
ಮತಗಳು

ಾಪುರ



ಕರ್ನಾಟಕದ ವೀರಶೈವ ಮಠಗಳು

ಕರ್ನಾಟಕದ ವೀರಶೈವ ಮಠಗಳು

(ಮಠಗಳ ಪರಂಪರೆ-ಮಾಹಿತಿಕೋಶ: ಸಂಪುಟ-೧)

ಚಂದ್ರಶೇಖರ ನಾರಣಾಪುರ

ಗೆಳೆಯ ಪ್ರಕಾಶನ
ಚನ್ನಾಪುರ ರಸ್ತೆ, ವಿನಾಯಕ ನಗರ, ಕೋಟೆ,
ಚಿಕ್ಕಮಗಳೂರು -೫೭೭ ೧೦೧.

KARNATAKADA VEERASHAIVA MATHAGALU
An Introduction of Veerashaiva Maths in Karnataka by Chandrashekara Naranapura
Published by Geleya Prakashana, Vinayaka Nagara, Kote,
Chikmagalur- 577 101


ಪ್ರಥಮ ಮುದ್ರಣ: ೨೦೦೨

ಪುಟಗಳು : XXIII+೧೩೭೮=೧೪೦೧

ಬೆಲೆ: ರೂ. ೭೫೦=೦೦
$-30

ಅಕ್ಷರ ಜೋಡಣೆ
ವಚನ ಡಿ.ಟಿ.ಪಿ. ಸೆಂಟರ್
ವಿನಾಯಕ ನಗರ, ಕೋಟೆ, ಚಿಕ್ಕಮಗಳೂರು - 577 101

ಮುದ್ರಣ
ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್
ಬನ್ನೇರುಘಟ್ಟ ರಸ್ತೆ
ಬೆಂಗಳೂರು.



ಅರ್ಪಣೆ

ಹಳ್ಳಿಯಲ್ಲಿ ಹುಟ್ಟಿ, ಬೆಳೆದು
ಬದುಕಿನ ಸೆಲೆಯಾದ ಜಾನಪದವನ್ನು
ತಮ್ಮ ಬದುಕಿನ ಉಸಿರಾಗಿಸಿಕೊಂಡ,

ನಗರದಲ್ಲಿ ನೆಲೆಸಿದರೂ ಹಳ್ಳಿಯನ್ನು ಮರೆಯದೆ
ಹಳ್ಳಿಯ ಹಣತೆಯಾಗಿ, ನಗರದಲ್ಲಿ
ಗ್ರಾಮಜ್ಯೋತಿಯನ್ನು ಹಚ್ಚಿದ,

ಶಿಸ್ತು ಮತ್ತು ಅಚ್ಚುಕಟ್ಟುತನಕ್ಕೆ ಹೆಸರಾದ,
ಹತ್ತಾರು ಸಾಂಸ್ಕೃತಿಕ ಸಂಘ ಸಂಸ್ಥೆಗಳ ಸ್ಥಾಪಕರಾದ
ಶ್ರೀ ಗೊ. ರು. ಚ. ಅವರಿಗೆ.

- ಚಂದ್ರಶೇಖರ ನಾರಣಾಪುರ

ಗ್ರಂಥ ಪೋಷಕರು



ರಾಜ್ಯ ಪ್ರಶಸ್ತಿ ವಿಜೇತರು, ದಾನವಿಶಾರದರು, ಗುರುಸೇವಾದುರೀಣರಾದ
ಶ್ರೀ ಬಿ.ಎಸ್. ಶಿವಪ್ಪಶೆಟ್ಟರು ಮತ್ತು ದಾನ ಚಿಂತಾಮಣಿ ಶ್ರೀಮತಿ ಕಮಲಮ್ಮನವರು



ಶ್ರೀ ಬಿ.ಎಸ್.ವಾಗೀಶ್ ಪ್ರಸಾದ್
ಮ್ಯಾನೇಜಿಂಗ್ ಡೈರಕ್ಟರ್ ಮ.ಭ.ವೇರ್‌ಹೌಸಿಂಗ್ ಕಾರ್ಪೋರೇಶನ್ (ಲಿ.), ಬೆಂಗಳೂರು.

ಪ್ರಕಾಶಕರ ನುಡಿ

ಗೆಳೆಯ ಪ್ರಕಾಶನವು ೧೯೯೦ ರಿಂದ ಗೆಳೆಯ ಪತ್ರಿಕೆಯನ್ನು ಪ್ರಕಟಿಸುತ್ತ, ಸಮಾಜದ ಅಭಿವೃದ್ಧಿಗೆ ಸರ್ಕಾರ ಮತ್ತು ಸಂಘ ಸಂಸ್ಥೆಗಳು ಕೈಗೊಂಡ ಕಾರ್ಯಗಳಿಗೆ ನೆರವಾಗಿದೆ. ಜೊತೆಗೆ ಪುಸ್ತಕ ಪ್ರಕಟಣಾ ಕಾರ್ಯಗಳಿಗೂ ಮುಂದಾಗಿ, ನಾಲ್ಕು ಜಿಲ್ಲೆಗಳ ವೀರಶೈವ ಮಠಗಳ ಸಂಕ್ಷಿಪ್ತ ಪರಿಚಯವನ್ನು ಒಳಗೊಂಡ "ಕರ್ನಾಟಕದ ವೀರಶೈವ ಮಠಗಳು" ಹಾಗೂ "ಅನರ್ಘ್ಯರತ್ನಗಳು" ಎಂಬ ಪುಸ್ತಕಗಳನ್ನು ಪ್ರಕಟಿಸಿದೆ.

ಭಾರತದ ಧಾರ್ಮಿಕ ಕ್ಷೇತ್ರದ ಧರ್ಮಕೇಂದ್ರಗಳಾದ ಮಠಗಳ ಮಾಹಿತಿ ಕೋಶವನ್ನು ಪ್ರಕಟಿಸಲು ಮುಂದಾಗಿ ಇಪ್ಪತ್ನಾಲ್ಕು ರಾಜ್ಯಗಳನ್ನು ಸರ್ವೆಮಾಡಿ ಅಲ್ಲಿರುವ ಮಠಗಳನ್ನು ಶೋಧಿಸಿ ವಿಶ್ವಕೋಶ ಮಾದರಿಯಂತೆ ಮಾಹಿತಿ ಗ್ರಂಥವನ್ನು ಪ್ರಕಟಿಸಲು ಮುಂದಾಗಿದೆ.

ಭಾರತದ ನೆಲದಲ್ಲಿ ಹುಟ್ಟಿ ಬೆಳೆದ ಧರ್ಮಗಳು, ಅವುಗಳ ಚಟುವಟಿಕಾ ಕೇಂದ್ರಗಳು ಎಷ್ಟು? ಅವುಗಳು ಎಲ್ಲಿವೆ? ಮಾಡುತ್ತಿರುವ ಕಾರ್ಯಗಳೇನು? ಅವುಗಳ ಸ್ಥಿತಿಗತಿ ಏನು? ಮುಂತಾದ ಮಾಹಿತಿಗಳನ್ನು ಒಳಗೊಂಡ ಮಾಹಿತಿ ಗ್ರಂಥವನ್ನು ಚಂದ್ರಶೇಖರ ನಾರಣಾಪುರ ಅವರು ಅಗುಮಾಡಿದ್ದನ್ನು ಗೆಳೆಯ ಪ್ರಕಾಶನ ಬೆಳಕಿಗೆ ತಂದಿದೆ. ಹಿಂದೆಂದು ಯಾರೂ ಮಾಡಲಾಗದ ಸಾಹಸ ಕಾರ್ಯದಿಂದ ರೂಪುಗೊಂಡ ಈ ಗ್ರಂಥದ ಬೃಹತ್ತನ್ನು ನೋಡಿದ ಅನೇಕರು, ಸಣ್ಣಪತ್ರಿಕೆಯನ್ನು ಪ್ರಕಟಿಸುತ್ತಿರುವ ಸಂಸ್ಥೆ ಇಂತಹ ಬೃಹತ್ ಯೋಜನೆಯನ್ನು ಮಾಡಬಹುದೇ ಎಂದು ಮೂಗು ಮುರಿದದ್ದೂ ಉಂಟು. ಇನ್ನೂ ಕೆಲವರು ಬೆನ್ನುತಟ್ಟಿ ಪ್ರೋತ್ಸಾಹಿಸಿದ್ದೂ ಉಂಟು. ತೆಗಳಿಕೆ-ಹೊಗಳಿಕೆಗೆ ಕಿವಿಕೊಡದೆ ಪ್ರಕಟಣೆಯನ್ನೇ ಗುರಿಯಾ ಗಿಟ್ಟುಕೊಂಡು ಮಾಡಿದ ಪ್ರಯತ್ನದ ಫಲವಾಗಿ "ಕರ್ನಾಟಕದ ವೀರಶೈವ ಮಠಗಳು" ಎಂಬ ಬೃಹತ್ ಗ್ರಂಥ ಪ್ರಕಟವಾಗಲು ಸಾಧ್ಯವಾಯಿತು. ಈ ಸಂದರ್ಭದಲ್ಲಿ ಶ್ರೀ ಗೊ.ರು.ಚನ್ನಬಸಪ್ಪ ಮತ್ತು ಡಾ॥ ಎಂ.ಚಿದಾನಂದಮೂರ್ತಿ ಅವರು ನೀಡಿದ ಮಾರ್ಗದರ್ಶನ ನಮಗೆ ದಾರಿ ದೀಪವಾಯಿತು. ಈ ಕಾರ್ಯಕ್ಕೆ ಇವರುಗಳನ್ನು ನಾವು ಸದಾ ಸ್ಮರಿಸುತ್ತೇವೆ.

ಕರ್ನಾಟಕದಲ್ಲಿ, ಭಾರತದಲ್ಲಿರುವ ಮಠಗಳ ಮೂರನೆಯ ಒಂದು ಭಾಗದಷ್ಟು ವೀರಶೈವ ಮಠಗಳು ಸ್ಥಾಪನೆಯಾಗಿರುವುದನ್ನು ಗಮನಿಸಿ ವೀರಶೈವ ಮಠಗಳ ಕುರಿತ ಮಾಹಿತಿಯನ್ನು ಮೊದಲ ಸಂಪುಟದಲ್ಲಿಯೂ,ಕರ್ನಾಟಕದ ಇತರೆ ಮಠಗಳ ಕುರಿತ ಮಾಹಿತಿಯನ್ನು ಎರಡನೆಯ ಸಂಪುಟದಲ್ಲಿಯೂ, ಹೊರ (23) ರಾಜ್ಯಗಳಲ್ಲಿರುವ ಮಠಗಳ ಕುರಿತ ಮಾಹಿತಿಯನ್ನು ಮೂರನೆಯ ಸಂಪುಟದಲ್ಲಿ ಪ್ರಕಟಿಸಲು ಯೋಜನೆಯನ್ನು ತಯಾರಿಸಿಕೊಂಡು ಮೊದಲ ಸಂಪುಟವನ್ನು ಈಗ ಪ್ರಕಟಿಸಲಾಗಿದೆ.

ಚಂದ್ರಶೇಖರ ನಾರಣಾಪುರ ಅವರು ನಮ್ಮ ಪ್ರಕಾಶನ ಸಂಸ್ಥೆಯು ಪ್ರಕಟಿಸುವ "ಗೆಳೆಯ"ಪತ್ರಿಕೆಯ ಸಂಪಾದಕರಾಗಿ, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳಾಗಿ ಹಲವು ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು, ಈ ಬೃಹತ್ ಗ್ರಂಥ ಯೋಜನೆಯಲ್ಲಿಯೂ ಯಶಸ್ವಿಯಾಗಿದ್ದಾರೆ. ಈ ಗ್ರಂಥಕ್ಕೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಡಾ॥ ಎಂ.ಎಂ.ಕಲಬುರ್ಗಿ ಅವರು ಮೌಲಿಕವಾದ ಮುನ್ನುಡಿಯನ್ನು ಬರೆದು ಗ್ರಂಥದ ಹಿರಿಮೆಯನ್ನು ಮತ್ತಷ್ಟು ಹೆಚ್ಚಿಸಿದ್ದಾರೆ. ಗ್ರಂಥ ಪ್ರಕಟಣೆಯ ಸಂದರ್ಭದಲ್ಲಿ ಲೇಖಕರು ಕಂಡುಂಡ ನೋವುಗಳ ಬಗ್ಗೆ ಶ್ರೀ ಗೊ.ರು.ಚ. ಅವರು ಮಾರ್ಗದರ್ಶಕರ ನುಡಿಯಲ್ಲಿ ವಿವರಿಸಿದ್ದಾರೆ. ಪ್ರಕಾಶ್‌ಚೌದರಿಯವರು ಮುಖಪುಟವನ್ನು ವಿನ್ಯಾಸಗೊಳಿಸಿದ್ದಾರೆ.

ಪಂಚಪೀಠಗಳ ಜಗದ್ಗುರುಗಳವರಾದ ಶ್ರೀ ಪ್ರಸನ್ನ ರೇಣುಕ ವೀರ ಸೋಮೇಶ್ವರ ರಾಜದೇಶಿಕೇಂದ್ರ ಭಗವತ್ಪಾದ ಮಹಾಸ್ವಾಮಿಗಳು,ಶ್ರೀ ಮರುಳಸಿದ್ಧ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು, ಶ್ರೀ ಭೀಮ

ಶಂಕರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು, ಶ್ರೀ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು, ಡಾ॥ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು, ಸುತ್ತೂರುಮಠದ ಜಗದ್ಗುರುಗಳವರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಸಿರಿಗೆರೆ ತರಳಬಾಳು ಬೃಹನ್ಮಠದ ಜಗದ್ಗುರುಗಳವರಾದ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು,ಚಿತ್ರದುರ್ಗದ ಶ್ರೀ ಮುರುಘ ರಾಜೇಂದ್ರ ಬೃಹನ್ಮಠದ ಗುರುಗಳಾದ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಶರಣರು ಸೇರಿದಂತೆ ಅನೇಕ ಗುರುಗಳು ಡಿ.ಟಿ.ಪಿ. ಪ್ರತಿಯನ್ನು ನೋಡಿ ಮೆಚ್ಚಿಕೊಂಡು ಪ್ರಕಟಣೆಗೆ ನೆರವಾದರು. ಅಲ್ಲದೆ ವೀರಶೈವ ಸಂಘ ಸಂಸ್ಥೆಗಳು, ಧರ್ಮಾಭಿಮಾನಿಗಳು ಹಾಗೂ ಸಾಹಿತ್ಯಾಭಿಮಾನಿಗಳು ನೆರವಾದರು. ಇವರೆಲ್ಲರ ನೆರವಿನ ಫಲವಾಗಿ ಈ ಬೃಹತ್ ಗ್ರಂಥವನ್ನು ಪ್ರಕಟಿಸಲು ಗೆಳೆಯ ಪ್ರಕಾಶನಕ್ಕೆ ಸಾಧ್ಯವಾಯಿತು. ಇವರೆಲ್ಲರಿಗೆ ನಮ್ಮ ಕೃತಜ್ಞತೆಗಳು.

ಕರ್ನಾಟಕದ ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಕ್ಷೇತ್ರಕ್ಕೆ ವೀರಶೈವ ಮಠಗಳು ನೀಡಿದ ಕೊಡುಗೆ ಅಪಾರ. ಈ ಪ್ರಮಾಣದಲ್ಲಿ ವೀರಶೈವ ಮಠಗಳು ಸ್ಥಾಪನೆಯಾಗದೆ ಹೋಗಿದ್ದರೆ, ಕರ್ನಾಟಕ ಈ ಮಟ್ಟಿಗೆ ಅಭಿವೃದ್ಧಿಯಾಗಿರುತ್ತಿರಲಿಲ್ಲವೇನೊ?. ಕರ್ನಾಟಕದ ಸಂಸ್ಕೃತಿಯ ಒಂದು ಅಂಗವೇ ಆಗಿರುವ ವೀರಶೈವ ಮಠಗಳು ಪ್ರತ್ಯೇಕ ಅಧ್ಯಯನಕ್ಕೆ ಯೋಗ್ಯವಾಗಿವೆ. ಈ ಅಧ್ಯಯನಕ್ಕೆ ವಿಪುಲವಾದ ಆಕರವನ್ನು ಈ ಗ್ರಂಥ ನೀಡುತ್ತದೆ. ಚಂದ್ರಶೇಖರ ನಾರಣಾಪುರ ಅವರು ಮಾಹಿತಿ ಸಂಗ್ರಹಕರಾಗಿ ಪಟ್ಟ ಕಷ್ಟ, ಅನುಭವಿಸಿದ ನೋವುಗಳು ಅಪಾರ. ಸರ್ಕಾರ, ವಿಶ್ವವಿದ್ಯಾಲಯಗಳು ಅಥವಾ ಹಣ ಇರುವ ಸಂಸ್ಥೆ ಮಾಡಬೇಕಾದ ಕಾರ್ಯವನ್ನು ಚಂದ್ರಶೇಖರ ನಾರಣಾಪುರ ಒಂಟಿಯಾಗಿ ಮಾಡಿದ್ದಾರೆ. "ಗೆಳೆಯ ಪ್ರಕಾಶನ" ಹಲವರ ನೆರವಿನಿಂದ ಮಹತ್ವದ ಕೃತಿಯನ್ನು ಪ್ರಕಟಿಸಿದೆ. ಸಹೃದಯ ಕನ್ನಡಿಗರು ಸಂತೋಷದಿಂದ ಈ ಕೃತಿಯನ್ನು ಸ್ವಾಗತಿಸುವರೆಂದು ನಂಬಿದ್ದೇವೆ.

ಚಿಕ್ಕಮಗಳೂರು
೨೦-೫-೨೦೦೨

ಜಿ.ಎಸ್.ಲಾವಣ್ಯ
ಗೆಳೆಯ ಪ್ರಕಾಶನ

ಮುನ್ನುಡಿ

ನಮ್ಮಲ್ಲಿ ವಿಶ್ವವಿದ್ಯಾಲಯಗಳಿವೆ, ಅಲ್ಲಿ ವಿದ್ವಾಂಸರಿದ್ದಾರೆ, ಅವರಿಗೆ ಕೈತುಂಬ ಸಂಬಳವೂ ಇದೆ. ಕ್ಷೇತ್ರಕಾರ್ಯದ ಅನುಕೂಲತೆಗಳಿವೆ, ಓದು-ಬರೆಹ-ಪ್ರಕಟನ ಸೌಲಭ್ಯಗಳೂ ಇವೆ. ಅವರು, ಕರ್ನಾಟಕ ಸಂಸ್ಕೃತಿಯ ಭಾಗವೇ ಆಗಿರುವ ಈ ಶ್ರಮನಿಷ್ಠ "ಆಕರಶೋಧ ಕೃತಿ" ಯನ್ನು ನೋಡಬೇಕು.

ಹೀಗೆ ಹೇಳಲು ಕಾರಣ, ಇದನ್ನು ರೂಪಿಸಿರುವ ಶ್ರೀ ಚಂದ್ರಶೇಖರ ನಾರಣಾಪುರ ಅವರಿಗೆ ಪದವಿಯಿಲ್ಲ, ಸರಕಾರಿ ನೌಕರಿಯಿಲ್ಲ. ಶ್ರದ್ಧೆಯಿದೆ, ಶ್ರಮಶೀಲ ಮನಸ್ಸಿದೆ. ಹೀಗಾಗಿ ಇವರು ವ್ಯಕ್ತಿಯಾಗಿ ಉಳಿಯದೆ ಸಂಸ್ಥೆಯಾಗಿ ದುಡಿದು ಪುಸ್ತಕವಾಗಿ ರೂಪಗೊಂಡಿದ್ದಾರೆ. ಚಿಕ್ಕಮಗಳೂರಿನಂಥ ವಿದ್ವತ್ ಸೌಲಭ್ಯವಂಚಿತ ನಗರದಲ್ಲಿದ್ದೂ ೧೧೮೯ ಮಠಗಳ ದಾಖಲಾತಿಯನ್ನು ಪೂರೈಸಿದ ಈ ಐತಿಹಾಸಿಕ ಪ್ರಯತ್ನಕ್ಕೆ ಇವರನ್ನು ಆರಂಭದಲ್ಲಿಯೇ ಅಭಿನಂದಿಸುತ್ತೇನೆ.

ಆಧುನಿಕ ವೀರಶೈವ ಅಧ್ಯಯನಕ್ಕೆ ೧೦೦ ವರ್ಷಗಳ ಇತಿಹಾಸವಿದೆ. ಈ ಅವಧಿಯಲ್ಲಿ ಎಲ್ಲರೂ ಮಾಡಿದುದು ಸಾಹಿತ್ಯದ ಅಭ್ಯಾಸ-ಸಿದ್ಧಾಂತದ ಅಭ್ಯಾಸ. ಅದೂ ಗ್ರಂಥಾಲಯದಲ್ಲಿ ಕುಳಿತು ಮಾಡಿದ ಕೇಂದ್ರೀಯ ಅಭ್ಯಾಸ. ಇಂಥ ಸಂದರ್ಭದಲ್ಲಿ ಗ್ರಂಥಾಲಯದಿಂದ ಹೊರಗೆ ಬಂದು ಮಾಡಿದ ಕ್ಷೇತ್ರೀಯ ಅಭ್ಯಾಸವೆನಿಸಿದೆ, ಪ್ರಸ್ತುತ **"ಕರ್ನಾಟಕದ ವೀರಶೈವ ಮಠಗಳು."**

ಇಂದಿನದು ಸಂಕ್ರಮಣ ಕಾಲ. ಹಳೆಯ ಮೌಲ್ಯಗಳು, ಹಳೆಯ ವ್ಯವಸ್ಥೆಗಳು ವೇಗವಾಗಿ ಮರೆಯಾಗುತ್ತಲಿರುವ ಕಾಲ. ವೀರಶೈವ ಮಠಗಳು ಇದಕ್ಕೆ ಹೊರತಲ್ಲ. ಒಂದು ಅಂದಾಜಿನ ಪ್ರಕಾರ ಕರ್ನಾಟಕದಲ್ಲಿದ್ದ ೫೭೦೬ ಮಠಗಳಲ್ಲಿ ೩೮೨೮ ಮಠಗಳು ಶಾಶ್ವತ ನಾಶವಾಗಿವೆ. ಉಳಿದಿದ್ದ ೧೮೭೮ ಮಠಗಳನ್ನು ಗುರುತಿಸಬಹುದಾದರೂ ಅಸ್ತಿತ್ವದಲ್ಲಿರುವುವು ೧೧೮೯ ಮಾತ್ರ. ಈ ವಿವರಣೆ ಲಿಂಗಾಯತ ಮಠಾಧಿಪತಿಗಳ, ಮಠಗಳ ನಿಜವಾದ ಯಜಮಾನರಾಗಿರುವ ಭಕ್ತರ ಹೊಣೆಗೇಡಿತನಕ್ಕೆ ಹಿಡಿದ ಕನ್ನಡಿಯಾಗಿದೆ. ಉಳಿದ ಜಿಲ್ಲೆಗಳು ಹೋಗಲಿ, ವಿರಕ್ತಪೀಠದ ಗಂಗೋತ್ರಿಯಾಗಿರುವ ಬಸವಕಲ್ಯಾಣವನ್ನೊಳಗೊಂಡ ಬೀದರ ಜಿಲ್ಲೆಯಲ್ಲಿ ಇದ್ದವೆಂದು ಹೇಳಲಾಗುವ ಮಠಗಳು ೧೩೪೨; ಅಸ್ತಿತ್ವದಲ್ಲಿರುವುವು ೩೯. ಗುರುಪೀಠದ ಬಾಳೆಹಳ್ಳಿ ಮಠವನ್ನೊಳಗೊಂಡ ಚಿಕ್ಕಮಗಳೂರು ಜಿಲ್ಲೆಯಲ್ಲಿ ಇದ್ದವೆಂದು ಹೇಳಲಾಗುವ ಮಠಗಳು ೭೭; ಅಸ್ತಿತ್ವದಲ್ಲಿರುವುವು ೧೬. ಉಜ್ಜಯಿನಿ ಮಠವನ್ನೊಳಗೊಂಡ ಬಳ್ಳಾರಿ ಜಿಲ್ಲೆಯಲ್ಲಿ ಇದ್ದವೆಂದು ಹೇಳಲಾಗುವ ಮಠಗಳು ೧೧೮; ಅಸ್ತಿತ್ವದಲ್ಲಿರುವುವು ೩೯. ಹೀಗೆ ತಮ್ಮ ತಮ್ಮ ಜಿಲ್ಲೆಯಲ್ಲಿಯೇ ವೀರಶೈವ ಮಠಗಳು ಕಾಲವಾಹಿನಿಯಲ್ಲಿ ಕೊಚ್ಚಿ ಹೋಗುತ್ತಲಿದ್ದಾಗ ವಿರಕ್ತ ಮತ್ತು ಗುರುವರ್ಗದ ಜಗದ್ಗುರು ಪೀಠಗಳು ಏನು ಮಾಡುತ್ತಿದ್ದವು?

ಈ ಮೊದಲು ಮಠಗಳು ಸ್ವಾಮಿಗಳ ಸಂಬಂಧಿಕರ ಮನೆಗಳಾಗುತ್ತಿದ್ದವು. ಇಂದು ಮಾರಾಟದ ಮಳಿಗೆಗಳಾಗುತ್ತಲಿವೆ, ಸಿನಿಮಾ ಟಾಕೀಜಗಳಾಗುತ್ತಲಿವೆ, ಮತ್ತೆ ಏನೇನೋ ಆಗುತ್ತಲಿವೆ. ಬೆಂಗಳೂರು ನಗರವೊಂದನ್ನೇ ಕುರಿತು ಹೇಳುವುದಾದರೆ ೧೯ನೆಯ ಶತಮಾನದ ಮಧ್ಯದಲ್ಲಿ ಇದ್ದ ೭೪ ವೀರಶೈವ ಮಠಗಳಲ್ಲಿ ಈಗ ೩೫ ಮಾತ್ರ ಉಳಿದಿವೆ. ಈ ಮೂವತ್ತೈದರಲ್ಲಿ ೧೮ ಮಠಗಳಿಗೆ ಅಧಿಪತಿಗಳಿಲ್ಲ. ಇವುಗಳಲ್ಲಿ ಸ್ವಾತಂತ್ರ್ಯ ಪೂರ್ವಕ್ಕಿಂತ, ಸ್ವಾತಂತ್ರ್ಯೋತ್ತರ ಕಾಲದಲ್ಲಿ ಮರೆಯಾದುವು ಅಧಿಕ. ನಮ್ಮ ಸ್ಥಳೀಯ ಧಾರ್ಮಿಕ ರಾಜಧಾನಿಗಳಾಗಿರುವ ಮಠಗಳು ಹೀಗೆ ಮರೆಯಾಗುವ ಮೊದಲು, ಕರ್ನಾಟಕ ವ್ಯಾಪ್ತಿಯ ಪರಿವೀಕ್ಷಣೆ ನಡೆಸಿ ಅವುಗಳ ಸ್ವರೂಪ ಮತ್ತು ಇತಿಹಾಸಗಳನ್ನು ದಾಖಲಿಸಬೇಕೆಂದು ಅನೇಕರು ಹೇಳುತ್ತಲಿದ್ದರು. ಈ ಮಾತು ಕೃತಿಗಿಳಿಯುವ ಸಲುವಾಗಿ ನಾವು ಶ್ರೀ ಚಂದ್ರಶೇಖರ ನಾರಣಾಪುರ ಅವರು ಹುಟ್ಟಿ ಬರುವವರೆಗೆ ಕಾಯಬೇಕಾಯಿತು. ಈ ಗ್ರಂಥದ ಮಹತ್ತು - ಬೃಹತ್ತು ನೋಡಿದರೆ, ದೇವರು ಈ ಮಣಿಹಕ್ಕಾಗಿಯೇ ಇವರನ್ನು ಭೂಮಿಗೆ ಕಳಿಸಿರುವನೆಂದು ಭಾಸವಾಗುತ್ತದೆ.

ಮುನಿಗಳಿರುವುದು ಆಶ್ರಮ, ವ್ರತಿಗಳಿರುವುದು ಮಠ - ಎಂದು ನಿಘಂಟು ಹೇಳುತ್ತದೆ. ಮುನಿಗಳು

ಆತ್ಮೋದ್ಧಾರಕ್ಕಾಗಿ ಅರಣ್ಯದ ಆಶ್ರಮದಲ್ಲಿ ತಪೋಮಗ್ನರಾದರೆ, ವ್ರತಿಗಳು ಗ್ರಾಮದ ಮಠದಲ್ಲಿ ತಪೋಮಗ್ನರಾಗಿರುತ್ತಾರೆ. ಈ 'ಮಠದ ವ್ರತಿ' ವೈದಿಕ ಧರ್ಮದಲ್ಲಿ 'ಸನ್ಯಾಸಿ' ಎನಿಸುತ್ತಾನೆ, ಶರಣಧರ್ಮದಲ್ಲಿ 'ಜಂಗಮ' ನೆನಿಸುತ್ತಾನೆ. "ಸನ್ಯಾಸಿ ಸಂಸ್ಕೃತಿ"ಗಿಂತ "ಜಂಗಮ ಸಂಸ್ಕೃತಿ" ತುಂಬ ಭಿನ್ನವಾದುದು. ಜಂಗಮನು ಸನ್ಯಾಸಿಯ ಆತ್ಮೋದ್ಧಾರದೊಂದಿಗೆ ಹೆಚ್ಚಿನದಾಗಿ ವರ್ಗಭೇದ, ವರ್ಣಭೇದ, ಲಿಂಗಭೇದವಿಲ್ಲದೆ ಸಮಾಜಸೇವಾದೀಕ್ಷಿತನಾಗಿರುತ್ತಾನೆ. ತನ್ನ ಈ ದೀಕ್ಷೆಯನ್ನು ಸಾಮಾಜಿಕರ ಆತ್ಮಶುದ್ಧಿಯ ಜೊತೆಗೆ, ಅನ್ನ-ಶಿಕ್ಷಣ-ಔಷಧ-ನ್ಯಾಯದಾನ-ಸಾಹಿತ್ಯಸೃಷ್ಟಿ ಇತ್ಯಾದಿ ಜೀವನಾವಶ್ಯಕ ಕ್ಷೇತ್ರಗಳಿಗೆ ವಿಸ್ತರಿಸಿ, ಸಮಾಜ ಸಮೃದ್ಧಿಗೂ ಕಾರಣನಾಗುತ್ತಾನೆ. ಅವನ ಮಠ ಆಯಾ ಗ್ರಾಮದ ಅನಧಿಕೃತ ಸರ್ಕಾರವೆಂಬಂತೆ ಕಾರ್ಯನಿರ್ವಹಿಸುತ್ತದೆ. ಹೀಗಾಗಿ ವೀರಶೈವ ಮಠಗಳ ಅಭ್ಯಾಸ, ಉಳಿದ ಧಾರ್ಮಿಕ ಮಠಗಳಂತೆ ಕೇವಲ ಧರ್ಮಮುಖಿಯಾಗದೆ ಹೆಚ್ಚಿನದಾಗಿ ಸಮಾಜಮುಖಿಯೂ ಆಗುತ್ತದೆ.

ಇಂಥ ಅಭ್ಯಾಸಕ್ಕೆ ಮೂಲಸಾಮಗ್ರಿ ಆಕರಗಳು, ಇತರ ಮಠಗಳಿಗಿಂತ ಅಧಿಕ ಸಂಖ್ಯೆಯಲ್ಲಿರುವ ವೀರಶೈವಮಠಗಳು, ಆಕರ ಸಾಮಗ್ರಿ ಸಂಗ್ರಹಿಸುವ ಕ್ಷೇತ್ರಕಾರ್ಯಕರ್ತನಿಗೆ ದೊಡ್ಡ ಅವಕಾಶವೂ ಹೌದು, ದೊಡ್ಡ ಆಹ್ವಾನವೂ ಹೌದು. ಈ ಎರಡರಲ್ಲಿಯೂ ಶ್ರೀ ಚಂದ್ರಶೇಖರ ನಾರಣಾಪುರ ಅವರು ಜಯಶಾಲಿಯಾಗಿದ್ದಾರೆ.

ಈವರೆಗೆ ಕರ್ನಾಟಕದ ಸಂಸ್ಕೃತಿಶೋಧವು ಗ್ರಂಥಸ್ಥ ಆಕರವನ್ನು ಅವಲಂಬಿಸಿದ್ದಿತು. ಇತ್ತೀಚೆಗೆ ಕ್ಷೇತ್ರಕಾರ್ಯದ ದೇಶಿ ಹಾದಿಯೊಂದು ತೆರೆದುಕೊಂಡಿದೆ. ಈ ಹಾದಿಯಲ್ಲಿ ಪ್ರಯಾಣಿಸಿ, ಚಂದ್ರಶೇಖರ ನಾರಣಾಪುರ ಅವರು ಕರ್ನಾಟಕದ ಎಲ್ಲ ೨೭ ಜಿಲ್ಲೆಗಳನ್ನೂ, ಎಲ್ಲ ೧೭೫ ತಾಲೂಕುಗಳನ್ನೂ ಸುತ್ತಿದ್ದಾರೆ. ಬಹುಶಃ ಈ ಶತಮಾನದ ಬಹು ದೊಡ್ಡ ಏಕವ್ಯಕ್ತಿ ಕಾರ್ಯವೆಂಬಂತೆ ಈ ಕೆಲಸವನ್ನು ಪೂರೈಸಿದ್ದಾರೆ. ಇದು ಭಾವಿಸಿದಷ್ಟು ಸುಲಭವಲ್ಲ. ಗಟ್ಟಿಮುಟ್ಟಾದ ಕಾಲು ಬೇಕು, ಮಳೆ-ಗಾಳಿಗೆ ಅಂಜದ ಮೈಬೇಕು, ಅನ್ಯಾಯ-ಅಪಮಾನಗಳನ್ನು ಸಹಿಸುವ ಮನಸ್ಸು ಬೇಕು. ಕೈಯೊಳಗಿನ ಉದ್ಯೋಗ, ಕೈ ಹಿಡಿದ ಹೆಂಡತಿ, ಅವಲಂಬಿಸಿದ ಕುಟುಂಬ ಸದಸ್ಯರನ್ನು ದಿನಗಟ್ಟಲೆ, ವಾರಗಟ್ಟಲೆ ಅಲ್ಲ, ತಿಂಗಳುಗಟ್ಟಲೆ ಮರೆಯಬೇಕು. ಇವೆಲ್ಲವುಗಳನ್ನು ಪವಾಡಸದೃಶ ರೀತಿಯಲ್ಲಿ ಹೊಂದಿಸಿಕೊಂಡು, ಮೈಯಲ್ಲಿ ಆವೇಶ ತುಂಬಿಕೊಂಡವರಂತೆ ಶ್ರೀ ಚಂದ್ರಶೇಖರ ನಾರಣಾಪುರ ಅವರು ಹಿಡಿದ ಕೆಲಸವನ್ನು ಆಗುಮಾಡಿದ್ದಾರೆ. ಪ್ರತಿಷ್ಠಿತ ಪಂಡಿತರಂತೆ ಸಂಸ್ಥೆಯಲ್ಲಿ ಬೆಚ್ಚಗೆ ಕುಳಿತು, ಪ್ರಶ್ನಾವಳಿ ಮೂಲಕ ಮಾಹಿತಿ ತರಿಸಿಕೊಳ್ಳದೆ ಸ್ವತಃ ಪ್ರಯಾಣಿಸಿ, ಕಂಡು, ಕೇಳಿ ಸಂಗ್ರಹಿಸಿಕೊಂಡಿದ್ದಾರೆ. ವಿಮರ್ಶಿಸಿ ದಾಖಲಿಸಿಕೊಂಡಿದ್ದಾರೆ.

ಸಂಶೋಧನೆಯು ಇಂದು ಆಕರಗಳ ವ್ಯಾಖ್ಯಾನ ಪಾತಳಿಯಲ್ಲಿ ವ್ಯವಹರಿಸುತ್ತಲಿದೆ. ಇದಕ್ಕೆ ಮೊದಲು ಆಕರಗಳ ವಿಶ್ಲೇಷಣೆಯ ಕೆಲಸ, ಇದಕ್ಕೂ ಮೊದಲು ಆಕರಗಳ ಶೋಧ ಕೆಲಸ ಅಗತ್ಯ. ಇಲ್ಲಿ ಶ್ರೀ ಚಂದ್ರಶೇಖರ ನಾರಣಾಪುರ ಅವರು ಮಾಡಿದ್ದು, ಆಕರಗಳ ಶೋಧಕೆಲಸ. ಲಿಂಗಾಯತರಲ್ಲಿ ಮುಖ್ಯವಾಗಿ ಸಂಪ್ರದಾಯವಾದಿ ಮತ್ತು ಉದಾರವಾದಿ ಎಂದು ಹೇಳಿಕೊಳ್ಳುವ ಎರಡು ಮಠ ಸಂಪ್ರದಾಯಗಳಿವೆ. ಅವುಗಳ ಗುಣದೋಷಗಳೇನೇ ಇರಲಿ, ಆ ಚರ್ಚೆಗೆ ಹೋಗದೆ, ದಾಖಲಾತಿಯಲ್ಲಿ ಪ್ರಾಮಾಣಿಕತೆ, ವಿಷಯ ಸಂಗ್ರಹದಲ್ಲಿ ಸಮಗ್ರತೆ, ನಿರೂಪಣೆಯಲ್ಲಿ ನಿರಾಡಂಬರತೆ- ಈ ಆದರ್ಶದಲ್ಲಿ ತಮ್ಮ ಕೃತಿಯನ್ನು ವಿನ್ಯಾಸಗೊಳಿಸಿದ್ದಾರೆ. ಅನುಬಂಧದಲ್ಲಿ ಉಪಯುಕ್ತ ಮಾಹಿತಿಯನ್ನೂ ಜೋಡಿಸಿದ್ದಾರೆ.

ಪ್ರಥಮ ಬಾರಿಗೆ ಬೆಳಕು ಕಂಡ ಈ ಮಾಹಿತಿಯನ್ನು ಬಳಸಿಕೊಂಡು ಅಭ್ಯಾಸ ಮುಂದುವರಿಸುವುದು ವಿದ್ವಾಂಸರಿಗೆ ಬಿಟ್ಟ ವಿಷಯ. ಸಂಖ್ಯಾನಿಷ್ಠ ಸಂಶೋಧನೆ ಕೈಗೊಳ್ಳುವವರು, ಯಾವ ಜಿಲ್ಲೆಗಳಲ್ಲಿ ಯಾವ ಸಂಪ್ರದಾಯದ ಮಠಗಳು ಹೆಚ್ಚು? ಯಾವ ಸಂಪ್ರದಾಯದ ಮಠಗಳು ಕಡಿಮೆ? ಇದಕ್ಕೆ ಐತಿಹಾಸಿಕ, ಸಾಮಾಜಿಕ, ಧಾರ್ಮಿಕ, ರಾಜಕೀಯ ಕಾರಣಗಳೇನು? ಎಂದು ಸೊಗಸಾದ ಅಭ್ಯಾಸ ಮಾಡಬಹುದು. ಕೇವಲ ಹೆಸರುಗಳನ್ನೇ ತೆಗೆದುಕೊಂಡರೆ ಇನ್ನೊಂದು ಬಗೆಯ ಅಭ್ಯಾಸ ಹೀಗೆ ಆಕಾರ ಪಡೆಯುತ್ತದೆ. ಇಲ್ಲಿ ಹೆಚ್ಚು ಸಂಖ್ಯೆಯಲ್ಲಿ ಕಂಡುಬರುವ 'ಹಿರೇಮಠ' ಹೆಸರುಗಳು

ಗುರುಪರಂಪರೆಯ, ' ವಿರಕ್ತಮಠ' ಹೆಸರುಗಳು ಜಂಗಮ ಪರಂಪರೆಯ ಸಮೂಹ ಸಂಸ್ಕೃತಿಯನ್ನು ಸೂಚಿಸುತ್ತವೆ. ಕುತೂಹಲದ ವಿಷಯವೆಂದರೆ ಇವುಗಳ ಜೊತೆಗೆ ಇವರ ಶಾಖೆಯನ್ನು ಸೂಚಿಸುವ (ಮುರುಘಾಮಠ, ಉಜ್ಜಯಿನಿ ಮಠ) ಹೆಸರುಗಳಿವೆ. ಶಾಖೆಗಳಲ್ಲಿಯೇ ಇವರ ಪರಂಪರೆಯ ಸ್ವಾಮಿಯೊಬ್ಬನನ್ನು ಸೂಚಿಸುವ (ಹಾಲುಸ್ವಾಮಿ ಮಠ, ಶಿವಲಿಂಗಸ್ವಾಮಿ ಮಠ) ಹೆಸರುಗಳು ದೊಡ್ಡ ಸಂಖ್ಯೆಯಲ್ಲಿವೆ. ಇವು ಸಮೂಹಪ್ರಧಾನ ಸಂಸ್ಕೃತಿಯಿಂದ, ವ್ಯಕ್ತಿ ಪ್ರಧಾನ ಸಂಸ್ಕೃತಿಯತ್ತ ವೀರಶೈವಮಠಗಳು ಸಾಗಿಬಂದುದನ್ನು ಸೂಚಿಸುತ್ತವೆ. ಕಲ್ಮಠ, ಗಚ್ಚಿನಮಠ, ಗವಿಮಠ, ಹಳೆಯಮಠ, ಹೊಸಮಠ, ಚಿಕ್ಕಮಠ ಇತ್ಯಾದಿಗಳು ಆಯಾಯ ಮಠಗಳ ಸ್ವರೂಪ ಮತ್ತು ಪ್ರಾಚೀನತೆಗಳನ್ನು ಸ್ಪಷ್ಟಪಡಿಸುತ್ತವೆ. ಮೇಗಲ್ಮಠ-ಹಳ್ಳದಮಠ-ಗುಡ್ಡದಮಠ-ತಿಪ್ಪಿಮಠ-ಪಡುವಲಮಠ-ಮೂಡಲಮಠ ಹೆಸರುಗಳು ಅವುಗಳ ಸ್ಥಾನವನ್ನು ಸೂಚಿಸುತ್ತವೆ. ಇದಕ್ಕಿಂತ ಓಲೆಮಠ-ಟೀಕಿನಮಠ-ಸಂಪಾದನೆಮಠ ಇತ್ಯಾದಿಗಳ ಹಿಂದೆ ಸಾಹಿತ್ಯ ಚರಿತ್ರೆಯ, ಸ್ಥಿರಪಟ್ಟಾಧ್ಯಕ್ಷಮಠ-ಚರಪಟ್ಟಾಧ್ಯಕ್ಷಮಠ-ಪಂಚವಣ್ಣಿಗೆಮಠ-ಕಬ್ಬಿಣಕಂಥೆಮಠ-ಶೀಲಸಂಪಾದನೆಮಠ-ಮಕ್ಕಳ ದೇವರಮಠ ಇತ್ಯಾದಿಗಳ ಹಿಂದೆ ಸಮಾಜೋಧಾರ್ಮಿಕ ಚರಿತ್ರೆಯ, ದಳವಾಯಿಮಠ ಮೊದಲಾದವುಗಳ ಹಿಂದೆ ರಾಜಕೀಯ ಚರಿತ್ರೆಯ ಸುದೀರ್ಘ ಇತಿಹಾಸಗಳಿವೆ, ಪರಿಕಲ್ಪನೆಗಳಿವೆ, ಸಂಸ್ಕೃತಿಗಳಿವೆ. ಇವು ಬಹುಮುಖಿ ಅಧ್ಯಯನಕ್ಕೆ ನಮ್ಮ ದಾರಿ ನೋಡುತ್ತಿವೆ.

ಇಂದಿನದು ಪ್ರಭುಸತ್ತಾಯುಗವಲ್ಲ, ಪ್ರಜಾಸತ್ತಾಯುಗ. ಈ ಬದಲಾದ ಸಂದರ್ಭಕ್ಕೆ ತಕ್ಕಂತೆ ವೀರಶೈವ ಮಠಗಳು ತಮ್ಮ ಪ್ರಭುಸತ್ತಾತ್ಮಕ ವ್ಯವಸ್ಥೆಯನ್ನು, ಧೋರಣೆಯನ್ನು ಪ್ರಜಾಸತ್ತಾತ್ಮಕವಾಗಿ ಪರಿವರ್ತಿಸಿಕೊಳ್ಳುವುದು ಇಂದಿನ ಬಹುಮುಖ್ಯ ಅಗತ್ಯವೆನಿಸಿದೆ.

೫೭೦೬ ಮಠಗಳಲ್ಲಿ ೩೮೨೮ ಮಠಗಳು ಶಾಶ್ವತ ನಾಶವಾಗಿ ಹೋಗಿವೆ. ಹೀಗೆಂದು, ಅವುಗಳ ಸ್ಥಾನದಲ್ಲಿ ಹೊಸಮಠಗಳನ್ನು ಸ್ಥಾಪಿಸಬೇಕೆಂದಿಲ್ಲ; ಕೆಲಸಕ್ಕೆ ಬಾರದ ಹಳೆಯ ಭಾವನೆಗಳ ಸ್ಥಾನದಲ್ಲಿ ಹೊಸ ಭಾವನೆಗಳನ್ನು ಸ್ಥಾಪಿಸಿಕೊಳ್ಳಬೇಕಿದೆ. ಅಂದರೆ ಭಕ್ತವರ್ಗ-ಜಂಗಮವರ್ಗ, ಜಂಗಮವರ್ಗದಲ್ಲಿಯೇ ಗುರುಪೀಠ-ಜಂಗಮಪೀಠವೆಂಬ ಭೇದಸಂಸ್ಕೃತಿಯನ್ನು ನಾಶಮಾಡಿಕೊಂಡರೆ ಮಾತ್ರ ವೀರಶೈವ ಮಠಗಳಿಗೆ, ವೀರಶೈವಮತಕ್ಕೆ ಉತ್ತಮ ಭವಿಷ್ಯವಿದೆ. ಆದುದರಿಂದ "ಒಬ್ಬರಿಗೊಬ್ಬರು ಮತ್ಸರಿಸಬೇಕೆಂದು ಕೊಟ್ಟನೆ ಶ್ರೀ ಗುರು ಲಿಂಗವನು?" ಎಂಬ ಚನ್ನಬಸವಣ್ಣನವರ ಮಾತನ್ನು ಭಕ್ತರೂ ಮಠಾಧೀಶರೂ ನೆನಪಿಸಿಕೊಂಡು, ಕ್ರೈಸ್ತ ಚರ್ಚುಗಳ ಮಾದರಿಯಲ್ಲಿ ಅಥವಾ ಬೇರೆ ಮಾದರಿಯಲ್ಲಿ ವೀರಶೈವ ಮಠಗಳನ್ನು ಮತ್ತೆ ಸಂಘಟಿಸುವ ನವನಿರ್ಮಾಣ ಚಳುವಳಿಯನ್ನು ಆರಂಭಿಸಿ, ಸಮಸಮಾಜಕ್ಕೆ, ಸಮೃದ್ಧಸಮಾಜಕ್ಕೆ ನಾಂದಿ ಹಾಡಬೇಕಿದೆ.

ಇದು, ಒಂದರ್ಥದಲ್ಲಿ ವಿಶ್ವಕೋಶ ಮಾದರಿಯ ಕೃತಿ. ಅಲ್ಪವಿರಾಮ, ಅರ್ಧವಿರಾಮಗಳೇ ಇಂಥ ಕೃತಿಗಳ ಲಕ್ಷಣ. ವಿದ್ವಾಂಸರು ಕಾಲಕಾಲಕ್ಕೆ ಈ ಕೆಲಸವನ್ನು ಪೂರ್ಣವಿರಾಮದೆಡೆಗೆ ಮುನ್ನಡೆಸಬೇಕಾಗುತ್ತದೆ ಈ ದೃಷ್ಟಿಯಿಂದ, ಕನ್ನಡಿಗರು ಪ್ರಸ್ತುತ ಗ್ರಂಥವನ್ನು ಬರಮಾಡಿಕೊಳ್ಳುವರೆಂದು ಆಶಿಸುತ್ತ, ಶ್ರೀ ಚಂದ್ರಶೇಖರ ನಾರಣಾಪುರ ಅವರನ್ನು ಇನ್ನೊಮ್ಮೆ ಅಭಿನಂದಿಸುತ್ತೇನೆ.

ಡಾ. ಎಂ.ಎಂ. ಕಲಬುರ್ಗಿ
ವಿಶ್ರಾಂತ ಕುಲಪತಿಗಳು

ಮಾರ್ಗದರ್ಶಕರ ನುಡಿ

ನನ್ನ ಬಹುದಿನಗಳ ಕನಸೊಂದನ್ನು ಈ ಕೃತಿಯ ರೂಪದಲ್ಲಿ ನನಸುಗೊಳಿಸಿರುವ ನನ್ನ ಬಂಧು ಚಂದ್ರಶೇಖರ ನಾರಣಾಪುರ ಅವರನ್ನು ಮೊದಲು ಅಭಿನಂದಿಸುತ್ತೇನೆ.

ಕರ್ನಾಟಕದಲ್ಲಿರುವ ಎಲ್ಲಾ ವೀರಶೈವ ಮಠಗಳ ಪರಿಚಯ ಮಾಹಿತಿ ಒಂದು ಕಡೆ ದೊರೆಯುವ ಅಮೂಲ್ಯ ದಾಖಲೆಯ ಗ್ರಂಥ ಇದು. ಇಂತಹ ಒಂದು ಮಹತ್ವದ, ಅಗತ್ಯದ ಮತ್ತು ಅಗಾಧ ಪ್ರಮಾಣದ ಕಾರ್ಯವನ್ನು ಕೈಗೊಂಡು ಯಶಸ್ವಿಯಾಗಿರುವ ಲೇಖಕರು ವೀರಶೈವ ಸಾಹಿತ್ಯ ಚರಿತ್ರೆಯ ಮುಂದಿನ ದಾಖಲೆಗಳಲ್ಲಿ ಸ್ಮರಣೀಯ ಸ್ಥಾನ ಪಡೆಯುತ್ತಾರೆ.

ಈ ಕೆಲಸ ಮಾಡಬೇಕೆಂದು ಮನಸ್ಸಾಗಿದೆ ಎಂದು ಐದಾರು ವರ್ಷಗಳ ಹಿಂದೆ ಚಂದ್ರಶೇಖರ ನಾರಣಾಪುರ ಅವರು ನನ್ನ ಬಳಿ ಬಂದು ಪ್ರಸ್ತಾಪಿಸಿದಾಗ, ಇದರ ಅಗತ್ಯವನ್ನು ನಾನು ಮನಗಂಡಿದ್ದರೂ ಇದರ ಅಗಾಧತೆ, ಪರಿಶ್ರಮ, ಎದುರಾಗುವ ಸಮಸ್ಯೆಗಳು, ಹಣದ ಸೌಲಭ್ಯ- ಇವುಗಳ ಬಗೆಗೆ ತಿಳಿಸಿ ಸೂಕ್ತ ಮಾರ್ಗಕ್ರಮವನ್ನು ಮನವರಿಕೆ ಮಾಡಿಕೊಟ್ಟಿದ್ದೆ. ಮಾಹಿತಿ ಸಂಗ್ರಹಕ್ಕೆ ಏಕರೂಪದ ಒಂದು ಚೌಕಟ್ಟು ಹಾಕಿಕೊಳ್ಳಲು ಅಗತ್ಯ ರೂಪುರೇಶೆಗಳನ್ನು ನೀಡಿದ್ದೆ. ಮಾಹಿತಿ ಸಂಗ್ರಹ ಮತ್ತು ಸಂಪನ್ಮೂಲ ಸಂಘಟನೆಗಳ ಬಗೆಗೆ ಎಲ್ಲಾ ಎಚ್ಚರ ಹೇಳಿದ್ದೆ.

ಚಂದ್ರಶೇಖರ ನಾರಣಾಪುರ ಅವರ ಶಕ್ತಿ ಸಾಮರ್ಥ್ಯಗಳ ಬಗೆಗೆ ಮೊದಲು ನನ್ನದೇ ಆದ ಅನುಮಾನವಿತ್ತು. ಆದರೆ ೧೯೯೬ರಲ್ಲಿ ಚಿಕ್ಕಮಗಳೂರಿನಲ್ಲಿ ನಡೆದ ಅಖಿಲ ಭಾರತ ಶರಣಸಾಹಿತ್ಯ ಸಮ್ಮೇಳನದ ಸಂಘಟನಾ ಕಾರ್ಯದರ್ಶಿಯಾಗಿ ನಿರ್ವಹಿಸಿದ ಹೊಣೆಗಾರಿಕೆಯನ್ನು ಕಂಡ ಮೇಲೆ ಅವರ ಕಾರ್ಯಶ್ರದ್ಧೆ ಮತ್ತು ಪ್ರಾಮಾಣಿಕತೆಗಳ ಬಗೆಗೆ ವಿಶ್ವಾಸ ಮೂಡಿತು. ನನ್ನ ವಿಶ್ವಾಸ ಸಾರ್ಥಕವಾಗಿದೆ. ಅವರೀಗ ಕನ್ನಡ ಲೇಖಕರ ಸಾಲಿನಲ್ಲಿ ಅಭಿಮಾನದ ಸ್ಥಾನಗಳಿಸಿದ್ದಾರೆ.

ಈ ಗ್ರಂಥಕ್ಕಾಗಿ ಮಾಹಿತಿ ಸಂಗ್ರಹಿಸುವ, ಬರಹ ಸಿದ್ಧಪಡಿಸುವ, ಸಂಯೋಜಿಸುವ, ಮುದ್ರಿಸುವ- ಹೀಗೆ ಪ್ರತಿಯೊಂದು ಹಂತದಲ್ಲೂ ಅವರು ನನ್ನ ಬಳಿ ಬಂದು ಆಗಿರುವ ಪ್ರಗತಿಯ ವರದಿಮಾಡಿ, ಬರಹ ತೋರಿಸಿ ಮುಂದುವರೆಯುತ್ತ ಬಂದಿದ್ದಾರೆ. ಅವರ ಕಾರ್ಯನಿಷ್ಠೆ ಮತ್ತು ಕಳಕಳಿಯನ್ನು ಕಂಡು ಈ ವ್ಯಕ್ತಿಯಿಂದ ಇಂತಹುದೊಂದು ದೊಡ್ಡ ಪ್ರಮಾಣದ ಕೆಲಸ ಆಗುವುದೆಂಬ ನಂಬಿಕೆ ನನ್ನಲ್ಲಿ ದೃಢವಾಯಿತು.

ಈಗ "ಕರ್ನಾಟಕದ ವೀರಶೈವ ಮಠಗಳು" ಒಂದು ಬೃಹತ್‌ಗ್ರಂಥವಾಗಿ ಓದುಗರ ಮುಂದಿದೆ. ಈ ಗ್ರಂಥಕ್ಕೆ ನಾಡಿನ ಹಿರಿಯ ಸಂಶೋಧಕರೂ, ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳೂ ಆದ ಡಾ. ಎಂ.ಎಂ. ಕಲಬುರ್ಗಿ ಅವರು ಲೇಖಕರ ಪ್ರಯತ್ನವನ್ನು ಮೆಚ್ಚಿಕೊಂಡು ಮೌಲಿಕ ಮುನ್ನುಡಿ ಬರೆದುಕೊಟ್ಟಿರುವುದು ಗ್ರಂಥದ ಗರಿಮೆಗೆ ಸಾಕ್ಷಿಯಾಗಿದೆ ಎಂದು ನಾನು ಭಾವಿಸುತ್ತೇನೆ.

ಈ ಗ್ರಂಥಕ್ಕೆ ಮಾಹಿತಿ ಸಂಗ್ರಹಿಸುವಲ್ಲಿ ಇದನ್ನು ಪ್ರಕಟಿಸುವಲ್ಲಿ ಚಂದ್ರಶೇಖರ ನಾರಣಾಪುರ ಅವರು ಪಟ್ಟಿರುವ ಪಾಡನ್ನು ನಾನು ಚೆನ್ನಾಗಿ ಬಲ್ಲೆ. ನನ್ನ ಬಳಿ ಬಂದಾಗ ಒಮ್ಮೊಮ್ಮೆ ನಿರಾಸೆಗೊಂಡುದೂ ಉಂಟು. ಆದರೂ "ನೀರಿನಲ್ಲಿ ಧುಮುಕಿದ್ದಾಗಿದೆ. ಈಜಾಡಿ ದಡ ಸೇರಬೇಕು" ಎಂದು ನಾನು ಧೈರ್ಯ ಹೇಳುತ್ತಲೇ ಇದ್ದೆ. ಆ ಧೈರ್ಯದ ಊರುಗೋಲು ಹಿಡಿದು ಅಂತೂ ಈಗ ದಡ ಸೇರಿದ್ದಾರೆ. ಅದೊಂದು ಸಮಾಧಾನದ ಸಂಗತಿ.

"ಕರ್ನಾಟಕದ ವೀರಶೈವ ಮಠಗಳು" ಸಂಶೋಧಕರಿಗೆ ಒಂದು ಗಮನಾರ್ಹ ಆಕರ ಗ್ರಂಥವಾಗಲಿದೆ ಎಂಬುದರಲ್ಲಿ ಸಂಶಯವಿಲ್ಲ. ಇಲ್ಲಿ ಲೇಖಕರು ತಮ್ಮದಾದ ಯಾವುದೇ ಅಭಿಪ್ರಾಯಗಳನ್ನು ಸೂಚಿಸದೆ, ವ್ಯಾಖ್ಯಾನ

ಮಾಡದೆ, ಪ್ರತಿಯೊಂದು ವೀರಶೈವ ಮಠದ ಅಧಿಪತಿಗಳು, ಪ್ರತಿನಿಧಿಗಳು ಅಥವಾ ಸ್ಥಳೀಯ ಮುಖ್ಯರು ಕೊಟ್ಟ ಮಾಹಿತಿಯನ್ನು ಕೊಟ್ಟಂತೆ ದಾಖಲಿಸಿದ್ದಾರೆ. ಹೀಗೆ ದಾಖಲು ಮಾಡುವಾಗಲೂ ಲೇಖಕರು ಯಾವುದೇ ಮಠದ ಘನತೆ ಗೌರವಗಳಿಗೆ ಕುಂದು ಬರದಂತೆ ಎಚ್ಚರವಹಿಸಿದ್ದಾರೆ.

ಇಂತಹ ಮಾಹಿತಿ ಸಂಗ್ರಹ ಬಹಳ ಕಷ್ಟದ ಕೆಲಸ. ಕೆಲವರು ಅತಿ ಉತ್ಸಾಹದಿಂದ ಅತ್ಯುತ್ತಮ ಮಾಹಿತಿ ನೀಡಬಹುದು. ಕೆಲವರು ನಿರಾಸಕ್ತಿಯಿಂದ ಸ್ಪಷ್ಟ ಮಾಹಿತಿ ನೀಡದಿರಬಹುದು. ಇನ್ನೂ ಕೆಲವರು ಅನುಮಾನದಿಂದ ಮಾಹಿತಿಯನ್ನೇ ನೀಡದಿರಬಹುದು. ಮತ್ತೆ ಕೆಲವರು "ನಮ್ಮದೂ ದಾಖಲಾಗಲಿ" ಎಂದು ಕಲ್ಪಿತ ಮಾಹಿತಿಯನ್ನು ನೀಡಬಹುದು. ಇಂತಹ ದಾಖಲೆಯ ಮಹತ್ವವನ್ನು ಅರಿತವರು ವಸ್ತುನಿಷ್ಠ ಮಾಹಿತಿ ನೀಡಬಹುದು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಮಾಹಿತಿ ಸಂಗ್ರಹಿಸಬೇಕೆಂದು ನಾನು ಲೇಖಕರಿಗೆ ಮೊದಲೇ ತಿಳಿಸಿದ್ದೆ. ಅಂತೇ ಅವರು ತುಂಬಾ ಜಾಗರೂಕತೆಯಿಂದ ಅಧಿಕೃತ ಮಾಹಿತಿ ಸಂಗ್ರಹಿಸಿ ವಸ್ತುಸ್ಥಿತಿಯನ್ನು ಓದುಗರ ಮುಂದಿಟ್ಟಿದ್ದಾರೆ. ಇಲ್ಲಿ ಅವರನ್ನು ಉದ್ದಕ್ಕೂ ಕೈಹಿಡಿದು ನಡೆಸಿರುವುದು ಅವರ ಸಾಮಾನ್ಯ ಪ್ರಜ್ಞೆ. ಸದು ವಿನಯದ ಬಳಿಸಾರಿಕೆ.

ವೀರಶೈವ ಸಂಸ್ಕೃತಿ, ಧರ್ಮ ಮತ್ತು ಸಮಾಜಗಳು ನಡೆದು ಬಂದ ಬಗೆಯನ್ನು ತಿಳಿಯಲು ಇಲ್ಲಿನ ಮಾಹಿತಿ ಬಹುಮಟ್ಟಿಗೆ ನೆರವಾಗುತ್ತದೆ. ವೀರಶೈವ ಮಠಗಳು ಸಮಷ್ಟಿ ಹಿತಕ್ಕಾಗಿ ಸಲ್ಲಿಸುತ್ತಾ ಬಂದಿರುವ ಸ್ಮರಣೀಯ ಕಾರ್ಯಗಳ ಜೊತೆಗೆ, ಈ ಮಠಗಳು ಮುಂಬರುವ ದಿನಗಳಲ್ಲಿ ನಿರ್ವಹಿಸಬೇಕಾದ ಮತ್ತು ನಿರ್ವಹಿಸಬಹುದಾದ ಪಾತ್ರಗಳ ಸುಳಿವನ್ನು ನೀಡುತ್ತದೆ. ನಿಜಕ್ಕೂ ಇದೊಂದು ಬೆಟ್ಟದ ಕೆಲಸ; ಗಟ್ಟಿ ಕೆಲಸ.

ವೀರಶೈವ ಪರಂಪರೆಯ ಮಠಗಳು ಮತ್ತು ಸಮಾಜ ಬಂಧುಗಳು ಚಂದ್ರಶೇಖರ ನಾರಣಾಪುರ ಅವರ ಈ ಮಹತ್ಕಾರ್ಯವನ್ನು ಗುರುತಿಸಿ ಮನ್ನಣೆ ನೀಡುವಂತಾಗಬೇಕು. ಪ್ರತಿಯೊಂದು ವೀರಶೈವ ಮನೆಯಲ್ಲೂ ಈ ಗ್ರಂಥದ ಒಂದು ಪ್ರತಿ ಇರುವಂತಾಗಬೇಕು. ಇಲ್ಲಿ ಪರಿಚಯಗೊಂಡಿರುವ ಎಲ್ಲಾ ಮಠಗಳು ತಲಾ ೫-೧೦ ಪ್ರತಿಗಳನ್ನು ತಮ್ಮ ಗ್ರಂಥ ಭಂಡಾರಗಳಿಗಾಗಿ ಕೊಂಡು ಲೇಖಕರು ಪಟ್ಟಿರುವ ಶ್ರಮಕ್ಕೆ ಪರಿಹಾರ ನೀಡುವಂತಾಗಬೇಕು.

ವೈಯಕ್ತಿಕವಾಗಿ ನನಗಂತೂ ಇದು ನಾನೇ ಮಾಡಿದ ಕೆಲಸವೆನ್ನುವಷ್ಟು ಚಂದ್ರಶೇಖರ ನಾರಣಾಪುರ ಅವರ ಬಗೆಗೆ ನನ್ನ ಅಭಿಮಾನ.

ಈ ಗ್ರಂಥ ಇನ್ನೂ ಅನೇಕ ಸಂಶೋಧನೆಗಳಿಗೆ, ಸಂಶೋಧಕರಿಗೆ ಸಾಕಷ್ಟು ಸಾಮಗ್ರಿ ಒದಗಿಸಿದೆ. ಈ ದೃಷ್ಟಿಯಿಂದ ಇದು ಸಾರ್ಥಕ ಗ್ರಂಥ.

ಚಂದ್ರಶೇಖರ ನಾರಣಾಪುರ ಅವರ ಅನನ್ಯ ಮತ್ತು ಅವಿರತ ಪ್ರಯತ್ನದ ಫಲವಾಗಿ ಮೂಡಿ ಬಂದಿರುವ ಈ ಬೃಹತ್‌ಗ್ರಂಥ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ, ಅದರಲ್ಲೂ ವೀರಶೈವ ಸಾಹಿತ್ಯಕ್ಕೆ ಒಂದು ಬೆಲೆಬಾಳುವ ಕೊಡುಗೆಯಾಗಿದೆ. ಈ ಲೇಖಕರಿಂದ ಇಂತಹ ಮಹತ್ವದ ಕೆಲಸಗಳು ಮತ್ತಷ್ಟು ನಡೆಯುವಂತಾಗಲಿ.

ಬೆಂಗಳೂರು
೨೦-೫-೨೦೦೨

ಗೊ.ರು.ಚನ್ನಬಸಪ್ಪ
ಅಧ್ಯಕ್ಷರು
ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು

ಪ್ರಸ್ತಾವನೆ

ಭರತಖಂಡದಲ್ಲಿ ಧರ್ಮಕ್ಕೆ ಇರುವಷ್ಟು ಪ್ರಾಮುಖ್ಯತೆ ಬೇರೆ ಯಾವ ದೇಶದಲ್ಲಿಯೂ ಇರಲಿಕ್ಕಿಲ್ಲ. ಭಾರತದಲ್ಲಿ ಹಲವು ಧರ್ಮಗಳು ತಮ್ಮ ಅಸ್ತಿತ್ವವನ್ನು ಬೆಳೆಸಿಕೊಂಡಿವೆ. ಪುರಾತನ ಹಿಂದೂಧರ್ಮದಲ್ಲಿ ಅನೇಕ ಶಾಖೆಗಳು ಇದ್ದು ಪ್ರತಿಯೊಂದೂ ಶಾಖೆಗೂ ಧರ್ಮಾಧಿಕಾರಿ ಅಥವಾ ಗುರುಗಳು ಇದ್ದಾರೆ. ಅದೇ ರೀತಿ ಬೌದ್ಧಧರ್ಮ, ಜೈನಧರ್ಮ, ವೀರಶೈವಧರ್ಮ, ಸಿಖ್‌ಧರ್ಮಗಳು ಅಸ್ತಿತ್ವದಲ್ಲಿದ್ದು ತಮ್ಮದೇ ಆದ ತತ್ತ್ವಗಳೊಂದಿಗೆ ಹಿಂದೂ ಧರ್ಮದೊಂದಿಗೆ ಬೆಳೆದು ಬಂದಿವೆ. ಈ ಎಲ್ಲಾ ಧರ್ಮಗಳು ಕೇಂದ್ರಗಳನ್ನು ಸ್ಥಾಪಿಸಿಕೊಂಡು ಧರ್ಮಪ್ರಚಾರವನ್ನು ಮಾಡುತ್ತಾ ಬಂದಿವೆ. ಧರ್ಮಪ್ರಚಾರಕರು ಅಥವಾ ಸಂನ್ಯಾಸಿಗಳು ನೆಲೆನಿಂತ ಕೇಂದ್ರಗಳೇ ಮಠಗಳಾಗಿ ಹೆಸರು ಪಡೆದಿವೆ. ಈ ಮಠಗಳ ಬಿಡಿ ಬಿಡಿ ಅಧ್ಯಯನ ನಡೆದಿದೆಯಾದರೂ ಭಾರತದ ಎಲ್ಲಾ ಮಠಗಳ ಸಮಗ್ರ ಅಧ್ಯಯನ ನಡೆದಿರಲಿಲ್ಲ. ಈಗ ಇಂತಹ ಒಂದು ಶೋಧನೆ **"ಮಠಗಳ ಪರಂಪರೆ- ಮಾಹಿತಿಕೋಶ "** ಸಂಪುಟಗಳಿಂದ ನಡೆಯಲಿದೆ.

ಇದೊಂದು ಬೃಹತ್ ಯೋಜನೆ. ಇದನ್ನು ಮೂರು ಭಾಗಗಳಾಗಿ ಮಾಡಿಕೊಂಡು ಮೂರು ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆ ನನ್ನದು. ಕರ್ನಾಟದಲ್ಲಿ, ಭಾರತದಲ್ಲಿರುವ ಮಠಗಳ ಮೂರನೇ ಒಂದು ಭಾಗದಷ್ಟು ವೀರಶೈವ ಮಠಗಳು ಸ್ಥಾಪನೆಯಾಗಿವೆ. ಇವುಗಳ ಮೊದಲ ಸಂಪುಟವೇ **"ಕರ್ನಾಟಕದ ವೀರಶೈವ ಮಠಗಳು"** ಕರ್ನಾಟಕದಲ್ಲಿ ಪುರಾತನ ಕಾಲದಿಂದ ಈವರೆಗೆ ಸ್ಥಾಪನೆಯಾಗಿರುವ ಇತರ ಎಲ್ಲಾ ಮಠಗಳನ್ನು ಒಳಗೊಂಡ ಮಾಹಿತಿಯು ಎರಡನೆಯ ಸಂಪುಟದಲ್ಲಿಯೂ, ಹೊರರಾಜ್ಯದ ಮಠಗಳನ್ನು ಕುರಿತ ಮಾಹಿತಿಯು ಮೂರನೆಯ ಸಂಪುಟದಲ್ಲೂ ದೊರೆಯಲಿದೆ.

ಮೊದಲ ಸಂಪುಟ

ಕರ್ನಾಟಕದ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಕ್ಷೇತ್ರಕ್ಕೆ ವೀರಶೈವ ಮಠಗಳು ನೀಡಿದ ಕೊಡುಗೆ ಅಪಾರವಾಗಿದೆ. ಸಮಗ್ರ ಕರ್ನಾಟಕದ ಬಹುಮುಖ ಅಭಿವೃದ್ಧಿಯ ಹಿಂದೆ ಈ ನಾಡಿನ ವೀರಶೈವ ಮಠಗಳ ಪಾತ್ರವನ್ನು ಮರೆಯುವಂತಿಲ್ಲ. ಸರ್ವಸಮಾನತೆಯ ನೆಲಗಟ್ಟಿನ ಮೇಲೆ ಮಾನವೀಯ ಮೌಲ್ಯಗಳನ್ನು, ನಿಜಧರ್ಮದ ಬೆಳಕನ್ನು ನೀಡಿದ್ದಲ್ಲದೆ, ದಲಿತರಿಗೆ ನ್ಯಾಯ ದೊರಕಿಸಿಕೊಟ್ಟು ಅವರಲ್ಲಿ ಆತ್ಮಗೌರವ ಮೂಡುವಂತೆ ಮಾಡುವಲ್ಲಿಯೂ ವೀರಶೈವ ಮಠಗಳು ಶ್ರಮಿಸಿವೆ.

ರೇವಣಸಿದ್ಧ, ಅಲ್ಲಮಪ್ರಭು, ಬಸವಣ್ಣ, ಚನ್ನಬಸವಣ್ಣ, ತೋಂಟದ ಸಿದ್ಧಲಿಂಗಯತಿಗಳು, ನಂತರದ ಅಪಾರ ಸಂಖ್ಯೆಯ ವೀರಶೈವ ಗುರುಗಳಿಂದ ವೀರಶೈವ ಧರ್ಮವು ಬದಲಾದ ಕಾಲ, ಪರಿಸರದಲ್ಲಿ ಹೊಸ ಹೊಸ ಮೌಲ್ಯಗಳನ್ನು ರೂಢಿಸಿಕೊಳ್ಳುತ್ತ,ವಿಕಾಸಗೊಳ್ಳುತ್ತ ಸುಭದ್ರವಾಗಿ ಬೆಳೆಯುತ್ತ ಬಂದಿದೆ. ವೀರಶೈವ ಧರ್ಮದ ಕ್ರಿಯಾ ಕೇಂದ್ರಗಳಾದ ಮಠಗಳು ಸಂಖ್ಯಾದೃಷ್ಟಿಯಿಂದ ಅಪಾರವಾಗಿವೆ. ಇವುಗಳ ಒಟ್ಟು ಅಧ್ಯಯನ ಈವರೆಗೆ ನಡೆಯದೇ ಇದ್ದುದು ಒಂದು ವಿಷಾದವೇ ಸರಿ. ಕರ್ನಾಟಕದಲ್ಲಿ ಹನ್ನೆರಡನೆಯ ಶತಮಾನ ಮತ್ತು ಅದಕ್ಕೂ ಮೊದಲು ಸ್ಥಾಪನೆಯಾದ ಮಠಗಳ ಸಂಖ್ಯೆ ಎಷ್ಟು? ಈ ಪ್ರಶ್ನೆ ಬಂದಾಗ ಅಂಧರು ಆನೆಯನ್ನು ವರ್ಣಿಸುವ ರೀತಿಯಲ್ಲಿ ತಮ್ಮ ತಮ್ಮ ಕಲ್ಪನೆಗೆ ಬಂದಂತೆ ಹೇಳುವ ಪರಿಪಾಠ ನಡೆಯುತ್ತ ಬಂದಿದೆ.

ಈಗಾಗಲೇ ಬಿಡಿ ಬಿಡಿ ಮಠಗಳ, ಬಿಡಿ ಬಿಡಿ ಅಧ್ಯಯನ, ಸಂಶೋಧನೆ, ಶೋಧನೆ, ಮಾಹಿತಿ ಕುರಿತಂತೆ ಪುಸ್ತಕಗಳು ಪ್ರಕಟಗೊಂಡಿವೆ. ಇಷ್ಟಾದರೂ ಕರ್ನಾಟಕದ ಎಲ್ಲಾ ಮಠಗಳ ಬಗ್ಗೆ ವಿವರ ದೊರೆಯದಂತಾಗಿದೆ. ೧೯೯೫ರಲ್ಲಿ ಒಂದು ವಿಶೇಷ ಸಂಚಿಕೆಗೆ 'ಕರ್ನಾಟಕದ ವೀರಶೈವ ಮಠಗಳ ಶೈಕ್ಷಣಿಕ ಕೊಡುಗೆ' ಎಂಬ ವಿಷಯದಲ್ಲಿ ಲೇಖನ ಬರೆಯಲು ಆಹ್ವಾನ ಬಂದಾಗ ನನಗೆ ಗೊತ್ತಿದ್ದ ಸುತ್ತಮುತ್ತಲಿನ ಮಠಗಳ ಶೈಕ್ಷಣಿಕ ಕೊಡುಗೆ ಏನು ಎಂದು

ಯೋಚಿಸಿ, ಲೇಖನ ಬರೆದು ಮುಗಿಸಿದಾಗ ಬೇರೆ ಬೇರೆ ಜಿಲ್ಲೆಗಳಲ್ಲಿರುವ ವೀರಶೈವ ಮಠಗಳ ಕೊಡುಗೆ ಏನು? ಎಂಬ ಪ್ರಶ್ನೆ ನನ್ನನ್ನು ಕಾಡಿತು. ಇದನ್ನು ತಿಳಿಯುವ ಪ್ರಯತ್ನ ಮಾಡಿದಾಗ ಕರ್ನಾಟಕದ ವೀರಶೈವ ಮಠಗಳ ಒಟ್ಟು ಅಧ್ಯಯನ ಹಾಗೂ ಮಾಹಿತಿ ಸಂಗ್ರಹ ನಮ್ಮಲ್ಲಿಲ್ಲದಿರುವ ಸತ್ಯ ನನ್ನ ಅರಿವಿಗೆ ಬಂತು. ಶೋಧನೆ ಕೆಲಸ ಕಷ್ಟವಾದರೂ ಈ ಸಾಹಸಕ್ಕೆ ಕೈಹಾಕಿದ ನಾನು ರಾಜ್ಯದ ಇಪ್ಪತ್ತೇಳು ಜಿಲ್ಲೆಗಳಲ್ಲಿ ಪ್ರವಾಸಮಾಡಿ, ಪ್ರತಿ ಮಠಕ್ಕೂ ಭೇಟಿ ನೀಡಿ ಮಾಹಿತಿಯನ್ನು ಸಂಗ್ರಹಿಸಿ ಗ್ರಂಥರೂಪದಲ್ಲಿ ತರಲು ನಿರ್ಧರಿಸಿದೆ.

ಅಂತೆಯೇ, ಶೋಧನೆ ಕೆಲಸದ ಕಡೆ ಆಸಕ್ತಿ ವಹಿಸಿದೆ. ಹಿರಿಯರೂ, ಮಾರ್ಗದರ್ಶಕರೂ ಆದ ಶ್ರೀ ಗೊ.ರು.ಚ. ಅವರ ಬಳಿಗೆ ಹೋಗಿ ಶೋಧನೆ ಕೆಲಸ ಪ್ರಾರಂಭಿಸುವ ಬಗ್ಗೆ ಕೇಳಿಕೊಂಡೆ. ಅವರು ಸಂತೋಷಗೊಂಡು ಪ್ರೋತ್ಸಾಹದ ಮಾತುಗಳ ಜತೆಗೆ ಕೆಲವು ಹಿರಿಯರು ಈ ದುರ್ಗಮ ಸಾಹಸಕ್ಕೆ ಕೈಹಾಕಿ ಹಿಂದೆ ಸರಿದಿದ್ದನ್ನು ನೆನಪಿಸಿಕೊಟ್ಟು, ಅಧೀರನಾಗದಂತೆ ಸಲಹೆ ನೀಡಿ, ಬೆನ್ನು ತಟ್ಟಿ ಮಾರ್ಗದರ್ಶನ ನೀಡಿದರು.

"ಕರ್ನಾಟಕದ ವೀರಶೈವ ಮಠಗಳು" ಎಂಬ ಶೀರ್ಷಿಕೆಯ ಈ ಗ್ರಂಥವನ್ನು ನನ್ನ ಆರ್ಥಿಕ ಅನುಕೂಲತೆಯನ್ನು ಗಮನದಲ್ಲಿಟ್ಟುಕೊಂಡು ನಾಲ್ಕು ಸಂಪುಟಗಳಲ್ಲಿ ಹೊರತರಲು ಕಾರ್ಯ ಯೋಜನೆ ತಯಾರಿಸಿಕೊಂಡು ಚಿಕ್ಕಮಗಳೂರು, ಕೊಡಗು, ಉತ್ತರ ಕನ್ನಡ ಮತ್ತು ಬೆಳಗಾವಿ ಜಿಲ್ಲೆಗಳನ್ನು ಒಳಗೊಂಡಂತೆ ಮೊದಲ ಸಂಪುಟವನ್ನು ೧೯೯೪ರಲ್ಲಿ ಪ್ರಕಟಿಸಿದೆ. ೨೦೦ ಪುಟಗಳ ಈ ಕೃತಿಯನ್ನು ಪ್ರಕಟಿಸಲು ನಾನು ಪಟ್ಟ ಕಷ್ಟ ಹೇಳತೀರದು. ಆಗ ಚಿಕ್ಕಮಗಳೂರು ಜಿಲ್ಲೆಯ ಧರ್ಮಪ್ರಕಾಶ ಅರಳಗುಪ್ಪೆ ಚಂದ್ರೇಗೌಡರ ಮನೆತನದ ಹಿರಿಯರೂ, ಕೊಡುಗೈ ದಾನಿಗಳೂ ಆದ ಶ್ರೀ ಎ.ಎಂ.ಬಸವೇಗೌಡರು ನನ್ನ ಪ್ರಯತ್ನ ಕಂಡು ಪ್ರಕಟಣೆಗೆ ಬೇಕಾಗುವ ಸಮಸ್ತ ಖರ್ಚನ್ನು ತಾವೇ ವಹಿಸಿಕೊಂಡು ನೆರವಾದರು. ಈ ಕಾರಣಕ್ಕೆ ನಾನು ಶ್ರೀ ಎ.ಎಂ.ಬಸವೇಗೌಡರ ಮನೆತನಕ್ಕೆ ಚಿರಋಣಿಯಾಗಿರುವೆ. ಆರ್ಥಿಕ ಭಾರ ಬಸವೇಗೌಡರಿಂದ ಇಳಿದ ಮೇಲೆ ಬೆಂಗಳೂರಿನಲ್ಲಿ ಪುಸ್ತಕ ಬಿಡುಗಡೆಯಾಯಿತು. ಮೊದಲ ಸಂಪುಟದಲ್ಲಿ ಅನೇಕ ಕೊರತೆಗಳು ಕಂಡುಬಂದವು. ಆದರೂ ಮುಂದಿನ ಕ್ರಮಬದ್ಧ ಸಮೀಕ್ಷೆಗೆ ಇದು ದಾರಿಯಾಗುತ್ತದೆ ಎಂದು ಹಿರಿಯ ಸಂಶೋಧಕರಾದ ಡಾ.ಎಂ.ಚಿದಾನಂದಮೂರ್ತಿಯವರು ಅಭಿಪ್ರಾಯಿಸಿದರು.

ನಂತರ ಸಮಾಜ ತೋರಿದ ನಿರುತ್ಸಾಹದಿಂದ ಮುಂದಿನ ಯೋಜನೆಯನ್ನು ಕೈಗೆತ್ತಿಕೊಳ್ಳುವುದೇ ಒಂದು ಕಷ್ಟದ ಕೆಲಸವಾಗಿ ಪರಿಣಮಿಸಿತು. ಗೃಹಸ್ಥಾಶ್ರಮಕ್ಕೆ ಕಾಲಿಟ್ಟಿದ್ದ ನನಗೆ ಕೌಟುಂಬಿಕ ಹಾಗೂ ವೃತ್ತಪತ್ರಿಕೆಯ ಕೆಲಸಗಳು ಹೆಚ್ಚಾಗಿ, ಮಠಗಳ ಶೋಧನೆ ಕೆಲಸ ಸ್ಥಗಿತಗೊಂಡಿತು. ಡಾ.ಎಂ.ಚಿದಾನಂದಮೂರ್ತಿ ಹಾಗೂ ಗೊ.ರು.ಚ.ರವರು ಹಿಡಿದ ಕೆಲಸ ಪೂರೈಸುವಂತೆ ಒತ್ತಡ ತರುತ್ತಲೇ ಬಂದರು. ಹಾಗಾಗಿ ಸ್ಥಗಿತಗೊಂಡ ಕೆಲಸ ಪುನರಾರಂಭವಾಯಿತು.

ಮೊದಲ ಸಂಪುಟದಲ್ಲಿ ಆದಂತಹ ಎಲ್ಲಾ ತಪ್ಪುಗಳನ್ನು ತಿದ್ದಿಕೊಳ್ಳುವ ದೃಷ್ಟಿಯಿಂದ, ಕ್ಷೇತ್ರ ಸುತ್ತಾಟದಲ್ಲಿ ಗಮನಿಸಬೇಕಾದ ಅಂಶಗಳ ಬಗ್ಗೆ, ನನ್ನ ಕಾರ್ಯವ್ಯಾಪ್ತಿಯ ಬಗ್ಗೆ ಶ್ರೀ ಗೊ.ರು.ಚ. ಹಾಗೂ ಡಾ. ಎಂ. ಚಿದಾನಂದಮೂರ್ತಿ ಅವರ ಮಾರ್ಗದರ್ಶನದಂತೆ ಒಂದು ಚೌಕಟ್ಟನ್ನು ತಯಾರಿಸಿಕೊಂಡೆ. ಈ ಚೌಕಟ್ಟಿನ ಆಚೆ-ಈಚೆ ಸರಿಯದಂತೆ ಎಚ್ಚರವಹಿಸಿ ಸಂಶೋಧಕನಾಗಿ ಕೆಲಸ ನಿರ್ವಹಿಸದೆ, ಬರೀ ಮಾಹಿತಿ ಸಂಗ್ರಾಹಕನಾಗಿ ಮಾಹಿತಿಯನ್ನು ಸಂಗ್ರಹಿಸತೊಡಗಿದೆ. ನನ್ನ ಪರಿಶ್ರಮವನ್ನು ನೋಡಿದ ವಿದ್ವಾಂಸರುಗಳು, ಈ ಹಿಂದೆ ಪ್ರಕಟಗೊಂಡ ಮೊದಲ ಸಂಪುಟವೂ ಸೇರಿದಂತೆ ಇಪ್ಪತ್ತೇಳು ಜಿಲ್ಲೆಗಳ ಸಮಗ್ರ ಮಾಹಿತಿ ಒಂದೇ ಸಂಪುಟದಲ್ಲಿ ದೊರೆಯುವಂತಾದರೆ ಮುಂದಿನ ಸಂಶೋಧನೆಗಳಿಗೆ ನೆರವಾಗುವುದಲ್ಲದೆ, ಇಂತಹ ದಾಖಲೆ ಪುಸ್ತಕಗಳು ಸಮಗ್ರವಾದ ಒಂದೇ ಸಂಪುಟದಲ್ಲಿ ಬರಬೇಕೆಂದು ಸಲಹೆನೀಡಿ, ನನಗೆ ನೈತಿಕ ಧೈರ್ಯವನ್ನು ತುಂಬಿದರು.

ಹಿರಿಯರ ಮಾರ್ಗದರ್ಶನದಿಂದ ಮಾಹಿತಿ ಸಂಗ್ರಹದ ಕೆಲಸ ನಡೆಯುತ್ತಿತ್ತಾದರೂ ಆರ್ಥಿಕವಾಗಿ ಅನೇಕ ನೋವುಗಳನ್ನು ಅನುಭವಿಸಬೇಕಾಯಿತು. ಈ ನೋವನ್ನು ಮೊದಲಿಗೆ ಅರ್ಥಮಾಡಿಕೊಂಡವರು ಶ್ರೀ ರಂಭಾಪುರಿ ಪೀಠದ ಜಗದ್ಗುರು ಶ್ರೀ ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಭಗವತ್ಪಾದ ಮಹಾಸ್ವಾಮಿಗಳು. ಗುರುಗಳು ಚಿಕ್ಕಮಗಳೂರಿಗೆ ಆಗಮಿಸಿದ್ದ ಸಂದರ್ಭದಲ್ಲಿ ಪುಸ್ತಕದ ಕೆಲಸದ ಬಗ್ಗೆ ವಿಚಾರಿಸಿ ಪೀಠಕ್ಕೆ ಬರಲು ಹೇಳಿದರು. ಗುರುಗಳ ಸೂಚನೆಯಂತೆ ಪೀಠಕ್ಕೆ ಹೋದಾಗ, ಈ ಯೋಜನೆಗೆ ಕೈಗೊಂಡ ಹಣಕಾಸಿನ ವ್ಯವಸ್ಥೆಯ ಬಗ್ಗೆ ವಿಚಾರಿಸಿದರು. ನನ್ನ ದುಡಿಮೆಯಿಂದ ಬಂದ ಹಣವನ್ನು ನನ್ನ ಸಂಸಾರದ ನಿರ್ವಹಣೆಗೆ ಬಳಸಿಕೊಳ್ಳದೆ, ಈ ಯೋಜನೆಗೆ ವ್ಯಯ ಮಾಡುತ್ತಿರುವುದಾಗಿ ತಿಳಿಸಿದ ಮೇಲೆ ಇಪ್ಪತ್ತೈದು ಸಹಸ್ರ ರೂ.ಗಳನ್ನು ನೀಡಿ, ಆದಷ್ಟು ಬೇಗ ಕ್ಷೇತ್ರ ಕಾರ್ಯವನ್ನು ಮುಗಿಸಲು ಆಶೀರ್ವದಿಸಿದರು. ಅಷ್ಟೇ ಅಲ್ಲದೆ ಚಿಕ್ಕಮಗಳೂರಿನ ದಾನಿಗಳ ಹತ್ತಿರ ನೆರವು ಪಡೆಯಲು ಮಾರ್ಗದರ್ಶನ ಮಾಡಿ ಒಂದುಲಕ್ಷರೂ. ಹಣ ಸಂಗ್ರಹವಾಗಲು ಕಾರಣಕರ್ತರಾದರು. ಇದರಿಂದ ಮಂದಗತಿಯಲ್ಲಿ ಸಾಗಿದ್ದ ಸಮೀಕ್ಷಾ ಕಾರ್ಯ ೧೯೯೯ರಿಂದ ಚುರುಕುಗೊಂಡು, ೨೦೦೦ದ ಏಪ್ರಿಲ್‌ನಲ್ಲಿ ೨೭ ಜಿಲ್ಲೆಗಳ ಕ್ಷೇತ್ರ ಸುತ್ತಾಟ ಮುಗಿಸಿದ್ದಾಯಿತು. ಈ ಸಂದರ್ಭದಲ್ಲಿ ನಿರಾಶೆ, ನೋವು, ಕೆಲವರಿಂದ ಅವಮಾನ, ಕೆಲವು ಕಡೆ ನಿಂದೆ-ನಿಷ್ಠುರಗಳನ್ನು ಎದುರಿಸಬೇಕಾಯಿತು. ಆದರೂ ಹಲವರು ಬೆನ್ನುತಟ್ಟಿ, ಪ್ರೋತ್ಸಾಹಿಸಿದರು. ಇದಕ್ಕಾಗಿ ಪೂಜ್ಯ ಜಗದ್ಗುರುಗಳಿಗೆ ನಾನು ಕೃತಜ್ಞನಾಗಿದ್ದೇನೆ.

ಮೊದಲ ಸಂಪುಟದಲ್ಲಿ ಪ್ರಕಟವಾಗಿದ್ದ ನಾಲ್ಕು ಜಿಲ್ಲೆಗಳ ಮಠಗಳ ಮಾಹಿತಿ ಅಪೂರ್ಣವಾಗಿದ್ದನ್ನು ಮನಗಂಡು, ಮತ್ತೊಮ್ಮೆ ಹೆಚ್ಚಿನ ಮಾಹಿತಿ ಸಂಗ್ರಹಿಸಿ ಬರವಣಿಗೆ ಕಾರ್ಯ ಪ್ರಾರಂಭಿಸಿದೆ. ಒಂದು ವರ್ಷಕಾಲ ಮನೆ ಬಿಟ್ಟು ಹೊರಗೆ ಬರದೆ ಇದ್ದದ್ದು ಹೊರಗಿನ ಪ್ರಪಂಚಕ್ಕೆ ಆಶ್ಚರ್ಯ ತಂದಿತ್ತು. ೨೪೬ ದಿನಗಳ ಪ್ರವಾಸ,ನಂತರ ಬರವಣಿಗೆ ಮತ್ತು ಡಿ.ಟಿ.ಪಿ. ಕೆಲಸ ಮುಗಿಸಲು ೪೮೦ ದಿನಗಳು ಬೇಕಾಯಿತು. ಇಷ್ಟು ದಿನಗಳು ಹೊರ ಪ್ರಪಂಚದ ಸಂಪರ್ಕವನ್ನು ಕಳೆದುಕೊಂಡು ಏಕಾಂತವಾಗಿದ್ದುದು ಒಂದು ತರಹದ ತಪಸ್ಸೇ ಆಗಿತ್ತು. ಈ ಸಂದರ್ಭದಲ್ಲಿ ನನ್ನ ವೃತ್ತಿಗೆ ಪೆಟ್ಟು ಬಿತ್ತು. ನಿಯತಕಾಲಿಕೆ ನಿಯಮ ತಪ್ಪಿತು. ಆದರೂ ಆ ಕಡೆ ಗಮನಕೊಡದೆ, ಪತ್ನಿ ಮತ್ತು ಮಕ್ಕಳ ಬೇಕು ಬೇಡಗಳಿಗೂ ಸ್ಪಂದಿಸದೆ, ಅವರ ಪಾಲಿಗೆ ಇದ್ದೂ ಇಲ್ಲದಂತಿದ್ದೆ. ಈ ಸಂದರ್ಭದಲ್ಲಿ ಸಹಕರಿಸಿದ ನನ್ನ ಪತ್ನಿ ಜಿ.ಎಸ್.ಲಾವಣ್ಯ, ಮಕ್ಕಳಾದ ಮೇಘ ಹಾಗೂ ವಚನ ಇವರಿಗೆ ನಾನು ಆಭಾರಿಯಾಗಿದ್ದೇನೆ.

ಒಡಲೊಳಗೆ

ಧಾರ್ಮಿಕ, ಸಾಂಸ್ಕೃತಿಕ ಸಂಸ್ಥೆಗಳಾದ ಮಠಮಾನ್ಯಗಳಿಗೂ ಸಮಾಜಕ್ಕೂ ಅವಿನಾಭಾವ ಸಂಬಂಧವಿದೆ. ಒಂದು ಕಾಲಕ್ಕೆ ಸಮಾಜದ ಬದುಕನ್ನು ನಿಯಂತ್ರಿಸಬಲ್ಲ, ರೂಪಿಸಬಲ್ಲ ಮಹತ್ತರವಾದ ಸಂಸ್ಥೆಗಳಾಗಿ ಮಠಮಾನ್ಯ ಗಳು ಬೆಳೆದು ನಿಂತಿದ್ದವು. ಸಾಂಸ್ಕೃತಿಕ ಪರಿಚಾರಕರಂತೆ ಕೆಲಸ ಮಾಡಿದ ಸಾವಿರಾರು ಮಠಗಳು ದಾಖಲೆಗೆ ಯೋಗ್ಯವಾಗಿವೆ. ಆದರೆ ಇತ್ತೀಚೆಗೆ ಊರಿಗೊಂದು ಮಠ, ಓಣಿಗೊಂದು ಮಠ, ಮನೆಗೊಂದು ಮಠ ಸ್ಥಾಪನೆಯಾಗಿ ತಮ್ಮ ಲೌಕಿಕ ಉಪಜೀವನದ ಮೂಲಾಧಾರದಂತೆ ವ್ಯವಹರಿಸುತ್ತಿವೆ. ಇದರಿಂದಾಗಿ ನಮ್ಮ ಪ್ರಾಚೀನ ಮಠಗಳಿಗಿದ್ದ ಅರ್ಥವ್ಯಾಪ್ತಿ ಇಂದು ಸಂಕುಚಿತಗೊಂಡಂತಿದೆ. ಅದರಲ್ಲೂ ಜನ ಸಮುದಾಯದ ಸರ್ವಾಂಗೀಣ ಅಭಿವೃದ್ಧಿಗೆ ಅವಿರತವಾಗಿ ಶ್ರಮಿಸಿದ ಅದೆಷ್ಟೋ ಮಠಗಳು ತಮ್ಮ ಮೂಲ ಅಸ್ತಿತ್ವವನ್ನು ಕಳೆದುಕೊಂಡು, ಹೆಸರಿನಿಂದಷ್ಟೇ ಪರಿಚಿತಗೊಂಡು ತೃಪ್ತಿಪಡಬೇಕಾಗಿದೆ. ಇದು ಎಷ್ಟರಮಟ್ಟಿಗೆ ಮುಂದುವರೆದಿದೆ ಎಂದರೆ ಕೆಲವು ಮಠಗಳ ಹೆಸರು ಕೇವಲ ಒಂದು ಮನೆತನದ ಹೆಸರಾಗಿಯೋ, ಇಲ್ಲವೇ ಒಬ್ಬವ್ಯಕ್ತಿಯ ಅಡ್ಡಹೆಸರಾಗಿಯೋ ಉಳಿದುಕೊಂಡುಬಿಟ್ಟಿವೆ.

ಚೆಂಗಾಳ್ವರು (ಕ್ರಿ.ಶ.೧೫೦೩-೧೫೮೨), ಕೊಡಗಿನ ಹಾಲೇರಿ ಅರಸರು (ಕ್ರಿ.ಶ.೧೫೮೨-೧೮೨೪), ಕೆಳದಿ ಅರಸರು (ಕ್ರಿ.ಶ.೧೫೦೦-೧೭೬೩), ವಿಜಯನಗರದ ಅರಸರು (ಕ್ರಿ.ಶ.೧೩೩೬-೧೫೬೫) ಹಾಗೂ ಕಿತ್ತೂರಿನ ಅರಸರು (ಕ್ರಿ.ಶ.೧೫೮೫-೧೮೨೪) ಇನ್ನೂ ಮುಂತಾದ ವೀರಶೈವ ಅರಸರ ಆಳ್ವಿಕೆಯ ಕಾಲದಲ್ಲಿ ದಕ್ಷಿಣಕನ್ನಡ, ಉಡುಪಿ,

ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ, ಉತ್ತರಕನ್ನಡ ಮುಂತಾದ ಭಾಗಗಳಲ್ಲಿ ಸ್ಥಾಪನೆಯಾದ ಸಾವಿರಾರು ಮಠಗಳು ರಾಜಾಶ್ರಯದಿಂದ ಬೆಳೆದವು. ಅಲ್ಲದೆ ಮುಂಬಯಿಕರ್ನಾಟಕ, ಹೈದರಾಬಾದ್‌ಕರ್ನಾಟಕದ ವ್ಯಾಪ್ತಿಯಲ್ಲಿ ಸ್ಥಾಪನೆಗೊಂಡ ಮಠಗಳು ತಮ್ಮ ವರ್ಚಸ್ಸಿನಿಂದ ಬೆಳೆದು ಮಹತ್ತರವಾದ ಕೊಡುಗೆಯನ್ನು ಕೊಟ್ಟಿರುವುದನ್ನು ಯಾರೂ ಅಲ್ಲಗಳೆಯಲಾರರು. ೧೨ನೆಯ ಶತಮಾನ ಮತ್ತು ಅದಕ್ಕೂ ಮೊದಲು ಸ್ಥಾಪನೆಗೊಂಡ ಸಾವಿರಾರು ಮಠಗಳು ಇಂದು ನಾಡಿನಾದ್ಯಂತ ಅಸ್ತಿತ್ವದಲ್ಲಿದ್ದು ಧಾರ್ಮಿಕ, ಸಾಮಾಜಿಕ ಕಾರ್ಯಗಳನ್ನು ನಡೆಸಿ ಪ್ರಭಾವಿ ಮಠಗಳಾಗಿ ಅಭಿವೃದ್ಧಿಗೊಂಡಿವೆ. ಇನ್ನೂ ಕೆಲವು ಮಠಗಳು ಆರ್ಥಿಕ ಅಭದ್ರತೆ, ಮಠಾಧಿಪತಿಗಳ ಅಸಮರ್ಥ ತೆಯಿಂದಾಗಿ ದುಃಸ್ಥಿತಿಯಲ್ಲಿದ್ದು, ಜನಸಮೂಹದ ಉಪೇಕ್ಷೆಗೆ ಒಳಗಾಗಿವೆ. ಈ ಎಲ್ಲಾ ವೀರಶೈವ ಮಠಗಳ ಶೋಧನ ರೂಪದ ಗ್ರಂಥವೇ "**ಕರ್ನಾಟಕದ ವೀರಶೈವ ಮಠಗಳು**".

ಪ್ರಸ್ತುತ ಗ್ರಂಥದಲ್ಲಿ ಮಠಗಳ ಸ್ಥಾಪನೆ, ಬೆಳೆದ ಪರಂಪರೆ, ಆಯಾ ಮಠಗಳ ಧಾರ್ಮಿಕ, ಸಾಮಾಜಿಕ, ಸಾಹಿತ್ಯಕ ಹಾಗೂ ಶೈಕ್ಷಣಿಕ ಪ್ರಗತಿಯ ಮಾಹಿತಿಗಳನ್ನು ದಾಖಲಿಸಲಾಗಿದೆ. ಈ ಆಕರಶೋಧದ ಕೆಲಸ ಮುಂದಿನ ಸಂಶೋಧನೆಗಳಿಗೆ ನೆರವಾಗಲೆಂಬುದೇ ನನ್ನ ಉದ್ದೇಶ. ಕರ್ನಾಟಕದಾದ್ಯಂತ ಸುಮಾರು ೫೭೦೬ ಮಠಗಳು ಅಸ್ತಿತ್ವದಲ್ಲಿದ್ದವೆಂದು ಕ್ಷೇತ್ರಕಾರ್ಯದಲ್ಲಿ ನನ್ನ ಅನುಭವಕ್ಕೆ ಬಂದಿತು. ಈ ಮಾಹಿತಿ ಆಧಾರದ ಮೇಲೆ ಶೋಧನೆ ನಡೆಸಿದಾಗ ೧೮೭೮ ಮಠಗಳನ್ನು ಮಾತ್ರ ಗುರುತಿಸಲು ಸಾಧ್ಯವಾಯಿತು. ಉಳಿದ ೩೮೨೮ ಮಠಗಳು ಇಂದು ಶಾಶ್ವತ ಮರೆಯಾಗಿರುವುದು ಒಂದು ದುಃಖದ ಸಂಗತಿ. ಇಲ್ಲಿ ಗುರುತಿಸಲಾದ ೧೮೭೮ ಮಠಗಳಲ್ಲೂ ೧೦೪೯ ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಹಿತ್ಯಕ ಪ್ರಗತಿಗೆ ನೆರವಾಗಿರುವುದು ತಿಳಿದು ಬರುತ್ತದೆ.

ಮಠಗಳ ಅರ್ಥ ಮತ್ತು ಸ್ವರೂಪ: ಭಾರತೀಯ ಧಾರ್ಮಿಕ ಪರಂಪರೆಯಲ್ಲಿ ವಿಶಿಷ್ಟ ಸ್ಥಾನ ಪಡೆದಿರುವ ಮಠಗಳ ಅರ್ಥದ ಬಗ್ಗೆ ಈಗಾಗಲೇ ಅನೇಕ ವ್ಯಾಖ್ಯಾನಗಳು ಪ್ರಕಟಗೊಂಡಿದ್ದು, ಮಠ ಎಂದರೆ ಸಂನ್ಯಾಸಿಗಳು ವಾಸಿಸುವ ಸ್ಥಳ ಎಂದೂ, ಅಮರಕೋಶದಲ್ಲಿ "ಛಾತ್ರಾದಿನಿಲಯ" ಎಂದೂ ಅರ್ಥವಿದ್ದು, ಇಲ್ಲಿ ಗುರುಗಳು, ಶಿಷ್ಯರು, ಸಂನ್ಯಾಸಿ ಗಳು ವಾಸಿಸುವ ಯೋಗ್ಯಸ್ಥಳವೆಂದು ಉಲ್ಲೇಖವಿದೆ. ವೀರಶೈವ ಮಠಗಳ ಮಟ್ಟಿಗೆ ಹೇಳಬಹುದಾದರೆ ಧಾರ್ಮಿಕ ಹಿನ್ನೆಲೆಯಲ್ಲಿ ಆತ್ಮೋದ್ಧಾರ ಮತ್ತು ಸಮಾಜೋದ್ಧಾರದ ಕೆಲಸವನ್ನು ನಡೆಸುವ ಕೇಂದ್ರಗಳೇ ಮಠಗಳಾಗಿವೆ. ಇಲ್ಲಿನ ಕೇಂದ್ರವ್ಯಕ್ತಿ ಇಷ್ಟಲಿಂಗಪೂಜೆಯಿಂದ ಆತ್ಮೋದ್ಧಾರಹೊಂದಿ, ಆ ಮೂಲಕ ಧರ್ಮ, ದಾಸೋಹ ಹಾಗೂ ಕಾಯಕದ ಬಗ್ಗೆ ಬೋಧನೆ ನೀಡುತ್ತ ಸಮಾಜವನ್ನು ತಿದ್ದುವ ಕಾರ್ಯದಲ್ಲಿ ನಿರತನಾಗಿರುತ್ತಾನೆ. ಈ ರೀತಿ ಆತ್ಮೋ ದ್ಧಾರ ಮತ್ತು ಸಮಾಜೋದ್ಧಾರದ ಅರ್ಥದೊಂದಿಗೆ ಬೆಳೆದ ವೀರಶೈವ ಮಠಗಳು ನಾಡಿನ ಅಭಿವೃದ್ಧಿಗೆ ಪೂರಕವಾಗಿ ಬೆಳೆದುಬಂದವು.

ಮಠಗಳ ವರ್ಗೀಕರಣ : ಬೇರೆ ಮಠಗಳಿಗಿಂತ ಭಿನ್ನವಾಗಿ ಬೆಳೆದ ವೀರಶೈವ ಮಠಗಳಲ್ಲಿ ಆಚಾರ-ವಿಚಾರಗಳಲ್ಲಿ ವ್ಯತ್ಯಾಸವಿಲ್ಲ. ಆದರೂ ಗುರು ಮತ್ತು ವಿರಕ್ತವರ್ಗ ಎಂಬ ಪ್ರಮುಖ ವರ್ಗಗಳನ್ನು ನೋಡಬಹುದಾಗಿದೆ. ಇವುಗಳಲ್ಲದೆ ಶರಣಸ್ಥಲ ಮಠಗಳು ಮತ್ತು ದಾಸೋಹ ಮಠಗಳೆಂಬ ಪ್ರತ್ಯೇಕ ವರ್ಗವನ್ನು ಗುರುತಿಸ ಬಹುದಾ ಗಿದೆ. ಈ ಎಲ್ಲ ಮಠಗಳ ಆಚಾರ-ವಿಚಾರಗಳು ಒಂದೇ ಆದರೂ, ಗುರು-ವಿರಕ್ತ ಎಂಬ ಭಿನ್ನಾಭಿಪ್ರಾ ಯವೇಕೆ? ಎಂಬ ಪ್ರಶ್ನೆ ಮೂಲಭೂತವಾಗಿ ಕೇಳಿಬರುತ್ತದೆ. ಶ್ರೀಶೈಲಪೀಠದ ಲಿಂಗೈಕ್ಯ ಜಗದ್ಗುರುಗಳಾದ ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಲೋಕಾರಾಧಕ ಬಸವಣ್ಣ ಎಂಬ ಕೃತಿಯಲ್ಲಿ ಹೇಳಿರುವ-

"ಬಸವಣ್ಣನ ನಡೆನುಡಿ ಎನ್ನ ಶಿರಸ್ಥಾನದಲ್ಲಿ ನೆಲಸಲಿ
ಬಸವಣ್ಣನ ಭಕ್ತಿ ಎನ್ನ ಆತ್ಮ ದಿವ್ಯಜ್ಯೋತಿಯಾಗಲಿ
ಬಸವಣ್ಣನ ಕ್ರಿಯಾತತ್ತ್ವ ಎನ್ನ ಆತ್ಮ ಪಟಲದಲ್ಲಿ ನಲಿದಾಡಲಿ"

ಎಂಬ ನುಡಿಮುತ್ತುಗಳು ಗುರುಪೀಠದ ಜಗದ್ಗುರುಗಳೊಬ್ಬರಿಗೆ ಬಸವಣ್ಣ ಮೊದಲಾದ ಶರಣರ ಬಗ್ಗೆ ಇದ್ದ ಗೌರವವನ್ನು ತೋರಿಸುತ್ತದೆ. ಈ ಮಾತುಗಳು ಪ್ರಸ್ತುತ ನಿರ್ಮಾಣವಾಗಿರುವ ಕಂದಕವನ್ನು ಮುಚ್ಚುವಲ್ಲಿ ಸಹಾಯಕವಾಗಬಲ್ಲವು. ಆದರೂ ಗುರು ಮತ್ತು ವಿರಕ್ತವರ್ಗದ ಗುರುಗಳು ಏಕಮುಖ ಚಿಂತನೆಗೆ ಒಂದೇ ವೇದಿಕೆಯನ್ನು ನಿರ್ಮಿಸಲು ಇನ್ನೂ ಸಾಧ್ಯವಾಗಿಲ್ಲದಿರುವುದು ಒಂದು ವಿಪರ್ಯಾಸವಾಗಿದೆ.

ಗುರುವರ್ಗದ ಮಠಗಳು: ಗುರುವರ್ಗದ ಪರಂಪರೆಯ ಮಠಗಳಿಗೆ ಮೂಲ ಕೇಂದ್ರಗಳಾಗಿರುವ ಪಂಚಪೀಠಗಳು ಕರ್ನಾಟಕ (ಬಾಳೆಹೊನ್ನೂರು, ಉಜ್ಜಯಿನಿ), ಆಂಧ್ರಪ್ರದೇಶ (ಶ್ರೀಶೈಲ), ಉತ್ತರಾಂಚಲ (ಕೇದಾರ) ಹಾಗೂ ಉತ್ತರ ಪ್ರದೇಶ (ಕಾಶಿ) ರಾಜ್ಯಗಳಲ್ಲಿ ಸ್ಥಾಪನೆಯಾಗಿವೆ.

ಶ್ರೀ ರಂಭಾಪುರಿ ಪೀಠ	(ಬಾಳೆಹೊನ್ನೂರು)
ಶ್ರೀ ಸದ್ಧರ್ಮಪೀಠ	(ಉಜ್ಜಯಿನಿ)
ಶ್ರೀ ವೈರಾಗ್ಯಪೀಠ	(ಕೇದಾರ)
ಶ್ರೀ ಸೂರ್ಯಸಿಂಹಾಸನ ಪೀಠ	(ಶ್ರೀಶೈಲ)
ಶ್ರೀ ಜ್ಞಾನಪೀಠ	(ಕಾಶಿ)

ಈ ಐದು ಪೀಠಗಳಿಗೆ ಹಳ್ಳಿ, ಪಟ್ಟಣಗಳಲ್ಲಿ ಸಾವಿರಾರು ಶಾಖಾಮಠಗಳು ಅಸ್ತಿತ್ವದಲ್ಲಿವೆ. ಇವುಗಳಲ್ಲಿಯೂ, ಶಿಷ್ಯ ವರ್ಗದ ಮಠ ಮತ್ತು ಪುತ್ರವರ್ಗದ ಮಠ ಎಂಬ ವಿಂಗಡಣೆಯನ್ನು ನಾವು ಕಾಣಬಹುದಾಗಿದೆ. ಪಂಚಪೀಠಗಳ ಗುರುಗಳಿಗೆ ೧೦೦೮ ಶ್ರೀಕಾರಗಳಿಂದ ಗೌರವಿಸಲಾಗುತ್ತದೆ. ಈ ಅರ್ಥದ ಹಿನ್ನೆಲೆಯಲ್ಲಿ ೧೦೦೮ ಸಂಖ್ಯೆಯ ಜತೆ ಅವರವರ ಗೋತ್ರಾನುಸಾರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ....ಭಗವತ್ಪಾದ ಮಹಾಸ್ವಾಮಿಗಳೆಂಬ ಪದವಿ ಪದಗಳೊಂದಿಗೆ ಸಂಬೋಧಿಸಲಾಗುತ್ತದೆ. ಇವರುಗಳು ತಮ್ಮ ಶಾಖಾಮಠಗಳ ಶಿವಾಚಾರ್ಯರಿಗೆ ಮಾರ್ಗದರ್ಶಕರಾಗಿ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಡುತ್ತಾರೆ.

ಶಿಷ್ಯವರ್ಗದ ಮಠಗಳು: ಗುರುವರ್ಗದ ಮಠಗಳಲ್ಲಿ ಪಂಚಪೀಠಗಳ ಕೆಲವು ಶಾಖಾಮಠಗಳು, ಜಂಗಮ ವಂಶಸ್ಥರಲ್ಲಿ ಸಮರ್ಥವಾದ ವಟುವನ್ನು ಉತ್ತರಾಧಿಕಾರಿಯನ್ನಾಗಿ ನೇಮಿಸಿಕೊಂಡು ಪಟ್ಟಾಧಿಕಾರ ಮಾಡುವ ಸಂಪ್ರದಾಯವನ್ನು ಬೆಳೆಸಿಕೊಂಡಿವೆ. ಇಂತಹ ಮಠಗಳನ್ನು ಶಿಷ್ಯವರ್ಗದ ಮಠಗಳೆಂದು ಕರೆಯಲಾಗುತ್ತದೆ.

ಪುತ್ರವರ್ಗದ ಮಠಗಳು: ಗುರುವರ್ಗದ ಪರಂಪರೆಯ ಪಂಚಪೀಠಗಳ ಬಹುತೇಕ ಶಾಖಾಮಠಗಳಲ್ಲಿ ತಮ್ಮ ವಂಶಸ್ಥರಲ್ಲೇ ವಟುವನ್ನು ಆಯ್ಕೆ ಮಾಡಿಕೊಂಡು ಪಟ್ಟಾಧಿಕಾರ ಮಾಡಲಾಗುತ್ತದೆ. ಇಂತಹ ಮಠಗಳನ್ನು ಪುತ್ರವರ್ಗದ ಮಠಗಳೆಂದು ಕರೆಯಲಾಗುತ್ತದೆ.

ವಿರಕ್ತಮಠಗಳು: ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದ ಅನುಭವ ಮಂಟಪದಲ್ಲಿ ಸ್ಥಾಪನೆಯಾದ ಶೂನ್ಯಪೀಠದ ಪರಂಪರೆಯಲ್ಲಿ ಬೆಳೆದು ಬಂದ ಮಠಗಳಿಗೆ ವಿರಕ್ತಮಠಗಳೆಂದು ಕರೆಯಲಾಗುತ್ತದೆ. ವಿರಕ್ತವರ್ಗದ ಮಠಗಳೂ ಸಹ ದೇಶದ ನಾನಾ ಭಾಗಗಳಲ್ಲಿ ಸ್ಥಾಪನೆಯಾಗಿ ವೀರಶೈವತತ್ತ್ವಗಳನ್ನು ಪ್ರಚಾರಪಡಿಸತೊಡಗಿದವು. ಕಾಲಾನಂತರ ಶೂನ್ಯಪೀಠದಲ್ಲೂ ಸಹ ಐದು ಸಮಯಬೇಧಗಳಾಗಿ ವಿಂಗಡಣೆಯಾಗಿರುವುದನ್ನು ಗಮನಿಸಬಹುದಾಗಿದೆ.

ಮುರುಘಾ ಸಮಯ
ಕುಮಾರ ಸಮಯ
ಚೀಲಾಳ ಸಮಯ
ಸಂಪಾದನೆ ಸಮಯ
ಕೆಂಪಿನ ಸಮಯ

ಶರಣಸ್ಥಲಮಠ: ಶರಣಸ್ಥಲ ಮಠಗಳು ವ್ಯಕ್ತಿಯ ನೆಲೆಗಟ್ಟಿನಲ್ಲಿ ಬೆಳೆದು ಸಮಾಜದ ಅಭಿವೃದ್ಧಿಗೆ ಪೂರಕವಾಗಿ ನಿಂತಿರುವುದನ್ನು ಗಮನಿಸಬಹುದಾಗಿದೆ. ಉದಾಹರಣೆಗೆ ಗುಲ್ಬರ್ಗ ನಗರದ ಶರಣಬಸವೇಶ್ವರ ಸಂಸ್ಥಾನಮಠವು ಶರಣಬಸವೇಶ್ವರರ ಕಾಯಕಯೋಗದಿಂದ ಸ್ಥಾಪನೆಗೊಂಡು ದಾಸೋಹವನ್ನು ಮೂಲೋದ್ದೇಶವಾಗಿಟ್ಟುಕೊಂಡು ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿಯೂ ಬೆಳೆದಿರುವುದನ್ನು ಕಾಣಬಹುದು.

ದಾಸೋಹಮಠ: ದಾಸೋಹಮಠಗಳು ಮೇಲಿನ ಮಠಗಳಂತೆ ಎಲ್ಲಾ ಧಾರ್ಮಿಕ ಕಾರ್ಯಗಳನ್ನು ನಡೆಸುವ ಅಧಿಕಾರವನ್ನು ಹೊಂದಿವೆಯಾದರೂ ಕಂತೆಭಿಕ್ಷವನ್ನು ಪ್ರಮುಖ ಕಾಯಕವಾಗಿ ಅಳವಡಿಸಿಕೊಂಡಿವೆ. ಬೆಳಗ್ಗೆ ಮತ್ತು ಸಂಜೆ ನಿಗದಿಯಾದ ವೇಳೆಗೆ, ನಿಗದಿಯಾದ ಮನೆಗಳಿಂದ ಕಂತೆಭಿಕ್ಷದ ಮೂಲಕ ಪ್ರಸಾದವನ್ನು ಪಡೆದು ಮಠಕ್ಕೆ ತಂದು, ಪೂಜಾವಿಧಿಗಳು ಮುಗಿದ ಮೇಲೆ ಮಠದಲ್ಲಿ ಆಶ್ರಯ ಪಡೆದ ಅಸಹಾಯಕರಿಗೆ, ಅಶಕ್ತರಿಗೆ ಪ್ರಸಾದವನ್ನು ಬಡಿಸಲಾಗುತ್ತದೆ. ಇಂದು ಈ ಉದ್ದೇಶದ ವ್ಯಾಪ್ತಿಯನ್ನು ಮೀರಿ, ಈ ಮಠಗಳೂ ಸಹ ಶೈಕ್ಷಣಿಕ ಹಾಗೂ ಇತರೇ ಕ್ಷೇತ್ರಗಳಲ್ಲಿಯೂ ತಮ್ಮ ಸೇವಾಹಸ್ತವನ್ನು ಚಾಚಿವೆ.

ವೀರಶೈವಧರ್ಮ ಚಲನಶೀಲ ಗುಣವುಳ್ಳದ್ದು, ಸಮೂಹ ಚಿಂತನೆಯುಳ್ಳದ್ದು. ಇಂತಹ ವ್ಯಾಪಕ ಅರ್ಥದಲ್ಲಿ ಬೆಳೆದ ವೀರಶೈವಧರ್ಮ ಮತ್ತು ಧಾರ್ಮಿಕ ಕೇಂದ್ರಗಳಾದ ಮಠಗಳು ಮತ್ತಷ್ಟು ವ್ಯಾಪಕಗೊಳ್ಳಬೇಕಾಗಿದೆ. ಅಲ್ಲದೆ ವೀರಶೈವಧರ್ಮದಲ್ಲಿರುವ ಒಳಪಂಗಡಗಳನ್ನು ಒಟ್ಟುಗೂಡಿಸಲು ವಿಶಾಲ ತಳಹದಿಯ ವೇದಿಕೆಯನ್ನು ಸಜ್ಜುಮಾಡ ಬೇಕಾಗಿದೆ. ಎಲ್ಲಾ ಮಠಗಳು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಸಂಘಟನಾತ್ಮಕ ಪ್ರಯತ್ನವನ್ನು ಮಾಡಿದ್ದಾದರೆ ವೀರಶೈವಧರ್ಮದಲ್ಲಿರುವ ಕಂದಕಗಳು ಬಹುಬೇಗ ಮುಚ್ಚಬಲ್ಲವು. ಇದರಿಂದ ವ್ಯಕ್ತಿಯಿಂದ ಸಮೂಹ, ಸಮೂಹ ಗಳಿಂದ ಸಮುದಾಯವನ್ನು ಬಲಿಷ್ಠವಾಗಿ ಬೆಳೆಸಲು ಸಹಾಯಕವಾಗುತ್ತದೆ. ಸಕಲ ಜೀವಾತ್ಮರಿಗೆ ಲೇಸ ಬಯಸಲು ಇನ್ನೂ ಹೆಚ್ಚು ಸಾಧ್ಯವಾಗುತ್ತದೆ.

ಈ ಸಂಪುಟದಲ್ಲಿ ಜಿಲ್ಲಾವಾರು, ತಾಲ್ಲೂಕುವಾರು ವಿವರ, ಮಠಗಳು ಸ್ಥಾಪನೆಗೊಂಡ ಸ್ಥಳಗಳನ್ನು ಕನ್ನಡ ವರ್ಣಮಾಲೆಯ ಅನುಕ್ರಮಣಿಕೆಯಲ್ಲಿ ಹೊಂದಿಸಲಾಗಿದೆ. ಧಾರ್ಮಿಕ ಆಚರಣೆಗಳು ಎಲ್ಲ ಮಠಗಳಲ್ಲಿಯೂ ಒಂದೇ ರೀತಿ ಇರುವ ಕಾರಣ, ಒಂದೇ ವಿಷಯ ಕೆಲವೊಮ್ಮೆ ಎಲ್ಲಾ ಕಡೆ ಪುನರುಕ್ತಿ ಆದಂತಿದೆ. ಇದು ಅನಿವಾರ್ಯ ಎಂಬುದನ್ನು ವಿದ್ವಾಂಸರು ಮತ್ತು ಓದುಗರು ಗಮನಿಸಬೇಕು.ಆರು ವರ್ಷಗಳ ದೀರ್ಘ ಪರಿಶ್ರಮದಿಂದ ರೂಪಗೊಂಡ "ಕರ್ನಾಟಕದ ವೀರಶೈವ ಮಠಗಳು" ಎಂಬ ಬೃಹತ್ ಗ್ರಂಥ ಪರಿಪೂರ್ಣವಾಗಿದೆ ಎಂಬ ನಂಬಿಕೆ ನನ್ನದಲ್ಲ. ಕೇವಲ ಪೂರ್ಣತೆಯ ಕಡೆಗೆ ಸಾಗಿದ ಒಂದು ಪ್ರಯತ್ನವೆಂದು ನಂಬಿರುವೆ. ಮಠ-ಪೀಠಗಳ ಪರಂಪರೆ ಹಾಗೂ ಧರ್ಮದಂತಹ ಸೂಕ್ಷ್ಮ ವಿಚಾರಗಳನ್ನು ನಿರೂಪಿಸುವಾಗ ಪ್ರಮಾದಗಳು ಆಗಿದ್ದಲ್ಲಿ ಸಂಬಂಧಿಸಿದವರು ನನ್ನ ಗಮನಕ್ಕೆ ತಂದಲ್ಲಿ ಮುಂದಿನ ಸಂಪುಟದಲ್ಲಿ ಅದನ್ನು ಸರಿಪಡಿಸುವ ಕೆಲಸ ಮಾಡುತ್ತೇನೆ.

ಕೃತಜ್ಞತೆಗಳು

ಈ ಕಾರ್ಯಕ್ಕಾಗಿ ನಾನು ಪಟ್ಟ ಪರಿಪಾಡನ್ನು ನೋಡಿ ಅನುಕಂಪ ತೋರಿಸಿ ಆಶೀರ್ವದಿಸಿದ ನನ್ನ ತಂದೆ ತಾಯಿಯರಾದ ಶ್ರೀ ಎನ್.ಕೆ.ಶಿವರುದ್ರಪ್ಪ ಮತ್ತು ಶ್ರೀಮತಿ ಗಂಗಮ್ಮ ಹಾಗೂ ಅತ್ತೆ ಮಾವಂದಿರಾದ ಶ್ರೀ ಜಿ.ಎಸ್. ಶಾಂತಪ್ಪ ಮತ್ತು ಲಿಂಗೈಕ್ಯ ಶ್ರೀಮತಿ ಮುದ್ದಮ್ಮ ಅವರುಗಳಿಗೆ ಚಿರಋಣಿಯಾಗಿರುವೆ.

ಕಂಪ್ಯೂಟರ್‌ನಲ್ಲಿ ತಯಾರಾದ ಕರಡುಪ್ರತಿಯನ್ನು ತರಿಸಿಕೊಂಡ ಸುತ್ತೂರು ಮಠದ ಜಗದ್ಗುರುಗಳವರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ನನ್ನ ಕಾರ್ಯವನ್ನು ಅವಲೋಕಿಸಿ, ವಿದ್ವಾಂಸರುಗಳಾದ ವಿದ್ವಾನ್

ಡಾ. ಇಮ್ಮಡಿ ಶಿವಬಸವಸ್ವಾಮಿಗಳು ಹಾಗೂ ಎಸ್.ನಂಜುಂಡಯ್ಯ ಇವರುಗಳಿಗೆ ಕರಡು ಪ್ರತಿಯನ್ನು ನೀಡಿ, ಅವರುಗಳಿಂದ ಮಾರ್ಗದರ್ಶನವನ್ನು ಕೊಡಿಸಿದರು. ಅಲ್ಲದೆ ನನ್ನ ಶ್ರಮವನ್ನು ಗುರುತಿಸಿ ಹೃದಯತುಂಬಿ ಪ್ರಶಂಸಿ ಸಿದರು. ಇತಿಹಾಸದಲ್ಲಿ ದಾಖಲಾಗುವ ಈ ಮಾಹಿತಿ ಗ್ರಂಥ ಸುಂದರವಾಗಿ ಮೂಡಿಬರಬೇಕು ಎಂಬ ಕಾಳಜಿ ವಹಿಸಿ, ಮುದ್ರಣ ತಜ್ಞರಿಂದ ಮಾರ್ಗದರ್ಶನ ಮಾಡಿಸಿದರು. ಈ ಕಾರಣದಿಂದಾಗಿ ಗ್ರಂಥ ಸುಂದರವಾಗಿ ಮೂಡಿಬರಲು ಸಾಧ್ಯವಾಗಿದೆ. ಗುರುಗಳು ಈ ಪ್ರೋತ್ಸಾಹದ ಜತೆಗೆ ಪ್ರಕಟಣೆಗೆ ಐವತ್ತು ಸಾವಿರ ರೂ.ಗಳನ್ನು ನೀಡಿ ನೆರವಾಗಿರುವುದಕ್ಕೆ ನಾನು ಪೂಜ್ಯರಿಗೆ ಋಣಿಯಾಗಿದ್ದೇನೆ.

ಸಿರಿಗೆರೆ ತರಳಬಾಳು ಬೃಹನ್ಮಠದ ಜಗದ್ಗುರುಗಳವರಾದ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಈ ಯೋಜನೆಯ ಬಗ್ಗೆ ಕುತೂಹಲಗೊಂಡು ಇಡೀ ಪುಸ್ತಕದ ಕರಡುಪ್ರತಿಯನ್ನು ತರಿಸಿಕೊಂಡರು. ತಮ್ಮ ಅಪಾರ ಕಾರ್ಯ ಒತ್ತಡಗಳ ನಡುವೆಯೂ ಎಲ್ಲಾ ಪುಟಗಳನ್ನು ಓದಿ ಮಾರ್ಗದರ್ಶನ ನೀಡಿದ್ದಲ್ಲದೆ, ಪ್ರಕಟಣೆಯ ವಿಚಾರದಲ್ಲಿ ಧೈರ್ಯಗೆಡದಂತೆ ಸ್ಥೈರ್ಯ ತುಂಬಿದರು. ಜತೆಗೆ ನನ್ನ ಪರಿಶ್ರಮವನ್ನು ಗುರುತಿಸಿ ಐವತ್ತು ಸಾವಿರ ರೂ.ಗಳನ್ನು ನೀಡಿ ನೆರವಾಗಿರುವುದಕ್ಕೆ ನಾನು ಪೂಜ್ಯರಿಗೆ ಋಣಿಯಾಗಿದ್ದೇನೆ.

ಚಿತ್ರದುರ್ಗದ ಶ್ರೀ ಮುರುಘಾಮಠದ ಗುರುಗಳಾದ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಶರಣರು ಈ ಗ್ರಂಥವನ್ನು ಅವಲೋಕಿಸಿ ಪ್ರಕಟಣೆಗೆಂದು ಇಪ್ಪತ್ತೈದು ಸಾವಿರ ರೂಗಳನ್ನು ನೀಡಿ ಆಶೀರ್ವದಿಸಿ ನೆರವಾಗಿದ್ದುದಕ್ಕೆ ಋಣಿಯಾಗಿದ್ದೇನೆ. ಹಾಗೆಯೇ, ಉಜ್ಜಯಿನಿ ಪೀಠದ ಜಗದ್ಗುರುಗಳವರಾದ ಶ್ರೀಮರುಳಸಿದ್ಧ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು,ಕೇದಾರ ಪೀಠದ ಜಗದ್ಗುರುಗಳವರಾದ ಶ್ರೀ ಭೀಮಶಂಕರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು, ಶ್ರೀಶೈಲಪೀಠದ ಜಗದ್ಗುರುಗಳವರಾದ ಶ್ರೀ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು, ಕಾಶಿಪೀಠದ ಜಗದ್ಗುರುಗಳವರಾದ ಡಾ॥ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು, ನಿಡಸೋಸಿಯ ಸಿದ್ಧಸಂಸ್ಥಾನಮಠದ ಶ್ರೀ ಪಂಚಮ ಶಿವಲಿಂಗೇಶ್ವರ ಮಹಾಸ್ವಾಮಿಗಳು, ಹುಬ್ಬಳ್ಳಿ ಮೂರುಸಾವಿರಮಠದ ಜಗದ್ಗುರುಗಳವರಾದ ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು,ಹಾರನಹಳ್ಳಿ ಕೋಡಿಮಠದಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಮಹಾಸ್ವಾಮಿಗಳು, ಸಾಣೇಹಳ್ಳಿ ಮಠದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯಮಹಾಸ್ವಾಮಿಗಳು, ಸಿದ್ಧಗಂಗಾಮಠದ ಡಾ॥ ಶಿವಕುಮಾರ ಮಹಾಸ್ವಾ ಮಿಗಳು,ಕರಿಬಸವ ಸ್ವಾಮಿಮಠದ ಜಗದ್ಗುರುಗಳವರಾದ ಶ್ರೀ ಚನ್ನಬಸವ ಸ್ವಾಮಿಗಳು ಮತ್ತು ಇತರ ದಾನಿಗಳನ್ನು ಭಕ್ತಿ ಪೂರ್ವಕವಾಗಿ ಸ್ಮರಿಸುತ್ತೇನೆ.

ಈ ಬೃಹತ್‌ಕೃತಿಯ ಪ್ರಕಟಣೆಯ ಎಲ್ಲಾ ಹಂತದಲ್ಲಿಯೂ ಸಹಕರಿಸಿ ನನ್ನ ಪರಿಶ್ರಮಕ್ಕೆ ಬೆಂಬಲವಾಗಿ ನಿಂತವರು ನನ್ನ ಸಹೋದರಿ ವಿನುತಾಳ ಪತಿ ಶ್ರೀ ಜಿ.ಎಸ್.ಶಶಿಧರ್. ಇವರು ಸ್ವಂತ ಪರಿಶ್ರಮದಿಂದ ಕಂಪನಿ ಕಾರ್ಯದರ್ಶಿಯಾಗಿ ಆರ್ಥಿಕ ಹಾಗೂ ಸಾಮಾಜಿಕವಾಗಿ ಉನ್ನತಮಟ್ಟಕ್ಕೆ ಏರಿದವರು. ಪ್ರವಾಸ, ಬರವಣಿಗೆ ಕಾರ್ಯ, ಮುದ್ರಣಕಾರ್ಯ ಈ ಎಲ್ಲ ಹಂತದಲ್ಲಿಯೂ ನನ್ನೊಡನಿದ್ದು, ಈ ಬೃಹತ್ ಯೋಜನೆಗೆ ಊರುಗೋಲಾಗಿದ್ದಾರೆ. ಆದ್ದರಿಂದ ಯೋಜನೆಯ ಯಶಸ್ಸಿನ ಪಾಲು ಶ್ರೀ ಜಿ.ಎಸ್.ಶಶಿಧರ್‌ರವರಿಗೂ ಸಲ್ಲುತ್ತದೆ.

ಹಂಪಿ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಡಾ.ಎಂ.ಎಂ.ಕಲಬುರ್ಗಿಯವರು ಕರಡುಪ್ರತಿಯನ್ನು ತರಿಸಿಕೊಂಡು ಅವಲೋಕಿಸಿ ಪುಸ್ತಕದ ವಾಸ್ತುವಿನ ಬಗ್ಗೆ ನಿರ್ದೇಶಿಸಿ, ಮೌಲಿಕವಾದ ಸಲಹೆಗಳನ್ನು ನೀಡಿ ಗ್ರಂಥವು ಸುಂದರವಾಗಿ ಮೂಡಿ ಬರಲು ಸೂಕ್ತ ಮಾರ್ಗದರ್ಶನ ಮಾಡಿದ್ದಾರೆ. ಅಲ್ಲದೆ ಈ ಗ್ರಂಥಕ್ಕೆ ಮುನ್ನುಡಿ ಬರೆದು ಮತ್ತಷ್ಟು ಮಹತ್ವ ಬರುವಂತೆ ಮಾಡಿದ್ದಕ್ಕೆ ಕೃತಜ್ಞತೆ ಸಲ್ಲಿಸುವೆ.

ದಾನ ವಿಶಾರದ, ಗುರು ಸೇವಾ ಧುರೀಣ, ರಾಜ್ಯ ಪ್ರಶಸ್ತಿ ವಿಜೇತರೂ ಆದ ಶ್ರೀ ಶಿವಪ್ಪಶೆಟ್ಟರು ಮತ್ತು ದಾನ ಚಿಂತಾಮಣಿ ಎಂಬ ಬಿರುದಾಂಕಿತರಾದ ಶ್ರೀಮತಿ ಕಮಲಮ್ಮನವರು ಈ ಗ್ರಂಥವನ್ನು ಅವಲೋಕಿಸಿ "ವೀರಶೈವ ಮಠಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ಪಟ್ಟ ಕಷ್ಟ, ಸಂಗ್ರಹಿಸಿದ ಮಾಹಿತಿಯನ್ನು ಒಪ್ಪವಾಗಿ ನಿರೂಪಿಸಿರುವುದು ಪ್ರಶಂಸನೀಯವಾಗಿದೆ" ಎಂದು ಅಭಿಪ್ರಾಯಿಸಿದ್ದಾರೆ.

ಅಲ್ಲದೆ "ಇಂತಹ ಧರ್ಮ ಕಾರ್ಯಕ್ಕೆ ತಮ್ಮ ಆಯುಷ್ಯವನ್ನು ಮುಡಿಪಾಗಿಟ್ಟಿರುವುದು ಸಮಾಜದ ಪುಣ್ಯ, ಪ್ರಾಚೀನ ಪರಂಪರೆಯುಳ್ಳ ವೀರಶೈವ ಧರ್ಮವನ್ನು ಕುರಿತು ಅನೇಕ ಗ್ರಂಥಗಳು ಇವರಿಂದ ಮೂಡಿ ಬರಬೇಕು. ಸಮಾಜ ಬಾಂಧವರು ಈ ಗ್ರಂಥವನ್ನು ತಮ್ಮ ಮನೆಯಲ್ಲಿ ಸಂಗ್ರಹಿಸಿಟ್ಟು ಕೊಳ್ಳುವ ಮೂಲಕ ಈ ಸತ್ಕಾರ್ಯದಲ್ಲಿ ಭಾಗಿಗಳಾಗಬೇಕು" ಎಂದು ತುಂಬು ಹೃದಯದಿಂದ ನನ್ನನ್ನು ಪ್ರೋತ್ಸಾಹಿಸಿದ್ದಾರೆ. ಜೊತೆಗೆ "ಇಂತಹ ಧರ್ಮ ಗ್ರಂಥಗಳು ಸಮಾಜಕ್ಕೆ ಅನಿವಾರ್ಯವಾಗಿವೆ ಇದನ್ನು ಪೂರ್ಣಗೊಳಿಸಿದ್ದಕ್ಕೆ ಜಗದಾದಿ ಪಂಚಾಚಾರ್ಯರು ಸನ್ಮಂಗಲ ಉಂಟು ಮಾಡಲಿ ಎಂದು ಲಿಖಿತವಾಗಿ ಹಾರೈಕೆ ಸಲ್ಲಿಸಿ ನನ್ನ ಕಾರ್ಯಕ್ಕೆ ಪ್ರೋತ್ಸಾಹಿಸಿ ಆಶೀರ್ವದಿಸಿರುವುದನ್ನು ನಾನು ಮರೆಯಲಾರೆ.

ಕರಡುಪ್ರತಿ ತಿದ್ದುವಲ್ಲಿ ನೆರವಾದ ಜಿ.ಎಸ್.ಲಾವಣ್ಯ, ಬೆಳವಾಡಿ ಮಂಜುನಾಥ್ ಹಾಗೂ ಮೊದಲಿನಿಂದ ಅಂತಿಮ ಹಂತದವರೆವಿಗೂ ಮಾರ್ಗದರ್ಶನ ನೀಡಿದ ಗೊ.ರು.ಚ. ಅವರನ್ನು ಈ ಸಂದರ್ಭದಲ್ಲಿ ಸ್ಮರಿಸಲೇಬೇಕಾಗಿದೆ. ಈ ಬೃಹತ್ ಯೋಜನೆಗೆ ಸಹಕಾರ ನೀಡಿದ ಬೀರೂರು ಕ್ಷೇತ್ರದ ಶಾಸಕರಾದ ಕೆ.ಬಿ.ಮಲ್ಲಿಕಾರ್ಜುನ್, ಚಿಕ್ಕಮಗಳೂರಿನ ಎಸ್.ಬಿ.ಮುಳ್ಳೇಗೌಡರು, ಶ್ರೀಮತಿ ಗೌರಮ್ಮ ಬಸವೇಗೌಡರು, ಬಿ.ಬಿ.ರೇಣುಕಾರ್ಯ, ಜೆ.ಬಿ.ಶಿವಪ್ಪಗೌಡ, ಎಂ.ಡಿ.ಪುಟ್ಟಸ್ವಾಮಿ, ಟಿ.ಎಸ್. ಶಂಕರೇಗೌಡ, ಚನ್ನಬಸಪ್ಪಶೆಟ್ಟಿ, ಜಗದೀಶ್ ಇವರಿಗೆ ಕೃತಜ್ಞತೆಗಳು.

ಅಲ್ಲದೆ ಹಿರಿಯ ಅಧಿಕಾರಿಗಳಾದ ಶಂಕರಪ್ಪ, ಆನಂದ್, ಚಿದಾನಂದ ಯರೇಸೀಮೆ, ವಾಟರ್ ಜೆಟ್ ಇಂಜನಿಯರುಗಳಾದ ಡಿ.ಹೆಚ್. ನಟರಾಜ್ ಮತ್ತು ಮೈಕೇಲ್ ಸದಾನಂದ ಬ್ಯಾಪ್ಟಿಸ್ಟ್, ಪತ್ರಿಕೋದ್ಯಮಿಯಾಗಿ ನಾನು ಉದ್ಯೋಗ ಪ್ರಾರಂಭಿಸಿದಾಗಿನಿಂದ ನನಗೆ ಸಹಕಾರ, ಮಾರ್ಗದರ್ಶನ ನೀಡುತ್ತಿದ್ದ ದಿವಂಗತ ಶ್ರೀನಿವಾಸ ನಾಯ್ಡು ರವರನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳ ಬೇಕಾಗಿದೆ. ಅದೇ ರೀತಿ ಅವರ ಮಕ್ಕಳಾ ದಯಾನಂದ ನಾಯ್ಡು ಮತ್ತು ವೆಂಕಟೇಶ ನಾಯ್ಡು ಹಿತೈಷಿಗಳಾಗಿದ್ದಾರೆ. ಗೆಳೆಯ ರುದ್ರೇಶ್ ಕಡೂರ್, ಸಿ.ಬಸವರಾಜು ಹಾಗೂ ದಾವಣಗೆರೆ ಜಿಲ್ಲೆಯ ವೀರಶೈವ ಮಹಾಸಭೆಯ ಅಧ್ಯಕ್ಷರಾದ ದಿಬ್ಬದಹಳ್ಳಿ ರಾಜಶೇಖರ್ ಆತ್ಮೀಯವಾಗಿ ಸ್ಪಂದಿಸಿದ್ದಾರೆ. ಅದೇ ರೀತಿ ಬಾಪುಹೆದ್ದೂರಶೆಟ್ಟಿ, ಬಸವವೇದಿಕೆಯ ಕಾರ್ಯಾಧ್ಯಕ್ಷರಾದ ಸಿ.ಸೋಮಶೇಖರ್, ಎಂ.ಎಸ್. ನಾಗೇಂದ್ರ, ಗುಲ್ಬರ್ಗ ವಿಶ್ವವಿದ್ಯಾನಿಲಯದ ಪ್ರಾಧ್ಯಾಪ ಕರಾದ ಡಾ.ಎಸ್.ಎಂ. ಹಿರೇಮಠ, ಬೆಳಗಾವಿಯ ಡಾ. ಗುಂಜಾಳ್, ಸಮಾಜ ಕಾರ್ಯತಜ್ಞ ಡಾ.ಎಚ್.ಎಂ. ಮರುಳಸಿದ್ದಯ್ಯ, ಹಂಪಿ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಡಾ. ರವೀಂದ್ರನಾಥ್ ಪ್ರೋತ್ಸಾಹಿಸಿದ್ದಾರೆ. ಇವರೆಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ.

ಪ್ರವಾಸದ ಸಂದರ್ಭದಲ್ಲಿ ಹತ್ತು ದಿನಗಳ ಕಾಲ ಬಿಜಾಪುರ, ಗುಲ್ಬರ್ಗ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ನನ್ನೊಡನೆ ಇದ್ದು, ನನ್ನ ಕಷ್ಟ-ಸುಖದಲ್ಲಿ ಭಾಗಿಗಳಾದ ಚಿಕ್ಕಮಗಳೂರಿನ ನನ್ನ ಹಿರಿಯ ಹಿತೈಷಿಗಳಾದ ಟಿ.ಎಸ್.ಶಂಕರೇಗೌಡರು, ಹಿರೇಕೆರೂರು ತಾಲ್ಲೂಕಿನ ಮಡ್ಲೂರು ಗ್ರಾಮದ ಶಿಕ್ಷಕರಾದ ನಾಗರಾಜ್, ಮಳವಳ್ಳಿ ತಾಲ್ಲೂಕು ಕುಂದೂರಿನ ಸರ್ಪಭೂಷಣ ಮಠದ ಶ್ರೀ ಚನ್ನಬಸವ ಸ್ವಾಮಿಗಳು, ಅಫಜಲ್‌ಪುರ ತಾಲ್ಲೂಕಿನ ನಿವೃತ್ತ ಶಿಕ್ಷಕರಾದ ಚಂದ್ರಶೇಖರ ರೇವೂರ್, ಜಮಖಂಡಿ ತಾಲ್ಲೂಕಿನ ಮರೆಗುದ್ದಿ ಗ್ರಾಮದ ಶಂಕರಣ್ಣ ಎಂ.ಕಲ್ಯಾಣಿ, ಚಿಕ್ಕೋಡಿ ತಾಲ್ಲೂಕಿನ ಅಡಿ ಗ್ರಾಮದ ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷರಾದ ಯಲಗೌಡ ಶಿವಗೌಡ ಪಾಟೀಲ್, ವಿದ್ವಾನ್ ಜಿ.ವಿ. ಶಿವಸ್ವಾಮಿ, ಸಿಂದಗಿಯ ಮಲ್ಲಿಕಾರ್ಜುನಯ್ಯ ಮ.ಹಿರೇಮಠ, ದಾವಣಗೆರೆಯ ಪತ್ರಕರ್ತ ಸ್ನೇಹಿತ ಜಿ.ಎಂ.ಆರ್. ಆರಾಧ್ಯ,


ಮಲ್ಲಿಕಾರ್ಜುನ ಕಲ್ಮಠ, ರೇಣುಕಾರಾಧ್ಯ ಇನ್ನೂ ಅನೇಕರು ನನ್ನ ಪ್ರವಾಸಕಾಲದಲ್ಲಿ ನೆರವಾಗಿದ್ದಾರೆ. ಇವರಿಗೆಲ್ಲ ತುಂಬು ಹೃದಯದ ಕೃತಜ್ಞತೆಗಳು. ಪತ್ರಿಕೋದ್ಯಮದಲ್ಲಿ ನನ್ನೊಟ್ಟಿಗೆ ದುಡಿದ ಎಂ.ಜಯರಾಂ ಹಾಗೂ ಪ್ರೊ.ಕೆ.ಓಂಕಾರಪ್ಪ, ಬಿ.ತಿಪ್ಪೇರುದ್ರಪ್ಪ, ಜಿಲ್ಲಾ ಸಹಕಾರ ಬ್ಯಾಂಕಿನ ಮಾಜಿ ಅಧ್ಯಕ್ಷರಾದ ಪದ್ಮಾಕ್ಷೇಗೌಡ ಹಾಲಿ ಅಧ್ಯಕ್ಷರಾದ ಆನಂದ್ ಹಾಗೂ ವ್ಯವಸ್ಥಾಪಕರುಗಳಾದ ಲೋಕೆಗೌಡರು, ನಾರಾಯಣಯಾಜಿ, ಸಿ.ಎಂ. ಮಂಜೇಗೌಡ, ಸ್ಟೇಟ್ ಬ್ಯಾಂಕ್ ಆಪ್ ಮೈಸೂರ್‌ನ ವ್ಯವಸ್ಥಾಪಕರು ಹಾಗೂ ಸಿಬ್ಬಂದಿ ವರ್ಗ, ಮೈಸೂರಿನ ಜೆ.ಎಸ್.ಎಸ್. ಸಂಸ್ಥೆಯ ಹಿರಿಯ ಅಧಿಕಾರಿಗಳಾದ ಕೆ.ಸಿ. ಶಿವಪ್ಪ ಬೆಂಗಳೂರಿನ ವಿನಾಯಕ ಆಪ್ ಸೆಟ್ ಪ್ರಿಂಟರ್ಸ್‌ನ ಮಾಲಿಕರಾದ ಮಹಿಮಯ್ಯ ಇವರುಗಳಿಗೆ ನನ್ನ ಕೃತಜ್ಞತೆಗಳು.

ಚಿಕ್ಕಮಗಳೂರು
೨೦-೫-೨೦೦೨

ಚಂದ್ರಶೇಖರ ನಾರಣಾಪುರ
ಗ್ರಂಥಕರ್ತ

ಪರಿವಿಡಿ

ಉತ್ತರಕನ್ನಡ ಜಿಲ್ಲೆ


ಉತ್ತರ ಕನ್ನಡ ಜಿಲ್ಲೆ
ಬೆಳಗಾಂವ
ಹಳಿಯಾಳ
ಸೂಪ
ಅಂಬಿಕಾನಗರ
ಉಳವಿ
ಯಲ್ಲಾಪುರ
ಮುಂಡಗೋಡ
ಕಾರವಾರ
ಅಂಕೋಲ
ಶಿರಸಿ
ಗೋಕರ್ಣ
ಬನವಾಸಿ
ಕುಮಟಾ
ಸಿದ್ದಾಪುರ
ಹೊನ್ನಾವರ
ಮಾವಿನಗುಂಡಿ
ಭಟ್ಕಳ
ದ.ಕನ್ನಡ

೧೬೩೮) ವೈಷ್ಣವ ಧರ್ಮವನ್ನು ತೊರೆದು ವೀರಶೈವಧರ್ಮದ ದೀಕ್ಷೆ ಪಡೆದುಕೊಂಡು, ಧರ್ಮವನ್ನು ಬೆಳೆಸಲು ಸಹಾಯಕರಾಗಿರುತ್ತಾರೆ. ನಂತರ ಬಂದ ಸೋದೆಯ ಸದಾಶಿವರಾಯನು ಇತಿಹಾಸ ಪ್ರಸಿದ್ಧ ಮಧುಕೇಶ್ವರ ದೇವಾಲಯದಲ್ಲಿ ವೀರಶೈವ ಧರ್ಮದ ಗುರುತು ಉಳಿಸಲು ನಿರ್ಮಿಸಿದ ತ್ರಿಲೋಕ ಮಂಟಪ ಇವುಗಳೆಲ್ಲ ಬನವಾಸಿಯಲ್ಲಿ ವೀರಶೈವ ಧರ್ಮ ಮೊಳೆತು ನೆಲೆಗೊಂಡಿದ್ದರ ಕುರುಹುಗಳನ್ನು ತೋರಿಸುತ್ತಿವೆ. ಆದರೆ ಮಮಕಾರ ಮತ್ತು ಸೋದೆಯ ಅರಸರಾದ ರಘುನಾಥ (೧೬೧೮-೧೬೩೮) ಮತ್ತು ಸದಾಶಿವ ರಾಯನ (೧೬೮೮) ಕಾಲದಲ್ಲಿ ವೀರಶೈವ ಧರ್ಮಕ್ಕೆ ಆಶ್ರಯ ಸಿಕ್ಕಿ ಹೆಚ್ಚು ಪ್ರಚಾರಗೊಂಡಿರುವುದಲ್ಲದೆ, ವೀರಶೈವರ ಮೂರು ಮನೆತನಗಳಾದ ಕನಕಪುರದಿಂದ ಬಂದ ಮನೆತನ, ಧುಂಡಸಿಯ ಉಳ್ಳಿಗಡ್ಡೆ ಮನೆತನ ಮತ್ತು ಕೆರೋಡಿ ಮನೆತನಗಳು ವೀರಶೈವ ಧರ್ಮ ಬೆಳೆಯಲು ಪೋಷಣೆ ನೀಡಿವೆ ಎಂದು ತಿಳಿದು ಮೇಲಿನ ಕುರುಹುಗಳನ್ನು ಸಾಕ್ಷೀಕರಿಸಲು ಬನವಾಸಿಯಲ್ಲಿ ಅಷ್ಟಮಠಗಳು ರೂಪುಗೊಂಡಿದ್ದು ಇಲ್ಲಿ ದಾಖಲೆಯಾಗಿ ಸಿಗುತ್ತಿವೆ. ಶ್ರೀ ಹಿರೇಮಠ, ಶ್ರೀ ಚೌಕಿಮಠ, ಶ್ರೀ ಚಿಕ್ಕಮಠ, ಶ್ರೀ ನಗಾರಿಮಠ, ಶ್ರೀ ಹೊಸಮಠ, ಶ್ರೀ ಗುಡ್ಡನಾಪುರಮಠ, ಶ್ರೀ ತವರಿಮಠ ಹಾಗೂ ಶ್ರೀ ಹೊಳೆಮಠ ಎಂಬ ಎಂಟು ಮಠಗಳು ಸ್ಥಾಪನೆಯಾಗಿದ್ದವು. ಇವುಗಳಲ್ಲಿ ಈಗ ಶ್ರೀ ಹೊಳೆಮಠ ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ಉಳಿದ ಮಠಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿವೆ.

ಹೊಳೆಮಠ: ಬನವಾಸಿಯ ಮಧುಕೇಶ್ವರ ದೇವಸ್ಥಾನದ ಬಳಿ ವಿರಕ್ತ ಸಮಯದ ಶ್ರೀ ಹೊಳೆಮಠವು ಸ್ಥಾಪನೆಯಾಗಿದೆ. ಹಿಂದೆ ವರದಾನದಿಯ ದಡದಲ್ಲಿ ಸ್ಥಾಪನೆಯಾಗಿದ್ದರಿಂದ '**ಶ್ರೀ ಹೊಳೆಮಠ**' ಎಂಬ ಹೆಸರು ಬಂದಿದೆ. ಕಾಲಾನಂತರ ನದಿಯ ನೆರೆ ಹಾವಳಿಯ ಹೆದರಿಕೆಯಿಂದ ಮಠವನ್ನು ಊರಿನ ಒಳಭಾಗಕ್ಕೆ ಸ್ಥಳಾಂತರಿಸಲಾಗಿದೆ.

ಮಠ ಸ್ಥಾಪನೆ: ನದಿಯ ತೀರದಿಂದ ಈಗ ಅಸ್ತಿತ್ವದಲ್ಲಿರುವ ಸ್ಥಳದಲ್ಲಿ ಶ್ರೀ ಹೊಳೆಮಠವನ್ನು ಶ್ರೀ ಬಸವಲಿಂಗ ಸ್ವಾಮಿಗಳು ಸ್ಥಾಪಿಸಿದರು. ಹೊಳೆದಡದಿಂದ ಸ್ಥಳಾಂತರಗೊಂಡ ಮಠವು ವಿಶಾಲವಾಗಿ ರೂಪುಗೊಂಡಿದೆ. ಮಠವನ್ನು ಸ್ಥಾಪಿಸಿದ ಈ ಸ್ಥಳವು ಹನ್ನೆರಡನೆಯ ಶತಮಾನದಲ್ಲಿ ಮಮಕಾರ ಭೂಪಾಲರು ಅಲ್ಲಮ ಪ್ರಭುವಿಗೆ ಉಂಬಳಿಯಾಗಿ ಕೊಟ್ಟ ಜಾಗವಾಗಿದೆ ಆದರೂ ಈ ಬಗ್ಗೆ ಆಧಾರಗಳು ಲಭ್ಯವಿಲ್ಲ. ಶ್ರೀ ಬಸವಲಿಂಗ ಸ್ವಾಮಿಗಳು ಬನವಾಸಿ ಗ್ರಾಮದ ಮಧ್ಯದಲ್ಲಿ ಮಠವನ್ನು ಸ್ಥಾಪಿಸಿ, ಧಾರ್ಮಿಕ ಕ್ರಿಯೆಗಳನ್ನು ನಡೆಸತೊಡಗಿದರು.

ಪರಂಪರೆ:

೧. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ರುದ್ರಮುನಿಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಸಿದ್ಧವೀರಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಚನ್ನವೀರಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ನಾಗಭೂಷಣಸ್ವಾಮಿಗಳು

ಈ ರೀತಿ ಮಠದ ಪರಂಪರೆಯ ಗುರುಗಳ ಕೆಲವು ಹೆಸರುಗಳನ್ನು ಮಾತ್ರ ದಾಖಲಿಸಲಾಗಿದೆ. ಹೊಳೆ ದಡದಲ್ಲಿದ್ದ ಪೂರ್ವ ಮಠದ ಪರಂಪರೆಯ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲದ ಕಾರಣ ಶ್ರೀ ಬಸವಲಿಂಗ ಸ್ವಾಮಿಗಳನ್ನು ಕರ್ತೃ ಗುರುಗಳೆಂದು ಗುರುತಿಸಲಾಗಿದೆ. ಕರ್ತೃ ಗುರುಗಳ ನಂತರ ಶ್ರೀ ರುದ್ರಮುನಿ ಸ್ವಾಮಿಗಳು ಈ ಮಠದಲ್ಲಿ ಆಡಳಿತ ನಡೆಸಿರ ಬಹುದೆಂದು ಹೇಳಲಾಗುತ್ತಿದೆ. ಗುರುಗಳ ಗದ್ದುಗೆ ಮಠದ ಆವರಣದಲ್ಲಿ ಸ್ಥಾಪನೆಯಾಗಿದೆ. ನಂತರ ಶತಾಯುಷಿಗಳಾದ ಶ್ರೀ ಸಿದ್ಧವೀರ ಸ್ವಾಮಿಗಳು ಪರಂಪರೆಯ ಗುರುಗಳಾಗಿ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಪ್ರಸಿದ್ಧಿಗೊಳಿಸಿದರು. ಪವಾಡ ಪುರುಷರು ಹಾಗೂ ವಾಕ್‌ಸಿದ್ಧಿ ಪುರುಷರಾಗಿದ್ದ ಶ್ರೀ ಸಿದ್ಧವೀರ ಸ್ವಾಮಿಗಳು ತಮ್ಮ ಯೋಗಸಾಧನೆಯಿಂದ ನೂರ ಹದಿನೇಳು ವರ್ಷ ಬದುಕಿ ಮಠ ಮತ್ತು ಸಮಾಜವನ್ನು ಅಭಿವೃದ್ಧಿಪಡಿಸಿದರು. ಶ್ರೀ ಸಿದ್ಧವೀರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಮಠವು ಉತ್ತರಾಧಿಕಾರಿಗಳಿಲ್ಲದೆ ಖಾಲಿ ಉಳಿಯಿತು. ಈ ಸಂದರ್ಭದಲ್ಲಿ ಸೊರಬ ತಾಲ್ಲೂಕಿನ ಮೂಡಿಯ ಶ್ರೀ ಚನ್ನವೀರ ಸ್ವಾಮಿಗಳು ಮಠದ ಆಡಳಿತ ನಡೆಸಿ, ಧಾರ್ಮಿಕ ಕಾರ್ಯಗಳು

ನಡೆಯುವಂತೆ ಮಾಡಿದರು. ಶ್ರೀ ನಾಗಭೂಷಣ ಸ್ವಾಮಿಗಳನ್ನು ಶ್ರೀ ಹೊಳೆಮಠದ ಉತ್ತರಾಧಿಕಾರಿಗಳನ್ನಾಗಿ ನೇಮಿಸಿ ೧೯೮೮ ರಲ್ಲಿ ಪಟ್ಟಾಧಿಕಾರವನ್ನು ಮಾಡಿದರು.

ಶ್ರೀ ನಾಗಭೂಷಣ ಸ್ವಾಮಿಗಳು ಎಡೆಯೂರು ಮತ್ತು ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡಿ ಚನ್ನಗಿರಿ ತಾಲ್ಲೂಕಿನ ಬಸವಪಟ್ಟಣದ ಶಂಕರಗವಿಮಠದಲ್ಲಿ ದೀರ್ಘ ಅನುಷ್ಠಾನವನ್ನು ಕೈಗೊಂಡರು. ಇದನ್ನು ನೋಡಿದ ಭಕ್ತರು ಬಸವಪಟ್ಟಣದಲ್ಲಿ ನೆಲೆಸುವಂತೆ ಒತ್ತಾಯಿಸಿದರು. ಗುರುಗಳು ಇದಕ್ಕೆ ಸಮ್ಮತಿಸದೆ ಅನುಷ್ಠಾನ ಪೂರೈಸಿದರು. ಈ ಸಂದರ್ಭದಲ್ಲಿ ಮೂಡಿಯ ಶ್ರೀ ಚನ್ನವೀರ ಸ್ವಾಮಿಗಳು ಬಸವಪಟ್ಟಣಕ್ಕೆ ಆಗಮಿಸಿ ಶ್ರೀ ನಾಗಭೂಷಣ ಸ್ವಾಮಿಗಳನ್ನು ಬನವಾಸಿಗೆ ಕರೆದುಕೊಂಡು ಬಂದು ಅಧಿಕಾರವನ್ನು ನೀಡಿ, ಉನ್ನತ ವಿದ್ಯಾಭ್ಯಾಸಕ್ಕೆಂದು ಶಿವಯೋಗಮಂದಿರಕ್ಕೆ ಕಳುಹಿಸಿಕೊಟ್ಟರು. ಗುರುಗಳು ಶಿವಯೋಗ ಮಂದಿರದಲ್ಲಿ ಸಂಸ್ಕೃತ, ವೇದ, ಯೋಗವನ್ನು ಕಲಿತು ಮಠಕ್ಕೆ ಆಗಮಿಸಿ ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಕರ್ತೃ ಗುರುಗಳ ಗದ್ದುಗೆ ಹಾಗೂ ಪರಂಪರೆಯ ಗುರುಗಳ ಗದ್ದುಗೆಗಳಿಗೆ ನಿತ್ಯಪೂಜೆ, ಶ್ರಾವಣಮಾಸದಲ್ಲಿ ವಿಶೇಷಪೂಜೆ ಹಾಗೂ ಹಿರಿಯ ಗುರುಗಳ ವಾರ್ಷಿಕ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಮಠದಲ್ಲಿ ಹೊರಗಿನಿಂದ ಬರುವ ಭಕ್ತರಿಗೆ ನಿತ್ಯ ಅನ್ನದಾಸೋಹವನ್ನು ನಡೆಸಲಾಗುತ್ತಿದೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ನಾಗಭೂಷಣ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠವು ಅಭಿವೃದ್ಧಿಗೊಳ್ಳತೊಡಗಿದೆ. ಮಠದ ಆಸ್ತಿಯನ್ನು ಅಭಿವೃದ್ಧಿಗೊಳಿಸಿ, ಇದರಿಂದ ಬರುವ ಆದಾಯದಲ್ಲಿ ಮಠದ ಜೀರ್ಣೋದ್ಧಾರದ ಕೆಲಸ ಹಾಗೂ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಮಠವನ್ನು ಪ್ರಗತಿದಾಯಕವಾಗಿ ಬೆಳೆಸಿದ್ದಾರೆ. ಅಲ್ಲಮ ಪ್ರಭುವಿನ ಸ್ಮಾರಕಮಂಟಪ ಮತ್ತು ಹರ್ಡೇಕರ್ ಮಂಜಪ್ಪನವರ ಮನೆಯನ್ನು ಸ್ಮಾರಕವಾಗಿ ರೂಪಿಸಲು ಪ್ರಯತ್ನಿಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ನಾಗಭೂಷಣ ಸ್ವಾಮಿಗಳು, ಶ್ರೀ ಹೊಳೆಮಠ, ಬನವಾಸಿ, ಶಿರಸಿ ತಾಲ್ಲೂಕು. ಉತ್ತರಕನ್ನಡ ಜಿಲ್ಲೆ.

ಶಿರಸಿ

ಶಿರಸಿಯು ಜಿಲ್ಲಾ ಕೇಂದ್ರದಿಂದ ಪೂರ್ವಕ್ಕೆ ಅರವತ್ತು ಕಿ.ಮೀ ದೂರದಲ್ಲಿದೆ. ತಾಲ್ಲೂಕು ಕೇಂದ್ರ ಸ್ಥಳವಾದ ಶಿರಸಿಯಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆದಿದೆ. ಹಿಂದೆ ಕೆಳದಿಯ ನಾಯಕರು (೧೪೯೯-೧೭೬೩) ಹಾಗೂ ಸೋದೆಯಅರಸರ (೧೬೧೮-೧೭೬೩) ಕಾಲದಲ್ಲಿ ವೀರಶೈವ ಧರ್ಮಕ್ಕೆ ಆಶ್ರಯ ಸಿಕ್ಕಿ ಸುಮಾರು ಎಂಟು ಮಠಗಳು ಸ್ಥಾಪನೆಯಾಗಿದ್ದವು ಎಂಬ ಮಾಹಿತಿ ದೊರೆತಿದೆ. ಈ ಮಾಹಿತಿಯ ಆಧಾರದ ಮೇಲೆ ಶೋಧನೆಗೆ ಹೋದಾಗ ಶ್ರೀ ಬಣ್ಣದಮಠ ಯಾನೆ ಉಣ್ಣೆಮಠ (ಚೌಕಿಮಠ), ಶ್ರೀ ರುದ್ರದೇವರಮಠ, ಶ್ರೀ ಕಾಳಹಸ್ತಿಮಠ, ಶ್ರೀ ಹಿರೇಮಠ, ಶ್ರೀ ಮಹಂತಿನಮಠ, ಶ್ರೀ ಕಟ್ಟಿಮಠ ಹಾಗೂ ಶ್ರೀ ಕಲ್ಲುಮಠ ಎಂಬ ಏಳು ಮಠಗಳು ದೊರೆತಿವೆ. ಉಳಿದ ಒಂದು ಮಠದ ಹೆಸರು ಲಭ್ಯವಿಲ್ಲ. ಶ್ರೀ ಬಣ್ಣದಮಠ ಮತ್ತು ಶ್ರೀ ರುದ್ರದೇವರ ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿವೆ. ಉಳಿದ ಮಠಗಳು ಸಂಸಾರಿ ಮನೆಗಳಾಗಿ ಪರಿವರ್ತನೆಗೊಂಡಿವೆ.

ಬಣ್ಣದ ಮಠ ಅಥವಾ ಉಣ್ಣೆಮಠ (ಚೌಕಿಮಠ): ಶಿರಸಿ ಪಟ್ಟಣದ ಹೃದಯ ಭಾಗದಲ್ಲಿ ಮುರುಘಾ ಸಮಯದ ಶ್ರೀ ಬಣ್ಣದ ಮಠ ಅಥವಾ ಉಣ್ಣೆಮಠ(ಚೌಕಿಮಠ)ವು ಮುನ್ನೂರು ವರ್ಷಗಳ ಹಿಂದೆ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಈ ಮಠವು ಪ್ರಾರಂಭದಲ್ಲಿ ಗ್ರಾಮದ ಹೊರಭಾಗದಲ್ಲಿತ್ತು. ಇದನ್ನು'ಶ್ರೀ **ಚೌಕಿಮಠ**'ವೆಂದು ಕರೆಯುತ್ತಿದ್ದರು. ಹಿಂದೆ ವೀರಶೈವರು ಮಠ ಇದ್ದ ಸ್ಥಳದಲ್ಲಿ ಶವಗಳನ್ನು ತಂದು ಸಂಸ್ಕಾರ ಮಾಡುತ್ತಿದ್ದರಂತೆ. ಇಂತಹ ಸ್ಥಳದಲ್ಲಿ ಚೌಕಿಮಠವು ತನ್ನ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿತ್ತು. ಕಾಲಾ ನಂತರ ಈ ಮಠವು ಜೀರ್ಣಾವಸ್ಥೆಗೆ ಬಂದಾಗ ಈ ಗ್ರಾಮದ ಉಣ್ಣೆ ಮನೆತನದವರು ವೀರಶೈವಧರ್ಮವನ್ನು ಬೆಳೆಸಬೇಕೆಂಬ ಮಹಾದಾಸೆಯಿಂದ, ಮಠವನ್ನು ಅಭಿವೃದ್ಧಿ ಪಡಿಸಲು ಮುಂದಾದರು. ಇವರು ಮಠವನ್ನು ಶಿರಸಿ ಪಟ್ಟಣದ ಮಧ್ಯಭಾಗಕ್ಕೆ ಸ್ಥಳಾಂತರಿಸಿ ಮಠಕ್ಕೆ ನೂತನ

ಕಟ್ಟಡ ವನ್ನು ನಿರ್ಮಿಸಿಕೊಟ್ಟರು. ಈ ಕಾರಣದಿಂದ ಚೌಕಿಮಠಕ್ಕೆ 'ಶ್ರೀ ಉಣ್ಣೆಮಠ' ಎಂಬ ಹೆಸರು ಬಂದಿತು. ಪಟ್ಟಣ ಬೆಳೆದಂತೆ ಚೌಕಿಮಠವಿದ್ದ ಮೂಲ ಮಠದ ಸ್ಥಳ ಗ್ರಾಮದ ಮಧ್ಯಭಾಗಕ್ಕೆ ಸೇರಿಕೊಂಡಿತ್ತು. ಕಾಲಾನಂತರ ಮಠ ಬೆಳೆದಂತೆ ಧಾರ್ಮಿಕ ಕಾರ್ಯಗಳಿಗೆ ಉಣ್ಣೆಮಠದ ಸ್ಥಳ ಸಾಕಾಗದೆ ಹೋದಾಗ ಮೂಲಸ್ಥಳ ಚೌಕಿಮಠಕ್ಕೆ ಪುನಃ ಮಠವನ್ನು ಸ್ಥಳಾಂತರಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುಲಾಗುತ್ತಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಕಪನಂಜೆ ಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಸಿದ್ಧಲಿಂಗ ಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಶಿವಲಿಂಗ ಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಎರಡನೆಯ ಶಿವಲಿಂಗ ಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಗುರುಸಿದ್ಧ ರಾಜಯೋಗೀಂದ್ರ ಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಮೂರನೆಯ ಶಿವಲಿಂಗ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃ ಗುರುಗಳಾದ ಶ್ರೀ ಕಪನಂಜೆ ಸ್ವಾಮಿಗಳ ಗದ್ದುಗೆ ಉಣ್ಣೆ ಮಠದಲ್ಲಿ ಸ್ಥಾಪನೆಯಾಗಿದೆ. ನಂತರ ಕೆಲವು ವರ್ಷಗಳ ಕಾಲ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿಯಿತು ಎಂದು ತಿಳಿದು ಬಂದಿದೆ. ನಂತರ ಅಧಿಕಾರಕ್ಕೆ ಬಂದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಹಾಗೂ ಶ್ರೀ ಶಿವಲಿಂಗ ಸ್ವಾಮಿಗಳ ಬಗ್ಗೆ ಹೆಚ್ಚು ಮಾಹಿತಿ ಲಭ್ಯವಿಲ್ಲ. ನಂತರ ಬಂದ ಎರಡನೆಯ ಶ್ರೀ ಶಿವಲಿಂಗ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ ಶ್ರೀಮಂತವಾಗಿ ಬೆಳೆಸಿದರು. ಇವರು ೧೯೩೩ರಲ್ಲಿ ಲಿಂಗೈಕ್ಯರಾದರು. ಇವರ ಗದ್ದುಗೆಯನ್ನು ಶ್ರೀ ಚೌಕಿಮಠದಲ್ಲಿ ಸ್ಥಾಪಿಸಲಾಗಿದೆ. ಇವರ ನಂತರ ಶ್ರೀ ಗುರುಸಿದ್ಧ ರಾಜಯೋಗೀಂದ್ರ ಸ್ವಾಮಿಗಳು ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡರು. ಇವರು ಬಸವನಬಾಗೇವಾಡಿಯ ಸಾಸನೂರು ಹಿರೇಮಠಕ್ಕೆ ಉತ್ತರಾಧಿಕಾರಿಗಳಾಗಿ ನೇಮಕಗೊಂಡಿದ್ದರು. ನಂತರ ಶಿರಸಿಯ ಹಿರಿಯರ ಅಪೇಕ್ಷೆಯ ಮೇರೆಗೆ ಶಿರಸಿ ಶ್ರೀ ಬಣ್ಣದ ಮಠಕ್ಕೆ ಬಂದು ೧೯೩೬ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡು, ಪುರಾತನ ಪರಂಪರೆಯ ಮಠವನ್ನು ಅಭಿವೃದ್ಧಿಗೊಳಿಸಿದರು. ಇವರು ಕೈಗೊಂಡು ಧಾರ್ಮಿಕ ಕಾರ್ಯಗಳಿಗೆ ಶ್ರೀ ಉಣ್ಣೆಮಠದಲ್ಲಿ ಸ್ಥಳ ಸಾಕಾಗದೆ ಇದ್ದಾಗ ಮಠವನ್ನು ಮೂಲ ಮಠವಾದ ಶ್ರೀ ಚೌಕಿಮಠಕ್ಕೆ ಸ್ಥಳಾಂತರಿಸಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಗುರುಗಳು ಧಾರ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯಿಕವಾಗಿ ಶ್ರೀಮಂತಗೊಳಿಸಿ ತಮ್ಮ ಉತ್ತರಾಧಿಕಾರಿಗಳನ್ನಾಗಿ, ತುಮಕೂರು ತಾಲ್ಲೂಕಿನ ಚಿಕ್ಕತೊಟ್ಟಲು ಕೆರೆಯ ಶ್ರೀ ಅಡವಿ ಮಠದ ಉತ್ತರಾಧಿಕಾರಿಗಳಾಗಿದ್ದ ಶ್ರೀ ಶಿವಲಿಂಗ ಸ್ವಾಮಿಗಳನ್ನು ನೇಮಕ ಮಾಡಿಕೊಂಡು ಪಟ್ಟಾಧಿಕಾರ ಮಾಡಿ ಲಿಂಗೈಕ್ಯರಾದರು. ಶ್ರೀ ಶಿವಲಿಂಗ ಸ್ವಾಮಿಗಳು ಕ್ರಿಯಾಶೀಲ ವ್ಯಕ್ತಿತ್ವವನ್ನು ಮೈಗೂಡಿ ಸಿಕೊಂಡು ಶ್ರೀ ಬಣ್ಣದಮಠ ಯಾನೆಉಣ್ಣೆಮಠವನ್ನು ಅಭಿವೃದ್ಧಿಪಡಿಸಿರುವುದಲ್ಲದೆ, ಈ ಮಠದ ಶಾಖಾಮಠವಾದ ಹಾವೇರಿ ತಾಲ್ಲೂಕಿನ ಶ್ರೀ ಹಂದಿಗನೂರು ಮಠ ಹಾಗೂ ತುಮಕೂರು ತಾಲ್ಲೂಕಿನ ಚಿಕ್ಕತೊಟ್ಟಲು ಕೆರೆಯ ಶ್ರೀ ಅಡವಿಮಠವು ಸೇರಿದಂತೆ ಈ ಮೂರು ಮಠಗಳನ್ನು ಅಭಿವೃದ್ಧಿಪಡಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗದ್ದುಗೆಗಳಿಗೆ ನಿತ್ಯಪೂಜೆ ಹಾಗೂ ವಾರ್ಷಿಕ ಪುಣ್ಯಾರಾಧನೆಗಳನ್ನು ನಡೆಸಲಾಗುತ್ತಿದೆ. ಗುರುಗಳು ಉತ್ತಮ ವಾಗ್ಮಿಗಳಾಗಿದ್ದಾರೆ. ಇವರು ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ, ವೀರಶೈವ ಧರ್ಮವನ್ನು ಬೆಳೆಸಿದ್ದಾರೆ. ಕಲಿಯುವ ವಿದ್ಯಾರ್ಥಿಗಳಿಗೆ ಮಠದಲ್ಲಿ ಆಶ್ರಯ ನೀಡಿ ಅವರ ಖರ್ಚು ವೆಚ್ಚಗಳನ್ನು ನೋಡಿ ಕೊಳ್ಳುತ್ತಿದ್ದಾರೆ. ಶಿರಸಿ ಪ್ರವಾಸಿ ತಾಣವಾಗಿರುವುದರಿಂದ ನೂರರಿಂದ ಇನ್ನೂರು ಜನಗಳ ವಸತಿಗೆ ವ್ಯವಸ್ಥೆ ಮಾಡಿದ್ದಾರೆ. ಅಲ್ಲದೆ ಮಠದಲ್ಲಿ ಆಶ್ರಯ ಬಯಸಿ ಬರುವ ಭಕ್ತರಿಗೆ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಗುರುಸಿದ್ಧ ರಾಜಯೋಗೀಂದ್ರ ಸ್ವಾಮಿಗಳು ಪ್ರಗತಿಪರ ಚಿಂತಕರಾಗಿದ್ದು ಮಠವು ಶ್ರೀ ಚೌಕಿಮಠಕ್ಕೆ ಸ್ಥಳಾಂತರಗೊಂಡ ಮೇಲೆ, ಮಠದ ಸುತ್ತ ಮಳಿಗೆಗಳನ್ನು ನಿರ್ಮಿಸಿ ಹೆಚ್ಚು ಆದಾಯ ಬರುವಂತೆ

ಮಾಡಿದ್ದಾರೆ. ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ಮಂಟಪವನ್ನು ನಿರ್ಮಿಸಿ, ಸ್ಮಾರಕಗಳನ್ನಾಗಿ ಮಾಡಿದ್ದಾರೆ. ಇಮ್ಮಡಿ ಸದಾಶಿವರಾಯರ ಕಾಲದಲ್ಲಿ (ಕ್ರಿ.ಶ.೧೬೮೮) ಹೆಚ್ಚು ದಾನ ದತ್ತಿ ದೊರೆತು ಮಠವು ಅಭಿವೃದ್ಧಿಗೊಂಡಿದೆ.

ಸಾಹಿತ್ಯ ಸೇವೆ: ಶ್ರೀ ಗುರುಸಿದ್ಧ ರಾಜಯೋಗಿಂದ್ರ ಸ್ವಾಮಿಗಳು ಸಾಹಿತ್ಯದ ಬಗ್ಗೆ ಹೆಚ್ಚು ಒಲವನ್ನು ತೋರಿಸಿ, ಪ್ರಾಚೀನ ಗ್ರಂಥಗಳು ಹಾಗೂ ಓಲೆಗರಿಗಳ ಸಂಗ್ರಹವನ್ನು ಒಂದು ಹವ್ಯಾಸವನ್ನಾಗಿ ಮಾಡಿಕೊಂಡಿದ್ದರು. ಈಗಿನ ಶ್ರೀ ಶಿವಲಿಂಗ ಸ್ವಾಮಿಗಳೂ ಸಾಹಿತ್ಯಾಸಕ್ತರಾಗಿದ್ದು, ಅನೇಕ ಕೃತಿಗಳು ಪ್ರಕಟವಾಗಲು ನೆರವಾಗಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಶಿವಲಿಂಗ ಸ್ವಾಮಿಗಳು, ಶ್ರೀ ಬಣ್ಣದಮಠ, ಬಜಾರ್ ಬೀದಿ, ಶಿರಸಿ, ಉತ್ತರಕನ್ನಡ ಜಿಲ್ಲೆ.

ರುದ್ರದೇವರ ಮಠ: ಶಿರಸಿ ಪಟ್ಟಣದ ಸಂಪಂಗಿ ರಸ್ತೆಯಲ್ಲಿ ಮುರುಘಾ ಸಮಯದ ಶ್ರೀ ರುದ್ರದೇವರ ಮಠವು ಸ್ಥಾಪನೆಯಾಗಿದೆ. ಸುಮಾರು ಮೂರುನೂರು ವರ್ಷಗಳ ಹಿಂದೆ ಪ್ರಾರಂಭವಾಗಿರುವ ಈ ಮಠವು ಚಿತ್ರದುರ್ಗದ ಬೃಹನ್ಮಠದ ಶಾಖಾಮಠವಾಗಿ ಬೆಳೆದಿದೆ. ಶ್ರೀ ರುದ್ರಮುನಿ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಭಕ್ತರ ಅಪೇಕ್ಷೆಯ ಮೇರೆಗೆ ಇಲ್ಲಿ ನೆಲೆಸಿ ಮಠವನ್ನು ಸ್ಥಾಪಿಸಿದ್ದರಿಂದ '**ಶ್ರೀ ರುದ್ರದೇವರ ಮಠ**' ಎಂಬ ಹೆಸರು ಬಂದಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ರುದ್ರಮುನಿಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಶಾಂತವೀರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಜಯಂತಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಶಿವಮೂರ್ತಿಸ್ವಾಮಿಗಳು

ಈ ರೀತಿ ಮಠದ ಪರಂಪರೆಯ ಗುರುಗಳ ಕೆಲವು ಹೆಸರುಗಳನ್ನು ಮಾತ್ರ ದಾಖಲಿಸಲಾಗಿದೆ. ಪುರಾತನ ಪರಂಪರೆಯ ಈ ಮಠದಲ್ಲಿ ಕರ್ತೃಗುರುಗಳ ನಂತರ ಕೆಲವು ಗುರುಗಳು ಅಧಿಕಾರ ನಡೆಸಿರಬಹುದೆಂದು ಹೇಳಲಾದರೂ,ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಶ್ರೀ ಶಾಂತವೀರ ಸ್ವಾಮಿಗಳು ಪರಂಪರೆಯ ಗುರುಗಳಾಗಿ ಮಠದ ಅಧಿಕಾರವನ್ನು ವಹಿಸಿಕೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸಿ, ಹುಬ್ಬಳ್ಳಿಯ ಹರಳಿಕಟ್ಟೆ ಎಂಬಲ್ಲಿ ಲಿಂಗೈಕ್ಯರಾಗಿದ್ದು, ಅವರ ಗದ್ದುಗೆಯನ್ನು ಅಲ್ಲಿಯೇ ಸ್ಥಾಪಿಸಲಾಗಿದೆ.

ಶ್ರೀ ರುದ್ರದೇವರಮಠವು ಗುರುಗಳಿಲ್ಲದೆ ಖಾಲಿ ಇರುವುದನ್ನು ಚಿತ್ರದುರ್ಗ ಬೃಹನ್ಮಠದ ಜಗದ್ಗುರುಗಳು ಗಮನಿಸಿ ಶ್ರೀ ಜಯಂತ ಸ್ವಾಮಿಗಳಿಗೆ ಪಟ್ಟಾಧಿಕಾರವನ್ನು ಮಾಡಿದರು. ಶ್ರೀ ಜಯಂತ ಸ್ವಾಮಿಗಳು ಪಟ್ಟಾಧಿಕಾರವನ್ನು ವಹಿಸಿಕೊಂಡು ಉನ್ನತ ಶಿಕ್ಷಣ ಪಡೆಯಲು ಕಾಶಿಗೆ ತೆರಳಿದರು. ಗುರುಗಳು ವಿದ್ಯಾಭ್ಯಾಸವನ್ನು ಮುಗಿಸಿದ ನಂತರ ಮಠಕ್ಕೆ ಆಗಮಿಸಲಿಲ್ಲ ಮಠವು ಪುನಃ ಖಾಲಿ ಉಳಿಯಿತು. ಚಿತ್ರದುರ್ಗದ ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮಿಗಳು ಶ್ರೀ ಶಿವಮೂರ್ತಿಸ್ವಾಮಿಗಳನ್ನು ಶ್ರೀ ರುದ್ರದೇವರ ಮಠಕ್ಕೆ ೧೯೮೮ ರಲ್ಲಿ ಅಧಿಕಾರಕ್ಕೆ ತಂದರು.

ಹಾವೇರಿಯ ಹೊಸ ಮಠದ ಜವಾಬ್ದಾರಿಯನ್ನು ಶ್ರೀ ಶಿವಮೂರ್ತಿಸ್ವಾಮಿಗಳು ನೋಡಿಕೊಳ್ಳ ಬೇಕಾಯಿತು. ಗುರುಗಳು ಈ ಎರಡು ಮಠಗಳ ಧಾರ್ಮಿಕ ಹಾಗೂ ಆಡಳಿತ ಕಾರ್ಯಗಳನ್ನು ನಡೆಸತೊಡಗಿದರು. ಗುರುಗಳ ಪ್ರಗತಿ ಶೀಲ ಗುಣಗಳನ್ನು ಗಮನಿಸಿದ ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮಿಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿಕೊಂಡು, ೧೯೯೧ ರ ವಿಜಯದಶಮಿಯಂದು ಚಿತ್ರದುರ್ಗ ಬೃಹನ್ಮಠದ ಅಧಿಕಾರವನ್ನು ನೀಡಿದರು. ಇದರಿಂದಾಗಿ ಶಿರಸಿಯ ಶ್ರೀ ರುದ್ರದೇವರ ಮಠ ಪುನಃ ಖಾಲಿ ಉಳಿಯುವಂತಾಯಿತು.

ಧಾರ್ಮಿಕ ಕಾರ್ಯಗಳು: ಪುರಾತನ ಪರಂಪರೆಯ ಮಠದಲ್ಲಿ ಕರ್ತೃ ಗುರುಗಳ ಗದ್ದುಗೆಗೆ ನಿತ್ಯಪೂಜೆಗೆ ವ್ಯವಸ್ಥೆ ಮಾಡ ಲಾಗಿದೆ. ಹಿಂದೆ ಗುರುಗಳಿದ್ದ ಸಂದರ್ಭದಲ್ಲಿ ಧಾರ್ಮಿಕ ಪ್ರವಚನ ಕಾರ್ಯಗಳು ನಡೆಯುತ್ತಿದ್ದವು. ಈಗ ಗುರುಗಳು ಇಲ್ಲದೆ ಇರುವ ಕಾರಣ ಕೇವಲ ಪೂಜೆ ಹಾಗೂ ವಾರ್ಷಿಕ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಶರಣರು, (ಶ್ರೀ ರುದ್ರದೇವರಮಠ), ಮೊಕ್ಕಾಂ ಶ್ರೀ ಬೃಹನ್ಮಠ, ಚಿತ್ರದುರ್ಗ.

ಸಿದ್ಧಾಪುರ ತಾಲ್ಲೂಕು

ಉತ್ತರಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕು ಪ್ರಾಕೃತಿಕ ಕೊಡುಗೆ ಜೋಗಜಲಪಾತದಿಂದ ಜಗತ್ ವಿಖ್ಯಾತಗೊಂಡಿದೆ. ಈ ತಾಲ್ಲೂಕಿನಲ್ಲಿ ಹಿಂದೆ ಅನೇಕ ಮಠಗಳು ಸ್ಥಾಪನೆಗೊಂಡಿದ್ದವೆಂದು ಹೇಳಲಾದರೂ ಈ ಬಗ್ಗೆ ಸ್ಪಷ್ಟ ಮಾಹಿತಿಗಳು ದೊರೆಯುವುದಿಲ್ಲ. ತಾಲ್ಲೂಕು ಕೇಂದ್ರಸ್ಥಳ ಸಿದ್ಧಾಪುರದಲ್ಲಿ ಮುರುಘಾಮಠ, ಇತ್ತೀಚೆಗೆ ಜೋಗಜಲಪಾತದ ಸಮೀಪ ಜೋಗಫಾಲ್ಸ್‌ಮಠ ಅಥವಾ ಪ್ರಭುದೇವ ಧರ್ಮಪೀಠ ಸ್ಥಾಪನೆಯಾಗಿವೆ.

ಮಾವಿನಗುಂಡಿ

ಸಿದ್ಧಾಪುರ ತಾಲ್ಲೂಕಿನ ಮಾವಿನಗುಂಡಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಹದಿನೈದು ಕಿ.ಮೀ ದೂರದಲ್ಲಿದೆ. ಶರಾವತಿ ನದಿಯು ಜೋಗದ ಬಳಿ ಜಲಪಾತವನ್ನು ಸೃಷ್ಟಿ ಮಾಡಿರುವ ಈ ರಮಣೀಯ ಸ್ಥಳದಲ್ಲಿ ಇತ್ತೀಚೆಗೆ ವೀರಶೈವ ಮಠವು ಸ್ಥಾಪನೆಯಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ಜೋಗ್‌ಫಾಲ್ಸ್‌ಮಠ: ಮಾವಿನಗುಂಡಿ ಗ್ರಾಮ ಠಾಣೆ ವ್ಯಾಪ್ತಿಯಲ್ಲಿ ಶ್ರೀ ಡಾ. ವಿಜಯಕುಮಾರ ಸ್ವಾಮಿಗಳು ಇಪ್ಪತ್ತನೆಯ ಶತಮಾನದ ಕೊನೆಯ ಅಂಚಿನಲ್ಲಿ ಮಠವನ್ನು ಸ್ಥಾಪಿಸಿದ್ದಾರೆ. ಜೋಗದ ಜಲಪಾತದ ಸಮೀಪದ ಮಠವು ಸ್ಥಾಪನೆಗೊಂಡಿರುವುದರಿಂದ 'ಜೋಗಾಫಾಲ್ಸ್‌ಮಠ' ಎಂಬ ಹೆಸರು ಬಂದಿದೆ. ಶ್ರೀ ಡಾ.ವಿಜಯಕುಮಾರ ಸ್ವಾಮಿಗಳು ಇಪ್ಪತ್ತನೆಯ ಶತಮಾನದ ಅಂತ್ಯ ಭಾಗದಲ್ಲಿ ಇಲ್ಲಿಗೆ ಆಗಮಿಸಿ ಮಠವನ್ನು ಸ್ಥಾಪನೆ ಮಾಡಿದರು. ಪಿಎಚ್.ಡಿ. ಪದವಿಯನ್ನು ಪಡೆದಿರುವ ಗುರುಗಳು ವೀರಶೈವ ಧರ್ಮದ ಪ್ರಚಾರಕ್ಕಾಗಿ ಸ್ವತಂತ್ರ ಮಠವನ್ನು ಸ್ಥಾಪಿಸಿದ್ದಾರೆ. ಗುರುಗಳು ಪ್ರವಚನಕಾರರಾಗಿ ನಾಡಿನ ನಾನಾ ಭಾಗಗಳಲ್ಲಿ ಪ್ರವಚನ ನೀಡಿ 'ಪ್ರವಚನ ಪ್ರವೀಣ'ರೆಂಬ ಹೆಸರು ಪಡೆದಿದ್ದಾರೆ.

ಚಟುವಟಿಕೆಗಳ ಕೇಂದ್ರ: ಶ್ರೀ ಡಾ.ವಿಜಯಕುಮಾರ ಸ್ವಾಮಿಗಳು ಮಠವನ್ನು ಸ್ಥಾಪಿಸಿ ಜಗದ್ಗುರು ಪ್ರಭುದೇವ ಧರ್ಮ ಪೀಠ, ಪ್ರಭುದೇವ ಧ್ಯಾನಕೇಂದ್ರ, ಪ್ರಭುದೇವ ಗ್ರಂಥಮಾಲೆ, ಅಕ್ಕಮಹಾದೇವಿ ಅನುಭವ ಮಂಟಪ, ಅಕ್ಕಮಹಾದೇವಿ ಸಂಗೀತ ವಿದ್ಯಾಲಯ, ರೇವಣಸಿದ್ಧ ದಾಸೋಹ ಧಾಮ, ವಿಜಯಕುಮಾರ ಯೋಗಕೇಂದ್ರ ಮುಂತಾದ ಹಲವು ಅಂಗ ಸಂಸ್ಥೆಗಳನ್ನು ಸ್ಥಾಪಿಸಿ, ಈ ಮೂಲಕ ಮಠ ಮತ್ತು ನಾಡಿನ ನಾನಾ ಭಾಗಗಳಲ್ಲಿ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ವೀರಶೈವ ಧರ್ಮವನ್ನು ಬೆಳೆಸಿದ್ದಾರೆ.

ವಿಳಾಸ: ಶ್ರೀ ಡಾ.ವಿಜಯಕುಮಾರಸ್ವಾಮಿಗಳು, ಶ್ರೀ ಜೋಗಾಫಾಲ್ಸ್‌ಮಠ, ಮಾವಿನಗುಂಡಿ, ಸಿದ್ಧಾಪುರ ತಾ, ಉತ್ತರಕನ್ನಡಜಿಲ್ಲೆ.

ಸೂಪ ತಾಲ್ಲೂಕು

ಉತ್ತರಕನ್ನಡ ಜಿಲ್ಲೆಯ ಸೂಪ ತಾಲ್ಲೂಕು ಪ್ರಕೃತಿಯ ರಮಣೀಯತೆಯಿಂದ ಹೆಸರು ಪಡೆದಿದೆ. ಇಂತಹ ತಾಲ್ಲೂಕಿನಲ್ಲಿ ಹನ್ನೆರಡನೆಯ ಶತಮಾನದಲ್ಲಿ ಶರಣರು ಇಲ್ಲಿ ನೆಲೆ ನಿಂತು ಶರಣಸಾಹಿತ್ಯವನ್ನು ಸಂರಕ್ಷಿಸಿ, ವೀರಶೈವಧರ್ಮ ವ್ಯಾಪಕವಾಗಿ ಬೆಳೆಯುವಂತೆ ಮಾಡಿದರು. ಅಂದು ಚನ್ನಬಸವಣ್ಣನವರು ಸ್ಥಾಪಿಸಿದ ಮಠ ಅಸ್ತಿತ್ವ ದಲ್ಲಿದ್ದು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ತಾಲ್ಲೂಕಿನಾದ್ಯಂತ ಹಿಂದೆ ಸ್ಥಾಪನೆಯಾಗಿದ್ದ ಅನೇಕ ಮಠಗಳಲ್ಲಿ ದಾಂಡೇಲಿಯ ಮೃತ್ಯುಂಜಯಮಠ, ಇಸಳೂರಿನ ಪಂಚವಟಿಗೆಮಠ (ಹತ್ಯೆಮಠ) ದಾಖಲೆಗೆ ಲಭ್ಯವಿದ್ದು, ಉಳಿದ ಮಠಗಳು ಇಂದು ಹೇಳಲು ಹೆಸರಿಲ್ಲದಂತಾಗಿವೆ.

ಉಳವಿ

ಸೂಪ ತಾಲ್ಲೂಕಿನ ಉಳವಿ ಕ್ಷೇತ್ರವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ.

ಉಳವಿ ಸುಕ್ಷೇತ್ರವು ದಟ್ಟವಾದ ಅರಣ್ಯಪ್ರದೇಶದ ಸುಂದರವಾದ ಪ್ರಕೃತಿಯ ಮಧ್ಯೆ ಸ್ಥಾಪನೆಯಾಗಿದೆ. ಹನ್ನೆರಡನೆಯ ಶತಮಾನದಲ್ಲಿ ನಡೆದ ಕಲ್ಯಾಣ ಕ್ರಾಂತಿಯ ನಂತರ ಶರಣರು ತಾವು ರಚಿಸಿದ ಸಾಹಿತ್ಯವನ್ನು ಹೊತ್ತು ಕಲ್ಯಾಣದಿಂದ ಚದುರಿದರು. ಶ್ರೀ ಚನ್ನಬಸವಣ್ಣನವರ ನಾಯಕತ್ವದಲ್ಲಿ ದಕ್ಷಿಣಾಭಿಮುಖವಾಗಿ ಹೊರಟು, ಬೆಳಗಾಂ ಜಿಲ್ಲೆಯ ಮುಖಾಂತರ ಉತ್ತರಕನ್ನಡದ ದಟ್ಟ ಅಡವಿಯಲ್ಲಿ ಬಂದು ನೆಲೆಸಿದರು. ಅವರಲ್ಲಿ ಅಕ್ಕನಾಗಮ್ಮ, ನುಲಿಯ ಚಂದಯ್ಯ, ಗಂಗಾಬಿಕೆ, ಮಡಿವಾಳ ಮಾಚಿದೇವ, ಡೋಹರ ಕಕ್ಕಯ್ಯ, ಹರಳಯ್ಯ ಮುಂತಾದವರು ಉಳಿವಿಗೆ ಬಂದು ನೆಲೆಸಿದರು.

ಮಹಾಮನೆ ಮಠ: ಜ್ಞಾನಜ್ಯೋತಿ ಚನ್ನಬಸವಣ್ಣನವರು ಉಳವಿಯಲ್ಲಿ ನೆಲೆಸಿ, ಈ ಕ್ಷೇತ್ರವನ್ನು ಸುಕ್ಷೇತ್ರಗೊಳಿಸಿದರು. ಅಂದು ಶರಣರು ನೆಲೆ ನಿಂತ ಜಾಗದಲ್ಲಿ ಮಹಾಮನೆಮಠ, ಹರಳಯ್ಯನ ಚಿಲುಮೆ, ಆಕಳಗವಿ, ರುದ್ರಾಕ್ಷಿ ಮಂಟಪ, ಅಕ್ಕನಾಗಮ್ಮನವರಗವಿ, ವಿಭೂತಿಕಣಜ ಮುಂತಾದ ಸ್ಥಳಗಳು ರೂಪುಗೊಂಡವು. ಇಲ್ಲಿ ಕೆಲವು ದಿನ ಅನುಷ್ಠಾನಗೊಂಡ ಶರಣರು ಧರ್ಮ ಪ್ರಸಾರಕ್ಕೆಂದು ಮುಂದೆ ಹೊರಡುತ್ತಾರೆ.


ಶ್ರೀ ಚನ್ನಬಸವಣ್ಣನವರು ಲೋಕಸಂಚಾರ ಕೈಗೊಳ್ಳದೆ ಈ ಕ್ಷೇತ್ರದಲ್ಲಿ ನೆಲೆಸಿ ಧರ್ಮ ಕ್ಷೇತ್ರವನ್ನಾಗಿ ಮಾಡಿ, ಶರಣ ಸಾಹಿತ್ಯದ ಸಾರವನ್ನು ಉಪದೇಶದ ಮೂಲಕ ನಾಡಿಗೆ ತಿಳಿಸಿ ವೀರಶೈವ ಧರ್ಮವನ್ನು ಬೆಳೆಸಿದರು. ಶ್ರೀ ಚನ್ನಬಸವಣ್ಣನವರು ಕಲ್ಯಾಣದ ಅನುಭವ ಮಂಟಪದಲ್ಲಿ ಕರ್ಮಯೋಗಿ ಸಿದ್ಧರಾಮನಿಗೆ ದೀಕ್ಷೆಯನ್ನು ಅನುಗ್ರಹಿಸಿ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ, ಲಿಂಗ, ಮಂತ್ರಗೊಪ್ಯ, ಘಟಚಕ್ರ ಹಾಗೂ ಕರಣಹಾಸಿಗೆ ಮುಂತಾದ ವಚನಗಳಲ್ಲಿ ವೈಜ್ಞಾನಿಕ ವಾದ ವಿಶ್ಲೇಷಣೆಯನ್ನು ನೀಡಿ ಸಿದ್ಧಾಂತವನ್ನು ರೂಪಿಸಿದ್ದರು. ಇಂತಹ ಮಹಾಜ್ಞಾನಿಯು ಬಸವಣ್ಣನವರ ಸೋದರ ಅಳಿಯರಾಗಿ, ವೀರಶೈವ ಸಿದ್ಧಾಂತವನ್ನು ನಾಡಿಗೆ ಬೋಧಿಸಿ ೧೧೬೮ ರಲ್ಲಿ ಲಿಂಗೈಕ್ಯರಾದರು.

ಧಾರ್ಮಿಕ ಕಾರ್ಯಗಳು: ಮಹಾಜ್ಞಾನಿ ಶ್ರೀ ಚನ್ನಬಸವಣ್ಣನವರು ಲಿಂಗೈಕ್ಯರಾದ ಮೇಲೆ ಭಕ್ತರು ಅವರ ಗದ್ದುಗೆಯ ಮೇಲೆ ಮಠವನ್ನು ಸ್ಥಾಪಿಸಿ ನಿತ್ಯಪೂಜೆಯನ್ನು ಮಾಡುತ್ತಿದ್ದಾರೆ. ಚನ್ನಬಸವಣ್ಣನವರ ತತ್ತ್ವಗಳನ್ನು ನಾಡಿಗೆ ಪರಿಚಯಿಸುವ ಮೂಲಕ ಶ್ರೀ ಚನ್ನಬಸವಣ್ಣನವರ ಸ್ಮರಣೋತ್ಸವವನ್ನು ಪ್ರತಿವರ್ಷ ಭರತ ಹುಣ್ಣಿಮೆಯಂದು ಆಚರಿಸಲಾಗುತ್ತಿದೆ. ಚನ್ನಬಸವಣ್ಣನವರ ಗದ್ದುಗೆಯ ಸುತ್ತ ನಿರ್ಮಿಸಲಾದ ಗೋಡೆಗಳ ಮೇಲೆ ಚನ್ನಬಸವಣ್ಣನವರ ವಚನಗಳನ್ನು ಬರೆಯಿಸಿ, ಯಾತ್ರಿಕರಿಗೆ ಹಾಗೂ ಭಕ್ತರಿಗೆ ವಚನಗಳನ್ನು ಪರಿಚಯಿಸುವಂತೆ ಮಾಡಿದ್ದಾರೆ. ನಿತ್ಯವೂ ಸಾವಿರಾರು ಜನ ಭಕ್ತರು ಈ ಸುಕ್ಷೇತ್ರಕ್ಕೆ ಆಗಮಿಸಿ, ಪೂಜೆ ಸಲ್ಲಿಸುತ್ತಿದ್ದಾರೆ.

ವಿಳಾಸ: ಅಧ್ಯಕ್ಷರು, ಶ್ರೀ ಚನ್ನಬಸವಣ್ಣನವರ ಸುಕ್ಷೇತ್ರ, ಉಳವಿ, ಸೂಪ ತಾಲ್ಲೂಕು, ಉತ್ತರಕನ್ನಡ ಜಿಲ್ಲೆ.

❑

ಉಡುಪಿ ಜಿಲ್ಲೆ



ಉಡುಪಿ ಜಿಲ್ಲೆ
ಶಿವಮೊಗ್ಗ
ಕುಂದಾಪುರ
ಅರಬ್ಬೀ ಸಮುದ್ರ
ಕೊಂಡಾಡಿ
ಉಡುಪಿ
ಪಾಂಗಳ
ಕಾರ್ಕಳ
ಚಿಕ್ಕಮಗಳೂರು
ಮೂಡಬಿದ್ರೆ
ದಕ್ಷಿಣ ಕನ್ನಡ

ಗಿದೆ. ಇದು ಚಿತ್ರದುರ್ಗದ ಬೃಹನ್ಮಠದ ಶಾಖಾಮಠವಾಗಿದ್ದು, ಧಾರ್ಮಿಕ ಮತ್ತು ಶೈಕ್ಷಣಿಕವಾಗಿ ಅಭಿವೃದ್ಧಿಗೊಂಡಿದೆ.

ಮಠ ಸ್ಥಾಪನೆ: ಪುರಾತನ ಕಾಲದಲ್ಲಿ ಶ್ರೀ ಗುರುಸಿದ್ಧ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಇಲ್ಲಿಗೆ ಆಗಮಿಸಿ ಭಕ್ತರ ಕೋರಿಕೆಯಂತೆ ಮಠವನ್ನು ಸ್ಥಾಪಿಸಿ, ಶಿವಾನುಭವ ಗೋಷ್ಠಿಗಳನ್ನು ನಡೆಸಿ ಧರ್ಮೋಪದೇಶವನ್ನು ಮಾಡಿ ಈ ಪ್ರಾಂತ್ಯವನ್ನು ಬೆಳೆಸಿದರು. ಶ್ರೀ ಗುರುಸಿದ್ಧ ಸ್ವಾಮಿಗಳಿಂದ ಪ್ರಾರಂಭಗೊಂಡ ಶ್ರೀ ವಿರಕ್ತಮಠಕ್ಕೆ ಹಾಲೇರಿಯ ಶ್ರೀ ಲಿಂಗರಾಜ (ಕ್ರಿ.ಶ. ೧೭೭೫-೧೭೮೦)ಮತ್ತು ವೀರರಾಜೇಂದ್ರರ(ಕ್ರಿ.ಶ.೧೭೮೧-೧೮೦೯)ಕಾಲದಲ್ಲಿ ಹೆಚ್ಚು ಆಶ್ರಯದೊರೆತು ಅಭಿದ್ಧಿವೃಗೊಂಡಿದೆ.

ಪರಂಪರೆ: ಶ್ರೀ ಗುರುಸಿದ್ಧ ಸ್ವಾಮಿಗಳಿಂದ ಪ್ರಾರಂಭಗೊಂಡ ಪರಂಪರೆಯಲ್ಲಿ ಕರ್ತೃ ಗುರುಗಳ ಹೆಸರನ್ನೇ ಪರಂಪರೆಯ ಗುರುಗಳು ಅಭಿಧಾನ ಪಡೆದು ಪಟ್ಟಾಧಿಕಾರಕ್ಕೆ ಬಂದ ಕಾರಣ, ಮಠದ ಪರಂಪರೆಯನ್ನು ನಿಖರವಾಗಿ ಹೇಳಲು ಸರಿಯಾದ ಆಧಾರಗಳು ಲಭ್ಯವಿಲ್ಲ. ಕರ್ತೃ ಗುರುಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಗುರುಸಿದ್ಧ ಸ್ವಾಮಿಗಳ ಹೆಸರು ಹೆಚ್ಚು ಪ್ರಚಾರದಲ್ಲಿದೆ. ಇವರ ಕಾಲದಲ್ಲಿ ಮಠವು ಸರ್ವತೋಮುಖವಾಗಿ ಅಭಿವೃದ್ಧಿಗೊಂಡಿದೆ. ನಂತರ ಬಂದ ಗುರುಗಳು ತಮ್ಮ ಶಕ್ತ್ಯಾನುಸಾರ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ ಮಠವನ್ನು ಬೆಳೆಸಿದ್ದಾರೆ.

೧೯೮೭ ರಲ್ಲಿ ಲಿಂಗೈಕ್ಯರಾದ ಶ್ರೀ ಗುರುಸಿದ್ಧ ಸ್ವಾಮಿಗಳ ಕಾಲದಲ್ಲಿ ಮಠದ ಕಟ್ಟಡ ನವೀಕರಣಗೊಂಡಿದೆ. ಗುರುಗಳು ತಮ್ಮ ಜೀವಿತಾವಧಿಯಲ್ಲೇ ಶ್ರೀ ವಿಶ್ವೇಶ್ವರ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿಕೊಂಡು, ೧೯೮೩ ರಲ್ಲಿ ಪಟ್ಟಾಧಿಕಾರದ ಅನುಗ್ರಹ ನೀಡಿ ಮಠದ ಜವಾಬ್ದಾರಿಯನ್ನು ವಹಿಸಿದ್ದರು. ಶ್ರೀ ವಿಶ್ವೇಶ್ವರ ಸ್ವಾಮಿಗಳು ಬೆಂಗಳೂರು ಹಾಗೂ ಎಡೆಯೂರಿನಲ್ಲಿ ವಿದ್ಯಾಭ್ಯಾಸ ಮಾಡಿ, ಮಠಕ್ಕೆ ಆಗಮಿಸಿ ಪರಂಪರೆಯ ಮಠವನ್ನು ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿಪಡಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಕರ್ತೃಗುರುಗಳು ಹಾಗೂ ಪರಂಪರೆಯ ಗುರುಗಳ ಗದ್ದುಗೆಗಳಿಗೆ ನಿತ್ಯಪೂಜೆ, ವರ್ಷಕ್ಕೊಮ್ಮೆ ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ಆಚರಿಸಲಾಗುತ್ತಿದೆ. ಮಠದ ಆವರಣದಲ್ಲಿ ಸ್ಥಾಪನೆಯಾಗಿರುವ ಚೌಡೇಶ್ವರಿಗೆ ವಿಶೇಷ ಪೂಜೆಯನ್ನು ಸಲ್ಲಿಸಲಾಗುತ್ತಿದೆ. ಪ್ರತಿ ಸೋಮವಾರ ಸಾಮೂಹಿಕ ಭಜನೆ ಹಾಗೂ ಶ್ರಾವಣ ಮಾಸದಲ್ಲಿ ಪುರಾಣ ಪ್ರವಚನ ಹಾಗೂ ಮಠದಲ್ಲಿ ನಿತ್ಯ ಅನ್ನದಾಸೋಹವನ್ನು ನಡೆಸಲಾಗುತ್ತಿದೆ. ಡಿಸೆಂಬರ್ ತಿಂಗಳಲ್ಲಿ ಶಿವಾನುಭವ ಶಿಬಿರವನ್ನು ಏರ್ಪಡಿಸಿ ನಾಡಿನ ಅನೇಕ ವಿದ್ವಾಂಸರು ಹಾಗೂ ಮಠಾಧೀಶರನ್ನು ಕರೆಸಿ, ಉಪನ್ಯಾಸ ಹಾಗೂ ಉಪದೇಶವನ್ನು ಮಾಡಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಶಾಲಾಮಕ್ಕಳಿಗೆ ಸ್ಪರ್ಧೆ ಏರ್ಪಡಿಸಿ, ವಿಜೇತರಿಗೆ ಬಹು ಮಾನವನ್ನು ನೀಡಲಾಗುತ್ತಿದೆ.

ಶೈಕ್ಷಣಿಕ ಸೇವೆ: ಪ್ರತಿವರ್ಷ ಹತ್ತು ಜನ ಪ್ರತಿಭಾವಂತ ಬಡಮಕ್ಕಳನ್ನು ಆಯ್ಕೆ ಮಾಡಿಕೊಂಡು ಊಟ, ವಸತಿ, ಬಟ್ಟೆ ಹಾಗೂ ಪುಸ್ತಕ ಕೊಟ್ಟು ಕಲಿಕೆಗೆ ಮಠವು ನೆರವಾಗುತ್ತಾ ಬಂದಿದೆ. ಸರ್ಕಾರಿ ಪ್ರಾಥಮಿಕ ಶಾಲೆಗೆ ಮಠದ ನಿವೇಶನವನ್ನು ದಾನಕೊಡಲಾಗಿದೆ. ಮಠದಿಂದ ನಡೆಯುವ ಶಾಲೆಯ ಉಸ್ತುವಾರಿ ನೋಡಿಕೊಂಡು, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಶೈಕ್ಷಣಿಕ ರಂಗದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವ ಗುರುಗಳು ಈ ಮಠವನ್ನು ಅಭಿವೃದ್ಧಿಗೆ ತಂದಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ವಿಶ್ವೇಶ್ವರ ಸ್ವಾಮಿಗಳು, ಶ್ರೀ ವಿರಕ್ತಮಠ, ಬಸವೇಶ್ವರ ರಸ್ತೆ, ಸೋಮವಾರಪೇಟೆ,ಕೊಡಗು ಜಿಲ್ಲೆ.

❑

ಉಡುಪಿ ತಾಲ್ಲೂಕು

ಉಡುಪಿ ಜಿಲ್ಲೆಯ ಕಸಬಾ ತಾಲ್ಲೂಕಾದ ಉಡುಪಿ ತಾಲ್ಲೂಕು ಕರಾವಳಿಯ ಪ್ರದೇಶವನ್ನು ಹೊಂದಿದ್ದು, ರಮಣೀಯ ಪ್ರಕೃತಿ ಸಿರಿಯನ್ನು ಪಡೆದಿದೆ. ಅಡಿಕೆ ಬೆಳೆಯಿಂದ ಶ್ರೀಮಂತಿಕೆಯನ್ನು ಪಡೆದಿದೆ. ಪ್ರಾಚೀನ ಕಾಲದಿಂದಲೂ ವ್ಯಾಪಾರದಿಂದ ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರುಗಳಿಸಿದೆ. ಇಂತಹ ಶ್ರೀಮಂತ ಜಿಲ್ಲೆಯಲ್ಲಿ ಕೆಳದಿ ಅರಸರ ಕಾಲದಲ್ಲಿ ಅನೇಕ ವೀರಶೈವ ಮಠಗಳು ಸ್ಥಾಪನೆಯಾಗಿದ್ದವು. ಇಂದು ಕೇವಲ ಒಂಬತ್ತು ಮಠಗಳನ್ನು ಮಾತ್ರ ನೋಡಬಹುದಾಗಿದೆ.

ಉಡುಪಿ

ಜಿಲ್ಲೆ ಹಾಗೂ ತಾಲ್ಲೂಕಿನ ಕೇಂದ್ರ ಸ್ಥಳವಾದ ಉಡುಪಿಯಲ್ಲಿ ವೀರಶೈವರು ಅಲ್ಪಸಂಖ್ಯಾತರಾಗಿದ್ದಾರೆ. ಹಿಂದೆ ಈ ನಗರದಲ್ಲಿ ಎರಡು ವೀರಶೈವ ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಇಂದು ಒಂದು ಮಠವನ್ನು ಮಾತ್ರ ಗುರುತಿಸಬಹುದಾಗಿದೆ.

ಶಿರಾಡಿಮಠ ಅಥವಾ ಜಂಗಮಮಠ: ಉಡುಪಿಯ ನಗರ ಬಸ್‌ನಿಲ್ದಾಣದ ಎದುರಿನಲ್ಲಿ ಸ್ಥಾಪನೆಯಗಿರುವ ಜಂಗಮಮಠವು ಪುರಾತನ ಪ್ರಸಿದ್ಧ ಮಠ. ಕ್ರಿ.ಶ. ೧೭೧೪ ರಿಂದ ೧೭೩೯ ರಲ್ಲಿ ಆಳ್ವಿಕೆ ನಡೆಸಿದ ಕೆಳದಿಯ ಸೋಮಶೇಖರ ನಾಯಕನು ಈ ಮಠವನ್ನು ಸ್ಥಾಪಿಸಿದನೆಂದು ಹೇಳಲಾಗುತ್ತಿದೆ. ಕೆಳದಿ ಅರಸರು ಈ ಮಠವನ್ನು ಸ್ಥಾಪಿಸಿದ ಬಗ್ಗೆ ಈ ಮಠದ ಚಾರಿತ್ರಿಕ ವಿಚಾರಗಳು ಲಭ್ಯವಾಗುತ್ತವೆ. ಕೆಳದಿಯ ಸೋಮಶೇಖರ ನಾಯಕನು **'ವೀರಾಪುರದ ಮಹತ್ತಿನ ಮಠ'** ಎಂಬ ಹೆಸರಿನಿಂದ ಈ ಮಠವನ್ನು ಸ್ಥಾಪಿಸಿದ. ಕಾಲಕ್ರಮೇಣ **'ಜಂಗಮ ಮಠ'**ವೆಂದು ನಾಮಾಂತರಗೊಂಡಿಧೆ. ಅಂದು ಸ್ಥಾಪನೆಗೊಂಡ ಮಠದಲ್ಲಿ ಹಾಗೂ ನಂತರದ ವರ್ಷಗಳಲ್ಲಿ ಅಧಿಕಾರವನ್ನು ನಡೆಸಿದ ಗುರುಗಳ ಬಗ್ಗೆ ಮಾಹಿತಿ ಗಳು ದೊರೆಯುತ್ತಿಲ್ಲ. ಕೆಳದಿ ಅರಸರ ಕಾಲದಲ್ಲಿ ಮಠಕ್ಕೆ ಉಂಬಳಿಯಾಗಿ ನೀಡಿದ್ದ ಜಮೀನನ್ನು ನಂತರ ಆಳ್ವಿಕೆಗೆ ಬಂದ ಹೈದರಾಲಿಯು ವಶಪಡಿಸಿಕೊಂಡನು.ನಂತರ ಮಠದ ಪ್ರಭಾವದ ಬಗ್ಗೆ ಅರಿತು ವಾಪಸ್ಸು ಪಡೆದಿದ್ದ ಈ ಭೂಮಿಯನ್ನು ಪುನಃ ಗುರುಗಳಿಗೆ ನೀಡಿ ಮಠವು ಬೆಳೆಯಲು ಸಹಕಾರಿಯಾದನೆಂದು ಮಠದಲ್ಲಿ ದಾಖಲಿಸಿರುವ ಮಾಹಿತಿಗಳು ತಿಳಿಸುತ್ತಿವೆ.

ಮಠದ ಮಧ್ಯ ಭಾಗದಲ್ಲಿ ಮಹಂತೇಶ್ವರರ ಗದ್ದುಗೆಯು ಸ್ಥಾಪನೆಯಾಗಿದೆ. ಗದ್ದುಗೆಯ ಎಡಬದಿಯಲ್ಲಿ ಈಶ್ವರಲಿಂಗ ವನ್ನು ಪ್ರತಿಷ್ಠಾಪಿಸಿ ಪೂಜೆಯನ್ನು ಮಾಡಲಾಗುತ್ತಿದೆ. ಮಠದ ಕಟ್ಟಡವನ್ನು ಮರದ ಬೃಹದಾಕಾರದ ಕೆತ್ತನೆಯ ಕಂಬಗಳ ಆಧಾರದಿಂದ ನಿರ್ಮಿಸಿದ್ದು, ಕಟ್ಟಡದ ಅಟ್ಟಣಿಕೆಯು ಅಲಂಕೃತ ಕೆತ್ತನೆಯ ಕಲಾಕೃತಿಗಳಿಂದ ನಿರ್ಮಿಸಲ್ಪಟ್ಟಿದೆ. ಒಂದು ಮಹತ್ವದ ಕಲಾಕೃತಿಯಾಗಿರುವ ಈ ಮಠದ ಕಟ್ಟಡವನ್ನು ಮಠದ ವಂಶಸ್ಥರಾದ ಶ್ರೀ ಡಾ.ನಿರಂಜನ ಅವರು ಸಂರಕ್ಷಿಸಿಕೊಂಡು ಬಂದಿದ್ದಾರೆ. ನಗರದ ಮಧ್ಯ ಭಾಗದಲ್ಲಿರುವ ಮಠದ ಕಟ್ಟಡದಲ್ಲಿ **'ಚಿತ್ರಕಲಾ ಮಂದಿರ'** ಎಂಬ ಚಿತ್ರಕಲಾ ಶಾಲೆಯನ್ನು ನಡೆಸಲಾಗುತ್ತಿದೆ.

ವಿಳಾಸ: ಡಾ.ನಿರಂಜನ, ಶ್ರೀ ಜಂಗಮಮಠ, ನಗರ ಬಸ್‌ನಿಲ್ದಾಣದ ಎದುರು, ಉಡುಪಿ.

ಪಾಂಗಾಳ

ಉಡುಪಿ ತಾಲ್ಲೂಕಿನ ಪಾಂಗಾಳ ಗ್ರಾಮವು ಉಡುಪಿಯಿಂದ ದಕ್ಷಿಣಕ್ಕೆ ಹತ್ತು ಕಿ.ಮೀ. ದೂರದಲ್ಲಿದೆ. ಇಲ್ಲಿಯೂ ಸಹ ವೀರಶೈವರು ಅಲ್ಪಸಂಖ್ಯಾತರಾಗಿದ್ದು, ಹಿಂದಿನ ತಮ್ಮ ವೈಭವದ ನೆನಪಿನಲ್ಲಿ ಬದುಕುಳಿದಿದ್ದು ವೀರಶೈವ ಧರ್ಮದ ಆಚರಣೆಗಳನ್ನು ಸಾಧ್ಯವಾದಷ್ಟು ಜೀವಂತವಾಗಿರಿಸಲು ಪ್ರಯತ್ನ ನಡೆಸಿದ್ದಾರೆ. ಇಂತಹ ಗ್ರಾಮದಲ್ಲಿ ಹಿಂದೆ ಸ್ಥಾಪನೆಯಾದ ವೀರಶೈವ ಮಠವು ಇಂದಿಗೂ ನೋಡಲು ಸಿಗುತ್ತದೆ.

ಜಂಗಮಮಠ: ಪಾಂಗಾಳ ಗ್ರಾಮದಲ್ಲಿ ಶ್ರೀ ರಂಭಾಪುರಿ ಪೀಠದ ಶಾಖಾ ಮಠವು ಸ್ಥಾಪನೆಯಾಗಿದ್ದು, ಈಗಲೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ. ಪುರಾತನ ಕಾಲದ ಈ ಮಠದಲ್ಲಿ ವೀರಭದ್ರಸ್ವಾಮಿ ದೇವರನ್ನು ಪ್ರತಿಷ್ಠಾ ಪಿಸಲಾಗಿದೆ.

ಉಡುಪಿ ಮತ್ತು ಮಂಗಳೂರು ರಸ್ತೆಯಂಚಿನಲ್ಲಿ ಸಿಗುವ ಈ ಗ್ರಾಮದಲ್ಲಿ ಕೆಳದಿ ಅರಸರ ಕಾಲದಲ್ಲಿ ಸ್ಥಾಪನೆಯಾಗಿತ್ತೆಂದು ಹೇಳಲಾಗುವ ಈ ಮಠವು ತನ್ನ ಅಸ್ತಿತ್ವದ ಕುರುಹುಗಳನ್ನು ಉಳಿಸಿಕೊಂಡು ಬಂದಿದೆ. ಮಠದ ಕಟ್ಟಡದ ಮುಂಭಾಗದಲ್ಲಿರುವ ಮೂರು ಎಕರೆ ಸೊಪ್ಪಿನ ಬೆಟ್ಟದಲ್ಲಿ ಮೂರು ಗದ್ದುಗೆಗಳು ನಿರ್ಮಾಣಗೊಂಡಿರುವುದು ಕಂಡುಬರುತ್ತದೆ. ಮಠಕ್ಕೆ ಮಹಾದ್ವಾರ ಇದ್ದ ಬಗ್ಗೆ ಅಳಿದುಳಿದ ಅವಶೇಷಗಳಿಂದ ತಿಳಿಯುತ್ತಿದೆ. ಮುಜರಾಯಿ ಇಲಾಖೆಯಿಂದ ಮಠದ ಧಾರ್ಮಿಕ ಕಾರ್ಯಗಳಿಗಾಗಿ ವರ್ಷಕ್ಕೆ ಐವತ್ತೇಳು ರೂಪಾಯಿಗಳನ್ನು ನೀಡುತ್ತಿರುವುದು, ಈ ಮಠವು ಹಿಂದೆ ಉಚ್ಛ್ರಾಯ ಸ್ಥಿತಿಯಲ್ಲಿ ಇದ್ದು ರಾಜಮನ್ನಣೆಗೆ ಪಾತ್ರ ವಾಗಿತ್ತು ಎಂಬುದನ್ನು ಸಾಕ್ಷೀಕರಿಸುತ್ತದೆ. ನಾಲ್ಕು ಉಪ್ಪರಿಗೆಯನ್ನು ಒಳಗೊಂಡಿದ್ದ ಕಟ್ಟಡವು ಮರದ ಕೆತ್ತನೆಯ ಬೃಹದಾಕಾರದ ಕಂಬಗಳಿಂದ ನಿರ್ಮಿತಗೊಂಡಿತ್ತು. ಮಠದ ಗುರು ಪರಂಪರೆಯ ಕೊನೆಯ ತಲೆಮಾರಿನ ಗುರುಗಳು ಅನ್ಯರ ಉಪದ್ರವವನ್ನು ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡರೆಂದು ಮಠದ ವಂಶಸ್ಥರು ತಿಳಿಸುತ್ತಾರೆ. ಈ ಘಟನೆ ನಡೆದ ನಂತರ ಪುನಃ ಉತ್ತರಾಧಿಕಾರಿಗಳಾಗಿ ಯಾರೂ ನೇಮಕವಾಗದೆ ಮಠವು ಖಾಲಿ ಉಳಿದಿದೆ.

ಕೊಂಡಾಡಿ

ಕೊಂಡಾಡಿ ಗ್ರಾಮವು, ಉಡುಪಿಯಿಂದ ಪೂರ್ವಕ್ಕೆ ಹದಿನೈದು ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ಹಿಂದೆ ಸ್ಥಾಪನೆಯಾದ ಶ್ರೀ ಜಂಗಮಮಠವು ಇಂದು ತನ್ನ ಅಸ್ತಿತ್ವದ ಗುರುತನ್ನು ಮಾತ್ರ ಉಳಿಸಿಕೊಂಡಿದೆ.

ಜಂಗಮಮಠ: ಕೊಂಡಾಡಿಯಲ್ಲಿ ಜಂಗಮ ಮಠ ಸ್ಥಾಪನೆಯಾಗಿದೆ. ಮಠದ ಆವರಣದಲ್ಲಿ ಸಿದ್ಧೇಶ್ವರ ದೇವರ ಗದ್ದುಗೆಯನ್ನು ನಿರ್ಮಿಸಲಾಗಿದೆ. ಕೆಳದಿಯ ಶಿವಪ್ಪ ನಾಯಕನ ಕಾಲದಲ್ಲಿ ಸ್ಥಾಪನೆಯಾಗಿದೆಯೆಂದು ಹೇಳಲಾಗುವ ಈ ಮಠದ ಕಟ್ಟಡ ಜೀರ್ಣಗೊಂಡಿದೆ. ಪರಂಪರೆಯಲ್ಲಿ ಬಂದಂತಹ ಗುರುಗಳ ಬಗ್ಗೆ ಮಾಹಿತಿ ದೊರೆಯತ್ತಿಲ್ಲ.ಸಂಸಾರಸ್ಥರಾದ ಶ್ರೀ ಸೋಮಶೇಖರಯ್ಯನವರು ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಸೋಮಶೇಖರಯ್ಯನವರು, ಶ್ರೀ ಜಂಗಮಮಠ, ಕೊಂಡಾಡಿ, ಹಿರಿಯಡ್ಕ ಮಾರ್ಗ, ಉಡುಪಿ ತಾಲ್ಲೂಕು.

ಕಲ್ಯಾಣಪುರ

ಕಲ್ಯಾಣಪುರವು ಉಡುಪಿಯಿಂದ ಆರು ಕಿ.ಮೀ.ದೂರದಲ್ಲಿರುವ ಕಲ್ಯಾಣಪುರದಲ್ಲಿ ಪುರಾತನ ಕಾಲದ ವೀರಶೈವ ಮಠವು ಸ್ಥಾಪನೆಯಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ಕಲ್ಯಾಣಪುರಮಠ: ಕಲ್ಯಾಣಪುರದಲ್ಲಿ ಹಿಂದೆ ಸ್ಥಾಪನೆಯಾದ ಮಠವು ರಾಜಾಶ್ರಯದಲ್ಲಿ ಅತ್ಯಂತ ವೈಭವಯುತವಾಗಿ ಆಡಳಿತವನ್ನು ನಡೆಸಿದೆ. ಈ ಮಠವು ಅಪಾರ ಆಸ್ತಿಯನ್ನು ಹೊಂದಿತ್ತು ಎಂದು ಹೇಳಲಾಗುತ್ತಿದೆ. ಹಿಂದೆ ಉಪ್ಪೂರು ಮಠವನ್ನು ಶಾಖಾಮಠವಾಗಿ ಪಡೆದು ಅದನ್ನು ಬೆಳೆಸಿದ ಕೀರ್ತಿ ಈ ಮಠಕ್ಕೆ ಸಲ್ಲುತ್ತದೆ. ಒಂದು ಕಾಲದಲ್ಲಿ ಪ್ರಖ್ಯಾತಿ ಹೊಂದಿದ್ದ ಮಠವು ಈಗ ಜೀರ್ಣಗೊಂಡಿದ್ದು, ತನ್ನ ಅಸ್ತಿತ್ವದ ಕುರುಹನ್ನು ಉಳಿಸಿದೆ.

ಪಿಲಾರು

ಪಿಲಾರು ಗ್ರಾಮವು ಉಡುಪಿಯಿಂದ ಹದಿನಾರು ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ಹಿಂದೆ ವೀರಶೈವ ಮಠವು ಸ್ಥಾಪನೆಯಾಗಿ ಈ ಭಾಗದ ಧಾರ್ಮಿಕ ಚಟುವಟಿಕೆಗಳು ಕೇಂದ್ರವಾಗಿ ಬೆಳೆದ ಬಗ್ಗೆ ಮಾಹಿತಿ ದೊರೆಯುತ್ತದೆ.

ಸ್ವರಕಾಳ ಜಂಗಮ ಮಠ: ಪಿಲಾರು ಗ್ರಾಮದಲ್ಲಿ ಶ್ರೀ ಸ್ವರಕಾಳ ಜಂಗಮ ಮಠವು ಸ್ಥಾಪನೆಯಾಗಿದೆ. ಪುರಾತನ ಮಠದ ಕಟ್ಟಡದಲ್ಲಿ ಶ್ರೀ ಸಿದ್ಧೇಶ್ವರ ದೇವರ ಗದ್ದುಗೆಯು ಇದೆ. ಈ ಒಂದು ಗದ್ದುಗೆಯನ್ನು ಬಿಟ್ಟರೆ ಉಳಿದಂತೆ ಬೇರೆ ಗದ್ದುಗೆಗಳು ನೋಡ ಸಿಗುವುದಿಲ್ಲ. ಅಲ್ಲದೆ ಮಠದ ಪರಂಪರೆಯ ಗುರುಗಳ ಹೆಸರುಗಳು ಸಹ ಲಭ್ಯವಿಲ್ಲವಾಗಿವೆ. ಈ ಕಾರಣದಿಂದ ಮಠದ ಪರಂಪರೆ ಹಾಗೂ ಕಾಲಮಾನದ ಬಗ್ಗೆ ನಿಖರವಾಗಿ ಹೇಳಲು ಸಾಧ್ಯವಾಗುತ್ತಿಲ್ಲ. ಪ್ರಸ್ತುತ ಮಠದ ವಂಶಸ್ಥರಾದ ಶ್ರೀ ಕುಮಾರ ಸ್ವಾಮಿಗಳ ಮಕ್ಕಳಾದ ಶ್ರೀ ಶಿವಪ್ರಸಾದ ಎಂಬುವವರಿಗೆ ದೀಕ್ಷೆಯನ್ನು ಕೊಡಿಸಿ ಮಠದ ಧಾರ್ಮಿಕ ಕಾರ್ಯ

ಗಳನ್ನು ನಡೆಸಿಕೊಂಡು ಹೋಗಲು ವ್ಯವಸ್ಥೆ ಮಾಡಿದ್ದಾರೆ. ಮಠದ ಪರಂಪರೆಯಲ್ಲಿ ಬಂದಂತಹ ಆಸ್ತಿ ಅನ್ಯರ ಪಾಲಾಗಿದೆ. ಈಗ ಕೇವಲ ಹತ್ತು ಎಕರೆ ಕಾಡು ಹಾಗೂ ಮೂರು ಎಕರೆ ಬೇಸಾಯಕ್ಕೆ ಯೋಗ್ಯವಾದ ಜಮೀನು ಮಾತ್ರ ಇದೆ.

ವಿಳಾಸ: ಶ್ರೀ ಶಿವಪ್ರಸಾದ ಸ್ವಾಮಿಗಳು, ಶ್ರೀ ಸ್ವರಕಾಳ ಜಂಗಮಮಠ, ಪಿಲಾರು, ಉಡುಪಿ ತಾಲ್ಲೂಕು.

ಉಡುಪಿ ತಾಲ್ಲೂಕಿನಲ್ಲಿ ಮೇಲೆ ಉಲ್ಲೇಖಿಸಿದ ಮಠಗಳ ಜತೆಗೆ ಉಪ್ಪೂರುಮಠ, ಬ್ರಹ್ಮಾವರಮಠ, ಸೂಡಮಠ ಹಾಗು ಸಾಸ್ತಾನಮಠ - ಎಂಬ ಮಠಗಳನ್ನು ಗುರುತಿಸಲಾಗುತ್ತದೆ. ಆದರೆ ಈ ಮಠಗಳ ಬಗ್ಗೆ ಹೆಚ್ಚು ಮಾಹಿತಿ ದೊರೆಯುತ್ತಿಲ್ಲ.

ಕಾರ್ಕಳ ತಾಲ್ಲೂಕು

ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕು ಪುರಾಣ ಪ್ರಸಿದ್ಧ ಸ್ಥಳಗಳನ್ನು ಒಳಗೊಂಡಿದೆ. ಈ ತಾಲ್ಲೂಕಿನಾದ್ಯಂತ ಅನೇಕ ಮಠಗಳು ಸ್ಥಾಪನೆಗೊಂಡಿದ್ದವು ಎಂದು ಹೇಳಲಾಗುತ್ತದೆ. ಇಂದು ಕೇವಲ ಹನ್ನೆರಡು ಮಠಗಳನ್ನು ಗುರುತಿಸ ಬಹುದಾಗಿದ್ದು, ಉಳಿದ ಮಠಗಳ ಬಗ್ಗೆ ಮಾಹಿತಿ ಲಭ್ಯವಿಲ್ಲ.

ಮೂಡಬಿದ್ರೆ

ಕಾರ್ಕಳ ತಾಲ್ಲೂಕಿನ ಮೂಡಬಿದ್ರೆಯು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತು ಕಿ.ಮೀ. ದೂರದಲ್ಲಿದೆ. ಈ ಗ್ರಾಮವು ಪುರಾತನ ಪ್ರಸಿದ್ಧ ಸ್ಥಳವಾಗಿದೆ. ಇಂತಹ ಪ್ರಸಿದ್ಧ ಪರಂಪರೆಯ ಗ್ರಾಮದಲ್ಲಿ ವೀರಶೈವ ಮಠವು ಸ್ಥಾಪನೆಯಾಗಿ ಸಮಾಜವನ್ನು ಸನ್ಮಾರ್ಗದಲ್ಲಿ ಬೆಳೆಸಿದ ಇತಿಹಾಸ ದೊರೆಯುತ್ತದೆ.

ಪನ್ನಾಚಾರಿಮಠ: ಮೂಡಬಿದ್ರೆ ಗ್ರಾಮದಲ್ಲಿ ವಿರಕ್ತ ಸಂಪ್ರದಾಯದ ಪನ್ನಾಚಾರಿ ಮಠವು ಶ್ರೀ ತೋಂಟದ ಸಿದ್ಧಲಿಂಗೇಶ್ವರರ ಕಾಲದಲ್ಲಿ ಸ್ಥಾಪನೆಯಾಗಿ, ಕೆಳದಿ ಅರಸರ ಕಾಲದಲ್ಲಿ ಅಭಿವೃದ್ಧಿಯನ್ನು ಕಂಡಿದೆ. ಮಂಗಳೂರು ತಾಲ್ಲೂಕಿನ ಗುರುಪುರ ಮಠದ ಮಠಾಧೀಶ್ವರರಿಗೂ ಈ ಮಠಕ್ಕೂ ನೇರ ಸಂಬಂಧವಿದೆ. ಪ್ರಸ್ತುತ ಗುರುಪುರದ ಮಠಾಧೀಶರಾದ ಶ್ರೀ ಶಿವಪ್ರಕಾಶ ಸ್ವಾಮಿಗಳ ಪೂರ್ವಾಶ್ರಮ ಈ ಮಠವೇ ಆಗಿದೆ. ಜೀರ್ಣಗೊಂಡಿರುವ ಮಠದ ಮುಂಭಾಗದಲ್ಲಿ ಶ್ರೀ ಸಿದ್ಧಲಿಂಗಯ್ಯ ಸ್ವಾಮಿಗಳು ಮತ್ತು ಶ್ರೀ ಪುಟ್ಟಯ್ಯ ಸ್ವಾಮಿಗಳ ಗದ್ದುಗೆಗಳು ನಿರ್ಮಾಣಗೊಂಡಿವೆ. ಮಠದ ಕೇಂದ್ರಬಿಂದುವಾಗಿ ಸಿದ್ಧೇಶ್ವರ ದೇವಾಲಯ ಸ್ಥಾಪನೆಯಾಗಿದೆ. ಈಗ ಮಠದಲ್ಲಿ ಪೂಜಾಕಾರ್ಯಗಳು ನಡೆಯುತ್ತ ಬಂದಿವೆ.

ಮಂಚಕಲ್ಲುಮಠ : ಕಾರ್ಕಳ ತಾಲ್ಲೂಕಿನಿಂದ ಇಪ್ಪತ್ತೈದು ಕಿ.ಮೀ. ದೂರದಲ್ಲಿರುವ ಮಂಚಕಲ್ಲು ಗ್ರಾಮದಲ್ಲಿ ವೀರಶೈವ ಮಠವು ಸ್ಥಾಪನೆ ಯಾಗಿ, ಇಲ್ಲಿನ ಕೇಂದ್ರಬಿಂದುವಾಗಿ ರೂಪುಗೊಂಡಿತ್ತು. ಕಾಲಕ್ರಮೇಣ ಮಠಾಧೀಶ್ವರರು ಇಲ್ಲದೆ ಹೋದ ಕಾರಣ ಮಠವು ಜೀರ್ಣಗೊಂಡಿತ್ತು. ಮಠದಲ್ಲಿ ಒಂದು ಗದ್ದುಗೆ ಇದೆ. ಇಪ್ಪತ್ತು ವರ್ಷಗಳ ಹಿಂದೆ ಒಂದು ವಿಶೇಷವಾದ ನಗಾರಿ ಇತ್ತಂತೆ. ಈ ನಗಾರಿಯ ಒಂದು ಕಡೆ ಚಂದ್ರವಾದ್ಯದ ದನಿ ಮತ್ತೊಂದು ಕಡೆ ಸೂರ್ಯವಾದ್ಯದ ದನಿ ಹೊರಹೊಮ್ಮುತ್ತಿತ್ತೆಂದು ಹೇಳಲಾಗುತ್ತದೆ.

ಕಾರ್ಕಳದ ಚರಂತಿಮಠ: ತಾಲ್ಲೂಕು ಕೇಂದ್ರವಾದ ಕಾರ್ಕಳದಲ್ಲಿ ಚರಂತಿಮಠವು ಸ್ಥಾಪನೆಯಾಗಿದೆ. ಮಠದ ಆವರಣದಲ್ಲಿ ವೀರಭದ್ರ ದೇವಾಲಯ ಸ್ಥಾಪನೆಯಾಗಿದೆ. ಮಠವು ನಶಿಸಿ ಹೋದರೂ ದೇವಾಲಯವು ಜೀರ್ಣಗೊಳ್ಳದೆ ಉಳಿದಿದೆ.

ಪುಟ್ಟಮೂರು ಹಿರೇಮಠ: ಕಾರ್ಕಳ ತಾಲ್ಲೂಕು ಕೇಂದ್ರಕ್ಕೆ ಇಪ್ಪತ್ತು ಕಿ.ಮೀ.ದೂರದಲ್ಲಿರುವ ಪುಟ್ಟಮೂರು ಗ್ರಾಮದಲ್ಲಿ ಹಿರೇಮಠವು ಸ್ಥಾಪನೆ ಯಾಗಿದೆ. ಪುರಾತನ ಕಾಲದಲ್ಲಿ ಸ್ಥಾಪನೆಗೊಂಡ ಈ ಮಠವು ಕಾಲಾನಂತರ ತನ್ನ ಅಸ್ತಿತ್ವವನ್ನು ಕಳೆದುಕೊಂಡು ನೇಪಥ್ಯಕ್ಕೆ ಸರಿದಿದೆ. ಆದರೂ ಮಠದ ಅಂದಿನ ಭವ್ಯತೆಯನ್ನು ಸಾರಲು ಮರದ ದಪ್ಪನೆಯ ಕೆತ್ತನೆಯ ಕಂಬಗಳು ಮಠದ ಆವರಣದಲ್ಲಿ ಗೆದ್ದಲಿಗೆ ಬಲಿಯಾಗುತ್ತ ನಿಂತಿವೆ.

ಕಾರ್ಕಳ ತಾಲ್ಲೂಕಿನ ಮೇಲಿನ ಮಠಗಳ ಜತೆಗೆ ಶ್ರೀ ಸಾಣೂರುಮಠ, ಶ್ರೀ ಪುತ್ತಿಗೆಮಠ, ಶ್ರೀ ಹಿರಿಯಕ್ಕಮಠ,

ಶ್ರೀ ಬೆಳವಾಯಿ ಜಂಗಮಮಠ, ಶ್ರೀ ಕೆರಂಪಾಡಿಮಠ, ಶ್ರೀ ಎಣ್ಣೆಹೊಳೆಮಠ, ಶ್ರೀ ಕುಕಂದೂರು ಮಠ, ಶ್ರೀ ಬಾಳೇಕೊಪ್ಪದಮಠ ಎಂಬ ಎಂಟು ಮಠಗಳು ಹಿಂದೆ ಅಸ್ತಿತ್ವದಲ್ಲಿ ಇದ್ದವೆಂದು ಹೇಳಲಾದರೂ ಈಗ ಕೇವಲ ತಮ್ಮ ಕುರುಹುಗಳನ್ನು ಮಾತ್ರ ಉಳಿಸಿಕೊಂಡಿವೆ.

ಕುಂದಾಪುರ ತಾಲ್ಲೂಕು

ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕು ಕರಾವಳಿ ಹಾಗು ಹಸಿರಿನ ಐಸಿರಿಯ ಮಧ್ಯೆ ಆವೃತಗೊಂಡಿದೆ. ಸಾಂಸ್ಕೃತಿಕ ಹಾಗೂ ಧಾರ್ಮಿಕ ವಿಚಾರಗಳಿಂದ ಜಗತ್ ಪ್ರಸಿದ್ಧಗೊಂಡಿರುವ ಈ ತಾಲ್ಲೂಕಿನಲ್ಲಿ ಸುಮಾರು ಹದಿನೈದು ವೀರಶೈವ ಮಠಗಳು ಸ್ಥಾಪನೆಯಾಗಿದ್ದವು ಎಂದು ಹೇಳಲಾಗುತ್ತದೆ. ಆದರೆ ಇಂದು ಕೇವಲ ಎಂಟು ಮಠಗಳು ತಮ್ಮ ಕುರುಹುಗಳನ್ನು ಉಳಿಸಿಕೊಂಡಿವೆ.

ಕುಂದಾಪುರ

ತಾಲ್ಲೂಕು ಕೇಂದ್ರವಾದ ಕುಂದಾಪುರ ಪಟ್ಟಣದಲ್ಲಿ ಮೂರು ವೀರಶೈವ ಮಠಗಳು ಸ್ಥಾಪನೆಯಾಗಿದ್ದವು ಎಂದು ಹೇಳಲಾಗುತ್ತಿದೆ. ಈ ಮೂರು ಮಠಗಳಲ್ಲಿ ಯಾವ ಮಠವೂ ಅಸ್ತಿತ್ವವನ್ನು ಉಳಿಸಿಕೊಳ್ಳದೆ ಜೀರ್ಣಗೊಂಡಿವೆ. ಹಿಂದೆ ಈ ಮೂರು ಮಠಗಳ ಆಡಳಿತವನ್ನು ಶ್ರೀ ನಂಜುಂಡೇಶ್ವರ ಸ್ವಾಮಿಗಳು ನೋಡಿಕೊಳ್ಳುತ್ತಿದ್ದರೆಂದು ಹೇಳಲಾಗುತ್ತದೆ. ಅಲ್ಲದೆ ಈ ಮಠಗಳಿಗೆ ವರ್ಷದ ಆದಾಯವಾಗಿ ನಾಲ್ಕು ಸಾವಿರ ಮುಡಿ ಅಕ್ಕಿ ಸಂಗ್ರಹವಾಗುತ್ತಿದ್ದು, ಈ ಅಕ್ಕಿ ದಾಸೋಹಕ್ಕಾಗಿ ವಿನಿಯೋಗವಾಗುತ್ತಿತ್ತೆಂದು ಹೇಳಾಗುತ್ತಿದೆ.

ಕುಂದಾಪುರ ತಾಲ್ಲೂಕಿನ ವಿವಿಧ ಭಾಗಗಳಲ್ಲಿ ಹಿಂದೆ ಸ್ಥಾಪನೆಯಾಗಿದ್ದು, ಈಗಲೂ ತಮ್ಮ ಕುರುಹುಗಳನ್ನು ಉಳಿಸಿ ಕೊಂಡಿರುವ ಶ್ರೀ ಕೋಟೇಶ್ವರಮಠ, ಶ್ರೀ ಬೈಂದೂರುಮಠ, ಶ್ರೀ ಬಾಸಬಯಲುಮಠ, ಶ್ರೀ ಹಾಲಾಡಿಮಠ, ಶ್ರೀ ಸಿದ್ಧಪುರ ಮಠ, ಶ್ರೀ ಶಂಕರನಾರಾಯಣಮಠ, ಶ್ರೀ ಕಂಡಲೂರುಮಠ, ಈ ರೀತಿ ಎಂಟು ಮಠಗಳು ನೋಡ ಸಿಗುತ್ತವೆ.

ಆಧಾರ: ೧. ಬಸವ ಪಥ, ಮಾರ್ಚ್ ೧೯೮೬ ರ ಸಂಚಿಕೆ-೧೨. ಲೇಖಕರು - ಕೆ.ಪಿ. ಶಿವಲಿಂಗಯ್ಯ

೨. ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ - ಡಾ. ಕೆ.ಜಿ. ವೆಂಕಟೇಶ ಜೋಯಿಸ್

೩. ಅಪ್ರಕಟಿತ ಚಾರಿತ್ರಿಕ ದಾಖಲೆ / ದಕ್ಷಿಣ ಕನ್ನಡದ ಇತಿಹಾಸ, ದರ್ಶನ - ಗುಂಡಾ ಜೋಯಿಸ್

❑

ಕೊಡಗು ಜಿಲ್ಲೆ



ಸೋಮುವಾರ ಪೇಟೆ ತಾಲ್ಲೂಕು : ೧. ಕೊಡ್ಲಿ ಪೇಟೆ ೨. ದುಂಡ ಹಳ್ಳಿ
೩. ನೀರಗುಂದ ೪. ತೊರೆನೂರು

ವೀರರಾಜ ಪೇಟೆ ತಾಲ್ಲೂಕು : ೧. ಅರಮೇರಿ

ಕಾಫಿಯ ಕಣಜವಾದ ಕೊಡಗು ಜಿಲ್ಲೆಯು ಮಡಕೇರಿ, ಸೋಮವಾರಪೇಟೆ ಮತ್ತು ವೀರರಾಜಪೇಟೆ ತಾಲ್ಲೂಕು ಗಳನ್ನು ಒಳಗೊಂಡ ಒಂದು ಚಿಕ್ಕಜಿಲ್ಲೆ. ತನ್ನ ಗಡಿಯಂಚಿನಲ್ಲಿ ದಕ್ಷಿಣಕನ್ನಡ, ಹಾಸನ ಹಾಗೂ ಮೈಸೂರು ಜಿಲ್ಲೆಗಳನ್ನು ಒಳಗೊಂಡಿರುವುದಲ್ಲದೆ, ಕೇರಳ ರಾಜ್ಯದ ಗಡಿ ಪ್ರದೇಶಕ್ಕೆ ಹೊಂದಿಕೊಂಡಿದೆ. ಈ ಜಿಲ್ಲೆಯಲ್ಲಿ ಕಾವೇರಿ, ಹೇಮಾವತಿ ಹಾಗೂ ಲಕ್ಷ್ಮಣತೀರ್ಥ ನದಿಗಳು ಹರಿದು ಜೀವನಾಡಿಗಳೆನಿಸಿವೆ. ಮಡಕೇರಿ ಸಮೀಪದ ಅಬ್ಬೆಜಲಪಾತ ಪ್ರವಾಸಿಗರ ಆಕರ್ಷಣೆಯ ಕೇಂದ್ರವಾಗಿದೆ. ತಲಕಾವೇರಿ ಸಮೀಪದ ಬ್ರಹ್ಮಗಿರಿ ಮತ್ತು ಸುಬ್ರಮಣ್ಯ ಬೆಟ್ಟಗಳು ಈ ಜಿಲ್ಲೆಯ ಪ್ರಕೃತಿ ಸೌಂದರ್ಯವನ್ನು ಹೆಚ್ಚಿಸಿವೆ.

ಇಂತಹ ಪ್ರಕೃತಿ ಸೌಂದರ್ಯದ ಮಡಿಲಲ್ಲಿರುವ ಕೊಡಗು,ರಾಜ್ಯದಲ್ಲೇ ವಿಶಿಷ್ಟ ಸಂಸ್ಕೃತಿಯನ್ನು ಪಡೆದ ಜಿಲ್ಲೆಯಾ ಗಿದೆ. ಕೊಡಗಿನ ಕಾವೇರಿ ತಲಕಾವೇರಿಯಲ್ಲಿ ಹುಟ್ಟಿ, ತಾನು ಸಾಗುವ ಇಕ್ಕೆಲಗಳಲ್ಲಿ ಸಮೃದ್ಧಿಯನ್ನು ತುಂಬಿದ್ದಾಳೆ. ಇಂತಹ ಕೊಡುಗೆ ನೀಡಿದ ಕೊಡಗಿನ ಭಾಗಮಂಡಲದಲ್ಲಿ ಓಂಕಾರೇಶ್ವರ ದೇವಾಲಯ ಪುರಾತನ ಕಾಲದಲ್ಲೇ ಸ್ಥಾಪನೆ ಗೊಂಡು ಜಿಲ್ಲೆಯ ಧಾರ್ಮಿಕ ಕ್ಷೇತ್ರವನ್ನು ಶ್ರೀಮಂತಗೊಳಿಸಿದೆ. ಹಾಲೇರಿ ಅರಸು ಮನೆತನವು ಪ್ರಬಲಗೊಳ್ಳುವ ಮೊದಲು ಕೊಡಗು, ಚಿಕ್ಕಮಗಳೂರು ಹಾಗೂ ಹಾಸನ ಜಿಲ್ಲೆ ಯಲ್ಲಿ ಆಳ್ವಿಕೆ ನಡೆಸಿದ ಚೆಂಗಾಳ್ವರ ದೊರೆಗಳಾದ ನಂಜರಾಜ ಮತ್ತು ಮಹಾದೇವರ (ಕ್ರಿ.ಶ.೧೫೦೩-೧೫೮೨) ಆಳ್ವಿಕೆ ಹಾಗೂ ಕೊಡಗನ್ನು ದೀರ್ಘ ಕಾಲ (ಕ್ರಿ.ಶ.೧೫೮೨-೧೮೨೪) ಆಳಿದ ವೀರಶೈವ ದೊರೆಗಳಾದ ಕೊಡಗಿನ ಹಾಲೇರಿ ಅರಸು ಮನೆತನದ ಹದಿನಾಲ್ಕು ಜನ ಅರಸರು ಈ ಜಿಲ್ಲೆಯನ್ನು ಐತಿಹಾಸಿಕವಾಗಿ ಶ್ರೀಮಂತಗೊಳಿಸಿದ್ದಾರೆ. ಕೊಡಗಿನ ಅರಸರಲ್ಲಿ ಅತ್ಯಂತ ಪ್ರಭಾವಶಾಲಿ ಹಾಗೂ ಧರ್ಮಾಭಿಮಾನಿಯಾಗಿದ್ದ ಲಿಂಗರಾಜರ ಕಾಲದಲ್ಲಿ ವೀರಶೈವ ಧರ್ಮಕ್ಕೆ ಹೆಚ್ಚಿನ ಮಾನ್ಯತೆ ಸಿಕ್ಕಿದೆ. ಕೊಡಗಿನ ಅರಸರು ಧರ್ಮದಿಂದ ಸಮಾಜವನ್ನು ಸನ್ಮಾರ್ಗದಲ್ಲಿ ನಡೆಸುವುದು ಸುಲಭ ಎಂಬ ಉದ್ದೇಶದಿಂದ, ಅರಮನೆಗೆ ಕೊಡುತ್ತಿದ್ದ ಪ್ರಾಮುಖ್ಯತೆಯಂತೆಯೇ ಮಠಗಳಿಗೂ ಕೊಟ್ಟು, ಮಠಗಳು ಬೆಳೆಯಲು ಸಹಕಾರಿಯಾಗಿದ್ದಾರೆ. ಲಿಂಗರಾಜ ಮತ್ತು ವೀರರಾಜರ ಕಾಲದ ಮೊದಲು ನೂರಎಂಟು ಮಠಗಳು ಸ್ಥಾಪನೆಯಾಗಿವೆ ಎಂಬ ದಾಖಲೆ ಸಿಗುತ್ತಿದೆ. ಇವುಗಳಲ್ಲಿ ವೀರರಾಜಪೇಟೆ ತಾಲ್ಲೂಕಿನಲ್ಲಿ ಹತ್ತೊಂಬತ್ತು ಮಠಗಳು, ಮಡಕೇರಿ ತಾಲ್ಲೂಕಿನಲ್ಲಿ ಹದಿನೆಂಟು ಮಠಗಳು, ಸೋಮವಾರಪೇಟೆ ತಾಲ್ಲೂಕಿನಲ್ಲಿ ಐವತ್ತೇಳು ಮಠಗಳು ಸ್ಥಾಪನೆಯಾಗಿದ್ದವು ಎಂದು ಎಂ.ಜಿ. ನಾಗರಾಜ್ ರವರ ಸಂಶೋಧನೆಯಿಂದ ತಿಳಿದು ಬಂದಿದೆ.

ಆದರೆ ಈಗ ವೀರರಾಜಪೇಟೆ ತಾಲ್ಲೂಕಿನಲ್ಲಿ ಎರಡು ಮಠಗಳು ಹಾಗೂ ಸೋಮವಾರಪೇಟೆ ತಾಲ್ಲೂಕಿನಲ್ಲಿ ಎಂಟು ಮಠಗಳು ಹೀಗೆ ಒಟ್ಟು ಹನ್ನೊಂದು ಮಠಗಳು ಮಾತ್ರ ಕೊಡಗು ಜಿಲ್ಲೆಯಲ್ಲಿ ಅಸ್ತಿತ್ವವನ್ನು ಉಳಿಸಿಕೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿವೆ. ಈ ಮಠಗಳು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕವಾಗಿ ಈ ಜಿಲ್ಲೆ ಶ್ರೀಮಂತಿಕೆ ಪಡೆಯಲು ಕಾರಣವಾಗಿವೆ. ಕೊಡಗಿನಲ್ಲಿ ಹಾಲೇರಿ ಮನೆತನದ ಆಳ್ವಿಕೆ ಕೊನೆಗೊಂಡ ಮೇಲೆ ರಾಜಾಶ್ರಯ ತಪ್ಪಿದ್ದರಿಂದ ಬಹುತೇಕ ಮಠಗಳು ಅಸ್ತಿತ್ವವನ್ನು ಕಳೆದುಕೊಂಡಿವೆ. ಈ ರೀತಿ ಜಿಲ್ಲೆಯಲ್ಲಿ ಸ್ಥಾಪಿತಗೊಂಡ ಮಠಗಳಲ್ಲಿ ದೊರಕಿದ ದಾಖಲೆಯ ಪ್ರಕಾರ ಪಟ್ಟದದೇವರ ಮಠಗಳಾಗಿ ಐದು, ಸಂಸಾರಿ ಮಠಗಳಾಗಿ ಹತ್ತೊಂಬತ್ತು, ಪರಾಧೀನ ಮಠಗಳಾಗಿ ಇಪ್ಪತ್ತಾರು ಹಾಗೂ ಹನ್ನೆರಡು ವಿರಕ್ತ ಮಠಗಳು ಇದ್ದವು. ಉಳಿದ ಮಠಗಳ ಬಗ್ಗೆ ವಿವರ ದೊರೆಯದಾಗಿದೆ.

ವೀರರಾಜಪೇಟೆ ತಾಲ್ಲೂಕು

ಕೊಡಗು ಜಿಲ್ಲೆಯ ವೀರರಾಜಪೇಟೆ ತಾಲ್ಲೂಕು ಪ್ರಕೃತಿಯ ರಮಣೀಯತೆಯ ಜೊತೆಗೆ ಆರ್ಥಿಕ ಸಂಪತ್ತಿನಿಂದ ಕೂಡಿದೆ. ಈ ತಾಲ್ಲೂಕಿನಲ್ಲಿ ಹಿಂದೆ ಹತ್ತೊಂಬತ್ತು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾದರೂ ಇಂದು ಎರಡು ಮಠಗಳನ್ನು ಮಾತ್ರ ದಾಖಲಿಸಬಹುದಾಗಿದ್ದು, ಉಳಿದ ಮಠಗಳು ಮರೆಯಾಗಿವೆ.

ಅರಮೇರಿ

ವೀರರಾಜಪೇಟೆ ತಾಲ್ಲೂಕಿನ ಅರಮೇರಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಕಾಫಿ ತೋಟಗಳ ಸುತ್ತ ಆವೃತಗೊಂಡಿರುವ ಈ ಗ್ರಾಮದಲ್ಲಿ ಶ್ರೀ ಕಳಂಚೇರಿಮಠವು ವೀರಶೈವ ಧರ್ಮದ ಪ್ರಚಾರಕ ಸಂಸ್ಥೆಯಾಗಿ ವೀರಶೈವ ಧರ್ಮವನ್ನು ಬೆಳೆಸುವಲ್ಲಿ ಯಶಸ್ವಿಯಾಗಿದೆ.

ಕಳಂಚೇರಿ ಮಠ: ಅರಮೇರಿ ಗ್ರಾಮದಲ್ಲಿ ೧೮೧೨ರಲ್ಲಿ ಚೀಲಾಳ ಸಮಯದ ವಿರಕ್ತಮಠವಾದ ಶ್ರೀ ಕಳಂಚೇರಿ ಮಠವು, ಶ್ರೀ ಮಹಾಂತ ಸ್ವಾಮಿಗಳಿಂದ ಸ್ಥಾಪನೆಯಾಗಿದೆ. ಇದರಿಂದ ಈ ಭಾಗವು ಧಾರ್ಮಿಕ ಸಂಸ್ಕಾರ ಪಡೆದು ಶ್ರೀಮಂತಗೊಂಡಿದೆ.

ಮಠ ಸ್ಥಾಪನೆ: ಲಿಂಗರಾಜರ ತಂಗಿ ನೀಲಮ್ಮಾಜಿಯು ನಾಯಿಕಂಡ್ರೆ ವಂಶದ ಸೇನಾನಾಯಕ ಉತ್ತುನಾಯಕನನ್ನು ಪ್ರೀತಿಸಿ ಮದುವೆಯಾಗಲು ನಿರ್ಧರಿಸಿದ್ದಳು. ಆಗ ದೊರೆಲಿಂಗರಾಜರು, ಹಾಲೇರಿ ಮತ್ತು ಸಿದ್ಧಾಪುರದ ಗುರುಗಳ ಹತ್ತಿರ ಉತ್ತು ನಾಯಕನಿಗೆ ಲಿಂಗಧಾರಣೆ ಮಾಡಿಸಿ ತಂಗಿಯನ್ನು ಧಾರೆ ಎರೆದುಕೊಡುತ್ತಾನೆ. ನಂತರ ಉತ್ತುನಾಯಕನು ಯುದ್ಧದಲ್ಲಿ ಮಡಿದಾಗ ತಂಗಿ ವಿಧವೆಯಾದಳು. ಅವಳ ಮಾನಸಿಕ ನೋವನ್ನು ನೀಗಿಸಲು ಅರಮೇರಿಯಲ್ಲಿ ನೀಲಮ್ಮಾ ಜಿಗಾಗಿ ಮಠವನ್ನು ಕಟ್ಟಿಸಿದ್ದಲ್ಲದೆ, ಉಪದೇಶವನ್ನು ಮಾಡಲು ಶ್ರೀ ಮಹಾಂತಪ್ಪ ಸ್ವಾಮಿಗಳನ್ನು ನೇಮಿಸಿದರು ಎಂದು ಹೇಳಲಾಗುತ್ತಿದೆ. ಅಂದು ಪ್ರಾರಂಭಗೊಂಡ ಮಠವು ಈತನಕ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬೆಳೆದು ಬಂದಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಮಹಾಂತಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಶಾಂತಮಲ್ಲಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಶಾಂತವೀರಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಶ್ರೀ ಶಾಂತಮಲ್ಲಿಕಾರ್ಜುನಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಒಳ್ಳೆಯ ಉದ್ದೇಶಕ್ಕಾಗಿ ಸ್ಥಾಪನೆಯಾದ ಈ ಮಠವು ಶ್ರೀ ಮಹಾಂತಪ್ಪ ಸ್ವಾಮಿಗಳ ನಂತರ ಉತ್ತರಾಧಿಕಾರಿಗಳು ಯಾರೂ ಇಲ್ಲದೆ ಖಾಲಿ ಉಳಿಯಿತು. ಆಗ ವೀರರಾಜಪೇಟೆಯ ದೊಡ್ಡಮಠದ ಶ್ರೀ ಮಹಾಂತಪ್ಪ ಸ್ವಾಮಿಗಳು ಮಠದ ಆಡಳಿತವನ್ನು ನೋಡಿಕೊಳ್ಳಲು ತೊಂದರೆಯಾದಾಗ ಅರಮೇರಿಯ ಶ್ರೀ ಕಳಂಚೇರಿ ಮಠಕ್ಕೆ ಶ್ರೀ ಶಾಂತಮಲ್ಲ ಸ್ವಾಮಿಗಳನ್ನು ನೇಮಕಮಾಡಿ, ೧೯೪೬ ರಲ್ಲಿ ಮಠದ ಆಡಳಿತವನ್ನು ವಹಿಸಿಕೊಟ್ಟು ಅರಮೇರಿಗೆ ಕಳುಹಿಸಿಕೊಡುತ್ತಾರೆ.

ಶ್ರೀ ಶಾಂತವೀರ ಸ್ವಾಮಿಗಳು ಅರಮೇರಿಗೆ ಬಂದಾಗ ದೇವಸ್ಥಾನ ಮತ್ತು ಲಿಂಗರಾಜರು ಕಟ್ಟಿಸಿದಂತಹ ಮಠ ಪೂರ್ಣ ಜೀರ್ಣಗೊಂಡು, ಮಠದ ಅವಶೇಷವೂ ಸಹ ಇರಲಿಲ್ಲ. ಇಂತಹ ಸ್ಥಿತಿಯಲ್ಲಿದ್ದ ಮಠದ ಆಡಳಿತವನ್ನು ವಹಿಸಿ ಕೊಂಡು ವಾಸಕ್ಕೆಂದು ಚಿಕ್ಕದಾಗಿ ಗುಡಿಸಲು ಕಟ್ಟಿಕೊಂಡು ಧಾರ್ಮಿಕ ಕಾರ್ಯಗಳಿಗೆ ಚಾಲನೆ ಕೊಟ್ಟರು. ಮಠದ ಅಭಿವೃದ್ಧಿಗೆಂದು ಲಿಂಗರಾಜರು ಕೊಟ್ಟಂತಹ ಹದಿನೈದು ಎಕರೆ ಜಮೀನನ್ನು ಅಭಿವೃದ್ಧಿಪಡಿಸಿ ಹೆಚ್ಚು ವರಮಾನ ಬರುವಂತೆ ಮಾಡಿ, ೧೯೬೨ ರಲ್ಲಿ ಮಠಕ್ಕೆ ನೂತನ ಕಟ್ಟಡವನ್ನು ನಿರ್ಮಿಸಿದರು.

ಶ್ರೀ ಶಾಂತಮಲ್ಲ ಸ್ವಾಮಿಗಳು ಮಠದ ಆಡಳಿತವನ್ನು ನೋಡಿಕೊಳ್ಳಲು ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿ

ಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡು ೧೯೭೪ ರಲ್ಲಿ ಪಟ್ಟಾಧಿಕಾರದ ಅನುಗ್ರಹ ನೀಡಿದರು. ಗುರುಗಳು ತಮ್ಮ ಕಾಯಕಯೋಗದಿಂದ ಮಠವನ್ನು ಅಭಿವೃದ್ಧಿಪಡಿಸಿ ೧೯೭೭ರ ಆಗಸ್ಟ್ ೧೭ರಂದು ಲಿಂಗೈಕ್ಯರಾದರು.

ಸ್ನಾತಕೋತ್ತರ ಪದವಿಯನ್ನು ಪಡೆದಿರುವ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ವೈಚಾರಿಕ ಚಿಂತನೆಯುಳ್ಳವರಾಗಿದ್ದು, ಶರಣತತ್ತ್ವವನ್ನು ಪ್ರಚಾರಪಡಿಸಿ ವೀರಶೈವ ಧರ್ಮವನ್ನು ಬೆಳೆಸುತ್ತಿದ್ದಾರೆ. ಸಿದ್ಧಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮಿಗಳ ಅಪೇಕ್ಷೆಯಂತೆ ಕೆಲವು ದಿನ ತೊರೆನೂರು ಶ್ರೀ ಮರುಳಸಿದ್ಧೇಶ್ವರ ಮಠದ ಅಧಿಕಾರದ ಉಸ್ತುವಾರಿಯನ್ನು ವಹಿಸಿಕೊಂಡಿದ್ದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು, ಎರಡು ಮಠಗಳನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ಶೈಕ್ಷಣಿಕ,ಧಾರ್ಮಿಕ ಕಾರ್ಯಗಳು: ಮಠದಲ್ಲಿ ನಿತ್ಯ ತ್ರಿಕಾಲಪೂಜೆ ಹಾಗೂ ವರ್ಷಕ್ಕೊಮ್ಮೆ ಶಿವಾನುಭವಗೋಷ್ಠಿಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಪದವಿಪೂರ್ವ ಕಾಲೇಜು, ಪದವಿ ಕಾಲೇಜುಗಳು, ವೈದ್ಯಕೀಯ ಕಾಲೇಜು, ತಾಂತ್ರಿಕ ಮತ್ತು ಸ್ನಾತಕೋತ್ತರ ತರಗತಿಗಳಲ್ಲಿ ವ್ಯಾಸಂಗ ಮಾಡುವ ಬಡವಿದ್ಯಾರ್ಥಿಗಳನ್ನು ಗುರುತಿಸಿ, ಪ್ರತಿವರ್ಷ ಇಪ್ಪತ್ತೈದುಸಾವಿರ ರೂಪಾಯಿಗಳನ್ನು ವಿತರಣೆ ಮಾಡಲಾಗುತ್ತಿದೆ. ೧೯೭೩ ರಲ್ಲಿ ಮತಾಂತರ ಮಾಡಿಕೊಂಡ ಕ್ರಿಶ್ಚಿಯನ್, ಮುಸ್ಲಿಂ ಮತ್ತು ಕೊಂಕಣಿ ಜನಾಂಗದ ಹದಿನಾಲ್ಕು ಜನರಿಗೆ ಜೀವನಕ್ಕೆ ಭದ್ರತೆ ಕೊಟ್ಟು ಶಿವದೀಕ್ಷೆಯನ್ನು ನೀಡಿ ಲಿಂಗಧಾರಣೆ ಮಾಡಿಸಿದ್ದಾರೆ. ಈ ರೀತಿ ಶೈಕ್ಷಣಿಕ ಹಾಗೂ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ ವೀರಶೈವ ಧರ್ಮವನ್ನು ಬೆಳೆಸುತ್ತಿದ್ದಾರೆ.

ಸಾಮಾಜಿಕ ಸೇವೆ: ೧೯೫೨ ರಲ್ಲಿ ವೀರರಾಜಪೇಟೆಯಲ್ಲಿ '**ಕನ್ನಡಸಂಘ**'ವನ್ನು ಪ್ರಾರಂಭಿಸಿ ಅದರ ಪೋಷಕರಾಗಿ ಸಂಘವನ್ನು ಬೆಳೆಸಿದ್ದಾರೆ. ಈಗ ಇದು '**ಕರ್ನಾಟಕ ಸಂಘ**'ವಾಗಿ ವೀರರಾಜಪೇಟೆಯಲ್ಲಿ ಸಾಂಸ್ಕೃತಿಕ ವೇದಿಕೆಯಾಗಿ ಉತ್ತಮ ಕೆಲಸವನ್ನು ನಿರ್ವಹಿಸುತ್ತಿದೆ. ಈಗಲೂ ಈ ಸಂಘಕ್ಕೆ ಮಠದ ವತಿಯಿಂದ ಧನಸಹಾಯ ಮಾಡಲಾಗುತ್ತಿದೆ. ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ಕಾಯಕದ ಬಗ್ಗೆ ಬರಿ ಉಪದೇಶವನ್ನು ಮಾಡದೆ, ತಾವೂ ನಿಜವಾದ ನೇಗಿಲಯೋಗಿಯಾಗಿ ಶ್ರಮವಹಿಸಿ ದುಡಿದು, ವಾಸ್ತವ ಬದುಕನ್ನು ಬದುಕಿ ನಾಡಿಗೆ, ಭಕ್ತರಿಗೆ ಆದರ್ಶಪ್ರಾಯರಾಗಿದ್ದಾರೆ.

ವಿಳಾಸ:ಶ್ರೀ ಮ.ನಿ.ಪ್ರ.ಶಾಂತಮಲ್ಲಿಕಾರ್ಜುನ ಸ್ವಾಮಿಗಳು, ಶ್ರೀಕಳಂಚೇರಿಮಠ, ಅರಮೇರಿ,ವೀರರಾಜಪೇಟೆ ತಾ,ಕೊಡಗು ಜಿಲ್ಲೆ.

ವೀರರಾಜಪೇಟೆ

ಕೊಡಗು ಜಿಲ್ಲೆಯ ವೀರರಾಜಪೇಟೆಯು ಜಿಲ್ಲಾ ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತೆರಡು ಕಿ.ಮೀ ದೂರದಲ್ಲಿದೆ. ತಾಲ್ಲೂಕು ಕೇಂದ್ರವಾಗಿರುವ ವೀರರಾಜಪೇಟೆಯು ಧಾರ್ಮಿಕವಾಗಿ ಹಿಂದೆ ಹೆಸರು ಗಳಿಸಿತ್ತು. ಇದರ ಕುರುಹಾಗಿ ದೊಡ್ಡಮಠವು ಅಸ್ತಿತ್ವದಲ್ಲಿದೆ.

ದೊಡ್ಡಮಠ: ವೀರರಾಜಪೇಟೆಯ ಮಧ್ಯಭಾಗದಲ್ಲಿ ಶ್ರೀ ದೊಡ್ಡಮಠವು ಸ್ಥಾಪನೆಯಾಗಿ, ಧಾರ್ಮಿಕ ಚಟುವಟಿಕೆಗಳ ಕೇಂದ್ರವಾಗಿ ಶ್ರೀ ಶಾಂತಮಲ್ಲ ಸ್ವಾಮಿಗಳಿಂದ (೧೮೧೧) ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ.

ಮಠ ಸ್ಥಾಪನೆ: ಶ್ರೀ ಶಾಂತಮಲ್ಲ ಸ್ವಾಮಿಗಳು ತಪೋನಿಷ್ಠರಾಗಿ ಅನೇಕ ಪವಾಡಗಳಿಂದ ಹೆಸರು ಗಳಿಸಿದ್ದರು. ಇವರು ಲೋಕಸಂಚಾರ ಕೈಗೊಂಡು ಇಲ್ಲಿ ಅನುಷ್ಠಾನ ಕೈಗೊಂಡಿದ್ದ ಸಂದರ್ಭದಲ್ಲಿ, ಗುರುಗಳಿಗಾಗಿ ಲಿಂಗರಾಜರು ಮಠವನ್ನು ಸ್ಥಾಪಿಸಿ ಇಲ್ಲೇ ನೆಲೆಗೊಳ್ಳುವಂತೆ ಮಾಡಿದರೆಂದು ತಿಳಿದು ಬರುತ್ತಿದೆ. ಗುರುಗಳು ರಾಜಾಶ್ರಯದಿಂದ ಮಠವನ್ನು ಅಭಿವೃದ್ಧಿಪಡಿಸಿ ವೀರಶೈವ ಧರ್ಮವನ್ನು ಬೆಳೆಸಿದರು.

ಕರ್ತೃ ಗುರುಗಳ ನಂತರ ಅನೇಕ ಗುರುಗಳು ಮಠದ ಅಧಿಕಾರವನ್ನು ನಡೆಸಿರಬಹುದೆಂದು ಹೇಳಲಾದರು ಸೂಕ್ತ ಆಧಾರಗಳು ದೊರೆಯದೆ ಇರುವುದರಿಂದ ಮಾಹಿತಿ ಲಭ್ಯವಿಲ್ಲ. ಶ್ರೀ ಮಹಾಂತಪ್ಪ ಸ್ವಾಮಿಗಳ ಕಾಲದಲ್ಲಿ ಮಠವು ಅಭಿವೃದ್ಧಿಪಡೆಯಿತು. ಗುರುಗಳು ಶಿವಪೂಜಾನಿಷ್ಠರಾಗಿ ಹಾಗೂ ಉತ್ತಮ ಪ್ರವಚನಕಾರರಾಗಿ ಧರ್ಮವನ್ನು ವ್ಯಾಪಕವಾಗಿ

ಬೆಳೆಸಿದರು. ಗುರುಗಳು ೧೯೬೬ರಲ್ಲಿ ಲಿಂಗೈಕ್ಯರಾದರು. ಮಠದಲ್ಲಿ ಗದ್ದುಗೆಗಳಿದ್ದು ನಿತ್ಯಪೂಜಾ ಕಾರ್ಯ ನಡೆಯುತ್ತಿದೆ. ವಿಳಾಸ: ಶ್ರೀ ದೊಡ್ಡಮಠ, ವೀರರಾಜಪೇಟೆ, ಕೊಡಗು ಜಿಲ್ಲೆ.

ಸೋಮವಾರಪೇಟೆ ತಾಲ್ಲೂಕು

ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕು ಕಾಫಿಯ ಕಣಜವೆಂದು ಹೆಸರು ಗಳಿಸಿದೆ. ಇಂತಹ ತಾಲ್ಲೂಕಿನಲ್ಲಿ ಧಾರ್ಮಿಕ ಕ್ಷೇತ್ರವೂ ಶ್ರೀಮಂತವಾಗಿ ಬೆಳೆದಿದೆ. ಈ ತಾಲ್ಲೂಕಿನಲ್ಲಿ ಹಿಂದೆ ಐವತ್ತೇಳು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಇಂದು ಕೆಳಗೆ ದಾಖಲಿಸಲಾಗಿರುವ ಎಂಟು ಮಠಗಳ ಜೊತೆಗೆ ಶನಿವಾರಸಂತೆ ಸಮೀಪದ ಶಿಡಗಳಲೆಮಠ ಇವುಗಳನ್ನು ಮಾತ್ರ ದಾಖಲಿಸಬಹುದಾಗಿದ್ದು ಉಳಿದ ಮಠಗಳು ಮರೆಯಾಗಿವೆ.

ಕೊಡ್ಲಿಪೇಟೆ

ಸೋಮವಾರಪೇಟೆ ತಾಲ್ಲೂಕಿನ ಕೊಡ್ಲಿಪೇಟೆಯು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಮೂವತ್ತೈದು ಕಿ.ಮೀ ದೂರದಲ್ಲಿದೆ.ಹಿಂದೆ ಇಲ್ಲಿ ವೀರಶೈವಧರ್ಮವು ಉಚ್ಛ್ರಾಯ ಸ್ಥಿತಿಯಲ್ಲಿ ಬೆಳೆದಿತ್ತು ಎಂಬ ಕುರುಹನ್ನು ಇನ್ನೂ ಮಾಸದೆ ಉಳಿಸಿಕೊಂಡಿದೆ. ಹಿಂದೆ ಕೊಡಗಿನ ವೀರಶೈವ ದೊರೆಗಳ ಕಾಲದಲ್ಲಿ ವೀರಶೈವ ಧರ್ಮ ಬೆಳೆಯಲು ಎಲ್ಲಾ ರೀತಿಯ ಸಹಾಯ ಮಾಡಿದ್ದರಿಂದ, ಕೊಡ್ಲಿಪೇಟೆಯಲ್ಲಿ ಶ್ರೀ ಕಲ್ಮಠ, ಶ್ರೀ ದೊಡ್ಡಕೊಡ್ಲಿ (ಊರ) ಮಠ, ಮತ್ತು ಶ್ರೀ ಕಲ್ಲಳ್ಳಿ ಮಠ ಎಂಬ ಮೂರು ಮಠಗಳು ಸ್ಥಾಪನೆಯಾಗಿ ಇಂದಿಗೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿವೆ. ಹಾಲೇರಿಯ ರಾಜಮನೆತನವು ಈ ಮಠಗಳ ಊರ್ಜಿತಕ್ಕೆ ಕೊಟ್ಟ ಆಸ್ತಿ ಹಾಳಾಗದೆ ಉಳಿದಿದ್ದು ಮಠಗಳಿಗೆ ಆದಾಯ ತರುತ್ತಿದೆ.

ಕಲ್ಮಠ: ಕೊಡ್ಲಿಪೇಟೆ ಗ್ರಾಮದಿಂದ ಸುಮಾರು ಎರಡು ಕಿ.ಮೀ.ದೂರದ ಕಾಫಿ ತೋಟದ ಮಧ್ಯ ಭಾಗದಲ್ಲಿ ನಿಸರ್ಗದ ರಮಣೀಯತೆಗೆ ಕಳಸ ಇಟ್ಟಂತೆ, ಚೀಲಾಳ ಸಮಯದ ಶ್ರೀ ಕಲ್ಮಠವು ಸ್ಥಾಪನೆಯಾಗಿದೆ. ಈ ಮಠವನ್ನು ಶ್ರೀಮಹಾಂತ ಸ್ವಾಮಿಗಳು ಸ್ಥಾಪಿಸಿದರೆಂದು ಹೇಳಲಾಗುತ್ತಿದೆ.

ಮಠ ಸ್ಥಾಪನೆ: ಮಠದ ಕಟ್ಟಡವು ಹೊಯ್ಸಳರ ಕಾಲದಲ್ಲಿ ಕಲ್ಲಿನಿಂದ ನಿರ್ಮಾಣಗೊಂಡಿರುವ ಕಾರಣ ಮಠಕ್ಕೆ**'ಕಲ್ಮಠ'** ಎಂದು ನಾಮಕರಣ ಮಾಡಿದ್ದಾರೆ. ಹಾಲೇರಿ ಅರಸು ಮನೆತನಕ್ಕೂ ಮೊದಲು ಚೆಂಗಾಳ್ವರ ಕಾಲದಲ್ಲಿ ಮಠವು ಸ್ಥಾಪನೆ ಯಾಗಿರಬಹುದೆಂದು ಕಟ್ಟಡವನ್ನು ಅವಲೋಕಿಸಿದರೆ ತಿಳಿಯುತ್ತದೆ. ಇದರಿಂದ ಹದಿನಾರನೆಯ ಶತಮಾನದಲ್ಲಿ ಮಠವು ಅಸ್ತಿತ್ವದಲ್ಲಿತ್ತು ಎಂದು ಹೇಳಲಾಗುತ್ತಿದೆ. ಕಾಲಕ್ರಮೇಣ ಮಠದ ಧಾರ್ಮಿಕ ಕಾರ್ಯಗಳು ಹೆಚ್ಚಾದಂತೆ ಆವಶ್ಯಕತೆಗೆ ಅನುಗುಣವಾಗಿ ಕಟ್ಟಡವನ್ನು ವಿಸ್ತರಿಸಲಾಗಿದೆ.ಶ್ರೀ ನಂಜುಂಡ ಸ್ವಾಮಿಗಳ ಕಾಲದಲ್ಲಿ ಹೆಚ್ಚು ವಿಸ್ತಾರಗೊಂಡು ಬೆಳೆದಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಮಹಾಂತಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಸೋಮಶೇಖರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ನಂಜುಂಡಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಮಹಾಂತಸ್ವಾಮಿಗಳು

ಈ ರೀತಿ ಮಠದ ಪರಂಪರೆಯ ಗುರುಗಳ ಕೆಲವು ಹೆಸರುಗಳನ್ನು ಮಾತ್ರ ದಾಖಲಿಸಲಾಗಿದೆ. ಕರ್ತೃ ಗುರುಗಳಾದ ಶ್ರೀ ಮಹಾಂತ ಸ್ವಾಮಿಗಳು ಶಿವಪೂಜಾ ನಿಷ್ಠರಾಗಿ, ವಾಕ್‌ಸಿದ್ಧಿ ಪುರುಷರಾಗಿ ಮಠವನ್ನು ಅಭಿವೃದ್ಧಿಪಡಿಸಿದ್ದರು. ಇವರ ನಂತರ ಶ್ರೀ ಸೋಮಶೇಖರ ಸ್ವಾಮಿಗಳು ಪಟ್ಟಾಧಿಕಾರಕ್ಕೆ ಬಂದು ಧಾರ್ಮಿಕ ಕಾರ್ಯಗಳನ್ನು ವ್ಯವಸ್ಥಿತವಾಗಿ ನಡೆಸಿದರು. ಇವರ ನಂತರ ಬಂದ ಶ್ರೀ ನಂಜುಂಡ ಸ್ವಾಮಿಗಳು ಮಠವನ್ನು ಆರ್ಥಿಕವಾಗಿ ಸದೃಢಗೊಳಿಸಿ, ಮಠವು ಸ್ವಾವಲಂಬನೆ ಸಾಧಿಸುವಂತೆ ಮಾಡಿದರು. ಇವರ ಕಾಲದಲ್ಲಿ ಮಠವು ಅಭಿವೃದ್ಧಿಗೊಂಡಿದೆ. ಗುರುಗಳು ತಮ್ಮ ಜೀವಿತಾ

ವಧಿಯಲ್ಲಿ ಸಿದ್ಧಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮಿಗಳಿಗೆ ಮಠದ ಆಡಳಿತ ಜವಾಬ್ದಾರಿಯನ್ನು ಒಪ್ಪಿಸಿ ಲಿಂಗೈಕ್ಯರಾದರು. ಶ್ರೀ ನಂಜುಂಡ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಕೆಲವು ದಿನಗಳ ಕಾಲ ಮಠವು ಉತ್ತರಾಧಿಕಾರಿಗಳಿಲ್ಲದೆ ಖಾಲಿ ಉಳಿಯಿತು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮಿಗಳ ಕೃಪಾಶೀರ್ವಾದಿಂದ ಪಟ್ಟಾಧಿಕಾರದ ಅನುಗ್ರಹ ಪಡೆದ ಶ್ರೀ ಮಹಾಂತಸ್ವಾಮಿಗಳು ೧೯೭೫ರಲ್ಲಿ ಶ್ರೀ ಕಲ್ಮಠದ ಅಧಿಕಾರವನ್ನು ವಹಿಸಿಕೊಂಡರು. ಗುರುಗಳು ಶ್ರೀ ಸಿದ್ಧಗಂಗಾ ಮಠದಲ್ಲಿ ವಿದ್ಯಾಭ್ಯಾಸ ಮಾಡಿ, ಸಂಸ್ಕಾರವನ್ನು ಪಡೆದುಕೊಂಡಿದ್ದರು. ಇವರು ಮಠದ ಆಡಳಿತವನ್ನು ವಹಿಸಿಕೊಂಡ ಮೇಲೆ ಹರಿದು ಹಂಚಿ ಹೋಗಿದ್ದ ಆಸ್ತಿಯನ್ನು ಶಿಸ್ತುಬದ್ಧಗೊಳಿಸಿ ವರಮಾನವನ್ನು ಹೆಚ್ಚಿಸಿಕೊಂಡರು. ಪದವೀಧರರಾದ ಗುರುಗಳು ಧರ್ಮವನ್ನು ವೈಚಾರಿಕ ದೃಷ್ಟಿಕೋನದಿಂದ ಅವಲೋಕಿಸಿ ಮಲೆನಾಡಿನ ಈ ಪ್ರದೇಶದಲ್ಲಿ ವೀರಶೈವ ಧರ್ಮ ಜೀವಂತವಾಗಿರುವಂತೆ ಶ್ರಮವಹಿಸಿ ಪ್ರಚಾರ ಕಾರ್ಯ ಕೈಗೊಂಡಿದ್ದಾರೆ.

ರಾಜಾಶ್ರಯ: ಕೊಡಗಿನ ದೊರೆ ಲಿಂಗರಾಜೇಂದ್ರ ಒಡೆಯರ ಕಾಲದಲ್ಲಿ (೧೮೧೧-೧೮೨೦) ಮಠಕ್ಕೆ ಕೊಡ್ಲಿಪೇಟೆಯ ವ್ಯಾಪ್ತಿಯಲ್ಲಿ ಬರುವಂತೆ ಸುಮಾರು ಎಂಟು ಸರ್ವೆನಂಬರುಗಳಲ್ಲಿ ಜಮೀನನ್ನು ಇನಾಂ ನೀಡಿ, ಮಠದ ಧಾರ್ಮಿಕ ಕೆಲಸ ಕಾರ್ಯಗಳು ಎಂದೂ ನಿಲ್ಲದಂತೆ ಸುಗಮವಾಗಿ ನಡೆದುಕೊಂಡು ಹೋಗಲು ಅನುವುಮಾಡಿಕೊಟ್ಟು, ಮಠದ ಪೋಷಕರಾಗಿದ್ದರು. ಇದರಲ್ಲಿ ಹೇಮಾವತಿ ಜಲಾನಯನ ಪ್ರದೇಶದಲ್ಲಿ ಇಪ್ಪತ್ತು ಎಕರೆ ಮುಳುಗಡೆಯಾಗಿ ಹೋಗಿದೆ. ಉಳಿದ ಜಮೀನಿನಲ್ಲಿ ಕಾಫಿ ಹಾಗೂ ಭತ್ತವನ್ನು ಬೆಳೆಯಲಾಗುತ್ತಿದೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಕರ್ತೃ ಗುರುಗಳ ಗದ್ದುಗೆ ಹಾಗೂ ಇತರೆ ಗದ್ದುಗೆಗಳಿಗೆ ನಿತ್ಯಪೂಜೆಯನ್ನು ಮಾಡಲಾಗುತ್ತಿದೆ. ವಾರ್ಷಿಕ ಪುಣ್ಯಾರಾಧನೆಯ ಕಾರ್ಯಕ್ರಮಗಳ ಅಂಗವಾಗಿ ಶಿವಾನುಭವ ಗೋಷ್ಠಿಯನ್ನು ನಡೆಸಲಾಗುತ್ತಿದೆ. ಅಂತರ್ ಜಾತಿ ವಿವಾಹಗಳಿಂದ ಜಾತಿ ನಿರ್ಮೂಲನೆ ಸಾಧ್ಯ ಎಂದು ಅರಿತು, ಮಠದಲ್ಲಿ ಅಂತರ ಜಾತಿ ವಿವಾಹಗಳನ್ನು ನಡೆಸಲಾಗಿದೆ. ಮಠದಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಧಾರ್ಮಿಕ ಕೆಲಸಗಳನ್ನು ಗುರುಗಳು ಮುಂದೆ ನಿಂತು ಮಾಡಿಸುತ್ತಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಮಹಾಂತ ಸ್ವಾಮಿಗಳು, ಶ್ರೀ ಕಲ್ಮಠ, ಕೊಡ್ಲಿಪೇಟೆ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ.

ದೊಡ್ಡಕೊಡ್ಲಿ (ಊರ) ಮಠ: ಕೊಡ್ಲಿಪೇಟೆಯಲ್ಲಿರುವ ದೊಡ್ಡಕೊಡ್ಲಿ (ಊರ) ಮಠವು ಪಂಚ ಪೀಠಗಳಲ್ಲಿ ಒಂದಾದ ಉಜ್ಜಯಿನಿ ಪೀಠದ ಶಾಖಾಮಠವಾಗಿದೆ. ಈ ಮಠವನ್ನು ಶ್ರೀ ಸಿದ್ಧಲಿಂಗ ಸ್ವಾಮಿಗಳು ಸ್ಥಾಪಿಸಿದ್ದರೆಂದು ಹೇಳಲಾಗುತ್ತಿದೆ. ಕಾಫಿ ತೋಟದಲ್ಲಿ ಹಳೆಯ ಕಟ್ಟಡವನ್ನು ಹೊಂದಿರುವ ಮಠವು ಶ್ರೀ ನಂಜಯ್ಯ ಸ್ವಾಮಿಗಳ ಕಾಲದಲ್ಲಿ ಅಭಿವೃದ್ಧಿಗೊಂಡಿದೆ. ಪುರಾತನ ಮಠವು ಮರದ ಕೆತ್ತನೆಯ ಕಲಾಕೃತಿಗಳಿಂದ ತೊಟ್ಟಿಯಾಕಾರದಲ್ಲಿ ನಿರ್ಮಾಣಗೊಂಡಿದೆ.

ಪರಂಪರೆ:

೧. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು

೨. ಷ.ಬ್ರ.ಶ್ರೀ ಶಾಂತವೀರ ಶಿವಾಚಾರ್ಯಸ್ವಾಮಿಗಳು

೩. ಷ.ಬ್ರ.ಶ್ರೀ ನಂಜಯ್ಯ ಶಿವಾಚಾರ್ಯಸ್ವಾಮಿಗಳು

೪. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯ ಗುರುಗಳ ಕೆಲವು ಹೆಸರುಗಳನ್ನು ಮಾತ್ರ ದಾಖಲಿಸಲಾಗಿದೆ. ಪರಂಪರೆಯ ಕರ್ತೃ ಗುರುಗಳ ನಂತರ ಅಧಿಕಾರ ನಡೆಸಿದ ಗುರುಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿಡದೆ ಇರುವ ಕಾರಣ ನಿಖರವಾಗಿ ಗುರುತಿಸಲು ಸಾಧ್ಯವಾಗುತ್ತಿಲ್ಲ. ಈಗಿನ ಮಠಾಧೀಶರಾದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಮಠದ ಆಡಳಿತವನ್ನು ನಡೆಸಿಕೊಂಡು, ಧಾರ್ಮಿಕ ಉಪದೇಶಗಳನ್ನು ಮಾಡುತ್ತಾ ವೀರಶೈವ ಧರ್ಮವನ್ನು ಹಾಗೂ ಮಠವನ್ನು ಬೆಳೆಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಎರಡು ಗದ್ದುಗೆಗಳಿಗೆ ನಿತ್ಯ ಪೂಜೆ ಹಾಗೂ ಸಾಂದರ್ಭಿಕವಾಗಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಗುರುಗಳು ಧರ್ಮೋಪದೇಶ ಕಾರ್ಯಕ್ರಮಗಳನ್ನು ಮಾಡುತ್ತಾ, ಭಕ್ತರ ನೆರವಿನಿಂದ ಮಠವನ್ನು ಬೆಳೆಸಿ ಉಳಿಸಿಕೊಂಡು ಬಂದಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ದೊಡ್ಡಕೊಡ್ಲಿ (ಊರು) ಮಠ, ಕೊಡ್ಲಿಪೇಟೆ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ.

ಕಲ್ಲಳ್ಳಿಮಠ: ಕೊಡಲಿಪೇಟೆಗೆ ಹೊಂದಿಕೊಂಡಂತಿರುವ ಕಲ್ಲಳ್ಳಿಯಲ್ಲಿ ಚಿತ್ರದುರ್ಗ ಬೃಹನ್ಮಠದ ಶಾಖಾಮಠವಾಗಿ ಶ್ರೀ ಕಲ್ಲಳ್ಳಿ ಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದಲ್ಲಿ ಸ್ಥಾಪನೆಯಾದ ಮಠದ ಕಲ್ಲಿನ ಕಟ್ಟಡ ಪೂರ್ತಿ ಶಿಥಿಲಗೊಂಡಾಗ ಮಠಕ್ಕೆ ಪ್ರತ್ಯೇಕ ಕಟ್ಟಡವನ್ನು ನಿರ್ಮಿಸಲಾಗಿದೆ. ಮಠದ ಸ್ಥಾಪನೆಯಿಂದ ಈ ಭಾಗದಲ್ಲಿ ನಡೆಯುವ ಧಾರ್ಮಿಕ ಚಟುವಟಿಕೆಗಳಿಗೆ ನೆರವಾಗಿದೆ.

ಪರಂಪರೆ: ಪುರಾತನ ಕಾಲದಲ್ಲಿ ಸ್ಥಾಪನೆಯಾದ ಈ ಮಠದ ಕರ್ತೃ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ಲಭ್ಯವಿಲ್ಲ. ಅಲ್ಲದೆ ಅಧಿಕಾರ ನಡೆಸಿದ ಗುರುಗಳ ಬಗ್ಗೆಯೂ ಮಾಹಿತಿಯನ್ನು ಸಂರಕ್ಷಿಸಿಡದ ಕಾರಣ ಪರಂಪರೆಯನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ. ೧೯೫೫ ರಲ್ಲಿ ಶ್ರೀ ವೀರಭದ್ರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಚಿತ್ರದುರ್ಗ ಜಿಲ್ಲೆಯ ಭರಮಸಾಗರದ ಹತ್ತಿರದ ನಲ್ಲಿಕಟ್ಟೆ ಗ್ರಾಮದಲ್ಲಿ ಜನಿಸಿದ ಶ್ರೀ ಸಂಗಮೇಶ್ವರ ಸ್ವಾಮಿಗಳು, ಚಿತ್ರದುರ್ಗದ ಮುರುಘಾ ಮಠದ ಜಗದ್ಗುರುಗಳ ಕೃಪಾಶೀರ್ವಾದಿಂದ ಬೆಳೆದು ಇಲ್ಲಿಗೆ ನೇಮಕಗೊಂಡರು. ೧೯೫೬ರಲ್ಲಿ ಮಠಕ್ಕೆ ಬಂದು ನೆಲೆಸಿದ ಶ್ರೀ ಸಂಗಮೇಶ್ವರ ಸ್ವಾಮಿಗಳು ೧೯೬೪ರಲ್ಲಿ ಚಿತ್ರದುರ್ಗದ ಬೃಹನ್ಮಠದ ಶ್ರೀ ಮುರುಘರಾಜೇಂದ್ರ ಸ್ವಾಮಿಗಳ ಸಾನ್ನಿಧ್ಯದಲ್ಲಿ ಶ್ರೀ ಗುರುಶಾಂತ ಸ್ವಾಮಿಗಳಿಂದ ಅನುಗ್ರಹ ಪಡೆದು ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ.

ಶ್ರೀ ಸಂಗಮೇಶ್ವರ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ಕೊಡಗಿನ ಹಾಲೇರಿ ಅರಸರ ಕಾಲದಲ್ಲಿ ಮಠಕ್ಕೆ ದೊರೆತಿದ್ದ ಸುಮಾರು ಐವತ್ತು ಎಕರೆ ಜಮೀನನ್ನು ಅಭಿವೃದ್ಧಿಪಡಿಸಿ, ಆದಾಯದ ಮೂಲವನ್ನಾಗಿ ಮಾಡಿಕೊಂಡರು. ಮಠದ ಆವರಣದಲ್ಲಿರುವ ಗದ್ದುಗೆಗೆ ನಿತ್ಯಪೂಜೆ, ಪ್ರತಿವರ್ಷ ಹಿರಿಯ ಗುರುಗಳ ಪುಣ್ಯಾರಾಧನೆ ಹಾಗೂ ಚೌಡೇಶ್ವರಿಯ ಆರಾಧನೆಯನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಸಂಗಮೇಶ್ವರ ಸ್ವಾಮಿಗಳು, ಶ್ರೀ ಕಲ್ಲಳ್ಳಿಮಠ, ಕೊಡಲಿಪೇಟೆ, ಕೊಡಗು ಜಿಲ್ಲೆ.

ತೊರೆನೂರು

ಸೋಮವಾರಪೇಟೆ ತಾಲ್ಲೂಕಿನ ತೊರೆನೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಕಾವೇರಿ ನದಿಯ ದಡದಲ್ಲಿ ಸ್ಥಾಪನೆಯಾಗಿರುವ ಈ ಗ್ರಾಮದಲ್ಲಿ ಶ್ರೀ ಮರಳುಸಿದ್ಧೇಶ್ವರಸ್ವಾಮಿ ವಿರಕ್ತ ಮಠವು ಸ್ಥಾಪನೆಯಾಗಿ ವೀರಶೈವ ಧರ್ಮವನ್ನು ಬೆಳಸಿದೆ.

ಮರುಳಸಿದ್ಧೇಶ್ವರಸ್ವಾಮಿ ವಿರಕ್ತಮಠ: ತೊರೆನೂರು ಗ್ರಾಮದ ಹೊರಭಾಗದಲ್ಲಿ ಹರಿಯುವ ಕಾವೇರಿ ನದಿಯ ದಡದಲ್ಲಿ ಚೀಲಾಳ ಸಮಯದ ಪರಂಪರೆಯಲ್ಲಿ ಬೆಳೆದು, ಶ್ರೀ ಮರುಳಸಿದ್ಧೇಶ್ವರಸ್ವಾಮಿ ವಿರಕ್ತಮಠವು ಸ್ಥಾಪನೆಯಾಗಿದೆ. ಶ್ರೀ ಮರುಳಸಿದ್ಧೇಶ್ವರ ಸ್ವಾಮಿಗಳು ಮಠವನ್ನು ಸ್ಥಾಪಿಸಿದ್ದರಿಂದ **'ಶ್ರೀ ಮರುಳಸಿದ್ಧೇಶ್ವರಸ್ವಾಮಿ ವಿರಕ್ತ ಮಠ'** ಎಂಬ ಹೆಸರು ಬಂದಿದೆ.

ಮಠ ಸ್ಥಾಪನೆ: ಶ್ರೀ ಮರುಳಸಿದ್ಧೇಶ್ವರ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಈ ನಾಡಿಗೆ ಆಗಮಿಸಿ,ಕಾವೇರಿ ನದಿಯ ದಡದ ಪ್ರಶಾಂತ ವಾತಾವರಣದಲ್ಲಿ ನೆಲೆ ನಿಂತು ಅನುಷ್ಠಾನಗೊಂಡರು. ಗುರುಗಳು ಇಲ್ಲಿ ಅನೇಕ ಪವಾಡಗಳನ್ನು ಮಾಡಿ ಭಕ್ತರನ್ನು ಉದ್ಧರಿಸಿದರು. ಈ ವಿಚಾರ ಲಿಂಗರಾಜರಿಗೆ ತಿಳಿಯುತ್ತದೆ. ಆಗ ಲಿಂಗರಾಜರು ತಮ್ಮ

ಪರಿವಾರ ಸಮೇತ ಗುರುಗಳು ನೆಲೆಗೊಂಡ ಸ್ಥಳಕ್ಕೆ ಬಂದು, ಮಠವನ್ನು ಸ್ಥಾಪಿಸಿ ಮಠದ ಸುತ್ತಲಿನ ಜಾಗವನ್ನು ಉಂಬಳಿಯಾಗಿ ನೀಡಿದರು. ರಾಜಾಶ್ರಯದಿಂದ ಸ್ಥಾಪನೆಯಾದ ಮಠವು ಈತನಕ ಬೆಳೆದು, ವೀರಶೈವ ಧರ್ಮವನ್ನು ಬೆಳೆಸಿದೆ. ಇಲ್ಲಿ ಮಠ ಸ್ಥಾಪನೆಯಾದ ಮೇಲೆ ಮಠದಲ್ಲಿ ಧಾರ್ಮಿಕ ಕಾರ್ಯಗಳು ನಿರಂತರವಾಗಿ ನಡೆಯತೊಡಗಿದವು. ಈ ಸಂದರ್ಭದಲ್ಲಿ ಶರಣೆ ಚೌಡಮ್ಮನನ್ನು ತಮ್ಮ ಸೇವಕಿಯನ್ನಾಗಿ ಮಾಡಿಕೊಂಡ ಶ್ರೀ ಮರುಳಸಿದ್ಧೇಶ್ವರ ಸ್ವಾಮಿಗಳು ಜೀವಂತ ಸಮಾಧಿಯಾದರು.

ಪರಂಪರೆ:

೧. ಶ್ರೀ ಮ.ನಿ.ಪ್ರ. ಮರುಳಸಿದ್ಧೇಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಚನ್ನಮಲ್ಲಪ್ಪಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಕೊಟ್ಟೂರುಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಮಹಾಂತಪ್ಪಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಎರಡನೆಯ ಕೊಟ್ಟೂರುಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಗುರುಲಿಂಗಪ್ಪಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಮಹಾಂತಸ್ವಾಮಿಗಳು
೯. ಶ್ರೀ ಮ.ನಿ.ಪ್ರ. ಮಲ್ಲೇಶಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃ ಗುರುಗಳ ನಂತರ ಶ್ರೀ ಚನ್ನಮಲ್ಲಪ್ಪ ಸ್ವಾಮಿಗಳು ಮಠವನ್ನು ಅಭಿ ವೃದ್ಧಿಪಡಿಸಿ ಇಲ್ಲಿಯೇ ಲಿಂಗೈಕ್ಯರಾದರು. ಇವರ ನಂತರ ಅಧಿಕಾರಕ್ಕೆ ಬಂದ ಮೂರು ಜನ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ನಂತರ ಆರನೆಯ ಗುರುಗಳಾದ ಶ್ರೀ ಗುರುಲಿಂಗಪ್ಪ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಇವರ ಗದ್ದುಗೆ ಮಠದಲ್ಲಿಯೇ ಸ್ಥಾಪನೆಯಾಗಿದೆ. ನಂತರ ಶ್ರೀ ಬಸವಲಿಂಗ ಸ್ವಾಮಿಗಳು ಅಧಿಕಾರಕ್ಕೆ ಬಂದರು. ಇವರು ಶಿವಪೂಜಾ ನಿಷ್ಠರಾಗಿ, ಪಾರಮಾರ್ಥಿಕ ಹೆಚ್ಚು ಒಲವನ್ನು ತೋರಿಸಿ ಹೆಸರುಗಳಿಸಿದ್ದರು. ತಮ್ಮ ಜೀವಿತಾವಧಿಯಲ್ಲಿಯೇ ಶ್ರೀ ಮಹಾಂತ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿಕೊಂಡು, ೧೯೫೬ ರಲ್ಲಿ ಪಟ್ಟಾಧಿಕಾರದ ಅನುಗ್ರಹ ನೀಡಿ ವಿಶ್ರಾಂತ ಜೀವನವನ್ನು ನಡೆಸಿ ೧೯೬೬ರಲ್ಲಿ ಲಿಂಗೈಕ್ಯರಾದರು.

ಶ್ರೀ ಮಹಾಂತ ಸ್ವಾಮಿಗಳು ಸಿದ್ಧಗಂಗೆಯಲ್ಲಿ ವಿದ್ಯಾಭ್ಯಾಸ ಮಾಡಿ, ಮಠಕ್ಕೆ ಆಗಮಿಸಿ ಹಿರಿಯ ಗುರುಗಳ ಸಾನ್ನಿಧ್ಯದಲ್ಲಿ ಮಠವನ್ನು ಅಭಿವೃದ್ಧಿಪಡಿಸಿದರು ಚೆಂಗಾಳ್ವರ ಕಾಲದಲ್ಲಿ ಸ್ಥಾಪಿಸಲಾದ ಚನ್ನಮಲ್ಲಪ್ಪನವರ ಗದ್ದುಗೆಯನ್ನು ಸೇರಿಸಿ ಕೊಂಡು, ಮಠದ ವಿಸ್ತೀರ್ಣವನ್ನು ಹೆಚ್ಚಿಸಿ ಮಠದ ಕಟ್ಟಡವನ್ನು ನವೀಕರಿಸಿದರು. ಗುರುಗಳ ಕರ್ತೃತ್ವಶಕ್ತಿಯಿಂದ ಮಠವು ಆರ್ಥಿಕವಾಗಿ ಶ್ರೀಮಂತಗೊಂಡಿತು. ಇವರು ತಮ್ಮ ಉತ್ತರಾಧಿಕಾರಿಗಳನ್ನಾಗಿ ಅರಮೇರಿಯ ಶ್ರೀ ಕಳಂಚೇರಿ ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿಕೊಂಡಿದ್ದರು. ಆದರೆ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳಿಗೆ ಎರಡು ಮಠಗಳ ಆಡಳಿತ ನೋಡಿಕೊಳ್ಳುವುದು ಕಷ್ಟವಾಗಬಹುದೆಂದು ಅರಿತು, ತಮ್ಮ ಶಾಖಾಮಠವಾದ ಎಲೆಮುದ್ದನಹಳ್ಳಿಯ ಮಠದ ಶ್ರೀ ಮಲ್ಲೇಶ ಸ್ವಾಮಿಗಳನ್ನು ೨೦೦೧ರಲ್ಲಿ ಪಟ್ಟಾಧಿಕಾರವನ್ನು ನೀಡಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ.

ಸಾಮಾಜಿಕ ಕಾರ್ಯಗಳು: ಶ್ರೀ ಮಹಾಂತ ಸ್ವಾಮಿಗಳ ಕಾಲದಿಂದಲೂ ಪ್ರತಿವರ್ಷ ಇಪ್ಪತ್ತೈದು ಬಡ ಮಕ್ಕಳನ್ನು ಆಯ್ಕೆಮಾಡಿ ಪುಸ್ತಕ ಹಾಗೂ ಬಟ್ಟೆಯನ್ನು ನೀಡುತ್ತಾ ಮಠ ಕಲಿಕೆಗೆ ನೆರವಾಗಿದೆ. ತೊರೆನೂರಿಗೆ ಕುಡಿಯುವ ನೀರಿನ ಶಾಶ್ವತ ವ್ಯವಸ್ಥೆಯನ್ನು ಮಾಡಿಸಲಾಗಿದೆ. ತೊರೆನೂರಿನ ಯುವಕ ಸಂಘಕ್ಕೆ ನಲವತ್ತು ಸಾವಿರ ರೂಪಾಯಿ ಬೆಲೆ ಬಾಳುವ ನಿವೇಶನ ನೀಡಲಾಗಿದೆ. ಮಠದ ಹತ್ತುಎಕರೆ ಜಮೀನನ್ನು ನಿವೇಶನವನ್ನಾಗಿ ಪರಿವರ್ತಿಸಿ ನಿರಾಶ್ರಿತರಿಗೆ ಜಾತಿಭೇದ ತೋರಿಸದೆ ಉಚಿತ ವಾಗಿ ಹಂಚಲಾಗಿದೆ. ಶ್ರೀ ಮಹಾಂತ ಸ್ವಾಮಿಗಳು ಅನೇಕ ಜನಪರ ಕಾರ್ಯಗಳನ್ನು ಮಾಡಿ ಜನಮನದಲ್ಲಿ ಉಳಿದಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯ ಪೂಜೆ, ಶ್ರಾವಣ ಹಾಗೂ ಕಾರ್ತೀಕ ಮಾಸದಲ್ಲಿ ವಿಶೇಷ ಪೂಜೆ ನಡೆಸಲಾಗುತ್ತಿದೆ. ವರ್ಷಕ್ಕೊಮ್ಮೆ ಹಿರಿಯ ಗುರುಗಳ ಪುಣ್ಯಾರಾಧನೆಯ ಅಂಗವಾಗಿ ಶಿವಾನುಭವ ಗೋಷ್ಠಿಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಅನ್ನದಾಸೋಹವನ್ನು ಮಾಡಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಮಲ್ಲೇಶ ಸ್ವಾಮಿಗಳು, ಶ್ರೀ ಮರುಳಸಿದ್ಧೇಶ್ವರಸ್ವಾಮಿ ವಿರಕ್ತಮಠ, ತೊರೆನೂರು, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ.

ದುಂಡಹಳ್ಳಿ

ಸೋಮವಾರಪೇಟೆ ತಾಲ್ಲೂಕಿನ ದುಂಡಹಳ್ಳಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹದಿನೆಂಟು ಕಿ.ಮೀ ದೂರದಲ್ಲಿದೆ. ಶನಿವಾರ ಸಂತೆಗೆ ಅತ್ಯಂತ ಸಮೀಪವಿರುವ ಈ ಗ್ರಾಮವು ವೀರಶೈವ ಧರ್ಮದ ಕೇಂದ್ರಬಿಂದುವಾಗಿ ಬೆಳೆದಿದೆ. ಇಲ್ಲಿ ಶ್ರೀ ಮುದ್ದಿನಕಟ್ಟೆಮಠವು ಸ್ಥಾಪನೆಯಾಗಿದ್ದು ತನ್ನ ಧಾರ್ಮಿಕ ಕಾರ್ಯಗಳಿಂದ ಹೆಸರು ಪಡೆದಿದೆ.

ಮುದ್ದಿನಕಟ್ಟೆಮಠ: ದುಂಡಳ್ಳಿ ಗ್ರಾಮದಲ್ಲಿ ಉಜ್ಜಯಿನಿಪೀಠದ ಶಾಖಾಮಠವಾಗಿ, ಶಿಷ್ಯವರ್ಗದ ಪರಂಪರೆಯಲ್ಲಿ ಬೆಳೆದಿರುವ ಶ್ರೀ ಮುದ್ದಿನಕಟ್ಟೆಮಠವು ಇಲ್ಲಿ ಸ್ಥಾಪನೆಯಾಗಿದೆ.ಪುರಾತನ ಕಾಲದ ಈ ಮಠವು ಇಂದಿನವರೆಗೂ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದಿದೆ.

ಮಠ ಸ್ಥಾಪನೆ: ಪುರಾತನ ಕಾಲದ ಈ ಮಠದ ಸ್ಥಾಪನೆಯ ಕಾಲದ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿದ್ದರೆಂದು ಹೇಳಲಾಗುತ್ತಿದೆ. ಗುರುಗಳು ದುಂಡಹಳ್ಳಿಯ ದಟ್ಟ ಅಡವಿಯ ಮಧ್ಯದಲ್ಲಿ ತಪೋನುಷ್ಠಾನ ಕೈಗೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿದ್ದ ವಿಚಾರ ಹಾಲೇರಿ ಅರಸು ಮನೆತನಕ್ಕೆ ತಿಳಿದು ಗುರುಗಳ ಮಹತ್ ಕಾರ್ಯಕ್ಕೆ ನೆರವಾಗಲು ಮುಂದಾಗಿ ಮಠದ ಸುತ್ತಲಿನ ಜಮೀನನ್ನು ಉಂಬಳಿಯಾಗಿ ನೀಡಿ, ಅನೇಕ ದಾನದತ್ತಿಯನ್ನು ನೀಡಿ ಮಠವು ಅಭಿವೃದ್ಧಿಯಾಗಲು ನೆರವಾಗಿದ್ದರೆಂದು ಹೇಳಲಾಗುತ್ತಿದೆ. ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ತಮ್ಮ ತಪೋಶಕ್ತಿಯಿಂದ ಮಠವನ್ನು ಪ್ರಖ್ಯಾತಗೊಳಿಸಿದರು.

ಪರಂಪರೆ:
೧. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಶಂಭುಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಸಿದ್ಧವೀರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಪುರಾತನ ಪರಂಪರೆಯ ಗುರುಗಳ ಕೆಲವು ಹೆಸರುಗಳನ್ನು ಮಾತ್ರ ದಾಖಲಿಸಲಾಗಿದೆ. ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಪ್ರಭಾವಿ ಗುರುಗಳಾಗಿ ಬೆಳೆದ ಕಾರಣಕ್ಕೆ ಹಾಗೂ ಕರ್ತೃ ಗುರುಗಳ ಮೇಲಿನ ಅಭಿಮಾನದಿಂದ ಪರಂಪರೆಯ ಎಲ್ಲಾ ಗುರುಗಳು '**ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿ**'ಗಳೆಂಬ ಹೆಸರನ್ನು ಅಭಿಧಾನ ಪಡೆದು ಅಧಿಕಾರಕ್ಕೆ ಬಂದಿದ್ದಾರೆ. ಈ ಕಾರಣಕ್ಕೆ ಪರಂಪರೆಯನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗುತ್ತಿಲ್ಲ. ೧೯೮೬ರಲ್ಲಿ ಲಿಂಗೈಕ್ಯರಾದ ಶ್ರೀ ಶಂಭುಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು ಮಹಾತಪಸ್ವಿಗಳಾಗಿ, ವಾಕ್ ಸಿದ್ಧಿಪುರುಷರಾಗಿ ಹೆಸರು ಪಡೆದಿದ್ದರು.ಇವರು ತಮ್ಮ ಜೀವಿತಾವಧಿಯಲ್ಲಿ ಶ್ರೀ ಸಿದ್ಧವೀರ ಶಿವಾಚಾರ್ಯ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿಕೊಂಡು, ೧೯೮೧ರಲ್ಲಿ ಪಟ್ಟಾಧಿಕಾರದ ಅನುಗ್ರಹವನ್ನು ನೀಡಿದರು. ಶ್ರೀ ಸಿದ್ಧವೀರ ಶಿವಾಚಾರ್ಯ ಸ್ವಾಮಿಗಳು ಹಿರಿಯ ಗುರುಗಳ ಮಾರ್ಗದರ್ಶನದಲ್ಲಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.ಗುರುಗಳು ಮಠದ ಜಮೀನನ್ನು ಶಿಸ್ತುಬದ್ಧಗೊಳಿಸಿ ಹೆಚ್ಚು ಆದಾಯ ಬರುವಂತೆ ಮಾಡಿ, ಮಠದ ಅಭಿವೃದ್ಧಿ ಕಾರ್ಯಗಳಿಗೆ ಬಳಸಿಕೊಂಡು ಮಠಕ್ಕೆ ಹೊಸ ಕಟ್ಟಡ ಹಾಗೂ ಆವರಣದಲ್ಲಿ ಕಲ್ಯಾಣ ಮಂಟಪವನ್ನು ನಿರ್ಮಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಪರಂಪರೆಯ ಗದ್ದುಗೆಗಳಿಗೆ ನಿತ್ಯ ಎರಡು ವೇಳೆ ಪೂಜೆ, ಶ್ರಾವಣ

ಮತ್ತು ಕಾರ್ತೀಕ ಮಾಸಗಳಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ವರ್ಷಕ್ಕೊಮ್ಮೆ ಹಿರಿಯ ಗುರುಗಳ ಪುಣ್ಯಾರಾಧನೆ ಹಾಗೂ ಶಿವಾನುಭವ ಗೋಷ್ಠಿಯನ್ನು ನಡೆಸಲಾಗುತ್ತಿದೆ. ಗುರುಗಳು ಕಾಯಕ ಯೋಗಿಗಳಾಗಿ ಮಠದ ಪರಂಪರೆಯಿಂದ ಬಂದ ಐವತ್ತು ಎಕರೆ ಭೂಮಿಯನ್ನು ಅಭಿವೃದ್ಧಿಪಡಿಸಿ, ಹತ್ತು ಎಕರೆಯಲ್ಲಿ ಕಾಫಿ ತೋಟ ಹಾಗೂ ನಾಲ್ಕು ಎಕರೆಯಲ್ಲಿ ಏಲಕ್ಕಿ ಬೆಳೆಸಿದ್ದಾರೆ. ಉಳಿದ ಜಮೀನಿನಲ್ಲಿ ಭತ್ತವನ್ನು ಬೆಳೆಯಲಾಗುತ್ತಿದೆ. ಈ ಮೂಲಗಳಿಂದ ಬರುವ ಆದಾಯದಿಂದ ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು, ಈ ಮಲೆನಾಡು ಪ್ರದೇಶದಲ್ಲಿ ವೀರಶೈವ ಧರ್ಮವನ್ನು ಬೆಳೆಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧವೀರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಮುದ್ದಿನಕಟ್ಟೆಮಠ, ದುಂಡಹಳ್ಳಿ, ಶನಿವಾರಸಂತೆ ಹೋಬಳಿ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ.

ನೀರಗುಂದ

ಸೋಮವಾರಪೇಟೆ ತಾಲ್ಲೂಕಿನ ನೀರಗುಂದ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಮೂವತ್ತೇಳು ಕಿ.ಮೀ ದೂರದಲ್ಲಿದೆ. ಗುಡ್ಡ ಬೆಟ್ಟಗಳಿಂದ ಸುತ್ತುವರೆದ ಈ ಪ್ರದೇಶವು ಅಭಿವೃದ್ಧಿ ಕಾಣಬೇಕಾಗಿದೆ. ಈ ಗ್ರಾಮದಲ್ಲಿ ಹಿಂದೆ ಸ್ಥಾಪನೆಯಾಗಿದ್ದ ಶ್ರೀ ಕಿರಿಕೊಡ್ಲಿ ಮಠವು ಅಸ್ತಿತ್ವದಲ್ಲಿದೆ.

ಶ್ರೀ ಕಿರಿಕೊಡ್ಲಿಮಠ: ಚೀಲಾಳ ಸಮಯದ ಶ್ರೀ ಕಿರಿಕೊಡ್ಲಿ ಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದ ಈ ಮಠವು ವಿರಕ್ತಸಂಪ್ರದಾಯಲ್ಲಿ ಬೆಳೆದು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದು ಹೆಚ್ಚು ಪ್ರಸಿದ್ಧಿ ಪಡೆದಿದೆ.

ಮಠ ಸ್ಥಾಪನೆ: ಪುರಾತನ ಕಾಲದಲ್ಲಿ ಶ್ರೀ ಜಂಗಮಯ್ಯರೆಂಬ ಶಿವಯೋಗಿಗಳು ಲೋಕಸಂಚಾರ ಕೈಗೊಂಡು ಈ ಪ್ರಾಂತ್ಯ ಕ್ಕೆ ಆಗಮಿಸಿ, ಶಿವಪೂಜೆ ಹಾಗೂ ತಪಸ್ಸಿನಿಂದ ಹೆಚ್ಚು ಹೆಸರುಗಳಿಸಿದ್ದರು. ಕಾಯಕ ಯೋಗಿಗಳಾದ ಇವರು ಈ ಗ್ರಾಮದ ದನಗಳನ್ನು ಕಾಯುತ್ತಾ ಅಡವಿಯಲ್ಲಿ ಶಿವಧ್ಯಾನ ಮಾಡುತ್ತಿದ್ದರು. ಇಂತಹ ಸಂದರ್ಭದಲ್ಲಿ ಈ ಪ್ರಾಂತ್ಯಕ್ಕೆ ಮಳೆ ಬಾರದೆ ನೀರಿಗೆ ಹಾಹಾಕಾರ ಪಡುವ ಪರಿಸ್ಥಿತಿ ಉಂಟಾಯಿತು. ಆಗ ಶ್ರೀ ಜಂಗಮಯ್ಯ ಶಿವಯೋಗಿ ಗಳು ಬೆಟ್ಟದ ಮೇಲೆ ಒಂದೇ ಕಾಲಿನಲ್ಲಿ ನಿಂತುಕೊಂಡು ತಪಸ್ಸನ್ನು ಆಚರಿಸಿ ಮಳೆ ತರಿಸಿದರು. ಇದರಿಂದ ಇಲ್ಲಿನ ಜನರಿಗೆ ಶ್ರೀ ಜಂಗಮಯ್ಯ ಶಿವಯೋಗಿಗಳ ಮೇಲೆ ಭಕ್ತಿ ಇಮ್ಮಡಿಗೊಂಡಿತು. ಗ್ರಾಮಸ್ಥರು ಗುರುಗಳ ಪವಾಡವನ್ನು ಮೆಚ್ಚಿ ಮಳೆ ತರಿಸಿದ ಶಿವಯೋಗಿಗಳಿಗೆ**'ಮಳೆ ಒಡೆಯರು'** ಎಂಬ ಅಭಿಧಾನವಿತ್ತರು. ಗುರುಗಳು ಕಾಯಕ ಯೋಗದಿಂದ ಧರ್ಮಪ್ರಸಾರ ಮಾಡುತ್ತಾ, ಪವಾಡ ಗಳಿಂದ ಭಕ್ತರನ್ನು ಉದ್ಧರಿಸಿ ಲಿಂಗೈಕ್ಯರಾದರು. ಗುರುಗಳು ಅನುಷ್ಠಾನಗೊಳ್ಳುತ್ತಿದ್ದ ಸ್ಥಳದಲ್ಲಿ ಮಳೆ ಒಡೆಯರ ಗದ್ದುಗೆ ಯನ್ನು ಸ್ಥಾಪಿಸಿ, ಮಠವನ್ನು ನಿರ್ಮಿಸಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದರು ಎಂದು ಹೇಳುವ ಜನಪದ ಕಥೆ ಈ ಭಾಗದಲ್ಲಿ ಕೇಳಿಬರುತ್ತಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಮಳೆ ಒಡೆಯರು
೨. ಶ್ರೀ ಮ.ನಿ.ಪ್ರ. ಗುರುಸಿದ್ಧಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಸದಾಶಿವಸ್ವಾಮಿಗಳು

ಈ ರೀತಿ ಮಠದ ಪರಂಪರೆಯ ಗುರುಗಳ ಕೆಲವು ಹೆಸರುಗಳನ್ನು ದಾಖಲಿಸಲಾಗಿದೆ. ಶ್ರೀ ಮಳೆ ಒಡೆಯರ ನಂತರ ಅನೇಕ ಜನ ಗುರುಗಳು ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ ಬಗ್ಗೆ ಮಾಹಿತಿ ದೊರೆಯುತ್ತಿದೆ. ಆದರೆ ಆ ಗುರುಗಳ ಬಗ್ಗೆ ಸ್ಪಷ್ಟವಾದ ಆಧಾರಗಳು ದೊರೆಯದೆ ಇರುವ ಕಾರಣ ಮಠದ ಪರಂಪರೆಯು ಮಸುಕಾಗಿ ಉಳಿದಿದೆ. ಶ್ರೀ ಗುರುಸಿದ್ಧ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿ ಪಡಿಸಿದರು. ಇವರ ಗದ್ದುಗೆಯು ಮಠದ ಆವರಣದಲ್ಲಿ ದೊರೆತಿದೆ. ಅನೇಕ ವರ್ಷಗಳಿಂದ ಖಾಲಿ ಉಳಿದಿದ್ದ ಮಠದಲ್ಲಿ ಭಕ್ತರು ಧಾರ್ಮಿಕ ಕಾರ್ಯಗಳನ್ನು ನಡೆಸಿ ಕೊಂಡು ಮಠದ ಅಸ್ತಿತ್ವವನ್ನು ಉಳಿಸಿಕೊಂಡಿದ್ದರು. ನಂತರ ಶ್ರೀ ಸದಾಶಿವ

ಸ್ವಾಮಿಗಳು ಉತ್ತರಾಧಿಕಾರಿಗಳಾಗಿ ನೇಮಕ ಗೊಂಡು ಕುಣಿಗಲ್ ತಾಲ್ಲೂಕಿನ ಬೆಟ್ಟಹಳ್ಳಿ ಮಠದ ಶ್ರೀ ನೀಲಕಂಠ ಸ್ವಾಮಿಗಳಿಂದ ಅನುಗ್ರಹವನ್ನು ಪಡೆದು ೧೯೮೩ ರ ಏಪ್ರಿಲ್ ಹದಿನೆಂಟರಂದು ಪಟ್ಟಾಧಿಕಾರವನ್ನು ವಹಿಸಿಕೊಂಡರು.

ಶ್ರೀ ಸದಾಶಿವ ಸ್ವಾಮಿಗಳು ಅಧಿಕಾರಾರೂಢರಾದ ಮೇಲೆ ಮಠವನ್ನು ನವೀಕರಣಗೊಳಿಸಿರುವುದಲ್ಲದೆ, ಮಠದ ಹೆಸರಲ್ಲಿ ಇರುವ ಅಲ್ಪ ಆಸ್ತಿಯನ್ನು ಅಭಿವೃದ್ಧಿಗೊಳಿಸಿ, ಕೃಷಿಗೆ ಅಳವಡಿಸಿ ಹೆಚ್ಚು ಉತ್ಪನ್ನ ತೆಗೆಯಲು ಮುಂದಾದರು. ವೀರಶೈವರ ಹತ್ತು ಮನೆಗಳಿರುವ ಈ ಗ್ರಾಮದಲ್ಲಿ ಧಾರ್ಮಿಕ ಕೆಲಸಗಳನ್ನು ಮಾಡಿ, ಎಲ್ಲಾ ವರ್ಗದ ಜನರನ್ನು ಮಠದ ಭಕ್ತರನ್ನಾಗಿ ಮಾಡಿಕೊಂಡಿದ್ದಾರೆ. ವಿದ್ಯಾಭ್ಯಾಸ ಮಾಡುವ ಬಡವಿದ್ಯಾರ್ಥಿಗಳಿಗೆ ಆಶ್ರಯ ನೀಡಿ ಬಟ್ಟೆ, ಪುಸ್ತಕ ಹಾಗೂ ಶುಲ್ಕವನ್ನು ನೀಡಿ ಕಲಿಕೆಗೆ ನೆರವಾಗಿದ್ದಾರೆ. ಮಠದಲ್ಲಿ ಪ್ರತಿವರ್ಷ ಬಸವ ಜಯಂತಿಯನ್ನು ಆಚರಿಸಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ.ಸದಾಶಿವ ಸ್ವಾಮಿಗಳು, ಶ್ರೀ ಕಿರಿಕೊಡ್ಲಿಮಠ, ನೀರುಗುಂದ, ಸೋಮವಾರಪೇಟೆ ತಾ, ಕೊಡಗು ಜಿಲ್ಲೆ.

ಮಾದಾಪುರ

ಸೋಮವಾರಪೇಟೆ ತಾಲ್ಲೂಕಿನ ಮಾದಾಪುರ ಗ್ರಾಮವು ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಹದಿಮೂರು ಕಿ.ಮೀ ದೂರದಲ್ಲಿದೆ. ಪ್ರಕೃತಿ ಸೌಂದರ್ಯದ ಮಡಿಲಲ್ಲಿರುವ ಈ ಗ್ರಾಮವು ಹಾಲೇರಿ ಅರಸರ ಧಾರ್ಮಿಕ ಕೇಂದ್ರ ಸ್ಥಳವಾಗಿತ್ತು. ಇಂದಿಗೂ ಸಹ ವೀರಶೈವರ ಧಾರ್ಮಿಕ ಕೇಂದ್ರವಾಗಿ ಬೆಳೆದಿದೆ.

ಮುರುಘಾಮಠ: ಮಾದಾಪುರ ಗ್ರಾಮದಲ್ಲಿ ಮುರುಘಾ ಸಮಯದ ಶ್ರೀ ಮುರುಘಾ ಮಠವು ಸ್ಥಾಪನೆಯಾಗಿ, ಚಿತ್ರದುರ್ಗ ಬೃಹನ್ಮಠದ ಶಾಖಾಮಠವಾಗಿ ಬೆಳೆದಿದೆ.

ಮಠ ಸ್ಥಾಪನೆ: ಶ್ರೀ ಮುರುಘಿಶಾಂತವೀರ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಮಾದಾಪುರದ ಪ್ರಶಾಂತ ಸ್ಥಳದಲ್ಲಿ ಅನುಷ್ಠಾನಕ್ಕೆ ಕುಳಿತಿದ್ದರು. ತಪೋನುಷ್ಠಾನಿಗಳಾದ ಇವರು ಅನೇಕ ಪವಾಡಗಳನ್ನು ಮಾಡಿ ಭಕ್ತರನ್ನು ಉದ್ಧರಿಸಿದ್ದರು. ಇವರು ನೀಡುತ್ತಿದ್ದ ಧರ್ಮೋಪದೇಶದಿಂದ ನಾಡು ಸಂಸ್ಕಾರ ಪಡೆಯಿತು.ಇದರಿಂದ ಸಂತೋಷಗೊಂಡ ಶ್ರೀ ದೊಡ್ಡವೀರ ರಾಜೇಂದ್ರರು (೧೭೮೧-೧೮೦೯) ಗುರುಗಳ ಆಶೀರ್ವಾದ ಪಡೆದು ೧೭೯೦ ರಲ್ಲಿ ಮಾದಾಪುರದಲ್ಲಿ ಮಠವನ್ನು ಸ್ಥಾಪಿಸಿದರು. ಅಲ್ಲದೆ ಬೇಳೂರು ಮತ್ತು ಮಾದಾಪುರ ಗ್ರಾಮಗಳಲ್ಲಿ ಒಟ್ಟು ಮೂರುಸಾವಿರದ ಐದುನೂರು ಎಕರೆ ಜಮೀನನ್ನು ಮಠಕ್ಕೆ ಉಂಬಳಿಯಾಗಿ ನೀಡಿ, ಈ ಗ್ರಾಮಗಳ ವ್ಯಾಪ್ತಿಗೆ ಬರುವ ಕಂದಾಯದ ಹಣವನ್ನು ಮಠದ ಧಾರ್ಮಿಕ ಕಾರ್ಯಗಳಿಗೆ ಉಪಯೋಗಿಸಿಕೊಂಡು ಹೋಗಬೇಕೆಂದು ತಾಮ್ರ ಶಾಸನವನ್ನು ಬರೆಸಿಕೊಟ್ಟಿದ್ದಾರೆ.

ಶ್ರೀ ಮುರುಘಿಶಾಂತವೀರ ಸ್ವಾಮಿಗಳು ಮಾದಾಪುರದಲ್ಲಿ ಮಠವನ್ನು ಸ್ಥಾಪಿಸಿದ ಮೇಲೆ ಬೇಳೂರಿನಲ್ಲೂ ಮಠವನ್ನು ಸ್ಥಾಪಿಸಿ, ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದರು. ಅಲ್ಲದೆ ಅಬ್ಬಿಮಠವನ್ನು ಬೆಳೆಸಿದರು. ಈ ಮೂರು ಮಠಗಳು ಈ ಭಾಗದ ಪ್ರಮುಖ ಮಠಗಳಾಗಿ ಬೆಳೆದಿವೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಮುರುಘ ಶಾಂತವೀರ ಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಗುರುಪಾದ ಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಶಾಂತಮಲ್ಲ ಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ವೀರಭದ್ರ ಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಶಾಂತವೀರ ಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಜಯವಂತ ಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಮೋಕ್ಷಪತಿ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಗುರುಗಳ ಕಾಲಾವಧಿಯನ್ನು

ಅಧಾರಗಳ ಕೊರತೆಯಿಂದ ಗುರುತಿಸಲು ಸಾಧ್ಯವಾಗುತ್ತಿಲ್ಲ. ಶ್ರೀ ಗುರುಪಾದ ಸ್ವಾಮಿಗಳು ಎರಡು ಮಠಗಳ ಆಡಳಿತವನ್ನು ವ್ಯವಸ್ಥಿತವಾಗಿ ನಡೆಸಿ, ಮಠಗಳನ್ನು ಅಭಿವೃದ್ಧಿಪಡಿಸಿ ಮಾದಾಪುರದಲ್ಲಿ ಲಿಂಗೈಕ್ಯರಾದರು. ನಂತರ ಬಂದ ಶ್ರೀ ಶಾಂತಮಲ್ಲ ಸ್ವಾಮಿಗಳು ಹಾಗೂ ಶ್ರೀ ವೀರಭದ್ರ ಸ್ವಾಮಿಗಳು ಈ ಮಠದ ಶಾಖಾಮಠವಾದ ಅಬ್ಬಿ ಮಠದಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ಗದ್ದುಗೆಗಳು ಅಬ್ಬಿ ಮಠದಲ್ಲಿ ಸ್ಥಾಪಿಸಿ ಪೂಜಿಸಲಾಗುತ್ತಿದೆ. ಇವರ ನಂತರ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿಯಿತು. ಆಗ ಚಿತ್ರದುರ್ಗ ಬೃಹನ್ಮಠವು ಶ್ರೀ ಶಾಂತವೀರ ಸ್ವಾಮಿಗಳನ್ನು ನೇಮಿಸಿತು. ಇವರ ಕಾಲದಲ್ಲಿ ಮಠದ ಆಸ್ತಿಯು ಬೇಳೂರಿನ ಸುತ್ತ ಇದ್ದ ಕಾರಣ ಆಸ್ತಿಯ ನಿರ್ವಹಣೆಗಾಗಿ ಮಾದಾಪುರ ಮಠದ ಆಡಳಿತವು ಬೇಳೂರಿಗೆ ವರ್ಗಾವಣೆಗೊಂಡಿತು. ಶ್ರೀ ಶಾಂತವೀರ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ ಲಿಂಗೈಕ್ಯರಾದರು. ನಂತರ ಶ್ರೀ ಜಯವಂತ ಸ್ವಾಮಿಗಳು ಬಂದು ಮಠವನ್ನು ಅಭಿವೃದ್ಧಿಪಡಿಸಿದರು. ಇವರ ನಂತರ ಶ್ರೀ ಮೋಕ್ಷಪತಿ ಸ್ವಾಮಿಗಳು ೧೯೮೧ರಲ್ಲಿ ಪ್ರತಿನಿಧಿಯಾಗಿ ನೇಮಕಗೊಂಡು, ಧಾರ್ಮಿಕ ಕೆಲಸಗಳ ಜೊತೆ ಶೈಕ್ಷಣಿಕ ಕೆಲಸಗಳನ್ನು ನಿರ್ವಹಿಸಿಕೊಂಡು ಬರುತ್ತಿದ್ದಾರೆ. ಮಠದ ಆಸ್ತಿಯನ್ನು ಶಿಸ್ತುಬದ್ಧಗೊಳಿಸಿ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ.

ಧಾರ್ಮಿಕ,ಶೈಕ್ಷಣಿಕ ಕಾರ್ಯಗಳು: ಮೂರು ಮಠಗಳ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯಪೂಜೆ ನಡೆಸಲಾಗುತ್ತಿದೆ. ಮಾದಾಪುರ ಮಠದಲ್ಲಿ ಶ್ರೀ ದೊಡ್ಡವೀರ ರಾಜೇಂದ್ರರ ಧರ್ಮಪತ್ನಿ ಶ್ರೀಮತಿ ಮಹದೇವಮ್ಮನವರ ಗದ್ದುಗೆಯನ್ನು ಸ್ಥಾಪಿಸ ಲಾಗಿದ್ದು, ನಿತ್ಯ ಪೂಜೆಯನ್ನು ಮಾಡಲಾಗುತ್ತಿದೆ. ಬೇಳೂರು ಮಠವು, ಮಾದಾಪುರ ಮತ್ತು ಅಬ್ಬಿಮಠದ ಕೇಂದ್ರವಾದ ಮೇಲೆ ಹೆಚ್ಚು ಧಾರ್ಮಿಕ ಕೆಲಸಗಳು ಇಲ್ಲಿ ನಡೆಯುತ್ತಿರುವುದಲ್ಲದೇ, ಮಠಕ್ಕೆ ವಿಶಾಲವಾದ ಕಟ್ಟಡವನ್ನು ನಿರ್ಮಿಸಲಾಗಿದೆ. ಮಾದಾಪುರದಲ್ಲಿ ಉತ್ತರಿ ಹಬ್ಬವನ್ನು ಪ್ರತಿವರ್ಷ ವಿಶೇಷವಾಗಿ ಆಚರಿಸಲಾಗುತ್ತಿದೆ. ಚಿತ್ರದುರ್ಗ ಬೃಹನ್ಮಠದ ಗುರುಗಳು ಸಂದರ್ಭಕ್ಕನುಸಾರವಾಗಿ ಮಠಕ್ಕೆ ಆಗಮಿಸಿ, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುತ್ತಿದ್ದಾರೆ.

ಬೇಳೂರಿನ ಮಠದ ಆವರಣದಲ್ಲಿ ವೀರರಾಜೇಂದ್ರ ಪ್ರೌಢಶಾಲೆಯನ್ನು ಪ್ರಾರಂಭಿಸಲಾಗಿದೆ. ಇದರಿಂದ ಈ ಭಾಗದ ಗ್ರಾಮಾಂತರ ಮಕ್ಕಳಿಗೆ ಕಲಿಯಲು ನೆರವಾಗಿದೆ. ಕಲಿಯುವ ಬಡಮಕ್ಕಳಿಗೆ ಮಠದಲ್ಲಿ ಆಶ್ರಯ ಕಲ್ಪಿಸಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ.ಮೋಕ್ಷಪತಿ ಸ್ವಾಮಿಗಳು, ಶ್ರೀ ಮುರುಘಾಮಠ, ಮಾದಾಪುರ, ಸೋಮವಾರಪೇಟೆ ತಾ,ಕೊಡಗು ಜಿಲ್ಲೆ.

ಶಿಡಗಳಲೆ

ಸೋಮವಾರಪೇಟೆ ತಾಲ್ಲೂಕಿನ ಶಿಡಗಳಲೆ ಗ್ರಾಮವು ತಾಲ್ಲೂಕು ಕೇಂದ್ರದಿಂದ ಹತ್ತು ಕಿ.ಮೀ. ದೂರದಲ್ಲಿದೆ. ಶನಿವಾರ ಸಂತೆ ಹೋಬಳಿಯ ವ್ಯಾಪ್ತಿಗೆ ಒಳಪಡುವ ಈ ಗ್ರಾಮದಲ್ಲಿ ಶ್ರೀ ಶಿಡಗಳಲೆ ಮಠವು ಅಸ್ತಿತ್ವದಲ್ಲಿದೆ.

ಶಿಡಗಳಲೆ ಮಠ: ಶಿಡಗಳಲೆ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಮಠವು ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿದೆ. ಪುರಾತನ ಕಾಲದಿಂದ ಅಸ್ತಿತ್ವದಲ್ಲಿರುವ ಈ ಮಠವು ಕೆಲವು ವರ್ಷಗಳಿಂದ ಮಠಾಧೀಶರು ಇಲ್ಲದೆ ಖಾಲಿ ಉಳಿದಿತ್ತು. ಪುತ್ರವರ್ಗದ ಪರಂಪರೆಯ ಮಠವಾಗಿರುವುದರಿಂದ ಇತ್ತೀಚೆಗೆ ಮಠದ ವಂಶಸ್ಥರಾದ ಶ್ರೀ ಬಸವರಾಜಸ್ವಾಮಿಗಳನ್ನು ಅಧಿಕಾರಕ್ಕೆ ತರಲಾಗಿದೆ. ಗುರುಗಳು ಅಧಿಕಾರವನ್ನು ಪಡೆದು ಸಿದ್ದಗಂಗಾ ಮಠದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ವಿಳಾಸ: ಷ.ಬ್ರ.ಶ್ರೀ ಬಸವರಾಜ ಶಿವಾಚಾರ್ಯಸ್ವಾಮಿಗಳು, ಶಿಡಗಳಲೆ ಮಠ, ಶಿಡಗಳಲೆ, ನಿರ್ತ ಅಂಚೆ, ಸೋಮವಾರಪೇಟೆ ತಾ. ಕೊಡಗು ಜಿಲ್ಲೆ.

ಸೋಮವಾರಪೇಟೆ

ಸೋಮವಾರಪೇಟೆಯು ಜಿಲ್ಲಾ ಕೇಂದ್ರದಿಂದ ಉತ್ತರಕ್ಕೆ ಮೂವತ್ತು ಕಿ.ಮೀ ದೂರದಲ್ಲಿದೆ. ತಾಲ್ಲೂಕು ಕೇಂದ್ರವಾದ ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ವಿರಕ್ತಮಠ: ಸೋಮವಾರಪೇಟೆ ಪಟ್ಟಣದ ಮಧ್ಯಭಾಗದಲ್ಲಿ ಮುರುಘಾಸಮಯದ ಶ್ರೀ ವಿರಕ್ತಮಠವು ಸ್ಥಾಪನೆಯಾ

ರಾಜ್ಯದ ಕರಾವಳಿ ಜಿಲ್ಲೆಯಾದ ಉಡುಪಿ ಜಿಲ್ಲೆಯು ದಕ್ಷಿಣ ಕನ್ನಡ, ಚಿಕ್ಕಮಗಳೂರು ಹಾಗೂ ಉತ್ತರ ಕನ್ನಡ ಜಿಲ್ಲೆಗಳಿಂದ ಆವೃತಗೊಂಡು ಪಶ್ಚಿಮಕ್ಕೆ ಕರಾವಳಿ ಪ್ರದೇಶವನ್ನು ಹೊಂದಿದೆ. ೧೯೯೭ ರಲ್ಲಿ ಹೊಸ ಜಿಲ್ಲೆಗಳು ರಚನೆಗೊಂಡ ಸಂದರ್ಭದಲ್ಲಿ ದಕ್ಷಿಣಕನ್ನಡ ಜಿಲ್ಲೆಯಿಂದ ವಿಭಜನೆಗೊಂಡ ಈ ಜಿಲ್ಲೆಯು ಉಡುಪಿ, ಕಾರ್ಕಳ ಹಾಗೂ ಕುಂದಾಪುರ ತಾಲ್ಲೂಕುಗಳನ್ನು ಒಳಗೊಂಡು ಪುನರ್ ರಚಿತಗೊಂಡಿದೆ.

ತೆಂಗು, ಅಡಿಕೆ ಬೆಳೆಗಳ ಜೊತೆ ಸಾಗರೋತ್ಪನ್ನಗಳು ಉಡುಪಿ ಜಿಲ್ಲೆಯನ್ನು ಹೆಚ್ಚು ಶ್ರೀಮಂತಗೊಳಿಸಿವೆ. ಕೆಳದಿ ಅರಸರು, ಉಲ್ಲಾಳದ ಚೌಟರಸರು, ಜೈನರಾದ ಅಜೀಲರು, ಬಂಕಿ ಅರಸರು, ಕೆಳದಿ ಮತ್ತು ವಿಜಯನಗರ ಅರಸರ ಸಾಮಂತರಾಗಿ ಈ ಜಿಲ್ಲೆಯಲ್ಲಿ ಅನೇಕ ವರ್ಷಗಳ ಕಾಲ ಆಳ್ವಿಕೆ ನಡೆಸಿ ಈ ನಾಡನ್ನು ಐತಿಹಾಸಿಕ ಹಾಗೂ ಸಾಂಸ್ಕೃತಿಕವಾಗಿ ಪ್ರಖ್ಯಾತಗೊಳಿಸಿದ್ದಾರೆ. ಕೊಲ್ಲೂರು, ಚಕ್ರ, ಸೀತಾ ಮತ್ತು ಸುವರ್ಣ ನದಿಗಳು ಹರಿದು ಜಿಲ್ಲೆಯ ಸೊಬಗನ್ನು ಹೆಚ್ಚಿಸಿವೆ. ಮಲ್ಪೆಯ ಸಮುದ್ರ ತೀರ ಪ್ರವಾಸಿಗರ ಆಕರ್ಷಣೀಯ ತಾಣವಾಗಿದೆ. ಗಿರಿಕಂದರಗಳ ಅಚ್ಚಹಸಿರಿನ ಸಿರಿ ಉಡುಪಿ ಜಿಲ್ಲೆಯನ್ನು ನೈಸರ್ಗಿಕವಾಗಿ ಹೆಚ್ಚು ಶ್ರೀಮಂತಗೊಳಿಸಿದೆ. ನೈಸರ್ಗಿಕ ಸೌಂದರ್ಯದ ಜೊತೆಗೆ ಧಾರ್ಮಿಕ,ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕವಾಗಿಯೂ ಉಡುಪಿ ಜಿಲ್ಲೆಯು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದೆ.

ಪುರಾಣ ಪ್ರಸಿದ್ಧ ಕತೆಯ ಆಧಾರದಲ್ಲಿ ಉಡುಪಿಯು ದಂಡಕಾರಣ್ಯದ ಒಂದು ಭಾಗವಾಗಿತ್ತು. ಇಲ್ಲಿ ಚಂದ್ರನು ತಪಸ್ಸನ್ನು ಆಚರಿಸಿದ ಕಾರಣಕ್ಕೆ ಚಂದ್ರೇಶ್ವರ ದೇವಾಲಯವು ಸ್ಥಾಪಿತವಾಯಿತು. ಚಂದ್ರನಿಗೆ ಮತ್ತೊಂದು ಹೆಸರು ಉಡುಪ ಅಥವ ಉಡುಪತಿ. ಈ ಕಾರಣಕ್ಕೆ ದಂಡಕಾರಣ್ಯದ ಈ ಪ್ರದೇಶಕ್ಕೆ ಉಡುಪಿ ಎಂದು ನಾಮಕರಣವಾಯಿತೆಂದು ಸ್ಥಳ ಪುರಾಣದಿಂದ ತಿಳಿಯುತ್ತಿದೆ. ಶ್ರೀ ಮಧ್ವಾಚಾರ್ಯರು ಪ್ರತಿಷ್ಠಾಪಿಸಿದ ಶ್ರೀಕೃಷ್ಣ ದೇವಾಲಯ ಲೋಕವಿಖ್ಯಾತ ಗೊಂಡಿದೆ. ಇಂತಹ ಪ್ರಸಿದ್ಧಿ ಪಡೆದ ಉಡುಪಿಯು ಜಿಲ್ಲಾ ಕೇಂದ್ರವಾಗಿ ಬೆಳೆದಿದೆ. ಮಣಿಪಾಲಿನ ವೈದ್ಯಕೀಯ, ಶಿಕ್ಷಣಸೇವೆ, ಕಾರ್ಕಳದ ಬಾಹುಬಲಿ, ಮೂಡುಬಿದರೆಯ ಸಾವಿರಕಲ್ಲಿನ ಜೈನಬಸದಿ, ಉಳ್ಳಾಲದ ಪ್ರಾರ್ಥನಾಮಂದಿರ ಇವು ನಾಡಿನ ಧಾರ್ಮಿಕ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳಾಗಿವೆ.

ಶಿವರಾಮಕಾರಂತರ ಸಾಹಿತ್ಯದ ಅದ್ವಿತೀಯ ಸಾಧನೆ, ಮಣಿಪಾಲದ ಪೈಕುಟುಂಬ ಶೈಕ್ಷಣಿಕ ರಂಗದಲ್ಲಿ ಸಾಧಿಸಿದ ಸಾಧನೆ ದಾಖಲಾರ್ಹವಾಗಿವೆ.ಇಂತಹ ಜಿಲ್ಲೆಯಲ್ಲಿ ವೀರಶೈವಧರ್ಮವು ಪುರಾತನ ಕಾಲದಿಂದಲೂ ಬೆಳೆದಿದ್ದು ಇಲ್ಲಿ ಐವತ್ತಾರು ವೀರಶೈವ ಮಠಗಳು ಸ್ಥಾಪನೆಯಾಗಿದ್ದವು ಎಂಬ ಮಾಹಿತಿ ದೊರೆಯುತ್ತದೆ. ಈ ಆಧಾರದ ಮೇಲೆ ಶೋಧನೆಗೆ ಹೋದಾಗ ಅಂದು ಸ್ಥಾಪನೆಗೊಂಡ ಎಲ್ಲಾ ಮಠಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡು ಅವಸಾನದ ಅಂಚಿನಲ್ಲಿವೆ ಎಂದರೆ ತಪ್ಪಾಗಲಾರದು. ಉಡುಪಿ ಜಿಲ್ಲೆ ದಕ್ಷಿಣಕನ್ನಡ ಜಿಲ್ಲೆಯಿಂದ ಬೇರ್ಪಟ್ಟ ಮೇಲೆ ವೀರಶೈವ ಧರ್ಮ ಮತ್ತೂಷ್ಟು ದುರ್ಬಲ ಸ್ಥಿತಿಯನ್ನು ಅನುಭವಿಸ ಬೇಕಾಗಿದೆ. ಉಡುಪಿಯ ಶಿರಾಡಿಮಠ ಅಥವ ಜಂಗಮಮಠದ ಡಾ.ನಿರಂಜನ್ ಹಾಗೂ ವೃತ್ತಿಗಾಗಿ ಬೇರೆ ಜಿಲ್ಲೆಯಿಂದ ಬಂದು ಉಡುಪಿಯಲ್ಲಿ ನರ್ಸಿಂಗ್‌ಹೋಂ ನಡೆಸುತ್ತಿರುವ ಡಾ.ಚಂದ್ರಶೇಖರ್ ಇವರುಗಳು, ಉಡುಪಿ ಜಿಲ್ಲೆಯಲ್ಲಿ ಇರುವ ಅಲ್ಪಸಂಖ್ಯಾತ ವೀರಶೈವರ ಸಂಘಟನೆ ಮತ್ತು ವೀರಶೈವ ಧರ್ಮದ ರಕ್ಷಣೆಗೆ ಮುಂದಾಗಿದ್ದಾರೆ. ಈ ಒಂದು ಪ್ರಯತ್ನದಿಂದ ವೀರಶೈವಧರ್ಮವು ಇಲ್ಲಿ ಇನ್ನೂ ಜೀವಂತಿಕೆಯನ್ನು ಉಳಿಸಿಕೊಂಡಿದೆ.

ಕೊಪ್ಪಳ ಜಿಲ್ಲೆ



ಕೊಪ್ಪಳ ತಾಲ್ಲೂಕು : ೧. ಎತ್ತಿನಪಟ್ಟಿ, ೨. ಹಿರೇಸಿಂದೋಗಿ

ಯಲಬುರ್ಗಿ ತಾಲ್ಲೂಕು : ೧. ಕುಕನೂರು, ೨. ಬೆದವಟಿ, ೩. ಕುದುರೇಮೋತಿ, ೪. ಮಂಗಳೂರು

ಕುಷ್ಟಗಿ ತಾಲ್ಲೂಕು : ೧. ಗುಡದೂರು, ೨. ಚಳಗೇರಿ, ೩. ನಿಡಸೇಸಿ, ೪. ಮುದೇನೂರು, ೫. ಕೇಸೂರು

ಗಂಗಾವತಿ ತಾಲ್ಲೂಕು : ೧. ಕನಕಗಿರಿ, ೨. ಬೂದಗುಂಪ, ೩. ಅರಳಳ್ಳಿ, ೪. ಸೂಳೆಕಲ್ಲು, ೫. ಹೆಬ್ಬಾಳು

೧೯೯೭ ರಲ್ಲಿ ಕರ್ನಾಟಕ ರಾಜ್ಯದಲ್ಲಿ ಜಿಲ್ಲೆಗಳ ವಿಂಗಡಣೆಯಾದ ಸಂದರ್ಭದಲ್ಲಿ ರಾಯಚೂರು ಜಿಲ್ಲೆಯಿಂದ ಬೇರ್ಪಟ್ಟು ಕೊಪ್ಪಳ, ಗಂಗಾವತಿ, ಯಲಬುರ್ಗ ಹಾಗೂ ಕುಷ್ಟಗಿ ತಾಲ್ಲೂಕುಗಳನ್ನು ಒಳಗೊಂಡು ಕೊಪ್ಪಳ ಜಿಲ್ಲೆಯು ಉದಯವಾಯಿತು. ಗದಗ,ಬಾಗಲಕೋಟೆ,ರಾಯಚೂರು ಹಾಗೂ ಬಳ್ಳಾರಿ ಜಿಲ್ಲೆಗಳಿಗೆ ಹೊಂದಿಕೊಂಡಿರುವ ಈ ಜಿಲ್ಲೆಯು ತನ್ನದೇ ಆದಂತಹ ಸಂಸ್ಕೃತಿಯನ್ನು ಹೊಂದಿದೆ.

ಕರ್ನಾಟಕದ ಇತಿಹಾಸದ ಪುಟಗಳಲ್ಲಿ ಅಮರವಾಗಿ ರಾರಾಜಿಸುವ ಬಾದಾಮಿಯ ಚಾಲುಕ್ಯರು (೫೪೦-೭೫೭), ರಾಷ್ಟ್ರಕೂಟರು (೭೫೭-೯೭೩), ಕಲ್ಯಾಣಿ ಚಾಲುಕ್ಯರು (೯೭೩-೧೧೮೯), ವಿಜಯನಗರದ ಅರಸರ (೧೩೩೬-೧೫೬೫) ಆಳ್ವಿಕೆಯ ಒಂದು ಪ್ರಮುಖ ಭಾಗವಾಗಿ ಕೊಪ್ಪಳ ಪ್ರಾಂತ್ಯವು ಹೆಸರು ಪಡೆದಿತ್ತು. ಇಂತಹ ಪ್ರಸಿದ್ಧ ನಾಡಿನಲ್ಲಿ ಆನೆ ಗುಂದಿಯ ಸಂಸ್ಥಾನ ಹೆಚ್ಚು ಹೆಸರು ಮಾಡಿತ್ತು. ಅದೇ ರೀತಿ ಕುರುಗೋಡು ಸಿಂದರು (ಹನ್ನೊಂದನೆಯ ಶತಮಾನ), ಯಲಬುರ್ಗಿಯ ಪಾಳೆಗಾರರು ಮತ್ತು ಕೊಪ್ಪಳದ ಪಾಳೆಗಾರರು ಈ ನಾಡನ್ನು ಪ್ರಸಿದ್ಧಿಗೊಳಿಸಿದರು. ಫಲವತ್ತಾದ ಭೂಪ್ರದೇಶವನ್ನು ಹೊಂದಿದ್ದ ಈ ಎಡದೊರೆಯ ನಾಡು ಸಾಂಸ್ಕೃತಿಕ ಹಾಗೂ ಧಾರ್ಮಿಕವಾಗಿ ಹೆಚ್ಚು ಹೆಸರು ಪಡೆದಿದೆ.

ಬಳ್ಳಾರಿ ಜಿಲ್ಲೆಯಿಂದ ಬೇರ್ಪಡಿಸುವ ತುಂಗಭದ್ರಾ ನದಿ ಹರಿದು ಈ ನಾಡನ್ನು ಪಾವನಗೊಳಿಸಿದೆ. ತುಂಗಭದ್ರಾ ಜಲಾಶಯದಿಂದ ಗಂಗಾವತಿ ಮತ್ತು ಕೊಪ್ಪಳದ ಕೆಲವು ಭಾಗಗಳು ಆರ್ಥಿಕವಾಗಿ ಅಭಿವೃದ್ಧಿಗೊಂಡಿವೆ. ಅದೇ ರೀತಿ ಅಪರೂಪದ ಕಲ್ಲುಗಣಿಗಳಿಂದ ಈ ಜಿಲ್ಲೆ ಆರ್ಥಿಕ ಆದಾಯದ ಮೂಲವಾಗಿ ಜಿಲ್ಲೆಯನ್ನು ಶ್ರೀಮಂತಗೊಳಿಸಿವೆ. ಈ ಜಿಲ್ಲೆಯು ಧಾರ್ಮಿಕವಾಗಿಯೂ ಹೆಸರು ಮಾಡಿದೆ. ಕೊಪ್ಪಳವು ಮಹಾಭಾರತದಲ್ಲಿ ತನ್ನ ಚರಿತ್ರೆಯನ್ನು ಗುರುತಿಸಿಕೊಂಡಿದೆ. ಅರ್ಜುನನು ಶಿವನಿಂದ ಪಾಶುಪತಾಸ್ತ್ರವನ್ನು ಪಡೆಯಲು ತಪಸ್ಸು ಮಾಡಿದ ಇಂದ್ರಕೀಲ ಪರ್ವತ ಇಲ್ಲಿಯ ಪರ್ವತ ಸಾಲು ಗಳಲ್ಲಿ ಒಂದಾಗಿದೆ. ಇದನ್ನು ಇಂದಿಗೂ ಅರ್ಜುನನು ತಪಸ್ಸು ಮಾಡಿದ ಸ್ಥಳವೆಂದು ಗುರುತಿಸಲಾಗುತ್ತಿದೆ. ತಡಕಲ್ಲು, ಹೆಬ್ಬಾಳು ಮುಂತಾದ ಕಡೆ ಶಿಲಾಯುಗ ಹಾಗೂ ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಗಳು ದೊರೆತಿವೆ.

ಕೊಪ್ಪಳ ಜಿಲ್ಲೆಯಲ್ಲಿ ವೀರಶೈವ ಧರ್ಮ ಪ್ರಬಲವಾಗಿ ಬೆಳೆದ ಬಗ್ಗೆ ಮಾಹಿತಿ ದೊರೆಯುತ್ತದೆ. ಈ ಜಿಲ್ಲೆಯಲ್ಲಿ ಒಟ್ಟು ಅರವತ್ತೆಂಟು ವೀರಶೈವ ಮಠಗಳು ಸ್ಥಾಪನೆಯಾಗಿವೆ ಎಂಬ ಮಾಹಿತಿ ದೊರೆತಿದೆ. ಈ ಆಧಾರದ ಮೇಲೆ ಶೋಧನೆಗೆ ಹೋದಾಗ ಮೂವತ್ತೆರಡು ಮಠಗಳು ದೊರೆತಿದ್ದು, ಉಳಿದ ಮೂವತ್ತಾರು ಮಠಗಳು ಹೇಳಲು ಹೆಸರಿಲ್ಲದಂತಾಗಿವೆ. ದೊರೆತ ಮಠಗಳಲ್ಲಿ ಇಪ್ಪತ್ತೊಂಬತ್ತು ಮಠಗಳು ಅಸ್ತಿತ್ವದಲ್ಲಿವೆ. ಉಳಿದ ಮೂರು ಮಠಗಳು ಗುರುಗಳಿಲ್ಲದೆ ಖಾಲಿ ಉಳಿದಿದ್ದು ಕೇವಲ ಗದ್ದುಗೆ ಪೂಜೆಗಷ್ಟೇ ಸೀಮಿತಗೊಂಡಿವೆ.

ಕೊಪ್ಪಳದ ಶ್ರೀ ಗವಿಮಠ, ಗಂಗಾವತಿಯ ಶ್ರೀ ಕೊಟ್ಟೂರೇಶ್ವರಮಠ, ಯಲಬುರ್ಗಿಯ ಶ್ರೀ ಸಿದ್ದ ರಾಮೇಶ್ವರಮಠ, ಮಂಗಳೂರಿನ ಶ್ರೀ ಕುದುರೆಮೋತಿಮಠ, ಕುಷ್ಟಗಿಯ ಶ್ರೀ ಮದ್ದಾನೇಶ್ವರಮಠ ಹಾಗೂ ಶ್ರೀಚನ್ನಬಸವೇಶ್ವರ ಮಠಗಳು ಈ ಜಿಲ್ಲೆಯಲ್ಲಿ ಧಾರ್ಮಿಕ ಶ್ರೀಮಂತಿಕೆಯನ್ನು ಹೆಚ್ಚಿಸಿವೆ. ಅಷ್ಟೇ ಅಲ್ಲದೆ ಈ ಜಿಲ್ಲೆಯ ಬಹುತೇಕ ಮಠಗಳು ಸಮಾಜದ ಅಭಿವೃದ್ಧಿಗೆ ಶ್ರಮಿಸಿ ವೀರಶೈವ ಧರ್ಮವನ್ನು ಬೆಳೆಸಿವೆ.

ಕುಷ್ಟಗಿ ತಾಲ್ಲೂಕು

ಕೊಪ್ಪಳ ಜಿಲ್ಲೆಯ ಕುಷ್ಟಗಿಯು ಪ್ರಕೃತಿಯ ವೈಪರೀತ್ಯದಿಂದ ಅತ್ಯಂತ ಹಿಂದುಳಿದ ಪ್ರದೇಶವಾಗಿದೆ. ಆರ್ಥಿಕವಾಗಿ ಹಿಂದುಳಿದಿದ್ದರೂ ಧಾರ್ಮಿಕವಾಗಿ ಶ್ರೀಮಂತಿಕೆಯನ್ನು ಪಡೆದುಕೊಂಡಿದೆ. ಈ ತಾಲ್ಲೂಕಿನಲ್ಲಿ ಆರು ಮಠಗಳು ಅಸ್ತಿತ್ವದಲ್ಲಿದ್ದು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಕುಷ್ಟಗಿ

ಕುಷ್ಟಗಿಯು ಜಿಲ್ಲಾ ಕೇಂದ್ರದಿಂದ ಉತ್ತರಕ್ಕೆ ನಲವತ್ತೆರಡು ಕಿ.ಮೀ ಧೂರದಲ್ಲಿದೆ. ಕುಷ್ಟಗಿ ತಾಲ್ಲೂಕು ಕೇಂದ್ರ ಸ್ಥಳವಾಗಿದ್ದು, ಪ್ರಾಚೀನ ಇತಿಹಾಸವಿರುವ ಈ ಪಟ್ಟಣದಲ್ಲಿ ಸ್ಥಾಪನೆಯಾಗಿರುವ ಮದ್ದಾನೆಹಿರೇಮಠವು ಸಾಮಾಜಿಕ ಸುಧಾರಣೆಯಲ್ಲಿಅಪಾರ ಸಾಧನೆಯನ್ನು ಮಾಡಿದೆ.

ಮದ್ದಾನೆ ಹಿರೇಮಠ: ಕುಷ್ಟಗಿ ಪಟ್ಟಣದ ಮಧ್ಯಭಾಗದಲ್ಲಿರುವ ಶ್ರೀ ರಂಭಾಪುರಿ ಪೀಠದ ಶಾಖಾಮಠವಾದ ಶ್ರೀ ಮದ್ದಾನೆ ಹಿರೇಮಠವು ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿದೆ.

ಮಠ ಸ್ಥಾಪನೆ: ಹನ್ನೊಂದನೆಯ ಶತಮಾನದಲ್ಲಿ ಸ್ಥಾಪನೆಯಾಗಿರಬಹುದೆಂದು ಹೇಳಲಾಗುವ ಈ ಮಠದ ಪರಂಪರೆಯ ಕರ್ತೃ ಗುರುಗಳು ಶ್ರೀ ಮದ್ದಾನೇಶ್ವರ ಸ್ವಾಮಿಗಳೆಂದು ಹೇಳಲಾಗುತ್ತಿದೆ. ಶ್ರೀ ಮದ್ದಾನೇಶ್ವರ ಸ್ವಾಮಿಗಳು ಪ್ರಾರಂಭ ಮಾಡಿದ ಕಾರಣಕ್ಕೆ ಈ ಮಠಕ್ಕೆ 'ಶ್ರೀ ಮದ್ದಾನೆ ಹಿರೇಮಠ' ಎಂದು ಹೆಸರು ಬಂದಿದೆ. ಶ್ರೀ ಕರಿಬಸವ ಸ್ವಾಮಿಗಳು, ಶ್ರೀ ಕೊಟ್ಟೂರು ಸ್ವಾಮಿಗಳು, ಶ್ರೀ ಕೆಂಜೆಡೆ ರುದ್ರಸ್ವಾಮಿಗಳು, ಶ್ರೀ ತಿಪ್ಪೇರುದ್ರ ಸ್ವಾಮಿಗಳು ಮತ್ತು ಶ್ರೀ ಶಾಂತಮಲ್ಲೇಶ್ವರ ಸ್ವಾಮಿಗಳು ಸ್ವಾಮಿಗಳು ಒಟ್ಟಿಗೆ ಲೋಕಸಂಚಾರ ಕೈಗೊಂಡು ಧರ್ಮಪ್ರಸಾರವನ್ನು ಮಾಡುತ್ತಾ ಬರುತ್ತಿರಲು, ಮದವೇರಿದ ಮದ್ದಾನೆಯನ್ನು ಶ್ರೀ ಕರಿಬಸವ ಸ್ವಾಮಿಗಳು ಮದಿಸಿದ ಕಾರಣ ಅವರಿಗೆ'ಶ್ರೀ ಮದ್ದಾನೇಶ್ವರ'ಎಂಬ ಹೆಸರನ್ನು ಗಳಿಸಿಕೊಳ್ಳುತ್ತಾರೆ. ಆನೆಯನ್ನು ಮದಿಸಿ ಪವಾಡವನ್ನು ಮಾಡಿದ ಗುರುಗಳನ್ನು ಭಕ್ತರು ಆರಾಧಿಸತೊಡಗಿದರು. ಶ್ರೀ ಮದ್ದಾನೇಶ್ವರರು ಕುಷ್ಟಗಿಯಲ್ಲಿ ಮಠವನ್ನು ಸ್ಥಾಪಿಸಿದರು.

ಪರಂಪರೆ:

೧. ಷ.ಬ್ರ.ಶ್ರೀ ಮದ್ದಾನೆ ಕರಿಬಸವ ಸ್ವಾಮಿಗಳು (ಕರ್ತೃ ಗುರುಗಳು)
೨. ಷ.ಬ್ರ.ಶ್ರೀ ಮದ್ದಾನೆ ಕರಿಬಸವ ಸ್ವಾಮಿಗಳು
೩. ಷ.ಬ್ರ.ಶ್ರೀ ಕರಿಬಸವ ಶಿವಾಚಾರ್ಯ ಸ್ವಾಮಿಗಳು

ಮಠದ ಪರಂಪರೆಯಲ್ಲಿ ಕರ್ತೃಗುರುಗಳ ಹೆಸರನ್ನೇ ಅಭಿಧಾನ ಮಾಡಿಕೊಂಡು ಪಟ್ಟಾಧಿಕಾರ ಪಡೆದುಕೊಳ್ಳುವ ಸಂಪ್ರದಾಯ ಹಿಂದಿನಿಂದ ನಡೆದು ಬಂದಿರುವ ಕಾರಣ, ಅಧಿಕಾರ ವಹಿಸಿಕೊಂಡ ಗುರುಗಳ ಬಗ್ಗೆ ನಿಖರವಾದ ಮಾಹಿತಿ ದೊರೆಯದಾಗಿದೆ. ಒಟ್ಟು ಹನ್ನೆರಡು ಜನ ಗುರುಗಳು ಅಧಿಕಾರ ನಡೆಸಿದ್ದಾರೆಂದು ಹೇಳಲಾಗಿದ್ದರೂ, ಹತ್ತು ಜನ ಗುರುಗಳ ಬಗ್ಗೆ ವಿವರ ದೊರೆಯುತ್ತಿಲ್ಲ. ಶ್ರೀ ಮದ್ದಾನೇಶ್ವರರು ಇಲ್ಲಿ ನೆಲೆಸಿ ಅನೇಕ ಪವಾಡಗಳನ್ನು ಮಾಡಿದರು ಎಂದು ಹೇಳಲಾಗುತ್ತಿದೆ. ಒಮ್ಮೆ ಗುರುಗಳು ಕುದುರೆ ಮೇಲೆ ಬರುವಾಗ ಅವರ ಶಿಷ್ಯನಿಗೆ ಬಾಯಾರಿಕೆಯಾಗುತ್ತದೆ. ಆಗ ದಾರಿಮಧ್ಯದಲ್ಲಿ ಕುಡಿಯಲು ನೀರು ಕೇಳಿದರು. ಯಾರೊಬ್ಬರೂ ನೀರು ಕೊಡದಿದ್ದಾಗ ತಮ್ಮ ತಪೋಶಕ್ತಿಯಿಂದ ಒಂದು ಕೆರೆಯನ್ನು ಸೃಷ್ಟಿಸಿ ನೀರು ಕೊಡದ ಅಜ್ಞಾನಿಗಳಿಗೆ ಜ್ಞಾನೋದಯ ಮಾಡಿಸಿದ್ದರಂತೆ. ಇಂದಿಗೂ ಈ ಭಾಗದಲ್ಲಿ ಈ ಕೆರೆಯನ್ನು'ಶ್ರೀ ಮದ್ದಾನೇಶ್ವರ ಕೆರೆ 'ಎಂದು ಕರೆಯುತ್ತಾರೆ. ಇಂತಹ ಅನೇಕ ಪವಾಡಗಳನ್ನು ಮಾಡಿದ ಇವರ ತರುವಾಯ ಮಠದ ಪಟ್ಟಾಧಿಕಾರಕ್ಕೆ ಬಂದ ಗುರುಗಳ ಬಗ್ಗೆ ಮಾಹಿತಿಗಳಿಲ್ಲ. ೧೯೭೫ ರಲ್ಲಿ ಲಿಂಗೈಕ್ಯರಾದ ಶ್ರೀ ಮದ್ದಾನೆ ಕರಿಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು ಶಿವಪೂಜಾನಿಷ್ಠರಾಗಿ ಮಠವನ್ನು ಅಭಿವೃದ್ಧಿಪಡಿಸಿದವರಾಗಿದ್ದಾರೆ.

ಶ್ರೀ ಕರಿಬಸವ ಶಿವಾಚಾರ್ಯ ಸ್ವಾಮಿಗಳು ಶ್ರೀ ಮದ್ದಾನಯ್ಯ ಮತ್ತು ಶ್ರೀಮತಿ ಅನ್ನಪೂರ್ಣಮ್ಮನವರ

ಪುತ್ರರಾಗಿ ೧೯೭೫ ರ ಜೂನ್ ಏಳರಂದು ಜನಿಸಿದರು. ಇವರು ಕುಷ್ಟಗಿಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಮುಗಿಸಿ, ದಾವಣಗೆರೆ ಜಿಲ್ಲೆಯ ಹೊನ್ನಾಳಿ ಮತ್ತು ಶಿವಯೋಗಮಂದಿರದಲ್ಲಿ ಧಾರ್ಮಿಕ ಶಿಕ್ಷಣವನ್ನು ಪಡೆದು, ಕೊಪ್ಪಳದ ಗವಿ ಮಠದಲ್ಲಿ ಆಶ್ರಯ ಪಡೆದು ಸಂಸ್ಕೃತದಲ್ಲಿ ಪದವಿ ಸಂಪಾದಿಸಿ ವೇದ, ಜ್ಯೋತಿಷ್ಯ ಕಲಿತು ಮಠಕ್ಕೆ ಆಗಮಿಸಿದರು. ಪಟ್ಟಾಧ್ಯಕ್ಷರು ಯಾರೂ ಇಲ್ಲದ ಕಾರಣ ಮಠವು ಪೂರ್ಣಜೀರ್ಣಗೊಂಡಿತ್ತು. ಗುರುಗಳು ಮಠವನ್ನು ಸಂಪೂರ್ಣವಾಗಿ ನವೀಕರಣಗೊಳಿಸಿ, ೧೯೭೭ರಲ್ಲಿ ನೂತನ ಕಟ್ಟಡವನ್ನು ನಿರ್ಮಿಸಿದರು. ಮಠದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಿ ೨೦೦೦ದ ಮಾರ್ಚ್ ಇಪ್ಪತ್ತೈದರಂದು ಗದಗ ಜಿಲ್ಲೆಯ ಚಿಕ್ಕಮಣ್ಣೂರು ಮಠದ ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳಿಂದ ಅನುಗ್ರಹ ಪಡೆದು ಪಟ್ಟಾಧಿಕಾರಕ್ಕೆ ಬಂದಿದ್ದಾರೆ.

ಧಾರ್ಮಿಕ ಕಾರ್ಯಗಳು: ಪರಂಪರೆಯ ಗುರುಗಳ ಆರು ಗದ್ದುಗೆಗಳು ಮಠದಲ್ಲಿ ಸ್ಥಾಪನೆಯಾಗಿದ್ದು, ಇವುಗಳಿಗೆ ನಿತ್ಯ ಎರಡು ವೇಳೆ ಪೂಜೆ, ಅಮಾವಾಸ್ಯೆ, ಹುಣ್ಣಿಮೆಯಲ್ಲಿ ವಿಶೇಷ ಪೂಜೆ, ಶ್ರಾವಣಮಾಸದಲ್ಲಿ ರುದ್ರಾಭಿಷೇಕ ಹಾಗೂ ನಿತ್ಯ ಭಜನೆ ಕಾರ್ಯಕ್ರಮ ನಡೆಯುತ್ತಿವೆ. ಫಾಲ್ಗುಣಮಾಸದಲ್ಲಿ ಮಠದಲ್ಲಿ ಪುರಾಣ ಪ್ರವಚನವನ್ನು ಏರ್ಪಡಿಸಲಾಗುತ್ತಿದೆ. ಹಿರಿಯ ಗುರುಗಳ ಪುಣ್ಯ ತಿಥಿಯನ್ನು ಈ ಸಂದರ್ಭದಲ್ಲಿ ಆಚರಿಸಿ ಅಡ್ಡಪಲ್ಲಕ್ಕಿ ಉತ್ಸವ, ಸಾಮೂಹಿಕ ವಿವಾಹಗಳು, ದೀಕ್ಷೆ, ಕುಂಭಮೇಳ ಈ ರೀತಿ ಅನೇಕ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಸಾಮಾಜಿಕ ಕಾರ್ಯಗಳು: ಹೈದರಾಬಾದ್ ನಿಜಾಮನ ಕಾಲದಲ್ಲಿ ಮಠಕ್ಕೆ ನಾಲ್ಕುನೂರು ಎಕರೆ ಭೂಮಿ ಉಂಬಳಿಯಾಗಿ ದೊರೆತಿದ್ದು, ಈಗ ಕೇವಲ ನಲವತ್ತುಎಕರೆ ಜಮೀನು ಮಾತ್ರ ಉಳಿದಿದೆ. ಗುರುಗಳು ಜನಜಾಗೃತಿಗಾಗಿ ಕುಷ್ಟಗಿಯಿಂದ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಶ್ರೀ ಶಂಭುಲಿಂಗನಬೆಟ್ಟಕ್ಕೆ ಪಾದಯಾತ್ರೆಯನ್ನು ಮಾಡಿದ್ದಾರೆ. ಮಠದಲ್ಲಿ ಉಚಿತ ನೇತ್ರ ಚಿಕಿತ್ಸಾ ಶಿಬಿರವನ್ನು ಏರ್ಪಡಿಸಿ ಬಡವರಿಗೆ ನೆರವಾಗಿದ್ದಾರೆ. ಶ್ರೀ ಮದ್ದಾನೇಶ್ವರ ಮಹಾವಿದ್ಯಾವರ್ಧಕ ಸಂಸ್ಥೆಯನ್ನು ಸ್ಥಾಪಿಸಿ ಶಿಶುವಿಹಾರವನ್ನು ನಡೆಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಕರಿಬಸವ ಶಿವಾಚಾರ್ಯ ಸ್ವಾಮಿಗಳು, ಶ್ರೀ ಮದ್ದಾನೆ ಹಿರೇಮಠ, ಕುಷ್ಟಗಿ, ಕೊಪ್ಪಳ ಜಿಲ್ಲೆ.

ಪಟ್ಟಕಂತೆ ಹಿರೇಮಠ: ತಾಲ್ಲೂಕು ಕೇಂದ್ರ ಸ್ಥಳವಾದ ಕುಷ್ಟಗಿಯಲ್ಲಿ ಕಾಶೀಪೀಠದ ಶಾಖಾಮಠವಾದ ಶ್ರೀ ಪಟ್ಟದಕಂತೆ ಅಥವಾ ಪಶ್ಚಿಕಂತೆ ಹಿರೇಮಠವು ಸ್ಥಾಪನೆಯಾಗಿದೆ. ಶ್ರೀ ಚನ್ನಬಸವ ಸ್ವಾಮಿಗಳು ಲೋಕಸಂಚಾರ ಕೈಗೊಂಡು, ಗೆಜ್ಜೆಬಾವಿಯಿಂದ ಕುಷ್ಟಗಿಗೆ ಬಂದು ಇಲ್ಲಿ ಕೆಲವು ದಿನ ನೆಲೆ ನಿಂತರು. ಅಂದು ಗುರುಗಳು ನೆಲೆ ನಿಂತ ಕ್ಷೇತ್ರವು ಇಂದು ಮಠವಾಗಿ ಬೆಳೆದು, ಈ ಪಟ್ಟಣದ ಧಾರ್ಮಿಕ ಕೇಂದ್ರವಾಗಿ ರೂಪುಗೊಂಡಿದೆ.

ನಿಡಸೇಸಿಯ ಪಟ್ಟದಕಂತೆ ಹಿರೇಮಠದ ಶಾಖಾಮಠವಾಗಿ ರೂಪುಗೊಂಡಿರುವ ಈ ಮಠವನ್ನು, ನೂರ ಮೂವತ್ತು ವರ್ಷ ಬದುಕಿದ ಶ್ರೀ ಕರಿಬಸವ ಶಿವಾಚಾರ್ಯ ಸ್ವಾಮಿಗಳು ಜೀರ್ಣೋದ್ಧಾರಗೊಳಿಸಿ ಪ್ರತಿ ತಿಂಗಳು ಧಾರ್ಮಿಕ ಕಾರ್ಯಕ್ರಮಗಳು ನಡೆಯುವಂತೆ ನೋಡಿಕೊಂಡರು. ಅಂದು ಪ್ರಾರಂಭವಾದ ಶಿವಾನುಭವ ಗೋಷ್ಠಿಗಳು ಇಂದಿನವರೆಗೂ ನಿರಂತರವಾಗಿ ನಡೆದುಕೊಂಡು ಬಂದಿವೆ. ಇವರ ನಂತರ ಇಮ್ಮಡಿ ಶ್ರೀ ಕರಿಬಸವ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠಕ್ಕೆ ನೂತನ ಕಟ್ಟಡ ನಿರ್ಮಿಸಿದರು. ಇಮ್ಮಡಿ ಶ್ರೀ ಕರಿಬಸವ ಸ್ವಾಮಿಗಳು ನಿಡಸೇಸಿಯ ಮತ್ತೊಂದು ಶಾಖಾ ಮಠವಾದ ಗೆಜ್ಜೆಬಾವಿ ಮಠದಲ್ಲಿ ನೆಲೆಸಿ, ಕುಷ್ಟಗಿ ಮತ್ತು ನಿಡಸೇಸಿ ಮಠದ ಅಧಿಕಾರವನ್ನು ತಮ್ಮ ಕರಕಮಲ ಸಂಜಾತರಾದ ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳಿಗೆ ವಹಿಸಿಕೊಟ್ಟಿದ್ದಾರೆ.

ಶ್ರೀ ಚನ್ನಬಸವ ಸ್ವಾಮಿಗಳು ಹಿಂದೆ ನಡೆಯುತ್ತಿದ್ದ ಧಾರ್ಮಿಕ ಆಚರಣೆಗಳನ್ನು ನಿಲ್ಲಿಸದೆ ವೈಭವಯುತವಾಗಿ ನಡೆಸುತ್ತಿದ್ದಾರೆ. ಶಿವಾನುಭವ ಗೋಷ್ಠಿಗಳಿಗೆ ವಿದ್ವಾಂಸರು ಮತ್ತು ವಿವಿಧ ಭಾಗಗಳ ಮಠಾಧೀಶರುಗಳನ್ನು ಕರೆಸಿ ಅರ್ಥ ಪೂರ್ಣವಾದ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. ಗುರುಗಳು ನಿಡಸೇಸಿ, ಕುಷ್ಟಗಿ ಹಾಗೂ ಗೆಜ್ಜೆಬಾವಿ ಮಠಗಳ ಆಡಳಿತವನ್ನು ನೋಡಿಕೊಂಡು ಇವುಗಳ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ.

ರೂಪುಗೊಂಡ ಕಾರ್ಯಕ್ರಮಗಳು: ಶ್ರೀ ಕರಿಬಸವ ಸ್ವಾಮಿಗಳ ಪರಿಶ್ರಮದಿಂದ ತಲೆಎತ್ತಿದ ಈ ಮಠದಲ್ಲಿ, ಪ್ರತಿ ಶ್ರಾವಣಮಾಸದಲ್ಲಿ ಪುರಾಣ ಪ್ರವಚನವನ್ನು ಹಮ್ಮಿಕೊಳ್ಳಲಾಗುತ್ತಿದೆ. ಕೊನೆಯ ದಿನ ಪಲ್ಲಕ್ಕಿ ಉತ್ಸವವನ್ನು ನಡೆಸಿ ಸಮಾರಂಭವನ್ನು ಮುಕ್ತಾಯ ಗೊಳಿಸಲಾಗುತ್ತದೆ. ಮಠದ ಆವರಣದಲ್ಲಿ ಮೂರು ಗದ್ದುಗೆಗಳಿವೆ. ಇವುಗಳಿಗೆ ನಿತ್ಯಪೂಜೆ ನಡೆಸಲಾಗುತ್ತಿದೆ. ಉಚಿತ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿ, ಬಡಮಕ್ಕಳಿಗೆ ಆಶ್ರಯ ಕಲ್ಪಿಸಿ ಕಲಿಕೆಗೆ ನೆರವಾಗಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು, ಶ್ರೀ ಪಟ್ಟಕಂತೆ ಹಿರೇಮಠ, ಕುಷ್ಟಗಿ, ಕೊಪ್ಪಳ ಜಿಲ್ಲೆ.

ಕೇಸೂರು

ಕುಷ್ಟಗಿ ತಾಲ್ಲೂಕಿನ ಕೇಸೂರು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಈ ಗ್ರಾಮವು ಪುರಾತನ ಕಾಲದಲ್ಲಿ ಧಾರ್ಮಿಕವಾಗಿ ಹೆಚ್ಚು ಹೆಸರು ಪಡೆದಿತ್ತು. ನಂತರ ಧಾರ್ಮಿಕ ಚಟುವಟಿಕೆಗಳು ಕ್ಷೀಣಿಸಿದ್ದವು. ಈಗ ಪುನಃ ಶ್ರೀ ಮಹಾಂತೇಶ್ವರಕಲ್ಮಠದ ಸ್ಥಾಪನೆಯಿಂದ ಧಾರ್ಮಿಕ ಕಾರ್ಯಗಳು ನಡೆಯತೊಡಗಿವೆ.

ಮಹಾಂತೇಶ್ವರಕಲ್ಮಠ: ಇಳಕಲ್ಲು ಮಹಾಂತೇಶಮಠದ ಶಾಖಾಮಠವಾಗಿ ಕಲ್ಮಠ ಸ್ಥಾಪನೆಯಾಗಿದೆ. ಧಾರ್ಮಿಕ ಹಾಗೂ ಶೈಕ್ಷಣಿಕ ವಾತಾವರಣವನ್ನು ಸೃಷ್ಟಿಸಿದೆ. ಈ ಮಠವು ವಿರಕ್ತ ಸಂಪ್ರದಾಯದಲ್ಲಿ ಬೆಳೆದು ಬಂದಿದೆ. ಪುರಾತನ ಕಾಲದ ಕಲ್ಲಿನ ಕಟ್ಟಡವು ಅಸ್ತಿತ್ವದಲ್ಲಿರುವ ಕಾರಣ ಈ ಮಠಕ್ಕೆ '**ಶ್ರೀ ಕಲ್ಮಠ**'ಎಂಬ ಹೆಸರು ಬಂದಿದೆ. ಈ ಮಠದಲ್ಲಿ ಇಳಕಲ್ಲು ಮಠದ ವತಿಯಿಂದ ಶಿಕ್ಷಣ ಸಂಸ್ಥೆ ಪ್ರಾರಂಭವಾಗಿ ಶಿಶುವಿಹಾರ ನಡೆಯುತ್ತಿದೆ. ಮಠದ ಆಸ್ತಿಯನ್ನು ಅಭಿವೃದ್ಧಿಪಡಿಸಲಾಗಿದೆ.

ವಿಳಾಸ: ಶ್ರೀ ಮಹಾಂತೇಶ್ವರಕಲ್ಮಠ, ಕೇಸೂರು, ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ.

ಗುಡದೂರು

ಕುಷ್ಟಗಿ ತಾಲ್ಲೂಕಿನ ಗುಡದೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹದಿನೈದು ಕಿ.ಮೀ ದೂರ ದಲ್ಲಿದೆ. ಇಲ್ಲಿ ಶ್ರೀ ದೊಡ್ಡಬಸವೇಶ್ವರಮಠ,ಶ್ರೀ ಅಂಕಲಿಮಠಗಳ ಸ್ಥಾಪನೆಯಿಂದ ಧಾರ್ಮಿಕವಾಗಿ ಪ್ರಸಿದ್ಧಿಗೆ ಬಂದಿದೆ.

ದೊಡ್ಡಬಸವೇಶ್ವರ ಮಠ: ಗುಡದೂರು ಗ್ರಾಮದಲ್ಲಿ ಶ್ರೀ ದೊಡ್ಡಬಸವೇಶ್ವರ ಮಠ ಮತ್ತು ಶ್ರೀ ಅಂಕಲಿಮಠಗಳು ಸ್ಥಾಪನೆಯಾಗಿವೆ. ಇದರಲ್ಲಿ ಅಂಕಲಿ ಮಠವು ಉತ್ತರಾಧಿಕಾರಿಗಳಿಲ್ಲದೆ ಜೀರ್ಣಾವಸ್ಥೆ ತಲುಪಿದೆ. ಶ್ರೀ ದೊಡ್ಡಬಸವೇಶ್ವರ ಮಠವು ಅಸ್ತಿತ್ವದಲ್ಲಿದ್ದು ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿದೆ.

ಮಠ ಸ್ಥಾಪನೆ: ಶರಣಸ್ಥಲದ ಸಂಪ್ರದಾಯದಲ್ಲಿ ಬೆಳೆದಿರುವ ಶ್ರೀ ದೊಡ್ಡಬಸವೇಶ್ವರ ಮಠವು ಮೊದಲು ಗ್ರಾಮದ ಮಧ್ಯ ಭಾಗದಲ್ಲಿ ಸ್ಥಾಪನೆಯಾಗಿತ್ತು. ಈಗ ಊರಿನ ಪೂರ್ವಕ್ಕೆ ಸ್ಥಾಪನೆಯಾಗಿದೆ. ಮಠಕ್ಕೆ ಹೊಸ ಕಟ್ಟಡವನ್ನು ನಿರ್ಮಿಸಲಾಗಿದ್ದು, ಮಠದ ಸ್ಥಾಪಕರಾದ ಶ್ರೀ ದೊಡ್ಡಬಸವಯ್ಯತಾತ ಮತ್ತು ನಂತರ ಬಂದ ಶ್ರೀ ಬಸವಯ್ಯ ತಾತನವರ ಗದ್ದುಗೆಗೆ ಮಂಟಪವನ್ನು ಕಟ್ಟಿಸಿ, ಗೋಪುರವನ್ನು ನಿರ್ಮಿಸಲಾಗಿದೆ. ಪ್ರಸ್ತುತ ಶ್ರೀ ನೀಲಕಂಠಯ್ಯ ತಾತನವರು ಮಠದ ಅಧಿಕಾರವನ್ನು ನೋಡಿಕೊಳ್ಳುತ್ತಿದ್ದಾರೆ. ಗುರುಗಳು ಶರಣಸ್ಥಲದ ಸಂಪ್ರದಾಯವನ್ನು ಅನುಸರಿಸುತ್ತಾ ಸಂಸಾರಿಗಳಾಗಿ, ಸಂಸಾರದ ಜತೆಗೆ ಆಧ್ಯಾತ್ಮ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಮಠದ ಆವರಣದಲ್ಲಿ ಒಟ್ಟು ಮೂರು ಗದ್ದುಗೆಗಳು ಸ್ಥಾಪಿತವಾಗಿವೆ. ಇವುಗಳಿಗೆ ನಿತ್ಯ ಎರಡು ವೇಳೆ ಪೂಜೆ, ಅಮಾವಾಸ್ಯೆ, ಕಾರ್ತೀಕ ಮತ್ತು ಶಿವರಾತ್ರಿಯಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಹೊರಗಿನಿಂದ ಬರುವ ಭಕ್ತರಿಗೆ ನಿತ್ಯ ದಾಸೋಹದ ವ್ಯವಸ್ಥೆಯನ್ನು ಮಾಡಿದ್ದಾರೆ.

ವಿಳಾಸ: ಶ್ರೀ ನೀಲಕಂಠಯ್ಯ ಸ್ವಾಮಿಗಳು, ಶ್ರೀ ದೊಡ್ಡಬಸವೇಶ್ವರಮಠ, ಗುಡದೂರು, ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ.

ಚಳಗೇರಿ

ಕುಷ್ಟಗಿ ತಾಲ್ಲೂಕಿನ ಚಳಗೇರಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಹದಿನೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠದ ಸ್ಥಾಪನೆಯಿಂದಾಗಿ ಈ ಭಾಗದ ಸುತ್ತಲಿನ ಗ್ರಾಮಗಳಿಗೆ ಧಾರ್ಮಿಕ ಬೋಧನೆಯನ್ನು ನೀಡುವ ಕೇಂದ್ರವಾಗಿ ಬೆಳೆದಿದೆ.

ಚಳಗೇರಿ ಹಿರೇಮಠ: ಚಳಗೆರಿ ಗ್ರಾಮದ ಮಧ್ಯಭಾಗದಲ್ಲಿ ಶ್ರೀ ರಂಭಾಪುರಿ ಪೀಠದ ಶಾಖಾಮಠವಾದ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ. ಈ ಮಠವು ಇಲ್ಲಿನ ಧಾರ್ಮಿಕ ಕೇಂದ್ರಬಿಂದುವಾಗಿ ರೂಪುಗೊಂಡು, ಸಮಾಜಕ್ಕೆ ಧಾರ್ಮಿಕ ಸಂಸ್ಕಾರವನ್ನು ನೀಡಿ ಮುನ್ನಡೆಸಿದೆ.

ಮಠ ಸ್ಥಾಪನೆ: ಮಠದ ಕರ್ತೃಗುರುಗಳಾದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಈ ಪ್ರಾಂತ್ಯಕ್ಕೆ ಆಗಮಿಸಿದರು. ಈ ಸಂದರ್ಭದಲ್ಲಿ ಅನ್ಯಧರ್ಮೀಯ ಪಾಳೆಗಾರನು ಆಡಳಿತವನ್ನು ನಡೆಸುತ್ತಿದ್ದನಂತೆ. ಇವನ ಅಜ್ಞಾನ ಹಾಗೂ ಅಂಧಕಾರದಲ್ಲಿ ಪ್ರಜೆಗಳು ಯಾತನೆಯನ್ನು ಅನುಭವಿಸುತ್ತಿದ್ದರಂತೆ. ಇವನ ಕಾಲದಲ್ಲಿ ಸಂಸ್ಕಾರವಂತರಿಗೆ ಬೆಲೆ ಇಲ್ಲದಾಗಿತ್ತು. ಇದನ್ನರಿತವರಂತೆ ಶ್ರೀ ರುದ್ರಮುನಿ ಸ್ವಾಮಿಗಳು ಈ ನಾಡಿಗೆ ಆಗಮಿಸಿದರು. ಗುರುಗಳು ಚಳಗೇರಿ ಗ್ರಾಮದ ಹೊರಭಾಗದಲ್ಲಿ ತಪೋನುಷ್ಠಾನ ಕೈಗೊಂಡಿರುವ ವಿಚಾರ ಪಾಳೆಗಾರನಿಗೆ ತಿಳಿಯಿತಂತೆ. ಆಗ ತನ್ನ ದರ್ಪದಿಂದ ತಪಸ್ವಿಗಳಿದ್ದ ಜಾಗಕ್ಕೆ ಬಂದು ಗುರುಗಳನ್ನು ನಿಂದಿಸುತ್ತಾನೆ. ಆಗ ಗುರುಗಳು ಶಾಂತಚಿತ್ತರಾಗಿ ಆತನಿಗೆ ಧರ್ಮೋಪದೇಶ ನೀಡುತ್ತಾರೆ. ಅಜ್ಞಾನದ ಅಂಧಕಾರದಲ್ಲಿದ್ದ ಇವನಿಗೆ ಧರ್ಮೋಪದೇಶ ತಟ್ಟಲಿಲ್ಲ. ಗುರುಗಳು ಅವನ ಕಣ್ಣು ತೆರೆಸಲು ಪವಾಡವನ್ನು ಮಾಡುತ್ತಾರಂತೆ. ಆಗ ಗುರುಗಳ ಪ್ರಭಾವಕ್ಕೆ ಮಣಿದು ಅಜ್ಞಾನದಲ್ಲಿ ಆ ವರೆವಿಗೆ ನಡೆಸಿದ ದುರಾಡಳಿತ ಬಗ್ಗೆ ಪಶ್ಚಾತ್ತಾಪಪಟ್ಟು, ಗುರುಗಳಿಗೆ ಶರಣಾದ ಪಾಳೆಗಾರ ಮಠವನ್ನು ಸ್ಥಾಪಿಸಲು ನೆರವಾಗುತ್ತನೆಂದು ಹೇಳುವ ಜನಪದ ಕಥೆಯಿಂದ ತಿಳಿದು ಬರುತ್ತಿದೆ.

ಪರಂಪರೆ:

೧. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ಪಂಚಾಕ್ಷರ ಶಿವಾಚಾರ್ಯ ಸ್ವಾಮಿಗಳು
೩. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು
೪. ಷ.ಬ್ರ.ಶ್ರೀ ವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳು
೫. ಷ.ಬ್ರ.ಶ್ರೀ ವೀರಸಂಗ ಶಿವಾಚಾರ್ಯ ಸ್ವಾಮಿಗಳು
೬. ಷ.ಬ್ರ.ಶ್ರೀ ವಿರೂಪಾಕ್ಷಲಿಂಗ ಶಿವಾಚಾರ್ಯ ಸ್ವಾಮಿಗಳು
೭. ಷ.ಬ್ರ.ಶ್ರೀ ವೀರಸಂಗಮೇಶ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಪಂಚಾಕ್ಷರ ಶಿವಾಚಾರ್ಯ ಸ್ವಾಮಿಗಳ ಗದ್ದುಗೆ ಮಠದಲ್ಲಿಯೇ ಸ್ಥಾಪನೆಯಾಗಿದೆ. ನಂತರ ಬಂದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಯೂ ಮುದ್ದೇಬಿಹಾಳು ತಾಲ್ಲೂಕು ನಲವತ್ವಾಡ ಗ್ರಾಮದ ಶಾಖಾಮಠದಲ್ಲಿ ಸ್ಥಾಪನೆಯಾಗಿದೆ. ನಂತರ ಬಂದ ಶ್ರೀ ವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಯೂ ಈ ಮಠದಲ್ಲಿಯೇ ಸ್ಥಾಪನೆಯಾಗಿದೆ. ನಂತರ ಐದನೆಯ ಪಟ್ಟಾಧ್ಯಕ್ಷರಾಗಿ ಅಧಿಕಾರಕ್ಕೆ ಬಂದ ಶ್ರೀ ವೀರಸಂಗ ಶಿವಾಚಾರ್ಯ ಸ್ವಾಮಿಗಳು ಭಕ್ತರಲ್ಲಿ ಅಚಲ ವಿಶ್ವಾಸವಿಟ್ಟು ಭಕ್ತರ ಉದ್ಧಾರಕ್ಕಾಗಿ ಶ್ರಮಿಸಿದವರಾಗಿದ್ದಾರೆ. ಇವರು ಆಡಂಬರದ ಜೀವನದ ಗೋಜಿಗೆ ಹೋಗದೆ ಸದಾ ಶಿವಪೂಜಾನಿಷ್ಠರಾಗಿ, ಉಪದೇಶ ನೀಡುತ್ತಾ ಸರಳ ಜೀವನವನ್ನು ನಡೆಸುತ್ತಿದ್ದಾರೆ. ಮಠದ ವಂಶಸ್ಥರಾದ ಶ್ರೀ ಸಂಗಯ್ಯ ಸ್ವಾಮಿ ಮತ್ತು ಶ್ರೀಮತಿ ಗುರುಲಿಂಗಮ್ಮನವರ ಪುತ್ರರಾಗಿ ಶ್ರೀ ವಿರೂಪಾಕ್ಷಲಿಂಗ ಶಿವಾಚಾರ್ಯ ಸ್ವಾಮಿಗಳು ಜನಿಸಿದರು. ಇವರು ಹಿರಿಯ ಗುರುಗಳ ಮಾರ್ಗದರ್ಶನದಲ್ಲಿ ಬೆಳೆದು ಸಂಸ್ಕಾರವಂತ ವಟುವಾಗಿ ರೂಪುಗೊಂಡರು. ಶ್ರೀ ವೀರಸಂಗ

ಶಿವಾಚಾರ್ಯ ಸ್ವಾಮಿಗಳು ತಮ್ಮ ಉತ್ತರಾಧಿಕಾರಿಗಳಿಗೆ ವಿದ್ಯಾಭ್ಯಾಸ ಮಾಡಿಸದಿದ್ದರೂ, ಧಾರ್ಮಿಕ ಸಂಸ್ಕಾರವನ್ನು ನೀಡಿ ೧೯೬೯ ರ ಏಪ್ರಿಲ್ ಮೂವತ್ತರಂದು ಮಠದ ಅಧಿಕಾರಕ್ಕೆ ತರುತ್ತಾರೆ.

ಗುರುಗಳು ಸಮಾಜದ ಅಭಿವೃದ್ಧಿಗೆ ಧರ್ಮೋಪದೇಶವನ್ನು ಮಾಡುತ್ತಾ, ಧಾರ್ಮಿಕ ಆಚರಣೆಗಳ ಮೂಲಕ ಭಕ್ತರನ್ನು ಸನ್ಮಾರ್ಗದೆಡೆಗೆ ಕೊಂಡೊಯ್ಯ ತೊಡಗಿದರು. ಶ್ರೀ ವಿರೂಪಾಕ್ಷಲಿಂಗ ಶಿವಾಚಾರ್ಯ ಸ್ವಾಮಿಗಳು ಉತ್ತರಾದಿಕಾರಿಗಳನ್ನಾಗಿ ತಮ್ಮ ವಂಶಸ್ಥರಾದ ಶ್ರೀ ಮುದ್ದಯ್ಯಸ್ವಾಮಿ ಮತ್ತು ಶ್ರೀಮತಿ ಗಂಗಾಂಬಿಕೆಯವರ ಪುತ್ರರಾಗಿ ೧೯೭೫ರ ಮೇ ಇಪ್ಪತ್ತೊಂರರಂದು ಜನಿಸಿದ ಶ್ರೀ ವೀರಸಂಗಮೇಶ್ವರ ಶಿವಾಚಾರ್ಯ ಸ್ವಾಮಿಗಳನ್ನು ನೇಮಕ ಮಾಡಿಕೊಂಡರು.

ಬಾಲ್ಯದಲ್ಲೇ ಸಂಸ್ಕಾರವಂತ ಶಿಶುವಾಗಿ ಪ್ರತಿಭೆಯನ್ನು ಮೈಗೂಡಿಸಿಕೊಂಡಿದ್ದ ಶ್ರೀ ಸಂಗಮೇಶ್ವರ ದೇವರು ಪ್ರೌಢ ಹಾಗೂ ಪದವಿ ಶಿಕ್ಷಣವನ್ನು ಪಡೆದು, ೧೯೯೪ ರ ಮೇ ಇಪ್ಪತ್ತೊಂರರಂದು ಪಟ್ಟಾಧಿಕಾರ ವಹಿಸಿಕೊಂಡಿದ್ದಾರೆ. ನಂತರ ವಿದ್ಯಾಭ್ಯಾಸವನ್ನು ಸ್ಥಗಿತಗೊಳಿಸದೆ ಧಾರವಾಡ ವಿಶ್ವವಿದ್ಯಾನಿಲಯದಲ್ಲಿ ಸಮಾಜಶಾಸ್ತ್ರ ಹಾಗೂ ಕನ್ನಡದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ಬಂದಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಹಿರಿಯ ಗುರುಗಳಾದ ಶ್ರೀ ವಿರೂಪಾಕ್ಷಲಿಂಗ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠವು ಅಭಿವೃದ್ಧಿ ಕಾಣತೊಡಗಿತು. ಗುರುಗಳು ಸ್ವತಃ ಕಾಯಕಯೋಗಿಗಳಾಗಿ ದುಡಿದು ಭಕ್ತರಿಗೆ ಮಾರ್ಗದರ್ಶಕರಾಗಿದ್ದಾರೆ. ಇವರ ಶ್ರಮದಿಂದ ಮಠವು ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಿ, ಮಠದ ಕಟ್ಟಡ ನವೀಕರಣಗೊಂಡಿತು. ಕಲ್ಯಾಣಮಂಟಪವನ್ನು ಸ್ಥಾಪಿಸಿ ಬಡವರಿಗೆ ಉಚಿತವಾಗಿ ನೀಡಿ, ಉಳ್ಳವರಿಂದ ಬಾಡಿಗೆ ಪಡೆದು ಮಠಕ್ಕೆ ಆದಾಯ ಹೆಚ್ಚಿಸಿಕೊಂಡಿದ್ದಾರೆ. ಕರ್ತೃ ಗದ್ದುಗೆಯನ್ನು ನವೀಕರಣಗೊಳಿಸಿ ರೇಣುಕಮೂರ್ತಿಯನ್ನು ಪ್ರತಿ ಷ್ಠಾಪಿಸಿದ್ದಾರೆ. ಸಮಾಜದ ಜಾಗೃತಿಗೆ ಧಾರ್ಮಿಕ ವಿಚಾರಗಳು ಅಗತ್ಯ ಎಂದು ಅರಿತು ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿಸಿ, ಗ್ರಾಮದಲ್ಲಿ ಧಾರ್ಮಿಕ ವಾತಾವರಣ ಸೃಷ್ಟಿಯಾಗಲು ಕಾರಣರಾದರು. ಶಾಖಾಮಠಗಳಾದ ನಲವತ್ತವಾಡ, ತಳವಗೆರೆ ಹಾಗೂ ಬೆನಕನಾಳು ಮಠಗಳನ್ನು ಅಭಿವೃದ್ಧಿಪಡಿಸಿದರು.

ಧಾರ್ಮಿಕ ಕಾರ್ಯಗಳು: ಮಠದಲ್ಲಿ ನಿತ್ಯ ಎರಡು ವೇಳೆ ಪೂಜೆ, ಅಮಾವಾಸ್ಯೆಯಲ್ಲಿ ರುದ್ರಾಭಿಷೇಕ, ಶ್ರಾವಣ ಮಾಸದಲ್ಲಿ ನಿತ್ಯ ಮಹಾರುದ್ರಾಭಿಷೇಕ, ಸಂಜೆ ಪುರಾಣ ಇವು ಮಠದಲ್ಲಿ ನಡೆಯುವ ಪೂಜಾ ಕಾರ್ಯಗಳು. ಹಿರಿಯ ಗುರುಗಳ ಪಟ್ಟಾಧಿಕಾರದ ವಾರ್ಷಿಕೋತ್ಸವದ ಆಚರಣೆಯಲ್ಲಿ ಸಾಮೂಹಿಕ ವಿವಾಹಗಳು, ಶಿವದೀಕ್ಷೆ, ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ಸಂದರ್ಭದಲ್ಲಿ ಧಾರ್ಮಿಕ ಸಭೆಯನ್ನು ಏರ್ಪಡಿಸಿ ಸಾಹಿತಿಗಳು, ಸಂಗೀತಗಾರರು, ವಿವಿಧ ಮಠಾಧೀಶರು ಹಾಗೂ ರಾಜಕೀಯ ಮುಖಂಡರನ್ನು ಕರೆಸಿ ಉಪನ್ಯಾಸ, ಉಪದೇಶ ಹಾಗೂ ಸನ್ಮಾನ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ.

ಸಾಮಾಜಿಕ ಕಾರ್ಯಗಳು: ಮಠದವತಿಯಿಂದ ಪ್ರತಿಭಾನ್ವಿತ ಮಕ್ಕಳನ್ನು ಗುರುತಿಸಿ ಪುರಸ್ಕಾರ ನೀಡಲಾಗುತ್ತದೆ. ಆರೋಗ್ಯ ಶಿಬಿರಗಳನ್ನು ಏರ್ಪಡಿಸಿ, ದುಶ್ಚಟಗಳ ನಿರ್ಮೂಲನ ಆಂದೋಲನವನ್ನು ಮಾಡಲಾಗಿದೆ.

ವಿಳಾಸ: ಷ.ಬ್ರ.ಶ್ರೀ ವೀರಸಂಗಮೇಶ ಶಿವಾಚಾರ್ಯಸ್ವಾಮಿಗಳು,ಶ್ರೀ ಚಳಗೇರಿಹಿರೇಮಠ, ಚಳಗೇರಿ,ಕುಷ್ಟಗಿ ತಾ, ಕೊಪ್ಪಳ ಜಿಲ್ಲೆ.

ನಿಡಸೇಸಿ

ಕುಷ್ಟಗಿ ತಾಲ್ಲೂಕಿನ ನಿಡಸೇಸಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಎರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಪಟ್ಟಕಂತೆ ಹಿರೇಮಠ ಸ್ಥಾಪನೆಯಾಗಿ, ಸಂಸ್ಕಾರವಂತ ಸಮಾಜವನ್ನು ರೂಪಿಸಿದೆ. ಈ ಕಾರಣದಿಂದ ಈ ಪ್ರಾಂತ್ಯ ಧಾರ್ಮಿಕ ಸಂಸ್ಕಾರ ಪಡೆದು ಬೆಳೆದಿದೆ.

ಪಟ್ಟಕಂತೆ ಹಿರೇಮಠ: ಈ ಗ್ರಾಮದ ಪೂರ್ವಭಾಗದಲ್ಲಿ ಶ್ರೀ ಪಟ್ಟಕಂತೆ ಹಿರೇಮಠವು ಸ್ಥಾಪನೆಯಾಗಿದೆ. ಪುರಾತನ

ಕಾಲದ ಈ ಮಠವು ಈ ಭಾಗದ ಧಾರ್ಮಿಕ ಕೇಂದ್ರಬಿಂದುವಾಗಿ ಬೆಳೆದಿದೆ.

ಮಠ ಸ್ಥಾಪನೆ: ಹದಿನೇಳನೆಯ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂದ ಈ ಮಠವು, ಕಾಶಿ ಪೀಠದ ಶಾಖಾಮಠವಾಗಿ ಪುತ್ರ ವರ್ಗದ ಪರಂಪರೆಯಲ್ಲಿ ಬೆಳೆದಿದೆ. ಮಠದ ಕರ್ತೃಗುರುಗಳಾದ ಶ್ರೀ ಚನ್ನಬಸವ ಸ್ವಾಮಿಗಳು ಲೋಕಸಂಚಾರ ಕೈಗೊಂಡು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಗೆಜ್ಜೆಬಾವಿಯಲ್ಲಿ ನೆಲೆಸಿ, ನಂತರ ಕುಷ್ಟಗಿಗೆ ಬಂದು ಮಠವನ್ನು ಸ್ಥಾಪಿಸಿ ಇಲ್ಲಿ ಕೆಲವು ದಿನ ಅನುಷ್ಠಾನಗೊಂಡರು. ನಂತರ ನಿಡಸೇಸಿಗೆ ಆಗಮಿಸಿ, ಗ್ರಾಮದ ಪೂರ್ವಭಾಗದ ಪ್ರಶಾಂತ ಸ್ಥಳದಲ್ಲಿ ನೆಲೆಸಿ ತಪೋನುಷ್ಠಾನ ಕೈಗೊಂಡರು. ಗ್ರಾಮದ ಭಕ್ತರು ಗುರುಗಳ ತಪೋಶಕ್ತಿಗೆ ಮನಸೋತು ಗುರುಗಳು ಇಲ್ಲೇ ನೆಲೆಸುವಂತೆ ಒತ್ತಾಯಿಸಿದರು. ಭಕ್ತರ ಒತ್ತಾಸೆಗೆ ಇಲ್ಲಿ ನೆಲೆನಿಂತ ಗುರುಗಳು ಮಠವನ್ನು ಸ್ಥಾಪಿಸಿದ್ದಾರೆ. ಅಂದು ಕಲ್ಲು ಮತ್ತು ಕಟ್ಟಿಗೆಯಿಂದ ನಿರ್ಮಿಸಲ್ಪಟ್ಟ ಭವ್ಯ ಕಟ್ಟಡವು, ಇಂದು ಪುರಾತನ ಸ್ಮಾರಕವಾಗಿದೆ. ನಿಡಸೇಸಿ ಗ್ರಾಮದಲ್ಲಿ ಶ್ರೀ ಚನ್ನಬಸವೇಶ್ವರರು ಅಡಿಯಿಟ್ಟು ಸ್ಥಾಪಿಸಿದ ಮಠದ ಪರಂಪರೆಯು ಇಂದಿನವರೆಗೂ ಬೆಳೆದಿದೆ.

ಪರಂಪರೆ:

೧. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಕರಿಬಸವ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಇಮ್ಮಡಿ ಕರಿಬಸವ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಎರಡನೆಯ ಚನ್ನಬಸವ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದಿದೆ. ಕರ್ತೃಗುರುಗಳಾದ ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ಮಹಾತಪಸ್ವಿ ಗಳಾಗಿ ಅನೇಕ ಪವಾಡಗಳನ್ನು ಮಾಡಿ ಜನಮನ ಗೆದ್ದಿದ್ದರು. ಗುರುಗಳು ಲೋಕ ಕಲ್ಯಾಣಕ್ಕಾಗಿ ದೇಶಸಂಚಾರ ಕೈಗೊಂಡು ನಾಡಿನ ನಾನಾ ಭಾಗಗಳಲ್ಲಿ ನೆಲೆನಿಂತು, ಮಠವನ್ನು ಸ್ಥಾಪಿಸಿ ಜನರನ್ನು ಜಾಗೃತರನ್ನಾಗಿ ಮಾಡಿದರು. ಇವರ ನಂತರ ಇಮ್ಮಡಿ ಶ್ರೀ ಕರಿಬಸವ ಶಿವಾಚಾರ್ಯ ಸ್ವಾಮಿಗಳು ೧೯೩೨ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡು, ಗೆಜ್ಜೆಬಾವಿ,ಕುಷ್ಟಗಿ ಮತ್ತು ನಿಡಸೇಸಿಯ ಆಡಳಿತವನ್ನು ನೋಡಿಕೊಳ್ಳುತ್ತಾ ಈ ಮಠವನ್ನು ಅಭಿವೃದ್ಧಿಪಡಿಸಿದರು. ಶ್ರೀ ಕರಿಬಸವ ಶಿವಾಚಾರ್ಯ ಸ್ವಾಮಿಗಳು ಶಿವಪೂಜಾನಿಷ್ಠರಾಗಿ ಧಾರ್ಮಿಕ ವಿಚಾರಗಳನ್ನು ಭಕ್ತರಿಗೆ ಮುಟ್ಟಿಸಿ ಸಂಸ್ಕಾರ ನೀಡಿದರು. ಅಂಧಕಾರದಲ್ಲಿದ್ದ ಭಕ್ತರ ಕಣ್ಣು ತೆರೆಸಿ ಸಮಾಜವನ್ನು ಉದ್ಧರಿಸಿದರು. ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಘನಲಿಂಗ ಶಾಂತಮೂರ್ತಿಗಳನ್ನು ನೇಮಕಮಾಡಿಕೊಂಡರು. ಗಜೇಂದ್ರಘಡದ ಶ್ರೀ ಮಹಂತಯ್ಯ ಮತ್ತು ಶ್ರೀಮತಿ ನೀಲಮ್ಮನವರ ಪುತ್ರರಾಗಿ ೧೯೫೧ ರಲ್ಲಿ ಜನಿಸಿದ ಶ್ರೀ ಘನಲಿಂಗ ಶಾಂತಮೂರ್ತಿಗಳು ಪದವಿ ಶಿಕ್ಷಣವನ್ನು ಮುಗಿಸಿದರು. ಹಿರಿಯ ಗುರುಗಳ ಕರಕಮಲ ಸಂಜಾತರಾಗಿ ಬೆಳೆದು, ಸಂಸ್ಕಾರವಂತ ವಟುವಾಗಿ ೨೦೦೦ ದ ಫೆಬ್ರವರಿ ಇಪ್ಪತ್ನಾಲ್ಕರಂದು ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳೆಂದು ಕರ್ತೃಗುರುಗಳ ಅಭಿಧಾನ ಪಡೆದು ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡರು.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಒಂದು ಗದ್ದುಗೆ ಸ್ಥಾಪನೆಯಾಗಿದೆ. ಇದಕ್ಕೆ ನಿತ್ಯಪೂಜೆ ಸಲ್ಲಿಸಲಾಗುತ್ತಿದೆ. ಗುರುಗಳು ಭಕ್ತರ ಮನೆಯ ಧಾರ್ಮಿಕ ಕಾರ್ಯಗಳಲ್ಲಿ ನೇರವಾಗಿ ಧಾರ್ಮಿಕ ಸಂಸ್ಕಾರವನ್ನು ನೀಡುತ್ತಾರೆ. ಫೆಬ್ರವರಿಯಲ್ಲಿ ಒಂದು ತಿಂಗಳ ಕಾಲ ಪುರಾಣ ಪ್ರವಚನವನ್ನು ಹಮ್ಮಿಕೊಳ್ಳಲಾಗುತ್ತಿದೆ. ಕಾರ್ತೀಕಮಾಸದಲ್ಲಿ ದೀಪೋತ್ಸವವನ್ನು ನಡೆಸಲಾಗುತ್ತಿದೆ. ಈ ಸಂದರ್ಭಗಳಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ಶಾಖಾಮಠಗಳು: ಕುಷ್ಟಗಿ ತಾಲ್ಲೂಕಿನ ಮಾದಾಪುರ,ಹೊಸೂರು ಮತ್ತು ಕುಷ್ಟಗಿ. ಮುಧೋಳು ತಾಲ್ಲೂಕಿನ ಲೋಕಾಪುರ. ಸಿಂದನೂರು ತಾಲ್ಲೂಕಿನ ಗುಡದೂರು. ದೇವದುರ್ಗ ತಾಲ್ಲೂಕಿನ ಗೆಜ್ಜೆಬಾವಿ ಮಠಗಳು ಈ ಮಠದ ಶಾಖಾಮಠಗಳಾಗಿದ್ದು, ಈ ಎಲ್ಲಾ ಮಠಗಳಿಗೆ ನೂರಾರು ಎಕರೆ ಆಸ್ತಿ ಇದ್ದು ಇದನ್ನು ಅಭಿವೃದ್ಧಿಪಡಿಸಲಾಗಿದೆ.

ವಿಳಾಸ: ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು,ಶ್ರೀ ಪಟ್ಟಕಂತೆಹಿರೇಮಠ, ನಿಡಸೇಸಿ, ಕುಷ್ಟಗಿ ತಾ, ಕೊಪ್ಪಳ ಜಿಲ್ಲೆ.

ಪುರ್ತಗೇರಿ

ಕುಷ್ಟಗಿ ತಾಲ್ಲೂಕಿನ ಪುರ್ತಗೇರಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಮೂವತ್ತು ಕಿಲೋ ಮೀಟರ್ ದೂರದಲ್ಲಿದೆ. ಹಿಂದೆ ಪುರಗಿರಿ ಎಂದು ಹೆಸರಿತ್ತು. ಕಾಲಾನಂತರ ಪುರ್ತಗೇರಿ ಎಂದು ಗ್ರಾಮದ ಹೆಸರು ನಾಮಾಂತರ ಹೊಂದಿದೆ. ಈ ಗ್ರಾಮವು ಪುರಾಣ ಪ್ರಸಿದ್ಧ ಕ್ಷೇತ್ರವಾಗಿದ್ದು, ಇಲ್ಲಿರುವ ಸೋಮೇಶ್ವರ ದೇವಸ್ಥಾನವು ಪ್ರಸಿದ್ಧಿಯಾಗಿದೆ. ಇಂತಹ ಕ್ಷೇತ್ರದಲ್ಲಿ ಪುರ್ತಗೇರಿ ಮಠವು ಸ್ಥಾಪನೆಯಾಗಿ ಧಾರ್ಮಿಕವಾಗಿ ಹೆಸರು ಮಾಡಿದೆ.

ಪುರ್ತಗೇರಿಮಠ: ಪುರ್ತಗೇರಿ ಗ್ರಾಮದ ಮಧ್ಯಭಾಗದಲ್ಲಿ ಶ್ರೀ ರಂಭಾಪುರಿ ಪೀಠದ ಶಾಖಾಮಠವಾದ ಪುರ್ತಗೇರಿ ಹಿರೇಮಠವು ಸ್ಥಾಪನೆಯಾಗಿದೆ. ಪುರಾತನ ಪರಂಪರೆಯುಳ್ಳ ಈ ಮಠವು ಹಿಂದೆ ಮಠಾಧೀಶರಿಲ್ಲದೆ ಕೆಲವು ದಿನಗಳ ಕಾಲ ಖಾಲಿ ಉಳಿದಿತ್ತು. ಶ್ರೀ ಕೈಲಾಸಲಿಂಗನಾಥ ಸ್ವಾಮಿಗಳು ಈ ಮಠದ ಮಠಾಧೀಶರಾಗಿ ನಂತರ ಕೇದಾರ ಪೀಠದ ಜಗದ್ಗುರುಗಳಾಗಿ ವೀರಶೈವ ಧರ್ಮವನ್ನು ಬೆಳಸಿದರು. ಇಂತಹ ಕೀರ್ತಿಯನ್ನು ಪಡೆದ ಮಠವು ಈ ಗ್ರಾಮದ ಧಾರ್ಮಿಕ ಕೇಂದ್ರಬಿಂದುವಾಗಿ ಬೆಳೆದಿದೆ.

ಮಠದ ಪರಂಪರೆ: ಮಠದ ಸ್ಥಾಪಕರ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಮಠದ ಆವರಣದಲ್ಲಿ ಶ್ರೀ ರುದ್ರ ಸ್ವಾಮಿಗಳ ಗದ್ದುಗೆ, ಶ್ರೀ ಗುರುಪಾದ ಸ್ವಾಮಿಗಳ ಗದ್ದುಗೆ, ಶ್ರೀ ಶಿವಸಂಗಯ್ಯ ಸ್ವಾಮಿಗಳ ಗದ್ದುಗೆ ಹಾಗೂ ಶ್ರೀ ಕೈಲಾಸಲಿಂಗನಾಥ ಶಿವಾಚಾರ್ಯ ಸ್ವಾಮಿಗಳ ಗದ್ದುಗೆ - ಹೀಗೆ ನಾಲ್ಕು ಗದ್ದುಗೆಗಳು ಸ್ಥಾಪನೆಯಾಗಿವೆ. ಶ್ರೀ ಕೈಲಾಸ ಲಿಂಗನಾಥ ಶಿವಾಚಾರ್ಯ ಸ್ವಾಮಿಗಳ ನಂತರ ಮಠವು ಅನೇಕ ವರ್ಷಗಳ ಕಾಲ ಮಠಾಧೀಶರಿಲ್ಲದೆ ಖಾಲಿ ಉಳಿದಿತ್ತು. ನಂತರ ಶ್ರೀ ಗುರುಪಾದ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಲಾಗಿತ್ತು. ಇವರು ಪಟ್ಟಾಧಿಕಾರಕ್ಕೆ ಬರುವ ಮೊದಲೇ ಅನಿವಾರ್ಯ ಕಾರಣದಿಂದ ಗೃಹಸ್ಥಾಶ್ರಮ ಸ್ವೀಕರಿಸಿದ ಹಿನ್ನೆಲೆಯಲ್ಲಿ ಮಠವು ಪುನಃ ಉತ್ತರಾಧಿಕಾರಿಗಳಿಲ್ಲದೆ ಖಾಲಿ ಉಳಿಯಿತು. ಈಗ ಶ್ರೀ ಮೃತ್ಯುಂಜಯಸ್ವಾಮಿ ಮತ್ತು ಶ್ರೀಮತಿ ಲಲಿತಮ್ಮ ಇವರ ಪುತ್ರರಾಗಿ ಜನಿಸಿದ ಶ್ರೀ ಸಿದ್ಧಲಿಂಗ ದೇವರನ್ನು ಉತ್ತರಾಧಿ ಕಾರಿಗಳನ್ನಾಗಿ ನೇಮಿಸಲಾಗಿದೆ. ಉತ್ತರಾಧಿಕಾರಿಗಳು ರಂಭಾಪುರಿ ಪೀಠದಲ್ಲಿ ವೇದ ಹಾಗೂ ಸಂಸ್ಕೃತವನ್ನು ಕಲಿತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಪುರಾತನ ಕಾಲದ ಸೋಮೇಶ್ವರ ದೇವಸ್ಥಾನ, ಕಾಶಿಲಿಂಗವನ್ನು ಪ್ರತಿಷ್ಠಾಪಿಸಿರುವ ದೇವಸ್ಥಾನ ಹಾಗೂ ಪರಂಪರೆಯ ಗುರುಗಳ ಗದ್ದುಗೆಗಳು ಪೂಜನೀಯ ಸ್ಥಳಗಳಾಗಿದ್ದು, ನಿತ್ಯ ಪೂಜೆ ನಡೆಯುತ್ತದೆ. ವೈಶಾಖ ಬಹುಳ ಅಷ್ಟಮಿಯಲ್ಲಿ ಐದು ದಿನಗಳ ಕಾಲ ಶ್ರೀ ಕೈಲಾಸಲಿಂಗನಾಥ ಸ್ವಾಮಿಗಳ ಸ್ಮರಣಾರ್ಥ ಪುರಾಣ ಪ್ರವಚನ ಹಾಗೂ ಪುಣ್ಯಾರಾಧನೆ ಕಾರ್ಯಕ್ರಮವು ನಡೆಯುವುದಲ್ಲದೆ, ಸೋಮೇಶ್ವರಜಾತ್ರೆಯು ವರ್ಷಕ್ಕೊಮ್ಮೆ ಅದ್ದೂರಿಯಾಗಿ ನಡೆಯುತ್ತದೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧಲಿಂಗ ಸ್ವಾಮಿಗಳು, ಶ್ರೀ ಪುರಗಿರಿಮಠ, ಪುರ್ತಗೇರಿ, ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ.

ಮುದೇನೂರು

ಕುಷ್ಟಗಿ ತಾಲ್ಲೂಕಿನ ಮುದೇನೂರು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಇಪ್ಪತ್ತೆರಡು ಕಿ.ಮೀ ದೂರದಲ್ಲಿದೆ. ಅಭಿವೃದ್ಧಿಯನ್ನು ಕಾಣಬೇಕಾಗಿರುವ ಈ ಗ್ರಾಮವು ಶ್ರೀ ಚಂದ್ರಶೇಖರಸ್ವಾಮಿ ಮಠದ ಸ್ಥಾಪನೆಯಿಂದಾಗಿ ಧಾರ್ಮಿಕ ಸಂಸ್ಕಾರವನ್ನು ಪಡೆದು ಮುನ್ನಡೆಯುತ್ತಿದೆ.

ಚಂದ್ರಶೇಖರಸ್ವಾಮಿಮಠ: ಮುದೇನೂರು ಗ್ರಾಮದಲ್ಲಿ ಶ್ರೀ ರಂಭಾಪುರಿ ಪೀಠದ ಶಾಖಾಮಠವಾದ ಶ್ರೀ ಚಂದ್ರಶೇಖರಸ್ವಾಮಿ ಮಠವು ಸ್ಥಾಪನೆಯಾಗಿದೆ.

ಮಠ ಸ್ಥಾಪನೆ: ಮುದೇನೂರು ಗ್ರಾಮದ ಉತ್ತರ ಭಾಗದಲ್ಲಿ ಸುಮಾರು ೧೯೩೫ ರಲ್ಲಿ ಡಾ. ಶ್ರೀ ಚಂದ್ರಶೇಖರ

ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿದ್ದಾರೆ. ಶ್ರೀ ಚಂದ್ರಶೇಖರ ಸ್ವಾಮಿಗಳು ಅಮರಾವತಿಯಲ್ಲಿ ವೈದ್ಯವೃತ್ತಿಯನ್ನು ನಡೆಸುತ್ತಿದ್ದವರು ಜೀವನದಲ್ಲಿ ವೈರಾಗ್ಯ ತಾಳಿ ಆಧ್ಯಾತ್ಮ ಚಿಂತನೆಯಿಂದ ಲೋಕಸಂಚಾರಕ್ಕೆ ಹೊರಟು ಈ ಗ್ರಾಮಕ್ಕೆ ಬಂದು ನೆಲೆಸುತ್ತಾರೆ. ಶ್ರೀ ಚಂದ್ರಶೇಖರ ಸ್ವಾಮಿಗಳು ಇಲ್ಲಿನ ದೇವಸ್ಥಾನದಲ್ಲಿ ನೆಲೆನಿಂತು,ವೀರಶೈವ ಸಿದ್ಧಾಂತದ ಪ್ರಚಾರ ಕಾರ್ಯ ಕೈಗೊಂಡು ೧೯೬೨ರಲ್ಲಿ ಲಿಂಗೈಕ್ಯರಾದರು. ಇವರ ತರುವಾಯ ಶಿರೋಳ ಗ್ರಾಮದ ಶ್ರೀ ವೀರಬಸಯ್ಯ ಮತ್ತು ಶ್ರೀಮತಿ ಪ್ರಭಾಮಣಿದೇವಿಯವರ ಪುತ್ರರಾಗಿ ಜನಿಸಿದ ಶ್ರೀ ಶಶಿಧರ ಸ್ವಾಮಿಗಳು, ೧೯೬೨ ರಲ್ಲಿ ನೇಮಕಗೊಂಡು ಮಠವನ್ನು ಮುನ್ನಡೆಸಿದ್ದಾರೆ. ಇವರು ಎಂ.ಎಸ್ಸಿ. ಪದವಿಯನ್ನು ಪಡೆದು ಪ್ರಾಧ್ಯಾಪಕರಾಗಿದ್ದು ಜೀವನದಲ್ಲಿ ಆಧ್ಯಾತ್ಮದ ಒಲವನ್ನು ಬೆಳೆಸಿ ಕೊಂಡು, ಅಧ್ಯಾಪಕ ವೃತ್ತಿಯನ್ನು ತೊರೆದು ಡಾ.ಶ್ರೀ ಚಂದ್ರಶೇಖರ ಸ್ವಾಮಿಗಳು ನಡೆಸಿದ ಧಾರ್ಮಿಕ ಕಾರ್ಯಗಳನ್ನು ಮುಂದುವರೆಸತೊಡಗಿದ್ದಾರೆ.

ಧಾರ್ಮಿಕ ಮತ್ತು ಸಾಹಿತ್ಯ ಸೇವೆ: ಶ್ರೀ ಚಂದ್ರಶೇಖರ ಸ್ವಾಮಿಗಳ ಗದ್ದುಗೆಗೆ ನಿತ್ಯ ಪೂಜೆ, ಶಿವರಾತ್ರಿಯಲ್ಲಿ ಶ್ರೀ ಉಮಾಚಂದ್ರಮೌಳೇಶ್ವರ ಜಾತ್ರೆ, ಶ್ರಾವಣಮಾಸದಲ್ಲಿ ನಿತ್ಯ ಪುರಾಣ ಪ್ರವಚನಗಳನ್ನೂ ಜಾತ್ರೆಯ ಸಂದರ್ಭದಲ್ಲಿ ದೀಕ್ಷಾ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳಲಾಗುತ್ತಿದೆ. ಗುರುಗಳು ಮಂಗಲ ಕುಸುಮಾಂಜಲಿ, ಹೃದಯದ ಹಂಬಲ, ನಿಮ್ಮ ನಾನೆಂತು ನೆನೆಯಲಿ, ವೀರಶೈವ ತತ್ತ್ವಾದರ್ಶನ ಮುಂತಾದ ಹದಿನೆಂಟು ಕೃತಿಗಳನ್ನು ಬರೆದು ಪ್ರಕಟಿಸಿದ್ದಾರೆ. ಗುರುಗಳು ಧಾರ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯಿಕ ವಿಚಾರಗಳಲ್ಲಿ ಆಸಕ್ತಿಯನ್ನು ಹೊಂದಿದ್ದಾರೆ. ಶ್ರೀ ಶಶಿಧರ ಸ್ವಾಮಿಗಳು ಪ್ರಗತಿಪರ ಚಿಂತಕರಾಗಿ ಧರ್ಮವನ್ನು ವೈಚಾರಿಕ ನೆಲೆಗಟ್ಟಿನಲ್ಲಿ ಬೆಳೆಸತೊಡಗಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶಶಿಧರ ಸ್ವಾಮಿಗಳು, ಶ್ರೀ ಚಂದ್ರಶೇಖರಸ್ವಾಮಿ ಮಠ, ಮುದೇನೂರು, ಕುಷ್ಟಗಿ ತಾ, ಕೊಪ್ಪಳ ಜಿಲ್ಲೆ.

❑

ಕೊಪ್ಪಳ ತಾಲ್ಲೂಕು

ಕೊಪ್ಪಳ ಜಿಲ್ಲೆಯ ಒಂದು ತಾಲ್ಲೂಕಾದ ಕೊಪ್ಪಳವು ಆರ್ಥಿಕವಾಗಿ ಸುಧಾರಣೆಯನ್ನು ಕಾಣತೊಡಗಿದೆ. ತುಂಗ ಭದ್ರಾನದಿಯ ನೀರಿನಿಂದ ಈ ತಾಲ್ಲೂಕಿನ ಕೆಲವು ಭಾಗ ಹಸಿರನ್ನು ಕಂಡಿದ್ದು ಬದುಕಿನ ಸುಧಾರಣೆಗೆ ಸಹಾಯಕವಾಗಿವೆ. ಇಂತಹ ತಾಲ್ಲೂಕಿನಲ್ಲಿ ನಾಲ್ಕು ವೀರಶೈವ ಮಠಗಳು ಅಸ್ತಿತ್ವದಲ್ಲಿದ್ದು, ಧಾರ್ಮಿಕ ಕೇಂದ್ರಗಳಾಗಿ ಬೆಳೆದಿವೆ.

ಅಳವಂಡಿ

ಕೊಪ್ಪಳ ತಾಲ್ಲೂಕಿನ ಅಳವಂಡಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಮೂವತ್ತು ಕಿ.ಮೀ ದೂರ ದಲ್ಲಿದೆ. ಈ ಗ್ರಾಮದಲ್ಲಿ ವೀರಶೈವ ಧರ್ಮ ಬೆಳೆದು ಪ್ರಸಿದ್ಧಿ ಪಡೆದಿದೆ. ಇದಕ್ಕೆ ಕಾರಣ ಎಂಬಂತೆ ಈ ಗ್ರಾಮದಲ್ಲಿ ಪುರಾತನ ಕಾಲದಲ್ಲಿ ಒಟ್ಟು ಐದು ಮಠಗಳು ಸ್ಥಾಪನೆಗೊಂಡಿವೆ. ಇವುಗಳೆಂದರೆ ಶ್ರೀ ಸಿದ್ಧೇಶ್ವರಮಠ, ಶ್ರೀ ಡಂಗುರಮಠ, ಶ್ರೀ ತುಪ್ಪದಮಠ, ಶ್ರೀ ಅರಳೆಲೆಮಠ ಮತ್ತು ಶ್ರೀ ಗವಿಮಠ. ಶ್ರೀ ಸಿದ್ಧೇಶ್ವರ ಮಠವನ್ನು ಹೊರತುಪಡಿಸಿ ಉಳಿದ ನಾಲ್ಕು ಮಠಗಳಲ್ಲಿ ಮಠಾಧೀಶರಿಲ್ಲದೆ ಕೇವಲ ಗದ್ದುಗೆ ಪೂಜೆಗಷ್ಟೇ ಸೀಮಿತಗೊಂಡಿವೆ.

ಸಿದ್ಧೇಶ್ವರ ಮಠ: ಅಳವಂಡಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಸಿದ್ಧೇಶ್ವರ ಮಠವು, ಉಜ್ಜಯಿನಿ ಪೀಠದ ಶಾಖಾ ಮಠವಾಗಿ ಬೆಳೆದಿದೆ. ಪುತ್ರವರ್ಗದ ಸಂಪ್ರದಾಯವನ್ನು ಹೊಂದಿರುವ ಈ ಮಠವು ಪ್ರಾಚೀನ ಕಾಲ ದಿಂದಲೂ ಅಸ್ತಿತ್ವದಲ್ಲಿದ್ದು ಹೆಚ್ಚು ಹೆಸರು ಮಾಡಿದೆ. ಈ ಮಠಕ್ಕೆ ಕಟ್ಟಿಮನಿ ಹಿರೇಮಠ ಎಂದು ಸಹ ಕರೆಯ ಲಾಗುತ್ತಿದೆ. ಈ ಮಠದ ಕರ್ತೃಗುರುಗಳಾಗಿ ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳ ಹೆಸರು ಕೇಳಿಬರುತ್ತಿದೆ. ಇವರು ಸಿದ್ಧಾಂತಶಿಖಾಮಣಿ, ಷಟ್‌ಸ್ಥಲ, ಅಷ್ಟಾವರಣ ಮತ್ತು ಪಂಚಾಚಾರಗಳ ಬಗ್ಗೆ ಉಪದೇಶವನ್ನು ನೀಡಿ ವೀರಶೈವಧರ್ಮ ವಿಧಿವತ್ತಾಗಿ ಬೆಳೆಯಲು ನೆರವು ನೀಡಿದರು. ಇವರ ಪ್ರಭಾವಕ್ಕೆ ಮಣಿದ ಶಿಷ್ಯವರ್ಗವು ಮಠವು ಆರ್ಥಿಕವಾಗಿ ಸದೃಢ ಗೊಳ್ಳುವಂತೆ ಮಾಡಿದರು. ಹೈದರಾಬಾದ್ ನಿಜಾಮನು ಜಮೀನನ್ನು ದಾನವಾಗಿ ನೀಡಿ ಮಠ ಬೆಳೆಯಲು ನೆರವಾಗಿದ್ದಾನೆ.

ಕರ್ತೃಗುರುಗಳ ನಂತರ ಅನೇಕ ಮಠಾಧೀಶರು ಅಧಿಕಾರ ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದರಾದರೂ ಇವರು ಗಳ ಬಗ್ಗೆ ಮಾಹಿತಿ ದೊರೆಯದಾಗಿದೆ. ಶ್ರೀ ಸಿದ್ಧೇಶ್ವರ ಸ್ವಾಮಿಗಳ ನಂತರ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಮಠದ ಆಡಳಿತವನ್ನು ವಹಿಸಿಕೊಂಡರು. ಸೋಲಾಪುರ ಹಾಗೂ ಕಾಶಿಯಲ್ಲಿ ಸಂಸ್ಕೃತ ವಿದ್ಯಾಭ್ಯಾಸವನ್ನು ಮಾಡಿಕೊಂಡು ಬಂದು ಮಠವನ್ನು ಮುನ್ನಡೆಸಿದರು. ಶ್ರೀ ಸಿದ್ಧೇಶ್ವರಸ್ವಾಮಿ ರಥೋತ್ಸವವು ಮಾಘಶುದ್ಧದಂದು ನಡೆಯಲು ವ್ಯವಸ್ಥೆ ಗೊಳಿಸಿದರು. ಮಠದ ಆಸ್ತಿಯನ್ನು ಅಭಿವೃದ್ಧಿಗೊಳಿಸಿ ಹೆಚ್ಚು ಆದಾಯ ಬರುವಂತೆ ಮಾಡಿ, ದಾಸೋಹ ಮತ್ತು ಧಾರ್ಮಿಕ ಆಚರಣೆಗಳಿಗೆ ವಿನಿಯೋಗಿಸುತ್ತಿದ್ದರು. ಇಂದು ಗುರುಗಳಿಲ್ಲದೆ ಮಠ ಖಾಲಿ ಉಳಿದಿದೆ.

ಧಾರ್ಮಿಕ ಕಾರ್ಯಗಳು: ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಉತ್ತರಾಧಿಕಾರಿಗಳು ನೇಮಕಗೊಳ್ಳದಿದ್ದರೂ, ಮಠದ ಧಾರ್ಮಿಕ ಕಾರ್ಯಗಳು ಸ್ಥಗಿತಗೊಳ್ಳದೆ ನಡೆಯುತ್ತಿವೆ. ಮಠದಲ್ಲಿ ಎರಡು ಗದ್ದುಗೆ ಗಳಿವೆ. ಶ್ರೀ ಸಿದ್ಧೇಶ್ವರ, ಗೋಣಿಬಸವೇಶ್ವರ ಮತ್ತು ಶ್ರೀ ವೀರಭದ್ರೇಶ್ವರ ದೇವಸ್ಥಾನಗಳು ಸ್ಥಾಪನೆಯಾಗಿವೆ. ಇವು ಗಳಿಗೆ ನಿತ್ಯಪೂಜೆ ನಡೆಯುತ್ತಿದೆ. ಶ್ರೀ ಸಿದ್ಧೇಶ್ವರ ಜಾತ್ರೆಯು ವರ್ಷಕ್ಕೊಮ್ಮೆ ನಡೆಯುವ ವಾರ್ಷಿಕ ಆಚರಣೆಯಾಗಿದೆ.

ವಿಳಾಸ: ಆಡಳಿತಾಧಿಕಾರಿಗಳು, ಶ್ರೀ ಸಿದ್ಧೇಶ್ವರಮಠ, ಅಳವಂಡಿ, ಕೊಪ್ಪಳ ತಾಲ್ಲೂಕು.

ಎತ್ತಿನಹಟ್ಟಿ

ಕೊಪ್ಪಳ ತಾಲ್ಲೂಕಿನ ಎತ್ತಿನಹಟ್ಟಿಯು ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಮೂರು ಕಿ.ಮೀ ದೂರದಲ್ಲಿದೆ. ಇಲ್ಲಿ ಪುರಾತನ ಕಾಲದಿಂದಲೂ ಧಾರ್ಮಿಕ ಚಟುವಟಿಕೆಗಳು ಕ್ರಮಬದ್ಧವಾಗಿ ನಡೆದುಕೊಂಡು ಬಂದಿದೆ. ಈಗಲೂ ಶ್ರೀ ಬಸವರಾಜೇಂದ್ರಸ್ವಾಮಿ ಮಠವು ಸ್ಥಾಪನೆಯಾಗಿ ಧಾರ್ಮಿಕ ಕಾರ್ಯಗಳು ಚುರುಕುಗೊಂಡಿವೆ.

ಬಸವರಾಜೇಂದ್ರಸ್ವಾಮಿ ಮಠ: ಎತ್ತಿನಹಟ್ಟಿ ಗ್ರಾಮದ ಮಧ್ಯಭಾಗದಲ್ಲಿ ವಿರಕ್ತ ಸಂಪ್ರದಾಯದ ಶ್ರೀ ಬಸವರಾಜೇಂದ್ರ ಸ್ವಾಮಿ ಮಠವು, ಕಳೆದ ಶತಮಾನದಲ್ಲಿ ಶ್ರೀ ಬಸವರಾಜೇಂದ್ರ ಸ್ವಾಮಿಗಳಿಂದ ಸ್ಥಾಪನೆಗೊಂಡಿರುವುದರಿಂದ 'ಶ್ರೀ ಬಸವರಾಜೇಂದ್ರಸ್ವಾಮಿ ಮಠ'ಎಂಬ ಹೆಸರು ಬಂದಿದೆ.

ಮಠ ಸ್ಥಾಪನೆ: ಶ್ರೀ ಬಸವರಾಜೇಂದ್ರ ಸ್ವಾಮಿಗಳು ಲೋಕೋದ್ಧಾರದ ಉದ್ದೇಶದಿಂದ ಶರಣಾದಿ ಪ್ರಮಥರ ತತ್ವಗಳನ್ನು ನಾಡಿಗೆ ಪ್ರಚಾರಗೊಳಿಸಲು ವಿರಕ್ತ ಸಂಪ್ರದಾಯದ ಶರಣಸ್ಥಲದ ಮಠವನ್ನು ಪ್ರಾರಂಭಿಸಿದರು. ಇಲ್ಲಿ ಮಠವು ಸ್ಥಾಪನೆಗೊಂಡ ಮೇಲೆ ನಿತ್ಯ ಧರ್ಮೋಪದೇಶ ಕಾರ್ಯಕ್ರಮಗಳು ನಡೆಯತೊಡಗಿದವು. ನಿಧಾನವಾಗಿ ಪ್ರಾರಂಭ ಗೊಂಡ ಚಟುವಟಿಕೆಗಳು ದಿನಕಳೆದಂತೆ ಪ್ರಚಾರ ಪಡೆಯಿತು. ಸುತ್ತಲಿನ ಭಕ್ತರು ಇಲ್ಲಿ ನಡೆಯುವ ಧರ್ಮೋಪದೇಶ ಕಾರ್ಯಕ್ರಮದಲ್ಲಿ ಪಾಲ್ಗೊಂಡು ನೈತಿಕ ಬದುಕನ್ನು ರೂಢಿಸಿಕೊಂಡರು. ವೀರಶೈವ ಧರ್ಮದ ಪ್ರಚಾರದ ಉದ್ದೇಶ ವನ್ನಿಟ್ಟುಕೊಂಡು ಮಠವು ಸ್ಥಾಪನೆಯಾಯಿತು.

ಪರಂಪರೆ:
೧. ಶ್ರೀ ಮ.ನಿ.ಪ್ರ. ಬಸವರಾಜೇಂದ್ರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಮಲ್ಲಿಕಾರ್ಜುನಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಗಂಗಾಧರಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳು ೧೯೫೪ ರಲ್ಲಿ ಲಿಂಗೈಕ್ಯರಾದರು. ಇವರ ನಂತರ ಶ್ರೀ ತಿಮ್ಮಯ್ಯ ಮತ್ತು ಶ್ರೀಮತಿ ಬಸಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳಿಗೆ ಪಟ್ಟಾಧಿಕಾರ ಮಾಡಲಾಯಿತು. ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಹಿರಿಯ ಗುರುಗಳು ತೋರಿಸಿದ ಮಾರ್ಗದರ್ಶನದಲ್ಲಿ ಮಠವನ್ನು ಮುನ್ನಡೆಸಿ ೧೯೭೬ ರಲ್ಲಿ ಲಿಂಗೈಕ್ಯರಾದರು.

ಇವರ ತರುವಾಯ ಸೂಡಿಸಮೀಪದ ಗುಳುಗುಳಿ ಗ್ರಾಮದ ಶ್ರೀ ಗಂಗಾಧರ ಸ್ವಾಮಿಗಳು ಮೂರನೆಯ ಗುರುಗಳಾಗಿ ೧೯೮೩ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಗುರುಗಳು ಈ ಮಠದ ಧಾರ್ಮಿಕ ಆಚರಣೆಗಳನ್ನು ನಡೆಸುತ್ತಾ, ಅಭಿವೃದ್ಧಿ ಕಾರ್ಯಗಳ ಕಡೆಗೂ ಹೆಚ್ಚು ಗಮನಕೊಟ್ಟಿದ್ದಾರೆ. ಎತ್ತಿನಹಟ್ಟಿಯಲ್ಲಿರುವ ಅರವತ್ತೇಳು ಎಕರೆ ಜಮೀನಿನಲ್ಲಿ ಹನ್ನೆರಡು ಎಕರೆ ಭೂಮಿಯನ್ನು ಆಧುನಿಕ ಬೇಸಾಯಕ್ಕೆ ಅಣಿಗೊಳಿಸಿ ಉತ್ಪಾದನೆ ತೆಗೆಯುತ್ತಿದ್ದಾರೆ. ಮಠದ ಆಸ್ತಿಯಾಗಿ ಕೆರೆಹಳ್ಳಿಯಲ್ಲಿ ಎಂಟುಎಕರೆ ಜಮೀನಿದೆ. ಶ್ರೀ ಗಂಗಾಧರ ಸ್ವಾಮಿಗಳು ಬೆಳಗಾವಿ ಜಿಲ್ಲೆಯ ಹೊಸೂರು ಗ್ರಾಮದ ಮಡಿವಾಳ ಮಠದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದು, ಈ ಮಠದಲ್ಲಿ ಒಂದುಎಕರೆ ಪ್ರದೇಶದಲ್ಲಿ ತೇಗದ ಮರಗಳನ್ನು ಬೆಳೆಸಿದ್ದಾರೆ. ಬಯಲಿನ ಬರಡು ಭೂಮಿಯಾಗಿರುವ ಈ ಪ್ರದೇಶದಲ್ಲಿ ಹಸಿರು ಕ್ರಾಂತಿ ಮಾಡಲು ಹೊರಟಿದ್ದಾರೆ.

ಧಾರ್ಮಿಕ ಕಾರ್ಯಗಳು: ಶ್ರೀ ಬಸವರಾಜೇಂದ್ರಸ್ವಾಮಿ ಮಠದಲ್ಲಿ ಕರ್ತೃ ಗುರುಗಳ ಗದ್ದುಗೆಯನ್ನು ಮಠದ ಒಳಭಾಗ ದಲ್ಲಿ ಸ್ಥಾಪನೆ ಮಾಡಲಾಗಿದೆ. ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳ ಗದ್ದುಗೆಯನ್ನು ಸಹ ಕರ್ತೃ ಗುರುಗಳ ಗದ್ದುಗೆಯ ಪಕ್ಕ ನಿರ್ಮಿಸಲಾಗಿದೆ. ಈ ಗದ್ದುಗೆಗಳಿಗೆ ನಿತ್ಯ ಎರಡು ವೇಳೆ ಪೂಜೆ, ಅಮಾವಾಸ್ಯೆ ಮತ್ತು ಹುಣ್ಣಿಮೆಯಲ್ಲಿ ನಡೆಯುವ ವಿಶೇಷ ಪೂಜೆಯ ಸಂದರ್ಭದಲ್ಲಿ ಮಠಕ್ಕೆ ಬರುವ ಭಕ್ತರಿಗೆ ಪ್ರಸಾದದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಈ ದಾಸೋಹದಲ್ಲಿ ಜೋಳದ ಗಂಜಿಯನ್ನು ಕೊಡಲಾಗುತ್ತಿದೆ. ಶ್ರೀ ಗಂಗಾಧರ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠದ ಕಟ್ಟಡವನ್ನು ನವೀಕರಣಗೊಳಿಸಿ, ದಾಸೋಹ ಮಂದಿರ ಮತ್ತು ಕಲ್ಯಾಣ ಮಂಟಪವನ್ನು ನಿರ್ಮಿಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಗಂಗಾಧರ ಸ್ವಾಮಿಗಳು, ಶ್ರೀ ಬಸವರಾಜೇಂದ್ರಸ್ವಾಮಿಮಠ,ಎತ್ತಿನಹಟ್ಟಿ, ಓಜನಹಳ್ಳಿಅಂಚೆ,ಕೊಪ್ಪಳ ತಾ.

ಕೊಪ್ಪಳ

೧೯೯೭ರಲ್ಲಿ ಜಿಲ್ಲೆಯ ವಿಂಗಡಣೆಯಾದ ಸಂದರ್ಭದಲ್ಲಿ ಕೊಪ್ಪಳನಗರವು ಜಿಲ್ಲಾಕೇಂದ್ರವಾಗಿ ರೂಪುಗೊಂಡಿತು.

ಅಂತೆಯೇ ವೀರಶೈವಧರ್ಮದ ಪರಂಪರೆಯ ಪ್ರಾಚೀನತೆಯಿಂದ ವೀರಶೈವ ಧರ್ಮದ ಕೇಂದ್ರಬಿಂದುವಾಗಿ ಬೆಳೆದಿದೆ.

ಗವಿಸಿದ್ಧೇಶ್ವರಮಠ: ಕೊಪ್ಪಳ ನಗರದ ಹೊರಭಾಗದ ಕಲ್ಲಿನ ಬೆಟ್ಟದಲ್ಲಿ ಸ್ಥಾಪನೆಯಾಗಿರುವ ವಿರಕ್ತ ಸಂಪ್ರದಾಯದ ಚೀಲಾಳ ಸಮಯದ ಶ್ರೀ ಗವಿಸಿದ್ಧೇಶ್ವರ ಮಠವು ಹೆಚ್ಚು ಪ್ರಸಿದ್ಧಿ ಪಡೆದಿದೆ. ಈ ಮಠದ ಸ್ಥಾಪನೆಯಿಂದಾಗಿ ಕೊಪ್ಪಳವು ಹೆಚ್ಚು ಪ್ರಸಿದ್ಧಿಗೆ ಬಂದಿದೆ.

ಮಠ ಸ್ಥಾಪನೆ: ಸಾವಿರ ವರ್ಷಗಳ ಹಿಂದೆ ಶ್ರೀ ರುದ್ರಮುನಿ ಶಿವಯೋಗಿಗಳು ಲೋಕಸಂಚಾರ ಕೈಗೊಂಡು ಕಾಶಿ ಯಾತ್ರೆಯನ್ನು ಮುಗಿಸಿ, ಕಾಶಿ ವಿಶ್ವನಾಥನ ಸ್ವರೂಪದಂತೆ ಮೈದಾಳಿ ಬಂದು,ಈ ಗ್ರಾಮದ ಕಲ್ಲುಬೆಟ್ಟದ ಮೇಲೆ ಸೃಷ್ಟಿಯಾಗಿದ್ದ ಗವಿಯಲ್ಲಿ ಅನುಷ್ಠಾನಗೊಂಡರು. ಮಹಾತಪಸ್ವಿಗಳೂ, ಶಿವಯೋಗಿಗಳೂ ಆದ ಶ್ರೀ ಕಾಶಿ ಚರವರ್ಯ ರುದ್ರಮುನೀಶ್ವರ ಶಿವಾಚಾರ್ಯ ಸ್ವಾಮಿಗಳು ಇಲ್ಲಿ ನೆಲೆಗೊಂಡ ಮೇಲೆ ಈ ಕ್ಷೇತ್ರ ಪಾವನಗೊಂಡಿತು. ಗುರುಗಳು ಭಕ್ತರನ್ನು ಸನ್ಮಾರ್ಗಕ್ಕೆ ತರಲು ನಿತ್ಯ ಶಿವಾನುಭವಗೋಷ್ಠಿ ನಡೆಸಿ, ಧರ್ಮೋಪದೇಶವನ್ನು ನೀಡಿ, ಅವರ ಕಷ್ಟ ಕಾರ್ಪಣ್ಯಗಳನ್ನು ನಿವಾರಿಸಿ ಮಹಾ ಮಹಿಮರೆನ್ನಿಸಿದರು. ಭಕ್ತರು ಈ ಪವಾಡ ಪುರುಷರ ಮಾರ್ಗದರ್ಶನ ಹಾಗೂ ಕೃಪಾಕಟಾಕ್ಷದಲ್ಲಿ ನೆಮ್ಮದಿಯ ಬದುಕನ್ನು ಕಾಣತೊಡಗಿದರು. ಗುರುಗಳು ನೆಲೆಗೊಂಡ ಮೇಲೆ ಈ ಪ್ರಾಂತ್ಯದಲ್ಲಿ ಅಂತಃಕಲಹಗಳಿಲ್ಲದೆ ಶಾಂತಿ ಸೌಹಾರ್ದತೆಯ ವಾತಾವರಣ ಮೂಡಿ ಸುಭಿಕ್ಷಗೊಂಡಿತು. ಶ್ರೀ ರುದ್ರಮುನೀಶ್ವರ ಶಿವಾಚಾರ್ಯ ಸ್ವಾಮಿಗಳು ಕೊಪ್ಪಳದ ಸಮೀಪದ ಮಂಗಳಾ ಪುರದ ಬೃಹನ್ಮಠದ ಗುರುಗಳ ಆಹ್ವಾನದ ಮೇರೆಗೆ ಮಂಗಳಾಪುರಕ್ಕೆ ಹೋಗಿ, ಅಲ್ಲಿನ ಬೆಟ್ಟದ ಮಳಲ ಮಲ್ಲೇಶ್ವರನ ಸನ್ನಿಧಿಯಲ್ಲಿ ಕೆಲವು ದಿನ ಪೂಜಾನುಷ್ಠಾನ ಕೈಗೊಂಡು ಕೊಪ್ಪಳದ ಗವಿಮಠಕ್ಕೆ ಹಿಂದಿರುಗುತ್ತಾರೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಕಾಶೀ ಚರವರ್ಯ ರುದ್ರಮುನೀಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಗವಿಸಿದ್ಧೇಶ್ವರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಹಿರಿ ಶಾಂತವೀರಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಮರಿ ಶಾಂತೇಶ್ವರಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಶಿವಶಾಂತವೀರಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಶಿವಶಾಂತವೀರ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದ್ದು, ಪರಂಪರೆಯಲ್ಲಿ ಒಟ್ಟು ಹತ್ತೊಂಬತ್ತು ಜನ ಗುರುಗಳು ಪಟ್ಟಾಧಿಕಾರ ಪಡೆದು ಧಾರ್ಮಿಕ ಆಚರಣೆಗಳಿಂದ ಮಠವನ್ನು ಬೆಳೆಸಿದ್ದಾರೆಂದು ಹೇಳಲಾಗುತ್ತಿದೆ. ಪ್ರಸ್ತುತ ಪುರಾತನ ಗವಿಮಠದಲ್ಲಿ ಒಟ್ಟು ಏಳು ಗದ್ದುಗೆಗಳು ನೋಡಸಿಗುತ್ತಿವೆ. ಉಳಿದ ಒಂಬತ್ತು ಗದ್ದುಗೆಗಳು, ಗುರುಗಳು ಲೋಕೋದ್ಧಾರಕ್ಕೆಂದು ದೇಶಸಂಚಾರಕ್ಕೆ ಹೋದ ಸಂದರ್ಭದಲ್ಲಿ ಅನುಷ್ಠಾನಗೊಂಡ ಕಡೆಯೇ ಲಿಂಗೈಕ್ಯರಾದ ಕಾರಣ ಅವರುಗಳ ಗದ್ದುಗೆಗಳು ನಾಡಿನ ನಾನಾಭಾಗಗಳಲ್ಲಿ ನಿರ್ಮಾಣಗೊಂಡಿವೆ. ಆ ಗದ್ದುಗೆಗಳು ಜಾಗೃತ ಸ್ಥಳಗಳಾಗಿ ಗವಿಸಿದ್ಧೇಶ್ವರ ಮಠದ ಶಾಖಾಮಠಗಳಾಗಿ ಬೆಳೆದಿವೆ.

ಕೊಪ್ಪಳದ ಗವಿಮಠವು, ಕರ್ತೃಗುರುಗಳ ನಂತರ ಬಂದ ಶ್ರೀ ಸಿದ್ಧೇಶ್ವರ ಸ್ವಾಮಿಗಳ ಪ್ರಭಾವದಿಂದ ಹೆಚ್ಚು ಪ್ರಚಾರಕ್ಕೆ ಬಂದಿತು. ಈ ಕಾರಣದಿಂದಲೇ ಈ ಮಠಕ್ಕೆ 'ಶ್ರೀ ಗವಿಸಿದ್ಧೇಶ್ವರಮಠ'ಎಂಬ ಹೆಸರು ಬಂದಿದೆ. ಮಂಗಳಾಪುರದ ಬೃಹನ್ಮಠದ ಶ್ರೀ ಮಹದೇವಯ್ಯ ಮತ್ತು ಶ್ರೀಮತಿ ಗುರುಲಿಂಗಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಗುಡ್ಡದಯ್ಯನವರು, ತಂದೆ ತಾಯಿಗಳಿಂದ ಹಾಗೂ ಶ್ರೀ ರುದ್ರಮುನೀಶ್ವರ ಸ್ವಾಮಿಗಳಿಂದ ಸಂಸ್ಕಾರವನ್ನು ಕಲಿತು ಶಿವಪೂಜಾ ನಿಷ್ಠೆಯನ್ನು ಚಿಕ್ಕವಯಸ್ಸಿನಲ್ಲೇ ಮೈಗೂಡಿಸಿಕೊಂಡು ಶಿವಧ್ಯಾನದಲ್ಲಿ ಸಿದ್ಧಿಯನ್ನು ಕಂಡುಕೊಳ್ಳತೊಡಗಿದರು. ಇಂತಹ ಮಹಾತಪಸ್ವಿಗಳು ಶ್ರೀ ಗವಿಸಿದ್ಧೇಶ್ವರ ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡು'**ಶ್ರೀ ಗವಿಸಿದ್ಧೇಶ್ವರ**

ಸ್ವಾಮಿ'ಗಳೆಂದು ಅಭಿಧಾನ ಪಡೆದು ಪಟ್ಟಾಧಿಕಾರವನ್ನು ವಹಿಸಿಕೊಂಡರು. ಚಿಕ್ಕವಯಸ್ಸಿನಲ್ಲೇ ಸಾಧನೆಯ ಸಿದ್ಧಿಯನ್ನು ಪಡೆದಿದ್ದ ಶ್ರೀ ಗವಿಸಿದ್ಧೇಶ್ವರ ಸ್ವಾಮಿಗಳು ಮೃತ ಗೋವುಗಳಿಗೆ ಹಾಗೂ ಶಿಶುಗಳಿಗೆ ಪ್ರಾಣದಾನ ಮಾಡಿದ್ದರಂತೆ. ಬರಡು ಹಸುಗಳಿಂದ ಹಾಲನ್ನು ಕರೆದು ಆಶ್ಚರ್ಯವುಂಟು ಮಾಡಿದ್ದರಂತೆ. ಒಮ್ಮೆ ಶ್ರೀ ಮಾಲೀಪಾಟೀಲ ಬಸವನ ಗೌಡರ ಮನೆಯಲ್ಲಿದ್ದು ಮಠಕ್ಕೆ ತೆರಳುವ ಸಂದರ್ಭದಲ್ಲಿ ಜಡೆಯನ್ನು ಕಿತ್ತು ಉಡಿಯ ತುಂಬಿ, ಪೋಲಿಸಗೌಡರಿಗೆ ತೆಂಗ ನ್ನಿತ್ತು ಫಲದಾನಗೈದರಂತೆ. ಅನೇಕ ಭಕ್ತರ ಭವರೋಗಗಳನ್ನು ನಿವಾರಿಸಿ, ಮಹಾಸರ್ಪದ ಹೆಡೆಯ ನೆರಳಿನಲ್ಲಿ ಯೋಗ ನಿದ್ರೆ ಮಾಡಿದರಂತೆ. ಅಮಾವಾಸ್ಯೆಯ ದಿನ ಚಂದ್ರದರ್ಶನ ಮಾಡಿಸಿದ್ದರಂತೆ. ಹೈದರಾಬಾದಿನ ಬಹದ್ದೂರನ ಕುಷ್ಠರೋಗ ವನ್ನು ತಮ್ಮ ಪ್ರಸಾದದ ಫಲದಿಂದ ನಿವಾರಿಸಿದ್ದರೆಂದು ಹೇಳಲಾಗುತ್ತಿದೆ. ಇದಕ್ಕೆ ಹೈದರಾಬಾದಿನ ಬಹದ್ದೂರನು ಜಹಗೀರು ನೀಡಿ ಮಠವು ಶ್ರೀಮಂತವಾಗಿ ಬೆಳೆಯಲು ಕಾರಣರಾದರಂತೆ. ಈ ರೀತಿ ಶ್ರೀ ಗವಿಸಿದ್ಧೇಶ್ವರರು ಮಾಡಿದ ಅನೇಕ ಪವಾಡಗಳನ್ನು ಇಲ್ಲಿನ ಭಕ್ತರು ಭಕ್ತಿಯಿಂದ ಹೇಳುತ್ತಾರೆ. ಇಂತಹ ಮಹಿಮಾಪುರುಷರಾದ ಶ್ರೀ ಗವಿಸಿದ್ಧೇಶ್ವರ ಸ್ವಾಮಿಗಳು ಅನೇಕ ಪವಾಡಗಳನ್ನು ಮಾಡಿ, ಲೋಕೋದ್ಧಾರವನ್ನು ಮಾಡಿ ಜೀವಂತ ಸಮಾಧಿಯಾಗಿದ್ದಾರೆ. ಇವರ ಗದ್ದುಗೆಯನ್ನು ಗವಿಯ ಮುಂಭಾಗದಲ್ಲಿ ಪಂಚಕಲಶಗಳಿಂದ ಕೂಡಿದ ಗೋಪುರದ ದೇಗುಲದಲ್ಲಿ ನಿರ್ಮಿಸಲಾಗಿದೆ.

ಶ್ರೀ ಗವಿಸಿದ್ಧೇಶ್ವರರು ತಮ್ಮ ಅನುಗ್ರಹ ಗುರುಗಳ ಸಮ್ಮುಖದಲ್ಲಿಯೇ ಅಪಾರ ಸಿದ್ಧಿಯನ್ನು ಸಾಧಿಸಿ ಗುರುಗಳಿ ಗೆಂದು ನಿರ್ಮಿಸಲ್ಪಟ್ಟಿದ್ದ ಸಮಾಧಿಯಲ್ಲಿ ತಾವೇ ಜೀವಂತ ಸಮಾಧಿಯಾಗಿದ್ದು ಒಂದು ಆಶ್ಚರ್ಯ ಘಟನೆಯಾಗಿ ಇಂದಿಗೂ ಈ ಭಾಗದಲ್ಲಿ ಉಳಿದಿದೆ. ಅನುಗ್ರಹ ಗುರುಗಳ ಆಶೀರ್ವಾದದಿಂದ ಮಹಾಮಹಿಮರಾಗಿ ಈ ಸ್ಥಳವನ್ನು ಜಾಗೃತ ಸ್ಥಳವ ನ್ನಾಗಿ ಮಾಡಿದ್ದಾರೆ. ಇವರ ನಂತರ ಲಿಂಗೈಕ್ಯರಾದ ಅನುಗ್ರಹ ಗುರುಗಳ ಗದ್ದುಗೆಯು ಶ್ರೀಗವಿಸಿದ್ಧೇಶ್ವರರ ಗದ್ದುಗೆಯ ಕೆಳಭಾಗದಲ್ಲಿ ನಿರ್ಮಾಣವಾಗಿದೆ.

ಶ್ರೀ ಗವಿಸಿದ್ಧೇಶ್ವರರು ತಮ್ಮ ಶಿಷ್ಯ ಶ್ರೀ ಹಿರಿಯ ಶಾಂತವೀರ ಸ್ವಾಮಿಗಳಿಗೆ ಅಧಿಕಾರವನ್ನಿತ್ತು, ಮಠವನ್ನು ಮುನ್ನ ಡೆಸಲು ಅನುಗ್ರಹಿಸಿದ್ದರು. ಇವರು ತಮ್ಮ ಗುರುಗಳಂತೆ ಮಹಾಮಹಿಮಾಶೀಲರಾಗಿದ್ದು, ಸಮಾಜವನ್ನು ಧಾರ್ಮಿಕ ತಳ ಹದಿಯ ಮೇಲೆ ಬೆಳೆಯುವಂತೆ ಮಾಡಿದರು. ನಂತರ ಶ್ರೀ ಮರಿಶಾಂತೇಶ್ವರ ಸ್ವಾಮಿಗಳು ಪರಂಪರಾಗತ ಮಠದ ಆಡಳಿತ ವನ್ನು ವಹಿಸಿಕೊಂಡು ಮಠದ ಅಭಿವೃದ್ಧಿಗೆ ಶ್ರಮಿಸಿದರು. ಶ್ರೀ ಮರಿಶಾಂತೇಶ್ವರ ಸ್ವಾಮಿಗಳೂ ಸಹ ಶಿವಪೂಜಾನಿಷ್ಠರಾಗಿ, ತಪೋ ಜ್ಞಾನಿಗಳಾಗಿದ್ದರು. ಇವರ ಕಾಲದಲ್ಲಿ ಮಠವು ಹೆಚ್ಚು ಹೆಸರು ಪಡೆದುಕೊಂಡಿತು. ಇವರ ತರುವಾಯ ಶ್ರೀ ಶಿವಶಾಂತವೀರ ಸ್ವಾಮಿಗಳು ಅಧಿಕಾರಕ್ಕೆ ಬಂದರು. ರೋಣ ತಾಲ್ಲೂಕಿನ ಸೂಡಿ ಗ್ರಾಮದ ಜುಕ್ತಿ ಹಿರೇಮಠದ ಪರಂಪರೆಯ ಹದಿನಾರನೆಯ ಗುರುಗಳಾಗಿ, ಎರಡನೆಯ ಶ್ರೀ ಉಮಾಪತಿ ಶಿವಾಚಾರ್ಯ ಸ್ವಾಮಿಗಳೆಂದು ಅಭಿಧಾನ ಪಡೆದು, ಜುಕ್ತಿ ಹಿರೇಮಠದ ಮಠಾಧೀಶರಾಗಿದ್ದರು. ಇವರು ಬಹಳ ಪ್ರತಿಭಾನ್ವಿತರಾಗಿ ಧಾರ್ಮಿಕ ಆಚರಣೆಗಳಲ್ಲಿ ಅಚಲ ಭಕ್ತಿಯನ್ನು ಇಟ್ಟುಕೊಂಡಂತಹ ಮಹಾತಪೋಜ್ಞಾನಿಗಳಾಗಿದ್ದರು. ಇದನ್ನು ಅರಿತ ಶ್ರೀ ಗವಿಸಿದ್ಧೇಶ್ವರ ಮಠದ ಶ್ರೀ ಮರಿಶಾಂತವೀರ ಸ್ವಾಮಿಗಳು ಇವರನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡು ಗವಿಸಿದ್ಧೇಶ್ವರ ಮಠದ ಅಧಿಕಾರವನ್ನು ಕೊಡತ್ತಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಗವಿಸಿದ್ಧೇಶ್ವರ ಗದ್ದುಗೆ ಹಾಗೂ ಕರ್ತೃಗುರುಗಳ ಗದ್ದುಗೆಗೆ ನಿತ್ಯ ರುದ್ರಾಭಿಷೇಕ ನಡೆಸಲಾಗುತ್ತಿದೆ. ನಿತ್ಯ ಸಾವಿರಾರು ಜನ ಭಕ್ತರು ಮಠಕ್ಕೆ ಆಗಮಿಸಿ ಗವಿಸಿದ್ಧೇಶ್ವರರ ಗದ್ದುಗೆ ಹಾಗೂ ಗುರುಗಳ ದರ್ಶನ ಪಡೆದು ಹೋಗುತ್ತಾರೆ. ಮಠಕ್ಕೆ ಬರುವ ಸಾವಿರಾರು ಜನರಿಗೆ ನಿತ್ಯ ಅನ್ನದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಗವಿಸಿದ್ಧೇಶ್ವರ ಮಠದ ಹಿಂಭಾಗದಲ್ಲಿ ಎರಡು ಕೊಳಗಳಿದ್ದು, ಇಲ್ಲಿನ ಪವಿತ್ರ ಸ್ಥಳಗಳಾಗಿವೆ. ಗವಿಯ ಮೇಲ್ಭಾಗದಲ್ಲಿ ಕೈಲಾಸ ಮಂದಿರವನ್ನು ನಿರ್ಮಿಸಿದ್ದು ಇಲ್ಲಿ ಶ್ರೀ ಮರಿಶಾಂತೇಶ್ವರರ ಗದ್ದುಗೆ, ಅನ್ನಪೂರ್ಣೇಶ್ವರಿ ದೇವಸ್ಥಾನವನ್ನು ಸ್ಥಾಪಿಸಲಾಗಿದೆ. ಮಠದ ಎಡಭಾಗದಲ್ಲಿ ಕೆರೆನಿರ್ಮಾಣಗೊಂಡಿದ್ದು, ಮಧ್ಯಭಾಗದಲ್ಲಿ ಮಠದ ಪರಂಪರೆಯ ಗುರುಗಳೊಬ್ಬರ ಗದ್ದುಗೆ ನಿರ್ಮಾಣಗೊಂಡಿದೆ. ವರ್ಷಕ್ಕೊಮ್ಮೆ ಗವಿಸಿದ್ಧೇಶ್ವರರ ಜಾತ್ರೆಯನ್ನು ಆಚರಿಸ

ಲಾಗುತ್ತಿದೆ. ಈ ಸಂದರ್ಭದಲ್ಲಿ ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಭಕ್ತರು ಬಂದು ಸೇರುತ್ತಾರೆ. ಆಗ ಧಾರ್ಮಿಕ ಆಚರಣೆಗಳ ಜೊತೆಗೆ ಮಹಾ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಪ್ರತಿವರ್ಷ ಶ್ರಾವಣಮಾಸದಲ್ಲಿ ಈಗಿನ ಗುರುಗಳಾದ ಶ್ರೀ ಶಿವಶಾಂತವೀರ ಸ್ವಾಮಿಗಳು ಹಿಂದಿನ ಗುರುಗಳು ತಪೋನಿಷ್ಠರಾಗಿರುತ್ತಿದ್ದ ಮೂಲಗವಿಯಲ್ಲಿ ಮೌನವ್ರತದಲ್ಲಿ ತಪೋನುಷ್ಠಾನ ಕೈಗೊಳ್ಳುತ್ತಾರೆ. ಪ್ರತಿ ಅಮಾವಾಸ್ಯೆ ಮತ್ತು ಹುಣ್ಣಿಮೆಯಲ್ಲಿ ವಿಶೇಷಪೂಜೆ ನಡೆಸಲಾಗುತ್ತಿದೆ.

ಶೈಕ್ಷಣಿಕ ಸೇವೆ: ಶ್ರೀ ಗವಿಸಿದ್ಧೇಶ್ವರ ಮಠವು ನಾಡಿನ ಪ್ರಸಿದ್ಧ ಮಠಗಳಲ್ಲಿ ಒಂದಾಗಿ ಮಾನ್ಯತೆ ಪಡೆದಿದೆ. ಧಾರ್ಮಿಕ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿಯನ್ನು ಸಾಧಿಸಿದ ಮಠವು ಶೈಕ್ಷಣಿಕವಾಗಿಯೂ ಸಾಧನೆಗೈದಿದೆ. ಸಂಸ್ಕೃತ ಪಂಡಿತರಾಗಿದ್ದ ಶ್ರೀ ಮರಿಶಾಂತವೀರ ಸ್ವಾಮಿಗಳು, ಗವಿಸಿದ್ಧೇಶ್ವರ ವಿದ್ಯಾವರ್ಧಕ ಸಮಿತಿಯನ್ನು ಸ್ಥಾಪಿಸಿದ್ದಾರೆ. ಇವರ ಕಾಲದಲ್ಲಿ ಪ್ರಾಥಮಿಕ, ಪ್ರೌಢಶಾಲೆಗಳು ಹಾಗೂ ಕಿರಿಯ ಕಾಲೇಜುಗಳು ಸ್ಥಾಪನೆಗೊಂಡವು. ಶೈಕ್ಷಣಿಕವಾಗಿ ಹಿಂದುಳಿದ ಈ ಪ್ರದೇಶ ದಲ್ಲಿ ಮಠವು ಸ್ಥಾಪಿಸಿದ ಶಿಕ್ಷಣ ಸಂಸ್ಥೆಗಳು, ಈ ಭಾಗದ ಗ್ರಾಮಾಂತರ ಮಕ್ಕಳ ಕಲಿಕೆಗೆ ನೆರವಾದವು. ನಂತರ ಶ್ರೀ ಶಿವ ಶಾಂತೇಶ್ವರ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಪದವಿ ಶಿಕ್ಷಣ, ಆಯುರ್ವೇದ ಕಾಲೇಜು ಹಾಗೂ ವೃತ್ತಿತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಿ ಗ್ರಾಮೀಣ ಮಕ್ಕಳಿಗೆ ನೆರವಾಗಿದ್ದಾರೆ. ಮಠದ ವತಿಯಿಂದ ಉಚಿತ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿ ನೂರಾರು ಬಡಮಕ್ಕಳಿಗೆ ನೆರವಾಗಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಶಿವಶಾಂತವೀರ ಸ್ವಾಮಿಗಳು, ಶ್ರೀ ಗವಿಸಿದ್ಧೇಶ್ವರ ಮಠ, ಕೊಪ್ಪಳ.
ಆಧಾರ: ಶ್ರೀ ಗವಿಸಿದ್ಧೇಶ್ವರ ಪುರಾಣಂ ಕವಿಗಳು ವೈ. ನಾಗೇಶ ಶಾಸ್ತ್ರೀಗಳು

ಹಿರೇಸಿಂದೂಗಿ

ಕೊಪ್ಪಳ ತಾಲ್ಲೂಕಿನ ಹಿರೇಸಿಂದೂಗಿ ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಪದಿನಾರು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಶ್ರೀ ಚನ್ನಬಸವೇಶ್ವರ ಕಪ್ಪತ್ತಮಠದ ಸ್ಥಾಪನೆಯಿಂದಾಗಿ ಈ ಗ್ರಾಮವು ಪ್ರಸಿದ್ಧಿಗೆ ಬಂದಿದೆ.

ಚನ್ನಬಸವೇಶ್ವರ ಕಪ್ಪತ್ತಮಠ: ಹಿರೇಸಿಂದೂಗಿ ಗ್ರಾಮದ ಮಧ್ಯಭಾಗದಲ್ಲಿ ವಿರಕ್ತ ಸಂಪ್ರದಾಯದ ಚೀಲಾಳ ಸಮಯದ ಶ್ರೀ ಚನ್ನಬಸವೇಶ್ವರ ಕಪ್ಪತ್ತಮಠವು ಸ್ಥಾಪನೆಯಾಗಿ, ಧಾರ್ಮಿಕ ಕೇಂದ್ರಬಿಂದುವಾಗಿ ಬೆಳೆದಿದೆ.

ಮಠ ಸ್ಥಾಪನೆ: ಸುಮಾರು ಇನ್ನೂರೈವತ್ತು ವರ್ಷಗಳ ಹಿಂದೆ ಶ್ರೀ ಚನ್ನಬಸವೇಶ್ವರ ಶಿವಯೋಗಿಗಳು ಗದಗ ತಾಲ್ಲೂಕಿನ ಬೆಳದಡಿ ಗ್ರಾಮದಲ್ಲಿ ಜನಿಸಿ, ಬಾಲ್ಯದಲ್ಲೇ ಆಧ್ಯಾತ್ಮ ಸಂಸ್ಕಾರವನ್ನು ಪಡೆದು, ಲೋಕಕಲ್ಯಾಣಾರ್ಥ ಶಿವಯೋಗ ಸಿದ್ಧಿಗಾಗಿ ಅನುಷ್ಠಾನಗೊಳ್ಳತೊಡಗಿದರು. ಪ್ರೌಢಾವಸ್ಥೆಗೆ ಬಂದ ಮೇಲೆ ಶ್ರೀ ಚನ್ನಬಸವೇಶ್ವರ ಶಿವಯೋಗಿಗಳು ಕಪ್ಪತ್ತಗುಡ್ಡಕ್ಕೆ ಬಂದು ದೀರ್ಘ ತಪಸ್ಸನ್ನು ಆಚರಿಸಿದರು. ತಪೋಸಿದ್ಧಿಯನ್ನು ಪಡೆದುಕೊಂಡು ಕಪ್ಪತ್ತಗುಡ್ಡದಿಂದ ನೇರವಾಗಿ ಹಿರೇಸಿಂದೂ ಗಿಗೆ ಬಂದು ಊರಿನ ಉತ್ತರಭಾಗದ ಪ್ರಶಾಂತ ಸ್ಥಳದಲ್ಲಿ ನೆಲೆಗೊಳ್ಳುತ್ತಾರೆ. ತಪೋನಿಷ್ಠರಾದ ಶ್ರೀ ಚನ್ನಬಸವೇಶ್ವರ ಸ್ವಾಮಿಗಳು ಮಠವನ್ನು ಸ್ಥಾಪಿಸಿ ಧರ್ಮಪ್ರಚಾರವನ್ನು ಕೈಗೊಂಡರು. ನಿತ್ಯ ಶಿವಾನುಭವಗೋಷ್ಠಿ, ದಾಸೋಹ ವ್ಯವಸ್ಥೆಯನ್ನು ಪ್ರಾರಂಭ ಮಾಡಿದರು. ಗುರುಗಳ ಮಾರ್ಗದರ್ಶನದಿಂದ ಜನರು ಸನ್ಮಾರ್ಗದ ಹಾದಿ ಹಿಡಿದರು. ಶ್ರೀ ಚನ್ನಬಸವೇಶ್ವರ ಸ್ವಾಮಿಗಳು ಅನುಷ್ಠಾನಮೂರ್ತಿಗಳಾಗಿ, ಧರ್ಮನಿಷ್ಠರಾಗಿ ಸಮಾಜವನ್ನು ಬೆಳೆಸಿ ಲಿಂಗೈಕ್ಯರಾದರು. ಗ್ರಾಮದ ಭಕ್ತರು ಗುರುಗಳ ಗದ್ದುಗೆಯನ್ನು ನಿರ್ಮಿಸಿ **'ಶ್ರೀ ಚನ್ನಬಸವೇಶ್ವರ ಕಪ್ಪತ್ತಮಠ'** ಎಂದು ನಾಮಕರಣ ಮಾಡಿದರು.

ಪರಂಪರೆ:
೧. ಶ್ರೀ ಮ.ನಿ.ಪ್ರ. ಚನ್ನಬಸವೇಶ್ವರ ಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಮಲ್ಲಣಾರ್ಯ ಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ತೋಟಪ್ಪ ಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಚಿದಾನಂದ ಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃಗುರುಗಳು ಲಿಂಗೈಕ್ಯರಾದ ನಂತರ ಶ್ರೀ ಮಲ್ಲಣ್ಣಾರ್ಯ ಸ್ವಾಮಿಗಳನ್ನು ಅಧಿಕಾರಕ್ಕೆ ತರಲಾಯಿತು. ಇವರ ನಂತರ ಶ್ರೀ ತೋಟಪ್ಪ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಅಭಿವೃದ್ಧಿ ಪಡಿಸಿದರು. ಕ್ರಿಯಾಶೀಲರಾದ ಶ್ರೀ ತೋಟಪ್ಪಯ್ಯ ಸ್ವಾಮಿಗಳು ಬೆಳೆದಡಿ ಗ್ರಾಮದವರಾಗಿದ್ದು, ಕರ್ತೃಗುರುಗಳ ವಂಶಸ್ಥರಾಗಿ ಅಧಿಕಾರವನ್ನು ವಹಿಸಿಕೊಂಡು ಮಠದ ಹಳೆಯ ಕಟ್ಟಡವನ್ನು ತೆಗೆಸಿ ನೂತನ ಕಟ್ಟಡವನ್ನು ನಿರ್ಮಿಸಿದರು. ಸುಮಾರು ಇಪ್ಪತ್ತಾರುಎಕರೆ ಜಮೀನನ್ನು ಸಂಪಾದಿಸಿ ಮಠವು ಆರ್ಥಿಕ ಸ್ವಾವಲಂಬನೆ ಸಾಧಿಸಲು ಬುನಾದಿಯನ್ನು ಹಾಕಿದರು. ಅನೇಕ ವರ್ಷಗಳ ಕಾಲ ಮಠದ ಆಡಳಿತವನ್ನು ನಡೆಸಿ, ಮಠವನ್ನು ಶ್ರೀಮಂತಗೊಳಿಸಿ ೧೯೭೦ ರಲ್ಲಿ ಲಿಂಗೈಕ್ಯರಾದರು.

ಇವರ ನಂತರ ಬೆಳದಡಿ ಗ್ರಾಮದ ಶ್ರೀ ಶಿವಯ್ಯ ಮತ್ತು ಶ್ರೀಮತಿ ಈರಮ್ಮನವರ ಪುತ್ರರಾಗಿ ೧೯೫೧ರ ಮಾರ್ಚ್ ಹತ್ತರಂದು ಜನಿಸಿದ ಶ್ರೀ ಚಿದಾನಂದ ದೇವರು, ವಿರಕ್ತ ಮಠವಾದರೂ ವಂಶ ಪರಂಪರೆಯ ಮಠವಾಗಿರುವ ಶ್ರೀ ಚನ್ನಬಸವೇಶ್ವರರ ಕಪ್ಪತ್ತ ಮಠದ ಅಧಿಕಾರವನ್ನು ೧೯೮೩ ರ ಮಾರ್ಚ್ ಇಪ್ಪತ್ತೈದರಂದು ವಹಿಸಿಕೊಂಡರು. ಗುರುಗಳು ಮಠದ ಅಧಿಕಾರ ವಹಿಸಿಕೊಂಡ ಮೇಲೆ ಮಠದ ಧಾರ್ಮಿಕ ಆಚರಣೆಗಳನ್ನು ವ್ಯವಸ್ಥಿತವಾಗಿ ನಡೆಸತೊಡಗಿದರು. ಪ್ರತಿವರ್ಷ ನಡೆಯುತ್ತಿದ್ದ ಶ್ರೀ ಚನ್ನಬಸವೇಶ್ವರ ಜಾತ್ರೆಯು ಕಾರಣಾಂತರದಿಂದ ಸ್ಥಗಿತಗೊಂಡಿತ್ತು. ಇದನ್ನು ಪುನರಾರಂಭಗೊಳಿಸಿ,ಮಠದ ಕಟ್ಟಡವನ್ನು ನವೀಕರಣಗೊಳಿಸಿದರು.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಲಿಂಗೈಕ್ಯ ಗುರುಗಳ ನಾಲ್ಕು ಗದ್ದುಗೆಗಳನ್ನು ನವೀಕರಣಗೊಳಿಸಿ ನಿತ್ಯ ಪೂಜೆಗೆ ವ್ಯವಸ್ಥೆಗೊಳಿಸಿದರು. ಮಠದ ಆವರಣದಲ್ಲಿರುವ ಈಶ್ವರ ದೇವಸ್ಥಾನ, ಹಿರಿಯ ಗುರುಗಳಾದ ಶ್ರೀ ತೋಟಪ್ಪ ಸ್ವಾಮಿಗಳು ಕಾಶಿಯಿಂದ ತಂದು ಪ್ರತಿಷ್ಠಾಪಿಸಿದ್ದ ಕಾಶಿಲಿಂಗಕ್ಕೆ ನಿತ್ಯ ಪೂಜೆ ನಡೆಯುವಂತೆ ನೋಡಿಕೊಂಡಿದ್ದಾರೆ. ಪ್ರತಿವರ್ಷ ಚನ್ನಬಸವೇಶ್ವರ ಜಾತ್ರೆಯ ಸಂದರ್ಭದಲ್ಲಿ ಪುರಾಣವನ್ನು ವಾಚಿಸಲಾಗುತ್ತಿದೆ. ಈ ಸಂದರ್ಭದಲ್ಲಿ ವಿದ್ವಾಂಸರು ಮತ್ತು ವಿವಿಧ ಮಠಾಧೀಶರನ್ನು ಆಹ್ವಾನಿಸಿ ಉಪನ್ಯಾಸ ಮತ್ತು ಉಪದೇಶಗಳನ್ನು ಮಾಡಿಸಲಾಗುತ್ತಿದೆ. ಪ್ರತಿ ಅಮಾವಾಸ್ಯೆ, ಹುಣ್ಣಿಮೆಯಲ್ಲಿ ವಿಶೇಷ ಪೂಜೆ ಮತ್ತು ದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ಧಾರ್ಮಿಕ ಮತ್ತು ಸಾಮಾಜಿಕವಾಗಿ ಮಠದಲ್ಲಿ ಅಭಿವೃದ್ಧಿಯನ್ನು ಸಾಧಿಸಿರುವ ಗುರುಗಳು, ಸಾಹಿತ್ಯಿಕ ಒಲವನ್ನು ಬೆಳೆಸಿಕೊಂಡು ಭಜನಾವಳಿ ಮತ್ತು ನಾಮಾವಳಿ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಮಠದ ಆಸ್ತಿಯನ್ನು ಅಭಿವೃದ್ಧಿಪಡಿಸಿ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಚಿದಾನಂದ ಸ್ವಾಮಿಗಳು, ಶ್ರೀ ಚನ್ನಬಸವೇಶ್ವರ ಕಪ್ಪತ್ತಮಠ, ಹಿರೇಸಿಂದೂಗಿ, ಕೊಪ್ಪಳ ತಾಲ್ಲೂಕು.

❑

ಗಂಗಾವತಿ ತಾಲ್ಲೂಕು

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕು ರಾಜ್ಯದ ಶ್ರೀಮಂತ ತಾಲ್ಲೂಕುಗಳಲ್ಲಿ ಒಂದಾಗಿದೆ. ತುಂಗಾಭದ್ರಾ ಯೋಜನೆಯಿಂದಾಗಿ ಅಭಿವೃದ್ಧಿಯನ್ನು ಕಂಡಿರುವ ಈ ತಾಲ್ಲೂಕು ಭತ್ತದ ಕಣಜವೆಂದು ಹೆಸರು ಗಳಿಸಿದೆ. ಇಂತಹ ಶ್ರೀಮಂತ ತಾಲ್ಲೂಕಿನಲ್ಲಿ ಹತ್ತು ಮಠಗಳು ಅಸ್ತಿತ್ವದಲ್ಲಿದ್ದು, ವೀರಶೈವ ಧರ್ಮವನ್ನು ಬೆಳೆಸಿವೆ.

ಅರಳಹಳ್ಳಿ

ಗಂಗಾವತಿ ತಾಲ್ಲೂಕಿನ ಅರಳಹಳ್ಳಿ ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಪುರಾತನ ಕಾಲದಿಂದಲೂ ಧಾರ್ಮಿಕ ಕಾರ್ಯಗಳಿಗೆ ಹೆಸರು ಪಡೆದಿದೆ. ಈಗಲೂ ಬೃಹನ್ಮಠದ ಅಸ್ತಿತ್ವದಿಂದ ಈ ಗ್ರಾಮ ಪ್ರಸಿದ್ಧಿಗೊಂಡಿದೆ.

ಬೃಹನ್ಮಠ: ಅರಳಹಳ್ಳಿ ಗ್ರಾಮದ ಮಧ್ಯಭಾಗದಲ್ಲಿ ಶ್ರೀ ಬೃಹನ್ಮಠವು ಸ್ಥಾಪನೆಯಾಗಿ, ಇಲ್ಲಿನ ಧಾರ್ಮಿಕ ಆಚರಣೆಗಳ ಕೇಂದ್ರಬಿಂದುವಾಗಿ ಬೆಳೆದಿದೆ. ಈ ಮಠದ ಮೂಲಪುರುಷರು ಕುಂಟೋಜಿ ಹಿರೇಮಠದವರು. ಇವರು ಈಶ್ವರಯ್ಯನವರ ಕಾಲದಲ್ಲಿ ಅರಳಹಳ್ಳಿಗೆ ಆಗಮಿಸಿದರು. ಈಶ್ವರಯ್ಯನವರ ಮಕ್ಕಳಾದ ಶ್ರೀ ಸಿದ್ಧಯ್ಯನವರು ಜ್ಯೋತಿಷ್ಯ ವಿದ್ವಾಂಸರಾಗಿ ಮನೆಮನೆಗೆ ಹೋಗಿ ಭಿಕ್ಷೆ ಬೇಡಿ ತಂದು ದಾಸೋಹವನ್ನು ನಡೆಸುತ್ತಿದ್ದರು. ಇವರಿಗೆ ಮೂರು ಜನ ಮಕ್ಕಳಿದ್ದು ಶ್ರೀ ವಿರೂಪಾಕ್ಷಯ್ಯ ಎಂಬುವವರು ದೇವಿಯ ಉಪಾಸಕರಾಗಿ ಶಿವಪೂಜಾನಿಷ್ಠರಾಗಿ ಹೆಸರು ಪಡೆದಿದ್ದರು. ಇವರ ನಂತರ ಶರಣ ಬಸವಯ್ಯನವರು ಹಿರಿಯರ ಧಾರ್ಮಿಕ ಆಚರಣೆಗಳನ್ನು ಮುಂದುವರೆಸುತ್ತಾ ಬಂದರು. ಶ್ರೀ ಬೃಹನ್ಮಠದ ಜವಾಬ್ದಾರಿಯನ್ನು ಈಗ ಶ್ರೀ ಶರಣಬಸವಯ್ಯನವರು ವಹಿಸಿಕೊಂಡು ಮಠಕ್ಕೆ ಬರುವ ಅನಾಥರಿಗೆ ಸ್ಪಂದಿಸುತ್ತಾ ಮಠವನ್ನು ಮುನ್ನಡೆಸಿದ್ದಾರೆ. ಶ್ರೀ ಶರಣ ಬಸವಯ್ಯನವರು ಸ್ವತಃ ಪುರಾಣ ಪ್ರವಚನಗಳನ್ನು ಹೇಳುತ್ತಾ, ಮಠದಲ್ಲಿ ಧಾರ್ಮಿಕ ಕಾರ್ಯಗಳ ಜೊತೆಗೆ ನಿತ್ಯ ದಾಸೋಹವನ್ನು ನಡೆಸುತ್ತಿದ್ದಾರೆ.

ವಿಳಾಸ: ಶ್ರೀ ಶರಣ ಬಸವಯ್ಯ ಸ್ವಾಮಿಗಳು ಶ್ರೀ ಬೃಹನ್ಮಠ, ಅರಳಹಳ್ಳಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ.

ಆರಾಳು

ಗಂಗಾವತಿ ತಾಲ್ಲೂಕಿನ ಆರಾಳು ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಆರು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ದಾಸೋಹಮಠವು ಸ್ಥಾಪನೆಯಾಗಿ ಧಾರ್ಮಿಕ ಕಾರ್ಯಗಳು ನಡೆಯುವಂತಾಗಿದೆ.

ದಾಸೋಹಮಠ: ಆರಾಳು ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ದಾಸೋಹ ಮಠವು ಹೆಚ್ಚು ಪ್ರಸಿದ್ಧಿ ಪಡೆದಿದೆ. ಬೆಳಗಾಂ ಜಿಲ್ಲೆಯ ಗೋಕಾಕ್ ತಾಲ್ಲೂಕಿನ ಅಡವಿ ಸಿದ್ಧೇಶ್ವರ ಮಠದ ಪರಂಪರೆಯಲ್ಲಿ ಬೆಳೆದಿರುವ ಈ ಮಠವು, ಶ್ರೀ ರುದ್ರ ಸ್ವಾಮಿಗಳಿಂದ ಪ್ರಾರಂಭವಾಗಿದೆ ಎಂದು ಹೇಳಲಾಗುತ್ತಿದೆ. ಶ್ರೀ ರುದ್ರ ಸ್ವಾಮಿಗಳು ದಾಸೋಹ ಮಠವನ್ನು ಪ್ರಾರಂಭಿಸಿ ಧಾರ್ಮಿಕ ಆಚರಣೆಗಳನ್ನು ಕಾರ್ಯರೂಪಕ್ಕೆ ತಂದು, ಈ ಗ್ರಾಮದ ಭಕ್ತರನ್ನು ಧಾರ್ಮಿಕವಾಗಿ ಜಾಗೃತಗೊಳಿಸಿ ಲಿಂಗೈಕ್ಯರಾದರು. ಇವರ ನಂತರ ಮಠವು ಖಾಲಿ ಉಳಿದಿದ್ದು, ಈಗ ಶರಣೆ ಸಂಗಮ್ಮ ಎಂಬುವರು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಶರಣೆ ಸಂಗಮ್ಮನವರು, ಶ್ರೀ ದಾಸೋಹಮಠ, ಆರಾಳು, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ.

ಕನಕಗಿರಿ

ಗಂಗಾವತಿ ತಾಲ್ಲೂಕಿನ ಕನಕಗಿರಿ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಈ ಗ್ರಾಮವು ಪುರಾಣ ಪ್ರಸಿದ್ಧ ಸ್ಥಳವಾಗಿದ್ದು, ಹನ್ನೆರಡನೆಯ ಶತಮಾನದಲ್ಲಿ ಕೆಲವು ಶರಣರು ಇಲ್ಲಿ ನೆಲೆ ನಿಂತಿದ್ದರೆಂದು

ಹೇಳಲಾಗುತ್ತದೆ. ಇಂತಹ ಪವಿತ್ರ ಸ್ಥಳದಲ್ಲಿ ಶ್ರೀ ರುದ್ರಸ್ವಾಮಿಮಠ, ಶ್ರೀ ಹಿರೇಮಠ ಸ್ಥಾಪನೆಯಾಗಿವೆ.

ರುದ್ರಸ್ವಾಮಿಮಠ: ಕನಕಗಿರಿ ಗ್ರಾಮದ ಉತ್ತರ ಭಾಗದಲ್ಲಿರುವ ಶ್ರೀ ರುದ್ರಸ್ವಾಮಿ ಮಠಕ್ಕೆ ಶ್ರೀ ಕಲ್ಮಠ ಮತ್ತು ಶ್ರೀ ಸುವರ್ಣಗಿರಿ ಸಂಸ್ಥಾನ ಮಠ ವೆಂತಲೂ ಕರೆಯಲಾಗುತ್ತಿದೆ. ಹನ್ನೆರಡನೆಯ ಶತಮಾನದಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಲಾಗುವ ಈ ಮಠದ ಕರ್ತೃಗುರುಗಳು ಶ್ರೀ ರುದ್ರಮುನಿ ಸ್ವಾಮಿಗಳು, ಈ ಕಾರಣಕ್ಕೆ ಶ್ರೀ ರುದ್ರಸ್ವಾಮಿ ಮಠ ಎಂದು ಕರೆಯಲಾಗುತ್ತಿದೆ.

ಮಠ ಸ್ಥಾಪನೆ: ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದ ಕ್ರಾಂತಿಯ ನಂತರ ಶರಣರು ಲೋಕಸಂಚಾರ ಹೊರಟರು. ಇವರಲ್ಲಿ ಶ್ರೀ ರುದ್ರಸ್ವಾಮಿಗಳು ಕಲ್ಯಾಣದಿಂದ ಹೊರಟು ಕನಕಗಿರಿಗೆ ಬಂದು ನೆಲೆಸಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೆ ಈ ಹೇಳಿಕೆಗೆ ಪೂರಕವಾಗುವಂತಹ ಆಧಾರಗಳು ಲಭ್ಯವಿಲ್ಲ. ವಿರಕ್ತ ಸಂಪ್ರದಾಯದ ಚೀಲಾಳ ಸಮಯದ ಈ ಮಠಕ್ಕೆ ಹೈದರಾಬಾದ್ ನಿಜಾಮನ ಕಾಲದಲ್ಲಿ ನೆರವು ದೊರೆತು ಪ್ರಬುದ್ಧಮಾನಕ್ಕೆ ಬಂದಿದೆ ಎಂದು ಹೇಳಲಾಗುತ್ತಿದೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ರುದ್ರ ಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಚನ್ನಮಲ್ಲ ಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ರುದ್ರ ಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಶ್ರೀ ರುದ್ರ ಸ್ವಾಮಿಗಳು ಮತ್ತು ಶ್ರೀ ಚನ್ನಮಲ್ಲ ಸ್ವಾಮಿಗಳು ಎಂಬ ಹೆಸರು ಅನುಕ್ರಮಣಿಕೆಯಲ್ಲಿ ಮಠದ ಪಟ್ಟಾಧಿಕಾರಿಗಳಿಗೆ ಅಭಿಧಾನಗೊಳ್ಳುತ್ತಾ ಬಂದಿದೆ. ಈ ಕಾರಣಕ್ಕೆ ಮಠದ ಪರಂಪರೆಯಲ್ಲಿ ಬಂದಂತಹ ಗುರುಗಳ ಬಗ್ಗೆ ಮಾಹಿತಿ ಲಭ್ಯವಿಲ್ಲ.

ಈಗಿನ ಗುರುಗಳು ಸೇರಿದಂತೆ ಒಟ್ಟು ಇಪ್ಪತ್ತಾರು ಜನ ಗುರುಗಳು ಪಟ್ಟಾಧ್ಯಕ್ಷರಾಗಿ ಮಠವನ್ನು ಮುನ್ನಡೆಸಿದ್ದಾರೆ ಎಂದು ಹೇಳುತ್ತಾರೆ. ಈ ಹಿಂದೆ ಅಧಿಕಾರದಲ್ಲಿದ್ದ ಶ್ರೀ ಚನ್ನಮಲ್ಲ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ ೧೯೫೫ ರಲ್ಲಿ ಲಿಂಗೈಕ್ಯರಾದರು. ನಂತರ ಕುಷ್ಟಗಿ ತಾಲ್ಲೂಕಿನ ತೊಲಚಾಳ ಗ್ರಾಮದ ಶ್ರೀ ಬಸಯ್ಯ ಮತ್ತು ಶ್ರೀಮತಿ ಗೌರಮ್ಮನವರ ಪುತ್ರರಾಗಿ ೧೯೪೭ರಲ್ಲಿ ಜನಿಸಿದ ಶ್ರೀ ರುದ್ರಸ್ವಾಮಿಗಳು ೧೯೭೧ರಲ್ಲಿ ಪಟ್ಟಾಧಿಕಾರ ವಹಿಸಿಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ವಿರಕ್ತ ಸಂಪ್ರದಾಯದ ಈ ಮಠದಲ್ಲಿ ಪರಂಪರೆಯ ಗುರುಗಳ ಮೂರು ಗದ್ದುಗೆಗಳು ಸ್ಥಾಪನೆಯಾಗಿವೆ. ಇವುಗಳಿಗೆ ಎರಡು ವೇಳೆ ಪೂಜೆ, ಆಶ್ವೀಜ ಮಾರ್ಗಶಿರದಲ್ಲಿ ದೇವಿಪುರಾಣವನ್ನು ವಾಚಿಸಲಾಗುತ್ತಿದೆ. ಶ್ರಾವಣ ಮಾಸ, ಅಮಾವಾಸ್ಯೆ ಮತ್ತು ಹುಣ್ಣಿಮೆಯಲ್ಲಿ ರುದ್ರಾಭಿಷೇಕ ಪೂಜೆಯನ್ನು ನಡೆಸಲಾಗುತ್ತಿದೆ. ನಿತ್ಯ ಅನ್ನ ದಾಸೋಹದ ವ್ಯವಸ್ಥೆಯನ್ನು ಮಾಡಲಾಗಿದೆ.೧೯೮೧ರಲ್ಲಿ ಶ್ರೀ ರುದ್ರಸ್ವಾಮಿ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿ ಬಾಲಕಿಯರ ಪ್ರೌಢಶಾಲೆ, ಪ್ರಾಥಮಿಕ ಶಾಲೆ ಹಾಗೂ ನರ್ಸರಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಇತ್ತೀಚೆಗೆ ಕಂಪ್ಯೂಟರ್ ತರಬೇತಿ ಕೇಂದ್ರವನ್ನು ಸ್ಥಾಪಿಸಲಾಗಿದೆ. ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿ ಬಡವಿದ್ಯಾರ್ಥಿಗಳಿಗೆ ಆಶ್ರಯ ಕಲ್ಪಿಸಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ.ರುದ್ರ ಸ್ವಾಮಿಗಳು, ಶ್ರೀ ರುದ್ರಸ್ವಾಮಿಮಠ ಕನಕಗಿರಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ.

ಹಿರೇಮಠ: ಕನಕಗಿರಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಹಿರೇಮಠವು ಶ್ರೀ ರಂಭಾಪುರಿ ಪೀಠದ ಶಾಖಾ ಮಠವಾಗಿ ಬೆಳೆದಿದೆ. ಪುರಾತನ ಕಾಲದ ಈ ಮಠವು ಈಗ ಗುರುಗಳು ಯಾರೂ ಇಲ್ಲದ ಕಾರಣ ಖಾಲಿ ಉಳಿದಿದೆ. ಮಠದ ಆವರಣದಲ್ಲಿ ಒಂದು ಗದ್ದುಗೆ ಇದ್ದು, ಮಠದ ವಂಶಸ್ಥರು ಇದಕ್ಕೆ ನಿತ್ಯ ಪೂಜೆಯನ್ನು ನಡೆಸುತ್ತಿದ್ದಾರೆ.

ಗಂಗಾವತಿ

ಕೊಪ್ಪಳ ಜಿಲ್ಲೆಯ ಗಂಗಾವತಿ ಜಿಲ್ಲಾ ಕೇಂದ್ರದಿಂದ ಪೂರ್ವಕ್ಕೆ ಮೂವತ್ತು ಕಿ.ಮೀ ದೂರದಲ್ಲಿದೆ. ತಾಲ್ಲೂಕು

ಕೇಂದ್ರ ಸ್ಥಳವಾದ ಗಂಗಾವತಿ ನಗರವು ಪೂರ್ವಕಾಲದಲ್ಲಿ'ನೀಲಾವತಿ'ಎಂಬ ಹೆಸರು ಪಡೆದಿತ್ತು. ಶ್ರೀ ಗಂಗಾಧರನೆಂಬ ಶಿವಭಕ್ತನಿಗೆ ಕಾಶಿಯಲ್ಲಿ ಶಿವಲಿಂಗ ದೊರೆತಿತ್ತಂತೆ. ಇದು ತೀರ್ಥಯಾತ್ರೆಯ ಪುಣ್ಯವೆಂದು ತಿಳಿದು ನೀಲಾವತಿಗೆ ಹಿಂದಿರುಗಿ ಇಲ್ಲಿನ ಅರಸನಿಗೆ ಅರ್ಪಿಸಿ, ಲೋಕಕಲ್ಯಾಣಾರ್ಥ ಇದನ್ನು ಇಲ್ಲಿ ಪ್ರತಿಷ್ಠಾಪಿಸಲು ಬಿನ್ನವಿಸಿಕೊಂಡ ನಂತೆ. ಆಗ ಅರಸನು ಸಂತೋಷಗೊಂಡು ನೀಲಾವತಿಯಲ್ಲಿ ಕಾಶಿಲಿಂಗವನ್ನು ಪ್ರತಿಷ್ಠಾಪಿಸಿ ಈ ಲಿಂಗಕ್ಕೆ 'ಗಂಗಾಧರೇಶ್ವರ' ಎಂದೂ ಈ ಪಟ್ಟಣಕ್ಕೆ 'ಗಂಗಾವತಿ' ಎಂದು ನಾಮಕರಣ ಮಾಡಿದನಂತೆ. ಅಂದಿನಿಂದ ಈ ಪಟ್ಟಣ'ಗಂಗಾವತಿ' ಎಂದು ಹೆಸರು ಪಡೆದಿದೆ ಎಂದು ಸ್ಥಳನಾಮ ತಿಳಿಸುತ್ತಿದೆ. ತುಂಗಭದ್ರ ಮತ್ತು ಕೃಷ್ಣಾನದಿಯ ನಡುವಿನ ಈ ಪ್ರದೇಶವು ಎಡದೊರೆ ನಾಡೆಂದು ಪ್ರಾಚೀನ ಕಾಲದಿಂದಲೂ ಪ್ರಸಿದ್ಧಿ ಪಡೆದಿದೆ. ಇಂದು ವ್ಯಾಪಾರದ ಕೇಂದ್ರಸ್ಥಳವಾಗಿ ಅಭಿವೃದ್ಧಿ ಗೊಂಡಿದೆ. ಜೊತೆಗೆ ಸಾಧುಸಂತರ ತಪೋಭೂಮಿಯಾಗಿ ಬೆಳೆದಿದೆ. ಇಂತಹ ಭೂಮಿಯಲ್ಲಿ ವೀರಶೈವಧರ್ಮ ಪ್ರಬಲ ವಾಗಿ ಬೆಳೆದು, ವಿಜಯನಗರದ ಅರಸರ ಕಾಲದಲ್ಲಿ ಹೆಚ್ಚು ಪ್ರಸಿದ್ಧಿ ಪಡೆದು ನಾಡಿಗೆ ಹೆಸರು ತಂದಿದೆ. ಈ ನಗರದಲ್ಲಿ ಶ್ರೀ ಕೊಟ್ಟೂರೇಶ್ವರ ಕಲ್ಮಠ, ಶ್ರೀ ಗುಮ್ಮಾಳಾ ಪುರಮಠ ಹಾಗೂ ಶ್ರೀ ಮಲ್ಲಿಕಾರ್ಜುನ ಮಠಗಳು ಸ್ಥಾಪನೆಯಾಗಿವೆ.

ಕೊಟ್ಟೂರೇಶ್ವರ ಕಲ್ಮಠ: ಗಂಗಾವತಿಯ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಕೊಟ್ಟೂರೇಶ್ವರ ಕಲ್ಮಠವು, ಪುರಾತನ ಕಾಲದಲ್ಲಿ ಕಲ್ಲಿನಿಂದ ಭವ್ಯವಾಗಿ ನಿರ್ಮಿತವಾದ ಕಾರಣ'**ಶ್ರೀ ಕಲ್ಮಠ**'ಎಂಬ ಹೆಸರು ಬಂದಿದೆ. ಜತೆಗೆ ಶ್ರೀಕೊಟ್ಟೂರೇಶ್ವರ ಸ್ವಾಮಿಗಳು ಇದರ ಸ್ಥಾಪಕರಾಗಿರುವುದರಿಂದ ಕಲ್ಮಠದ ಜೊತೆಗೆ ಕರ್ತೃಗುರುಗಳ ಹೆಸರನ್ನು ಸಮೀಕರಿಸಿ 'ಶ್ರೀ ಕೊಟ್ಟೂರೇಶ್ವರ ಕಲ್ಮಠ' ಎಂದು ರೂಢಿಗತವಾಗಿ ಕರೆಯಲಾಗುತ್ತಿದೆ.

ಮಠ ಸ್ಥಾಪನೆ: ಹದಿನೈದನೆಯ ಶತಮಾನದಲ್ಲಿ ಶ್ರೀ ಕೊಟ್ಟೂರೇಶ್ವರ ಸ್ವಾಮಿಗಳು, ಶ್ರೀ ಮಹಾಂತ ಸ್ವಾಮಿಗಳು ಹಾಗೂ ಶ್ರೀ ಅನ್ನದಾನೇಶ್ವರ ಸ್ವಾಮಿಗಳು ಒಟ್ಟಿಗೆ ಲೋಕಸಂಚಾರ ಕೈಗೊಂಡು, ಧರ್ಮಪ್ರಸಾರವನ್ನು ಮಾಡಿಕೊಂಡು ಬರುತ್ತಿದ್ದರು. ಬಾಗಲಕೋಟೆ ಜಿಲ್ಲೆಯ ಇಳಕಲ್ಲಿನ ಚಿತ್ತರಗಿ ಮಠದಲ್ಲಿ ಈ ಮೂರು ಜನ ಗುರುಗಳು ಅನುಷ್ಠಾನ ಗೊಂಡರು. ಬಹುದಿನದ ನಂತರ ಇಲ್ಲಿಂದ ಹೊರಡಲು ಅನುವಾದಾಗ ಶ್ರೀ ಮಹಾಂತ ಸ್ವಾಮಿಗಳು ಚಿತ್ತರಗಿಯಲ್ಲಿಯೇ ಉಳಿದು ಮಠವನ್ನು ಬೆಳೆಸುತ್ತಾರೆ. ನಂತರ ಶ್ರೀ ಅನ್ನದಾನೇಶ್ವರರು ಹಾಗೂ ಶ್ರೀ ಕೊಟ್ಟೂರು ಸ್ವಾಮಿಗಳು ಮುಂದೆ ಬಂದು ಗದಗ ಜಿಲ್ಲೆಯ ಮುಂಡರಗಿಯಲ್ಲಿ ನೆಲೆಗೊಳ್ಳುತ್ತಾರೆ. ಇಲ್ಲಿ ಶ್ರೀ ಕೊಟ್ಟೂರು ಸ್ವಾಮಿಗಳು ಮುಂದೆ ಬಂದು ಗಂಗಾವತಿಯಲ್ಲಿ ನೆಲೆ ನಿಲ್ಲುತ್ತಾರೆ. ಈ ರೀತಿ ಮೂರು ಜನ ಮಹಾತಪಸ್ವಿಗಳು ನೆಲೆನಿಂತ ಸ್ಥಳಗಳು ಇಂದು ವೀರಶೈವ ಧರ್ಮದ ಪ್ರತಿಷ್ಠಿತ ಮಠಗಳಾಗಿ ಬೆಳೆದಿವೆ ಎಂಬುದು ಹೆಗ್ಗಳಿಕೆಯ ವಿಚಾರ.

ಶ್ರೀ ಕೊಟ್ಟೂರು ಸ್ವಾಮಿಗಳು ಗಂಗಾವತಿಗೆ ಆಗಮಿಸಿ ನೆಲೆನಿಂತ ಸಂದರ್ಭದಲ್ಲಿ ಶ್ರೀ ದಿಗಂಬರ ಸ್ವಾಮಿಗಳೆಂಬ ಯೋಗಿಗಳು ಆಗಮಿಸಿ, ಶ್ರೀ ಕೊಟ್ಟೂರು ಸ್ವಾಮಿಗಳಿಗೆ ಇಲ್ಲಿಯೇ ನೆಲೆ ನಿಂತು ಮಠವನ್ನು ಸ್ಥಾಪಿಸಿ ವೀರಶೈವಧರ್ಮದ ಪ್ರಚಾರವನ್ನು ಮಾಡಬೇಕೆಂದು ಸಲಹೆ ಕೊಟ್ಟರು. ಅದರಂತೆ ಶ್ರೀ ಕೊಟ್ಟೂರು ಸ್ವಾಮಿಗಳು ಗಂಗಾವತಿಯಲ್ಲಿ ಕಲ್ಮಠವನ್ನು ಸ್ಥಾಪಿಸಿ, ಮಠದ ಅಭಿವೃದ್ಧಿಗೆ ಭದ್ರಬುನಾದಿಯನ್ನು ಹಾಕಿಕೊಟ್ಟರು. ಗುರುಗಳು ತಮ್ಮ ಅನುಭಾವದ ಹಿನ್ನಲೆಯಲ್ಲಿ ಶರಣ ತತ್ತ್ವವನ್ನು ವ್ಯವಸ್ಥಿತವಾಗಿ ಪ್ರಚಾರಗೊಳಿಸಲು ಮುಂದಾದರು. ನಿತ್ಯ ಶಿವಾನುಭವ ಗೋಷ್ಠಿಯನ್ನು ನಡೆಸಿ ಅಷ್ಟಾವರಣ, ಪಂಚಾಚಾರ ಮತ್ತು ಷಟ್‌ಸ್ಥಲದ ಬಗ್ಗೆ ವಿಶಿಷ್ಟ ಉಪನ್ಯಾಸಗಳಿಂದ ಭಕ್ತರಲ್ಲಿ ಧಾರ್ಮಿಕ ಭಾವನೆ ಅರಳುವಂತೆ ಮಾಡಿ, ಧರ್ಮಸಂಪನ್ನರನ್ನಾಗಿ ರೂಪಿಸಿದರು.

ವೀರಶೈವ ಧರ್ಮವನ್ನು ಪ್ರಚಾರಗೊಳಿಸಿ ಹೆಚ್ಚು ಬಲವರ್ಧನೆಗೊಳಿಸುವ ಉದ್ದೇಶದಿಂದ ಅನೇಕ ಹರಗುರು ಚರ ಮೂರ್ತಿಗಳನ್ನು ಮಠದಲ್ಲಿ ಕಲೆ ಹಾಕಿ, ಅವರಿಗೆ ತಮ್ಮ ಅನುಭಾವವನ್ನು ಧಾರೆ ಎರೆದರು. ಇದರಿಂದ ಅನೇಕ ಸಮರ್ಥ ಗುರುಗಳು ಸೃಷ್ಟಿಯಾಗಲು ಕಾರಣವಾಯಿತು. ಗುರುಗಳು ಗಂಗಾವತಿಯಲ್ಲಿ ಮಠವನ್ನು ಸ್ಥಾಪಿಸಿದರೂ ಸಹ ಸಂದರ್ಭಾನು ಸಾರ ಸಂಚಾರಕ್ಕೆ ಹೊರಟು ಭಕ್ತರನ್ನು ಉದ್ಧರಿಸಿ, ತಾವು ಸ್ಥಾಪಿಸಿದ ಕಲ್ಮಠಕ್ಕೆ ಹಿಂದಿರುಗುತ್ತಿದ್ದರು. ಈ ಸಂದರ್ಭದಲ್ಲಿ ಲಿಂಗಸುಗೂರು ತಾಲ್ಲೂಕಿನ ಮೆದಕಿನಹಾಳದಲ್ಲಿ ಲಿಂಗೈಕ್ಯರಾದರು. ಗುರುಗಳು ಗಂಗಾವತಿಯ ಕಲ್ಮಠಕ್ಕೆ ಉತ್ತರಾಧಿಕಾರಿ

ಗಳನ್ನಾಗಿ, ಮಠದಲ್ಲಿ ಶಿವಾನುಭವದ ಅಧ್ಯಯನಕ್ಕೆಂದು ಆಗಮಿಸಿದ್ದ ಶ್ರೀ ಚನ್ನಬಸವ ಸ್ವಾಮಿಗಳನ್ನು ನೇಮಕ ಮಾಡಿ ಕೊಂಡಿದ್ದರು. ಗುರುಗಳು ಲಿಂಗೈಕ್ಯರಾದ ಮೇಲೆ ಶ್ರೀ ಕೊಟ್ಟೂರು ಸ್ವಾಮಿಗಳ ಕರಕಮಲ ಸಂಜಾತರಾಗಿದ್ದ ಶ್ರೀ ಚನ್ನಬಸವ ಸ್ವಾಮಿಗಳು ಕೊಟ್ಟೂರೇಶ್ವರ ಕಲ್ಮಠದ ಅಧಿಕಾರವನ್ನು ವಹಿಸಿಕೊಂಡರು.

ಪರಂಪರೆ:

೧. ಶ್ರೀ ಮ.ನಿ.ಪ್ರ. ಕೊಟ್ಟೂರುಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಚನ್ನಬಸವಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಹಿರೇಕೊಟ್ಟೂರುಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಸಣ್ಣಕೊಟ್ಟೂರುಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಸಿದ್ಧಲಿಂಗ ಕೊಟ್ಟೂರುಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಹಿರೇಕೊಟ್ಟೂರುಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಚನ್ನಬಸವಸ್ವಾಮಿಗಳು
೯. ಶ್ರೀ ಮ.ನಿ.ಪ್ರ. ಮರಿಚನ್ನಬಸವಸ್ವಾಮಿಗಳು
೧೦. ಶ್ರೀ ಮ.ನಿ.ಪ್ರ. ಕೊಟ್ಟೂರುಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಅಧಿಕಾರ ವಹಿಸಿಕೊಂಡ ಗುರುಗಳೆಲ್ಲರೂ ಮಹಾ ತೇಜೋಮೂರ್ತಿಗಳಾಗಿ ಧರ್ಮವನ್ನು ಪ್ರಕಾಶಗೊಳಿಸಿದರು. ಪರಂಪರೆಯ ಎಂಟನೆಯ ಗುರುಗಳಾದ ಶ್ರೀ ಚನ್ನಬಸವ ಸ್ವಾಮಿಗಳು ೧೯೨೧ ರಲ್ಲಿ ಮಠದ ಅಧಿಕಾರವನ್ನು ವಹಿಸಿಕೊಂಡು ಇಡೀ ನಾಡಿಗೆ ಬೆಳಕಾದರು. ಗುರುಗಳು ಮಹಾ ಶಿವಯೋಗಿಗಳಾಗಿದ್ದು, ಕಾಯಕಯೋಗವನ್ನು ಹೇಳುವುದಕ್ಕಿಂತ ಮಾಡಿ ತೋರಿಸುತ್ತಿದ್ದರು. ಇವರು ಜಾತಿ ಭೇದ ಮರೆತು ಎಲ್ಲರನ್ನು ಸಮಾನವಾಗಿ ಕಾಣುತ್ತ ಬಸವತತ್ತ್ವವನ್ನು ಆಚರಣೆಯಲ್ಲಿ ತಂದಿದ್ದರು. ಗುರುಗಳು ಮಠದ ಆಡಳಿತವನ್ನು ನಡೆಸಿ ಕಲ್ಮಠವನ್ನು ಅಭಿವೃದ್ಧಿಯ ಉತ್ತುಂಗಕ್ಕೆ ಕೊಂಡೊಯ್ದರು. ಶ್ರೀ ಮರಿ ಚನ್ನಬಸವ ಸ್ವಾಮಿಗಳಿಗೆ ಅಧಿಕಾರವನ್ನು ನೀಡಿ, ಗಂಗಾವತಿಯ ಹೊರಭಾಗದಲ್ಲಿರುವ ಹಳ್ಳದ ದಡದ ಮೇಲಿರುವ ಶ್ರೀ ಮಲ್ಲಿಕಾರ್ಜುನ ಮಂದಿರಕ್ಕೆ ಬಂದು ವಿಶ್ರಾಂತ ಜೀವನ ನಡೆಸತೊಡಗಿದರು.

ಬಿಜಾಪುರ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಕುಟಕನಕೇರಿ ಗ್ರಾಮದ ಹಿರೇಮಠದ ಶ್ರೀ ಚನ್ನಬಸವಯ್ಯ ಹಾಗೂ ಶ್ರೀಮತಿ ಸಂಗಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಪತ್ರಯ್ಯನವರು, ಯಾದಗಿರಿ, ಕಂಪ್ಲಿ ಮುಂತಾದ ಕಡೆ ವಿದ್ಯಾಭ್ಯಾಸ ವನ್ನು ಮುಗಿಸಿಕೊಂಡು, ಕಂಪ್ಲಿಯ ಶ್ರೀ ಗುರುಸಿದ್ಧ ಶಿವಯೋಗಿಗಳಿಂದ ಅನುಗ್ರಹ ಪಡೆದು ಕಲ್ಮಠದ ಅಧಿಕಾರವನ್ನು ವಹಿಸಿಕೊಂಡರು. ಸಾಹಿತ್ಯಾಸಕ್ತಿಯನ್ನು ಬೆಳೆಸಿಕೊಂಡ ಗುರುಗಳು ಉತ್ತಮ ವಾಗ್ಮಿಗಳಾಗಿದ್ದರು. ಈ ಭಾಗದಲ್ಲಿ ಶೈಕ್ಷಣಿಕ ಪ್ರಗತಿ ಕುಂಠಿತವಾಗಿದ್ದನ್ನು ಗಮನಿಸಿ ೧೯೬೫ರಲ್ಲಿ ಶ್ರೀ ಕೊಟ್ಟೂರೇಶ್ವರ ವಿದ್ಯಾವರ್ಧಕ ಸಂಘವನ್ನು ಸ್ಥಾಪನೆ ಮಾಡಿದರು. ಸಾಹಿತ್ಯ ಮತ್ತು ಸಂಗೀತದಲ್ಲಿ ಒಲವನ್ನು ಬೆಳೆಸಿ ಕೊಂಡಿದ್ದ ಗುರುಗಳು ೧೯೭೧ರಲ್ಲಿ ಶ್ರೀ ಕೊಟ್ಟೂರೇಶ್ವರ ಸಂಗೀತ ವಿದ್ಯಾಲಯವನ್ನು ಸ್ಥಾಪಿಸಿದರು. ಈ ರೀತಿ ಎಲ್ಲಾ ರಂಗಗಳಲ್ಲಿಯೂ ಸೇವೆ ಸಲ್ಲಿಸಿದ ಗುರುಗಳು ೧೯೮೪ ನವೆಂಬರ್ ಆರರಂದು ಲಿಂಗೈಕ್ಯರಾದರು. ನಂತರ ಹಿರಿಯ ಗುರುಗಳ ಕರಕಮಲ ಸಂಜಾತರಾಗಿ ಬೆಳೆದಿದ್ದ ಬಿಜಾಪುರ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಕುಟಕನಕೇರಿ ವೀರಯ್ಯ ಮತ್ತು ಗುರುಲಿಂಗಮ್ಮನವರಿಗೆ ೧೯೬೨ರಲ್ಲಿ ಜನಿಸಿದ್ದ ಶ್ರೀಕೊಟ್ಟೂರು ಮರಿದೇವರು ಶ್ರೀ ಕೊಟ್ಟೂರು ಸ್ವಾಮಿಗಳೆಂದು ಅಭಿಧಾನ ಪಡೆದು, ೧೯೮೫ರ ಮೇ ಹನ್ನೆರಡರಂದು ಕಲ್ಮಠದ ಹತ್ತನೆಯ ಗುರುಗಳಾಗಿ ಅಧಿಕಾರ ವಹಿಸಿಕೊಂಡರು.

ಶ್ರೀ ಕೊಟ್ಟೂರು ಸ್ವಾಮಿಗಳು ಹುಬ್ಬಳ್ಳಿಯ ಮೂರುಸಾವಿರ ಮಠದಲ್ಲಿ ಆಶ್ರಯ ಪಡೆದು, ಕರ್ನಾಟಕ ವಿಶ್ವ ವಿದ್ಯಾನಿಲಯದಲ್ಲಿ ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ನಂತರ ಬನಾರಸ್ ವಿಶ್ವವಿದ್ಯಾನಿಲಯದಲ್ಲಿ ವೇದಾಂತ ಶಾಸ್ತ್ರಗಳ ಬಗ್ಗೆ ಪದವಿ ಪಡೆದು, ಸಾಹಿತ್ಯಸಂಶೋಧನಾ ವಿದ್ಯಾರ್ಥಿಯಾಗಿ ಕಲಿಕೆಯನ್ನು ಆರಂಭಿಸಿದ್ದಾರೆ.

ಅಪಾರ ಪಾಂಡಿತ್ಯದಿಂದ ಮಾಗಿದ ಮನಸ್ಸು, ಧಾರ್ಮಿಕ ಸಂಸ್ಕಾರದಿಂದ ಅನುಭಾವಿಗಳಾಗಿ ಮಠವನ್ನು ಸಮಾಜಮುಖಿಯಾಗಿಸಿ ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕವಾಗಿ ಪ್ರಗತಿಯನ್ನು ಸಾಧಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯಲ್ಲಿ ಬಂದಂತಹ ಗುರುಗಳ ಗದ್ದುಗೆಯನ್ನು ಸ್ಮಾರಕಗಳನ್ನಾಗಿ ಮಾಡಿ ನಿತ್ಯ ಪೂಜೆಗೆ ವ್ಯವಸ್ಥೆಗೊಳಿಸಲಾಗಿದೆ. ಹಿರಿಯ ಗುರುಗಳ ಸಂಸ್ಮರಣೆ ಕಾರ್ಯಕ್ರಮವನ್ನು ಹಮ್ಮಿಕೊಂಡು, ಈ ಸಂದರ್ಭದಲ್ಲಿ ನಾಡಿನ ಹೆಸರಾಂತ ವಿದ್ವಾಂಸರು, ಮಠಾಧೀಶರು, ಸಮಾಜದ ಮುಖಂಡರು ಹಾಗೂ ರಾಜಕೀಯ ಧುರೀಣರನ್ನು ಕರೆಸಿ ಉಪ ನ್ಯಾಸ ಉಪದೇಶಗಳನ್ನು ಮಾಡಿಸಿ ಗಣ್ಯರಿಗೆ ಸನ್ಮಾನಿಸಿ, ಗೌರವಿಸುವ ಪರಿಪಾಠವನ್ನು ಹಿಂದಿನಿಂದಲೂ ಬೆಳೆಸಿಕೊಂಡು ಬರಲಾಗಿದೆ. ಮಠದಲ್ಲಿ ನಿತ್ಯ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗಿದೆ.

ಶೈಕ್ಷಣಿಕ ಸಾಧನೆ: ೧೯೬೫ ರಲ್ಲಿ ಸ್ಥಾಪನೆಗೊಂಡ ಶಿಕ್ಷಣ ಸಂಸ್ಥೆಯಡಿ ಶ್ರೀ ಚನ್ನಬಸವಸ್ವಾಮಿ ಕನ್ನಡಹಿರಿಯ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಕಲ್ಮಠ ಶ್ರೀ ಚನ್ನಬಸವಸ್ವಾಮಿ ಕಲಾ ಮತ್ತು ವಾಣಿಜ್ಯ ಮಹಿಳಾ ವಿದ್ಯಾಲಯ, ಜಿ.ಎಚ್.ಎನ್. ಕಾಮರ್ಸ್ ಕಾಲೇಜು, ಎಚ್.ಆರ್.ಸರೋಜಮ್ಮ ಸ್ಮಾರಕ ಬಾಲಕಿಯರ ಪದವಿಪೂರ್ವ ಕಾಲೇಜು, ಶ್ರೀ ಕೊಟ್ಟೂರೇಶ್ವರ ಪದವಿಪೂರ್ವ ಕಾಲೇಜು ಹಾಗೂ ಶ್ರೀ ಕೊಟ್ಟೂರೇಶ್ವರ ಉಚಿತ ಪ್ರಸಾದನಿಲಯವನ್ನು ಪ್ರಾರಂಭಿಸಿದ್ದಾರೆ. ೧೯೮೧ ರಲ್ಲಿ ಶ್ರೀ ಕೊಟ್ಟೂರೇಶ್ವರ ವಿದ್ಯಾನಿಲಯವನ್ನು ಸ್ಥಾಪಿಸಿದ್ದು, ಈ ಸಂಸ್ಥೆ ಇಂದು ಹೆಮ್ಮರವಾಗಿ ಬೆಳೆದಿದೆ. ಹೊಸಳ್ಳಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಗೆ ನಿವೇಶನದ ಕೊರತೆ ಇದ್ದಾಗ ಮಠದ ಐದು ಎಕರೆ ಜಮೀನನ್ನು ದಾನವಾಗಿ ನೀಡಲಾಗಿದೆ.

ಈಗಿನ ಗುರುಗಳಾದ ಶ್ರೀ ಕೊಟ್ಟೂರು ಸ್ವಾಮಿಗಳು ಕಿರಿಯ ವಯಸ್ಸಿನಲ್ಲಿ ಹಿರಿದಾದುದ್ದನ್ನು ಸಾಧಿಸಲು ಮುಂದಾಗಿ ದ್ದಾರೆ. ಕ್ರಿಯಾಶೀಲತೆ ಹಾಗೂ ಮಾನವೀಯ ಮೌಲ್ಯಗಳಿಗೆ ಹೆಚ್ಚು ಬೆಲೆ ಕೊಡುವ ಇವರು ಸಾಮಾಜಿಕ ನ್ಯಾಯ,ಸಮನ್ವಯ ಬದುಕು ಎಲ್ಲರದಾಗಬೇಕು ಎಂಬ ಮಹದಾಸೆಯೊಂದಿಗೆ ಮಠವನ್ನು ಮುನ್ನಡೆಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಕೊಟ್ಟೂರು ಸ್ವಾಮಿಗಳು, ಶ್ರೀ ಕೊಟ್ಟೂರೇಶ್ವರ ಕಲ್ಮಠ, ಗಂಗಾವತಿ-೫೮೩ ೨೨೭, ಕೊಪ್ಪಳ ಜಿಲ್ಲೆ.
ಆಧಾರ:'ಗಂಗಾವತಿಯ ಬೆಳಗು'-ಪ್ರೊ.ಕೊಟ್ರೇಶ ಗು. ಆರಾಧ್ಯಮಠ / 'ಕಾಯಕಸಿರಿ'-ಶರಣಬಸಪ್ಪ ಕೋಲ್ಕಾರರ ಲೇಖನ.

ಮಲ್ಲಿಕಾರ್ಜುನ ಮಠ: ಗಂಗಾವತಿ ನಗರದಲ್ಲಿ ಸ್ಥಾಪನೆಯಾಗಿರುವ ಶ್ರೀ ಮಲ್ಲಿಕಾರ್ಜುನ ಮಠವು ಶ್ರೀ ಚನ್ನಬಸವೇಶ್ವರ ಸ್ವಾಮಿಗಳಿಂದ ಪ್ರಾರಂಭವಾಗಿದೆ. ಗುರುಗಳು ಕಲ್ಮಠದ ಆಡಳಿತವನ್ನು ಶ್ರೀ ಮರಿ ಚನ್ನಬಸವ ಸ್ವಾಮಿಗಳಿಗೆ ವಹಿಸಿಕೊಟ್ಟು,ಹಳ್ಳದ ದಡದಲ್ಲಿರುವ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ನೆಲೆಗೊಂಡರು. ಹಿರಿಯ ಚೇತನವು ನೆಲೆಗೊಂಡ ಜಾಗವು ಸುಕ್ಷೇತ್ರವಾಗಿ ಬೆಳೆದು, ಇಂದು ನಗರದ ಅತಿ ಮುಖ್ಯ ಧಾರ್ಮಿಕ ಕೇಂದ್ರವಾಗಿ ಬೆಳೆಯಲು ಕಾರಣವಾಗಿದೆ.

ಮಠ ಸ್ಥಾಪನೆ: ಶ್ರೀ ಚನ್ನಬಸವೇಶ್ವರ ಸ್ವಾಮಿಗಳು ದೇವಸ್ಥಾನದಲ್ಲಿ ಅನುಷ್ಠಾನಗೊಂಡು ತಮ್ಮ ಆಧ್ಯಾತ್ಮ ಸಾಧನೆಯಿಂದ ಭಕ್ತರ ಅಭಿಲಾಷೆಗಳನ್ನು ಈಡೇರಿಸತೊಡಗಿದರು. ಇದರಿಂದ ಈ ಕ್ಷೇತ್ರ ಹೆಸರುವಾಸಿಯಾಯಿತು. ನಂತರ ಭಕ್ತರು ಆಕರ್ಷಿತಗೊಂಡು ಈ ಸ್ಥಳವನ್ನು ಸುಕ್ಷೇತ್ರವನ್ನಾಗಿ ಬೆಳೆಸಲು ಕಾರಣರಾದರು. ಹೊಸಳ್ಳಿಯ ಶ್ರೀ ಶಂಕರಗೌಡರ ಹಿರಿಯರಾದ ಶ್ರೀ ವಿರುಪನಗೌಡ ಹಾಗೂ ಶ್ರೀ ಮಲ್ಲನಗೌಡರು ತಮ್ಮ ಅಧೀನದ ಮೂವತ್ತೊಂದು ಎಕರೆ ಭೂಮಿಯನ್ನು ಹಿರಿಯ ಚೇತನಕ್ಕೆ ಅರ್ಪಿಸಿದರು. ಹಿರೇಜಂತಗಲ್ಲಿನ ಕುಷ್ಟಗಿ ಶ್ರೀಮತಿ ಕೊಟ್ರಮ್ಮನವರು ಜಂಗಮ ಕಲ್ಲುಗುಡಿ ಸೀಮೆಯ ಹತ್ತುಎಕರೆ, ವೆಂಕನಗೌಡರು ಹತ್ತುಎಕರೆ, ರುದ್ರಮ್ಮನವರು ಎಂಟುಎಕರೆ ಭೂಮಿಯನ್ನು ಶ್ರೀ ಚನ್ನಬಸವ ಸ್ವಾಮಿಗಳಿಗೆ ಅರ್ಪಿಸಿ, ಮಲ್ಲಿಕಾರ್ಜುನ ಮಠವನ್ನು ಸ್ಥಾಪಿಸಲು ಹಾಗೂ ಬೆಳೆಸಲು ನೆರವಾದರು.

ವಿಶ್ರಾಂತ ಜೀವನಕ್ಕಾಗಿ ಇಲ್ಲಿಗೆ ಆಗಮಿಸಿ ನೆಲೆನಿಂತ ಮೇಲೆ ಈ ಸ್ಥಳವನ್ನು ಧಾರ್ಮಿಕ ಕೇಂದ್ರವಾಗಿ ರೂಪಿಸಲು ಭಕ್ತರು ತೋರಿಸಿದ ಉತ್ಸಾಹವನ್ನು ನೋಡಿದ ಗುರುಗಳಿಗೆ ಪರಮಾನಂದವಾಯಿತು. ಗುರುಗಳು ಈ ಎಲ್ಲಾ ಆಸ್ತಿಯನ್ನು ಸ್ವೀಕರಿಸಿ ೧೯೪೫ ರಲ್ಲಿ ವಿಶ್ವಸ್ಥ ಸಮಿತಿಯೊಂದನ್ನು ಸ್ಥಾಪಿಸಿದರು. ಮಠದ ಧಾರ್ಮಿಕ ಪೂಜೆ ಪುನಸ್ಕಾರಗಳು,

ಅತಿಥಿಗಳಿಗೆ ಅನ್ನದಾಸೋಹ ಸದಾ ಈ ನೂತನ ಮಠದಲ್ಲಿ ನಡೆಯಬೇಕೆಂದು ಅಪ್ಪಣೆಕೊಡಿಸಿ ವಿಲ್ ಬರೆಸಿ ೧೯೪೫ ರ ಜನವರಿಯಲ್ಲಿ ಲಿಂಗೈಕ್ಯರಾದರು. ಗುರುಗಳು ಅಪೇಕ್ಷೆಪಡದಿದ್ದರೂ ಭಕ್ತರು ಹಿಡಿ,ಹಿಡಿಯಾಗಿ ಕೊಟ್ಟ ದಾನವನ್ನು ಸ್ವೀಕರಿಸಿ ಸಮಾಜದ ಅಭಿವೃದ್ಧಿಗೆ ವಿನಿಯೋಗವಾಗಲು ವ್ಯವಸ್ಥಿತವಾಗಿ ರೂಪಿಸಿದರು. ಇಂದಿಗೂ ಗುರುಗಳ ಅಪೇಕ್ಷೆಯಂತೆ ಶ್ರೀ ಮಲ್ಲಿಕಾರ್ಜುನ ಮಠದ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳು ನಡೆಯುತ್ತಿವೆ.

ವಿಳಾಸ: ಅಧ್ಯಕ್ಷರು, ಶ್ರೀ ಮಲ್ಲಿಕಾರ್ಜುನ ಮಠ, ಗಂಗಾವತಿ-೫೮೩ ೨೨೭, ಕೊಪ್ಪಳ ಜಿಲ್ಲೆ.

ರೇಣುಕಮಠ: ಗಂಗಾವತಿ ನಗರದ ಉತ್ತರದಲ್ಲಿ ಸ್ಥಾಪನೆಯಾಗಿರುವ ಮಠಕ್ಕೆ ಗುಮ್ಮಾಳಾಪುರ ಮಠ ಅಥವಾ ರೇಣುಕ ಮಠ ಎಂದು ಕರೆಯಲಾಗುತ್ತಿದೆ. ೧೪೪೦ರ ಸುಮಾರಿನಲ್ಲಿ ಈ ಮಠವು ತಮಿಳುನಾಡಿನ ಗುಮ್ಮಳಾಪುರದಿಂದ ಇಲ್ಲಿಗೆ ಸ್ಥಳಾಂತರಗೊಂಡಿದೆ ಎಂದು ಹೇಳಲಾಗುತ್ತಿದೆ. ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿ ಬೆಳೆದಿರುವ ಈ ಮಠದ ಮೂಲ ಪುರುಷರಾದ ಶ್ರೀ ಗುರುಬಾಳೇಶ್ವರರು ಕೋಡಿಹಾಳು, ಬೆನಕನಾಳು ಹಾಗೂ ಆನೆಗುಂದಿಯಲ್ಲಿ ನೆಲೆಸಿದ್ದರು. ಆನೆಗುಂದಿಯಲ್ಲಿ ನೆಲೆಸಿದ ಸಂದರ್ಭದಲ್ಲಿ ಗುರುಗಳ ತಪೋಶಕ್ತಿಗೆ ಒಲಿದು ನೂರಾರು ಎಕರೆ ಭೂಮಿ ಉಂಬಳಿಯಾಗಿ ಬಂದಿತ್ತಂತೆ. ಆದರೆ ಆಸ್ತಿಗೆ ಆಸೆಪಡದ ಗುರುಗಳು ಎಲ್ಲವನ್ನೂ ಅಲ್ಲೇ ಬಿಟ್ಟು ಧರ್ಮಪ್ರಚಾರಕ್ಕೆ ಮುಂದೆ ಪ್ರಯಾಣ ಮಾಡಿ, ಇಲ್ಲಿಗೆ ಬಂದು ನೆಲೆಸಿದರೆಂದು ಹೇಳಲಾಗುತ್ತಿದೆ.

ಅಂದು ಸ್ಥಾಪನೆಯಾದ ಮಠ ಇಂದಿಗೂ ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ. ಈ ಮಠಕ್ಕೆ ಆಸ್ತಿ ಇಲ್ಲದಿದ್ದರೂ ಭಕ್ತರೇ ಆಸ್ತಿಯಾಗಿದ್ದಾರೆ. ಮಠದ ಆವರಣದಲ್ಲಿ ಭಕ್ತರಿಂದ ನೆರವು ಪಡೆದು ವೀರಭದ್ರೇಶ್ವರ ದೇವ ಸ್ಥಾನವನ್ನು ಸ್ಥಾಪಿಸಿದ್ದಾರೆ. ಬೆನಕನಾಳು, ಕೋಡಿಹಾಳು ಗ್ರಾಮಗಳಲ್ಲಿ ಪರಂಪರೆಯ ಗುರುಗಳ ಗದ್ದುಗೆಗಳು ಸ್ಥಾಪನೆಯಾಗಿವೆ ಎಂದು ಹೇಳಲಾಗುತ್ತಿದೆ. ಪ್ರಸ್ತುತ ಮಠದಲ್ಲಿ ಮಠಾಧೀಶರು ಇಲ್ಲದೆ ಖಾಲಿ ಉಳಿದಿದೆ.

ವಿಳಾಸ: ಶ್ರೀ ರೇಣುಕ ಮಠ (ಗುಮ್ಮಾಳಾಪುರ ಮಠ), ಗಂಗಾವತಿ, ಕೊಪ್ಪಳ ಜಿಲ್ಲೆ.

ಬೂದಗುಂಪಾ

ಗಂಗಾವತಿ ತಾಲ್ಲೂಕಿನ ಬೂದಗುಂಪಾ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಮೂವತ್ತು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಪುರಾತನ ಕಾಲದ ವಿರಕ್ತಮಠವು ಅಸ್ತಿತ್ವದಲ್ಲಿದೆ. ಇದರಿಂದ ಬೂದಗುಂಪಾ ಧಾರ್ಮಿಕ ಮತ್ತು ಶೈಕ್ಷಣಿಕವಾಗಿ ಅಭಿವೃದ್ಧಿಯನ್ನು ಕಂಡಿದೆ.

ವಿರಕ್ತಮಠ: ಬೂದಗುಂಪಾ ಗ್ರಾಮದ ಹೊರಭಾಗದಲ್ಲಿ ಶ್ರೀ ವಿರಕ್ತಮಠವು ಸ್ಥಾಪನೆಯಾಗಿದೆ. ಈ ಮಠವು ಬಳ್ಳಾರಿಯ ಕೊಟ್ಟೂರು ಸ್ವಾಮಿ ಮಠದ ಶಾಖಾಮಠವಾಗಿದೆ. ವಿರಕ್ತಸಂಪ್ರದಾಯದ ಚೀಲಾಳ ಸಮಯದ ಮಠವಾಗಿ ಈ ಗ್ರಾಮದ ಧಾರ್ಮಿಕ ಕೇಂದ್ರವಾಗಿ ಬೆಳೆದಿದೆ.

ಮಠದ ಪರಂಪರೆ: ಶ್ರೀ ಚನ್ನಬಸವ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಈ ಗ್ರಾಮಕ್ಕೆ ಬಂದು ಮಠವನ್ನು ಸ್ಥಾಪಿಸುರುತ್ತಾರೆ. ಶ್ರೀ ಚನ್ನಬಸವೇಶ್ವರ ಸ್ವಾಮಿಗಳು ಲಿಂಗೈಕ್ಯರಾದ ನಂತರ ಶ್ರೀ ಬಸವಲಿಂಗ ಸ್ವಾಮಿಗಳಿಂದ ಮಠವು ಅಭಿವೃದ್ಧಿಗೊಂಡಿದೆ. ಇವರು ಅಧಿಕಾರಕ್ಕೆ ಬಂದ ಮೇಲೆ ಮಠವನ್ನು ಹೆಚ್ಚು ಶ್ರೀಮಂತಗೊಳಿಸಿದ್ದಲ್ಲದೆ ಹೆಚ್ಚು ಪ್ರಸಿದ್ಧಿಯಾಗಲು ಕಾರಣಕರ್ತರಾದರು. ಗುರುಗಳು ಲಿಂಗೈಕ್ಯರಾದ ನಂತರ ಶ್ರೀ ಹುಚ್ಚಪ್ಪ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಧಾರ್ಮಿಕವಾಗಿ ಹೆಚ್ಚು ಪ್ರಚಾರಕ್ಕೆ ತಂದರು. ಗುರುಗಳು ತಪೋನಿಷ್ಠರಾಗಿ ತಮ್ಮ ತಪೋಶಕ್ತಿಯಿಂದ ಅನೇಕ ಪವಾಡಗಳನ್ನು ಮಾಡಿ ಜನಮನವನ್ನು ಗೆದ್ದರು. ಇವರ ಕಾಲದಲ್ಲಿ ಪಂಚಾಕ್ಷರ ಗವಾಯಿಗಳನ್ನು ಮಠಕ್ಕೆ ಕರೆಸಿ, ಮೂರು ತಿಂಗಳುಗಳ ಕಾಲ ಪುರಾಣ ಪ್ರವಚನ ಹಾಗೂ ಕೀರ್ತನೆಗಳನ್ನು ಮಾಡಿಸಿದರು.

ಇವರ ನಂತರ ಕಕ್ಕರಗೋಳದ ಶ್ರೀ ವೀರಯ್ಯ ಮತ್ತು ಶ್ರೀಮತಿ ಚನ್ನವೀರಮ್ಮನವರ ಪುತ್ರರಾಗಿ ಜನಿಸಿದ ಶ್ರೀ

ಬಸವಲಿಂಗ ಸ್ವಾಮಿಗಳು ಮಠದ ಆಡಳಿತವನ್ನು ವಹಿಸಿಕೊಂಡರು. ಇವರು ಧಾರ್ಮಿಕ ಆಚರಣೆಗಳಿಂದ ಹೆಚ್ಚು ಹೆಸರು ಮಾಡಿದ್ದಂತೆಯೇ ಸಂಗೀತ, ಕಲೆ ಮತ್ತು ಸಾಹಿತ್ಯದ ವಿಚಾರದಲ್ಲಿ ಹೆಚ್ಚು ಆಸಕ್ತಿಯನ್ನು ಹೊಂದಿದ್ದರು. ಇವರು ಮಠಕ್ಕೆ ಶ್ರೀ ಮಲ್ಲಿಕಾರ್ಜುನಮನ್ಸೂರ, ಶ್ರೀ ಬಸವರಾಜರಾಜಗುರು, ಶ್ರೀ ಸಿದ್ಧರಾಮ ಜಂಬಲದಿನ್ನಿ, ಶ್ರೀಪುಟ್ಟರಾಜು ಗವಾಯಿ ಮೊದಲಾದವರನ್ನು ಕರೆಸಿ ಸಂಗೀತ ಸುಧೆಯನ್ನು ಈ ಭಾಗದ ಭಕ್ತರಿಗೆ ಉಣಬಡಿಸಿದರು. ನಾಡಿನ ಹಿರಿಯ ಗುರುಗಳ ಸಂಪರ್ಕವನ್ನು ಹೊಂದಿದ್ದ ಇವರು ಅನೇಕ ಸತ್ಕಾರ್ಯಗಳನ್ನು ಮಾಡಿ, ವೀರಶೈವಧರ್ಮ ಬೆಳೆಯಲು ಕಾರಣಕರ್ತರಾಗಿ ಮಠವನ್ನು ಹೆಚ್ಚು ಅಭಿವೃದ್ಧಿಪಡಿಸಿದರು. ಇವರ ತರುವಾಯ ಬಳ್ಳಾರಿಯ ಕೊಟ್ಟೂರುಸ್ವಾಮಿ ಮಠದ ಗುರುಗಳು ಅಧಿಕಾರಕ್ಕೆ ಬಂದರೆಂದು ಹೇಳಲಾಗುತ್ತಿದೆ. ಹಿಂದಿನ ಗುರುಗಳು ಕೈಗೊಂಡ ಧಾರ್ಮಿಕ ಆಚರಣೆಗಳನ್ನು ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಕೊಟ್ಟೂರು ಸ್ವಾಮಿ ಮಠದ ಈಗಿನ ಗುರುಗಳಾದ ಶ್ರೀ ಸಂಗನಬಸವ ಸ್ವಾಮಿಗಳು ಮುನ್ನಡೆಸಿದ್ದಾರೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಚನ್ನಬಸವ ಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಬಸವಲಿಂಗ ಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಹುಚ್ಚಪ್ಪ ಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಎರಡನೆಯ ಬಸವಲಿಂಗ ಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಸಂಗನಬಸವ ಸ್ವಾಮಿಗಳು

ಧರ್ಮ-ಶಿಕ್ಷಣ ಕಾರ್ಯಗಳು: ಮಠದಲ್ಲಿ ಗದ್ದುಗೆಗಳಿಗೆ ನಿತ್ಯಪೂಜೆಯನ್ನು ನಡೆಸಲಾಗುತ್ತಿದೆ. ಹಿಂದಿನ ಶ್ರೀಬಸವಲಿಂಗ ಸ್ವಾಮಿಗಳು ಶ್ರೀಶೈಲ, ತಿರುಪತಿ ಮುಂತಾದ ಧರ್ಮಕ್ಷೇತ್ರಗಳಿಗೆ ನಾಡಿನ ಹಿರಿಯ ಮಠಾಧೀಶರ ನೇತೃತ್ವದಲ್ಲಿ ಭಕ್ತರನ್ನು ಕರೆದುಕೊಂಡು ಹೋಗಿ ಸಂದರ್ಶಿಸಿದ್ದಾರೆ. ಜೊತೆಗೆ ಶಿವಾನುಭವ ಪರೀಕ್ಷೆಗಳನ್ನು ಏರ್ಪಡಿಸಿ ವಿದ್ಯಾರ್ಥಿಗಳಿಗೆ ಬಾಲ್ಯದಲ್ಲಿಯೇ ಧರ್ಮದ ಕಲ್ಪನೆ ಮೂಡಲು ನೆರವಾಗಿದ್ದಾರೆ. ಮಠದ ಆವರಣದಲ್ಲಿ ಸ್ಥಾಪಿಸಿರುವ ಬಸವೇಶ್ವರ ದೇವಾಲಯದಲ್ಲಿ ನಿತ್ಯ ಎರಡು ವೇಳೆ ಪೂಜೆಯನ್ನು ನಡೆಸಲಾಗುತ್ತಿದೆ.

ಶೈಕ್ಷಣಿಕ ಸೇವೆ: ೧೯೬೩ ರಲ್ಲಿ ಕೊಟ್ಟೂರುಸ್ವಾಮಿ ಕಲ್ಯಾಣ ಕೇಂದ್ರದ ವತಿಯಿಂದ ಶ್ರೀ ಹುಚ್ಚೇಶ್ವರ ಕನ್ನಡ ಪ್ರಾಥಮಿಕ ಶಾಲೆಯನ್ನು ಪ್ರಥಮವಾಗಿ ಪ್ರಾರಂಭಿಸಲಾಗಿದೆ. ಇದರಿಂದ ಗ್ರಾಮಾಂತರದಲ್ಲಿ ಕಲಿಯುವ ಬಡಮಕ್ಕಳಿಗೆ ನೆರವಾಗಿದೆ ಹಾಗೂ ಬಡಮಕ್ಕಳಿಗೆ ಮಠದಲ್ಲಿ ಆಶ್ರಯ ಕಲ್ಪಿಸಿ ನೆರವಾಗಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಸಂಗನಬಸವ ಸ್ವಾಮಿಗಳು, ಶ್ರೀ ವಿರಕ್ತಮಠ, ಬೂದಗುಂಪಾ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ.
ಆಧಾರ:'ಕಾಯಕ ಸಿರಿ' ಸ್ಮರಣ ಸಂಚಿಕೆ, ಡಾ.ಬಿ.ವಿ.ಶಿರೂರರ ಲೇಖನ 'ಗಂಗಾವತಿ ಪ್ರದೇಶದ ವೀರಶೈವ ಮಠಗಳು'

ಸೂಳೇಕಲ್ಲು

ಗಂಗಾವತಿ ತಾಲ್ಲೂಕಿನ ಸೂಳೇಕಲ್ಲು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹದಿನೈದು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಶ್ರೀ ಬೃಹನ್ಮಠವು ಸ್ಥಾಪನೆಗೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಬೃಹನ್ಮಠ: ಸೂಳೇಕಲ್ಲು ಗ್ರಾಮದ ಮಧ್ಯಭಾಗದಲ್ಲಿ ಶ್ರೀ ಬೃಹನ್ಮಠವು ಸ್ಥಾಪನೆಯಾಗಿ, ಧಾರ್ಮಿಕ ಕಾರ್ಯಗಳ ಕೇಂದ್ರಬಿಂದುವಾಗಿ ಬೆಳೆದಿದೆ. ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿ ಪುರಾತನ ಕಾಲದಿಂದಲೂ ಹೆಸರು ಮಾಡಿದೆ.
ಮಠ ಸ್ಥಾಪನೆ: ಈ ಮಠದ ಮೂಲಮಠ ಕೆಂಬಾವಿ ಹಿರೇಮಠ ಎಂದು ಹೇಳಲಾಗುತ್ತಿದೆ. ಏಳು ತಲೆಮಾರಿನ ಹಿಂದೆ ಶ್ರೀ ವಿರೂಪಾಕ್ಷ ಸ್ವಾಮಿಗಳೆಂಬುವರ ಕಾಲದಲ್ಲಿ ಕೆಂಬಾವಿಯಲ್ಲಿ ಭೀಕರ ಬರಗಾಲ ಬಂದಿತು. ಈ ಸಂದರ್ಭದಲ್ಲಿ ಭಕ್ತರೊಡಗೂಡಿ ಗುರುಗಳು ದೇಶಸಂಚಾರಕ್ಕೆ ಹೊರಟರು. ಅರಳಹಳ್ಳಿಗೆ ಬಂದ ಗುರುಗಳು ಅಲ್ಲಿ ಮಠ ಸ್ಥಾಪನೆ ಮಾಡಿದರು. ಸಂಸಾರಿಗಳಾಗಿದ್ದ ಇವರಿಗೆ ಹಿರೇಪಟ್ಟದಯ್ಯ ಮತ್ತು ಸಣ್ಣಪಟ್ಟದಯ್ಯ ಎಂಬ ಇಬ್ಬರು ಮಕ್ಕಳಿದ್ದರು. ಹಿರೇಪಟ್ಟದಯ್ಯನಿಗೆ ದೊಡ್ಡ ವಿರೂಪಾಕ್ಷಯ್ಯ ಮತ್ತು ಸಣ್ಣ ವಿರೂಪಾಕ್ಷಯ್ಯ ಎಂಬ ಇಬ್ಬರು ಮಕ್ಕಳಿದ್ದರು. ಇವರಲ್ಲಿ

ದೊಡ್ಡ ವಿರೂಪಾಕ್ಷಯ್ಯನವರು ಸೂಳೇಕಲ್ಲಿಗೆ ಆಗಮಿಸಿ ಮಠವನ್ನು ಸ್ಥಾಪಿಸಿದರು. ಶ್ರೀ ದೊಡ್ಡ ವಿರೂಪಾಕ್ಷಯ್ಯ ಮತ್ತು ಅವರ ಕುಟುಂಬ ವರ್ಗದೇವಿಯ ಆರಾಧಕರಾಗಿದ್ದ ಕಾರಣ ಸೂಳೇಕಲ್ಲಿನಲ್ಲಿ ಪ್ರಾರಂಭವಾದ ಮಠದಲ್ಲಿ ದೇವಿಯ ಆರಾಧನೆಯ ಕಾರ್ಯ ಪ್ರಾರಂಭವಾಯಿತು. ಈ ರೀತಿ ಪ್ರಾರಂಭಗೊಂಡ ಮಠವು ಈ ಭಾಗದ ಭಕ್ತರನ್ನು ಆಕರ್ಷಿಸಿಕೊಂಡು, ಹೆಚ್ಚು ಪ್ರಸಿದ್ಧಿ ಪಡೆದು ಬೆಳೆದಿದೆ. ಭಕ್ತರು ನೂರಾರು ಸಮಸ್ಯೆಗಳನ್ನು ಹೊತ್ತು ಮಠಕ್ಕೆ ಆಗಮಿಸು ತ್ತಾರೆ. ಇವರಿಗೆ ಅವರವರ ಸಮಸ್ಯೆಗಳಿಗೆ ಅನುಗುಣವಾಗಿ ಯಾವ ಫಲಾಪೇಕ್ಷೆಯಿಲ್ಲದೆ ಪರಿಹಾರವನ್ನು ತೋರಿಸಿ, ಯಂತ್ರವನ್ನು ಬರೆದು ಕೊಟ್ಟು, ಧೈರ್ಯ ನೀಡಿ ಕಳುಹಿಸಿಕೊಡುವ ಸಂಪ್ರದಾಯ ಮಠದ್ದಾಗಿದೆ. ಭಕ್ತರು ಸಹ ಗುರುಗಳು ನೀಡಿದ ಭರವಸೆಯ ಮಾತುಗಳನ್ನು ನಂಬಿ ಪರಿಹಾರವನ್ನು ಕಂಡುಕೊಳ್ಳುವ ಪರಿಪಾಠ ಸಾಮಾನ್ಯವಾಗಿದೆ.

ಶ್ರೀ ದೊಡ್ಡ ವಿರೂಪಾಕ್ಷಯ್ಯನವರ ಕಾಲದಿಂದ ಪ್ರಾರಂಭಗೊಂಡ ಮಠದಲ್ಲಿ ಅನೇಕ ಸಾಧಕರು ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬಂದಿರುತ್ತಾರೆ. ಈಗ ಶ್ರೀ ಭುವನೇಶ್ವರ ಸ್ವಾಮಿಗಳು ಧಾರ್ಮಿಕ ಕಾರ್ಯಗಳನ್ನು ನೋಡಿ ಕೊಂಡು ಬರುತ್ತಿದ್ದಾರೆ. ಇವರು ತಮ್ಮ ವಾಕ್‌ಸಿದ್ಧಿಯಿಂದ ಖ್ಯಾತರಾಗಿದ್ದಾರೆ. ಶ್ರೀ ಭುವನೇಶ್ವರಯ್ಯ ಸ್ವಾಮಿಗಳು ಬಾಲಕರಾಗಿದ್ದಾಗಲೇ ತಮ್ಮ ತಂದೆಯನ್ನು ಕಳೆದುಕೊಂಡಿದ್ದರು. ಆಗ ಸೋದರಮಾವ ಶ್ರೀ ಶರಣ ಬಸವಯ್ಯನವರು ತನ್ನ ತಂಗಿ ಮತ್ತು ಮಕ್ಕಳ ಆರೈಕೆಯನ್ನು ನೋಡಿಕೊಳ್ಳಲು ಪಕ್ಕದ ಅರಳಹಳ್ಳಿಯಿಂದ ಇಲ್ಲಿಗೆ ಬಂದು ನೆಲೆನಿಂತರು. ವೃತ್ತಿಯಿಂದ ಶಿಕ್ಷಕರಾಗಿದ್ದ ಇವರು ಮಹಾನ್ ಸಾಧಕರಾಗಿದ್ದು, ಧಾರ್ಮಿಕ ಆಚರಣೆಗಳನ್ನು ನಿಷ್ಠೆಯಿಂದ ನಡೆಸುತ್ತಿದ್ದರು. ಇವರ ಪ್ರಭಾವ ಶ್ರೀ ಭುವನೇಶ್ವರಯ್ಯನರ ಮೇಲೆ ಗಾಢವಾಗಿ ಬೇರೂರಿತು. ಫಲವಾಗಿ ಶ್ರೀ ಭುವನೇಶ್ವರಯ್ಯನವರು ವಾಕ್‌ಸಿದ್ಧಿ ಪುರುಷರಾಗಿ, ನೊಂದುಬರುವ ಭಕ್ತರಿಗೆ ಹಾರೈಕೆ ಮಾಡಿ ಕಳುಹಿಸುವ ಶಕ್ತಿಯನ್ನು ಪಡೆದುಕೊಂಡರು. ತಲೆನೋವಿನಿಂದ ಹಿಡಿದು ಕ್ಯಾನ್ಸರ್‌ವರೆಗಿನ ರೋಗಿಗಳು ಈ ಮಠಕ್ಕೆ ಆಗಮಿಸಿ ಪರಿಹಾರವನ್ನು ಅಪೇಕ್ಷಿಸುತ್ತಾರೆ. ಅದೇ ರೀತಿ ಬಡವರಿಂದ ಬಲ್ಲಿದರವರೆಗೆ, ಗುರುಗಳಿಂದ ಪರಿಹಾರವನ್ನು ಕಂಡುಕೊಳ್ಳಲು ಮಠಕ್ಕೆ ಆಗಮಿಸುತ್ತಾರೆ.

ಶ್ರೀ ಭುವನೇಶ್ವರ ಸ್ವಾಮಿಗಳು ಮಠಕ್ಕೆ ಆಗಮಿಸುವ ಭಕ್ತರಿಗಾಗಿ ನಿತ್ಯ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಿ ದ್ದಾರೆ. ಈಗಿರುವ ಮಠದ ಕಟ್ಟಡವು ಚಿಕ್ಕದಿದ್ದು ಧಾರ್ಮಿಕ ಚಟುವಟಿಕೆಗಳಿಗೆ ಸ್ಥಳದ ಅಭಾವ ಕಂಡುಬಂದಿದ್ದರಿಂದ, ಗ್ರಾಮದ ಹೊರಭಾಗದಲ್ಲಿ ನಲವತ್ತು ಲಕ್ಷರೂಪಾಯಿಗಳ ಯೋಜನೆಯಲ್ಲಿ ಭವ್ಯವಾದ ಹಾಗೂ ವಿಶಾಲವಾದ ಕಟ್ಟಡ ವನ್ನು ನಿರ್ಮಿಸಿದ್ದಾರೆ. ಆದಿಶಕ್ತಿ ಜಗನ್ಮಾತೆಯ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದಾರೆ. ಈ ದೇವಿಗೆ ಪೂಜಾಕಾರ್ಯ ನಡೆಸ ಲಾಗುತ್ತಿದೆ. ದಿನದ ಹನ್ನೆರಡು ಗಂಟೆಗಳ ಕಾಲ ಭಕ್ತರಿಗೆ ಸಂದರ್ಶನ ಕೊಡುವ ಗುರುಗಳು, ಜಾತಿ-ಭೇದ, ಮೇಲು-ಕೀಳು, ಬಡವ-ಬಲ್ಲಿದ ಎಂಬ ವ್ಯತ್ಯಾಸವಿಲ್ಲದೆ ಎಲ್ಲರನ್ನೂ ಸಮಾನವಾಗಿ ಕಾಣುತ್ತಾ ಮಾನಸಿಕ ಸ್ಥೈರ್ಯವನ್ನು ತುಂಬುತ್ತಿದ್ದಾರೆ.

ವಿಳಾಸ: ಶ್ರೀ ಭುವನೇಶ್ವರ ಸ್ವಾಮಿಗಳು ಶ್ರೀ ಬೃಹನ್ಮಠ, ಸೂಳೇಕಲ್ಲು, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ.

ಹೆಬ್ಬಾಳ

ಗಂಗಾವತಿ ತಾಲ್ಲೂಕಿನ ಹೆಬ್ಬಾಳು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ತುಂಗಭದ್ರಾ ನದಿಯ ಎಡದಂಡೆಯ ಮೇಲೆ ಸ್ಥಾಪಿತವಾಗಿರುವ ಈ ಗ್ರಾಮವು ಆರ್ಥಿಕವಾಗಿ ಅಭಿವೃದ್ಧಿಯನ್ನು ಕಂಡಿದೆ.

ಬೋಳೊಡಿ ಬಸವೇಶ್ವರ ಶಿವಯೋಗಿ ಸಂಸ್ಥಾನ ಹಿರೇಮಠ: ಹೆಬ್ಬಾಳು ಗ್ರಾಮದ ಮಧ್ಯಭಾಗದಲ್ಲಿ ಶ್ರೀ ರಂಭಾಪುರಿ ಪೀಠದ ಶಾಖಾಮಠವಾದ ಶ್ರೀ ಬೋಳೊಡಿ ಬಸವೇಶ್ವರ ಶಿವಯೋಗಿ ಸಂಸ್ಥಾನ ಹಿರೇಮಠವು ಸ್ಥಾಪನೆಯಾಗಿದೆ.

ಮಠ ಸ್ಥಾಪನೆ: ಮಠದ ಕರ್ತೃಗುರುಗಳಾದ ಶ್ರೀ ಬೋಳೊಡಿ ಬಸವೇಶ್ವರ ಶಿವಯೋಗಿಗಳು ಕೆಂಬಾವಿಯಿಂದ ಲೋಕ ಸಂಚಾರಕ್ಕೆ ಹೊರಟು, ದೇಶ ಪರ್ಯಟನೆಯನ್ನು ಮುಗಿಸಿಕೊಂಡು ಕನಸಾವಿ, ಮುದಗಲು, ಹಂಪಿ ಹಾಗೂ ಹುಣಿಕಾಳು ಈ ಮೂಲಕ ಹೆಬ್ಬಾಳಿಗೆ ಬಂದು ನೆಲೆಸಿದರು. ಗುರುಗಳು ನಿತ್ಯ ತಪೋನಿಷ್ಠರಾಗಿ ಬಳಿಗೆ ಬರುವ ಭಕ್ತರನ್ನು ಆಶೀರ್ವದಿಸಿ ಕಳುಹಿಸಿಕೊಡುತ್ತಿದ್ದರು. ಕಾಲಕ್ರಮೇಣ ಇವರ ತಪೋಶಕ್ತಿಗೆ ತಲೆಬಾಗಿದ ಗ್ರಾಮದ ಜನರು ಗುರುಗಳು

ಇಲ್ಲೇ ನೆಲೆಸಲು ಮಠವನ್ನು ಸ್ಥಾಪಿಸಿಕೊಡುತ್ತಾರೆ. ಈ ಮಠದ ಕರ್ತೃಗುರುಗಳು ಶ್ರೀ ಬೋಳೊಡಿ ಬಸವೇಶ್ವರ ಶಿವಯೋಗಿಗಳು ಆದ ಕಾರಣ ಗುರುಗಳ ಹೆಸರಿನಿಂದಲೇ ಮಠವು ಅಭಿವೃದ್ಧಿಗೊಂಡಿದೆ. ಗುರುಗಳು ಅನೇಕ ವರ್ಷಗಳ ಕಾಲ ಇಲ್ಲಿ ಬದುಕಿ, ಇದನ್ನು ಜಾಗೃತಸ್ಥಳವನ್ನಾಗಿ ಮಾಡಿ ಲಿಂಗೈಕ್ಯರಾದರು. ಇವರ ಸಮಾಧಿಯನ್ನು ಮಠದಲ್ಲಿ ನಿರ್ಮಿಸಲಾಗಿದೆ. ಈ ಗದ್ದುಗೆ ಇಂದಿಗೂ ಪೂಜನೀಯವಾಗಿದೆ.

ಪರಂಪರೆ:

೧. ಷ.ಬ್ರ.ಶ್ರೀ ಬೋಳೊಡಿ ಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ಬಸವಾರ್ಯ ಶಿವಾಚಾರ್ಯ ಸ್ವಾಮಿಗಳು
೩. ಷ.ಬ್ರ.ಶ್ರೀ ಸಣ್ಣ ಬಸವಾರ್ಯ ಶಿವಾಚಾರ್ಯ ಸ್ವಾಮಿಗಳು
೪. ಷ.ಬ್ರ.ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು
೫. ಷ.ಬ್ರ.ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳು
೬. ಷ.ಬ್ರ.ಶ್ರೀ ಮರಿ ಶಾಂತವೀರ ಶಿವಾಚಾರ್ಯ ಸ್ವಾಮಿಗಳು
೭. ಷ.ಬ್ರ.ಶ್ರೀ ನಾಗಭೂಷಣ ಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು
೮. ಷ.ಬ್ರ.ಶ್ರೀ ಮರಿ ನಾಗಭೂಷಣ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಶ್ರೀ ಬಸವಾರ್ಯರು ತಮ್ಮ ಶ್ರೀ ಸಣ್ಣ ಬಸವಾರ್ಯರು ಅಧಿಕಾರಕ್ಕೆ ಬಂದರು. ಇವರ ಬಗ್ಗೆ ಹೆಚ್ಚು ವಿಷಯ ತಿಳಿಯದಾಗಿದೆ. ಇವರ ನಂತರ ಅದಿಕಾರಕ್ಕೆ ಬಂದ ಶ್ರೀ ಸಿದ್ಧೇಶ್ವರ ಸ್ವಾಮಿಗಳು ತಪೋನಿಧಿಗಳಾಗಿ ಮಹಿಮಾಪುರುಷರಾಗಿದ್ದರು. ಇವರು ದೇಶಸಂಚಾರದಿಂದ ಅಪಾರ ಜ್ಞಾನವನ್ನು ಸಂಪಾದಿಸಿಕೊಂಡಿದ್ದರು. ಭೂತ ಪ್ರೇತಗಳಿಂದ ಒಂದೇ ರಾತ್ರಿಯಲ್ಲಿ ಇವರು ಮಠವನ್ನು ಕಟ್ಟಿಸಿದರೆಂದು ಹೇಳಲಾಗುತ್ತಿದೆ. ಈ ಪವಾಡಪುರುಷರು ಭೂತಗಳನ್ನು ಮಠದಲ್ಲಿಯೇ ಇಟ್ಟುಕೊಂಡು ನೂರಾರು ಎಕರೆ ಭೂಮಿಯನ್ನು ಸಾಗುವಳಿ ಮಾಡಿಸುತ್ತಿದ್ದರಂತೆ. ಇದಕ್ಕೆ ಸಾಕ್ಷಿ ಎಂಬಂತೆ ಈಗಲೂ ಈ ಜಮೀನನ್ನು'ದೈವ್ವದ ಭೂಮಿ'ಯೆಂದು ಕರೆಯಲಾಗುತ್ತಿದೆ. ಶ್ರೀ ಸಿದ್ಧೇಶ್ವರ ಸ್ವಾಮಿಗಳು ತುಂಬಿ ಹರಿಯುತ್ತಿದ್ದ ತುಂಗಭದ್ರಾ ನದಿಯ ನೀರಿನ ಮೇಲೆ ಕರಿಯ ಕಂಬಳಿಯನ್ನು ಹಾಸಿ ಅದರ ಮೇಲೆ ಕುಳಿತು ನದಿಯನ್ನು ದಾಟಿ ಪವಾಡ ಮಾಡಿದ್ದನ್ನು ಇಂದಿಗೂ ಜನರು ಕಥೆಗಳ ರೂಪದಲ್ಲಿ ಹೇಳುತ್ತಾರೆ. ಇವರು ಧಾರ್ಮಿಕ ಕಾರ್ಯಗಳನ್ನು ನಡೆಸಿ, ಸಮಾಜವನ್ನು ಉದ್ಧರಿಸಿ ಮಠದಲ್ಲಿಯೇ ಲಿಂಗೈಕ್ಯರಾದರು. ಇವರ ತರುವಾಯ ಶ್ರೀ ಶಾಂತವೀರ ಸ್ವಾಮಿಗಳು, ನಂತರ ಶ್ರೀ ಮರಿಶಾಂತವೀರ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದರು. ಶ್ರೀ ಮರಿ ಶಾಂತವೀರ ಶಿವಾಚಾರ್ಯ ಸ್ವಾಮಿಗಳು ದೇವಿಉಪಾಸಕರಾಗಿ, ಬಳ್ಳಾರಿ ಜಿಲ್ಲೆಯ ರಾಂಪುರವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಅಲ್ಲೇ ಲಿಂಗೈಕ್ಯರಾದರು. ನಂತರ ಬಂದ ಶ್ರೀ ನಾಗಭೂಷಣ ಶಿವಾಚಾರ್ಯ ಸ್ವಾಮಿಗಳು ಅನೇಕ ಪವಾಡಗಳನ್ನು ಮಾಡಿ ೧೯೯೬ ರಲ್ಲಿ ಲಿಂಗೈಕ್ಯರಾದರು.

ಪುರಾತನ ಹೆಬ್ಬಾಳ ಸಂಸ್ಥಾನ ಹಿರೇಮಠಕ್ಕೆ ಶ್ರೀ ಬಸಪ್ಪಯ್ಯನವರ ಪುತ್ರರಾದ ಶ್ರೀ ಮರಿ ನಾಗಭೂಷಣ ಶಿವಾಚಾರ್ಯ ಸ್ವಾಮಿಗಳು ೧೯೯೬ ರಲ್ಲಿ ಪಟ್ಟಾಧ್ಯಕ್ಷರಾಗಿ ಅಧಿಕಾರಕ್ಕೆ ಬಂದಿದ್ದಾರೆ. ಗುರುಗಳು ಕೊಪ್ಪಳದ ಗವಿ ಮಠ ಹಾಗೂ ಮೈಸೂರಿನಲ್ಲಿ ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿಯನ್ನು ಪೂರೈಸಿಕೊಂಡು ಬಂದಿದ್ದಾರೆ.

ಧಾರ್ಮಿಕ ಕಾರ್ಯಗಳು: ಕರ್ತೃಗದ್ದುಗೆ ಹಾಗೂ ಶ್ರೀ ಸಿದ್ಧೇಶ್ವರ ಗದ್ದುಗೆಗಳನ್ನು ಒಳಗೊಂಡಂತೆ ಉಳಿದ ಗದ್ದುಗೆಗಳಿಗೆ ನಿತ್ಯಪೂಜೆ ಮಾಡಲಾಗುತ್ತಿದೆ. ಶ್ರೀ ಸಿದ್ಧೇಶ್ವರ ಸ್ವಾಮಿಗಳ ಪ್ರಭಾವಕ್ಕೆ ಒಳಗಾಗಿರುವ ಭಕ್ತರು ಪ್ರತಿ ಅಮಾವಾಸ್ಯೆಯಂದು ನಡೆಯುವ ವಿಶೇಷ ಪೂಜೆಯಲ್ಲಿ ಪಾಲ್ಗೊಳ್ಳಲು ಸಾವಿರಾರು ಸಂಖ್ಯೆಯಲ್ಲಿ ಸೇರುತ್ತಾರೆ. ಮಠದಲ್ಲಿ ಪ್ರತಿವರ್ಷ ಮಾರ್ಗಶಿರ ಶುದ್ಧ ತ್ರಯೋದಶಿಯಂದು ಕರ್ತೃಗುರುಗಳ ರಥೋತ್ಸವ ನಡೆಯುತ್ತಿದೆ. ಮಣ್ಣೆತ್ತಿನ ಅಮಾವಾಸ್ಯೆಯಂದು ಶ್ರೀ ಮರಿಶಾಂತೇಶ್ವರ ಸ್ವಾಮಿಗಳ ಪುಣ್ಯಾರಾಧನೆ ನಡೆಯುತ್ತಿದೆ. ನವರಾತ್ರಿಯಂದು ದೇವಿಪಾರಾಯಣ ನಡೆಯುತ್ತಿದೆ. ಶ್ರಾವಣಮಾಸದಲ್ಲಿ ಗುರುಗಳು ಅನುಷ್ಠಾನಗೊಂಡು ಶುಕ್ರವಾರ ಮೌನಾಚರಣೆ ಮಾಡುತ್ತಾರೆ. ಪ್ರತಿ ಅಮಾವಾಸ್ಯೆ,

ಗುರುವಾರ ಮತ್ತು ಭಾನುವಾರ ಯಂತ್ರ-ಮಂತ್ರಗಳನ್ನು ಮಾಡಿ ತಾಯತ ಕಟ್ಟುವ ಪರಿಪಾಠ ಪುರಾತನ ಕಾಲದಿಂದಲೂ ಬಂದಿದ್ದು, ಈಗಿನ ಗುರುಗಳು ಈ ಕಾಯಕವನ್ನು ಮುಂದುವರಿಸಿದ್ದಾರೆ. ಜಾತಿ ಮತಗಳ ಭೇದ-ಭಾವವಿಲ್ಲದೆ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಬಂದು ಸೇರುತ್ತಾರೆ. ಈ ಎಲ್ಲಾ ವಿಶೇಷ ಸಂದರ್ಭಗಳಲ್ಲಿ ನಿತ್ಯ ಅನ್ನದಾಸೋಹದ ಕಾರ್ಯ ನಿರಂತರವಾಗಿ ನಡೆಯುತ್ತಿರುತ್ತದೆ.

ವಿಳಾಸ: ಷ.ಬ್ರ.ಶ್ರೀ ನಾಗಭೂಣಷಣ ಶಿವಾಚಾರ್ಯ ಸ್ವಾಮಿಗಳು, ಶ್ರೀ ಸಂಸ್ಥಾನ ಹಿರೇಮಠ, ಹೆಬ್ಬಾಳ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ.

ಆಧಾರ: 'ಕಾಯಕ ಸಿರಿ' ಸ್ಮರಣ ಸಂಚಿಕೆ, ಲೇಖಕರು : ಡಾ.ಬಿ.ವಿ.ಶಿರೂರ 'ಗಂಗಾವತಿ ಪ್ರದೇಶದ ವೀರಶೈವ ಮಠಗಳು'

❑

ಯಲಬುರ್ಗ ತಾಲ್ಲೂಕು

ಕೊಪ್ಪಳ ಜಿಲ್ಲೆಯ ಯಲಬುರ್ಗ ತಾಲ್ಲೂಕು ಅಭಿವೃದ್ಧಿಯನ್ನು ಕಾಣಬೇಕಾಗಿರುವ ತಾಲ್ಲೂಕು. ಈ ತಾಲ್ಲೂಕಿನಲ್ಲಿ ವೀರಶೈವ ಧರ್ಮ ಪ್ರಬಲವಾಗಿ ಬೆಳೆದಿದೆ. ಪುರಾತನ ಕಾಲದಿಂದ ಈತನಕ ಅನೇಕ ವೀರಶೈವ ಮಠಗಳು ಸ್ಥಾಪನೆಯಾಗಿ ಸಂಸ್ಕಾರವನ್ನು ನೀಡಿವೆ. ತಾಲ್ಲೂಕಿನಾದ್ಯಂತ ಏಳು ಮಠಗಳು ಅಸ್ತಿತ್ವದಲ್ಲಿದ್ದು, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿಯನ್ನು ಸಾಧಿಸಿವೆ.

ಕುದುರೆಮೋತಿ

ಯಲಬುರ್ಗ ತಾಲ್ಲೂಕಿನ ಕುದುರೆಮೋತಿಯು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಈ ಗ್ರಾಮವು ಪುರಾತನ ಪ್ರಸಿದ್ಧವಾಗಿದ್ದು ಇಲ್ಲಿ ಮೈಸೂರು ಸಂಸ್ಥಾನ ಮಠವು ಸ್ಥಾಪನೆಯಾಗಿ, ಧಾರ್ಮಿಕ ಹಾಗೂ ಶೈಕ್ಷಣಿಕವಾಗಿ ಈ ಪ್ರಾಂತ್ಯ ಬೆಳೆಯುವಂತೆ ಮಾಡಿದೆ.

ಮೈಸೂರು ಸಂಸ್ಥಾನಮಠ: ಈ ಗ್ರಾಮದಲ್ಲಿ ಪುರಾತನ ಕಾಲದ ಶ್ರೀ ಮೈಸೂರು ಸಂಸ್ಥಾನ ಮಠವು ಸ್ಥಾಪನೆಯಾಗಿ, ಈ ಭಾಗದ ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಪ್ರಗತಿಗೆ ಕಾರಣವಾಗಿದೆ.

ಹಿನ್ನೆಲೆ: ಮಠದ ಕರ್ತೃಗುರುಗಳು ಮೈಸೂರು ಪ್ರಾಂತ್ಯದವರಾಗಿದ್ದು, ಮೈಸೂರಿನ ಮಹಾರಾಜರಿಗೆ ಎದುರಾಗಬಹುದಾಗಿದ್ದ ವಿಪತ್ತನ್ನು ತಪ್ಪಿಸಿದರು. ಇದರಿಂದ ರಾಜಪರಿವಾರವು ಸಂತೋಷಗೊಂಡು ಗುರುಗಳನ್ನು ಅರಮನೆಗೆ ಕರೆಸಿ ಸತ್ಕರಿಸಿ, ಪಾದಪೂಜೆ ಮಾಡಿ ಸಕಲ ಮರ್ಯಾದೆಯೊಂದಿಗೆ ಗೌರವಿಸಿತು.'ಮೈಸೂರಿನಲ್ಲಿ ಮೂಲ ಪೀಠವನ್ನು ಸ್ಥಾಪಿಸಿ ಗುರುಗಳು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಹೋಗಲು ದಾನ, ದತ್ತಿಯನ್ನು ನೀಡಿ ಅರಮನೆಯು ಗುರುಮನೆಗೆ ಋಣಿಯಾಯಿತು' ಎಂದು ಹೇಳಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸ್ಥಾಪನೆಗೊಂಡ ಮಠದಲ್ಲಿ ಕರ್ತೃಗುರುಗಳು ಹೆಚ್ಚು ದಿನ ಇಲ್ಲಿ ನೆಲೆಸದೆ, ಲೋಕಕಲ್ಯಾಣಾರ್ಥ ಸಂಚಾರಕ್ಕೆಂದು ಉತ್ತರದ ಕಡೆ ಹೊರಟರು.

ಮಠ ಸ್ಥಾಪನೆ: ಉತ್ತರಾಭಿಮುಖವಾಗಿ ಸಂಚಾರ ಕೈಗೊಂಡು ಗುರುಗಳು ಕುದುರೆಮೋತಿಗೆ ಆಗಮಿಸಿ ಇಲ್ಲಿ ನೆಲೆಗೊಂಡರು. ಗುರುಗಳ ತಪೋಶಕ್ತಿಗೆ ಮನಸೋತ ಭಕ್ತರು ಇಲ್ಲಿಯೇ ನೆಲೆಸಬೇಕೆಂದು ಬಿನ್ನವಿಸಿಕೊಂಡು ಗುರುಗಳಿಗಾಗಿ ಕುಟೀರವನ್ನು ಕಟ್ಟಿಸಿಕೊಡುತ್ತಾರೆ. ಭಕ್ತರ ಅಭಿಲಾಷೆಗೆ ಮನ್ನಣೆ ನೀಡಿದ ಗುರುಗಳು ಇಲ್ಲಿ ನೆಲೆಸಿ ಮಠವನ್ನು ಸ್ಥಾಪನೆ ಮಾಡುತ್ತಾರೆ. ಮೈಸೂರಿನಿಂದ ಆಗಮಿಸಿ ಇಲ್ಲಿ ಬಂದು ನೆಲೆಸಿದ ಜ್ಞಾಪಕಾರ್ಥವಾಗಿ ಈ ಮಠಕ್ಕೆ 'ಮೈಸೂರು ಸಂಸ್ಥಾನ ಮಠ'ವೆಂದು ಅಭಿಧಾನ ಮಾಡಿ, ಮಠವು ಬೆಳೆಯಲು ಕಾರಣರಾದರು. ಗುರುಗಳು ಕುದುರೆಮೋತಿ ಮಠಕ್ಕೆ ಶ್ರೀ ಕರಿಸಿದ್ಧ ದೇವರನ್ನು ನೇಮಿಸಿ, ಮತ್ತೆ ದಕ್ಷಿಣಾಭಿಮುಖವಾಗಿ ಲೋಕಸಂಚಾರ ಕೈಗೊಂಡರೆಂದು ಮಠದ ಇತಿಹಾಸದಿಂದ ತಿಳಿಯುತ್ತಿದೆ.

ಪರಂಪರೆ:

೧. ಶ್ರೀ ಕರ್ತೃ ಗುರುಗಳು (ಹೆಸರು ಲಭ್ಯವಿಲ್ಲ)
೨. ಶ್ರೀ ಮ.ನಿ.ಪ್ರ. ಕರಿಸಿದ್ಧಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಗುರುಮಹಾಂತಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಮರಿಮಹಾಂತಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಕರಿಸಿದ್ಧಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಸಿದ್ಧರಾಮಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಗುರುಮಹಾಂತಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಸಿದ್ಧರಾಮಸ್ವಾಮಿಗಳು

೯. ಶ್ರೀ ಮ.ನಿ.ಪ್ರ. ಗುರುಮಹಾಂತಸ್ವಾಮಿಗಳು
೧೦. ಶ್ರೀ ಮ.ನಿ.ಪ್ರ. ಮರಿಮಹಾಂತಸ್ವಾಮಿಗಳು
೧೧. ಶ್ರೀ ಮ.ನಿ.ಪ್ರ. ಸಿದ್ದೇಶ್ವರಸ್ವಾಮಿಗಳು
೧೨. ಶ್ರೀ ಮ.ನಿ.ಪ್ರ. ಮರಿಮಹಾಂತಸ್ವಾಮಿಗಳು
೧೩. ಶ್ರೀ ಮ.ನಿ.ಪ್ರ. ಗುರುಮಹಾಂತಸ್ವಾಮಿಗಳು
೧೪. ಶ್ರೀ ಮ.ನಿ.ಪ್ರ. ವಿಜಯ ಮಹಾಂತಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಇಲ್ಲಿ ಗುರುಗಳು ಪಟ್ಟಾಧಿಕಾರ ಪಡೆದುಕೊಳ್ಳುವ ಸಂದರ್ಭದಲ್ಲಿ ಹಿರಿಯ ಗುರುಗಳ ಕೆಲವು ಹೆಸರಿನ ಅಭಿಧಾನದೊಂದಿಗೆ ಅಧಿಕಾರಕ್ಕೆ ಬಂದಿರುವುದರಿಂದ ಪರಂಪರೆಯನ್ನು ನಿಖರವಾಗಿ ಗುರುತಿಸಲು ಗೊಂದಲವಾಗಿದೆ. ಮಠದಲ್ಲಿ ದೊರೆಯುವ ಮಾಹಿತಿಯ ಪ್ರಕಾರ ಇಪ್ಪತ್ತು ಜನ ಗುರುಗಳು ಅಧಿಕಾರಕ್ಕೆ ಬಂದಿದ್ದಾರೆ ಎಂದು ಹೇಳಲಾಗುತ್ತಿದೆ. ಹತ್ತೊಂಬತ್ತನೆಯ ಗುರುಗಳಾದ ಶ್ರೀ ಗುರುಮಹಾಂತ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮೂಲಮಠ ಹಾಗೂ ತಮ್ಮ ಎಲ್ಲಾ ಶಾಖಾಮಠಗಳನ್ನು ಅಭಿವೃದ್ಧಿಪಡಿಸಿ ಸೂಡಿಯಲ್ಲಿ ನೆಲೆಸಿದರು. ಇವರ ತರುವಾಯ ಬಂದ ಶ್ರೀ ವಿಜಯಮಹಾಂತ ಸ್ವಾಮಿಗಳು ರೋಣತಾಲ್ಲೂಕಿನ ಸವಡಿ ಗ್ರಾಮದ ಸಾರಂಗದೇವರ ಬೃಹನ್ಮಠದ ಶ್ರೀ ವೇದಮೂರ್ತಿ ಮದ್ದಾನಯ್ಯ ಮತ್ತು ಶ್ರೀಮತಿ ಗಂಗಮ್ಮನವರ ಪುತ್ರರಾಗಿ ೧೯೪೬ ರ ಫೆಬ್ರವರಿ ಹನ್ನೊಂದರಂದು ಜನಿಸಿದವರು. ಸವಡಿ ಮತ್ತು ಧಾರವಾಡದಲ್ಲಿ ವಿದ್ಯಾಭ್ಯಾಸ ಮುಗಿಸಿದ ಗುರುಗಳು ಪುತ್ರವರ್ಗದ ಸಾರಂಗ ಮಠದ ಅಧಿಕಾರವನ್ನು ೧೯೬೦ ರಲ್ಲಿ ವಹಿಸಿಕೊಂಡರು. ನಂತರ ಇವರ ಧಾರ್ಮಿಕ ಆಚರಣೆಗಳು ಮತ್ತು ಪ್ರತಿಭೆಯನ್ನು ಗುರುತಿಸಿದ ಕುದುರೆ ಮೋತಿಯ ಮೈಸೂರು ಸಂಸ್ಥಾನ ಮಠದ ಭಕ್ತರು ಉತ್ತರಾಧಿಕಾರಿಗಳನ್ನಾಗಿ ಆಯ್ಕೆಮಾಡಿಕೊಂಡರು. ೧೯೬೮ ರ ಮೇ ಹತ್ತರಂದು ಹಾಲಕೆರೆ ಮಠದ ಶ್ರೀ ಅನ್ನದಾನ ಸ್ವಾಮಿಗಳಿಂದ ಪಟ್ಟಾಧಿಕಾರದ ಅನುಗ್ರಹವನ್ನು ಕೊಡಿಸಿ ಅಧಿಕಾರಕ್ಕೆ ತಂದರು.

ಶ್ರದ್ಧಾ ನಿಷ್ಠರು: ಕ್ರಿಯಾಶೀಲತೆ, ಸಾಮಾಜಿಕ ಅಭಿವೃದ್ಧಿ ಹಾಗೂ ಮಾನವೀಯ ಮೌಲ್ಯಗಳಿಗೆ ಹೆಚ್ಚು ಒತ್ತುಕೊಟ್ಟು, ಹನ್ನೆರಡನೆಯ ಶತಮಾನದ ಬಸವಾದಿ ಪ್ರಮಥರ ತತ್ತ್ವಾದರ್ಶಗಳಿಗೆ ಬದ್ಧರಾಗಿ ಮಠದ ಅಧಿಕಾರವನ್ನು ವಹಿಸಿಕೊಂಡರು. ಮಠದ ದೊಡ್ಡ ಜವಾಬ್ದಾರಿಯನ್ನು ಹೊತ್ತ ಶ್ರೀ ವಿಜಯ ಮಹಾಂತ ಸ್ವಾಮಿಗಳು ಕೆಲವೇ ವರ್ಷಗಳಲ್ಲಿ ಕುದುರೆಮೋತಿ ಮಠದಲ್ಲಿ ಕಂಡರಿಯದ ರೀತಿಯಲ್ಲಿ ಪ್ರಗತಿಯನ್ನು ಸಾಧಿಸಿದರು. ಹಿಂದೆ ಕರ್ತೃಗುರುಗಳು ಭಕ್ತರ ಉದ್ಧಾರಕ್ಕೆಂದು ನಾಡಲ್ಲೆಲ್ಲಾ ಸಂಚರಿಸಿ ಅನುಷ್ಠಾನಗೊಂಡ ಸ್ಥಳಗಳೆಲ್ಲ ಶಾಖಾಮಠಗಳಾಗಿ ಸ್ಥಾಪಿತವಾಗಿದ್ದವು. ಆ ಶಾಖಾಮಠಗಳ ಸಂಖ್ಯೆ ಏಳುನೂರ ಎಪ್ಪತ್ತು ಎಂದು ಹೇಳಲಾಗುತ್ತಿದೆ. ಆದರೆ ಇಂದು ಕೇವಲ ಅರವತ್ತೂ್ಮರು ಮಠಗಳು ಮೈಸೂರು ಸಂಸ್ಥಾನಮಠದ ಶಾಖಾಮಠಗಳಾಗಿವೆ. ಶ್ರೀ ವಿಜಯ ಮಹಾಂತ ಸ್ವಾಮಿಗಳು ಅಧಿಕಾರಕ್ಕೆ ಬಂದ ನಂತರ ಈ ಶಾಖಾಮಠಗಳ ಅಭಿವೃದ್ಧಿ ಹಾಗೂ ಅವುಗಳ ಆಸ್ತಿಯನ್ನು ಶಿಸ್ತುಬದ್ಧಗೊಳಿಸಿದರು. ಇದರಿಂದ ಕೆಲವರಿಗೆ ಅಸೂಯೆ ಪ್ರಾರಂಭವಾಯಿತು. ಇದಾವುದಕ್ಕೂ ತಲೆಕೆಡಿಸಿಕೊಳ್ಳದ ಗುರುಗಳು ಯಾವ ಆರೋಪಕ್ಕೂ ಜಗ್ಗದೆ, ಅಪವಾದಗಳನ್ನು ಮೆಟ್ಟಿನಿಂತು ಮುಕ್ತರಾದರು. ಇಂತಹ ಮನೋಬಲದ ಗುರುಗಳು ಮೂಲಮಠದ ಅಭಿವೃದ್ಧಿ ಮತ್ತು ಶಾಖಾಮಠಗಳ ಪ್ರಗತಿಯನ್ನು ಮಾಡತೊಡಗಿದರು.

ಸಾಮಾಜಿಕ ಕಳಕಳಿ: ಶ್ರೀ ವಿಜಯ ಮಹಾಂತ ಸ್ವಾಮಿಗಳ ಕ್ರಿಯಾಶೀಲತೆಯಿಂದ ಶಾಖಾಮಠಗಳಲ್ಲಿ ಶಿಕ್ಷಣ ಸಂಸ್ಥೆಗಳು ತಲೆಎತ್ತಿದವು. ಇದರಿಂದ ಗ್ರಾಮಾಂತರ ಪ್ರದೇಶದ ಮಕ್ಕಳು ಅಕ್ಷರಾಭ್ಯಾಸಕ್ಕೆ ನೆರವಾಯಿತು. ಗುರುಗಳು ಸಾಮಾಜಿಕ ಅಭಿವೃದ್ಧಿಯ ಬಗ್ಗೆ ಚಿಂತಿಸಿ ಭಕ್ತರನ್ನು ಸಂಘಟಿಸಿ, ಧಾರ್ಮಿಕ ತಳಹದಿಯ ಮೇಲೆ ತಮ್ಮ ಬದುಕನ್ನು ರೂಪಿಸಿಕೊಳ್ಳಲು ಉಪದೇಶ ಮಾಡಿದರು. ಗುರುಗಳು ಸಾಹಿತ್ಯ, ಸಂಗೀತ ಕಲೆಗಳಲ್ಲಿ ಅಪಾರ ಆಸಕ್ತಿಯನ್ನು ಹೊಂದಿದ್ದು ಸಾಹಿತಿಗಳು, ಸಂಗೀತಗಾರರನ್ನು ಮಠಕ್ಕೆ ಆಹ್ವಾನಿಸಿ ಜನಸಮೂಹಕ್ಕೆ ಪರಿಚಯಿಸಿ ಸನ್ಮಾನಿಸುವ ಪರಿಪಾಠವನ್ನು ಬೆಳೆಸಿಕೊಂಡಿದ್ದಾರೆ.

ಈ ರೀತಿ ಗುರುಗಳು ಧಾರ್ಮಿಕ, ಸಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಮನೋಭಾವವನ್ನು ಬೆಳೆಸಿಕೊಂಡು ಈ ಭಾಗದಲ್ಲಿ ಮೈಸೂರು ಸಂಸ್ಥಾನ ಮಠವು ತಲೆಎತ್ತಿ ನಿಲ್ಲಲು ಕಾರಣಕರ್ತರಾಗಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ವಿಜಯಮಹಾಂತ ಸ್ವಾಮಿಗಳು, ಶ್ರೀ ಮೈಸೂರು ಸಂಸ್ಥಾನಮಠ, ಕುದುರೆಮೋತಿ. ಯಲಬುರ್ಗಾ ತಾಲ್ಲೂಕು, ಕೊಪ್ಪಳ ಜಿಲ್ಲೆ.

ಆಧಾರ: 'ಸಿದ್ಧಶ್ರೀ' ಲೇಖನ: ಶ್ರೀ ಸಿದ್ಧರಾಮ ಸ್ವಾಮಿಗಳು (ಸಿಹಿ)

ಕುಕುನೂರು

ಯಲಬುರ್ಗಾ ತಾಲ್ಲೂಕಿನ ಕುಕುನೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಹಿಂದೆ ಸ್ಥಾಪನೆಯಾಗಿದ್ದ ಅರಳೆಲೆ ಕಟ್ಟಿಮನಿ ಹಿರೇಮಠವು ಅಸ್ತಿತ್ವದಲ್ಲಿದ್ದು, ಧಾರ್ಮಿಕ ಕಾರ್ಯಗಳ ಕೇಂದ್ರವಾಗಿ ಬೆಳೆದಿದೆ.

ಅರಳೆಲೆ ಕಟ್ಟಿಮನಿ ಹಿರೇಮಠ: ಕುಕನೂರು ಗ್ರಾಮದ ಮಧ್ಯಭಾಗದಲ್ಲಿ ಶ್ರೀ ರಂಭಾಪುರಿಪೀಠದ ಶಾಖಾಮಠವಾದ ಶ್ರೀ ಅರಳೆಲೆ ಕಟ್ಟಿಮನಿ ಹಿರೇಮಠವು ಸ್ಥಾಪನೆಯಾಗಿ, ಧಾರ್ಮಿಕ ಸಂಸ್ಕಾರ ನೀಡುವ ಕೇಂದ್ರವಾಗಿ ಬೆಳೆದಿತ್ತು. ಪುರಾತನ ಪರಂಪರೆಯನ್ನು ಹೊಂದಿರುವ ಈ ಮಠವು ಇಂದು ಮಠಾಧೀಶರಿಲ್ಲದೆ ಖಾಲಿ ಉಳಿದಿದೆ.

ಶ್ರೀ ಚರಂತಯ್ಯ ಮತ್ತು ಶ್ರೀಮತಿ ಗಂಗಮ್ಮನವರ ಪುತ್ರರಾಗಿ ೧೯೩೦ ರಲ್ಲಿ ಜನಿಸಿದ ಶ್ರೀ ಸಂಗಮೇಶ್ವರ ಶಿವಾಚಾರ್ಯ ಸ್ವಾಮಿಗಳು, ಧಾರ್ಮಿಕ ಕಾರ್ಯಗಳ ಮೂಲಕ ಸಮಾಜವನ್ನು ಮುನ್ನಡೆಸಿದ್ದರು. ಶಿವಪೂಜಾನಿಷ್ಠರಾದ ಇವರು ೧೯೭೭ ರ ಏಪ್ರಿಲ್ ಎಂಟರಂದು ಲಿಂಗೈಕ್ಯರಾದ ನಂತರ ಮಠವು ಖಾಲಿ ಉಳಿದಿದೆ. ಈಗ ಉತ್ತರಾಧಿಕಾರಿಗಳ ನೇಮಕಕ್ಕೆ ಸಿದ್ಧತೆ ನಡೆದಿದೆ.

ವಿಳಾಸ: ಶ್ರೀ ಅರಳೆಲೆ ಕಟ್ಟಿಮನಿ ಹಿರೇಮಠ, ಕುಕನೂರು, ಯಲಬುರ್ಗಾ ತಾಲ್ಲೂಕು, ಕೊಪ್ಪಳ ಜಿಲ್ಲೆ.

ತಳಕಲ್ಲು

ಯಲಬುರ್ಗಾ ತಾಲ್ಲೂಕಿನ ತಳಕಲ್ಲು ತಾಲ್ಲೂಕು ಕೇಂದ್ರದಿಂದ ಹತ್ತು ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ಸ್ಥಾಪನೆಯಾಗಿದ್ದ ಹಿರೇಮಠವು ಧಾರ್ಮಿಕ ಆಚರಣೆಗಳಿಂದ ಹೆಚ್ಚು ಹೆಸರು ಪಡೆದಿತ್ತು.

ಹಿರೇಮಠ: ತಳಕಲ್ಲು ಗ್ರಾಮದಲ್ಲಿ ಪುರಾತನ ಕಾಲದ ಹಿರೇಮಠವು ಸ್ಥಾಪನೆಯಾಗಿದೆ. ಹಿಂದೆ ವೈಭವಯುತವಾಗಿ ಮೆರೆದ ಈ ಮಠವು ಇಂದು ಮಠಾಧೀಶರಿಲ್ಲದೆ ಪೂರ್ಣವಾಗಿ ಜೀರ್ಣಗೊಂಡಿದೆ. ಈ ಗ್ರಾಮದ ಕೆಲವರ ಅಭಿಪ್ರಾಯದಂತೆ ಕಳೆದ ಐವತ್ತು ವರ್ಷಗಳ ಹಿಂದೆ ಮಠಾಧೀಶರು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದರು. ಅವರು ಲಿಂಗೈಕ್ಯರಾದ ನಂತರ ಉತ್ತರಾಧಿಕಾರಿಗಳಿಲ್ಲದೆ ಮಠವು ಜೀರ್ಣಗೊಂಡಿದೆ ಎಂದು ಅಲ್ಲಿನ ಭಕ್ತರು ತಿಳಿಸುತ್ತಾರೆ.

ಬೆದವಟಿ

ಯಲಬುರ್ಗಾ ತಾಲ್ಲೂಕಿನ ಬೆದವಟಿಯು ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಹದಿನೈದು ಕಿ.ಮೀ ದೂರದಲ್ಲಿದೆ. ವೇದವತಿ ಎಂಬುದು ವೇದವಟಿಯಾಗಿ ನಂತರ ಬೆದವಟಿಯಾಗಿ ರೂಪಾಂತರಗೊಂಡಿದೆ ಎಂದು ಸ್ಥಳನಾಮದ ಬಗ್ಗೆ ತಿಳಿದು ಬರುತ್ತದೆ. ಇಲ್ಲಿ ಶ್ರೀ ಹಿರೇಮಠವು ಸ್ಥಾಪನೆಯಾಗಿ ಈ ಗ್ರಾಮದ ಧಾರ್ಮಿಕ ಕೇಂದ್ರಬಿಂದುವಾಗಿ, ಭಕ್ತರನ್ನು ಸನ್ಮಾರ್ಗದಲ್ಲಿ ನಡೆಸಲು ನೆರವಾಗಿದೆ.

ಹಿರೇಮಠ: ಬೆದವಟಿಯು ಶ್ರೀ ಹಿರೇಮಠದ ಪರಂಪರೆಯು ಪ್ರಾಚೀನವಾದದ್ದೆಂದು ಹೇಳಲಾಗುತ್ತಿದೆ.ಈ ಮಠದ ಪ್ರಥಮ ಪಟ್ಟಾಧ್ಯಕ್ಷರಾದ ಶ್ರೀ ೧೦೮ ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಸ್ಥಾಪಿಸಿ ಪರಂಪರೆಗೆ ನಾಂದಿ

ಹಾಡಿದರು. ಧರ್ಮಜಾಗೃತಿಗಾಗಿ ಮಠವನ್ನು ಸ್ಥಾಪಿಸಿ, ವೀರಶೈವ ಧರ್ಮವನ್ನು ಪ್ರಚಾರಪಡಿಸಿದರು. ಗುರುಗಳು ಮೇಧಾವಿಗಳಾಗಿದ್ದು, ಪಂಚಪೀಠದ ಜಗದ್ಗುರುಗಳ ನಿಕಟಸಂಪರ್ಕವನ್ನು ಹೊಂದಿ ಭಕ್ತರನ್ನು ಮುನ್ನಡೆಸಿದರು. ಇವರ ವಿದ್ವತ್ತಿಗೆ ಹಾಗೂ ಪ್ರಭಾವಕ್ಕೆ ಮಣಿದಿದ್ದ ಅನೇಕ ಪಾಳೆಗಾರರು ಸಂಗನಾಳು, ಬೆದವಟಿ, ಶಿರೂರ, ಮುದ್ದಾಪುರ, ಅರಕೇರಿ ಹಾಗೂ ಮಲಕ ಸಮುದ್ರ ಈ ಆರು ಗ್ರಾಮಗಳಲ್ಲಿ ಜಮೀನನ್ನು ಇನಾಂ ನೀಡಿ, ಮಠವು ಚಿರಸ್ಥಾಯಿಯಾಗಿ ಬೆಳೆಯಲು ನೆರವಾಗಿದ್ದರು.

ಪರಂಪರೆ:

೧. ಷ.ಬ್ರ.ಶ್ರೀ ೧೦೮ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ೧೦೮ ಎರಡನೆಯ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ೧೦೮ ಗುರುಲಿಂಗಯ್ಯ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ೧೦೮ ಅನ್ನದಾನ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ೧೦೮ ಚರಂತಯ್ಯ ಬಸವಲಿಂಗ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ೧೦೮ ಮೂರನೆಯ ಸಿದ್ಧರಾಮ ಬಸವಲಿಂಗ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ೧೦೮ ಪುಷ್ಪದಯ್ಯ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ೧೦೮ ಪಂಚಾಕ್ಷರ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ೧೦೮ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೧೦. ಷ.ಬ್ರ.ಶ್ರೀ ೧೦೮ ಶಿವಸಂಗೇಶ್ವರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಮೊದಲ ಗುರುಗಳ ಹೆಸರನ್ನು ಅಭಿಧಾನವಾಗಿ ಪಡೆದು ಪಟ್ಟಾಧಿಕಾರ ವಹಿಸಿಕೊಂಡ ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು, ಸಂಗನಹಾಳು ಶಾಖಾಮಠದಲ್ಲಿ ವಾಸ್ತವ್ಯ ಮಾಡಿ, ತಮ್ಮ ಅಧೀನದ ಆರು ಮಠಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದರು. ಇವರು ಶಿವಪೂಜಾನಿಷ್ಠರಾಗಿ, ಪವಾಡ ಪುರುಷರಾಗಿ ಹೆಸರು ಮಾಡಿದ್ದರು. ಇವರ ನಂತರ ಮಠದ ವಂಶಸ್ಥರಾದ ಶ್ರೀ ಪಟದಯ್ಯನವರ ಪುತ್ರರಾದ ಶ್ರೀ ಗುರುಲಿಂಗ ಸ್ವಾಮಿಗಳು ಅಧಿಕಾರಕ್ಕೆ ಬಂದರು. ನಂತರ ಬಂದಂತಹ ಶ್ರೀ ಅನ್ನದಾನ ಶಿವಾಚಾರ್ಯ ಸ್ವಾಮಿಗಳು ಮತ್ತು ಶ್ರೀ ಚರಂತಯ್ಯ ಶಿವಾಚಾರ್ಯ ಸ್ವಾಮಿಗಳೂ ಸಹ ತಮ್ಮ ಹಿಂದಿನ ಗುರುಗಳಂತೆ ಸಂಗನಹಾಳು ಮಠದಲ್ಲಿಯೇ ನೆಲೆಸಿದ್ದರು.

ಇವರ ತರುವಾಯ ಅಧಿಕಾರಕ್ಕೆ ಬಂದ ಆರನೆಯ ಪಟ್ಟಾಧ್ಯಕ್ಷರಾದ ಮೂರನೆಯ ಶ್ರೀ ಸಿದ್ಧರಾಮ ಸ್ವಾಮಿಗಳು ಸಂಕನಾಳ ದಲ್ಲಿ ಅಧಿಕಾರ ಪಡೆದು, ಬೆದವಟಿ ಮಠದಲ್ಲಿ ಬಂದು ನೆಲೆಸಿದರು. ಅಲ್ಲಿಂದ ಈವರೆಗೆ ಎಲ್ಲಾ ಗುರುಗಳು ಬೆದವಟಿಯನ್ನೇ ತಮ್ಮ ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡು ಅಧಿಕಾರ ನಡೆಸಿದ್ದಾರೆ. ಶ್ರೀ ಸಿದ್ಧರಾಮಯ್ಯ ಹಿರೇಮಠ ಮತ್ತು ಶ್ರೀಮತಿ ಗುರುಲಿಂಗಮ್ಮನವರ ಪುತ್ರರಾಗಿ ೧೯೪೫ ರ ಜುಲೈ ನಾಲ್ಕರಂದು ಜನಿಸಿದ ಶ್ರೀ ಶಿವಸಂಗಮೇಶ್ವರ ಸ್ವಾಮಿಗಳು ಮುದ್ದಾಪುರ, ಕಿನ್ನಾಳದಲ್ಲಿ ಪ್ರಾಥಮಿಕ ಮತ್ತು ಕೊಪ್ಪಳದಲ್ಲಿ ಪ್ರೌಢಶಾಲಾ ಶಿಕ್ಷಣವನ್ನು ಮುಗಿಸಿ, ಸಂಸ್ಕೃತ, ಜ್ಯೋತಿಷ್ಯ ಮತ್ತು ಶಿಕ್ಷಕ ತರಬೇತಿ ಕೇಂದ್ರದಲ್ಲಿ ಎರಡು ವರ್ಷ ತರಬೇತಿ ಪಡೆದು ಲೌಕಿಕ ಬದುಕಿನ ಕಡೆ ಮುಖ ಮಾಡದೆ ಆಧ್ಯಾತ್ಮ ಚಿಂತನೆಯಿಂದ ಹಿರಿಯ ಗುರುಗಳಾದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳ ಮನಸ್ಸನ್ನು ಗೆದ್ದರು. ೧೯೬೪ ರಲ್ಲಿ ಮುನಿರಾಬಾದಿನಲ್ಲಿದ್ದಾಗ ತುಂಗಾ ನದಿಯಲ್ಲಿ ಸ್ನಾನಮಾಡುವ ಸಂದರ್ಭದಲ್ಲಿ ಕಾವಿಬಣ್ಣದ ಜೋಳಿಗೆ ದೊರೆಯಿತಂತೆ. ಈ ಘಟನೆಯಿಂದ ಮಠದ ಹಿರಿಯ ಗುರುಗಳು 'ಇವರು ಜಂಗಮ ಜ್ಯೋತಿಯಾಗಿ ಬೆದವಟಿ ಹಿರೇಮಠದ ಉದ್ಧಾರಕರಾಗಿ ಕಂಗೊಳಿಸುತ್ತಾರೆ' ಎಂದು ಹೇಳಿ ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಕಮಾಡಿಕೊಂಡರು. ನಂತರ ೧೯೭೦ರ ಮೇ ಎಂಟರಂದು ಶ್ರೀ ಅರಳೆಲೆ ಕಟ್ಟಿಮನಿ ಹಿರೇಮಠದ ಶ್ರೀ ಷಡಕ್ಷರ ಶಿವಾಚಾರ್ಯ ಸ್ವಾಮಿಗಳಿಂದ ಪಟ್ಟಾಧಿಕಾರದ ದೀಕ್ಷೆಯನ್ನು ಕೊಡಿಸಿ ಮಠದ ಅಧಿಕಾರಕ್ಕೆ ತಂದರು. ಗುರುಗಳು ಮೇಲೆ ಮಠವನ್ನು ಸರ್ವಾಂಗೀಣವಾಗಿ

ಅಭಿವೃದ್ಧಿಗೆ ತಂದರು.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಐದು ಗದ್ದುಗೆಗಳಿಗೆ ನಿತ್ಯಪೂಜೆ, ಅಮಾವಾಸ್ಯೆ,ಹುಣ್ಣಿಮೆ, ಶ್ರಾವಣ ಮತ್ತು ಕಾರ್ತೀಕಮಾಸದಲ್ಲಿ ವಿಶೇಷ ಪೂಜೆ, ಪಾಲ್ಗುಣ ಮಾಸದಲ್ಲಿ ಒಂಬತ್ತನೆಯ ಪಟ್ಟಾಧ್ಯಕ್ಷರಾದ ಶ್ರೀ ಸಿದ್ಧಲಿಂಗ ಸ್ವಾಮಿಗಳ ಪುಣ್ಯಾರಾಧನೆ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಪಾಲ್ಗುಣಮಾಸದಲ್ಲಿ ಜಾತ್ರಾಮಹೋತ್ಸವವನ್ನು ಏರ್ಪಡಿಸಿ, ವಿಶೇಷ ಪೂಜೆ ಹಾಗೂ ವೈವಿಧ್ಯಮಯ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಮಠದಲ್ಲಿ ಪಂಚಪೀಠಾಧೀಶರನ್ನು ಕರೆಸಿ ಅಡ್ಡಪಲ್ಲಕ್ಕಿ ಉತ್ಸವವನ್ನು ಏರ್ಪಡಿಸಲಾಗುತ್ತಿದೆ. ಮಠದ ವತಿಯಿಂದ ನಡೆಯುವ ಎಲ್ಲಾ ಧಾರ್ಮಿಕ ಸಭೆ ಸಮಾರಂಭ ಗಳಲ್ಲಿ ಮಠಕ್ಕೆ ಆಗಮಿಸುವ ಭಕ್ತರಿಗೆ, ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಪ್ರತಿವರ್ಷ ಮಾರ್ಚ್ ತಿಂಗಳಲ್ಲಿ ಸಾಮೂಹಿಕ ವಿವಾಹಗಳನ್ನು ನಡೆಸಲಾಗುತ್ತಿದೆ.

ವಿಳಾಸ:ಷ.ಬ್ರ.ಶ್ರೀ ಶಿವಸಂಗಮೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀಹಿರೇಮಠ, ಬೆದವಟ್ಟಿ, ಯಲಬುರ್ಗ ತಾ, ಕೊಪ್ಪಳ ಜಿಲ್ಲೆ.

ಮಂಗಳೂರು

ಯಲಬುರ್ಗ ತಾಲ್ಲೂಕಿನ ಮಂಗಳೂರು ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಹಿಂದೆ ಮೂರು ಮಠಗಳು ಅಸ್ತಿತ್ವದಲ್ಲಿದ್ದವೆಂದು ಹೇಳಲಾಗುತ್ತದೆ. ಆದರೆ ಇಂದು ಎರಡು ಮಠಗಳು ಅಸ್ತಿತ್ವವನ್ನು ಕಳೆದುಕೊಂಡಿದ್ದು, ಶ್ರೀ ಅರಳೆಲೆ ಕಟ್ಟಿಮನಿ ಹಿರೇಮಠವು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ಅರಳಿಲೆ ಕಟ್ಟಿಮನಿ ಹಿರೇಮಠ: ಮಂಗಳೂರು ಗ್ರಾಮದ ಮಧ್ಯಭಾಗದಲ್ಲಿ ಶ್ರೀ ರಂಭಾಪುರಿ ಪೀಠದ ಶಾಖಾಮಠವಾದ ಶ್ರೀ ಅರಳೆಲೆ ಕಟ್ಟಿಮನಿ ಹಿರೇಮಠವು ಸ್ಥಾಪನೆ ಯಾಗಿದೆ. ಪುರಾತನ ಕಾಲದ ಈ ಮಠವು ಶ್ರೀ ಷಡಕ್ಷರಿ ಶಿವಾಚಾರ್ಯ ಸ್ವಾಮಿಗಳಿಂದ ಹೆಚ್ಚು ಪ್ರಚಾರಕ್ಕೆ ಬಂದಿತು.

ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದ ಈ ಮಠವು ಧಾರ್ಮಿಕ ಆಚರಣೆಗಳಿಗಷ್ಟೇ ಸೀಮಿತವಾಗದೆ, ಸ್ವತಂತ್ರ ಪೂರ್ವದಲ್ಲಿದ್ದ ಈ ಮಠದ ಶ್ರೀ ಷಡಕ್ಷರಿ ಸ್ವಾಮಿಗಳು ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮನ್ನು ತೊಡಗಿಸಿಕೊಂಡು ಸೆರೆವಾಸವನ್ನು ಅನುಭವಿಸಿದರು. ಇವರು ರಾಷ್ಟ್ರಪ್ರೇಮ ಪ್ರಜ್ಞೆಯನ್ನು ಭಕ್ತರಲ್ಲಿ ಬಿತ್ತಿ ಯುವಜನಾಂಗಕ್ಕೆ ಚೇತನ ನೀಡುವ ಶಕ್ತಿಯಾಗಿದ್ದರು. ಗುರುಗಳು ಶ್ರೀ ಮುದ್ದಯ್ಯ ಮತ್ತು ಶ್ರೀಮತಿ ಸಿದ್ಧಮ್ಮನವರ ಪುತ್ರರಾಗಿ ಜನಿಸಿ, ಪ್ರಾಥಮಿಕ ಶಿಕ್ಷಣವನ್ನು ಮಂಗಳೂರಿನಲ್ಲಿ ಮುಗಿಸಿ, ಬೆಳಗಾವಿಯ ಆಯುರ್ವೇದ್ಯ ಕಾಲೇಜಿನಲ್ಲಿ ಡಿಪ್ಲೋಮ ಪದವಿಯನ್ನು ಪಡೆದು ಮಂಗಳೂರಿನಲ್ಲಿ ಆಯುರ್ವೇದ್ಯ ಆಸ್ಪತ್ರೆಯನ್ನು ಪ್ರಾರಂಭಿಸಿದ ಇವರು ಧಾರ್ಮಿಕ, ಸಾಮಾಜಿಕ ಸೇವೆಯ ಜೊತೆಗೆ ದೇಶಸೇವೆಯನ್ನು ಕೈಗೊಂಡ ಮಹಾಮಹಿಮರು. ಇವರು ಸರಳ ಸಜ್ಜನಿಕೆಯಿಂದ, ಹಸನ್ಮುಖಿಗಳಾಗಿ ಸದಾಚಿಂತನ ಶೀಲರಾಗಿ ಹಾಗೂ ಕಾಯಕಯೋಗಿಯಾಗಿ ಕೃಷಿಯಲ್ಲಿ ತೊಡಗಿಸಿಕೊಂಡು ಮಠವನ್ನು ಅಭಿವೃದ್ಧಿ ಪಡಿಸಿದ್ದರು. ಇವರು ತಮ್ಮ ಸಹೋದರ ಸಂಬಂಧಿ ಶ್ರೀ ಪಂಚಾಕ್ಷರಯ್ಯನವರ ಪುತ್ರರಾದ ಶ್ರೀ ಸಿದ್ಧಲಿಂಗ ಸ್ವಾಮಿಗಳಿಗೆ ಅಧಿಕಾರವನ್ನು ನೀಡಿ ಲಿಂಗೈಕ್ಯರಾಗಿದ್ದಾರೆ.

ಪರಂಪರೆ:

೧. ಷ.ಬ್ರ.ಶ್ರೀ ಷಡಕ್ಷರ ಶಿವಾಚಾರ್ಯಸ್ವಾಮಿಗಳು

೨. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು

ಮಠದ ಪರಂಪರೆಯಲ್ಲಿ ಈ ಎರಡು ಹೆಸರುಗಳನ್ನು ಮಾತ್ರ ಗುರುತಿಸಬಹುದಾಗಿದೆ. ಪುರಾತನ ಕಾಲದ ಮಠವಾದರೂ ಆಧಾರಗಳ ಕೊರತೆಯಿಂದ ಪರಂಪರೆಯ ಗುರುಗಳ ಹೆಸರುಗಳನ್ನು ದಾಖಲಿಸುವುದು ಕಷ್ಟವಾಗಿದೆ. ಲಿಂಗೈಕ್ಯ ಗುರುಗಳ ನಾಲ್ಕು ಗದ್ದುಗೆಗಳು ಮಠದ ಜಮೀನಿನಲ್ಲಿ ಸ್ಥಾಪಿತವಾಗಿವೆ. ಶ್ರೀ ಷಡಕ್ಷರ ಶಿವಾಚಾರ್ಯ ಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಪ್ರಾಥಮಿಕ, ಪ್ರೌಢಶಿಕ್ಷಣವನ್ನು ಮಂಗಳೂರಿನಲ್ಲಿ

ಮುಗಿಸಿ, ಸಂಸ್ಕೃತ ಮತ್ತು ವೇದಾಗಮಗಳನ್ನು ಕಲಿತು, ಸಮಾಜಕ್ಕೆ ಧಾರ್ಮಿಕ ಮಾರ್ಗದರ್ಶನವನ್ನು ನೀಡುವ ಗುರುಗಳಾಗಿ ಬೆಳೆದಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಅರಳೆಲೆ ಕಟ್ಟಿಮನಿ ಹಿರೇಮಠ, ಮಂಗಳೂರು, ಯಲಬುರ್ಗ ತಾಲ್ಲೂಕು, ಕೊಪ್ಪಳ ಜಿಲ್ಲೆ.
ಆಧಾರ: 'ಸಿದ್ಧಶ್ರೀ' ಲೇಖನ: ಶ್ರೀ ಸಿದ್ಧರಾಮ ಸ್ವಾಮಿಗಳು (ಸಿಹಿ)

ಯಲಬುರ್ಗ

ಕೊಪ್ಪಳ ಜಿಲ್ಲೆಯ ಯಲಬುರ್ಗ ಪಟ್ಟಣವು ಜಿಲ್ಲಾ ಕೇಂದ್ರದಿಂದ ಉತ್ತರಕ್ಕೆ ಇಪ್ಪತ್ತೈದು ಕಿ.ಮೀ ದೂರದಲ್ಲಿದೆ. ತಾಲ್ಲೂಕು ಕೇಂದ್ರ ಸ್ಥಳವಾಗಿರುವ ಯಲಬುರ್ಗದಲ್ಲಿ ವೀರಶೈವ ಧರ್ಮ ಹೆಚ್ಚು ಪ್ರಸಿದ್ಧಿ ಪಡೆದು ಬೆಳೆದಿದೆ. ಇಲ್ಲಿ ಶ್ರೀ ಸಿದ್ಧರಾಮೇಶ್ವರ ಸಂಸ್ಥಾನ ಹಿರೇಮಠ ಮತ್ತು ಶ್ರೀ ಶ್ರೀಧರಮುಡಿ ಮಠವು ಸ್ಥಾಪನೆಯಾಗಿ ಈ ಪಟ್ಟಣದ ಧಾರ್ಮಿಕ ಆಚರಣೆಯ ಕೇಂದ್ರಬಿಂದುವಾಗಿ ಬೆಳೆದಿವೆ.

ಸಿದ್ಧರಾಮೇಶ್ವರ ಸಂಸ್ಥಾನ ಹಿರೇಮಠ: ಯಲಬುರ್ಗ ಪಟ್ಟಣದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಸಿದ್ಧರಾಮೇಶ್ವರ ಸಂಸ್ಥಾನ ಹಿರೇಮಠವು ಪುರಾತನ ಕಾಲದಲ್ಲಿ ಸ್ಥಾಪನೆಗೊಂಡ ಮಠವೆಂದು ಹೇಳಲಾಗುತ್ತಿದೆ. ಶ್ರೀಶೈಲ ಪೀಠದ ಶಾಖಾಮಠವಾಗಿ ಬೆಳೆದಿರುವ ಈ ಮಠವು ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದಿದೆ.

ಶ್ರೀ ಪರ್ವತಲಿಂಗ ಸ್ವಾಮಿ ಎಂಬುವವರ ಎರಡನೆಯ ಪುತ್ರರಾದ ಶ್ರೀ ರುದ್ರಮುನಿ ಸ್ವಾಮಿಗಳು ಕಲ್ಯಾಣದಲ್ಲಿ ಮಠವನ್ನು ಸ್ಥಾಪಿಸಿದರೆಂದು ಹೇಳಲಾಗಿದೆ. ಇವರು ಪವಾಡಪುರುಷರಾಗಿ ಹೆಚ್ಚುಹೆಸರು ಮಾಡಿದ್ದರು ಕಲ್ಯಾಣದಲ್ಲಿ ಧಾರ್ಮಿಕ ಆಚರಣೆಗಳನ್ನು ನಡೆಸಿ ಲೋಕೋದ್ಧಾರಕ್ಕೆಂದು ದೇಶಸಂಚಾರ ಹೊರಟು ಸುರಪುರಕ್ಕೆ ಬಂದು ನೆಲೆಸಿದರು. ಆ ಕಾಲದಲ್ಲಿ ಪಾಮಾನಾಯಕ ಎಂಬುವನು ಪಾಳೆಗಾರನಾಗಿದ್ದ. ಇವನಿಗೆ ಅನೇಕ ವರ್ಷಗಳಿಂದ ಮಕ್ಕಳಿಲ್ಲದೆ ದುಃಖತಪ್ತನಾಗಿದ್ದ. ಈ ಸಮಯದಲ್ಲಿ ಪವಾಡಪುರುಷರು ತನ್ನ ರಾಜಧಾನಿಗೆ ಆಗಮಿಸಿರುವ ವಿಚಾರ ತಿಳಿದು ಗುರುಗಳನ್ನು ಅರಮನೆಗೆ ಆಹ್ವಾನಿಸಿ ಗೌರವಿಸಿದ. ಗುರುಗಳು ಪಾಳೆಗಾರನ ದುಃಖಕ್ಕೆ ಕಾರಣವನ್ನು ತಿಳಿದುಕೊಂಡು ಪಾಮಾನಾಯಕ ಮತ್ತು ಆತನ ಹೆಂಡತಿ ಮಾರಮ್ಮನಿಗೆ ವಿಭೂತಿ, ರುದ್ರಾಕ್ಷಿಗಳನ್ನು ಕೊಟ್ಟು ಆಶೀರ್ವದಿಸಿದರು. ಇದರಿಂದ ಸಂತೋಷಗೊಂಡ ಪಾಳೆಗಾರನು ಹಿರೇಹೊಳಿ, ಬೆಂಡಿ, ಬೊಮ್ಮನಹಳ್ಳಿ, ಹಿರೇನೂರು ಮತ್ತು ಮಂದಾಲಿ ಗ್ರಾಮಗಳನ್ನು ಗುರುಗಳಿಗೆ ಉಂಬಳಿಯಾಗಿ ನೀಡಿದನು, ಎಂಬ ಜನಪದ ಕಥೆ ಜನಜನಿತವಾಗಿದೆ.

ಶ್ರೀ ರುದ್ರಮುನಿ ಸ್ವಾಮಿಗಳು ಭಕ್ತರ ಉದ್ಧಾರವನ್ನು ಬಯಸಿ ಧರ್ಮಾನುಷ್ಠಾನ ಕೈಗೊಂಡರು. ಇವರು ತಮ್ಮ ಸಹೋದರ ಸಂಬಂಧಿಯಾದ ಶ್ರೀ ಸಿದ್ಧರಾಮ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿಕೊಂಡು ಸ್ಥಿರ ಪಟ್ಟಾಧಿಕಾರವನ್ನು ನೀಡಿದರು. ಶ್ರೀ ಸಿದ್ಧರಾಮ ಸ್ವಾಮಿಗಳು ಹಿರಿಯ ಗುರುಗಳ ಆಶೀರ್ವಾದದಂತೆ ಮಠದ ಆಡಳಿತವನ್ನು ನಡೆಸಿ, ರುದ್ರಗುಂಜಿ ಗ್ರಾಮದಲ್ಲಿ ಲಿಂಗೈಕ್ಯರಾದರು. ಇವರ ಗದ್ದುಗೆ ಇಂದಿಗೂ ಪೂಜಿಸಲ್ಪಡುತ್ತಿದೆ.

ಮಠ ಸ್ಥಾಪನೆ: ಈ ಪರಂಪರೆಯಲ್ಲಿ ಬಂದಂತಹ ಶ್ರೀ ಸೊಲಭ ಸ್ವಾಮಿಗಳು ಹುಲಿಯನ್ನೇರಿ ಸಂಚರಿಸುತ್ತಾ ಧರ್ಮ ಕಾರ್ಯವನ್ನು ಮಾಡುತ್ತಿದ್ದರಂತೆ. ಇವರು ಲೋಕಸಂಚಾರದಲ್ಲಿದ್ದಾಗ ಯಲಬುರ್ಗ ಪಾಳೆಗಾರನು ಗುರುಗಳಿಗೆ ಯಲಬುರ್ಗದ ಚಿಕ್ಕಮ್ಯಾಗೇರಿಯಲ್ಲಿ ಮಠವನ್ನು ಕಟ್ಟಿಸಿಕೊಡುತ್ತಾನೆ.ಗುರುಗಳು ಹುಲಿಯನ್ನೇರಿ ಸಂಚರಿಸುತ್ತಿದ್ದ ಕಾರಣ ಈ ಮಠ ಹುಲಿಕಂತೆಮಠ ಎಂದು ರೂಢಿಗತವಾಗಿ ಪ್ರಸಿದ್ಧಿ ಪಡೆದಿರಬಹುದು. ಈ ಮಠದ ಸ್ಥಾಪಕ ಗುರುಗಳು ಯಲಬುರ್ಗಿಯಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ಗದ್ದುಗೆಯು ಗ್ರಾಮದ ಹೊರಭಾಗದಲ್ಲಿರುವ ಚೌಕಿಮಠದಲ್ಲಿ ಸ್ಥಾಪನೆಯಾಗಿದೆ. ಹನ್ನೆರಡನೆಯ ಶತಮಾನದಲ್ಲಿ ಯಲಬುರ್ಗಿಯನ್ನು ಆಳಿದ ಸಿಂಧರು ಈ ಮಠದ ಶಿಷ್ಯರಾಗಿ ಗುರುಗಳ ಕೃಪಾಶೀರ್ವಾದದಿಂದ ಬೆಳೆದಿದ್ದರಂತೆ. ಸಿಂಧು ಅರಸರ ರಾಷ್ಟ್ರಧ್ವಜ ನಾಗಚಿಹ್ನೆಯಾಗಿದ್ದು ಮಠದಲ್ಲಿಯೂ ಸಹ ನಾಗಪೂಜೆಗೆ ಹೆಚ್ಚು ಪ್ರಾಶಸ್ತ್ಯ

ಕೊಡುತ್ತಿರುವುದನ್ನು ಗಮನಿಸಿದರೆ ಮಠದ ಮತ್ತು ಅರಸರ ಸಂಬಂಧದ ಅನ್ಯೋನ್ಯತೆ ಎಂಥದ್ದು ಎಂದು ತಿಳಿಯುತ್ತದೆ.

ಪರಂಪರೆ:
೧. ಷ.ಬ್ರ.ಶ್ರೀ ಜಡೆಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಕೆಂಪ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಆರುಬೆರಳಿನ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ರುದ್ರಾಕ್ಷಿಕಿರೀಟದ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ವೈರಾಗ್ಯ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಎರಡನೆಯ ವೈರಾಗ್ಯ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು (ವಿದ್ಯಾಸಾಗರರು)
೮. ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು (ಸಿಹಿ)
೯. ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೧೦. ಷ.ಬ್ರ.ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಈ ಮಠಕ್ಕೆ ಚರಪಟ್ಟಾಧ್ಯಕ್ಷರು ಇದ್ದ ಬಗ್ಗೆ ಉಲ್ಲೇಖ ದೊರೆಯುತ್ತಿದೆ. ಚರ ಪಟ್ಟಾಧ್ಯಕ್ಷರ ಪರಂಪರೆಯಲ್ಲಿ ಒಟ್ಟು ಏಳು ಜನ ಗುರುಗಳು ಮಠದ ಧಾರ್ಮಿಕ ಕಾರ್ಯಗಳನ್ನು ನೋಡಿ ಕೊಂಡಿದ್ದರು ಎಂದು ಹೇಳಲಾಗುತ್ತಿದೆ.

ಮಠದ ಕರ್ತೃಗುರುಗಳು ಹಾಗೂ ನಂತರ ಅಧಿಕಾರಕ್ಕೆ ಬಂದ ಎರಡು ಜನ ಗುರುಗಳ ಬಗ್ಗೆ ಸ್ಪಷ್ಟವಾದ ವಿವರಗಳು ಲಭ್ಯವಿಲ್ಲ. ನಾಲ್ಕನೆಯ ಸ್ಥಿರಪಟ್ಟದ ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು ರುದ್ರಾಕ್ಷಿ ಟೊಪ್ಪಿಗೆ ಯನ್ನು ಧರಿಸಿ, ಸದಾ ಶಿವಪೂಜಾ ಮಗ್ನರಾಗಿರುತ್ತಿದ್ದರಿಂದ ಇವರು 'ರುದ್ರಾಕ್ಷಿಕಿರೀಟದ ಸ್ವಾಮಿ'ಗಳೆಂದು ಹೆಸರು ಪಡೆದರು. ನಂತರ ಅಧಿಕಾರಕ್ಕೆ ಬಂದ ಐದನೆಯ ಮತ್ತು ಆರನೆಯ ಗುರುಗಳು ವೈರಾಗ್ಯ ಮೂರ್ತಿಗಳಾಗಿ ಲೌಕಿಕ ವಿಚಾರದ ಕಡೆ ಗಮನಕೊಡದೆ ಧ್ಯಾನದಲ್ಲಿ ಮಗ್ನರಾಗಿರುತ್ತಿದ್ದರಿಂದ ಇವರು'ಶ್ರೀ ವೈರಾಗ್ಯ ಮೂರ್ತಿ'ಗಳೆಂದು ಹೆಸರು ಪಡೆದರು. ಪರಂಪರೆಯ ಆರನೆಯ ಗುರುಗಳ ತರುವಾಯ ಪೀಠಕ್ಕೆ ಬಂದ ವಿದ್ಯಾಸಾಗರರು ಬಾಲ್ಯದಲ್ಲೇ ಬಳ್ಳಾರಿ ಹಾಗೂ ಸೋಲಾಪುರಗಳಲ್ಲಿ ವಿದ್ಯಾಭ್ಯಾಸ ಮಾಡಿ, ಕಾಶಿಯಲ್ಲಿ ಸಂಸ್ಕೃತ ಅಧ್ಯಯನ ಮಾಡಿದರು. ಇವರ ಸಾಧನೆಯನ್ನು ಗಮನಿಸಿದ ಬನಾರಸ್ ವಿಶ್ವವಿದ್ಯಾನಿಲಯವು 'ವಿದ್ಯಾಸಾಗರ'ಎಂಬ ಬಿರುದನ್ನು ನೀಡಿ ಗೌರವಿಸಿದೆ. ಇವರು ಕಾಶಿಯಿಂದ ಯಲಬುರ್ಗಿಗೆ ಆಗಮಿಸಿ, ಸ್ಥಿರಪಟ್ಟದ ಶ್ರೀ ವೈರಾಗ್ಯಸಿದ್ಧರಾಮ ಸ್ವಾಮಿಗಳಿಂದ ೧೯೦೮ರಲ್ಲಿ ಅಧಿಕಾರ ವಹಿಸಿಕೊಂಡರು.

ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು (ವಿದ್ಯಾಸಾಗರರು) ಇಂಗ್ಲೀಷ್, ಉರ್ದು, ಫಾರ್ಸಿ,ಅರಬ್ಬಿ, ಗುಜರಾತಿ, ಬಂಗಾಲಿ, ಹಿಂದಿ, ತಮಿಳು, ತೆಲುಗು ಮುಂತಾದ ಭಾಷೆಗಳಲ್ಲಿ ಪ್ರಾವೀಣ್ಯತೆಯನ್ನು ಪಡೆದಿದ್ದರು. ಇವರು ಸಾಹಿತಿಗಳಾಗಿ, ಕಲಾವಿದರಾಗಿ ಹೆಸರು ಮಾಡಿದ್ದರು. ಇವರು ಧರ್ಮಗುಪ್ತ ಎಂಬ ಬಯಲಾಟ ಬರೆದು ಸ್ವತಃ ನಿರ್ದೇಶಿಸಿ ಪ್ರದರ್ಶನ ನೀಡಿಸಿದ್ದರು. ಈ ಭಾಗದಲ್ಲಿ ನಡೆಯುತ್ತಿದ್ದ ಯಾವುದೇ ವ್ಯಾಜ್ಯಗಳು ನ್ಯಾಯಾಲಯಕ್ಕೆ ಹೋಗದಂತೆ ತಡೆದು ಮಠದಲ್ಲಿಯೇ ಬಗೆಹರಿಸಿ ಸಮಾಜದಲ್ಲಿ ಶಾಂತಿ ನೆಲೆಸುವಂತೆ ಮಾಡಿದ್ದರು. ಇವರು ೧೯೪೦ ರಲ್ಲಿ ಲಿಂಗೈಕ್ಯರಾದರು. ಇವರ ನಂತರ ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು (ಸಿಹಿ) ಉತ್ತರಾಧಿಕಾರಿಗಳಾಗಿ ಮಠದ ಅಧಿಕಾರವನ್ನು ವಹಿಸಿಕೊಂಡರು. ಇವರೂ ಸಹ ಕನ್ನಡ, ಉರ್ದು, ಇಂಗ್ಲೀಷ್ ಮೊದಲಾದ ಭಾಷೆಗಳಲ್ಲಿ ಪಾಂಡಿತ್ಯ ಪಡೆದುಕೊಂಡಿದ್ದರು. ಇವರು ಸಾಹಿತಿಗಳಾಗಿದ್ದು 'ಸಿಹಿ' ಕಾವ್ಯನಾಮದಿಂದ ಅನ್ವೇಷಣ ಎಂಬ ಕವನಸಂಕಲನ, ಸಿದ್ದೇಶನ ವಚನಗಳು ಎಂಬ ತ್ರಿಪದಿಯನ್ನು ಬರೆದು ಪ್ರಕಟಿಸಿದ್ದಾರೆ. ಇವರ ಕಾಯಕಯೋಗದಿಂದ ಮಠವು ಜೀರ್ಣೋದ್ಧಾರ ಗೊಂಡಿತು. ಮಠದ ಅಧೀನದಲ್ಲಿದ್ದ ಭೂಮಿಯನ್ನು ಅಭಿವೃದ್ಧಿಪಡಿಸಿ ತೋಟವನ್ನು ಬೆಳೆಸಿದರು. ಇವರು ತಮ್ಮ ವಂಶೋದ್ಧಾರಕ್ಕೆಂದು ಗೃಹಸ್ಥಾಶ್ರಮ ಸೇರಿದರು.ನಂತರ ನರಗುಂದ ತಾಲ್ಲೂಕಿನ ಸುರಗೋಡು ಗ್ರಾಮದ ಶ್ರೀ ವೀರಾರ್ಯ ಮತ್ತು ಶ್ರೀಮತಿ ಶಂಕರಮ್ಮನವರ ಪುತ್ರರಾದ ಹಿರೇಮಠದ ಪಟ್ಟಾಧಿಕಾರಿಗಳಾಗಿದ್ದ ಶ್ರೀ ಗುರುಪಾದ ಶಿವಾಚಾರ್ಯ

ಸ್ವಾಮಿಗಳಿಗೆ ೧೯೭೦ರ ಮೇ ಹದಿನೇಳರಂದು ಅಧಿಕಾರವನ್ನು ನೀಡಿದರು.

ಇವರು ಅನೇಕ ಅಭಿವೃದ್ಧಿಕಾರ್ಯಗಳನ್ನು ಕೈಗೊಂಡು, ಮಠವು ಹೆಚ್ಚು ಹೆಸರು ಮಾಡಲು ಕಾರಣವಾದರು. ಉದಾತ್ತ ಚಿಂತನೆಯನ್ನು ಇಟ್ಟುಕೊಂಡ ಹಿರಿಯ ಚೇತನ ಇವರಾಗಿದ್ದಾರೆ. ಇವರು ಧಾರ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯ ಕ್ಷೇತ್ರಗಳಲ್ಲಿ ಸಮಾನವಾಗಿ ದುಡಿದು ಹೆಸರುಗಳಿಸಿದರು. ಇವರು ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಸಿದ್ಧರಾಮ ಸ್ವಾಮಿಗಳು (ಸಿಹಿ) ಮತ್ತು ಶ್ರೀಮತಿ ಬಸವಣ್ಣಮ್ಮನವರ ಪುತ್ರರಾಗಿ ೧೯೭೪ ರ ಜೂನ್ ಹದಿನಾರರಂದು ಜನಿಸಿದ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮಿಗಳನ್ನು ನೇಮಿಸಿಕೊಂಡು ೨೦೦೦ದ ಫೆಬ್ರವರಿ ಹತ್ತರಂದು ಪಟ್ಟಾಧಿಕಾರವನ್ನು ನೀಡಿ, ವಿಶ್ರಾಂತ ಜೀವನ ನಡೆಸುತ್ತಿದ್ದಾರೆ.

ಒಂಬತ್ತನೆಯ ಮಠಾಧ್ಯಕ್ಷರಾಗಿ ಅಧಿಕಾರಕ್ಕೆ ಬಂದ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮಿಗಳು ಗುಲ್ಬರ್ಗ ವಿಶ್ವವಿದ್ಯಾನಿಲಯದಲ್ಲಿ ಕನ್ನಡದಲ್ಲಿ ಸ್ನಾತಕೋತ್ತರ ಮುಗಿಸಿ, ಸಾಹಿತ್ಯ ಮತ್ತು ಧಾರ್ಮಿಕ ವಿಚಾರಗಳನ್ನು ಮೈಗೂಡಿಸಿಕೊಂಡು ಮಠವನ್ನು ಮುನ್ನಡೆಸುತ್ತಿದ್ದಾರೆ. ಕಂಪ್ಯೂಟರ್ ಯುಗದ ಈ ಕಾಲಮಾನದಲ್ಲಿ ಧರ್ಮವನ್ನು ಮೌಢ್ಯ ಹಾಗೂ ಸಂಪ್ರದಾಯದ ಚೌಕಟ್ಟಿನಲ್ಲಿ ಬಂಧಿಸದೆ ವೈಚಾರಿಕ ಹಾಗೂ ವಾಸ್ತವಿಕ ನೆಲೆಗಟ್ಟಿನಲ್ಲಿ ಅವಲೋಕಿಸುತ್ತಾ ಭಕ್ತರ ಬಾಳಿಗೆ, ಸಮಾಜದ ಒಳಿತಿಗೆ ಧರ್ಮವನ್ನು ಯಾವ ರೀತಿ ಬಳಸಿಕೊಳ್ಳಬೇಕು ಎಂದು ಚಿಂತನೆ ಮಾಡುತ್ತಾ, ಆಚಾರ್ಯರ ಹಾಗೂ ಬಸವಾದಿ ಪ್ರಮಥರ ತತ್ವಗಳನ್ನು ಭಕ್ತರಿಗೆ ಮುಟ್ಟಿಸಲು ಪ್ರಯತ್ನಿಸುತ್ತಿದ್ದಾರೆ.

ಸಾಹಿತ್ಯ ಸೇವೆ: ಮಠವು ಧಾರ್ಮಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಚಿಂತಿಸಿದಂತೆಯೇ ಸಾಹಿತ್ಯದ ಅಭಿವೃದ್ಧಿಗೂ ಚಿಂತಿಸಿದೆ. ಇದರ ಫಲವಾಗಿ ಶ್ರೀ ಸಿದ್ಧರಾಮೇಶ್ವರ ಪ್ರಕಾಶನ ಸಂಸ್ಥೆಯನ್ನು ಪ್ರಾರಂಭಿಸಿ, ಈವರೆಗೆ ಒಟ್ಟು ಇಪ್ಪತ್ತೆಂಟು ಮೌಲಿಕ ಕೃತಿಗಳನ್ನು ಪ್ರಕಟಿಸಿ, ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿದೆ.

ಮಠದ ಪರಂಪರೆಯ ಏಳನೆಯ ಗುರುಗಳಾದ ಶ್ರೀ ಸಿದ್ಧರಾಮ ಸ್ವಾಮಿಗಳು ಸುರಗೂಡು ಹಿರೇಮಠದ ಪಟ್ಟಾಧ್ಯಕ್ಷರಾಗಿ ಶ್ರೀ ಗುರುಪಾದ ಶಿವಾಚಾರ್ಯರೆಂದು ಹೆಸರು ಪಡೆದಿದ್ದರು. ಇವರು ಸುರಗೂಡದಲ್ಲಿದ್ದಾಗ ಪುರುಷ ಸೂಕ್ತ, ಬಿಲ್ವೋಪನಿಷತ್ತು, ಪಂಚಾಕ್ಷರಿಕಲ್ಪ, ಪಂಚಾಕ್ಷರಿ ಪ್ರಬೇಧ, ಮಂತ್ರ ಬೀಜಕೋಶ ಮೊದಲಾದ ಕೃತಿಗಳನ್ನು ರಚಿಸಿ ಯಲಬುರ್ಗಿಗೆ ಬಂದ ಮೇಲೆ ಬಸವಾದಿ ಪ್ರಮಥರ ಪದಗಳು ಭಾಗ ಒಂದು, ಎರಡು, ಮೂರು, ನಾಲ್ಕು ಹಾಗೂ ನಾಗಲಿಂಗ ದೇವರ ತ್ರಿವಿಧಿ ಎಂಬ ಕೃತಿಗಳನ್ನು ಹೊರತಂದರು. ಬಿಜ್ಜಳನನ್ನು ಕೊಂದ ಮೊಲ್ಲೆಬೊಮ್ಮಯ್ಯನ ಚರಿತ್ರೆಗೆ ಸಂಬಂಧಿಸಿದ ಎರಡು ಹಸ್ತಪ್ರತಿಗಳನ್ನು ಸಂಶೋಧಿಸಿ, ಡಾ.ಬಿ.ವಿ. ಶಿರೂರ ಅವರಿಂದ ಸಂಪಾದಿಸಿ ಗದಗಿನ ತೋಂಟದಾರ್ಯ ಮಠದಿಂದ ಪ್ರಕಾಶಗೊಳಿಸಿದ್ದಾರೆ. ವೀರಶೈವ ಸಾಹಿತ್ಯದಲ್ಲಿ ಆದರ್ಶಪ್ರಾಯವಾದ ಮೌಲಿಕ ಗ್ರಂಥಗಳನ್ನು ಹೊರತರಬೇಕೆಂಬ ಉದ್ದೇಶದಿಂದ ತಮ್ಮ ಪಟ್ಟಾಧಿಕಾರದ ರಜತ ಮಹೋತ್ಸವದ ಸಂದರ್ಭದಲ್ಲಿ ಸಿದ್ಧರಾಮ ಸಂಪದ ಎಂಬ ಸಂಶೋಧಾನ್ಮಕ ಕೃತಿಯನ್ನು ಹೊರತಂದಿದ್ದಾರೆ. ಶ್ರೀ ಸಿದ್ಧರಾಮಸ್ವಾಮಿ ಹಿರೇಮಠದ(ಸಿಹಿ) ಸಹ ಸಾಹಿತ್ಯಾಸಕ್ತಿಯನ್ನು ಬೆಳೆಸಿಕೊಂಡು ಅನೇಕ ಕೃತಿಗಳು ಪ್ರಕಾಶಗೊಳ್ಳಲು ನೆರವಾಗಿದ್ದಾರೆ. ಈಗಿನ ಪಟ್ಟಾಧ್ಯಕ್ಷರಾದ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳು ಸ್ವತಃ ಸಾಹಿತಿಗಳಾಗಿ, ಸಾಹಿತ್ಯದ ಮೂಲಕ ಧರ್ಮವನ್ನು ಬೆಳೆಸಬೇಕೆಂಬ ಮನೋಪ್ರವೃತ್ತಿಯವರಾಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಪರಂಪರೆಯ ಗುರುಗಳ ಏಳು ಗದ್ದುಗೆಗಳು ನಿರ್ಮಾಣಗೊಂಡಿವೆ. ಮಠದ ಮೂಲ ಸ್ಥಳವಾಗಿದ್ದ ಚೌಕಿಮಠದಲ್ಲಿ ಕೆಲವು ಗದ್ದುಗೆಗಳು ಸ್ಥಾಪನೆಯಾಗಿವೆ. ಇವುಗಳಿಗೆ ನಿತ್ಯಪೂಜೆ, ಶ್ರಾವಣ ಮಾಸದಲ್ಲಿ ನಿತ್ಯ ಪ್ರವಚನ, ಮಹಾ ಗಣಾರಾಧನೆಯನ್ನು ಮಾಡಿ ಕೊನೆಯ ದಿನ ಪಲ್ಲಕ್ಕಿ ಉತ್ಸವವನ್ನು ಮಾಡಲಾಗುತ್ತಿದೆ. ಕಾರ್ತೀಕ ಮಾಸದಲ್ಲಿ ವಿಶೇಷ ಪೂಜೆ, ವಿಜಯದಶಮಿಯಲ್ಲಿ ಒಂಬತ್ತು ದಿನ ದೇವಿಪುರಾಣ, ಏಪ್ರಿಲ್ ತಿಂಗಳಲ್ಲಿ ಮಠದ ಅಭಿವೃದ್ಧಿಗೆ ಶ್ರಮಿಸಿದ ರಾಜಶ್ರೀ ವಿದ್ಯಾಸಾಗರರ ಪುಣ್ಯಸ್ಮರಣೆ ಹಾಗೂ ಪರಂಪರೆಯ ಗುರುಗಳ ಆರಾಧನೆಯನ್ನು ಮಾಡಲಾಗುತ್ತಿದೆ. ಮಠದಲ್ಲಿ ನಿತ್ಯ ಅನ್ನದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಶಿವಾನುಭವ ಸೇವಾ

ಸಮಿತಿಯಿಂದ ಪ್ರತಿ ತಿಂಗಳು ನಡೆಯುವ ಶಿವಾನುಭವ ಗೋಷ್ಠಿಯ ಸಂದರ್ಭದಲ್ಲಿ, ನೂರಾರು ಜನ ಹಾಗೂ ವಾರ್ಷಿಕ ಕಾರ್ಯಕ್ರಮಗಳಲ್ಲಿ ಸುಮಾರು ಪತ್ತುಸಾವಿರ ಭಕ್ತರಿಗೆ ಅನ್ನದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.

ಸಾಮಾಜಿಕ ಕಾರ್ಯಗಳು: ವೈಚಾರಿಕ ತಳಹದಿಯ ಮೇಲೆ ಸಮಾಜವನ್ನು ರೂಪಿಸಲು ಹೊರಟ ಈ ಮಠವು ಭಕ್ತರ ಏಳ್ಗೆ ಗಾಗಿ ಶ್ರಮಿಸುತ್ತಿದ್ದು, ಪ್ರತಿ ಅಕ್ಟೋಬರ್ ತಿಂಗಳಲ್ಲಿ ಯೋಗಶಿಬಿರವನ್ನು ಸತತವಾಗಿ ನಡೆಸಿಕೊಂಡು ಬಂದಿದೆ. ಡಿಸೆಂಬರ್ ತಿಂಗಳಲ್ಲಿ ಆರೋಗ್ಯ ಶಿಬಿರವನ್ನು ಏರ್ಪಡಿಸಿ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ. ಮೃಗಶಿರ ಮಳೆ ಬೀಳುವ ಸಂದರ್ಭದಲ್ಲಿ ಉಬ್ಬಸ ರೋಗಕ್ಕೆ ಉಚಿತ ಚಿಕಿತ್ಸೆಯನ್ನು ಕೊಡಿಸಲಾಗುತ್ತಿದೆ.ಈ ಸಂದರ್ಭದಲ್ಲಿ ಐನೂರರಿಂದ ಆರುನೂರು ಜನ ಇದರ ಲಾಭವನ್ನು ಪಡೆಯುತ್ತಾರೆ. ಈವರೆಗೆ ಸುಮಾರು ೮೦೦೦ ಜನರಿಗೆ ಲಿಂಗಧಾರಣೆ ಮಾಡಿ ವೀರಶೈವ ಧರ್ಮವನ್ನು ಅಂಗೀಕರಿಸುವಂತೆ ಮಾಡಿದ್ದಾರೆ. ಜಾತ್ಯಾತೀತ ಸಮಾಜವನ್ನು ರೂಪಿಸಲು ಅಂತರ್‌ಜಾತಿ ವಿವಾಹಕ್ಕೆ ಪ್ರೋತ್ಸಾಹ ನೀಡಿ, ಮಠದ ವತಿಯಿಂದ ಈವರೆಗೆ ಹನ್ನೆರಡು ವಿವಾಹಗಳನ್ನು ಮಾಡಿಸಿದ್ದಾರೆ. ಇವರೆಲ್ಲ ಸಾಮರಸ್ಯದ ಬದುಕನ್ನು ಬದುಕುತ್ತಿದ್ದಾರೆ. ಈಗಿನ ಪಟ್ಟಾಧ್ಯಕ್ಷರಾದ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮಿಗಳ ಪಟ್ಟಾಭಿಷೇಕವನ್ನು ಕೇವಲ ಸಂಪ್ರದಾಯದಂತೆ ಆಚರಿಸದೆ ಆರೋಗ್ಯ ತಪಾಸಣಾ ಶಿಬಿರ, ಸಂಗೀತೋತ್ಸವ, ಮಾಹೇಶ್ವರದೀಕ್ಷೆ, ಸಾಹಿತ್ಯ ಪ್ರಕಟಣೆಗಳ ಬಿಡುಗಡೆ, ಸಾಮೂಹಿಕ ವಿವಾಹಗಳು ಈ ರೀತಿ ಸಾಮಾಜಿಕ ಅಭಿವದ್ಧಿಗೆ ನೆರವಾಗುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಭಾವೈಕ್ಯತೆ ಸಾರಲು ಗುರುಗಳು ಉರುಸ್‌ನಲ್ಲಿ ಭಾಗವಹಿಸುವುದು, ಹಿಂದುಳಿದ ವರ್ಗದ ಭಕ್ತರಿಗೆ ನೆರವು ಈ ರೀತಿ ಸಾಮಾಜಿಕ ಅಭಿವೃದ್ಧಿಗೆ ನೆರವಾಗುವಂತಹ ಕಾರ್ಯಕ್ರಮಗಳ ಮೂಲಕ ಸಮಾಜಮುಖಿಯಾಗಿ ಮಠವು ಬೆಳೆಯುವಂತೆ ಮಾಡಿದ್ದಾರೆ.

ಶೈಕ್ಷಣಿಕ ಸೇವೆ: ೧೯೮೭ ರಲ್ಲಿ ಶ್ರೀ ಸಿದ್ಧರಾಮೇಶ್ವರ ವಿದ್ಯಾಪೀಠವನ್ನು ಪ್ರಾರಂಭಿಸಿ ನರ್ಸರಿ, ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲೆಯನ್ನು ಪ್ರಾರಂಭಿಸಲಾಗಿದೆ. ಗ್ರಾಮಾಂತರ ಮಹಿಳೆಯರ ಸ್ವಯಂ ಉದ್ಯೋಗಕ್ಕೆ ನೆರವಾಗಲು ಹೊಲಿಗೆ ತರಬೇತಿ ಕೇಂದ್ರವನ್ನು ತೆರೆಯಲಾಗಿದೆ. ಕಲಿಯುವ ಬಡಮಕ್ಕಳಿಗೆ ಮಠದಲ್ಲಿ ಆಶ್ರಯ ಕಲ್ಪಿಸಿಕೊಡಲಾಗಿದೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಸಿದ್ಧರಾಮೇಶ್ವರಮಠ, ಯಲಬುರ್ಗ, ಕೊಪ್ಪಳ ಜಿಲ್ಲೆ.
ಆಧಾರ: 'ಸಿದ್ಧಶ್ರೀ' ಸಂಪಾದಕರು : ಡಾ.ಬಿ.ವಿ.ಶಿರೂರು

ಶ್ರೀಧರಮುಡಿಮಠ: ಯಲಬುರ್ಗ ಪಟ್ಟಣದ ಪಶ್ಚಿಮಕ್ಕೆ ಶ್ರೀಧರಮುಡಿ ಮಠವು ಸ್ಥಾಪನೆಯಾಗಿದೆ. ಇನ್ನೂರು ವರ್ಷಗಳ ಹಿಂದೆ ಸ್ಥಾಪನೆಯಾಗಿರಬಹುದಾದ ಈ ಮಠವು ಉಜ್ಜಯಿನಿ ಪೀಠದ ಶಾಖಾಮಠವಾಗಿ, ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದು ಬಂದಿದೆ. ಮಠದ ಕರ್ತೃಗುರುಗಳಾದ ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನ ಹಳ್ಳಿ ತಾಲ್ಲೂಕಿನ ಸೊನ್ನಾ ಗ್ರಾಮದಿಂದ ಲೋಕಸಂಚಾರಕ್ಕೆ ಹೊರಟು, ಈ ಗ್ರಾಮದಲ್ಲಿ ಬಂದು ನೆಲೆ ನಿಂತರೆಂದು ಹೇಳಲಾಗುತ್ತಿದೆ. ತಪಸ್ವಿಗಳಾಗಿ ಬಾಳಿ ಬದುಕಿದ ಮಹಾಚೇತನ ಶ್ರೀ ಬಸವಲಿಂಗ ಸ್ವಾಮಿಗಳು ಸ್ಥಾಪಿಸಿದ ಮಠ ಈತನಕ ಬೆಳೆದು ಬಂದಿದೆ.

ಪರಂಪರೆ:
೧. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಗಡ್ಡದ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಕರಿಬಸವ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಕೊಟ್ಟೂರುಬಸವ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಎರಡನೆಯ ಬಸವಲಿಂಗ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಮೂರನೆಯ ಬಸವಲಿಂಗ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ರವಿಸ್ವಾಮಿ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳು ಮಠವನ್ನು ಸ್ಥಾಪಿಸಿ ನಂತರ ಶ್ರೀ ಗಡ್ಡದ ಸ್ವಾಮಿಗಳಿಗೆ ಅಧಿಕಾರ ನೀಡಿದ್ದಾರೆ. ಶ್ರೀ ಗಡ್ಡದ ಸ್ವಾಮಿಗಳು ಗಜೇಂದ್ರಘಡದ ಶಾಖಾಮಠದಲ್ಲಿ ಲಿಂಗೈಕ್ಯರಾಗಿದ್ದು, ಅವರ ಗದ್ದುಗೆಯನ್ನು ಅಲ್ಲೇ ಸ್ಥಾಪಿಸಲಾಗಿದೆ.ನಂತರ ಶ್ರೀ ಕರಿಬಸವ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಮುಂದುವರೆಸಿದ್ದಾರೆ. ಇವರ ಗದ್ದುಗೆಯನ್ನು ಕುಕನೂರು ಸಮೀಪದ ಗೊರಟಕೊಪ್ಪದ ಶಾಖಾಮಠದಲ್ಲಿ ಸ್ಥಾಪಿಸಲಾಗಿದೆ. ನಂತರ ಬಂದ ಶ್ರೀ ಕೊಟ್ಟೂರುಬಸವ ಸ್ವಾಮಿಗಳ ಗದ್ದುಗೆಯನ್ನು ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಸೊನ್ನದಲ್ಲಿ ನಿರ್ಮಿಸಲಾಗಿದೆ. ೧೯೮೬ರಲ್ಲಿ ಲಿಂಗೈಕ್ಯರಾದ ಮೂರನೆಯ ಶ್ರೀ ಬಸವಲಿಂಗ ಸ್ವಾಮಿಗಳ ಗದ್ದುಗೆಯು ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲ್ಲೂಕಿನ ಮಾನ್ಯರಮಸಲವಾಡಿ ಗ್ರಾಮದಲ್ಲಿ ಸ್ಥಾಪಿತವಾಗಿದೆ. ಹಿರಿಯ ಗುರುಗಳು ಲಿಂಗೈಕ್ಯರಾಗುವ ಮೊದಲೇ ೧೯೮೫ರಲ್ಲಿ ಶ್ರೀ ರವಿ ಸ್ವಾಮಿಗಳನ್ನು ಮಠದ ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ. ಇವರು ಪದವಿ ಶಿಕ್ಷಣವನ್ನು ಮುಗಿಸಿ, ತಿರುಪತಿಯಲ್ಲಿ ಸಂಸ್ಕೃತ, ವೇದಾಧ್ಯಯನವನ್ನು ಮುಗಿಸಿ ೧೯೯೯ ರಲ್ಲಿ ಮಠಕ್ಕೆ ಆಗಮಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ನಿತ್ಯ ಗದ್ದುಗೆಗೆ ಪೂಜೆ, ಶ್ರಾವಣಮಾಸದಲ್ಲಿ ಪುರಾಣ ಪ್ರವಚನ, ಅಮಾವಾಸ್ಯೆ ಮತ್ತು ಹುಣ್ಣಿಮೆಯಲ್ಲಿ ಶಿವಾನುಭವ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಭಕ್ತರಿಗೆ ನಿತ್ಯ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ವಿಳಾಸ: ಷ.ಬ್ರ.ಶ್ರೀ ರವಿಸ್ವಾಮಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ಶ್ರೀಧರಮುಡಿಮಠ, ಯಲಬುರ್ಗಾ, ಕೊಪ್ಪಳ ಜಿಲ್ಲೆ.

❑

ಕೋಲಾರ ಜಿಲ್ಲೆ

ಕೋಲಾರ ಜಿಲ್ಲೆ



ಕೋಲಾರ ತಾಲ್ಲೂಕು : ೧. ನಾಗಲಾಪುರ
ಬಾಗೇಪಲ್ಲಿ ತಾಲ್ಲೂಕು : ೧. ಗೂಳೂರು
ಮಾಲೂರು ತಾಲ್ಲೂಕು : ೧. ಬೆಳ್ಳಾವಿ
ಬಂಗಾರಪೇಟೆ ತಾಲ್ಲೂಕು : ೧. ಐತಾಂಡನ ಹಳ್ಳಿ

ರಾಷ್ಟ್ರದ ಪ್ರತಿಷ್ಠಿತ ಚಿನ್ನದ ಗಣಿಯನ್ನು ಹೊಂದಿದ್ದು ನಾಡಿನ ಆರ್ಥಿಕ ಸಂಪನ್ಮೂಲತೆಯ ಆಧಾರವಾಗಿದೆ. ಕೋಲಾರ ಜಿಲ್ಲೆಯು ಬೆಂಗಳೂರು ಗ್ರಾಮಾಂತರ, ತುಮಕೂರು ಜಿಲ್ಲೆಗಳ ಗಡಿ ಪ್ರದೇಶವನ್ನು ಒಳಗೊಂಡಿರುವುದಲ್ಲದೆ, ಆಂಧ್ರ ಮತ್ತು ತಮಿಳುನಾಡು ರಾಜ್ಯಗಳ ಗಡಿಪ್ರದೇಶಕ್ಕೆ ಹೊಂದಿಕೊಂಡಿದೆ. ಮಾತೃಭಾಷೆ ಕನ್ನಡದ ಜೊತೆಗೆ ತೆಲಗು ಮತ್ತು ತಮಿಳು ಭಾಷೆಯ ಪ್ರಭಾವದಿಂದ ಭಾಷಾ ವೈವಿಧ್ಯತೆಯನ್ನು ಇಲ್ಲಿ ಕಾಣಬಹುದಾಗಿದೆ. ಕೋಲಾರ, ಮುಳಬಾಗಿಲು, ಬಂಗಾರಪೇಟೆ, ಮಾಲೂರು, ಶ್ರೀನಿವಾಸಪುರ, ಚಿಂತಾಮಣಿ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಗುಡಿ ಬಂಡೆ, ಬಾಗೇಪಲ್ಲಿ ಮತ್ತು ಗೌರಿಬಿದನೂರು ಈ ರೀತಿ ಹನ್ನೊಂದು ತಾಲ್ಲೂಕುಗಳನ್ನು ಒಳಗೊಂಡ ದೊಡ್ಡ ಜಿಲ್ಲೆಯಾಗಿ ರೂಪುಗೊಂಡಿದೆ.

ಉತ್ತರಪಿನಾಕಿನಿ, ಪಾಲಾರ್, ಚಿತ್ರಾವತಿ ಮತ್ತು ಪಾಪಘ್ನಿ ನದಿಗಳು ಹರಿದು ಈ ಜಿಲ್ಲೆಯನ್ನು ನೈಸರ್ಗಿಕವಾಗಿ ಶ್ರೀಮಂತ ಗೊಳಿಸಿದ್ದವು. ಈಗ ಪ್ರಕೃತಿಯ ವೈಪರೀತ್ಯದಿಂದ ಕೆಲವು ನದಿಗಳು ಕೇವಲ ಹೆಸರಿಗಷ್ಟೇ ದಾಖಲೆಯಾಗಿದ್ದು, ಮಳೆಗಾಲದಲ್ಲಿ ಮಾತ್ರ ಮೈದುಂಬಿ ಹರಿದು ಬೇಸಿಗೆಯಲ್ಲಿ ಬಾಯಾರುತ್ತವೆ. ಈ ಜಿಲ್ಲೆಯಲ್ಲಿ ಶತಶೃಂಗ ಪರ್ವತ ಹಾಗೂ ನಂದಿದುರ್ಗ ಹೆಚ್ಚು ಪ್ರಸಿದ್ಧಿಗೊಂಡಿವೆ. ಭಾರತದ ಪ್ರಸಿದ್ಧ ಗಿರಿಧಾಮಗಳಲ್ಲಿ ಒಂದೆಂದು ಹೆಸರು ಗಳಿಸಿರುವ **'ನಂದಿಬೆಟ್ಟ'**ವು ಈ ಜಿಲ್ಲೆಯಲ್ಲಿದ್ದು ಅನೇಕ ಪ್ರವಾಸಿಗರನ್ನು ತನ್ನತ್ತ ಸೆಳೆಯುತ್ತಿದೆ. ಕೋಲಾರದ ಸಮೀಪವಿರುವ ಅಂತರಗಂಗೆ ಬೆಟ್ಟವು ಆಸ್ತಿಕ ಮತ್ತು ನಾಸ್ತಿಕರನ್ನು ಆಕರ್ಷಿಸಿಕೊಂಡಿದೆ. ಈ ರೀತಿ ಕೋಲಾರ ಜಿಲ್ಲೆಯು ಭೌಗೋಳಿಕ ಹಾಗೂ ಪ್ರಾಕೃತಿಕ ಲಕ್ಷಣವನ್ನು ಹೊಂದಿದೆ.

ವಿಜಯನಗರದ ಅರಸರು, ಯಲಹಂಕದ ಗೌಡರು, ಟಿಪ್ಪುಸುಲ್ತಾನ್ ಹಾಗೂ ಮೈಸೂರು ಅರಸರ ಆಳ್ವಿಕೆಗೆ ಒಳಪಟ್ಟು ಅಭಿವೃದ್ಧಿಯನ್ನು ಕಂಡಿದೆ. ಇಂತಹ ಐತಿಹಾಸಿಕ ಸ್ಥಾನ ಪಡೆದ ಕೋಲಾರ ಜಿಲ್ಲೆಯು ಧಾರ್ಮಿಕ ಜಾಗೃತಿ ಕ್ಷೇತ್ರವಾಗಿ ಹೆಸರು ಮಾಡಿದೆ. ಇಲ್ಲಿನ **'ಕೈವಾರ ಕ್ಷೇತ್ರ'** ನಾಡಿನ ಹೆಸರಾಂತ ಧರ್ಮ ಕ್ಷೇತ್ರಗಳಲ್ಲಿ ಒಂದಾಗಿ ಬೆಳೆದಿದೆ. ಈ ಜಿಲ್ಲೆಯಲ್ಲಿ ವೀರಶೈವ ಧರ್ಮವು ಹೆಚ್ಚು ಪ್ರಚಾರಗೊಂಡು ಪ್ರಭಾವಿ ಧರ್ಮವಾಗಿ ಬೆಳೆದ ಲಕ್ಷಣಗಳು ಕಂಡುಬರುತ್ತವೆ. ಬಾಗೇಪಲ್ಲಿ ತಾಲ್ಲೂಕಿನ ಗೂಳೂರಿನ ನಿಡುಮಾಮಿಡಿ ಮಠ ಹಾಗೂ ಜಿಲ್ಲೆಯ ವಿವಿಧೆಡೆ ಸ್ಥಾಪನೆಗೊಂಡ ವೀರಶೈವ ಮಠಗಳು ಇದಕ್ಕೆ ಸಾಕ್ಷಿಯಾಗಿವೆ. ಕೋಲಾರ ಜಿಲ್ಲೆಯಲ್ಲಿ ಒಟ್ಟು ಇಪ್ಪತ್ತೆರಡು ಮಠಗಳು ಸ್ಥಾಪನೆಗೊಂಡಿದ್ದವೆಂಬ ಮಾಹಿತಿ ದೊರೆಯುತ್ತಿದೆ.

ಆದರೆ ಶೋಧನೆಗೆ ಹೋದ ಸಂದರ್ಭದಲ್ಲಿ ಕೋಲಾರ ತಾಲ್ಲೂಕಿನಲ್ಲಿ ಎಂಟು ಮಠಗಳು, ಬಂಗಾರಪೇಟೆ ತಾಲ್ಲೂಕಿನಲ್ಲಿ ಒಂದು ಮಠ, ಮಾಲೂರು ತಾಲ್ಲೂಕಿನಲ್ಲಿ ಒಂದು ಮಠ, ಬಾಗೇಪಲ್ಲಿ ತಾಲ್ಲೂಕಿನಲ್ಲಿ ಒಂದು ಮಠ ಈ ರೀತಿ ಒಟ್ಟು ಹನ್ನೊಂದು ಮಠಗಳು ಕಂಡುಬರುತ್ತವೆ. ಉಳಿದ ಹನ್ನೊಂದು ಮಠಗಳು ಹೇಳಲು ಹೆಸರಿಲ್ಲದಂತಾಗಿರುವುದು ಒಂದು ದುರ್ದೈವದ ಸಂಗತಿ. ದಾಖಲಿಸಿರುವ ಹನ್ನೊಂದು ಮಠಗಳಲ್ಲಿ ಬಾಗೇಪಲ್ಲಿ ತಾಲ್ಲೂಕಿನ ಗೂಳೂರು, ಬಂಗಾರಪೇಟೆ ತಾಲ್ಲೂಕಿನ ಐತಾಂಡಹಳ್ಳಿ, ಕೋಲಾರ ತಾಲ್ಲೂಕಿನ ನಾಗಲಾಪುರ, ಮಾಲೂರು ತಾಲ್ಲೂಕಿನ ಬೆಳ್ಳಾವಿ ಈ ನಾಲ್ಕು ಮಠಗಳಲ್ಲಿ ಮಾತ್ರ ಮಠಾಧೀಶರಿದ್ದು, ಉಳಿದ ಏಳು ಮಠಗಳಲ್ಲಿ ಮಠಾಧೀಶರಿಲ್ಲದೆ ಖಾಲಿ ಉಳಿದಿವೆ. ಕೋಲಾರ ಜಿಲ್ಲೆಯಲ್ಲಿ ಬೆರಳೆಣಿಕೆಯಷ್ಟು ಮಠಗಳು ಅಸ್ತಿತ್ವದಲ್ಲಿದ್ದರೂ, ಈ ನಾಲ್ಕು ಮಠಗಳು ಪ್ರಭಾವಿ ಮಠಗಳಾಗಿ ಕ್ರಿಯಾತ್ಮಕ ಚಟುವಟಿಕೆಗಳಿಂದ ಕೋಲಾರ ಜಿಲ್ಲೆಯ ಧಾರ್ಮಿಕ ಕ್ಷೇತ್ರವನ್ನು ಶ್ರೀಮಂತಗೊಳಿಸಿವೆ.

ಕೋಲಾರ ತಾಲ್ಲೂಕು

ಕೋಲಾರ ಜಿಲ್ಲೆಯ ಹತ್ತು ತಾಲ್ಲೂಕುಗಳಲ್ಲಿ ಒಂದಾದ ಕೋಲಾರ ತಾಲ್ಲೂಕು ರೇಷ್ಮೆ ಕೃಷಿ ಹಾಗೂ ಇತರೆ ವಾಣಿಜ್ಯ ಬೆಳೆಗಳಿಂದ ಅಭಿವೃದ್ಧಿಯನ್ನು ಕಂಡಿದೆ. ಇತಿಹಾಸ ಪ್ರಸಿದ್ಧ ತಾಲ್ಲೂಕಿನಲ್ಲಿ ಈಗ ಹಲವು ಮಠಗಳನ್ನು ಗುರುತಿಸ ಬಹುದಾಗಿದ್ದು, ಈ ಮಠಗಳು ವೀರಶೈವ ಧರ್ಮದ ಆಚರಣೆಗೆ ನೆರವಾಗಿ ಧರ್ಮವನ್ನು ಬೆಳೆಸಿವೆ.

ಕೋಲಾರ

ಜಿಲ್ಲೆಯ ಕೇಂದ್ರ ಸ್ಥಳವಾದ ಕೋಲಾರದಲ್ಲಿ ವೀರಶೈವ ಧರ್ಮ ಹೆಚ್ಚು ಪ್ರಚಾರಗೊಂಡು ಬೆಳೆದಿದೆ. ನಂತರ ಅನ್ಯರ ಅತಿಕ್ರಮಣದಿಂದ ಹಿಮ್ಮುಖಗೊಂಡು ಇಂದು ದುರ್ಬಲಾವಸ್ಥೆಗೆ ಒಳಗಾಗಿದೆ. ಕೋಲಾರ ನಗರದಲ್ಲಿ ಪುರಾತನ ಕಾಲದಲ್ಲಿ ಒಟ್ಟು ಹನ್ನೆರಡು ಮಠಗಳು ಸ್ಥಾಪನೆಗೊಂಡ ಬಗ್ಗೆ ಮಾಹಿತಿ ದೊರೆಯುತ್ತಿದೆ.. ಈ ಬಗ್ಗೆ ಶೋಧನೆ ಮಾಡಿದ ಸಂದರ್ಭದಲ್ಲಿ ಶ್ರೀ ಕಂಬಳಿಮಠ, ಶ್ರೀ ಹಳೆಯಮಠ, ಶ್ರೀ ಹೊಸಮಠ, ಶ್ರೀ ಗವಿಮಠ, ಶ್ರೀ ಕುಮಾರಪ್ಪನಮಠ, ಶ್ರೀ ಕೈವಾರಮಠ ಹಾಗೂ ಶ್ರೀ ಹೊರಗಪ್ಪನಮಠ ಅಥವಾ ಶ್ರೀ ಚೌಕಿಮಠ ಈ ರೀತಿ ಒಟ್ಟು ಏಳು ಮಠಗಳು ದೊರೆಯುತ್ತಿವೆ. ಇವುಗಳಲ್ಲಿ ಕುಮಾರಪ್ಪನ ಮಠ ಪೂರ್ಣ ಅಸ್ತಿತ್ವ ಕಳೆದುಕೊಂಡಿದ್ದರೆ ಉಳಿದ ಆರು ಮಠಗಳಲ್ಲಿ ಪೂಜಾಕಾರ್ಯಗಳು ನಡೆಯುತ್ತಾ ಮಠದ ಕಲ್ಪನೆಯನ್ನು ಉಳಿಸಿಕೊಂಡಿವೆ. ಆದರೆ ಈ ಆರು ಮಠಗಳಲ್ಲಿ ಗುರುಗಳು ಇಲ್ಲಾ ಎಂಬುದು ನೋವಿನ ಸಂಗತಿ.

ಕಂಬಳಿಸ್ವಾಮಿ ಮಠ: ಕೋಲಾರ ನಗರದ ಮಧ್ಯಭಾಗದ ಗೌರಿಪೇಟೆಯಲ್ಲಿ ಸ್ಥಾಪನೆಯಾಗಿರುವ ಶ್ರೀ ಕಂಬಳಿಸ್ವಾಮಿ ಮಠವು, ಪಂಚ ಪೀಠಗಳಲ್ಲಿ ಒಂದಾದ ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿ ಬೆಳೆದಿದೆ. ಈ ಮಠದ ಸ್ಥಾಪನೆಯಿಂದ ಕೋಲಾರ ನಗರದ ಧಾರ್ಮಿಕ ಆಚರಣೆಗೆ ನೆರವು ದೊರೆತಿದ್ದಲ್ಲದೆ, ವೀರಶೈವ ಧರ್ಮ ಬೆಳೆಯಲು ಸಹಕಾರಿಯಾಯಿತು.

ಮಠ ಸ್ಥಾಪನೆ: ವಿಜಯನಗರ ಸಾಮ್ರಾಜ್ಯದ ಪತನದ ನಂತರ ಗೂಳೂರಿನಲ್ಲಿ ಸ್ಥಾಪನೆಯಾಗಿದ್ದ ಮಠವು ಕೋಲಾರ ನಗರಕ್ಕೆ ಸ್ಥಳಾಂತರವಾಯಿತು. ವಿಜಯನಗರದ ಅರಸರ ಕಾಲದಲ್ಲಿ ಮಠಕ್ಕೆ ಆಶ್ರಯ ದೊರೆತು ಮಠವು ವೈಭವಯುತವಾಗಿ ಬೆಳೆದು, ಹೆಚ್ಚು ಪ್ರಚಾರಗೊಂಡಿತ್ತು ಎಂದು ಹೇಳಲಾಗುತ್ತಿದೆ. ಕೋಲಾರ ನಗರಕ್ಕೆ ಸ್ಥಳಾಂತರಗೊಳ್ಳುವ ಸಂದರ್ಭದಲ್ಲಿ ಮಠಾಧೀಶರಾಗಿದ್ದ ಶ್ರೀ ಕಂಬಳಿ ಸ್ವಾಮಿಗಳು ಇಲ್ಲಿನ ಈ ಪ್ರಶಾಂತ ಸ್ಥಳದಲ್ಲಿ ಮಠವನ್ನು ಸ್ಥಾಪನೆ ಮಾಡಿ ಅಭಿವೃದ್ಧಿಪಡಿಸಿದರು. ಗುರುಗಳ ಧಾರ್ಮಿಕ ಪ್ರಭಾವಕ್ಕೆ ಒಳಗಾಗಿದ್ದ ಕೋಲಾರದ ವೀರಶೈವ ಧರ್ಮೀಯರು ಮಠವು ಬೆಳೆಯಲು ಸಹಕಾರ ನೀಡಿದರು.

ಪರಂಪರೆ:

೧. ಷ.ಬ್ರ.ಶ್ರೀ ಕಂಬಳಿ ಶಿವಾಚಾರ್ಯ ಸ್ವಾಮಿಗಳು

೨. ಷ.ಬ್ರ.ಶ್ರೀ ರಾಚೋಟಿ ಶಿವಾಚಾರ್ಯ ಸ್ವಾಮಿಗಳು

೩. ಷ.ಬ್ರ.ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳು

೪. ಷ.ಬ್ರ.ಶ್ರೀ ಕರಿಬಸವ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆಯಲ್ಲಿ ನಾಲ್ಕು ಗುರುಗಳು ಅಧಿಕಾರವನ್ನು ನಡೆಸಿದ್ದಾರೆ ಎಂದು ತಿಳಿಯುತ್ತದೆ. ಕರ್ತೃ ಗುರುಗಳಾದ ಶ್ರೀ ಕಂಬಳಿ ಸ್ವಾಮಿಗಳು ಪವಾಡ ಪುರುಷರಾಗಿ ಹೆಸರು ಗಳಿಸಿ ಜೀವಂತ ಸಮಾಧಿಯಾದರು. ಇವರ ನಂತರ ಶ್ರೀ ರಾಚೋಟಿ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಅಭಿವೃದ್ಧಿಪಡಿಸಿದರು. ಕೋಲಾರ ನಗರದಲ್ಲಿದ್ದ ವೀರಶೈವರನ್ನು ಸಂಘಟಿಸುವುದರ ಮೂಲಕ ಧರ್ಮ ಬೆಳೆಯುವಂತೆ ಮಾಡಿದರು. ಇವರ ನಂತರ ಅಧಿಕಾರಕ್ಕೆ ಬಂದ ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳು ಶ್ರೀ ಕಂಬಳಿ ಸ್ವಾಮಿಗಳ ಆಶೀರ್ವಾದದ ಕೂಸಾಗಿ ಜನಿಸಿದ್ದರಂತೆ. ಈ ಕಾರಣಕ್ಕಾಗಿ ಶ್ರೀ ನೀಲಕಂಠ ಸ್ವಾಮಿಗಳ ತಂದೆ ತಾಯಿಗಳು ಇವರನ್ನು ಮಠಕ್ಕೆ ಒಪ್ಪಿಸಿ, ಶ್ರೀ ಕಂಬಳಿ ಸ್ವಾಮಿಗಳ ಹಾರೈಕೆಯಲ್ಲಿ ಸಂಸ್ಕಾರವಂತ ಶಿಶುವಾಗಿ ಬೆಳೆಯುವಂತೆ ಮಾಡಿದರು. ನಂತರ ಸಂಸ್ಕೃತ, ವೇದಾಧ್ಯಯ ಮಾಡಿ ವಿದ್ವತ್ ಸಂಪನ್ನರಾಗಿ ಬೆಳೆದು ಮಠದ ಅಧಿಕಾರವನ್ನು ವಹಿಸಿಕೊಂಡರು

ಎಂದು ಹೇಳಲಾಗುತ್ತಿದೆ. ಇವರ ನಂತರ ಶ್ರೀ ಕರಿಬಸವ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಮುನ್ನಡೆಸಿ ಇಲ್ಲೇ ಲಿಂಗೈಕ್ಯರಾದರೆಂದು ಹೇಳುವ ಅಸ್ಪಷ್ಟವಾದ ಮಾಹಿತಿಗಳ ಆಧಾರದ ಮೇಲೆ ಮಠದ ಪರಂಪರೆಯನ್ನು ಇಲ್ಲಿ ದಾಖಲಿಸಲಾಗಿದೆ.

ಧಾರ್ಮಿಕ ಕಾರ್ಯಗಳು: ಪುರಾತನ ಪರಂಪರೆಯ ಈ ಮಠಕ್ಕೆ ಭಕ್ತರು ಇಂದಿಗೂ ಶ್ರೀ ಕಂಬಳಿ ಸ್ವಾಮಿಗಳ ಪ್ರಭಾವಕ್ಕೆ ಒಳಗಾಗಿ ನಂಬಿಕೆ ಹಾಗೂ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಮಠದ ಕರ್ತೃ ಗುರುಗಳಾದ ಶ್ರೀ ಕಂಬಳೇಶ್ವರರ ಜೀವಂತ ಸಮಾಧಿಗೆ ಗದ್ದುಗೆ ನಿರ್ಮಾಣ ಮಾಡಿ, ಬೃಹದಾಕಾರದ ದೇವಸ್ಥಾನ ಸ್ಥಾಪಿಸಲಾಗಿದೆ. ಈ ಮಠದ ಕೇಂದ್ರಬಿಂದುವಾಗಿರುವ ಈ ದೇವಾಲಯದ ಬಲಬದಿಯಲ್ಲಿ ಮಠದ ಪರಂಪರೆಯ ಗುರುಗಳ ಗದ್ದುಗೆಗಳು ನಿರ್ಮಾಣಗೊಂಡಿವೆ. ಶ್ರೀ ಕರಿಬಸವ ಸ್ವಾಮಿಗಳ ಗದ್ದುಗೆ ಊರಿನ ಹೊರಭಾಗದ ಮಠದ ಜಮೀನಿನಲ್ಲಿ ಸ್ಥಾಪನೆಯಾಗಿದೆ. ಈ ಎಲ್ಲಾ ಗದ್ದುಗೆಗಳಿಗೆ ನಿತ್ಯ ಎರಡು ವೇಳೆ ಪೂಜೆ ನಡೆಯುತ್ತಿದೆ. ಈ ಮಠದ ಹಿರಿಯ ಗುರುಗಳು ಮುಸ್ಲಿಂ ಜನಾಂಗದ ಅನೇಕರಿಗೆ ಲಿಂಗಧಾರಣೆಮಾಡಿ ವೀರಶೈವ ಧರ್ಮಕ್ಕೆ ಮತಾಂತರ ಮಾಡಿಕೊಂಡಿದ್ದರಂತೆ. ಬಂಗಾರಪೇಟೆಯ ಸುತ್ತಮುತ್ತ ತುರುಕಾಣಿ ಬಣಜಿಗರು ಎಂಬ ಹೆಸರಿನಲ್ಲಿ ಗುರುತಿಸಬಹುದಾದ ವೀರಶೈವ ಜನಾಂಗದವರು ಇದ್ದಾರೆ. ಅಂದು ಮತಾಂತರಗೊಂಡ ಭಕ್ತರು ಇಂದಿಗೂ ವೀರಶೈವ ಧರ್ಮದ ತತ್ವಾಚರಣೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಮಠದ ಆವರಣದಲ್ಲಿ ಬಿಲ್ವಪತ್ರೆ ಮರಗಳು ಅರಳಿ, ಬೇಲದ ಮರಗಳು ಬೆಳೆದಿದ್ದು, ಇಲ್ಲಿ ವೀರಭದ್ರಸ್ವಾಮಿ, ನಂದಿಯನ್ನು ಸ್ಥಾಪಿಸಲಾಗಿದೆ. ಇವುಗಳಿಗೆ ನಿತ್ಯ ಪೂಜೆ ನಡೆಸಲಾಗುತ್ತಿದೆ. ಶ್ರೀ ಕಂಬಳಿ ಸ್ವಾಮಿಗಳ ಗದ್ದುಗೆಯ ಬಲಭಾಗದಲ್ಲಿ ವೀರಭದ್ರ, ವೀರಭದ್ರನ ಎದುರು ಭದ್ರಕಾಳಮ್ಮನನ್ನು ಪ್ರತಿಷ್ಠಾಪಿಸಲಾಗಿದೆ. ಕಾರ್ತೀಕಮಾಸದ ಕೊನೆಯ ಸೋಮವಾರ ಕರ್ತೃ ಗದ್ದುಗೆಗೆ ವಿಶೇಷ ಪೂಜೆ ಮತ್ತು ಅನ್ನ ದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ಪುರಾತನ ವಸ್ತುಗಳು: ಪಲ್ಲಕ್ಕಿ, ತ್ರಿಶೂಲ, ಕತ್ತಿ, ಶ್ರೀ ಕಂಬಳೇಶ್ವರ ಸ್ವಾಮಿಗಳು ಬಳಸುತ್ತಿದ್ದ ಕಂಬಳಿ, ಪಾದುಕೆ, ವಿಭೂತಿ ಘಟ್ಟಿ, ವ್ಯಾಘ್ರಜಿನ ಹಾಗೂ ಯಾವ ಮಠದಲ್ಲಿಯೂ ಸಿಗಲಾರದಂತಹ ಅಪರೂಪದ ಏಕಮುಖ ರುದ್ರಾಕ್ಷಿ ಈ ಮಠದಲ್ಲಿವೆ. ಉತ್ಸವ ಮೂರ್ತಿ, ಧ್ವಜ ಸ್ತಂಭಗಳು ಮಠದಲ್ಲಿ ನೋಡ ಸಿಗುವ ಪುರಾತನ ವಸ್ತುಗಳಾಗಿವೆ. ಮಠದ ಹೊರಭಾಗದಲ್ಲಿ ಪುರಾತನ ಕಾಲದ ಒಂದು ಬಾವಿಯು ಪರಂಪರೆಯ ಸ್ಮಾರಕವಾಗಿ ಉಳಿದಿದೆ.

ಇಂತಹ ಪುರಾತನ ಪ್ರಸಿದ್ಧ ಮಠವು ಈಗ ಉತ್ತರಾಧಿಕಾರಿಗಳಿಲ್ಲದೆ ಖಾಲಿ ಉಳಿದಿದೆ. ಮಠದ ವಂಶಸ್ಥರಾದ ಶ್ರೀಕುಮಾರಸ್ವಾಮಿ ಎಂಬುವರು ಮಠದ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಕುಮಾರ ಸ್ವಾಮಿ, ಶ್ರೀ ಕಂಬಳೇಶ್ವರ ಮಠ, ಗೌರಿ ಪೇಟೆ, ಕೋಲಾರ.

ಹಳೆಯ ಮಠ: ಕೋಲಾರ ನಗರದ ದರ್ಗಾದ ಸಮೀಪದಲ್ಲಿ ಸ್ಥಾಪನೆಯಾಗಿರುವ ಹಳೆಯ ಮಠಕ್ಕೆ ಶ್ರೀ ಚನ್ನಬಸವೇಶ್ವರ ಸ್ವಾಮಿ ಗದ್ದುಗೆ ಮಠ ಎಂದು ಸಹ ಕರೆಯಲಾಗುತ್ತಿದೆ. ಶ್ರೀ ಚನ್ನಬಸವೇಶ್ವರ ಸ್ವಾಮಿಗಳು ಈ ನಗರದಲ್ಲಿ ಮಠವನ್ನು ಸ್ಥಾಪಿಸಿ ಪ್ರಬುದ್ಧಮಾನಕ್ಕೆ ತಂದಿದ್ದರು. ಈ ಸಂದರ್ಭದಲ್ಲಿ ಮುಸ್ಲಿಂರು ಈ ಪ್ರದೇಶದಲ್ಲಿ ಪ್ರಬಲರಾಗಿದ್ದರು. ಹಳೇಮಠ ಇದ್ದ ಜಾಗದಲ್ಲಿ ಮುಸ್ಲಿಮನೊಬ್ಬನ ಗೋರಿ ನಿರ್ಮಿಸಲು ಮುಂದಾದರು. ಆಗ ಗುರುಗಳು ಪವಾಡವನ್ನು ಮಾಡಿ ಮುಸ್ಲಿಂರಿಂದ ಗೌರವಿಸಲ್ಪಟ್ಟರಂತೆ. ನಂತರ ಅಂತರಗಂಗೆ ಪ್ರಾಂತ್ಯದಲ್ಲಿ ನಾಯಕಳಾಗಿದ್ದ ಮುಸ್ಲಿಂ ರಾಣಿಯೊಬ್ಬಳು ಗುರುಗಳ ಪವಾಡವನ್ನು ಕೇಳಿ ತಿಳಿದು ಗುರುಗಳಿಗೆ ಮಠ ನಿರ್ಮಿಸಲು ಜಾಗವನ್ನು ಉಂಬಳಿಯಾಗಿ ನೀಡಿದಳು. ನಂತರ ಈ ಜಾಗದಲ್ಲಿ ಮಠವನ್ನು ನಿರ್ಮಿಸಿದ ಗುರುಗಳು,ವೀರಶೈವಧರ್ಮ ಹೆಚ್ಚುಪ್ರಚಾರಗೊಳ್ಳಲು ಕಾರಣಕರ್ತರಾದರು ಎಂದು ಹೇಳುವ ಕಥೆ ಜನಜನಿತವಾಗಿದೆ.

ವಿರಕ್ತ ಸಂಪ್ರದಾಯದ ಈ ಮಠದಲ್ಲಿ ನಾಲ್ಕು ಗದ್ದುಗೆಗಳಿದ್ದು, ಇವುಗಳು ಯಾರ ಹೆಸರುಗಳಲ್ಲಿ ನಿರ್ಮಾಣಗೊಂಡಿವೆ ಎಂಬುದು ತಿಳಿಯುತ್ತಿಲ್ಲ. ಈ ಕಾರಣದಿಂದ ಮಠವನ್ನು ಪುರಾತನ ಮಠವೆಂದು ಹೇಳಬಹುದಾಗಿದ್ದರೂ ಸ್ಪಷ್ಟವಾದ ಮಾಹಿತಿಗಳು ದೊರೆಯದೆ ಇರುವ ಕಾರಣದಿಂದ, ಈ ಮಠದ ಪರಂಪರೆಯನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ. ಮಠವು ಪ್ರಸ್ತುತ ಉತ್ತರಾಧಿಕಾರಿ ಗಳಿಲ್ಲದೆ ಖಾಲಿ ಉಳಿದಿದೆ. ಈಗ ಮಠದ ವಂಶಸ್ಥರಾದ ಶ್ರೀ ಚನ್ನಬಸವಾರಾಧ್ಯ ಮತ್ತು ಅವರ

ಸಹೋದರರು ಪೂಜಾ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಮಠದಲ್ಲಿ ನಿತ್ಯ ಪೂಜೆ, ಕಾರ್ತೀಕ ಮತ್ತು ಶ್ರಾವಣಮಾಸದಲ್ಲಿ ವಿಶೇಷ ಪೂಜೆ ನಡೆಸಲಾಗುವುದಲ್ಲದೆ ಬಸವ ಜಯಂತಿಯನ್ನು ಆಚರಿಸಲಾಗುತ್ತಿದೆ.

ವಿಳಾಸ: ಶ್ರೀ ಚನ್ನಬಸವಾರಾಧ್ಯ, ಶ್ರೀ ಹಳೇಮಠ, ದರ್ಗಾ ಬಡಾವಣೆ, ಕ್ಲಾಕ್ ಟವರ್ ಹತ್ತಿರ, ಕೋಲಾರ.

ಹೊಸಮಠ: ಕೋಲಾರ ನಗರದ ಶಾಂತಿನಗರ ಬಡಾವಣೆಯಲ್ಲಿರುವ ಹೊಸಮಠಕ್ಕೆ ಶ್ರೀ ಚನ್ನಂಜಪ್ಪನ ಮಠ ಎಂದೂ ಸಹ ಕರೆಯಲಾಗುತ್ತಿದೆ. ವಿರಕ್ತ ಸಂಪ್ರದಾಯದ ಈ ಮಠದಲ್ಲಿ ಎರಡು ಗದ್ದುಗೆಗಳಿವೆ. ಶ್ರೀ ನಂಜುಂಡಯ್ಯ ಎಂಬುವರು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಮಠದ ಕಲ್ಪನೆಯನ್ನು ಉಳಿಸಿಕೊಂಡು ಬಂದಿದ್ದಾರೆ.

ಗವಿಮಠ: ಕೋಲಾರ ನಗರದ ಕೀಲುಕೋಟೆ ಬಡಾವಣೆಯ ಅಂತರಗಂಗೆ ಬೆಟ್ಟದಲ್ಲಿ ಗವಿಮಠ ಸ್ಥಾಪನೆಯಾಗಿದೆ. ಈ ಮಠವು ಪುರಾತನ ಮಠವಾಗಿ ಹೆಚ್ಚು ಹೆಸರು ಪಡೆದಿತ್ತು. ಬೆಟ್ಟದ ಮೇಲಿನ ಗುಹೆಗಳು ಪುರಾತನ ಗುರುಗಳ ವಾಸಸ್ಥಾನ ಹಾಗೂ ಪೂಜಾ ಸ್ಥಾನಗಳಾಗಿದ್ದವು. ಈ ಗವಿಗಳು ಇಂದಿಗೂ ಯಾತ್ರಾ ಸ್ಥಳವಾಗಿ ಪ್ರಸಿದ್ಧಿಯಾಗಿವೆ. ಇಂತಹ ಒಂದು ಪವಿತ್ರ ಸ್ಥಳ ವೀರಶೈವ ಧರ್ಮದ ಮಠವಾಗಿ ರೂಪುಗೊಂಡಿದ್ದು, ಈಗ ಗುರುಗಳಿಲ್ಲದೆ ಖಾಲಿ ಉಳಿದಿರುವುದು ನೋವಿನ ಸಂಗತಿ.

ಕೈವಾರ ಮಠ: ಕೋಲಾರ ನಗರದ ಟೇಕಾಲ್ ರಸ್ತೆಯ ತಿರುವಿನಲ್ಲಿರುವ ಶ್ರೀ ಕೈವಾರಮಠವು, ವೀರಶೈವ ಧರ್ಮದ ಪುರಾತನ ಮಠವಾಗಿದೆ. ಪಂಚಪೀಠಗಳ ಪರಂಪರೆಯ ಶಾಖಾಮಠವಾದ ಈ ಮಠವು ಇಂದು ಗುರುಗಳಿಲ್ಲದೆ ಖಾಲಿ ಉಳಿದಿದೆ. ಮಠದ ಆವರಣದಲ್ಲಿ ಒಂದು ಗದ್ದುಗೆ ಇದ್ದು, ಇದಕ್ಕೆ ನಿತ್ಯ ಪೂಜೆ ಮಾಡುವ ಮೂಲಕ ಮಠದ ಅಸ್ತಿತ್ವವನ್ನು ಉಳಿಸಿಕೊಳ್ಳಲಾಗಿದೆ. ಈಗ ಶ್ರೀ ನಂಜುಂಡಯ್ಯ ಎಂಬುವರು ಮಠದ ಧಾರ್ಮಿಕ ಆಚರಣೆಗಳನ್ನು ಮಾಡಿಕೊಂಡು ಬರುತ್ತಿದ್ದಾರೆ.

ಹೊರಗಪ್ಪನ ಮಠ: ಕೋಲಾರ ನಗರದ ಹೃದಯ ಭಾಗದಲ್ಲಿರುವ ಶ್ರೀ ಹೊರಗಪ್ಪನ ಮಠವು ಹೆಚ್ಚು ಪ್ರಸಿದ್ಧಿ ಪಡೆದಿದ್ದ ಮಠವಾಗಿತ್ತು. ಪಂಚ ಪೀಠಗಳ ಪರಂಪರೆಯ ಮಠವಾಗಿದ್ದು, ಇಲ್ಲಿ ವೀರಭದ್ರೇಶ್ವರ ದೇವಸ್ಥಾನ ಮತ್ತು ಹೊರ ಬಸವೇಶ್ವರ ದೇವಸ್ಥಾನಗಳು ಸ್ಥಾಪನೆಯಾಗಿವೆ. ಹೊರಗಪ್ಪನ ಮಠಕ್ಕೆ 'ಶ್ರೀ ಚೌಕಿಮಠ' ಎಂದು ಸಹ ಕರೆಯಲಾಗುತ್ತಿದೆ. ಮಠದಲ್ಲಿ ಗುರುಗಳು ಇಲ್ಲದ ಕಾರಣ ಹಿಂದೆ ಈ ಮಠದ ಪೂರ್ಣ ಉಸ್ತುವಾರಿಯನ್ನು ಶ್ರೀ ಬಸವರಾಜಪ್ಪನವರು ವ್ಯವಸ್ಥಿತವಾಗಿ ನೋಡಿಕೊಳ್ಳುತ್ತಿದ್ದರು. ಇವರು ಲಿಂಗೈಕ್ಯರಾದ ಮೇಲೆ ಶ್ರೀಮತಿ ಗಂಗಮ್ಮನವರು ನೋಡಿಕೊಳ್ಳುತ್ತಿದ್ದರು. ಗ್ರಾಮಸ್ಥರು ಈಗ ವಿಶ್ವಸ್ಥ ಸಮಿತಿಯನ್ನು ರಚಿಸಿಕೊಂಡು ಈ ಮಠದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದಾರೆ. ಮಠದ ಆವರಣದಲ್ಲಿರುವ ಪುರಾತನ ಕಾಲದ ವೀರಭದ್ರ ದೇವಸ್ಥಾನ ಹಾಗೂ ಹೊರಬಸವೇಶ್ವರ ದೇವಸ್ಥಾನಗಳನ್ನು ಜೀರ್ಣಾಭಿವೃದ್ಧಿಗೊಳಿಸಿ, ವೀರಶೈವರ ಧಾರ್ಮಿಕ ಆಚರಣೆಗಳಿಗೆ ಕೇಂದ್ರ ಸ್ಥಾನವನ್ನಾಗಿ ಮಾಡಿಕೊಳ್ಳಲಾಗಿದೆ.

ವಿಳಾಸ: ಅಧ್ಯಕ್ಷರು, ವಿಶ್ವಸ್ಥ ಸಮಿತಿ, ಶ್ರೀ ಹೊರಗಪ್ಪನ ಮಠ, ಕೋಲಾರ.

ನಾಗಲಾಪುರ

ಕೋಲಾರ ತಾಲ್ಲೂಕಿನ ನಾಗಲಾಪುರವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಅಭಿವೃದ್ಧಿ ಪಥದಲ್ಲಿರುವ ನಾಗಲಾಪುರವು ಪ್ರಕೃತಿ ಸೌಂದರ್ಯದ ತಾಣ. ಶತಶೃಂಗ ಪರ್ವತವು ಈ ಗ್ರಾಮದ ಸುತ್ತ ಆವರಿಸಿದೆ. ಪುರಾತನ ಕಾಲದಲ್ಲಿ ಜಮದಗ್ನಿ ಮುನಿಯು ಈ ಪವಿತ್ರ ಸ್ಥಳದಲ್ಲಿ ತಪಸ್ಸನ್ನು ಆಚರಿಸಿದ್ದರೆಂದು ಹೇಳಲಾಗುತ್ತಿದೆ. ಈ ಸ್ಥಳದಲ್ಲಿ ಶ್ರೀ ಲಿಂಗರಾಜ ಸ್ವಾಮಿಗಳು ಮಠವನ್ನು ಸ್ಥಾಪಿಸಿದ್ದಾರೆ.

ನಾಗಲಾಪುರ ಮಠ: ನಾಗಲಾಪುರದಲ್ಲಿರುವ ಮಠವು ಶ್ರೀ ಲಿಂಗರಾಜ ಸ್ವಾಮಿಗಳಿಂದ ಸ್ಥಾಪನೆಯಾಗಿದೆ. ವಿಜಯನಗರ ಸಾಮ್ರಾಜ್ಯದ ಪತನದ ನಂತರ ಶ್ರೀ ಲಿಂಗರಾಜ ಗುರುಗಳು ದೇಶಸಂಚಾರ ಹೊರಟು, ತಮ್ಮ ಶಿಷ್ಯರ ಜೊತೆ ಶತಶೃಂಗ ಪರ್ವತದಲ್ಲಿ ಅನುಷ್ಠಾನಕ್ಕೆ ಕುಳಿತುಕೊಂಡರು. ಈ ಸಂದರ್ಭದಲ್ಲಿ ಅನೇಕ ಅಸಹಾಯಕರಿಗೆ ಕಾಯಕ ಯೋಗದ ಮಹತ್ವದ ಅರಿವು ಮೂಡಿಸಿ ಸನ್ಮಾರ್ಗಕ್ಕೆ ತಂದರು. ಅನೇಕ ಪವಾಡಗಳನ್ನು ಮಾಡಿ ಪ್ರಸಿದ್ಧಿಯಾದರು. ಇಂತಹ ಮಹಾಪುರುಷರು

ಶತಶೃಂಗ ಪರ್ವತದಲ್ಲಿ ನೆಲೆಸಿರುವ ವಿಚಾರವನ್ನು ತಿಳಿದ ಈ ಪ್ರಾಂತ್ಯದ ಪಾಳೆಗಾರರಾದ ಅಂಬಮ್ಮ ಎಂಬುವರು ತಮ್ಮ ಪರಿವಾರದ ಸಮೇತ ಗುರುಗಳಿದ್ದಲ್ಲಿಗೆ ಬಂದು ದರ್ಶನ ಪಡೆದು, ಕಾಣಿಕೆ ನೀಡಬೇಕೆಂದು ಅಪೇಕ್ಷೆಪಟ್ಟಳಂತೆ. ಆಗ ಗುರುಗಳು ಮಠ ಸ್ಥಾಪನೆಗೆ ಈ ಅರಣ್ಯದ ಪ್ರದೇಶ ಬೇಕಾಗಿದೆ ಎಂದು ಕೇಳಿದರಂತೆ. ಆಗ ಅಂಬಮ್ಮ ರಾಣಿಯು ಈ ಪ್ರದೇಶವನ್ನು ಉಂಬಳಿಯಾಗಿ ನೀಡಿದಳಂತೆ. ಇಂತಹ ಪವಿತ್ರಸ್ಥಳದಲ್ಲಿ ಮಠವನ್ನು ನಿರ್ಮಿಸಿ, ಎಲ್ಲಾ ರೀತಿಯ ಸಹಕಾರವನ್ನು ನೀಡಿ ಮಠದ ಸ್ಥಾಪನೆಗೆ ಅಂಬಮ್ಮ ಕಾರಣಕರ್ತಳಾದಳು ಎಂದು ಹೇಳಲಾಗುತ್ತಿದೆ.

ಪರಂಪರೆ: ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿರುವ ನಾಗಲಾಪುರ ಮಠವು ಶ್ರೀ ಲಿಂಗರಾಜ ಸ್ವಾಮಿಗಳಿಂದ ಸ್ಥಾಪನೆಗೊಂಡು ಈಗಿನ ತನಕ ಬೆಳೆದು ಬಂದಿದೆ. ಈ ಮಠದ ಪರಂಪರೆಯಲ್ಲಿ ಕರ್ತೃ ಗುರುಗಳ ನಂತರದಲ್ಲಿ ಪಟ್ಟಾಧಿಕಾರ ಪಡೆದ ಎಂಟು ಜನ ಸ್ವಾಮಿಗಳ ಹೆಸರುಗಳು ಲಭ್ಯವಿಲ್ಲ. ಶೋಧನೆಗೆ ಹೋದ ಸಂದರ್ಭದಲ್ಲಿ ದೊರೆತ ಮಾಹಿತಿಯ ಆಧಾರದ ಮೇಲೆ ಈ ಕೆಳಗಿನ ಹೆಸರುಗಳನ್ನು ದಾಖಲಿಸಲಾಗಿದೆ.

೧. ಷ.ಬ್ರ.ಶ್ರೀ ಲಿಂಗರಾಜ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ಸಿದ್ಧಲಿಂಗರಾಜ ಶಿವಾಚಾರ್ಯ ಸ್ವಾಮಿಗಳು
೩. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು
೪. ಷ.ಬ್ರ.ಶ್ರೀ ಪಟ್ಟದ ಗುರುಲಿಂಗರಾಜ ಶಿವಾಚಾರ್ಯ ಸ್ವಾಮಿಗಳು
೫. ಷ.ಬ್ರ.ಶ್ರೀ ಎರಡನೆಯ ಗುರುಲಿಂಗರಾಜ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದು ಬಂದಿದೆ. ಕರ್ತೃ ಗುರುಗಳಾದ ಶ್ರೀ ಲಿಂಗರಾಜ ಸ್ವಾಮಿ ಗಳು ಅನೇಕ ಪವಾಡಗಳನ್ನು ಮಾಡಿ ಮಠವನ್ನು ಪ್ರಬುದ್ಧಮಾನಕ್ಕೆ ತಂದು, ತಮ್ಮ ಸಹೋದರ ಸಂಬಂಧಿಯನ್ನು ಉತ್ತರಾಧಿಕಾರಿಗಳನ್ನಾಗಿ ಮಾಡಿ ಜೀವಂತ ಸಮಾಧಿಯಾದರು. ಇವರ ನಂತರ ಶ್ರೀ ಸಿದ್ಧಲಿಂಗರಾಜ ಸ್ವಾಮಿಗಳು ಅಧಿಕಾರಕ್ಕೆ ಬಂದರು. ಇವರ ನಂತರ ನಾಲ್ಕು ಜನ ಗುರುಗಳು ಅಧಿಕಾರ ನಡೆಸಿದ ಬಗ್ಗೆ ಮಾಹಿತಿ ದೊರೆಯುತ್ತಿದೆ. ಆದರೆ ಇವರುಗಳ ಹೆಸರುಗಳು ಹಾಗೂ ಆಡಳಿತದ ವಿವರಗಳು ದೊರೆಯದಾಗಿದೆ. ಶ್ರೀ ರುದ್ರಮುನಿ ಸ್ವಾಮಿಗಳ ನಂತರ ೧೯೧೫ ರಲ್ಲಿ ಲಿಂಗೈಕ್ಯರಾದ ಶ್ರೀ ಪಟ್ಟದ ಗುರುಲಿಂಗರಾಜ ಸ್ವಾಮಿಗಳು ಮಠವನ್ನು ಹೆಚ್ಚು ಅಭಿವೃದ್ಧಿಪಡಿಸಿದ್ದಾರೆ. ಇವರು ಲಿಂಗೈಕ್ಯರಾದ ಮೇಲೆ ನಲವತ್ತೇಳು ವರ್ಷಗಳ ಕಾಲ ಮಠವು ಉತ್ತರಾಧಿಕಾರಿಗಳಿಲ್ಲದೆ ಖಾಲಿ ಉಳಿಯಿತು. ಶ್ರೀ ಗುರುಲಿಂಗ ದೇವರು ಮತ್ತು ಶ್ರೀಮತಿ ಮರಿಯಮ್ಮನವರ ಪುತ್ರರಾಗಿ ೧೯೫೦ ರ ಮೇ ನಾಲ್ಕರಂದು ಶ್ರೀ ಗುರುಲಿಂಗರಾಜ ದೇವರು ಜನಿಸಿದರು. ಬೆಂಗಳೂರಿನಲ್ಲಿ ಕಲಿತು ೧೯೬೨ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಇವರು ಅಧಿಕಾರಕ್ಕೆ ಬಂದ ಮೇಲೆ ಮಠಕ್ಕೆ ಕಟ್ಟಡವನ್ನು ನಿರ್ಮಿಸಿ, ರೇಣುಕಮೂರ್ತಿಯನ್ನು ಸ್ಥಾಪಿಸಿದರು. ಬೆಟ್ಟದ ಮೇಲಿನ ವೀರಭದ್ರಸ್ವಾಮಿ ದೇವಸ್ಥಾನವನ್ನು ಜೀರ್ಣೋದ್ಧಾರಗೊಳಿಸಿ,ಮಕರ ಸಂಕ್ರಾಂತಿಯಂದು ಜಾತ್ರೆ ನಡೆಯಲು ವ್ಯವಸ್ಥೆ ಮಾಡಿದರು.

ಧಾರ್ಮಿಕ ಕಾರ್ಯಗಳು: ಪುತ್ರವರ್ಗದ ಸಂಪ್ರದಾಯದ ಈ ಮಠದ ಜಾಗದಲ್ಲಿ ಪರಂಪರೆಯ ಹದಿಮೂರು ಜನ ಗುರುಗಳ ಗದ್ದುಗೆಗಳು ಇವೆ. ವೀರಭದ್ರಸ್ವಾಮಿ ದೇವಸ್ಥಾನಕ್ಕೆ ನಿತ್ಯಪೂಜೆ, ಕಾರ್ತೀಕ, ಶ್ರಾವಣಮಾಸದಲ್ಲಿ ವಿಶೇಷ ಪೂಜೆ ಹಾಗೂ ಹಿರಿಯ ಗುರುಗಳ ಪುಣ್ಯಾರಾಧನೆ ಕಾರ್ಯವನ್ನು ಭಾದ್ರಪದಮಾಸದಲ್ಲಿ ಹಮ್ಮಿಕೊಂಡು, ಹದಿನೈದು ದಿನಗಳ ಕಾಲ ಪುರಾಣ ಪ್ರವಚನವನ್ನು ನಡೆಸಲಾಗುತ್ತಿದೆ. ಹುಣ್ಣಿಮೆಯಾದ ಎರಡನೆಯ ದಿನ ಆರಾಧನೆಯ ಕಾರ್ಯಕ್ರಮವನ್ನು ಮಾಡಲಾಗುತ್ತಿದೆ.

ಅಭಿವೃದ್ಧಿ ಕಾರ್ಯಗಳು: ಎರಡನೆಯ ಶ್ರೀ ಗುರುಲಿಂಗರಾಜ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಮಠವು ಹೆಚ್ಚು ಅಭಿವೃದ್ಧಿಯನ್ನು ಕಂಡಿದೆ. ಹಿಂದೆ ಮಠಕ್ಕೆ ಉಂಬಳಿಯಾಗಿ ದೊರೆತಿದ್ದ ಆಸ್ತಿಯು ಅನ್ಯರ ಪಾಲಾಗಿ, ಈಗ ಅರವತ್ತು ಎಕರೆ ಜಮೀನು ಮಾತ್ರ ಉಳಿದಿದೆ. ಇದನ್ನು ಅಭಿವೃದ್ಧಿಪಡಿಸಿ ಹೆಚ್ಚು ಆದಾಯ ಬರುವಂತೆ ಮಾಡಲಾಗಿದೆ. ಮಠದ ಕಟ್ಟಡ, ದೇವಸ್ಥಾನಗಳ ಅಭಿವೃದ್ಧಿಯನ್ನು ಕೈಗೊಂಡ ಗುರುಗಳು, ವೀರಶೈವ ಧರ್ಮದ ಅಭಿವೃದ್ಧಿಗೂ ಶ್ರಮಿಸುತ್ತಿದ್ದಾರೆ.

ವಿಳಾಸ: ಶ್ರೀ ಪಟ್ಟದ ಗುರುಲಿಂಗರಾಜ ಸ್ವಾಮಿಗಳು, ಶ್ರೀ ನಾಗಲಾಪುರ ಮಠ, ನಾಗಲಾಪುರ, ಕೋಲಾರ ತಾಲ್ಲೂಕು.

ಬಂಗಾರಪೇಟೆ ತಾಲ್ಲೂಕು

ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕು ವ್ಯಾಪಾರ ಹಾಗೂ ಕೃಷಿ ಕ್ಷೇತ್ರದಿಂದ ಅಭಿವೃದ್ಧಿ ಕಂಡಿದೆ. ಚಿನ್ನದ ನಾಡೆಂದು ಹೆಸರು ಗಳಿಸಿದ ಈ ತಾಲ್ಲೂಕು ಜಗತ್ ಪ್ರಸಿದ್ಧಿಯಾಗಿದೆ. ಇಂತಹ ತಾಲ್ಲೂಕಿನಲ್ಲಿ ಹಿಂದೆ ಅನೇಕ ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಆದರೆ ಇಂದು ಕೇವಲ ಐತಾಂಡಹಳ್ಳಿ ಮಠವನ್ನು ಹೊರತುಪಡಿಸಿದರೆ ಉಳಿದ ಯಾವ ಮಠಗಳು ಅಸ್ತಿತ್ವದಲ್ಲಿ ಉಳಿದಿಲ್ಲವೆಂಬುದು ಒಂದು ವಿಪರ್ಯಾಸದ ಸಂಗತಿ.

ಐತಾಂಡಹಳ್ಳಿ

ಬಂಗಾರಪೇಟೆ ತಾಲ್ಲೂಕಿನ ಐತಾಂಡಹಳ್ಳಿಯು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಆರು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಗೂಳೂರು ಜಂಗಮಮಠವು ಸ್ಥಾಪನೆಯಾಗಿ ಹೆಸರು ಮಾಡಿದೆ.

ಗೂಳೂರು ಜಂಗಮಮಠ: ಐತಾಂಡಹಳ್ಳಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಮಠವು ಶ್ರೀ ನಿಡುಮಾಮಿಡಿ ಮಹಾ ಸಂಸ್ಥಾನಮಠದ ಶಾಖಾಮಠವಾಗಿ ಬೆಳೆದು, ಈ ಭಾಗದ ಧಾರ್ಮಿಕ ಕೇಂದ್ರಬಿಂದುವಾಗಿ ರೂಪುಗೊಂಡಿದೆ.

ಮಠ ಸ್ಥಾಪನೆ: ಗೂಳೂರು ಜಂಗಮ ಮಠವು ಬಾಗೇಪಲ್ಲಿ ತಾಲ್ಲೂಕಿನ ಗೂಳೂರು ಗ್ರಾಮದ ಶ್ರೀ ನಿಡುಮಾಮಿಡಿ ಮಹಾ ಸಂಸ್ಥಾನ ಮಠದ ಶಾಖಾಮಠವಾಗಿ ಇಲ್ಲಿ ಸ್ಥಾಪನೆಗೊಂಡ ಕಾರಣಕ್ಕಾಗಿ ಐತಾಂಡಹಳ್ಳಿ ಮಠಕ್ಕೆ 'ಗೂಳೂರು ಜಂಗಮ ಮಠ'ವೆಂದು ಹೆಸರು ಬಂದಿದೆ. ಶ್ರೀ ಜಂಗಮ ಮಠವು ಐತಾಂಡಹಳ್ಳಿಯ ಈಶಾನ್ಯಕ್ಕೆ ಐದು ಕಿ.ಮೀ ದೂರದಲ್ಲಿರುವ ಗಣಾಚಾರಪುರದಲ್ಲಿ ಸ್ಥಾಪನೆಯಾಯಿತ್ತು. ಈ ಗ್ರಾಮವು ಕಾರಣಾಂತರದಿಂದ ನಶಿಸಿ ಹೋದಾಗ ಮಠವು ಐತಾಂಡಹಳ್ಳಿಗೆ ಐದನೂರು ವರ್ಷಗಳ ಹಿಂದೆ ಪುನಃ ಸ್ಥಳಾಂತರಗೊಂಡು, ತನ್ನ ಪರಂಪರೆಯನ್ನು ಮುಂದುವರೆಸಿತು ಎಂದು ಹೇಳಲಾಗುತ್ತಿದೆ. ಗೂಳೂರಿನಿಂದ ಗಣಾಚಾರಪುರಕ್ಕೆ ಶ್ರೀ ಜಡೆಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಸ್ಥಳಾಂತರ ಗೊಂಡಿದೆ ಎಂದು ಹೇಳಲಾಗುತ್ತಿದೆ. ಈ ಕಾರಣಕ್ಕಾಗಿಯೇ ಈ ಮಠದ ಕರ್ತೃ ಗುರುಗಳೆಂದು ಶ್ರೀ ಜಡೆಸಿದ್ಧಲಿಂಗ ಸ್ವಾಮಿಗಳ ಗದ್ದುಗೆಯನ್ನು ಪೂಜಿಸಿ ಗೌರವಿಸಲಾಗುತ್ತಿದೆ.

ಪರಂಪರೆ:

೧. ಶ್ರೀಮದ್ ಘನಲಿಂಗ ಚಕ್ರವರ್ತಿ ಜಡೆಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು
೨. ಶ್ರೀಮದ್ ಘನಲಿಂಗ ಚಕ್ರವರ್ತಿ ಲಿಂಗರಾಜ ಶಿವಾಚಾರ್ಯ ಸ್ವಾಮಿಗಳು
೩. ಶ್ರೀಮದ್ ಘನಲಿಂಗ ಚಕ್ರವರ್ತಿ ಮರಿಲಿಂಗರಾಜ ಶಿವಾಚಾರ್ಯ ಸ್ವಾಮಿಗಳು
೪. ಶ್ರೀಮದ್ ಘನಲಿಂಗ ಚಕ್ರವರ್ತಿ ಷಣ್ಮುಖ ಶಿವಾಚಾರ್ಯ ಸ್ವಾಮಿಗಳು
೫. ಶ್ರೀಮದ್ ಘನಲಿಂಗ ಚಕ್ರವರ್ತಿ ನೀಲಕಂಠ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃ ಗುರುಗಳಾದ ಶ್ರೀ ಜಡೆಸಿದ್ಧಲಿಂಗ ಸ್ವಾಮಿಗಳು ಮಹಾಪವಾಡ ಪುರುಷರಾಗಿ ಹೆಸರುಗಳಿಸಿದ್ದರು. ಇವರು ಲೋಕೋದ್ಧಾರಕ್ಕಾಗಿ ಸಂಚಾರ ಕೈಗೊಂಡು ಆಂಧ್ರ, ತಮಿಳುನಾಡು ಪ್ರಾಂತ್ಯಗಳಲ್ಲಿ ಹೆಚ್ಚು ಶಿಷ್ಯರನ್ನು ಗಳಿಸಿಕೊಂಡಿದ್ದರು. ಅಂದು ಮಠದ ಶಿಷ್ಯರಾಗಿದ್ದ ಭಕ್ತರು ಇಂದಿಗೂ ಮಠದ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಂಡು, ಗುರುಗಳ ಕೃಪಾಶೀರ್ವಾದಕ್ಕೆ ಪಾತ್ರರಾಗಿದ್ದಾರೆ. ಇಂತಹ ಇತಿಹಾಸ ಪ್ರಸಿದ್ಧ ಮಠದ ಐದನೆಯ ಗುರುಗಳಾಗಿ ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಮುನ್ನಡೆಸಿಕೊಂಡು ಬರುತ್ತಿದ್ದಾರೆ.

ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ಹಾರನಹಳ್ಳಿ ಕೋಡಿಮಠದ ಶ್ರೀ ನೀಲಲೋಚನ ಸ್ವಾಮಿಗಳ ಶಿಷ್ಯರಾಗಿ ಬೆಳೆದ ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳು, ಕಲಿಕೆಗೆಂದು ಹಾವೇರಿಯ ಸಿಂದಗಿ ಮಠದಲ್ಲಿ ಆಶ್ರಯ ಪಡೆದು ಶ್ರೀ ಶಾಂತವೀರ ಪಟ್ಟದ ದೇವರ ಕೃಪಾಶೀರ್ವಾದ ಹಾಗೂ ಅವರ ಮಾರ್ಗದರ್ಶನದಲ್ಲಿ ಸಮರ್ಥ ವಟುವಾಗಿ ರೂಪುಗೊಂಡರು. ಒಮ್ಮೆ ಗೂಳೂರು ನಿಡುಮಾಮಿಡಿ ಮಠದ ಶ್ರೀ ಜ.ಚ.ನಿ ಯವರು ಶ್ರೀ ಶಾಂತವೀರ ಪಟ್ಟದ ದೇವರ ಬಳಿ ಬಂದು

ಉತ್ತಮ ವಟುವನ್ನು ನೀಡುವಂತೆ ಕೇಳಿದಾಗ, ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳನ್ನು ಶ್ರೀ ಜ.ಚ.ನಿ. ಯವರ ಕೈಗೆ ಒಪ್ಪಿಸಿದರು. ೧೯೬೮ ರಿಂದ ಶ್ರೀ ಜ.ಚ.ನಿ. ಯವರ ಮಾರ್ಗದರ್ಶನ ಹಾಗೂ ಆರೈಕೆಯಲ್ಲಿ ಬೆಳೆದ ಗುರುಗಳಿಗೆ ಶ್ರೀ ಜ.ಚ.ನಿ. ಅವರು ೧೯೭೦ ರ ಜೂನ್ ಇಪ್ಪತ್ತೆರಡರಂದು ಐತಾಂಡಹಳ್ಳಿ ಮಠದ ಪಟ್ಟಾಧಿಕಾರವನ್ನು ವಹಿಸಿಕೊಟ್ಟರು.

ಗುರುಗಳು ಪಟ್ಟಾಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ ಮಠವು ಪೂರ್ಣ ಜೀರ್ಣಗೊಂಡಿತ್ತು. ಇಂತಹ ಮಠವನ್ನು ಅಭಿವೃದ್ಧಿಪಡಿಸುವ ಹೊಣೆಗಾರಿಕೆ ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳ ಹೆಗಲ ಮೇಲೆ ಬಿತ್ತು. ಸಿಕ್ಕ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ಸಾಧನೆಯನ್ನು ಮಾಡುವ ಹಂಬಲದಿಂದ, ಗುರುಗಳು ಮಠದ ಅಭಿವೃದ್ಧಿಗೆ ನೀಲಿನಕ್ಷೆಯನ್ನು ತಯಾರಿಸಿಕೊಂಡರು.

ಮೊದಲ ಹಂತವಾಗಿ ಶಿಷ್ಯರ ಸಂಘಟನೆಯನ್ನು ಮಾಡಿ ಧಾರ್ಮಿಕ ವಿಚಾರಗಳಿಂದ ಭಕ್ತರಿಗೆ ಸಂಸ್ಕಾರ ನೀಡಿದರು. ಜಾತಿ, ಬೇಧವಿಲ್ಲದೆ ಸಮಾಜದ ಎಲ್ಲಾ ಸ್ತರದ ಭಕ್ತರನ್ನು ಸಮಾನವಾಗಿ ನೋಡಿ ಅವರ ಒಲವನ್ನು ಗಳಿಸಿಕೊಂಡರು.ನಂತರ ಹೇಳುವವರು ಕೇಳುವವರಿಲ್ಲದೆ ಅನ್ಯರ ಪಾಲಾಗಿದ್ದ ಮಠದ ಆಸ್ತಿಯನ್ನು ಉಳಿಸಲು ಶ್ರಮಿಸಿದರು. ಇದರ ಫಲವಾಗಿ ಮಠ ಆಸ್ತಿವಂತ ಮಠವಾಗಿ, ಧಾರ್ಮಿಕ ಕ್ಷೇತ್ರದಲ್ಲಿ ಹೆಚ್ಚು ಹೆಸರು ಪಡೆಯಲು ಕಾರಣವಾಯಿತು. ಮಠದ ಅಭಿವೃದ್ಧಿಯ ಜೊತೆಗೆ ಭಕ್ತರನ್ನು ಕಾಯಕಯೋಗಕ್ಕೆ ಹಚ್ಚಿಸಿ ಗ್ರಾಮದ ಅಭಿವೃದ್ಧಿಗೂ ಕಾರಣಕರ್ತರಾಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳು ಹಳೆಯ ಕಟ್ಟಡವನ್ನು ತೆಗೆಸಿ ಮಠಕ್ಕೆ ಹೊಸ ಕಟ್ಟಡ ವನ್ನು ನಿರ್ಮಿಸಿದರು. ಮಠದ ಹಿಂಬದಿಯಲ್ಲಿರುವ ಐದು ಗದ್ದುಗೆಗಳನ್ನು ನವೀಕರಣಗೊಳಿಸಿ ಪೂಜೆಗೆ ಅಣಿಗೊಳಿಸಿದರು. ವೀರಭದ್ರಸ್ವಾಮಿ ದೇವಸ್ಥಾನವನ್ನು ಅಭಿವೃದ್ಧಿಪಡಿಸಿ, ೧೯೮೮ ರ ಏಪ್ರಿಲ್ ಮೂರರಂದು ವೀರಭದ್ರಸ್ವಾಮಿ ಮೂರ್ತಿಯನ್ನು ಪ್ರತಿಷ್ಠಾಪಿಸಿದರು. ಮಠದ ಹಿಂಬದಿಯಲ್ಲಿ ಬಿಲ್ವಪತ್ರೆ, ಹೂವಿನ ವನವನ್ನು ಬೆಳೆಸಿ ಪರಿಸರವನ್ನು ಸ್ವಚ್ಛವಾಗಿರಿಸಿದ್ದಾರೆ. ಲೋಕೋದ್ಧಾರಕ್ಕಾಗಿ ಮಠದಲ್ಲಿ ಮಂಟಪ ಪೂಜೆಯನ್ನು ನಡೆಸಿದ್ದಾರೆ. ಶ್ರಾವಣ, ಕಾರ್ತೀಕ ಹಾಗೂ ಧನುರ್ಮಾಸಗಳಲ್ಲಿ ಮಠದಲ್ಲಿ ವಿಶೇಷ ಪೂಜೆಯನ್ನು ಹಮ್ಮಿಕೊಂಡು ಭಕ್ತರಿಗೆ ಧಾರ್ಮಿಕ ಸಂಸ್ಕಾರ ನೀಡುತ್ತಿದ್ದಾರೆ. ಡಮರುಗ, ಚಮಳ, ಪುರಾತನ ಕಾಲದ ಪಂಚ ಲೋಹದ ಪೂಜಾ ಸಾಮಗ್ರಿಗಳು, ಪೂಜಾ ಪರಿಕರಗಳಾಗಿ ಇಂದಿಗೂ ಮಠದಲ್ಲಿ ಪುರಾತನ ವಸ್ತುಗಳಾಗಿ ನೋಡಲು ಸಿಗುತ್ತಿವೆ. ಕಲಿಯುವ ಬಡಮಕ್ಕಳಿಗೆ ಮಠದಲ್ಲಿ ಆಶ್ರಯ ಕಲ್ಪಿಸಿ ನೆರವಾಗಿದ್ದಾರೆ.

ಕ್ರಿಯಾಶೀಲರಾದ ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳು ಕಳೆದ ಮೂವತ್ತು ವರ್ಷಗಳಿಂದ ಮಠದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಿ, ತಮ್ಮ ಕಲ್ಪನೆಗೆ ಅನುಗುಣವಾಗಿ ಮಠವನ್ನು ಬೆಳೆಸಿ, ತಮಿಳುನಾಡಿನ ಕುಂಬಕೋಣಂನ ಮಠದ ಮಠಾಧೀಶರಾಗಿ ೧೯೮೨ ರಲ್ಲಿ ಪಟ್ಟಾಧಿಕಾರ ವಹಿಸಿಕೊಂಡಿದ್ದಾರೆ. ಈ ಎರಡೂ ಮಠಗಳ ಆಡಳಿತವನ್ನು ಸಮರ್ಥವಾಗಿ ನಿಭಾ ಯಿಸುತ್ತಾ, ಮಠವು ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ಅಭಿವೃದ್ಧಿಯಾಗಲು ಕಾರಣಕರ್ತರಾಗಿದ್ದಾರೆ.

ವಿಳಾಸ: ಶ್ರೀ ಮ.ಘ.ಚ. ನೀಲಕಂಠ ಶಿವಾಚಾರ್ಯ ಸ್ವಾಮಿಗಳು, ಶ್ರೀ ಗೂಳೂರು ಜಂಗಮಮಠ, ಐತಾಂಡಹಳ್ಳಿ, ಬಂಗಾರಪೇಟೆ ತಾಲ್ಲೂಕು, ಕೋಲಾರ ಜಿಲ್ಲೆ.

❑

ಬಾಗೇಪಲ್ಲಿ ತಾಲ್ಲೂಕು

ಕೋಲಾರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕು, ಆಂಧ್ರಪ್ರದೇಶದ ಗಡಿಭಾಗದಲ್ಲಿದೆ. ಈ ತಾಲ್ಲೂಕು ಕೃಷಿ ಆಧಾರಿತವಾಗಿದ್ದು, ಅಭಿವೃದ್ಧಿಯಲ್ಲಿ ಕುಂಟಿತಗೊಂಡಿದೆ. ತಾಲ್ಲೂಕಿನ ಗೂಳೂರು ವೀರಶೈವ ಧರ್ಮದ ಕೇಂದ್ರವಾಗಿ ಬೆಳೆದು ವೀರಶೈವ ಧರ್ಮ ಪ್ರಬಲವಾಗಿ ಬೆಳೆಯಲು ನೆರವಾಗಿದೆ.

ಗೂಳೂರು

ಬಾಗೇಪಲ್ಲಿ ತಾಲ್ಲೂಕಿನ ಗೂಳೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಎಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಪುರಾತನ ಕಾಲದಲ್ಲಿ ನಿಡುಮಾಮಿಡಿ ಸಂಸ್ಥಾನ ಮಠ ಸ್ಥಾಪನೆಯಾಗಿ ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿಯನ್ನು ಸಾಧಿಸಿದೆ.

ನಿಡುಮಾಮಿಡಿ ಸಂಸ್ಥಾನಮಠ: ಗೂಳೂರಿನಲ್ಲಿ ಸ್ಥಾಪನೆಯಾಗಿರುವ ಶ್ರೀ ನಿಡುಮಾಮಿಡಿ ಸಂಸ್ಥಾನ ಮಠವು ಸ್ವತಂತ್ರವಾದ ನಿಡುಮಾಮಿಡಿ ಬಗೆಯಲ್ಲಿ ಬೆಳೆದಿದೆ. ಈ ಸಂಸ್ಥಾನ ಮಠವು ಹನ್ನೊಂದನೆಯ ಶತಮಾನದಲ್ಲಿ ಸ್ಥಾಪನೆಯಾಗಿದೆ. ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಲ್ಲಿ ನಿಡುಮಾಮಿಡಿ ಕ್ಷೇತ್ರವಿದ್ದು, ಇಲ್ಲಿ ಹನ್ನೆರಡನೆಯ ಶತಮಾನದಲ್ಲಿ ಮಠವು ಸ್ಥಾಪನೆಯಾಗಿದೆ. ಅಂದಿನಿಂದ ಈತನಕ ಮಠದ ಗುರುಗಳ ಕ್ರಿಯಾಶೀಲ ಚಟುವಟಿಕೆಗಳಿಂದ ಕರ್ನಾಟಕದ ಪ್ರಭಾವಿ ಮಠಗಳಲ್ಲಿ ಒಂದಾಗಿ ಬೆಳೆದಿದೆ.

ಸಂಸ್ಥಾನ ಮಠ ಸ್ಥಾಪನೆ: ಹನ್ನೊಂದನೆಯ ಶತಮಾನದಲ್ಲಿ ಶ್ರೀಶೈಲದಲ್ಲಿದ್ದ ಶ್ರೀ ಚಂದ್ರಗುಂಡ ದೇಶಿಕೇಂದ್ರ ಸ್ವಾಮಿಗಳು ಲೋಕಸಂಚಾರ ಮಾಡುತ್ತಾ, ಚೋಳಮಂಡಲವಾದ ಬಾಗೇಪಲ್ಲಿ ಪ್ರಾಂತ್ಯಕ್ಕೆ ಆಗಮಿಸಿ, ಗೂಳೂರಿನ ಸಮೀಪದ ಉದ್ಯಾನ ವನದಲ್ಲಿ ಅನುಷ್ಠಾನಕ್ಕೆ ಕುಳಿತರು. ಇಲ್ಲಿ ದೀರ್ಘ ತಪಸ್ಸನ್ನು ಆಚರಿಸಿದರು. ಆಗ ಚೋಳ ರಾಜನು ಗುರುಗಳನ್ನು ಗೌರವಿಸಿ ಸತ್ಕರಿಸುತ್ತಾನೆ. ಈ ಸಂದರ್ಭದಲ್ಲಿ ಗುರುಗಳು ಚೋಳ ರಾಜನಿಗೆ ಅಭಯ ಹಸ್ತ ನೀಡಿ ಆಶೀರ್ವದಿಸಿ ಕಳುಹಿಸಿದರಂತೆ. ಗುರುಗಳ ಆಶೀರ್ವಾದ ಪಡೆದ ಚೋಳ ರಾಜೇಂದ್ರನು ಗೂಳೂರಿನಲ್ಲಿ ಧರ್ಮಗುರು ಪೀಠವನ್ನು ಕಟ್ಟಿಸಿ ಧಾರ್ಮಿಕ ಕಾರ್ಯಗಳು ನಿರಂತರವಾಗಿ ನಡೆಯುವಂತೆ ನೆರವು ನೀಡಿದ್ದನೆಂದು ಹೇಳಲಾಗುತ್ತದೆ. ಜಗದ್ಗುರುಗಳಾದ ಶ್ರೀ ಚಂದ್ರಗುಂಡ ದೇಶಿಕೇಂದ್ರ ಸ್ವಾಮಿಗಳು ಇಲ್ಲಿ ಮಠವನ್ನು ಸ್ಥಾಪಿಸಿದ ಮೇಲೆ ವೀರಭದ್ರಸ್ವಾಮಿಮೂರ್ತಿಯನ್ನು ಪ್ರತಿಷ್ಠಾಪಿಸಿ ಅನೇಕ ಲೋಕೋದ್ಧಾರದ ಕೆಲಸಗಳನ್ನು ಮಾಡಿ, ಗೂಳೂರಿನಲ್ಲಿ ಜೀವಂತ ಸಮಾಧಿಯಾದರು ಎಂದು ಮಠದ ಚರಿತ್ರೆಯಿಂದ ತಿಳಿಯುತ್ತದೆ.

ವಚನ ಸಾಹಿತ್ಯದ ಪ್ರವರ್ತಕರಾದ ಶ್ರೀ ದೇವರ ದಾಸಿಮಯ್ಯನವರ ದೀಕ್ಷಾ ಗುರುವಾಗಿದ್ದ ಶ್ರೀ ಚಂದ್ರಗುಂಡ ದೇಶಿಕೇಂದ್ರ ಸ್ವಾಮಿಗಳು ಗೂಳೂರಿನಲ್ಲಿ ನೆಲೆಸಿದ ಮೇಲೆ ಈ ಪರಂಪರೆಯ ಪ್ರತಿಭಾನ್ವಿತ ಗುರುಗಳು ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶದಲ್ಲಿ ಸಂಚರಿಸಿ, ನೂರಾರು ಮಠಗಳನ್ನು ಸ್ಥಾಪಿಸಿ ಧರ್ಮಪ್ರಚಾರ ನಡೆಯುವಂತೆ ಅನುವು ಮಾಡಿದರು.

ಪರಂಪರೆ:

೧. ಶ್ರೀ ಜಗದ್ಗುರು ಚಂದ್ರಗುಂಡ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು, (೧೧ನೆಯ ಶತಮಾನದ ಪೂರ್ವಾರ್ಧ), ಗೂಳೂರಿನಲ್ಲಿ ಲಿಂಗೈಕ್ಯ

೨. ಶ್ರೀ ಜಗದ್ಗುರು ಕರಿಬಸವ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು (ಕ್ರಿ.ಶ ೧೨೦೦-೧೨೪೯), ನಿಡುಮಾಮಿಡಿಯಲ್ಲಿ ಲಿಂಗೈಕ್ಯ

೩. ಶ್ರೀ ಜಗದ್ಗುರು ವೃಷಭ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು (೧೨ನೆಯ ಶತಮಾನ), ನರೇಂದ್ರದಲ್ಲಿ ಲಿಂಗೈಕ್ಯ

೪. ಶ್ರೀ ಜಗದ್ಗುರು ಮರಿಬಸವ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು

(ಕ್ರಿ.ಶ ೧೨೭೦-೧೨೪೯), ಕೂಡಲಸಂಗಮದಲ್ಲಿ ಲಿಂಗೈಕ್ಯ
೫. ಶ್ರೀ ಜಗದ್ಗುರು ಕರಿಬಸವ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
(ಕ್ರಿ.ಶ ೧೨೪೯-೧೩೩೦), ಇಂದ್ರಗಿರಿಯಲ್ಲಿ ಲಿಂಗೈಕ್ಯ
೬. ಶ್ರೀ ಜಗದ್ಗುರು ಕಾಶಿವಿಲಾಸ ಕ್ರಿಯಾಶಕ್ತಿ ಒಡೆಯರು
(ಕ್ರಿ.ಶ ೧೩೩೧-೧೩೪೮) ....
೭. ಶ್ರೀ ಜಗದ್ಗುರು ಮುಮ್ಮಡಿ ಕರಿಬಸವೇಂದ್ರ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
(ಕ್ರಿ.ಶ ೧೩೪೯.......), ಕಲ್ಮಟ್ಟೇಶ್ವರದಲ್ಲಿ ಲಿಂಗೈಕ್ಯ
೮. ಶ್ರೀ ಜಗದ್ಗುರು ಕರಿಬಸವರಾಜ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
(ಕ್ರಿ.ಶ ೧೩೫೦-೧೩೭೯), ತಡವಲಗದಲ್ಲಿ ಲಿಂಗೈಕ್ಯ
೯. ಶ್ರೀ ಜಗದ್ಗುರು ಮರಿ ಕರಿಬಸವರಾಜ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
(ಕ್ರಿ.ಶ ೧೩೮೦-೧೩೯೮), ಬಾವಿಹಳ್ಳಿಯಲ್ಲಿ ಲಿಂಗೈಕ್ಯ
೧೦. ಶ್ರೀ ಜಗದ್ಗುರು ಇಮ್ಮಡಿ ಕರಿಬಸವರಾಜ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
(ಕ್ರಿ.ಶ ೧೩೯೮-೧೪೧೦), ಕಲ್ಲೆದೇವರ ಹಿಪ್ಪರಗಿಯಲ್ಲಿ ಲಿಂಗೈಕ್ಯ
೧೧. ಶ್ರೀ ಜಗದ್ಗುರು ಕರಿಬಸವೇಶ್ವರ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
(ಕ್ರಿ.ಶ ೧೪೧೧-೧೪೭೨), ಗುಂಜರಹಳ್ಳಿಯಲ್ಲಿ ಲಿಂಗೈಕ್ಯ
೧೨. ಶ್ರೀ ಜಗದ್ಗುರು ಮರಿ ಕರಿಬಸವರಾಜ ದೇಶಿಕೇಂದ್ರ ಶಿವಾಚಾಯಸ್ವಾಮಿಗಳು
(ಕ್ರಿ.ಶ ....), ತೇರದಾಳದಲ್ಲಿ ಲಿಂಗೈಕ್ಯ
೧೩. ಶ್ರೀ ಜಗದ್ಗುರು ಚಂದ್ರಭೂಷಣದೇವ ಒಡೆಯರು
(ಕ್ರಿ.ಶ........), ಪಂಪಾಕ್ಷೇತ್ರದಲ್ಲಿ ಲಿಂಗೈಕ್ಯ
೧೪. ಶ್ರೀ ಜಗದ್ಗುರು ಕರಿಬಸವಸ್ವಾಮಿ ದೇಶಿಕೇಂದ್ರ ಶಿವಾಚಾಯಸ್ವಾಮಿಗಳು
(ಕ್ರಿ.ಶ........), ನಿಡವಳ್ಳಿಯಲ್ಲಿ ಲಿಂಗೈಕ್ಯ
೧೫. ಶ್ರೀ ಜಗದ್ಗುರು ಮರಿ ಕರಿಬಸವಸ್ವಾಮಿ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
(ಕ್ರಿ.ಶ ೧೪೭೦-೧೫೦೫), ಬಂಕಾಪುರದಲ್ಲಿ ಲಿಂಗೈಕ್ಯ
೧೬. ಶ್ರೀ ಜಗದ್ಗುರು ಕರಿಬಸವಸ್ವಾಮಿ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
(ಕ್ರಿ.ಶ ೧೫೦೫-೧೫೩೦), ಕುಷ್ಟಗಿಯಲ್ಲಿ ಲಿಂಗೈಕ್ಯ
೧೭. ಶ್ರೀ ಜಗದ್ಗುರು ಇಮ್ಮಡಿ ಕರಿಬಸವಸ್ವಾಮಿ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
(ಕ್ರಿ.ಶ ೧೫೩೦-೧೫೭೫), ನಿಡುಮಾಮಿಡಿಯಲ್ಲಿ ಲಿಂಗೈಕ್ಯ
೧೮. ಶ್ರೀ ಜಗದ್ಗುರು ಕಂಚಿ ಕರಿಬಸವಸ್ವಾಮಿ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
(ಕ್ರಿ.ಶ ೧೫೭೫-೧೬೧೦), ಕಂಚಿಯಲ್ಲಿ ಲಿಂಗೈಕ್ಯ
೧೯. ಶ್ರೀ ಜಗದ್ಗುರು ಶಾಂತವೀರ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
(ಕ್ರಿ.ಶ ೧೬೧೦-೧೬೪೦), ಕೊತ್ತಚರುವುನಲ್ಲಿ ಲಿಂಗೈಕ್ಯ
೨೦. ಶ್ರೀ ಜಗದ್ಗುರು ನಾಲ್ಮಡಿ ಕರಿಬಸವೇಂದ್ರ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
(ಕ್ರಿ.ಶ ೧೬೪೦-೧೬೬೦), ಕನಮುಕ್ಕಲುನಲ್ಲಿ (ಆಂಧ್ರ) ಲಿಂಗೈಕ್ಯ
೨೧. ಶ್ರೀ ಜಗದ್ಗುರು ಕರಿಬಸವಸ್ವಾಮಿ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
(ಕ್ರಿ.ಶ ೧೬೬೦-೧೬೯೦), ಕೊತ್ತಚರುವುನಲ್ಲಿ ಲಿಂಗೈಕ್ಯ
೨೨. ಶ್ರೀ ಜಗದ್ಗುರು ಮರಿ ಕರಿಬಸವಸ್ವಾಮಿ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
(ಕ್ರಿ.ಶ ೧೬೯೦-೧೭೧೦), ಕೊತ್ತಚರುವುನಲ್ಲಿ ಲಿಂಗೈಕ್ಯ
೨೩. ಶ್ರೀ ಜಗದ್ಗುರು ಮಾಹೇಶ್ವರಸ್ವಾಮಿ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
(ಕ್ರಿ.ಶ ೧೭೧೦-೧೭೩೦), ನಿಡುಮಾಮಿಡಿಯಲ್ಲಿ ಲಿಂಗೈಕ್ಯ

೨೪. ಶ್ರೀ ಜಗದ್ಗುರು ಕರಿಬಸವರಾಜ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು (ಕ್ರಿ.ಶ ೧೭೩೧-೧೭೪೦), ಧರ್ಮಾವರಂನಲ್ಲಿ ಲಿಂಗೈಕ್ಯ

೨೫. ಶ್ರೀ ಜಗದ್ಗುರು ಮರಿ ಕರಿಬಸವರಾಜ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು (ಕ್ರಿ.ಶ ೧೭೫೦-೧೭೭೫), ಧರ್ಮಾವರಂನಲ್ಲಿ ಲಿಂಗೈಕ್ಯ

೨೬. ಶ್ರೀ ಜಗದ್ಗುರು ಕರಿಬಸವ ದೇಶಿಕೇಂದ್ರ ಶಿವಾಚಾಯ ಸ್ವಾಮಿಗಳು (ಕ್ರಿ.ಶ ೧೭೭೫-೧೭೯೫), ಅನಂತಪುರಂನಲ್ಲಿ ಲಿಂಗೈಕ್ಯ

೨೭. ಶ್ರೀ ಜಗದ್ಗುರು ಕರಿಬಸವರಾಜಸ್ವಾಮಿ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು (ಕ್ರಿ.ಶ ೧೭೯೫-೧೮೧೫), ಗೂಳೂರಿನಲ್ಲಿ ಲಿಂಗೈಕ್ಯ

೨೮. ಶ್ರೀ ಜಗದ್ಗುರು ಮರಿ ಕರಿಬಸವರಾಜ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು (ಕ್ರಿ.ಶ ೧೮೧೫-೧೮೩೫), ಗೂಳೂರಿನಲ್ಲಿ ಲಿಂಗೈಕ್ಯ

೨೯. ಶ್ರೀ ಜಗದ್ಗುರು ಇಮ್ಮಡಿ ಕರಿಬಸವರಾಜ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು (ಕ್ರಿ.ಶ ೧೮೩೫-೧೮೯೯), ಗೂಳೂರಿನಲ್ಲಿ ಲಿಂಗೈಕ್ಯ

೩೦. ಶ್ರೀ ಜಗದ್ಗುರು ಮರಿ ಕರಿಬಸವರಾಜಸ್ವಾಮಿ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು (ಕ್ರಿ.ಶ ೧೮೯೯-೧೯೩೭), ಗೂಳೂರಿನಲ್ಲಿ ಲಿಂಗೈಕ್ಯ

೩೧. ಶ್ರೀ ಜಗದ್ಗುರು ಚನ್ನಬಸವರಾಜ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು (ಕ್ರಿ.ಶ ೧೯೩೯-೧೯೮೭), ಗೂಳೂರಿನಲ್ಲಿ ಲಿಂಗೈಕ್ಯ

೩೨. ಶ್ರೀ ಜಗದ್ಗುರು ಇಮ್ಮಡಿ ಚಂದ್ರಗುಂಡ ದೇಶಿಕೇಂದ್ರ ಸ್ವಾಮಿಗಳು, (ಕ್ರಿ.ಶ ೧೯೮೪-೧೯೮೮)

೩೩. ಶ್ರೀ ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಮಹಾ ಸ್ವಾಮಿಗಳು, (ಕ್ರಿ.ಶ ೧೯೯೦)

ಕರ್ತೃ ಗುರುಗಳಾದ ಶ್ರೀ ಚಂದ್ರಗುಂಡ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು ದೇಶದ ನಾನಾ ಭಾಗಗಳಲ್ಲಿ ಸಂಚರಿಸಿ, ಶಾಖಾ ಮಠಗಳನ್ನು ಸ್ಥಾಪಿಸಿದ್ದೇ ಅಲ್ಲದೆ ಅನೇಕ ಕಡೆ ವೀರಭದ್ರಸ್ವಾಮಿ ಮೂರ್ತಿಗಳನ್ನು ಪ್ರತಿಷ್ಠಾಪಿಸಿದರು. ಇವರು ಶೋಷಿತ ವರ್ಗದ ಹದಿನೆಂಟು ಕುಲದವರಿಗೆ ದೀಕ್ಷೆಯನ್ನು ನೀಡಿ, ಸಂಸ್ಕಾರವಂತರನ್ನಾಗಿ ಮಾಡಿದರು. ಇದರಿಂದ ಜನತೆ ಪೂಜ್ಯರನ್ನು ಧರ್ಮಗುರುಗಳೆಂದೇ ಕರೆಯುತ್ತ ಬಂದರು.

ಹನ್ನೆರಡನೆಯ ಶತಮಾನದ ಶ್ರೀ ಜಗದ್ಗುರು ಕರಿಬಸವ ದೇಶಿಕೇಂದ್ರರು ಪವಾಡ ಪುರುಷರಾಗಿದ್ದರು. ಆಂಧ್ರಪ್ರದೇಶದ ಪೆನುಗೊಂಡೆ ತಾಲ್ಲೂಕಿನ ನಿಡುಮಾಮಿಡಿಯಲ್ಲಿ ತಮ್ಮ ಪಾದೋದಕವನ್ನು ಸಿಂಪಡಿಸಿ ಸೋಮಲಾಪುರದಲ್ಲಿ ಒಣಗಿದ ಮಾವಿನ ಮರವನ್ನು ಚಿಗುರಿಸಿ'ನೀಡು ಮಾಮಿಡಿ' ಎಂದು ಭಿಕ್ಷೆ ಬೇಡಿ ಮಾವಿನ ಫಲವನ್ನು ಪಡೆದರೆಂದು ಹೇಳಲಾಗುತ್ತದೆ. ಗುರುಗಳ ಈ ಮಹಿಮೆಯನ್ನು ಕೇಳಿ ಹೊಯ್ಸಳರ ವಂಶಿಕ ಅಚ್ಯುತರಾಯನೆಂಬ ರಾಜ ಗುರುಗಳಿಗೆ ಗೌರವವನ್ನು ಅರ್ಪಿಸಿ, ಜ್ಞಾಪಕಾರ್ಥವಾಗಿ ಮಠವನ್ನು ನಿರ್ಮಿಸಿ ಕೊಟ್ಟನೆಂದು ಮಠದ ಚರಿತ್ರೆಯು ತಿಳಿಸುತ್ತದೆ. ಪೆನುಗೊಂಡೆ ತಾಲ್ಲೂಕಿನ ಸೋಮಲಾಪುರದಲ್ಲಿ ಮಠವು ಸ್ಥಾಪನೆಯಾದ ಮೇಲೆ ಸೋಮಲಾಪುರ ಎಂಬ ಗ್ರಾಮಕ್ಕೆ ನಿಡುಮಾಮಿಡಿ ಎಂದು ಮರುನಾಮಕರಣ ಮಾಡಲಾಗಿತ್ತೆಂದು ಚರಿತ್ರೆ ತಿಳಿಸುತ್ತದೆ. ಇಂತಹ ಪವಾಡದಿಂದ ಜನಪ್ರಿಯ ಗೊಂಡ ಕಾರಣ ಗೂಳೂರಿನ ಧರ್ಮಗುರುಪೀಠಕ್ಕೆ ನಿಡುಮಾಮಿಡಿ ಎಂಬ ಹೆಸರು ಶಾಶ್ವತವಾಗಿ ಉಳಿಯಿತು.

ಶ್ರೀ ಕರಿಬಸವ ದೇಶಿಕೇಂದ್ರ ಸ್ವಾಮಿಗಳ ಪ್ರಭಾವಕ್ಕೆ ಮಣಿದ ಮುಂದಿನ ಗುರು ಪರಂಪರೆಯು ಗುರುಗಳ ಹೆಸರನ್ನೇ ಅಭಿಧಾನ ಪಡೆದು ಪಟ್ಟಾಧಿಕಾರಕ್ಕೆ ಬರತೊಡಗಿತು. ಪರಂಪರೆಯ ಆರನೆಯ ಗುರುಗಳಾದ ಶ್ರೀ ಕಾಶೀವಿಲಾಸ ಕ್ರಿಯಾಶಕ್ತಿ ಒಡೆಯರು ಅಕ್ಕ-ಬುಕ್ಕರಿಗೆ ವಿಜಯನಗರ ರಾಜ್ಯ ಕಟ್ಟಲು ನೆರವಾದರೆಂದು ಹೇಳಲಾಗುತ್ತದೆ. ಈ ಬಗ್ಗೆ ಪೆನಗುಂಡೆಯಲ್ಲಿ ಶಾಸನವಿದೆ. ಈ ರೀತಿ ಮಠದ ಪರಂಪರೆಯಲ್ಲಿ ಬಂದ ಗುರುಗಳು ಪ್ರಭಾವಶಾಲಿಗಳಾಗಿ ರಾಜ ಮನ್ನಣೆ ಪಡೆದು ಭಕ್ತ ಕುಲಕೋಟಿಯನ್ನು ಉದ್ಧರಿಸಿದರು.

ಶಾಖಾಮಠಗಳು: ಹನ್ನೊಂದನೆಯ ಶತಮಾನದಲ್ಲಿ ಪ್ರಾರಂಭಗೊಂಡ ಈ ಸಂಸ್ಥಾನ ಮಠವು, ಕರ್ನಾಟಕದಲ್ಲಿ ತೊಂಬತ್ನಾಲ್ಕು ಮಠಗಳು, ಆಂಧ್ರಪ್ರದೇಶದಲ್ಲಿ ಮೂವತ್ತೊಂದು ಮಠಗಳು, ತಮಿಳುನಾಡು ರಾಜ್ಯದಲ್ಲಿ ಒಂಬತ್ತು ಮಠಗಳು ಹಾಗೂ ಮಹಾರಾಷ್ಟ್ರ ರಾಜ್ಯವು ಸೇರಿದಂತೆ ಹಲವೆಡೆ ಸುಮಾರು ನೂರ ಮೂವತ್ತೊಂದಕ್ಕೂ ಹೆಚ್ಚು ಮಠಗಳು ಸ್ಥಾಪನೆಯಾಗಿದ್ದವು ಎಂದು ಶ್ರೀ ಪಲ್ಲಕವಿ ವಿರಚಿತ ಶ್ರೀಶೈಲ ಪಂಡಿತಾರಾಧ್ಯ ಚರಿತ್ರಮು ಎಂಬ ಗ್ರಂಥದಿಂದ ತಿಳಿದುಬರುತ್ತದೆ. ಪ್ರಸ್ತುತ ಅನೇಕ ಮಠಗಳು ಸ್ವತಂತ್ರಗೊಂಡಿವೆ. ಈಗಿನ ಗುರುಗಳಾದ ಶ್ರೀ ವೀರಭದ್ರ ಚನ್ನಮಲ್ಲ ದೇಶೀಕೇಂದ್ರ ಮಹಾ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ತಮ್ಮ ಶಾಖಾಮಠಗಳನ್ನು ಅಭಿವೃದ್ಧಿ ಪಡಿಸತೊಡಗಿದ್ದಾರೆ.

ಜ.ಚ.ನಿ: ಇಪ್ಪತ್ತನೆಯ ಶತಮಾನದ ಶ್ರೀ ಮರಿಬಸವರಾಜ ದೇಶಿಕೇಂದ್ರ ಸ್ವಾಮಿಗಳ ತರುವಾಯ ನಿಡುಮಾಮಿಡಿ ಪೀಠವನ್ನು ಆರೋಹಣ ಮಾಡಿದ ಮಹಾನ್‌ಶಕ್ತಿ, ಶ್ರೀ ಜಗದ್ಗುರು ಚನ್ನಬಸವರಾಜ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು. ೧೨-೬-೧೯೩೯ರಲ್ಲಿ ಅಲಂಕರಿಸಿದರು. ಇವರು ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಅಂಬಡಗಟ್ಟಿಯಲ್ಲಿ ೧೯೦೮ರ ಅಕ್ಟೋಬರ್ ೨೧ರಂದು ಜನಿಸಿದರು. ಶ್ರೀ ಜಗದ್ಗುರು ಚನ್ನಬಸವರಾಜ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು (ಜ.ಚ.ನಿ)ಯವರು ಹನ್ನೆರಡು ವರ್ಷಗಳ ಕಾಲ ಶಿವಯೋಗ ಮಂದಿರದಲ್ಲಿ ಸಂಸ್ಕೃತ ವಿದ್ಯಾಭ್ಯಾಸ ಮಾಡಿದರು. ಕೋಲ್ಕತ ವಿಶ್ವವಿದ್ಯಾನಿಲಯದಲ್ಲಿ ಸಾಹಿತ್ಯ, ವ್ಯಾಕರಣ ವೇದಾಂತ ಸಾಂಖ್ಯಶಾಸ್ತ್ರದಲ್ಲಿ ಪದವಿಯನ್ನು ಪಡೆದರು. ವಿದ್ಯಾರ್ಥಿಯಾಗಿದ್ದಾಗಲೇ ಆಶುಕವಿಗಳಾಗಿದ್ದರು. ಇವರು ೧೯೩೩ರಲ್ಲಿ ಕಾಳಿದಾಸನ ಮಾಲವಿಕಾಗ್ನಿಮಿತ್ರಂ ಎಂಬ ನಾಟಕವನ್ನು ಕನ್ನಡಕ್ಕೆ ಅನುವಾದಿಸಿದರು. ಸುಕುಮಾರ ಎಂಬ ಕೈಬರಹದ ಮಾಸಿಕವನ್ನು ೧೯೩೩ರಲ್ಲಿ ಸ್ಥಾಪಿಸಿ, ಮೂರು ವರ್ಷಗಳ ಕಾಲ ಪ್ರಕಟಿಸಿದರು. ನಂತರ ೧೯೩೯ರ ಜೂನ್ ಹನ್ನೆರಡರಂದು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ ಅನುಮತಿಯಂತೆ ಬಾಗೇಪಲ್ಲಿ ತಾಲ್ಲೂಕಿನ ಗೂಳೂರು ನಿಡುಮಾಮಿಡಿ ಮಹಾಸಂಸ್ಥಾನ ಮಠದ ಪೀಠಾಧಿಕಾರಿಗಳಾಗಿ ಅಧಿಕಾರವನ್ನು ಸ್ವೀಕರಿಸಿದರು.

ಶ್ರೀ ಜಗದ್ಗುರು ಚನ್ನಬಸವರಾಜ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು ಪೀಠಾಧಿಪತಿಗಳಾಗಿ ಧಾರ್ಮಿಕ ಕಾರ್ಯಗಳನ್ನು ಮಾಡುವುದರ ಜತೆಗೆ ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿ, ಕನ್ನಡಸಾಹಿತ್ಯ ಲೋಕಕ್ಕೆ ಅಪಾರ ಸಂಪತ್ತನ್ನು ನೀಡಿದರು. ಗುರುಗಳು ನೀಳಕಾಯವನ್ನು ಹೊಂದಿದ್ದು, ಅಪಾರ ಬುದ್ಧಿಮತ್ತೆಯಿಂದ ವೀರಶೈವ ಧರ್ಮ ಮತ್ತು ಸಾಹಿತ್ಯವನ್ನು ಪ್ರಚಾರಗೊಳಿಸಿದರು. ಗುರುಗಳು ತಮ್ಮ ಜೀವಿತಾವಧಿಯಲ್ಲಿ ಎಂಟುಸಾವಿರಕ್ಕೂ ಹೆಚ್ಚು ವಚನಗಳನ್ನು ಹದಿನೈದು ಕೃತಿಗಳಲ್ಲಿ ಹೊರತಂದಿದ್ದಾರೆ. ಹದಿನೆಂಟು ಸಂಕಲನಗಳ ಮೂಲಕ ಒಂದುಸಾವಿರ ಕವನಗಳು, ಮೂರು ಮಹಾಕಾವ್ಯಗಳು, ನಾಲ್ಕು ಕಾವ್ಯಗಳು, ಹನ್ನೊಂದು ಲಾಕ್ಷಣಿಕ ಕೃತಿಗಳು, ಹದಿನಾರು ಸಂಶೋಧನಾ ಗ್ರಂಥಗಳು, ಹದಿನೆಂಟು ಚರಿತ್ರಾ ಗ್ರಂಥಗಳು, ಮೂವತ್ತಾರು ವಿಮರ್ಶಾ ಗ್ರಂಥಗಳು, ಹನ್ನೆರಡು ಸಮೀಕ್ಷಾ ಕೃತಿಗಳು, ಅರವತ್ತು ತಾತ್ವಿಕ ಪ್ರಬಂಧ ಸಾಹಿತ್ಯ- ಹೀಗೆ ಮೂರುನೂರು ಕೃತಿಗಳನ್ನು ರಚಿಸಿ ಪ್ರಕಟಿಸಿದರು. ಜೀವನ ಸಿದ್ಧಾಂತ, ಶಿವಾದ್ವೈತ ದರ್ಶನ, ಸದಾಶಿವ ರುದ್ರಂ, ಸಂಪಾದನೆಯ ಸೊಂಪು, ಸಜ್ಜಲಶರಣವ್ವೆ, ಚಂದ್ರಪ್ರಭ, ದೇವರದಾಸಿಮಯ್ಯ, ಅಣ್ಣನ ಬದುಕು, ಅಲ್ಲಯ್ಯನ ಬೆಳಕು, ಸಮ್ಯಜ್ಞಾನಿ ಚನ್ನಬಸವಣ್ಣ, ಶಿವಾಗಮನ, ವಿಭೂತಿ, ಸಿದ್ಧಾಂತ ಶಿಖಾಮಣಿ- ಮುಂತಾದವುಗಳು ಶ್ರೇಷ್ಠ ಕೃತಿಗಳೆಂದು ಗೌರವಿಸಲ್ಪಟ್ಟಿದೆ.

ಶ್ರೀ ಜಗದ್ಗುರು ಚನ್ನಬಸವರಾಜ ದೇಶಿಕೇಂದ್ರ ಶಿವಾಚಾರ್ಯರ (ಜ.ಚ.ನಿ.)ಜೀವನಸಿದ್ಧಾಂತ ಎಂಬ ಕೃತಿಗೆ ಮೈಸೂರು ವಿಶ್ವವಿದ್ಯಾನಿಲಯ ೧೯೭೨ರಲ್ಲಿ ಡಿ.ಲಿಟ್. ಪ್ರಶಸ್ತಿ ನೀಡಿ ಗೌರವಿಸಿದೆ. ರಾಜ್ಯ ಸಾಹಿತ್ಯ ಅಕಾಡೆಮಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು ಸೇರಿದಂತೆ ನಾಡಿನ ಸುಮಾರು ಮೂವತ್ತಾರು ಸಂಘ ಸಂಸ್ಥೆಗಳು ಪ್ರಶಸ್ತಿಗಳನ್ನು ನೀಡಿ ಅಭಿವಂದಿಸಿವೆ. ಗುರುಗಳು 'ಮಾಮಿಡಿ' ಎಂಬ ತ್ರೈಮಾಸಿಕವನ್ನು ೧೯೮೦ರಲ್ಲಿ ಪ್ರಾರಂಭಿಸಿದರು. ಶ್ರೀ ಜ.ಚ.ನಿ. ಅಧ್ಯಯನಪೀಠ ಮತ್ತು ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಿ, ಉದಯೋನ್ಮುಖ ಲೇಖಕರ ಹಾಗೂ ಸಂಶೋಧಕರ ನೂರಾರು ಕೃತಿಗಳನ್ನು ಪ್ರಕಟಿಸಿದ್ದಾರೆ. ೧೯೭೨ರಲ್ಲಿ ತಮ್ಮ ಪೀಠಾರೋಹಣ ರಜತ ಮಹೋತ್ಸವವನ್ನು ಸಾಹಿತ್ಯಿಕ, ಸಾಂಸ್ಕೃತಿ ಹಾಗೂ ವೈಚಾರಿಕ ವೈವಿಧ್ಯತೆಯಿಂದ ಆಚರಿಸಿದರು. ಗುರುಗಳು ತಮ್ಮ ಐವತ್ತೇಳು ವರ್ಷಗಳ ದೀರ್ಘ ಅವಧಿಯಲ್ಲಿ ಅಪಾರವಾದ ಹಾಗೂ ಶಾಶ್ವತವಾದ ಕೆಲಸವನ್ನು ಮಾಡಿ,

೧೯೯೬ರ ನವೆಂಬರ್ ಐದರಂದು ಲಿಂಗೈಕ್ಯರಾದರು. ಗುರುಗಳು ತಮ್ಮ ಜೀವಿತದ ಕೊನೆಯ ಅವಧಿಯ ವಿಶ್ರಾಂತ ಜೀವನವನ್ನು ಧಾರವಾಡ ತಾಲ್ಲೂಕಿನ ನರೇಂದ್ರದ ಶಾಖಾಮಠದಲ್ಲಿ ಕಳೆದರು. ಗೂಳೂರು ಪೀಠದಲ್ಲಿ ಎಂಭತ್ತೇಳು ವರ್ಷಗಳ ತುಂಬು ಜೀವನವನ್ನು ನಡೆಸಿದ ಗುರುಗಳು ಅಮರರಾಗಿದ್ದಾರೆ. ಕುವೆಂಪುರವರ ಅಭಿಪ್ರಾಯದಂತೆ ಶ್ರೀ ಜ.ಚ.ನಿ. ಯವರು ಧಾರ್ಮಿಕ ಕ್ಷೇತ್ರದಲ್ಲಿ ಗುರುವಾದಂತೆ ಸಾಹಿತ್ಯ ಕ್ಷೇತ್ರದಲ್ಲೂ ಗುರುವಾಗಿದ್ದಾರೆ. ಎಂಬುದನ್ನು ಕನ್ನಡ ನಾಡು ಸದಾ ನೆನೆಯುತ್ತದೆ.

ಶ್ರೀ ಜಗದ್ಗುರು ಚನ್ನಬಸವರಾಜ ದೇಶಿಕೇಂದ್ರ ಶಿವಾಚಾರ್ಯರು (ಜ.ಚ.ನಿ.) ೧೯೮೪ರಲ್ಲಿ ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಇಮ್ಮಡಿ ಚಂದ್ರಗುಂಡ ದೇಶಿಕೇಂದ್ರ ಸ್ವಾಮಿಗಳನ್ನು ನೇಮಿಸಿಕೊಂಡಿದ್ದರು. ಸದರಿ ಶ್ರೀಗಳು ವೈಯಕ್ತಿಕ ಕಾರಣಗಳಿಗಾಗಿ ೧೯೮೮ರಲ್ಲಿ ಮಹಾಸಂಸ್ಥಾನ ಮಠದ ಅಧಿಕಾರಕ್ಕೆ ರಾಜೀನಾಮೆ ನೀಡಿದರು. ತರುವಾಯ ತಮ್ಮ ಕರಕಮಲ ಸಂಜಾತರನ್ನಾಗಿ ಶ್ರೀ ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಮಹಾಸ್ವಾಮಿಗಳನ್ನು ನೇಮಿಸಿಕೊಂಡರು.

ಬಹುಮುಖ ಪ್ರತಿಭೆ: ಶ್ರೀ ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಮಹಾಸ್ವಾಮಿಗಳು, ಚಿತ್ರದುರ್ಗದ ಶ್ರೀ ಸಾರಂಗಮಠ ಗಂಗಾಧರಯ್ಯ ಮತ್ತು ಶ್ರೀಮತಿ ಗಿರಿಜಮ್ಮನವರ ಪುತ್ರರಾಗಿ ೧೯೬೦ರ ಜೂನ್ ಒಂದರಂದು ಜನಿಸಿದರು. ಗುರುಗಳು ಬಳ್ಳಾರಿ ಜಿಲ್ಲೆಯ ಕಾನಾಮಡುಗು ದಾಸೋಹಮಠದಲ್ಲಿ ನೆಲೆಸಿ, ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿದರು. ಹೆಬ್ಬಾಳು ಶ್ರೀ ರುದ್ರಸ್ವಾಮಿಮಠದಲ್ಲಿ ನೆಲೆಸಿ ಪ್ರೌಢಶಿಕ್ಷಣವನ್ನು ಮುಗಿಸಿದರು. ನಂತರ ಬೆಂಗಳೂರು, ಚಿತ್ರದುರ್ಗ, ಮೈಸೂರಿನಲ್ಲಿ ಸ್ನಾತಕೋತ್ತರ ಪದವಿಯ ತನಕ ಅಭ್ಯಾಸ ಮಾಡಿದರು. ೧೯೮೪ರಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಗೊಂಡು ಚಿನ್ನದಪದಕ ಪಡೆದು, ಮೈಸೂರಿನ ರಾಮಕೃಷ್ಣಾಶ್ರಮದ ಕಾಲೇಜಿನಲ್ಲಿ ಅಧ್ಯಾಪಕರಾಗಿಸೇವೆ ಸಲ್ಲಿಸಿದರು. ನಂತರ ೧೯೮೬ರಿಂದ ೧೯೯೦ ರವರೆಗೆ ಚಿತ್ರದುರ್ಗದ ಶ್ರೀ ಮುರುಘ ರಾಜೇಂದ್ರ ಮಹಿಳಾ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ೧೯೯೦ರ ಡಿಸೆಂಬರ್ ಇಪ್ಪತ್ತೇಳರಂದು ನಿಡುಮಾಮಿಡಿ ಸಂಸ್ಥಾನ ಮಠದ ಪೀಠಾರೋಹಣ ಮಾಡಿದರು.

ಶ್ರೀ ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಮಹಾಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠದ ಆಸ್ತಿಯನ್ನು ಕಾನೂನುಬದ್ಧಗೊಳಿಸಿ ಅಭಿವೃದ್ಧಿಪಡಿಸಿದರು. ನಾಡಿನ ನಾನಾ ಭಾಗಗಳಲ್ಲಿದ್ದ ಶಾಖಾಮಠಗಳ ಜೀರ್ಣೋದ್ಧಾರ ಮಾಡಿರುವುದಲ್ಲದೆ ಅನ್ಯರ ಪಾಲಾಗಿದ್ದ ಮಠದ ಆಸ್ತಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡು ಅಭಿವೃದ್ಧಿಪಡಿಸಿದರು. ಗುರುಗಳು ವೈಚಾರಿಕ ನೆಲೆಗಟ್ಟಿನಲ್ಲಿ ಧರ್ಮಪ್ರಚಾರವನ್ನು ಕೈಗೊಂಡು ತಮ್ಮ ನೇರ ಹಾಗೂ ನಿಷ್ಠುರ ನುಡಿಗಳಿಂದ ಬೇರೆಯವರ ವಿರೋಧವನ್ನು ಕಟ್ಟಿಕೊಳ್ಳಬೇಕಾದ ಸ್ಥಿತಿ ಎದುರಾಯಿತು. ತಮಗೆ ತೋಚಿದ, ಸರಿಯಾದ ಅಭಿಪ್ರಾಯಗಳನ್ನು ಯಾರಿಗೂ ಅಂಜದೆ ಅಭಿವ್ಯಕ್ತಗೊಳಿಸುವ ರೀತಿ ಹಾಗೂ ಹೋರಾಟದ ಮನೋಭಾವದಿಂದ ಜನಪ್ರಿಯಗೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಗೂಳೂರು ಮಠದಲ್ಲಿ ಏಳು ಗದ್ದುಗೆಗಳು ಸ್ಥಾಪನೆಯಾಗಿವೆ. ಅಲ್ಲದೆ ದೇಶದ ನಾನಾ ಕಡೆ ಇರುವ ಶಾಖಾಮಠಗಳಲ್ಲೂ ಗದ್ದುಗೆಗಳು ಸ್ಥಾಪನೆಯಾಗಿದ್ದು, ಇವುಗಳಿಗೆ ನಿತ್ಯ ಪೂಜೆ ನಡೆಯುತ್ತಿದೆ. ಗೂಳೂರು ಮಠದ ಆವರಣದಲ್ಲಿರುವ ಶ್ರೀ ವೀರಭದ್ರಸ್ವಾಮಿಗೆ ಪೂಜೆ ಹಾಗೂ ಜಾತ್ರೆ ನಡೆಯುತ್ತಿದೆ. ಶ್ರೀ ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಪೂಜಾರಿಕೆ ಕಾಯಕವು ಕೆಲವರಿಗೆ ಸೀಮಿತವಾಗಬಾರದು ಎಂಬ ಉದ್ದೇಶದಿಂದ ದಲಿತವೀರಶೈವರೊಬ್ಬರನ್ನು ಇಲ್ಲಿನ ವೀರಭದ್ರಸ್ವಾಮಿ ದೇವಸ್ಥಾನದ ಅರ್ಚಕರನ್ನಾಗಿ ೧೯೯೪ರಲ್ಲಿ ನೇಮಿಸಿದ್ದಾರೆ. ಗುರುಗಳು ಅಧಿಕಾರಕ್ಕೆ ಬಂದ ಮೇಲೆ ತಮ್ಮ ವೈಚಾರಿಕ ನೆಲೆಗಟ್ಟಿನಲ್ಲಿ ಧರ್ಮಪ್ರಚಾರವನ್ನು ಮಾಡುತ್ತಿದ್ದಾರೆ.

ಮಾನವಧರ್ಮಪೀಠ: 'ಒಂದೇ ಒಂದು ಜಾತಿ ಮಾನವ ಜಾತಿ, ಒಂದೇ ಒಂದು ಧರ್ಮ ಮಾನವ ಧರ್ಮ' ಎಂಬ ಧೋರಣೆಯೊಂದಿಗೆ ಮಾನವಧರ್ಮ ಪೀಠವನ್ನು ಸ್ಥಾಪಿಸಿ ಶೋಷಣೆ ರಹಿತ ಸಮಾಜ ಹಾಗೂ ಮುಕ್ತ ಮಾನವನ ನಿರ್ಮಾಣ ಜೀವನದ ಗುರಿ ಎಂದು ನಂಬಿ ಸಾಮಾಜಿಕ ನ್ಯಾಯಕ್ಕಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಬಾಗೇಪಲ್ಲಿ ತಾಲ್ಲೂಕಿನ ಗೂಳೂರು ಸಂಸ್ಥಾನ ಮಠದ ಆಡಳಿತ ಕಾರ್ಯಗಳನ್ನು ನಡೆಸಲು ಅನುಕೂಲವಾಗಲೆಂದು

ಬೆಂಗಳೂರಿನ ಬಸವನಗುಡಿಯಲ್ಲಿ ಶ್ರೀ ಜ.ಚ.ನಿ. ಅವರು ೧೯೪೪ರಲ್ಲಿ ಶ್ರೀ ನಿಜಾನುಭವ ನಿವಾಸವನ್ನು ಸ್ಥಾಪನೆ ಮಾಡಿದರು. ಈ ನಿವಾಸವನ್ನೆ ಡಾ.ಜ.ಚ.ನಿ.ರಾಷ್ಟ್ರೀಯ ಸೇವಾಪೀಠದ ಕಾರ್ಯಾಲಯವನ್ನಾಗಿ ಮಾಡಿಕೊಂಡಿದ್ದಾರೆ. ಈಗಿನ ಗುರುಗಳು ಸಂದರ್ಭಕ್ಕನುಸಾರವಾಗಿ ಮೂಲಮಠ ಹಾಗೂ ನಾಲ್ಕು ರಾಜ್ಯಗಳಲ್ಲಿರುವ ಶಾಖಾಮಠಗಳಿಗೆ ಭೇಟಿ ನೀಡಿ ಕೆಲಸ ಕಾರ್ಯಗಳನ್ನು ನಿರ್ವಹಿಸತೊಡಗಿದ್ದಾರೆ.

ಶೈಕ್ಷಣಿಕ ಸೇವೆ: ಗೂಳೂರು ನಿಡುಮಾಮಿಡಿ ಸಂಸ್ಥಾನ ಮಠವು ಧಾರ್ಮಿಕ ಹಾಗೂ ಸಾಹಿತ್ಯಿಕ ಕ್ಷೇತ್ರದಂತೆ ಶಿಕ್ಷಣ ಕ್ಷೇತ್ರಕ್ಕೂ ಹೆಚ್ಚು ಒತ್ತುಕೊಟ್ಟು, ಎಪ್ಪತ್ತೈದಕ್ಕೂ ಹೆಚ್ಚು ಶೈಕ್ಷಣಿಕ ಹಾಗೂ ಸಾಮಾಜಿಕ ಸೇವಾ ಸಂಸ್ಥೆಗಳನ್ನು ನಡೆಸುತ್ತಿದೆ.

೧. ಡಾ. ಜ.ಚ.ನಿ. ಶಿಶುಪಾಲನಾ ಕೇಂದ್ರ (೨)
೨. ಡಾ. ಜ.ಚ.ನಿ. ಪ್ರಾಥಮಿಕ ಶಾಲೆ (೬೦)
೩. ಡಾ. ಜ.ಚ.ನಿ. ಮಾಧ್ಯಮಿಕ ಶಾಲೆ
೪. ಡಾ. ಜ.ಚ.ನಿ. ಪ್ರೌಢಶಾಲೆ
೫. ಡಾ. ಜ.ಚ.ನಿ. ಉಚಿತ ವಿದ್ಯಾರ್ಥಿನಿಲಯ
೬. ಡಾ. ಜ.ಚ.ನಿ. ಕಿರಿಯ ಮಹಾವಿದ್ಯಾಲಯ
೭. ಪದವಿ ಕಾಲೇಜು
೮. ಶ್ರೀ ಬಸವೇಶ್ವರ ವೊಕೇಶನಲ್ ಟ್ರೈನಿಂಗ್ ಸೆಂಟರ್ (೧೦)
೯. ಡಾ. ಬಿ.ಆರ್. ಅಂಬೇಡ್ಕರ್ ಪರಿಶಿಷ್ಟ ಜಾತಿಯ ವಿದ್ಯಾರ್ಥಿನಿಲಯ
೧೦. ಹಿಂದುಳಿದ ವರ್ಗದ ವಿದ್ಯಾರ್ಥಿನಿಲಯ
೧೧. ಬಾಬು ಜಗಜೀವನರಾಂ ಪರಿಶಿಷ್ಟ ಜಾತಿ ಬಾಲಕಿಯರ ವಸತಿ ಸಹಿತ ಪ್ರೌಢಶಾಲೆ
೧೨. ಶಿವಪಾರ್ವತಿ ಪರಿಶಿಷ್ಟ ಪಂಗಡ ಬಾಲಕರ ವಿದ್ಯಾರ್ಥಿನಿಲಯ
೧೩. ಸ್ವಾಮಿ ವಿವೇಕಾನಂದ ಡೆಸ್ಟಿಟ್ಯೂಟ್ ಹೋಂ
೧೪. ಮದರ್ ತೆರಸಾ ಗರ್ಲ್ಸ್ ಡೆಸ್ಟಿಟ್ಯೂಟ್ ಹೋಂ
೧೫. ಮಹಾತ್ಮಗಾಂಧೀಜಿ ಕಿವುಡ ಮತ್ತು ಮೂಕ ಮಕ್ಕಳ ವಸತಿ ಶಾಲೆ
೧೬. ರಾಜಾರಾಂ ಮೋಹನರಾಯ್ ಅಂಧ ಬಾಲಕರ ವಸತಿ ಶಾಲೆ
೧೭. ಕುವೆಂಪು ಬೆರಳಚ್ಚು ತರಬೇತಿ ಕೇಂದ್ರ
೧೮. ಶ್ರೀ ಸಾಜಪ ಮಹಾಸ್ವಾಮೀಜಿ ಪರಿಶಿಷ್ಟ ಪಂಗಡ ಆಶ್ರಮ ಶಾಲೆ
೧೯. ಶ್ರೀಮತಿ ಗಿರಿಜಮ್ಮ ಗಂಗಾಧರಯ್ಯ ಬಾಲಕಿಯರ ವಿದ್ಯಾರ್ಥಿನಿಲಯ
೨೦. ಶ್ರೀಮತಿ ರತು ವೃದ್ಧಾಶ್ರಮ
೨೧. ಅಂಗವಿಕಲರ ಕಲ್ಯಾಣಕೇಂದ್ರ
೨೨. ಡಾ. ಜ.ಚ.ನಿ. ಬಾಲಕಿಯರ ಕಾಲೇಜು, ಬಾಗೇಪಲ್ಲಿ
೨೩. ಡಾ. ಜ.ಚ.ನಿ. ಜೂನಿಯರ್ ಕಾಲೇಜು, ನರೇಂದ್ರ

ಮೇಲಿನ ಈ ಶಿಕ್ಷಣ ಹಾಗೂ ಸಾಮಾಜಿಕ ಸಂಸ್ಥೆಗಳಲ್ಲಿ ಯಾವುದೇ ವಂತಿಕೆಗಳಿಲ್ಲದೆ ಉಚಿತ ಶಿಕ್ಷಣವನ್ನು ನೀಡುತ್ತಿದ್ದಾರೆ. ಎಲ್ಲಾ ವರ್ಗದ ಸುಮಾರು ಐದುನೂರು ಬಡವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿಯನ್ನು ಕಲ್ಪಿಸಿದ್ದಾರೆ.

ಸಾಮಾಜಿಕ ಸೇವೆ: ನಿಡುಮಾಮಿಡಿ ಮಠದಲ್ಲಿ ೧೯೬೧ರಲ್ಲಿ ದಲಿತ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿ, ಎಲ್ಲಾ ವರ್ಗದವರೊಂದಿಗೆ ಸಹಪಂಕ್ತಿ ಭೋಜನದ ವ್ಯವಸ್ಥೆಯನ್ನು ಮಾಡಿಸಿರುತ್ತಾರೆ. ಜಾತಿಮತ, ಸ್ತ್ರೀ ಪುರುಷರ ಬೇಧ ಭಾವವಿಲ್ಲದೆ ದೇವರನ್ನು ಮುಟ್ಟಿ ಪೂಜಿಸಲು ಅವಕಾಶವನ್ನು ಕಲ್ಪಿಸಿದ್ದಾರೆ. ಆಡಂಬರದ ಮತ್ತು ವರದಕ್ಷಿಣೆ ರಹಿತ ಮದುವೆಗಳಿಗೆ ಭಾಗಿಯಾಗುವ

ಗುರುಗಳು, ಕನ್ನಡದಲ್ಲಿ ಪ್ರವ[illegible] ಮೂಲಕ ಸಂಪ್ರದಾಯಗಳಿಲ್ಲದ ಸರಳ ವಿವಾಹ ಪದ್ಧತಿಯನ್ನು ರೂಪಿಸಿದ್ದಾರೆ. ಅಂತರ್‌ಜಾತಿ ಹಾಗೂ ವಿಧವಾ ವಿವಾಹಗಳನ್ನು ನಡೆಸುತ್ತಾ ಬಂದಿದ್ದಾರೆ. ನಾಡಿನಾದ್ಯಂತ ನೂರಾರು ಸಭೆ ಸಮಾರಂಭಗಳಲ್ಲಿ ಭಾಗವಹಿಸಿ ಅಸ್ಪೃಶ್ಯತೆ, ಜಾತಿಪದ್ಧತಿ, ಮೂಢನಂಬಿಕೆಗಳು, ಮದ್ಯಪಾನ, ಜೂಜು, ಭ್ರಷ್ಟಾಚಾರ, ನೈತಿಕ ಅವನತಿ ಹಾಗೂ ಪುರೋಹಿತ ವರ್ಗದ ವಂಚನೆ, ಶೋಷಣೆಗಳ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸುತ್ತಾ ಸಾಮಾಜಿಕ ನ್ಯಾಯಕ್ಕಾಗಿ ದುಡಿಯುತ್ತಿದ್ದಾರೆ. ಪರಂಪರೆಯಿಂದ ಬಂದಿದ್ದ ಜಗದ್ಗುರು ಎಂಬ ಪದವನ್ನು ತೊರೆದು ಪಲ್ಲಕ್ಕಿ, ಕಿರೀಟ ಹಾಗೂ ಸಿಂಹಾಸನಗಳ ಬಳಕೆಯನ್ನು ತ್ಯಜಿಸಿದ್ದಾರೆ. ಅದೇ ರೀತಿ ಪಾದೋದಕ, ಪಾದಪೂಜೆ, ಪಾದವಂದನೆಗಳನ್ನು ಕೈಬಿಟ್ಟ, ಮೊದಲ ಪೀಠಾಧೀಶರಾಗಿದ್ದಾರೆ. ಮೂಢನಂಬಿಕೆ ಮತ್ತು ಕಂದಾಚಾರಗಳನ್ನು ವಿರೋಧಿಸುತ್ತಾ ಬಂದಿದ್ದಾರೆ.

ಸಾಹಿತ್ಯಸೇವೆ: ನಿಡುಮಾಮಿಡಿ ಸಂಸ್ಥಾನಮಠವು ಸಾಹಿತ್ಯಕ್ಷೇತ್ರದಲ್ಲಿ ಅದ್ವಿತೀಯ ಸಾಧನೆಯನ್ನು ಮಾಡಿ ತೋರಿಸಿದ ಪ್ರಥಮ ಮಠ ಎಂದರೆ ಅತಿಶಯೋಕ್ತಿಯಾಗಲಾರದು. ಶ್ರೀ ಜಗದ್ಗುರು ಚನ್ನಬಸವರಾಜ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು ಡಾ. ಜ.ಚ.ನಿ. ಎಂಬ ಕಾವ್ಯ ನಾಮದೊಂದಿಗೆ ಮೂರುನೂರು ಕೃತಿಗಳನ್ನು ರಚಿಸಿದ ಕೀರ್ತಿಗೆ ಬಾಜನರಾಗಿದ್ದಾರೆ. ಹಿರಿಯ ಗುರುಗಳ ಜಾಡಿನಲ್ಲಿಯೇ ಸಾಗಿದ ಶ್ರೀ ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮಿಗಳು ಕನ್ನಡದ ಬನ, ವಚನಾಂಜಲಿ, ವ್ಯಾಸಂಗ, ಅಂತರ, ಚಿಂತನ ಚೇತನ, ಸಹಜ ಜೀವಿಗಳು, ಸುಳ್ಳು ಸೃಷ್ಟಿಗಳು, ಒಲವು ನಿಲುವು, ಮಣ್ಣು ಮುಗಿಲು, ನಲ್ವರಕೆ, ಪಂಚಾಚಾರ್ಯರಿಗೇಕೆ ಉತ್ಸವ, ಸಾಹಿತ್ಯ ಸೂರ್ಯ ಜ.ಚ.ನಿ. ನೆನಪು, ನಮನ, ಶಿವಸಂಸ್ಕೃತಿ ಒಂದು ಚಿಂತನೆ, ಹೋರಾಟದ ಹೆಜ್ಜೆಗಳು, ಗುರುಚೈತನ್ಯ - ಇನ್ನೂ ಮುಂತಾದ ಸಾಹಿತ್ಯಿಕ ಕೃತಿಗಳನ್ನು ರಚಿಸಿದ್ದಾರೆ.

ವಿಳಾಸ: ಶ್ರೀ ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಮಹಾಸ್ವಾಮಿಗಳು, ಶ್ರೀ ನಿಡುಮಾಮಿಡಿ ಮಹಾಸಂಸ್ಥಾನಮಠ - ಮಾನವ ಧರ್ಮಪೀಠ, ಗೂಳೂರು, ಬಾಗೇಪಲ್ಲಿ ತಾಲ್ಲೂಕು, ಕೋಲಾರ ಜಿಲ್ಲೆ.

ಆಧಾರ: 'ನಿಡುಮಾಮಿಡಿ ಜಗದ್ಗುರುಪೀಠ ಹಾಗೂ ನಿಡುಮಾಮಿಡಿಕ್ಷೇತ್ರ ಪರಿಚಯ', ಪ್ರಕಾಶಕರು, ಶ್ರೀ ವೀರಭದ್ರಸ್ವಾಮಿ ಸೇವಾಸಮಿತಿ
'ಜಗದ್ಗುರು ಶ್ರೀ ನಿಡುಮಾಮಿಡಿ ಸ್ವಾಮಿಗಳವರ ಸಂಕ್ಷಿಪ್ತ ಚರಿತ್ರೆ', ಲೇ: ಎಸ್.ಹಂಪಯ್ಯ, ಪ್ರಕಟಣೆ ೧೯೩೬
'ಸಾಹಿತ್ಯ ಸೂರ್ಯ ಡಾ. ಜ.ಚ.ನಿ', ಸಂಪಾದನೆ - ವೀರಭದ್ರ ಚನ್ನಮಲ್ಲ ಸ್ವಾಮಿಗಳು,ಪ್ರಕಟಣೆ ೧೯೯೬
'ನೂತನ ಚೇತನ', ಸ್ಮರಣ ಸಂಚಿಕೆ,ಪ್ರಕಟಣೆ ೧೯೯೦

ಮಾಲೂರು ತಾಲ್ಲೂಕು

ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕು ವ್ಯಾಪಾರ ಮತ್ತು ಕೃಷಿ ಅವಲಂಬಿತ ತಾಲ್ಲೂಕು. ಈ ತಾಲ್ಲೂಕಿನಲ್ಲಿ ವೀರಶೈವ ಧರ್ಮವು ಪುರಾತನ ಕಾಲದಿಂದಲೂ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಂಡು ಬಂದಿತ್ತಾದರೂ ಕಾಲಾನಂತರ ತನ್ನ ಪ್ರಭಾವವನ್ನು ಕಳೆದುಕೊಂಡಿತು. ಇಲ್ಲಿ ಸ್ಥಾಪನೆಯಾಗಿದ್ದ ಹತ್ತು ಮಠಗಳಲ್ಲಿ ಬೆಳ್ಳಾವಿ ಗ್ರಾಮದ ಶ್ರೀಮದ್ ಬೆಳ್ಳನಪುರಿ ವೀರ ಧರ್ಮಸಿಂಹಾಸನ ಸಂಸ್ಥಾನ ಮಠ ಮಾತ್ರ ಅಸ್ತಿತ್ವದಲ್ಲಿರುವುದು ವೀರಶೈವ ಧರ್ಮ ಇಲ್ಲಿ ತನ್ನ ಪ್ರಭಾವವನ್ನು ಕಳೆದುಕೊಂಡಿರುವುದಕ್ಕೆ ಸಾಕ್ಷಿಯಾಗಿದೆ.

ಬೆಳ್ಳಾವಿ

ಮಾಲೂರು ತಾಲ್ಲೂಕಿನ ಬೆಳ್ಳಾವಿಯು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಆರು ಕಿ.ಮೀ ದೂರದಲ್ಲಿದೆ. ಮಾಲೂರು ಮತ್ತು ಚಿಂತಾಮಣಿ ರಸ್ತೆಯ ಎಡಭಾಗಕ್ಕೆ ಒಂದು ಕಿ.ಮೀ ಸಾಗಿದರೆ ಸಿಗುವ ಪುಟ್ಟ ಹಳ್ಳಿಯಲ್ಲಿ ಶ್ರೀಮದ್ ಬೆಳ್ಳನಪುರಿ ವೀರ ಧರ್ಮಸಿಂಹಾಸನ ಸಂಸ್ಥಾನ ಮಠವು ಸ್ಥಾಪನೆಯಾಗಿ, ಇಲ್ಲಿನ ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ಬೆಳೆದಿದೆ.

ಶ್ರೀಮದ್ ಬೆಳ್ಳನಪುರಿ ವೀರಧರ್ಮಸಿಂಹಾಸನ ಸಂಸ್ಥಾನ ಮಠ: ಬೆಳ್ಳಾವಿಯಲ್ಲಿ ಸ್ಥಾಪನೆಯಾಗಿರುವ ಶ್ರೀಮದ್

ಬೆಳ್ಳನಪುರಿ ವೀರ ಧರ್ಮಸಿಂಹಾಸನ ಸಂಸ್ಥಾನ ಮಠವು ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿದೆ. ಈ ಮಠವು ಕಳೆದ ಇನ್ನೂರು ವರ್ಷಗಳ ಹಿಂದೆ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಕರ್ತೃ ಗುರುಗಳು ಬೆಳ್ಳಿಯ ಹಾವಿಗೆಗಳನ್ನು (ಪಾದುಕೆ) ಧರಿಸಿಕೊಂಡು ಸೂರ್ಯೋದಯದ ಮೊದಲು ಗ್ರಾಮದಲ್ಲಿ ಪ್ರದಕ್ಷಿಣೆ ಮಾಡುತ್ತಿದ್ದರಂತೆ. ಈ ಕಾರಣದಿಂದ ಗ್ರಾಮಕ್ಕೆ **'ಬೆಳ್ಳಾವಿಗೆ >ಬೆಳ್ಳಾವಿ'**ಎಂಬ ಹೆಸರು ಬಂದಿತು ಎಂದು ಹೇಳಲಾಗುತ್ತಿದೆ. ಮಠದ ಪರಂಪರೆಯಲ್ಲಿ ಕರ್ತೃ ಗುರುಗಳು ಮತ್ತು ನಂತರ ಬಂದ ಗುರುಗಳ ಹೆಸರು ಲಭ್ಯವಾಗಿಲ್ಲ.

ಪರಂಪರೆ:
೧. ಷ.ಬ್ರ.ಶ್ರೀ ಮರಿ ಸ್ವಾಮಿಗಳು
೨. ಷ.ಬ್ರ.ಶ್ರೀ ವೀರರಾಜ ಶಿವಾಚಾರ್ಯ ಸ್ವಾಮಿಗಳು
೩. ಷ.ಬ್ರ.ಶ್ರೀ ಮಹಂತ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃ ಗುರುಗಳ ಪ್ರಭಾವದಿಂದ ಬೆಳೆದ ಈ ಮಠವು ಈಗಿನ ಶ್ರೀ ಮಹಂತ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳಿಂದ ಹೆಚ್ಚು ಅಭಿವೃದ್ಧಿಯನ್ನು ಕಾಣತೊಡಗಿದೆ. ಶ್ರೀ ವೀರರಾಜ ದೇವರು ೧೯೦೧ರಲ್ಲಿ ಪಟ್ಟಾಧಿಕಾರಕ್ಕೆ ಬಂದು ದೀರ್ಘ ಕಾಲ ಆಡಳಿತವನ್ನು ನಡೆಸಿ, ಮಠವು ಧಾರ್ಮಿಕವಾಗಿ ಹೆಸರು ಪಡೆಯಲು ಕಾರಣರಾದರು. ಶಿವಪೂಜಾ ನಿಷ್ಠರಾದ ಶ್ರೀ ವೀರರಾಜ ಸ್ವಾಮಿಗಳು ೧೯೮೬ ರ ಸೆಪ್ಟೆಂಬರ್ ಇಪ್ಪತ್ತರಂದು ಲಿಂಗೈಕ್ಯರಾದರು. ಮಠದ ವಂಶಸ್ಥರಾದ ಶ್ರೀ ವೀರರಾಜಯ್ಯ ಮತ್ತು ಶ್ರೀಮತಿ ವೀರಮ್ಮನವರ ಪುತ್ರರಾಗಿ ೧೯೬೨ ರ ಜುಲೈನಲ್ಲಿ ಜನಿಸಿದ ಶ್ರೀ ಮಹಂತ ದೇವರು ಪದವಿ ಶಿಕ್ಷಣ ಪಡೆದು, ೧೯೮೬ ರ ಜೂನ್ ಇಪ್ಪತ್ತಾರರಂದು ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಹಿರಿಯ ಗುರುಗಳ ಮಾರ್ಗದರ್ಶನದಲ್ಲಿ ೧೯೬೮ ರಲ್ಲಿ ಮಠಕ್ಕೆ ಹೊಸ ಕಟ್ಟಡವನ್ನು ನಿರ್ಮಿಸಿದ್ದಾರೆ.**'ಶ್ರೀ ವೀರರಾಜ ವಿದ್ಯಾನಿಕೇತನ'** ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಇದರ ಅಡಿಯಲ್ಲಿ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿ, ಶೈಕ್ಷಣಿಕ ಅಭಿವೃದ್ಧಿಗೂ ಕಾರಣರಾಗಿದ್ದಾರೆ. ವೃದ್ಧಾಶ್ರಮ ಹಾಗೂ ಕಲ್ಯಾಣಮಂಟಪವನ್ನು ನಿರ್ಮಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಹಾಗೂ ಹೊರಗಿನ ಜಮೀನಿನಲ್ಲಿರುವ ನಾಲ್ಕು ಗದ್ದುಗೆಗಳಿಗೆ ನಿತ್ಯ ಎರಡು ವೇಳೆ ಪೂಜೆ, ಶ್ರಾವಣ, ಕಾರ್ತೀಕ ಮತ್ತು ಧನುರ್ಮಾಸಗಳಲ್ಲಿ ವಿಶೇಷ ಪೂಜೆ, ಶಿವರಾತ್ರಿಯ ಸಂದರ್ಭದಲ್ಲಿ ಹತ್ತು ದಿನ ಹಾಗೂ ಯುಗಾದಿ ಸಂದರ್ಭದಲ್ಲಿ ನಾಲ್ಕು ಗದ್ದುಗೆಗಳಿಗೆ ಪಂಚಾಮೃತ ಅಭಿಷೇಕ ಮಾಡಲಾಗುತ್ತಿದೆ. ಪ್ರತಿ ಅಮಾವಾಸ್ಯೆ ಮತ್ತು ಹುಣ್ಣಿಮೆಯಲ್ಲಿ ರುದ್ರಾಭಿಷೇಕ ಪೂಜೆಯನ್ನು ನಡೆಸುವುದಲ್ಲದೆ, ಹುಣ್ಣಿಮೆಯಂದು ಚಿಂತನ ಮಂಥನ ಗೋಷ್ಠಿಯನ್ನು ಏರ್ಪಡಿಸಿ ವಿದ್ವಾಂಸರನ್ನು ಕರೆಸಿ ಉಪನ್ಯಾಸಗಳನ್ನು ಮಾಡಿಸಲಾಗುತ್ತಿದೆ. ಈ ಸಂದರ್ಭದಲ್ಲಿ ದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಸಾಮೂಹಿಕ ವಿವಾಹ ಮಠದಲ್ಲಿ ಜರುಗುತ್ತವೆ. ಪರಂಪರೆಯ ಪೂಜಾ ಪರಿಕರಗಳಾದ ಜಾಗಟೆ, ಕೈತಾಳ, ಶಂಖ, ಕಹಳೆ, ಎರಡು ಚಮಳಗಳು, ಪಟ್ಟದ ಕತ್ತಿಗಳು, ತ್ರಿಶೂಲ ಹಾಗೂ ಮರದ ಪಾದುಕೆಗಳು ಪುರಾತನ ವಸ್ತುಗಳಾಗಿದ್ದು ಪೂಜನೀಯವಾಗಿವೆ.

ವಿಳಾಸ: ಷ.ಬ್ರ.ಶ್ರೀ ಮಹಾಂತ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು, ಶ್ರೀಮದ್ ಬೆಳ್ಳನಪುರಿ ವೀರಧರ್ಮಸಿಂಹಾಸನ ಸಂಸ್ಥಾನ ಮಠ, ಬೆಳ್ಳಾವಿ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ.

❑

ಗದಗ ಜಿಲ್ಲೆ

ಗದಗ ಜಿಲ್ಲೆ



ಗದಗ ತಾಲ್ಲೂಕು : ೧. ಬಳಗಾನೂರು, ೨. ಎಚ್.ಎಸ್. ವೆಂಕಟಾಪುರ, ೩. ಹೊಸಹಳ್ಳಿ, ೪. ನರಸಾಪುರ, ೫. ಮುಳುಗುಂದ

ಶಿರಹಟ್ಟಿ ತಾಲ್ಲೂಕು : ೧. ಬನ್ನಿಕೊಪ್ಪ, ೨. ಬೆಳ್ಳಟ್ಟಿ, ೩. ಲಕ್ಷ್ಮೇಶ್ವರ, ೪. ಮುಕ್ತಿಮಂದಿರ, ೫. ಕಳಸ, ೬. ತಂಗೋಡ, ೭. ಇಟಗಿ

ಮುಂಡರಗಿ ತಾಲ್ಲೂಕು : ೧. ಪೇಠಹಾಲೂರು, ೨. ಡಂಬಳ, ೩. ಹಿರೇವಡ್ಡಟ್ಟಿ, ೪. ಜಾಲವಾಡಗಿ, ೫. ಕಲಕೇರಿ

ರೋಣ ತಾಲ್ಲೂಕು : ೧. ಅಸೂಟಿ, ೨. ಕೊತಬಾಳು ೩. ಸೂಡಿ, ೪. ಗಜೇಂದ್ರಗಡ,
೫. ನಿಡಗುಂದಿ ಕೊಪ್ಪ, ೬. ಕರಮುಡಿ, ೭. ಹಾಲುಕೆರೆ, ೮. ನರೆಗಲ್ಲು, ೯. ಅಬ್ಬಿಗೇರಿ,
೧೦. ಜಕ್ಲಿ, ೧೧. ಬೆಳವಣಿಕೆ

ನರಗುಂದ ತಾಲ್ಲೂಕು : ೧. ಕೊಣ್ಣೂರು, ೨. ಶಿರೋಳ, ೩. ಸುರುಕೋಡು, ೪. ರೆಡ್ಡೆರ ನಾಗನೂರು, ೫. ಬೈರನಹಟ್ಟಿ

ಕರ್ನಾಟಕದ ಮಧ್ಯಭಾಗದಲ್ಲಿರುವ ಗದಗ ಜಿಲ್ಲೆಯು ೧೯೯೭ ರಲ್ಲಿ ಧಾರವಾಡ ಜಿಲ್ಲೆಯಿಂದ ಬೇರ್ಪಟ್ಟು ಹೊಸ ಜಿಲ್ಲೆಯಾಗಿ ರೂಪುಗೊಂಡಿತು. ಈ ಜಿಲ್ಲೆಯಲ್ಲಿ ಗದಗ, ಶಿರಹಟ್ಟಿ, ಮುಂಡರಗಿ, ನರಗುಂದ ಹಾಗೂ ರೋಣ ಒಟ್ಟು ಐದು ತಾಲ್ಲೂಕುಗಳನ್ನು ಒಳಗೊಂಡಿವೆ. ಈ ಜಿಲ್ಲೆಯ ಆಗ್ನೇಯ ಭಾಗದಲ್ಲಿ ತುಂಗಭದ್ರಾ ನದಿ ಮತ್ತು ಉತ್ತರ ಭಾಗದಲ್ಲಿ ಮಲಪ್ರಭಾ ನದಿಗಳು ಹರಿದು ಈ ಜಿಲ್ಲೆಗೆ ಮೆರಗು ತಂದಿದೆ.

ಬೆಳಗಾಂ, ಬಾಗಲಕೋಟೆ, ಕೊಪ್ಪಳ, ಬಳ್ಳಾರಿ, ಹಾವೇರಿ ಹಾಗೂ ಧಾರವಾಡ ಜಿಲ್ಲೆಗಳಿಗೆ ಹೊಂದಿಕೊಂಡ ಈ ಜಿಲ್ಲೆಯು ಭೌಗೋಳಿಕವಾಗಿ ಶ್ರೀಮಂತ ಜಿಲ್ಲೆ. ಬಹುತೇಕ ಎರೆಭೂಮಿಯನ್ನೇ ಹೊಂದಿರುವ ಈ ನೆಲದಲ್ಲಿ ಧಾರ್ಮಿಕ ಸಾಮರಸ್ಯ ನೆಲೆಗೊಂಡಿದೆ. ಶಿರಹಟ್ಟಿಯ ಫಕೀರೇಶ್ವರಮಠ ಕಲುಷಿತಗೊಂಡ ಈಗಿನ ಸಮಾಜಕ್ಕೆ ಸಾಮರಸ್ಯದ ಸಂಕೇತವಾಗಿ ಇಡೀ ರಾಷ್ಟ್ರಕ್ಕೆ ಆದರ್ಶಪ್ರಾಯವಾಗಿದೆ. ಇಂತಹ ಸುಕ್ಷೇತ್ರವನ್ನು ಪಡೆದಿರುವುದು ಈ ಜಿಲ್ಲೆಯ ಒಂದು ಹೆಗ್ಗಳಿಕೆ. ಇದೇ ರೀತಿ ಜಿಲ್ಲೆಯ ಕೇಂದ್ರ ಸ್ಥಳದಲ್ಲಿ ಸ್ಥಾಪನೆಗೊಂಡಿರುವ ಗದಗದ ತೋಂಟದಾರ್ಯಮಠ ಸಾಹಿತ್ಯ ಮತ್ತು ಸಾಂಸ್ಕೃತಿಕ ವಿಚಾರದಲ್ಲಿ ಅದ್ವಿತೀಯ ಸಾಧನೆಗೈದಿದೆ. ಪಂಚಾಕ್ಷರ ಗವಾಯಿಗಳು ಇಲ್ಲಿ ಸ್ಥಾಪಿಸಿರುವ ವೀರೇಶಾಶ್ರಮ ಸಂಗೀತ ಸಾಧಕರ ಬೀಡಾಗಿದೆ. ಅಸಹಾಯಕರಿಗೆ ಬದುಕಿನ ನೆಲೆಯನ್ನು ತೋರಿಸಿ ಭರತ ಖಂಡದ ಒಂದು ಸಾಂಸ್ಕೃತಿಕ ಕೇಂದ್ರವಾಗಿದೆ.

ಲಕ್ಷ್ಮೇಶ್ವರದ ಬಳಿ ರಂಭಾಪುರಿ ಪೀಠದ ಹಿಂದಿನ ಜಗದ್ಗುರುಗಳಾಗಿದ್ದ ಶ್ರೀ ಪ್ರಸನ್ನ ರೇಣುಕ ವೀರಗಂಗಾಧರ ಶಿವಾಚಾರ್ಯ ಭಗವತ್ಪಾದರು ಮುಕ್ತಿಮಂದಿರವನ್ನು ಸ್ಥಾಪಿಸಿ ಧಾರ್ಮಿಕ ಸುಕ್ಷೇತ್ರವನ್ನಾಗಿ ಮಾಡಿದ್ದಾರೆ. ಸದಾ ಬರಗಾಲದ ದವಡೆಗೆ ಸಿಕ್ಕಿ ನಲುಗಿರುವ ಮುಂಡರಗಿ ತಾಲ್ಲೂಕಿನ ಕೇಂದ್ರ ಸ್ಥಳದಲ್ಲಿ ಶ್ರೀ ಜಗದ್ಗುರು ಅನ್ನದಾನೇಶ್ವರ ಮಠವು ಸ್ಥಾಪನೆಯಾಗಿ ಈ ಭಾಗದ ಭಾಗ್ಯವೆಂಬಂತೆ ಕಾರ್ಯವನ್ನು ನಿರ್ವಹಿಸುತ್ತಿದೆ. ಈ ರೀತಿ ಈ ಜಿಲ್ಲೆಯಲ್ಲಿ ಸ್ಥಾಪಿತಗೊಂಡಿರುವ ಒಂದೊಂದು ಮಠವೂ ತಮ್ಮದೇ ಆದಂತಹ ಸೇವೆಯನ್ನು ಮಾಡಿ ಈ ನಾಡಿಗೆ ತಮ್ಮ ಕಾಣಿಕೆಯನ್ನು ಸಲ್ಲಿಸುತ್ತಿವೆ.

ಈ ಜಿಲ್ಲೆಯ ಧಾರ್ಮಿಕ ಕ್ಷೇತ್ರದ ತವರೂರೆಂದು ಹೆಸರು ಪಡೆದಿರುವ ಲಕ್ಕುಂಡಿಯಲ್ಲಿ ನೂರಾ ಒಂದು ದೇವಾಲಯಗಳು, ದೇವಾಲಯಗಳಿಗೆ ಒಂದರಂತೆ ನೂರ ಒಂದು ಬಾವಿಗಳು ಪ್ರಾಚೀನ ಕಾಲದಲ್ಲಿ ಸ್ಥಾಪನೆಯಾಗಿ ನಿಂತಿವೆ. ಕುಮಾರವ್ಯಾಸನು ಸಾಹಿತ್ಯ ಕೃಷಿಯನ್ನು ಕೈಗೊಂಡಿದ್ದು, ಗದಗದಲ್ಲಿ ರನ್ನನ ಹುಟ್ಟೂರಾದ ಲಕ್ಷ್ಮೇಶ್ವರ ಈ ಜಿಲ್ಲೆಯಲ್ಲಿದೆ ಎಂಬುದು ಇಲ್ಲಿನ ಮತ್ತೊಂದು ಹೆಗ್ಗಳಿಕೆ.

ಈ ರೀತಿ ಧಾರ್ಮಿಕ ಹಾಗೂ ಸಾಹಿತ್ಯಿಕವಾಗಿ ಹೆಸರು ಪಡೆದಿರುವ ಈ ಜಿಲ್ಲೆಯಲ್ಲಿ ಪ್ರಾಚೀನ ಕಾಲದಿಂದ ಇದುವರೆಗೆ ಎರಡುನೂರ ನಲವತ್ತಾರು ವೀರಶೈವ ಮಠಗಳು ಮಾತ್ರ ಸ್ಥಾಪನೆಯಾಗಿವೆ ಎಂದು ಮಾಹಿತಿ ದೊರೆತಿದೆ. ಈ ಆಧಾರದ ಮೇಲೆ ಶೋಧನೆಗೆ ಹೋದ ಸಂದರ್ಭದಲ್ಲಿ ನೂರ ಇಪ್ಪತ್ಮೂರು ಮಠಗಳು ದೊರೆತಿವೆ. ಇವುಗಳಲ್ಲಿ ಪ್ರಸ್ತುತ ಎಪ್ಪತ್ತು ಮಠಗಳಲ್ಲಿ, ಧಾರ್ಮಿಕ ಕಾರ್ಯಗಳು ನಡೆಯುತ್ತಿದ್ದರೆ ಐವತ್ಮೂರು ಮಠಗಳು ಕೇವಲ ಹೆಸರಿಗಷ್ಟೇ ಮಠಗಳಾಗಿ ಉಳಿದು ಗದ್ದುಗೆ ಪೂಜೆಗಷ್ಟೇ ಸೀಮಿತಗೊಂಡಿವೆ. ಇನ್ನುಳಿದಂತೆ ನೂರಇಪ್ಪತ್ಮೂರು ಮಠಗಳು ಎಲ್ಲಿ ಯಾವಾಗ ಸ್ಥಾಪನೆಯಾದವು, ನಂತರ ಯಾವಾಗ ನಶಿಸಿ ಹೋದವು ಎಂಬುದರ ಬಗ್ಗೆ ಮಾಹಿತಿ ಇಲ್ಲವಾಗಿ ಹೇಳಲು ಹೆಸರಿಲ್ಲದಂತಾಗಿವೆ.

ಗದಗ ತಾಲ್ಲೂಕು

ಗದಗ ಜಿಲ್ಲೆಯ ಪ್ರಮುಖ ತಾಲ್ಲೂಕುಗಳಲ್ಲಿ ಒಂದಾದ ಗದಗ ತಾಲ್ಲೂಕು, ಸಾಂಸ್ಕೃತಿಕವಾಗಿ ಹೆಸರು ಮಾಡಿದೆ. ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆದು ಸಂಸ್ಕಾರವಂತ ಸಮಾಜವನ್ನೂ ರೂಪಿಸಿದೆ. ಜಿಲ್ಲೆಯಾದ್ಯಂತ ಪ್ರಸ್ತುತ ಹದಿಮೂರು ಮಠಗಳು ಕಾರ್ಯನಿರ್ವಹಿಸುತ್ತಿವೆ.

ಗದಗ

ಧಾರವಾಡ ಜಿಲ್ಲೆಯು ೧೯೯೭ರಲ್ಲಿ ಎರಡು ಜಿಲ್ಲೆಗಳಾಗಿ ವಿಂಗಡಣೆಯಾದ ಮೇಲೆ ಗದಗ ನಗರವು ಹೊಸ ಜಿಲ್ಲೆಯ ಕೇಂದ್ರಸ್ಥಳವಾಗಿ ಸ್ಥಾನ ಪಡೆಯಿತು. ಕರ್ನಾಟಕದ ಅಭಿವೃದ್ಧಿಶೀಲ ನಗರಗಳಲ್ಲಿ ಗದಗವು ಒಂದಾಗಿದೆ. ಕನ್ನಡ ಸಾಹಿತ್ಯ ಲೋಕಕ್ಕೆ ಕುಮಾರವ್ಯಾಸನು ನೀಡಿದ ಕಾಣಿಕೆ **'ಕರ್ಣಾಟ ಭಾರತ ಕಥಾಮಂಜರಿ'** ಗದಗಿನ ನಾರಾಯಣನ ಪ್ರೇರಣೆಯಾಗಿದೆ. ಪ್ರಾಚೀನದಿಂದ ಈಚಿನವರೆಗೆ ಸಾಹಿತ್ಯ, ಸಾಂಸ್ಕೃತಿಕ ಹಾಗೂ ಧಾರ್ಮಿಕವಾಗಿ ಕರ್ನಾಟಕಕ್ಕೆ ವಿಶಿಷ್ಟವಾದ ಕೊಡುಗೆಯನ್ನು ನೀಡುತ್ತಾ ಬಂದಿರುವ ಗದಗ ಜಿಲ್ಲಾ ಕೇಂದ್ರವಾಗಿ ಬೆಳೆಯುವುದರ ಜೊತೆಗೆ ಧಾರ್ಮಿಕ ಕೇಂದ್ರಬಿಂದುವಾಗಿ ಬೆಳೆದು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿ ಕರ್ನಾಟಕಕ್ಕೆ ಕೀರ್ತಿ ತಂದಿದೆ. ಈ ಹೆಗ್ಗಳಿಕೆಗೆ ಭಾಜನರಾಗಬೇಕಾದವರು ಶ್ರೀ ಪುಟ್ಟರಾಜ ಗವಾಯಿಗಳು ಹಾಗೂ ಶ್ರೀ ತೋಂಟದ ಡಾ.ಸಿದ್ಧಲಿಂಗ ಸ್ವಾಮಿಗಳು ಎಂದರೆ ತಪ್ಪಾಗಲಾರದು.

ಗದಗ ನಗರದಲ್ಲಿ ಜಗದ್ಗುರು ಶ್ರೀ ತೋಂಟದಾರ್ಯ ಸಂಸ್ಥಾನ ಮಠ, ಜಗದ್ಗುರು ಶ್ರೀ. ಶಿವಾನಂದ ಬೃಹನ್ಮಠ, ಶ್ರೀ ನೀಲಕಂಠೇಶ್ವರ ಮಠ, ಶರಣೆ ನೀಲಮ್ಮನ ಮಠ, ಶ್ರೀ ತಗ್ಗಿನ ಮಠ ಮತ್ತು ಶ್ರೀ ಮೂಲೆ ಮಠ ಈ ರೀತಿ ಆರು ಮಠಗಳು ಅಸ್ತಿತ್ವದಲ್ಲಿವೆ.

ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ: ಗದಗ ನಗರದ ಹೃದಯಭಾಗದಲ್ಲಿರುವ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠವು ವಿರಕ್ತ ಸಂಪ್ರದಾಯದ ಚೀಲಾಳ ಸಮಯದಲ್ಲಿ ತನ್ನ ಪರಂಪರೆಯನ್ನು ಬೆಳೆಸಿಕೊಂಡು ಬಂದಿದೆ. ಕರ್ನಾಟಕದ ಕೆಲವೇ ಪ್ರತಿಷ್ಠಿತ ವೀರಶೈವ ಮಠಗಳಲ್ಲಿ ಈ ಮಠವು ಒಂದಾಗಿದ್ದು ವೈಚಾರಿಕ, ಸಾಮಾಜಿಕ ಹಾಗೂ ಸಾಹಿತ್ಯಿಕವಾಗಿ ವಿಶೇಷವಾಗಿ ಹೆಸರು ಮಾಡಿದೆ. ಸಂಪ್ರದಾಯದ ಹೆಸರಿನಲ್ಲಿ ನಡೆಯುತ್ತಿರುವ ಅನೇಕ ಆಚರಣೆಗಳನ್ನು ವಿರೋಧಿಸಿ ಬಸವತತ್ವದ ವಿಚಾರಧಾರೆಯನ್ನು ಸಮಾಜದಲ್ಲಿ ಮತ್ತೊಮ್ಮೆ ಪ್ರಯೋಗಿಸಿದ ತೋಂಟದಾರ್ಯ ಮಠವು ನೈಜ ಬದುಕಿಗೆ ಒತ್ತುಕೊಟ್ಟಿದೆ.

ಮಠಸ್ಥಾಪನೆ: ಹದಿನೈದನೆಯ ಶತಮಾನದಲ್ಲಿ ಈಗಿನ ಚಾಮರಾಜನಗರ ಜಿಲ್ಲೆಯ ಕೇಂದ್ರವಾದ ಚಾಮರಾಜನಗರ ಸಮೀಪದ ಹರದನಹಳ್ಳಿಯ ವೀರಶೈವ ಕುಟುಂಬದ ಮಲ್ಲಿಕಾರ್ಜುನ ಮತ್ತು ಜ್ಞಾನಾಂಬೆಯರ ಪುತ್ರರಾಗಿ ಜನಿಸಿದ ಸಿದ್ಧಲಿಂಗರು (೧೪೧೦) ಇಲ್ಲಿನ ಮಠಕ್ಕೆ ಮಠಾಧೀಶರಾಗಿ ಕ್ರಿ.ಶ. ೧೪೩೫ರಲ್ಲಿ ಅಧಿಕಾರ ವಹಿಸಿಕೊಂಡರು. ಬಸವಣ್ಣನ ವಿಚಾರಕ್ರಾಂತಿ ಶರಣರಪ್ರಭಾವಕ್ಕೆ ಒಳಗಾಗಿದ್ದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಹನ್ನೆರಡನೆಯ ಶತಮಾನದಲ್ಲಿ ನಡೆದಂತಹ ಆಂದೋಲನದಂತೆಯೇ ವ್ಯಾಪಕವಾದ ಆಂದೋಲನವನ್ನು ರೂಪಿಸಿ ಹಳ್ಳಿಹಳ್ಳಿಗಳನ್ನು ಸುತ್ತಿ ವಿಚಾರಕ್ರಾಂತಿಯನ್ನು ಬಿತ್ತಿದ್ದರು. ಏಳನೂರು ವಿರಕ್ತರು, ಮೂರು ಸಾವಿರ ಜಂಗಮರು ಆಂದೋಲನದಲ್ಲಿ ಭಾಗಿಯಾದರು. ವೀರಶೈವ ಧರ್ಮಪ್ರಸಾರಕ್ಕಾಗಿ ತುಂಗಭದ್ರಾನದಿಯಿಂದ ಕಾವೇರಿಯನ್ನು ದಾಟಿ ಮಲೆಯಾಳಂವರೆಗೆ ತಮ್ಮ ಕಾರ್ಯಕ್ಷೇತ್ರವನ್ನು ರೂಪಿಸಿದರು. ಶ್ರೀ ಸಿದ್ಧಲಿಂಗ ಶಿವಯೋಗಿಗಳ ಜೊತೆ ಇದ್ದ ವಿರಕ್ತರು ಒಂದೊಂದು ಕಡೆ ನೆಲೆನಿಂತು ಮಠ ಸ್ಥಾಪಿಸಿದರು. ಅಲ್ಲದೆ ಹನ್ನೆರಡನೆಯ ಶತಮಾನ ದಲ್ಲಿ ಪ್ರಾರಂಭಗೊಂಡು ಸ್ಥಗಿತವಾಗಿದ್ದ ಶೂನ್ಯಪೀಠದ ಪರಿಕಲ್ಪನೆಯನ್ನು ಪುನಃ ಹದಿನೈದನೆಯ ಶತಮಾನದಲ್ಲಿ ತೋಂಟದ ಶ್ರೀ ಸಿದ್ಧಲಿಂಗ ಶಿವಯೋಗಿಗಳು ಪ್ರಾರಂಭಿಸಿ ಬೆಳೆಸಿದರು. ಈ ರೀತಿ ತಮ್ಮ ಸಂಚಾರದ ಸಮಯದಲ್ಲಿ ಗದಗಿನಲ್ಲಿ ಮಠ ಸ್ಥಾಪಿಸಿ ಕೆಲವು ದಿನ ನೆಲೆಸಿ ಲೋಕಸಂಚಾರಕ್ಕೆ ಹೊರಡುತ್ತಾರೆ. ತಮ್ಮ ನಂತರ ಶೂನ್ಯಸಿಂಹಾಸನಪೀಠಕ್ಕೆ, ತಮ್ಮ ಶಿಷ್ಯ ಶ್ರೀ ತೋಂಟದ ಬೋಳಬಸವ ಸ್ವಾಮಿಗಳಿಗೆ ಅಧಿಕಾರ ನೀಡಿ ಸಿದ್ಧಗಂಗೆ, ಶಿವಗಂಗೆಯಲ್ಲಿ ನೆಲೆಸಿ ನಂತರ ಕಗ್ಗೆರೆಯ

ನಾಗಿಣಿ ನದಿಯ ಪಕ್ಕದ ತೋಟದಲ್ಲಿ ದೀರ್ಘ ತಪಸ್ಸನ್ನು ಆಚರಿಸಿದರು. ಈ ಸಂದರ್ಭದಲ್ಲಿ ಅವರ ಸುತ್ತ ಹುತ್ತ ಬೆಳೆಯಿತು. ನಂತರ ಹುತ್ತದಿಂದ ಮೇಲೆದ್ದು ಭಕ್ತರಿಗೆ ದರ್ಶನಕೊಟ್ಟು ತೋಂಟದ ಶ್ರೀ ಸಿದ್ಧಲಿಂಗಯತಿಗಳಾಗಿ ಮೆರೆದು ಎಡೆಯೂರಿನಲ್ಲಿ ನಿರ್ವಿಕಲ್ಪ ಸಮಾಧಿಯಾದರು.

ವಿರಕ್ತ ಶ್ರೀ ತೋಂಟದಾರ್ಯರು ಬರೆದ ಸಿದ್ಧೇಶ್ವರ ಪುರಾಣ (ಕ್ರಿ.ಶ. ೧೫೬೦), ಚನ್ನವೀರ ಜಂಗಮದೇವ ಬರೆದ ಷಟ್‌ಸ್ಥಲ ವಲ್ಲಭ (ಕ್ರಿ.ಶ. ೧೫೦೦), ಶಾಂತೇಶ ಕವಿಯು ಸಿದ್ಧೇಶ್ವರ ಪುರಾಣ (೧೫೬೧), ಹೇರಂಬನೆಂಬ ಬ್ರಾಹ್ಮಣ ಕವಿಯ ಸಿದ್ಧಲಿಂಗಸಾಂಗತ್ಯ (ಕ್ರಿ.ಶ. ೧೫೬೦) ಇವುಗಳಲ್ಲಿ ಶ್ರೀ ಸಿದ್ಧಲಿಂಗ ಶಿವಯೋಗಿಗಳ ಜೀವನ ಚರಿತ್ರೆ ಮತ್ತು ಘಟನಾವಳಿಗಳು ದಾಖಲಾಗಿವೆ. ಮೇಲಿನ ಗ್ರಂಥಗಳ ಅಧ್ಯಯನ ಮತ್ತು ಸಂಶೋಧನೆಯಿಂದ ಶ್ರೀ ಸಿದ್ಧಲಿಂಗ ಶಿವಯೋಗಿಗಳು ಹನ್ನೆರಡನೆಯ ಶತಮಾನದ ಶೂನ್ಯ ಸಿಂಹಾಸನದ ಪರಂಪರೆಯನ್ನು ಮುಂದುವರೆಸಿದರೆಂದು ಸಂಶೋಧಕರು ದೃಢಪಡಿಸುತ್ತಾರೆ. ಡಾ. ಎಂ.ಎ, ಕಲಬುರ್ಗಿಯವರು, ವೀರಶೈವ ವಿರಕ್ತ ಪರಂಪರೆಗೆ ಎಂಟು ನೂರು ವರ್ಷಗಳ ಇತಿಹಾಸವಿದೆ. ಈ ಇತಿಹಾಸದ ಆ ತುದಿ ಕಲ್ಯಾಣದ ಅಲ್ಲಮ ಪ್ರಭುಗಳು ಈ ತುದಿ ಗದುಗಿನ ತೋಂಟದ ಶ್ರೀ ಸಿದ್ದಲಿಂಗ ಸ್ವಾಮಿಗಳು. ಅಂದು ಅಲ್ಲಮ ಪ್ರಭುಗಳು ಏರಿದ್ದ ಶೂನ್ಯಸಿಂಹಾಸನವನ್ನು ನೇರ ವಾರಸುದಾರರಾಗಿ ಇಂದು ಏರಿದರು. ಎಂದು ಹೇಳಿರುವ ಮಾತುಗಳಿಂದ ಗದುಗಿನ ಶ್ರೀ ತೋಂಟದಾರ್ಯ ಸಂಸ್ಥಾನ ಮಠದ ಪ್ರಾಚೀನತೆ ಮತ್ತು ಮಹತ್ವ ವ್ಯಕ್ತವಾಗುತ್ತದೆ.

ಬೆಳೆದ ಪರಂಪರೆ:

೧.	ಶ್ರೀ ತೋಂಟದ ಸಿದ್ಧಲಿಂಗ ಶಿವಯೋಗಿಗಳು	(- ೧೪೫೯)
೨.	ಶ್ರೀ ತೋಂಟದ ಬೋಳಬಸವಸ್ವಾಮಿಗಳು	(೧೪೫೯ -೧೪೭೧)
೩.	ಶ್ರೀ ತೋಂಟದ ಗೂಳೂರು ಸಿದ್ಧವೀರಸ್ವಾಮಿಗಳು	(೧೪೭೧ -೧೪೮೭)
೪.	ಶ್ರೀ ತೋಂಟದ ಉದ್ದಾನಾರ್ಯಸ್ವಾಮಿಗಳು	(೧೪೮೭ -೧೫೦೭)
೫.	ಶ್ರೀ ತೋಂಟದ ಹಿರೇಹಡಗಲಿ ಹರಿಹರಸ್ವಾಮಿಗಳು	(೧೫೦೭-೧೫೩೦)
೬.	ಶ್ರೀ ತೋಂಟದ ಭಿಕ್ಷದ ಹರಿಹರಸ್ವಾಮಿಗಳು	(೧೫೩೦-೧೫೬೦)
೭.	ಶ್ರೀ ತೋಂಟದ ಕಟಗಿಹಳ್ಳಿ ರಾಚೋಟಿಸ್ವಾಮಿಗಳು	(೧೫೬೦-೧೬೧೦)
೮.	ಶ್ರೀ ತೋಂಟದ ಕೌದಿ ಮಹಾಂತಸ್ವಾಮಿಗಳು (ಸಂಚಾರದಲ್ಲಿದ್ದ ಪೀಠ ಡಂಬಳ- ಗದಗದಲ್ಲಿ ನೆಲೆಗೊಂಡಿತು)	(೧೬೧೦-೧೬೭೫)
೯.	ಶ್ರೀ ತೋಂಟದ ಅರ್ಧನಾರೀಶ್ವರಸ್ವಾಮಿಗಳು	(೧೬೭೫-೧೭೨೫)
೧೦.	ಶ್ರೀ ತೋಂಟದ ಈಸೂರು ನಂದೀಶ್ವರಸ್ವಾಮಿಗಳು	(೧೭೨೫-೧೭೭೦)
೧೧.	ಶ್ರೀ ತೋಂಟದ ಉಗ್ಗದ ತೋಂಟದಾರ್ಯಸ್ವಾಮಿಗಳು	(೧೭೭೦-೧೭೭೬)
೧೨.	ಶ್ರೀ ತೋಂಟದ ಸದಾಶಿವಸ್ವಾಮಿಗಳು	(೧೭೭೬-೧೮೧೧)
೧೩.	ಶ್ರೀ ತೋಂಟದ ಮಹಾಂತಸ್ವಾಮಿಗಳು	(೧೮೧೧-೧೮೩೮)
೧೪.	ಶ್ರೀ ತೋಂಟದ ವೃದ್ಧ ತೋಂಟದಾರ್ಯಸ್ವಾಮಿಗಳು	(೧೮೩೮-೧೮೭೮)
೧೫.	ಶ್ರೀ ತೋಂಟದ ಮೃತ್ಯುಂಜಯಸ್ವಾಮಿಗಳು	(೧೮೭೮-೧೮೮೧)
೧೬.	ಶ್ರೀ ತೋಂಟದ ಸಿದ್ಧೇಶ್ವರಸ್ವಾಮಿಗಳು	(೧೮೮೧-೧೯೨೪)
೧೭.	ಶ್ರೀ ತೋಂಟದ ಗುರುಬಸವಸ್ವಾಮಿಗಳು	(೧೯೨೪-೧೯೬೦)
೧೮.	ಶ್ರೀ ತೋಂಟದ ಶಿವಕುಮಾರಸ್ವಾಮಿಗಳು	(೧೯೬೦-೧೯೭೪)
೧೯.	ಶ್ರೀ ತೋಂಟದ ಡಾ. ಸಿದ್ಧಲಿಂಗಸ್ವಾಮಿಗಳು	(೧೯೭೪-)

ಈ ರೀತಿ ಮಠದ ಪರಂಪರೆಯ ವಿವರ ಮಠದಿಂದ ಪ್ರಕಟಿತಗೊಂಡ ಕೃತಿಗಳಿಂದ ತಿಳಿದುಬರುತ್ತದೆ. ಶ್ರೀ ತೋಂಟದ ಶಿವ ಯೋಗಿಗಳ ನಂತರ ಶ್ರೀ ಬೋಳಬಸವೇಶ್ವರರು ಅಧಿಕಾರ ನಡೆಸಿ ಮಧುಗಿರಿಯಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಶ್ರೀ ಗೂಳೂರು ಸಿದ್ಧವೀರ ಸ್ವಾಮಿಗಳು, ಶ್ರೀ ಉದ್ದನಾರ್ಯ ಸ್ವಾಮಿಗಳು ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ.

ಆಧುನಿಕ ಸಂಶೋಧಕರು ಮಠದ ಪರಂಪರೆಯ ಬಗ್ಗೆ ಸಂಶೋಧನೆ ನಡೆಸಿ ಷಟ್‌ಸ್ಥಲ ಶಿವಯೋಗವೇ ಪ್ರಾಚೀನ ಕೃತಿ ಎಂದು ಅವರು ಗುರುತಿಸಿದ್ದಾರೆ. ಈ ಬಗ್ಗೆ ಡಾ. ಎಂ.ಎಂ.ಕಲಬುರ್ಗಿಯವರು ಶ್ರೀ ಬೋಳಬಸವೇಶ್ವರರ ಬಳಿಕ ಯಾರೂ ಶೂನ್ಯಸಿಂಹಾಸನ ಏರಿದರೆಂಬ ಬಗ್ಗೆ ಒಮ್ಮತವಿಲ್ಲ ಎಂದು ಅಭಿಪ್ರಾಯಿಸಿ (ಕಲ್ಯಾಣದ ಹಾದಿ-ಪುಟಸಂಖ್ಯೆ ೫೧೪) ಶ್ರೀ ಬೋಳಬಸವೇಶ್ವರರ ಬಳಿಕ ಶ್ರೀ ಚನ್ನಂಜೇದೇವರು ಪೀಠವೇರಿದರೆಂದು ಅಭಿಪ್ರಾಯಿಸಿದ್ದಾರೆ. ಇವರ ನಂತರ ಕಟ್ಟಿಗೆಹಳ್ಳಿ ಶ್ರೀ ಸಿದ್ದಲಿಂಗೇಶ್ವರರು ಅಧಿಕಾರಕ್ಕೆ ಬರುತ್ತಾರೆ. ನಂತರ ಶ್ರೀ ಚೀಲಾಳ ಸ್ವಾಮಿಗಳು ನಂತರ ಶೂನ್ಯಸಿಂಹಾಸನ ಅಧಿಕಾರವನ್ನು ಹರಪನಹಳ್ಳಿಯಲ್ಲಿ ಪಡೆಯುತ್ತಾರೆ. ಈ ಸಂದರ್ಭದಲ್ಲಿ ಕೆಲವರು ಅಸಮಾಧಾನಗೊಂಡು ಬೇರೆ ಸಮಯಗಳನ್ನು ರೂಪಿಸಿಕೊಂಡು ಹೋದರೆಂದು ಹೇಳಲಾಗುತ್ತದೆ.

ಶ್ರೀ ಚೀಲಾಳ ಸ್ವಾಮಿಗಳ ನಂತರ ಶ್ರೀ ಕಪಿಲಸಿದ್ದ ಸ್ವಾಮಿಗಳು ಪಟ್ಟಾಧಿಕಾರದ ಅನುಗ್ರಹವನ್ನು ಪಡೆಯುತ್ತಾರೆ. ಇವರ ತರುವಾಯ ಶ್ರೀ ಉದ್ದನಾರ್ಯ, ಶ್ರೀ ಹರಿಹರ ಸ್ವಾಮಿಗಳು, ಶ್ರೀ ಭಿಕ್ಷದ ಬಸವಲಿಂಗಾರ್ಯರು, ಶ್ರೀ ಕಟ್ಟಿಗೆಹಳ್ಳಿ ರಾಚೋಟಿ ಸ್ವಾಮಿಗಳು, ಶ್ರೀ ಮಹಾಂತ ಸ್ವಾಮಿಗಳು, ಶ್ರೀ ಅರ್ಧನಾರೀಶ್ವರ ಸ್ವಾಮಿಗಳು, ಶ್ರೀ ಈಸೂರು ನಂದೀಶ್ವರ ಸ್ವಾಮಿಗಳು, ಶ್ರೀ ಉಗ್ಗದ ಸಿದ್ದಲಿಂಗ ಸ್ವಾಮಿಗಳು, ಶ್ರೀ ಸದಾಶಿವ ಸ್ವಾಮಿಗಳು, ಶ್ರೀ ಮಹಾಂತ ಸ್ವಾಮಿಗಳು, ಶ್ರೀ ತೋಂಟದಾರ್ಯಸ್ವಾಮಿಗಳು, ಶ್ರೀ ಮೃತ್ಯುಂಜಯ ಸ್ವಾಮಿಗಳು, ಶ್ರೀ ಸಿದ್ದಲಿಂಗ ಸ್ವಾಮಿಗಳು, ಶ್ರೀ ಗುರುಬಸವ ಸ್ವಾಮಿಗಳು, ಶ್ರೀ ಶಿವಕುಮಾರ ಸ್ವಾಮಿಗಳು ಹಾಗೂ ಈಗಿನ ಶ್ರೀ ತೋಂಟದ ಡಾ. ಶ್ರೀ ಸಿದ್ಧಲಿಂಗ ಸ್ವಾಮಿಗಳು ಈ ರೀತಿ ಒಟ್ಟು ಇಪ್ಪತ್ತಮೂರು ಗುರುಗಳ ಹೆಸರನ್ನು ಉಲ್ಲೇಖಿಸುತ್ತಾರೆ. ಶ್ರೀ ಚೀಲಾಳ ಸ್ವಾಮಿಗಳು ಅಧಿಕಾರಕ್ಕೆ ಬರುವ ಸಂದರ್ಭದಲ್ಲಿ ಸಂಚಾರದಲ್ಲಿದ್ದ ಶೂನ್ಯಪೀಠವು ಒಂದೆಡೆ ನೆಲೆಗೊಳ್ಳಲು ಬುನಾದಿಯನ್ನು ಹಾಕಿಕೊಟ್ಟಿದೆ. ನಂತರ ಹರಪನ ಹಳ್ಳಿಯಿಂದ ಜಗದ್ಗುರು ಪೀಠವು ಡಂಬಳಕ್ಕೆ ನಂತರ ಗದುಗಿಗೆ ವರ್ಗಾವಣೆಗೊಂಡಿದೆ ಎಂದು ತಿಳಿಯುತ್ತದೆ.

ಸಾಧಕರು: ಬಿಜಾಪುರ ಜಿಲ್ಲೆಯ ಸಿಂದಗಿಯ ಹಿರೇಮಠದ ಶ್ರೀ ಮರೆಯ್ಯ ಮತ್ತು ಶ್ರೀಮತಿ ಶಂಕರವ್ವನವರ ಪುತ್ರರಾಗಿ ೧೯೪೯ ರ ಫೆಬ್ರವರಿ ಇಪ್ಪತ್ತೊಂದರಂದು ಶ್ರೀ ಸಿದ್ಧರಾಮ ದೇವರು ಜನಿಸಿದರು. ಸಿಂದಗಿಯ ಹಿರೇಮಠಕ್ಕೆ ಉತ್ತರಾಧಿಕಾರಿಯಾಗಿ ಆಯ್ಕೆಗೊಂಡ ಇವರು ಸಿಂದಗಿಯಲ್ಲಿ ಪ್ರಾಥಮಿಕ ಶಾಲೆಯನ್ನು ಮುಗಿಸಿ ಹುಬ್ಬಳಿಯ ಮೂರುಸಾವಿರ ಮಠದಲ್ಲಿ ಆಶ್ರಯ ಪಡೆದು ಪ್ರೌಢಶಿಕ್ಷಣ ಹಾಗೂ ಕಾಲೇಜು ಶಿಕ್ಷಣವನ್ನು ಮುಗಿಸಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲ ಯದಲ್ಲಿ ಕನ್ನಡ ಎಂ.ಎ.ಯನ್ನು ಮುಗಿಸಿದರು. ಸಿಂದಗಿಯ ಶ್ರೀ ಶಾಂತವೀರಪಟ್ಟದ ದೇವರ ಹಾರೈಕೆ ಹಾಗೂ ಮಾರ್ಗದರ್ಶನ ದಲ್ಲಿ ಬೆಳೆದು ಪ್ರತಿಭಾನ್ವಿತ ವ್ಯಕ್ತಿತ್ವವನ್ನು ಮೈಗೂಡಿಸಿ ಕೊಂಡರು. ಸಿಂದಗಿ ಹಿರೇಮಠದ ಅಧಿಕಾರವನ್ನು ಶ್ರೀ ಸಿದ್ಧರಾಮ ದೇವರಿಗೆ ವಹಿಸಿಕೊಡಲು ಸಿಂದಗಿ ಶ್ರೀ ಶಾಂತವೀರಪಟ್ಟದ ದೇವರು ಸಿದ್ಧತೆಯಲ್ಲಿರುವಾಗ ಗದಗದ ಶ್ರೀ ತೋಂಟದಾರ್ಯ ಮಠದ ಅಧಿಕಾರವಹಿಸಿಕೊಳ್ಳಲು ಶ್ರೀ ಸಿದ್ಧರಾಮದೇವರು ವಚನ ನೀಡಿದರು. ಕೊನೆಗೆ ೧೯೭೪ ರ ಜುಲೈ ಇಪ್ಪತ್ತೊಂಬತ್ತ ರಂದು ಜಗದ್ಗುರು ಶ್ರೀ ತೋಂಟದ ಸಿದ್ಧಲಿಂಗಸ್ವಾಮಿಗಳೆಂದು ಅಭಿಧಾನ ಪಡೆದು ಗದಗದ ತೋಂಟದಾರ್ಯಮಠದ ಜಗದ್ಗುರುಗಳಾಗಿ ಅಧಿಕಾರವನ್ನು ವಹಿಸಿಕೊಂಡರು. ಅಧಿಕಾರ ವಹಿಸಿಕೊಂಡ ನಂತರ ಸಿಂದಗಿ ಶ್ರೀ ಪಟ್ಟದದೇವರ ಅಭಿಲಾಷೆಯಂತೆ ಗುರಸ್ಥಲ ಮತ್ತು ವಿರಕ್ತ ಮಠಗಳ ಸಂಪರ್ಕವನ್ನಿಟ್ಟುಕೊಂಡು, ಹಾವೇರಿಯ ಸಿಂದಗಿಯ ಸುರಗಿ ಮಠ ಮತ್ತು ಇದರ ಅಧೀನ ಮಠಗಳ ಆಡಳಿತವನ್ನು ನೋಡಿಕೊಂಡು ಬರುತ್ತಿದ್ದಾರೆ. ಕಾಯಕ ಯೋಗಿಗಳು, ಸಮಾಜ ಸೇವಕರು ಹಾಗೂ ಸಾಧಕರಾದ ಇವರ ಕಾರ್ಯ ದಕ್ಷತೆಯನ್ನು ಗುರುತಿಸಿ ೧೯೯೪ ರ ಜನವರಿ ಹನ್ನೆರಡರಂದು ಗುಲ್ಬರ್ಗ ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ.

ಕೆಳದಿ ಅರಸರ ಕೊಡುಗೆ : ತೋಂಟದ ಶ್ರೀ ಅರ್ಧನಾರೀಶ್ವರ ಸ್ವಾಮಿಗಳ ಕಾಲದಲ್ಲಿ ಡಂಬಳದಲ್ಲಿ ಮಠಸ್ಥಾಪನೆಯಾಗುತ್ತದೆ. ಬಳ್ಳಾರಿ ಜಿಲ್ಲೆಯ ಲಿಂಗನಮರಡಿಯಿಂದ ನೇರವಾಗಿ ಡಂಬಳಕ್ಕೆ ಆಗಮಿಸಿ ಇಲ್ಲಿನ ದೇವಾಲಯದಲ್ಲಿ ನೆಲೆನಿಲ್ಲುತ್ತಾರೆ. ಇಲ್ಲಿ ನೆಲೆಸಿದ ಸಂದರ್ಭದಲ್ಲಿ ಶೀನಪ್ಪಯ್ಯ ಎಂಬ ಧನಿಕನಿಗೆ ಇದ್ದ ಕುಷ್ಠರೋಗವನ್ನು ನಿವಾರಣೆ ಮಾಡಿದರು. ಧನಿಕನು ಇದರಿಂದ ಸಂತೋಷಗೊಂಡು ಗುರುಗಳಿಗಾಗಿ ಮಠ ಕಟ್ಟಿಸಿಕೊಡುತ್ತಾನೆ. ನಂತರ ಶ್ರೀ ಅರ್ಧನಾರೀಶ್ವರರು ಕೆಳದಿ ಸಂಸ್ಥಾನಕ್ಕೆ

ಹೋಗಿ ಸೋಮಶೇಖರ ನಾಯಕನಿಂದ (ಕ್ರಿ.ಶ.೧೭೧೪-೧೭೩೯) ಆತಿಥ್ಯವನ್ನು ಸ್ವೀಕರಿಸಿ, ಸೋಮಶೇಖರನ ನಾಯಕನ ಮಗ ವೀರಭದ್ರ ನಾಯಕ ಮತ್ತು ಮಲ್ಲಾಂಬಿಕೆಗೆ ಜನಿಸಿದ ಬಸಪ್ಪನಾಯಕನಿಗೆ(ಕ್ರಿ.ಶ.೧೭೩೯-೧೭೫೫)ವಿಭೂತಿ ಘಟ್ಟಿಯನ್ನು ನೀಡಿ ಆಶೀರ್ವದಿಸಿ ಪುನಃ ಡಂಬಳಕ್ಕೆ ಆಗಮಿಸಿದರು.

ಕೆಳದಿ ಅರಸರು ಗುರುಭಕ್ತರಾಗಿ, ಧಾರ್ಮಿಕ ತತ್ತ್ವನಿಷ್ಠರಾದ ಕಾರಣ ಡಂಬಳಕ್ಕೆ ಆಗಮಿಸಿ ಪ್ರತಿವರ್ಷ ಮಾಘ ಪೂರ್ಣಿಮೆಯ ಮಘಾನಕ್ಷತ್ರದಲ್ಲಿ ರಥೋತ್ಸವ ನಡೆಸಲು ವ್ಯವಸ್ಥೆಗೊಳಿಸಿ ನೂತನ ರಥ, ನಂದಾದೀವಿಗೆ ನೀಡಿ ಹೋಗಿರುತ್ತಾರೆ. ನಂತರ ಬೂದಿಬಸಪ್ಪನು ೧೭೪೦ರ ಸುಮಾರಿನಲ್ಲಿ ಡಂಬಳಕ್ಕೆ ಆಗಮಿಸಿ ಮೂರು ದೊಡ್ಡ ಗಾತ್ರದ ವಿಭೂತಿ ಘಟ್ಟಿಗಳನ್ನು ಮಾಡಿಸಿಕೊಡುತ್ತಾನೆ. ಅಲ್ಲದೆ ಬಂಗಾರದ ಲೇಪನದ ಆರು ಕಳಶಗಳು, ಬೆಳ್ಳಿ ಬಂಗಾರದ ಪೂಜಾ ಸಾಮಾಗ್ರಿಗಳು, ಚಿನ್ನದ ಪಾದುಕೆಗಳು ಹಾಗೂ ರತ್ನಕಂಬಳಿಯನ್ನು ನೀಡಿ ಗುರುಗಳನ್ನು ಗೌರವಿಸಿ ಹೋಗುತ್ತಾನೆ. ಶ್ರೀ ಅರ್ಧನಾರೀಶ್ವರರು ಲಿಂಗೈಕ್ಯರಾದ ಮೇಲೆ ಕೆಳದಿ ಅರಸರು ಅವರ ಗದ್ದುಗೆಯನ್ನು ನಿರ್ಮಿಸಿ ದೊಡ್ಡ ಮಂಟಪವನ್ನು ನಿರ್ಮಿಸಿದ್ದಲ್ಲದೆ ಗದ್ದುಗೆಯ ಎಡಭಾಗದಲ್ಲಿ ಮಠದ ಗುರುಗಳ ಪೂಜೆ ಮತ್ತು ವಾಸ್ತವ್ಯಕ್ಕೆ ಕೊಠಡಿ ನಿರ್ಮಿಸಿದರು. ಅಲ್ಲದೆ ಕುದುರೆ ಕಟ್ಟುವ ಮನೆ, ಆನೆಮನೆ, ತೇರಿನ ಮನೆ ನಿರ್ಮಿಸಿಕೊಟ್ಟು ಮಠಕ್ಕೆ ವೈಭವ ತಂದುಕೊಟ್ಟರು..

ಮಠದ ಧಾರ್ಮಿಕ ಕಾರ್ಯಗಳು: ಡಂಬಳ ಮತ್ತು ಗದಗಿನಲ್ಲಿರುವ ಗದ್ದುಗೆಗಳಿಗೆ ನಿತ್ಯ ಎರಡು ವೇಳೆ ಪೂಜೆ ನಡೆಯುತ್ತಿದೆ. ಈಗಿನ ಗುರುಗಳು ೧೯೭೦ ರ ಅಕ್ಟೋಬರ್ ಐದರಂದು 'ವೀರಶೈವ ಪ್ರಗತಿ ಯುವಕ ಸಂಘ'ವನ್ನು ಸ್ಥಾಪಿಸಿ ಪ್ರತಿ ಸೋಮವಾರ ಹಳ್ಳಿ ಹಳ್ಳಿಗಳಲ್ಲಿ ಶಿವಾನುಭವಗೋಷ್ಠಿ ನಡೆಸಿ ಜನರಲ್ಲಿ ಧಾರ್ಮಿಕ ಪ್ರಜ್ಞೆ ಜಾಗೃತಗೊಳ್ಳಲು ಪ್ರೇರಣೆ ನೀಡಿದ್ದಾರೆ. ಅಂದು ಪ್ರಾರಂಭಗೊಂಡ ಗೋಷ್ಠಿ ಈತನಕ ನಿರಂತರವಾಗಿ ನಡೆಯುತ್ತಾ ಬಂದಿರುವುದು ಒಂದು ವಿಶೇಷತೆ. ಮಠದಲ್ಲಿ ಸಾಂಪ್ರದಾಯಿಕ ವಾಗಿ ನಡೆಯುತ್ತಾ ಬಂದಿದ್ದ ಜಾತ್ರೆಯನ್ನು ಶ್ರೀ ತೋಂಟದ ಸಿದ್ಧಲಿಂಗ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಕೇವಲ ಆಚರಣೆಗಾಗಿ ಮಾಡುವ ಜಾತ್ರೆಯಲ್ಲಿ ಕಾಲ ಕಳೆಯಲು ಅವಕಾಶ ನೀಡದೆ ಅರ್ಥಪೂರ್ಣವಾಗಿ ಆಚರಿಸತೊಡಗಿದ್ದಾರೆ. ಈ ಸಂದರ್ಭದಲ್ಲಿ ವಿದ್ವಾಂಸರಿಂದ ಉಪನ್ಯಾಸ, ಗ್ರಾಮೀಣಕಲೆಗಳ ಪ್ರದರ್ಶನ, ಗ್ರಾಮೀಣ ಕೃಷಿಕರಿಗೆ ಸ್ಪರ್ಧೆ, ಕೃಷಿಸಾಮಾಗ್ರಿಗಳ ವಸ್ತುಪ್ರದರ್ಶನ, ವಿವಿಧ ಕ್ಷೇತ್ರಗಳಲ್ಲಿ ದುಡಿದ ಸಾಧಕರನ್ನು ಗೌರವಿಸುವುದು ಈ ರೀತಿ ಅನಕ್ಷರಸ್ಥರಿಂದ ವಿದ್ವಾಂಸರವರೆಗೆ, ಧನಿಕರಿಂದ ಬಡವರವರೆಗೆ ಎಲ್ಲರನ್ನೂ ಸೇರಿಸಿ ಸಾಂಸ್ಕೃತಿಕ ವೇದಿಕೆಯನ್ನಾಗಿ ರೂಪಿಸಿದ್ದಾರೆ.

ಜಾತ್ರೆಯ ವಿಶೇಷತೆ: ಜಾತ್ರೆಯಲ್ಲಿ ಮನರಂಜನೆ, ಜ್ಞಾನದಾಸೋಹದ ಜೊತೆಗೆ ಅನ್ನದಾಸೋಹವನ್ನು ವಿಶಿಷ್ಟವಾಗಿ ಮಾಡಿಸುತ್ತಾರೆ. ಪ್ರತಿದಿನ ಒಂದೊಂದು ಬಗೆಯ ಒಂದೊಂದು ಪ್ರಾಂತ್ಯದ ಭೋಜನವನ್ನು ಮಾಡಿಸಿ ಭಕ್ತರ ನಾಲಿಗೆಗೆ ಕರ್ನಾಟಕದ ಎಲ್ಲಾ ವಿಧದ ರುಚಿಯನ್ನೂ ತೋರಿಸುವ ವ್ಯವಸ್ಥೆಯಿದೆ. ಜಾತ್ರೆಯಲ್ಲಿ ಹಿಂದೂ ಮತ್ತು ಮುಸ್ಲಿಂರು ಜಾತಿ ಬೇಧ ಮರೆತು ಒಟ್ಟಿಗೆ ಸೇರಿ ಉರುಸ್ ಆಚರಿಸುತ್ತಾರೆ.

ಶಾಖಾಮಠಗಳು: ಮಠದ ಕರ್ತೃಗುರುಗಳಾದ ಶ್ರೀ ತೋಂಟದ ಸಿದ್ಧಲಿಂಗ ಸ್ವಾಮಿಗಳು ಎಲ್ಲೆಲ್ಲಿ ಅನುಷ್ಠಾನಗೊಂಡರೇ ಅಲ್ಲೆಲ್ಲಾ ಕಡೆ ಮಠಗಳು ಸ್ಥಾಪನೆಯಾಗಿವೆ. ಶ್ರೀ ಸಿದ್ಧಲಿಂಗ ಶಿವಯೋಗಿಗಳ ಜೊತೆ ಮೂರು ಸಾವಿರ ಜಂಗಮರು ಹಾಗೂ ಏಳುನೂರು ವಿರಕ್ತರು ಲೋಕಸಂಚಾರದಲ್ಲಿದ್ದಾಗ ಇವರುಗಳೆಲ್ಲ ಒಂದೊಂದು ಕಡೆ ನೆಲೆ ನಿಂತು ಮಠವನ್ನು ಸ್ಥಾಪಿಸಿದರು ಎಂದು ಹೇಳಲಾಗುತ್ತಿದೆ. ಆದರೆ ಈ ಮಠಗಳಲ್ಲಿ ಬಹುತೇಕ ಮಠಗಳು ನಶಿಸಿಹೋಗಿವೆ. ಈಗ ಅಸ್ತಿತ್ವದಲ್ಲಿರುವ ಕೆಲವೇ ಮಠಗಳಲ್ಲಿ ಕೆಲವು ಸ್ವತಂತ್ರಮಠಗಳಾಗಿವೆ. ಕೇವಲ ತೊಂಬತ್ತಾರು ಮಠಗಳು ತೋಂಟದಾರ್ಯ ಸಂಸ್ಥಾನ ಮಠದ ಶಾಖಾ ಮಠಗಳಾಗಿ ಉಳಿದಿವೆ ಎಂದು ಮಠದ ಪ್ರಕಟಣೆಯ ಆಧಾರದ ಮೇಲೆ ಹೇಳಬಹುದಾಗಿದೆ. ತಾಲ್ಲೂಕುವಾರು ಶಾಖಾಮಠಗಳು ಈ ಕೆಳಕಂಡಂತಿವೆ.

ಗದಗ ತಾಲ್ಲೂಕು : ಗದಗ, ಬೆಟಗೇರಿ, ಕಳಸಾಪುರ, ಅಸುಂಡಿ, ಅಂತೂರ, ನಾಗಾವಿ, ಕುರ್ತಕೋಟಿ, ಕದಡಿ,ಹರ್ಲಾಪೂರ, ಲಕ್ಕುಂಡಿ, ಲಿಂಗದಾಳ, ಕೋಟುಮಚಗಿ, ಬಳಗಾನೂರು, ಕಣಗಿನಹಾಳ, ಹುಯಿಲಗೋಳ, ಹೊಂಬಳ, ಹುಲಕೋಟಿ.

ಮುಂಡರಗಿ ತಾಲ್ಲೂಕು ಹೆಸರೂರು,	: ಡಂಬಳ, ಮುಂಡರಗಿ, ಡೋಣಿ, ಬೂದಿಹಾಳ, ಕಲಕೇರಿ, ಪೇಟಾ ಅಲೂರು, ಶಿರೂರ, ಎಕಲಾಸಪುರ, ಮುಷ್ಠಿಕೊಪ್ಪ.
ರೋಣ ತಾಲ್ಲೂಕು	: ರೋಣ, ಕರಕಿಕಟ್ಟಿ, ಹಿರೇಹಾಳ, ಅಬ್ಬಿಗೇರಿ, ನರೇಗಲ್ಲು, ಹೊಳೆಆಲೂರು, ಜಕ್ಕಲಿ, ಬೆಳವಣಿಕಿ, ಕೌಜಗೇರಿ, ಹುಲ್ಲೂರು, ಮಲ್ಲಾಪೂರ, ಸಂದಿಗವಾಡ, ಹಳ್ಳೂರು, ಬೆನಹಾಳ, ಜಿಗಳೂರು, ಅಮರಗೋಳ, (ಡಂಬಳ ಸಮ್ಮತ) ಹಡಗಲಿ, ಕುರುಡಗಿ, ಗಾಡಗೋಳಿ, ಮಾರನಬಸರಿ,ಅರಹುಣಸಿ, ಅಸೂಟಿ.
ನವಿಲಗುಂದ ತಾಲ್ಲೂಕು	: ಅಣ್ಣಿಗೇರಿ, ನಾಗನೂರು, ಶಿಶ್ವಿನಹಳ್ಳಿ,ಹಳ್ಳಿಕೇರಿ, ಬಸಾಪುರ, ಮಣಕವಾಡ, ಭದ್ರಾಪುರ, ಶಲವಡಿ.
ನರಗುಂದ ತಾಲ್ಲೂಕು	: ಸಿದ್ದಾಪುರ, ಹದ್ದಿ, ಸೋಮಾಪುರ, ಚಿಕ್ಕನರಗುಂದ, ಶಿರೋಳ.
ಹುಬ್ಬಳ್ಳಿತಾಲ್ಲೂಕು	: ಬ್ಯಾಹಟ್ಟಿ,ಇಂಗಳಹಳ್ಳಿ.
ಧಾರವಾಡ ತಾಲ್ಲೂಕು	: ಹೊಸಯಲ್ಲಾಪುರ.
ಹಾನಗಲ್ಲು ತಾಲ್ಲೂಕು	: ತಿಳವಳ್ಳಿ, ಬಾಗವಾಡಿ.
ಹುನಗುಂದ ತಾಲ್ಲೂಕು	: ಸೂಳೀಬಾವಿ,ಅಮೀನಗಡ.
ಬಾದಾಮಿ ತಾಲ್ಲೂಕು	: ಬಾದಾಮಿ,ಬೇಲೂರು, ನೀರಲಗಿ, ನೀಲಗುಂದ, ಸುಳ್ಳ.
ರಾಮದುರ್ಗ ತಾಲ್ಲೂಕು	: ಮಲ್ಲೂರು
ಹೂವಿನಹಡಗಲಿ ತಾಲ್ಲೂಕು	: ಹಿರೇಹಡಗಲಿ
ಹಗರಿಬೊಮ್ಮನಹಳ್ಳಿ ತಾಲ್ಲೂಕು	: ಬಾಚಿಗೊಂಡನಹಳ್ಳಿ, ತಂಬ್ರಳ್ಳಿ, ಹಂಪಸಾಗರ.
ಯಲಬುರ್ಗಾ ತಾಲ್ಲೂಕು	: ಬೆದವಟ್ಟಿ,ಬನ್ನಿಕೊಪ್ಪ, ಮಸಿಬಿಹಂಚಿನಾಳ, ಕುಕನೂರು, ಸಂಗನಹಾಳ, ಇಟಗಿ, ರಾಜೂರು, ಬಿನ್ನಾಳ, ಬಸಾಪೂರ, ಎಡಿಯಾಪುರ.
ಕೊಪ್ಪಳ ತಾಲ್ಲೂಕು	: ಕವಲೂರು
ಚಿಂಚೋಳಿ ತಾಲ್ಲೂಕು	: ರದ್ದೂರು,ಚಿಂತಪಲ್ಲಿ.

ಸಾಮಾಜಿಕ ಕಾರ್ಯಗಳು: ಶ್ರೀ ಡಾ. ಸಿದ್ಧಲಿಂಗ ಸ್ವಾಮಿಗಳು ಪಟ್ಟಾಧಿಕಾರದ ನಂತರ ಪ್ರತಿ ಅಮಾವಸ್ಯೆಯಂದು ಜನಜಾಗೃತಿಗಾಗಿ ಗದುಗಿನಿಂದ ಡಂಬಳಕ್ಕೆ ಇಪ್ಪತ್ತೊಂದು ಕಿಲೋ ಮೀಟರ್ ಪಾದಯಾತ್ರೆ ನಡೆಸಿದರು. ಡಂಬಳದಲ್ಲಿ ಹಾಳುಬಿದ್ದಿದ್ದ ಭೂಮಿಯನ್ನು ನಂದನವನವನ್ನಾಗಿಸಿ ಕೃಷಿಕರಿಗೆ ಆದರ್ಶಪ್ರಾಯರಾದರು. ಜೊತೆಗೆ ಸುತ್ತಮುತ್ತಲಿನ ಕೃಷಿಗರಿಗೆ ಪ್ರೇರಣೆ ನೀಡಿ ಆಧುನಿಕ ಬೇಸಾಯವನ್ನು ಅಳವಡಿಸಿಕೊಳ್ಳಲು ನೆರವಾದರು. ಈ ಮೂಲಕ ಬಡರೈತರಲ್ಲಿ ಶ್ರೀಮಂತಿಕೆಯ ಕಳೆತಂದುಕೊಟ್ಟರು. ಬರಡು ಭೂಮಿಯಲ್ಲಿ ತೋಟಗಾರಿಕೆ ಬೆಳೆ ಬೆಳೆದು ನಾಡಿಗೆ ಸಮೃದ್ಧಿ ತಂದರು. ಗೋಶಾಲೆಯನ್ನು ಸ್ಥಾಪಿಸಿ ಸಾವಿರಾರು ರಾಸುಗಳನ್ನು ಪೋಷಿಸಿದ್ದಾರೆ. ಆರ್ಥಿಕವಾಗಿ ಅಸಹಾಯಕರಾದವರಿಗೆ ಹಸು, ಎಮ್ಮೆಗಳನ್ನು ದಾನವಾಗಿ ನೀಡಿ ಸ್ವಾವಲಂಬಿಗಳಾಗಿ ಬದುಕಲು ನೆರವಾಗಿದ್ದಾರೆ. ಕೃಷಿಕರಿಗೆ ಎತ್ತುಗಳನ್ನು ನೀಡಿ ಬೇಸಾಯಕ್ಕೆ ನೆರವಾಗಿದ್ದಾರೆ.

ಮಠದಲ್ಲಿ ಬುದ್ಧ, ಬಸವ, ಪೈಗಂಬರ್, ಅಂಬೇಡ್ಕರ್ ಜಯಂತಿಗಳನ್ನು ಆಚರಿಸಿ ಸಮಾಜದಲ್ಲಿ ಸಮನ್ವಯತೆ ತರಲು ಪ್ರಯತ್ನಿಸಿದ್ದಾರೆ. ದೇವದಾಸಿಯರ ವಿವಾಹಗಳು, ದೇವದಾಸಿ ವಿಮೋಚನಾ ಸಂಘಟನೆಗಳಿಗೆ ಆರ್ಥಿಕ ನೆರವು ನೀಡಿದ್ದಾರೆ. ಅಲ್ಲದೆ ದೇವದಾಸಿಯರ ಮಕ್ಕಳ ಪುನರ್‌ವಸತಿಗೆ ಅನಾಥಾಶ್ರಮ ಸ್ಥಾಪಿಸಿದ್ದಾರೆ. ಅಂತರ್ಜಾತಿ ವಿವಾಹವನ್ನು ಪ್ರೋತ್ಸಾಹಿಸಿ ಮಠದಲ್ಲಿ ವಿವಾಹಗಳನ್ನು ಮಾಡಿಸಿದ್ದಾರೆ. ಉಚಿತವಾಗಿ ಸಾಮೂಹಿಕ ವಿವಾಹಗಳು, ಸಿದ್ಧರಾಮ ಜಯಂತಿಯಲ್ಲಿ ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಜಾತಿಯ ಕೇರಿಗಳಲ್ಲಿ ಅನ್ನಸಂತರ್ಪಣೆ ಮತ್ತು ಉಪನ್ಯಾಸ ನೀಡಿ ಮನಃಪರಿವರ್ತನೆ ಹಾಗೂ ಕಾಯಕದ ಮಹತ್ವವನ್ನು ತಿಳಿಸಿದ್ದಾರೆ. ಆರೋಗ್ಯ ತಪಾಸಣ ಶಿಬಿರಗಳನ್ನು ನಡೆಸಿ ಗ್ರಾಮೀಣ ಬಡ ಜನರ ಬಾಳಿಗೆ ನೆರವಾಗಿದ್ದಾರೆ. ಗದಗ ಮತ್ತು ಡಂಬಳದಲ್ಲಿ ನಿತ್ಯ ಅನ್ನದಾಸೋಹಕ್ಕೆ ವ್ಯವಸ್ಥೆ ಮಾಡಿದ್ದಾರೆ.

ಶೈಕ್ಷಣಿಕ ಸೇವೆ: ಹತ್ತೊಂಬತ್ತನೆಯ ಗುರುಗಳಾದ ಶ್ರೀ ತೋಂಟದ ಸಿದ್ಧೇಶ್ವರ ಸ್ವಾಮಿಗಳು ೧೮೪೦ರಲ್ಲಿ ಬ್ರಿಟಿಷ್ ಸರ್ಕಾರದಲ್ಲಿ ಶ್ರೀ ಜಗದ್ಗುರು ತೋಂಟದ ಸ್ವಾಮಿ ಸಂಸ್ಕೃತ ವಿದ್ಯಾಭಿವೃದ್ಧಿ ನಿಧಿಯನ್ನು ಸ್ಥಾಪಿಸಿದರು. ಇದರ ಬಡ್ಡಿಯಿಂದ ಬರುವ ಹಣದಿಂದ ಸಂಸ್ಕೃತ ಶಿಕ್ಷಕರಿಗೆ ಸಂಬಳ ನೀಡಲಾಯಿತು. ಇದು ಮಠದ ಮೊದಲ ವಿದ್ಯಾಸಂಸ್ಥೆ. ನಂತರ ೧೯೦೩ ರಲ್ಲಿ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಲಾಗಿದೆ. ೧೯೫೫ ರಲ್ಲಿ ಶ್ರೀ ಗುರುಬಸವ ಸ್ವಾಮಿಗಳು ಕೆ.ಎಲ್.ಇ. ಸೊಸೈಟಿಯಿಂದ ನಡೆಯುವ ಗದಗಿನ ಜಗದ್ಗುರು ತೋಂಟದಾರ್ಯ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯಕ್ಕೆ ದೊಡ್ಡ ಮೊತ್ತದ ದಾನ ನೀಡಿದ್ದಾರೆ. ಹೊಳೆ ಆಲೂರಿನ ಕಲ್ಲೇಶ್ವರ ವಿದ್ಯಾವರ್ಧಕ ಸಂಘಕ್ಕೆ ಜಮೀನನ್ನು ದಾನವಾಗಿ ನೀಡಿದ್ದಾರೆ. ಅಣ್ಣಿಗೇರಿಯಲ್ಲಿ ಅಮರೇಶ್ವರ ಶಿಕ್ಷಣ ಸಂಸ್ಥೆ ಸ್ಥಾಪನೆಗೆ ಸಹಾಯ ನೀಡಿದ ಮಠದಿಂದ ಅಮೃತೇಶ್ವರ ಪ್ರೌಢಶಾಲೆ, ಅಮೃತೇಶ್ವರ ಪದವಿಪೂರ್ವ ಕಾಲೇಜು ಹಾಗೂ ಪದವಿಕಾಲೇಜು ಹಾಗೂ ಬಾಲಕಿಯರ ಪ್ರೌಢಶಾಲೆ ಪ್ರಾರಂಭ ಗೊಳ್ಳಲು ಮಠದ ಎಂಟು ಎಕರೆ ಜಮೀನನ್ನು ದಾನವಾಗಿ ನೀಡಲಾಗಿದೆ. ಈ ರೀತಿ ಶಿರೋಳ, ಡಂಬಳ, ಭದ್ರಾಪುರ, ಮುಂಡರಗಿ, ನೀಲಗುಂದ ಮುಂತಾದಕಡೆ ಶಿಕ್ಷಣ ಸಂಸ್ಥೆಗಳು ಬೆಳೆಯಲು ಹಣ ಮತ್ತು ಭೂಮಿಯನ್ನು ನೀಡಿ ಮಠವು ನೆರವಾಗಿದೆ. ೧೯೭೭ರ ಡಿಸೆಂಬರ್ ಇಪ್ಪತ್ತಮೂರರಂದು ಜಗದ್ಗುರು ಶ್ರೀ ತೋಂಟದಾರ್ಯ ವಿದ್ಯಾಪೀಠವನ್ನು ಸ್ಥಾಪಿಸಿ ಈ ಸಂಸ್ಥೆಯ ಮೂಲಕ ನಾಡಿನಾದ್ಯಂತ ಅನೇಕ ಶಿಕ್ಷಣ ಸಂಸ್ಥೆಗಳನ್ನು ತೆರೆದು ಶಿಕ್ಷಣ ಮತ್ತು ಸ್ವಯಂ ಉದ್ಯೋಗಕ್ಕೆ ನೆರವು ನೀಡಿದೆ.

ಶಿಕ್ಷಣ ಸಂಸ್ಥೆಗಳು:

೧. ಇಂಜಿನಿಯರಿಂಗ್ ಕಾಲೇಜು	: ಗದಗ (೧೯೯೨)
೨. ವೈದ್ಯಕೀಯ ಮಹಾವಿದ್ಯಾಲಯ	: ಹಾವೇರಿ (೧೯೯೨)
೩. ಪಾಲಿಟೆಕ್ನಿಕ್ ಕಾಲೇಜು	: ಗದಗ, ಜೇವರ್ಗಿ
೪. ಕೈಗಾರಿಕಾ ತರಬೇತಿ ಸಂಸ್ಥೆಗಳು	: ಗದಗ, ಡಂಬಳ, ಮುಂಡಲಗಿರಿ, ಮೋರಟಗಿ, ಶಿರೋಳ, ಮಾಲಗತ್ತಿ
೫. ಪದವಿ ಕಾಲೇಜು	: ಗದಗ, ಕಾರಟಗಿ
೬. ಪದವಿಪೂರ್ವಕಾಲೇಜು	: ಡಂಬಳ, ಆಲಮಟ್ಟಿ, ಹಳೆ ಆಲಮಟ್ಟಿ
೭. ಪ್ರೌಢಶಾಲೆಗಳು	: ನರೆಗಲ್ಲು (ಹಾನಗಲ್ಲು ತಾ.) ಚಿಕ್ಕಪಡಸಲಗಿ (ಜಮಖಂಡಿ ತಾ.) ಬಾಚಿಗೊಂಡನಹಳ್ಳಿ (ಹಗರಿಬೊಮ್ಮನಹಳ್ಳಿ ತಾ.) ಗದಗ, ಡಂಬಳ, ಶಿರೋಳ (ನರಗುಂದ ತಾ.) ಇಂಗಳಹಳ್ಳಿ (ಹುಬ್ಬಳ್ಳಿ ತಾ.) ಆಲಮಟ್ಟಿ, ಹಳೇಆಲಮಟ್ಟಿ.
೮.ಜೆ.ಎಲ್.ಸಿಮತ್ತು ಜೆ.ಓ.ಡಿ.ಸಿ.ಕೋರ್ಸ್	: ಆಲಮಟ್ಟಿ, ಕಾರಟಗಿ, ಡಂಬಳ, ಗದಗ, ಜೇವರಗಿ.
೯. ಕಲಾಮಂದಿರಗಳು	: ಹಾವೇರಿ, ಗದಗ.
೧೦. ಪ್ರಾಥಮಿಕ ಶಾಲೆಗಳು	: ಗದಗ, ಗಜೇಂದ್ರಗಡ (ರೋಣ ತಾ.) ಬನ್ನಿಕೊಪ್ಪ, ಜೇವರಗಿ, ಮಂಟೂರು, ಚಿಕ್ಕಪಡಸಲಗಿ.
೧೧. ಸಂಸ್ಕೃತ ಪಾಠಶಾಲೆಗಳು	: ಗದಗ,ಡಂಬಳ,ಮೊರಟಗಿ(ಸಿಂದಗಿ ತಾ) ಶಿರೋಳ, (ನರಗುಂದ ತಾ.)ಹಾವೇರಿ.
೧೨. ಅನಾಥಾಶ್ರಮಗಳು	: ಮೊರಟಗಿ (ಸಿಂದಗಿ ತಾ.) ನೆಲೋಗಿ (ಜೇವರಗಿತಾ.)ಸೊನ್ನ (ಜೇವರಗಿ ತಾ.)
೧೩. ಶಿಶುವಿಹಾರಗಳು	: ಗದಗದಲ್ಲಿ ಎರಡು,ಬನ್ನಿಕೊಪ್ಪ, ಜೇವರಗಿ, ಮಂಟೂರು,ಗಜೇಂದ್ರಗಡ, ಚಿಕ್ಕಪಡಸಲಗಿ.

ಈ ರೀತಿ ಶೈಕ್ಷಣಿಕ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸುತ್ತಿರುವ ಮಠವು ವಿವಿಧೆಡೆ ಹತ್ತು ಉಚಿತ ಪ್ರಸಾದನಿಲಯಗಳನ್ನು ಪ್ರಾರಂಭಿಸಿ ಕಲಿಯುವ ಮಕ್ಕಳಿಗೆ ನೆರವಾಗಿದೆ. ಜೊತೆಗೆ ಸಾವಿರಾರು ಕುಟುಂಬಗಳಿಗೆ ಉದ್ಯೋಗವನ್ನು ನೀಡಿದೆ.

ಸಾಹಿತ್ಯ ಸೇವೆ: ೧೯೭೫ ರಲ್ಲಿ ವೀರಶೈವ ಅಧ್ಯಯನ ಸಂಸ್ಥೆಯನ್ನು ಪ್ರಾರಂಭಿಸಿ ವೀರಶೈವಧರ್ಮದ ಬಗ್ಗೆ ಬೆಳಕು

ಬೆಲ್ಲುವಂತಹ ಅನೇಕ ಪುಸ್ತಕಗಳನ್ನು ಪ್ರಕಟಿಸಿದೆ. ಶ್ರೀ ಡಾ.ತೋಂಟದ ಸಿದ್ಧಲಿಂಗಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ವೀರಶೈವ ಹಸ್ತ ಪ್ರತಿ, ಪ್ರಾಚ್ಯವಸ್ತುಗಳ ಸಂಗ್ರಹ ಮತ್ತು ಸಂರಕ್ಷಣೆ, ವೀರಶೈವ ಪುರಾತನ ಹಾಗೂ ನೂತನಕೃತಿಗಳ ಗ್ರಂಥ ಭಂಡಾರ ಸ್ಥಾಪನೆ, ವೀರಶೈವ ಪುರಾತನ ಸಾಹಿತ್ಯರತ್ನಮಾಲೆ ಪ್ರಕಟಣೆ, ವೀರಶೈವ ಅನುವಾದ ಸಾಹಿತ್ಯ ರತ್ನಮಾಲೆ, ವೀರಶೈವ ಪುಣ್ಯಪುರುಷ ಸಾಹಿತ್ಯರತ್ನಮಾಲೆ, ಅಭಿನಂದನ ಗ್ರಂಥಗಳ ಪ್ರಕಟಣೆ ಹಾಗೂ ಪಿಎಚ್.ಡಿ. ಪ್ರಬಂಧಗಳ ಪ್ರಕಟಣೆ ಈ ರೀತಿ ಒಟ್ಟು ಇನ್ನೂರ ಎಪ್ಪತ್ತೆಂಟು ಮೌಲಿಕ ಕೃತಿಗಳನ್ನು ಪ್ರಕಟಿಸಿ ವೀರಶೈವ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

ಶ್ರೀ ತೋಂಟದ ಡಾ. ಸಿದ್ಧಲಿಂಗ ಸ್ವಾಮಿಗಳು ಮಾನವೀಯ ಮೌಲ್ಯಗಳು ಹಾಗೂ ವಾಸ್ತವದ ಬಗ್ಗೆ ಚಿಂತಿಸಿ, ವೈಚಾರಿಕ ದೃಷ್ಟಿಕೋನದಲ್ಲಿ ಧರ್ಮವನ್ನು ಪ್ರಚಾರಪಡಿಸುತ್ತಿದ್ದಾರೆ. ಸಾಹಿತ್ಯಾಸಕ್ತಿ, ಸಾಮಾಜಿಕ ಕಳಕಳಿಯೊಂದಿಗೆ ಸಮಾಜವನ್ನು ಬಸವಾದಿ ಶರಣರ ಕಲ್ಪನೆಗೆ ಅನುಗುಣವಾಗಿ ನಿರ್ಮಿಸುವ ಮಣಿಹದಲ್ಲಿ ತೊಡಗಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಜಗದ್ಗುರು ತೋಂಟದ ಡಾ. ಸಿದ್ಧಲಿಂಗ ಸ್ವಾಮಿಗಳು, ಶ್ರೀ ತೋಂಟದಾರ್ಯ ಸಂಸ್ಥಾನ ಮಠ, ಗದಗ-ಡಂಬಳ, ಗದಗ- ೫೮೨ ೧೦೧

ಆಧಾರ: 'ಎಡೆಯೂರು ತೋಂಟದ ಸಿದ್ಧಲಿಂಗ ಯತಿ ' : ಶ್ರೀ ಓ.ಎಸ್. ಲಿಂಗಣ್ಣಯ್ಯ
'ಉದ್ದಾನೇಶ್ವರ ಚರಿತೆ ' : ಶ್ರೀ ಎರೆಸೀಮೆ ಚೆನ್ನಪ್ಪ.
'ಕಲ್ಯಾಣದ ಹಾದಿ' ಅಭಿನಂದನಾ ಗ್ರಂಥ : ಸಂಪಾದಕರು ಡಾ. ಸಿದ್ಧಲಿಂಗ ಪಟ್ಟಣ ಶೆಟ್ಟಿ.
'ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ ' : ಡಾ. ಕೆ.ಜಿ. ವೆಂಕಟೇಶ ಜೋಯಿಸ್.

ಜಗದ್ಗುರು ಶಿವಾನಂದ ಬೃಹನ್ಮಠ: ಗದಗ ನಗರದ ಹೊರಭಾಗದ ಕೆರೆಯ ದಡದಲ್ಲಿ ಸ್ಥಾಪನೆಯಾಗಿರುವ ಶ್ರೀ ಜಗದ್ಗುರು ಶಿವಾನಂದ ಬೃಹನ್ಮಠವು ಗದಗಿನ ಮತ್ತೊಂದು ಧಾರ್ಮಿಕ ಕೇಂದ್ರವಾಗಿ ಬೆಳೆದಿದೆ. ಜಾತ್ಯಾತೀತ ಭಾವನೆಯಲ್ಲಿ ಎಲ್ಲರನ್ನು ಒಟ್ಟೊಟ್ಟಿಗೆ ಕರೆದೊಯ್ಯುತ್ತಿರುವ ಈ ಮಠವು ಶ್ರೀ ಶಿವಾನಂದ ಸ್ವಾಮಿಗಳೆಂಬ ಮಹಾ ಆಧ್ಯಾತ್ಮಯೋಗಿಯಿಂದ ಪ್ರಾರಂಭವಾಗಿದ್ದರಿಂದ ಶ್ರೀಜಗದ್ಗುರು ಶಿವಾನಂದ ಬೃಹನ್ಮಠ ಎಂಬ ಹೆಸರು ಬರಲು ಕಾರಣವಾಗಿದೆ.ಅಂದು ಗದುಗಿನ ದಕ್ಷಿಣದ ಹೊರಭಾಗದಲ್ಲಿ ಸ್ಥಾಪನೆಯಗಿದ್ದ ಈ ಮಠ ಇಂದು ನಗರ ಬೆಳೆದಂತೆ ಮಠವು ಮಧ್ಯಭಾಗಕ್ಕೆ ಸೇರಿದೆ.

ಮಠಸ್ಥಾಪನೆ: ಗದಗ ಜಿಲ್ಲೆಯ ವನಿಹಾಳದಲ್ಲಿ ಶ್ರೀ ಶಿವಾನಂದ ಸ್ವಾಮಿಗಳು ಅವತರಿಸಿ ಪರಂಪರಾಗತವಾಗಿ ಬಂದಿದ್ದ ಗೌಡಿಕೆಯನ್ನು ಸಮರ್ಥವಾಗಿ ನಿಭಾಯಿಸಿ ಆಧ್ಯಾತ್ಮವನ್ನು ಮೈಗೂಡಿಸಿಕೊಂಡು, ಸಂಸಾರವನ್ನು ತ್ಯಜಿಸಿ ಬನಹಟ್ಟಿಯ ಶ್ರೀರುದ್ರದೇವ ಶಿವಾಚಾರ್ಯ ಸ್ವಾಮಿಗಳ ಸಾನಿಧ್ಯದಲ್ಲಿ ಸೇವೆ ಸಲ್ಲಿಸಿ ಆಧ್ಯಾತ್ಮ ಸಾಧನೆ ಮಾಡಿಕೊಂಡು ಲೌಕಿಕದಿಂದ ಪಾರಮಾರ್ಥದ ಅರ್ಥವನ್ನು ಕಲಿತು ಗುರುಕಾರುಣ್ಯಕ್ಕೆ ಪಾತ್ರರಾದರು. ನಂತರ ಲೋಕಸಂಚಾರ ಕೈಗೊಂಡು ನೆಲೆನಿಂತ ಕಡೆ ಮಠ ಸ್ಥಾಪಿಸಿ ಗದಗ ನಗರಕ್ಕೆ ಆಗಮಿಸಿದರು.

ಗದಗಿನ ಈ ಪ್ರಶಾಂತ ಸ್ಥಳದಲ್ಲಿ ನೆಲೆನಿಂತ ಗುರುಗಳು ಆಧ್ಯಾತ್ಮವನ್ನು ಬೋಧಿಸಿ ಭಕ್ತರಿಗೆ ಸಂಸ್ಕಾರ ನೀಡಿದರು. ಸಕಲರನ್ನು ಸಮಾನವಾಗಿ ಹಾರೈಸಿ ಉದ್ಧರಿಸಿದರು. ಗುರುಗಳ ವಾತ್ಸಲ್ಯದಿಂದ ಬೆಳೆದ ಭಕ್ತರು ಮಠವನ್ನು ಬೆಳೆಸಿದರು. ಮಠವು ದಿನದಿಂದ ದಿನಕ್ಕೆ ಬೆಳೆದು ಹೆಚ್ಚು ಹೆಸರು ಪಡೆಯಿತು. ಶ್ರೀ ಶಿವಾನಂದ ಸ್ವಾಮಿಗಳು ಕಾಯಕ ಶೀಲರಾಗಿ ವೀರಶೈವ ತತ್ತ್ವವನ್ನು ಪ್ರಚಾರಗೊಳಿಸಿ ಲಕ್ಷಾಂತರ ಭಕ್ತರನ್ನು ಗಳಿಸಿಕೊಂಡರು. ಇವರ ನಂತರ ಶ್ರೀ ಸದಾಶಿವಾನಂದ ಸ್ವಾಮಿಗಳನ್ನು ಅಧಿಕಾರಕ್ಕೆ ತಂದರು. ಕಾಶಿಯಲ್ಲಿ ವಿದ್ಯಾಭ್ಯಾಸಮಾಡಿ ವಿದ್ವತ್ ಪದವಿಯನ್ನು ಗಳಿಸಿಕೊಂಡು ಬಂದು ಶ್ರೀ ಶಿವಾನಂದ ಜಗದ್ಗುರುಗಳ ಕೃಪಾಕಟಾಕ್ಷದಿಂದ ಬೆಳೆದು ಧರ್ಮ ಬೋಧನಾ ಸಾಮರ್ಥ್ಯವನ್ನು ಪಡೆದರು.

ಪರಂಪರೆ:
೧. ಜಗದ್ಗುರು ಶ್ರೀ ಶಿವಾನಂದಸ್ವಾಮಿಗಳು
೨. ಜಗದ್ಗುರು ಶ್ರೀ ಸದಾಶಿವಾನಂದಸ್ವಾಮಿಗಳು
೩. ಜಗದ್ಗುರು ಶ್ರೀ ನಂದೀಶ್ವರಸ್ವಾಮಿಗಳು
೪. ಜಗದ್ಗುರು ಶ್ರೀ ಎರಡನೆಯ ಶಿವಾನಂದಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಹಿರಿಯ ಗುರುಗಳಾದ ಶ್ರೀ ಶಿವಾನಂದ ಜಗದ್ಗುರುಗಳು ಮಠವನ್ನು ತಮ್ಮ ಕರಕಮಲ ಸಂಜಾತರಾದ ಶ್ರೀ ಸದಾಶಿವಾನಂದ ಸ್ವಾಮಿಗಳಿಗೆ ನೀಡಿ ೧೯೩೮ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಹಿರಿಯ ಗುರುಗಳ ಕೃಪಾಶೀರ್ವಾದದಿಂದ ಅಧಿಕಾರವನ್ನು ವಹಿಸಿಕೊಂಡ ಶ್ರೀ ಸದಾಶಿವಾನಂದ ಸ್ವಾಮಿಗಳು ವೇದಾಂತ ಕೇಸರಿಯಾಗಿ, ಕಾಯಕ ಯೋಗಿಯಾಗಿ ನೇಗಿಲು ಹಿಡಿದು ಕಾಯಕ ಮಾಡುತ್ತಿದ್ದರು. ಮಠದ ಸುತ್ತ ಜಾತಿಯ ಸೋಂಕು ತಗಲದಂತೆ ನೋಡಿಕೊಂಡು ಮೇಲು ಕೀಳೆಂಬ ಬೇಧವನ್ನು ತೊರೆದು ಮಠವನ್ನು ಬೆಳೆಸಿ ೧೯೭೦ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ತರುವಾಯ ೧೯೮೨ರ ಫೆಬ್ರವರಿ ಎಂಟರಂದು ಶ್ರೀ ನಂದೀಶ್ವರ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡರು. ಶ್ರೀ ನಂದೀಶ್ವರ ಶಿವಾಚಾರ್ಯರು ವಿದ್ವತ್ ಸಂಪನ್ನರಾಗಿ ಪುರಾಣ ಪ್ರವಚನವನ್ನು ಸಮರ್ಥವಾಗಿ ನೀಡಬಲ್ಲಂತ ಮಹಾ ಮೇಧಾವಿಗಳಾಗಿ ರೂಪುಗೊಂಡಿದ್ದರು. ಕ್ರಿಯಾಶೀಲ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡಿದ್ದ ಶ್ರೀ ನಂದೀಶ್ವರ ಸ್ವಾಮಿಗಳು ಸಾಮಾಜಿಕ ಕಳಕಳಿಯುಳ್ಳವರಾಗಿದ್ದರು.

ಇವರ ನಂತರ ೨೦೦೦ದ ಮಾರ್ಚ್ ಹತ್ತೊಂಬತ್ತರಂದು ರಾಣೆಬೆನ್ನೂರಿನ ಶ್ರೀಪುಟ್ಟಪ್ಪ ಮತ್ತು ಶ್ರೀಮತಿ ಬಸಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಶಿವಾನಂದ ಸ್ವಾಮಿಗಳು ಗದಗ ನಗರದಲ್ಲಿಯೇ ಪ್ರಾಥಮಿಕ ಹಾಗೂ ಪದವಿ ಶಿಕ್ಷಣ ಪಡೆದು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಮತ್ತು ಸಂಸ್ಕೃತ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪಡೆದುಕೊಂಡು, ಉತ್ತರಾಧಿಕಾರಿಗಳಾಗಿ ನೇಮಕಗೊಂಡಿದ್ದರು. ಕಲಿತಿದ್ದನ್ನು ನಾಲ್ಕು ಜನರಿಗೆ ತಿಳಿಸಬೇಕೆಂಬ ಮಹದಾಸೆಯಿಂದ ಸಿರಿಗೆರೆ ಬೃಹನ್ಮಠದ ವಿದ್ಯಾಸಂಸ್ಥೆಯಲ್ಲಿ ಪ್ರೌಢಶಾಲೆಯ ಶಿಕ್ಷಕರಾಗಿ ಕಾಯಕ ಮಾಡುತ್ತಿದ್ದರು. ಶಿಕ್ಷಕವೃತ್ತಿಯಿಂದ ಸ್ವಯಂ ನಿವೃತ್ತಿ ಪಡೆದು ಪಟ್ಟಾಧಿಕಾರ ವನ್ನು ವಹಿಸಿಕೊಂಡಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಸದಾಶಿವಾನಂದ ಸ್ವಾಮಿಗಳ ಕಾಲದಲ್ಲಿಯೇ ಮಠವು ಅಭಿವೃದ್ಧಿಯತ್ತ ಸಾಗಿತ್ತು. ನಂತರ ಬಂದ ಶ್ರೀ ನಂದೀಶ್ವರ ಸ್ವಾಮಿಗಳು ಮೂಲ ಮಠದ ಸುತ್ತ ಕಟ್ಟಡಗಳನ್ನು ನಿರ್ಮಿಸಿ ಮಠದ ಸಮುಚ್ಚಯವನ್ನು ವೈಭವಗೊಳಿಸಿದರು. ಇವರ ಕಾಲದಲ್ಲಿ ಕಲ್ಯಾಣ ಮಂಟಪ, ಆಯುರ್ವೇದ ಕಾಲೇಜಿನ ಕಟ್ಟಡ ಹಾಗೂ ಸಂಸ್ಕೃತ ಪಾಠಶಾಲೆ ಹಾಗೂ ಇತರೆ ಶಿಕ್ಷಣ ಸಂಸ್ಥೆಗಳಿಗೆ ಕಟ್ಟಡಗಳನ್ನು ನಿರ್ಮಿಸಿದ್ದಾರೆ. ಶ್ರೀ ನಂದೀಶ್ವರ ಸ್ವಾಮಿಗಳು ತಮ್ಮ ಅಧಿಕಾರದ ಅವಧಿಯಲ್ಲಿ ಮಠವನ್ನು ಸರ್ವ ವಿಧದಲ್ಲಿ ಶ್ರೀಮಂತಗೊಳಿಸಿದ್ದಾರೆ.

ಸಾಹಿತ್ಯ-ಧಾರ್ಮಿಕ ಸೇವೆ: ಮಠದಲ್ಲಿ ನಿತ್ಯ ಪ್ರವಚನ, ಶ್ರಾವಣಮಾಸದಲ್ಲಿ ವಿಶೇಷ ಪ್ರವಚನ ನಡೆಸುವುದಲ್ಲದೆ ಹಳ್ಳಿ ಹಳ್ಳಿಗಳಲ್ಲಿ ಧರ್ಮಜಾಗೃತಿಗಾಗಿ ಪ್ರವಾಸಮಾಡುವುದು, ಲಿಂಗದೀಕ್ಷೆ, ವೀರಶೈವ ಧರ್ಮವನ್ನು ಒಪ್ಪಿಬಂದಂತಹ ಅನ್ಯ ಧರ್ಮೀಯ ರಿಗೆ ಲಿಂಗಧಾರಣೆ ಮಾಡಲಾಗುತ್ತದೆ. ನಿಜಗುಣ ಹಾಗೂ ಶಂಕರಾಚಾರ್ಯರ ಗ್ರಂಥ ಬೋಧನೆ, ಗೀತಾಪಠಣ, ಶರಣ ಸಾಹಿತ್ಯ ಪ್ರಸಾರ.... ಈ ರೀತಿ ಧರ್ಮಬೋಧನೆಯ ಜೊತೆಗೆ ಸಂಬೋಧ ಚಂದ್ರಿಕೆ ಎಂಬ ಪುಸ್ತಕವನ್ನು ಪ್ರಕಟಿಸಲಾಗಿದೆ. ಶ್ರೀ ಶಿವಾನಂದ ಜಗದ್ಗುರುಗಳು ಅನುಷ್ಠಾನಗೊಂಡು ನಾಡಿನಾದ್ಯಂತ ಸ್ಥಾಪಿಸಿದ ನಲವತ್ತನಾಲ್ಕು ಶಾಖಾ ಮಠಗಳು ಅಸ್ತಿತ್ವದಲ್ಲಿವೆ. ಇವುಗಳ ಅಭಿವೃದ್ಧಿಗೆ ನೆರವು ನೀಡಿ ಧಾರ್ಮಿಕ ಚಟುವಟಿಕೆಗಳು ನಡೆಯುವಂತೆ ಮಾಡಲಾಗಿದೆ.

ಶೈಕ್ಷಣಿಕ ಸಾಧನೆ: ಸಂಸ್ಕೃತ ಪಾಠಶಾಲೆ, ಪ್ರೌಢಶಾಲೆ ಹಾಗೂ ಪ್ರಾಥಮಿಕ ಶಾಲೆಗಳು ಸೇರಿದಂತೆ ಇತ್ತೀಚೆಗೆ ಸ್ಥಾಪಿಸಲಾದ ಆಯುರ್ವೇದ ಕಾಲೇಜು ಮಠದ ವತಿಯಿಂದ ನಡೆಯುತ್ತಿವೆ. ಈ ಶಿಕ್ಷಣ ಸಂಸ್ಥೆಗಳಿಗೆ ಹೊಂದಿಕೊಂಡಂತೆ ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಲಾಗಿದೆ. ಇಲ್ಲಿ ಜಾತಿ ಬೇಧ, ಆರ್ಥಿಕ ಸ್ಥಿತಿಯ ಮೇಲು ಕೀಳು ಎಂಬ ಬೇಧಭಾವವಿಲ್ಲದೆ ಅಪೇಕ್ಷಿಸಿ ಬಂದ ಎಲ್ಲಾ ವಿದ್ಯಾರ್ಥಿಗಳಿಗೂ ಅವಕಾಶ ಕಲ್ಪಿಸಿಕೊಡಲಾಗಿದೆ.

ವಿಳಾಸ: ಜಗದ್ಗುರು ಶ್ರೀ ಎರಡನೆಯ ಶಿವಾನಂದ ಸ್ವಾಮಿಗಳು, ಶ್ರೀ ಜಗದ್ಗುರು ಶಿವಾನಂದ ಬೃಹನ್ಮಠ, ಗದಗ-೫೮೨೧೦೧

ವೀರೇಶಾಶ್ರಮ: ಗದಗ ನಗರದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ವೀರೇಶಾಶ್ರಮವು ನಾಡಿನ ಹಾಗೂ ನಾಡಿನಾಚೆಗೆ ತನ್ನ ಪ್ರಭಾವವನ್ನು ಬೀರಿ ಕರ್ನಾಟಕದ ಸಾಂಸ್ಕೃತಿಕ ಪರಂಪರೆಗೆ ತನ್ನದೇ ಆದ ಕೊಡುಗೆಯನ್ನು ನೀಡಿದೆ.

ಹಾವೇರಿ ಜಿಲ್ಲೆಯ ಹಾನಗಲ್ಲು ತಾಲ್ಲೂಕಿನ ಕಾಡುಶೆಟ್ಟಿ ಹಳ್ಳಿಯಲ್ಲಿ ಜನಿಸಿದ ಶ್ರೀ ಪಂಚಾಕ್ಷರ ಗವಾಯಿಗಳು ಅಂಧರಾಗಿ ಜನಿಸಿ ತಮ್ಮ ತಂದೆ ತಾಯಿಗೆ ಹೊರೆಯಾಗದಂತೆ ಬೆಳೆದು ಹುಟ್ಟಿದ ನಾಡಿನ ಋಣವನ್ನು ತೀರಿಸಿದ ಮಹಾನ್ ಸಾಧಕರು. ಇವರಿಂದ ಪ್ರಾರಂಭಗೊಂಡ ಶ್ರೀ ವೀರೇಶಾಶ್ರಮವು ಇಂದು ಸಾವಿರಾರು ಅಂಧ ಮಕ್ಕಳಿಗೆ ದಾರಿತೋರಿಸುವ ಕೇಂದ್ರವಾಗಿ ಬೆಳೆದಿದೆ. ಇಂತಹ ಒಂದು ಮಹಾನ್ ಕ್ಷೇತ್ರವನ್ನು ವೀರಶೈವ ಮಠಗಳ ಪರಂಪರೆಗೆ ಸೇರಿಸಿದರೆ ತಪ್ಪಾಗಲಾರದು.

ಹಾನಗಲ್ಲು ಶ್ರೀ ಕುಮಾರ ಸ್ವಾಮಿಗಳು ಕಾಡಶೆಟ್ಟಿ ಹಳ್ಳಿಯ ಜಾತ್ರೆಗೆಂದು ಹೋದವರು ಇಲ್ಲಿನ ಚರಂತಿಮಠದ ಶ್ರೀ ಗುರುಪಾದಯ್ಯ ಮತ್ತು ಶ್ರೀಮತಿ ನೀಲಮ್ಮನವರ ಮಕ್ಕಳಾದ ಶ್ರೀ ಗುರುಬಸವಯ್ಯ ಮತ್ತು ಗದ್ದಿಗಯ್ಯನವರನ್ನು ನೋಡಿ ಈ ಅಂಧ ಮಕ್ಕಳನ್ನು ತಮ್ಮವಶಕ್ಕೆ ಪಡೆದು ನುರಿತ ಸಂಗೀತಗಾರರಿಂದ ಸಂಗೀತವನ್ನು ಕಲಿಸಿ ಮಹಾನ್ ಸಂಗೀತಗಾರರನ್ನಾಗಿ ರೂಪಿಸಿದರು. ಸಂಗೀತ ಕ್ಷೇತ್ರದಲ್ಲಿ ಅದ್ವಿತಿಯ ಸಾಧನೆಯನ್ನು ಸಾಧಿಸಿದ ಗದ್ದಿಗಯ್ಯನವರಿಗೆ ಪಂಚಾಕ್ಷರ ಗವಾಯಿ ಎಂದು ಶ್ರೀ ಹಾನಗಲ್ಲು ಕುಮಾರ ಸ್ವಾಮಿಗಳೇ ಮರುನಾಮಕರಣ ಮಾಡಿ ಸಂಗೀತಕ್ಷೇತ್ರಕ್ಕೆ ಒಪ್ಪಿಸಿದರು. ನಾಡಿನ ನಾನಾಭಾಗಗಳಲ್ಲಿ ಸಂಗೀತ ಸೇವೆಯನ್ನು ಮಾಡಿ ಹೆಸರು ಗಳಿಸಿ ಅಪಾರ ಭಕ್ತವೃಂದವನ್ನು ಗೆದ್ದರು. ನಂತರ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಕಂಚಕಲ್ಲು ಬಿದರೆಯ ಶ್ರೀಮದ್ ಘನಲಿಂಗ ಚಕ್ರವರ್ತಿ ಪ್ರಭುಕುಮಾರ ಸ್ವಾಮಿಗಳಿಂದ ಶಿವದೀಕ್ಷೆಯನ್ನು ಪಡೆದರು. ಅಂದಿನಿಂದ ಪಂಚಾಕ್ಷರ ಗವಾಯಿಗಳು ಶಿವಯೋಗಿಗಳಾಗಿ ಶಿವಯೋಗ ಮಂದಿರದಲ್ಲಿ ನೆಲೆಸಿದರು. ನಂತರ ಲೋಕಸಂಚಾರ ಕೈಗೊಂಡು ರೋಣ ತಾಲ್ಲೂಕಿನ ನಿಡುಗುಂದಿ ಕೊಪ್ಪದಲ್ಲಿ ಪ್ರಥಮವಾಗಿ ೧೯೧೪ ರಲ್ಲಿ ಸಂಗೀತ ಪಾಠಶಾಲೆಯನ್ನು ಪ್ರಾರಂಭಿಸಿದರು. ಈ ಮಧ್ಯೆ ಹಾನಗಲ್ಲು ತಾಲ್ಲೂಕಿನ ಹೊಸಪೇಟೆ ಸಮೀಪದ ವೆಂಕಟಾಪುರದ ಮಠದ ಶ್ರೀ ರೇವಣ್ಣಯ್ಯ ಮತ್ತು ಶ್ರೀಮತಿ ಸಿದ್ದಮ್ಮನವರ ಪುತ್ರರಾಗಿ ೧೯೧೪ ರ ಮಾರ್ಚ್ ಮೂರರಂದು ಜನಿಸಿದ ಪುಟ್ಟರಾಜ ಗವಾಯಿಗಳು, ಶಿವಯೋಗಿ ಪಂಚಾಕ್ಷರಿ ಗವಾಯಿಗಳ ಜೊತೆ ಸೇರಿಕೊಂಡರು.

ಗದುಗಿನ ವೈದಿಕರಾದ ಹಿಡ್ಕಿ ಮಠದ ಶ್ರೀ ಚನ್ನವೀರಶಾಸ್ತ್ರಿಗಳ ನೆರವಿನಿಂದ ಗದಗದಲ್ಲಿ ನೆಲೆಗೊಳ್ಳಲು ತೀರ್ಮಾನಿಸಿದರು. ಈ ಸಂದರ್ಭದಲ್ಲಿ ಬಸರೀಗಿಡದ ಶ್ರೀ ವೀರಪ್ಪನವರು, ಗವಾಯಿಗಳ ನೆರವಿಗೆ ಬಂದು ಗದುಗಿನಲ್ಲಿ ಉಳಿಯಲು ಪೂರ್ಣ ಆಶ್ರಯ ಕೊಡುತ್ತಾರೆ. ಆ ನೆರವಿನಿಂದ ಗದಗಿನಲ್ಲಿ ವೀರೇಶಾಶ್ರಮವನ್ನು ಸ್ಥಾಪಿಸಿದರು. ತಾವೇ ಸ್ಥಾಪಿಸಿದ ವೀರೇಶಾಶ್ರಮದ ಮೂಲಕ ಸಹಸ್ರಾರು ಸಂಗೀತಕಾರರನ್ನು ಸೃಷ್ಟಿಸಿ ಬೆಳೆಸಿದರು. ಶ್ರೀ ಪಂಚಾಕ್ಷರ ಗವಾಯಿಗಳು ಗಾಯನದ ಜೊತೆಗೆ ಸಂಗೀತ ಪರಿಕರಗಳಾದ ಹಾರ್ಮೋನಿಯಂ, ತಬಲ, ವೀಣೆ, ಪಿಟೀಲು, ಸಿತಾರ್ ಮೊದಲಾದ ಅನೇಕ ವಾದ್ಯಗಳನ್ನು ನುಡಿಸುವಲ್ಲಿಯೂ ಪರಿಣಿತರಾಗಿ ಜಂಗಮ ಸೇವೆಯಲ್ಲಿ ನಿರತರಾಗಿ ೧೯೪೪ ರಲ್ಲಿ ಲಿಂಗೈಕ್ಯರಾದರು.

ಶ್ರೀ ಪಂಚಾಕ್ಷರ ಗವಾಯಿಗಳು ತಮ್ಮ ಆಪ್ತ ಶಿಷ್ಯ ಶ್ರೀ ಪುಟ್ಟರಾಜ ಗವಾಯಿಗಳಿಗೆ ವೀರೇಶಾಶ್ರಮದ ಪೂರ್ಣ ಜವಾಬ್ದಾರಿಯನ್ನು ವಹಿಸಿದ ಮೇಲೆ ವೀರೇಶಾಶ್ರಮದ ಎರಡನೆಯ ಅಭಿವೃದ್ಧಿಯ ಹಂತ ಪ್ರಾರಂಭವಾಯಿತು. ಕನ್ನಡ, ಸಂಸ್ಕೃತ ಹಾಗೂ ಹಿಂದಿ ಭಾಷೆಗಳಲ್ಲಿ ಅನೇಕ ಕೃತಿಗಳನ್ನು ರಚಿಸಿ ಕರ್ನಾಟಕ ಮತ್ತು ಹಿಂದುಸ್ಥಾನಿ ಸಂಗೀತದಲ್ಲಿ ಅದ್ವಿತೀಯ ಪಾಂಡಿತ್ಯ ಪಡೆದ ಶ್ರೀ ಪುಟ್ಟರಾಜ ಗವಾಯಿಗಳು ಉಭಯ ಗಾಯನ ವಿಶಾರದರಾಗಿದ್ದಾರೆ. ವೀರೇಶಾಶ್ರಮದಿಂದ ಹೊರಡುವ 'ಪಂಚಾಕ್ಷರ ವಾಣಿ'ಯ ಸಂಪಾದಕರಾಗಿ, ಅನೇಕ ನಾಟಕಗಳನ್ನು ರಚಿಸಿ, ನಾಟಕ ಕಂಪನಿಯನ್ನು ಸ್ಥಾಪಿಸಿ ಒಂದು ದೊಡ್ಡ ಸಾಧನೆಯನ್ನೇ ಮಾಡಿದ್ದಾರೆ.

ಶ್ರೀ ಪುಟ್ಟರಾಜ ಗವಾಯಿಗಳು ನಾಡಿನ ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ ಹಾಗೂ ಕಲಾ ರಂಗಕ್ಕೆ ಸಲ್ಲಿಸಿದ ಸೇವೆಯನ್ನು ಸ್ಮರಿಸಿ ಕರ್ನಾಟಕ ವಿಶ್ವವಿದ್ಯಾನಿಲಯವು ೧೯೭೫ ರ ಮೇ ಹದಿನಾರರಂದು ಗೌರವ ಡಾಕ್ಟರೇಟ್ ಪದವಿಯನ್ನು ನೀಡಿದೆ. ವೀರೇಶಾಶ್ರಮವನ್ನು ಸರ್ವರೀತಿಯಲ್ಲಿ ಅಭಿವೃದ್ಧಿ ಪಡಿಸಿರುವ ಗವಾಯಿಗಳು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆಯುವಂತಹ ಕಾರ್ಯವನ್ನು ಮಾಡಿದ್ದಾರೆ.

ವಿಳಾಸ: ಶ್ರೀ ಶಿವಯೋಗಿ ಪುಟ್ಟರಾಜ ಗವಾಯಿಗಳು, ಶ್ರೀ ವೀರೇಶಾಶ್ರಮ, ಗದಗ-೫೮೨ ೧೦೧

ಆಧಾರ: ವಿ.ಬಿ.ಹಿರೇಮಠ ಅವರ 'ಯೋಗಿತ್ರಯರು'

ನೀಲಕಂಠೇಶ್ವರ ಮಠ: ಗದಗದ ಬೇಟಗೇರಿ ಬಡಾವಣೆಯಲ್ಲಿ ಶ್ರೀ ನೀಲಕಂಠೇಶ್ವರ ಮಠವು ಸ್ಥಾಪನೆಯಾಗಿದೆ. ಶ್ರೀ ನೀಲಕಂಠೇಶ್ವರ ಪಟ್ಟಾರಾಧ್ಯ ಸ್ವಾಮಿಗಳು ಹದಿನೆಂಟನೆಯ ಶತಮಾನದಲ್ಲಿ ಮಠವನ್ನು ಸ್ಥಾಪನೆ ಮಾಡಿದ ಕಾರಣಕ್ಕೆ ಈ ಹೆಸರು ಬಂದಿದೆ. ಮೂಲ ಮಠವು ಶ್ರೀಶೈಲದಲ್ಲಿದ್ದು, ಅಲ್ಲಿ ನಡೆದ ಅಹಿತಕರ ಘಟನೆಗೆ ಬೇಸತ್ತು ಇಲ್ಲಿಗೆ ಸ್ಥಳಾಂತರ ಮಾಡಲಾಗಿದೆ ಎಂದು ಹೇಳಲಾಗುತ್ತಿದೆ. ಶ್ರೀಶೈಲದಿಂದ ಸ್ಥಳಾಂತರಗೊಂಡ ಮೇಲೆ ಇಲ್ಲಿನ ಕುರುಹಿನಶೆಟ್ಟರ ಸಮಾಜದ ಅಭಿವೃದ್ಧಿಗಾಗಿ ಶ್ರಮಿಸಿದ ಈ ಮಠವು ಸಮಸ್ತ ಭಕ್ತರ ಶ್ರೇಯೋಭಿವೃದ್ಧಿಗೆ ಕಾರಣವಾಗಿದೆ.

ಪರಂಪರೆ:

೧. ಶ್ರೀ ನೀಲಕಂಠ ಪಟ್ಟಾರಾಧ್ಯ ಸ್ವಾಮಿಗಳು
೨. ಶ್ರೀ ಇಮ್ಮಡಿ ನೀಲಕಂಠ ಪಟ್ಟಾರಾಧ್ಯ ಸ್ವಾಮಿಗಳು
೩. ಶ್ರೀ ಮುಮ್ಮಡಿ ನೀಲಕಂಠ ಪಟ್ಟಾರಾಧ್ಯ ಸ್ವಾಮಿಗಳು
೪. ಶ್ರೀ ನಾಲ್ಮಡಿ ನೀಲಕಂಠ ಪಟ್ಟಾರಾಧ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಶ್ರೀಶೈಲದಲ್ಲಿದ್ದ ಮೂಲ ಮಠವನ್ನು ಇಲ್ಲಿಗೆ ಸ್ಥಳಾಂತರಿಸಿದ ಶ್ರೀ ನೀಲ ಕಂಠ ಪಟ್ಟಾರಾಧ್ಯ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ ೧೮೪೯ ರಲ್ಲಿ ಲಿಂಗೈಕ್ಯರಾಗಿರುತ್ತಾರೆ. ಇವರ ನಂತರ ಕೆಲವು ವರ್ಷಗಳ ಕಾಲಮಠವು ಮಠಾಧೀಶರಿಲ್ಲದೆ ಖಾಲಿ ಉಳಿಯುತ್ತದೆ. ೧೮೮೬ ರಲ್ಲಿ ಇಮ್ಮಡಿ ಶ್ರೀ ನೀಲಕಂಠ ಪಟ್ಟಾರಾಧ್ಯ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡರು. ಇವರ ಕಾಲದಲ್ಲಿ ಕುರುಹಿನಶೆಟ್ಟರ ಸಮಾಜದ ಅಭಿವೃದ್ಧಿಗಾಗಿ ಶ್ರಮಿಸಿ ವೀರಶೈವ ತತ್ತ್ವವನ್ನು ಹೆಚ್ಚು ಪ್ರಚಾರಕ್ಕೆ ತಂದು ೧೯೩೨ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ತರುವಾಯ ೧೯೬೦ ರಲ್ಲಿ ಮುಮ್ಮಡಿ ಶ್ರೀ ನೀಲಕಂಠ ಪಟ್ಟಾರಾಧ್ಯ ಸ್ವಾಮಿಗಳು ಅಧಿಕಾರಕ್ಕೆ ಬರುತ್ತಾರೆ. ಇವರು ತಮ್ಮ ಕಾಲದಲ್ಲಿ ಕಟ್ಟಡಗಳ ಅಭಿವೃದ್ಧಿ ಹಾಗೂ ಮಠಕ್ಕೆ ಆದಾಯ ಬರುವಂತಹ ಶಾಶ್ವತ ಕೆಲಸವನ್ನು ನಡೆಸಿ ೧೯೫೫ ರಲ್ಲಿ ಲಿಂಗೈಕ್ಯರಾದರು.

ಶ್ರೀ ಪ್ರಭುಲಿಂಗಸ್ವಾಮಿ ಮತ್ತು ಶ್ರೀಮತಿ ಜಾನಕಿ ದೇವಿಯವರ ಪುತ್ರರಾಗಿ ೧೯೭೧ ರಲ್ಲಿ ಜನಿಸಿದ ಶ್ರೀ ನಾಲ್ಮಡಿ ನೀಲಕಂಠ ಪಟ್ಟಾರಾಧ್ಯ ಸ್ವಾಮಿಗಳು ಗದಗ ಮತ್ತು ಧಾರವಾಡದಲ್ಲಿ ಪದವಿಯವರೆಗೆ ಶಿಕ್ಷಣವನ್ನು ಪಡೆದರು. ಶಕ್ತಿ ವಿಶಿಷ್ಟಾದ್ವೈತ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದು ೧೯೭೮ ರಂದು ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಕರ್ನಾಟಕದಾದ್ಯಂತ ಶಿಷ್ಯವರ್ಗವನ್ನು ಹೊಂದಿರುವ ಈ ಮಠ ಮಹಾರಾಷ್ಟ್ರ, ಆಂಧ್ರಪ್ರದೇಶ, ಗುಜರಾತ್ ರಾಜ್ಯಗಳಲ್ಲಿಯೂ ಶಿಷ್ಯವರ್ಗವನ್ನು ಹೊಂದಿದೆ. ಕುರುಹಿನಶೆಟ್ಟಿ ಸಮಾಜದಲ್ಲಿ ಸಸ್ಯಹಾರಿ ಮತ್ತು ಮಾಂಸಾಹಾರಿ ಗಳೆಂಬ ಎರಡು ವರ್ಗ ಇದ್ದು ಮಾಂಸಹಾರಿಗಳನ್ನು ಪರಿವರ್ತಿಸಿ ಲಿಂಗದೀಕ್ಷೆಯನ್ನು ಕೊಡುವ ನಿಟ್ಟಿನಲ್ಲಿ ಮಠವು ಪ್ರಯತ್ನ ನಡೆಸಿದೆ. ಮಠದ ಆವರಣದಲ್ಲಿ ಮೂರು ಗದ್ದುಗೆಗಳು ಇದ್ದು ಈ ಗದ್ದುಗೆಗಳಿಗೆ ನಿತ್ಯ ಎರಡು ವೇಳೆ ಪೂಜೆ ನಡೆಸಲಾಗು ತ್ತಿದೆ. ಶ್ರಾವಣ ಮಾಸದಲ್ಲಿ ಪ್ರವಚನ ಹಾಗೂ ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತದೆ. ಶ್ರೀ ನೀಲಕಂಠೇಶ್ವರ ಪುರಾಣ ಎಂಬ ಗ್ರಂಥವನ್ನು ಪ್ರಕಟಿಸಲಾಗಿದೆ.

ಪಟ್ಟಾಧಿಕಾರ: ಉತ್ತರಾಧಿಕಾರಿಗಳನ್ನು ನೇಮಕಮಾಡಿಕೊಳ್ಳುವಾಗ ನಡೆಸುವ ಧಾರ್ಮಿಕ ಕ್ರಿಯಾದಿಗಳನ್ನು ಕರ್ತೃಗದ್ದುಗೆಯ ಬಳಿ ಇರುವ ಪೂಜಾ ಸ್ಥಳದಲ್ಲಿ ನಡೆಸಲಾಗುತ್ತದೆ. ಪಟ್ಟಾಧಿಕಾರದ ಸಂದರ್ಭದಲ್ಲಿ ಅಧಿಕಾರ ಕೊಡುವ ಮೊದಲು ಉತ್ತರಾಧಿಕಾರಿಯನ್ನು ಕರ್ತೃಗದ್ದುಗೆಯ ಎದುರು ನಿಲ್ಲಿಸಿ ಶಿಖಾ, ಸೂತ್ರಕಮಂಡಲ, ಪೂಜಾಪರಿಕರಗಳನ್ನು ಉತ್ತರಾಧಿಕಾ ರಿಯ ಕೈಗೆ ಕೊಟ್ಟು ಪಟ್ಟಾಧಿಕಾರವನ್ನು ಮಾಡಲು ಸಮಾಜದ ಒಪ್ಪಿಗೆಯನ್ನು ಪಡೆದು ಇದನ್ನು ಘೋಷಿಸಿ, ನಂತರ ಅಧಿಕಾರವನ್ನು ನೀಡಲಾಗುತ್ತದೆ. ಪಟ್ಟಾಧಿಕಾರದ ಮೊದಲೇ ಹಿರಿಯ ಗುರುಗಳು ಲಿಂಗೈಕ್ಯರಾಗಿದ್ದಾಗ ಈ ಕ್ರಮವನ್ನು ಅನುಸರಿಸಲಾಗುತ್ತದೆ. ಗುರುಗಳು ಜೀವಂತವಿದ್ದಾಗಲೇ ಪಟ್ಟಾಧಿಕಾರ ನೀಡುವುದಾದರೆ ಗದ್ದುಗೆಗಳ ದರ್ಶನ ಮಾಡಿಸಿ ಪಟ್ಟಾಧಿಕಾರದ ಸ್ಥಳದಲ್ಲಿಯೇ ಹಿರಿಯ ಗುರುಗಳು ತಮ್ಮ ಉತ್ತರಾಧಿಕಾರಿಗೆ ಅಧಿಕಾರ ನೀಡುವುದನ್ನು ಘೋಷಿಸಿ ಪಟ್ಟಾಧಿಕಾರವನ್ನು ಅನುಗ್ರಹಿಸುತ್ತಾರೆ.

ಶೈಕ್ಷಣಿಕ ಸೇವೆ: ಶ್ರೀ ಜಗದ್ಗುರು ನೀಲಕಂಠೇಶ್ವರ ವಿದ್ಯಾಸಂಸ್ಥೆಯನ್ನು ಪ್ರಾರಂಭಿಸಿ, ಗದಗ ನಗರದಲ್ಲಿ ಪದವಿಪೂರ್ವ

ಕಾಲೇಜನ್ನು ಪ್ರಾರಂಭಿಸಲಾಗಿದೆ. ಗಂಗಾವತಿಯಲ್ಲಿ ಪ್ರೌಢಶಾಲೆಯನ್ನು ಪ್ರಾರಂಭಿಸಲಾಗಿದೆ.

ವಿಳಾಸ: ಶ್ರೀ ನೀಲಕಂಠ ಪಟ್ಟಾರಾಧ್ಯ ಸ್ವಾಮಿಗಳು, ಶ್ರೀ ನೀಲಕಂಠೇಶ್ವರ ಮಠ, ಬೇಟಗೇರಿ ಬಡಾವಣೆ, ಗದಗ-೫೮೨ ೧೦೧

ಶರಣೆ ನೀಲಮ್ಮ ಮಠ: ಗದಗ ನಗರದ ದಕ್ಷಿಣದ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ಶಿವಶರಣೆ ನೀಲಮ್ಮ ತಾಯಿ ಆಧ್ಯಾತ್ಮ ವಿದ್ಯಾಶ್ರಮವು ೧೯೬೭ ರಲ್ಲಿ ಸ್ಥಾಪನೆಯಾಗಿದೆ. ನವಿಲುಗುಂದ ತಾಲ್ಲೂಕಿನ ಅಸುಂಡಿ ಗ್ರಾಮದ ಶ್ರೀ ಭೀಮಸೇನ ಜೋಷಿ ಅವರಲ್ಲಿ ನ್ಯಾಯ ಶಾಸ್ತ್ರ, ತರ್ಕಶಾಸ್ತ್ರ ಹಾಗೂ ಅರ್ಥಶಾಸ್ತ್ರಗಳನ್ನು ಕಲಿತ ಶರಣೆ ನೀಲಮ್ಮ ತಾಯಿ ಅವರು ಗದಗದ ಶ್ರೀ ಶಿವಾನಂದ ಮಠದ ಶ್ರೀ ಸದಾಶಿವಾನಂದ ಸ್ವಾಮಿಗಳ ಅನುಗ್ರಹ ಪಡೆದು ಪುರಾಣ ಪ್ರವಚನಗಳನ್ನು ಪ್ರಾರಂಭಿಸಿದರು. ನಂತರ ಸ್ವತಂತ್ರವಾಗಿ ಶರಣಸ್ಥಲ ಮಠವನ್ನು ಸ್ಥಾಪಿಸಿ ಶರಣ ತತ್ತ್ವವನ್ನು ನಾಡಿಗೆ ನೀಡತೊಡಗಿದ್ದಾರೆ.

ಶಿವಶರಣೆ ನೀಲಮ್ಮ ತಾಯಿಯು ಹನ್ನೆರಡು ವರ್ಷದ ಬಾಲಕಿಯಾಗಿದ್ದಾಗಲೇ ಆಧ್ಯಾತ್ಮದ ಹುಚ್ಚನ್ನು ಹಚ್ಚಿಕೊಂಡು ಸಾಕು ತಂದೆಯಿಂದ ದೂರವಾಗಿ ಆಧ್ಯಾತ್ಮದ ಹಸಿವನ್ನು ತೀರಿಸಿಕೊಳ್ಳಲು ಮುಂದಾಗಿ ಅಪಾರ ಜ್ಞಾನಸಂಪತ್ತನ್ನು ಸಂಪಾದಿಸಿ ಕೊಂಡರು. ತಮ್ಮ ಅನುಭವದ ಮೂಸೆಯಲ್ಲಿ ಹೊರಬಂದಿರುವ ವಿಚಾರ ಕಿರಣ, ತುಂಬಿ ತುಳುಕಿದಾಗ, ಶರಣರು ನಿರ್ಮಿಸಿದ ದಾರಿ, ಮುಗುಳಕೋಡು ಎಲ್ಲಲಿಂಗೇಶ್ವರನ ಲೀಲಾಮೃತ, ಅಸುಂಡಿಯ ಅಕ್ಷಯ ನಿಧಿ ಮತ್ತು ಭೀಮಾಂಬಿಕ ಚರಿತ್ರೆಯನ್ನು ರಚಿಸಿ ಪ್ರಕಟಿಸಿರುವ ಶರಣೆ ನೀಲಮ್ಮ ತಾಯಿಯವರ ಸಾಧನೆಯನ್ನು ಇದರಿಂದ ಗುರುತಿಸಬಹುದಾಗಿದೆ. ಮಹಿಳೆಯರಿಗೆ ಸಂಸ್ಕೃತ ಕಲಿಸುವ ಪಾಠಶಾಲೆಯನ್ನು ನಡೆಸುತ್ತಾರೆ. ಪ್ರತಿ ಶುಕ್ರವಾರ ಮತ್ತು ಹುಣ್ಣಿಮೆಯಂದು ಮಠದಲ್ಲಿ ವಿಶೇಷ ಪೂಜಾ ಕಾರ್ಯಗಳು ನಡೆಯುತ್ತವೆ. ಶ್ರಾವಣ ಮಾಸ ಮತ್ತು ಇತರೆ ವಿಶೇಷ ದಿನಗಳಲ್ಲಿ ಶಿವಶರಣೆ ನೀಲಮ್ಮ ತಾಯಿಯವರು ಬೇರೆ ಬೇರೆ ಕಡೆ ನಡೆಯುವ ಉಪನ್ಯಾಸ ಹಾಗೂ ಪ್ರವಚನ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಮಠವನ್ನು ಹೆಚ್ಚು ಪ್ರಚಾರಕ್ಕೆ ತರುತ್ತ ಅಭಿವೃದ್ಧಿಪಡಿಸತೊಡಗಿದ್ದಾರೆ.

ವಿಳಾಸ: ಶಿವಶರಣೆ ನೀಲಮ್ಮ ತಾಯಿ, ಆಧ್ಯಾತ್ಮ ವಿದ್ಯಾಶ್ರಮ, ಗದಗ - ೫೮೨ ೧೦೧

ತಗ್ಗಿನಮಠ: ಗದಗ ನಗರದ ಬೇಟಗೇರಿ ಬಡಾವಣೆಯಲ್ಲಿರುವ ತಗ್ಗಿನಮಠವು ಪುರಾತನ ಮಠವಾಗಿದೆ. ಈ ಮಠದಲ್ಲಿ ಇಂದು ಉತ್ತರಾಧಿಕಾರಿಗಳು ಯಾರೂ ಇಲ್ಲದೆ ಇರುವ ಕಾರಣ ಮಠದ ಪರಂಪರೆಯ ಬಗ್ಗೆ ತಿಳಿದುಕೊಳ್ಳಲು ಸಾಧ್ಯವಾಗಿಲ್ಲ. ಮಠದ ಕಟ್ಟಡದಲ್ಲಿ ಶ್ರೀ ಮಲ್ಲಿಕಾರ್ಜುನಸ್ವಾಮಿಗಳು ನೆಲೆಸಿದ್ದರೆಂದೂ ಇವರು ಲಿಂಗೈಕ್ಯರಾದ ಮೇಲೆ ಇವರ ಗದ್ದುಗೆಯನ್ನು ಸ್ಥಾಪಿಸಲಾಗಿದೆ ಎಂದೂ ಹೇಳಲಾಗುತ್ತದೆ.

ಮೂಲೆಮಠ: ಗದಗ ನಗರದ ಬೆಟಗೇರಿ ಬಡಾವಣೆಯ ಗಾರ್ಗಿ ಪೇಟೆಯಲ್ಲಿ ಸ್ಥಾಪನೆಯಾಗಿರುವ ಶ್ರೀ ಮೂಲೆಮಠವು ಇತಿಹಾಸ ಇರುವ ವಿರಕ್ತಮಠ. ಶ್ರೀ ತೋಂಟದಾರ್ಯ ಮಠದ ಶಾಖಾ ಮಠವಾಗಿರುವ ಈ ಮಠದಲ್ಲಿ ಒಂದು ಗದ್ದುಗೆ ಇದೆ. ಈ ಗದ್ದುಗೆಗೆ ಪೂಜೆ ನಡೆಸಲಾಗುತ್ತಿದೆ. ಮಠದ ಸುತ್ತಮುತ್ತ ಮನೆಗಳಿದ್ದು, ಇವುಗಳನ್ನು ಬಾಡಿಗೆಗೆ ಕೊಡಲಾಗಿದೆ.

ನರಸಾಪುರ

ಗದಗ ತಾಲ್ಲೂಕಿನ ನರಸಾಪುರ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವ ಭಾಗಕ್ಕೆ ಮೂರು ಕಿ.ಮೀ. ದೂರದಲ್ಲಿದೆ. ಗದಗ ನಗರದ ಹೊರವಲಯದಲ್ಲಿರುವ ಈ ಗ್ರಾಮವು ಆಧುನಿಕವಾಗಿ ಬೆಳೆದಿದೆ. ಈ ಗ್ರಾಮದಲ್ಲಿ ವೀರಶೈವ ಧರ್ಮದ ಬೆಳವಣಿಗೆಗಾಗಿ ವೀರೇಶ್ವರ ಮಠವು ಸ್ಥಾಪನೆಯಾಗಿದೆ.

ವೀರೇಶ್ವರ ಮಠ: ನರಸಾಪುರ ಗ್ರಾಮದ ಹೊರಭಾಗದಲ್ಲಿ ಶ್ರೀ ವೀರೇಶ್ವರ ಮಠವು ಸ್ಥಾಪನೆಯಾಗಿ ಸುತ್ತಮುತ್ತಲಿನ ಗ್ರಾಮಸ್ಥರ ಕೇಂದ್ರ ಬಿಂದುವಾಗಿ ಬೆಳೆದಿದೆ. ವಿರಕ್ತ ಸಂಪ್ರದಾಯದ ಈ ಮಠವು ಶರಣಸ್ಥಲದಲ್ಲಿ ಬೆಳೆದು ಶರಣ ತತ್ತ್ವಗಳನ್ನು ನಾಡಿಗೆ ನೀಡುವ ಕೆಲಸದಲ್ಲಿ ಮುಂದಾಗಿದೆ. ನರಸಾಪುರ ಗ್ರಾಮದ ಮಧ್ಯಭಾಗದಲ್ಲಿ ಶ್ರೀ ರೇವಣಸಿದ್ಧ ಶರಣರು ಈ ಮಠವನ್ನು ಸ್ಥಾಪನೆ ಮಾಡಿದ್ದರು. ನಲ್ವತ್ತಾಡ ಶರಣ ಅನುಯಾಯಿಗಳಾದ ಶ್ರೀ ರೇವಣಸಿದ್ಧ ಶರಣರು ಇಲ್ಲಿ ನಲವತ್ತಾಡ

ವೀರೇಶ್ವರ ಶರಣರ ಮೂರ್ತಿಯನ್ನು ಪ್ರತಿಷ್ಠಾಪಿಸಿ ಮಠವನ್ನು ಸ್ಥಾಪಿಸಿದರು. ನಂತರ ಅವರು ಲಿಂಗೈಕ್ಯರಾದ ಮೇಲೆ ಗ್ರಾಮದ ಹೊರಭಾಗದಲ್ಲಿ ಚಂದ್ರಶೇಖರ ಶರಣರು ಹೊಸಮಠವನ್ನು ಸ್ಥಾಪಿಸಿದ್ದಾರೆ. ರೇವಣಸಿದ್ಧ ಶರಣರ ಗದ್ದುಗೆಯನ್ನೂ ಸ್ಥಾಪಿಸಲಾಗಿದೆ. ಮಠದಲ್ಲಿ ನಿತ್ಯ ರುದ್ರಾಭಿಷೇಕ ಪೂಜೆಯನ್ನು ನಡೆಸಲಾಗುತ್ತಿದೆ. ಅಮಾವಾಸ್ಯೆಯಲ್ಲಿ ವಿಶೇಷ ಪೂಜೆ ಹಾಗೂ ದಾಸೋಹ ನಡೆಯುತ್ತಿದೆ. ಮಠದ ವತಿಯಿಂದ ಪ್ರಾಥಮಿಕ ಶಾಲೆ ನಡೆಯುತ್ತಿದೆ.

ವಿಳಾಸ: ಶ್ರೀ ಚಂದ್ರಶೇಖರ ಶರಣರು, ಶ್ರೀ ವೀರೇಶ್ವರ ಮಠ, ನರಸಾಪುರ, ಗದಗ ತಾಲ್ಲೂಕು.

ಬಳಗಾನೂರು

ಗದಗ ತಾಲ್ಲೂಕಿನ ಬಳಗಾನೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಇಪ್ಪತ್ತೆರಡು ಕಿ.ಮೀ.ದೂರದಲ್ಲಿದೆ. ಇಲ್ಲಿ ಕಳೆದ ಶತಮಾನದಲ್ಲಿ ಸ್ಥಾಪನೆಗೊಂಡ ಮಠವು ವೀರಶೈವ ಧರ್ಮವನ್ನು ಪ್ರಚಾರಗೊಳಿಸಿ ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಸಾಧನೆ ಮಾಡಿ ಸಮಾಜವನ್ನು ಅಭಿವೃದ್ಧಿಪಡಿಸಿದೆ.

ಬಳಗಾನೂರು ಮಠ: ಬಳಗನೂರು ಗ್ರಾಮದ ಮಧ್ಯಭಾಗದಲ್ಲಿ ಶ್ರೀ ಬಳಗನೂರು ಮಠವು ಸ್ಥಾಪನೆಯಾಗಿದೆ. ತ್ರಿಕಾಲಜ್ಞಾನಿ ಚಿಕೇನಕೊಪ್ಪದ ಶ್ರೀ ಚನ್ನವೀರ ಶಿವಶರಣರು ನೆಲೆನಿಂತು ಈ ಗ್ರಾಮವನ್ನು ಧಾರ್ಮಿಕ ಸುಕ್ಷೇತ್ರವನ್ನಾಗಿ ಮಾಡಿದರು.

ಮಠ ಸ್ಥಾಪನೆ: ಚಿಕೇನ ಕೊಪ್ಪದ ಶ್ರೀ ಭಾಗಯ್ಯ ಮತ್ತು ಶ್ರೀಮತಿ ಶಿವಮ್ಮನವರ ಮಗನಾಗಿ ೧೯೨೩ ರ ಜೂನ್ ಹದಿನೈದರಂದು ಜನಿಸಿದ ಶ್ರೀ ಚಂದ್ರಯ್ಯನವರಿಗೆ ಕೊಪ್ಪಳದ ಲಿಂಗೈಕ್ಯ ಶ್ರೀ ಮರಿಶಾಂತವೀರ ಶಿವಯೋಗಿಗಳು ದೀಕ್ಷೆಯನ್ನು ನೀಡಿ ಶ್ರೀಚನ್ನವೀರ ಶರಣರೆಂದು ಅಭಿದಾನವಿತ್ತು ಶರಣ ಮಾರ್ಗವನ್ನು ತೋರಿಸಿದರು.ಅಂದಿನಿಂದ ಲೋಕಸಂಚಾರಕ್ಕೆ ಹೊರಟ ಶರಣರು ಸಮಾಜದ ಮೌಢ್ಯದ ನಿವಾರಣೆಗೆ ಕಂಕಣ ತೊಟ್ಟು, ೧೯೬೯ ರಲ್ಲಿ ಗದಗ ತಾಲ್ಲೂಕಿನ ಬಳಗಾನೂರಿಗೆ ಬಂದು ನೆಲೆಗೊಳ್ಳುತ್ತಾರೆ. ಇಲ್ಲಿ ನೆಲೆಗೊಂಡ ಮೇಲೆ ಬಸವ ತತ್ತ್ವಪುರಾಣವನ್ನು ಬೋಧನೆ ಮಾಡಲು ಪ್ರಾರಂಭಿಸಿ ಭಕ್ತರ ಮನ ಗೆದ್ದರು.ಹೇಮರೆಡ್ಡಿಮಲ್ಲಮ್ಮನವರ ನಾಟಕದಿಂದ ಪ್ರಭಾವಿತರಾಗಿ ನಾಡಿನ ಎಲ್ಲಾ ಸ್ತ್ರೀಯರು ಈ ತತ್ತ್ವಗಳನ್ನು ಪಾಲಿಸಬೇಕೆಂಬ ಅಭಿಲಾಷೆಯಿಂದ ಮುತ್ತೈದೆಯರಿಗೆ ಈ ಬಗ್ಗೆ ತಿಳುವಳಿಕೆಯನ್ನು ನೀಡಿ ಉಡಿ ತುಂಬಿಸುವ ಕಾರ್ಯಕ್ರಮ ವನ್ನು ಪ್ರಾರಂಭಿಸಿದರು.ಧಾರ್ಮಿಕ ಕಾರ್ಯಗಳ ಜೊತೆಗೆ ಸಂಗೀತ ಕಲೆಗೆ ಪ್ರೋತ್ಸಾಹಿಸಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೂ ಹೆಚ್ಚು ಒತ್ತುಕೊಟ್ಟು ಮಠವನ್ನು ಬೆಳಸಿದರು.

ಬೆಳೆದ ಪರಂಪರೆ: ಚಿಕೇನಕೊಪ್ಪದ ಶ್ರೀ ಮಹಾಂತಯ್ಯ ಮತ್ತು ಶ್ರೀಮತಿ ದಾಕ್ಷಾಯಣಮ್ಮನವರ ಪುತ್ರರಾಗಿ ೧೯೬೨ ರ ಜೂನ್ ಒಂದರಂದು ಜನಿಸಿದ ಶ್ರೀ ಶಿವಶಾಂತವೀರ ಶರಣರು ಕೊಪ್ಪಳದ ಗವಿಮಠದ ಶ್ರೀ ಶಿವಶಾಂತವೀರ ಸ್ವಾಮಿಗಳಿಂದ ದೀಕ್ಷೆ ಪಡೆದು ೧೯೮೫ ರ ಏಪ್ರಿಲ್ ಇಪ್ಪತ್ತಾರರಂದು ಬಳಗಾನೂರು ಕ್ಷೇತ್ರಕ್ಕೆ ಆಗಮಿಸಿದರು.ನಂತರ ಶ್ರೀ ಚನ್ನವೀರ ಶರಣರು ಶ್ರೀ ಶಾಂತವೀರ ಶರಣರಿಗೆ ಅಧಿಕಾರವನ್ನು ನೀಡಿ ೧೯೯೫ ರ ಏಪ್ರಿಲ್ ಏಳರಂದು ಲಿಂಗೈಕ್ಯರಾದರು.

ಅಭಿವೃದ್ಧಿ ಕಾರ್ಯಗಳು: ಶ್ರೀ ಚನ್ನವೀರ ಶರಣರ ಚೈತನ್ಯಸ್ವರೂಪವಾಗಿ ಬೆಳೆದಿದ್ದ ಶ್ರೀ ಶಿವಶಾಂತವೀರ ಶರಣರು ಬಳಗಾನೂರು ಮಠದ ಆವರಣವನ್ನು ಐವತ್ತು ಲಕ್ಷರೂ ವೆಚ್ಚದಲ್ಲಿ ಅಭಿವೃದ್ಧಿಗೊಳಿಸಿದ್ದಾರೆ. ಶ್ರೀ ಶಿವಶಾಂತವೀರ ಶರಣರು ತಮ್ಮ ಕಾರ್ಯಕ್ಷೇತ್ರವನ್ನು ರಾಜಧಾನಿ ಬೆಂಗಳೂರಿಗೂ ವಿಸ್ತರಿಸಿ ರಾಜಾಜಿ ನಗರದಲ್ಲಿ ಶರಣರ ಬಳಗವೆಂಬ ಆಧ್ಯಾತ್ಮಿಕ ಕೇಂದ್ರವನ್ನು ೧೯೯೮ರಲ್ಲಿ ಸ್ಥಾಪಿಸಿದರು. ನಂತರ ಹುಬ್ಬಳ್ಳಿಯಲ್ಲಿ ಶ್ರೀ ವೆಂಕನಗೌಡ ಪಾಟೀಲರು ನಡೆಸುತ್ತಿದ್ದ ಅಂಧರ ಕಲ್ಯಾಣಕೇಂದ್ರವನ್ನು ವಹಿಸಿಕೊಂಡು ಮುನ್ನಡೆಸತೊಡಗಿದ್ದಾರೆ. ಮಠದ ಆವರಣದಲ್ಲಿ ವೇದ ಪಾಠಶಾಲೆ, ಕನ್ನಡಮಾಧ್ಯಮದ ಪೂರ್ವಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದ್ದಾರೆ. ಶ್ರೀ ಚನ್ನವೀರ ಶರಣರ ಶಿಲಾಮೂರ್ತಿಯನ್ನು ಪ್ರತಿಷ್ಠಾಪಿಸಿ ದೇವಸ್ಥಾನ ವನ್ನು ನಿರ್ಮಿಸಿದ್ದಾರೆ. ನಿತ್ಯ ಸಾವಿರಾರು ಜನರಿಗೆ ದಾಸೋಹ ನಡೆಯುತ್ತಿದೆ.

ವಿಳಾಸ: ಶ್ರೀ ಶಿವಶಾಂತವೀರ ಶರಣರು, ಶ್ರೀ ಬಳಗಾನೂರು ಮಠ, ಬಳಗಾನೂರು, ಗದಗ ತಾಲ್ಲೂಕು.

ಆಧಾರ: ಎನ್.ಎಂ.ಯಲಬುರ್ಗಿ, ಅಡ್ನೂರ ಅವರ ಪ್ರಕಟಿತ ಬಿಡಿ ಲೇಖನ.

ನೀಲಗುಂದ

ಗದಗ ತಾಲ್ಲೂಕಿನ ನೀಲಗುಂದ ಗ್ರಾಮವು ತಾಲ್ಲೂಕು ಕೇಂದ್ರದಿಂದ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಶ್ರೀ ಗುದ್ನೇಶ್ವರ ಶರಣರು ನೆಲೆ ನಿಂತು ಮಠವನ್ನು ಸ್ಥಾಪಿಸಿದ್ದರಿಂದ ನೀಲಗುಂದ ಧಾರ್ಮಿಕವಾಗಿ ಹೆಸರು ಮಾಡುವಂತಾಯಿತು.

ಗುದ್ನೇಶ್ವರ ಮಠ: ನೀಲಗುಂದ ಗ್ರಾಮದಲ್ಲಿ ಪುರಾತನ ಪರಂಪರೆಯ ವಿರಕ್ತ ಸಂಪ್ರದಾಯದ 'ಶ್ರೀ ಗುದ್ನೇಶ್ವರ ಮಠ'ವು ಸ್ಥಾಪನೆಯಾಗಿದೆ. ಶ್ರೀ ಗುದ್ನೇಶ್ವರ ಶರಣರು ಈ ಮಠವನ್ನು ಸ್ಥಾಪನೆ ಮಾಡಿದ್ದಾರೆ. ಶ್ರೀ ಗುದ್ನೇಶ್ವರ ಸ್ವಾಮಿಗಳು ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನಿಂದ ಸಂಚಾರ ಕೈಗೊಂಡು ನೀಲಗುಂದ ಗ್ರಾಮಕ್ಕೆ ಬಂದು ನೆಲೆಸಿದರು. ಗುರುಗಳು ಇಲ್ಲಿ ನೆಲೆ ನಿಂತ ಮೇಲೆ ಮಠವನ್ನು ಸ್ಥಾಪಿಸಿ, ವೀರಶೈವ ಧರ್ಮದ ಆಚರಣೆಗಳನ್ನು ನಡೆಸುತ್ತಾ ಮಠವನ್ನು ಅಭಿವೃದ್ಧಿ ಪಡಿಸಿದ್ದರು.

ಶರಣ ಸ್ಥಲದ ಈ ಮಠವು ಧಾರ್ಮಿಕ ಆಚರಣೆಗಳಿಂದ ಹೆಚ್ಚು ಪ್ರಸಿದ್ಧಿ ಪಡೆದು ಅಪಾರ ಭಕ್ತ ಸಂಪತ್ತನ್ನು ಸಂಪಾದಿಸಿ ಕೊಂಡಿತು. ಮಠದಲ್ಲಿ ನಡೆಯುವ ಧಾರ್ಮಿಕ ಆಚರಣೆಗಳಿಗೆ ವ್ಯವಸ್ಥಿತವಾದ ಕಟ್ಟಡವನ್ನು ನಿರ್ಮಿಸಿಕೊಂಡ ಗುರುಗಳು ನಿತ್ಯ ದಾಸೋಹ ಕಾರ್ಯವನ್ನು ಕೈಗೊಂಡರು. ಗುರುಗಳು ಸಂಸಾರದಲ್ಲಿದ್ದರೂ ಸಹ ಆಧ್ಯಾತ್ಮಿಕವಾಗಿ ಮಠವನ್ನು ಅಭಿವೃದ್ಧಿಪಡಿಸಿ ಲಿಂಗೈಕ್ಯರಾದರು. ಇವರ ನಂತರ ಶ್ರೀ ಪ್ರಭು ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿ ಪಡಿಸುತ್ತಿದ್ದಾರೆ.

ವಿಳಾಸ: ಶ್ರೀ ಪ್ರಭು ಸ್ವಾಮಿಗಳು, ಶ್ರೀ ಗುದ್ನೇಶ್ವರಮಠ, ನೀಲಗುಂದ, ಗದಗ ತಾಲ್ಲೂಕು.

ಮುಳುಗುಂದ

ಗದಗ ತಾಲ್ಲೂಕಿನ ಮುಳುಗುಂದ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಪುರಾಣ ಪ್ರಸಿದ್ಧ ಸ್ಥಳವಾಗಿದ್ದು, ಇಲ್ಲಿ ಗವಿಮಠದ ಸ್ಥಾಪನೆಯಿಂದಾಗಿ ಮುಳುಗುಂದವು ಪ್ರಸಿದ್ಧಿ ಪಡೆಯಿತು.

ಗವಿಮಠ: ಮುಳುಗುಂದ ಗ್ರಾಮದ ಮಧ್ಯಭಾಗದಲ್ಲಿ ೧೮೪೫ರಲ್ಲಿ ಶ್ರೀ ಗವಿಮಠವು ಸ್ಥಾಪನೆಯಾಗಿದೆ. ಈ ಮಠವನ್ನು ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳು ಸ್ಥಾಪಿಸಿದ್ದಾರೆ. ಇವರು ೧೮೨೨ ರ ಸುಮಾರಿನಲ್ಲಿ ಬಿಜಾಪುರ ಜಿಲ್ಲೆಯ ಆಲಮಟ್ಟಿಯ ಶ್ರೀ ಚನ್ನಮಲ್ಲಿಕಾರ್ಜುನ ಮತ್ತು ಶ್ರೀಮತಿ ಅನ್ನಪೂರ್ಣಾಂಬೆಯವರ ಪುತ್ರರಾಗಿ ಜನಿಸಿದರು. ಬಾಲ್ಯದಲ್ಲೇ ಆಧ್ಯಾತ್ಮವನ್ನು ಮೈಗೂಡಿಸಿಕೊಂಡು ಲೋಕಸಂಚಾರ ಮಾಡುತ್ತಾ, ಮುಳುಗುಂದ ಗ್ರಾಮದ ಬೆಟ್ಟದ ಮೇಲೆ ಬಂದು ನೆಲೆಸಿ, ತಪಸ್ಸನ್ನು ಕೈಗೊಂಡು ಮಠವನ್ನು ಸ್ಥಾಪಿಸಿದ್ದಾರೆ. ಮೂಲ ಮಠದಲ್ಲಿ ನೆಲೆಸಿದ ಗುರುಗಳು ನಂತರ ಗ್ರಾಮದ ಮಧ್ಯದಲ್ಲಿ ಮಠವನ್ನು ಸ್ಥಾಪಿಸಿ, ಧಾರ್ಮಿಕ ಕಾರ್ಯಗಳನ್ನು ನಡೆಸ ತೊಡಗಿದರು.

ಶ್ರೀ ಬಾಲಮಹಾಂತ ಶಿವಯೋಗಿಗಳು ಮುಳುಗುಂದದಲ್ಲಿ ಮಠವನ್ನು ಸ್ಥಾಪಿಸಿದ ಮೇಲೆ ಅನೇಕ ಪವಾಡಗಳನ್ನು ಮಾಡಿ ಭಕ್ತರನ್ನು ಉದ್ಧರಿಸಿದರು. ಗುರುಗಳು ಧಾರ್ಮಿಕ ಕಾರ್ಯಗಳ ಜೊತೆಗೆ ವಚನಗಳನ್ನು ರಚಿಸಿ, ಕೈವಲ್ಯ ದರ್ಪಣ ಎಂಬ ಕೃತಿಯನ್ನು ರಚಿಸಿ ಸಾಹಿತ್ಯ ಕ್ಷೇತ್ರಕ್ಕೆ ತಮ್ಮ ಕೊಡುಗೆಯನ್ನು ನೀಡಿದ್ದಾರೆ. ಮುಳುಗುಂದಕ್ಕೆ ಬಂದು ನೆಲೆಸಿ ವಿರಕ್ತಮಠವನ್ನು ಸ್ಥಾಪಿಸಿ, ನಾಡು ಮರೆಯದ ಮಹಾಚೇತನವಾಗಿ ಬೆಳಗಿ ಲಿಂಗೈಕ್ಯರಾದರು.

ಮಠದ ಪರಂಪರೆ:
೧. ಶ್ರೀ ಮ.ನಿ.ಪ್ರ ಬಾಲಲೀಲಾ ಮಹಾಂತ ಶಿವಯೋಗಿಗಳು
೨. ಶ್ರೀ ಮ.ನಿ.ಪ್ರ ಮುದಿಮಹಾಂತಸ್ವಾಮಿಗಳು
೩. ಶ್ರೀ ಮ.ನಿ.ಪ್ರ ಬಸವಲಿಂಗಸ್ವಾಮಿಗಳು
೪. ಶ್ರೀ ಮ.ನಿ.ಪ್ರ ಮೃತ್ಯುಂಜಯಸ್ವಾಮಿಗಳು
೫. ಶ್ರೀ ಮ.ನಿ.ಪ್ರ ಶಿವಲಿಂಗ ದೇವರು
೬. ಶ್ರೀ ಮ.ನಿ.ಪ್ರ ಮಲ್ಲಿಕಾರ್ಜುನ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದ್ದು ಶ್ರೀ ಬಸವಲಿಂಗ ಸ್ವಾಮಿಗಳು ಮತ್ತು ಈಗಿನ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳ ಕಾಲದಲ್ಲಿ ಮಠವು ಅಭಿವೃದ್ಧಿಗೊಂಡಿದೆ. ಬಾದಾಮಿ ತಾಲ್ಲೂಕಿನ ಕೆರೂರು ಗ್ರಾಮದ ಶ್ರೀ ಶಿವಸಂಗಯ್ಯ ಮತ್ತು ಶ್ರೀಮತಿ ರಾಚಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ೧೯೭೪ ರಲ್ಲಿ ಮಠದ ಅಧಿಕಾರವನ್ನು ವಹಿಸಿಕೊಂಡು ಇಲ್ಲಿ ನೆಲೆ ನಿಂತು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಗ್ರಾಮದ ಹೊರ ಭಾಗದಲ್ಲಿರುವ ಗುಡ್ಡದ ಮೇಲಿನ ಮೂಲ ಮಠ ಹಾಗೂ ಗ್ರಾಮದ ಮಧ್ಯ ಭಾಗದಲ್ಲಿ ಮಠಗಳಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಾ ಮಠವನ್ನು ವ್ಯವಸ್ಥೆ ಗೊಳಿಸಿದ್ದಾರೆ. ಗುರುಗಳು ಬಾದಾಮಿ ತಾಲ್ಲೂಕಿನ ಕೆರೂರು ಗ್ರಾಮದ ಶ್ರೀ ವಿರಕ್ತಮಠ ಹಾಗೂ ಬೆಂಗಳೂರಿನ ಶ್ರೀ ಸರ್ಪಭೂಷಣ ಮಠದ ಅಧಿಕಾರದ ಜೊತೆಗೆ ಈ ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ವ್ಯವಸ್ಥಿತವಾಗಿ ಮುನ್ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಮಲ್ಲಿಕಾರ್ಜನ ಸ್ವಾಮಿಗಳು, ಶ್ರೀ ಗವಿಮಠ, ಮುಳುಗುಂದ, ಗದಗ ತಾಲ್ಲೂಕು.

ಎಚ್.ಎಸ್. ವೆಂಕಟಾಪುರ

ಗದಗ ತಾಲ್ಲೂಕಿನ ಎಚ್.ಎಸ್. ವೆಂಕಟಾಪುರವು ತಾಲ್ಲೂಕು ಕೇಂದ್ರದಿಂದ ಉತ್ತರ ಭಾಗಕ್ಕೆ ಹದಿನೆಂಟು ಕಿ.ಮೀ. ದೂರದಲ್ಲಿದೆ. ಇಲ್ಲಿ ಹಿಂದೆ ಸ್ಥಾಪನೆಯಾಗಿದ್ದ ಮಠವು ಈಗ ಜೀರ್ಣೋದ್ಧಾರಗೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸ ತೊಡಗಿದ್ದರಿಂದ ಧಾರ್ಮಿಕ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿಗೊಳ್ಳತೊಡಗಿದೆ.

ಕೊಂಬಳಿ ಹಿರೇಮಠ: ಎಚ್.ಎಸ್. ವೆಂಕಟಾಪುರ ಗ್ರಾಮದ ಪೂರ್ವದ ಹೊರಭಾಗದಲ್ಲಿ ಶ್ರೀ ಕೊಂಬಳಿ ಹಿರೇಮಠವು ಸ್ಥಾಪನೆಯಾಗಿ, ಈ ಗ್ರಾಮದ ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ರೂಪುಗೊಂಡಿದೆ. ಶಿಷ್ಯವರ್ಗದ ಸಂಪ್ರದಾಯದಲ್ಲಿ ಬೆಳೆದಿರುವ ಈ ಮಠವು ಗುರು ಮಠವಾದರೂ ವಿರಕ್ತಮಠಗಳ ಸಂಪರ್ಕ ಹೊಂದಿ ಗುರು-ವಿರಕ್ತರ ಸಮನ್ವಯತೆಯನ್ನು ಸಾಧಿಸಿಕೊಂಡು ಬಂದಿದೆ. ಹನ್ನೆರಡನೆಯ ಶತಮಾನಕ್ಕೂ ಪೂರ್ವದಲ್ಲಿಯೇ ಈ ಮಠ ಸ್ಥಾಪನೆಯಾಗಿದೆ. ಇದಕ್ಕೆ ಪೂರಕವೆಂಬಂತೆ ಪ್ರಭುದೇವರ ಕಾಲದಲ್ಲಿ ಕಲ್ಯಾಣದ ಅನುಭವ ಮಂಟಪದಲ್ಲಿ ಮಗ್ಗಿ ಮಹಾದೇವರ ಹೆಸರು ಚಿರಾಯುವಾಗಿದೆ. ಶ್ರೀ ಮಗ್ಗಿ ಮಹಾದೇವರು ಈ ಮಠದ ಪಟ್ಟದ ಗುರುಗಳೆಂದು ಹೇಳಲಾಗುತ್ತಿದೆ. ಹನ್ನೆರಡನೆಯ ಶತಮಾನದಲ್ಲಿಯೂ ವಿರಕ್ತಸಂಪ್ರದಾಯದ ಸಂಪರ್ಕ ಪಡೆದು ಪಟ್ಟದ ಮಠವಾಗಿ ಮುಂದುವರೆಯುತ್ತಾ ಬಂದಿರುವುದು ಒಂದು ವಿಶೇಷತೆಯಾಗಿದೆ.

ಪರಂಪರೆ: ಮಠದ ಕರ್ತೃಗುರುಗಳಾದ ಶ್ರೀ ವಿರಭದ್ರ ಶಿವಾಚಾರ್ಯ ಸ್ವಾಮಿಗಳು, ನಂತರ ಶ್ರೀ ಮಗ್ಗಿಮಹಾದೇವ ಸ್ವಾಮಿಗಳು ಈ ಹೆಸರುಗಳನ್ನು ಬಿಟ್ಟರೆ ಉಳಿದಂತೆ ಈಗಿನ ಶ್ರೀ ಗುರುಸಿದ್ಧ ಶಿವಾಚಾರ್ಯ ಸ್ವಾಮಿಗಳ ಹೆಸರನ್ನು ಮಾತ್ರ ದಾಖಲಿಸಬಹುದಾಗಿದೆ. ಈಗಿನ ಪಟ್ಟಾಧ್ಯಕ್ಷರಾದ ಶ್ರೀ ಗುರುಸಿದ್ಧದೇವ ಶಿವಾಚಾರ್ಯ ಸ್ವಾಮಿಗಳು ನವಿಲುಗುಂದ ತಾಲ್ಲೂಕಿನ ನಾಯಕನೂರಿನ ಶ್ರೀ ಬಸವಯ್ಯ ಮತ್ತು ಶ್ರೀಮತಿ ಶಾಂತಮ್ಮನವರ ಪುತ್ರರಾಗಿ ಜನಿಸಿ, ಶಿಷ್ಯವರ್ಗದ ಪರಂಪರೆಯ ಈ ಹಿರೇಮಠಕ್ಕೆ ೧೯೯೮ ರಲ್ಲಿ ಪಟ್ಟಾಧಿಕಾರಕ್ಕೆ ಬಂದಿದ್ದಾರೆ. ಶಿವಯೋಗಮಂದಿರ ಮತ್ತು ಮೂರುಸಾವಿರ ಮಠದಲ್ಲಿ ವಾಸ್ತವ್ಯ ಮಾಡಿಕೊಂಡು ಧಾರ್ಮಿಕ ಸಂಸ್ಕಾರವನ್ನು ಪಡೆದುಕೊಂಡಿರುವ ಈ ಗುರುಗಳು ಅಧಿಕಾರಕ್ಕೆ ಬರುವ ಮೊದಲು ಹದಿನೈದು ವರ್ಷಗಳ ಕಾಲ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿದಿತ್ತು. ಹಳೆಯದಾದ ಮಣ್ಣಿನ ಕಟ್ಟಡದ ಆವರಣದಲ್ಲಿ ಎರಡು ಗದ್ದುಗೆಗಳಿದ್ದು ಇವುಗಳಿಗೆ ನಿತ್ಯ ಪೂಜೆ ಮಾಡಲಾಗುತ್ತಿದೆ. ಎಳ್ಳಮಾವಾಸ್ಯೆಯ ದಿನ ಹಿರಿಯ ಗುರುಗಳ ಆರಾಧನೆಯನ್ನು ಮಾಡಲಾಗುತ್ತಿದೆ.ಮಠದಲ್ಲಿ ಒಂದು ತಿಂಗಳು ಪುರಾಣ ಪ್ರವಚನವನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಸಾವಿರಾರು ಜನರಿಗೆ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀಗುರುಸಿದ್ಧದೇವ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕೊಂಬಳಿ ಹಿರೇಮಠ, ಎಚ್.ಎಸ್.ವೆಂಕಟಾಪುರ,ಬೆಳವಡಿ ಅಂಚೆ, ಗದಗ ತಾಲ್ಲೂಕು.

ಹೊಸಹಳ್ಳಿ

ಗದಗ ತಾಲ್ಲೂಕಿನ ಹೊಸಹಳ್ಳಿ ಗ್ರಾಮವು ತಾಲ್ಲೂಕು ಕೇಂದ್ರಸ್ಥಳದಿಂದ ಪಶ್ಚಿಮಕ್ಕೆ ಹದಿನೈದು ಕಿ.ಮೀ. ದೂರದಲ್ಲಿದೆ. ಶ್ರೀ ಜಗದ್ಗುರು ಬೂದೀಶ್ವರ ಸಂಸ್ಥಾನ ಮಠವು ಸ್ಥಾಪನೆಯಾಗಿ ಈ ಗ್ರಾಮದ ಧಾರ್ಮಿಕ ಕೇಂದ್ರಸ್ಥಳವಾಗಿ ಪ್ರಸಿದ್ಧವಾಗಿದೆ.

ಜಗದ್ಗುರು ಬೂದೀಶ್ವರ ಸಂಸ್ಥಾನ ಮಠ: ಹೊಸಳ್ಳಿ ಗ್ರಾಮದ ದಕ್ಷಿಣಭಾಗದಲ್ಲಿರುವ ಈ ಮಠವು ವಿರಕ್ತ ಸಂಪ್ರದಾಯದ ಕುಮಾರ ಸಮಯದಲ್ಲಿ ಬೆಳೆದು ಬಂದಿದೆ. ೧೭೬೮ ರಲ್ಲಿ ಈ ಮಠವು ಶ್ರೀ ಬೂದೀಶ್ವರ ಶಿವಯೋಗಿಗಳಿಂದ ಸ್ಥಾಪನೆಯಾಗಿದೆ ಎಂದು ಶ್ರೀ ಬೂದೀಶ್ವರ ಲೀಲೆ ಪುರಾಣದಿಂದ ತಿಳಿದು ಬರುತ್ತದೆ.ಹನ್ನೆರಡನೆಯ ಶತಮಾನದಲ್ಲಿ ಅಲ್ಲಮ ಪ್ರಭುಗಳು ಇಲ್ಲಿ ನೆಲೆನಿಂತು ಅನುಷ್ಠಾನಗೊಂಡು ಈ ಸ್ಥಳವನ್ನು ಜಾಗೃತ ಸ್ಥಳವನ್ನಾಗಿ ಮಾಡಿ ಧಾರ್ಮಿಕ ಪರಂಪರೆ ಬೆಳೆಯಲು ಅನುವಾಗುವಂತೆ ಮಾಡಿದರು. ಇವರ ನಂತರ ಅಲ್ಲಮ ಪ್ರಭುಗಳ ಸ್ಮಾರಕವಾಗಿ ತೋರುಗದ್ದುಗೆಯನ್ನು ನಿರ್ಮಿಸಲಾಗಿದೆ. ಇಂತಹ ಪವಿತ್ರಸ್ಥಳದಲ್ಲಿ ಶ್ರೀ ಬೂದೀಶ್ವರರು ನೆಲೆಗೊಂಡು ಮಠವನ್ನು ಸ್ಥಾಪಿಸಿದ್ದಾರೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಬೂದೀಶ್ವರ ಶಿವಯೋಗಿಗಳು
೨. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಪಟ್ಟದಾರ್ಯಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಪ್ರಭುಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಹೆಸರುಮಾಡಿದೆ. ಮಠದ ಪರಂಪರೆಯ ಕರ್ತೃಗುರುಗಳಾದ ಶ್ರೀ ಬೂದೀಶ್ವರ ಸ್ವಾಮಿಗಳು ಪವಾಡ ಪುರುಷರಾಗಿ ವಾಕ್‌ಸಿದ್ಧಿಗಳಾಗಿ ಅನೇಕ ಲೀಲೆಗಳನ್ನು ಮಾಡಿ ಭಕ್ತರನ್ನು ಉದ್ಧರಿಸಿದರಂತೆ. ಇವರ ಕಾಲದಲ್ಲಿ ನಿತ್ಯ ಶಿವಾನುಭವಗೋಷ್ಠಿಗಳು, ಶರಣರ ತತ್ತ್ವದ ಬಗ್ಗೆ ಉಪನ್ಯಾಸ ಮತ್ತು ಕೀರ್ತನೆಗಳು ನಡೆಯುತ್ತಿದ್ದವಂತೆ. ಸದಾ ಭಕ್ತರ ಶ್ರೇಯಸ್ಸಿಗಾಗಿ ಅನುಷ್ಠಾನಗೊಂಡು ಲೋಕೋದ್ಧಾರವನ್ನೇ ತಮ್ಮ ಉಸಿರಾಗಿಸಿಕೊಂಡಿದ್ದರಂತೆ. ಇಂತಹ ಮಹಾನ್ ತಪೋನಿಷ್ಠರು ಅನೇಕ ವರ್ಷ ಬದುಕಿದ್ದರು ಎಂದು ಹೇಳಲಾಗುತ್ತದೆ. ಶ್ರೀ ಬೂದೀಶ್ವರ ಸ್ವಾಮಿಗಳ ಮಹಿಮೆಯಿಂದ ಈ ಕ್ಷೇತ್ರ ಇಂದು ಧಾರ್ಮಿಕ ಸುಕ್ಷೇತ್ರವಾಗಿ ಮೆರೆಯುತ್ತಿದೆ. ಶ್ರೀ ಬೂದೀಶ್ವರರು ನಿರ್ವಿಕಲ್ಪ ಸಮಾಧಿಯಾದ ನಂತರ, ಶ್ರೀ ಬಸವ ಲಿಂಗ ಸ್ವಾಮಿಗಳು ಅಧಿಕಾರಕ್ಕೆ ಬಂದು ಬೂದೀಶ್ವರರ ತತ್ತ್ವಗಳನ್ನು ನಾಡಿಗೆ ಬಿತ್ತಿದರು. ಇವರು ಮಹಾನ್ ಸಾಧಕರಾಗಿ ಈ ನಾಡನ್ನು ಸಂಸ್ಕಾರದ ಬೀಡಾಗಿ ಬೆಳೆಯುವಂತೆ ಧರ್ಮಬೋಧನೆಯನ್ನು ಮಾಡಿದರು. ಕಾಯಕ ಯೋಗದ ಬಗ್ಗೆ ಭಕ್ತರಿಗೆ ತಿಳುವಳಿಕೆ ನೀಡಿ ಜನರನ್ನು ಕಾಯಕ ಮಾರ್ಗಕ್ಕೆ ಹಚ್ಚಿದರು. ಇವರ ಕಾಲದಲ್ಲಿ ಮಠವು ಹೆಚ್ಚು ಅಭಿವೃದ್ಧಿ ಗೊಂಡು ಬೆಳೆಯಿತು. ಶ್ರೀ ಬೂದೀಶ್ವರ ಗದ್ದುಗೆಗೆ ಮಂಟಪವನ್ನು ನಿರ್ಮಿಸಿದರು. ಇವರ ನಂತರ ಬಂದಂತಹ ಎಲ್ಲಾ ಗುರುಗಳು ಮಠದ ಅಭಿವೃದ್ಧಿಗೆ ಶ್ರಮಿಸಿ ಲಿಂಗೈಕ್ಯರಾಗಿದ್ದಾರೆ. ಪ್ರಸ್ತುತ ಮಠದಲ್ಲಿ ಮಠಾಧೀಶರು ಯಾರೂ ಇಲ್ಲದೆ ಭಕ್ತರೇ ಮಠದ ಆಡಳಿತ ಮತ್ತು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಬಸವಲಿಂಗ ಸ್ವಾಮಿಗಳ ಕ್ರಿಯಾಶೀಲ ವ್ಯಕ್ತಿತ್ವದಿಂದ ಮಠವು ಅಭಿವೃದ್ಧಿಯನ್ನು ಕಂಡಿದೆ. ಗುರುಗಳ ಕ್ರಿಯಾಶೀಲ ವ್ಯಕ್ತಿತ್ವ ಮತ್ತು ತಪೋಶಕ್ತಿಗೆ ಕೆಳದಿ ಅರಸನಾದ ಬೂದಿಬಸಪ್ಪ ನಾಯಕನು (೧೭೩೯-೧೭೫೫) ಪ್ರಭಾವಿತನಾಗಿ ಮಠದ ಭಕ್ತನಾಗಿ ಮಠಕ್ಕೆ ಸುಸಜ್ಜಿತ ಕಟ್ಟಡವನ್ನು ನಿರ್ಮಿಸಿಕೊಟ್ಟಿದ್ದಾನೆ. ಅಲ್ಲದೆ ಅನೇಕ ದತ್ತಿನಿಧಿಯನ್ನು ನೀಡಿ ಮಠ ಅಭಿವೃದ್ಧಿಯಾಗಲು ಕಾರಣಕರ್ತನಾದನು.

ಧಾರ್ಮಿಕ ಕಾರ್ಯಗಳು: ಶ್ರೀ ಬೂದೀಶ್ವರ ಶಿವಯೋಗಿಗಳ ಗದ್ದುಗೆಯನ್ನು ಕೇಂದ್ರವಾಗಿಟ್ಟುಕೊಂಡು ರಚಿತವಾಗಿರುವ ಮಠದ ಕಟ್ಟಡದ ಆವರಣದಲ್ಲಿ ಅಲ್ಲಮ ಪ್ರಭುಗಳ ತೋರುಗದ್ದುಗೆ ಸೇರಿದಂತೆ ಪಂರಪರೆಯ ಗುರುಗಳ ಗದ್ದುಗೆಗಳು

ಸ್ಥಾಪನೆಯಾಗಿವೆ. ಈ ಗದ್ದುಗೆಗಳಿಗೆ ನಿತ್ಯ ಪೂಜೆ ನಡೆಸಲಾಗುತ್ತಿದೆ. ವರ್ಷಕ್ಕೊಮ್ಮೆ ಶ್ರೀ ಬೂದೀಶ್ವರ ಸ್ವಾಮಿಗಳ ಜಾತ್ರೆಯನ್ನು ಅದ್ದೂರಿಯಾಗಿ ಆಚರಿಸಲಾಗುತ್ತಿದೆ. ಶ್ರೀ ಬೂದೀಶ್ವರ ಶಿವಯೋಗಿಗಳು ಬಳಸುತ್ತಿದ್ದ ದಂಡ,ಕಮಂಡಲ, ಪಾದುಕೆಗಳು ಮಠದಲ್ಲಿ ಇದ್ದು ಇವುಗಳಿಗೂ ನಿತ್ಯ ಪೂಜೆಯನ್ನು ಸಲ್ಲಿಸಲಾಗುತ್ತಿದೆ. ಪ್ರತಿ ತಿಂಗಳು ಶಿವಾನುಭವಗೋಷ್ಠಿ ಗಳು ಶ್ರಾವಣ ಮತ್ತು ಕಾರ್ತಿಕೋತ್ಸವಗಳಲ್ಲಿ ವಿಶೇಷ ಪೂಜೆ ನಡೆಸಲಾಗುತ್ತಿದೆ.

ಸಾಹಿತ್ಯ ಸೇವೆ: ಮಠವು ಧಾರ್ಮಿಕ ಆಚರಣೆಗಳಿಂದ ಹೆಚ್ಚು ಹೆಸರು ಮಾಡಿದಂತೆ ಸಾಹಿತ್ಯ ಕ್ಷೇತ್ರದಲ್ಲಿಯೂ ಗಣನೀಯವಾದ ಸೇವೆ ಸಲ್ಲಿಸಿದೆ. ವಚನ ವಾಙ್ಮಯದಲ್ಲಿ ಬಸವಣ್ಣನವರ, ಆಚರಣೆಯ ವಚನ ಮತ್ತು ಶ್ರೀ ಬೂದೀಶ್ವರ ಲೀಲೆ ಮೊದಲಾದ ಅನೇಕ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿದೆ. ಈ ರೀತಿ ಎಲ್ಲ ಕ್ಷೇತ್ರಗಳಲ್ಲಿಯೂ ಅಭಿವೃದ್ಧಿಯ ವಾಹಿನಿಯಾಗಿ ಭಕ್ತರಿಗೆ ಮಾರ್ಗ ದರ್ಶನ ತೋರುತ್ತಿರುವ ಶ್ರೀ ಬೂದೀಶ್ವರ ಮಠದಲ್ಲಿ ನಿತ್ಯ ಅನ್ನದಾಸೋಹ ನಡೆಯುತ್ತಿದೆ.

ವಿಳಾಸ: ಧರ್ಮದರ್ಶಿಗಳು, ಶ್ರೀ ಬೂದೀಶ್ವರ ಸಂಸ್ಥಾನ ಮಠ, ಹೊಸಹಳ್ಳಿ -೫೮೨ ೨೦೫, ಗದಗ ತಾಲ್ಲೂಕು.

❑

ನರಗುಂದ ತಾಲ್ಲೂಕು

ಗದಗ ಜಿಲ್ಲೆಯ ನರಗುಂದ ತಾಲ್ಲೂಕು ಪ್ರಾಚೀನ ಇತಿಹಾಸವನ್ನು ಹೊಂದಿದೆ. ಈ ತಾಲ್ಲೂಕು ಐತಿಹಾಸಿಕ ಪರಂಪರೆಯಂತೆಯೇ ಧಾರ್ಮಿಕವಾಗಿಯೂ ಹೆಸರು ಪಡೆದಿದೆ. ತಾಲ್ಲೂಕಿನಾದ್ಯಂತ ಸುಮಾರು ಮೂವತ್ತು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಇಂದು ಹದಿಮೂರು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿ ವೀರಶೈವ ಧರ್ಮವನ್ನು ಪ್ರಬಲವಾಗಿ ಬೆಳೆಸಿವೆ.

ಕೊಣ್ಣೂರು

ನರಗುಂದ ತಾಲ್ಲೂಕಿನ ಕೊಣ್ಣೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಇಪ್ಪತ್ತು ಕಿ.ಮೀ. ದೂರದಲ್ಲಿದೆ. ಅಭಿವೃದ್ಧಿಯನ್ನು ಕಾಣಬೇಕಾಗಿರುವ ಈ ಗ್ರಾಮದಲ್ಲಿ ಶ್ರೀ ಹಿರೇಮಠ ಮತ್ತು ಶ್ರೀ ವಿರಕ್ತಮಠ ಸ್ಥಾಪನೆಯಾಗಿ ಈ ಗ್ರಾಮದ ಧಾರ್ಮಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗೆ ಕಾರಣವಾಗಿವೆ.

ಹಿರೇಮಠ: ಕೊಣ್ಣೂರು ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಹಿರೇಮಠವು ಪುರಾತನ ಕಾಲದಲ್ಲಿ ಸ್ಥಾಪನೆಗೊಂಡಿದೆ. ಎಂದು ಹೇಳಲಾಗುತ್ತಿದೆ. ಕಾಶಿಪೀಠದ ಶಾಖಾಮಠವಾಗಿರುವ ಈ ಮಠವು ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದು ಬಂದಿದೆ. ಈ ಮಠವು ಬೆಳಗಾಂ, ಬಿಜಾಪುರ ಜಿಲ್ಲೆಗಳಲ್ಲಿ ಭಕ್ತರನ್ನು ಸಂಪಾದಿಸಿಕೊಂಡಿದೆ.

ಪರಂಪರೆ:

೧. ಷ.ಬ್ರ.ಶ್ರೀ ಸಂಗನಬಸವ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಕರಿಬಸವ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಮುಪ್ಪಿನ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಕಂಬಾಳಿ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಮುರುಗೇಂದ್ರ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ನೂರೊಂದು ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ಗುರುಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೧೦. ಷ.ಬ್ರ.ಶ್ರೀ ಎರಡನೆಯ ಮುರುಗೇಂದ್ರ ಶಿವಾಚಾರ್ಯಸ್ವಾಮಿಗಳು
೧೧. ಷ.ಬ್ರ.ಶ್ರೀ ವೀರಭದ್ರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಪರಂಪರೆಯ ಒಂಬತ್ತನೆಯ ಗುರುಗಳಾದ ಶ್ರೀ ಗುರುಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ೧೯೨೨ ರ ಅಕ್ಟೋಬರ್ ಹದಿನೈದರಂದು ಪಟ್ಟಾಧಿಕಾರಕ್ಕೆ ಬಂದರು.ಸಂಸ್ಕೃತ, ಪ್ರಾಕೃತವನ್ನು ಅಧ್ಯಯನ ಮಾಡಿ ಮುಕ್ತಿಮಾರ್ಗ,ಹಿತಮಾರ್ಗೋಪದೇಶ,ಸ್ತ್ರೀನೀತಿ ಪದ್ಯ ಪಂಜರಿ, ಮಾನವ ಧರ್ಮ ಮತ್ತು ನೀತಿ ಸುಧಾ ಎಂಬ ಗ್ರಂಥಗಳನ್ನು ಬರೆದು ಪ್ರಕಟಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇವರ ವಿದ್ವತ್ತಿಗೆ ಮೆಚ್ಚಿದ ಬ್ರಿಟಿಷ್ ಸರ್ಕಾರವು ಹದಿನೆಂಟು ಎಕರೆ ಜಮೀನನ್ನು ನೀಡಿ ೧೯೪೪ ನೆಯ ಜೂನ್ ಹತ್ತರಂದು ಗುರುಗಳ ಹೆಸರಿಗೆ ನೊಂದಾಯಿಸಿಕೊಟ್ಟಿದೆ. ಅಲ್ಲದೆ ಬಾದಾಮಿ ತಾಲ್ಲೂಕಿನ ಸೋಮನಕೊಪ್ಪದ ದೇಶಪಾಂಡೆಯವರು ಸಹ ಹದಿನಾರು ಎಕರೆ ಭೂಮಿಯನ್ನು ದಾನವಾಗಿ ನೀಡಿದ್ದರೆಂದು ಉಲ್ಲೇಖ ಇದೆ. ಇವರ ಕಾಲದಲ್ಲಿ ಮಠವು ಹೆಚ್ಚು ಅಭಿವೃದ್ಧಿಯಾಗಿ ಹೆಸರುಗಳಿಸಿತು. ಧಾರ್ಮಿಕ ಮತ್ತು ಸಾಹಿತ್ಯಕವಾಗಿ ಹೆಚ್ಚು ಹೆಸರುಮಾಡಿದ ಗುರುಗಳು ೧೯೬೮ರಲ್ಲಿ ಲಿಂಗೈಕ್ಯರಾಗಿದ್ದಾರೆ.

ಪುತ್ರವರ್ಗದ ಸಂಪ್ರದಾಯದ ಈ ಮಠಕ್ಕೆ ಶ್ರೀ ಮೃತ್ಯುಂಜಯಸ್ವಾಮಿ ಮತ್ತು ಶ್ರೀಮತಿ ಮಂಗಳಮ್ಮನವರ ಪುತ್ರರಾಗಿ ಜನಿಸಿದ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳನ್ನು ಅಧಿಕಾರಕ್ಕೆ ತರಲಾಗಿದೆ. ಸಂಸ್ಕೃತ ಸಾಹಿತ್ಯವನ್ನು

ಹೊನ್ನಾಳಿ ಮಠದಲ್ಲಿ ಅಭ್ಯಾಸ ಮಾಡಿ ಮಠಕ್ಕೆ ಆಗಮಿಸಿದ ಗುರುಗಳು ೧೯೬೪ ರಲ್ಲಿ ಉತ್ತರಾಧಿಕಾರಿಗಳಾಗಿ ನೇಮಕಗೊಂಡು ಮಠದ ಆಡಳಿತವನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯಪೂಜೆ ನಡೆಸಲಾಗುತ್ತಿದೆ. ಪ್ರತಿ ಶ್ರಾವಣದಲ್ಲಿ ಕರ್ತೃಗದ್ದುಗೆಗೆ ರುದ್ರಾಭಿಷೇಕದ ವಿಶೇಷ ಪೂಜೆಯನ್ನು ನಡೆಸಲಾಗುವುದಲ್ಲದೆ, ಶ್ರಾವಣಮಾಸದಲ್ಲಿ ಒಂದು ತಿಂಗಳು ಪುರಾಣ ಪ್ರವಚನವನ್ನು ನಡೆಸಲಾಗುತ್ತಿದೆ. ಕಾರ್ತೀಕ ಮಾಸದಲ್ಲಿ ಶ್ರೀ ಮುರುಗೇಂದ್ರ ಸ್ವಾಮಿಗಳ ಆರಾಧನೆಯನ್ನು ನಡೆಸಲಾಗುತ್ತಿದೆ. ಮಠದಲ್ಲಿ ನಿತ್ಯ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಪ್ರತಿವರ್ಷ ನಡೆಯುವ ಜಾತ್ರೆಯಲ್ಲಿ ಸುಮಾರು ಹತ್ತು ಸಾವಿರ ಜನರಿಗೆ ಅನ್ನದಾಸೋಹವನ್ನು ನಡೆಸಲಾಗುತ್ತಿದೆ. ಧರ್ಮಜಾಗೃತಿಗಾಗಿ ಶಿಗ್ಗಾಂವಿ ತಾಲ್ಲೂಕಿನ ಗಂಜಿ ಕಟ್ಟೆಯ ಗುರುಗಳ ಜೊತೆ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದಾರೆ. ಈ ರೀತಿ ಜನಪರ ಕಾರ್ಯಗಳ ಜೊತೆಗೆ ಸ್ಪಂದಿಸಿದ್ದಲ್ಲದೆ ಶಿಕ್ಷಣಕ್ಕೆ ಪ್ರೋತ್ಸಾಹ ಕೊಡುವ ಉದ್ದೇಶದಿಂದ ಮಠವು ಎಸ್.ಎಸ್.ಎಲ್.ಸಿ.ಯಲ್ಲಿ ಅತಿ ಹೆಚ್ಚು ಅಂಕ ಪಡೆದ ಗ್ರಾಮದ ವಿದ್ಯಾರ್ಥಿಗೆ ಪ್ರಶಸ್ತಿನೀಡಿ ಪ್ರೋತ್ಸಾಹ ಧನವನ್ನು ನೀಡುವ ಪರಿಪಾಠವನ್ನು ಬೆಳೆಸಿಕೊಂಡು ಬಂದಿದೆ. ಈ ಮಠಕ್ಕೆ ಹನ್ನೊಂದು ಎಕರೆ ಭೂಮಿ ಇದ್ದು, ನೀರಾವರಿಗೆ ಯೋಗ್ಯಗೊಳಿಸಲಾಗಿದೆ. ನೂರಾಅರವತ್ತು ವರ್ಷಗಳ ಹಳೆಯದಾದ ಮಠದ ಕಟ್ಟಡವು ಕಲ್ಲಿನ ಹಾಗೂ ಮರದ ಕೆತ್ತನೆಯಿಂದ ಅಲಂಕೃತಗೊಂಡಿದ್ದು ಒಂದು ಸ್ಮಾರಕದಂತೆ ಕಂಗೊಳಿಸುತ್ತಿದೆ.

ವಿಳಾಸ:ಷ.ಬ್ರ.ಶ್ರೀವೀರಭದ್ರ ಶಿವಾಚಾರ್ಯಸ್ವಾಮಿಗಳು,ಶ್ರೀ ಹಿರೇಮಠ, ಕೊಣ್ಣೂರು, ನರಗುಂದ ತಾಲ್ಲೂಕು, ಗದಗ ಜಿಲ್ಲೆ.
ಆಧಾರ: ವೇ. ವಿರೂಪಾಕ್ಷ ಶಾಸ್ತ್ರಿ ಅವರ - **'ಗುರುವರ್ಗ ದರ್ಪಣ'**

ವಿರಕ್ತ ಮಠ: ಕೊಣ್ಣೂರು ಗ್ರಾಮದ ಉತ್ತರದ ಹೊರಭಾಗದಲ್ಲಿ ವಿರಕ್ತ ಮಠವು ಸ್ಥಾಪನೆಯಾಗಿ ಈ ಗ್ರಾಮದ ಧಾರ್ಮಿಕ ಕೇಂದ್ರಬಿಂದುವಾಗಿ ಬೆಳೆದಿದೆ. ವಿರಕ್ತಸಂಪ್ರದಾಯದ ಕುಮಾರ ಸಮಯದ ಈ ಮಠವು ೧೭೪೦ ರಲ್ಲಿ ಶ್ರೀ ಚನ್ನಬಸವ ಸ್ವಾಮಿಗಳಿಂದ ಪ್ರಾರಂಭವಾಗಿದೆ ಎಂದು ಹೇಳಲಾಗುತ್ತದೆ. ಶ್ರೀ ಚನ್ನಬಸವ ಸ್ವಾಮಿಗಳು ರಾಮದುರ್ಗ ತಾಲ್ಲೂಕಿನ ಕುಂದ್ರಾಳ ಗ್ರಾಮದಿಂದ ಲೋಕಸಂಚಾರಕ್ಕೆ ಹೊರಟು ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ ಈ ಗ್ರಾಮಕ್ಕೆ ಬಂದು ನೆಲೆ ನಿಲ್ಲುತ್ತಾರೆ.ಗುರುಗಳು ನೀಡುತ್ತಿದ್ದ ಬಸವತತ್ತ್ವ ಪುರಾಣ ಹಾಗೂ ಶಿವಾನುಭವ ಗೋಷ್ಠಿಗಳಿಂದ ಇಲ್ಲಿನ ಭಕ್ತರು ಆಕರ್ಷಿತರಾಗಿ ಗುರುಗಳಿಗೆ ಮಠ ಕಟ್ಟಲು ನೆರವಾಗುತ್ತಾರೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ಚನ್ನಬಸವ ಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಬಸವಲಿಂಗ ಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಸಂಗನಬಸವ ಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಬಸವಯ್ಯ ಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಚನ್ನವೀರ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳು ಮಠಕ್ಕೆ ಸುಸಜ್ಜಿತ ಕಟ್ಟಡವನ್ನು ನಿರ್ಮಿಸಿದರು. ಅಲ್ಲದೆ ಭವಿಷ್ಯದ ದೃಷ್ಟಿಯಿಂದ ಆಸ್ತಿಯನ್ನು ಮಾಡಿ ಮಠಕ್ಕೆ ಸ್ವಾವಲಂಬನೆ ತಂದುಕೊಟ್ಟು ಲಿಂಗೈಕ್ಯರಾಗಿದ್ದಾರೆ. ಇವರ ತರುವಾಯ ಶ್ರೀಬಸವಲಿಂಗ ಸ್ವಾಮಿಗಳು,ಶ್ರೀ ಸಂಗನಬಸವ ಸ್ವಾಮಿಗಳು ಅಧಿಕಾರಕ್ಕೆ ಬಂದರು.ಆಧಾರಗಳ ಕೊರತೆಯಿಂದ ಇವರ ಬಗ್ಗೆ ಹೆಚ್ಚು ವಿಷಯ ತಿಳಿಯದಾಗಿದೆ. ನಂತರ ಶ್ರೀ ಬಸವಯ್ಯ ಸ್ವಾಮಿಗಳು ಮಠದ ಆಡಳಿತವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿ ೧೯೫೭ ರಲ್ಲಿ ಕುಂದ್ರಾಳು ಗ್ರಾಮದಲ್ಲಿ ಲಿಂಗೈಕ್ಯರಾಗಿದ್ದಾರೆ.

ರಾಮದುರ್ಗ ತಾಲ್ಲೂಕಿನ ಕುಂದ್ರಾಳು ಮಠದ ವಂಶಸ್ಥರಾದ ಶ್ರೀ ಈಶ್ವರಯ್ಯ ಮತ್ತು ಶ್ರೀಮತಿ ನಾಗಮ್ಮನವರ ಪುತ್ರರಾಗಿ ೧೯೩೧ ರಲ್ಲಿ ಜನಿಸಿದ ಶ್ರೀ ಚನ್ನವೀರ ಸ್ವಾಮಿಗಳು ಕೊನ್ನೂರು ಮಠದಲ್ಲಿದ್ದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ವನ್ನು ಮುಗಿಸಿ ಹುಬ್ಬಳ್ಳಿಯಲ್ಲಿ ಸಂಸ್ಕೃತ ವೇದಾಧ್ಯಯವನ್ನು ಮಾಡಿ ೧೯೫೮ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡಿರುತ್ತಾರೆ.

ಕಾಯಕ ಯೋಗಿಯಾಗಿ ಮಠದ ಜಮೀನನ್ನು ಅಭಿವೃದ್ಧಿ ಪಡಿಸಿ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ಕರ್ತೃಗುರುಗಳ ಕಾಲದಲ್ಲಿ ನಿರ್ಮಿಸಲ್ಪಟ್ಟಿದ್ದ ಮಠದ ಕಟ್ಟಡವನ್ನು ಅಗತ್ಯಕ್ಕೆ ಅನುಗುಣವಾಗಿ ನವೀಕರಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಮೂರು ಗದ್ದುಗೆಗಳಿಗೆ ನಿತ್ಯ ಪೂಜೆ, ಶ್ರಾವಣ ಮಾಸದ ಕೊನೆಯ ಸೋಮವಾರ ಪಲ್ಲಕ್ಕಿ ಉತ್ಸವವನ್ನು ಆಚರಿಸಲಾಗುತ್ತದೆ. ಅಂದು ಸೇರುವ ಸಾವಿರಾರು ಭಕ್ತರಿಗೆ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ಶೈಕ್ಷಣಿಕ ಸೇವೆ: ೧೯೬೫ ರಲ್ಲಿ ಕೊಣ್ಣೂರು ಶಿಕ್ಷಣ ಸಮಿತಿಯನ್ನು ಪ್ರಾರಂಭಿಸಿ ಈ ಸಮಿತಿಯ ಆಶ್ರಯದಲ್ಲಿ ಒಂದು ಪ್ರೌಢಶಾಲೆ, ಒಂದು ಪದವಿಪೂರ್ವ ಕಾಲೇಜು, ಸ್ವಯಂ ಉದ್ಯೋಗ ತರಬೇತಿ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ಉಚಿತ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿ ಕಲಿಯುವ ಐವತ್ತೈದು ಬಡಮಕ್ಕಳಿಗೆ ಆಶ್ರಯ ಕಲ್ಪಿಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಚನ್ನವೀರ ಸ್ವಾಮಿಗಳು, ಶ್ರೀ ವಿರಕ್ತಮಠ, ಕೊಣ್ಣೂರು, ನರಗುಂದ ತಾಲ್ಲೂಕು, ಗದಗ ಜಿಲ್ಲೆ.

ನರಗುಂದ

ಗದಗ ಜಿಲ್ಲೆಯ ನರಗುಂದ ಪಟ್ಟಣವು ಜಿಲ್ಲಾ ಕೇಂದ್ರದಿಂದ ವಾಯುವ್ಯ ಭಾಗಕ್ಕೆ ನಲವತ್ತು ಕಿ.ಮೀ. ದೂರದಲ್ಲಿದೆ. ತಾಲ್ಲೂಕು ಕೇಂದ್ರವಾದ ನರಗುಂದ ಪಟ್ಟಣದಲ್ಲಿ ಶ್ರೀ ಪಂಚಗ್ರಹ ಗುಡ್ಡದ ಹಿರೇಮಠ, ಶ್ರೀ ಚನ್ನಬಸವೇಶ್ವರ ವಿರಕ್ತಮಠ ಹಾಗೂ ಪುಣ್ಯಾರಣ್ಯ ಪತ್ರೆವನ ಸಂಸ್ಥಾನ ಮಠ ಈ ರೀತಿ ಒಟ್ಟು ಮೂರು ಮಠಗಳು ಸ್ಥಾಪನೆಯಾಗಿ ಪಟ್ಟಣವನ್ನು ಧಾರ್ಮಿಕವಾಗಿ ಶ್ರೀಮಂತಗೊಳಿಸಿವೆ.

ಪಂಚಗ್ರಹ ಗುಡ್ಡದ ಹಿರೇಮಠ: ನರಗುಂದ ಪಟ್ಟಣದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಪಂಚಗ್ರಹಗುಡ್ಡದ ಹಿರೇಮಠವು ಉಜ್ಜಯಿನಿ ಪೀಠದ ಶಾಖಾ ಮಠವಾಗಿ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಪುರಾತನ ಕಾಲದಲ್ಲಿ ಪ್ರಾರಂಭಗೊಂಡಿರಬಹುದಾದ ಈ ಮಠವು ನರಗುಂದದ ಬಾಬಾಸಾಹೇಬನ ಕಾಲದಲ್ಲಿ ಹೆಚ್ಚು ನೆರವು ದೊರೆತು ಶ್ರೀಮಂತಗೊಂಡಿದೆ. ಶ್ರೀ ಘನಲಿಂಗ ಚಕ್ರವರ್ತಿ ಚನ್ನವಿರ ಶಿವಾಚಾರ್ಯ ಸ್ವಾಮಿಗಳು ಈ ಮಠದ ಕರ್ತೃಗಳೆಂದು ಹೇಳಲಾಗುತ್ತಿದೆ. ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಮಹಾ ತಪಸ್ವಿಗಳಾಗಿ, ಧರ್ಮಚಿಂತಕರಾಗಿ, ವಾಕ್‌ಸಿದ್ಧಿಗಳಾಗಿ ಹೆಸರು ಮಾಡಿದವರಾಗಿದ್ದರು. ಇವರ ಕಾಲದಲ್ಲಿ ಮಠವು ಸುಸಜ್ಜಿತವಾಗಿ ಬೆಳೆದು ಈ ಪ್ರಾಂತ್ಯದ ಪ್ರಭಾವಿ ಮಠವಾಗಿ ಬೆಳೆಯಿತು.

ಪರಂಪರೆ: ಮಠದ ಪರಂಪರೆಯಲ್ಲಿ ಬರುವ ಎಲ್ಲಾ ಗುರುಗಳಿಗೂ ಶ್ರೀ ಘನಲಿಂಗ ಚಕ್ರವರ್ತಿ ಚನ್ನವೀರ ಶಿವಾಚಾರ್ಯ ಸ್ವಾಮಿಗಳೆಂಬ ಒಂದೇ ಹೆಸರು ಅಭಿಧಾನಗೊಳ್ಳುವ ಕಾರಣ ಮಠದ ಪರಂಪರೆಯಲ್ಲಿ ಬೇರೆ ಹೆಸರುಗಳನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ಮಠದ ಆವರಣದಲ್ಲಿ ಐದು ಗದ್ದುಗೆಗಳು ಸ್ಥಾಪನೆಯಾಗಿವೆ. ಅಲ್ಲದೆ ಗುಡ್ಡದ ಮೇಲೆ ಒಂದು ಗದ್ದುಗೆ ಸ್ಥಾಪನೆಯಾಗಿದೆ. ಕಳೆದ ತಲೆಮಾರಿನ ಗುರುಗಳು ಮಹಾ ತಪಸ್ವಿಗಳಾಗಿದ್ದರು ಇವರು ವೀರಶೈವ ಧರ್ಮದ ತತ್ತ್ವಸಿದ್ಧಾಂತಗಳಾದ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳ ಬಗ್ಗೆ ಭಕ್ತರಲ್ಲಿ ತಿಳಿವಳಿಕೆ ಮೂಡಿಸಲು ಶ್ರಮಿಸಿದರು. ಇವರ ಕಾಲದಲ್ಲಿ ಮಠದ ಕಟ್ಟಡವು ಅಗತ್ಯಕ್ಕೆ ತಕ್ಕಷ್ಟು ವಿಸ್ತಾರಗೊಂಡಿತು. ಪಂಚಪೀಠಾಧೀಶರ ಜೊತೆಗೆ ಉತ್ತಮ ಸಂಬಂಧವನ್ನು ಇಟ್ಟುಕೊಂಡು ಧರ್ಮವನ್ನು ಬೆಳೆಸಿದರು. ತಮ್ಮ ಜೀವಿತಾವಧಿಯಲ್ಲಿಯೇ ಉತ್ತರಾಧಿಕಾರಿಯನ್ನು ನೇಮಕಮಾಡಿಕೊಂಡು ೧೯೮೦ ರಲ್ಲಿ ಲಿಂಗೈಕ್ಯರಾಗಿದ್ದಾರೆ.

ಹಿರಿಯ ಗುರುಗಳ ಸಹೋದರ ಸಂಬಂಧಿಯಾದ ಶ್ರೀ ಚಿಕ್ಕವೀರಯ್ಯ ಮತ್ತು ಶ್ರೀಮತಿ ಪಾರ್ವತಮ್ಮನವರ ಪುತ್ರರಾಗಿ ೧೯೬೫ ರಲ್ಲಿ ಜನಿಸಿದ ಶ್ರೀ ಚನ್ನವೀರ ಸ್ವಾಮಿಗಳು ನರಗುಂದದಲ್ಲಿ ಪ್ರಾಥಮಿಕ ಹಾಗೂ ಧಾರವಾಡದಲ್ಲಿ ಪದವಿ ಶಿಕ್ಷಣ ಮತ್ತು ಶಿವಯೋಗ ಮಂದಿರದಲ್ಲಿ ಧಾರ್ಮಿಕ ಶಿಕ್ಷಣವನ್ನು ಪಡೆದು ಬಂದು ಘನಲಿಂಗ ಚಕ್ರವರ್ತಿ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳೆಂದು ಅಭಿಧಾನ ಪಡೆದು ೧೯೮೦ ರಲ್ಲಿ ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಕ್ರಿಯಾಶೀಲ ಗುಣಗಳನ್ನು ಮೈಗೂಡಿಸಿಕೊಂಡ ಗುರುಗಳು ಮಠದ ಸರ್ವಾಂಗೀಣ ಅಭಿವೃದ್ಧಿಗೆ ನೀಲಿನಕ್ಷೆಯನ್ನು ತಯಾರಿಸಿಕೊಂಡು ಮಠವನ್ನು ಹಂತ ಹಂತವಾಗಿ ಅಭಿವೃದ್ಧಿಪಡಿಸುತ್ತಿದ್ದಾರೆ. ಉಜ್ಜಯಿನಿ ಪೀಠದ ಹಿಂದಿನ ಜಗದ್ಗುರುಗಳಾದ ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಭಗವತ್ಪಾದರು ಪೀಠದಿಂದ ಆಗಮಿಸಿ ನರಗುಂದ ಗುಡ್ಡದಲ್ಲಿ ದೀರ್ಘ ಅನುಷ್ಠಾನ ಕುಳಿತು ಈ ಜಾಗವನ್ನು ಪಾವನಗೊಳಿಸಿದ್ದರು.ಇಂತಹ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯವನ್ನು ಕೈಗೊಂಡು ಗದ್ದುಗೆ ಹಾಗೂ ಮಂಟಪವನ್ನು ನಿರ್ಮಿಸಿ ಶರಣೆ ಕಲ್ಯಾಣಮ್ಮನವರನ್ನು ನೇಮಕಗೊಳಿಸಿ ಪೂಜಾಕಾರ್ಯಗಳು ನಡೆಯುವಂತೆ ವ್ಯವಸ್ಥೆ ಗೊಳಿಸಿ,ಸಿದ್ಧೇಶ್ವರ ಬೆಟ್ಟವನ್ನು ಒಂದು ಯಾತ್ರಾ ಸ್ಥಳವನ್ನಾಗಿ ರೂಪಿಸಿದ್ದಾರೆ.ಮಠದ ಆಸ್ತಿಯನ್ನು ಕೃಷಿಗೆ ಯೋಗ್ಯಗೊಳಿಸಿ ಉತ್ಪನ್ನವನ್ನು ತೆಗೆಯುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಒಳ ಆವರಣದಲ್ಲಿ ಪರಂಪರೆಯ ಗುರುಗಳ ಗದ್ದುಗೆಗಳನ್ನು ನಿರ್ಮಿಸಿದ್ದು ಇವುಗಳಿಗೆ ನಿತ್ಯಪೂಜೆಯನ್ನು ಸಲ್ಲಿಸಲಾಗುತ್ತಿದೆ.ಬೆಟ್ಟದ ಮೇಲೆ ಪ್ರತಿ ಅಮಾವಾಸ್ಯೆ ಮತ್ತು ಹುಣ್ಣಿಮೆಯಲ್ಲಿ ಪ್ರವಚನ ಮತ್ತು ಭಜನೆಯನ್ನು ನಡೆಸಲಾಗುತ್ತಿದೆ. ಸಿದ್ಧಲಿಂಗೇಶ್ವರ ಮೂರ್ತಿಯ ಪ್ರತಿಷ್ಠಾಪನೆ,ವೀರಭದ್ರ, ನಾಗರಕಟ್ಟೆ ಹಾಗೂ ಈಶ್ವರಲಿಂಗ ವನ್ನು ಪ್ರತಿಷ್ಠಾ ಪನೆ ಮಾಡಲಾಗಿದೆ.ಐದು ದಿನಗಳ ಕಾಲ ಸಿದ್ಧಲಿಂಗೇಶ್ವರ ಜಾತ್ರೆಯನ್ನು ಆಶ್ವೀಜ ಬಹುಳ ಸಪ್ತಮಿಯಂದು ನಡೆಸಲಾಗುತ್ತಿದೆ.ಮಠದಲ್ಲಿ ಪುರಾತನ ಕಾಲದ ಪಲ್ಲಕ್ಕಿ, ಬೆತ್ತ ಹಾಗೂ ಪೂಜಾ ಸಾಮಗ್ರಿಗಳಿವೆ. ಮಠದ ವತಿಯಿಂದ ಶ್ರೀ ಸಿದ್ಧೇಶ್ವರ ಬೆಟ್ಟದಲ್ಲಿ ನಿತ್ಯಅನ್ನ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಶೈಕ್ಷಣಿಕ ಕಾರ್ಯ: ಮಠದ ವತಿಯಿಂದ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ ಪ್ರೌಢಶಾಲೆ ಹಾಗೂ ಶ್ರೀ ಸಿದ್ಧೇಶ್ವರ ಕಲಾ ಕಾಲೇಜನ್ನು ನಡೆಸಲಾಗುತ್ತಿದೆ. ಅಲ್ಲದೆ ಸರ್ಕಾರದ ವತಿಯಿಂದ ನಡೆಯುವ ಪ್ರಥಮದರ್ಜೆ ಕಾಲೇಜು ಹಾಗೂ ಸರ್ಕಾರಿ ಆಸ್ಪತ್ರೆಗೆ ಹತ್ತು ಎಕರೆ ಭೂಮಿಯನ್ನು ನೀಡಿರುವುದಲ್ಲದೆ ವಿವಿಧ ಅಭಿವೃದ್ಧಿ ಕಾರ್ಯಗಳಿಗಾಗಿ ಒಟ್ಟು ಐವತ್ತು ಎಕರೆ ಭೂಮಿಯನ್ನು ದಾನ ಮಾಡಲಾಗಿದೆ.

ವಿಳಾಸ: ಶ್ರೀ ಘನಲಿಂಗ ಚಕ್ರವರ್ತಿ ಚನ್ನವೀರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಪಂಚಗ್ರಹ ಹಿರೇಮಠ, ನರಗುಂದ, ಗದಗ ಜಿಲ್ಲೆ.

ಚನ್ನಬಸವೇಶ್ವರ ವಿರಕ್ತ ಮಠ: ನರಗುಂದ ಪಟ್ಟಣದ ಸಿದ್ಧನಬಾವಿ ಓಣಿಯಲ್ಲಿ ಶ್ರೀ ಚನ್ನಬಸವೇಶ್ವರ ವಿರಕ್ತ ಮಠವು ಸ್ಥಾಪನೆಯಾಗಿದೆ. ಕಳೆದ ಎರಡುನೂರು ವರ್ಷಗಳ ಹಿಂದೆ ಪ್ರಾರಂಭಗೊಂಡಿದ್ದ ಶ್ರೀ ವಿರಕ್ತಮಠವು ಶ್ರೀ ನಿರಂಜನ ಸ್ವಾಮಿಗಳ ಕಾಲದಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಸಾಧಿಸಿದೆ.

ಹೆಸರು ಪಡೆದ ಕಾಲ: ಮೈಸೂರು ಕಡೆಯಿಂದ ಲೋಕಸಂಚಾರ ಕೈಗೊಂಡು ಈ ಕ್ಷೇತ್ರಕ್ಕೆ ಆಗಮಿಸಿದ ಬಾಲಕ ಶ್ರೀಚನ್ನಬಸವ ಸ್ವಾಮಿಗಳು ಹುಬ್ಬಳ್ಳಿ ಮಾರ್ಗವಾಗಿ ಸಂಚರಿಸಿ ಇಲ್ಲಿ ನೆಲೆಗೊಂಡರು. ಈ ಸಂದರ್ಭದಲ್ಲಿ ಶ್ರೀ ನಿರಂಜನ ಸ್ವಾಮಿಗಳು ವಿರಕ್ತ ಮಠದಲ್ಲಿ ವಿರಾಜಿಸುತ್ತಿದ್ದರು. ಶ್ರೀ ಚನ್ನಬಸವ ಸ್ವಾಮಿಗಳು ನರಗುಂದಕ್ಕೆ ಆಗಮಿಸಿದ ಮೇಲೆ ಶ್ರೀವಿರಕ್ತಮಠದ ಶ್ರೀ ನಿರಂಜನ ಸ್ವಾಮಿಗಳು ಬಾಲಕ ಶ್ರೀ ಚನ್ನಬಸವ ಸ್ವಾಮಿಗಳಿಗೆ ಧರ್ಮೋಪದೇಶವನ್ನು ಮಾಡಿದರು. ಶ್ರೀ ನಿರಂಜನ ಸ್ವಾಮಿಗಳ ನಂತರ ಮಠದ ಅಧಿಕಾರವನ್ನು ವಹಿಸಿಕೊಂಡ ಶ್ರೀ ಚನ್ನಬಸವೇಶ್ವರ ಸ್ವಾಮಿಗಳು ಬಹಳ ಪ್ರಭಾವಿ ವ್ಯಕ್ತಿತ್ವವನ್ನು ಬೆಳಸಿಕೊಂಡು ಶರಣ ಸಾಹಿತ್ಯವನ್ನು ಆಳವಾಗಿ ಅಭ್ಯಸಿಸಿ, ಸರಳ ರೀತಿಯಲ್ಲಿ ಭಕ್ತರಿಗೆ ಮನನ ಮಾಡಿಸುತ್ತಿದ್ದರು. ಶಿವಾನುಭವ ತತ್ತ್ವವನ್ನು ತಮ್ಮಲ್ಲಿ ಸಾಕಾರಗೊಳಿಸಿಕೊಂಡಿದ್ದ ಗುರುಗಳು ಭಕ್ತರ ಮನದಾಸೆಯನ್ನು ನೀಗಿಸುವ ಪವಾಡಪುರುಷರಾಗಿ ಬೆಳೆದರು.ಇಂತಹ ಮಹಾಪುರಷರು ನೂರ ಮೂವತ್ತೆರಡು ವರ್ಷಗಳ ಹಿಂದೆ ಲಿಂಗೈಕ್ಯಗೊಂಡಿದ್ದಾರೆ. ಆದರೂ ಇಂದಿಗೂ ಮಹಾ ಚೇತನವಾಗಿ ಭಕ್ತರಿಂದ ಆರಾಧನೆಗೆ ಒಳಗಾಗಿದ್ದಾರೆ.

ವಿಳಾಸ: ಅಧ್ಯಕ್ಷರು, ಶ್ರೀ ಚನ್ನಬಸವೇಶ್ವರ ವಿರಕ್ತ ಮಠಟ್ರಸ್ಟ್, ಸಿದ್ಧನಬಾವಿ ಓಣಿ, ನರಗುಂದ, ಗದಗ ಜಿಲ್ಲೆ.

ಪುಣ್ಯಾರಣ್ಯ ಪತ್ರಿವನ ಸಂಸ್ಥಾನ ಮಠ: ನರಗುಂದ ಪಟ್ಟಣದ ಉತ್ತರದ ಹೊರಭಾಗದಲ್ಲಿ ಸಿದ್ಧೇಶ್ವರ ಬೆಟ್ಟದ ತಪ್ಪಲಿನಲ್ಲಿ

ಸ್ಥಾಪನೆಯಾಗಿರುವ ಪುಣ್ಯಾರಣ್ಯ ಪತ್ರೆವನ ಸಂಸ್ಥಾನ ಮಠವು ಉಜ್ಜಯಿನಿ ಪೀಠದ ಶಾಖಾ ಮಠವಾಗಿ ಬೆಳೆದು ಬಂದಿದೆ. ಗುರು ವಿರಕ್ತರ ಸಮನ್ವಯ ಮಠವಾಗಿ ಶಿಷ್ಯವರ್ಗದ ಪರಂಪರೆಯಲ್ಲಿ ಬೆಳೆದು ಈ ಭಾಗದ ವಿಶಿಷ್ಟ ಮಠವಾಗಿ ರೂಪ ಗೊಂಡಿದೆ. ಇಲ್ಲಿ ಸುಮಾರು ನೂರಾರು ಬಿಲ್ವ ಪತ್ರೆ ಮರಗಳು ಬೆಳೆದಿದ್ದು ಇದೊಂದು ಪುಣ್ಯಕ್ಷೇತ್ರವಾಗಿ ರೂಪುಗೊಂಡಿದೆ. ಇಂತಹ ಪುಣ್ಯಾರಣ್ಯ ಪತ್ರೆವನದಲ್ಲಿ ಶ್ರೀ ವೀರಪ್ಪಜ್ಜ ಎಂಬ ಶರಣರು ವೀರಶೈವಧರ್ಮವನ್ನು ಸ್ವೀಕರಿಸಿ ಅನೇಕ ವರ್ಷಗಳ ಕಾಲ ತಪಸ್ಸನ್ನು ಆಚರಿಸಿ ಈ ಕ್ಷೇತ್ರವನ್ನು ಪಾವನಗೊಳಿಸಿದರು. ಇವರ ತರುವಾಯ ಶ್ರೀ ಶಿವಪ್ಪಜ್ಜಯ್ಯ ಎಂಬುವರು ನೆಲೆಸಿ ಈ ಕ್ಷೇತ್ರವು ಬೆಳೆಯಲು ಶ್ರಮಿಸಿದರು. ನಂತರ ಶ್ರೀ ಶಂಭುಲಿಂಗಸ್ವಾಮಿಗಳು ೧೯೫೨ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಗೊಳಿಸಿ ಹೆಚ್ಚು ಪ್ರಚಾರಕ್ಕೆ ತಂದರು.

ನರಗುಂದದ ಬಾಬಾಸಾಹೇಬರ ತಾಯಿ ಬೆಳೆಸಿದ ಈ ಪತ್ರೆವನವು ಪುಣ್ಯಕ್ಷೇತ್ರಗಳಲ್ಲಿ ಒಂದಾಗಿದೆ. ಈ ಕ್ಷೇತ್ರದಲ್ಲಿ ಸಿರಸಂಗಿ ಲಿಂಗರಾಜರು ಪುರಾತನ ಗವಿಯನ್ನು ಜೀರ್ಣಾಭಿವೃದ್ಧಿಗೊಳಿಸಿ ಈ ಕ್ಷೇತ್ರಕ್ಕೆ ಒಂದು ಧಾರ್ಮಿಕ ಕಳೆಯನ್ನು ತಂದುಕೊಟ್ಟಿದ್ದಾರೆ. ಇಂತಹ ಪವಿತ್ರ ಸ್ಥಳದಲ್ಲಿ ಶ್ರೀ ಶಂಭುಲಿಂಗೇಶ್ವರ ದೇವಸ್ಥಾನ ಸ್ಥಾಪನೆಯಾಗಿದೆ. ಗವಿಯ ಒಳಭಾಗದಲ್ಲಿ ಶ್ರೀ ಕಾಶಿವಿಶ್ವನಾಥ ಲಿಂಗ, ಶ್ರೀ ಸೋಮನಾಥಲಿಂಗ, ಶ್ರೀ ವೀರಪ್ಪಜ್ಜಯ್ಯ ಮತ್ತು ಶ್ರೀ ಶಿವಪ್ಪಜ್ಜಯ್ಯನವರ ಗದ್ದುಗೆಗಳು ಹಾಗೂ ದೇವಿ ಗದ್ದುಗೆ ನಿರ್ಮಾಣಗೊಂಡಿವೆ. ಇಂತಹ ಧಾರ್ಮಿಕ ಸ್ಥಳದಲ್ಲಿ ಕಳೆದ ನೂರಾರು ವರ್ಷಗಳಿಂದ ಧಾರ್ಮಿಕ ಆಚರಣೆಯನ್ನು ಜಾತಿ ಬೇಧವಿಲ್ಲದೆ ಸಮಷ್ಟಿ ಸಮಾಜದ ಭಕ್ತರೆಲ್ಲ ಸೇರಿ ನಡೆಸುತ್ತಿದ್ದಾರೆ.

ಪರಂಪರೆ:

೧. ಶ್ರೀ ವೀರಪ್ಪಜ್ಜಯ್ಯ
೨. ಶ್ರೀ ಶಿವಪ್ಪಜ್ಜಯ್ಯ
೩. ಶ್ರೀ ಶಂಭುಲಿಂಗಸ್ವಾಮಿಗಳು
೪. ಶ್ರೀ ಅಭಿನವ ಶಂಭುಲಿಂಗಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ೧೭೨೦ ರಲ್ಲಿ ಶ್ರೀ ವೀರಪ್ಪಜ್ಜಯ್ಯನವರು ಇಲ್ಲಿಗೆ ಆಗಮಿಸಿ ಈ ಪುಣ್ಯಕ್ಷೇತ್ರವನ್ನು ಅಭಿವೃದ್ಧಿಪಡಿಸಿದ್ದಾರೆ. ಇವರ ತರುವಾಯ ಶ್ರೀ ಶಿವಪ್ಪಜ್ಜಯ್ಯನವರು ನೆಲೆ ನಿಂತು ೧೮೬೦ ರಲ್ಲಿ ಶ್ರೀ ಶಂಭುಲಿಂಗೇಶ್ವರ ದೇವಸ್ಥಾನವನ್ನು ಅಭಿವೃದ್ಧಿಗೊಳಿಸಿದರು. ನವಿಲಗುಂದ ತಾಲ್ಲೂಕಿನ ಹಳ್ಳಿಕೆರೆ ಗ್ರಾಮದ ಶ್ರೀ ವೀರಯ್ಯ ಮತ್ತು ಶ್ರೀಮತಿ ನೀಲಮ್ಮನವರ ಪುತ್ರರಾಗಿ ೧೯೩೧ ರಲ್ಲಿ ಜನಿಸಿದ ಶ್ರೀ ಶಂಬುಲಿಂಗಸ್ವಾಮಿಗಳು ೧೯೫೨ ರಲ್ಲಿ ಶಿಷ್ಯವರ್ಗದ ಸಂಪ್ರದಾಯದ ಈ ಮಠದ ಅಧಿಕಾರವನ್ನು ವಹಿಸಿಕೊಂಡರು. ಗುರುಗಳು ತಮ್ಮ ಕ್ರಿಯಾಶೀಲ ಚಟುವಟಿಕೆಯಿಂದ ಮಠದ ಸಮುಚ್ಛಯವನ್ನು ಅಭಿವೃದ್ಧಿಗೊಳಿಸಿದ್ದಾರೆ. ದಾಸೋಹ ಕೊಠಡಿ, ಭಕ್ತರಿಗೆ ವಸತಿ ಗೃಹಗಳು, ನೀರಿನ ಸೌಕರ್ಯ ಈ ರೀತಿ ಸಕಲ ವ್ಯವಸ್ಥೆಯನ್ನು ಮಾಡಿ ನಿತ್ಯ ದಾಸೋಹ ನಡೆಯುವಂತೆ ಮಾಡಿದ್ದಾರೆ.

ಶ್ರೀ ಶಂಭುಲಿಂಗ ಸ್ವಾಮಿಗಳು ತಮ್ಮ ಉತ್ತರಾಧಿಕಾರಿಗಳನ್ನು ನೇಮಕ ಮಾಡಿಕೊಂಡಿದ್ದಾರೆ. ನರಗುಂದದ ಶ್ರೀ ಬಸವಯ್ಯ ಮತ್ತು ಶ್ರೀಮತಿ ದಾಕ್ಷಾಯಿಣಿಯವರ ಪುತ್ರರಾಗಿ ೧೯೭೩ ರ ಜನವರಿ ಒಂದರಂದು ಶ್ರೀ ಅಭಿನವ ಶಂಭುಲಿಂಗ ಸ್ವಾಮಿಗಳು ಜನಿಸಿದರು. ನರಗುಂದ ಮತ್ತು ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮುಗಿಸಿ ಶ್ರೀ ಅಭಿನವ ಶಂಭುಲಿಂಗ ಸ್ವಾಮಿಗಳು ಉಜ್ಜಯಿನಿ ಪೀಠದ ಜಗದ್ಗುರು ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳ ನೇತೃತ್ವದಲ್ಲಿ ಗುರುಸ್ಥಲದ ಸಂಪ್ರದಾಯದಂತೆ ೧೯೯೮ ರ ಏಪ್ರಿಲ್ ಎರಡರಂದು ಪಟ್ಟಾಧಿಕಾರವನ್ನು ಸ್ವೀಕರಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ದಿನದ ಇಪ್ಪತ್ತನಾಲ್ಕು ಗಂಟೆಯೂ ಭಕ್ತರಿಂದ ಸಮೃದ್ಧವಾಗಿರುವ ಈ ಕ್ಷೇತ್ರದಲ್ಲಿ ಬೆಳಿಗ್ಗೆಯಿಂದ ರಾತ್ರಿಯ ತನಕ ಎಡಬಿಡದೆ ಪೂಜೆ ನಡೆಯುತ್ತಾ ಇರುತ್ತದೆ. ಪ್ರತಿ ಅಮಾವಾಸ್ಯೆ, ಹುಣ್ಣಿಮೆಯಲ್ಲಿ ವಿಶೇಷ ಪೂಜೆ, ಉಪನ್ಯಾಸ ಕಾರ್ಯಕ್ರಮಗಳು ನಡೆಯುತ್ತವೆ. ವೀರಶೈವ ಮಠವಾದರೂ ಚಂಡಿಹೋಮ, ನವಚಂಡಿಹೋಮ, ರುದ್ರಹೋಮ, ಸತ್ಯ ನಾರಾಯಣ ಪೂಜೆ, ವರದ ಶಂಕರಪೂಜೆ, ದತ್ತಚರಿತಾಮೃತ, ವಿವೇಕ ಚಿಂತಾಮಣಿ, ಭಗವದ್ಗೀತೆ ಮತ್ತು ವೇದಗಳ ಪಠಣ ನಡೆಯುತ್ತವೆ. ಅಲ್ಲದೆ ಸರ್ವಧರ್ಮಗಳ ಪ್ರಾರ್ಥನೆಯೂ ನಡೆಯುತ್ತದೆ. ಮಠದ ವತಿಯಿಂದ ಧಾರ್ಮಿಕ ಸಾಮರಸ್ಯ

ಮೂಡಿಸುವ ಶಿಬಿರಗಳು ನಡೆಯುತ್ತವೆ. ನೂಲು ಹುಣ್ಣಿಮೆಯ ದಿನ ವಿಶಿಷ್ಟ ಆಚರಣೆಯನ್ನು ನಡೆಸಲಾಗುತ್ತದೆ. ಅಂದು ಭಕ್ತರು ಮಠಕ್ಕೆ ಬಂದು ಗುರುಗಳಿಗೆ ಜನಿವಾರವನ್ನು ತೊಡಿಸಿ ಆಶೀರ್ವಾದ ಪಡೆಯುತ್ತಾರೆ. ಅದೇ ರೀತಿ ಮುಸ್ಲಿಂ ಹಬ್ಬಗಳಲ್ಲಿ ಮುಸ್ಲಿಮರು ಮಠಕ್ಕೆ ಬಂದು ಗುರುಗಳಿಗೆ ಹಸಿರು ಪೇಠ ತೊಡಿಸಿ ಆಶೀರ್ವಾದ ಪಡೆದು ಹೋಗುತ್ತಾರೆ. ಜಮಲ್ ಖಾವಲಿ ದರ್ಗಾದ ಉರಸ್ಸನ್ನು ಮಠವೇ ನಡೆಸುತ್ತಿದೆ. ಇದು ಮಠದ ಧಾರ್ಮಿಕ ಏಕ ಸಾಮರಸ್ಯವನ್ನು ಸಾರುತ್ತದೆ.

ಮಠದ ವತಿಯಿಂದ ಬಿಲ್ವಕುಂಜ ಮಾಸಪತ್ರಿಕೆ, ಪುರಾಣ, ಭಕ್ತಿಗೀತೆ ಮುಂತಾದ ವಿವಿಧ ರೀತಿಯ ಹದಿನೇಳು ಪುಸ್ತಕಗಳನ್ನು ಪ್ರಕಟಿಸಿದೆ. ಈ ರೀತಿ ಧಾರ್ಮಿಕ ಕಾರ್ಯಗಳ ಜೊತೆಗೆ ಸಾಹಿತ್ಯಿಕ ಸೇವೆಯನ್ನು ನಡೆಸಿಕೊಂಡು ಬಂದಿರುವ ಮಠವು ಶೈಕ್ಷಣಿಕ ಕ್ಷೇತ್ರಕ್ಕೆ ಕಾಲಿಡದಿದ್ದರೂ, ಕಲಿಯುವ ಬಡ ಮಕ್ಕಳಿಗೆ ಆಶ್ರಯ ಕಲ್ಪಿಸಿ ನೆರವಾಗಿದೆ. ನರಗುಂದ ತಾಲ್ಲೂಕಿನ ಜಾಗಪುರ, ಸಿದ್ದಾಪುರ, ಗುರಟಗೇರಿ, ಮಧುಗುಣಿಕೆ, ಜಂಗವಾಡ, ಬಾದಾಮಿ ತಾಲ್ಲೂಕಿನ ರೆಡ್ಡಿಯಾರ, ತಿಮ್ಮಾಪುರ ಮೊದಲಾದ ಕಡೆ ಶಾಖಾಮಠಗಳು ಇದ್ದು ಇವುಗಳ ಉಸ್ತುವಾರಿಯನ್ನು ಈ ಮಠವೇ ನೋಡಿಕೊಳ್ಳುತ್ತಿದೆ.

ವಿಳಾಸ: ಶ್ರೀ ಅಭಿನವ ಶಂಭುಲಿಂಗಸ್ವಾಮಿಗಳು, ಶ್ರೀ ಪುಣ್ಯಾರಣ್ಯ ಪತ್ರೆವನ ಸಂಸ್ಥಾನ ಮಠ, ನರಗುಂದ, ಗದಗ ಜಿಲ್ಲೆ.

ಬನಹಟ್ಟಿ

ನರಗುಂದ ತಾಲ್ಲೂಕಿನ ಬನಹಟ್ಟಿಯು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಆರು ಕಿ.ಮೀ. ದೂರದಲ್ಲಿದ್ದು, ಅಭಿವೃದ್ಧಿಯನ್ನು ಕಾಣಬೇಕಾಗಿದೆ. ಪುರಾತನ ಕಾಲದಲ್ಲಿ ಈ ಗ್ರಾಮವು ಸುಂದರವಾದ ವನದಿಂದ ಆವೃತಗೊಂಡಿತ್ತಂತೆ. ಇಲ್ಲಿನ ಹಸಿರಿನ ವನವನ್ನು ನೋಡುವುದೇ ಒಂದು ಕಣ್ಣಿಗೆ ಹಬ್ಬವಾಗಿತ್ತಂತೆ. ಇಂತಹ ವನ ಸೌಂದರ್ಯದ ಮಧ್ಯೆ ಸ್ಥಾಪನೆಯಾಗಿದ್ದ ಗ್ರಾಮಕ್ಕೆ **'ವನಹಟ್ಟಿ'** ಎಂದು ಕರೆಯುತ್ತಿದ್ದರಂತೆ. ಇದು ಕಾಲಕ್ರಮೇಣ **'ಬನಹಟ್ಟಿ'** ಯಾಗಿ ಪರಿವರ್ತನೆ ಯಾಗಿದೆ ಎಂದು ಸ್ಥಳನಾಮ ತಿಳಿಸುತ್ತದೆ. ಇಂತಹ ಪ್ರಕೃತಿ ಸೌಂದರ್ಯದ ಮಡಿಲಲ್ಲಿ ೧೮೮೨ರಲ್ಲಿ ಶ್ರೀ ರುದ್ರಮುನಿ ಸ್ವಾಮಿಗಳಿಂದ ಮಠವು ಸ್ಥಾಪನೆಯಾಗಿ ಈ ಗ್ರಾಮಕ್ಕೆ ಧಾರ್ಮಿಕ ಚೇತನವನ್ನು ತಂದುಕೊಟ್ಟಿದೆ.

ಹಿರೇಮಠ: ಬನಹಟ್ಟಿ ಗ್ರಾಮದ ಮಧ್ಯಭಾಗದಲ್ಲಿ ಪುರಾತನ ಕಾಲದ ಕಟ್ಟಡದಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ. ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿರುವ ಶ್ರೀ ರುದ್ರಸ್ವಾಮಿ ಹಿರೇಮಠವು ಧಾರ್ಮಿಕವಾಗಿ ಹೆಸರು ಪಡೆದಂತೆ ಸಾಹಿತ್ಯಿಕವಾಗಿಯೂ ಹೆಚ್ಚು ಹೆಸರು ಮಾಡಿದೆ. ಈ ಮಠದ ಕರ್ತೃಗುರುಗಳಾದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ರುದ್ರಯೇತ, ಚಿತ್ರಸಂಚೇತ ಇನ್ನೂ ಅನೇಕ ಪುಸ್ತಕಗಳನ್ನು ಬರೆದಿದ್ದರು ಎಂದು ಹೇಳಲಾಗುತ್ತಿದೆ. ಆದರೆ ಇವುಗಳು ಯಾವುದೂ ಪ್ರಕಟಗೊಂಡಿಲ್ಲ . ಮುರುಗೇಂದ್ರವಿಜಯ ಎಂಬ ಕೃತಿಯು ಇವರು ರಚಿಸಿದ ಪುರಾಣ ಗ್ರಂಥವಾಗಿದೆ. ಇಂತಹ ಮಹಾನ್ ಚೇತನವು ಸ್ಥಾಪಿಸಿದ ಈ ಮಠವು ಈ ತನಕ ಬೆಳೆದು ಬಂದು ಧಾರ್ಮಿಕ ಆಚರಣೆಯನ್ನು ಮುಂದುವರೆಸಿಕೊಂಡು ಬಂದಿದೆ. ಪ್ರಸ್ತುತ ಶ್ರೀ ಬಸವಯ್ಯ ದೇವರು ಮಠದ ಉತ್ತರಾಧಿಕಾರಿಯಾಗಿ ಮಠವನ್ನು ಮುನ್ನಡೆಸಿಕೊಂಡು ಬರುತ್ತಿದ್ದಾರೆ. ಮಠದ ಆವರಣದಲ್ಲಿ ಕರ್ತೃಗುರುಗಳ ಗದ್ದುಗೆ ಇದೆ. ಕರ್ತೃಗುರುಗಳ ಪುಣ್ಯಾರಾಧನೆಯನ್ನು ಬೆನಕನ ಅಮಾವಾಸ್ಯೆಯ ನಂತರ ನಡೆಸಲಾಗುತ್ತಿದೆ. ಶಿವರಾತ್ರಿಯಲ್ಲಿ ಪುರಾಣಪ್ರವಚನವನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ದಾಸೋಹ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.

ವಿಳಾಸ: ಶ್ರೀ ಬಸವಯ್ಯ ದೇವರು, ಶ್ರೀ ರುದ್ರಸ್ವಾಮಿ ಹಿರೇಮಠ, ಬನಹಟ್ಟಿ, ನರಗುಂದ ತಾಲ್ಲೂಕು, ಗದಗ ಜಿಲ್ಲೆ.

ಭೈರನಹಟ್ಟಿ

ನರಗುಂದ ತಾಲ್ಲೂಕಿನ ಭೈರನಹಟ್ಟಿಯು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಏಳು ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಹೊರಭಾಗದ ಪಶ್ಚಿಮದಲ್ಲಿ ಶ್ರೀ ದೊರೆಸ್ವಾಮಿ ಮಠವು ಕಳೆದ ಶತಮಾನದಲ್ಲಿ ಸ್ಥಾಪನೆಯಾಗಿ ಈ ಗ್ರಾಮದ ಧಾರ್ಮಿಕ ಕೇಂದ್ರ ಬಿಂದುವಾಗಿ ಬೆಳೆದಿದೆ.

ದೊರೆಸ್ವಾಮಿ ಮಠ: ಭೈರನಹಟ್ಟಿ ಗ್ರಾಮದ ಹೊರಭಾಗದಲ್ಲಿ ಶ್ರೀ ದೊರೆಸ್ವಾಮಿ ಮಠವು ಸ್ಥಾಪನೆಯಾಗಿದೆ. ಆಂಧ್ರ ಪ್ರದೇಶದಿಂದ ದೇಶಸಂಚಾರ ಕೈಗೊಂಡು ಈ ಪ್ರಾಂತ್ಯಕ್ಕೆ ಆಗಮಿಸಿದ ಶ್ರೀ ದೊರೆಸ್ವಾಮಿಗಳು ಇಲ್ಲಿ ನೆಲೆನಿಂತು ಅನುಷ್ಠಾನ ಕೈಗೊಳ್ಳುತ್ತಾರೆ. ಇವರ ದೀರ್ಘ ಅನುಷ್ಠಾನಕ್ಕೆ ಮನಸೋತ ಭಕ್ತರು ಗುರುಗಳ ಕಾರುಣ್ಯಕ್ಕೆ ಒಳಗಾದರು. ಗುರು ಮತ್ತು ಭಕ್ತರ ಸಂಬಂಧ ಗಾಢವಾದ ಮೇಲೆ ಗುರುಗಳನ್ನು ಇಲ್ಲೇ ನೆಲೆಸುವಂತೆ ಮಾಡಿ ಮಠವನ್ನು ನಿರ್ಮಿಸಿಕೊಟ್ಟಿದ್ದಾರೆ. ಪ್ರತಿನಿತ್ಯ ಸತ್‌ಸಂಗವನ್ನು ಏರ್ಪಡಿಸಿ ಶಿವಾನುಭವಗೋಷ್ಠಿ, ಕೀರ್ತನೆಯ ಮೂಲಕ ಧರ್ಮಪ್ರಚಾರವನ್ನು ಕೈಗೊಂಡಿದ್ದರು. ಗುರುಗಳು ಗ್ರಾಮದ ಜನರಿಗೆ ಸಂಸ್ಕಾರ ನೀಡಿ ಧಾರ್ಮಿಕ ಕಾರ್ಯಗಳು ಮಠದ ಮೂಲಕ ನಡೆಯುವಂತೆ ವ್ಯವಸ್ಥೆಗೊಳಿಸಿ ಲಿಂಗೈಕ್ಯರಾದರು. ಭಕ್ತರ ಅಂಧಕಾರವನ್ನು ತೊಡೆದು ಹಾಕಿದ ಗುರುಗಳಿಗೆ ಗದ್ದುಗೆಯನ್ನು ನಿರ್ಮಿಸಿ, ನಿತ್ಯ ಪೂಜೆ, ಭಜನೆ ನಡೆಯುವಂತೆ ವ್ಯವಸ್ಥೆಗೊಳಿಸಿ ಅಂದಿನಿಂದ ಇಂದಿನ ತನಕ ನಡೆಸಿಕೊಂಡು ಬರಲಾಗುತ್ತಿದೆ. ಇಂತಹ ಪವಿತ್ರಸ್ಥಳದಲ್ಲಿ ನೂರಾರು ವಿರಕ್ತರು ಬಂದು ಅನುಷ್ಠಾನಗೊಂಡು ಹೋಗುತ್ತಿರುತ್ತಾರೆ.

ಧಾರ್ಮಿಕ ಕ್ರಿಯೆಗಳು ಸಾಂಗವಾಗಿ ನಡೆಯುತ್ತಿದ್ದರೂ ಮಠದಲ್ಲಿ ಗುರುಗಳು ಇಲ್ಲದಿರುವುದು ಸರಿಯಲ್ಲ ಎಂದು ಅರಿತು ೧೯೯೭ ರಲ್ಲಿ ಶ್ರೀ ಶಿವಪುತ್ರಯ್ಯ ಸ್ವಾಮಿಗಳನ್ನು ನೇಮಕಮಾಡಲಾಗಿದೆ. ಇವರು ಭೈರನಹಟ್ಟಿಯ ಭದ್ರಯ್ಯ ಮತ್ತು ಮಹಾದೇವಿಯಮ್ಮವರ ಪುತ್ರರಾಗಿ ೧೯೭೭ರ ಮೇ ಒಂದರಂದು ಜನಿಸಿ, ಭೈರನಹಟ್ಟಿ ಮತ್ತು ಹಾವೇರಿಯ ಸಿಂದಗಿ ಮಠದಲ್ಲಿ ವಿದ್ಯಾಭ್ಯಾಸ ಪೂರೈಸಿ ಗದಗಿನ ಶ್ರೀ ತೋಂಟದಾರ್ಯ ಸ್ವಾಮಿಗಳ ಕೃಪಾಕಟಾಕ್ಷದಿಂದ ಸಂಸ್ಕಾರವನ್ನು ಪಡೆದು ಮಠದ ಧಾರ್ಮಿಕ ಕ್ರಿಯೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಶೇಷ ಕಾರ್ಯಗಳು: ಮಠದ ಕರ್ತೃಗುರುಗಳ ಗದ್ದುಗೆಯನ್ನು ನಿರ್ಮಿಸಿ ನಿತ್ಯ ಎರಡುವೇಳೆ ಪೂಜೆಯನ್ನು ಸಲ್ಲಿಸಲಾಗುತ್ತಿದೆ. ಅಮಾವಾಸ್ಯೆಯ ಹಿಂದಿನ ದಿನ ಮಾಸಿಕ ಶಿವಾನುಭವ ಕಾರ್ಯಕ್ರಮವನ್ನು ತಪ್ಪದೆ ಆಚರಣೆ ಮಾಡಿಕೊಂಡು ಬರಲಾಗುತ್ತಿದೆ. ಬಸವ ಜಯಂತಿಯಂದು ಕಲಬುರ್ಗಿ ಶರಣ ಬಸವೇಶ್ವರರ ಪುರಾಣವನ್ನು ನಡೆಸಲಾಗುತ್ತದೆ. ಈ ಸಂದರ್ಭದಲ್ಲಿ ಸಾಮೂಹಿಕ ವಿವಾಹಗಳನ್ನು ನಡೆಸುತ್ತಾ ಬಂದಿದೆ. ಪ್ರತಿ ತಿಂಗಳು ಒಂದೊಂದು ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬಂದಿದೆ. ಇದರಲ್ಲಿ ಲಿಂಗದೀಕ್ಷೆ, ಪಶುವೈದ್ಯಚಿಕಿತ್ಸಾಶಿಬಿರ, ಕ್ರೀಡೆ ಈ ರೀತಿ ಪ್ರತಿತಿಂಗಳು ಕಾರ್ಯಕ್ರಮವನ್ನು ರೂಪಿಸಿ ಗ್ರಾಮದ ಭಕ್ತರಿಗೆ ನೆರವಾಗುತ್ತಿದ್ದಾರೆ. ಮಠದಲ್ಲಿ ಐದು ಜನ ಬಡ ಮಕ್ಕಳಿಗೆ ಆಶ್ರಯ ಕಲ್ಪಿಸಿ ಇವರ ಕಲಿಕೆಗೆ ಪೂರ್ಣ ನೆರವು ನೀಡಿದ್ದಾರೆ. ಅಲ್ಲದೆ ಸರ್ಕಾರಿ ಶಾಲೆಗಳಲ್ಲಿ ಕಲಿಯುವ ಮಕ್ಕಳಿಗೆ ಮಠದ ವತಿಯಿಂದ ನೋಟ್ ಪುಸ್ತಕಗಳನ್ನು ವಿತರಣೆ ಮಾಡಿ ಮಕ್ಕಳಿಗೆ ನೆರವಾಗುತ್ತಿದ್ದಾರೆ. ಇಲ್ಲಿ ಗುರು-ವಿರಕ್ತರು ಎಂಬ ಬೇಧ ಭಾವವಿಲ್ಲದೆ ಎರಡು ವರ್ಗದ ಗುರುಗಳನ್ನು ಕರೆಸಿ ಮಠದ ಧಾರ್ಮಿಕ ಕಾರ್ಯಗಳಲ್ಲಿ ಗೌರವಿಸಲಾಗುತ್ತಿದೆ.

ವಿಳಾಸ: ಶ್ರೀ ಶಿವಪುತ್ರಯ್ಯ ಸ್ವಾಮಿಗಳು, ಶ್ರೀ ದೊರೆಸ್ವಾಮಿ ಮಠ, ಭೈರನಹಟ್ಟಿ, ನರಗುಂದ ತಾಲ್ಲೂಕು, ಗದಗ ಜಿಲ್ಲೆ.

ಮಧುಗುಣಕಿ

ನರಗುಂದ ತಾಲ್ಲೂಕಿನ ಮಧುಗುಣಕಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಐದು ಕಿ.ಮೀ. ದೂರದಲ್ಲಿದೆ. ವ್ಯಾಪಾರ ಹಾಗೂ ವ್ಯವಸಾಯವನ್ನು ಮುಖ್ಯ ಕಸುಬಾಗಿದ್ದು, ಅಭಿವೃದ್ಧಿಯನ್ನು ಕಂಡಿದೆ. ಈ ಗ್ರಾಮದಲ್ಲಿ ಶ್ರೀ ಶಂಭುಲಿಂಗೇಶ್ವರ ಮಠವು ಸ್ಥಾಪನೆಯಾಗಿ ಧಾರ್ಮಿಕ ಕೇಂದ್ರ ಸ್ಥಳವಾಗಿ ಬೆಳೆದಿದೆ.

ಶಂಭುಲಿಂಗೇಶ್ವರ ಮಠ: ಮಧುಗುಣಕಿ ಗ್ರಾಮದ ಹೊರಭಾಗದಲ್ಲಿ ಶ್ರೀ ಶಂಭುಲಿಂಗೇಶ್ವರ ಮಠವು ಸ್ಥಾಪನೆಯಾಗಿ ಈ ಗ್ರಾಮವನ್ನು ನೈತಿಕ ಹಾಗೂ ಸಾಮಾಜಿಕವಾಗಿ ಮೇಲೆತ್ತಿದೆ. ಕಳೆದ ಐವತ್ತೆರಡು ವರ್ಷಗಳ ಹಿಂದೆ ಸಂನ್ಯಾಸಿಗಳೊಬ್ಬರು (ಹೆಸರು ತಿಳಿದಿಲ್ಲ) ಆಗಮಿಸಿ ಜಾಲಿ ಮುಳ್ಳಿನಿಂದ ಆವೃತಗೊಂಡಿದ್ದ ವನದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿದ್ದ ಶಿವಲಿಂಗವನ್ನು ಗುರುತಿಸಿ ಈ ಪುಣ್ಯಸ್ಥಳದಲ್ಲಿ ಅನುಷ್ಠಾನ ಗೊಂಡರು. ಸಂನ್ಯಾಸಿಯು ಈ ಗ್ರಾಮಕ್ಕೆ ಆಗಮಿಸಿದ ಪ್ರಾರಂಭ ದಲ್ಲಿ ಗ್ರಾಮಸ್ಥರು ಉಪೇಕ್ಷಿಸಿದ್ದರು. ಕಾಲಕ್ರಮೇಣ ಗುರುಗಳ ಧಾರ್ಮಿಕ ಆಚರಣೆಗಾಗಿ ಜಾಲಿ ವನವನ್ನು ಸ್ವಚ್ಛಗೊಳಿಸಿ

ಧಾರ್ಮಿಕ ವಾತಾವರಣ ವನ್ನು ಸೃಷ್ಟಿಸಿದರು. ನಂತರ ಭಕ್ತರು ಒಬ್ಬೊಬ್ಬರಾಗಿ ಗುರುಗಳ ಕಾರುಣ್ಯಕ್ಕೆ ಒಳಗಾದರು.

ಗುರುಗಳು ಈ ಕ್ಷೇತ್ರಕ್ಕೆ ಬರುವ ಮೊದಲು ಇಲ್ಲಿನ ಗ್ರಾಮಸ್ಥರು ದುಶ್ಚಟಗಳಿಗೆ ಬಲಿಯಾಗಿದ್ದರು. ಗುರುಗಳು ಬಂದ ಮೇಲೆ ಸಂಸ್ಕಾರ ನೀಡಿ ದುಶ್ಚಟಗಳನ್ನು ಬಿಡಿಸಿದರು. ಇದರಿಂದ ಭಕ್ತರು ಸಂಸ್ಕಾರವಂತರಾಗಿ ಕಾಯಕದೆಡೆ ಮುಖ ಮಾಡಿದರು. ಇದರಿಂದ ಆರ್ಥಿಕ ಸ್ಥಿರತೆಯನ್ನು ಕಂಡುಕೊಂಡರು.ಗುರುಗಳು ಇಲ್ಲಿ ನೆಲೆಗೊಂಡು ಮಠವನ್ನು ಸ್ಥಾಪಿಸಿ ೧೯೬೭ ರಲ್ಲಿ ಲಿಂಗೈಕ್ಯರಾದ ಮೇಲೆ ಭಕ್ತರು ಗದ್ದುಗೆಗೆ ಭವ್ಯವಾದ ಕಟ್ಟಡವನ್ನು ನಿರ್ಮಿಸಿದ್ದಾರೆ. ಶ್ರಾವಣ ಮಾಸದ ಎರಡನೆಯ ಸೋಮವಾರ ಗುರುಗಳ ಜಾತ್ರೆಯನ್ನು ಆಚರಿಸಿ, ಸಾಮೂಹಿಕ ವಿವಾಹಗಳು ಮತ್ತು ಲಿಂಗದೀಕ್ಷೆಯನ್ನು ನೆರವೇರಿಸಲಾಗುತ್ತದೆ. ಅಂದು ಸೇರುವ ಸಾವಿರಾರು ಭಕ್ತರಿಗೆ ಅನ್ನದಾಸೋಹವನ್ನು ನಡೆಸುವ ಗ್ರಾಮಸ್ಥರು ಮಠವನ್ನು ಮುನ್ನಡೆಸಿಕೊಂಡು ಬರುತ್ತಿದ್ದಾರೆ. ಮಠದ ಧಾರ್ಮಿಕ ಹಾಗೂ ಅಭಿವೃದ್ಧಿ ಕಾರ್ಯಗಳಿಗೆ ನರಗುಂದದ ಪುಣ್ಯಾರಣ್ಯ ಪತ್ರೆವನ ಮಠವು ಎಲ್ಲ ರೀತಿಯ ಸಹಕಾರ ಮತ್ತು ಮಾರ್ಗದರ್ಶನವನ್ನು ಕೊಡುತ್ತಾ ಬಂದಿದೆ.

ವಿಳಾಸ: ಶ್ರೀ ಶಂಭುಲಿಂಗೇಶ್ವರ ಮಠ, ಮಧುಗುಣಕಿ, ನರಗುಂದ ತಾಲ್ಲೂಕು, ಗದಗ ಜಿಲ್ಲೆ.

ರೆಡ್ಡೆರನಾಗನೂರು

ನರಗುಂದ ತಾಲ್ಲೂಕಿನ ರೆಡ್ಡೆರನಾಗನೂರು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹದಿನಾರು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಸಿದ್ಧೇಶ್ವರ ಮಠವು ಸ್ಥಾಪನೆಯಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ಸಿದ್ಧೇಶ್ವರ ಮಠ: ರೆಡ್ಡೆರನಾಗನೂರು ಗ್ರಾಮದಲ್ಲಿ ಸರ್ಪಗಳ ವಸತಿಯು ಹೆಚ್ಚಾಗಿತ್ತಂದೂ ಆ ಹುತ್ತಗಳ ಜಾಗದಲ್ಲಿಯೇ ಇಲ್ಲಿನ ಮಠವು ಸ್ಥಾಪನೆಯಾಗಿದೆಯೆಂದೂ ಹೇಳಲಾಗುತ್ತಿದೆ. ಒಮ್ಮೊಮ್ಮೆ ಗುರುಗಳು ಸರ್ಪಗಳ ಜೊತೆಯಲ್ಲಿ ಆಟವಾಡುತ್ತಿದ್ದರೆಂದೂ ಈ ಕಾರಣದಿಂದ ಈ ಗ್ರಾಮಕ್ಕೆ **'ನಾಗನೂರು'**ಎಂದು ಹೆಸರು ಬಂದಿದೆ ಎಂದೂ ಸ್ಥಳನಾಮ ತಿಳಿಸುತ್ತದೆ. ಕಾಶಿ ಪೀಠದ ಶಾಖಾಮಠವಾದ ಪುತ್ರವರ್ಗದ ಸಂಪ್ರದಾಯದ ಶ್ರೀ ಸಿದ್ಧೇಶ್ವರ ಹಿರೇಮಠವನ್ನು ಹದಿನೈದನೆಯ ಶತಮಾನದಲ್ಲಿ ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಸ್ಥಾಪನೆ ಮಾಡಿದ್ದಾರೆ. ಕರ್ತೃಗುರುಗಳು ಶಿವಪೂಜಾ ನಿಷ್ಠರಾಗಿ ವೀರಶೈವ ಧರ್ಮವು ಬೆಳೆಯುವಂತೆ ಮಾಡಿದರು. ಈ ಗ್ರಾಮದ ಸುತ್ತಮುತ್ತಲಿವ ಖಾನಾಪುರ, ಗಂಗಾಪುರ, ಬೋಪಾಳಪುರ, ಮಾಳವಾಡ ಗ್ರಾಮಗಳಲ್ಲಿ ತಮ್ಮ ಮಠಗಳನ್ನು ಸ್ಥಾಪಿಸಿದ್ದ ಕಾರಣದಿಂದಲೇ ರೆಡ್ಡೆರ ನಾಗನೂರಿನ ಹಿರೇಮಠವು ಐದು ಮಠಗಳನ್ನು ಒಳಗೊಂಡ ಪಂಚಗ್ರಹ ಹಿರೇಮಠ ಎಂದು ಪ್ರಸಿದ್ಧಿ ಪಡೆದಿದೆ ಎಂದು ಹೇಳಲಾಗಿದೆ.

ಪರಂಪರೆ:

೧. ಷ.ಬ್ರ.ಶ್ರೀ ಸಿದ್ಧೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ನಾಗಭೂಷಣ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ವಿಶ್ವನಾಥ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಸಿದ್ಧೇಶ್ವರ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಗುರುಸಿದ್ಧ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ಸಿದ್ಧೇಶ್ವರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದಲ್ಲಿ ಒಂಬತ್ತು ತಲೆಮಾರುಗಳ ತನಕ ಗುರುಪರಂಪರೆ ಬೆಳೆದಿದ್ದು ನಂತರ ಸ್ಥಗಿತಗೊಂಡಿದೆ. ಮಠದ ಆವರಣದಲ್ಲಿ ಎರಡು ಗದ್ದುಗೆಗಳು ಇವೆ. ಮಠದ ಪರಂಪರೆಯ ಕೊನೆಯ ಗುರುಗಳಾದ ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳಿಗೆ ಸುಮಾರು ಎಂಬತ್ತು ವರ್ಷಗಳು ಸಂದಿದ್ದು ಈವರೆವಿಗೂ ಮಠಕ್ಕೆ ಉತ್ತರಾಧಿಕಾರಿಗಳನ್ನು ನೇಮಿಸಿಲ್ಲ.

ಮಠದ ವಂಶಸ್ಥರಾವ ಶ್ರೀ ಸಿದ್ದ[illegible]ರು ಮಠದ ಆಡಳಿತ, ಧರ್ಮಾಚರಣೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಸಿದ್ದಮ್ಮದೇವರು, ಶ್ರೀ ಸಿದ್ದೇಶ್ವರ ಮಠ, ರಡ್ಡೇರ್ ನಾಗನೂರು, ನರಗುಂದ ತಾಲ್ಲೂಕು, ಗದಗ ಜಿಲ್ಲೆ.

ಶಿರೋಳ

ನರಗುಂದ ತಾಲ್ಲೂಕಿನ ಶಿರೋಳ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹದಿನೆಂಟು ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ಶ್ರೀ ಹಿರೇಮಠ ಮತ್ತು ಗದಗಿನ ಶ್ರೀ ತೋಂಟದಾರ್ಯ ಮಠದ ಶಾಖಾಮಠವಾದ ಶ್ರೀ ಕಲ್ಮಠ ಅಸ್ತಿತ್ವದಲ್ಲಿವೆ. ಅಭಿವೃದ್ಧಿಯ ಪಥದಲ್ಲಿರುವ ಈ ಗ್ರಾಮವನ್ನು ಈ ಎರಡು ಮಠಗಳು ಧಾರ್ಮಿಕ ಮತ್ತು ಶೈಕ್ಷಣಿಕವಾಗಿ ಉನ್ನತಿಯತ್ತ ಕೊಂಡೊಯ್ಯುತ್ತಿವೆ.

ಹಿರೇಮಠ: ಗ್ರಾಮದ ಮಧ್ಯಭಾಗದಲ್ಲಿರುವ ಶ್ರೀ ಹಿರೇಮಠವು ಶಿರೋಳ ಮತ್ತು ಸುತ್ತಮುತ್ತಲಿನ ಗ್ರಾಮಗಳ ಜನರ ಧಾರ್ಮಿಕ ಕೇಂದ್ರಬಿಂದುವಾಗಿ ಧರ್ಮಜಾಗೃತಿಯನ್ನು ಉಂಟುಮಾಡುತ್ತಿದೆ. ಸುಮಾರು ನಾಲ್ಕು ನೂರು ವರ್ಷಗಳ ಇತಿಹಾಸವನ್ನು ಹೊಂದಿದೆ ಎನ್ನಲಾದ ಈ ಮಠವು ಶ್ರೀ ರೇವಯ್ಯ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪಿತವಾಗಿದೆ ಎಂದು ಹೇಳಲಾಗುತ್ತಿದೆ. ಕರ್ತೃಗುರುಗಳಾದ ಶ್ರೀ ರೇವಯ್ಯ ಸ್ವಾಮಿಗಳು ಶಿವಪೂಜಾ ನಿಷ್ಠರಾಗಿ ವೀರಶೈವ ತತ್ತ್ವಗಳನ್ನು ನಾಡಿಗೆ ಪ್ರಚಾರಗೊಳಿಸಿ ಭಕ್ತರನ್ನು ಸನ್ಮಾರ್ಗಕ್ಕೆ ತಂದಿದ್ದರು. ಅವರು ಕಟ್ಟಿ ಬೆಳೆಸಿದ ಮಠವು ಈ ತನಕ ಬೆಳೆದುಬಂದಿದೆ.

ಪರಂಪರೆ:

೧. ಷ.ಬ್ರ.ಶ್ರೀ ರೇವಯ್ಯ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಚನ್ನವೀರಯ್ಯ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಪಂಪಯ್ಯ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಹಂಪೆಯ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಪ್ರಭುಸ್ವಾಮಿ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಎರಡನೆಯ ಚನ್ನವೀರ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ವಿರೂಪಾಕ್ಷ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಪ್ರಸ್ತುತ ಮಠದಲ್ಲಿ ಪಟ್ಟಾಧಿಕಾರಿಗಳು ಯಾರು ಇಲ್ಲದಿದ್ದರೂ ಮಠದ ವಂಶಸ್ಥರಾದ ಶ್ರೀ ವೇ.ರೇವಣಸಿದ್ಧೇಶ್ವರ ಶಾಸ್ತ್ರಿಗಳು ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ರಂಭಾಪುರಿ ಪೀಠದ ಶಾಖಾ ಮಠವಾಗಿರುವ ಈ ಮಠವು ಪೀಠದ ಜಗದ್ಗುರುಗಳಾದ ಶ್ರೀ ಪ್ರಸನ್ನ ರೇಣುಕ ವೀರಗಂಗಾಧರ ಸ್ವಾಮಿಗಳನ್ನು ಕರೆಸಿ ಅವರ ಸಾನ್ನಿಧ್ಯದಲ್ಲಿ ಸಹಸ್ರಕುಂಭಾಭಿಷೇಕ ಹಾಗೂ ಅರವತ್ತಮೂರು ಮಂಟಪಗಳ ಪೂಜೆಯನ್ನು ನಡೆಸಿ, ಗುರುವಿರಕ್ತರೆನ್ನದೆ ಎಲ್ಲಾ ಗುರುಗಳನ್ನು ಆಹ್ವಾನಿಸಿ ಗೌರವಿಸಲಾಗಿದೆ. ಮಠದಲ್ಲಿ ಜಂಗಮದೀಕ್ಷೆ, ಸಾಮೂಹಿಕವಿವಾಹಗಳು, ಲಕ್ಷದೀಪೋತ್ಸವ, ಪುರಾಣಪ್ರವಚನಗಳನ್ನು ನಡೆಸಲಾಗುತ್ತಿದೆ. ಶ್ರೀ ವೀರಭದ್ರೇಶ್ವರ ದೇವಸ್ಥಾನದ ನಿರ್ಮಾಣ ಕಾರ್ಯವನ್ನು ಕೈಗೊಂಡು ಮುಗಿಸಿ ೧೯೯೦ರಲ್ಲಿ ವೀರಭದ್ರೇಶ್ವರ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ನಂತರ ೧೯೯೧ ರಿಂದ ವೀರಭದ್ರೇಶ್ವರ ಜಾತ್ರೆಯನ್ನು ನಡೆಸಿಕೊಂಡು ಬರಲಾಗುತ್ತಿದೆ. ಹೇಮರೆಡ್ಡಿ ಮಲ್ಲಮ್ಮನ ಹೆಸರಿನಲ್ಲಿ ಸಮುದಾಯ ಭವನವನ್ನು ನಿರ್ಮಿಸಿದ್ದಾರೆ. ಕ್ರಿಯಾಶೀಲರಾದ ಶ್ರೀ ರೇವಣಸಿದ್ಧೇಶ್ವರ ಶಾಸ್ತ್ರಿಗಳು ಭಕ್ತರ ಸಹಕಾರದಿಂದ ಮಠವನ್ನು ಸರ್ವಾಂಗೀಣವಾಗಿ ಅಭಿವೃದ್ಧಿಪಡಿಸಿ ಭಕ್ತರ ಧಾರ್ಮಿಕ ಕೇಂದ್ರ ಸ್ಥಳವಾಗಿ ರೂಪಿಸಿದ್ದಾರೆ. ಮಠದ ಒಳಭಾಗದಲ್ಲಿ ಕರ್ತೃಗುರುಗಳ ಗದ್ದುಗೆ ಇದ್ದು,ಕರ್ತೃಗದ್ದುಗೆಯ ಜೊತೆಗೆ ಇತರ ಮೂರು ಗದ್ದುಗೆಗಳು ನೋಡ ಸಿಗುತ್ತವೆ. ಉಳಿದ ಗದ್ದುಗೆಗಳು ಜೀರ್ಣಗೊಂಡು ಗುರುತಿಸಲಾಗದೆ ಹೋಗಿವೆ.ಯಾವುದೇ ಆಸ್ತಿ ಇಲ್ಲದ ಮಠಕ್ಕೆ ಭಕ್ತರೇ ಆಸ್ತಿಯಾಗಿದ್ದಾರೆ. ಸಮಾಜದ ಏಳಿಗೆಗಾಗಿ ಶ್ರಮಿಸುತ್ತಿರುವ ಈ ಮಠದ ಉತ್ತರಾಧಿಕಾರಿಯ ಆಯ್ಕೆಯ ಬಗ್ಗೆ ಚರ್ಚೆನಡೆದಿದೆ.

ವಿಳಾಸ: ಶ್ರೀ ವೇ. ರೇವಣಸಿದ್ಧೇಶ್ವರ ಶಾಸ್ತ್ರಿಗಳು, ಶ್ರೀ ಹಿರೇಮಠ, ಶಿರೋಳ, ನರಗುಂದ ತಾಲ್ಲೂಕು, ಗದಗ ಜಿಲ್ಲೆ.

ಕಲ್ಮಠ: ಶಿರೋಳ ಗ್ರಾಮದ ಮಧ್ಯಭಾಗದಲ್ಲಿರುವ ಈ ವಿರಕ್ತಮಠವು ಗದಗಿನ ತೋಂಟದಾರ್ಯ ಮಠದ ಶಾಖಾ ಮಠವಾಗಿದೆ. ಪುರಾತನ ಕಾಲದಲ್ಲಿ ಪ್ರಾರಂಭಗೊಂಡ ಈ ಮಠವು ಬಹಳ ವೈಭವಯುತವಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದಿದೆ. ಶ್ರೀ ಅನ್ನದಾನ ಸ್ವಾಮಿಗಳ ತಪೋ ಬಲದಿಂದ ಈ ಮಠವು ಬೆಳೆದು ನಂತರ ಸಮರ್ಥ ಉತ್ತರಾಧಿಕಾರಿಗಳಿಲ್ಲದೆ ಮಠವು ಜೀರ್ಣಾವಸ್ಥೆಗೆ ಬಂದಿತ್ತು. ನಂತರ ಶ್ರೀ ಗುರುಬಸವ ಸ್ವಾಮಿಗಳ ಕಾಲದಲ್ಲಿ ಮಠವು ಅಭಿವೃದ್ಧಿಗೊಂಡಿತ್ತು. ನಂತರ ಕೆಲವು ದಿನಗಳ ಕಾಲ ಮಠಾಧೀಶರಿಲ್ಲದೆ ಮಠವು ಖಾಲಿ ಉಳಿದಿತ್ತು. ಈಗ ಗಜೇಂದ್ರಘಡದ ಶ್ರೀ ಗುರುಲಿಂಗಯ್ಯ ಮತ್ತು ಶ್ರೀಮತಿ ಬಸಮ್ಮನವರ ಪುತ್ರರಾದ ಶ್ರೀ ಶಂಕರದೇವರು ಉತ್ತರಾಧಿಕಾರಿಗಳಾಗಿ ನೇಮಕಗೊಂಡು ಮಠವನ್ನು ಊರ್ಜಿತಾವಸ್ಥೆಗೆ ತರುತ್ತಿದ್ದಾರೆ. ಅಲ್ಲದೆ ಗದಗಿನ ಮೂಲ ಮಠವು ಇಲ್ಲಿ ಕೈಗಾರಿಕಾ ತರಬೇತಿ ಕೇಂದ್ರ, ಪ್ರೌಢಶಾಲೆ, ಶಿಶುವಿಹಾರ ಹಾಗೂ ಸಂಸ್ಕೃತ ಪಾಠಶಾಲೆಗಳ ಉಸ್ತುವಾರಿಯನ್ನು ನೋಡಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಈ ಮಠದ ಆವರಣದಲ್ಲಿ ಐದು ಗದ್ದುಗೆಗಳಿದ್ದು ಇವುಗಳಿಗೆ ನಿತ್ಯ ಪೂಜೆಯನ್ನು ಮಾಡಲಾಗುತ್ತಿದೆ. ಪ್ರತಿವರ್ಷ ಸಂಕ್ರಣದಲ್ಲಿ ಮಠದ ಜಾತ್ರೆಯನ್ನು ನಡೆಯುತ್ತಿದೆ. ಜಾತ್ರೆಯ ನಿಮಿತ್ತ ಮಹಾ ರಥೋತ್ಸವ, ಪುರಾಣ ಪ್ರವಚನ ಹಾಗೂ ಎರಡನೆಯ ದಿನಕ್ಕೆ ಶಕ್ತಿ ಪ್ರದರ್ಶನವನ್ನು ಏರ್ಪಡಿಸಲಾಗುತ್ತಿದೆ. ಈ ಸಂದರ್ಭದಲ್ಲಿ ರೊಟ್ಟಿ ಊಟದ ದಾಸೋಹವು ಬಹಳ ಆಕರ್ಷಣೆಯವಾಗಿ ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಶಂಕರ ದೇವರ, ಶ್ರೀ ಕಲ್ಮಠ, ಶಿರೋಳ, ನರಗುಂದ ತಾಲ್ಲೂಕು, ಗದಗ ಜಿಲ್ಲೆ.

ಸುರುಕೋಡು

ನರಗುಂದ ತಾಲ್ಲೂಕಿನ ಸುರುಕೋಡು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹತ್ತು ಕಿ.ಮೀ. ದೂರದಲ್ಲಿದೆ. ಈ ಗ್ರಾಮವು ಪುರಾಣ ಪ್ರಸಿದ್ಧ ಗ್ರಾಮವಾಗಿದ್ದು, ಇಲ್ಲಿ ಶಿವರುದ್ರ ಶಿವಯೋಗಿ ಹಿರೇಮಠದ ಸ್ಥಾಪನೆಯಿಂದಾಗಿದೆ.

ಶಿವರುದ್ರ ಶಿವಯೋಗಿ ಹಿರೇಮಠ: ಸುರುಕೋಡು ಗ್ರಾಮದ ಹೊರಭಾಗದಲ್ಲಿ ರಂಭಾಪುರಿ ಪೀಠದ ಶಾಖಾಮಠವಾದ ಶ್ರೀ ಶಿವರುದ್ರ ಶಿವಯೋಗಿ ಹಿರೇಮಠವು ಸ್ಥಾಪನೆಯಾಗಿ ಈ ಗ್ರಾಮದ ಹಾಗೂ ನಾಡಿನ ಧಾರ್ಮಿಕ ಜ್ಯೋತಿಯಾಗಿ ಕಂಗೊಳಿಸಿದೆ. ಸುಮಾರು ಒಂದು ಸಾವಿರ ವರ್ಷಗಳ ಹಿಂದಿನ ಇತಿಹಾಸ ಇರುವ ಈ ಮಠವು ಈವರೆಗೆ ಸುಮಾರು ಇಪ್ಪತ್ತು ಜನ ಪಟ್ಟಾಧ್ಯಕ್ಷರ ಆಡಳಿತಕ್ಕೆ ಒಳಪಟ್ಟು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದಿದೆ ಎಂದು ಶ್ರೀ ಶಿವರುದ್ರ ವಿಜಯಂ ಎಂಬ ಪ್ರಕಟಿತ ಪುರಾಣದಿಂದ ತಿಳಿಯುತ್ತದೆ.

ಪುರಾತನ ಕಾಲದಲ್ಲಿ ಸ್ಥಾಪನೆಗೊಂಡಿದ್ದ ಈ ಮಠದ ಪರಂಪರೆಯ ಬಗ್ಗೆ ಪೂರ್ಣ ಮಾಹಿತಿ ದೊರೆಯುತ್ತಿಲ್ಲ. ದೊರೆತ ಮಾಹಿತಿಯ ಪ್ರಕಾರ ಶ್ರೀ ಗುರುಪಾದ ಸ್ವಾಮಿಗಳು ಮಹಾಮೇದಾವಿಗಳು ಅಲ್ಲದೆ ಲಿಂಗಪೂಜಾ ನಿಷ್ಠರು ಹಾಗೂ ಏಕಾಂತಪ್ರಿಯರು. ಸದಾ ಧ್ಯಾನ ಮಗ್ನರಾಗಿ ಶಿವಚಿಂತನೆಯಲ್ಲಿ ತೊಡಗಿರುತ್ತಿದ್ದ ಮಹಾತಪಸ್ವಿಗಳು ಇವರಾಗಿದ್ದರು. ಇಂತಹ ತಪಸ್ವಿಗಳಿಗೆ ಗ್ರಾಮದಲ್ಲಿ ನಡೆದ ಒಂದು ಅಹಿತಕರ ಘಟನೆ ಸಹಿಸಲಾಗದ ನೋವಾಗಿತ್ತು. ಈ ನೋವನ್ನು ಸಹಿಸಿಕೊಳ್ಳಲಾಗದೆ ಕಿರಾತಕರನ್ನು ಶಪಿಸಿ ನವಿಲುಗುಂದಕ್ಕೆ ಬಂದರು. ನವಿಲುಗುಂದದ ಗಾಣಿಗರ ಸತ್ಯಸ್ಥನೆಂಬ ಸದ್ಭಕ್ತನು ಗುರುಗಳ ಮಹಿಮೆಯನ್ನು ಅರಿತು ಗುರುಗಳನ್ನು ಸತ್ಕರಿಸಿ ಮಠವನ್ನು ಕಟ್ಟಿಸಿಕೊಡುತ್ತಾನೆ. ಗುರುಗಳು ನವಿಲುಗುಂದದಲ್ಲಿ ಲಿಂಗೈಕ್ಯರಾಗಿದ್ದಾರೆ. ಗುರುಗಳು ಲಿಂಗೈಕ್ಯರಾದ ಮೇಲೆ ಕಾಗದ ಪತ್ರಗಳು ಹಾಗೂ ಪಟ್ಟಾಭಿಷೇಕದ ಮುದ್ರೆ ಉಂಗುರಗಳನ್ನು ಸತ್ಯಸ್ಥನು ಮಠದ ಮೂಲ ವಂಶಸ್ಥರಿಗೆ ತಲುಪಿಸಿ ಕೃತಾರ್ಥನಾದನೆಂದು ಶಿವರುದ್ರ ವಿಜಯಂ ಪುರಾಣದಿಂದ ತಿಳಿಯುತ್ತದೆ.

ಶ್ರೀ ಗುರುಪಾದ ಸ್ವಾಮಿಗಳ ತರುವಾಯ ಶ್ರೀ ಶಿವರುದ್ರಸ್ವಾಮಿಗಳು ೧೮೮೨ರಲ್ಲಿ ಸುರುಕೋಡು ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿರುತ್ತಾರೆ. ಇವರು ಬೆದಹಟ್ಟಿಯ ಹಿರೇಮಠದ ಪಟ್ಟದ ಸ್ವಾಮಿಗಳಿಂದ ಶಿಕ್ಷಣ ಪಡೆದು ವಿದ್ವಾಂಸರಾಗಿ ರೂಪುಗೊಂಡು ಧಾರ್ಮಿಕ ಹಾಗೂ ಆಡಳಿತದ ವಿಚಾರದಲ್ಲಿ ಹೆಚ್ಚು ಅನುಭವ ಪಡೆದಿದ್ದ ಇವರು ಡಿಸೆಂಬರ್ ಒಂಬತ್ತರ ೧೯೩೭ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಶ್ರೀ ಶಿವರುದ್ರ ಶಿವಯೋಗಿಗಳು ಪರಂಪರಾಗತ

ಮಠದ ಇತಿಹಾಸದ ಮೇಲೆ ಬೆ[illegible]ವಂತಹ ಅನೇಕ ದಾಖಲಾರ್ಹ ಕಾರ್ಯಗಳನ್ನು ಮಾಡಿ ಮಠವನ್ನು ಹೆಚ್ಚು ಪ್ರಚಾರಕ್ಕೆ ತಂದ ಕಾರಣಕ್ಕಾಗಿಯೇ 'ಶ್ರೀ ಶಿವರುದ್ರ ಶಿವಯೋಗಿ ಹಿರೇಮಠ' ಎಂದು ಹೆಸರು ಬಂದಿದೆ.

ಪರಂಪರೆ:
೧. ಷ.ಬ್ರ.ಶ್ರೀ ಗುರುಪಾದ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಶಿವರುದ್ರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಎರಡನೆಯ ಗುರುಪಾದ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಶಿವಶಾಂತ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯ ಗುರುಗಳ ಹೆಸರು ದೊರೆಯುತ್ತವೆ. ಇದನ್ನು ಮಾಹಿತಿಗಾಗಿ ದಾಖಲಿಸಲಾಗಿದೆ. ಮಠದ ಪರಂಪರೆಯ ಗುರುಗಳಾಗಿ ಶ್ರೀ ಶಿವರುದ್ರ ಶಿವಾಚಾರ್ಯಸ್ವಾಮಿಗಳು ಮಾಡಿದ ಸಾಧನೆಗಳು ಇತಿಹಾಸವಿರುವ ತನಕ ಗಟ್ಟಿಯಾಗಿ ಉಳಿಯುತ್ತವೆ. ಇವರ ನಂತರ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ತಮ್ಮ ಕರಕಮಲ ಸಂಜಾತರಾದ ಶ್ರೀ ಎರಡನೆಯ ಗುರುಪಾದ ಶಿವಾಚಾರ್ಯಸ್ವಾಮಿಗಳಿಗೆ ಅಧಿಕಾರವನ್ನು ನೀಡಿದ್ದಾರೆ. ಶ್ರೀ ಚನ್ನವೀರ ಸ್ವಾಮಿಗಳು ಕವಿಗಳಾಗಿ ಹೆಸರು ಮಾಡಿದ್ದರು.ಇವರು ಪೂರ್ಣಾವಧಿ ಅಧಿಕಾರವನ್ನು ನಡೆಸದೆ ಗೃಹಸ್ಥಾಶ್ರಮ ವನ್ನು ಸ್ವೀಕರಿಸಿದರೆಂದು ಹೇಳಲಾಗುತ್ತದೆ. ನಂತರ ಉಭಯ ಭಾಷಾವಿಶಾರದರೆಂದು ಖ್ಯಾತಿ ಪಡೆದಿರುವ ಎರಡನೆಯ ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳು ಅಧಿಕಾರ ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದಾರೆ. ನಂತರ ಕೊಪ್ಪಳ ಜಿಲ್ಲೆಯ ಯಲಬುರ್ಗದ ಶ್ರೀ ಸಿದ್ಧರಾಮೇಶ್ವರ ಮಠದ ಅಧಿಕಾರ ವಹಿಸಿಕೊಂಡು ಎರಡೂ ಕಡೆಯ ಅಧಿಕಾರವನ್ನು ನೋಡಿಕೊಳ್ಳುತ್ತಿದ್ದರು. ಎಂಬತ್ತು ವರ್ಷದ ಗುರುಗಳು ಈ ಮಠಕ್ಕೆ ಉತ್ತರಾಧಿಕಾರಿಗಳನ್ನು ನೇಮಿಸಿ ಯಲಬುರ್ಗದ ಶ್ರೀ ಸಿದ್ಧರಾಮೇಶ್ವರ ಮಠದಲ್ಲಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ಈಗ ಶ್ರೀ ಬಸವಯ್ಯ ಮತ್ತು ಶ್ರೀಮತಿ ರುದ್ರಾಣಿ ಯವರ ಪುತ್ರರಾಗಿ ಜನಿಸಿರುವ ಶ್ರೀ ಶಿವಶಾಂತ ಸ್ವಾಮಿಗಳು ಉತ್ತರಾಧಿಕಾರಿಗಳಾಗಿ ನೇಮಕಗೊಂಡಿದ್ದಾರೆ. ಎಂ.ಎ. ಪಿಎಚ್.ಡಿ. ವ್ಯಾಸಂಗ ಮಾಡಿ ವಿದ್ವತ್ ಸಂಪನ್ನರಾಗಿರುವ ಇವರು ಮಠವನ್ನು ಮುನ್ನಡೆಸುತ್ತಾ ಮಹಾರಾಷ್ಟ್ರದ ಆಲೂರು ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡು ಎರಡೂ ಮಠದ ಆಡಳಿತವನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶಿವಶಾಂತ ಶಿವಾಚಾರ್ಯ ಸ್ವಾಮಿಗಳು, ಶ್ರೀ ಶಿವರುದ್ರ ಶಿವಯೋಗಿ ಹಿರೇಮಠ, ಸುರುಕೋಡು, ನರಗುಂದ ತಾಲ್ಲೂಕು, ಗದಗ ಜಿಲ್ಲೆ.

ಆಧಾರ: ವೇ.ಪಂ.ಕವಿರತ್ನ ಚನ್ನಕವಿಗಳ **'ಶಿವರುದ್ರ ವಿಜಯಂ ಪುರಾಣ'**

ಹದಲಿ

ನರಗುಂದ ತಾಲ್ಲೂಕಿನ ಹದಲಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಭಾಗಕ್ಕೆ ಹದಿಮೂರು ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ಪುರಾತನ ಕಾಲದ ಹಿರೇಮಠವು ಸ್ಥಾಪನೆಯಾಗಿ ಹೆಸರು ಪಡೆದಿದೆ.

ಹಿರೇಮಠ: ಹದಲಿ ಗ್ರಾಮದ ಮಧ್ಯಭಾಗದಲ್ಲಿ ಕಾಶಿಪೀಠದ ಶಾಖಾಮಠವಾದ ಹಿರೇಮಠವು ಅಸ್ತಿತ್ವದಲ್ಲಿದೆ. ಪುರಾತನ ಕಾಲದ ಈ ಮಠದಲ್ಲಿ ಕರ್ತೃಗುರುಗಳ ಗದ್ದುಗೆ ಎಂದು ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಯನ್ನು ಗುರುತಿಸಲಾಗುತ್ತದೆ. ಕರ್ತೃಗುರುಗಳ ನಂತರ ಶ್ರೀ ವೀರತಾಯ್ಯ ಸ್ವಾಮಿಗಳು ಕೆಲವು ದಿನ ಅಧಿಕಾರ ನಡೆಸಿದರೆಂದು ಹೇಳಲಾಗುತ್ತದೆ. ನಂತರ ಶ್ರೀ ಸಿದ್ಧರಾಮಯ್ಯ ಸ್ವಾಮಿಗಳು, ಶ್ರೀ ಗಂಗಾಧರ ಚರಮೂರ್ತಿ ಸ್ವಾಮಿಗಳು, ಶ್ರೀ ನಾಗಬಸವಯ್ಯ ಸ್ವಾಮಿಗಳು ಈ ರೀತಿ ಮಠದ ಪರಂಪರೆಯಲ್ಲಿ ಐದು ಜನ ಗುರುಗಳು ಮಠದ ಅಧಿಕಾರ ನಡೆಸಿದರೆಂದು ಹೇಳಲಾಗುತ್ತದೆ. ಮಠದ ಆವರಣದಲ್ಲಿ ಶ್ರೀ ವಿಶ್ವಾರಾಧ್ಯರ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಈಗ ಮಠದಲ್ಲಿ ಉತ್ತರಾಧಿಕಾರಿಗಳು ಯಾರೂ ಇಲ್ಲದೇ ಇರುವ ಕಾರಣ ಮಠದ ವಂಶಸ್ಥರೇ ಪೂಜಾ ಕಾರ್ಯಗಳನ್ನು ನಡೆಸಿ ಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಹಿರೇಮಠ, ಹದಲಿ, ನರಗುಂದ ತಾಲ್ಲೂಕು, ಗದಗ ಜಿಲ್ಲೆ. ❑

ಮುಂಡರಗಿ ತಾಲ್ಲೂಕು

ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕು ಸದಾ ಬರಗಾಲದ ದವಡೆಗೆ ಸಿಕ್ಕಿ ನಲುಗಿದೆ. ಮಳೆಯ ಆಶ್ರಯದ ಕೃಷಿಯನ್ನು ಅವಲಂಬಿಸಿರುವ ಈ ಪ್ರಾಂತ್ಯ ಸಂಸ್ಕಾರವನ್ನು ಬಿಡದೆ ಸದಾಚಾರ ಸಂಪನ್ನತೆಯನ್ನು ಕಾಯ್ದುಕೊಂಡು ಬಂದಿದೆ. ಇದಕ್ಕೆ ಕಾರಣ ಇಲ್ಲಿ ಸ್ಥಾಪನೆಗೊಂಡಿರುವ ವೀರಶೈವ ಮಠಗಳು ಕಾರಣ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ತಾಲ್ಲೂಕಿನಲ್ಲಿ ಈಗ ಎಂಟು ಮಠಗಳು ಅಸ್ತಿತ್ವದಲ್ಲಿದ್ದು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಕಲಕೇರಿ-ವಿರುಪಾಪುರ

ಮುಂಡರಗಿ ತಾಲ್ಲೂಕಿನ ಕಲಕೇರಿ ಮತ್ತು ವಿರುಪಾಪುರ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹತ್ತು ಕಿ.ಮೀ. ದೂರದಲ್ಲಿದೆ. ಈ ಗ್ರಾಮಗಳ ಧಾರ್ಮಿಕ ಕೇಂದ್ರಬಿಂದುವಾಗಿ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ.

ಹಿರೇಮಠ: ಕಲಕೇರಿ ಮತ್ತು ವಿರುಪಾಪುರದ ಮಧ್ಯದಲ್ಲಿ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ. ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದಿರುವ ಈ ಮಠವು ಕಾಶಿಪೀಠದ ಶಾಖಾಮಠವಾಗಿ ಬೆಳೆದಿದೆ.

ಮಠಸ್ಥಾಪನೆ: ೧೮೫೦ರ ಸುಮಾರಿನಲ್ಲಿ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿರಬಹುದೆಂದು ಹೇಳಲಾಗುತ್ತಿದೆ. ಬುಕ್ಕಸಾಗರದ ಶ್ರೀ ಕರಿಸಿದ್ಧೇಶ್ವರ ಮಠದ ಗುರುಗಳಾಗಿದ್ದ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಕಲ್ಕೆರೆಗೆ ಬಂದು ನೆಲೆಸಿ ಮಠವನ್ನು ಸ್ಥಾಪನೆ ಮಾಡಿ ಇಲ್ಲೇ ಲಿಂಗೈಕ್ಯರಾಗಿದ್ದಾರೆ. ಇವರ ಗದ್ದುಗೆಯು ಕಲ್ಕೆರೆ ಗ್ರಾಮದ ಮಧ್ಯದಲ್ಲಿರುವ ಮಠದಲ್ಲಿ ಸ್ಥಾಪನೆಯಾಗಿದೆ. ಇವರ ನಂತರ ಶ್ರೀ ಮುಡುಕೇಶ್ವರ ಶರಣರು ಕೆಲವು ದಿನ ಮಠದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದರಾದರೂ ಇವರಿಗೆ ಪಟ್ಟಾಧಿಕಾರವಾಗಿರಲಿಲ್ಲ. ಇವರು ೧೯೭೨ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಮಠವು ಸುಮಾರು ಹತ್ತುವರ್ಷಗಳ ಕಾಲ ಖಾಲಿ ಉಳಿದಿದ್ದು ಕೇವಲ ಪೂಜೆ ಮಾತ್ರ ನಡೆಯುತ್ತಾ ಬಂದಿತ್ತು.

ಖಾಲಿ ಉಳಿದ ಮಠಕ್ಕೆ ಶ್ರೀ ಚನ್ನವೀರ ಸ್ವಾಮಿಗಳ ವಂಶಸ್ಥರಾದ ಶ್ರೀ ಅಂದಾನಯ್ಯ ಮತ್ತು ಶ್ರೀಮತಿ ಬಸವಣ್ಣಮ್ಮನವರ ಪುತ್ರರಾಗಿ ೧೯೫೪ ರಲ್ಲಿ ಜನಿಸಿದ ಶ್ರೀ ಮುಡುಕೇಶ್ವರರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕಮಾಡಲಾಯಿತು. ಶ್ರೀ ಮುಡುಕೇಶ್ವರ ದೇವರು ಪ್ರಾಥಮಿಕ ಮತ್ತು ಪ್ರೌಢಶಾಲೆಯನ್ನು ವಿರುಪಾಪುರ ಮತ್ತು ಅಣ್ಣಿಗೇರೆಯಲ್ಲಿ ಮುಗಿಸಿ, ಧಾರ್ಮಿಕ ವಿದ್ಯಾಭ್ಯಾಸವನ್ನು ಶಿವಯೋಗ ಮಂದಿರದಲ್ಲಿ ಮುಗಿಸಿ ಹೊನ್ನಾಳಿಯಲ್ಲಿ ವೈದಿಕ ಶಿಕ್ಷಣವನ್ನು ಮುಗಿಸಿದರು. ವಿದ್ಯಾಭ್ಯಾಸ ಮುಗಿದ ಮೇಲೆ ೧೯೮೨ ರಲ್ಲಿ ಶ್ರೀ ಮುಡುಕೇಶ್ವರ ಶಿವಾಚಾರ್ಯ ಸ್ವಾಮಿಗಳೆಂದು ಅಭಿಧಾನ ಪಡೆದು ಪಟ್ಟಾಧಿಕಾರಕ್ಕೆ ಬಂದರು.

ಅಭಿವೃದ್ಧಿ ಕಾರ್ಯಗಳು: ಅನೇಕ ವರ್ಷಗಳ ಕಾಲ ಮಠವು ಖಾಲಿ ಉಳಿದಿದ್ದ ಕಾರಣ ಪೂರ್ಣ ಜೀರ್ಣಾವಸ್ಥೆಗೆ ಬಂದಿತ್ತು. ಗುರುಗಳು ಜೀರ್ಣಗೊಂಡ ಮಠದ ಕಟ್ಟಡವನ್ನು ಅಭಿವೃದ್ಧಿಗೊಳಿಸಿದರು. ಮಠದ ಆವರಣದಲ್ಲಿ ಸಾರ್ವಜನಿಕರಿಗೆ ಅನುಕೂಲವಾಗಲೆಂದು ಕಲ್ಯಾಣ ಮಂಟಪವನ್ನು ನಿರ್ಮಿಸಿದ್ದಾರೆ. ಕಲ್ಕೆರೆಯ ದೇಸಾಯಿಯು ಉಂಬಳಿಯಾಗಿ ನೀಡಿದ್ದ ಜಮೀನಿನಲ್ಲಿ ಈಗ ಕೇವಲ ಮುವತ್ತೈದು ಎಕರೆ ಜಮೀನು ಉಳಿದಿದ್ದು ಈ ಜಮೀನನ್ನು ಬೇಸಾಯಕ್ಕೆ ಯೋಗ್ಯಗೊಳಿಸಿದ್ದಾರೆ. ಮಠದ ಭೂಮಿಯಲ್ಲಿ ಬಾವಿಯನ್ನು ತೆಗೆಸಿ ಎರಡು ಎಕರೆ ಜಮೀನಿನಲ್ಲಿ ತೋಟಗಾರಿಕೆ ಮಾಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಎರಡು ಗದ್ದುಗೆಗಳಿಗೆ ನಿತ್ಯ ಪೂಜೆ, ಮಠದ ಕೇಂದ್ರಬಿಂದುವಾಗಿರುವ ಶ್ರೀ ಮುಡುಕೇಶ್ವರ ದೇವಸ್ಥಾನದಲ್ಲಿ ಎರಡು ವೇಳೆ ಪೂಜೆ ನಡೆಸುತ್ತಿದ್ದಾರೆ. ಅಲ್ಲದೆ ವರ್ಷಕ್ಕೊಮ್ಮೆ ಜಾತ್ರೆಯನ್ನು ಅದ್ದೂರಿಯಾಗಿ ಆಚರಿಸಿ ಅನ್ನದಾಸೋಹ, ವಿದ್ವಾಂಸರಿಂದ ಮತ್ತು ಧರ್ಮಗುರುಗಳಿಂದ ಉಪನ್ಯಾಸವನ್ನು ಏರ್ಪಡಿಸಿ ಜ್ಞಾನದಾಸೋಹವನ್ನು ನೀಡುತ್ತಾರೆ. ಶಿವರಾತ್ರಿಯ ಸಂದರ್ಭದಲ್ಲಿ ಪುರಾತನ ಕಾಲದಿಂದಲೂ ನಡೆದು ಬಂದ ಸಂಪ್ರದಾಯದ

ಕಾರ್ಯಕ್ರಮವಾದ ಕಡುಬಿನ ಕಾಳಗ ಹಾಗೂ ಕುಸ್ತಿಯನ್ನು ನಡೆಸಲಾಗುತ್ತಿದೆ. ಅಮಾವಾಸ್ಯೆಯ ದಿನ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಶ್ರೀ ಮುದುಕೇಶ್ವರ ಶಿವಾಚಾರ್ಯ ಸ್ವಾಮಿಗಳು ೧೯೯೨ರಿಂದ ೧೯೯೪ರವರೆಗೆ ಮೂರು ವರ್ಷಗಳ ಕಾಲ ಮುಂಡರಗಿ ತಾಲ್ಲೂಕಿನ ಮುಂಡುವಾಡದಲ್ಲಿ ಇಪ್ಪತ್ತೊಂದು ದಿನಗಳ ಕಾಲ ಅನುಷ್ಠಾನಕ್ಕೆ ಕುಳಿತು ಸಾಧನೆ ಮಾಡಿದ್ದಾರೆ. ಅನುಷ್ಠಾನದ ಮೂರನೆಯ ವರ್ಷದ ಕೊನೆಯ ದಿನ ಶ್ರೀ ರಂಭಾಪುರಿ ಜಗದ್ಗುರುಗಳನ್ನು ಕರೆಸಿ ಅಡ್ಡ ಪಲ್ಲಕ್ಕಿ ಉತ್ಸವ, ಧಾರ್ಮಿಕ ಸಮಾರಂಭವನ್ನು ಆಚರಿಸಿದ್ದು, ಮಠದ ಇತಿಹಾಸದಲ್ಲಿ ಉಳಿಯುವ ಒಂದು ಕಾರ್ಯಕ್ರಮವಾಗಿದೆ.

ವಿಳಾಸ: ಷ.ಬ್ರ.ಶ್ರೀ ಮುದುಕೇಶ್ವರ ಶಿವಾಚಾರ್ಯಸ್ವಾಮಿಗಳು,ಶ್ರೀ ಹಿರೇಮಠ, ಕಲ್ಕೆರೆ-ವಿರುಪಾಪುರ, ಮುಂಡರಗಿ ತಾ, ಗದಗಜಿಲ್ಲೆ.

ಜಾಲವಾಡಿಗಿ

ಮುಂಡರಗಿ ತಾಲ್ಲೂಕಿನ ಜಾಲವಾಡಿಗಿಯು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿನೆಂಟು ಕಿ.ಮೀ. ದೂರದಲ್ಲಿದೆ. ತುಂಗಾಭದ್ರಾ ನದಿಯ ದಡದಲ್ಲಿರುವ ಈ ಗ್ರಾಮ ಧಾರ್ಮಿಕ ಹಾಗೂ ಸಾಂಸ್ಕೃತಿಕವಾಗಿ ಬೆಳೆದಿದೆ. ಇಲ್ಲಿ ಶ್ರೀ ಮಾನಿಹಳ್ಳಿ ಪುರವರ್ಗದ ಮಠವು ಸ್ಥಾಪನೆಯಾಗಿದೆ.

ಮಾನಿಹಳ್ಳಿ ಪುರವರ್ಗದ ಮಠ: ಜಾಲವಾಡಿಗಿ ಗ್ರಾಮದ ಮಧ್ಯಭಾಗದಲ್ಲಿ ಉಜ್ಜಯಿನಿ ಪೀಠದ ಪರಂಪರೆಯ ಮಠವು ಸ್ಥಾಪನೆಯಾಗಿದೆ. ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನ ಮಾನಿಹಳ್ಳಿಯ ಪುರವರ್ಗದ ಮಠದ ಶಾಖಾಮಠವಾಗಿ ಬೆಳೆದಿದೆ. ಮಠದ ಆವರಣದಲ್ಲಿ ಮೂರು ಗದ್ದುಗೆಗಳು ಸುಸ್ಥಿತಿಯಲ್ಲಿದ್ದು ಉಳಿದ ಗದ್ದುಗೆಗಳು ನಶಿಸಿಹೋಗಿವೆ. ಶ್ರೀ ಮಳೆಯೋಗೀಶ್ವರ ಶಿವಾಚಾರ್ಯಸ್ವಾಮಿಗಳು ಪಟ್ಟಾಧಿಕಾರಕ್ಕೆ ಬರುವ ತನಕ ಮಠದ ಉಸ್ತುವಾರಿಯನ್ನು ನೋಡಿಕೊಳ್ಳಲು ಯಾರೂ ಇಲ್ಲದಿದ್ದ ಕಾರಣ ಮಠವು ಪೂರ್ಣ ಜೀರ್ಣಗೊಂಡಿದೆ. ಶ್ರೀ ಮಳೆಯೋಗೀಶ್ವರ ಶಿವಾಚಾರ್ಯ ಸ್ವಾಮಿಗಳು ಮಠಕ್ಕೆ ತಿಂಗಳಿಗೊಮ್ಮೆ ಭೇಟಿ ನೀಡಿ ಮಠದ ಉಸ್ತುವಾರಿಯನ್ನು ನೋಡಿಕೊಂಡು ಭಕ್ತರಿಗೆ ಧರ್ಮೋಪದೇಶವನ್ನು ನೀಡುತ್ತಿದ್ದಾರೆ. ಮಠದ ಅಧೀನದಲ್ಲಿ ಐವತ್ತು ಎಕರೆ ಜಮೀನಿದ್ದು ಇದನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ಮಠದ ಕಟ್ಟಡವನ್ನು ನೂತನವಾಗಿ ನಿರ್ಮಿಸಲು ಯೋಜನೆಯನ್ನು ತಯಾರಿಸಿಕೊಂಡು ಮಠದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ.

ಮಠದಲ್ಲಿ ಗದ್ದುಗೆಗಳ ಪೂಜೆ, ವರ್ಷಕ್ಕೊಮ್ಮೆ ಹಿರಿಯ ಗುರುಗಳ ಪುಣ್ಯ ಸ್ಮರಣೆ ಮೊದಲಾದ ಕಾರ್ಯಕ್ರಮವನ್ನು ಹಮ್ಮಿಕೊಂಡು ಈ ಭಾಗದ ಭಕ್ತರಲ್ಲಿ ಧಾರ್ಮಿಕ ಪ್ರಜ್ಞೆಯನ್ನು ಮೂಡಿಸುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ಈ ಭಾಗದ ಮೂವತ್ತ ಮೂರು ಹಳ್ಳಿಗಳಲ್ಲಿ ಭಕ್ತರು ಇದ್ದು ಇವರುಗಳ ಧಾರ್ಮಿಕ ಕ್ರಿಯಾದಿಗಳಲ್ಲಿ ಗುರುಗಳು ಭಾಗಿಯಾಗಿ ಧರ್ಮೋಪದೇಶ ನೀಡುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಮಳೆಯೋಗೀಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಮಾನಿಹಳ್ಳಿ ಪುರವರ್ಗದ ಮಠ, ಜಾಲವಾಡಿಗಿ, ಮುಂಡರಗಿ ತಾಲ್ಲೂಕು, ಗದಗ ಜಿಲ್ಲೆ.

ಡಂಬಳ

ಮುಂಡರಗಿ ತಾಲ್ಲೂಕಿನ ಡಂಬಳವು ಧಾರ್ಮಿಕವಾಗಿ ಹೆಸರು ಮಾಡಿದೆ. ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿನೆಂಟು ಕಿ.ಮೀ. ದೂರದಲ್ಲಿರುವ ಈ ಗ್ರಾಮವು ಶ್ರೀ ಅರ್ಧನಾರೀಶ್ವರ ಸ್ವಾಮಿಗಳ ಗದ್ದುಗೆಯ ಸ್ಥಾಪನೆಯಿಂದ ಖ್ಯಾತವಾಗಿದೆ. ಇದೇ ರೀತಿ ಇಲ್ಲಿ ಶ್ರೀ ಹಾಲುಸ್ವಾಮಿ ಮಠವೂ ಸ್ಥಾಪನೆಯಾಗಿದೆ.

ಅರ್ಧನಾರೀಶ್ವರಮಠ: ಡಂಬಳ ಗ್ರಾಮದ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ಅರ್ಧನಾರೀಶ್ವರಮಠವು ೧೬೭೫-೧೭೨೫ರ ಅವಧಿಯಲ್ಲಿ ಸ್ಥಾಪನೆಗೊಂಡಿದೆ. ಶ್ರೀ ತೋಂಟದ ಸಿದ್ಧಲಿಂಗೇಶ್ವರಯತಿಗಳ ನಂತರ ಬೆಳೆದ ಪರಂಪರೆಯ ಒಂಭತ್ತನೆಯ ಗುರುಗಳಾದ ಶ್ರೀ ಅರ್ಧನಾರೀಶ್ವರರ ಕಾಲದಲ್ಲಿ ಸಂಚಾರದಲ್ಲಿದ್ದ ಪೀಠ ಡಂಬಳದಲ್ಲಿ ನೆಲೆಗೊಳ್ಳುತ್ತದೆ. ಈ ಕಾರಣದಿಂದ ಶ್ರೀ ಅರ್ಧನಾರೀಶ್ವರಮಠ ಎಂಬ ಹೆಸರು ಬಂದಿದೆ.

ಗದಗದ ತೋಂಟದಾರ್ಯ ಸಂಸ್ಥಾನ ಮಠದ ಮೂಲಮಠವಾಗಿದ್ದ ಈ ಮಠವು ಚೀಲಾಳಸಮಯಕ್ಕೆ ಸೇರಿದ್ದು ಕೆಳದಿ ಅರಸರ ನೆರವಿನಿಂದ ಶ್ರೀಮಂತಗೊಂಡು ಐತಿಹಾಸಿಕವಾಗಿಯೂ ಹೆಸರು ಪಡೆದಿದೆ. ಕಾಲಕ್ರಮೇಣ ಡಂಬಳದ ಆಡಳಿತವು ಶಾಖಾಮಠವಾದ ಗದಗಕ್ಕೆ ಸ್ಥಳಾಂತರಗೊಂಡಿತು. ಮಠದ ಪರಂಪರೆ, ಆಡಳಿತಾತ್ಮಕ ವಿಚಾರ ಗದಗದ ತೋಂಟದಾರ್ಯ ಮಠದ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಈ ಎರಡೂ ಮಠಗಳ ಇತಿಹಾಸ ಒಟ್ಟೊಟ್ಟಿಗೆ ಬೆಳೆದಿದೆ. (ಪುಟ ೮೯ ನೋಡಿ) ಈಗಿನ ಗುರುಗಳಾದ ಶ್ರೀ ತೋಂಟದ ಡಾ. ಸಿದ್ಧಲಿಂಗಸ್ವಾಮಿಗಳು ಡಂಬಳ ಮತ್ತು ಗದಗ ಎರಡೂ ಮಠಗಳನ್ನು ಸಮಾನ ದೃಷ್ಟಿಯಿಂದ ನೋಡುತ್ತ ಡಂಬಳದಲ್ಲಿಯೇ ತಮ್ಮ ವಾಸ್ತವ್ಯವನ್ನು ಮಾಡಿಕೊಂಡಿದ್ದು ಇಲ್ಲಿ ಉಲ್ಲೇಖಾರ್ಹವಾಗಿದೆ.

ವಿಳಾಸ: ಶ್ರೀ ತೋಂಟದ ಡಾ. ಸಿದ್ಧಲಿಂಗಸ್ವಾಮಿಗಳು, ಶ್ರೀ ಅರ್ಧನಾರೀಶ್ವರ ಮಠ, ಡಂಬಳ, ಮುಂಡರಗಿ ತಾ. ಗದಗ ಜಿಲ್ಲೆ.

ಹಾಲುಸ್ವಾಮಿ ಮಠ: ಡಂಬಳದ ದಕ್ಷಿಣಭಾಗದಲ್ಲಿ ಶ್ರೀ ಹಾಲುಸ್ವಾಮಿ ಮಠವು ೧೯೩೪ ರಲ್ಲಿ ಸ್ಥಾಪನೆಯಾಗಿದೆ. ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ರಾಂಪುರದ ಶ್ರೀ ವಿಶ್ವರಾಧ್ಯ ಶಿವಯೋಗಿಗಳು ಲೋಕಸಂಚಾರ ಕೈಗೊಂಡು ಈ ಸ್ಥಳದಲ್ಲಿ ತಮ್ಮ ಭಕ್ತರ ಅಪೇಕ್ಷೆಮೇರೆಗೆ ಮಠವನ್ನು ಸ್ಥಾಪನೆಮಾಡಿದ್ದಾರೆ. ಪಂಚಪೀಠದಲ್ಲಿ ಒಂದಾದ ಕಾಶಿಪೀಠದ ಶಾಖಾಮಠವಾದ ಈ ಮಠವು ತನ್ನದೇ ಆದ ಭಕ್ತರನ್ನು ಸಂಪಾದಿಸಿಕೊಂಡು ಬೆಳೆದು ಬಂದಿದೆ.

ಪರಂಪರೆ:

೧. ಶ್ರೀ ಶಿವಯೋಗಿ ಹಾಲುಸ್ವಾಮಿಗಳು

೨. ಶ್ರೀ ಹಾಲುಶಂಕರಸ್ವಾಮಿಗಳು

೩. ಶ್ರೀ ಶಿವಾನಂದ ಹಾಲುಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಶ್ರೀ ವಿಶ್ವಾರಾಧ್ಯ ಶಿವಯೋಗಿ ಹಾಲು ಸ್ವಾಮಿಗಳು ಮಠವನ್ನು ಸ್ಥಾಪನೆಮಾಡಿದ ನಂತರ, ಮೊದಲ ಮಠಾಧ್ಯಕ್ಷರಾಗಿ ಅಧಿಕಾರಕ್ಕೆ ಬಂದ ಶ್ರೀ ಶಿವಯೋಗಿಸ್ವಾಮಿಗಳು ಮಠವನ್ನು ಬೆಳೆಸಿದರು. ಅಲ್ಲದೆ. ಅನ್ನದಾಸೋಹಕ್ಕೆ ವ್ಯವಸ್ಥೆಗೊಳಿಸಿದರು. ನಿತ್ಯ ಭಜನೆ ನಡೆಯಲು ವ್ಯವಸ್ಥೆಗೊಳಿಸಿದ ಗುರುಗಳು ಮಠದಲ್ಲಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿ ೧೯೬೧ರಲ್ಲಿ ಲಿಂಗೈಕ್ಯರಾದರು. ನಂತರ ಬಂದ ಶ್ರೀ ಹಾಲುಶಂಕರ ಸ್ವಾಮಿಗಳು ಮಠವನ್ನು ಮುನ್ನಡೆಸಿ ೧೯೮೮ ರ ಡಿಸೆಂಬರ್ ಇಪ್ಪತ್ತೆರಡರಂದು ಲಿಂಗೈಕ್ಯರಾದರು. ತರುವಾಯ ಈಗಿನ ಮಠಾಧ್ಯಕ್ಷರಾಗಿ ಶ್ರೀ ಶಿವಾನಂದ ಸ್ವಾಮಿಗಳು ೧೯೯೯ ರ ಜನವರಿ ಹದಿನಾಲ್ಕರಂದು ಅಧಿಕಾರಕ್ಕೆ ಬಂದರು. ಡಂಬಳದ ಶ್ರೀ ಮುರುಗೇಂದ್ರಯ್ಯ ಮತ್ತು ಶ್ರೀಮತಿ ಸಿದ್ಧಮ್ಮನವರ ಮಗನಾಗಿ ೧೯೭೫ ರಲ್ಲಿ ಜನಿಸಿದ ಗುರುಗಳು ಪ್ರೌಢಶಾಲೆಯವರೆಗೆ ವಿದ್ಯಾಭ್ಯಾಸ ಮಾಡಿ ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ನಿತ್ಯಗದ್ದುಗೆಗೆ ಪೂಜೆ, ಆಶ್ವೀಜಮಾಸದಲ್ಲಿ ದೇವಿಯ ಪುರಾಣವನ್ನು ನಡೆಸಲಾಗುತ್ತಿದೆ. ಶ್ರಾವಣ ಮಾಸದಲ್ಲಿ ಗುರುಗಳು ಅನುಷ್ಠಾನಗೊಳ್ಳುತ್ತಾರೆ. ನಿತ್ಯ ಅನ್ನದಾಸೋಹ ನಡೆಯುತ್ತಿದೆ.

ವಿಳಾಸ: ಶ್ರೀ ಶಿವಾನಂದ ಹಾಲು ಸ್ವಾಮಿಗಳು, ಶ್ರೀ ಹಾಲು ಸ್ವಾಮಿ ಮಠ, ಡಂಬಳ, ಮುಂಡರಗಿ ತಾಲ್ಲೂಕು, ಗದಗ ಜಿಲ್ಲೆ.

ಪೇಠಾ ಆಲೂರು

ಮುಂಡರಗಿ ತಾಲ್ಲೂಕಿನ ಪೇಠಾಆಲೂರು ಗ್ರಾಮವು ತಾಲ್ಲೂಕು ಕೇಂದ್ರದ ಉತ್ತರಕ್ಕೆ ಹದಿನೇಳು ಕಿ.ಮೀ. ದೂರದಲ್ಲಿದೆ. ಅಭಿವೃದ್ಧಿಯನ್ನು ಕಾಣುತ್ತಿರುವ ಈ ಗ್ರಾಮದಲ್ಲಿ ಇತ್ತೀಚಿಗೆ ಸ್ಥಾಪನೆಯಾದ ಶ್ರೀ ಹಾಲೇಶ್ವರ ಕೃಪಾಪೋಷಿತ ಶಿವಯೋಗಾಶ್ರಮವು ಧಾರ್ಮಿಕ ಮತ್ತು ಶೈಕ್ಷಣಿಕ ಪ್ರಗತಿಗೆ ನೆರವಾಗಿದೆ.

ಹಾಲೇಶ್ವರ ಕೃಪಾಪೋಷಿತ ಶಿವಯೋಗಾಶ್ರಮ: ಪೇಠಾ ಆಲೂರು ಗ್ರಾಮದಲ್ಲಿ ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ರಾಂಪುರದ ಹಾಲುಸ್ವಾಮಿ ಮಠದ ಶಾಖಾಮಠವು ೧೯೬೪ರಲ್ಲಿ ಶ್ರೀ ಹಾಲೇಶ್ವರ ಶರಣರಿಂದ ಪ್ರಾರಂಭಗೊಂಡಿರುತ್ತದೆ. ಇದೇ ಗ್ರಾಮದಲ್ಲಿ ಜನಿಸಿದ ಶ್ರೀ ಹಾಲೇಶ್ವರ ಶರಣರು ಆಧ್ಯಾತ್ಮಚಿಂತಕರಾಗಿ ಮಠವನ್ನು

ಸ್ಥಾಪಿಸಿ, ೧೯೭೮ ರಲ್ಲಿ ಹಾವೇರಿ ಜಿಲ್ಲೆಯ ನೆಗಳೂರು ಮಠದ ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳಿಂದ ಪಟ್ಟಾಧಿಕಾರದ ಅನುಗ್ರಹ ಪಡೆದು ೧೯೭೮ ರಲ್ಲಿ ಮಠದ ಅಧಿಕಾರವನ್ನು ವಹಿಸಿಕೊಂಡಿರುತ್ತಾರೆ.

ಧಾರ್ಮಿಕ ಕಾರ್ಯಗಳು: ಶ್ರೀ ಹಾಲೇಶ್ವರ ಸ್ವಾಮಿಗಳು ತಾವೇ ಸ್ಥಾಪಿಸಿದ ಮಠದಲ್ಲಿ ಪ್ರತಿ ತಿಂಗಳಿಗೊಮ್ಮೆ ಶಿವಾನುಭವ ಕಾರ್ಯಕ್ರಮವನ್ನು ಹಮ್ಮಿಕೊಂಡು ಭಕ್ತರನ್ನು ಸಂಸ್ಕಾರವಂತರನ್ನಾಗಿ ಮಾಡಿದ್ದಾರೆ. ಪ್ರತಿ ವರ್ಷದ ದವನ ಹುಣ್ಣಿಮೆಯಂದು ನಡೆಯುವ ಜಾತ್ರೆಯಲ್ಲಿ ಮುಳ್ಳು ಗದ್ದುಗೆಯ ಮೇಲೆ ಅನುಷ್ಠಾನವನ್ನು ಕೈಗೊಳ್ಳುತ್ತಿದ್ದಾರೆ.

ಶೈಕ್ಷಣಿಕ ಸೇವೆ: ೧೯೭೮ ರಲ್ಲಿ ಶ್ರೀ ಹಾಲೇಶ್ವರ ವಿದ್ಯಾಪೀಠವನ್ನು ಸ್ಥಾಪಿಸಿ ಎರಡು ಪ್ರೌಢಶಾಲೆ, ಒಂದು ಪ್ರಾಥಮಿಕ ಶಾಲೆ ಹಾಗೂ ಒಂದು ಪದವಿಪೂರ್ವ ಕಾಲೇಜನ್ನು ಪ್ರಾರಂಭಿಸಿದ್ದಾರೆ. ಎರಡು ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿ ಕಲಿಯುವ ಬಡ ಮಕ್ಕಳಿಗೆ ಆಶ್ರಯ ಕಲ್ಪಿಸಿದ್ದಾರೆ. ಗುರುಗಳು ಅಧಿಕಾರಕ್ಕೆ ಬಂದ ಮೇಲೆ ಮಠದ ಸುತ್ತ ಎಂಟು ಎಕರೆ ಜಮೀನನ್ನು ಖರೀದಿಸಿದ್ದು ಈ ಜಾಗದಲ್ಲಿ ಶಾಲೆ ಹಾಗೂ ಮಠದ ಸಮುಚ್ಚಯವನ್ನು ನಿರ್ಮಿಸಿದ್ದಾರೆ.

ವಿಳಾಸ: ಶ್ರೀ ಹಾಲೇಶ್ವರ ಸ್ವಾಮಿಗಳು, ಶ್ರೀ ಹಾಲೇಶ್ವರ ಕೃಪಾ ಪೋಷಿತ ಶಿವಾಯೋಗಾಶ್ರಮ, ಪೇಠಾಆಲೂರು, ಮುಂಡರಗಿ ತಾಲ್ಲೂಕು, ಗದಗ ಜಿಲ್ಲೆ.

ಮುಂಡರಗಿ

ಗದಗ ಜಿಲ್ಲೆಯ ತಾಲ್ಲೂಕು ಕೇಂದ್ರಸ್ಥಳವಾದ ಮುಂಡರಗಿಯು ಜಿಲ್ಲಾ ಕೇಂದ್ರದಿಂದ ಆಗ್ನೇಯಕ್ಕೆ ನಲವತ್ತು ಕಿ.ಮೀ. ದೂರದಲ್ಲಿದೆ. ಪ್ರಾಚೀನ ಕಾಲದಿಂದಲೂ ಭವ್ಯ ಇತಿಹಾಸವನ್ನು ಹೊಂದಿರುವ ಮುಂಡರಗಿಯು ಮುಂಡ ಎಂಬ ಬುಡಕಟ್ಟಿನ ಜನಾಂಗದ ಪ್ರದೇಶವಾಗಿತ್ತೆಂದು ಹೇಳಲಾಗುತ್ತದೆ. ಮುಂಡರಗೆಯ್, ಮುಂಡರಗೈ ಎಂಬ ಹೆಸರು ರೂಢಿಗತವಾಗಿ ರೂಪಾಂತರಗೊಂಡು ಮೃಡಗಿರಿಯಾಗಿ ಈಗ ಮುಂಡರಗಿಯಾಗಿದೆ ಎಂದು ಸ್ಥಳನಾಮದ ಬಗ್ಗೆ ಇತಿಹಾಸಕಾರರು ಅಭಿಪ್ರಾಯಿಸಿದ್ದಾರೆ. ಇಂತಹ ಇತಿಹಾಸ ಪ್ರಸಿದ್ಧ ಪಟ್ಟಣದಲ್ಲಿ ಶ್ರೀ ಅನ್ನದಾನೇಶ್ವರ ಮಠವು ಸ್ಥಾಪನೆಯಾಗಿ ತನ್ನದೇ ಆದ ವಿಶಿಷ್ಟ ಪರಂಪರೆಯಿಂದ ಸಮಷ್ಟಿ ಸಮಾಜದ ಉಳಿವಿಗೆ ಶ್ರಮಿಸಿ ಧಾರ್ಮಿಕ, ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕವಾದ ಕೊಡುಗೆಯನ್ನು ನೀಡಿದೆ.

ಜಗದ್ಗುರು ಅನ್ನದಾನೇಶ್ವರ ಸಂಸ್ಥಾನ ಮಠ: ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ಕ್ರಾಂತಿಯಾದಾಗ ಶರಣರು ತಮ್ಮ ವಚನ ಸಾಹಿತ್ಯವನ್ನು ರಕ್ಷಿಸಲು ದೇಶಾಂತರ ಹೊರಟರು. ಶ್ರೀ ಚನ್ನಬಸವಣ್ಣ, ಅಕ್ಕನಾಗಮ್ಮ ಮುಂತಾದ ಪ್ರಮುಖ ಶರಣರು ದಕ್ಷಿಣಾಭಿಮುಖವಾಗಿ ಹೊರಟು ಉಳವಿ ನಂತರ ಚಿಕ್ಕಮಗಳೂರು ತನಕ ಬಂದು ನೆಲೆಗೊಳ್ಳುತ್ತಾರೆ. ಉಳವಿಯನ್ನು ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡು ವೀರಶೈವ ಧರ್ಮವನ್ನು ಬೆಳೆಸುತ್ತಾರೆ. ಚನ್ನಬಸವಣ್ಣನವರ ಶಿಷ್ಯ ಸಮೂಹ ನಾಡಿನಾದ್ಯಂತ ಸಂಚರಿಸಿ ಮಠಗಳನ್ನು ಸ್ಥಾಪಿಸಿ, ಧರ್ಮಕಾರ್ಯದ ಜೊತೆಗೆ ಶರಣ ಸಾಹಿತ್ಯವನ್ನು ಪ್ರಚಾರಪಡಿಸುವ ಕಾಯಕದಲ್ಲಿ ತೊಡಗುತ್ತಾರೆ. ಇಂತಹ ಶರಣರಲ್ಲಿ ಶ್ರೀ ಅನ್ನದಾನೇಶ್ವರ ಶಿವಯೋಗಿಗಳು ಒಬ್ಬರು. ಇವರು ಮುಂಡರಗಿಗೆ ಬರುವ ಸಂದರ್ಭದಲ್ಲಿ ದರೋಡೆಕಾರರ ಗುಂಪು ಶ್ರೀ ಅನ್ನದಾನೇಶ್ವರ ಶಿವಯೋಗಿಗಳನ್ನು ಸುತ್ತುವರೆದು ನಿಂತಿತು. ಮಹಾ ತಪಸ್ವಿಗಳಾದ ಗುರುಗಳ ದೃಷ್ಟಿಗೆ ದರೋಡೆಕಾರರ ನಾಯಕ ಶರಣಾಗತನಾಗುತ್ತಾನೆ. ಆಗ ಗುರುಗಳು 'ನೀವು ಈ ಕೃತ್ಯಕ್ಕೆ ಇಳಿದಿದ್ದು ನಿಮ್ಮಗಳ ಹಸಿವಿನಿಂದ ತಾನೇ' ಎಂದು ಅವರ ಕಣ್ಣು ತೆರೆಸಿ ತಮ್ಮ ಜೋಳಿಗೆಯಿಂದ ಅನ್ನದ ಬಟ್ಟಲನ್ನು ತೆಗೆದು ಅಂಬಲಿ ನೀಡಿ ಸಂತೃಪ್ತಗೊಳಿಸಿದರು. ಅದೇ ರೀತಿ ಜ್ಞಾನದ ಕಣ್ಣು ತೆರೆಸಿ ಇಲ್ಲಿಯ ಜನರ ಅಜ್ಞಾನವನ್ನು ತೊಳೆಯಲು ಇಲ್ಲಿಯೇ ನೆಲೆಸಲು ನಿಶ್ಚಯಿಸಿದರು. ಜನರ ಅಜ್ಞಾನ ಅಂಧಕಾರ ತೊಳೆದು ಜ್ಞಾನದ ಜ್ಯೋತಿಯನ್ನು ನೀಡಿ ಕಾಯಕಕ್ಕೆ ತೊಡಗಿಸಿದ ಗುರುಗಳು ಇಲ್ಲಿ ಮಠವನ್ನು ಸ್ಥಾಪಿಸಿ ಲೋಕಸಂಚಾರ ಕೈಗೊಂಡು ಮೈಸೂರಿನಲ್ಲಿ ಒಂದು ಮಠವನ್ನು ಸ್ಥಾಪಿಸಿ, ಧಾರವಾಡ ಜಿಲ್ಲೆ ಅಣ್ಣಿಗೇರೆಯಲ್ಲಿ ಲಿಂಗೈಕ್ಯರಾದರು. ಶ್ರೀ ಅನ್ನದಾನೇಶ್ವರ ಶಿವಾಯೋಗಿಗಳು ಸ್ಥಾಪಿಸಿದ ಮಠ ಈತನಕ ಉತ್ತರೋತ್ತರವಾಗಿ ಬೆಳೆದು ಬಂದಿದೆ.

ಒಂದೇ ಹೆಸರಿನ ಪರಂಪರೆ: ಮಠವು ಸ್ಥಾಪನೆಯಾದಾಗಿನಿಂದ ಕರ್ತೃಗುರುಗಳ ನಾಮಾಂಕಿತವನ್ನೇ ಪರಂಪರೆಯ ಎಲ್ಲಾ ಗುರುಗಳು ಅಭಿದಾನವಾಗಿ ಪಡೆದು ಅಧಿಕಾರಕ್ಕೆ ಬರುತ್ತಿದ್ದಾರೆ. ಮೊದಲ ಗುರುಗಳ ನಂತರ ಮಹಾಲಿಂಗಪುರದ ಶ್ರೀ ಪಂಚಾಕ್ಷರ ದೇವರ ಸ್ವಾಮಿಗಳು ಕರ್ತೃಗುರುಗಳ ಸೇವೆಗೈದು ಸಂಸ್ಕಾರ ಹೊಂದಿದ್ದರು. ಇವರ ನಂತರ ಮೂರನೆಯ ಗುರುಗಳಾಗಿ ಅಧಿಕಾರಕ್ಕೆ ಬಂದ ಶ್ರೀ ಅನ್ನದಾನೇಶ್ವರ ಸ್ವಾಮಿಗಳು ಶರಣ ತತ್ವಗಳನ್ನು ಕ್ರಮವಾಗಿ ಪ್ರಚಾರಗೊಳಿಸಿ ಭಕ್ತರ ಜ್ಞಾನದ ಮಟ್ಟವನ್ನು ಹೆಚ್ಚಿಸಿದರು. ಐದನೆಯ ಗುರುಗಳು (೧೮೧೫-೧೮೫೩) ದೀರ್ಘ ಆಯುಷ್ಯವನ್ನು ಪಡೆದು ಶ್ರೀ ಮುದಿ ಅನ್ನದಾನೇಶ್ವರ ಸ್ವಾಮಿಗಳೆಂದೇ ಹೆಸರು ಪಡೆದಿದ್ದರು. ಆರನೆಯ ಜಗದ್ಗುರುಗಳಾಗಿ ಕಲ್ಲೂರಿನ ಗುರುಗಳು ಬಾಲ್ಯದಲ್ಲಿಯೇ ಮಠದ ಆಡಳಿತವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿ ಶ್ರೀ ಬಾಲಲೀಲಾ ಅನ್ನದಾನೇಶ್ವರರು ಎಂಬ ಹೆಸರು ಪಡೆದು ನಂತರ ತಮ್ಮ ಆಚಾರ ವಿಚಾರಗಳಿಂದ ಹುಚ್ಚು ಶ್ರೀ ಅನ್ನದಾನೇಶ್ವರ ಸ್ವಾಮಿಗಳೆಂಬ ಹೆಸರು ಪಡೆದು ಲಿಂಗೈಕ್ಯರಾದರು.

ಏಳನೆಯ ಮಠಾಧೀಶರು ಉಪ್ಪಿನ ಬೆಟಗೇರಿಯವರ ಬಳ್ಳೊಳ್ಳಿಯವರ ಮನೆತನದವರು. ಆರನೆಯ ಗುರುಗಳು ಮಠವನ್ನು ತ್ಯಜಿಸಿದನಂತರ ಮರಿದೇವರಾಗಿದ್ದ ಗುರುಗಳು ೧೮೫೩ ರಲ್ಲಿ ಮಠದ ಅಧಿಕಾರವನ್ನು ವಹಿಸಿಕೊಂಡರು. ಕೆಲಕಾಲ ಇಲ್ಲಿ ನೆಲೆಸಿ ವಿವಾದದಿಂದ ಬೇಸತ್ತು ಮಠವನ್ನು ತ್ಯಜಿಸಿ ಭಕ್ತರ ನೆರವು ಪಡೆದು ಹೊಸ ಮಠವನ್ನು ಸ್ಥಾಪಿಸಿ ಶ್ರೀ ಲಿಂಗರಾಜ ನಾಡಗೌಡರ ಜಮೀನಿನಲ್ಲಿ ೧೮೫೪ ರಲ್ಲಿ ಹೊಸಮಠವನ್ನು ಕಟ್ಟಿದರು. ನಂತರ ಎಂಟನೆಯ ಮಠಾಧೀಶರು (೧೮೮೮- ೧೯೨೬) ಸೊರಟೂರಿನ ಅಜ್ಜನವರು ಎಂದೇ ಖ್ಯಾತಿಗಳಿಸಿದವರು ಗುರುಗಳು ಮಹಾ ಶಿವಪೂಜಾನಿಷ್ಠರು. ಹಾನಗಲ್ಲು ಶ್ರೀ ಕುಮಾರ ಸ್ವಾಮಿಗಳು ಹಾಗೂ ಮಲ್ಲನಕೇರಿ ಗುರುಗಳನ್ನು ಮುಂಡರಗಿಗೆ ಆಹ್ವಾನಿಸಿ ಧಾರ್ಮಿಕ ಸಭೆಗಳನ್ನು ಏರ್ಪಡಿಸಿ ಸಮಾಜವನ್ನು ಸನ್ಮಾರ್ಗದಲ್ಲಿ ನಡೆಸಿದರು. ಜನಪರ ಕಾಳಜಿ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಅಂದೇ ದೊಡ್ಡ ಹೋರಾಟ ಮಾಡಿದರು. ಮುಂಡರಗಿಯಲ್ಲಿ ಕನ್ನಡ ಶಾಲೆ, ಸರಕಾರಿ ಆಸ್ಪತ್ರೆ, ಪಂಚಾಯತ್ ಕಟ್ಟಡ, ಪೊಲೀಸ್ ಮೈದಾನ ಹಾಗೂ ಸೊರಟೂರಿನಲ್ಲಿ ಕನ್ನಡ ಶಾಲೆಗೆ ಇಪ್ಪತ್ತೈದು ಎಕರೆ ಜಮೀನನ್ನು ದಾನ ಮಾಡಿದರು. ಅಲ್ಲದೆ ಆರ್ಥಿಕ ಸಹಾಯವನ್ನು ನೀಡಿ ಸಮಾಜವು ಧಾರ್ಮಿಕವಾಗಿ ಮತ್ತು ಶೈಕ್ಷಣಿಕವಾಗಿ ಪ್ರಗತಿ ಕಾಣಲು ನೆರವಾಗಿದ್ದರು.

ಸಾಧನೆಯ ಶಿಲ್ಪಿ: ಮುಂಡರಗಿ ತಾಲ್ಲೂಕಿನ ವೆಂಕಟಾಪುರದ ರಾಚೋಟಿ ದೇವರು, ೧೯೨೬ರ ಜೂನ್ ಆರರಂದು ಒಂಬತ್ತನೆಯ ಗುರುಗಳಾಗಿ ಮಠದ ಅಧಿಕಾರವನ್ನು ವಹಿಸಿಕೊಂಡರು. ಸಿಕ್ಕುಗಳ ಸರಮಾಲೆಯಾಗಿದ್ದ ಮಠವನ್ನು ಉಳಿಸಿಕೊಳ್ಳುವುದೇ ದುಸ್ಥರ ಎಂಬ ಸ್ಥಿತಿ ಎದುರಾದರೂ, ತಮ್ಮ ತೀಕ್ಷ್ಣ ಬುದ್ಧಿವಂತಿಕೆಯಿಂದ ಎಲ್ಲಾ ಸಿಕ್ಕುಗಳನ್ನು ನಿವಾರಣೆ ಮಾಡಿ ೧೯೩೬ ರಲ್ಲಿ ಗೊಂದಲದ ಪೊರೆಯನ್ನು ಕಳಚಿದರು. ನಂತರ ಮಠವನ್ನು ಧಾರ್ಮಿಕವಾಗಿ ಹೆಚ್ಚು ಪ್ರಚಾರಕ್ಕೆ ತಂದರಲ್ಲದೆ ಮುಂಡರಗಿಯ ಪ್ರೌಢಶಾಲೆ ಹಾಗೂ ವಿದ್ಯಾರ್ಥಿ ನಿಲಯಕ್ಕೆ ಮಠದ ಆಸ್ತಿಯನ್ನು ಬಳಸಿದರು. ಅದೇ ರೀತಿ ಹೊಳೆ ಆಲೂರಿನ ಶ್ರೀ ಕಲ್ಲೇಶ್ವರ ಪ್ರೌಢಶಾಲೆಗೆ ಹನ್ನೊಂದು ಎಕರೆ, ಲಕ್ಕುಂಡಿ ಸರಕಾರಿ ಆಸ್ಪತ್ರೆ ಮತ್ತು ಪಂಚಾಯತ್ ಕಟ್ಟಡಕ್ಕೆ ಬೆಲೆಬಾಳುವ ಭೂಮಿಯನ್ನು ಕಾಣಿಕೆಯಾಗಿ ನೀಡಿದರು. ಹುಬ್ಬಳ್ಳಿಯ ಭೂಮರೆಡ್ಡಿ ತಾಂತ್ರಿಕ ಕಾಲೇಜು, ಹೊಸರಿತ್ತಿಯ ಗಾಂಧಿ ಆಶ್ರಮ, ಬಿಜಾಪುರದ ಅಂಧರ ಸಂಘ ಈ ರೀತಿ ಅನೇಕ ಶೈಕ್ಷಣಿಕ ಹಾಗೂ ಸಾಮಾಜಿಕ ಕಾರ್ಯಗಳಿಗೆ ಉದಾರ ನೆರವು ನೀಡಿ ಸಮಾಜವನ್ನು ಬೆಳೆಸಿದರು.

ಪ್ರಗತಿಯ ಹರಿಕಾರರು: ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳು ತಾಲ್ಲೂಕಿನ ಶ್ರೀ ವೀರಭದ್ರಯ್ಯ ಮತ್ತು ಶ್ರೀಮತಿ ಬಸಮ್ಮನವರ ಪುತ್ರರಾಗಿ ೧೯೪೩ ರಲ್ಲಿ ಜನಿಸಿದ ಶ್ರೀ ಮಹಾಲಿಂಗ ದೇವರು ಮುಂಡರಗಿಯ ಅನ್ನದಾನೇಶ್ವರ ಮಠದ ಹತ್ತನೆಯ ಗುರುಗಳಾಗಿ ನೇಮಕಗೊಂಡರು. ತಮ್ಮ ಎಳೆಯ ವಯಸ್ಸಿನಲ್ಲಿಯೇ ವಿರಕ್ತರಾಗಿ ಶಿವಯೋಗ ಮಂದಿರವನ್ನು ಸೇರಿದರು. ಶಿವಯೋಗ ಮಂದಿರದಲ್ಲಿ ಅಧ್ಯಯನವನ್ನು ಪೂರ್ಣಗೊಳಿಸಿ ೧೯೬೩ ರಲ್ಲಿ ಉನ್ನತ ಶಿಕ್ಷಣಕ್ಕಾಗಿ ಕಾಶಿಗೆ ತೆರಳಿದರು. ಅಲಹಾಬಾದ್ ಹಿಂದಿ ಸಾಹಿತ್ಯ ಹಾಗೂ ಸಾಹಿತ್ಯ ರತ್ನ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದ ವೇದಾಂತ ಶಾಸ್ತ್ರ ಪರೀಕ್ಷೆಯಲ್ಲಿ ಪ್ರಥಮ ಸ್ಥಾನದಲ್ಲಿ ಉತ್ತೀರ್ಣರಾಗಿ ಪ್ರಶಸ್ತಿ ಗಳಿಸಿದರು. ಕಲ್ಕತ್ತಾ ವಿಶ್ವವಿದ್ಯಾನಿಲಯವು ವಿಶಿಷ್ಟ ಪ್ರತಿಭೆಗೆ ನೀಡುವ ಅಗ್ರ ಲೇಖನ ಪ್ರಶಸ್ತಿಯನ್ನು ಪಡೆದರು. ರಾಮಕೃಷ್ಣಾಶ್ರಮದಲ್ಲಿ

ನಡೆದ ಪ್ರಬಂಧ ಸ್ಪರ್ಧೆಯಲ್ಲಿ ಎರಡು ಪ್ರಬಂಧಗಳಿಗೆ ಪ್ರಥಮಸ್ಥಾನ ಪಡೆದು ಬರವಣಿಗೆಗೆ ನಾಂದಿ ಹಾಡಿದರು.

ಶಿಕ್ಷಣದಲ್ಲಿ ಹಿರಿಯ ಸಾಧನೆಯನ್ನೇ ಸಾಧಿಸಿ ಮಠಕ್ಕೆ ಆಗಮಿಸಿದ ಶ್ರೀ ಮಹಾಲಿಂಗ ದೇವರು ಹಿರಿಯ ಗುರುಗಳ ಮಾರ್ಗದರ್ಶನದಲ್ಲಿ ಮುಂಡರಗಿ ಮಠದ ಅಭಿವೃದ್ಧಿಗೆ ಯೋಜನೆಯನ್ನು ತಯಾರಿಸಿಕೊಂಡರು. ಜೀರ್ಣಾವಸ್ಥೆಯಲ್ಲಿದ್ದ ಶಾಖಾಮಠಗಳನ್ನು ಅಭಿವೃದ್ಧಿಪಡಿಸಿದರು. ಮಠದಲ್ಲಿ ೧೯೬೬ ರಲ್ಲಿ ಶ್ರೀ ಕುಮಾರೇಶ್ವರ ಗ್ರಂಥಾಲಯವನ್ನು ಸ್ಥಾಪಿಸಿದರು. ಹಾನಗಲ್ಲು ಶ್ರೀ ಕುಮಾರ ಸ್ವಾಮಿಗಳ ಶತಮಾನೋತ್ಸವವನ್ನು ಪ್ರಥಮವಾಗಿ ಮುಂಡರಗಿ ಮಠದಲ್ಲಿ ಅದ್ದೂರಿಯಾಗಿ ಆಚರಿಸಿದರು. ಹಿರಿಯ ಗುರುಗಳು ೧೯೬೭ರ ಏಪ್ರಿಲ್ ಇಪ್ಪತ್ತಾನಾಲ್ಕರಂದು ಲಿಂಗೈಕ್ಯರಾದ ನಂತರ ಮಠದ ಪೂರ್ಣಜವಾಬ್ದಾರಿಯನ್ನು ವಹಿಸಿಕೊಂಡು ೧೯೬೮ರ ಜನವರಿ ಮೂವತ್ತೊಂದರಂದು ಹತ್ತನೆಯ ಗುರುಗಳಾಗಿ ಜಗದ್ಗುರು ಶ್ರೀ ಅನ್ನದಾನೇಶ್ವರ ಮಹಾಸ್ವಾಮಿಗಳೆಂಬ ಅಭಿದಾನ ಪಡೆದು ಪಟ್ಟಾಧಿಕಾರವನ್ನು ವಹಿಸಿಕೊಂಡರು.

ಧಾರ್ಮಿಕ ಕಾರ್ಯಗಳು: ಗದ್ದುಗೆಗಳಿಗೆ ಎರಡು ವೇಳೆ ಪೂಜೆ, ಬಿಲ್ವಾರ್ಚನೆ, ಮಹಾಮಂಗಳಾರತಿ ಹಾಗೂ ದಾಸೋಹ ಇವುಗಳು ಮಠದಲ್ಲಿ ನಿತ್ಯ ನಡೆಯುವ ಧಾರ್ಮಿಕ ಕಾರ್ಯಗಳಾಗಿವೆ. ಪ್ರತಿ ಶುಕ್ರವಾರ ಶಿವಾನುಭವಗೋಷ್ಠಿ, ಅಮಾವಾಸ್ಯೆಯಲ್ಲಿ ವಿಶೇಷ ಪೂಜೆ, ಮಹಾ ಶಿವತ್ರಯೋದಶಿಯಲ್ಲಿ ಶ್ರೀ ಅನ್ನದಾನೇಶ್ವರರ ಜಾತ್ರೆ ನಡೆಯುತ್ತವೆ. ಗುರುಗಳು ಗುರು-ವಿರಕ್ತರ ಸಮನ್ವಯ ಸಾಧಕರಾಗಿದ್ದಾರೆ. ಅನೇಕ ಕಡೆಗಳಲ್ಲಿ ವೀರಶೈವ ಧರ್ಮದ ಬಗ್ಗೆ ಉಪನ್ಯಾಸ ನೀಡಿ ಧರ್ಮವು ಬೆಳೆಯುವಂತೆ ಮಾಡಿದ್ದಾರೆ. ಗುರುಗಳು ಶಿವಯೋಗ ಮಂದಿರದ ಟ್ರಸ್ಟಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಶಾಖಾಮಠಗಳು:

೧. ಬಾಚಣಿಕೆ (ಮುಂಡಗೋಡು ತಾ.)	೨. ಮರಿಯಮ್ಮನ ಹಳ್ಳಿ (ಹೊಸಪೇಟೆ ತಾ.)
೩. ಶ್ಯಾಗೋಟಿ (ಗದಗ ತಾ.)	೪. ಮಣಕಲಾಡ (ನವಲಗುಂದ ತಾ.)
೫. ಹಿರೇವಡ್ಡಟ್ಟಿ (ಮುಂಡರಗಿ ತಾ.)	೬. ಬೆನಕಲ್ (ಯಲಬುರ್ಗಾ ತಾ.)
೭. ಕುಕನೂರ (ಯಲಬುರ್ಗಾ ತಾ.)	೮. ಮಡಗಾನೂರು (ಗದಗ ತಾ.)
೯. ಗೊಂಡಬಾಳ (ಕೊಪ್ಪಳ ತಾ.)	೧೦. ಉಪ್ಪಿನಬೆಟಗೇರಿ (ಕೊಪ್ಪಳ ತಾ.)
೧೧. ಗದಗ	೧೨. ಮುಳಗುಂದ (ಗದಗ ತಾ)
೧೩. ಹರ್ತಿ (ಗದಗ ತಾ.)	೧೪. ಲಕ್ಕುಂಡಿ (ಗದಗ ತಾ.)
೧೫. ಸೊರಟೂರ (ಗದಗ ತಾ)	೧೬. ಚಿಕ್ಕಹಂದಿಗೋಳ (ಗದಗ ತಾ)
೧೭. ಶಿಸುವಿನಹಳ್ಳಿ ನವಲಗುಂದ ತಾ.)	೧೮. ಅಬ್ಬಿಗೇರಿ (ಕೊಪ್ಪಳ ತಾ)
೧೯. ರಾಜವಾಳ (ಹೊಸಪೇಟೆ ತಾ)	

ಶೈಕ್ಷಣಿಕ ಸೇವೆ: ಮುಂಡರಗಿ ಅನ್ನದಾನೇಶ್ವರ ಮಠವು ಬೇರೆ ಶಿಕ್ಷಣ ಸಂಸ್ಥೆಗಳಿಗೂ ನೆರವು ನೀಡಿ ಶಿಕ್ಷಣ ಸಂಸ್ಥೆಗಳು ಬೆಳೆಯಲು ನೆರವಾಗಿದೆ. ಜೊತೆಗೆ ಮಠದ ವತಿಯಿಂದ ೧೯೨೬ ರಲ್ಲಿ ಶ್ರೀ ಅನ್ನದಾನೇಶ್ವರ ವಿದ್ಯಾಸಂಸ್ಥೆಯನ್ನು ಪ್ರಾರಂಭಿಸಿತು. ಈ ಸಮಿತಿ ಅಡಿಯಲ್ಲಿ ಹತ್ತು ಪ್ರೌಢಶಾಲೆಗಳು, ಒಂದು ಪಾಲಿಟೆಕ್ನಿಕ್ ಕಾಲೇಜು, ಎರಡು ನರ್ಸರಿಗಳು, ಬನ್ನಿಕೊಪ್ಪದಲ್ಲಿ ಒಂದು ಪದವಿಪೂರ್ವ ಕಾಲೇಜು, ಒಂದು ಸಂಸ್ಕೃತ ಪಾಠಶಾಲೆ, ಮುಂಡರಗಿಯಲ್ಲಿ ಎರಡು ಪದವಿ ಪೂರ್ವ ಕಾಲೇಜುಗಳು ಮತ್ತು ಒಂದು ಪ್ರಥಮ ದರ್ಜೆ ಕಾಲೇಜು ನಡೆಯುತ್ತಿವೆ. ಮುಂಡರಗಿ, ಕುಕ್ಕನೂರು, ಗೊಂಡವಾಳ, ಉಪ್ಪಿನ ಬೇಟಗೇರಿ, ನರಸಾಪುರದಲ್ಲಿ ಉಚಿತ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿದ್ದು ಕಲಿಯುವ ಗ್ರಾಮಾಂತರ ಬಡ ಮಕ್ಕಳಿಗೆ ನೆರವಾಗಿದ್ದಾರೆ.

ಸಾಮಾಜಿಕ ಸೇವೆ: ಸಮಾಜದ ಎಲ್ಲಾ ಸ್ತರದ ಭಕ್ತರನ್ನು ಒಂದೇ ಸಮಾನವಾಗಿ ನೋಡುತ್ತಾ ಸಾಮಾಜಿಕ ನ್ಯಾಯ ದೊರಕಿಸಿ ಕೊಡಲು ಪ್ರಯತ್ನಿಸಿದ ಮಠವು ಶರಣತತ್ತ್ವದ ಆಧಾರದ ಮೇಲೆ ಸಮಾಜದಲ್ಲಿ ಸಾಮರಸ್ಯವನ್ನು ಬೆಳೆಸುತ್ತಿದೆ. ದೀನ ದಲಿತರ, ಶೋಷಿತರ ಸೇವೆಯನ್ನು ಮಾಡುತ್ತಾ, ಜನಪರವಾದ ಕಾಳಜಿಯನ್ನು ಹೊಂದಿರುವ ಮಠದಲ್ಲಿ ನಡೆಯುವ

ಜಾತ್ರೆಯ ಸಂದರ್ಭದಲ್ಲಿ ಸಾಮೂಹಿಕ ವಿವಾಹವನ್ನು ನೆರವೇರಿಸಿ ಬಡವರಿಗೆ ಹೊರೆಯನ್ನು ತಪ್ಪಿಸಿದೆ. ಹಿರೇವಡ್ಡಟ್ಟಿಯ ಶಾಖಾಮಠದಲ್ಲಿ ಅಂತರ್ಜಾತಿ ವಿವಾಹವನ್ನು ಮಾಡಿಸಿದ ಸಾಧನೆ ಈಗಿನ ಗುರುಗಳಿಗೆ ಸಲ್ಲುತ್ತದೆ.

ಪ್ರತಿವರ್ಷ ಜಾತ್ರೆಯಲ್ಲಿ ಸಾಮೂಹಿಕ ವಿವಾಹಗಳು ನಡೆಸುವಂತೆ ಕೃಷಿ ಸಮಾವೇಶ, ಕೃಷಿ ವಸ್ತು ಪ್ರದರ್ಶನ, ಕೃಷಿ ಪ್ರಾತ್ಯಕ್ಷತೆ, ಕಾಂಪೋಸ್ಟ್, ಎರೆಹುಳ ಗೊಬ್ಬರದ ಪ್ರಾತ್ಯಕ್ಷಿಕೆ ಹಾಗೂ ವೈಜ್ಞಾನಿಕ ಬೇಸಾಯದ ಬಗೆಗೆ ಉಪನ್ಯಾಸ ಕೊಡಿಸಿ ರೈತರಿಗೆ ನೆರವಾಗಿದ್ದಾರೆ. ಈಗಿನ ಗುರುಗಳ ಪಟ್ಟಾಧಿಕಾರದ ರಜತ ಮಹೋತ್ಸವದ ಸಂದರ್ಭದಲ್ಲಿ ಮುಂಡರಗಿ ಮತ್ತು ಬೆಳ್ಳಟ್ಟಿಯಲ್ಲಿ ಆರೋಗ್ಯ ಶಿಬಿರವನ್ನು ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಕಣ್ಣಿನ ಶಸ್ತ್ರಚಿಕಿತ್ಸೆ, ಉಚಿತ ಔಷಧಿ ವಿತರಣೆಯನ್ನು ಮಾಡ ಲಾಯಿತು. ಇಂತಹ ಕಾರ್ಯಕ್ರಮಗಳನ್ನು ಮಠದಲ್ಲಿ ಮೇಲಿಂದ ಮೇಲೆ ಏರ್ಪಡಿಸಲಾಗುತ್ತಿದೆ. ಇದರಿಂದ ಬಡಜನರಿಗೆ ನೆರವಾಗಿದೆ.

ಮುಂಡರಗಿ ಪಟ್ಟಣ ಪಂಚಾಯಿತಿ, ಪೀಸ್ ಮೆಮೋರಿಯಲ್ ಹಾಲ್, ಸರಕಾರಿ ಆಸ್ಪತ್ರೆ, ಪೋಲೀಸ್ ಪೆರೇಡ್ ಮೈದಾನ ಗಳಿಗೆ ಭೂಮಿಯನ್ನು ದಾನ ಮಾಡಿ ಮಠವು ಸಾರ್ವಜನಿಕ ಕಾರ್ಯಗಳಿಗೆ ನೆರವಾಗಿದೆ. ಗುರುಗಳು ಸರ್ಕಾರಿ ಆಸ್ಪತ್ರೆಗೆ ಜಾಗ ನೀಡಿದ್ದಲ್ಲದೆ ದೇಣಿಗೆಯನ್ನೂ ನೀಡಿದ್ದಾರೆ. ವೀರಶೈವ ಬಡವಿದ್ಯಾರ್ಥಿಗಳಿಗಷ್ಟೇ ನೆರವು ನೀಡುವುದಲ್ಲದೆ ದಲಿತ ವಿದ್ಯಾರ್ಥಿಗಳನ್ನು ಗುರುತಿಸಿ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿದ್ದಾರೆ. ಮುಂಡರಗಿ ಪ್ರದೇಶದ ಸುತ್ತಮುತ್ತ ಜಾತಿ ಘರ್ಷಣೆ ನಡೆದ ಸಂದರ್ಭದಲ್ಲಿ ಸ್ಥಳಕ್ಕೆ ಭೇಟಿ ನೀಡಿ ಸೌಹಾರ್ದ ರೀತಿಯಲ್ಲಿ ಬದುಕಲು ಉಪದೇಶ ನೀಡಿ, ಮನಪರಿವರ್ತನೆ ಮಾಡುತ್ತಾರೆ. 'ಭಕ್ತರ ಆತ್ಮೋದ್ಧಾರದಿಂದ ಸಮಾಜದ ಉದ್ಧಾರ ಸಾಧ್ಯ' ಎನ್ನುವುದು ಪೂಜ್ಯರ ನಿಲುವಾಗಿದೆ.

ಸಾಹಿತ್ಯ ಸೇವೆ: ಕನ್ನಡ, ಸಂಸ್ಕೃತ, ಹಿಂದಿಭಾಷೆಗಳಲ್ಲಿ ಅಪಾರ ಜ್ಞಾನ ಸಂಪಾದಿಸಿರುವ ಈಗಿನ ಶ್ರೀ ಅನ್ನದಾನೇಶ್ವರ ಸ್ವಾಮಿಗಳು ವಿದ್ಯಾರ್ಥಿಯಾಗಿದ್ದಗಲೇ ಪ್ರಬಂಧ ಸ್ಪರ್ಧೆಯ ಮೂಲಕ ಲೇಖನ ಕಲೆಯನ್ನು ಮೈಗೂಡಿಸಿಕೊಂಡಿದ್ದರು. ವೀರಶೈವಧರ್ಮ, ವಚನಗಳ ವಿಶ್ಲೇಷಣೆ ಕುರಿತಂತೆ ಭಾವ ಸೌರಭ, ಅನ್ನದಾನೇಶ್ವರ ನಾಮಾವಳಿ, ವಚನ ಸಂಪದ, ವೀರಶೈವಧರ್ಮ ಒಂದು ಅಧ್ಯಯನ, ಮೊದಲಾದ ಒಟ್ಟು ಅರವತ್ತು ಪುಸ್ತಕಗಳನ್ನು ಗುರುಗಳು ಬರೆದು ಪ್ರಕಟಿಸಿದ್ದಾರೆ. ಜಗದ್ಗುರು ಶ್ರೀ ಅನ್ನದಾನೇಶ್ವರ ಗ್ರಂಥ ಮಾಲೆಯನ್ನು ಪ್ರಾರಂಭಿಸಿದ್ದು ತಮ್ಮ ಕೃತಿಗಳ ಪ್ರಕಟಣೆಯ ಜೊತೆಗೆ ವಿದ್ವಾಂಸರು ಗಳಾದ ಡಾ. ಎಸ್.ಎಂ. ಹಿರೇಮಠರವರ ನಿರಂಜನ ಜಂಗಮ, ಶರಣ ಬಸವರ ಪವಾಡಗಳು, ಡಾ. ಎ.ಎಸ್. ಕಂಬಿಯವರ ಆಗಮಪ್ರಣೀತ, ಎರಡು ಶೈವಗಳ ತೌಲನಿಕ ಅಧ್ಯಯನ, ಡಾ.ಎಸ್.ಎಂ.ಹೆಗ್ಗಡೆಯವರ ಶೂನ್ಯ ಸಂಪಾದನೆಗಳ ತೌಲನಿಕ ಅಧ್ಯಯನ, ಡಾ. ಎ.ಎಸ್. ಕಂಬಿಯವರ ಮುಕ್ತಾಯಕ್ಕಗಳ ಸಂಪಾದನೆ, ಶಕ್ತಿ ವಿಶಿಷ್ಟ, ಶಿವಾದ್ವೈತ, ಬ್ರಹ್ಮಾದ್ವೈತ, ಮೀಮಾಂಸೆ ಈ ರೀತಿ ಅನೇಕ ವಿದ್ವಾಂಸರ ಮೌಲಿಕ ಕೃತಿಗಳೂ ಸೇರಿದಂತೆ ಒಟ್ಟು ನೂರಾಮೂವತ್ತು ಕೃತಿಗಳನ್ನು ಪ್ರಕಟಿಸಿ ಕನ್ನಡ ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ.

ಮಠದಲ್ಲಿ ಗ್ರಂಥಾಲಯವನ್ನು ಪ್ರಾರಂಭಿಸಿ ಕನ್ನಡ, ಸಂಸ್ಕೃತ, ಹಿಂದಿ ಭಾಷೆಯ ಅಪರೂಪದ ಸುಮಾರು ಐದು ಸಾವಿರ ಕನ್ನಡ ಪುಸ್ತಕಗಳನ್ನು ಸಂಗ್ರಹಿಸಿ ಗ್ರಂಥಾಲಯದಲ್ಲಿ ಜೋಡಿಸಿದ್ದಾರೆ. ವೀರಶೈವ ಧರ್ಮದ ಮೇಲೆ ಬೆಳಕು ಚೆಲ್ಲುವ ಅನೇಕ ವಿಚಾರ ಸಂಕಿರಣಗಳನ್ನು ನಡೆಸಿ ವಿಚಾರ ಮಂಥನ ನಡೆಯುವಂತೆ ಮಾಡಿದ್ದಾರೆ. ತಮ್ಮ ಪಟ್ಟಾಧಿಕಾರದ ರಜತ ಮಹೋತ್ಸವದ ಅಂಗವಾಗಿ ಇಪ್ಪತ್ತೈದು ವಿಚಾರ ಸಂಕಿರಣಗಳನ್ನು ಏರ್ಪಡಿಸಿ ಒಂದು ದಾಖಲೆಯ ಕೆಲಸ ಮಾಡಿದ್ದಲ್ಲದೆ ರಜತ ಮಹೋತ್ಸವವನ್ನು ಅರ್ಥಪೂರ್ಣವಾಗಿ ನಡೆಸಿದ್ದಾರೆ.

ಪ್ರಜ್ಞಾವಂತರೂ, ಸೃಜನಶೀಲರೂ ಹಾಗೂ ವೈಚಾರಿಕ ನೆಲಗಟ್ಟಿನಲ್ಲಿ ಧರ್ಮವನ್ನು ಬೆಳೆಸುತ್ತಿರುವವವರೂ ಆದ ಶ್ರೀ ಅನ್ನದಾನೇಶ್ವರ ಸ್ವಾಮಿಗಳು ಗುರುವಿರಕ್ತರೆಂಬ ಬೇಧವಿಲ್ಲದೆ ಸಮಷ್ಟಿ ಸಮಾಜದ ಅಭ್ಯುದಯಕ್ಕೆ ಶ್ರಮಿಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಜಗದ್ಗುರು ಅನ್ನದಾನೇಶ್ವರ ಸ್ವಾಮಿಗಳು, ಶ್ರೀ ಅನ್ನದಾನೇಶ್ವರ ಸಂಸ್ಥಾನ ಮಠ, ಮುಂಡರಗಿ, ಗದಗಜಿಲ್ಲೆ.
ಆಧಾರ: 'ಕಲ್ಯಾಣದ ಹಾದಿ'- ಎ.ಬಿ. ಹಿರೇಮಠ

ತೋಂಟದಾರ್ಯ ಮಠ: ಮುಂಡರಗಿಯ ಭೀಮರಾಯ ಕೋಟೆಯ ಪಕ್ಕದಲ್ಲಿ ಶ್ರೀ ತೋಂಟದಾರ್ಯ ಮಠವು ಸ್ಥಾಪನೆಯಾಗಿದೆ. ಹನ್ನೆರಡನೆಯ ಶತಮಾನದಲ್ಲಿ ಚನ್ನಬಸವಣ್ಣನವರ ಶಿಷ್ಯರಾಗಿದ್ದ ಶ್ರೀ ಅನ್ನದಾನೇಶ್ವರ ಸ್ವಾಮಿಗಳು ಅನುಷ್ಠಾನಗೊಂಡು ಸ್ಥಾಪಿಸಿದ ಈ ಮಠವು ಕಾಲಾನಂತರ ಇಲ್ಲಿನ ಶ್ರೀ ಅನ್ನದಾನೇಶ್ವರ ಸಂಸ್ಥಾನ ಮಠದಿಂದ ಬೇರ್ಪಟ್ಟು, ಈಗ ಗದಗ ಡಂಬಳ ತೋಂಟದಾರ್ಯ ಮಠದ ಶಾಖಾಮಠವಾಗಿ ಬೆಳೆದಿದೆ.

ಮಠದ ಆವರಣದಲ್ಲಿ ಶ್ರೀ ಅನ್ನದಾನೇಶ್ವರ ಸ್ವಾಮಿಗಳ ತೋರು ಗದ್ದುಗೆ, ಶ್ರೀ ಮೃತ್ಯುಂಜಯ ಸ್ವಾಮಿಗಳ ಗದ್ದುಗೆ, ಶ್ರೀ ವಿರೂಪಾಕ್ಷ ಸ್ವಾಮಿಗಳ ಗದ್ದುಗೆಯ ಜೊತೆಗೆ ಶ್ರೀ ಅನ್ನದಾನೇಶ್ವರ ಸ್ವಾಮಿಗಳ ಹೆಸರಿನ ಮತ್ತೊಂದು ಗದ್ದುಗೆ ಈ ರೀತಿ ಒಟ್ಟು ನಾಲ್ಕು ಗದ್ದುಗೆಗಳು ಸ್ಥಾಪನೆಯಾಗಿ,ನಿತ್ಯಪೂಜಾ ಕಾರ್ಯ ನಡೆಯುತ್ತಿದೆ. ಮಠದ ಆವರಣವನ್ನು ನವೋದಯ ಶಾಲೆಯನ್ನು ನಡೆಸಲು ನೀಡಲಾಗಿದೆ. ಜೊತೆಗೆ ಮಠದಲ್ಲಿ ತ್ರೈಮಾಸಿಕ ಶಿವಾನುಭವ ಗೋಷ್ಠಿಯನ್ನು ನಡೆಸಲಾಗುತ್ತಿದೆ. ಗದಗಿನ ಶ್ರೀ ಡಾ.ತೋಂಟದ ಸಿದ್ಧಲಿಂಗ ಸ್ವಾಮಿಗಳು ಆಗಿಂದಾಗ್ಗೆ ಮಠಕ್ಕೆ ಆಗಮಿಸಿ ಧಾರ್ಮಿಕ ಕಾರ್ಯಗಳನ್ನು ನೋಡಿಕೊಂಡು ಹೋಗುತ್ತಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಜಗದ್ಗುರು ಡಾ.ತೋಂಟದ ಸಿದ್ಧಲಿಂಗ ಸ್ವಾಮಿಗಳು, ಶ್ರೀ ತೋಂಟದಾರ್ಯ ಆಡಳಿತ ಮಠ, ಮುಂಡರಗಿ, ಗದಗ ಜಿಲ್ಲೆ.

ಹಿರೇವಡ್ಡಟ್ಟಿ

ಮುಂಡರಗಿ ತಾಲ್ಲೂಕಿನ ಹಿರೇವಡ್ಡಟ್ಟಿಯು, ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿನೆಂಟು ಕಿ.ಮೀ. ದೂರದಲ್ಲಿದೆ. ಪುರಾತನ ಕಾಲದಿಂದ ಈಗಿನ ತನಕ ಈ ಗ್ರಾಮದಲ್ಲಿ ಐದು ಮಠಗಳು ಸ್ಥಾಪನೆಯಾಗಿವೆ. ಇವುಗಳಲ್ಲಿ ಶ್ರೀ ಹಿರೇಮಠ, ನವಿಲಗುಂದ ತಾಲ್ಲೂಕಿನ ಮಣಕವಾಡದ ಶ್ರೀ ವಿರಕ್ತಮಠ,೨೦೦೦ದ ಇಸವಿಯಲ್ಲಿಈ ಗ್ರಾಮದ ಹೊರಭಾಗದಲ್ಲಿ ಸ್ಥಾಪನೆಯಾದ ಶ್ರೀ ಮೃತ್ಯುಂಜಯಮಠ, ಪುರಾತನ ಕಾಲದ ಮಠವಾಗಿರುವ ಶ್ರೀ ಅನ್ನದಾನೇಶ್ವರ ಮಠ ಎಂಬ ಮಠಗಳು ಅಸ್ತಿತ್ವದಲ್ಲಿದ್ದು, ಶ್ರೀ ಅನ್ನದಾನೇಶ್ವರ ಮಠವು ಮುಂಡರಗಿ ಅನ್ನದಾನೇಶ್ವರ ಮಠದ ಶಾಖಾಮಠವಾಗಿ ಬೆಳೆದಿದೆ. ಕೊಪ್ಪಳದ ಗವಿಮಠದ ಶಾಖಾಮಠ ಹಾಗೂ ಶಿರಹಟ್ಟಿಯ ಫಕೀರಸ್ವಾಮಿ ಮಠದ ಶಾಖಾ ಮಠಗಳು ಅಸ್ತಿತ್ವದಲ್ಲಿವೆ.

ಹಿರೇಮಠ: ಹಿರೇವಡ್ಡಟ್ಟಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಹಿರೇಮಠವು ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದು ಕಾಶಿ ಪೀಠದ ಶಾಖಾಮಠವಾಗಿ, ಈ ಗ್ರಾಮದ ಧಾರ್ಮಿಕ ಕೇಂದ್ರಬಿಂದುವಾಗಿದೆ. ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಈ ಮಠವನ್ನು ಪ್ರಾರಂಭಿಸಿದರಂತೆ. ಹಿರೇವಡ್ಡಟ್ಟಿಯಲ್ಲಿ ಜನಿಸಿದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ತಮ್ಮ ಬಾಲ್ಯದಲ್ಲಿಯೇ ಆಧ್ಯಾತ್ಮ ಒಲವನ್ನು ಬೆಳೆಸಿಕೊಂಡು ಅನುಷ್ಠಾನಗೊಂಡು ಲೋಕಸಂಚಾರ ಕೈಗೊಂಡು ಶಿರಹಟ್ಟಿ ತಾಲ್ಲೂಕಿನ ಕಪಾತಗುಡ್ಡದಲ್ಲಿ ದೀರ್ಘ ಅನುಷ್ಠಾನಗೊಂಡು ಆಧ್ಯಾತ್ಮ ಸಾಧನೆಯ ಸಿದ್ಧಿಯನ್ನು ಪಡೆದು, ಹಿರೇವಡ್ಡಟ್ಟಿಗೆ ಬಂದು ಮಠವನ್ನು ಸ್ಥಾಪನೆಮಾಡಿ ನಿತ್ಯ ಶಿವಾನುಭವಗೋಷ್ಠಿಯನ್ನು ನಡೆಸಿ ಭಕ್ತರಿಗೆ ಆಧ್ಯಾತ್ಮ ಸಂಸ್ಕಾರವನ್ನು ನೀಡುತ್ತಿದ್ದರು ಎಂದು ಹೇಳಲಾಗುತ್ತದೆ.

ಪರಂಪರೆ:

೧. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ರುದ್ರದೇವ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಚೆನ್ನವೀರಯ್ಯ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ದೊಡ್ಡರುದ್ರಯ್ಯ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ವೀರೇಶ್ವರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ರುದ್ರದೇವ ಶಿವಾಚಾರ್ಯ ಸ್ವಾಮಿಗಳು ಭಕ್ತೋದ್ಧಾರವನ್ನೇ ತಮ್ಮ ಗುರಿಯನ್ನಾಗಿಟ್ಟುಕೊಂಡು ಮಠವನ್ನು ಮುನ್ನಡೆಸಿದರು. ಇವರ ನಂತರ ಶ್ರೀ ಚನ್ನ

ವೀರಯ್ಯ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ನಡೆಸಿ, ಶ್ರೀ ದೊಡ್ಡರುದ್ರಯ್ಯ ಶಿವಾಚಾರ್ಯ ಸ್ವಾಮಿಗಳಿಗೆ ಅಧಿಕಾರವನ್ನು ಕೊಡುತ್ತಾರೆ. ಗುರುಗಳು ಮಠದ ಸರ್ವಾಂಗೀಣ ಅಭಿವೃದ್ಧಿಗೆ ದುಡಿದು ಅಕ್ಟೋಬರ್ ಹತ್ತು ೧೯೬೪ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಹಿರಿಯ ಗುರುಗಳು ಲಿಂಗೈಕ್ಯರಾದ ನಾಲ್ಕನೆಯ ದಿನಕ್ಕೆ ಶ್ರೀ ವೀರೇಶ ಶಿವಾಚಾರ್ಯ ಸ್ವಾಮಿಗಳು ಉತ್ತರಾಧಿಕಾರಿಗಳಾಗಿ ನೇಮಕಗೊಳ್ಳುತ್ತಾರೆ.

ಇದೇ ಗ್ರಾಮದ ಶ್ರೀ ಮರಿಶಿವರುದ್ರಯ್ಯ ಮತ್ತು ಶ್ರೀಮತಿ ಅಂದಮ್ಮನವರ ಪುತ್ರರಾಗಿ ೧೯೫೭ರ ಜುಲೈ ಇಪ್ಪತ್ತೆರಡ ರಂದು ಜನಿಸಿದ ಶ್ರೀ ವೀರೇಶ ಸ್ವಾಮಿಗಳು ತಮ್ಮ ಏಳು ವರ್ಷದ ಎಳೆಯ ವಯಸ್ಸಿನಲ್ಲಿಯೇ ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡರು. ಕೋಡಿಕೊಪ್ಪ, ನರೆಗಲ್ಲು ಹಾಗೂ ಹರಪನಹಳ್ಳಿಯಲ್ಲಿ ವಿದ್ಯಾಭ್ಯಾಸ ಮುಗಿಸಿ ವೇದ, ಸಂಸ್ಕೃತವನ್ನು ಕಲಿತು ೧೯೭೭ರ ಏಪ್ರಿಲ್ ಇಪ್ಪತ್ತೈದರಂದು ಪಟ್ಟಾಧಿಕಾರವನ್ನು ವಹಿಸಿಕೊಂಡಿರುತ್ತಾರೆ. ಮಠದ ಪರಂಪರೆಯ ಎರಡನೆಯ ಗುರುಗಳು ಮಠದ ಕಟ್ಟಡವನ್ನು ನಿರ್ಮಿಸಿದ್ದರು. ಈಗಿನ ಗುರುಗಳು ಈ ಕಟ್ಟಡವನ್ನು ನವೀಕರಣಗೊಳಿಸಿ ಕಲ್ಯಾಣ ಮಂಟಪವನ್ನು ನಿರ್ಮಿಸಿದ್ದಾರೆ. '**ಶ್ರೀ ರುದ್ರೇಶ್ವರ ಎಜುಕೇಷನ್ ಸೊಸೈಟಿ**'ಯನ್ನು ೨೦೦೦ ದ ಇಸವಿಯಲ್ಲಿ ಪ್ರಾರಂಭಿಸಿದ್ದಾರೆ. ಕಲ್ಕೆರೆ ದೇಸಾಯಿ ಯವರ ಕಾಲದಲ್ಲಿ ಉಂಬಳಿಯಾಗಿ ದೊರೆತಿತ್ತು ಎನ್ನಲಾದ ಜಮೀನಿನಲ್ಲಿ ಈಗ ಮೂವತ್ತು ಎಕರೆ ಜಮೀನು ಉಳಿದಿದೆ. ಇದನ್ನೆ ಅಭಿವೃದ್ಧಿ ಪಡಿಸಿ ಮಠಕ್ಕೆ ಆದಾಯ ಬರುವಂತೆ ಮಾಡಿದ್ದಾರೆ. ಗ್ರಾಮದ ಯುವಕರನ್ನು ಸಂಘಟಿಸಿ ಶ್ರೀ ರುದ್ರಸ್ವಾಮಿ ಯುವಕ ಸಂಘವನ್ನು ರಚಿಸಿ, ನಿತ್ಯ ಮಠದಲ್ಲಿ ಭಜನೆ ಹಾಗೂ ಧಾರ್ಮಿಕ ಉಪದೇಶ ಕಾರ್ಯಗಳನ್ನು ಹಮ್ಮಿಕೊಂಡು ಧಾರ್ಮಿಕ ಚಟುವಟಿಕೆಯಲ್ಲಿ ಯುವಕರನ್ನು ತೊಡಗಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ನಿತ್ಯ ಗದ್ದುಗೆಗಳಿಗೆ ನಿತ್ಯಪೂಜೆ, ಶ್ರಾವಣ ಮತ್ತು ಕಾರ್ತೀಕ ಮಾಸಗಳಲ್ಲಿ ವಿಶೇಷ ಪೂಜೆ ನಡೆಯುತ್ತಿದೆ. ಪ್ರತಿ ತಿಂಗಳು ಮಠದಲ್ಲಿ ಸಂಸ್ಮರಣೆ ಕಾರ್ಯಕ್ರಮಗಳು ಕಳೆದ ನೂರೈವತ್ತು ತಿಂಗಳುಗಳಿಂದ ನಡೆಯುತ್ತಾ ಬಂದಿದೆ. ಈ ಸಂದರ್ಭದಲ್ಲಿ ಸಾಮೂಹಿಕ ವಿವಾಹಗಳು ಹಾಗೂ ಶಿವದೀಕ್ಷೆಯನ್ನು ನಡೆಸಲಾಗುತ್ತಿದೆ. ಯುಗಾದಿಯ ಸಂದರ್ಭದಲ್ಲಿ ಗ್ರಾಮದಲ್ಲಿ ಜಾತ್ರೆಯನ್ನು ನಡೆಸಲಾಗುತ್ತಿದೆ. ಈ ವೇಳೆಯಲ್ಲಿ ಮಠದ ವತಿಯಿಂದ ಅನ್ನದಾಸೋಹವನ್ನು ವ್ಯವಸ್ಥೆಗೊಳಿಸಲಾಗುತ್ತದೆ.

ವಿಳಾಸ: ಷ.ಬ್ರ.ಶ್ರೀ ವೀರೇಶ್ವರ ಶಿವಾಚಾರ್ಯಸ್ವಾಮಿಗಳು, ಶ್ರೀ ಹಿರೇಮಠ, ಹಿರೇವಡ್ಡಟ್ಟಿ, ಮುಂಡರಗಿ ತಾಲ್ಲೂಕು, ಗದಗ ಜಿಲ್ಲೆ.

❑

ರೋಣ ತಾಲ್ಲೂಕು

ಗದಗ ಜಿಲ್ಲೆಯ ರೋಣ ತಾಲ್ಲೂಕು ಪುರಾಣ ಪ್ರಸಿದ್ಧ ಹಾಗೂ ಐತಿಹಾಸಿಕ ಮಹತ್ವವನ್ನು ಪಡೆದು ಇಲ್ಲಿ ವೀರಶೈವ ಧರ್ಮ ಅತ್ಯಂತ ಪ್ರಬಲವಾಗಿ ಬೆಳೆದಿದೆ. ಈ ತಾಲ್ಲೂಕಿನಲ್ಲಿ ಹಿಂದೆ ಸುಮಾರು ನೂರಇಪ್ಪತ್ತೈದು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಈ ಮಠಗಳಲ್ಲಿ ಇಂದು ಇಪ್ಪತ್ತೆರಡು ಮಠಗಳನ್ನು ಗುರುತಿಸಬಹುದಾಗಿದ್ದು, ಉಳಿದ ಮಠಗಳು ಮರೆಯಾಗಿವೆ.

ಅಸೂಟಿ

ರೋಣ ತಾಲ್ಲೂಕಿನ ಅಸೂಟಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿನೆಂಟು ಕಿ.ಮೀ.ದೂರದಲ್ಲಿದೆ. ಧಾರ್ಮಿಕ ಹಾಗೂ ಸಾಂಸ್ಕೃತಿಕವಾಗಿ ಅಭಿವೃದ್ಧಿ ಹೊಂದಿರುವ ಈ ಗ್ರಾಮದಲ್ಲಿ ಶ್ರೀ ಹಿರೇಮಠ, ಶ್ರೀ ತೋಂಟದಾರ್ಯ ಮಠ ಹಾಗೂ ಶ್ರೀ ಫಲಹಾರೇಶ್ವರಮಠ. ಈ ರೀತಿ ಒಟ್ಟು ಮೂರು ಮಠಗಳು ಸ್ಥಾಪನೆಯಾಗಿವೆ.

ಫಲಹಾರೇಶ್ವರ ಮಠ: ಅಸೂಟಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಫಲಾಹಾರೇಶ್ವರ ಮಠವು ಇನ್ನೂರ ತ್ತೊಂಬತ್ತು ವರ್ಷಗಳ ಹಿಂದೆ ಶ್ರೀ ಮಲ್ಲಿಕಾರ್ಜುನ ಶಿವಯ್ಯ ಅರಳಕಟ್ಟಿ ಹಿರೇಮಠ ಇವರಿಂದ ಸ್ಥಾಪಿತವಾಗಿತ್ತೆಂದು ಹೇಳಲಾಗುತ್ತದೆ. ಸಂಸಾರದಲ್ಲಿ ವೈರಾಗ್ಯ ತಾಳಿ ಆಧ್ಯಾತ್ಮ ಚಿಂತನೆಯತ್ತ ವಾಲಿದ ಇವರು ತಮ್ಮ ಸಂಪತ್ತನ್ನೆಲ್ಲ ವಿನಿಯೋಗಿಸಿ ಮಠವನ್ನು ನಿರ್ಮಿಸುತ್ತಾರೆ.

ಮಠ ಸ್ಥಾಪನೆಯ ಹಿನ್ನೆಲೆ: ಶಿವಯೋಗಿ ಎಂಬ ಬಾಲಕನು ತನ್ನ ಚಿಕ್ಕ ವಯಸ್ಸಿನಲ್ಲಿಯೇ ಸಂನ್ಯಾಸ ದೀಕ್ಷೆಯನ್ನು ಪಡೆದು ಶ್ರೀಶೈಲಕ್ಕೆ ಹೋಗಿ ಹನ್ನೆರಡು ವರ್ಷ ತಪೋನುಷ್ಠಾನಗೊಂಡು, ಹನ್ನೆರಡು ವರ್ಷದ ತರುವಾಯ ಸ್ವಗ್ರಾಮ ಅಸೂಟಿಗೆ ಆಗಮಿಸುತ್ತಾರೆ. ಧಾರ್ಮಿಕತೆಯಲ್ಲಿ ಪ್ರೌಢ ಅನುಭವ ಹಾಗೂ ತಪೋಸಿದ್ಧಿಯನ್ನು ಸಂಪಾದಿಸಿಕೊಂಡು ಬಂದಿದ್ದ ಶಿವಯೋಗಿಗಳು ಶ್ರೀಶೈಲ ಗಿರಿಯಲ್ಲಿ ಸಿಗುತ್ತಿದ್ದ ಗೆಡ್ಡೆ ಗೆಣಸುಗಳನ್ನು ತಿಂದು ಬದುಕಿದ ಕಾರಣ ಶಿವಯೋಗಿಗೆ **'ಶ್ರೀ ಫಲಾಹಾರ ಶಿವಯೋಗಿ'** ಎಂದು ಮರುನಾಮಕರಣ ಪಡೆದುಕೊಳ್ಳುತ್ತಾರೆ. ತಾವು ಚಿಕ್ಕವಯಸ್ಸಿನಲ್ಲಿಯೇ ಗಳಿಸಿದ ಆಧ್ಯಾತ್ಮ ಜ್ಞಾನವನ್ನು ಪ್ರಚಾರಗೊಳಿಸಲು ಲೋಕಸಂಚಾರಕ್ಕೆ ಹೊರಡುತ್ತಾರೆ.

ಹಂಪಿ ಚಕ್ರತೀರ್ಥದಲ್ಲಿ ಪವಾಡಗೈದು ಜಾಲಿಹಾಳ ದೇಸಾಯಿಯ ಆಳ್ವಿಕೆಯಲ್ಲಿದ್ದ ಬಾದಾಮಿ ತಾಲ್ಲೂಕಿನ ಅರಳಿ ಕಟ್ಟೆಯಲ್ಲಿ ಕೆಲವು ದಿನ ಅನುಷ್ಠಾನಗೊಳ್ಳುತ್ತಾರೆ. ಈ ಸಂದರ್ಭದಲ್ಲಿ ನರಗುಂದದ ದೊರೆ ಬಾಬಾಸಾಹೇಬನು ರೋಗಕ್ಕೆ ತುತ್ತಾಗುತ್ತಾನೆ. ಚಿದಂಬರ ದೀಕ್ಷಿತರ ಅಪೇಕ್ಷೆಯ ಮೇರೆಗೆ ಬಾಬಾಸಾಹೇಬನ ರೋಗವನ್ನು ಗುಣಪಡಿಸಿದ ಶ್ರೀ ಫಲಹಾರೇಶ್ವರರು ತೊರೆಗಲ್ಲು ಅರಮನೆಯ ಬ್ರಹ್ಮಪಿಶಾಚಿಯನ್ನು ತೊಲಗಿಸಿದರು. ನಂತರ ಉಡುಪಡಿ ಗ್ರಾಮದಲ್ಲಿ ಮಹಾರಾಣಿಗಿದ್ದ ಮನೋರೋಗವನ್ನು ದೂರಮಾಡಿದರು. ಈ ರೀತಿ ಅನೇಕ ಪವಾಡಗಳನ್ನು ಮಾಡಿ ಮುಂದೆ ಗುಡ್ಡದ ಮಲ್ಲಾಪುರದಲ್ಲಿ ನೆಲೆಸಿದರು. ಈ ಸಂದರ್ಭದಲ್ಲಿ ಈ ಪ್ರಾಂತ್ಯದ ಜನರು ಬರಗಾಲದಿಂದ ಬಳಲುತ್ತ ನೀರಿಗಾಗಿ ಹಾಹಾಕಾರ ಪಡುತ್ತಿದ್ದರು. ಭಕ್ತರ ಕಷ್ಟ ನಿವಾರಣೆಗೆ ತಪಸ್ಸನ್ನು ಆಚರಿಸಿ ಮಳೆಯನ್ನು ಕರೆಯಿಸಿದರು. ಹೊಳೆ ಮಣ್ಣೂರಿನಲ್ಲಿ ದತ್ತಾತ್ರೇಯ ಮೂರ್ತಿಯನ್ನು ಸ್ಥಾಪಿಸಿ ಅವರಾದಿಯಲ್ಲಿ ನೆಲಸಬೇಕು ಎಂದು ನಿರ್ಧರಿಸಿ ಅತ್ತ ಹೊರಟರು. ಈ ಸಂದರ್ಭದಲ್ಲಿ ರಾಮದುರ್ಗದ ಮಹಾರಾಜ ಮತ್ತು ನರಗುಂದದ ಮಹಾರಾಜನಿಗೆ ಜಗಳ ಏರ್ಪಟ್ಟು ಶ್ರೀ ಫಲಹಾರೇಶ್ವರರು ನಮ್ಮಲ್ಲಿ ನೆಲಸಬೇಕೆಂದು ಬೇಡಿಕೆ ಇಟ್ಟರು. ಆಗ ಗುರುಗಳು ಇಬ್ಬರನ್ನು ಸಮಾಧಾನಪಡಿಸಿ ಎರಡೂ ಪ್ರಾಂತ್ಯಗಳ ಮಧ್ಯಭಾಗದ ಅವರಾಧಿಯಲ್ಲೇ ನೆಲಸಬೇಕೆಂಬ ಇಚ್ಛೆ ನಮ್ಮದಾಗಿದೆ ಎಂದು ಅಪ್ಪಣೆ ಕೊಟ್ಟರು. ಗುರುಗಳ ಅಪ್ಪಣೆಗೆ ತಲೆಬಾಗಿದ ಇಬ್ಬರು ಅರಸರು ಅವರಾದಿಯಲ್ಲಿ ಗುರುಗಳಿಗಾಗಿ ಮಠವನ್ನು ಕಟ್ಟಿಸಿರುತ್ತಾರೆ.

ಪರಂಪರೆ: ಇಂತಹ ಪವಾಡ ಪುರುಷರ ಪೂರ್ವಾಶ್ರಮದಲ್ಲಿ ಮಠ ಸ್ಥಾಪನೆಯಾಗಿದೆ. ಈ ಮಠವು ವಿರಕ್ತ ಸಂಪ್ರದಾಯದ

ಮುರುಘಾ ಸಮಯದ ಪರಂಪರೆಯಲ್ಲಿ ಬೆಳೆದು ಬಂದಿದೆ. ಈ ಮಠದ ಪರಂಪರೆಯಲ್ಲಿ ಅಧಿಕಾರವನ್ನು ವಹಿಸಿಕೊಂಡ ಗುರುಗಳ ಬಗ್ಗೆ ಮಾಹಿತಿ ಲಭ್ಯವಿಲ್ಲ. ಆದರೆ ಮಠದ ಹಿರಿಯರಾದ ಶಿವಪುತ್ರಯ್ಯನವರ ಪ್ರಕಾರ ಈಗಾಗಲೇ ಆರು ಜನ ಗುರುಗಳು ಅಧಿಕಾರ ನಡೆಸಿ ಲಿಂಗೈಕ್ಯರಾಗಿದ್ದಾರೆ ಎಂದು ತಿಳಿಸುತ್ತಾರೆ. ಈಗ ನೇಮಕಕೊಂಡಿರುವ ಶ್ರೀ ಚಂದ್ರಶೇಖರ ಸ್ವಾಮಿಗಳು ಏಳನೆಯ ಗುರುಗಳೆಂದು ಹೇಳುತ್ತಾರೆ.

ಶ್ರೀ ಫಲಹಾರೇಶ್ವರರ ವಂಶಸ್ಥರಾದ ಶ್ರೀ ಶಿವಪುತ್ರಯ್ಯ ಹಾಗೂ ಶ್ರೀಮತಿ ಶಾರದಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಚಂದ್ರಶೇಖರ ಸ್ವಾಮಿಗಳು ೧೯೯೪ ರ ಫೆಬ್ರವರಿ ಇಪ್ಪತ್ತನಾಲ್ಕರಂದು ಈ ಮಠದ ಉತ್ತರಾಧಿಕಾರಿಗಳಾಗಿ ನೇಮಕ ಗೊಂಡಿದ್ದಾರೆ. ಇಲ್ಲಿಗೆ ನೇಮಕಗೊಂಡ ನಂತರ ಚಿತ್ರದುರ್ಗ ಬೃಹನ್ಮಠದ ಶಾಖಾಮಠವಾಗಿ ಬೆಳೆದಿರುವ ಗುಲ್ಬರ್ಗ ಜಿಲ್ಲೆಯ ಆಳಂದ ತಾಲ್ಲೂಕಿನ ಖಜೂರಿ ಗ್ರಾಮದ ಶ್ರೀ ಕೋರಣೇಶ್ವರ ವಿರಕ್ತಮಠದ ಆಡಳಿತವನ್ನು ವಹಿಸಿಕೊಂಡು, ಎರಡೂ ಮಠಗಳ ಆಡಳಿತವನ್ನು ನೋಡಿಕೊಂಡು ಹೋಗುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಚಂದ್ರಶೇಖರ ಸ್ವಾಮಿಗಳು, ಶ್ರೀ ಫಲಹಾರೇಶ್ವರ ಮಠ, ಅಸೂಟಿ, ರೋಣ ತಾ, ಗದಗ ಜಿಲ್ಲೆ.

ಹಿರೇಮಠ: ಅಸೂಟಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಹಿರೇಮಠವು ಕಾಶಿಪೀಠದ ಶಾಖಾಮಠವಾಗಿ ಬೆಳೆದಿದೆ. ಹತ್ತನೆಯ ಶತಮಾನದಲ್ಲಿ ಶ್ರೀ ರಾಚೋಟಿ ಸ್ವಾಮಿಗಳು ಮಠವನ್ನು ಸ್ಥಾಪಿಸಿದ್ದಾರೆಂದು ಹೇಳಲಾಗುತ್ತದೆ. ಆದರೆ ಈ ಹೇಳಿಕೆಗೆ ಪೂರಕವಾಗಿ ಯಾವುದೇ ಮಾಹಿತಿಗಳು ದೊರಕುವುದಿಲ್ಲ. ಪ್ರಸ್ತುತ ಮಠಾಧೀಶರು ಸನ್ಯಾಸಿಗಳಾಗದೆ ಸಂಸಾರಿ ಗಳಾಗಿದ್ದು, ಅಣ್ಣ ಶ್ರೀ ರೇವಣಸಿದ್ಧಯ್ಯ, ತಮ್ಮ ಶ್ರೀ ಗುರುಸಿದ್ಧಯ್ಯ ಎಂಬುವರು ಮಠದ ಆಡಳಿತವನ್ನು ಸರದಿಯ ಪ್ರಕಾರ ನೋಡಿಕೊಂಡು ಬರುತ್ತಿದ್ದಾರೆ. ಪ್ರತಿ ಬಸವ ಜಯಂತಿಗೊಮ್ಮೆ ಅಧಿಕಾರದ ಹಸ್ತಾಂತರ ಕಾರ್ಯ ನಡೆಯುತ್ತದೆ. ಅಂದು ಮಠದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಭಕ್ತರ ಸಮ್ಮುಖದಲ್ಲಿ ಬೆತ್ತ, ಜೋಳಿಗೆ ಹಾಗೂ ಶಲ್ಯವನ್ನು ಹಸ್ತಾಂತರಿಸಿ ಅಧಿಕಾರವನ್ನು ಬಿಟ್ಟುಕೊಡುವ ಕ್ರಮ ಸಂಪ್ರದಾಯಬದ್ಧವಾಗಿ ನಡೆಯುತ್ತಿದೆ.

ಇಂತಹ ವಿಶಿಷ್ಟ ಸಂಪ್ರದಾಯವುಳ್ಳ ಮಠಕ್ಕೆ ಈ ಪ್ರಾಂತ್ಯದ ಇನ್ನೂರು ಹಳ್ಳಿಗಳಲ್ಲಿ ಭಕ್ತರಿದ್ದಾರೆ. ಶಿಗ್ಗಾಂವಿ ತಾಲ್ಲೂಕಿನ ಹಿರೇಬೆಟಗೇರಿ, ಬಾದಾಮಿ ತಾಲ್ಲೂಕಿನ ನಂದಿಕೇಶ್ವರದಲ್ಲಿ ಶಾಖಾಮಠಗಳಿವೆ. ಮಠದ ವತಿಯಿಂದ ಯುಗಾದಿ ಪಾಡ್ಯದಿಂದ ಬಸವಜಯಂತಿಯ ತನಕ ಪುರಾಣ ಪ್ರವಚನವನ್ನು ಏರ್ಪಡಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಸಾಮೂಹಿಕ ವಿವಾಹಗಳು ಹಾಗೂ ದೀಕ್ಷಾ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಮಠದ ವತಿಯಿಂದ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದ್ದು ಗ್ರಾಮಾಂತರ ಮಕ್ಕಳ ಕಲಿಕೆಗೆ ನೆರವಾಗಿದ್ದಾರೆ.

ವಿಳಾಸ: ಶ್ರೀ ರೇವಣಸಿದ್ಧಯ್ಯ ಸ್ವಾಮಿಗಳು, ಶ್ರೀ ಹಿರೇಮಠ, ಅಸೂಟಿ, ರೋಣ ತಾಲ್ಲೂಕು, ಗದಗ ಜಿಲ್ಲೆ.

ತೋಂಟದಾರ್ಯ ಮಠ: ಅಸೂಟಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಈ ವಿರಕ್ತಮಠವು ಗದಗಿನ ಶ್ರೀ ತೋಂಟದಾರ್ಯ ಮಠದ ಶಾಖಾಮಠವಾಗಿದೆ. ಪುರಾತನ ಕಾಲದಲ್ಲಿ ಸ್ಥಾಪನೆಯಾದ ಈ ಮಠವು ಕಾಲಾನಂತರ ಉತ್ತರಾಧಿ ಕಾರಿಗಳು ಇಲ್ಲದೆ ಜೀರ್ಣಾವಸ್ಥೆಗೆ ಬಂದಿತು. ನಂತರ ಕೆಲವು ವರ್ಷಗಳ ಹಿಂದೆ ಮಠವನ್ನು ಸುಸ್ಥಿತಿಗೆ ತಂದು ಧಾರ್ಮಿಕ ಆಚರಣೆಗಳು ನಡೆಯುವಂತೆ ಮಾಡಲಾಗಿತ್ತು. ನಂತರ ಪುನಃ ಜೀರ್ಣಾವಸ್ಥೆಯನ್ನು ತಲುಪಿದೆ. ಜೀರ್ಣಗೊಂಡ ಮಠದಲ್ಲಿ ಪುರಾತನ ಕಾಲದಲ್ಲಿ ಗಚ್ಚಿನಲ್ಲಿ ನಿರ್ಮಿಸಿದ ಗದ್ದುಗೆಯು ನೋಡಸಿಗುತ್ತಿದೆ.

ಅಬ್ಬಿಗೇರಿ

ರೋಣ ತಾಲ್ಲೂಕಿನ ಅಬ್ಬಿಗೇರಿಯು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹತ್ತು ಕಿ.ಮೀ. ದೂರದಲ್ಲಿದೆ. ಪುರಾತನ ಪರಂಪರೆಯ ಈ ಗ್ರಾಮವು ಆಧುನಿಕ ಸವಲತ್ತುಗಳನ್ನು ಪಡೆಯಲು ವಿಫಲವಾಗಿದೆ. ಈ ಗ್ರಾಮದಲ್ಲಿ ಶ್ರೀ ಹಿರೇಮಠ, ಶ್ರೀಅರಳೆಲೆ ಮಠ ಹಾಗೂ ಶ್ರೀ ಅನ್ನದಾನೇಶ್ವರ ಮಠಗಳು ಸ್ಥಾಪನೆಯಾಗಿವೆ.

ಹಿರೇಮಠ: ಅಬ್ಬಿಗೇರಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ರಂಭಾಪುರಿ ಪೀಠದ ಶಾಖಾ ಮಠವಾಗಿ ಪುತ್ರ ವರ್ಗದ ಸಂಪ್ರದಾಯದಲ್ಲಿ ಬೆಳೆದಿದೆ. ಈ ಮಠವು ಪುರಾತನ ಪರಂಪರೆಯನ್ನು ಹೊಂದಿದ್ದು ದೇಸಾಯಿಗಳ ಮತ್ತು ಪಾಳೆಗಾರರಿಂದ ಇನಾಂ ಭೂಮಿಯನ್ನು ಪಡೆದು ಗೌರವಿಸಲ್ಪಟ್ಟಿದ್ದು, ಪುರಾತನ ಕಾಲದಿಂದಲೂ ಬಹಳ ಪ್ರಭಾವಿ ಮಠವಾಗಿ ಬೆಳೆದು ಬಂದಿದೆ ಎಂದು ೧೯೩೬ ರಲ್ಲಿ ಪ್ರಕಟವಾಗಿರುವ 'ಗುರುವರ್ಗದರ್ಪಣ' ಕೃತಿಯಲ್ಲಿ ಶ್ರೀ ವಿರೂಪಾಕ್ಷ ಶಾಸ್ತ್ರಿಗಳು ಅಭಿಪ್ರಾಯಿಸಿದ್ದಾರೆ.

ಪರಂಪರೆ:

೧. ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ವೀರಭದ್ರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಗಂಗಾಧರ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ರೇಣುಕ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ವೀರಯ್ಯ ಶಿವಾಚಾರ್ಯಸ್ವಾಮಿಗಳು
೧೦. ಷ.ಬ್ರ.ಶ್ರೀ ವೀರಭದ್ರ ಶಿವಾಚಾರ್ಯಸ್ವಾಮಿಗಳು
೧೧. ಷ.ಬ್ರ.ಶ್ರೀ ಸೋಮಶೇಖರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಜೀವಂತ ಸಮಾಧಿಯಾಗಿದ್ದು ಕರ್ತೃಗದ್ದುಗೆಯ ಮೇಲೆ ಲಿಂಗವನ್ನು ಸ್ಥಾಪಿಸಿ ಬೆಳ್ಳಿ ಪಾದುಕೆ ಹಾಗೂ ಮುಖವಾಡ ಮಾಡಿಸಲಾಗಿದೆ. ಕರ್ತೃಗದ್ದುಗೆಯ ಬಳಿಯಲ್ಲೇ ಈಗಿನ ಗುರುಗಳು ಪೂಜೆಗೆ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಮಠದ ಹೊರಭಾಗದಲ್ಲಿ ಒಂದು ಗದ್ದುಗೆ ಒಳಭಾಗದಲ್ಲಿ ಎರಡುಗದ್ದುಗೆಗಳು ಇದ್ದು ಪರಂಪರೆಯ ಲಿಂಗೈಕ್ಯ ಗುರುಗಳ ನಾಲ್ಕು ಗದ್ದುಗೆಗಳು ನೋಡಸಿಗುತ್ತವೆ.

ಈಗಿನ ಪಟ್ಟಾಧಿಕಾರಿಗಳಾದ ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮಿಗಳು ಶ್ರೀ ವೀರಭದ್ರಯ್ಯ ಮತ್ತು ಶ್ರೀಮತಿ ಶಾಂತಮ್ಮನವರ ಪುತ್ರರಾಗಿ ೧೯೫೨ ರ ಜೂನ್ ಒಂದರಂದು ಜನಿಸಿದರು. ಬಿಜಾಪುರ ಜಿಲ್ಲೆ ಹುನುಗುಂದ ತಾಲ್ಲೂಕಿನ ಗುಡೂರು ಗ್ರಾಮದಲ್ಲಿ ಆಶ್ರಯ ಪಡೆದು ಶಿಕ್ಷಣವನ್ನು ಮುಗಿಸಿ ೧೯೭೦ ರ ಜುಲೈ ಹದಿನಾಲ್ಕರಂದು ಮಠದ ಅಧಿಕಾರವನ್ನು ವಹಿಸಿಕೊಂಡರು. ಶ್ರೀ ಸೋಮೇಶ್ವರ ಶಿವಾಚಾರ್ಯ ಸ್ವಾಮಿಗಳು ಅಧಿಕಾರ ವಹಿಸಿಕೊಂಡ ಮೇಲೆ ಹಳೆಯದಾದ ಕಟ್ಟಡವನ್ನು ನವೀಕರಿಸಿ ಸುಸ್ಥಿತಿಗೆ ತಂದರು. ಅಲ್ಲದೆ ಗದ್ದುಗೆಗಳನ್ನು ನಿರ್ಮಿಸಿ ಪೂಜೆಗೆ ವ್ಯವಸ್ಥೆಗೊಳಿಸಿದರು.

ಧಾರ್ಮಿಕ ಕಾರ್ಯಗಳು: ಮಠದಲ್ಲಿರುವ ಗದ್ದುಗೆಗಳಿಗೆ ಎರಡು ವೇಳೆ ಪೂಜೆ, ಶ್ರಾವಣ ಮತ್ತು ಕಾರ್ತೀಕ ಮಾಸಗಳಲ್ಲಿ ವಿಶೇಷ ಪೂಜೆ ಆಷಾಡ ಬಹುಳಷಷ್ಠಿಯಲ್ಲಿ ಹಿರಿಯ ಗುರುಗಳಾದ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆ ಯನ್ನು ಮಾಡಲಾಗುತ್ತಿದೆ. ಈ ಸಂದರ್ಭದಲ್ಲಿ ವಿಶೇಷ ಪೂಜೆಗೆ ವ್ಯವಸ್ಥೆಗೊಳಿಸಿ ಪುರಾಣ ಪ್ರವಚನ ಹಾಗೂ ಅನ್ನದಾಸೋಹ ವನ್ನು ವ್ಯವಸ್ಥೆ ಮಾಡಲಾಗುತ್ತಿದೆ. ಈ ಮಠಕ್ಕೆ ರೋಣ ತಾಲ್ಲೂಕಿನ ನೆಲ್ಲೂರು, ಕೊಪ್ಪಳ ತಾಲ್ಲೂಕಿನ ವದಗಿನಾಳು, ಮುದ್ದೇಬಿಹಾಳು ತಾಲ್ಲೂಕಿನ ಗೋನಾಳ, ಶಿರಹಟ್ಟಿ ತಾಲ್ಲೂಕಿನ ಹೊಳೆ ಇಟಗಿಯಲ್ಲಿ ಶಾಖಾಮಠಗಳು ಅಸ್ತಿತ್ವದಲ್ಲಿ ವೆ. ಇವುಗಳಲ್ಲಿಯೂ ಗದ್ದುಗೆಗಳು ಇದ್ದು ಪೂಜೆಗೆ ವ್ಯವಸ್ಥೆ ಮಾಡಲಾಗಿದೆ.

ಶೈಕ್ಷಣಿಕ ಸೇವೆ: ಪ್ರಸ್ತುತ ಮಠದ ವತಿಯಿಂದ ಶ್ರೀ ಗುರುಚಂದ್ರಶೇಖರ ಕೈಗಾರಿಕಾ ತರಬೇತಿ ಕೇಂದ್ರ ಹಾಗೂ ಹೊಲಿಗೆ ತರಬೇತಿ ಕೇಂದ್ರಗಳು ೧೯೯೩ ರಿಂದ ನಡೆಯುತ್ತಾ ಬಂದಿವೆ.

ವಿಳಾಸ: ಷ.ಬ್ರ.ಶ್ರೀ ಸೋಮಶೇಖರ ಶಿವಾಚಾರ್ಯಸ್ವಾಮಿಗಳು, ಶ್ರೀ ಹಿರೇಮಠ, ಅಬ್ಬಿಗೇರೆ,ರೋಣ ತಾಲ್ಲೂಕು, ಗದಗ ಜಿಲ್ಲೆ.

ಅರಳೆಲೆ ಮಠ: ಅಬ್ಬಿಗೇರಿಯ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಅರಳೆಲೆ ಮಠವು ರಂಭಾಪುರಿ ಪೀಠದ ಶಾಖಾಮಠವಾಗಿ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿದೆ. ಈ ಮಠವೂ ಪ್ರಾಚೀನ ಕಾಲದ ಇತಿಹಾಸವನ್ನು ಹೊಂದಿದೆ. ಈ ಮಠಕ್ಕೆ 'ಕಟ್ಟಿಮನೆ ಹಿರೇಮಠ' ಎಂದು ಸಹ ಕರೆಯಲಾಗುತ್ತದೆ. ಪುರಾತನ ಪರಂಪರೆಯುಳ್ಳ ಈ ಮಠದ ಕರ್ತೃಗುರುಗಳು ಶ್ರೀ ನಿರಂಜನ ಸ್ವಾಮಿಗಳು ಎಂದು ಹೇಳಲಾಗುತ್ತದೆ.

ಪುರಾತನ ಪರಂಪರೆಯ ಈ ಮಠದಲ್ಲಿ ಹತ್ತು ಜನ ಗುರುಗಳು ಅಧಿಕಾರ ನಡೆಸಿದ್ದಾರೆ ಎಂದು 'ಗುರುವರ್ಗ ದರ್ಪಣ'ದಲ್ಲಿ ಉಲ್ಲೇಖಿಸಿದೆ. ಆದರೆ ಗುರುಗಳ ಹೆಸರನ್ನು ಪ್ರಕಟಿಸಿಲ್ಲ. ಅಲ್ಲದೆ ಈ ಮಠದಲ್ಲಿ ಸಹ ಅಧಿಕಾರ ವಹಿಸಿಕೊಂಡ ಗುರುಗಳ ಬಗೆಗೂ ಮಾಹಿತಿ ದೊರೆಯುವುದಿಲ್ಲ.

ಪರಂಪರೆ:
೧. ಷ.ಬ್ರ.ಶ್ರೀ ನಿರಂಜನ ಶಿವಾಚಾರ್ಯಸ್ವಾಮಿಗಳು (ಕರ್ತೃಗುರುಗಳು)
೨. ಷ.ಬ್ರ.ಶ್ರೀ ಬಸವರಾಜ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಶಾಂತಮೂರ್ತಿ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ವಿಜಯಾನಂದ ಶಿವಾಚಾರ್ಯಸ್ವಾಮಿಗಳು

ಈ ರೀತಿ ನಾಲ್ಕು ಗುರುಗಳ ಹೆಸರನ್ನು ದಾಖಲಿಸಬಹುದಾಗಿದೆ. ಮಠದಲ್ಲಿ ಕರ್ತೃಗದ್ದುಗೆಯನ್ನು ಗುರುತಿಸಬಹುದಾಗಿದ್ದು ಉಳಿದ ಗದ್ದುಗೆಗಳು ನಶಿಸಿಹೋಗಿವೆ. ಎರಡು ಗದ್ದುಗಳಿಗೆ ನಿತ್ಯ ಎರಡೂ ವೇಳೆ ಪೂಜೆ ಮಾಡಲಾಗುತ್ತಿದೆ. ಹಿರಿಯ ಗುರುಗಳ ಪುಣ್ಯಾರಾಧನೆ ಹಾಗೂ ಅನ್ನದಾಸೋಹವನ್ನು ಮಠವು ನಡೆಸುತ್ತಾ ಬಂದಿದೆ.

ವಿಳಾಸ: ಷ.ಬ್ರ.ಶ್ರೀ ವಿಜಯಾನಂದ ಶಿವಾಚಾರ್ಯ ಸ್ವಾಮಿಗಳು, ಶ್ರೀ ಅರಳೆಲೆಮಠ ,ಅಬ್ಬಿಗೇರೆ, ರೋಣ ತಾ, ಗದಗ ಜಿಲ್ಲೆ,

ಇಟಗಿ

ರೋಣ ತಾಲ್ಲೂಕಿನ ಇಟಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹದಿನೈದು ಕಿ.ಮೀ. ದೂರದಲ್ಲಿದೆ. ಅಭಿವೃದ್ಧಿಶೀಲ ಈ ಗ್ರಾಮವು, ಗೊಗ್ಗೆಹಳ್ಳಿ ಹಿರೇಮಠದ ಸ್ಥಾಪನೆಯಿಂದ ಧಾರ್ಮಿಕ ಸಂಸ್ಕಾರವನ್ನು ಪಡೆದುಕೊಂಡಿದೆ.

ಗೊಗ್ಗೆಹಳ್ಳಿ ಹಿರೇಮಠ: ಇಟಗಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಗೊಗ್ಗೆಹಳ್ಳಿ ಹಿರೇಮಠದ ಮೂಲ ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನ ಗೊಗ್ಗೆಹಳ್ಳಿಯಾಗಿದ್ದು, ನಂತರ ಇಟಗಿಗೆ ಸ್ಥಳಾಂತರಗೊಂಡು ಮೂಲ ಗ್ರಾಮದ ಹೆಸರನ್ನು ಉಳಿಸಿಕೊಂಡಿದೆ.

ಶ್ರೀಶೈಲ ಪೀಠದ ಶಾಖಾ ಮಠವಾದ ಈ ಮಠವು ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿದೆ. ಕೆಳದಿ ಅರಸರ ಕಾಲದಲ್ಲಿ ಗೌರವಕ್ಕೆ ಒಳಗಾಗಿದ್ದ ಮಠವು ಜನಮನ್ನಣೆಗೆ ಪಾತ್ರವಾಗಿತ್ತಂತೆ. ಕಾಲಾನಂತರದಲ್ಲಿ ಮಠದಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಹೋಗಲು ಮಠಾಧೀಶರು ಯಾರೂ ಇಲ್ಲದಿದ್ದಾಗ ಮಠದ ವಂಶಸ್ಥರಾಗಿದ್ದ ಹಿರಿಯರೊಬ್ಬರು ಹಾನಗಲ್ಲು ಶ್ರೀ ಕುಮಾರ ಸ್ವಾಮಿಗಳಿಗೆ ಒಪ್ಪಿಸಿದರು.ಆಗ ಶ್ರೀ ಕುಮಾರ ಸ್ವಾಮಿಗಳು ಮಠದಲ್ಲಿ ದೀಪಬೆಳಗಿಸಿ ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಹೋಗಲು ತಮ್ಮ ಜೊತೆಯಲ್ಲಿದ್ದ ಸೋಮನಾಥ ಶಾಸ್ತ್ರಿಗಳನ್ನು ನೇಮಿಸಿದರು. ಹಾನಗಲ್ಲು ಗುರುಗಳು ಅಧಿಕಾರ ಕೊಟ್ಟ ಮೇಲೆಲ್ಲಾ ಎನ್ನನಾಗದೆ ಸೋಮನಾಥ ಶಾಸ್ತ್ರಿಗಳು ಇಟಗಿ ಮಠದ ಅಧಿಕಾರವನ್ನು ವಹಿಸಿಕೊಂಡು. ಗೊಗ್ಗೆಹಳ್ಳಿ ಮತ್ತು ಇಟಗಿ ಮಠಗಳನ್ನು ಒಟ್ಟೊಟ್ಟಿಗೆ ಮುನ್ನಡೆಸಿದರು. ಅಂದಿನಿಂದ ಇಟಗಿ ಮಠಕ್ಕೆ 'ಗೊಗ್ಗೆಹಳ್ಳಿ ಹಿರೇಮಠ' ಎಂಬ ಹೆಸರು ಬಂದಿತಂತೆ.

ಸೋಮನಾಥ ಶಾಸ್ತ್ರಿಗಳ ನಂತರ ಶ್ರೀ ನಿಜಗುಣ ಶಿವಾಚಾರ್ಯ ಸ್ವಾಮಿಗಳನ್ನು ಈ ಎರಡು ಮಠಗಳಿಗೆ ಅಧಿಕಾರಕ್ಕೆ ತರಲಾಯಿತು. ಈಗ ಎಂಬತ್ತಾರು ವರ್ಷದ ತುಂಬು ಬದುಕನ್ನು ಪೂರೈಸಿರುವ ಶ್ರೀ ನಿಜಗುಣ ಶಿವಾಚಾರ್ಯ ಸ್ವಾಮಿಗಳು ಇನ್ನು ಜೀವನೋತ್ಸಹವನ್ನು ಕಳೆದುಕೊಳ್ಳದೇ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಶ್ರೀ ಸಂಗಮೇಶ

ಶಿವಾಚಾರ್ಯ ಸ್ವಾಮಿಗಳನ್ನು ತಮ್ಮ ಉತ್ತರಾಧಿಕಾರಿಯಾಗಿ ನೇಮಕ ಮಾಡಿಕೊಂಡು ೧೯೮೪ರಲ್ಲಿ ಪಟ್ಟಾಧಿಕಾರ ನೀಡಿದ್ದಾರೆ.

ಇಟಗಿ ಗೊಗ್ಗೆಹಳ್ಳಿ ಮಠದ ವಂಶಸ್ಥರಾದ ಶ್ರೀ ಸದಾಶಿವಶಾಸ್ತ್ರೀ ಮತ್ತು ಶ್ರೀಮತಿ ಗೌರಮ್ಮನವರ ಪುತ್ರರಾಗಿ ಜನಿಸಿದ, ಶ್ರೀ ಸಂಗಮೇಶ ದೇವರು ಶಿಕ್ಷಣವನ್ನು ಮುಗಿಸಿ ಹಿರಿಯ ಗುರುಗಳ ಮಾರ್ಗದರ್ಶನದಲ್ಲಿ ಬೆಳೆದು, ಸಂಸ್ಕಾರ ಪಡೆದು ಮಠದ ಆಡಳಿತವನ್ನು ವಹಿಸಿಕೊಂಡು ಎರಡೂ ಮಠಗಳನ್ನು ನೋಡಿಕೊಂಡು ಹೋಗುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸಂಗಮೇಶ ಶಿವಾಚಾರ್ಯ ಸ್ವಾಮಿಗಳು, ಶ್ರೀ ಗೊಗ್ಗೆಹಳ್ಳಿ ಹಿರೇಮಠ, ಇಟಗಿ, ರೋಣ ತಾ, ಗದಗ ಜಿಲ್ಲೆ.

ಕರಮುಡಿ

ರೋಣ ತಾಲ್ಲೂಕಿನ ಕರಮುಡಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಇಪ್ಪತ್ತು ಕಿ.ಮೀ. ದೂರದಲ್ಲಿದೆ. ಅಭಿವೃದ್ಧಿಯ ಪಥದಲ್ಲಿರುವ ಈ ಗ್ರಾಮದಲ್ಲಿ ವಿರಕ್ತ ಸಂಪ್ರದಾಯದ ಶ್ರೀ ಒಪ್ಪತ್ತೇಶ್ವರ ಮಠವು ಸ್ಥಾಪನೆಯಾಗಿ, ಧಾರ್ಮಿಕ ಕಾರ್ಯಗಳ ಕೇಂದ್ರವಾಗಿ ಬೆಳೆದಿದೆ.

ಒಪ್ಪತ್ತೇಶ್ವರ ಮಠ: ಕರಮುಡಿ ಗ್ರಾಮದ ಮಧ್ಯಭಾಗದಲ್ಲಿ ಶ್ರೀ ಒಪ್ಪತ್ತೇಶ್ವರ ಮಠವು ಸ್ಥಾಪನೆಯಾಗಿದೆ. ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ನೆಲೆಸಿದ್ದ ಶರಣರಲ್ಲಿ ಒಬ್ಬರಾಗಿದ್ದ ಶ್ರೀ ಒಪ್ಪತ್ತೇಶ್ವರರು ಈ ಮಠದ ಸ್ಥಾಪಕರಾದ ಕಾರಣ **'ಶ್ರೀ ಒಪ್ಪತ್ತೇಶ್ವರ ಮಠ'** ಎಂದು ಹೆಸರು ಬಂದಿದೆ.

ಶ್ರೀ ಒಪ್ಪತ್ತೇಶ್ವರರು ಕಲ್ಯಾಣದಿಂದ ಹೊರಟು ಗುಳೇದಗುಡ್ಡದಲ್ಲಿ ಅನುಷ್ಠಾನಗೊಂಡು ನಂತರ ಕರಮುಡಿಗೆ ಬಂದು ನೆಲೆಸುತ್ತಾರೆ. ಇಲ್ಲಿ ನೆಲೆಗೊಂಡ ಮೇಲೆ ಭಕ್ತರಲ್ಲಿ ಜಾಗೃತಿಯನ್ನುಂಟು ಮಾಡಿ ವೀರಶೈವ ಧರ್ಮ ಹೆಚ್ಚು ಪ್ರಚಾರಗೊಳ್ಳಲು ನೆರವಾದರು. ಕಾಯಕ ಯೋಗದಿಂದ ಬದುಕುವ ಮಾರ್ಗವನ್ನು ಭಕ್ತರಿಗೆ ತೋರಿಸಿ ಮಾರ್ಗದರ್ಶನ ಮಾಡಿ ಜನಜಾಗೃತಿಉಂಟುಮಾಡಲು ಮಠವನ್ನು ಸ್ಥಾಪಿಸಿದ್ದಾರೆ. ಇವರ ತರುವಾಯ ಶ್ರೀ ಬೂದಿ ಶಿವಲಿಂಗೇಶ್ವರ ಸ್ವಾಮಿಗಳು ಏಳುನೂರಎಪ್ಪತ್ತು ವರ್ಷಗಳ ಕಾಲ ಬದುಕಿ ಉದ್ದನೆಯ ಜಡೆಯನ್ನು ಬಿಟ್ಟಿದ್ದರೆಂದು ಹೇಳುತ್ತಾರೆ. ಇವರು ಭಕ್ತರಿಗೆ ಧರ್ಮಸಂಸ್ಕಾರವನ್ನು ನೀಡುವಲ್ಲಿ ಯಶಸ್ವಿಯಾಗಿದ್ದರಂತೆ. ವಾಕ್‌ಸಿದ್ಧಿ ಪಡೆದಿದ್ದ ಇವರ ಮಾತಿಗೆ ಅಪಾರ ಗೌರವ ದೊರೆಯುತ್ತಿತ್ತು ಎಂದು ಹೇಳಲಾಗುತ್ತದೆ. ಇಂತಹ ಇತಿಹಾಸವನ್ನು ಹೊಂದಿರುವ ಈ ಮಠದ ಉತ್ತರಾಧಿಕಾರಿಯಾಗಿ ಹುನುಗುಂದ ತಾಲ್ಲೂಕಿನ ಹೊನ್ನಾರ ಹಳ್ಳಿಯಲ್ಲಿ ಜನಿಸಿದ ಶ್ರೀ ಅಭಿನವ ಒಪ್ಪತ್ತೇಶ್ವರ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಗುರುಗಳು ತಮ್ಮ ಚಿಕ್ಕವಯಸ್ಸಿನಲ್ಲೇ ದೊಡ್ಡ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಬಾದಾಮಿ ತಾಲ್ಲೂಕಿನ ಗುಳೇದಗುಡ್ಡದ ಒಪ್ಪತ್ತೇಶ್ವರ ಮಠವು ಈ ಮಠದ ಶಾಖಾ ಮಠವಾಗಿದ್ದು ಈ ಎರಡೂ ಮಠಗಳ ಆಡಳಿತವನ್ನು ನೋಡಿಕೊಳ್ಳುತ್ತಾ ಗುರುಗಳು ಧರ್ಮ ಜಾಗೃತಿಯನ್ನು ಉಂಟು ಮಾಡುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಪರಂಪರೆಯ ಹಿನ್ನೆಲೆಯುಳ್ಳ ಈ ಮಠದಲ್ಲಿ ಶ್ರೀ ಒಪ್ಪತ್ತೇಶ್ವರರ ತೋರುಗದ್ದುಗೆಯ ಜೊತೆಗೆ ಒಟ್ಟು ಹದಿನೈದು ಗದ್ದುಗೆಗಳು ಮಠದ ಜಾಗದಲ್ಲಿವೆ. ಈ ಎಲ್ಲಾ ಗದ್ದುಗೆಗಳಿಗೆ ನಿತ್ಯ ಪೂಜೆ ನಡೆಯುತ್ತಿದೆ. ಶ್ರಾವಣಮಾಸದಲ್ಲಿ ಪುರಾಣ ಪ್ರವಚನವನ್ನು ಹಮ್ಮಿಕೊಳ್ಳಲಾಗುತ್ತಿದೆ. ಈಗಿನ ಶ್ರೀ ಅಭಿನವ ಒಪ್ಪತ್ತೇಶ್ವರ ಸ್ವಾಮಿಗಳು ಲೋಕೋದ್ಧಾರಕ್ಕಾಗಿ ೧೯೯೭ ರಿಂದ ೧೯೯೯ ರವರೆಗೆ ಮೂರು ವರ್ಷಗಳ ಕಾಲ ಶ್ರಾವಣಮಾಸದಲ್ಲಿ ಅನುಷ್ಠಾನ ಕೈಗೊಂಡಿದ್ದರು. ಮಠದಲ್ಲಿ ನಡೆಯುವ ವಿಶೇಷ ಸಂದರ್ಭಗಳಲ್ಲಿ ಅನ್ನದಾಸೋಹವನ್ನು ವ್ಯವಸ್ಥೆಗೊಳಿಸಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಅಭಿನವ ಒಪ್ಪತ್ತೇಶ್ವರ ಸ್ವಾಮಿಗಳು, ಶ್ರೀ ಒಪ್ಪತ್ತೇಶ್ವರ ಮಠ, ಕರಮುಡಿ, ರೋಣ ತಾ, ಗದಗ ಜಿಲ್ಲೆ.

ಕೊತಬಾಳ

ರೋಣತಾಲ್ಲೂಕಿನ ಕೊತಬಾಳು ಗ್ರಾಮವು ರೋಣ ಬಾದಾಮಿ ರಸ್ತೆಯಲ್ಲಿ ಸಿಗುವ ಒಂದು ಅಭಿವೃದ್ಧಿಗೊಂಡ ಗ್ರಾಮ. ಈ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಏಳು ಕಿ.ಮೀ.ದೂರದಲ್ಲಿದೆ. ಈ ಗ್ರಾಮದ ಹೊರಭಾಗದಲ್ಲಿ

ಶ್ರೀ ಅಡವಿ ಸಿದ್ಧೇಶ್ವರ ಮಠವು ಸ್ಥಾಪನೆಯಾಗಿ ಈ ಗ್ರಾಮದ ಧಾರ್ಮಿಕ ಕೇಂದ್ರಬಿಂದುವಾಗಿ ರೂಪುಗೊಂಡಿದೆ.

ಅಡವಿ ಸಿದ್ಧೇಶ್ವರ ಸಂಸ್ಥಾನ ಮಠ: ಬೆಳಗಾಂ ಜಿಲ್ಲೆಯ ಗೋಕಾಕ್ ತಾಲ್ಲೂಕಿನ ಅಂಕಲಗಿ ಅಡವಿ ಮಠದ ಮೂರನೆಯ ಪಟ್ಟಾಧ್ಯಕ್ಷರಾಗಿದ್ದ ಶ್ರೀಅಡವಿ ಸಿದ್ಧೇಶ್ವರ ಸ್ವಾಮಿಗಳು ಲೋಕ ಸಂಚಾರಕ್ಕೆ ಹೊರಟು ಕೊತಬಾಳು ಗ್ರಾಮದ ಈ ಸ್ಥಳದಲ್ಲಿ ನೆಲೆನಿಂತು ದೀರ್ಘ ಅನುಷ್ಠಾನವನ್ನು ಕೈಗೊಂಡು ಇಲ್ಲಿನ ಭಕ್ತರ ಅಪೇಕ್ಷೆಯ ಮೇರೆಗೆ ೧೯೩೨ ರಲ್ಲಿ ಸ್ವತಂತ್ರ ಮಠವನ್ನು ಕೊತಬಾಳಿನಲ್ಲಿ ಸ್ಥಾಪಿಸಿದ್ದಾರೆ. ಇಲ್ಲಿ ಸ್ಥಾಪನೆಗೊಂಡ ಮಠವು ಭವಿಷ್ಯದಲ್ಲಿ ಶಾಶ್ವತವಾಗಿ ಉಳಿಯುವಂತೆ ಮಾಡಲು ತಮ್ಮ ತಪೋಶಕ್ತಿಯ ಬಲದಿಂದ ಮಠವನ್ನು ಸರ್ವಾಂಗೀಣ ರೀತಿಯಲ್ಲಿ ಅಭಿವೃದ್ಧಿಪಡಿಸಿದರು.

ಪರಂಪರೆ:
೧. ಶ್ರೀ ಮ.ನಿ.ಪ್ರ. ಅಡವಿ ಸಿದ್ಧೇಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ರಾಜಶೇಖರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಗಂಗಾಧರಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಶ್ರೀ ಅಡವಿಸಿದ್ಧೇಶ್ವರಸ್ವಾಮಿಗಳ ಜೊತೆಯಲ್ಲಿ ಅಂಕಲಗಿಯಿಂದ ಆಗಮಿಸಿದ್ದ ಶ್ರೀ ರಾಜಶೇಖರ ಸ್ವಾಮಿಗಳು ಮೊದಲಿನಿಂದಲೂ ಗುರುಗಳ ಸೇವೆ ಮಾಡುತ್ತಾ ಗುರು ಕಾರುಣ್ಯದಿಂದ ಬೆಳೆದವರಾಗಿದ್ದರು. ಶ್ರೀ ಅಡವಿಸಿದ್ದೇಶ್ವರ ಸ್ವಾಮಿಗಳು ೧೯೫೫ ರಲ್ಲಿ ಲಿಂಗೈಕ್ಯರಾಗುವ ಮೊದಲೇ ತಮ್ಮ ಕರಕಮಲ ಸಂಜಾತರಾದ ಶ್ರೀ ರಾಜಶೇಖರ ಸ್ವಾಮಿಗಳಿಗೆ ಪಟ್ಟಾಧಿಕಾರದ ಅನುಗ್ರಹವನ್ನು ನೀಡಿದ್ದರು. ಎರಡನೆಯ ಗುರುಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ಕೊತಬಾಳು ಗ್ರಾಮದ ಶ್ರೀ ಸಿದ್ಧಯ್ಯ ಹಿರೇಮಠ ಮತ್ತು ಶ್ರೀಮತಿ ರುದ್ರಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಗಂಗಾಧರ ದೇವರನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿಕೊಂಡರು.ಶ್ರೀ ಗಂಗಾಧರದೇವರು ಕೊತಬಾಳು,ರೋಣ ಹಾಗೂ ಹೊನ್ನಾಳಿಯಲ್ಲಿ ವಿದ್ಯಾಭ್ಯಾಸ ಮಾಡಿ ೨೦೦೦ದ ಫೆಬ್ರವರಿ ಹದಿನೇಳರಂದು ಕೊಪ್ಪಳ ಗವಿಮಠದ ಶ್ರೀ ಶಿವಶಾಂತವೀರ ಸ್ವಾಮಿಗಳಿಂದ ನಿರಂಜನ ಪಟ್ಟಾಧಿಕಾರದ ಅನುಗ್ರಹವನ್ನು ಪಡೆದುಕೊಂಡು ಅಧಿಕಾರಕ್ಕೆ ಬಂದಿದ್ದಾರೆ.

ಧಾರ್ಮಿಕ ಕೆಲಸಗಳು: ಶ್ರೀ ಅಡವಿಸಿದ್ಧೇಶ್ವರ ಸ್ವಾಮಿಗಳ ರಥೋತ್ಸವವನ್ನು ಆಚರಣೆಗೆ ತರಲಾಗಿದೆ. ಶ್ರೀ ಅಡವಿ ಸಿದ್ಧೇಶ್ವರರ ಪುಣ್ಯ ತಿಥಿಯ ಅಂಗವಾಗಿ ಹುಣ್ಣಿಮೆಯಾದ ಮೂರನೆಯ ದಿನದಂದು ರಥೋತ್ಸವವು ನಡೆಯಲಿದ್ದು, ಈ ಸಂದರ್ಭದಲ್ಲಿ ಸಾಮೂಹಿಕ ವಿವಾಹಗಳನ್ನು ನಡೆಸಲಾಗುತ್ತಿದೆ. ನಿತ್ಯಪೂಜೆಯ ಜೊತೆಗೆ ಶ್ರಾವಣ ಮಾಸದಲ್ಲಿ ವಿಶೇಷ ಪೂಜೆ, ಪುರಾಣ ಪ್ರವಚನಗಳು ನಡೆಯುತ್ತವೆ. ಶಿವರಾತ್ರಿಯಲ್ಲಿ ಜಾಗರಣೆಯನ್ನು ಮಾಡಲಾಗುತ್ತದೆ. ನಿತ್ಯ ಅನ್ನದಾಸೋಹ ನಡೆಯುವುದಲ್ಲದೆ ಜಾತ್ರೆಯ ಸಂದರ್ಭದಲ್ಲಿ ನಡೆಯುವ ದಾಸೋಹದ ಸಿದ್ಧತೆಗಾಗಿ ನಾಲ್ಕು ಕೊಪ್ಪರಿಗೆಗಳನ್ನು ಮಾಡಿಸಿದ್ದು ಪ್ರತಿ ವರ್ಷ ಈ ಕೊಪ್ಪರಿಗೆಗಳಲ್ಲಿ ಅನ್ನ, ಸಜ್ಜಕವನ್ನು ಮಾಡಲಾಗುತ್ತದೆ. ಒಂದು ದಿನದ ದಾಸೋಹಕ್ಕಾಗಿ ಇಪ್ಪತ್ತು ಕ್ವಿಂಟಾಲ್ ಅಕ್ಕಿ, ಹತ್ತು ಕ್ವಿಂಟಾಲ್ ಗೋಧಿ ಬೇಕಾಗುತ್ತದೆಯಂತೆ.

ಅಭಿವೃದ್ಧಿ ಕಾರ್ಯಗಳು: ಅರವತ್ತೈದು ವರ್ಷಗಳ ಹಿಂದೆ ಪ್ರಾರಂಭವಾದ ಈ ಮಠವು ಮೂರುತಲೆಮಾರುಗಳ ಆಡಳಿತವನ್ನು ಕಂಡಿದ್ದು, ಈ ಅವಧಿಯಲ್ಲಿ ಆಗಾಧವಾದುದ್ದನ್ನು ಸಾಧಿಸಿದೆ. ಮಠದ ಆಸ್ತಿಯಾಗಿರುವ ಹತ್ತು ಎಕರೆ ಜಮೀನನ್ನು ನೀರಾವರಿಗೆ ಯೋಗ್ಯಗೊಳಿಸಿ ಅಧಿಕ ಬೆಳೆಯನ್ನು ಬೆಳೆಯಲಾಗುತ್ತಿದೆ. ಮಠದಲ್ಲಿ ಸಮುದಾಯ ಭವನವನ್ನು ನಿರ್ಮಿಸಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಗಂಗಾಧರ ಸ್ವಾಮಿಗಳು, ಶ್ರೀ ಅಡವಿ ಸಿದ್ಧೇಶ್ವರ ಸಂಸ್ಥಾನ ಮಠ, ಕೊತಬಾಳ, ರೋಣ ತಾ, ಗದಗ ಜಿಲ್ಲೆ.

ಕೋಡಿಕೊಪ್ಪ

ರೋಣತಾಲ್ಲೂಕಿನ ಕೋಡಿಕೊಪ್ಪವು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಹತ್ತೊಂಬತ್ತು ಕಿ.ಮೀ ದೂರದಲ್ಲಿದೆ. ಮುಖ್ಯರಸ್ತೆಯಿಂದ ಒಳದಾರಿಯಲ್ಲಿ ಸಾಗಿದರೆ ಸಿಗುವ ಕೋಡಿಕೊಪ್ಪದಲ್ಲಿ ಶ್ರೀ ವೀರಪ್ಪಜ್ಜನ ಮಠ ಸ್ಥಾಪನೆಯಾಗಿದೆ.

ವೀರಪ್ಪಜ್ಜನ ಮಠ: ಕೋಡಿಕೊಪ್ಪ ಗ್ರಾಮದಲ್ಲಿ ಇತ್ತೀಚೆಗೆ 'ವೀರಪ್ಪಜ್ಜನಮಠ'ಪ್ರಾರಂಭಗೊಂಡಿದೆ. ವೀರಪ್ಪಜ್ಜ ಎಂಬ ವಿರಕ್ತರಿಂದ ಪ್ರಾರಂಭಗೊಂಡ ಕಾರಣ ಮಠಕ್ಕೆ ಈ ಹೆಸರುಬಂದಿದೆ. ಶ್ರೀ ಅನ್ನದಾನೇಶ್ವರರು ಅನುಷ್ಠಾನಗೊಂಡು ಪಾವನಗೊಳಿಸಿದ್ದ ಈ ಸ್ಥಳದಲ್ಲಿ ಶ್ರೀ ವೀರಪ್ಪಜ್ಜನವರು ತಪೋನುಷ್ಠಾನ ಕೈಗೊಂಡು ಧಾರ್ಮಿಕ ಕಾರ್ಯಗಳು ನಡೆಯಲು ಅವಕಾಶ ಮಾಡಿಕೊಟ್ಟಿದ್ದಾರೆ. ಅಂದು ಪ್ರಾರಂಭಗೊಂಡ ಧಾರ್ಮಿಕ ಕಾರ್ಯಗಳು ನಾಡಿನಲ್ಲೆಲ್ಲ ಪ್ರಸಿದ್ಧಿ ಪಡೆದು ಜಾಗೃತ ಸ್ಥಳವಾಗಿ ರೂಪುಗೊಂಡಿದೆ. ವೀರಪ್ಪಜ್ಜನವರು ೧೯೨೫ ರಲ್ಲಿ ಲಿಂಗೈಕ್ಯರಾದ ಮೇಲೆ ಭಕ್ತರು ಲಿಂಗೈಕ್ಯ ಗುರುಗಳ ಹೆಸರಿನಲ್ಲಿ ಸಮಿತಿಯನ್ನು ರಚಿಸಿಕೊಂಡು ಧಾರ್ಮಿಕ ಕಾರ್ಯಗಳನ್ನು ನೇರವೇರಿಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ವೀರಪ್ಪಜ್ಜನ ಮಠ ಸಮಿತಿ, ಕೋಡಿಕೊಪ್ಪ, ರೋಣ ತಾಲ್ಲೂಕು, ಗದಗ ಜಿಲ್ಲೆ.

ಗಜೇಂದ್ರಘಡ

ರೋಣ ತಾಲ್ಲೂಕಿನ ಗಜೇಂದ್ರಘಡವು ತಾಲ್ಲೂಕು ಕೇಂದ್ರದಿಂದ ಈಶಾನ್ಯ ಭಾಗಕ್ಕೆ ನಲವತ್ತು ಕಿ.ಮೀ.ದೂರದಲ್ಲಿದೆ. ಅಭಿವೃದ್ಧಿ ಶೀಲ ಪಟ್ಟಣದಲ್ಲಿ ಪುರಾತನ ಕಾಲದಲ್ಲಿ ವೀರಶೈವ ಧರ್ಮವು ಶ್ರೀಮಂತವಾಗಿ ಬೆಳೆದ ಕುರುಹುಗಳು ದೊರಕುತ್ತವೆ. ಇದಕ್ಕೆ ನಿದರ್ಶನವೆಂಬಂತೆ ಶ್ರೀ ಗವಿಮಠ, ಶ್ರೀ ಹಾಲಕೆರೆ ಅನ್ನದಾನೇಶ್ವರಮಠ ಹಾಗೂ ಶ್ರೀ ಮೈಸೂರು ಮಠ ಈ ರೀತಿ ಒಟ್ಟು ಮೂರು ಮಠಗಳು ಸ್ಥಾಪನೆಯಾಗಿವೆ.

ಪ್ರಸ್ತುತ ಹಾಲಕೆರೆ ಶ್ರೀ ಅನ್ನದಾನೇಶ್ವರಮಠವು ಹಾಲಕೆರೆಯ ಮಠದ ಶಾಖಾಮಠವಾಗಿ ಬೆಳೆದಿದೆ. ಈಮಠದಲ್ಲಿರುವ ಒಂದು ಗದ್ದುಗೆಗೆ ನಿತ್ಯ ಪೂಜೆಗೆ ವ್ಯವಸ್ಥೆಯನ್ನು ಮಾಡಲಾಗಿದೆ. ಮೈಸೂರು ಮಠವು ಕೊಪ್ಪಳ ಜಿಲ್ಲೆಯ ಕುದುರೆ ಮೋತಿಯ ಮೈಸೂರು ಮಠದ ಶಾಖಾಮಠವಾಗಿದ್ದು ಇಲ್ಲಿರುವ ಗದ್ದುಗೆಗಳಿಗೆ ನಿತ್ಯಪೂಜೆಗೆ ವ್ಯವಸ್ಥೆ ಮಾಡಿಸಿರುವುದಲ್ಲದೆ, ಭಕ್ತರ ಆಶ್ರಯ ಮತ್ತು ಪ್ರಸಾದಕ್ಕೆ ವ್ಯವಸ್ಥೆಯನ್ನು ಮಾಡಲಾಗಿದೆ. ಗವಿಮಠವು ಕೊಪ್ಪಳ ಗವಿಮಠದ ಶಾಖಾಮಠವಾಗಿ ಬೆಳೆದಿದೆ.

ಚಿಕ್ಕಮಣ್ಣೂರು

ರೋಣ ತಾಲ್ಲೂಕಿನ ಚಿಕ್ಕಮಣ್ಣೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಪುರಾತನ ಪ್ರಸಿದ್ಧ ಈ ಗ್ರಾಮದಲ್ಲಿ ಬೃಹನ್ಮಠದ ಸ್ಥಾಪನೆಯಿಂದ ಧಾರ್ಮಿಕವಾಗಿ ಹೆಸರು ಮಾಡಿದೆ.

ಬೃಹನ್ಮಠ: ಚಿಕ್ಕಮಣ್ಣೂರು ಗ್ರಾಮದಲ್ಲಿ ಪುರಾತನ ಕಾಲದ ಶ್ರೀ ಬೃಹನ್ಮಠವು ಸ್ಥಾಪನೆಯಾಗಿದೆ. ಶ್ರೀರಂಭಾಪುರಿ ಪೀಠದ ಶಾಖಾ ಮಠವಾಗಿ ಪುತ್ರವರ್ಗದ ಪಂಪರೆಯಲ್ಲಿ ಬೆಳೆದಿದೆ. ಈ ಭಾಗದ ಪ್ರಸಿದ್ಧ ಮಠಗಳಲ್ಲಿ ಒಂದಾದ ಬೃಹನ್ಮಠದ ಆಡಳಿತದಲ್ಲಿ ಅನೇಕ ಪುಣ್ಯಪುರುಷರು ಹಾಗೂ ವಿದ್ವಾಂಸರುಗಳು ಆಡಳಿತ ನಡೆಸಿ ಮಠವನ್ನು ಪ್ರಖ್ಯಾತಗೊಳಿಸಿದ್ದಾರೆ. ಮಠದ ಪ್ರಭಾವಕ್ಕೆ ಒಳಗಾಗಿ ವಿಜಯ ನಗರದ ಅರಸರು ಇನಾಂ ಭೂಮಿಯನ್ನು ನೀಡಿದ್ದಾರೆ.

ಪ್ರಾಚೀನ ಕಾಲದ ಈ ಮಠದಲ್ಲಿ ಮಠದ ಸ್ಥಾಪಕರು ಮತ್ತು ಸ್ಥಾಪನೆಯ ಕಾಲದ ಬಗ್ಗೆ ಸ್ಪಷ್ಟವಾದ ಆಧಾರಗಳನ್ನು ಕಾಯ್ದಿಡದ ಕಾರಣ ಮಾಹಿತಿಗಳು ಮರೆಯಾಗಿವೆ. ೧೯೨೦ ರ ನವೆಂಬರ್ ಇಪ್ಪತ್ತೆರಡರಂದು ಈಗಿನ ಹಿರಿಯ ಗುರುಗಳಾದ ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ ಮುನ್ನಡೆಸುತ್ತಿದ್ದಾರೆ. ಶತಾಯುಷಿಗಳಾದ ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ಶ್ರೀಶೈಲ ಹಾಗೂ ಕೇದಾರ ಪೀಠಗಳಲ್ಲಿ ಜಗದ್ಗುರುಗಳ ಆಡಳಿತದಲ್ಲಿ ಕಾರುಬಾರು ನಡೆಸಿ ಹೆಸರು ಗಳಿಸಿದ್ದಾರೆ. ಗುರುಗಳು ಸಂಸ್ಕೃತ, ವೇದ ಹಾಗೂ ಸಂಗೀತದಲ್ಲಿ ಅಪಾರ ಜ್ಞಾನವನ್ನು ಸಂಪಾದಿಸಿಕೊಂಡು ವೀರಶೈವ ಧರ್ಮವನ್ನು ಅಭಿವೃದ್ಧಿಪಡಿಸಿದ್ದಾರೆ. ಗುರುಗಳು ಪಟ್ಟಾಧಿಕಾರವನ್ನು ವಹಿಸಿಕೊಂಡ ನಂತರ ಗ್ರಾಮ ಗ್ರಾಮಗಳಲ್ಲಿ ಸಂಚರಿಸಿ ವೀರಶೈವ ಧರ್ಮದ ತತ್ತ್ವಗಳನ್ನು ಪ್ರಚಾರಪಡಿಸಿ ಸಂಸ್ಕಾರವಂತ ಸಮಾಜವನ್ನು ರೂಪಿಸಿದ್ದಾರೆ. ಗುರುಗಳು ಈಗ ಉತ್ತರಾಧಿಕಾರಿಗಳನ್ನು ನೇಮಿಸಿಕೊಂಡು ಮಠವನ್ನು ಮುನ್ನಡೆಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು, ಶ್ರೀ ಬೃಹನ್ಮಠ, ಚಿಕ್ಕಮಣ್ಣೂರು, ರೋಣ ತಾ, ಗದಗ ಜಿಲ್ಲೆ.

ಜಕ್ಲಿ

ರೋಣ ತಾಲ್ಲೂಕಿನ ಜಕ್ಲಿಯು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಎಂಟು ಕಿ.ಮೀ. ದೂರದಲ್ಲಿದೆ. ಎರೆಸೀಮೆಯ ಪ್ರಮುಖ ಗ್ರಾಮಗಳಲ್ಲಿ ಒಂದಾದ ಜಕ್ಲಿಯು ಹಿರೇಮಠದ ಸ್ಥಾಪನೆಯಿಂದಾಗಿ ಹೆಸರು ಮಾಡಿದೆ.

ಹಿರೇಮಠ: ಜಕ್ಲಿ ಗ್ರಾಮದಲ್ಲಿ ಕಾಶಿಪೀಠದ ಶಾಖಾಮಠವು ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದಿದೆ. ಪುರಾತನ ಪರಂಪರೆಯನ್ನು ಹೊಂದಿರುವ ಈ ಮಠದ ಹಳೆಯ ಕಟ್ಟಡದಲ್ಲಿ ಒಂದು ಗದ್ದುಗೆ ಇದೆ. ಉಳಿದ ಗದ್ದುಗೆಗಳ ವಿವರ ಲಭ್ಯವಿಲ್ಲ. ಮಠದ ಪರಂಪರೆಯಲ್ಲಿ ಬಂದಂತಹ ಗುರುಗಳು ವೀರಶೈವ ಧರ್ಮವನ್ನು ಸಮಾಜದಲ್ಲಿ ಬೆಳೆಸಲು ನೆರವಾಗಿ ಮಠವನ್ನು ಬೆಳೆಸಿದ್ದಾರೆ.

ಶ್ರೀ ಶರಣಯ್ಯ ದಂಪತಿಗಳ ಪುತ್ರರಾಗಿ ಜನಿಸಿದ ಶ್ರೀ ವಿಶ್ವಾರಾಧ್ಯ ಸ್ವಾಮಿಗಳು ತಮ್ಮ ಹತ್ತು ವರ್ಷ ವಯಸ್ಸಿನಲ್ಲೇ ಮಠದ ಅಧಿಕಾರವನ್ನು ವಹಿಸಿಕೊಂಡು ಈಗ ಉನ್ನತ ಶಿಕ್ಷಣ ಪಡೆಯಲು ಕಾಶಿಯಲ್ಲಿ ನೆಲೆಸಿದ್ದಾರೆ.ಗ್ರಾಮದ ಹೊರಭಾಗದಲ್ಲಿರುವ ವಿಶಾಲ ನಿವೇಶನದಲ್ಲಿ ನಿರ್ಮಿಸಿರುವ ನೂತನ ಕಟ್ಟಡಕ್ಕೆ ಮಠವನ್ನು ಸ್ಥಳಾಂತರಿಸಲಾಗಿದೆ.

ವಿಳಾಸ: ಷ.ಬ್ರ.ಶ್ರೀ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಜಕ್ಲಿ, ರೋಣ ತಾಲ್ಲೂಕು, ಗದಗ ಜಿಲ್ಲೆ.

ನರೇಗಲ್ಲು

ರೋಣ ತಾಲ್ಲೂಕಿನ ನರೇಗಲ್ಲು ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹದಿನೈದು ಕಿ.ಮೀ. ದೂರದಲ್ಲಿದೆ. ಪುರಾತನ ಇತಿಹಾಸವುಳ್ಳ ಈ ಗ್ರಾಮದಲ್ಲಿ ಶ್ರೀ ಅನ್ನದಾನೇಶ್ವರ ಮಠ, ಶ್ರೀ ತೋಂಟದಾರ್ಯ ಮಠ, ಶ್ರೀ ವಿರಕ್ತಮಠ, ಶ್ರೀ ಚೌಕಿಮಠ ಹಾಗೂ ಶ್ರೀ ಹಿರೇಮಠ ಸ್ಥಾಪನೆಯಾಗಿ ಈ ಗ್ರಾಮಕ್ಕೆ ಹೆಸರು ತಂದಿವೆ.

ಅನ್ನದಾನೇಶ್ವರ ಮಠ: ಶ್ರೀ ಅನ್ನದಾನೇಶ್ವರ ಶಿವಯೋಗಿಗಳು ಅನುಷ್ಠಾನಗೊಂಡು ಈ ಗ್ರಾಮವನ್ನು ಒಂದು ಜಾಗೃತ ಸ್ಥಳವನ್ನಾಗಿ ಮಾಡಿ ಮಠ ಸ್ಥಾಪನೆಯಾಗಲು ಕಾರಣರಾಗಿರುತ್ತಾರೆ. ಶ್ರೀ ಜಗದ್ಗುರು ಅನ್ನದಾನೇಶ್ವರ ಮಠ ಸ್ಥಾಪನೆಯಾಗಿದ್ದರಿಂದ ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕವಾಗಿ ಈ ಗ್ರಾಮವು ಅಭಿವೃದ್ಧಿಯಾಗಲು ಸಾಧ್ಯವಾಗಿದೆ.

ಹಾಲಕೆರೆ ಅನ್ನದಾನೇಶ್ವರ ಮಠದ ಶಾಖಾಮಠವಾಗಿರುವ ಈ ಮಠವು ಈಗಿನ ಹಾಲಕೆರೆಯ ಜಗದ್ಗುರು ಶ್ರೀ ಅಭಿನವ ಅನ್ನದಾನೇಶ್ವರ ಸ್ವಾಮಿಗಳಿಂದ ಶ್ರೀಮಂತಗೊಂಡು ಬೆಳೆಯತೊಡಗಿದೆ. ಮಠದ ಆವರಣದಲ್ಲಿರುವ ತೋರು ಗದ್ದುಗೆಗೆ ಮಂಟಪವನ್ನು ನಿರ್ಮಿಸಿ ಪೂಜಾಕಾರ್ಯ ನಡೆಯುವಂತೆ ಮಾಡಿದ್ದಾರೆ.ಮಠದ ಸಮುಚ್ಛಯದಲ್ಲಿ ಒಂದು ಪ್ರಾಥಮಿಕ, ಒಂದು ಪ್ರೌಢಶಾಲೆ ಮತ್ತೊಂದು ಬಾಲಕಿಯರ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜನ್ನು ಸ್ಥಾಪಿಸಿದ್ದಾರೆ. ಶ್ರೀ ಅನ್ನದಾನೇಶ್ವರ ವಿಜಯ ವಿದ್ಯಾಪ್ರಸಾರ ಸಮಿತಿಯನ್ನು ರಚಿಸಿ ಈ ಸಮಿತಿಯ ಅಡಿ ಈ ಎಲ್ಲಾ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವುದಲ್ಲದೆ ಸಮೀಪದ ನಿಡುಗುಂದಿಯಲ್ಲಿ ಪ್ರೌಢಶಾಲೆ ಹಾಗೂ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಅಭಿನವ ಅನ್ನ ದಾನೇಶ್ವರ ಸ್ವಾಮಿಗಳು, ಶ್ರೀ ಅನ್ನದಾನೇಶ್ವರ ಮಠ, ನರೇಗಲ್ಲು , ರೋಣ ತಾ, ಗದಗಜಿಲ್ಲೆ.

ಹಿರೇಮಠ: ನರೇಗಲ್ಲು ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಹಿರೇಮಠವು ಈ ಗ್ರಾಮದಲ್ಲಿ ಧಾರ್ಮಿಕ ವಾತಾವರಣವನ್ನು ಬೆಳೆಸುವಲ್ಲಿ ಸಫಲವಾಗಿದೆ. ಉಜ್ಜಯಿನಿ ಪೀಠದ ಶಾಖಾಮಠವಾಗಿರುವ ಈ ಮಠವು ಶ್ರೀ ಮಳೆಮಲ್ಲೇಶ್ವರ ಶಿವಾಚಾರ್ಯ ಸ್ವಾಮಿಗಳಿಂದ ಪ್ರಾರಂಭವಾಗಿದೆ ಎಂದು ಹೇಳಲಾಗುತ್ತದೆ. ಶ್ರೀ ಮಳೆ ಮಲ್ಲೇಶ್ವರರು ಲೋಕಸಂಚಾರ ಕೈಗೊಂಡು ಈ ಜಾಗದಲ್ಲಿ ಅನುಷ್ಠಾನಗೊಂಡು ಮಠವನ್ನು ಬೆಳೆಸಿದ್ದಾರೆ. ಶ್ರೀ ಮಳೆಮಲ್ಲೇಶ್ವರರು ಈ ಸ್ಥಳಕ್ಕೆ ಬರುವ ಮುನ್ನ ಇಲ್ಲಿ ಸಂನ್ಯಾಸಿಗಳೊಬ್ಬರು ಅನುಷ್ಠಾನ ಕೈಗೊಂಡು ಮಠವನ್ನು ಸ್ಥಾಪನೆ ಮಾಡಿದ್ದಾರೆಂದು ಹೇಳಲಾಗುತ್ತದೆ.ಆದರೆ ಈ ಹೇಳಿಕೆಗೆ ಯಾವುದೇ ಸಾಕ್ಷ್ಯಾಧಾರಗಳು ದೊರೆಯದ ಕಾರಣ ಶ್ರೀ ಮಳೆಮಲ್ಲೇಶ್ವರರಿಂದ ಮಠ ಸ್ಥಾಪನೆಯಾಗಿ, ಬೆಳೆಯಿತೆಂದೇ ಹೇಳಬೇಕಾಗಿದೆ.

ಪರಂಪರೆ: ೧.ಷ.ಬ್ರ.ಶ್ರೀ ಮಳೆಮಲ್ಲೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ವೀರಭದ್ರಯ್ಯ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಶ್ರೀ ಸದಾಶಿವಯ್ಯ ಮತ್ತು ಶ್ರೀಮತಿ ವಿಶಾಲಾಕ್ಷಿ ಇವರ ಪುತ್ರರಾಗಿ ೧೯೭೪ರ ಮಾರ್ಚ್ ಇಪ್ಪತ್ತಮೂರರಂದು ಜನಿಸಿ ನರೇಗಲ್ಲು, ಹೊಸ್ಕಾಳಿ ಹಾಗೂ ಮೈಸೂರಿನಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ.

ಶ್ರೀ ಚನ್ನವೀರ ಸ್ವಾಮಿಗಳ ಕಾಲದಲ್ಲಿ ಮಠವು ಅಭಿವೃದ್ಧಿಯತ್ತ ಸಾಗಿತು. ಈಗಿನ ಗುರುಗಳು ಅಧಿಕಾರಕ್ಕೆ ಬಂದ ಮೇಲೆ ಶ್ರೀ ಅನ್ನಪೂರ್ಣೇಶ್ವರಿ ಬಳಗವನ್ನು ಸ್ಥಾಪಿಸಿ ಸಂಗೀತ ಶಾಲೆಯನ್ನು ಪ್ರಾರಂಭಿಸಿದ್ದಾರೆ.ಗುರುಗಳು ಕ್ರಿಯಾಶೀಲ ವ್ಯಕ್ತಿತ್ವದಿಂದ ಧಾರ್ಮಿಕ ಆಚರಣೆಗಳನ್ನು ಕ್ರಿಯಾಶೀಲವಾಗಿ ನಡೆಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಎರಡು ಅಂತಸ್ತಿನ ಕಟ್ಟಡವನ್ನು ಹೊಂದಿರುವ ಮಠದಲ್ಲಿ ಪೂರ್ವಕಾಲದ ಪಲ್ಲಕ್ಕಿ ಹಾಗೂ ಹಳೆಯ ಸಾಮಗ್ರಿಗಳು ನೋಡಸಿಗುತ್ತವೆ. ಲಿಂಗೈಕ್ಯ ಹಿರಿಯ ಗುರುಗಳ ಗದ್ದುಗೆಗಳನ್ನು ನಿರ್ಮಿಸಲಾಗಿದೆ. ಗದ್ದುಗೆಗಳಿಗೆ ನಿತ್ಯಪೂಜೆ, ಅಮಾವಾಸ್ಯೆ ಮತ್ತು ಹುಣ್ಣಿಮೆಯಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಧಾರ್ಮಿಕ ಆಚರಣೆಗೆ ಹೆಚ್ಚು ಒತ್ತುಕೊಟ್ಟು ತಮ್ಮ ಕಾರ್ಯವನ್ನು ನಡೆಸಿಕೊಂಡು ಬರುತ್ತಿರುವ ಗುರುಗಳು ಸಮಾಜದ ಸರ್ವಾಂಗೀಣ ಅಭಿವೃದ್ಧಿಗೆ ಮಾರ್ಗದರ್ಶನ ನೀಡುತ್ತಾ ಭಕ್ತರಿಗೆ ನೆರವಾಗಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ನರೇಗಲ್ಲು, ರೋಣ ತಾ, ಗದಗ ಜಿಲ್ಲೆ.

ನಿಡಗುಂದಿಕೊಪ್ಪ

ರೋಣ ತಾಲ್ಲೂಕಿನ ನಿಡಗುಂದಿಕೊಪ್ಪವು ತಾಲ್ಲೂಕು ಕೇಂದ್ರದ ಪೂರ್ವಕ್ಕೆ ಇಪ್ಪತ್ತು ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಪೂರ್ವಭಾಗದ ಹಳ್ಳದ ದಡದಲ್ಲಿ ಶ್ರೀ ಶಾಖಾ ಶಿವಯೋಗ ಮಂದಿರವು ಸ್ಥಾಪನೆಯಾಗಿ ಈ ಭಾಗದ ಭಕ್ತರಿಗೆ ಸಂಸ್ಕಾರ ನೀಡುವ ಕೇಂದ್ರವಾಗಿ ಬೆಳೆದಿದೆ.

ಶಾಖಾ ಶಿವಯೋಗ ಮಂದಿರ: ೧೯೦೪ ರಲ್ಲಿ ಬಾದಾಮಿ ತಾಲ್ಲೂಕಿನಲ್ಲಿ ಶಿವಯೋಗ ಮಂದಿರವು ಸ್ಥಾಪನೆಯಾಗಿ ಒಂದು ಧಾರ್ಮಿಕ ಅಭಿವೃದ್ಧಿಯ ಕೇಂದ್ರವಾಗಿ ಬೆಳೆಯಿತು. ಇದರ ಕರ್ತೃಗುರುಗಳಾದ ಶ್ರೀ ಹಾನಗಲ್ಲು ಕುಮಾರ ಸ್ವಾಮಿಗಳು ಇವರ ಆಪ್ತರಾಗಿದ್ದ ಹಾವೇರಿ ಶ್ರೀ ಶಿವಬಸವ ಸ್ವಾಮಿಗಳ ಜೊತೆಗೆ ವೀರಶೈವ ಸಮಾಜವನ್ನು ಬೆಳೆಸುವ ಕಾರಣಕ್ಕಾಗಿ ಸಂಚಾರವನ್ನು ಕೈಗೊಳ್ಳುತ್ತಿದ್ದರು. ಇಂತಹ ಸಂದರ್ಭದಲ್ಲಿ ರೋಣ ತಾಲ್ಲೂಕಿನ ನಿಡಗುಂದಿಗೆ ಆಗಮಿಸುತ್ತಾರೆ.ಗುರುಗಳಿಬ್ಬರು ತಮ್ಮ ಗ್ರಾಮಕ್ಕೆ ಅನಿರೀಕ್ಷಿತವಾಗಿ ಭೇಟಿಕೊಟ್ಟಿದಕ್ಕೆ ಸಂತೋಷಗೊಂಡ ಭಕ್ತರು ಗುರುಗಳಿಬ್ಬರನ್ನು ಆಹ್ವಾನಿಸಿ ಅವರ ವಸತಿಗೆ ಅನುವು ಮಾಡಿಕೊಟ್ಟರು. ನಿಡಗುಂದಿ ಯಲ್ಲಿ ಕೆಲವು ದಿನ ನೆಲೆಸಲು ಬಿನ್ನವಿಸಿಕೊಂಡರು. ಭಕ್ತರ ಒತ್ತಾಸೆಯಂತೆ ಗುರುಗಳು ಉಳಿಯಲು ಒಪ್ಪಿಗೆ ಕೊಟ್ಟರು.ಮುಂದೆ ಒಂದು ದಿನ ಶ್ರೀ ಶಿವಬಸವ ಸ್ವಾಮಿಗಳು ಇಲ್ಲಿ ನೆಲೆಸಲು ಇಷ್ಟಪಡದೆ ಹೊರಡಲು ಶ್ರೀ ಹಾನಗಲ್ಲು ಸ್ವಾಮಿಗಳಿಗೆ ವಿನಂತಿಸಿ ಕೊಂಡು ಮುಂದೆ ಹೊರಟರು.

ನಿಡಗುಂದಿಯಿಂದ ಹೊರಟ ಗುರುಗಳು ಕೊಪ್ಪ ಗ್ರಾಮಕ್ಕೆ ಬರುತ್ತಿದ್ದಂತೆಯೇ ಗ್ರಾಮಸ್ಥರು ಸಂತೋಷಗೊಂಡು ಗುರುಗಳನ್ನು ಸ್ವಾಗತಿಸಿ, ಗ್ರಾಮದ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಗುರು ಮಠದಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಿದರು. ಸಕಲ ಪೂಜಾ ವ್ಯವಸ್ಥೆಯನ್ನು ಮಾಡಿ ಗುರುಗಳಿಬ್ಬರನ್ನು ಸಂತೋಷಗೊಳಿಸಿದರು. ಒಂದು ದಿನ ಶ್ರೀ ಶಿವಬಸವ ಸ್ವಾಮಿಗಳು ಬೆಳಗಿನ ಜಾವ ಸಂಚಾರಕ್ಕೆಂದು ಹೊರಟವರು ಗ್ರಾಮದ ಪೂರ್ವದಿಕ್ಕಿನತ್ತ ಬರುತ್ತಾರೆ. ಅಷ್ಟು ಸಿಗುವ ಹಳ್ಳವನ್ನು ದಾಟಿ ಬಂದಾಗ ಐದು ಬಿಲ್ವವೃಕ್ಷಗಳನ್ನು ನೋಡಿ ಪರಮಾನಂದಗೊಂಡು ವೃಕ್ಷದ ಕೆಳಗೆ ತನ್ಮಯರಾಗಿ ಶಿವಧ್ಯಾನಾಸಕ್ತರಾಗಿ

ಕುಳಿತರು. ಇತ್ತ ಕೊಪ್ಪದ ಗುರುಮಠದಲ್ಲಿ ಶ್ರೀ ಶಿವಬಸವ ಸ್ವಾಮಿಗಳು ಕಾಣೆಯಾಗಿದ್ದಕ್ಕೆ ಕಳವಳಗೊಂಡು ಹಾನಗಲ್ಲು ಕುಮಾರಸ್ವಾಮಿಗಳ ಸೂಚನೆಯ ಮೇರೆಗೆ ಶಿವಬಸವಸ್ವಾಮಿಗಳನ್ನು ಹುಡುಕಲು ಗ್ರಾಮಸ್ಥರು ಹೊರಟರು. ಶ್ರೀ ಶಿವಬಸವ ಸ್ವಾಮಿಗಳು ಬಿಲ್ವಮರದ ಕೆಳಗೆ ತಪೋಭಂಗಿಯಲ್ಲಿ ಕುಳಿತಿರುವುದನ್ನು ನೋಡಿದ ಗ್ರಾಮಸ್ಥರು ಹತ್ತಿರ ಬಂದು ಗುರುಗಳನ್ನು ಮಠಕ್ಕೆ ಆಹ್ವಾನಿಸಿದರು. ಆಗ ಗುರುಗಳು ಈ ಪ್ರಶಾಂತ ಹಾಗೂ ಪವಿತ್ರ ಸ್ಥಳದಲ್ಲಿ ಅನುಷ್ಠಾನಗೊಂಡು ಶಿವಾರ್ಚನೆಯನ್ನು ಮಾಡಬೇಕಾಗಿದೆ. ಈ ಕಾರಣದಿಂದ ನಮ್ಮ ಪೂಜೆ ಇಲ್ಲಿಯೇ ನಡೆಯಬೇಕು ಎಂದು ಅಪ್ಪಣೆ ಕೊಟ್ಟರು. ಮರುಮಾತನಾಡದ ಭಕ್ತರು ತಕ್ಷಣವೇ ಹಸಿರು ಸೊಪ್ಪಿನಿಂದ ಕುಟೀರವನ್ನು ನಿರ್ಮಿಸಿ ಪೂಜೆಗೆ ಸಕಲ ವ್ಯವಸ್ಥೆಗೊಳಿಸಿದರು. ಈ ರೀತಿ ಗುರುಗಳು ಅನುಷ್ಠಾನಗೊಂಡ ಜಾಗವು ಮಠವಾಗಿ ೧೯೧೦ ರಲ್ಲಿ ಸ್ಥಾಪನೆಗೊಂಡಿತು.

ಹಳ್ಳದ ಆಚೆಯ ದಡದಲ್ಲಿದ್ದ ಈ ಪವಿತ್ರಸ್ಥಳಕ್ಕೆ ಕೊಪ್ಪದ ಗ್ರಾಮಸ್ಥರು ಹೋಗಿ ಬರಲು ತೊಂದರೆಯಾಗುವುದನ್ನು ಕಂಡು ಹಳ್ಳದ ಈಚೆಯ ದಡಕ್ಕೆ ಮಠವನ್ನು ಸ್ಥಳಾಂತರಿಸಲು ನಿರ್ಣಯ ಕೈಗೊಂಡರು. ಶ್ರೀ ಹಾನಗಲ್ಲು ಕುಮಾರ ಸ್ವಾಮಿಗಳು ಹಾಗೂ ಹಾವೇರಿಯ ಶ್ರೀ ಶಿವಬಸವ ಸ್ವಾಮಿಗಳ ಈ ನಿರ್ಣಯವನ್ನು ಕೇಳಿದ ಭಕ್ತರು ಭೂಮಿಯನ್ನು ದಾನವಾಗಿ ನೀಡಿದರು. ಗುರುಗಳ ಮಾರ್ಗದರ್ಶನದಲ್ಲಿ ನೂತನ ಮಠದ ಕಟ್ಟಡವು ಪ್ರಾರಂಭಗೊಂಡಿತು. ಮಠವು ಸ್ಥಾಪನೆಯಾದ ಮೇಲೆ ಕೆಲವು ದಿನ ನೆಲೆಸಿದ ಗುರುಗಳಿಬ್ಬರು ಮುಂದಿನ ಪ್ರಯಾಣಕ್ಕೆ ಅಣಿಯಾದರು. ಈ ವೇಳೆಗಾಗಲೇ ಹಾಲಕೆರೆ ಗ್ರಾಮದ ಶ್ರೀಮತಿ ವೀರಮ್ಮ ಸೊಪ್ಪಿನಮಠ ಮೂರು ಕೂರಿಗೆ, ಶ್ರೀ ಬಸವೇಗೌಡರು ಆರುಕೂರಿಗೆ ಭೂಮಿಯನ್ನು ದಾನವಾಗಿ ನೀಡಿ ಮಂದಿರಕ್ಕೆ ಭದ್ರತೆಯನ್ನು ತಂದುಕೊಟ್ಟು, ಕೊಪ್ಪ ಗ್ರಾಮದ ಪುಣ್ಯವಿಶೇಷತೆಯಾಗಿ ಶಾಖಾ ಶಿವಯೋಗ ಮಂದಿರವು ಬೆಳೆಯತೊಡಗಿತು. ಶ್ರೀ ಕುಮಾರ ಶಿವಯೋಗಿಗಳು ಶಾಖಾ ಶಿವಯೋಗ ಮಂದಿರದಲ್ಲಿ ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಿದರು. ನಂತರ ಸಂಗೀತ ಪಾಠಶಾಲೆಯನ್ನು ಆರಂಭಿಸಿ ಶ್ರೀ ಪಂಚಾಕ್ಷರ ಗವಾಯಿಗಳನ್ನು ಗುರುಗಳಾಗಿ ನೇಮಿಸಿದರು. ಇಂತಹ ಪುಣ್ಯಭಾಗ್ಯ ದೊರತಿದ್ದಕ್ಕೆ ನಿಡಗುಂದಿ ಕೊಪ್ಪದ ಜನ ಇಂದಿಗೂ ಕೃತಜ್ಞರಾಗಿದ್ದಾರೆ.

ಪರಂಪರೆ: ಶಾಖಾ ಶಿವಯೋಗ ಮಂದಿರದ ಉಸ್ತುವಾರಿಯನ್ನು ನೋಡಿಕೊಳ್ಳಲು ಶ್ರೀ ಜಡೆ ಸ್ವಾಮಿಗಳನ್ನು ನಿಯೋಜಿಸಿದರು. ಇವರ ಕಾಲದಲ್ಲಿ ಮಠವು ಹಲವಾರು ಅಭಿವೃದ್ಧಿ ಕಾರ್ಯವನ್ನು ಕಂಡಿತು. ಅಲ್ಲದೆ ಈ ಕ್ಷೇತ್ರ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿ ಹೆಸರು ಪಡೆಯುವಂತೆ ಮಾಡಿದರು. ಶ್ರೀ ಜಡೆ ಸ್ವಾಮಿಗಳು ತಮ್ಮ ನಂತರ ಶ್ರೀ ನಿರಂಜನ ದೇವರನ್ನು ನೇಮಿಸಿ ತಮ್ಮ ಮೊದಲಿನ ಮಠಕ್ಕೆ ಹಿಂದಿರುಗಿದರು. ಇವರ ನಂತರ ನಲವತ್ವಾಡದ ಗುರುಗಳೊಬ್ಬರು (ಹೆಸರು ತಿಳಿದಿಲ್ಲ) ಮಂದಿರದ ಜವಾಬ್ದಾರಿಯನ್ನು ವಹಿಸಿಕೊಂಡರು. ಶಿವಪೂಜಾ ನಿಷ್ಠರಾದ ನಲವತ್ವಾಡದ ಶ್ರೀ ಪಟ್ಟದ ದೇವರು ತಮ್ಮ ತಪೋಬಲದಿಂದ ಮಂದಿರದ ಹೆಸರನ್ನು ಹೆಚ್ಚಿಸಿದರು. ಇವರ ನಂತರ ಶ್ರೀ ಚನ್ನಬಸವ ಸ್ವಾಮಿಗಳನ್ನು ೧೯೨೪ ರ ಆಶ್ವೀಜಮಾಸದಲ್ಲಿ ನೇಮಿಸಲಾಯಿತು. ಹಾನಗಲ್ಲು ಶ್ರೀ ಕುಮಾರ ಸ್ವಾಮಿಗಳು ಹಾಗೂ ಶ್ರೀ ಶಿವಬಸವ ಸ್ವಾಮಿಗಳ ಆಶೀರ್ವಾದದಿಂದ ಬೆಳೆದವರಾಗಿದ್ದ ಕಾರಣ ಗುರುಗಳ ನಿರೀಕ್ಷೆಗಿಂತ ಮಿಗಿಲಾಗಿ ಧಾರ್ಮಿಕ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಶಾಖಾ ಶಿವಯೋಗ ಮಂದಿರದ ಕೀರ್ತಿಯನ್ನು ಬೆಳಗಿಸಿದರು. ಇವರ ಕಾಯಕನಿಷ್ಠೆಗೆ ಮೆಚ್ಚಿ ಶಾಖಾಶಿವಯೋಗ ಮಂದಿರದ ಪೂರ್ಣ ಜವಾಬ್ದಾರಿಯನ್ನು ವಹಿಸಿಕೊಡಲು ನಿರ್ಧರಿಸಿದ ಶ್ರೀ ಕುಮಾರ ಶಿವಯೋಗಿಗಳು ೧೯೨೮ ರಲ್ಲಿ ಹಾವೇರಿಯ ಶ್ರೀ ಶಿವಬಸವ ಸ್ವಾಮಿಗಳಿಂದ ಶ್ರೀ ಚನ್ನಬಸವ ಸ್ವಾಮಿಗಳಿಗೆ ಪಟ್ಟಾಧಿಕಾರದ ಅನುಗ್ರಹವನ್ನು ಕೊಡಿಸಿದರು. ಅಧಿಕಾರ ಪಡೆದ ಮೇಲೆ ಹಾನಗಲ್ಲು ಶ್ರೀ ಕುಮಾರ ಸ್ವಾಮಿಗಳು ಹಾಗೂ ಶ್ರೀ ಶಿವಬಸವ ಸ್ವಾಮಿಗಳ ಮಾರ್ಗದರ್ಶನ ಪಡೆದು ಅವರುಗಳ ಆಜ್ಞಾನುಸಾರದಂತೆಯೇ ಮಠವನ್ನು ಬೆಳೆಸಿದರು.

ಶ್ರೀ ಚನ್ನಬಸವ ಸ್ವಾಮಿಗಳ ಆಡಳಿತದಿಂದ ವಿಸ್ತಾರಗೊಂಡ ಧಾರ್ಮಿಕ ಚಟುವಟಿಕೆಗಳಿಗೆ ಹಳೆಯ ಕಟ್ಟಡವು ಸಾಕಾಗದೆ ಹೋದಾಗ ಹೊಸ ಕಟ್ಟಡವನ್ನು ನಿರ್ಮಿಸಲು ಮುಂದಾಗಿ ಕಟ್ಟಡ ನಿರ್ಮಾಣದಲ್ಲಿ ತಮ್ಮನ್ನು ತೊಡಗಿಸಿಕೊಂಡ ಗುರುಗಳು ಭಕ್ತರ ನೆರವಿನಿಂದ ಕಟ್ಟಡವನ್ನು ಪೂರ್ಣಗೊಳಿಸಿದರು. ಕಟ್ಟಡದ ಮುಂಭಾಗದಲ್ಲಿ ವಿಶಾಲವಾದ ವೇದಿಕೆ, ಭಕ್ತರಿಗೆ ದರ್ಶನ ಕೊಡಲು ಮಂಟಪ ಈ ರೀತಿ ಸಕಲ ಸಜ್ಜಾದ ಮಠಕ್ಕೆ ಭಕ್ತರು **'ಕಟ್ಟಿಗೆಮಠ'**ವೆಂದು ರೂಢಿಗತವಾಗಿ

ಕರೆಯು ತೊಡಗಿದರು. ಮಠ ಬೆಳೆದಂತೆ ಭಕ್ತರು ಮಠದ ಅಭಿವೃದ್ಧಿಗೆ ಭೂಮಿ, ಹಣ, ಧವಸಧಾನ್ಯ ಈ ರೀತಿ ತಮ್ಮ ಕೈಲಾದ ನೆರವನ್ನು ನೀಡಿ ಮಠವು ಉತ್ತರೋತ್ತರವಾಗಿ ಬೆಳೆಯುವಂತೆ ಮಾಡಿದರು. ಗುರುಗಳು ಮಠದ ಜೊತೆಗೆ ಗ್ರಾಮದಲ್ಲಿ ಶ್ರೀ ಶರಣಬಸವೇಶ್ವರ ದೇವಸ್ಥಾನ ಹಾಗೂ ಶ್ರೀ ಕಲ್ಲೇಶ್ವರ ದೇವಸ್ಥಾನಗಳನ್ನು ನಿರ್ಮಿಸಿದರು.

ಈ ರೀತಿ ಮಠ ಮತ್ತು ಸಮಾಜದ ಅಭಿವೃದ್ಧಿಯನ್ನು ಕೈಗೊಂಡು ವೃದ್ಧಾಪ್ಯದ ಅಂಚಿಗೆ ಬಂದಾಗ, ಯಥೇಚ್ಛವಾಗಿ ಕಟ್ಟಿಗೆಯನ್ನು ಬಳಸಿ ಪ್ರಾರಂಭ ದಲ್ಲಿ ಕಟ್ಟಿದ ಕಟ್ಟಿಗೆಯ ಮಠದ ಪಕ್ಕದಲ್ಲಿಯೇ ಕಲ್ಲಿನ ಕಟ್ಟಡವನ್ನು ನಿರ್ಮಿಸಬೇಕೆಂದು ನಿರ್ಧರಿಸಿ ಆರಂಭಿಸಿಯೇ ಬಿಟ್ಟರು. ಕಡಿಮೆ ವೇಳೆಯಲ್ಲಿ ಸುಸಜ್ಜಿತವಾದ ಕಟ್ಟಡವು ನಿರ್ಮಾಣಗೊಂಡಿತು. ತಮ್ಮ ಕೊನೆಯಾಸೆ ಎಂಬಂತೆ ತಮ್ಮ ಉತ್ತರಾಧಿಕಾರಿ ಗಳನ್ನಾಗಿ ಶ್ರೀ ಗುರುಸಿದ್ಧ ದೇವರನ್ನು ಆಯ್ಕೆ ಮಾಡಿಕೊಂಡು ತಮ್ಮ ಬಳಿಯಲ್ಲಿ ಆಶ್ರಯ ಕಲ್ಪಿಸಿ, ಧಾರ್ಮಿಕ ಸಂಸ್ಕಾರವನ್ನು ನೀಡಿ ಮಠ ಮತ್ತು ಸಮಾಜದ ಹಿತಚಿಂತನೆಗೆ ದುಡಿಯುವ ರೀತಿಯನ್ನು ತಿಳಿಸಿ ಪರಿಪೂರ್ಣ ವ್ಯಕ್ತಿತ್ವ ಮೈದಳೆಯುವಂತೆ ಮಾಡಿದರು. ತಮ್ಮ ಕರಕಮಲ ಸಂಜಾತ ಶ್ರೀ ಗುರುಸಿದ್ಧ ದೇವರನ್ನು ಬೆಳೆಸಿ, ಭಕ್ತರ ಸಹಕಾರದೊಂದಿಗೆ ೧೯೯೩ರ ಮೇ ಮೂವತ್ತರಂದು ಶ್ರೀ ಗುರುಸಿದ್ಧ ಸ್ವಾಮಿಗಳೆಂದು ಅಭಿದಾನವಿತ್ತು ಶಾಖಾ ಶಿವಯೋಗ ಮಂದಿರದ ಅಧಿಕಾರವನ್ನು ನೀಡುತ್ತಾರೆ.

ಹಿರಿಯ ಗುರುಗಳು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮಠದ ಧಾರ್ಮಿಕ ಕಾರ್ಯಗಳನ್ನು ಯಶಸ್ವಿ ರೀತಿಯಲ್ಲಿ ಮುನ್ನಡೆಸಿಕೊಂಡು ಬರುತ್ತಾ ಮಠದ ಅಭಿವೃದ್ಧಿಗೆ ಹಲವು ಯೋಜನೆಗಳನ್ನು ರೂಪಿಸಿಕೊಂಡಿರುವ ಶ್ರೀ ಗುರುಸಿದ್ಧ ಸ್ವಾಮಿಗಳು ಶಾಖಾ ಶಿವಯೋಗ ಮಂದಿರವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಗುರುಸಿದ್ಧ ಸ್ವಾಮಿಗಳು, ಶ್ರೀ ಶಾಖಾಶಿವಾಯೋಗ ಮಂದಿರ,ನಡಗುಂದಿಕೊಪ್ಪ, ರೋಣ ತಾ, ಗದಗಜಿಲ್ಲೆ.

ಬೆನಹಾಳು

ರೋಣ ತಾಲ್ಲೂಕಿನ ಬೆನಹಾಳು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿನೆಂಟು ಕಿ.ಮೀ. ದೂರದಲ್ಲಿದೆ. ಅಭಿವೃದ್ಧಿಶೀಲ ಈ ಗ್ರಾಮದಲ್ಲಿ ಶ್ರೀ ಹಿರೇಮಠದ ಸ್ಥಾಪನೆಯಿಂದಾಗಿ ಹೆಚ್ಚು ಹೆಸರು ಪಡೆದಿದೆ.

ಹಿರೇಮಠ: ಬೆನಹಾಳು ಗ್ರಾಮದ ಮಧ್ಯಭಾಗದಲ್ಲಿ ಉಜ್ಜಯಿನಿ ಪೀಠದ ಶಾಖಾಮಠವಾದ ಶ್ರೀ ಹಿರೇಮಠವು ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿದೆ. ಮುನ್ನೂರು ವರ್ಷಗಳ ಹಿಂದೆ ಸ್ಥಾಪನೆಯಾಗಿರಬಹುದೆಂದು ಹೇಳಲಾಗುವ ಈ ಮಠದಲ್ಲಿ ಧಾರ್ಮಿಕ ಕಾರ್ಯಗಳು ನಡೆಯುತ್ತಾ ಬಂದು ಈ ಗ್ರಾಮಕ್ಕೆ ಧಾರ್ಮಿಕ ಸಂಸ್ಕಾರವನ್ನು ನೀಡಿದೆ.

ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳಿಂದ ಪ್ರಾರಂಭಗೊಂಡಿರಬಹುದಾದ ಈ ಮಠವು ಇವರ ತಪೋಶಕ್ತಿಯಿಂದ ಹೆಚ್ಚು ಪ್ರಚಾರಗೊಂಡಿದೆ. ಇವರ ನಂತರ ಮಠದಲ್ಲಿ ಆಡಳಿತ ನಡೆಸಿದ ಮಠಾಧೀಶರ ಹೆಸರುಗಳು ದೊರೆಯುತ್ತಿಲ್ಲ. ಕಳೆದ ತಲೆಮಾರಿನ ಗುರುಗಳಾದ ಶ್ರೀ ಸಂಗಮೇಶ್ವರ ಶಿವಾಚಾರ್ಯ ಸ್ವಾಮಿಗಳು ಅಧಿಕಾರ ವಹಿಸಿಕೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸಿದ ಬಗ್ಗೆ ಮಾಹಿತಿ ದೊರೆಯುತ್ತದೆ. ಶ್ರೀ ಸಂಗಮೇಶ್ವರ ಶಿವಾಚಾರ್ಯ ಸ್ವಾಮಿಗಳು ಶಿವಯೋಗ ಮಂದಿರದಲ್ಲಿ ವಿದ್ಯಾಭ್ಯಾಸಮಾಡಿ ಮಠದ ಅಧಿಕಾರವನ್ನು ವಹಿಸಿಕೊಂಡಿರುತ್ತಾರೆ. ಇವರ ನಂತರ ೧೯೮೨ ರಲ್ಲಿ ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದಾರೆ. ಪುತ್ರವರ್ಗದ ಪರಂಪರೆಯ ಈ ಮಠಕ್ಕೆ ನೇಮಕಗೊಂಡ ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳು ಶ್ರೀ ಬಸವಯ್ಯ ಮತ್ತು ಶ್ರೀಮತಿ ಬಸಮ್ಮನವರ ಪುತ್ರರಾಗಿ ಜನಿಸಿ, ಶಿವಯೋಗಮಂದಿರ ಮತ್ತು ತಿರುಪತಿಯಲ್ಲಿ ಸಂಸ್ಕೃತವನ್ನು ಕಲಿತು ಮಠಕ್ಕೆ ಆಗಮಿಸಿ ದರು. ಮಠದ ಆವರಣದಲ್ಲಿ ಶ್ರೀ ಆದಿಬಸವೇಶ್ವರ ಮೂರ್ತಿಯು ಉದ್ಭವವಾಗಿದ್ದು, ಇದಕ್ಕೆ ದೇವಸ್ಥಾನ ನಿರ್ಮಿಸಲಾಗಿದೆ.

ಶ್ರೀ ಸಂಗಮೇಶ್ವರ ಸ್ವಾಮಿಗಳ ಕಾಲದಲ್ಲಿ ಮಠವು ಜೀರ್ಣಾಭಿವೃದ್ಧಿಯಾಗಿ ಹೆಚ್ಚು ಪ್ರಚಾರಕ್ಕೆ ಬಂದಿದೆ. ಇವರ ಪರಿಶ್ರಮದಿಂದ ಮಠವು ಅಭಿವೃದ್ಧಿಗೊಂಡು ಮುನ್ನಡೆದಿದೆ. ತಮ್ಮ ಜೀವಿತಾವಧಿಯಲ್ಲೇ ಶ್ರೀ ಸದಾಶಿವ ದೇವರನ್ನು ನೇಮಕಮಾಡಿಕೊಂಡು ಪಟ್ಟಾಧಿಕಾರ ಮಾಡುವ ಮೊದಲೇ ಏಪ್ರಿಲ್ ಇಪ್ಪತ್ತೈದರ ೧೯೯೭ ರಲ್ಲಿ ಲಿಂಗೈಕ್ಯರಾಗಿದ್ದಾರೆ.

ಹಿರಿಯ ಗುರುಗಳು ನೀಡಿದ್ದ ಮಾರ್ಗದರ್ಶನದ ಶ್ರೀರಕ್ಷೆಯಿಂದ ಹಾಗೂ ಗ್ರಾಮದ ಭಕ್ತರ ಸಹಕಾರದಿಂದ ಈಗಿನ ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಧಾರ್ಮಿಕ ಹಾಗೂ ಆರ್ಥಿಕವಾಗಿ ಅಭಿವೃದ್ಧಿಪಡಿಸತೊಡಗಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಬೆನಹಾಳು,ರೋಣ ತಾಲ್ಲೂಕು, ಗದಗ ಜಿಲ್ಲೆ.

ಬೆಳವಣಿಕೆ

ರೋಣ ತಾಲ್ಲೂಕಿನ ಬೆಳವಣಿಕೆ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿನೆಂಟು ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ಶ್ರೀ ಹಿರೇಮಠ, ಶ್ರೀ ಬೂಬಲಾಪುರ ಮಠ, ಶ್ರೀ ಹಳ್ಳಿ ಮಠ, ಶ್ರೀ ಸಾಲಿ ಮಠ, ಶ್ರೀ ಸಿದ್ಧೇಶ್ವರ ಮಠ, ಶ್ರೀ ಶಿವಾನಂದ ಮಠ ಈ ರೀತಿ ಒಟ್ಟು ಆರು ಮಠಗಳು ಸ್ಥಾಪನೆಯಾಗಿವೆ. ಶ್ರೀ ಶಿವಾನಂದ ಮಠವನ್ನು ಹೊರತುಪಡಿಸಿದರೆ ಉಳಿದ ಎಲ್ಲಮಠಗಳಲ್ಲಿಯೂ ಗುರುಗಳಿಲ್ಲದೆ ಮಠದಲ್ಲಿರುವ ಗದ್ದುಗೆಗಳಿಗೆ ನಿತ್ಯ ಪೂಜೆ ಮಾತ್ರ ನಡೆಯುತ್ತಿದೆ.

ಶಿವಾನಂದ ಮಠ: ಗ್ರಾಮದ ಹೊರಭಾಗದಲ್ಲಿರುವ ಶ್ರೀ ಶಿವಾನಂದ ಮಠವು ವಿರಕ್ತ ಸಂಪ್ರದಾಯದಲ್ಲಿ ಬೆಳೆದು ಬಂದಿದೆ. ಶ್ರೀ ಬಸವ ದೇವರು ಪ್ರಾರಂಭ ಮಾಡಿದ ಈ ಮಠವು ಇತ್ತೀಚಿನ ಕಾಲಮಾನದಲ್ಲಿ ಸ್ಥಾಪನೆಯಾಗಿದೆ. ಕರ್ತೃಗುರುಗಳು ಮಠವನ್ನು ಅಭಿವೃದ್ಧಿಪಡಿಸಲು ಶ್ರಮಿಸಿ ೧೯೭೮ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ತರುವಾಯ ಗುರುಸಿದ್ಧಯ್ಯ ಎಂಬುವವರು ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಗುರುಸಿದ್ಧಯ್ಯ ಸ್ವಾಮಿಗಳು, ಶ್ರೀ ಶಿವಾನಂದ ಮಠ, ಬೆಳವಣಿಕೆ, ರೋಣ ತಾಲ್ಲೂಕು, ಗದಗ ಜಿಲ್ಲೆ.

ಯಾವಗಲ್ಲು

ರೋಣ ತಾಲ್ಲೂಕಿನ ಯಾವಗಲ್ಲು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ನಾಲ್ಕು ಕಿ.ಮೀ. ದೂರ ದಲ್ಲಿದೆ. ಈ ಗ್ರಾಮದಲ್ಲಿ ಪುರಾತನ ಕಾಲದಲ್ಲಿ ಪ್ರಾರಂಭಗೊಂಡ ಸುಮಾರು ಹದಿನೆಂಟು ಮಠಗಳಲ್ಲಿ ಈಗ ಹದಿಮೂರು ಮಠಗಳ ಹೆಸರುಗಳನ್ನು ಗುರುತಿಸಬಹುದಾಗಿದೆ. ಉಳಿದ ಮೂರು ಮಠಗಳ ಹೆಸರುಗಳು ಜನರ ಮನಸ್ಸಿನಿಂದ ದೂರವಾಗಿವೆ.

ಶ್ರೀ ವಿರಕ್ತಮಠ, ಶ್ರೀ ಶಿರಕಾಳಮಠ, ಶ್ರೀ ಬಂಗಾರಿಮಠ, ಶ್ರೀ ಹಿರೇಮಠ, ಶ್ರೀ ಹೊಸಮಠ, ಶ್ರೀ ಗುರುಶಾಂತೇಶ್ವರ ಮಠ, ಶ್ರೀ ಚರಂತಿಮಠ, ಶ್ರೀ ಸಾಲಿಮಠ, ಶ್ರೀ ಕಾಡಸಿದ್ಧೇಶ್ವರ ಮಠ, ಶ್ರೀ ಮಳೆಯ ಮಲ್ಲಪ್ಪನ ಮಠ, ಶ್ರೀ ಗುಡ್ಡದ ಮಠ, ಶ್ರೀ ಮಳೆಮಠ ಮತ್ತು ಶ್ರೀ ಬೂಸನೂರುಮಠ ಈ ರೀತಿ ಹದಿಮೂರು ಮಠಗಳ ಹೆಸರುಗಳನ್ನು ಮಾತ್ರ ಗುರುತಿಸಬಹುದಾಗಿದೆ. ಆದರೆ ಈ ಮಠಗಳಲ್ಲಿ ಮಠಾಧೀಶರಾರೂ ಇಲ್ಲದೆ ಪೂರ್ಣ ಜೀರ್ಣಾವಸ್ಥೆಗೆ ಬಂದಿವೆ.

ರೋಣ

ಗದಗ ಜಿಲ್ಲೆಯ ತಾಲ್ಲೂಕು ಕೇಂದ್ರ ಸ್ಥಳವಾದ ರೋಣ ಪಟ್ಟಣವು ಜಿಲ್ಲಾ ಕೇಂದ್ರದ ಉತ್ತರಕ್ಕೆ ಇಪ್ಪತ್ತೆರಡುಕಿ.ಮೀ. ದೂರದಲ್ಲಿದೆ. ಈ ಮಠವು ಪುರಾಣ ಪ್ರಸಿದ್ಧ ಮತ್ತು ಇತಿಹಾಸ ಪ್ರಸಿದ್ಧ ಪಟ್ಟಣವಾಗಿ ಬೆಳೆದಿದೆ. ರೋಣ ಎಂಬ ಪದವು ದ್ರೋಣಪುರ ಎಂಬುದಾಗಿದ್ದು ಕಾಲಕ್ರಮೇಣ **'ರೋಣ'**ವಾಗಿ ರೂಢಿಗತವಾಗಿ ಉಳಿದು ಬಂದಿದೆ. ಇಂತಹ ಪಟ್ಟಣದಲ್ಲಿ ಶ್ರೀಗುಲಗಂಜಿ ಮಠ, ಶ್ರೀ ವಿರಕ್ತಮಠ ಹಾಗೂ ಶ್ರೀ ಗುರುಶಾಂತ ಸ್ವಾಮಿಗಳ ಮಠ ಸ್ಥಾಪನೆಯಾಗಿ ಈ ಪಟ್ಟಣವನ್ನು ಧಾರ್ಮಿಕವಾಗಿ ಬೆಳೆಸಿವೆ. ಇವುಗಳಲ್ಲಿ ಈಗ ಗುಲಗಂಜಿ ಮಠ ಮಾತ್ರ ಅಸ್ತಿತ್ವದಲ್ಲಿ ದೆ. ಉಳಿದವುಗಳಲ್ಲಿ ವಿರಕ್ತ ಮಠವು ಗದಗಿನ ಶಾಖಾ ಮಠವಾಗಿದೆ. ಈ ಮಠದಲ್ಲಿ ಶ್ರೀ ಸಿದ್ಧೇಶ್ವರ ಸ್ವಾಮಿಗಳ ಗದ್ದುಗೆ ಇದೆ. ಶ್ರೀ ಗುರುಶಾಂತ ಸ್ವಾಮಿಗಳ ಮಠ ಹಿಂದೆ ಪ್ರಭಾವಿ ಮಠವಾಗಿದ್ದು, ಬಾಳೆಹೊನ್ನೂರು ರಂಭಾಪುರಿ ಪೀಠದ ಶಾಖಾಮಠವಾಗಿ ಬೆಳೆದಿದೆ. ಈ ಮಠ ಈಗ ಅನ್ಯರ ಪಾಲಗಿ ಹೋಗಿದೆ.

ಗುಲಗಂಜಿ ಮಠ: ರೋಣ ಪಟ್ಟಣದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಗುಲಗಂಜಿ ಮಠವು ವಿರಕ್ತ ಸಂಪ್ರದಾಯದ

ಕುಮಾರ ಸಮಯದ ಮಠವಾಗಿದೆ. ಪುರಾತನ ಪರಂಪರೆಯನ್ನು ಹೊಂದಿರುವ ಮಠವು ಈ ಭಾಗದ ಪ್ರಭಾವಿ ಮಠಗಳಲ್ಲಿ ಒಂದಾಗಿ ಬೆಳೆದಿದೆ. ಮಠದ ಕಟ್ಟಡವು ವಿಶಾಲವಾದ ಕಲ್ಲು ಮತ್ತು ಸಾಗುವಾನಿ ಕಟ್ಟಿಗೆಯಿಂದ ನಿರ್ಮಿಸಿದ್ದಾಗಿದ್ದು, ಹಿಂದಿನ ತನ್ನ ಭವ್ಯತೆಯನ್ನು ಸಾರುತ್ತಿದೆ.

ಇಂತಹ ಪುರಾತನ ಮಠದಲ್ಲಿ ಗುರುಪರಂಪರೆ ಬೆಳೆದು ಬಂದ ರೀತಿ ಮತ್ತು ಅಧಿಕಾರವನ್ನು ವಹಿಸಿಕೊಂಡ ಗುರುಗಳ ಹೆಸರುಗಳು ಲಭ್ಯವಾಗುತ್ತಿಲ್ಲ ಮಠದಲ್ಲಿ ಲಭ್ಯವಿರುವ ಪ್ರಕಾರ ಶ್ರೀ ಗುರುಪಾದ ಸ್ವಾಮಿಗಳು, ಶ್ರೀ ಬಸವಲಿಂಗ ಸ್ವಾಮಿಗಳು ಅಧಿಕಾರ ನಡೆಸಿ ಈಗ ಎರಡನೆಯ ಶ್ರೀ ಗುರುಪಾದ ಸ್ವಾಮಿಗಳು ಅಧಿಕಾರ ವಹಿಸಿಕೊಂಡಿದ್ದಾರೆ. ಈಗ ಅಧಿಕಾರದಲ್ಲಿರುವ ಶ್ರೀ ಗುರುಪಾದ ಸ್ವಾಮಿಗಳು ಶಿವಯೋಗ ಮಂದಿರದಲ್ಲಿದ್ದು ಎರಡೂ ಕಡೆ ಹೋಗಿ ಬರುತ್ತ ಗುಲಗಂಜಿ ಮಠದಲ್ಲಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ವ್ಯವಸ್ಥೆ ಮಾಡಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಗುರುಪಾದ ಸ್ವಾಮಿಗಳು, ಶ್ರೀ ಗುಲಗಂಜಿ ಮಠ, ರೋಣ, ಗದಗ ಜಿಲ್ಲೆ.

ಸೂಡಿ

ರೋಣ ತಾಲ್ಲೂಕಿನ ಸೂಡಿಯು ತಾಲ್ಲೂಕು ಕೇಂದ್ರದ ಪೂರ್ವಕ್ಕೆ ನಾಲ್ಕು ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ಶ್ರೀ ಜುಕ್ತಿಮಠ, ಶ್ರೀ ಕಳ್ಳಿಮಠ, ಶ್ರೀ ಮುರುಡಿಮಠ, ಶ್ರೀ ಬೂಸನೂರುಮಠ ಹಾಗೂ ಶ್ರೀ ಕರಸ್ಥಲಮಠಗಳು ಸ್ಥಾಪನೆಯಾಗಿದ್ದವು. ಈಗ ಶ್ರೀ ಜುಕ್ತಿಹಿರೇಮಠವು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ಜುಕ್ತಿ ಹಿರೇಮಠ: ಸೂಡಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಜುಕ್ತಿ ಹಿರೇಮಠವು ಧಾರ್ಮಿಕ ಕಾರ್ಯಗಳ ಕೇಂದ್ರ ಬಿಂದುವಾಗಿ ಬೆಳೆದಿದೆ. ಪಂಚಪೀಠಗಳಲ್ಲಿ ಒಂದಾದ ಕಾಶಿಪೀಠದ ಶಾಖಾಮಠವಾಗಿ ಬೆಳೆದಿರುವ ಈ ಮಠವು ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದಿದೆ.

ಮಠ ಸ್ಥಾಪನೆ: ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ ಮಸೂದಿ ಗ್ರಾಮದಲ್ಲಿ ಮೂಲ ಮಠದ ಸ್ಥಾಪನೆಯಾಗಿತ್ತು. ಆದಿಲ್‌ಶಾಹಿಯ ಆಡಳಿತದಲ್ಲಿ ಮಸೂದಿಯ ಜುಕ್ತಿ ಮಠವು ಬಹಳ ಹೆಸರು ಗಳಿಸಿತ್ತು. ಜುಕ್ತಿ ಮಠದ ಗುರುಗಳು ಬಹಳ ಬುದ್ಧಿವಂತರಾಗಿದ್ದರು.ಈ ಕಾರಣಕ್ಕೆ ಆದಿಲ್‌ಶಾಹಿ ತನ್ನ ಎಲ್ಲಾ ಕೆಲಸಗಳಿಗೂ ಗುರುಗಳ ಸಲಹೆ ಮಾರ್ಗದರ್ಶನ ಪಡೆದು ಮುನ್ನಡೆಯುತ್ತಿದ್ದರು. ಒಮ್ಮೆ ಆದಿಲ್‌ಶಾಹಿಯ ಸಂಬಂಧಿಗಳೊಬ್ಬರಿಗೆ ಆರೋಗ್ಯ ಸರಿ ಇಲ್ಲದಿದ್ದಾಗ ಎಲ್ಲಾ ರೀತಿಯ ಔಷಧೋಪಚಾರ ಮಾಡಿಸಿ ವಿಫಲವಾದಾಗ ಮಠದ ಗುರುಗಳಲ್ಲಿಗೆ ಆಗಮಿಸಿದರು. ಆಗ ಗುರುಗಳು ಮರಣವೇ ಅಂತಿಮ, ಯಾವುದೇ ಚಿಕಿತ್ಸೆ ಫಲಕಾರಿಯಾಗದು ಎಂದು ನೇರವಾಗಿ ಹೇಳಿದರು. ಆಗ ಗುರುಗಳ ಮಾತಿನಲ್ಲಿ ನಂಬಿಕೆ ಸಾಲದೆ ಹಿಂದಿರುಗಿದರು. ಗುರುಗಳು ಹೇಳಿದಂತೆ ಮರಣ ಸಂಭವಿಸಿತು. ಗುರುಗಳು ಮರಣದ ಮೊದಲೇ ಹೇಳಿದ್ದು ಸಾವಿಗೆ ಕಾರಣವಾಯಿತು ಎಂದು ಕೋಪಗೊಂಡ ಅರಸು ಪರಿವಾರ ಗುರುಗಳ ಮೇಲೆ ಸಿಟ್ಟುಗೊಂಡಿತು. ಆಗ ಗುರುಗಳು ಅಪಾತ್ರರ ಜೊತೆ ಇಲ್ಲಿ ಇರಬಾರದು ಎಂದು ಮಸೂದಿಯನ್ನು ತ್ಯಜಿಸಿ ರೋಣ ಪ್ರಾಂತ್ಯಕ್ಕೆ ಬಂದು ಸೂಡಿಯಲ್ಲಿ [illegible] ಮಠವನ್ನು ಸ್ಥಾಪನೆ ಮಾಡಿದರು ಎಂದು ಹೇಳಲಾಗಿದೆ.

ಬೆಳೆದ ಪರಂಪರೆ: ಪುತ್ರವರ್ಗದ ಪರಂಪರೆಯ ಕಾಶಿಪೀಠದ ಶಾಖಾಮಠವಾದ ಜುಕ್ತಿ ಮಠದ ಪರಂಪರೆಯಲ್ಲಿ ಹದಿನೇಳು ಜನ ಗುರುಗಳು ಅಧಿಕಾರವನ್ನು ವಹಿಸಿಕೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸಿದ್ದಾರೆ ಎಂದು ಹೇಳಲಾಗುತ್ತದೆ. ಆದರೆ

೧. ಷ.ಬ್ರ.ಶ್ರೀ ಕೊಟ್ಟೂರು ಬಸವೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಉಮಾಪತಿ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಎರಡನೆಯ ಉಮಾಪತಿ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಕೊಟ್ಟೂರೇಶ್ವರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಕೇವಲ ನಾಲ್ಕು ಜನ ಗುರುಗಳ ಹೆಸರನ್ನು ದಾಖಲಿಸಬಹುದಾಗಿದೆ. ಮಸೂದಿಯಿಂದ ಸ್ಥಳಾಂತರಗೊಳಿಸಿದ ಗುರುಗಳು ಮತ್ತು ನಂತರ ಬಂದಂತಹ ಹನ್ನೆರಡು ಜನ ಗುರುಗಳ ಹೆಸರು ಎಲ್ಲಿಯೂ ಲಭ್ಯವಿಲ್ಲ ಎಂದು ಮಠದ ಹಿರಿಯರಾದ ವಿರೂಪಾಕ್ಷಯ್ಯ ಜುಕ್ತಿಮಠ ಅಭಿಪ್ರಾಯಿಸುತ್ತಾರೆ.

ಮಠದ ಪರಂಪರೆಯ ಹದಿನಾಲ್ಕನೆಯ ಗುರುಗಳಾದ ಶ್ರೀ ಕೊಟ್ಟೂರು ಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು ಮಹಾ ತಪಸ್ವಿಗಳಾಗಿದ್ದು ಪೂಜಾನಿಷ್ಠರಾಗಿದ್ದರು. ಕೀರ್ತನೆ, ಪುರಾಣ ಪ್ರವಚನ ಹೇಳುವುದರಲ್ಲಿ ಮಹಾ ಪ್ರವೀಣರಾಗಿದ್ದರೆಂದು ಹೇಳಲಾಗುತ್ತದೆ. ಇಂತಹ ಮಹಾ ವಿದ್ವಾಂಸರು ಚಿತ್ತರಗಿಯಲ್ಲಿ ಲಿಂಗೈಕ್ಯರಾಗಿದ್ದು ಅವರ ಗದ್ದುಗೆಯನ್ನು ಅಲ್ಲೇ ನಿರ್ಮಿಸಲಾಗಿದೆ ಎಂದು ಹೇಳಲಾಗುತ್ತಿದೆ. ಹದಿನೈದನೆಯ ಪಟ್ಟಾಧ್ಯಕ್ಷರಾದ ಶ್ರೀ ಉಮಾಪತಿ ಶಿವಾಚಾರ್ಯ ಸ್ವಾಮಿಗಳು, ಕಾಶಿಯಲ್ಲಿ ಅಪಾರಜ್ಞಾನವನ್ನು ಸಂಪಾದಿಸಿಕೊಂಡು ಬಂದವರಾಗಿದ್ದರು ಭಕ್ತರು ಗುರುಗಳನ್ನು **'ಕಾಶಿಪಂಡಿತ'**ರೆಂದೇ ಕರೆಯುತ್ತಿದ್ದರು. ಇವರ ಕಾಲದಲ್ಲಿ ಮಠವು ಹೆಚ್ಚು ಅಭಿವೃದ್ಧಿ ಹೊಂದಿತು. ಇವರ ಗದ್ದುಗೆಯು ಸೂಡಿ ಮಠದಲ್ಲಿ ನಿರ್ಮಾಣವಾಗಿದೆ. ಇವರ ನಂತರ ಎರಡನೆಯ ಶ್ರೀ ಉಮಾಪತಿ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದರು. ಇವರ ಪ್ರತಿಭೆಯನ್ನು ಗಮನಿಸಿದ ಕೊಪ್ಪಳದ ಗವಿಮಠದ ಹಿರಿಯ ಗುರುಗಳು ಇವರಿಗೆ ಶ್ರೀ ಶಿವಶಾಂತವೀರ ಸ್ವಾಮಿಗಳೆಂದು ಅಭಿದಾನವಿತ್ತು ಗವಿಮಠದ ಅಧಿಕಾರವನ್ನು ವಹಿಸಿಕೊಡುತ್ತಾರೆ. ಈ ಗುರುಗಳು ಕೊಪ್ಪಳಕ್ಕೆ ಬಂದ ಮೇಲೆ ಮಠವು ಖಾಲಿ ಉಳಿಯಿತು.

ಪುತ್ರವರ್ಗದ ಪರಂಪರೆಯ ಮಠವಾಗಿದ್ದರಿಂದ ಸೂಕ್ತ ಉತ್ತರಾಧಿಕಾರಿಗಳು ಇಲ್ಲದ ಕಾರಣ ಕೆಲವು ದಿನ ಮಠವು ಖಾಲಿ ಉಳಿದಿತ್ತು. ತರುವಾಯ ಶ್ರೀ ವಿರೂಪಾಕ್ಷಯ್ಯ ಮತ್ತು ಶ್ರೀಮತಿ ಕಳಕಮ್ಮನವರ ಮಗನಾಗಿ ೧೯೭೦ ರಲ್ಲಿ ಜನಿಸಿದ ಶ್ರೀ ಕೊಟ್ಟೂರು ಸ್ವಾಮಿಗಳನ್ನು ಮಠದ ಉತ್ತರಾಧಿಕಾರಿಗಳಾಗಿ ನೇಮಕಮಾಡಿದರು. ಶ್ರೀ ಮರಿದೇವರು ಪ್ರತಿಭಾವಂತರಾಗಿ ಬೆಳೆದು ಗಂಗಾವತಿ, ಗದಗದಲ್ಲಿ ಪದವಿ ಪಡೆದು, ಧಾರವಾಡದಲ್ಲಿ ತತ್ತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದೇ ಅಲ್ಲದೆ ಪಿಎಚ್.ಡಿ ಪಡೆದಿದ್ದಾರೆ. ಚಿಕ್ಕ ವಯಸ್ಸಿನಲ್ಲೇ ಅಪಾರವಾದದ್ದನ್ನು ಸಾಧಿಸಿದ ಶ್ರೀ ಕೊಟ್ಟೂರು ಶಿವಾಚಾರ್ಯ ಸ್ವಾಮಿಗಳು ಧಾರವಾಡ ವಿಶ್ವವಿದ್ಯಾನಿಲಯದಲ್ಲಿ ತತ್ತ್ವಶಾಸ್ತ್ರದ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆಯನ್ನು ಸಲ್ಲಿಸುತ್ತಾ ಬಿಡುವಿನ ವೇಳೆಯಲ್ಲಿ ಸೂಡಿಗೆ ಆಗಮಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ನಿತ್ಯ ಗದ್ದುಗೆಗೆ ಎರಡು ವೇಳೆ ಪೂಜೆ, ಪ್ರತಿ ಅಮಾವಾಸ್ಯೆಗೆ ರುದ್ರಾಭಿಷೇಕ ಪೂಜೆ, ಶಿವಾನುಭವ ಗೋಷ್ಠಿ ಉಪನ್ಯಾಸ ಹಾಗೂ ಸಂಗೀತ ಕಛೇರಿಯನ್ನು ಏರ್ಪಡಿಸಲಾಗುತ್ತದೆ. ಆಶ್ವೀಜ ಶುದ್ಧ ಷಷ್ಠಿಯಂದು ನಡೆಯುವ ಹಿರಿಯರ ಗುರುಗಳ ಜಾತ್ರೆ ಸಂದರ್ಭದಲ್ಲಿ ಅನ್ನದಾಸೋಹವು ನಡೆಯುತ್ತದೆ. ಭಾದ್ರಪದ ಮಾಸದಲ್ಲಿ ತಿಂಗಳು ಪೂರ್ಣ ಮಠದಲ್ಲಿ ಪ್ರವಚನವನ್ನು ನಡೆಸಲಾಗುತ್ತಿದೆ.

ವಿಳಾಸ:ಷ.ಬ್ರ.ಶ್ರೀ ಕೊಟ್ಟೂರೇಶ್ವರ ಶಿವಾಚಾರ್ಯ ಸ್ವಾಮಿಗಳು ಶ್ರೀ ಜುಕ್ತಿಹಿರೇಮಠ, ಸೂಡಿ, ರೋಣ ತಾಲ್ಲೂಕು, ಗದಗ ಜಿಲ್ಲೆ.

ಹಾಲಕೆರೆ

ರೋಣ ತಾಲ್ಲೂಕಿನ ಹಾಲಕೆರೆಯು ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಇಪ್ಪತ್ತೈದು ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ವಿರಕ್ತ ಸಂಪ್ರದಾಯದ ಶ್ರೀ ಅನ್ನದಾನೇಶ್ವರ ಮಠವು ೧೬೫೦ ರಲ್ಲಿ ಸ್ಥಾಪನೆಯಾಗಿ ಈ ಗ್ರಾಮದ ಹೆಸರನ್ನು ದಶದಿಕ್ಕುಗಳಿಗೂ ಪ್ರಚಾರ ಪಡಿಸಿದೆ.

ಜಗದ್ಗುರು ಅನ್ನದಾನೇಶ್ವರ ಸಂಸ್ಥಾನ ಮಠ: ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದ ಕ್ರಾಂತಿಯ ನಂತರ ಗುರು ಮಹಾಂತಶ್ವೇರರು, ಶ್ರೀ ಅನ್ನದಾನೇಶ್ವರರು ಹಾಗೂ ಕೊಟ್ಟೂರು ಸ್ವಾಮಿಗಳು ಚಿತ್ತರಗಿಗೆ ಬಂದರು. ಶ್ರೀ ವಿಜಯ ಮಹಾಂತೇಶ್ವರ ಸ್ವಾಮಿಗಳು ಚಿತ್ತರಗಿಯಲ್ಲಿ ನೆಲೆಸಿದರು. ನಂತರ ಅನ್ನದಾನೇಶ್ವರ ಹಾಗೂ ಕೊಟ್ಟೂರು ಸ್ವಾಮಿಗಳು ಮುಂದೆ ಹೊರಟು ಹಾಲಕೆರೆಗೆ ಬಂದು ಅನುಷ್ಠಾನಗೊಳ್ಳುತ್ತಾರೆ.ಇಲ್ಲಿ ಶ್ರೀ ಅನ್ನದಾನೇಶ್ವರರರು ಮಠವನ್ನು ಸ್ಥಾಪಿಸಿದರು.ನಂತರ ಕೊಟ್ಟೂರು ಸ್ವಾಮಿಗಳು ಕೊಪ್ಪಳ ತಾಲ್ಲೂಕಿನ ಗಂಗಾವತಿಯಲ್ಲಿ ಬಂದು ನೆಲೆಸಿದರು. ಇಲ್ಲಿಗೆ

ಬರುವ ಮೊದಲು ಗಂಜಿಹಾಳು, ನರೇಗಲ್ಲು ಗ್ರಾಮಗಳಲ್ಲಿ ಮಠವನ್ನು ಸ್ಥಾಪನೆ ಮಾಡಿದರೆಂದು ಹೇಳಲಾಗುತ್ತಿದೆ. ಈ ಕಾರಣದಿಂದ ಈ ಮಠಗಳು ಇಂದಿಗೂ ಹಾಲಕೆರೆಯ ಮಠದ ಶಾಖಾ ಮಠಗಳಾಗಿ ಬೆಳೆದಿವೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಅನ್ನದಾನೇಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಕರಿಸಿದ್ಧಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಮುಪ್ಪಿನ ಬಸವಲಿಂಗಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಅನ್ನದಾನಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಕಿರಿಯ ಮುಪ್ಪಿನಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಹಿರಿಯ ಅನ್ನದಾನೀಶ್ವರಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಗುರು ಅನ್ನದಾನೀಶ್ವರಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಮುಪ್ಪಿನ ಬಸವಲಿಂಗಸ್ವಾಮಿಗಳು
೯. ಶ್ರೀ ಮ.ನಿ.ಪ್ರ. ಅನ್ನದಾನೇಶ್ವರಸ್ವಾಮಿಗಳು
೧೦. ಶ್ರೀ ಮ.ನಿ.ಪ್ರ. ಗುರು ಅನ್ನದಾನಸ್ವಾಮಿಗಳು
೧೧. ಶ್ರೀ ಮ.ನಿ.ಪ್ರ. ಪ್ರಭುರಾಜೇಂದ್ರಸ್ವಾಮಿಗಳು.
೧೨. ಶ್ರೀ ಮ.ನಿ.ಪ್ರ. ಅಭಿನವ ಅನ್ನದಾನೀಶ್ವರಸ್ವಾಮಿಗಳು

ಈ ರೀತಿ ಮಠದ ಪರಂಪರೆಯಲ್ಲಿ ಹನ್ನೆರೆಡು ಜನ ಗುರುಗಳು ಮಠದ ಅಧಿಕಾರವನ್ನು ನಡೆಸಿಕೊಂಡು ಬಂದಿರುವುದರ ಬಗ್ಗೆ ಮಾಹಿತಿ ದೊರೆಯುತ್ತವೆ. ಶ್ರೀ ಅನ್ನದಾನೇಶ್ವರರು ಪ್ರಾರಂಭಿಸಿದ ಮಠವು ಈಗಿನ ಶ್ರೀ ಅಭಿನವ ಅನ್ನದಾನೇಶ್ವರ ಸ್ವಾಮಿಗಳ ತನಕ ಬೆಳೆದು ಬಂದಿದೆ. ಗಂಜಿಹಾಳದ ಶಾಖಾಮಠದಲ್ಲಿ ಶ್ರೀ ಮುಪ್ಪಿನ ಬಸವಲಿಂಗ ಸ್ವಾಮಿಗಳು ಅಧಿಕಾರ ನಡೆಸುತ್ತಿದ್ದ ಸಂದರ್ಭದಲ್ಲಿ ಹಾಲಕೆರೆಯ ಭಕ್ತರ ಮನವಿಯನ್ನು ಮನ್ನಿಸಿ ಗಂಜಿಹಾಳದಿಂದ ಹಾಲಕೆರೆಗೆ ಬಂದು ನೆಲೆಸಿ ನಂತರ ಹಾಲಕೆರೆ ಮಠದಲ್ಲಿ ಲಿಂಗೈಕ್ಯರಾದರು. ಶ್ರೀ ಮುಪ್ಪಿನ ಬಸವಲಿಂಗ ಸ್ವಾಮಿಗಳು ಮಹಾತಪಸ್ವಿಗಳಾಗಿ ಪವಾಡ ಪುರುಷರಾಗಿ, ವಾಕ್ ಸಿದ್ಧಿಯಿಂದ ಹೆಸರು ಮಾಡಿದ್ದರು. ಶ್ರೀ ಹಾಲಕೆರೆ ಮಠವು ಇವರ ಕಾಲದಲ್ಲಿ ಹೆಚ್ಚು ಪ್ರಬುದ್ಧಮಾನಕ್ಕೆ ಬಂದಿತು ಎಂದು ಇಲ್ಲಿನ ಗ್ರಾಮಸ್ಥರು ಅಭಿಮಾನದಿಂದ ಹೇಳುತ್ತಾರೆ. ಇವರ ನಂತರ ಅಧಿಕಾರಕ್ಕೆ ಬಂದ ಗುರುಗಳು ಸಹ ಮಠವನ್ನು ಅಭಿವೃದ್ಧಿಪಡಿಸಿದರು. ಜೊತೆಗೆ ಶಾಖಾ ಮಠವನ್ನು ಬೆಳೆಸಿದ್ದಾರೆ. ಈಗಿನ ಶ್ರೀ ಅಭಿನವ ಅನ್ನದಾನೇಶ್ವರ ಸ್ವಾಮಿಗಳಿಗೆ ೧೯೮೮ ರಲ್ಲಿ ಪಟ್ಟಾಧಿಕಾರ ಮಾಡಲಾಯಿತು.

ಶ್ರೀ ಅಭಿನವ ಅನ್ನದಾನೇಶ್ವರ ಸ್ವಾಮಿಗಳು ಅನ್ನದಾನೇಶ್ವರಮಠದ ಇಪ್ಪತ್ತೆಂಟು ಶಾಖಾಮಠಗಳೆ ಅಲ್ಲದೆ ಹೊಸಪೇಟೆಯ ಕೊಟ್ಟೂರುಸ್ವಾಮಿಮಠ ಮತ್ತು ಹಂಪೆ, ಬಳ್ಳಾರಿಯ ಮಠಗಳ ಜವಾಬ್ದಾರಿಯ ಜೊತೆಗೆ ಈ ಮಠಗಳ ಶಾಖಾ ಮಠಗಳ ಜವಾಬ್ದಾರಿಯನ್ನ ವಹಿಸಿಕೊಂಡು ಮಠದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಗದ್ದುಗೆಗೆ ನಿತ್ಯ ತ್ರಿಕಾಲಪೂಜೆ, ಪ್ರತಿ ಅಮವಾಸ್ಯೆ ಹುಣ್ಣಿಮೆಯಲ್ಲಿ ವಿಶೇಷ ಪೂಜೆ ನಡೆಯುತ್ತವೆ. ತಿಂಗಳಿಗೊಮ್ಮೆ ಶಿವಾನುಭವಗೋಷ್ಠಿ ನಡೆಯುತ್ತದೆ. ಹಿರಿಯ ಗುರುಗಳ ಪುಣ್ಯಾರಾಧನೆಯು ಶ್ರಾವಣ ಶುದ್ಧ ಅಷ್ಟಮಿಯಂದು ನಡೆಯುತ್ತದೆ. ಶ್ರೀ ಅನ್ನದಾನೇಶ್ವರರ ಜಾತ್ರೆಯು ವೈಭವಯುತವಾಗಿ ನಡೆಯುತ್ತದೆ. ಮಾರ್ಗಶಿರ ಷಷ್ಠಿ ಯಂದು ರಥೋತ್ಸವ, ಹಿರಿಯ ಗುರುಗಳ ಪುಣ್ಯಸ್ಮರಣೆಯನ್ನು ಮಾಡಲಾಗುತ್ತಿದೆ. ಎರಡು ದಿನಗಳ ಕಾಲ ನಡೆಯುವ ಉತ್ಸವದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ, ಉಪನ್ಯಾಸ, ಧರ್ಮೋಪದೇಶವನ್ನು ನೀಡಲಾಗುತ್ತಿದೆ. ನಿತ್ಯ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಸಾಮಾಜಿಕ ಕಾರ್ಯಗಳು: ಶ್ರೀ ಹಾಲಕೆರೆ ಮಠವು ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಗಳಿಗೆ ಸಮಾನ ಅವಕಾಶಕೊಟ್ಟು ಸಮಾಜದ ಅಸಹಾಯಕರಿಗೆ ನೆರವು ನೀಡಿದೆ. ಇದಕ್ಕೆ ಸಾಕ್ಷಿ ಎಂಬಂತೆ ಕಿವುಡರ ಮತ್ತು ಮೂಗರಿಗೆ ವಸತಿ ಗೃಹ ನಿರ್ಮಾಣ, ನರೇಗಲ್ಲಿನಲ್ಲಿ ಕಿವುಡ ಮತ್ತು ಮೂಕರ ಪಾಠಶಾಲೆ, ಅಂಗವಿಕಲ ಮಕ್ಕಳ ಶಾಲೆಯನ್ನು ೧೯೯೪ ರಲ್ಲಿ ಸ್ಥಾಪಿಸಲಾಗಿದೆ.

ನರಗಲ್ಲಿನಲ್ಲಿ ಶ್ರೀ ಅನ್ನದಾನೇಶ್ವರ ಆಸ್ಪತ್ರೆಯನ್ನು ಪ್ರಾರಂಭಿಸಲಾಗಿದೆ. ಅನಾಥ ಹಾಗೂ ಬಡ ಮಕ್ಕಳನ್ನು ದತ್ತು ತೆಗೆದು ಕೊಂಡು ಅವರಿಗೆ ಎಲ್ಲಾ ಬಗೆಯ ಶೈಕ್ಷಣಿಕ ಹಾಗೂ ಆರ್ಥಿಕ ಸಹಾಯವನ್ನು ನೀಡಿ ಬೆಳೆಸುತ್ತಿದ್ದಾರೆ. ಪ್ರತಿಭಾನ್ವಿತ ಮಕ್ಕಳಿಗೆ ಆರ್ಥಿಕ ಸಹಾಯವನ್ನು ನೀಡುವುದು, ಸೆಂಟ್ರಲ್‌ಬ್ಯಾಂಕ್ ಆಫ್ ಇಂಡಿಯಾ ಎಂಬ ಸಂಸ್ಥೆಗೆ ಕಟ್ಟಡವನ್ನು ನೀಡಿರುವುದು, ಅನ್ನದಾನೇಶ್ವರ ಗ್ರಂಥ ಮಾಲಾಪ್ರಕಟಣೆಯಿಂದ ಅನೇಕ ಮೌಲಿಕ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿರುವುದು ಸಮಾಜದ ಪಿಡುಗಾಗಿರುವ ಅದ್ದೂರಿ ಮದುವೆಗಳನ್ನು ತಪ್ಪಿಸಲು ಮಠದಲ್ಲಿ ಸಾಮೂಹಿಕ ಉಚಿತ ವಿವಾಹಗಳನ್ನು ಏರ್ಪಡಿಸುವುದು ಹೀಗೆ ಸಾಮಾಜಿಕ ಅಭಿವೃದ್ಧಿಗೆ ನೆರವಾಗಬಲ್ಲಂತಹ ಅನೇಕ ಕಾರ್ಯಕ್ರಮಗಳನ್ನು ಶ್ರೀ ಅಭಿನವ ಅನ್ನದಾನೇಶ್ವರ ಸ್ವಾಮಿಗಳು ನಡೆಸಿಕೊಂಡು ಬರುತ್ತಿದ್ದಾರೆ.

ಶೈಕ್ಷಣಿಕ ಸೇವೆ: ಶ್ರೀ ಅನ್ನದಾನೇಶ್ವರ ಮಠದ ವತಿಯಿಂದ ನಾಲ್ಕು ಪ್ರೌಢಶಾಲೆಗಳು, ಎರಡು ಪ್ರಥಮ ದರ್ಜೆ ಕಾಲೇಜುಗಳು, ಹದಿಮೂರು ಉಚಿತ ಪ್ರಸಾದ ನಿಲಯಗಳು ಈ ರೀತಿ ಶಿಕ್ಷಣ ಸಂಸ್ಥೆಗೆ ನೆರವಾಗಿ ಗ್ರಾಮಾಂತರ ಕಲಿಯುವ ಮಕ್ಕಳಿಗೆ ನೆರವಾಗಿದೆ. ಅಲ್ಲದೆ ಬೇರೆ ಸಂಸ್ಥೆಗಳು ನಡೆಸುವ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಸ್ಪಂದಿಸುತ್ತಾ ದಾನವನ್ನು ನೀಡಿ ಪ್ರೋತ್ಸಾಹಿಸಿದೆ.

ವಿಳಾಸ:ಶ್ರೀ ಮ.ನಿ.ಪ್ರ. ಅಭಿನವ ಅನ್ನದಾನೇಶ್ವರ ಸ್ವಾಮಿಗಳು, ಶ್ರೀ ಅನ್ನದಾನೇಶ್ವರ ಮಠ, ಹಾಲಕೆರೆ, ರೋಣ ತಾ, ಗದಗ ಜಿಲ್ಲೆ.

ಆಧಾರ: ದ್ಯಾಂಪುರ ಚನ್ನಕವಿಗಳ 'ಶ್ರೀ ಅನ್ನದಾನೇಶ್ವರ ಮಹಾಪುರಾಣ'

ಹೊಳೆ ಹಡಗಲಿ

ರೋಣ ತಾಲ್ಲೂಕಿನ ಹೊಳೆಹಡಗಲಿಯು ತಾಲ್ಲೂಕು ಕೇಂದ್ರದಿಂದ ಪಶ್ಚಿಮ ಭಾಗಕ್ಕೆ ಇಪ್ಪತ್ತೊಂದು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಸ್ಥಾಪನೆಯಾಗಿ ಧಾರ್ಮಿಕ ವಾತಾವರಣವನ್ನು ಸೃಷ್ಟಿಸಿದೆ.

ಹಿರೇಮಠ: ಹೊಳೆಹಡಗಲಿ ಗ್ರಾಮದ ಮಧ್ಯಭಾಗದಲ್ಲಿ ರಂಭಾಪುರಿ ಪೀಠದ ಶಾಖಾಮಠವು ಅಸ್ತಿತ್ವದಲ್ಲಿದೆ.ನವಿಲಗುಂದ ಪಂಚಗ್ರಹ ಹಿರೇಮಠದ ಶ್ರೀ ಚಂದ್ರಮೌಳೇಶ್ವರ ಶಿವಾಚಾರ್ಯ ಸ್ವಾಮಿಗಳು ಹಡಗಲಿ ಗ್ರಾಮಕ್ಕೆ ಬಂದು ಮಠವನ್ನು ಸ್ಥಾಪನೆ ಮಾಡಿದ್ದಾರೆ. ಎಂದು ಹೇಳಲಾಗುತ್ತದೆ. ಇದಕ್ಕೆ ಪೂರಕವೆಂಬಂತೆ ಮಠದಲ್ಲಿ ಶ್ರೀ ಚಂದ್ರಮೌಳೇಶ್ವರ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಯನ್ನು ಕರ್ತೃಗದ್ದುಗೆಯೆಂದು ಪೂಜಿಸಲಾಗುತ್ತಿದೆ. ಅಂದು ಪ್ರಾರಂಭಗೊಂಡ ಮಠವು ಈ ಗ್ರಾಮದಲ್ಲಿ ಧಾರ್ಮಿಕ ವಾತಾವರಣವು ಸೃಷ್ಟಿಯಾಗಲು ಕಾರಣವಾಯಿತು.

ಶಿವಪೂಜಾ ನಿಷ್ಠರಾದ ಗುರುಗಳು ನಿತ್ಯಧರ್ಮೋಪದೇಶವನ್ನು ಮಾಡಿ ಭಕ್ತರಿಗೆ ಸನ್ಮಾರ್ಗ ತೋರಿಸಿದ್ದಲ್ಲದೆ ಮಠದ ಅಭಿವೃದ್ಧಿಗೆ ಕಾರಣಕರ್ತರಾದರು. ಇವರ ತರುವಾಯ ಮಠದ ಆಡಳಿತವನ್ನು ವಹಿಸಿಕೊಂಡ ಗುರುಗಳ ಬಗ್ಗೆ ಮಾಹಿತಿ ದೊರೆಯದಾಗಿದೆ. ಶ್ರೀ ಶಾಂತವೀರಪಟ್ಟದ ದೇವರು ಕೆಲವು ವರ್ಷಗಳ ಕಾಲ ಮಠದ ಅಧಿಕಾರವನ್ನು ವಹಿಸಿಕೊಂಡು ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಅಲ್ಲದೆ ಬಾದಾಮಿಯಲ್ಲಿ ಒಂದು ಶಾಖಾ ಮಠವನ್ನು ಸ್ಥಾಪಿಸಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದ್ದರು. ಇವರು ಲಿಂಗೈಕ್ಯರಾದ ಮೇಲೆ ಶ್ರೀ ಶಿವಪೂಜೆ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠದ ಆಡಳಿತವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಹಿಂದಿನ ಪಟ್ಟದ ದೇವರು ಸ್ಥಾಪಿಸಿದ ಬಾದಾಮಿಯ ಶಾಖಾ ಮಠದಲ್ಲಿ ನೆಲೆಸಿ ಎರಡೂ ಕಡೆಯಲ್ಲೂ ಧಾರ್ಮಿಕ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶಿವಪೂಜೆ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಹೊಳೆಹಡಗಲಿ, ರೋಣ ತಾಲ್ಲೂಕು, ಗದಗ ಜಿಲ್ಲೆ.

ಶಿರಹಟ್ಟಿ ತಾಲ್ಲೂಕು

ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನಲ್ಲಿ ನೂರಹತ್ತು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಅಂದು ಸ್ಥಾಪನೆಗೊಂಡ ಬಹುತೇಕ ಮಠಗಳು ಅಸ್ತಿತ್ವವನ್ನು ಕಳೆದುಕೊಂಡಿದ್ದು, ಈಗ ಹತ್ತೊಂಬತ್ತು ಮಠಗಳನ್ನು ಗುರುತಿಸಬಹುದಾಗಿದೆ. ಇಂತಹ ಧಾರ್ಮಿಕ ಹಿನ್ನಲೆಯುಳ್ಳ ಶಿರಹಟ್ಟಿ ತಾಲ್ಲೂಕು ಧಾರ್ಮಿಕ ಸಾಮರಸ್ಯವನ್ನು ಸಾಧಿಸಿದೆ.

ಕಡಗೋಳ

ಶಿರಹಟ್ಟಿ ತಾಲ್ಲೂಕಿನ ಕಡಗೋಳ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹತ್ತು ಕಿ.ಮೀ. ದೂರದಲ್ಲಿದೆ. ಹಿಂದೆ ಇಲ್ಲಿ ಹಿರೇಮಠವು ಸ್ಥಾಪನೆಯಾಗಿ ಹೆಸರು ಮಾಡಿತ್ತು.

ಹಿರೇಮಠ: ಕಡಗೋಳ ಗ್ರಾಮದ ಮಧ್ಯಭಾಗದಲ್ಲಿ ಉಜ್ಜಯಿನಿ ಪೀಠದ ಶಾಖಾಮಠವಾದ ಶ್ರೀ ಹಿರೇಮಠ ಅಥವಾ ಶ್ರೀ ಪ್ರಭುಸ್ವಾಮಿ ಮಠವು ಸ್ಥಾಪನೆಯಾಗಿದೆ. ಪುರಾತನ ಪರಂಪರೆಯಿದ್ದ ಈ ಮಠವು ಈಗ ಮಠಾಧೀಶರು ಯಾರೂ ಇಲ್ಲದೆ ಖಾಲಿ ಉಳಿದಿದೆ. ಮಠದಲ್ಲಿ ಎರಡು ಗದ್ದುಗೆಗಳು ನೋಡಲು ಸಿಗುತ್ತಿದ್ದು ಪೂರ್ಣ ಜೀರ್ಣಾವಸ್ಥೆ ತಲುಪಿವೆ.

ಕಳಸ

ಶಿರಹಟ್ಟಿ ತಾಲ್ಲೂಕಿನ ಕಳಸ ಗ್ರಾಮವು ತಾಲ್ಲೂಕು ಕೇಂದ್ರದಿಂದ ಇಪ್ಪತ್ತೈದು ಕಿ.ಮೀ. ದೂರದಲ್ಲಿದೆ. ಅಭಿವೃದ್ಧಿ ಹಂತದಲ್ಲಿರುವ ಈ ಗ್ರಾಮದಲ್ಲಿ, ಶ್ರೀ ಮೇಗಲಮಠ ಅಥವಾ ಶ್ರೀ ಅಖಂಡ ಸ್ವಾಮಿಗಳ ಮಠವು ಸ್ಥಾಪನೆಯಾಗಿವೆ.

ಮೇಗಲ ಮಠ: ಕಳಸ ಗ್ರಾಮದ ಮಧ್ಯಭಾಗದಲ್ಲಿ ವಿರಕ್ತ ಸಂಪ್ರದಾಯದ ಆ ಅಖಂಡ ಸ್ವಾಮಿಗಳ ಮಠವು ಶ್ರೀ ಅಖಂಡೇಶ್ವರ ಸ್ವಾಮಿಗಳಿಂದ ಪ್ರಾರಂಭವಾಗಿದ್ದರಿಂದ ಈ ಹೆಸರು ಬಂದಿದೆ. ಅನುಭವ ಮಂಟಪದಲ್ಲಿ ಶರಣರ ಜೊತೆಯಲ್ಲಿದ್ದ ಶರಣ ಅಖಂಡೇಶ್ವರರು ಕಲ್ಯಾಣದಕ್ರಾಂತಿಯ ನಂತರ ವಚನ ಸಾಹಿತ್ಯವನ್ನು ರಕ್ಷಿಸಲು ದೇಶಾಂತರ ಹೋಗಬೇಕಾದ ಸಂದರ್ಭ ಬಂದಾಗ ದಕ್ಷಿಣಾಭಿಮುಖವಾಗಿ ಬಂದು ಕಳಸಗ್ರಾಮದ ಹೊರಭಾಗದಲ್ಲಿರುವ ಅಲ್ಲಿನ ಪ್ರದೇಶದಲ್ಲಿ ನೆಲೆ ನಿಂತರು. ಎತ್ತರ ಪ್ರದೇಶದ ನಿಶ್ಯಬ್ದ ವಾತಾವರಣದಲ್ಲಿ ಅನುಷ್ಠಾನಗೊಂಡು ಧರ್ಮ ಪ್ರಸಾರ ಮಾಡತೊಡಗಿದರು. ವರ್ಷದಿಂದ ವರ್ಷಕ್ಕೆ ಶ್ರೀ ಅಂಖಡ ಸ್ವಾಮಿಗಳ ಪ್ರಭಾವ ಹೆಚ್ಚಾಗಿ ಗುರುಗಳ ಪ್ರವಚನ, ಉಪದೇಶ ಕೇಳಲು ಭಕ್ತರು ಬರತೊಡಗಿದರು. ಈ ರೀತಿ ಶರಣರು ನಿಂತ ನೆಲ ಪಾವನವಾಗಿ ಕಳಸದ ನೆಲದಲ್ಲಿ ಮಠವು ಸ್ಥಾಪನೆಯಾಗಲು ನಾಂದಿಯಾಯಿತು.

ಬೇರೆ ಗುರುಬೇಡ: ಶ್ರೀ ಅಖಂಡೇಶ್ವರ ಸ್ವಾಮಿಗಳ ಪ್ರಭಾವಕ್ಕೆ ಒಳಗಾದ ಇಲ್ಲಿನ ಭಕ್ತರು 'ಗುರುವೆಂದರೆ ಇವರೊಬ್ಬರೇ ಗುರು 'ಎಂಬ ಅತೀತ ಭಾವನೆಯಿಂದ ಅವರು ಲಿಂಗೈಕ್ಯಗೊಂಡ ಮೇಲೆ ಮಠಕ್ಕೆ ಉತ್ತರಾಧಿಕಾರಿಗಳನ್ನು ನೇಮಿಸದೆ ಶ್ರೀ ಅಖಂಡೇಶ್ವರರ ತತ್ತ್ವಗಳನ್ನು ಪೂಜಿಸುತ್ತ ಅವರ ನೆನಪು ಸದಾ ಇರಲಿ ಎಂಬ ಧೋರಣೆಯಿಂದ ಈಗಲೂ ಅವರನ್ನು ಭಕ್ತಿ ಭಾವದಿಂದ ನೆನಪು ಮಾಡಿಕೊಳ್ಳುತ್ತ, ಪಾಲಿಸುತ್ತಾ ಮಠವನ್ನು ಪ್ರಚಾರಕ್ಕೆ ತರುತ್ತಿದ್ದಾರೆ. ಈ ಜಾಗೃತ ನೆಲದ ಪ್ರಭಾವಕ್ಕೆ ಅನೇಕ ಶರಣರು, ಸಾಧು ಸಂತರು ಆಕರ್ಷಿತರಾಗಿ ಭೇಟಿ ನೀಡಿದ್ದಾರೆ. ಅದರಲ್ಲಿ ಶಿಶುನಾಳ ಶರೀಫರು ಒಬ್ಬರು. ಶಿಶುನಾಳ ಶರೀಫರು'ನಡೆಯೋ ಮೇಗಲ ಮಠಕ್ಕೆ.... 'ಎಂಬ ಪದಕಟ್ಟಿ ಹಾಡಿದ್ದಾರೆ. ಈ ರೀತಿ ಹನ್ನೆರಡನೆಯ ಶತಮಾನದಿಂದ ಈ ಮಠವು ಒಬ್ಬರೇ ಗುರುಗಳ ಹೆಸರಿನಲ್ಲಿ ಅಖಂಡವಾಗಿ ನಡೆಯುತ್ತಾ ಬೆಳೆದು ಬಂದಿರುವುದು ಒಂದು ವಿಶೇಷವಾಗಿದೆ.

ವಿಳಾಸ: ಶ್ರೀ ಮೇಗಲ ಮಠ, ಕಳಸ, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ.

ತಂಗೋಡ

ಶಿರಹಟ್ಟಿ ತಾಲ್ಲೂಕಿನ ತಂಗೋಡ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತೆಂಟು ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ಹಿರೇಮಠವು ಸ್ಥಾಪನೆಯಾಗಿ ಧಾರ್ಮಿಕ ಚಟುವಟಿಕೆಗಳಿಗೆ ನೆರವಾಗಿದೆ.

ಹಿರೇಮಠ: ತಂಗೋಡ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಹಿರೇಮಠವು ಗ್ರಾಮದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ಉಜ್ಜಯಿನಿ ಪೀಠದ ಶಾಖಾ ಮಠವಾಗಿರುವ ಹಿರೇಮಠವು ಪುರಾತನ ಕಾಲದಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಮಠದಲ್ಲಿ ಶ್ರೀ ಮಲ್ಲೇಶ್ವರ ಸ್ವಾಮಿಗಳ ಮೂರ್ತಿಯನ್ನು ಸ್ಥಾಪಿಸಿ ಪೂಜೆಯನ್ನು ನಡೆಸಲಾಗುತ್ತಿದೆ. ಮಠದ ಪರಂಪರೆಯಲ್ಲಿ ಬಂದಂತಹ ಸ್ವಾಮಿಗಳ ಎರಡು ಗದ್ದುಗೆಗಳು ಮಠದ ಹೊಲದಲ್ಲಿ ನಿರ್ಮಾಣಗೊಂಡಿವೆ. ಹಿರೇ ಮಠದಲ್ಲಿ ಇತ್ತೀಚೆಗೆ ಶ್ರೀ ಅಜ್ಜಯ್ಯ ಸ್ವಾಮಿಗಳೆಂಬುವರು ಅಧಿಕಾರವನ್ನು ನಡೆಸಿ ಲಿಂಗೈಕ್ಯರಾಗಿದ್ದಾರೆ. ನಂತರ ಗುರುಗಳಿಲ್ಲದೆ ಪೀಠವು ಖಾಲಿ ಉಳಿದಿತ್ತು. ಈಗ ಶ್ರೀ ವಿರೂಪಾಕ್ಷದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ.

ವಿಳಾಸ: ಶ್ರೀ ವಿರೂಪಾಕ್ಷ ದೇವರು, ಶ್ರೀ ಹಿರೇಮಠ, ತಂಗೋಡ, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ.

ಬನ್ನಿಕೊಪ್ಪ

ಶಿರಹಟ್ಟಿ ತಾಲ್ಲೂಕಿನ ಬನ್ನಿಕೊಪ್ಪವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಇಪ್ಪತ್ತೇಳು ಕಿ.ಮೀ.ದೂರದಲ್ಲಿದೆ. ಅಭಿವೃದ್ಧಿಯ ಪಥದಲ್ಲಿರುವ ಈ ಗ್ರಾಮದಲ್ಲಿ ಪಂಚ ಮಠಗಳು ಸ್ಥಾಪನೆಯಾಗಿ ಇಲ್ಲಿ ಧಾರ್ಮಿಕ ಸಂಸ್ಕಾರ ಬೆಳೆಯುವಂತೆ ಮಾಡಿವೆ. ಪುರಾತನ ಕಾಲದಲ್ಲಿ ಶ್ರೀ ಹಿರೇಮಠ, ಶ್ರೀ ದಾರಕೇಶ್ವರ ಮಠ, ಶ್ರೀ ವಿರಕ್ತಮಠ, ಶ್ರೀ ಹೇಮಗಿರಿ ಮಠ ಹಾಗೂ ಶ್ರೀ ಫಕೀರೇಶ್ವರ ಮಠಗಳು ಸ್ಥಾಪನೆಯಾಗಿವೆ. ಇವುಗಳಲ್ಲಿ ಸದ್ಯ ಶ್ರೀ ದಾರಕೇಶ್ವರ ಮಠವು ಅಸ್ತಿತ್ವವನ್ನು ಉಳಿಸಿಕೊಂಡಿದೆ. ಹಿರೇಮಠದಲ್ಲಿ ಎರಡು ಗದ್ದುಗೆಗಳು ಇದ್ದು ಶ್ರೀ ಘನಲಿಂಗ ಚಕ್ರವರ್ತಿ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಪಟ್ಟಾಧಿಕಾರಿಗಳು ಯಾರೂ ಇರದೆ ಮಠವು ಖಾಲಿ ಉಳಿದಿದೆ. ವಿರಕ್ತಮಠದಲ್ಲಿಯೂ ಸಹ ಮಠಾಧೀಶ್ವರರು ಇಲ್ಲದೆ ಮಠವು ಖಾಲಿ ಉಳಿದಿದೆ. ವಿರಕ್ತ ಸಂಪ್ರದಾಯದ ಈ ಮಠಕ್ಕೆ **'ಮುರುಗಿ ಮಠ'** ಎಂದು ಸಹ ಕರೆಯಲಾಗುತ್ತದೆ. ಈ ಮಠದಲ್ಲಿ ಎರಡು ಗದ್ದುಗೆಗಳಿವೆ. ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಹೇಮಗಿರಿ ಮಠವು ಇಲ್ಲಿ ಸ್ಥಾಪನೆಯಾಗುವ ಮೊದಲು ಹಾವೇರಿ ಜಿಲ್ಲೆಯ ಗುತ್ತಲ ಗ್ರಾಮದಲ್ಲಿ ಸ್ಥಾಪನೆಯಾಗಿತ್ತೆಂದು ಹೇಳಲಾಗುತ್ತದೆ. ಗುತ್ತಲದಿಂದ ಇಲ್ಲಿಗೆ ಸ್ಥಳಾಂತರಗೊಂಡ ಮೇಲೆ ಎರಡು ತಲೆಮಾರುಗಳ ಕಾಲ ಮಠದ ಅಧಿಕಾರ ನಡೆದು ನಂತರ ಮಠವು ಖಾಲಿ ಉಳಿದಿದೆ. ಮಠದಲ್ಲಿ ಎರಡು ಗದ್ದುಗೆಗಳು ಸ್ಥಾಪನೆಯಾಗಿವೆ. ಶ್ರೀ ಫಕೀರೇಶ್ವರ ಮಠವು ಶಿರಹಟ್ಟಿಯ ಶಾಖಾ ಮಠವಾಗಿದ್ದರೂ ಕಾಲ ಕ್ರಮೇಣ ದಾರಕೇಶ್ವರ ಮಠದ ಶಾಖಾಮಠವಾಗಿ ಬೆಳೆದಿದೆ. ಈ ಮಠದಲ್ಲಿರುವ ಗದ್ದುಗೆಗೆ ಪೂಜೆ ಹಾಗೂ ಇಲ್ಲಿ ನಡೆಯುವ ಧಾರ್ಮಿಕ ಕಾರ್ಯಗಳನ್ನು ದಾರಕೇಶ್ವರ ಮಠವೇ ನಡೆಸುತ್ತಿದೆ.

ದಾರಕೇಶ್ವರ ಮಠ: ಬನ್ನಿಕೊಪ್ಪದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ದಾರಕೇಶ್ವರ ಮಠವು ಹದಿನೈದು ವರ್ಷಗಳ ಹಿಂದೆ ಪ್ರಾರಂಭವಾಗಿದೆ. ಡಾ. ಎಸ್.ಎಂ.ಹಿರೇಮಠ ಎಂಬ ವೃದ್ಧರು ತಮಗೆ ಮಕ್ಕಳಿಲ್ಲದ ಕಾರಣಕ್ಕೆ ತಮ್ಮ ಅಪಾರ ಆಸ್ತಿಯು ಸಮಾಜಕ್ಕೆ ಸದ್ವಿನಿಯೋಗವಾಗಲೆಂದು ಮಠಸ್ಥಾಪಿಸಿ, ಧಾರ್ಮಿಕ ಕಾರ್ಯಗಳನ್ನು ನಡೆಸಲು ಅನುವು ಮಾಡಿಕೊಟ್ಟರು.

ಪರಂಪರೆ: ಉಜ್ಜಯಿನಿ ಪೀಠದ ಪರಂಪರೆಯ ಶಾಖಾ ಮಠವಾಗಿ ರೂಪುಗೊಂಡ ಶ್ರೀ ದಾರಕೇಶ್ವರ ಮಠವು ಈ ಗ್ರಾಮದಲ್ಲಿ ನಡೆಯುವ ಧಾರ್ಮಿಕ ಕಾರ್ಯಗಳಿಗೆ ಸ್ಪಂದಿಸುತ್ತಾ ಭಕ್ತರನ್ನು ಸನ್ಮಾರ್ಗದಲ್ಲಿ ಮುನ್ನಡೆಸುತ್ತಿದೆ. ಮಠವನ್ನು ಪ್ರಾರಂಭಿಸಿದ ಹಿರೇಮಠದವರು ಇದೇ ಗ್ರಾಮದ ವಿರೂಪಾಕ್ಷಯ್ಯ ಮತ್ತು ಫಕೀರವ್ವನವರ ಪುತ್ರರಾಗಿ ಜನಿಸಿದ ಶ್ರೀ ಸುಜ್ಞಾನ ದೇವರನ್ನು ಹತ್ತು ವರ್ಷದ ಬಾಲಕರಾಗಿರುವಾಗಲೇ ನೂತನ ಮಠಕ್ಕೆ ಮಠಾಧೀಶ್ವರರನ್ನಾಗಿ ನೇಮಕ ಮಾಡಿದ್ದಾರೆ.

ಪಟ್ಟಾಧಿಕಾರ ಪಡೆದ ಶ್ರೀ ಸುಜ್ಞಾನ ಶಿವಾಚಾರ್ಯ ಸ್ವಾಮಿಗಳು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಮುಗಿಸಿ ಹೊನ್ನಾಳಿಯಲ್ಲಿ ಕಾಲೇಜು ಶಿಕ್ಷಣ ಮುಗಿಸಿದರು. ಕಾಶಿಯಲ್ಲಿ ಸಂಸ್ಕೃತ ಎಂ.ಎ.ಮುಗಿಸಿ ಈಗ ಪಿಎಚ್.ಡಿ. ಮಾಡತೊಡಗಿದ್ದಾರೆ. ಗುರುಗಳು ತಿಂಗಳಿಗೊಮ್ಮೆ ಮಠಕ್ಕೆ ಬಂದು ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಈ ಜವಾಬ್ದಾರಿಯ ಜೊತೆ ಮೈಸೂರಿನ ಅರಮನೆ ಜಪದಕಟ್ಟೆ ಮಠದ ಅಧಿಕಾರವನ್ನು ವಹಿಸಿಕೊಂಡು ಎರಡು ಮಠಗಳನ್ನು ನೋಡಿಕೊಳ್ಳುತ್ತಿದ್ದಾರೆ.

ಮಠದಲ್ಲಿ ದಾರುಕಾಚಾರ್ಯರ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದು ನಿತ್ಯ ಪೂಜೆ ನಡೆಸಲಾಗುತ್ತಿದೆ. ಗುರುಗಳು ಪಟ್ಟಾಧಿಕಾರ ಪಡೆದಾಗಿನಿಂದ ಈಗಿನ ತನಕ ಈ ಗ್ರಾಮದ ಹೊರಗೆ ಇದ್ದು ಅಭ್ಯಾಸ ಮಾಡುತ್ತಿರುವುದರಿಂದ ಧಾರ್ಮಿಕ ಆಚರಣೆಗಳು ಹಾಗೂ ಇತರೇ ಚಟುವಟಿಕೆಗಳು ನಡೆಯಲು ಸಾಧ್ಯವಾಗಿಲ್ಲ.

ವಿಳಾಸ: ಷ.ಬ್ರ.ಶ್ರೀ ಸುಜ್ಞಾನ ಶಿವಾಚಾರ್ಯ ಸ್ವಾಮಿಗಳು, ಶ್ರೀ ದಾರುಕೇಶ್ವರ ಮಠ, ಬನ್ನಿಕೊಪ್ಪ, ಶಿರಹಟ್ಟಿ ತಾ, ಗದಗ ಜಿಲ್ಲೆ.

ಬಾಲೇಹೊಸೂರು

ಶಿರಹಟ್ಟಿ ತಾಲ್ಲೂಕಿನ ಬಾಲೇಹೊಸೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ನಲ್ವತ್ತು ಕಿ.ಮೀ. ದೂರದಲ್ಲಿದೆ. ಅಭಿವೃದ್ಧಿ ಕಾಣದ ಈ ಗ್ರಾಮದಲ್ಲಿ ಶ್ರೀ ದಿಂಗಾಲೇಶ್ವರ ವಿರಕ್ತಮಠದ ಸ್ಥಾಪನೆಯಿಂದಾಗಿ ಧಾರ್ಮಿಕ ಸಂಸ್ಕಾರವನ್ನು ಕಂಡಿದೆ.

ದಿಂಗಾಲೇಶ್ವರ ವಿರಕ್ತಮಠ: ಬಾಲೇಹೊಸೂರು ಗ್ರಾಮದ ಹೊರಭಾಗದಲ್ಲಿ ಶ್ರೀ ದಿಂಗಾಲೇಶ್ವರ ವಿರಕ್ತ ಮಠವು ಸ್ಥಾಪನೆಯಾಗಿದೆ. ಗದಗ ಜಿಲ್ಲೆಯ ಬಯಲು ಪ್ರದೇಶದಿಂದ, ಹಾನಗಲ್ಲಿನ ಮಲೆನಾಡು ಪ್ರಾಂತ್ಯದವರೆಗೆ ಧರ್ಮಪ್ರಸಾರವನ್ನು ಕೈಗೊಂಡು ಬಹಳ ಪ್ರಸಿದ್ಧ ಮಠವಾಗಿ ರೂಪುಗೊಂಡಿದೆ.

ಮಠ ಸ್ಥಾಪನೆ: ಸಮಾಜದ ಎಲ್ಲಾ ವರ್ಗಗಳ ಭಕ್ತಸಮೂಹದ ಹಿತರಕ್ಷಣೆಗಾಗಿ ಶ್ರೀ ದಿಂಗಾಲೇಶ್ವರ ಸ್ವಾಮಿಗಳು ಬಾಲೇಹೊಸೂರು ಗ್ರಾಮದಲ್ಲಿ ಈ ಮಠವನ್ನು ಸ್ಥಾಪನೆ ಮಾಡಿದರು. ಅಲ್ಲದೆ ತಾವು ಲೋಕಸಂಚಾರ ಕೈಗೊಂಡು ಅನುಷ್ಠಾನ ಕೈಗೊಂಡ ಸ್ಥಳಗಳನ್ನು ಜಾಗೃತ ಸ್ಥಳಗಳನ್ನಾಗಿ ಪರಿವರ್ತಿಸಿದರು. ಸಮಾಜವನ್ನು ಧರ್ಮದ ನೆಲೆಗಟ್ಟಿನ ಮೇಲೆ ಬೆಳೆಸಲು ಶ್ರೀದಿಂಗಾಲೇಶ್ವರ ಸ್ವಾಮಿಗಳು ಮಠವನ್ನು ಸ್ಥಾಪಿಸಿದ್ದಾರೆ. ಅಂದು ಸ್ಥಾಪನೆಗೊಂಡ ಮಠ ಈ ತನಕ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ಶ್ರೀ ದಿಂಗಾಲೇಶ್ವರ ಮಠವು ವಿರಕ್ತ ಸಂಪ್ರದಾಯದ ಕುಮಾರ ಸಮಯಕ್ಕೆ ಸೇರಿದ ಮಠವಾಗಿದೆ. ಸಕಲ ಧರ್ಮಗಳ ಭಕ್ತ ಸಮೂಹಕ್ಕೆ ವಿವಿಧ ರೀತಿಯ ಮಾರ್ಗದರ್ಶನ, ನೆರವು, ಸಹಕಾರ ನೀಡಿ ಭಕ್ತರನ್ನು ಉದ್ಧರಿಸುವ ಮಠವಾಗಿ ಬೆಳೆದಿದೆ. ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಾಧನೆ ಮಾಡಿ ಒಟ್ಟು ಸಮಾಜದ ಅಭಿವೃದ್ಧಿಗೆ ಮುಂದಾಗಿದೆ.

ಪರಂಪರೆ: ಮಠದ ಪರಂಪರೆಯ ಕರ್ತೃಗುರುಗಳು ಶ್ರೀ ದಿಂಗಾಲೇಶ್ವರರು ಎಂದು ಹೇಳಬಹುದಾದರೂ ಇವರ ಕಾಲಮಾನದ ಬಗ್ಗೆ ನಿಖರವಾಗಿ ತಿಳಿದಿಲ್ಲ. ಪರಂಪರೆಯಲ್ಲಿ ಬಂದಿರಬಹುದಾದ ಗದ್ದುಗೆಗಳು ಮಠದ ಆವರಣದಲ್ಲಿ ನೋಡಸಿಗುತ್ತವೆ. ಆದರೆ ಈ ಗದ್ದುಗೆಗಳು ಯಾರವುಗಳೆಂದು ಗುರುತಿಸಲು ಸಾಧ್ಯವಾಗುತ್ತಿಲ್ಲ. ಮಠದ ಕೇಂದ್ರ ಸ್ಥಾನದಲ್ಲಿ ಕರ್ತೃಗದ್ದುಗೆ, ಬಲಬದಿಯಲ್ಲಿ ಒಂದು ಗದ್ದುಗೆ, ಹೊರಗೆ ಒಂದೇ ಮಂಟಪದಲ್ಲಿ ಎರಡು ಗದ್ದುಗೆಗಳು, ಮತ್ತೊಂದು ಮಂಟಪದಲ್ಲಿ ಒಂದು ಗದ್ದುಗೆ ನಿರ್ಮಾಣವಾಗಿವೆ. ಈ ಹಿನ್ನೆಲೆಯಲ್ಲಿ ಮಠದ ಪರಂಪರೆ ಪುರಾತನ ಕಾಲದ್ದು ಎಂದು ಹೇಳಬಹುದು.

ಮಠದ ಪರಂಪರೆಯಲ್ಲಿ ಬರುವ ಶ್ರೀ ದಿಂಗಾಲೇಶ್ವರ ಸ್ವಾಮಿಗಳು ಶಿವಪೂಜಾನಿಷ್ಠರಾಗಿದ್ದರು ಹಾಗೂ ಧಾರ್ಮಿಕ ಚಟುವಟಿಕೆಯ ಕಡೆಗೆ ಒತ್ತುಕೊಟ್ಟು ಮಠವನ್ನು ಮುನ್ನಡೆಸಿದ್ದರೆಂದು ಇಲ್ಲಿನ ಭಕ್ತರು ಅಭಿಪ್ರಾಯಿಸುತ್ತಾರೆ. ಶ್ರೀ ದಿಂಗಾಲೇಶ್ವರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಅನೇಕ ವರ್ಷಗಳ ಕಾಲ ಮಠವು ಉತ್ತರಾಧಿಕಾರಿಗಳಿಲ್ಲದೆ ಖಾಲಿ ಉಳಿದಿತ್ತು. ಗ್ರಾಮದ ಭಕ್ತರು ಸೂಕ್ತ ಉತ್ತರಾಧಿಕಾರಿಗಳಿಗಾಗಿ ಅನ್ವೇಷಣೆ ನಡೆಸಿದ್ದರಾದರೂ ದೊರೆತಿರಲಿಲ್ಲ. ನಂತರ ಮುಂಡರಗಿಯ ಶ್ರೀ ಅನ್ನದಾನೇಶ್ವರ ಸ್ವಾಮಿಗಳು ಮತ್ತು ಬಳ್ಳಾರಿ ಜಿಲ್ಲೆಯ ಲಿಂಗನಾಯಕನ ಹಳ್ಳಿಯ ಶ್ರೀ ಚನ್ನವೀರಸ್ವಾಮಿಗಳ ಸಮಯೋಚಿತ ನಿಲುವಿನಿಂದ ರಾಯಚೂರು ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಬೊಮ್ಮನಾಳ ಗ್ರಾಮದ ಶ್ರೀ ವೀರಯ್ಯ ಮತ್ತು ಶ್ರೀಮತಿ ಪಾರ್ವತಮ್ಮನವರ ಪುತ್ರರಾದ ಶ್ರೀ ಬೊಮ್ಮಲಿಂಗೇಶ್ವರ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿದರು. ಬೊಮ್ಮನಾಳದಲ್ಲಿ ಜನಿಸಿದ ಶ್ರೀ ಬೊಮ್ಮಲಿಂಗೇಶ್ವ ದೇವರು ಬೊಮ್ಮನಾಳ ಶಿವಯೋಗ ಮಂದಿರದಲ್ಲಿ ವಿದ್ಯಾಭ್ಯಾಸವನ್ನು ಕಲಿತು ನಂತರ ಕೊಪ್ಪಳದ ಗವಿಮಠದಲ್ಲಿ ಆಶ್ರಯ ಪಡೆದು ಧಾರ್ಮಿಕ ಶಿಕ್ಷಣವನ್ನು ಪಡೆದು ೧೯೯೫

ರ ಏಪ್ರಿಲ್ ಇಪ್ಪತ್ತಾರರಲ್ಲಿ ಶ್ರೀ ದಿಂಗಾಲೇಶ್ವರ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡಿರುತ್ತಾರೆ. ಮುಂಡರಗಿಯ ಶ್ರೀ ಅನ್ನದಾನೇಶ್ವರ ಸ್ವಾಮಿಗಳು ಶ್ರೀ ಬೊಮ್ಮಲಿಂಗೇಶ್ವರ ದೇವರಿಗೆ ಶ್ರೀ ದಿಂಗಾಲೇಶ್ವರ ಸ್ವಾಮಿಗಳೆಂದು ಅಭಿದಾನವಿತ್ತು ಪಟ್ಟಾಧಿಕಾರದ ಅನುಗ್ರಹ ನೀಡಿರುತ್ತಾರೆ.

ಅಧಿಕಾರಕ್ಕೆ ಮುನ್ನ ಅಭಿವೃದ್ಧಿ: ಶ್ರೀ ದಿಂಗಾಲೇಶ್ವರ ಸ್ವಾಮಿಗಳು ಅಧಿಕಾರಕ್ಕೆ ಬರುವ ಮೊದಲು ಉತ್ತರಾಧಿಕಾರಿಯಾಗಿ ನೇಮಕಗೊಂಡು ಮಠದಲ್ಲಿ ನೆಲೆಸಿ ಧಾರ್ಮಿಕ ಕಾರ್ಯಗಳ ಜೊತೆಗೆ ಮಠದ ಸರ್ವಾಂಗೀಣ ಅಭಿವೃದ್ಧಿಯ ಕಡೆ ಒತ್ತು ಕೊಟ್ಟರು. ಕರ್ತೃಗುರುಗಳ ಗದ್ದುಗೆಗೆ ಕಟ್ಟಡ ನಿರ್ಮಾಣ ಮಾಡಿದರು. ಬಸವತತ್ತ್ವವನ್ನು ಪ್ರಚಾರಕ್ಕೆ ತರುವ ಉದ್ದೇಶದಿಂದ ಪ್ರವಚನ ಕಾರ್ಯ ಕೈಗೊಂಡು ಭಕ್ತರು ಮಠದೆಡೆಗೆ ಒಲವು ತೋರುವಂತೆ ಮಾಡಿದರು. ಏಳು ಅಂಕಣದಲ್ಲಿ ಮಠದ ಕಟ್ಟಡವನ್ನು ಕಲ್ಲಿನಿಂದ ನಿರ್ಮಿಸಿ ಧಾರ್ಮಿಕ ಸ್ಮಾರಕವಾಗಿ ರೂಪಿಸಿದ್ದಾರೆ. ಈ ಅಭಿವೃದ್ಧಿ ಕಾರ್ಯಗಳು ಮುಗಿದ ಮೇಲೆ ಅಧಿಕಾರವನ್ನು ಪಡೆದು ನಾಡಿನ ನಾನಾ ಭಾಗಗಳಲ್ಲಿರುವ ಶಾಖಾಮಠಗಳನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ಸಾಂಸ್ಕೃತಿಕ ಒಲವು: ಸಂಗೀತ, ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಗಳ ಬಗ್ಗೆ ಒಲವು ಇರುವ ಗುರುಗಳು ಧಾರ್ಮಿಕ ಕಾರ್ಯಗಳ ಜತೆಗೆ ಸಮಾಜದಲ್ಲಿ ಸಾಂಸ್ಕೃತಿಕ ವಾತಾವರಣ ಬೆಳೆಯಲು ನೆರವಾಗಿದ್ದಾರೆ. ಹಿರಿಯ ಗುರುಗಳ ಆರಾಧನೆಯನ್ನು ಅರ್ಥಪೂರ್ಣವಾಗಿ ಆಚರಣೆ ಮಾಡುತ್ತಾರೆ. ಶಿಕ್ಷಣದ ಬಗ್ಗೆ ಆಸಕ್ತಿ ಹೊಂದಿರುವ ಗುರುಗಳು ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ನಡೆಸಲು ಮಠದ ನಿವೇಶನವನ್ನು ದಾನಮಾಡಿ ಶಿಕ್ಷಣ ಕ್ಷೇತ್ರ ಬೆಳೆಯಲು ನೆರವಾಗಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ದಿಂಗಾಲೇಶ್ವರ ಸ್ವಾಮಿಗಳು, ಶ್ರೀ ದಿಂಗಾಲೇಶ್ವರ ಮಠ, ಬಾಲೇಹೊಸೂರು, ಶಿರಹಟ್ಟಿ ತಾ, ಗದಗ ಜಿಲ್ಲೆ.

ಬೆಳ್ಳಟ್ಟಿ

ಶಿರಹಟ್ಟಿ ತಾಲ್ಲೂಕಿನ ಬೆಳ್ಳಟ್ಟಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹತ್ತೊಂಬತ್ತು ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಉತ್ತರದ ಹೊರಭಾಗದಲ್ಲಿರುವ ಗುಡ್ಡದ ಮೇಲೆ ಶ್ರೀ ರಾಮಲಿಂಗೇಶ್ವರ ಮಠವು ಸ್ಥಾಪನೆಯಾಗಿದೆ. ಶಿರಹಟ್ಟಿಯ ಶ್ರೀ ಫಕೀರೇಶ್ವರ ಸ್ವಾಮಿಗಳು ಅನುಷ್ಠಾನ ಕುಳಿತ ಯೋಗಸ್ಥಳವೇ ಮಠವಾಗಿ ರೂಪು ಪಡೆದಿದೆ.

ರಾಮಲಿಂಗೇಶ್ವರ ಮಠ: ಬೆಳ್ಳಟ್ಟಿ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ರಾಮಲಿಂಗೇಶ್ವರ ಮಠವು ಪುರಾಣ ಪ್ರಸಿದ್ಧ ಕ್ಷೇತ್ರದಲ್ಲಿ ಸ್ಥಾಪನೆಯಾಗಿದೆ. ಈ ತಪೋಜಾಗದಲ್ಲಿ ರಾಮ-ಲಕ್ಷ್ಮಣರು ವನವಾಸದ ಸಂದರ್ಭದಲ್ಲಿ ಇಲ್ಲಿನ ಬೆಟ್ಟದ ಮೇಲೆ ಪೂಜೆಗೆ ಕುಳಿತು ಈಶ್ವರಲಿಂಗವನ್ನು ಸ್ಥಾಪನೆ ಮಾಡಿದ್ದರಿಂದ ಈ ಬೆಟ್ಟಕ್ಕೆ ರಾಮಲಿಂಗೇಶ್ವರ ಬೆಟ್ಟ ಎಂದು ಹೆಸರು ಬಂದಿತು ಎಂದು ಸ್ಥಳ ಪುರಾಣ ಹೇಳುತ್ತದೆ. ಇಂತಹ ವೈಶಿಷ್ಟ್ಯ ಇರುವ ಈ ಬೆಟ್ಟದಲ್ಲಿ ಶ್ರೀ ಫಕೀರೇಶ್ವರರು ತಪೋನುಷ್ಠಾನಗೊಂಡು ಮಠವನ್ನು ಸ್ಥಾಪನೆ ಮಾಡಿದರು. ರಾಮಲಿಂಗೇಶ್ವರ ಬೆಟ್ಟದಲ್ಲಿ ಮಠ ಸ್ಥಾಪನೆಯಾಗಿದ್ದರಿಂದ ರೂಢಿಗತವಾಗಿ ಈ ಮಠಕ್ಕೆ **'ರಾಮಲಿಂಗೇಶ್ವರ ಮಠ'** ಎಂದು ಹೆಸರು ಬರಲು ಕಾರಣವಾಯಿತು.

ಮಠದ ಪರಂಪರೆ:

೧. ಶ್ರೀ ಫಕೀರಯ್ಯ ಸ್ವಾಮಿಗಳು
೨. ಶ್ರೀ ಸಣ್ಣ ಫಕೀರಯ್ಯ ಸ್ವಾಮಿಗಳು
೩. ಶ್ರೀ ಫಕೀರಜ್ಜ ಸ್ವಾಮಿಗಳು
೪. ಶ್ರೀ ಗುರುಪಾದಯ್ಯ ಸ್ವಾಮಿಗಳು
೫. ಶ್ರೀ ವೀರಭದ್ರ ಸ್ವಾಮಿಗಳು
೬. ಶ್ರೀ ಬಸವರಾಜ ಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಮಠದ ಕರ್ತೃಗುರುಗಳಾದ ಶ್ರೀ ಫಕೀರಯ್ಯ ಸ್ವಾಮಿಗಳು ಈ ತಪೋಭೂಮಿಯಲ್ಲಿ ಮಠವನ್ನು ಸ್ಥಾಪಿಸಿ ಶ್ರೀ ಫಕೀರೇಶ್ವರರ ತತ್ತ್ವಗಳನ್ನು ನಾಡಿಗೆ ಸಾರಿ ೧೮೪೯ರಲ್ಲಿ ಲಿಂಗೈಕ್ಯರಾಗಿದ್ದಾರೆ.

ಮಠದ ಪರಂಪರೆಯಲ್ಲಿ ಬಂದಂತಹ ಗುರುಗಳು ಶಿವಪೂಜಾನಿಷ್ಠರಾಗಿ ವೀರಶೈವ ಧರ್ಮವು ಬೆಳೆಯಲು ಸಹಾಯಕರಾಗಿದ್ದಾರೆ. ಶ್ರೀ ವೀರಭದ್ರಸ್ವಾಮಿಗಳು ಮಠವನ್ನು ಸರ್ವಾಂಗೀಣವಾಗಿ ಅಭಿವೃದ್ಧಿಪಡಿಸಿ ಜುಲೈ ಇಪ್ಪತ್ತೆರಡರ ೨೦೦೦ದಂದು ಲಿಂಗೈಕ್ಯರಾಗಿದ್ದಾರೆ. ಶ್ರೀ ವೀರಭದ್ರಸ್ವಾಮಿಗಳ ನಂತರ ೨೦೦೧ರಲ್ಲಿ ಶ್ರೀ ಬಸವರಾಜ ಸ್ವಾಮಿಗಳಿಗೆ ಪಟ್ಟಾಧಿಕಾರ ನಡೆಯಿತು. ಈ ಪರಂಪರಾಗತ ಮಠದಲ್ಲಿ ಶ್ರೀ ಬೂದಿಸ್ವಾಮಿಗಳ ಗದ್ದುಗೆಯೊಂದು ಸ್ಥಾಪನೆಯಾಗಿದ್ದು, ಇದೂ ಸಹ ಮಠದ ಪರಂಪರೆಯ ಗುರುಗಳದ್ದು ಎಂದು ಹೇಳಲಾಗುತ್ತಿದೆ.

ಧಾರ್ಮಿಕ ಕಾರ್ಯಗಳು: ನಿತ್ಯ ಗದ್ದುಗೆಗಳಿಗೆ ಹಾಗೂ ಮಠದ ಆವರಣದಲ್ಲಿ ಸ್ಥಾಪನೆಯಾಗಿರುವ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಎರಡು ವೇಳೆ ಪೂಜೆ ನಡೆಯುತ್ತಿದೆ. ಅಮಾವಾಸ್ಯೆ, ಹುಣ್ಣಿಮೆ ಹಾಗೂ ಶ್ರಾವಣ, ಕಾರ್ತೀಕ ಮಾಸಗಳಲ್ಲಿ ವಿಶೇಷ ಪೂಜೆಗಳು ನಡೆಯಲ್ಪಡುತ್ತವೆ. ಯುಗಾದಿಯ ಪಾಡ್ಯದಲ್ಲಿ ರಾಮಲಿಂಗೇಶ್ವರರ ಜಾತ್ರೆಯು ಏಳು ದಿನಗಳ ಕಾಲ ನಡೆಯುತ್ತಿದೆ. ಮಠದ ಆಸ್ತಿಯಾಗಿ ಹದಿನಾರು ಎಕರೆ ಜಮೀನಿದ್ದು ಈ ಜಮೀನಿನಿಂದ ಬರುವ ಅಲ್ಪಸಲ್ಪ ಆದಾಯವನ್ನು ಮಠದ ಧಾರ್ಮಿಕ ಕಾರ್ಯಗಳಿಗೆ ಬಳಸಿಕೊಳ್ಳುತ್ತಿದ್ದಾರೆ. ಶ್ರೀ ವೀರಭದ್ರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಅಧಿಕಾರಕ್ಕೆ ಬಂದ ಶ್ರೀ ಬಸವರಾಜ ಸ್ವಾಮಿಗಳು ಮಠದ ಧಾರ್ಮಿಕ ಮತ್ತು ಆಡಳಿತ ಕಾರ್ಯವನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಬಸವರಾಜ ಸ್ವಾಮಿಗಳು, ಶ್ರೀ ರಾಮಲಿಂಗೇಶ್ವರ ಮಠ, ಬೆಳ್ಳಟ್ಟಿ, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ.

ಮಾಗಡಿ

ಶಿರಹಟ್ಟಿ ತಾಲ್ಲೂಕಿನ ಮಾಗಡಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಏಳು ಕಿ.ಮೀ. ದೂರದಲ್ಲಿದೆ. ಇಲ್ಲಿ ಇತ್ತೀಚೆಗೆ ಶರಣೆ ನೀಲಮ್ಮನ ಮಠ ಮತ್ತು ಶ್ರೀ ಫಕೀರಸ್ವಾಮಿಮಠ ಸ್ಥಾಪನೆಯಾಗಿ ಧಾರ್ಮಿಕ ಕೇಂದ್ರವಾಗಿ ಬೆಳೆದಿವೆ.

ಶರಣೆ ನೀಲಮ್ಮನ ಮಠ: ಮಾಗಡಿ ಗ್ರಾಮದ ಮಧ್ಯಭಾಗದಲ್ಲಿ ಶರಣೆ ನೀಲಮ್ಮನವರ ಮಠ ಅಸ್ತಿತ್ವದಲ್ಲಿದೆ. ಪುರಾತನ ಕಾಲದಲ್ಲಿ ಸ್ಥಾಪನೆಯಾದ ಈ ಮಠದಲ್ಲಿ ಈಗ ಯಾರೂ ಉತ್ತರಾಧಿಕಾರಿಗಳು ಇಲ್ಲ. ಶರಣೆ ನೀಲಮ್ಮನವರ ಗದ್ದುಗೆಗೆ ಪೂಜೆಯನ್ನು ನಡೆಸಿಕೊಂಡು ಬರಲಾಗುತ್ತಿದೆ.

ಫಕೀರಸ್ವಾಮಿ ಮಠ: ಮಾಗಡಿ ಗ್ರಾಮದ ಮಧ್ಯಭಾಗದಲ್ಲಿ ಶ್ರೀ ಫಕೀರಸ್ವಾಮಿ ಮಠವು ಇದೆ. ಶ್ರೀ ಫಕೀರ ಸ್ವಾಮಿಗಳು ಇಲ್ಲಿ ಅನುಷ್ಠಾನಗೊಂಡಿದ್ದರು ಎಂಬ ಕಾರಣಕ್ಕೆ ಅವರ ಹೆಸರಲ್ಲಿ ಮಠ ಸ್ಥಾಪನೆಯಾಗಿದ್ದು ಅವರ ತೋರುಗದ್ದುಗೆ ರಚನೆಯಾಗಿ ಪೂಜೆ ನಡೆಯುತ್ತಿದೆ.

ಮುಕ್ತಿಮಂದಿರ

ಶಿರಹಟ್ಟಿ ತಾಲ್ಲೂಕಿನ ಮುಕ್ತಿ ಮಂದಿರವು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಹದಿನೈದು ಕಿ.ಮೀ.ದೂರದಲ್ಲಿದೆ. ಬಾಳೆಹೊನ್ನೂರಿನ ರಂಭಾಪುರಿ ಪೀಠದ ಜಗದ್ಗುರುಗಳಾಗಿದ್ದ ಶ್ರೀ ವೀರರುದ್ರಮುನಿ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ೧೯೩೨ ರಲ್ಲಿ ಸ್ಥಾಪಿಸಿದ ಮುಕ್ತಿ ಮಂದಿರವು ಇಂದು ನಾಡಿನ ಹೆಸರಾಂತ ಕ್ಷೇತ್ರಗಳಲ್ಲಿ ಒಂದಾಗಿ ಬೆಳೆದಿದೆ. ಹುಬ್ಬಳ್ಳಿ ತಾಲ್ಲೂಕಿನ ಪಾಲಿಕೊಪ್ಪದ ಹಿರೇಮಠದ ಮಠಾಧೀಶರಾಗಿದ್ದ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ೧೯೩೨ ರಿಂದ ೧೯೪೭ ರ ತನಕ ತಾವು ಸ್ಥಾಪಿಸಿದ ಮುಕ್ತಿ ಮಂದಿರದಲ್ಲಿ ನೆಲೆಸಿದ್ದರು. ಇದಾದ ನಂತರ ರಂಭಾಪುರಿ ಪೀಠದ ಉತ್ತರಾಧಿಕಾರಿಯಾಗಿ ನೇಮಕಗೊಂಡ ಶ್ರೀ ಪ್ರಸನ್ನ ರೇಣುಕ ವೀರ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ೧೯೪೭ರಲ್ಲಿ ಬಾಳೆಹೊನ್ನೂರಿನಲ್ಲಿ ಜಗದ್ಗುರುಗಳಾಗಿ ಅಧಿಕಾರವಹಿಸಿಕೊಂಡು, ಎರಡೂ ಕಡೆಯ ಆಡಳಿತವನ್ನು ನೋಡಿಕೊಂಡು ಬರುತ್ತಿದ್ದರು.

ಶ್ರೀ ರಂಭಾಪುರಿ ಪೀಠದ ಅಧಿಕಾರವನ್ನು ವಹಿಸಿಕೊಂಡು ಸಮರ್ಥವಾಗಿ ಆಡಳಿತವನ್ನು ನಡೆಸಿದ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ತಮ್ಮ ವಿಶ್ರಾಂತ ಜೀವನವನ್ನು ನಡೆಸಲು ಪುನಃ ಮುಕ್ತಿ ಮಂದಿರಕ್ಕೆ ಬಂದು ನೆಲೆಸುತ್ತಾರೆ. ಇಲ್ಲಿ ನೆಲೆಗೊಂಡ ಸಂದರ್ಭದಲ್ಲಿ ವಿಶ್ವ ವೀರಶೈವ ಗುರುವರ್ಗದ ಬೃಹತ್ ಸಮಾವೇಶವನ್ನು ನಡೆಸಿದರು. ಅಲ್ಲದೆ

ನೂರೆಂಟು ಲಿಂಗ ಪೂಜೆ, ದಸರಾ ದರ್ಬಾರು ಈ ರೀತಿ ಅನೇಕ ಧಾರ್ಮಿಕ ಕಾರ್ಯಗಳನ್ನು ಮಾಡುವುದರ ಜೊತೆಗೆ ಅನೇಕ ಪವಾಡಗಳನ್ನು ಮಾಡಿದರು. ನಂತರ ಶ್ರೀ ವಿಮಲ ರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ಸ್ವಾಮಿಗಳಿಗೆ ೧೯೮೨ ರ ಫೆಬ್ರುವರಿ ಇಪ್ಪತ್ತಾರರಂದು ಜಗದ್ಗುರು ಶ್ರೀ ಪ್ರಸನ್ನ ವೀರ ಗಂಗಾಧರ ಶಿವಾಚಾರ್ಯ ಭಗವತ್ಪಾದರ ಸಮ್ಮುಖದಲ್ಲಿ ಪಟ್ಟಾಧಿಕಾರವನ್ನು ನೀಡಲಾಗಿದೆ.

ಪಾಲಿಕೊಪ್ಪದ ಪುತ್ರವರ್ಗದ ಪರಂಪರೆಯ ಹಿರೇಮಠದ ಶ್ರೀ ಅಡವಿಸ್ವಾಮಿ ಮತ್ತು ಶ್ರೀಮತಿ ರಾಚಮ್ಮನವರ ಪುತ್ರರಾಗಿ ೧೯೫೮ ರ ಜನವರಿ ಇಪ್ಪತ್ತೈದರಂದು ಜನಿಸಿದ ಶ್ರೀ ವಿಮಲ ರೇಣುಕ ಮುಕ್ತಿಮುನಿ ಶಿವಾಚಾರ್ಯ ಸ್ವಾಮಿಗಳು ಬಾಳೆಹೊನ್ನೂರಿನಲ್ಲಿ ವೇದ ಹಾಗೂ ಸಂಸ್ಕೃತವನ್ನು ಕಲಿತು ಬೆಂಗಳೂರಿನ ಮಹಂತಿನ ಮಠದಲ್ಲಿ ಆಶ್ರಯ ಪಡೆದು ವೀರಶೈವ ಸಿದ್ಧಾಂತವನ್ನು ಕಲಿತು ಮುಕ್ತಿ ಮಂದಿರಕ್ಕೆ ಆಗಮಿಸಿದರು. ಹಿರಿಯ ಜಗದ್ಗುರುಗಳು ಮಾಡುತ್ತಿದ್ದ ಅನೇಕ ಪ್ರಗತಿ ಕಾರ್ಯಗಳನ್ನು ಮುಂದುವರೆಸಿದ್ದಾರೆ.

ಶ್ರೀ ವಿಮಲರೇಣುಕ ಮುಕ್ತಿಮುನಿ ಶಿವಾಚಾರ್ಯ ಸ್ವಾಮಿಗಳು ವೀರಶೈವ ಧರ್ಮದ ಪ್ರಸಾರ ಕಾರ್ಯವನ್ನು ಯಶಸ್ವಿಯಾಗಿ ನಡೆಸುತ್ತಿದ್ದಾರೆ. ಅಲ್ಲದೆ ಶ್ರೀ ಜಗದ್ಗುರು ಗಂಗಾಧರ ಶಿವಾಚಾರ್ಯ ಸ್ವಾಮಿಗಳ ತ್ರಿಕೋಟಿ ಲಿಂಗವನ್ನು ಸ್ಥಾಪಿಸುವ ಮಹದಾಸೆಯನ್ನು ಈಡೇರಿಸಲು ಟ್ರಸ್ಟನ್ನು ರಚಿಸಿದ್ದ ಶ್ರೀ ಎಂ.ಜಿ.ಹಾಲಯ್ಯ ಎಂಬುವರು ದಾನವಾಗಿ ನೀಡಿರುವ ಹದಿನಾರು ಎಕರೆ ಜಮೀನಿನಲ್ಲಿ ಮೂರುಕೋಟಿ ಲಿಂಗುಗಳನ್ನು ಸ್ಥಾಪಿಸಲು ಹನ್ನೆರಡು ಕೋಟಿ ರೂಗಳ ಯೋಜನೆಯನ್ನು ತಯಾರಿಸಿಕೊಂಡಿದ್ದಾರೆ. ಶ್ರೀ ಜಗದ್ಗುರು ಪ್ರಸನ್ನ ವೀರಗಂಗಾಧರ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಯನ್ನು ಹದಿನಾರು ಲಕ್ಷರೂಗಳ ಯೋಜನೆಯಲ್ಲಿ ನಿರ್ಮಿಸಿ, ಪ್ರಪಂಚದ ಎಲ್ಲಾ ಸಮಾಜ ಸುಧಾರಕರ ಮೂರ್ತಿಗಳನ್ನು ಸ್ಥಾಪಿಸಲಾಗಿದೆ.

ಧಾರ್ಮಿಕ ಕಾರ್ಯಗಳು: ಪ್ರತಿನಿತ್ಯ ಜಗದ್ಗುರುಗಳ ಗದ್ದುಗೆಗೆ ಮಹಾ ರುದ್ರಾಭಿಷೇಕ ನಡೆಸಲಾಗುತ್ತಿದೆ. ಪ್ರತಿ ಅಮಾವಾಸ್ಯೆ ದಿನ ವಿಶೇಷ ಪೂಜೆಯನ್ನು ನಡೆಸಲಾಗುವುದಲ್ಲದೆ ಶಿವಕೀರ್ತನೆಯನ್ನು ನಡೆಸಲಾಗುತ್ತಿದೆ. ಅಕ್ಟೋಬರ್ ತಿಂಗಳ ಆಶ್ವಿಜ ಬಹುಳ ತೃತೀಯದಲ್ಲಿ ಜಗದ್ಗುರು ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಶಿವರಾತ್ರಿ ಸಂದರ್ಭದಲ್ಲಿ ಐದು ದಿನಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಶಿವರಾತ್ರಿಯ ಮೊದಲ ದಿನ ಶಿವ ಪಾರ್ವತಿ ರಥೋತ್ಸವ, ಎರಡನೆಯ ದಿನ ಉಪವಾಸ ಜಾಗರಣೆ, ಮೂರನೆಯ ದಿನ ವೀರಭದ್ರಸ್ವಾಮಿ ಮತ್ತು ಮಹಾಗಣಪತಿ ರಥೋತ್ಸವ, ನಾಲ್ಕನೆಯ ದಿನ ಷಣ್ಮುಖ ಮತ್ತು ಲಕ್ಷ್ಮೀ ರಥೋತ್ಸವ, ಐದನೆಯ ದಿನ ವಿಶ್ವಶಕ್ತಿ ಮತ್ತು ಶ್ರೀ ರೇಣುಕರ ರಥೋತ್ಸವವನ್ನು ನಡೆಸಲಾಗುತ್ತಿದೆ.

ಸಾಮಾಜಿಕ ಸೇವೆ: ಈಗಿನ ಗುರುಗಳಾದ ಶ್ರೀ ವಿಮಲ ರೇಣುಕ ಮುಕ್ತಿಮುನಿ ಶಿವಾಚಾರ್ಯಸ್ವಾಮಿಗಳು ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ದುಡಿಯುತ್ತಿದ್ದಾರೆ. ಲಾತೂರಿನಲ್ಲಿ ಭೂಕಂಪ ಸಂಭವಿಸಿದ ಸಂದರ್ಭದಲ್ಲಿ ಹಾಗೂ ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಪಾದಯಾತ್ರೆಯ ಮೂಲಕ ಹಣ ಸಂಗ್ರಹಿಸಿ ಸಂತ್ರಸ್ತರಿಗೆ ನೀಡಿದ್ದಾರೆ. ಸಾಮೂಹಿಕ ವಿವಾಹವನ್ನು ನಡೆಸುವ ಮೂಲಕ ಸಮಾಜಕ್ಕೆ ನೆರವಾಗಿದ್ದಾರೆ.

ಶಿಕ್ಷಣ: ಬೆಳಗಾಂ ಜಿಲ್ಲೆಯ ಖಾನಾ ಪುರದ ದೇವಲತ್ತಿ ಗ್ರಾಮದಲ್ಲಿ ವೀರಮುಕ್ತಿ ಮಹರ್ಷಿಗಳ ಹೆಸರಿನಲ್ಲಿ ಪ್ರೌಢಶಾಲೆಯನ್ನು ನಡೆಸಲಾಗುತ್ತಿದೆ. ಸಂಸ್ಕೃತ ಪಾಠಶಾಲೆಯನ್ನು ಹಿಂದೆ ಪ್ರಾರಂಭಿಸಲಾಗಿದ್ದು ಕಾರಣಾಂತರಗಳಿಂದ ಸ್ಥಗಿತಗೊಳಿಸಲಾಗಿದೆ. ಈ ಶಾಲೆಯನ್ನು ಪುನರ್ ಪ್ರಾರಂಭಿಸಲು ಸಿದ್ಧತೆಯನ್ನು ಮಾಡಿಕೊಂಡಿದ್ದಾರೆ.ಹುಬ್ಬಳ್ಳಿ ಸಮೀಪದಲ್ಲಿ ಒಂದು ಶಾಖಾ ಮಠವನ್ನು ಪ್ರಾರಂಭಿಸಿ ಇಲ್ಲಿ ವೈದಿಕ ಪಾಠ ಶಾಲೆಯನ್ನು ಪ್ರಾರಂಭಿಸಲಾಗಿದೆ.

ವಿಳಾಸ: ಷ.ಬ್ರ.ಶ್ರೀ ವಿಮಲರೇಣುಕ ಮುಕ್ತಿಮುನಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ಮುಕ್ತಿ ಮಂದಿರ, ಶಿರಹಟ್ಟಿ ತಾ, ಗದಗಜಿಲ್ಲೆ.

ಲಕ್ಷ್ಮೇಶ್ವರ

ಶಿರಹಟ್ಟಿ ತಾಲ್ಲೂಕಿನ ಲಕ್ಷ್ಮೇಶ್ವರವು ತಾಲ್ಲೂಕಿನ ಅತಿ ದೊಡ್ಡ ಪಟ್ಟಣ. ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ

ಹದಿನೆಂಟು ಕಿ.ಮೀ. ದೂರದಲ್ಲಿರುವ ಈ ಪಟ್ಟಣವು ಐತಿಹಾಸಿಕ ಮಹತ್ವವನ್ನು ಪಡೆದಿದೆ. ಮುನ್ನೂರು ವರ್ಷಗಳ ಹಿಂದೆ ಅಂಕುಶ ಖಾನನಿಂದ ಆಳ್ವಿಕೆಗೊಂಡು ನಂತರ ಪುಲಿಗೆರೆ ಲಕ್ಷ್ಮಣ ಅರಸನಿಂದ ಆಳಲ್ಪಟ್ಟಿತು. ಲಕ್ಷ್ಮಣನ ಆಳ್ವಿಕೆಗೆ ಹೆಸರಾಗಿ ಲಕ್ಷ್ಮೇಶ್ವರ ಎಂಬ ಹೆಸರಿನಿಂದ ಅಭಿಧಾನಗೊಂಡು ಈ ಪಟ್ಟಣ ಪ್ರಸಿದ್ಧಿ ಪಡೆಯಿತು. ಕನ್ನಡದ ಸಾರಸ್ವತ ಲೋಕದ ಮಹಾನ್ ವ್ಯಕ್ತಿಯಾದ ರನ್ನನ ಜನ್ಮಕ್ಷೇತ್ರ ಇದಾಗಿದೆ. ಜೈನ ಬಸದಿಗಳು ಮತ್ತು ಪುರಾತನ ಕಾಲದ ಸೋಮೇಶ್ವರ ದೇವಸ್ಥಾನ ಈ ಪಟ್ಟಣದ ಸ್ಮಾರಕಗಳಾಗಿವೆ. ಇಂತಹ ಪುರಾಣ ಪ್ರಸಿದ್ಧ ಪಟ್ಟಣದಲ್ಲಿ ವೀರಶೈವ ಧರ್ಮ ಬೆಳೆದು ತನ್ನ ಶ್ರೀಮಂತಿಕೆಯನ್ನು ಪಡೆದಿದೆ. ಈ ಪಟ್ಟಣದಲ್ಲಿ ಒಟ್ಟು ಇಪ್ಪತ್ತನಾಲ್ಕು ಮಠಗಳು ಸ್ಥಾಪನೆಗೊಂಡಿದ್ದವೆಂದು ಹೇಳಲಾಗುತ್ತದೆ.

೧. ಶ್ರೀ ಹಿರೇಮಠ	೨. ಶ್ರೀ ಗದ್ದಿನ ದೇವರ ಮಠ
೩. ಶ್ರೀ ವೀರಪ್ಪದೇವರ ಮಠ	೪. ಶ್ರೀ ಬಾಳೆಹಳ್ಳಿ ಮಠ
೫. ಶ್ರೀ ಗೋವಿನ ಮಠ	೬. ಶ್ರೀ ರಾಜಪುರ ಮಠ
೭. ಶ್ರೀ ಶಂಕರದೇವರ ಮಠ	೮. ಶ್ರೀ ಕರೆ ಒಡೆಯರ ಮಠ
೯. ಶ್ರೀ ಬಿದರೆ ಮಠ	೧೦. ಶ್ರೀ ಚಿನ್ನಕಂತೆ ಮಠ
೧೧. ಶ್ರೀ ಸುರುಗಿ ಮಠ	೧೨. ಶ್ರೀ ಮಹಂತಿನ ಮಠ
೧೩. ಶ್ರೀ ಮೂಲೆ ಮಠ	೧೪. ಶ್ರೀ ಕಸಬಿ ಮಠ
೧೫. ಶ್ರೀ ಚಂದ್ರಗುಂಡ ಮಠ	೧೬. ಶ್ರೀ ಹಾಲೇವಾಡಿ ಮಠ
೧೭. ಶ್ರೀ ಕಲ್ಮಠ	೧೮. ಶ್ರೀ ಕೋಟೆ ಮಠ
೧೯. ಶ್ರೀ ಶಿಗ್ಲಿ ಮಠ	೨೦. ಶ್ರೀ ತೋಟದ ದೇವರ ಮಠ
೨೧. ಶ್ರೀ ಲಿಂಬೆಸ್ವಾಮಿ ಮಠ	೨೨. ಶ್ರೀ ಶಿರಸ್ಸು ಪವಾಡ ಮಠ

ಹಿಂದೆ ಸ್ಥಾಪನೆಗೊಂಡ ಒಟ್ಟು ಇಪ್ಪತ್ತನಾಲ್ಕು ಮಠಗಳಲ್ಲಿ ಇಂದು ಇಪ್ಪತ್ತೆರಡು ಮಠಗಳ ಹೆಸರನ್ನು ದಾಖಲಿಸಬಹುದಾಗಿದೆ. ದಾಖಲಿಸಿರುವ ಇಪ್ಪತ್ತೆರಡು ಮಠಗಳ ಪೈಕಿ ಕರೆವಾಡಿಮಠ ಮತ್ತು ಸುರುಗಿ ಮಠ ಮಾತ್ರ ಅಸ್ತಿತ್ವದಲ್ಲಿವೆ.

ಕರೆವಾಡಿಮಠ: ಲಕ್ಷ್ಮೇಶ್ವರದ ಹಳ್ಳದಕೇರಿ ಬಡಾವಣೆಯಲ್ಲಿರುವ ಕರೆವಾಡಿ ಅಥವಾ ಕರೆಒಡೆಯರ ಮಠವು ಉಜ್ಜಯಿನಿ ಪೀಠದ ಶಾಖಾ ಮಠವಾಗಿ ಬೆಳೆದಿದೆ. ಪುರಾತನ ಕಾಲದಲ್ಲಿ ಸ್ಥಾಪನೆಯಾಗಿರಬಹುದಾದ ಈ ಮಠವು ಶ್ರೀ ಜಡೆಶಂಕರ ಸ್ವಾಮಿಗಳಿಂದ ಪ್ರಾರಂಭವಾಗಿದೆ ಎಂದು ಹೇಳಲಾಗುತ್ತಿದೆ. ಇದಕ್ಕೆ ಪೂರಕವೆಂಬಂತೆ ಮಠದ ಆವರಣದಲ್ಲಿ ಶ್ರೀ ಜಡೆ ಶಂಕರ ಸ್ವಾಮಿಗಳ ಗದ್ದುಗೆಯು ಕೇಂದ್ರ ಬಿಂದುವಾಗಿ ರೂಪುಗೊಂಡಿದೆ.

ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿರುವ ಈ ಮಠವು ಲಕ್ಷ್ಮೇಶ್ವರದ ಧಾರ್ಮಿಕ ಕೇಂದ್ರಬಿಂದುವಾಗಿದೆ. ಈಗಿನ ಮಠಾಧೀಶರಾದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ೧೯೭೯ರ ಮೇ ಮೂರರಂದು ಉಜ್ಜಯಿನಿ ಪೀಠದ ಜಗದ್ಗುರುಗಳಾದ ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಭಗವತ್ಪಾದರಿಂದ ಪಟ್ಟಾಧಿಕಾರದ ಅನುಗ್ರಹ ಪಡೆದು ಅಧಿಕಾರಕ್ಕೆ ಬಂದಿದ್ದಾರೆ. ಗುರುಗಳು ಅಧಿಕಾರ ವಹಿಸಿಕೊಳ್ಳುವ ಸಂದರ್ಭದಲ್ಲಿ ಜೀರ್ಣಾವಸ್ಥೆಯಲ್ಲಿದ್ದ ಮಠವು ಈಗ ಅಭಿವೃದ್ಧಿಯನ್ನು ಕಂಡಿದೆ. ಮಠದ ಪರಂಪರೆಯಲ್ಲಿ ಬಂದಂತಹ ಗುರುಗಳ ಹೆಸರುಗಳು ಲಭ್ಯವಿಲ್ಲವಾಗಿದೆ. ಪರಂಪರೆಯ ಕುರುಹುಗಳನ್ನು ಉಳಿಸಿರುವ ಕರ್ತೃ ಗದ್ದುಗೆಯು ಸೇರಿದಂತೆ ಒಟ್ಟು ಆರು ಗದ್ದುಗೆಗಳು ಮಠದ ಪರಂಪರೆಯ ಸ್ಮಾರಕಗಳಾಗಿ ಉಳಿದಿವೆ.

ಧಾರ್ಮಿಕ ಕಾರ್ಯಗಳು: ನಿತ್ಯ ಗದ್ದುಗೆಗಳಿಗೆ ಪೂಜೆ, ಶ್ರಾವಣ ಮತ್ತು ಕಾರ್ತೀಕಮಾಸಗಳಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಜಾಗರಣೆಯ ಮೂಲಕ ಶಿವರಾತ್ರಿಯನ್ನು ಆಚರಿಸಲಾಗುತ್ತಿದೆ. ಮಠದಲ್ಲಿ ನಡೆಯುವ ವಿಶೇಷ ಕಾರ್ಯಕ್ರಮಗಳ ಸಂದರ್ಭದಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕರೆವಾಡಿಮಠ, ಲಕ್ಷ್ಮೇಶ್ವರ, ಶಿರಹಟ್ಟಿ ತಾ, ಗದಗ ಜಿಲ್ಲೆ.

ಸುರುಗಿ ಮಠ: ಲಕ್ಷ್ಮೇಶ್ವರ ಪಟ್ಟಣದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಸುರುಗಿ ಮಠವು ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟಿದೆ ಎಂದು ಹೇಳಲಾಗುತ್ತದೆ. ರಂಭಾಪುರಿ ಪೀಠದ ಶಾಖಾ ಮಠವಾಗಿ ಬೆಳೆದ ಈ ಮಠದ ಪರಂಪರೆಯಲ್ಲಿ ಒಟ್ಟು ಹತ್ತು ಜನ ಗುರುಗಳು ಅಧಿಕಾರ ನಡೆಸಿದ ಬಗ್ಗೆ 'ಶ್ರೀ ಗುರುವರ್ಗ ದರ್ಪಣ' ಕೃತಿಯಲ್ಲಿ ಪ್ರಕಟವಾಗಿದೆ. ಪುತ್ರವರ್ಗದ ಸಂಪ್ರದಾಯದ ಈ ಮಠವು ರಾಜಾಶ್ರಯ ಪಡೆದು ಬಹಳ ಪ್ರಭಾವಿ ಮಠವಾಗಿ ರೂಪುಗೊಂಡಿತ್ತು. ಪ್ರಾಚೀನ ಪರಂಪರೆಯನ್ನು ಹೊಂದಿದ್ದ ಸುರುಗಿ ಮಠದ ಆವರಣದಲ್ಲಿ ಐದು ಗದ್ದುಗೆಗಳು ಇವೆ.

ಈ ಹಿಂದೆ ಮಠದ ಅಧಿಕಾರಿಯಾಗಿ ಲಿಂಗೈಕ್ಯರಾದ ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು ತಮ್ಮ ಜೀವಿತಾವಧಿಯಲ್ಲೇ ಉತ್ತರಾಧಿಕಾರಿಯನ್ನು ನೇಮಕಮಾಡಿಕೊಂಡಿದ್ದರು. ಅಂದು ನೇಮಕಗೊಂಡ ಉತ್ತರಾಧಿಕಾರಿಗೆ ಇನ್ನೂ ಪಟ್ಟಾಧಿಕಾರವಾಗಿಲ್ಲ. ರಾಜಾಶ್ರಯದ ಸಂದರ್ಭದಲ್ಲಿ ದೊರೆತಿದ್ದ ಇನಾಂ ಭೂಮಿಯಲ್ಲಿ ಉಳಿದಿರುವ ಭೂಮಿಯನ್ನು ಬೇಸಾಯಕ್ಕೆ ಅಣಿಗೊಳಿಸಿ ಉತ್ಪನ್ನವನ್ನು ತೆಗೆಯಲಾಗುತ್ತಿದೆ. ಅಲ್ಲದೆ ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯ ಪೂಜೆ, ಹಿರಿಯ ಗುರುಗಳ ಆರಾಧನೆಯ ಸಂದರ್ಭದಲ್ಲಿ ಅನ್ನದಾಸೋಹವನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಸುರುಗಿಮಠ, ಲಕ್ಷ್ಮೇಶ್ವರ, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ.

ಕಲ್ಮಠ: ಲಕ್ಷ್ಮೇಶ್ವರ ಪಟ್ಟಣದ ಮಧ್ಯಭಾಗದಲ್ಲಿರುವ ಶ್ರೀ ಕಲ್ಮಠವು ಸುಮಾರು ಇನ್ನೂರು ವರ್ಷಗಳ ಹಿಂದೆ ಪ್ರಾರಂಭಗೊಂಡಿದೆ ಎಂದು ಹೇಳಲಾಗುತ್ತಿದೆ. ಶ್ರೀ ಅನ್ನದಾನಯ್ಯ ಶಿವಾಚಾರ್ಯಸ್ವಾಮಿಗಳಿಂದ ಪ್ರಾರಂಭಗೊಂಡ ಈ ಮಠವು ರಂಭಾಪುರಿ ಪೀಠದ ಶಾಖಾಮಠವಾಗಿ ಬೆಳೆದಿದೆ. ಕರ್ತೃಗುರುಗಳ ನಂತರ ಮಠದ ಉತ್ತರಾಧಿಕಾರಿಗಳ ಬಗ್ಗೆ ಯಾವುದೇ ಮಾಹಿತಿ ಲಭ್ಯವಿಲ್ಲ. ಅಲ್ಲದೆ ಮಠದ ಪರಂಪರೆಯನ್ನು ದಾಖಲಿಸಬಹುದಾದ ಯಾವುದೇ ಗದ್ದುಗೆಗಳು ಮಠದಲ್ಲಿ ಲಭ್ಯವಿಲ್ಲ. ಮಠವು ಹಿಂದೆ ವೈಭವಯುತವಾಗಿ ಆಡಳಿತ ನಡೆಸಿದೆ ಎಂದು ಹೇಳಲಾಗುವ ಕುರುಹುಗಳು ಮಠದ ಆವರಣದಲ್ಲಿ ಸಿಗುತ್ತವೆ. ಪ್ರಸ್ತುತ ಮಠದ ಧಾರ್ಮಿಕ ಕಾರ್ಯಗಳನ್ನು ಶ್ರೀ ಕರಿಬಸವಯ್ಯ ಉಮ್ಮಯ್ಯ ಕಲ್ಮಠ ಇವರು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಕರಿಬಸವಯ್ಯ ಉಮ್ಮಯ್ಯ ಕಲ್ಮಠ, ಶ್ರೀ ಕಲ್ಮಠ, ಲಕ್ಷ್ಮೇಶ್ವರ, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ.

ಗಡ್ಡದ ದೇವರ ಮಠ: ಲಕ್ಷ್ಮೇಶ್ವರ ಪಟ್ಟಣದ ಮಧ್ಯಭಾಗದಲ್ಲಿ ಶ್ರೀ ಗಡ್ಡದ ದೇವರ ಮಠವು ಸ್ಥಾಪನೆಯಾಗಿದೆ. ಗುಲಗಂಜಿಕೊಪ್ಪದ ಶ್ರೀಘನಲಿಂಗದೇವರ ಮಠದ ಮಹಾ ತಪಸ್ವಿಗಳೊಬ್ಬರು ಲೋಕಸಂಚಾರಕ್ಕೆಂದು ಹೊರಟು ಲಕ್ಷ್ಮೇಶ್ವರದಲ್ಲಿ ಬಂದು ನೆಲೆಸುತ್ತಾರೆ. ಇಲ್ಲಿ ನೆಲೆಗೊಂಡ ಸಂದರ್ಭದಲ್ಲಿ ದೀರ್ಘ ತಪೋನುಷ್ಠಾನಕ್ಕೆ ಕುಳಿತುಕೊಳ್ಳುತ್ತಾರೆ. ಭಕ್ತರು ಗುರುಗಳ ಸಾಧನೆಯನ್ನು ಗಮನಿಸಿ ಇಲ್ಲೇ ಯೇ ನೆಲೆಸುವಂತೆ ಒತ್ತಾಯಿಸಿ ಮಠವನ್ನು ಸ್ಥಾಪಿಸಿಕೊಡುತ್ತಾರೆ. ಭಕ್ತರ ಒತ್ತಾಯಕ್ಕೆ ಒಪ್ಪಿದ ಗುರುಗಳು ತಾವು ಗಳಿಸಿದ ತಪೋಶಕ್ತಿಯ ಜ್ಞಾನದಿಂದ ಸಮಾಜವನ್ನು ಉದ್ಧರಿಸಿ ಜೀವಂತ ಸಮಾಧಿಯಾಗಿದ್ದಾರೆ.

ಲೋಕಸಂಚಾರ ಕೈಗೊಂಡು ಇಲ್ಲಿಗೆ ಬಂದು ನೆಲೆಗೊಂಡು ಜೀವಂತ ಸಮಾಧಿಯಾದ ಗುರುಗಳು ಉದ್ದನೆಯ ಗಡ್ಡವನ್ನು ಬಿಟ್ಟಿದ್ದ ಕಾರಣ ಗುರುಗಳಿಗೆ ಗಡ್ಡದ ಸ್ವಾಮಿಗಳು ಎಂದು ಕರೆಯಲಾಗುತ್ತಿತ್ತು. ಗುರುಗಳು ಲಿಂಗೈಕ್ಯರಾದ ಮೇಲೆ ಅವರ ಜೀವಂತ ಸಮಾಧಿಯ ಮೇಲೆ ಗದ್ದುಗೆಯನ್ನು ನಿರ್ಮಿಸಿದರು. ಶ್ರೀ ಗಡ್ಡದ ಸ್ವಾಮಿಗಳಿಂದ ಮಠವು ಸ್ಥಾಪನೆಗೊಂಡ ಕಾರಣಕ್ಕೆ ಶ್ರೀ ಗಡ್ಡದದೇವರ ಮಠ ಎಂದು ರೂಢಿಗತವಾಗಿ ಕರೆಯಲ್ಪಟ್ಟಿತು. ಅಂದು ಸ್ಥಾಪಿಸಲ್ಪಟ್ಟ ಮಠಕ್ಕೆ ನಂತರ ನೇಮಕಗೊಂಡ ಮಠಾಧೀಶರ ಹೆಸರುಗಳು ದೊರೆಯದಾಗಿವೆ.

ವಿಳಾಸ: ಶ್ರೀ ಗಡ್ಡದ ದೇವರ ಮಠ, ಲಕ್ಷ್ಮೇಶ್ವರ, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ.

ಹಾಲೇವಾಡಿ ಮಠ: ಲಕ್ಷ್ಮೇಶ್ವರ ಗ್ರಾಮದ ದೇಸಾಯಿ ಬೀದಿಯಲ್ಲಿರುವ ಹಾಲೇವಾಡಿ ಮಠವು ರಂಭಾಪುರಿ ಪೀಠದ ಶಾಖಾಮಠವಾಗಿದೆ. ಬಿಜಾಪುರದ ಎರಡನೆಯ ಆದಿಲ್‌ಶಾಹಿಯು ಹತ್ತುಗುಂಟೆ ಜಾಗದಲ್ಲಿ ಮಠವನ್ನು ಕಟ್ಟಿಸಿಕೊಟ್ಟನು. ಅಲ್ಲದೆ ಹದಿನಾರು ಕೂರಿಗೆ ಜಮೀನನ್ನು ಉಂಬಳಿಯಾಗಿ ನೀಡಿ ಮಠವು ಬೆಳೆಯಲು ಸಹಾಯಕನಾಗಿದ್ದಾನೆ ಎಂದು ಮಠದಲ್ಲಿರುವ ದಾಖಲೆಗಳಿಂದ ತಿಳಿಯಬಹುದಾಗಿದೆ.

ಪುರಾತನ ಮಠವಲ್ಲಿ ಈಗ ಉತ್ತರಾಧಿಕಾರಿಗಳು ಯಾರು ಇಲ್ಲದಿದ್ದರೂ ಪೂಜೆ ಕಾರ್ಯಗಳು ಹಾಗೂ ಮಠದ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಮಠದ ಆವರಣದಲ್ಲಿ ಕರ್ತೃ ಗುರುಗಳಾದ ಶ್ರೀ ಶಿವಲಿಂಗಶಿವಾಚಾರ್ಯ ಸ್ವಾಮಿಗಳ ಗದ್ದುಗೆಯು ಸ್ಥಾಪಿತವಾಗಿದೆ. ರೇಣುಕಾಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ.

ವಿಳಾಸ: ಶ್ರೀ ಹಾಲೇವಾಡಿ ಮಠ, ಲಕ್ಷ್ಮೇಶ್ವರ, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ.

ಶಿರಹಟ್ಟಿ

ಗದಗ ಜಿಲ್ಲೆಯ ಶಿರಹಟ್ಟಿಯು ತಾಲ್ಲೂಕು ಕೇಂದ್ರವಾಗಿ ಕರ್ನಾಟಕದ ಭೂಪಟದಲ್ಲಿ ಒಂದು ಸ್ಥಾನ ಪಡೆದಿರುವಂತೆಯೇ ಧಾರ್ಮಿಕ ಕ್ಷೇತ್ರದಲ್ಲಿಯೂ ಸಹ ತನ್ನದೇ ಆದ ಸ್ಥಾನ ಪಡೆದು ಹೆಸರು ಮಾಡಿದೆ. ಧಾರ್ಮಿಕ ವಿಷಯಗಳಲ್ಲಿ ಸಾಮರಸ್ಯವಿಲ್ಲದೆ ಕಲಹಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಶಿರಹಟ್ಟಿಯಲ್ಲಿ ಸ್ಥಾಪನೆಯಾಗಿರುವ ಜಗದ್ಗುರು ಶ್ರೀಫಕೀರೇಶ್ವರ ಮಠವು ಭಾವೈಕ್ಯತೆಯ ಸಂಕೇತವಾಗಿ ಬೆಳೆದು ನಿಂತಿದೆ.

ಜಗದ್ಗುರು ಫಕೀರೇಶ್ವರ ಮಠ: ಶಿರಹಟ್ಟಿಯ ಉತ್ತರದ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ಮಠವು ಹದಿನಾರನೆಯ ಶತಮಾನದಲ್ಲಿ ಶ್ರೀ ಫಕೀರೇಶ್ವರರಿಂದ ಸ್ಥಾಪನೆಯಾಗಿದೆ. ಸಾಂಗ್ಲಿ ಸಂಸ್ಥಾನದ ಅಧೀನಕ್ಕೆ ಒಳಪಟ್ಟಿದ್ದ ಬಿಜಾಪುರವು ಆಲಿ ಆದಿಲ್ ಶಾಹಿಯು (ಕ್ರಿ.ಶ.೧೫೫೭-೧೫೮೦)ಆಳ್ವಿಕೆಗೆ ಒಳಪಟ್ಟಿತ್ತು. ಬಿಜಾಪುರದ ಸಮೀಪದ ಮಂಜಲಪುರದ ಹಿರೇಮಠದ ಶ್ರೀ ಶಿವಯ್ಯ ಮತ್ತು ಶ್ರೀಮತಿ ಗೌರಮ್ಮನವರಿಗೆ ಬಹಳ ದಿನಗಳಾದರೂ ಮಕ್ಕಳಾಗಿರಲಿಲ್ಲವಂತೆ. ಈ ಸಂದರ್ಭದಲ್ಲಿ ಗೌರಮ್ಮನ ಗೆಳತಿಯರು ಮಂಜಲಪುರದ ಸಮೀಪದ ಖಾಜಾ ಅಮೀನ್ ದರ್ಗಕ್ಕೆ ಕರೆತರುತ್ತಾರಂತೆ. ಆಗ ದರ್ಗದ ಖಾಜಿಯು ಎರಡು ಉತ್ತತ್ತಿ ಕಾಯಿ ಕೊಟ್ಟು ಮೊದಲು ಹುಟ್ಟಿದ ಮಗುವನ್ನು ಈ ದರ್ಗಕ್ಕೆ ಕೊಡಬೇಕು. ನಂತರ ನಿನಗೆ ಮೂರು ಮಕ್ಕಳಾಗುತ್ತವೆ ಎಂದು ಹೇಳಿ ಕಳುಹಿಸಿಕೊಟ್ಟಿದ್ದರಂತೆ. ಅವರು ಹೇಳಿದಂತೆ ಶ್ರೀಮತಿ ಗೌರಮ್ಮನಿಗೆ ಗಂಡು ಮಗುವಾಗುತ್ತದೆ. ವೀರಶೈವ ಧರ್ಮದ ಪ್ರಕಾರ ಮಗುವಿಗೆ ಲಿಂಗಧಾರಣೆ ಮಾಡಿ ಚನ್ನವೀರೇಶ್ವರ ಎಂದು ನಾಮಕರಣ ಮಾಡುತ್ತಾರೆ. ಮಗುವಿಗೆ ಆರು ವರ್ಷ ತುಂಬಿದರೂ ಮಗುವನ್ನು ದರ್ಗಕ್ಕೆ ಕೊಡಬೇಕೆಂಬ ಭಾವನೆ ಬರಲಿಲ್ಲ. ಮಗುವಿಗೆ ವಿಷಮ ಶೀತ ಜ್ವರ ಬಂದು ಬಳಲತೊಡಗಿತು. ಎಲ್ಲಾ ವಿಧದ ಔಷಧೋಪಚಾರ ಮಾಡಿದರೂ ಗುಣಮುಖವಾಗಲಿಲ್ಲ, ಆಗ ದರ್ಗದ ನೆನಪಾಗಿ ಮಗುವನ್ನು ದರ್ಗಕ್ಕೆ ಕರೆತರುತ್ತಾರೆ. ಆಗ ಗುರುಗಳು **ಈಗ ನೆನಪಾಯಿತೆ** ಎಂದು ಹೇಳಿ ತಾಯಿಯ ಹತ್ತಿರ ನಿಸ್ತೇಜವಾಗಿ ಮಲಗಿದ್ದ ಮಗುವನ್ನು ತಮ್ಮ ತೋಳು ತೆಕ್ಕೆಗೆ ತೆಗೆದುಕೊಂಡು ಹಾರೈಕೆ ಮಾಡಿ ಮಲಗಿಸುತ್ತಾರೆ. ಬೆಳಗಿನ ಜಾವ ಮಗುವಿಗೆ ಚೇತನ ಶಕ್ತಿ ಬಂದು ಭವರೋಗದಿಂದ ಮುಕ್ತಿಯನ್ನು ಪಡೆಯುತ್ತದೆ.

ದರ್ಗಾದಲ್ಲಿ ದೀಕ್ಷೆ: ಬೆಳೆದ ಮಗುವಿಗೆ ದೀಕ್ಷಾಸಂಸ್ಕಾರವನ್ನು ನೀಡಿ ಶಿಕ್ಷಣವನ್ನು ಕೊಡಿಸುತ್ತಾರೆ. ಅಲ್ಲದೆ ಸಂಸ್ಕಾರ ನೀಡಿ ಸಮಾಜ ಸುಧಾರಣೆಯ ಹರಿಕಾರರನ್ನಾಗಿ ಮಾಡಲು ದರ್ಗಾದ ಮುಲ್ಲರಾವರು ಮಗುವನ್ನು ಬೆಳೆಸಿದರು. ಈ ಸಂದರ್ಭದಲ್ಲಿ ಕುತುಬಿ ಹಬ್ಬ ಬರುತ್ತದೆ. ಮುಸ್ಲಿಂ ದೊರೆ ಆಲಿ ಆದಿಲ್ ಶಾಹ ತನ್ನ ಪರಿವಾರದೊಂದಿಗೆ ದರ್ಗಾಕ್ಕೆ ಬಂದು ಮುಲ್ಲರಿಗೆ ನಮಸ್ಕಾರಿಸುತ್ತಾರೆ. ತಮ್ಮ ಎಡಪಕ್ಕದಲ್ಲಿ ಕುಳ್ಳಿರಿಸಿಕೊಂಡಿದ್ದ ಬಾಲಶಿವಯೋಗಿಗೆ ನಮಸ್ಕರಿಸುವಂತೆ ನವಾಬರಿಗೆ ಹೇಳುತ್ತಾರೆ. ಗುರುಗಳ ಮಾತಿಗೆ ಆಶ್ಚರ್ಯಗೊಂಡ ನವಾಬರು ಈ ಬಾಲಕ ಯಾರು? ನಾನೇಕೆ ನಮಸ್ಕರಿಸಬೇಕು? ಎಂದು ಕೇಳಿ, ಭೀಮಾ ನದಿಯ ನೀರಿನ ಮೇಲೆ ನಮಾಜ್ ಮಾಡಿ ಬರಲಿ ನಂತರ ನಮಸ್ಕರಿಸುತ್ತೇನೆ ಎಂದು ಉಡಾಪೆಯಿಂದ ಸವಾಲು ಹಾಕುತ್ತಾರೆ. ಆಗ ಗುರುಗಳು ಬಾಲಶಿವಯೋಗಿಯ ಪ್ರಭಾವವನ್ನು ನವಾಬರಿಗೆ ತೋರಿಸಬೇಕು ಎಂದು ಗುರುಶಿಷ್ಯರು ಇಬ್ಬರು ನೀರಿನ ಮೇಲೆ ಚಾಪೆ ಹಾಸಿ ನಮಾಜ್ ಮಾಡುತ್ತಾರೆ. ಇದನ್ನು ಕಣ್ಣಾರೆ ನೋಡಿದ ನವಾಬರು ಪಶ್ಚಾತ್ತಾಪಪಟ್ಟು ಮನ್ನಿಸಲು ಭಿನ್ನವಿಸಿ ಕೊಳ್ಳುತ್ತಾರೆ.

ಇದಾದ ಕೆಲವು ವರ್ಷಗಳ ನಂತರ ಫಕೀರ (ಬಾಲಶಿವಯೋಗಿ)ನಿಗೆ ದರ್ಗದ ಗುರುಗಳು "ನೀನು ವೀರಶೈವ ಧರ್ಮದಲ್ಲಿ ಹುಟ್ಟಿರುವ ಕಾರಣಕ್ಕೆ ನಿನ್ನ ಧರ್ಮದ ಪ್ರಚಾರಕ್ಕೆ ನೀನು ಹೊರಡು" ಎಂದು ಗುರುಗಳು ಅಪ್ಪಣೆ ಕೊಡಿಸುತ್ತಾರೆ.

ಆಗ ಫಕೀರ ಒಪ್ಪದಿದ್ದಾಗ "ನೀನು ವೀರಶೈವ ಧರ್ಮದಲ್ಲಿ ಹುಟ್ಟಿ ಮುಸ್ಲಿಂ ದರ್ಗಾದಲ್ಲಿ ಸಂಸ್ಕಾರ ಪಡೆದಿರುವೆ" ಈ ಕಾರಣಕ್ಕೆ ಎರಡೂ ಧರ್ಮಗಳ ತತ್ವವನ್ನು ಪ್ರಚಾರ ಪಡಿಸಿ ಸಮಾಜದಲ್ಲಿ ಸಾಮರಸ್ಯವನ್ನು ಮೂಡಿಸುವ ಜಗದ್ಗುರುವಾಗಿ ಬೆಳೆದು ಸಮಾಜವನ್ನು ಬೆಳೆಸು ಎಂದು ಆಶೀರ್ವದಿಸಿ ಕಳುಹಿಸುತ್ತಾರೆ.

ಫಕೀರ+ಈಶ್ವರ: ದರ್ಗಾದ ಗುರುಗಳಿಂದ ಆಶೀರ್ವಾದ ಪಡೆದ ಕಾರಣಕ್ಕೆ ಫಕೀರನಾಗಿ, ವೀರಶೈವ ಧರ್ಮದಲ್ಲಿ ಹುಟ್ಟಿ ಕಾರಣಕ್ಕೆ ಈಶ್ವರನಾಗಿ (ಫಕೀರ+ಈಶ್ವರ) ಫಕೀರೇಶ್ವರರೆಂದು ಅಭಿದಾನ ಪಡೆದು ಹೊರಡುತ್ತಾರೆ. ಗುರುಗಳು ಹೊರಡುವ ಮುನ್ನ 'ಪುನಃ ನನ್ನ ನಿಮ್ಮ ಭೇಟಿ ಎಲ್ಲಿ? ಯಾವಾಗ ?'ಎಂದು ಮುಲ್ಲಾರನ್ನು ಕೇಳುತ್ತಾರೆ. ಆಗ ಮುಲ್ಲಾ 'ನೀನು ಶಿರಹಟ್ಟಿಯಲ್ಲಿ ನೆಲಸಿ ಧರ್ಮಕಾರ್ಯವನ್ನು ನಡೆಸುತ್ತಿರು. ನಾನು ಗೋನಾಳಿನ ತಿಂತಿಣಿಯ ಮೌನೇಶ್ವರನಾಗಿ ಜನಿಸಿ ಸಂಚಾರ ಮಾಡುತ್ತಾ ನಿನ್ನ ಕ್ಷೇತ್ರಕ್ಕೆ ಬರುತ್ತೇನೆ. ಅಲ್ಲಿ ಭೇಟಿಯಾಗುತ್ತೇನೆ' ಎಂದು ಹೇಳಿ ಕಳುಹಿಸಿಕೊಡುತ್ತಾರೆ. ಶ್ರೀ ಫಕೀರೇಶ್ವರರು ಸಂಚರಿಸುತ್ತಾ ಮುದ್ದೇಬಿಹಾಳು ಪಟ್ಟಣಕ್ಕೆ ಬಂದು ನೆಲೆ ನಿಂತು ಮಠವನ್ನು ಸ್ಥಾಪಿಸಿ ಎರಡು ಧರ್ಮಗಳಲ್ಲಿ ಸಾಮರಸ್ಯ ಬೆಳೆಯಲು ಪ್ರೇರಣೆ ನೀಡಿ ಚಿತ್ರದುರ್ಗಕ್ಕೆ ಬರುತ್ತಾರೆ. ಇಲ್ಲಿ ಅನೇಕ ಪವಾಡಗಳನ್ನು ಮಾಡಿ ಬೃಹನ್ಮಠದ ಗುರುಗಳಿಂದ ಧರ್ಮೋಪದೇಶ ಪಡೆದು ಪುನಃ ಉತ್ತರಾಭಿಮುಖವಾಗಿ ಸಂಚಾರ ಹೊರಡುತ್ತಾರೆ.

ಶಿರಹಟ್ಟಿಗೆ ಆಗಮನ: ಶ್ರೀ ಫಕೀರೇಶ್ವರರು ಇಲ್ಲಿಗೆ ಆಗಮಿಸಿದಾಗ ಕೇವಲ ಹದಿನೆಂಟು ವರ್ಷ. ಹದಿನೆಂಟು ವರ್ಷದ ಬಾಲಕ ಹುಲಿಯ ಮೇಲೆ ಕುಳಿತು ಶಿರಹಟ್ಟಿಯ ಉತ್ತರದ ಹೊರಭಾಗದ ಗಿಡಗೆಂಟೆಗಳಿಂದ ಆವೃತ್ತಗೊಂಡ ಕಾಡಿನಲ್ಲಿ ಅನುಷ್ಠಾನಕ್ಕೆ ಕುಳಿತುಕೊಳ್ಳುತ್ತಾರೆ. ಬಾವಿಯ ಬಳಿ ಕುಟೀರ ಕಟ್ಟಿಕೊಂಡು ವಾಸ್ತವ್ಯ ಮಾಡಿದರು. ಗ್ರಾಮದ ವೀರಶೈವ ಧರ್ಮದ ಕೆಲವರು ತಪಸ್ಸಿಗೆ ಕುಳಿತ ಬಾಲಶಿವಯೋಗಿಯ ಬಳಿ ಬಂದು ಧರ್ಮೋಪದೇಶ ಪಡೆಯತೊಡಗಿದರು. ಫಕೀರೇಶ್ವರ ಎಂಬ ಹೆಸರನ್ನು ಕೇಳಿಯೇ ಆಶ್ಚರ್ಯಗೊಂಡಿದ್ದ ಜನರು ಶಿವಪೂಜೆ ಮತ್ತು ನಮಾಜ್ ಎರಡನ್ನೂ ಆಚರಿಸುತ್ತಿದ್ದನ್ನು ನೋಡಿ ಪರಮಾಶ್ಚರ್ಯಪಟ್ಟರು.ಇಲ್ಲಿನ ಶ್ರೀ ಬೋರಶೆಟ್ಟಿ ಎಂಬುವರು ಫಕೀರೇಶ್ವರರ ಪ್ರಭಾವವನ್ನು ತಡೆಗಟ್ಟಬೇಕೆಂದು ಪ್ರಯತ್ನಿಸಿ ದರು. ಒಮ್ಮೆ ಫಕೀರೇಶ್ವರರು ಬೋರಶೆಟ್ಟಿಯ ಮನೆಗೆ ಭಿಕ್ಷೆಗೆ ಬಂದಿದ್ದಾಗ 'ನೀವು ಅನ್ಯ ಜಾತಿಯನ್ನು ಆರಾಧಿಸುತ್ತೀರಿ ನಿಮಗೆ ಭಿಕ್ಷೆ ನೀಡುವುದಿಲ್ಲ'ಎಂದು ಹೇಳಿಕಳುಹಿಸಿ ಕೊಟ್ಟಿದ್ದ. ನಂತರ ಫಕೀರೇಶ್ವರರ ಪ್ರಭಾವ ಮತ್ತು ಎರಡೂ ಧರ್ಮಗಳನ್ನು ಭಾವೈಕ್ಯತೆಯಿಂದ ಬೆಳೆಸಲು ಹೊರಟ ರೀತಿಯನ್ನು ಮನಗಂಡ ಬೋರಶೆಟ್ಟಿ ಶರಣಾಗಿ ಶ್ರೀ ಫಕೀರೇಶ್ವರರನ್ನು ಮನೆಗೆ ಕರೆಸಿ ಜಂಗಮ ಆರಾಧನೆಯನ್ನು ನಡೆಸಿದರು. ಆಗ ಫಕೀರೇಶ್ವರರು 'ದ್ವೇಷಬಿಡು, ಪ್ರೀತಿ ಮಾಡು' ಎಂಬ ತತ್ವವನ್ನು ಸಾರಿ ತಮ್ಮ ಕುಟೀರಕ್ಕೆ ಹಿಂದಿರುಗಿದರು.

ಮಠ ಸ್ಥಾಪನೆ: ಇದೇ ಸಂದರ್ಭದಲ್ಲಿ ಸಾಂಗ್ಲಿ ಸಂಸ್ಥಾನದ ಪಟವರ್ಧನ ರಾಜ ಶಿರಹಟ್ಟಿಗೆ ಆಗಮಿಸುತ್ತಾರೆ. ಶ್ರೀ ಫಕೀರೇಶ್ವರರ ಪ್ರಭಾವವನ್ನು ಕೇಳಿತಿಳಿದುಕೊಂಡಿದ್ದನಾದರೂ ನೋಡುವ ಭಾಗ್ಯ ದೊರೆತಿರಲಿಲ್ಲ. ಈ ಅವಕಾಶ ದೊರೆತಿದ್ದಕ್ಕೆ ಹರ್ಷಗೊಂಡು ದರ್ಶನ ಪಡೆಯುತ್ತಾರೆ. ಅಶೀರ್ವಾದ ಪಡೆದ ಮೇಲೆ ತಮ್ಮ ಪತ್ನಿಗೆ ಇರುವ ರೋಗವನ್ನು ನಿವಾರಣೆ ಮಾಡಬೇಕೆಂದು ಬಿನ್ನವಿಸಿಕೊಳ್ಳುತ್ತಾರೆ. ಗುರುವಿನ ಆಶೀರ್ವಾದದಿಂದ ಪಟವರ್ಧನನ ಹೆಂಡತಿಯ ಕಾಯಿಲೆ ದೂರವಾದಾಗ ರಾಜನು ಹರ್ಷಗೊಂಡು ಮತ್ತೊಮ್ಮೆ ಫಕೀರೇಶ್ವರರ ಸನ್ನಿಧಾನಕ್ಕೆ ಆಗಮಿಸಿ ಆಶೀರ್ವಾದ ಪಡೆದು ಮಠಸ್ಥಾಪನೆ ಮಾಡಲು ನಾನೂರು ಎಕರೆ ಜಮೀನನ್ನು ಇನಾಂ ನೀಡಿ ನೆರವಾಗುತ್ತಾರೆ. ಆಗ ಕುಟೀರವೇ ಮಠವಾಗಿ ರೂಪಾಂತರ ಪಡೆದು ಬೆಳೆಯತೊಡಗಿತು. ಅಲ್ಲದೆ ಗುರುಗಳ ಪ್ರಭಾವ ಎಲ್ಲಾ ಕಡೆ ಹರಡಿ ಹೈದರಾಬಾದ್ ನಿಜಾಂ ಗುರುಗಳ ಪವಾಡಕ್ಕೆ ತಲೆಬಾಗಿ ಕಠಾರಿಯನ್ನು ನೆನಪಿನ ಕಾಣಿಕೆಯಾಗಿ ನೀಡುತ್ತಾನೆ. ಅಕ್ಬರ್ ಬಾದಶಹ ರಣಬಿಟ್ಟ, (ಬಂಗಾರದ ರಣಬಿಲ್ಲೆ) ಸಿರಾಪೇಚು (ಕಿರೀಟ) ಹಾಗೂ ಅಪಾರ ಬೆಳ್ಳಿ, ಬಂಗಾರವನ್ನು ಕಾಣಿಕೆಯನ್ನಾಗಿ ನೀಡಿ ಗೌರವಿಸಿದ್ದಾರೆ. ಅಂದು ಅಕ್ಬರ್ ನೀಡಿದ ಕಾಣಿಕೆಗಳು ಈಗಲೂ ಮಠದಲ್ಲಿ ನೋಡಲು ಸಿಗುತ್ತವೆ.

ಶಿರಹಟ್ಟಿಗೆ ಬಂದಿದ್ದ ದೊಂಬರಾಟದ ತಂಡದಲ್ಲಿ ಹಿರೇಮಠದ ಹುಡುಗನೊಬ್ಬ ಬಂದಿದ್ದನು. ಬಡತನದ ಬೇಗೆಯಲ್ಲಿ ಬಳಲಿದ್ದ ಹುಡುಗ ಸಿದ್ಧರಾಮನು ತನ್ನ ತಂದೆ ತಾಯಿಗೆ ಹೊರೆಯಾಗಿ ಬದುಕುವುದು ಇಷ್ಟವಾಗದೆ ಕಾಯಕದಿಂದ ಬದುಕುವ

ಹಂಬಲ ತೊಟ್ಟು ಬಂದಿದ್ದ ಆ ಹಿರೇಮಠದ ಹುಡುಗ ತನ್ನ ಸಂಪ್ರದಾಯದಂತೆ ಲಿಂಗಪೂಜೆ ನಂತರ ಪ್ರಸಾದ ಈ ರೀತಿ ಬಿಡದೆ ಆಚರಿಸುತ್ತಾ ತಂಡದಲ್ಲಿ ಎಲ್ಲರಿಂದ ಗೌರವಿಸಲ್ಪಟ್ಟಿದ್ದ. ಈ ಸಂದರ್ಭದಲ್ಲಿ ಶ್ರೀ ಫಕೀರೇಶ್ವರರ ಪ್ರಭಾವಕ್ಕೆ ಒಳಗಾದ ಸಿದ್ಧರಾಮನು ಪ್ರತಿನಿತ್ಯ ಗುರುಗಳ ಬಳಿ ಬಂದು ತನ್ನ ಅನನ್ಯ ಭಕ್ತಿಯಿಂದ ಗುರುಗಳ ಪ್ರೀತಿಗೆ ಪಾತ್ರನಾದನು. ಈತನಲ್ಲಿದ್ದ ಸಂಸ್ಕಾರ, ಕಾಯಕದ ನಿಷ್ಠೆಯನ್ನು ಗಮನಿಸಿದ ಶ್ರೀ ಫಕೀರೇಶ್ವರರು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿಕೊಳ್ಳಲು ನಿರ್ಧರಿಸಿದರು. ದೊಂಬರಾಟದ ತಂಡ ತಮ್ಮ ಪ್ರದರ್ಶನವನ್ನು ಮುಗಿಸಿ ಮುಂದಿನ ಊರಿಗೆ ಪ್ರಯಾಣ ಬೆಳೆಸಲು ಮುಂದಾದಾಗ ಶ್ರೀ ಫಕೀರೇಶ್ವರರು ಆ ಹುಡುಗನನ್ನು ಇಲ್ಲಿಯೇ ಬಿಟ್ಟು ಹೋಗಲು ದೊಂಬರಾಟದ ತಂಡದ ನಾಯಕನಿಗೆ ಹೇಳುತ್ತಾರೆ. ಆದರೆ ಆ ನಾಯಕನು ತಂಡಕ್ಕೆ ಬಂಡವಾಳವಾಗಿದ್ದ ಬಾಲಕನನ್ನು ಕಳೆದುಕೊಳ್ಳಲು ಇಷ್ಟವಾಗದೆ ಗುರುಗಳ ಕೋರಿಕೆಯನ್ನು ತಿರಸ್ಕರಿಸಿ ಹೋಗುತ್ತಾನೆ. ತಂಡವು ಪಕ್ಕದ ಗ್ರಾಮದಲ್ಲಿ ಬಿಡಾರ ಮಾಡಿತ್ತು. ತಂಡದ ನಾಯಕನು ಮಾನಸಿಕವಾಗಿ ತಳಮಳಗೊಂಡು ಪವಾಡ ಪುರುಷರ ಕೋರಿಕೆಯನ್ನು ಕಡೆಗಣಿಸಿ ಬಂದಿದ್ದು ತಪ್ಪಾಯಿತೆಂಬ ಅರಿವಾಗಿ ಮರುದಿನವೇ ಶಿರಹಟ್ಟಿಗೆ ಬಂದು ಬಾಲಕ ಸಿದ್ಧರಾಮನನ್ನು ಗುರುಗಳಿಗೆ ಒಪ್ಪಿಸಿ ಹೋಗುತ್ತಾನೆ. ಶ್ರೀ ಫಕೀರೇಶ್ವರರು ಸಮಸ್ತ ಭಕ್ತರನ್ನು ಕರೆಸಿ ಉತ್ತರಾಧಿಕಾರಿಗಳ ನೇಮಕವನ್ನು ಪ್ರಕಟಿಸಿದರು. ಗುರುಗಳ ಮಾತಿಗೆ ಯಾರೂ ಎದುರುತ್ತರ ಕೊಡದೆ ಸಮ್ಮತಿಸಿದರು.ಮಠದ ಪರಂಪರೆ ಅವಿಚ್ಛಿನ್ನವಾಗಿ ಬೆಳೆಯಬೇಕು ಎಂಬ ಉದ್ದೇಶ ಹೊಂದಿ ಭಕ್ತರ ಸಮ್ಮುಖದಲ್ಲಿ ಶ್ರೀ ಸಿದ್ಧರಾಮ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕಮಾಡಿಕೊಂಡರು. ಅಗಿ ಹುಣ್ಣಿಮೆಯ ಜಾತ್ರೆಯು ಮುಗಿದ ಮೇಲೆ ಶ್ರೀ ಫಕೀರೇಶ್ವರರು ತಮ್ಮ ಉತ್ತರಾಧಿಕಾರಿಗಳಾದ ಶ್ರೀ ಸಿದ್ಧರಾಮ ಸ್ವಾಮಿಗಳನ್ನು ಪಕ್ಕದಲ್ಲಿ ಕುಳ್ಳಿರಿಸಿಕೊಂಡು 'ಮನುಜಕುಲ ಒಂದೇ. ನಾವೆಲ್ಲರೂ ನೀತಿವಂತರಾಗಿ ಬಾಳಬೇಕು, ಈಶ್ವರ ಬೇರೆಯಲ್ಲ, ಅಲ್ಲಾ ಬೇರೆಯಲ್ಲ' ಎಂಬ ಸಂದೇಶ ಕೊಟ್ಟು, ಶ್ರಾವಣ ಪಂಚಮಿಯಂದು ಸರ್ಪದ ರೂಪ ತಾಳಿ ಮಠದ ಬಳಿ ಇದ್ದ ಹುತ್ತವನ್ನು ಸೇರುತ್ತಾರೆ. ಅಂದಿನಿಂದ ಇಂದಿನವರೆಗೆ ಶ್ರೀ ಫಕೀರೇಶ್ವರ ಸ್ವಾಮಿಗಳು ಇನ್ನೂ ಜೀವಂತವಾಗಿ ಇದ್ದಾರೆ ಎಂಬ ನಂಬಿಕೆಯಲ್ಲಿಯೇ ಭಕ್ತರಿದ್ದಾರೆ.

ಬೆಳೆದ ಪರಂಪರೆ:

೧. ಜಗದ್ಗುರು ಶ್ರೀ ಫಕೀರೇಶ್ವರಸ್ವಾಮಿಗಳು (ಕರ್ತೃಗುರುಗಳು)

೨. ಜಗದ್ಗುರು ಶ್ರೀ ಫಕೀರೇಶ್ವರ ಸಿದ್ಧರಾಮಸ್ವಾಮಿಗಳು

೩. ಜಗದ್ಗುರು ಶ್ರೀ ಫಕೀರೇಶ್ವರ ಶಿವಯೋಗಿಸ್ವಾಮಿಗಳು

೪. ಜಗದ್ಗುರು ಶ್ರೀ ಫಕೀರೇಶ್ವರ ಚನ್ನವೀರಸ್ವಾಮಿಗಳು

ಈ ರೀತಿ ಮಠದ ಕರ್ತೃ ಗುರುಗಳಾದ ಶ್ರೀ ಫಕೀರೇಶ್ವರರ ನಂತರ ಮೂರು ಹೆಸರುಗಳು ಪ್ರಮುಖವಾಗಿ ಕೇಳಿ ಬರುತ್ತವೆ. ಈಗ ಜಗದ್ಗುರು ಶ್ರೀ ಫಕೀರೇಶ್ವರ ಸಿದ್ಧರಾಮ ಸ್ವಾಮಿಗಳು ಅಧಿಕಾರ ಪಡೆದು ವಿಶೇಷ ಸಂಪ್ರದಾಯದ ಮಠವನ್ನು ಮುನ್ನಡೆಸಿ ದ್ದಾರೆ. ಮಠದ ಪರಂಪರೆಯ ಎಲ್ಲಾ ಸ್ವಾಮಿಗಳು ಪ್ರಭಾವಿಗಳಾಗಿ ಮಠವನ್ನು ಜಾತ್ಯಾತೀತ ಭಾವನೆಯಲ್ಲಿ ಬೆಳೆಸಿ, ಸಮಾಜದಲ್ಲಿ ಸೌಹಾರ್ದ ಭಾವನೆ ಬೆಳೆಯಲು ಕಾರಣ ಪುರುಷರಾಗಿದ್ದಾರೆ.

ಹದಿಮೂರನೆಯ ಪಟ್ಟಾಧ್ಯಕ್ಷರಾಗಿರುವ ಈಗಿನ ಗುರುಗಳಾದ ಜಗದ್ಗುರು ಶ್ರೀ ಫಕೀರೇಶ್ವರ ಸಿದ್ಧರಾಮ ಸ್ವಾಮಿಗಳು ೧೯೭೮ ರಲ್ಲಿ ಈ ಮಠದ ಆಡಳಿತವನ್ನು ವಹಿಸಿಕೊಂಡಿದ್ದಾರೆ. ಬೆಳಗಾಂ ಜಿಲ್ಲೆಯ ಅಥಣಿ ತಾಲ್ಲೂಕಿನ ಶ್ರೀ ಬಸವಲಿಂಗ ಸ್ವಾಮಿ ಮತ್ತು ಶ್ರೀಮತಿ ಗೌರಮ್ಮನವರ ಪುತ್ರರಾಗಿ ಜನಿಸಿದ ಗುರುಗಳು ವಿದ್ಯೆ ಕಲಿತು ಪುರಾಣ ಪ್ರವಚನಗಳನ್ನು ಅದ್ವಿತೀಯ ವಾಗಿ ನಡೆಸಿಕೊಡುತ್ತಾ ಹೆಸರು ಗಳಿಸಿದರು. ಇವರು ಹನ್ನೆರಡನೆಯ ಪಟ್ಟಾಧ್ಯಕ್ಷರು ದೈಹಿಕವಾಗಿ ಸಾಮರ್ಥ್ಯವನ್ನು ಕಳೆದುಕೊಂಡ ಸಂದರ್ಭದಲ್ಲಿ ಶ್ರೀ ಫಕೀರೇಶ್ವರ ಮಠಕ್ಕೆ ಪ್ರವಚನಕ್ಕಾಗಿ ಆಗಮಿಸಿದ್ದರು. ಗುರುಗಳು ಹಾಗೂ ಮಠದ ಭಕ್ತರು ಇವರ ಪ್ರತಿಭೆಯನ್ನು ನೋಡಿ ಉತ್ತರಾಧಿಕಾರಿಗಳನ್ನಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ. ಉತ್ತರಾಧಿಕಾರಿಗಳಾಗಿ ನೇಮಕಗೊಂಡ ಗುರುಗಳು ಧಾರವಾಡದಲ್ಲಿ ಕನ್ನಡ ಭಾಷಾಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದು ಸಂಸ್ಕೃತ ವ್ಯಾಸಂಗ ಮಾಡಿದ್ದಾರೆ. ವಿದ್ವತ್‌ಪೂರ್ಣ ಪ್ರತಿಭೆಯನ್ನು ಗಳಿಸಿಕೊಂಡು ಭಾವೈಕ್ಯತೆಯನ್ನು ಸಾರುವ ಈ ಮಠದ ಆಡಳಿತವನ್ನು ವಹಿಸಿಕೊಂಡು ಮಠವನ್ನು ಸರ್ವಾಂಗೀಣವಾಗಿ ಅಭಿವೃದ್ಧಿಪಡಿಸಿದ್ದಾರೆ.

ಪಟ್ಟಾಧಿಕಾರದ ವಿಶೇಷ: ಮಠದ ಗುರುಗಳು ತಮ್ಮ ಜೀವಿತದಲ್ಲಿಯೇ ತಮ್ಮ ಉತ್ತರಾಧಿಕಾರಿಗಳನ್ನು ಆಯ್ಕೆ ಮಾಡಿಕೊಳ್ಳುವ ಪದ್ಧತಿಗೆ ಪಟ್ಟಾಧಿಕಾರದ ಗುರುಗಳು ಲಿಂಗೈಕ್ಯರಾದ ಮೇಲೆ ಪಾರ್ಥಿವ ಶರೀರದ ಎಡಪಕ್ಕದಲ್ಲಿ ಉತ್ತರಾಧಿಕಾರಿಯನ್ನು ಕೂರಿಸಿ ರಣಬಿಲ್ಲೆಯನ್ನು ಕಟ್ಟಿ ನಂತರ ಪಾರ್ಥಿವಶರೀರವನ್ನು ಮುಂದಿಟ್ಟುಕೊಂಡು ಪಟ್ಟಾಭಿಷೇಕದ ಶಾಸ್ತ್ರವನ್ನು ಪ್ರಾರಂಭಿಸಲಾಗುತ್ತದೆ. ಇತ್ತ ಪಟ್ಟಾಭಿಷೇಕ ಒಂದೆಡೆ ನಡೆಯುತ್ತಿದ್ದರೆ ಇನ್ನೊಂದೆಡೆ ಅಂತ್ಯಕ್ರಿಯೆ ನಡೆಯುತ್ತಿರುತ್ತದೆ. ಈ ಎರಡೂ ಕ್ರಿಯೆಗಳು ಏಕಕಾಲದಲ್ಲಿ ನಡೆಯುತ್ತವೆ.ಈ ಸಂದರ್ಭದಲ್ಲಿ ವೀರಶೈವ ಮಠಾಧೀಶರು ಬಂದು ಸೇರುತ್ತಾರೆ. ಜೊತೆಗೆ ಬಿಜಾಪುರದ ಖಾಜಿಗಳು, ಮಂಜಲಾಪುರದ ದರ್ಗಾದ ಖಾಜಿಗಳು ಈ ಎರಡೂ ಕಾರ್ಯಗಳಲ್ಲಿ ಭಾಗಿಗಳಾಗಿ ತಮ್ಮ ತಮ್ಮ ಪಾಲಿನ ಧರ್ಮಕಾರ್ಯಗಳನ್ನು ನಡೆಸಿಕೊಡುತ್ತಾರೆ. ವೀರಶೈವ ಸಿದ್ಧಾಂತದ ಪ್ರಕಾರ ಪ್ರಥಮವಾಗಿ ಬೋಧನೆ ನಡೆಯುತ್ತದೆ. ನಂತರ ಇಸ್ಲಾಂ ಧರ್ಮದ ಪ್ರಕಾರ ದೀಕ್ಷಾ ಕಾರ್ಯ ನಡೆಯುತ್ತದೆ. ಪಟ್ಟಾಭಿಷೇಕದ ಸಂದರ್ಭದಲ್ಲಿ ಇಸ್ಲಾಂ ಮತ ಧರ್ಮದ ಪ್ರಕಾರ ಒಂದರಿಂದ ಹತ್ತು ಜಾರ್ತ,ಇಪ್ಪತ್ತೊಂದು ಜಾರ್ತ, ನಂತರ ನಾಲವತ್ತು ಜಾರ್ತ, ಅಂದರೆ ಮುಸ್ಲಿಂ ಸಂಪ್ರದಾಯದ ಪ್ರಕಾರ ನಲವತ್ತೊಂದು ವಿವಿಧ ಧಾರ್ಮಿಕ ಕ್ರಿಯೆಗಳು ನಡೆಯುತ್ತವೆ. ನಂತರ ವೀರಶೈವ ಮತ ಧರ್ಮದ ಪ್ರಕಾರ ಪಟ್ಟದ ದೇವರು ಬಂದು ಕೇಶಮಂಡನ ಮಾಡಿಸಿ ದೀಕ್ಷೆಯ ಧಾರ್ಮಿಕ ಕಾರ್ಯಗಳನ್ನು ಮಾಡುತ್ತಾರೆ. ಪಟ್ಟಾಧಿಕಾರ ಮತ್ತು ಅಂತ್ಯಕ್ರಿಯೆ ಎರಡೂ ಸಂದರ್ಭಗಳಲ್ಲಿಯೂ ಎರಡೂ ಮತ ಧರ್ಮಗಳ ಪ್ರಕಾರ ಧಾರ್ಮಿಕ ಕಾರ್ಯಗಳು ನಡೆಯುವುದು ಒಂದು ವಿಶೇಷವಾಗಿದೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಹನ್ನೊಂದು ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ ಮಾಡಲಾಗುತ್ತಿದೆ. ಇಲ್ಲಿ ನಿರ್ಮಾಣವಾಗಿರುವ ಗದ್ದುಗೆಗಳನ್ನು ದರ್ಗಾದ ಗೋರಿಗಳು ಹಾಗೂ ವೀರಶೈವ ಗದ್ದುಗೆಗಳ ಮಾದರಿಯಲ್ಲಿ ನಿರ್ಮಾಣ ಮಾಡಲಾಗಿದೆ. ಮಠದ ಕಟ್ಟಡವನ್ನು ಹಿಂದೂ ಮತ್ತು ಮುಸ್ಲಿಂ ಧರ್ಮಗಳ ಭಾವೈಕ್ಯತೆಯ ಸಂಕೇತವೆಂಬಂತೆ ನಿರ್ಮಿಸಲಾಗಿದೆ. ನಗರಖಾನೆ ನಿರ್ಮಿಸಿ ಇಲ್ಲಿ ನಗಾರಿ, ಟಕೋರಿ, ತಾಳ, ಮುದ್ದಳೆ ಹಾಗೂ ಶಹನಾಯಿ ವಾದ್ಯಗಳನ್ನು ಇಟ್ಟು ಪೂಜೆ ಸಂದರ್ಭದಲ್ಲಿ ಈ ವಾದ್ಯಗಳನ್ನು ಬಾರಿಸಲಾಗುತ್ತದೆ. ವಿಜಯದಶಮಿಯ ಸಂದರ್ಭದಲ್ಲಿ ನಡೆಯುವ ದಸರಾ ಸಂದರ್ಭದಲ್ಲಿ ಆನೆ, ಕುದುರೆ ಹಾಗೂ ಒಂಟೆಗಳನ್ನು ಅಲಂಕರಿಸಿ ಸಕಲ ದರ್ಬಾರಿನೊಂದಿಗೆ ಗುರುಗಳು ಮುಸ್ಲಿಂ ದೊರೆಗಳು ಧರಿಸುವ ರಾಜ ಉಡುಪುಗಳನ್ನು ಧರಿಸಿ ಬನ್ನಿ ಮುಡಿಯಲು ಹೋಗುವ ಪರಿ ಬಹಳ ಆಕರ್ಷಣೀಯವಾಗಿರುತ್ತದೆ. ವಾರ್ಷಿಕ ಜಾತ್ರೆಯನ್ನು ಅದ್ದೂರಿಯಾಗಿ ಆಚರಿಸುವುದಲ್ಲದೆ ಜಾತಿ ಬೇಧವಿಲ್ಲದೆ ಜನ ಬಂದು ಸೇರುತ್ತಾರೆ. ಈ ಸಂದರ್ಭದಲ್ಲಿಯೇ ಅಲ್ಲದೆ ದಿನ ನಿತ್ಯ ಸಹಪಂಕ್ತಿ ಭೋಜನ ನಡೆಯುತ್ತಿದೆ.

ಅಭಿವೃದ್ಧಿ ಕಾರ್ಯಗಳು: ಹದಿಮೂರನೆಯ ಗುರುಗಳಾದ ಜಗದ್ಗುರು ಶ್ರೀ ಫಕೀರೇಶ್ವರ ಸಿದ್ಧರಾಮ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಎರಡೂವರೆ ಕೋಟಿ ರೂಗಳ ಯೋಜನೆಯಲ್ಲಿ ಕರ್ತೃಗುರುಗಳ ಗದ್ದುಗೆಗೆ ಮಂಟಪ ಮತ್ತು ಮೇಲಂತಸ್ತಿನ ಕಟ್ಟಡ ನಿರ್ಮಾಣಗೊಂಡಿದೆ. ದಾಸೋಹಮಂದಿರ ಮತ್ತು ಮಠದ ದ್ವಾರದಲ್ಲಿ ನಿರ್ಮಿಸಿರುವ ಸ್ವಾಗತ ಕಮಾನುಗಳು ಶ್ರೀ ಫಕೀರೇಶ್ವರ ಮಠದ ಅಭಿವೃದ್ಧಿಯ ದ್ಯೋತಕಗಳಾಗಿ ನಿಂತಿವೆ. ಮಠದ ಆವರಣದಲ್ಲಿ ಹಳೆಯ ಕಟ್ಟಡದಿಂದ ಹಿಡಿದು ನೂತನ ಕಟ್ಟಡದವರೆಗೆ ಎಲ್ಲವೂ ಹಿಂದೂ ಮತ್ತು ಮುಸ್ಲಿಂ ವಾಸ್ತುಶಿಲ್ಪದ ಮಾದರಿಯಲ್ಲಿ ನಿರ್ಮಾಣಗೊಂಡಿವೆ. ಮಠದ ನಾನೂರು ಎಕರೆ ಇನಾಂ ಜಮೀನಿನಲ್ಲಿ ಇನ್ನೂರು ಎಕರೆ ಉಳಿದಿದ್ದು ಇದನ್ನು ಅಭಿವೃದ್ಧಿಪಡಿಸಿದ್ದಾರೆ.

ಶೈಕ್ಷಣಿಕ ಸಾಧನೆ: ಶ್ರೀ ಫಕೀರೇಶ್ವರ ವಿದ್ಯಾಸಂಸ್ಥೆಯನ್ನು ಪ್ರಾರಂಭಿಸಿ ಒಂದು ಟಿ.ಸಿ.ಎಚ್. ಕಾಲೇಜು, ಬೆಳ್ಳಟ್ಟಿ, ಕೆಲವತ್ತಿ, ಕುಂದಗೋಳು ತಾಲ್ಲೂಕಿನ ಸಂಸಿ, ನೆಗಳೂರು, ಸವಣೂರು ತಾಲ್ಲೂಕಿನ ಹುರುಳಿ ಕೊಪ್ಪದ ಈ ಗ್ರಾಮಗಳಲ್ಲಿ ಐದು ಪ್ರೌಢ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಕಲಿಯುವ ಬಡವಿದ್ಯಾರ್ಥಿಗಳಿಗೆ ಮಠದಲ್ಲಿ ಆಶ್ರಯ ಕಲ್ಪಿಸಿ ನೆರವಾಗಿದ್ದಾರೆ.

ಶ್ರೀ ಫಕೀರೇಶ್ವರ ಮಠವು ಸಮಾಜದಲ್ಲಿ ಭಾವೈಕ್ಯತೆಯನ್ನು ಸೃಷ್ಟಿಸಲು ನೆರವಾಗಿದೆ. ವೀರಶೈವಧರ್ಮ ಮತ್ತು ಮುಸ್ಲಿಂ ಧರ್ಮಗಳ ಭಾವೈಕ್ಯತೆಯ ಸಂಕೇತವಾಗಿ ರೂಪುಗೊಂಡು ರಾಷ್ಟ್ರ ಮಟ್ಟದಲ್ಲಿ ಮನ್ನಣೆ ಪಡೆದುಕೊಂಡಿದೆ.

ವಿಳಾಸ: ಜಗದ್ಗುರು ಶ್ರೀ ಫಕೀರೇಶ್ವರ ಸಿದ್ಧರಾಮಸ್ವಾಮಿಗಳು, ಶ್ರೀ ಫಕೀರೇಶ್ವರ ಸಂಸ್ಥಾನ ಮಠ, ಶಿರಹಟ್ಟಿ, ಗದಗ ಜಿಲ್ಲೆ.

ಕಲ್ಮಠ: ಇದು ಶಿರಹಟ್ಟಿ ಪಟ್ಟಣದಲ್ಲಿ ಪುರಾತನ ಕಾಲದಲ್ಲಿ ಪ್ರಾರಂಭವಾದ ವಿರಕ್ತಸಂಪ್ರದಾಯದ ಮುರುಘಾ ಸಮಯದ ಮಠ. ಪ್ರಸ್ತುತ ಈ ಮಠದಲ್ಲಿ ಗುರುಗಳಿಲ್ಲದೆ ಖಾಲಿ ಉಳಿದಿದೆ. ಚಿತ್ರದುರ್ಗದ ಮುರುಘಾ ಮಠದ ಶಾಖಾಮಠವಾಗಿರುವ ಈ ಮಠದಲ್ಲಿ ಕೆಲವು ಗದ್ದುಗೆಗಳಿದ್ದು ಮಠದ ಕಟ್ಟಡವು ಜೀರ್ಣಾವಸ್ಥೆ ತಲುಪಿದೆ.

ಸಂತೆ ಶಿಗ್ಲಿ

ಶಿರಹಟ್ಟಿ ತಾಲ್ಲೂಕಿನ ಸಂತೆಶಿಗ್ಲಿಯು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತು ಕಿ.ಮೀ. ದೂರದಲ್ಲಿದೆ. ಸುಧಾರಣೆ ಕಾಣಬೇಕಾದ ಈ ಗ್ರಾಮದಲ್ಲಿ ಗ್ರಾಮಾಭ್ಯುದಯದ ದೃಷ್ಟಿಯಿಂದ ಶಿವಯೋಗ ಮಂದಿರವು ಸ್ಥಾಪನೆಯಾಗಿದೆ.

ಶಿವಯೋಗ ಮಂದಿರ: ಸಂತೆಶಿಗ್ಲಿಯ ಹೊರಭಾಗದಲ್ಲಿ ಶ್ರೀ ವೀರಪ್ಪಯ್ಯ ಸ್ವಾಮಿಗಳು ಪ್ರಾರಂಭ ಮಾಡಿದ ಶ್ರೀ ಶಿವಯೋಗ ಮಂದಿರವು ಆಧ್ಯಾತ್ಮ ಚಿಂತನೆಯನ್ನೇ ಮೂಲ ಉದ್ದೇಶವಾಗಿಟ್ಟುಕೊಂಡು ಗ್ರಾಮದ ಜನರಿಗೆ ಧಾರ್ಮಿಕ ಸಂಸ್ಕಾರ ನೀಡ ತೊಡಗಿತು. ಶ್ರೀ ವೀರಪ್ಪಯ್ಯ ಸ್ವಾಮಿಗಳ ಕಾಲದಲ್ಲಿ ಶಿಶುನಾಳ ಶರೀಫರು ಕೆಲವು ದಿನ ಇಲ್ಲಿ ನೆಲಸಿ ಹೋದರೆಂದು ಈ ಗ್ರಾಮದ ಜನ ಅಭಿಮಾನದಿಂದ ಹೇಳುತ್ತಾರೆ. ಆದರೆ ಈ ಬಗ್ಗೆ ಸ್ಪಷ್ಟೀಕರಿಸುವ ಯಾವುದೇ ಆಧಾರಗಳು ದೊರಕುತ್ತಿಲ್ಲ. ಶ್ರೀ ವೀರಪ್ಪಯ್ಯ ಸ್ವಾಮಿಗಳಿಂದ ಬೆಳೆದ ಈ ಮಠವು ನಂತರ ಶ್ರೀ ಪರಪ್ಪ ಸ್ವಾಮಿಗಳಿಂದ ಮುನ್ನಡೆದು ಬಂದ ಬಗ್ಗೆ ಮಾಹಿತಿ ದೊರೆಯುತ್ತದೆ. ಈಗ ಶ್ರೀ ಇಷ್ಟಲಿಂಗ ದೇವರು ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡಿದ್ದಾರೆ.

ಬಿಜಾಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮಿಗಳು ಗ್ರಾಮ ಸ್ವರಾಜ್ಯದ ಕನಸನ್ನು ಕಂಡು ಗ್ರಾಮಕ್ಕೆ ಬೇಕಾಗುವ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡುವ ಉದ್ದೇಶದಿಂದ ಸಾರ್ವಜನಿಕ ಶೌಚಾಲಯವನ್ನು ನಿರ್ಮಿಸಿ, ಗ್ರಾಮದ ನೈರ್ಮಲ್ಯವನ್ನು ಕಾಪಾಡಲು ವ್ಯವಸ್ಥೆ ಮಾಡಿದ್ದಾರೆ. ಅಕ್ಕನ ಬಳಗ, ಗ್ರಾಮದ ಯುವಕ ತಂಡ ಮಠದ ಎಲ್ಲಾ ಧಾರ್ಮಿಕ ಕಾರ್ಯಗಳಿಗೆ ಸ್ಪಂದಿಸುತ್ತಾ ಮಠವನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ.

ವಿಳಾಸ: ಶ್ರೀ ಇಷ್ಟಲಿಂಗ ದೇವರು, ಶ್ರೀ ಶಿವಯೋಗ ಮಂದಿರ, ಸಂತೆಶಿಗ್ಲಿ, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ.

ಸಾಸಲವಾಡ

ಶಿರಹಟ್ಟಿ ತಾಲ್ಲೂಕಿನ ಸಾಸಲವಾಡವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಮೂವತ್ತೈದು ಕಿ.ಮೀ.ದೂರದಲ್ಲಿದೆ. ಈ ಗ್ರಾಮದಲ್ಲಿ ಪುರಾತನ ಪರಂಪರೆಯ ಹಿರೇಮಠವು ಸ್ಥಾಪನೆಯಾಗಿತ್ತು.

ಹಿರೇಮಠ: ಸಾಸಲವಾಡ ಗ್ರಾಮದಲ್ಲಿ ಬಾಳೆಹೊನ್ನೂರು ರಂಭಾಪುರಿಪೀಠದ ಶಾಖಾಮಠವಾದ ಹಿರೇಮಠವು ಸ್ಥಾಪನೆ ಯಾಗಿದೆ. ಈ ಮಠವು ಪುರಾತನ ಇತಿಹಾಸ ಹೊಂದಿದ್ದು **'ಚವನ ಮಹರ್ಷಿ'** ತಪಸ್ಸು ಮಾಡಿದ ಜಾಗ ಇದಾಗಿದೆ ಎಂದು ಹೇಳಲಾಗುತ್ತಿದೆ. ಈ ಸ್ಥಳದಲ್ಲಿ ಪುರಾತನ ಕಾಲದ ಗಡಿಬಸವೇಶ್ವರ ದೇವಸ್ಥಾನ, ಶಂಕರಲಿಂಗ ದೇವಸ್ಥಾನಗಳು ಸ್ಥಾಪನೆ ಯಾಗಿವೆ. ಈ ಮಠದಲ್ಲಿ ಪುರಾತನ ಕಾಲದ ತೂಗುದೀಪವನ್ನು ನೋಡಬಹುದಾಗಿದೆ. ಇಂತಹ ಪುರಾಣ ಪ್ರಸಿದ್ಧ ಮಠದಲ್ಲಿ ಅಧಿಕಾರಕ್ಕೆ ಬಂದ ಗುರುಗಳ ಬಗ್ಗೆ ಮಾಹಿತಿ ದೊರೆಯದಾಗಿದೆ. ಅಲ್ಲದೆ ಇಂದು ಈ ಮಠದಲ್ಲಿ ಉತ್ತರಾಧಿಕಾರಿಗಳು ಯಾರೂ ಇಲ್ಲದೆ ಮಠವು ಖಾಲಿ ಉಳಿದು ತನ್ನ ಅಸ್ತಿತ್ವವನ್ನು ಕಳೆದುಕೊಂಡಿದೆ.

ಹೊಳೆ ಇಟಗಿ

ಶಿರಹಟ್ಟಿ ತಾಲ್ಲೂಕಿನ ಹೊಳೆ ಇಟಗಿಯು ತಾಲ್ಲೂಕು ಕೇಂದ್ರದಿಂದ ಆಗ್ನೇಯ ದಿಕ್ಕಿಗೆ ಮೂವತ್ತೇಳು ಕಿ.ಮೀ. ದೂರದಲ್ಲಿದೆ. ತುಂಗಾಭದ್ರಾ ನದಿಯ ದಡದಲ್ಲಿರುವ ಕಾರಣ ಇಟಗಿ ಗ್ರಾಮಕ್ಕೆ 'ಹೊಳೆ ಇಟಗಿ' ಎಂದು ಹೆಸರು ಬಂದಿದೆ. ಈ ಗ್ರಾಮದಲ್ಲಿ ಮೂರು ಮಠಗಳು ಸ್ಥಾಪನೆಯಾಗಿರುವ ಬಗ್ಗೆ ಮಾಹಿತಿ ದೊರೆಯುತ್ತದೆ. ಇವುಗಳೆಂದರೆ ಶ್ರೀ ಹಿರೇಮಠ, ಶ್ರೀ ಘನಲಿಂಗ ದೇವರ ಮಠ ಹಾಗೂ ಶ್ರೀ ವಿರಕ್ತಮಠ. ಈ ಗ್ರಾಮದಲ್ಲಿ ಪಂಚಪೀಠಗಳಲ್ಲಿ ಒಂದಾದ ಶ್ರೀ ರಂಭಾಪುರಿ

ಪೀಠದ ಶಾಖಾ ಮಠವು ಅಸ್ತಿತ್ವದಲ್ಲಿತ್ತು. ಇದು ಕಾಲ ಕ್ರಮೇಣ ನಶಿಸಿ ಹೋಗಿದ್ದು, ಇದ್ದ ಆಸ್ತಿಯನ್ನು ಮಾರಿಕೊಳ್ಳಲಾಗಿದೆ. ಇದೇ ರೀತಿ ಶ್ರೀ ಘನಲಿಂಗ ದೇವರ ಮಠವು ಅಸ್ತಿತ್ವದಲ್ಲಿತ್ತೆಂದು ಗ್ರಾಮಸ್ಥರ ಬಾಯಲ್ಲಿ ಮಾತ್ರ ಉಳಿದಿದೆ.

ವಿರಕ್ತಮಠ: ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ವಿರಕ್ತಮಠವು ಹೊಳೆ ಇಟಗಿಯ ಧಾರ್ಮಿಕ ಕೇಂದ್ರಸ್ಥಳವಾಗಿ ರೂಪುಗೊಂಡಿದೆ. ಸುಮಾರು ಮುನ್ನೂರು ವರ್ಷಗಳ ಹಿಂದೆ ಸ್ಥಾಪನೆಯಾಗಿರುವ ಈ ಮಠವು ಚೀಲಾಳ ಸಂಪ್ರದಾಯದಲ್ಲಿ ಬೆಳೆದು ಬಂದಿದೆ. ಕಾಲ ಕ್ರಮೇಣ ಈ ಮಠವು ಮುರುಘಾ ಸಮಯದ ಮಠವಾಗಿ ಬೆಳೆದು ಈ ಗ್ರಾಮದಲ್ಲಿ ಧಾರ್ಮಿಕ ನೆಲೆಯನ್ನು ರೂಪಿಸಲು ನೆರವಾಗಿದೆ. ಶ್ರೀ ವಿರಕ್ತ ಮಠದ ಸ್ಥಾಪನೆಯು ಶ್ರೀ ತೋಂಟದ ಸ್ವಾಮಿಗಳಿಂದ ಪ್ರಾರಂಭವಾಗಿದೆ. ಅಂದು ಪ್ರಾರಂಭಗೊಂಡ ಮಠವು ಇತ್ತೀಚಿನ ದಿನಗಳಲ್ಲಿ ಕೆಲವು ಸ್ಥಿತ್ಯಂತರಗಳನ್ನು ಕಂಡು ಈತನಕ ಬೆಳೆದು ಬಂದಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ ತೋಂಟದಸ್ವಾಮಿಗಳು
೨. ಶ್ರೀ ಮ.ನಿ.ಪ್ರ ಚನ್ನಬಸವ ಶಿವಯೋಗಿಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಸಂಗಮೇಶ ಶಿವಯೋಗಿಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಚನ್ನವೀರಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಮುರುಘಾಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ನಾಗಭೂಷಣಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಮಡಿವಾಳಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಮಠದ ಕರ್ತೃ ಗುರುಗಳಾದ ಶ್ರೀ ತೋಂಟದ ಸ್ವಾಮಿಗಳು ಮಹಾ ತಪಸ್ವಿಗಳಾಗಿದ್ದರೆಂದು ಹೇಳಲಾಗುತ್ತದೆ. ಇವರ ಕಾಲದಲ್ಲಿ ಗುರುಗಳ ಮಾರ್ಗದರ್ಶನದಲ್ಲಿ ಭಕ್ತರು ಬೆಳೆದವರಾಗಿ ಸಮಾಜವನ್ನು ಸನ್ಮಾರ್ಗದಲ್ಲಿ ನಡೆಸಿಕೊಂಡು ಬಂದಿದ್ದರು. ಇವರು ಲಿಂಗೈಕ್ಯರಾದ ಮೇಲೆ ಶ್ರೀ ಚನ್ನಬಸವ ಶಿವಯೋಗಿ ಸ್ವಾಮಿಗಳು ಅಧಿಕಾರಕ್ಕೆ ಬಂದಿದ್ದರು. ಇವರೂ ಸಹ ಮಹಾಪ್ರಭಾವಿಗಳಾಗಿ ಸಮಾಜವನ್ನು ಮುನ್ನಡೆಸಿದ್ದರು. ಇವರ ನಂತರ ಅಧಿಕಾರಕ್ಕೆ ಬಂದ ಶ್ರೀ ಸಂಗಮೇಶ್ವರ ಶಿವಯೋಗಿ ಸ್ವಾಮಿಗಳು ಮಠವನ್ನು ಉದ್ಧರಿಸಿ ತಮ್ಮ ಜೀವಿತದ ಕೊನೆ ಘಳಿಗೆಯಲ್ಲಿ ಕುಂದಗೋಡ ತಾಲ್ಲೂಕಿನ ಗುಡಿಗೇರಿಯಲ್ಲಿ ಲಿಂಗೈಕ್ಯರಾದರು. ನಂತರ ಶ್ರೀ ಚನ್ನವೀರ ಸ್ವಾಮಿಗಳು ೧೯೪೦ ರಲ್ಲಿ ಮಠದ ಅಧಿಕಾರಕ್ಕೆ ಬಂದು ಮಠವು ಉಚ್ಛ್ರಾಯ ಸ್ಥಿತಿಯಲ್ಲಿ ಬೆಳೆಯಲು ಕಾರಣಕರ್ತರಾದರು. ನಂತರ ಮುಂಡರಗಿ ತಾಲ್ಲೂಕಿನ ಜಾಲವಾಡಗಿ ಗ್ರಾಮದ ಶ್ರೀ ಮುರುಘಾ ಸ್ವಾಮಿಗಳು ಅಧಿಕಾರವನ್ನು ನಡೆಸಿ ೧೯೪೪ ರಲ್ಲಿ ಲಿಂಗೈಕ್ಯರಾದರು. ಇವರ ನಂತರ ಶಿಗ್ಗಾಂವಿ ತಾಲ್ಲೂಕಿನ ಮಣ್ಣೂರಿನಲ್ಲಿ ಜನಿಸಿದ ಶ್ರೀ ನಾಗಭೂಷಣ ಸ್ವಾಮಿಗಳು ೧೯೫೬ ರಲ್ಲಿ ಪಟ್ಟಾಧಿಕಾರಕ್ಕೆ ಬಂದು ಮಠದ ಸರ್ವಾಂಗೀಣ ಅಭಿವೃದ್ಧಿಗೆ ಕಾರಣ ಕರ್ತರಾಗಿದ್ದಾರೆ.

ಮಠದ ಆಸ್ತಿಯು ಅನ್ಯರ ಪಾಲಾಗಿತ್ತು ಇದನ್ನು ಕಾನೂನಿನ ಹೋರಾಟದಿಂದ ಬಿಡಿಸಿಕೊಂಡು ಮಠಕ್ಕೆ ಹೊಸ ರೂಪಕೊಡಲು ಪ್ರಯತ್ನಿಸಿದರು. ಅನ್ಯರ ಆಕ್ರಮಣದಿಂದ ಮಠವು ದಿವಾಳಿ ಸ್ಥಿತಿಯನ್ನು ಕಂಡಿತ್ತು. ಇವರ ಕಾಲದಲ್ಲಿ ಸುಸ್ಥಿತಿಯನ್ನು ತಲುಪಿತು. ಜೀರ್ಣಗೊಂಡಿದ್ದ ಮಠವು ಅಭಿವೃದ್ಧಿಯಾಯಿತು. ಹೋರಾಟದಷ್ಟೇ ಧಾರ್ಮಿಕ ವಿಚಾರದಲ್ಲಿಯೂ ಅಚಲ ನಿಲುವುಳ್ಳವರಾಗಿದ್ದರು. ಗುರುಗಳು ಯೋಗಾಸನ ಪ್ರವೀಣರಾಗಿ ಹಾಗೂ ಶರಣ ತತ್ವವನ್ನು ಪ್ರಚಾರಪಡಿಸುವ ಉತ್ತಮ ಸಾಧಕರಾಗಿ ಜನಮನದಲ್ಲಿ ಹೆಸರಾಗಿ ೧೯೮೭ ರಲ್ಲಿ ಲಿಂಗೈಕ್ಯರಾದರು. ಇವರ ನಂತರ ಶ್ರೀ ಮಡಿವಾಳ ಸ್ವಾಮಿಗಳು ೧೯೮೨ ರ ಫೆಬ್ರುವರಿ ಎರಡರಂದು ಪಟ್ಟಾಧಿಕಾರಕ್ಕೆ ಬಂದರು. ಧಾರವಾಡ ತಾಲ್ಲೂಕಿನ ಬೆಳ್ಳಗಟ್ಟಿ ಗ್ರಾಮದ ಶ್ರೀ ಅಪ್ಪಯ್ಯಸ್ವಾಮಿ ಮತ್ತು ಶ್ರೀಮತಿ ಗಂಗಮ್ಮನವರ ಪುತ್ರರಾಗಿ ೧೯೫೮ ರ ಫೆಬ್ರುವರಿ ಹದಿಮೂರರಂದು ಜನಿಸಿದರು. ಇವರು ಬೆಳ್ಳಗಟ್ಟಿ, ಅಥಣಿ, ಹಂಸಭಾವಿ ಧಾರವಾಡದಲ್ಲಿ ವಿದ್ಯಾಭ್ಯಾಸ ಮಾಡಿ ಹಿರಿಯ ಗುರುಗಳಾದ ಶ್ರೀ ನಾಗಭೂಷಣ ಸ್ವಾಮಿಗಳ ಸಮ್ಮುಖದಲ್ಲಿ ಪಟ್ಟಾಧಿಕಾರವನ್ನು ಪಡೆದುಕೊಂಡರು.

ಗದ್ದುಗೆಗಳು: ಮಠದ ಪರಂಪರೆಯಲ್ಲಿ ಬಂದಂತಹ ಗುರುಗಳ ಒಂಬತ್ತು ಗದ್ದುಗೆಗಳು ಮಠದ ಆವರಣದಲ್ಲಿ

ನಿರ್ಮಾಣಗೊಂಡಿವೆ. ಈಗಾಗಲೇ ಪರಂಪರೆಯಲ್ಲಿ ಬಂದಂತಹ ಆರು ಲಿಂಗೈಕ್ಯ ಗುರುಗಳ ಹೆಸರನ್ನು ದಾಖಲಿಸಲಾಗಿದ್ದು, ಗದ್ದುಗೆಗಳ ಆಧಾರದ ಮೇಲೆ ಇನ್ನು ಮೂರು ಜನ ಲಿಂಗೈಕ್ಯ ಗುರುಗಳ ಹೆಸರನ್ನು ದಾಖಲಿಸಬಹುದಾಗಿದೆ ಆದರೆ ಮಾಹಿತಿ ದೊರೆಯುತ್ತಿಲ್ಲ.

ಧಾರ್ಮಿಕ ಕೆಲಸ: ನಿತ್ಯ ಗದ್ದುಗೆಗಳಿಗೆ ಪೂಜೆ, ಪ್ರತಿ ಶ್ರಾವಣದಲ್ಲಿ ಒಂದು ತಿಂಗಳು ಪ್ರವಚನ ಕಾರ್ಯಕ್ರಮ, ಅನ್ನದಾಸೋಹ, ಶಿವದೀಕ್ಷೆ ಕಾರ್ಯಕ್ರಮಗಳು ನಡೆಯುತ್ತಿವೆ. ಗುರುಗಳು ಶ್ರಾವಣ ಮಾಸದಲ್ಲಿ ಧಾರ್ಮಿಕ ಪ್ರವಚನ ಕಾರ್ಯಕ್ರಮವನ್ನು ಹಮ್ಮಿಕೊಂಡು ಭಕ್ತರನ್ನು ಸನ್ಮಾರ್ಗದಲ್ಲಿ ಮುನ್ನಡೆಸುತ್ತಿದ್ದಾರೆ. ಯೋಗಾಸನ ಪ್ರವೀಣರಾಗಿರುವ ಗುರುಗಳು ಆಯುರ್ವೇದ ಔಷಧಿಯನ್ನು ನೀಡಿ ಭಕ್ತರ ರೋಗ ರುಜಿನಗಳನ್ನು ಪರಿಹಾರ ಮಾಡುತ್ತಿದ್ದಾರೆ. ಮಠದ ನೆಲಮಾಳಿಗೆಯಲ್ಲಿ ಪ್ರಮುಖ ಪುರಾತನ ವಸ್ತುಗಳಾದ ಮೇಸೆ, ತಾಳೆಗರಿ ಗ್ರಂಥಗಳು ದೊರೆತಿವೆ. ಈ ಹಿನ್ನೆಲೆಯಲ್ಲಿ ಮಠವು ಪುರಾತನ ಇತಿಹಾಸವನ್ನು ಹೊಂದಿದೆ ಎಂದು ಹೇಳಬಹುದು. ಮಠದಲ್ಲಿ ಶಿಕ್ಷಣ ಸಂಸ್ಥೆಗಳು ಇಲ್ಲದಿದ್ದರೂ ಗ್ರಾಮದಲ್ಲಿ ಪ್ರೌಢಶಾಲೆ ಪ್ರಾರಂಭವಾಗಲು ನೆರವನ್ನು ನೀಡಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಮಡಿವಾಳ ಸ್ವಾಮಿಗಳು, ಶ್ರೀ ವಿರಕ್ತ ಮಠ, ಹೊಳೇಇಟಗಿ, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ.

❑

ಗುಲ್ಬರ್ಗ ಜಿಲ್ಲೆ



ಅಫಜಲಪುರ ತಾ.
1.ನೀಲೂರು
2.ಬಡದಾಳು
3.ಬಳುರ್ಗಿ
4.ಬಂದರವಾಡ
5.ಭೈರಾಮಡಗಿ
6.ಮಲ್ಲಾಬಾರ
7.ಮಹಾಂತಪುರ
8.ರೇವೂರು (ಬಿ)
9.ಹಿರೇಹಳ್ಳಗಿ
10.ಹಿಂಜಗೇರಿ
11.ಹಿರೇಜೇವರ್ಗಿ

ಆಳಂದ ತಾ.
1.ಕಡೆಗಂಚಿ
2.ಕವಲಗಿ
3.ಖಜೂರಿ
4.ಚಿಂಚನಸೂರು
5.ಜಿಡಗ
6.ದೇವಂತಿಗಿ
7.ನರೋಣ
8.ನಿಂಬಾಳ
9.ನಿಂಬರ್ಗಾ
10.ಪಡುಸಾವಳಗಿ
11.ಭೂಸನೂರು
12.ಮಾದನಹಿಪ್ಪರಗಿ
13.ಮಾಡ್ಯಾಳ
14.ಮುದ್ದಡಗ
15.ಯಳಸಂಗಿ
16.ವಿ.ಕೆ. ಸಲಗರ
17.ಹಡಲಗಿ

ಗುಲ್ಬರ್ಗ ತಾ.
1.ಅಷ್ಟಗಿ
2.ಕಮಲಾಪುರ
3.ಕುರುಕೋಟಿ
4.ನಾಗೂರು
5.ಪಾಳಾ
6.ಬಬಲಾದಿ
7.ಮಹಾಗಾಂವ್
8.ಸರಡಗಿ
9.ಸ್ವಂತ
10.ಹಿರೇನಂದೂರು
11.ಹಿರೇಸಾವಳಗಿ

ಚಿತ್ತಾಪುರ ತಾ.
1.ಅಳ್ಳಳ್ಳಿ
2.ಕಾಳಗಿ
3.ತೆಂಗಳಿ
4.ದಂಡೋತಿ
5.ನಾಲವಾರ
6.ಭರತನೂರು
7.ಮುಗಳನಾಗಾವಿ
8.ರಾವೂರು

ಚಿಂಚೋಳಿ ತಾ.
1.ಕೋಡ್ಲಿ
2.ಚಂದನಕೆರೆ
3.ಚಿಮ್ಮಇದಲಾಯಿ
4.ನಿಡುಗುಂದಿ
5.ರಟಗಲ್ಲು
6.ಸುಲೇಪೇಟೆ

ಜೇವರಗಿ ತಾ.
1.ಆಲೂರು
2.ಕಡಕೋಳ
3.ಚೇರಟಗಿ
4.ನೆಲೋಗಿ
5.ಮಳ್ಳಿ
6.ಮಾಗಣಗೇರಿ
7.ಯಡ್ರಾಮಿ
8.ಯಲಗೋಡು
9.ಸೊನ್ನ

ಯಾದಗಿರಿ ತಾ.
1.ಅಬ್ಬೆತುಮಕೂರು
2.ಕಡೆಚೂರು
3.ಕೌಳೂರು
4.ಗುರುಮಠಕಲ್ಲು
5.ಚಿಂತನಹಳ್ಳಿ

ಶಹಾಪುರ ತಾ.
1.ಕನ್ಯಕೋಳೂರು
2.ದೋರನಹಳ್ಳಿ
3.ಮದ್ದರಕಿ
4.ರಸ್ತಾಪುರ
5.ಸಗರ

ಸುರಪುರ ತಾ.
1.ಕರಡಗಲ್ಲು
2.ಕುಂಬಾರಪೇಟೆ
3.ಕೆಂಬಾವಿ
4.ದೇವಾಪುರ
5.ನಗನೂರು
6.ರಂಗಂಪೇಟೆ
7.ರುಕ್ಮಾಪುರ

ಸೇಡಂ ತಾ.
1.ಕೋಲಕುಂಡ
2.ಜಾಕನಹಳ್ಳಿ
3.ಮಳಖೇಡ
4.ಮಲಖೋಡ

ಕಲ್ಲಿನ ಗಣಿಗಾರಿಕೆಯಿಂದ ನಾಡಿನ ಬೊಕ್ಕಸಕ್ಕೆ ಹೆಚ್ಚು ಆದಾಯವನ್ನು ತುಂಬುತ್ತಿರುವ ಗುಲ್ಬರ್ಗ ಜಿಲ್ಲೆಯು ಗುಲ್ಬರ್ಗ, ಆಳಂದ, ಚಿಂಚೋಳಿ, ಅಫಜಲಪುರ, ಜೇವರಗಿ, ಚಿತ್ತಾಪುರ, ಸೇಡಂ, ಯಾದಗಿರಿ, ಶಹಾಪುರ ಮತ್ತು ಸುರಪುರ ಈ ರೀತಿ ಹತ್ತು ತಾಲ್ಲೂಕುಗಳನ್ನು ಒಳಗೊಂಡು ರಾಜ್ಯದ ಅತ್ಯಂತ ದೊಡ್ಡ ಜಿಲ್ಲೆಯಾಗಿದೆ. ಉತ್ತರ ಕರ್ನಾಟಕದ ಪ್ರಮುಖ ಜಿಲ್ಲೆಯಲ್ಲಿ ಒಂದಾದ ಈ ಜಿಲ್ಲೆಯಲ್ಲಿ ಭೀಮಾ ಮತ್ತು ಕೃಷ್ಣಾ ನದಿಗಳು ಹರಿದು, ಈ ನಾಡನ್ನು ಪ್ರಾಕೃತಿಕವಾಗಿ ಶ್ರೀಮಂತಗೊಳಿಸಿವೆ. ಸೇಡಂ, ಯಾದಗಿರಿ, ಶಹಾಪುರ ಮತ್ತು ಚಿತ್ತಾಪುರ ತಾಲ್ಲೂಕಿನಲ್ಲಿ ಸಿಗುವ ಶಿಲೆಗಳು ಅತ್ಯುತ್ತಮ ಶ್ರೇಣಿಯ ಶಿಲೆಗಳಾಗಿದ್ದು, ಪ್ರಪಂಚದಾದ್ಯಂತ ಬೇಡಿಕೆ ಪಡೆದಿವೆ. ಕಲ್ಲಿನ ಗಣಿಯ ನಾಡೆಂದೇ ಹೆಸರು ಗಳಿಸಿದೆ.

ಈ ಜಿಲ್ಲೆಯಲ್ಲಿ ರಾಷ್ಟ್ರಕೂಟ ಹಾಗೂ ಚಾಳುಕ್ಯ ರಾಜಮನೆತನಗಳು ಆಳ್ವಿಕೆ ನಡೆಸಿವೆ. ನಂತರ ರೋಜಾ ರಾಜ ಹಾಗೂ ದೆಹಲಿಯ ಬಾದಷಹರ ಆಳ್ವಿಕೆಗೆ ಒಳಪಟ್ಟು ನಂತರ ಹೈದರಾಬಾದ್ ನಿಜಾಮನ ಆಳ್ವಿಕೆಗೆ ಒಳಪಟ್ಟಿತ್ತು. ಈ ರೀತಿ ಅನೇಕ ರಾಜಕೀಯ ಸ್ಥಿತ್ಯಂತರಗಳಿಂದ ಗುಲ್ಬರ್ಗ ಜಿಲ್ಲೆ ಸಾಂಸ್ಕೃತಿಕವಾಗಿ ಬೆಳೆದಿದೆ. ಮಳಖೇಡದ ನೃಪತುಂಗರಾಜನ ಕಾಲದ **'ಕವಿರಾಜ ಮಾರ್ಗ'** ಕನ್ನಡ ಸಾಹಿತ್ಯದ ಪ್ರಥಮ ಉಪಲಬ್ಧ ಗ್ರಂಥವಾಗಿದೆ. ವಚನ ಸಾಹಿತ್ಯದ ಹರಿಕಾರರಾದ ಶ್ರೇಷ್ಠರೆನಿಸಿದ ದೇವರ ದಾಸಿಮಯ್ಯ, ಕೆಂಬಾವಿ ಮೂಗಣ್ಣ, ಷಣ್ಮುಖ ಶಿವಯೋಗಿಗಳು ಹಾಗೂ ಮಡಿವಾಳೇಶ್ವರರು ಮುಂತಾದ ವಚನಕಾರರು ಜನಿಸಿರುವ ಗುಲ್ಬರ್ಗ ಜಿಲ್ಲೆ ಕರ್ನಾಟಕದ ರಾಜಕೀಯ, ಸಾಹಿತ್ಯಿಕ, ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದ ಅಭಿವೃದ್ಧಿಗೆ ತನ್ನದೇ ಆದಂತಹ ಶ್ರೇಷ್ಠ ಕೊಡುಗೆಯನ್ನು ನೀಡಿದೆ.

ರಾಯಚೂರು, ಬಿಜಾಪುರ ಹಾಗೂ ಬೀದರ್ ಜಿಲ್ಲೆಗಳಲ್ಲದೆ, ಪೂರ್ವಕ್ಕೆ ಆಂಧ್ರಪ್ರದೇಶ, ವಾಯುವ್ಯಕ್ಕೆ ಮಹಾರಾಷ್ಟ್ರದ ಗಡಿಯಂಚಿನಿಂದ ಆವೃತಗೊಂಡಿರುವ ಈ ಜಿಲ್ಲೆಯು ಮರಾಠಿ, ಉರ್ದು, ಹಿಂದಿ ಹಾಗೂ ತೆಲುಗು ಭಾಷೆಗಳ ಪ್ರಭಾವವನ್ನು ಪಡೆದು, ಭಾಷಾ ಬಾಂಧವ್ಯ ಹಾಗೂ ಧಾರ್ಮಿಕ ಭಾವೈಕ್ಯತೆಯನ್ನು ಬೆಳೆಸಿಕೊಂಡಿದೆ.

ವಿಶಿಷ್ಟತೆಗಳಿಂದ ಕೂಡಿರುವ ಗುಲ್ಬರ್ಗ ಜಿಲ್ಲೆಯಲ್ಲಿ ವೀರಶೈವ ಧರ್ಮ ಪ್ರಬಲವಾಗಿ ಬೆಳೆದಿದೆ. ಹಿರೇ ಸಾವಳಗಿಯ ಶ್ರೀ ಶಿವಲಿಂಗೇಶ್ವರ ಶಿವಯೋಗಿಗಳು ಭಾವೈಕ್ಯತಾ ಸಮಾಜವನ್ನು ರೂಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ಗುಲ್ಬರ್ಗದ ಶರಣ ಬಸವೇಶ್ವರ ಸಂಸ್ಥಾನ ಪೀಠವು ದಾಸೋಹದ ಮೂಲಕ ವೀರಶೈವ ಧರ್ಮವನ್ನು ವಿಶಿಷ್ಟ ರೀತಿಯಲ್ಲಿ ಉಳಿಸಿ, ಬೆಳೆಸುವಲ್ಲಿ ನೆರವಾಗಿರುವುದನ್ನು ಯಾರೂ ಮರೆಯುಂತಿಲ್ಲ. ಗುಲ್ಬರ್ಗ ಜಿಲ್ಲೆಯಲ್ಲಿ ಸ್ಥಾಪನೆಗೊಂಡಿರುವ ಬಹುತೇಕ ಎಲ್ಲಾ ವೀರಶೈವ ಮಠಗಳು ತಮ್ಮ ಶಕ್ತಿಗನುಸಾರವಾಗಿ ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ ಹಾಗೂ ಶೈಕ್ಷಣಿಕ ಪ್ರಗತಿಗೆ ನೆರವಾಗಿ, ಭಾವೈಕ್ಯತೆಯ ವಾತಾವರಣ ಬೆಳೆಯುವಂತೆ ಮಾಡಿವೆ.

ಪುರಾತನ ಕಾಲದಿಂದ ಈತನಕ ಈ ಜಿಲ್ಲೆಯಲ್ಲಿ ಒಟ್ಟು ಮುನ್ನೂರೈವತ್ತೆಂಟು ಮಠಗಳು ಸ್ಥಾಪನೆಗೊಂಡಿವೆ ಎಂಬ ಮಾಹಿತಿ ದೊರೆಯುತ್ತಿದೆ. ಈ ಮಾಹಿತಿಯ ಹಿನ್ನೆಲೆಯಲ್ಲಿ ಶೋಧನೆಗೆ ಹೋದ ಸಂದರ್ಭದಲ್ಲಿ ನೂರತೊಂಭತ್ತು ಮಠಗಳು ದೊರೆತಿದ್ದು, ಇವುಗಳಲ್ಲಿ ನೂರನಲವತ್ತು ಮಠಗಳು ಅಸ್ತಿತ್ವದಲ್ಲಿವೆ ಉಳಿದ ಮಠಗಳು ಅಸ್ತಿತ್ವವನ್ನು ಕಳೆದುಕೊಂಡಿದ್ದು, ಕೇವಲ ಗದ್ದುಗೆ ಪೂಜೆಗೆ ಮಾತ್ರ ಸೀಮಿತಗೊಂಡಿವೆ. ಇನ್ನು ನೂರಅರವತ್ತೆಂಟು ಮಠಗಳು ಹೇಳಲು ಹೆಸರಿಲ್ಲದಂತಾಗಿರುವುದು ನೋವಿನ ಸಂಗತಿಯಾಗಿದೆ.

ಅಫಜಲಪುರ ತಾಲ್ಲೂಕು

ಗುಲ್ಬರ್ಗ ಜಿಲ್ಲೆಯ ಅಫಜಲಪುರ ತಾಲ್ಲೂಕು ಐತಿಹಾಸಿಕ ಪರಂಪರೆಯುಳ್ಳದ್ದಾಗಿದೆ. ಹನ್ನೆರಡನೆಯ ಶತಮಾನದ ಶರಣರ ಪ್ರಭಾವಕ್ಕೆ ಒಳಗಾದ ಈ ಪ್ರಾಂತ್ಯ ಧಾರ್ಮಿಕವಾಗಿ ಮಹತ್ವ ಪಡೆದಿದೆ. ಇಲ್ಲಿ ಹದಿನೈದು ವೀರಶೈವ ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಅಫಜಲಪುರ

ಗುಲ್ಬರ್ಗ ಜಿಲ್ಲೆಯ ತಾಲ್ಲೂಕು ಕೇಂದ್ರ ಸ್ಥಳವಾದ ಅಫಜಲಪುರವು ಜಿಲ್ಲಾ ಕೇಂದ್ರದಿಂದ ನೈರುತ್ಯಕ್ಕೆ ನಲವತ್ತೈದು ಕಿ.ಮೀ ದೂರದಲ್ಲಿದೆ. ಪುರಾತನ ಕಾಲದಲ್ಲಿ ಈ ಪಟ್ಟಣವು ವೀರಶೈವ ಧರ್ಮದ ಪ್ರಚಾರದಲ್ಲಿ ಪ್ರಮುಖ ಪಾತ್ರ ವಹಿಸಿತ್ತೆಂದು ಹೇಳಲಾಗುತ್ತದೆ. ಇದಕ್ಕೆ ಪೂರಕವೆಂಬಂತೆ ಈ ಗ್ರಾಮದಲ್ಲಿ ಶ್ರೀ ಹಿರೇಮಠ, ಶ್ರೀ ವಿರಕ್ತಮಠ ಮತ್ತು ಶ್ರೀ ಕಳ್ಳಿಮಠ ಎಂಬ ಮೂರು ಮಠಗಳು ಸ್ಥಾಪನೆಗೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದು ವೀರಶೈವ ಧರ್ಮ ಪ್ರಬಲವಾಗಿ ಬೇರೂರಲು ಸಹಾಯಕವಾಗಿವೆ. ಈಗ ಶ್ರೀ ಹಿರೇಮಠ ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ಹಿರೇಮಠ: ಅಫಜಲಪುರ ಪಟ್ಟಣದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ಉಜ್ಜಯಿನಿ ಪೀಠದ ಶಾಖಾ ಮಠವಾಗಿದೆ. ಪುತ್ರವರ್ಗದ ಪರಂಪರೆಯಲ್ಲಿ ಬೆಳೆದ ಈ ಮಠವು ಶ್ರೀ ಮಳೇಂದ್ರ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪಿತವಾಗಿದೆ. ಈ ಕಾರಣಕ್ಕೆ ಹಿರೇಮಠಕ್ಕೆ 'ಮಳೇಂದ್ರ ಮಠ' ಎಂದೂ ಸಹ ಕರೆಯಲಾಗುತ್ತಿದೆ.

ಮಠ ಸ್ಥಾಪನೆ: ಈ ಮಠವು ಹನ್ನೆರಡನೆಯ ಶತಮಾನದಲ್ಲಿ ಬೆಳಕಿಗೆ ಬಂದಿದೆ. ಉಜ್ಜಯಿನಿ ಪೀಠದ ಜಗದ್ಗುರುಗಳಾಗಿದ್ದ ಶ್ರೀ ಮಳೇಂದ್ರ ಶಿವಾಚಾರ್ಯ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಧರ್ಮ ಪ್ರಚಾರಕ್ಕೆಂದು ಉತ್ತರ ಕರ್ನಾಟಕದ ಕಡೆ ಆಗಮಿಸಿದ ಸಂದರ್ಭದಲ್ಲಿ, ಇಲ್ಲಿ ಅನೇಕ ವರ್ಷಗಳ ಕಾಲ ನೆಲೆ ನಿಂತು ಈ ಭಾಗದ ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವನ್ನಾಗಿ ಮಾಡಿಕೊಂಡಿದ್ದರು. ಜಗದ್ಗುರುಗಳ ಕಾರ್ಯ ಕ್ಷೇತ್ರವಾಗಿ ಸ್ಥಾಪನೆಗೊಂಡ ಈ ಮಠವು ಈವರೆವಿಗೆ ಬೆಳೆದು ಬಂದಿದೆ. ಶ್ರೀ ಮಳೇಂದ್ರ ಶಿವಾಚಾರ್ಯ ಸ್ವಾಮಿಗಳು ಇಲ್ಲಿ ನೆಲೆಸಿದ ಸಂದರ್ಭದಲ್ಲಿ ನಾಡು ಬರಗಾಲಕ್ಕೆ ತುತ್ತಾಗುತ್ತದೆ. ಆಗ ಶ್ರೀ ಮಳೇಂದ್ರ ಶಿವಾಚಾರ್ಯ ಸ್ವಾಮಿಗಳು ಘೋರ ತಪಸ್ಸನ್ನು ಆಚರಿಸಿ ಮಳೆಯನ್ನು ತರಿಸುತ್ತಾರಂತೆ. ಈ ಕಾರಣಕ್ಕಾಗಿ ಅವರು 'ಶ್ರೀ ಮಳೇಂದ್ರ ಶಿವಾಚಾರ್ಯ'ರೆಂದು ಹೆಸರು ಗಳಿಸಿದರೆಂದು ಹೇಳಲಾಗುವ ಜನಪದ ಕಥೆ ಕೇಳಿ ಬರುತ್ತಿದೆ. ಗುರುಗಳು ತಮ್ಮ ತಪೋಬಲದಿಂದ ಧರ್ಮಜಾಗೃತಿಯನ್ನುಂಟುಮಾಡಿ ವೀರಶೈವ ಧರ್ಮ ಬೆಳೆಯಲು ಕಾರಣಕರ್ತರಾಗಿದ್ದಾರೆ.

ಪರಂಪರೆ: ಕರ್ತೃಗುರುಗಳ ನಂತರ ಬೆಳೆದ ಪರಂಪರೆಯು ಶ್ರೀ ಮಳೇಂದ್ರ ಶಿವಾಚಾರ್ಯ ಸ್ವಾಮಿಗಳು ಎಂಬ ಒಂದೇ ಹೆಸರಿನಲ್ಲಿ ಬೆಳೆದು ಬಂದಿದೆ. ಪಟ್ಟಾಧಿಕಾರ ವಹಿಸಿಕೊಳ್ಳುವ ಗುರುಗಳು ತಮ್ಮ ಪೂರ್ವಾಶ್ರಮದ ಹೆಸರನ್ನು ತ್ಯಜಿಸಿ ಕರ್ತೃಗುರುಗಳ ಹೆಸರನ್ನು ಅಭಿದಾನ ಪಡೆದು ಪಟ್ಟಾಧಿಕಾರಕ್ಕೆ ಬರುವ ಸಂಪ್ರದಾಯ ಬೆಳೆದು ಬಂದಿದೆ. ಆದ್ದರಿಂದ ಈ ಮಠದ ಪರಂಪರೆಯಲ್ಲಿ ಬಂದಿರುವ ಗುರುಗಳ ಸಂಖ್ಯೆಯನ್ನು ನಿಖರವಾಗಿ ಗುರುತಿಸಲು ಸಾಧ್ಯವಾಗಿಲ್ಲ. ಅಲ್ಲದೆ ಮಠದಲ್ಲಿಯೂ ಸಹ ಪರಂಪರೆಯ ಮಾಹಿತಿಯನ್ನು ದಾಖಲಿಸಿಟ್ಟಿಲ್ಲ.

ಈಗಿನ ಗುರುಗಳ ಅನುಗ್ರಹ ಗುರುಗಳಾಗಿದ್ದ ಶ್ರೀ ಮಳೇಂದ್ರ ಶಿವಾಚಾರ್ಯ ಸ್ವಾಮಿಗಳು (ಶ್ರೀ ಶಂಕರಯ್ಯಸ್ವಾಮಿ ಕಲ್ಲೂರು) ಇವರು ಮಠವನ್ನು ಅಭಿವೃದ್ಧಿಪಡಿಸಿ ೧೯೬೨ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಅವರ ತರುವಾಯ ಈಗಿನ ಶ್ರೀ ಮಳೇಂದ್ರ ಶಿವಾಚಾರ್ಯ ಸ್ವಾಮಿಗಳು (ಶ್ರೀ ಶಾಂತವೀರ ದೇವರು) ೧೯೬೩ ರಲ್ಲಿ ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಶ್ರೀಶಾಂತವೀರ ದೇವರು ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ಗಲಗಲಿ ಗ್ರಾಮದ ಶ್ರೀ ಅಯ್ಯಪ್ಪಸ್ವಾಮಿ ಮತ್ತು ಶ್ರೀಮತಿ ವೀರಬಸಮ್ಮನವರ ಪುತ್ರರಾಗಿ ೧೯೧೭ ರಲ್ಲಿ ಜನಿಸಿ,ಬಾಗಲಕೋಟೆ, ಶಿವಯೋಗಮಂದಿರದಲ್ಲಿ ವಿದ್ಯಾಭ್ಯಾಸ ಮಾಡಿ ಉಜ್ಜಯಿನಿ ಜಗದ್ಗುರುಗಳ ಅನುಗ್ರಹದೊಂದಿಗೆ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಗುರುಗಳು ಅಧಿಕಾರಕ್ಕೆ

ಬಂದ ಮೇಲೆ ಮಠದ ಹಳೆಯ ಕಟ್ಟಡವನ್ನು ತೆಗೆದು ಹೊಸ ಕಟ್ಟಡವನ್ನು ನಿರ್ಮಿಸಿದರು. ಪಟ್ಟಾಧಿಕಾರ ವಹಿಸಿಕೊಂಡ ನಂತರ ಮೂರು ವರ್ಷ ದೇಶಸಂಚಾರ ಕೈಗೊಂಡು ಧರ್ಮಪ್ರಚಾರ ಮಾಡಿ ಅನುಭವವನ್ನು ಸಂಪಾದಿಸಿಕೊಂಡು ಮಠಕ್ಕೆ ಆಗಮಿಸಿದರು. ಶ್ರೀ ಮಳೇಂದ್ರ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಸರ್ವಾಂಗೀಣವಾಗಿ ಅಭಿವೃದ್ಧಿಪಡಿಸಿ ಜಗದ್ಗುರು ಪಂಚಾಚಾರ್ಯರನ್ನು ಅಫಜಲಪುರಕ್ಕೆ ಬರಮಾಡಿಕೊಂಡು ವಿಜೃಂಭಣೆಯಾಗಿ ಧಾರ್ಮಿಕ ಸಭೆಯನ್ನು ಆಚರಿಸಿ, ಧರ್ಮೋಪದೇಶವನ್ನು ಮಾಡಿಸಿದ್ದಾರೆ. ಈ ರೀತಿ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮಠವನ್ನು ಜನಗಳ ಹತ್ತಿರ ಕೊಂಡೊಯ್ಯ ತೊಡಗಿದರು.ಈಗ ಎಂಬತ್ತೂಮ್ರು ವರ್ಷ ಸಂದಿದ್ದರೂ ಇನ್ನೂ ಉತ್ಸಾಹ ಕುಂದದೆ, ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯಲ್ಲಿ ಬಂದ ಗುರುಗಳ ಪೈಕಿ ಮೂರು ಗದ್ದುಗೆಗಳು ಸ್ಥಾಪನೆಯಾಗಿವೆ. ಇವುಗಳಿಗೆ ನಿತ್ಯ ಪೂಜೆ, ಶ್ರಾವಣದಲ್ಲಿ ರುದ್ರಾಭಿಷೇಕ, ಪುರಾಣ,ಪ್ರವಚನವನ್ನು ಪ್ರಾರಂಭಿಸಿ ಗಣೇಶ ಚೌತಿಗೆ ಮುಕ್ತಾಯ ಮಾಡಲಾಗುತ್ತಿದೆ. ಮಠದ ಪರಂಪರೆಯಲ್ಲಿ ಕಲ್ಲೂರು, ಶಿವಪುರ, ಚಿಲಮಗೆರೆ, ಬದ್ದೊಡಿ,ರೇವೂರು, ಕವಲಗಿ ಎಂಬ ಗ್ರಾಮಗಳಲ್ಲಿ ಶಾಖಾ ಮಠಗಳಿದ್ದವು. ಆದರೆ ಇಂದು ಈ ಮಠಗಳು ಸ್ವತಂತ್ರಗೊಂಡಿವೆ. ಶ್ರೀ ಮಳೇಂದ್ರ ಶಿವಾಚಾರ್ಯ ಸ್ವಾಮಿಗಳು ಧರ್ಮೋಪದೇಶ ವನ್ನು ನೀಡುತ್ತಾ ಧಾರ್ಮಿಕ ಸಂಸ್ಕಾರವನ್ನು ನೀಡುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಮಳೇಂದ್ರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಅಫಜಲಪುರ, ಗುಲ್ಬರ್ಗ ಜಿಲ್ಲೆ.

ಚಿಂಚೋಳಿ

ಅಫಜಲಪುರ ತಾಲ್ಲೂಕಿನ ಚಿಂಚೋಳಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹದಿನೈದು ಕಿ.ಮೀ ದೂರದಲ್ಲಿದೆ. ಈ ಗ್ರಾಮವು ಅಭಿವೃದ್ಧಿಯನ್ನು ಕಾಣಬೇಕಾಗಿದೆ. ಇಲ್ಲಿನ ಧಾರ್ಮಿಕ ಕೇಂದ್ರವಾಗಿ ಹಿರೇಮಠವು ಬೆಳೆದಿದೆ.

ಹಿರೇಮಠ: ಚಿಂಚೋಳಿ ಗ್ರಾಮದ ಮಧ್ಯಭಾಗದಲ್ಲಿ ಉಜ್ಜಯಿನಿಪೀಠದ ಶಾಖಾಮಠವಾದ ಶ್ರೀ ಹಿರೇಮಠವು ಈ ಗ್ರಾಮದಲ್ಲಿ ಸ್ಥಾಪನೆಯಾಗಿ ತನ್ನ ಧಾರ್ಮಿಕ ಕಾರ್ಯಗಳಿಂದ ಹೆಸರು ಮಾಡಿ ವೀರಶೈವ ಧರ್ಮವನ್ನು ಪ್ರಚಾರಪಡಿಸಿ ಬೆಳೆಸಿದೆ.

***ಪರಂಪರೆ* :** ಪುರಾತನ ಕಾಲದಿಂದಲೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದ ಮಠದಲ್ಲಿ ಈಗ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ನಡೆಸುತ್ತಿದ್ದಾರೆ. ಗುರುಗಳು ೧೯೮೮ ರಲ್ಲಿ ಮಠದ ಅಧಿಕಾರವನ್ನು ವಹಿಸಿಕೊಂಡು ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಗುರುಗಳು ಹುಕ್ಕೇರಿ ತಾಲ್ಲೂಕಿನ ಇಸ್ಲಾಂಪುರದ ಶ್ರೀ ಅಡವಿ ಸಿದ್ಧೇಶ್ವರ ವಿರಕ್ತ ಮಠದ ಅಧಿಕಾರವನ್ನು ಸಹ ವಹಿಸಿಕೊಂಡು ಆಡಳಿತವನ್ನು ನಡೆಸಿಕೊಂಡು ಬರುತ್ತಿದ್ದಾರೆ.

***ಧಾರ್ಮಿಕ ಕಾರ್ಯಗಳು* :** ಹಿರೇಮಠದ ಆವರಣದಲ್ಲಿ ಐದು ಗದ್ದುಗೆಗಳು ಸ್ಥಾಪನೆಯಾಗಿವೆ. ಈ ಗದ್ದುಗೆಗಳಿಗೆ ನಿತ್ಯ ಪೂಜೆ, ಅಮಾವಾಸ್ಯೆ ಮತ್ತು ಹುಣ್ಣಿಮೆ, ಕಾರ್ತೀಕ ಹಾಗೂ ಶ್ರಾವಣಮಾಸಗಳಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭಗಳಲ್ಲಿ ಗುರುಗಳು ಆಗಮಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುತ್ತಾರೆ. ಮಠದ ಆವರಣದಲ್ಲಿ ಶ್ರೀ ಮಲ್ಲಿಕಾರ್ಜುನ ದೇವಸ್ಥಾನ ಸ್ಥಾಪನೆಯಾಗಿದೆ.

ವಿಳಾಸ: ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಚಿಂಚೋಳಿ, ಅಫಜಲಪುರ ತಾ, ಗುಲ್ಬರ್ಗ ಜಿಲ್ಲೆ.

ಜೋಗೂರು

ಅಫಜಲಪುರ ತಾಲ್ಲೂಕಿನ ಜೋಗೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಮೂವತ್ತಾಲ್ಕು ಕಿ.ಮೀ ದೂರದಲ್ಲಿದೆ. ಇಲ್ಲಿ ಪುರಾತನ ಕಾಲದ ಹಿರೇಮಠವು ಅಸ್ತಿತ್ವದಲ್ಲಿದ್ದು, ಇಲ್ಲಿನ ಧಾರ್ಮಿಕ ಕೇಂದ್ರವಾಗಿ ರೂಪುಗೊಂಡಿದೆ.

ಹಿರೇಮಠ: ಜೋಗೂರು ಗ್ರಾಮದಲ್ಲಿ ಪುರಾತನ ಕಾಲದ ಹಿರೇಮಠವು ಸ್ಥಾಪನೆಯಾಗಿ ಧಾರ್ಮಿಕ ಆಚರಣೆಯ ಕೇಂದ್ರಬಿಂದು

ವಾಗಿದೆ. ಈ ಮಠದಲ್ಲಿ ಅನೇಕ ಗುರುಗಳು ಅಧಿಕಾರ ನಡೆಸಿದ್ದರೂ, ಈ ಗುರುಗಳ ಬಗ್ಗೆ ಸ್ಪಷ್ಟ ಮಾಹಿತಿ ದೊರೆತಿಲ್ಲ. ಇತ್ತೀಚೆಗೆ ಈ ಮಠದ ಗುರುಗಳು ಲಿಂಗೈಕ್ಯರಾಗಿದ್ದು, ಲಿಂಗೈಕ್ಯರಾದ ದಿನವೇ ಎಂಟು ವರ್ಷದ ಬಾಲಕನನ್ನು ಉತ್ತರಾಧಿಕಾರಿಗಳನ್ನಾಗಿ ಮಾಡಲಾಗಿದೆ. ಪುತ್ರವರ್ಗದ ಪರಂಪರೆಯ ಈ ಮಠವು ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿದೆ.

ವಿಳಾಸ: ಶ್ರೀ ಹಿರೇಮಠ, ಜೋಗೂರು, ಅಫಜಲಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ನೀಲೂರು

ಅಫಜಲಪುರ ತಾಲ್ಲೂಕಿನ ನೀಲೂರು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ನಲವತ್ತು ಕಿ.ಮೀ ದೂರದಲ್ಲಿದೆ. ಈ ಗ್ರಾಮವು ಪುರಾತನ ಕಾಲದಿಂದಲೂ ಧಾರ್ಮಿಕ ತಳಹದಿಯ ಮೇಲೆ ಬೆಳೆದು ಬಂದಿದೆ. ಇಲ್ಲಿ ಶ್ರೀ ರಾಚೋಟೇಶ್ವರ ಮಠವು ಅಸ್ತಿತ್ವದಲ್ಲಿದೆ.

ರಾಚೋಟೇಶ್ವರ ಮಠ: ನೀಲೂರು ಗ್ರಾಮದ ದಕ್ಷಿಣದ ಹೊರಭಾಗದಲ್ಲಿ 'ಶ್ರೀ ರಾಚೋಟೇಶ್ವರ ಮಠ'ವು ಸ್ಥಾಪನೆಯಾಗಿದೆ. ರಂಭಾಪುರಿ ಪೀಠದ ಶಾಖಾಮಠವಾಗಿ ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದು ಬಂದಿರುವ ಪುರಾತನ ಕಾಲದ ಈ ಮಠವನ್ನು ಶ್ರೀ ರಾಚೋಟಿ ಸ್ವಾಮಿಗಳು ಸ್ಥಾಪನೆ ಮಾಡಿದ ಕಾರಣಕ್ಕಾಗಿ 'ಶ್ರೀ ರಾಚೋಟೇಶ್ವರ ಮಠ' ಎಂಬ ಹೆಸರು ಬಂದಿದೆ.

ಮಠ ಸ್ಥಾಪನೆ: ಶ್ರೀ ರಾಚೋಟಿ ಸ್ವಾಮಿಗಳು ಲೋಕ ಸಂಚಾರಕ್ಕೆ ಹೋಗಿ ಲೋಕಾನುಭವ ಪಡೆದುಕೊಂಡು ಬಂದ ಮೇಲೆ ಈ ಗ್ರಾಮದಲ್ಲಿ ಮಠವನ್ನು ಸ್ಥಾಪನೆ ಮಾಡಿದರು. ಮಠವು ಸ್ಥಾಪನೆಗೊಂಡ ನಂತರ ಶಿವಾನುಭವ, ಶಿವದೀಕ್ಷೆ ಕಾರ್ಯಕ್ರಮಗಳು ನಡೆಯತೊಡಗಿ ಧಾರ್ಮಿಕ ಚಟುವಟಿಕೆಗಳು ಚುರುಕುಗೊಂಡವು. ಗುರುಗಳ ಧಾರ್ಮಿಕ ಕ್ರಿಯೆಯಿಂದ ಗ್ರಾಮವು ಸಂಸ್ಕಾರವನ್ನು ಪಡೆಯಿತು. ಗುರುಗಳು ಮಠವನ್ನು ಸ್ಥಾಪಿಸಿದ ನಂತರ ಲೋಕೋದ್ಧಾರಕ್ಕಾಗಿ ಪುನಃ ನಾಡಿನಲೆಲ್ಲ ಸಂಚಾರ ಕೈಗೊಂಡು ಧರ್ಮಪ್ರಚಾರಮಾಡಿದರು. ಈ ಕಾರಣಕ್ಕೆ ನೀಲೂರು ಮಠವು ಹೆಚ್ಚು ಪ್ರಸಿದ್ಧಿ ಪಡೆಯಿತು. ಪ್ರಸಿದ್ಧಿಗೊಂಡ ಮಠಕ್ಕೆ ಉತ್ತರಾಧಿಕಾರಿಗಳನ್ನು ನೇಮಿಸಿ ಶ್ರೀ ರಾಚೋಟೇಶ್ವರ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯಗೊಂಡರು.

ಪರಂಪರೆ:

೧. ಷ.ಬ್ರ.ಶ್ರೀ ರಾಚೋಟೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ರುದ್ರಯ್ಯ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಚನ್ನಬಸವಯ್ಯ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಗುರುಪಾದಯ್ಯ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ರಾಚಯ್ಯ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ವೀರಭದ್ರ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಅಯ್ಯಪ್ಪ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಏಳು ಜನ ಗುರುಗಳು ತಮ್ಮ ಶಕ್ತ್ಯಾನುಸಾರ ಧಾರ್ಮಿಕ ಕಾರ್ಯಗಳನ್ನು ಕೈಗೊಂಡು ಮಠವನ್ನು ಉಳಿಸಿ ಬೆಳೆಸಿದ್ದಾರೆ. ಏಳನೆಯ ಗುರುಗಳಾದ ಶ್ರೀ ಅಯ್ಯಪ್ಪ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಮಠವು ಜೀರ್ಣಾವಸ್ಥೆಗೆ ಬಂದಿತು. ನಂತರ ೧೯೮೨ ರಲ್ಲಿ ಶ್ರೀ ಮಲ್ಲಿಕಾರ್ಜುನ ದೇವರು ಉತ್ತರಾಧಿಕಾರಿಯಾಗಿ ನೇಮಕಗೊಂಡ ಮೇಲೆ ಮಠವು ಅಭಿವೃದ್ಧಿಯನ್ನು ಕಾಣತೊಡಗಿತು.

ಶ್ರೀ ಮಲ್ಲಿಕಾರ್ಜುನ ದೇವರು ಶ್ರೀ ರಾಚಯ್ಯ ಮತ್ತು ಶ್ರೀಮತಿ ಬಂಗಾರಮ್ಮನವರ ಪುತ್ರರಾಗಿ ೧೯೫೮ ರಲ್ಲಿ ಜನಿಸಿದರು. ಇವರು ಕಾಲೇಜು ವಿದ್ಯಾಭ್ಯಾಸವನ್ನು ಮುಗಿಸಿ, ಆಯುರ್ವೇದ ಶಾಸ್ತ್ರದಲ್ಲಿ ಪಾಂಡಿತ್ಯವನ್ನು ಪಡೆದು ಬಂದು ೧೯೮೪ ರ ಏಪ್ರಿಲ್ ನಾಲ್ಕರಂದು 'ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿ'ಗಳೆಂದು ಅಭಿದಾನ ಪಡೆದು ಪಟ್ಟಾಧಿಕಾರವನ್ನು

ವಹಿಸಿಕೊಂಡಿದ್ದಾರೆ. ಗುರುಗಳು ಶಾಂತ ಸ್ವಭಾವದವರಾಗಿ, ಸಮಾಜದ ಮಾರ್ಗದರ್ಶಕರಾಗಿ ಮಠವನ್ನು ಬೆಳೆಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಗುರುಗಳು ಶ್ರೀ ರಾಚೋಟೇಶ್ವರ ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ಮಠವು ಸರ್ವ ವಿಧದಲ್ಲಿಯೂ ಅಭಿವೃದ್ಧಿಯನ್ನು ಕಂಡಿದೆ. ಮಠದ ಆವರಣದಲ್ಲಿದ್ದ ಪರಂಪರೆಯ ಏಳು ಜನ ಗುರುಗಳ ಗದ್ದುಗೆಗಳನ್ನು ಗುರುತಿಸಿ ನವೀಕರಿಸಿದ್ದಾರೆ. ಇವುಗಳಿಗೆ ನಿತ್ಯ ಎರಡೂ ವೇಳೆ ಪೂಜೆ ನಡೆಸಲಾಗುತ್ತಿದೆ. ಪ್ರತಿ ಹುಣ್ಣಿಮೆಯಲ್ಲಿ ಶಿವಾನುಭವ ಗೋಷ್ಠಿಯನ್ನು ನಡೆಸಿ ಧಾರ್ಮಿಕ ಹಾಗೂ ಸಾಹಿತ್ಯಿಕ ವಿಚಾರಗಳಲ್ಲಿ ಉಪನ್ಯಾಸ ಮಾಡಿಸಲಾಗುತ್ತಿದೆ. ಶ್ರೀ ರಾಚೋಟೇಶ್ವರ ಸ್ವಾಮಿಗಳ ಪುಣ್ಯತಿಥಿಯನ್ನು ಏಪ್ರಿಲ್ ತಿಂಗಳಿನಲ್ಲಿ ನಡೆಸಲಾಗುತ್ತಿದೆ.

ವಿಳಾಸ:ಷ.ಬ್ರ.ಶ್ರೀಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು,ಶ್ರೀ ರಾಚೋಟೇಶ್ವರಮಠ,ನೀಲೂರು,ಅಫಜಲಪುರ ತಾ,ಗುಲ್ಬರ್ಗಜಿಲ್ಲೆ.

ಬಡದಾಳು

ಅಫಜಲಪುರ ತಾಲ್ಲೂಕಿನ ಬಡದಾಳು ಗ್ರಾಮವು ತಾಲ್ಲೂಕು ಕೇಂದ್ರದಿಂದ ಈಶಾನ್ಯ ಭಾಗಕ್ಕೆ ಹದಿನಾಲ್ಕು ಕಿ.ಮೀ ದೂರದಲ್ಲಿದೆ. ಈ ಗ್ರಾಮವು ಹಿಂದೆ ಮಾಂಡಲಿಕನೊಬ್ಬನ ಆಳ್ವಿಕೆಗೆ ಒಳಪಟ್ಟಿತ್ತು. ಈ ಸಂದರ್ಭದಲ್ಲಿ ಅನ್ಯ ರಾಜನ ದಾಳಿಯಿಂದ ಸಂಪತ್ತೆಲ್ಲ ಬರಿದಾಗಿತ್ತಂತೆ. ಅಂದಿನಿಂದ ಈ ಗ್ರಾಮವು 'ಬರಿದಾದಪುರ' ಎಂಬುದಾಗಿ ಹೆಸರು ಪಡೆದು, ನಂತರ ಬಡಿದಾಳು ಪುರವಾಗಿ ಈಗ 'ಬಡದಾಳು' ಎಂಬ ಹೆಸರನ್ನು ಉಳಿಸಿಕೊಂಡಿದೆ ಎಂದು ಸ್ಥಳಪುರಾಣದಿಂದ ತಿಳಿದು ಬರುತ್ತಿದೆ. ಇಂತಹ ಪುರಾತನ ಪ್ರಸಿದ್ಧ ಗ್ರಾಮದಲ್ಲಿ ಶ್ರೀ ಚನ್ನಮಲ್ಲೇಶ್ವರ ಮಠವು ಸ್ಥಾಪನೆಗೊಂಡಿದೆ.

ಚನ್ನಮಲ್ಲೇಶ್ವರ ಮಠ: ಶ್ರೀ ಚನ್ನಮಲ್ಲೇಶ್ವರ ಮಠವು ೧೧೨೬ ರಲ್ಲಿ ಘೋಳನೂರು ಗ್ರಾಮದಲ್ಲಿ ಸ್ಥಾಪನೆಗೊಂಡಿತ್ತೆಂದು ಹೇಳಲಾಗುತ್ತದೆ. ಈ ಗ್ರಾಮದಲ್ಲಿ ವೀರಶೈವರ ಮೇಲೆ ದಬ್ಬಾಳಿಕೆ ಹೆಚ್ಚಾದಾಗ ಗುರುಗಳು ಇದನ್ನು ಸರಿಪಡಿಸಲು ಪ್ರಯತ್ನಿಸಿದರು. ಆದರೆ ಭಕ್ತರು ಈ ಸ್ಥಳವನ್ನು ತೊರೆದು ಬೇರೆ ಕಡೆಗೆ ಹೋದ ಮೇಲೆ ಗುರುಗಳು ಮನನೊಂದು, ಅಪಾತ್ರರಿರುವ ಈ ಸ್ಥಳವು ಅನುಷ್ಠಾನಕ್ಕೆ ಯೋಗ್ಯವಲ್ಲ ಎಂದು ಅರಿತು ಘೋಳನೂರನ್ನು ತ್ಯಜಿಸಿ ಬಡದಾಳು ಗ್ರಾಮಕ್ಕೆ ಬಂದು ನೆಲಸಿದರೆಂದು ಹೇಳಲಾಗುತ್ತಿದೆ.

ಶ್ರೀ ಚನ್ನಮಲ್ಲೇಶ್ವರ ಶಿವಾಚಾರ್ಯ ಸ್ವಾಮಿಗಳು ಬಡದಾಳು ಗ್ರಾಮದ ವಾಯುವ್ಯ ಭಾಗದಲ್ಲಿ ನೆಲೆ ನಿಂತು ಧರ್ಮ ಪ್ರಸಾರವನ್ನು ಕೈಗೊಂಡು ವೀರಶೈವ ಧರ್ಮ ಬೆಳೆದು ಪ್ರಬಲವಾಗುವಂತೆ ಮಾಡಿದರು. ಗುರುಗಳು ಮಠವನ್ನು ಸ್ಥಾಪಿಸಿದ ಮೇಲೆ ಶಿವಾನುಭವ ಗೋಷ್ಠಿ, ಧರ್ಮೋಪದೇಶ ಹಾಗೂ ಲಿಂಗಪೂಜೆಯನ್ನು ಮಾಡಿ ವೀರಶೈವ ಧರ್ಮದ ಬಗ್ಗೆ ಭಕ್ತರಲ್ಲಿ ಜಾಗೃತಿಯನ್ನುಂಟುಮಾಡಿ ಜೀವಂತ ಸಮಾಧಿಯಾದರು.

ಪರಂಪರೆ: ರಂಭಾಪುರಿ ಪೀಠದ ಶಾಖಾ ಮಠವಾಗಿ ಶಿಷ್ಯವರ್ಗದ ಪರಂಪರೆಯಲ್ಲಿ ಬೆಳೆದಿರುವ ಶ್ರೀ ಚನ್ನಮಲ್ಲೇಶ್ವರ ಮಠದ ಕರ್ತೃಗುರುಗಳಾದ, ಶ್ರೀ ಚನ್ನಮಲ್ಲೇಶ್ವರ ಶಿವಾಚಾರ್ಯಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಪಟ್ಟಾಧಿಕಾರಕ್ಕೆ ಬಂದ ನಾಲ್ಕು ಜನ ಗುರುಗಳ ಹೆಸರುಗಳು ಲಭ್ಯವಾಗಿಲ್ಲ. ನಂತರ ಅಧಿಕಾರಕ್ಕೆ ಬಂದ ಗುರುಗಳ ಬಗ್ಗೆ ಮಾಹಿತಿ ಈ ಕೆಳಕಂಡಂತಿದೆ.

೧. ಷ.ಬ್ರ.ಶ್ರೀ ಚನ್ನಮಲ್ಲೇಶ್ವರ ಶಿವಾಚಾರ್ಯಸ್ವಾಮಿಗಳು (ಕರ್ತೃಗುರುಗಳು)
೨. ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಚನ್ನಮಲ್ಲೇಶ್ವರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಚನ್ನಮಲ್ಲ ಶಿವಯೋಗಿ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಮಠವು ಬಡದಾಳು ಗ್ರಾಮಕ್ಕೆ ಸ್ಥಳಾಂತರಗೊಳ್ಳುವ ಮೊದಲು ಅನೇಕ ವರ್ಷಗಳ ಪೂರ್ವ ಪರಂಪರೆಯು ಇತ್ತಾದರೂ, ಆ ಪರಂಪರೆಯನ್ನು ಆಧಾರಗಳ ಕೊರತೆಯಿಂದ ದಾಖಲಿಸಲು ಸಾಧ್ಯವಾಗುತ್ತಿಲ್ಲ. ಘೋಳನೂರಿನಿಂದ ಬಡದಾಳು ಗ್ರಾಮಕ್ಕೆ ಮಠವನ್ನು ಸ್ಥಳಾಂತರಿಸಿದ ಗುರುಗಳ ನಂತರ ನಾಲ್ಕು ಜನ

ಮಠಾಧೀಶರು ಅಧಿಕಾರವನ್ನು ನಡೆಸಿದ ಮೇಲೆ ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದರು. ಇವರ ನಂತರ ಅಧಿಕಾರಕ್ಕೆ ಬಂದ ಶ್ರೀ ಚನ್ನಮಲ್ಲೇಶ್ವರ ಶಿವಾಚಾರ್ಯ ಸ್ವಾಮಿಗಳು ಪವಾಡ ಪುರುಷರಾಗಿ, ಯಾವುದೇ ಲೌಕಿಕ ವಿಚಾರಗಳ ಕಡೆ ಗಮನಕೊಡದೆ ಧರ್ಮಪ್ರಚಾರಕ್ಕಾಗಿ ಪ್ರವಾಸಮಾಡಿದರು.ಇವರು ಅಲೌಕಿಕತೆಯ ಪರಾಮಾವಧಿಯ ಮಟ್ಟವನ್ನು ಮುಟ್ಟಿ ಧಾರ್ಮಿಕ ಹುಚ್ಚರಂತೆ ವರ್ತಿಸತೊಡಗಿದರು. ಇವರ ಧಾರ್ಮಿಕ ಭಾವನೆಗಳನ್ನು ಯಾರೂ ಅರ್ಥಮಾಡಿ ಕೊಳ್ಳಲಾಗಲಿಲ್ಲ. ಇಂತಹ ಪವಾಡ ಪುರುಷರು ೧೯೮೪ ರ ಡಿಸೆಂಬರ್ ಹದಿನೇಳರಂದು ಲಿಂಗೈಕ್ಯರಾದರು. ಇವರ ತರುವಾಯ ಶ್ರೀ ಚನ್ನಮಲ್ಲ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದು, ಮಠದ ಧಾರ್ಮಿಕ ಆಚರಣೆಗಳನ್ನು ಮುನ್ನಡೆಸಿ ಕೊಂಡು ಬರುತ್ತಿದ್ದಾರೆ. ಶ್ರೀ ಚನ್ನಮಲ್ಲ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು ಗುಲ್ಬರ್ಗ ತಾಲ್ಲೂಕಿನ ಬಸವಪಟ್ಟಣದ ಶ್ರೀ ಗುರುಲಿಂಗಯ್ಯ ಮತ್ತು ಶ್ರೀಮತಿ ಬಸಮ್ಮನವರ ಪುತ್ರರಾಗಿ ೧೯೬೪ ರ ಜೂನ್ ಇಪ್ಪತ್ತೊಂದರಂದು ಜನಿಸಿದರು. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಮುಗಿಸಿ ಸುಳ್ಯಾ, ಹೊನ್ನಾಳಿ, ಹಾಗೂ ಹುಬ್ಬಳ್ಳಿಯಲ್ಲಿ ಕಾಲೇಜು ಶಿಕ್ಷಣ, ಸಂಸ್ಕೃತ, ಹಾಗೂ ವೇದವನ್ನು ಕಲಿತು ೧೯೮೫ ರ ಡಿಸೆಂಬರ್ ಇಪ್ಪತ್ತರಂದು ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಗುರುಗಳು ಸುಳ್ಳದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಸಂದರ್ಭದಲ್ಲಿ ಇವರ ವಿದ್ವತ್ತನ್ನು ಗುರುತಿಸಿ ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿದ್ದರು. ಗುರುಗಳು ಮಠದ ಆಡಳಿತವನ್ನು ವಹಿಸಿಕೊಂಡ ಮೇಲೆ ಮಠವನ್ನು ಅಭಿವೃದ್ಧಿಪಡಿಸಲು ಮುಂದಾದರು.

ಗದ್ದುಗೆಗಳು: ಪುರಾತನ ಪರಂಪರೆಯುಳ್ಳ ಈ ಮಠದಲ್ಲಿ ಈಗಿನ ಗುರುಗಳು ಸೇರಿದಂತೆ ಒಟ್ಟು ಮೂವತ್ತು ಜನ ಗುರುಗಳು ಅಧಿಕಾರವನ್ನು ನಡೆಸಿದ್ದಾರೆಂದು ಹೇಳಲಾಗುತ್ತದೆ. ಆದರೆ ಮಠದ ಪರಂಪರೆಯ ನಾಲ್ಕು ಜನ ಗುರುಗಳ ಹೆಸರನ್ನು ಬಿಟ್ಟರೆ ಉಳಿದ ಇಪ್ಪತ್ನಾಲ್ಕು ಜನ ಗುರುಗಳ ಹೆಸರುಗಳು ಲಭ್ಯವಿಲ್ಲ. ಆದರೆ ಬಡದಾಳು ಗ್ರಾಮದಲ್ಲಿ ಹತ್ತು ಗದ್ದುಗೆಗಳು, ಘೋಳನೂರು ಮಠದಲ್ಲಿ ನಾಲ್ಕು, ಕುಲಾಲಿ ಮಠದಲ್ಲಿ ನಾಲ್ಕು, ಯಳಸಂಗ ಮಠದಲ್ಲಿ ಒಂದು ಗದ್ದುಗೆ ಸೇರಿದಂತೆ ಒಟ್ಟು ಹತ್ತೊಂಬತ್ತು ಗದ್ದುಗೆಗಳನ್ನು ಗುರುತಿಸಬಹುದಾಗಿದೆ. ಗುರುಗಳು ಲೋಕಸಂಚಾರದಲ್ಲಿದ್ದ ಸಂದರ್ಭದಲ್ಲಿ ಲಿಂಗೈಕ್ಯರಾಗಿದ್ದು, ಆ ಸ್ಥಳಗಳಲ್ಲಿಯೇ ಸಮಾಧಿ ಮಾಡಲಾದ ಕಾರಣ ಉಳಿದ ಗುರುಗಳ ಗದ್ದುಗೆಗಳನ್ನು ಗುರುತಿಸಲು ಕಷ್ಟವಾಗಿದೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗದ್ದುಗೆಗಳಿಗೆ ಎರಡೂ ವೇಳೆ ಪೂಜೆ, ಅಮಾವಾಸ್ಯೆಯಲ್ಲಿ ವಿಶೇಷ ಪೂಜೆ ಜೊತೆಗೆ ಭಜನೆ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಮಾರ್ಗಶಿರ ಪಂಚಮಿಯಂದು ಕರ್ತೃಗುರುಗಳಾದ ಶ್ರೀ ಚನ್ನಮಲ್ಲೇಶ್ವರ ಶಿವಾಚಾರ್ಯ ಸ್ವಾಮಿಗಳ ಜಾತ್ರೆಯನ್ನು ನಡೆಸಲಾಗುತ್ತಿದೆ. ವೀರಭದ್ರದೇವರ ಕೆಂಡೋತ್ಸವದ ಸಂದರ್ಭದಲ್ಲಿ ಪರಂಪರಾಗತ ಕಲೆಯಾದ ಕುಸ್ತಿ ಸ್ಪರ್ಧೆಯನ್ನು ಏರ್ಪಡಿಸಲಾಗುತ್ತಿದೆ. ಪ್ರತಿ ಭಾನುವಾರ ಮತ್ತು ಅಮಾವಾಸ್ಯೆಯಂದು ಮಠದಲ್ಲಿಯೇ ಬಿಡಾರ ಮಾಡುವ ಗುರುಗಳು, ಅಂದು ಸೇರುವ ಸಾವಿರಾರು ಭಕ್ತರಿಗೆ ದರ್ಶನ ನೀಡಿ ಭಕ್ತರ ನೋವು ಹಾಗೂ ಅಹವಾಲುಗಳನ್ನು ಆಲಿಸಿ ಜಾತಿ ಬೇಧ, ದೀನದಲಿತ ಎಂಬ ಬೇಧವಿಲ್ಲದೆ ಸಮಾನ ರೀತಿಯಲ್ಲಿ ಸ್ಪಂದಿಸಿ ಭಕ್ತರಿಗೆ ಮಾನಸಿಕ ಸ್ಥೈರ್ಯ ತುಂಬಿ ಕಳಿಸಿಕೊಡುತ್ತಾರೆ. ಈ ಎರಡೂ ದಿನಗಳಲ್ಲಿ ಗುರುಗಳಿಂದ ಆಶೀರ್ವಾದ ಪಡೆಯಲು ಸುಮಾರು ಸಾವಿರಾರು ಜನ ಭಕ್ತರು ಆಗಮಿಸುತ್ತಾರೆ. ಈ ದಿನಗಳಲ್ಲಿ ಭಕ್ತರಿಗೆ ಅನ್ನದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಪ್ರತಿ ದಿನ ಕನಿಷ್ಟ ನೂರು ಜನ, ಅಮಾವಾಸ್ಯೆ ಮತ್ತು ಭಾನುವಾರದಂದು ಕನಿಷ್ಟ ಒಂದು ಸಾವಿರ ಜನ ಹಾಗೂ ಜಾತ್ರೆಯ ಸಂದರ್ಭದಲ್ಲಿ ಸುಮಾರು ಇಪ್ಪತ್ತೈದು ಸಾವಿರ ಭಕ್ತರು ಅನ್ನ ದಾಸೋಹದಲ್ಲಿ ಪಾಲ್ಗೊಳ್ಳುತ್ತಾರೆ ಎಂದು ಗುರುಗಳು ಹೇಳುತ್ತಾರೆ.

ಸಾಮಾಜಿಕ ಚಟುವಟಿಕೆಗಳು: ಶ್ರೀ ಚನ್ನಮಲ್ಲೇಶ್ವರ ಮಠವು ಧಾರ್ಮಿಕ ಆಚರಣೆಗಳ ಜೊತೆಗೆ ಸಾಮಾಜಿಕವಾಗಿ ತನ್ನನ್ನು ತೊಡಗಿಸಿಕೊಂಡು ಸಮಾಜ ಮುಖಿಯಾಗಿ ಬೆಳೆಯತೊಡಗಿದೆ. ಇದಕ್ಕೆ ಸಾಕ್ಷಿ ಎಂಬಂತೆ ಈಗಿನ ಗುರುಗಳಾದ ಶ್ರೀ ಚನ್ನಮಲ್ಲ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು ಪ್ರತಿ ವರ್ಷ ಸಾರ್ವಜನಿಕ ಸಮಾರಂಭವನ್ನು ಏರ್ಪಡಿಸಿ, ಸಮಾಜದ ಅಭಿವೃದ್ಧಿಗೆ ಪೂರಕವಾಗಿ ದುಡಿಯುವ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಗೌರವಿಸುತ್ತಿದ್ದಾರೆ. ತಾಲ್ಲೂಕು ಮಟ್ಟದಲ್ಲಿ ಉತ್ತಮ ಶಿಕ್ಷಕರನ್ನು ಆಯ್ಕೆ ಮಾಡಲು ಸಮಿತಿಯನ್ನು ರಚಿಸಿರುವ ಗುರುಗಳು ಪ್ರತಿ ವರ್ಷ ಹತ್ತು ಜನ ಉತ್ತಮ ಶಿಕ್ಷಕರು ಹಾಗೂ ಒಬ್ಬ ಉತ್ತಮ ಅಧಿಕಾರಿಯನ್ನು ಗುರುತಿಸಿ ಸನ್ಮಾನಿಸುತ್ತಾರೆ. ಧರ್ಮಜಾಗೃತಿಗಾಗಿ ಅಹಿಂಸಾ ವೃತ್ತಿ ಹಾಗೂ ದುಶ್ಚಟಗಳ

ನಿರ್ಮೂಲನೆಗಾಗಿ ಪಾದಯಾತ್ರೆಯನ್ನು ಕೈಗೊಳ್ಳುತ್ತಿದ್ದಾರೆ. ಈ ರೀತಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡ ಗುರುಗಳು ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ.

ಅನೇಕ ಕ್ಷೇತ್ರಗಳನ್ನು ಸಂದರ್ಶಿಸಿ ಅನೇಕ ಗುರುಗಳ ದರ್ಶನ ಪಡೆದು, ಲೋಕಾನುಭವ ಪಡೆದು ಹಿಂಜಗೇರಿ ಗ್ರಾಮದ ಹೊರ ಭಾಗದಲ್ಲಿ ಅನುಷ್ಠಾನಕ್ಕೆ ಕುಳಿತುಕೊಳ್ಳುತ್ತಾರೆ. ಗುರುಗಳು ವೀರಶೈವ ಧರ್ಮವನ್ನು ಪ್ರಚಾರಮಾಡಬೇಕೆಂಬ ಉದ್ದೇಶ ಸುಪ್ರಭಾತ ಚನ್ನಮಲ್ಲೇಶ್ವರ ಚರಿತ್ರೆ ಎಂಬ ಪುಸ್ತಕಗಳು ಹಾಗೂ 'ಸಕಲ ಜೀವಾತ್ಮರ ತಂದೆ ಬಡದಾಳು ಭಗವಂತ' ಎಂಬ ಧ್ವನಿಸುರುಳಿಯನ್ನು ಮಠದ ವತಿಯಿಂದ ಬಿಡುಗಡೆ ಮಾಡಿಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಚನ್ನಮಲ್ಲ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ಚನ್ನಮಲ್ಲೇಶ್ವರ ಮಠ, ಬಡದಾಳು, ಅಫಜಲಪುರ, ಗುಲ್ಬರ್ಗ ಜಿಲ್ಲೆ.

ಬಳುರ್ಗಿ

ಅಫಜಲಪುರ ತಾಲ್ಲೂಕಿನ ಬಳುರ್ಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ವಿರಕ್ತ ಸಂಪ್ರದಾಯದ ಮಠವು ಸ್ಥಾಪನೆಯಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ವಿರಕ್ತ ಮಠ: ಬಳುರ್ಗಿ ಗ್ರಾಮದಲ್ಲಿ ಹನ್ನೆರಡನೆಯ ಶತಮಾನದಲ್ಲಿ ಶ್ರೀ ಶಾಂತಲಿಂಗೇಶ್ವರ ವಿರಕ್ತಮಠವು ಸ್ಥಾಪನೆಯಾಗಿದೆ. ಗ್ರಾಮದ ಪೂರ್ವ ಭಾಗದಲ್ಲಿ ಸ್ಥಾಪನೆಯಾಗಿರುವ ಈ ಮಠವು ಕುಮಾರ ಸಮಯದ ಮಠವಾಗಿ ಬೆಳೆದು ಬಂದಿದೆ. ಶ್ರೀ ಶಾಂತಲಿಂಗೇಶ್ವರ ಸ್ವಾಮಿಗಳಿಂದ ಪ್ರಾರಂಭಗೊಂಡ ಮಠವು ತನ್ನ ಪರಂಪರೆಯಲ್ಲಿ ಅನೇಕ ಏರಿಳಿತಗಳನ್ನು ಕಂಡು ಈತನಕ ಬೆಳೆದು ಬಂದಿದೆ.

ಪರಂಪರೆ: ಮಠದ ಕರ್ತೃಗುರುಗಳಾದ ಶ್ರೀ ಶಾಂತಲಿಂಗೇಶ್ವರ ಸ್ವಾಮಿಗಳು ಹಾಗೂ ನಂತರದ ಪರಂಪರೆಯ ಬಗ್ಗೆ ಸ್ಪಷ್ಟ ಮಾಹಿತಿಗಳು ದೊರೆಯದಾಗಿದೆ. ಕಳೆದ ನಲವತ್ತು ವರ್ಷಗಳ ಹಿಂದೆ ಅಧಿಕಾರದಲ್ಲಿದ್ದ ಶ್ರೀ ಶಾಂತಲಿಂಗೇಶ್ವರ ಸ್ವಾಮಿಗಳ ನಂತರ ಮಠವು ಖಾಲಿ ಉಳಿದಿತ್ತು. ಈ ಸಂದರ್ಭದಲ್ಲಿ ಗ್ರಾಮದ ಭಕ್ತರು ಶ್ರೀ ಶಂಭುಲಿಂಗ ಸ್ವಾಮಿಗಳನ್ನು ಮಠದ ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿದರು. ಶ್ರೀ ಶಂಭುಲಿಂಗ ಸ್ವಾಮಿಗಳು ಗದಗ ಜಿಲ್ಲೆ ರೋಣ ತಾಲ್ಲೂಕಿನ ನಿಡಗುಂದಿ ಗ್ರಾಮದ ಶ್ರೀಪುತ್ರಯ್ಯ ಮತ್ತು ಶ್ರೀಮತಿ ಚನ್ನಬಸಮ್ಮನವರ ಪುತ್ರರಾಗಿ ೧೯೫೪ ರಲ್ಲಿ ಜನಿಸಿದರು. ಇವರು ಪ್ರಾಥಮಿಕ ಮತ್ತು ಪ್ರೌಢಶಾಲೆ ಯನ್ನು ನಿಡಗುಂದಿಯಲ್ಲಿ ಮುಗಿಸಿ, ಹಾವೇರಿ ಹಾಗೂ ಶಿವಯೋಗ ಮಂದಿರದಲ್ಲಿ ವಿದ್ಯಾಭ್ಯಾಸಮಾಡಿ ೧೯೭೮ ರಲ್ಲಿ ಮಠಕ್ಕೆ ಆಗಮಿಸಿದರು. ಗುರುಗಳು ಮಠದಲ್ಲಿ ನೆಲೆಸಿ ಜೀರ್ಣಗೊಂಡ ಈ ಪುರಾತನ ಕಟ್ಟಡವನ್ನು ಅಭಿವೃದ್ಧಿಪಡಿಸಿದರು. ಅಲ್ಲದೆ ಮಠದಲ್ಲಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ವ್ಯವಸ್ಥೆಗೊಳಿಸಿ, ೧೯೮೭ ರ ಮೇ ಹದಿನೆಂಟರಂದು ಪಟ್ಟಾಧಿಕಾರವನ್ನು ಪಡೆದುಕೊಂಡು ಮಠವನ್ನು ಮುನ್ನಡೆಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಪುರಾತನ ಮಠದ ಪರಂಪರೆಯಲ್ಲಿ ಕೇವಲ ಮೂರು ಜನ ಗುರುಗಳ ಹೆಸರನ್ನು ಗುರುತಿಸಬಹುದಾದರೂ, ಮಠದ ಆವರಣದಲ್ಲಿ ಐದು ಗದ್ದುಗೆಗಳಿವೆ. ಈ ಐದು ಗದ್ದುಗೆಗಳಿಗೆ ನಿತ್ಯ ಪೂಜೆ, ಶ್ರಾವಣಮಾಸದಲ್ಲಿ ಪಾದಪೂಜೆ, ಯುಗಾದಿಯಲ್ಲಿ ಒಂದು ತಿಂಗಳು ಪುರಾಣ ಪ್ರವಚನ ಕಾರ್ಯಕ್ರಮ ನಡೆಯುತ್ತಿವೆ. ಮಠದ ಆಸ್ತಿಯಾಗಿರುವ ನಲವತ್ತು ಎಕರೆ ಭೂಮಿಯನ್ನು ಅಭಿವೃದ್ಧಿಪಡಿಸಿ ಬರುವ ಆದಾಯವನ್ನು ಮಠದ ಧಾರ್ಮಿಕ ಚಟುವಟಿಕೆಗಳಿಗೆ ಹಾಗೂ ವಿನಿಯೋಗಪಡಿಸಿ ಕೊಳ್ಳುತ್ತಿದ್ದಾರೆ. ಅಲ್ಲದೆ ಮಠದ ಅಭಿವೃದ್ಧಿಗೆ ಬಳಕೆ ಮಾಡಿಕೊಳ್ಳುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಶಂಭುಲಿಂಗಸ್ವಾಮಿಗಳು, ಶ್ರೀವಿರಕ್ತಮಠ, ಬಳುರ್ಗಿ, ಅಫಜಲಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಬಂದರವಾಡ

ಅಫಜಲಪುರ ತಾಲ್ಲೂಕಿನ ಬಂದರವಾಡ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಮೂವತ್ತು ಕಿ.ಮೀ

ದೂರದಲ್ಲಿದೆ. ಇಲ್ಲಿ ಪರಂಪರಾಗತ ಸುರುಗಿ ಮಠದ ಸ್ಥಾಪನೆಯಿಂದಾಗಿ ಧಾರ್ಮಿಕವಾಗಿ ಹೆಸರು ಮಾಡಿದೆ.

ಸುರುಗಿ ಮಠ: ಬಂದರವಾಡ ಗ್ರಾಮದಲ್ಲಿ ರಂಭಾಪುರಿ ಪೀಠದ ಶಾಖಾ ಮಠವಾದ ಶ್ರೀ ಸುರುಗಿ ಮಠವು ಸ್ಥಾಪನೆಯಾಗಿ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿದೆ. '**ಶ್ರೀ ಸುರುಗಿ ಶಾಂತೇಶ್ವರ ಸ್ವಾಮಿ**'ಗಳು ಈ ಮಠದ ಕರ್ತೃಗುರುಗಳೆಂದು ಹೇಳಲಾಗುತ್ತದೆ. ಈ ಮಠವು ಹನ್ನೆರಡನೆಯ ಶತಮಾನಕ್ಕೂ ಪೂರ್ವದಲ್ಲಿಯೆ ಸ್ಥಾಪನೆಯಾಗಿತ್ತೆಂದು ಹೇಳಲಾಗುತ್ತದೆ. ಕಲ್ಯಾಣದ ಕ್ರಾಂತಿಯ ನಂತರ, ಬಸವಣ್ಣನವರು ಕಲ್ಯಾಣದಿಂದ ಕೂಡಲ ಸಂಗಮಕ್ಕೆ ಹೋಗುವಾಗ ಈ ಮಠಕ್ಕೆ ಬಂದು ಮಠದ ಮುಂಭಾಗದ ಮನೆಯಲ್ಲಿ ಆಶ್ರಯ ಪಡೆದರೆಂದೂ ಬಸವಣ್ಣನವರ ಜೊತೆಯಲ್ಲಿ ಆಗಮಿಸಿದ್ದ ನೂರಾರು ಶರಣರಿಗೆ ಈ ಮಠ ಆಶ್ರಯ ಕಲ್ಪಿಸಿ ಕೊಟ್ಟಿತ್ತೆಂದೂ ಹೇಳಲಾಗುತ್ತದೆ.

ಪರಂಪರೆ:

೧. ಷ.ಬ್ರ.ಶ್ರೀ ಸುರುಗಿ ಶಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ಘನಲಿಂಗ ಶಾಂತವೀರ ಶಿವಾಚಾರ್ಯ ಸ್ವಾಮಿಗಳು
೩. ಷ.ಬ್ರ.ಶ್ರೀ ಸಿದ್ಧಬಸವ ಶಿವಾಚಾರ್ಯ ಸ್ವಾಮಿಗಳು
೪. ಷ.ಬ್ರ.ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು
೫. ಷ.ಬ್ರ.ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳು
೬. ಷ.ಬ್ರ.ಶ್ರೀ ಗುರುಬಸವ ಶಿವಾಚಾರ್ಯ ಸ್ವಾಮಿಗಳು
೭. ಷ.ಬ್ರ.ಶ್ರೀ ಉಳುಬಸವ ಶಿವಾಚಾರ್ಯ ಸ್ವಾಮಿಗಳು
೮. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು
೯. ಷ.ಬ್ರ.ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಮಠದ ಪರಂಪರೆಯಲ್ಲಿ ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಗುರು ಪರಂಪರೆಯ ಬಗ್ಗೆ ಹೆಚ್ಚು ಮಾಹಿತಿ ದೊರಕುತ್ತಿಲ್ಲ. ಇಲ್ಲಿ ದಾಖಲಿಸಲಾಗಿರುವ ಏಳನೆಯ ಗುರುಗಳ ತನಕ ಇತಿಹಾಸ ಅಸ್ಪಷ್ಟ ವಾಗಿದೆ. ಎಂಟನೆಯ ಗುರುಗಳಾದ ಶ್ರೀ ಚನ್ನಬಸವ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ ೧೯೭೨ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಈಗಿನ ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳು ಶ್ರೀ ಶರಣಯ್ಯಸ್ವಾಮಿ ಮತ್ತು ಶ್ರೀಮತಿ ನೀಲಾಂಬಿಕೆಯವರ ಪುತ್ರರಾಗಿ ೧೯೫೩ ರಲ್ಲಿ ಜನಿಸಿದರು. ಇವರು ಹುಬ್ಬಳ್ಳಿ, ಹಂದಿಗನೂರು ಮತ್ತು ಧಾರವಾಡದಲ್ಲಿ ವಿದ್ಯಾಭ್ಯಾಸ ಮಾಡಿದರು. ತತ್ತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದ ಇವರು ೧೯೭೨ ರಲ್ಲಿ ಮಠದ ಪಟ್ಟಾಧಿಕಾರವನ್ನು ಪಡೆದುಕೊಂಡಿದ್ದಾರೆ.

ಮಠದ ಹಳೆಯ ಕಟ್ಟಡದಲ್ಲಿ ಪರಂಪರೆಯ ಗುರುಗಳ ಗದ್ದುಗೆಗಳು ನಿರ್ಮಾಣಗೊಂಡಿವೆ. ಪುರಾತನ ಕಾಲದ ಗಚ್ಚಿನ ಮಠವು ಇನ್ನೂ ಅಚ್ಚಳಿಯದೆ ಉಳಿದಿದೆ. ಇತ್ತೀಚಿಗೆ ಮಠದ ಧಾರ್ಮಿಕ ಕಾರ್ಯಗಳ ಅನುಕೂಲಕ್ಕಾಗಿ ಕಟ್ಟಡವನ್ನು ವಿಸ್ತಾರ ಮಾಡಿಕೊಳ್ಳಲಾಗಿದೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗದ್ದುಗೆಗಳಿಗೆ ನಿತ್ಯಪೂಜೆ, ಶ್ರಾವಣಮಾಸದಲ್ಲಿ ನಂದಾದೀಪ ಹಾಗೂ ಪುರಾಣ ಪ್ರವಚನ, ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ಮಾಡಲಾಗುತ್ತಿದೆ.ಮಠದ ಆವರಣದಲ್ಲಿರುವ ಗವಿಯಲ್ಲಿ ಕರ್ತೃ ಗುರುಗಳು ಜೀವಂತ ಸಮಾಧಿಯಾಗಿದ್ದು, ನರಕ ಚತುರ್ಥಿಯ ದಿನದಂದು ಈ ಗವಿಯ ಬಾಗಿಲನ್ನು ತೆರೆದು ಒಳಗೆ ಪ್ರವೇಶಿಸಿ ಪೂಜೆ ನಡೆಸಲಾಗುತ್ತಿದೆ. ವರ್ಷಕ್ಕೊಮ್ಮೆ ಗವಿಯ ಬಾಗಿಲನ್ನು ತೆರೆದು ನಡೆಸುವ ವಿಶೇಷ ಪೂಜೆ ಈ ಮಠದ ಪವಿತ್ರ ಧಾರ್ಮಿಕ ಕಾರ್ಯಗಳಲ್ಲಿ ಒಂದಾಗಿದೆ.

ಸಾಹಿತ್ಯ ಸೇವೆ: ಈಗಿನ ಗುರುಗಳಾದ ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳು ಪಂಡಿತರಾಗಿದ್ದು, ಸಾಹಿತ್ಯಾಸಕ್ತಿಯನ್ನು ಬೆಳೆಸಿಕೊಂಡಿದ್ದಾರೆ. ಗುರುಗಳು ಅಧಿಕಾರಕ್ಕೆ ಬಂದ ಮೇಲೆ ವಚನ ಪ್ರದೀಪ್ತಿ, ಪಂಚಾಕ್ಷರಿ ಪ್ರಬೇಧ ಪ್ರಕಾಶ, ಮರದ

ಕವಲುಗಳು (ಕವನ ಸಂಕಲನ) ಚಿನ್ಮಗೇರಿ ವೀರಭದ್ರಚರಿತೆ, ಸುರಗಿ ಶಾಂತೇಶ್ವರ ಚರಿತ್ರೆ, ಶ್ರೀ ಲಕ್ಷ್ಮೇಶ್ವರ ಭೋಂತಲ ದೇವಿ ಚರಿತ್ರೆ,ಕೂಲಿ ಕೊಟ್ಟು ಸಲಾಂ ಮಾಡು (ನಾಟಕ), ತ್ಯಾಗವಿಲ್ಲದ ಯೋಗಿ(ಕಾದಂಬರಿ) ಮುಂತಾದ ಒಟ್ಟು ಹದಿನೈದು ಗ್ರಂಥಗಳನ್ನು ಬರೆದು ಪ್ರಕಟಿಸಿದ್ದಾರೆ. ಈ ರೀತಿ ಧಾರ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯಿಕ ಕ್ಷೇತ್ರಗಳ ಅಭಿವೃದ್ಧಿಗೆ ಗುರುಗಳು ಶ್ರಮಿಸುತ್ತಿದ್ದಾರೆ.

ಶಾಖಾ ಮಠ: ಬಂದರವಾಡ ಸುರಗಿ ಮಠದ ಶಾಖಾ ಮಠವಾದ ಚಿನ್ಮಗೇರಿ ಶ್ರೀ ವೀರಭದ್ರೇಶ್ವರ ಮಠವು ಶ್ರೀ ವೀರಭದ್ರ ದೇವಸ್ಥಾನದ ಆವರಣದಲ್ಲಿ ಸ್ಥಾಪನೆಯಾದ ಕಾರಣಕ್ಕೆ ಈ ಮಠಕ್ಕೆ 'ಶ್ರೀ ವೀರಭದ್ರೇಶ್ವರ ಮಠ' ಎಂದು ಹೆಸರು ಬಂದಿದೆ. ಈ ಮಠದ ಆವರಣದಲ್ಲಿ ಎರಡು ಗದ್ದುಗೆಗಳಿದ್ದು,ಇಲ್ಲಿ ನಿತ್ಯಪೂಜೆ ಮತ್ತು ಧಾರ್ಮಿಕ ಆಚರಣೆಗಳು ನಡೆಯುತ್ತಿವೆ.ಗುರುಗಳು ಪ್ರತಿ ಸೋಮವಾರ ಮತ್ತು ಅಮಾವಾಸ್ಯೆ ದಿನ ಈ ಮಠದಲ್ಲಿ ನೆಲೆಸಿ ಭಕ್ತರಿಗೆ ದರ್ಶನನೀಡಿ ಧರ್ಮೋಪದೇಶ ಮಾಡಿ ಅವರಲ್ಲಿ ಮಾನಸಿಕ ಸ್ಥೈರ್ಯ ತುಂಬುತ್ತಾರೆ. ಅಲ್ಲದೆ ಆಯುರ್ವೇದ ಚಿಕಿತ್ಸಾ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಸುರುಗಿಮಠ, ಬಂದರವಾಡ, ಅಫಜಲಪುರ ತಾ, ಗುಲ್ಬರ್ಗಜಿಲ್ಲೆ.

ಭೈರಾಮಡಗಿ

ಅಫಜಲಪುರ ತಾಲ್ಲೂಕಿನ ಭೈರಾಮಡಗ್ಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಇಪ್ಪತ್ತೈದು ಕಿ.ಮೀ ದೂರ ದಲ್ಲಿದೆ. ಆರನೆಯ ಶತಮಾನದಲ್ಲಿ ಕಂದನಹಟ್ಟಿ, ಕಲಿನಹಟ್ಟಿ, ಸೋಮಜನಹಟ್ಟಿ, ಭೀಮಜನಹಟ್ಟಿ, ಜ್ಯೋಗ್ಯನಹಟ್ಟಿ, ಹನುಮನಹಟ್ಟಿ, ನಾಯಕನಹಟ್ಟಿ ಎಂಬ ಏಳು ಹಟ್ಟಿಗಳು ಕೂಡಿಕೊಂಡು ಭೈರಾಮಡಗಿ ಗ್ರಾಮವು ಸ್ಥಾಪನೆಯಾಗಿದೆ. ಗ್ರಾಮದ ಅಧಿದೇವತೆ ಕಾಲಭೈರವ. ಈ ಕಾರಣಕ್ಕೆ ಈ ಗ್ರಾಮಕ್ಕೆ'ಭೈರಾಮಡಗಿ'ಎಂಬ ಹೆಸರು ಬಂದಿದೆ ಎಂದು ಸ್ಥಳಪುರಾಣವು ಹೇಳುತ್ತದೆ. ಇಂತಹ ಪುರಾತನ ಗ್ರಾಮದಲ್ಲಿ ಶ್ರೀ ಮಹಾಂತೇಶ್ವರ ವಿರಕ್ತಮಠವು ಸ್ಥಾಪನೆಯಾಗಿದೆ.

ಮಹಾಂತೇಶ್ವರ ವಿರಕ್ತಮಠ: ಭೈರಾಮಡಗಿ ಗ್ರಾಮದಲ್ಲಿ ಶ್ರೀ ಮಹಾಂತೇಶ್ವರ ವಿರಕ್ತಮಠವು ಹನ್ನೊಂದನೆಯ **ಶತಮಾನ** ದಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಈ ಪುರಾತನ ಮಠದ ಕರ್ತೃಗುರುಗಳು ಶ್ರೀ ಮಹಾಂತೇಶ್ವರರು, ಈ ಕಾರಣಕ್ಕೆ **'ಶ್ರೀ ಮಹಾಂತೇಶ್ವರಮಠ'**ಎಂದು ಹೆಸರು ಬಂದಿದೆ. ಕರ್ತೃಗುರುಗಳು ಲೋಕೋದ್ಧಾರವನ್ನು ತಮ್ಮ ಉದ್ದೇಶವಾಗಿ ಟ್ಟುಕೊಂಡು ಲೋಕಸಂಚಾರ ಮಾಡುತ್ತಾ ಬಂದು ಇಲ್ಲಿ ನೆಲೆಸಿ ಮಠವನ್ನು ಸ್ಥಾಪನೆ ಮಾಡಿರುತ್ತಾರೆ ಎಂದೂ ಈ ಮಠದ ಆವರಣದಲ್ಲಿರುವ ಬೃಹದಾಕಾರದ ನಂದಿಯು ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಸ್ಥಾಪನೆಯಾಗಿತ್ತೆಂದೂ ಹೇಳಲಾಗುತ್ತದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಮಹಾಂತೇಶ್ವರ ಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಶಾಂತಲಿಂಗ ಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಹುಚ್ಚ ಮಹಾಂತ ಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ರೇವಣಸಿದ್ಧ ಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಗದ್ದುಗೇಶ್ವರ ಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ರಾಚೋಟೇಶ್ವರ ಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಶಿವಯೋಗೀಶ್ವರ ಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ವೀರ ಮಹಾಂತೇಶ್ವರ ಸ್ವಾಮಿಗಳು
೯. ಶ್ರೀ ಮ.ನಿ.ಪ್ರ. ರುದ್ರಮುನಿ ಸ್ವಾಮಿಗಳು
೧೦. ಶ್ರೀ ಮ.ನಿ.ಪ್ರ. ಗುರುಬಸವ ಸ್ವಾಮಿಗಳು
೧೧. ಶ್ರೀ ಮ.ನಿ.ಪ್ರ. ಬಸವಲಿಂಗ ಸ್ವಾಮಿಗಳು
೧೨. ಶ್ರೀ ಮ.ನಿ.ಪ್ರ. ವಿಜಯ ಮಹಾಂತೇಶ್ವರ ಸ್ವಾಮಿಗಳು

೧೩. ಶ್ರೀ ಮ.ನಿ.ಪ್ರ. ಹಾಲಬಸವೇಶ್ವರ ಸ್ವಾಮಿಗಳು
೧೪. ಶ್ರೀ ಮ.ನಿ.ಪ್ರ. ಗುರು ಮಹಾಂತ ಸ್ವಾಮಿಗಳು
೧೫. ಶ್ರೀ ಮ.ನಿ.ಪ್ರ. ರೇವಣಸಿದ್ಧೇಶ್ವರ ಸ್ವಾಮಿಗಳು
೧೬. ಶ್ರೀ ಮ.ನಿ.ಪ್ರ. ಶಿವಯೋಗೀಶ್ವರ ಸ್ವಾಮಿಗಳು
೧೭. ಶ್ರೀ ಮ.ನಿ.ಪ್ರ. ವೀರಭದ್ರ ಸ್ವಾಮಿಗಳು
೧೮. ಶ್ರೀ ಮ.ನಿ.ಪ್ರ. ಶಿವಯೋಗಪ್ಪ ಸ್ವಾಮಿಗಳು
೧೯. ಶ್ರೀ ಮ.ನಿ.ಪ್ರ. ಬಸವಲಿಂಗ ಸ್ವಾಮಿಗಳು
೨೦. ಶ್ರೀ ಮ.ನಿ.ಪ್ರ. ಗವಿಮಹಾಂತ ಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಈಗಿನ ಗುರುಗಳಾದ ಶ್ರೀ ಗವಿಮಹಾಂತ ಸ್ವಾಮಿಗಳು ಸೇರಿದಂತೆ ಒಟ್ಟು ಇಪ್ಪತ್ತು ಜನ ಗುರುಗಳು ಅಧಿಕಾರ ನಡೆಸಿದ್ದಾರೆಂದು ಹೇಳಲಾದರೂ ಈ ಗುರುಗಳ ಬಗ್ಗೆ ಹೆಚ್ಚು ಮಾಹಿತಿ ದೊರೆಯದಾಗಿದೆ. ಈಗಿನ ಶ್ರೀ ಗವಿಮಹಾಂತ ಸ್ವಾಮಿಗಳು ಶ್ರೀ ಕಲ್ಲಿನಾಥ ಸ್ವಾಮಿಗಳು ಮತ್ತು ಶ್ರೀಮತಿ ಗೌರಮ್ಮನವರ ಪುತ್ರರಾಗಿ ೧೯೪೪ ರಲ್ಲಿ ಜನಿಸಿದ್ದಾರೆ. ಹಾನಗಲ್ಲು ತಾಲ್ಲೂಕಿನ ಕ್ಯಾಸನೂರು ಗ್ರಾಮದಲ್ಲಿ ಜನಿಸಿದ ಇವರು ೧೯೮೫ ರ ಫೆಬ್ರವರಿ ಎರಡರಂದು ಶ್ರೀ ಮಹಾಂತೇಶ್ವರ ವಿರಕ್ತ ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಗದ್ದುಗೆಗಳಿಗೆ ನಿತ್ಯ ಪೂಜೆ, ಪ್ರತಿ ಅಮಾವಾಸ್ಯೆಯಲ್ಲಿ ಶಿವಾನುಭವ ಗೋಷ್ಠಿ, ಶ್ರಾವಣ ಮಾಸದಲ್ಲಿ ನಿತ್ಯ ಭಜನೆ, ನವೆಂಬರ್ ಹದಿನೆಂಟರಂದು ಬಸವಲಿಂಗ ಸ್ವಾಮಿಗಳ ಸ್ಮರಣೋತ್ಸವನ್ನು ನಡೆಸಲಾಗುತ್ತಿದೆ. ಯುಗಾದಿ, ಬಸವಜಯಂತಿ, ವಿಜಯದಶಮಿ, ಮಹಾಶಿವರಾತ್ರಿಗಳನ್ನು ವಿಶೇಷವಾಗಿ ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಅನ್ನ ದಾಸೋಹದ ವ್ಯವಸ್ಥೆ ಇರುತ್ತದೆ. ಮಠದ ಆವರಣದಲ್ಲಿ ಆಳೆತ್ತರಕ್ಕೂ ಮಿಗಿಲಾದ ಏಕಶಿಲೆಯ ಮಹಾಲಿಂಗ ಮತ್ತು ಬೃಹದಾಕಾರದ ಎರಡು ನಂದಿಗಳಿದ್ದು ಈ ಶಿಲ್ಪಗಳು ಪುರಾತನ ಶಿಲ್ಪಕಲೆಯನ್ನು ಬಿಂಬಿಸುತ್ತವೆ. ಅಲ್ಲದೆ ಧಾರ್ಮಿಕ ಪರಂಪರೆಯ ಇತಿಹಾಸವನ್ನು ಹೇಳುತ್ತವೆ.

ಸಾಹಿತ್ಯ ಸೇವೆ: ಈಗಿನ ಗುರುಗಳಾದ ಶ್ರೀ ಗವಿಮಹಾಂತ ಸ್ವಾಮಿಗಳು ಸಾಹಿತಿಗಳಾಗಿದ್ದಾರೆ. ಇವರು ಮಠದ ಕರ್ತೃಗುರುಗಳಾದ ಶ್ರೀ ಮಹಾಂತಲಿಂಗ ಸ್ವಾಮಿಗಳ ಬಗ್ಗೆ ವಚನಗಳನ್ನು ರಚಿಸಿದ್ದಾರೆ. ಗುರುಗಳು ಪ್ರಸ್ತುತ ಸಮಾಜದ ಕೆಲವು ಸಮಸ್ಯೆಗಳನ್ನು ಬಿಂಬಿಸುವ ಅನೇಕ ಲೇಖನಗಳನ್ನು ಬರೆದಿದ್ದಾರೆ. ಇವರು ಧಾರ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯದ ಅಭಿವೃದ್ಧಿಗೆ ಶ್ರಮಿಸುತ್ತಾ ಮಠದ ಪರಂಪರೆಯನ್ನು ಬೆಳೆಸುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದಾರೆ. ಗುರುಗಳು ಉತ್ತರಾಧಿಕಾರಿಗಳನ್ನು ನೇಮಕ ಮಾಡಿಕೊಂಡು ಮೈಸೂರಿನ ಸುತ್ತೂರು ಮಠದ ಗುರುಕುಲದಲ್ಲಿ ಕಲಿಯಲು ಕಳುಹಿಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಗವಿಮಹಾಂತ ಸ್ವಾಮಿಗಳು, ಶ್ರೀ ಮಹಾಂತೇಶ್ವರವಿರಕ್ತಮಠ, ಭೈರಾಮಡಗಿ,ಅಫಜಲಪುರ ತಾ, ಗುಲ್ಬರ್ಗಜಿಲ್ಲೆ.

ಮಲ್ಲಾಬಾರ

ಅಫಜಲಪುರ ತಾಲ್ಲೂಕಿನ ಮಲ್ಲಾಬಾರ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಎಂಟು ಕಿ.ಮೀ ದೂರದಲ್ಲಿದೆ. ಆಧುನಿಕ ಸೌಲತ್ತುಗಳನ್ನು ಹೊಂದಿರುವ ಈ ಗ್ರಾಮದಲ್ಲಿ ಶ್ರೀ ರೇವಣಸಿದ್ಧೇಶ್ವರ ಮಠವು ಸ್ಥಾಪನೆಯಾಗಿದೆ.

ರೇವಣಸಿದ್ಧೇಶ್ವರ ಹಿರೇಮಠ: ಮಲ್ಲಾಬಾರ ಗ್ರಾಮದ ಪಶ್ಚಿಮದ ಹೊರಭಾಗದಲ್ಲಿ ರಂಭಾಪುರಿಪೀಠದ ಶಾಖಾಮಠವಾದ ಶ್ರೀ ರೇವಣಸಿದ್ಧೇಶ್ವರ ಹಿರೇಮಠವು ಸ್ಥಾಪನೆಯಾಗಿದೆ. ಈ ಮಠದ ಸ್ಥಾಪನೆಯಿಂದಾಗಿ ಗ್ರಾಮವು ಧಾರ್ಮಿಕ ಸಂಸ್ಕಾರವನ್ನು ಪಡೆದಿದೆ. ಹನ್ನೆರಡನೆಯ ಶತಮಾನಕ್ಕೂ ಪೂರ್ವದಲ್ಲಿಯೇ ಸ್ಥಾಪನೆಯಾಗಿದೆ ಎಂದು ಹೇಳಲಾದರೂ ಇದಕ್ಕೆ ಪೂರಕವಾದ ಆಧಾರಗಳು ಸಿಗುತ್ತಿಲ್ಲ. ಶ್ರೀ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಈ ಮಠದ ಕರ್ತೃಗುರುಗಳೆಂದು ಗುರುತಿಸಲಾಗಿದೆ. ನಂತರದ ಪರಂಪರೆಯ ಮಠಾಧೀಶರ ಹೆಸರುಗಳು ಲಭ್ಯವಿಲ್ಲ.

ಬೆಳೆದ ಪರಂಪರೆ: ಮಠದ ಪರಂಪರೆಯನ್ನು ಬೆಳೆಸಲು ಈಗಿನ ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಈಗಿನ ಗುರುಗಳಿಗಿಂತ ಹಿಂದೆ ಅಧಿಕಾರ ವಹಿಸಿಕೊಂಡಿದ್ದ ಗುರುಗಳ ಪರಂಪರೆ ಮಸುಕಾಗಿದ್ದು ಪರಂಪರೆಯನ್ನು ಉಲ್ಲೇಖಿಸುವ ಮಾಹಿತಿಗಳು ದೊರೆಯದಾಗಿದೆ. ಈ ಕಾರಣಕ್ಕಾಗಿ ಕರ್ತೃಗುರುಗಳ ನಂತರ ಈಗಿನ ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳ ಹೆಸರುಗಳನ್ನು ಮಾತ್ರ ದಾಖಲಿಸಬಹುದಾಗಿದೆ. ಪುತ್ರವರ್ಗದ ಈ ಮಠಕ್ಕೆ ಶ್ರೀ ಗುರುಶಾಂತಯ್ಯ ಮತ್ತು ಶ್ರೀಮತಿ ಶಿವಮ್ಮನವರ ಪುತ್ರರಾಗಿ ೧೯೭೫ ರಲ್ಲಿ ಜನಿಸಿದ ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಮಲ್ಲಾಬಾರದಲ್ಲಿಯೇ ಮುಗಿಸಿ ಬಿಜಾಪುರ ತಾಲ್ಲೂಕಿನ ಬೊಮ್ಮನಹಳ್ಳಿ ಗವಿಮಠದಲ್ಲಿ ಸಂಸ್ಕೃತ, ವೇದ ಹಾಗೂ ಜ್ಯೋತಿಷ್ಯವನ್ನು ಕಲಿತರು. ನಂತರ ಗದಗದಲ್ಲಿ ಸಂಗೀತಾಭ್ಯಾಸವನ್ನು ಮಾಡಿ ಮಠಕ್ಕೆ ಆಗಮಿಸಿದರು.ನಂತರ ಚಿಂಚನಸೂರು ಮಠದ ಶ್ರೀ ಸಿದ್ಧಮಲ್ಲ ಶಿವಾಚಾರ್ಯ ಸ್ವಾಮಿಗಳಿಂದ ಅನುಗ್ರಹ ಪಡೆದು ೧೯೯೬ ರ ಮಾರ್ಚ್ ಇಪ್ಪತ್ತೊಂಭತ್ತರಂದು ಪಟ್ಟಾಧಿಕಾರಕ್ಕೆ ಬಂದಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಕರ್ತೃಗದ್ದುಗೆಗೆ ನಿತ್ಯ ಎರಡೂ ವೇಳೆ ಪೂಜೆ, ಅಮಾವಾಸ್ಯೆಯಲ್ಲಿ ವಿಶೇಷ ಪೂಜೆ, ಪ್ರತಿ ಸೋಮವಾರ ಸಂಜೆ ವಚನಗೋಷ್ಠಿ ಹಾಗೂ ಶಿವಭಜನೆ, ಶ್ರಾವಣ ಮಾಸದಲ್ಲಿ ಪುರಾಣ ಪ್ರವಚನ, ಗಣೇಶ ಚತುರ್ಥಿಯಂದು ಪಲ್ಲಕ್ಕಿ ಉತ್ಸವ ನಡೆಸಲಾಗುತ್ತಿದೆ. ಅಲ್ಲದೆ ಈ ಸಂದರ್ಭಗಳಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಿಸಲಾಗುತ್ತಿದೆ. ಮಠದ ಆಸ್ತಿಯಾಗಿ ಇಪ್ಪತ್ತು ಎಕರೆ ಜಮೀನಿದ್ದು ಇದನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಈ ಮಠದಲ್ಲಿ ಹತ್ತನೆಯ ಶತಮಾನಕ್ಕೂ ಹಿಂದಿನ ವಿಗ್ರಹಗಳು ಎಂದು ಹೇಳಲಾಗುವ ವೃಷಭ ಹಾಗೂ ಗಣೇಶನ ವಿಗ್ರಹಗಳು ಇವೆ. ಇವುಗಳನ್ನು ಒರಟು ಕಲ್ಲುಗಳಿಂದ ತಯಾರಿಸಲಾಗಿದ್ದು, ಪುರಾತನ ಕಾಲದ ಕಲೆಯನ್ನು ಈ ವಿಗ್ರಹಗಳು ಬಿಂಬಿಸುತ್ತಿವೆ.

ವಿಳಾಸ: ಷ.ಬ್ರ.ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು, ಶ್ರೀ ರೇವಣಸಿದ್ಧೇಶ್ವರ ಹಿರೇಮಠ, ಮಲ್ಲಾಬಾರ,ಅಫಜಲಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಮಹಾಂತಪುರ

ಅಫಜಲಪುರ ತಾಲ್ಲೂಕಿನ ಮಹಾಂತಪುರ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಇಪ್ಪತ್ತಾರು ಕಿ.ಮೀ ದೂರದಲ್ಲಿದೆ. ಈ ಗ್ರಾಮದ ಹೊರಭಾಗದ ಎತ್ತರದ ಸ್ಥಳದಲ್ಲಿ ಶ್ರೀ ಮಹಾಂತೇಶ್ವರ ಮಠವು ಸ್ಥಾಪನೆಯಾಗಿದೆ.

ಮಹಾಂತೇಶ್ವರ ಮಠ: ಮಹಾಂತಪುರ ಗ್ರಾಮದಲ್ಲಿರುವ ಮಹಾಂತೇಶ್ವರ ಮಠವು ಈ ಭಾಗದ ಪ್ರಭಾವಿ ಮಠವಾಗಿ ಬೆಳೆದಿದೆ. ಈ ಮಠವು ಧಾರ್ಮಿಕ ಹಾಗೂ ಶೈಕ್ಷಣಿಕವಾಗಿ ಸಾಧನೆ ಸಾಧಿಸಿದೆ.

ಮಠ ಸ್ಥಾಪನೆ: ಬಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಮಲಘಾಣದ ಶ್ರೀ ಮಹಾಂತ ಸ್ವಾಮಿಗಳು, ಎಂಟುನೂರು ವರ್ಷಗಳ ಹಿಂದೆ ಲೋಕಸಂಚಾರ ಕೈಗೊಂಡು ಚಿನ್ಮಯಗಿರಿಗೆ ಬಂದು ನೆಲೆಸಿದರು. ಗುರುಗಳು ಇಲ್ಲಿ ನೆಲೆ ನಿಂತು ಮಠವನ್ನು ಸ್ಥಾಪಿಸಿದರು. ಶ್ರೀ ಮಹಾಂತ ಸ್ವಾಮಿಗಳು ಇಲ್ಲಿ ತಪೋನುಷ್ಠಾನ ಕೈಗೊಂಡು ಶಿವಪೂಜೆಯ ನಂತರ ಭಕ್ತರಿಗೆ ದರ್ಶನ ಹಾಗೂ ಉಪದೇಶವನ್ನು ನೀಡುತ್ತಿದ್ದರು. ದಿನದಿಂದ ದಿನಕ್ಕೆ ಭಕ್ತರ ಸಂಖ್ಯೆ ಇಮ್ಮಡಿಗೊಂಡಾಗ ಭಕ್ತರಿಗೆ ಪ್ರಸಾದದ ವ್ಯವಸ್ಥೆಯನ್ನು ಸಜ್ಜುಗೊಳಿಸಿದರು. ಗುರುಗಳು ಕಂತೆ ಭಿಕ್ಷದ ಮೂಲಕ ಪ್ರಸಾದವನ್ನು ಸಂಗ್ರಹಿಸಿ, ಮಠದ ಆವರಣದಲ್ಲಿರುವ ರೇವಡಿ ವೃಕ್ಷಕ್ಕೆ ಕಟ್ಟಿ ನಂತರ ಮಠಕ್ಕೆ ಬರುವ ಭಕ್ತರಿಗೆ ದಾಸೋಹವನ್ನು ನಡೆಸುತ್ತಿದ್ದರು.

ಶ್ರೀ ಮಹಾಂತ ಸ್ವಾಮಿಗಳಿಂದ ಚಿನ್ಮಯಗಿರಿಯಲ್ಲಿ ಸ್ಥಾಪನೆಗೊಂಡ ಮಠದ ಪರಂಪರೆಯು, ಮಲಘಾಣದಲ್ಲಿ ತನ್ನ ಪೂರ್ವ ಪರಂಪರೆಯನ್ನು ಹೊಂದಿದೆ. ಮಲಘಾಣದ ಮೂಲ ಮಠದಲ್ಲಿ ಶ್ರೀ ರುದ್ರಮುನಿ ಸ್ವಾಮಿಗಳು ಮಠದ ಸ್ಥಾಪಕರಾಗಿದ್ದು, ಇವರ ನಂತರ ಶ್ರೀ ಚಿಕ್ಕ ರೇವಣಸಿದ್ಧ ಸ್ವಾಮಿಗಳು, ಶ್ರೀ ಗುರುನಂಜ ಸ್ವಾಮಿಗಳು, ಶ್ರೀ ರಾಚೋಟಿ ಸ್ವಾಮಿಗಳು, ಶ್ರೀ ನಿಡು ಮಾಮಿಡಿಯ ಕರಿಬಸವ ಸ್ವಾಮಿಗಳು ಹಾಗೂ ಶ್ರೀ ಜಡೆಶಾಂತ ಸ್ವಾಮಿಗಳು ಅಧಿಕಾರವನ್ನು ನಡೆಸಿ, ಮಠವನ್ನು ಅಭಿವೃದ್ಧಿ ಪಡಿಸಿದ್ದರು. ನಂತರ ಬಂದ ಶ್ರೀ ಮಹಾಂತ ಸ್ವಾಮಿಗಳು ಮೂಲ ಮಠವನ್ನು ಅಭಿವೃದ್ಧಿಪಡಿಸಿ,

ವೀರಶೈವ ಧರ್ಮದ ಉದ್ಧಾರಕ್ಕಾಗಿ ಲೋಕ ಸಂಚಾರವನ್ನು ಕೈಗೊಂಡು ಇಲ್ಲಿಗೆ ಬಂದು ನೆಲೆಸಿ, ಮಠವನ್ನು ಸ್ಥಾಪಿಸಿದರು.

ಬೆಳೆದ ಪರಂಪರೆ:
೧. ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ಮಡಿವಾಳ ಶಿವಾಚಾರ್ಯ ಸ್ವಾಮಿಗಳು
೩. ಷ.ಬ್ರ.ಶ್ರೀ ರಾಚೋಟಿ ಶಿವಾಚಾರ್ಯ ಸ್ವಾಮಿಗಳು
೪. ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು
೫. ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು
೬. ಷ.ಬ್ರ.ಶ್ರೀ ಮರಿ ಶಿವಾಚಾರ್ಯ ಸ್ವಾಮಿಗಳು
೭. ಷ.ಬ್ರ.ಶ್ರೀ ಗುರುಬಸವ ಶಿವಾಚಾರ್ಯ ಸ್ವಾಮಿಗಳು
೮. ಷ.ಬ್ರ.ಶ್ರೀ ಮಡಿವಾಳ ಶಿವಾಚಾರ್ಯ ಸ್ವಾಮಿಗಳು
೯. ಷ.ಬ್ರ.ಶ್ರೀ ಮರಬದ ಮಹಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು
೧೦. ಷ.ಬ್ರ.ಶ್ರೀ ಅಸಂಗಹಾಳ ಮಡಿವಾಳ ಶಿವಾಚಾರ್ಯ ಸ್ವಾಮಿಗಳು
೧೧. ಷ.ಬ್ರ.ಶ್ರೀ ಹೇರ ಮಹಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು
೧೨. ಷ.ಬ್ರ.ಶ್ರೀ ಬೇಲೂರು ಮಹಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು
೧೩. ಷ.ಬ್ರ.ಶ್ರೀ ಶಿವರುದ್ರ ಶಿವಾಚಾರ್ಯ ಸ್ವಾಮಿಗಳು
೧೪. ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಚಿನ್ಮಯಗಿರಿಯಲ್ಲಿ ಮಠದ ಪರಂಪರೆ ಬೆಳೆದು ಶ್ರೀಮಂತಗೊಂಡಿದೆ. ಕರ್ತೃಗುರುಗಳಾದ ಶ್ರೀ ಮಹಾಂತ ಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಎಲ್ಲಾ ಗುರುಗಳು ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ಮಠವನ್ನು ಶ್ರೀಮಂತಗೊಳಿಸಿದ್ದಾರೆ. ಶ್ರೀ ಶಿವರುದ್ರ ಸ್ವಾಮಿಗಳು ೧೯೫೬ ರಲ್ಲಿ ಪಟ್ಟಾಧಿಕಾರಕ್ಕೆ ಬಂದು ಹತ್ತು ವರ್ಷಗಳಲ್ಲೇ ಅಗಾಧವಾದುದ್ದನ್ನು ಸಾಧಿಸಿ, ೧೯೬೬ ರಲ್ಲಿ ಲಿಂಗೈಕ್ಯರಾದರು. ನಂತರ ಈಗಿನ ಮಠಾಧ್ಯಕ್ಷರಾದ ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು ಆಳಂದ ತಾಲ್ಲೂಕಿನ ಜಿಡಗ ಗ್ರಾಮದ ಶ್ರೀ ಚನ್ನಬಸವಯ್ಯ ಮತ್ತು ಶ್ರೀಮತಿ ಗುರುಶಾಂತಮ್ಮನವರ ಪುತ್ರರಾಗಿ ಜನಿಸಿ, ೧೯೬೬ ರಲ್ಲಿ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯ ಪೂಜೆ, ಅಮಾವಾಸ್ಯೆಯಲ್ಲಿ ಶಿವಾನುಭವ ಗೋಷ್ಠಿ, ಕರ್ತೃ ಗುರುಗಳಾದ ಶ್ರೀ ಮಹಾಂತ ಸ್ವಾಮಿಗಳ ಜಾತ್ರಾ ಮಹೋತ್ಸವವು ಅದ್ದೂರಿಯಾಗಿ ನಡೆಯುತ್ತದೆ. ಈ ಸಂದರ್ಭದಲ್ಲಿ ಧರ್ಮಸಭೆಯನ್ನು ಏರ್ಪಡಿಸಿ ನಾಡಿನ ವಿದ್ವಾಂಸರು ಹಾಗೂ ಹಿರಿಕಿರಿಯ ಧರ್ಮ ಗುರುಗಳನ್ನು ಕರೆಸಿ ಉಪದೇಶ, ಉಪನ್ಯಾಸವನ್ನು ಏರ್ಪಡಿಸಲಾಗುತ್ತಿದೆ. ಅಲ್ಲದೆ ಅನ್ನದಾಸೋಹವನ್ನು ನಡೆಸಲಾಗುತ್ತಿದೆ.

ಸಾಮಾಜಿಕ,ಸಾಹಿತ್ಯ ಸೇವೆ: ಶ್ರೀ ಸಿದ್ಧರಾಮ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠದಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳ ಜೊತೆಯಲ್ಲಿ ಮಠದ ವತಿಯಿಂದ ಸಾಮೂಹಿಕ ವಿವಾಹಗಳು, ಉಚಿತ ಆರೋಗ್ಯ ತಪಾಸಣಾ ಶಿಬಿರಗಳನ್ನು ಏರ್ಪಡಿಸುತ್ತಿದ್ದಾರೆ. ಈಗಿನ ಗುರುಗಳು ಮಠದ ಗ್ರಂಥಮಾಲಿಕೆಯಲ್ಲಿ ಶ್ರೀ ಮಡಿವಾಳೇಶ್ವರ ಚರಿತ್ರೆ,(ಪುರಾಣ ಗ್ರಂಥ) ಮೊದಲ ಹೆಜ್ಜೆ(ಕವನ ಸಂಕಲನ), ಶ್ರೀ ಮಹಾಂತೇಶ್ವರ ಚರಿತ್ರೆ (ಪುರಾಣ ಗ್ರಂಥ), ಶ್ರೀ ಮಹಾಂತೇಶ್ವರ ನಾಮಾವಳಿ, ಶ್ರೀ ಮಡಿವಾಳೇಶ್ವರ ನಾಮಾವಳಿ ಎಂಬ ಅನೇಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅಲ್ಲದೆ ಮಠದ ವತಿಯಿಂದ ಪ್ರತಿವರ್ಷ ಸಾಹಿತ್ಯ, ಜಾನಪದ ಹಾಗೂ ಸಂಗೀತದಲ್ಲಿ ಸಾಧನೆ ಮಾಡಿದವರು, ದಾನಿಗಳು ಹಾಗೂ ಸಮಾಜದ ಸೇವಾಕರ್ತರನ್ನು ಗುರುತಿಸಿ ಪ್ರಶಸ್ತಿಯನ್ನು ನೀಡುತ್ತಾ ಬರಲಾಗುತ್ತಿದೆ.

ಶೈಕ್ಷಣಿಕ ಸೇವೆ: ಶ್ರೀ ಸಿದ್ಧರಾಮ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ '**ಶ್ರೀ ಮಹಾಂತಜ್ಯೋತಿ ವಿದ್ಯಾಪೀಠ**'ವನ್ನು

ಪ್ರಾರಂಭಿಸಿ, ಪ್ರೌಢಶಾಲೆ, ಸಂಸ್ಕೃತ ಪಾಠಶಾಲೆ, ಸಂಗೀತ ಪಾಠಶಾಲೆಯನ್ನು ಪ್ರಾರಂಭಿಸಿದ್ದಾರೆ. ಅನಾಥ ಮಕ್ಕಳ ಕಲ್ಯಾಣ ಕೇಂದ್ರ ಹಾಗೂ ಉಚಿತ ಪ್ರಸಾದ ನಿಲಯವನ್ನು ಪ್ರಾರಂಭಿಸಿ ಕಲಿಯುವ ಬಡ ಮಕ್ಕಳಿಗೆ ನೆರವಾಗಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು, ಶ್ರೀ ಮಹಾಂತೇಶ್ವರ ಮಠ, ಮಹಾಂತಪುರ (ಚಿನ್ಮಯಗಿರಿ) ಅಫಜಲಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಆಧಾರ: 'ಗುಡ್ಡದ ಮಹಾತಪಸ್ವಿ ಶ್ರೀ ಮಹಾಂತೇಶ್ವರ ಮಠ', ಲೇಖಕರು : ಡಾ. ಎಸ್.ಎಂ. ಹಿರೇಮಠ

ರೇವೂರು (ಬಿ)

ಅಫಜಲಪುರ ತಾಲ್ಲೂಕಿನ ರೇವೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಶ್ರೀ ಬೊಮ್ಮಲಿಂಗೇಶ್ವರ ಮಠ, ಶ್ರೀ ಹಿರೇಮಠ ಎಂಬ ಎರಡು ಮಠಗಳು ಸ್ಥಾಪನೆಯಾಗಿ ಧಾರ್ಮಿಕ ಮತ್ತು ಸಾಮಾಜಿಕ ವಾತಾವರಣವನ್ನು ಬೆಳಸಿ ಗ್ರಾಮದ ಭಕ್ತರಿಗೆ ಸಂಸ್ಕಾರ ನೀಡಿವೆ.

ಬೊಮ್ಮಲಿಂಗೇಶ್ವರ ಮಠ: ರೇವೂರು ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಉಜ್ಜಯಿನಿ ಪೀಠದ ಶಾಖಾಮಠವಾದ ಈ ಮಠವು, ಈ ಭಾಗದ ಧಾರ್ಮಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದ ಅಭಿವೃದ್ಧಿಗೆ ಕಾರಣವಾಗಿದೆ. ಈ ಮಠದ ಕರ್ತೃಗಳು ಶ್ರೀ ಬೋಮ್ಮಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳೆಂದು ಹೇಳಲಾಗುತ್ತದೆ. ಈ ಕಾರಣಕ್ಕಾಗಿಯೇ ಮಠಕ್ಕೆ **'ಶ್ರೀ ಬೊಮ್ಮಲಿಂಗೇಶ್ವರ ಮಠ'** ಎಂದು ಹೆಸರು ಬಂದಿದೆ.

ಪುರಾತನ ಕಾಲದಲ್ಲಿ ಸ್ಥಾಪನೆಗೊಂಡ ಈ ಮಠವು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದು ನಂತರ ಕೆಲವು ದಿನ ಮಠಾಧೀಶರಿಲ್ಲದೆ ಖಾಲಿ ಉಳಿದಿತ್ತು. ಈ ಕಾರಣದಿಂದ ಮಠದ ಕಟ್ಟಡವು ಶಿಥಿಲಗೊಂಡಿತು. ನಂತರ ಪರಂಪರೆಯನ್ನು ಉಳಿಸಲು ಶ್ರೀ ಶ್ರೀಕಂಠ ಶಿವಾಚಾರ್ಯ ಸ್ವಾಮಿಗಳು ಮಠದ ಆಡಳಿತವನ್ನು ವಹಿಸಿಕೊಂಡು ಅಭಿವೃದ್ಧಿಪಡಿಸಿದ್ದಾರೆ.

ಬೆಳಕು ಕಂಡ ಮಠ : ಶ್ರೀ ಶ್ರೀಕಂಠ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠವು ದೀರ್ಘ ಕಾಲದ ನಂತರ ಬೆಳಕು ಕಂಡಿತು. ಗುರುಗಳು ಅಧಿಕಾರವನ್ನು ವಹಿಸಿಕೊಂಡ ತಕ್ಷಣ ಹಳೆಯ ಕಟ್ಟಡವನ್ನು ತೆಗೆಸಿ ಹೊಸ ಕಟ್ಟಡವನ್ನು ನಿರ್ಮಿಸಿದರು. ಅಲ್ಲದೆ ಶಿಥಿಲಗೊಂಡಿದ್ದ ಕರ್ತೃಗದ್ದುಗೆಯನ್ನು ನವೀಕರಿಸಿದರು. ಬೃಹದಾಕಾರವಾಗಿ ಕಟ್ಟಿಸಿರುವ ಮಠದ ಕಟ್ಟಡ ಗುರುಗಳ ಕ್ರಿಯಾಶೀಲತೆಗೆ ಕೈಗನ್ನಡಿಯಾಗಿದೆ. ಗ್ರಾಮದ ಮಂಗಳ ಕಾರ್ಯಗಳು ನಡೆಯಲು ಅನುಕೂಲ ಕಲ್ಪಿಸುವ ಸಲುವಾಗಿ ಮಠದ ಆವರಣದಲ್ಲಿ ಕಲ್ಯಾಣ ಮಂಟಪವನ್ನು ನಿರ್ಮಿಸಿದರು. ಈ ಮಠದ ಶಾಖಾ ಮಠಗಳಾಗಿರುವ ನಾಗಣಸೂರು, ಹಂಜಿಗೆ ಗ್ರಾಮಗಳಲ್ಲಿನ ಮಠಗಳನ್ನು ಅಭಿವೃದ್ಧಿಪಡಿಸಿದರು.

ತಮ್ಮ ಶಾಖಾ ಮಠವಾದ ನಾಗಣಸೂರು ಗ್ರಾಮದಲ್ಲಿ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ, ಶಿಕ್ಷಣ ಕ್ಷೇತ್ರಕ್ಕೂ ಪಾದಾರ್ಪಣೆ ಮಾಡಿದ್ದಾರೆ. ಹುಣ್ಣಿಮೆಯಲ್ಲಿ ಪುರಾಣ ಪ್ರವಚನ, ಅಮಾವಾಸ್ಯೆಯಲ್ಲಿ ಭಜನೆ ಈ ರೀತಿ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಧರ್ಮಪ್ರಸಾರವನ್ನು ಮಾಡತೊಡಗಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶ್ರೀಕಂಠ ಶಿವಾಚಾರ್ಯ ಸ್ವಾಮಿಗಳು, ಶ್ರೀ ಬೊಮ್ಮಲಿಂಗೇಶ್ವರ ಮಠ, ರೇವೂರು (ಬಿ), ಅಫಜಲಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಹಿರೇಮಠ: ರೇವೂರು ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ಉಜ್ಜಯಿನಿ ಪೀಠದ ಶಾಖಾಮಠವಾಗಿ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಪುರಾತನ ಕಾಲದಲ್ಲಿ ಈ ಮಠವನ್ನು ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳು ಸ್ಥಾಪಿಸಿದರೆಂದು ಹೇಳಲಾಗುತ್ತದೆ. ಪುರಾತನ ಕಾಲದಲ್ಲಿ ಸ್ಥಾಪನೆಗೊಂಡ ಈ ಮಠಕ್ಕೆ ಉತ್ತರಾಧಿಕಾರಿಗಳು ನೇಮಕ ಗೊಳ್ಳದೆ ಮಠವು ಖಾಲಿ ಉಳಿದು ತನ್ನ ಅಸ್ತಿತ್ತ್ವವನ್ನು ಕಳೆದುಕೊಂಡಿತು. ಆದರೆ ಮಠದ ವಂಶಸ್ಥರು ಮೂಲ ಮಠದಲ್ಲಿದ್ದ ಪರಂಪರೆಯ ಗುರುಗಳ ಗದ್ದುಗೆಗೆ ನಿತ್ಯಪೂಜೆ ಮತ್ತು ಧಾರ್ಮಿಕ ಕಾರ್ಯಗಳನ್ನು

ನಡೆಸಿಕೊಂಡು ಬಂದ ಕಾರಣ ಈ ಮಠ ಪುನಃ ತನ್ನ ಪರಂಪರೆಯನ್ನು ಬೆಳೆಸಲು ನೆರವಾಗಿದೆ.

ಮಠದ ವಂಶಸ್ಥರಾದ ಶ್ರೀ ವೀರಯ್ಯ ಗುಂಡಯ್ಯ ಹಿರೇಮಠ ಇವರು ಧಾರ್ಮಿಕ ಸಂಸ್ಕಾರದಿಂದ ಬೆಳೆದು ಬಂದವರು. ಇವರು ಸಂಸಾರಿಗಳಾದರೂ ಮಠದ ಧಾರ್ಮಿಕ ಚಟುವಟಿಕೆಗಳನ್ನು ಗುರುವಿನ ಸ್ಥಾನದಲ್ಲಿ ನಿಂತು ನಡೆಸಿಕೊಂಡು ಬರುತ್ತಿದ್ದ ಧರ್ಮನಿಷ್ಠರು. ಇವರ ಈ ಧಾರ್ಮಿಕ ಪ್ರಜ್ಞೆಯಿಂದ ಇತಿಹಾಸದಲ್ಲಿ ಮರೆಯಾಗುತ್ತಿದ್ದ ಪರಂಪರೆಯ ಮಠ, ಪುನರುಜ್ಜೀವನ ಗೊಳ್ಳಲು ಅವಕಾಶವಾಗಿದೆ. ಹತ್ತುವರ್ಷಗಳ ಹಿಂದೆ ಶ್ರೀ ವೀರಯ್ಯ ಗುಂಡಯ್ಯ ಹಿರೇಮಠ ಇವರು ಮಠದ ಮೂಲ ಸ್ಥಳದಲ್ಲಿ ಧಾರ್ಮಿಕ ಚಟುವಟಿಕೆಗಳು ನಡೆಯಲು ಅನುಕೂಲ ಕಲ್ಪಿಸಲು ಹೊಸ ಕಟ್ಟಡವನ್ನು ನಿರ್ಮಿಸಲು ಮುಂದಾದರು. ತಳಪಾಯವನ್ನು ತೆಗೆದ ಸಂದರ್ಭದಲ್ಲಿ ಶ್ರೀ ವೀರಭದ್ರಮೂರ್ತಿ, ಪರಂಪರೆಯ ಗುರುಗಳ ಅಸ್ಥಿಪಂಜರಗಳು, ವಿಭೂತಿ ಘಟ್ಟಿಗಳು ಮತ್ತು ಲಿಂಗಗಳು ದೊರೆತವು. ಇದರಿಂದ ಇಲ್ಲಿ ಮಠ ಅಸ್ತಿತ್ವದಲ್ಲಿ ಇತ್ತು ಎಂಬುದನ್ನು ಸಾಕ್ಷೀಕರಿಸಿದೆ. ಈ ಘಟನೆ ನಡೆದ ಮೇಲೆ ಧಾರ್ಮಿಕ ಸಂಸ್ಕಾರದ ಹಿನ್ನೆಲೆಯಲ್ಲಿ ಬಂದ ಈ ಕುಟುಂಬದವರು ಮಠಕ್ಕೆ ಉತ್ತರಾಧಿಕಾರಿಗಳನ್ನು ನೇಮಿಸುವ ನಿಶ್ಚಯ ಕೈಗೊಂಡರು.

ಉತ್ತರಾಧಿಕಾರಿ ನೇಮಕ: ಶ್ರೀ ವೀರಯ್ಯ ಗುಂಡಯ್ಯ ಮತ್ತು ಶ್ರೀಮತಿ ಶಾಂತಾಬಾಯಿಯವರ ಪುತ್ರರಾಗಿ ೧೯೭೪ ರಲ್ಲಿ ಜನಿಸಿದ ಶ್ರೀ ಶಿವಾನಂದ ದೇವರನ್ನು ಈ ಮಠಕ್ಕೆ ಉತ್ತರಾಧಿಕಾರಿಗಳಾಗಿ ನೇಮಿಸಲಾಯಿತು.ಗುರುಗಳು ಹುಬ್ಬಳ್ಳಿ ಮೂರು ಸಾವಿರ ಮಠದಲ್ಲಿ ಆಶ್ರಯ ಪಡೆದು ವಿದ್ಯಾಭ್ಯಾಸವನ್ನು ಮಾಡುತ್ತಿರುವ ಸಂದರ್ಭದಲ್ಲಿ, ಇವರ ವಿದ್ವತ್ ಪ್ರತಿಭೆಯನ್ನು ಗುರುತಿಸಿದ ಧಾರವಾಡ ಮುರುಘಾ ಮಠದ ಗುರುಗಳು ಇವರನ್ನು ಬೆಳಗಾಂ ಜಿಲ್ಲೆಯ ಹುಕ್ಕೇರಿಯ ಶ್ರೀ ಅಡವಿಸಿದ್ದೇಶ್ವರ ಮಠಕ್ಕೆ ನೇಮಿಸಿದರು. ಗುರುಗಳು ಜೀರ್ಣಗೊಂಡ ಶ್ರೀ ಅಡವಿಸಿದ್ದೇಶ್ವರ ಮಠವನ್ನು ಅಭಿವೃದ್ಧಿಗೊಳಿಸಿ ಧಾರ್ಮಿಕ ಕಾರ್ಯಗಳನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಬರುತ್ತಾ ಈ ಹಿರೇಮಠದ ಆಡಳಿತವನ್ನೂ ವಹಿಸಿಕೊಂಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶಿವಾನಂದ ದೇವರು,ಶ್ರೀ ಹಿರೇಮಠ, ರೇವೂರು (ಬಿ), ಅಫಜಲಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಹಿರೇಹಳ್ಳಗಿ

ಅಫಜಲಪುರ ತಾಲ್ಲೂಕಿನ ಹಿರೇಹಳ್ಳಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಐದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಶಾಂತಲಿಂಗೇಶ್ವರ ಮಠವು ಸ್ಥಾಪನೆಯಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ಶಾಂತಲಿಂಗೇಶ್ವರ ಮಠ: ಹಿರೇಹಳ್ಳಗಿ ಗ್ರಾಮದಲ್ಲಿ ಉಜ್ಜಯಿನಿ ಪೀಠದ ಶಾಖಾ ಮಠವಾಗಿ 'ಶ್ರೀ ಶಾಂತಲಿಂಗೇಶ್ವರ ಮಠ'ವು ಸ್ಥಾಪನೆಯಾಗಿದೆ. ಈ ಮಠದ ಸ್ಥಾಪನೆಯಿಂದಾಗಿ ಈ ಗ್ರಾಮದಲ್ಲಿ ಧಾರ್ಮಿಕ ವಾತಾವರಣ ಸೃಷ್ಟಿಯಾಗಿದೆ. ಪುರಾತನ ಕಾಲದಲ್ಲಿ ಸ್ಥಾಪನೆಗೊಂಡ ಮಠವು ಕಳೆದ ಐವತ್ತು ವರ್ಷಗಳಿಂದ ಉತ್ತರಾಧಿಕಾರಿಗಳಿಲ್ಲದೆ ಖಾಲಿ ಉಳಿದಿತ್ತು. ಈಗ ಉತ್ತರಾಧಿಕಾರಿಗಳನ್ನು ನೇಮಿಸಿದ್ದು ಮಠವು ಧಾರ್ಮಿಕ ಚಟುವಟಿಕೆಗಳನ್ನು ನಡೆಸುತ್ತಿದೆ.

ಪರಂಪರೆ: ಮಠವು ತನ್ನ ಪರಂಪರೆಯಲ್ಲಿ ಏರಿಳಿತಗಳನ್ನು ಕಂಡು ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿತ್ತು. ಐವತ್ತು ವರ್ಷಗಳ ಹಿಂದೆ ಮಠಾಧೀಶರು ಲಿಂಗೈಕ್ಯರಾದ ಮೇಲೆ ಈ ಪುತ್ರವರ್ಗದ ಮಠಕ್ಕೆ ಉತ್ತರಾಧಿಕಾರಿಗಳಿಲ್ಲದೆ ಮಠವು ಖಾಲಿ ಉಳಿಯಿತು. ಆದರೆ ಮಠದ ವಂಶಸ್ಥರು ಮಠದಲ್ಲಿದ್ದ ಗದ್ದುಗೆಗಳಿಗೆ ನಿತ್ಯ ಪೂಜೆ ಹಾಗೂ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಾ ಮಠದ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದ್ದರು. ನಂತರ ಗ್ರಾಮಸ್ಥರೆಲ್ಲ ಒಂದಾಗಿ ಈ ಪುರಾತನ ಮಠವನ್ನು ಅಭಿವೃದ್ಧಿಪಡಿಸಿ, ಮಠಾಧೀಶರನ್ನು ನೇಮಕಮಾಡುವ ನಿರ್ಧಾರಕ್ಕೆ ಬರುತ್ತಾರೆ. ಇದರ ಫಲವೇ ಪರಂಪರಾಗತ ಮಠ ಪುನಃ ತಲೆ ಎತ್ತಿ ನಿಲ್ಲಲು ಸಹಾಯಕವಾಯಿತು. ಪುರಾತನ ಮಠವು ಶಿಥಿಲಗೊಂಡಿದ್ದ ಕಾರಣ ಭಕ್ತರು ಗ್ರಾಮದ ಪಶ್ಚಿಮದ ಹೊರಭಾಗದಲ್ಲಿ ನೂತನ ಮಠವನ್ನು ಕಟ್ಟಿಸಿದ್ದಾರೆ.

ಶ್ರೀ ಸಿದ್ಧರಾಮಯ್ಯ ಮತ್ತು ಶ್ರೀಮತಿ ಸುಗಲಬಾಯಿಯವರ ಪುತ್ರರಾಗಿ ಜನಿಸಿದ ಶ್ರೀ ಮಹಂತಯ್ಯ ದೇವರನ್ನು

ಈ ಮಠದ ಉತ್ತರಾಧಿಕಾರಿಯನ್ನಾಗಿ ನೇಮಿಸಿದ್ದಾರೆ. ಬಡದಾಳು ಮಠದ ಶ್ರೀ ಚನ್ನಮಲ್ಲ ಶಿವಯೋಗಿ ಶಿವಾಚಾರ್ಯ ಸ್ವಾಮಿ ಗಳಿಂದ ಪಟ್ಟಾಧಿಕಾರದ ಅನುಗ್ರಹವನ್ನು ಕೊಡಿಸಿ ಶ್ರೀ ಶಾಂತಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳೆಂದು ಅಭಿದಾನ ವಿತ್ತು ಅಧಿಕಾರಕ್ಕೆ ತರಲಾಗಿದೆ. ಗುರುಗಳು ಕ್ರಿಯಾಶೀಲರಾಗಿದ್ದು ಮಠವನ್ನು ಅಭಿವೃದ್ಧಿಪಡಿಸುವ ಲಕ್ಷಣವನ್ನು ತೋರಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಜನರ ಮನಸ್ಸಿನಿಂದ ದೂರ ಸರಿಯುತ್ತಿದ್ದ ಮಠದಲ್ಲಿ ಧಾರ್ಮಿಕ ಚಟುವಟಿಕೆಗಳನ್ನು ಕ್ರಿಯಾತ್ಮಕ ವಾಗಿ ನಡೆಸತೊಡಗಿದ ಕಾರಣದಿಂದಾಗಿ ಜನರು ಮಠದ ಕಡೆ ಒಲವು ತೋರಿಸಿದ್ದಾರೆ. ಗುರುಗಳು ಅಮಾವಾಸ್ಯೆ ಮತ್ತು ಹುಣ್ಣಿಮೆ, ಶ್ರಾವಣ ಹಾಗೂ ಕಾರ್ತೀಕ ಮಾಸಗಳಲ್ಲಿ ವಿಶೇಷ ಪೂಜೆ, ಭಜನೆ ಮತ್ತು ಪ್ರವಚನಗಳನ್ನು ಹಮ್ಮಿಕೊಂಡು ಭಕ್ತರಿಗೆ ಧಾರ್ಮಿಕ ತಿಳುವಳಿಕೆಯ ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡತೊಡಗಿದ್ದಾರೆ. ಈ ಸಂದರ್ಭದಲ್ಲಿ ಅನ್ನದಾಸೋಹದ ವ್ಯವಸ್ಥೆ ಯನ್ನು ಮಾಡುತ್ತಿದ್ದಾರೆ. ವರ್ಷಕ್ಕೊಮ್ಮೆ ಜಾತ್ರೆಯನ್ನು ನಡೆಸಿ ಅಡ್ಡಪಲ್ಲಕ್ಕಿ ಉತ್ಸವವನ್ನು ನಡೆಸಲಾಗುತ್ತಿದೆ. ಗುರುಗಳು ಪ್ರವಚನಗಳನ್ನು ನೀಡುವ ಕಲೆಯನ್ನು ಗಳಿಸಿಕೊಂಡಿದ್ದು ಮಠದಲ್ಲಿ ಪುರಾಣ ಪ್ರವಚನ ಮಾಡುವುದಲ್ಲದೆ, ಬೇರೆ ಮಠಗಳಲ್ಲಿಯೂ ಪುರಾಣ ಪ್ರವಚನವನ್ನು ನಡೆಸಿ ಧರ್ಮಪ್ರಚಾರವನ್ನು ಕೈಗೊಂಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶಾಂತಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಶಾಂತಲಿಂಗೇಶ್ವರ ಮಠ, ಹಿರೇಹಳ್ಳಗಿ, ಅಫಜಲಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಹಿಂಜಗೇರಿ

ಅಫಜಲಪುರ ತಾಲ್ಲೂಕಿನ ಹಿಂಜಗೇರಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹದಿನಾಲ್ಕು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ೧೯೮೦ ರಲ್ಲಿ ಶ್ರೀ ಶಿವಯೋಗೀಶ್ವರ ವಿರಕ್ತಮಠವು ಸ್ಥಾಪನೆಗೊಂಡಿದೆ.

ಶಿವಯೋಗೀಶ್ವರ ವಿರಕ್ತಮಠ: ಶ್ರೀ ಶಿವರಾಜೇಂದ್ರ ದೇವರು ಬಂದರವಾಡದ ಶ್ರೀ ಶಂಕರಲಿಂಗ ಸ್ವಾಮಿ ಮತ್ತು ಶ್ರೀಮತಿ ಮಲ್ಲಿಕಮ್ಮನವರ ಪುತ್ರರಾಗಿ ಜನಿಸಿದರು. ಇವರು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಬಂದರವಾಡದಲ್ಲಿ ಮುಗಿಸಿ, ಪ್ರೌಢಾವಸ್ಥೆಗೆ ಬಂದ ಮೇಲೆ ಆಧ್ಯಾತ್ಮಿಕ ಒಲವನ್ನು ಬೆಳೆಸಿಕೊಂಡು ಲೋಕಸಂಚಾರಕ್ಕೆ ಹೊರಡುತ್ತಾರೆ. ಗುರುಗಳು ಲೋಕ ಸಂಚಾರದಲ್ಲಿ ಧಾರ್ಮಿಕ ಹೊಂದಿ ಈ ಮಠವನ್ನು ಸ್ಥಾಪಿಸಿದರು. ಗುರುಗಳು ಇಲ್ಲಿ ಮಠವನ್ನು ಸ್ಥಾಪಿಸಿ ಅನೇಕ ವರ್ಷಗಳ ಕಾಲ ಅನುಷ್ಠಾನಗೊಂಡು ಧರ್ಮಜಾಗೃತಿಯನ್ನುಂಟು ಮಾಡಿದರು.

ಪಟ್ಟಾಧಿಕಾರ: ಶ್ರೀ ಶಿವರಾಜೇಂದ್ರ ದೇವರು, ಬೀದರ್ ಜಿಲ್ಲೆ ಬಸವ ಕಲ್ಯಾಣ ತಾಲ್ಲೂಕಿನ ಖೇಳಗಿ ಶ್ರೀ ಶಿವಲಿಂಗೇಶ್ವರ ಸಂಸ್ಥಾನ ಮಠದ ಅಭಿನವಪ್ರಭು ನಿರಂಜನ ಶ್ರೀ ವಿಜಯ ಮಹಾಂತಪ್ರಭು ಓಂಕಾರ ರಾಜಯೋಗೀಂದ್ರ ಸ್ವಾಮಿಗಳ ಅನುಗ್ರಹವನ್ನು ಪಡೆದು ೧೯೮೯ ರ ಮಾರ್ಚ್ ಒಂದರಂದು '**ಶ್ರೀ ಶಿವಯೋಗೀಶ್ವರ ಸ್ವಾಮಿ**'ಗಳೆಂದು ಅಭಿದಾನ ಪಡೆದು ನೂತನ ಮಠದ ಪಟ್ಟಾಧಿಕಾರವನ್ನು ವಹಿಸಿಕೊಳ್ಳುತ್ತಾರೆ. ಗುರುಗಳು ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ಧಾರ್ಮಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಪೂರಕವಾದ ಕಾರ್ಯಗಳನ್ನು ಹಮ್ಮಿಕೊಂಡು ಜನ ಜಾಗೃತಿಯನ್ನುಂಟುಮಾಡಿದ್ದಾರೆ.

ಧಾರ್ಮಿಕ ಚಟುವಟಿಕೆಗಳು: ತ್ರಿಕಾಲ ಪೂಜಾನಿಷ್ಠರಾದ ಶ್ರೀ ಶಿವಯೋಗೀಶ್ವರ ಸ್ವಾಮಿಗಳು ಮಠವನ್ನು ನಿರ್ಮಿಸಿದ ಮೇಲೆ ಶಿವಲಿಂಗ ಮೂರ್ತಿಯನ್ನು ಪ್ರತಿಷ್ಠಾಪಿಸಿ ಪೂಜೆಯನ್ನು ನಡೆಸುತ್ತಿದ್ದಾರೆ. ಯುಗಾದಿಯಲ್ಲಿ ಪುರಾಣ ಪ್ರವಚನವನ್ನು ಹಮ್ಮಿಕೊಂಡು, ಶ್ರೀ ಶಿವಯೋಗೀಶ್ವರ ಜಾತ್ರೆಯನ್ನು ಮೂರು ದಿನಗಳ ಕಾಲ ನಡೆಸಿ ಕುಸ್ತಿ, ಅಡ್ಡಪಲ್ಲಕ್ಕಿ ಉತ್ಸವ ಹಾಗೂ ಅನ್ನ ದಾಸೋಹವನ್ನು ನಡೆಸುತ್ತಿದ್ದಾರೆ. ಹೊಸದಾಗಿ ಖರೀದಿಸಿದ ಜಮೀನಿನಲ್ಲಿ ನಾಲ್ಕುಎಕರೆ ಭೂಮಿಯನ್ನು ಸರ್ಕಾರಿ ಪ್ರಾಥಮಿಕ ಶಾಲೆಗೆ ದಾನವಾಗಿ ನೀಡಿದ್ದಾರೆ. ಈ ರೀತಿ ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಪ್ರಗತಿಗೆ ಶ್ರಮಿಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಶಿವಯೋಗೀಶ್ವರ ಸ್ವಾಮಿಗಳು, ಶ್ರೀ ಶಿವಯೋಗೀಶ್ವರ ವಿರಕ್ತಮಠ, ಹಿಂಜಗೇರಿ, ಅಫಜಲಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಹಿರೇಜೇವರ್ಗಿ

ಅಫಜಲಪುರ ತಾಲ್ಲೂಕಿನ ಹಿರೇಜೇವರ್ಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹದಿನೇಳು ಕಿಲೋ ಮೀಟರ್ ದೂರದಲ್ಲಿದೆ. ಇಲ್ಲಿ ಶ್ರೀ ಶಾಂತಲಿಂಗೇಶ್ವರ ಮಠವು ಸ್ಥಾಪನೆಯಾಗಿ, ಧಾರ್ಮಿಕ ಕೇಂದ್ರವಾಗಿ ಬೆಳೆದಿದೆ.

ಶಾಂತಲಿಂಗೇಶ್ವರಮಠ: ಹಿರೇಜೇವರ್ಗಿ ಗ್ರಾಮದ ಮದ್ಯಭಾಗದಲ್ಲಿ ಶ್ರೀ ಶಾಂತಲಿಂಗೇಶ್ವರ ಮಠವು ಸ್ಥಾಪನೆಯಾಗಿದೆ. ಪ್ರಾಚೀನ ಪರಂಪರೆಯುಳ್ಳ ಈ ಮಠಕ್ಕೆ ಈಗ ಡಾ. ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಮಠಾಧಿಪತಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಗುರುಗಳು ಸ್ನಾತಕೋತ್ತರ ಪದವೀಧರರಾಗಿ ಪಿಹೆಚ್.ಡಿ ಪಡೆದು ವಿದ್ವಾಂಸರಾಗಿರುವ ಇವರು ಕಾಶಿವಿದ್ಯಾಪೀಠದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಈಗ ನಿವೃತ್ತಿ ಹೊಂದಿ ಮಠದ ಧಾರ್ಮಿಕ ಕಾರ್ಯಗಳು ಹಾಗೂ ಅಭಿವೃದ್ಧಿಯ ಕಡೆ ಹೆಚ್ಚು ಒತ್ತುಕೊಟ್ಟು ಮಠ ಮತ್ತು ಸಮಾಜವನ್ನು ಬೆಳೆಸುತ್ತಿದ್ದಾರೆ.

ವಿಳಾಸ: ಡಾ. ಷ.ಬ್ರ.ಶ್ರೀ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ಶ್ರೀ ಶಾಂತಲಿಂಗೇಶ್ವರ ಮಠ, ಹಿರೇಜೇವರ್ಗಿ, ಅಫಜಲಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

❑

ಆಳಂದ ತಾಲ್ಲೂಕು

ಗುಲ್ಬರ್ಗ ಜಿಲ್ಲೆಯ ಆಳಂದ, ಇತಿಹಾಸ ಪ್ರಸಿದ್ಧ ತಾಲ್ಲೂಕು. ಜಿಲ್ಲೆಯ ಶ್ರೀಮಂತ ತಾಲ್ಲೂಕುಗಳಲ್ಲಿ ಒಂದಾದ ಆಳಂದವು ಪೌರಾಣಿಕ, ಐತಿಹಾಸಿಕ, ಸಾಂಸ್ಕೃತಿಕ, ಸಾಹಿತ್ಯಿಕ ಹಾಗೂ ಧಾರ್ಮಿಕವಾಗಿ ವಿಶಿಷ್ಟಸ್ಥಾನ ಪಡೆದಿದೆ. ಈ ತಾಲ್ಲೂಕಿನಲ್ಲಿ ನೂರಇಪ್ಪತ್ತೈದಕ್ಕೂ ಹೆಚ್ಚು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಇಂದು ಕೇವಲ ಇಪ್ಪತ್ತೈದು ಮಠಗಳು ಅಸ್ತಿತ್ವದಲ್ಲಿದ್ದು, ಧಾರ್ಮಿಕ ಕೆಲಸಗಳನ್ನು ನಡೆಸುತ್ತಾ ಬಂದಿವೆ. ನೀಲೂರು, ಮುಡಕಿ, ಕರಹರಿ, ಮಂಟಗಿ, ತಡಕಲ್ಲು, ಹಿರೋಳ್ಳಿ ಇನ್ನು ಮುಂತಾದ ಕಡೆ ಮಠಗಳು ಅಸ್ತಿತ್ವವನ್ನು ಉಳಿಸಿಕೊಂಡು ಕಾರ್ಯನಿರ್ವಹಿಸುತ್ತಿವೆ. ರಾಜ್ಯದ ನೂರಇಪ್ಪತ್ತೈದು ತಾಲ್ಲೂಕುಗಳಲ್ಲಿ ಹೆಚ್ಚು ಮಠಗಳನ್ನು ಹೊಂದಿರುವ ಹೆಗ್ಗಳಿಕೆ ಈ ತಾಲ್ಲೂಕಿನದಾಗಿದೆ.

ಆಳಂದ

ಗುಲ್ಬರ್ಗ ಜಿಲ್ಲೆಯ ಆಳಂದವು ಜಿಲ್ಲಾ ಕೇಂದ್ರದಿಂದ ವಾಯುವ್ಯ ಭಾಗಕ್ಕೆ ನಲವತ್ತೆರಡು ಕಿ.ಮೀ ದೂರದಲ್ಲಿದೆ. ತಾಲ್ಲೂಕು ಕೇಂದ್ರ ಸ್ಥಳವಾದ ಆಳಂದ ಪಟ್ಟಣವು ಇತಿಹಾಸ ಪ್ರಸಿದ್ಧ ಪಟ್ಟಣ. ಕಲ್ಯಾಣಿ ಚಾಲುಕ್ಯರ ಆಡಳಿತಕ್ಕೆ ಒಳಪಟ್ಟಿದ್ದ ಈ ನಾಡು ಆಳಂದೆಸಾಸಿರ ಎಂಬ ಹೆಸರಿನಿಂದ ವರ್ಣಿತವಾಗಿದೆ. ಅದೇ ರೀತಿ ಈ ಪ್ರದೇಶವನ್ನು ಗೊಂಕನಾಡು ಎಂದು ಕರೆಯುತ್ತಿದ್ದರು ಎಂಬುದಾಗಿ ಸಂಶೋಧಕರಾದ ಡಾ.ಎಸ್.ಎಂ.ಹಿರೇಮಠರು ಅಭಿಪ್ರಾಯಿಸುತ್ತಾರೆ. ಇಂತಹ ಇತಿಹಾಸ ಪ್ರಸಿದ್ಧ ಪಟ್ಟಣದಲ್ಲಿ ಎರಡು ವೀರಶೈವ ಮಠಗಳು ಸ್ಥಾಪನೆಗೊಂಡಿವೆ. ಈಗ ಶ್ರೀ ಸಿದ್ಧಲಿಂಗೇಶ್ವರ ಸಂಸ್ಥಾನ ಹಿರೇಮಠವು ಅಸ್ತಿತ್ವದಲ್ಲಿದೆ.

ಸಿದ್ಧಲಿಂಗೇಶ್ವರ ಸಂಸ್ಥಾನ ಹಿರೇಮಠ: ಈಗ ಶ್ರೀ ಸಿದ್ಧಲಿಂಗೇಶ್ವರ ಸಂಸ್ಥಾನ ಹಿರೇಮಠವು ಹನ್ನೆರಡನೆಯ ಶತಮಾನಕ್ಕೂ ಪೂರ್ವ ಕಾಲದಲ್ಲಿ ಅಸ್ತಿತ್ವದಲ್ಲಿದ್ದು ಈತನಕ ತನ್ನ ಗುರು ಪರಂಪರೆಯನ್ನು ಬೆಳೆಸಿಕೊಂಡು ಬಂದಿದೆ.

ಮಠ ಸ್ಥಾಪನೆ: ಉಜ್ಜಯಿನಿ ಪೀಠದ ಶಾಖಾನುವರ್ತಿ ಮಠವಾದ ಈ ಮಠವು ಶಿಷ್ಯವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಮಠದ ಮೂಲ ಗುರುಗಳಾದ ಶ್ರೀ ಮಹಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು ಲೋಕಸಂಚಾರದಲ್ಲಿದ್ದ ಸಂದರ್ಭದಲ್ಲಿ ಈ ಮಠವನ್ನು ಸ್ಥಾಪಿಸಿ ಆಚಾರ್ಯರು ಪ್ರತಿಪಾದಿಸಿದ ವೀರಶೈವ ಸಿದ್ಧಾಂತಗಳನ್ನು ಪ್ರಚಾರಪಡಿಸತೊಡಗಿದರು. ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳನ್ನು ಬೋಧಿಸಿ ಈ ತತ್ತ್ವಗಳ ಆಧಾರದ ಮೇಲೆ ವೀರಶೈವ ಧರ್ಮ ಬೆಳೆಯುವಂತೆ ಮಾಡಿದರು. ಅದಿಲ್ಲದೆ ಭಕ್ತರ ಬೇಕು ಬೇಡಗಳಿಗೆ ಸ್ಪಂದಿಸಿ ಪವಾಡದ ರೂಪದಲ್ಲಿ ಸಮಸ್ಯೆಗಳನ್ನು ಪರಿಹರಿಸುತ್ತಿದ್ದರು.

ಪರಂಪರೆ: ಪುರಾತನ ಕಾಲದ ಇತಿಹಾಸವಿರುವ ಈ ಮಠದ ಪರಂಪರೆಯಲ್ಲಿ ಒಟ್ಟು ಇಪ್ಪತ್ತೈದು ಜನ ಗುರುಗಳು ಪಟ್ಟಾಧಿಕಾರವನ್ನು ಪಡೆದು ಧಾರ್ಮಿಕ ಕಾರ್ಯಗಳನ್ನು ನಿರಂತರವಾಗಿ ನಡೆಸಿಕೊಂಡು ಬಂದಿದ್ದಾರೆ ಎಂದು ಹೇಳಲಾಗುತ್ತದೆ.

೧. ಷ.ಬ್ರ.ಶ್ರೀ ಮಹಾಂತೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು

ಪಟ್ಟಾಧಿಕಾರವನ್ನು ವಹಿಸಿಕೊಳ್ಳುವ ಗುರುಗಳು ಈ ಮೂರು ಜನ ಗುರುಗಳ ಹೆಸರನ್ನು ಅನುಕ್ರಮಣಿಕೆಯಲ್ಲಿ ಅಭಿದಾನ ಪಡೆದು ಅಧಿಕಾರಕ್ಕೆ ಬರುತ್ತಿರುವುದರಿಂದ ಈ ಮಠದ ಪರಂಪರೆಯಲ್ಲಿ ಮೂರು ಹೆಸರುಗಳನ್ನು ಮಾತ್ರ ದಾಖಲಿಸಬಹುದಾಗಿದೆ.ಪರಂಪರೆಯ ಇಪ್ಪತ್ನಾಲ್ಕನೆಯ ಗುರುಗಳಾಗಿದ್ದ ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು ಬೀದರ್ ಜಿಲ್ಲೆಯ ಬಸವ ಕಲ್ಯಾಣ ತಾಲ್ಲೂಕಿನ ಹುಲುಸೂರು ಗ್ರಾಮದ ಹಿರೇಮಠದ ಶ್ರೀಮತಿ ಬಸಮ್ಮ ಮತ್ತು ಶ್ರೀ ರೇವಣಸಿದ್ದಯ್ಯನವರ ಪುತ್ರರಾಗಿ ಜನಿಸಿದರು. ಇವರ ಪಾಂಡಿತ್ಯವನ್ನು ಗುರುತಿಸಿ ಈ ಮಠಕ್ಕೆ ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿಕೊಳ್ಳಲಾಯಿತು. ಗುರುಗಳು ದೀರ್ಘ ಕಾಲ ಮಠದ ಧಾರ್ಮಿಕ ಆಚರಣೆಗಳನ್ನು ನಡೆಸಿ ೧೯೮೫ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಹಿರಿಯ ಗುರುಗಳ

ಕರಕಮಲ ಸಂಜಾತರಾಗಿ ಬೆಳೆದ ಈಗಿನ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಬಿಜಾಪುರ ಜಿಲ್ಲೆ ಹುನುಗುಂದ ತಾಲ್ಲೂಕಿನ ದಾಸ್ಯನಾಳ ಹಿರೇಮಠದ ಶ್ರೀ ನಾಗಯ್ಯ ಮತ್ತು ಶ್ರೀಮತಿ ಚನ್ನಬಸಮ್ಮನವರ ಪುತ್ರರಾಗಿ ೧೯೪೦ ರಲ್ಲಿ ಜನಿಸಿದರು. ಹಿರಿಯ ಗುರುಗಳಾದ ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾದ ನಂತರದ ಒಂದು ವರ್ಷದಲ್ಲಿ (೧೯೮೬) ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಗುರುಗಳು ಶಿವಯೋಗ ಮಂದಿರದಲ್ಲಿ ವಿದ್ಯಾಭ್ಯಾಸ ಮಾಡಿ ಸಂಸ್ಕೃತ, ವೇದಾಧ್ಯಯನವನ್ನು ಮಾಡಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಅಭಿವೃದ್ಧಿ ಕಂಡ ಕಾಲ: ಗುರುಗಳು ಕ್ರಿಯಾಶೀಲರಾಗಿ, ಚಟುವಟಿಕೆಯಿಂದ ಮಠದ ಆಡಳಿತವನ್ನು ನೋಡಿಕೊಳ್ಳತೊಡಗಿ ಮಠವು ಕೆಲವೇ ವರ್ಷಗಳಲ್ಲಿ ಅಭಿವೃದ್ಧಿಯನ್ನು ಕಂಡು ಬೆರಗಾಗುವಂತೆ ಮಾಡಿದರು. ಗುರುಗಳು ಅಧಿಕಾರಕ್ಕೆ ಬಂದ ಮೇಲೆ ಜೀರ್ಣಗೊಂಡಿದ್ದ ಮಠದ ಕಟ್ಟಡವನ್ನು ಪೂರ್ಣ ತೆಗೆಸಿ ಹತ್ತು ಲಕ್ಷರೂ ವೆಚ್ಚದಲ್ಲಿ ಹೊಸ ಕಟ್ಟಡವನ್ನು ನಿರ್ಮಿಸಿದ್ದಾರೆ. ಅಲ್ಲದೆ ಮಠದ ಸಮುಚ್ಚಯದಲ್ಲಿ ಹೊಸ ಕಟ್ಟಡಗಳನ್ನು ನಿರ್ಮಿಸಿ ಮಠಕ್ಕೆ ನವೀನತೆಯನ್ನು ತಂದುಕೊಟ್ಟರು. ಮಹಾರಾಷ್ಟ್ರದ ಲಾತೂರ್ ಜಿಲ್ಲೆಯ ದೇವಣಿಗೆಯ ಶಾಖಾ ಮಠದಲ್ಲಿ ಹದಿನೈದು ಲಕ್ಷ ರೂಗಳ ಯೋಜನೆಯಲ್ಲಿ ಮಠಕ್ಕೆ ಹೊಸ ಕಟ್ಟಡವನ್ನು ನಿರ್ಮಿಸಿದ್ದಾರೆ. ಮಠದ ಪರಂಪರೆಯ ಗುರುಗಳ ಪ್ರಭಾವಕ್ಕೆ ಮಣಿದ ನವಾಬನು ಮಠದ ಧಾರ್ಮಿಕ ಚಟುವಟಿಕೆಗಳಿಗೆ ನೆರವಾಗ ಲೆಂದು ಐದುನೂರು ಎಕರೆ ಜಮೀನನ್ನು ಉಂಬಳಿಯಾಗಿ ನೀಡಿದ್ದನಂತೆ. ಆ ಜಮೀನಿನಲ್ಲಿ ಈಗ ಕೇವಲ ನೂರ ಹನ್ನೆರಡು ಎಕರೆ ಜಮೀನು ಮಾತ್ರ ಉಳಿದಿದ್ದು, ಅದನ್ನು ಆಧುನಿಕ ಬೇಸಾಯ ಪದ್ಧತಿಯಲ್ಲಿ ಅಭಿವೃದ್ಧಿಪಡಿಸಿ ಹೆಚ್ಚು ಆದಾಯ ತೆಗೆಯಲಾಗುತ್ತಿದೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯಲ್ಲಿ ಬಂದಂತಹ ಗುರುಗಳ ಗದ್ದುಗೆಗೆ ನಿತ್ಯ ಮೂರು ವೇಳೆ ಪೂಜೆ ನಡೆಯುತ್ತಿದೆ. ಭಾದ್ರಪದ ಮಾಸದಲ್ಲಿ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆ ಕಾರ್ಯಕ್ರಮ ನಡೆಯುತ್ತಿದೆ. ಈ ಸಂದರ್ಭದಲ್ಲಿ ಹನ್ನೊಂದು ದಿನ ಪುರಾಣ ಪ್ರವಚನ ಕಾರ್ಯಕ್ರಮಗಳು ನಡೆಯುತ್ತಿವೆ. ಅಮಾವಾಸ್ಯೆಯಲ್ಲಿ ಶಿವಾನುಭವ ಗೋಷ್ಠಿ, ಹುಣ್ಣಿಮೆ ಯಲ್ಲಿ ಶಿವಭಜನೆ, ಮೇ ತಿಂಗಳಿನಲ್ಲಿ ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆಯ ಅಂಗವಾಗಿ ಐದು ದಿನಗಳ ಕಾಲ ಆಧ್ಯಾತ್ಮಚಿಂತನೆ ಕಾರ್ಯಕ್ರಮ ನಡೆಯುತ್ತಿದೆ. ಮಠದಲ್ಲಿ ನಿತ್ಯ ಅನ್ನ ದಾಸೋಹದ ವ್ಯವಸ್ಥೆ ಮಾಡಲಾಗಿದೆ. ದಿನಪ್ರತಿ ನೂರಾರು ಜನ ಭಕ್ತರು ದಾಸೋಹದಲ್ಲಿ ಪಾಲ್ಗೊಳ್ಳುತ್ತಾರೆ.

ಶಿಕ್ಷಣ -ಸಾಹಿತ್ಯ ಸೇವೆ: ಶ್ರೀ ಸಿದ್ಧಲಿಂಗೇಶ್ವರ ಶಿವಾಚಾರ್ಯ ವಿದ್ಯಾ ಸಂಸ್ಥೆಯನ್ನು ೧೯೯೪ ರಲ್ಲಿ ಪ್ರಾರಂಭಿಸಿದ್ದು ಈ ಸಂಸ್ಥೆಯ ಮೂಲಕ ಶಿಶುವಿಹಾರ,ಪ್ರಾಥಮಿಕ ಶಾಲೆ, ಪ್ರೌಢಶಾಲೆಗಳನ್ನು ಪ್ರಾರಂಭಿಸಲಾಗಿದೆ. ಮಠದಲ್ಲಿ ಉಚಿತ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಿ ಕಲಿಯುವ ಬಡ ಮಕ್ಕಳಿಗೆ ಆಶ್ರಯ ನೀಡಲಾಗಿದೆ. ದೇವಣಗಿ ಮಠದಲ್ಲಿ ಮರಾಠಿ ಭಾಷೆಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳನ್ನು ಪ್ರಾರಂಭಿಸಲಾಗಿದ್ದು, ಶ್ರೀ ಗುರುಲಿಂಗೇಶ್ವರ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಸಿದ್ಧತೆ ನಡೆದಿದೆ. ಶಿಕ್ಷಣ ಸೇವೆಯ ಜೊತೆಗೆ ಸಾಹಿತ್ಯಿಕ ಸೇವೆಯನ್ನು ಸಲ್ಲಿಸಿರುವ ಮಠ ಶ್ರೀ ಸಿದ್ಧಲಿಂಗೇಶ್ವರ ಸಂಸ್ಥಾನ ಮಠದ ಚರಿತ್ರೆ, ಹೊಂಬೆಳಕು, ಆಳಂದ ತಾಲ್ಲೂಕಿನ ಅನಂತ ಶರಣರ ಜೀವನ ಚರಿತ್ರೆ ಕೃತಿಗಳನ್ನು ಪ್ರಕಟಿಸಲಾಗಿದೆ.

ಗುರುಗಳು ಸಾಮಾಜಿಕ ಕಳಕಳಿಯನ್ನು ಹೊಂದಿದ್ದು ಮಾನವೀಯ ಮೌಲ್ಯಗಳಿಗೆ ಹೆಚ್ಚು ಒತ್ತುಕೊಟ್ಟು ಧರ್ಮವನ್ನು ವೈಚಾರಿಕ ನೆಲೆಗಟ್ಟಿನಲ್ಲಿ ಪ್ರಚಾರಪಡಿಸುತ್ತಾ ಜನರು ಧಾರ್ಮಿಕ ವಿಚಾರಗಳಿಂದ ವಿಮುಖರಾಗದಂತೆ ತಡೆಗಟ್ಟುವ ಪ್ರಯತ್ನ ನಡೆಸಿದ್ದಾರೆ. ಗುರುಗಳು ಧರ್ಮಜಾಗೃತಿಗಾಗಿ ಆಳಂದದಿಂದ ಶ್ರೀಶೈಲ, ಆಳಂದಿಂದ ಎಡೆಯೂರು, ಆಳಂದದಿಂದ ಅಂಬಾದೇವಿ ಯ ಕ್ಷೇತ್ರವಾದ ತುಳಜಾಪುರ ಈ ಕ್ಷೇತ್ರಗಳಿಗೆ ಎರಡು ಸಲ ಮೂರು ವರ್ಷಕ್ಕೊಮ್ಮೆ ಪಾದಯಾತ್ರೆಯನ್ನು ಮಾಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಸಿದ್ಧರಾಮೇಶ್ವರ ಸಂಸ್ಥಾನಮಠ, ಆಳಂದ, ಗುಲ್ಬರ್ಗ ಜಿಲ್ಲೆ.

ಕಡೆಗಂಚಿ

ಆಳಂದ ತಾಲ್ಲೂಕಿನ ಕಡೆಗಂಚಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣ ಭಾಗಕ್ಕೆ ಇಪ್ಪತ್ತೆರಡು ಕಿ.ಮೀ

ದೂರದಲ್ಲಿದೆ. ಈ ಗ್ರಾಮವು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಕಡೆ ಅಂಚಿನ ಗ್ರಾಮವಾಗಿದ್ದರಿಂದ ಈ ಗ್ರಾಮಕ್ಕೆ 'ಕಡೆಗಂಚಿ' ಎಂದು ಹೆಸರು ಬಂದಿದೆ. ಈ ಗ್ರಾಮದಲ್ಲಿ ಶ್ರೀ ಶಾಂತಲಿಂಗೇಶ್ವರ ಕಟ್ಟಿಮಠವು ಸ್ಥಾಪನೆಯಾಗಿದೆ.

ಶಾಂತಲಿಂಗೇಶ್ವರ ಕಟ್ಟಿಮಠ: ಕಡೆಗಂಚಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಶಾಂತಲಿಂಗೇಶ್ವರ ಕಟ್ಟಿಮಠವು ರಾಯಚೂರು ಜಿಲ್ಲೆಯ ಬಿಚ್ಚಾಲೆ ಗ್ರಾಮದ ಶಾಖಾಮಠವಾಗಿದೆ. ಈ ಮಠವು ಪುರಾತನ ಕಾಲದ ಮಠವಾಗಿದ್ದು, ಶಿಷ್ಯವರ್ಗದ ಪರಂಪರೆಯಲ್ಲಿ ಬೆಳೆದು ಈ ಗ್ರಾಮದ ಧಾರ್ಮಿಕ ಕೇಂದ್ರಬಿಂದುವಾಗಿದೆ.

ಮಠ ಸ್ಥಾಪನೆ: ಶ್ರೀ ಶಾಂತಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿದ್ದಾರೆ. ಗುರುಗಳು ಪವಾಡ ಪುರುಷರಾಗಿ ವೀರಶೈವ ಧರ್ಮವನ್ನು ಅಭಿವೃದ್ಧಿಪಡಿಸಿ ಭಕ್ತರ ಉದ್ಧಾರಕ್ಕಾಗಿ ಶ್ರಮಿಸಿದರು. ಇಲ್ಲಿನ ಅಜ್ಞಾನ, ಅಂಧಕಾರವನ್ನು ತೊಡೆದು ಹಾಕಿ ಧಾರ್ಮಿಕ ವಾತಾವರಣ ಬೆಳೆಯಲು ಕಾರಣರಾದರು. ಇವರ ಆಧ್ಯಾತ್ಮ ಶಕ್ತಿಯಿಂದ ಸ್ಥಾಪನೆಯಾದ ಮಠವು ಹೆಸರಾಂತ ಮಠವಾಗಿ ಬೆಳೆಯಿತು.

ಮಠದ ಪರಂಪರೆ:

೧. ಷ.ಬ್ರ.ಶ್ರೀ ಶಾಂತಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು
೩. ಷ.ಬ್ರ.ಶ್ರೀ ಶಾಂತಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು
೪. ಷ.ಬ್ರ.ಶ್ರೀ ಕರಿಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು
೬. ಷ.ಬ್ರ.ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ ಎಂದು ಹೇಳಲಾಗುತ್ತದೆ. ಕರ್ತೃಗುರುಗಳ ನಂತರ ಅಧಿಕಾರವನ್ನು ವಹಿಸಿಕೊಂಡ ಶ್ರೀ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳಿಂದ ಶ್ರೀ ಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳ ತನಕ ಅಧಿಕಾರ ನಡೆಸಿದ ಗುರುಗಳು ಧರ್ಮವನ್ನು ಸಮರ್ಥವಾಗಿ ಪ್ರಚಾರಪಡಿಸುವ ನಿಟ್ಟಿನಲ್ಲಿ ಶ್ರಮಿಸಿದ್ದಾರೆ. ನಂತರ ಅಧಿಕಾರಕ್ಕೆ ಬಂದ ಶ್ರೀ ಕರಿ ಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಬೆಳಸಿ ಅಭಿವೃದ್ಧಿಗೆ ತಂದು ಸುಮಾರು ೧೯೭೦ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಅಧಿಕಾರ ವಹಿಸಿಕೊಂಡ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳು ಬಳಗನೂರು ಗ್ರಾಮದವರು. ಇವರು ರಾಯಚೂರು ಜಿಲ್ಲೆಯ ಬಿಚ್ಚಾಲಿ ಹಿರೇಮಠದ ಮಠಾಧ್ಯಕ್ಷರಾಗಿ ಅಧಿಕಾರವನ್ನು ವಹಿಸಿಕೊಂಡು, ಮಟಮರಿ ಹಾಗೂ ಕಡೆಗಂಚಿ ಮಠ ಆಡಳಿತವನ್ನು ನೋಡಿಕೊಂಡು ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ ಅಮಾವಾಸ್ಯೆಯಲ್ಲಿ ಭಜನೆ, ಶ್ರಾವಣ ಮಾಸದಲ್ಲಿ ಪುರಾಣ ಪ್ರವಚನ, ಯುಗಾದಿಯಾದ ಏಳನೆಯ ದಿನಕ್ಕೆ ಶ್ರೀ ಶಾಂತಲಿಂಗೇಶ್ವರ ಜಾತ್ರೆ, ಇವು ಮಠದಲ್ಲಿ ನಡೆಯುವ ಧಾರ್ಮಿಕ ಕಾರ್ಯಗಳು. ಈ ಸಂದರ್ಭಗಳಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಮಠದ ಆವರಣದಲ್ಲಿ ಲಿಂಗು ಸ್ಥಾಪನೆ ಮಾಡಿ ದಾಸೋಹ ಮಂದಿರವನ್ನು ಇತ್ತೀಚೆಗೆ ನಿರ್ಮಿಸಲಾಗಿದೆ. ೧೯೮೫ ರಲ್ಲಿ ಶ್ರೀ ಶಾಂತಲಿಂಗೇಶ್ವರ ವಸತಿ ಶಾಲೆಯನ್ನು ಪ್ರಾರಂಭಿಸಿ ಒಂದರಿಂದ ಏಳನೆಯ ತರಗತಿಯವರೆಗೆ ಶಾಲೆಯನ್ನು ಪ್ರಾರಂಭಿಸಲಾಗಿದೆ. ಮಠದ ಆಸ್ತಿಯನ್ನು ಅಭಿವೃದ್ಧಿಪಡಿಸಿ ತೆಂಗಿನ ತೋಟವನ್ನು ಬೆಳೆಸಲಾಗಿದೆ. ಗುರುಗಳು ಅಧಿಕಾರಕ್ಕೆ ಬಂದ ಮೇಲೆ ಮಠವನ್ನು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕವಾಗಿ ಅಭಿವೃದ್ಧಿಪಡಿಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ವೀರಭದ್ರ ಶಿವಾಚಾರ್ಯಸ್ವಾಮಿಗಳು, ಶ್ರೀ ಶಾಂತಲಿಂಗೇಶ್ವರಕಟ್ಟಿಮಠ,ಕಡೆಗಂಚಿ,ಆಳಂದ ತಾ, ಗುಲ್ಬರ್ಗಜಿಲ್ಲೆ.

ಮಹಾಂತೇಶ್ವರ ಮಠ: ಕಡೆಗಂಚಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಪುರಾತನ ಕಾಲದ ಶ್ರೀ ಮಹಾಂತೇಶ್ವರ ಮಠವು ನಂದವಾಡಿಗೆ ಹಿರೇಮಠದ ಶಾಖಾ ಮಠವಾಗಿದೆ. ಶ್ರೀ ಮಹಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು ಸ್ಥಾಪನೆ ಮಾಡಿದ ಕಾರಣಕ್ಕಾಗಿ ಇದು ಶ್ರೀ ಮಹಾಂತೇಶ್ವರ ಮಠವಾಗಿದೆ. ಮಠದ ಆವರಣದಲ್ಲಿ ಕರ್ತೃಗುರುಗಳ ಗದ್ದುಗೆ ಇದ್ದು ನಿತ್ಯ ಪೂಜೆ ಮಾಡಲಾಗುತ್ತಿದೆ. ಇತ್ತೀಚೆಗೆ ಶ್ರೀ ರೇಣುಕರ ಮೂರ್ತಿಯನ್ನು ಸ್ಥಾಪಿಸಲಾಗಿದೆ. ಈಗ ಶ್ರೀ ಮಹಾಂತಲಿಂಗ

ಶಿವಾಚಾರ್ಯ ಸ್ವಾಮಿಗಳು ನುಂದವಾಡಿಗೆ ಹಿರೇಮಠದಲ್ಲಿಯೇ ಇದ್ದುಕೊಂಡು ಈ ಮಠದ ಧಾರ್ಮಿಕ ಮತ್ತು ಆಡಳಿತ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಮಹಾಂತಲಿಂಗ ಶಿವಾಚಾರ್ಯಸ್ವಾಮಿಗಳು, ಶ್ರೀ ಮಹಾಂತೇಶ್ವರಮಠ, ಕಡೆಗಂಚಿ, ಆಳಂದ ತಾ, ಗುಲ್ಬರ್ಗಜಿಲ್ಲೆ.

ಕವಲಗಿ

ಆಳಂದ ತಾಲ್ಲೂಕಿನ ಕವಲಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹದಿನೇಳು ಕಿ.ಮೀ ದೂರದಲ್ಲಿದೆ. ಅಭಿವೃದ್ಧಿ ಪಥದಲ್ಲಿರುವ ಈ ಗ್ರಾಮದಲ್ಲಿ ಶ್ರೀ ಶಾಂತಲಿಂಗೇಶ್ವರ ವಿರಕ್ತ ಮಠವು ಸ್ಥಾಪನೆಯಾಗಿದೆ.

ಶಾಂತಲಿಂಗೇಶ್ವರ ವಿರಕ್ತಮಠ: ಕವಲಗಿ ಗ್ರಾಮದಲ್ಲಿ ಶ್ರೀ ಶಾಂತಲಿಂಗೇಶ್ವರ ವಿರಕ್ತ ಮಠವು ಸ್ಥಾಪನೆಯಾಗಿ ಈ ಗ್ರಾಮದ ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ. ವಿರಕ್ತಸಂಪ್ರದಾಯದ ಮುರುಘಾ ಸಮಯದ ಈ ಮಠವು ಶ್ರೀ ಬಸವಲಿಂಗ ಸ್ವಾಮಿಗಳಿಂದ ಸ್ಥಾಪಿತವಾಗಿದೆ. ಆದರೆ ಈ ಮಠದ ಪರಂಪರೆಯ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಇಲ್ಲ.

ಮಠ ಸ್ಥಾಪನೆ: ಶ್ರೀ ಬಸವಲಿಂಗ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಈ ಗ್ರಾಮಕ್ಕೆ ಬಂದು ನೆಲೆ ನಿಲ್ಲುತ್ತಾರೆ. ಹಳ್ಳದ ಬಲದಂಡೆಯ ಮೇಲೆ ನೆಲೆ ನಿಂತ ಗುರುಗಳು ನಿತ್ಯ ಪೂಜಾನುಷ್ಠಾನಗಳಿಂದ ಸಾಧನೆಯ ಸಿದ್ಧಿಯನ್ನು ಸಾಧಿಸಿಕೊಂಡಿದ್ದರು. ಶ್ರೀ ಬಸವಲಿಂಗ ಸ್ವಾಮಿಗಳು ಹಳ್ಳದ ದಡದಲ್ಲಿ ಅನುಷ್ಠಾನಕ್ಕೆ ಕುಳಿತ ವಿಚಾರ ಗ್ರಾಮದ ಭಕ್ತರಿಗೆ ತಿಳಿದು ಗುರುಗಳ ಬಳಿಗೆ ಆಗಮಿಸಿ ಆಶೀರ್ವಾದ ಪಡೆಯುತ್ತಾರೆ. ಗುರುಗಳು ನೆಲೆ ನಿಂತ ಜಾಗದಲ್ಲಿ ಮಠವನ್ನು ಕಟ್ಟಿಸಿಕೊಡುತ್ತಾರೆ. ಗುರುಗಳು ನೆಲೆಗೊಂಡ ಮೇಲೆ ಧಾರ್ಮಿಕ ಚಟುವಟಿಕೆಗಳು ಚುರುಕುಗೊಂಡವು.ನಿತ್ಯ ಶಿವಾನುಭವ ಗೋಷ್ಠಿ, ಧರ್ಮೋಪದೇಶ ನಡೆಯತೊಡಗಿತು. ಭಕ್ತರು ಸಂಸ್ಕಾರವಂತರಾದರು. ಅಷ್ಟಾವರಣ, ಪಂಚಚಾರಗಳ ಬಗ್ಗೆ ಅರಿತು ಆಚಾರ ಮತ್ತು ವಿಚಾರವನ್ನು ನಡೆ ನುಡಿಯಲ್ಲಿ ತಂದುಕೊಂಡರು. ಶ್ರೀ ಬಸವಲಿಂಗ ಸ್ವಾಮಿಗಳು ಇದರಿಂದ ಸಂತೃಪ್ತರಾಗಿ ಶ್ರೀ ರಾಚೋಟಿ ಸ್ವಾಮಿಗಳಿಗೆ ಅಧಿಕಾರವನ್ನು ನೀಡಿ ಪರಂಪರೆ ಬೆಳೆಯಲು ಆಶೀರ್ವದಿಸಿರುತ್ತಾರೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಬಸವಲಿಂಗ ಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ರಾಚೋಟಿ ಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಶಾಂತಲಿಂಗ ಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಶಿವಬಸವ ಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಶಾಂತಲಿಂಗ ಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಗೌರಿಶಂಕರ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃ ಶ್ರೀ ಬಸವರಾಜ ಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದು ಶ್ರೀ ರಾಚೋಟಿ ಸ್ವಾಮಿಗಳು ಮಠವನ್ನು ಬೆಳಸಿದರು. ಶ್ರೀ ಶಿವಬಸವ ಸ್ವಾಮಿಗಳ ತನಕ ನಿರಂತರವಾಗಿ ನಡೆದ ಮಠದ ಪರಂಪರೆ ಮತ್ತೆ ಕೆಲವು ವರ್ಷಗಳ ಕಾಲ ಸ್ಥಗಿತಗೊಂಡಿತು. ನಂತರ ಶ್ರೀ ಶಾಂತಲಿಂಗ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡು ಪರಂಪರೆಯನ್ನು ಮುನ್ನಡೆಸಿದರು. ಗುರುಗಳು ಉತ್ತರಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವ ಮೊದಲೇ ಲಿಂಗೈಕ್ಯರಾದ ಕಾರಣ ಮಠವು ೧೯೪೦ ರಿಂದ ೧೯೮೦ ರವರೆಗೆ ಪುನಃ ಖಾಲಿ ಉಳಿಯಿತು. ಖಾಲಿ ಉಳಿದ ಮಠಕ್ಕೆ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಚಿಕ್ಕಜಂಬಿಗೆ ಗ್ರಾಮದ ಶ್ರೀ ಕಲ್ಯಾಣಯ್ಯ ಮತ್ತು ಶ್ರೀಮತಿ ನೀಲಮ್ಮನವರ ಪುತ್ರರಾಗಿ ೧೯೪೮ ರಲ್ಲಿ ಜನಿಸಿದ ಶ್ರೀ ಗೌರಿಶಂಕರ ಸ್ವಾಮಿಗಳು ಮಠದ ಆಡಳಿತವನ್ನು ೧೯೮೦ ರಲ್ಲಿ ವಹಿಸಿಕೊಂಡರು. ಬೆಂಗಳೂರು, ಜಮಖಂಡಿ, ಗದಗ, ಹಾವೇರಿಯಲ್ಲಿ ವಿದ್ಯಾಭ್ಯಾಸ ಮುಗಿಸಿದ ಗುರುಗಳು ಜಿಡಗ ಶ್ರೀ ಷಡಕ್ಷರಿ ಸಿದ್ಧರಾಮ ಸ್ವಾಮಿಗಳ ಅನುಗ್ರಹ ಪಡೆದು ೧೯೮೪ ರಲ್ಲಿ ಪಟ್ಟಾಧಿಕಾರವನ್ನು ಪಡೆದುಕೊಂಡರು.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗುರುಗಳ ನಾಲ್ಕು ಗದ್ದುಗೆಗಳು ಸ್ಥಾಪನೆಯಾಗಿವೆ. ಈ ಗದ್ದುಗೆಗಳಿಗೆ ಎರಡೂ ವೇಳೆ ಪೂಜೆ, ಅಮಾವಾಸ್ಯೆ ಮತ್ತು ಹುಣ್ಣಿಮೆಗಳಲ್ಲಿ ವಿಶೇಷ ಪೂಜೆ, ಏಪ್ರಿಲ್‌ನಲ್ಲಿ ಪುರಾಣ ಪ್ರವಚನವನ್ನು ಹಮ್ಮಿ ಕೊಳ್ಳಲಾಗುತ್ತಿದೆ. ಮಠದ ಆಸ್ತಿಯಾಗಿರುವ ಮೂವತ್ತು ಎಕರೆ ಜಮೀನನ್ನು ಅಭಿವೃದ್ಧಿಪಡಿಸಿ ಹೆಚ್ಚು ಉತ್ಪಾದನೆ ತೆಗೆಯಲಾಗು ತ್ತಿದೆ. ಈಗಿನ ಗುರುಗಳು ಜಮಖಂಡಿಯ ಗುರುಸ್ಥಲದ ಕಲ್ಯಾಣ ಮಠದ ಆಡಳಿತವನ್ನು ಸಹ ನೋಡಿಕೊಂಡು ಹಿರೇಮಠ ಮತ್ತು ವಿರಕ್ತ ಮಠಗಳ ಆಡಳಿತವನ್ನು ಏಕಕಾಲದಲ್ಲಿ ನಡೆಸಿಕೊಂಡು ಸಮನ್ವಯತೆ ತಂದಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಗೌರಿಶಂಕರ ಸ್ವಾಮಿಗಳು, ಶ್ರೀ ಶಾಂತಲಿಂಗೇಶ್ವರ ವಿರಕ್ತಮಠ, ಕವಲಗಿ, ಆಳಂದ ತಾ, ಗುಲ್ಬರ್ಗ ಜಿಲ್ಲೆ.

ಖಜೂರಿ

ಆಳಂದ ತಾಲ್ಲೂಕನ ಖಜೂರಿ ಗ್ರಾಮದ ಶ್ರೀ ಕೋರಣ್ಣೇಶ್ವರ ವಿರಕ್ತ ಮಠವು ತಾಲ್ಲೂಕು ಕೇಂದ್ರದ ಉತ್ತರ ಭಾಗಕ್ಕೆ ಹದಿನಾಲ್ಕು ಕಿ.ಮೀ ದೂರದಲ್ಲಿದೆ. ಮಹಾರಾಷ್ಟ್ರದ ಗಡಿಭಾಗದಲ್ಲಿರುವ ಈ ಗ್ರಾಮವು ಧಾರ್ಮಿಕವಾಗಿ ವಿಶಿಷ್ಟ ಸ್ಥಾನ ಪಡೆದಿದೆ. ಇಲ್ಲಿ ಶ್ರೀ ಕೋರಣ್ಣೇಶ್ವರ ವಿರಕ್ತ ಮಠವು ಸ್ಥಾಪನೆಯಾಗಿದೆ.

ಕೋರಣ್ಣೇಶ್ವರ ವಿರಕ್ತ ಮಠ: ಖಜೂರಿ ಗ್ರಾಮದ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ಮಠವು ವಿರಕ್ತ ಸಂಪ್ರದಾಯದ ಮುರುಘಾ ಸಮಯದ ಮಠವಾಗಿದೆ. ಹದಿನೆಂಟನೆಯ ಶತಮಾನದಲ್ಲಿ ಪ್ರಾರಂಭವಾಗಿದ್ದು ಶ್ರೀ ಕೋರಣ್ಣೇಶ್ವರ ಗುರುಗಳು ಈ ಮಠದ ಪ್ರಭಾವಿ ಗುರುಗಳಾದ ಕಾರಣ '**ಶ್ರೀ ಕೋರಣೇಶ್ವರ ವಿರಕ್ತಮಠ**' ಎಂಬ ಹೆಸರು ಬಂದಿದೆ.

ಮಠ ಸ್ಥಾಪನೆ: ಮಹಾರಾಷ್ಟ್ರದ ನಿಲಂಗಾ ಗ್ರಾಮವು ಮುರುಘೇಂದ್ರ ಶಿವಯೋಗಿಗಳ ಧಾರ್ಮಿಕ ಕೇಂದ್ರವಾಗಿತ್ತು. ಈ ವ್ಯಾಪ್ತಿಯಲ್ಲಿ ಕಾಸಾರ ಸಿರಸಿಯಲ್ಲಿ ಕರಿಬಸವೇಶ್ವರ ಮಠವು ಸ್ಥಾಪನೆಯಾಗಿದೆ. ಈ ಮಠದ ಆಗಿನ ಮಠಾಧ್ಯಕ್ಷರಾದ ಶ್ರೀ ಕರಿ ಬಸವ ಶಿವಾಚಾರ್ಯ ಸ್ವಾಮಿಗಳು ಧರ್ಮಪ್ರಚಾರಾರ್ಥ ಲೋಕಸಂಚಾರ ಕೈಗೊಂಡು ಆಳಂದ ತಾಲ್ಲೂಕಿನ ಖಜೂರಿ ಗ್ರಾಮಕ್ಕೆ ಬರುತ್ತಾರೆ. ಇಲ್ಲಿ ಭೀಮರಾಯ ಅಲ್ದಿ ಎಂಬುವರು ಹೊಟ್ಟೆ ನೋವಿನಿಂದ ಬಳಲುತ್ತಿದ್ದರು ಇವರು ಎಲ್ಲಾ ತರಹದ ಚಿಕಿತ್ಸೆಗಳನ್ನು ಪಡೆದಿದ್ದರೂ ಗುಣಮುಖರಾಗಿರಲಿಲ್ಲವಂತೆ. ಈ ಸಂದರ್ಭದಲ್ಲಿ ಶ್ರೀ ಕರಿಬಸವೇಶ್ವರರ ಕೃಪಾದೃಷ್ಟಿ ಯಿಂದ ಅಲ್ದಿಯವರ ಹೊಟ್ಟೆನೋವು ಗುಣಮುಖವಾಯಿತಂತೆ. ಆಗ ಗುರುಗಳು ನೋವಿನಿಂದ ಗುಣಮುಖರಾದ ಅಲ್ದಿಯ ವರಿಗೆ ನಿಮಗೆ ಹುಟ್ಟಿದ ಮೊದಲನೆಯ ಗಂಡು ಮಗುವನ್ನು ಮಠಕ್ಕೆ ಒಪ್ಪಿಸಬೇಕೆಂದು ಅಪ್ಪಣೆ ಕೊಡಿಸಿ, ಪುನಃ ಮೂಲ ಮಠಕ್ಕೆ ಹೋದರಂತೆ. ಕೆಲವು ದಿನಗಳ ನಂತರ ಭೀಮರಾಯ ಅಲ್ದಿಯವರು ಗುರುಗಳ ದರ್ಶನಕ್ಕೆಂದು ಕಾಸಾರ ಸಿರಸಿಗೆ ಹೋದರಂತೆ. ಆಗ ಗುರುಗಳು ಲಿಂಗೈಕ್ಯರಾಗಿದ್ದರಂತೆ. ಇವರ ಉತ್ತರಾಧಿಕಾರಿಯಾಗಿ ಶ್ರೀ ಮುರುಘೇಂದ್ರ ಸ್ವಾಮಿಗಳು ಅಧಿಕಾರ ವಹಿಸಿಕೊಂಡು ಆಡಳಿತ ನಡೆಸುತ್ತಿದ್ದರು. ಅಲ್ದಿಯು ಮಠಕ್ಕೆ ಭೇಟಿ ಕೊಟ್ಟು, ಹಿಂದಿನ ಗುರುಗಳಿಗೆ ನೀಡಿದ್ದ ವಾಗ್ದಾನದ ವಿಚಾರವಾಗಿ ಮಾತನಾಡಿದರಂತೆ. ಆಗ ಶ್ರೀ ಮುರುಘೇಂದ್ರ ಸ್ವಾಮಿಗಳು ಗುರುಗಳಿಗೆ ಕೊಟ್ಟ ಮಾತಿನಂತೆ ನಡೆದುಕೊ ಎಂದು ಹೇಳಿ ಕಳಿಸುತ್ತಾರಂತೆ. ಅಲ್ದಿವರು ಖಜೂರಿಗೆ ಬಂದು ತನ್ನ ಸಂಸಾರದ ಜಂಜಾಟದಲ್ಲಿ ಮುಳುಗಿ ಗುರುಗಳ ಮಾತನ್ನು ನಡೆಸಿಕೊಡದೆ ಹೋಗುತ್ತಾರೆ. ಆಗ ಪುನಃ ಹೊಟ್ಟೆನೋವು ಕಾಣಿಸಿಕೊಂಡಿತಂತೆ. ತಕ್ಷಣ ತನ್ನ ಹಿರಿಯ ಮಗನನ್ನು ಕಾಸಾರ ಸಿರಸಿಗೆ ಕರೆದು ಕೊಂಡು ಹೋಗಿ ಗುರುಗಳಿಗೆ ಒಪ್ಪಿಸುತ್ತಾರಂತೆ. ನಂತರ ಹೊಟ್ಟೆನೋವು ಗುಣಮುಖವಾಯಿತಂತೆ ಎಂಬ ಐತಿಹ್ಯವಿದೆ.

ಅಲ್ದಿಯವರ ಮಗ ಶ್ರೀ ಮುರುಘೇಂದ್ರ ಸ್ವಾಮಿಗಳ ಕೃಪಾಶೀರ್ವಾದದಿಂದ ಬೆಳೆದು, ಸಂಸ್ಕಾರವನ್ನು ಪಡೆದು 'ಶ್ರೀಕೋರಣ್ಣೇಶ್ವರ' ರೆಂಬ ಹೆಸರಿನಲ್ಲಿ ಧರ್ಮ ಕಾರ್ಯಗಳನ್ನು ನಡೆಸಲು ಪ್ರಾರಂಭಿಸುತ್ತಾರೆ. ಗುರುಗಳ ಜೊತೆಗೆ ಲೋಕ ಸಂಚಾರ ಕೈಗೊಂಡು ಜ್ಞಾನ ಸಂಪತ್ತನ್ನು ಹೆಚ್ಚಿಸಿಕೊಳ್ಳುತ್ತಾರೆ. ಲೋಕ ಸಂಚಾರದಲ್ಲಿ ಅನೇಕ ಪವಾಡಗಳನ್ನು ಮಾಡಿ ಭಕ್ತರನ್ನು ಉದ್ಧರಿಸುತ್ತಾ ಖಜೂರಿಗೆ ಬಂದು ೧೮೯೯ ರಲ್ಲಿ ಲಿಂಗೈಕ್ಯರಾಗುತ್ತಾರೆ. ಗುರುಗಳು ಲಿಂಗೈಕ್ಯಗೊಂಡ ಸಮಾಧಿ ಸ್ಥಳ ಇಂದೂ ಜಾಗೃತ ಸ್ಥಳವಾಗಿ ಬೆಳೆದಿದೆ. ಈ ಪವಿತ್ರ ಸ್ಥಳದಲ್ಲಿ ಮಠವು ರೂಪುಗೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸತೊಡಗಿತು.

ಪರಂಪರೆ: ಶ್ರೀ ಕೋರಣ್ಣೇಶ್ವರ ಸ್ವಾಮಿಗಳು ಲಿಂಗೈಕ್ಯರಾಗಿ ಸಮಾಧಿಯಾದ ಸ್ಥಳ ಮಠವಾಗಿ ರೂಪುಗೊಂಡ ಮೇಲೆ ಕಾಸಾರ ಸಿರಸಿಯ ಗುರುಗಳು ಈ ಮಠದ ಉಸ್ತುವಾರಿಯನ್ನು ೧೯೯೨ ರವರೆಗೆ ನೋಡಿಕೊಳ್ಳುತ್ತಿರುತ್ತಾರೆ. ನಂತರ ಚಿತ್ರದುರ್ಗ ಬೃಹನ್ಮಠದ ಶ್ರೀ ಶಿವಮೂರ್ತಿ ಮುರುಘಾರಾಜೇಂದ್ರ ಸ್ವಾಮಿಗಳ ಕೃಪಾಶೀರ್ವಾದಿಂದ ಶ್ರೀ ಮುರುಘೇಂದ್ರ ಸ್ವಾಮಿಗಳು ೧೯೯೬ ರ ಡಿಸೆಂಬರ್ ೧೫ ರಂದು ಪಟ್ಟಾಧಿಕಾರಕ್ಕೆ ಬರುತ್ತಾರೆ. ಇವರು ರೋಣ ತಾಲ್ಲೂಕಿನ ಅಸೂಟಿ ಗ್ರಾಮದ ಶ್ರೀ ಫಲಹಾರೇಶ್ವರ ಸ್ವಾಮಿಗಳ ಮೂಲ ವಂಶಸ್ಥರಾದ ಶ್ರೀ ಶಿವಪುತ್ರಯ್ಯ ಮತ್ತು ಶ್ರೀಮತಿ ಶಾರದಮ್ಮನವರ ಪುತ್ರರಾಗಿ ೧೯೬೧ ರ ಜನವರಿ ಒಂದರಂದು ಜನಿಸಿದರು. ಇವರು ಚಿತ್ರದುರ್ಗ, ಧಾರವಾಡದಲ್ಲಿ ವಿದ್ಯಾಭ್ಯಾಸವನ್ನು ಮಾಡಿ ಅಪಾರ ಪಾಂಡಿತ್ಯವನ್ನು ಸಂಪಾದಿಸಿ ಕೊಂಡಿದ್ದಾರೆ. ಚಿತ್ರದುರ್ಗ ಬೃಹನ್ಮಠದ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಸ್ವಾಮಿಗಳ ನೆರವು ಪಡೆದು ಹದಿನೈದು ಲಕ್ಷ ರೂ ವೆಚ್ಚದಲ್ಲಿ ಮಠಕ್ಕೆ ನೂತನ ಕಟ್ಟಡವನ್ನು ನಿರ್ಮಿಸಿದ್ದಾರೆ. ಮಠದ ಆಸ್ತಿಯಾಗಿ ಸುಮಾರು ನೂರ ಇಪ್ಪತ್ತು ಎಕರೆ ಜಮೀನಿದ್ದು ಇದನ್ನು ಅಭಿವೃದ್ಧಿಪಡಿಸಲಾಗುತ್ತಿದೆ.ಈ ಭಾಗದ ಕೆಲವೇ ಶ್ರೀಮಂತ ಮಠಗಳಲ್ಲಿ ಈ ಮಠವು ಒಂದಾಗಿ ಬೆಳೆದಿದೆ.

ಧಾರ್ಮಿಕ ಕಾರ್ಯಗಳು: ಪ್ರತಿ ಸೋಮವಾರ ಶಿವಾನುಭವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಯುಗಾದಿ ಅಮಾವಾಸ್ಯೆಯಲ್ಲಿ ಶರಣ ಸಂಸ್ಕೃತಿ ಉತ್ಸವ, ಶ್ರೀ ಕೋರಣ್ಣೇಶ್ವರ ರಥೋತ್ಸವ ನಡೆಸಲಾಗುತ್ತಿದೆ. ಜನ ಜಾಗೃತಿಗಾಗಿ ಗುರುಗಳು ಇದುವರೆವಿಗೂ ಹನ್ನೆರಡು ಪಾದಯಾತ್ರೆಗಳನ್ನು ಮಾಡಿದ್ದಾರೆ. ಮಠಕ್ಕೆ ಬರುವ ಭಕ್ತರಿಗೆ ವೈಚಾರಿಕ ಹಿನ್ನಲೆಯಲ್ಲಿ ಧರ್ಮವನ್ನು ತಿಳಿಹೇಳಿ ಮೂಢನಂಬಿಕೆಗಳನ್ನು ದೂರಮಾಡಲು ಪ್ರಯತ್ನಿಸು ತ್ತಿದ್ದಾರೆ. ಬಸವತತ್ತ್ವದ ಪ್ರಚಾರವನ್ನು ವ್ಯವಸ್ಥಿತ ವಾಗಿ ಮಾಡುತ್ತಾ ಸಹಜ ಶಿವಯೋಗದ ಬಗ್ಗೆ ಶಿಬಿರಗಳನ್ನು ಏರ್ಪಡಿಸಿ ಶಿವಪೂಜೆಯ ಕ್ರಮವನ್ನು ಭಕ್ತರಿಗೆ ಕಲಿಸಿ ಕೊಡುತ್ತಿದ್ದಾರೆ. ಮಠದಲ್ಲಿ ನಿತ್ಯ ಅನ್ನದಾಸೋಹದ ವ್ಯವಸ್ಥೆ ಮಾಡಿದ್ದಾರೆ. ಗುರುಗಳು ಕೋರಣ್ಣೇಶ್ವರ ಮಠದ ಜೊತೆಗೆ ಮೂಲ ಮಠವಾದ ಅಸೂಟಿಯ ಫಲಹಾರೇಶ್ವರ ಮಠದ ಆಡಳಿತ ಮತ್ತು ಧಾರ್ಮಿಕ ಕಾರ್ಯಗಳನ್ನೂ ನಡೆಸಿಕೊಂಡು ಬರುತ್ತಿದ್ದಾರೆ.

ಶಿಕ್ಷಣ -ಸಾಹಿತ್ಯ ಸೇವೆ: ಶ್ರೀ ಕೋರಣ್ಣೇಶ್ವರ ಶಿಕ್ಷಣ ಸಂಸ್ಥೆಯನ್ನು ೧೯೮೮ ರಲ್ಲಿ ಪ್ರಾರಂಭಿಸಲಾಗಿದ್ದು, ೨೦೦೦ ದ ಜುಲೈ ಒಂದರಂದು ಕನ್ನಡ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಲಾಗಿದೆ. ಇದರಿಂದ ಗಡಿ ನಾಡ ಪ್ರದೇಶದಲ್ಲಿ ಕನ್ನಡವು ಬೆಳೆಯಲು ಸಹಕಾರ ನೀಡಿದ್ದಾರೆ. ಮಠದ ವತಿಯಿಂದ ಕಂಪ್ಯೂಟರ್ ತರಬೇತಿಯನ್ನು ಪ್ರಾರಂಭಿಸಿ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡಿ, ಸ್ವಯಂ ಉದ್ಯೋಗಕ್ಕೆ ಹಾಗೂ ಕಂಪ್ಯೂಟರ್ ಯುಗದಲ್ಲಿ ಗ್ರಾಮಾಂತರ ಯುವಕರು ಅವಕಾಶದಿಂದ ವಂಚಿತರಾಗದಂತೆ ಪ್ರೇರಣೆ ನೀಡತೊಡಗಿದ್ದಾರೆ. ತಮ್ಮ ಹುಟ್ಟು ಹಬ್ಬವನ್ನು ವಿಶಿಷ್ಟವಾಗಿ ಆಚರಿಸಿಕೊಳ್ಳಲು ಮುಂದಾದ ಗುರುಗಳು ಗಡಿನಾಡ ಸಾಹಿತ್ಯ ಸಮ್ಮೇಳನವನ್ನು ನಡೆಸಿದ್ದಾರೆ. ಮಹಾರಾಷ್ಟ್ರದ ಗಡಿಯಲ್ಲಿರುವ ಈ ನಾಡು ಮರಾಠಿ ಭಾಷೆಯ ಪ್ರಭಾವಕ್ಕೆ ಒಳಗಾಗಿದೆ. ಈ ಪ್ರಭಾವವನ್ನು ತಪ್ಪಿಸಲು ಕನ್ನಡ ಭಾಷೆಯ ಬಗ್ಗೆ ಜಾಗೃತಿ ಮೂಡಿಸಲು ೨೦೦೦ ದ ಸೆಪ್ಟಂಬರ್ ಒಂದರಂದು ಆಳಂದ ತಾಲ್ಲೂಕು ಗಡಿನಾಡ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸಿ ಇತಿಹಾಸವನ್ನೇ ಸೃಷ್ಟಿಸಿದ್ದಾರೆ. ಗುರುಗಳು ವೀರಶೈವ ಧರ್ಮದ ಪ್ರಚಾರಕ್ಕಾಗಿ ಕಿರು ಪುಸ್ತಕಗಳನ್ನು ಪ್ರಕಟಿಸಿ ಹತ್ತುಸಾವಿರ ಪ್ರತಿಗಳನ್ನು ಉಚಿತವಾಗಿ ವಿತರಣೆ ಮಾಡಿದ್ದಾರೆ. ಈ ರೀತಿ ಪ್ರಗತಿದಾಯಕ ಹಾಗೂ ವೈಚಾರಿಕ ಹಿನ್ನೆಲೆಯಲ್ಲಿ ಚಿಂತಿಸುವ ಕಿರಿಯ ವಯಸ್ಸಿನ ಈ ಗುರುಗಳು ಹಿರಿದಾದುದನ್ನು ಸಾಧಿಸುತ್ತಾ ಶರಣ ಸಾಹಿತ್ಯ ಹಾಗೂ ವೀರಶೈವ ಧರ್ಮದ ಮಾನವೀಯ ತತ್ತ್ವಗಳನ್ನು ಸಮಾಜಕ್ಕೆ ಪರಿಚಯಿಸಿ ಸಮಾಜವನ್ನು ತಿದ್ದುವ ಕೆಲಸದಲ್ಲಿ ಮುಂದಾಗಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಮುರುಘೇಂದ್ರ ಸ್ವಾಮಿಗಳು, ಶ್ರೀ ಕೋರಣ್ಣೇಶ್ವರ ವಿರಕ್ತಮಠ, ಖಜೂರಿ, ಆಳಂದ ತಾ, ಗುಲ್ಬರ್ಗಜಿಲ್ಲೆ.
ಆಧಾರ: 'ಸ್ಮರಣ ಸಂಪುಟ' (ಆಳಂದ ತಾಲ್ಲೂಕಿನ ಸಂಪೂರ್ಣ ದರ್ಶನ)

ಚಿಂಚನಸೂರು

ಆಳಂದ ತಾಲ್ಲೂಕಿನ ಚಿಂಚನಸೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ನಲವತ್ತು ಕಿ.ಮೀ ದೂರ

ದಲ್ಲಿದೆ. ನಾಗರೀಕ ಸೌಲತ್ತುಗಳನ್ನು ಪಡೆದ ಈ ಗ್ರಾಮವು ಅಭಿವೃದ್ಧಿಯನ್ನು ಕಂಡಿದೆ. ಇಲ್ಲಿ ಶ್ರೀ ಕಲ್ಮಠವು ಸ್ಥಾಪನೆಯಾಗಿದೆ.

ಕಲ್ಮಠ: ಚಿಂಚನಸೂರು ಗ್ರಾಮದ ದಕ್ಷಿಣ ಭಾಗದಲ್ಲಿ ರಂಭಾಪುರಿ ಪೀಠದ ಶಾಖಾ ಮಠವಾದ ಶ್ರೀ ಕಲ್ಮಠವು ಅಸ್ತಿತ್ವದಲ್ಲಿದೆ. ಈ ಮಠಕ್ಕೆ 'ಶ್ರೀ ಸಿದ್ಧರಾಮೇಶ್ವರ ಚಿಕ್ಕಮಠ' ಎಂದೂ ಸಹ ಕರೆಯಲಾಗುತ್ತದೆ. ಈ ಮಠವು ಕ್ರಿ.ಶ. ೯೭೧ ರಲ್ಲಿ ಅಸ್ತಿತ್ವದಲ್ಲಿತ್ತು ಎಂದು ಹೇಳಲಾಗುತ್ತದೆ. ಕಲ್ಯಾಣಿ ಚಾಲುಕ್ಯರ ತೈಲಪ ದೊರೆಯ ಕಾಲದಲ್ಲಿ ಈ ಮಠಕ್ಕೆ ಇನಾಂ ಭೂಮಿಯನ್ನು ನೀಡಿರುವುದಾಗಿ 'ಸಿದ್ಧಮಲ್ಲೇಶ್ವರ ವಿಜಯ' ಕೃತಿಯಲ್ಲಿ ಉಲ್ಲೇಖಗೊಂಡಿದೆ. ಇಂತಹ ಪುರಾತನ ಮಠವು ಶಿಷ್ಯ ವರ್ಗದ ಸಂಪ್ರದಾಯದಲ್ಲಿ ಬೆಳೆದು ಸಮಾಜವನ್ನು ಉದ್ಧರಿಸಿದೆ.

ಮಠ ಸ್ಥಾಪನೆ: ಕರ್ತೃಗುರುಗಳಾದ ಶ್ರೀ ಸಿದ್ಧಮಲ್ಲೇಶ್ವರ ಶಿವಾಚಾರ್ಯ ಸ್ವಾಮಿಗಳು ಶಿವಯೋಗ ಸಿದ್ಧಿಯನ್ನು ಸಾಧಿಸಿದ ಧರ್ಮವನ್ನು ಬೆಳಸಿದರು. ಗುರುಗಳು ತಮ್ಮ ಜೀವಿತದಲ್ಲಿ ಸದಾ ಸಂಚಾರಮೂರ್ತಿಯಾಗಿ ಅಜ್ಞಾನ, ಅಂಧಕಾರವಿರುವ ಸ್ಥಳಗಳಲ್ಲಿ ನೆಲಸಿ ಜನ ಜಾಗೃತಿಯನ್ನುಂಟುಮಾಡಿ ಪ್ರಯಾಣ ಬೆಳಸುತ್ತಿದ್ದರಂತೆ. ಗುರುಗಳು ಸಂಚಾರದಲ್ಲಿದ್ದಾಗ ಈ ಗ್ರಾಮಕ್ಕೆ ಬಂದು ನೆಲೆಗೊಳ್ಳುತ್ತಾರೆ. ಗುರುಗಳು ದೀರ್ಘ ಅನುಷ್ಠಾನ ಕೈಗೊಂಡು ಭಕ್ತರಲ್ಲಿ ಧಾರ್ಮಿಕ ಭಾವನೆಗಳು ಬೆಳೆಯುವಂತೆ ಮಾಡಿದರು. ನಂತರ ಶಿವಾನುಭವ ಗೋಷ್ಠಿ ಹಾಗೂ ಶಿವಪೂಜೆಗಳ ಮೂಲಕ ಭಕ್ತರಲ್ಲಿ ಸಂಸ್ಕಾರ ನೀಡಿ ಮುಂದೆ ಹೊರಡಲು ಅನುವಾಗುತ್ತಾರೆ. ಇಲ್ಲಿನ ಭಕ್ತರು ಒತ್ತಾಯಪೂರ್ವಕವಾಗಿ ಗುರುಗಳನ್ನು ಇಲ್ಲಿಯೇ ನೆಲೆಸಿ ಮಠವನ್ನು ಸ್ಥಾಪಿಸುವಂತೆ ಬಿನ್ನವಿಸಿಕೊಳ್ಳುತ್ತಾರೆ. ಆಗ ಭಕ್ತರ ಅಪೇಕ್ಷೆಯಂತೆ ಗುರುಗಳು ಇಲ್ಲಿ ನೆಲೆಸಿ ಮಠವನ್ನು ಸ್ಥಾಪಿಸಿದರು. ಗುರುಗಳು ಕೈಗೊಂಡ ಧಾರ್ಮಿಕ ಕಾರ್ಯಗಳಿಗೆ ಮನಸೋತ ಅಂದಿನ ಪೊನ್ನಾಡು ಸಂಸ್ಥಾನವು ಮಠ ಸ್ಥಾಪನೆಯಾಗಲು ನೆರವನ್ನು ನೀಡಿದೆ ಎಂದು ಹೇಳಲಾಗುತ್ತದೆ. ನಂತರ ಕಲ್ಯಾಣಿ ಚಾಲುಕ್ಯರ ತೈಲಪ ದೊರೆಯು ಈ ಮಠದ ಭಕ್ತನಾಗಿ ಧಾರ್ಮಿಕ ಕಾರ್ಯಗಳು ಶಾಶ್ವತವಾಗಿ ನಡೆಯಲೆಂದು ಭೂಮಿಯನ್ನು ಉಂಬಳಿಯಾಗಿ ನೀಡಿದುದಾಗಿ ತಿಳಿದುಬರುತ್ತದೆ.

ಪರಂಪರೆ:

೧. ಷ.ಬ್ರ.ಶ್ರೀ ಸಿದ್ಧಮಲ್ಲೇಶ್ವರ ಶಿವಾಚಾರ್ಯ ಸ್ವಾಮಿಗಳು

(ಎರಡರಿಂದ ಹದಿನೈದು ಜನ ಗುರುಗಳ ಹೆಸರು ಲಭ್ಯವಿಲ್ಲ)

೧೬. ಷ.ಬ್ರ.ಶ್ರೀ ನೂರೊಂದಪ್ಪ ಶಿವಾಚಾರ್ಯ ಸ್ವಾಮಿಗಳು

೧೭. ಷ.ಬ್ರ.ಶ್ರೀ ಗದ್ದುಗೇಂದ್ರ ಶಿವಾಚಾರ್ಯ ಸ್ವಾಮಿಗಳು

೧೮. ಷ.ಬ್ರ.ಶ್ರೀ ಸಿದ್ಧಮಲ್ಲ ಶಿವಾಚಾರ್ಯ ಸ್ವಾಮಿಗಳು

೧೯. ಷ.ಬ್ರ.ಶ್ರೀ ಸಿದ್ಧಮಲ್ಲ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದ್ದು, ಕರ್ತೃಗುರುಗಳ ನಂತರ ಪಟ್ಟಾಧಿಕಾರವನ್ನು ವಹಿಸಿಕೊಂಡು ಧಾರ್ಮಿಕ ಆಚರಣೆಗಳನ್ನು ನಡೆಸಿದ ಗುರುಗಳ ಹೆಸರುಗಳನ್ನು ದಾಖಲಿಸಿಡದೆ ಹೋದ ಕಾರಣ ಇಂದು ಆ ಹೆಸರುಗಳು ಮರೆಯಾಗಿವೆ ಎಂದು ಈಗಿನ ಮಠಾಧೀಶರಾದ ಶ್ರೀ ಸಿದ್ಧಮಲ್ಲ ಶಿವಾಚಾರ್ಯ ಸ್ವಾಮಿಗಳು ಅಭಿಪ್ರಾಯಿಸುತ್ತಾರೆ. ಈಗ ಲಭ್ಯವಿರುವಂತೆ ಹದಿನಾರನೆಯ ಪಟ್ಟಾಧ್ಯಕ್ಷರಾದ ಶ್ರೀ ನೂರೊಂದಪ್ಪ ಶಿವಾಚಾರ್ಯ ಸ್ವಾಮಿಗಳು ಅನಂತ ಲೀಲಾಪುರುಷರಾಗಿ ಅನೇಕ ಪವಾಡಗಳನ್ನು ಮಾಡಿ ಸಮಾಜವನ್ನು ಸನ್ಮಾರ್ಗಕ್ಕೆ ತಂದಿದ್ದಾರಂತೆ. ಇವರ ನಂತರ ಶ್ರೀ ಗದ್ದುಗೇಂದ್ರ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದಿದ್ದಾರೆ. ಇವರ ಕಾಲದಲ್ಲಿ ಪ್ಲೇಗ್ ಮಾರಿ ಈ ಗ್ರಾಮಕ್ಕೆ ಅಪ್ಪಳಿಸಿತ್ತಂತೆ. ಈ ಸಂದರ್ಭದಲ್ಲಿ ಜನರು ದಿಕ್ಕೆಟ್ಟು ಹೋದಾಗ ಗುರುಗಳು ಮಾನಸಿಕ ಸ್ಥೈರ್ಯವನ್ನು ತುಂಬಿ ತಮ್ಮ ಪೂಜಾನಿಷ್ಠೆಯ ಫಲದಿಂದ ರೋಗವನ್ನು ಹಿಮ್ಮೆಟ್ಟಿಸಿದ್ದರಂತೆ. ಇವರ ನಂತರ ಅಧಿಕಾರಕ್ಕೆ ಬಂದವರು ಶ್ರೀ ಸಿದ್ಧಮಲ್ಲ ಶಿವಾಚಾರ್ಯ ಸ್ವಾಮಿಗಳು, ಇವರು **'ಕವಿರತ್ನ'** ಎಂಬ ಬಿರುದಾವಳಿಯನ್ನು ಪಡೆದು ಧಾರ್ಮಿಕ, ಸಾಹಿತ್ಯದಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದರು ಎಂದು ಹೇಳಲಾಗುತ್ತದೆ. ಉದ್ದಾಮ ಪಂಡಿತರಾದ ಶ್ರೀ ಸಿದ್ಧಮಲ್ಲ ಶಿವಾಚಾರ್ಯ ಸ್ವಾಮಿಗಳು ೧೯೭೪ರ ಅಕ್ಟೋಬರ್ ಎರಡರಂದು ಕುರುಕೋಟಿಯಲ್ಲಿ ಲಿಂಗೈಕ್ಯರಾಗಿರುತ್ತಾರೆ. ಗುರುಗಳ ಗದ್ದುಗೆಯನ್ನು ಕುರುಕೋಟಿಯಲ್ಲಿಯೇ ಸ್ಥಾಪಿಸಲಾಗಿದೆ.

ಶ್ರೀ ಸಿದ್ಧಮಲ್ಲ ಶಿವಾಚಾರ್ಯ ಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದವರು ಈಗಿನ ಶ್ರೀ ಸಿದ್ಧಮಲ್ಲ ಶಿವಾಚಾರ್ಯರು.

ಇವರು ಸಿಂದಗಿ ತಾಲ್ಲೂಕಿನ ಗುಡ್ನಳ್ಳಿಯ ಶ್ರೀ ಸಾತಯ್ಯ ಮತ್ತು ಶ್ರೀಮತಿ ಪಾರ್ವತಿಬಾಯಿಯವರ ಪುತ್ರರಾಗಿ ೧೯೪೦ ರ ಆಗಸ್ಟ್ ಎಂಟರಂದು ಜನಿಸಿದರು. ಬಂಥನಾಳು ಗುರುಗಳ ಹತ್ತಿರ ವಿದ್ಯಾಭ್ಯಾಸವನ್ನು ಮಾಡಿ ಸಂಸ್ಕಾರವನ್ನು ಪಡೆದ ಇವರು ಚಿಂಚನಸೂರು ಕಲ್ಮಠದ ಉತ್ತರಾಧಿಕಾರಿಯಾಗಿ ನೇಮಕಗೊಂಡು ೧೯೭೭ರ ಏಪ್ರಿಲ್ ಇಪ್ಪತ್ತಾರರಂದು ಹತ್ತೊಂಬತ್ತನೆಯ ಗುರುಗಳಾಗಿ ಪಟ್ಟಾಧಿಕಾರವನ್ನು ವಹಿಸಿಕೊಳ್ಳುತ್ತಾರೆ.

ಧಾರ್ಮಿಕ ಕಾರ್ಯಗಳು: ಪುರಾತನ ಪರಂಪರೆಯ ಈ ಮಠದಲ್ಲಿ ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ, ಅಮಾವಾಸ್ಯೆಯಲ್ಲಿ ಮತ್ತು ಶ್ರಾವಣ ಮಾಸದಲ್ಲಿ ರುದ್ರಾಭಿಷೇಕ, ಭಜನೆ ಹಾಗೂ ಅನ್ನದಾಸೋಹ, ಅಕ್ಟೋಬರ್‌ನಲ್ಲಿ ಶ್ರೀ ಸಿದ್ಧಮಲ್ಲೇಶ್ವರ ಶಿವಾಚಾರ್ಯರ ಪುಣ್ಯಾರಾಧನೆ, ಫಾಲ್ಗುಣಬಹುಳ ಸಪ್ತಮಿಯಂದು ಶ್ರೀ ಗದ್ದುಗೇಂದ್ರ ಶಿವಾಚಾರ್ಯರ ಪುಣ್ಯತಿಥಿ, ದಸರಾ ಸಂದರ್ಭದಲ್ಲಿ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯುತ್ತಿದೆ. ಶ್ರೀ ಸಿದ್ಧಮಲ್ಲ ಶಿವಾಚಾರ್ಯ ಸ್ವಾಮಿಗಳು ಈ ಮಠವನ್ನು ಜೀರ್ಣಾಭಿವೃದ್ಧಿಗೊಳಿಸಿ ಧಾರ್ಮಿಕ ಕಾರ್ಯಗಳು ಚುರುಕುಗೊಳ್ಳುವಂತೆ ಮಾಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧಮಲ್ಲ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕಲ್ಮಠ, ಚಿಂಚನಸೂರು, ಆಳಂದ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಜಿಡಗ

ಆಳಂದ ತಾಲ್ಲೂಕಿನ ಜಿಡಗ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿಮೂರು ಕಿ.ಮೀ ದೂರದಲ್ಲಿದೆ. ಈ ಗ್ರಾಮದ ದಕ್ಷಿಣದ ಹೊರಭಾಗದ ಗುಡ್ಡದ ಮೇಲೆ ಸ್ಥಾಪನೆಗೊಂಡಿರುವ ಶ್ರೀ ಬಸವಲಿಂಗೇಶ್ವರ ವಿರಕ್ತಮಠವು ಬಹಳ ಪ್ರಭಾವಿ ಮಠವಾಗಿ ಬೆಳೆದಿದೆ.

ಬಸವಲಿಂಗೇಶ್ವರ ವಿರಕ್ತಮಠ: ಆಳಂದ ತಾಲ್ಲೂಕಿನಲ್ಲಿಯೇ ಅತ್ಯಂತ ಶ್ರೀಮಂತ ಮಠಗಳಲ್ಲಿ ಒಂದಾಗಿ, ಜಾತ್ಯಾತೀತ ಭಾವನೆಯಲ್ಲಿ ಬೆಳೆದು ಈ ಭಾಗದ ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ಬೆಳೆದಿದೆ. ಈಗಿನ ಮಠಾಧೀಶರಾದ ಶ್ರೀ ಷಡಾಕ್ಷರಿ ಸಿದ್ಧರಾಮೇಶ್ವರ ಶಿವಯೋಗಿಗಳ ಕರ್ತೃತ್ವಶಕ್ತಿಯಿಂದ ಮಠವು ಶ್ರೀಮಂತವಾಗಿ ಬೆಳೆದಿದೆ. ಎತ್ತರದ ಸ್ಥಳದಲ್ಲಿ ಸ್ಥಾಪನೆಯಾಗಿರುವ ಮಠದ ಹಸಿರುವನದ ಪರಿಸರ ಧಾರ್ಮಿಕ ಬೋಧನೆಗೆ ಸೂಕ್ತ ಸ್ಥಳವಾಗಿದೆ. ಎಲ್ಲಾ ಸ್ತರದ ಭಕ್ತರಿಗೆ ಸಮಾನ ಅವಕಾಶ ನೀಡಿ ಸಮಾಜವನ್ನು ಏಕತೆಯ ರೂಪದಲ್ಲಿ ಬೆಳೆಸತೊಡಗಿದೆ.

ಮಠ ಸ್ಥಾಪನೆ: ನಾನೂರು ವರ್ಷಗಳ ಹಿಂದೆ ಶ್ರೀ ಬಸವಲಿಂಗೇಶ್ವರ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿದ್ದಾರೆ. ಲೋಕಸಂಚಾರ ಕೈಗೊಂಡು ಈ ಪ್ರದೇಶಕ್ಕೆ ಬಂದು ನೆಲೆ ನಿಂತ ಗುರುಗಳಿಗೆ ಭಕ್ತರು ಸ್ಪಂದಿಸಿ ಗ್ರಾಮದ ದಕ್ಷಿಣ ಭಾಗದಲ್ಲಿ ಮಠವನ್ನು ಸ್ಥಾಪಿಸಿ ಕೊಡುತ್ತಾರೆ. ಶ್ರೀ ಬಸವಲಿಂಗೇಶ್ವರ ಸ್ವಾಮಿಗಳು ಅನೇಕ ಪವಾಡಗಳನ್ನು ಮಾಡಿ ಬಸವಾದಿ ಶರಣರ ತತ್ತ್ವಗಳನ್ನು ಪ್ರಚಾರ ಪಡಿಸುತ್ತಾರೆ. ಇವರು ನೆಲೆ ನಿಂತ ಜಾಗದಲ್ಲಿ ದಾಸೋಹದ ವ್ಯವಸ್ಥೆಯನ್ನು ಪ್ರಾರಂಭಿಸಿ ಅಸಹಾಯಕರಿಗೆ ನೆರವಾದರು. ಇವರ ಪವಾಡಕ್ಕೆ ಒಲಿದ ದೇಶದ ನಾನಾ ಭಾಗಗಳಿಂದ ಬಂದ ಅನೇಕರು ಇವರ ಭಕ್ತರಾದರು ಎಂದು ಹೇಳಲಾಗುತ್ತದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಬಸವಲಿಂಗೇಶ್ವರ ಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಷಡಕ್ಷರಿ ಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಸಿದ್ಧರಾಮೇಶ್ವರ ಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಸಿದ್ಧರಾಮ ಸ್ವಾಮಿಗಳು (ಸಿದ್ಧರಾಮ ಬಾಬಾ)
೫. ಶ್ರೀ ಮ.ನಿ.ಪ್ರ. ಷಡಕ್ಷರಿ ಸಿದ್ಧರಾಮೇಶ್ವರ ಶಿವಯೋಗಿ ಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಷಡಕ್ಷರಿ ಬಸವರಾಜ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ.ಶ್ರೀ ಬಸವಲಿಂಗೇಶ್ವರ ಸ್ವಾಮಿಗಳಿಂದ ಸ್ಥಾಪನೆಗೊಂಡ ಮಠವು ಶ್ರೀ ಷಡಾಕ್ಷರಿ

ಸ್ವಾಮಿಗಳು ಮತ್ತು ಶ್ರೀ ಸಿದ್ಧರಾಮಸ್ವಾಮಿಗಳ ಕರ್ತೃತ್ವ ಶಕ್ತಿಯಿಂದ ಬೆಳೆಯಿತು. ನಂತರ ಅಧಿಕಾರಕ್ಕೆ ಬಂದ ಶ್ರೀ ಸಿದ್ಧರಾಮ ಬಾಬಾರವರು ಮಠವನ್ನು ಮತ್ತಷ್ಟು ಬೆಳೆಸಿ ಪ್ರಚಾರಕ್ಕೆ ತಂದರು. ಶ್ರೀ ಸಿದ್ಧರಾಮಬಾಬಾ ತಮ್ಮ ನಂತರ ಶ್ರೀ ಷಡಕ್ಷರಿ ಸಿದ್ಧರಾಮೇಶ್ವರ ಶಿವಯೋಗಿಗಳನ್ನು ಉತ್ತರಾಧಿಕಾರಿಗಳನ್ನಾಗಿ ಆಯ್ಕೆ ಮಾಡಿಕೊಂಡರು.ಆಳಂದ ತಾಲ್ಲೂಕಿನ ಜಂಬಿಗಿ ಗ್ರಾಮದ ಶ್ರೀ ಚನ್ನವೀರಯ್ಯ ಮತ್ತು ಶ್ರೀಮತಿ ಶರಣಮ್ಮ ತಾಯಿಯವರ ಪುತ್ರರಾಗಿ ಪವಾಡ ಪುರುಷ ಶ್ರೀ ಷಡಕ್ಷರ ಸಿದ್ಧರಾಮ ಶಿವಯೋಗಿಗಳು ಜನಿಸಿದರು. ಮಗುವು ಜನಿಸಿದ ದಿನವೇ ಮುಗುಳಖೋಡಾದ ಶ್ರೀ ಯಲ್ಲಲಿಂಗ ಮಹಾರಾಜರು ಬಂದು ಮಗುವಿಗೆ ಶಿವಲಿಂಗಯ್ಯ ಎಂದು ನಾಮಕರಣ ಮಾಡಿ, ಆಶೀರ್ವದಿಸಿ ತಮ್ಮ ಉತ್ತರಾಧಿಕಾರಿ ನೀನಾಗಬೇಕೆಂದು ಹರಸಿ ಹೋಗಿದ್ದರು. ಬಾಲ್ಯದಲ್ಲಿಯೇ ಅಪ್ರತಿಮ ಶಕ್ತಿಯನ್ನು ಗುರುತಿಸಿದ್ದರು. ನಂತರ ಜಿಡಗ ಬಸವಲಿಂಗೇಶ್ವರ ಮಠದ ಶ್ರೀ ಸಿದ್ಧರಾಮ ಬಾಬಾರವರು ಶಿವಲಿಂಗಯ್ಯನಲ್ಲಿದ್ದ ಅಪ್ರತಿಮ ಶಕ್ತಿಯನ್ನು ಗುರುತಿಸಿ ಈತನಿಂದ ಈ ಮಠ ಉದ್ಧಾರವಾಗಿ ಧರ್ಮ ಬೆಳೆಯುತ್ತದೆ ಎಂದು ನಿರ್ಧರಿಸಿ"ಶ್ರೀ ಮ.ನಿ.ಪ್ರ.ಷಡಕ್ಷರಿ ಸಿದ್ಧರಾಮೇಶ್ವರ ಶಿವಯೋಗಿ" ಯೆಂದು ಅಭಿದಾನವಿತ್ತು ಈ ಮಠದ ಪಟ್ಟಾಧಿಕಾರವನ್ನು ನೀಡಿದರು.

ಬಾಲ್ಯದಲ್ಲಿಯೆ ಮುಗುಳಖೋಡಾದ ಶ್ರೀ ಯಲ್ಲಲಿಂಗ ಮಹಾರಾಜರು ತಮ್ಮ ಮಠದ ಉತ್ತರಾಧಿಕಾರಿಯೆಂದು ನಿರ್ಧರಿಸಿದವರಿಗೆ ಈ ವಿಚಾರ ತಿಳಿದು ಆಘಾತವಾಯಿತು. ಆಗ ಗುರುಗಳ ಅಭಿಲಾಷೆಯನ್ನು ಈಡೇರಿಸಲು ಶ್ರೀ ಷಡಕ್ಷರಿ ಸಿದ್ಧರಾಮ ಶಿವಯೋಗಿಗಳು ಮುಗಳ ಖೋಡಾದ ಅಧಿಕಾರವನ್ನು ವಹಿಸಿಕೊಂಡರು. ಗುರುಗಳಿಬ್ಬರ ಅಭಿಲಾಷೆಯನ್ನು ಪೂರೈಸಿ ಗುರುಗಳಿಬ್ಬರ ಆಶೀರ್ವಾದದಿಂದ ಬೆಳದ ಶ್ರೀ ಷಡಕ್ಷರಿ ಸಿದ್ಧರಾಮ ಶಿವಯೋಗಿಗಳು ಜಿಡಗ ಮೂಲ ಮಠವು ತಮ್ಮ ಧಾರ್ಮಿಕ ಆಚರಣೆಗೆ ಸಾಕಾಗದೆ ಹೋದಾಗ, ಈ ಗ್ರಾಮದ ದಕ್ಷಿಣದ ಹೊರಭಾಗದಲ್ಲಿ ಗ್ರಾಮದ ಶಿಖರದಂತಿದ್ದ ಗುಡ್ಡದ ಐವತ್ತು ಎಕರೆ ಜಮೀನನ್ನು ೧೯೮೧ರಲ್ಲಿ ಖರೀದಿಸಿದರು. ಈ ಜಾಗದಲ್ಲಿ ಹುಲ್ಲಿನ ಕುಟೀರ ಹಾಗೂ ನಂದಿಯನ್ನು ಪ್ರತಿಷ್ಠಾಪಿಸಿ ಗ್ರಾಮದ ಉತ್ತರಭಾಗದಲ್ಲಿದ್ದ ಮೂಲಮಠದ ಆಡಳಿತವನ್ನು ಇಲ್ಲಿಗೆ ಸ್ಥಳಾಂತರಿಸಿಕೊಂಡರು.

ಭವ್ಯವಾಗಿ ಬೆಳೆದ ತಪೋವನ: ೧೯೮೧ ರಲ್ಲಿ ಭೂಮಿಯನ್ನು ಖರೀದಿಸಿ ೧೯೮೫ ರಲ್ಲಿ ತಪೋವನವನ್ನು ನಿರ್ಮಿಸಲು ಪ್ರಾರಂಭಿಸಿ ಗುರು ಮಠವನ್ನು ಸ್ಥಾಪಿಸಿದರು. ಅನುಭವ ಆಶ್ರಮ, ವಚನಮಂಟಪ, ಬಸವಭವನ, ಯೋಗಾಶ್ರಮ, ಸಿದ್ಧಾಶ್ರಮ, ಪರ್ಣಕುಟೀರ, ರಾಮಕೃಷ್ಣಮಂದಿರ, ಲಚ್ಚಣ್ಣ ಸಿದ್ಧಲಿಂಗ ಮಹಾರಾಜರ ಕುಟೀರ, ದತ್ತಾತ್ರೇಯ ದೇವಸ್ಥಾನ,ತಿಂತಿಣಿ ಮೌನೇಶ್ವರ, ಈ ರೀತಿ ಜಾತ್ಯಾತೀತವಾಗಿ ಎಲ್ಲಾ ಕುಲದ ಮಹಾತ್ಮರ ಹೆಸರಿನಲ್ಲಿ ಆಶ್ರಮಗಳನ್ನು ನಿರ್ಮಿಸಿದ್ದಾರೆ. ಇಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳು ಸಹ ಎಲ್ಲಾ ವರ್ಗದ ಜನರಿಗೆ ಒಪ್ಪುವಂತೆ ನಡೆಸಲಾಗುತ್ತಿದೆ. ಇಷ್ಟೆಲ್ಲಾ ಸಾಧನೆಯನ್ನು ಶ್ರೀ ಷಡಕ್ಷರಿ ಸಿದ್ಧರಾಮೇಶ್ವರ ಶಿವಯೋಗಿಗಳ ಇಚ್ಛಾ ಶಕ್ತಿಯ ಮೇರೆಗೆ ನಡೆದಿದೆ. ಇಂತಹ ಭವ್ಯವಾದ ತಪೋವನ, ಅದರ ಮಧ್ಯೆ ಕಂಗೊಳಿಸುವ ಆಶ್ರಮಗಳ ಸಮುಚ್ಚಯ ಒಂದು ಆಧ್ಯಾತ್ಮಲೋಕಕ್ಕೆ ಕರೆದೊಯ್ಯುತ್ತದೆ. ಇಂತಹ ವಾತಾವರಣವನ್ನು ಸೃಷ್ಟಿಸಿ ಧಾರ್ಮಿಕ ಸಂಸ್ಕಾರವನ್ನು ಬೆಳಸುವಲ್ಲಿ ಗುರುಗಳು ಯಶಸ್ವಿಯಾಗಿದ್ದಾರೆ.

ಶ್ರೀ ಷಡಕ್ಷರಿ ಸಿದ್ಧರಾಮೇಶ್ವರ ಶಿವಯೋಗಿಗಳು ತಮ್ಮ ಉತ್ತರಾಧಿಕಾರಿಯನ್ನಾಗಿ ಪಡುಸಾವಳಿಗಿಯ ಶ್ರೀ ಮುರುಘಯ್ಯ ಮತ್ತು ಶ್ರೀಮತಿ ತಂಗಿಮ್ಮ ಇವರ ಪುತ್ರರಾಗಿ ೧೯೭೦ರ ಜೂನ್ ಇಪ್ಪತ್ತೈರಂದು ಜನಿಸಿದ ಶ್ರೀ ಗುರುಷಡಕ್ಷರಿ ಬಸವರಾಜ ದೇವರನ್ನು ನೇಮಕ ಮಾಡಿಕೊಂಡಿದ್ದಾರೆ. ಶ್ರೀ ಗುರು ಷಡಕ್ಷರಿ ಬಸವರಾಜದೇವರು ಶಿವಯೋಗಮಂದಿರ ಮತ್ತು ಕಾಶಿಯಲ್ಲಿ ಸಂಸ್ಕೃತ ಸಾಹಿತ್ಯವನ್ನು ಅಧ್ಯಯನ ಮಾಡಿ ಬಂದಿದ್ದಾರೆ. ವ್ಯವಹಾರ ಜ್ಞಾನಕ್ಕಾಗಿ ಪದವಿ ಶಿಕ್ಷಣವನ್ನು ಪಡೆದು ಈಗ ಮಠದಲ್ಲಿಯೇ ನೆಲೆಸಿ ಗುರುಗಳ ಕೃಪಾಶೀರ್ವಾದಿಂದ ಸಂಸ್ಕಾರ ಪಡೆದು ಧಾರ್ಮಿಕ ಮತ್ತು ಆಡಳಿತ ವಿಚಾರಗಳನ್ನು ಕಲಿಯುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ತಪೋವನದಲ್ಲಿ ನಿರ್ಮಿಸಲ್ಪಟ್ಟಿರುವ ಶರಣ ಬಸವೇಶ್ವರ ಗುಡಿ ಹಾಗೂ ಇತರೆ ದೇವಾಲಯಗಳಲ್ಲಿ ನಿತ್ಯ ಎರಡೂ ವೇಳೆ ಪೂಜೆ, ಶರಣ ಬಸವೇಶ್ವರ ದೇವಸ್ಥಾನದಲ್ಲಿ ನಂದಾದೀಪ,ರುದ್ರಾಭಿಷೇಕ, ಅಮಾವಾಸ್ಯೆ ಮತ್ತು ಹುಣ್ಣಿಮೆ ಯಲ್ಲಿ ಪ್ರವಚನ, ಕೀರ್ತನೆ ಹಾಗೂ ಸಂಗೀತೋತ್ಸವ, ಭಾದ್ರಪದ ಹುಣ್ಣಿಮೆಯಲ್ಲಿಶ್ರೀ ಸಿದ್ಧರಾಮ ಬಾಬಾರವರ

ಪುಣ್ಯಾರಾಧನೆ ನಡೆಯುತ್ತಿದೆ. ಈ ಎಲ್ಲಾ ಸಂದರ್ಭಗಳಲ್ಲಿ ದಿನದಲ್ಲಿ ಇಪ್ಪತ್ತು ಸಾವಿರ ಜನರಿಗೆ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಪ್ರತಿದಿನ ಕನಿಷ್ಟ ಒಂದುಸಾವಿರ ಜನರಿಗೆ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಿಸಲಾಗುತ್ತಿದೆ. ಗ್ರಾಮದ ಉತ್ತರ ಭಾಗದಲ್ಲಿರುವ ಮೂಲ ಮಠದಲ್ಲಿ ಗದ್ದುಗೆಗಳನ್ನು ಸ್ಥಾಪಿಸಿ ನಿತ್ಯ ಪೂಜೆ ನಡೆಯುವಂತೆ ವ್ಯವಸ್ಥೆ ಮಾಡಲಾಗಿದೆ.

ಸಾಮಾಜಿಕ -ಶಿಕ್ಷಣ ಸೇವೆ: ಧಾರ್ಮಿಕವಾಗಿ ಅಪಾರವಾದುದ್ದನ್ನು ಸಾಧಿಸಿರುವ ಈ ಮಠ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸ ದಿದ್ದರೂ ಸರ್ಕಾರ ನಡೆಸುವ ಪ್ರೌಢಶಾಲೆಗೆ ಕಟ್ಟಡವನ್ನು ನಿರ್ಮಿಸಿ ಕೊಟ್ಟಿದೆ. ಆಸ್ಪತ್ರೆಗೆ ಮೂರು ಎಕರೆ ಜಾಗ ಮತ್ತು ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ಸರ್ಕಾರಿ ವಿದ್ಯಾರ್ಥಿ ನಿಲಯಕ್ಕೆ ಜಾಗವನ್ನು ನೀಡಿದೆ. ಆಯುರ್ವೇದ ಆಸ್ಪತ್ರೆಯನ್ನು ನಿರ್ಮಿಸಲು ಐದು ಎಕರೆ ಜಾಗವನ್ನು ದಾನ ಮಾಡಿದೆ. ಮಠದಲ್ಲಿ ಉಚಿತ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿದ್ದು ವರ್ಷದಲ್ಲಿ ಮುನ್ನೂರು ಜನ ವಿದ್ಯಾರ್ಥಿಗಳಿಗೆ ವ್ಯವಸ್ಥೆ ಕಲ್ಪಿಸಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಷಡಕ್ಷರಿ ಸಿದ್ಧರಾಮೇಶ್ವರ ಶಿವಯೋಗಿಗಳು, ಶ್ರೀ ಬಸವಲಿಂಗೇಶ್ವರ ವಿರಕ್ತ ಮಠ, ಜಿಡಗ, ಆಳಂದ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ದೇವಂತಿಗಿ

ಆಳಂದ ತಾಲ್ಲೂಕಿನ ದೇವಂತಿಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣ ಭಾಗಕ್ಕೆ ಇಪ್ಪತ್ತು ಕೀ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ರೇವಣಸಿದ್ಧೇಶ್ವರ ಮಠವು ಸ್ಥಾಪನೆಯಾಗಿ ಧಾರ್ಮಿಕ ಕೇಂದ್ರವಾಗಿ ಬೆಳೆದಿದೆ.

ರೇವಣಸಿದ್ಧೇಶ್ವರ ಮಠ: ದೇವಂತಿಗಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ರೇವಣಸಿದ್ಧೇಶ್ವರ ಮಠವು ರಂಭಾಪುರಿ ಪೀಠದ ಶಾಖಾ ಮಠವಾಗಿ ಶಿಷ್ಯವರ್ಗದ ಪರಂಪರೆಯಲ್ಲಿ ಬೆಳೆದಿದೆ. ಪುರಾತನ ಕಾಲದಲ್ಲಿ ಸ್ಥಾಪನೆಯಾದ ಈ ಮಠವು ಈ ಗ್ರಾಮದಲ್ಲಿ ಧಾರ್ಮಿಕ ಹಾಗೂ ಸಾಂಸ್ಕೃತಿಕ ವಾತಾವರಣವನ್ನು ಸೃಷ್ಟಿಸಿದೆ.

ಮಠ ಸ್ಥಾಪನೆ: ಶ್ರೀ ಮಡಿವಾಳೇಶ್ವರ ಶಿವಾಚಾರ್ಯ ಸ್ವಾಮಿಗಳು ಈ ಗ್ರಾಮಕ್ಕೆ ಬಂದು ನೆಲೆಸಿ ಗ್ರಾಮದ ಹೊರಭಾಗದಲ್ಲಿರುವ ಗವಿಯಲ್ಲಿ ಅನುಷ್ಠಾನ ಕೈಗೊಂಡರು. ದೀರ್ಘ ಕಾಲ ಅನುಷ್ಠಾನಗೊಂಡ ಗುರುಗಳು ಯಾರ ಕಣ್ಣಿಗೂ ಗೋಚರಿಸಿರಲಿಲ್ಲ. ಒಮ್ಮೆ ಇಲ್ಲಿನ ದನ ಕಾಯುವ ಹುಡುಗರಿಗೆ ಗೋಚರವಾದರಂತೆ. ಈ ವಿಷಯ ಊರಿನಲ್ಲಿ ಹಬ್ಬಿ ಊರಿನ ಮುಖಂಡರಾದಿ ಯಾಗಿ ಭಕ್ತರೆಲ್ಲ ಗವಿಯ ಬಳಿಗೆ ಬಂಧು ಗುರುಗಳ ದರ್ಶನ ಪಡೆದುಕೊಳ್ಳುತ್ತಾರೆ. ಗುರುಗಳು ಭಕ್ತರಿಗೆ ದರ್ಶನ ಕೊಟ್ಟು ಆಶೀರ್ವದಿಸಿ ಕಳಿಸಿಕೊಡುತ್ತಾರಂತೆ. ನಂತರ ಗುರುಗಳ ಆಶೀರ್ವಾದದಿಂದ ಬೆಳೆಯ ತೊಡಗಿದ ಭಕ್ತರು ನಿತ್ಯ ಗುರುಗಳ ಉಪದೇಶದಿಂದ ಸಂಸ್ಕಾರವನ್ನು ಪಡೆದರು. ನಂತರ ಗುರುಗಳು ಅನುಷ್ಠಾನಗೊಂಡ ಜಾಗದಲ್ಲಿ ಮಠವನ್ನು ಸ್ಥಾಪಿಸಿ ಧಾರ್ಮಿಕ ಕಾರ್ಯಗಳು ನಿರಂತರವಾಗಿ ನಡೆಯುವಂತೆ ವ್ಯವಸ್ಥೆ ಮಾಡಿದರೆಂದು ಹೇಳಲಾಗುವ ಜನಪದ ಕಥೆ ಕೇಳಿ ಬರುತ್ತಿದೆ. ಮಠ ಸ್ಥಾಪನೆಗೊಂಡ ಅನೇಕ ವರ್ಷಗಳ ಕಾಲ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬಂದ ಗುರುಗಳು ಅನೇಕ ಪವಾಡಗಳನ್ನು ಮಾಡಿ ಜನರಲ್ಲಿ ಜಾಗೃತಿಯನ್ನುಂಟುಮಾಡಿ,ಲೋಕಸಂಚಾರಕ್ಕೆ ಹೋದರೆಂದು ಹೇಳಲಾಗುತ್ತಿದೆ. ಆದರೆ ಶ್ರೀ ಮಡಿವಾಳೇಶ್ವರರ ನಂತರ ಮಠವು ನಡೆಸಿದ ಧಾರ್ಮಿಕ ಕಾರ್ಯಗಳ ಬಗ್ಗೆ ಹಾಗೂ ಮಠಾಧೀಶರ ಬಗ್ಗೆ ವಿವರಗಳು ಮರೆಯಾಗಿವೆ.

ಬೆಳೆದ ಪರಂಪರೆ:

೧. ಷ.ಬ್ರ.ಶ್ರೀ ಮಡಿವಾಳೇಶ್ವರ ಶಿವಾಚಾರ್ಯ ಸ್ವಾಮಿಗಳು

೨. ಷ.ಬ್ರ.ಶ್ರೀ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು

೩. ಷ.ಬ್ರ.ಶ್ರೀ ರಾಚೋಟಿ ಶಿವಾಚಾರ್ಯ ಸ್ವಾಮಿಗಳು

೪. ಷ.ಬ್ರ.ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆಯನ್ನು ಗುರುತಿಸಬಹುದಾಗಿದ್ದು, ಕರ್ತೃ ಗುರುಗಳ ನಂತರ ಅನೇಕ ವರ್ಷಗಳ ಕಾಲ ಖಾಲಿ ಇದ್ದ ಮಠಕ್ಕೆ ಶ್ರೀ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಆಗಮಿಸುತ್ತಾರೆ. ಪವಾಡ ಪುರುಷರಾದ ಗುರುಗಳು

ತಮ್ಮ ಶಿವಪೂಜೆಯ ವೇಳೆ ಕರದಲ್ಲಿ ಲಿಂಗವನ್ನು ಹಿಡಿದು ಧ್ಯಾನಾಸಕ್ತರಾಗಿ, ಕುಳಿತ ಜಾಗದಿಂದ ಮೂರು ಅಡಿ ಮೇಲೆದ್ದು ಅಂತರ ಸ್ಥಿತಿಯಲ್ಲಿದ್ದು ಪೂಜೆ ಮುಗಿದ ಮೇಲೆ ಗದ್ದುಗೆ ಕಂಬಳಿಯ ಮೇಲೆ ಪವಡಿಸುತ್ತಿದ್ದರಂತೆ. ಇಂತಹ ಮಹಾ ಶಿವಯೋಗಿಗಳು ಈ ಮಠದ ಪರಂಪರೆಯನ್ನು ಮುಂದುವರೆಸಿ ಗವಿಯಲ್ಲಿ ಜೀವಂತ ಸಮಾಧಿಯಾದರು. ಗವಿಯ ಒಳಗೆ ಇವರ ಗದ್ದುಗೆಯನ್ನು ನಿರ್ಮಾಣ ಮಾಡಲಾಗಿದೆ. ಶ್ರೀ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಪವಾಡ ಪುರುಷರಾಗಿ ಜನಮನದಲ್ಲಿ ಉಳಿದು ಮಠವನ್ನು ಅಭಿವೃದ್ಧಿಪಡಿಸಿದ! ಕಾರಣ ಮಠಕ್ಕೆ ಈ ಹೆಸರು ಬಂದಿದೆ. ನಂತರ ಶ್ರೀ ರಾಚೋಟಿ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದಿದ್ದಾರೆ. ಇವರು ಸಹ ಶಿವಪೂಜಾ ನಿಷ್ಠರಾಗಿ ವೀರಶೈವ ಧರ್ಮವನ್ನು ಬೆಳೆಸಿದ್ದಾರೆ. ಇವರು ಲಿಂಗೈಕ್ಯರಾದ ಮೇಲೆ ಕೆಲವು ವರ್ಷ ಮಠ ಖಾಲಿ ಉಳಿಯಿತು. ನಂತರ ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು ೧೯೭೪ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ, ಮಠದಲ್ಲಿ ಮೂವತ್ತರಿಂದ ನಲವತ್ತು ವರ್ಷಗಳ ಕಾಲ ಯಾರೂ ಇಲ್ಲದ ಕಾರಣ, ಕಟ್ಟಡವು ಕ್ಷೀಣಿಸಿ ಹೋಗಿತ್ತು. ಮಠದ ಹಳೆಯ ಕಟ್ಟಡವನ್ನು ತೆಗೆದು ಹೊಸದಾಗಿ ನಿರ್ಮಿಸಿದ್ದಾರೆ. ಪರಂಪರೆಯ ಗುರುಗಳ ಐದು ಗದ್ದುಗೆಗಳನ್ನು ಗುರುತಿಸಿ ನವೀಕರಣಗೊಳಿಸಿದ್ದಾರೆ. ಮಠದ ಆಸ್ತಿಯನ್ನು ಕಾನೂನುಬದ್ಧಗೊಳಿಸಿ ಅಭಿವೃದ್ಧಿಪಡಿಸತೊಡಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ, ಸಂಜೆ ಮಂಗಳಾರತಿ ಹಾಗೂ ಭಜನೆ ಕಾರ್ಯಕ್ರಮ ನಡೆಯುತ್ತಿದೆ. ಶ್ರಾವಣ ಮಾಸದಲ್ಲಿ ಪುರಾಣ ಪ್ರವಚನ, ಪಲ್ಲಕ್ಕಿ ಮೆರವಣಿಗೆ ನಡೆಯುತ್ತಿದೆ. ಪ್ರತಿ ಸೋಮವಾರ ಶ್ರೀ ರೇವಣ ಸಿದ್ಧೇಶ್ವರರ ಪಲ್ಲಕ್ಕಿ ಉತ್ಸವ ನಡೆಯುತ್ತಿದೆ. ವಿಶೇಷ ಸಂದರ್ಭಗಳಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಮಠದಲ್ಲಿ ನಡೆದಿರುವ ಅಭಿವೃದ್ಧಿ ಕಾರ್ಯಗಳು ಈಗಿನ ಗುರುಗಳ ಕ್ರಿಯಾಶೀಲತೆಯಿಂದ ಆದಂಥವು. ಗುರುಗಳು ಪೂಜಾ ನಿಷ್ಠರಾಗಿ, ಪ್ರಗತಿಪರ ಚಿಂತಕರಾಗಿ, ಭಕ್ತರಲ್ಲಿ ಆತ್ಮವಿಶ್ವಾಸವನ್ನು ಮೂಡಿಸಿ ಮಠ ಮತ್ತು ಸಮಾಜವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುತ್ತಿದ್ದಾರೆ.

ವಿಳಾಸ: ಷ.ಬ್ರ. ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು, ಶ್ರೀ ರೇವಣಸಿದ್ಧೇಶ್ವರಮಠ, ದೇವಂತಿಗೆ, ಆಳಂದ ತಾ, ಗುಲ್ಬರ್ಗ ಜಿಲ್ಲೆ.

ನರೋಣ

ಆಳಂದ ತಾಲ್ಲೂಕಿನ ನರೋಣ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಇಪ್ಪತ್ತೆರಡು ಕಿ.ಮೀ ದೂರದಲ್ಲಿದೆ. ಈ ಗ್ರಾಮವು ಕ್ಷೇತ್ರಪಾಲ ಕ್ಷೇಮಲಿಂಗೇಶ್ವರ ಸ್ಥಾಪನೆಯಿಂದ ಹೆಚ್ಚು ಹೆಸರು ಪಡೆದಿದೆ. ಈ ಗ್ರಾಮದ ಮೂಲ ಹೆಸರು ಕ್ಷೇತ್ರಪಾಲ ಅಥವಾ ಕ್ಷೇತ್ರಪಾಳ್ಯ ಎಂಬುದಾಗಿತ್ತು. ನಂತರ ಇದು **'ನರವಣ'**ಆಗಿ ಜನಪದ ಬಾಯಿಯಿಂದ ಮೂಲ ಶಬ್ದದ ರೂಪವು **'ನರೋಣ'**ಎಂಬುದಾಗಿ ರೂಪಾಂತರ ಪಡೆದಿದೆ. ಇಂತಹ ಪುರಾಣ ಪ್ರಸಿದ್ಧ ಗ್ರಾಮದಲ್ಲಿ ವೀರಶೈವ ಧರ್ಮವು ಹೆಚ್ಚು ಪ್ರಚಾರ ಗೊಂಡು ಬೆಳೆದಿದೆ. ಇದಕ್ಕೆ ಸಾಕ್ಷಿ ಎಂಬಂತೆ ಈ ಗ್ರಾಮದಲ್ಲಿ ಶ್ರೀ ಹಿರೇಮಠ, ಶ್ರೀ ಸಂಪಾದನೆ ಮಠ ಮತ್ತು ಶ್ರೀ ಮಹಾಂತೇಶ್ವರ ವಿರಕ್ತ ಮಠ ಎಂಬ ಮೂರು ಮಠಗಳು ಸ್ಥಾಪನೆಯಾಗಿವೆ.

ಮಹಾಂತೇಶ್ವರ ವಿರಕ್ತ ಮಠ: ನರೋಣ ಗ್ರಾಮದ ಮಧ್ಯಭಾಗದಲ್ಲಿ ಶ್ರೀ ಮಹಾಂತೇಶ್ವರ ವಿರಕ್ತಮಠವು ಸ್ಥಾಪನೆಯಾಗಿದೆ. ಪುರಾತನ ಪರಂಪರೆಯುಳ್ಳ ಮಠವು ಶ್ರೀ ಮಹಾಂತೇಶ್ವರ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟಿದೆ. ಗುರುಗಳು ಲೋಕಸಂಚಾರ ಕೈಗೊಂಡು ಪುರಾಣ ಪ್ರಸಿದ್ಧ ಈ ಗ್ರಾಮದಲ್ಲಿ ಅನುಷ್ಠಾನ ಕೈಗೊಂಡು ಈ ಸ್ಥಳವನ್ನು ಜಾಗೃತಗೊಳಿಸಿದರು. ಗುರುಗಳು ನೆಲೆ ನಿಂತ ಜಾಗದಲ್ಲಿ ಮಠವು ಸ್ಥಾಪನೆಯಾಗಿದೆ. ಇವರ ನಂತರ ಅನೇಕ ಗುರುಗಳು ಮಠದ ಪರಂಪರೆಯನ್ನು ಬೆಳಸಿ ಧರ್ಮ ಜಾಗೃತಿಯನ್ನುಂಟುಮಾಡಿ ವೀರಶೈವ ಧರ್ಮವನ್ನು ಮುನ್ನಡೆಸಿದ್ದಾರೆ.

ಪರಂಪರೆ: ಶ್ರೀ ಮಹಾಂತೇಶ್ವರ ಸ್ವಾಮಿಗಳು ಅಧಿಕಾರ ನಡೆಸಿ ಮಠವನ್ನು ಪ್ರಾರಂಭಿಸಿದ ಮೇಲೆ ಪರಂಪರೆಯಲ್ಲಿ ಬಂದ ಗುರುಗಳು ಶರಣ ತತ್ತ್ವವನ್ನು ಪ್ರಚಾರಗೊಳಸಿದ್ದಾರೆ. ಇವರ ನಂತರ ೧೯೪೮ ರಲ್ಲಿ ಶ್ರೀ ಗುರುಮಹಾಂತ ಸ್ವಾಮಿಗಳು

ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಬಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ದೇವಣಗಾಂವ್ ಹಿರೇಮಠದ ಶ್ರೀ ಚನ್ನಬಸವಯ್ಯ ಮತ್ತು ಶ್ರೀಮತಿ ಗುಂಡಮ್ಮನವರ ಪುತ್ರರಾಗಿ ೧೯೬೫ ರಲ್ಲಿ ಜನಿಸಿದರು. ಇವರು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ವನ್ನು ಅಲಮೇಲ ಗ್ರಾಮದಲ್ಲಿ ಮುಗಿಸಿದ್ದಾರೆ. ನಂತರ ಸಂಸ್ಕೃತವನ್ನು ಗದಗಿನ ಸಿಂದಗಿ ಶ್ರೀ ಶಾಂತವೀರ ಸ್ವಾಮಿಗಳ ಪಾಠಶಾಲೆ ಯಲ್ಲಿ ಆಶ್ರಯ ಪಡೆದು ಅಧ್ಯಯನ ಮಾಡಿದ್ದಾರೆ. ನಂತರ ಹುಬ್ಬಳ್ಳಿಯ ಮೂರು ಸಾವಿರ ಮಠದಲ್ಲಿ ನೆಲಸಿ ಪದವಿ ಶಿಕ್ಷಣವನ್ನು ಪಡೆದು ಪುರಾಣ ಪ್ರವಚನದಲ್ಲಿ ಪಾಂಡಿತ್ಯವನ್ನು ಸಂಪಾದಿಸಿಕೊಂಡು ಈ ಮಠಕ್ಕೆ ಮಠಾಧೀಶರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಗುರುಗಳು ಕ್ರಿಯಾಶೀಲ ವ್ಯಕ್ತಿತ್ತ್ವವನ್ನು ಬೆಳಸಿಕೊಂಡು ಧರ್ಮವನ್ನು ಬೆಳಸಲು ಅನೇಕ ವೇದಿಕೆಗಳನ್ನು ರೂಪಿಸಿ ವೀರಶೈವ ಧರ್ಮವನ್ನು ಪ್ರಚಾರಗೊಳಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಕರ್ತೃಗುರುಗಳ ಹಾಗೂ ಪರಂಪರೆಯಲ್ಲಿ ಬಂದಂತಹ ಗುರುಗಳ ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ ಸಲ್ಲಿಸಲಾಗುತ್ತಿದೆ. ಮಠದ ಆವರಣದಲ್ಲಿ ಪ್ರತಿ ಸೋಮವಾರ, ಅಮಾವಾಸ್ಯೆ ಮತ್ತು ಶ್ರಾವಣದಲ್ಲಿ ಭಜನೆ ನಡೆಸಲಾಗುತ್ತಿದೆ. ಗುರುಗಳು ಪಟ್ಟಾಧಿಕಾರ ಆದ ಮೇಲೆ ಐದು ವರ್ಷದವರೆಗೆ ಪುರಾಣ ಪ್ರವಚನವನ್ನು ಹೇಳುತ್ತಿದ್ದರು. ಈಗ ನಾಡಿನ ಬೇರೆ ಬೇರೆ ಭಾಗಗಳಲ್ಲಿ ಸಂಚರಿಸಿ ಪುರಾಣ ಪ್ರವಚನ ನಡೆಸುತ್ತಿದ್ದಾರೆ. ಮಠದಲ್ಲಿ ಮಾಸಿಕ ಶಿವಾನುಭವ ಕಾರ್ಯಕ್ರಮವನ್ನು ನಿರಂತರವಾಗಿ ನಡೆಸಿಕೊಂಡು ಬಂದಿದ್ದಾರೆ. ಯುಗಾದಿಯಂದು ಕರ್ತೃಗುರುವಿನ ಪುಣ್ಯಾರಾಧನೆ, ಬಸವ ಜಯಂತಿಯನ್ನು ಅದ್ದೂರಿಯಾಗಿ ಆಚರಣೆ ಮಾಡಲಾಗುತ್ತಿದೆ. ಗುರುಗಳು ಅಧಿಕಾರಕ್ಕೆ ಬಂದ ಮೇಲೆ ಒಂದು ಸಾವಿರ ಜನರಿಗೆ ಲಿಂಗ ದೀಕ್ಷೆಯನ್ನು ನೀಡಿ ವೀರಶೈವ ಧರ್ಮವನ್ನು ಬೆಳಸಿದ್ದಾರೆ. ಈ ಗ್ರಾಮದಲ್ಲಿದ್ದ ಸಂಪಾದನೆ ಮಠವು ಹಾಳು ಬಿದ್ದಿದ್ದು ಈ ಮಠದ ಜವಾಬ್ದಾರಿಯನ್ನ ವಹಿಸಿಕೊಂಡಿರುವ ಗುರುಗಳು ಈ ಮಠದ ಜೀರ್ಣಾಭಿವೃದ್ಧಿಯನ್ನು ನಡೆಸುತ್ತಿದ್ದಾರೆ. ಆಂಧ್ರದ ಜರಾಸಂಗಮದಲ್ಲಿ ತಪೋನುಷ್ಠಾನ ಗೈದು ಸಿದ್ಧಿ ಸಂಪಾದಿಸಿಕೊಂಡಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಪೂರ್ಣಜೀರ್ಣಗೊಂಡಿದ್ದ ಮಠದ ಅಧಿಕಾರವನ್ನು ವಹಿಸಿ ಕೊಂಡು ಮಠವನ್ನು ಅಭಿವೃದ್ಧಿಪಡಿಸಿ ಗುರುಗಳು ಮಠದ ಸುತ್ತ ಗೋಡೆಯನ್ನು ನಿರ್ಮಿಸಿ ಮಠಕ್ಕೆ ಅಗತ್ಯ ಕಟ್ಟಡವನ್ನು ನಿರ್ಮಿಸಿಕೊಂಡಿದ್ದಾರೆ. ಮಠದ ಆಸ್ತಿಯನ್ನು ಅಭಿವೃದ್ಧಿಗೊಳಿಸಿ ತೆಂಗಿನ ತೋಟವನ್ನು ನಿರ್ಮಿಸಿದ್ದಾರೆ. ಪ್ರಗತಿಪರ ಚಿಂತನೆಗಳನ್ನು ಹೊಂದಿರುವ ಗುರುಗಳು ತಮ್ಮ ಅವಧಿಯಲ್ಲಿ ಮಠವನ್ನು ಅಭಿವೃದ್ಧಿಗೊಳಿಸಿ ಮಠವನ್ನು ಮುನ್ನಡೆಸಿದ್ದಾರೆ. ಸಾಹಿತ್ಯಾಸಕ್ತಿಯನ್ನು ಮೈಗೂಡಿಸಿಕೊಂಡಿರುವ ಇವರು 'ಕ್ಷೇತ್ರಪಾಲ ಶ್ರೀ ಕ್ಷೇಮಲಿಂಗೇಶ್ವರ' ಮಹಿಮೆ ಎಂಬ ಪುಸ್ತಕವನ್ನು ಬರೆದು ಪ್ರಕಟಿಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಗುರುಮಹಾಂತ ಸ್ವಾಮಿಗಳು, ಶ್ರೀ ಮಹಾಂತೇಶ್ವರಮಠ, ನರೋಣ,ಆಳಂದ ತಾ, ಗುಲ್ಬರ್ಗ ಜಿಲ್ಲೆ.

ಹಿರೇಮಠ: ನರೋಣ ಗ್ರಾಮದ ಮಧ್ಯಭಾಗದಲ್ಲಿರುವ ಶ್ರೀ ಹಿರೇಮಠವು ಮಹಾರಾಷ್ಟ್ರದ ಲಾಥೂರ್ ಜಿಲ್ಲೆಯ ಅಂಬಾಜೋಗಾಯಿ ಮಠದ ಶಾಖಾ ಮಠವಾಗಿದೆ. ಈ ಮಠದಲ್ಲಿರುವ ಗದ್ದುಗೆಗಳಿಗೆ ನಿತ್ಯ ಪೂಜೆಗೆ ವ್ಯವಸ್ಥೆ ಮಾಡಲಾಗಿದೆ. ಅಂಬಾಜೋಗಾಯಿ ಹಿರೇಮಠದ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ಮಠದ ಆಡಳಿತವನ್ನು ನೋಡಿಕೊಂಡು ಇಲ್ಲಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ವ್ಯವಸ್ಥೆ ಮಾಡಿದ್ದಾರೆ.

ನಿಂಬಾಳ

ಆಳಂದ ತಾಲ್ಲೂಕಿನ ನಿಂಬಾಳ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಮೂವತ್ತೆಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಶಾಂತಲಿಂಗೇಶ್ವರ ವಿರಕ್ತ ಮಠವು ಸ್ಥಾಪನೆಯಾಗಿ ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ.

ಶಾಂತಲಿಂಗೇಶ್ವರ ವಿರಕ್ತಮಠ: ನಿಂಬಾಳ ಗ್ರಾಮದ ಮಧ್ಯಭಾಗದಲ್ಲಿ ಕುಮಾರಸಮಯದ ಶ್ರೀ ಶಾಂತಲಿಂಗೇಶ್ವರ ವಿರಕ್ತ ಮಠವು ಸ್ಥಾಪನೆಯಾಗಿದೆ.'ಶ್ರೀ ಶಾಂತಲಿಂಗೇಶ್ವರರು'ಈ ಮಠವನ್ನು ಸ್ಥಾಪಿಸಿದ ಕಾರಣ ಈ ಹೆಸರು ಬಂದಿದೆ. ಶ್ರೀ ಶಾಂತಲಿಂಗೇಶ್ವರರು ಮಹಾರಾಷ್ಟ್ರದ ದುಧನಿ ಗ್ರಾಮದ ವಿರಕ್ತ ಮಠದ ಮಠಾಧೀಶರಾಗಿ ಇಲ್ಲಿ ಮಠವನ್ನು ಸ್ಥಾಪಿಸಿದರು. ಈ ಮಠವು ದುಧನಿ ಮಠದ ಶಾಖಾ ಮಠವಾಗಿ ಈ ಗ್ರಾಮದ ಧಾರ್ಮಿಕ ಕೇಂದ್ರಬಿಂದುವಾಗಿ ಬೆಳೆದಿದೆ.

ಪರಂಪರೆ: ೧. ಶ್ರೀ ಮ.ನಿ.ಪ್ರ. ಶಾಂತಲಿಂಗೇಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಅನ್ನದಾನಯ್ಯಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಗುರು ಶಾಂತಲಿಂಗಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಜಡೆ ಶಾಂತಲಿಂಗಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ಶಾಂತಲಿಂಗೇಶ್ವರ ಸ್ವಾಮಿಗಳು ಮಠವನ್ನು ಸ್ಥಾಪಿಸಿದ ಮೇಲೆ ಶ್ರೀ ಗುರುಶಾಂತಲಿಂಗೇಶ್ವರರ ತನಕ ಮಠವು ಬೆಳೆದು ಬಂದಿತ್ತು. ನಂತರ ದುಧನಿ ಮಠಕ್ಕೆ ಶ್ರೀ ಮಹಾಲಿಂಗ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಈ ಮಠವು ಖಾಲಿ ಉಳಿಯಿತು.ಅಂದಿನಿಂದ ಮಠವು ಪೂರ್ಣ ಜೀರ್ಣಾವಸ್ಥೆಗೆ ಬಂದಿತು. ನಂತರ ಶ್ರೀ ಜಡೆ ಶಾಂತಲಿಂಗ ಸ್ವಾಮಿಗಳು ೧೯೭೩ ರಲ್ಲಿ ದುಧನಿ ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ೧೯೭೪ ರಿಂದ ಇಲ್ಲಿ ಬಂದು ನೆಲೆಸತೊಡಗಿದರು. ಅಂದಿನಿಂದ ಮಠವು ಜೀರ್ಣಾಭಿವೃದ್ಧಿಗೊಳ್ಳತೊಡಗಿತು. ಹಳೆಯ ಕಟ್ಟಡವನ್ನು ನವೀಕರಣಗೊಳಿಸಿ ಹೊಸ ಕಟ್ಟಡವನ್ನು ನಿರ್ಮಿಸಿದ್ದಾರೆ. ಶ್ರೀ ಜಡೆಶಾಂತಲಿಂಗೇಶ್ವರ ಸ್ವಾಮಿಗಳು ಇಲ್ಲಿ ನೆಲೆಸಿ ಧಾರ್ಮಿಕ ಕಾರ್ಯಗಳನ್ನು ಚುರುಕುಗೊಳಿಸಿದರು. ೧೯೮೨ ರಿಂದ ಮೌನ ವ್ರತವನ್ನು ಪ್ರಾರಂಭಿಸಿ ಈತನಕ ನಡೆಸಿಕೊಂಡು ಬಂದಿದ್ದಾರೆ. ಮೌನದಲ್ಲಿಯೇ ಮಠದ ಎಲ್ಲಾ ಕಾರ್ಯಗಳನ್ನು ವ್ಯವಸ್ಥಿತವಾಗಿ ನಡೆಸುತ್ತಾ ಬಂದು ಅಭಿವೃದ್ಧಿಪಡಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದಲ್ಲಿ ಶ್ರೀ ಶಾಂತಲಿಂಗೇಶ್ವರರ ಕರ್ತೃಗದ್ದುಗೆ ನಿರ್ಮಾಣವಾಗಿದೆ. ಈ ಗದ್ದುಗೆಗೆ ನಿತ್ಯ ರುದ್ರಾಭಿಷೇಕ ಪೂಜೆ, ಕಾರ್ತೀಕ ಅಮಾವಾಸ್ಯೆಯಲ್ಲಿ ಹನ್ನೊಂದು ದಿನಗಳ ಕಾಲ ಜಾತ್ರೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭ ದಲ್ಲಿ ಪುರಾಣ ಪ್ರವಚನ, ಧಾರ್ಮಿಕ ಕಾರ್ಯಗಳನ್ನು ನಡೆಸಲಾಗುತ್ತಿದೆ. ಗುರುಗಳು ಮಠದಲ್ಲಿ ನೇತ್ರ ಚಿಕಿತ್ಸಾ ಶಿಬಿರ, ಧಾರ್ಮಿಕ ಹಾಗೂ ಸಾಹಿತ್ಯಿಕ ಉಪನ್ಯಾಸ ಕಾರ್ಯಕ್ರಮಗಳನ್ನು ಏರ್ಪಡಿಸಿ ಜನರನ್ನು ಸನ್ಮಾರ್ಗಕ್ಕೆ ತರುವ ಪ್ರಯತ್ನದಲ್ಲಿ ಸಫಲರಾಗಿದ್ದಾರೆ. ಈ ಎಲ್ಲಾ ಕಾರ್ಯಗಳನ್ನು ಮೌನ ವ್ರತದಲ್ಲಿದ್ದು ಸಾಧಿಸಿದ್ದು ಒಂದು ಸಾಧನೆಯೇ ಸರಿ. ಮಠದ ಅಭಿವೃದ್ಧಿಗೆ ಯೋಜನೆಯನ್ನು ಹಮ್ಮಿಕೊಂಡ ಗುರುಗಳು ಈ ಎಲ್ಲಾ ಕಾರ್ಯಗಳನ್ನು ಅನುಷ್ಠಾನಗೊಳಿಸಿ ವ್ರತವನ್ನು ಮುಗಿಸಲು ನಿರ್ಧರಿಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಜಡೆಶಾಂತಲಿಂಗೇಶ್ವರ ಸ್ವಾಮಿಗಳು, ಶ್ರೀ ಶಾಂತಲಿಂಗೇಶ್ವರವಿರಕ್ತಮಠ,ನಿಂಬಾಳ, ಆಳಂದ ತಾ, ಗುಲ್ಬರ್ಗಜಿಲ್ಲೆ.

ನಿಂಬರ್ಗಾ

ಆಳಂದ ತಾಲ್ಲೂಕಿನ ನಿಂಬರ್ಗಾ ಗ್ರಾಮವು ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಮೂವತ್ತೈದು ಕಿ.ಮೀ ದೂರದಲ್ಲಿದೆ. ಈ ಇತಿಹಾಸ ಪ್ರಸಿದ್ಧ ಗ್ರಾಮದಲ್ಲಿ ಶ್ರೀ ಗದ್ದುಗೆಮಠ, ಶ್ರೀ ಕುಂಬಾರಮಠ, ಶ್ರೀ ವಿರಕ್ತಮಠ, ಶ್ರೀ ಹಿರೇಮಠ ಎಂಬ ನಾಲ್ಕು ಮಠಗಳು ಸ್ಥಾಪನೆಯಾಗಿವೆ. ಇವುಗಳಲ್ಲಿ ಶ್ರೀ ಕುಂಬಾರಮಠ ಪೂರ್ಣವಾಗಿ ಅಸ್ತಿತ್ವವನ್ನು ಕಳೆದುಕೊಂಡಿದೆ. ಶ್ರೀ ವಿರಕ್ತಮಠ ಮತ್ತು ಶ್ರೀ ಗದ್ದುಗೆ ಮಠಗಳು ಅಸ್ತಿತ್ವದಲ್ಲಿವೆ.

ವಿರಕ್ತಮಠ: ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ವಿರಕ್ತ ಮಠವು ಕುಮಾರ ಸಮಯದ ಮಠವಾಗಿದೆ. ಶ್ರೀ ಶಾಂತವೀರ ಸ್ವಾಮಿಗಳು ಈ ಮಠದ ಸ್ಥಾಪಕರೆಂದು ಹೇಳಲಾಗುತ್ತಿದೆ.ಈ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ದೊರೆಯದಾಗಿದೆ. ಪ್ರಸ್ತುತ ಈ ಮಠದಲ್ಲಿ ಎಪ್ಪತ್ತು ವರ್ಷದ ಶ್ರೀ ಸಂಗನ ಬಸವಯ್ಯ ಸ್ವಾಮಿಗಳು ಅಧಿಕಾರ ನಡೆಸುತ್ತಿದ್ದಾರೆ. ಗುರುಗಳು ಸುಮಾರು ೧೯೪೫ ರಲ್ಲಿ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದಾರೆ. ಗುರುಗಳು ಈಗ ಉತ್ತರಾಧಿಕಾರಿಗಳನ್ನು ನೇಮಿಸಿಕೊಂಡು ವಿದ್ಯಾಭ್ಯಾಸಕ್ಕೆ ಕಳಿಸಿದ್ದಾರೆ. ಮಠದಲ್ಲಿ ಧಾರ್ಮಿಕ ಕಾರ್ಯಗಳು ನಡೆಯುತ್ತಿವೆ.

ವಿಳಾಸ: ಶ್ರೀ ಮ.ನಿ.ಪ್ರ.ಸಂಗನ ಬಸವಯ್ಯ ಸ್ವಾಮಿಗಳು, ಶ್ರೀವಿರಕ್ತಮಠ,ನಿಂಬರ್ಗಾ,ಆಳಂದ ತಾಲ್ಲೂಕು,ಗುಲ್ಬರ್ಗಾ ಜಿಲ್ಲೆ.

ಗದ್ದುಗೆ ಮಠ: ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ರಂಭಾಪುರಿ ಪೀಠದ ಶಾಖಾ ಮಠವಾದ ಗದ್ದುಗೆ ಮಠವು

ಪುರಾತನ ಮಠವಾಗಿದೆ. ಮಠದ ಸ್ಥಾಪಕರ ಬಗ್ಗೆ ಹಾಗೂ ಸ್ಥಾಪನೆಯ ಕಾಲಮಾನದ ಬಗ್ಗೆ ನಿಖರವಾದ ಮಾಹಿತಿಗಳು ಲಭ್ಯವಿಲ್ಲ. ಈ ಹಿಂದೆ ಶ್ರೀ ಗುರುಪಾದಯ್ಯ ಶಿವಾಚಾರ್ಯ ಸ್ವಾಮಿಗಳು ಅಧಿಕಾರ ನಡೆಸಿದ್ದರು. ಇವರ ತರುವಾಯ ಶ್ರೀ ಶರಣ ಬಸವಯ್ಯ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ಮಾಡಲಾಗಿದೆ. ಶ್ರೀ ಶರಣ ಬಸವಯ್ಯ ದೇವರು ಶ್ರೀ ಗದ್ದುಗಯ್ಯ ಮತ್ತು ಶ್ರೀಮತಿ ಶಶಿಕಲಾ ಇವರ ಪುತ್ರರಾಗಿ ೧೯೭೫ ರಲ್ಲಿ ಜನಿಸಿದ್ದಾರೆ. ಇವರು ವಿದ್ಯಾಭ್ಯಾಸ ಮುಗಿದ ಮೇಲೆ ಮಠದ ಅಧಿಕಾರವನ್ನು ವಹಿಸಿ ಕೊಂಡು ಮಠದ ಪರಂಪರೆಯನ್ನು ಬೆಳೆಸಲಿದ್ದಾರೆ.

ಮಠದ ಆವರಣದಲ್ಲಿ ಒಟ್ಟು ಆರು ಗದ್ದುಗೆಗಳು ನೋಡ ಸಿಗುತ್ತವೆ. ಈ ಗದ್ದುಗೆಗಳಿಗೆ ನಿತ್ಯ ಪೂಜೆಯನ್ನು ಸಲ್ಲಿಸಲಾಗುತ್ತಿದೆ. ಅಲ್ಲದೆ ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ಮಾಡಲಾಗುತ್ತಿದೆ. ಈ ವಿಶೇಷ ಸಂದರ್ಭಗಳಲ್ಲಿ ಅನ್ನ ದಾಸೋಹವನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಶರಣ ಬಸವಯ್ಯ ದೇವರು, ಶ್ರೀ ಗದ್ದುಗೆ ಮಠ, ನಿಂಬರ್ಗಾ, ಆಳಂದ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಹಿರೇಮಠ: ನಿಂಬರ್ಗಾ ಗ್ರಾಮದ ಮಧ್ಯಭಾಗದಲ್ಲಿ ಉಜ್ಜಯಿನಿ ಪೀಠದ ಶಾಖಾ ಮಠವಾದ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ. ಪುತ್ರವರ್ಗದ ಪರಂಪರೆಯ ಈ ಮಠದಲ್ಲಿ ಒಟ್ಟು ಮೂವತ್ತು ಜನ ಗುರುಗಳು ಮಠದ ಆಡಳಿತವನ್ನು ನಡೆಸಿದ್ದಾರೆ ಎಂದು ಹೇಳಲಾಗುತ್ತಿದೆ. ಇದಕ್ಕೆ ಪೂರಕವೆಂಬಂತೆ ಒಟ್ಟು ಮೂವತ್ತು ಗದ್ದುಗೆಗಳು ಮಠದಲ್ಲಿ ಸ್ಥಾಪನೆಯಾಗಿವೆ. ಇಂತಹ ಪುರಾತನ ಮಠದ ಸ್ಥಾಪಕರು ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳು. ಇವರು ತಪೋನಿಧಿಗಳಾಗಿ, ವೀರ ವೈರಾಗ್ಯಮೂರ್ತಿಗಳಾಗಿ ಮಹಿಮಾಶಾಲಿಗಳಾಗಿ ಗುಹೆಯಲ್ಲಿ ವಾಸಮಾಡುತ್ತಾ ಬಿಲ್ವಪತ್ರೆಯನ್ನು ತಮ್ಮ ಆಹಾರವನ್ನಾಗಿ ಮಾಡಿಕೊಂಡು ಜೀವಿಸಿದ್ದರು. ಇವರಿಗೆ ಭಕ್ತರು ಶ್ರೀ ಗುಹೇಶ್ವರ ಸ್ವಾಮಿಗಳು ಎಂದು ಕರೆಯುತ್ತಿದ್ದರಂತೆ.

ಇಂತಹ ಪುರಾತನ ಪರಂಪರೆಯ ಮಠದಲ್ಲಿ ಅಧಿಕಾರ ನಡೆಸಿದ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿಗಳ ಲಭ್ಯವಿಲ್ಲ. ಈ ಹಿಂದೆ ಅಧಿಕಾರ ನಡೆಸಿದ ಶ್ರೀ ಸಿದ್ಧಲಿಂಗಶಿವಾಚಾರ್ಯಸ್ವಾಮಿಗಳು ಮಠವನ್ನು ಅಭಿವೃದ್ಧಿ ಪಡಿಸಿ ಪರಂಪರೆಯ ಹೆಸರನ್ನು ಬೆಳೆಸಿ ಉಳಿಸಿದ್ದಾರೆ.ಇವರು ಲಿಂಗೈಕ್ಯರಾದ ಮೇಲೆ ಮಠದ ವಂಶಸ್ಥರು ಧಾರ್ಮಿಕಕಾರ್ಯಗಳನ್ನುನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಹಿರೇಮಠ, ಶ್ರೀ ಉಜ್ಜಯಿನಿ ಪೀಠದ ಶಾಖಾ ಮಠ, ನಿಂಬರ್ಗಾ, ಆಳಂದ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಪಡುಸಾವಳಗಿ

ಆಳಂದ ತಾಲ್ಲೂಕಿನ ಪಡುಸಾವಳಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿನೆಂಟು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಶ್ರೀ ಶಿವಲಿಂಗೇಶ್ವರ ಹಿರೇಮಠ ಹಾಗೂ ಶ್ರೀ ಜಗಜ್ಯೋತಿ ಬಸವೇಶ್ವರ ಮಠ, ಶ್ರೀ ಶೀಲವಂತ ಮಠ ಎಂಬ ಮೂರು ಮಠಗಳು ಸ್ಥಾಪನೆಯಾಗಿ ವೀರಶೈವ ಧರ್ಮ ಬೆಳೆಯಲು ಸಹಾಯಕವಾಗಿವೆ.

ಶಿವಲಿಂಗೇಶ್ವರ ಹಿರೇಮಠ: ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಶಿವಲಿಂಗೇಶ್ವರ ಹಿರೇಮಠವು ರಂಭಾಪುರಿ ಪೀಠದ ಶಾಖಾ ಮಠವಾಗಿ ಶಿಷ್ಯವರ್ಗದ ಪರಂಪರೆಯಲ್ಲಿ ಬೆಳೆದುಬಂದಿದೆ. ಪುರಾತನ ಕಾಲದಲ್ಲಿ ಸ್ಥಾಪನೆಯಾದ ಈ ಮಠವು ಶ್ರೀ ಶಿವಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪನೆಗೊಂಡಿದೆ.ಗುರುಗಳು ತಮ್ಮ ತಪೋಶಕ್ತಿಯ ಬಲದಿಂದ ಈ ಗ್ರಾಮದಲ್ಲಿ ಮಠವನ್ನು ಸ್ಥಾಪಿಸಿ ಭಕ್ತರನ್ನು ಸಂಸ್ಕಾರವಂತರನ್ನಾಗಿ ಮಾಡಿ ಜಾಗೃತಿಯನ್ನುಂಟುಮಾಡಿದರು. ಈ ಮಠದ ಪರಂಪರೆಯು ಬೆಳೆದು ವೀರಶೈವ ಧರ್ಮವನ್ನು ಬೆಳಸಿ ಪೋಷಿಸುವಲ್ಲಿ ಸಹಾಯಕವಾಗಿದೆ.

ಪರಂಪರೆ:

೧. ಷ.ಬ್ರ.ಶ್ರೀ ಶಿವಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಶಿವಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಶಂಭುಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ.ಮಠದ ಪರಂಪರೆಯಲ್ಲಿ ಬಂದಂತಹ ಎಲ್ಲಾ ಗುರುಗಳು ತಪೋನಿಷ್ಠರಾಗಿ ವೀರಶೈವ ಧರ್ಮ ಬೆಳೆಯಲು ಸಹಕಾರಿಯಾಗಿದ್ದಾರೆ. ಪರಂಪರೆಯ ಈ ಹಿಂದಿನ ಗುರುಗಳಾದ ಶ್ರೀ ಶಿವಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾದ ನಂತರ ಅನೇಕ ವರ್ಷಗಳ ಕಾಲ ಮಠವು ಖಾಲಿ ಉಳಿದಿತ್ತು. ನಂತರ ಭಕ್ತರ ಅಪೇಕ್ಷೆಯ ಮೇರೆಗೆ ಈಗಿನ ಶ್ರೀ ಶಂಭುಲಿಂಗ ಶಿವಾಚಾರ್ಯ ಸ್ವಾಮಿಗಳಿಗೆ ೧೯೯೦ ರಲ್ಲಿ ಪಟ್ಟಾಧಿಕಾರವಾಗುತ್ತದೆ.

ಅಫಜಲಪುರ ತಾಲ್ಲೂಕಿನ ಮನೂರು ಗ್ರಾಮದ ಶ್ರೀ ಸಂಗಯ್ಯ ಮತ್ತು ಶ್ರೀಮತಿ ಕಲ್ಲಮ್ಮನವರ ಪುತ್ರರಾಗಿ ೧೯೬೨ ರಲ್ಲಿ ಜನಿಸಿದ ಶ್ರೀ ಶಂಭುಲಿಂಗ ಶಿವಾಚಾರ್ಯ ಸ್ವಾಮಿಗಳು ಶಿವಯೋಗ ಮಂದಿರ, ಎಡೆಯೂರು ಸುಕ್ಷೇತ್ರಗಳಲ್ಲಿ ವಿದ್ಯಾಭ್ಯಾಸವನ್ನು ಪೂರೈಸಿ, ಮಠಕ್ಕೆ ಆಗಮಿಸಿ ಪೂರ್ಣ ಜವಾಬ್ದಾರಿಯನ್ನು ತೆಗೆದುಕೊಂಡರು. ಜೀರ್ಣಗೊಂಡ ಮಠವನ್ನು ಅಭಿವೃದ್ಧಿಗೊಳಿಸಿದರು. ಅಲ್ಲದೆ ಮಠದ ಆವರಣದಲ್ಲಿದ್ದ ಗದ್ದುಗೆಗಳನ್ನು ಗುರುತಿಸಿ ನವೀಕರಣಗೊಳಿಸಿದರು. ಮಠದಲ್ಲಿ ವ್ಯವಸ್ಥಿತ ಕಾರ್ಯಕ್ರಮಗಳು ನಡೆಯುವಂತೆ ವ್ಯವಸ್ಥೆಗೊಳಿಸಿದರು.

ಧಾರ್ಮಿಕ ಕಾರ್ಯಗಳು: ನಿತ್ಯಪೂಜೆ, ಅಮಾವಾಸ್ಯೆಯಲ್ಲಿ ರುದ್ರಾಭಿಷೇಕ, ಶಿವಾನುಭವ ಗೋಷ್ಠಿ ಹಾಗೂ ದಾನೇಶ್ವರಿ ಮಹಿಳಾ ಮಂಡಳಿಯಿಂದ ದಿನ ಸಂಜೆ ವೇಳೆ ಭಜನೆ ನಡೆಯುತ್ತಿದೆ. ಗಣೇಶ ಚೌತಿ ದಿನ ಶ್ರೀ ಶಿವಲಿಂಗೇಶ್ವರರ ಪುಣ್ಯತಿಥಿಯನ್ನು ಆಚರಿಸಲಾಗುತ್ತಿದೆ. ಮಠದಲ್ಲಿ ಲಿಂಗೈಕ್ಯರಾದ ಗುರುಗಳ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಪ್ರತಿವರ್ಷ ನಲವತ್ತೊಂದು ದಿನಗಳ ಕಾಲ ಗುರುಗಳು ಹಣ್ಣು ಹಂಪಲನ್ನು ಮಾತ್ರ ಸ್ವೀಕರಿಸಿ ಕಟ್ಟು ನಿಟ್ಟಿನ ಅನುಷ್ಠಾನವನ್ನು ಆಚರಿಸುತ್ತಾರೆ. ಪ್ರತಿ ಶುಕ್ರವಾರ ಮೌನ ವ್ರತವನ್ನು ಆಚರಿಸುತ್ತಿದ್ದಾರೆ.

ಶೈಕ್ಷಣಿಕ ಸೇವೆ: ೧೯೯೬ ರಲ್ಲಿ ಶ್ರೀ ಶಿವಲಿಂಗೇಶ್ವರ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿ ಶ್ರೀ ಚನ್ನಬಸವೇಶ್ವರ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದ್ದಾರೆ. ಮಠದ ವತಿಯಿಂದ ಅನಾಥಾಶ್ರಮವನ್ನು ಸ್ಥಾಪಿಸಿ ಎಂಬತ್ತು ಜನ ವಿದ್ಯಾರ್ಥಿಗಳಿಗೆ ಆಶ್ರಯ ಕಲ್ಪಿಸಿದ್ದಾರೆ. ಗುರುಗಳು ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಮಠವನ್ನು ಅಭಿವೃದ್ಧಿಪಡಿಸಲು ಮುಂದಾಗಿದ್ದಾರೆ. ಕ್ರಿಯಾಶೀಲ ವ್ಯಕ್ತಿತ್ವವನ್ನು ಹೊಂದಿರುವ ಗುರುಗಳು ನಾಡಿನ ವಿವಿಧ ಮಠಾಧೀಶರ ಸಂಪರ್ಕ ಹೊಂದಿ ಪ್ರಗತಿಪರ ಯೋಚನೆಗಳಿಂದ ಮಠ ಮತ್ತು ಸಮಾಜವನ್ನು ಬೆಳೆಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶಂಭುಲಿಂಗ ಶಿವಾಚಾರ್ಯಸ್ವಾಮಿಗಳು, ಶ್ರೀ ಶಿವಲಿಂಗೇಶ್ವರಹಿರೇಮಠ, ಪಡುಸಾವಳಗಿ, ಆಳಂದ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಜಗಜ್ಯೋತಿ ಬಸವೇಶ್ವರ ಮಠ: ಪಡುಸಾವಳಗಿಯ ಮಧ್ಯ ಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಜಗಜ್ಯೋತಿ ಬಸವೇಶ್ವರ ಮಠವು ೧೯೮೫ ರ ಸುಮಾರಿನಲ್ಲಿ ಪ್ರಾರಂಭವಾಗಿದೆ. ಈ ಮಠವನ್ನು ಶ್ರೀ ರಾಜಾನಂದ ಸ್ವಾಮಿಗಳು ಪ್ರಾರಂಭಿಸಿದ್ದಾರೆ. ಗುರುಗಳು ಲೋಕ ಸಂಚಾರದಿಂದ ಬಂದು ಇಲ್ಲಿ ಮಠವನ್ನು ಸ್ಥಾಪಿಸಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಶ್ರೀ ಶಿವಾನಂದ ಸ್ವಾಮಿಗಳು ಈಗ ಈ ಮಠದ ಆಡಳಿತವನ್ನು ನೋಡಿಕೊಂಡು ಧಾರ್ಮಿಕ ಆಚರಣೆಗಳನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಶ್ರಾವಣದಲ್ಲಿ ಪುರಾಣ ಹಾಗೂ ಭಕ್ತರಿಗೆ ನಿತ್ಯ ದರ್ಶನ ನೀಡಿ ಧಾರ್ಮಿಕ ಮಾರ್ಗದರ್ಶನವನ್ನು ನೀಡುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಶಿವಾನಂದ ಸ್ವಾಮಿಗಳು, ಶ್ರೀ ಜಗಜ್ಯೋತಿ ಬಸವೇಶ್ವರಮಠ, ಪಡುಸಾವಳಗಿ, ಆಳಂದ ತಾ, ಗುಲ್ಬರ್ಗಜಿಲ್ಲೆ.

ಭೂಸನೂರು

ಆಳಂದ ತಾಲ್ಲೂಕಿನ ಭೂಸನೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣ ಭಾಗಕ್ಕೆ ಹದಿನೈದು ಕಿ.ಮೀ ದೂರದಲ್ಲಿದೆ.ಈ ಗ್ರಾಮದಲ್ಲಿ ಸುಂದರವಾದ ಭೂಸದೇವಿಯ ಮೂರ್ತಿಯಿದ್ದು ಇದು ಭೂಸದೇವಿಯ ವಾಸಸ್ಥಾನವಾಗಿತ್ತೆಂದು ಹೇಳಲಾಗುತ್ತಿದೆ. ಈ ಕಾರಣದಿಂದ ಈ ಗ್ರಾಮಕ್ಕೆ 'ಭೂಷಣಪುರ' ಎಂದು ಕರೆಯುತ್ತಿದ್ದರು. ಕಾಲಾನಂತರ ಈ ಪದ 'ಭೂಸನೂರು' ಎಂದು ಪರಿವರ್ತಿತವಾಗಿದೆ ಎಂದು ಹೇಳಲಾಗುತ್ತದೆ. ಇಂತಹ ಧಾರ್ಮಿಕ ಹಿನ್ನಲೆಯುಳ್ಳ ಈ ಗ್ರಾಮದಲ್ಲಿ ಶ್ರೀ ಹಿರೇಮಠ, ಶ್ರೀ ಒಪ್ಪತ್ತೇಶ್ವರ ಹಿರೇಮಠ ಸ್ಥಾಪನೆಯಾಗಿ ಈ ಗ್ರಾಮದಲ್ಲಿ ಧಾರ್ಮಿಕ ವಾತಾವರಣವನ್ನು ಬೆಳೆಸಿವೆ.

ಒಪ್ಪತ್ತೇಶ್ವರ ವಿರಕ್ತ ಮಠ: ಭೂಸನೂರು ಗ್ರಾಮದ ಪಶ್ಚಿಮದ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಒಪ್ಪತ್ತೇಶ್ವರ ವಿರಕ್ತಮಠವು ಮುರುಘಾ ಸಮಯದ ಮಠವಾಗಿ ಬೆಳೆದು ಬಂದಿದೆ.ಹನ್ನೆರಡನೆಯ ಶತಮಾನದಲ್ಲಿ ಶ್ರೀ ಒಪ್ಪತ್ತೇಶ್ವರ ಸ್ವಾಮಿಗಳು ಶರಣರ ಜೊತೆಗೆ ಬಂದವರು. ಈ ತಾಲ್ಲೂಕಿನ ಮಾಡ್ಯಾಳದಲ್ಲಿ ನೆಲೆಸಿ, ನಂತರ ಇಲ್ಲಿಗೆ ಬಂದು ಕೆಲವು ದಿನ ಅನುಷ್ಠಾನಗೊಂಡು ಇಲ್ಲಿ ಮಠವನ್ನು ಸ್ಥಾಪಿಸಿ ತಮ್ಮ ಶಿಷ್ಯರನ್ನು ಈ ಮಠಕ್ಕೆ ಉತ್ತರಾಧಿಕಾರಿಯನ್ನಾಗಿ ನೇಮಿಸಿ ಮುಂದೆ ಹೊರಡುತ್ತಾರೆ. ಶ್ರೀ ಒಪ್ಪತ್ತೇಶ್ವರರಿಂದ ಸ್ಥಾಪನೆಯಾದ ಈ ಮಠಕ್ಕೆ 'ಶ್ರೀ ಒಪ್ಪತ್ತೇಶ್ವರಮಠ' ಎಂದು ಹೆಸರು ಬಂದಿದೆ.

ಪರಂಪರೆ: ಶ್ರೀ ಒಪ್ಪತ್ತೇಶ್ವರರಿಂದ ಪ್ರಾರಂಭಗೊಂಡ ಈ ಮಠದ ಪರಂಪರೆಯು ಕರ್ತೃಗುರುಗಳ ನಂತರ ಅಧಿಕಾರವನ್ನು ವಹಿಸಿಕೊಂಡ ಗುರುಗಳ ಬಗ್ಗೆ ಮಾಹಿತಿಗಳು ದೊರೆಯುತ್ತಿಲ್ಲ ನಂತರದ ಪರಂಪರೆಯ ಕೆಲವರ ಹೆಸರುಗಳು ಮಾತ್ರದೊರೆತಿವೆ.

೧. ಶ್ರೀ ಮ.ನಿ.ಪ್ರ. ಒಪ್ಪತ್ತೇಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ದೇವಯ್ಯಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಬಸವಯ್ಯಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಶಾಂತಮಲ್ಲಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಮಡಿವಾಳೇಶ್ವರಸ್ವಾಮಿಗಳು

ಈ ರೀತಿ ಮಠದ ಪರಂಪರೆಯ ಕೆಲವು ಹೆಸರುಗಳನ್ನು ಗುರುತಿಸಲಾಗಿದೆ. ಆದರೆ ಗುರುತಿಸಲಾದ ಗುರುಗಳ ಬಗ್ಗೆ ಆಧಾರಗಳ ಕೊರತೆಯಿಂದ ಇವರ ಬಗ್ಗೆ ಹೆಚ್ಚು ದೊರೆಯದಾಗಿದೆ. ಈಗಿನ ಶ್ರೀ ಮಡಿವಾಳೇಶ್ವರ ಸ್ವಾಮಿಗಳು ಶ್ರೀ ಸಿದ್ಧಲಿಂಗಯ್ಯ ಮತ್ತು ಶ್ರೀಮತಿ ಶಿವಮ್ಮನವರ ಪುತ್ರರಾಗಿ ೧೯೩೦ ರಲ್ಲಿ ಜನಿಸಿ, ಗುಲ್ಬರ್ಗದಲ್ಲಿ ಮೆಟ್ರಿಕ್‌ವರೆಗೆ ವಿದ್ಯಾಭ್ಯಾಸ ಮಾಡಿ ೧೯೬೩ ರಲ್ಲಿ ಶ್ರೀ ಒಪ್ಪತ್ತೇಶ್ವರ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಸೋಲಾಪುರದ ಶ್ರೀ ಮೃತ್ಯುಂಜಯ ಸ್ವಾಮಿಗಳು ಪಟ್ಟಾಧಿಕಾರದ ಅನುಗ್ರಹವನ್ನು ನೀಡಿರುತ್ತಾರೆ. ಶ್ರೀ ಮಡಿವಾಳೇಶ್ವರ ಸ್ವಾಮಿಗಳು ಶಿಥಿಲಗೊಂಡಿದ್ದ ಮಠದ ಕಟ್ಟಡವನ್ನು ತೆಗೆಸಿ, ನೂತನ ಕಟ್ಟಡವನ್ನು ನಿರ್ಮಿಸಿದ್ದಾರೆ. ಅಲ್ಲದೆ ಪರಂಪರೆಯಲ್ಲಿ ಬಂದಂತಹ ಗುರುಗಳ ಎಂಟು ಗದ್ದುಗೆಗಳನ್ನು ಗುರುತಿಸಿ ನವೀಕರಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಶಿವಪೂಜಾ ನಿಷ್ಠರಾದ ಶ್ರೀ ಮಡಿವಾಳೇಶ್ವರ ಸ್ವಾಮಿಗಳು ತ್ರಿಕಾಲ ಪೂಜೆಯನ್ನು ನಡೆಸುತ್ತಾರೆ. ಪರಂಪರೆಯ ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ, ಅಮಾವಾಸ್ಯೆ ಮತ್ತು ಹುಣ್ಣಿಮೆಯಲ್ಲಿ ವಿಶೇಷಪೂಜೆ, ಶ್ರಾವಣಮಾಸ ದಲ್ಲಿ ಗುರುಗಳ ಪಾದಪೂಜೆ, ಪ್ರವಚನ, ಭಜನೆ ನಡೆಯುತ್ತಿದೆ. ಬಸವಜಯಂತಿಯನ್ನು ಆಚರಿಸಿ ಬಸವ ತತ್ತ್ವದ ಬಗ್ಗೆ ಅಂದು ಉಪನ್ಯಾಸ ಮಾಡಿಸಲಾಗುತ್ತಿದೆ. ಮಠದ ಆಸ್ತಿಯಾಗಿ ಇಪ್ಪತ್ತು ಎಕರೆ ಜಮೀನಿದ್ದು ಇದನ್ನು ಅಭಿವೃದ್ಧಿಪಡಿಸಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಮಡಿವಾಳೇಶ್ವರ ಸ್ವಾಮಿಗಳು,ಶ್ರೀ ಒಪ್ಪತ್ತೇಶ್ವರವಿರಕ್ತಮಠ, ಭೂಸನೂರು, ಆಳಂದ. ತಾ, ಗುಲ್ಬರ್ಗಜಿಲ್ಲೆ.

ಹಿರೇಮಠ: ಭೂಸನೂರು ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ರಂಭಾಪುರಿ ಪೀಠದ ಶಾಖಾ ಮಠವಾಗಿ ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆಯುತ್ತಿದೆ. ಈ ಮಠವು ಮೊದಲು ರೋಣ ತಾಲ್ಲೂಕಿನ ಗಜೇಂದ್ರಘಡದಲ್ಲಿ ಸ್ಥಾಪನೆಯಾಗಿ ತ್ತಂತೆ. ಕಾರಣಾಂತರದಿಂದ ಇಲ್ಲಿಗೆ ಸ್ಥಳಾಂತರಗೊಂಡಿತೆಂದು ಹೇಳಲಾಗುತ್ತಿದೆ. ಸಾವಿರ ವರ್ಷಗಳಿಗೂ ಮಿಗಿಲಾದ ಇತಿಹಾಸ ಇದೆ ಎಂದು ಹೇಳಲಾಗುತ್ತಿದೆ. ಆದರೆ ಇದಕ್ಕೆ ಪೂರಕವಾದ ಆಧಾರಗಳು ಮಠದಲ್ಲಿ ಲಭ್ಯವಿಲ್ಲ. ಈ ಪುರಾತನ ಮಠವು ಈ ಗ್ರಾಮದಲ್ಲಿ ಸ್ಥಾಪನೆಗೊಂಡು ವೀರಶೈವ ಧರ್ಮದ ಆಚರಣೆಗಳನ್ನು ಭಕ್ತರಲ್ಲಿ ಬೆಳೆಸಿದೆ.

ಗಜೇಂದ್ರಘಡದಿಂದ ಸ್ಥಳಾಂತರಗೊಂಡ ಕಾರಣಕ್ಕೆ ಹಿಂದಿನ ಪರಂಪರೆಯು ತಿಳಿಯದಾಗಿದೆ. ಈ ಕಾರಣಕ್ಕೆ ಮಠದ ಸ್ಥಾಪನೆಯ ಬಗ್ಗೆ ಸ್ಪಷ್ಟವಾಗಿ ಹೇಳುವುದು ಕಷ್ಟವಾಗಿದೆ ಎಂದು ಈ ಮಠದ ವಂಶಸ್ಥರು ಅಭಿಪ್ರಾಯಿಸುತ್ತಾರೆ. ಶ್ರೀ ಗುರುಸಿದ್ಧ ಶಿವಾಚಾರ್ಯ ಸ್ವಾಮಿಗಳು ಇಪ್ಪತ್ತನೆಯ ಗುರುಗಳಾಗಿ ಅಧಿಕಾರ ನಡೆಸಿದ್ದರೆಂದು ಮಠದ ವಂಶಸ್ಥರು ಸ್ಪಷ್ಟಪಡಿಸುತ್ತಾರೆ. ಇಪ್ಪತ್ತನೆಯ ಗುರುಗಳಾಗಿದ್ದ ಶ್ರೀ ಗುರುಸಿದ್ಧ ಶಿವಾಚಾರ್ಯ ಸ್ವಾಮಿಗಳು ಸೆಪ್ಟೆಂಬರ್ ಎರಡರಂದು

೧೯೮೦ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಗುರುಗಳು ಲಿಂಗೈಕ್ಯರಾದ ಮರುದಿನವೇ ಶ್ರೀ ಬಸವಲಿಂಗ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ. ಉತ್ತರಾಧಿಕಾರಿಗಳಾದ ಶ್ರೀ ಬಸವಲಿಂಗ ದೇವರು ವಿದ್ಯಾಭ್ಯಾಸ ಮುಗಿದ ನಂತರ ಪಟ್ಟಾಧಿಕಾರವನ್ನು ವಹಿಸಿಕೊಳ್ಳಲಿದ್ದಾರೆ ಎಂದು ಈ ಮಠದ ವಂಶಸ್ಥರು ಅಭಿಪ್ರಾಯಿಸುತ್ತಾರೆ.

ಮಠದ ಪರಂಪರೆಯಲ್ಲಿ ಬಂದಂತಹ ಗುರುಗಳ ಮೂರು ಗದ್ದುಗೆಗಳು ಹಳೆಯದಾದ ಕಟ್ಟಡದ ಆವರಣದಲ್ಲಿ ದೊರೆಯುತ್ತವೆ. ಮಠದ ಆಸ್ತಿಯಾಗಿ ನಲವತ್ತು ಎಕರೆ ಜಮೀನಿದ್ದು ಬೇಸಾಯ ಮಾಡಿಸಲಾಗುತ್ತಿದೆ. ಮಠದಲ್ಲಿ ನಿತ್ಯ ಪೂಜೆ, ಶ್ರಾವಣದಲ್ಲಿ ವಿಶೇಷ ಪೂಜೆ, ಶ್ರೀ ಗುರುಸಿದ್ಧ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಅನ್ನದಾಸೋಹವನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಬಸವಲಿಂಗ ದೇವರು, ಶ್ರೀ ಹಿರೇಮಠ, ಭೂಸನೂರು, ಆಳಂದ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಮಾದನಹಿಪ್ಪರಗಿ

ಆಳಂದ ತಾಲ್ಲೂಕಿನ ಮಾದನಹಿಪ್ಪರಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಮೂವತ್ತು ಕಿ.ಮೀ ದೂರದಲ್ಲಿದೆ. ತಾಲ್ಲೂಕಿನ ಅತ್ಯಂತ ದೊಡ್ಡ ಗ್ರಾಮ ಮಾದನಹಿಪ್ಪರಗಿ. ಮಹಾರಾಷ್ಟ್ರ ಗಡಿಯ ಅಂಚಿನಲ್ಲಿರುವ ಕರ್ನಾಟಕದ ಈ ಗಡಿ ಗ್ರಾಮದಲ್ಲಿ ಶ್ರೀ ಶಿವಲಿಂಗೇಶ್ವರ ವಿರಕ್ತಮಠವು ಸ್ಥಾಪನೆಯಾಗಿದೆ. ಇದರಿಂದ ಜನಜಾಗೃತಿಯಾಗಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ಕಾರ್ಯಕ್ರಮಗಳು ನಡೆಯಲು ಕಾರಣವಾಗಿದೆ.

ಶಿವಲಿಂಗೇಶ್ವರಮಠ: ಮಾದನಹಿಪ್ಪರಗಿ ಗ್ರಾಮದಲ್ಲಿ ಶ್ರೀ ಶಿವಲಿಂಗೇಶ್ವರರು ಸ್ಥಾಪನೆ ಮಾಡಿದ ಮಠಕ್ಕೆ 'ಶ್ರೀ ಶಿವಲಿಂಗೇಶ್ವರ ಮಠ' ಎಂದು ಹೆಸರು ಬಂದಿದೆ. ಶ್ರೀ ಶಿವಲಿಂಗೇಶ್ವರ ಸ್ವಾಮಿಗಳು ವೀರಶೈವ ಧರ್ಮದ ತತ್ತ್ವಾಚರಣೆಗಳು ಜನ ಸಮುದಾಯಕ್ಕೆ ತಲುಪಿ, ಶರಣರು ಕಂಡ ಕನಸು ನನಸಾಗಬೇಕೆಂದು ಅಭಿಲಾಷೆಪಟ್ಟು ಧರ್ಮವನ್ನು ಬೆಳೆಸಿದರು. ನಿತ್ಯ ಶಿವಾನುಭವ ಗೋಷ್ಠಿಗಳನ್ನು ನಡೆಸಿ ಶರಣರು ನೀಡಿದ ಸಂದೇಶವನ್ನು ಜನ ಸಮುದಾಯಕ್ಕೆ ಹಂಚಿ, ಸುಸಂಸ್ಕೃತ ಸಮಾಜವನ್ನು ನಿರ್ಮಿಸಿದರು. ಶ್ರೀ ಶಿವ ಲಿಂಗೇಶ್ವರರು ಅಂದು ಪಟ್ಟ ಶ್ರಮದಿಂದ ಇಂದು ಈ ಗ್ರಾಮವು ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಶಿವಲಿಂಗೇಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಶಾಂತಲಿಂಗಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಶಿವಲಿಂಗೇಶ್ವರಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ಶಿವಲಿಂಗೇಶ್ವರರ ನಂತರ ಈ ಮಠದ ಪರಂಪರೆಯ ವಿಚಾರ ಅಸ್ಪಷ್ಟವಾಗಿದೆ. ಶ್ರೀ ಶಾಂತಲಿಂಗ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠವು ಧಾರ್ಮಿಕವಾಗಿ ಅಭಿವೃದ್ಧಿಯನ್ನು ಕಂಡಿತು. ಇವರು ಹಾನಗಲ್ಲು ಶ್ರೀ ಕುಮಾರಶಿವಯೋಗಿಗಳು ಮತ್ತು ಹಾವೇರಿಯ ಶ್ರೀ ಶಿವಬಸವ ಸ್ವಾಮಿಗಳ ಸಮಕಾಲೀನರಾಗಿ ವೀರಶೈವ ಸಮಾಜವನ್ನು ವ್ಯಾಪಕ ಅರ್ಥದಲ್ಲಿ ಹಾಗೂ ಸಂಘಟನಾತ್ಮಕವಾಗಿ ಬೆಳೆಸುತ್ತಿದ್ದರು. ಇವರು ೧೯೪೪ ರಲ್ಲಿ ಲಿಂಗೈಕ್ಯರಾದರು. ಇವರ ತರುವಾಯ ೧೯೪೫ ರಲ್ಲಿ ಶ್ರೀ ಶಿವಲಿಂಗೇಶ್ವರ ಸ್ವಾಮಿಗಳು ಪಟ್ಟಾಧಿಕಾರಕ್ಕೆ ಬಂದರು.

ಶ್ರೀ ಶಿವಲಿಂಗೇಶ್ವರ ಸ್ವಾಮಿಗಳು (ಶ್ರೀ ಸೋಮಶೇಖರ ದೇವರು) ಶಿರಾಳಕೊಪ್ಪಾ ತಾಲ್ಲೂಕಿನ ಮಂಚಿಕೊಪ್ಪಾ ಹಿರೇ ಮಠದ ಶ್ರೀ ಬಸವಣ್ಣಯ್ಯ ಮತ್ತು ಶ್ರೀಮತಿ ಪಕೀರಮ್ಮನವರ ಪುತ್ರರಾಗಿ ೧೯೧೮ ರ ಮಾರ್ಚ್ ತಿಂಗಳಲ್ಲಿ ಜನಿಸಿದರು. ಶ್ರೀ ಸೋಮಶೇಖರದೇವರು ಹಾವೇರಿಯ ಹುಕ್ಕೇರಿಮಠದ ಶ್ರೀ ಶಿವಬಸವಸ್ವಾಮಿಗಳು ಮತ್ತು ಹಾನಗಲ್ಲು ಶ್ರೀ ಕುಮಾರ ಸ್ವಾಮಿಗಳ ಕೃಪಾಶೀರ್ವಾದಿಂದ ಬೆಳೆದು 'ಶ್ರೀ ಶಿವಯೋಗಿ ದೇಶಿಕರಾಗಿ 'ಅಭಿದಾನ ಪಡೆದರು. ನಂತರ ಶಿವಯೋಗ ಮಂದಿರದಲ್ಲಿ ಅಭ್ಯಾಸ ಮಾಡಿ ಮಾದನಹಿಪ್ಪರಗಿ ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡು ಕರ್ತೃಗುರುಗಳಾದ 'ಶ್ರೀ ಶಿವಲಿಂಗೇಶ್ವರರ' ಹೆಸರನ್ನು ಅಭಿದಾನ ಪಡೆದು ೧೯೪೫ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಳ್ಳುತ್ತಾರೆ. ಗುರುಗಳು

ಮಾದನಹಿಪ್ಪರಗಿ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡ ಮೇಲೆ ಮಠವು ಸರ್ವಾಂಗೀಣವಾಗಿ ಅಭಿವೃದ್ಧಿ ಗೊಳ್ಳತೊಡಗಿತು.

ಧಾರ್ಮಿಕ-ಅಭಿವೃದ್ಧಿ: ಈ ಪುರಾತನ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡ ಶ್ರೀ ಶಿವಲಿಂಗೇಶ್ವರ ಸ್ವಾಮಿಗಳು ಮಠದ ಹಳೆಯ ಕಟ್ಟಡವನ್ನು ತೆಗೆಸಿ ಭವ್ಯವಾದ ನೂತನ ಕಟ್ಟಡವನ್ನು ಕಟ್ಟಿಸಿದರು. ಮಠದ ಪರಂಪರೆಯ ಗದ್ದುಗೆಗಳನ್ನು ನವೀಕರಣ ಗೊಳಿಸಿ ಮಂಟಪವನ್ನು ನಿರ್ಮಿಸಿದರು. ಅಲ್ಲದೆ ಈ ಗದ್ದುಗೆಗಳಿಗೆ ನಿತ್ಯ ಪೂಜೆ ನಡೆಯಲು ವ್ಯವಸ್ಥೆ ಮಾಡಿದರು. ಮಠಕ್ಕೆ ಬರುವ ಭಕ್ತರ ಕಷ್ಟ ಸುಖಗಳನ್ನು ವಿಚಾರಿಸಿ ಆಶೀರ್ವದಿಸಿ ಕಳಿಸತೊಡಗಿದರು. ಇದರಿಂದ ಭಕ್ತರು ಗುರುಗಳ ಸಂಪರ್ಕವನ್ನು ಬೆಳಸಿಕೊಂಡರು. ಪ್ರತಿನಿತ್ಯ ಮಠಕ್ಕೆ ಬರುವ ಭಕ್ತರ ಸಂಖ್ಯೆ ಹೆಚ್ಚಾದಂತೆ ದಾಸೋಹದ ವ್ಯವಸ್ಥೆಯನ್ನು ವಿಸ್ತರಿಸಿ ನಿತ್ಯ ನಿರಂತರವಾಗಿ ದಾಸೋಹ ನಡೆಯುವಂತೆ ವ್ಯವಸ್ಥೆಗೊಳಿಸಿದರು. ಹಿರಿಯ ಗುರುಗಳ ಪುಣ್ಯಸ್ಮರಣೆಯಲ್ಲಿ ಶಿವಾನುಭವ ಗೋಷ್ಠಿಗಳನ್ನು ಏರ್ಪಡಿಸಿ ಧರ್ಮ ಮತ್ತು ಸಾಹಿತ್ಯದ ವಿಚಾರದಲ್ಲಿ ಉಪನ್ಯಾಸ ನಡೆಯುಂತೆ ಮಾಡಿದರು. ಗುರುಗಳ ಪ್ರಭಾವಕ್ಕೆ ಒಳಗಾದ ಭಕ್ತರು ಇವರ ಆಶೀರ್ವಾದದಿಂದ ಇಂದು ಸುಸಂಸ್ಕೃತರಾಗಿ ನೆಮ್ಮದಿಯ ಬದುಕನ್ನು ಕಂಡವರಾಗಿದ್ದಾರೆ. ಈ ಕಾರಣಕ್ಕಾಗಿ ಗುರುಗಳ ಷಷ್ಟ್ಯಬ್ದಿ ಅಂಗವಾಗಿ ಅಮೃತ ಮಹೋತ್ಸವವನ್ನು ನಡೆಸಿದ್ದಾರೆ. ೧೯೭೭ ರಲ್ಲಿ ಪಟ್ಟಾಧಿಕಾರದ ಸುವರ್ಣ ಮಹೋತ್ಸ ವನ್ನು ಆಚರಿಸಿದ್ದಾರೆ. ಗುರುಗಳು ಎಂಬತ್ತೆರಡು ವರ್ಷಗಳನ್ನು ಪೂರೈಸಿದ ಸವಿನೆನಪಿಗಾಗಿ ಭಕ್ತರು ೨೦೦೦ ದ ಮಾರ್ಚ್ ಮೂರರಂದು ಲಕ್ಷದೀಪೋತ್ಸವ ಹಾಗೂ ಸಹಸ್ರ ಚಂದ್ರದರ್ಶನ ಮಹೋತ್ಸವವನ್ನು ನಡೆಸಿದ್ದಾರೆ.

ಶ್ರೀ ಶಿವಲಿಂಗೇಶ್ವರ ಸ್ವಾಮಿಗಳು ೧೯೭೬ ರಲ್ಲಿ ಪುನಃ ಮಠವನ್ನು ನವೀಕರಣಗೊಳಿಸಿದರು. ವಜ್ರಮಹೋತ್ಸವದ ಸಂದರ್ಭದಲ್ಲಿ ಶಾಶ್ವತ ನಿಧಿಯನ್ನು ಸ್ಥಾಪನೆಮಾಡಿ ಶ್ರೀ ಶಿವಲಿಂಗೇಶ್ವರ ವಿದ್ಯಾವರ್ಧಕ ಸಂಘದ ಅಭಿವೃದ್ಧಿಗೆ ಠೇವಣಿ ಸ್ಥಾಪಿಸಿದ್ದಾರೆ. ೧೯೯೪ ರಲ್ಲಿ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿ ಒಂದರಿಂದ ಏಳನೆಯ ತರಗತಿಗಳನ್ನು ನಡೆಸುತ್ತಿದ್ದಾರೆ. ಮಠದ ಆಸ್ತಿಯನ್ನು ಅಭಿವೃದ್ಧಿಪಡಿಸಿ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ.

ಶಿವಪೂಜಾ ನಿಷ್ಠರಾಗಿ,ಅನುಷ್ಠಾನ ಮೂರ್ತಿಗಳಾಗಿ, ಮಾದನಹಿಪ್ಪರಗಿ ಹಾಗೂ ಹಾವೇರಿಯ ಹುಕ್ಕೇರಿ ಮಠದ ಆಡಳಿತ ವನ್ನು ನಡೆಸುತ್ತಾ ಎರಡೂ ಮಠಗಳ ಅಭಿವೃದ್ಧಿಗೆ ಕಾರಣಕರ್ತರಾಗಿ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಸೇವೆಯನ್ನು ನಡೆಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಶಿವಲಿಂಗೇಶ್ವರ ಸ್ವಾಮಿಗಳು,ಶ್ರೀ ಶಿವಲಿಂಗೇಶ್ವರಮಠ, ಮಾದನಹಿಪ್ಪರಗಿ, ಆಳಂದ ತಾ, ಗುಲ್ಬರ್ಗ ಜಿಲ್ಲೆ.

ಮಾಡ್ಯಾಳ

ಆಳಂದ ತಾಲ್ಲೂಕಿನ ಮಾಡ್ಯಾಳ ಗ್ರಾಮವು ತಾಲ್ಲೂಕು ಕೇಂದ್ರದಿಂದ ಮೂವತ್ತೊಂದು ಕಿ.ಮೀ ದೂರದಲ್ಲಿದೆ. ಈ ಗ್ರಾಮವು ದೇವಸ್ಥಾನಗಳ ತವರೂರಾಗಿದೆ. ಈ ಊರಿನ ಗ್ರಾಮಸ್ಥರ ಹೇಳಿಕೆಯ ಪ್ರಕಾರ ಎಲ್ಲಾ ದೇವರುಗಳಿಗೂ ನೈವೇದ್ಯ ಕೊಡಲು ಸುಮಾರು ನಾಲ್ಕು ಸೇರು ಕಡಲೆಬೇಳೆಯ ಹೋಳಿಗೆ ಸಾಲದಂತೆ! ಅಷ್ಟು ದೇವಸ್ಥಾನಗಳು ಈ ಊರಿನಲ್ಲಿ ಸ್ಥಾಪನೆಯಾಗಿವೆ. ಈ ಎಲ್ಲಾ ದೇವಸ್ಥಾನಗಳು ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡಿವೆ ಎಂದು ಹೇಳಲಾಗುತ್ತಿದೆ. ಇಲ್ಲಿನ ಅಲ್ಲಮ ಪ್ರಭು ದೇವಸ್ಥಾನಕ್ಕೆ ಹಿಂದೂ ಮತ್ತು ಮುಸ್ಲಿಂ ಎರಡೂ ವರ್ಗದ ಜನ ನಡೆದುಕೊಳ್ಳುತ್ತಾ ಭಾವೈಕ್ಯತೆಯನ್ನು ಸಾಧಿಸಿದ್ದಾರೆ. ಇಂತಹ ಧಾರ್ಮಿಕ ಹಿನ್ನೆಲೆಯುಳ್ಳ ಈ ಗ್ರಾಮದಲ್ಲಿ ಶ್ರೀ ಒಪ್ಪತ್ತೇಶ್ವರ ವಿರಕ್ತ ಮಠವು ಸ್ಥಾಪನೆಯಾಗಿದೆ.

ಒಪ್ಪತ್ತೇಶ್ವರ ವಿರಕ್ತ ಮಠ: ಮಾಡ್ಯಾಳ ಗ್ರಾಮದಲ್ಲಿ ಮುರುಘಾ ಸಮಯದ ಶ್ರೀ ಒಪ್ಪತ್ತೇಶ್ವರ ಮಠವು ಸ್ಥಾಪನೆಯಾಗಿದೆ. ಶ್ರೀ ಒಪ್ಪತೇಶ್ವರ ಸ್ವಾಮಿಗಳಿಂದ ಸ್ಥಾಪನೆಯಾದ ಕಾರಣ ಮಠಕ್ಕೆ ಈ ಹೆಸರು ಬಂದಿದೆ. ಹನ್ನೆರಡನೆಯ ಶತಮಾದಲ್ಲಿ ಕಲ್ಯಾಣದಿಂದ ಹೊರಟ ಶರಣರಲ್ಲಿ ಶ್ರೀ ಒಪ್ಪತ್ತೇಶ್ವರರು ಒಬ್ಬರು. ಇವರು ಈ ಗ್ರಾಮಕ್ಕೆ ಬಂದು ಕೆಲವು ದಿನ ನೆಲೆಸಿ ಮಠವನ್ನು ಸ್ಥಾಪನೆಮಾಡಿ ಧರ್ಮಪ್ರಚಾರವನ್ನು ಕೈಗೊಂಡು ಮುಂದೆ ಸಾಗುತ್ತಾರೆ.

ಇಂತಹ ಶರಣರಿಂದ ಪ್ರಾರಂಭಗೊಂಡ ಈ ಮಠದಲ್ಲಿ ಒಟ್ಟು ಹದಿನೆಂಟು ಜನ ಗುರುಗಳು ಅಧಿಕಾರ ನಡೆಸಿದ್ದಾರೆಂದು

ಹೇಳಲಾಗುತ್ತಿದೆ. ಇತಿಹಾಸವನ್ನು ಕಾಯ್ದಿಟ್ಟು ಕೊಳ್ಳಲಾಗದೆ ಇರುವುದರಿಂದ ಗುರುಗಳ ಹೆಸರು ಲಭ್ಯವಿಲ್ಲ. ಈಗ ಶ್ರೀ ಮರುಳಸಿದ್ಧ ಸ್ವಾಮಿಗಳು ಅಧಿಕಾರ ನಡೆಸುತ್ತಿದ್ದಾರೆ. ಗುರುಗಳು ಶ್ರೀ ರುದ್ರಯ್ಯ ಮತ್ತು ಶ್ರೀಮತಿ ಶಾಂತಬಾಯಿಯವರ ಪುತ್ರರಾಗಿ ಜನಿಸಿ ೧೯೭೬ ರ ಸುಮಾರಿನಲ್ಲಿ ಮಠದ ಅಧಿಕಾರವನ್ನು ವಹಿಸಿಕೊಂಡು ಮಠದಲ್ಲಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಕರ್ತೃಗುರುಗಳಾದ ಶ್ರೀ ಒಪ್ಪತ್ತೇಶ್ವರರ ಗದ್ದುಗೆಯನ್ನು ಮಠದ ಕೇಂದ್ರ ಸ್ಥಳದಲ್ಲಿ ಸ್ಥಾಪಿಸಲಾಗಿದೆ. ಉಳಿದಂತೆ ಪರಂಪರೆಯ ಗುರುಗಳ ಗದ್ದುಗೆಗಳು ಸ್ಥಾಪನೆಯಾಗಿದ್ದು ಇವುಗಳಿಗೆ ನಿತ್ಯ ಪೂಜೆ ಮಾಡಲಾಗುತ್ತಿದೆ. ಪ್ರತಿ ಹುಣ್ಣಿಮೆ ಯಲ್ಲಿ ಶಿವಾನುಭವ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಶ್ರೀ ಒಪ್ಪತ್ತೇಶ್ವರರ ಜಾತ್ರೆಯನ್ನು ವಿಜಯ ದಶಮಿಯಾದ ಎರಡನೆಯ ದಿನಕ್ಕೆ ನಡೆಸಲಾಗುತ್ತಿದೆ. ಮಠದ ಆಸ್ತಿಯಾಗಿರುವ ಅರವತ್ತು ಎಕರೆ ಜಮೀನಿನಲ್ಲಿ ಇಪ್ಪತ್ತು ಎಕರೆಯನ್ನು ಕೆರೆ ನಿರ್ಮಾಣಕ್ಕೆ ಬಿಟ್ಟು ಕೊಡಲಾಗಿದ್ದು ಉಳಿದಿರುವ ಆಸ್ತಿಯನ್ನು ಗುರುಗಳೇ ಮುಂದೆ ನಿಂತು ಅಭಿವೃದ್ಧಿ ಪಡಿಸಿದ್ದಾರೆ. ಇದರಿಂದ ಉತ್ಪಾದನೆ ತೆಗೆದು ಮಠದ ಧಾರ್ಮಿಕ ಮತ್ತು ಆಡಳಿತ ಕಾರ್ಯಗಳಿಗೆ ಬಳಸಿಕೊಳ್ಳಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ.ಮರುಳಸಿದ್ಧ ಸ್ವಾಮಿಗಳು, ಶ್ರೀ ಒಪ್ಪತ್ತೇಶ್ವರ ವಿರಕ್ತಮಠ, ಮಾಡ್ಯಾಳ,ಆಳಂದ ತಾ,ಗುಲ್ಬರ್ಗ ಜಿಲ್ಲೆ.

ಮುಗುಳಿ

ಆಳಂದ ತಾಲ್ಲೂಕಿನ ಮುಗುಳಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿನ ಧಾರ್ಮಿಕ ಕೇಂದ್ರವಾಗಿ ವಿರಕ್ತಮಠವು ಹೆಸರು ಮಾಡಿದೆ.

ವಿರಕ್ತಮಠ: ಮುಗುಳಿ ಗ್ರಾಮದಲ್ಲಿ ಹದಿನಾರನೆಯ ಶತಮಾನದಲ್ಲಿ ಸ್ಥಾಪನೆಯಾಗಿರುವ, ಮುರುಘಾಸಮಯದ ಶ್ರೀ ವಿರಕ್ತಮಠವು ಇಲ್ಲಿನ ಧಾರ್ಮಿಕ ಕೇಂದ್ರ ಬಿಂದುವಾಗಿ ಬೆಳೆದಿದೆ. ಶ್ರೀ ವಿರೂಪಾಕ್ಷ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿರುವರೆಂದು ಹೇಳಲಾಗುತ್ತಿದೆ.

ಸ್ಪಷ್ಟವಾದ ಆಧಾರಗಳು ದೊರೆಯದೆ ಇರುವ ಕಾರಣ ಮಠದ ಪರಂಪರೆಯನ್ನು ಗುರುತಿಸಲು ತೊಡಕಾಗಿದೆ. ಪುರಾತನ ಪರಂಪರೆಯ ಈ ಮಠದಲ್ಲಿ ಐದು ಜನ ಗುರುಗಳು ಅಧಿಕಾರವನ್ನು ನಡೆಸಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆಂದು ಹೇಳಲಾಗುತ್ತದೆ. ಈಗ ಶ್ರೀ ವಿರೂಪಾಕ್ಷ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ವಿರೂಪಾಕ್ಷ ಸ್ವಾಮಿಗಳು, ಶ್ರೀ ವಿರಕ್ತಮಠ, ಮುಗುಳಿ, ಆಳಂದ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಮುದ್ದಡಗ

ಆಳಂದ ತಾಲ್ಲೂಕಿನ ಮುದ್ದಡಗ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವದಿಕ್ಕಿಗೆ ನಲವತ್ತೂ್ಮರು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಸಂಗೇಶ್ವರ ಮಠವು ಸ್ಥಾಪನೆಯಾಗಿದೆ.

ಸಂಗಮೇಶ್ವರ ಮಠ: ಮುದ್ದಡಗ ಗ್ರಾಮದಲ್ಲಿ ರಂಭಾಪುರಿ ಪೀಠದ ಶಾಖಾ ಮಠವಾದ ಶ್ರೀ ಸಂಗೇಶ್ವರ ಮಠವು ಸ್ಥಾಪನೆಯಾಗಿ ಈ ಗ್ರಾಮದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದಿದೆ. ಐವತ್ತು ವರ್ಷಗಳ ಹಿಂದೆ ಸಂನ್ಯಾಸಿಗಳೊಬ್ಬರು ಆಗಮಿಸಿ ಗ್ರಾಮದ ಹೊರಗಿನ ದೇವಸ್ಥಾನದಲ್ಲಿ ಅನುಷ್ಠಾನಕ್ಕೆ ಕುಳಿತುಕೊಳ್ಳುತ್ತಾರೆ. ನಂತರ ಗ್ರಾಮದ ಭಕ್ತರು ಗುರುಗಳಿಗಾಗಿ ಪ್ರತ್ಯೇಕ ಕಟ್ಟಡವನ್ನು ನಿರ್ಮಿಸಿ ಗುರುಗಳ ಅನುಷ್ಠಾನಕ್ಕೆ ನೆರವು ಮಾಡಿಕೊಡುತ್ತಾರೆ. ಅಂದು ಗ್ರಾಮದ ಭಕ್ತರು ಸಂನ್ಯಾಸಿಗಳಿಗಾಗಿ ನಿರ್ಮಿಸಿಕೊಟ್ಟ ಕಟ್ಟಡವೇ ಮಠವಾಗಿ ಬೆಳೆಯಿತು.

ಸಂನ್ಯಾಸಿಗಳು ಇಲ್ಲಿ ಅನುಷ್ಠಾನ ಮಾಡಿ ಜಾಗೃತ ಸ್ಥಳವಾಗಿ ಮಾಡಿದರು. ಇವರು ಬಂದು ನೆಲೆಸಿದ ನಂತರ ನಡೆಯುತ್ತಿದ್ದ ಧಾರ್ಮಿಕ ಆಚರಣೆಗಳು ಪ್ರಸಿದ್ಧಿಪಡೆದವು. ಗುರುಗಳು ಲೋಕಸಂಚಾರಕ್ಕೆ ಹೋದ ಮೇಲೆ ಶ್ರೀ ಸಂಗಮೇಶ್ವರ

ಶಿವಾಚಾರ್ಯ ಸ್ವಾಮಿಗಳು ಆಗಮಿಸಿ ಈ ಮಠದಲ್ಲಿ ನೆಲೆಸಿ ವ್ಯವಸ್ಥಿತವಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸತೊಡಗಿದರು. ಗುರುಗಳು ಇಲ್ಲಿ ಬಂದು ನೆಲಸಿದ ನಂತರ ಹಳೆಯ ಕಟ್ಟಡವನ್ನು ತೆಗೆಸಿ ನೂತನ ಕಟ್ಟಡವನ್ನು ನಿರ್ಮಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸತೊಡಗಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸಂಗಮೇಶ್ವರ ಶಿವಾಚಾರ್ಯಸ್ವಾಮಿಗಳು, ಶ್ರೀ ಸಂಗಮೇಶ್ವರಮಠ, ಮುದ್ದಡಗ,ಆಳಂದ ತಾ, ಗುಲ್ಬರ್ಗಜಿಲ್ಲೆ.

ಯಳಸಂಗಿ

ಆಳಂದ ತಾಲ್ಲೂಕಿನ ಯಳಸಂಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಮೂವತ್ತು ಕಿ.ಮೀ ದೂರದಲ್ಲಿದೆ. ಮುರುಘಾ ಸಮಯದ ಶ್ರೀ ಸಿದ್ಧಲಿಂಗೇಶ್ವರ ವಿರಕ್ತಮಠವು ಪುರಾತನ ಕಾಲದಲ್ಲಿ ಸ್ಥಾಪನೆಯಾಗಿದೆ. ಈ ಮಠದ ಸ್ಥಾಪನೆಯಿಂದಾಗಿ ಈ ಗ್ರಾಮವು ಧಾರ್ಮಿಕ ಹಾಗೂ ಸಾಮಾಜಿಕವಾಗಿ ಮುನ್ನಡೆ ಸಾಧಿಸಿದೆ. ಗ್ರಾಮದ ಪಶ್ಚಿಮದ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ಈ ವಿರಕ್ತ ಮಠವು ಧರ್ಮಜಾಗೃತಿಯನ್ನು ಮೂಡಿಸುವಲ್ಲಿ ಯಶಸ್ವಿಯಾಗಿದೆ.

ಸಿದ್ಧಲಿಂಗೇಶ್ವರ ವಿರಕ್ತಮಠ: ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಈ ಗ್ರಾಮದ ಹೊರಭಾಗದಲ್ಲಿ ನೆಲೆ ನಿಂತು ಅನೇಕ ಪವಾಡಗಳನ್ನು ಮಾಡಿ ಜನರ ಮನಪರಿವರ್ತನೆ ಮಾಡಿದ್ದರು ಎಂದು ಹೇಳಲಾಗುತ್ತಿದೆ. ಗುರುಗಳು ಅನುಷ್ಠಾನಗೊಂಡು ಧರ್ಮಜಾಗೃತಿಯನ್ನು ಮಾಡಿ ವೀರಶೈವ ಧರ್ಮವನ್ನು ಪ್ರಬಲವಾಗಿ ಬೆಳೆಸಲು ಇಲ್ಲಿ ಮಠವನ್ನು ಸ್ಥಾಪಿಸಿ ಶರಣರ ತತ್ತ್ವಗಳನ್ನು ಪರಿಪಾಲಿಸಲು ಭಕ್ತರಿಗೆ ತಿಳಿಯ ಹೇಳಿ ಧರ್ಮೋಪದೇಶವನ್ನು ಮಾಡುತ್ತಾರೆ. ಭಕ್ತರು ಗುರುಗಳ ಬೋಧನೆಯಿಂದ ಪರಿವರ್ತನೆ ಯಾದರು. ಆಚಾರ ವಿಚಾರಗಳನ್ನು ಜೀವನದಲ್ಲಿ ಆಚರಣೆಗೆ ತಂದರು. ಸಮಾಜದಲ್ಲಿ ಸಾಮರಸ್ಯದ ಬದುಕನ್ನು ಕಾಣತೊಡಗಿ ಸಮೃದ್ಧಿ ನೆಲೆಸಿತು. ಭಕ್ತರ ಈ ಪರಿವರ್ತನೆಯನ್ನು ಕಂಡ ಗುರುಗಳು ಸಂತೋಷಗೊಂಡು ಮಠವನ್ನು ಬೆಳೆಸಿದರು. ಬೆಳೆದ ಮಠಕ್ಕೆ ಉತ್ತರಾಧಿಕಾರಿಯನ್ನು ನೇಮಿಸಿ ಲಿಂಗೈಕ್ಯರಾಗಿದ್ದಾರೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಸಿದ್ಧಲಿಂಗೇಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಶಿವಲಿಂಗಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಶಾಂತಲಿಂಗಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಚನ್ನವೀರಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಗುರುಪಾದಲಿಂಗಸ್ವಾಮಿಗಳು

ಮಠದ ಪರಂಪರೆಯ ಮಾಹಿತಿಯನ್ನು ಗುರುತಿಸಲು ಸರಿಯಾದ ಆಧಾರಗಳು ಇಲ್ಲದೆ ಇರುವ ಕಾರಣಕ್ಕೆ ಕೆಲವು ಹೆಸರುಗಳನ್ನು ಮಾತ್ರ ಗುರುತಿಸಬಹುದಾಗಿದೆ. ಪುರಾತನ ಕಾಲದ ಈ ಮಠದಲ್ಲಿ ಒಟ್ಟು ಹನ್ನೆರಡು ಗದ್ದುಗೆಗಳು ಸ್ಥಾಪನೆಯಾಗಿವೆ. ಈ ಹಿಂದಿನ ಗುರುಗಳಾದ ಶ್ರೀ ಚನ್ನವೀರ ಸ್ವಾಮಿಗಳು ಗುಲ್ಬರ್ಗ ತಾಲ್ಲೂಕಿನ ಬಬಲಾದಿಯ ವಿರಕ್ತ ಮಠದಲ್ಲಿ ೧೯೮೫ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಉತ್ತರಾಧಿಕಾರಿಗಳಾಗಿ ಆಯ್ಕೆಯಾದ ಶ್ರೀ ಗುರುಪಾದಲಿಂಗ ಸ್ವಾಮಿಗಳು ೧೯೯೧ ರಲ್ಲಿ ಪಟ್ಟಾಧಿಕಾರ ವಹಿಸಿಕೊಂಡಿದ್ದಾರೆ. ಗುಲ್ಬರ್ಗ ತಾಲ್ಲೂಕಿನ ಕುರುಕೋಟ ಗ್ರಾಮದ ಶ್ರೀ ಷಡಕ್ಷರಿಸ್ವಾಮಿ ಹಾಗೂ ಶ್ರೀಮತಿ ಸಿದ್ದಮ್ಮನವರ ಪುತ್ರರಾಗಿ ೧೯೭೬ ರಲ್ಲಿ ಜನಿಸಿದ ಶ್ರೀ ಗುರುಲಿಂಗ ಸ್ವಾಮಿಗಳು, ಗುಲ್ಬರ್ಗದ ಶ್ರೀ ಗುರುಬಸವ ಸ್ವಾಮಿಗಳಿಂದ ಪಟ್ಟಾಧಿಕಾರದ ಅನುಗ್ರಹ ಪಡೆದು ಮಠದ ಅಧಿಕಾರಕ್ಕೆ ಬಂದಿದ್ದಾರೆ. ಗುರುಗಳು ಮಠಕ್ಕೆ ಆಗಮಿಸಿ ಮಠದಲ್ಲಿ ಸ್ಥಗಿತಗೊಂಡಿದ್ದ ಧಾರ್ಮಿಕ ಕಾರ್ಯಗಳನ್ನು ಪುನರಾರಂಭಿಸಿದರು. ಅಲ್ಲದೆ ಜೀರ್ಣಗೊಂಡಿದ್ದ ಮಠವನ್ನು ಅಭಿವೃದ್ಧಿಗೊಳಿಸಿದರು. ಈ ಮಠದ ಶಾಖಾ ಮಠಗಳಾದ, ಬಬಲಾದಿ, ಅಗರಹುಂಡಿಗೆ, ಗುಲ್ಬರ್ಗ ಮಠಗಳನ್ನು ಅಭಿವೃದ್ಧಿಪಡಿಸಿದರು.

ಧಾರ್ಮಿಕ ಕಾರ್ಯಗಳು: ಶ್ರೀ ಗುರುಪಾದಲಿಂಗ ಸ್ವಾಮಿಗಳು ಮಠದ ಪರಂಪರೆಯ ಗುರುಗಳ ಹನ್ನೆರಡು ಗದ್ದುಗೆಗಳನ್ನು ಗುರುತಿಸಿ ನವೀಕರಣಗೊಳಿಸಿ ಪೂಜೆಗೆ ವ್ಯವಸ್ಥೆ ಮಾಡಿಸಿದ್ದಾರೆ.ಅಲ್ಲದೆ ಮಠಕ್ಕೆ ಆಗಮಿಸುವ ಭಕ್ತರಿಗೆ ಅನ್ನದಾಸೋಹಕ್ಕೆ ವ್ಯವಸ್ಥೆಗೊಳಿಸಿದ್ದಾರೆ. ಶ್ರೀ ಗುರುಪಾದಲಿಂಗ ಸ್ವಾಮಿಗಳು ಅನುಷ್ಠಾನ ಮೂರ್ತಿಗಳಾಗಿದ್ದು ಈವರೆಗೆ ಒಟ್ಟು ಹತ್ತು ಅನುಷ್ಠಾನ

ಗಳನ್ನು ಪೂರೈಸಿದ್ದಾರೆ. ವೀರಶೈವ ಧರ್ಮವನ್ನು ಮಾನವೀಯ ಮೌಲ್ಯಗಳ ಹಿನ್ನೆಲೆಯಲ್ಲಿ ಬೆಳೆಸಲು ಪ್ರಯತ್ನ ನಡೆಸಿರುವ ಗುರುಗಳು ಸಮಾಜ ಮುಖಿಯಾಗಿ ಮಠವನ್ನು ಕೊಂಡೊಯ್ಯುತ್ತಿದ್ದಾರೆ.

ವಿಳಾಸ: ಶ್ರೀಮ.ನಿ.ಪ್ರ.ಗುರುಪಾದಲಿಂಗ ಸ್ವಾಮಿಗಳು, ಶ್ರೀವಿರಕ್ತಮಠ, ಯಳಸಂಗಿ, ಆಳಂದ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ವಿ.ಕೆ. ಸಲಗರ

ಆಳಂದ ತಾಲ್ಲೂಕಿನ ವಜೀದ್‌ಖಾನ್ ಸಲಗರವು ತಾಲ್ಲೂಕು ಕೇಂದ್ರದ ಪೂರ್ವಭಾಗಕ್ಕೆ ನಲವತ್ತು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಶ್ರೀ ಸಾಂಬ ಶಿವಯೋಗೀಶ್ವರ ಸಂಸ್ಥಾನ ಹಿರೇಮಠ, ಶ್ರೀ ಮಹಾಂತೇಶ್ವರ ಹಿರೇಮಠ, ಶ್ರೀಸಂಗಯ್ಯನಮಠ, ಶ್ರೀ ಕಳ್ಳಿಮಠ, ಶ್ರೀ ಕೊಟ್ರಯ್ಯನಮಠ ಎಂಬ ಐದು ಮಠಗಳು ಸ್ಥಾಪನೆಯಾಗಿವೆ. ಇವುಗಳಲ್ಲಿ ಶ್ರೀಸಾಂಬ ಶಿವಯೋಗೀಶ್ವರ ಸಂಸ್ಥಾನ ಹಿರೇಮಠದಲ್ಲಿ ಗುರುಗಳಿದ್ದು ಧಾರ್ಮಿಕ ಕಾರ್ಯಗಳು ನಡೆಯುತ್ತಾ ಬಂದಿವೆ. ಉಳಿದ ಮಠಗಳಲ್ಲಿ ಗುರುಗಳಿಲ್ಲದೆ ಕೇವಲ ಗದ್ದುಗೆ ಪೂಜೆಗಷ್ಟೇ ಸೀಮಿತವಾಗಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ.

ಸಾಂಬ ಶಿವಯೋಗೀಶ್ವರ ಸಂಸ್ಥಾನ ಹಿರೇಮಠ: ಈ ಗ್ರಾಮದ ಹೊರಭಾಗದಲ್ಲಿ ಶ್ರೀ ಸಾಂಬ ಶಿವಯೋಗೀಶ್ವರ ಸಂಸ್ಥಾನ ಹಿರೇಮಠವು ಅಸ್ತಿತ್ವದಲ್ಲಿದೆ.ಈ ಮಠದ ಮೂಲ ಹೆಸರು 'ದಿಂಗಬರೇಶ್ವರ ಹಿರೇಮಠ'ವೆಂದಿತ್ತು ನಂತರ ಈ ಮಠದ ಹೆಸರನ್ನು ಬದಲಿಸಿ ಪರಂಪರೆಯ ಗುರುಗಳಾದ ತಪೋನಿಧಿ 'ಶ್ರೀ ಸಾಂಬಶಿವಯೋಗಿ'ಗಳ ಹೆಸರಿನಿಂದ ಗುರುತಿಸ ತೊಡಗಿದರು. ರಂಬಾಪುರಿ ಪೀಠದ ಶಿಷ್ಯವರ್ಗದ ಪರಂಪರೆಯಲ್ಲಿ ಬೆಳೆದಿರುವ ಈ ಮಠವು ಹೆಸರಾಂತ ಮಠಗಳಲ್ಲಿ ಒಂದಾಗಿ ಬೆಳೆದಿದೆ.

ಮಠ ಸ್ಥಾಪನೆ: ಈ ಮಠವು ಶ್ರೀ ದಿಗಂಬರೇಶ್ವರ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪನೆಯಾಗಿದೆ. ಸಲಗರ ಗ್ರಾಮದಲ್ಲಿ ಶ್ರೀ ದಿಗಂಬರೇಶ್ವರರು ದೀರ್ಘ ಕಾಲ ತಪಸ್ಸನ್ನು ಆಚರಿಸಿ ಶಿವಯೋಗ ಸಿದ್ಧಿಯನ್ನು ಗಳಿಸಿಕೊಂಡರು. ವಿಭೂತಿ ಪುರುಷರಾಗಿ ಅನೇಕ ಪವಾಡಗಳನ್ನು ಮಾಡಿ ಭಕ್ತರನ್ನು ಉದ್ಧರಿಸಿದರು. ಇವರು ಅನೇಕ ಸತ್ಕಾರ್ಯಗಳನ್ನು ಮಾಡಿ ತಮ್ಮ ಪವಾಡದಿಂದ ಭೂಮಿಯನ್ನು ಬಾಯಿಬಿಡಿಸಿ ಅಂತರ್‌ಗತವಾಗಿ ಜೀವಂತ ಸಮಾಧಿಯಾದರಂತೆ. ಇಂತಹ ಮಹಾಯೋಗಿಯು ಸ್ಥಾಪಿಸಿದ ಮಠದ ಪರಂಪರೆಯಲ್ಲಿ ಅನೇಕ ಶಿವಾಚಾರ್ಯರು ಆಗಿ ಹೋಗಿದ್ದಾರೆಂದು ಹೇಳಲಾಗುತ್ತದೆ.

ಪರಂಪರೆ:
೧. ಷ.ಬ್ರ.ಶ್ರೀ ದಿಗಂಬರೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಸಿದ್ಧೇಶ್ವರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಸಾಂಬ ಶಿವಯೋಗಿ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಬಾಲತಪಸ್ವಿ ದ್ವಿತೀಯ ಸಾಂಬ ಶಿವಯೋಗಿ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರಗಳ ನಂತರ ಅನೇಕ ಶಿವಾಚಾರ್ಯರು ಮಠದ ಆಡಳಿತವನ್ನು ನಡೆಸಿರುತ್ತಾರೆ ಎಂದು ಹೇಳಲಾದರೂ ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಳ್ಳುವ ತನಕ ಇದ್ದ ಗುರುಗಳ ಹೆಸರುಗಳು ಲಭ್ಯವಿರುವುದಿಲ್ಲ. ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಈ ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದರು. ಇವರು ಮಹಾ ದಾಸೋಹಿಗಳಾಗಿ ಮಠದಲ್ಲಿ ನಿರಂತರ ದಾಸೋಹವನ್ನು ನಡೆಸಿದರು. ಇವರ ಕಾಲದಲ್ಲಿ ಮಠದಲ್ಲಿ ಹಾಲು,ಮೊಸರು,ತುಪ್ಪವನ್ನು ಗಡಿಗೆಗಳಲ್ಲಿ ಸಂಗ್ರಹಿಸಿಟ್ಟು ದಾಸೋಹಕ್ಕೆ ಬಳಸಲಾಗುತ್ತಿತ್ತಂತೆ. ರೊಟ್ಟಿ ಮತ್ತು ತುಪ್ಪವನ್ನೇ ಹೆಚ್ಚಾಗಿ ನೀಡಲಾಗುತ್ತಿತ್ತೆಂದು ಹೇಳಲಾಗುತ್ತದೆ. ಇಂತಹ ಸಮೃದ್ಧಿಯನ್ನು ಕಂಡ ಮಠ ಧಾರ್ಮಿಕವಾಗಿಯೂ ಶ್ರೀಮಂತಗೊಂಡು ಭಕ್ತರನ್ನು ಉದ್ಧರಿಸಿದೆ. ಇಂತಹ ಮಹಾಯೋಗಿಗಳು, ತಪೋನಿಧಿ ಶ್ರೀ ಸಾಂಬ ಶಿವಯೋಗಿ ಶಿವಾಚಾರ್ಯರನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ನೇಮಿಸಿದರು.

ಬಾಲ ತಪಸ್ವಿ ಶ್ರೀ ಸಾಂಬ ಶಿವಯೋಗಿ ಶಿವಾಚಾರ್ಯರು ಲಾತೂರ್ ಜಿಲ್ಲೆಯ ನಿಲಂಗ ತಾಲ್ಲೂಕಿನ ನಿಟ್ಟೂರಿನ ಶ್ರೀಗುರುಬಸವಯ್ಯ ಮತ್ತು ಶ್ರೀಮತಿ ನೀಲಮ್ಮನವರ ಪುತ್ರರಾಗಿ ಜನಿಸಿದರು. ಇವರು ತಮ್ಮ ಹನ್ನೆರಡನೆಯ ವರ್ಷದಲ್ಲಿ

ಏಡಶಿಯ ಅರಣ್ಯದಲ್ಲಿ ಧೀರ್ಘ ತಪಸ್ಸನ್ನು ಆಚರಿಸಿ ಸಿದ್ಧಿಯನ್ನು ಪಡೆದುಕೊಂಡರು. ಇಂತಹ ಬಾಲ ತಪಸ್ವಿ ಶ್ರೀ ಸಾಂಬ ಶಿವಯೋಗಿಗಳು ಸಲಗರದ ಶ್ರೀ ದಿಗಂಬರೇಶ್ವರ ಮಠಕ್ಕೆ ಉತ್ತರಾಧಿಕಾರಿಗಳಾಗಿ ನೇಮಕ ಗೊಂಡಿದ್ದು ಈ ಮಠದ ಯೋಗಾಯೋಗವೇ ಸರಿ. ಗುರುಗಳು ಇಲ್ಲಿಗೆ ಬಂದು ನೆಲೆಸಿ ಅನೇಕ ಪವಾಡಗಳನ್ನು ಮಾಡಿ ಭಕ್ತರನ್ನು ಉದ್ಧರಿಸಿದರು. ಶಿವಪೂಜೆ, ಈಶ್ವರ ಚಿಂತನೆಯಿಂದ ಕಷ್ಟಗಳು ಪರಿಹಾರವಾಗುತ್ತವೆ ಎಂಬ ಉಕ್ತಿಯನ್ನು ಹೇಳಿ ಜನರನ್ನು ಸನ್ಮಾರ್ಗಕ್ಕೆ ತಂದರು. ಗುರುಗಳ ಪ್ರಭಾವವನ್ನು ಸಹಿಸಲಾಗದ ಕೆಲವರು ಗುರುಗಳನ್ನು ಮುಗಿಸಬೇಕೆಂಬ ಸಂಚು ಮಾಡಿದರಂತೆ. ಆಗ ಗುರುಗಳು ತಮ್ಮ ಅಂತರ್ ಜ್ಞಾನದಿಂದ ಅರಿತು ಕುಹಕಿಗಳ ಕುಟಿಲತಂತ್ರವನ್ನು ವಿಫಲಗೊಳಿಸಿದರಂತೆ. ಇದರಿಂದ ವಿರೋಧಿಗಳು ಸಹ ಗುರುಗಳಿಗೆ ಶರಣಾಗಿ ಗುರುಗಳ ಉಪದೇಶಾಮೃತಕ್ಕೆ ಒಳಗಾಗಿ ಕೃತಾರ್ಥರಾದರಂತೆ. ಗುರುಗಳು ತಮ್ಮ ಜೀವಿತಾವಧಿಯಲ್ಲಿ ಮಾಡಿದ ಅನೇಕ ಸಾಧನೆಗಳು ಸಮಾಜದ ಹಾಗೂ ಭಕ್ತರ ಒಳಿತಿಗೆ ಪೂರಕವಾಗಿದ್ದವು. ಇಂತಹ ಮಹಾ ಪುರುಷರು ಲೋಕ ಸಂಚಾರದಲ್ಲಿದ್ದಾಗ ಸೋಲಾಪುರ ಜಿಲ್ಲೆಯ ಕುರ್ಡುವಾಡಿಯಲ್ಲಿ ಲಿಂಗೈಕ್ಯರಾಗಿದ್ದಾರೆ. ಗುರುಗಳು ಲಿಂಗೈಕ್ಯರಾದ ಮೇಲೆ ಇವರ ಪ್ರಭಾವದ ಜ್ವಾಲೆಯಿಂದ ನಾಡು ಬೆಳಗಿತು. ಮಠ ಮತ್ತು ಸಮಾಜ ಶ್ರೀ ಸಾಂಬ ಸದಾಶಿವ ಸ್ವಾಮಿಗಳ ಕಾಲದಲ್ಲಿ ಅಭಿವೃದ್ಧಿಯಾದ ಕಾರಣ ಇವರ ಪ್ರಭಾವಕ್ಕೆ ಒಳಗಾದ ಭಕ್ತರು ಪರಂಪರಾಗತ ಮಠಕ್ಕೆ 'ಶ್ರೀ ಸಾಂಬಶಿವಯೋಗಿಗಳ ಮಠ' ಎಂದು ಕರೆಯತೊಡಗಿ ಗುರುಗಳ ಹೆಸರನ್ನು ಸದಾ ಸ್ಮರಿಸಿಕೊಳ್ಳುವಂತೆ ಮಾಡಿದ್ದಾರೆ. ಇವರು ಲಿಂಗೈಕ್ಯರಾದ ಮೇಲೆ ಅನೇಕ ವರ್ಷಗಳ ಕಾಲ ಮಠವು ಖಾಲಿ ಉಳಿದಿತ್ತು. ನಂತರ ೧೯೯೬ ರ ಫೆಬ್ರವರಿ ಹದಿನೈದರಲ್ಲಿ ಬಾಲ ತಪಸ್ವಿ ಶ್ರೀ ದ್ವಿತೀಯ ಸಾಂಬ ಶಿವಯೋಗಿ ಶಿವಾಚಾರ್ಯರು ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡು ಪರಂಪರೆಯ ಗುರುಗಳ ತತ್ವಗಳನ್ನು ಹಾಗೂ ವೀರಶೈವ ಧರ್ಮದ ಪ್ರಸಾರ ಕಾರ್ಯವನ್ನು ಮಾಡಿಕೊಂಡು ಬರುತ್ತಿದ್ದಾರೆ.

ಜೇವರ್ಗಿ ತಾಲ್ಲೂಕಿನ ಆಲೂರು ಹಿರೇಮಠದ ಶ್ರೀ ಬಸವಯ್ಯಸ್ವಾಮಿ ಮತ್ತು ಶ್ರೀಮತಿ ಪಾರ್ವತಿ ದೇವಿಯವರ ಪುತ್ರರಾಗಿ ೧೯೭೭ ರ ಡಿಸೆಂಬರ್ ಮೂವತ್ತೊಂದರಂದು ಶ್ರೀ ದ್ವಿತೀಯ ಸಾಂಬ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು ಜನಿಸಿದರು.ಇವರು ಆಲೂರು, ಸೋಲಾಪುರ ಮತ್ತು ಬಾಳೆಹೊನ್ನೂರು ರಂಭಾಪುರಿ ಪೀಠ ಈ ಸ್ಥಳಗಳಲ್ಲಿ ವಿದ್ಯಾಭ್ಯಾಸವನ್ನು ಮಾಡಿ, ೧೯೯೪ ರಲ್ಲಿ ರಂಭಾಪುರಿ ಜಗದ್ಗುರುಗಳ ಕೃಪಾಶೀರ್ವಾದದಿಂದ ಈ ಮಠಕ್ಕೆ ಉತ್ತರಾಧಿಕಾರಿಗಳಾಗಿ ನೇಮಕ ಗೊಂಡರು. ಗುರುಗಳು ಪಟ್ಟಾಧಿಕಾರವನ್ನು ವಹಿಸಿಕೊಂಡ ಮೇಲೆ ಮಠವನ್ನು ಅಭಿವೃದ್ಧಿಗೊಳಿಸಿ ಸುಸ್ಥಿತಿಗೆ ತಂದರು.ಅಲ್ಲದೆ ಹಿಂದಿನ ಶ್ರೀ ಸಾಂಬ ಶಿವಯೋಗಿ ಶಿವಾಚಾರ್ಯ ಗುರುಗಳು ನಡೆಸುತ್ತಿದ್ದ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯಲ್ಲಿ ಬಂದಂತಹ ಗುರುಗಳ ನಾಲ್ಕು ಗದ್ದುಗೆಗಳು ಹಾಗೂ ಸೋಲಾಪುರ ಜಿಲ್ಲೆಯ ಕುರ್ಡುವಾಡಿಯಲ್ಲಿ ಲಿಂಗೈಕ್ಯರಾದ ಶ್ರೀ ಸಾಂಬ ಶಿವಯೋಗಿಗಳ ತೋರು ಗದ್ದುಗೆ ಸೇರಿದಂತೆ ಒಟ್ಟು ಐದು ಗದ್ದುಗೆಗಳಿಗೆ ನಿತ್ಯಪೂಜೆ ಮಾಡಲಾಗುತ್ತಿದೆ. ದವನದ ಹುಣ್ಣಿಮೆಯಲ್ಲಿ ದಿಗಂಬರೇಶ್ವರರ ಜಾತ್ರೆ, ಎಳ್ಳ ಅಮಾವಾಸ್ಯೆಯಲ್ಲಿ ಶ್ರೀ ಸಾಂಬ ಶಿವಯೋಗಿ ಶಿವಾಚಾರ್ಯರ ಜಾತ್ರೆಯನ್ನು ನಡೆಸಲಾಗುತ್ತಿದೆ. ಶ್ರಾವಣಮಾಸದಲ್ಲಿ ಒಂದು ತಿಂಗಳು ಅನುಷ್ಠಾನ ನಡೆಸಿ ಕೊನೆಯ ದಿನ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಪ್ರತಿ ಸೋಮವಾರ ಮಹಾಪೂಜೆ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ. ಪ್ರತಿ ಅಮಾವಾಸ್ಯೆಯಲ್ಲಿ ಮಠದಲ್ಲಿ ವಿಶೇಷ ಕಾರ್ಯಕ್ರಮಗಳು ಜರುಗುತ್ತಿದ್ದು ಸುಮಾರು ಒಂದೂವರೆ ಸಾವಿರ ಜನ ಭಕ್ತಾಧಿಗಳು ಬಂದು ಸೇರುತ್ತಾರೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ದ್ವಿತೀಯ ಸಾಂಬ ಸದಾಶಿವ ಶಿವಾಚಾರ್ಯ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ಹಿರಿಯ ಗುರುಗಳ ಸಂಕಲ್ಪ ಶಕ್ತಿ ಹಾಗೂ ತಮ್ಮ ಕ್ರಿಯಾಶೀಲತೆಯಿಂದ ಮಠದ ಕಟ್ಟಡವನ್ನು ವಿಸ್ತರಿಸಿ ಆಧುನೀಕರಿಸಿದ್ದಾರೆ. ಮಠದ ಆಸ್ತಿಯಾಗಿರುವ ಇನ್ನೂರು ಎಕರೆ ಭೂಮಿಯನ್ನು ಮಠದ ವತಿಯಿಂದ ಅಭಿವೃದ್ಧಿಪಡಿಸಲಾಗಿದ್ದು ಇದರಿಂದ ಬರುವ ಆದಾಯದಿಂದ ಮಠದ ಧಾರ್ಮಿಕ ಹಾಗೂ ಅನ್ನದಾಸೋಹವನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಬಾಲ ತಪಸ್ವಿ ಸಾಂಬ ಶಿವಯೋಗಿ ಶಿವಾಚಾರ್ಯಸ್ವಾಮಿಗಳು, ಶ್ರೀ ಸಾಂಬ ಶಿವಯೋಗೀಶ್ವರ ಸಂಸ್ಥಾನ ಹಿರೇಮಠ, ವಿ.ಕೆ.ಸಲಗರ, ಆಳಂದ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಹಡಲಗಿ

ಆಳಂದ ತಾಲ್ಲೂಕಿನ ಹಡಲಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ನಲವತ್ತೆರಡು ಕಿ.ಮೀ ದೂರದಲ್ಲಿದೆ. ಧಾರ್ಮಿಕವಾಗಿ ಹೆಸರು ಪಡೆದ ಈ ಗ್ರಾಮದಲ್ಲಿ ಶ್ರೀ ಶಾಂತೇಶ್ವರಮಠವು ಸ್ಥಾಪನೆಯಾಗಿದೆ.

ಶಾಂತೇಶ್ವರ ಮಠ: ಹಡಲಗಿ ಗ್ರಾಮದಲ್ಲಿ ರಂಭಾಪುರಿ ಪೀಠದ ಶಾಖಾ ಮಠವಾದ ಶಿಷ್ಯವರ್ಗದ ಪರಂಪರೆಯ ಶ್ರೀಶಾಂತೇಶ್ವರಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದ ಈ ಮಠವನ್ನು ಶ್ರೀ ಶಾಂತೇಶ್ವರ ಸ್ವಾಮಿಗಳು ಪ್ರಾರಂಭ ಮಾಡಿದ್ದಾರೆಂದು ಹೇಳಲಾಗುತ್ತಿದೆ. ಮಠದಲ್ಲಿ ಒಟ್ಟು ಏಳು ಜನ ಗುರುಗಳು ಅಧಿಕಾರ ನಡೆಸಿರಬಹುದೆಂದು ಹೇಳಲಾಗುತ್ತಿದೆ.

ಪರಂಪರೆ:

೧. ಷ.ಬ್ರ.ಶ್ರೀ ಶಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ಶಾಂತಯ್ಯ ಶಿವಾಚಾರ್ಯ ಸ್ವಾಮಿಗಳು
೩. ಷ.ಬ್ರ.ಶ್ರೀ ಶಾಂತಬಸವ ಶಿವಾಚಾರ್ಯ ಸ್ವಾಮಿಗಳು

ಮಠದ ಪರಂಪರೆಯಲ್ಲಿ ಕೇವಲ ಮೂರು ಜನ ಗುರುಗಳ ಹೆಸರನ್ನು ಮಾತ್ರ ದಾಖಲಿಸಬಹುದಾಗಿದೆ. ಉಳಿದಂತೆ ಐದು ಜನ ಗುರುಗಳ ಹೆಸರು ಲಭ್ಯವಿಲ್ಲ. ಮಠದ ಆವರಣದಲ್ಲಿ ಆರು ಗದ್ದುಗೆಗಳನ್ನು ಗುರುತಿಸಬಹುದಾಗಿದ್ದು ಈ ಗದ್ದುಗೆಗಳ ಬಗ್ಗೆಯೂ ಆಧಾರಗಳ ಕೊರತೆಯಿಂದ ವಿವರಗಳು ತಿಳಿಯದಾಗಿದೆ. ಮಠದ ಪರಂಪರೆಯಲ್ಲಿ ಶ್ರೀ ಮಲ್ಲಿಕಯ್ಯ, ಶ್ರೀಹಂಪಯ್ಯ, ಶ್ರೀ ಗುರಶಾಂತಯ್ಯ,ಎಂಬುವರು ದೇಶಿಕರಾಗಿ ಮಠದ ಆಡತವನ್ನು ನಡೆಸಿಕೊಂಡು ಬಂದಿದ್ದಾರೆಂದು ಹೇಳಲಾಗುತ್ತಿದೆ. ಮಠದ ಕರ್ತೃಗುರುಗಳ ನಂತರ ಕೆಲವು ವರ್ಷಗಳ ಕಾಲ ಮಠವು ಖಾಲಿ ಉಳಿದಿದ್ದು. ನಂತರ ಶ್ರೀಶಾಂತಯ್ಯ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದಿದ್ದಾರೆ. ಇವರು ಅನೇಕ ವರ್ಷಗಳ ಕಾಲ ಮಠದ ಆಡಳಿತವನ್ನು ನಡೆಸಿ ಲಿಂಗೈಕ್ಯರಾಗಿದ್ದಾರೆಂದು ಹೇಳಲಾಗುತ್ತಿದೆ. ಹಿರಿಯ ಗುರುಗಳು ಲಿಂಗೈಕ್ಯರಾದ ಹದಿನೆಂಟು ವರ್ಷಗಳ ತರುವಾಯ ಶ್ರೀಶಾಂತಬಸವ ಸ್ವಾಮಿಗಳು ೧೯೮೮ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಗುರುಗಳು ಹಾವೇರಿ ಜಿಲ್ಲೆಯ ಹಾನಗಲ್ಲು ತಾಲ್ಲೂಕಿನ ಕಾಡಶೆಟ್ಟಿಹಳ್ಳಿ ಯವರಾಗಿದ್ದು, ಈ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡು ಧಾರ್ಮಿಕ ಆಚರಣೆಗಳು ನಡೆಯುವಂತೆ ಮಾಡಿದ್ದಾರೆ.

ಶ್ರೀ ಶಾಂತಬಸವ ಸ್ವಾಮಿಗಳು ಗುಲ್ಬರ್ಗಾ ನಗರದಲ್ಲಿ ಬೋರ್ಡಿಂಗ್ ಶಾಲೆಯನ್ನು ಪ್ರಾರಂಭಿಸಿದ್ದಾರೆ. ಗುರುಗಳು ಹೆಚ್ಚು ಗುಲ್ಬರ್ಗದಲ್ಲಿಯೇ ಇರುವ ಕಾರಣ ಮಠವು ಪೂರ್ಣ ಜೀರ್ಣಗೊಂಡಿದೆ. ಮಠದ ಗರ್ಭಗುಡಿಯಲ್ಲಿರುವ ಗವಿಯಲ್ಲಿ ಪೂಜಾ ಕಾರ್ಯಗಳು ನಡೆಯುತ್ತಿವೆ. ಅಲ್ಲದೆ ಪ್ರತಿನಿತ್ಯ ಗದ್ದುಗೆಗಳಿಗೆ ಪೂಜಾಕಾರ್ಯ ನಡೆಯುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಶಾಂತಬಸವ ಸ್ವಾಮಿಗಳು, ಶ್ರೀ ಶಾಂತೇಶ್ವರ ಮಠ, ಹಡಲಗಿ, ಆಳಂದ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಹೊದಲೂರು

ಆಳಂದ ತಾಲ್ಲೂಕಿನ ಹೊದಲೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತೆರಡು ಕಿ.ಮೀ ದೂರದಲ್ಲಿದೆ. ಈ ಗ್ರಾಮದ ಪಶ್ಚಿಮದ ಹೊರಭಾಗದಲ್ಲಿ ಶ್ರೀ ಶಿವಲಿಂಗೇಶ್ವರ ವಿರಕ್ತಮಠವು ಸ್ಥಾಪನೆಯಾಗಿದೆ.

ಶಿವಲಿಂಗೇಶ್ವರ ವಿರಕ್ತಮಠ: ಹೊದಲೂರು ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ಶಿವಲಿಂಗೇಶ್ವರ ವಿರಕ್ತಮಠವು ಮಾದನ ಹಿಪ್ಪರಗಿಯ ಶಿವಲಿಂಗೇಶ್ವರ ಮಠದ ಶಾಖಾ ಮಠವಾಗಿದೆ. ಮಾದನ ಹಿಪ್ಪರಗಿಯ ಶಿವಲಿಂಗೇಶ್ವರ ಸ್ವಾಮಿಗಳು ಈ ಗ್ರಾಮದಲ್ಲಿ ಅನುಷ್ಠಾನಗೊಂಡು ಈ ಸ್ಥಳವನ್ನು ಜಾಗೃತ ಸ್ಥಳವನ್ನಾಗಿ ಮಾಡಿದ್ದರು. ಅಂದಿನಿಂದ ಈ ಸ್ಥಳದಲ್ಲಿ ಧಾರ್ಮಿಕ ಕಾರ್ಯಗಳು ನಡೆಯುತ್ತಾ ಬಂದಿದ್ದವು. ಐವತ್ತು ವರ್ಷಗಳ ಹಿಂದೆ ಇಲ್ಲಿ ಕಟ್ಟಡವು ನಿರ್ಮಾಣವಾಗಿ ಶ್ರೀ ಶಿವಲಿಂಗೇಶ್ವರರ ತೋರು ಗದ್ದುಗೆಯನ್ನು ಸ್ಥಾಪಿಸಲಾಯಿತು.

ಶ್ರೀ ಗುರುಬಸವಯ್ಯ ಎಂಬುವರು ಈ ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದರು. ಅವರು

ಲಿಂಗೈಕ್ಯರಾದ ಮೇಲೆ ಶ್ರೀ ಶಿವಲಿಂಗದೇವರನ್ನು ಉತ್ತರಾಧಿಕಾರಿಯಾಗಿ ೧೯೮೫ ರಲ್ಲಿ ನೇಮಕ ಮಾಡಲಾಗಿದೆ. ಇದೇ ಗ್ರಾಮದ ಶ್ರೀ ನೀಲಕಂಠಯ್ಯ ಮತ್ತು ಶ್ರೀಮತಿ ಪುತ್ತಳಾಬಾಯಿಯವರ ಪುತ್ರರಾಗಿ ಜನಿಸಿದ ಇವರು ಶಿವಯೋಗ ಮಂದಿರ, ಮೈಸೂರಿನ ಸುತ್ತೂರು ಮಠದ ಗುರುಕುಲದಲ್ಲಿ ಅಭ್ಯಾಸ ಮಾಡಿ ಸಂಸ್ಕೃತ ಸಾಹಿತ್ಯವನ್ನು ಅಭ್ಯಾಸ ಮಾಡಿದ್ದಾರೆ. ಅಲ್ಲದೆ ಪುರಾಣ ಪ್ರವಚನ ಪ್ರವೀಣರಾಗಿ ಕಳೆದ ಹದಿನೈದು ವರ್ಷಗಳಿಂದ ಮಠದ ಸೇವೆಯನ್ನು ಮಾಡತೊಡಗಿದ್ದಾರೆ.

ಮಠದ ಆಸ್ತಿಯಾಗಿ ಎಂಟು ಎಕರೆ ಭೂಮಿಯಿದ್ದು ಇದನ್ನು ಅಭಿವೃದ್ಧಿಪಡಿಸಲಾಗಿದೆ. ಪ್ರತಿ ಶ್ರಾವಣದಲ್ಲಿ ಪುರಾಣ ಪ್ರವಚನವನ್ನು ಹಮ್ಮಿಕೊಳ್ಳಲಾಗುತ್ತಿದೆ. ನಿತ್ಯ ರುದ್ರಾಭಿಷೇಕ ಪೂಜೆ, ಅಮಾವಾಸ್ಯೆಯಲ್ಲಿ ತರುಣ ಸಂಘದಿಂದ ಭಜನೆ ಕಾರ್ಯಕ್ರಮ ನಡೆಯುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ.ಶಿವಲಿಂಗ ದೇವರು, ಶ್ರೀ ಶಿವಲಿಂಗೇಶ್ವರ ವಿರಕ್ತಮಠ, ಹೊದಲೂರು, ಆಳಂದ ತಾ, ಗುಲ್ಬರ್ಗ ಜಿಲ್ಲೆ.

❑

ಗುಲ್ಬರ್ಗ ತಾಲ್ಲೂಕು

ಗುಲ್ಬರ್ಗವು ರಾಜ್ಯದ ಪ್ರತಿಷ್ಠಿತ ತಾಲ್ಲೂಕುಗಳಲ್ಲಿ ಒಂದಾಗಿದೆ. ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ವಾಗಿ ವಿಶಿಷ್ಟ ಸ್ಥಾನ ಗಳಿಸಿರುವ ಗುಲ್ಬರ್ಗವು ವೀರಶೈವ ಧರ್ಮಕ್ಕೆ ತನ್ನದೇ ಆದಂತಹ ಕೊಡುಗೆಯನ್ನು ನೀಡಿ, ವೀರಶೈವ ಧರ್ಮವನ್ನು ಬೆಳೆಸಿದೆ. ಈ ತಾಲ್ಲೂಕಿನಾದ್ಯಂತ ಸುಮಾರು ಎಪ್ಪತ್ತೈದು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಇಂದು ಕೇವಲ ಇಪ್ಪತ್ತೆರಡು ಮಠಗಳು ಅಸ್ತಿತ್ವದಲ್ಲಿವೆ.

ಅಷ್ಟಗಿ

ಗುಲ್ಬರ್ಗ ತಾಲ್ಲೂಕಿನ ಅಷ್ಟಗಿ ಗ್ರಾಮವು ಧಾರ್ಮಿಕವಾಗಿ ಹೆಚ್ಚು ಹೆಸರುಮಾಡಿದೆ. ಈ ಗ್ರಾಮದಲ್ಲಿ ಶ್ರೀ ಹಿರೇಮಠವು ಸ್ಥಾಪನೆಯಾಗಿ ಧಾರ್ಮಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ನೆರವಾಗಿದೆ.

ಹಿರೇಮಠ: ಅಷ್ಟಗಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಹಿರೇಮಠವು ಹಿರಿಯ ಪರಂಪರೆಯನ್ನು ಹೊಂದಿದೆ. ಪುರಾತನ ಕಾಲದ ಈ ಮಠವು ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಇಲ್ಲಿ ಮಠ ಸ್ಥಾಪನೆಯಾಗಿರುವುದರಿಂದ ಈ ಗ್ರಾಮವು ಧಾರ್ಮಿಕ ಸಂಸ್ಕಾರವನ್ನು ಪಡೆಯುವಂತಾಗಿದೆ. ಪ್ರಸ್ತುತ ಶ್ರೀ ನಿಜಲಿಂಗ ಶಿವಾಚಾರ್ಯ ಸ್ವಾಮಿಗಳು ಮಠಾಧಿಪತಿಯಾಗಿ ಅಧಿಕಾರದಲ್ಲಿದ್ದಾರೆ. ಗುರುಗಳು ಕ್ರಿಯಾಶೀಲರಾಗಿ, ವಿಚಾರವಂತರಾಗಿ ಧರ್ಮವನ್ನು ಪ್ರಚಾರಪಡಿಸಿ ವೀರಶೈವ ಧರ್ಮ ಬೆಳೆಯುವಂತೆ ಮಾಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ನಿಜಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಅಷ್ಟಗಿ, ಗುಲ್ಬರ್ಗ ತಾಲ್ಲೂಕು.

ಕಮಲಾಪುರ

ಗುಲ್ಬರ್ಗ ತಾಲ್ಲೂಕಿನ ಕಮಲಾಪುರವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಮೂವತ್ತು ಕಿ.ಮೀ ದೂರದಲ್ಲಿದೆ. ಧಾರ್ಮಿಕ ಹಿನ್ನಲೆಯುಳ್ಳ ಈ ಗ್ರಾಮವು ತಾಲ್ಲೂಕಿನ ಇತಿಹಾಸದಲ್ಲಿ ತಮ್ಮದೇ ಆದಂತಹ ಸ್ಥಾನವನ್ನು ಗಳಿಸಿಕೊಂಡಿದೆ. ಇಲ್ಲಿ ಶ್ರೀ ಶಾಂತಲಿಂಗೇಶ್ವರ ಹಿರೇಮಠವು ಸ್ಥಾಪನೆಯಾಗಿದೆ.

ಶಾಂತಲಿಂಗೇಶ್ವರ ಹಿರೇಮಠ: ಕಮಲಾಪುರ ಗ್ರಾಮದಲ್ಲಿ ಶ್ರೀ ಶಾಂತಲಿಂಗೇಶ್ವರ ಹಿರೇಮಠವು ಸ್ಥಾಪನೆಯಾಗಿ ಕಾಶಿಪೀಠದ ಈ ಮಠವು ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದು ಬಂದಿದೆ.

ಮಠ ಸ್ಥಾಪನೆ: ನೂರ ಐವತ್ತೈದು ವರ್ಷಗಳ ಹಿಂದೆ ಶ್ರೀ ಶಾಂತಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿದ್ದಾರೆ. ಮಹಾತಪಸ್ವಿಗಳಾದ ಗುರುಗಳು ಆಧ್ಯಾತ್ಮದ ಒಲವನ್ನು ಬೆಳಸಿಕೊಂಡು ಶಿವಯೋಗಸಿದ್ಧಿಯನ್ನು ಪಡೆದ ಮಹಾ ಮಹಿಮರು.ಇವರು ವೀರಶೈವ ಧರ್ಮವನ್ನು ಪ್ರಚಾರಪಡಿಸಿ, ಬೆಳೆಸಬೇಕೆಂಬ ಮಹಾದಾಸೆಯಿಂದ ಮಠವನ್ನು ಸ್ಥಾಪಿಸಿ ಅಪಾರವಾದ ಕಾರ್ಯವನ್ನು ಮಾಡಿದರು. ಶ್ರೀ ಶಾಂತಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳ ಸಾಧನೆಯಿಂದ ಈ ಪ್ರಾಂತ್ಯದಲ್ಲಿ ಭಕ್ತರು ಸಂಸ್ಕಾರವಂತರಾಗಿದ್ದಾರೆ. ಮಠವು ನಿರಂತರವಾಗಿ ಧಾರ್ಮಿಕ ಆಚರಣೆಗಳನ್ನು ನಡೆಸಬೇಕು ಎಂಬ ಧೃಢ ಸಂಕಲ್ಪದಿಂದ ಮಠಕ್ಕೆ ಆರ್ಥಿಕ ಸದೃಢತೆಯನ್ನು ತಂದುಕೊಟ್ಟು ಶ್ರೀ ಶಾಂತಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾದರು.

ಪರಂಪರೆ:

೧.ಷ.ಬ್ರ.ಶ್ರೀ ಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೨.ಷ.ಬ್ರ.ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯಸ್ವಾಮಿಗಳು
೩.ಷ.ಬ್ರ.ಶ್ರೀ ಶಾಂತಲಿಂಗದೇವರು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ

ಸ್ವಾಮಿಗಳು ಮಠದ ಧಾರ್ಮಿಕ ಕಾರ್ಯಗಳನ್ನು ಸಮರ್ಥವಾಗಿ ನಡೆಸಿದರು. ಇವರು ಶಿವಪೂಜಾ ನಿಷ್ಠರಾಗಿ ಧಾರ್ಮಿಕ ಆಚರಣೆ ಯನ್ನು ಮಾಡಿ ಮಠವನ್ನು ಒಂದು ಜಾಗೃತ ಸ್ಥಳವನ್ನಾಗಿ ಮಾಡಿ ಲಿಂಗೈಕ್ಯರಾದರು. ಇವರ ತರುವಾಯ ಈ ಮಠಕ್ಕೆ ಉತ್ತರಾಧಿ ಕಾರಿಗಳಿಲ್ಲದೆ ತೊಂಬತ್ತು ವರ್ಷಗಳ ಕಾಲ ಮಠವು ಖಾಲಿ ಉಳಿಯಬೇಕಾಯಿತು. ಈ ಸಂದರ್ಭದಲ್ಲಿ ಭಕ್ತರು ಮತ್ತು ಮಠದ ಸಂಬಂಧ ದೂರವಾಯಿತು. ಮಠದ ವಂಶಸ್ಥರು ಕೇವಲ ಗದ್ದುಗೆಗಳ ಪೂಜೆಗೆ ಮಾತ್ರ ಸೀಮಿತಗೊಂಡಿದ್ದರು. ಇಂತಹ ಸಂದರ್ಭದಲ್ಲಿ ಹಿರಿಯರು ಕಟ್ಟಿ ಬೆಳಸಿದ ಮಠವು ನಶಿಸಿಹೋಗಬಾರದೆಂಬ ಮಹದಾಸೆಯಿಂದ ಮಠದ ವಂಶಸ್ಥರು ೧೯೭೮ ರಲ್ಲಿ ಮಠಕ್ಕೆ ಶ್ರೀ ಶಾಂತಲಿಂಗ ಸ್ವಾಮಿಗಳನ್ನು ಉತ್ತರಾಧಿಕಾರಿಗಳಾಗಿ ನೇಮಿಸಿದ್ದಾರೆ.

ಶ್ರೀ ಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ಶ್ರೀ ಶಿವಲಿಂಗಯ್ಯ ಮತ್ತು ಶ್ರೀಮತಿ ಅನ್ನಪೂರ್ಣಮ್ಮನವರ ಪುತ್ರರಾಗಿ ೧೯೬೫ ರ ಮೇ ಎಂಟರಂದು ಜನಿಸಿದರು. ಇವರು ಕಮಲಾಪುರದಲ್ಲಿ ಪ್ರಾಥಮಿಕದಿಂದ ಪದವಿಯವರೆಗೂ ವಿದ್ಯಾಭ್ಯಾಸ ಕಲಿತು ಗದಗಿನ ಪುಟ್ಟರಾಜ ಗವಾಯಿಗಳಲ್ಲಿ ಸಂಗೀತ ವಿದ್ಯಾಭ್ಯಾಸವನ್ನು ಕಲಿತು ಮಠಕ್ಕೆ ಬಂದರು.

ಧಾರ್ಮಿಕ ಕಾರ್ಯಗಳು: ಶ್ರೀ ಶಾಂತಲಿಂಗ ದೇವರು ೧೯೯೦ ರಲ್ಲಿ ಮಹಾರಾಷ್ಟ್ರದ ಹೊಳಕೊಂಡದಲ್ಲೂ, ೧೯೯೩ ರಲ್ಲಿ ಮುಂಬಯಿನಲ್ಲೂ ಅನುಷ್ಠಾನ ಕೈಗೊಂಡರು. ಗುಲ್ಬರ್ಗ, ಬೀದರ್ ಜಿಲ್ಲೆಗಳಲ್ಲಿ ಸಂಚರಿಸಿ ಪುರಾಣ ಪ್ರವಚನಗಳನ್ನು ನೀಡಿ ಬಂದಿದ್ದಾರೆ. ಭಾದ್ರಪದ ಬಹುಳ ಪಂಚಮಿಯಂದು ಹಿರಿಯ ಗುರುಗಳ ಪುಣ್ಯಾರಾಧನೆ ಹಾಗೂ ಉತ್ಸವವನ್ನು ನಡೆಸಲಾ ಗುತ್ತಿದೆ. ಮಠದಲ್ಲಿ ಗದ್ದುಗೆಗಳಿಗೆ ನಿತ್ಯ ಪೂಜೆ ನಡೆಸಲಾಗುತ್ತಿದೆ. ಮಠದಲ್ಲಿ ನಡೆಯುವ ವಿಶೇಷ ಕಾರ್ಯಕ್ರಮಗಳಲ್ಲಿ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಗುರುಗಳು ೧೯೮೮ ರಲ್ಲಿ ಉತ್ತರಾಧಿಕಾರಿಗಳಾಗಿ ನೇಮಕಗೊಂಡ ಮೇಲೆ ಮಠಕ್ಕೆ ನೂತನ ಕಟ್ಟಡವನ್ನು ಕಟ್ಟಿಸಿದ್ದಾರೆ. ಅಲ್ಲದೆ ಗದ್ದುಗೆಗಳನ್ನು ನವೀಕರಣಗೊಳಿಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶಾಂತಲಿಂಗೇಶ್ವರ ದೇವರು, ಶ್ರೀ ಶಾಂತಲಿಂಗೇಶ್ವರ ಹಿರೇಮಠ, ಕಮಲಾಪುರ, ಗುಲ್ಬರ್ಗ ತಾಲ್ಲೂಕು.

ಕುರುಕೋಟಿ

ಗುಲ್ಬರ್ಗ ತಾಲ್ಲೂಕಿನ ಕುರುಕೋಟಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಎರೆಭೂಮಿಯ ಈ ನಾಡು ಸಮೃದ್ಧತೆಯನ್ನು ಕಂಡಿತ್ತು. ಇತ್ತೀಚೆಗೆ ಪ್ರಕೃತಿಯ ವೈಪರೀತ್ಯದಿಂದ ಸಂಕಷ್ಟಕ್ಕೆ ಈಡಾಗಿದೆ. ಇಲ್ಲಿ ಶ್ರೀ ಶಿವಲಿಂಗೇಶ್ವರ ವಿರಕ್ತ ಮಠವು ಸ್ಥಾಪನೆಯಾಗಿದೆ.

ಶಿವಲಿಂಗೇಶ್ವರ ವಿರಕ್ತಮಠ: ಕುರುಕೋಟಿ ಗ್ರಾಮದಲ್ಲಿ ಶ್ರೀ ಶಿವಲಿಂಗೇಶ್ವರ ವಿರಕ್ತ ಮಠವು ಸ್ಥಾಪನೆಯಾಗಿ ಈ ಗ್ರಾಮದ ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ಬೆಳೆದಿದೆ. ವಿರಕ್ತ ಸಂಪ್ರದಾಯದ ಈ ಮಠವು ಪುರಾತನ ಕಾಲದಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಈ ಮಠದ ಸ್ಥಾಪಕರು ಶ್ರೀ ಶಿವಲಿಂಗೇಶ್ವರ ಸ್ವಾಮಿಗಳೆಂದು ಹೇಳಲಾಗುತ್ತಿದೆ. ಆದರೆ ಇವರ ಕಾಲಮಾನದ ಬಗ್ಗೆ ನಿಖರವಾಗಿ ತಿಳಿದು ಬಂದಿಲ್ಲ.

ಶ್ರೀ ಶಿವಲಿಂಗೇಶ್ವರರು ಮಹಾತಪಸ್ವಿಗಳಾಗಿದ್ದು ಭಕ್ತರನ್ನು ಧಾರ್ಮಿಕ ವಿಚಾರಗಳಿಂದ ಸಂಸ್ಕಾರವಂತರನ್ನಾಗಿ ಮಾಡಿದ್ದರು. ಈ ಕಾರಣಕ್ಕಾಗಿ ಭಕ್ತರ ಮೆಚ್ಚಿನ ಗುರುಗಳಾಗಿದ್ದರು. ಇವರ ಕಾಲದಲ್ಲಿ ಶಿವಾನುಭವ ಗೋಷ್ಠಿಗಳು, ಧಾರ್ಮಿಕ ಸಭೆಗಳು ನಡೆದು ಜನರು ಆತ್ಮತೃಪ್ತಿಯಿಂದ ಬದುಕುವಂತೆ ಮಾಡಿದ್ದರು. ಇವರ ನಂತರ ಶ್ರೀ ರೇವಣಸಿದ್ಧ ಸ್ವಾಮಿಗಳು ಅಧಿಕಾರಕ್ಕೆ ಬಂದರು. ಇವರ ನಂತರ ಈಗ ಶ್ರೀ ಚನ್ನವೀರ ಸ್ವಾಮಿಗಳು ನೇಮಕಗೊಂಡಿದ್ದಾರೆ. ಇವರು ಬಿಜಾಪುರ ಜಿಲ್ಲೆಯ ಆಳಂದ ತಾಲ್ಲೂಕಿನ ದೇವರ ಹಿಪ್ಪರಿಗಿಯ ಗುರುಗಳು. ಇಲ್ಲಿ ನೇಮಕಗೊಂಡು ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಮಠವನ್ನು ಮುನ್ನಡೆಸಿದ್ದಾರೆ. ಗುರುಗಳು ಸಂಸ್ಕೃತ ಹಾಗೂ ವೇದವನ್ನು ಅಧ್ಯಯನ ಮಾಡಿದ್ದು ಧರ್ಮವನ್ನು ಆಚರಣೆಗೆ ತರುವಲ್ಲಿ ಭಕ್ತರಿಗೆ ಪ್ರೇರೇಪಣೆ ಕೊಡುತ್ತಾ ಧರ್ಮವನ್ನು ಅನುಷ್ಠಾನಗೊಳಿಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಚನ್ನವೀರ ಸ್ವಾಮಿಗಳು, ಶ್ರೀ ಶಿವಲಿಂಗೇಶ್ವರ ವಿರಕ್ತ ಮಠ, ಕುರುಕೋಟಿ, ಗುಲ್ಬರ್ಗ ತಾಲ್ಲೂಕು.

ಗುಲ್ಬರ್ಗ

ಗುಲ್ಬರ್ಗವು ನಿಜಾಮರ ಆಡಳಿತಕ್ಕೆ ಒಳಪಟ್ಟು ತನ್ನದೇ ಆದಂತಹ ಒಂದು ಸಂಸ್ಕೃತಿಯನ್ನು ರೂಪಿಸಿಕೊಂಡಿದೆ. ಹೈದರಾಬಾದ್ ಮತ್ತು ಮಹಾರಾಷ್ಟ್ರಗಳ ನೇರ ಸಂಪರ್ಕವನ್ನು ಹೊಂದಿರುವ ಗುಲ್ಬರ್ಗ ನಗರವು ವ್ಯಾಪಾರಿ ಕೇಂದ್ರವಾಗಿ ಹೆಸರು ಮಾಡಿದೆ. ಅಲ್ಲದೆ ಧಾರ್ಮಿಕ ವಲಯದಲ್ಲಿಯೂ ಪ್ರಖ್ಯಾತವಾಗಿದ್ದು ವೀರಶೈವ ಧರ್ಮದ ಬೆಳವಣಿಗೆಗೆ ಇಲ್ಲಿನ ಮಹಾ ಪುರುಷರು ನೀಡಿರುವ ಕಾಣಿಕೆ ಸ್ಮರಣೀಯ. ಪುರಾತನ ಕಾಲದಲ್ಲಿ ಹದಿನೆಂಟು ವೀರಶೈವ ಮಠಗಳು ಸ್ಥಾಪನೆಯಾಗಿದ್ದವು ಎಂದು ತಿಳಿದು ಬರುತ್ತದೆ. ಆದರೆ ಶೋಧನೆಗೆ ಹೋದ ಸಂದರ್ಭದಲ್ಲಿ ಕೇವಲ ಎಂಟು ಮಠಗಳ ಮಾಹಿತಿ ದೊರೆತಿದೆ.

ಗದ್ದುಗೆಮಠ: ಗುಲ್ಬರ್ಗ ನಗರದ ಮುಕ್ತಂಪುರ ಬಡಾವಣೆಯಲ್ಲಿ ಸ್ಥಾಪನೆಯಾಗಿರುವ ಗದ್ದುಗೆ ಮಠವು ವಿರಕ್ತ ಸಂಪ್ರದಾಯದ ಮಠವಾಗಿದೆ. ಈ ಮಠವು ನಗರದ ಹೊರ ವಲಯದಲ್ಲಿ ಸುಮಾರು ಮುನ್ನೂರು ವರ್ಷಗಳ ಹಿಂದೆ ಪ್ರಾರಂಭಗೊಂಡಿತ್ತು. ಆದರೆ ನಗರ ಬೆಳೆದಂತೆ ಮಠವು ನಗರದ ಮಧ್ಯಭಾಗಕ್ಕೆ ಬಂದಿದೆ. ಈ ಮಠವನ್ನು ಶ್ರೀ ರೇವಣಸಿದ್ಧೇಶ್ವರ ಸ್ವಾಮಿಗಳು ಸ್ಥಾಪನೆ ಮಾಡಿದ್ದಾರೆ.

ಮಠ ಸ್ಥಾಪನೆ: ಕಲ್ಯಾಣಕ್ಕೆ ಹೊರಟಿದ್ದ ಶ್ರೀ ರೇವಣಸಿದ್ಧೇಶ್ವರ ಸ್ವಾಮಿಗಳು ಭಕ್ತರ ಆಗ್ರಹದ ಮೇರೆಗೆ ಇಲ್ಲಿಯೇ ವಾಸ್ತವ್ಯ ಮಾಡಿದರು.ಗುರುಗಳು ಮಹಾತಪಸ್ವಿಗಳಾಗಿದ್ದು ಇವರ ತಪೋಶಕ್ತಿಗೆ ಭಕ್ತರು ಒಲಿದು ಮುಕ್ತಂಪುರದಲ್ಲಿ ಚಿಕ್ಕದಾದ ಒಂದು ಮಠವನ್ನು ಸ್ಥಾಪಿಸಿಕೊಟ್ಟರು. ನಂತರ ಗುಲ್ಬರ್ಗದ'ಬಾವೆ ಮನೆತನ'ದವರು ತಮ್ಮ ಭೂಮಿಯನ್ನು ಮಠಕ್ಕೆ ದಾನವಾಗಿ ಕೊಟ್ಟರು.'ಹುಂಡೇಕಾರರು'ಶಿಲಾಮಂಟಪವನ್ನು ಕಟ್ಟಿಸಿದರು. ನಂತರ ಭಕ್ತರೆಲ್ಲ ಸೇರಿ ಬೃಹದಾಕಾರದ ಕಟ್ಟಡವನ್ನು ಕಟ್ಟಿಸಿಕೊಟ್ಟರು. ಅಂದು ಕಟ್ಟಿಸಿದ ಬೃಹತ್ ಕಟ್ಟಡವೇ ಇಂದಿಗೂ ಗದ್ದುಗೆ ಮಠದ ಆಡಳಿತ ಹಾಗೂ ಧಾರ್ಮಿಕ ಕಾರ್ಯಗಳ ಕೇಂದ್ರವಾಗಿ ಬೆಳೆದಿದೆ.

ಶ್ರೀ ರೇವಣಸಿದ್ಧೇಶ್ವರ ಸ್ವಾಮಿಗಳು ತಪೋನಿಷ್ಠರಾಗಿ ಸಂಸ್ಕೃತ, ವೇದ ಹಾಗೂ ಶರಣ ತತ್ತ್ವವನ್ನು ಆಳವಾಗಿ ಅಭ್ಯಾಸ ಮಾಡಿದ ಪರಿಣಿತರಾಗಿದ್ದರು. ಇವರ ಪಾಂಡಿತ್ಯಕ್ಕೆ ಮನಸೋತ ನಾಡಿನ ಅನೇಕ ಶಿವಯೋಗಿಗಳು ಇವರಲ್ಲಿಗೆ ಬಂದು ಶಿವಯೋಗ ತತ್ತ್ವದ ಬಗ್ಗೆ ಚಿಂತನೆ ನಡೆಸಿ ಹೋಗುತ್ತಿದ್ದರು. ಇವರ ಕಾಲದಲ್ಲಿ ಗದ್ದುಗೆಯ ಮಠದಲ್ಲಿ ಅನುಭವ ಮಂಟಪದ ರೀತಿಯಲ್ಲಿ ಚರ್ಚೆಗಳು ನಡೆಯುತ್ತಿದ್ದವು. ಗುರುಗಳು ತಮ್ಮ ಬಳಿ ಒಟ್ಟು ಹದಿನಾಲ್ಕು ಜನ ಶಿಷ್ಯರನ್ನು ಬೆಳಸಿ ಶರಣ ಸಾಹಿತ್ಯ ಮತ್ತು ಶಿವಯೋಗದ ಬಗ್ಗೆ ತರಬೇತಿ ನೀಡಿ ಉತ್ತಮ ಸಾಧಕರನ್ನಾಗಿ ರೂಪಿಸಿದ್ದರು. ಇವರುಗಳು ಧರ್ಮಪ್ರಚಾರಕ್ಕಾಗಿ ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ, ವೀರಶೈವ ಧರ್ಮವನ್ನು ಬೋಧಿಸಿ ಬರುತ್ತಿದ್ದರು. ಇವರಲ್ಲಿ ಕೊನೆಯ ಶಿಷ್ಯರಾದ ಶ್ರೀ ಶಿವ ಶಂಕರ ಸ್ವಾಮಿಗಳಿಗೆ ಗದ್ದುಗೆ ಮಠದ ಅಧಿಕಾರವನ್ನು ಕೊಟ್ಟು ಶ್ರೀ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾಗಿದ್ದಾರೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ರೇವಣಸಿದ್ಧೇಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಶಿವಶಂಕರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಚನ್ನವೀರಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ರೇವಣಸಿದ್ಧಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ರೇವಪ್ಪಜ್ಜಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಶಿವಸಂಗಮೇಶ್ವರಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಶಂಕರಸ್ವಾಮಿಗಳು
೯. ಶ್ರೀ ಮ.ನಿ.ಪ್ರ. ರುದ್ರಮುನಿಸ್ವಾಮಿಗಳು

೧೦. ಶ್ರೀ ಮ.ನಿ.ಪ್ರ. ಗದ್ದುಗೇಶ್ವರಸ್ವಾಮಿಗಳು (-೧೮೮೬)
೧೧. ಶ್ರೀ ಮ.ನಿ.ಪ್ರ. ಚರಲಿಂಗೇಶ್ವರಸ್ವಾಮಿಗಳು (೧೮೮೬-೧೯೧೭)
೧೨. ಶ್ರೀ ಮ.ನಿ.ಪ್ರ. ಶಿವಮೂರ್ತಿಸ್ವಾಮಿಗಳು (೧೯೧೭-೧೯೬೧)
೧೩. ಶ್ರೀ ಮ.ನಿ.ಪ್ರ. ರುದ್ರಮುನಿಸ್ವಾಮಿಗಳು (೧೯೬೧-೧೯೭೬)
೧೪. ಶ್ರೀ ಮ.ನಿ.ಪ್ರ. ರೇವಣಸಿದ್ಧಸ್ವಾಮಿಗಳು (೧೯೭೮-)

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ರೇವಣಸಿದ್ಧ ಸ್ವಾಮಿಗಳ ತರುವಾಯ ಶ್ರೀ ರೇವಣ ಸಿದ್ದೇಶ್ವರರ ಕರಕಮಲ ಸಂಜಾತರಾದ ಶ್ರೀ ಶಿವಶಂಕರ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಮುನ್ನಡೆಸಿದ್ದಾರೆ. ಇವರ ತರುವಾಯ ಬಂದಂತಹ ಎಲ್ಲಾ ಗುರುಗಳು ಧಾರ್ಮಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಮಠವನ್ನು ಹೆಚ್ಚು ಅಭಿವೃದ್ಧಿ ಪಡಿಸಿದ್ದಾರೆ. ಪರಂಪರೆಯ ಹದಿಮೂರನೆಯ ಗುರುಗಳಾಗಿ ಅಧಿಕಾರವನ್ನು ವಹಿಸಿಕೊಂಡ ಶ್ರೀ ರುದ್ರಮುನಿ ಸ್ವಾಮಿಗಳು ಬಿಜಾಪುರ ಜಿಲ್ಲೆಯ ಹಡಗಲಿ ಗ್ರಾಮದಲ್ಲಿ ಜನಿಸಿ, ೧೯೬೧ ರಲ್ಲಿ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡು ೧೯೭೬ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ತರುವಾಯ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿದಿತ್ತು. ನಂತರ ರಾಯಚೂರು ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಕಂದಕೂರು ಗ್ರಾಮದ ಹಿರೇಮಠದಲ್ಲಿ ಜನಿಸಿದ ಶ್ರೀ ರೇವಣಸಿದ್ಧ ಸ್ವಾಮಿಗಳು ೧೯೭೮ ರ ಫೆಬ್ರುವರಿ ಹದಿನೇಳರಂದು ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಗುರುಗಳು ಸ್ನಾತಕೋತ್ತರ ಪದವೀಧರರಾಗಿ ಅಪಾರ ಪಾಂಡಿತ್ಯವನ್ನು ಸಂಪಾದಿಸಿಕೊಂಡಿದ್ದಾರೆ, ವೀರಶೈವ ಧರ್ಮದ ಪ್ರಗತಿಗೆ ಶಕ್ತಿಮೀರಿ ಶ್ರಮಿಸಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಲಿಂಗೈಕ್ಯ ಶ್ರೀ ಶಿವಮೂರ್ತಿ ಸ್ವಾಮಿಗಳು ೧೯೬೭ ರಲ್ಲಿ ಪ್ರತಿ ವಾರ ಸದ್ಭಾವನ ಗೋಷ್ಠಿಯನ್ನು ನಡೆಸಲು ಪ್ರಾರಂಭಿಸಿದ್ದರು. ಅಂದು ಪ್ರಾರಂಭಗೊಂಡ ಈ ಗೋಷ್ಠಿಯು ಈತನಕವೂ ನಡೆದುಕೊಂಡು ಬಂದಿದೆ. ಪ್ರತಿ ವಾರ ಒಂದೊಂದು ವಿಷಯದ ಬಗ್ಗೆ ಮುಕ್ತವಾಗಿ ಚರ್ಚೆ ನಡೆಸಲಾಗುತ್ತಿದೆ. ನಂತರ ವರ್ಷ ತುಂಬಿದ ಮೇಲೆ ಅರ್ಚನೆ, ಅರ್ಪಣಾ ಅನುಭಾವ ನಡೆಯುತ್ತಿದೆ. ಪ್ರತಿವರ್ಷ ಮಾಘಶುದ್ಧ ಭರತ ಹುಣ್ಣಿಮೆಯಲ್ಲಿ ಕರ್ತೃಗುರುಗಳ ರಥೋತ್ಸವ ನಡೆಯುತ್ತಿದೆ. ಈ ಸಂದರ್ಭದಲ್ಲಿ ಪುರಾಣ ಪ್ರವಚನ, ಉಪನ್ಯಾಸಗಳು ನಡೆಯುತ್ತಿವೆ. ಶ್ರಾವಣ ಮಾಸದಲ್ಲಿ ಮಠದಲ್ಲಿ ಬಹಿರಂಗ ಜಂಗಮ ಪಾದಪೂಜೆ ನಡೆಯುತ್ತಿದೆ.

ಸಾಹಿತ್ಯ-ಶಿಕ್ಷಣ ಸೇವೆ: ಗುರುಗಳು ಸಾಹಿತ್ಯ ಪ್ರೇಮಿಗಳಾಗಿದ್ದು ಸಾಹಿತ್ಯದ ಮೂಲಕ ಧರ್ಮವನ್ನು ಪ್ರಚಾರ ಮಾಡಬಹುದೆಂದು ಅರಿತು, ಈವರೆಗೆ ವೀರಶೈವ ಸಾಹಿತ್ಯಕ್ಕೆ ಸಂಬಂಧಪಟ್ಟ ಒಟ್ಟು ಇಪ್ಪತ್ತೈದು ಮೌಲಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಬಸವಣ್ಣನವರ ಅಷ್ಟಾವರಣ ನಿಷ್ಠೆ, ಶರಣರ ಅಷ್ಟಾವರಣನಿಷ್ಠೆ, ಗುರುಕರುಣ ತ್ರಿವಿಧಿ, ಶ್ರೀ ತೋಂಟದ ಸಿದ್ಧಲಿಂಗ ವಚನಗಳು, ಶ್ರೀ ದೇವರದಾಸಿಮಯ್ಯನವರ ವಚನಗಳು, ಅನುಭಾವಿಗಳ ಅನುಭವ ಪದಗಳು, ವಚನ ಸಂಪದ, ಶ್ರೀ ಚರಲಿಂಗೇಶ್ವರ ಪುರಾಣ ಮುಂತಾದ ಕೃತಿಗಳು ಜೊತೆಗೆ 'ದಿ ಸ್ಟೋರಿ ಆಫ್ ಶರಣ ಬಸವೇಶ್ವರ' ಎಂಬ ಆಂಗ್ಲ ಕೃತಿಯನ್ನು ಪ್ರಕಟಿಸಿ ಸಾಹಿತ್ಯ ಲೋಕಕ್ಕೆ ನೀಡಿದ್ದಾರೆ.

೧೯೬೭ ರಲ್ಲಿ ಬಸವೇಶ್ವರ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಲಾಗಿತ್ತು. ಅಂದು ಪ್ರಾರಂಭಿಸಿದ ವಿದ್ಯಾರ್ಥಿ ನಿಲಯವು ಈತನಕವೂ ನಡೆಯುತ್ತಾ ಬಂದಿದೆ. ಇತ್ತೀಚೆಗೆ ನರ್ಸರಿ ಹಾಗೂ ಪ್ರೌಢಶಾಲೆಯನ್ನು ಪ್ರಾರಂಭಿಸಲಾಗಿದೆ.

ಅಭಿವೃದ್ಧಿ ಕಾರ್ಯಗಳು: ಗುರುಗಳು ಅಧಿಕಾರಕ್ಕೆ ಬರುವ ಮೊದಲೇ ಗದ್ದುಗೆಮಠ ಹಾಗೂ ಈ ಮಠದ ಅಧೀನಕ್ಕೆ ಒಳಪಡುವ ಆಸ್ತಿಯು ಈ ಜಿಲ್ಲೆಯ ನಾನಾ ಭಾಗಗಳಲ್ಲಿ ಚದುರಿ ಹೋಗಿದೆ. ಹಿಂದೆ ನಿಜಾಮರ ಕಾಲದಲ್ಲಿ ಇನಾಂ ಕೊಟ್ಟ ಭೂಮಿಯು ಈಗಲೂ ಇದ್ದು ಇದರಲ್ಲಿ ಒಟ್ಟು ತೊಂಬತ್ತೆರಡು ಎಕರೆ ಮಠದ ಆಸ್ತಿಯಾಗಿ ಉಳಿದಿದೆ. ಈ ಆಸ್ತಿಯನ್ನು ಅಭಿವೃದ್ಧಿ ಪಡಿಸಿರುವ ಗುರುಗಳು ಆದಾಯವನ್ನು ತೆಗೆಯುತ್ತಿದ್ದಾರೆ. ಇದರಿಂದ ಬರುವ ಆದಾಯವನ್ನು ಮಠದ ಅಭಿವೃದ್ಧಿ,

ಧಾರ್ಮಿಕ ಕಾರ್ಯಗಳಿಗೆ ಹಾಗೂ ದಾಸೋಹಕ್ಕೆ ಬಳಸಿಕೊಳ್ಳಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ರೇವಣಸಿದ್ಧ ಸ್ವಾಮಿಗಳು, ಶ್ರೀ ಗದ್ದುಗೆ ಮಠ, ಮುಕ್ತಂಪುರ, ಗುಲ್ಬರ್ಗ ಜಿಲ್ಲೆ.

ಗುರುಬಸವ ಬೃಹನ್ಮಠ: ಗುಲ್ಬರ್ಗ ನಗರದ ಮುಕ್ತಂಪುರ ಬಡಾವಣೆಯಲ್ಲಿ ಸ್ಥಾಪನೆಯಾಗಿರುವ ಶ್ರೀ ಗುರುಬಸವ ಬೃಹನ್ಮಠವು, ವಿರಕ್ತಮಠವಾಗಿ ಕುಮಾರಸಮಯದಲ್ಲಿ ಬೆಳೆದು ಬಂದಿದೆ. ಹನ್ನೆರಡನೆಯ ಶತಮಾನದಲ್ಲಿ ಶ್ರೀ ಗುರುಬಸವೇಶ್ವರರಿಂದ ಪ್ರಾರಂಭಗೊಂಡ ಈ ಮಠವು ಈತನಕ ಬೆಳೆದು ಬಂದು ಶರಣತತ್ತ್ವಗಳನ್ನು ಪ್ರಚಾರಪಡಿಸುವಲ್ಲಿ ಯಶಸ್ಸನ್ನು ಕಂಡಿದೆ.

ಮಠ ಸ್ಥಾಪನೆ: ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ಕ್ರಾಂತಿಯಾದ ನಂತರ ಶರಣರು ದೇಶದ ನಾನಾ ಭಾಗಗಳಿಗೆ ಚದುರಿ ಹೋದಾಗ ಶರಣ ಬಸವೇಶ್ವರರು ತಮ್ಮ ಸಂಗಡಿಗರೊಂದಿಗೆ ಇಲ್ಲಿಗೆ ಬಂದು ಈ ಸ್ಥಳದಲ್ಲಿ ಆಶ್ರಯ ಪಡೆದಿದ್ದರು ಎಂದು ಹೇಳಲಾಗುತ್ತಿದೆ. ಇಲ್ಲಿ ನೆಲೆಸಿ ಧಾರ್ಮಿಕ ಆಚರಣೆಗಳನ್ನು ನಡೆಸಿದ ಶರಣರು ಕೆಲವು ದಿನಗಳ ನಂತರ ಬೇರೆಡೆಗೆ ಹೋದರು. ಅವರ ನೆನಪನ್ನು ಉಳಿಸಿಕೊಂಡು ಶರಣತತ್ತ್ವವನ್ನು ಪ್ರಚಾರಗೊಳಿಸುವ ಮಹದೋದ್ದೇಶದಿಂದ ಈ ಸ್ಥಳ ಒಂದು ಜಾಗೃತ ಸ್ಥಳವಾಗಿ ರೂಪುಗೊಂಡಿತು. ಶರಣತತ್ತ್ವದ ಪ್ರಚಾರಕ್ಕೆ ಈ ಮಠ ಸಲ್ಲಿಸಿರುವ ಸೇವೆ ಅಪಾರವಾಗಿದೆ. ಪುರಾತನ ಕಾಲದ ಈ ಮಠವು ಸ್ಥಾಪನೆಗೊಂಡಾಗಿನಿಂದ ಈತನಕ ಒಟ್ಟು ಹತ್ತೊಂಬತ್ತು ಜನ ಗುರುಗಳು ಪಟ್ಟಾಧಿಕಾರವನ್ನು ಪಡೆದುಕೊಂಡು ಅಧಿಕಾರವನ್ನು ನಡೆಸಿ ವೀರಶೈವ ಧರ್ಮವನ್ನು ಬೆಳೆಸಿದ್ದಾರೆ.

ಪರಂಪರೆ:

೦೧. ಶ್ರೀ ಮ.ನಿ.ಪ್ರ. ಗುರುಬಸವೇಶ್ವರರು
(ಮುಂದಿನ ಹದಿನೈದು ಮಠಾಧೀಪತಿಗಳ ಹೆಸರು ತಿಳಿದು ಬಂದಿಲ್ಲ)
೧೭. ಶ್ರೀ ಮ.ನಿ.ಪ್ರ. ವಿರೂಪಾಕ್ಷಸ್ವಾಮಿಗಳು
೧೮. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು
೧೯. ಶ್ರೀ ಮ.ನಿ.ಪ್ರ. ಚನ್ನಮಲ್ಲಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ಗುರುಬಸವೇಶ್ವರರು ಮಠವನ್ನು ಸ್ಥಾಪಿಸಿದ ನಂತರ ಅಧಿಕಾರಕ್ಕೆ ಬಂದ ಎಲ್ಲಾ ಗುರುಗಳು ಮಠವನ್ನು ಬೆಳೆಸಲು ಶಕ್ತಿ ಮೀರಿ ದುಡಿದಿದ್ದಾರೆ. ಹದಿನೆಂಟನೆಯ ಗುರುಗಳಾದ ಶ್ರೀ ಬಸವಲಿಂಗ ಸ್ವಾಮಿಗಳು ಧಾರವಾಡ ಜಿಲ್ಲೆ ಹುಬ್ಬಳಿ ತಾಲ್ಲೂಕಿನ ಶ್ರೀ ಸಿದ್ಧಲಿಂಗಸ್ವಾಮಿ ಮತ್ತು ಶ್ರೀಮತಿ ಪಾರ್ವತಮ್ಮನವರ ಪುತ್ರರಾಗಿ ೧೯೩೭ ರಲ್ಲಿ ಜನಿಸಿದರು. ತಂದೆ ತಾಯಿಯರು ಬಡತನದಿಂದ ಪಡುತ್ತಿದ್ದ ಕಷ್ಟವನ್ನು ನೋಡಿದ ಶ್ರೀ ಬಸವಲಿಂಗ ಸ್ವಾಮಿಗಳು ಚಿಕ್ಕ ವಯಸ್ಸಿನಲ್ಲಿಯೇ ಕಾಯಕಯೋಗವನ್ನು ಮೈಗೂಡಿಸಿಕೊಂಡು ಸಂಸಾರಕ್ಕೆ ನೆರವಾಗುತ್ತಿದ್ದರಂತೆ. ಈ ನೋವಿ ನಲ್ಲಿಯೂ ಧರ್ಮನಿಷ್ಠರಾಗಿ ಆಧ್ಯಾತ್ಮದ ಒಲವನ್ನು ಬೆಳೆಸಿಕೊಂಡಿದ್ದರು. ಧಾರವಾಡ ಮುರುಘಾ ಮಠದ ಶ್ರೀ ಮೃತ್ಯುಂಜಯ ಸ್ವಾಮಿಗಳ ದೃಷ್ಟಿಗೆ ಶ್ರೀ ಬಸವಲಿಂಗ ಸ್ವಾಮಿಗಳು ಬಿದ್ದರು. ನಂತರ ಶ್ರೀ ಬಸವಲಿಂಗ ಸ್ವಾಮಿಗಳಿಗೆ ಶಿಕ್ಷಣವನ್ನು ಕೊಡಿಸುವ ಉದ್ದೇಶದಿಂದ ಸೋಲಾಪುರದ ವೀರಶೈವ ಗುರುಕುಲಕ್ಕೆ ಕಳಿಸಿದರು. ಶ್ರೀ ಬಸವಲಿಂಗ ಸ್ವಾಮಿಗಳು ಸೋಲಾಪುರ, ಯಾದಗಿರಿ, ಬೆಂಗಳೂರಿನ ಜಯಚಾಮರಾಜೇಂದ್ರ ಕಾಲೇಜು ಹಾಗೂ ವಾರಣಾಸಿಯ ವಿಶ್ವವಿದ್ಯಾನಿಲಯದಲ್ಲಿ ಅದ್ವೈತ ಶಿಕ್ಷಣವನ್ನು ಪಡೆದು ೧೯೫೭ ರಲ್ಲಿ ಉಪ್ಪಿನ ಬೆಟಗೇರಿಯ ರಾಜಗುರು ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡರು. ನಂತರ ಗುಲ್ಬರ್ಗ ನಗರದ ಶ್ರೀ ಗುರುಬಸವ ಬೃಹನ್ಮಠದ ಹದಿನೇಳನೆಯ ಪಟ್ಟಾಧ್ಯಕ್ಷರಾದ ಶ್ರೀ ವಿರೂಪಾಕ್ಷ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಇಲ್ಲಿನ ಭಕ್ತರು ಸಮರ್ಥ ಉತ್ತರಾಧಿಕಾರಿಯ ಅನ್ವೇಷಣೆಯಲ್ಲಿದ್ದರು. ಈ ಸಂದರ್ಭದಲ್ಲಿ ಮುರಘಾ ಮಠದ ಗುರುಗಳಲ್ಲಿ ಭಿನ್ನವಿಸಿಕೊಂಡಾಗ ಮುರುಘಾ ಮಠದ ಗುರುಗಳು ಉಪ್ಪಿನ ಬೆಟಗೇರಿಯ ಆರನೆಯ ಪೀಠಾಧಿಕಾರಿಗಳಾಗಿದ್ದ ಶ್ರೀ ಬಸವಲಿಂಗ ಸ್ವಾಮಿಗಳನ್ನು ಇಲ್ಲಿಗೆ ಉತ್ತರಾಧಿಕಾರಿ ಯಾಗಿ ಅಧಿಕಾರ ವಹಿಸಿಕೊಳ್ಳಲು ಒಪ್ಪಿಸಿದರು. ಶ್ರೀ ಬಸವಲಿಂಗ ಸ್ವಾಮಿಗಳು ಉಪ್ಪಿನ ಬೆಟಗೇರಿಯ ಅಧಿಕಾರದ ಜೊತೆಗೆ ಪುರಾತನ ಪರಂಪರೆಯ ಶ್ರೀ ಗುರುಬಸವ ಬೃಹನ್ಮಠದ ಅಧಿಕಾರವನ್ನು ೧೯೬೧ ರಲ್ಲಿ ವಹಿಸಿಕೊಂಡರು. ಶಿವಪೂಜಾ ನಿಷ್ಠರಾಗಿ, ಜ್ಞಾನ ದಾಸೋಹಿಗಳಾಗಿ ಹಾಗೂ ಭಕ್ತರ ಉದ್ಧಾರಕರಾಗಿ ಮಠವನ್ನು ಸರ್ವ ರೀತಿಯಲ್ಲಿ ಬೆಳಸಿದರು. ಇವರು

೧೯೫೫ ರ ಏಪ್ರಿಲ್ ಎಂಟರಂದು ಲಿಂಗೈಕ್ಯರಾದರು. ಗುರುಗಳು ಲಿಂಗೈಕ್ಯರಾದ ಮೇಲೆ ಉತ್ತರಾಧಿಕಾರಿಗಳನ್ನು ನೇಮಿಸಿ ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಹೋಗಲು ಅನುವು ಮಾಡಿದ್ದಾರೆ.

ಧಾರ್ಮಿಕ ಕೆಲಸಗಳು: ಮಠದಲ್ಲಿರುವ ಪರಂಪರೆಯ ಗುರುಗಳ ಒಟ್ಟು ಎಂಟು ಗದ್ದುಗೆಗಳು ಈ ಮಠದಲ್ಲಿ ಸ್ಥಾಪನೆಯಾಗಿವೆ. ಈ ಗದ್ದುಗಳಿಗೆ ನಿತ್ಯಪೂಜೆ, ಶ್ರಾವಣದಲ್ಲಿ ಪುರಾಣಪ್ರವಚನ ಹಾಗೂ ಶಿವಾನುಭವ ಕಾರ್ಯಕ್ರಮಗಳು ನಡೆಯುತ್ತಿವೆ.ದಸರಾ ಸಂದರ್ಭದಲ್ಲಿ ನಡೆಯುವ ಹಿರಿಯ ಗುರುಗಳ ಪುಣ್ಯ ಸ್ಮರಣೆಯಲ್ಲಿ ಹನ್ನೊಂದುದಿನ ಪುರಾಣ ಪ್ರವಚನ ಹಾಗೂ ಸಂಗೀತ ಕಾರ್ಯಕ್ರಮಗಳು, ಧರ್ಮಸಭೆಗಳು ನಡೆಯುತ್ತಿವೆ. ಶ್ರೀ ಶರಣ ಬಸವೇಶ್ವರ ಜಾತ್ರೆಯನ್ನು ವೈಭವವಾಗಿ ಆಚರಿಸಲಾಗುತ್ತಿದೆ.

ಶಿಕ್ಷಣ-ಸಾಹಿತ್ಯ ಸೇವೆ: ಪರಂಪರೆಯ ಹದಿನೆಂಟನೆಯ ಶ್ರೀ ಬಸವಲಿಂಗ ಸ್ವಾಮಿಗಳು ೧೯೬೫ ರಲ್ಲಿ ಶ್ರೀಗುರು ಬಸವೇಶ್ವರ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿದರು. ಈ ಶಿಕ್ಷಣ ಸಂಸ್ಥೆಯಲ್ಲಿ ಪದವಿ ಪೂರ್ವಕಾಲೇಜು, ಶ್ರೀ ಅಣ್ಣಾರಾವ್ ಗುಣಮುಖಿ ಪ್ರೌಢಶಾಲೆ, ಪ್ರಾಥಮಿಕ ಶಾಲೆ, ಸಂಸ್ಕೃತ ಪಾಠಶಾಲೆಯನ್ನು ನಡೆಸಲಾಗುತ್ತಿದೆ. ಅಲ್ಲದೆ ಅನಾಥಾಲಯವನ್ನು ಸಹ ಈ ಶಿಕ್ಷಣ ಸಂಸ್ಥೆಯಲ್ಲಿ ನಡೆಸಲಾಗುತ್ತಿದೆ. ಮಠದ ವತಿಯಿಂದ ಉಚಿತ ಪ್ರಸಾದನಿಲಯವನ್ನು ನಡೆಸಲಾಗುತ್ತಿದ್ದು ಇಲ್ಲಿ ಅನೇಕ ವಿದ್ಯಾರ್ಥಿಗಳು ಆಶ್ರಯ ಪಡೆದಿದ್ದಾರೆ. ಮಠವು ಶಿಕ್ಷಣದ ಜೊತೆಗೆ ಸಾಹಿತ್ಯ ಕ್ಷೇತ್ರಕ್ಕೂ ಪಾದಾರ್ಪಣೆಮಾಡಿ ಶ್ರೀ ಗುರು ಬಸವೇಶ್ವರ ಚರಿತೆ, ಶ್ರೀ ಬಸವಲಿಂಗೇಶ್ವರ ನಾಮಾವಳಿ ಎಂಬ ಕೃತಿಗಳನ್ನು ಪ್ರಕಟಿಸಿದೆ. ಶ್ರೀ ಬಸವಲಿಂಗ ಸ್ವಾಮಿಗಳು ಜ್ಞಾನ ದಾಸೋಹಿಗಳಾಗಿದ್ದ ಕಾರಣ ಇವರು ಶಿಕ್ಷಣ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ಹೆಚ್ಚು ಒತ್ತು ಕೊಟ್ಟು ಕೆಲಸ ಮಾಡಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಪುರಾತನ ಪರಂಪರೆಯ ಈ ಮಠವನ್ನು ಕಳೆದ ಮುನ್ನೂರು ವರ್ಷಗಳ ಹಿಂದೆ ಗಚ್ಚಿನಲ್ಲಿ ನಿರ್ಮಿಸಿದ್ದು ಭವ್ಯವಾದ ಕಟ್ಟಡವನ್ನು ಒಳಗೊಂಡಿದೆ. ಈ ಕಟ್ಟಡದ ವಿಶಾಲತೆ ಹಾಗೂ ಕಟ್ಟಡವನ್ನು ನಿರ್ಮಿಸಿರುವ ಕಲಾ ಕೌಶಲ್ಯತೆಯ ಈ ಮಠವು ಹಿಂದೆ ನಡೆಸಿದ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳ ಶ್ರೀಮಂತಿಕೆಯ ಪ್ರತೀಕವಾಗಿದೆ. ಮಠದ ಕಟ್ಟಡವನ್ನು ಎರಡು ಅಂತಸ್ತಿನಲ್ಲಿ ಅಗತ್ಯಕ್ಕೆ ಅನುಗುಣವಾಗಿ ನಿರ್ಮಿಸಲಾಗಿದೆ. ಇತ್ತೀಚೆಗೆ ಶ್ರೀ ಬಸವಲಿಂಗೇಶ್ವರ ಕಲ್ಯಾಣ ಮಂಟಪವನ್ನು ಸ್ಥಾಪಿಸಲಾಗಿದೆ. ಹಿಂದೆ ಈ ಮಠಕ್ಕೆ ನೂರಾರು ಎಕರೆ ಆಸ್ತಿಯಿತ್ತು. ಈಗ ಎಪ್ಪತ್ತು ಎಕರೆ ಜಮೀನು ಮಾತ್ರ ಉಳಿದಿದ್ದು ಇದನ್ನು ಅಭಿವೃದ್ಧಿಪಡಿಸಿ ಉತ್ಪತ್ತಿ ತೆಗೆಯಲಾಗುತ್ತಿದೆ. ಕಳೆದ ಮುನ್ನೂರು ವರ್ಷಗಳಲ್ಲಿ ಅಭಿವೃದ್ಧಿಯನ್ನು ಕಂಡ ಮಠ ಇತ್ತೀಚಿನ ದಿನಗಳಲ್ಲಿ ಅಭಿವೃದ್ಧಿಯಲ್ಲಿ ಕುಂಠಿತಗೊಂಡ ಲಕ್ಷಣಗಳು ಕಂಡುಬರುತ್ತಿದೆ.

ವಿಳಾಸ: ಶ್ರೀ ಗುರುಬಸವ ಬೃಹನ್ಮಠ, ಮುಕ್ತಂಪುರ, ಗುಲ್ಬರ್ಗ ಜಿಲ್ಲೆ.

ಚೌದಾಪುರಿ ಮಠ: ಗುಲ್ಬರ್ಗ ನಗರದ ಬ್ರಹ್ಮಪುರ ಬಡಾವಣೆಯಲ್ಲಿ ಚೌದಾಪುರಿ ಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದಲ್ಲಿ ಕರ್ತೃಗುರುಗಳಾದ ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ತಮ್ಮ ಶಿಷ್ಯ ಸಮುದಾಯದ ಜೊತೆ ಶ್ರೀಶೈಲವನ್ನು ಬಿಟ್ಟು ದಕ್ಷಿಣ ಕರ್ನಾಟಕದಲ್ಲೆಲ್ಲ ಸಂಚರಿಸಿ ವೀರಶೈವ ಧರ್ಮದ ಸಾರವನ್ನು ಉಪದೇಶಿಸಿ ಉತ್ತರ ಕರ್ನಾಟಕದ ಕಲ್ಬುರ್ಗಿ ನಗರಕ್ಕೆ ಸಾವಿರ ವರ್ಷಗಳ ಹಿಂದೆ ಗುಲ್ಬರ್ಗ ನಗರಕ್ಕೆ ಆಗಮಿಸುತ್ತಾರೆ. ಆಗ ಇಲ್ಲಿ ಆಳ್ವಿಕೆ ನಡೆಸುತ್ತಿದ್ದ ದೊರೆಯು ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳ ಧಾರ್ಮಿಕ ಹಾಗೂ ಪವಾಡಗಳನ್ನು ಕೇಳಿ ತಿಳಿದುಕೊಂಡು ಅರಮನೆಗೆ ಆಹ್ವಾನಿಸಿ ಸತ್ಕರಿಸಿ ಅರಮನೆಯ ಪಕ್ಕದಲ್ಲಿಯೇ ಕಲ್ಮಠವನ್ನು ಕಟ್ಟಿಸಿಕೊಡುತ್ತಾನೆ. ಅಂದು ಕಟ್ಟಿಸಿದ ಕಲ್ಮಠ ಇಂದಿಗೂ ಕೋಟೆಯ ಒಳಭಾಗದಲ್ಲಿ ಇರುವುದನ್ನು ಗಮನಿಸ ಬಹುದಾಗಿದೆ. ದೊರೆಯು ಅರಮನೆಯ ಪಕ್ಕದಲ್ಲಿ ನಿರ್ಮಿಸಿದ ಮಠವನ್ನು ಮೂಲ ಮಠವಾಗಿ ತನ್ನ ಆಡಳಿತದ ವ್ಯಾಪ್ತಿಯಲ್ಲಿ ಬರುವ ಬ್ರಹ್ಮಪುರ,ಜಗತಿ,ದದ್ದಾಪುರ, ಮುಕ್ತಾಪುರ, ಹಿರೇಬಜಾರ, ಸೇಕರೋಜ ಮುಂತಾದ ಒಟ್ಟು ಹದಿಮೂರು ಗ್ರಾಮಗಳಲ್ಲಿ ಮಠಗಳನ್ನು ಸ್ಥಾಪಿಸಿ ಹದಿನಾಲ್ಕು ಮಠಗಳಿಗೆ ಗುರುಗಳನ್ನಾಗಿ ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳನ್ನು ಮುಖ್ಯ ಮಠಾಧೀಶರಾಗಿ ನೇಮಿಸುತ್ತಾನೆ. ಈ ಹದಿನಾಲ್ಕು ಮಠಗಳಿಗೆ'ಚೌದಾಪುರಿ ಮಠ'ವೆಂದು ನಾಮಕರಣ ಮಾಡಿ ವೀರಶೈವ ಧರ್ಮವು ಬೆಳೆಯಲು ಕಾರಣೀಭೂತರಾಗಿದ್ದಾರೆ. ರಂಭಾಪುರಿ ಪೀಠದ ಶಾಖಾ ಮಠವಾಗಿರುವ ಈ ಮಠವು ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ.

ಕರ್ತೃಗುರುಗಳಾದ ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ಘಟದಿಂದ ಮಠ ಬೆಳೆಯಬೇಕೇ ವಿನಃ ಮಠದಿಂದ ಘಟ ಬೆಳೆಯಬಾರದು ಎಂಬ ತತ್ತ್ವವನ್ನು ಇಟ್ಟುಕೊಂಡು ಮಠವನ್ನು ಪ್ರಭಾವಿ ಮಠವಾಗಿ ಬೆಳೆಸಿದರು. ಇವರ ತರುವಾಯ ಮಠದ ಅಧಿಕಾರವನ್ನು ವಹಿಸಿಕೊಂಡ ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳು ಮಠದ ಪರಂಪರೆಯನ್ನು ಬೆಳೆಸಿದರು.

ಪರಂಪರೆ:

೧. ಷ.ಬ್ರ.ಶ್ರೀ ರೇವಣಸಿದ್ಧೇಶ್ವರ ಶಿವಾಚಾರ್ಯಸ್ವಾಮಿಗಳು

೨. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು

೩. ಷ.ಬ್ರ.ಶ್ರೀ ಶಾಂತವೀರ ಶಿವಾಚಾರ್ಯಸ್ವಾಮಿಗಳು

೪. ಷ.ಬ್ರ.ಶ್ರೀ ರೇವಣಸಿದ್ಧೇಶ್ವರ ಶಿವಾಚಾರ್ಯಸ್ವಾಮಿಗಳು (ಈಗಿನ ಗುರುಗಳು)

ಈ ರೀತಿ ಮಠದ ಪರಂಪರೆಯಲ್ಲಿ ಮೂರು ಜನ ಗುರುಗಳ ಹೆಸರುಗಳನ್ನೇ ಅನುಕ್ರಮಣಿಕೆಯ ರೀತಿಯಲ್ಲಿ ಪಟ್ಟಾಧಿಕಾರ ವಹಿಸಿಕೊಳ್ಳುವ ಗುರುಗಳು ಅಭಿದಾನ ಪಡೆದು ಅಧಿಕಾರಕ್ಕೆ ಬಂದಿರುವ ಕಾರಣ ಪರಂಪರೆಯ ಉಳಿದ ಗುರುಗಳ ಹೆಸರನ್ನು ಗುರುತಿಸಲಾಗಿಲ್ಲ. ಈ ಪುರಾತನ ಮಠದಲ್ಲಿ ಈವರೆವಿಗೆ ಅಧಿಕಾರ ನಡೆಸಿದ ಗುರುಗಳ ಬಗ್ಗೆ ನಿಖರವಾಗಿ ಹೇಳಲು ಕಷ್ಟವಾಗಿದೆ.

ಸ್ಥಳಾಂತರ: ಮೊದಲು ಸ್ಥಾಪನೆಯಾಗಿದ್ದ ಅರಮನೆಯ ಪಕ್ಕದ ಮಠವನ್ನು ಬಿಟ್ಟು ಶಹಬಜಾರಿನ ಮಠಕ್ಕೆ ಮಠದ ಆಡಳಿತವನ್ನು ಸ್ಥಳಾಂತರಿಸಿದ್ದರು. ನಂತರ ಈ ಮಠವನ್ನು ಬಿಟ್ಟ ಬ್ರಹ್ಮಪುರದಲ್ಲಿದ್ದ ಶಾಖಾ ಮಠಕ್ಕೆ ಪುನಃ ಸ್ಥಳಾಂತರಗೊಂಡಿತು. ಪ್ರಸ್ತುತ ಶಹಬಜಾರಿನ ಮಠ ಮತ್ತು ಬ್ರಹ್ಮಪುರ ಮಠ ಮಾತ್ರ ಉಳಿದಿದ್ದು ಉಳಿದೆಲ್ಲ ಮಠಗಳು ತಮ್ಮ ಅಸ್ತಿತ್ತ್ವವನ್ನು ಕಳೆದುಕೊಂಡಿವೆ. ಶಹಬಜಾರಿನಲ್ಲಿರುವ ಮಠದಲ್ಲಿ ಈಗಲೂ ಧಾರ್ಮಿಕ ಕಾರ್ಯಗಳನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಬರಲಾಗುತ್ತಿದೆ. ಈ ಮಠಕ್ಕೆ ಸಂಬಂಧಿಸಿದ ಮೂಲ ಮಠವು ಗುಲ್ಬರ್ಗ ಕೋಟೆಯ ಒಳಗೆ ಇದ್ದು ಈಗ ಜೀರ್ಣಗೊಂಡಿದೆ. ಆದರೂ ಈ ಮಠದ ಜಾಗದಲ್ಲಿ ಶಿವಲಿಂಗಗಳು ಮತ್ತು ಗದ್ದುಗೆಗಳನ್ನು ಗುರುತಿಸಬಹುದಾಗಿದೆ ಎಂದು ಹೇಳಲಾಗುತ್ತಿದೆ. ಶಹಾಬಜಾರಿನಲ್ಲಿರುವ ಮೂಲಮಠದಲ್ಲಿ ನಾಲ್ಕು ಗದ್ದುಗೆಗಳು, ಬ್ರಹ್ಮಪುರ ಮಠದಲ್ಲಿ ಎರಡು ಗದ್ದುಗೆಗಳು ಸ್ಥಾಪನೆಯಾಗಿವೆ. ಉಳಿದಂಥ ಗದ್ದುಗೆಗಳು ಶಾಖಾ ಮಠದಲ್ಲಿ ಸ್ಥಾಪನೆಯಾಗಿವೆ ಎಂದು ಈಗಿನ ಗುರುಗಳು ಹೇಳುತ್ತಾರೆ. ಹಿರಿಯ ಗುರುಗಳಾದ ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಬೆಳೆಸಿ ೧೯೮೩ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಗುರುಗಳು ಲಿಂಗೈಕ್ಯರಾಗುವ ಮೊದಲೇ ತಮ್ಮ ಕರಕಮಲ ಸಂಜಾತ ಶ್ರೀ ರೇವಣಸಿದ್ಧೇಶ್ವರ ಸ್ವಾಮಿಗಳಿಗೆ ೧೯೭೮ ರಲ್ಲಿ ಪಟ್ಟಾಧಿಕಾರವನ್ನು ನೀಡಿದ್ದರು.

ಸುರಪುರ ತಾಲ್ಲೂಕಿನ ಶ್ರೀ ರುದ್ರಸ್ವಾಮಿ ಮತ್ತು ಶ್ರೀಮತಿ ಸಿದ್ಧರಾಮಮ್ಮನವರ ಪುತ್ರರಾಗಿ ೧೯೪೫ ರ ಮೇ ಐದು ರಂದು ಜನಿಸಿದ ಶ್ರೀ ರೇವಣಸಿದ್ಧ ಸ್ವಾಮಿಗಳು ಪ್ರಾಥಮಿಕ,ಪ್ರೌಢ ಹಾಗೂ ಕಾಲೇಜು ಶಿಕ್ಷಣವನ್ನು ಗುಲ್ಬರ್ಗದಲ್ಲಿಯೇ ಮುಗಿಸಿ, ಧಾರವಾಡ ವಿಶ್ವವಿದ್ಯಾನಿಲಯದಲ್ಲಿ ತತ್ತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಹಿರಿಯ ಗುರುಗಳ ಮಾರ್ಗದರ್ಶನದಲ್ಲಿ ಮಠವನ್ನು ಮುನ್ನಡೆಸಿ ಅಪಾರ ಅನುಭವವನ್ನು ಪಡೆದುಕೊಂಡರು. ಪೂಜಾ ನಿಷ್ಠರಾಗಿ, ಉತ್ತಮ ಪಾಂಡಿತ್ಯ ಪಡೆದ ಗುರುಗಳು ಸಮಾಜ ಸಂಘಟಿಕರಾಗಿ ಮಠವನ್ನು ಹಾಗೂ ಸಮಾಜವನ್ನು ಬೆಳೆ ಸಿದ್ದಾರೆ. ಗುರುಗಳು ಹೈದರಾಬಾದ್ ಕರ್ನಾಟಕದ ಶಿವಾಚಾರ್ಯ ಸಂಘದ ಅಧ್ಯಕ್ಷರಾಗಿ ಆಚಾರ್ಯ ಪರಂಪರೆಯನ್ನು ಬೆಳಸುವಲ್ಲಿ ಹಾಗೂ ಪ್ರಚಾರಪಡಿಸುವಲ್ಲಿ ಶ್ರಮಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಗುಲ್ಬರ್ಗ ನಗರದ ಎರಡೂ ಮಠಗಳಲ್ಲಿರುವ ಗದ್ದುಗೆಗಳಿಗೆ ನಿತ್ಯ ಪೂಜೆ, ಅಮಾವಾಸ್ಯೆಯಲ್ಲಿ ವಿಶೇಷ ಪೂಜೆಯ ಜೊತೆಗೆ ಧಾರ್ಮಿಕ ಸಭೆಯನ್ನು ಹಮ್ಮಿಕೊಳ್ಳಲಾಗುತ್ತಿದೆ. ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಹಾಗೂ ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಶ್ರಾವಣ ಮಾಸದಲ್ಲಿ ನಲವತ್ತೊಂದು ದಿನಗಳ ಕಾಲ ಪುರಾಣ ಮತ್ತು ಪ್ರವಚನವನ್ನು ನಡೆಸಲಾಗುತ್ತಿದೆ.

ಶಿಕ್ಷಣ-ಸಾಹಿತ್ಯ ಸೇವೆ: ೧೯೯೨ ರಲ್ಲಿ 'ಚೌದಾಪುರ ಹಿರೇಮಠ ಶಿಕ್ಷಣ ಸಂಸ್ಥೆ'ಯನ್ನು ಪ್ರಾರಂಭಿಸಿ ಎರಡು ಪ್ರಾಥಮಿಕ ಶಾಲೆಗಳನ್ನು ನಡೆಸುತ್ತಿದ್ದಾರೆ. ಅಲ್ಲದೆ ಉಚಿತ ವಿದ್ಯಾರ್ಥಿ ನಿಲಯವನ್ನು ನಡೆಸುತ್ತಿದ್ದು ಇಪ್ಪತ್ತು ವಿದ್ಯಾರ್ಥಿಗಳು ಆಶ್ರಯ

ಪಡೆದಿದ್ದಾರೆ. ಗುರುಗಳು ಸ್ವತಃ ಸಾಹಿತಿಗಳಾಗಿ ಕವನ ಸಂಕಲನ, ನಾನೊಬ್ಬ ಸಂನ್ಯಾಸಿ ಎಂಬ ಪುಸ್ತಕಗಳನ್ನು ಬರೆದು ಪ್ರಕಟಿಸಿದ್ದಾರೆ. ಮಠದಲ್ಲಿ ನಡೆಯುವ ಧಾರ್ಮಿಕ ಸಭೆಯಲ್ಲಿ ಸಾಹಿತ್ಯಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಉಪನ್ಯಾಸಗಳನ್ನು ಏರ್ಪಡಿಸಿ ಸಾಹಿತ್ಯದ ಬಗ್ಗೆ ತಮಗಿರುವ ಆಸಕ್ತಿಯನ್ನು ಬಿಂಬಿಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು, ಶ್ರೀ ಚೌದಾಪುರಿ ಮಠ, ಬ್ರಹ್ಮಪುರ, ಗುಲ್ಬರ್ಗ.
ಆಧಾರ: 'ಅರಳು' ಸಂಭಾವನಾ ಗ್ರಂಥ

ಪರುಷ ಮಠ: ಗುಲ್ಬರ್ಗ ನಗರದ ಶಹಬಜಾರದ ಕಬಾಡ ಗಲ್ಲಿಯಲ್ಲಿ ಸ್ಥಾಪನೆಯಾಗಿರುವ ಪರುಷ ಮಠವು ಏಳುನೂರು ವರ್ಷಗಳ ಹಿಂದೆ ಪ್ರಾರಂಭಗೊಂಡಿದೆ. ಪರುಷ ಮಠವು ಶ್ರೀ ಚನ್ನಮಲ್ಲೇಶ್ವರ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪನೆಯಾಯಿತು. ಉಜ್ಜಯಿನಿ ಪೀಠದ ಶಾಖಾ ಮಠವಾಗಿ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ.

ಮಠ ಸ್ಥಾಪನೆ: ಬಿಜಾಪುರ ಜಿಲ್ಲೆಯ ಚರಲಿಂಗಮಠದ ಶ್ರೀ ರಾಚೋಟಯ್ಯ ಮತ್ತು ಶ್ರೀಮತಿ ಶಿವಲಿಂಗಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಚನ್ನಮಲ್ಲೇಶ್ವರರು ಬಾಲಯೋಗಿಯಾಗಿ ಬಾಲ್ಯದಲ್ಲಿಯೇ ಮೆರೆದರು. ನಂತರ ಪ್ರೌಢಾವಸ್ಥೆಗೆ ಬಂದ ಮೇಲೆ ಶಾಸ್ತ್ರೀಯವಾಗಿ ಧರ್ಮವನ್ನು ಅಧ್ಯಯನಮಾಡಿ ಆಧ್ಯಾತ್ಮಸಿದ್ಧಿಯನ್ನು ಪಡೆದರು. ಪ್ರೌಢಾವಸ್ಥೆಗೆ ಬಂದ ಮೇಲೆ ಶ್ರೀ ಚನ್ನಮಲ್ಲೇಶ್ವರರು ದೇಶ ಪರ್ಯಟನೆ ಮಾಡಿ ಅಪಾರ ಜ್ಞಾನವನ್ನು ಸಂಪಾದಿಸಿಕೊಂಡರು. ಇವರು ಲೋಕಸಂಚಾರ ಕೈಗೊಂಡು ಗುಲ್ಬರ್ಗ ನಗರಕ್ಕೆ ಬಂದು ಇಲ್ಲಿ ಅನೇಕ ಪವಾಡಗಳನ್ನು ಮಾಡಿದರು. ಈ ಸಂದರ್ಭದಲ್ಲಿ ಭಕ್ತರು ಮಠವನ್ನು ಸ್ಥಾಪಿಸಿ ಗುರುಗಳನ್ನು ಸತ್ಕರಿಸಿ ಉತ್ಸವದಲ್ಲಿ ಮಠಕ್ಕೆ ಕರೆತರುತ್ತಾರಂತೆ. ಗುರುಗಳ ಪ್ರಭಾವ ಸುತ್ತಲ ಪ್ರಾಂತ್ಯಕ್ಕೆ ಹಬ್ಬಿ ಭಕ್ತರು ಗುರುಗಳ ದರ್ಶನಕ್ಕೆ ಆಗಮಿಸಿ ತಮ್ಮ ಕಷ್ಟ ಕಾರ್ಪಣ್ಯಗಳನ್ನು ಪರಿಹರಿಸಿಕೊಂಡರು. ಮಠಕ್ಕೆ ಬರುವ ಭಕ್ತರೆಲ್ಲಾ ಪರಸಿ (ಜಂಗಮರ ಆರಾಧನೆ)ಯನ್ನು ಮಾಡುವುದರಿಂದ ಈ ಮಠವನ್ನು 'ಪರಸಿಮಠ'ಎಂದು ರೂಢಿಗತವಾಗಿ ಕರೆಯತೊಡಗಿದರು. ನಂತರ 'ಪರುಷ ಮಠ'ಎಂದು ಪರಿವರ್ತನೆಯಾಗಿದೆ ಎಂದು ಹೇಳಲಾಗುತ್ತಿದೆ.ಮಠ ಸ್ಥಾಪನೆಯ ನಂತರ ಶ್ರೀ ಚನ್ನಮಲ್ಲೇಶ್ವರರು ಇಲ್ಲಿ ಅನೇಕ ಪವಾಡಗಳನ್ನು ಮಾಡಿ ಭಕ್ತರ ಮನಸೆದ್ದರು. ಅಲ್ಲದೆ ವೀರಶೈವ ಧರ್ಮವನ್ನು ಬೆಳಗಿಸಿ ೧೯೨೫ ರಲ್ಲಿ ಜೀವಂತ ಸಮಾಧಿಯಾಗಿದ್ದಾರೆ.

ಪರಂಪರೆ:
೧. ಷ.ಬ್ರ.ಶ್ರೀ ಚನ್ನಮಲ್ಲೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಚನ್ನಮಲ್ಲೇಶ್ವರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಅಭಿನವ ಚನ್ನಮಲ್ಲೇಶ್ವರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಮಠದ ಪರಂಪರೆಯಲ್ಲಿ ಅಧಿಕಾರಕ್ಕೆ ಬಂದ ಗುರುಗಳ ಬಗ್ಗೆ ನಿಖರವಾದ ಮಾಹಿತಿ ತಿಳಿಯದಾಗಿದೆ. ಈಗಿನ ಅಭಿನವ ಶ್ರೀ ಚನ್ನಮಲ್ಲೇಶ್ವರ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬರುವ ಮೊದಲು ಶ್ರೀ ಚನ್ನಮಲ್ಲೇಶ್ವರ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ನಡೆಸಿದ್ದರೆಂದು ತಿಳಿದು ಬರುತ್ತದೆ. ಇವರು ಲಿಂಗೈಕ್ಯರಾದ ಮೇಲೆ ೧೯೭೬ ರ ಅಕ್ಟೋಬರ್ ಇಪ್ಪತ್ತೊಂದರಂದು ಅಭಿನವ ಶ್ರೀ ಚನ್ನಮಲ್ಲೇಶ್ವರರು ಅಧಿಕಾರಕ್ಕೆ ಬಂದಿದ್ದಾರೆ. ಇವರು ಬಿಜಾಪುರದ ಶ್ರೀ ವೀರಭದ್ರಯ್ಯ ಮತ್ತು ಶ್ರೀಮತಿ ಶಿವಲಿಂಗಮ್ಮನವರ ಪುತ್ರರಾಗಿ ೧೯೫೬ ರ ಮೇ ಹತ್ತರಂದು ಜನಿಸಿ ಬಿಜಾಪುರದಲ್ಲಿಯೇ ವಿದ್ಯಾಭ್ಯಾಸವನ್ನು ಮುಗಿಸಿ ಪುತ್ರ ವರ್ಗದ ಈ ಮಠಕ್ಕೆ ಮಠಾಧೀಶರಾದರು.ಗುರುಗಳು ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ ಮಠದ ಕಟ್ಟಡ ಪೂರ್ಣ ಶಿಥಿಲಗೊಂಡಿತ್ತು. ಗುರುಗಳು ಅದನ್ನು ಪೂರ್ಣ ತೆಗೆಸಿ ನೂತನ ಕಟ್ಟಡವನ್ನು ನಿರ್ಮಿಸಿರುತ್ತಾರೆ. ಮಠದ ಆವರಣದಲ್ಲಿ ಎರಡು ಗದ್ದುಗೆಗಳು ಇವೆ.

ಧಾರ್ಮಿಕ -ಶೈಕ್ಷಣಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಎರಡೂ ಗದ್ದುಗೆಗಳಿಗೆ ನಿತ್ಯ ಪೂಜೆ ಸಲ್ಲಿಸಲಾಗುತ್ತಿದೆ. ಅಮಾವಾಸ್ಯೆಯಲ್ಲಿ ವಿಶೇಷ ಪೂಜೆ, ಶ್ರಾವಣ ಮಾಸದಲ್ಲಿ ಒಂದು ತಿಂಗಳು ಪುರಾಣ ಪ್ರವಚನ, ಮಾರ್ಗಶಿರ ದ್ವಾದಶಿಯಲ್ಲಿ ಕರ್ತೃ ಗುರುಗಳ ಪುಣ್ಯ ತಿಥಿಯನ್ನು ನಡೆಸಲಾಗುತ್ತಿದೆ. ಮಠದ ವತಿಯಿಂದ 'ಪರುಷ ಮಠ ಚರಿತೆ' ಎಂಬ ಪುಸ್ತಕ ಹಾಗೂ

ಧ್ವನಿಸುರುಳಿಯನ್ನು ಪ್ರಕಟಿಸಿ ಬಿಡುಗಡೆ ಮಾಡಿಸಲಾಗಿದೆ. ಈ ರೀತಿ ಧಾರ್ಮಿಕ ಕಾರ್ಯಗಳ ಜೊತೆಗೆ ಶಿಕ್ಷಣಕ್ಕೂ ಒತ್ತು ಕೊಟ್ಟ ಮಠ ೧೯೯೫ರಲ್ಲಿ 'ಶ್ರೀ ಚನ್ನಮಲ್ಲೇಶ್ವರ ವಿದ್ಯಾವರ್ಧಕ ಸಂಘ' ವನ್ನು ಸ್ಥಾಪಿಸಿ ಶಿಶುವಿಹಾರ, ಪ್ರಾಥಮಿಕ ಶಾಲೆಯನ್ನು ನಡೆಸುತ್ತಿದೆ. ಮಠದಲ್ಲಿ ನಿತ್ಯದಾಸೋಹ ಹಾಗೂ ಕಲಿಯುವ ಬಡಮಕ್ಕಳಿಗೆ ಆಶ್ರಯ ಕಲ್ಪಿಸಲಾಗಿದೆ.

ವಿಳಾಸ: ಷ.ಬ್ರ.ಶ್ರೀ ಅಭಿನವ ಚನ್ನಮಲ್ಲೇಶ್ವರ ಶಿವಾಚಾರ್ಯ ಸ್ವಾಮಿಗಳು,ಶ್ರೀ ಪರುಷಮಠ, ಶಹಾಬಜಾರ್, ಕಬಾಡಗಲ್ಲಿ, ಗುಲ್ಬರ್ಗ.

ಮಹಾಜನಮಠ: ಗುಲ್ಬರ್ಗ ನಗರದ ಸರಾಫ್ ಬಜಾರ್‌ನ ಭೋಯಿ ಗಲ್ಲಿಯಲ್ಲಿ ಶ್ರೀ ಮಹಾಜನ ಮಠವು ಸ್ಥಾಪನೆಯಾಗಿದೆ. ಪುರಾತನ ಪರಂಪರೆಯುಳ್ಳ ಈ ಮಠವು ನಗರದಲ್ಲಿ ಅಸ್ತಿತ್ವದಲ್ಲಿದ್ದು, ವೀರಶೈವಧರ್ಮ ಪ್ರಬಲವಾಗಿ ಬೆಳೆಯಲು ನೆರವಾಗಿದೆ. ಪ್ರಸ್ತುತ ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು ಮಠಾಧಿಪತಿಯಾಗಿದ್ದು ತಮ್ಮ ಕ್ರಿಯಾಶೀಲ ಚಟುವಟಿಕೆಗಳಿಂದ ಮಠ ಮತ್ತು ಸಮಾಜವನ್ನು ಅಭಿವೃದ್ಧಿಪಡಿಸಿದ್ದಾರೆ. ಗುರುಗಳು ಹೈದರಾಬಾದ್ ಕರ್ನಾಟಕದ ಶಿವಾಚಾರ್ಯ ಸಂಘದ ಪ್ರಧಾನ ಕಾರ್ಯದರ್ಶಿಗಳಾಗಿ ಸಂಘಟನಾ ಕಾರ್ಯದಲ್ಲಿಯೂ ಹೆಸರು ಗಳಿಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು, ಶ್ರೀ ಮಹಾಜನ ಮಠ, ಸರಾಫ್ ಬಜಾರ್, ಭೋಯಿಗಲ್ಲಿ, ಗುಲ್ಬರ್ಗ.

ರೋಜಾ ಹಿರೇಮಠ: ಗುಲ್ಬರ್ಗ ನಗರದ ಬಡಾರೋಜಾ ಬಡಾವಣೆಯ ಬಂದೇನವಾಜ್ ದರ್ಗದ ಹತ್ತಿರ ರಂಭಾಪುರಿ ಪೀಠದ ಶಾಖಾ ಮಠವಾದ 'ಶ್ರೀ ರೋಜಾ ಹಿರೇಮಠವು'ಸ್ಥಾಪನೆಯಾಗಿದೆ. ಇದು ಶ್ರೀ ಕೆಂಚಬಸವ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಗುರುಗಳು ಬಹಳ ಪವಾಡ ಪುರುಷರಾಗಿದ್ದ ಕಾರಣ ಇವರಿಗೆ ಹೈದರಾಬಾದ್ ನಿಜಾಮನು ಶರಣಾಗಿ, ಗುರುಗಳ ಧಾರ್ಮಿಕ ಆಚರಣೆಗೆ ತೊಂದರೆಯಾಗಬಾರದೆಂಬ ಕಾರಣಕ್ಕಾಗಿ ಮಠವನ್ನು ಸ್ಥಾಪಿಸಿ ಇನಾಂ ನೀಡಿದ್ದನು. ಕರ್ತೃ ಗುರುಗಳಾದ ಶ್ರೀ ಕೆಂಚಬಸವ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಹಿಂದೂ ಮತ್ತು ಮುಸ್ಲಿಂ ಭಾವೈಕ್ಯತೆಯ ಸಂಕೇತವಾಗಿ ಬೆಳೆದ ಈ ಮಠಕ್ಕೆ ಇಂದಿಗೂ ಮುಸ್ಲಿಮರೂ ಸಹ ಭಕ್ತರಾಗಿದ್ದಾರೆ.

ಪರಂಪರೆ:

೧. ಷ.ಬ್ರ.ಶ್ರೀ ಕೆಂಚಬಸವ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ನಾಗಬಸವೇಶ್ವರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಕೆಂಚಬಸವ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಈ ಮಠದ ಶಾಖಾ ಮಠವಾದ ಶ್ರೀ ಅವಿ ಮಠವು ಗುಲ್ಬರ್ಗ ನಗರದ ಚೆಕ್‌ಪೋಸ್ಟ್ ಬಳಿ ಇದ್ದು, ಇಲ್ಲಿ ಮಠದ ಪರಂಪರೆಯ ಗುರುಗಳ ಗದ್ದುಗೆಗಳನ್ನು ನಿರ್ಮಿಸಲಾಗಿದೆ. ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ನಾಗಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಮುನ್ನಡೆಸಿದ್ದಾರೆ ಎಂದು ತಿಳಿದು ಬರುತ್ತದೆ. ಇವರ ನಂತರ ಉತ್ತರಾಧಿಕಾರಿಗಳು ಯಾರೂ ಇಲ್ಲದೆ ಇದ್ದಾಗ ಶ್ರೀ ಮುಪ್ಪಯ್ಯ ಎಂಬುವರು ಈ ಮಠದಲ್ಲಿ ವಾಸ್ತವ್ಯ ಮಾಡಿ ಈ ಮಠದ ಧಾರ್ಮಿಕ ಕೆಲಸಗಳನ್ನು ಮಾಡಿಕೊಂಡು ಬರುತ್ತಿದ್ದರು. ಇವರು ಹತ್ತುವರ್ಷಗಳ ಹಿಂದೆ ಲಿಂಗೈಕ್ಯರಾದರು. ನಂತರ ಮಠದಲ್ಲಿ ಧಾರ್ಮಿಕ ಆಚರಣೆಗಳನ್ನು ನಡೆಸಲು ಯಾರೂ ಇಲ್ಲದಂತಾಯಿತು. ಆಗ ಸಮಿತಿಯನ್ನು ರಚಿಸಿಕೊಂಡ ಮಠದ ಭಕ್ತರು ಸುಲಫಲ್ ಮಠದ ಗುರುಗಳಲ್ಲಿ ಉತ್ತರಾಧಿಕಾರಿಗಳನ್ನು ನೇಮಿಸಿಕೊಡಬೇಕೆಂದು ಬಿನ್ನವಿಸಿಕೊಂಡರು. ಆಗ ಸುಲಫಲ್ ಮಠದ ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು, ಶ್ರೀ ಸಿದ್ಧೇಶ್ವರ ದೇವರನ್ನು ಕರೆತಂದು ಮಠದ ಉತ್ತರಾಧಿಕಾರಿಗಳನ್ನಾಗಿ ನೇಮಿಸಿದರು.

ಜೇವರ್ಗಿ ತಾಲ್ಲೂಕಿನ ಕೋಳಕೊಡು ಹಿರೇಮಠದ ಶ್ರೀ ಸಂಗಯ್ಯ ಮತ್ತು ಶ್ರೀಮತಿ ಶಾಂತಮ್ಮನವರ ಪುತ್ರರಾಗಿ ೧೯೭೨ ರಲ್ಲಿ ಜನಿಸಿದ ಶ್ರೀ ಸಿದ್ಧೇಶ್ವರ ದೇವರು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಗದಗ, ಧರ್ಮಸ್ಥಳದಲ್ಲಿ ಸಂಸ್ಕೃತ ಎಂ.ಎ ಯನ್ನು ಮುಗಿಸಿದರು. ನಂತರ '**ಶ್ರೀ ಕೆಂಚ ಬಸವ ಶಿವಾಚಾರ್ಯ ಸ್ವಾಮಿ**'ಗಳೆಂದು ಅಭಿದಾನ ಪಡೆದು ೧೯೮೫ ರ ನವೆಂಬರ್ ಆರರಂದು ರೋಜಾ ಹಿರೇಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಗುರುಗಳು ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ, ಶಿಥಿಲಗೊಂಡ ಮಠದ ಕಟ್ಟವನ್ನು ಅಭಿವೃದ್ಧಿಪಡಿಸಿ ಪೂಜಾ ಕಾರ್ಯಗಳು ನಡೆಯುವಂತೆ ಮಾಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಅಡವಿ ಮಠದಲ್ಲಿರುವ ಗದ್ದುಗೆಗಳನ್ನು ನವೀಕರಣಗೊಳಿಸಿ ನಿತ್ಯ ಪೂಜೆಗೆ ವ್ಯವಸ್ಥೆ ಮಾಡಲಾಗಿದೆ. ಪ್ರತಿ ವರ್ಷ ಆಷಾಢದಲ್ಲಿ ಹನ್ನೊಂದು ದಿನ ಪುರಾಣ, ಶ್ರಾವಣಮಾಸದಲ್ಲಿ ಅಕ್ಕನ ಬಳಗ ಮತ್ತು ಅಣ್ಣನ ಬಳಗದಿಂದ ಭಜನೆ, ಶಿವರಾತ್ರಿಯಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭಗಳಲ್ಲಿಯೇ ಅಲ್ಲದೆ ಮಠದಲ್ಲಿ ನಿತ್ಯ ಅನ್ನದಾಸೋಹವನ್ನು ಮಾಡಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಸಿದ್ದೇಶ್ವರ ಶಿವಾಚಾರ್ಯಸ್ವಾಮಿಗಳು, ಶ್ರೀ ರೋಜಾ ಹಿರೇಮಠ, ಬಡಾರೋಜಾ ಬಡಾವಣೆ, ಗುಲ್ಬರ್ಗ.

ಶರಣಬಸವೇಶ್ವರ ಸಂಸ್ಥಾನಮಠ: ಗುಲ್ಬರ್ಗ ನಗರದ ಬ್ರಹ್ಮಪುರ ಬಡಾವಣೆಯಲ್ಲಿ ಸ್ಥಾಪನೆಯಾಗಿರುವ ಶ್ರೀ ಶರಣ ಬಸವೇಶ್ವರ ಸಂಸ್ಥಾನ ಮಠವು ನಾಡಿನ ಅಭಿವೃದ್ಧಿಗೆ ನೆರವಾಗಿರುವುದಲ್ಲದೆ, ವೀರಶೈವ ಧರ್ಮದ ಪ್ರಗತಿಗೆ ತನ್ನದೇ ಆದಂತಹ ಕೊಡುಗೆಯನ್ನು ನೀಡಿದೆ.

ಮಠ ಸ್ಥಾಪನೆ: ಕ್ರಿ.ಶ. ೧೭೮೧ರ ಸುಮಾರಿನಲ್ಲಿ ಶ್ರೀ ಶರಣ ಬಸವೇಶ್ವರರು ಲೋಕಸಂಚಾರ ಕೈಗೊಂಡು ಆದಿದೊಡ್ಡಪ್ಪನವರ ಕೋರಿಕೆಯ ಮೇರೆಗೆ ಗುಲ್ಬರ್ಗಾ ನಗರಕ್ಕೆ ಆಗಮಿಸಿದರು. ಆದಿ ದೊಡ್ಡಪ್ಪನವರ ಮಹಾಮನೆಯಲ್ಲಿ ನೆಲೆನಿಂತ ಶ್ರೀ ಶರಣ ಬಸವೇಶ್ವರರು ತಮ್ಮ ದಾಸೋಹ ಸಿದ್ಧಾಂತದಿಂದ ಈ ಭಾಗದಲ್ಲಿ ಅಪಾರ ಸೇವೆಯನ್ನು ಮಾಡಿ ಭಕ್ತರನ್ನು ಉದ್ಧರಿಸಿದರು. ಗುರುಗಳು ಜಾತ್ಯಾತೀತ ಮನೋಭಾವನೆಯಿಂದ ಸಹಬಾಳ್ವೆ ಮತ್ತು ಸೌಹಾರ್ದತೆಯ ಬದುಕು ಸಮಾಜದಲ್ಲಿ ಮೂಡುವಂತೆ ಮಾಡಿ, ಅಂದಿನ ಮುಸ್ಲಿಂ ದೊರೆಗಳಾದ ನಿಜಾಂ ಉಲ್ಲ ಮುಲ್ಕ್‌ಅಸಫ್ ಜಾಹ್ (೧೭೨೪-೧೭೪೮), ನಾಸೀರ್‌ಜಂಗ್ ಮುಜಫರ್ ಜಂಗ್ (೧೭೪೮-೧೭೫೦), ಸಲಾಬತ್‌ಜಂಗ್ (೧೭೫೦-೧೭೬೧), ನಿಜಾಂಅಲಿ (೧೭೬೧-೧೮೦೩), ಸಿಖಂದರ್‌ಜಹ್ನಾ (೧೮೦೩-೧೮೨೯) ಶರಣಬಸವೇಶ್ವರರ ಧಾರ್ಮಿಕ ಕಾರ್ಯಗಳಿಗೆ ಮನಸೋತಿದ್ದರು.

ಶ್ರೀ ಶರಣ ಬಸವೇಶ್ವರರು ಗುಲ್ಬರ್ಗ ಜಿಲ್ಲೆಯ ಜೇವರಗಿ ತಾಲ್ಲೂಕಿನ ಅರಳಗುಂಡಿಗೆ ಗ್ರಾಮದಲ್ಲಿ ಜನಿಸಿ, ಬಡತನದ ಬದುಕನ್ನು ಕಂಡವರು. ತಮ್ಮ ಪಾಲಿಗೆ ಬಂದಿದ್ದ ಅಲ್ಪ ಭೂಮಿಯಲ್ಲಿ ಬೆಳೆಯನ್ನು ಬೆಳೆದು ದಾಸೋಹಕ್ಕಾಗಿ ವಿನಿಯೋಗಿಸಿ ಕಾಯಕದಲ್ಲಿ ಅಮರತ್ವವನ್ನು ಕಂಡ ಶರಣರು. ದಾಸೋಹ ಕ್ರಿಯೆಯನ್ನು ಪವಾಡದಂತೆ ನಡೆಸತೊಡಗಿದರು. ಗುರುಗಳು ಅರಳುಗುಂಡಿಗೆಯಲ್ಲಿರುವಾಗ ತಮ್ಮ ಸಂಸಾರಿಕ ಬದುಕಿನೊಂದಿಗೆ ಆಧ್ಯಾತ್ಮವನ್ನು ಮೈಗೂಡಿಸಿಕೊಂಡು ಸಮಾಜದ ದುಷ್ಟರ ಹಾಗೂ ಅಜ್ಞಾನಿಗಳ ಕಣ್ಣು ತೆರೆಸಿ ಜ್ಞಾನಿಗಳಾಗಿ ಬೆಳೆದರು. ಕಡಕೋಳು ಮಡಿವಾಳರಿಗೆ ಆಶ್ರಯ ನೀಡಿ ಸಮಾಜದ ಉದ್ಧಾರಕ್ಕೆ ಅರ್ಪಿಸಿದರು. ತಮ್ಮ ಮನೆಗುರುಗಳಾದ ಕಲಕೇರಿಯ ಹಿರೇಮಠದ ಶ್ರೀ ಮರುಳಸಿದ್ಧ ಸ್ವಾಮಿಗಳ ಆಶೀರ್ವಾದದೊಂದಿಗೆ ಲೋಕೋದ್ಧಾರದ ಕನಸನ್ನು ಕಂಡರು.

ಶ್ರೀ ಶರಣ ಬಸವೇಶ್ವರರು ಸಮಾಜವನ್ನು ತಿದ್ದುವ ಕಾಯಕದೊಂದಿಗೆ ಹಸಿವನ್ನು ನೀಗಿಸುವ ಮಹಾದಾಸೋಹಿಗಳಾಗಿ ಬೆಳೆಯುತ್ತಿರುವಾಗಲೇ, ಮಶಾಳ ಗ್ರಾಮದ ಬಾವಿಮನೆ ಶಾಂತಲಿಂಗಪ್ಪನವರ ಮಗಳು ಮಹಾದೇವಿಯನ್ನು ವಿವಾಹವಾದರು. ಕೆಲವು ವರ್ಷಗಳ ನಂತರ ಮೊದಲ ಪತ್ನಿ ಮಹಾದೇವಿಯು ವಿಯೋಗಗೊಂಡಾಗ, ಅಲಮೇಲದ ನಾಸೀ ಮನೆತನದ ಚನ್ನಬಸವಮ್ಮನವರನ್ನು ವಿವಾಹವಾದರು. ಹೀಗೆ ಸಾಂಸಾರಿಕ ಬದುಕಿನಲ್ಲಿ ಅನೇಕ ಸಿಹಿ-ಕಹಿಗಳನ್ನು ಉಂಡು ಬದುಕನ್ನು ಗಟ್ಟಿಗೊಳಿಸಿಕೊಂಡರು. ಸಮಾಜದ ಉದ್ಧಾರಕ್ಕಾಗಿ ಲೋಕಸಂಚಾರವನ್ನು ಕೈಗೊಂಡ ಶರಣಬಸವೇಶ್ವರರು ಉತ್ತರ ಕರ್ನಾಟಕದ ಅನೇಕ ಪ್ರದೇಶಗಳಲ್ಲಿ ನೆಲೆ ನಿಂತು, ವೀರಶೈವ ಧರ್ಮಾಚರಣೆಗಳ ಬಗ್ಗೆ ಉಪದೇಶ ನೀಡಿದರು. ನಂತರ ಕಲಬುರ್ಗಿಯಲ್ಲಿ ಮಹಾದಾಸೋಹ ಮಠವನ್ನು ಸ್ಥಾಪಿಸಲು ಕಾರಣರಾದರು.

ಪರಂಪರೆ:	೧. ಶ್ರೀ ಶರಣಬಸವೇಶ್ವರರು	(೧೭೪೬-೧೮೨೨)
	೨. ಶ್ರೀ ಆದಿದೊಡ್ಡಪ್ಪ ಶರಣರು	(೧೮೨೨-೧೮೪೬)
	೩. ಶ್ರೀ ಎರಡನೆಯ ಶರಣಬಸವಪ್ಪ ಅಪ್ಪ	(೧೮೪೬-೧೮೭೧)
	೪. ಶ್ರೀ ಬಸವಣ್ಣಪ್ಪ ಅಪ್ಪ	(೧೮೭೧-೧೮೭೮)

೫. ಶ್ರೀ ಲಿಂಗಬಸವಪ್ಪ ಅಪ್ಪ (೧೮೭೮-೧೮೯೭)
೬. ಶ್ರೀ ಮೂರನೆಯ ಶರಣಬಸವಪ್ಪ ಅಪ್ಪ (೧೮೯೭-೧೯೦೩)
೭. ಶ್ರೀ ದೊಡ್ಡಪ್ಪ ಅಪ್ಪ (೧೯೦೩-೧೯೮೩)
೮. ಶ್ರೀ ಡಾ. ಶರಣಬಸವಪ್ಪ ಅಪ್ಪ (೧೯೮೩.........)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಶ್ರೀ ಶರಣಬಸವೇಶ್ವರರು ತಾವು ಸ್ಥಾಪಿಸಿದ ದಾಸೋಹ ಮಠದಲ್ಲಿ ಅನಾಥರಿಗೆ, ದೂರದಿಂದ ಬರುವ ಭಕ್ತರಿಗೆ, ದೀನ ದಲಿತರಿಗೆ ನಿತ್ಯವೂ ಪ್ರಸಾದ ನಡೆಯುವಂತೆ ಮಾಡಿದರು. ತಮ್ಮ ಕೊನೆ ಉಸಿರಿನವರೆಗೂ ಸಮಾಜದ ಏಳಿಗೆಗೆ ದುಡಿದು, ೧೮೨೨ರಲ್ಲಿ ಲಿಂಗೈಕ್ಯರಾದರು. ಇವರ ನಂತರ ಶ್ರೀ ಆದಿ ದೊಡ್ಡಪ್ಪ ಶರಣರು ಮಠದ ಅಧಿಕಾರವನ್ನು ವಹಿಸಿಕೊಂಡು ಮಹಾದಾಸೋಹ ಮಠದ ಆಡಳಿತವನ್ನು ನಡೆಸಿದರು.

ಶ್ರೀ ಆದಿ ದೊಡ್ಡಪ್ಪನವರ ನಂತರ ಎರಡನೆಯ ಶ್ರೀ ಶರಣ ಬಸವಪ್ಪಅಪ್ಪ ಅಧಿಕಾರಕ್ಕೆ ಬಂದು, ಇಪ್ಪತ್ತೈದು ವರ್ಷಗಳ ಕಾಲ ಮಠ ಮತ್ತು ಸಮಾಜವನ್ನು ಅಭಿವೃದ್ಧಿಗೊಳಿಸಿದರು. ಇವರ ಕಾಲದಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಗಳು ನಿರಂತರವಾಗಿ ನಡೆದವು. ಕರ್ತೃ ಗುರುಗಳಾದ ಶ್ರೀ ಶರಣ ಬಸವೇಶ್ವರರ ಗದ್ದುಗೆಗೆ ಶಿಲಾಮಂಟಪವನ್ನು ನಿರ್ಮಿಸಿದರು. ಇವರ ನಂತರ ಬಂದ ಗುರುಗಳೆಲ್ಲರೂ ಮಠವನ್ನು ಬೆಳೆಸಿದರು.

ಹೋರಾಟಗಾರರು: ಏಳನೆಯ ಪೀಠಾಧಿಪತಿಗಳಾದ ಶ್ರೀ ದೊಡ್ಡಪ್ಪಅಪ್ಪ ಅವರು ಅಭಿನವ ಶರಣ ಬಸವೇಶ್ವರರೆಂದೇ ಹೆಸರು ಪಡೆದಿದ್ದರು. ಇವರು ನಲವತ್ತು ವರ್ಷಗಳ ಕಾಲ ತ್ರಿಕಾಲ ಪೂಜೆ, ಜಂಗಮ ದಾಸೋಹ ಮಾಡುತ್ತಾ, ಸಾರ್ಥಕ ಬದುಕನ್ನು ಬದುಕಿ ಮಠವನ್ನು ಅಭಿವೃದ್ಧಿಪಡಿಸಿದ್ದಲ್ಲದೆ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ ಶಿಕ್ಷಣ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದರು. ಇವರ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳನ್ನು ಕೇಳಿ ತಿಳಿದುಕೊಂಡಿದ್ದ ಮಹಾತ್ಮ ಗಾಂಧೀಜಿಯವರು ೧೯೨೫ರ ಏಪ್ರಿಲ್ ಇಪ್ಪತ್ತನಾಲ್ಕರಂದು ಮಠಕ್ಕೆ ಭೇಟಿ ನೀಡಿ ಗುರುಗಳ ಆಶೀರ್ವಾದ ಪಡೆದಿದ್ದರು. ಗುರುಗಳು ಸಹ ಗಾಂಧೀಜಿಯವರ ಸ್ವತಂತ್ರ ಚಳುವಳಿಗೆ ಅಪಾರವಾದ ದೇಣಿಗೆಯನ್ನು ನೀಡಿ, ಚಳುವಳಿಗೆ ನೆರವಾದರು. ಕನ್ನಡ ನಾಡಿನ ಏಕೀಕರಣ ಚಳುವಳಿ ಮತ್ತು ಹೈದರಾಬಾದ್ ಕನ್ನಡ ಪ್ರದೇಶದ ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮದೇ ಆದಂತಹ ಕೊಡುಗೆಯನ್ನು ನೀಡಿ, ದೇಶ ಪ್ರೇಮ ಮತ್ತು ಭಾಷಾ ಪ್ರೇಮವನ್ನು ತೋರಿಸಿಕೊಟ್ಟಿದ್ದಾರೆ.

ಅಭಿವೃದ್ಧಿಯ ಹರಿಕಾರರು: ಶ್ರೀ ದೊಡ್ಡಪ್ಪ ಅಪ್ಪ ಅವರ ನಂತರ ಅಧಿಕಾರಕ್ಕೆ ಬಂದ ಶ್ರೀ ಶರಣಬಸವಪ್ಪಅಪ್ಪ ಅವರು ಶ್ರೀ ದೊಡ್ಡಪ್ಪಅಪ್ಪ ಮತ್ತು ಶ್ರೀಮತಿ ಗೋದೂತಾಯಿಯವರ ಪುತ್ರರಾಗಿ, ೧೯೩೫ರ ನವೆಂಬರ್‌ಹದಿನಾಲ್ಕರಂದು ಜನಿಸಿದರು. ಗುಲ್ಬರ್ಗ ಹಾಗೂ ಧಾರವಾಡದಲ್ಲಿ ವಿದ್ಯಾಭ್ಯಾಸ ಮುಗಿಸಿದ ಗುರುಗಳು ೧೯೮೩ರಲ್ಲಿ ಅಧಿಕಾರಕ್ಕೆ ಬಂದು, ಮಠವನ್ನು ಅಭಿವೃದ್ಧಿಪಡಿಸತೊಡಗಿದರು. ಕರ್ನಾಟಕ ವಿಶ್ವವಿದ್ಯಾನಿಲಯದ ಸೆನೆಟ್ ಮತ್ತು ಸಿಂಡಿಕೇಟ್ ಸದಸ್ಯರಾಗಿ ಗುಲ್ಬರ್ಗ ಸ್ನಾತಕೋತ್ತರ ಕೇಂದ್ರದ ಸ್ಥಾನಿಕ ಸಮಿತಿಯ ಕಾರ್ಯಾಧ್ಯಕ್ಷರಾಗಿ, ಗುಲ್ಬರ್ಗ ವಿಶ್ವವಿದ್ಯಾನಿಲಯದ ಪಂಚವಾರ್ಷಿಕ ಅಭಿವೃದ್ಧಿ ಯೋಜನೆಯ ಸದಸ್ಯರಾಗಿ, ಹೈದಾರಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ, ಅಖಿಲಭಾರತ ವೀರಶೈವ ಮಹಾಸಭದ ಅಧ್ಯಕ್ಷರಾಗಿ... ಹೀಗೆ ನಾಡಿನ ವಿವಿಧ ಸಂಘ ಸಂಸ್ಥೆಗಳಲ್ಲಿ ಉನ್ನತ ಹುದ್ದೆಗಳನ್ನು ಪಡೆದು, ಸಮಾಜದ ಅಭಿವೃದ್ಧಿಗೆ ಹರಿಕಾರರಾಗಿದ್ದಾರೆ. ಇವರು ಅಧಿಕಾರಕ್ಕೆ ಬಂದ ಮೇಲೆ ಮಹಾದಾಸೋಹ ಮಠವು ಶೈಕ್ಷಣಿಕ, ಸಾಹಿತ್ಯಿಕ, ಆರ್ಥಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಅಪಾರವಾದ ಸಾಧನೆಯನ್ನು ಸಾಧಿಸಿದೆ.

ಧಾರ್ಮಿಕ ಕಾರ್ಯಗಳು: ಕರ್ತೃಗುರುಗಳಾದ ಶ್ರೀ ಶರಣ ಬಸವೇಶ್ವರರ ಗದ್ದುಗೆಗೆ ಶಿಲಾಮಂಟಪವನ್ನು ಭವ್ಯವಾಗಿ ನಿರ್ಮಿಸಲಾಗಿದ್ದು, ಇಲ್ಲಿ ನಿತ್ಯಪೂಜೆ ನಡೆಯುತ್ತಿದೆ. ವರ್ಷಕ್ಕೊಮ್ಮೆ ಅದ್ದೂರಿಯಾಗಿ ಜಾತ್ರೆಯನ್ನು ನಡೆಸಲಾಗುತ್ತಿದೆ. ಶ್ರಾವಣಮಾಸದಲ್ಲಿ ಅಖಿಲಭಾರತ ಅನುಭವ ಮಂಟಪವನ್ನು ಏರ್ಪಡಿಸಿ, ನಿತ್ಯ ಇಬ್ಬರು ಉಪನ್ಯಾಸಕರುಗಳಿಂದ ಉಪನ್ಯಾಸ ವನ್ನು ಕೊಡಿಸಿ, ಈ ಉಪನ್ಯಾಸದ ವಿಷಯಗಳನ್ನು ಸಂಗ್ರಹಿಸಿ ಪ್ರತಿವರ್ಷ ಗ್ರಂಥ ರೂಪದಲ್ಲಿ ಹೊರತರಲಾಗುತ್ತಿದೆ. ಶರಣ ಬಸವೇಶ್ವರರ ಪುರಾಣವನ್ನು ಹಳ್ಳಿ ಹಳ್ಳಿಗಳಲ್ಲಿ ನಡೆಸುವ ಯೋಜನೆಯನ್ನು ಹಮ್ಮಿಕೊಂಡಿರುವುದಲ್ಲದೆ, ಪುರಾಣ ನಡೆಸುವ

ಸಂಘ ಸಂಸ್ಥೆಗಳಿಗೆ ನೆರವು ನೀಡಿ ಶ್ರೀ ಶರಣ ಬಸವೇಶ್ವರರ ತತ್ವಗಳು ಜನಮನಕ್ಕೆ ಮುಟ್ಟುವಂತೆ ಮಾಡಿದ್ದಾರೆ.

ಶೈಕ್ಷಣಿಕ ಸೇವೆ: ೧೯೧೮ರಲ್ಲಿಯೇ ಶ್ರೀ ಶರಣಬಸವೇಶ್ವರ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿ, ಈ ಮೂಲಕ ಶಿಕ್ಷಣ ಕ್ಷೇತ್ರಕ್ಕೆ ನಾಂದಿಯಾಡಲಾಯಿತು. ೧೯೩೪ರಲ್ಲಿ ಹೆಣ್ಣುಮಕ್ಕಳ ಕನ್ನಡ ಶಾಲೆಯನ್ನು ಪ್ರಾರಂಭಿಸಿ, ನಿಜಾಮರ ವಿರೋಧವನ್ನು ಎದುರಿಸಬೇಕಾಯಿತು. ಅಂದು ಸ್ಥಾಪನೆಗೊಂಡ ಶಿಕ್ಷಣ ಸಂಸ್ಥೆಯು ಇಂದು ಹೆಮ್ಮರವಾಗಿ ಬೆಳೆದಿದೆ.

೧. ಪ್ರಾಥಮಿಕ ಶಾಲೆಗಳು (೩)
೨. ಪ್ರೌಢಶಾಲೆಗಳು (೩)
೩. ಮಹಾವಿದ್ಯಾಲಯಗಳು (೬)
೪. ವಸತಿ ಸಹಿತ ಆಂಗ್ಲಮಾಧ್ಯಮ ಕಿರಿಯ ಮಹಾವಿದ್ಯಾಲಯ
೫. ಸ್ನಾತಕೋತ್ತರ ಚಿತ್ರಕಲಾಶಾಲೆ
೬. ವೃತ್ತಿಪರ ತರಬೇತಿ ಸಂಸ್ಥೆಗಳು
೭. ಹೋಂ ಆರ್ಟ್
೮. ಐ.ಎ.ಎಸ್. ತರಬೇತಿ ಕೇಂದ್ರ
೯. ಗ್ರಂಥಾಲಯಗಳು

ಈ ರೀತಿ ಅನೇಕ ವಿದ್ಯಾಸಂಸ್ಥೆಗಳನ್ನು ಪ್ರಾರಂಭಿಸಿ ಕಂಪ್ಯೂಟರ್ ತರಬೇತಿ, ಇಂಡಸ್ಟ್ರಿಯಲ್ ಕೆಮಿಸ್ಟ್ರಿ, ಪ್ರಿಂಟಿಂಗ್ ಟೆಕ್ನಾಲಜಿ ಮುಂತಾದ ಸ್ವಯಂ ಉದ್ಯೋಗ ಹೊಂದಲು ಸಹಕಾರಿಯಾಗುವ ಕೋರ್ಸ್‌ಗಳನ್ನು ಇಲ್ಲಿ ನಡೆಸಲಾಗುತ್ತಿದೆ. ಗುಲ್ಬರ್ಗ ನಗರವು ಸೇರಿದಂತೆ ಬಸವಕಲ್ಯಾಣದಲ್ಲಿಯೂ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿದ್ದಾರೆ.

ಸಾಹಿತ್ಯಿಕ ಸೇವೆ: ಗುಲ್ಬರ್ಗದಲ್ಲಿ ನಡೆದ ಅಖಿಲಭಾರತ ಮೂರನೆಯ ಕನ್ನಡಸಾಹಿತ್ಯ ಸಮ್ಮೇಳನ ಮಠದ ಆಶ್ರಯದಲ್ಲೇ ನಡೆದಿರುವುದು ದಾಖಲಾರ್ಹ ವಿಚಾರವಾಗಿದೆ. ಶ್ರೀ ಶರಣಬಸಪ್ಪ ಅಪ್ಪ ಅವರು ಅಧಿಕಾರಕ್ಕೆ ಬಂದ ಮೇಲೆ ಕರ್ತೃ ಗುರುಗಳನ್ನು ಕುರಿತಂತೆ ಕನ್ನಡ, ತೆಲುಗು, ಮರಾಠಿ ಭಾಷೆಗಳಲ್ಲಿ ಪುರಾಣಗಳನ್ನು ಬರೆಸಿ ಪ್ರಕಟಿಸಿದ್ದಾರೆ. ಶ್ರೀ ಶರಣ ಬಸವೇಶ್ವರರನ್ನು ಕುರಿತಂತೆ ಡಾ. ಎಸ್.ಎಂ. ಹಿರೇಮಠ ಅವರು ಪಿಹೆಚ್.ಡಿ. ಮಹಾಪ್ರಬಂಧವನ್ನು ರಚಿಸಿ ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ. ಮಠದ ವತಿಯಿಂದ ಈವರೆಗೆ ವಚನ ಚಳುವಳಿ (ಡಾ.ಹೆಚ್. ತಿಪ್ಪೇರುದ್ರಸ್ವಾಮಿ), ಬಸವಣ್ಣನವರ ಷಟ್‌ಸ್ಥಲದ ವಚನಗಳು (ಡಾ. ಎಲ್.ಬಸವರಾಜು), ಡಾ. ಶರಣಬಸಪ್ಪ ಅಪ್ಪ ಅವರ ಮಹಾದಾಸೋಹ ಸೂತ್ರಗಳು (ಡಾ. ವಿಜಾಸುದ್ದೀನ್ ಫಿರೋಜ್) ..... ಈ ರೀತಿ ಸುಮಾರು ಐವತ್ತಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಲಾಗಿದೆ. ವಿವಿಧ ಲೇಖಕರು ಬರೆದ ಸಾಹಿತ್ಯ ಕೃತಿಗಳಿಗೆ ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ. ಮಠದ ವತಿಯಿಂದ ದಾಸೋಹ ಜ್ಞಾನರತ್ನ ಎಂಬ ಪಾಕ್ಷಿಕ ಪತ್ರಿಕೆಯನ್ನು ೧೯೭೦ರಿಂದ ಪ್ರಕಟಿಸಲಾಗುತ್ತಿದೆ. ಮಠದಲ್ಲಿ ಸಾಹಿತ್ಯ ಕಮ್ಮಟಗಳನ್ನು ಏರ್ಪಡಿಸಿ, ಶರಣಸಾಹಿತ್ಯ ವನ್ನು ಪ್ರಚಾರಗೊಳಿಸುವ ಕಾಯಕದಲ್ಲಿ ಮಠವು ನಿರಂತರವಾಗಿ ಸೇವೆ ಗೈಯ್ಯುತ್ತಿದೆ.

ಸಾಮಾಜಿಕ-ಸಾಂಸ್ಕೃತಿಕ ಸೇವೆ: ಶ್ರೀ ಶರಣಬಸವೇಶ್ವರ ಸಂಸ್ಥಾನ ಮಠವು ಧಾರ್ಮಿಕ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿದ ಅಪಾರ ಸೇವೆಯ ಜತೆಗೆ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೂ ಕೊಡುಗೆಯನ್ನು ನೀಡಿದೆ. ೧೯೮೪ರಿಂದ ಪುರಾಣ ಪ್ರವಚನ ಮಾಡುವ ಪ್ರವೀಣರನ್ನು ಗುರುತಿಸಿ ಹತ್ತುಸಾವಿರ ರೂಗಳ ಬಹುಮಾನದ ಜೊತೆಗೆ ಪುರಾಣ ಪ್ರವೀಣ ಎಂಬ ಪ್ರಶಸ್ತಿಯನ್ನು ನೀಡಿ, ಗ್ರಾಮಾಂತರ ಪ್ರದೇಶದಲ್ಲಿ ಧಾರ್ಮಿಕ ಜಾಗೃತಿಯನ್ನುಂಟು ಮಾಡಲು ಪ್ರೋತ್ಸಾಹಿಸುತ್ತಿದೆ. ವೀರಶೈವ ಸಂಸ್ಕೃತಿ ದರ್ಶನ ಮಂಟಪವನ್ನು ಸ್ಥಾಪಿಸಿ, ವೀರಶೈವ ಸಂಸ್ಕೃತಿಗೆ ಸಂಬಂಧಿಸಿದ ಪ್ರಾಚೀನ ವಸ್ತುಗಳ ಸಂಗ್ರಹಣೆ ಮಾಡಿದ್ದಾರೆ. ಶಿವಶರಣರ ಜೀವನ ಹಾಗೂ ದಾಸೋಹ ಸಂಸ್ಕೃತಿಯನ್ನು ಗಮನದಲ್ಲಿರಿಸಿಕೊಂಡು ಸಾಹಿತ್ಯ, ಸಂಗೀತ, ಚಿತ್ರಕಲೆ, ವಾಸ್ತುಶಿಲ್ಪ, ಕೃಷಿ, ಕೈಗಾರಿಕೆ, ಶಿಕ್ಷಣ, ಸ್ತ್ರೀವಿಮೋಚನೆ, ಸಮಾಜಸೇವೆ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಮಹನೀಯರನ್ನು ಗುರುತಿಸಿ ಒಂದು ಲಕ್ಷರೂಪಾಯಿ ಮೌಲ್ಯದ ದಾಸೋಹ ಜ್ಞಾನರತ್ನ ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ. ಈ

ಪ್ರಶಸ್ತಿಯನ್ನು ಜಾತ್ಯಾತೀತ, ಭಾಷಾತೀತ ಹಾಗೂ ದೇಶಾತೀತವಾಗಿ ನೀಡುವ ಉದ್ದೇಶವನ್ನು ಇಟ್ಟುಕೊಂಡಿದೆ.

ಮಠದಲ್ಲಿ ನಡೆಯುವ ನಿತ್ಯ ದಾಸೋಹದಲ್ಲಿ ಜಾತ್ಯಾತೀತವಾಗಿ ಎಲ್ಲಾ ವರ್ಣಿಯರು ಪಾಲ್ಗೊಂಡು ಸೇವೆ ಮಾಡಿ, ಸೇವೆ ಸ್ವೀಕರಿಸಿ ಹೋಗುವುದು ಇಲ್ಲಿನ ಒಂದು ವಿಶೇಷತೆಯಾಗಿದೆ. ಶ್ರೀ ಶರಣ ಬಸವೇಶ್ವರರ ಹಾಗೂ ಮಹಾಮಠದ ಜನ ಸೇವೆಯನ್ನು ಮನ್ನಿಸಿ, ಗುಲ್ಬರ್ಗ ನಗರ ಸಭೆಯು ತನ್ನ ಚಿಹ್ನೆಯಲ್ಲಿ ಮಠದ ಚಿತ್ರವನ್ನು ಬಳಸಿಕೊಂಡಿರುವುದು ಈ ಮಠದ ಘನತೆಯನ್ನು ಎತ್ತಿ ತೋರಿಸುತ್ತದೆ.

ವಿಳಾಸ: ಶ್ರೀ ಡಾ. ಶರಣ ಬಸವಪ್ಪಅಪ್ಪ, ಶ್ರೀ ಶರಣ ಬಸವೇಶ್ವರ ಸಂಸ್ಥಾನಮಠ, ಬ್ರಹ್ಮಪುರ ಬಡಾವಣೆ, ಗುಲ್ಬರ್ಗ.
ಆಧಾರ: ಶರಣ ಬಸವೇಶ್ವರರು ಹಾಗೂ ಅವರ ಪರಿಸರದ ಸಾಹಿತ್ಯ-ಡಾ. ಎಸ್.ಎಂ. ಹಿರೇಮಠ
ಕಲ್ಯಾಣದ ಹಾದಿ: ಲೇಖನ-ಡಾ. ಎಸ್.ಎಂ. ಹಿರೇಮಠ

ಸುಲಫಲ್ ಮಠ: ಗುಲ್ಬರ್ಗ ನಗರದ ಶಹಬಜಾರ್‌ನಲ್ಲಿ ಶ್ರೀ ಸುಲಫಲ್ ಮಠವು ಸ್ಥಾಪನೆಯಾಗಿದೆ. ರಂಭಾಪುರಿ ಪೀಠದ ಶಾಖಾ ಮಠವಾಗಿರುವ ಈ ಮಠವು ನಾನೂರು ವರ್ಷಗಳ ಇತಿಹಾಸವನ್ನು ಹೊಂದಿದೆ. ಈ ಮಠವು ಸುಲಫಲ್ ಗ್ರಾಮದಿಂದ ಸ್ಥಳಾಂತರಗೊಂಡು ಇಲ್ಲಿ ಸ್ಥಾಪನೆಯಾದ ಕಾರಣ **'ಸುಲಫಲ್'** ಎಂಬ ಹೆಸರನ್ನು ಉಳಿಸಿಕೊಂಡು ಬೆಳೆದು ಬಂದಿದೆ.

ಮಠ ಸ್ಥಾಪನೆ: ಹದಿನೈದನೆಯ ಶತಮಾನದಲ್ಲಿ ಬಂದ ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು ಬಳ್ಳಾರಿ ಜಿಲ್ಲೆ ತಂಬರ ಹಳ್ಳಿಯ ತೆಗ್ಗಿನಕೆರೆ ಹಿರೇಮಠದವರು. ಇವರು ಲೋಕ ಸಂಚಾರಕ್ಕೆಂದು ಹೊರಟು ದೇಶದ ನಾನಾ ಭಾಗಗಳಲ್ಲಿ ಸಂಚರಿಸಿ ಸುಲಫಲ್‌ಪುರಕ್ಕೆ ಬಂದು ನೆಲೆಸುತ್ತಾರೆ. ಗುರುಗಳು ಇಲ್ಲಿಗೆ ಬರುವ ಮೊದಲು ಸುಲ್ತಾನ್‌ಪುರ, ರಾಜಾಪುರ, ಚಿಂಚೋಳಿ ತಾಲ್ಲೂಕಿನ ಚಿಕ್ಕಲಿಂಗದಳ್ಳಿ, ಚಿತ್ತಾಪುರ ತಾಲ್ಲೂಕಿನ ಪೇಟೆ ಶಿರೂರು ಈ ಗ್ರಾಮಗಳಲ್ಲಿ ನೆಲೆ ನಿಂತು ಧರ್ಮ ಪ್ರಚಾರ ಮಾಡಿ ಅಲ್ಲೆಲ್ಲಾ ಮಠಗಳನ್ನು ಸ್ಥಾಪಿಸಿರುತ್ತಾರೆ. ಸುಲಫಲ್ ಪುರಕ್ಕೆ ಆಗಮಿಸಿ ಇಲ್ಲೂ ಮಠವನ್ನು ಸ್ಥಾಪಿಸಿರುತ್ತಾರೆ. ಅಂದು ಅವರು ಸ್ಥಾಪಿಸಿದ ಮಠ ಗುರುಗಳ ಕರ್ತೃತ್ವಶಕ್ತಿಯಿಂದ ಇಂದಿಗೂ ವೈಭವಯುತವಾಗಿ ಬೆಳೆದಿದೆ. ಈ ಮಠದ ಪರಂಪರೆಯಲ್ಲಿ ಒಟ್ಟು ಇಪ್ಪತ್ತು ಜನ ಗುರುಗಳು ಅಧಿಕಾರವನ್ನು ಪಡೆದು ಆಡಳಿತವನ್ನು ನಡೆಸಿದ್ದಾರೆ ಎಂದು ಹೇಳಲಾಗುತ್ತದೆ.

ಪರಂಪರೆ:

೧. ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯಸ್ವಾಮಿಗಳು (ಕರ್ತೃ ಗುರುಗಳು)
೨. ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯಸ್ವಾಮಿಗಳು (ಈಗಿನ ಗುರುಗಳು)

ಈ ಮಠದ ಪರಂಪರೆಯಲ್ಲಿ ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು, ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಹಾಗೂ ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು ಈ ಮೂರು ಹೆಸರುಗಳನ್ನೇ ಪಟ್ಟಾಧಿಕಾರದ ಸಂದರ್ಭದಲ್ಲಿ ಅಭಿದಾನ ಪಡೆದು ಕೊಳ್ಳುತ್ತಿರುವ ಕಾರಣ ಮಠದ ಪರಂಪರೆಯ ಮೂರು ಹೆಸರುಗಳಲ್ಲಿ ಬೆಳೆದು ಬಂದಿದೆ.

ಕರ್ತೃಗುರುಗಳಾದ ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು ಸುಲಫಲ್ ಗ್ರಾಮದಲ್ಲಿ ಮಠವನ್ನು ಸ್ಥಾಪಿಸಿದ ನಂತರ ಹದಿನೇಳನೆಯ ಗುರುಗಳಾದ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳ ತನಕ ಸುಲಫಲ್‌ನಲ್ಲಿ ಮಠದ ಆಡಳಿತ ಕಾರ್ಯಗಳು ನಡೆಯುತ್ತಿದ್ದವು. ಹದಿನೆಂಟನೆಯ ಗುರುಗಳಾದ ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಮಠದ ಆಡಳಿತ ಕಾರ್ಯವು ಗುಲ್ಬರ್ಗಕ್ಕೆ ವರ್ಗಾವಣೆಗೊಂಡಿದೆ. ಮೊದಲಿನಿಂದಲೂ ಸುಲಫಲ್ ಮಠದ ಶಾಖಾ ಮಠವಾಗಿದ್ದ ಗುಲ್ಬರ್ಗ ಮಠವು ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿತ್ತು. ಧಾರ್ಮಿಕ ಆಚರಣೆಗಳಿಗೆ ಮಾತ್ರ ಸೀಮಿತ ಗೊಂಡಿದ್ದ ಇಲ್ಲಿನ ಕಾರ್ಯ ಚಟುವಟಿಕೆಗಳು ಮಠದ ಆಡಳಿತವು ಇಲ್ಲಿಗೆ ವರ್ಗಾವಣೆಗೊಂಡ ಮೇಲೆ ವೀರಶೈವರ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರ ಬಿಂದುವಾಗಿ ಬೆಳೆಯಿತು.

ಪುತ್ರವರ್ಗದ ಪರಂಪರೆಯ ಈ ಮಠದ ಇಪ್ಪತ್ತನೆಯ ಗುರುಗಳಾಗಿ ಶ್ರೀ ಮಹಾಂತ ಶಿವಾಚಾರ್ಯಸ್ವಾಮಿಗಳು

ಅಧಿಕಾರಕ್ಕೆ ಬಂದ ಮೇಲೆ ಮಠವು ಆಚಾರ್ಯರ ಹಾಗೂ ಶರಣಾದಿ ಪ್ರಮಥರ ತತ್ತ್ವಗಳನ್ನು ಸಮಾನವಾಗಿ ಪ್ರಚಾರ ಮಾಡುತ್ತಾ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯ ತೊಡಗಿದೆ. ಶ್ರೀ ಮಹಾಂತಶಿವಾಚಾರ್ಯಸ್ವಾಮಿಗಳು ಜಾತ್ಯಾತೀತ ಮನೋಭಾವನೆಯಿಂದ ಸರ್ವರೂ ಸಮಾನವಾಗಿ ಬದುಕಬೇಕು ಎಂಬ ಮನೋಭೂಮಿಕೆಯನ್ನು ಹೊಂದಿ ವೀರಶೈವ ಧರ್ಮವನ್ನು ನಿಜವಾದ ಅರ್ಥದಲ್ಲಿ ಬೆಳೆಸತೊಡಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಸುಲಫಲ್ ಮಠ ಹಾಗೂ ಗುಲ್ಬರ್ಗದಲ್ಲಿ ಸ್ಥಾಪನೆಯಾಗಿರುವ ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ ಮಾಡಲಾಗುತ್ತಿದೆ. ಪ್ರತಿ ವರ್ಷದ ಸೆಪ್ಟೆಂಬರ್ ತಿಂಗಳಿನಲ್ಲಿ ಹತ್ತೊಂಬತ್ತನೆಯ ಗುರುಗಳಾದ ಲಿಂಗೈಕ್ಯ ಶ್ರೀ ಚನ್ನವೀರ ಸ್ವಾಮಿಗಳ ಪುಣ್ಯಾರಾಧನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ. ಪ್ರತಿ ಅಮಾವಾಸ್ಯೆಯಲ್ಲಿ ಶಿವಾನುಭವ ಕಾರ್ಯಕ್ರಮವನ್ನು ಏರ್ಪಡಿಸಿ ಸಾಹಿತ್ಯ ಮತ್ತು ಧಾರ್ಮಿಕ ವಿಚಾರಗಳಲ್ಲಿ ಉಪನ್ಯಾಸ ಏರ್ಪಡಿಸಲಾಗುತ್ತಿದೆ.

ಈಗಿನ ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು ಮಹಾಂತ ಜೋಳಿಗೆಯನ್ನು ಹಾಕಿಕೊಂಡು ಪಾದಯಾತ್ರೆಯನ್ನು ಮಾಡಿ ದುಶ್ಚಟಗಳ ನಿವಾರಣೆಗೆ ಒಂದು ಆಂದೋಲನವನ್ನು ರೂಪಿಸಿದ್ದಾರೆ. ಆರೋಗ್ಯ ದಿನಾಚರಣೆಯ ಅಂಗವಾಗಿ ರೋಗಗಳ ಬಗ್ಗೆ ತಿಳುವಳಿಕೆ ಮೂಡಿಸುವ ಶಿಬಿರಗಳನ್ನು ಗುರುಗಳು ಮಠದ ವತಿಯಿಂದ ನಡೆಸುತ್ತಿದ್ದಾರೆ. ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು ಗುರುಸ್ಥಲ ಮಠದ ಗುರುಗಳಾದರೂ ಗುರು ಮತ್ತು ವಿರಕ್ತರಲ್ಲಿ ಬೇಧವೆಣಿಸದೆ, ಸಮಾನ ಭಾವನೆಯಿಂದ ಎಲ್ಲರನ್ನು ಸಮಾನವಾಗಿ ಗೌರವಿಸಿ ವೀರಶೈವ ಧರ್ಮದಲ್ಲಿ ಏಕತೆಯನ್ನು ಸಾಧಿಸಲು ಹೊರಟಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು, ಶ್ರೀ ಸುಲಫಲ್ ಮಠ, ಶಹಬಜಾರ್, ಗುಲ್ಬರ್ಗ ಜಿಲ್ಲೆ.

ನಾಗೂರು

ಗುಲ್ಬರ್ಗ ತಾಲ್ಲೂಕಿನ ನಾಗೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಮೂವತ್ತೈದು ಕಿ.ಮೀ ದೂರದಲ್ಲಿದೆ. ಜಾನಪದ ಐತಿಹ್ಯದ ಪ್ರಕಾರ ಇಲ್ಲಿ ಸರ್ಪಗಳು ಅತಿ ಹೆಚ್ಚಾಗಿದ್ದ ಕಾರಣ ಈ ಗ್ರಾಮಕ್ಕೆ ನಾಗೂರು ಎಂಬ ಹೆಸರು ಬಂದಿದೆ ಎಂದು ಹೇಳಲಾಗುತ್ತದೆ. ಈ ಗ್ರಾಮವು ಈಗ ಮುಳುಗಡೆಯಾಗಲಿದ್ದು ಮೂಲಗ್ರಾಮದ ಸಮೀಪವೇ ಪುನರ್‌ವಸತಿ ಜಾಗವನ್ನು ಕಲ್ಪಿಸಲಾಗಿದೆ. ಇಲ್ಲಿ ವಿರಕ್ತಮಠವು ಸ್ಥಾಪನೆಯಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸುವ ಕೇಂದ್ರವಾಗಿ ಬೆಳೆದಿದೆ.

ವಿರಕ್ತಮಠ: ನಾಗೂರು ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ವಿರಕ್ತಮಠವು ಹದಿನಾರನೆಯ ಶತಮಾನದಲ್ಲಿ ಶ್ರೀ ಗುರುಬಸವ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟಿದೆ. ಗುರುಗಳು ಮಹಪ್ರಭಾವಿಗಳಾಗಿ ವೀರಶೈವ ಧರ್ಮ ಪ್ರಬಲವಾಗಿ ಬೆಳೆಯುವಂತೆ ಮಾಡಿದ್ದರು. ಇವರ ನಂತರ ಬಂದ ಗುರುಪರಂಪರೆಯ ಬಗ್ಗೆ ಸ್ಪಷ್ಟ ಮಾಹಿತಿಗಳು ಲಭ್ಯವಿಲ್ಲ. ಈ ಹಿಂದೆ ಉತ್ತರಾಧಿಕಾರಿಗಳಾಗಿ ನೇಮಕಗೊಂಡಿದ್ದ ಶ್ರೀ ಶಾಂತವೀರ ಸ್ವಾಮಿಗಳು, ಬೀದರ್ ಜಿಲ್ಲೆಯ ಗಡಿಗೌಡಗಾವ್‌ಂ ಮಠದ ಅಧಿಕಾರವನ್ನು ವಹಿಸಿಕೊಂಡರು. ನಂತರ ಶ್ರೀ ರುದ್ರಮುನಿ ಸ್ವಾಮಿಗಳು ಉತ್ತರಾಧಿಕಾರಿಗಳಾದರು. ಇವರೂ ಸಹ ಯಡ್ರಾಮಿ ಮಠದ ಅಧಿಕಾರವನ್ನು ವಹಿಸಿಕೊಂಡಿದ್ದರಿಂದ ಮಠವು ಖಾಲಿ ಉಳಿಯಿತು. ಈಗ ಗೋಕಾಕ್ ನಗರದ ಶ್ರೀ ಬಸವಯ್ಯ ಮತ್ತು ಶ್ರೀಮತಿ ಸುಶೀಲಮ್ಮನವರ ಪುತ್ರರಾಗಿ ೧೯೮೨ರ ಜುಲೈ ಒಂದರಂದು ಜನಿಸಿದ ಶ್ರೀ ಕುಮಾರ ದೇವರು ಉತ್ತರಾಧಿಕಾರಿಗಳಾಗಿ ೧೯೯೮ರಲ್ಲಿ ನೇಮಕಗೊಂಡಿದ್ದಾರೆ. ಶ್ರೀ ಕುಮಾರ ದೇವರು ಮೈಸೂರಿನಲ್ಲಿ ಉನ್ನತ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಮಠದ ಆವರಣದಲ್ಲಿ ಮೂರು ಗದ್ದುಗೆಗಳಿದ್ದು ನಿತ್ಯ ಪೂಜೆ ನಡೆಸಲಾಗುತ್ತಿದೆ. ಕಲ್ಲು ಮತ್ತು ಮಣ್ಣಿನಿಂದ ನಿರ್ಮಿಸಿರುವ ಮಠದ ಕಟ್ಟಡವು ಸುಸ್ಥಿಯಲ್ಲಿದೆ.

ವಿಳಾಸ: ಶ್ರೀ ಕುಮಾರ ದೇವರು, ಶ್ರೀ ವಿರಕ್ತಮಠ, ನಾಗೂರು, ಗುಲ್ಬರ್ಗ ತಾಲ್ಲೂಕು.

ಪಾಳಾ

ಗುಲ್ಬರ್ಗ ತಾಲ್ಲೂಕಿನ ಪಾಳಾ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಭಾಗಕ್ಕೆ ಹದಿನಾರು ಕಿ.ಮೀ ದೂರದಲ್ಲಿದೆ.

ಐತಿಹಾಸಿಕ ಹಾಗೂ ಧಾರ್ಮಿಕ ಪರಂಪರೆಯಲ್ಲಿ ಬೆಳೆದ ಪಾಳಾ ಗ್ರಾಮದಲ್ಲಿ ಶ್ರೀ ಕಟ್ಟಿಮನಿ ಹಿರೇಮಠವು ಸ್ಥಾಪನೆಯಾಗಿದೆ.

ಕಟ್ಟಿಮನಿ ಹಿರೇಮಠ: ಪಾಳಾ ಗ್ರಾಮದಲ್ಲಿ ಹದಿನಾಲ್ಕನೆಯ ಶತಮಾನದಲ್ಲಿ ಶ್ರೀ ಕಟ್ಟಿಮನಿಹಿರೇಮಠವು ಪ್ರಾರಂಭಗೊಂಡಿದೆ. ಈ ಮಠದ ಸ್ಥಾಪನೆಯಿಂದ ಈ ಗ್ರಾಮವು ಧಾರ್ಮಿಕ ಸಂಸ್ಕಾರವನ್ನು ಪಡೆದಿದೆ. ಉಜ್ಜಯಿನಿ ಪೀಠದ ಶಾಖಾ ಮಠವಾಗಿರುವ ಶ್ರೀ ಕಟ್ಟಿಮನಿ ಹಿರೇಮಠವು ವೀರಶೈವ ಧರ್ಮವನ್ನು ಬೆಳಸುವಲ್ಲಿ ಪ್ರಯತ್ನಿಸಿದೆ.

ಮಠ ಸ್ಥಾಪನೆ: ಶ್ರೀ ಕಟ್ಟಿಮನಿ ಹಿರೇಮಠದ ಸ್ಥಾಪಕರೆಂದು ಹೇಳಲಾಗುವ ಶ್ರೀ ಮಹಾಂತೇಶ ಶಿವಾಚಾರ್ಯ ಸ್ವಾಮಿಗಳು ೧೩೮೯ ಕ್ಕೂ ಮೊದಲು ಜೀವಿಸಿದ್ದರೆಂದು ಹೇಳಲಾಗುತ್ತದೆ. ಶ್ರೀ ಮಹಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು ಮಹಾ ತಪಸ್ವಿಗಳಾಗಿ, ಶಿವಯೋಗವನ್ನು ಸಾಧನೆ ಮಾಡಿಕೊಂಡಂತಹ ಮಹಾ ಪುರುಷರು. ಇವರು ವೀರಶೈವ ಧರ್ಮದ ಪ್ರಚಾರಕರಾಗಿ ಮತ್ತು ಈ ಧರ್ಮದ ಬೆಳವಣಿಗೆಯ ಸಾಧಕರಾಗಿ ಶ್ರಮಿಸಿ, ಅದು ಈ ಪ್ರಾಂತ್ಯದಲ್ಲಿ ಗಟ್ಟಿಯಾಗಿ ನೆಲೆಗೊಳ್ಳುವಂತೆ ಮಾಡಿದರು. ಗುರುಗಳು ಸಂಚಾರಮೂರ್ತಿಗಳಾಗಿ ಈ ನಾಡಿನ ಭಾಗದಲ್ಲಿ ಸಂಚರಿಸಿ ಧರ್ಮದ ಬಗ್ಗೆ ಭಕ್ತರಲ್ಲಿ ಅರಿವನ್ನು ಮೂಡಿಸಿ, ಎಲ್ಲೆಲ್ಲಿ ನೆಲೆ ನಿಂತರೋ ಅಲ್ಲಿ ಮಠಗಳನ್ನು ಸ್ಥಾಪಿಸಿ ಧಾರ್ಮಿಕ ಆಚರಣೆಗಳ ಕೇಂದ್ರಗಳನ್ನು ಮಾಡಿದರು. ಪಾಳಾದಲ್ಲಿ ನೆಲೆ ನಿಂತು ಮಠವನ್ನು ಸ್ಥಾಪಿಸಿ ನಿರಂತರವಾಗಿ ನಡೆದುಕೊಂಡು ಬರುವಂತೆ ಭದ್ರ ಬುನಾದಿಯನ್ನು ಹಾಕಿದರು. ಗುರುಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಕರಿಬಸವ ಶಿವಾಚಾರ್ಯ ಸ್ವಾಮಿಗಳನ್ನು ನೇಮಿಸಿ ಲಿಂಗೈಕ್ಯರಾಗಿದ್ದಾರೆ.

ಪರಂಪರೆ:

೧. ಷ.ಬ್ರ.ಶ್ರೀ ಮಹಾಂತೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಕರಿಬಸವ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಮಳೆಯ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ನಾಗಭೂಷಣ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಎರಡನೆಯ ಮಳೆಯ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಸಿದ್ದೇಶ್ವರ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ಮೂರನೆಯ ಮಳೆ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ಸಿದ್ದಲಿಂಗ ಶಿವಾಚಾರ್ಯಸ್ವಾಮಿಗಳು
೧೦. ಷ.ಬ್ರ.ಶ್ರೀ ಮಳೇಂದ್ರ ಶಿವಾಚಾರ್ಯಸ್ವಾಮಿಗಳು
೧೧. ಷ.ಬ್ರ.ಶ್ರೀ ಗುರುಮೂರ್ತಿ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಪಾಳ ಮತ್ತು ಚಿತ್ತಾಪುರ ತಾಲ್ಲೂಕಿನ ಮುಗಳನಾಗವಿ ಮಠಗಳು ಒಂದೇ ಪರಂಪರೆಯಲ್ಲಿ ಬೆಳೆದು ಬಂದಿವೆ. ಪರಂಪರೆಯ ಹತ್ತನೆಯ ಗುರುಗಳಾದ ಶ್ರೀ ಮಳೇಂದ್ರ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಆಡಳಿತ ಬೇರೆ ಬೇರೆಯಾಗಿವೆ. ಪಾಳಾದ ಮಠದಲ್ಲಿ ಈಗ ಹನ್ನೊಂದನೆಯ ಗುರುಗಳಾಗಿ ಶ್ರೀ ಗುರುಮೂರ್ತಿ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದಿರುತ್ತಾರೆ.

ಪಾಳದ ಶ್ರೀ ಮುನಿಸ್ವಾಮಿ ಮತ್ತು ಶ್ರೀಮತಿ ಶಾಂತಾಬಾಯಿಯವರ ಪುತ್ರರಾಗಿ ಜನಿಸಿದ ಶ್ರೀ ಗುರುಮೂರ್ತಿ ಶಿವಾ ಚಾರ್ಯ ಸ್ವಾಮಿಗಳು ಶಹಬಾದ್‌ನಲ್ಲಿ ವಿದ್ಯಾಭ್ಯಾಸ ಮುಗಿಸಿ, ಕಳೆದ ಹನ್ನೆರಡು ವರ್ಷಗಳಿಂದ ಮಠದಲ್ಲಿ ಬಂದು ನೆಲೆಸಿದ್ದಾರೆ. ಶ್ರೀ ಮಳೇಂದ್ರ ಶಿವಾಚಾರ್ಯರು ಲಿಂಗೈಕ್ಯರಾದ ಮೇಲೆ ಉಜ್ಜಯಿನಿ ಪೀಠದಲ್ಲಿ ಜಗದ್ಗುರುಗಳ ಸಾನಿಧ್ಯದಲ್ಲಿ ೧೯೯೨ ರಲ್ಲಿ ಪಟ್ಟಾಧಿಕಾರವನ್ನು ಪಡೆದುಕೊಂಡು ಬಂದು ಪಾಳದ ಮಠದಲ್ಲಿ ನೆಲಸಿ ಅಧಿಕಾರವನ್ನು ನಡೆಸುತ್ತಿದ್ದಾರೆ. ಗುರುಗಳು ಮಠದಲ್ಲಿ ನೆಲೆಸಿದ ಮೇಲೆ ಧಾರ್ಮಿಕ ಕಾರ್ಯಗಳು ಚುರುಕುಗೊಂಡಿವೆ. ಮಠದಲ್ಲಿ ನಿತ್ಯ ಪೂಜೆ, ಶ್ರಾವಣ ಮಾಸದಲ್ಲಿ ಪ್ರವಚನ ಕಾರ್ಯಕ್ರಮ ಹಾಗೂ ಅನ್ನದಾಸೋಹವನ್ನು ನಡೆಸುತ್ತಾ ಮಠವನ್ನು ಮುನ್ನಡೆಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಗುರುಮೂರ್ತಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕಟ್ಟಿಮನಿ ಹಿರೇಮಠ, ಪಾಳಾ, ಗುಲ್ಬರ್ಗ ತಾಲ್ಲೂಕು.
ಆಧಾರ: 'ಶರಣ ಬಸವ ಪ್ರಭೆ' ಡಾ. ಎಸ್.ಎಂ.ಹಿರೇಮಠ

ಬಬಲಾದಿ (ಐ.ಕೆ)

ಗುಲ್ಬರ್ಗ ತಾಲ್ಲೂಕಿನ ಬಬಲಾದಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಇಪ್ಪತ್ತೈದು ಕಿ.ಮೀ ದೂರದಲ್ಲಿದೆ. ಕೃಷಿಯನ್ನೇ ಅವಲಂಬಿಸಿರುವ ಈ ಗ್ರಾಮವು ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಿದೆ. ಇಲ್ಲಿ ಶ್ರೀ ವಿರಕ್ತಮಠವು ಸ್ಥಾಪನೆಯಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ವಿರಕ್ತಮಠ: ಬಬಲಾದಿ ಗ್ರಾಮವು ಬುಟಬುಟಕನ ಬಬಲಾದಿ, ನಂತರ ಇಮ್ರಾನ್‌ಖಾನ್ ಬಬಲಾದಿ ತದನಂತರ ಚನ್ನವೀರ ಸ್ವಾಮಿಗಳ ಪ್ರಭಾವದಿಂದ ಬೆಳೆದ ಮೇಲೆ'ಮುತ್ತ್ಯಾನ ಬಬಲಾದಿ'ಎಂದು ಕರೆಯಲ್ಪಡುತ್ತಿತ್ತಂತೆ. ಈ ಗ್ರಾಮದಲ್ಲಿ ಮುರುಘಾ ಸಮುಯದ ವಿರಕ್ತ ಮಠವು ಸ್ಥಾಪನೆಯಾಗಿ ಈ ಭಾಗದ ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿ ರೂಪುಗೊಂಡಿದೆ. ಶ್ರೀ ಗುರುಪಾದಲಿಂಗ ಸ್ವಾಮಿಗಳು ಈ ಮಠದ ಸ್ಥಾಪಕರೆಂದು ಹೇಳಲಾಗುತ್ತದೆ. ಆದರೆ ಈ ಮಠದ ಸ್ಥಾಪನೆಯ ಕಾಲಮಾನದ ಬಗ್ಗೆ ನಿಖರವಾದ ಮಾಹಿತಿಗಳು ತಿಳಿಯದಾಗಿದೆ.

ಮಠ ಸ್ಥಾಪನೆ: ಮಠದ ಕರ್ತೃಗುರುಗಳಾದ ಶ್ರೀ ಗುರುಪಾದಲಿಂಗ ಸ್ವಾಮಿಗಳು ಲೋಕ ಸಂಚಾರ ಕೈಗೊಂಡು ಈ ಗ್ರಾಮಕ್ಕೆ ಬಂದು ನೆಲೆಸುತ್ತಾರೆ. ಗುರುಗಳು ಇಲ್ಲಿ ಬಂದು ನೆಲಸಿದ ಮೇಲೆ ಇಲ್ಲಿನ ಭಕ್ತರು ಗುರುಗಳ ಪ್ರಭಾವಕ್ಕೆ ಒಳಗಾಗಿ ಮಠವನ್ನು ಸ್ಥಾಪಿಸಿ ಕೊಡುತ್ತಾರೆ. ಇಲ್ಲಿ ಮಠ ಸ್ಥಾಪನೆಯಾದ ಮೇಲೆ ನಿತ್ಯ ಶಿವಾನುಭವ ಗೋಷ್ಠಿಗಳು, ಭಜನೆ, ಹಾಗೂ ಕೀರ್ತನೆಗಳು ಪ್ರಾರಂಭಗೊಂಡವು. ನಂತರ ದಾಸೋಹವು ವ್ಯವಸ್ಥೆಗೊಂಡಿತು. ಗುರುಗಳ ಪರಿಶ್ರಮದಿಂದ ತಲೆ ಎತ್ತಿದ ಮಠವು ಈ ಗ್ರಾಮದ ಸುತ್ತಮುತ್ತಲ ಪ್ರದೇಶ ಸಂಸ್ಕಾರವಂತ ನಾಡಾಗಿ ಬೆಳೆಯಲು ಸಹಾಯಕವಾಯಿತು.

ಮಠದ ಪರಂಪರೆ:

೧. ಶ್ರೀ ಮ.ನಿ.ಪ್ರ. ಗುರುಪಾದಲಿಂಗಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಶಾಂತಲಿಂಗಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಚನ್ನವೀರಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಗುರುಪಾದಲಿಂಗಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಮಠದ ಕರ್ತೃಗುರುಗಳ ನಂತರ ಶ್ರೀ ಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಳ್ಳುತ್ತಾರೆ. ಈ ಗುರುಗಳು ಸಹ ಮಠವನ್ನು ಅಭಿವೃದ್ಧಿಪಡಿಸಿ ಧಾರ್ಮಿಕ ವಿಚಾರಗಳನ್ನು ಭಕ್ತರಿಗೆ ಮುಟ್ಟಿಸಲು ನಿತ್ಯ ಶಿವಾನುಭವ ಗೋಷ್ಠಿಗಳನ್ನು ನಡೆಸುತ್ತಾ ಬಂದರು. ಇವರ ಕಾಲದಲ್ಲಿ ಸಾಮರಸ್ಯದ ಬದುಕನ್ನು ಬದುಕಿದ ಗ್ರಾಮದ ಭಕ್ತರು ಧರ್ಮವಂತರಾದರು. ಇವರ ನಂತರ ಪವಾಡಪುರುಷರಾಗಿದ್ದ ಶ್ರೀ ಚನ್ನವೀರ ಸ್ವಾಮಿಗಳು ಈ ಮಠಕ್ಕೆ ಆಗಮಿಸಿ ತಮ್ಮ ಕರ್ತೃತ್ವ ಶಕ್ತಿಯಿಂದ ಈ ನಾಡನ್ನು ಬೆಳಗಿಸಿದರು. ಇವರು ಅನೇಕ ಪವಾಡಗಳನ್ನು ಮಾಡಿ ಜನರನ್ನು ಜಾಗೃತಗೊಳಿಸಿದರು. ಇವರ ಕಾಲದಲ್ಲಿ ಮಠವು ಹೆಚ್ಚು ಹೆಸರು ಮಾಡಿತು. ಅಲ್ಲದೆ ಆರ್ಥಿಕ ಸಧೃಡತೆಯನ್ನು ಸಹ ತಂದುಕೊಟ್ಟರು. ಇಂತಹ ಮಹಾಸಾಧಕ ಶ್ರೀ ಚನ್ನವೀರ ಸ್ವಾಮಿಗಳು ೧೯೮೫ ರಲ್ಲಿ ಲಿಂಗೈಕ್ಯರಾದರು. ಇವರ ನಂತರ ಶ್ರೀ ಗುರುಪಾದಲಿಂಗ ಸ್ವಾಮಿಗಳು ನೇಮಕಗೊಂಡು ಅಧಿಕಾರವನ್ನು ವಹಿಸಿಕೊಂಡಿದ್ದಾರೆ.

ಕುರುಕೋಟ ಗ್ರಾಮದ ಶ್ರೀ ಪಂಚಾಕ್ಷರಿ ಮತ್ತು ಶ್ರೀಮತಿ ಸಿದ್ಧಮ್ಮನವರ ಪುತ್ರರಾಗಿ ೧೯೬೯ ರಲ್ಲಿ ಶ್ರೀ ಗುರುಪಾದಲಿಂಗ ಸ್ವಾಮಿಗಳು ಜನಿಸಿದರು. ಇವರು ಕುರುಕೋಟದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದರು. ನಂತರ ಧಾರ್ಮಿಕ ಶಿಕ್ಷಣ ಪಡೆದು ಈ ಮಠದ ಪಟ್ಟಾಧಿಕಾರವನ್ನು ೧೯೯೧ ರ ಏಪ್ರಿಲ್ ಐದರಂದು ವಹಿಸಿಕೊಂಡಿದ್ದಾರೆ. ಗುರುಗಳು ಪಟ್ಟಾಧಿಕಾರ ವಹಿಸಿಕೊಂಡ ಮೇಲೆ ಹಿರಿಯ ಗುರುಗಳು ನಡೆಸಿಕೊಂಡು ಬರುತ್ತಿದ್ದ ಧಾರ್ಮಿಕ ಆಚರಣೆಗಳನ್ನು ಮುಂದುವರೆಸಿದರು. ಚಿಕ್ಕ ವಯಸ್ಸಿನಲ್ಲಿಯೇ ದೊಡ್ಡ ಜವಾಬ್ದಾರಿಯನ್ನು ವಹಿಸಿಕೊಂಡು, ಪ್ರಗತಿಪರ ಚಿಂತನೆಯಿಂದ ವೀರಶೈವ ಧರ್ಮವನ್ನು ಪ್ರಚಾರ ಪಡಿಸಲು ಮುಂದಾದರು. ಅಲ್ಲದೆ ಮಠದ ಆಸ್ತಿಯನ್ನು ಶಿಸ್ತು ಹಾಗೂ ಕಾನೂನುಬದ್ಧಗೊಳಿಸಿದರು. ಶ್ರೀ ಗುರುಪಾದಲಿಂಗ ಶಿವಾಚಾರ್ಯ ಸ್ವಾಮಿಗಳು ಕ್ರಿಯಾತ್ಮಕ ಚಟುವಟಿಕೆಗಳು ಹಾಗೂ

ಧಾರ್ಮಿಕ ಕಾರ್ಯಗಳನ್ನು ವಿಸ್ತರಿಸಿ ಗುಲ್ಬರ್ಗ ನಗರದ ರಿಂಗ್ ರೋಡ್‌ನಲ್ಲಿ ಒಂದು ಶಾಖಾ ಮಠವನ್ನು ಸ್ಥಾಪಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯಲ್ಲಿ ಬಂದಂತಹ ಮೂರು ಜನ ಲಿಂಗೈಕ್ಯ ಗುರುಗಳ ಗದ್ದುಗೆಗಳನ್ನು ಮಠದ ಆವರಣದಲ್ಲಿ ಸ್ಥಾಪಿಸಲಾಗಿದೆ. ಈ ಗದ್ದುಗೆಗಳಿಗೆ ತ್ರಿಕಾಲ ಪೂಜೆ, ಪ್ರತಿದಿನ ಬೆಳಿಗ್ಗೆ ರುದ್ರಾಭಿಷೇಕ, ಪ್ರತಿ ಅಮಾವಾಸ್ಯೆಯಲ್ಲಿ ಹಿರಿಯ ಕರ್ತೃಗುರುಗಳ ಗದ್ದುಗೆಯ ಬಳಿ ಕುಳಿತು ಈಗಿನ ಗುರುಗಳು ದರ್ಶನವನ್ನು ನೀಡುತ್ತಾರೆ. ಶ್ರೀ ಚನ್ನವೀರ ಸ್ವಾಮಿಗಳ ಪುಣ್ಯಾರಾಧನೆಯನ್ನು ಡಿಸೆಂಬರ್ ಹದಿನಾರರಂದು ಹಾಗೂ ಬಸವೇಶ್ವರ ಜಾತ್ರೆಯನ್ನು ಜನವರಿಯಲ್ಲಿ ಅದ್ದೂರಿಯಾಗಿ ಆಚರಿಸಲಾಗುತ್ತಿದೆ. ದಸರಾ ಉತ್ಸವವು ಮಠದಲ್ಲಿ ನಡೆಯುವ ಮತ್ತೊಂದು ವಿಜೃಂಭಣೆಯ ಕಾರ್ಯಕ್ರಮವಾಗಿದೆ. ಯುಗಾದಿ ಯಲ್ಲಿ ಇಪ್ಪತ್ತೊಂದು ದಿನ ದೇವಿ ಪುರಾಣಗಳನ್ನು ನಡೆಸಲಾಗುತ್ತಿದೆ.

ಅಭಿವೃದ್ಧಿ ಕಾರ್ಯಗಳು: ೧೯೬೧ ರಲ್ಲಿ ಅಧಿಕಾರಕ್ಕೆ ಬಂದ ಶ್ರೀ ಗುರುಪಾದಲಿಂಗ ಸ್ವಾಮಿಗಳು ದಾಸೋಹ ಮಂದಿರ, ಕಲ್ಯಾಣ ಮಂಟಪ, ಚನ್ನವೀರ ಸ್ವಾಮಿಗಳ ಗದ್ದುಗೆ ಮಂಟಪವನ್ನು ನಿರ್ಮಿಸಿದ್ದಾರೆ. ಅಲ್ಲದೆ ಅನ್ನದಾಸೋಹದ ವ್ಯವಸ್ಥೆಯನ್ನು ನಿತ್ಯವೂ ನಡೆಯುವಂತೆ ಮಾಡಿದ್ದಾರೆ. ಗುರುಗಳ ಕರ್ತೃತ್ವಶಕ್ತಿಯಿಂದ ಮಠಕ್ಕೆ ಆರ್ಥಿಕ ಸದೃಢತೆಯನ್ನು ತಂದುಕೊಟ್ಟಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಗುರುಪಾದಲಿಂಗ ಸ್ವಾಮಿಗಳು, ಶ್ರೀ ವಿರಕ್ತಮಠ, ಬಬಲಾದ (ಐ.ಕೆ), ಗುಲ್ಬರ್ಗ ತಾಲ್ಲೂಕು.

ಮಹಾಗಾಂವ್

ಗುಲ್ಬರ್ಗ ತಾಲ್ಲೂಕಿನ ಮಹಾಗಾಂವ್ ಗ್ರಾಮವು ತಾಲ್ಲೂಕು ಕೇಂದ್ರದಿಂದ ಇಪ್ಪತ್ತೆಂಟು ಕಿ.ಮೀ ದೂರದಲ್ಲಿದೆ. ಪುರಾತನ ಕಾಲದಲ್ಲಿ ಇಲ್ಲಿ ವೀರಶೈವ ಧರ್ಮವು ಪ್ರಾಬಲ್ಯವನ್ನು ಸಾಧಿಸಿದೆ. ಪುರಾತನ ಇತಿಹಾಸವುಳ್ಳ ಈ ಗ್ರಾಮದಲ್ಲಿ ಶ್ರೀ ಕಳ್ಳಿಮಠ, ಶ್ರೀ ವಿರಕ್ತಮಠ ಹಾಗೂ ಶ್ರೀ ಗಚ್ಚಿನಮಠ ಎಂಬ ಮೂರು ಮಠಗಳು ಸ್ಥಾಪನೆಯಾಗಿದ್ದವು. ಈ ಮೂರು ಮಠಗಳಲ್ಲಿ ಈಗ ಶ್ರೀ ಕಳ್ಳಿಮಠ ಅಸ್ತಿತ್ವದಲ್ಲಿದೆ. ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದ್ದರೂ ಈ ಮಠದ ಗುರುಗಳು ಇಂಗಳೇಶ್ವರದಲ್ಲಿರುವ ಕಾರಣಕ್ಕೆ ಈ ಮಠವು ಸಹ ಖಾಲಿ ಉಳಿದಿದೆ.

ಕಳ್ಳಿಮಠ: ಮಹಾಗಾಂವ್ ಗ್ರಾಮದ ಪಶ್ಚಿಮ ಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಕಳ್ಳಿಮಠವು ಪುರಾತನ ಪರಂಪರೆಯ ಮಠವಾಗಿದೆ. ಉಜ್ಜಯಿನಿ ಪೀಠದ ಪುತ್ರವರ್ಗದ ಪರಂಪರೆಯ ಈ ಮಠವು ಶ್ರೀ ಮಹಾಂತೇಶ್ವರ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತದೆ. ಗುರುಗಳು ಇಲ್ಲಿ ನೆಲೆಸಿ ಮಠವನ್ನು ಸ್ಥಾಪನೆ ಮಾಡಿದಾಗ ಈ ಮಠದ ಸುತ್ತ ಕಳ್ಳಿಯು ಬೆಳೆದಿದ್ದ ಕಾರಣ, ಈ ಮಠಕ್ಕೆ ರೂಢಿಗತವಾಗಿ'ಕಳ್ಳಿಮಠ'ವೆಂದು ಹೆಸರು ಬಂದಿದೆ ಎಂಗು ಸ್ಥಳ ಪುರಾಣ ಹೇಳುತ್ತದೆ. ಗುರುಗಳು ಮಹಾ ತಪಸ್ವಿಗಳಾಗಿದ್ದು ವೀರಶೈವ ಧರ್ಮದ ಅಷ್ಟಾವರಣ, ಪಂಚಚಾರ ಮತ್ತು ಷಟ್‌ಸ್ಥಲ ಸಿದ್ಧಾಂತದ ಅನ್ವಯ ವೀರಶೈವ ಧರ್ಮವನ್ನು ಪ್ರಚಾರಪಡಿಸಿ, ಒಲಿದು ಬಂದ ಭಕ್ತರಿಗೆ ಧರ್ಮೋಪದೇಶ ನೀಡಿ ಸಮಾಜವನ್ನು ಸನ್ಮಾರ್ಗಕ್ಕೆ ತರುವಲ್ಲಿ ಪ್ರಯತ್ನಿಸಿದರು. ಗುರುಗಳು ಮಠವನ್ನು ಸ್ಥಾಪನೆ ಮಾಡಿದ ಮೇಲೆ ಮಠದಲ್ಲಿ ನಿತ್ಯ ಶಿವಾನುಭವಗೋಷ್ಠಿ, ಧರ್ಮೋಪದೇಶವನ್ನು ಮಾಡಿ ಭಕ್ತರಲ್ಲಿ ಜಾಗೃತಿಯನ್ನುಂಟು ಮಾಡುತ್ತಿದ್ದರು. ಅಲ್ಲದೆ ಭಕ್ತರ ಬೇಕು-ಬೇಡಗಳನ್ನು ತಮ್ಮ ತಪೋಶಕ್ತಿಯ ಬಲದಿಂದ ಪರಿಹರಿ ಸಲು ಪ್ರಯತ್ನಿಸಿ, ಭಕ್ತರಲ್ಲಿ ಮಾನಸಿಕ ಧೈರ್ಯತುಂಬಿ ಕಾಯಕದಲ್ಲಿ ತೊಡಗಿಸುತ್ತಿದ್ದರು. ಇವರ ಈ ಪ್ರಯತ್ನದಿಂದ ಗ್ರಾಮವು ಸುಭಿಕ್ಷವನ್ನು ಕಂಡಿತು.

ಪರಂಪರೆ:

೧. ಷ.ಬ್ರ.ಶ್ರೀ ಮಹಾಂತೇಶ್ವರ ಶಿವಾಚಾರ್ಯಸ್ವಾಮಿಗಳು

೨. ಷ.ಬ್ರ.ಶ್ರೀ ವಿರೂಪಾಕ್ಷೇಶ್ವರ ಶಿವಾಚಾರ್ಯಸ್ವಾಮಿಗಳು

೩. ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ಮಹಾಂತೇಶ್ವರ ಶಿವಾಚಾರ್ಯ ಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ವಿರೂಪಾಕ್ಷೇಶ್ವರ ಶಿವಾಚಾರ್ಯ ಸ್ವಾಮಿಗಳು ಮಹಾ ತಪಸ್ವಿಗಳೆಂದು ಹೆಸರು ಪಡೆದಿದ್ದರು.

ಇವರು ಪವಾಡ ಪುರುಷರಾಗಿ ಭೂತ ಪ್ರೇತಗಳನ್ನು ಒಲಿಸಿಕೊಂಡಿದ್ದರೆಂದು ಹೇಳಲಾಗುತ್ತಿದೆ. ಇವರು ಆಯುರ್ವೇದ ಪಂಡಿತರಾಗಿ ಭಕ್ತರಿಗೆ ಚಿಕಿತ್ಸೆ ನೀಡಿದ್ದಾರೆ. ಇವರ ನಂತರ ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಮುನ್ನಡೆಸಿದ್ದಾರೆ.

ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು ಶ್ರೀ ಚನ್ನಯ್ಯ ಮತ್ತು ಶ್ರೀಮತಿ ಕಲ್ಯಾಣಮ್ಮನವರ ಪುತ್ರರಾಗಿ ೧೯೬೮ ರಲ್ಲಿ ಜನಿಸಿದರು. ಇವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಮಹಾಗಾಂವ್‌ನಲ್ಲಿಯೇ ಮುಗಿಸಿ, ಧಾರವಾಡದಲ್ಲಿ ಪದವಿ ಶಿಕ್ಷಣ ಮತ್ತು ತತ್ತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ಪಾಂಡಿತ್ಯವನ್ನು ಸಂಪಾದಿಸಿಕೊಂಡು ಬಂದರು. ಗುರುಗಳು ಉತ್ತಮ ವಾಗ್ಮಿಗಳಾಗಿ, ವೀರಶೈವ ಸಿದ್ಧಾಂತದ ಬಗ್ಗೆ ಅಪಾರ ಜ್ಞಾನ ಉಳ್ಳವರಾಗಿ ಧರ್ಮವನ್ನು ಮುನ್ನಡೆಸಲು ೧೯೮೦ ರಲ್ಲಿ ಪುತ್ರವರ್ಗದ ಶ್ರೀ ಕಳ್ಳಿ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಸ್ಥಾಪನೆಯಾಗಿರುವ ಐದು ಗದ್ದುಗೆಗಳಿಗೆ ನಿತ್ಯ ಪೂಜೆಯನ್ನು ಮಾಡಲಾಗುತ್ತಿದೆ.ಪ್ರತಿ ಸೋಮವಾರ ಅಕ್ಕನಬಳಗದಿಂದ ಭಜನೆ, ಡಿಸೆಂಬರ್‌ನಲ್ಲಿ ವಿರೂಪಾಕ್ಷೇಶ್ವರ ಶಿವಾಚಾರ್ಯ ಸ್ವಾಮಿಗಳ ಪುಣ್ಯತಿಥಿಯನ್ನು ಆಚರಿಸಲಾಗುತ್ತಿದೆ. ಪುಣ್ಯತಿಥಿಯ ಅಂಗವಾಗಿ ಎಂಟು ದಿನಗಳ ಕಾಲ ಪುರಾಣ ಪ್ರವಚನವನ್ನು ನಡೆಸಲಾಗುತ್ತಿದೆ. ಅಲ್ಲದೆ ಪುರಾಣ ಪ್ರವಚನದ ಕೊನೆಯ ದಿನ ಧರ್ಮ ಸಭೆಯನ್ನು ನಡೆಸಿ ನಾಡಿನ ವಿದ್ವಾಂಸರು, ವಿವಿಧ ಮಠದ ಮಠಾಧೀಶರನ್ನು ಕರೆಸಲಾಗುತ್ತಿದೆ. ಈ ದಿನಗಳಲ್ಲಿ ಸಾಂಸ್ಕೃತಿ ಕಾರ್ಯಕ್ರಮಗಳನ್ನು ಹಾಗೂ ಅನ್ನ ಸಂತರ್ಪಣೆಯನ್ನು ನಡೆಸಲಾಗುತ್ತಿದೆ.

ಶಿಕ್ಷಣ ಸೇವೆ: ೧೯೮೯ ರಲ್ಲಿ ಶ್ರೀ ವಿರೂಪಾಕ್ಷೇಶ್ವರ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಲಾಗಿದೆ. ಈ ಸಂಸ್ಥೆಯ ವತಿಯಿಂದ ಶ್ರೀ ಮಹಾಂತೇಶ್ವರ ಶಿಶುವಿಹಾರ, ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲೆಯನ್ನು ನಡೆಸಲಾಗುತ್ತಿದೆ. ಇದರಿಂದ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಶಿಕ್ಷಣ ಕಲಿಯಲು ನೆರವಾಗಿದೆ. ಮಠದ ವತಿಯಿಂದ ಶ್ರೀ ವಿರೂಪಾಕ್ಷೇಶ್ವರ ಉಚಿತ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಲಾಗಿದೆ. ಈ ವಿದ್ಯಾರ್ಥಿ ನಿಲಯದಲ್ಲಿ ಮೂವತ್ತು ವಿದ್ಯಾರ್ಥಿಗಳು ಆಶ್ರಯ ಪಡೆದಿದ್ದಾರೆ. ಈ ರೀತಿ ಗುರುಗಳು ಧಾರ್ಮಿಕ,ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಮಠವನ್ನು ಅಭಿವೃದ್ಧಿಪಡಿಸಿ, ಮಾನವೀಯ ಮೌಲ್ಯಗಳನ್ನು ಬೆಳೆಸಲು ಮುಂದಾಗಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕಳ್ಳಿಮಠ, ಮಹಾಗಾಂವ್, ಗುಲ್ಬರ್ಗ ತಾಲ್ಲೂಕು.

ಸರಡಗಿ

ಗುಲ್ಬರ್ಗ ತಾಲ್ಲೂಕಿನ ಸರಡಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವ ಭಾಗಕ್ಕೆ ಹದಿನೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಚಿಕ್ಕವೀರೇಶ್ವರ ಸುಲ್ತಾನಪುರ ಹಿರೇಮಠವು ಸ್ಥಾಪನೆಯಾಗಿದೆ.

ಚಿಕ್ಕವೀರೇಶ್ವರ ಸುಲ್ತಾನಪುರ ಹಿರೇಮಠ: ಸರಡಗಿ ಗ್ರಾಮದಲ್ಲಿ ಚಿಕ್ಕವೀರೇಶ್ವರ ಸುಲ್ತಾನಪುರ ಹಿರೇಮಠವು ಸ್ಥಾಪನೆಯಾಗಿದೆ. ಉಜ್ಜಯಿನಿ ಪೀಠದ ಶಾಖಾ ಮಠವಾಗಿರುವ ಈ ಮಠವು ಪುತ್ರವರ್ಗದ ಪರಂಪರೆಯಲ್ಲಿ ಬೆಳೆದುಬಂದಿದೆ.

ಮಠ ಸ್ಥಾಪನೆ: ಶ್ರೀ ಚಿಕ್ಕವೀರೇಶ್ವರ ಶಿವಾಚಾರ್ಯ ಸ್ವಾಮಿಗಳು ಸುಲ್ತಾನ್‌ಪುರದಲ್ಲಿದ್ದ ಹಿರೇಮಠವನ್ನು ಸರಡಗಿ ಗ್ರಾಮಕ್ಕೆ ಸ್ಥಳಾಂತರಿಸಿರುತ್ತಾರೆ.ಗುರುಗಳು ಮಠದ ಆಡಳಿತ ನಿರ್ವಹಣೆಗೆ ಮತ್ತು ಧರ್ಮ ಪ್ರಚಾರ ಕಾರ್ಯಕ್ಕಾಗಿ ಆಡಳಿತಾತ್ಮಕ ದೃಷ್ಟಿಯಿಂದ ಸರಡಗಿಯೇ ಸೂಕ್ತ ಎಂದು ಮನಗಂಡು ಈ ನಿರ್ಧಾರವನ್ನು ಕೈಗೊಂಡಿರುತ್ತಾರೆ ಎಂದು ಈಗಿನ ಗುರುಗಳು ಅಭಿಪ್ರಾಯಿ ಸುತ್ತಾರೆ. ಸುಲ್ತಾನಪುರದಲ್ಲಿ ಹಿಳಸೆಯ ಗುರುಗಳಾಗಿ ಅಧಿಕಾರ ವಹಿಸಿಕೊಂಡಿದ್ದ ಶ್ರೀ ಚಿಕ್ಕವೀರೇಶ್ವರ ಶಿವಾಚಾರ್ಯ ಸ್ವಾಮಿಗಳು ಧಾರ್ಮಿಕ ಕಾರ್ಯಗಳನ್ನು ಸಮರ್ಥವಾಗಿ ನಡೆಸಿ ಮಠವನ್ನು ಬೆಳೆಸಿದ್ದರು.

ಪರಂಪರೆ: ಶ್ರೀ ಚಿಕ್ಕವೀರೇಶ್ವರ ಶಿವಾಚಾರ್ಯ ಸ್ವಾಮಿಗಳು ಇಲ್ಲಿಗೆ ಮಠವನ್ನು ಸ್ಥಳಾಂತರಿಸಿದ ಮೇಲೆ ಪಟ್ಟಾಧಿಕಾರವನ್ನು ವಹಿಸಿಕೊಂಡ ಗುರುಗಳ ಹೆಸರುಗಳನ್ನು ಆಧಾರದ ಕೊರತೆಯಿಂದ ಗುರುತಿಸಲು ಸಾಧ್ಯವಾಗುತ್ತಿಲ್ಲ. ಆದರೆ ಸರಡಗಿ ಮಠದಲ್ಲಿ

ನಾಲ್ಕು ಗದ್ದುಗೆಗಳು, ಸುಲ್ತಾನಪುರದಲ್ಲಿ ಏಳು ಗದ್ದುಗೆಗಳು ಸ್ಥಾಪನೆಯಾಗಿವೆ. ಈ ಹಿನ್ನಲೆಯಲ್ಲಿ ಈ ಮಠದ ಪರಂಪರೆಯಲ್ಲಿ ಹತ್ತು ಜನ ಗುರುಗಳು ಅಧಿಕಾರವನ್ನು ವಹಿಸಿಕೊಂಡಿದ್ದರು ಎಂಬುದು ಸ್ಪಷ್ಟವಾಗುತ್ತಿದೆ. ದೊರೆತ ಮಾಹಿತಿ ಪ್ರಕಾರ ಸರಡಗಿ ಮಠದಲ್ಲಿ ಈ ಕೆಳಗಿನ ಕೆಲವು ಮಠಾಧೀಶರು ಅಧಿಕಾರ ನಡೆಸಿದ್ದರು ಎಂದು ತಿಳಿದು ಬಂದಿದೆ.

೧. ಷ.ಬ್ರ.ಶ್ರೀ ಚಿಕ್ಕವೀರೇಶ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ಎರಡನೆಯ ಚಿಕ್ಕವೀರೇಶ ಶಿವಾಚಾರ್ಯ ಸ್ವಾಮಿಗಳು
೩. ಷ.ಬ್ರ.ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಸರಡಗಿಯಲ್ಲಿ ಬೆಳೆದು ಬಂದಿದೆ. ಎರಡನೆಯ ಶ್ರೀ ಚಿಕ್ಕವೀರೇಶ ಶಿವಾಚಾರ್ಯ ಸ್ವಾಮಿಗಳು ಮಠದಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸಿ, ಮಠವನ್ನು ಅಭಿವೃದ್ಧಿಗೊಳಿಸಿ ೧೯೭೪ ರಲ್ಲಿ ಲಿಂಗೈಕ್ಯರಾಗಿರುತ್ತಾರೆ. ಇವರ ತರುವಾಯ ಈಗಿನ ಗುರುಗಳಾದ ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದಿದ್ದಾರೆ. ಇವರು ಶ್ರೀಶರಣಯ್ಯ ಮತ್ತು ಶ್ರೀಮತಿ ಸಂಗಮ್ಮನವರ ಪುತ್ರರಾಗಿ ಜನಿಸಿ, ಪದವೀಧರರಾಗಿ ೧೯೮೯ ರಲ್ಲಿ ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠದ ಹಳೆಯ ಕಟ್ಟಡವನ್ನು ತೆಗೆಸಿ ಹೊಸ ಕಟ್ಟಡವನ್ನು ನಿರ್ಮಿಸಿದ್ದಾರೆ. ಗುರುಗಳು ವೀರಶೈವ ಧರ್ಮವನ್ನು ಪ್ರಚಾರ ಪಡಿಸುವಲ್ಲಿ ಮುಂದಾಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗದ್ದುಗೆಗಳಿಗೆ ನಿತ್ಯ ಪೂಜೆ, ಪ್ರತಿ ಅಮಾವಾಸ್ಯೆಯಲ್ಲಿ ಶಿವಾನುಭವ ಕಾರ್ಯಕ್ರಮವನ್ನು ನಡೆಸುತ್ತಿದ್ದಾರೆ. ಶ್ರಾವಣ ಮಾಸದಲ್ಲಿ ಪ್ರವಚನ ಕಾರ್ಯಕ್ರಮ, ಜನವರಿಯಲ್ಲಿ ಕರ್ತೃಗುರುಗಳ ಪುಣ್ಯಾರಾಧನೆಯನ್ನು ವಿಜೃಂಭಣೆಯಿಂದ ನಡೆಸುತ್ತಿದ್ದಾರೆ. ಈ ಸಂದರ್ಭದಲ್ಲಿ ಅನ್ನದಾಸೋಹವೂ ಸಹ ನಡೆಯುತ್ತಿದೆ.

ವಿಳಾಸ: ಷ.ಬ್ರ.ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು, ಶ್ರೀ ಸುಲ್ತಾನಪುರ ಹಿರೇಮಠ, ಸರಡಗಿ, ಗುಲ್ಬರ್ಗ ತಾಲ್ಲೂಕು.

ಸ್ವಂತ

ಗುಲ್ಬರ್ಗ ತಾಲ್ಲೂಕಿನ ಸ್ವಂತ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ನಲವತ್ತೆರೆಡು ಕಿ.ಮೀ ದೂರದಲ್ಲಿದೆ. ಧಾರ್ಮಿಕ ಇತಿಹಾಸವುಳ್ಳ ಈ ಗ್ರಾಮದಲ್ಲಿ ಶ್ರೀ ಹಿರೇಮಠವು ಸ್ಥಾಪನೆಯಾಗಿ ವೀರಶೈವಧರ್ಮ ಬೆಳೆಯುವಂತೆ ಮಾಡಿದೆ.

ಹಿರೇಮಠ: ಸ್ವಂತ ಗ್ರಾಮದ ದಕ್ಷಿಣದ ಹೊರ ಭಾಗದಲ್ಲಿ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ. ರಂಭಾಪುರಿ ಪೀಠದ ಶಾಖಾ ಮಠವಾಗಿ ಪುತ್ರ ವರ್ಗದ ಪರಂಪರೆಯಲ್ಲಿ ಬೆಳೆದುಬಂದಿದೆ. ಈ ಮಠವು ಶ್ರೀ ವೀರಂತಯ್ಯ ಸ್ವಾಮಿಗಳಿಂದ ಪ್ರಾರಂಭಗೊಂಡು ವೀರಶೈವ ಧರ್ಮದ ಪ್ರಚಾರ ಕಾರ್ಯವನ್ನು ಕೈಗೊಂಡಿದೆ.

ಪರಂಪರೆ:
೧. ಷ.ಬ್ರ.ಶ್ರೀ ವೀರಂತಯ್ಯ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಚನ್ನಮಲ್ಲಪ್ಪ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಶಾಂತವೀರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಶಿವಕುಮಾರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಗುರುಗಳು ಮಠವನ್ನು ಧಾರ್ಮಿಕವಾಗಿ ಅಭಿವೃದ್ಧಿಪಡಿಸಿದರು. ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠವು ಆರ್ಥಿಕ ಸದೃಢತೆಯನ್ನು ಕಂಡಿತು. ಗುರುಗಳು ವೀರಶೈವ ಧರ್ಮವನ್ನು ಪ್ರಚಾರಪಡಿಸಿ ಮಠ ಮತ್ತು ಸಮಾಜವನ್ನು ಬೆಳೆಸಿದರು.ಇವರ ಆಡಳಿತದ ದೀರ್ಘ ಅವಧಿಯಲ್ಲಿ ಮಠವು ಹೆಚ್ಚು ಅಭಿವೃದ್ಧಿಯನ್ನು ಕಂಡಿತು. ಗುರುಗಳು ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳಿಗೆ ೧೯೯೨ ರಲ್ಲಿ ಪಟ್ಟಾಧಿಕಾರವನ್ನು ನೀಡಿ ವಿಶ್ರಾಂತ ಜೀವನವನ್ನು ನಡೆಸುತ್ತಿದ್ದಾರೆ.

ಈಗಿನ ಪಟ್ಟಾಧ್ಯಕ್ಷರಾದ ಶ್ರೀ ಶಿವಕುಮಾರ ಸ್ವಾಮಿಗಳು ಶ್ರೀ ರೇವಣಸಿದ್ಧಯ್ಯ ಮತ್ತು ಶ್ರೀಮತಿ ಪ್ರೇಮಲತ

ಇವರ ಪುತ್ರರಾಗಿ ಜನಿಸಿದರು. ಗುರುಗಳು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಮುಗಿಸಿ ಪಟ್ಟಾಧಿಕಾರವನ್ನು ವಹಿಸಿಕೊಂಡು ಹುಬ್ಬಳ್ಳಿಯಲ್ಲಿ ಪದವಿ ಶಿಕ್ಷಣವನ್ನು ಮುಗಿಸಿದ್ದಾರೆ. ಹಿರಿಯ ಗುರುಗಳ ಮಾರ್ಗದರ್ಶನ ಹಾಗೂ ಅನುಭವಗಳಿಂದ ಮಠವನ್ನು ಧಾರ್ಮಿಕ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿಪಡಿಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ,ಸ್ಟಂತ, ಗುಲ್ಬರ್ಗ ತಾಲ್ಲೂಕು.

ಹಿರೇನಂದೂರು

ಗುಲ್ಬರ್ಗ ತಾಲ್ಲೂಕಿನ ಹಿರೇನಂದೂರು, ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಹತ್ತು ಕಿ.ಮೀ ದೂರದಲ್ಲಿದೆ. ಪುರಾಣ ಪ್ರಸಿದ್ಧ ಇಲ್ಲಿ ಶ್ರೀ ತೋಪಿನಕಟ್ಟಿಮನಿ ಹಿರೇಮಠವು ಸ್ಥಾಪನೆಯಾಗಿ ವೀರಶೈವಧರ್ಮ ಬೆಳೆಯುವಂತೆ ಮಾಡಿದೆ.

ತೋಪಿನ ಕಟ್ಟಿಮನಿ ಹಿರೇಮಠ: ಸುಮಾರು ಎಂಟುನೂರು ವರ್ಷಗಳ ಹಿಂದೆ ಸ್ಥಾಪನೆಗೊಂಡ ತೋಪಿನಕಟ್ಟಿಮನಿ ಹಿರೇಮಠವು ಈ ಪ್ರಾಂತ್ಯದ ಪ್ರಮುಖ ಮಠಗಳಲ್ಲಿ ಒಂದಾಗಿ ಬೆಳೆದಿದೆ. ಚಿಕ್ಕನಂದೂರು ಮತ್ತು ಹಿರೇನಂದೂರು ಅವಳಿ ಗ್ರಾಮಗಳು. ಈ ಗ್ರಾಮಗಳ ಮಧ್ಯಭಾಗದಲ್ಲಿ ರಂಭಾಪುರಿ ಪೀಠದ ಶಾಖಾ ಮಠವಾದ ಈ ಮಠವು ಸ್ಥಾಪನೆಗೊಂಡು ತನ್ನ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ ಬಂದಿದೆ.

ಮಠದ ಸ್ಥಾಪನೆ: ಈ ಮಠದ ಮೂಲ ಕರ್ತೃಗುರುಗಳು ಶ್ರೀ ಮಲಯ ಶಾಂತೇಶ್ವರ ಶಿವಾಚಾರ್ಯ ಸ್ವಾಮಿಗಳಾಗಿದ್ದು, ಇವರು ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಪ್ರವಾಸವನ್ನು ಕೈಗೊಂಡ ಮಹಾ ಪುರುಷರು. ಇವರು ಹಿರೇನಂದೂರಿನಲ್ಲಿ ಮಠವನ್ನು ಸ್ಥಾಪಿಸಿ ವೀರಶೈವ ಧರ್ಮ ಬೆಳಗುವಂತೆ ಆಶೀರ್ವದಿಸಿ ಲೋಕ ಸಂಚಾರ ಕೈಗೊಂಡರು.ಗುರುಗಳು ಮಹಾ ಜ್ಞಾನಿಗಳಾಗಿ ವೀರಶೈವ ಸಿದ್ಧಾಂತದ ಬಗ್ಗೆ ಅಧಿಕೃತವಾಗಿ ಚರ್ಚಿಸಬಲ್ಲಂತವರಾಗಿದ್ದರು. ಇವರು ಶ್ರೀ ರೇವಣಸಿದ್ಧರ ಸಮಕಾಲೀನರಾಗಿ ದಕ್ಷಿಣ ಕರ್ನಾಟಕದ ಶಿವಗಂಗೆಯಲ್ಲಿ ನೆಲೆಸಿದರು. ಇಲ್ಲಿ ನೆಲೆಸಿ ಶ್ರೀ ರೇವಣಸಿದ್ಧರು ಪ್ರಾರಂಭ ಮಾಡಿದ ಮೇಲಣ ಗವಿಮಠದ ಮಠಾಧ್ಯಕ್ಷರಾಗಿ ವೀರಶೈವ ಧರ್ಮ ವಿಸ್ತಾರವಾಗಿ ಬೆಳೆಯಲು ನೆರವಾದರು. ಇಂತಹ ಮಹಾ ಮಹಿಮರು ನೆಲೆ ನಿಂತ ಕ್ಷೇತ್ರಗಳು ಇಂದು ಸುಕ್ಷೇತ್ರಗಳಾಗಿ ಬೆಳೆದು ಹೆಸರು ಮಾಡಿವೆ. ನಂತರ ಗುರುಗಳು ಪುನಃ ಶಿವಗಂಗೆಯಿಂದ ಲೋಕ ಸಂಚಾರ ಕೈಗೊಂಡು ತಾವು ಸ್ಥಾಪಿಸಿದ ಹಿರೇನಂದೂರು ಮಠಕ್ಕೆ ಆಗಮಿಸಿ ಧರ್ಮ ಕಾರ್ಯಗಳನ್ನು ಮುಂದುವರೆಸಿದರು. ಗುರುಗಳು ಹಿರೇನಂದೂರು ಸಮೀಪದ ಬೆಟ್ಟದಲ್ಲಿ ಅನುಷ್ಠಾನಕ್ಕೆ ಕುಳಿತು ಗಂಗೆ ಉದ್ಭವವಾಗುವಂತೆ ಮಾಡಿದ್ದರೆಂದು ಹೇಳಲಾಗುತ್ತಿದೆ.ಅಂದು ಅನುಷ್ಠಾನ ಆಚರಿಸಿದ ಬೆಟ್ಟದಲ್ಲಿ ಯಾವತ್ತೂ ಬತ್ತದ ಚಿಲುಮೆ ಇದೆ. ಈ ಕಾರಣದಿಂದ ಈ ಸ್ಥಳವು ಗಂಗೆಯ ಬೆಟ್ಟವೆಂದು ಹೆಸರು ಪಡೆದಿದೆ. ಶ್ರೀ ಮಲಯ ಶಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು ಈ ನಾಡನ್ನು ಸುಕ್ಷೇತ್ರಗೊಳಿಸಿ (ಸುಮಾರು ಕ್ರಿ.ಶ.೯೬೪) ಲಿಂಗೈಕ್ಯರಾದರೆಂದು ಮಠದ ಚರಿತ್ರೆ ತಿಳಿಸುತ್ತದೆ. ನಂತರ ಅಧಿಕಾರಕ್ಕೆ ಬಂದ ಗುರುಗಳ ವಿವರಗಳು ನಿಖರವಾಗಿ ತಿಳಿದುಬಂದಿಲ್ಲ. ಈ ಮಠಕ್ಕೆ ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳು ಅಧಿಕಾರ ವಹಿಸಿಕೊಳ್ಳುವ ತನಕ ಮಠದ ಪರಂಪರೆ ಅಸ್ಪಷ್ಟವಾಗಿದೆ.

ಮಠದ ಪರಂಪರೆ:
೧. ಷ.ಬ್ರ.ಶ್ರೀ ಮಲಯ ಶಾಂತೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಸದಾಶಿವ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಚಂದ್ರಮೌಳೇಶ್ವರ ಶಿವಾಚಾರ್ಯಸ್ವಾಮಿಗಳು

ಪಂಡಿತ ರತ್ನ: ಶ್ರೀ ರಾಚೋಟಿ ಸ್ವಾಮಿಗಳು ಮತ್ತು ಶ್ರೀಮತಿ ಸಂಗಮ್ಮನವರ ಪುತ್ರರಾಗಿ ಶಾಲಿವಾಹನ ಶಕೆ ೧೮೩೨ ರಲ್ಲಿ (ಕ್ರಿ.ಶ.೧೯೦೬) ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳು ಜನಿಸಿದರು. ಗುರುಗಳು ಬಾಲ್ಯದಲ್ಲಿಯೆ ಅಪ್ರತಿಮ ಪಂಡಿತರಾಗಿ ಹೆಸರು ಪಡೆದಿದ್ದರು. ಇವರು ಆಧ್ಯಾತ್ಮಿಕ ವಿದ್ಯಾಭ್ಯಾಸದ ಜೊತೆಗೆ ಲೌಕಿಕ ವಿದ್ಯಾಭ್ಯಾಸವನ್ನು ಮಾಡಿ ವಿದ್ಯಾರ್ಥಿ ದೆಸೆಯಲ್ಲಿಯೆ ಪ್ರಶಂಸೆಗೆ ಒಳಗಾಗಿದ್ದರು. ಇವರ ಪಾಂಡಿತ್ಯವನ್ನು ಗುರುತಿಸಿದ ಪಂಚಪೀಠಾಧೀಶರು ಇವರಿಗೆ ಪ್ರೋತ್ಸಾಹ ನೀಡಿದರು. ಈ

ಕಾರಣಕ್ಕಾಗಿ ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳು ಮಹಾ ಜ್ಞಾನಿಗಳಾಗಿ, ಅನುಷ್ಠಾನ ಮೂರ್ತಿಗಳಾಗಿ ಹೆಸರು ಪಡೆಯಲು ಸಾಧ್ಯವಾಯಿತು. ಗುರುಗಳು ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿ ಬಸವ ಕಲ್ಯಾಣ ತಾಲ್ಲೂಕಿನ ಬೇಲೂರು ಮಠದ ಶ್ರೀ ಗುರು ಲಿಂಗ ಶಿವಾಚಾರ್ಯ ಸ್ವಾಮಿಗಳ ಅನುಗ್ರಹ ಪಡೆದು, ಹಿರೇನಂದೂರು ಹಿರೇಮಠದ ಪಟ್ಟಾಧಿಕಾರವನ್ನು ೧೯೩೮ ರಲ್ಲಿ ವಹಿಸಿಕೊಂಡಿರುತ್ತಾರೆ. ಪರಂಪರೆಯ ಸಂಪ್ರದಾಯದಂತೆ ಮಠವನ್ನು ಬೆಳೆಸಿದ್ದಾರೆ.

ಬೆಳೆದ ಶಿಷ್ಯ ಸಂಪತ್ತು: ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳು ಶಿವಯೋಗ ರತ್ನ, ವೈದ್ಯಭೂಷಣ, ವೈದ್ಯರತ್ನ, ಪದವಿಗಳನ್ನು ಸಂಪಾದಿಸಿಕೊಂಡರು. ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳಲ್ಲಿ ಗುರುಗಳ ಅವಿರತ ಸೇವೆಯನ್ನು ಗುರುತಿಸಿದ ಅಂದಿನ ಕರ್ನಾಟಕ ಸರ್ಕಾರ 'ರಾಜ್ಯಪ್ರಶಸ್ತಿ'ಯನ್ನು ನೀಡಿ ಗೌರವಿಸಿತು. ಇಂತಹ ಅಪ್ರತಿಮ ವ್ಯಕ್ತಿತ್ವದ ಗುರುಗಳು ಸಮಾಜದ ಎಲ್ಲಾ ವರ್ಗದ ಜನರನ್ನು ಸಮಾನವಾಗಿ ಕಂಡು ಗೌರವಿಸಿದ್ದರ ಫಲವಾಗಿ ಅಪಾರ ಶಿಷ್ಯ ಸಂಪತ್ತು ಬೆಳೆಯಿತು. ಗುರುಗಳು ಮಠದ ಕಟ್ಟಡವನ್ನು ನೂತನವಾಗಿ ನಿರ್ಮಿಸಿ, ಶ್ರೀ ಮಲಯ ಶಾಂತೇಶ್ವರ ಶಿವಾಚಾರ್ಯ ಸ್ವಾಮಿಗಳ ಜೀವಂತ ಸಮಾಧಿಯ ಗದ್ದುಗೆಗೆ ಭವ್ಯವಾದ ಮಂಟಪವನ್ನು ನಿರ್ಮಿಸಿದರು.

ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳು ಆಯುರ್ವೇದ ಶಾಸ್ತ್ರವನ್ನು ಅಧ್ಯಯನಮಾಡಿ ಗಿಡಮೂಲಿಕೆಗಳಿಂದ ವೈದ್ಯ ಸೇವೆಯನ್ನು ನೀಡುತ್ತಿದ್ದರು. ಇವರು ಜಗದ್ಗುರು ಪಂಚ ಪೀಠಾಧ್ಯಕ್ಷರನ್ನು ಪ್ರಥಮವಾಗಿ ಗುಲ್ಬರ್ಗ ನಗರಕ್ಕೆ ಆಹ್ವಾನಿಸಿ ಧರ್ಮ ಜಾಗೃತಿ ಕಾರ್ಯಕ್ರಮವನ್ನು ಮಾಡಿದ್ದರು. ಮಹಾ ದಾರ್ಶನಿಕರು, ಸಮಾಜದ ಸಂಘಟಕರು ಎಂದು ಹೆಸರು ಗಳಿಸಿದ್ದರು. ಗುರುಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಚಂದ್ರಮೌಳೇಶ್ವರ ಶಿವಾಚಾರ್ಯ ಸ್ವಾಮಿಗಳನ್ನು ನೇಮಿಸಿಕೊಂಡು ಅಧಿಕಾರಕ್ಕೆ ತಂದರು. ಹಿರಿಯ ಗುರುಗಳು ತಮ್ಮ ಜವಾಬ್ದಾರಿಯನ್ನೆಲ್ಲ ಪೂರೈಸಿ ಜೂನ್ ಹದಿನೇಳರ ೧೯೯೪ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಈಗ ಅಧಿಕಾರದಲ್ಲಿರುವ ಶ್ರೀ ಚಂದ್ರಮೌಳೇಶ್ವರ ಶಿವಾಚಾರ್ಯ ಸ್ವಾಮಿಗಳು ಶ್ರೀ ರೇವಣಸಿದ್ಧಯ್ಯ ಮತ್ತು ಶ್ರೀಮತಿ ಶಾಂತಮ್ಮ ನವರ ಪುತ್ರರಾಗಿ ೧೯೬೨ ರ ಡಿಸೆಂಬರ್ ೧೨ ರಂದು ಜನಿಸಿದರು. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಇಲ್ಲೇ ಮುಗಿಸಿ, ಕಾಲೇಜು ಶಿಕ್ಷಣವನ್ನು ಗುಲ್ಬರ್ಗದಲ್ಲಿ ಮುಗಿಸಿ ೧೯೮೨ ರಲ್ಲಿ ಹಿರಿಯ ಗುರುಗಳ ಸಮ್ಮುಖದಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡರು.

ಧಾರ್ಮಿಕ -ಸಾಮಾಜಿಕ ಸೇವೆ: ಮಠದಲ್ಲಿ ಇರುವ ಗದ್ದುಗೆಗಳಿಗೆ ನಿತ್ಯಪೂಜೆ, ಅಮಾವಾಸ್ಯೆ ಹುಣ್ಣಿಮೆಗಳಲ್ಲಿ ವಿಶೇಷ ಪೂಜೆ, ಮಾಘ ಶುದ್ಧ ಪಂಚಮಿಯಲ್ಲಿ ಶ್ರೀ ಮಲಯ ಶಾಂತೇಶ್ವರ ಶಿವಾಚಾರ್ಯ ಸ್ವಾಮಿಗಳ ಜಾತ್ರೋತ್ಸವ ನಡೆಯುತ್ತಿದೆ. ಶ್ರಾವಣದಲ್ಲಿ ನಿತ್ಯ ಭಜನೆ ಮತ್ತು ಅನ್ನದಾಸೋಹ ನಡೆಯುತ್ತಿದೆ.ಪರಂಪರೆಯ ಗುರುಗಳಂತೆ ಈಗಿನ ಶ್ರೀ ಚಂದ್ರಮೌಳೇಶ್ವರ ಶಿವಾಚಾರ್ಯ ಸ್ವಾಮಿಗಳು ಗಿಡ ಮೂಲಿಕೆಗಳಿಂದ ತಯಾರಿಸಿದ ಔಷಧಿಯನ್ನು ನೀಡುವ ಅಭ್ಯಾಸವನ್ನು ಬೆಳಸಿಕೊಂಡಿದ್ದು, ಅಪೇಕ್ಷಿಸಿ ಬರುವ ಭಕ್ತರಿಗೆ ಔಷಧಿಯನ್ನು ನೀಡುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಚಂದ್ರಮೌಳೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ತೋಪಿನಕಟ್ಟಿಮನಿ ಹಿರೇಮಠ, ಹಿರೇನಂದೂರು, ಗುಲ್ಬರ್ಗ ತಾಲ್ಲೂಕು.

ಹಿರೇಸಾವಳಗಿ

ಗುಲ್ಬರ್ಗ ತಾಲ್ಲೂಕಿನ ಹಿರೇಸಾವಳಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮ ಭಾಗಕ್ಕೆ ಹದಿನಾಲ್ಕು ಕಿ.ಮೀ ದೂರದಲ್ಲಿದೆ.ಈ ಗ್ರಾಮವು ವೀರಶೈವ ಧರ್ಮದ ನೆಲೆ ಬೀಡಾಗಿ ಬೆಳೆದಿದೆ. ಈ ಗ್ರಾಮದಲ್ಲಿ ಶ್ರೀ ಶಿವಲಿಂಗೇಶ್ವರ ಸಂಸ್ಥಾನ ಮಠ ಮತ್ತು ಶ್ರೀ ಶಾಂತೇಶ್ವರ ಸಂಸ್ಥಾನ ಮಠಗಳು ಸ್ಥಾಪನೆಯಾಗಿ ಧರ್ಮವನ್ನು ಪ್ರಚಾರಕ್ಕೆ ತಂದಿವೆ.

ಶಿವಲಿಂಗೇಶ್ವರ ಸಂಸ್ಥಾನಮಠ: ಹಿರೇಸಾವಳಗಿಯ ಹೊರ ಭಾಗದಲ್ಲಿ ಶ್ರೀ ಶಿವಲಿಂಗೇಶ್ವರ ಸಂಸ್ಥಾನ ಮಠವು ಸ್ಥಾಪನೆಯಾಗಿದೆ. ವಿರಕ್ತ ಸಂಪ್ರದಾಯದ ಈ ಮಠವು ಶ್ರೀ ಶಿವಲಿಂಗೇಶ್ವರರಿಂದ (ಕ್ರಿ.ಶ.೧೩೦೦) ಸ್ಥಾಪನೆಯಾಗಿದ್ದು ಧಾರ್ಮಿಕ,ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿಗೊಂಡು ಸಮಾಜವನ್ನು ಬೆಳೆಸಿದೆ.

ಮಠ ಸ್ಥಾಪನೆ: ಸಾವಳಗಿ ಸಮೀಪದ ಕೊಳ್ಳೂರು ಗ್ರಾಮದ ಶ್ರೀ ಲಿಂಗಬಸವಯ್ಯ ಮತ್ತು ಶ್ರೀಮತಿ ಮಲ್ಲಮಾಂಬೆಯವರ ಪುತ್ರರಾಗಿ ಜನಿಸಿದ ಶ್ರೀ ಶಿವಲಿಂಗೇಶ್ವರರು, ಬಾಲ್ಯದಲ್ಲಿಯೇ ಅಧ್ಯಾತ್ಮ ಚಿಂತನೆಯಿಂದ ಲೌಕಿಕ ವಿಚಾರಗಳ ಕಡೆ ಗಮನ ಕೊಡದೆ ಬೆಳೆದರು. ಗುರುಗಳು ಹನ್ನೆರಡನೆಯ ವಯಸ್ಸಿನಲ್ಲಿಯೇ ಮನೆಯನ್ನು ತೊರೆದು ಹಿರೇಸಾವಳಗಿಯ ಬೆಟ್ಟದ ಮೇಲೆ ಜನ ಸಂಚಾರವಿಲ್ಲದ ದುರ್ಗಮ ಪ್ರದೇಶದಲ್ಲಿ ಅನುಷ್ಠಾನಕ್ಕೆ ಕುಳಿತುಕೊಂಡರು. ತಪೋಸಿದ್ಧಿಯನ್ನು ಸಾಧಿಸಿಕೊಂಡರು. ಇವರಿಗೆ ಶಿವಪುರದ ಶ್ರೀ ಗುರುಸಿದ್ಧದೇವರು ಧರ್ಮೋಪದೇಶವನ್ನು ನೀಡಿ ಬಾಲಶಿವಯೋಗಿಯ ಸಾಧನೆಗೆ ನೆರವಾದರು. ಹಿರೇಸಾವಳಗಿಯ ಬೆಟ್ಟದಲ್ಲಿ ಯೋಗಸಿದ್ಧಿಯನ್ನು ಸಂಪಾದಿಸಿಕೊಂಡ ಈ ಸಂದರ್ಭದಲ್ಲಿ ಭಕ್ತರು ಶಿವಯೋಗಿ ಶಿವಲಿಂಗೇಶ್ವರರ ಇರುವಿಕೆಯನ್ನು ಕಂಡು ದರ್ಶನಕ್ಕೆ ಬರತೊಡಗಿದರು. ಈ ಸಂದರ್ಭದಲ್ಲಿ ಗುರುಗಳು ತಮ್ಮ ತಪೋಶಕ್ತಿಯಿಂದ ಅನೇಕ ಪವಾಡಗಳನ್ನು ಮಾಡಿ, ಭಕ್ತರನ್ನು ಉದ್ಧರಿಸಿದರು. ದಿನ ಕಳೆದಂತೆ ಬಾಲಶಿವಯೋಗಿ ಶಿವಲಿಂಗೇಶ್ವರರ ಪ್ರಭಾವ ಹೆಚ್ಚಾಗಿ ಹಿರೇಸಾವಳಗಿಯ ಭಕ್ತರು ಗುರುಗಳಿಗಾಗಿ ಮಠವನ್ನು ಸ್ಥಾಪಿಸಿದ ನಂತರ ಗುರುಗಳು ಭಕ್ತರ ಅಪೇಕ್ಷೆಯ ಮೇರೆಗೆ ಇಲ್ಲಿ ನೆಲೆನಿಂತರು.

ಗುರುಗಳು ಇಲ್ಲಿ ನೆಲೆ ನಿಂತ ಹತ್ತಾರು ವರ್ಷಗಳ ನಂತರ ಬಾಲಕ ಮಹಾಂತೇಶನಿಗೆ ಜೀವದಾನ ಮಾಡಿ ಶಿಷ್ಯನನ್ನಾಗಿ ಮಾಡಿಕೊಂಡರು. ತಮ್ಮ ತಪೋಶಕ್ತಿಯಿಂದ ಬರಡು ಆಕಳಿನಿಂದ ಹಾಲನ್ನು ಕರೆದು ಮುಸ್ಲಿಮರಿಗೆ ಆಶ್ಚರ್ಯವನ್ನುಂಟು ಮಾಡಿ, ತಮ್ಮ ಭಕ್ತರನ್ನಾಗಿ ಮಾಡಿಕೊಂಡರಂತೆ. ಇವರ ಪವಾಡಗಳನ್ನು ತಿಳಿದ ಗುಲ್ಬರ್ಗದ ಮುಸ್ಲಿಂ ಸಂತರಾದ ಬಂದೇನವಾಜರು ಶ್ರೀ ಶಿವಲಿಂಗೇಶ್ವರರನ್ನು ಉರುಸ್‌ಗೆ ಕರೆಸಬೇಕೆಂದು ತೀರ್ಮಾನಿಸಿ ಕರೆಯೋಲೆಯನ್ನು ಕಳುಹಿಸಿದರು. ಆದರೆ ಉರುಸ್‌ನಲ್ಲಿ ನನ್ನದೇನು ಕೆಲಸ ಎಂದು ಕರೆಯೋಲೆಯ್ನು ತಿರಸ್ಕರಿಸುತ್ತಾರಂತೆ. ಆಗ ಈ ವಿಚಾರವನ್ನು ತಿಳಿದ ರೋಜಾದ ನಾಯಕ ತನ್ನ ಸೇನಾ ಪಡೆಯನ್ನು ಕಳಹಿಸಿ ಬಲವಂತವಾಗಿ ಕರೆತರಲು ಕಳುಹಿಸುತ್ತಾನೆ. ಆದರೆ ಶ್ರೀ ಶಿವಲಿಂಗೇಶ್ವರರು ತಪೋಶಕ್ತಿಯಿಂದ ಬಂದ ಸೈನಿಕರನ್ನೆಲ್ಲಾ ಅಸಹಾಯಕರನ್ನಾಗಿ ಮಾಡಿ ಈ ವಿಚಾರವನ್ನು ಬಂದೇನವಾಜರಿಗೆ ಹಾಗೂ ರೋಜಾದ ರಾಜನಿಗೆ ತಿಳಿಸಲು ಸೈನಿಕನೊಬ್ಬನನ್ನು ಕಳುಹಿಸಿಕೊಡುತ್ತಾರಂತೆ. ಶ್ರೀ ಶಿವಲಿಂಗೇಶ್ವರರ ಪವಾಡವನ್ನು ಕೇಳಿ ತಿಳಿದ ಬಂದೇ ನವಾಜರು ಹುಲಿಯ ಮೇಲೆ ಕುಳಿತು ಸರ್ಪವನ್ನೇ ಚಾಟಿಯನ್ನಾಗಿ ಮಾಡಿಕೊಂಡು ಹಿರೇಸಾವಳಗಿಯ ಕಡೆ ಬರುತ್ತಾರಂತೆ. ಆಗ ಈ ಘಟನೆಯನ್ನು ತಮ್ಮ ಅಂತರ್‌ಜ್ಞಾನದಿಂದ ಅರಿತ ಶ್ರೀ ಶಿವಲಿಂಗೇಶ್ವರರು, ತಾವು ಕುಳಿತ ಕಟ್ಟೆಯನ್ನೇ ಚಲಿಸಿಕೊಂಡು ಬಂದೇ ನವಾಜರನ್ನು ಸ್ವಾಗತಿಸಲು ಹೊರಡುತ್ತಾರಂತೆ. ಬಂದೇ ನವಾಜರು ಹುಲಿಯ ಮೇಲಿಂದ ಕೆಳಗಿಳಿದು ಶ್ರೀ ಶಿವಲಿಂಗೇಶ್ವರರಿಗೆ ಶರಣಾದರಂತೆ.

ಶ್ರೀ ಶಿವಲಿಂಗೇಶ್ವರ ಶಿವಯೋಗಿಗಳು ಬಂದೇ ನವಾಜರ ಆಹ್ವಾನದಂತೆ ಗುಲ್ಬರ್ಗಕ್ಕೆ ಬರುತ್ತಾರಂತೆ. ಈ ಸಂದರ್ಭದಲ್ಲಿ ರೋಜಾದ ರಾಜನು ಶ್ರೀ ಶಿವಲಿಂಗೇಶ್ವರರ ಪಾದ ಪೂಜೆಯನ್ನು ಮಾಡಿ ಪಟ್ಟಣದಲ್ಲಿ ಮೆರವಣಿಗೆಯನ್ನು ಮಾಡಿಸುತ್ತಾನಂತೆ. ಶ್ರೀ ಶಿವಲಿಂಗೇಶ್ವರರಿಗೆ ಬಂದೇ ನವಾಜರು ಮತ್ತು ರೋಜಾದ ರಾಜನು ನೀಡಿದ ಮನ್ನಣೆಯನ್ನು ನೋಡಿ ಸಹಿಸಿಕೊಳ್ಳಲಾಗದ, ಕೆಲವು ಅಸೂಯೆಗೊಂಡ ಮುಸ್ಲಿಮರು ಶ್ರೀ ಶಿವಲಿಂಗೇಶ್ವರರಿಗೆ ತಿಳಿಯದಂತೆ ಮಾಂಸದ ಅಡಿಗೆಯನ್ನು ಊಟಮಾಡಿಸಬೇಕೆಂದು ಸಿದ್ಧತೆ ಮಾಡಿಕೊಂಡರು. ರೋಜಾದ ಅರಮನೆಯಲ್ಲಿ ಸತ್ಕಾರ್ಯ ನಡೆದ ಮೇಲೆ ಪ್ರಸಾದ ಸ್ವೀಕರಿಸುವ ಸಂದರ್ಭದಲ್ಲಿ ಮಾಂಸದ ಅಡುಗೆಯನ್ನು ತಂದು ಬಡಿಸಲು ಮುಂದಾದರು. ಗುರುಗಳ ಸಮೀಪಕ್ಕೆ ತರುತ್ತಿದ್ದಂತೆ ಮಾಂಸದ ಅಡಿಗೆಯಲ್ಲಾ ಮಲ್ಲಿಗೆಯ ಹೂವಾಯಿತಂತೆ. ಈ ಪವಾಡವನ್ನು ನೋಡಿ ಅಸೂಯೆ ಪಟ್ಟಿದ್ದ ಜನರು ಶ್ರೀ ಶಿವಲಿಂಗೇಶ್ವರರಲ್ಲಿ ಕ್ಷಮೆ ಕೇಳಿ ಶರಣಾದರಂತೆ. ಈ ಘಟನೆಗಳು ನಡೆದ ಮೇಲೆ ಅಲ್ಲಿ ಹಿಂದೂ ಮುಸ್ಲಿಮರ ಮಧ್ಯೆ ಭಾವೈಕ್ಯತೆಯ ಭಾವನೆಯು ಬೆಳೆಯಿತೆಂದು ಹೇಳಲಾಗುತ್ತಿದೆ.

ದೇಶ ಪರ್ಯಟನೆ: ಶ್ರೀ ಶಿವಲಿಂಗೇಶ್ವರ ಶಿವಯೋಗಿಗಳು ಹಿರೇಸಾವಳಗಿಯಲ್ಲಿ ಮಠವನ್ನು ಸ್ಥಾಪಿಸಿ, ಅನೇಕ ಪವಾಡಗಳಿಂದ ಭಕ್ತರನ್ನು ಉದ್ಧರಿಸಿ, ಜಾತ್ಯಾತೀತ ಮನೋಭಾವನೆಯು ಮೊಳಕೆ ಹೊಡೆಯುವಂತೆ ಮಾಡಿ ಸಮಾಜವನ್ನು ಉದ್ಧರಿಸಿದರು. ಇವರು ಲೋಕೋದ್ಧಾರಕ್ಕೆಂದು ದೇಶ ಪರ್ಯಟನೆಗೆ ಹೊರಟು, ಬಲಖೇಡದಲ್ಲಿ ದಿಲ್ಲಿಯ ಬಾದಷಹನಿಗೆ ತಮ್ಮ ಪವಾಡವನ್ನು

ತೋರಿಸಿ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ತುಬಚಿ ಗ್ರಾಮದಲ್ಲಿ ಕೆಲವು ದಿನ ನೆಲೆಸಿದರು. ನಂತರ ಕುರುಬೆಟ್ಟ ಶ್ರೀ ಸಿದ್ಧರಾಮ ದೇಸಾಯಿಗೆ ದರ್ಶನ ಕೊಟ್ಟು, ದೇಸಾಯಿಯ ಮನೆಯಲ್ಲಿ ಅನುಷ್ಠಾನಗೊಂಡು ಗೋಕಾಕ ತಾಲ್ಲೂಕಿನ ಘಟಪ್ರಭಾ ಮತ್ತು ಹಿರಣ್ಯಕಶಿಪು ನದಿಗಳ ಸಂಗಮ ಸ್ಥಳದಲ್ಲಿ ನೆಲೆ ನಿಂತು, ಇಲ್ಲಿ (ಸಾವಳಗಿ) ಮಠವನ್ನು ಸ್ಥಾಪಿಸಿ ತಮ್ಮ ಯೋಗ ಭೂಮಿಯನ್ನಾಗಿ ಮಾಡಿಕೊಂಡರು. ತಮ್ಮ ಜೊತೆಯಲ್ಲಿದ್ದ ಶ್ರೀ ಮಹಾಂತೇಶ್ವರರಿಗೆ ನಿರಂಜನ ಪಟ್ಟಾಧಿಕಾರವನ್ನು ಮಾಡಿ, ಹಿರೇಸಾವಳಗಿ ಮಠದ ಪರಂಪರೆಯನ್ನು ಬೆಳೆಸುವಂತೆ ಆಶೀರ್ವದಿಸಿ ಕಳುಹಿಸಿಕೊಡುತ್ತಾರೆ. ಗುರುಗಳು ಅನೇಕ ವರ್ಷಗಳ ಕಾಲ ಗೋಕಾಕ ತಾಲ್ಲೂಕಿನ ಘಟಪ್ರಭಾ ನದಿಯ ದಡದ ಸಾವಳಗಿಯಲ್ಲಿ ಸ್ಥಾಪಿಸಿದ ಯೋಗಭೂಮಿಯಲ್ಲಿ ಅನುಷ್ಠಾನ ಕೈಗೊಂಡರು. ತಮ್ಮ ಜೊತೆಯಲ್ಲಿದ್ದ ಶ್ರೀಮತಿ ಮರುಳಮ್ಮನವರಿಗೆ 'ತಾವು ಯೋಗ ಸಮಾಧಿಯಲ್ಲಿರುವುದಾಗಿ ತಿಳಿಸಿ, ಐದು ದಿನಗಳಾದ ನಂತರ ಗವಿಯ ಬಾಗಿಲನ್ನು ತೆಗೆದು ನೋಡಬಹುದು' ಎಂದು ಹೇಳಿ ಗವಿಯನ್ನು ಪ್ರವೇಶಿಸುತ್ತಾರೆ. ಭಕ್ತರು ಈ ವಿಚಾರವನ್ನು ತಿಳಿದು ಕುತೂಹಲಗೊಂಡು ಗುರುಗಳ ಪವಾಡವನ್ನು ನೋಡಬೇಕೆಂಬ ಕಾತುರದಿಂದ, ನಾಲ್ಕನೆಯ ದಿನಕ್ಕೆ ಗವಿಯ ಬಾಗಿಲನ್ನು ತೆರೆದು ಒಳ ಪ್ರವೇಶಿಸಿದರಂತೆ. ಆಗ ಭಕ್ತರಿಗೆ ಮೂರು ಭಸ್ಮದ ಘಟ್ಟಿಗಳು ದೊರೆತವಂತೆ. ಈ ಮೂರು ಭಸ್ಮದ ಘಟ್ಟಿಗಳಲ್ಲಿ ಒಂದು ಗುರುಗಳು ನೆಲೆ ನಿಂತ ಜಾಗದಲ್ಲಿ, ಎರಡನೆಯದು ಹಿರೇ ಸಾವಳಗಿಯಲ್ಲಿ ಮತ್ತು ಮೂರನೆಯದು ಕುರುಬೆಟ್ಟ ಶ್ರೀ ಸಿದ್ಧರಾಮ ದೇಸಾಯಿಯವರ ಮನೆಯಲ್ಲಿ ಸ್ಥಾಪಿತಗೊಂಡು ಇಂದಿಗೂ ಪೂಜೆಗೆ ಒಳಗಾಗಿವೆ.

ಪರಂಪರೆ: ಶ್ರೀ ಶಿವಲಿಂಗೇಶ್ವರ ಶಿವಯೋಗಿಗಳ ನಂತರ ಉತ್ತರಾಧಿಕಾರಿಗಳಾಗಿ ನೇಮಕಗೊಂಡ ಶ್ರೀಮಹಾಂತೇಶ್ವರ ಸ್ವಾಮಿಗಳು ಮಠದ ಆಡಳಿತವನ್ನು ನಡೆಸಿ, ಮಠದ ಪರಂಪರೆ ಬೆಳೆಯುಂತೆ ಮಾಡಿದರು. ಪರಂಪರೆಯಲ್ಲಿ ಈತನಕ ಅನೇಕ ಗುರುಗಳು ಮಠದ ಆಡಳಿತವನ್ನು ವಹಿಸಿಕೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಈಗ ಅಧಿಕಾರ ವಹಿಸಿಕೊಂಡಿರುವ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಹಿರೇಸಾವಳಗಿಯ ಸ್ಥಾವರ ಮಠದ ಶ್ರೀ ಗುರುಸಿದ್ಧಯ್ಯ ಮತ್ತು ಶ್ರೀಮತಿ ಈರಮ್ಮನವರ ಪುತ್ರರಾಗಿ ೧೯೫೧ರ ಅಕ್ಟೋಬರ್ ನಾಲ್ಕರಂದು ಜನಿಸಿದ್ದಾರೆ. ಇವರು ಸಂಸ್ಕೃತ, ವೇದಾಧ್ಯಯನವನ್ನು ಮಾಡಿ ೧೯೬೭ರ ನವೆಂಬರ್ ಹದಿನಾರರಂದು ಪರಂಪರಾಗತ ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ.

ಮೊಹಿನುದ್ದೀನ್ ಸೇವೆ: ರೋಜಾದ ರಾಜನು ಶ್ರೀ ಶಿವಲಿಂಗೇಶ್ವರ ಶಿವಯೋಗಿಗಳಿಗೆ ರಾಜ ಮನ್ನಣೆ ನೀಡಿದ ಮೇಲೆ ಮುಸ್ಲಿಮರು ಸಹ ಮಠದ ಭಕ್ತರಾಗಿ, ಸೇವಕರಾಗಿ ದುಡಿಯತೊಡಗಿದರು. ಉದಾಹರಣೆ ಎಂಬಂತೆ, ಈಗಲೂ ಶ್ರೀ ರುಕ್ಮುದ್ದೀನ್ ಮತ್ತು ಶ್ರೀಮತಿ ಸುಲ್ತಾನ್‌ಬಿ ಇವರ ಮಗನಾಗಿ ಜನಿಸಿದ ಮೊಹಿನುದ್ದೀನ್ ಮಠದ ಸೇವಕರಾಗಿ, ಭಕ್ತರಾಗಿ ಮಠದಲ್ಲಿಯೇ ನೆಲೆಸಿದ್ದಾರೆ. ಮಠದ ಬಾಲಕ ಉತ್ತರಾಧಿಕಾರಿಯ ಸೇವೆ, ಉತ್ತರಾಧಿಕಾರಿಯ ಸ್ನಾನ, ಪೂಜೆ ಹಾಗೂ ಉಡುವ ಮಡಿ ಬಟ್ಟೆಗಳಿಂದ ಹಿಡಿದು ಎಲ್ಲವನ್ನೂ ನೋಡಿಕೊಂಡು ಬಾಲಕ ಉತ್ತರಾಧಿಕಾರಿಗೆ ನೆರವಾಗುತ್ತಿದ್ದಾರೆ. ಮಠದ ಜಾತ್ರಾ ಸಂದರ್ಭದಲ್ಲಿ ಪಲ್ಲಕ್ಕಿ ಸೇವೆಯನ್ನು ಮುಸ್ಲಿಮರೇ ನೆರವೇರಿಸಿಕೊಡುತ್ತಾರೆ. ಈ ರೀತಿ ಮಠದ ಧಾರ್ಮಿಕ ಕಾರ್ಯಗಳಲ್ಲಿ ವೀರಶೈವರ ಜೊತೆಗೆ ಮುಸ್ಲಿಮರು ತಮ್ಮ ಸಮಪಾಲಿನ ಸೇವೆಯನ್ನು ಅರ್ಪಿಸಿ, ಇಂದಿನ ಜಾತಿಯ ದಳ್ಳುರಿಗೆ ಸಿಕ್ಕಿದ ಸಮಾಜಕ್ಕೆ ಮಾದರಿಯಾಗಿ, ಭಾವೈಕ್ಯತೆಯ ಸಮಾಜವನ್ನು ರೂಪಿಸಿದ್ದಾರೆ.

ಶಾಖಾ ಮಠಗಳು: ಶ್ರೀ ಶಿವಲಿಂಗೇಶ್ವರ ಶಿವಯೋಗಿಗಳು ಲೋಕ ಸಂಚಾರದಲ್ಲಿದ್ದ ಸಂದರ್ಭದಲ್ಲಿ, ಅನುಷ್ಠಾನಗೊಂಡ ಸ್ಥಳಗಳು ಜಾಗೃತ ಕ್ಷೇತ್ರಗಳಾಗಿ ರೂಪುಗೊಂಡು ಈ ಜಾಗದಲ್ಲಿ ಶಾಖಾ ಮಠಗಳು ಸ್ಥಾಪನೆಗೊಂಡಿವೆ. ಈ ಮಠಗಳಲ್ಲಿ ಕೆಲವು ಮಠಗಳು ಸ್ವತಂತ್ರ ಮಠಗಳಾಗಿ ಕಾರ್ಯ ನಿರ್ವಹಿಸುತ್ತಿವೆ. ಕೆಲವು ಮಠಗಳು ಈ ಮಠದ ಅಧೀನ ಮಠಗಳಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ವಿಳಾಸ: ಶ್ರೀ ಮ.ನಿ.ಪ್ರ.ಮಲ್ಲಿಕಾರ್ಜುನ ಸ್ವಾಮಿಗಳು, ಶ್ರೀ ಶಿವಲಿಂಗೇಶ್ವರ ಸಂಸ್ಥಾನಮಠ, ಹಿರೇಸಾವಳಗಿ, ಗುಲ್ಬರ್ಗ ತಾಲ್ಲೂಕು.

ಶಾಂತೇಶ್ವರ ಸಂಸ್ಥಾನ ಮಠ: ಹಿರೇಸಾವಳಗಿಯ ಮಧ್ಯ ಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಶಾಂತೇಶ್ವರ ಸಂಸ್ಥಾನ ಮಠವು ರಂಭಾಪುರಿ ಪೀಠದ ಶಾಖಾ ಮಠವಾಗಿ, ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿದೆ. ಶ್ರೀ ಶಾಂತೇಶ್ವರ ಶಿವಾಚಾರ್ಯ

ಸ್ವಾಮಿಗಳಿಂದ ಈ ಮಠವು ಸ್ಥಾಪನೆಯಾಗಿದೆ. ಗುರುಗಳು ಸದಾಚಾರ ಸಂಪನ್ನರಾಗಿ ಹಾಗೂ ಶಿವಪೂಜಾ ನಿಷ್ಠರಾಗಿ ಹೆಸರು ಪಡೆದಿದ್ದರು. ಶ್ರೀ ಶಾಂತೇಶ್ವರರು ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ ವೀರಶೈವ ಧರ್ಮವನ್ನು ಪ್ರಚಾರ ಪಡಿಸಿದವರಾಗಿದ್ದಾರೆ. ಇವರ ನಂತರ ಉತ್ತರಾಧಿಕಾರಿಗಳು ಇಲ್ಲದೆ ಮಠವು ಕೆಲವು ವರ್ಷಗಳ ಕಾಲ ಖಾಲಿ ಉಳಿದಿತ್ತು. ನಂತರ ಶ್ರೀ ಶಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು ಮಠದ ಪರಂಪರೆಯ ಎರಡನೆಯ ಗುರುಗಳಾಗಿ ಅಧಿಕಾರವನ್ನು ವಹಿಸಿಕೊಂಡರು.

ಮಠದ ಪರಂಪರೆ:
೧. ಷ.ಬ್ರ.ಶ್ರೀ ಶಾಂತೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಎರಡನೆಯ ಶಾಂತೇಶ್ವರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ನೀಲಕಂಠ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಮೃತ್ಯುಂಜಯದೇವರು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಶ್ರೀ ನೀಲಕಂಠೇಶ್ವರ ಶಿವಾಚಾರ್ಯ ಸ್ವಾಮಿಗಳು ಸೋಲಾಪುರದಲ್ಲಿ ಸಂಸ್ಕೃತ ಮತ್ತು ವೇದಾಧ್ಯಯನವನ್ನು ಮಾಡಿ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿ ೧೯೫೫ ರಲ್ಲಿ ಲಿಂಗೈಕ್ಯರಾದರು. ಇವರ ನಂತರ ಶ್ರೀ ಮೃತ್ಯುಂಜಯ ದೇವರು ಉತ್ತರಾಧಿಕಾರಿಗಳಾಗಿ ನೇಮಕಗೊಂಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಮೃತ್ಯುಂಜಯ ದೇವರು, ಶ್ರೀ ಶಾಂತೇಶ್ವರ ಸಂಸ್ಥಾನಮಠ, ಹಿರೇಸಾವಳಗಿ, ಗುಲ್ಬರ್ಗ ತಾಲ್ಲೂಕು.

ಹೊನ್ನಕಿರಣ

ಗುಲ್ಬರ್ಗ ತಾಲ್ಲೂಕಿನ ಹೊನ್ನಕಿರಣ ಗ್ರಾಮವು ತಾಲ್ಲೂಕು ಕೇಂದ್ರದಿಂದ ಹದಿನಾರು ಕಿ.ಮೀ ದೂರದಲ್ಲಿದೆ. ಇಲ್ಲಿ ಪುರಾತನ ಪರಂಪರೆಯ ಶ್ರೀ ಹೊನ್ನಕಿರಣ ಮಠವು ಸ್ಥಾಪನೆಯಾಗಿದೆ.

ಹೊನ್ನಕಿರಣಮಠ: ಹೊನ್ನಕಿರಣ ಗ್ರಾಮದ ಮಧ್ಯಭಾಗದಲ್ಲಿ ಪಂಚಪೀಠಗಳ ಪರಂಪರೆಯ ಶಾಖಾಮಠವಾಗಿ ಹಿರೇಮಠವು ಅಸ್ತಿತ್ವದಲ್ಲಿದೆ. ಇತ್ತೀಚೆಗೆ ಗುಲ್ಬರ್ಗದಲ್ಲಿಯೂ ಒಂದು ಶಾಖಾಮಠವನ್ನು ಪ್ರಾರಂಭಿಸಲಾಗಿದೆ.

ಫಿರೋಜಬಾದ್

ಗುಲ್ಬರ್ಗ ತಾಲ್ಲೂಕಿನ ಫಿರೋಜಬಾದ್ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹದಿನೆಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ವಿರಕ್ತ ಸಂಪ್ರದಾಯದ ಮಠವು ಸ್ಥಾಪನೆಯಾಗಿದೆ.

ವಿರಕ್ತಮಠ: ಫಿರೋಜಬಾದ್ ಗ್ರಾಮದಲ್ಲಿ ಸ್ಥಾಪನೆಯಾಗಿರುವ ವಿರಕ್ತಮಠವು ಇಲ್ಲಿನ ಧಾರ್ಮಿಕ ಕೇಂದ್ರವಾಗಿ ಬೆಳೆದಿದೆ. ಅನೇಕ ವರ್ಷಗಳಿಂದ ಅಸ್ತಿತ್ವದಲ್ಲಿರುವ ಈ ಮಠವು ಶರಣರ ತತ್ತ್ವಗಳನ್ನು ಪ್ರಚಾರಪಡಿಸಿ ಹೆಸರು ಗಳಿಸಿದೆ. ಮಠದ ಪರಂಪರೆಯಲ್ಲಿ ಅನೇಕ ಗುರುಗಳು ಅಧಿಕಾರ ನಡೆಸಿ ಮಠ ಮತ್ತು ಸಮಾಜವನ್ನು ಅಭಿವೃದ್ಧಿಪಡಿಸಿದ್ದಾರೆ. ಪ್ರಸ್ತುತ ಅಧಿಕಾರದಲ್ಲಿರುವ ಗುರುಗಳು ಸಹ ವಿಚಾರವಂತರಾಗಿ, ಕಾಯಕ ಯೋಗಿಗಳಾಗಿ ಮಠವನ್ನು ಬೆಳೆಸಿದ್ದಾರೆ.

ವಿಳಾಸ: ಶ್ರೀಮ.ನಿ.ಪ್ರ.ಗುರುಬಸವಸ್ವಾಮಿಗಳು ಶ್ರೀ ವಿರಕ್ತಮಠ, ಫಿರೋಜಬಾದ್, ಗುಲ್ಬರ್ಗ ತಾಲ್ಲೂಕು.

❑

ಚಿತ್ತಾಪುರ ತಾಲ್ಲೂಕು

ಗುಲ್ಬರ್ಗ ಜಿಲ್ಲೆಯ ಚಿತ್ತಾಪುರ ತಾಲ್ಲೂಕು ಗಣಿಗಾರಿಕೆ ಹಾಗೂ ಕೈಗಾರಿಕೋದ್ಯಮದಲ್ಲಿ ಯಶಸ್ಸುಸಾಧಿಸಿದೆ. ಇಲ್ಲಿ ಹನ್ನೆರಡನೆಯ ಶತಮಾನ ಮತ್ತು ಅದಕ್ಕೂ ಮೊದಲು ವೀರಶೈವ ಧರ್ಮ ಬೆಳೆದು ಸಮಾಜವನ್ನು ಸನ್ಮಾರ್ಗದಲ್ಲಿ ನಡೆಸಲು ನೆರವಾಗಿದೆ. ಇಲ್ಲಿ ಎಂಭತ್ತಾರು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಆದರೆ ಇಂದು ಕೇವಲ ಹದಿನೇಳು ಮಠಗಳನ್ನು ಮಾತ್ರ ಗುರುತಿಸಬಹುದಾಗಿದೆ.

ಅಳ್ಳಳ್ಳಿ

ಚಿತ್ತಾಪುರ ತಾಲ್ಲೂಕಿನ ಅಳ್ಳಳ್ಳಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣ ಭಾಗಕ್ಕೆ ಹದಿನೈದು ಕಿ.ಮೀ ದೂರದಲ್ಲಿದೆ ಈ ಗ್ರಾಮದಲ್ಲಿ ವೀರಶೈವ ಧರ್ಮದ ಆಚರಣೆಗಾಗಿ ಶ್ರೀ ಸಾವಿರ ಸಂಸ್ಥಾನಮಠವು ಸ್ಥಾಪನೆಯಾಗಿದೆ.

ಸಾವಿರ ಸಂಸ್ಥಾನ ಮಠ: ಅಳ್ಳಳ್ಳಿ ಗ್ರಾಮದಲ್ಲಿ ಶ್ರೀ ರಂಭಾಪುರಿ ಪೀಠದ ಶಾಖಾಮಠವಾದ ಶ್ರೀ ಸಾವಿರ ಸಂಸ್ಥಾನಮಠವು ಸ್ಥಾಪನೆಯಾಗಿ, ಈ ಭಾಗದ ಧಾರ್ಮಿಕ ಕೇಂದ್ರಬಿಂದುವಾಗಿ ರೂಪುಗೊಂಡಿದೆ. ಈ ಮಠವು ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಗಳ ಕಾಲದಲ್ಲಿ ಸ್ಥಾಪನೆಗೊಂಡಿ ತ್ತೆಂದು ಹೇಳಲಾಗಿದೆ.

ಮಠ ಸ್ಥಾಪನೆ: ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಗಳು ಮಹಾ ಮಹಿಮಾ ಪುರುಷರಾಗಿ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿದ್ದರು. ಇವರು ಧರ್ಮಜಾಗೃತಿಗಾಗಿ ಮಾಡುತ್ತಿದ್ದ ಪವಾಡಗಳನ್ನು ನೋಡಿದ ನಿಜಾಮನೂ ಸಹ ಶರಣಾಗಿ ಮಠ ಸ್ಥಾಪನೆಗೆ ಇನಾಂ ಭೂಮಿಯನ್ನು ನೀಡಿದ್ದನು ಎಂದು ಹೇಳಲಾಗುತ್ತದೆ.

ಪರಂಪರೆ:

೧. ಷ.ಬ್ರ.ಶ್ರೀ ಸಿದ್ಧಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಸದಾಶಿವ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಶಾಂತಮಲ್ಲ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಪುರಾತನ ಮಠದ ಈ ಪರಂಪರೆಯಲ್ಲಿ ಒಟ್ಟು ಒಂಬತ್ತು ಜನ ಗುರುಗಳು ಅಧಿಕಾರ ನಡೆಸಿದ್ದಾರೆಂದು ಹೇಳಲಾಗುತ್ತಿದೆ. ಇದಕ್ಕೆ ಪೂರಕವೆಂಬಂತೆ ಎಂಟು ಗದ್ದುಗೆಗಳು ಸ್ಥಾಪನೆಯಾಗಿವೆ. ಕರ್ತೃಗುರುಗಳಾದ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಗಳ ತರುವಾಯ ಒಟ್ಟು ಏಳು ಜನ ಗುರುಗಳು ಅಧಿಕಾರ ನಡೆಸಿ ಲಿಂಗೈಕ್ಯರಾಗಿದ್ದಾರೆ. ಈಗಿನ ಪಟ್ಟಾಧ್ಯಕ್ಷರಾಗಿರುವ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮಿಗಳು ಮಠದ ಪರಂಪರೆಯ ಒಂಬತ್ತನೆಯ ಗುರುಗಳಾಗಿದ್ದಾರೆ. ಅರವತ್ತೈದು ವರ್ಷದ ಗುರುಗಳು ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮಿಗಳು,ಶ್ರೀ ಸಾವಿರಸಂಸ್ಥಾನಮಠ, ಅಳ್ಳಳ್ಳಿ,ಚಿತ್ತಾಪುರ ತಾ, ಗುಲ್ಬರ್ಗಜಿಲ್ಲೆ.

ಕಾಳಗಿ

ಚಿತ್ತಾಪುರ ತಾಲ್ಲೂಕಿನ ಕಾಳಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಮೂವತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಶಿವಬಸವೇಶ್ವರ ಹಿರೇಮಠವು ಸ್ಥಾಪನೆಯಾಗಿ ಪ್ರಸಿದ್ಧಿ ಪಡೆದಿದೆ.

ಶಿವಬಸವೇಶ್ವರ ಹಿರೇಮಠ: ಕಾಳಗಿ ಗ್ರಾಮದ ಹೊರಭಾಗದಲ್ಲಿ ಶ್ರೀ ಶಿವಬಸವೇಶ್ವರ ಹಿರೇಮಠವು ಸ್ಥಾಪನೆಯಾಗಿದೆ. ರಂಭಾಪುರಿ ಪೀಠದ ಶಾಖಾ ಮಠವಾದ ಈ ಮಠವು ಪುತ್ರವರ್ಗದ ಪರಂಪರೆಯಲ್ಲಿ ಬೆಳೆದುಬಂದಿದೆ.

ಮಠ ಸ್ಥಾಪನೆ: ಹನ್ನೆರಡನೆಯ ಶತಮಾನದಲ್ಲಿ ಶ್ರೀ ಶಿವಬಸವ ಶಿವಾಚಾರ್ಯ ಸ್ವಾಮಿಗಳು ಕಾಳಗಿ ಗ್ರಾಮದ ಹೊರ ಭಾಗದಲ್ಲಿ ಬಂದು ನೆಲೆಸಿದರು. ಗುರುಗಳು ಏಕಾಂಗಿಯಾಗಿ ತಪೋಮಗ್ನರಾಗಿ ಕುಳಿತುಕೊಳ್ಳುತ್ತಿದ್ದರು. ದಿನದ ಬಹುತೇಕ ಕಾಲವನ್ನು ಶಿವಪೂಜೆ ಮತ್ತು ಧ್ಯಾನದಲ್ಲಿ ಕಳೆದು ಬಳಿಗೆ ಬರುತ್ತಿದ್ದ ಭಕ್ತರಿಗೆ ದರ್ಶನ ಕೊಟ್ಟು ಆಶೀರ್ವದಿಸುತ್ತಿದ್ದುದು ದಿನಚರಿಯಾಗಿತ್ತು. ಗುರುಗಳು ಧ್ಯಾನಾಸಕ್ತರಾಗಿ ಕುಳಿತಿರುವ ಸಂದರ್ಭದಲ್ಲಿ ಒಮ್ಮೆ ಗ್ರಾಮದ ಭಕ್ತರು ಬಂದು ತಾವು ಇಲ್ಲಿ ನೆಲೆಸಿ ನಮಗೆ ಧಾರ್ಮಿಕ ಮಾರ್ಗದರ್ಶನ ಮಾಡಿ ದಾರಿ ತೋರಿಸಿದ್ದೀರಿ. ನಿಮ್ಮ ಮಾರ್ಗದರ್ಶನದಿಂದ ಈ ಗ್ರಾಮವು ನೆಮ್ಮದಿ ಕಂಡಿದೆ. ತಮಗಾಗಿ ಮಠವನ್ನು ನಿರ್ಮಿಸಿ ಕೊಡಲು ನಾವೆಲ್ಲಾ ತೀರ್ಮಾನಿಸಿದ್ದೇವೆ. ತಾವು ಅಪ್ಪಣೆ ಕೊಡಬೇಕು ಎಂದು ಬಿನ್ನವಿಸಿಕೊಂಡರಂತೆ. ಆಗ ಗುರುಗಳು 'ಇಂದು ಈ ಊರು. ನಾಳೆ ಮತ್ತೆಲ್ಲಿಯೋ? ನಮಗೆ ಮಠ ನಿರ್ಮಿಸುವುದು ಬೇಡ'ಎಂದರು. ಆಗ ಭಕ್ತರು ಒತ್ತಾಯಿಸಿ 'ತಮ್ಮ ಹೆಸರಿನಲ್ಲಿ ಮಠ ಸ್ಥಾಪನೆಯಾಗಬೇಕು. ತಮ್ಮ ಹೆಸರು ಇಲ್ಲಿ ಶಾಶ್ವತವಾಗಿ ಉಳಿಯಬೇಕು. ಈ ಕಾರಣದಿಂದ ತಾವು ಮನಸ್ಸನ್ನು ಬದಲಿಸಿ ಇಲ್ಲಿಯೇ ನೆಲೆಗೊಳ್ಳಬೇಕು' ಎಂದು ಪುನಃ ಬಿನ್ನವಿಸಿಕೊಂಡರು. ಆಗ ಭಕ್ತರ ಅಭಿಲಾಷೆಗೆ ಸ್ಪಂದಿಸಿ ಒಪ್ಪಿಗೆ ಕೊಟ್ಟರು. ಸಂತೋಷಗೊಂಡ ಭಕ್ತರು ಕಾಳಗಿ ಗ್ರಾಮದಲ್ಲಿ ಗುರುಗಳು ನೆಲೆ ನಿಂತು ಪಾವನಗೊಳಿಸಿದ ತಪೋಭೂಮಿಯಲ್ಲಿ ಮಠವನ್ನು ಸ್ಥಾಪಿಸಿದರು.

ಪರಂಪರೆ: ಅಂದಿನಿಂದ ಕಾಳಗಿ ಗ್ರಾಮದಲ್ಲಿ ಧಾರ್ಮಿಕ ಕಾರ್ಯಗಳು ವ್ಯವಸ್ಥಿತವಾಗಿ ನಡೆಯತೊಡಗಿದವು. ಗುರುಗಳು ಇಲ್ಲಿ ಮಠ ಸ್ಥಾಪಿಸಿದ ನಂತರ ಪುನಃ ಸಂಚಾರ ಕೈಗೊಂಡು ಧರ್ಮಜಾಗೃತಿಯನ್ನುಂಟು ಮಾಡಿಬರುತ್ತಿದ್ದರು. ನಂತರ ಇವರು ಈ ಮಠಕ್ಕೆ ಉತ್ತರಾಧಿಕಾರಿಯನ್ನು ನೇಮಿಸಿ ಶ್ರೀ ಗುರುನಂಜೇಶ್ವರ ಶಿವಾಚಾರ್ಯ ಸ್ವಾಮಿಗಳೆಂದು ಅಭಿದಾನವಿತ್ತು ಪಟ್ಟಾಧಿಕಾರವನ್ನು ನೀಡಿದರು. ಅಂದು ಪ್ರಾರಂಭಗೊಂಡ ಮಠದ ಸಂಪ್ರದಾಯ ಇಂದಿನ ತನಕವೂ ಮುಂದುವರೆದು ಬಂದಿದ್ದು, ಈ ಮಧ್ಯದಲ್ಲಿ ಮಠವು ಅನೇಕ ವರ್ಷಗಳಕಾಲ ಖಾಲಿ ಉಳಿದಿತ್ತು. ಶ್ರೀ ಗುರುಪಾದೇಶ್ವರ ಶಿವಾಚಾರ್ಯ ಸ್ವಾಮಿಗಳು ಈ ಪರಂಪರೆಯಲ್ಲಿ ಅಧಿಕಾರ ನಡೆಸಿದ್ದಾರೆ. ಇವರ ನಂತರ ಮಠವು ಪುನಃ ೧೯೪೫ ರಿಂದ ೧೯೯೫ ರವರೆಗೆ ಖಾಲಿ ಉಳಿದಿತ್ತು.

ಕಾಳಗಿಯ ಶ್ರೀ ನೀಲಕಂಠಸ್ವಾಮಿ ಮತ್ತು ಶ್ರೀಮತಿ ಶಿವಕಾಂತಮ್ಮನವರ ಪುತ್ರರಾಗಿ ೧೯೭೮ ರ ಜೂನ್ ಇಪ್ಪತ್ತೊಂದರಂದು ಈಗಿನ ಶ್ರೀ ಶಿವಬಸವೇಶ್ವರ ಸ್ವಾಮಿಗಳು ಜನಿಸಿದರು. ಇವರು ಕಾಳಗಿಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಮುಗಿಸಿ ಹುಬ್ಬಳ್ಳಿಯಲ್ಲಿ ಪದವಿ ಶಿಕ್ಷಣವನ್ನು ಮುಗಿಸಿ, ಮಠದ ಪಟ್ಟಾಧಿಕಾರವನ್ನು ೧೯೯೫ ರ ಮೇ ಇಪ್ಪತ್ತೊಂದರಂದು ವಹಿಸಿಕೊಂಡಿದ್ದಾರೆ. ಗುರುಗಳು ಉತ್ತಮ ಪ್ರವಚನಕಾರರಾಗಿ ರೂಪುಗೊಂಡಿದ್ದಾರೆ. ಚಿಕ್ಕ ವಯಸ್ಸಿನಲ್ಲಿಯೇ ಆಧ್ಯಾತ್ಮವನ್ನು ತಮ್ಮ ಉಸಿರಾಗಿಸಿಕೊಂಡು ಧಾರ್ಮಿಕ ಪ್ರಸಾರ ಕಾರ್ಯವನ್ನು ಮಾಡುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಕರ್ತೃಗುರುಗಳ ಗದ್ದುಗೆಯು ಸೇರಿದಂತೆ ಒಟ್ಟು ಐದು ಗದ್ದುಗೆಗಳು ಸ್ಥಾಪನೆಯಾಗಿವೆ. ಈ ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ ಮಾಡಲಾಗುತ್ತಿದೆ. ದೀಪಾವಳಿಯಲ್ಲಿ ಹಿರಿಯ ಗುರುಗಳ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಶ್ರಾವಣ ಮಾಸದಲ್ಲಿ ಗುರುಗಳು ಅನುಷ್ಠಾನ ಕೈಗೊಂಡು ಪೂರ್ಣಗೊಂಡ ದಿನ ಧಾರ್ಮಿಕ ಸಭೆಯನ್ನು ನಡೆಸುತ್ತಾರೆ. ಅಂದು ನಾಡಿನ ವಿದ್ವಾಂಸರು, ಮಠಾಧೀಶರನ್ನು ಕರೆಸಿ ಧಾರ್ಮಿಕ ಮತ್ತು ಸಾಹಿತ್ಯಿಕ ವಿಚಾರಗಳ ಬಗ್ಗೆ ಉಪನ್ಯಾಸವನ್ನು ಮಾಡಿಸುತ್ತಾರೆ. ಆಗ ಸೇರುವ ಸಾವಿರಾರು ಭಕ್ತರಿಗೆ ಅನ್ನ ದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತದೆ.

ವಿಳಾಸ: ಷ.ಬ್ರ.ಶ್ರೀ ಶಿವಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಬಸವೇಶ್ವರಮಠ,ಕಾಳಗಿ, ಚಿತ್ತಾಪುರ ತಾ, ಗುಲ್ಬರ್ಗ ಜಿಲ್ಲೆ.

ಚಿತ್ತಾಪುರ

ಗುಲ್ಬರ್ಗ ಜಿಲ್ಲೆಯ ಚಿತ್ತಾಪುರ ಪಟ್ಟಣವು ಜಿಲ್ಲಾ ಕೇಂದ್ರದಿಂದ ಆಗ್ನೇಯಕ್ಕೆ ನಲವತ್ತೈದು ಕಿ.ಮೀ ದೂರದಲ್ಲಿದೆ. ತಾಲ್ಲೂಕು ಕೇಂದ್ರ ಸ್ಥಳವಾದ ಚಿತ್ತಾಪುರವು ಈ ಭಾಗದ ಪುರಾತನ ಪಟ್ಟಣಗಳಲ್ಲಿ ಒಂದಾಗಿದೆ. ಈ ಪಟ್ಟಣದಲ್ಲಿ ಒಟ್ಟು ನಾಲ್ಕು ಮಠಗಳು ಸ್ಥಾಪನೆಗೊಂಡಿವೆ. ಇವುಗಳೆಂದರೆ ಶ್ರೀ ಕಂಬಳೇಶ್ವರಮಠ, ಶ್ರೀ ಶಿವಶಂಕರಮಠ, ಶ್ರೀ ಸಾವಳಗಿ

ಶಿವಲಿಂಗೇಶ್ವರಮಠ, ಶ್ರೀ ನಾಗಾವಿಮಠ. ಇವುಗಳಲ್ಲಿ ಶ್ರೀ ಕಂಬಳೇಶ್ವರಮಠವು ಸ್ವತಂತ್ರ ಮಠವಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ಶ್ರೀ ಶಿವಶಂಕರ ಮಠವು ಸೇಡಂ ಮಠದ ಶಾಖಾ ಮಠವಾಗಿದೆ. ಶ್ರೀ ಸಾವಳಗಿ ಹಾಗೂ ಶ್ರೀ ನಾಗಾವಿ ಮಠಗಳಲ್ಲಿ ಮಠಾಧೀಶರಿಲ್ಲದೆ ಖಾಲಿ ಉಳಿದಿವೆ.

ಕಂಬಳೇಶ್ವರಮಠ: ಚಿತ್ತಾಪುರ ಪಟ್ಟಣದ ಪೂರ್ವಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಕಂಬಳೇಶ್ವರ ಮಠವು ರಂಭಾಪುರಿ ಪೀಠದ ಶಾಖಾಮಠವಾಗಿ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಪುರಾತನಕಾಲದಲ್ಲಿ ಸ್ಥಾಪನೆಯಾದ ಈ ಮಠವು ಶ್ರೀ ಕಂಬಳೇಶ್ವರ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪನೆಯಾದ ಕಾರಣ 'ಶ್ರೀ ಕಂಬಳೇಶ್ವರಮಠ 'ಎಂದು ಹೆಸರು ಬಂದಿದೆ.

ಮಠ ಸ್ಥಾಪನೆ: ಶ್ರೀ ಕಂಬಳೇಶ್ವರರು ದಕ್ಷಿಣದಿಂದ ಲೋಕಸಂಚಾರವನ್ನು ಕೈಗೊಂಡು ಉತ್ತರದ ನಾನಾ ಭಾಗಗಳಲ್ಲಿ ಸಂಚರಿಸಿ, ಚಿತ್ತಾಪುರದ ಕಾಗಿಣಿ ನದಿಯದಡದಲ್ಲಿ ತಪೋನುಷ್ಠಾನ ಕೈಗೊಳ್ಳುತ್ತಾರೆ. ಭಕ್ತರ ಅಪೇಕ್ಷೆಯ ಮೇರೆಗೆ ಶ್ರೀ ಕಂಬಳೇಶ್ವರರಿಂದ ಸ್ಥಾಪಿತಗೊಂಡ ಮಠದಲ್ಲಿ ಧಾರ್ಮಿಕ ಕಾರ್ಯಗಳು ನಿರಂತರವಾಗಿ ನಡೆದು ನಾಡಿನಲ್ಲೆಲ್ಲಾ ಹೆಚ್ಚು ಪ್ರಸಿದ್ಧಿಪಡೆದಿದೆ.

ಪರಂಪರೆ:

೧. ಷ.ಬ್ರ.ಶ್ರೀ ಕಂಬಳೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಮಡಿವಾಳೇಶ್ವರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಸೋಮಶೇಖರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ಕಂಬಳೇಶ್ವರ ಸ್ವಾಮಿಗಳ ನಂತರ ಈ ಮಠದಲ್ಲಿ ಅನೇಕ ಗುರುಗಳು ಅಧಿಕಾರವನ್ನು ನಡೆಸಿ ಮಠವನ್ನು ಬೆಳಸಿದ್ದಾರೆ ಎಂಬ ಹೇಳಿಕೆ ಇದೆಯಾದರೂ ಆಧಾರಗಳ ಕೊರತೆಯಿಂದ ಸ್ಪಷ್ಟವಾಗಿ ಉಲ್ಲೇಖಿಸಲು ಸಾಧ್ಯವಾಗುತ್ತಿಲ್ಲ. ಮಠವು ಖಾಲಿ ಉಳಿದಿದ್ದ ಸಂದರ್ಭದಲ್ಲಿ ಶಿರೂರು ಪಟ್ಟದ ದೇವರು ಆಗಮಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದರು ಎಂದು ಹೇಳಲಾಗುತ್ತಿದೆ.ನಂತರ ಬಂದ ಶ್ರೀ ಮಡಿವಾಳ ಸ್ವಾಮಿಗಳು ಶಿವಪೂಜಾ ನಿಷ್ಠರಾಗಿ, ಮಹಾ ಮೇಧಾವಿಗಳಾಗಿದ್ದರು. ಇವರ ಪಾಂಡಿತ್ಯಕ್ಕೆ ಅನೇಕ ಜನ ವಿದ್ವಾಂಸರು ಶರಣಾಗಿದ್ದರಂತೆ. ತ್ರಿಕಾಲಪೂಜೆಯನ್ನು ನಡೆಸಿ ಕುದುರೆಯ ಮೇಲೆ ಸಂಚಾರ ಕೈಗೊಂಡು ಧರ್ಮಪ್ರಚಾರವನ್ನು ಮಾಡುತ್ತಿದ್ದರು. ಇವರ ಕಾಲದಲ್ಲಿ ಮಠವು ಪ್ರಸಿದ್ಧಿ ಪಡೆಯಿತು. ಇವರ ನಂತರ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ೧೯೩೫ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡು ಮಠವನ್ನು ಸಮರ್ಥವಾಗಿ ಬೆಳಸಿದರು. ಇವರು ವ್ಯಾಕರಣ ಪಂಡಿತರಾಗಿ ಹೆಸರು ಮಾಡಿದ್ದ ಇವರು ಶಿವಯೋಗ ಮಂದಿರದಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಧಾರ್ಮಿಕ ಸಾಹಿತ್ಯದಲ್ಲಿ ಆಳವಾದ ಪಾಂಡಿತ್ಯವನ್ನು ಪಡೆದು ನಿವೃತ್ತಿಯ ನಂತರ ಮಠಕ್ಕೆ ಆಗಮಿಸಿ, ಮಠವನ್ನು ಅಭಿವೃದ್ಧಿಪಡಿಸಿದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ೧೯೫೫ ರಲ್ಲಿ ಲಿಂಗೈಕ್ಯರಾದರು. ಇವರು ಶಿವಯೋಗಮಂದಿರದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದ ಸಂದರ್ಭದಲ್ಲಿ ಶ್ರೀ ಗುರು ಲಿಂಗಯ್ಯ ಎಂಬುವರು ಮಠದ ಪೂರ್ಣ ಜವಾಬ್ದಾರಿಯನ್ನು ಹೊತ್ತು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ೧೯೭೫ ರಲ್ಲಿ ಶ್ರೀ ಸೋಮಶೇಖರ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ.

ಶ್ರೀ ಗುರುಲಿಂಗಯ್ಯ ಮತ್ತು ಶ್ರೀಮತಿ ಈರಮ್ಮನವರ ಪುತ್ರರಾಗಿ ೧೯೬೭ ರ ಮೇ ಐದರಂದು ಶ್ರೀ ಸೋಮಶೇಖರ ದೇವರು ಜನಿಸಿದರು. ಚಿತ್ತಾಪುರದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ ಶಿವಯೋಗ ಮಂದಿರದಲ್ಲಿ ಸಂಸ್ಕೃತ, ಸಾಹಿತ್ಯ ಮತ್ತು ಸಂಗೀತವನ್ನು ಅಭ್ಯಾಸಮಾಡಿ ವಿದ್ವತ್ ಸಂಪಾದಿಸಿಕೊಂಡರು. ನಂತರ ಹುಬ್ಬಳ್ಳಿಯ ಮೂರು ಸಾವಿರ ಮಠದಲ್ಲಿ ಆಶ್ರಯಪಡೆದು ಕಾಲೇಜು ಶಿಕ್ಷಣವನ್ನು ಪೂರೈಸಿ,೧೯೯೪ರಲ್ಲಿ ಆಗಮಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸತೊಡಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗುರುಗಳ ನಾಲ್ಕು ಗದ್ದುಗೆಗಳು ಮಠದ ಆವರಣದಲ್ಲಿ ಸ್ಥಾಪನೆಯಾಗಿವೆ.

ಬೊಮ್ಮನಹಳ್ಳಿಯ ಶ್ರೀ ಕಂಬಳೇಶ್ವರ ಮಠದಲ್ಲಿ ಒಂದು ಗದ್ದುಗೆ ಸ್ಥಾಪನೆಯಾಗಿದೆ. ಈ ಗದ್ದುಗೆಗಳಿಗೆ ನಿತ್ಯ ತ್ರಿಕಾಲ ಪೂಜೆ, ಅಮಾವಾಸ್ಯೆ ಮತ್ತು ಹುಣ್ಣಿಮೆ ಹಾಗೂ ಪ್ರತಿ ಸೋಮವಾರ ಭಜನೆ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಶಿವರಾತ್ರಿಯಲ್ಲಿ ಪುರಾಣ ಪ್ರವಚನ, ಶ್ರಾವಣದ ಹುಣ್ಣಿಮೆಯಂದು ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಮಠದಲ್ಲಿ ನಡೆಯುವ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳ ಸಂದರ್ಭದಲ್ಲಿ ಅನ್ನದಾಸೋಹವನ್ನು ವ್ಯವಸ್ಥೆ ಮಾಡಲಾಗುತ್ತಿದೆ.

ಶೈಕ್ಷಣಿಕ ಕಾರ್ಯಗಳು: ಈಗಿನ ಉತ್ತರಾಧಿಕಾರಿಗಳಾದ ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮಿಗಳು ಸಂಗೀತಗಾರ ರಾಗಿದ್ದು ಈಗಾಗಲೇ ಇವರು ಹೊರ ತಂದಿರುವ ಹತ್ತು ಕ್ಯಾಸೆಟ್‌ಗಳು ಜನಪ್ರಿಯವಾಗಿವೆ. ಧಾರ್ಮಿಕ ಕಾರ್ಯಕ್ರಮಗಳ ನಡುವೆಯೂ ಸಂಗೀತ ಕ್ಷೇತ್ರದತ್ತ ಒಲವು ತೋರಿಸಿರುವ ಗುರುಗಳು ಮಠದ ವತಿಯಿಂದ ೧೯೯೦ರಲ್ಲಿ ಸಂಗೀತ ಪಾಠಶಾಲೆ ಯನ್ನು ಪ್ರಾರಂಭಿಸಿದ್ದಾರೆ. ಸರ್ಕಾರಿ ಶಾಲೆ ನಡೆಯಲು ಮಠದ ಕಟ್ಟಡವನ್ನು ಬಿಟ್ಟುಕೊಡಲಾಗಿದೆ. ಅಲ್ಲದೆ ಅಂಗನವಾಡಿ ಕೇಂದ್ರವನ್ನು ನಡೆಸಲು ಕಟ್ಟಡವನ್ನು ನೀಡಲಾಗಿದೆ. ಹಿಂದೆ ವಿದ್ಯಾರ್ಥಿ ನಿಲಯ, ಸಂಸ್ಕೃತ ಪಾಠಶಾಲೆ, ವೈದಿಕ ಪಾಠಶಾಲೆ ನಡೆಯುತ್ತಿದ್ದವು. ಈಗ ಈ ಶಾಲೆಗಳನ್ನು ಕಾರಣಾಂತರದಿಂದ ನಿಲ್ಲಿಸಲಾಗಿದೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಹಾಗೂ ಮಠದ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಶ್ರೀ ಗುರುಲಿಂಗಯ್ಯನವರ ಕಾಲದಲ್ಲಿ ಮಠವು ಸರ್ವಾಂಗೀಣವಾಗಿ ಅಭಿವೃದ್ಧಿಗೊಂಡಿದೆ. ೧೯೮೨ ರಲ್ಲಿ ಮಠದ ಕಟ್ಟಡವನ್ನು ಆಮೂಲಾಗ್ರವಾಗಿ ನವೀಕರಣಗೊಳಿಸಲಾಗಿದೆ. ಅಲ್ಲದೆ ನಾಲ್ಕು ಗದ್ದುಗೆಗಳಿಗೆ ಕಟ್ಟಡವನ್ನು ನಿರ್ಮಿಸಲಾಗಿದೆ. ಮಠದ ಆಸ್ತಿಯನ್ನು ವ್ಯವಸ್ಥಿತಗೊಳಿಸಿ ಬೇಸಾಯ ನಡೆಸಿ ಉತ್ಪಾದನೆ ತೆಗೆಯಲಾಗುತ್ತಿದೆ. ಈ ರೀತಿ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕವಾಗಿ ಮಠವು ತನ್ನನ್ನು ತೊಡಗಿಸಿಕೊಂಡು ವೀರಶೈವ ಧರ್ಮದ ಪ್ರಚಾರ ಕಾರ್ಯವನ್ನು ನಡೆಸಿಕೊಂಡು ಬಂದಿದೆ.

ವಿಳಾಸ: ಷ.ಬ್ರ.ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕಂಬಳೇಶ್ವರ ಮಠ, ಚಿತ್ತಾಪುರ, ಗುಲ್ಬರ್ಗ ಜಿಲ್ಲೆ.

ತೆಂಗಳಿ

ಚಿತ್ತಾಪುರ ತಾಲ್ಲೂಕಿನ ತೆಂಗಳಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರ ಭಾಗಕ್ಕೆ ಹದಿನಾರು ಕಿ.ಮೀ ದೂರದ ಲ್ಲಿದೆ. ಈ ಗ್ರಾಮದಲ್ಲಿ ವೀರಶೈವ ಧರ್ಮವು ಪ್ರಬಲವಾಗಿ ಬೆಳೆದಿದೆ. ಇಲ್ಲಿ ಒಂಬತ್ತು ಮಠಗಳು ಸ್ಥಾಪನೆಯಾಗಿ ತಮ್ಮ ಧರ್ಮ ಕಾರ್ಯಗಳನ್ನು ನಡೆಸಿದ್ದವು ಎಂದು ಹೇಳಲಾಗುತ್ತಿದೆ. ಇದಕ್ಕೆ ಸಾಕ್ಷಿ ಎಂಬಂತೆ ಈ ಗ್ರಾಮದಲ್ಲಿ ಶ್ರೀ ಭರತನೂರು ಮಠ, ಶ್ರೀ ಶಾಂತನಮಠ, ಶ್ರೀ ಮೊರಟಗಿಮಠ, ಶ್ರೀ ಭೂದಾನಮಠ, ಶ್ರೀ ಹಿರೇಮಠ, ಶ್ರೀ ಸಾರಂಗಮಠ ಎಂಬ ಆರು ಮಠಗಳು ದೊರೆತಿವೆ. ಉಳಿದ ಮೂರು ಮಠಗಳ ಹೆಸರುಗಳು ಸಹ ದೊರೆಯದಾಗಿದೆ. ಇಲ್ಲಿ ಈಗ ಗುರುತಿಸಿರುವ ಐದು ಮಠಗಳಲ್ಲೂ ಗುರುಗಳಿಲ್ಲದೆ ಖಾಲಿ ಉಳಿದಿವೆ.

ಭರತನೂರುಮಠ: ಶ್ರೀ ಭರತನೂರು ಮಠವು ಭರತನೂರಿನ ಶಾಖಾ ಮಠವಾಗಿದೆ. ವಿರಕ್ತ ಸಂಪ್ರದಾಯದ ಈ ಮಠಕ್ಕೆ ಮೂಲ ಮಠದ ಗುರುಗಳು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿದ್ದಾರೆ. ಅಲ್ಲದೆ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿದ್ದಾರೆ.

ಮೊರಟಗಿ ಮಠ: ಶ್ರೀ ಮೊರಟಗಿಮಠವು ಬಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಮೊರಟಗಿಮಠದ ಶಾಖಾ ಮಠವಾಗಿದೆ. ಈ ಮಠದಲ್ಲಿ ಒಂದು ಗದ್ದುಗೆ ಇದ್ದು, ನಿತ್ಯ ಪೂಜೆಯನ್ನು ಮಾಡಲಾಗುತ್ತಿದೆ.

ಭೂದಾನ ಮಠ: ಶ್ರೀ ಭೂದಾನಮಠದಲ್ಲಿ ಇತ್ತೀಚೆಗೆ ಶ್ರೀ ಸಂಗಮೇಶ್ವರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಈ ಮಠಕ್ಕೆ ಉತ್ತರಾಧಿಕಾರಿಗಳಾಗಿ ಯಾರೂ ನೇಮಕ ಗೊಂಡಿಲ್ಲದ ಕಾರಣ ಈ ಮಠವು ಖಾಲಿ ಉಳಿದಿದೆ. ಈಗ ಮಠದಲ್ಲಿರುವ ಗದ್ದುಗೆಗಳಿಗೆ ನಿತ್ಯಪೂಜಾ ಕಾರ್ಯ ಮಾತ್ರ ನಡೆಯುತ್ತಿದೆ.

ಹಿರೇಮಠ: ಶ್ರೀ ಹಿರೇಮಠವು ಉಜ್ಜಯಿನಿ ಪೀಠದ ಶಾಖಾ ಮಠವಾಗಿ ಬೆಳೆದಿದೆ. ಈ ಮಠದಲ್ಲಿ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಮಠಾಧೀಶರಾಗಿದ್ದರು. ಇವರ ತರುವಾಯ ಉತ್ತರಾಧಿಕಾರಿಗಳು ಯಾರೂ ಇಲ್ಲದೆ ಮಠವು ಖಾಲಿ ಉಳಿದಿದೆ. ಇಲ್ಲಿಯೂ ಸಹ ಮಠದ ವಂಶಸ್ಥರು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಸಾರಂಗ ಮಠ: ಶ್ರೀ ಸಾರಂಗ ಮಠವು ಉಜ್ಜಯಿನಿ ಪೀಠದ ಶಾಖಾ ಮಠವಾಗಿದೆ. ಈ ಮಠವು ಪೂರ್ಣ ಶಿಥಿಲಾವಸ್ಥೆಗೆ ಬಂದಿದ್ದು ಈಗ ಕೋರವಾರ ಮಠದ ಶಾಖಾಮಠವಾಗಿದೆ.

ಶಾಂತನ ಮಠ: ತೆಂಗಳಿಯ ಮಧ್ಯಭಾಗದಲ್ಲಿರುವ ಶ್ರೀ ಶಾಂತನಮಠವು ರಂಭಾಪುರಿ ಪೀಠದ ಶಾಖಾ ಮಠವಾಗಿ ಬೆಳೆದಿದೆ. ಈ ಮಠವನ್ನು ಶ್ರೀ ಶಾಂತವೀರ ಸ್ವಾಮಿಗಳು ಸ್ಥಾಪಿಸಿದ ಕಾರಣ 'ಶ್ರೀ ಶಾಂತನ ಮಠ' ಎಂದು ಹೆಸರು ಬಂದಿದೆ. ಮಠದಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರಲಾಗುತ್ತಿದೆ.

ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳು ಇಲ್ಲಿ ಮಠವನ್ನು ಸ್ಥಾಪಿಸಿ ಅಭಿವೃದ್ಧಿಪಡಿಸಿದರು. ನಂತರ ಶ್ರೀ ಮಡಿವಾಳ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಧಾರ್ಮಿಕ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿಪಡಿಸಿದ್ದಲ್ಲದೆ, ಆರ್ಥಿಕ ವಾಗಿ ಸ್ವಾವಲಂಬನೆಯನ್ನು ಸಾಧಿಸಲು ಆಸ್ತಿಯನ್ನು ವಿಸ್ತರಿಸಿದರು. ಇವರು ೧೯೮೪ ರಲ್ಲಿ ಲಿಂಗೈಕ್ಯರಾಗಿರುತ್ತಾರೆ. ಇವರ ನಂತರ ಶ್ರೀ ಶರಣ ಬಸವ ಸ್ವಾಮಿಗಳು ಉತ್ತರಾಧಿಕಾರಿಗಳಾಗಿ ನೇಮಕಗೊಂಡಿದ್ದಾರೆ.

ಶ್ರೀ ಶರಣ ಬಸವ ಸ್ವಾಮಿಗಳು ಪ್ರಾಥಮಿಕ ಶಾಲೆಯನ್ನು ತೆಂಗಳಿಯಲ್ಲಿ ಮುಗಿಸಿ, ಧಾರವಾಡದಲ್ಲಿ ಪ್ರೌಢ ಶಿಕ್ಷಣವನ್ನು ಪಡೆಯುವುದರ ಜೊತೆಗೆ ಸಂಸ್ಕೃತ ಮತ್ತು ವೇದಾಧ್ಯಯನವನ್ನು ಮಾಡುತ್ತಿದ್ದಾರೆ. ಮಠದಲ್ಲಿ ಸ್ಥಾಪನೆಯಾಗಿರುವ ಗದ್ದುಗೆಗಳಿಗೆ ನಿತ್ಯಪೂಜೆ, ಮಡಿವಾಳ ಸ್ವಾಮಿಗಳ ಪುಣ್ಯತಿಥಿ, ರೇಣುಕ ಜಯಂತಿ ಹಾಗೂ ಯುಗಾದಿಯನ್ನು ವಿಶೇಷವಾಗಿ ಆಚರಣೆ ಮಾಡಲಾಗುತ್ತಿದೆ.

ವಿಳಾಸ: ಶ್ರೀ ಶರಣ ಬಸವ ಸ್ವಾಮಿಗಳು, ಶ್ರೀ ಶಾಂತನಮಠ, ತೆಂಗಳಿ, ಚಿತ್ತಾಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ದಂಡೋತಿ

ಚಿತ್ತಾಪುರ ತಾಲ್ಲೂಕಿನ ದಂಡೋತಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಎಂಟು ಕಿ.ಮೀ ದೂರದಲ್ಲಿದೆ. ದಂಡೋತಿ ಗ್ರಾಮವು ಹಿಂದೆ ನೃಪತುಂಗ ರಾಜನ ಆಡಳಿತಕ್ಕೆ ಒಳಪಟ್ಟಿದ್ದ ಕ್ಷೇತ್ರವಾಗಿತ್ತು. ಆತನು ಈ ಸ್ಥಳವನ್ನು ತನ್ನ ಸೈನ್ಯದ ನೆಲೆಯನ್ನಾಗಿ ಮಾಡಿಕೊಂಡಿದ್ದನಂತೆ. ಕಲ್ಯಾಣದ ಬಿಜ್ಜಳ ಮಹಾರಾಜನ ದಂಡೂ ಇಲ್ಲಿ ನೆಲೆಗೊಂಡಿತೆಂದು ಹೇಳಲಾಗುತ್ತಿದೆ. ಈ ಕಾರಣದಿಂದ ಈ ಗ್ರಾಮಕ್ಕೆ ದಂಡೋತಿ ಎಂದು ಹೆಸರು ಬಂದಿದೆ. ಇಂತಹ ಇತಿಹಾಸ ಪ್ರಸಿದ್ಧ ಗ್ರಾಮದಲ್ಲಿ ದೀವಟಗೆ ಮಠವು ಸ್ಥಾಪನೆಯಾಗಿ ಈ ಭಾಗದ ಧಾರ್ಮಿಕ ಕೇಂದ್ರಬಿಂದುವಾಗಿ ಬೆಳೆದಿದೆ.

ದೀವಟಗೆಮಠ: ದೀವಟಗಿ ಗ್ರಾಮದಲ್ಲಿ ಸ್ಥಾಪನೆಯಾಗಿರುವ ದೀವಟಗೆ ಮಠವು ಹೆಸರು ಪಡೆದಿದೆ. ಈ ಮಠದ ಕರ್ತೃ ಗುರುಗಳಾದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮಿಗಳು ಮಲೆನಾಡಿನ ಪ್ರಾಂತ್ಯದವರು. ಇವರು ಲೋಕಸಂಚಾರ ಕೈಗೊಂಡು, ಧರ್ಮಜಾಗೃತಿಯನ್ನು ಮಾಡುತ್ತಾ ದಂಡೋತಿ ಗ್ರಾಮಕ್ಕೆ ಆಗಮಿಸುತ್ತಾರೆ. ಇಲ್ಲಿಗೆ ಆಗಮಿಸಿದ ಗುರುಗಳು ಇಲ್ಲಿನ ವಾತಾವರಣವನ್ನು ನೋಡಿ ಇಲ್ಲಿಯೇ ನೆಲೆಸಬೇಕೆಂಬ ಸದಿಚ್ಛೆಯಿಂದ ಮಠವನ್ನು ಸ್ಥಾಪನೆ ಮಾಡುತ್ತಾರೆ. ನಿರ್ಜನ ಪ್ರದೇಶದ ಈ ಕಾಡಿನಲ್ಲಿ ಭೂತಗಳ ಚೇಷ್ಟೆ ಅಪಾರವಾಗಿತ್ತಂತೆ. ಈ ಸಂದರ್ಭದಲ್ಲಿ ಶ್ರೀ ಶಿವಲಿಂಗೇಶ್ವರರು ಭೂತಗಳನ್ನು ತಮ್ಮ ವಶಪಡಿಸಿಕೊಂಡು ಅವುಗಳಿಂದಲೇ ತಮ್ಮ ಸೇವೆಯನ್ನು ಮಾಡಿಸಿಕೊಳ್ಳುತ್ತಿದ್ದರಂತೆ. ಇಲ್ಲಿನ ಜಾಗೀರುದಾರನಿಗೆ ಮಕ್ಕಳಿರಲಿಲ್ಲವಂತೆ. ಈ ಸಂದರ್ಭದಲ್ಲಿ ಗುರುಗಳ ಮಹಿಮೆಯನ್ನು ಕೇಳಿ ಗುರುಗಳ ಹತ್ತಿರ ಬಂದು ಮನೆಗೆ ಆಹ್ವಾನಿಸಿದನಂತೆ. ಆಗ ಗುರುಗಳು ಜಾಗೀರುದಾರನ ಮನೆಗೆ ಹೋಗಲು ಒಪ್ಪಿ ರಾತ್ರಿ ಹೊರಟರು. ಮೇನೆಯ ಮೇಲೆ ಕುಳಿತ ಗುರುಗಳನ್ನು ಭೂತಗಳು ಹೊತ್ತುಕೊಳ್ಳುತ್ತವೆ. ಉಳಿದ ಭೂತಗಳು ದೀವಟಿಗೆಯನ್ನು ಹಚ್ಚಿಕೊಂಡು ಮೆರವಣಿಗೆ ಯೋಪಾದಿಯಲ್ಲಿ ಸಾಗುತ್ತವೆ. ಗುರುಗಳು ಜಾಗೀರುದಾರನ ಮನೆಗೆ ಆಗಮಿಸುತ್ತಾರೆ. ಭಕ್ತರು ಗುರುಗಳ ಆಗಮನಕ್ಕಾಗಿ ಕಾದಿದ್ದರು. ಗುರುಗಳು

ಪವಾಡದ ರೀತಿಯಲ್ಲಿ ಬಂದದ್ದನ್ನು ನೋಡಿ ಬೆರಗಾದ ಭಕ್ತರು ಗುರುಗಳಿಗೆ ಶರಣಾದರಂತೆ. ಗುರುಗಳು ಜಾಗೀರುದಾರನ ಮನೆಯಲ್ಲಿ ಶಿವಪೂಜೆಯನ್ನು ನಡೆಸಿ ಆಶೀರ್ವದಿಸಿ ಬಂದರಂತೆ. ಆಗ ಜಾಗೀರುದಾರನು ಮಠದ ಧಾರ್ಮಿಕ ಕಾರ್ಯಗಳು ನಡೆಯಲು ಸಕಲ ವ್ಯವಸ್ಥೆಯನ್ನು ಮಾಡಿ ಇನಾಂಭೂಮಿಯನ್ನು ನೀಡಿರುತ್ತಾನೆ ಎಂದು ಹೇಳಲಾಗುತ್ತಿದೆ. ಈ ಘಟನೆ ನಡೆದ ಮೇಲೆ ಈ ಮಠವು ಹೆಚ್ಚು ಪ್ರಸಿದ್ಧಿ ಪಡೆಯುತ್ತದೆ. ಗುರುಗಳು ದೀವಟಿಗೆಯ ಬೆಳಕಿನಲ್ಲಿ ಪ್ರಥಮವಾಗಿ ಗ್ರಾಮವನ್ನು ಪ್ರವೇಶಿಸಿದ್ದ ಕಾರಣ ಈ ಮಠಕ್ಕೆ 'ದೀವಟಗೆಮಠ' ಎಂದು ಹೆಸರು ಬಂದಿದೆ.

ಪರಂಪರೆ:

೧. ಷ.ಬ್ರ.ಶ್ರೀ ಶಿವಲಿಂಗ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ರೇವಣಸಿದ್ಧ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಶಿವಲಿಂಗ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ವೀರಭದ್ರಯ್ಯ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಸೋಮಶೇಖರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮಿಗಳ ಕರ್ತೃತ್ವಶಕ್ತಿ ಮತ್ತು ಪವಾಡದಿಂದ ಹೆಸರು ಪಡೆದು ಸ್ಥಾಪನೆಯಾದ ದೀವಟಗೆ ಮಠದಲ್ಲಿ ಸುಮಾರು ಏಳು ಜನ ಮಠಾಧೀಶರು ಅಧಿಕಾರ ನಡೆಸಿ ಮಠವು ಬೆಳೆಯಲು ಕಾರಣಕರ್ತರಾಗಿದ್ದಾರೆ. ೧೯೨೫ ರಲ್ಲಿ ಲಿಂಗೈಕ್ಯರಾದ ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಸರ್ವಾಂಗೀಣವಾಗಿ ಅಭಿವೃದ್ಧಿಗೊಳಿಸಿದ್ದಾರೆ. ಇವರ ನಂತರ ಕೆಲವು ವರ್ಷಗಳ ಕಾಲ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿದ ಕಾರಣ ಮಠವು ಶಿಥಿಲಗೊಂಡಿತ್ತಂತೆ. ನಂತರ ಶ್ರೀ ಸಿದ್ಧಯ್ಯ ಮತ್ತು ಶ್ರೀಮತಿ ಚನ್ನಮ್ಮನವರ ಪುತ್ರರಾಗಿ ೧೯೪೨ರಲ್ಲಿ ಜನಿಸಿದ ಶ್ರೀ ಸೋಮ ಶೇಖರ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡಿರುತ್ತಾರೆ. ಇವರು ಬೆಂಗಳೂರಿನ ಮಹಂತಿನ ಮಠದಲ್ಲಿ ಆಶ್ರಯ ಪಡೆದು ಸಂಸ್ಕೃತ ಅಭ್ಯಾಸವನ್ನು ಮಾಡಿ ಬಂದಿದ್ದಾರೆ.

ಧಾರ್ಮಿಕ ಕೆಲಸಗಳು: ಮಠದ ಪರಂಪರೆಯಲ್ಲಿ ಬಂದ ಗುರುಗಳ ಗದ್ದುಗೆಗಳಿಗೆ ನಿತ್ಯಪೂಜೆ, ಅಮಾವಾಸ್ಯೆ ಮತ್ತು ಹುಣ್ಣಿಮೆ ಯಲ್ಲಿ ವಿಶೇಷ ಪೂಜೆ, ಶ್ರಾವಣ ಮಾಸದಲ್ಲಿ ಪುರಾಣ ಪ್ರವಚನ ಹಾಗೂ ಭಜನೆ, ಮಹಾನವಮಿಯಂದು ಒಂಬತ್ತು ದಿನಗಳ ಕಾಲ ದೇವಿಪುರಾಣವನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಅನ್ನದಾಸೋಹವನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀಸೋಮಶೇಖರ ಸ್ವಾಮಿಗಳು,ಶ್ರೀ ದೀವಟಗೆಮಠ, ದಂಡೋತಿ, ಚಿತ್ತಾಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ದಂಡಗುಂಡ

ಚಿತ್ತಾಪುರ ತಾಲ್ಲೂಕಿನ ದಂಡಗುಂಡವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹದಿನೈದು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಹಿರೇಮಠವು ಸ್ಥಾಪನೆಯಾಗಿ ಧಾರ್ಮಿಕವಾಗಿ ಹೆಸರು ಪಡೆದಿದೆ.

ಹಿರೇಮಠ: ದಂಡಗುಂಡ ಗ್ರಾಮದಲ್ಲಿ ರಂಭಾಪುರಿ ಪೀಠದ ಶಾಖಾಮಠವಾದ ಹಿರೇಮಠವು ಸ್ಥಾಪನೆಯಾಗಿದೆ. ಗ್ರಾಮದ ಹೊರಭಾಗದ ಗುಡ್ಡದ ಮೇಲೆ ಬಸವೇಶ್ವರ ದೇವಾಲಯದ ಒಂದು ಅಂಗವಾಗಿ ದೇವಸ್ಥಾನದ ಪಕ್ಕದಲ್ಲಿಯೇ ಸ್ಥಾಪನೆಯಾಗಿರುವ ಈ ಮಠ ಈ ಭಾಗದ ಯಾತ್ರಾಸ್ಥಳವಾಗಿ ರೂಪುಗೊಂಡಿದೆ.

ಶ್ರೀ ಸಂಗಮೇಶ್ವರ ಶಿವಾಚಾರ್ಯ ಸ್ವಾಮಿಗಳು ಈ ಮಠದ ಕರ್ತೃಗುರುಗಳೆಂದು ಹೇಳಲಾಗುತ್ತದೆ. ಇವರ ನಂತರ ಶ್ರೀ ಗುರುಬಸವಯ್ಯ ಸ್ವಾಮಿಗಳು ಮಠದ ಆಡಳಿತವನ್ನು ಕೆಲವು ವರ್ಷ ನೋಡಿಕೊಂಡಿದ್ದರಂತೆ. ಇವರ ನಂತರ ಶ್ರೀ ಚನ್ನ ಬಸವ ಶಿವಾಚಾರ್ಯ ಸ್ವಾಮಿಗಳು ಕಳೆದ ಐವತ್ತೈದು ವರ್ಷಗಳಿಂದ ಈ ಮಠದ ಆಡಳಿತವನ್ನು ನೋಡಿಕೊಂಡು ಬರುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಚನ್ನಬಸವೇಂದ್ರ ಶಿವಾಚಾರ್ಯಸ್ವಾಮಿಗಳು, ಶ್ರೀ ಹಿರೇಮಠ, ದಂಡಗುಂಡ, ಚಿತ್ತಾಪುರ ತಾ, ಗುಲ್ಬರ್ಗ ಜಿಲ್ಲೆ.

ನಾಲವಾರ

ಚಿತ್ತಾಪುರ ತಾಲ್ಲೂಕಿನ ನಾಲವಾರ ಗ್ರಾಮವು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ವ್ಯಾಪಾರಿ ಕೇಂದ್ರವಾಗಿ ಬೆಳೆದಿರುವ ನಾಲವಾರವು ಆರ್ಥಿಕವಾಗಿ ಅಭಿವೃದ್ಧಿ ಹೊಂದಿದೆ. ರಂಭಾಪುರಿ ಪೀಠದ ಶಾಖಾ ಮಠವಾದ ಶ್ರೀ ಕೋರಿಸಿದ್ಧೇಶ್ವರ ಸಂಸ್ಥಾನ ಮಠದ ಸ್ಥಾಪನೆಯಿಂದಾಗಿ ಈ ಗ್ರಾಮವು ಧಾರ್ಮಿಕ ಕ್ಷೇತ್ರವಾಗಿ ರೂಪು ಗೊಂಡಿದೆ. ಅಲ್ಲದೆ ಒಂದು ಯಾತ್ರಾ ಸ್ಥಳವಾಗಿಯೂ ಹೆಸರು ಮಾಡಿದೆ.

ಕೋರಿಸಿದ್ಧೇಶ್ವರ ಸಂಸ್ಥಾನಮಠ: ಪುರಾತನ ಕಾಲದ ರಂಭಾಪುರಿಪೀಠದ ಶಾಖಾಮಠವು ಈ ಗ್ರಾಮದಲ್ಲಿ ಅಸ್ತಿತ್ವದಲ್ಲಿತ್ತಂತೆ. ಈ ಮಠವು ಕಾಲಾನಂತರ ನಶಿಸಿಹೋಗಿ ಮಠದಲ್ಲಿ ಕೇವಲ ಎರಡು ಗದ್ದುಗೆಗಳು ಸ್ಮಾರಕವಾಗಿ ಉಳಿದಿದ್ದವು. ಈ ಗ್ರಾಮದ ಭಕ್ತರು ಈ ಗದ್ದುಗೆಗಳಿಗೆ ವಾರಕ್ಕೊಮ್ಮೆ ಪೂಜೆ ಸಲ್ಲಿಸುತ್ತಾ ಮಠದ ಮತ್ತು ಮಠಾಧೀಶರ ನೆನಪು ಉಳಿಯುವಂತೆ ಮಾಡಿದ್ದರು.

ಮಠ ಸ್ಥಾಪನೆ: ಶ್ರೀ ಕೋರಿಸಿದ್ಧೇಶ್ವರರು ಈ ಭಾಗದ ಮಹಾ ಮಹಿಮಾ ಪುರುಷರು. ಇವರು ಪಾದವಿಟ್ಟ ಕ್ಷೇತ್ರ ಸುಕ್ಷೇತ್ರವಾಗಿ ಬೆಳೆಯುತ್ತಿತ್ತು. ಇಂತಹ ಪವಾಡ ಪುರುಷರು ಲೋಕಸಂಚಾರ ಕೈಗೊಂಡು ನಾಲವಾರ ಗ್ರಾಮಕ್ಕೆ ಆಗಮಿಸುತ್ತಾರೆ. ಗುರುಗಳು ಈ ಗ್ರಾಮಕ್ಕೆ ಆಗಮಿಸಿ ಪೂರ್ಣ ಜೀರ್ಣಾವಸ್ಥೆಯಲ್ಲಿದ್ದ ಹಿರೇಮಠದಲ್ಲಿ ಆಶ್ರಯ ಪಡೆಯುತ್ತಾರೆ. ಇಲ್ಲಿನ ಭಕ್ತರು ಬೇರೆ ಕಡೆ ವಾಸ್ತವ್ಯ ಮಾಡಲು ವ್ಯವಸ್ಥೆ ಮಾಡಿಕೊಡುವುದಾಗಿ ವಿನಂತಿಸಿಕೊಂಡರೂ ಭಕ್ತರ ಮಾತಿಗೆ ಒಪ್ಪದೆ ಪುರಾತನಕಾಲದ ಜೀರ್ಣಾವಸ್ಥೆಯ ಮಠದಲ್ಲಿಯೇ ನೆಲೆಗೊಂಡು ಈ ಜಾಗೃತ ಸ್ಥಳವನ್ನು ಪುನಃ ಜಾಗೃತಗೊಳಿಸಬೇಕೆಂಬ ಅಭಿಲಾಷೆ ಹೊಂದಿ ಈ ಸ್ಥಳದಲ್ಲಿಯೇ ದೀರ್ಘಾನುಷ್ಠಾನವನ್ನು ಕೈಗೊಳ್ಳುತ್ತಾರೆ. ಗುರುಗಳು ಇಲ್ಲಿ ನೆಲೆಸಿದ ಮೇಲೆ ಮಾಡಿದ ಪವಾಡಗಳನ್ನು ನೋಡಿ ಈ ಗ್ರಾಮದ ಭಕ್ತರು ಶರಣಾಗಿ ಗುರುಗಳ ಸೇವೆ ಮಾಡಲು ಮುಂದಾದರು. ಪೂರ್ಣ ಜೀರ್ಣಗೊಂಡು ಜನರಿಂದ ನಿರ್ಲಕ್ಷಿಸಲ್ಪಟ್ಟಿದ್ದ ಕ್ಷೇತ್ರ ಸುಕ್ಷೇತ್ರವಾಗಿ ಬೆಳೆಯಲು ನಾಂದಿ ಹಾಡಿದರು.

ಮೂಲ ಮಠದ ಮೇಲೆ ನೂತನ ಕಟ್ಟಡವು ಸ್ಥಾಪನೆಯಾಯಿತು. ಇಲ್ಲಿ ನಿತ್ಯ ಶಿವಾನುಭವ ಗೋಷ್ಠಿಗಳು, ಭಜನೆ, ದಾಸೋಹ ನಡೆಯತೊಡಗಿತು. ದೂರದ ಭಕ್ತರು ಶ್ರೀ ಕೋರಿ ಸಿದ್ಧೇಶ್ವರರು ನಡೆಸುವ ಪವಾಡವನ್ನು ಕೇಳಿ ತಿಳಿದುಕೊಂಡಿದ್ದವರು, ನೋಡಿ ಆನಂದಿಸಬೇಕೆಂದು ನಾಲವಾರ ಕ್ಷೇತ್ರದ ಕಡೆಗೆ ಬರತೊಡಗಿದರು. ಮಠಕ್ಕೆ ಆಗಮಿಸುವ ಭಕ್ತರನ್ನು ಗುರುಗಳು ಪ್ರೀತ್ಯಾದರಗಳಿಂದ ನೋಡಿ ಅವರ ಇಷ್ಟಾರ್ಥವನ್ನು ಕೇಳಿ ಈಡೇರಿಸಿ ಕಳುಹಿಸಿ ಕೊಡುತ್ತಿದ್ದರು.

ಪರಂಪರೆ:

೧.	ಷ.ಬ್ರ.ಶ್ರೀ ಕೋರಿ ಸಿದ್ಧೇಶ್ವರ ಶಿವಾಚಾರ್ಯಸ್ವಾಮಿಗಳು	(೧೭೬೫-೧೮೭೫)
೨.	ಷ.ಬ್ರ.ಶ್ರೀ ತೋಟೇಂದ್ರ ಶಿವಾಚಾರ್ಯಸ್ವಾಮಿಗಳು	(೧೮೭೫-೧೯೬೫)
೩.	ಷ.ಬ್ರ.ಶ್ರೀ ಎರಡನೆಯ ತೋಟೇಂದ್ರ ಶಿವಾಚಾರ್ಯಸ್ವಾಮಿಗಳು	(೧೯೬೫-೧೯೧೫)
೪.	ಷ.ಬ್ರ.ಶ್ರೀ ಮೂರನೆಯ ತೋಟೇಂದ್ರ ಶಿವಾಚಾರ್ಯಸ್ವಾಮಿಗಳು	(೧೯೧೫-೧೯೭೩)
೫.	ಷ.ಬ್ರ.ಶ್ರೀ ನಾಲ್ಕನೆಯ ತೋಟೇಂದ್ರ ಶಿವಾಚಾರ್ಯಸ್ವಾಮಿಗಳು	(೧೯೭೫-)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಹಿಂದೆ ಇದ್ದ ಮಠವನ್ನು ಪುನರುಜ್ಜೀವನಗೊಳಿಸಿ ಬೆಳೆಸಿದ ಶ್ರೀ ಕೋರಿ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ತಿಮ್ಮಾಪುರ ಗ್ರಾಮದ ಶ್ರೀ ಶಿವಲಿಂಗಾರ್ಯ ಮತ್ತು ಶ್ರೀಮತಿ ಶಿವದೇವಿಯವರ ಪುತ್ರರಾಗಿ ೧೭೭೭ ರಲ್ಲಿ ಜನಿಸಿದರು. ಬಾಲ್ಯದಲ್ಲಿಯೇ ಆಧ್ಯಾತ್ಮದ ಒಲವನ್ನು ಗಳಿಸಿಕೊಂಡಿದ್ದ ಗುರುಗಳು ಶ್ರೀ ಮಲ್ಲಾರಾಧ್ಯ ಸ್ವಾಮಿಗಳಿಂದ ಶಿಕ್ಷಣ ಪಡೆದು ಜ್ಞಾನಿಯಾಗಿ ಬೆಳೆದು ಕಾಖಂಡಕಿ ಮಠದ ಅಧಿಕಾರವನ್ನು ವಹಿಸಿಕೊಂಡರು. ಶ್ರೀ ಸಿದ್ಧೇಶ್ವರರು, ಶ್ರೀ ಮಲ್ಲಾರಾಧ್ಯ ಸ್ವಾಮಿಗಳಿಂದ ಕೋರಿಟೊಪ್ಪಿಗೆಯನ್ನು ತೊಡಿಸಿಕೊಂಡು ಮಠದ ಅಧಿಕಾರವನ್ನು ವಹಿಸಿಕೊಂಡರು. ಅಂದಿನಿಂದ'ಶ್ರೀ ಕೋರಿಸಿದ್ಧೇಶ್ವರ ಸ್ವಾಮಿ'ಗಳಾಗಿ ಮೆರೆದರು. ನಂತರ ಲೋಕಸಂಚಾರ ಹೊರಟ ಗುರುಗಳು ಇಲ್ಲಿಗೆ ಬಂದು ಮಠವನ್ನು ಪುನರುಜ್ಜೀವನಗೊಳಿಸಿ ಮಹಾನ್ ಪವಾಡ ಪುರುಷರಾಗಿ ಹೆಸರು ಪಡೆದರು. ವೀರಶೈವ ಧರ್ಮವನ್ನು ಹೆಚ್ಚು ಪ್ರಚಾರಗೊಳಿಸಿದರು. ಇವರ ಕಾಲದಲ್ಲಿ ಮಾಡಿದ ಅನೇಕ ಪವಾಡಗಳು ಇಂದಿಗೂ ಈ ಭಾಗದ ಜನಮನದಲ್ಲಿ ಹಸಿರಾಗಿ

ಉಳಿದಿವೆ.ಇವರು ೧೯೬೭ ರಲ್ಲಿ ಲಿಂಗೈಕ್ಯರಾದರು. ಇವರ ತರುವಾಯ 'ಶ್ರೀ ತೋಟೇಂದ್ರ ಸ್ವಾಮಿ'ಗಳು ಅಧಿಕಾರಕ್ಕೆ ಬಂದರು. ಇವರು ಸಹ ಮಹಾಪವಾಡ ಪುರುಷರಾಗಿ ಅನೇಕ ಲೀಲೆಗಳನ್ನು ಮಾಡಿ ಈ ಮಠದ ಪರಂಪರೆಯನ್ನು ಬೆಳಗಿಸುವ ಮೂರ್ತಿ ಯಾದರು. ಇವರ ನಂತರ ಅಧಿಕಾರಕ್ಕೆ ಬಂದ ಎಲ್ಲಾ ಗುರುಗಳು ಶ್ರೀ ತೋಟೇಂದ್ರ ಶಿವಾಚಾರ್ಯ ಸ್ವಾಮಿಗಳೆಂದೇ ಅಭಿದಾನ ಪಡೆದು ಅಧಿಕಾರಕ್ಕೆ ಬರುತ್ತಿದ್ದಾರೆ. ಈ ಎಲ್ಲಾ ಗುರುಗಳು ಮಹಾ ಜ್ಞಾನಿಗಳಾಗಿ, ಮಹಾ ಮಾನವತಾವಾದಿಗಳಾಗಿ, ಮಹಾ ದಾಸೋಹಿಗಳಾಗಿ ಮಠವನ್ನು ಬೆಳೆಸಿದ್ದಾರೆ.

ಈಗಿನ ಮಠಾಧ್ಯಕ್ಷರಾದ ಶ್ರೀ ತೋಟೇಂದ್ರ ಶಿವಾಚಾರ್ಯ ಸ್ವಾಮಿಗಳು ೧೯೬೫ ರಲ್ಲಿ ಶ್ರೀ ಗುರುಸಿದ್ಧಯ್ಯ ಮತ್ತು ಶ್ರೀಮತಿ ಗೌರಮ್ಮನವರ ಪುತ್ರರಾಗಿ ಜನಿಸಿದರು. ಆದವಾನಿಯಲ್ಲಿ ಸಂಸ್ಕೃತ ಅಭ್ಯಾಸ ಮಾಡಿ ಚಿಕ್ಕ ವಯಸ್ಸಿನಲ್ಲಿಯೇ ಹಿಂದೂ ಮತ್ತು ಮುಸ್ಲಿಂ ಧರ್ಮೀಯರ ಸಾಮರಸ್ಯಕ್ಕೆ ಪ್ರಾರ್ಥನೆ ಮಾಡಿದ್ದಾರೆ.ಇವರು ಬಾಲ್ಯದಲ್ಲಿಯೇ ಪ್ರಗತಿಪರ ವಿಚಾರಗಳನ್ನು ಹೊಂದಿ ಧರ್ಮವನ್ನು ಬೆಳೆಸುವ ಹಂಬಲ ತೊಟ್ಟರು. ಈ ಕಾರಣಕ್ಕಾಗಿಯೇ'ಬಾಲ ತಪಸ್ವಿ'ಯೆಂದು ಬಿರುದು ಪಡೆದರು. ಸಂಸ್ಕೃತ, ವೇದಾಧ್ಯಯನಗಳನ್ನು ಮಾಡಿ ಜ್ಞಾನವನ್ನು ಹೆಚ್ಚಿಸಿಕೊಂಡ ಇವರು ವೀರಶೈವಧರ್ಮದ ಆಚಾರ್ಯರು ಮತ್ತು ಬಸವಾದಿ ಪ್ರಮಥರ ತತ್ತ್ವಗಳನ್ನು ಚೆನ್ನಾಗಿ ಅಧ್ಯಯನ ಮಾಡಿದ್ದಾರೆ.'ಉಪಾಚಾರ್ಯ ರತ್ನ'ಎಂಬ ಬಿರುದನ್ನು ಹಿಂದಿನ ರಂಭಾಪುರಿ ಪೀಠದ ಜಗದ್ಗುರುಗಳಾದ ಶ್ರೀ ರುದ್ರಮುನಿ ಶಿವಾಚಾರ್ಯ ಭಗವತ್ಪಾದರು ನೀಡಿ ಗೌರವಿಸಿದ್ದಾರೆ.

ಸದಾ ನಗುಮುಖದೊಂದಿಗೆ ಲವಲವಿಕೆಯಿಂದ ಇರುವ ಗುರುಗಳು ಮಠಕ್ಕೆ ಆಗಮಿಸುವ ಎಲ್ಲಾ ಭಕ್ತರಿಗೂ ದರ್ಶನ ಕೊಟ್ಟು ಅವರ ಕೋರಿಕೆಗಳನ್ನು ಸ್ವೀಕರಿಸಿ ಮಾನಸಿಕ ಸ್ಥೈರ್ಯ ತುಂಬಿ, ಸಾಂತ್ವನ ಮಾಡಿ, ಪ್ರೇರಣೆ ನೀಡಿ ಅವರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಸಮಸ್ತ ಭಕ್ತರ ಆಶಾ ದೀಪವಾಗಿ ಬೆಳಗುತ್ತಿದ್ದಾರೆ. ಚಿಕ್ಕವಯಸ್ಸಿನಲ್ಲೇ ಅಪಾರವಾದುದ್ದನ್ನು ಸಾಧಿಸಿರುವ ಗುರುಗಳು ತಮ್ಮ ಪ್ರಭಾವದಿಂದ ಈ ಕ್ಷೇತ್ರವನ್ನು ಅಭಿವೃದ್ಧಿ ಪಡಿಸತೊಡಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಉಪಚಾರ್ಯರತ್ನ ಶ್ರೀ ತೋಟೇಂದ್ರ ಶಿವಾಚಾರ್ಯ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ಮಠದಲ್ಲಿ ನಡೆಯುತ್ತಿದ್ದ ದಾಸೋಹವನ್ನು ಅತ್ಯಾಧುನಿಕ ರೀತಿಯಲ್ಲಿ ವ್ಯವಸ್ಥೆಮಾಡಿದ್ದಾರೆ. ಪ್ರತಿ ಭಾನುವಾರ ಮತ್ತು ಗುರುವಾರ ಮಠದಲ್ಲಿಯೇ ಇದ್ದು ದೂರದಿಂದ ಬರುವ ಭಕ್ತರಿಗೆ ದರ್ಶನ ಕೊಡುತ್ತಾರೆ. ಪ್ರತಿ ಅಮಾವಾಸ್ಯೆಯಲ್ಲಿ ಶಿವಾನುಭವ ಚಿಂತನ ಕಾರ್ಯಕ್ರಮವು ನಿರಂತರವಾಗಿ ನಡೆಯುತ್ತಾ ಬಂದಿದೆ. ಈ ಶಿವಾನುಭವ ಚಿಂತನ ಕಾರ್ಯಕ್ರಮವು ಒಂದು ಸಾಂಪ್ರದಾಯಿಕ ಕಾರ್ಯಕ್ರಮವಾಗದೆ ಅರ್ಥಪೂರ್ಣ ವಿಚಾರಗಳ ಬಗ್ಗೆ ಚಿಂತನ ಮಂಥನ ನಡೆಸಲು ಪ್ರೇರಣೆ ನೀಡಿದೆ. ಈ ಕಾರ್ಯಕ್ರಮಕ್ಕೆ ನಾಡಿನ ಮುಖ್ಯಮಂತ್ರಿಗಳು, ವಿವಿಧ ಕ್ಷೇತ್ರದ ಗಣ್ಯರು ಹಾಗೂ ವಿದ್ವಾಂಸರು ಮತ್ತು ವಿವಿಧ ಮಠಾಧೀಶರನ್ನು ಕರೆಸಿ ಉಪನ್ಯಾಸ, ಉಪದೇಶಗಳನ್ನು ಮಾಡಿಸುತ್ತಿದ್ದಾರೆ. ನಾಲವಾರದ ಶ್ರೀ ಕೋರಿ ಸಿದ್ಧೇಶ್ವರ ಮಠದಿಂದ ಶ್ರೀ ಕೋರಿ ಸಿದ್ಧೇಶ್ವರ ಸ್ವಾಮಿಗಳು ಮೊದಲು ಪಟ್ಟಾಧಿಕಾರ ವಹಿಸಿಕೊಂಡಿದ್ದ ಕಾಖಂಡಕಿ ಮಠಕ್ಕೆ ಪ್ರತಿವರ್ಷ ಪಾದಯಾತ್ರೆಯನ್ನು ಹಮ್ಮಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಭಕ್ತರನ್ನು ಸಂಘಟಿಸಿ ಜನಜಾಗೃತಿಯನ್ನು ಮಾಡುವ ಮೂಲಕ ಪಾದಯಾತ್ರೆಯನ್ನು ಮುಗಿಸಿ, 'ತನಾರತಿ' ಮಹೋತ್ಸವ ಈ ಮಠದ ಒಂದು ವಿಶೇಷ ಧಾರ್ಮಿಕ ಆಚರಣೆಯಾಗಿದೆ. ಗುರುವಿಗೆ ತಮ್ಮ ತನುವನ್ನೇ ಆರತಿಮಾಡಿ ಬೆಳಗುವ ಈ ಉತ್ಸವ ಬಹಳ ವಿಜೃಂಭಣೆಯಿಂದ ನಡೆಯುತ್ತಿದೆ. ತನಾರತಿ ಕಾರ್ಯಕ್ರಮವು ನವರಾತ್ರಿ, ಮಣ್ಣಅಮಾವಾಸ್ಯೆ ಹಾಗೂ ಅಕ್ಷಯ ತೃತೀಯದಲ್ಲಿ ಪ್ರತಿ ವರ್ಷ ಮೂರು ಬಾರಿ ನಡೆಯುತ್ತಿದೆ. ಮಠದಲ್ಲಿ ಲಕ್ಷದೀಪೋತ್ಸವ ಕಾರ್ಯಕ್ರಮವನ್ನು ೧೯೯೩ ರಲ್ಲಿ ಮಾಡಿದ್ದಾರೆ. ಶ್ರೀ ಕೋರಿ ಸಿದ್ಧೇಶ್ವರ ಪುಣ್ಯಾರಾಧನೆಯನ್ನು ಸೀಗೆಹುಣ್ಣಿಮೆಯ ಸಪ್ತಮಿ ತಿಥಿಯಂದು ಮಾಡಲಾಗುತ್ತಿದೆ.

ಶಿಕ್ಷಣ-ಸಾಹಿತ್ಯಸೇವೆ: ೧೯೯೨ ರಲ್ಲಿ ಶ್ರೀ ಕೋರಿಸಿದ್ಧೇಶ್ವರ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಶಿಶುವಿಹಾರ, ಪ್ರಾಥಮಿಕ ಹಾಗೂ ಪ್ರೌಢಶಾಲೆ, ಪದವಿಪೂರ್ವ ಕಾಲೇಜನ್ನು ಪ್ರಾರಂಭಿಸಲಾಗಿದೆ. ಮಠದ ವತಿಯಿಂದ ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸದಿದ್ದರೂ ಕಲಿಯುವ ಬಡ ಮಕ್ಕಳಿಗೆ ಮಠದಲ್ಲಿ ಆಶ್ರಯ ಕಲ್ಪಿಸಿ ವಿದ್ಯಾಭ್ಯಾಸಕ್ಕೆ ನೆರವಾಗಿದ್ದಾರೆ.

ಪ್ರವಾಸ ಕಥನ, ವೀರಶೈವ ಧರ್ಮದ ಕೈಪಿಡಿ, ಶ್ರೀ ಕೋರಿ ಸಿದ್ದೇಶ್ವರರ ಚರಿತ್ರೆ ಇನ್ನೂ ಮುಂತಾದ ಅನೇಕ

ಮೌಲಿಕ ಕೃತಿಗಳ ಜೊತೆಗೆ ಸ್ಮರಣ ಸಂಚಿಕೆಗಳನ್ನು ಪ್ರಕಟಿಸಲಾಗಿದೆ. ಮಠದ ವತಿಯಿಂದ 'ತನಾರತಿ'ಎಂಬ ದ್ವೈಮಾಸಿಕ ಪತ್ರಿಕೆಯನ್ನು ನಿರಂತರವಾಗಿ ಪ್ರಕಟಿಸಲಾಗುತ್ತಿದೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ತೋಟೇಂದ್ರ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠವು ಈ ಹಿಂದೆ ಕಂಡರಿಯದ ರೀತಿಯಲ್ಲಿ ಅಭಿವೃದ್ಧಿಯನ್ನು ಸಾಧಿಸಿದೆ. ಮಠದ ಹಳೆಯ ಕಟ್ಟಡವನ್ನು ತೆಗೆಸಿ ಕಟ್ಟಡಗಳ ಸಮುಚ್ಛಯವನ್ನು ನಿರ್ಮಿಸಿದ್ದಾರೆ. ಇದರಲ್ಲಿ ಇಪ್ಪತ್ತೈದು ಲಕ್ಷ ರೂ ವೆಚ್ಚದಲ್ಲಿ ನಿರ್ಮಿಸಿದ ಕಲ್ಯಾಣಮಂಟಪ, ಇಪ್ಪತ್ತೈದು ಲಕ್ಷರೂ ವೆಚ್ಚದಲ್ಲಿ ಯಾತ್ರಾನಿವಾಸ, ಹತ್ತು ಲಕ್ಷ ರೂ ವೆಚ್ಚದಲ್ಲಿ ದಾಸೋಹ ಮಂಟಪ, ಐದುಲಕ್ಷ ರೂ ವೆಚ್ಚದಲ್ಲಿ ರಂಗಮಂಟಪ, ಹತ್ತುಲಕ್ಷ ರೂ ವೆಚ್ಚದಲ್ಲಿ ಪುರಾಣ ಮಂಟಪ, ಎಂಟು ಲಕ್ಷ ರೂ ವೆಚ್ಚದಲ್ಲಿ ಸಾಮೂಹಿಕ ಭವನ ಈ ರೀತಿ ಕೋಟ್ಯಾಂತರ ರೂಪಾಯಿಗಳನ್ನು ಮಠದ ಅಭಿವೃದ್ಧಿಗಾಗಿ ವಿನಿಯೋಗಿಸಲಾಗಿದೆ. ಶ್ರೀ ಕೋರಿಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಇಲ್ಲಿಗೆ ಬರುವ ಮೊದಲು ಅಧಿಕಾರ ವಹಿಸಿಕೊಂಡಿದ್ದ ಕಾಖಂಡಿಕ ಮಠದ ಹಳೆಯ ಕಟ್ಟಡವನ್ನು ತೆಗೆಸಿ ನೂತನವಾಗಿ ಕಟ್ಟಡವನ್ನು ನಿರ್ಮಿಸಿದ್ದಾರೆ. ಗುಲ್ಬರ್ಗ ನಗರದಲ್ಲಿ ಕರುಣೇಶ್ವರ ನಗರದಲ್ಲಿ ಈ ಮಠದ ಶಾಖಾಮಠವನ್ನು ಸ್ಥಾಪಿಸಲಾಗಿದೆ.ಅಲ್ಲದೆ ಈ ಮಠದ ಶಾಖಾ ಮಠಗಳಾದ ಜೇವರ್ಗಿ ತಾಲ್ಲೂಕಿನ ಚಿಕ್ಕಬಿರಾಳ ಮತ್ತು ಮಂದೇವಾಡ, ಶಹಪುರ ತಾಲ್ಲೂಕಿನ ಉರುಸುಗುಂಡಿಗೆ, ಚಿತ್ತಾಪುರ ತಾಲ್ಲೂಕಿನ ಲಾದ್ನಾಪುರ, ಸುರಪುರ ತಾಲ್ಲೂಕಿನ ಕರಡಕಲ್ಲು ಮಠಗಳನ್ನು ಅಭಿವೃದ್ಧಿಪಡಿಸಲಾಗಿದೆ. ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಈ ಎಲ್ಲಾ ಕ್ಷೇತ್ರಗಳನ್ನು ಗಮನದಲ್ಲಿಟ್ಟುಕೊಂಡು ಮಠವನ್ನು ಅಭಿವೃದ್ಧಿಪಡಿಸ ಲಾಗಿದೆ. ಸಮಾಜದ ಎಲ್ಲಾ ಮುಖಗಳ, ಎಲ್ಲಾ ವರ್ಗದ ಜನರ ಶ್ರೇಯಸ್ಸಿಗೆ ಸ್ಪಂದಿಸಬೇಕು ಎಂಬುದನ್ನು ನಾಲವಾರ ಮಠ ಈ ನಾಡಿಗೆ ತೋರಿಸಿ ಕೊಟ್ಟಿದೆ. ಗುಲ್ಬರ್ಗ ಜಿಲ್ಲೆಯ ಪ್ರತಿಷ್ಠಿತ ಮಠಗಳಲ್ಲಿ ಒಂದಾಗಿದೆ.

ವಿಳಾಸ: ಷ.ಬ್ರ.ಶ್ರೀ ಉಪಚಾರ್ಯ ರತ್ನ ಶ್ರೀ ತೋಟೇಂದ್ರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕೋರಿ ಸಿದ್ಧೇಶ್ವರ ಸಂಸ್ಥಾನ ಮಠ, ನಾಲವಾರ, ಚಿತ್ತಾಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಆಧಾರ: 'ಸಿದ್ಧಪ್ರಭೆ' ಸಂಪಾದಕರು, ಟಿ.ಆರ್.ಮಹಾದೇವಯ್ಯ, ಲೇಖನ ೧. ಲಿಂಗನಗೌಡ ಹಿರೇಗೌಡ ಕೊಲ್ಲೂರು.
ಲೇಖನ ೨. ಡಾ. ಎಸ್.ಎಂ.ಹಿರೇಮಠ.

ಭರತನೂರು

ಚಿತ್ತಾಪುರ ತಾಲ್ಲೂಕಿನ ಭರತನೂರು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತೈದು ಕಿ.ಮೀ ದೂರದಲ್ಲಿದೆ. ಈ ಗ್ರಾಮದ ಉತ್ತರದ ಹೊರಭಾಗದಲ್ಲಿ ಶ್ರೀ ಗುರುನಂಜೇಶ್ವರ ವಿರಕ್ತ ಮಠವು ಸ್ಥಾಪನೆಯಾಗಿ,ಈ ಭಾಗದ ಧಾರ್ಮಿಕ ಆಚರಣೆ ಹಾಗೂ ಶೈಕ್ಷಣಿಕ ಪ್ರಗತಿಯ ಪ್ರತೀಕವಾಗಿ ನಿಂತಿದೆ. ಈ ಮಠದಿಂದಾಗಿ ಈ ಗ್ರಾಮ ಹೆಚ್ಚು ಪ್ರಸಿದ್ಧಿ ಪಡೆದಿದೆ.

ಗುರುನಂಜೇಶ್ವರ ವಿರಕ್ತಮಠ: ಭರತನೂರು ಗ್ರಾಮದಲ್ಲಿ ಶ್ರೀ ಗುರುನಂಜೇಶ್ವರ ವಿರಕ್ತಮಠವು ಪ್ರಾಚೀನ ಕಾಲದ ಪರಂಪರೆಯನ್ನು ಪಡೆದು ಬೆಳೆದು ಬಂದಿದೆ. ಈ ಮಠದ ಕರ್ತೃಗುರುಗಳು ಶ್ರೀ ಗುರುನಂಜೇಶ್ವರ ಸ್ವಾಮಿಗಳಾಗಿದ್ದು ಇವರು ಉತ್ತರದ ಕಡೆಯಿಂದ ಲೋಕಸಂಚಾರ ಕೈಗೊಂಡು ಈ ಗ್ರಾಮದಲ್ಲಿ ಬಂದು ನೆಲೆಸುತ್ತಾರೆ. ಗುರುಗಳು ಬಂದು ನೆಲೆಸಿದ ಜಾಗ ನಿರ್ಜನ ಪ್ರದೇಶವಾಗಿ ಕಾಡು ಪ್ರಾಣಿಗಳಿಂದ ಭಯಾನಕ ವಾತಾವರಣ ಇತ್ತು. ಇಂತಹ ಜಾಗದಲ್ಲಿ ಗುರುಗಳು ಅನುಷ್ಠಾನಗೊಂಡು ಸಿದ್ಧಿ ಪಡೆಯುತ್ತಿದ್ದರು. ಒಮ್ಮೆ ಈ ಗ್ರಾಮದ ಜನರಿಗೆ ಅನಿರೀಕ್ಷಿತವಾಗಿ ದರ್ಶನವಾಗಿ ಇಲ್ಲಿ ಮಠ ಸ್ಥಾಪನೆಯಾಗಲು ಕಾರಣವಾಯಿತು ಎಂದು ಇಲ್ಲಿನ ಜನಪದ ಕಥೆ ಹೇಳುತ್ತದೆ. ಅನಿರೀಕ್ಷಿತವಾಗಿ ದರ್ಶನವಾದ ಗುರುಗಳನ್ನು ಗ್ರಾಮದ ಭಕ್ತರು ಗೌರವಿಸಿ, ಪೂಜಿಸುತ್ತಾರೆ. ನಂತರ ಕೆಲವಾರು ದಿನ ಭಕ್ತರ ಮತ್ತು ಗುರುಗಳ ಒಡನಾಟ, ಧರ್ಮೋಪದೇಶ ಕಾರ್ಯಕ್ರಮಗಳು ನಡೆದ ಮೇಲೆ ಗುರುಗಳು ನೆಲೆ ನಿಂತ ಜಾಗದಲ್ಲಿ ಭಕ್ತರು ಮಠವನ್ನು ಸ್ಥಾಪಿಸಿ ಕೊಡುತ್ತಾರೆ. ಶ್ರೀ ಗುರುನಂಜೇಶ್ವರರರು ಮಠದ ಮೊದಲ ಗುರುಗಳಾಗಿ ಧಾರ್ಮಿಕ ಕಾರ್ಯಗಳನ್ನು ನಿರಂತರವಾಗಿ ನಡೆಸಿ ಈ ಮಠಕ್ಕೆ ಉತ್ತರಾಧಿಕಾರಿಗಳನ್ನು ನೇಮಿಸಿ ಜೀವಂತ ಸಮಾಧಿಯಾದರು.

ಪರಂಪರೆ: ಶ್ರೀ ಗುರುನಂಜೇಶ್ವರ ಸ್ವಾಮಿಗಳಿಂದ ಪ್ರಾರಂಭಗೊಂಡ ಮಠದ ಪರಂಪರೆಯು ಈತನಕ ಒಂದೇ ಹೆಸರಿನಲ್ಲಿ ಬೆಳೆದು ಬಂದಿದೆ. ಈ ಪರಂಪರೆಯಲ್ಲಿ ಕರ್ತೃಗುರುಗಳಾದ ಶ್ರೀಗುರುನಂಜೇಶ್ವರಸ್ವಾಮಿಗಳ ಹೆಸರನ್ನು ಅಭಿದಾನವಾಗಿಪಡೆದು ಪಟ್ಟಾಧಿಕಾರವನ್ನು ವಹಿಸಿಕೊಳ್ಳುವ ಸಂಪ್ರದಾಯ ಮೊದಲಿನಿಂದಲೂ ಬೆಳೆದು ಬಂದಿದೆ. ಈ ಕಾರಣಕ್ಕಾಗಿ ಮಠದ ಪರಂಪರೆ ಯಲ್ಲಿ ಹತ್ತುಜನ ಗುರುಗಳು ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದರೂ ಇವರನ್ನು ಒಂದೇ ಹೆಸರಿನಲ್ಲಿ ಗುರುತಿಸಲಾಗಿದೆ. ಮಠದ ಪರಂಪರೆಯಲ್ಲಿ ಬಂದಂತಹ ಗುರುಗಳು ಧಾರ್ಮಿಕ ಮತ್ತು ಸಾಮಾಜಿಕ ಕಳಕಳಿ ಉಳ್ಳವರಾಗಿ ಮಠವನ್ನು ಬೆಳೆಸಿದ್ದಾರೆ.

ಈ ಹಿಂದೆ ಅಧಿಕಾರದಲ್ಲಿದ್ದ ಗುರುಗಳು ೧೯೯೪ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಗುರುಗಳು ಲಿಂಗೈಕ್ಯರಾಗುವ ಮೊದಲೇ ಉತ್ತರಾಧಿಕಾರಿಯನ್ನು ನೇಮಿಸಿದ್ದರು. ಹಿರಿಯ ಗುರುಗಳ ಕರಕಮಲ ಸಂಜಾತರಾಗಿ ಧಾರ್ಮಿಕ ಸಂಸ್ಕಾರವನ್ನು ಪಡೆದುಕೊಂಡು ಮಠದ ಅಧಿಕಾರವನ್ನು ವಹಿಸಿಕೊಂಡಿರುವ ಶ್ರೀ ಗುರುನಂಜೇಶ್ವರ ಸ್ವಾಮಿಗಳು ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಜಂಬಿಗೆ ಗ್ರಾಮದ ಶ್ರೀ ಮುರುಘಯ್ಯ ಮತ್ತು ಶ್ರೀಮತಿ ಶಾಂತಬಾಯಿಯವರ ಪುತ್ರರಾಗಿ ಜನಿಸಿ ೨೦೦೦ ದ ಏಪ್ರಿಲ್ ಒಂಬತ್ತರಂದು ಈ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಗುರುಗಳು ವಾಸ್ತವ ನೆಲೆಗಟ್ಟಿನಲ್ಲಿ ಚಿಂತಿಸಿ ಧಾರ್ಮಿಕ ವಿಚಾರಗಳನ್ನು ವೈಜ್ಞಾನಿಕ ತಳಹದಿಯ ಮೇಲೆ ಅವಲೋಕಿಸಿ ಧರ್ಮವನ್ನು ಬೆಳೆಸುತ್ತಿದ್ದಾರೆ. ಬಸವಾದಿ ಶರಣರು ರೂಪಿಸಿದ ಜಾತ್ಯಾತೀತ ಸಮಾಜದ ಕಲ್ಪನೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಜನ ಸಾಮಾನ್ಯರ ಅಭಿವೃದ್ಧಿಗೆ ಹಾಗೂ ಅಂಧಕಾರದಲ್ಲಿರುವ ಅಸಹಾಯಕರಿಗೆ ಬೆಳಕನ್ನು ತೋರಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಪರಂಪರೆಯ ಗುರುಗಳ ಗದ್ದುಗೆಗಳ ಜೊತೆಗೆ ಮಠದ ಅಭಿವೃದ್ಧಿಗೆ ಶ್ರಮಿಸಿದ ಶ್ರೀಮತಿ ಶಿವಬಸಮ್ಮನವರ ಗದ್ದುಗೆ ಸ್ಥಾಪನೆಯಾಗಿವೆ. ಈ ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ, ಅಮಾವಾಸ್ಯೆ ಮತ್ತು ಹುಣ್ಣಿಮೆಯಲ್ಲಿ ವಿಶೇಷಪೂಜೆ ಹಾಗೂ ಭಜನಾಕಾರ್ಯಕ್ರಮಗಳು,ದಸರಾ ಸಂದರ್ಭದಲ್ಲಿ ಕರ್ತೃಗುರುಗಳ ಪುಣ್ಯಾರಾಧ ನೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಧಾರ್ಮಿಕಸಭೆ ಹಾಗೂ ಸಾಂಸ್ಕೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗು ತ್ತಿದೆ. ಈ ಸಂದರ್ಭದಲ್ಲೇ ಅಲ್ಲದೆ ಹೊರಗಿನಿಂದ ಬರುವ ಭಕ್ತರಿಗೆ ನಿತ್ಯ ಅನ್ನದಾಸೋಹವನ್ನು ಮಾಡಲಾಗುತ್ತಿದೆ.

ಕರ್ತೃಗುರುಗಳಾದ ಶ್ರೀ ಗುರುನಂಜೇಶ್ವರ ಸ್ವಾಮಿಗಳು ಅನುಷ್ಠಾನ ಕೈಗೊಂಡು ಸ್ಥಾಪಿಸಿದ್ದ ಮಠಗಳು ಇಂದಿಗೂ ಈ ಮಠದ ಶಾಖಾ ಮಠಗಳಾಗಿ ಬೆಳೆದಿವೆ. ಈ ಶಾಖಾಮಠಗಳಲ್ಲಿ ನಿತ್ಯ ಧಾರ್ಮಿಕ ಆಚರಣೆಗಳು ನಡೆಯುವಂತೆ ವ್ಯವಸ್ಥೆ ಮಾಡಲಾಗಿದೆ. ಶ್ರೀ ಗುರುನಂಜೇಶ್ವರ ವಿದ್ಯಾಸಂಸ್ಥೆಯನ್ನು ಪ್ರಾರಂಭಿಸಿ ಸುಲೇಪೇಟೆ, ತೆಂಗಳಿಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಯನ್ನು ಪ್ರಾರಂಭಿಸಿ, ಗ್ರಾಮಾಂತರ ಮಕ್ಕಳು ಕಲಿಯಲು ನೆರವು ಮಾಡಿಕೊಟ್ಟಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಗುರುನಂಜೇಶ್ವರ ಸ್ವಾಮಿಗಳು, ಶ್ರೀಗುರುನಂಜೇಶ್ವರಮಠ, ಭರತನೂರು, ಚಿತ್ತಾಪುರ ತಾ, ಗುಲ್ಬರ್ಗಜಿಲ್ಲೆ.

ಮುಗಳ ನಾಗಾವಿ

ಚಿತ್ತಾಪುರ ತಾಲ್ಲೂಕಿನ ಮುಗಳ ನಾಗಾವಿ, ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತೈದು ಕಿ.ಮೀ ದೂರದಲ್ಲಿದೆ. ದುರುದಡ, ಗೂಗೆಕೋಳ, ನಾಗಾವಿ ಈ ಮೂರು ಗ್ರಾಮಗಳು ಸಂಗಮವಾಗಿ 'ಮುಗಳ ನಾಗಾವಿ'ಯಾಗಿ ಹೊಸ ಹೆಸರನ್ನು ಪಡೆದಿದೆ ಎಂದು ಸ್ಥಳ ಪುರಾಣ ತಿಳಿಸುತ್ತದೆ. ಮೂರು ಗ್ರಾಮಗಳ ಸಂಗಮ ಕ್ಷೇತ್ರದಲ್ಲಿ ಈ ಗ್ರಾಮದ ಹೊರ ಭಾಗದಲ್ಲಿ ಕಟ್ಟಿಮನಿ ಹಿರೇಮಠವು ಸ್ಥಾಪನೆಯಾಗಿ ಈ ಗ್ರಾಮದ ಧಾರ್ಮಿಕ ಚಟುವಟಿಕೆಯ ಕೇಂದ್ರಬಿಂದುವಾಗಿ ಬೆಳೆದಿದೆ.

ಕಟ್ಟಿಮನಿ ಹಿರೇಮಠ: ಮುಗಳ ನಾಗಾವಿಯಲ್ಲಿ ಪುರಾತನ ಕಾಲದಲ್ಲಿ ಸ್ಥಾಪನೆಯಾದ ಕಟ್ಟಿಮನಿ ಹಿರೇಮಠವು ಉಜ್ಜಯಿನಿ ಪೀಠದ ಶಾಖಾ ಮಠವಾಗಿ ಶಿಷ್ಯ ವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ.

ಮಠ ಸ್ಥಾಪನೆ: ಕ್ರಿ.ಶ.೧೪೬೮ ಕ್ಕೂ ಮೊದಲು ಶ್ರೀ ಹಿರೇಮಠವನ್ನು ಸ್ಥಾಪಿಸಿದರೆಂದು ಹೇಳಲಾಗುವ ಶ್ರೀ ಮಹಾಂತೇಶ ಶಿವಾಚಾರ್ಯ ಸ್ವಾಮಿಗಳ ಕರ್ತೃತ್ವ ಶಕ್ತಿಯಿಂದ ಈವರೆವಿಗೂ ನಡೆದುಕೊಂಡು ಬಂದಿದೆ. ಶ್ರೀ ಮಹಾಂತೇಶ್ವರ ಶಿವಾಚಾರ್ಯ

ಸ್ವಾಮಿಗಳು ಮಹಾ ತಪಸ್ವಿಗಳಾಗಿ, ಶಿವಯೋಗವನ್ನು ಸಾಧನೆ ಮಾಡಿಕೊಂಡಂತಹ ಮಹಾ ಪುರುಷರು. ಇವರು ವೀರಶೈವ ಧರ್ಮದ ಪ್ರಚಾರಕರಾಗಿ ಮತ್ತು ಈ ಧರ್ಮದ ಬೆಳವಣಿಗೆಯ ಸಾಧಕರಾಗಿ ಶ್ರಮಿಸಿ ವೀರಶೈವ ಧರ್ಮ ಈ ಪ್ರಾಂತ್ಯದಲ್ಲಿ ಗಟ್ಟಿಯಾಗಿ ನೆಲೆಗೊಳ್ಳುವಂತೆ ಮಾಡಿದರು. ಗುರುಗಳು ಸಂಚಾರಮೂರ್ತಿಗಳಾಗಿ ಈ ನಾಡಿನ ನಾನಾ ಭಾಗದಲ್ಲಿ ಧರ್ಮದ ಬಗ್ಗೆ ಭಕ್ತರಲ್ಲಿ ಅರಿವನ್ನು ಮೂಡಿಸಿ,ಎಲ್ಲೆಲ್ಲಿ ನೆಲೆ ನಿಂತರೋ ಅಲ್ಲಿ ಮಠಗಳನ್ನು ಸ್ಥಾಪಿಸಿ ಧಾರ್ಮಿಕ ಆಚರಣೆಗಳ ಕೇಂದ್ರಗಳನ್ನಾಗಿ ಮಾಡಿದರು. ಮುಗಳ ನಾಗಾವಿಯಲ್ಲಿ ಮಠವನ್ನು ಸ್ಥಾಪಿಸಿ ಈ ಮಠವು ನಿರಂತರವಾಗಿ ನಡೆದುಕೊಂಡು ಬರುವಂತೆ ಭದ್ರ ಬುನಾದಿಯನ್ನು ಹಾಕಿದರು. ಗುರುಗಳು ನಂತರ ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಕರಿಬಸವ ಶಿವಾಚಾರ್ಯ ಸ್ವಾಮಿಗಳನ್ನು ನೇಮಿಸಿ ಲಿಂಗೈಕ್ಯರಾದರು.

ಪರಂಪರೆ:
೧. ಷ.ಬ್ರ.ಶ್ರೀ ಮಹಾಂತೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಕರಿಬಸವ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಮಳೆಯ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ನಾಗಭೂಷಣ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಎರಡನೆಯ ಮಳೆ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಸಿದ್ಧೇಶ್ವರ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ಮೂರನೆಯ ಮಳೆ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೧೦. ಷ.ಬ್ರ.ಶ್ರೀ ಮಳೇಂದ್ರ ಶಿವಾಚಾರ್ಯಸ್ವಾಮಿಗಳು
೧೧. ಷ.ಬ್ರ.ಶ್ರೀ ಅಭಿನವ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ಮಹಾಂತೇಶ್ವರ ಶಿವಾಚಾರ್ಯ ಸ್ವಾಮಿಗಳ ನಂತರ ಶ್ರೀ ಕರಿಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು ಪ್ರಖಾಂಡ ಪಂಡಿತರಾಗಿ ಮಠವನ್ನು ಬೆಳೆಸಿದರು. ಇವರ ನಂತರ ಬಂದಂತಹ ಗುರುಗಳು ಸಹ ಪೂಜಾನಿಷ್ಠರಾಗಿ ಮಠವನ್ನು ಬೆಳೆಸಿದರು. ಈ ಮಠದ ಪರಂಪರೆಯ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಸಹ ಅಪ್ರತಿಮ ಪಂಡಿತರಾಗಿ ಶಿವಾಪೂಜಾನಿಷ್ಠರಾಗಿ ಹೆಸರು ಮಾಡಿದ್ದರು. ಇವರ ಪ್ರಭಾವಕ್ಕೆ ಶರಣಾಗಿ ಬಂದ ನವಾಜ್ ಮಠಕ್ಕೆ ಭೂಮಿಯನ್ನು ಇನಾಂ ಕೊಟ್ಟು ಗೌರವಿಸಿದ್ದರು. ಶ್ರೀ ಶರಣ ಬಸವೇಶ್ವರರು ಕಲಬುರ್ಗಿಗೆ ಬಂದ ಸಂದರ್ಭದಲ್ಲಿ ಶರಣ ಬಸವೇಶ್ವರರ ಕ್ರಿಯಾ ಮೂರ್ತಿಗಳಾಗಿ ಪಾದೋದಕವನ್ನು ನೀಡಿ ಬರುತ್ತಿದ್ದರು. ಇಂತಹ ಪ್ರಭಾವಿ ಗುರುಗಳ ನಂತರ ಬಂದಂತಹ ಗುರುಗಳೆಲ್ಲರೂ ಮಠವನ್ನು ಮತ್ತು ಶಾಖಾ ಮಠಗಳನ್ನು, ಧಾರ್ಮಿಕ ಚಟುವಟಿಕೆಯ ತಾಣಗಳನ್ನಾಗಿ ರೂಪಿಸಿದ್ದರು. ಪರಂಪರೆಯ ಹತ್ತನೆಯ ಗುರುಗಳಾದ ಶ್ರೀ ಮಳೇಂದ್ರ ಶಿವಾಚಾರ್ಯರು ತಪೋ ನಿಧಿಗಳಾಗಿ, ಆಯುರ್ವೇದ ಪಂಡಿತರಾಗಿ, ನಾಡಿ ಶಾಸ್ತ್ರವನ್ನು ಬಲ್ಲಂತಹ ಮಹಾ ಮೇಧಾವಿಗಳಾಗಿದ್ದರು. ವಾಕ್‌ಸಿದ್ಧಿಗಳಾದ ಶ್ರೀ ಮಳೇಂದ್ರ ಶಿವಾಚಾರ್ಯರು ಕೊಟ್ಟ ಆಶೀರ್ವಾದ ಎಂದೂ ಸುಳ್ಳಾಗಿರಲಿಲ್ಲ ಎಂಬ ನಂಬಿಕೆಯನ್ನು ಭಕ್ತರು ಬೆಳೆಸಿಕೊಂಡಿದ್ದಾರೆ. ಇವರು ೧೯೮೮ ರ ಆಗಸ್ಟ್ ಒಂಬತ್ತರಂದು ಲಿಂಗೈಕ್ಯರಾಗಿದ್ದಾರೆ. ಇವರ ತರುವಾಯ ಗುಲ್ಬರ್ಗ ತಾಲ್ಲೂಕಿನ ಅಂಕಲಗಿ ಗ್ರಾಮದ ಶ್ರೀ ಶಂಕರಯ್ಯ ಮತ್ತು ಶ್ರೀಮತಿ ಗುರಬಾಯಿಯವರ ಪುತ್ರರಾಗಿ ೧೯೭೭ ರ ಜನವರಿ ಇಪ್ಪತ್ತೈದರಂದು ಶ್ರೀ ಅಭಿನವ ಸಿದ್ಧಲಿಂಗ ಶಿವಾಚಾರ್ಯರು ಜನಿಸಿದರು. ಹತ್ತನೆಯ ಗುರುಗಳಾದ ಶ್ರೀ ಮಳೇಂದ್ರ ಶಿವಾಚಾರ್ಯ ಸ್ವಾಮಿಗಳ ಕೃಪಾದೃಷ್ಟಿಗೆ ಬಿದ್ದು ಮಠದ ಪರಂಪರೆಯ ಹನ್ನೊಂದನೆಯ ಉತ್ತರಾಧಿಕಾರಿಗಳಾಗಿ ನೇಮಕಗೊಂಡರು. ಗುರುಗಳು ಅಂಕಲಗಿಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಮುಗಿಸಿ ಶಿವಯೋಗ ಮಂದಿರದಲ್ಲಿ ಧಾರ್ಮಿಕ ವಿದ್ಯಾಭ್ಯಾಸವನ್ನು ಪಡೆದು ಮಠಕ್ಕೆ ಆಗಮಿಸಿ ೧೯೮೯ ರ ಮೇ ಇಪ್ಪತ್ತೊಂದರಂದು ಹನ್ನೊಂದನೆಯ ಪಟ್ಟಾಧ್ಯಕ್ಷರಾಗಿ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಗುರುಗಳು ಅಧಿಕಾರವನ್ನು ವಹಿಸಿಕೊಂಡ ಮೇಲೆ ಮಠದ ಅಭಿವೃದ್ಧಿಯ ಕಡೆಗೆ ಗಮನ ಕೊಟ್ಟು ಧಾರ್ಮಿಕ ಆಚರಣೆಗಳನ್ನು

ನಡೆಸಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಪುರಾತನ ಪರಂಪರೆಯುಳ್ಳ ಈ ಮಠದಲ್ಲಿ ಏಳು ಗದ್ದುಗೆಗಳು ಸ್ಥಾಪನೆಯಾಗಿವೆ. ಈ ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ ಸಲ್ಲಿಸಲಾಗುತ್ತಿದೆ. ಅಮಾವಾಸ್ಯೆ ಮತ್ತು ಹುಣ್ಣಿಮೆ,ಕಾರ್ತೀಕ ಮತ್ತು ಶ್ರಾವಣ ಮಾಸದಲ್ಲಿ ವಿಶೇಷ ಪೂಜೆಯನ್ನು ಏರ್ಪಡಿಸಲಾಗುತ್ತಿದೆ. ಶ್ರಾವಣದಲ್ಲಿ ಒಂದು ತಿಂಗಳು ಪಾದಪೂಜೆಯನ್ನು ನಡೆಸಲಾಗುತ್ತಿದೆ. ವೈಶಾಖ ಮಾಸದಲ್ಲಿ ಸಿದ್ಧಲಿಂಗೇಶ್ವರರ ಜಾತ್ರೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಇಪ್ಪತ್ತೊಂದು ದಿನಗಳ ಕಾಲ ಪುರಾಣ, ಐದು ದಿನ ಸಂಗೀತೋತ್ಸವ ಹಾಗೂ ಸಾಹಿತ್ಯ ಕಾರ್ಯಕ್ರಮಗಳು ನಡೆಯುತ್ತಿವೆ. ಒಟ್ಟು ಐದು ದಿನ ನಡೆಯುವ ಈ ಜಾತ್ರೆಯಲ್ಲಿ ಜಂಗಮ ವಟುಗಳಿಗೆ ಶಿವದೀಕ್ಷೆ, ಅಯ್ಯಾಚಾರವನ್ನು ನಡೆಸಲಾಗುತ್ತಿದೆ.

ಈಗಿನ ಮಠಾಧ್ಯಕ್ಷರಾದ ಶ್ರೀ ಅಭಿನವ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಧಾರ್ಮಿಕ ಆಚರಣೆಗಳನ್ನು ವೈಜ್ಞಾನಿಕವಾಗಿ ಅವಲೋಕಿಸಿ ಭಕ್ತರಿಗೆ ಪ್ರಚಾರ ಮಾಡುತ್ತಿದ್ದಾರೆ. ಆಚಾರ್ಯರ ಹಾಗೂ ಬಸವಾದಿ ಶರಣರ ತತ್ತ್ವಗಳನ್ನು ಪ್ರಚಾರಪಡಿಸುತ್ತಿದ್ದಾರೆ. ಮಠದ ಅಭಿವೃದ್ಧಿಯ ಕಡೆಗೆ ಹೆಚ್ಚು ಒತ್ತು ಕೊಟ್ಟು ದುಡಿಯುತ್ತಿರುವ ಗುರುಗಳು ಸಮಾಜದ ಅನಿಷ್ಟ ಪದ್ಧತಿಗಳನ್ನು ಹೋಗಲಾಡಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮಠವನ್ನು ಮುನ್ನಡೆಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಅಭಿನವ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕಟ್ಟಿಮನಿ ಹಿರೇಮಠ, ಮುಗಳ ನಾಗಾವಿ, ಚಿತ್ತಾಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ರಾವೂರು

ಚಿತ್ತಾಪುರ ತಾಲ್ಲೂಕಿನ ರಾವೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹತ್ತು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಶ್ರೀ ವಿರಕ್ತಮಠವು ಸ್ಥಾಪನೆಯಾಗಿ ಧಾರ್ಮಿಕ,ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹೆಚ್ಚು ಹೆಸರು ಪಡೆದಿದೆ.

ವಿರಕ್ತಮಠ: ರಾವೂರು ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ವಿರಕ್ತಮಠವು ಹೆಸರೇ ಹೇಳುವಂತೆ ವಿರಕ್ತ ಸಂಪ್ರದಾಯದ ಕುಮಾರ ಸಮಯದ ಈ ಮಠವು ಈ ಭಾಗದ ಧಾರ್ಮಿಕ ಚಟುವಟಿಕೆಗಳ ಕೇಂದ್ರ ಬಿಂದುವಾಗಿದೆ.

ಮಠ ಸ್ಥಾಪನೆ: ಕಳೆದ ಮುನ್ನೂರು ವರ್ಷಗಳ ಹಿಂದೆ ಶ್ರೀ ಸಿದ್ಧಲಿಂಗ ಸ್ವಾಮಿಗಳು ಲೋಕ ಸಂಚಾರ ಕೈಗೊಂಡು ಈ ಪ್ರಾಂತ್ಯಕ್ಕೆ ಬಂದು ನೆಲೆಸಿ ಮಠವನ್ನು ಸ್ಥಾಪನೆ ಮಾಡಿರುತ್ತಾರೆ. ಇಲ್ಲಿ ಗುರುಗಳು ನಿತ್ಯ ಶಿವಾನುಭವ ಗೋಷ್ಠಿಯನ್ನು ನಡೆಸುವುದರ ಮೂಲಕ ಧರ್ಮಜಾಗೃತಿಯನ್ನು ಉಂಟುಮಾಡಿದರು. ಇವರು ನಿತ್ಯ ದಾಸೋಹವನ್ನು ವ್ಯವಸ್ಥೆಗೊಳಿಸಿ ಭಕ್ತರಿಗೆ ಕಾಯಕ ಯೋಗದ ಬಗ್ಗೆ ಅರಿವು ಮೂಡಿಸಿ ಸಮಾಜವನ್ನು ಅಭಿವೃದ್ಧಿಗೊಳಿಸಿದರು. ಇವರು ಸಮಷ್ಟಿ ಸಮಾಜದ ಅಭಿವೃದ್ಧಿಗೆ ಶ್ರಮಿಸಿ ಜಾತಿ ಬೇಧವನ್ನು ತೊಡೆದು ಹಾಕಲು ಪ್ರಯತ್ನಿಸಿದರು. ಇವರ ತರುವಾಯ ಅಧಿಕಾರಕ್ಕೆ ಬಂದಂತಹ ಗುರುಗಳ ಬಗ್ಗೆ ಆಧಾರದ ಕೊರತೆಯಿಂದ ನಿಖರವಾದ ಮಾಹಿತಿಗಳು ದೊರೆಯುವುದಿಲ್ಲ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಎರಡನೆಯ ಸಿದ್ಧಲಿಂಗಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಕದರಳ್ಳಿ ಸಿದ್ಧಲಿಂಗಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ತೋಟದಮನೆ ಸಿದ್ಧಲಿಂಗಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಮಠದ ಪರಂಪರೆಯಲ್ಲಿ ಅಧಿಕಾರಕ್ಕೆ ಬರುವ ಎಲ್ಲಾ ಗುರುಗಳು ಕರ್ತೃ ಗುರುಗಳ ಹೆಸರನ್ನೇ ಅಭಿದಾನ ಪಡೆದು ಅಧಿಕಾರಕ್ಕೆ ಬರುವ ಸಂಪ್ರದಾಯ ಬೆಳೆದು ಬಂದಿದೆ. ಈ ಸಂಪ್ರದಾಯದಂತೆ ೧೯೪೬ರಲ್ಲಿ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡ ಶ್ರೀ ಷಣ್ಮುಖದೇವರು "ಶ್ರೀ ಸಿದ್ಧಲಿಂಗ ಸ್ವಾಮಿ"ಗಳೆಂದು ಅಭಿದಾನ ಪಡೆದು ಅಧಿಕಾರಕ್ಕೆ ಬಂದಿದ್ದಾರೆ. ಇವರು ಮಠವನ್ನು ಅಭಿವೃದ್ಧಿಪಡಿಸಿ ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬಂದು ೧೯೮೬ ರಲ್ಲಿ ಲಿಂಗೈಕ್ಯರಾಗಿದ್ದಾರೆ.

ರಾವೂರಿನ ಶ್ರೀ ಶಾಂತಪ್ಪ ಮತ್ತು ಶ್ರೀಮತಿ ಸಿದ್ಧಮ್ಮನವರ ಪುತ್ರರಾಗಿ ೧೯೬೦ ರಲ್ಲಿ ಜನಿಸಿದ ತೋಟದ ಮನೆ ಶ್ರೀ ಸಿದ್ಧಲಿಂಗ ಸ್ವಾಮಿಗಳು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಆದವಾನಿಯಲ್ಲಿ ಮುಗಿಸಿ ಧಾರವಾಡದಲ್ಲಿ ಕಾಲೇಜು ಶಿಕ್ಷಣವನ್ನು ಮುಗಿಸಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತದಲ್ಲಿ ಎಂ.ಎ ಪದವಿಯನ್ನು ಪಡೆದರು. ತರುವಾಯ ೧೯೯೫ ಏಪ್ರಿಲ್ ಹತ್ತರಂದು ಪಟ್ಟಾಧಿಕಾರವನ್ನು ವಹಿಸಿಕೊಂಡಿರುತ್ತಾರೆ. ಗುರುಗಳು ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಮಠವು ಪೂರ್ಣವಾಗಿ ಜೀರ್ಣಗೊಂಡಿತು. ಗುರುಗಳು ಅಧಿಕಾರಕ್ಕೆ ಬಂದವರೇ ಮಠದ ಅಭಿವೃದ್ಧಿಗೆ ಹೆಚ್ಚು ಒತ್ತು ಕೊಟ್ಟರು. ಕ್ರಿಯಾಶೀಲ ವ್ಯಕ್ತಿತ್ವದಿಂದ ಜಾತ್ಯಾತೀತ ಸಮಾಜವನ್ನು ಶರಣರು ಕಂಡಂತೆ ನಿರ್ಮಿಸಬೇಕೆಂಬ ಹಂಬಲವನ್ನು ಹೊಂದಿರುವ ಗುರುಗಳು ಸಮಾಜವನ್ನು ತಿದ್ದಬೇಕಾದರೆ ಮೊದಲು ಅಕ್ಷರಸ್ಥರನ್ನಾಗಿ ಮಾಡಬೇಕೆಂಬುದು ಇವರ ಉದ್ದೇಶ. ಈ ಕಾರಣದಿಂದ ಮಠಕ್ಕೆ ನೇಮಕಗೊಂಡ ಸಂದರ್ಭದಲ್ಲಿ ಶಿಕ್ಷಣ ಸಂಸ್ಥೆಯನ್ನು ಪ್ರಥಮವಾಗಿ ಸ್ಥಾಪಿಸಿದರು. ಗುರುಗಳು ಸಮಾಜದ ಅನಿಷ್ಟ ಪದ್ಧತಿಗಳನ್ನು ದೂರ ಮಾಡಲು ಜನಜಾಗೃತಿಯನ್ನು ಉಂಟು ಮಾಡುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯಲ್ಲಿ ಬಂದಂತಹ ಗುರುಗಳ ಗದ್ದುಗೆಗಳು ಮಠದ ಆವರಣದಲ್ಲಿ ಸ್ಥಾಪನೆಯಾಗಿವೆ. ಮಠದ ಒಳಭಾಗದಲ್ಲಿ ಐದು ಜನ ಗುರುಗಳ ಗದ್ದುಗೆ, ಹೊರ ಭಾಗದಲ್ಲಿ ಒಂದು ಗದ್ದುಗೆ ನಿರ್ಮಾಣಗೊಂಡಿದೆ. ಈ ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ ನಡೆಸಲಾಗುತ್ತಿದೆ. ಪ್ರತಿವರ್ಷ ನಡೆಯುವ ಜಾತ್ರೆಗೆ ಮುನ್ನ ಮಠಾಧೀಶರು ಪಾದಯಾತ್ರೆಯನ್ನು ಮಾಡಿ ಜನಜಾಗೃತಿಯನ್ನುಂಟುಮಾಡುತ್ತಿದ್ದಾರೆ. ಮಠದಲ್ಲಿ ಪ್ರತಿ ಅಮಾವಾಸ್ಯೆಯಲ್ಲಿ ಶಿವಾನುಭವ ಗೋಷ್ಠಿ, ಶ್ರಾವಣ ಮಾಸದಲ್ಲಿ ನಿತ್ಯ ಭಜನೆ ನಡೆಸಲಾಗುತ್ತಿದೆ. ಮಠದ ಶಾಖಾ ಮಠಗಳಾಗಿ ನಾಲ್ವರ, ಅನುಗುಂಟ, ಯನಗುಂಟ, ಗೋಳ, ಸಾತನೂರು, ಲಾದ್ಲಾಪುರ ಈ ರೀತಿ ಒಟ್ಟು ಹದಿನಾರು ಮಠಗಳು ಸ್ಥಾಪನೆಯಾಗಿವೆ. ಈ ಶಾಖಾ ಮಠಗಳಲ್ಲಿ ಇರುವ ಗದ್ದುಗೆಗಳಿಗೆ ಪೂಜೆಯ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ ಎಂದು ಗುರುಗಳು ಹೇಳುತ್ತಾರೆ.

ಶೈಕ್ಷಣಿಕ-ಸಾಹಿತ್ಯಸೇವೆ: ೧೯೮೪ ರಲ್ಲಿ ಶ್ರೀ ಸಿದ್ಧಲಿಂಗೇಶ್ವರ ವಿದ್ಯಾ ಸಂಸ್ಥೆಯನ್ನು ಸ್ಥಾಪಿಸಿ, ಪ್ರಾಥಮಿಕ ಶಾಲೆ, ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲಾಗಿದೆ. ಉಚಿತ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಿ ೨೮೦ ಮಕ್ಕಳಿಗೆ ಆಶ್ರಯ ಕಲ್ಪಿಸಿದ್ದಾರೆ. ಶೂನ್ಯಸಂಪಾದನೆ ಪರಾಮರ್ಶೆ ಮುಂತಾದ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಈ ರೀತಿ ಧಾರ್ಮಿಕ, ಸಾಮಾಜಿಕ,ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮಠವು ಸ್ಪಂದಿಸುತ್ತಾ ಸಮಾಜದ ಅಭಿವೃದ್ಧಿಗೆ ಶ್ರಮಿಸತೊಡಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಸಿದ್ಧಲಿಂಗ ಸ್ವಾಮಿಗಳು, ಶ್ರೀ ವಿರಕ್ತಮಠ, ರಾವೂರು, ಚಿತ್ತಾಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಹಾಳಕಟ್ಟಾ

ಚಿತ್ತಾಪುರ ತಾಲ್ಲೂಕಿನ ಹಾಳಕಟ್ಟಾ, ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹದಿನಾರು ಕಿ.ಮೀ ದೂರದಲ್ಲಿದೆ.ಈ ಗ್ರಾಮದ ಮಧ್ಯಭಾಗದಲ್ಲಿ ಶ್ರೀ ಕಟ್ಟಿಮನಿ ಹಿರೇಮಠವು ಸ್ಥಾಪನೆಯಾಗಿದೆ. ಈ ಮಠದ ಸ್ಥಾಪನೆಯಿಂದ ಗ್ರಾಮವು ಧಾರ್ಮಿಕ ಸಂಸ್ಕಾರವನ್ನು ಕಂಡಿದೆ.

ಕಟ್ಟಿಮನಿ ಹಿರೇಮಠ: ಹಾಳಕಟ್ಟಾ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಕಟ್ಟಿಮನಿ ಹಿರೇಮಠವು ಕಾಶಿ ಪೀಠದ ಶಾಖಾಮಠವಾಗಿದೆ. ಈ ಮಠವು ಪುರಾತನ ಕಾಲದ್ದೆಂದು ಹೇಳಲಾಗುತ್ತಿದೆ. ಮಠದ ಕರ್ತೃಗುರುಗಳು ಪವಾಡ ಸ್ವಾಮಿಗಳೆಂದು ಹೇಳಲಾಗುತ್ತಿದೆ.

ಮಠದ ಸ್ಥಾಪನೆ: ಮಠದ ಕರ್ತೃಗುರುಗಳಾದ ಶ್ರೀ ಪವಾಡ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಈ ಗ್ರಾಮದಲ್ಲಿ ಬಂದು ನೆಲೆಸುತ್ತಾರೆ. ಗುರುಗಳು ಮಹಾ ತಪಸ್ವಿಗಳಾಗಿದ್ದರು. ಇವರು ತಪೋಶಕ್ತಿಯಿಂದ ಅನೇಕ ಪವಾಡಗಳನ್ನು ಮಾಡಿ ಈ ಪ್ರಾಂತ್ಯವೇ ಬೆರಗಾಗುವಂತೆ ಮಾಡಿದ್ದರಂತೆ. ಇವರ ತರುವಾಯ ಶ್ರೀ ದೊಡ್ಡಯ್ಯ ಸ್ವಾಮಿಗಳು ಮಠದ ಅಧಿಕಾರಕ್ಕೆ ಬಂದು ಮಠವನ್ನು ಮುನ್ನಡೆಸಿರುತ್ತಾರೆ.

ಮಠದ ಪರಂಪರೆ:

೧. ಷ.ಬ್ರ.ಶ್ರೀ ಪವಾಡಸ್ವಾಮಿಗಳು
೨. ಷ.ಬ್ರ.ಶ್ರೀ ದೊಡ್ಡಯ್ಯ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಮುನೀಂದ್ರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಚನ್ನಯ್ಯ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಪುರಾತನ ಕಾಲದ ಈ ಮಠದಲ್ಲಿ ಒಟ್ಟು ಒಂಬತ್ತು ಜನ ಗುರುಗಳು ಅಧಿಕಾರವನ್ನು ನಡೆಸಿದ್ದಾರೆ ಎಂದು ತಿಳಿದು ಬರುತ್ತದೆ. ಆದರೆ ಕೇವಲ ನಾಲ್ಕು ಹೆಸರುಗಳನ್ನು ಮಾತ್ರ ದಾಖಲಿಸಬಹುದಾಗಿದೆ. ಶ್ರೀ ದೊಡ್ಡಯ್ಯ ಸ್ವಾಮಿಗಳು ಮತ್ತು ಶ್ರೀ ಮುನೀಂದ್ರ ಸ್ವಾಮಿಗಳು ಸಹ ಪವಾಡ ಪುರುಷರಾಗಿ ಮಠವನ್ನು ಹೆಚ್ಚು ಪ್ರಚಾರಕ್ಕೆ ತಂದಿದ್ದಾರೆ. ಶ್ರೀ ಮುನೀಂದ್ರ ಸ್ವಾಮಿಗಳು ವೀರಶೈವ ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಿದವರಾಗಿದ್ದು, ಷಟ್‌ಸ್ಥಲ ಸಿದ್ಧಾಂತವನ್ನು ಆಚರಣೆಗೆ ತಂದು ಧರ್ಮವನ್ನು ಬೆಳಸಿದರು. ಗುರುಗಳು ಪಂಚಪೀಠಾಧೀಶರ ನಿಕಟ ಸಂಪರ್ಕವನ್ನು ಹೊಂದಿ ಸಮಾಜವನ್ನು ಸಂಘಟಿತವಾಗಿ ಬೆಳಸಲು ಶ್ರಮಿಸಿದರು. ಇವರ ತರುವಾಯ ಶ್ರೀ ಚನ್ನಯ್ಯ ಸ್ವಾಮಿಗಳು ಪರಂಪರೆಯ ಒಂಬತ್ತನೆಯ ಗುರುಗಳಾಗಿ ಅಧಿಕಾರಕ್ಕೆ ಬಂದಿದ್ದಾರೆ.ಗುರುಗಳು ತಪೋನಿಷ್ಠರು. ವೀರಶೈವ ಸಿದ್ಧಾಂತದ ಆಚರಣೆಗಳನ್ನು ಅನುಷ್ಠಾನಗೊಳಿಸುತ್ತಾ ಮಠವನ್ನು ಮುನ್ನಡೆಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಸ್ಥಾಪನೆಯಾಗಿರುವ ಮೂರು ಗದ್ದುಗೆಗಳಿಗೆ ನಿತ್ಯ ಪೂಜೆ ಸಲ್ಲಿಸಲಾಗುತ್ತಿದೆ. ಶ್ರಾವಣ ಮಾಸದಲ್ಲಿ ಒಂದು ತಿಂಗಳು ಅನುಷ್ಠಾನ, ಅಮಾವಾಸ್ಯೆ ಮತ್ತು ಹುಣ್ಣಿಮೆಯಲ್ಲಿ ವಿಶೇಷ ಪೂಜೆ, ಗೌರಿ ಹುಣ್ಣಿಮೆಯಾದ ಐದು ದಿನಕ್ಕೆ ವಿರಭದ್ರೇಶ್ವರ ಜಾತ್ರೆಯನ್ನು ನಡೆಸಲಾಗುತ್ತಿದೆ. ವೀರಭದ್ರೇಶ್ವರ ದೇವಸ್ಥಾನದ ವಿಶ್ವಸ್ಥ ಸಮಿತಿಯ ಅಧ್ಯಕ್ಷರಾಗಿರುವ ಗುರುಗಳು ಮಠದ ಧಾರ್ಮಿಕ ಕಾರ್ಯಗಳ ಜೊತೆಗೆ ವೀರಭದ್ರಸ್ವಾಮಿ ದೇವಸ್ಥಾನದ ಅಭಿವೃದ್ಧಿಯ ಬಗ್ಗೆಯೂ ಚಿಂತಿಸುತ್ತಿದ್ದಾರೆ. ಮಠದಲ್ಲಿ ನಡೆಯುವ ಧಾರ್ಮಿಕ ಕಾರ್ಯಗಳಲ್ಲಿ ವಿಶೇಷ ದಾಸೋಹದ ವ್ಯವಸ್ಥೆಯಿರುತ್ತದೆ. ಮಠದ ಕಲ್ಲಿನ ಕಟ್ಟಡವು, ಮಠವು ಪುರಾತನದ್ದೆಂದು ಸಾಕ್ಷೀಕರಿಸುತ್ತದೆ. ಕಟ್ಟಡವು ವಿಶಾಲ ಹಾಗೂ ಭವ್ಯವಾಗಿ ನಿರ್ಮಾಣಗೊಂಡಿದೆ. ಮಠದ ಸುತ್ತಲೂ ನಿರ್ಮಿಸಿರುವ ಆವರಣ ಗೋಡೆಯನ್ನು ನೋಡಿದರೆ ಕೋಟೆಯ ಕಲ್ಪನೆ ಬರುತ್ತದೆ. ಕಲ್ಲಿನಿಂದಲೇ ನಿರ್ಮಿಸಿರುವ ಕಟ್ಟಡ, ಈ ಮಠವು ಹಿಂದೆ ವೈಭವಯುತವಾಗಿ ಆಡಳಿತವನ್ನು ನಡೆಸಿತ್ತು ಎಂಬುದಕ್ಕೆ ಸಾಕ್ಷಿಯಾಗಿದೆ.

ವಿಳಾಸ: ಷ.ಬ್ರ.ಶ್ರೀ ಚನ್ನಯ್ಯ ಶಿವಾಚಾರ್ಯ ಸ್ವಾಮಿಗಳು, ಶ್ರೀಕಟ್ಟಿಮನಿ ಹಿರೇಮಠ, ಹಾಳಕಟ್ಟಾ, ಚಿತ್ತಾಪುರ ತಾ, ಗುಲ್ಬರ್ಗಜಿಲ್ಲೆ.

ಹೊನಗುಂಟ

ಚಿತ್ತಾಪುರ ತಾಲ್ಲೂಕಿನ ಹೊನಗುಂಟ ಗ್ರಾಮವು ತಾಲ್ಲೂಕು ಕೇಂದ್ರದಿಂದ ನಲವತ್ತೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠ ಸ್ಥಾಪನೆಯಾಗಿದೆ.

ವಿರಕ್ತಮಠ: ಹೊನಗುಂಟ ಗ್ರಾಮದಲ್ಲಿ ರವೂರು ಗ್ರಾಮದ ಶ್ರೀ ವಿರಕ್ತಮಠದ ಶಾಖಾ ಮಠವು ಅಸ್ತಿತ್ವದಲ್ಲಿದೆ. ಕುಮಾರ ಸಮಯದ ಈ ಮಠದಲ್ಲಿ ಎರಡು ಗದ್ದುಗೆಗಳು ಸ್ಥಾಪನೆಯಾಗಿವೆ. ಈ ಗದ್ದುಗೆಗಳಿಗೆ ನಿತ್ಯಪೂಜಾ ವ್ಯವಸ್ಥೆಯನ್ನು ರವೂರು ಮಠವು ಮಾಡಿದ್ದು ಮಠದ ಆವರಣದಲ್ಲಿ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿ, ಗ್ರಾಮೀಣ ಮಕ್ಕಳಿಗೆ ನೆರವನ್ನು ಕಲ್ಪಿಸಿದೆ.

ರವೂರು ಮಠದ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಗಳು ಸಂದರ್ಭಕ್ಕನುಗುಣವಾಗಿ ಈ ಮಠಕ್ಕೆ ಆಗಮಿಸಿ ಇಲ್ಲಿನ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಸಿದ್ಧಲಿಂಗೇಶ್ವರ ಸ್ವಾಮಿಗಳು, ಶ್ರೀ ವಿರಕ್ತಮಠ, ಹೊನಗುಂಟ, ಚಿತ್ತಾಪುರ ತಾ, ಗುಲ್ಬರ್ಗ ಜಿಲ್ಲೆ.

❑

ಚಿಂಚೋಳಿ ತಾಲ್ಲೂಕು

ಗುಲ್ಬರ್ಗ ಜಿಲ್ಲೆಯ ಚಿಂಚೋಳಿ ತಾಲ್ಲೂಕು ಕೃಷಿ ಆಧಾರಿತ ಪ್ರದೇಶ ಉತ್ತರ ಕರ್ನಾಟಕದ ಪ್ರಭಾವಿ ತಾಲ್ಲೂಕುಗಳಲ್ಲಿ ಒಂದಾದ ಈ ಜಿಲ್ಲೆಯು ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕವಾಗಿ ಪ್ರಬುದ್ಧತೆ ಪಡೆದಿದೆ. ಈ ತಾಲ್ಲೂಕಿನಲ್ಲಿ ಸುಮಾರು ಎಪ್ಪತ್ತಾರು ಮಠಗಳು ಅಸ್ತಿತ್ವದಲ್ಲಿದ್ದವೆಂದು ಹೇಳಲಾಗುತ್ತದೆ. ಪ್ರಸ್ತುತ ಹದಿನೈದು ಮಠಗಳು ಅಸ್ತಿತ್ವದಲ್ಲಿ ಉಳಿದಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಕುಡಳ್ಳಿ

ಚಿಂಚೋಳಿ ತಾಲ್ಲೂಕಿನ ಕುಡಳ್ಳಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಹಿರೇಮಠವು ಸ್ಥಾಪನೆಯಾಗಿದೆ.

ಹಿರೇಮಠ: ಕುಡಳ್ಳಿ ಗ್ರಾಮದ ಮಧ್ಯಭಾಗದಲ್ಲಿ ಪುತ್ರವರ್ಗದ ಪರಂಪರೆಯ ಉಜ್ಜಯಿನಿ ಪೀಠದ ಶಾಖಾ ಮಠವಾದ ಹಿರೇಮಠವು ಸ್ಥಾಪನೆಯಾಗಿದೆ. ಈ ಮಠದ ಸ್ಥಾಪನೆಯ ಬಗ್ಗೆ ಆಧಾರಗಳ ಕೊರತೆಯಿಂದ ನಿಖರವಾದ ಮಾಹಿತಿಗಳು ದೊರೆಯದಾಗಿದೆ. ಲಿಂಗೈಕ್ಯರಾದ ಶ್ರೀ ಸಿದ್ಧಯ್ಯ ಶಿವಾಚಾರ್ಯ ಸ್ವಾಮಿಗಳ ಹೆಸರನ್ನು ಹೊರತು ಪಡಿಸಿದರೆ ಉಳಿದ ಗುರುಗಳ ಹೆಸರುಗಳು ತಿಳಿಯದಾಗಿದೆ. ಈ ಮಠದ ಆಡಳಿತವನ್ನು ೧೯೯೯ ರವರೆಗೆ ನಡೆಸಿದ ಶ್ರೀ ಸಿದ್ದಯ್ಯ ಶಿವಾಚಾರ್ಯ ಸ್ವಾಮಿಗಳು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಮಠವನ್ನು ಮುನ್ನಡೆಸಿದ್ದರು. ಗುರುಗಳು ಲಿಂಗೈಕ್ಯರಾದ ದಿನವೇ ಶ್ರೀ ಶಿವಕುಮಾರ ಸ್ವಾಮಿ ಮತ್ತು ಶ್ರೀಮತಿ ಕಮಲಾಬಾಯಿಯವರ ಪುತ್ರರಾದ ಬಾಲಕ ಶ್ರೀ ರೇವಣಸಿದ್ದ ದೇವರನ್ನು ಮಠದ ಉತ್ತರಾಧಿಕಾರಿಯನ್ನಾಗಿ ನೇಮಿಸಲಾಗಿದೆ. ಮಠದಲ್ಲಿ ನಿತ್ಯಪೂಜೆ, ಶ್ರಾವಣ ಮಾಸದಲ್ಲಿ ಭಜನೆ, ವರ್ಷಕ್ಕೊಮ್ಮೆ ಪುಣ್ಯತಿಥಿ ಇವುಗಳು ಮಠದ ಧಾರ್ಮಿಕ ಕಾರ್ಯಗಳಾಗಿವೆ.

ವಿಳಾಸ: ಷ.ಬ್ರ.ಶ್ರೀ ರೇವಣಸಿದ್ಧ ಸ್ವಾಮಿಗಳು, ಶ್ರೀ ಹಿರೇಮಠ, ಕುಡಳ್ಳಿ, ಚಿಂಚೋಳಿ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಕೋಡ್ಲಿ

ಚಿಂಚೋಳಿ ತಾಲ್ಲೂಕಿನ ಕೋಡ್ಲಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಮೂವತ್ತು ಕಿ.ಮೀ ದೂರದಲ್ಲಿದೆ. ಗುಲ್ಬರ್ಗ ಮತ್ತು ಚಿಂಚೋಳಿ ರಸ್ತೆಯ ಬಲಭಾಗಕ್ಕೆ ಎರಡು ಕಿ.ಮೀ ಒಳದಾರಿಯಲ್ಲಿ ಹೋದರೆ ಸಿಗುವ ಕೋಡ್ಲಿ ಗ್ರಾಮದಲ್ಲಿ ಶ್ರೀ ರೇವಣಸಿದ್ಧೇಶ್ವರ ಹೀರೇಮಠವು ಸ್ಥಾಪನೆಯಾಗಿದೆ.

ರೇವಣಸಿದ್ಧೇಶ್ವರ ಹಿರೇಮಠ: ಕೋಡ್ಲಿ ಗ್ರಾಮದ ಮಧ್ಯಭಾಗದಲ್ಲಿ ರಂಭಾಪುರಿ ಪೀಠದ ಶಾಖಾಮಠವಾದ ಶ್ರೀ ರೇವಣ ಸಿದ್ಧೇಶ್ವರ ಹೀರೇಮಠವು ಸ್ಥಾಪನೆಯಾಗಿದೆ. ಈ ಮಠವು ಪುರಾತನ ಕಾಲದಲ್ಲಿ ಸ್ಥಾಪನೆಯಾಗಿದ್ದು ಈ ಮಠವನ್ನು ಶ್ರೀ ರೇವಣಸಿದ್ಧೇಶ್ವರರು ಸ್ಥಾಪನೆ ಮಾಡಿದ ಕಾರಣ ಈ ಮಠಕ್ಕೆ 'ಶ್ರೀ ರೇವಣಸಿದ್ಧೇಶ್ವರ ಹಿರೇಮಠ ' ಎಂದು ಹೆಸರು ಬಂದಿದೆ.

ಮಠದ ಪರಂಪರೆಯಲ್ಲಿ ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಗುರುಗಳ ವಿವರ ಲಭ್ಯವಿಲ್ಲ. ಈಗಿನ ಗುರುಗಳಿಗಿಂತ ಹಿಂದೆ ಇದ್ದವರು ಶ್ರೀ ಬಸವಲಿಂಗ ಸ್ವಾಮಿಗಳೆಂದು ಹೇಳಲಾಗುತ್ತದೆ. ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಮಠವು ಅಭಿವೃದ್ಧಿ ಹೊಂದಿದೆ. ಅಲ್ಲದೆ ಇವರ ಕಾಲದಲ್ಲಿ ಮಠಕ್ಕೆ ಕಟ್ಟಡವನ್ನು ಕಟ್ಟಿಸಲಾಗಿದೆ. ಇವರು ಲಿಂಗೈಕ್ಯರಾದ ನಂತರ ಹಿರಿಯ ಗುರುಗಳ ಹೆಸರನ್ನು ಅಭಿದಾನ ಪಡೆದು ಅಧಿಕಾರಕ್ಕೆ ಬಂದ ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ಶ್ರೀಮತಿ ಮಹಾದೇವಿ ಮತ್ತು ಶ್ರೀ ಚನ್ನಬಸಯ್ಯನವರ ಪುತ್ರರಾಗಿ ೧೯೭೦ ರಲ್ಲಿ ಜನಿಸಿದ್ದಾರೆ. ಇವರು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಮುಗಿಸಿ ೧೯೯೪ ರ ಮೇ ತಿಂಗಳಲ್ಲಿ ಮಠದ ಆಡಳಿತವನ್ನು ವಹಿಸಿಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ೧೯೯೪ ರಲ್ಲಿ ಮಠದ ಆಡಳಿತವನ್ನು ವಹಿಸಿಕೊಂಡ ಗುರುಗಳು ಮಠದ ಆವರಣದಲ್ಲಿ ರೇಣುಕ

ಮೂರ್ತಿಯನ್ನು ಸ್ಥಾಪಿಸಿದ್ದಾರೆ. ಅಲ್ಲದೆ ಪರಂಪರೆಯ ಗುರುಗಳ ಗದ್ದುಗೆಗಳನ್ನು ನವೀಕರಣಗೊಳಿಸಿ ನಿತ್ಯ ಪೂಜೆಗೆ ವ್ಯವಸ್ಥೆಗೊಳಿಸಿದ್ದಾರೆ. ಮಠದಲ್ಲಿ ಶ್ರಾವಣ ಮಾಸದಲ್ಲಿ ರುದ್ರಾಭಿಷೇಕ, ಪೂಜೆ ಹಾಗೂ ಭಜನೆ ಕಾರ್ಯಕ್ರಮ ನಡೆಯುತ್ತಿವೆ.

ವಿಳಾಸ:ಷ.ಬ್ರ.ಶ್ರೀಬಸವಲಿಂಗ ಶಿವಾಚಾರ್ಯಸ್ವಾಮಿಗಳು, ಶ್ರೀ ರೇವಣಸಿದ್ಧೇಶ್ವರಹಿರೇಮಠ,ಕೋಡ್ಲಿ, ಚಿಂಚೋಳಿ ತಾ,ಗುಲ್ಬರ್ಗಜಿಲ್ಲೆ.

ಗವನಹಳ್ಳಿ

ಚಿಂಚೋಳಿ ತಾಲ್ಲೂಕಿನ ಗವನಹಳ್ಳಿಯು ತಾಲ್ಲೂಕು ಕೇಂದ್ರದಿಂದ ದಕ್ಷಿಣಭಾಗಕ್ಕಿದೆ. ಈ ಗ್ರಾಮದಲ್ಲಿ ಹಿರೇಮಠವು ಅಸ್ತಿತ್ವದಲ್ಲಿತ್ತು.

ಹಿರೇಮಠ: ಗವನಹಳ್ಳಿಯಲ್ಲಿ ಉಜ್ಜಯಿನಿ ಪೀಠದ ಶಾಖಾ ಮಠವು ಅಸ್ತಿತ್ವದಲ್ಲಿತ್ತೆಂದು ಹಿಂದೆ ಇದ್ದ ಗುರುಗಳು ಮಠವನ್ನು ಅಭಿವೃದ್ಧಿಪಡಿಸಿದ್ದರೆಂದೂ ಹೇಳಲಾಗುತ್ತಿದೆ. ಈಗ ಈ ಮಠದಲ್ಲಿ ಉತ್ತರಾಧಿಕಾರಿಗಳು ಯಾರೂ ಇಲ್ಲದೆ ಮಠದ ಪರಂಪರೆಯ ಗದ್ದುಗೆಗಳಿಗೆ ಮಾತ್ರ ಪೂಜೆ ನಡೆಯುತ್ತಿದೆ.

ಚಂದನಕೆರೆ

ಚಿಂಚೋಳಿ ತಾಲ್ಲೂಕಿನ ಚಂದನಕೆರೆಯು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಇಪ್ಪತ್ತೆಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಮಹಾಂತಿನ ಮಠವು ಸ್ಥಾಪನೆಯಾಗಿದೆ.

ಮಹಾಂತಿನ ಮಠ: ಚಂದನಕೆರೆ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಮಹಾಂತಿನ ಮಠವು ರಂಭಾಪುರಿ ಪೀಠದ ಶಾಖಾ ಮಠವಾಗಿ ಬೆಳೆದಿದೆ. ಮಠದ ಪರಂಪರೆಯಲ್ಲಿ ಬಂದಂತಹ ಅನೇಕ ಗುರುಗಳು ಧಾರ್ಮಿಕ ಕಾರ್ಯಗಳಿಂದ ಹೆಸರು ಪಡೆದು ಮಠವನ್ನು ಬೆಳೆಸಿ, ಮುನ್ನಡೆಸಿದ್ದಾರೆ. ಇವರಲ್ಲಿ ಈಗಿರುವ ಶ್ರೀ ರಾಚೋಟಿ ಶಿವಾಚಾರ್ಯ ಸ್ವಾಮಿಗಳು ಒಬ್ಬರು.

ವಿಳಾಸ: ಷ.ಬ್ರ.ಶ್ರೀ ರಾಚೋಟಿ ಶಿವಾಚಾರ್ಯಸ್ವಾಮಿಗಳು, ಶ್ರೀ ಮಹಾಂತಿ ಮಠ, ಚಂದನಕೆರೆ, ಚಿಂಚೋಳಿ ತಾ, ಗುಲ್ಬರ್ಗ ಜಿಲ್ಲೆ.

ಚಿಂಚೋಳಿ

ಗುಲ್ಬರ್ಗ ಜಿಲ್ಲೆಯ ಚಿಂಚೋಳಿಯು ತಾಲ್ಲೂಕಿನ ಕೇಂದ್ರ ಸ್ಥಳ. ಜಿಲ್ಲಾ ಕೇಂದ್ರದಿಂದ ಈಶಾನ್ಯ ದಿಕ್ಕಿಗೆ ಎಂಬತ್ತೈದು ಕಿ.ಮೀ ದೂರದಲ್ಲಿದೆ. ತಾಲ್ಲೂಕು ಕೇಂದ್ರಸ್ಥಳವಾದ ಚಿಂಚೋಳಿಯಲ್ಲಿ ವೀರಶೈವ ಧರ್ಮ ಪುರಾತನ ಕಾಲದಲ್ಲಿ ಪ್ರಬಲವಾಗಿ ಬೆಳೆದ ಲಕ್ಷಣಗಳು ಕಂಡುಬರುತ್ತವೆ. ವೀರಶೈವ ಧರ್ಮದ ಪ್ರಚಾರಕ್ಕಾಗಿ ಹಿಂದೆ ಒಟ್ಟು ಎಂಟು ಮಠಗಳು ಸ್ಥಾಪನೆಯಾಗಿದ್ದವು ಎಂಬ ಮಾಹಿತಿ ದೊರೆಯುತ್ತದೆ. ಆದರೆ ಶೋಧನೆಗೆ ಹೋದ ಸಂದರ್ಭದಲ್ಲಿ ಶ್ರೀ ಮಹಾಂತೇಶ್ವರ ಮಠ, ಶ್ರೀ ಹರಕೋಡು ಮಠ ಮತ್ತು ಶ್ರೀ ಸಂಗನ ಬಸವೇಶ್ವರಮಠ ಅಥವಾ ನಡವಿನಮಠ ಎಂದು ಕರೆಯಲ್ಪಡುವ ಮೂರು ಮಠಗಳು ಈ ಪಟ್ಟಣದಲ್ಲಿ ಅಸ್ತಿತ್ವದಲ್ಲಿವೆ. ಇವುಗಳಲ್ಲಿ ಶ್ರೀ ಹರಕೋಡು ಮಠವು ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ಹರಕೋಡು ಹಿರೇಮಠದ ಶಾಖಾ ಮಠವಾಗಿ ಮುಂದುವರೆದಿದೆ. ಈ ಮಠದ ಧಾರ್ಮಿಕ ಕಾರ್ಯಗಳನ್ನು ಹರಕೋಡು ಮಠಾಧ್ಯಕ್ಷರೇ ನಡೆಸತೊಡಗಿದ್ದಾರೆ.

ಮಹಾಂತೇಶ್ವರ ಮಠ: ಚಿಂಚೋಳಿ ಪಟ್ಟಣದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಮಹಾಂತೇಶ್ವರಮಠವು ಪುರಾತನ ಕಾಲದಲ್ಲಿ ಸ್ಥಾಪನೆಯಾಗಿದೆ. ರಂಭಾಪುರಿ ಪೀಠದ ಶಾಖಾ ಮಠವಾಗಿರುವ ಈ ಮಠವನ್ನು ಶ್ರೀ ದಿಗಂಬರ ಸ್ವಾಮಿಗಳು ಸ್ಥಾಪನೆ ಮಾಡಿದ್ದರು ಎಂದು ಹೇಳಲಾಗುತ್ತಿದೆ. ಅಂದು ಸ್ಥಾಪನೆಗೊಂಡ ಮಠವು ಧಾರ್ಮಿಕ ಚಟುವಟಿಕೆಯಿಂದ ಹೆಚ್ಚು ಹೆಸರು ಮಾಡಿತ್ತು. ಮಠದ ಈ ಪರಂಪರೆಯ ಮಠಾಧೀಶರಾದ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ಮತ್ತು ಶ್ರೀ ಮಹಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ನಡೆಸಿ ಮಠವನ್ನು ವ್ಯವಸ್ಥಿತವಾಗಿ ಬೆಳಸಿದರು.

ಶ್ರೀ ಮಹಾಂತೇಶ್ವರ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಮಠವು ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ

ಹೆಸರು ಮಾಡಿದೆ. ಗುರುಗಳು ಪವಾಡಪುರುಷರಾಗಿ ಅನೇಕ ಪವಾಡಗಳನ್ನು ಮಾಡಿ ಇಲ್ಲಿ ಹೆಸರು ಪಡೆದಿದ್ದಾರೆ. ಇವರ ಕಾಲದಲ್ಲಿ ನಿತ್ಯ ಶಿವಾನುಭವ ಗೋಷ್ಠಿಗಳು, ಧರ್ಮೋಪದೇಶ ನಡೆಯುತ್ತಿದ್ದವಂತೆ. ಗುರುಗಳು ಸಾಮಾನ್ಯರ ನೋವುಗಳಿಗೆ ಸ್ಪಂದಿಸಿ ಮಾನಸಿಕ ಸ್ಥೈರ್ಯನೀಡಿ ಕಾಯಕಕ್ಕೆ ಪ್ರೇರಣೆ ನೀಡಿ ಸಮಾಜದ ಒಳಿತಿಗಾಗಿ ಶ್ರಮಿಸಿದರು. ಇವರ ಆದರ್ಶ ಕಾರ್ಯಗಳಿಗೆ ಜನ ಸ್ಪಂದಿಸಿ ಪರಮ ಭಕ್ತರಾದರು. ಗುರುಗಳು ಲಿಂಗೈಕ್ಯರಾದ ಮೇಲೆ ಗುರುಗಳ ಹೆಸರಲ್ಲಿ ಒಂದು ಸಮಿತಿಯನ್ನು ರಚಿಸಿಕೊಂಡು ಮಠದಲ್ಲಿ ನಿತ್ಯ ದಾಸೋಹ, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರಲಾಗುತ್ತಿದೆ.

ವಿಳಾಸ: ಶ್ರೀ ಮಹಾಂತೇಶ್ವರ ಶಿವಾಚಾರ್ಯ ಸ್ವಾಮಿಗಳ ವಿಶ್ವಸ್ಥಸಮಿತಿ, ಶ್ರೀ ಮಹಾಂತೇಶ್ವರಮಠ, ಚಿಂಚೋಳಿ, ಗುಲ್ಬರ್ಗ ಜಿಲ್ಲೆ.

ಚಿಮ್ಮ ಇದಲಾಯಿ

ಚಿಂಚೋಳಿ ತಾಲ್ಲೂಕಿನ ಚಿಮ್ಮ ಇದಲಾಯಿಯು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಆರು ಕಿ.ಮೀ ದೂರದಲ್ಲಿದೆ. ಈ ಗ್ರಾಮದ ಹೊರಭಾಗದಲ್ಲಿ ಶ್ರೀ ಸಿದ್ಧರಾಮೇಶ್ವರ ಹಿರೇಮಠವು ಸ್ಥಾಪನೆಯಾಗಿದೆ.

ಸಿದ್ಧರಾಮೇಶ್ವರ ಹಿರೇಮಠ: ಚಿಮ್ಮ ಇದಲಾಯಿ ಗ್ರಾಮದ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಸಿದ್ಧರಾಮೇಶ್ವರ ಹಿರೇಮಠವು ಉಜ್ಜಯಿನಿ ಪೀಠದ ಶಾಖಾ ಮಠವಾಗಿ, ಶಿಷ್ಯವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಶ್ರೀ ಸೋಮೇಶ್ವರ ಶಿವಾಚಾರ್ಯ ಸ್ವಾಮಿಗಳು ಈ ಮಠದ ಕರ್ತೃಗುರುಗಳೆಂದು ಹೇಳಲಾಗುತ್ತಿದೆ. ಗುರುಗಳು ಲೋಕಸಂಚಾರ ಕೈಗೊಂಡು ಈ ಪ್ರದೇಶದಲ್ಲಿ ನೆಲೆ ನಿಂತ ಮೇಲೆ ಇಲ್ಲಿನ ಭಕ್ತರು ಗುರುಗಳಿಗಾಗಿ ಮಠವನ್ನು ಕಟ್ಟಿಸಿಕೊಟ್ಟರು. ಗುರುಗಳು ಮಠ ಸ್ಥಾಪನೆ ಮಾಡಿದ ನಂತರ ವೀರಶೈವ ಧರ್ಮವನ್ನು ಬೆಳೆಸಿ ಭಕ್ತರನ್ನು ಸನ್ಮಾರ್ಗಕ್ಕೆ ತಂದರು. ಇವರ ನಂತರ ಶ್ರೀ ಮರಿ ಸೋಮಶೇಖರ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದರು.

ಪರಂಪರೆ:

೧. ಷ.ಬ್ರ.ಶ್ರೀ ಸೋಮಶೇಖರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಮರಿ ಸೋಮಶೇಖರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಸೋಮಪ್ಪ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಮೂರನೆಯ ಸೋಮಶೇಖರ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಎರಡನೆಯ ಸೋಮಪ್ಪ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ವಿಜಯ ಮಹಾಂತೇಶ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಮಠದ ಕರ್ತೃಗುರುಗಳ ನಂತರ ಮಠದ ಅಧಿಕಾರವನ್ನು ವಹಿಸಿಕೊಂಡ ಶ್ರೀ ಮರಿ ಸೋಮಶೇಖರ ಸ್ವಾಮಿಗಳು ಮಠವನ್ನು ಮುನ್ನಡೆಸಿದರು. ಇವರ ತರುವಾಯ ಬಂದಂತಹ ಎಲ್ಲಾ ಸ್ವಾಮಿಗಳು ಧರ್ಮನಿಷ್ಠರಾಗಿ ವೀರಶೈವ ಧರ್ಮವನ್ನು ಬೆಳೆಸುವಲ್ಲಿ ಶ್ರಮ ವಹಿಸಿದ್ದಾರೆ. ಪರಂಪರೆಯ ಆರನೆಯ ಗುರುಗಳಾದ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮಿಗಳು ವಾಕ್‌ಸಿದ್ಧಿ ಪುರುಷರಾಗಿ ಹೆಚ್ಚು ಹೆಸರು ಮಾಡಿದ್ದರು. ಇವರ ಕಾಲದಲ್ಲಿ ಮಠವು ಹೆಚ್ಚು ಪ್ರಚಾರ ಗೊಂಡಿತು. ಗುರುಗಳು ಶಿವಯೋಗಸಿದ್ಧಿಯನ್ನು ಸಾಧಿಸಿಕೊಂಡಿದ್ದರು. ಸದಾ ಶಿವಪೂಜೆಯಲ್ಲಿ ಕಾಲ ಕಳೆಯುತ್ತಾ ಲೋಕೋದ್ಧಾರಕ್ಕಾಗಿ ಪ್ರಾರ್ಥನೆ ಸಲ್ಲಿಸುತ್ತಿದ್ದರು. ಮಠಕ್ಕೆ ಆಗಮಿಸುವ ಭಕ್ತರಿಗೆ ಧರ್ಮೋಪದೇಶವನ್ನು ನೀಡಿ ಸಂಸ್ಕಾರವಂತರನ್ನಾಗಿ ಮಾಡುತ್ತಿದ್ದರು. ಇವರ ಈ ಕಾರ್ಯಕ್ಕೆ ಜನರು ಶರಣಾಗಿದ್ದರು. ಈ ಕಾರಣದಿಂದ ಪರಂಪರೆಯ ಈ ಮಠಕ್ಕೆ 'ಶ್ರೀ ಸಿದ್ಧರಾಮೇಶ್ವರ ಮಠ 'ಎಂದು ರೂಢಿಗತವಾಗಿ ಕರೆಯತೊಡಗಿ ಗುರುಗಳ ಹೆಸರನ್ನು ಶಾಶ್ವತವಾಗಿ ಉಳಿಸಿದ್ದಾರೆ. ಗುರುಗಳು ಲಿಂಗೈಕ್ಯರಾದ ನಂತರ ಕೆಲವು ವರ್ಷ ಮಠವು ಖಾಲಿ ಉಳಿದಿತ್ತು. ನಂತರ ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಖೇಡಗಿ ಗ್ರಾಮದ ಶ್ರೀ ಸಿದ್ಧಮಲ್ಲಯ್ಯ ಮತ್ತು ಶ್ರೀಮತಿ ಮಲ್ಲಮ್ಮನವರ ಪುತ್ರರಾಗಿ ೧೯೬೬ ರ ಜೂನ್ ಒಂದರಂದು ಜನಿಸಿದ ಶ್ರೀವಿಜಯ ಮಹಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು ಈ ಮಠದ ಉತ್ತರಾಧಿಕಾರಿಗಳಾಗಿದ್ದಾರೆ. ಇವರು ಬೆಂಗಳೂರು ಮಹಾಂತಿನ ಮಠ, ಶಿವಯೋಗಮಂದಿರದಲ್ಲಿ ಕಲಿತು ಮೈಸೂರಿನ ಸುತ್ತೂರು ಶಿವರಾತ್ರೀಶ್ವರ

ಮಠದ ಗುರುಕುಲದಲ್ಲಿ ಆಶ್ರಯ ಪಡೆದು ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ವಿದ್ಯಾಭ್ಯಾಸ ಮುಗಿಸಿದ ನಂತರ ೧೯೮೩ ರಲ್ಲಿ ಪಟ್ಟಾಧಿಕಾರ ವಹಿಸಿಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಪರಂಪರೆಯ ಗುರುಗಳ ಗದ್ದುಗೆಗಳು ಸ್ಥಾಪನೆಯಾಗಿವೆ. ಈ ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ ಮಾಡಲಾಗುತ್ತಿದೆ. ಶ್ರಾವಣ ಮಾಸದಲ್ಲಿ ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ ಪುರಾಣ ಪ್ರವಚನ ಮಾಡುವ ಮೂಲಕ ಧರ್ಮಪ್ರಸಾರ ಮಾಡುತ್ತಿದ್ದಾರೆ. ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ಬನದ ಹುಣ್ಣಿಮೆಯಲ್ಲಿ ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಮಠದಲ್ಲಿ ಒಂದು ತಿಂಗಳು ಪುರಾಣ ಪ್ರವಚನಗಳು ನಡೆಯುತ್ತವೆ. ಈ ವಿಶೇಷ ಸಂದರ್ಭಗಳಲ್ಲಿ ಮಠದಲ್ಲಿ ಅನ್ನ ದಾಸೋಹ ನಡೆಯುತ್ತಿದೆ.

ವಿಳಾಸ: ಷ.ಬ್ರ.ಶ್ರೀ ವಿಜಯ ಮಹಾಂತ ಶಿವಾಚಾರ್ಯಸ್ವಾಮಿಗಳು, ಶ್ರೀ ಸಿದ್ಧರಾಮೇಶ್ವರ ಹಿರೇಮಠ, ಚಿಮ್ಮಇದಲಾಯಿ, ಚಿಂಚೋಳಿ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ನಿಡುಗುಂದಿ

ಚಿಂಚೋಳಿ ತಾಲ್ಲೂಕಿನ ನಿಡುಗುಂದಿಯು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ವೀರಶೈವ ಧರ್ಮದ ಬೆಳವಣಿಗೆಗಾಗಿ ಪುರಾತನ ಕಾಲದಲ್ಲಿ ಐದು ಮಠಗಳು ಸ್ಥಾಪನೆಯಾಗಿದ್ದವು ಎಂದು ತಿಳಿದು ಬರುತ್ತದೆ. ಈಗ ಶ್ರೀ ಚಿಕ್ಕಮಠ, ಶ್ರೀ ಹಿರೇಮಠ, ಶ್ರೀ ಜಟ್ಟಿರ ಮಠ, ಶ್ರೀ ಸಾವಳಗಿ ಮಠ ಮತ್ತು ಶ್ರೀ ವಿರಕ್ತ ಮಠ ಎಂಬ ಐದು ಮಠಗಳು ಇಂದಿಗೂ ತಮ್ಮ ಅಸ್ತಿತ್ವದ ಗುರುತನ್ನು ಉಳಿಸಿಕೊಂಡಿವೆ. ಆದರೆ ಶ್ರೀ ಹಿರೇಮಠ ಒಂದನ್ನು ಹೊರತುಪಡಿಸಿದರೆ ಉಳಿದ ನಾಲ್ಕು ಮಠಗಳಲ್ಲಿ ಮಠಾಧೀಶರಿಲ್ಲದೆ ಖಾಲಿ ಉಳಿದಿವೆ.

ಹಿರೇಮಠ: ನಿಡುಗುಂದಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ರಂಭಾಪುರಿ ಪೀಠದ ಶಾಖಾ ಮಠವಾಗಿ ಬೆಳೆದಿದೆ. ಈ ಮಠವನ್ನು ಪುರಾತನ ಕಾಲದಲ್ಲಿ ಶ್ರೀ ರಾಚೋಟಯ್ಯ ಸ್ವಾಮಿಗಳೆಂಬುವರು ಸ್ಥಾಪನೆ ಮಾಡಿದ್ದರೆಂದು ಹೇಳಲಾಗುತ್ತದೆ. ಶ್ರೀ ರಾಚೋಟಯ್ಯ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಸ್ಥಾಪಿಸಿ ಧಾರ್ಮಿಕ ಕಾರ್ಯಗಳನ್ನು ಅನುಷ್ಠಾನಗೊಳಿಸಿ ವೀರಶೈವಧರ್ಮ ಹೆಚ್ಚು ಪ್ರಸಾರವಾಗಿ ಬೆಳೆಯುವಂತೆ ಮಾಡಿದ್ದರು. ಇವರ ನಂತರ ಅಧಿಕಾರಕ್ಕೆ ಬಂದ ಗುರುಗಳ ಹೆಸರುಗಳು ಲಭ್ಯವಿಲ್ಲ.ಆದರೆ ಈ ಮಠದ ವಂಶಸ್ಥರಲ್ಲಿ ಒಬ್ಬರಾದ ಹಿರಿಯರ ಪ್ರಕಾರ, ಆರು ವರ್ಷಗಳ ಹಿಂದೆ ಲಿಂಗೈಕ್ಯರಾದ ಶ್ರೀ ರಾಚೋಟಯ್ಯ ಸ್ವಾಮಿಗಳ ತನಕವೂ ಹಿಂದಿನ ಎಲ್ಲಾ ಗುರುಗಳು ಒಂದೇ ಹೆಸರಿನಲ್ಲಿ ಮಠದ ಪಟ್ಟಾಧಿಕಾರವನ್ನು ವಹಿಸಿಕೊಳ್ಳುತ್ತಿದ್ದರು ಎಂದೂ ಈವರೆಗೆ ಒಟ್ಟು ಹನ್ನೊಂದುಜನ ಗುರುಗಳು ಅಧಿಕಾರ ನಡೆಸಿದ್ದಾರೆಂದೂ ತಿಳಿಯುತ್ತದೆ.

ಆರು ವರ್ಷಗಳ ಹಿಂದೆ ಶ್ರೀ ರಾಚೋಟಯ್ಯ ಶಿವಾಚಾರ್ಯಸ್ವಾಮಿಗಳ ನಂತರ ಪುತ್ರವರ್ಗದ ಈ ಮಠಕ್ಕೆ ಶ್ರೀಮಹಾಂತಯ್ಯ ಮತ್ತು ಶ್ರೀಮತಿ ರತ್ನಮ್ಮಬಾಯಿಯರ ಪುತ್ರರಾದ ಶ್ರೀ ಸೋಮಶೇಖರ ದೇವರು ಉತ್ತರಾಧಿಕಾರಿಗಳಾಗಿ ನೇಮಕಗೊಂಡಿದ್ದಾರೆ. ಇವರಿಗೆ ಇನ್ನೂ ಪಟ್ಟಾಧಿಕಾರವನ್ನು ನಡೆಯಬೇಕಾಗಿದೆ. ಮಠದ ಆವರಣದಲ್ಲಿ ಒಟ್ಟು ಹನ್ನೊಂದು ಗದ್ದುಗೆಗಳು ಇದ್ದವೆಂದು ಈ ಮಠದ ಹಿರಿಯರು ತಿಳಿಸುತ್ತಾರೆ.

ವಿಳಾಸ: ಶ್ರೀ ಸೋಮಶೇಖರ ದೇವರು, ಶ್ರೀ ಹಿರೇಮಠ, ನಿಡುಗುಂದಿ, ಚಿಂಚೋಳಿ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಪಂಗಡಗ

ಚಿಂಚೋಳಿ ತಾಲ್ಲೂಕಿನ ಪಂಗಡಗ ಗ್ರಾಮವು ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ನಲವತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಪುರಾತನ ಪರಂಪರೆಯ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ.

ಹಿರೇಮಠ: ಪಂಗಡಗ ಗ್ರಾಮದಲ್ಲಿ ಉಜ್ಜಯಿನಿ ಪೀಠದ ಶಾಖಾಮಠವಾದ ಶ್ರೀ ಹಿರೇಮಠವು ಸ್ಥಾಪನೆಯಾಗಿ,ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ಬೆಳೆದಿದೆ. ಪುತ್ರವರ್ಗದ ಪರಂಪರೆಯ ಈ ಮಠದ ಸ್ಥಾಪನೆ ಹಾಗೂ ಪರಂಪರೆಯ

ಗುರುಗಳ ಬಗ್ಗೆ ನಿಖರವಾದ ಮಾಹಿತಿ ದೊರೆಯುವುದಿಲ್ಲ. ಶ್ರೀ ಚರಲಿಂಗಯ್ಯ ಶಿವಾಚಾರ್ಯ ಸ್ವಾಮಿಗಳೆಂಬುವರು ನೂರು ವರ್ಷಗಳ ಹಿಂದೆ ಅಧಿಕಾರ ನಡೆಸುತ್ತಿದ್ದರು. ಇವರು ಲಿಂಗೈಕ್ಯರಾದ ನಂತರ ಮಠವು ಉತ್ತರಾಧಿಕಾರಿಗಳಿಲ್ಲದೆ ಖಾಲಿ ಉಳಿದಿತ್ತು. ೧೯೮೧ರಲ್ಲಿ ಶ್ರೀ ಚರಲಿಂಗ ಶಿವಾಚಾರ್ಯ ಸ್ವಾಮಿಗಳು ಪಟ್ಟಾಧಿಕಾರವನ್ನು ವಹಿಸಿಕೊಂಡು ಮಠದ ಆಡಳಿತವನ್ನು ನಡೆಸುತ್ತಿದ್ದಾರೆ. ಮಠದ ಪರಂಪರೆಯ ಎರಡು ಜನ ಗುರುಗಳ ಗದ್ದುಗೆಗಳು ಮಠದ ಜಮೀನಿನಲ್ಲಿ ಸ್ಥಾಪನೆಯಾಗಿವೆ.

ವಿಳಾಸ: ಷ.ಬ್ರ.ಶ್ರೀ ಚರಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಪಂಗಡಗ, ಚಿಂಚೋಳಿ ತಾ, ಗುಲ್ಬರ್ಗ ಜಿಲ್ಲೆ.

ರಟಗಲ್ಲು

ಚಿಂಚೋಳಿ ತಾಲ್ಲೂಕಿನ ರಟಗಲ್ಲು ಗ್ರಾಮವು ಈ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಮೂವತ್ತೈದು ಕಿ.ಮೀ ದೂರದಲ್ಲಿದೆ. ಈ ಗ್ರಾಮವು ಪುರಾತನ ವೀರಶೈವ ಮಠಗಳ ಕೇಂದ್ರ ಸ್ಥಾನವಾಗಿದ್ದು, ಇಲ್ಲಿ ವೀರಶೈವ ತತ್ತ್ವಗಳ ಪ್ರಚಾರಕ್ಕೆಂದು ಒಟ್ಟು ಮೂರು ಮಠಗಳು ಸ್ಥಾಪನೆಯಾಗಿವೆ. ಇವುಗಳೆಂದರೆ ಶ್ರೀ ಮುರುಘೇಂದ್ರಸ್ವಾಮಿ ಮಠ, ಶ್ರೀ ರೇವಣಸಿದ್ಧೇಶ್ವರ ಹಿರೇಮಠ, ಶ್ರೀ ಹಾಲುಮಠ. ಇವುಗಳಲ್ಲಿ ಶ್ರೀ ಹಾಲುಮಠ ಮಠಾಧೀಶರಿಲ್ಲದೆ ಖಾಲಿ ಉಳಿದಿದೆ. ಉಳಿದ ಎರಡೂ ಮಠಗಳಲ್ಲಿ ಮಠಾಧೀಶರಿದ್ದು ಧಾರ್ಮಿಕ ಹಾಗೂ ಶೈಕ್ಷಣಿಕವಾಗಿ ಸಾಧನೆ ಸಾಧಿಸಿವೆ.

ರೇವಣಸಿದ್ಧೇಶ್ವರ ಹಿರೇಮಠ: ರಟಗಲ್ಲು ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ರೇವಣಸಿದ್ಧೇಶ್ವರ ಹಿರೇಮಠವು ಪುರಾತನ ಕಾಲದ 'ಗುರುಸ್ಥಲ' ಮಠವಾಗಿದೆ. ರಂಭಾಪುರಿ ಪೀಠದ ಶಾಖಾಮಠವಾಗಿರುವ ಈ ಮಠವು ಶಿಷ್ಯವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದ್ದು, ಪುರಾತನ ಕಾಲದ ವೀರಶೈವ ಮಠಗಳಲ್ಲಿ ಒಂದಾಗಿದೆ. ಈ ಮಠದ ಕರ್ತೃಗುರುಗಳು ಶ್ರೀ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು. ಈ ಕಾರಣಕ್ಕಾಗಿ ಈ ಮಠಕ್ಕೆ 'ಶ್ರೀ ರೇವಣಸಿದ್ಧೇಶ್ವರ ಹಿರೇಮಠ'ವೆಂದು ಹೆಸರು ಬಂದಿದೆ. ಕರ್ತೃಗುರುಗಳು ಸಂಚಾರಮೂರ್ತಿಗಳು, ಸಂಚಾರದಲ್ಲಿ ಧರ್ಮಜಾಗೃತಿಗಾಗಿ ಕೆಲವು ದಿನ ಅಲ್ಲಲ್ಲಿ ಅನುಷ್ಠಾನಕ್ಕೆ ಕುಳಿತು ಆಯಾ ಕ್ಷೇತ್ರವನ್ನು ಜಾಗೃತಸ್ಥಳವನ್ನಾಗಿ ಮಾಡಿ ತಮ್ಮ ಪ್ರಯಾಣ ಬೆಳೆಸುತ್ತಿದ್ದರು. ಗುರುಗಳ ಧಾರ್ಮಿಕ ವ್ಯಕ್ತಿತ್ವಕ್ಕೆ ಮನ್ನಣೆ ಕೊಟ್ಟು ಇಲ್ಲೇ ನೆಲೆ ನಿಲ್ಲುವಂತೆ ಭಕ್ತರು ಒತ್ತಾಯಿಸಿದರು. ಅವರ ಒತ್ತಾಸೆಯಂತೆ ನೆಲೆ ನಿಂತ ಗುರುಗಳು ಇಲ್ಲಿ ಮಠವನ್ನು ಸ್ಥಾಪಿಸಿದರು. ಮಠದಲ್ಲಿ ನಿತ್ಯಶಿವಾನುಭವಗೋಷ್ಠಿ,ಸಂಜೆ ಸತ್ಸಂಗದಲ್ಲಿ ಭಜನೆ ಧಾರ್ಮಿಕ ವಿಚಾರಗಳ ಬಗ್ಗೆ ಚರ್ಚೆ ಈ ರೀತಿ ಕಾರ್ಯಗಳು ನಡೆಯತೊಡಗಿ, ಸುತ್ತಲ ಗ್ರಾಮಗಳಿಗೂ ಗುರುಗಳು ಮಾಡುತ್ತಿದ್ದ ಧಾರ್ಮಿಕ ಚಟುವಟಿಕೆಗಳು ಪ್ರಚಾರಗೊಂಡವು. ದಿನದಿಂದ ದಿನಕ್ಕೆ ಮಠದ ಧಾರ್ಮಿಕ ಚಟುವಟಿಕೆಗಳು ವಿಸ್ತಾರಗೊಂಡು ಅನೇಕ ಭಕ್ತರು ಇವರ ಪರಮ ಶಿಷ್ಯರಾದರು. ಇವರ ತರುವಾಯ ಶ್ರೀ ವೀರಭದ್ರ ಶಿವಯೋಗಿ ಶಿವಾಚಾರ್ಯರು ಮಠವನ್ನು ಮುನ್ನಡೆಸಿ ಗುರುಗಳು ಹಾಕಿಕೊಟ್ಟ ಧರ್ಮಮಾರ್ಗದಲ್ಲಿ ಮುನ್ನಡೆದರು.

ಪರಂಪರೆ:

೧. ಷ.ಬ್ರ.ಶ್ರೀ ರೇವಣಸಿದ್ಧ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ವೀರಭದ್ರ ಶಿವಯೋಗಿ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಸಿದ್ಧೇಶ್ವರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಶಿವರುದ್ರ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಮುರುಘೇಂದ್ರ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ವಿರೂಪಾಕ್ಷ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಶ್ರೀ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಸ್ಥಾಪಿಸಿದ ನಂತರ ಅಧಿಕಾರಕ್ಕೆ ಬಂದ ಶ್ರೀ ವೀರಭದ್ರ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು ಶಿವಯೋಗವನ್ನು ಸಾಧಿಸಿದ ಮಹಾ ಯೋಗಿಗಳು. ಇವರು ಶ್ರೀ ರೇವಣಸಿದ್ಧ ಶಿವಚಾರ್ಯ ಸ್ವಾಮಿಗಳ ಕರ ಕಮಲ ಸಂಜಾತರಾಗಿ ಬೆಳೆದು ಧರ್ಮವನ್ನು

ಭೋದಿಸುವ ಸಮರ್ಥ ಮಠಾಧಿಪತಿಯಾಗಿ ಬೆಳೆದರು. ಇವರ ಕಾಲದಲ್ಲಿ ಕೈಗೊಂಡ ಧಾರ್ಮಿಕ ಚಟುವಟಿಕೆಗಳಿಂದ ಗ್ರಾಮವು ಸಂಸ್ಕಾರಗೊಂಡಿದೆ. ಇವರು ಜೀವಂತ ಸಮಾಧಿಯಾಗಿ ಈ ಕ್ಷೇತ್ರವನ್ನು ಜಾಗೃತ ಸ್ಥಳವನ್ನಾಗಿ ಮಾಡಿದ್ದಾರೆ. ಇವರ ನಂತರ ಅಧಿಕಾರಕ್ಕೆ ಬಂದ ಬಹುತೇಕ ಎಲ್ಲಾ ಗುರುಗಳೂ ಈ ಕ್ಷೇತ್ರವನ್ನು ಅಭಿವೃದ್ಧಿಪಡಿಸಿ ವೀರಶೈವ ಧರ್ಮವು ಬೆಳೆಯಲು ಪ್ರೇರಣೆ ನೀಡಿದವರಾಗಿದ್ದಾರೆ. ಹಿಂದಿನ ಗುರುಗಳಾದ ಶ್ರೀ ಮುರುಘೇಂದ್ರ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾದ ನಂತರ ಕೆಲವು ವರ್ಷಗಳ ಕಾಲ ಮಠವು ಖಾಲಿ ಉಳಿದಿತ್ತು. ಇವರ ನಂತರ ಶ್ರೀ ವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳು ಮಠದ ಉತ್ತರಾಧಿಕಾರಿಯಾಗಿ ನೇಮಕಗೊಂಡಿದ್ದಾರೆ.

ಈಗಿನ ಗುರುಗಳಾದ ಶ್ರೀ ವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳು ಶ್ರೀ ಶಿವಲಿಂಗಯ್ಯ ಮತ್ತು ಶ್ರೀಮತಿ ಸಿದ್ಧಮ್ಮನವರ ಪುತ್ರರಾಗಿ ಜನಿಸಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ರಟಗಲ್ಲು ಗ್ರಾಮದಲ್ಲಿ ಮುಗಿಸಿ ಬೆಂಗಳೂರಿನ ಮಹಾಂತಿನ ಮಠದಲ್ಲಿ ಸಂಸ್ಕೃತ ವೇದಾಧ್ಯಯನವನ್ನು ಮಾಡಿ ಪುರಾಣ ಪ್ರವಚನ ಮಾಡುವ ಕಲೆಯನ್ನು ಬೆಳಸಿಕೊಂಡಿದ್ದಾರೆ. ಗುರುಗಳು ಮಠಕ್ಕೆ ನೇಮಕಗೊಂಡ ಮೇಲೆ ಮಠವನ್ನು ಅಭಿವೃದ್ಧಿಗೊಳಿಸಿ ಸುಸ್ಥಿತಿಗೆ ತಂದಿದ್ದಾರೆ. ಗುರುಗಳು ಆಂಧ್ರ, ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಈವರೆಗೆ ಒಟ್ಟು ನೂರ ಇಪ್ಪತ್ತೈದು ಸ್ಥಳಗಳಲ್ಲಿ ಪುರಾಣ ಪ್ರವಚನವನ್ನು ನೀಡಿ ದಾಖಲೆಯನ್ನು ಮಾಡಿದ್ದಾರೆ. ೧೯೭೪ ರಲ್ಲಿ ಇಪ್ಪತ್ತೈದು ಜನ ಗುರುಗಳ ಜೊತೆಯಲ್ಲಿ ಐನೂರು ಜನ ಭಕ್ತರನ್ನು ಸೇರಿಸಿಕೊಂಡು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಪ್ರವಾಸ ಮಾಡಿ, ಅನೇಕ ಧಾರ್ಮಿಕ ಕ್ಷೇತ್ರಗಳನ್ನು ಸಂದರ್ಶಿಸಿ ಬಂದಿದ್ದಾರೆ. ವಿಶ್ವಧರ್ಮ ಪ್ರವಚನ, ರೈತರ ಮೇಳ ಈ ರೀತಿ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ತೋರಿಸಿದ್ದಾರೆ.

ಧಾರ್ಮಿಕ ಕಾಯಗಳು: ಮಠದ ಪರಂಪರೆಯ ಗುರುಗಳ ಗದ್ದುಗೆಗಳಿಗೆ ನಿತ್ಯ ಪೂಜೆ, ಶ್ರಾವಣ ಮಾಸ, ಪ್ರತಿ ಸೋಮವಾರ ಅಮಾವಾಸ್ಯೆ ಹುಣ್ಣಿಮೆಯಲ್ಲಿ ಭಜನೆ ಕಾರ್ಯಕ್ರಮ ನಡೆಯುತ್ತಿದೆ. ಗುರುಗಳು ಈಗಾಗಲೇ ಒಟ್ಟು ಹನ್ನೊಂದು ಅನುಷ್ಠಾನ ಗಳನ್ನು ಪೂರೈಸಿದ್ದು 'ಅನುಷ್ಠಾನ ಮೂರ್ತಿ'ಗಳೆಂದೇ ಹೆಸರು ಪಡೆದಿದ್ದಾರೆ. ಐದು ಸಾವಿರ ಭಕ್ತರಿಗೆ ಲಿಂಗಧಾರಣೆಯನ್ನು ಮಾಡಿಸಿ ವೀರಶೈವ ಧರ್ಮ ಬೆಳೆಯಲು ಕಾರಣ ಕರ್ತರಾಗಿದ್ದಾರೆ.

ಶೈಕ್ಷಣಿಕ ಸೇವೆ: ಶ್ರೀ ರೇವಣಸಿದ್ಧೇಶ್ವರ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿ ಸಂಸ್ಥೆಯನ್ನು ೧೯೯೧ ರಲ್ಲಿ ಪ್ರಾರಂಭಿಸಿ ಶ್ರೀ ರೇವಣಸಿದ್ಧೇಶ್ವರ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದ್ದಾರೆ. ಒಟ್ಟು ಮುನ್ನೂರು ವಿದ್ಯಾರ್ಥಿಗಳು ಈ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಮಠದಲ್ಲಿ ವಿದ್ಯಾರ್ಥಿನಿಲಯ ಸ್ಥಾಪಿಸದಿದ್ದರೂ ಕಲಿಯುವ ಬಡ ಮಕ್ಕಳಿಗೆ ಮಠದಲ್ಲಿ ಆಶ್ರಯ ಕಲ್ಪಿಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀವಿರೂಪಾಕ್ಷ ಶಿವಾಚಾರ್ಯಸ್ವಾಮಿಗಳು,ಶ್ರೀ ರೇವಣಸಿದ್ಧೇಶ್ವರಮಠ,ರಟಗಲ್ಲು, ಚಿಂಚೋಳಿ ತಾ, ಗುಲ್ಬರ್ಗಜಿಲ್ಲೆ.

ಮುರುಘೇಂದ್ರಸ್ವಾಮಿ ಮಠ: ರಟಗಲ್ಲು ಗ್ರಾಮದ ಹೊರಭಾಗದಲ್ಲಿ ಮುರುಘೇಂದ್ರಸ್ವಾಮಿ ಮಠವು ಸ್ಥಾಪನೆಯಾಗಿದೆ. ವಿರಕ್ತ ಸಂಪ್ರದಾಯದ ಈ ಮಠವು ೧೭೫೮ ರಲ್ಲಿ ಶ್ರೀ ರುದ್ರಮುನಿ ಶಿವಯೋಗಿಗಳಿಂದ ಸ್ಥಾಪನೆಯಾಗಿದೆ. ದಕ್ಷಿಣ ಕರ್ನಾಟಕದ ಮಲೆನಾಡಿನ ಸೊಬಗಿನ ನಾಡಾದ ಕೊಡಗಿನಿಂದ ಲೋಕಸಂಚಾರ ಕೈಗೊಂಡ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ರಟಗಲ್ಲು ಸಮೀಪದ ಗೌರಿ ಗುಡ್ಡದಲ್ಲಿ ನೆಲೆಸಿದ ಸಂದರ್ಭದಲ್ಲಿ ಇವರು ಮಾಡಿದ ಪವಾಡಗಳಿಗೆ ಮನಸೋತ ರಟಗಲ್ಲು ಗ್ರಾಮಸ್ಥರು ಗುರುಗಳನ್ನು ಗ್ರಾಮಕ್ಕೆ ಆಹ್ವಾನಿಸಿ ಮಠ ಸ್ಥಾಪಿಸಲು ಕಾರಣರಾಗುತ್ತಾರೆ.

ಮಠ ಸ್ಥಾಪನೆ: ಗುರುಗಳು ರಟಗಲ್ಲಿನಲ್ಲಿ ನೆಲೆಸಲು ಒಪ್ಪಿದ ಮೇಲೆ ಗ್ರಾಮದ ಧನಿಕರು ಕುಲ ಜಾತಿ ಎಂಬುದನ್ನು ಮರೆತು ಎಲ್ಲರೂ ಒಟ್ಟಾಗಿ ಮಠ ಸ್ಥಾಪನೆಗೆ ಜಾಗವ ನಿಗದಿಗೊಳಿಸಿದರು. ಈ ಸಂದರ್ಭದಲ್ಲಿ ಭಕ್ತರೆಲ್ಲಾ ಸೇರಿ ತಮ್ಮ ಕೈಲಾದ ಭೂಮಿ, ಧನ, ಕನಕ, ದವಸ, ಧಾನ್ಯಗಳನ್ನು ನೀಡಿದರು. ಈ ರೀತಿ ಮಠ ಸ್ಥಾಪನೆಗೆ ಸಕಲ ಸಿದ್ಧತೆಯನ್ನು ಮಾಡಿಕೊಂಡು ಗುರುಗಳನ್ನು ಗೌರಿ ಗುಡ್ಡದಿಂದ ರಟಗಲ್ಲಿಗೆ ಕರೆತಂದರು. ರಟಗಲ್ಲಿಗೆ ಆಗಮಿಸಿದ ಶ್ರೀ ರುದ್ರಮುನಿ ಸ್ವಾಮಿಗಳು ಸಂಗಪ್ಪ ರೇವಣ್ಣನವರು ನೀಡಿದ ಜಾಗದಲ್ಲಿ ಮಠವನ್ನು ಸ್ಥಾಪನೆ ಮಾಡಿರುತ್ತಾರೆ. ಇಲ್ಲಿ ನೆಲೆಸಿ ಸತ್ಕಾರ್ಯಗಳನ್ನು ನೆರವೇರಿಸಿ ತಮ್ಮ

ಉತ್ತರಾಧಿಕಾರಿ ಶ್ರೀ ಶಾಂತಲಿಂಗ ದೇವರಿಗೆ ಮಠವನ್ನು ಒಪ್ಪಿಸಿದರು.

ಪರಂಪರೆ:
೧. ಶ್ರೀ ಮ.ನಿ.ಪ್ರ. ರುದ್ರಮುನಿಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಎರಡನೆಯ ರುದ್ರಮುನಿಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಮುರುಘೇಂದ್ರಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಥೇಂಗಟಿ ರುದ್ರಪ್ಪಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಮಡಿವಾಳಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಮುರುಘೇಂದ್ರಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ನೀಲಕಂಠಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಈ ಮಠದ ಪರಂಪರೆಯ ಎರಡನೆಯ ಗುರುಗಳಾದ ಶ್ರೀ ಎರಡನೆಯ ರುದ್ರಮುನಿ ಸ್ವಾಮಿಗಳು (ಶ್ರೀ ಶಾಂತಲಿಂಗ ದೇವರು) ಹಿರಿಯ ಗುರುಗಳ ಕರಕಮಲ ಸಂಜಾತರಾಗಿ ಗುರುಗಳ ಸೇವೆಯನ್ನು ಮಾಡಿಕೊಂಡಿದ್ದರು. ಗುರುಗಳ ಕೃಪಾಶೀರ್ವಾದದಿಂದ ಸಂಸ್ಕಾರವಂತ ಗುರುವಾಗಿ ರೂಪುಗೊಂಡು, ರಟಗಲ್ಲು ಮಠದ ಪರಂಪರೆಯನ್ನು ಬೆಳೆಸಿದರು. ಇವರ ತರುವಾಯ ಶ್ರೀ ಮುರುಘೇಂದ್ರ ಸ್ವಾಮಿಗಳು ಅಧಿಕಾರಕ್ಕೆ ಬಂದರು. ೧೮೩೨ ರಲ್ಲಿ ಜನಿಸಿದ ಶ್ರೀ ಮುರುಘೇಂದ್ರ ಸ್ವಾಮಿಗಳು ಬಾಲ್ಯದಲ್ಲಿಯೇ ಆಧ್ಯಾತ್ಮವನ್ನು ಮೈಗೂಡಿಸಿಕೊಂಡು ಬೆಳೆದ್ದರು. ಸಂಸ್ಕೃತ, ವೇದಾಧ್ಯಯನ ಗಳಿಂದ ಸಂಸ್ಕಾರವಂತರಾದರು. ಇವರ ವಿದ್ವತ್ ಪಾಂಡಿತ್ಯ ಹಾಗೂ ಶಿವಪೂಜಾ ನಿಷ್ಠೆಯನ್ನು ಗಮನಿಸಿ ಗುರುಗಳನ್ನು ರಟಗಲ್ಲು ಮಠದ ಉತ್ತರಾಧಿಕಾರಿಯಾಗಿ ನೇಮಿಸಿದರು. ವೀರಶೈವ ಸಿದ್ಧಾಂತವನ್ನು ಆಳವಾಗಿ ಅಧ್ಯಯನ ಮಾಡಿದ್ದ ಶ್ರೀ ಮುರುಘೇಂದ್ರ ಸ್ವಾಮಿಗಳು ತಮ್ಮ ಅಚಲ ನಿಷ್ಠೆಯಿಂದ ಶಿವಯೋಗವನ್ನು ಸಾಧಿಸಿದರು. ಇವರು ಶಿವಯೋಗ ಸಿದ್ಧಿಯಿಂದ ಮಠದಲ್ಲಿ ಮಾಡಿದ ಅನೇಕ ಪವಾಡ ಕಾರ್ಯಗಳು ಜನರ ಕಣ್ಣನ್ನು ತೆರೆಸಿತು. ಇವರ ಕಾಲದಲ್ಲಿ ಮಠವು ಕಂಡರಿಯದ ರೀತಿಯಲ್ಲಿ ಬೆಳೆಯಿತು. ಇವರ ನಂತರ ನಾಲ್ಕನೆಯ ಪೀಠಾಧಿಪತಿಯಾಗಿ ಶ್ರೀ ಥೇಂಗಟಿ ರುದ್ರಪ್ಪ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡರು. ಇವರು ಅಧಿಕಾರ ವಹಿಸಿಕೊಂಡ ಕೆಲವೇ ದಿನದಲ್ಲಿ ಲಿಂಗೈಕ್ಯರಾದರು. ಇವರ ತರುವಾಯ ಶ್ರೀ ಮಡಿವಾಳ ಸ್ವಾಮಿಗಳು ಅಧಿಕಾರಕ್ಕೆ ಬಂದರು. ಇವರು ಶ್ರೀ ಮುರುಘೇಂದ್ರ ಸ್ವಾಮಿಗಳು ಆರಂಭಿಸಿದ್ದ ಪಾಠಶಾಲೆ ಮತ್ತು ಅವರ ಕಾಲದಲ್ಲಿ ಕೈಗೊಂಡಿದ್ದ ಧಾರ್ಮಿಕ ಚಟುವಟಿಕೆಗಳನ್ನು ಸಮರ್ಥವಾಗಿ ನಡೆಸಿಕೊಂಡು ಬಂದು ೧೯೨೨ ರಲ್ಲಿ ಲಿಂಗೈಕ್ಯರಾದರು. ಇವರ ತರುವಾಯ ಕೊಕಟೂರಿನ ಶ್ರೀ ಮಡಿವಾಳೇಶ್ವರರು ಶ್ರೀ ಮುರುಘೇಂದ್ರ ಸ್ವಾಮಿಗಳ ಹೆಸರನ್ನು ಅಭಿಧಾನ ಪಡೆದು ಮಠದ ಪರಂಪರೆಯ ಆರನೆಯ ಗುರುಗಳಾಗಿ ೧೯೨೩ ರಲ್ಲಿ ಅಧಿಕಾರ ವಹಿಸಿಕೊಂಡರು. ಇವರು ಮಹಾ ತಪಸ್ವಿಗಳಾಗಿದ್ದರು. ಇವರು ಅಥಣಿಯ ಶಿವಯೋಗಿಗಳಿಂದ ಆಶೀರ್ವಾದ ಪಡೆದು ಅವರ ಒಡನಾಟದಲ್ಲಿ ಪಕ್ವಗೊಂಡಿದ್ದರು. ಇಂತಹ ಮಹಾ ಪುರುಷರು ಪರಂಪರೆಯ ಮಠಕ್ಕೆ ಗುರುಗಳಾಗಿ ಅಪಾರವಾದುದ್ದನ್ನು ಸಾಧಿಸಿದರು. ಇವರ ತರುವಾಯ ಶ್ರೀ ನೀಲಕಂಠ ಸ್ವಾಮಿಗಳು ೧೯೮೦ ರಲ್ಲಿ ಪಟ್ಟಾಧಿಕಾರಕ್ಕೆ ಬಂದಿದ್ದಾರೆ. ಇವರು ರಟಗಲ್ಲಿನ ಶ್ರೀವಿರೂಪಾಕ್ಷಪ್ಪ ಮತ್ತು ಶ್ರೀಮತಿ ರಾಚಮ್ಮನವರ ಪುತ್ರರಾಗಿ ಜನಿಸಿ, ಪದವೀಧರರಾಗಿ ಸಾಮಾನ್ಯ ವಿದ್ಯಾಭ್ಯಾಸದ ಜೊತೆಗೆ ಸಂಸ್ಕೃತ ವೇದಾಧ್ಯಯನವನ್ನೂ ಮಾಡಿದ್ದಾರೆ. ಮಠದ ಧಾರ್ಮಿಕ ಕಾರ್ಯಗಳನ್ನು ಸಮರ್ಥವಾಗಿ ನಡೆಸಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಪುರಾತನ ಪರಂಪರೆಯ ಮೂರನೆಯ ಗುರುಗಳಾದ ಶ್ರೀ ಮುರುಘೇಂದ್ರ ಸ್ವಾಮಿಗಳ ಕಾಲದಲ್ಲಿ ಮಠವು ಪ್ರಗತಿ ಕಂಡಿತು. ಅಂದು ಸ್ಥಾಪಿಸಿದ ಭವ್ಯವಾದ ಮಠದ ಕಟ್ಟಡವು ಇಂದಿಗೂ ಅಚ್ಚಳಿಯದೆ ಒಂದು ಸ್ಮಾರಕವಾಗಿ ನಿಂತಿದೆ. ಈ ಕಟ್ಟಡವು ಮಠದ ಕಲ್ಪನೆಗೆ ಅನುಗುಣವಾಗಿ ನಿರ್ಮಿತವಾಗಿದೆ. ಇಂತಹ ಪುರಾತನ ಕಟ್ಟಡದಲ್ಲಿರುವ ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ, ಶ್ರಾವಣ ಮತ್ತು ಕಾರ್ತೀಕ ಮಾಸಗಳಲ್ಲಿ ವಿಶೇಷ ಪೂಜೆ ನಡೆಸಲಾಗುತ್ತಿದೆ. ಈ ವಿಶೇಷ ಸಂದರ್ಭಗಳಲ್ಲಿ ಅನ್ನ ದಾಸೋಹವನ್ನು ವ್ಯವಸ್ಥೆ ಮಾಡಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ನೀಲಕಂಠ ಸ್ವಾಮಿಗಳು, ಶ್ರೀ ಮುರುಘೇಂದ್ರಸ್ವಾಮಿಮಠ, ರಟಗಲ್ಲು, ಚಿಂಚೋಳಿ ತಾ, ಗುಲ್ಬರ್ಗ ಜಿಲ್ಲೆ.

ರಾಯಕೋಡು

ಚಿಂಚೋಳಿ ತಾಲ್ಲೂಕಿನ ರಾಯಕೋಡು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತೈದು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಶ್ರೀ ಕಟ್ಟಿಮನಿ ಹಿರೇಮಠ ಅಥವಾ ಶ್ರೀ ಶಿವಲಿಂಗೇಶ್ವರ ವಿರಕ್ತಮಠ ಎಂದು ಕರೆಯಲ್ಪಡುವ ಮಠವು ಸ್ಥಾಪನೆಯಾಗಿ, ಗ್ರಾಮದ ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ಬೆಳೆದಿದೆ.

ಕಟ್ಟಿಮನಿ ಹಿರೇಮಠ: ರಾಯಕೋಡು ಗ್ರಾಮದ ಮಧ್ಯಭಾಗದಲ್ಲಿ ಶ್ರೀ ಕಟ್ಟಿಮನಿ ಹಿರೇಮಠವು ಕಾಶಿಪೀಠದ ಶಾಖಾ ಮಠವಾಗಿ ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದಿದೆ. ಪುರಾತನ ಈ ಮಠವನ್ನು ಶ್ರೀ ಶಿವಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು ಸ್ಥಾಪಿಸಿದರು ಎಂದು ಹೇಳಲಾಗುತ್ತದೆ. ಮಠದ ಸ್ಥಾಪನೆಯ ಕಾಲಮಾನದ ಬಗ್ಗೆ ನಿಖರವಾದ ಮಾಹಿತಿ ದೊರೆಯುವುದಿಲ್ಲ. ಶ್ರೀ ಶಿವಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು ಶಿವಯೋಗ ಸಿದ್ಧಿಯನ್ನು ಪಡೆದು ಆಧ್ಯಾತ್ಮ ಚಿಂತನೆಯ ಸಾಕಾರ ಮೂರ್ತಿಯಾಗಿ ಬೆಳೆದು, ವೀರಶೈವ ಧರ್ಮದ ಪ್ರಚಾರಕ್ಕಾಗಿ ನಾಡನ್ನೆಲ್ಲಾ ಸುತ್ತಿದರು. ಗುರುಗಳು ಎಲ್ಲೆಲ್ಲಿ ನೆಲೆನಿಂತು ಮಠ ಸ್ಥಾಪಿಸಿದ ಭಾಗಗಳೆಲ್ಲ ಧಾರ್ಮಿಕ ಜಾಗೃತಸ್ಥಳವಾಗಿ ರೂಪುಗೊಂಡವು. ಶ್ರೀ ಶಿವಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು ರಾಯಕೋಡು ಗ್ರಾಮದ ಹೊರಭಾಗದ ತೋಪಿನಲ್ಲಿ ನೆಲೆ ನಿಂತು ಅನುಷ್ಠಾನಗೊಂಡು ಅನೇಕ ಪವಾಡಗಳನ್ನು ಮಾಡಿದರು. ಇವರ ಕಾಲದಲ್ಲಿ ವೀರಶೈವಧರ್ಮ ಪ್ರಗತಿದಾಯಕವಾಗಿ ಬೆಳೆಯಿತು. ಅವರು ಸ್ಥಾಪಿಸಿದ ಮಠವು ಅಸಹಾಯಕರಿಗೆ ಒಂದು ಆಶ್ರಯ ಸ್ಥಾನವಾಗಿದೆ. ಕಾಯಕಯೋಗದಿಂದ ಬದುಕಿ ಸಮಾಜವನ್ನು ಶ್ರೀಮಂತಗೊಳಿಸಿದ ಗುರುಗಳು ಜೀವಂತ ಸಮಾಧಿಯಾಗಿ ಈ ಕ್ಷೇತ್ರವನ್ನು ಸುಕ್ಷೇತ್ರಗೊಳಿಸಿದರು.

ಮಠದ ಪರಂಪರೆ:

೧. ಷ.ಬ್ರ.ಶ್ರೀ ಶಿವಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
(೩,೪,೫,೬ ನೆಯ ಗುರುಗಳ ಹೆಸರುಗಳು ಲಭ್ಯವಿಲ್ಲ)
೭. ಷ.ಬ್ರ.ಶ್ರೀ ರೇವಣಸಿದ್ಧ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಪರಂಪರೆಯ ಕರ್ತೃಗುರುಗಳ ನಂತರ ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು ಧಾರ್ಮಿಕ ಕಾರ್ಯಗಳನ್ನು ಹಮ್ಮಿಕೊಂಡು ಮಠವು ಹೆಸರು ಪಡೆಯಲು ಕಾರಣರಾದರು. ಇವರ ಕಾಲದಲ್ಲಿ ದಾಸೋಹ ಸೇವೆ ಚುರುಕುಗೊಂಡಿತ್ತು. ಅಷ್ಟಾವರಣ,ಪಂಚಾಚಾರ ಹಾಗೂ ಷಟ್‌ಸ್ಥಲ ಸಿದ್ಧಾಂತದ ಅನ್ವಯ ಮಠದಲ್ಲಿ ಧಾರ್ಮಿಕ ಆಚರಣೆಗಳನ್ನು ನಡೆಸುತ್ತಾ ಆಚಾರ ವಿಚಾರ ಒಂದಾಗಿ ಬದುಕಿದ್ದ ಇವರು ಅಪಾರ ಶಿಷ್ಯ ಸಂಪತ್ತನ್ನು ಗಳಿಸಿ ಭಕ್ತರ ಪ್ರೀತಿಗೆ ಪಾತ್ರರಾಗಿದ್ದರೆಂದು ಹೇಳಲಾಗುತ್ತಿದೆ. ಇವರ ತರುವಾಯ ಆಡಳಿತಕ್ಕೆ ಬಂದ ನಾಲ್ಕು ಜನ ಗುರುಗಳ ಹೆಸರುಗಳು ಮತ್ತು ಅವರು ನಡೆಸಿದ ಧಾರ್ಮಿಕ ಚಟುವಟಿಕೆಗಳ ಬಗ್ಗೆ ಅಸ್ಪಷ್ಟವಾದ ಮಾಹಿತಿಗಳು ದೊರೆಯುತ್ತವೆ. ನಂತರ ಪರಂಪರೆಯ ಏಳನೆಯ ಗುರುಗಳಾಗಿ ಅಧಿಕಾರವನ್ನು ವಹಿಸಿಕೊಂಡ ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ಶಿವಪೂಜಾನಿಷ್ಠರಾಗಿ, ಮಹಾ ದಾಸೋಹಿಗಳಾಗಿ ಸಮಾಜದಲ್ಲಿ ಧರ್ಮವು ಬೇರೂರುವಂತೆ ಮಾಡಿದರು. ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಆರ್ಥಿಕವಾಗಿ ಸದೃಢಗೊಳಿಸಿ ೧೯೭೫ ರಲ್ಲಿ ಲಿಂಗೈಕ್ಯರಾಗಿದ್ದಾರೆ.

ಪರಂಪರೆಯ ಎಂಟನೆಯ ಗುರುಗಳಾಗಿ ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ಆಂಧ್ರ ಪ್ರದೇಶದ ಕೊಡಗಲ್ಲು ಜಿಲ್ಲೆಯ ರಂಗರೆಡ್ಡಿ ತಾಲ್ಲೂಕಿನ ಶ್ರೀ ಪಿ.ಎಸ್.ಕೆಂಪಳ್ಳಿಯ ಶ್ರೀಮತಿ ಮಹಾದೇವಮ್ಮ ಮತ್ತು ಶ್ರೀ ಚಿನ್ನಯ್ಯನವರ ಪುತ್ರರಾಗಿ ೧೯೬೮ ರ ಮೇ ಐದರಂದು ಜನಿಸಿದರು. ಇವರು ಆಧ್ಯಾತ್ಮ ಚಿಂತಕರಾಗಿ ಧರ್ಮಶಾಸ್ತ್ರಗಳ ಬಗ್ಗೆ ಆಳವಾದ ಅಧ್ಯಯನ ಕೈಗೊಂಡು ಮಹಾ ಮೇಧಾವಿಗಳಾಗಿದ್ದಾರೆ. ಇವರು ೧೯೭೭ ರಲ್ಲಿ ಮಠದ ಅಧಿಕಾರವನ್ನು ವಹಿಸಿಕೊಂಡರು.

ಅಭಿವೃದ್ಧಿ ಕಾರ್ಯಗಳು: ಇವರು ಅಧಿಕಾರಕ್ಕೆ ಬಂದ ಮೇಲೆ ಮಠದ ಚಟುವಟಿಕೆಗಳಿಗೆ ಶಿಸ್ತುಬದ್ಧತೆ ತಂದರು. ಅಲ್ಲದೆ ಪುರಾತನ ಕಾಲದ ಮಠದ ಕಟ್ಟಡವನ್ನು ನವೀಕರಣಗೊಳಿಸಿದರು. ಅರೇಬಿಯನ್ ಶೈಲಿಯ ಈ ಕಲ್ಲಿನ ಕಟ್ಟಡ ಒಂದು

ವಿಶೇಷ ಸ್ಮಾರಕದಂತಿದೆ. ಜಂತಿಗೆ ಬೃಹದಾಕಾರದ ಕಲ್ಲುಗಳನ್ನು ಬಳಸಿ ನಿರ್ಮಿಸಿರುವ ಮಠ ಹಾಗೂ ದೇವಸ್ಥಾನ ಭವ್ಯವಾಗಿದ್ದು ಗುರುಗಳು ಈ ಕಟ್ಟಡವನ್ನು ಸುಸ್ಥಿತಿಯಲ್ಲಿಟ್ಟಿದ್ದಾರೆ. ಕಾಯಕಯೋಗಿಯಾಗಿ ಮಠದ ಆಸ್ತಿಯನ್ನು ಅಭಿವೃದ್ಧಿ ಪಡಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಕಲ್ಲಿನ ಮಠದ ಪ್ರಾಂಗಣದಲ್ಲಿ ಕರ್ತೃಗದ್ದುಗೆಯು ಸೇರಿದಂತೆ ಒಟ್ಟು ಹತ್ತು ಗದ್ದುಗೆಗಳು ಮಠದಲ್ಲಿ ಸ್ಥಾಪನೆಯಾಗಿವೆ. ಈ ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ, ಶ್ರಾವಣಮಾಸದಲ್ಲಿ ರುದ್ರಾಭಿಷೇಕ, ಅಮಾವಾಸ್ಯೆ ಮತ್ತು ಹುಣ್ಣಿಮೆಯಲ್ಲಿ ವಿಶೇಷ ಪೂಜೆ ಜೊತೆಗೆ ಭಜನೆ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಶಿವಲಿಂಗೇಶ್ವರರ ಜಾತ್ರೆಯನ್ನು ಅಕ್ಟೋಬರ್ ತಿಂಗಳಲ್ಲಿ ಎರಡು ದಿನಗಳ ಕಾಲ ವಿಜೃಂಭಣೆಯಿಂದ ನಡೆಸಲಾಗುತ್ತಿದೆ. ಶ್ರೀ ರೇವಣಸಿದ್ಧೇಶ್ವರರ ಜಾತ್ರೆಯನ್ನು ಜುಲೈ ತಿಂಗಳಲ್ಲಿ ನಡೆಸಲಾಗುತ್ತಿದೆ. ಈ ವಿಶೇಷ ಸಂದರ್ಭಗಳಲ್ಲಿ ವಿಶೇಷ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಗುರುಗಳು ಅನುಷ್ಠಾನ ಮೂರ್ತಿಗಳಾಗಿ ಈವರೆವಿಗೆ ಐದು ಅನುಷ್ಠಾನಗಳನ್ನು ಮಾಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಚನ್ನಬಸವಶಿವಾಚಾರ್ಯಸ್ವಾಮಿಗಳು, ಶ್ರೀ ಕಟ್ಟಿಮನಿಹಿರೇಮಠ, ರಾಯಕೋಡು, ಚಿಂಚೋಳಿ ತಾ, ಗುಲ್ಬರ್ಗಜಿಲ್ಲೆ.

ಸುಲೇಪೇಟೆ

ಚಿಂಚೋಳಿ ತಾಲ್ಲೂಕಿನ ಸುಲೇಪೇಟೆ ಗ್ರಾಮವು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಈ ಗ್ರಾಮವು ವೀರಶೈವರ ಧಾರ್ಮಿಕ ಕೇಂದ್ರವಾಗಿ ಬೆಳೆದಿದೆ. ಇದಕ್ಕೆ ಉದಾಹರಣೆ ಎಂಬಂತೆ ಈ ಗ್ರಾಮದಲ್ಲಿ ಶ್ರೀಖಟ್ವಾಂಗೇಶ್ವರಮಠ, ಶ್ರೀ ತೆಂಗಿನಮಠ, ಶ್ರೀ ಹಿರೇಮಠ, ಶ್ರೀ ಮಹಾಂತೇಶ್ವರಮಠ ಎಂಬ ನಾಲ್ಕು ಮಠಗಳು ಸ್ಥಾಪನೆಯಾಗಿವೆ. ಪುರಾತನ ಕಾಲದ ಈ ಮಠಗಳು ತಮ್ಮ ಶಕ್ತಿಗನುಸಾರ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದು ಈ ಭಾಗದಲ್ಲಿವೀರಶೈವ ಧರ್ಮ ಹೆಚ್ಚು ಪ್ರಚಾರವಾಗುವಂತೆ ಮಾಡಿವೆ.

ಖಟ್ವಾಂಗೇಶ್ವರ ಮಠ: ಸುಲೇಪೇಟೆಯ ಗ್ರಾಮದ ಮಧ್ಯಭಾಗದಲ್ಲಿ ಶ್ರೀ ಖಟ್ವಾಂಗೇಶ್ವರ ವಿರಕ್ತ ಮಠವು ಸ್ಥಾಪನೆಯಾಗಿದೆ. ಈ ಮಠದ ಕರ್ತೃಗುರುಗಳು ಶ್ರೀ ಖಟ್ವಾಂಗೇಶ್ವರ ಸ್ವಾಮಿಗಳು. ಕಾರವಾರ ಜಿಲ್ಲೆಯ ಉಳುವಿಯಿಂದ ಸಂಚಾರಕ್ಕೆ ಬಂದ ಶ್ರೀ ಖಟ್ವಾಂಗೇಶ್ವರ ಸ್ವಾಮಿಗಳು ಯಾವಾಗಲೂ ತಮ್ಮ ಕೈಯಲ್ಲಿ ತ್ರಿಶೂಲವನ್ನು ಹಿಡಿದು ಸಂಚರಿಸುತ್ತಿದ್ದ ಕಾರಣ ಇವರಿಗೆ ಶ್ರೀ ಖಟ್ವಾಂಗೇಶ್ವರರು ಎಂದು ಜನ ರೂಢಿಗತವಾಗಿ ಕರೆಯುತ್ತಿದ್ದರಂತೆ. ಪರಶಿವನ ಅವತಾರವೆಂದು ಭಕ್ತರು ಬಣ್ಣಿಸುತ್ತಿದ್ದರಂತೆ. ಇವರು ಲೋಕಸಂಚಾರ ಕೈಗೊಂಡು ಅನೇಕ ಸ್ಥಳಗಳಲ್ಲಿ ನೆಲೆಸಿ ಮಠವನ್ನು ಸ್ಥಾಪಿಸಿರುತ್ತಾರೆ.

ಮಠ ಸ್ಥಾಪನೆ: ಶ್ರೀ ಖಟ್ವಾಂಗೇಶ್ವರ ಸ್ವಾಮಿಗಳು ಸುಲೇಪೇಟೆಯ ಈ ಎತ್ತರದ ಪ್ರದೇಶದಲ್ಲಿ ಅನುಷ್ಠಾನಕ್ಕೆ ಕುಳಿತಿದ್ದಾಗ ಜನರದೃಷ್ಟಿಗೆ ಬೀಳುತ್ತಾರೆ. ಆಗ ಭಕ್ತರು ತಪಸ್ಸಿಗೆ ಕುಳಿತ ಗುರುಗಳನ್ನು ಸತ್ಕರಿಸಿ ಮಠವನ್ನು ಸ್ಥಾಪಿಸಿಕೊಡುತ್ತಾರೆ. ಹದಿನೇಳನೆಯ ಶತಮಾನದಲ್ಲಿ ಶ್ರೀ ಖಟ್ವಾಂಗೇಶ್ವರ ಸ್ವಾಮಿಗಳಿಂದ ಸ್ಥಾಪನೆಗೊಂಡ ಮುರುಘಾ ಸಮಯದ ಈ ಮಠವು ಈತನಕ ಬೆಳೆದು ಬಂದಿದೆ. ಶ್ರೀ ಖಟ್ವಾಂಗೇಶ್ವರರು ಮಠವನ್ನು ಧಾರ್ಮಿಕ ತಳಹದಿಯ ಮೇಲೆ ಬೆಳೆಸಿ ಈ ಭಾಗದ ವಿರಕ್ತ ಮಠಗಳಿಗೆ ಹಿರಿಯಣ್ಣನಂತಿದ್ದು ಮಾರ್ಗದರ್ಶನ ನೀಡುತ್ತಿದ್ದರು. ಇವರ ಕಾಲದಲ್ಲಿ ವೀರಶೈವಧರ್ಮವು ಪ್ರಭಾವಯುತವಾಗಿ ಬೆಳೆಯಿತು.

ಪರಂಪರೆ:

೧. ಶ್ರೀ ಮ.ನಿ.ಪ್ರ. ಖಟ್ವಾಂಗೇಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಚನ್ನಬಸವಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಸದಾಶಿವಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಎರಡನೆಯ ಖಟ್ವಾಂಗೇಶ್ವರಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಚನ್ನಬಸವ ಸ್ವಾಮಿಗಳು ಶಿವಪೂಜಾ ನಿಷ್ಠರಾಗಿ, ಶರಣ ತತ್ತ್ವವನ್ನು ಪ್ರಚಾರ ಪಡಿಸಿ ವೀರಶೈವ ಧರ್ಮವನ್ನು ಅಭಿವೃದ್ಧಿ ಪಡಿಸಿದರು. ಇವರ ತರುವಾಯ ಶ್ರೀ ಸಿದ್ಧಲಿಂಗ ಸ್ವಾಮಿಗಳು ಮಠದ ಪರಂಪರೆಯ ಮೂರನೆಯ ಗುರುಗಳಾಗಿ ಅಧಿಕಾರವನ್ನು ವಹಿಸಿಕೊಂಡರು. ಇವರು

ವೀರಶೈವ ಧರ್ಮ ಮತ್ತು ಸಂಸ್ಕೃತಿಯ ಸಂಘಟಕರಾಗಿ ಸಮಾಜವನ್ನು ಬೆಳಸಿದರು. ವೀರಶೈವ ಧರ್ಮದ ಆಚಾರ ವಿಚಾರಗಳನ್ನು ಭಕ್ತರು ಆಚರಣೆಗೆ ತರುವಂತೆ ಪ್ರೇರಣೆ ನೀಡಿದರು. ಇವರು ಕಲ್ಬುರ್ಗಿ ಶ್ರೀ ಶರಣ ಬಸವೇಶ್ವರರ ದಾಸೋಹ ಕಾರ್ಯದಲ್ಲಿ ತೊಡಗಿ ಶರಣ ಸೇವೆಯನ್ನು ಸಲ್ಲಿಸಿರುತ್ತಾರೆ. ಇವರ ನಂತರ ಕೆಲವು ದಿನ ಮಠವು ಖಾಲಿ ಉಳಿದಿತ್ತು. ಈಗ ಮಠದ ಐದನೆಯ ಪಟ್ಟಾಧ್ಯಕ್ಷರಾಗಿ ಶ್ರೀ ಎರಡನೆಯ ಖಟ್ವಾಂಗೇಶ್ವರರು ಅಧಿಕಾರಕ್ಕೆ ಬಂದಿದ್ದಾರೆ. ಇವರು ಪರಂಪರೆಯ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಶರಣರ ತತ್ತ್ವಗಳನ್ನು ಪ್ರಚಾರಪಡಿಸುವ ನಿಟ್ಟಿನಲ್ಲಿ ಮುಂದಾಗಿದ್ದಾರೆ.

ಪುರಾತನ ಕಾಲದ ಮಠದ ಕಟ್ಟಡವು ವಿಶಾಲವಾಗಿ ನಿರ್ಮಾಣಗೊಂಡಿದೆ. ಮಠದ ಆವರಣದಲ್ಲಿ ಪ್ರೌಢಶಾಲೆ ನಡೆಯುತ್ತಿದೆ. ಇಲ್ಲಿ ನಿತ್ಯದಾಸೋಹ, ಗದ್ದುಗೆಗಳಿಗೆಪೂಜೆ, ಶ್ರಾವಣ ಮತ್ತು ಕಾರ್ತೀಕಮಾಸಗಳಲ್ಲಿ ವಿಶೇಷಪೂಜೆ ನಡೆಯುತ್ತಿದೆ. ಈಗಿನ ಗುರುಗಳು ಕ್ರಿಯಾತ್ಮಕವಾಗಿ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಾ ಮಠವನ್ನು ಬೆಳೆಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಖಟ್ವಾಂಗೇಶ್ವರ ಸ್ವಾಮಿಗಳು, ಶ್ರೀ ಖಟ್ವಾಂಗೇಶ್ವರವಿರಕ್ತಮಠ, ಸುಲೇಪೇಟೆ, ಚಿಂಚೋಳಿ ತಾ, ಗುಲ್ಬರ್ಗಜಿಲ್ಲೆ.

ತೆಂಗಿನ ಮಠ: ಸುಲೇಪೇಟೆಯ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ತೆಂಗಿನ ಮಠವು ರಂಭಾಪುರಿ ಪೀಠದ ಶಾಖಾ ಮಠವಾಗಿ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿದೆ. ಪುರಾತನ ಪರಂಪರೆಯುಳ್ಳ ಈ ಮಠದ ಸ್ಥಾಪಕರು ಹಾಗೂ ಬೆಳೆದು ಬಂದ ಪರಂಪರೆಯ ಬಗ್ಗೆ ಆಧಾರಗಳ ಕೊರತೆಯಿಂದ ಮಾಹಿತಿಗಳಿಲ್ಲ. ಹನ್ನೆರಡು ವರ್ಷಗಳ ಹಿಂದೆ ಶ್ರೀ ಸಿದ್ದಯ್ಯ ಶಿವಾಚಾರ್ಯ ಸ್ವಾಮಿಗಳು ಆಡಳಿತ ನಡೆಸಿ ಲಿಂಗೈಕ್ಯರಾಗಿದ್ದಾರೆ. ಇವರ ತರುವಾಯ ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ.

ಪುರಾತನ ಕಾಲದ ಹಳೆಯ ಕಟ್ಟಡದಲ್ಲಿ ಐದು ಗದ್ದುಗೆಗಳು ಸ್ಥಾಪನೆಯಾಗಿವೆ. ಈ ಗದ್ದುಗೆಗಳಿಗೆ ನಿತ್ಯ ಪೂಜೆ ನಡೆಸಲಾಗುತ್ತಿದೆ. ಶ್ರಾವಣ ಮತ್ತು ಶಿವರಾತ್ರಿಯ ಸಂದರ್ಭದಲ್ಲಿ ವಿಶೇಷ ಪೂಜೆ ನಡೆಸಲಾಗುತ್ತಿದೆ. ಮಠದ ಆಸ್ತಿಯಾಗಿ ಎಂಟು ಎಕರೆ ಜಮೀನಿದ್ದು ಇದನ್ನು ಅಭಿವೃದ್ಧಿಗೊಳಿಸಲಾಗಿದೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು, ಶ್ರೀ ತೆಂಗಿನಮಠ, ಸುಲೇಪೇಟೆ, ಚಿಂಚೋಳಿ ತಾ, ಗುಲ್ಬರ್ಗ ಜಿಲ್ಲೆ.

ಹಿರೇಮಠ: ಸುಲೇಪೇಟೆಯ ಮಧ್ಯಭಾಗದಲ್ಲಿರುವ ಶ್ರೀ ಹಿರೇಮಠವು ರಂಭಾಪುರಿ ಪೀಠದ ಶಾಖಾಮಠವಾಗಿ ಬೆಳೆದಿದೆ. ಈ ಮಠದ ಸ್ಥಾಪನೆಯ ಬಗ್ಗೆ ಹಾಗೂ ಪರಂಪರೆಯ ಬಗ್ಗೆ ನಿಖರ ಮಾಹಿತಿ ಇಲ್ಲ. ಈ ಪುರಾತನ ಮಠದಲ್ಲಿ ಐದು ಗದ್ದುಗೆಗಳು ನೋಡಲು ಸಿಗುತ್ತವೆ. ಉತ್ತರಾಧಿಕಾರಿಗಳಿಲ್ಲದೆ ಅನೇಕ ವರ್ಷಗಳಿಂದ ಮಠವು ಖಾಲಿ ಉಳಿದಿದೆ. ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯ ಪೂಜಾಕಾರ್ಯವನ್ನು ಹಾಗೂ ಶ್ರಾವಣಮಾಸದ ಕಾಲದಲ್ಲಿ ಪುರಾಣವನ್ನು ನಡೆಸಲಾಗುತ್ತಿದೆ. ಈ ಎಲ್ಲಾ ಕಾರ್ಯಗಳನ್ನು ಮಠದ ವಂಶಸ್ಥರಾದ ಶ್ರೀ ಭೂಪಾಲ ತೇಗನೂರು ಶಿವಲಿಂಗಯ್ಯ ಹಿರೇಮಠ ಎಂಬುವರು ನೋಡಿಕೊಳ್ಳುತ್ತಿದ್ದಾರೆ.

ವಿಳಾಸ: ಶ್ರೀ ಶಿವಲಿಂಗಯ್ಯ ಹಿರೇಮಠ, ಶ್ರೀ ಹಿರೇಮಠ, ಸುಲೇಪೇಟೆ, ಚಿಂಚೋಳಿ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಹೊಸಳ್ಳಿ

ಚಿಂಚೋಳಿ ತಾಲ್ಲೂಕಿನ ಹೊಸಳ್ಳಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಭಾಗಕ್ಕೆ ಮೂವತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ.

ಹಿರೇಮಠ: ಹೊಸಳ್ಳಿ ಗ್ರಾಮದಲ್ಲಿ ರಂಭಾಪುರಿ ಪೀಠದ ಶಾಖಾಮಠವಾದ ಪುತ್ರವರ್ಗದ ಹಿರೇಮಠವು ಸ್ಥಾಪನೆಯಾಗಿದೆ. ಮಠದ ಕರ್ತೃ ಗುರುಗಳಾದ ಶ್ರೀ ನಿರಂಜನೇಶ್ವರ ಗುರುಗಳು ಮಹಾರಾಷ್ಟ್ರದಿಂದ ಲೋಕ ಸಂಚಾರ ಕೈಗೊಂಡು ಕಮಲಾಪುರದಲ್ಲಿ ನೆಲೆ ನಿಂತು ನಂತರ ಭರತನೂರು, ಸುಲೇಪೇಟೆ, ಗುರುಮಠಕಲ್ಲು, ರುದ್ರನೂರು ಈ ರೀತಿ ಅನೇಕ ಸ್ಥಳಗಳಲ್ಲಿ ನೆಲೆ ನಿಂತು ಧರ್ಮಜಾಗೃತಿಯನ್ನುಂಟುಮಾಡಿ ಹೊಸಳ್ಳಿ ಗ್ರಾಮಕ್ಕೆ ಆಗಮಿಸಿ ಮಠವನ್ನು ಸ್ಥಾಪನೆ ಮಾಡಿರುತ್ತಾರೆ. ಮಠದ ಪರಂಪರೆಯಲ್ಲಿ

ಬಂದಂತಹ ಗುರುಗಳ ಹೆಸರು ಲಭ್ಯವಿಲ್ಲ. ಆದರೆ ಮೂವತ್ತೈದು ವರ್ಷಗಳ ಹಿಂದೆ ಲಿಂಗೈಕ್ಯರಾದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಈ ಮಠದ ಪರಂಪರೆಯನ್ನು ಉಳಿಸಿ ಬೆಳೆಸುವಲ್ಲಿ ಶ್ರಮವಹಿಸಿದ್ದಾರೆ. ಇವರ ತರುವಾಯ ಮಠ ಪುನಃ ಖಾಲಿ ಉಳಿಯಿತು. ಈಗ ಶ್ರೀ ಶಿವಶಂಕರಯ್ಯ ಮತ್ತು ಶ್ರೀಮತಿ ಸಂಗಮ್ಮನವರ ಪುತ್ರರಾಗಿ ೧೯೭೨ರಲ್ಲಿ ಜನಿಸಿದ ಶ್ರೀ ಸಿದ್ಧವೀರ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಗುರುಗಳು ಅಧ್ಯಯನ ಮಾಡುತ್ತಿರುವ ಕಾರಣದಿಂದ ಪಟ್ಟಾಧಿಕಾರವನ್ನು ಮಾಡಲಾಗಿಲ್ಲ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗುರುಗಳ ಮೂರು ಗದ್ದುಗೆಗಳು ನಿರ್ಮಾಣಗೊಂಡಿವೆ. ಈ ಗದ್ದುಗೆಗಳಿಗೆ ನಿತ್ಯ ಪೂಜಾ ಕಾರ್ಯವನ್ನು ನೆರವೇರಿಸಲಾಗುತ್ತಿದೆ. ಶ್ರಾವಣ ಮತ್ತು ಪ್ರತಿ ಸೋಮವಾರ ರುದ್ರಾಭಿಷೇಕ ಪೂಜೆ, ಅಮಾವಾಸ್ಯೆಯ ಹಿಂದಿನ ದಿನ ಶಿವಾನುಭವ ಗೋಷ್ಠಿಯನ್ನು ಏರ್ಪಡಿಸಿ ಧಾರ್ಮಿಕ ವಿಷಯಗಳ ಬಗ್ಗೆ ಉಪನ್ಯಾಸ ಏರ್ಪಡಿಸಲಾಗುತ್ತಿದೆ. ಶಿವರಾತ್ರಿ ಮತ್ತು ಕಾರ್ತೀಕ ಮಾಸಗಳಲ್ಲಿ ಹಿರಿಯ ಗುರುಗಳ ಪುಣ್ಯ ತಿಥಿಯನ್ನು ಮಾಡಲಾಗುತ್ತಿದೆ. ಮಠದ ಆಸ್ತಿಯಾಗಿ ಮೂವತ್ತು ಎಕರೆ ಜಮೀನಿದ್ದು ಇದನ್ನು ಅಭಿವೃದ್ಧಿಪಡಿಸಲಾಗಿದೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧಲಿಂಗ ದೇವರು, ಶ್ರೀ ಹಿರೇಮಠ, ಹೊಸಳ್ಳಿ, ಚಿಂಚೋಳಿ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

❑

ಜೇವರಗಿ ತಾಲ್ಲೂಕು

ಗುಲ್ಬರ್ಗ ಜಿಲ್ಲೆಯ ಜೇವರ್ಗಿ ತಾಲ್ಲೂಕು, ಕೃಷ್ಣಾನದಿಯ ಹರಿಯುವಿಕೆಯಿಂದ ಪ್ರಾಕೃತಿಕವಾಗಿ ಶ್ರೀಮಂತಿಕೆ ಪಡೆದಿದೆ. ಇಲ್ಲಿ ವೀರಶೈವ ಧರ್ಮ ಪ್ರಬಲವಾಗಿ ಬೆಳೆದಿದೆ. ಪ್ರಸ್ತುತ ಈ ತಾಲ್ಲೂಕಿನಲ್ಲಿ ಹತ್ತು ಮಠಗಳು ಅಸ್ತಿತ್ವದಲ್ಲಿದ್ದು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಆಲೂರು

ಜೇವರಗಿ ತಾಲ್ಲೂಕಿನ ಆಲೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಮೂವತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಪುರಾತನ ಪರಂಪರೆಯ ಶ್ರೀ ಹಿರೇಮಠವು ಸ್ಥಾಪನೆಯಾಗಿ ಈ ಭಾಗದ ಪ್ರಭಾವಿ ಮಠವಾಗಿ ಬೆಳೆದಿದೆ.

ಸಂಸ್ಥಾನ ಹಿರೇಮಠ: ಆಲೂರು ಗ್ರಾಮದ ಮಧ್ಯಭಾಗದಲ್ಲಿ ಶ್ರೀ ರಂಭಾಪುರಿಪೀಠದ ಶಾಖಾಮಠವಾದ 'ಶ್ರೀ ಹಿರೇಮಠ'ವು ಸ್ಥಾಪನೆಯಾಗಿದೆ. ಶ್ರೀ ಕೆಂಚಬಸವ ಶಿವಾಚಾರ್ಯ ಸ್ವಾಮಿಗಳಿಂದ ಪ್ರಾರಂಭಗೊಂಡ ಈ ಮಠವು ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ವೀರಶೈವ ಧರ್ಮದ ಬೆಳವಣಿಗೆಗೆ ನೆರವಾಗಿದೆ. ಶ್ರೀ ಕೆಂಚಬಸವ ಶಿವಾಚಾರ್ಯ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿ ಅಷ್ಟಾವರಣ, ಪಂಚಾಚಾರ ಮತ್ತು ಷಟ್‌ಸ್ಥಲ ಸಿದ್ಧಾಂತವನ್ನು ಆಚರಣೆಗೆ ತಂದು ಭಕ್ತರನ್ನು ಸಂಸ್ಕಾರವಂತರನ್ನಾಗಿ ಮಾಡಿದ್ದರು.

ಪರಂಪರೆ:
೧. ಷ.ಬ್ರ.ಶ್ರೀ ಕೆಂಚಬಸವ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಎರಡನೆಯ ಕೆಂಚಬಸವ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಕೆಂಚ ವೃಷಭೇಂದ್ರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಕರ್ತೃ ಗುರುಗಳ ಹೆಸರಿನಲ್ಲಿ ಮುಂದುವರಿದಿರುವ ಕಾರಣ ಈವರೆಗೆ ಆಡಳಿತ ನಡೆಸಿದ ಗುರುಗಳ ಬಗ್ಗೆ ನಿಖರವಾದ ಮಾಹಿತಿಗಳು ಲಭ್ಯವಿಲ್ಲ. ಮಠದ ಆವರಣದಲ್ಲಿ ಹನ್ನೊಂದು ಗದ್ದುಗೆಗಳು ಸ್ಥಾಪನೆಯಾಗಿವೆ. ಈಗಿನ ಪಟ್ಟಾಧ್ಯಕ್ಷರಾದ ಶ್ರೀ ಕೆಂಚವೃಷಭೇಂದ್ರ ಶಿವಾಚಾರ್ಯ ಸ್ವಾಮಿಗಳು ೧೯೭೫ರ ಮೇ ಇಪ್ಪತ್ತೊಂಬತ್ತರಂದು ಅಧಿಕಾರಕ್ಕೆ ಬಂದ ಮೇಲೆ ಮಠದ ಹಳೆಯ ಕಟ್ಟಡವನ್ನು ನವೀಕರಿಸಿ, ಭವ್ಯವಾದ ಕಟ್ಟಡವನ್ನು ನಿರ್ಮಿಸಿದ್ದಾರೆ. ಪುರಾತನ ಕಾಲದಿಂದಲೂ ಮಠದ ಆಸ್ತಿಯಾಗಿರುವ ನೂರಾರು ಎಕರೆ ಜಮೀನನ್ನು ಅಭಿವೃದ್ಧಿಗೊಳಿಸಿ, ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಸ್ಥಾಪನೆಯಾಗಿರುವ ಕರ್ತೃ ಗುರುಗಳ ಗದ್ದುಗೆ ಹಾಗೂ ಶ್ರೀ ಕೆಂಚಬಸವ ಸ್ವಾಮಿಗಳ ಗದ್ದುಗೆಗೆ ನಿತ್ಯ ಪೂಜೆ, ವಾರ್ಷಿಕ ಪುಣ್ಯಾರಾಧನೆ ಕಾರ್ಯಕ್ರಮವು ದವಣದ ಹುಣ್ಣಿಮೆಯಂದು ನಡೆಸಲಾಗುತ್ತಿದೆ. ಈ ಸಂದರ್ಭಗಳಲ್ಲಿ ಅನ್ನ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಜವಳಗಿ, ಬವಸಿಗೆ, ಗೊಬ್ಬುರವಾಡಿಗೆ, ಎಡ್ರಾಮಿ ಮಠಗಳು ಮಠದ ಶಾಖಾಮಠಗಳಾಗಿ ಕಾರ್ಯ ನಿರ್ವಹಿಸುತ್ತಿವೆ.

ವಿಳಾಸ: ಷ.ಬ್ರ.ಶ್ರೀ ಕೆಂಚ ವೃಷಭೇಂದ್ರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಆಲೂರು, ಜೇವರಗಿ ತಾಲ್ಲೂಕು, ಗುಲ್ಬರ್ಗಜಿಲ್ಲೆ.

ಕಡಕೋಳ

ಜೇವರಗಿ ತಾಲ್ಲೂಕಿನ ಕಡಕೋಳ ಗ್ರಾಮವು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ನಲವತ್ತೈದು ಕಿ.ಮೀ ದೂರದಲ್ಲಿದೆ. ಕೃಷಿ ಅವಲಂಬಿತ ಈ ಹಳ್ಳಿಯು ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸಿದೆ. ಇಲ್ಲಿ ಶ್ರೀ ಮಡಿವಾಳೇಶ್ವರ ಮಠವು ಸ್ಥಾಪನೆಯಾಗಿ ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಪ್ರಗತಿಯನ್ನು ಸಾಧಿಸಿದೆ.

ಮಡಿವಾಳೇಶ್ವರ ಮಹಾಮಠ: ಕಡಕೋಳ ಗ್ರಾಮದ ಹೊರ ಭಾಗದಲ್ಲಿ ನದಿಯ ದಂಡೆಯ ಮೇಲೆ 'ಶ್ರೀ ಮಡಿವಾಳೇಶ್ವರ ಮಹಾಮಠ'ವು ಹದಿನೇಳನೆಯ ಶತಮಾನದಲ್ಲಿ ಸ್ಥಾಪನೆಯಾಗಿದೆ.ಅಫಜಲಪುರ ತಾಲ್ಲೂಕಿನ ಬಿದನೂರು ಗ್ರಾಮದಲ್ಲಿ ಜನಿಸಿದ

ಶ್ರೀ ಮಡಿವಾಳೇಶ್ವರ ಸ್ವಾಮಿಗಳು, ಅಫಜಲಪುರ ತಾಲ್ಲೂಕಿನ ಚಿನ್ಮಯ ಗಿರಿಯ ಮಹಾಂತೇಶ್ವರ ಮಠದ ಶ್ರೀ ಗುರುಬಸವ ಶಿವಾಚಾರ್ಯ ಸ್ವಾಮಿಗಳಿಂದ ಶಿವ ದೀಕ್ಷೆಯನ್ನು ಪಡೆದರು. ಶಹಾಪುರ ತಾಲ್ಲೂಕಿನ ಅರುಳಗುಂಡಿಗಿ ಗ್ರಾಮದಲ್ಲಿ ನೆಲೆಸಿ, ಶ್ರೀ ಶರಣ ಬಸವೇಶ್ವರರ ಅನುಗ್ರಹದಿಂದ ಸಾಧನೆಯನ್ನು ಸಾಧಿಸಿ ತಪೋಸಿದ್ಧಿಯನ್ನು ಪಡೆದರು. ನಂತರ ಕಡಕೋಳ ಗ್ರಾಮದ ನದಿತೀರದ ವನ ಪ್ರದೇಶದಲ್ಲಿ ಅನುಷ್ಠಾನಕ್ಕೆ ಕುಳಿತು ಕೊಳ್ಳುತ್ತಾರೆ. ಗುರುಗಳು ಇಲ್ಲಿ ನೆಲೆಗೊಂಡ ಮೇಲೆ ಮಠವು ಸ್ಥಾಪನೆಯಾಗಿ, ಧಾರ್ಮಿಕ ಆಚರಣೆಗಳು, ನಿತ್ಯ ಶಿವಾನುಭವಗೋಷ್ಠಿ ಹಾಗೂ ಅನ್ನದಾಸೋಹ ಕಾರ್ಯ ನಡೆಯ ತೊಡಗಿದವು. ಇಲ್ಲಿ ವೀರಶೈವ ಧರ್ಮವು ಬೆಳೆದು ಹೆಚ್ಚು ಪ್ರಚಾರಕ್ಕೆ ಬಂದಿತು.

ಶ್ರೀ ಮಡಿವಾಳೇಶ್ವರರು ಇಲ್ಲಿ ಮಠವನ್ನು ಸ್ಥಾಪಿಸಿ, ಬೆಳೆಸಿ ಜೀವಂತ ಸಮಾಧಿಯಾದ ಮೇಲೆ ಶ್ರೀ ಗುರುಮಹಾಂತ ಶಿವಾಚಾರ್ಯ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದರು. ಶ್ರೀ ರಂಭಾಪುರಿ ಪೀಠದ ಶಾಖಾ ಮಠವಾದ ಈ ಮಠವು ಪುತ್ರ ವರ್ಗದ ಪರಂಪರೆಯಲ್ಲಿ ಈತನಕ ಬೆಳೆದು ಬಂದಿದೆ.

ಪರಂಪರೆ:

೧. ಷ.ಬ್ರ.ಶ್ರೀ ಮಡಿವಾಳೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ವೀರೇಶ್ವರ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು

ಈ ರೀತಿ ಶ್ರೀ ಮಡಿವಾಳೇಶ್ವರ ಮಠದ ಪರಂಪರೆ ಬೆಳೆದು ಬಂದಿದೆ. ಪರಂಪರೆಯ ನಾಲ್ಕನೆಯ ಗುರುಗಳಾದ ಶ್ರೀ ವೀರೇಶ್ವರ ಶಿವಾಚಾರ್ಯ ಸ್ವಾಮಿಗಳು ಇಲ್ಲಿಗೆ ಸಮೀಪದ ತೆಲಗಬಾಳು ಗ್ರಾಮದ ಶ್ರೀ ಬಸವಲಿಂಗಯ್ಯ ಮತ್ತು ಶ್ರೀಮತಿ ರುದ್ರಮ್ಮನವರ ಪುತ್ರರಾಗಿ ಜನಿಸಿದರು. ಇವರು ಬಾಲ್ಯದಲ್ಲೇ ಧಾರ್ಮಿಕ ವಾತಾವರಣದಲ್ಲಿ ಬೆಳೆದು,ಅಖಂಡ ಆಧ್ಯಾತ್ಮವನ್ನು ಮೈಗೂಡಿಸಿ ಕೊಂಡು ಚಿಕ್ಕ ವಯಸ್ಸಿನಲ್ಲೇ ಪಟ್ಟಾಧಿಕಾರವನ್ನು ಪಡೆದು ೧೯೪೮ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಗುರುಗಳು ಲಿಂಗೈಕ್ಯರಾದ ಮೇಲೆ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಉತ್ತರಾಧಿಕಾರಿಗಳಾಗಿ ನೇಮಕಗೊಂಡರು.

ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ತೆಲಗುಬಾಳಿನ ಶ್ರೀ ಶಿವಲಿಂಗಯ್ಯ ಮತ್ತು ಶ್ರೀಮತಿ ಮಡಿವಾಳಮ್ಮ ನವರ ಪುತ್ರರಾಗಿ ಜನಿಸಿ, ಸಿಂದಗಿ ಮತ್ತು ಕಾಶಿಯಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿದರು. ಗುರುಗಳು ಸಂಸ್ಕೃತ ಮತ್ತು ಸಾಹಿತ್ಯವನ್ನು ಅಭ್ಯಾಸ ಮಾಡಿ,ಮಠಕ್ಕೆ ಆಗಮಿಸಿ ೧೯೭೭ ರ ಜೂನ್ ನಾಲ್ಕರಂದು ಪಟ್ಟಾಧಿಕಾರವನ್ನು ವಹಿಸಿಕೊಂಡರು. ಗುರುಗಳು ಕ್ರಿಯಾಶೀಲ ವ್ಯಕ್ತಿತ್ವದೊಂದಿಗೆ ಮಠವನ್ನು ಸಮಾಜದ ಮುಖಿಯನ್ನಾಗಿ ಮಾಡಿ ಅಭಿವೃದ್ಧಿಗೊಳಿಸಿದ್ದಾರೆ. ಆಚಾರ್ಯರ ಹಾಗೂ ಶರಣರ ತತ್ವಗಳನ್ನು ನಾಡಿಗೆ ಪ್ರಚಾರಗೊಳಿಸಿ ವೀರಶೈವ ಧರ್ಮವನ್ನು ಶ್ರೀಮಂತಗೊಳಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಕರ್ತೃ ಗದ್ದುಗೆಗೆ ನಿತ್ಯ ರುದ್ರಾಭಿಷೇಕ, ಅಮಾವಾಸ್ಯೆಯಲ್ಲಿ ಶಿವಾನುಭವ ಗೋಷ್ಠಿ, ಭಜನೆ, ಡಿಸೆಂಬರ್ ತಿಂಗಳಿನಲ್ಲಿ ಶ್ರೀ ಮಡಿವಾಳೇಶ್ವರರ ಜಾತ್ರೆ, ಶ್ರಾವಣ ಮಾಸದಲ್ಲಿ ಪುರಾಣ ಪ್ರವಚನ, ಆಷಾಢ ಬಹುಳ ಅಷ್ಟಮಿಯಂದು ಶ್ರೀ ವೀರೇಶ್ವರ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆ ಹಾಗೂ ಗಣೇಶ ಚತುರ್ಥಿಯನ್ನು ಮಠದಲ್ಲಿ ಅದ್ದೂರಿಯಾಗಿ ಆಚರಿಸಲಾಗುತ್ತಿದೆ. ಈ ವಿಶೇಷ ದಿನಗಳಲ್ಲಿ ಅಲ್ಲದೆ ನಿತ್ಯ ಅನ್ನ ದಾಸೋಹವನ್ನು ವ್ಯವಸ್ಥೆ ಮಾಡಲಾಗುತ್ತಿದೆ. ಪಂಚ ಪೀಠಾಧೀಶ್ವರರ ಉತ್ಸವ ಹಾಗೂ ಧರ್ಮೋಪದೇಶದ ಕಾರ್ಯಕ್ರಮಗಳನ್ನು ಏರ್ಪಡಿಸಿ ಧರ್ಮಪ್ರಚಾರವನ್ನು ಕೈಗೊಂಡಿದ್ದಾರೆ.

ಸಾಮಾಜಿಕ ಕಾರ್ಯಗಳು: ಶ್ರೀ ಮಡಿವಾಳೇಶ್ವರ ಶಿವಯೋಗಿಗಳ ಕಾಲದಿಂದಲೂ ಮಠವು ಸಮಾಜದ ಮುಖಿಯಾಗಿ ಬೆಳೆದು ಬಂದಿದೆ. ಈಗಿನ ಗುರುಗಳಾದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಸಮಾಜದ ಅಭಿವೃದ್ಧಿಗೆ ಕಂಕಣ ತೊಟ್ಟು, ಕಡಕೋಳು ಗ್ರಾಮಕ್ಕೆ ರಸ್ತೆ ಸಂಪರ್ಕ ಹಾಗೂ ಗ್ರಾಮದ ಸಮೀಪದಲ್ಲಿ ಹರಿಯುವ ನದಿಗೆ ಸೇತುವೆಯನ್ನು ನಿರ್ಮಿಸಲು

ಸರ್ಕಾರ ವಿಳಂಬ ನೀತಿ ತೋರಿಸಿದ್ದನ್ನು ಪ್ರತಿಭಟಿಸಿ, ಉಪವಾಸ ಸತ್ಯಾಗ್ರಹವನ್ನು ಮಾಡುವ ಮೂಲಕ ಸರ್ಕಾರದ ಗಮನ ಸೆಳೆದು ರಸ್ತೆ ಮತ್ತು ಸೇತುವೆ ನಿರ್ಮಾಣದ ಕಾರಣ ಕರ್ತರಾಗಿದ್ದಾರೆ. ಮಠದಲ್ಲಿ ಸಾಮೂಹಿಕ ವಿವಾಹಗಳು, ಪಾದಯಾತ್ರೆಯ ಮೂಲಕ ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಮಾಜವನ್ನು ಜಾಗೃತಗೊಳಿಸಿದ್ದಾರೆ.

ಸಾಹಿತ್ಯ ಸೇವೆ: ಶ್ರೀ ಮಡಿವಾಳೇಶ್ವರರು ತತ್ತ್ವ ಪದಗಳನ್ನು ರಚಿಸಿ, ಕನ್ನಡ ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ಅಂದು ಶ್ರೀ ಮಡಿವಾಳೇಶ್ವರರು ರಚಿಸಿದ ತತ್ತ್ವ ಪದಗಳನ್ನು ಸಂಗ್ರಹಿಸಿ ಪ್ರಕಟಿಸಲಾಗಿದೆ. ಕೈಸೂರು ಕೃಷ್ಣಪ್ಪ, ಕಡ್ಲೆವಾರದ ಸಿದ್ದಪ್ಪ, ತೆಲಗಬಾಳು ರೇವಪ್ಪ, ಕ್ಯಾಡಗಿ ಬಸವಲಿಂಗಪ್ಪ, ಚನ್ನೂರಿನ ಜಲಾಲ್ ಸಾಹೇಬ್ ಹಾಗೂ ಹಸೀನ್‌ಸಾಬ್ ಮುಂತಾದ ಪ್ರಮುಖರು ಶ್ರೀ ಮಡಿವಾಳೇಶ್ವರರ ನಾಮಾಂಕಿತದಲ್ಲಿ ತತ್ತ್ವ ಪದಗಳನ್ನು ರಚಿಸಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಸುರಪುರದ ವೆಂಕಟಪ್ಪ ನಾಯಕನ ಕಾಲದಲ್ಲಿ ಕಡ್ಲಪ್ಪ ಮತ್ತು ವೀರನ ಗೌಡರು ಮಠಕ್ಕೆ ಎಪ್ಪತ್ತೈದು ಎಕರೆ ಜಮೀನನ್ನು ಉಂಬಳಿಯನ್ನಾಗಿ ನೀಡಿ, ಮಠದ ಅಭಿವೃದ್ಧಿಗೆ ನೆರವಾಗಿದ್ದರು. ಅಂದು ನೀಡಿದ ಭೂಮಿಯಲ್ಲಿ ಈಗ ಇಪ್ಪತ್ತೈದು ಎಕರೆ ಉಳಿದಿದೆ. ಈ ಇನಾಂ ಭೂಮಿಯ ಜೊತೆಗೆ ಹದಿನೈದು ಎಕರೆ ಜಮೀನನ್ನು ಖರೀದಿಸಿ ಅಭಿವೃದ್ಧಿಪಡಿಸಿ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ಪುರಾತನ ಕಾಲದ ಮಠದ ಕಟ್ಟಡವನ್ನು ೧೯೯೫ ರಲ್ಲಿ ನವೀಕರಣಗೊಳಿಸಲಾಗಿದೆ.

ವಿಳಾಸ: ಷ.ಬ್ರ.ಶ್ರೀರುದ್ರಮುನಿ ಶಿವಾಚಾರ್ಯಸ್ವಾಮಿಗಳು, ಶ್ರೀಮಡಿವಾಳೇಶ್ವರ ಮಹಾಮಠ, ಕಡಕೋಳ, ಜೇವರಗಿ ತಾ, ಗುಲ್ಬರ್ಗಜಿಲ್ಲೆ.

ಜೇವರಗಿ

ಗುಲ್ಬರ್ಗ ಜಿಲ್ಲೆಯ ಜೇವರಗಿ ಪಟ್ಟಣವು ಜಿಲ್ಲಾ ಕೇಂದ್ರದಿಂದ ದಕ್ಷಿಣಕ್ಕೆ ಮೂವತ್ತೆಂಟು ಕಿ.ಮೀ ದೂರದಲ್ಲಿದೆ. ತಾಲ್ಲೂಕಿನ ಕೇಂದ್ರ ಸ್ಥಳವಾದ ಜೇವರಗಿಯಲ್ಲಿ ಶ್ರೀ ಷಣ್ಮುಖ ಶಿವಯೋಗಿ ಮಠವು ಸ್ಥಾಪನೆಯಾಗಿ ಧಾರ್ಮಿಕ ಹಾಗೂ ಶೈಕ್ಷಣಿಕ ಪ್ರಗತಿಗೆ ನೆರವಾಗಿದೆ.

ಷಣ್ಮುಖ ಶಿವಯೋಗಿಮಠ: ಜೇವರಗಿ ಪಟ್ಟಣದಲ್ಲಿ ೧೬೩೧ ರಲ್ಲಿ ಮುರುಘಾ ಸಮಯದ ವಿರಕ್ತ ಮಠವು ಸ್ಥಾಪನೆಯಾಗಿದೆ. ಈ ಮಠವನ್ನು ಶ್ರೀ ಅಖಂಡೇಶ್ವರ ಸ್ವಾಮಿಗಳು ಸ್ಥಾಪಿಸಿದ್ದಾರೆ. ಶ್ರೀ ಅಖಂಡೇಶ್ವರರು ಹದಿನಾರನೆಯ ಶತಮಾನದ ಉತ್ತರಾರ್ಧದಲ್ಲಿ ಜನಿಸಿ, ಬೆಳಗಾಂ ಜಿಲ್ಲೆಯಿಂದ ಲೋಕ ಸಂಚಾರ ಕೈಗೊಂಡು ಜೇವರಗಿಗೆ ಬಂದು ನೆಲೆಸಿ, ಈ ಭೂಮಿಯನ್ನು ತಪೋ ಭೂಮಿಯನ್ನಾಗಿ ಮಾಡಿದರು. ಇಲ್ಲಿ ನೆಲೆಗೊಂಡ ಮೇಲೆ ಭಕ್ತರು ಗುರುಗಳ ದರ್ಶನಾಶೀರ್ವಾದದಿಂದ ಸಂಸ್ಕಾರವಂತ ರಾಗಿ ಬೆಳೆದರು. ಶ್ರೀ ಅಖಂಡೇಶ್ವರ ಸ್ವಾಮಿಗಳ ಕೃಪಾಶೀರ್ವಾದದಿಂದ ಬೆಳೆದ ಶ್ರೀ ಷಣ್ಮುಖ ಸ್ವಾಮಿಗಳು ಉತ್ತರಾಧಿಕಾರಿ ಗಳಾಗಿ ಮಠವನ್ನು ಅಭಿವೃದ್ಧಿಗೊಳಿಸಿದರು.

ಪರಂಪರೆ:

೧. ಶ್ರೀ ಮ.ನಿ.ಪ್ರ. ಅಖಂಡೇಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಷಣ್ಮುಖಸ್ವಾಮಿಶಿವಯೋಗಿಗಳು
೩. ಶ್ರೀ ಮ.ನಿ.ಪ್ರ. ಮರಿ ಷಣ್ಮುಖಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಅಪ್ಪಯ್ಯಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಸಿದ್ಧರಾಮಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ರುದ್ರಮುನಿಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಷಣ್ಮುಖಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಚನ್ನಮಲ್ಲಿಕಾರ್ಜುನಸ್ವಾಮಿಗಳು
೯. ಶ್ರೀ ಮ.ನಿ.ಪ್ರ. ಅಖಂಡೇಶ್ವರಸ್ವಾಮಿಗಳು
೧೦. ಶ್ರೀ ಮ.ನಿ.ಪ್ರ. ನೀಲಕಂಠೇಶ್ವರಸ್ವಾಮಿಗಳು
೧೧. ಶ್ರೀ ಮ.ನಿ.ಪ್ರ. ಶಾಂತಲಿಂಗಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಪರಂಪರೆಯ ಎರಡನೆಯ ಗುರುಗಳಾದ ಶ್ರೀ ಷಣ್ಮುಖ ಶಿವಯೋಗಿಗಳು ಜೇವರಗಿಯ ಶ್ರೀ ಮಲ್ಲಶೆಟ್ಟೆಪ್ಪ ಮತ್ತು ಶ್ರೀಮತಿ ದೊಡ್ಡಮಾಂಬೆಯವರ ಪುತ್ರರಾಗಿ ೧೬೩೯ ರಲ್ಲಿ ಜನಿಸಿದರು. ಇವರು ಬಾಲ್ಯದಲ್ಲೇ ಆಧ್ಯಾತ್ಮವನ್ನು ಮೈಗೂಡಿಸಿಕೊಂಡು ಶ್ರೀ ಅಖಂಡೇಶ್ವರ ಸ್ವಾಮಿಗಳ ಆಶೀರ್ವಾದದಿಂದ ಬೆಳೆದರು. ಶ್ರೀ ಷಣ್ಮುಖ ಸ್ವಾಮಿಗಳು ಶಿವಯೋಗ ಸಿದ್ಧಿಯನ್ನು ಸಾಧಿಸಿಕೊಂಡು ಶಿವಯೋಗಿಗಳಾದರು. ಶ್ರೀ ಅಖಂಡೇಶ್ವರ ಸ್ವಾಮಿಗಳ ಮಾರ್ಗದರ್ಶನದ ಮೇರೆಗೆ ಲೋಕಸಂಚಾರವನ್ನು ಕೈಗೊಂಡು, ನಾಡಿನ ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸಿ ಲೋಕಾನುಭವ ಸಂಪಾದಿಸಿಕೊಂಡರು. ಲೋಕಸಂಚಾರ ಮುಗಿಸಿ ಜೇವರಗಿ ಸಮೀಪದ ಯೋಗಿಕೊಳ್ಳದಲ್ಲಿ ದೀರ್ಘ ಅನುಷ್ಠಾನ ಕೈಗೊಂಡರು. ದೀರ್ಘ ಅನುಷ್ಠಾನದ ನಂತರ ೧೬೫೯ರಲ್ಲಿ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡರು.

ಶ್ರೀ ಷಣ್ಮುಖ ಸ್ವಾಮಿಗಳು 'ಶ್ರೀ ಅಖಂಡೇಶ್ವರರ' ಅಂಕಿತ ನಾಮದೊಂದಿಗೆ ಅಖಂಡೇಶ್ವರ ವಚನಗಳನ್ನು ರಚಿಸಿ, ಕನ್ನಡ ಸಾರಸ್ವತ ಲೋಕಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಇವರ ಸಾಧನೆಯ ಸಿದ್ಧಿಯಿಂದ ವೀರಶೈವಧರ್ಮ ವ್ಯಾಪಕವಾಗಿ ಬೆಳೆಯಿತಲ್ಲದೆ, ಮಠವು ಪ್ರಖ್ಯಾತಗೊಂಡಿತು. ಇದರಿಂದ ಈ ಮಠವನ್ನು 'ಶ್ರೀ ಷಣ್ಮುಖ ಶಿವಯೋಗಿಮಠ' ಎಂದು ಭಕ್ತರು ಗುರುತಿಸತೊಡಗಿದರು. ಇವರು ೧೭೧೧ರಲ್ಲಿ ಲಿಂಗೈಕ್ಯರಾದರು. ಇವರ ನಂತರ ಅಧಿಕಾರಕ್ಕೆ ಬಂದ ಎಲ್ಲಾ ಗುರುಗಳು ಮಠದ ಪರಂಪರೆಯನ್ನು ಬೆಳೆಸುವಲ್ಲಿ ಶ್ರಮಿಸಿದ್ದಾರೆ.

ಈಗಿನ ಶ್ರೀ ಶಾಂತಲಿಂಗ ಸ್ವಾಮಿಗಳು ಬಿಜಾಪುರ ಜಿಲ್ಲೆಯ ಕನಮಡಿ ಗ್ರಾಮದ ಶ್ರೀ ಗುರುಪಾದಯ್ಯ ಮತ್ತು ಶ್ರೀಮತಿ ರಾಚಮ್ಮನವರ ಪುತ್ರರಾಗಿ ಜನಿಸಿದರು. ಚಿಂಚೋಳಿ, ಯಾದಗಿರಿ ಹಾಗೂ ಬೆಂಗಳೂರಿನಲ್ಲಿ ವಿದ್ಯಾಭ್ಯಾಸವನ್ನು ಮಾಡಿ ೧೯೪೪ ರಲ್ಲಿ ಮಠಕ್ಕೆ ಆಗಮಿಸಿದರು. ಮಠದ ಧಾರ್ಮಿಕ ಆಚರಣೆಗಳನ್ನು ನಡೆಸುತ್ತಾ, ಮಠವನ್ನು ಅಭಿವೃದ್ಧಿಪಡಿಸಿ ೧೯೫೮ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಇವರು ತಮ್ಮ ಕ್ರಿಯಾಶೀಲ ವ್ಯಕ್ತಿತ್ವದಿಂದ ಶರಣರ ತತ್ತ್ವವನ್ನು ಪ್ರಚಾರಗೊಳಿಸಿ ವೀರಶೈವ ಧರ್ಮವನ್ನು ಬೆಳೆಸಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಅಖಂಡೇಶ್ವರ ಮತ್ತು ಶ್ರೀ ಷಣ್ಮುಖ ಶಿವಯೋಗಿಗಳ ಕಾಲದಲ್ಲಿ ಮಠದ ಕಟ್ಟಡವು ವಿಸ್ತಾರವಾಗಿ ರೂಪುಗೊಂಡಿದೆ. ನಂತರ ಸುರಪುರದ ವೆಂಕಟಪ್ಪ ನಾಯಕನ ಕಾಲದಲ್ಲಿ ಮಂತ್ರಿಯಾಗಿದ್ದ ವೀರಪ್ಪ ಗೌಡರು ಶ್ರೀ ಅಖಂಡೇಶ್ವರ ದೇವಸ್ಥಾನ ಹಾಗೂ ಗೋಪುರಕ್ಕೆ ಕಳಸಾರೋಹಣವನ್ನು ಮಾಡಿಸಿದ್ದಾರೆ. ಈಗಿನ ಗುರುಗಳಾದ ಶ್ರೀ ಶಾಂತಲಿಂಗ ಸ್ವಾಮಿಗಳ ಕಾಲದಲ್ಲಿ ಮಠವು ನವೀಕರಣಗೊಂಡು ಮತ್ತಷ್ಟು ವಿಸ್ತಾರಗೊಂಡಿದೆ. ಮಠದ ಆಸ್ತಿಯಾಗಿ ಎಂಟುಎಕರೆ ಭೂಮಿಯಿದ್ದು, ಇದನ್ನು ಅಭಿವೃದ್ಧಿಪಡಿಸಿ ಆದಾಯದ ಮೂಲವನ್ನಾಗಿ ಮಾಡಿಕೊಳ್ಳಲಾಗಿದೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಸ್ಥಾಪನೆಯಾಗಿರುವ ಎಂಟು ಗದ್ದುಗೆಗಳಿಗೆ ನಿತ್ಯ ಪೂಜೆಯನ್ನು ನಡೆಸಲಾಗುತ್ತಿದೆ. ಕರ್ತೃಗುರುಗಳಾದ ಶ್ರೀ ಅಖಂಡೇಶ್ವರ ಸ್ವಾಮಿಗಳ ಗದ್ದುಗೆಗೆ ನಿತ್ಯ ರುದ್ರಾಭಿಷೇಕ, ವಚನ ಪಾರಾಯಣ, ವೈಶಾಖ ಬಹುಳ ಪಂಚಮಿಯಂದು ಶ್ರೀ ಅಖಂಡೇಶ್ವರ ಸ್ವಾಮಿಗಳ ಪುಣ್ಯಾರಾಧನೆ, ಮೇ ತಿಂಗಳಲ್ಲಿ ಶ್ರೀ ಷಣ್ಮುಖ ಶಿವಯೋಗಿಗಳ ಪುಣ್ಯಾರಾಧನೆ ಯನ್ನು ನಡೆಸಲಾಗುತ್ತಿದೆ. ಪ್ರತಿ ತಿಂಗಳಿಗೊಮ್ಮೆ ಶಿವಾನುಭವ ಕಾರ್ಯಕ್ರಮ, ಶ್ರಾವಣ ಮಾಸದಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಅಲ್ಲದೆ ಅನ್ನ ದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ಶೈಕ್ಷಣಿಕ ಸೇವೆ: ಶ್ರೀ ಷಣ್ಮುಖಶಿವಯೋಗಿ ಶಿಕ್ಷಣಸಂಸ್ಥೆಯನ್ನು ಪ್ರಾರಂಭಿಸಿ ಶ್ರೀ ಷಣ್ಮುಖ ಶಿವಯೋಗಿ ಪ್ರೌಢಶಾಲೆ, ಪ್ರಾಥಮಿಕಶಾಲೆ,ಡಿಪ್ಲೋಮಕಾಲೇಜನ್ನು ಪ್ರಾರಂಭಿಸಲಾಗಿದೆ.ಕಲಿಯುವ ಬಡಮಕ್ಕಳಿಗೆ ಮಠದಲ್ಲಿಆಶ್ರಯವನ್ನುಕಲ್ಪಿಸಲಾಗಿದೆ.

ಸಾಹಿತ್ಯ ಸೇವೆ: ಪರಂಪರೆಯ ಎರಡನೆಯ ಗುರುಗಳಾದ ಶ್ರೀ ಷಣ್ಮುಖ ಶಿವಯೋಗಿಗಳು ರಚಿಸಿದ ವಚನಗಳನ್ನು 'ಅಖಂಡೇಶ್ವರ ವಚನಗಳು'ಎಂಬ ಗ್ರಂಥ ರೂಪದಲ್ಲಿ ಪ್ರಕಟಿಸಲಾಗಿದೆ. ಅಲ್ಲದೆ ಶ್ರೀ ಷಣ್ಮುಖ ಶಿವಯೋಗಿಗಳು ಬರೆದ 'ಸ್ವಯಂ ಜ್ಯೋತಿ' ಗ್ರಂಥವನ್ನು ಸಂಪಾದಿಸಿ ಪ್ರಕಟಿಸಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಶಾಂತಲಿಂಗ ಸ್ವಾಮಿಗಳು, ಶ್ರೀ ಷಣ್ಮುಖ ಶಿವಯೋಗಿ ಸಂಸ್ಥಾನ ಮಠ, ಜೇವರಗಿ, ಗುಲ್ಬರ್ಗ ಜಿಲ್ಲೆ.

ಜೇರಟಗಿ

ಜೇವರಗಿ ತಾಲ್ಲೂಕಿನ ಜೇರಟಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಮೂವತ್ತೈದು ಕಿ.ಮೀ ದೂರದಲ್ಲಿದೆ. ಬಿಜಾಪುರ ಮತ್ತು ಗುಲ್ಬರ್ಗ ರಸ್ತೆಯಲ್ಲಿ ಸಿಗುವ ಜೇರಟಗಿ ಗ್ರಾಮದಲ್ಲಿ ಶ್ರೀ ವಿರಕ್ತಮಠವು ಸ್ಥಾಪನೆಯಾಗಿದೆ.

ವಿರಕ್ತಮಠ: ಜೇರಟಗಿ ಗ್ರಾಮದ ಹೊರಭಾಗದಲ್ಲಿ ಕುಮಾರ ಸಮಯದ 'ಶ್ರೀ ವಿರಕ್ತಮಠ'ವು ಸ್ಥಾಪನೆಯಾಗಿದೆ. ಹನ್ನೆರಡನೆಯ ಶತಮಾನದ ಕ್ರಾಂತಿಯ ನಂತರ ಶರಣರು ದೇಶ ಸಂಚಾರಕ್ಕೆ ಹೊರಟ ಸಂದರ್ಭದಲ್ಲಿ ಶ್ರೀ ಚನ್ನಬಸವಣ್ಣ, ಶ್ರೀ ಸಿದ್ಧರಾಮ, ಶ್ರೀ ಮಡಿವಾಳ ಮಾಚಿದೇವ ಹಾಗೂ ಶ್ರೀ ರೇವಣಸಿದ್ಧೇಶ್ವರ ಮುಂತಾದ ಶರಣರು ಈ ಸ್ಥಳದಲ್ಲಿ ನೆಲೆಸಿ ಹೋಗಿದ್ದಾರೆ. ಇವರ ಕುರುಹಾಗಿ ಇವರುಗಳ ಹೆಸರಿನಲ್ಲಿ ದೇವಸ್ಥಾನಗಳು ನಿರ್ಮಾಣಗೊಂಡಿವೆ. ಈ ಕಾರಣದಿಂದ ಜೇರಟಗಿಯನ್ನು 'ಮರಿಕಲ್ಯಾಣ'ಎಂದು ಕರೆಯುವುದುಂಟು. ಸುರಪುರದ ವೆಂಕಟಪ್ಪ ನಾಯಕನ ಕಾಲದಲ್ಲಿ ಕಡ್ಲಪ್ಪ ಮತ್ತು ವೀರಪ್ಪನವರು ನಾಡಿನಾದ್ಯಂತ ವೀರಶೈವ ಧರ್ಮ ಬೆಳೆಯಬೇಕೆಂಬ ಸದಿಚ್ಛೆಯಿಂದ ನೂರೊಂದು ಮಠಗಳನ್ನು ಸ್ಥಾಪಿಸಿದ್ದರು. ಈ ನೂರೊಂದು ಮಠಗಳಲ್ಲಿ ಜೇರಟಗಿಯ ವಿರಕ್ತ ಮಠವು ಒಂದಾಗಿದ್ದು, ಮಠದ ಪ್ರಥಮ ಗುರುಗಳಾಗಿ ಶ್ರೀ ಬಸವಲಿಂಗ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಬೆಳೆಸಿದ್ದಾರೆ. ಕಡ್ಲಪ್ಪ ಮತ್ತು ವೀರಪ್ಪನವರು ಮಠವನ್ನು ಸ್ಥಾಪಿಸಿ, ಗುರುಗಳನ್ನು ನೇಮಿಸಿದ ಮೇಲೆ ಮಠದ ಧಾರ್ಮಿಕ ಕಾರ್ಯಗಳು ಸುಗಮವಾಗಿ ನಡೆದುಕೊಂಡು ಹೋಗಬೇಕೆಂಬ ಉದ್ದೇಶದಿಂದ ಭೂಮಿಯನ್ನು ಉಂಬಳಿಯಾಗಿ ನೀಡಿ ಮಠವನ್ನು ಸದೃಢವಾಗಿ ಬೆಳೆಸಿದರು.

ಪರಂಪರೆ:

೧. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ವಿರೂಪಾಕ್ಷಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಮುರುಘೇಂದ್ರಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಗುರುಶಾಂತಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಮಹಾಂತಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃ ಗುರುಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ವಿರೂಪಾಕ್ಷ ಸ್ವಾಮಿಗಳು ಮತ್ತು ಶ್ರೀ ಮುರುಘೇಂದ್ರ ಸ್ವಾಮಿಗಳ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಪರಂಪರೆಯ ನಾಲ್ಕನೆಯ ಗುರುಗಳಾದ ಶ್ರೀ ಗುರುಶಾಂತ ಸ್ವಾಮಿಗಳು ಜೇರಟಗಿಯಲ್ಲಿ ಜನಿಸಿ, ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿ ೧೯೮೮ ರಲ್ಲಿ ಲಿಂಗೈಕ್ಯರಾದರು. ಇವರ ನಂತರ ಶ್ರೀ ಮಹಾಂತ ಸ್ವಾಮಿಗಳು ಅಧಿಕಾರಕ್ಕೆ ಬಂದಿದ್ದಾರೆ. ಇವರು ಜೇವರಗಿ ತಾಲ್ಲೂಕಿನ ಅಂಕಲಗಿ ಗ್ರಾಮದ ಶ್ರೀ ಕಾಂತಯ್ಯ ಮತ್ತು ಶ್ರೀಮತಿ ನೀಲಮ್ಮನವರ ಪುತ್ರರಾಗಿ ೧೯೬೩ ರಲ್ಲಿ ಜನಿಸಿದರು. ಇವರು ಪ್ರಾಥಮಿಕ ಶಿಕ್ಷಣವನ್ನು ಅಂಕಲಗಿಯಲ್ಲಿ ಮುಗಿಸಿ,ಹುಬ್ಬಳ್ಳಿ, ಶಿವಯೋಗ ಮಂದಿರ ಹಾಗೂ ಗದಗದಲ್ಲಿ ವಿದ್ಯಾಭ್ಯಾಸ ವನ್ನು ಮುಗಿಸಿ ಗದಗದ ಜಗದ್ಗುರು ಶ್ರೀ ತೋಂಟದಸಿದ್ಧಲಿಂಗ ಸ್ವಾಮಿಗಳ ಕೃಪಾಶೀರ್ವಾದದಿಂದ, ೧೯೮೪ ರ ಮಾರ್ಚ್‌ನಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ.

ಶ್ರೀ ಮಹಾಂತ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠವನ್ನು ನವೀಕರಣಗೊಳಿಸಿ, ಧಾರ್ಮಿಕ ಕಾರ್ಯಗಳು ವ್ಯವಸ್ಥಿತವಾಗಿ ನಡೆಯುವಂತೆ ಮಾಡಿದ್ದಾರೆ. ಮಠದ ವತಿಯಿಂದ ಕಲ್ಯಾಣ ಮಂಟಪವನ್ನು ನಿರ್ಮಿಸಿದ್ದಾರೆ. ಮಠದ ಪರಂಪರೆಯ ಗುರುಗಳ ಗದ್ದುಗೆಗಳನ್ನು ನವೀಕರಣಗೊಳಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಮೂರು ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ, ಶ್ರಾವಣ ಮಾಸದಲ್ಲಿ ವಿಶೇಷ ಪೂಜೆ, ಮಾರ್ಚ್ ತಿಂಗಳಲ್ಲಿ ಹಿರಿಯ ಗುರುಗಳ ಪುಣ್ಯ ಸ್ಮರಣೋತ್ಸವವನ್ನು ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಒಂದು ತಿಂಗಳ ಕಾಲ ಪುರಾಣ ಪ್ರವಚನ ಹಾಗೂ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಮಠದ ಮುಂಭಾಗದಲ್ಲಿ ಪುರಾತನ ಕಾಲದ ಕಲ್ಲಿನ ಬಾವಿ ನಿರ್ಮಾಣಗೊಂಡಿದ್ದು, ಮಠದ ಧಾರ್ಮಿಕ ಹಾಗೂ ಅನ್ನ ದಾಸೋಹದ

ಕಾರ್ಯಗಳಿಗೆ ಈ ನೀರನ್ನೇ ಬಳಕೆ ಮಾಡಿಕೊಳ್ಳಲಾಗುವುದಲ್ಲದೆ, ಗ್ರಾಮಸ್ಥರು ಸಹ ಕುಡಿಯುವುದಕ್ಕಾಗಿ ಈ ನೀರನ್ನು ಬಳಕೆ ಮಾಡಿಕೊಳ್ಳುತ್ತಾರೆ.

ಶೈಕ್ಷಣಿಕ ಸೇವೆ: ೧೯೯೩ರಲ್ಲಿ ಸಗರ ನಾಡಿನ ಶರಣಸಂಸ್ಕೃತಿ ಕೇಂದ್ರವನ್ನು ಸ್ಥಾಪಿಸಿ,ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಲಾಗಿದೆ. ಮಠದ ವತಿಯಿಂದ ಉಚಿತ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಲಾಗಿದೆ. ಇದರಿಂದ ಗ್ರಾಮೀಣ ಪ್ರದೇಶದ ಮಕ್ಕಳ ಕಲಿಕೆಗೆ ನೆರವಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಮಹಾಂತ ಸ್ವಾಮಿಗಳು, ಶ್ರೀ ವಿರಕ್ತಮಠ, ಜೇರಟಗಿ, ಜೇವರಗಿ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ನೆಲೋಗಿ

ಜೇವರಗಿ ತಾಲ್ಲೂಕಿನ ನೆಲೋಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತೈದು ಕಿ.ಮೀ ದೂರದಲ್ಲಿದೆ. ಈ ಗ್ರಾಮವು ಪುರಾತನ ಕಾಲದಿಂದಲೂ ಪ್ರಸಿದ್ಧಿ ಪಡೆದು ಸುಕ್ಷೇತ್ರವಾಗಿದೆ. ವಚನಕಾರರಲ್ಲಿ ಒಬ್ಬರಾದ ಕೋಲ ಶಾಂತೇಶ್ವರರ ಜನ್ಮಸ್ಥಳ ಇದಾಗಿದೆ. ಇಲ್ಲಿ ಶ್ರೀ ಶಿವಾನಂದೇಶ್ವರ ಮಠವು ಅಸ್ತಿತ್ವದಲ್ಲಿದೆ.

ಶಿವಾನಂದೇಶ್ವರ ವಿರಕ್ತಮಠ: ನೆಲೋಗಿ ಗ್ರಾಮದ ಹೊರಭಾಗದಲ್ಲಿ ಹರಿಯುತ್ತಿರುವ ಭೀಮಾನದಿಯ ದಡದಲ್ಲಿ ಕುಮಾರ ಸಮಯದ, ವಿರಕ್ತ ಸಂಪ್ರದಾಯದ ಶ್ರೀ ಶಿವಾನಂದೇಶ್ವರ ಮಠವು ಸ್ಥಾಪನೆಯಾಗಿ ಈ ಭಾಗದ ಧಾರ್ಮಿಕ ಚಟುವಟಿಕೆಗಳ ಕೇಂದ್ರ ಬಿಂದುವಾಗಿ ಬೆಳೆದಿದೆ.

ಸುರಪುರದ ವೆಂಕಟಪ್ಪ ನಾಯಕನ ಕಾಲದಲ್ಲಿ ಮಂತ್ರಿಯಾಗಿದ್ದ ಶ್ರೀ ವೀರಪ್ಪ ಮತ್ತು ಅವರ ಸಹೋದರರಾದ ಶ್ರೀ ಕಡ್ಲಪ್ಪನವರು ಈ ಗ್ರಾಮದಲ್ಲಿ ಮಠವನ್ನು ಸ್ಥಾಪಿಸಿ, ವೀರಶೈವ ಧರ್ಮ ಬೆಳೆಯುವಂತೆ ಮಾಡಿದರು. ಅಂದು ಪ್ರಾರಂಭಗೊಂಡ ಮಠಕ್ಕೆ ಗುರುಗಳನ್ನು ನೇಮಿಸಿದರು. (ಹೆಸರು ಲಭ್ಯವಿಲ್ಲ) ಇವರು ವೀರಶೈವ ಧರ್ಮವನ್ನು ಬೆಳೆಸಿ, ಮಠವನ್ನು ಒಂದು ಜಾಗೃತ ಕ್ಷೇತ್ರವನ್ನಾಗಿ ಮಾಡಿದ್ದಾರೆ. ಇವರ ನಂತರ ಅಧಿಕಾರಕ್ಕೆ ಬಂದ ಗುರುಗಳ ಬಗ್ಗೆ ಸ್ಪಷ್ಟವಾದ ಆಧಾರಗಳು ಇಲ್ಲದೆ ಇರುವ ಕಾರಣ ಮಠದ ಪರಂಪರೆಯನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ. ಬಹಳ ವರ್ಷಗಳ ಕಾಲ ಗುರುಗಳಿಲ್ಲದೆ ಮಠವು ಜೀರ್ಣಾವಸ್ಥೆಗೆ ಬಂದಿತ್ತು. ಇಂತಹ ಮಠಕ್ಕೆ ಶ್ರೀ ಸಿದ್ಧಲಿಂಗ ಸ್ವಾಮಿಗಳು ೧೯೯೩ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಳ್ಳುವುದರ ಮೂಲಕ ಮಠದ ಅಸ್ತಿತ್ತ್ವವನ್ನು ಉಳಿಸಿ ಬೆಳೆಸುತ್ತಿದ್ದಾರೆ.

ಸೊನ್ನ ಗ್ರಾಮದ ಶ್ರೀ ಮರಿದೇವಪ್ಪ ಮತ್ತು ಶ್ರೀಮತಿ ಮಲಕಮ್ಮನವರ ಪುತ್ರರಾಗಿ ಜನಿಸಿ, ಹುಬ್ಬಳ್ಳಿ ಮತ್ತು ಶಿವಯೋಗ ಮಂದಿರದಲ್ಲಿ ವಿದ್ಯಾಭ್ಯಾಸ ಮಾಡಿ ಮಠಕ್ಕೆ ಆಗಮಿಸಿದ್ದಾರೆ. ಗುರುಗಳು ಮಠಕ್ಕೆ ನೂತನ ಕಟ್ಟಡವನ್ನು ನಿರ್ಮಿಸಿ,ಸೊನ್ನದ ಶ್ರೀ ಶಿವಾನಂದ ಸ್ವಾಮಿಗಳ ತೋರು ಗದ್ದುಗೆಯನ್ನು ನಿರ್ಮಿಸಿ ಮಠದಲ್ಲಿ ಪೂಜಾ ಕಾರ್ಯಗಳು ನಡೆಯುವಂತೆ ಮಾಡಿದ್ದಾರೆ.

ಸಾಮಾಜಿಕ ಕಾರ್ಯಗಳು: ಶ್ರೀ ಸಿದ್ಧಲಿಂಗ ಸ್ವಾಮಿಗಳು ಪಟ್ಟಾಧಿಕಾರಕ್ಕೆ ಬಂದ ಮೇಲೆ ಜೇವರಗಿ ತಾಲ್ಲೂಕಿನ ಹನ್ನೆರೆಡು ಹಳ್ಳಿಗಳಲ್ಲಿ ಪಾದಯಾತ್ರೆ ಮಾಡಿ ಧರ್ಮ ಜಾಗೃತಿಯನ್ನುಂಟು ಮಾಡಿದ್ದಾರೆ. ಮಠದಲ್ಲಿ ಪ್ರತಿ ಶ್ರಾವಣ ಮಾಸದಲ್ಲಿ ಪಾದಪೂಜೆ, ಪುರಾಣ ಪ್ರವಚನವನ್ನು ನಡೆಸುತ್ತಿದ್ದಾರೆ. ಬಸವ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಿ ಸಾಮಾಜಿಕ ಸುಧಾರಣೆಗೆ ನೆರವಾಗ ಬಲ್ಲಂತಹ ಕಾರ್ಯಕ್ರಮಗಳನ್ನು ರೂಪಿಸಿ, ಜ್ಞಾನ ಮತ್ತು ಅನ್ನದಾಸೋಹವನ್ನು ನೀಡುತ್ತಿದ್ದಾರೆ. ಮಠದಲ್ಲಿ ಪ್ರತಿ ವರ್ಷ ಉಚಿತ ನೇತ್ರಚಿಕಿತ್ಸಾ ಶಿಬಿರ ಹಾಗೂ ಈ ಭಾಗದಲ್ಲಿ ಅತಿಯಾಗಿ ಕಾಣಿಸಿಕೊಳ್ಳುವ ಆನೆಕಾಲು ರೋಗದ ತಡೆಗೆ ಉಚಿತ ತಪಾಸಣಾ ಶಿಬಿರವನ್ನು ಏರ್ಪಡಿಸಿ, ಚಿಕಿತ್ಸೆಯನ್ನು ಕೊಡಿಸುತ್ತಿದ್ದಾರೆ. ಸಾಮೂಹಿಕ ವಿವಾಹಗಳು ಹಾಗೂ ಅಂತರ್ ಜಾತಿ ವಿವಾಹಗಳನ್ನು ಮಾಡಿಸುವ ಮೂಲಕ ಜಾತ್ಯಾತೀತ ಸಮಾಜದ ನಿರ್ಮಾಣಕ್ಕೆ ಗುರುಗಳು ಪ್ರಯತ್ನ ನಡೆಸಿದ್ದಾರೆ.

ಶೈಕ್ಷಣಿಕ ಸೇವೆ: ತೋಂಟದಾರ್ಯ ವಿದ್ಯಾಪೀಠವನ್ನು ೧೯೯೩ ರಲ್ಲಿ ಪ್ರಾರಂಭಿಸಿ ಪ್ರಾಥಮಿಕ ಶಾಲೆ, ಅನಾಥಾಶ್ರಮ, ಶಿಶು

ಪಾಲನಾ ಕೇಂದ್ರ ಹಾಗೂ ವೃದ್ಧಾಶ್ರಮವನ್ನು ಸ್ಥಾಪಿಸಲಾಗಿದೆ. ಮಠದಲ್ಲಿ ದೇವದಾಸಿ ಮಕ್ಕಳಿಗೆ ಹಾಗೂ ಅಂಗವಿಕಲ ಮಕ್ಕಳಿಗೆ ಆಶ್ರಯ ಕಲ್ಪಿಸಿ, ಇವರುಗಳಿಗೆ ಸಮಾಜದಲ್ಲಿ ಒಂದು ಸ್ಥಾನ ಕಲ್ಪಿಸಿಕೊಡಲು ಗುರುಗಳು ನೆರವಾಗುತ್ತಿದ್ದಾರೆ. ಬಸವಣ್ಣನವರ ವಚನಗಳನ್ನು ಸಂಗ್ರಹಿಸಿ ಸಣ್ಣ ಹೊತ್ತಿಗೆಗಳಲ್ಲಿ ಮುದ್ರಿಸಿ, ಭಕ್ತರಿಗೆ ಹಾಗೂ ಸಾಹಿತ್ಯಾಸಕ್ತರಿಗೆ ಸುಲಭವಾಗಿ ದೊರೆಯುವಂತೆ ಮಾಡಿದ್ದಾರೆ. ಗುರುಗಳು ಕ್ರಿಯಾಶೀಲರಾಗಿ ಮಠದ ಆಸ್ತಿಯನ್ನು ಕಾನೂನು ಬದ್ಧಗೊಳಿಸಿ, ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ಅಲ್ಲದೆ ಮಠವು ಸಮಾಜದ ಪ್ರಗತಿಗೆ ಸದಾ ಚಿಂತಿಸುವಂತೆ ಮಾಡಿ, ಸಮಾಜದ ಪ್ರಗತಿಯ ಜೊತೆಗೆ ಮಠದ ಪ್ರಗತಿಯನ್ನು ಮಾಡುತ್ತಿದ್ದಾರೆ.

ವಿಳಾಸ:ಶ್ರೀ ಮ.ನಿ.ಪ್ರ.ಸಿದ್ಧಲಿಂಗ ಸ್ವಾಮಿಗಳು, ಶ್ರೀ ಶಿವಾನಂದೇಶ್ವರ ವಿರಕ್ತಮಠ, ನೆಲೋಗಿ, ಜೇವರಗಿ ತಾಲ್ಲೂಕು, ಗುಲ್ಬರ್ಗಜಿಲ್ಲೆ.

ಮಳ್ಳಿ

ಜೇವರಗಿ ತಾಲ್ಲೂಕಿನ ಮಳ್ಳಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಐವತ್ತೆರೆಡು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಪುರಾತನ ಕಾಲದಿಂದಲೂ ವೀರಶೈವ ಧರ್ಮ ಬೆಳೆದು ಪ್ರಬುದ್ಧಮಾನಕ್ಕೆ ಬಂದಿದೆ. ಹಿಂದೆ ಈ ಗ್ರಾಮದಲ್ಲಿ ಶ್ರೀ ಹಿರೇಮಠ, ಶ್ರೀ ವಿರಕ್ತಮಠ ಹಾಗೂ ಶ್ರೀ ಚಿನ್ನದಕಂತೆ ಮಠ ಎಂಬ ಮೂರು ಮಠಗಳು ಸ್ಥಾಪನೆಗೊಂಡಿದ್ದವು. ಈ ಮಠಗಳಲ್ಲಿ ಶ್ರೀ ವಿರಕ್ತಮಠ ಮತ್ತು ಶ್ರೀ ಚಿನ್ನದಕಂತೆ ಮಠದಲ್ಲಿ ಉತ್ತರಾಧಿಕಾರಿಗಳು ಯಾರೂ ಇಲ್ಲದೆ ಖಾಲಿ ಉಳಿದಿವೆ.

ಹಿರೇಮಠ: ಮಳ್ಳಿ ಗ್ರಾಮದ ಮಧ್ಯ ಭಾಗದಲ್ಲಿ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ. ಶ್ರೀ ರಂಭಾಪುರಿ ಪೀಠದ ಶಾಖಾ ಮಠವಾಗಿರುವ ಈ ಮಠವು ಪುತ್ರ ವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಪುರಾತನ ಕಾಲದಲ್ಲಿ ಶ್ರೀ ಗಂಗಾಧರ ಸ್ವಾಮಿಗಳಿಂದ ಸ್ಥಾಪಿತವಾದ ಮಠವು ಈತನಕ ಬೆಳೆದು ಬಂದಿದೆ. ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ಮಹಾ ತಪಸ್ವಿಗಳಾಗಿ ಮಠವನ್ನು ಅಭಿವೃದ್ಧಿಪಡಿಸಿದ್ದರು. ಇವರ ನಂತರ ಅಧಿಕಾರಕ್ಕೆ ಬಂದ ಗುರುಗಳ ಬಗ್ಗೆ ಹೆಚ್ಚು ಮಾಹಿತಿ ಲಭ್ಯವಿಲ್ಲ. ನಂತರ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದು ತಮ್ಮ ತಪೋ ಶಕ್ತಿಯಿಂದ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಇವರು ೧೯೬೨ ರ ಆಗಸ್ಟ್ ಹದಿನೈದರಂದು ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಬೆಳೆಸಿದ್ದಾರೆ. ಇವರು ಸಂಸ್ಕೃತ ಪಂಡಿತರಾಗಿ ರಾಜ್ಯಪ್ರಶಸ್ತಿಯನ್ನು ಪಡೆದು ಗೌರವಕ್ಕೆ ಪಾತ್ರರಾಗಿದ್ದ ಇವರು ೧೯೯೫ ರ ನವೆಂಬರ್ ಇಪ್ಪತ್ತೊಂಬತ್ತರಂದು ಲಿಂಗೈಕ್ಯರಾಗಿದ್ದಾರೆ. ನಂತರ ಶ್ರೀ ರುದ್ರಸ್ವಾಮಿ ಮತ್ತು ಶ್ರೀಮತಿ ಗಿರಿಜಮ್ಮನವರ ಪುತ್ರರಾಗಿ ೧೯೮೨ ರಲ್ಲಿ ಜನಿಸಿದ ಶ್ರೀ ರುದ್ರಮುನಿ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ. ಶ್ರೀ ರುದ್ರಮುನಿ ದೇವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಮಳ್ಳಿಯಲ್ಲಿ ಮುಗಿಸಿ, ರಂಭಾಪುರಿ ಪೀಠದ ಶ್ರೀ ರೇಣುಕಾಚಾರ್ಯ ಗುರುಕುಲದಲ್ಲಿ ಸಂಸ್ಕೃತ, ವೇದಾಧ್ಯಯನವನ್ನು ಮಾಡುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಸ್ಥಾಪನೆಯಾಗಿರುವ ನಾಲ್ಕು ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ ಹಾಗೂ ವಾರ್ಷಿಕ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ.ಮಠದ ಆಸ್ತಿಯಾಗಿರುವ ನಲವತ್ತೆಂಟು ಎಕರೆ ಜಮೀನನ್ನು ಅಭಿವೃದ್ಧಿಪಡಿಸಿ, ಮಠದ ಧಾರ್ಮಿಕ ಕಾರ್ಯಗಳಿಗೆ ಬಳಸಿಕೊಳ್ಳಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ರುದ್ರಮುನಿ ದೇವರು, ಶ್ರೀ ಹಿರೇಮಠ, ಮಳ್ಳಿ, ಜೇವರಗಿ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಮಾಗಣಗೇರಿ

ಜೇವರಗಿ ತಾಲ್ಲೂಕಿನ ಮಾಗಣಗೇರಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಐವತ್ತಾರು ಕಿ.ಮೀ ದೂರದಲ್ಲಿದೆ. ಪುರಾತನ ಪರಂಪರೆಯ ಈ ಗ್ರಾಮದಲ್ಲಿ ಶ್ರೀ ಬೃಹನ್ಮಠವು ಸ್ಥಾಪನೆಯಾಗಿ ಧಾರ್ಮಕ ಜಾಗೃತಿಯನ್ನುಂಟು ಮಾಡಿದೆ.

ಬೃಹನ್ಮಠ: ಮಾಗಣಗೇರಿ ಗ್ರಾಮದ ಮಧ್ಯಭಾಗದಲ್ಲಿ ಉಜ್ಜಯಿನಿ ಪೀಠದ ಶಾಖಾಮಠವಾದ ಈ ಮಠವು, ಕಳೆದ ಎಂಟುನೂರು ವರ್ಷಗಳಿಗೂ ಮೊದಲೇ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಈ ಮಠವನ್ನು ಶ್ರೀ ಕೊರಣಯ್ಯ ಶಿವಾಚಾರ್ಯ

ಸ್ವಾಮಿಗಳು ಸ್ಥಾಪಿಸಿದ್ದರೆಂದು ಹೇಳಲಾಗುತ್ತಿದೆ. ಪುರಾತನ ಪರಂಪರೆಯ ಈ ಮಠವು ವೀರಶೈವ ಧರ್ಮ ಬೆಳೆಯುವಂತೆ ಮಾಡಿ ಭಕ್ತರನ್ನು ಉದ್ಧರಿಸಿದೆ. ಶ್ರೀ ಕೊರಣಯ್ಯ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಸ್ಥಾಪಿಸಿದ್ದಾಗಿನಿಂದ ಚರ ಮತ್ತು ಸ್ಥಿರ ಪಟ್ಟಾಧಿಕಾರಿಗಳು ಮಠದ ಆಡಳಿತವನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಪರಂಪರೆ:

೧. ಷ.ಬ್ರ.ಶ್ರೀ ಕೊರಣಯ್ಯ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ತೋಂಟದಾರ್ಯ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಕೊರಣಯ್ಯ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ತೋಟಪ್ಪಯ್ಯ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಶಾಂತಯ್ಯ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ಮಳೇಂದ್ರ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ತೋಟಪ್ಪ ಶಿವಾಚಾರ್ಯಸ್ವಾಮಿಗಳು
೧೦. ಷ.ಬ್ರ.ಶ್ರೀ ಮರುಳಾರಾಧ್ಯ ಶಿವಾಚಾರ್ಯಸ್ವಾಮಿಗಳು
೧೧. ಷ.ಬ್ರ.ಶ್ರೀ ಕೊರಣಯ್ಯ ಶಿವಾಚಾರ್ಯಸ್ವಾಮಿಗಳು
೧೨. ಷ.ಬ್ರ.ಶ್ರೀ ದಾರುಕಾಚಾರ್ಯ ಶಿವಾಚಾರ್ಯಸ್ವಾಮಿಗಳು
೧೩. ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯಸ್ವಾಮಿಗಳು
೧೪. ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೧೫. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೧೬. ಷ.ಬ್ರ.ಶ್ರೀ ದೊಡ್ಡಬಸವ ಶಿವಾಚಾರ್ಯಸ್ವಾಮಿಗಳು
೧೭. ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೧೮. ಷ.ಬ್ರ.ಶ್ರೀ ಚನ್ನವೃಷಭೇಂದ್ರ ಶಿವಾಚಾರ್ಯಸ್ವಾಮಿಗಳು
೧೯. ಷ.ಬ್ರ.ಶ್ರೀ ಡಾ.ವಿಶ್ವಾರಾಧ್ಯ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃ ಗುರುಗಳ ನಂತರ ಅಧಿಕಾರಕ್ಕೆ ಬಂದ ಗುರುಗಳ ಬಗ್ಗೆ ಹೆಚ್ಚು ಮಾಹಿತಿ ಲಭ್ಯವಿಲ್ಲ.ಪರಂಪರೆಯ ಹದಿನೆಂಟನೆಯ ಗುರುಗಳಾದ ಶ್ರೀ ಚನ್ನವೃಷಭೇಂದ್ರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಗುರು ಬಸವಾರ್ಯ ಮತ್ತು ಶ್ರೀಮತಿ ಹಂಪಮ್ಮನವರ ಪುತ್ರರಾಗಿ ಜನಿಸಿ, ಬಾಲ್ಯದಲ್ಲೇ ಆಧ್ಯಾತ್ಮವನ್ನು ಮೈಗೂಡಿಸಿಕೊಂಡಿದ್ದರು. ಇವರು ಪೂಜಾನಿಷ್ಠರಾಗಿ, ಜ್ಞಾನಿಗಳಾಗಿ, ಮಠವನ್ನು ಸಮಾಜದ ಮುಖಿಯಾಗಿ ಬೆಳೆಸಿದರು. ಗುರುಗಳು ಅನೇಕ ಪವಾಡಗಳನ್ನು ಮಾಡಿ ಭಕ್ತರನ್ನು ಉದ್ಧರಿಸಿದ್ದಾರೆ. ಇವರು ಲೋಕಸಂಚಾರ ಕೈಗೊಂಡು ಅನೇಕ ಧರ್ಮ ಕ್ಷೇತ್ರಗಳನ್ನು ಸಂದರ್ಶಿಸಿ, ಲೋಕಾನುಭವ ಪಡೆದು ಮಠ ಮತ್ತು ಸಮಾಜವನ್ನು ಬೆಳೆಸುವ ಮೂಲಕ ವೀರಶೈವ ಧರ್ಮವನ್ನು ಅಭಿವೃದ್ಧಿ ಪಡಿಸಿದ್ದರು. ಇವರ ಕಾಲದಲ್ಲಿ ಮಠವು ಶ್ರೀಮಂತಗೊಂಡು ಬೆಳೆಯಿತು. ಇವರು ಸೊನ್ನಾದ ವಿರಕ್ತ ಮಠದ ಶ್ರೀ ಶಿವಾನಂದ ಸ್ವಾಮಿಗಳಿಗೆ ಜಂಗಮ ದೀಕ್ಷೆಯನ್ನು ನೀಡಿ, ಶ್ರೀ ಶಿವಾನಂದ ಸ್ವಾಮಿಗಳು,ವೀರಶೈವ ಧರ್ಮದ ಪ್ರಚಾರ ಕಾರ್ಯದಲ್ಲಿ ತೊಡಗಿಸಿ ಕೊಳ್ಳುವಂತೆ ಮಾಡಿದರು. ಈ ರೀತಿ ಸತ್ ಪುರುಷರಿಗೆ ಮಾರ್ಗದರ್ಶಕರಾಗಿ, ಸಮಾಜದ ಅಭಿವೃದ್ಧಿಗೆ ಕಾರಣೀಭೂತರಾದ ಶ್ರೀ ಚನ್ನವೃಷಭೇಂದ್ರ ಶಿವಾಚಾರ್ಯ ಸ್ವಾಮಿಗಳು ೧೯೫೫ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಮಠವು ಉತ್ತರಾಧಿಕಾರಿಗಳಿಲ್ಲದೆ ಕೆಲವು ವರ್ಷಗಳ ಕಾಲ ಖಾಲಿ ಉಳಿದಿತ್ತು.

ಶ್ರೀ ಡಾ.ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಈಗ ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಗುರುಗಳು ಸಂಸ್ಕೃತದಲ್ಲಿ ಪಾಂಡಿತ್ಯ ಪಡೆದು ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಗುರುಗಳು ವೀರಶೈವ ಧರ್ಮದ ಬಗ್ಗೆ

ಸಂಶೋಧನೆ ನಡೆಸಿ, ಪಿಎಚ್.ಡಿ ಪದವಿಯನ್ನು ಪಡೆದು 'ವೇದಾಂತಚಾರ್ಯ' ಹಾಗೂ 'ಸಾಹಿತ್ಯ ರತ್ನ' ಎಂಬ ಬಿರುದುಗಳನ್ನು ಪಡೆದಿದ್ದಾರೆ. ಧಾರ್ಮಿಕ,ಶೈಕ್ಷಣಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಮಠವನ್ನು ಅಭಿವೃದ್ಧಿ ಪಡಿಸಿದ್ದಾರೆ.೧೯೯೭ರಲ್ಲಿ ಮಠದದ್ವಾರ ಬಾಗಿಲಿಗೆ ಮಂಟಪವನ್ನು ನಿರ್ಮಿಸಿರುವುದಲ್ಲದೆ,ಮಠವನ್ನು ನವೀಕರಿಸಿ ವಿಸ್ತರಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗದ್ದುಗೆಗಳನ್ನು ನವೀಕರಿಸಿ ಪೂಜೆಗೆ ವ್ಯವಸ್ಥೆಗೊಳಿಸಿದ್ದಾರೆ. ಅಮಾವಾಸ್ಯೆ ಮತ್ತು ಹುಣ್ಣಿಮೆಯಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಶ್ರೀ ಗುರು ಚನ್ನವೃಷಭೇಂದ್ರ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆಯನ್ನು ಅದ್ದೂರಿಯಾಗಿ ಆಚರಿಸಿ, ಅಂದು ಧರ್ಮಸಭೆಯನ್ನು ಏರ್ಪಡಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಅನ್ನ ದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಡಾ. ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ಶ್ರೀ ಬೃಹನ್ಮಠ, ಮಾಗಣಗೇರಿ, ಜೇವರಗಿ ತಾ, ಗುಲ್ಬರ್ಗಜಿಲ್ಲೆ.
ಆಧಾರ: 'ಶ್ರೀ ಗುರು ಚನ್ನವೃಷಭೇಂದ್ರ ಶಿವಯೋಗಿಗಳ ಪುರಾಣ', ಲೇಖಕರು : ಶ್ರೀ ಬ.ಮ. ಪಾಟೀಲ

ಯಡ್ರಾಮಿ

ಜೇವರಗಿ ತಾಲ್ಲೂಕಿನ ಯಡ್ರಾಮಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ನಲವತ್ತು ಕಿ.ಮೀ ದೂರದಲ್ಲಿದೆ. ಏಳು ಗ್ರಾಮಗಳು ಸೇರಿ ಈ ಗ್ರಾಮವು ರೂಪಿತಗೊಂಡಿದ್ದು,'ಯಳರಾಮೆ'ಎಂದು ಕರೆಯಲಾಗುತ್ತಿತ್ತು. ಕಾಲಾನಂತರ 'ಯಡ್ರಾಮಿ' ಯಾಗಿದೆ ಎಂದು ಸ್ಥಳ ಪುರಾಣ ತಿಳಿಸುತ್ತದೆ.

ಮುರುಘೇಂದ್ರಸ್ವಾಮಿ ವಿರಕ್ತಮಠ: ಈ ಗ್ರಾಮದ ಮಧ್ಯ ಭಾಗದಲ್ಲಿ ಮುಗುಘಾ ಸಮಯದ 'ಶ್ರೀ ಮುರುಘೇಂದ್ರಸ್ವಾಮಿ ವಿರಕ್ತ ಮಠ'ವು ಸ್ಥಾಪನೆಯಾಗಿದೆ. ಪುರಾತನ ಪರಂಪರೆಯುಳ್ಳ ಮಠದ ಸ್ಥಾಪನೆಯಿಂದಾಗಿ ಧಾರ್ಮಿಕ ಚಟುವಟಿಕೆಗಳು ನಡೆಯತೊಡಗಿ ಸಂಸ್ಕಾರವಂತ ಸಮಾಜ ರೂಪುಗೊಂಡಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಮುರುಘೇಂದ್ರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಗುರುಬಸವಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಶಿವಲಿಂಗಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಸಿದ್ಧರಾಮಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಮಠದ ಪರಂಪರೆಯಲ್ಲಿ ಎಂಟು ಜನ ಗುರುಗಳು ಕಳೆದ ನಾನೂರು ವರ್ಷಗಳಿಂದ ಅಧಿಕಾರವನ್ನು ನಡೆಸುತ್ತಾ ಬಂದಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೆ ಮಠದ ಪರಂಪರೆಯಲ್ಲಿ ಐದು ಜನ ಗುರುಗಳ ಹೆಸರನ್ನು ದಾಖಲಿಸಲಾಗಿದ್ದು, ಆಧಾರಗಳ ಕೊರತೆಯಿಂದ ಪರಂಪರೆಯ ಮೂರು ಜನ ಗುರುಗಳ ಹೆಸರನ್ನು ದಾಖಲಿಸಲಾಗುತ್ತಿಲ್ಲ. ಕರ್ತೃ ಗುರುಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಗುರುಬಸವ ಸ್ವಾಮಿಗಳು ಮತ್ತು ಶ್ರೀ ಗುರುಶಾಂತ ಸ್ವಾಮಿಗಳ ಬಗ್ಗೆ ಹೆಚ್ಚು ಮಾಹಿತಿ ಲಭ್ಯವಿಲ್ಲ. ಪರಂಪರೆಯ ನಾಲ್ಕನೆಯ ಗುರುಗಳಾದ ಶ್ರೀ ಶಿವಲಿಂಗ ಸ್ವಾಮಿಗಳು ಇದೇ ಗ್ರಾಮದಲ್ಲಿ ಜನಿಸಿ,ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿ ಲಿಂಗೈಕ್ಯರಾಗಿದ್ದಾರೆ.

ಇವರ ನಂತರ ಸುರಪುರ ತಾಲ್ಲೂಕಿನ ಸತ್ಯಂಪೇಟೆಯ ಶ್ರೀ ರೇವಣಸಿದ್ಧಯ್ಯ ಮತ್ತು ಶ್ರೀಮತಿ ನಾಗಮ್ಮನವರ ಪುತ್ರರಾಗಿ ೧೯೫೫ ರ ಜೂನ್ ಹನ್ನೆರಡರಂದು ಜನಿಸಿದ ಶ್ರೀ ಸಿದ್ಧರಾಮ ಸ್ವಾಮಿಗಳು ಉತ್ತರಾಧಿಕಾರಿಗಳಾಗಿ ನೇಮಕಗೊಂಡರು. ಇವರು ಸತ್ಯಂಪೇಟೆ ಮತ್ತು ಬೆಂಗಳೂರಿನಲ್ಲಿ ಸಂಸ್ಕೃತ ವೇದಾಧ್ಯಯನವನ್ನು ಮಾಡಿ,೧೯೭೫ ರ ಮೇ ಹದಿಮೂರರಂದು ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಗುರುಗಳು ಕಾಯಕ ಯೋಗದಿಂದ ಮಠವನ್ನು ಆರ್ಥಿಕವಾಗಿ ಸದೃಢಗೊಳಿಸಿದ್ದಾರೆ. ಮಠದ ಹಳೆಯ ಕಟ್ಟಡವನ್ನು ತೆಗೆದು ಹೊಸಕಟ್ಟಡವನ್ನು ರೂಪಿಸಿದ್ದಾರೆ. ಮಠದ ಆಸ್ತಿಯಾಗಿರುವ ನಲವತ್ತುಎಕರೆ ಭೂಮಿಯನ್ನು ಅಭಿವೃದ್ಧಿಪಡಿಸಿ,ಮಠದ ಧಾರ್ಮಿಕ ಮತ್ತು ದಾಸೋಹಕ್ರಿಯೆಗಳಿಗೆ ಆದಾಯದ ಮೂಲವನ್ನಾಗಿ ಮಾಡಿಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಸ್ಥಾಪಿತವಾಗಿರುವ ಗದ್ದುಗೆಗಳಿಗೆ ತ್ರಿಕಾಲ ಪೂಜೆ, ಶ್ರಾವಣ ಮಾಸದಲ್ಲಿ ಭಜನೆ ಕಾರ್ಯಕ್ರಮ ಹಾಗೂ ಬಸವ ಜಯಂತಿಯನ್ನು ಅದ್ದೂರಿಯಾಗಿ ಆಚರಣೆ ಮಾಡಲಾಗುತ್ತಿದೆ. ಹೊರಗಿನಿಂದ ಬರುವ ಭಕ್ತರಿಗೆ ಮಠದಲ್ಲಿ ನಿತ್ಯ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಮಠದಲ್ಲಿ ಶಿಕ್ಷಣ ಸಂಸ್ಥೆ ಇಲ್ಲದಿದ್ದರೂ, ಉಚಿತ ಪ್ರಸಾದ ನಿಲಯವನ್ನು ಸ್ಥಾಪಿಸಿ ಕಲಿಯುವ ಬಡ ಮಕ್ಕಳಿಗೆ ನೆರವಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ.ಸಿದ್ಧರಾಮ ಸ್ವಾಮಿಗಳು, ಶ್ರೀ ಮುರುಘೇಂದ್ರಸ್ವಾಮಿವಿರಕ್ತಮಠ, ಯಡ್ರಾಮಿ, ಜೇವರಗಿ ತಾ, ಗುಲ್ಬರ್ಗಜಿಲ್ಲೆ.

ಯಲಗೋಡು

ಜೇವರಗಿ ತಾಲ್ಲೂಕಿನ ಯಲಗೋಡು ಗ್ರಾಮವು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಮೂವತ್ತೈದು ಕಿ.ಮೀ ದೂರದಲ್ಲಿದೆ. ಈ ಗ್ರಾಮದ ಹೊರಭಾಗದಲ್ಲಿ ಶ್ರೀ ಪರಮಾನಂದೇಶ್ವರ ದೇವಸ್ಥಾನದ ಸಮೀಪ 'ಶ್ರೀ ಶಿವಯೋಗಿ ಪ್ರಭು ಮಠ'ವು ೧೯೯೨ ರಲ್ಲಿ ಸ್ಥಾಪನೆಗೊಂಡಿದೆ.

ಶಿವಯೋಗಿ ಪ್ರಭು ಮಠ: ಶ್ರೀ ಗುರುಲಿಂಗ ಸ್ವಾಮಿಗಳು ಮಹಾರಾಷ್ಟ್ರದ ಸೋಲಾಪುರ ಜಿಲ್ಲೆಯ ಅಕ್ಕಲಕೋಟೆ ತಾಲ್ಲೂಕಿನ ಜಂಗಮ ಮನೆತನದಲ್ಲಿ ಜನಿಸಿ, ಬಾಲ್ಯದಲ್ಲೇ ಆಧ್ಯಾತ್ಮವನ್ನು ಮೈಗೂಡಿಸಿಕೊಂಡು ಬೆಳೆದರು. ಇವರು ತಮ್ಮ ಹದಿನಾಲ್ಕನೆಯ ವಯಸ್ಸಿನಲ್ಲಿಯೇ ಮನೆಯನ್ನು ತೊರೆದು ಆಧ್ಯಾತ್ಮದ ಹಸಿವನ್ನು ತೀರಿಸಿಕೊಳ್ಳಲು ನಾಡಿನ ಧರ್ಮ ಕ್ಷೇತ್ರಗಳಲ್ಲಿ ಸಂಚರಿಸಿ, ಯಲಗೋಡು ಗ್ರಾಮದ ಶ್ರೀ ಪರಮಾನಂದೇಶ್ವರ ದೇವಸ್ಥಾನದಲ್ಲಿ ಬಂದು ನೆಲೆಗೊಂಡರು. ಬಾಲ ತಪಸ್ವಿಯ ಆಗಮನದಿಂದ ಯಲಗೋಡು ಗ್ರಾಮಸ್ಥರು ಸಂತೋಷಗೊಂಡು ಗುರುಗಳಿಗೆ ತಪೋನುಷ್ಠಾನಕ್ಕೆ ವ್ಯವಸ್ಥೆಗೊಳಿಸಿ ಆಶ್ರಯ ಕಲ್ಪಿಸಿದರು. ಗುರುಗಳು ಇಲ್ಲಿ ನೆಲೆಗೊಂಡ ಮೇಲೆ ದೇವಸ್ಥಾನದ ಧಾರ್ಮಿಕ ಕಾರ್ಯಗಳ ಜೊತೆಗೆ ಆಧ್ಯಾತ್ಮ ಜೀವನವನ್ನು ಶ್ರೀಮಂತಗೊಳಿಸಿಕೊಂಡು ದೇವಸ್ಥಾನವನ್ನು ಅಭಿವೃದ್ಧಿಪಡಿಸಿದರು. ಗುರುಗಳು ಬಾಲ್ಯಾವಸ್ಥೆಯಿಂದ ಪ್ರೌಢಾವಸ್ಥೆಗೆ ಬರುವ ವೇಳೆಗಾಗಲೇ ಹೆಚ್ಚು ಪ್ರಸಿದ್ಧಿಯಾಗಿದ್ದರು. ಗುರುಗಳು ಪರಮಾನಂದೇಶ್ವರ ದೇವಸ್ಥಾನವನ್ನು ಅಭಿವೃದ್ಧಿಪಡಿಸಿ ಒಂದು ಯಾತ್ರಾ ಸ್ಥಳವನ್ನಾಗಿ ರೂಪಿಸಿದರು. ನಂತರ ದೇವಸ್ಥಾನದ ಪಕ್ಕದಲ್ಲಿ ಜಮೀನನ್ನು ಖರೀದಿಸಿ ನೂತನವಾಗಿ ಮಠವನ್ನು ಸ್ಥಾಪಿಸಿ, ೧೯೯೨ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಗದಗದ ಶ್ರೀ ತೋಂಟದ ಸಿದ್ಧಲಿಂಗ ಸ್ವಾಮಿಗಳು ಹಾಗೂ ಚಿತ್ತಾಪುರ ತಾಲ್ಲೂಕಿನ ನಾಲವಾರದ ಶ್ರೀ ತೋಟೇಂದ್ರ ಶಿವಾಚಾರ್ಯ ಸ್ವಾಮಿಗಳ ಕೃಪಾ ವಲಯದಲ್ಲಿ ಬೆಳೆದು, ಈ ಗುರುಗಳ ನಿಕಟ ಸಂಪರ್ಕದಿಂದ ಮಠವನ್ನು ಸ್ವಯಂ ಶಕ್ತಿಯಿಂದ ಬೆಳೆಸಿದ್ದಾರೆ. ಗುರುಗಳು ಮಠದ ಮುಂಭಾಗದಲ್ಲಿ ದೊರೆತ ಶಿವಲಿಂಗವನ್ನು ದೊರೆತ ಸ್ಥಳದಲ್ಲಿಯೇ ಶ್ರೀಶೈಲ ಮಲ್ಲಿಕಾರ್ಜುನ ಎಂಬ ಹೆಸರಿನಲ್ಲಿ ಪ್ರತಿಷ್ಠಾಪಿಸಿದ್ದಾರೆ. ಈ ಸ್ಥಳದಲ್ಲಿ ಅಬ್ಬೆ ತುಮಕೂರಿನ ಶ್ರೀ ವಿಶ್ವಾರಾಧ್ಯ ಗುರುಗಳು ಅನುಷ್ಠಾನಗೊಂಡು ಈ ಕ್ಷೇತ್ರವನ್ನು ಪವಿತ್ರಗೊಳಿಸಿದ್ದಾರೆ. ಇಂತಹ ಪವಿತ್ರ ಸ್ಥಳವನ್ನು ಶ್ರೀ ಗುರುಲಿಂಗ ಸ್ವಾಮಿಗಳು ಸುಕ್ಷೇತ್ರವನ್ನಾಗಿ ಮಾಡಿ ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿಪಡಿಸಿದ್ದಾರೆ.

ಕಾಯಕ ಯೋಗಿಗಳಾದ ಶ್ರೀ ಗುರುಲಿಂಗ ಸ್ವಾಮಿಗಳು ತಮ್ಮ ದುಡಿಮೆಯ ಬಲದಿಂದ ಹನ್ನೆರಡು ಎಕರೆ ಭೂಮಿಯನ್ನು ಖರೀದಿಸಿ ಅಭಿವೃದ್ಧಿಪಡಿಸಿ, ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ಕಾಯಕದಿಂದ ಬರುವ ಆದಾಯವನ್ನು ಮಠದಲ್ಲಿ ನಡೆಯುವ ಧಾರ್ಮಿಕ ಚಟುವಟಿಕೆಗಳು ಹಾಗೂ ಅನ್ನ ದಾಸೋಹಕ್ಕೆ ಬಳಸಿಕೊಳ್ಳಲಾಗುತ್ತಿದೆ. ಗುರುಗಳು ಸುತ್ತಲ ಗ್ರಾಮಗಳಲ್ಲಿ ಪಾದಯಾತ್ರೆ ಮಾಡಿ, ಜನರ ದುಶ್ಚಟಗಳನ್ನು ದೂರ ಮಾಡಿ ಸಂಸ್ಕಾರವಂತರನ್ನಾಗಿ ಮಾಡಿರುವರಲ್ಲದೆ ಕಾಯಕ ಯೋಗದ ಪರಿಕಲ್ಪನೆಯನ್ನು ಮೂಡಿಸಿ, ಕಾಯಕ ಯೋಗಿಗಳನ್ನಾಗಿ ಪರಿವರ್ತಿಸಿದ್ದಾರೆ. ಹಿಂದು, ಮುಸ್ಲಿಂ ಹಾಗೂ ಹಿಂದುಳಿದ ವರ್ಗಗಳನ್ನು ಒಟ್ಟೊಟ್ಟಿಗೆ ಸೇರಿಸಿ ಸಹಬಾಳ್ವೆ ನಡೆಸುವಂತೆ ಸಮಾಜದಲ್ಲಿ ಸೌಹಾರ್ದಯುತ ವಾತಾವರಣವನ್ನು ಸೃಷ್ಟಿಸಿದ್ದಾರೆ.

ಮಕ್ಕಳಿಗೆ ಆಶ್ರಯ: ಗುರುಗಳು ಸ್ವತಂತ್ರವಾಗಿ ಮಠವನ್ನು ನಿರ್ಮಿಸಿದ ಮೇಲೆ ಮಠದಲ್ಲಿ ಕಲಿಯುವ ಬಡ ಮಕ್ಕಳಿಗೆ ಆಶ್ರಯವನ್ನು ಕಲ್ಪಿಸಿ, ವಿದ್ಯಾರ್ಜನೆಗೆ ನೆರವಾಗಿದ್ದಾರೆ. ಮಠದಲ್ಲಿ ನಿತ್ಯ ಅನ್ನದಾಸೋಹ ನಡೆಸುತ್ತಾ ಅಸಹಾಯಕರಿಗೆ

ಆಶ್ರಯದಾತರಾಗಿದ್ದಾರೆ. ಗುರುಗಳು ಧರ್ಮ ಮತ್ತು ಸಮಾಜದ ಹಿತ ಚಿಂತನೆಯ ಜೊತೆಗೆ ಸಾಹಿತ್ಯಾಸಕ್ತಿಯನ್ನು ಬೆಳಸಿಕೊಂಡು, ನೂರಾರು ವಚನಗಳನ್ನು ರಚಿಸಿದ್ದಾರೆ. ಮಠದಲ್ಲಿ ವಾರ್ಷಿಕ ಧರ್ಮ ಸಮ್ಮೇಳವನ್ನು ನಡೆಸಿ ನಾಡಿನ ವಿದ್ವಾಂಸರು ಹಾಗೂ ಗುರು ವಿರಕ್ತರೆಂಬ ಬೇಧ ಭಾವವಿಲ್ಲದೆ ಎಲ್ಲಾ ಗುರುಗಳನ್ನು ಕರೆಸಿ, ಧರ್ಮೋಪದೇಶ ಕಾರ್ಯವನ್ನು ನಡೆಸುತ್ತಿದ್ದಾರೆ.

ವಿಳಾಸ:ಶ್ರೀ ಗುರುಲಿಂಗ ಸ್ವಾಮಿಗಳು,ಶ್ರೀ ಶಿವಯೋಗಿಪ್ರಭುಮಠ, ಯಲಗೋಡು, ಜೇವರಗಿ ತಾಲ್ಲೂಕು, ಗುಲ್ಬರ್ಗ

ಸೊನ್ನ

ಜೇವರಗಿ ತಾಲ್ಲೂಕಿನ ಸೊನ್ನ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿನೈದು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಚೀಲಾಳ ಸಮಯದ ವಿರಕ್ತ ಮಠವು ಸ್ಥಾಪನೆಯಾಗಿದೆ.

ವಿರಕ್ತಮಠ: ವಿರಕ್ತಮಠವು ಸೊನ್ನ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿದೆ. ಹದಿನೇಳನೆಯ ಶತಮಾನದ ಉತ್ತರಾರ್ಧದಲ್ಲಿ ಈ ಮಠವು ಶ್ರೀ ಸಿದ್ಧಲಿಂಗ ಶಿವಯೋಗಿಗಳಿಂದ ಸ್ಥಾಪಿಸಲ್ಪಟ್ಟಿದೆ. ಶ್ರೀ ಸಿದ್ಧಲಿಂಗ ಶಿವಯೋಗಿಗಳು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಯಲ್ಲಾನೂರು ಗ್ರಾಮದಲ್ಲಿ ಜನಿಸಿ, ಬಾಲ್ಯದಲ್ಲೇ ಆಧ್ಯಾತ್ಮವನ್ನು ಮೈಗೂಡಿಸಿಕೊಂಡು ಬೆಳೆದರು. ಗುರುಗಳು ಪ್ರೌಢಾವಸ್ಥೆಗೆ ಬಂದ ಮೇಲೆ ಕಲ್ಯಾಣದ ಶರಣರ ತತ್ವಗಳಿಗೆ ಮನಸೋತು ಅವುಗಳನ್ನು ಜನಮನದಲ್ಲಿ ಮೂಡಿಸಬೇಕೆಂಬ ಮಹದಾಸೆಯಿಂದ ಲೋಕಸಂಚಾರಕ್ಕೆ ಹೊರಟರು.

ಮಠ ಸ್ಥಾಪನೆ: ಶ್ರೀ ಸಿದ್ಧಲಿಂಗ ಶಿವಯೋಗಿಗಳು ಲೋಕ ಸಂಚಾರದಲ್ಲಿ ನಾಡಿನ ನಾನಾ ಸ್ಥಳಗಳಲ್ಲಿ ಅನುಷ್ಠಾನ ಕೈಗೊಂಡು ಧರ್ಮ ಪ್ರಸಾರವನ್ನು ಮಾಡಿ ಸೊನ್ನಾ ಗ್ರಾಮಕ್ಕೆ ಆಗಮಿಸಿದರು. ಗುರುಗಳು ಇಲ್ಲಿ ತಪೋನುಷ್ಠಾನ ಕೈಗೊಂಡು ಮುಂದೆ ಹೊರಡಲು ತಯಾರಾದಾಗ, ಭಕ್ತರ ಒತ್ತಾಸೆಯ ಮೇರೆಗೆ ತಮ್ಮ ನಿರ್ಧಾರವನ್ನು ಬದಲಿಸಿ ಈ ಗ್ರಾಮದಲ್ಲಿ ನೆಲೆ ನಿಂತರು. ಭಕ್ತರು ಕಟ್ಟಡವನ್ನು ಕಟ್ಟಿಸಿದರು. ಗುರುಗಳ ನಿತ್ಯ ಧರ್ಮೋಪದೇಶ ಹಾಗೂ ಅನ್ನದಾಸೋಹವನ್ನು ನಡೆಸತೊಡಗಿದರು. ಇದರಿಂದ ಭಕ್ತರು ಸಂಸ್ಕಾರ ಪಡೆದು, ಕಾಯಕಯೋಗಿಗಳಾಗಿ ತಮ್ಮ ಆತ್ಮೋನ್ನತಿಯನ್ನು ಕಂಡುಕೊಂಡರು.

ಪರಂಪರೆ:

೧. ಶ್ರೀ ಮ.ನಿ.ಪ್ರ. ಸಿದ್ಧಲಿಂಗ ಶಿವಯೋಗಿಗಳು
೨. ಶ್ರೀ ಮ.ನಿ.ಪ್ರ. ಸಿದ್ಧೇಶ್ವರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಮರಿದೇವರು
೪. ಶ್ರೀ ಮ.ನಿ.ಪ್ರ. ಶಿವಾನಂದಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಗುರುಸಿದ್ಧಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಶಿವಾನಂದಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಮಠದ ಕರ್ತೃಗುರುಗಳಾದ ಶ್ರೀ ಸಿದ್ಧಲಿಂಗ ಶಿವಯೋಗಿಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಸಿದ್ಧೇಶ್ವರ ದೇವರು ಮತ್ತು ಶ್ರೀ ಮರಿದೇವರ ಬಗ್ಗೆ ಹೆಚ್ಚು ಮಾಹಿತಿ ಲಭ್ಯವಿಲ್ಲ. ನಂತರ ಪರಂಪರೆಯ ನಾಲ್ಕನೆಯ ಗುರುಗಳಾಗಿ ಅಧಿಕಾರಕ್ಕೆ ಬಂದ ಶ್ರೀ ಶಿವಾನಂದ ಸ್ವಾಮಿಗಳು ತಪೋನಿಷ್ಠರಾಗಿ, ಕಾಯಕ ಯೋಗಿಗಳಾಗಿ ಮಠವನ್ನು ಹೆಚ್ಚು ಅಭಿವೃದ್ಧಿಪಡಿಸಿದರು. ಇವರ ಕಾಲದಲ್ಲಿ ಧರ್ಮೋಪದೇಶಗಳು ಹಾಗೂ ಅನ್ನದಾಸೋಹ ಕಾರ್ಯ ನಿರಂತರವಾಗಿ ನಡೆಯುತ್ತಿದ್ದ ರಿಂದ ಭಕ್ತರು ಇವರನ್ನು 'ಮಹಾ ದಾಸೋಹಮೂರ್ತಿ'ಗಳೆಂದು ಬಣ್ಣಿಸಿದರು. ದಾಸೋಹ ಮೂರ್ತಿಯು ನೂರಹದಿನಾಲ್ಕು ವರ್ಷಗಳ ಕಾಲ ಬದುಕಿ ಮಠವನ್ನು ಬೆಳೆಸುವುದರ ಮೂಲಕ ಸಮಾಜದ ಅಭಿವೃದ್ಧಿಯನ್ನು ಕಂಡರು. ಇಂತಹ ಮಹಾ ಯೋಗಿಯು ೧೯೭೭ರ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಮಹಾ ದಾಸೋಹಮೂರ್ತಿಗಳಾದ ಶ್ರೀ ಶಿವಾನಂದ ಸ್ವಾಮಿಗಳ ಕರಕಮಲ ಸಂಜಾತರಾಗಿದ್ದ ಶ್ರೀ ಗುರುಸಿದ್ಧ ಸ್ವಾಮಿಗಳು ಹಿರಿಯ ಗುರುಗಳ ಕೃಪಾಶೀರ್ವಾದದಿಂದ ಪಟ್ಟಾಧಿಕಾರವನ್ನು ಪಡೆದು, ಅವರ ಮಾರ್ಗದರ್ಶನದಲ್ಲಿ ಬೆಳೆದು ತಾವೂ ಸಹ ದಾಸೋಹಮೂರ್ತಿಗಳಾದರು. ದೀನ

ದಲಿತರ ಬಗ್ಗೆ ಅಪಾರ ಕಾಳಜಿಯನ್ನಿಟ್ಟುಕೊಂಡು ಅವರ ಉದ್ಧಾರಕ್ಕೆ ಶ್ರಮಿಸಿದ ಅವರು ತಮ್ಮ ಕಾಲವಾವಧಿಯಲ್ಲಿ ಜಾತಿ ನಿರ್ಮೂಲನೆ ಮಾಡಿ, ಸಮಾಜದಲ್ಲಿ ಸಮಾನತೆಯನ್ನು ತರಲು ಶ್ರಮಿಸಿದರು.

ಈಗಿನ ಮಠಾಧ್ಯಕ್ಷರಾದ ಶ್ರೀ ಶಿವಾನಂದ ಸ್ವಾಮಿಗಳು ೧೯೮೫ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡು ಮಠವನ್ನು ಬೆಳೆಸಿದ್ದಾರೆ. ಗುರುಗಳು ಮುದ್ದೇಬಿಹಾಳು ತಾಲ್ಲೂಕಿನ ಮಡಕೇಶ್ವರ ಗ್ರಾಮದ ಶ್ರೀ ಚನ್ನಯ್ಯ ಶಾಂತಯ್ಯ ಹಿರೇಮಠ ಇವರ ಪುತ್ರರಾಗಿ ೧೯೬೪ ರ ಜುಲೈ ಎರಡರಂದು ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಸೊನ್ನಾದಲ್ಲಿ ಮುಗಿಸಿ, ನಂತರ ಶಿವಯೋಗ ಮಂದಿರದಲ್ಲಿ ಸಂಸ್ಕೃತ, ಶರಣ ಸಾಹಿತ್ಯ ಹಾಗೂ ಯೋಗ ಶಿಕ್ಷಣವನ್ನು ಪಡೆದುಕೊಂಡರು. ನಂತರ ಹುಬ್ಬಳ್ಳಿಯ ಮೂರು ಸಾವಿರ ಮಠದಲ್ಲಿ ನೆಲೆಸಿ, ಪದವಿ ಶಿಕ್ಷಣವನ್ನು ಮುಗಿಸಿದರು. ನಂತರ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಮೊದಲ ವರ್ಷದ ಎಂ.ಎ ಪೂರೈಸಿ ಮಠದ ಉತ್ತಾರಾಧಿಕಾರಿಗಳಾಗಿ ಅಧಿಕಾರವನ್ನು ವಹಿಸಿಕೊಂಡರು.ಶ್ರೀ ಶಿವಾನಂದ ಸ್ವಾಮಿಗಳು ಕ್ರಿಯಾಶೀಲರಾಗಿ ಪ್ರಗತಿಪರ ಚಿಂತಕರಾಗಿದ್ದು ವೀರಶೈವ ಧರ್ಮವನ್ನು ಶರಣರು ಕಂಡ ರೀತಿಯಲ್ಲಿ ಬೆಳೆಸಲು ಮುಂದಾಗಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಶಿವಾನಂದ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠದ ಆವರಣದಲ್ಲಿ ಶಿವಾನುಭವ ಮಂಟಪ, ಮಠದ ಹಳೆಯ ಕಟ್ಟಡದ ನವೀಕರಣ, ಹೊಸದಾದ ಒಂದು ಕಟ್ಟಡ, ಮಹಾದ್ವಾರ ಈ ರೀತಿ ಮಠದ ಸಮುಚ್ಛಯದಲ್ಲಿ ಕಟ್ಟಡಗಳನ್ನು ನಿರ್ಮಿಸಿದ್ದಾರೆ. ಮಠದ ಆಸ್ತಿಯನ್ನು ಅಭಿವೃದ್ಧಿಪಡಿಸಿ ಮಠದ ಆದಾಯದ ಮೂಲವನ್ನಾಗಿ ಮಾಡಿಕೊಂಡಿದ್ದಾರೆ. ಪರಂಪರೆಯ ಗದ್ದುಗೆಗಳನ್ನು ನವೀಕರಣಗೊಳಿಸಿ ಮಂಟಪವನ್ನು ಸ್ಥಾಪಿಸಲಾಗಿದೆ.

ಸಾಮಾಜಿಕ ಕಾರ್ಯಗಳು: ಶ್ರೀ ಶಿವಾನಂದ ಸ್ವಾಮಿಗಳು ೧೯೯೩ ರಲ್ಲಿ ಅನಾಥಾಶ್ರಮವನ್ನು ಸ್ಥಾಪಿಸಿ, ಜಾತ್ಯಾತೀತವಾಗಿ ಎಲ್ಲರಿಗೂ ಸಮಾನ ಅವಕಾಶ ಕೊಟ್ಟು ನಡೆಸುತ್ತಿದ್ದಾರೆ. ಮಠದಲ್ಲಿ ಸಾಮೂಹಿಕ ವಿವಾಹಗಳನ್ನು ನಡೆಸುತ್ತಿದ್ದಾರೆ. ಪಾದಯಾತ್ರೆಯ ಮೂಲಕ ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸಿ ಧಾರ್ಮಿಕ ಸಂಸ್ಕಾರವನ್ನು ನೀಡುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಪುರಾತನ ಪರಂಪರೆಯ ಈ ವಿರಕ್ತಮಠದಲ್ಲಿ ಏಳು ಗದ್ದುಗೆಗಳು ಸ್ಥಾಪನೆಯಾಗಿದ್ದು, ಈ ಗದ್ದುಗೆಗಳಿಗೆ ನಿತ್ಯ ಪೂಜೆ, ಅಮಾವಾಸ್ಯೆಯಲ್ಲಿ ಭಜನೆ, ಶ್ರಾವಣ ಮಾಸದಲ್ಲಿ ಪುರಾಣ ಪ್ರವಚನ, ಆಗಿ ಹುಣ್ಣಿಮೆಯಲ್ಲಿ ಐದು ದಿನಗಳ ಕಾಲ ಕರ್ತೃಗುರುಗಳಾದ ಶ್ರೀ ಸಿದ್ಧಲಿಂಗ ಸ್ವಾಮಿಗಳ ಪುಣ್ಯಾರಾಧನೆ, ಧರ್ಮಸಭೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ. ಶ್ರೀ ಶಿವಾನಂದ ಸ್ವಾಮಿಗಳು ಪುರಾಣ ಪ್ರವಚನಕಾರರಾಗಿದ್ದು ನಾಡಿನ ಅನೇಕ ಮಠಗಳಲ್ಲಿ ಪ್ರವಚನಗಳನ್ನು ನೀಡಿ ಧರ್ಮಪ್ರಚಾರವನ್ನು ಕೈಗೊಂಡಿದ್ದಾರೆ. ಅಲ್ಲದೆ ಮಠದಲ್ಲಿ ಸಾಮೂಹಿಕ ಲಿಂಗಪೂಜೆ, ಶಿವದೀಕ್ಷೆ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

ಶೈಕ್ಷಣಿಕ ಕಾರ್ಯಗಳು: ಗದಗಿನ ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ವತಿಯಿಂದ ಕಿರಿಯ ಪ್ರಾಥಮಿಕ ಶಾಲೆ, ಲಿಂಗೈಕ್ಯ ಶ್ರೀ ಶಿವಾನಂದ ಸ್ವಾಮಿಗಳ ಹೆಸರಿನಲ್ಲಿ ಅನಾಥಾಶ್ರಮ ಮತ್ತು ಉಚಿತ ಪ್ರಸಾದ ನಿಲಯವನ್ನು ಪ್ರಾರಂಭಿಸಲಾಗಿದೆ. ಗುರುಗಳು ಬಹುತೇಕ ಸಮಯವನ್ನು ಮಕ್ಕಳ ಅಭ್ಯುದಯಕ್ಕೆ ಮೀಸಲಿಟ್ಟು ಶ್ರಮಿಸುತ್ತಿದ್ದಾರೆ.

ಶಾಖಾ ಮಠಗಳು: ಮಸುಬಿನಾಳು, ಆಲೂರು, ಯಲ್ಲಾನೂರು, ಜಾಲವಾಡಿ, ಬೂದಿಹಾಳು ಮುಂತಾದ ಕಡೆ ಈ ವಿರಕ್ತ ಮಠದ ಶಾಖಾ ಮಠಗಳಿದ್ದು ಅವುಗಳನ್ನೂ ಅಭಿವೃದ್ಧಿಪಡಿಸಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಶಿವಾನಂದ ಸ್ವಾಮಿಗಳು, ಶ್ರೀ ವಿರಕ್ತಮಠ, ಸೊನ್ನ, ಜೇವರಗಿ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

❑

ಯಾದಗಿರಿ ತಾಲ್ಲೂಕು

ಗುಲ್ಬರ್ಗ ಜಿಲ್ಲೆಯ ಯಾದಗಿರಿ ತಾಲ್ಲೂಕು ಪೌರಾಣಿಕ ಹಾಗೂ ಐತಿಹಾಸಿಕವಾಗಿ ಮಹತ್ವ ಪಡೆದಿದೆ. ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಕ್ಷೇತ್ರದಲ್ಲಿ ಪ್ರಸಿದ್ಧಿ ಪಡೆದ ಈ ತಾಲ್ಲೂಕಿನಲ್ಲಿ ಎಂಟು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿ ವೀರಶೈವ ಧರ್ಮವನ್ನು ಪ್ರಚಾರಕ್ಕೆ ತಂದಿವೆ.

ಅಬ್ಬೆತುಮಕೂರು

ಯಾದಗಿರಿ ತಾಲ್ಲೂಕಿನ ಅಬ್ಬೆತುಮಕೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹತ್ತು ಕಿ.ಮೀ ದೂರದಲ್ಲಿದೆ. ಈ ಗ್ರಾಮದ ಹೊರಭಾಗದಲ್ಲಿ ಶ್ರೀ ವಿಶ್ವಾರಾಧ್ಯ ಸಿದ್ಧಸಂಸ್ಥಾನ ಮಠವು ಸ್ಥಾಪನೆಯಾಗಿ ಈ ಗ್ರಾಮದ ಧಾರ್ಮಿಕ ಕೇಂದ್ರಬಿಂದು ವಾಗಿ, ಆಧ್ಯಾತ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ಹೆಚ್ಚು ಶ್ರೀಮಂತಿಕೆ ಪಡೆದಿದೆ.

ವಿಶ್ವಾರಾಧ್ಯ ಸಿದ್ಧಸಂಸ್ಥಾನ ಮಠ: ಜೇವರ್ಗಿ ತಾಲ್ಲೂಕಿನ ಗಮಾರ ಗ್ರಾಮದ ಪಂಚಗ್ರಹ ತೋಪಿನಕಟ್ಟೆ ಹಿರೇಮಠದ ಶ್ರೀಮತಿ ನೀಲಾಂಬಿಕೆ ಮತ್ತು ಶ್ರೀ ಬಸದಯ್ಯ ಇವರ ಪುತ್ರರಾಗಿ ೧೮೮೩ ರಲ್ಲಿ ಜನಿಸಿದ ಶ್ರೀ ವಿಶ್ವಾರಾಧ್ಯರು, ಬಾಲ್ಯ ಶಿಕ್ಷಣವನ್ನು ಹುಟ್ಟೂರಿನಲ್ಲಿಯೇ ಪೂರೈಸಿ ಕಾಶಿ ಜ್ಞಾನ ಪೀಠದ ಆಶ್ರಯದಲ್ಲಿ ಸಂಸ್ಕೃತ ವೇದಾಧ್ಯಯನವನ್ನು ಕಲಿತರು.ಇವರು ಕಾಶಿಯಿಂದ ಗಮಾರಕ್ಕೆ ವಾಪಸ್ಸಾದ ಮೇಲೆ ಗೃಹಸ್ಥಾಶ್ರಮವನ್ನು ಸ್ವೀಕರಿಸಿದರು. ಇಲ್ಲಿ ಕಾಯಕಯೋಗಿಗಳಾಗಿ ದುಡಿದು ಸಂಸಾರವನ್ನು ಮುನ್ನಡೆಸತೊಡಗಿದರು. ಇಂತಹ ಸಂದರ್ಭದಲ್ಲಿ ತಾವು ಕಲಿತ ಪಾಂಡಿತ್ಯ ವ್ಯರ್ಥವಾಗುವುದನ್ನು ಮನಗಂಡು ಪಾಠಶಾಲೆಯನ್ನು ಪ್ರಾರಂಭ ಮಾಡಿದರು. ನಂತರ ಆತ್ಮೋನ್ನತಿಗಾಗಿ ಎರಡು ಬಾರಿ ಅನುಷ್ಠಾನ ಕೈಗೊಂಡರು. ಅಪಾರ ಪಾಂಡಿತ್ಯವನ್ನು ಸಂಪಾದಿಸಿಕೊಂಡು ವೈರಾಗ್ಯವನ್ನು ತಾಳಿದರು. ಉಜ್ಜಯಿನಿ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಶ್ರೀವಿಶ್ವಾರಾಧ್ಯರಿಂದ'ಸಿದ್ಧಾಂತ ಶಿಖಾಮಣಿಯ' ಅಭ್ಯಾಸವನ್ನು ಮಾಡಿದರೆಂದು ಹೇಳಲಾಗುತ್ತಿದೆ. ಇದರಿಂದ ಶ್ರೀ ವಿಶ್ವಾರಾಧ್ಯರ ಪಾಂಡಿತ್ಯ ಎಂತಹದ್ದೆಂದು ಗುರುತಿಸಬಹುದಾಗಿದೆ.

ಸಂಸಾರಿಗಳಾಗಿದ್ದು ಆಧ್ಯಾತ್ಮದ ಕಡೆ ಒಲವುತೋರಿಸಿ ಅನೇಕ ಅನುಷ್ಠಾನಗಳನ್ನು ಕೈಗೊಂಡು ಕೊನೆಗೊಮ್ಮೆ ಸಂಸಾರ ವನ್ನು ತ್ಯಜಿಸಿ,ಪಾರಮಾರ್ಥದ ದಾರಿಯನ್ನು ಹಿಡಿದು ತಮ್ಮಪಾಂಡಿತ್ಯವನ್ನು ಒರೆಹಚ್ಚಲು ಪ್ರಯತ್ನಿಸತೊಡಗಿದರು. ಆತ್ಮೋನ್ನತಿಗಾಗಿ ಅಡವಿ ತಾತನ ಉಪದೇಶವನ್ನು ಪಡೆದುಕೊಂಡರು. ನಂತರ ಆಧ್ಯಾತ್ಮ ಸಾಧನೆಗಾಗಿ ಲೋಕ ಸಂಚಾರ ಕೈಗೊಂಡರು. ದೇಹದ ಮೋಹವನ್ನು ತೊರೆದು ನಿರ್ಬಯಲು ತತ್ತ್ವಕ್ಕೆ ಹೊಂದಿಕೊಂಡು ದಿಗಂಬರತ್ವ ಪಡೆದರು. ದೀರ್ಘ ಕಾಲ ಅನುಷ್ಠಾನ ಕೈಗೊಂಡು ದೇವಿಯನ್ನು ಒಲಿಸಿಕೊಂಡು ಸಿದ್ಧ ಶಿವಯೋಗಿಗಳಾದರು. ನಾಡಿನ ತುಂಬೆಲ್ಲಾ ಸಂಚರಿಸಿ ಶಿವ ಸ್ವರೂಪಿಯಾದರು. ಲೋಕಸಂಚಾರ ಕೈಗೊಂಡು ಅಬ್ಬೆ ತುಮಕೂರಿಗೆ ಬಂದ ಶಿವಯೋಗಿಗಳು ಈ ಗ್ರಾಮದಲ್ಲಿ ನೆಲಸಿದರು. ಆಗ ಈ ಗ್ರಾಮದ ಸಕ್ಕರಪ್ಪಗೌಡ ಎಂಬುವರು ಗುರುಗಳ ತಪೋಶಕ್ತಿಗೆ ಮನಸೋತು ಗುರುಗಳ ಸೇವೆಯನ್ನು ಮಾಡತೊಡಗಿದರು.

ನೆಲೆ ನಿಂತ ಗುರುಗಳು: ಎಲ್ಲಿಯೂ ಹೆಚ್ಚು ದಿನ ನೆಲೆಸದ ಶ್ರೀ ಶಿವಯೋಗಿ ವಿಶ್ವಾರಾಧ್ಯರು ಶ್ರೀ ಸಕ್ಕರಪ್ಪಗೌಡರ ಭಕ್ತಿಗೆ ಓಗೊಟ್ಟು ಇಲ್ಲಿಯೇ ನೆಲೆಸಲು ತೀರ್ಮಾನಿಸಿದರು. ಇಲ್ಲಿ ನೆಲೆನಿಂತ ಮೇಲೆ ಅನೇಕ ಪವಾಡಗಳನ್ನು ಮಾಡಿ ಕೆಲವೇ ದಿನಗಳಲ್ಲಿ ಹೆಚ್ಚು ಪ್ರಸಿದ್ಧಿಗೊಂಡರು. ಗುರುಗಳ ಪವಾಡಗಳನ್ನು ನೋಡಲು ಜನ ಸೇರತೊಡಗಿದರು. ಅಬ್ಬೆ ತುಮಕೂರು, ಶ್ರೀ ವಿಶ್ವಾರಾಧ್ಯರು ನೆಲೆಗೊಂಡಿದ್ದರಿಂದ ಯಾತ್ರಾಸ್ಥಳವಾಗಿ ರೂಪುಗೊಂಡಿತು. ಆ ಸಂದರ್ಭದಲ್ಲಿ ಚಿಕ್ಕದಾದ ಒಂದು ಮಾಳಿಗೆಯ ಮನೆಯಿತ್ತು. ನಂತರ ಭಕ್ತರ ಒಡನಾಟ ಹಾಗೂ ಇಲ್ಲಿ ನಡೆಯುವ ಕಾರ್ಯಗಳು ಹೆಚ್ಚಾದಂತೆಲ್ಲಾ ಈ ಜಾಗ ಸಾಕಾಗದೆ ಹೋಯಿತು.

ಮಠ ಸ್ಥಾಪನೆ: ಗುರುಗಳು ಇಲ್ಲಿ ನೆಲೆ ನಿಂತು ಧಾರ್ಮಿಕ ಕಾರ್ಯಗಳು ಹೆಚ್ಚಾದ ಮೇಲೆ ಶ್ರೀ ಸಕ್ಕರಪ್ಪಗೌಡರು ತಮ್ಮ ವಾಸದ ಮನೆಯನ್ನೇ ಬಿಟ್ಟುಕೊಟ್ಟು ಮಠವನ್ನು ಸ್ಥಾಪಿಸಿ, ಧಾರ್ಮಿಕ ಚಟುವಟಿಕೆಗಳು ನಡೆಯಲು ಅವಕಾಶ ಮಾಡಿಕೊಟ್ಟರು.

ಗುರುಗಳು ಲೀಲಾಮೂರ್ತಿಗಳಾಗಿ ಭಕ್ತಿಯ ಪರಾಕಾಷ್ಠತೆಗೆ ಹೋಗಿ ದಿಗಂಬರ ವೇಷದಲ್ಲಿ ಬೂದಿ ಬಸವನಂತೆ ಕಾಲ ಕಳೆಯ ತೊಡಗಿದರು. ಒಳಗಣ್ಣು ಇಲ್ಲದ ಕೆಲವರು ಅಪಹಾಸ್ಯ ಮಾಡಿದರು. ಆಧ್ಯಾತ್ಮದ ಒಳಗಣ್ಣಿದ್ದವರು ಗುರುಗಳ ಈ ಸ್ಥಿತಿಯನ್ನು ನೋಡಿ ಅವರು ಆಧ್ಯಾತ್ಮದ ಪರಾಕಾಷ್ಠತೆಗೆ ಹೋಗಿದ್ದನ್ನು ಗುರುತಿಸಿದರು.

ಮಹಾ ಮಹಿಮರಾಗಿ, ಪವಾಡ ಪುರುಷರಾಗಿ, ಆಧ್ಯಾತ್ಮದ ಹುಚ್ಚರಾಗಿ, ದೇವಿಯನ್ನು ಒಲಿಸಿಕೊಂಡ ಅವಧೂತರಾಗಿ ಒಬ್ಬೊಬ್ಬರ ಕಣ್ಣಿಗೆ ಒಂದೊಂದು ತರದಲ್ಲಿ ಗೋಚರಿಸಿದ ಶ್ರೀ ವಿಶ್ವಾರಾಧ್ಯ ಗುರುಗಳು ತಾವೇ ನಿರ್ಮಿಸಿಕೊಂಡಿದ್ದ ಗವಿಯಲ್ಲಿ ಸಮಾಧಿ ಸ್ಥಿತಿಯಲ್ಲಿ ಇರತೊಡಗಿದರು. ಶಿವರಾತ್ರಿಯ ದಿನ ಗುರುಗಳು ಗವಿಯ ಒಳಗೆ ಹೋದವರು ಹೊರಗೆ ಬರಲಿಲ್ಲ. ಈ ರೀತಿ ಪವಾಡ ಪುರುಷರಾಗಿ ತಮ್ಮ ಲೀಲೆಗಳನ್ನು ಕೊನೆಯವರೆಗೂ ಮಾಡಿ ತೋರಿಸಿದರು. 'ಶರಣರನ್ನು ಮರಣದಲ್ಲಿ ನೋಡು' ಎಂಬ ಉಕ್ತಿಯಂತೆ ಈ ಘಟನೆ ನಡೆದ ಮೇಲೆ ಸಾವಿರ ಸಾವಿರ ಸಂಖ್ಯೆಯಲ್ಲಿ ಜನ ಇಲ್ಲಿಗೆ ಬರತೊಡಗಿದರು.

ಬೆಳೆದ ಕ್ಷೇತ್ರ: ಶ್ರೀ ವಿಶ್ವಾರಾಧ್ಯ ಗುರುಗಳು ಲಿಂಗೈಕ್ಯರಾದ ಮೇಲೆ ಅನೇಕ ಸಾಧಕರು ಈ ಕ್ಷೇತ್ರದಲ್ಲಿ ನೆಲೆಗೊಳ್ಳಲು ಪ್ರಯತ್ನಿಸಿದರು. ಆದರೆ ಯಾರೊಬ್ಬರೂ ಇಲ್ಲಿ ನೆಲೆಗೊಳ್ಳಲಾರದೆ ಹೋಗುತ್ತಿದ್ದರು. ಈ ಸಂದರ್ಭದಲ್ಲಿ ಶ್ರೀ ವಿಶ್ವಾರಾಧ್ಯರ ವಂಶಸ್ಥರಾದ ಶ್ರೀ ಚಂದ್ರಶೇಖರ ಶಾಸ್ತ್ರಿ ಮತ್ತು ಶ್ರೀಮತಿ ಕಮಲಮ್ಮನವರ ಪುತ್ರರಾಗಿ ೧೯೬೩ ರ ಆಗಸ್ಟ್ ಹದಿನೈದರಂದು ಜನಿಸಿದ ಶ್ರೀ ಗಂಗಾಧರ ಸ್ವಾಮಿಗಳು ಗಮಾರನಲ್ಲಿ ಪ್ರಾಥಮಿಕ ಶಿಕ್ಷಣ, ಯಾದಗಿರಿಯಲ್ಲಿ ಪ್ರೌಢಶಿಕ್ಷಣ, ಗುಲ್ಬರ್ಗದಲ್ಲಿ ಕಾಲೇಜು ಶಿಕ್ಷಣ ಹಾಗೂ ಸಂಸ್ಕೃತ ಶಿಕ್ಷಣವನ್ನು ಹುಬ್ಬಳ್ಳಿಯಲ್ಲಿ ಪಡೆದು ಆಧ್ಯಾತ್ಮದ ಒಲವಿನಿಂದ ತಮ್ಮ ವಂಶಸ್ಥ ಗುರುಗಳಿಂದ ಸ್ಥಾಪನೆಯಾದ ಮಠವನ್ನು ಮುನ್ನಡೆಸಿಕೊಂಡು ಹೋಗುವ ಉದ್ದೇಶದಿಂದ,ಅಬ್ಬೆತುಮಕೂರಿಗೆ ೧೯೮೫ ರಲ್ಲಿ ಪ್ರಥಮವಾಗಿ ಆಗಮಿಸಿದರು. ಗುರುಗಳು ಇಲ್ಲಿನ ವ್ಯವಸ್ಥೆಯನ್ನು ಗಮನಿಸಿ ನಿರುತ್ಸಾಹಗೊಳ್ಳದೆ ಇಲ್ಲೇ ನೆಲೆಗೊಂಡರು. ಮೊದಮೊದಲು ಹೋಗಿ ಬರುತ್ತಾ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರತೊಡಗಿದರು.

ಬೆಳೆದ ಪರಂಪರೆ: ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ಏಕ ನಿರ್ಧಾರದಿಂದ ನೆಲೆಗೊಂಡು ಸುಕ್ಷೇತ್ರದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡರು.ಇದರ ಫಲವಾಗಿ ಇಂದು ಈ ಕ್ಷೇತ್ರ ಬೆಳೆದು ನಿಂತಿದೆ. ಶ್ರೀ ವಿಶ್ವಾರಾಧ್ಯರು ಸ್ಥಾಪಿಸಿದ ಈ ಮಠಕ್ಕೆ ಮೊಮ್ಮಗನಾದ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ಬೆಳಕನ್ನು ನೀಡಿದ್ದಾರೆ. ೧೯೯೬ ರಿಂದ ಪೂರ್ಣಅಧಿಕಾರ ವನ್ನು ವಹಿಸಿಕೊಂಡ ಗುರುಗಳು ಆಧ್ಯಾತ್ಮ ಚಿಂತನೆಯಿಂದ ಭಕ್ತರನ್ನು ಒಲಿಸಿಕೊಂಡು ಹೆಚ್ಚು ಹೆಸರು ಗಳಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಶ್ರೀ ವಿಶ್ವಾರಾಧ್ಯರಿಂದ ಪಾವನಗೊಂಡ ಈ ಕ್ಷೇತ್ರ ಈಗ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳಿಂದ ಪ್ರಚಾರ ಪಡೆಯತೊಡಗಿದೆ. ಇಂತಹ ಸುಕ್ಷೇತ್ರದಲ್ಲಿ ಕರ್ತೃಗುರುಗಳಾದ ಶ್ರೀ ವಿಶ್ವಾರಾಧ್ಯ ಶಿವಯೋಗಿಗಳ ಗದ್ದುಗೆಯನ್ನು ನಿರ್ಮಿಸಿ, ನಿತ್ಯ ತ್ರಿಕಾಲ ಪೂಜಯನ್ನು ಸಲ್ಲಿಸಲಾಗುತ್ತಿದೆ. ಅಮಾವಾಸ್ಯೆ ಮತ್ತು ಪ್ರತಿ ಬುಧವಾರ ಶಿವಾನುಭವ ಗೋಷ್ಠಿಯನ್ನು ನಡೆಸಲಾಗುತ್ತಿದೆ. ಅಂದು ಹದಿನೈದರಿಂದ ಇಪ್ಪತ್ತುಸಾವಿರ ಜನ ಭಕ್ತರು ಬಂದು ಸೇರುತ್ತಾರೆ. ಶ್ರಾವಣಮಾಸದಲ್ಲಿ ನಿತ್ಯ ಪುರಾಣ ಪ್ರವಚನ ನಡೆಸಲಾಗುತ್ತಿದೆ. ಶ್ರೀ ವಿಶ್ವಾರಾಧ್ಯರು ದೇವಿ ಆರಾಧಕರಾದ ಕಾರಣ ಮಹಾ ನವಮಿಯ ಸಂದರ್ಭದಲ್ಲಿ ಹನ್ನೊಂದು ನೂರು ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ನಡೆಯುತ್ತದೆ. ಶಿವರಾತ್ರಿಯಾದ ಐದು ದಿನಗಳಲ್ಲಿ ಶ್ರೀ ವಿಶ್ವಾರಾಧ್ಯರ ಜಾತ್ರೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಹನ್ನೊಂದು ದಿನ ಪುರಾಣ ನಡೆಸಲಾಗುವುದಲ್ಲದೆ ಧರ್ಮಗೋಷ್ಠಿ, ಭಾವೈಕ್ಯತಾ ಸಮ್ಮೇಳನವನ್ನು ನಡೆಸಲಾಗುತ್ತಿದೆ. ನಿತ್ಯ ನಡೆಯುವ ಅನ್ನದಾಸೋಹವನ್ನು ಗುರುಗಳು ಪರಿಶೀಲಿಸಿ ಭಕ್ತರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳುತ್ತಾರೆ. ದಾಸೋಹಕ್ಕಾಗಿ ದಿನ ಒಂದಕ್ಕೆ ಒಂದು ಚೀಲ ಅಕ್ಕಿ ಬೇಕಾಗುತ್ತದೆ ಎಂದು ಗುರುಗಳು ಹೇಳುತ್ತಾರೆ.

ಅಭಿವೃದ್ಧಿ ಕಾರ್ಯಗಳು: ಗುರುಗಳು ಅಧಿಕಾರ ವಹಿಸಿಕೊಂಡು ಕೇವಲ ನಾಲ್ಕು ವರ್ಷಗಳಾಗಿದೆ. ಈ ಅವಧಿಯಲ್ಲಿ ಮಠದ ಆವರಣದಲ್ಲಿ ಆದಂತಹ ಅಭಿವೃದ್ಧಿ ಕಾರ್ಯಗಳನ್ನು ಅವಲೋಕಿಸಿದರೆ ಪರಂಪರಾಗತ ಮಠಗಳು ಶತ ಶತಮಾನಗಳಿಂದ ಸಾಧಿಸಲಾಗದಿರುವುದನ್ನು ಸಾಧನೆಮಾಡಿ ತೋರಿಸಿರುವುದು ಇವರ ಕ್ರಿಯಾಶೀಲತೆಗೆ ಹಿಡಿದ ಕೈಗನ್ನಡಿಯಾಗಿದೆ. ಮಠದ

ಆವರಣದಲ್ಲಿ ಒಂದು ಲಕ್ಷ ರೂಗಳ ವೆಚ್ಚದಲ್ಲಿ ಶಿವಾನುಭವಮಂಟಪ, ಇಪ್ಪತ್ತು ಲಕ್ಷ ರೂಗಳ ವೆಚ್ಚದಲ್ಲಿ ಕಲ್ಯಾಣ ಮಂಟಪ, ಹದಿನಾರು ಲಕ್ಷ ರೂಗಳ ವೆಚ್ಚದಲ್ಲಿ ಅನ್ನಪೂರ್ಣ ಪ್ರಸಾದನಿಲಯ, ಎರಡು ಲಕ್ಷ ರೂಗಳ ವೆಚ್ಚದಲ್ಲಿ ಮುದ್ನಾಳು ಮಂಟಪ, ಎರಡು ಲಕ್ಷ ರೂಗಳ ವೆಚ್ಚದಲ್ಲಿ ಸೂಗೂರು ಮಂಟಪ ಮತ್ತು ಯಾದಗಿರಿಯಲ್ಲಿ ಎರಡು ಲಕ್ಷ ರೂಗಳ ವೆಚ್ಚದಲ್ಲಿ ಅನುಭವ ಮಂಟಪವನ್ನು ಸ್ಥಾಪಿಸಿದ್ದಾರೆ. ಯೋಜನೆಯನ್ನು ಶ್ರೀ ವಿಶ್ವಾರಾಧ್ಯರ ಗದ್ದುಗೆಗೆ ಶಿಲಾ ಮಂಟಪವನ್ನು ನಿರ್ಮಿಸುವ ಒಟ್ಟು ಐವತ್ತು ಲಕ್ಷ ರೂಗಳ ಯೋಜನೆ ತಯಾರಾಗಿದ್ದು ಕೆಲಸ ನಡೆಸಿದ್ದಾರೆ. ಇಷ್ಟಲ್ಲದೆ ರಥದ ಕೋಣೆ, ದಸರಾ ದರ್ಬಾರ್ ಹಾಲನ್ನು ನಿರ್ಮಿಸಿದ್ದಾರೆ. ಹೀಗೆ ಕೇವಲ ನಾಲ್ಕು ವರ್ಷದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ವೆಚ್ಚ ಮಾಡಿ ಮಠದ ಸಮುಚ್ಚಯವನ್ನು ಅಭಿವೃದ್ಧಿಗೊಳಿಸಿದ್ದಾರೆ.

ಗುರುಗಳು ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳಂತೆಯೇ ಸಾಹಿತ್ಯ ಮತ್ತು ಸಾಂಸ್ಕೃತಿಕ ವಿಚಾರ ಗಳಲ್ಲಿಯೂ ಒಲವಿದ್ದು, ಅನೇಕ ಉದಯೋನ್ಮುಖ ಸಾಹಿತಿಗಳಿಗೆ ನೆರವು ನೀಡಿ ಸಾಹಿತ್ಯ ಕ್ಷೇತ್ರವನ್ನು ಬೆಳೆಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು, ಶ್ರೀ ವಿಶ್ವಾರಾಧ್ಯ ಸಂಸ್ಥಾನಮಠ, ಅಬ್ಬೆತುಮಕೂರು, ಯಾದಗಿರಿ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಅಶನಾಳ

ಯಾದಗಿರಿ ತಾಲ್ಲೂಕಿನ ಅಶನಾಳ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಶರಣಸ್ಥಲ ಮಠವು ಸ್ಥಾಪನೆಯಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ಸತ್ಯವಾಹಿ ಮಠ: ಈ ಗ್ರಾಮದಲ್ಲಿ ಶ್ರೀ ಸತ್ಯವಾಹಿ ಮಠವೆಂಬ ಶರಣಸ್ಥಲ ಮಠವು ಇತ್ತೀಚಿನ ದಿನಗಳಲ್ಲಿ ಸ್ಥಾಪನೆಯಾಗಿ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿದೆ. ಶ್ರೀ ಕಾಶಿವಿಶ್ವನಾಥ ಶರಣರು ಈ ಮಠವನ್ನು ೧೯೯೬ ರಲ್ಲಿ ಸ್ಥಾಪಿಸಿದ್ದಾರೆ. ಮಹಾರಾಷ್ಟ್ರದ ಸೋಲಾಪುರದ ಯತ್ನಾಳು ಗ್ರಾಮದಲ್ಲಿ ಜನಿಸಿ ಸಂಸಾರವನ್ನು ನಡೆಸಿ ನಂತರ ಗೃಹಸ್ಥಾಶ್ರಮವನ್ನು ತ್ಯಜಿಸಿ, ಇಲ್ಲಿಗೆ ಬಂದು ಮಠವನ್ನು ಸ್ಥಾಪಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಮಠ ಸ್ಥಾಪಕರಾದ ಶ್ರೀ ಕಾಶಿನಾಥ ಶರಣರು ದೇವಿ ಆರಾಧಕರಾಗಿದ್ದಾರೆ. ಮಠದಲ್ಲಿ ಶ್ರಾವಣಮಾಸದಲ್ಲಿ ಭಜನೆ, ಮಹಾನವಮಿಯಂದು ದೇವಿಯ ಆರಾಧನೆಯನ್ನು ನಡೆಸಿ,ನಿತ್ಯಭಕ್ತರ ಧಾರ್ಮಿಕ ಕ್ರಿಯಾದಿಗಳಲ್ಲಿ ಪಾಲ್ಗೊಂಡು ನೆರವಾಗುತ್ತಿದ್ದಾರೆ.

ವಿಳಾಸ: ಶ್ರೀ ಕಾಶಿನಾಥ ಶರಣರು, ಶ್ರೀ ಸತ್ಯವಾಹಿ ಮಠ, ಅಶನಾಳ, ಯಾದಗಿರಿ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಕಡೆಚೂರು

ಯಾದಗಿರಿ ತಾಲ್ಲೂಕಿನ ಕಡೆಚೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಐವತ್ತು ಕಿ.ಮೀ ದೂರದಲ್ಲಿದೆ. ಹೈದರಾಬಾದ್ ಕರ್ನಾಟಕದ ಗಡಿ ಭಾಗದಲ್ಲಿರುವ ಈ ಅಭಿವೃದ್ಧಿಶೀಲ ಗ್ರಾಮವು ಹೈದರಾಬಾದ್ ನಿಜಾಮನ ಆಳ್ವಿಕೆಯಲ್ಲಿ ಕನ್ನಡ ಭಾಷೆಯ ಜೊತೆಗೆ ತೆಲುಗು ಮತ್ತು ಉರ್ದು ಭಾಷೆಯ ಪ್ರಭಾವಕ್ಕೆ ಒಳಗಾಗಿದೆ. ಇಲ್ಲಿ ವೀರಶೈವ ಮತ್ತು ಮುಸ್ಲಿಂ ಧರ್ಮೀಯರು ಅಧಿಕ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ಧರ್ಮ ಧರ್ಮಗಳ ಮಧ್ಯ ವೈಷಮ್ಯ ನಡೆಯುತ್ತಿರುವ ಈ ಕಾಲದಲ್ಲಿ ಈ ಗ್ರಾಮ ಧಾರ್ಮಿಕ ಸಾಮರಸ್ಯವನ್ನು ಕಂಡುಕೊಂಡಿದೆ. ಇಲ್ಲಿ ಉಜ್ಜಯನಿ ಶಾಖಾಮಠವು ಅಸ್ತಿತ್ವದಲ್ಲಿದೆ.

ಉಜ್ಜಯಿನಿ ಶಾಖಾಮಠ: ಕಡೆಚೂರು ಗ್ರಾಮದಲ್ಲಿ ಉಜ್ಜಯಿನಿ ಪೀಠದ ಶಾಖಾಮಠವು ಸ್ಥಾಪನೆಯಾಗಿದೆ. ಪುರಾತನ ಪರಂಪರೆಯಿರುವ ಈ ಮಠವನ್ನು ಸ್ಥಾಪಿಸಿದ ಕಾಲಮಾನದ ಬಗ್ಗೆ ನಿಖರವಾದ ಮಾಹಿತಿಗಳು ಲಭ್ಯವಿಲ್ಲ. ಆದರೆ ಮಠದ ಆವರಣದಲ್ಲಿರುವ ವಸ್ತುಗಳನ್ನು ಹಾಗೂ ಪರಂಪರೆಯ ಕಟ್ಟಡವನ್ನು ಅವಲೋಕಿಸಿದರೆ ಈ ಮಠವು ಪುರಾತನ ಮಠವೆಂಬುದನ್ನು ಸಾಕ್ಷೀಕರಿಸುತ್ತದೆ.

ಗುರುಗಳ ನೇಮಕ: ಮಠದ ಗುರುಗಳಾದ ಶ್ರೀ ಪರ್ವತಲಿಂಗ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಕಳೆದ

ಆರು ವರ್ಷಗಳಿಂದ ಮಠವು ಖಾಲಿ ಉಳಿದಿತ್ತು. ಈಗ ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಬರುಡೋಲ ಗ್ರಾಮದ ಗುರುಮೂರ್ತಿ ದೇವರನ್ನು ನೇಮಕ ಮಾಡಲಾಗಿದೆ. ಎಂ.ಎ ಪದವೀಧರರಾದ ಶ್ರೀ ಗುರುಮೂರ್ತಿ ಶಿವಾಚಾರ್ಯ ಸ್ವಾಮಿಗಳು ಜ್ಯೋತಿಷ್ಯ ವೇದಾಗಮಗಳನ್ನು ಕಲಿತು, ಪುರಾಣ ಪ್ರವಚನ ಪ್ರವೀಣರಾಗಿ ವಿದ್ವತ್ ಗುಣಗಳಿಂದ ಮಠದ ಪೀಠವನ್ನು ಅಲಂಕರಿ ಸಿದ್ದಾರೆ. ಗುರುಗಳು ಕ್ರಿಯಾಶೀಲ ವ್ಯಕ್ತಿತ್ತ್ವವನ್ನು ಬೆಳಸಿಕೊಂಡು ಬದುಕಿನಲ್ಲಿ ಸಾಧನೆ ಮಾಡುವ ಹಂಬಲದಿಂದ, ವೀರಶೈವ ಧರ್ಮ ಪ್ರಚಾರ ಕಾರ್ಯದಲ್ಲಿನಿರತರಾಗಿದ್ದಾರೆ. ಅನುಷ್ಠಾನಮೂರ್ತಿಗಳಾದ ಇವರು ಈಗಾಗಲೇ ನಾಡಿನ ನಾನಾ ಭಾಗಗಳಲ್ಲಿ ಅನುಷ್ಠಾನ ಕೈಗೊಂಡಿದ್ದಾರೆ.

ಹಳೆಯ ಕಟ್ಟಡದ ಅವಶೇಷಗಳಿಂದ ಈ ಮಠವು ಹಿಂದೆ ಬಹಳ ವೈಭವಯುತವಾಗಿ ಬೆಳೆದಿದೆ ಎಂದು ಗುರುತಿಸ ಬಹುದಾಗಿದೆ. ಮಠದ ಆವರಣದಲ್ಲಿ ಏಳು ಗದ್ದುಗೆಗಳು, ಗದ್ದುಗೆ ಮಂಟಪದ ಪಕ್ಕದಲ್ಲಿ ಒಂದು ಗದ್ದುಗೆ ನಿರ್ಮಾಣವಾಗಿದೆ. ಹಳೆಯ ಕಟ್ಟಡವನ್ನು ತೆಗೆದಿದ್ದರೂ ಈ ಗದ್ದುಗೆಗಳನ್ನು ಸ್ಮಾರಕಗಳನ್ನಾಗಿ ಉಳಿಸಿಕೊಳ್ಳಲಾಗಿದೆ. ಮಠದಲ್ಲಿ ಪುರಾತನ ಕಾಲದ ಮುದ್ರೆ ಬಿಲ್ಲೆಗಳು, ಬೆಳ್ಳಿ ಬೆತ್ತ, ಚಾಮರಗಳು ದೊರೆತಿವೆ.

ಜೀರ್ಣೋದ್ಧಾರದ ಕಾರ್ಯ: ಪೂರ್ಣ ಜೀರ್ಣಗೊಂಡಿರುವ ಈ ಮಠವನ್ನು ಅಭಿವೃದ್ಧಿಗೊಳಿಸಿ,ಮಠಕ್ಕೆ ಗುರುವನ್ನು ನೇಮಿಸಿದ ಕೀರ್ತಿ ಶ್ರೀ ಸಿದ್ಧನಗೌಡರಿಗೆ ಸಲ್ಲಬೇಕಾಗಿದೆ. ಗ್ರಾಮದ ಮುಖಂಡರಾದ ಇವರು ನಶಿಸಿ ಹೋಗುತ್ತಿದ್ದ ಮಠದ ಅಭಿವೃದ್ಧಿ ಕಾರ್ಯವನ್ನು ಕೈಗೊಂಡು ಉಜ್ಜಯಿನಿ ಪೀಠದ ಜಗದ್ಗುರುಗಳ ಆಶೀರ್ವಾದದಂತೆ ಉತ್ತರಾಧಿಕಾರಿಯನ್ನು ನೇಮಿಸಿ ಮಠವನ್ನು ಸುಸ್ಥಿತಿಗೆ ತಂದಿದ್ದಾರೆ. ಅಲ್ಲದೆ ಮಠಕ್ಕೆ ಹೊಂದಿಕೊಂಡಿರುವ ದೇವಾಲಯವನ್ನು ಜೀರ್ಣಾಭಿವೃದ್ಧಿ ಗೊಳಿಸಿದ್ದಾರೆ. ಮಠಕ್ಕೆ ಐವತ್ನಾಲ್ಕು ಎಕರೆ ಜಮೀನಿದ್ದು ಇದನ್ನು ಅಭಿವೃದ್ಧಿಪಡಿಸಲಾಗಿದೆ.

ವಿಳಾಸ:ಷ.ಬ್ರ.ಶ್ರೀಗುರುಮೂರ್ತಿ ಶಿವಾಚಾರ್ಯಸ್ವಾಮಿಗಳು,ಶ್ರೀಉಜ್ಜಯಿನಿಶಾಖಾಮಠ,ಕಡೆಚೂರು,ಯಾದಗಿರಿ ತಾ,ಗುಲ್ಬರ್ಗ ಜಿಲ್ಲೆ.

ಕೌಳೂರು

ಯಾದಗಿರಿ ತಾಲ್ಲೂಕಿನ ಕೌಳೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹದಿನಾಲ್ಕು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಸಿದ್ಧರಾಮೇಶ್ವರಸ್ವಾಮಿ ಮಠವು ಸ್ಥಾಪನೆಯಾಗಿದೆ.

ಸಿದ್ಧರಾಮೇಶ್ವರಸ್ವಾಮಿ ಮಠ: ಕೌಳೂರು ಗ್ರಾಮದಲ್ಲಿ ಹೈದರಾಬಾದ್ ನಿಜಾಂನ ಕಾಲದಲ್ಲಿ ಶ್ರೀಶೈಲ ಪೀಠದ ಶಾಖಾ ಮಠವಾದ ಶ್ರೀ ಸಿದ್ಧರಾಮೇಶ್ವರಸ್ವಾಮಿ ಮಠವು ಸ್ಥಾಪನೆಯಾಗಿ ಹೆಸರು ಪಡೆದಿದೆ. ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳು ಮಠವನ್ನು ಸ್ಥಾಪಿಸಿರುವ ಕಾರಣ ಈ ಮಠಕ್ಕೆ 'ಶ್ರೀ ಸಿದ್ಧರಾಮೇಶ್ವರ ಮಠ ' ಎಂದು ಹೆಸರು ಬಂದಿದೆ.

ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮಿಗಳು ಗುಳಗುಂಡಿ ಅಮರೇಶ್ವರ ಮುತ್ತಿನಪೆಂಡಿ ಮಠದಿಂದ ಆಗಮಿಸಿ ಇಲ್ಲಿ ಮಠವನ್ನು ಸ್ಥಾಪಿಸಿ ಲಿಂಗೈಕ್ಯರಾಗಿದ್ದಾರೆ. ಇವರ ತರುವಾಯ ಇಳಕಲ್ಲಿನ ದಿಂಡಿ ಮಠದ ಗುರುಗಳು ಈ ಮಠದ ಆಡಳಿತವನ್ನು ನೋಡಿಕೊಂಡು ಬರುತ್ತಿದ್ದಾರೆ. ಮಠಕ್ಕೆ ಹಳೆಯ ಕಟ್ಟಡವಿದ್ದು, ಇದರ ಅಭಿವೃದ್ಧಿಯ ಕೆಲಸ ಆಗಬೇಕಾಗಿದೆ. ಮಠದಲ್ಲಿ ಒಂದು ಗದ್ದುಗೆ ಸ್ಥಾಪನೆಯಾಗಿದ್ದು ಈ ಗದ್ದುಗೆಗೆ ನಿತ್ಯ ಪೂಜೆ ಮಾಡಲಾಗುತ್ತಿದೆ. ಭರತ ಹುಣ್ಣಿಮೆಯ ದಿನ ಶ್ರೀ ಸಿದ್ಧರಾಮೇಶ್ವರ ಗುರುಗಳ ಜಾತ್ರೆಯನ್ನು ಅದ್ದೂರಿಯಾಗಿ ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಸಿದ್ಧರಾಮೇಶ್ವರಸ್ವಾಮಿಗಳು, ಶ್ರೀಸಿದ್ಧರಾಮೇಶ್ವರ ಮಠ, ಕೌಳೂರು,ಯಲಬುರ್ಗತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಗುರುಮಠ ಕಲ್ಲು

ಯಾದಗಿರಿ ತಾಲ್ಲೂಕಿನ ಗುರುಮಠ ಕಲ್ಲು, ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ನಲವತ್ತು ಕಿ.ಮೀ ದೂರದಲ್ಲಿದೆ. ಈ ಮಠಕ್ಕೆ ಮೊದಲು 'ನಾರಾಯಣಪುರ 'ಎಂಬ ಹೆಸರಿತ್ತು. ಈ ಗ್ರಾಮವು ವ್ಯಾಪಾರಸ್ಥರ ಕೇಂದ್ರವಾಗಿತ್ತು. ಈ ಗ್ರಾಮದಲ್ಲಿ ವೀರಶೈವ ಧರ್ಮ ಬಹಳ ಶ್ರೀಮಂತವಾಗಿ ಬೆಳೆದು ಧರ್ಮಜಾಗೃತಿಯನ್ನುಂಟುಮಾಡಿದೆ. ಈ ಗ್ರಾಮದಲ್ಲಿ ಒಟ್ಟು ಅರವತ್ಮೂರು

ಮಠಗಳು ಸ್ಥಾಪನೆಯಾಗಿದ್ದವು ಎಂದು ಹೇಳುತ್ತಾರೆ. ಆದರೆ ಈ ಬಗ್ಗೆ ಶೋಧನೆ ಮಾಡಿದಾಗ ಶ್ರೀ ಹಿರೇಮಠ, ಶ್ರೀ ಶಾಂತವೀರಮಠ, ಶ್ರೀ ಕೊಡ್ಲಿಮಠ, ಶ್ರೀ ಶೆಟ್ಟಿಮಠ, ಶ್ರೀ ಸಾಲಿಮಠ, ಶ್ರೀ ಕುಂಬರೋಳುಮಠ, ಶ್ರೀ ತೋಟದಮಠ, ಶ್ರೀ ಹೊಮ್ಮುದಯ್ಯನಮಠ, ಶ್ರೀ ಕಿವುಡಯ್ಯನಮಠ, ಶ್ರೀ ನಿರಂಜನಮಠ ಎಂಬ ಹತ್ತು ಮಠಗಳ ಹೆಸರನ್ನು ಇಲ್ಲಿ ದಾಖಲಿಸಬಹುದಾಗಿದೆ. ಉಳಿದ ಮಠಗಳ ಹೆಸರು ದೊರೆಯದಾಗಿದೆ. ಇಲ್ಲಿ ದಾಖಲಿಸಿದ ಹತ್ತು ಮಠಗಳಲ್ಲಿ ಎರಡು ಮಠಗಳು ಅಸ್ತಿತ್ವವನ್ನು ಉಳಿಸಿಕೊಂಡು ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿವೆ.

ಶಾಂತವೀರಮಠ: ಗುರುಮಠ ಕಲ್ಲಿನ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಶಾಂತವೀರಮಠವು, ಮುರುಘಾ ಸಮಯದ ಮಠವಾಗಿ ಚಿತ್ರದುರ್ಗ ಬೃಹನ್ಮಠದ ಶಾಖಾ ಮಠವಾಗಿ ಬೆಳೆದಿದೆ. ಸುಮಾರು ಮುನ್ನೂರು ವರ್ಷಗಳ ಹಿಂದೆ ಶ್ರೀ ಶಾಂತವೀರ ಸ್ವಾಮಿಗಳು ಲೋಕ ಸಂಚಾರ ಕೈಗೊಂಡು ನಾರಾಯಣಪುರದ ಕಾಡಿನಲ್ಲಿ ಬಂದು ನೆಲೆಸುತ್ತಾರೆ. ನಿರ್ಜನ ಪ್ರದೇಶದಲ್ಲಿ ತಪಸ್ಸಿಗೆ ಕುಳಿತು ಕೊಳ್ಳುತ್ತಾರೆ. ಗುರುಗಳು ದೀರ್ಘ ಕಾಲ ಗೆಡ್ಡೆ ಗೆಣಸುಗಳನ್ನು ಆಹಾರವನ್ನಾಗಿ ಮಾಡಿಕೊಂಡು ಬದುಕಿದ್ದರು. ಗುರುಗಳು ಯಾರ ಕಣ್ಣಿಗೂ ಬೀಳದಂತಿದ್ದ ಸಂದರ್ಭದಲ್ಲಿ ದಂಪತಿಗಳಿಬ್ಬರು ಕಾಡಿನ ದಾರಿಯಲ್ಲಿ ಹೋಗುತ್ತಿದ್ದರು. ಈ ಸಂದರ್ಭದಲ್ಲಿ; ಕಾಕತಾಳೀಯ ಎಂಬಂತೆ ಇವರ ಬಳಿ ಇದ್ದ ಮಗು ಮರಣ ಹೊಂದುತ್ತದೆ. ಆಗ ತಾಯಿಯ ರೋದನ ಅರಣ್ಯರೋದನವಾಗಿ ಬಿಡುತ್ತದೆ. ಆಗ ಗುರುಗಳು ಯೋಗದಿಂದ ಎಚ್ಚೆತ್ತು ರೋದಿಸುತ್ತಿದ್ದ ದಂಪತಿಗಳ ಬಳಿ ಬಂದು ವಿಚಾರಿಸುತ್ತಾರೆ. ನಂತರ ತಮ್ಮ ತಪೋಶಕ್ತಿಯಿಂದ ಮಗುವಿಗೆ ಜೀವಬರುವಂತೆ ಮಾಡುತ್ತಾರೆ. ಆಗ ದಂಪತಿಗಳು' ಮಲ್ಲಿಕಾರ್ಜುನನ ದರ್ಶನಕ್ಕೆ ಹೊರಟ ನಮಗೆ ಸಾಕ್ಷಾತ್ ಮಲ್ಲಿಕಾರ್ಜುನಂತೆ ದರ್ಶನಕೊಟ್ಟು ಮಗುವಿನ ಪ್ರಾಣ ಉಳಿಸಿದ್ದೀರಿ. ನಮಗಿನ್ನೇಕೆ ಮಲ್ಲಿಕಾರ್ಜುನನ ದರ್ಶನ. ಎಲ್ಲಾ ನೀವೆ' ಎಂದು ಉತ್ತರಿಸಿದರು. ಆಗ ಗುರುಗಳು ಒತ್ತಾಯಪೂರ್ವಕವಾಗಿ ದಂಪತಿಗಳನ್ನು ಶ್ರೀಶೈಲಕ್ಕೆ ಕಳುಹಿಸಿಕೊಟ್ಟರಂತೆ. ಶ್ರೀಶೈಲಕ್ಕೆ ಹೋಗಿ ಮಲ್ಲಿಕಾರ್ಜುನನ ದರ್ಶನ ಪಡೆದು ಹಿಂದಿರುಗಿ ಬರುತ್ತಿರುವಾಗ ಈ ದಂಪತಿಗಳು ಇಲ್ಲಿನ ಕಾಕಲವಾರ ಗ್ರಾಮದಲ್ಲಿ ಆಶ್ರಯ ಪಡೆದಿದ್ದರು. ಕಾಕರವಾರ ಗ್ರಾಮದ ದೇಶಮುಖರು ಶಾಪಕ್ಕೆ ಒಳಗಾಗಿ ಅವರು ಮುಟ್ಟಿದ ಅನ್ನವೆಲ್ಲ ಹುಳುವಾಗುತ್ತಿತ್ತಂತೆ. ಈ ಶಾಪ ಮುಕ್ತಿಗಾಗಿ ಅನೇಕ ಧಾರ್ಮಿಕ ಕಾರ್ಯಗಳನ್ನು ಮಾಡಿದ್ದರೂ ಶಾಪ ಮುಕ್ತಿಯಾಗಿರಲಿಲ್ಲವಂತೆ. ಆಗ ದಂಪತಿಗಳು ಶ್ರೀ ಶಾಂತವೀರ ಸ್ವಾಮಿಗಳು ತಮ್ಮ ತಪೋಶಕ್ತಿಯಿಂದ ಮಗುವಿಗೆ ಪ್ರಾಣವನ್ನು ನೀಡಿದ ಬಗ್ಗೆ ಹೇಳುತ್ತಾರಂತೆ.

ಆಗ ಶ್ರೀ ರಾಜಾಲಕ್ಷ್ಮಣಪ್ಪ ದೇಶಮುಖರು ಶ್ರೀ ಶಾಂತವೀರರು ನೆಲೆಸಿದ ಕಾಡಿನತ್ತ ಬರುತ್ತಾರಂತೆ. ಗುರುಗಳ ದರ್ಶನವನ್ನು ಪಡೆದು ತಮ್ಮನೋವನ್ನು ಹೇಳಿಕೊಂಡರಂತೆ. ಆಗ ಗುರುಗಳು ಆತನಿಗೆ ಲಿಂಗದೀಕ್ಷೆಯನ್ನು ಮಾಡಿ 'ನೀನು ವೀರಶೈವ ಧರ್ಮೀಯ ನಾಗಿ ಶಿವಪೂಜೆಯನ್ನು ನಿಷ್ಠೆಯಿಂದ ಪಾಲಿಸಿದ್ದಾದರೆ ನಿನ್ನನ್ನು ಕಾಡಿಸುತ್ತಿರುವ ಪೀಡೆ ದೂರವಾಗುತ್ತದೆ' ಎಂದು ಅಪ್ಪಣೆಕೊಟ್ಟರಂತೆ. ಈ ರೀತಿ ಅನೇಕ ಪವಾಡಗಳನ್ನು ಮಾಡಿ ಈ ಭಾಗದಲ್ಲಿ ಒಂದು ಮಠವನ್ನು ಕಟ್ಟಿಸಲು ಪ್ರಾರಂಭಿಸಿದರು. ಮಠದ ಕಟ್ಟಡವನ್ನು ನಿರ್ಮಿಸಲು ಸಾವಿರಾರು ಸಂಖ್ಯೆಯಲ್ಲಿ ಕೆಲಸಗಾರರು ಬಂದು ದುಡಿಯುತ್ತಿದ್ದರು. ಇವರಿಗೆಲ್ಲ ಗುರುಗಳು ಕಲ್ಲುಗಳನ್ನು ರಾಶಿ ಮಾಡಿ ಪ್ರತಿಯೊಂದು ರಾಶಿಯ ಕಲ್ಲುಗಳನ್ನು ಮುಟ್ಟಿ ಇವುಗಳನ್ನು ತೆಗೆದುಕೊಳ್ಳಿ ಎಂದು ಹೇಳುತ್ತಿದ್ದರು.ಆಗ ಕೆಲಸಗಾರರು ಗುರು ಮುಟ್ಟಿದ ಕಲ್ಲುಗಳನ್ನು ಕೈಗೆತ್ತಿಕೊಳ್ಳುತ್ತಿದ್ದರು. ಅವರ ಶ್ರಮಕ್ಕೆ ತಕ್ಕಷ್ಟು ಮಾತ್ರ ಹೊನ್ನಾಗಿ ಪರಿವರ್ತನೆಯಾಗುತ್ತಿತ್ತಂತೆ. ಈ ರೀತಿ ಗುರುಗಳ ಪವಾಡದಿಂದಲೇ ಬೃಹದಾಕಾರದ ಮಠವನ್ನು ಕಟ್ಟಿಸಲಾಗಿದೆ ಎಂದು ಹೇಳಲಾಗುತ್ತಿದೆ.

ಜಗದ್ಗುರುವಿನ ಆಗಮನ: ಚಿತ್ರದುರ್ಗ ಬೃಹನ್ಮಠದ ಜಗದ್ಗುರುಗಳಾದ ಶ್ರೀ ಮುರುಘರಾಜೇಂದ್ರ ಸ್ವಾಮಿಗಳು ತಮ್ಮ ಏಳುನೂರು ಭಕ್ತರ ಸಮೇತ ಈ ಕಾಡಿನಲ್ಲಿ ಹೋಗುತ್ತಿರುವಾಗ ಶ್ರೀ ಶಾಂತವೀರರ ಪವಾಡವನ್ನು ತಿಳಿದು ನೋಡಲು ಇಲ್ಲಿಗೆ ಆಗಮಿಸಿದರು. ಶ್ರೀ ಶಾಂತವೀರ ಸ್ವಾಮಿಗಳು ಕೈಗೊಂಡಿದ್ದ ಕಾರ್ಯಗಳಿಗೆ ಮತ್ತು ಅವರ ತತ್ವಾದರ್ಶಗಳಿಗೆ ಮನಸೋತು ಶ್ರೀಶೈಲಕ್ಕೆ ಹೋಗುವುದನ್ನು ಮೊಟುಕುಗೊಳಿಸಿ ಚಿತ್ರದುರ್ಗಕ್ಕೆ ಹಿಂದಿರುಗುವುದಾಗಿ ನಿಶ್ಚಯಿಸಿಕೊಂಡು, ಈ ಸ್ಥಳದಲ್ಲಿ ನಾಲ್ಕು ದಿನ ವಿಶ್ರಾಂತಿಗೆಂದು ಉಳಿದರಂತೆ. ಈ ಸಂದರ್ಭದಲ್ಲಿ ಶ್ರೀ ಶಾಂತವೀರ ಸ್ವಾಮಿಗಳು ಅನುಷ್ಠಾನವನ್ನು

ಕೈಗೊಳ್ಳಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸಿ ಗುಹೆಯಲ್ಲಿ ಪೂಜಾನುಷ್ಠಾನಕ್ಕೆ ಕುಳಿತುಕೊಳ್ಳುತ್ತಾರೆ. ಗುರುಗಳು ಇನ್ನು ಸಾಧಿಸಿದ್ದು ಸಾಕು ಎಂಬ ತೃಪ್ತಭಾವದಿಂದ ಶ್ರೀ ಶಾಂತವೀರ ಸ್ವಾಮಿಗಳಿಗೆ ಹೇಳಿ ನಾವು ಜೀವಂತ ಸಮಾಧಿಯಾಗುತ್ತೇವೆ ಎಂದು ತಿಳಿಸಿ ಗವಿಯಲ್ಲಿ ನಿರ್ವಿಕಲ್ಪ ಸಮಾಧಿಯನ್ನು ಹೊಂದಿದರು. ನಂತರ ಗುರುಗಳ ಅಂತಿಮ ಧಾರ್ಮಿಕ ವಿಧಾನಗಳನ್ನು ಮುಗಿಸಿದ ಮೇಲೆ ಚಿತ್ರದುರ್ಗದಿಂದ ಆಗಮಿಸಿದ್ದ ತಂಡದ ಹಿರಿಯ ಗುರುಗಳಾದ ಶ್ರೀ ಖಾಟಂಗೇಶ್ವರರು ಶ್ರೀ ಶಾಂತವೀರ ಸ್ವಾಮಿಗಳಿಗೆ ಗುರು ಕಲ್ಮಠದ ಅಧಿಕಾರವನ್ನು ನೀಡಿ ಚಿತ್ರದುರ್ಗಕ್ಕೆ ಪ್ರಯಾಣ ಬೆಳಸಿದ್ದಾರೆ.

ಅಧಿಕಾರ ವಹಿಸಿಕೊಂಡ ಗುರುಗಳು: ತಾವೇ ಸ್ಥಾಪಿಸಿದ ಮಠದ ಅಧಿಕಾರವನ್ನು ವಹಿಸಿಕೊಂಡ ಶ್ರೀ ಶಾಂತವೀರ ಸ್ವಾಮಿಗಳು ಅಪೂರ್ಣಗೊಂಡಿದ್ದ ಕಟ್ಟಡವನ್ನು ಪೂರ್ಣಗೊಳಿಸಿ ಅನೇಕ ಪವಾಡಗಳನ್ನು ನಡೆಸಿ ಎರಡನೆಯ ಶಾಂತವೀರ ಸ್ವಾಮಿಗಳಿಗೆ ಪಟ್ಟಾಧಿಕಾರದ ಅನುಗ್ರಹವನ್ನು ನೀಡಿ ಲೋಕಕಲ್ಯಾಣಾರ್ಥ ಲೋಕಸಂಚಾರ ಹೊರಟು ಬಾಗೋಡಿಯಲ್ಲಿ ಲಿಂಗೈಕ್ಯರಾಗುತ್ತಾರೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಶಾಂತವೀರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಎರಡನೆಯ ಶಾಂತವೀರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಶಿವಪೂಜಪ್ಪಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ರುದ್ರಪ್ಪಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಮಲ್ಲಿಕಾರ್ಜುನಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಮುರುಘೇಂದ್ರಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಬಸವಣ್ಣಪ್ಪಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಶಾಂತವೀರಸ್ವಾಮಿಗಳು
೯. ಶ್ರೀ ಮ.ನಿ.ಪ್ರ. ಸಂಗಮೇಶ್ವರಸ್ವಾಮಿಗಳು
೧೦. ಶ್ರೀ ಮ.ನಿ.ಪ್ರ. ಶಾಂತವೀರ ಮುರುಘರಾಜೇಂದ್ರಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಎಲ್ಲಾ ಗುರುಗಳು ಮಠದ ಪರಂಪರೆಯನ್ನು ಎತ್ತಿ ಹಿಡಿಯುವಲ್ಲಿ ಶ್ರಮವಹಿಸಿದ್ದಾರೆ. ಮಠದ ಪರಂಪರೆಯ ಎಂಟನೆಯ ಗುರುಗಳಾದ ಶ್ರೀ ಶಾಂತವೀರ ಸ್ವಾಮಿಗಳು ೧೮೮೬ ರಲ್ಲಿ ಲಿಂಗೈಕ್ಯರಾದ ಮೇಲೆ, ಎಪ್ಪತ್ತೊಂಬತ್ತು ವರ್ಷಗಳ ಕಾಲ ಉತ್ತರಾಧಿಕಾರಿಗಳಿಲ್ಲದೆ ಮಠವು ಖಾಲಿ ಉಳಿದಿತ್ತು. ನಂತರ ಮಠದ ಪರಂಪರೆಯ ಒಂಬತ್ತನೆಯ ಗುರುಗಳಾಗಿ ಶ್ರೀ ಸಂಗಮೇಶ್ವರ ಸ್ವಾಮಿಗಳು ೧೯೬೫ ರ ಮೇ ಹದಿಮೂರು ರಂದು ಮಠದ ಅಧಿಕಾರವನ್ನು ವಹಿಸಿಕೊಂಡು ಮಠದ ಧಾರ್ಮಿಕ ಕಾರ್ಯಗಳನ್ನು ಮುನ್ನಡೆಸಿಕೊಂಡು ಬಂದರು. ಶ್ರೀ ಸಂಗಮೇಶ್ವರ ಸ್ವಾಮಿಗಳು ಲಿಂಗೈಕ್ಯರಾದ ನಂತರ ಮಠವು ಪುನಃ ಖಾಲಿ ಉಳಿದಿದೆ. ಈಗ ಚನ್ನಗಿರಿ ತಾಲ್ಲೂಕಿನ ತೋಪಿನ ಹಳ್ಳಿಯ ಶ್ರೀ ಬಸಯ್ಯ ಮತ್ತು ಶ್ರೀಮತಿ ರತ್ನಮ್ಮನವರ ಪುತ್ರರಾದ ಶ್ರೀ ಶಾಂತವೀರ ಮುರುಘೇಂದ್ರ ಸ್ವಾಮಿಗಳು ಉತ್ತರಾಧಿ ಕಾರಿಗಳಾಗಿ ನೇಮಕಗೊಂಡಿದ್ದಾರೆ. ಚಿತ್ರದುರ್ಗ ಬೃಹನ್ಮಠದಲ್ಲಿ ನೆಲೆಸಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣವನ್ನು ಮುಗಿಸಿ ಶರಣತತ್ತ್ವದ ಬಗ್ಗೆ ಅಧ್ಯಯನ ಮಾಡಿರುವ ಗುರುಗಳು ಈಗ ಗುರುಮಠಕಲ್ಲಿನಲ್ಲಿ ನೆಲಸಿ ಧಾರ್ಮಿಕ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ನಡೆಸತೊಡಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಈ ಮಠವು ಹಿಂದೆ ಧಾರ್ಮಿಕ ಆಚರಣೆಗಳನ್ನು ವೈಭವಯುತವಾಗಿ ನಡೆಸುತ್ತಿತ್ತು. ನಂತರ ಗುರುಗಳಿಲ್ಲದ ಕಾರಣ ಧಾರ್ಮಿಕ ಕಾರ್ಯಗಳನ್ನು ಸ್ಥಗಿತಗೊಂಡಿದ್ದವು. ಈಗ ಗುರುಗಳು ನೇಮಕಗೊಂಡ ಮೇಲೆ ಗದ್ದುಗೆಗಳಿಗೆ ನಿತ್ಯಪೂಜೆ, ಪ್ರತಿ ತಿಂಗಳು ಹತ್ತನೆಯ ತಾರೀಖು ಶರಣರ ಸ್ಮರಣೋತ್ಸವ ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ.ಶಾಂತವೀರ ಮುರುಘೇಂದ್ರ ಸ್ವಾಮಿಗಳು, ಶ್ರೀ ಶಾಂತವೀರಮಠ, ಗುರುಮಠಕಲ್ಲು,ಯಾದಗಿರಿ,ಗುಲ್ಬರ್ಗಜಿಲ್ಲೆ.

ಹಿರೇಮಠ: ಗುರುಮಠಕಲ್ಲು ಪಟ್ಟಣದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಹಿರೇಮಠವು, ಉಜ್ಜಯಿನಿ ಪೀಠದ ಶಾಖಾಮಠವಾಗಿದೆ. ಪುರಾತನ ಕಾಲದಲ್ಲಿ ಸ್ಥಾಪನೆಯಾದ ಈ ಮಠವು ಈ ನಾಡಿನ ಧಾರ್ಮಿಕ ಆಚರಣೆಗಳ ಕೇಂದ್ರಬಿಂದುವಾಗಿ

ರೂಪುಗೊಂಡಿತ್ತು. ಈ ಮಠದ ಗುರುಗಳು ಕಾಕಳವಾಡ ಶ್ರೀ ರಾಜಾಲಕ್ಷ್ಮಣಪ್ಪನ ಆಸ್ಥಾನದ ಗುರುಗಳಾಗಿದ್ದರಿಂದ ಮಠವು ಹೆಸರು ಪಡೆದಿತ್ತು. ನಾನೂರು ವರ್ಷಗಳ ಹಿಂದಿನದು ಎಂದು ಹೇಳಲಾಗುವ ಮಠದ ಕಟ್ಟಡದ ಕೆಲವು ಭಾಗ ಜೀರ್ಣಗೊಂಡಿದೆ.

ಈ ಮಠದ ಪರಂಪರೆಯ ಗುರುಗಳ ಬಗ್ಗೆ ಮಾಹಿತಿ ದೊರೆಯುವುದಿಲ್ಲ. ಪ್ರಸ್ತುತ ಮಠಾಧೀಶರಿಲ್ಲದೆ ಶ್ರೀ ರಾಜಶೇಖರ ಸ್ವಾಮಿಗಳು ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಮಠದಲ್ಲಿ ಕರ್ತೃಗದ್ದುಗೆ ಇದ್ದು ಈ ಗದ್ದುಗೆಯ ಹೆಸರು ತಿಳಿದು ಬರುತ್ತಿಲ್ಲ.

ವಿಳಾಸ: ಶ್ರೀ ರಾಜಶೇಖರ ಸ್ವಾಮಿಗಳು, ಶ್ರೀ ಹಿರೇಮಠ, ಗುರುಮಠಕಲ್ಲು, ಯಾದಗಿರಿ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಚಿಂತನಹಳ್ಳಿ

ಯಾದಗಿರಿ ತಾಲ್ಲೂಕಿನ ಈಶಾನ್ಯ ಭಾಗಕ್ಕೆ ಇಪ್ಪತ್ತೈದು ಕಿ.ಮೀ ದೂರದಲ್ಲಿರುವ ಚಿಂತನಹಳ್ಳಿಯಲ್ಲಿ ಶ್ರೀ ಗವಿಸಿದ್ಧೇಶ್ವರ ಮಠವು ಅಸ್ತಿತ್ವದಲ್ಲಿದೆ.

ಗವಿಸಿದ್ಧೇಶ್ವರ ಮಠ: ಚಿಂತನಹಳ್ಳಿ ಗ್ರಾಮದಲ್ಲಿ ಶ್ರೀ ಗವಿಸಿದ್ಧೇಶ್ವರ ಮಠವು ಸ್ಥಾಪನೆಯಾಗಿದೆ. ಸೇಡಂ ತಾಲ್ಲೂಕಿನ ಜಾಕನಹಳ್ಳಿಯ ಶ್ರೀ ಗವಿಸಿದ್ಧೇಶ್ವರರು ತಮ್ಮ ಕೊನೆಯ ದಿನಗಳಲ್ಲಿ ಇಲ್ಲಿ ಬಂದು ನೆಲೆಸಿ ಗವಿಯಲ್ಲಿ ಅನುಷ್ಠಾನ ಕೈಗೊಂಡು ಮಠವನ್ನು ಸ್ಥಾಪನೆ ಮಾಡಿದ್ದಾರೆ. ಅಂದು ಗುರುಗಳು ಸ್ಥಾಪನೆ ಮಾಡಿದ ಮಠದಲ್ಲಿ ಇಂದಿಗೂ ಧಾರ್ಮಿಕ ಕಾರ್ಯಗಳು ನಡೆದುಕೊಂಡು ಬರುತ್ತಿವೆ. ಪ್ರಸ್ತುತ ಮಠದಲ್ಲಿ ಗುರುಗಳು ಯಾರೂ ಇಲ್ಲದೆ ಮಠವು ಖಾಲಿ ಉಳಿದಿದೆ.

ಯಾದಗಿರಿ

ಗುಲ್ಬರ್ಗ ಜಿಲ್ಲೆಯ ಯಾದಗಿರಿ ಪಟ್ಟಣವು ತಾಲ್ಲೂಕಿನ ಕೇಂದ್ರ ಸ್ಥಳ. ಜಿಲ್ಲಾ ಕೇಂದ್ರದಿಂದ ಆಗ್ನೇಯ ಭಾಗಕ್ಕೆ ನೂರು ಕಿ.ಮೀ ದೂರದಲ್ಲಿದೆ. ಕಲ್ಲಿನ ಪರ್ವತದ ಸುತ್ತ ಬೆಳೆದಿರುವ ಈ ಪಟ್ಟಣದಲ್ಲಿ ವೀರಶೈವ ಧರ್ಮವೂ ಪ್ರಬಲವಾಗಿ ಬೆಳೆದಿದೆ. ಇದಕ್ಕೆ ಸಾಕ್ಷಿ ಎಂಬಂತೆ ಶ್ರೀ ರಾಮಗಿರಿಮಠ, ಶ್ರೀ ಮಹಾಂತಿನಮಠ, ಶ್ರೀ ಶರಣ ಬಸವೇಶ್ವರಮಠ, ಶ್ರೀ ಗವಿಮಠ ಮತ್ತು ಶ್ರೀ ಮಸಿಮಠ ಎಂಬ ಐದು ಮಠಗಳು ಈ ಪಟ್ಟಣದಲ್ಲಿ ಸ್ಥಾಪನೆಯಾಗಿವೆ. ಇವುಗಳಲ್ಲಿ ರಾಮಗಿರಿ ಹಿರೇಮಠ ಗುರುಗಳು ಇಲ್ಲದಿದ್ದರೂ ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ.

ರಾಮಗಿರಿ ಹಿರೇಮಠ: ಪಟ್ಟಣದ ಖಾಜಗರ್ ವಾಡಿಯಲ್ಲಿರುವ ರಾಮಗಿರಿ ಮಠವು ಪುರಾತನ ಪರಂಪರೆಯನ್ನು ಹೊಂದಿರುವ ಮಠವಾಗಿದೆ. ರಂಭಾಪುರಿ ಪೀಠದ ಶಾಖಾ ಮಠವಾಗಿರುವ ಈ ಪುತ್ರವರ್ಗದ ಮಠವು ಯಾದಗಿರಿ ತಾಲ್ಲೂಕಿನ ಬೆಳಗೇರ ಗ್ರಾಮದಿಂದ ಸ್ಥಳಾಂತರಗೊಂಡು ಇಲ್ಲಿ ಸ್ಥಾಪಿಸಲ್ಪಟ್ಟಿದೆ. ಮಠದ ಪರಂಪರೆಯ ಬಗ್ಗೆ ನಿಖರವಾದ ಮಾಹಿತಿಗಳು ದೊರೆಯದಾಗಿದೆ. ಈಗ ದೊರೆತಿರುವ ಮಾಹಿತಿಯ ಆಧಾರದ ಮೇಲೆ

೧. ಷ.ಬ್ರ.ಶ್ರೀ ಶಿವಶಂಕರ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು

ಈ ಇಬ್ಬರು ಗುರುಗಳ ಹೆಸರನ್ನು ದಾಖಲಿಸಬಹುದಾಗಿದೆ. ಮಠದ ಪರಂಪರೆಯ ಹಿಂದಿನ ಗುರುಗಳು ಬೆಳಗೇರ ಮಠದಲ್ಲಿ ಲಿಂಗೈಕ್ಯರಾಗಿದ್ದು, ಆಧಾರದ ಕೊರತೆಯಿಂದ ಪರಂಪರೆಯ ಉಳಿದ ಗುರುಗಳ ಬಗ್ಗೆ ದಾಖಲಿಸಲಾಗುತ್ತಿಲ್ಲ. ಈಗಲೂ ಮೂಲ ಮಠದ ಸಂಪರ್ಕವನ್ನು ಉಳಿಸಿಕೊಂಡಿರುವ ಈ ಮಠ ಎರಡೂ ಕಡೆ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ಈ ಮಠದಲ್ಲಿ ಈಗ ಪಟ್ಟಾಧಿಕಾರಿಗಳು ಯಾರೂ ಇಲ್ಲದೆ ಶ್ರೀ ಗುರುಸಿದ್ಧ ಶಾಸ್ತ್ರಿಗಳು ಮಠದ ಆಡಳಿತವನ್ನು ನೋಡಿಕೊಂಡು ಬರುತ್ತಿದ್ದಾರೆ. ಬೆಳಗೇರಿಯಲ್ಲಿ ಮೂರು ಗದ್ದುಗೆಗಳು ನಿರ್ಮಾಣಗೊಂಡಿವೆ. ಮೂಲ ಮಠದ ಹಳೆಯ ಕಟ್ಟಡವನ್ನು ತೆಗೆಸಿ, ಹೊಸ ಕಟ್ಟಡವನ್ನು ನಿರ್ಮಿಸಲಾಗಿದೆ. ಸದ್ಯ ಉತ್ತರಾಧಿಕಾರಿಗಳನ್ನು ನೇಮಿಸುವ ಬಗ್ಗೆ ಚರ್ಚೆ ನಡೆದಿದೆ.

ವಿಳಾಸ: ಶ್ರೀ ಗುರುಸಿದ್ಧ ಶಾಸ್ತ್ರಿಗಳು, ಶ್ರೀ ರಾಮಗಿರಿ ಹಿರೇಮಠ, ಖಾಜಗರ್ ವಾಡಿ, ಯಾದಗಿರಿ, ಗುಲ್ಬರ್ಗ ಜಿಲ್ಲೆ. ❑

ಶಹಾಪುರ ತಾಲ್ಲೂಕು

ಗುಲ್ಬರ್ಗ ಜಿಲ್ಲೆಯ ಶಹಾಪುರ ತಾಲ್ಲೂಕು ವಾಣಿಜ್ಯೋದ್ಯಮ ಹಾಗೂ ಕೃಷಿ ಅವಲಂಬಿತ ಪ್ರದೇಶವಾಗಿದೆ. ಈ ತಾಲ್ಲೂಕಿನಲ್ಲಿ ಸುಮಾರು ಎಪ್ಪತ್ತೈದು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಇಂದು ಹದಿನಾರು ಮಠಗಳು ಮಾತ್ರ ಅಸ್ತಿತ್ವದಲ್ಲಿದ್ದು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಕನ್ಯೆಕೋಳೂರು

ಶಹಾಪುರ ತಾಲ್ಲೂಕಿನ ಕನ್ಯೆಕೋಳೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಆರು ಕಿ.ಮೀ ದೂರದಲ್ಲಿದೆ. ೧೨೦೦ ವರ್ಷಗಳ ಹಿಂದೆ ಬಾಲಕಿಯೊಬ್ಬಳು ಇಲ್ಲಿನ ಶಿವಲಿಂಗಕ್ಕೆ ಹಾಲನ್ನು ಕುಡಿಸಿ ಮುಗ್ಧ ಭಕ್ತಿಯನ್ನು ಪ್ರದರ್ಶಿಸಿ, ಶಿವನಲ್ಲಿ ಐಕ್ಯಗೊಂಡು **'ಕೋಳೂರು ಕೊಡಗೂಸು'** ಎಂದು ಹೆಸರು ಪಡೆದ ಪುರಾಣ ಪ್ರಸಿದ್ಧ ಗ್ರಾಮವಿದ್ದು ಇಲ್ಲಿ ಶ್ರೀಸಿದ್ಧಲಿಂಗೇಶ್ವರ ಹಿರೇಮಠವು ಸ್ಥಾಪನೆಯಾಗಿ ವೀರಶೈವ ಧರ್ಮವನ್ನು ಬೆಳೆಸಿದೆ.

ಸಿದ್ಧಲಿಂಗೇಶ್ವರ ಹಿರೇಮಠ: ಕನ್ಯೆಕೋಳೂರು ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಸಿದ್ಧಲಿಂಗೇಶ್ವರ ಹಿರೇಮಠವು ರಂಭಾಪುರಿ ಪೀಠದ ಶಾಖಾಮಠವಾಗಿ, ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಮಠದ ಸ್ಥಾಪನೆ ಮತ್ತು ಸ್ಥಾಪಕ ಗುರುಗಳ ಬಗ್ಗೆ ಸ್ಪಷ್ಟವಾದ ಆಧಾರಗಳು ಇಲ್ಲದೆ ಇರುವುದರಿಂದ ಈ ಮಠದ ಇತಿಹಾಸವನ್ನು ಗುರುತಿಸಲು ತೊಡಕಾಗಿದೆ. ಮಠದಲ್ಲಿ ಈಗ ಲಭ್ಯವಿರುವ ಮಾಹಿತಿಯ ಆಧಾರದ ಮೇಲೆ ಇತ್ತೀಚಿನ ಕೆಲವು ಮಠಾಧೀಶರ ಹೆಸರುಗಳನ್ನು ಮಾತ್ರ ದಾಖಲಿಸಬಹುದಾಗಿದೆ.

ಪರಂಪರೆ:

೧. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು
೩. ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು
೪. ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು
೫. ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆಯಲ್ಲಿ ಕೇವಲ ಐದು ಜನ ಗುರುಗಳ ಹೆಸರಗಳನ್ನು ಮಾತ್ರ ದಾಖಲಿಸಬಹುದಾಗಿದೆ. ಮಠದ ಪರಂಪರೆಯ ನಾಲ್ಕನೆಯ ಗುರುಗಳಾದ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಪವಾಡ ಪುರುಷರಾಗಿ, ವಾಕ್‌ಸಿದ್ಧಿ ಪುರುಷರಾಗಿ ಮಠವನ್ನು ಅಭಿವೃದ್ಧಿಪಡಿಸಿ ವೀರಶೈವ ಧರ್ಮವನ್ನು ಪ್ರಚಾರ ಪಡಿಸಿದ್ದರು. ಇವರು ೧೯೨೫ರಲ್ಲಿ ಲಿಂಗೈಕ್ಯರಾದರು. ಇವರ ನಂತರ ಎಪ್ಪತ್ತೈದು ವರ್ಷಗಳ ಕಾಲ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿದಿತ್ತು. ಈಗ ಶ್ರೀಚನ್ನವೀರ ಶಿವಾಚಾರ್ಯ ಸ್ವಾಮಿಗಳು ಮಠದ ಆಡಳಿತವನ್ನು ವಹಿಸಿಕೊಂಡಿದ್ದಾರೆ.

ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಶ್ರೀ ವಿರೂಪಾಕ್ಷಯ್ಯ ಮತ್ತು ಶ್ರೀಮತಿ ಸಂಗಮ್ಮನವರ ಪುತ್ರರಾಗಿ ೧೯೬೨ ರಲ್ಲಿ ಜನಿಸಿದರು. ಇವರು ಆಧ್ಯಾತ್ಮ ಸಂಸ್ಕಾರದೊಂದಿಗೆ ೨೦೦೦ ದ ಏಪ್ರಿಲ್ ಇಪ್ಪತ್ತಾರರಂದು ಪಟ್ಟಾಧಿಕಾರವನ್ನು ವಹಿಸಿಕೊಂಡು, ವೀರಶೈವ ಧರ್ಮದ ಆಚರಣೆಗಳನ್ನು ನಡೆಸುತ್ತಾ ಭಕ್ತರಿಗೆ ಮಾರ್ಗದರ್ಶನ ನೀಡುತ್ತಾ, ಸಮಾಜ ಮತ್ತು ಮಠವನ್ನು ಬೆಳೆಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಗುರುಗಳು ಪಟ್ಟಾಧಿಕಾರವನ್ನು ವಹಿಸಿಕೊಂಡ ದಿನದಿಂದಲೇ ಒಂದು ತಿಂಗಳು ಮೌನ ವ್ರತ ಅನುಷ್ಠಾನವನ್ನು ಕೈಗೊಂಡು, ಬಾಳೆಹೊನ್ನೂರು ಶ್ರೀ ರಂಭಾಪುರಿ ಪೀಠದ ಜಗದ್ಗುರು ಶ್ರೀ ಪ್ರಸನ್ನರೇಣುಕ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರ ಸಮ್ಮುಖದಲ್ಲಿ ಪೂರ್ಣಗೊಳಿಸಿದ್ದರು. ನಂತರ ಕಳೆದ ಶ್ರಾವಣಮಾಸದಲ್ಲಿ ಎರಡನೆಯ ಅನುಷ್ಠಾನವನ್ನು ಪೂರೈಸಿ,'**ಅನುಷ್ಠಾನಮೂರ್ತಿ**'ಗಳೆಂದು ಹೆಸರು ಪಡೆದಿದ್ದಾರೆ. ಮಠದ ಆವರಣದಲ್ಲಿರುವ ಎರಡು

ಗದ್ದುಗೆಗಳಿಗೆ ನಿತ್ಯ ಪೂಜೆ, ಶ್ರಾವಣ ಮಾಸದಲ್ಲಿ ಪ್ರವಚನ ಹಾಗೂ ಭಜನೆ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಶಿವರಾತ್ರಿಯಲ್ಲಿ ಜಾಗರಣೆ, ದವನದ ಹುಣ್ಣಿಮೆಯಲ್ಲಿ ಐದು ದಿನ ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಮಠದ ಆಸ್ತಿಯಾಗಿ ಹದಿನೆಂಟು ಎಕರೆ ಜಮೀನಿದ್ದು ಇದನ್ನು ಅಭಿವೃದ್ಧಿಪಡಿಸಿ, ಮಠದ ಧಾರ್ಮಿಕ ಚಟುವಟಿಕೆಗಳಿಗೆ ಬಳಸಿಕೊಳ್ಳಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಸಿದ್ಧಲಿಂಗೇಶ್ವರ ಹಿರೇಮಠ, ಕನ್ಯೆಕೋಳೂರು, ಶಹಾಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ದೋರನಹಳ್ಳಿ

ಶಹಾಪುರ ತಾಲ್ಲೂಕಿನ ದೋರನಹಳ್ಳಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಏಳು ಕಿ.ಮೀ ದೂರದಲ್ಲಿದೆ. ಡೋಹರರು ಹೆಚ್ಚು ಸಂಖ್ಯೆಯಲ್ಲಿ ವಾಸಿಸುತ್ತಿದ್ದ ಕಾರಣ ಈ ಗ್ರಾಮಕ್ಕೆ ಡೋಹರಹಟ್ಟಿ ಎಂದು ಹೆಸರು ಬಂದಿತು. ಕಾಲಕ್ರಮೇಣ ಡೋಹರಹಳ್ಳಿಯಾಗಿ > ಡೋರನಹಳ್ಳಿಯಾಗಿ > ಈಗ 'ದೋರನಹಳ್ಳಿ'ಯಾಗಿ ರೂಪಾಂತರ ಪಡೆದಿದೆ ಎಂದು ಸ್ಥಳ ಪುರಾಣ ತಿಳಿಸುತ್ತಿದೆ. ಈ ಗ್ರಾಮದಲ್ಲಿ ಪುರಾತನ ಪರಂಪರೆಯ ಶ್ರೀ ಮಹಾಂತೇಶ್ವರ ಹಿರೇಮಠ ಮತ್ತು ಶ್ರೀ ಚಿಕ್ಕಮಠಗಳು ಸ್ಥಾಪನೆಯಾಗಿ, ವೀರಶೈವ ಧರ್ಮ ಅಭಿವೃದ್ಧಿಯಾಗಲು ಕಾರಣವಾಗಿವೆ.

ಮಹಾಂತೇಶ್ವರ ಹಿರೇಮಠ: ದೋರನಹಳ್ಳಿಯ ಮಧ್ಯ ಭಾಗದಲ್ಲಿ ಸ್ಥಾಪಿತವಾಗಿರುವ ಶ್ರೀ ಮಹಾಂತೇಶ್ವರ ಹಿರೇಮಠವು, ಶ್ರೀ ರಂಭಾಪುರಿ ಪೀಠದ ಶಾಖಾ ಮಠವಾಗಿ ಶಿಷ್ಯ ವರ್ಗದ ಪರಂಪರೆಯಲ್ಲಿ ಬೆಳೆದಿದೆ. ಹದಿನಾರನೆಯ ಶತಮಾನದ ಕಾಲದಲ್ಲಿ ಶ್ರೀ ಮಹಾಂತೇಶ್ವರರಿಂದ ಪ್ರಾರಂಭಗೊಂಡ ಈ ಮಠವು ಈತನಕ ಬೆಳೆದು ಬಂದಿದೆ.

ಮಠ ಸ್ಥಾಪನೆ: ಶ್ರೀ ರಂಭಾಪುರಿ ಪೀಠದ ಜಗದ್ಗುರುಗಳಾದ ಶ್ರೀ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಲೋಕ ಸಂಚಾರಕ್ಕೆ ಬಂದ ಸಂದರ್ಭದಲ್ಲಿ ಜಗದ್ಗುರುಗಳ ಜೊತೆಯಲ್ಲಿ ಶ್ರೀ ಮಹಾಂತೇಶ್ವರ ಸ್ವಾಮಿಗಳು ಆಗಮಿಸಿದ್ದರು. ಇವರುಗಳು ಈ ಭಾಗದಲ್ಲಿ ಅನುಷ್ಠಾನಗೊಂಡಿದ್ದ ಸಂದರ್ಭದಲ್ಲಿ, ಈ ಗ್ರಾಮದ ಡೋಹರ ಗೌಡನು ಕುಷ್ಠರೋಗದಿಂದ ಬಳಲುತ್ತಿದ್ದನಂತೆ. ಮಂದಾಕಿನಿ ತೀರ್ಥದಲ್ಲಿ ದಿನನಿತ್ಯ ಸ್ನಾನ ಮಾಡಿದರೆ, ರೋಗವು ಗುಣಮುಖವಾಗುತ್ತದೆ ಎಂದು ಪಂಡಿತರು ಹೇಳಿದ್ದರು. ಶಹಾಪುರದ ಸಮೀಪವಿರುವ ಮಂದಾಕಿನಿ ಕೊಳದಲ್ಲಿ ತೀರ್ಥವನ್ನು ತರಲು ಜಂಗಮ ವಂಶಸ್ಥರಿಗೆ ಡೋಹರ ಗೌಡನು ನೇಮಿಸಿದ್ದ. ಒಮ್ಮೆ ಜಂಗಮರು ಈ ಗ್ರಾಮದಲ್ಲಿ ನಡೆಯುತ್ತಿದ್ದ ಬಯಲಾಟವನ್ನು ರಾತ್ರಿ ಇಡೀ ನೋಡಿ ಬೆಳಗಿನ ಜಾವ ಮಲಗಿದವರಿಗೆ ಸೂರ್ಯೋದಯದ ನಂತರ ಎಚ್ಚರವಾಯಿತು. ಆಗ ಡೋಹರ ಗೌಡನಿಗೆ ಹೆದರಿದ ಜಂಗಮರು ಮಹಾಂತ ತೀರ್ಥಕ್ಕೆ ಹೋಗ ಲಾಗದೆ, ಹೆದರಿಕೆಯಿಂದ ತೊಳಲಾಡುತ್ತಿದ್ದರು. ಆಗ ಇವರ ತೊಳಲಾಟವನ್ನು ಗಮನಿಸಿದ ಶ್ರೀ ಜಗದ್ಗುರು ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಹಾಗೂ ಶ್ರೀ ಮಹಾಂತೇಶ್ವರ ಸ್ವಾಮಿಗಳು ಜಂಗಮರನ್ನು ಹತ್ತಿರ ಕರೆದು, ಅವರ ಕಷ್ಟವನ್ನು ವಿಚಾರಿಸಿ ಪಕ್ಕದಲ್ಲಿದ್ದ ಹೊಂಡದಿಂದ ನೀರನ್ನು ತುಂಬಿಕೊಂಡು ಹೋಗಿ ಸ್ನಾನಕ್ಕೆ ಒಪ್ಪಿಸುವಂತೆ ತಿಳಿಸಿದರು. ದಾರಿ ಕಾಣದ ಈ ಜಂಗಮರು ಕೊಳದ ನೀರನ್ನೇ ತುಂಬಿಕೊಂಡು ಡೋಹರ ಗೌಡನ ಮನೆಯಲ್ಲಿಟ್ಟು ಹೋದರು.

ಎಂದಿಗಿಂತ ತಡವಾಗಿ ಎಚ್ಚರಗೊಂಡ ಗೌಡನು ಜಂಗಮರು ತಂದಿಟ್ಟಿದ್ದ ನೀರಿನಲ್ಲಿ ಸ್ನಾನ ಮಾಡಲು ಮೈಮೇಲೆ ನೀರು ಸುರಿದುಕೊಂಡನಂತೆ, ಕುಷ್ಟ ರೋಗವು ನಿವಾರಣೆಯಾಗುತ್ತಾ ಹೋಯಿತಂತೆ. ನಿರಂತರವಾಗಿ ಮಂದಾಕಿನಿ ತೀರ್ಥದಲ್ಲಿ ಸ್ನಾನ ಮಾಡಿದರೂ, ಸ್ವಲ್ಪವೂ ಗುಣಮುಖವಾಗದೇ ಇದ್ದದ್ದು, ಇಂದು ಒಂದೇ ದಿನದಲ್ಲಿ ಗುಣಮುಖವಾಗಿದ್ದನ್ನು ಕಂಡು ಸಂತೋಷಗೊಂಡ ಡೋಹರ ಗೌಡನು ಜಂಗಮರನ್ನು ಕರೆಸಿ ವಿಚಾರಿಸಿದನಂತೆ. ಜಂಗಮರು ನಿಜ ವಿಷಯ ಗೌಡನಿಗೆ ತಿಳಿದಿದೆ ಸುಳ್ಳನ್ನಾಡಬಾರದು ಎಂದು, ತಮ್ಮ ತಪ್ಪನ್ನು ಒಪ್ಪಿಕೊಂಡರಂತೆ. ಆಗ ಡೋಹರ ಗೌಡನು ಸಂತೋಷಗೊಂಡು, ಜಂಗಮರನ್ನು ಕರೆದುಕೊಂಡು ತಪಸ್ವಿಗಳು ಇದ್ದ ಜಾಗಕ್ಕೆ ಬಂದು ಗುರುಗಳಿಗೆ ವಂದಿಸಿ ದೋರನಹಳ್ಳಿಗೆ ಕರೆ ತಂದು ಗುರುಗಳಿಗಾಗಿ ಮಠವನ್ನು ಕಟ್ಟಿಸಿ ಕೊಟ್ಟನು. ಶ್ರೀ ರಂಭಾಪುರಿ ಪೀಠದ ಜಗದ್ಗುರುಗಳಾದ ಶ್ರೀ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ನೂತನವಾಗಿ

ಸ್ಥಾಪಿತಗೊಂಡ ಈ ಮಠದಲ್ಲಿ, ಶ್ರೀ ಮಹಾಂತೇಶ್ವರ ಶಿವಾಚಾರ್ಯ ಸ್ವಾಮಿಗಳನ್ನು ನೆಲೆಗೊಳಿಸಿ ಸಂಚಾರಕ್ಕೆ ಹೊರಡುತ್ತಾರೆ. ಡೋಹರ ಗೌಡನು ಗ್ರಾಮದ ಹೊರ ಭಾಗದಲ್ಲಿರುವ ಬೆಟ್ಟದ ಬಳಿ ಮಠವನ್ನು ಸ್ಥಾಪಿಸಿ ಕೊಟ್ಟಿದ್ದು, ಈ ಮಠ ಇಂದಿಗೂ ಅಸ್ತಿತ್ವದಲ್ಲಿದೆ. ಈ ಬೆಟ್ಟಕ್ಕೆ 'ಶ್ರೀ ಮಹಾಂತೇಶ್ವರ ಬೆಟ್ಟ' ಎಂದು ರೂಢಿಗತವಾಗಿ ಕರೆಯಲಾಗುತ್ತಿದೆ. ಕಾಲಾನಂತರ ಮಠವು ಗ್ರಾಮದ ಮಧ್ಯ ಭಾಗಕ್ಕೆ ಸ್ಥಳಾಂತರಗೊಂಡು ತನ್ನ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದಿದೆ. ಗ್ರಾಮದ ಮಧ್ಯ ಭಾಗದಲ್ಲಿ ಸ್ಥಾಪನೆಯಾದ ಮಠವು ಮಣ್ಣಿನ ಗಚ್ಚಿನಿಂದ ರಚಿಸಲ್ಪಟ್ಟಿದ್ದು, ವಿಶಾಲ ತಳಹದಿಯ ಮೇಲೆ ರೂಪುಗೊಂಡಿದೆ.

ಶ್ರೀ ಮಹಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು ಇಲ್ಲಿ ನೆಲೆಗೊಂಡ ಮೇಲೆ ವೀರಶೈವ ಧರ್ಮದ ಅಷ್ಟಾವರಣ, ಪಂಚಾಚಾರ ಹಾಗೂ ಷಟ್‌ಸ್ಥಲಗಳ ಆಧಾರದ ಮೇಲೆ ಧರ್ಮವನ್ನು ಬೆಳೆಸಿದರು. ಇವರ ಕಾಲದಲ್ಲಿ ಡೋಹರರು ವೀರಶೈವರಾಗಿ ಇಷ್ಟಲಿಂಗ ಧಾರಣೆಯನ್ನು ಮಾಡಿಕೊಂಡು ವೀರಶೈವರಾದರೆಂದು ಹೇಳಲಾಗುತ್ತಿದೆ.

ಪರಂಪರೆ:

೧. ಷ.ಬ್ರ.ಶ್ರೀ ಮಹಾಂತೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಶಿವಪೂಜಾ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಅನ್ನದಾನ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ವೀರಮಹಾಂತ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃ ಗುರುಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಶಿವಪೂಜಾ ಶಿವಾಚಾರ್ಯ ಸ್ವಾಮಿಗಳು ಮಹಾ ತಪಸ್ವಿಗಳಾಗಿ, ಮಠವನ್ನು ಅಭಿವೃದ್ಧಿಪಡಿಸಿದರು. ಇವರ ನಂತರ ಬಂದಂತಹ ಶ್ರೀ ಬಸವಲಿಂಗ ಸ್ವಾಮಿಗಳ ಬಗ್ಗೆ ಹೆಚ್ಚು ಮಾಹಿತಿ ಲಭ್ಯವಿಲ್ಲ. ಪರಂಪರೆಯ ನಾಲ್ಕನೆಯ ಗುರುಗಳಾದ ಶ್ರೀ ಅನ್ನದಾನ ಶಿವಾಚಾರ್ಯ ಸ್ವಾಮಿಗಳು ಪಟ್ಟಾಧಿಕಾರ ವಹಿಸಿಕೊಂಡ ಕೆಲವು ವರ್ಷಗಳ ಕಾಲ ಮಠದಲ್ಲಿ ನೆಲೆಸಿ, ಧಾರ್ಮಿಕ ಕಾರ್ಯಗಳನ್ನು ಯಶಸ್ವಿಯಾಗಿ ನಡೆಸಿ ಮಠವನ್ನು ತ್ಯಜಿಸಿದರು. ಇವರ ನಂತರ ಕೆಲವು ವರ್ಷಗಳ ಕಾಲ ಮಠವು ಖಾಲಿ ಉಳಿಯುತ್ತದೆ. ನಂತರ ೧೯೬೭ ರಲ್ಲಿ ಶ್ರೀ ವೀರಮಹಾಂತ ಸ್ವಾಮಿಗಳು ಉತ್ತರಾಧಿಕಾರಿಗಳಾಗಿ ನೇಮಕಗೊಂಡಿದ್ದಾರೆ.

ಶ್ರೀ ವೀರಮಹಾಂತ ಸ್ವಾಮಿಗಳು ಅಫಜಲಪುರ ತಾಲ್ಲೂಕಿನ ಚಿಂಚೋಳಿ ಗ್ರಾಮದ ಶ್ರೀ ಗಂಗಯ್ಯ ಮತ್ತು ಶ್ರೀಮತಿ ಬಸಮ್ಮನವರ ಪುತ್ರರಾಗಿ ೧೯೭೩ ರಲ್ಲಿ ಜನಿಸಿದರು. ಇವರು ಬನಾರಸ್ ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತದಲ್ಲಿ ಎಂ.ಎ ಪದವಿಯನ್ನು ಪಡೆದು ೧೯೯೮ ರ ಮೇ ಇಪ್ಪತ್ತೇಳರಂದು ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ.

ಗದ್ದುಗೆಯ ವಿಶೇಷತೆ: ಗ್ರಾಮದ ಮಧ್ಯ ಭಾಗದಲ್ಲಿ ಸ್ಥಾಪನೆಯಾಗಿರುವ ಮಠದಲ್ಲಿ ಗವಿಯನ್ನು ನಿರ್ಮಿಸಿದ್ದು, ಗವಿಯ ಒಳ ಭಾಗದಲ್ಲಿ ಸಮಾಧಿ ಸ್ಥಳವನ್ನು ನಿರ್ಮಿಸಲಾಗಿದೆ. ಈ ಸಮಾಧಿ ಸ್ಥಳದಲ್ಲಿ ಮಠದ ಪರಂಪರೆಯ ಎಲ್ಲಾ ಗುರುಗಳ ಸಮಾಧಿಯನ್ನು ನಡೆಸಲಾಗುತ್ತಿದೆ. ಪರಂಪರೆಯ ಗುರುಗಳು ಲಿಂಗೈಕ್ಯರಾದಾಗ ಹಿಂದಿನ ಲಿಂಗೈಕ್ಯ ಗುರುಗಳನ್ನು ಸಮಾಧಿ ಮಾಡಿದ ಸ್ಥಳದಲ್ಲಿರುವ ಅಸ್ಥಿ ಪಂಜರವನ್ನು ತೆಗೆದು, ಗವಿಯಲ್ಲಿಯೇ ರಚಿತಗೊಂಡಿರುವ ಬೇರೆ ಸ್ಥಳಕ್ಕೆ ವರ್ಗಾಯಿಸಿ,ಲಿಂಗೈಕ್ಯ ಗುರುಗಳ ಸಮಾಧಿಯನ್ನು ಮಾಡಲಾಗುತ್ತಿದೆ. ಯಾವ ವೀರಶೈವ ಮಠಗಳಲ್ಲಿಯೂ ಈ ಸಂಪ್ರದಾಯ ಬೆಳೆದು ಬಂದಿಲ್ಲ. ಇಂತಹ ವಿಶೇಷತೆ ಇಲ್ಲಿ ಜಾರಿಯಲ್ಲಿದ್ದು ಇದು ಸಂಶೋಧನೆಗೆ ಒಂದು ಉತ್ತಮ ವಿಷಯವಾಗಿದೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯಲ್ಲಿರುವ ಗದ್ದುಗೆಗೆ ನಿತ್ಯಪೂಜೆ,ಅಮಾವಾಸ್ಯೆಯಲ್ಲಿ ವಿಶೇಷ ಪೂಜೆ ಹಾಗೂ ರಾತ್ರಿ ಪ್ರವಚನವನ್ನು ನಡೆಸಲಾಗುತ್ತಿದೆ. ವರ್ಷಕ್ಕೊಮ್ಮೆ ಶ್ರೀಮಹಾಂತೇಶ್ವರ ಬೆಟ್ಟದ ಮೂಲ ಮಠದಲ್ಲಿ ಶ್ರೀ ಮಹಾಂತೇಶ್ವರ ಜಾತ್ರೆಯನ್ನು ನಡೆಸಲಾಗುತ್ತಿದೆ. ಮಠದಲ್ಲಿ ನಿತ್ಯ ಅನ್ನದಾಸೋಹದ ವ್ಯವಸ್ಥೆಯನ್ನು ನಡೆಸಲಾಗುತ್ತಿದೆ. ಮಠದ ಆಸ್ತಿಯಾಗಿ ನಲವತ್ತು ಎಕರೆ ಜಮೀನಿದ್ದು, ಇದನ್ನು ಅಭಿವೃದ್ಧಿಪಡಿಸಿ ಮಠದ ಆದಾಯದ ಮೂಲವನ್ನಾಗಿ ಮಾಡಿಕೊಳ್ಳಲಾಗಿದೆ.

ವಿಳಾಸ: ಷ.ಬ್ರ.ಶ್ರೀ ವೀರಮಹಾಂತ ಶಿವಾಚಾರ್ಯ ಸ್ವಾಮಿಗಳು, ಶ್ರೀ ಮಹಾಂತೇಶ್ವರ ಹಿರೇಮಠ, ದೋರನಹಳ್ಳಿ, ಶಹಾಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಚಿಕ್ಕಮಠ: ದೋರನಹಳ್ಳಿ ಗ್ರಾಮದ ಮಧ್ಯ ಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಚಿಕ್ಕಮಠವು, ಶ್ರೀ ರಂಭಾಪುರಿ ಪೀಠದ ಶಾಖಾ ಮಠವಾಗಿ ಬೆಳೆದಿದೆ. ಪುರಾತನ ಪರಂಪರೆಯಿರುವ ಈ ಮಠದ ಸ್ಥಾಪನೆ ಹಾಗೂ ಸ್ಥಾಪಕ ಗುರುಗಳ ಬಗ್ಗೆ ಸ್ಪಷ್ಟವಾದ ಆಧಾರಗಳು ಇಲ್ಲದೆ ಇರುವುದರಿಂದ ಮಠದ ಪರಂಪರೆಯನ್ನು ಗುರುತಿಸಲು ತೊಂದರೆಯಾಗಿದೆ. ಶಿಷ್ಯ ವರ್ಗದ ಪರಂಪರೆಯಲ್ಲಿ ಬೆಳೆದಿರುವ ಈ ಮಠದಲ್ಲಿ ಈವರೆಗೆ ಐದು ಜನ ಗುರುಗಳು ಅಧಿಕಾರವನ್ನು ನಡೆಸಿದ್ದಾರೆಂದು ಹೇಳಲಾಗುತ್ತಿದೆ.

ಪರಂಪರೆ: ಚಿಕ್ಕಮಠದ ಪರಂಪರೆಯಲ್ಲಿ ಆಡಳಿತ ನಡೆಸಿದ ಗುರುಗಳು ಪ್ರಭಾವಿ ಶಾಲಿಗಳಾಗಿ ವೀರಶೈವಧರ್ಮವನ್ನು ಪ್ರಬಲವಾಗಿ ಬೆಳೆಸಿ, ಸಂಸ್ಕಾರವಂತ ಸಮಾಜವನ್ನು ರೂಪಿಸಿದ್ದಾರೆ. ಈ ಹಿಂದೆ ಅಧಿಕಾರ ನಡೆಸಿದ ಶ್ರೀ ಗುರುಶಾಂತ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ, ೧೯೬೦ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಗುರುಗಳು ಸುರಪುರ ತಾಲ್ಲೂಕಿನ ಹಗರಟಗಿ ಗ್ರಾಮದ ಶ್ರೀ ಗುರುಸಿದ್ಧಯ್ಯ ಮತ್ತು ಶ್ರೀಮತಿ ರುದ್ರಮ್ಮನವರ ಪುತ್ರರಾಗಿ ೧೯೩೦ ರಲ್ಲಿ ಜನಿಸಿ, ಸಂಸ್ಕೃತ, ವೇದಾಧ್ಯಯನ ಮಾಡಿ ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ.

ಪಂಚವಟಿ: ಮಠದ ಆವರಣದಲ್ಲಿ ಬಿಲ್ವ, ಬನ್ನಿ, ಅರಳಿ, ಹತ್ತಿ ಹಾಗೂ ಬೇವು ಈ ಐದು ಜಾತಿ ವೃಕ್ಷಗಳನ್ನು ಒಂದೇ ಬುಡದಲ್ಲಿ ಬೆಳೆಸಲಾಗಿದೆ. ಈ ವೃಕ್ಷಗಳನ್ನು ಬೆಳೆಸಿರುವ ಜಾಗಕ್ಕೆ 'ಪಂಚವಟಿ'ಎಂದು ಕರೆಯಲಾಗುತ್ತಿದೆ. ಭಾರತೀಯ ಧರ್ಮಶಾಸ್ತ್ರದಲ್ಲಿ ಹೆಚ್ಚು ಪ್ರಾಶಸ್ತ್ಯವಿರುವ ಪಂಚವಟಿಯು ಇಲ್ಲಿ ನಿರ್ಮಾಣವಾಗಿರುವುದು ಈ ಮಠದ ಒಂದು ವಿಶೇಷತೆಯಾಗಿದೆ. ಈ ವೃಕ್ಷಗಳಿಗೆ ನಿತ್ಯಪೂಜೆಯನ್ನು ನಡೆಸಲಾಗುತ್ತಿದೆ. ಪುರಾತನ ಪರಂಪರೆಯ ಗುರುಗಳ ನಾಲ್ಕು ಗದ್ದುಗೆಗಳನ್ನು ತೆಗೆದು ಒಂದೇ ಗದ್ದುಗೆಯನ್ನಾಗಿ ನಿರ್ಮಿಸಲಾಗಿದೆ.ಅಲ್ಲದೆ ಶ್ರೀ ಮಹಾಂತೇಶ್ವರ ಹಿರೇಮಠದಲ್ಲಿ ಜಾರಿಯಲ್ಲಿರುವ ಒಂದೇ ಸಮಾಧಿ ಸ್ಥಳದಲ್ಲಿ ಸಮಾಧಿ ಮಾಡುವ ಸಂಪ್ರದಾಯವನ್ನು ಈ ಮಠದಲ್ಲಿಯೂ ಅನುಸರಿಸ ಲಾಗುತ್ತಿದೆ. ಈ ಸ್ಥಳಕ್ಕೆ ನಿತ್ಯ ಎರಡೂ ವೇಳೆಪೂಜೆ, ಪ್ರತಿ ಅಮಾವಾಸ್ಯೆ ಮತ್ತು ಹುಣ್ಣಿಮೆಯಲ್ಲಿ ಅಪೇಕ್ಷಿತ ಭಕ್ತರಿಗೆ ಯಂತ್ರ ಬರೆಯುವುದು, ನವರಾತ್ರಿಯಂದು ದೇವಿ ಪಾರಾಯಣ ಹಾಗೂ ಜಾತ್ರಾ ಮಹೋತ್ಸವವನ್ನು ನಡೆಸಲಾಗುತ್ತಿದೆ. ಗುರುಗಳು ಅಧಿಕಾರಕ್ಕೆ ಬಂದ ಮೇಲೆ ಮಠದ ಕಟ್ಟಡವನ್ನು ವಿಸ್ತರಿಸಿಕೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿದ್ದಾರೆ. ಮಠದ ಆಸ್ತಿಯಾಗಿರುವ ಹನ್ನೆರಡು ಎಕರೆ ಭೂಮಿಯನ್ನು ಅಭಿವೃದ್ಧಿಪಡಿಸಿ, ಇದರಿಂದ ಬರುವ ಆದಾಯದಿಂದ ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಚಿಕ್ಕಮಠ, ದೋರನಹಳ್ಳಿ, ಶಹಾಪುರ ತಾ, ಗುಲ್ಬರ್ಗ ಜಿಲ್ಲೆ.

ಮದ್ದರಕಿ

ಶಹಾಪುರ ತಾಲ್ಲೂಕಿನ ಮದ್ದರಕಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹದಿನಾರು ಕಿ.ಮೀ ದೂರದಲ್ಲಿದೆ. ಪುರಾತನ ಕಾಲದಲ್ಲಿ ಒಟ್ಟು ಐದು ವೀರಶೈವ ಮಠಗಳು ಸ್ಥಾಪನೆಯಾಗಿದ್ದವು ಎಂಬ ಮಾಹಿತಿ ದೊರೆಯುತ್ತದೆ. ಶೋಧನೆಗೆ ಹೋದಾಗ ಶ್ರೀ ಶೀಲವಂತೇಶ್ವರ ಸಂಸ್ಥಾನಮಠ, ಶ್ರೀ ಗಚ್ಚಿನಮಠ, ಶ್ರೀ ಕಾಡಯ್ಯನಮಠ ಹಾಗೂ ಶ್ರೀ ಷಣ್ಮುಖಸ್ವಾಮಿಮಠ ಎಂಬ ನಾಲ್ಕು ಮಠಗಳು ನೋಡ ಸಿಗುತ್ತಿವೆ. ಈ ಮಠಗಳಲ್ಲಿ ಶ್ರೀ ಶೀಲವಂತೇಶ್ವರ ಸಂಸ್ಥಾನಮಠ ಹಾಗೂ ಶ್ರೀ ಗಚ್ಚಿನ ಮಠಗಳು ಅಸ್ತಿತ್ವದಲ್ಲಿವೆ. ಉಳಿದ ಮಠಗಳು ಅಸ್ತಿತ್ವವನ್ನು ಕಳೆದುಕೊಂಡಿವೆ.

ಶೀಲವಂತೇಶ್ವರ ಸಂಸ್ಥಾನಮಠ: ಮದ್ದರಕಿ ಗ್ರಾಮದ ಮಧ್ಯಭಾಗದಲ್ಲಿ ಶ್ರೀ ಶೀಲವಂತೇಶ್ವರ ಸಂಸ್ಥಾನ ಮಠವು ಸ್ಥಾಪನೆಯಾಗಿದೆ. ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿ, ಶಿಷ್ಯ ವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಪುರಾತನ ಕಾಲದಲ್ಲಿ ಶ್ರೀ ಶೀಲವಂತೇಶ್ವರ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪಿತವಾದ ಈ ಮಠವು ಈತನಕ ಬೆಳೆದು ಬಂದಿದೆ.

ಪರಂಪರೆ:
೧. ಷ.ಬ್ರ.ಶ್ರೀ ಶೀಲವಂತೇಶ್ವರ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ಜಡೆ ಶೀಲವಂತೇಶ್ವರ ಶಿವಾಚಾರ್ಯ ಸ್ವಾಮಿಗಳು

೩. ಷ.ಬ್ರ.ಶ್ರೀ ದಿಗಂಬರೇಶ್ವರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಬಸವಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಶೀಲವಂತೇಶ್ವರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಮಠದ ಕರ್ತೃ ಗುರುಗಳಿಂದ ನಾಲ್ಕನೆಯ ಗುರುಗಳ ತನಕ ಮಾಹಿತಿ ಲಭ್ಯವಿಲ್ಲ. ಐದನೆಯ ಗುರುಗಳಾದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಕೆಲ್ಲೂರು ಗ್ರಾಮದ ಶ್ರೀ ಶರಬಯ್ಯ ಮತ್ತು ಶ್ರೀಮತಿ ಶಿವಮ್ಮನವರ ಪುತ್ರರಾಗಿ ೧೮೮೬ ರಲ್ಲಿ ಜನಿಸಿದರು. ಗುರುಗಳು ಯಡ್ರಾಮಿಯಲ್ಲಿ ಸಂಸ್ಕೃತ ಮತ್ತು ವೇದಾಧ್ಯಯನ ಮಾಡಿ ಮಠದ ಅಧಿಕಾರವನ್ನು ವಹಿಸಿಕೊಂಡರು. ಇವರು ನೂರಹದಿನಾಲ್ಕು ವರ್ಷಗಳ ಕಾಲ ದೀರ್ಘ ಬದುಕನ್ನು ಬದುಕಿ ೧೯೯೮ ರಲ್ಲಿ ಲಿಂಗೈಕ್ಯರಾದರು.

ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ತಮ್ಮ ಜೀವಿತಾವಧಿಯಲ್ಲೇ ಶ್ರೀ ಶರಣಬಸವ ದೇವರಿಗೆ, ಕರ್ತೃಗುರುಗಳ ಹೆಸರಾದ ಶ್ರೀ ಶೀಲವಂತೇಶ್ವರ ಶಿವಾಚಾರ್ಯ ಸ್ವಾಮಿಗಳೆಂಬ ಅಭಿದಾನವಿತ್ತು, ೧೯೫೫ ರ ನವೆಂಬರ್ ಇಪ್ಪತ್ತೆರಂದು ಪಟ್ಟಾಧಿಕಾರ ಮಾಡಲಾಗಿದೆ. ಶ್ರೀ ಶೀಲವಂತೇಶ್ವರ ಶಿವಾಚಾರ್ಯ ಸ್ವಾಮಿಗಳು ಹಾಸನ ಜಿಲ್ಲೆಯ ಶಿಶುವಾಳ ಗ್ರಾಮದ ಶ್ರೀ ಶಿವಲಿಂಗಯ್ಯ ಮತ್ತು ಶ್ರೀಮತಿ ಶಿವಲಿಂಗಮ್ಮನವರ ಪುತ್ರರಾಗಿ ೧೯೩೬ ರಲ್ಲಿ ಜನಿಸಿದರು. ಇವರು ಹುಬ್ಬಳ್ಳಿ, ರಾಯಬಾಗ್ ಮತ್ತು ಶಿವಯೋಗ ಮಂದಿರದಲ್ಲಿ ಅಧ್ಯಯನ ಮಾಡಿದರು. ಚಿಂಚಣಿ ಹಾಗೂ ಖೇಳಗಿಯಲ್ಲಿ ನೆಲೆಸಿ ೧೯೮೫ ರಲ್ಲಿ ಮಠಕ್ಕೆ ಆಗಮಿಸಿದ್ದಾರೆ. ಗುರುಗಳು ಇಲ್ಲಿಗೆ ಬಂದ ಮೇಲೆ ಹಿರಿಯ ಗುರುಗಳಾದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳ ಮಾರ್ಗದರ್ಶನದಲ್ಲಿ ಧಾರ್ಮಿಕ ಸಂಸ್ಕಾರವನ್ನು ಪಡೆದು, ಧಾರ್ಮಿಕ ಕಾರ್ಯಗಳನ್ನು ನಡೆಸ ತೊಡಗಿದರು. ಹಿರಿಯ ಗುರುಗಳಾದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಶಿವಪೂಜಾ ನಿಷ್ಠರಾಗಿ, ಲೌಕಿಕ ವಿಚಾರಗಳ ಬಗ್ಗೆ ಚಿಂತಿಸದೆ ಮಠವನ್ನು ಅಭಿವೃದ್ಧಿಪಡಿಸುವಲ್ಲಿ ವಿಫಲರಾದರು. ನಿತ್ಯ ಶಿವಪೂಜೆಯ ನಂತರ ಕಂತೆ ಭಿಕ್ಷದ ಮೂಲಕ ಸಂಗ್ರಹಿಸಿದ ಪ್ರಸಾದವನ್ನು ಸ್ವೀಕರಿಸಿ, ಶಿವಪೂಜೆ ಮತ್ತು ಧರ್ಮೋಪದೇಶ ಕಾರ್ಯದಲ್ಲಿ ತೊಡಗುತ್ತಿದ್ದರು. ಗುರುಗಳು ಲಿಂಗೈಕ್ಯರಾದ ಮೇಲೆ ಈಗಿನ ಪಟ್ಟಾಧ್ಯಕ್ಷರಾದ ಶ್ರೀ ಶೀಲವಂತೇಶ್ವರ ಶಿವಾಚಾರ್ಯ ಸ್ವಾಮಿಗಳು ಮಠದಲ್ಲಿ ವಾಸ್ತವ್ಯ ಕೊಠಡಿ ಹಾಗೂ ಶಿವಪೂಜಾ ಮಂದಿರವನ್ನು ನಿರ್ಮಿಸಿದ್ದಾರೆ. ಇಲ್ಲಿನ ಗ್ರಾಮಸ್ಥರನ್ನು ಸಂಘಟಿಸಿ, ಸಂಘಟನಾತ್ಮಕ ಪ್ರಯತ್ನದಿಂದ ಧರ್ಮವನ್ನು ಪ್ರಚಾರಪಡಿಸುವುದರ ಜತೆಗೆ ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಪರಂಪರೆಯ ಮೂರು ಜನ ಗುರುಗಳ ಗದ್ದುಗೆಗಳು ಸ್ಥಾಪನೆಯಾಗಿವೆ. ಈ ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ, ಅಮಾವಾಸ್ಯೆ ಮತ್ತು ಹುಣ್ಣಿಮೆಯಲ್ಲಿ ಶಿವಾನುಭವ ಕಾರ್ಯಕ್ರಮ ಹಾಗೂ ಹಿರಿಯ ಗುರುಗಳ ಪುಣ್ಯಾರಾಧನೆಯ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಮಠದ ಅಧೀನದಲ್ಲಿ ಇಪ್ಪತ್ತೈದು ಎಕರೆ ಜಮೀನಿದ್ದು, ಈ ಜಮೀನಿಗೆ ಇತ್ತೀಚೆಗೆ ನೀರಾವರಿ ಸೌಲಭ್ಯ ದೊರೆತಿದೆ. ಮಠದವತಿಯಿಂದ ಅದನ್ನು ಅಭಿವೃದ್ಧಿಪಡಿಸಿ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ಈಗಿನ ಗುರುಗಳಾದ ಶ್ರೀ ಶೀಲವಂತೇಶ್ವರ ಶಿವಾಚಾರ್ಯ ಸ್ವಾಮಿಗಳು ಕ್ರಿಯಾಶೀಲರಾಗಿ, ಕಾಯಕ ಯೋಗಿಗಳಾಗಿ, ಶಿವಪೂಜಾ ನಿಷ್ಠರಾಗಿ ಹೆಸರು ಪಡೆದು ಗ್ರಾಮಸ್ಥರ ಒಲವನ್ನು ಸಂಪಾದಿಸಿಕೊಂಡು, ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸೀಲವಂತೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಶೀಲವಂತೇಶ್ವರ ಸಂಸ್ಥಾನಮಠ, ಮದ್ದರಕಿ, ಶಹಾಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಗಚ್ಚಿನಮಠ: ಮದ್ದರಕಿ ಗ್ರಾಮದ ಹೊರ ಭಾಗದಲ್ಲಿ 'ಶ್ರೀ ಗಚ್ಚಿಮಠ'ವು ಸ್ಥಾಪನೆಯಾಗಿದೆ. ಶ್ರೀ ಕಾಶಿಪೀಠದ ಶಾಖಾ ಮಠವಾದ ಈ ಮಠವು ಪುತ್ರ ವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಒಂಬೈನೂರು ವರ್ಷಗಳ ಹಿಂದೆ ಸ್ಥಾಪಿಸಿರ ಬಹುದಾದ ಈ ಮಠದ ಭವ್ಯವಾದ ಕಲ್ಲಿನ ಕಟ್ಟಡವು ವಿಶಾಲ ತಳಹದಿಯ ಮೇಲೆ ರೂಪುಗೊಂಡಿದೆ. ಪುರಾತನ ಕಾಲದಲ್ಲಿ

ನಿರ್ಮಿಸಲ್ಪಟ್ಟಿರುವ ಈ ಕಟ್ಟಡದಲ್ಲಿ ಗುರುಗಳ ವಾಸ್ತವ್ಯ ಕೊಠಡಿ, ಪೂಜಾ ಮಂದಿರ, ಭಕ್ತರಿಗೆ ದರ್ಶನ ನೀಡುವ ಅಂಗಳ, ದಾಸೋಹ ಮಂದಿರ, ಮಠದ ಹಿಂಭಾಗದಲ್ಲಿ ಕುದುರೆ, ದನಗಳನ್ನು ಕಟ್ಟುವ ಕಟ್ಟಡ ಹಾಗೂ ಕಲ್ಲಿನ ಬಾವಿ ನಿರ್ಮಾಣಗೊಂಡಿದೆ. ಈ ಕಟ್ಟಡವನ್ನು ಅವಲೋಕಿಸಿದರೆ ಈ ಮಠವು ಪುರಾತನ ಕಾಲದಲ್ಲಿ ವೈಭವದಿಂದ ಧಾರ್ಮಿಕ ಕಾರ್ಯಗಳನ್ನು ನಡೆಸಿರುವುದರ ಕುರುಹನ್ನು ಬಿಂಬಿಸುತ್ತಿದೆ. ಭವ್ಯವಾದ ಕಟ್ಟಡವೇ ಸಂಶೋಧಕರಿಗೆ ಅಧ್ಯಯನದ ವಸ್ತುವಾಗಬಲ್ಲದು.

ಪರಂಪರೆ:
೧. ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಪ್ರಸಾದೇಶ್ವರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ರಾಚೋಟೇಶ್ವರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಪ್ರಸಾದ ದೇವರು

ಈ ರೀತಿ ಮಠದ ಪರಂಪರೆಯ ಕೆಲವು ಗುರುಗಳ ಹೆಸರುಗಳನ್ನು ಮಾತ್ರ ದಾಖಲಿಸಲಾಗಿದೆ. ಪುರಾತನ ಪರಂಪರೆಯುಳ್ಳ ಪ್ರಮುಖ ವಿಚಾರಗಳು ಲಭ್ಯವಿಲ್ಲದಂತಾಗಿದೆ. ಮಠದಲ್ಲಿ ಸಿಕ್ಕಷ್ಟು ಮಾಹಿತಿಗಳನ್ನು ಶೋಧಿಸಿ ಪರಂಪರೆಯನ್ನು ದಾಖಲಿಸಲಾಗಿದೆ. ಪರಂಪರೆಯ ಕೊನೆಯ ಕೊಂಡಿಯಾದ ಶ್ರೀ ರಾಚೋಟೇಶ್ವರ ಸ್ವಾಮಿಗಳು ಅಧಿಕಾರವನ್ನು ನಡೆಸಿ, ಮಠವನ್ನು ಅಭಿವೃದ್ಧಿಪಡಿಸಿ ೧೯೮೩ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಮಠವು ಖಾಲಿ ಉಳಿದಿದ್ದು ಇತ್ತೀಚೆಗೆ ಶ್ರೀಬಸಯ್ಯ ಮತ್ತು ಶ್ರೀಮತಿ ಶ್ರೀದೇವಿಯವರ ಪುತ್ರರಾಗಿ ೧೯೭೪ ರಲ್ಲಿ ಜನಿಸಿದ್ದಾರೆ. ಶ್ರೀ ಪ್ರಸಾದ ದೇವರು ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡಿದ್ದು, ಇವರ ವಿದ್ಯಾಭ್ಯಾಸ ಮುಗಿದ ನಂತರ ಮಠದ ಪಟ್ಟಾಧಿಕಾರವನ್ನು ಮಾಡಲಾಗುತ್ತದೆ ಎಂದು ಈ ಮಠದ ವಂಶಸ್ಥರು ಅಭಿಪ್ರಾಯಿಸುತ್ತಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ನಾಲ್ಕು ಗದ್ದುಗೆಗಳು ಸ್ಥಾಪನೆಗೊಂಡಿದ್ದು, ಈ ಗದ್ದುಗೆಗಳಿಗೆ ನಿತ್ಯ ಪೂಜೆಯನ್ನು ನಡೆಸಲಾಗುತ್ತಿದೆ. ಕಾರ್ತೀಕ ಮಾಸದ ಹುಣ್ಣಿಮೆಯಲ್ಲಿ ಶ್ರೀ ರಾಚೋಟೇಶ್ವರ ಸ್ವಾಮಿಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಅನ್ನ ದಾಸೋಹದ ವ್ಯವಸ್ಥೆಯನ್ನು ನಡೆಸಲಾಗುತ್ತಿದೆ. ಮಠದ ಆಸ್ತಿಯಾಗಿ ನಲವತ್ತೆಂಟು ಎಕರೆ ಭೂಮಿಯಿದ್ದು, ಇದನ್ನು ಮಠದ ವತಿಯಿಂದಲೇ ಬೇಸಾಯ ಮಾಡಿಸಿ ಹೆಚ್ಚು ಆದಾಯ ಬರುವಂತೆ ಮಾಡಲಾಗಿದೆ.

ವಿಳಾಸ: ಷ.ಬ್ರ.ಶ್ರೀ ಪ್ರಸಾದ ದೇವರು, ಶ್ರೀ ಗಚ್ಚಿನಮಠ, ಮದ್ದರಕಿ, ಶಹಾಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ರಸ್ತಾಪುರ

ಶಹಾಪುರ ತಾಲ್ಲೂಕಿನ ರಸ್ತಾಪುರ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಒಂಬತ್ತು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಪುರಾತನ ಕಾಲದಲ್ಲಿ ಸ್ಥಾಪನೆಯಾದ ಶ್ರೀ ಗಿರಿಲಿಂಗೇಶ್ವರಮಠ ಮತ್ತು ಶ್ರೀ ವಿರಕ್ತಮಠ ಸ್ಥಾಪನೆಯಾಗಿ, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಗಿರಿಲಿಂಗೇಶ್ವರ ಮಠ: ರಸ್ತಾಪುರದ ಮಧ್ಯ ಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಗಿರಿಲಿಂಗೇಶ್ವರ ಮಠವು ಶ್ರೀಶೈಲ ಪೀಠದ ಶಾಖಾ ಮಠವಾಗಿ, ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿದೆ. ಪುರಾತನ ಕಾಲದಲ್ಲಿ ಸ್ಥಾಪನೆಯಾದ ಈ ಮಠವನ್ನು ಸ್ಥಾಪಿಸಿದ ಗುರುಗಳು ಹಾಗೂ ಕಾಲಮಾನದ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಾಗದ ಕಾರಣ ಮಠದ ಪರಂಪರೆಯನ್ನು ಸ್ಪಷ್ಟವಾಗಿ ಗುರುತಿಸಲಾಗಿಲ್ಲ.

ಪರಂಪರೆ:
೧. ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಅನ್ನದಾನ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಗಿರಿಧರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯ ಕೆಲವು ಗುರುಗಳ ಹೆಸರನ್ನು ದಾಖಲಿಸಬಹುದಾಗಿದೆ. ಶ್ರೀ ಗುರುಲಿಂಗ ಸ್ವಾಮಿಗಳು ಹಾಗೂ ಶ್ರೀ ಸಿದ್ಧರಾಮ ಸ್ವಾಮಿಗಳ ಗದ್ದುಗೆಗಳು ಮಠದ ಆವರಣದಲ್ಲಿ ಸ್ಥಾಪನೆಯಾಗಿವೆ. ಶ್ರೀ ಅನ್ನದಾನ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಯು ಮೂಡ್ನೂರು ಗ್ರಾಮದಲ್ಲಿ ಸ್ಥಾಪನೆಯಾಗಿದೆ. ಶ್ರೀ ಸಿದ್ಧರಾಮ ಸ್ವಾಮಿಗಳು ೧೯೬೨ ರ ಜನವರಿ ಹದಿನೈದರಂದು ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಮಠದ ವಂಶಸ್ಥರಾದ ಶ್ರೀ ಈಶ್ವರಯ್ಯ ಮತ್ತು ಶ್ರೀಮತಿ ಅಮೃತಾವತಿಯವರ ಪುತ್ರರಾಗಿ ೧೯೭೭ ರಲ್ಲಿ ಜನಿಸಿದ ಶ್ರೀ ಗಿರಿಧರ ಶಿವಾಚಾರ್ಯ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡು, ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಪರಂಪರೆಯ ಗುರುಗಳ ಗದ್ದುಗೆಗಳಿಗೆ ನಿತ್ಯಪೂಜೆ, ಅಮಾವಾಸ್ಯೆಯಲ್ಲಿ ರುದ್ರಾಭಿಷೇಕಪೂಜೆ ಹಾಗೂ ರಾತ್ರಿ ವೇಳೆ ಭಜನೆಯನ್ನು ನಡೆಸಲಾಗುತ್ತಿದೆ. ಶ್ರೀ ಸಿದ್ಧರಾಮ ಸ್ವಾಮಿಗಳ ಪುಣ್ಯಾರಾಧನೆಯನ್ನು ಎರಡು ದಿನಗಳ ಕಾಲ ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಭಜನೆ, ಉಪನ್ಯಾಸ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ.

ವಿಳಾಸ:ಷ.ಬ್ರ.ಶ್ರೀ ಗಿರಿಧರ ಶಿವಾಚಾರ್ಯ ಸ್ವಾಮಿಗಳು,ಶ್ರೀ ಗಿರಿಲಿಂಗೇಶ್ವರಮಠ, ರಸ್ತಾಪುರ,ಶಹಾಪುರ ತಾ, ಗುಲ್ಬರ್ಗ ಜಿಲ್ಲೆ.

ವಿರಕ್ತಮಠ: ರಸ್ತಾಪುರ ಗ್ರಾಮದ ಮಧ್ಯ ಭಾಗದಲ್ಲಿ ಶ್ರೀ ವಿರಕ್ತಮಠವು ಸ್ಥಾಪನೆಯಾಗಿದೆ. ಶ್ರೀ ಷಣ್ಮುಖ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿರುವರೆಂದು ಹೇಳಲಾಗುತ್ತಿದೆ. ಶ್ರೀ ಷಣ್ಮುಖ ಸ್ವಾಮಿಗಳು ಲೋಕ ಸಂಚಾರ ಕೈಗೊಂಡು ಈ ಗ್ರಾಮಕ್ಕೆ ಬಂದು ನೆಲೆಸಿ, ಮಠವನ್ನು ಸ್ಥಾಪಿಸಿದ್ದಲ್ಲದೆ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದರು. ನಂತರ ಶ್ರೀ ಶಂಕರಯ್ಯ ಸ್ವಾಮಿಗಳು ಮಠದ ಅಧಿಕಾರವನ್ನು ನಡೆಸಿ ೧೯೬೪ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಶ್ರೀ ಅಯ್ಯಪ್ಪ ಸ್ವಾಮಿಗಳು ಅಧಿಕಾರವನ್ನು ನಡೆಸುತ್ತಿದ್ದಾರೆ. ಮಠದ ಆವರಣದಲ್ಲಿ ಎರಡು ಗದ್ದುಗೆಗಳು ಸ್ಥಾಪನೆಯಾಗಿದ್ದು, ಈ ಗದ್ದುಗೆಗಳಿಗೆ ಎರಡು ವೇಳೆ ಪೂಜೆ, ದೀಪಾವಳಿಯ ಸಂದರ್ಭದಲ್ಲಿ ಹಿರಿಯ ಗುರುಗಳ ಪುಣ್ಯಸ್ಮರಣೆಯನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಅಯ್ಯಪ್ಪ ಸ್ವಾಮಿಗಳು, ಶ್ರೀ ವಿರಕ್ತಮಠ, ರಸ್ತಾಪುರ, ಶಹಾಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಶಹಾಪುರ

ಗುಲ್ಬರ್ಗ ಜಿಲ್ಲೆಯ ಶಹಾಪುರ ಪಟ್ಟಣವು ಜಿಲ್ಲಾ ಕೇಂದ್ರದಿಂದ ದಕ್ಷಿಣಕ್ಕೆ ಎಂಬತ್ತು ಕಿ.ಮೀ ದೂರದಲ್ಲಿದೆ. ತಾಲ್ಲೂಕಿನ ಕೇಂದ್ರ ಸ್ಥಳವಾಗಿರುವ ಶಹಾಪುರ ಪಟ್ಟಣವು ನಿಜಾಮರ ಆಡಳಿತದ ಕಾಲದಲ್ಲಿ ಪ್ರಮುಖ ಪಟ್ಟಣವಾಗಿ ಬೆಳೆದಿತ್ತು. ಈ ಪಟ್ಟಣದಲ್ಲಿ ವೀರಶೈವ ಧರ್ಮ ಪುರಾತನ ಕಾಲದಿಂದಲೂ ಗಟ್ಟಿಯಾಗಿ ನೆಲೆಯೂರಿತ್ತು. ಸಮಷ್ಟಿ ಸಮಾಜದ ಅಭಿವೃದ್ಧಿಗೆ ಶ್ರಮಿಸಿ ಸಮಾಜದಲ್ಲಿ ಸಾಮರಸ್ಯವನ್ನು ಮೂಡಿಸಿ, ಸಂಸ್ಕಾರವಂತ ಸಮಾಜವನ್ನು ಬೆಳೆಸಿದೆ. ಈ ಪಟ್ಟಣದಲ್ಲಿ ಶ್ರೀ ಫಕೀರೇಶ್ವರ ಮಠ, ಶ್ರೀ ಗುಮ್ಮಳಾಪುರ ಹಿರೇಮಠ, ಶ್ರೀ ಕುಂಬಾರಪೇಟೆ ಹಿರೇಮಠ, ಶ್ರೀ ಕಬ್ಬಿಣ ಕಂತೆ ಹಿರೇಮಠ, ಶ್ರೀ ಬಿಲಂಕೊಂಡಿ ಮಠ ಹಾಗೂ ಶ್ರೀ ಚರಬಸವೇಶ್ವರ ಮಠ ಎಂಬ ಆರು ಮಠಗಳು ಸ್ಥಾಪನೆಯಾಗಿ ಸಮಾಜವನ್ನು ಬೆಳೆಸಿವೆ.

ಫಕೀರೇಶ್ವರ ಮಠ: ಶಹಾಪುರ ಪಟ್ಟಣದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಫಕೀರೇಶ್ವರ ಮಠವು ವಿರಕ್ತ ಸಂಪ್ರದಾಯದ, ಕುಮಾರ ಸಮಯದಲ್ಲಿ ಬೆಳೆದು ಬಂದಿದೆ. ಸುರಪುರದ ವೆಂಕಟಪ್ಪ ನಾಯಕನ (೧೬೫೦) ಕಾಲದಲ್ಲಿ ಈ ಮಠವು ಸ್ಥಾಪನೆಯಾಗಿದ್ದು, ಸ್ಥಾಪಕ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ಲಭ್ಯವಿಲ್ಲದ ಕಾರಣ ಮಠದ ಪರಂಪರೆಯನ್ನು ಶ್ರೀ ಶೀಲವಂತೇಶ್ವರ ಸ್ವಾಮಿಗಳ ಕಾಲದಿಂದ ಗುರುತಿಸಬಹುದಾಗಿದೆ. ಮಠದ ಸುತ್ತ ಹೆಚ್ಚು ಸಂಖ್ಯೆಯಲ್ಲಿ ಮುಸ್ಲಿಮರು ವಾಸವಾಗಿದ್ದು, ಈ ಮಠವು ಹಿಂದೂ ಮತ್ತು ಮುಸ್ಲಿಂ ಭಾವೈಕ್ಯತೆಯ ಸಂಕೇತವಾಗಿ ಬೆಳೆದಿದೆ. ಈ ಕಾರಣದಿಂದ 'ಶ್ರೀ ಫಕೀರೇಶ್ವರ ಮಠ ' ಎಂಬ ಹೆಸರು ಬಂದಿರ ಬಹುದೆಂದು ಹೇಳಲಾಗುತ್ತಿದೆ.

ಶ್ರೀ ಶೀಲವಂತೇಶ್ವರ ಸ್ವಾಮಿಗಳು ಲೋಕ ಸಂಚಾರ ಕೈಗೊಂಡು ಈ ಪ್ರದೇಶಕ್ಕೆ ಬಂದು ಶಹಾಪುರದ ಪಶ್ಚಿಮ ಭಾಗದಲ್ಲಿ ರುವ ಕಲ್ಲುಬೆಟ್ಟದ ಮೇಲೆ ತಪಸ್ಸನ್ನು ಆಚರಿಸುತ್ತಿದ್ದರು. ಈ ಸಂದರ್ಭದಲ್ಲಿ ರಾಜ ವೆಂಕಟಪ್ಪ ನಾಯಕನ

ಆಸ್ಥಾನದಲ್ಲಿ ಮಂತ್ರಿಯಾಗಿದ್ದ ವೀರಪ್ಪ ಮತ್ತು ಆತನ ಸಹೋದರರಾದ ಕಡ್ಲಪ್ಪನವರು ಗುರುಗಳಿಗಾಗಿ ಮಠವನ್ನು ಕಟ್ಟಿಸಿಕೊಟ್ಟು, ಮಠದ ಧಾರ್ಮಿಕ ಕಾರ್ಯಗಳಿಗೆ ನೆರವಾಗಲೆಂಬ ಉದ್ಧೇಶದಿಂದ ಭೂಮಿಯನ್ನು ಉಂಬಳಿಯಾಗಿ ನೀಡಿರುತ್ತಾರೆ.ಗುರುಗಳು ಬೆಟ್ಟದ ಮೇಲೆ ತಪಸ್ಸನ್ನು ಆಚರಿಸಿ, ಈ ಸ್ಥಳವನ್ನು ಸುಕ್ಷೇತ್ರವನ್ನಾಗಿ ಮಾಡಿದ ಮೇಲೆ ಈ ಬೆಟ್ಟ 'ಶ್ರೀ ಶೀಲವಂತೇಶ್ವರ ಬೆಟ್ಟ'ಎಂದು ಹೆಸರು ಪಡೆದಿದ್ದು, ಈಗಲೂ ಇದೇ ಹೆಸರಿನಿಂದ ಕರೆಯಲ್ಪಡುತ್ತಿದೆ. ಬೆಟ್ಟದ ಮೇಲೆ ಸ್ಥಾಪಿಸಿದ ಮಠದಲ್ಲಿ ಗುರುಗಳು ಲಿಂಗೈಕ್ಯರಾಗಿದ್ದು ಗದ್ದುಗೆಯನ್ನು ನಿರ್ಮಿಸಲಾಗಿದೆ.

ಪರಂಪರೆ: ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಎಲ್ಲಾ ಗುರುಗಳಿಗೆ ಶ್ರೀ ಶೀಲವಂತೇಶ್ವರ ಸ್ವಾಮಿಗಳೆಂದು ಅಭಿದಾನ ಮಾಡಲಾಗಿದೆ. ಈ ಕಾರಣದಿಂದ ಮಠದ ಪರಂಪರೆಯಲ್ಲಿ ಬಂದಿರುವಂತಹ ಗುರುಗಳ ಇತಿಹಾಸವನ್ನು ಗುರುತಿಸಲು ತೊಂದರೆಯಾಗಿದೆ. ಹಿಂದಿನ ಗುರುಗಳು ಈ ಪರಂಪರೆಯನ್ನು ಮುರಿದು ಶ್ರೀ ಗಂಗಾಧರ ಸ್ವಾಮಿಗಳೆಂಬ ಅಭಿದಾನದೊಂದಿಗೆ ಪಟ್ಟಾಧಿಕಾರಕ್ಕೆ ಬಂದು ಮಠವನ್ನು ಅಭಿವೃದ್ಧಿಪಡಿಸಿದರು. ಗುರುಗಳು ಅಧಿಕಾರಕ್ಕೆ ಬರುವ ಮುನ್ನ ಮಠವು ಅವ್ಯವಸ್ಥೆಯ ಆಗರವಾಗಿತ್ತು. ಕಾನೂನಿನ ಹೋರಾಟದಿಂದ ನ್ಯಾಯ ಬದ್ಧಗೊಳಿಸಿ, ಮಠವನ್ನು ಸುಧಾರಿಸಿದರು. ಗುರುಗಳು ತಮ್ಮ ಅವಿರತ ಶ್ರಮದಿಂದ ಪುರಾತನ ಮಠವನ್ನು ಉಳಿಸಿ, ಬೆಳೆಸುವಲ್ಲಿ ಯಶಸ್ವಿಯಾದರು. ಇವರು ೧೯೯೬ ರಲ್ಲಿ ರಾಯಚೂರು ಜಿಲ್ಲೆಯ ಮಸ್ಕಿಯಲ್ಲಿ ಲಿಂಗೈಕ್ಯರಾದರು.

ಶ್ರೀ ಗಂಗಾಧರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ೧೯೯೬ ರಲ್ಲಿ ಶ್ರೀ ಗುರುಪಾದೇಶ್ವರ ಸ್ವಾಮಿಗಳು ಉತ್ತರಾಧಿಕಾರಿಗಳಾಗಿ ನೇಮಕಗೊಂಡರು. ಗುರುಗಳು ಆಳಂದ ತಾಲ್ಲೂಕಿನ ಮಾದನ ಹಿಪ್ಪರಗಿಯ ಹಿರೇಮಠದ ಶ್ರೀ ಬೊಮ್ಮಯ್ಯ ಮತ್ತು ಶ್ರೀಮತಿ ರುದ್ರಾಂಬೆಯವರ ಪುತ್ರರಾಗಿ ೧೯೬೭ ರಲ್ಲಿ ಜನಿಸಿದರು. ಇವರು ಶಿವಯೋಗ ಮಂದಿರ, ಹುಬ್ಬಳ್ಳಿ ಹಾಗೂ ಧಾರವಾಡದಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ, ಸಂಸ್ಕೃತ ಮತ್ತು ಅರ್ಥಶಾಸ್ತ್ರದಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ಮಹಾರಾಷ್ಟ್ರದ ಲಾಥೂರು ಹಿರೇಮಠದಲ್ಲಿ ೧೯೯೨ ರಿಂದ ೧೯೯೩ ರವರೆಗೆ ನೆಲೆಸಿ, ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿದ್ದರು. ಇವರ ವಿದ್ವತ್ತನ್ನು ಮೆಚ್ಚಿದ ಹುಬ್ಬಳ್ಳಿ ಮೂರು ಸಾವಿರ ಮಠದ ಜಗದ್ಗುರುಗಳು ಶ್ರೀ ಫಕೀರೇಶ್ವರ ಮಠಕ್ಕೆ ಉತ್ತರಾಧಿಕಾರಿಯನ್ನಾಗಿ ನೇಮಿಸಿದರು. ಶ್ರೀ ಗುರುಪಾದೇಶ್ವರ ಸ್ವಾಮಿಗಳು ಶಹಾಪುರದಲ್ಲಿ ೧೯೯೬ ರಿಂದ ೧೯೯೮ ರ ವರೆಗೆ ನೆಲೆಸಿ, ಮಠದ ಅಭಿವೃದ್ಧಿಯನ್ನು ಮಾಡಿ ೧೯೯೮ ರ ಫೆಬ್ರವರಿ ಎರಡರಂದು ಮಠದ ಅಧಿಕಾರವನ್ನು ವಹಿಸಿಕೊಂಡರು.

ಧಾರ್ಮಿಕ ವಿಶೇಷತೆ: ಯುಗಾದಿಯ ಸಂದರ್ಭದಲ್ಲಿ, ಶಹಾಪುರದ ಪಶ್ಚಿಮ ಭಾಗದಲ್ಲಿರುವ ಶ್ರೀ ಶೀಲವಂತೇಶ್ವರ ಬೆಟ್ಟದಲ್ಲಿ ಗಿರಿ ಸುತ್ತುವ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಹಿಂದೆ ಧರ್ಮ ಗುರುಗಳ ಜೊತೆಗೆ ಸಾವಿರಾರು ಜನ ಭಕ್ತರು ಕಾಲ್ನಡಿಗೆಯಲ್ಲಿ ಸುತ್ತುತ್ತಿದ್ದರು. ನಂತರ ಕುದುರೆಗಳ ಮೇಲೆ ಸುತ್ತುವ ಪರಿಪಾಠ ಬೆಳೆಯಿತು. ತದ ನಂತರ ಗುರುಗಳನ್ನು ಪಲ್ಲಕ್ಕಿಯ ಮೇಲೆ ಕೂರಿಸಿ, ಉತ್ಸವದ ಮುಖಾಂತರ ಬೆಟ್ಟವನ್ನು ಸುತ್ತುತ್ತಿದ್ದರು. ಕಾಲ ಬದಲಾದಂತೆ ಪರಿವರ್ತನೆಗೊಂಡ ಇಂದಿನ ಸಮಾಜದಲ್ಲಿ ಈಗಿನ ಗುರುಗಳು ನೂರಾರು ಭಕ್ತರ ಜೊತೆ ವಾಹನದಲ್ಲಿ ಗಿರಿ ಸುತ್ತುವ ಕಾರ್ಯವನ್ನು ನೆರವೇರಿಸುತ್ತಾರೆ. ವರ್ಷದ ಆರಂಭದ ದಿನ ಈ ಸಾಂಪ್ರದಾಯಿಕ ಕಾರ್ಯ ನಡೆಯುತ್ತಿದೆ. ಗಿರಿ ಸುತ್ತುವುದರಿಂದ ಶ್ರೀಶೈಲಕ್ಕೆ ಹೋಗಿ ಬಂದಷ್ಟೇ ಪುಣ್ಯ ಲಭಿಸುತ್ತದೆ ಎಂಬ ನಂಬಿಕೆ ಜನಪದರಲ್ಲಿ ಬೇರೂರಿದೆ.

ಮಠದ ಆವರಣದಲ್ಲಿ ಸ್ಥಾಪನೆಯಾಗಿರುವ ಪರಂಪರೆಯ ಏಳು ಜನ ಗುರುಗಳ ಗದ್ದುಗೆಗಳಿಗೆ ಹಾಗೂ ಬೆಟ್ಟದ ಮೇಲೆ ಸ್ಥಾಪನೆಯಾಗಿರುವ ಕರ್ತೃ ಗುರುಗಳ ಗದ್ದುಗೆಗೆ ನಿತ್ಯ ಎರಡು ವೇಳೆಪೂಜೆ ಹಾಗೂ ಅಮಾವಾಸ್ಯೆಯಲ್ಲಿ ರುದ್ರಾಭಿಷೇಕವನ್ನು ನಡೆಸಲಾಗುತ್ತಿದೆ. ನವೆಂಬರ್ ಒಂದರಿಂದ ಹದಿನೇಳರವರೆಗೆ ವೈಚಾರಿಕ ಕಾರ್ಯಕ್ರಮಗಳನ್ನು ರೂಪಿಸಿ, ವಿದ್ವಾಂಸರು ಹಾಗೂ ವಿವಿಧ ಮಠಾಧೀಶರನ್ನು ಕರೆಸಿ ಉಪನ್ಯಾಸ, ಉಪದೇಶವನ್ನು ನಡೆಸಲಾಗುತ್ತಿದೆ. ಹಿರಿಯ ಗುರುಗಳಾದ ಶ್ರೀ ಗಂಗಾಧರೇಶ್ವರ ಸ್ವಾಮಿಗಳ ಪುಣ್ಯಾರಾಧನೆಯನ್ನು ಅದ್ಧೂರಿಯಾಗಿ ಆಚರಿಸಲಾಗುತ್ತಿದೆ.

ಸಾಮಾಜಿಕ ಸೇವೆ: ಗುರುಗಳು ಧರ್ಮಜಾಗೃತಿಗಾಗಿ ಶಹಾಪುರ ತಾಲ್ಲೂಕಿನ ಹಳ್ಳಿಗಳಲ್ಲಿ ಪಾದಯಾತ್ರೆಯ ಮೂಲಕ ಸಂಚರಿಸಿ,

ಧರ್ಮೋಪದೇಶವನ್ನು ನೀಡಿ ಜನ ಜಾಗೃತಿಯನ್ನುಂಟು ಮಾಡುತ್ತಿದ್ದಾರೆ. ಅಲ್ಲದೆ ಮಠದಲ್ಲಿ ಉಚಿತ ನೇತ್ರ ಚಿಕಿತ್ಸಾ ಶಿಬಿರ ಹಾಗೂ ಉಚಿತ ಆರೋಗ್ಯ ತಪಾಸಣಾಶಿಬಿರವನ್ನು ನಡೆಸಲಾಗುತ್ತಿದೆ. ಅಲ್ಲದೆ ಗಣ್ಯರಿಗೆ ಸತ್ಕಾರ ಕಾರ್ಯಕ್ರಮವನ್ನು ಮಠದಲ್ಲಿ ನಡೆಸಲಾಗುತ್ತಿದೆ. ಮಠದಲ್ಲಿ ಸಂಸ್ಕೃತ, ವೇದ ಹಾಗೂ ಜ್ಯೋತಿಷ್ಯ ಪಾಠಶಾಲೆಯನ್ನು ಪ್ರಾರಂಭಿಸಲಾಗಿದೆ. ಮಠದಲ್ಲಿ ಕಲಿಯುವ ಮಕ್ಕಳಿಗೆ ಆಶ್ರಯ ಕಲ್ಪಿಸಲಾಗಿದೆ. ಶ್ರೀ ಗುರುಪಾದೇಶ್ವರ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ಕ್ರಿಯಾತ್ಮಕ ಹಾಗೂ ವೈಚಾರಿಕ ಚಿಂತನೆಗಳಿಂದ ಸಮಾಜವನ್ನು ಧರ್ಮದ ತಳಹದಿಯ ಮೇಲೆ ಬೆಳೆಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಗುರುಪಾದೇಶ್ವರ ಸ್ವಾಮಿಗಳು, ಶ್ರೀ ಫಕೀರೇಶ್ವರಮಠ, ಶಹಾಪುರ, ಗುಲ್ಬರ್ಗ ಜಿಲ್ಲೆ.

ಗುಮ್ಮಳಾಪುರ ಹಿರೇಮಠ: ಶಹಾಪುರದ ಪಶ್ಚಿಮ ಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಗುಮ್ಮಳಾಪುರ ಹಿರೇಮಠವು ಶ್ರೀ ರಂಭಾಪುರಿ ಪೀಠದ ಶಾಖಾ ಮಠವಾಗಿ, ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿದೆ. ಕ್ರಿ.ಶ.೧೭೮೩ ರಲ್ಲಿ ಗುಮ್ಮಳಾಪುರದಿಂದ ಆಗಮಿಸಿದ ಗುರುಗಳಿಂದ ಈ ಮಠವು ಸ್ಥಾಪನೆಯಾಗಿದೆ ಎಂದು ಮಠದಲ್ಲಿರುವ ವಂಶಾವಳಿಯಿಂದ ತಿಳಿದು ಬರುತ್ತಿದೆ.

ಮಠ ಸ್ಥಾಪನೆ: ಗುಮ್ಮಳಾಪುರದಿಂದ ಕಾರಣಾಂತರದಿಂದ ವಲಸೆ ಹೊರಟ ಹಿರೇಮಠದ ವಂಶಸ್ಥರು ಲೋಕಸಂಚಾರ ಮಾಡುತ್ತಾ, ಶಹಾಪುರಕ್ಕೆ ಬಂದು ನೆಲೆಸುತ್ತಾರೆ. ಇಲ್ಲಿ ನೆಲೆಗೊಂಡ ಗುಮ್ಮಳಾಪುರದ ಮನೆತನದವರು ಮಠವನ್ನು ಸ್ಥಾಪಿಸಿದರೆಂದು ಹೇಳಲಾಗು ತ್ತಿದೆ. ಅಂದು ಸ್ಥಾಪನೆಗೊಂಡ ಮಠವು ಈತನಕ ಉಳಿದು ತನ್ನ ಪರಂಪರೆಯನ್ನು ಬೆಳೆಸಿಕೊಂಡು ಬಂದಿದೆ. ಗುಮ್ಮಳಾಪುರದಿಂದ ಬಂದು ಇಲ್ಲಿ ಮಠವನ್ನು ಸ್ಥಾಪಿಸಿದ್ದರಿಂದ ಈ ಮಠಕ್ಕೆ 'ಶ್ರೀ ಗುಮ್ಮಳಾಪುರ ಹಿರೇಮಠ' ಎಂಬ ಹೆಸರು ಬಂದಿದೆ.

ಪರಂಪರೆ:

೧. ಷ.ಬ್ರ.ಶ್ರೀ ಗುಮ್ಮಳೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಶಾಂತವೀರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಸಿದ್ಧಬಸವ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಗುರುಶಾಂತ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಸಿದ್ಧಯ್ಯ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ಗುರುಶಾಂತ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ಸಿದ್ಧೇಶ್ವರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃ ಗುರುಗಳ ನಂತರ ಪರಂಪರೆಯ ಆರನೆಯ ಗುರುಗಳ ತನಕ ಅಧಿಕಾರ ನಡೆಸಿದ ಗುರುಗಳ ಬಗ್ಗೆ ಹೆಚ್ಚು ಮಾಹಿತಿ ಲಭ್ಯವಿಲ್ಲ. ಏಳನೆಯ ಗುರುಗಳಾದ ಶ್ರೀ ಸಿದ್ಧಯ್ಯ ಶಿವಾಚಾರ್ಯ ಸ್ವಾಮಿಗಳು ಪವಾಡ ಪುರುಷರಾಗಿ, ಬ್ರಹ್ಮ ರಾಕ್ಷಸನನ್ನು ತಮ್ಮ ಸೇವಕನನ್ನಾಗಿ ಮಾಡಿಕೊಂಡು ಭಕ್ತರನ್ನು ಉದ್ಧರಿಸಿದ್ದರಂತೆ. ಇಂತಹ ಮಹಾ ಪವಾಡ ಪುರುಷರು ಮಠವನ್ನು ಅಭಿವೃದ್ಧಿ ಪಡಿಸಿದ್ದಾರೆ. ಇವರ ನಂತರ ಶ್ರೀ ಗುರುಶಾಂತ ಶಿವಾಚಾರ್ಯಸ್ವಾಮಿಗಳು ಅಧಿಕಾರಕ್ಕೆ ಬಂದಿದ್ದು, ಇವರ ಬಗ್ಗೆಯೂ ಹೆಚ್ಚು ಮಾಹಿತಿ ಲಭ್ಯವಿಲ್ಲ. ನಂತರ ಮಠಾಧೀಶರಿಲ್ಲದೆ ಮಠವು ಖಾಲಿ ಉಳಿದಿದ್ದ ಸಂದರ್ಭದಲ್ಲಿ ಶ್ರೀ ಜಂಬಯ್ಯ ಸ್ವಾಮಿಗಳು ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಾ, ಮಠದ ಅಸ್ತಿತ್ವ ಉಳಿಯುಂತೆ ಮಾಡಿದರು. ಈಗ ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಮಠದ ಆಡಳಿತವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಶ್ರೀ ಸಿದ್ಧಯ್ಯಸ್ವಾಮಿ ಮತ್ತು ಶ್ರೀಮತಿ ಕಮಲಮ್ಮನವರ ಪುತ್ರರಾಗಿ ೧೯೭೫ ರಲ್ಲಿ ಜನಿಸಿದರು. ಇವರು ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ ೧೯೮೮ ರ ಏಪ್ರಿಲ್ ಒಂದರಂದು ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಗುರುಗಳು ಪಟ್ಟಾಧಿಕಾರವನ್ನು ವಹಿಸಿಕೊಂಡ ನಂತರ ಶಿವಯೋಗ ಮಂದಿರ, ರಂಭಾಪುರಿ ಪೀಠ ಹಾಗೂ

ಬೆಂಗಳೂರಿನಲ್ಲಿ ಸಂಸ್ಕೃತ, ಸಾಹಿತ್ಯ ಹಾಗೂ ವೇದಾಧ್ಯಯನವನ್ನು ಮಾಡಿ ೧೯೯೬ ರಲ್ಲಿ ಮಠಕ್ಕೆ ಆಗಮಿಸಿದರು. ಗುರುಗಳು ತಮ್ಮ ಪಾಂಡಿತ್ಯದಿಂದ ಮಠವನ್ನು ಅಭಿವೃದ್ಧಿಪಡಿಸುತ್ತಾ, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಪುರಾತನ ಪರಂಪರೆಯ ಈ ಮಠದಲ್ಲಿ ಕರ್ತೃ ಗದ್ದುಗೆಯು ಸೇರಿದಂತೆ ಒಟ್ಟು ನಾಲ್ಕು ಗದ್ದುಗೆಗಳು ಸ್ಥಾಪನೆಯಾಗಿವೆ. ಶಾಖಾ ಮಠಗಳಾದ ಹೊತಪೇಟೆ, ಮುರಗೋಳು ಹಾಗೂ ಅಗರಹುಂಡಿಗೆಯಲ್ಲಿ ಕೆಲವು ಗದ್ದುಗೆಗಳು ಸ್ಥಾಪನೆಯಾಗಿವೆ. ಈ ಗದ್ದುಗೆಗಳಿಗೆ ನಿತ್ಯಪೂಜೆ, ಶ್ರಾವಣ ಮಾಸದಲ್ಲಿ ಪುರಾಣ ಹಾಗೂ ಅನ್ನ ದಾಸೋಹವನ್ನು ನಡೆಸಲಾಗುತ್ತಿದೆ. ನವೆಂಬರ್ ಇಪ್ಪತ್ತೊಂದರಂದು ಕರ್ತೃ ಗುರುಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ.

ಮಠದ ಒಳ-ಹೊರಭಾಗದಲ್ಲಿ ಒಂದೊಂದು ಬಾವಿ ಕಲ್ಲಿನಿಂದ ನಿರ್ಮಿಸಲ್ಪಟ್ಟಿವೆ. ಪುರಾತನ ಕಾಲದಲ್ಲಿ ರಾಜಾಶ್ರಯದಿಂದ ದೊರೆತಿದ್ದ ಹದಿನಾರು ಎಕರೆ ಜಮೀನಿದ್ದು, ಇದನ್ನು ಅಭಿವೃದ್ಧಿಪಡಿಸಿ ಮಠಕ್ಕೆ ಆದಾಯದ ಮೂಲವನ್ನಾಗಿ ಮಾಡಿಕೊಳ್ಳಲಾಗಿದೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಗುಮ್ಮಳಾಪುರ ಹಿರೇಮಠ, ಶಹಾಪುರ, ಗುಲ್ಬರ್ಗ ಜಿಲ್ಲೆ.

ಹಿರೇಮಠ: ಶಹಾಪುರದ ಕುಂಬಾರ ಪೇಟೆಯಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ಉಜ್ಜಯಿನಿಪೀಠದ ಶಾಖಾ ಮಠವಾಗಿ, ಪುತ್ರ ವರ್ಗದ ಪರಂಪರೆಯಲ್ಲಿ ಬೆಳೆದಿದೆ. ೧೧೨೬ ರಲ್ಲಿ ಸ್ಥಾಪನೆಯಾಗಿರುವ ಈ ಮಠವನ್ನು ಶ್ರೀ ಮುಪ್ಪಿನಯ್ಯ ಶಿವಾಚಾರ್ಯ ಸ್ವಾಮಿಗಳು ಸ್ಥಾಪಿಸಿದ್ದರೆಂದು ಹೇಳಲಾಗುತ್ತಿದೆ. ಪುರಾತನ ಕಾಲದ ಈ ಮಠದ ಪರಂಪರೆಯು ಈತನಕ ಬೆಳೆದು ವೀರಶೈವ ಧರ್ಮದ ಬೆಳವಣಿಗೆಗೆ ಸಹಾಯಕವಾಗಿದೆ.

ಪರಂಪರೆ:

೧. ಷ.ಬ್ರ.ಶ್ರೀ ಮುಪ್ಪಿನಯ್ಯ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಬಸವಲಿಂಗಯ್ಯ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಮಹಾಂತಯ್ಯ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಶಿವಕುಮಾರ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಸೂಗೂರೇಶ್ವರ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಚೆನ್ನವೀರ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ವಿರೂಪಾಕ್ಷ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ಸೂಗೂರೇಶ್ವರ ದೇವರು

ಮಠದ ಪರಂಪರೆಯಲ್ಲಿ ಕರ್ತೃ ಗುರುಗಳಿಂದ ಪರಂಪರೆಯ ಏಳನೆಯ ಗುರುಗಳ ತನಕ ಅಧಿಕಾರ ನಡೆಸಿದ ಗುರುಗಳ ಬಗ್ಗೆ ಮಾಹಿತಿ ಲಭ್ಯವಿಲ್ಲ. ಎಂಟನೆಯ ಗುರುಗಳಾದ ಶ್ರೀ ವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳು ೧೯೨೦ ರಲ್ಲಿ ಲಿಂಗೈಕ್ಯರಾದ ಮೇಲೆ ಮಠವು ಖಾಲಿ ಉಳಿದಿದೆ. ನಂತರ ಮಠದ ವಂಶಸ್ಥರು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಾ, ಮಠದ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದ್ದಾರೆ. ೧೯೮೮ ರಲ್ಲಿ ಇಟಗಿಯ ಶ್ರೀ ಅನ್ನದಾನೆ ಸ್ವಾಮಿಗಳ ನೇತೃತ್ವದಲ್ಲಿ ಶ್ರೀ ಸೂಗೂರೇ ಶ್ವರ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಲಾಗಿದೆ.

ಶ್ರೀ ಸೂಗೂರೇಶ್ವರ ದೇವರು ಶ್ರೀ ಹಂಪಯ್ಯ ಮತ್ತು ಶ್ರೀಮತಿ ಮುನಿಯಮ್ಮನವರ ಪುತ್ರರಾಗಿ, ೧೯೭೮ ರ ಫೆಬ್ರುವರಿ ಎಂಟರಂದು ಜನಿಸಿದರು. ಇವರು ಹೊನ್ನಾಳಿ ಹಾಗೂ ಮೈಸೂರಿನಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ, ಕನ್ನಡದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ಮಠಕ್ಕೆ ಆಗಮಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಪುರಾತನ ಪರಂಪರೆಯ ಈ ಮಠದಲ್ಲಿ ನಾಲ್ಕು ಜನ ಗುರುಗಳ ಗದ್ದುಗೆಗಳು ಸ್ಥಾಪನೆಯಾಗಿವೆ.

ಉಳಿದ ಗದ್ದುಗೆಗಳು ಜೀರ್ಣಗೊಂಡ ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿವೆ. ಈಗ ಲಭ್ಯವಿರುವ ನಾಲ್ಕು ಗದ್ದುಗೆಗಳಿಗೆ ನಿತ್ಯ ಪೂಜೆ, ಶಿವರಾತ್ರಿಯ ಅಮಾವಾಸ್ಯೆಯಾದ ಒಂಬತ್ತನೆಯ ದಿನಕ್ಕೆ ಶ್ರೀ ವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಅನ್ನ ದಾಸೋಹವನ್ನು ನಡೆಸಲಾಗುತ್ತಿದೆ. ಮಠದ ಆಸ್ತಿಯಾಗಿ ಮೂವತ್ತೆಂಟು ಎಕರೆ ಜಮೀನಿದ್ದು, ಇದನ್ನು ಮಠದ ಆದಾಯದ ಮೂಲವನ್ನಾಗಿ ಮಾಡಿಕೊಳ್ಳಲಾಗಿದೆ. ಶ್ರೀ ಸೂಗೂರೇಶ್ವರ ದೇವರು ವೀರಶೈವ ಧರ್ಮದ ಬಗ್ಗೆ ಸಂಶೋಧನಾತ್ಮಕ ವಿಚಾರಗಳನ್ನು ಮಂಡಿಸುತ್ತಾ ಧರ್ಮದ ಆಚಾರ ವಿಚಾರಗಳನ್ನು ವೈಜ್ಞಾನಿಕವಾಗಿ ಜಾರಿಗೆ ತರುವಲ್ಲಿ ಶ್ರಮಿಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸೂಗೂರೇಶ್ವರ ದೇವರು, ಶ್ರೀ ಹಿರೇಮಠ, ಕುಂಬಾರಪೇಟೆ, ಶಹಾಪುರ, ಗುಲ್ಬರ್ಗ ಜಿಲ್ಲೆ.

ಚರಬಸವೇಶ್ವರಮಠ (ಪಂಚಕಂತೆಮಠ): ಶಹಾಪುರದ ಪಶ್ಚಿಮದ ಹೊರಭಾಗದಲ್ಲಿ ಶ್ರೀ ಚರಬಸವೇಶ್ವರ ಮಠವು ಸ್ಥಾಪನೆಯಾಗಿ, ದಾಸೋಹ ಕ್ರಿಯೆಯಿಂದ ಹೆಚ್ಚು ಪ್ರಸಿದ್ಧಿ ಪಡೆದಿದೆ. ಶ್ರೀ ಚರಬಸವೇಶ್ವರ ಸ್ವಾಮಿಗಳು ಇಲ್ಲಿ ಲಿಂಗೈಕ್ಯರಾಗಿ, ಇವರ ಸಮಾಧಿಯ ಮೇಲೆ ಮಠವು ಸ್ಥಾಪನೆಗೊಂಡು ಹೆಚ್ಚು ಪ್ರಖ್ಯಾತಗೊಂಡಿದೆ.

ಮಠ ಸ್ಥಾಪನೆ: ಇಲ್ಲಿಗೆ ಸಮೀಪದ ಅನುವಾರದ ಹಿರೇಮಠದ ಶ್ರೀ ಶೀಲವಂತಯ್ಯ ಮತ್ತು ಶ್ರೀಮತಿ ಅವ್ವಮಾಂಬೆಯವರ ಪುತ್ರರಾಗಿ ೧೮೨೨ ರಲ್ಲಿ ಜನಿಸಿದ, ಶ್ರೀ ಬಸವಯ್ಯ ತಾತನವರು ಬಾಲ್ಯದಲ್ಲೇ ಆಧ್ಯಾತ್ಮವನ್ನು ಬೆಳೆಸಿಕೊಂಡು ಲೋಕಸಂಚಾರಕ್ಕೆ ಹೊರಟು ಅನೇಕ ಧರ್ಮ ಕ್ಷೇತ್ರಗಳನ್ನು ಸಂದರ್ಶಿಸಿ ಶಹಾಪುರಕ್ಕೆ ಆಗಮಿಸಿದ್ದರು. ಗುರುಗಳು ಇಲ್ಲಿಗೆ ಆಗಮಿಸಿದ ಮೇಲೆ ಭಕ್ತರು ಇಲ್ಲಿನ ಪಂಚಕಂತೆ ಹಿರೇಮಠವನ್ನು ಗುರುಗಳಿಗೆ ಒಪ್ಪಿಸಿ, ಶಹಾಪುರದಲ್ಲಿ ಧಾರ್ಮಿಕ ಚಟುವಟಿಕೆಗಳು ನಡೆಯುಂತೆ ಮಾಡಿದರು. ಶ್ರೀ ಬಸವಯ್ಯ ತಾತನವರು ಇಲ್ಲಿ ನೆಲೆಗೊಂಡು ಅನೇಕ ಸತ್ಕಾರ್ಯಗಳನ್ನು ಮಾಡುವ ಮೂಲಕ ಹೆಚ್ಚು ಪ್ರಸಿದ್ಧಿಗೊಂಡರು. ದಿನ ಕಳೆದಂತೆ ಇವರ ಕೃಪಾಶೀರ್ವಾದದಿಂದ ಭಕ್ತರು ಉದ್ಧಾರಗೊಂಡರು. ವಾಕ್‌ಸಿದ್ಧಿ ಪುರುಷರಾಗಿದ್ದ ಶ್ರೀ ಬಸವಯ್ಯ ತಾತನವರು ಧರ್ಮ ಜಾಗೃತಿಗಾಗಿ ಲೋಕಸಂಚಾರವನ್ನು ಕೈಗೊಳ್ಳುತ್ತಿದ್ದರು. ಇವರು ಲೋಕ ಸಂಚಾರದಿಂದ ಲೋಕಾನುಭವವನ್ನು ಪಡೆದು ಸಾಧನೆಯ ಸಿದ್ಧಿ ಪುರುಷರಾಗಿ, 'ಶ್ರೀ ಚರ ಬಸವೇಶ್ವರರು ' ಎಂದು ಹೆಸರು ಪಡೆದರು. ಗುರುಗಳು ಮಹತ್ತರ ಸಾಧನೆಯನ್ನು ಸಾಧಿಸಿ, ಶತಾಯುಷಿಗಳಾಗಿ ೧೯೨೨ ರಲ್ಲಿ ಲಿಂಗೈಕ್ಯರಾದರು.

ಪರಂಪರೆ: ರಂಭಾಪುರಿ ಪೀಠದ ಶಾಖಾ ಮಠವಾದ ಪಂಚಕಂತೆ ಮಠವು ಶ್ರೀ ಚರಬಸವೇಶ್ವರರಿಂದ ಅಭಿವೃದ್ಧಿಗೊಂಡಿತು. ಶ್ರೀ ಚರಬಸವೇಶ್ವರ ಸ್ವಾಮಿಗಳ ನಂತರ ಶ್ರೀಮಹಾಲಿಂಗ ಸ್ವಾಮಿಗಳು ಈ ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿ ಮಠವನ್ನು ಅಭಿವೃದ್ಧಿ ಪಡಿಸಿದರು. ಇವರ ತರುವಾಯ ಶ್ರೀ ಮಹಾಲಿಂಗಯ್ಯನವರ ಪುತ್ರರಾದ ಶ್ರೀ ಬಸವಯ್ಯ ಸ್ವಾಮಿಗಳು ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಾ ಮಠವನ್ನು ಅಭಿವೃದ್ಧಿ ಪಡಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದಲ್ಲಿ ಶ್ರೀ ಚರಬಸವೇಶ್ವರ ಸ್ವಾಮಿಗಳ ಗದ್ದುಗೆಗೆ ನಿತ್ಯ ರುದ್ರಾಭಿಷೇಕ ಪೂಜೆ ಹಾಗೂ ಅಮಾವಾಸ್ಯೆಯಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಈದಿನ ಮಠಕ್ಕೆ ಆಗಮಿಸುವ ಅಪೇಕ್ಷಿತ ಭಕ್ತರಿಗೆ ಯಂತ್ರ (ಚೀಟಿ) ಬರೆದು ಕೊಡಲಾಗುತ್ತಿದೆ. ಚೈತ್ರ ಶುದ್ಧ ಪಂಚಮಿಯಲ್ಲಿ ಶ್ರೀ ಚರಬಸವೇಶ್ವರರ ಜಾತ್ರೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ದನಗಳ ಜಾತ್ರೆಯನ್ನು ನಡೆಸಲಾಗುತ್ತಿದೆ. ಶ್ರಾವಣ ಮಾಸದಲ್ಲಿ ಪುರಾಣ, ಪ್ರವಚನವನ್ನು ನಡೆಸಲಾಗುತ್ತಿದೆ. ಶ್ರೀ ಚರಬಸವೇಶ್ವರರ ಪುರಾಣ ಹಾಗೂ ನಾಟಕಗಳನ್ನು ಬರೆಸಿ ಪ್ರಕಟಿಸಲಾಗಿದೆ. ನಿತ್ಯ ನೂರಾರು ಜನರಿಗೆ ನಿರಂತರವಾಗಿ ಅನ್ನ ದಾಸೋಹವನ್ನು ನಡೆಸಲಾಗುತ್ತಿದೆ.

ಶಾಖಾ ಮಠಗಳು: ಜೇವರಗಿ ತಾಲ್ಲೂಕಿನ ಕೆಲ್ಲೂರು ಹಾಗೂ ಮಾರಡಗಿಯಲ್ಲಿ ಶಾಖಾ ಮಠಗಳನ್ನು ಸ್ಥಾಪಿಸಿ, ಇಲ್ಲಿ ಶ್ರೀ ಚರಬಸವೇಶ್ವರರ ತೋರು ಗದ್ದುಗೆಯನ್ನು ಸ್ಥಾಪಿಸಿ ಪೂಜೆಗೆ ವ್ಯವಸ್ಥೆಯನ್ನು ಮಾಡಲಾಗಿದೆ. ಅಲ್ಲದೆ ಪ್ರತಿ ವರ್ಷ ರಥೋತ್ಸವವನ್ನು ನಡೆಸಲಾಗುತ್ತಿದೆ. ಈ ಎರಡೂ ಮಠಗಳಲ್ಲಿ ನಿರಂತರ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ವಿಳಾಸ: ಶ್ರೀ ಬಸವಯ್ಯ ಸ್ವಾಮಿಗಳು, ಶ್ರೀ ಚರಬಸವೇಶ್ವರಮಠ, ಶಹಾಪುರ, ಗುಲ್ಬರ್ಗ ಜಿಲ್ಲೆ.

ಸಗರ

ಶಹಾಪುರ ತಾಲ್ಲೂಕಿನ ಸಗರ ಗ್ರಾಮವು ಇತಿಹಾಸ ಪ್ರಸಿದ್ಧ ಸ್ಥಳ. ಈ ಸ್ಥಳದಲ್ಲಿ ವೀರಶೈವ ಧರ್ಮ ಪುರಾತನ ಕಾಲದಿಂದ ಬೆಳೆದು ಬಂದಿದೆ. ಇದಕ್ಕೆ ಸಾಕ್ಷಿ ಎಂಬಂತೆ ಈ ಗ್ರಾಮದಲ್ಲಿ ಹದಿನೆಂಟು ಮಠಗಳು ಸ್ಥಾಪನೆಯಾಗಿವೆ ಎಂಬ ಮಾಹಿತಿ ದೊರೆತಿದೆ. ಈ ಮಾಹಿತಿಯ ಆಧಾರದ ಮೇಲೆ ಶೋಧನೆಗೆ ಹೋದ ಸಂದರ್ಭದಲ್ಲಿ ಶ್ರೀ ಒಕ್ಕಲಗೆರೆಮಠ, ಶ್ರೀ ನಾಗಠಾಣ ಹಿರೇಮಠ, ಶ್ರೀ ಕಡಗುಡ್ನಮಠ, ಶ್ರೀ ತುಪ್ಪದಮಠ, ಶ್ರೀ ಗೌಡರಮಠ, ಶರಣೆ ಅಕ್ಕಮಹಾದೇವಿ ಆನಂದಾಶ್ರಮ ಹಾಗೂ ಶ್ರೀ ಕಡ್ಲಪ್ಪನ ಮಠ ಎಂಬ ಏಳು ಮಠಗಳು ದೊರೆತಿವೆ. ಈ ಮಠಗಳಲ್ಲಿ ಈಗ ಶ್ರೀ ನಾಗಠಾಣ ಹಿರೇಮಠ, ಶ್ರೀ ಹಿರೇಮಠ, ಶ್ರೀ ಒಕ್ಕಲಗೆರೆಮಠ ಹಾಗೂ ಶರಣೆಅಕ್ಕಮಹಾದೇವಿ ಆನಂದಾಶ್ರಮವು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ನಾಗಠಾಣ ಹಿರೇಮಠ: ಸಗರ ಗ್ರಾಮದ ಮಧ್ಯ ಭಾಗದಲ್ಲಿ ಶ್ರೀ ನಾಗಠಾಣ ಹಿರೇಮಠವು ಸ್ಥಾಪನೆಯಾಗಿದೆ. ಶ್ರೀ ರಂಭಾಪುರಿ ಪೀಠದ ಶಾಖಾ ಮಠವಾದ ಇದು ಪುರಾತನ ಕಾಲದಲ್ಲಿ ಸ್ಥಾಪನೆಯಾಗಿ, ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ. ಶ್ರೀ ರಂಭಾಪುರಿ ಪೀಠದ ಜಗದ್ಗುರುಗಳಾದ ಶ್ರೀ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಲೋಕಸಂಚಾರದಲ್ಲಿದ್ದ ಸಂದರ್ಭದಲ್ಲಿ ಜಗದ್ಗುರುಗಳ ಜತೆಯಲ್ಲಿ ಶ್ರೀ ಉದಯೇಶ್ವರ ಮತ್ತು ಶ್ರೀ ಮಹಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು ಇದ್ದು ಧರ್ಮ ಪ್ರಸಾರವನ್ನು ನಡೆಸಿಕೊಂಡು ಬರುತ್ತಿದ್ದರು. ಗುರುಗಳು ಸಗರ ಗ್ರಾಮಕ್ಕೆ ಬಂದು ಕೆಲವು ದಿನ ನೆಲೆಸಿ, ಶ್ರೀ ಉದಯೇಶ್ವರ ಶಿವಾಚಾರ್ಯ ಸ್ವಾಮಿಗಳನ್ನು ಇಲ್ಲಿ ನೆಲೆಗೊಳಿಸಿ ಮುಂದೆ ಹೋಗುತ್ತಾರೆ. ಶ್ರೀ ಉದಯೇಶ್ವರ ಸ್ವಾಮಿಗಳು ಇಲ್ಲಿ ನೆಲೆಗೊಂಡ ಮೇಲೆ ವಾಸ್ತವ್ಯಕ್ಕೆಂದು ಒಂದು ಜೋಪಡಿಯನ್ನು ಕಟ್ಟಿಕೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದರು. ಗುರುಗಳು ತಪೋನಿಷ್ಠರಾಗಿ, ಅನೇಕ ಪವಾಡಗಳನ್ನು ಸೃಷ್ಟಿ ಮಾಡಿದ್ದರು. ಬಿಜಾಪುರದ ಆದಿಲ್‌ಶಾಹಿಯ ಅಧೀನಕ್ಕೆ ಒಳಪಟ್ಟ ಸಗರ ನಾಡಿಗೆ ಆದಿಲ್‌ಶಾಹಿ ಭೇಟಿ ಕೊಟ್ಟ ಸಂದರ್ಭದಲ್ಲಿ, ಗುರುಗಳ ಪವಾಡವನ್ನು ಕೇಳಿ ತಿಳಿದುಕೊಂಡು ಗುರುಗಳಿಗೆ ಭೂಮಿಯನ್ನು ಉಂಬಳಿಯಾಗಿ ನೀಡಿದ್ದನೆಂದು ಹೇಳಲಾಗುತ್ತಿದೆ.

ಪರಂಪರೆ:

೧. ಷ.ಬ್ರ.ಶ್ರೀ ಉದಯೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಸೋಮಶೇಖರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಚನ್ನಮಲ್ಲ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಪವಾಡಪ್ಪ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಸೋಮಶೇಖರ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಚನ್ನಮಲ್ಲ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ಶಾಂತವೀರ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ಗುರುಪಾದ ಶಿವಾಚಾರ್ಯಸ್ವಾಮಿಗಳು
೧೦. ಷ.ಬ್ರ.ಶ್ರೀ ಚನ್ನಮಲ್ಲ ಶಿವಾಚಾರ್ಯಸ್ವಾಮಿಗಳು
೧೧. ಷ.ಬ್ರ.ಶ್ರೀ ಸೋಮಶೇಖರ ಶಿವಾಚಾರ್ಯಸ್ವಾಮಿಗಳು
೧೨. ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃ ಗುರುಗಳ ನಂತರ ಅಧಿಕಾರಕ್ಕೆ ಬಂದ ಪರಂಪರೆಯ ಗುರುಗಳ ಬಗ್ಗೆ ಮಾಹಿತಿಯನ್ನು ದಾಖಲಿಸದಿರುವ ಕಾರಣ ಮಾಹಿತಿ ಲಭ್ಯವಿಲ್ಲ. ಪರಂಪರೆಯ ಹನ್ನೊಂದನೆಯ ಗುರುಗಳಾದ ಶ್ರೀ ಸೋಮ ಶೇಖರ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ ೧೯೭೪ ರಲ್ಲಿ ಲಿಂಗೈಕ್ಯರಾಗಿದ್ದಾರೆ. ನಂತರ ಶ್ರೀ ಸೋಮಶೇಖ ರಯ್ಯ ಮತ್ತು ಶ್ರೀಮತಿ ಅಯ್ಯಮ್ಮನವರ ಪುತ್ರರಾಗಿ ೧೯೫೧ ರ ಮಾರ್ಚ್ ಇಪ್ಪತ್ತೈದರಂದು ಜನಿಸಿದ, ಶ್ರೀ ಮಹಾಂತ

ಸ್ವಾಮಿಗಳು ೧೯೭೫ ರಲ್ಲಿ ಉತ್ತರಾಧಿಕಾರಿಯಾಗಿ ನೇಮಕಗೊಂಡರು. ಇವರು ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಮಠಕ್ಕೆ ಆಗಮಿಸಿದ ಮೇಲೆ ಸೃಷ್ಟಿಯಾದ ಕೆಲವು ವಿವಾದಗಳನ್ನು ಕಾನೂನುಬದ್ಧ ಹೋರಾಟದಿಂದ ಸರಿಪಡಿಸಿಕೊಂಡು, ೧೯೮೭ ರ ಮೇ ಹನ್ನೆರಡರಂದು ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗುರುಗಳ ಗದ್ದುಗೆಗಳಿಗೆ ನಿತ್ಯ ಪೂಜಾ ವ್ಯವಸ್ಥೆ, ವರ್ಷಕ್ಕೊಮ್ಮೆ ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಮಠದ ಆಸ್ತಿಯಾಗಿ ಹದಿನಾರು ಎಕರೆ ಜಮೀನಿದ್ದು ಇದನ್ನು ಅಭಿವೃದ್ಧಿಪಡಿಸಿ, ಮಠಕ್ಕೆ ಆದಾಯದ ಮೂಲವನ್ನಾಗಿ ಮಾಡಿಕೊಳ್ಳಲಾಗಿದೆ. ಇತ್ತೀಚೆಗೆ ರೇಣುಕ ಮಂದಿರ ಹಾಗೂ ಕಲ್ಯಾಣ ಮಂಟಪವನ್ನು ನಿರ್ಮಿಸಲಾಗಿದೆ. ಮಠದಲ್ಲಿ ಹೊರಗಿನಿಂದ ಬರುವ ಭಕ್ತರಿಗೆ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.

ವಿಳಾಸ:ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು, ಶ್ರೀ ನಾಗಠಾಣ ಹಿರೇಮಠ, ಸಗರ, ಶಹಾಪುರ ತಾಲ್ಲೂಕು, ಗುಲ್ಬರ್ಗಜಿಲ್ಲೆ.

ಒಕ್ಕಲಗೆರೆ ಮಠ: ಸಗರ ಗ್ರಾಮದ ಪ್ರವೇಶ ದ್ವಾರದಲ್ಲಿ ಸ್ಥಾಪನೆಯಾಗಿರುವ ಶ್ರೀ ಒಕ್ಕಲಗೆರೆಮಠವು, ಉಜ್ಜಯಿನಿ ಪೀಠದ ಶಾಖಾಮಠವಾಗಿ ಬೆಳೆದಿದೆ. ಈ ಮಠವು ಪುರಾತನ ಕಾಲದಲ್ಲಿ ಸ್ಥಾಪನೆಯಾಗಿ, ಈತನಕ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಾ ವೀರಶೈವಧರ್ಮವನ್ನು ಪ್ರಚಾರಕ್ಕೆತಂದು ಸಮಾಜವನ್ನು ಬೆಳೆಸಿದೆ. ಪ್ರಸ್ತುತ ಹತ್ತಳ್ಳಿ ಮಠದ ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳು ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಾ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳು, ಶ್ರೀ ಒಕ್ಕಲಗೆರೆಮಠ, ಸಗರ, ಶಹಾಪುರ ತಾ, ಗುಲ್ಬರ್ಗ ಜಿಲ್ಲೆ.

ಹಿರೇಮಠ: ಸಗರ ಗ್ರಾಮದ ಮಧ್ಯ ಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು, ಉಜ್ಜಯಿನಿ ಪೀಠದ ಶಾಖಾ ಮಠವಾಗಿ ಬೆಳೆದಿದೆ. ಪುರಾತನ ಕಾಲದ ಈ ಮಠವು ಧಾರ್ಮಿಕ ಸಂಸ್ಕಾರವನ್ನು ಬೆಳೆಸಿದೆ. ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು ಈ ಮಠದ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಇವರು ಪವಾಡ ಪುರುಷರಾಗಿ, ಶಿವಪೂಜಾ ನಿಷ್ಠರಾಗಿ ಹೆಚ್ಚು ಹೆಸರು ಮಾಡಿದ್ದರು. ಇವರ ಕಾಲದಲ್ಲಿ ಮಠವು ಅಭಿವೃದ್ಧಿಗೊಂಡಿತು.

ಪರಂಪರೆ:

೧. ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಗುಮ್ಮಳೇಶ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಅಯ್ಯಪ್ಪ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಶಂಕರಯ್ಯ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಪರಂಪರೆಯ ಗುರುಗಳ ಬಗ್ಗೆ ಹೆಚ್ಚು ಮಾಹಿತಿ ಲಭ್ಯವಿಲ್ಲ. ಈಗ ಮಠದ ಆಡಳಿತವನ್ನು ನಡೆಸುತ್ತಿರುವ ಶ್ರೀ ಶಂಕರಯ್ಯ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ಮಠದ ಆವರಣದಲ್ಲಿ ಎರಡು ಗದ್ದುಗೆಗಳು ಸ್ಥಾಪನೆಯಾಗಿದ್ದು, ಈ ಗದ್ದುಗೆಗಳಿಗೆ ನಿತ್ಯ ಪೂಜೆಯನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಶಂಕರಯ್ಯ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಸಗರ, ಶಹಾಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಶರಣೆ ಅಕ್ಕಮಹಾದೇವಿ ಆನಂದಾಶ್ರಮ: ಸಗರ ಗ್ರಾಮದ ಮಧ್ಯ ಭಾಗದಲ್ಲಿ ಶರಣೆ ಅಕ್ಕಮಹಾದೇವಿ ಆನಂದಾಶ್ರಮವು ೧೯೮೯ ರಲ್ಲಿ ಸ್ಥಾಪನೆಯಾಗಿದೆ. ಶರಣಮ್ಮ ತಾಯಿಯು ಬದುಕಿನಲ್ಲಿ ವೈರಾಗ್ಯವನ್ನು ತಾಳಿ ಶರಣೆ ಅಕ್ಕಮಹಾದೇವಿಯವರ ತತ್ತ್ವಾದರ್ಶಗಳಿಗೆ ಶರಣಾಗಿ, ಇವರ ತತ್ತ್ವಗಳನ್ನು ಪ್ರಚಾರ ಪಡಿಸುವ ಉದ್ದೇಶದಿಂದ ಸಂಸಾರವನ್ನು ತೊರೆದು, ಶಿವದೀಕ್ಷೆಯನ್ನು ಪಡೆದರು. ಶ್ರೀಶೈಲ, ಅಂಬಾಭವಾನಿ ಕ್ಷೇತ್ರ ಹಾಗೂ ಅನೇಕ ಸುಕ್ಷೇತ್ರಗಳಲ್ಲಿ ಸಂಚರಿಸಿ, ಈ ಗ್ರಾಮಕ್ಕೆ ಬಂದು ಮಠವನ್ನು ಸ್ಥಾಪಿಸಿದ್ದಾರೆ. ಬೃಹದಾಕಾರದ ಕಲ್ಲಿನಕಟ್ಟಡವನ್ನು ನಿರ್ಮಿಸಿ, ಧರ್ಮಪ್ರಸಾರ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ವಿಳಾಸ: ಶರಣಮ್ಮ ತಾಯಿ, ಶರಣೆ ಅಕ್ಕಮಹಾದೇವಿ ಆನಂದಾಶ್ರಮ, ಸಗರ, ಶಹಾಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಸುಗೂರು

ಶಹಪುರ ತಾಲ್ಲೂಕಿನ ಸುಗೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಸ್ಥಾಪನೆಯಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ಹಿರೇಮಠ: ಸುಗೂರು ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ಉಜ್ಜಯನಿ ಪೀಠದ ಶಾಖಾಮಠವಾಗಿ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿದೆ.

ಮಠ ಸ್ಥಾಪನೆ: ಕೊಡೆಕಲ್ಲು ಬಸವೇಶ್ವರರು ಲೋಕಸಂಚಾರದ ಸಂದರ್ಭದಲ್ಲಿ ಇಲ್ಲಿ ನೆಲೆಸಿ, ಧಾರ್ಮಿಕ ಕಾರ್ಯಗಳನ್ನು ನಡೆಸಿದ ಸ್ಥಳವೇ ಮಠವಾಗಿ ಪರಿವರ್ತನೆಯಾಗಿದೆ. ಅಂದು ಸ್ಥಾಪನೆಯಾಗೊಂಡ ಮಠದಲ್ಲಿ ಮೊದಲ ಗುರುಗಳಾಗಿ ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ಅಧಿಕಾರ ವಹಿಸಿಕೊಂಡು ಮಠದ ಪರಂಪರೆಯನ್ನು ಬೆಳೆಸಿದ್ದಾರೆ. ಇವರ ನಂತರ ಅನೇಕ ಗುರುಗಳು ಅಧಿಕಾರ ನಡೆಸಿದ ಬಗ್ಗೆ ವಿವರಣೆ ದೊರೆಯುತ್ತದೆ. ಆದರೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಪ್ರಸ್ತುತ ಮಠದ ಆವರಣದಲ್ಲಿ ಐದು ಗದ್ದುಗೆಗಳು ರಚನೆಯಾಗಿವೆ.

ಪ್ರಸ್ತುತ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಮಠದ ಆಡಳಿತವನ್ನು ನೋಡಿಕೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಸುಗೂರು, ಶಹಾಪುರ ತಾ, ಗುಲ್ಬರ್ಗ ಜಿಲ್ಲೆ.

❑

ಸುರಪುರ ತಾಲ್ಲೂಕು

ಗುಲ್ಬರ್ಗ ಜಿಲ್ಲೆಯ ಸುರಪುರ ತಾಲ್ಲೂಕು ಕೃಷಿ ಆಧಾರಿತ ಪ್ರದೇಶವಾಗಿದೆ. ಐತಿಹಾಸಿಕವಾಗಿ ಪ್ರಸಿದ್ಧಿ ಪಡೆದ ಈ ತಾಲ್ಲೂಕಿನಲ್ಲಿ ವೀರಶೈವ ಧರ್ಮ ಪ್ರಬಲವಾಗಿ ಬೆಳೆದಿದೆ. ಹಿಂದೆ ಸುಮಾರು ನೂರಎಂಟು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಆದರೆ ಇಂದು ತಾಲ್ಲೂಕಿನಾದ್ಯಂತ ಕೇವಲ ಒಂಬತ್ತು ಮಠಗಳು ಅಸ್ತಿತ್ವದಲ್ಲಿವೆ.

ಕರಡಗಲ್ಲು

ಸುರಪುರ ತಾಲ್ಲೂಕಿನ ಕರಡಗಲ್ಲು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತಾ್ನಲ್ಕು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಕೋರಿಸಿದ್ಧೇಶ್ವರ ಮಠವು ಸ್ಥಾಪನೆಯಾಗಿ ಪ್ರಸಿದ್ಧಿ ಪಡೆದಿದೆ.

ಕೋರಿಸಿದ್ಧೇಶ್ವರಮಠ: ಕರಡಗಲ್ಲು ಗ್ರಾಮದಲ್ಲಿ ರಂಭಾಪುರಿ ಪೀಠದ ಶಾಖಾ ಮಠವಾದ ಶ್ರೀ ಹಿರೇಮಠವು ಪುರಾತನ ಕಾಲದಿಂದಲೂ ಅಸ್ತಿತ್ವದಲ್ಲಿದೆ. ಈ ಮಠದ ವಂಶಸ್ಥರಾದ ಶ್ರೀ ವೀರತಯ್ಯಸ್ವಾಮಿ ಮತ್ತು ಶ್ರೀಮತಿ ಗುಂಡಮ್ಮನವರ ಪುತ್ರರಾಗಿ, ೧೯೬೫ ರಲ್ಲಿ ಜನಿಸಿದ ಶ್ರೀ ರುದ್ರಮುನಿ ಸ್ವಾಮಿಗಳು ಆಧ್ಯಾತ್ಮವನ್ನು ಮೈಗೂಡಿಸಿಕೊಂಡು ಬಾಲ್ಯದಲ್ಲೇ ಅನುಷ್ಠಾನವನ್ನು ಮಾಡಿ, ಪಾರಮಾರ್ಥದ ಸಾಧನೆಯನ್ನು ಸಿದ್ಧಿಸಿಕೊಂಡರು. ಗುರುಗಳು ಪ್ರೌಢಾವಸ್ಥೆಗೆ ಬಂದ ಮೇಲೆ ಚಿತ್ತಾಪುರ ತಾಲ್ಲೂಕಿನ ನಾಲವಾರದ ಶ್ರೀ ಕೋರಿಸಿದ್ಧೇಶ್ವರ ಮಠದ ಶ್ರೀ ತೋಟೇಂದ್ರ ಶಿವಾಚಾರ್ಯ ಸ್ವಾಮಿಗಳ ಕೃಪಾಶೀರ್ವಾದಕ್ಕೆ ಒಳಗಾಗಿ, ಅವರ ಮಾರ್ಗದರ್ಶನ ದಲ್ಲಿ ಬೆಳೆದು ಹೆಚ್ಚಿನ ಆಧ್ಯಾತ್ಮ ಸಿದ್ಧಿಯನ್ನು ಗಳಿಸಿಕೊಂಡರು. ಶ್ರೀ ತೋಟೇಂದ್ರ ಗುರುಗಳ ಆಶೀರ್ವಾದ ಪಡೆದು, ಈ ಗ್ರಾಮದಲ್ಲಿ ೧೯೯೩ ರ ಆಗಸ್ಟ್ ಏಳರಂದು 'ಶ್ರೀ ಕೋರಿ ಸಿದ್ಧೇಶ್ವರ ಮಠ'ವನ್ನು ಸ್ಥಾಪಿಸಿದ್ದಾರೆ.

ನೂತನ ಮಠಕ್ಕೆ ಈ ಗ್ರಾಮದ ಹನುಮಂತರಾಯ ಗೌಡರ ಮಕ್ಕಳಾದ ಸೋಮಶೇಖರಪ್ಪಗೌಡ ಮತ್ತು ರಾಯಪ್ಪಗೌಡ ಢವಳಾರ ಪುತ್ರರಾದ ಶ್ರೀ ಸಿದ್ಧನಗೌಡ ಇವರು ದಾನವಾಗಿ ನೀಡಿದ ಭೂಮಿಯಲ್ಲಿ, ಹದಿನೈದು ಲಕ್ಷರೂ ಯೋಜನೆಯಲ್ಲಿ ಕಟ್ಟಡವನ್ನು ನಿರ್ಮಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸತೊಡಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠಕ್ಕೆ ಆಸ್ತಿ ಇಲ್ಲದಿದ್ದರೂ ಭಕ್ತರೇ ದೊಡ್ಡ ಆಸ್ತಿಯಾಗಿದ್ದಾರೆ. ಗುರುಗಳು ಪ್ರತಿ ಶ್ರಾವಣ ಮಾಸದ ನೂಲುಹುಣ್ಣಿಮೆಯ ದಿನ ಸಹಸ್ರಾರು ಭಕ್ತರ ಜೊತೆ ನಾಲವಾರಕ್ಕೆ ಪಾದಯಾತ್ರೆಯ ಮೂಲಕ ಹೋಗಿ, ಧರ್ಮ ಜಾಗೃತಿಯನ್ನುಂಟು ಮಾಡುತ್ತಿದ್ದಾರೆ. ನವರಾತ್ರಿಯಲ್ಲಿ ದೇವಿಪಾರಾಯಣವನ್ನು ನಡೆಸುತ್ತಿದ್ದಾರೆ. ಮಹಾಶಿವರಾತ್ರಿಯಂದು ವಿಶೇಷ ಕಾರ್ಯಕ್ರಮಗಳ ಜೊತೆಗೆ ಶಿವದೀಕ್ಷಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದಾರೆ. ಪ್ರತಿ ಅಮಾವಾಸ್ಯೆಯಲ್ಲಿ ಮಠದಲ್ಲಿ ವಿಶೇಷ ಪೂಜೆಯನ್ನು ಏರ್ಪಡಿಸಲಾಗುವುದಲ್ಲದೆ, ಅಂದು ಮಠಕ್ಕೆ ಬರುವ ಭಕ್ತರಿಗೆ ಯಂತ್ರ(ತಾಯತ)ವನ್ನು ನೀಡುವ ಮೂಲಕ ಭಕ್ತರ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸುತ್ತಿದ್ದಾರೆ. ಮಠದಲ್ಲಿ ನಿತ್ಯ ದಾಸೋಹದ ವ್ಯವಸ್ಥೆಯನ್ನು ಮಾಡಿದ್ದಾರೆ.

ವಿಳಾಸ: ಶ್ರೀ ರುದ್ರಮುನಿ ಸ್ವಾಮಿಗಳು, ಶ್ರೀ ಕೋರಿಸಿದ್ಧೇಶ್ವರ ಮಠ, ಕರಡಗಲ್ಲು, ಸುರಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಕುಂಬಾರಪೇಟೆ

ಸುರಪುರ ತಾಲ್ಲೂಕಿನ ಕುಂಬಾರಪೇಟೆಯು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಒಂದು ಕಿ.ಮೀ ದೂರದಲ್ಲಿದೆ. ಇಲ್ಲಿ ದಾಸೋಹಮಠವು ಸ್ಥಾಪನೆಯಾಗಿದೆ.

ದಾಸೋಹಮಠ: ಕುಂಬಾರಪೇಟೆ ಗ್ರಾಮದಲ್ಲಿ ಶ್ರೀ ರಂಭಾಪುರಿ ಪೀಠದ ಶಾಖಾಮಠವಾದ'ದಾಸೋಹಮಠ'ವು ಸ್ಥಾಪನೆಯಾಗಿ, ಕಂತೆ ಭಿಕ್ಷದ ಮೂಲಕ ಪ್ರಸಾದವನ್ನು ಸಂಗ್ರಹಿಸಿ ಅಸಹಾಯಕರಿಗೆ ನೀಡುತ್ತಿದೆ. ಈ ಮಠದ ಸ್ಥಾಪನೆಯ ಕಾಲಮಾನದ ಬಗ್ಗೆ ನಿಖರವಾದ ಮಾಹಿತಿಗಳು ಲಭ್ಯವಿಲ್ಲ. ಪ್ರಸ್ತುತ ಶ್ರೀ ಶರಣ ಬಸವಯ್ಯ ಸ್ವಾಮಿಗಳು ಮಠದ ಆಡಳಿತ ಹಾಗೂ

ದಾಸೋಹ ಕ್ರಿಯೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಶರಣಯ್ಯ ಸ್ವಾಮಿಗಳು, ಶ್ರೀ ದಾಸೋಹಮಠ, ಕುಂಬಾರಪೇಟೆ, ಸುರಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಕೆಂಬಾವಿ

ಸುರಪುರ ತಾಲ್ಲೂಕಿನ ಕೆಂಬಾವಿ ಮಠವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತಾಲ್ಕು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ರಂಭಾಪುರಿ ಪೀಠದ ಶಾಖಾ ಮಠಗಳಾದ ಶ್ರೀ ಹಿರೇಮಠ ಮತ್ತು ಶ್ರೀ ಚಿಕ್ಕಮಠಗಳು ಸ್ಥಾಪನೆಯಾಗಿವೆ. ಈ ಮಠಗಳಲ್ಲಿ ಶ್ರೀ ಚಿಕ್ಕಮಠದಲ್ಲಿ ಬಹಳ ವರ್ಷಗಳಿಂದ ಉತ್ತರಾಧಿಕಾರಿಗಳು ಯಾರೂ ಇಲ್ಲದೆ ಮಠವು ಖಾಲಿ ಉಳಿದಿದೆ.

ಹಿರೇಮಠ: ಕೆಂಬಾವಿಯ ಮಧ್ಯ ಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ಶ್ರೀ ರಂಭಾಪುರಿ ಪೀಠದ ಶಾಖಾ ಮಠವಾಗಿ, ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿದೆ. ಪುರಾತನ ಕಾಲದ ಇತಿಹಾಸವುಳ್ಳ ಈ ಮಠವನ್ನು ಶ್ರೀ ಕಂತೇಶ್ವರ ಶಿವಾಚಾರ್ಯ ಸ್ವಾಮಿಗಳು ಸ್ಥಾಪಿಸಿದರೆಂದು ಹೇಳಲಾಗುತ್ತಿದೆ. ನಿಜಾಮರ ಆಡಳಿತದ ಕಾಲದಲ್ಲಿ ಇಲ್ಲಿಗೆ ಸಮೀಪದ ಕಮರಿ ಮಠದಲ್ಲಿದ್ದ ಶ್ರೀ ಕಂತೇಶ್ವರ ಶಿವಾಚಾರ್ಯ ಸ್ವಾಮಿಗಳನ್ನು ಪರೀಕ್ಷೆ ಮಾಡಲೆಂದು, ನಿಜಾಮನ ಪರಿವಾರದವರೊಬ್ಬರು ಕಾದ ಕಬ್ಬಿಣದ ಸರಪಳಿಯನ್ನು ಗುರುಗಳ ಕೊರಳಿಗೆ ಹಾಕುತ್ತಾರೆ. ಕಾದ ಕಬ್ಬಿಣದ ಸರಪಳಿಯು ಹೂವಿನ ಹಾರವಾಗಿ ಪರಿವರ್ತನೆಯಾಗುತ್ತದೆ. ಈ ಪವಾಡದಿಂದ ಗುರುಗಳಿಗೆ ಶರಣಾದ ನಿಜಾಮನ ಪರಿವಾರವು ಗುರುಗಳಿಗೆ ಗೌರವ ಸಲ್ಲಿಸಿ, ಅರವತ್ನಾಲ್ಕು ಹಳ್ಳಿಗಳನ್ನು ಉಂಬಳಿಯನ್ನಾಗಿ ನೀಡಿ ಇಲ್ಲಿನ ಪೂರ್ಣ ಪ್ರಮಾಣದ ಕಂದಾಯವನ್ನು ಮಠಕ್ಕೆ ಸಲ್ಲಿಸುವಂತೆ ಶಾಸನ ಬರೆಸಿದರೆಂದು ಹೇಳಲಾಗುತ್ತಿದೆ. ಗುರುಗಳು ತಪೋನುಷ್ಠಾನರಾಗಿ, ಈ ಪ್ರಾಂತ್ಯದಲ್ಲಿ ಧರ್ಮವು ಬೆಳೆಯುವಂತೆ ಮಾಡಿದರು. ಗುರುಗಳು ಲೋಕ ಸಂಚಾರ ಮಾಡುತ್ತಾ ಕೆಂಬಾವಿಗೆ ಆಗಮಿಸಿ, ಇಲ್ಲೇ ನೆಲೆಗೊಂಡು ಮಠವನ್ನು ಸ್ಥಾಪಿಸಿದ್ದಾರೆ. ಅಂದಿನಿಂದ ಈತನಕ ತನ್ನ ಪರಂಪರೆಯನ್ನು ಬೆಳೆಸಿಕೊಂಡು, ವೀರಶೈವ ಧರ್ಮದ ಕೇಂದ್ರ ಬಿಂದುವಾಗಿ ಬೆಳೆದು ಬಂದಿದೆ.

ಪರಂಪರೆ:

೧. ಷ.ಬ್ರ.ಶ್ರೀ ಕಂತೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ದೊಡ್ಡ ಬಸವಯ್ಯ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಪರ್ವತ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃ ಗುರುಗಳ ನಂತರ ಅಧಿಕಾರ ವಹಿಸಿಕೊಂಡ ಗುರುಗಳ ಬಗ್ಗೆ ಸ್ಪಷ್ಟವಾದ ವಿವರಗಳು ಲಭ್ಯವಿಲ್ಲ. ಪರಂಪರೆಯ ಐದನೆಯ ಗುರುಗಳಾದ ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು ಶಿವಪೂಜಾ ನಿಷ್ಠರಾಗಿ, ಮಠವನ್ನು ಅಭಿವೃದ್ಧಿಪಡಿಸಿ ೧೯೬೨ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಗುರುಗಳು ಲಿಂಗೈಕ್ಯರಾದ ಮೇಲೆ ಇಪ್ಪತ್ತೊಂಬತ್ತು ವರ್ಷಗಳ ಕಾಲ ಉತ್ತರಾಧಿಕಾರಿಗಳು ಇಲ್ಲದೆ ಮಠವು ಖಾಲಿ ಉಳಿಯಿತು.

ಶ್ರೀ ಶಿವೋಂಕಾರಯ್ಯ ಮತ್ತು ಶ್ರೀಮತಿ ಸೂಗಮ್ಮನವರ ಪುತ್ರರಾಗಿ, ೧೯೭೩ ರ ಜನವರಿ ಒಂದರಂದು ಜನಿಸಿದ ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ಈಗ ಮಠದ ಆಡಳಿತವನ್ನು ನಡೆಸುತ್ತಿದ್ದಾರೆ. ಗುರುಗಳು ಶ್ರೀ ರಂಭಾಪುರಿ ಪೀಠ ಹಾಗೂ ಸಿದ್ಧಗಂಗೆಯಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ, ೧೯೯೧ ರಲ್ಲಿ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗುರುಗಳ ಆರು ಗದ್ದುಗೆಗಳು ಮಠದ ಆವರಣದಲ್ಲಿ ಸ್ಥಾಪನೆಗೊಂಡಿದ್ದು, ಈ ಗದ್ದುಗೆಗಳಿಗೆ ನಿತ್ಯ ಪೂಜೆಯನ್ನು ನಡೆಸಲಾಗುತ್ತಿದೆ. ಅಲ್ಲದೆ ಮಠದ ಮಧ್ಯ ಭಾಗದಲ್ಲಿ ಸ್ಥಾಪನೆಯಾಗಿರುವ ಕರ್ತೃ

ಗುರುಗಳ ಗದ್ದುಗೆಯ ಸಮೀಪ ಕಲ್ಲಿನ ವೃಷಭ ಮೂರ್ತಿಯು ಬೆಳೆಯುತ್ತಿದೆ, ಎಂಬ ನಂಬಿಕೆಯನ್ನು ಇಟ್ಟುಕೊಂಡು ನಿತ್ಯಪೂಜೆ ಮಾಡಲಾಗುತ್ತಿದೆ. ಅಮಾವಾಸ್ಯೆಯಲ್ಲಿ ರುದ್ರಾಭಿಷೇಕ, ಶ್ರಾವಣಮಾಸದಲ್ಲಿ ಪುರಾಣ, ಫೆಬ್ರವರಿಯಲ್ಲಿ ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಹಿಂದೆ ನಿಜಾಮನ ಕಾಲದಲ್ಲಿ ದೊರೆತಿದ್ದ ಉಂಬಳಿ ಜಮೀನಿನಲ್ಲಿ ಹತ್ತು ಎಕರೆ ಜಮೀನು ಮಾತ್ರ ಉಳಿದಿದ್ದು, ಇದನ್ನೇ ಮಠದ ಆದಾಯದ ಮೂಲವನ್ನಾಗಿ ಮಾಡಿಕೊಂಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಕೆಂಬಾವಿ, ಸುರಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ದೇವಾಪುರ

ಸುರಪುರ ತಾಲ್ಲೂಕಿನ ದೇವಾಪುರ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹನ್ನೊಂದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ.

ಹಿರೇಮಠ: ದೇವಾಪುರ ಗ್ರಾಮದಲ್ಲಿ ಶ್ರೀ ರಂಭಾಪುರಿ ಪೀಠದ ಶಾಖಾ ಮಠವಾದ 'ಶ್ರೀ ಹಿರೇಮಠ'ವು ಸ್ಥಾಪನೆಯಾಗಿದೆ. ಪುರಾತನ ಕಾಲದಲ್ಲಿ ಸ್ಥಾಪನೆಯಾದ ಶ್ರೀ ಹಿರೇಮಠವು ಸುಮಾರು ನಲವತ್ತೊಂದು ಶಾಖಾ ಮಠಗಳನ್ನು ಸ್ಥಾಪಿಸಿ, ವೀರಶೈವ ಧರ್ಮ ಬೆಳೆಯುವಂತೆ ಮಾಡಿದೆ. ಇತ್ತೀಚೆಗೆ ಮಠದಲ್ಲಿ ಉತ್ತರಾಧಿಕಾರಿಗಳು ಯಾರೂ ಇಲ್ಲದೆ ಜೀರ್ಣಾವಸ್ಥೆಗೆ ಬಂದಿದೆ. ಈಗ ಮಠದ ಧಾರ್ಮಿಕ ಆಚರಣೆಗಳನ್ನು ಮಠದ ವಂಶಸ್ಥರಾದ ಶ್ರೀ ಸಿದ್ಧಯ್ಯ ಸ್ವಾಮಿಗಳು ನಡೆಸಿಕೊಂಡು ಬರುತ್ತಿದ್ದಾರೆ. ಅಲ್ಲದೆ ತಮ್ಮ ಮಗನನ್ನು ಉತ್ತರಾಧಿಕಾರಿಯನ್ನಾಗಿ ನೇಮಿಸಿ, ವಿದ್ಯಾಭ್ಯಾಸಕ್ಕೆ ಕಳುಹಿಸಿದ್ದಾರೆ.

ವಿಳಾಸ : ಶ್ರೀ ಸಿದ್ಧಯ್ಯ ಸ್ವಾಮಿಗಳು, ಶ್ರೀ ಹಿರೇಮಠ, ದೇವಾಪುರ, ಸುರಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ನಗನೂರು

ಸುರಪುರ ತಾಲ್ಲೂಕಿನ ನಗನೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಮೂವತ್ತು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಶರಣ ಸ್ಥಲದ ಶ್ರೀ ಶರಣ ಬಸವೇಶ್ವರ ಮಠ ಮತ್ತು ಗುರುಸ್ಥಲದ ಶ್ರೀ ಸುಗೂರೇಶ್ವರ ಮಠವು ಸ್ಥಾಪನೆಯಾಗಿದೆ. ಈ ಮಠಗಳು ಪುರಾತನ ಕಾಲದಲ್ಲಿ ಸ್ಥಾಪನೆಯಾಗಿ, ವೀರಶೈವಧರ್ಮ ವ್ಯಾಪಕವಾಗಿ ಬೆಳೆಯಲು ಸಹಾಯಕವಾಗಿವೆ.

ಶರಣ ಬಸವೇಶ್ವರಮಠ: ನಗನೂರು ಗ್ರಾಮದ ಮಧ್ಯ ಭಾಗದಲ್ಲಿ ಸ್ಥಾಪನೆಯಾಗಿರುವ ಶರಣ ಬಸವೇಶ್ವರ ಮಠವು ಶ್ರೀ ಉಜ್ಜಯಿನಿ ಪೀಠದ ಶಾಖಾಮಠವಾಗಿ ಬೆಳೆದಿದೆ. ಶ್ರೀ ಶರಣ ಬಸವೇಶ್ವರರ ಆಶೀರ್ವಾದದಿಂದ ಅರಳುಗುಂಡಿಗೆಯಲ್ಲಿ ಜನಿಸಿದ, ಶ್ರೀ ಬಲವಂತ ಶರಣರು ಬಾಲ್ಯದಲ್ಲೇ ಆಧ್ಯಾತ್ಮವನ್ನು ಮೈಗೂಡಿಸಿಕೊಂಡು, ಲೋಕಸಂಚಾರ ಮಾಡಿ ನಗನೂರು ಗ್ರಾಮಕ್ಕೆ ಬಂದು ಇಲ್ಲೇ ನೆಲೆಗೊಂಡ ಗುರುಗಳು ಮಠವನ್ನು ಸ್ಥಾಪಿಸಿ, ವೀರಶೈವ ಧರ್ಮದ ಆಚರಣೆಗಳನ್ನು ಅನುಷ್ಠಾನಕ್ಕೆ ತಂದು ಧರ್ಮದ ತಳಹದಿಯ ಮೇಲೆ ಸಮಾಜವನ್ನು ಉದ್ಧರಿಸಿದರು.

ಪರಂಪರೆ:

೧. ಶ್ರೀ ಬಲವಂತ ಶರಣರು
೨. ಶ್ರೀ ನಾಗಪ್ಪ ಶರಣರು
೩. ಶ್ರೀ ಅಮರಪ್ಪ ಶರಣರು
೪. ಶ್ರೀ ಶರಣಪ್ಪ ಶರಣರು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಪುತ್ರ ವರ್ಗದ ಸಂಪ್ರದಾಯದಲ್ಲಿ ಬೆಳೆದ ಈ ಮಠದ ಗುರುಗಳು ಸಂಸಾರಿಗಳಾಗಿಯೇ, ಧರ್ಮ ಗುರುಗಳಾಗಿ ಮಠದ ಪರಂಪರೆಯನ್ನು ಬೆಳೆಸಿದ್ದಾರೆ. ಈಗಿನ ಮಠಾಧ್ಯಕ್ಷರಾದ ಶ್ರೀ ಶರಣಪ್ಪ ಶರಣರು ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಕರ್ತೃ ಗುರುಗಳ ಗದ್ದುಗೆಗೆ ನಿತ್ಯಪೂಜೆ, ದೀಕ್ಷಾ ಕಾರ್ಯಕ್ರಮ, ಚೈತ್ರ ಶುದ್ಧ ಪಂಚಮಿಯಂದು

ಪುರಾಣವನ್ನು ಪ್ರಾರಂಭಿಸಿ, ಚೈತ್ರ ಬಹುಳ ದಶಮಿಯಂದು ಮುಕ್ತಾಯಗೊಳಿಸಿ ರಥೋತ್ಸವವನ್ನು ನಡೆಸಲಾಗುತ್ತಿದೆ. ಮಠದಲ್ಲಿ ನಿತ್ಯ ದಾಸೋಹದ ವ್ಯವಸ್ಥೆ ಮಾಡಲಾಗಿದೆ. ಶ್ರೀ ಬಲವಂತ ಶರಣರ ಗದ್ದುಗೆಗೆ ಹತ್ತು ಲಕ್ಷ ರೂ ವೆಚ್ಚದಲ್ಲಿ ಮಂಟಪವನ್ನು ನಿರ್ಮಿಸಲಾಗಿದೆ. ಮಠದ ಆವರಣದಲ್ಲಿ ಕಲ್ಯಾಣ ಮಂಟಪವನ್ನು ನಿರ್ಮಿಸಿ, ಸಾರ್ವಜನಿಕರ ಉಪಯೋಗಕ್ಕೆ ನೀಡಲಾಗಿದೆ.

ವಿಳಾಸ: ಶ್ರೀ ಶರಣಪ್ಪ ಶರಣರು, ಶ್ರೀ ಶರಣ ಬಸವೇಶ್ವರಮಠ, ನಗನೂರು, ಸುರಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಸುಗೂರೇಶ್ವರ ಮಠ: ನಗನೂರು ಗ್ರಾಮದ ಮಧ್ಯ ಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಸುಗೂರೇಶ್ವರ ಮಠವು ಶ್ರೀ ಉಜ್ಜಯಿನಿ ಪೀಠದ ಶಾಖಾ ಮಠವಾಗಿದ್ದು, ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಶ್ರೀ ಸುಗೂರೇಶ್ವರರು ಲೋಕಸಂಚಾರ ಕೈಗೊಂಡು ಇಲ್ಲಿ ನೆಲೆಸಿ, ಮಠವನ್ನು ಸ್ಥಾಪಿಸಿದರೆಂದು ಹೇಳಲಾಗುತ್ತದೆ. ಇಂತಹ ಇತಿಹಾಸವಿರುವ ಈ ಮಠದ ಪರಂಪರೆಯ ಬಗ್ಗೆ ಮಾಹಿತಿ ಲಭ್ಯವಿಲ್ಲ. ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು ಈ ಹಿಂದೆ ಅಧಿಕಾರ ನಡೆಸಿ, ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಪ್ರಸ್ತುತ ಶ್ರೀ ಚನ್ನವೀರಯ್ಯ ಸ್ವಾಮಿಗಳು ಮಠದ ಆಡಳಿತ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಈಗ ಶ್ರೀ ಶಿವಕುಮಾರ ದೇವರನ್ನು ಮಠದ ಉತ್ತರಾಧಿಕಾರಿಯನ್ನಾಗಿ ನೇಮಿಸಲಾಗಿದೆ. ಇವರು ಮೈಸೂರಿನ ಸುತ್ತೂರು ಮಠದ ಗುರುಕುಲದಲ್ಲಿ ನೆಲೆಸಿ, ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಪ್ರಸ್ತುತ ಮಠದ ಆವರಣದಲ್ಲಿ ನಾಲ್ಕು ಗದ್ದುಗೆಗಳಿದ್ದು ನಿತ್ಯ ಪೂಜೆ ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಶಿವಕುಮಾರ ದೇವರು, ಶ್ರೀ ಸುಗೂರೇಶ್ವಮಠ, ನಗನೂರು, ಸುರಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ರಂಗಂಪೇಟೆ

ಸುರಪುರ ತಾಲ್ಲೂಕಿನ ರಂಗಂಪೇಟೆ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಒಂದು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಶ್ರೀ ಅಣ್ಣಯ್ಯಸ್ವಾಮಿ ಮಠ ಮತ್ತು ಶ್ರೀ ರುದ್ರಸ್ವಾಮಿ ಮಠಗಳು ಸ್ಥಾಪನೆಯಾಗಿವೆ. ಶ್ರೀ ರುದ್ರಸ್ವಾಮಿ ಮಠವು ಗುಲ್ಬರ್ಗ ನಗರದ ಶ್ರೀ ಚೌದಾಪುರಿ ಮಠದ ಶಾಖಾ ಮಠವಾಗಿದೆ. ಶ್ರೀ ಚೌದಾಪುರಿ ಮಠದ ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ಸಂದರ್ಭಕ್ಕನುಗುಣವಾಗಿ ಇಲ್ಲಿಗೆ ಬಂದು ಧಾರ್ಮಿಕ ಆಚರಣೆಗಳನ್ನು ನಡೆಸುತ್ತಿದ್ದಾರೆ.

ಅಣ್ಣಯ್ಯಸ್ವಾಮಿ ಮಠ: ರಂಗಂಪೇಟೆಯ ಮಧ್ಯ ಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಅಣ್ಣಯ್ಯಸ್ವಾಮಿ ಮಠವು ವಿರಕ್ತ ಸಂಪ್ರದಾಯದ ಮಠವಾಗಿ ಬೆಳೆದಿದೆ. ಶ್ರೀ ಬೋಳಬಸವ ಸ್ವಾಮಿಗಳು ಈ ಮಠದ ಸ್ಥಾಪಕರೆಂದು ಹೇಳಲಾಗುತ್ತಿದೆ. ಈ ಮಠದ ಸ್ಥಾಪನೆಯ ಕಾಲಮಾನದ ಬಗ್ಗೆ ನಿಖರವಾದ ಆಧಾರಗಳು ಲಭ್ಯವಿಲ್ಲದ ಕಾರಣ, ಮಠದ ಪರಂಪರೆಯನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ. ಪುರಾತನ ಕಾಲದ ಈ ಮಠವು ಬಸವಾದಿ ಪ್ರಮಥರ ತತ್ತ್ವಗಳನ್ನು ಉಳಿಸಿ, ಬೆಳೆಸುವ ಕಾರ್ಯದಲ್ಲಿ ತೊಡಗಿ ವೀರಶೈವ ಧರ್ಮವನ್ನು ವ್ಯಾಪಕವಾಗಿ ಬೆಳೆಸಿತ್ತು.

ಪರಂಪರೆ:

೧. ಶ್ರೀ ಮ.ನಿ.ಪ್ರ. ಬೋಳಬಸವಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಷಡಕ್ಷರಿಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಚನ್ನವೀರಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಗುರುರಾಧ್ಯಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಷಡಕ್ಷರಿ ದೇವರು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃ ಗುರುಗಳಿಂದ ಈವರೆಗೆ ಅಧಿಕಾರ ನಡೆಸಿದ ಗುರುಗಳ ಬಗ್ಗೆ ಮಾಹಿತಿ ಲಭ್ಯವಿಲ್ಲ. ಈಗ ಉತ್ತರಾಧಿಕಾರಿಯಾಗಿ ನೇಮಕಗೊಂಡಿರುವ ಶ್ರೀ ಷಡಕ್ಷರಿ ಸ್ವಾಮಿಗಳು, ಶ್ರೀ ಬಸವರಾಜಪ್ಪ ಮತ್ತು ಶ್ರೀಮತಿ ಭ್ರಮರಾಂಬ ಇವರ ಪುತ್ರರಾಗಿ ಜನಿಸಿದ್ದಾರೆ. ಇವರು ಈಗ ಸಿದ್ಧಗಂಗೆಯಲ್ಲಿ ವಿದ್ಯಾಭ್ಯಾಸವನ್ನು ಮಾಡುತ್ತಿದ್ದು, ತಮ್ಮ ಕಲಿಕೆ ಪೂರ್ಣಗೊಂಡ ಮೇಲೆ ಮಠದ ಅಧಿಕಾರವನ್ನು ವಹಿಸಿಕೊಳ್ಳಲಿದ್ದಾರೆ.

ಪುರಾತನ ಕಾಲದ ಮಠದ ಕಟ್ಟಡವು ಮಣ್ಣಿನ ಗಚ್ಚಿನಿಂದ ನಿರ್ಮಿಸಲ್ಪಟ್ಟಿದ್ದು, ಗೋಡೆಯ ಮೇಲೆ ವಿವಿಧ ರೀತಿಯ ಚಿತ್ರಕಲೆಗಳನ್ನು ಬರೆಸಲಾಗಿದೆ. ಇಂದು ಆ ಕಟ್ಟಡವು ಜೀರ್ಣಾವಸ್ಥೆಗೆ ಬಂದಿದೆ. ಶ್ರೀ ಸದಾಶಿವಯ್ಯಸ್ವಾಮಿ ಎಂಬ ಗೃಹಸ್ಥರು ಮಠದ ಉಸ್ತುವಾರಿಯನ್ನು ನೋಡಿಕೊಂಡು, ಭಕ್ತರ ಸಹಕಾರ ಪಡೆದು ಮಠದ ದ್ವಾರಮಂಟಪವನ್ನು ದುರಸ್ಥಿಗೊಳಿಸಿ ನವೀಕರಣ ಗೊಳಿಸಿದ್ದಾರೆ. ಇವರು ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿರುವುದರಿಂದ ಪುರಾತನ ಮಠವು ಅಸ್ತಿತ್ವದಲ್ಲಿ ಉಳಿಯುವಂತಾಗಿದೆ. ಮಠದ ಆವರಣದಲ್ಲಿ ಮೂರು ಗದ್ದುಗೆಗಳಿದ್ದು, ಈ ಗದ್ದುಗೆಗಳಿಗೆ ನಿತ್ಯ ಪೂಜೆಯನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ.ಷಡಕ್ಷರಿ ದೇವರು, ಶ್ರೀ ಅಣ್ಣಯ್ಯಸ್ವಾಮಿ ಮಠ, ರಂಗಂಪೇಟೆ, ಸುರಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ರುಕ್ಮಾಪುರ

ಸುರಪುರ ತಾಲ್ಲೂಕಿನ ರುಕ್ಮಾಪುರ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಎರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ.

ಹಿರೇಮಠ: ರುಕ್ಮಾಪುರ ಗ್ರಾಮದ ಉತ್ತರದ ಹೊರ ಭಾಗದಲ್ಲಿ ರಂಭಾಪುರಿ ಪೀಠದ ಶಾಖಾ ಮಠವಾದ 'ಶ್ರೀ ಹಿರೇಮಠ'ವು ಸ್ಥಾಪನೆಯಾಗಿದೆ. ಪುರಾತನ ಕಾಲದಲ್ಲಿ ಶ್ರೀ ಶಾಂತ ಮೂರ್ತಿ ಶಿವಾಚಾರ್ಯ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿದ್ದಾರೆ. ಅಂದು ಸ್ಥಾಪನೆಗೊಂಡ ಮಠವು ಈತನಕ ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿದೆ.

ಪರಂಪರೆ:

೧. ಷ.ಬ್ರ.ಶ್ರೀ ಶಾಂತಮೂರ್ತಿ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಕಲ್ಲಯ್ಯ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಚಿಕ್ಕಕಲ್ಲಯ್ಯ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಶಾಂತಮೂರ್ತಿ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಕೊಟ್ಟೂರಯ್ಯ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃ ಗುರುಗಳಿಂದ ಪರಂಪರೆಯ ನಾಲ್ಕನೆಯ ಗುರುಗಳ ತನಕ ಅಧಿಕಾರ ನಡೆಸಿದ ಗುರುಗಳ ಬಗ್ಗೆ ಮಾಹಿತಿ ಲಭ್ಯವಿಲ್ಲ. ಈಗಿನ ಶ್ರೀ ಕೊಟ್ಟೂರಯ್ಯ ಸ್ವಾಮಿಗಳು, ಶ್ರೀ ಸಿದ್ಧಲಿಂಗಸ್ವಾಮಿ ಮತ್ತು ಶ್ರೀಮತಿ ಮುರುಘಮ್ಮನವರ ಪುತ್ರರಾಗಿ ಜನಿಸಿ, ಎಂಟು ವರ್ಷದ ಬಾಲ್ಯದಲ್ಲೇ ಮಠದ ಅಧಿಕಾರವನ್ನು ವಹಿಸಿಕೊಂಡರು. ಇವರು ಯಾದಗಿರಿ ಹಾಗೂ ಎಲೇರಿಯಲ್ಲಿ ಸಂಸ್ಕೃತ ವಿದ್ಯಾಭ್ಯಾಸವನ್ನು ಮಾಡಿ, ಮಠಕ್ಕೆ ಆಗಮಿಸಿದರು. ಪುರಾತನ ಕಾಲದ ಮಠವನ್ನು ನವೀಕರಣಗೊಳಿಸಿ, ಮಠದ ಪರಂಪರೆಯ ಗದ್ದುಗೆಗಳನ್ನು ನವೀಕರಿಸಿ ಪೂಜೆಗೆ ವ್ಯವಸ್ಥೆ ಮಾಡಿದ್ದಾರೆ.

ಶ್ರೀ ಕೊಟ್ಟೂರಯ್ಯ ಸ್ವಾಮಿಗಳು ಭಕ್ತರ ಸಹಕಾರದಿಂದ ಮಠದ ಕಟ್ಟಡವನ್ನು ನೂತನವಾಗಿ ನಿರ್ಮಿಸುತ್ತಿದ್ದಾರೆ. ಮಠದಲ್ಲಿ ನಿತ್ಯಪೂಜೆ, ಅಮಾವಾಸ್ಯೆಯಲ್ಲಿ ಭಜನೆ, ಶ್ರಾವಣ ಮಾಸದಲ್ಲಿ ವಿಶೇಷ ಪೂಜೆ, ಹಾಗೂ ಭಜನೆ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಕೊಟ್ಟೂರಯ್ಯ ಶಿವಾಚಾರ್ಯ ಸ್ವಾಮಿಗಳು,ಶ್ರೀ ಹಿರೇಮಠ, ರುಕ್ಮಾಪುರ, ಸುರಪುರ ತಾ, ಗುಲ್ಬರ್ಗ ಜಿಲ್ಲೆ.

ಸುರಪುರ

ಗುಲ್ಬರ್ಗ ಜಿಲ್ಲೆಯ ಸುರಪುರವು ಜಿಲ್ಲಾ ಕೇಂದ್ರದಿಂದ ದಕ್ಷಿಣಕ್ಕೆ ನೂರ ಹತ್ತು ಕಿ.ಮೀ ದೂರದಲ್ಲಿದೆ. ತಾಲ್ಲೂಕಿನ ಕೇಂದ್ರ ಸ್ಥಳವಾಗಿರುವ ಸುರಪುರವು ರಾಜಾ ವೆಂಕಟಪ್ಪ ನಾಯಕನ (೧೬೫೦) ಆಡಳಿತಕ್ಕೆ ಒಳಪಟ್ಟು ಅಭಿವೃದ್ಧಿಯನ್ನು ಕಂಡಿದೆ. ವೆಂಕಟಪ್ಪ ನಾಯಕನ ಕಾಲದಲ್ಲಿ ಮಂತ್ರಿಯಾಗಿದ್ದ ಶ್ರೀ ವೀರಣ್ಣನವರು ವೀರಶೈವರಾಗಿದ್ದು, ಇವರ ಸಹೋದರರಾದ ಶ್ರೀ ಕಡ್ಲಪ್ಪನವರು ಧರ್ಮಾಭಿಮಾನಿಗಳಾಗಿ ವೀರಶೈವ ಧರ್ಮ ಬೆಳೆಯಲು ಹೆಚ್ಚು ನೆರವಾಗಿದ್ದಾರೆ. ಇವರ ಕಾಲದಲ್ಲಿ ನಾಡಿನಾದ್ಯಂತ ನೂರೊಂದು ಮಠಗಳು ಸ್ಥಾಪನೆಯಾಗಿ ವೀರಶೈವ ಧರ್ಮವನ್ನು ಬೆಳೆಸುವಲ್ಲಿ ನೆರವಾಗಿವೆ. ಇವರ ಕಾಲದಲ್ಲಿ

ಸುರಪುರದಲ್ಲಿ ಶ್ರೀ ಕಡ್ಲ ಪ್ಪನವರಮಠ, ಶ್ರೀ ಬಿಲಂಕೊಂಡಿ ಮಠ, ಶ್ರೀ ನೀಲಯ್ಯನವರ ಮಠ ಹಾಗೂ ಶ್ರೀ ಸುರುಗೇಶ್ವರ ಮಠ ಎಂಬ ನಾಲ್ಕು ಮಠಗಳು ಸ್ಥಾಪನೆಗೊಂಡಿವೆ. ಈ ಮಠಗಳಲ್ಲಿ ಶ್ರೀ ಕಡ್ಲಪ್ಪನವರ ಮಠ ಅಸ್ತಿತ್ವದಲ್ಲಿದ್ದು, ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿದೆ. ಉಳಿದವುಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿವೆ.

ಕಡ್ಲಪ್ಪನವರ ಮಠ: ಸುರಪುರ ಪಟ್ಟಣದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಕಡ್ಲ ಪ್ಪನವರ ಮಠವು ಕಳೆದ ನಾನೂರು ವರ್ಷಗಳ ಹಿಂದೆ ಸ್ಥಾಪನೆಯಾಗಿದೆ. ಇದರ ಸ್ಥಾಪಕರು ಶ್ರೀ ಕಡ್ಲಪ್ಪನವರಾಗಿದ್ದು, ಸ್ಥಾಪಕರ ಹೆಸರಿನಿಂದಲೇ ಈ ಮಠವನ್ನು ರೂಢಿಗತವಾಗಿ ಕರೆಯಲಾಗುತ್ತಿದೆ. ಮುರುಘಾ ಸಮಯದ ವಿರಕ್ತ ಮಠದ ಸ್ಥಾಪಕ ಗುರುಗಳಾಗಿ ಶ್ರೀ ಪ್ರಭುಲಿಂಗ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಶ್ರೀ ಕಡ್ಲಪ್ಪನವರ ಕಾಲದಲ್ಲಿ ಸುಸಜ್ಜಿತವಾದ ಹಾಗೂ ವಿಶಾಲ ತಳಹದಿಯ ಮೇಲೆ ನಿರ್ಮಾಣಗೊಂಡ ಮಠವು ಬೃಹದಾಕಾರವಾಗಿ ರೂಪುಗೊಂಡಿದೆ. ಮಠದ ಮುಂಭಾಗದ ಎಡ ಬದಿಯಲ್ಲಿ ಬೃಹದಾಕಾರದ ಕಲ್ಯಾಣಿಯನ್ನು ಸ್ಥಾಪಿಸಲಾಗಿದೆ. ಶ್ರೀ ಕಡ್ಲಪ್ಪನವರು ವ್ಯವಸ್ಥಿತವಾದ ಮಠವನ್ನು ಸ್ಥಾಪಿಸಿ, ಸಮರ್ಥ ಗುರುಗಳನ್ನು ನೇಮಕ ಮಾಡಿ, ಧಾರ್ಮಿಕ ಕಾರ್ಯಗಳು ಸುಲಲಿತವಾಗಿ ನಡೆಯುವಂತೆ ಮಾಡಲು, ೨೮೦ ಎಕರೆ ಭೂಮಿಯನ್ನು ಉಂಬಳಿಯಾಗಿ ನೀಡಿದ್ದಾರೆ. ರಾಜಾಶ್ರಯದಿಂದಲೇ ಸ್ಥಾಪನೆಗೊಂಡ ಈ ಮಠವು, ವೀರಶೈವ ಧರ್ಮದ ಆಚರಣೆಗಳನ್ನು ಶ್ರೀಮಂತವಾಗಿಯೇ ಆಚರಣೆಗೆ ತಂದು ಧರ್ಮವನ್ನು ಬೆಳೆಸಿತು.

ಸ್ಥಾಪಕ ಗುರುಗಳಾದ ಶ್ರೀ ಪ್ರಭುಲಿಂಗ ಸ್ವಾಮಿಗಳು ಮಠದಲ್ಲಿ ನಿತ್ಯ ಶಿವಾನುಭವ ಗೋಷ್ಠಿ, ಅನ್ನ ದಾಸೋಹವನ್ನು ನಡೆಸುವ ಮೂಲಕ ಧರ್ಮವನ್ನು ಪ್ರಚಾರಗೊಳಿಸಿದರು.

ಪರಂಪರೆ:

೧. ಶ್ರೀ ಮ.ನಿ.ಪ್ರ. ಪ್ರಭುಲಿಂಗಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ರುದ್ರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಗುರುಶಾಂತಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಚಂದ್ರಶೇಖರಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಮಲ್ಲಿಕಾರ್ಜುನಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಪ್ರಭುಲಿಂಗದೇವರು

ಈ ರೀತಿ ಮಠದ ಪರಂಪರೆಯಲ್ಲಿ ಆರು ಜನ ಗುರುಗಳು ಅಧಿಕಾರ ನಡೆಸಿ ಲಿಂಗೈಕ್ಯರಾಗಿದ್ದು, ೧೯೭೬ ರಲ್ಲಿ ಶ್ರೀ ಪ್ರಭುಲಿಂಗ ದೇವರು ಉತ್ತರಾಧಿಕಾರಿಯಾಗಿ ನೇಮಕಗೊಂಡಿದ್ದಾರೆ. ಕರ್ತೃ ಗುರುಗಳ ನಂತರ ಅಧಿಕಾರಕ್ಕೆ ಬಂದ ನಾಲ್ಕು ಜನ ಗುರುಗಳ ಬಗ್ಗೆ ಹೆಚ್ಚು ಮಾಹಿತಿ ಲಭ್ಯವಿಲ್ಲ. ಪರಂಪರೆಯ ಆರನೆಯ ಗುರುಗಳಾದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಮಠವನ್ನು ಅಭಿವೃದ್ಧಿ ಪಡಿಸಿ ೧೯೭೬ ರಲ್ಲಿ ಲಿಂಗೈಕ್ಯರಾದರು. ಇವರ ನಂತರ ಉತ್ತರಾಧಿಕಾರಿಯಾಗಿ ನೇಮಕಗೊಂಡಿರುವ ಶ್ರೀ ಪ್ರಭುಲಿಂಗ ದೇವರು ಶ್ರೀ ಪ್ರಭುದೇವಸ್ವಾಮಿ ಮತ್ತು ಶ್ರೀಮತಿ ಮೀನಾಕ್ಷಮ್ಮನವರ ಪುತ್ರರಾಗಿ ೧೯೬೮ ರಲ್ಲಿ ಜನಿಸಿದರು. ಇವರು ಪ್ರೌಢಶಿಕ್ಷಣವನ್ನು ಮುಗಿಸಿ ಸಂಸ್ಕೃತ, ವೇದ ಹಾಗೂ ಜ್ಯೋತಿಷ್ಯವನ್ನು ಕಲಿತು ಮಠದಲ್ಲಿ ನೆಲೆಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಪರಂಪರೆಯ ಗುರುಗಳ ಎರಡು ಗದ್ದುಗೆಗಳು ಹಾಗೂ ಮಠದ ಸ್ಥಾಪಕರಾದ ಶ್ರೀ ಕಡ್ಲಪ್ಪ ಮತ್ತು ಶ್ರೀ ವೀರಪ್ಪನವರ ಗದ್ದುಗೆಗಳು ಸ್ಥಾಪನೆಯಾಗಿವೆ. ಶಿವರಾತ್ರಿಯಲ್ಲಿ ಹಿರಿಯ ಗುರುಗಳ ಪುಣ್ಯಾರಾಧನೆ ಯನ್ನು ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ದಾಸೋಹವನ್ನು ನಡೆಸಲಾಗುತ್ತಿದೆ. ಶ್ರೀ ಕಡ್ಲಪ್ಪನವರು ನಾಡಿನಾದ್ಯಂತ ಸ್ಥಾಪಿಸಿದ ನೂರೊಂದು ಮಠಗಳಲ್ಲಿ ಈ ಮಠವು ಪ್ರಥಮ ಮಠವಾಗಿದ್ದು, ಈಮಠಕ್ಕೆ ಹೆಚ್ಚು ಪ್ರಾಶಸ್ತ್ಯ ಬಂದಿದೆ. ಹಿಂದೆ ಶ್ರೀಮಂತವಾಗಿ ಬೆಳೆದು ಈ ಭಾಗದ ಪ್ರಭಾವಿ ಮಠವಾಗಿ ಬೆಳೆದಿತ್ತು.

ವಿಳಾಸ: ಶ್ರೀ ಮ.ನಿ.ಪ್ರ. ಪ್ರಭುಲಿಂಗ ದೇವರು, ಶ್ರೀ ಕಡ್ಲಪ್ಪನವರ ಮಠ, ಸುರಪುರ, ಗುಲ್ಬರ್ಗ ಜಿಲ್ಲೆ.

ಸೇಡಂ ತಾಲ್ಲೂಕು

ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕು ಕೈಗಾರಿಕೆ ಹಾಗೂ ವಾಣಿಜ್ಯ ಕ್ಷೇತ್ರದಲ್ಲಿ ಹೆಸರು ಮಾಡಿದೆ. ಗಣಿಗಾರಿಕೆಯಿಂದ ಅತ್ಯಂತ ಅಧಿಕ ಗಳಿಕೆಯನ್ನು ಮಾಡುತ್ತಿರುವ ಈ ತಾಲ್ಲೂಕಿನಲ್ಲಿ ವೀರಶೈವ ಧರ್ಮ ಪ್ರಬಲವಾಗಿ ಬೆಳೆದಿದೆ. ಪ್ರಸ್ತುತ ಈ ತಾಲ್ಲೂಕಿನಲ್ಲಿ ಏಳು ಮಠಗಳು ಅಸ್ತಿತ್ವದಲ್ಲಿದ್ದು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಕೋಲಕುಂಡ

ಸೇಡಂ ತಾಲ್ಲೂಕಿನ ಕೋಲಕುಂಡವು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಮೂವತ್ತೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ.

ಕೋಲಕುಂಡ ಹಿರೇಮಠ: ಕೋಲಕುಂಡ ಗ್ರಾಮದಲ್ಲಿ ಹಿರೇಮಠವು ಸ್ಥಾಪನೆಯಾಗಿ ಧಾರ್ಮಿಕ ವಾತಾವರಣವನ್ನು ಸೃಷ್ಟಿಸಿದೆ. ರಂಭಾಪುರಿ ಪೀಠದ ಶಾಖಾ ಮಠವಾಗಿರುವ ಈ ಮಠವು ಎಂಟುನೂರು ವರ್ಷಗಳ ಹಿಂದೆ ಸ್ಥಾಪಿಸಲಾಗಿದೆ. ಈ ಮಠದ ಮೂಲ ಕರ್ತೃಗಳು ಶ್ರೀ ರಾಚೋಟಿ ವೀರಭದ್ರ ಶಿವಾಚಾರ್ಯ ಸ್ವಾಮಿಗಳೆಂದು ಹೇಳಲಾಗುತ್ತದೆ. ಇವರು ಲೋಕ ಸಂಚಾರ ಕೈಗೊಂಡು ಅನೇಕ ಕಡೆ ನೆಲೆ ನಿಂತು ಮಠಗಳನ್ನು ಸ್ಥಾಪಿಸಿ,ಅಂತಿಮವಾಗಿ ಕೋಲಕುಂಡ ಗ್ರಾಮಕ್ಕೆ ಬಂದು ನೆಲೆಸುತ್ತಾರೆ. ಇವರ ತಪೋಶಕ್ತಿಗೆ ಶರಣಾದ ಇಲ್ಲಿನ ಭಕ್ತರು ಗುರುಗಳಿಗೆ ಕುಟೀರವನ್ನು ಕಟ್ಟಿಸಿಕೊಟ್ಟು, ಪೂಜಾ ಕಾರ್ಯಗಳು ನಡೆಯುವಂತೆ ವ್ಯವಸ್ಥೆಗೊಳಿಸಿದರು.ಇಲ್ಲಿ ನೆಲೆ ನಿಂತ ಗುರುಗಳು ನಿತ್ಯ ಶಿವಾನುಭವ ಗೋಷ್ಠಿಯನ್ನು ನಡೆಸಿ ಧರ್ಮೋಪದೇಶವನ್ನು ನೀಡತೊಡಗಿದರು. ಧರ್ಮ ಸಂಸ್ಕಾರಗೊಂಡ ಈ ಗ್ರಾಮದಲ್ಲಿ ಮಠ ಸ್ಥಾಪನೆಯಾಯಿತು. ಗುರುಗಳು ನಂತರ ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳಗೆ ಅಧಿಕಾರವನ್ನು ನೀಡಿ ಲಿಂಗೈಕ್ಯರಾಗುತ್ತಾರೆ ಎಂದು ಹೇಳಲಾಗುತ್ತದೆ.

ಪರಂಪರೆ:

೧. ಷ.ಬ್ರ.ಶ್ರೀ ರಾಚೋಟಿ ವೀರಭದ್ರ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು
೩. ಷ.ಬ್ರ.ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳು
೪. ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು
೫. ಷ.ಬ್ರ.ಶ್ರೀ ರಾಚೋಟಿ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಪುರಾತನ ಈ ಮಠದಲ್ಲಿ ಒಟ್ಟು ಎಂಟು ಜನ ಗುರುಗಳು ಅಧಿಕಾರ ನಡೆಸಿದ್ದಾರೆಂದು ಹೇಳಲಾಗುತ್ತಿದೆ. ಆದರೆ ಆಧಾರಗಳ ಕೊರತೆಯಿಂದ ಐದು ಜನರ ಹೆಸರನ್ನು ಮಾತ್ರ ಗುರುತಿಸಲಾಗಿದೆ. ಮಠದ ಆವರಣದಲ್ಲಿ ಒಟ್ಟು ಆರು ಗದ್ದುಗೆಗಳು ಇವೆ. ಜೇವರ್ಗಿ ತಾಲ್ಲೂಕಿನ ಅಂಗರಗಿ ಮಠವು ಈ ಮಠದ ಶಾಖಾ ಮಠವಾಗಿದ್ದು ಅಲ್ಲಿ ಎರಡು ಗದ್ದುಗೆಗಳು ಸ್ಥಾಪನೆಯಾಗಿವೆ.ಮಠದ ಪರಂಪರೆಯ ಕೊನೆಯ ಗುರುಗಳಾಗಿದ್ದ ಶ್ರೀ ರಾಚೋಟಿ ಸ್ವಾಮಿಗಳು ೧೯೭೭ ರಲ್ಲಿ ಲಿಂಗೈಕ್ಯರಾಗಿದ್ದು ಇವರ ನಂತರ ಯಾರೂ ಉತ್ತರಾಧಿಕಾರಿಗಳಿಲ್ಲದೆ ಮಠವು ಖಾಲಿ ಉಳಿದಿದೆ.

ವಿಳಾಸ: ಶ್ರೀ ಕೋಲಕುಂಡ ಹಿರೇಮಠ, ಕೋಲಕುಂಡ ಸೇಡಂ ತಾಲ್ಲೂಕು, ಗುಲ್ಬರ್ಗ ಜಿಲ್ಲೆ.

ಜಾಕನಹಳ್ಳಿ

ಸೇಡಂ ತಾಲ್ಲೂಕಿನ ಜಾಕನಹಳ್ಳಿಯು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಮೂವತ್ತೆಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಗವಿಸಿದ್ಧಲಿಂಗೇಶ್ವರ ಮಠವು ಸ್ಥಾಪನೆಯಾಗಿದೆ.

ಗವಿಸಿದ್ಧಲಿಂಗೇಶ್ವರಮಠ: ಜಾಕನಹಳ್ಳಿ ಗ್ರಾಮದಲ್ಲಿ ಶ್ರೀ ಗವಿಸಿದ್ಧಲಿಂಗೇಶ್ವರ ಮಠವು ಸ್ಥಾಪನೆಯಾಗಿ ಧಾರ್ಮಿಕ ವಾತಾವರಣವನ್ನು ಸೃಷ್ಟಿಸಿದೆ. ಇದು ರಂಭಾಪುರಿ ಪೀಠದ ಶಾಖಾ ಮಠವಾಗಿದೆ. ಶ್ರೀ ಮದನಿ ಮಠವು ಈ ಮಠದ ಮೂಲ

ಮಠವಾಗಿದ್ದು, ಮದನಿಯಿಂದ ಶ್ರೀ ಗವಿಸಿದ್ಧಲಿಂಗೇಶ್ವರ ಸ್ವಾಮಿಗಳು ಸಂಚಾರ ಕೈಗೊಂಡು ಈ ಗ್ರಾಮದಲ್ಲಿ ಬಂದು ನೆಲೆಸುತ್ತಾರೆ. ಇಲ್ಲಿ ಅನೇಕ ಪವಾಡಗಳನ್ನು ಮಾಡಿ ಭಕ್ತರನ್ನು ಸನ್ಮಾರ್ಗಕ್ಕೆ ತಂದರು. ಇಂತಹ ಮಹಾ ಪುರುಷರು ಇಲ್ಲಿ ನೆಲೆಗೊಂಡು ಮಠ ಸ್ಥಾಪಿಸಿ ಲೋಕ ಸಂಚಾರವನ್ನು ಕೈಗೊಂಡರು. ಸಂಚಾರದಲ್ಲಿದ್ದಾಗ ಗುರುಗಳು ಯಾದಗಿರಿ ತಾಲ್ಲೂಕಿನ ಚಿಂತನಹಳ್ಳಿಯಲ್ಲಿ ಲಿಂಗೈಕ್ಯರಾದರು. ಇವರ ಗದ್ದುಗೆಯು ಗವಿಯಲ್ಲಿ ಸ್ಥಾಪನೆಯಾಗಿದೆ.

ಶ್ರೀ ಗವಿಸಿದ್ಧಲಿಂಗೇಶ್ವರರು ಸ್ಥಾಪಿಸಿದ ಮಠಕ್ಕೆ ಶ್ರೀ ಶಿವಯೋಗಿ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಮುನ್ನಡೆಸಿದ್ದಾರೆ. ಇವರ ಕಾಲದಲ್ಲಿ ಮಠವು ಆರ್ಥಿಕವಾಗಿ ಸ್ವಾವಲಂಬನೆಯನ್ನು ಸಾಧಿಸಿ, ಅಪಾರ ಸಂಪತ್ತನ್ನು ಗಳಿಸಿತು. ಇವರ ಕಾಲಾನಂತರ ಉತ್ತರಾಧಿಕಾರಿಗಳಿಲ್ಲದೆ ಮಠವು ಖಾಲಿ ಉಳಿದಿದೆ.

ಮಳಖೇಡ

ಸೇಡಂ ತಾಲ್ಲೂಕಿನ ಮಳಖೇಡ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಇತಿಹಾಸ ಪ್ರಸಿದ್ಧ ನೃಪತುಂಗ ರಾಜನ ರಾಜಧಾನಿಯಾಗಿ ಬೆಳೆದ ಮಾನ್ಯಖೇಡ ಇದಾಗಿದೆ. ಮಾನ್ಯಖೇಡ ಎಂಬುದು ಕಾಲಕ್ರಮೇಣ ಮಳಖೇಡವಾಗಿ ಪರಿವರ್ತನೆಯಾಗಿದೆ. ಇಂತಹ ಇತಿಹಾಸ ಪ್ರಸಿದ್ಧ ನಾಡಿನಲ್ಲಿ ವೀರಶೈವ ಧರ್ಮ ಬೆಳೆಯಲು ಸಾಕಷ್ಟು ಪ್ರೋತ್ಸಾಹ ದೊರೆತಿದೆ. ಇಲ್ಲಿ ಒಟ್ಟು ಐದು ಮಠಗಳು ಸ್ಥಾಪನೆಯಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸಿದ್ದವು ಎಂದು ಹೇಳಲಾಗುತ್ತಿದೆ. ಆದರೆ ಇಂದು ನಮಗೆ ಶ್ರೀ ಭಂಗೀಮಠ ಮತ್ತು ಶ್ರೀ ಮೂಲಾಧಾರ ಮಠ ಎಂಬ ಎರಡು ಮಠಗಳು ಮಾತ್ರ ನೋಡಸಿಗುತ್ತವೆ. ಉಳಿದ ಮೂರು ಮಠಗಳ ಹೆಸರುಗಳು ತಿಳಿಯದಾಗಿದೆ.

ಭಂಗೀಮಠ: ಈ ಇತಿಹಾಸ ಪ್ರಸಿದ್ಧ ಗ್ರಾಮದ ಮಧ್ಯಭಾಗದಲ್ಲಿ ರಂಭಾಪುರಿ ಪೀಠದ ಶಾಖಾ ಮಠವಾಗಿರುವ ಶ್ರೀ ಭಂಗೀಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದ ಈ ಮಠದ ಕರ್ತೃಗುರುಗಳು '**ಶ್ರೀ ಚನ್ನವೀರೇಶ್ವರ ಶಿವಾಚಾರ್ಯ ಸ್ವಾಮಿ**'ಗಳೆಂದು ಹೇಳಲಾಗುತ್ತಿದೆ. ಗುರುಗಳು ಲೋಕಸಂಚಾರ ಕೈಗೊಂಡು ಯಾದಗಿರಿಯ ಎಲೇರಿ, ಕೋಲಕುಂಡ ಮುಂತಾದ ಕ್ಷೇತ್ರಗಳಲ್ಲಿ ಸಂಚರಿಸಿ ಅನೇಕ ಪವಾಡಗಳನ್ನು ಮಾಡಿ ಧರ್ಮಜಾಗೃತಿಯನ್ನುಂಟು ಮಾಡಿ, ಇಲ್ಲಿಗೆ ಬಂದು ನೆಲೆಸಿ ಶ್ರೀ ಭಂಗೀಮಠವನ್ನು ಸ್ಥಾಪಿಸಿದ್ದಾರೆ.

ಮಠದ ಪರಂಪರೆ: ಶ್ರೀ ಚನ್ನವೀರೇಶ್ವರ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಸ್ಥಾಪಿಸಿದ ನಂತರ ಈ ಪರಂಪರೆಯಲ್ಲಿ ಒಟ್ಟು ಎಂಟು ಜನ ಗುರುಗಳು ಅಧಿಕಾರ ನಡೆಸಿದ್ದಾರೆ ಎಂದು ಹೇಳಲಾಗುತ್ತಿದೆ. ಇದಕ್ಕೆ ಪೂರಕವೆಂಬಂತೆ ಮಳಖೇಡ ಮಠದಲ್ಲಿ ಒಟ್ಟು ಆರು ಗದ್ದುಗೆಗಳು ಸ್ಥಾಪನೆಯಾಗಿವೆ. ಎಲೇರಿ ಶಾಖಾ ಮಠದಲ್ಲಿ ಕೆಲವು ಗದ್ದುಗೆಗಳು ಸ್ಥಾಪನೆಯಾಗಿವೆ ಎಂದು ಮಠದ ಭಕ್ತರು ಅಭಿಪ್ರಾಯಿಸುತ್ತಾರೆ. ಈ ಹಿಂದೆ ಅಧಿಕಾರ ನಡೆಸಿ ಲಿಂಗೈಕ್ಯರಾದ ಶ್ರೀ ಮಹಾಂತ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಇವರ ನಂತರ ಬೂದಾಪುರ ಗ್ರಾಮದ ಶ್ರೀ ಶಿವಶಂಕರಯ್ಯ ಮತ್ತು ಶ್ರೀಮತಿ ಬಸಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ಸಂಸ್ಕೃತ, ವೇದ ಕಲಿತು ಆಧ್ಯಾತ್ಮ ಚಿಂತನೆಯನ್ನು ಮೈಗೂಡಿಸಿಕೊಂಡು, ಹಿರಿಯ ಗುರುಗಳ ಆಶೀರ್ವಾದದಿಂದ ಬೆಳೆದು ಪರಂಪರಾಗತ ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಇಂದಿನ ಸಮಾಜಕ್ಕೆ ಧರ್ಮದ ಬಗ್ಗೆ ನಿರಾಸಕ್ತಿ ಉಂಟಾಗಿದ್ದು ಭಕ್ತರು ಧರ್ಮಸಂಸ್ಕಾರವನ್ನು ಪಡೆದು ಸಮಾಜದಲ್ಲಿ ಸಾಮರಸ್ಯದಿಂದ ಬದುಕ ಬೇಕಾಗಿದೆ ಎಂಬ ಹಂಬಲದಿಂದ ಧರ್ಮ ಪ್ರಚಾರವನ್ನು ಕೈಗೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ೧೯೭೨ ರಲ್ಲಿ ಮಠದ ಹಳೆಯ ಕಟ್ಟಡವನ್ನು ತೆಗೆಸಿ ನೂತನವಾಗಿ ಕಟ್ಟಡವನ್ನು ಸ್ಥಾಪಿಸಲಾಗಿದೆ. ಒಂದೆ ಮಠದ ಹೊರಭಾಗದಲ್ಲಿದ್ದ ಈ ಮಠವು ಇಂದು ಗ್ರಾಮ ಬೆಳೆದಂತೆ ಮಧ್ಯಭಾಗಕ್ಕೆ ಸೇರಿದೆ. ಈ ಮಠದಲ್ಲಿ ಸ್ಥಾಪನೆಯಾಗಿ ರುವ ಆರು ಗದ್ದುಗೆಗಳಿಗೆ ನಿತ್ಯಪೂಜೆ ನಡೆಸಲಾಗುತ್ತಿದೆ. ಗುರುಗಳು ತ್ರಿಕಾಲ ಪೂಜಾನಿಷ್ಠರಾಗಿದ್ದಾರೆ. ಅಮಾವಾಸ್ಯೆಯಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಸಾವಿರಾರು ಜನ ಭಕ್ತರು ಮಠಕ್ಕೆ ಆಗಮಿಸಿ ಪೂಜೆ ಮತ್ತು ಅನ್ನ ಸಂತರ್ಪಣೆಯಲ್ಲಿ ಪಾಲ್ಗೊಳ್ಳುತ್ತಾರೆ. ಶ್ರಾವಣಮಾಸದಲ್ಲಿ ನಿತ್ಯ ರುದ್ರಾಭಿಷೇಕ, ಸಂಜೆ ಪ್ರವಚನ ಕಾರ್ಯಕ್ರಮಗಳು

ನಡೆಯುತ್ತಿವೆ. ಶಿವರಾತ್ರಿಯಲ್ಲಿ ಜಾಗರಣೆ ಹಾಗೂ ವಿಶೇಷ ಪೂಜೆಯನ್ನು ಹಮ್ಮಿಕೊಳ್ಳಲಾಗುತ್ತಿದೆ. ಮಠದ ಆವರಣದಲ್ಲಿ ರೇಣುಕ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಗುರುಗಳು ಭಕ್ತರ ಧಾರ್ಮಿಕ ಕ್ರಿಯಾದಿಗಳಲ್ಲಿ ಪಾಲ್ಗೊಂಡು ಸಂಸ್ಕಾರವನ್ನು ನೀಡತೊಡಗಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಭಂಗಿಮಠ, ಮಳಖೇಡ, ಸೇಡಂ ತಾ, ಗುಲ್ಬರ್ಗ ಜಿಲ್ಲೆ.

ಮೂಲಾಧಾರಮಠ: ಮಳಖೇಡ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಮೂಲಧಾರ ಮಠವು ಪುರಾತನ ಕಾಲದ ಮಠವಾಗಿದೆ. ಈ ಮಠವು ರಂಭಾಪುರಿ ಪೀಠದ ಶಾಖಾಮಠವಾಗಿ ಬೆಳೆದು ಹೆಸರು ಮಾಡಿದೆ. ಈ ಮಠವು ನೃಪತುಂಗ ರಾಜನ ಕಾಲದಲ್ಲಿಯೇ ಅಸ್ತಿತ್ವದಲ್ಲಿದ್ದು, ರಾಜ ಮನ್ನಣೆಗೆ ಪಾತ್ರವಾಗಿದೆ. ಇಂತಹ ಮಠದ ಪರಂಪರೆಯಲ್ಲಿ ಅನೇಕ ಜನ ಗುರುಗಳು ಅಧಿಕಾರವನ್ನು ನಡೆಸಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ಪರಂಪರೆ: ಮಠದ ಕರ್ತೃಗುರುಗಳು ಹಾಗೂ ನಂತರ ಅಧಿಕಾರ ನಡೆಸಿದ ಗುರುಗಳ ಬಗ್ಗೆ ಹೆಚ್ಚು ಮಾಹಿತಿ ದೊರೆಯುವುದಿಲ್ಲ. ಶ್ರೀ ಕಾರ್ತೀಕೇಶ್ವರ ಶಿವಾಚಾರ್ಯ ಸ್ವಾಮಿಗಳು ಹಾಗೂ ಹಿರಿಯ ಗುರುಗಳ ಕರಕಮಲ ಸಂಜಾತರಾದ ಶ್ರೀ ವೀರಗಂಗಾಧರ ಶಿವಾಚಾರ್ಯ ಸ್ವಾಮಿಗಳು ಮಠದ ಆಡಳಿತವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಎಪ್ಪತ್ತೈದು ವರ್ಷ ವಯಸ್ಸಿನ ಬಾಲ ಬ್ರಹ್ಮಚಾರಿ ಎಂದು ಹೆಸರು ಪಡೆದ ಶ್ರೀ ಕಾರ್ತೀಕೇಶ್ವರ ಶಿವಾಚಾರ್ಯ ಸ್ವಾಮಿಗಳು ತ್ರಿಕಾಲ ಪೂಜಾನಿಷ್ಠರಾಗಿ, ತಮ್ಮ ತಪೋಶಕ್ತಿಯ ಬಲದಿಂದ ಈ ಮಠವನ್ನು ಹೆಚ್ಚು ಅಭಿವೃದ್ಧಿಪಡಿಸಿದ್ದಾರೆ. ಇವರು ದೀರ್ಘ ಕಾಲ ಮಠದ ಆಡಳಿತವನ್ನು ನಡೆಸಿ ಮಠಕ್ಕೆ ಆರ್ಥಿಕ ಭದ್ರತೆಯನ್ನು ತಂದುಕೊಟ್ಟಿದ್ದಾರೆ. ಹಿರಿಯ ಗುರುಗಳು ಮಹಾ ವಿದ್ವತ್‌ಚೇತನರಾಗಿ ಈ ನಾಡಿನಲ್ಲಿ ಹೆಸರು ಮಾಡಿದವರಾಗಿದ್ದಾರೆ. ಇವರ ಕಾಲದಲ್ಲಿ ಯಾದಗಿರಿ ತಾಲ್ಲೂಕಿನ ಹರಕೆರೆಮಠ ಹಾಗೂ ಇತರೆ ಶಾಖಾ ಮಠಗಳು ಅಭಿವೃದ್ಧಿ ಗೊಂಡಿವೆ. ಈಗ ಶ್ರೀ ವೀರಗಂಗಾಧರ ಶಿವಾಚಾರ್ಯ ಸ್ವಾಮಿಗಳಿಗೆ ಪಟ್ಟಾಧಿಕಾರವನ್ನು ನೀಡಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ಹಿರಿಯ ಗುರುಗಳ ಕರಕಮಲ ಸಂಜಾತರಾಗಿ ಬೆಳೆದು ಮಠದ ಅಧಿಕಾರವನ್ನು ವಹಿಸಿಕೊಂಡಿರುವ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ಸಂಸ್ಕೃತ ಹಾಗೂ ವೇದಗಳನ್ನು ಕಲಿತು ಪಾಂಡಿತ್ಯವನ್ನು ಸಂಪಾದಿಸಿಕೊಂಡಿದ್ದಾರೆ. ಹಿರಿಯ ಗುರುಗಳ ಮಾರ್ಗದರ್ಶನದಲ್ಲಿ ಹರಕೆರೆ ಹಾಗೂ ಮಳಖೇಡ ಮಠಗಳ ಧಾರ್ಮಿಕ ಮತ್ತು ಆಡಳಿತ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಕಾರ್ತೀಕೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಮೂಲಾಧಾರಮಠ, ಮಳಖೇಡ, ಸೇಡಂ ತಾ, ಗುಲ್ಬರ್ಗ ಜಿಲ್ಲೆ.

ಮಲಖೋಡ

ಸೇಡಂ ತಾಲ್ಲೂಕಿನ ಮಲಖೋಡ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿನೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಕಟ್ಟಿಮನಿ ಹಿರೇಮಠವು ಸ್ಥಾಪನೆಯಾಗಿದೆ.

ಕಟ್ಟಿಮನಿ ಹಿರೇಮಠ: ಮಲಖೋಡ ಗ್ರಾಮದಲ್ಲಿ ಶ್ರೀ ಕಟ್ಟಿಮನಿ ಹಿರೇಮಠವು ಸ್ಥಾಪನೆಯಾಗಿ ಧಾರ್ಮಿಕ ಆಚರಣೆಯ ಕೇಂದ್ರಬಿಂದುವಾಗಿ ಬೆಳೆದಿದೆ. ಶ್ರೀಶೈಲ ಪೀಠದ ಶಾಖಾಮಠವಾಗಿರುವ ಈ ಮಠವು ಪುರಾತನ ಕಾಲದ ಮಠವಾಗಿದೆ. ಈ ಮಠದ ಕರ್ತೃಗುರುಗಳ ಬಗ್ಗೆ ನಿಖರವಾದ ಮಾಹಿತಿ ದೊರೆಯದಾಗಿದೆ. ಆದರೆ ಮಠದ ಪರಂಪರೆಯ ಗುರುಗಳ ಸುಮಾರು ಹತ್ತು ಗದ್ದುಗೆಗಳು ಸ್ಥಾಪನೆಯಾಗಿರುವುದರಿಂದ ಈ ಮಠವು ಪುರಾತನ ಮಠ ಎಂದು ಹೇಳಬಹುದು.

ಪರಂಪರೆ:

೧. ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಚನ್ನಬಸಪ್ಪ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಸೋಮಶೇಖರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು

ಈ ರೀತಿ ನಾಲ್ಕು ಗುರುಗಳ ಹೆಸರುಗಳನ್ನು ಮಾತ್ರ ದಾಖಲಿಸಬಹುದು. ಅಲ್ಲದೆ ಇಲ್ಲಿ ದಾಖಲಿಸಿರುವ ಹೆಸರುಗಳು ಪಟ್ಟಾಧಿಕಾರದ ಅನುಕ್ರಮಣಿಕೆಯಲ್ಲಿಯೂ ಸಹ ಇಲ್ಲ. ಶ್ರೀ ಲಿಂಗಯ್ಯ ಮತ್ತು ಶ್ರೀಮತಿ ದಾನಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ಹದಿನೈದು ವರ್ಷಗಳ ಹಿಂದೆ ಪಟ್ಟಾಧಿಕಾರವನ್ನು ವಹಿಸಿಕೊಂಡು ಈ ಮಠದ ಆಡಳಿತವನ್ನು ನಡೆಸುತ್ತಿದ್ದಾರೆ. ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯಪೂಜೆ, ದವನದ ಹುಣ್ಣಿಮೆಯಲ್ಲಿ ಜಾತ್ರೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಪ್ರವಚನ ಹಾಗೂ ಅನ್ನದಾಸೋಹವನ್ನು ನಡೆಸಲಾಗುತ್ತಿದೆ.

ವಿಳಾಸ:ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು, ಶ್ರೀ ಕಟ್ಟಿಮನಿಹಿರೇಮಠ, ಮಲಖೋಡ, ಸೇಡಂ ತಾ, ಗುಲ್ಬರ್ಗ ಜಿಲ್ಲೆ.

ಸೇಡಂ

ಗುಲ್ಬರ್ಗ ಜಿಲ್ಲೆಯ ಸೇಡಂ ಪಟ್ಟಣವು ಜಿಲ್ಲಾ ಕೇಂದ್ರದಿಂದ ಪೂರ್ವಕ್ಕೆ ಐವತ್ತೆರಡು ಕಿ.ಮೀ ದೂರದಲ್ಲಿದೆ. ಸೇಡಂ ಪಟ್ಟಣವು ತಾಲ್ಲೂಕು ಕೇಂದ್ರ ಸ್ಥಳವಾಗಿದೆ. ವ್ಯಾಪಾರಿ ಕೇಂದ್ರ ಸ್ಥಳವಾದ ಸೇಡಂನಲ್ಲಿ ಪುರಾತನ ಕಾಲದಲ್ಲಿ ವೀರಶೈವ ಮಠಗಳ ಸ್ಥಾಪನೆಯಾಗಿ ವೀರಶೈವಧರ್ಮ ಬೆಳೆಯಲು ಸಹಾಯಕವಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಇಲ್ಲಿನ ಸುಮಾರು ಎಂಟು ಮಠಗಳು ಧಾರ್ಮಿಕ ಆಚರಣೆಗಳನ್ನು ವಿಧಿವತ್ತಾಗಿ ನಡೆಸಿಕೊಂಡು ಬಂದಿದ್ದವು. ಹಿಂದೆ ಸ್ಥಾಪನೆಗೊಂಡ ಎಂಟು ಮಠಗಳಲ್ಲಿ ಶ್ರೀ ಶಿವಶಂಕರೇ ಶ್ವರ ಮಠ, ಶ್ರೀ ವಿರಕ್ತ ಮಠ, ಶ್ರೀ ಕಲ್ಮಠ ಮತ್ತು ಶ್ರೀ ಹಳ್ಳಳ್ಳಿ ರಾಚೋಟಪ್ಪನ ಮಠ ಎಂಬ ನಾಲ್ಕು ಮಠಗಳು ಮಾತ್ರ ಉಳಿದಿವೆ. ಈ ನಾಲ್ಕು ಮಠಗಳಲ್ಲಿ ಶ್ರೀ ಶಿವಶಂಕರೇಶ್ವರ ಮಠ ಹಾಗೂ ಶ್ರೀ ವಿರಕ್ತ ಮಠದಲ್ಲಿ ಗುರುಗಳಿದ್ದು ಧಾರ್ಮಿಕ ಕಾರ್ಯಗಳು ನಡೆಯುತ್ತಿವೆ.

ಶಿವಶಂಕರೇಶ್ವರ ಸಂಸ್ಥಾನ ಮಠ: ಸೇಡಂ ಪಟ್ಟಣದ ಜಂಗಮವಾಡದಲ್ಲಿ ಶ್ರೀ ಶಿವಶಂಕರೇಶ್ವರ ಸಂಸ್ಥಾನ ಮಠವು ಸ್ಥಾಪನೆಯಾಗಿದೆ. ಮಠದ ಕರ್ತೃ ಗುರುಗಳಾದ ಶ್ರೀ ಕಂಭರಾಧ್ಯ ಸ್ವಾಮಿಗಳೆಂಬುವರು ಆರುನೂರು ವರ್ಷಗಳ ಹಿಂದೆ ಬೂದಿಗುಂಪಿಯಿಂದ ಹೊರಟು, ನಾಡಿನ ನಾನಾ ಭಾಗಗಳಲ್ಲಿ ಅನುಷ್ಠಾನಗೊಂಡು ಸೇಡಂಗೆ ಬಂದು ಇಲ್ಲಿನ ಈಶ್ವರ ಗವಿಯಲ್ಲಿ ಅನುಷ್ಠಾನಕ್ಕೆಗೊಳ್ಳುತ್ತಾರೆ. ಇಲ್ಲಿ ದೀರ್ಘಕಾಲ ನೆಲೆಸಿ ಧರ್ಮೋಪದೇಶ ಮಾಡಿ ಭಕ್ತರನ್ನು ಉದ್ಧರಿಸಿದರು. ಗುರುಗಳ ಪ್ರಭಾವಕ್ಕೆ ಒಳಗಾದ ಇಲ್ಲಿನ ದೇಶಮುಖರು ಮಠವನ್ನು ಸ್ಥಾಪಿಸಿಕೊಡಲು ಮುಂದಾದರು. ಗುರುಗಳು ನೆಲೆ ನಿಲ್ಲಲು ಇಷ್ಟಪಡದೆ ಇದಕ್ಕೆ ಒಪ್ಪಲಿಲ್ಲ. ನಂತರ ಭಕ್ತರು ಗುರುಗಳನ್ನು ಒತ್ತಾಯಿಸಿ ಈಶ್ವರ ಗವಿಯಲ್ಲಿಯೇ ನೆಲೆಸಿ ಈ ನಾಡನ್ನು ಉದ್ಧರಿಸಬೇಕೆಂದು ಒತ್ತಾಯಿಸಿದಾಗ ಭಕ್ತರ ಅಪೇಕ್ಷೆಗೆ ಒಪ್ಪಿ ಈಶ್ವರ ಗವಿಯಲ್ಲಿಯೇ ನೆಲೆಸಿ ಲಿಂಗೈಕ್ಯರಾದರು. ನಂತರ ಲಿಂಗೈಕ್ಯಗೊಂಡ ಗುರುಗಳಿಗೆ ಗದ್ದುಗೆಯನ್ನು ನಿರ್ಮಿಸಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ವ್ಯವಸ್ಥೆಗೊಳಿಸಿದರು.

ಮಠದ ಸ್ಥಾಪನೆ: ತಪೋನಿಷ್ಠರಾಗಿದ್ದ ಶ್ರೀ ಕಂಭರಾಧ್ಯರು ಲಿಂಗೈಕ್ಯರಾದ ಮೇಲೆ ಈ ಸ್ಥಳ ಜಾಗೃತಸ್ಥಳವಾಗಿ ರೂಪುಗೊಂಡಿತು. ಈ ಸಂದರ್ಭದಲ್ಲಿ ಶ್ರೀ ಶಿವಶಂಕರ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಈ ನಾಡಿಗೆ ಆಗಮಿಸಿ ಈಶ್ವರ ಗವಿಯಲ್ಲಿ ನೆಲೆಗೊಳ್ಳುತ್ತಾರೆ. ಆಗ ದೇಶಮುಖರು,ಶ್ರೀ ಕಂಭರಾಧ್ಯರು ನೆಲೆಗೊಂಡು ಜಾಗೃತಸ್ಥಳವನ್ನಾಗಿ ಮಾಡಿದ ಈ ಸ್ಥಳದಲ್ಲಿ ಮಠವನ್ನು ಸ್ಥಾಪಿಸಿ ಗುರುಗಳನ್ನು ನೇಮಿಸಬೇಕೆಂಬುದು ನಮ್ಮ ಇಚ್ಛೆಯಾಗಿದೆ ಎಂದು ತಮ್ಮ ಅಭಿಪ್ರಾಯವನ್ನು ಗುರುಗಳ ಮುಂದಿಟ್ಟರು. ಆಗ ಶ್ರೀ ಶಿವಶಂಕರ ಸ್ವಾಮಿಗಳು ದೇಶಮುಖರಿಂದ ನಿರ್ಮಿಸಲ್ಪಟ್ಟ ಕಟ್ಟಡದಲ್ಲಿ ಮಠವನ್ನು ಸ್ಥಾಪಿಸಿದರು. ಶ್ರೀ ಶಿವಶಂಕರ ಸ್ವಾಮಿಗಳು ಸ್ಥಾಪನೆ ಮಾಡಿದ ಈ ಮಠವು ಈತನಕ ಬೆಳೆದು ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಸಮಾಜವನ್ನುಬೆಳೆಸಿದೆ.

ಶ್ರೀ ಶಿವಶಂಕರ ಸ್ವಾಮಿಗಳಿಂದ ಸ್ಥಾಪನೆಗೊಂಡ ಕಾರಣಕ್ಕಾಗಿ ಈ ಮಠಕ್ಕೆ'ಶಿವಶಂಕರೇಶ್ವರ ಮಠ'ಎಂದು ಹೆಸರು ಬಂದಿದೆ. ಶ್ರೀ ಶಿವಶಂಕರ ಸ್ವಾಮಿಗಳು ಮಹಾ ತಪೋನಿಧಿಗಳು ಹಾಗೂ ಸಂಚಾರ ಮೂರ್ತಿಗಳು ಆಗಿದ್ದರು. ಈ ಕಾರಣಕ್ಕಾಗಿ ಚರ ಮತ್ತು ಸ್ಥಿರ ಪಟ್ಟಾಧಿಕಾರವನ್ನು ಮಠದ ಸಂಪ್ರದಾಯದಲ್ಲಿ ತಂದು, ಸ್ಥಿರಪಟ್ಟಾಧಿಕಾರಿಯನ್ನು ನೇಮಿಸಿ ಮಠದ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಹೋಗಲು ವ್ಯವಸ್ಥೆ ಮಾಡಿದರು. ಮಠದಲ್ಲಿ ಸ್ಥಿರ ಪಟ್ಟಾಧಿಕಾರ ನೆಲೆಗೊಂಡ

ಮೇಲೆ ಸದಾ ಸಂಚಾರ ಮೂರ್ತಿಯಾಗಿ ನಾಡನ್ನೆಲ್ಲ ಸುತ್ತಿ ಧರ್ಮೋಪದೇಶವನ್ನು ಕೈಗೊಂಡರು. ಅಂದಿನಿಂದ ಈ ಮಠದ ಪರಂಪರೆಯಲ್ಲಿ ಚರ ಮತ್ತು ಸ್ಥಿರ ಪಟ್ಟಾಧಿಕಾರಗಳು ನಡೆಯುತ್ತಿವೆ.

ಪರಂಪರೆ: ಮಠದ ಪರಂಪರೆಯ ಮೊದಲನೆಯ ಪಟ್ಟಾಧ್ಯಕ್ಷರಾದ ಶ್ರೀ ಶಿವಶಂಕರ ಶಿವಾಚಾರ್ಯ ಸ್ವಾಮಿಗಳ ಹೆಸರನ್ನೇ ಅಭಿದಾನ ಪಡೆದು ಪಟ್ಟಾಧಿಕಾರಕ್ಕೆ ಬರುವ ಸಂಪ್ರದಾಯ ಈ ಮಠದಲ್ಲಿ ನಡೆದು ಬಂದಿದೆ. ಮಠದ ಪರಂಪರೆಯಲ್ಲಿ ಈವರೆವಿಗೆ ಒಟ್ಟು ಒಂಬತ್ತು ಜನ ಗುರುಗಳು ಪಟ್ಟಾಧಿಕಾರ ಪಡೆದು ಅಧಿಕಾರ ನಡೆಸಿದ್ದಾರೆ ಎಂದು ಹೇಳಲಾಗುತ್ತಿದೆ. ಇದಕ್ಕೆ ಸಾಕ್ಷಿ ಎಂಬಂತೆ ಮಠದ ಆವರಣದಲ್ಲಿ ಒಟ್ಟು ಒಂಬತ್ತು ಗದ್ದುಗೆಗಳು ಸ್ಥಾಪನೆಯಾಗಿದೆ. ಶಿಷ್ಯವರ್ಗದ ಪರಂಪರೆಯಲ್ಲಿ ಬೆಳೆದು ಬಂದಿರುವ ಈ ಮಠದ ಈಗಿನ ಮಠಾಧೀಶರಾಗಿ ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಚಿಕ್ಕುಂಬಿ ಗ್ರಾಮದ ಗುರಯ್ಯ ಮತ್ತು ಶ್ರೀಮತಿ ಶಾಂತಮ್ಮನವರ ಪುತ್ರರಾಗಿ ೧೯೪೫ ರಲ್ಲಿ ಜನಿಸಿದ ಈಗಿನ ಶ್ರೀ ಶಿವಶಂಕರ ಶಿವಾಚಾರ್ಯ ಸ್ವಾಮಿಗಳು, ೧೯೭೬ ರಲ್ಲಿ ಚರ ಪಟ್ಟಾಧಿಕಾರವನ್ನು ವಹಿಸಿಕೊಂಡು ಆಡಳಿತ ನಡೆಸುತ್ತಿದ್ದಾರೆ. ಸಂಸ್ಕೃತ, ವೇದಾಧ್ಯಯನಗಳನ್ನು ಮಾಡಿ ವಿದ್ವತ್ತನ್ನು ಗಳಿಸಿಕೊಂಡಿರುವ ಗುರುಗಳು ಹಾವೇರಿ ಮತ್ತು ಕೇದಾರದಲ್ಲಿ ಅಧ್ಯಯನ ಮಾಡಿದ್ದಾರೆ. ಪ್ರಸ್ತುತ ಸ್ಥಿರ ಪಟ್ಟಾಧ್ಯಕ್ಷರಾಗಿ ಶ್ರೀ ಗುರುಬಸವ ಶಿವಾಚಾರ್ಯಸ್ವಾಮಿಗಳು ಅಧಿಕಾರ ವಹಿಸಿಕೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸಿದರೆ, ಚರ ಪಟ್ಟಾಧ್ಯಕ್ಷರಾದ ಶ್ರೀ ಶಿವಶಂಕರ ಶಿವಾಚಾರ್ಯ ಸ್ವಾಮಿಗಳು ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ ವೀರಶೈವ ಧರ್ಮವನ್ನು ಬೆಳೆಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಪರಂಪರೆಯ ಗುರುಗಳ ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ, ಶ್ರಾವಣಮಾಸದಲ್ಲಿ ಬೇರೆ ಗುರುಗಳನ್ನು ಮಠಕ್ಕೆ ಆಹ್ವಾನಿಸಿ ಪಾದಪೂಜೆಯನ್ನು ಮಾಡಿಸಲಾಗುತ್ತಿದೆ. ವೈಶಾಖ ಶುದ್ಧ ಏಕಾದಶಿಯಲ್ಲಿ ಹನ್ನೊಂದು ದಿನಗಳ ಕಾಲ ಮಠದಲ್ಲಿ ಪುರಾಣ ಪ್ರವಚನಗಳನ್ನು ಏರ್ಪಡಿಸಲಾಗುತ್ತಿದೆ. ಕೊನೆಯ ದಿನ ಧಾರ್ಮಿಕ ಸಭೆಯನ್ನು ಏರ್ಪಡಿಸಿ ಧರ್ಮ ಮತ್ತು ಸಾಹಿತ್ಯದ ವಿಚಾರದಲ್ಲಿ ಉಪನ್ಯಾಸ, ಉಪದೇಶವನ್ನು ಏರ್ಪಡಿಸಲಾಗುತ್ತಿದೆ. ಹಿರಿಯ ಗುರುಗಳ ಆರಾಧನೆಯನ್ನು ವೈಶಾಖ ಮತ್ತು ಶ್ರಾವಣ ಮಾಸಗಳಲ್ಲಿ ನಡೆಸಿ ಅನ್ನ ಸಂತರ್ಪಣೆ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಮಠದ ಶಾಖಾ ಮಠಗಳು ಚಿತ್ತಾಪುರ, ಚಿಂಚೋಳಿ ತಾಲ್ಲೂಕಿನ ಪೋಲಾಕ್‌ಪಳ್ಳಿಯಲ್ಲಿ ಇದ್ದು ಇವುಗಳಲ್ಲಿ ನಿತ್ಯ ಪೂಜೆಗೆ ವ್ಯವಸ್ಥೆ ಮಾಡಲಾಗಿದೆ. ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸುವ ಸಲುವಾಗಿ ವಿವಿಧ ಮೂಲಗಳಿಂದ ಬಂದಂತಹ ನೂರೈವತ್ತೈದು ಎಕರೆ ಜಮೀನು ಮಠದ ಆಸ್ತಿಯಾಗಿದೆ. ಮಠದ ವತಿಯಿಂದ ಬೇಸಾಯವನ್ನು ಮಾಡಿಸಿ ಉತ್ಪಾದನೆ ಯನ್ನು ತೆಗೆಯಲಾಗುತ್ತಿದೆ.

ಸಾಮಾಜಿಕ ಕಾರ್ಯಗಳಿಗೆ ಅನುಕೂಲವಾಗಲೆಂದು ಮಠದ ವತಿಯಿಂದ ಕಲ್ಯಾಣ ಮಂಟಪಗಳನ್ನು ನಿರ್ಮಿಸಲಾಗಿದೆ. ಶ್ರೀ ಶಿವಶಂಕರ ಸ್ವಾಮಿ ಕನ್ನಡ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಲಾಗಿದೆ. ಹೀಗೆ ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಸೇವೆಯನ್ನು ಸಲ್ಲಿಸುತ್ತಾ ಮಠವು ಅಭಿವೃದ್ಧಿಗೊಂಡಿದೆ.

ವಿಳಾಸ: ಷ.ಬ್ರ.ಶ್ರೀ ಶಿವಶಂಕರ ಶಿವಾಚಾರ್ಯಸ್ವಾಮಿಗಳು, ಶ್ರೀ ಶಿವಶಂಕರೇಶ್ವರಮಠ, ಜಂಗಮವಾಡ, ಸೇಡಂ, ಗುಲ್ಬರ್ಗ ಜಿಲ್ಲೆ.

ವಿರಕ್ತ ಮಠ: ಸೇಡಂ ನಗರದ ಹಳೆಯ ಬಜಾರಿನಲ್ಲಿ ಹದಿನೆಂಟನೆಯ ಶತಮಾನದಲ್ಲಿ ಸ್ಥಾಪನೆಯಾದ ಶ್ರೀ ವಿರಕ್ತ ಮಠವು ಮುರುಘಾ ಸಮಯದ ಮಠವಾಗಿದೆ. ಶ್ರೀ ಪಂಚಾಕ್ಷರಿ ಸ್ವಾಮಿಗಳು ದಕ್ಷಿಣದ ಕಡೆಯಿಂದ ಲೋಕ ಸಂಚಾರ ಕೈಗೊಂಡು ಈ ಪ್ರಾಂತ್ಯಕ್ಕೆ ಬಂದು ನೆಲೆಸುತ್ತಾರೆ. ಗುರುಗಳು ಶ್ರೀಶೈಲ, ಬಸವಕಲ್ಯಾಣ ಮುಂತಾದ ಕ್ಷೇತ್ರಗಳಲ್ಲಿ ಸಂಚರಿಸಿ ಲೋಕಾನುಭವ ಪಡೆದು ಸೇಡಂಗೆ ಆಗಮಿಸಿ ಗ್ರಾಮದ ಹೊರಭಾಗದಲ್ಲಿರುವ ಲೋಕೇಶ್ವರ ಗುಡಿಯಲ್ಲಿ ಅನುಷ್ಠಾನಕ್ಕೆ ಕುಳಿತುಕೊಳ್ಳುತ್ತಾರೆ.

ವೀರಶೈವ ಧರ್ಮದ ಆಚಾರ ವಿಚಾರಗಳು, ಷಟ್‌ಸ್ಥಲ ಸಿದ್ಧಾಂತದ ಬಗ್ಗೆ ಉಪನ್ಯಾಸವನ್ನು ನೀಡಿ ಭಕ್ತರನ್ನು ಸನ್ಮಾರ್ಗಕ್ಕೆ ತರುತ್ತಾರೆ. ಅಲ್ಲದೆ ಭಕ್ತರಿಗೆ ಧರ್ಮಪ್ರಜ್ಞೆ ಮೂಡುವಂತೆ ಮಾಡುತ್ತಾರೆ. ಇದರಿಂದ ಜನ ಭಕ್ತರಾಗಿ, ಗುರುಗಳಿಗಾಗಿ ಈ ಸ್ಥಳದಲ್ಲಿ ಮಠವನ್ನು ಸ್ಥಾಪನೆ ಮಾಡಿದರು. ಗುರುಗಳು ಮಠದ ಸ್ಥಾಪನೆಯ ನಂತರ ವ್ಯವಸ್ಥಿತವಾದ

ಧರ್ಮ ಪ್ರಚಾರವನ್ನು ಕೈಗೊಂಡು ವೀರಶೈವ ಧರ್ಮವನ್ನು ಬೆಳೆಸುತ್ತಾರೆ. ಇವರ ನಂತರ ಮಠದ ಆಡಳಿತವನ್ನು ನಡೆಸಿಕೊಂಡು ಬಂದ ಮಠಾಧೀಶರ ಬಗ್ಗೆ ಮಾಹಿತಿ ಆಧಾರಗಳ ಕೊರತೆಯಿಂದ ಅವರುಗಳ ಹೆಸರುಗಳು ತಿಳಿಯದಾಗಿದೆ.

ಆದರೆ ಆರು ವರ್ಷಗಳ ಹಿಂದೆ ಲಿಂಗೈಕ್ಯರಾದ ಶ್ರೀ ಹಾಲುಪುಟ್ಟಯ್ಯ ಸ್ವಾಮಿಗಳು ಮಠಾಧೀಶರಾಗಿ ಮಠದ ಆಡಳಿತವನ್ನು ನಡೆಸಿಕೊಂಡು ಬರುತ್ತಿದ್ದರು. ಇವರು ಶಿವಪೂಜಾ ನಿಷ್ಠರಾಗಿ ಸದಾ ಶಿವಪೂಜೆ ಹಾಗೂ ಧ್ಯಾನದಲ್ಲಿ ನಿರತರಾಗಿರುತ್ತಿದ್ದರು. ಇವರ ನಂತರ ಈಗ ಶ್ರೀ ಗುಡ್ಡಯ್ಯ ಮತ್ತು ಶ್ರೀಮತಿ ಮಹಾದೇವಿಯರ ಪುತ್ರರಾಗಿ ೧೯೮೨ ರಲ್ಲಿ ಜನಿಸಿದ ಶ್ರೀ ರವಿಸ್ವಾಮಿಗಳನ್ನು ನೇಮಕ ಮಾಡಲಾಗಿದೆ. ಇದು ವಿರಕ್ತ ಮಠವಾದರೂ ಗುರುವಿರಕ್ತರೆಂಬ ಬೇಧವಿಲ್ಲದೆ ಸೇಡಂಗೆ ಆಗಮಿಸಿದ್ದ ಸಂದರ್ಭದಲ್ಲಿ ಕಾಶೀ ಜಗದ್ಗುರುಗಳಾದ ಶ್ರೀ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರ ಆಶೀರ್ವಾದದ ಮೇರೆಗೆ ಉತ್ತರಾಧಿಕಾರಿಯನ್ನು ನೇಮಿಸಿ ವಿದ್ಯಾಭ್ಯಾಸಕ್ಕೆ ಕಳುಹಿಸಲಾಗಿದೆ. ಊರ ಹೊರಗೆ ಸ್ಥಾಪನೆಯಾಗಿದ್ದ ವಿರಕ್ತ ಮಠವು ಕಾಲಾನಂತರ ಹಳೆ ಬಜಾರಿಗೆ ಸ್ಥಳಾಂತರಗೊಂಡಿದೆ. ಹಳೆಯ ಮಠದ ಆವರಣದಲ್ಲಿ ಮೂರು ಗದ್ದುಗೆಗಳು ಸ್ಥಾಪನೆಯಾಗಿವೆ. ಪಟ್ಟಣದ ಒಳ ಭಾಗದಲ್ಲಿರುವ ಮಠದಲ್ಲಿ ತೋರು ಗದ್ದುಗೆಯನ್ನು ಸ್ಥಾಪಿಸಿಕೊಳ್ಳಲಾಗಿದೆ.

ವಿಳಾಸ: ಶ್ರೀ ರವಿಸ್ವಾಮಿಗಳು, ಶ್ರೀ ವಿರಕ್ತ ಮಠ, ಹಳೆಬಜಾರ್, ಸೇಡಂ, ಗುಲ್ಬರ್ಗ ಜಿಲ್ಲೆ.

❑

ಚಾಮರಾಜನಗರ ಜಿಲ್ಲೆ



ಗುಂಡ್ಲುಪೇಟೆ ತಾಲ್ಲೂಕು : ೧. ಮಾದಹಳ್ಳಿ ೨. ಸೋಮಹಳ್ಳಿ, ೩. ಕಬ್ಬಳ್ಳಿ, ೪. ಮುಡಗೂರು ೫. ಪಡಗೂರು ೬. ಜಿಕ್ಕತುಪ್ಪೂರು ೭. ಬೊಮ್ಮನಹಳ್ಳಿ ೮. ಹಂಗಳ ೯. ಗೋಪಾಲಪುರ ೧೦. ಕುರುಬರಹುಂಡಿ ೧೧. ತೆರಕಣಾಂಬಿ. **ಚಾಮರಾಜನಗರ ತಾಲ್ಲೂಕು** : ೧. ಹರವೆ ೨. ಹುರುಳಿ ನಂಜೂಪುರ ೩. ಅಂಡರಕಳ್ಳಿ ೩. ಮರೆಯಾಲ ೪. ಉಗೇನದಹುಂಡಿ ೫. ಕಟ್ನವಾಡಿ ೬.ಅರಕಲವಾಡಿ ಯಳಂದೂರು ತಾಲ್ಲೂಕು : ೧. ಕಾರಾಪುರ ೨. ಅಗರ ೩. ಹೊನ್ನೂರು ೪. ಕೆಸ್ತೂರು. **ಕೊಳ್ಳೆಗಾಲ ತಾಲ್ಲೂಕು** : ೧. ಚಿಲಕವಾಡಿ ೨. ಮುಡಿಗುಂಡಂ ೩. ಆಲಹಳ್ಳಿ ೪. ಹೊಂಡರಬಾಳು ೫. ಮಧುವನಹಳ್ಳಿ ೬. ಗುಂಡೇಗಾಲ ೭. ಪಾಳ ೮. ಬಂಡಹಳ್ಳಿ ೯. ಕಾಮಗೆರೆ ೧೦. ಮಲೆಮಾದೇಶ್ವರ ಬೆಟ್ಟ ೧೧. ಅಜ್ಜೀಪುರ ೧೨. ಗೋಪಿಶೆಟ್ಟಿಊರು ೧೩. ಚೆನ್ನಲಿಂಗನಹಳ್ಳಿ

ಚಾಮರಾಜನಗರ ಜಿಲ್ಲೆಯು ೧೯೯೭ ರಲ್ಲಿ ಮೈಸೂರು ಜಿಲ್ಲೆಯಿಂದ ಬೇರ್ಪಟ್ಟು ಪ್ರತ್ಯೇಕವಾದ ಜಿಲ್ಲೆಯ ಅಸ್ತಿತ್ವವನ್ನು ಪಡೆದಿದೆ. ಈ ಜಿಲ್ಲೆಯು ಚಾಮರಾಜನಗರ, ಕೊಳ್ಳೆಗಾಲ, ಗುಂಡ್ಲುಪೇಟೆ ಮತ್ತು ಯಳಂದೂರು ತಾಲ್ಲೂಕುಗಳನ್ನು ಒಳಗೊಂಡಿದೆ. ಮೈಸೂರು, ಬೆಂಗಳೂರು ಕೇರಳ ಹಾಗೂ ತಮಿಳುನಾಡು ಗಡಿಭಾಗಕ್ಕೆ ಹೊಂದಿಕೊಂಡಿರುವ ಈ ಜಿಲ್ಲೆ, ಕೊಳ್ಳೆಗಾಲದ ಮಲೆಮಾದೇಶ್ವರಬೆಟ್ಟ, ಬಿಳಿಗಿರಿ ರಂಗಯ್ಯನಬೆಟ್ಟ ಹಾಗೂ ಬಂಡಿಪುರ ಅರಣ್ಯಗಳಿಂದ ಆವೃತಗೊಂಡು ಶ್ರೀಗಂಧದ ಬೀಡೆಂದು ಹೆಸರು ಪಡೆದಿದೆ. ಕಾವೇರಿ ಹಾಗೂ ನುಗು ನದಿಗಳು ಚಾಮರಾಜನಗರ ಜಿಲ್ಲೆಯಲ್ಲಿ ಹರಿದು ಪ್ರಕೃತಿ ಸಿರಿಸಂಪತ್ತಿನ ಜಿಲ್ಲೆಯಾಗಿ ರೂಪುಗೊಳ್ಳುವಂತೆ ಮಾಡಿದೆ.

ಇಂತಹ ನಾಡಿನಲ್ಲಿ ಯದುವಂಶ ಮೊಳಕೆಯೊಡೆದು ನಾಡನ್ನು ಆಳಿತು ಎಂದರೆ ಎಲ್ಲರೂ ಹೆಮ್ಮೆ ಪಡಬೇಕು. ಅದೇ ರೀತಿ ತೆರಕಣಾಂಬಿ, ಉಮ್ಮತ್ತೂರು ಪಾಳೆಗಾರರು ಸೇರಿದಂತೆ ಚೋಳರು, ಗಂಗರು, ವಿಜಯನಗರದ ಅರಸರು ಹಾಗೂ ಶ್ರೀರಂಗಪಟ್ಟಣದ ಸುಲ್ತಾನರು ಈ ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿ ಐತಿಹಾಸಿಕ ಸ್ಥಾನವನ್ನು ನೀಡಿದ್ದಾರೆ.

ಹನ್ನೆರಡನೆಯ ಶತಮಾನದಲ್ಲಿ ಎಪ್ಪತ್ತೇಳು ಮಲೆಗಳ ಉದ್ಧಾರಕ್ಕಾಗಿಯೆ ಬಂದ ಮಹಾಪುರುಷ ಶ್ರೀ ಮಾದೇಶ್ವರರ ಕಾಯಕ ಕ್ಷೇತ್ರ ಇದಾಗಿದೆ. ಇಂತಹ ಧಾರ್ಮಿಕ, ಐತಿಹಾಸಿಕ ನಾಡು ಸಾಹಿತ್ಯಿಕವಾಗಿಯೂ ಸಹ ಹಿಂದುಳಿದಿಲ್ಲ. ಕೊಳ್ಳೆಗಾಲ ತಾಲ್ಲೂಕಿನ ಚಿಲಕವಾಡಿಯ ಶಂಭುಲಿಂಗನಬೆಟ್ಟದಲ್ಲಿ ಅನುಷ್ಠಾನಗೊಂಡಿದ್ದ ಶ್ರೀ ನಿಜಗುಣ ಶಿವಯೋಗಿಗಳು, ಸಾಹಿತ್ಯ ಪ್ರಕಾರಕ್ಕೆ ನವೀನ ರೀತಿಯ ಕೈವಲ್ಯ ಸಾಹಿತ್ಯ ಪ್ರಕಾರವನ್ನು ನೀಡಿ ಕನ್ನಡ ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿದರು. ಶ್ರೀ ಮುಪ್ಪಿನ ಷಡಕ್ಷರಿ ದೇವರು ಯಳಂದೂರು ತಾಲ್ಲೂಕಿನ ಯರಗಂಬಳ್ಳಿಯಲ್ಲಿ ಪಟ್ಟದ ಮಠದ ಮಠಾಧಿಪತಿಗಳಾಗಿದ್ದು ಉಭಯಭಾಷಾ ವಿಶಾರದರಾಗಿ ಮಹಾಕವಿ ಎನಿಸಿಕೊಂಡಿದ್ದಾರೆ. ಸಾಹಿತ್ಯಿಕವಾಗಿ, ಭೌಗೋಳಿಕವಾಗಿ, ಐತಿಹಾಸಿಕವಾಗಿ ಹಾಗೂ ಧಾರ್ಮಿಕವಾಗಿ ಚಾಮರಾಜನಗರ ಜಿಲ್ಲೆ ಈ ನಾಡಿಗೆ ನೀಡಿರುವ ಕೊಡುಗೆ ಅಪಾರವಾಗಿದೆ. ಚಾಮರಾಜನಗರ ಸಮೀಪದ ಹರದನಹಳ್ಳಿಯ ಗುರುಪೀಠದ ಮಠಾಧಿಪತಿಗಳಾಗಿದ್ದ ಶ್ರೀ ಗೋಸಲ ಸಿದ್ಧೇಶ್ವರರು, ಶ್ರೀ ಗೋಸಲ ಚನ್ನಬಸವೇಶ್ವರರು ಮಾಡಿದ ಸಾಧನೆಯ ಜೊತೆಗೆ ಶ್ರೀ ತೋಂಟದ ಸಿದ್ಧಲಿಂಗ ಸ್ವಾಮಿಗಳು ಹದಿನೈದನೆಯ ಶತಮಾನದಲ್ಲಿ ಧಾರ್ಮಿಕ ಆಂದೋಲನ ವನ್ನು ರೂಪಿಸಿ, ವೀರಶೈವ ಧರ್ಮವನ್ನು ಪುನಶ್ಚೇತನಗೊಳಿಸಿದ್ದರು ಎಂಬುದು ದಾಖಲಾರ್ಹ ವಿಚಾರವಾಗಿದೆ.

ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿ ಒಟ್ಟು ಎಂಬತ್ತೈದು ವೀರಶೈವ ಮಠಗಳು ಸ್ಥಾಪನೆಯಾಗಿವೆ ಎಂಬ ಮಾಹಿತಿ ದೊರೆತಿದೆ. ಇದರ ಆಧಾರದ ಮೇಲೆ ಶೋಧನೆಗೆ ಹೋದ ಸಂದರ್ಭದಲ್ಲಿ ಚಾಮರಾಜನಗರ ತಾಲ್ಲೂಕಿನಲ್ಲಿ ಹದಿಮೂರು ಮಠಗಳು. ಕೊಳ್ಳೆಗಾಲ ತಾಲ್ಲೂಕಿನಲ್ಲಿ ಇಪ್ಪತ್ನಾಲ್ಕು ಮಠಗಳು, ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಹದಿನಾರು ಮಠಗಳು ಹಾಗೂ ಯಳಂದೂರು ತಾಲ್ಲೂಕಿನಲ್ಲಿ ಐದು ಮಠಗಳು ಸ್ಥಾಪನೆಯಾಗಿರುವುದು ತಿಳಿಯುತ್ತಿದೆ. ಉಳಿದ ಮಠಗಳು ಹೇಳಲು ಹೆಸರಿಲ್ಲದಂತಾಗಿವೆ. ಅಸ್ತಿತ್ವದಲ್ಲಿರುವ ಐವತ್ತೆಂಟು ಮಠಗಳಲ್ಲಿ ಈಗ ಐವತ್ನಾಲ್ಕು ಮಠಗಳಲ್ಲಿ ಗುರುಗಳಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿ, ಈ ಜಿಲ್ಲೆಯನ್ನು ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಶ್ರೀಮಂತಗೊಳಿಸಿವೆ. ಇಲ್ಲಿನ ಬಹುತೇಕ ಮಠಗಳು ಕಂತೆ ಭಿಕ್ಷದ ಮೂಲಕ ಅನ್ನದಾಸೋಹವನ್ನು ನಿರಂತರವಾಗಿ ನಡೆಸಿ ಅಸಹಾಯಕರಿಗೆ ನೆರವಾಗಿವೆ.

ಕೊಳ್ಳೆಗಾಲ ತಾಲ್ಲೂಕು

ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲವು ಪ್ರಾಕೃತಿಕವಾಗಿ ಶ್ರೀಮಂತಿಕೆ ಪಡೆದಿದೆ. ಈ ತಾಲ್ಲೂಕು ವೀರಶೈವ ಧರ್ಮದ ಕೇಂದ್ರ ಸ್ಥಳವಾಗಿ ರೂಪುಗೊಂಡಿದೆ. ಈ ತಾಲ್ಲೂಕಿನಲ್ಲಿ ಪ್ರಸ್ತುತ ಇಪ್ಪತ್ನಾಲ್ಕು ಮಠಗಳು ಅಸ್ತಿತ್ವದಲ್ಲಿದ್ದು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಅಜ್ಜೀಪುರ

ಕೊಳ್ಳೆಗಾಲ ತಾಲ್ಲೂಕಿನ ಅಜ್ಜೀಪುರವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಮೂವತ್ತೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಕೋಡದಾಳು ಮಠವು ಸ್ಥಾಪನೆಯಾಗಿದೆ.

ಕೋಡದಾಳು ಮಠ: ಅಜ್ಜೀಪುರ ಗ್ರಾಮದ ಪಶ್ಚಿಮಕ್ಕೆ ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿ, ಪುತ್ರವರ್ಗದ ಪರಂಪರೆಯ ಶ್ರೀ ಕೋಡದಾಳು ಮಠವು ಸ್ಥಾಪನೆಯಾಗಿದೆ. ಚಿತ್ರದುರ್ಗದಲ್ಲಿದ್ದ ಶ್ರೀ ನಿರ್ವಾಣ ಶಿವಯೋಗಿಗಳೆಂಬುವರು ಲೋಕಸಂಚಾರ ಕೈಗೊಂಡು ಉತ್ತರದೇಶಗಳಲ್ಲಿ ಸಂಚಾರ ಮಾಡಿ ನಂತರ ಕಾವೇರಿ, ಸಂಗಮಕ್ಷೇತ್ರ ಹಾಗೂ ಕೊಳ್ಳೆಗಾಲದ ಮೂಲಕ ಈ ಪ್ರಾಂತ್ಯಕ್ಕೆ ಬಂದು ನೆಲೆಸಿ, ಮಠವನ್ನು ಸ್ಥಾಪನೆ ಮಾಡಿದರು ಎಂದು ಹೇಳಲಾಗುತ್ತಿದೆ. ಇಲ್ಲಿ ಅನೇಕ ವರ್ಷಗಳ ಕಾಲ ಬದುಕಿದ ಶ್ರೀ ಶಿವಯೋಗಿಗಳು ವೀರಶೈವ ತತ್ತ್ವದ ಬೋಧನೆ ಮಾಡಿದರು. ಶ್ರೀ ನಿರ್ವಾಣ ಸ್ವಾಮಿಗಳು ತಪಸ್ಸಿನ ಶಕ್ತಿಯಿಂದ ಈ ಕ್ಷೇತ್ರವನ್ನು ಕಾಯಲು ಭದ್ರಕಾಳಿಯನ್ನು ಕಾವಲಿಟ್ಟಿದ್ದಾರೆ ಈ ಕಾರಣಕ್ಕೆ ಇಲ್ಲಿ ದುಷ್ಟ ಶಕ್ತಿಗಳ ಬಾಧೆ ಇಲ್ಲ ಎಂದು ಹೇಳುವ ಕಥೆ ಜನಜನಿತವಾಗಿದೆ.

ಶಿಷ್ಯರಾದ ಗುರುಗಳು: ಶ್ರೀ ನಿರ್ವಾಣ ಶಿವಯೋಗಿಗಳ ಆಧ್ಯಾತ್ಮ ಶಕ್ತಿಗೆ ಮಾರುಹೋಗಿದ್ದ ಅನೇಕ ಕಿರಿಯ ಗುರುಗಳು ಶಿಷ್ಯರಾಗಿ ಇವರ ಬಳಿ ನೆಲೆಸಿದ್ದರು. ಇವರಲ್ಲಿ ಮುಖ್ಯರಾದವರೆಂದರೆ ಮಧುವನಹಳ್ಳಿಯ ಶ್ರೀ ಸಿದ್ಧಮಲ್ಲ ಶಿವಾಚಾರ್ಯ ಸ್ವಾಮಿಗಳು. ಇವರು ಗುರುಗಳ ಸೇವೆ ಮಾಡಿಕೊಂಡಿದ್ದು ಈ ಮಠದಲ್ಲೇ ಐಕ್ಯಗೊಂಡರು. ಅನೇಕ ಪವಾಡಗಳನ್ನು ಮಾಡಿ ಜನಪರ ಕಾರ್ಯಕ್ರಮಗಳೊಂದಿಗೆ ಹೆಚ್ಚು ಪ್ರಸಿದ್ಧಿ ಪಡೆದ ಶ್ರೀ ನಿರ್ವಾಣ ಶಿವಯೋಗಿಗಳು ಇಲ್ಲಿ ನೆಲೆಸಿದ್ದು ಸಾಕು ಎಂದು ಪುನಃ ಲೋಕಸಂಚಾರಕ್ಕೆ ಹೊರಟು ಮಧುವನಹಳ್ಳಿಯ ಮಠದಲ್ಲಿ ಲಿಂಗೈಕ್ಯರಾದರು.

ಪರಂಪರೆ:

೧. ಷ.ಬ್ರ.ಶ್ರೀ ನಿರ್ವಾಣ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ಜಡೆ ಶಿವಾಚಾರ್ಯ ಸ್ವಾಮಿಗಳು
೩. ಷ.ಬ್ರ.ಶ್ರೀ ಉದ್ದಾನ ಶಿವಾಚಾರ್ಯ ಸ್ವಾಮಿಗಳು
೪. ಷ.ಬ್ರ.ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು
೫. ಷ.ಬ್ರ.ಶ್ರೀ ನಂದೀಶ ಶಿವಾಚಾರ್ಯ ಸ್ವಾಮಿಗಳು (ಈಗಿನವರು)

ಶ್ರೀ ನಿರ್ವಾಣ ಶಿವಯೋಗಿಗಳಿಂದ ಪ್ರಾರಂಭಗೊಂಡ ಈ ಮಠದ ಪರಂಪರೆಯನ್ನು ನಿರ್ದಿಷ್ಟವಾಗಿ ಗುರುತಿಸಲು ಆಧಾರಗಳು ಲಭ್ಯವಿಲ್ಲ. ಈ ಕಾರಣಕ್ಕೆ ಐದು ಜನ ಗುರುಗಳ ಹೆಸರನ್ನು ಗುರುತಿಸಬಹುದಾಗಿದೆ. ಮಠದ ಪರಂಪರೆಯಲ್ಲಿ ಹನ್ನೊಂದು ಜನ ಸ್ವಾಮಿಗಳು ಅಧಿಕಾರಕ್ಕೆ ಬಂದಿರಬಹುದೆಂದು ಹೇಳಲಾಗುತ್ತಿದೆ. ಆದರೆ ಇದಕ್ಕೆ ಆಧಾರಗಳು ಲಭ್ಯವಿಲ್ಲ. ಈ ಮಠದ ಪರಂಪರೆ ಯಲ್ಲಿ ಬರುವ ಶ್ರೀ ಜಡೆ ಶಿವಾಚಾರ್ಯ ಸ್ವಾಮಿಗಳು ಮತ್ತು ಶ್ರೀ ಉದ್ದಾನ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಗಳು ಮಠದ ಆವರಣದಲ್ಲಿ ನಿರ್ಮಾಣಗೊಂಡಿವೆ. ನಂತರದ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಯು ಮಳವಳ್ಳಿ ತಾಲ್ಲೂಕಿನ ಧನಗೂರು ಮಠದಲ್ಲಿ ಸ್ಥಾಪನೆಯಾಗಿದೆ. ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ೧೯೬೨ ರಲ್ಲಿ ಲಿಂಗೈಕ್ಯರಾದ ಮೇಲೆ ಮಠವು ಉತ್ತರಾಧಿಕಾರಿಗಳು ಇಲ್ಲದೆ ಖಾಲಿ ಉಳಿದಿತ್ತು. ಧನಗೂರು, ಮಧುವನಹಳ್ಳಿ ಗುರುಗಳು ಖಾಲಿ ಇದ್ದ ಮಠಕ್ಕೆ ಉತ್ತರಾಧಿಕಾರಿಗಳನ್ನು ಆಯ್ಕೆಮಾಡಿ, ಪುರಾತನ ಮಠದ ಪರಂಪರೆ ಬೆಳೆಯುವಂತೆ ಮಾಡಿದ್ದಾರೆ.

ಅಜ್ಜೀಪುರದ ಶ್ರೀ ಮಹಾದೇವಪ್ಪ ಮತ್ತು ಶ್ರೀಮತಿ ಮಹಾದೇವಮ್ಮನವರ ಪುತ್ರರಾಗಿ ೧೯೭೩ ರ ಮೇ ಇಪ್ಪತ್ತೆರಡು ಜನಿಸಿದ ಶ್ರೀ ನಂದೀಶ ಶಿವಾಚಾರ್ಯ ಸ್ವಾಮಿಗಳು, ಉತ್ತರಾಧಿಕಾರಿಗಳಾಗಿ ನೇಮಕಗೊಂಡು ವಿದ್ಯಾಭ್ಯಾಸವನ್ನು ಮುಂದುವರೆಸಿ, ಮೈಸೂರಿನಲ್ಲಿ ಪದವಿ ಮುಗಿಸಿ ಮಠಕ್ಕೆ ಆಗಮಿಸಿದರು. ಶ್ರೀ ನಂದೀಶ್ವರ ಶಿವಾಚಾರ್ಯ ಸ್ವಾಮಿಗಳು ಮಠದ ಹಳೆಯ ಕಟ್ಟಡವನ್ನು ತೆಗೆಸಿ ನೂತನ ಕಟ್ಟಡವನ್ನು ನಿರ್ಮಿಸಿ, ೧೯೯೨ ರ ಫೆಬ್ರವರಿ ಹದಿನೈದರಂದು ಮಧುವನಹಳ್ಳಿ ಹಾಗೂ ಧನಗೂರು ಗುರುಗಳಿಂದ ಅನುಗ್ರಹ ಪಡೆದು ಪಟ್ಟಾಧಿಕಾರವನ್ನು ವಹಿಸಿಕೊಂಡರು.

ಬಿಲ್ವ: ಮಠದ ಆವರಣದಲ್ಲಿದ್ದ ಬಿಲ್ವಪತ್ರೆ ಮರ ಹೊರಗೆ ಇರುವ ತನಕ ಊರು ಅಭಿವೃದ್ಧಿಯಾಗಿರಲಿಲ್ಲ. ಇದನ್ನು ಮನಗಂಡ ಶ್ರೀ ಉದ್ದಾನ ಶಿವಯೋಗಿಗಳು ಬಿಲ್ವಪತ್ರೆ ಮರವನ್ನೂ ಸೇರಿಸಿಕೊಂಡು ಮಠ ಕಟ್ಟಿಸಿದ್ದಾರೆ. ಮರ ಮಠದೊಳಗೆ ಸೇರಿದ ಮೇಲೆ ಊರು ಅಭಿವೃದ್ಧಿ ಕಾಣತೊಡಗಿದೆ ಎಂಬ ನಂಬಿಕೆಯನ್ನು ಉಳಿಸಿಕೊಂಡ ಊರಿನ ಜನರು, ಮಠದ ಬಗ್ಗೆ ವಿಶೇಷ ಗೌರವದೊಂದಿಗೆ ತಮ್ಮ ಸಂಪರ್ಕವನ್ನು ಬೆಳೆಸಿಕೊಂಡು ಬಂದಿದ್ದಾರೆ.

ಧಾರ್ಮಿಕ ಕಾರ್ಯಗಳು: ಗದ್ದುಗೆಗಳಿಗೆ ನಿತ್ಯ ಪೂಜೆ ನಡೆಸಲಾಗುತ್ತಿದೆ. ಕಾರ್ತೀಕ, ಶ್ರಾವಣ, ಧನುರ್ಮಾಸ, ನವರಾತ್ರಿ, ಶಿವರಾತ್ರಿಯಲ್ಲಿ ವಿಶೇಷ ಪೂಜೆ ಹಾಗೂ ಕಾರ್ತೀಕದಲ್ಲಿ ದೀಪೋತ್ಸವವನ್ನು ನಡೆಸಲಾಗುತ್ತಿದೆ. ತಮಿಳುನಾಡಿನಲ್ಲಿ ಹೆಚ್ಚು ಜನ ಭಕ್ತರಿದ್ದಾರೆ. ಕೊಳ್ಳೆಗಾಲದ ಸುತ್ತಮುತ್ತ ಮಠದ ಭಕ್ತರ ಸಂಖ್ಯೆ ಹೆಚ್ಚಾಗಿದ್ದು, ಇವರು ಮಠದ ಅಭಿವೃದ್ಧಿಗೆ ನೆರವು ನೀಡುತ್ತಿದ್ದಾರೆ. ಮಠದ ಆಸ್ತಿಯಾಗಿ ಮೂರು ಎಕರೆ ಜಮೀನು ಮಾತ್ರ ಇದೆ. ನೀರಾವರಿ ಸೌಕರ್ಯ ಇಲ್ಲದ ಕಾರಣ ಇದರ ಆದಾಯವನ್ನು ನಂಬಿಕೊಳ್ಳುವಂತಿಲ್ಲ. ಭಕ್ತರನ್ನು ಸಂಘಟಿಸುತ್ತಾ ಧಾರ್ಮಿಕ ಪ್ರಜ್ಞೆಯನ್ನು ಸಮಾಜದಲ್ಲಿ ಬೆಳೆಸುತ್ತಾ, ಧರ್ಮ ಕಾರ್ಯದಲ್ಲಿ ಮಠ ತನ್ನನ್ನು ತೊಡಗಿಸಿಕೊಂಡಿದೆ.

ವಿಳಾಸ: ಷ.ಬ್ರ.ಶ್ರೀ ನಂದೀಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕೋಡದಾಳು ಮಠ, ಅಜ್ಜೀಪುರ, ಕೊಳ್ಳೆಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ಆಲಹಳ್ಳಿ

ಕೊಳ್ಳೆಗಾಲ ತಾಲ್ಲೂಕಿನ ಆಲಹಳ್ಳಿ, ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಹದಿನೈದು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಪಟ್ಟದ ಮಠವು ಸ್ಥಾಪನೆಯಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ

ಪಟ್ಟದ ಮಠ: ಆಲಹಳ್ಳಿ,ಹಳ್ಳಿಯಿಂದ ಪೂರ್ವಕ್ಕೆ ಹೊರಭಾಗದಲ್ಲಿ ಸೋಮಹಳ್ಳಿಯ ಶಾಖೆಯ ಪಟ್ಟದ ಮಠವು ಸ್ಥಾಪನೆಯಾಗಿದ್ದು, ಧಾರ್ಮಿಕ ಚಟುವಟಿ ಕೆಗಳನ್ನು ಮುಂದುವರೆಸಿಕೊಂಡು ಬಂದಿದೆ. ಗ್ರಾಮದ ಧಾರ್ಮಿಕ ಕ್ರಿಯಾದಿಗಳನ್ನು ನೆರವೇರಿಸಲು ಜಂಗಮ ಮೂರ್ತಿಯ ಆವಶ್ಯಕತೆಯಿದೆ ಎಂದು ಅರಿತು ಮಠ ಸ್ಥಾಪನೆ ಮಾಡಿ, ಶ್ರೀ ಬಸಪ್ಪ ಸ್ವಾಮಿಗಳಿಗೆ ಪಟ್ಟಾಧಿಕಾರ ಮಾಡಲಾಯಿತು.

ನಂತರ ೧೯೯೪ ರ ಮಾರ್ಚ್ ಹದಿನಾರರಂದು ಶ್ರೀ ಶಿವಕುಮಾರ ಸ್ವಾಮಿಗಳು ಪಟ್ಟಾಧಿಕಾರಕ್ಕೆ ಬಂದರು. ಇವರು ಆಡಳಿತಕ್ಕೆ ಬಂದ ಮೇಲೆ ಮಠದ ಧಾರ್ಮಿಕ ಕಾರ್ಯಗಳನ್ನು ವಿಧಿವತ್ತಾಗಿ ನಡೆಸಿಕೊಂಡು ಬರತೊಡಗಿದರು. ಭಿಕ್ಷದ ಮರಿಯನ್ನು ನೇಮಿಸಿಕೊಂಡು ದಿನದ ಎರಡೂ ವೇಳೆ ಕಂತೆ ಭಿಕ್ಷ ಮಾಡಿಸಿ ದಾಸೋಹ ಕ್ರಿಯೆಯನ್ನು ಸಾಂಗವಾಗಿ ನಡೆಸುತ್ತಾ ಬಂದಿದ್ದಾರೆ. ಶ್ರೀ ಶಿವಕುಮಾರ ಸ್ವಾಮಿಗಳು ಆಡಳಿತಕ್ಕೆ ಬಂದ ಆರು ವರ್ಷಗಳ ತರುವಾಯ, ಹಳೆಯ ಮಠದ ಮುಂಭಾಗಕ್ಕೆ ನೂತನ ಕಟ್ಟಡ ಕಟ್ಟಿಸಿದ್ದು ಹಳೆಯ ಕಟ್ಟಡವನ್ನು ಹಾಗೇ ಉಳಿಸಿಕೊಳ್ಳಲಾಗಿದೆ. ಮಠದ ಹಿರಿಯ ಗುರುಗಳಾದ ಶ್ರೀ ಬಸಪ್ಪ ಸ್ವಾಮಿಗಳ ಗದ್ದುಗೆಗೆ ಮಂಟಪ ನಿರ್ಮಿಸಲಾಗಿದೆ. ಶ್ರೀ ಬಸಪ್ಪ ಸ್ವಾಮಿಗಳ ಸಮಕಾಲೀನರಾದ ಜ್ಯೋತಿಷ್ಯ ಗುರುಗಳಾದ ಶ್ರೀ ನಂಜುಂಡ ಸ್ವಾಮಿಗಳ ಗದ್ದುಗೆಯನ್ನು ಮಠದಲ್ಲೇ ನಿರ್ಮಿಸಲಾಗಿದೆ. ಮಠದ ಆಸ್ತಿಯಾಗಿರುವ ನಾಲ್ಕು ಎಕರೆ ಗದ್ದೆಯಲ್ಲಿ ಆದಾಯ ತೆಗೆದು, ದಾಸೋಹ ಕ್ರಿಯೆಗೆ ಬಳಸಿಕೊಳ್ಳಲಾಗುತ್ತಿದೆ.

ವಿಳಾಸ: ಶ್ರೀ ಶಿವಕುಮಾರ ಸ್ವಾಮಿಗಳು, ಶ್ರೀ ಪಟ್ಟದ ಮಠ, ಆಲಹಳ್ಳಿ, ಕೊಳ್ಳೆಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ಕಾಮಗೆರೆ

ಕೊಳ್ಳೆಗಾಲ ತಾಲ್ಲೂಕಿನ ಕಾಮಗೆರೆಯು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹದಿನಾಲ್ಕು ಕಿ.ಮೀ. ದೂರದಲ್ಲಿದೆ. ಕೊಳ್ಳೆಗಾಲ ಮತ್ತು ಮಹದೇಶ್ವರ ಬೆಟ್ಟದ ರಸ್ತೆಯಲ್ಲಿ ಸಿಗುವ ಕಾಮಗೆರೆಯಲ್ಲಿ ಶ್ರೀ ಪಟ್ಟದಮಠ ಮತ್ತು ಶ್ರೀ ದಾಸೋಹ ಮಠ ಪ್ರಾರಂಭವಾಗಿ ಇಲ್ಲಿನ ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ಬೆಳೆದಿವೆ.

ಪಟ್ಟದಮಠ: ಕಾಮಗೆರೆ ಗ್ರಾಮದ ಮಧ್ಯಭಾಗದಲ್ಲಿ ಶ್ರೀಶೈಲ ಪೀಠದ ಶಾಖಾಮಠವಾಗಿರುವ ಶ್ರೀ ಪಟ್ಟದ ಮಠವು ಸ್ಥಾಪನೆಯಾಗಿದೆ. ಶ್ರೀ ಭೋಗನಂಜಪ್ಪ ಶಿವಾಚಾರ್ಯ ಸ್ವಾಮಿಗಳು ಸುಮಾರು ನೂರೈವತ್ತು ವರ್ಷಗಳ ಹಿಂದೆ ಈ ಮಠವನ್ನು ಸ್ಥಾಪಿಸಿ, ಧರ್ಮ ನೆಲೆಗೊಳ್ಳುವಂತೆ ಮಾಡಿದ್ದರು ಎಂದು ಹೇಳಲಾಗುತ್ತಿದೆ. ಅಂದು ಸ್ಥಾಪನೆಗೊಂಡ ಮಠ ಈತನಕ ಧಾರ್ಮಿಕ ಕೆಲಸಗಳನ್ನು ನಡೆಸಿಕೊಂಡು ಬಂದಿದೆ.

ಪರಂಪರೆ:

೧. ಷ.ಬ್ರ.ಶ್ರೀ ಭೋಗನಂಜಪ್ಪ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಚನ್ನಬಸಪ್ಪ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಶಾಂತಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ನಂಜುಂಡ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಶಾಂತಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ಭೋಗನಂಜಪ್ಪ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದು ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ, ಜನರನ್ನು ಜಾಗೃತಗೊಳಿಸಿ ವೀರಶೈವ ಧರ್ಮದ ಆಚರಣೆಗಳನ್ನು ಪ್ರಸಾರ ಮಾಡಿದರು. ಅನೇಕರಿಗೆ ಲಿಂಗ ದೀಕ್ಷೆ ನೀಡಿ ವೀರಶೈವ ಧರ್ಮ ಬೆಳೆಯುವಂತೆ ಮಾಡಿದರು. ಮಠದ ಪರಂಪರೆಯ ಗುರುಗಳಾಗಿ ಅಧಿಕಾರ ವಹಿಸಿಕೊಂಡ ಶ್ರೀ ಶಾಂತಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿದರು. ನಂತರ ಬಂದ ಶ್ರೀ ನಂಜುಂಡ ಶಿವಾಚಾರ್ಯ ಸ್ವಾಮಿಗಳು ಮಠದ ಆಸ್ತಿಯನ್ನು ವಿಸ್ತರಿಸಿ, ತೆಂಗನ್ನು ಬೆಳೆಸಿ ಹೆಚ್ಚು ಆದಾಯ ಬರುವಂತೆ ಮಾಡಿ ಜೀರ್ಣಗೊಂಡ ಮಠವನ್ನು ಅಭಿವೃದ್ಧಿಪಡಿಸಿದರು. ಶ್ರೀ ಕಪಿನಪ್ಪ ಮತ್ತು ಶ್ರೀಮತಿ ಕೆಂಪಮ್ಮನವರ ಪುತ್ರರಾಗಿ ೧೯೬೭ರಲ್ಲಿ ಜನಿಸಿದ ಶ್ರೀ ಶಾಂತಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡು ೧೯೮೯ರಲ್ಲಿ ಪಟ್ಟಾಧಿಕಾರ ಮಾಡಿದರು. ಇಂತಹ ಕಾಯಕಯೋಗಿಗಳು ೧೯೯೦ರಲ್ಲಿ ಲಿಂಗೈಕ್ಯರಾದರು. ಈಗಿನ ಗುರುಗಳಾದ ಶ್ರೀ ಶಾಂತ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು ಕಾಯಕ ಯೋಗದಿಂದ ಮಠವನ್ನು ಆರ್ಥಿಕವಾಗಿ ಸದೃಢಗೊಳ್ಳುವಂತೆ ಮಾಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಸ್ಥಾಪನೆಯಾಗಿರುವ ನಾಲ್ಕು ಗದ್ದುಗೆಗಳಿಗೆ ನಿತ್ಯ ಪೂಜೆ ನಡೆಸಲಾಗುತ್ತಿದೆ. ಈ ಮಠಕ್ಕೆ ಹನ್ನೆರಡು ಹಳ್ಳಿಗಳ ಭಕ್ತರು ಇದ್ದು, ಇವರ ಮನೆಗಳಿಗೆ ಹೋಗಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು, ಶ್ರೀಪಟ್ಟದಮಠ,ಕಾಮಗೆರೆ, ಕೊಳ್ಳೆಗಾಲ ತಾ,ಚಾಮರಾಜನಗರ ಜಿಲ್ಲೆ.

ದಾಸೋಹಮಠ: ಕಾಮಗೆರೆಯ ಮಧ್ಯಭಾಗದಲ್ಲಿ ೧೮೮೫ ರಲ್ಲಿ ಭಿಕ್ಷದ ದೇವನೂರು ಶ್ರೀ ಗುರುಮಲ್ಲೇಶ್ವರರು ಮತ್ತು ಭಿಕ್ಷದ ಶ್ರೀ ರಾಚಪ್ಪ ಸ್ವಾಮಿಗಳ ನೇತೃತ್ವದಲ್ಲಿ ಶ್ರೀ ದಾಸೋಹ ಮಠವು ಸ್ಥಾಪನೆಯಾಗಿದೆ. ಮಠದಲ್ಲಿ ಈಗಿರುವ ಶ್ರೀ ಮಹಾದೇವ ಸ್ವಾಮಿಗಳು ಭಿಕ್ಷೆ ಮಾಡುತ್ತಾ ದಾಸೋಹ ಕಾರ್ಯವನ್ನು ನಡೆಸುತ್ತಿದ್ದಾರೆ. ಮಠದ ಹಳೆಯ ಕಟ್ಟಡವನ್ನು ಕಲ್ಲಿನಿಂದ ನಿರ್ಮಿಸಲಾಗಿದ್ದು, ಈಗ ಗ್ರಾಮದ ಜನರು ನೂತನ ಕಟ್ಟಡವನ್ನು ಕಟ್ಟಿಸಿದ್ದಾರೆ. ಗ್ರಾಮಸ್ಥರು ಮತ್ತು ಮಠದ ವತಿಯಿಂದ ಬಸವ ಜಯಂತಿಯನ್ನು ಆಚರಿಸಲಾಗುತ್ತಿದೆ.

ವಿಳಾಸ: ಶ್ರೀ ಮಹಾದೇವ ಸ್ವಾಮಿಗಳು, ಶ್ರೀ ದಾಸೋಹಮಠ, ಕಾಮಗೆರೆ, ಕೊಳ್ಳೆಗಾಲ ತಾಲ್ಲೂಕು. ಚಾಮರಾಜನಗರ ಜಿಲ್ಲೆ.

ಕೊಳ್ಳೆಗಾಲ

ಚಾಮರಾಜ ನಗರ ಜಿಲ್ಲೆಯ ಕೊಳ್ಳೆಗಾಲವು ಜಿಲ್ಲಾ ಕೇಂದ್ರದಿಂದ ಈಶಾನ್ಯಕ್ಕೆ ಇಪ್ಪತ್ತೆಂಟು ಕಿ.ಮೀ ದೂರದಲ್ಲಿದೆ. ಈ ಪಟ್ಟಣದಲ್ಲಿ ಶ್ರೀ ರಂಭಾಪುರಿ ಪೀಠದ ಶಾಖಾ ಮಠ ಹಾಗೂ ದೇವನೂರು ಮಠದ ಶಾಖಾಮಠಗಳು ಸ್ಥಾಪನೆಯಾಗಿ ಇಲ್ಲಿನ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ. ಶ್ರೀ ಪಟ್ಟದ ಮಠವು ಪುರಾತನ ಕಾಲದಲ್ಲಿ ಸ್ಥಾಪನೆಯಾಗಿ, ಅನೇಕ ಏಳು ಬೀಳುಗಳ ಮಧ್ಯೆ ಈ ತನಕ ಸಾಗಿ ಬಂದಿದೆ. ಪುತ್ರವರ್ಗದ ಈ ಮಠದಲ್ಲಿ ಇತ್ತೀಚಿನ ಶ್ರೀ ಬಸವರಾಜ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಉತ್ತರಾಧಿಕಾರಿಗಳಿಲ್ಲದೆ ಖಾಲಿ ಉಳಿದಿದೆ.

ದಾಸೋಹಮಠ: ಕೊಳ್ಳೆಗಾಲದ ಮಠದ ಬೀದಿಯಲ್ಲಿ ಸ್ಥಾಪನೆಯಾಗಿರುವ ಶ್ರೀ ದಾಸೋಹ ಮಠವು ದೇವನೂರಿನ ಶಾಖಾಮಠವಾಗಿ ಬೆಳೆದಿದೆ. ನೂರೈವತ್ತು ವರ್ಷಗಳ ಹಿಂದೆ ಶ್ರೀ ಗುರುಮಲ್ಲೇಶ್ವರರ ಜೊತೆಯಲ್ಲಿ ಆಗಮಿಸಿದ್ದ ಶ್ರೀ ಮಹಾಂತ ಸ್ವಾಮಿಗಳು, ಇಲ್ಲಿ ಬಂದು ನೆಲೆಸಿ ಮಠವನ್ನು ಸ್ಥಾಪಿಸಿದ್ದರು. ಅಂದು ಭಿಕ್ಷಾ ಕಾಯಕದಿಂದ ದಾಸೋಹ ಕ್ರಿಯೆಯನ್ನು ಶ್ರೀಮಂತಗೊಳಿಸಿ, ಇಲ್ಲಿನ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದು ಕರ್ತೃ ಗುರುಗಳಾದ ಶ್ರೀ ಮಹಾಂತ ಸ್ವಾಮಿಗಳು ಲಿಂಗೈಕ್ಯರಾದರು. ಕರ್ತೃಗುರುಗಳು ಲಿಂಗೈಕ್ಯರಾದ ಮೇಲೆ ಅಧಿಕಾರ ನಡೆಸಿದ ಗುರುಗಳ ಬಗ್ಗೆ ಸರಿಯಾದ ದಾಖಲೆಗಳು ಲಭ್ಯವಿಲ್ಲ. ಅಲ್ಲದೆ ಕರ್ತೃ ಗುರುಗಳ ಗದ್ದುಗೆಯನ್ನು ಹೊರತು ಪಡಿಸಿದರೆ ಬೇರೆ ಗದ್ದುಗೆಗಳು ಸ್ಥಾಪನೆಯಾಗಿಲ್ಲ. ಈ ಪುರಾತನ ಮಠದಲ್ಲಿ ಮಠಾಧೀಶರು ಇಲ್ಲದಿರುವುದನ್ನು ಗಮನಿಸಿದ ದೇವನೂರು ಮಠದ ಮಠಾಧೀಶರು ಶ್ರೀ ವೀರಭದ್ರ ಸ್ವಾಮಿಗಳನ್ನು ಮರಿಗಳನ್ನಾಗಿ ನೇಮಿಸಿ, ಕಂತೆ ಭಿಕ್ಷ ಕಾಯಕದಿಂದ ದಾಸೋಹ ಕ್ರಿಯೆ ನಡೆಯುವಂತೆ ಮಾಡಿದ್ದಾರೆ.

ವಿಳಾಸ: ಶ್ರೀ ವೀರಭದ್ರ ಸ್ವಾಮಿಗಳು, ಶ್ರೀ ದಾಸೋಹಮಠ, ಕೊಳ್ಳೆಗಾಲ, ಚಾಮರಾಜನಗರ ಜಿಲ್ಲೆ.

ಗುಂಡೇಗಾಲ

ಕೊಳ್ಳೆಗಾಲ ತಾಲ್ಲೂಕಿನ ಗುಂಡೇಗಾಲವು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಎಂಟು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಶಿವಯೋಗಿ ತೋಟದ ಮಠ ಸ್ಥಾಪನೆಯಾಗಿದೆ.

ಶಿವಯೋಗೀಶ್ವರ ತೋಟದ ಮಠ: ಗುಂಡೇಗಾಲ ಗ್ರಾಮದ ಪಶ್ಚಿಮ ಭಾಗದಲ್ಲಿ, ತೋಟದ ಪ್ರಶಾಂತ ವಾತಾವರಣದಲ್ಲಿ ಶ್ರೀ ಶಿವಯೋಗಿ ತೋಟದ ಮಠ ಸ್ಥಾಪನೆಯಾಗಿದೆ. ಶ್ರೀ ಶಿವಯೋಗಿಗಳು ಉತ್ತರದ ಕಡೆಯಿಂದ ಬಂದು ಗುಂಡೇಗಾಲದ ಈ ಪ್ರಶಾಂತ ವಾತಾವರಣದಲ್ಲಿ ಅನುಷ್ಠಾನಗೊಂಡು ಇಲ್ಲೇ ನೆಲೆಸುತ್ತಾರೆ. ಶ್ರೀ ಶಿವಯೋಗಿಗಳು ನೆಲೆನಿಂತ ಊರಹೊರಗಿನ ಜಾಗದಲ್ಲಿ ಭಕ್ತರು ಮಠ ಕಟ್ಟಿಸಿ ಕೊಡುತ್ತಾರೆ. ಅಲ್ಲಿಂದ ಪ್ರಾರಂಭವಾದ ಧಾರ್ಮಿಕ ಚಟುವಟಿಕೆ ನಿರಂತರವಾಗಿ ನಡೆದುಕೊಂಡು ಬಂದು ಹೆಸರುವಾಸಿಯಾಗಿದೆ. ಮೂಲಕರ್ತೃ ಶ್ರೀ ಶಿವ ಯೋಗಿಗಳು ಲಿಂಗೈಕ್ಯರಾದ ಮೇಲೆ ನಂತರ ಬಂದ ಉತ್ತರಾಧಿಕಾರಿಗಳು (ಹೆಸರುಗೊತ್ತಿಲ್ಲ) ಮಠದ ಆಡಳಿತವನ್ನು ನಡೆಸಿಕೊಂಡು ಬಂದರು. ನಿತ್ಯ ದಾಸೋಹ ಕಾರ್ಯಗಳು ನಡೆಯುತ್ತಿದ್ದ ಕಾರಣ ಭಕ್ತರ ಸಂಖ್ಯೆ ಅಪಾರವಾಗಿ ಬೆಳೆಯತೊಡಗಿತು. ಇಲ್ಲಿನ ದಾಸೋಹ ಕ್ರಿಯೆ ನೋಡಿದ ಬೆಂಕಿಕಳ್ಳರು ಈ ಜಂಗಮರ ಬಳಿ ಅಪಾರಸಂಪತ್ತು ಇರಬೇಕೆಂದು ತಿಳಿದು, ರಾತ್ರಿವೇಳೆ ಪಂಜುಗಳಿಗೆ ಬೆಂಕಿ ಹತ್ತಿಸಿಕೊಂಡು ಬಂದು ಎರಡು ಮೂರು ಬಾರಿ ದಾಳಿ ನಡೆಸಿದರು. ಆದರೆ ಅವರಿಗೆ ಏನೂ ಸಿಗಲಿಲ್ಲ. ಇದೇ ರೀತಿ ಬೆಂಕಿ ಕಳ್ಳರ ಕಾಟ ಹೆಚ್ಚಾದಾಗ ಊರಿನ ಭಕ್ತರು ಗುರುಗಳನ್ನು ಒತ್ತಾಯಿಸಿ ಮಠದ ಆಡಳಿತವನ್ನು ಊರ ಒಳಭಾಗಕ್ಕೆ ಸ್ಥಳಾಂತರಿಸುತ್ತಾರೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ಶಿವಯೋಗಿಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಮಹಾಂತಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ವೃಷಭ ರಾಜೇಂದ್ರಸ್ವಾಮಿಗಳು

ಆಧಾರಗಳ ಕೊರತೆಯಿಂದ ಪರಂಪರೆಯ ಗುರುಗಳ ಕೆಲವು ಹೆಸರುಗಳನ್ನು ಮಾತ್ರ ದಾಖಲಿಸಲಾಗಿದೆ. ಕರ್ತೃ ಗುರುಗಳಾದ

ಶ್ರೀ ಶಿವಯೋಗಿಗಳಿಂದ ಸ್ಥಾಪನೆಯಾಗಿ ನಂತರ ಗ್ರಾಮದ ಒಳಭಾಗಕ್ಕೆ ಸ್ಥಳಾಂತರಗೊಂಡ ಮಠದಲ್ಲಿ, ಎಷ್ಟು ಜನ ಗುರುಗಳು ಅಧಿಕಾರ ನಡೆಸಿದರು ಎಂಬ ಮಾಹಿತಿ ಲಭ್ಯವಿಲ್ಲ. ಪರಂಪರೆಯ ಗುರುಗಳಾದ ಶ್ರೀ ಮಹಾಂತ ಸ್ವಾಮಿಗಳು ಮೌನವಾಗಿದ್ದೇ ಧಾರ್ಮಿಕ ವಿಚಾರಗಳನ್ನು ಪ್ರಚಾರಕ್ಕೆ ತಂದು ವೀರಶೈವ ಧರ್ಮವನ್ನು ಉಳಿಸಿ ಬೆಳೆಸಿದರು. ಮುಂದೆ ಪುರಾತನ ಮಠದ ಆಡಳಿತ ನಡೆಯಬೇಕೆಂದು ತಮ್ಮ ಜೀವಿತಾವಧಿಯಲ್ಲೇ ಶ್ರೀ ಶಿವಪ್ಪ ದೇವರು ಮತ್ತು ಶ್ರೀಮತಿ ಚಿಕ್ಕಮಾದಮ್ಮನವರ ಪುತ್ರರಾಗಿ ೧೯೬೨ ರ ಜೂನ್ ಇಪ್ಪತ್ತೆರಡರಲ್ಲಿ ಜನಿಸಿದ ಶ್ರೀ ವೃಷಭರಾಜೇಂದ್ರ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ಆಯ್ಕೆಮಾಡಿಕೊಂಡು, ೧೯೮೧ ರಲ್ಲಿ ಮರಿಯಾಲದ ಸ್ವಾಮಿಗಳ ಮತ್ತು ಕನಕಪುರದ ದೇಗುಲಮಠದ ಶ್ರೀ ಮಹಾಲಿಂಗ ಸ್ವಾಮಿಗಳ ಸಮ್ಮುಖದಲ್ಲಿ ಪಟ್ಟಾಧಿಕಾರ ನೀಡಿ ೧೯೯೧ ರಲ್ಲಿ ಲಿಂಗೈಕ್ಯರಾದರು.

ಶ್ರೀ ವೃಷಭರಾಜೇಂದ್ರ ಸ್ವಾಮಿಗಳು ಕನಕಪುರದ ದೇಗುಲಮಠದಲ್ಲಿ ವಿದ್ಯಾಭ್ಯಾಸ ಮುಗಿಸಿ ಬಂದು, ತಮ್ಮ ಕ್ರಿಯಾಶೀಲ ಗುಣಗಳಿಂದ ಮಠವನ್ನು ಜನರ ಹತ್ತಿರ ಕೊಂಡೊಯ್ದರು. ಹಿಂದೆ ಶಿವಯೋಗಿಗಳು ಸ್ಥಾಪಿಸಿದ್ದ ಮೂಲಮಠಕ್ಕೆ ಹೋಗಬೇಕೆಂದು ನಿರ್ಧರಿಸಿ, ಶಿಥಿಲಗೊಂಡ ಮಠವನ್ನು ತೆಗೆಸಿ ನೂತನ ಕಟ್ಟಡವನ್ನು ನಿರ್ಮಿಸಿ, ಮಠದ ಆಡಳಿತವನ್ನು ಇಲ್ಲಿಗೆ ಸ್ಥಳಾಂತರಿಸಿದ್ದಾರೆ.

ಗದ್ದುಗೆಗಳು: ಮಠದ ಮೂಲಕರ್ತೃ ಶ್ರೀ ಶಿವಯೋಗಿಸ್ವಾಮಿಗಳು ಹಾಗೂ ಶ್ರೀ ಮಹಾಂತ ಸ್ವಾಮಿಗಳ ಗದ್ದುಗೆಗಳು ನೂತನ ಮಠದ ಆವರಣದಲ್ಲಿ ಸ್ಥಾಪನೆಯಾಗಿದ್ದು, ಇವುಗಳನ್ನು ಸೇರಿಸಿಕೊಂಡು ನೂತನ ಮಠದ ಕಟ್ಟಡವನ್ನು ನಿರ್ಮಿಸಲಾಗಿದೆ. ಅಲ್ಲದೆ ಶಿವಯೋಗಿಗಳ ನಂತರ ಆಡಳಿತ ನಡೆಸಿದ ಸ್ವಾಮಿಗಳ ಗದ್ದುಗೆಗಳು ಮಠದ ಬಾವಿಕಟ್ಟೆಯ ಹತ್ತಿರ ಸ್ಥಾಪಿತವಾಗಿದ್ದು, ಬಾವಿ ಕುಸಿದ ಸಂದರ್ಭದಲ್ಲಿ ಗದ್ದುಗೆಗಳು ಮುಚ್ಚಿ ಹೋಗಿವೆ ಎಂದು ಹೇಳಲಾಗುತ್ತಿದೆ. ಶಿವಯೋಗಿಗಳು ಲೋಕಸಂಚಾರದಲ್ಲಿದ್ದಾಗ ಮಂಗಲ ಗ್ರಾಮದಲ್ಲಿ ಲಿಂಗೈಕ್ಯರಾಗಿದ್ದು, ಅಲ್ಲೇ ಗದ್ದುಗೆಯನ್ನು ಸ್ಥಾಪಿಸಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ವೃಷಭರಾಜೇಂದ್ರ ಸ್ವಾಮಿಗಳು, ಶ್ರೀ ಶಿವಯೋಗೀಶ್ವರ ತೋಟದಮಠ, ಗುಂಡೇಗಾಲ, ಕೊಳ್ಳೆಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ಗೋಪಿಶೆಟ್ಟಿಯೂರು

ಕೊಳ್ಳೆಗಾಲ ತಾಲ್ಲೂಕಿನ ಗೋಪಿಶೆಟ್ಟಿಯೂರು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ನಲವತ್ತು ಕಿ.ಮೀ. ದೂರದಲ್ಲಿದೆ. ಇಲ್ಲಿ ಸುತ್ತೂರು ಶಾಖೆಯ ಶ್ರೀ ಪಟ್ಟದಮಠ ಮತ್ತು ದೇವನೂರು ಶಾಖೆಯ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠವು ಸ್ಥಾಪನೆಯಾಗಿ, ಧಾರ್ಮಿಕ ಚಟುವಟಿಕೆಯ ಕೇಂದ್ರಬಿಂದುವಾಗಿ ರೂಪುಗೊಂಡಿವೆ.

ಪಟ್ಟದಮಠ: ಸುತ್ತೂರು ಶ್ರೀ ಶಿವರಾತ್ರೀಶ್ವರ ಮಠದ ಮಂತ್ರಮಹರ್ಷಿ ಶ್ರೀ ಶಿವಯೋಗಿ ಶಿವರಾತ್ರೀಶ್ವರ ಸ್ವಾಮಿಗಳ ಅನುಗ್ರಹದಿಂದ ಇಲ್ಲಿ ಮಠ ಸ್ಥಾಪನೆಯಾಯಿತು. ನಂತರದ ಶ್ರೀ ಡಾ.ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಮಠದ ವತಿಯಿಂದ ಪ್ರೌಢಶಾಲೆಯನ್ನು ಪ್ರಾರಂಭಿಸಿದರು. ಶ್ರೀ ಪಟ್ಟದ ಮಠಕ್ಕೆ ಕೊಳ್ಳೆಗಾಲ ಸಮೀಪದ ತಿಮ್ಮರಾಜಿಪುರದ ವಿದ್ವಾನ್ ಶ್ರೀ ಗುರುಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿ, ಶ್ರೀ ಡಾ.ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಅನುಗ್ರಹ ನೀಡಿ ೧೯೫೦ ರಲ್ಲಿ ಅಧಿಕಾರ ವಹಿಸಿಕೊಟ್ಟರು.

ಸುತ್ತೂರು ಜಗದ್ಗುರುಗಳ ಮಾರ್ಗದರ್ಶನ ಹಾಗೂ ಶ್ರೀ ಗುರುಸ್ವಾಮಿಗಳ ಕರ್ತೃತ್ವ ಶಕ್ತಿಯಿಂದ ನೂತನ ಮಠವು ಅಭಿವೃದ್ಧಿಗೊಂಡಿತು. ಇವರ ಕಾಲದಲ್ಲಿ ನೂತನ ಕಟ್ಟಡ ಸ್ಥಾಪನೆಯಾಯಿತು. ಸುಮಾರು ನಲವತ್ತೊಂಬತ್ತು ವರ್ಷಗಳ ಕಾಲ ದೀರ್ಘ ಆಡಳಿತ ನಡೆಸಿದ ಶ್ರೀ ವಿದ್ವಾನ್ ಗುರು ಸ್ವಾಮಿಗಳು ಮಠದ ಐದು ಎಕರೆ ಜಮೀನನ್ನು ನೀರಾವರಿಗೆ ಯೋಗ್ಯಗೊಳಿಸಿ ಮಠಕ್ಕೆ ಹೆಚ್ಚು ಆದಾಯ ಬರುವಂತೆ ಮಾಡಿ, ೧೯೯೯ ರ ಆಗಸ್ಟ್ ಇಪ್ಪತ್ತರಂದು ಲಿಂಗೈಕ್ಯರಾದರು. ಇವರ ಗದ್ದುಗೆಯನ್ನು ಮಠದಲ್ಲಿ ನಿರ್ಮಿಸಲಾಗಿದೆ. ಇದೇ ಸಂದರ್ಭದಲ್ಲಿ ಮಠ ಖಾಲಿ ಬೀಳಬಾರದೆಂದು, ಶ್ರೀ ಗುರುಸ್ವಾಮಿಗಳ ಪೂರ್ವಾಶ್ರಮದ ಸಂಬಂಧಿ ಶ್ರೀ ಸುಬ್ಬದೇವರು ಮತ್ತು ಶ್ರೀಮತಿ ಮಾದಮ್ಮನವರ ಪುತ್ರರಾದ ಶ್ರೀ ಬಸವಣ್ಣ ದೇವರನ್ನು

ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿ, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳ ಅನುಗ್ರಹದೊಂದಿಗೆ ಪಟ್ಟಾಧಿಕಾರ ಮಾಡಲಾಗಿದೆ. ಸುತ್ತೂರು ಜಗದ್ಗುರುಗಳ ಸೇವೆ ಮಾಡಿಕೊಂಡಿದ್ದ ಶ್ರೀ ಬಸವಣ್ಣ ಸ್ವಾಮಿಗಳು ಗುರುಗಳ ಒಡನಾಟದಿಂದ ಸಂಸ್ಕಾರಪಡೆದು, ಸಮರ್ಥ ಗುರುಗಳಾಗಿ ಬೆಳೆಯುವ ಲಕ್ಷಣ ತೋರಿಸಿದ್ದಾರೆ.

ವಿಳಾಸ: ಶ್ರೀ ಬಸವಣ್ಣ ಸ್ವಾಮಿಗಳು, ಶ್ರೀ ಪಟ್ಟದಮಠ, ಗೋಪಿಶೆಟ್ಟಿಯೂರು, ಹನೂರು ಹೋಬಳಿ, ಕೊಳ್ಳೆಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ದಾಸೋಹಮಠ: ಗೋಪಿಶೆಟ್ಟಿಯೂರಿನ ಸುತ್ತೂರು ಶಾಖೆಯ ಪಟ್ಟದ ಮಠದ ಪಕ್ಕದಲ್ಲಿ ಸ್ಥಾಪಿತವಾಗಿರುವ ದೇವನೂರಿನ ಶಾಖಾಮಠವು ಶ್ರೀ ತೋಂಟದಾರ್ಯರ ಕಾಲದಲ್ಲಿ ಪ್ರಾರಂಭಗೊಂಡಿದೆ ಎಂದು ಹೇಳಲಾಗುತ್ತಿದೆ. ಸುಮಾರು ಐವತ್ತೈದು ವರ್ಷಗಳ ಹಿಂದೆ ಶ್ರೀ ಸುಬ್ಬೇದೇವ ಸ್ವಾಮಿಗಳನ್ನು ಭಿಕ್ಷದ ಗುರುಗಳಾಗಿ ನೇಮಕ ಮಾಡಲಾಗಿತ್ತು. ಈಗ ಗುರುಗಳಿಗೆ ವಯಸ್ಸಾಗಿದ್ದು ಭಿಕ್ಷದ ಕಾಯಕಕ್ಕೆ ಶ್ರೀ ಸೋಮಶೇಖರ ಸ್ವಾಮಿಗಳು ಮತ್ತು ಶ್ರೀ ಬಸವರಾಜ ಸ್ವಾಮಿಗಳನ್ನು ಮರಿಗಳನ್ನಾಗಿ ನೇಮಕ ಮಾಡಿಕೊಂಡು, ಕಂತೆ ಭಿಕ್ಷದ ಕಾಯಕ ಮಾಡಿಸಲಾಗುತ್ತಿದೆ. ಮಠದ ಆಸ್ತಿಯಾಗಿ ಐದು ಎಕರೆ ನೀರಾವರಿ ಜಮೀನು ಇದೆ.ಇದನ್ನು ಬೇಸಾಯಕ್ಕೆ ಅಣಿಗೊಳಿಸಿ ಬಂದ ಉತ್ಪತ್ತಿಯನ್ನು ದಾಸೋಹ ಕ್ರಿಯೆಗೆ ಬಳಸಿಕೊಳ್ಳಲಾಗುತ್ತಿದೆ.

ವಿಳಾಸ: ಶ್ರೀ ಸುಬ್ಬೇದೇವ ಸ್ವಾಮಿಗಳು, ಶ್ರೀ ದಾಸೋಹ ಮಠ, ಗೋಪಿಶೆಟ್ಟಿಯೂರು, ಹನೂರು ಹೋಬಳಿ, ಕೊಳ್ಳೆಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ಚನ್ನಲಿಂಗನಹಳ್ಳಿ

ಕೊಳ್ಳೆಗಾಲ ತಾಲ್ಲೂಕಿನ ಚನ್ನಲಿಂಗನಹಳ್ಳಿಯು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹದಿನೈದು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ಪಟ್ಟದಮಠ ಸ್ಥಾಪನೆಯಾಗಿದೆ.

ಪಟ್ಟದ ಮಠ: ಚನ್ನಲಿಂಗನಹಳ್ಳಿಯ ಮಧ್ಯಭಾಗದಲ್ಲಿ ಶ್ರೀಶೈಲ ಪೀಠದ ಶಾಖಾಮಠವಾದ ಶ್ರೀ ಪಟ್ಟದ ಮಠ ಸ್ಥಾಪನೆಯಾಗಿ, ಧಾರ್ಮಿಕ ಕಾರ್ಯಗಳಿಗೆ ನೆರವಾಗಿದೆ. ಶಿವಯೋಗಿಗಳೊಬ್ಬರು ಲೋಕಸಂಚಾರ ಕೈಗೊಂಡು ಇಲ್ಲಿಗೆ ಬಂದು ನೆಲೆಸಿದರು. ನಂತರ ಜಿ.ಬಿ. ಮಲ್ಲಪ್ಪನವರ ಬಂಗಲೆಯಲ್ಲಿ ಕೆಲವು ದಿನ ಅನುಷ್ಠಾನಗೊಂಡು ಮಠವನ್ನು ಸ್ಥಾಪಿಸಿ, ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದರು.

ಪರಂಪರೆ:

೧. ಷ.ಬ್ರ.ಶ್ರೀ ಶಿವಯೋಗಿಗಳು
೨. ಷ.ಬ್ರ.ಶ್ರೀ ವೀರತ ಶಿವಾಚಾರ್ಯ ದೇವರು
೩. ಷ.ಬ್ರ.ಶ್ರೀ ದೊಡ್ಡಶಾಂತಮಲ್ಲ ಶಿವಾಚಾರ್ಯ ದೇವರು
೪. ಷ.ಬ್ರ.ಶ್ರೀ ಚಿಕ್ಕ ಶಾಂತಮಲ್ಲ ಶಿವಾಚಾರ್ಯ ದೇವರು
೫. ಷ.ಬ್ರ.ಶ್ರೀ ಶಿವಾಲಂಕಾರ ಶಿವಾಚಾರ್ಯ ದೇವರು
೬. ಷ.ಬ್ರ.ಶ್ರೀ ಪ್ರಭು ಶಿವಾಚಾರ್ಯ ಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದ್ದು, ಶ್ರೀ ಚಿಕ್ಕಶಾಂತ ಮಲ್ಲೇದೇವರ ಕಾಲದಲ್ಲಿ ಮಠ ಹೆಚ್ಚು ಅಭಿವೃದ್ಧಿಗೊಂಡಿತು. ಧರ್ಮ ಜಾಗೃತಿಗಾಗಿ ಹಳ್ಳಿ ಹಳ್ಳಿಗೆ ಹೋಗಿ ಅಂಧಕಾರದಲ್ಲಿದ್ದ ಜನರ ಕಣ್ಣು ತೆರೆಸಿ ನೈತಿಕ ಬದುಕು ಸಾಗಿಸಲು ಮಾರ್ಗದರ್ಶನ ನೀಡುತ್ತಿದ್ದ ಗುರುಗಳು, ಸಮಾಜದ ಒಂದು ಭಾಗವಾಗಿ ಬೆಳೆದರು. ಇದರ ಫಲವೇ ಭಕ್ತರು ಮಠವನ್ನು ಅಭಿವೃದ್ಧಿಪಡಿಸಿದರು. ಇಂತಹ ಆಕರ್ಷಕ ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದ ಗುರುಗಳು ಮಠವನ್ನು ಹೆಚ್ಚು ಅಭಿವೃದ್ಧಿಪಡಿಸಿದರು.

ಶ್ರೀ ವೀರತಿದೇವರು ಮತ್ತು ಶ್ರೀಮತಿ ಗೌರಮ್ಮನವರ ಪುತ್ರರಾಗಿ ೧೯೩೫ ರಲ್ಲಿ ಜನಿಸಿದ ಶ್ರೀ ಪ್ರಭು ಸ್ವಾಮಿಗಳು, ಮಾಧ್ಯಮಿಕ ಶಾಲೆಯ ನಂತರ ಸಂಸ್ಕೃತ ಕಲಿತ ಮಠದ ಅಧಿಕಾರವನ್ನು ವಹಿಸಿಕೊಂಡರು. ಮಠದ ದೈನಂದಿನ ಧಾರ್ಮಿಕ

ಚಟುವಟಿಕೆಗಳನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ಮಠದ ಆಸ್ತಿಯಾಗಿರುವ ಇಪ್ಪತ್ತುಎಕರೆ ಜಮೀನನ್ನು ಕಾಯಕ ಯೋಗದಿಂದ ಅಭಿವೃದ್ಧಿ ಪಡಿಸಿ, ಅಧಿಕ ಲಾಭ ಬರುವಂತೆ ಮಾಡಿದ್ದಾರೆ. ವರ್ಷಕ್ಕೊಮ್ಮೆ ಹಿರಿಯ ಗುರುಗಳ ಪುಣ್ಯಾರಾಧನೆ ಯನ್ನು ಮಾಡುತ್ತಾರೆ. ಕಾರ್ತೀಕ, ಶ್ರಾವಣಮಾಸ ಹಾಗೂ ಶಿವರಾತ್ರಿಯಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಪ್ರಭು ಶಿವಾಚಾರ್ಯ ಸ್ವಾಮಿಗಳು, ಶ್ರೀ ಪಟ್ಟದಮಠ, ಚನ್ನಲಿಂಗನಹಳ್ಳಿ, ಕೊಳ್ಳೆಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ಚಿಲಕವಾಡಿ

ಕೊಳ್ಳೆಗಾಲ ತಾಲ್ಲೂಕಿನ ಚಿಲಕವಾಡಿ ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಹನ್ನೆರಡು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ರಾಮಯೋಗೀಶ್ವರಮಠ, ಶ್ರೀ ನಿಜಗುಣಾನುಭವ ಮಂಟಪ ಹಾಗೂ ಶ್ರೀ ಓಂ ನಮಃ ಶಿವಾಯ ಮಠ ಸ್ಥಾಪನೆಯಾಗಿವೆ. ಈಗ ಶ್ರೀ ಓಂ ನಮಃ ಶಿವಾಯ ಮಠವು ಅಸ್ತಿತ್ವವನ್ನು ಕಳೆದುಕೊಂಡಿದೆ. ಶ್ರೀ ರಾಮಯೋಗಿಶ್ವರ ಮಠ ಹಾಗೂ ಶ್ರೀ ನಿಜಗುಣಾನುಭವ ಮಂಟಪ ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಗುರುರಾಮಯೋಗೀಶ್ವರ ಮಠ: ಚಿಲಕವಾಡಿ ಗ್ರಾಮದಿಂದ ಪೂರ್ವಕ್ಕೆ ಕೊಳ್ಳೆಗಾಲ ರಸ್ತೆಯ ಬಲಬದಿಯಲ್ಲಿ ಸ್ಥಾಪನೆ ಯಾಗಿರುವ ಗುರು ರಾಮಯೋಗೀಶ್ವರ ಮಠವು, ಶ್ರೀ ಗುರು ರಾಮಲಿಂಗ ಶಿವಯೋಗಿಗಳಿಂದ ಸ್ಥಾಪಿತವಾಗಿದ್ದರಿಂದ ಈ ಮಠಕ್ಕೆ ಅವರ ಹೆಸರು ಬರಲು ಕಾರಣವಾಗಿದೆ. ಶ್ರೀ ಚನ್ನಬಸಪ್ಪ ಸ್ವಾಮಿಗಳು ನಿಜಗುಣ ಗವಿಯಲ್ಲಿ ಧ್ಯಾನಮಾಡಿಕೊಂಡು, ಈ ಮಠಕ್ಕೆ ಬಂದು ದಾಸೋಹ ನಡೆಸುತ್ತಿದ್ದ ರೀತಿ ನೋಡಿದ ಈ ಗ್ರಾಮದ ಜನರು ಆಕರ್ಷಿತರಾಗಿದ್ದರು. ಈ ಮಠಕ್ಕೆ ಏನೂ ಆದಾಯ ಇಲ್ಲದೇ ಈ ರೀತಿ ದಾಸೋಹ ಮಾಡುವುದನ್ನು ನೋಡಿದ ಕಾಳ ಮತ್ತು ಬಿಲ್ಲ ಎಂಬ ಕಳ್ಳರು ಈ ಗುರುಗಳು ಗುಪ್ತನಿಧಿ ಇಟ್ಟಿರಬೇಕು ಎಂದು ಯೋಚಿಸಿ ಮಠವನ್ನು ಪ್ರವೇಶಿಸಿ ನಿಧಿಗಾಗಿ ಹುಡುಕಾಟ ನಡೆಸಿದರು. ಏನೂ ಸಿಗದೆ ಚಿಂತಾಕ್ರಾಂತರಾಗಿ ಹಿಂದಿರುತ್ತಿದ್ದಾಗ ಅವರ ಕಣ್ಣಿಗೆ ಬಿದ್ದಿದ್ದು ಶ್ರೀ ಚನ್ನಬಸಪ್ಪ ಸ್ವಾಮಿಗಳ ಕೊರಳಲ್ಲಿ ಇದ್ದ ಗಂಧದ ಕರಡಿಗೆ. ಇದರಲ್ಲಿ ನಿಧಿಯನ್ನು ಇಟ್ಟಿರಬಹುದೆಂದು ತಿಳಿದು ಗುರುಗಳ ಕೊರಳಲ್ಲಿ ಇದ್ದ ಕರಡಿಗೆಯನ್ನು ಕಿತ್ತುಕೊಂಡು ಪರಾರಿಯಾದರು. ಗುರುಗಳು ತಮ್ಮ ಕೊರಳಲ್ಲಿದ್ದ ಇಷ್ಟಲಿಂಗವೇ ಕಳವಾದಮೇಲೆ ನಾವು ಜೀವಿಸಿದ್ದು ಏನು ಪ್ರಯೋಜನ ಎಂದು ಜೀವಂತ ಸಮಾಧಿಯಾದರು.

ಪರಂಪರೆ:

೧. ಶ್ರೀ ಗುರುರಾಮಯೋಗೀಶ್ವರರು
೨. ಶ್ರೀ ಕಲ್ಲಳ್ಳಿಲಿಂಗಪ್ಪಸ್ವಾಮಿಗಳು
೩. ಶ್ರೀ ಸಿದ್ಧಪ್ಪಸ್ವಾಮಿಗಳು
೪. ಶ್ರೀ ಗುರುಲಿಂಗಸ್ವಾಮಿಗಳು
೫. ಶ್ರೀ ನಾಗಪ್ಪಸ್ವಾಮಿಗಳು
೬. ಶ್ರೀ ಇಮ್ಮಡಿ ಗುರುಲಿಂಗಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯಲ್ಲಿ ಬಂದ ಗುರುಗಳ ಹೆಸರನ್ನು ದಾಖಲಿಸಬಹುದಾಗಿದೆ. ಆದರೆ ಇವರುಗಳು ಯಾವ ಕಾಲಮಾನ ದಲ್ಲಿ ಅಧಿಕಾರ ಪಡೆದರು ಎಂಬ ಬಗ್ಗೆ ಪುರಾವೆಗಳು ಲಭ್ಯವಿಲ್ಲ. ಶ್ರೀ ಗುರುರಾಮಲಿಂಗ ಶಿವಯೋಗಿಗಳು ಮಹಾ ಪವಾಡ ಪುರುಷರಾಗಿದ್ದರು. ಇವರು ಈ ನಾಡನ್ನು ಧಾರ್ಮಿಕವಾಗಿ ಎಚ್ಚರಗೊಳ್ಳುವಂತೆ ಮಾಡಿದ ಮಹಾನ್ ಪುರುಷರು. ಇವರ ಸಾಧನೆ ಹಾಗೂ ದೀರ್ಘ ಅನುಷ್ಠಾನಕ್ಕೆ ಬೆರಗಾಗಿದ್ದ ಭಕ್ತರು ಗುರುಗಳನ್ನು ಧರೆಗಿಳಿದ ಮಹಾಪುರುಷ ಎಂದೇ ನಂಬಿದ್ದರು. ಕಲ್ಲಳ್ಳಿಯಿಂದ ಆಗಮಿಸಿದ ಶ್ರೀ ಲಿಂಗಪ್ಪ ಸ್ವಾಮಿಗಳೂ ಸಹ ಮಹಾನ್ ಸಾಧಕರಾಗಿ, ದಾಸೋಹ ಪ್ರಿಯರಾಗಿ ಮಠವನ್ನು ಹೆಚ್ಚು ಪ್ರಚಾರಕ್ಕೆ ತಂದ ಮಹಾ ಮಹಿಮರು. ಪರಂಪರೆಯ ಆರನೆಯ ಗುರುಗಳಾಗಿ ಟಿ.ನರಸೀಪುರ ತಾಲ್ಲೂಕಿನ ತುಂಬಲ ಗ್ರಾಮದ ಶ್ರೀ ಗುರುಸ್ವಾಮಿ ಮತ್ತು ಶ್ರೀಮತಿ ರತ್ನಮ್ಮನವರ ಪುತ್ರರಾಗಿ ಜನಿಸಿದ ಇಮ್ಮಡಿ ಶ್ರೀ

ಗುರುಲಿಂಗ ಸ್ವಾಮಿಗಳು ಇಪ್ಪತ್ತನೆಯ ವಯಸ್ಸಿನಲ್ಲಿ (೧೯೯೫)ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಈ ಮಠದ ಆವರಣದಲ್ಲಿ ಕರ್ತೃಗುರುಗಳ ಗದ್ದುಗೆಯ ಜತೆಗೆ ಉಳಿದ ಏಳು ಗದ್ದುಗೆಗಳು ನೋಡ ಸಿಗುತ್ತಿವೆ. ಇವುಗಳಲ್ಲಿ ಹೆಸರಿಸಿರುವ ಆರು ಜನ ಪಟ್ಟಾಧಿಕಾರದ ಗುರುಗಳ ಗದ್ದುಗೆಗಳ ಜೊತೆಗೆ ಶ್ರೀ ಚನ್ನಬಸಪ್ಪ ಸ್ವಾಮಿಗಳ ಗದ್ದುಗೆಯನ್ನು ನಾವು ಗುರುತಿಸಬಹುದಾಗಿದೆ. ಆದರೆ ಉಳಿದ ಇನ್ನೊಂದು ಗದ್ದುಗೆ ಯಾರದೆಂದು ತಿಳಿಯುತ್ತಿಲ್ಲ. ಇವುಗಳಿಗೆ ನಿತ್ಯ ಪೂಜೆ ನಡೆಯುತ್ತಿದೆ. ಶ್ರೀ ನಿಜಗುಣ ಶಿವಯೋಗಿಗಳು ಅನುಷ್ಠಾನಗೊಂಡ ಗವಿಯ ಉಸ್ತುವಾರಿಯ ಜವಾಬ್ದಾರಿಯನ್ನು ಈ ಮಠವೇ ನೋಡಿಕೊಂಡು, ಪ್ರತಿನಿತ್ಯ ಪೂಜಾಕಾರ್ಯ ಮಾಡುತ್ತಿದೆ. ಹಿರಿಯ ಗುರುಗಳ ಆರಾಧನೆ ಕಾರ್ಯ ಮತ್ತು ಭಕ್ತರ ಧಾರ್ಮಿಕ ಕ್ರಿಯಾದಿಗಳನ್ನು ನೆರವೇರಿಸುವುದು ಮಠದ ವಾಡಿಕೆ ಕೆಲಸವಾಗಿದೆ.

ವಿಳಾಸ: ಶ್ರೀ ಇಮ್ಮಡಿ ಗುರುಲಿಂಗ ಸ್ವಾಮಿಗಳು, ಶ್ರೀ ಗುರುರಾಮಯೋಗೀಶ್ವರಮಠ, ಚಿಲಕವಾಡಿ, ಕೊಳ್ಳೆಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ನಿಜಗುಣಾನುಭವ ಮಂಟಪ: ಚಿಲಕವಾಡಿಯ ಶಂಭುಲಿಂಗಕ್ಷೇತ್ರದ ಗವಿಯಲ್ಲಿ ಶ್ರೀ ನಿಜಗುಣ ಶಿವಯೋಗಿಗಳು ಅನುಷ್ಠಾನಗೊಂಡು ಈ ಸ್ಥಳವನ್ನು ಒಂದು ಸುಕ್ಷೇತ್ರವನ್ನಾಗಿ ಮಾಡಿದ ಕಾರಣಕ್ಕೆ, ಈ ನಾಡು ಸಂಸ್ಕಾರವಂತ ನಾಡಾಗಿ ಬೆಳಗುತ್ತಿದೆ. ಪ್ರಕೃತಿ ಐಸಿರಿಯನ್ನು ಹೊಂದಿರುವ ಈ ಜಾಗ ಸಾಧಕರ ಸಾಧನೆಯ ಕ್ಷೇತ್ರವಾಗಿದೆ. ಯೋಗಸಿದ್ಧಿ, ಧರ್ಮಸಿದ್ಧಿ ಹಾಗೂ ಸಾಹಿತ್ಯದ ಸಿದ್ಧಿಯ ಸಾಧಕರಾದ ಶ್ರೀ ನಿಜಗುಣರು ಹಾಗೂ ಶ್ರೀ ಷಡಕ್ಷರಿ ದೇವರು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿದ ಕೊಡುಗೆ ಅಪಾರವಾಗಿದೆ. ವಚನಕಾರರಿಗಿಂತ ಭಿನ್ನವಾದ ಕೈವಲ್ಯ ಸಾಹಿತ್ಯವನ್ನು ಕನ್ನಡ ಸಾಹಿತ್ಯಲೋಕಕ್ಕೆ ಪರಿಚಯಿಸಿದ ಶ್ರೀ ನಿಜಗುಣಶಿವಯೋಗಿಗಳ ಸಾಹಿತ್ಯದ ಪ್ರಚಾರಕ್ಕೆ ಹಾಗೂ ಅವರ ತತ್ತ್ವಗಳ ಪ್ರಚಾರಕ್ಕೆ ಈಗ ಇಲ್ಲಿ ನಿಜಗುಣಾನುಭವ ಮಂಟಪ ಸ್ಥಾಪನೆಯಾಗಿದೆ.

ಕರಡಿ ಮಠದಲ್ಲಿ ಧರ್ಮಜ್ಯೋತಿ: ಶಂಭುಲಿಂಗಬೆಟ್ಟದ ಹಿಂಬದಿಯಲ್ಲಿರುವ ಕರಡಿ ಮಠದಲ್ಲಿ ೧೯೭೧ ರಲ್ಲಿ ನಿಜಗುಣರ ಸಾಹಿತ್ಯವನ್ನು ಪ್ರಚಾರಕ್ಕೆ ತರುವ ಉದ್ದೇಶದಿಂದ ಪಿ.ಬಸವಣ್ಣ ಎಂಬುವರು ವಿರಕ್ತಾಶ್ರಮ ಸ್ವೀಕರಿಸಿ, **ಶ್ರೀ ಕುಮಾರ ನಿಜಗುಣ ಸ್ವಾಮಿ**ಗಳೆಂದು ಅಭಿಧಾನ ಪಡೆದರು. ಭಿಕ್ಷದ ಮಠವಾಗಿದ್ದ ಕರಡಿಮಠದಲ್ಲಿ ಸಾಧನೆಗೈದು ಈ ಕ್ಷೇತ್ರದಲ್ಲಿ ಶ್ರೀ ನಿಜಗುಣ ಶಿವಯೋಗಿಗಳ ಹೆಸರಲ್ಲಿ ಸ್ಮಾರಕವನ್ನು ನಿರ್ಮಿಸಿ, ಈ ಮೂಲಕ ಅವರ ತತ್ತ್ವಗಳನ್ನು ಪ್ರಚಾರಗೊಳಿಸಬೇಕು ಎಂಬ ಉದ್ದೇಶ ಹೊಂದಿ ಕರಡಿ ಮಠವನ್ನು ಕೇಂದ್ರ ಸ್ಥಳವನ್ನಾಗಿ ಮಾಡಿಕೊಂಡರು.

ವಿಶಾಲವಾದ ಕಲ್ಲು ಮಂಟಪವಾಗಿದ್ದ ಕರಡಿ ಮಠದಲ್ಲಿ ಇದ್ದು ಅನೇಕ ವಿರೋಧ, ತೊಂದರೆಗಳನ್ನು ಎದುರಿಸಿದ ಶ್ರೀ ಕುಮಾರ ನಿಜಗುಣ ಸ್ವಾಮಿಗಳು ತಮ್ಮ ಉದ್ದೇಶದಿಂದ ಹಿಂದೆ ಸರಿಯದೆ, ಕರಡೀ ಮಠವನ್ನು ಅಭಿವೃದ್ಧಿಪಡಿಸಿ ತಾವು ಮಾಡುವ ಕಾಯಕದಲ್ಲಿ ನಿಷ್ಠೆ ತೋರಿಸಿದರು. ಶ್ರೀ ಕುಮಾರ ನಿಜಗುಣ ಸ್ವಾಮಿಗಳು ಇಪ್ಪತ್ತೊಂದು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿಜಗುಣಾನುಭವ ಮಂಟಪ ನಿರ್ಮಿಸಲು ಯೋಜನೆ ತಯಾರಿಸಿಕೊಂಡು ನಾಲ್ಕುಎಕರೆ ಜಮೀನನ್ನು ಖರೀದಿಸಿದರು. ೧೯೮೩ರಲ್ಲಿ ಮಂಟಪ ನಿರ್ಮಿಸಲು ಪ್ರಾರಂಭಿಸಿ ೧೯೯೧ ರಲ್ಲಿ ಮುಗಿಸಿದರು. ತಮ್ಮ ಕಲ್ಪನೆಗೆ ಅನುಗುಣವಾಗಿ ಮಂಟಪವನ್ನು ನಿರ್ಮಿಸಿ, ಶ್ರೀ ನಿಜಗುಣರ ಭವ್ಯವಾದ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ಈ ಮೂಲಕ ಶ್ರೀ ನಿಜಗುಣ ಶಿವಯೋಗಿಗಳ ತತ್ತ್ವಗಳನ್ನು ಪ್ರಚಾರಪಡಿಸಿ, ವೀರಶೈವ ಧರ್ಮವನ್ನು ಬಲಿಷ್ಠಗೊಳಿಸಲು ನಾಂದಿಹಾಡಿದ್ದಾರೆ.

ಶ್ರೀ ಕುಮಾರ ನಿಜಗುಣ ಸ್ವಾಮಿಗಳು ಒಂದೇ ಜನ್ಮದಲ್ಲಿ ಎರಡು ಹುಟ್ಟುಗಳನ್ನು ಪಡೆದ ಶ್ರೇಷ್ಠರು. ಇವರು ತಮ್ಮ ಲೌಕಿಕ ಬದುಕನ್ನು ತ್ಯಜಿಸಿ, ಈಗ ಪ್ರಾತಃಸ್ಮರಣೀಯರಾದ ಶ್ರೀ ನಿಜಗುಣ ಶಿವಯೋಗಿಗಳ ಗುಹೆಯಲ್ಲಿ ಏಕಾಂತವಾಸಿಗಳಾಗಿ ಶಿವಯೋಗವನ್ನು ಸಾಧಿಸಿದ್ದಾರೆ ಎಂದು ಖ್ಯಾತ ವಿದ್ವಾಂಸ ಘ.ನಿ.ನರಸಿಂಹಾಚಾರ್ ಕುಮಾರ ನಿಜಗುಣರ ಬಗ್ಗೆ ಉಲ್ಲೇಖಿಸಿದ್ದಾರೆ. ೧೯೮೦ ರಲ್ಲಿ ವೈರಾಗ್ಯ ಉತ್ಕಟತೆಯಿಂದ ಸಿದ್ಧಗಂಗೆಯ ಶ್ರೀ ಶಿವಕುಮಾರ ಸ್ವಾಮಿಗಳಿಂದ ದೀಕ್ಷೆ ಪಡೆದು ನಂತರ ಬಿಜಾಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಸ್ವಾಮಿಗಳಿಂದ ಅನುಗ್ರಹ ಪಡೆದು, ಪೂರ್ಣಮಟ್ಟದ

ವಿರಕ್ತಯೋಗಿಗಳಾಗಿ ನಿಜಗುಣರ ಸಾಹಿತ್ಯ, ಶರಣಸಾಹಿತ್ಯವನ್ನು ಪ್ರಚಾರಕ್ಕೆ ತರುತ್ತಿರುವ ಇವರ ಸಾಧನೆ ಗೌರವಿಸುವಂತಹದ್ದು.

ಲೌಕಿಕದಿಂದ ಅಲೌಕಿಕದೆಡೆಗೆ: ಕೊಳ್ಳೆಗಾಲದಲ್ಲಿ ನ್ಯಾಯವಾದಿಗಳಾಗಿದ್ದ ಪಿ.ಬಸವಣ್ಣನವರು ಲೌಕಿಕ ಪ್ರಪಂಚದಲ್ಲಿದ್ದೇ ಅಲೌಕಿಕತೆಯ ಕಡೆಗೆ ಮುಖ ಮಾಡಿಕೊಂಡಿದ್ದರು. ಲೌಕಿಕತೆಯ ಒಂದೊಂದೇ ಜವಾಬ್ದಾರಿಯನ್ನು ಕಳಚಿಕೊಂಡ ಬಸವಣ್ಣನವರು ಶ್ರೀ ನಿಜಗುಣಶಿವಯೋಗಿಗಳ ತತ್ತ್ವಕ್ಕೆ ಮಾರುಹೋಗತೊಡಗಿದರು. ನಿಜಗುಣಶಿವಯೋಗಿಗಳ ಬಗ್ಗೆ ಆಳವಾದ ಅಧ್ಯಯನ ಕೈಗೊಂಡರು. ಇದರ ಫಲವೇ ಶ್ರೀ ಕುಮಾರ ನಿಜಗುಣ ಸ್ವಾಮಿಗಳಾಗಿ ಮರುಹುಟ್ಟು ಪಡೆದು, ಸಾಧಕರಾಗಿ ತಾವು ಆಯ್ದುಕೊಂಡ ಕ್ಷೇತ್ರದಲ್ಲಿ ಪರಮೋಚ್ಚ ಸ್ಥಿತಿ ಮುಟ್ಟುವ ಹಂಬಲದೊಂದಿಗೆ ಬೆಳೆಯತೊಡಗಿದರು.

ಈ ರೀತಿ ಲೌಕಿಕದಿಂದ ಅಲೌಕಿಕದೆಡೆಗೆ ಪಾದಾರ್ಪಣೆ ಮಾಡಿದ ಶ್ರೀ ಕುಮಾರ ನಿಜಗುಣ ಸ್ವಾಮಿಗಳು ನಿಜಗುಣ ಕ್ಷೇತ್ರಕ್ಕೆ ಆಗಮಿಸುವ ಭಕ್ತರ, ಸಾಹಿತ್ಯ ಪ್ರೇಮಿಗಳ, ಅಧ್ಯಯನಾಸಕ್ತರ ವಸತಿಗಾಗಿ ಕರಡಿಮಠದ ಕಲ್ಲುಕಟ್ಟಡದ ಮೇಲೆ ವಿಶಾಲ ಕೊಠಡಿಗಳನ್ನು ನಿರ್ಮಿಸಿದ್ದಾರೆ. ಮೊದಲ ಹಂತದ ಕಾರ್ಯದಲ್ಲಿ ಯಶಸ್ವಿಯಾಗಿರುವ ಶ್ರೀಕುಮಾರ ನಿಜಗುಣ ಸ್ವಾಮಿಗಳ ಮಠಗಳ ಕಲ್ಪನೆಗೆ ಅನುಗುಣವಾಗಿ ಚಟುವಟಿಕೆಗಳು ನಡೆಯತೊಡಗಿದವು. ಕರಡಿಮಠದಲ್ಲಿ ವಿಶಾಲಕಟ್ಟಡವನ್ನು ನಿರ್ಮಿಸಿದ್ದಾರೆ. ಶ್ರೀ ಕುಮಾರ ಸ್ವಾಮಿಗಳು ಶಂಭುಲಿಂಗಬೆಟ್ಟದ ಶ್ರೀ ಷಡಕ್ಷರಿ ಸ್ವಾಮಿಗಳು ಅನುಷ್ಠಾನಗೊಂಡ ಗವಿಯಲ್ಲಿ ವಾಸಮಾಡತೊಡಗಿ ದ್ದಾರೆ. ಇಪ್ಪತ್ತೊಂದು ಲಕ್ಷರೂಪಾಯಿ ಯೋಜನೆಯ ವೆಚ್ಚದ ಶ್ರೀ ನಿಜಗುಣಾನುಭವ ಮಂಟಪ ನಿರ್ಮಾಣವಾದ ಮೇಲೆ ಈ ಮಂಟಪವನ್ನು ನಿಜಗುಣರ ಸಾಹಿತ್ಯವನ್ನು ಸಂಗೀತದ ಮೂಲಕ ಪ್ರಚಾರಪಡಿಸ ತೊಡಗಿದ್ದಾರೆ. ಇದನ್ನು ಅಧ್ಯಯನ ಕೇಂದ್ರವನ್ನಾಗಿ ಮಾರ್ಪಡಿಸಿದ್ದಾರೆ. ಈ ಮಂಟಪದಲ್ಲಿ ನಿಜಗುಣರ ಅಮೃತಶಿಲೆಯ ಆಕರ್ಷಕಮೂರ್ತಿ, ಪ್ರವಚನಕ್ಕೆ ಮತ್ತು ಸಂಗೀತಕ್ಕಾಗಿಯೇ ಪ್ರತ್ಯೇಕ ವೇದಿಕೆಗಳನ್ನು ನಿರ್ಮಿಸಿರುವುದಲ್ಲದೆ, ಸಂಗೀತ ಪರಿಕರಗಳನ್ನು ಸಂಗೀತ ವೇದಿಕೆಯಲ್ಲಿ ಜೋಡಿಸಿದ್ದಾರೆ.

ಸಾಹಿತ್ಯ ಸೇವೆ: ಶ್ರೀ ಕುಮಾರ ನಿಜಗುಣ ಸ್ವಾಮಿಗಳು ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆಮಾಡಿದ್ದರು. ನಿಜಗುಣರ ಕೈವಲ್ಯ ಪದ್ಧತಿ ಕೃತಿಯು ಪಂಡಿತರ ಆವೃತ್ತಿಯಾಗಿದ್ದು, ಇದನ್ನು ಓದುಗರಿಗೆ ಸರಳಭಾಷೆಯಲ್ಲಿ ಪ್ರಕಟಿಸಿದ್ದಾರೆ. ಶಿವಯೋಗ ಪ್ರದೀಪಕಾ ಕೃತಿಯನ್ನು ಯೋಗದ ಬಗ್ಗೆ ಪ್ರಕಟಿತವಾದ ಕೃತಿಯನ್ನು ಆಧಾರವಾಗಿಟ್ಟುಕೊಂಡು ಪಾರಮಾರ್ಥ ಪ್ರಣಾಳಿಕೆ ಬರೆದಿದ್ದಾರೆ. ಅಲ್ಲದೆ ಶ್ರೀ ನಿಜಗುಣ ಶಿವಯೋಗಿಗಳ ಬಗ್ಗೆ ಅನೇಕ ಧ್ವನಿಸುರಳಿ ಹೊರತಂದಿದ್ದಾರೆ. **'ಬೋಳು ಬಸವನ ಬೊಂತೆ'** ಬರೆದು ಪ್ರಕಟಿಸಿ, ಇದರಿಂದ ಬಂದ ಹಣವೇ ಶ್ರೀ ನಿಜಗುಣಾನುಭವ ಮಂಟಪ ನಿರ್ಮಾಣಕ್ಕೆ ಮೂಲ ಮೊತ್ತವಾಯಿತು. ಶ್ರೀ ಸಿದ್ಧೇಶ್ವರ ಸ್ವಾಮಿಗಳ ನಾನಾರು ಎಂಬ ಮೌಲಿಕ ಕೃತಿಯನ್ನು ಪ್ರಕಟಿಸಿದ್ದಾರೆ. ಈ ರೀತಿ ಅನೇಕ ವೀರಶೈವ ಹಾಗೂ ಮಾನವ ಧರ್ಮಕ್ಕೆ ಹತ್ತಿರವಾದ ಕೃತಿಗಳನ್ನು ಪ್ರಕಟಿಸಿ ಹಾಗೂ ಪ್ರಕಟಣೆಗೆ ನೆರವಾಗಿ ಸದ್ದಿಲ್ಲದೆ ಸೇವೆ ಸಲ್ಲಿಸುತ್ತಿದ್ದಾರೆ.

ವಿಳಾಸ: ಶ್ರೀ ಕುಮಾರ ನಿಜಗುಣ ಸ್ವಾಮಿಗಳು, ಶ್ರೀ ನಿಜಗುಣಾನುಭವ ಮಂಟಪ, ಶಂಭುಲಿಂಗನಕ್ಷೇತ್ರ, ಚಿಲಕವಾಡಿ, ಕೊಳ್ಳೆಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ಚಿಕ್ಕಿಂದವಾಡಿ

ಕೊಳ್ಳೆಗಾಲ ತಾಲ್ಲೂಕಿನ ಚಿಕ್ಕಿಂದವಾಡಿಯು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಏಳು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಪಟ್ಟದ ಮಠವು ಅಸ್ತಿತ್ವದಲ್ಲಿದೆ.

ಪಟ್ಟದಮಠ: ಚಿಕ್ಕಿಂದವಾಡಿ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ಪಟ್ಟದಮಠವು ಶ್ರೀಶೈಲ ಪೀಠದ ಪರಂಪರೆಯಲ್ಲಿ ಬೆಳೆದು ಪುತ್ರವರ್ಗದ ಪರಂಪರೆಯಲ್ಲಿ ಮುಂದುವರೆದಿದೆ. ಈ ಹಿಂದೆ ಶ್ರೀ ಗಂಗಾಧರ ಸ್ವಾಮಿಗಳು ಅಧಿಕಾರದಲ್ಲಿದ್ದರು. ಇವರ ಕಾಲದಲ್ಲಿ ಮಠವು ಪ್ರಭಾವಿಯುತವಾಗಿ ಬೆಳೆದಿತ್ತು. ನಂತರದ ಪರಂಪರೆಯ ಬಗ್ಗೆ ಸ್ಪಷ್ಟ ಮಾಹಿತಿ ಲಭ್ಯವಿಲ್ಲ. ಪ್ರಸ್ತುತ ಮಠದ ಆವರಣದಲ್ಲಿ ಒಂದು ಗದ್ದುಗೆ ರಚನೆಯಾಗಿದೆ. ಈಗ ಬಾಲಷಡಾಕ್ಷರಿ ಸ್ವಾಮಿಗಳು ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡಿದ್ದಾರೆ. ಇವರು ಸುತ್ತೂರು ಮಠದ ಗುರುಕುಲದಲ್ಲಿ ವಿದ್ಯೆ ಕಲಿತಿದ್ದಾರೆ.

ಮಠದ ಸಮೀಪ ಶ್ರೀ ಬಿಟ್ಟಮಂಡೇಶ್ವರ ದೇವಸ್ಥಾನ ಸ್ಥಾಪನೆಯಾಗಿದೆ. ಈ ದೇವಸ್ಥಾನವನ್ನು ಪರಂಪರೆಯ ಗುರುಗಳು ಅಭಿವೃದ್ಧಿಪಡಿಸಿದ್ದಾರೆಂದು ಹೇಳಲಾಗುತ್ತದೆ.

ವಿಳಾಸ: ಶ್ರೀ ಬಾಲಷಡಕ್ಷರಿ ಸ್ವಾಮಿಗಳು, ಶ್ರೀ ಪಟ್ಟದಮಠ, ಚಿಕ್ಕಿಂದವಾಡಿ, ಕೊಳ್ಳೆಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ಪಾಳ್ಯ

ಕೊಳ್ಳೆಗಾಲ ತಾಲ್ಲೂಕಿನ ಪಾಳ್ಯ ಗ್ರಾಮವು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಹನ್ನೆರಡು ಕಿ.ಮೀ.ದೂರದಲ್ಲಿದೆ. ಇಲ್ಲಿ ಹಿಂದೆ ನಾಲ್ಕು ಮಠಗಳು ಸ್ಥಾಪಿತವಾಗಿದ್ದವು ಎಂದು ಹೇಳಲಾಗುತ್ತಿದೆ. ಈ ಮಠಗಳಲ್ಲಿ ಈಗ ಶ್ರೀ ಪಟ್ಟದಮಠವು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ಪಟ್ಟದಮಠ: ಪಾಳ್ಯದ ಮಧ್ಯದಲ್ಲಿ ಪುತ್ರವರ್ಗದ ಪರಂಪರೆಯ ಶ್ರೀಪಟ್ಟದಮಠವು ಸ್ಥಾಪನೆಯಾಗಿ, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.ಹಿಂದೆ ಈ ಭಾಗದ ಅತ್ಯಂತ ದೊಡ್ಡ ಮಠವಾಗಿ ಹೆಸರುವಾಸಿಯಾಗಿತ್ತು ಎಂದು ತಿಳಿದು ಬಂದಿದೆ. ಈವರೆಗೆ ಮಠದ ಆಡಳಿತವನ್ನು ನೋಡಿಕೊಂಡಿದ್ದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮಿಗಳು ೧೯೯೭ ರಲ್ಲಿ ಲಿಂಗೈಕ್ಯರಾದರು. ಇವರ ನಂತರ ಉತ್ತರಾಧಿಕಾರಿಗಳನ್ನು ನೇಮಿಸಲಾಗಿದ್ದು, ಗುರುಗಳ ವಿದ್ಯಾಭ್ಯಾಸ ಮುಗಿದ ಮೇಲೆ ಪಟ್ಟಾಧಿಕಾರ ಮಾಡಲಾಗುತ್ತದೆ ಎಂದು ಮಠದ ವಂಶಸ್ಥರು ತಿಳಿಸಿದ್ದಾರೆ.

ವಿಳಾಸ: ಶ್ರೀ ಪಟ್ಟದಮಠ, ಪಾಳ್ಯ, ಕೊಳ್ಳೆಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ಬಂಡಹಳ್ಳಿ

ಕೊಳ್ಳೆಗಾಲ ತಾಲ್ಲೂಕಿನ ಬಂಡಹಳ್ಳಿಯು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ನಲವತ್ತು ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ಶ್ರೀ ದೊಡ್ಡಮಠ, ಶ್ರೀ ಚಿಕ್ಕಮಠ ಮತ್ತು ದೇವನೂರು ಶಾಖೆಯ ಶ್ರೀ ದಾಸೋಹ ಮಠಗಳು ಸ್ಥಾಪನೆಯಾಗಿವೆ. ಈಗ ಶ್ರೀ ಚಿಕ್ಕಮಠವು ಉತ್ತರಾಧಿಕಾರಿಗಳಿಲ್ಲದೆ ನಿರ್ಲಕ್ಷ್ಯಕ್ಕೆ ಒಳಗಾಗಿ ನಶಿಸಿ ಹೋಗಿದೆ.

ದೊಡ್ಡಮಠ: ಬಂಡಹಳ್ಳಿ ಗ್ರಾಮದ ಮಧ್ಯದಲ್ಲಿರುವ ದೊಡ್ಡಮಠವು, ಈ ಗ್ರಾಮದ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಪ್ರಗತಿಯ ಪ್ರತೀಕವಾಗಿ ಬೆಳೆದು ನಿಂತಿದೆ. ಲೋಕಸಂಚಾರ ಕೈಗೊಂಡು ಬಂದ ಜಂಗಮರೊಬ್ಬರು ಬಂಡಹಳ್ಳಿಯಲ್ಲಿ ನೆಲೆಸಿ ಊರ ಕೆರೆಯಲ್ಲಿ ಸ್ನಾನಮಾಡಿಕೊಂಡು, ಪೂಜೆ ಧ್ಯಾನ ಮುಗಿಸಿ ಫಲಹಾರವನ್ನು ಸೇವಿಸುತ್ತಾ ಸರಳ ಜೀವನ ನಡೆಸಿ ಭಕ್ತರಿಗೆ ಉಪದೇಶ ನೀಡುತ್ತಿದ್ದರು. ಕಾಲಕ್ರಮೇಣ ಇವರ ಉಪದೇಶಕ್ಕೆ ಒಲಿದ ಭಕ್ತರ ಸಂಖ್ಯೆ ಅಪಾರವಾದಂತೆ, ಇಲ್ಲಿನ ಧಾರ್ಮಿಕ ಚಟುವಟಿಕೆಗಳು ವಿಸ್ತಾರಗೊಳ್ಳುತ್ತಾ ಹೋದವು. ಈರೀತಿ ಬದುಕಿದ ಇವರು ಅನೇಕ ಪವಾಡಗಳನ್ನು ಮಾಡಿ ಭಕ್ತರನ್ನು ಉದ್ಧರಿಸಿದ್ದರು ಎಂದು ಈಗಲೂ ಕಥೆಯ ರೂಪದಲ್ಲಿ ಹೇಳುತ್ತಾರೆ.

ಪರಂಪರೆ: ಪವಾಡಗಳೊಂದಿಗೆ ಹೆಸರಾಗಿದ್ದ ಗುರುಗಳು ಬೇಯಿಸಿದ ಆಹಾರ ಸೇವಿಸದೆ ಬರಿ ಫಲಾಹಾರವನ್ನೇ ಸೇವಿಸುತ್ತಿದ್ದ ರಿಂದ ಇವರಿಗೆ'ಶ್ರೀ ಫಲಹಾರೇಶ್ವರ' ಎಂದು ಕರೆಯಲಾಗುತ್ತಿತ್ತು. ನಂತರ ಮುಂದಿನ ಈ ಪರಂಪರೆಯ ಎಲ್ಲಾ ಗುರುಗಳು ಇದೇ ಹೆಸರಿನಲ್ಲಿ ಪಟ್ಟಾಧಿಕಾರ ಪಡೆದಿದ್ದಾರೆ. ಈ ಮಠದ ಪರಂಪರೆಯಲ್ಲಿ ನಾಲ್ಕು ಜನ ಗುರುಗಳು ಅಧಿಕಾರ ನಡೆಸಿದ್ದಾರೆ ಎಂದು ಮಠದ ಆವರಣದಲ್ಲಿರುವ ಮೂರು ಗದ್ದುಗೆಗಳ ಆಧಾರದ ಮೇಲೆ ಹೇಳಬಹುದಾಗಿದೆ. ಪರಂಪರೆಯ ಎರಡನೆಯ ಶ್ರೀ ಫಲ ಹಾರೇಶ್ವರ ಸ್ವಾಮಿಗಳು ಬಹಳ ಮೇಧಾವಿಗಳು,ಪವಾಡಪುರುಷರು ಆದ ಕಾರಣ ಟಿಪ್ಪುಸುಲ್ತಾನ್ ಇವರ ಪ್ರಭಾವಕ್ಕೆ ಒಳಗಾಗಿ, ಮಠಕ್ಕೆ ಬಂದು ಆಶೀರ್ವಾದ ಪಡೆದು ಕಾಣಿಕೆ ಸಲ್ಲಿಸಿ ಹೋಗಿದ್ದಾನೆಂದು ಹೇಳಲಾಗುತ್ತಿದೆ. ಪರಂಪರೆಯ ಮೂರನೆಯ ಗುರುಗಳು ಮಠವನ್ನು ಅಭಿವೃದ್ಧಿಪಡಿಸಿ, ೧೯೫೫ರ ಮೇ ಹದಿನೈದರಂದು ಲಿಂಗೈಕ್ಯರಾದರು.

ಶ್ರೀ ಬಸವಣ್ಣ ಮತ್ತು ಶ್ರೀಮತಿ ಗುರುಮಲ್ಲಮ್ಮನವರ ಪುತ್ರರಾಗಿ ೧೯೬೦ ರಲ್ಲಿ ಜನಿಸಿದ ಶ್ರೀ ಪ್ರಭುಸ್ವಾಮಿ ಫಲ ಹಾರೇಶ್ವರ ಸ್ವಾಮಿಗಳು ಉನ್ನತ ವಿದ್ಯಾಭ್ಯಾಸವನ್ನು ಮಾಡಿ, ೧೯೫೫ ರ ಮೇ ಇಪ್ಪತ್ತೇಳರಂದು ಪಟ್ಟಾಧಿಕಾರ ಪಡೆದಿದ್ದಾರೆ.

ಗುರುಗಳು ಸಂಸ್ಕೃತ ಕಲಿತು ಮೈಸೂರಿನ ಮಡಿವಾಳಸ್ವಾಮಿ ವಿದ್ಯಾಸಂಸ್ಥೆಯ ಸಂಸ್ಕೃತ ಪಾಠಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ಶೈಕ್ಷಣಿಕ ಸೇವೆ: ಶ್ರೀ ಫಲಹಾರೇಶ್ವರ ಪ್ರಭು ಸ್ವಾಮಿಗಳು ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಾ ಮಠದ ವತಿಯಿಂದ,'ಶ್ರೀ ಫಲಾಹಾರ ಪ್ರಭುಸ್ವಾಮಿ ವಿದ್ಯಾಸಂಸ್ಥೆ'ಯನ್ನು ಸ್ಥಾಪಿಸಿ ಈ ಮೂಲಕ ಸಂಸ್ಕೃತ ಶಾಲೆಗಳು, ಸಾಲ್ಕು ಹಿರಿಯ ಪ್ರಾಥಮಿಕ ಪಾಠಶಾಲೆಗಳು ಹಾಗೂ ಅನಾಥಾಲಯಗಳನ್ನು ಪ್ರಾರಂಭಿಸಿ, ಗ್ರಾಮಾಂತರ ಮಕ್ಕಳ ಕಲಿಕೆಗೆ ನೆರವಾಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಒಳಗೆ ನಿರ್ಮಿಸಲಾದ ಮೂರು ಗದ್ದುಗೆಗಳಿಗೆ ಪೂಜೆ,ಅಮಾವಾಸ್ಯೆ, ಹುಣ್ಣಿಮೆ, ಕಾರ್ತೀಕ, ಶ್ರಾವಣಮಾಸದಲ್ಲಿ ಮಠದಲ್ಲಿ ವಿಶೇಷ ಪೂಜೆ ಹಾಗೂ ಈ ಸಂದರ್ಭದಲ್ಲಿ ಅನ್ನದಾಸೋಹವ ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಫಲಾಹಾರ ಪ್ರಭು ಶಿವಾಚಾರ್ಯ ಸ್ವಾಮಿಗಳು, ಶ್ರೀ ದೊಡ್ಡಮಠ, ಬಂಡಹಳ್ಳಿ, ಕೊಳ್ಳೆಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ಕಂತೆಭಿಕ್ಷದ ಮಠ: ಬಂಡಹಳ್ಳಿಯ ಮುಖ್ಯ ರಸ್ತೆಯಲ್ಲಿ ಸ್ಥಾಪಿತವಾಗಿರುವ ಕಂತೆ ಭಿಕ್ಷ ಮಠವು, ದೇವನೂರಿನ ಶಾಖಾ ಮಠವಾಗಿ ಕಳೆದ ಎಪ್ಪತ್ತು ವರ್ಷಗಳಲ್ಲಿ ಸ್ಥಾಪಿತಗೊಂಡಿದೆ. ಈ ಮಠದಲ್ಲಿ ಎರಡು ಗದ್ದುಗೆಗಳು ನಿರ್ಮಾಣವಾಗಿವೆ. ಈ ಹಿಂದೆ ಶ್ರೀ ಮಲ್ಲಪ್ಪ ಸ್ವಾಮಿಗಳು ಅಧಿಕಾರ ನಡೆಸಿ ಮಠವನ್ನು ಹೆಚ್ಚು ಪ್ರಚಾರಕ್ಕೆ ತಂದಿದ್ದಾರೆ. ಈಗ ಶ್ರೀ ಬಸಪ್ಪ ಸ್ವಾಮಿಗಳು ನೇಮಕಗೊಂಡಿದ್ದು, ಮಠದ ಸಂಪ್ರದಾಯದ ಕೆಲಸಗಳನ್ನು ಮಾಡಿಕೊಂಡು ದಾಸೋಹ ಕಾರ್ಯವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇತ್ತೀಚೆಗೆ ಊರಿನ ಭಕ್ತರು ಸೇರಿ ನೂತನ ಕಟ್ಟಡವನ್ನು ನಿರ್ಮಿಸಿಕೊಟ್ಟಿದ್ದಾರೆ.

ವಿಳಾಸ: ಶ್ರೀ ಬಸಪ್ಪ ಸ್ವಾಮಿಗಳು, ಶ್ರೀ ದಾಸೋಹ ಮಠ, ಬಂಡಹಳ್ಳಿ, ಕೊಳ್ಳೆಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ಮಲೆಮಾದೇಶ್ವರ ಬೆಟ್ಟ

ಕೊಳ್ಳೆಗಾಲ ತಾಲ್ಲೂಕಿನ ಮಲೆಮಾದೇಶ್ವರಬೆಟ್ಟವು ಶ್ರೀ ಮಾದೇಶ್ವರರು ನೆಲೆನಿಂತ ಕಾರಣಕ್ಕೆ ಪವಿತ್ರ ಯಾತ್ರಾಸ್ಥಳವಾಗಿ ಪ್ರಖ್ಯಾತಗೊಂಡಿದೆ. ಕೊಳ್ಳೆಗಾಲದ ಪೂರ್ವಭಾಗಕ್ಕೆ ಎಂಬತ್ತು ಕಿ.ಮೀ.ದೂರದಲ್ಲಿರುವ ಈ ಕ್ಷೇತ್ರವು ಸಮುದ್ರ ಮಟ್ಟದಿಂದ ೩೦೮೫ ಅಡಿ ಎತ್ತರದಲ್ಲಿದೆ. ಈ ಪ್ರಕೃತಿ ಸೌಂದರ್ಯದ ಬೀಡು ಧರ್ಮ ಜಾಗೃತಿ ಸ್ಥಳವಾಗಿ ರೂಪಗೊಂಡಿದೆ. ಇಲ್ಲಿ ಶ್ರೀ ಸಾಲೂರು ಮಠವು ಅಸ್ತಿತ್ವದಲ್ಲಿದೆ.

ಸಾಲೂರುಮಠ: ಮಲೆಮಾದೇಶ್ವರಬೆಟ್ಟದ ಗಿರಿಕಂದರಗಳ ಮಧ್ಯೆ ವಿಶಾಲ ಪ್ರದೇಶವಾದ ನಡುಮಲೆಯಲ್ಲಿ ಸ್ಥಾಪನೆಯಾಗಿರುವ ಸಾಲೂರು ಮಠವು ಕಗ್ಗತ್ತಲಿನ ಈ ನಾಡಿನಲ್ಲಿ ಧರ್ಮದ ಕಿಡಿ ಬೆಳಗಿಸಿ ಈ ನಾಡನ್ನು ಪುಣ್ಯಕ್ಷೇತ್ರವನ್ನಾಗಿ ಮಾಡಿರುವುದಲ್ಲದೇ ವೀರಶೈವಧರ್ಮ ಕುಡಿಯೊಡೆದು ಹೆಮ್ಮರವಾಗಲು ಕಾರಣವಾಗಿದೆ. ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ಹಾಗೂ ಶ್ರೀ ಮುಪ್ಪಿನ ಸ್ವಾಮಿಗಳು ನೆಲೆಗೊಂಡ ನಡುಮಲೆಯಲ್ಲಿ ಶ್ರೀ ಮಾದೇಶ್ವರರು ಮಠವನ್ನು ಸ್ಥಾಪನೆ ಮಾಡಿದರು. ಈ ರೀತಿ ಸ್ಥಾಪಿತಗೊಂಡ ಮಠಕ್ಕೆ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಸಾಲೂರಿನಿಂದ ಲೋಕಸಂಚಾರ ಕೈಗೊಂಡು ನಡುಮಲೆಗೆ ಬಂದಿದ್ದ ಮಹಾತಪಸ್ವಿ ಶ್ರೀ ಸಾಲೂರು ಸ್ವಾಮಿಗಳನ್ನು, ಮೊದಲ ಗುರುಗಳನ್ನಾಗಿ ಪಟ್ಟಾಧಿಕಾರ ಮಾಡಿದದರೆಂದು ಹೇಳಲಾಗುತ್ತಿದೆ. ಶ್ರೀ ಸಾಲೂರು ಸ್ವಾಮಿಗಳು ಮೊದಲ ಗುರುಗಳಾದ ಕಾರಣ ಈಮಠವು'ಸಾಲೂರು ಮಠ' ಎಂದು ಹೆಸರು ಪಡೆದು ನಾಡನ್ನೇ ಬೆಳಗಿಸಿದೆ.

ಸುತ್ತೂರಿಗೆ ಮಾದೇಶ್ವರರ ಆಗಮನ: ಶ್ರೀಶೈಲದ ಶ್ರೀ ಚಂದ್ರಶೇಖರಮೂರ್ತಿ ಮತ್ತು ಶ್ರೀಮತಿ ಉತ್ತರಾಜಮ್ಮನವರ ಪುತ್ರರಾದ ಮಾದೇಶ್ವ ರರು ಲೋಕೋದ್ಧಾರಕ್ಕಾಗಿ ಬಾಲ್ಯದಲ್ಲೇ ಸಂಚಾರಕ್ಕೆ ಹೊರಟ ಮಹಾಮಹಿಮರು. ಕಲ್ಯಾಣದ ಮುಸುಡಿ ಚೌಡಯ್ಯನವರು ಶ್ರೀಶೈಲಕ್ಕೆ ಬಂದಿದ್ದಾಗ, ಅವರ ಜೊತೆಯಲ್ಲಿ ಸುತ್ತೂರು ನೋಡಲು ಬಂದ ಶರಣರ ಗುಂಪಿನಲ್ಲಿ ಬಾಲಕ ಶ್ರೀ ಮಾದೇಶ್ವರರು ಬರುತ್ತಾರೆ. ಸುತ್ತೂರು ಮಠದ ಆಗಿನ ಗುರುಗಳಾದ ಶ್ರೀ ಸಿದ್ದನಂಜೆ ದೇಶಿಕೇಂದ್ರ ಸ್ವಾಮಿಗಳ

ದರ್ಶನದಿಂದ ಮಠದಲ್ಲೇ ನೆಲೆಸಿ, ರಾಗಿಬೀಸುವ ಕಾಯಕದಲ್ಲಿ ನಿರತರಾದರು. ಈ ಕಾಯಕದಲ್ಲಿ ಪವಾಡಮಾಡಿತೋರಿಸಿ 'ಸುತ್ತೂರು ಮಠ ಸುಕ್ಷೇತ್ರ ವಾಗಲಿ'ಎಂದು ಹರಸಿ ಪ್ರಭುದೇವರ ಬೆಟ್ಟಕ್ಕೆ ಬಂದರು. ಇಲ್ಲಿ ಕೆಲದಿನ ನೆಲೆಸಿ ಪ್ರಭುದೇವರ ಸೇವೆ ಮಾಡಿ ಕುಂತೂರು ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳಿಂದ ದೀಕ್ಷೆ ಪಡೆದು, ಪ್ರಭುದೇವರಿಂದ ತ್ರಿಶೂಲ ಪಡೆದು ಅನೇಕ ಪವಾಡಗಳನ್ನು ಮಾಡಿ-ಮೂಡಲ ಮಲೆಯತ್ತ ಹೋಗಲು ತಮ್ಮ ಪಾದಗಳನ್ನು ಮುಂದಿಟ್ಟರು. ದಾರಿ ಮಧ್ಯದಲ್ಲಿ ಬರುವ ಭಕ್ತರನ್ನು ಆಶೀರ್ವದಿಸಿ ಬರುತ್ತಿರುವಾಗ ಶ್ರೀ ಗಂಗಾಧರೇಶ್ವರರ ಅಹಂಕಾರ ನೋಡಿ, ಘಟ ಸರ್ಪವನ್ನಾಗಿ ಮಾಡಿ ನಿನ್ನ ಅಹಂಕಾರದ ಅರಿವಾದಾಗ ನನ್ನನ್ನು ಹುಡುಕುತ್ತಾ ಬಂದು ನನ್ನ ಸೇವೆ ಮಾಡು ಎಂದು ಶಾಪಕೊಟ್ಟು ಹೋಗುತ್ತಾರೆ. ನಂತರ ಶ್ರೀ ಗಂಗಾಧರೇಶ್ವರರಿಗೆ ಜ್ಞಾನದ ಅರಿವಾದಾಗ ಮಾದೇಶ್ವರರನ್ನು ಹುಡುಕುತ್ತಾ ಎಪ್ಪತ್ತೇಳು ಮಲೆಗಳನ್ನು ಸುತ್ತಿ ಮಾದೇಶ್ವರರು ತಪಸ್ಸು ಮಾಡುತ್ತಿದ್ದ ಜಾಗಕ್ಕೆ ಬಂದು ಹೆಡೆಎತ್ತಿ ಮಾದೇಶ್ವರರಿಗೆ ನೆರಳಾಗಿ ನಿಲ್ಲುತ್ತಾರೆ. ಈ ಸ್ಥಳ 'ಬೆಟ್ಟನಾಗಲಿಂಗಮಲೆ' ಎಂದು ಹೆಸರಾಗುತ್ತದೆ. ಅಲ್ಲದೆ ಹೆಡೆ ಎತ್ತಿದ ಸರ್ಪದಾಕಾರದ ಬಂಡೆ ಲಿಂಗದಾಕಾರದ ಬಂಡೆಗೆನೆರಳು ನೀಡುತ್ತಿರುವಂತೆ ಈ ಜಾಗದಲ್ಲಿ ಬಂಡೆ ಸೃಷ್ಟಿಯಾಗಿದೆ. ಈ ಬಂಡೆಗೆ ಈಗಲೂ ಮಠದ ವತಿಯಿಂದ ಪೂಜೆ ನಡೆಯುತ್ತಿದೆ.

ಮಾದೇಶ್ವರರು ಆನುಮಲೆ,ಜೇನುಮಲೆ,ಗುಂಜುಮಲೆ, ಗುಲಗಂಜಿಮಲೆ, ಸುತ್ತುಮಲೆ, ನಾಗಮಲೆ ಮುಂತಾದ ಎಪ್ಪತ್ತೇಳು ಮಲೆಗಳನ್ನು ಹುಲಿಯ ಮೇಲೆ ಕುಳಿತು ಪ್ರಭುದೇವರು ಕೊಟ್ಟ ತ್ರಿಶೂಲ ಹಿಡಿದು ಸುತ್ತಿ, ಗಿರಿಜನರನ್ನು ಸಂಸ್ಕಾರವಂತರನ್ನಾಗಿ ಮಾಡುತ್ತಾರೆ. ಬೇಡರಿಗೆ ಅಹಿಂಸಾನೀತಿ ಬೋಧಿಸಿ ಅವರ ಬದುಕನ್ನು ಬದಲಿಸಿ, ಜೀವನಕ್ಕಾಗಿ ಬೇಸಾಯದ ಕಾಯಕಕ್ಕೆ ತೊಡಗಿಸಿ ದರು. ಈ ಕತ್ತಲೆಯ ನಾಡಿನ ಅಂಧಕಾರವನ್ನು ದೂರ ಮಾಡಿ ಜಾತಿ ಬೇಧವಿಲ್ಲದೆ ಆಚಾರ ವಿಚಾರಗಳನ್ನು ತಿಳಿಸಿ ಲಿಂಗದೀಕ್ಷೆ ಕೊಟ್ಟು ವೀರಶೈವ ಧರ್ಮ ಬೆಳೆಯಲು ಕಾರಣ ಕರ್ತರಾದರು. ಶ್ರೀ ಮಾದೇಶ್ವರರ ಪವಾಡಗಳು ದಿನದಿಂದ ದಿನಕ್ಕೆ ಹೆಚ್ಚಾಗ ತೊಡಗಿದ್ದ ಸಂದರ್ಭದಲ್ಲಿ ದೀಕ್ಷೆಕೊಟ್ಟ ಶಿಷ್ಯನನ್ನು ಕಣ್ಣಾರೆ ನೋಡಬೇಕೆಂಬ ಹಂಬಲದಿಂದ. ಕುಂತೂರಿನ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ಶ್ರೀ ಮಾದೇಶ್ವರರ ದಿವ್ಯಕ್ಷೇತ್ರ ನಡುಮಲೆಗೆ ಆಗಮಿಸುತ್ತಾರೆ. ಕಾಡುಜನರಲ್ಲಿ ಸಂಸ್ಕಾರ ಸಾಕಾರಗೊಂಡಿರುವುದನ್ನು ನೋಡಿ ಆನಂದಿಸುತ್ತಾರೆ. ಪ್ರಥಮವಾಗಿ ನಡುಮಲೆಗೆ ಬಂದ ದೀಕ್ಷಾ ಗುರು ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳನ್ನು ನಡುಮಲೆಯ ಕಾಡುಜನರ ಉದ್ಧಾರಕ್ಕೆಂದು ಈ ಹಿಂದೆ ತಮ್ಮ ಜೀವ ಸವೆಸಿದ ಶ್ರೀ ಮುಪ್ಪಿನ ಸ್ವಾಮಿಗಳ ದರ್ಶನ ಮಾಡಿಸಲು ಮಾದೇಶ್ವರರು ಕರೆತರುತ್ತಾರೆ.

ಮಠ ಸ್ಥಾಪನೆ: ಗವಿಯ ಮುಂದಿನ ವಿಶಾಲ ಜಾಗವನ್ನು ತಮ್ಮ ಧರ್ಮೋಪದೇಶ ನೀಡುವ ಕಾರ್ಯಕ್ಷೇತ್ರವನ್ನಾಗಿ ಮಾಡಿ ಕೊಂಡಿದ್ದ ಶ್ರೀ ಮುಪ್ಪಿನ ಸ್ವಾಮಿಗಳು ಗವಿಯೊಳಗೆ ಏಕಾಗ್ರ ಚಿತ್ತದಿಂದ ತಪೋಮಗ್ನರಾಗಿದ್ದರು. ಶ್ರೀ ಮುಪ್ಪಿನ ಸ್ವಾಮಿಗಳನ್ನು ನೋಡಿದ ಮೊದಲ ನೋಟದಲ್ಲೇ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳಿಗೆ ಮಹದಾನಂದವಾಯಿತು. ಗುರುಗಳು ಎಚ್ಚರಗೊಂಡ ಮೇಲೆ ಶ್ರೀ ಮಾದೇಶ್ವರರು ಮತ್ತು ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ಹಿರಿಯ ಚೇತನ ಮುಪ್ಪಿನ ಸ್ವಾಮಿಗಳೊಡನೆ ಚರ್ಚಿಸಿ, ಪ್ರಕೃತಿಯ ನಿಸರ್ಗತಾಣವಾದ ಈ ನಡುಮಲೆಯಲ್ಲಿ ನಿರಂತರವಾಗಿ ಈ ಕಾಡು ಜನರಿಗೆ ಆಚಾರ ವಿಚಾರ, ಲಿಂಗದೀಕ್ಷೆ ಹಾಗೂ ಧಾರ್ಮಿಕ ಕ್ರಿಯಾದಿಗಳು ನಿಲ್ಲದಂತೆ ನೋಡಿಕೊಳ್ಳಲು ಮಠವನ್ನು ಸ್ಥಾಪಿಸಬೇಕೆಂಬ ನಿರ್ಧಾರವನ್ನು ಕೈಗೊಂಡರು. ಶ್ರೀ ಮುಪ್ಪಿನ ಸ್ವಾಮಿಗಳು ತಪಸ್ಸನ್ನು ಆಚರಿಸುತ್ತಿದ್ದ ಜಾಗದಲ್ಲಿ ಮಠ ಸ್ಥಾಪನೆಗೆ ಮುಹೂರ್ತ ಸ್ತಂಭವನ್ನು ಸ್ಥಾಪಿಸಿ, 'ಈ ಸ್ತಂಭ ಯಾವಾಗಲೂ ಮುಪ್ಪಾಗದಿರಲಿ' ಎಂದು ಹರಸಿದರು.

ಇದೇ ಸಂದರ್ಭದಲ್ಲಿ ಸಾಲೂರು ಸ್ವಾಮಿಗಳು ಶ್ರೀ ಮಾದೇಶ್ವರರ ಪವಾಡ ನೋಡಲು ನಡುಮಲೆಗೆ ಆಗಮಿಸುವ ದಾರಿ ಮಧ್ಯದಲ್ಲಿ, ಕುಂತೂರಿನ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳನ್ನು ಭೇಟಿಮಾಡಿ ಆಶೀರ್ವಾದ ಪಡೆದು ಬರಲು ಕುಂತೂರು ಮಠಕ್ಕೆ ಹೋದರು. ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ನಡುಮಲೆಗೆ ಮಾದೇಶ್ವರರನ್ನು ನೋಡಲು ಹೋಗಿದ್ದಾರೆ ಎಂಬ ವಿಷಯ ತಿಳಿದು, ನಡುಮಲೆಯ ಕಡೆ ಪ್ರಯಾಣ ಮುಂದುವರಸುತ್ತಾರೆ. ನಡುಮಲೆಗೆ ಬಂದ ಶ್ರೀಸಾಲೂರು ಸ್ವಾಮಿಗಳು ಮಾದೇಶ್ವರರ ಕಾಯಕ ನೋಡಿ ಬೆರಗಾದರು. ಈ ಪವಾಡಗಳನ್ನು ನೋಡಿ ಇಲ್ಲೇ ನೆಲೆಸಿ ಶ್ರೀ ಮಾದೇಶ್ವರರ ಕಾರ್ಯಗಳಿಗೆ ನೆರವಾಗಲು ನಿರ್ಧರಿಸಿಕೊಂಡು ಶ್ರೀ ಮಾದೇಶ್ವರರ ಬಳಿಗೆ ಬಂದರು. ಶ್ರೀ ಸಾಲೂರು ಸ್ವಾಮಿಗಳನ್ನು ಇನ್ನು

ಆಗ ತಾನೇ ಸ್ಥಾಪಿಸಿದ್ದ ಮಠಕ್ಕೆ ಮೊದಲ ಗುರುಗಳನ್ನಾಗಿ ಸಾಕಾರಗೊಳಿಸಿದರು.

ಸಂಕಲ್ಪಗೊಂಡ ಕಾರ್ಯಗಳು: ಶ್ರೀ ಸಾಲೂರು ಸ್ವಾಮಿಗಳು ತಮ್ಮ ಸಂಕಲ್ಪಗಳನ್ನು ಸಾಕಾರಗೊಳಿಸಲು ಚೇರ,ಚೋಳ, ಪಾಂಡ್ಯ ದೇಶಗಳ ಉದ್ದಗಲಕ್ಕೂ ಸಂಚರಿಸಿ ವೀರಶೈವ ತತ್ತ್ವಗಳನ್ನು ಬೋಧಿಸಿ, ಅವರನ್ನು ಜಾಗೃತಗೊಳಿಸಿದರು. ಈ ಕಾರ್ಯ ನೋಡಿ ಮನಸೋತು ಕಂಚಿ ತೆಲಂಗಾಣ ಮಠದ ಶ್ರೀ ಕರಿಬಸವ ಸ್ವಾಮಿಗಳು, ಶ್ರೀ ಸಾಲೂರು ಸ್ವಾಮಿಗಳನ್ನು ಮಠಕ್ಕೆ ಕರೆಸಿ ಗೌರವಿಸಿದರು. ಶ್ರೀ ಮಾದೇಶ್ವರರು ಸೋಲಿಗರ, ಕಾಡುಕುರುಬರ, ಹಾಗೂ ಕಾಡು ಜನರ ಬದುಕನ್ನು ಹಸನ ಗೊಳಿಸುತ್ತಿರುವ ಕೆಲಸಕ್ಕೆ ನಾವು ಸೇರಬೇಕು ಎಂದು ಶ್ರೀ ಕರಿಬಸವ ಸ್ವಾಮಿಗಳು ನಿರ್ಧರಿಸಿಕೊಂಡರು. ಶ್ರೀ ಸಾಲೂರು ಸ್ವಾಮಿಗಳು ಈ ಪ್ರದೇಶದ ಶೈವರನ್ನು ವೀರಶೈವರನ್ನಾಗಿ ಪರಿವರ್ತಿಸಲು ದೊಡ್ಡ ಆಂದೋಲನವನ್ನೇ ಮಾಡಿದರು.ಮಾದೇಶ್ವರರ ಸಮ್ಮುಖದಲ್ಲಿ ನಡುಮಲೆಯ ಮಠದಲ್ಲಿ ಸಾಮೂಹಿಕ ಲಿಂಗಧಾರಣೆ ಕಾರ್ಯಕ್ರಮವನ್ನು ನೆರವೇರಿಸಿದರು. ಕಂಚಿ, ಕುಂಬ ಕೋಣಗಳಲ್ಲಿದ್ದ ಪ್ರಾಚೀನ ವೀರಶೈವ ಮಠಗಳನ್ನು ಜೀರ್ಣೋದ್ಧಾರಗೊಳಿಸಿದರು. ಅಲ್ಲದೆ ಎಪ್ಪತ್ತೇಳು ಮಲೆಗಳನ್ನು ಶ್ರೀ ಮಾದೇಶ್ವರರ ಜತೆ ಸುತ್ತಿ,ಶ್ರೀ ಮಾದೇಶ್ವರರ ಮಹಾತ್ಕಾರ್ಯಕ್ಕೆ ನೆರವಾಗಿ ತೃಪ್ತಿಕಂಡರು. ಕಂಚಿ ತೆಲಂಗಾಣಮಠದ ಗುರುಗಳಾಗಿ ನಡುಮಲೆಯಲ್ಲಿ ಸೇವೆಮಾಡಬೇಕು ಎಂದು ಆಗಮಿಸಿ, ಮಾದೇಶ್ವರರ ಜತೆ ಕಾಯಕಮಾಡುತ್ತಿದ್ದ ಶ್ರೀ ಕರಿಬಸವ ಸ್ವಾಮಿಗಳನ್ನು ಶ್ರೀ ಸಾಲೂರು ಸ್ವಾಮಿಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡು ಅಧಿಕಾರ ಕೊಟ್ಟು ಲಿಂಗೈಕ್ಯರಾದರು.

ಪರಂಪರೆ: ಮಲೆಮಾದೇಶ್ವರ ದೇವಸ್ಥಾನದಿಂದ ಈಶಾನ್ಯಕ್ಕೆ ಕೇವಲ ಅರ್ಧ ಕಿ.ಮೀ.ದೂರದಲ್ಲಿರುವ ಶ್ರೀ ಸಾಲೂರು ಮಠದ ಪರಂಪರೆಯು ಈತನಕ ಅವಿಚ್ಛಿನ್ನವಾಗಿ ಬೆಳೆದು ಶ್ರೀಮಂತಗೊಂಡಿದೆ.

೧. ಶ್ರೀ ಸಾಲೂರುಸ್ವಾಮಿಗಳು
೨. ಶ್ರೀ ಕರಿಬಸವಸ್ವಾಮಿಗಳು
೩. ಶ್ರೀ ಶಾಂತಲಿಂಗಸ್ವಾಮಿಗಳು
೪. ಶ್ರೀ ಇಮ್ಮಡಿ ಸಾಲೂರುಸ್ವಾಮಿಗಳು
೫. ಶ್ರೀ ಮುದ್ದುವೀರಸ್ವಾಮಿಗಳು
೬. ಶ್ರೀ ಕೆಂಪನಂಜಸ್ವಾಮಿಗಳು
೭. ಶ್ರೀ ಶಾಂತಲಿಂಗಸ್ವಾಮಿಗಳು
೮. ಶ್ರೀ ಸಿದ್ಧವೀರಸ್ವಾಮಿಗಳು
೯. ಶ್ರೀ ಗುಂಡೇಗಾಲದಸ್ವಾಮಿಗಳು
೧೦. ಶ್ರೀ ಚೆನ್ನೂರಿನಸ್ವಾಮಿಗಳು
೧೧. ಶ್ರೀ ದೇವರಹಳ್ಳಿಸ್ವಾಮಿಗಳು
೧೨. ಶ್ರೀ ಸಿದ್ಧವೀರಸ್ವಾಮಿಗಳು
೧೩. ಶ್ರೀ ಕೆಂಪನಂಜಸ್ವಾಮಿಗಳು
೧೪. ಶ್ರೀ ಶಾಂತಲಿಂಗಸ್ವಾಮಿಗಳು
೧೫. ಶ್ರೀ ಇಮ್ಮಡಿ ಮುದ್ದುವೀರಸ್ವಾಮಿಗಳು
೧೬. ಶ್ರೀ ಮಹಾದೇವಸ್ವಾಮಿಗಳು
೧೭. ಶ್ರೀ ಗುರುಸ್ವಾಮಿಗಳು

ಈ ರೀತಿ ಸಾಲೂರು ಮಠದ ಪರಂಪರೆಯು ಬೆಳೆದು ಬಂದಿದೆ. ಶ್ರೀ ಸಾಲೂರು ಸ್ವಾಮಿಗಳ ಉತ್ತರಾಧಿಕಾರಿಗಳಾಗಿ ಬಂದ ಶ್ರೀ ಕರಿಬಸವ ಸ್ವಾಮಿಗಳು ತಮ್ಮ ಮೂಲಮಠವನ್ನು ತೊರೆದು ಈ ನೆಲದ ಉದ್ಧಾರಕ್ಕೆ ಬಂದರು. ಈ ಗುರುಗಳು ಅಧಿಕಾರಕ್ಕೆ ಬಂದ ಮೇಲೆ ಈ ಮಠಕ್ಕೆ 'ಕಂಚಿಕಾಳಹಸ್ತಿ ತೆಲಂಗಾಣಮಠ' ಎಂಬ ಹೆಸರು ತಳುಕು ಹಾಕಿಕೊಂಡಿತ್ತಾದರೂ, ಶ್ರೀ ಸಾಲೂರು ಮಠ ಎಂಬ ಹೆಸರೇ ಖಾಯಂ ಆಗಿ ಉಳಿದುಕೊಂಡಿತು.

ನೆಲೆಗೊಂಡ ಮಾದೇಶ: ಮಾದೇಶ್ವರರ ಲಿಂಗಪೂಜೆಗೆ ನೆರವಾಗಿ ಇವರ ಸೇವೆ ಮಾಡಿಕೊಂಡಿದ್ದ ಶ್ರೀ ಶಾಂತಲಿಂಗಸ್ವಾಮಿಗಳು ಸಾಲೂರು ಮಠಕ್ಕೆ ನೇಮಕಗೊಂಡು, ಮಠವನ್ನು ಬೆಳೆಸಿ ವೀರಶೈವ ಧರ್ಮವನ್ನು ಉದ್ಧರಿಸಿದರು. ಈ ಗುರುಗಳು ಮಠದ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಶ್ರೀ ಮಾದೇಶ್ವರರು ತಮ್ಮ ಮತ್ತು ಮಠದ ಸಂಬಂಧ ಚಿರವಾಗಿ ಉಳಿಯಲು ಸಾಕ್ಷಿಯಾಗಿರಲಿ ಎಂದು ತಾವು ಬಳಸುತ್ತಿದ್ದ ಬೆತ್ತ, ಶಂಖ ಮತ್ತು ಪಾದುಕೆಗಳನ್ನು ಸಾಲೂರು ಮಠಕ್ಕೆ ನೀಡಿ, ಈ ಮಠದಲ್ಲಿ ಶಿವ ತತ್ತ್ವಪ್ರಸಾರ, ದಾಸೋಹವು ನಿರಂತರವಾಗಿ ನಡೆಯಲೆಂದು ಹಾರೈಸಿ ಮಠದ ನೈರುತ್ಯ ಭಾಗದಲ್ಲಿ(ಈಗಿನ ದೇವಸ್ಥಾನದ ಜಾಗ) ಜೀವಂತ ಸಮಾಧಿ ಹೊಂದಿದರು. ಇದೇ ಸಂದರ್ಭದಲ್ಲಿ ಶ್ರೀ ಮಾದೇಶ್ವರರಿಗೆ ದೀಕ್ಷೆ ನೀಡಿದ ಹಿರಿಯ ಗುರುಗಳಾದ ಕುಂತೂರಿನ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳೂ ಸಹ ಲಿಂಗೈಕ್ಯರಾದರು. ಶ್ರೀ ಶಾಂತಲಿಂಗ ಸ್ವಾಮಿಗಳು ಈ ಎರಡೂ ಘಟನೆಗಳಿಂದ ವಿಚಲಿತರಾಗದೆ, ಶ್ರೀ ಮಾದೇಶ್ವರ ಸ್ವಾಮಿಗಳ ಕ್ರಿಯಾಮೂರ್ತಿಗಳಾಗಿದ್ದ ಪಂಚ ಮಠಗಳಾದ (ಇದರಲ್ಲಿ ಸಾಲೂರುಮಠವು ಒಂದು) ಸುತ್ತೂರು, ಯರಗಂಬಳ್ಳಿ, ಹೊಂಡರಬಾಳು ಹಾಗೂ ಕುಂತೂರು ಮಠಗಳ ಗುರುಗಳನ್ನು ಕರೆಸಿ ಇವರ ನೇತೃತ್ವದಲ್ಲಿ ಅಂತಿಮ ಕ್ರಿಯಾದಿಗಳನ್ನು ಮುಗಿಸಿದರು. ಇದಾದ ಕೆಲವೇ ದಿನಗಳಲ್ಲಿ ಶ್ರೀ ಇಮ್ಮಡಿ ಸಾಲೂರು ಸ್ವಾಮಿಗಳಿಗೆ ಅಧಿಕಾರ ನೀಡಿ ಲಿಂಗೈಕ್ಯರಾದರು.

ಶ್ರೀ ಇಮ್ಮಡಿ ಸಾಲೂರು ಸ್ವಾಮಿಗಳು ಮಾದೇಶ್ವರರ ಸೇವೆ ಮಾಡುತ್ತಾ, ವೀರಶೈವ ಧರ್ಮದ ಪ್ರಸಾರ ಕೈಗೊಂಡು ಮಹಾ ಸಂಘಟಕರಾಗಿದ್ದರು. ಈ ಮಠದ ಪರಂಪರೆಯಂತೆ ಧಾರ್ಮಿಕ ಕಾರ್ಯಗಳನ್ನು ಉಳಿಸಿ ಬೆಳೆಸಿದರು. ಈ ರೀತಿ ಮಠದ ಪರಂಪರೆಯ ಎಲ್ಲಾ ಗುರುಗಳು ಪವಾಡ ಪುರುಷರಾಗಿ, ಮಠವನ್ನು ಮತ್ತು ಮಾದೇಶ್ವರ ದೇವಸ್ಥಾನವನ್ನು ಅಭಿವೃದ್ಧಿಪಡಿಸಿದರು.

ಅರಸರ ಗಮನ: ಈ ಮಠದ ಪರಂಪರೆಯ ಶ್ರೀ ಶಾಂತಲಿಂಗ ಸ್ವಾಮಿಗಳು ಕಾಶಿಯಲ್ಲಿ ವಿದ್ಯಾಭ್ಯಾಸ ಪಡೆದು ಮಹಾನ್ ಪಂಡಿತರಾಗಿದ್ದರು. ಇವರ ಅಧಿಕಾರಾವಧಿಯಲ್ಲಿ ಮಠ ಮತ್ತು ದೇವಸ್ಥಾನ ಅಭಿವೃದ್ಧಿ ಕಂಡಿತು. ತಮ್ಮ ಯೋಗಸಿದ್ಧಿಯಿಂದ ಅನೇಕ ಪವಾಡಗಳನ್ನು ಮಾಡಿದ್ದರು. ಇವರ ಕಾಲದಲ್ಲಿ ಉಮ್ಮತ್ತೂರಿಗೆ ಹೋಗುತ್ತಿದ್ದ ಸೈನ್ಯವು ಬಾಯಾರಿಕೆಯಿಂದ ಬಳಲಿ ಕೆರೆ ಕಟ್ಟೆಗಳಲ್ಲಿ ನೀರು ಸಿಗದೆ ಸಾಲೂರು ಮಠಕ್ಕೆ ಬರುತ್ತದೆ. ಈ ಸೈನ್ಯಕ್ಕೆ ನೀರು ಸರಬರಾಜು ಮಾಡುವುದೇ ಒಂದು ದೊಡ್ಡ ಸಮಸ್ಯೆಯಾಗಿತ್ತು. ಆಗ ಶ್ರೀ ಶಾಂತಲಿಂಗ ಸ್ವಾಮಿಗಳು ಗುರು ಶ್ರೀ ಮಾದೇಶ್ವರರನ್ನು ಧ್ಯಾನಿಸಿ ಸೋರೆ ಬುರುಡೆಯಿಂದ ಸೈನ್ಯಕ್ಕೆ ತಾವೇ ನೀರುಕೊಟ್ಟು ದಣಿವಾರಿಸಿದರು. ಸೇನಾಪತಿ ರಾಜಧಾನಿಗೆ ಬಂದವನೇ ಸಾಲೂರು ಮಠದ ಗುರುಗಳ ಪವಾಡವನ್ನು ವರ್ಣಿಸಿದನು. ಅಂದಿನಿಂದ ಉಮ್ಮತ್ತೂರಿನ ಪಾಳೆಗಾರರು ಈ ಮಠದ ಭಕ್ತರಾಗಿ ದಾನ ನೀಡಿದರು. ಮೈಸೂರು ಒಡೆಯರು ಈ ಮಠದ ಪ್ರಭಾವಕ್ಕೆ ಒಳಗಾಗಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರು ಬಂಗಾರದ ಲಿಂಗವನ್ನು, ನಂತರ ಬಂದ ನಾಲ್ವಡಿ ಕೃಷ್ಣ ರಾಜ ಒಡೆಯರು ೧೯೨೪ ರಲ್ಲಿ ಮಾದೇಶ್ವರರ ಪೂಜೆಗೆಂದು ಚಿನ್ನದ ಕೊಳಗವನ್ನು ನೀಡಿದ್ದಾರೆ. ಅಲ್ಲದೆ ಮಠದ ಧರ್ಮ ಕಾರ್ಯಗಳು ಯಾವುದೇ ತೊಂದರೆ ಇಲ್ಲದಂತೆ ನಡೆಯಲು ಅನೇಕ ದಾನ ದತ್ತಿ ನೀಡಿ ನೆರವಾದರು. ಹೈದರಾಲಿಯು ಈ ಮಠಕ್ಕೆ ಮತ್ತು ಮಾದೇಶ್ವರ ದೇವಸ್ಥಾನಕ್ಕೆ ಉದಾರ ನೆರವು ನೀಡಿದ್ದಾರೆ.

ದೈವಾಂಶ ಸಂಭೂತರು: ೧೯೧೪ ರಲ್ಲಿ ಪಟ್ಟಾಧಿಕಾರಕ್ಕೆ ಬಂದ ಶ್ರೀ ಇಮ್ಮಡಿ ಶಾಂತಲಿಂಗ ಸ್ವಾಮಿಗಳು ದೈವಾಂಶ ಸಂಭೂತರು. ಇವರು ಮಠಕ್ಕಿಂತಲೂ ನಡುಮಲೆಯ ಕ್ಷೇತ್ರನಾಥ ಮಾದೇಶ್ವರದೇವರ ದೇವಾಲಯದ ಅಭಿವೃದ್ಧಿ ಹಾಗೂ ಪ್ರಚಾರಕ್ಕೆ ಹೆಚ್ಚು ಒತ್ತುಕೊಟ್ಟು, ಧರ್ಮಕಾರ್ಯಗಳನ್ನು ಮಾಡಿದ್ದಾರೆ. ೧೯೧೭ ರಲ್ಲಿ ಭಕ್ತರ ನೆರವು ಪಡೆದು ಮಾದೇಶ್ವರರ ರಥೋತ್ಸವಕ್ಕೆ ಬೆಳ್ಳಿ ಹುಲಿಯನ್ನು ಮಾಡಿಸಿದರು. ಪರಂಪರೆಯ ಹಿಂದಿನ ಗುರುಗಳಿಗೆ ಮುಮ್ಮಡಿ ಕೃಷ್ಣರಾಜ ಒಡೆಯರು ನೀಡಿದ್ದ ಚಿನ್ನದ ಲಿಂಗವನ್ನು ನಾಲ್ವಡಿ ಕೃಷ್ಣರಾಜ ಒಡೆಯರ ಸಮ್ಮುಖದಲ್ಲಿ ಮಾದೇಶ್ವರರಿಗೆ ಅರ್ಪಿಸಿದರು. ಈ ಚಿನ್ನದ ಲಿಂಗವು ಈಗಲೂ ಮಾದೇಶ್ವರ ಮೂರ್ತಿಯ ಕೊರಳಲ್ಲಿ ಇದೆ. ಈ ರೀತಿ ಧರ್ಮಪ್ರೇರಕರಾಗಿ, ಪ್ರಚಾರಕರಾಗಿ ಮಠದ ಇತಿಹಾಸದಲ್ಲಿ ಉಳಿಯುವಂತ ಮಹಾ ರಥೋತ್ಸವವನ್ನು ೧೯೨೬ ರಲ್ಲಿ ಪ್ರಾರಂಭ ಮಾಡಿದರು.

ಮೈಸೂರು ಅರಸರ ಸಹಕಾರ ಪಡೆದು ರಥೋತ್ಸವಕ್ಕೆ ರಥವನ್ನು ನಿರ್ಮಿಸಿದರು. ದೇವಸ್ಥಾನದ ಗೋಪುರ ಕಾರ್ಯವನ್ನು ಮೂರು ವರ್ಷದಲ್ಲಿ ಮುಗಿಸಿ, ೧೯೩೯ರಲ್ಲಿ ಮಹಾದ್ವಾರಕ್ಕೆ ಗಣಪತಿಯನ್ನು ಪ್ರತಿಷ್ಠಾಪಿಸಿದರು. ಅಲ್ಲದೆ ದೇವಸ್ಥಾನದ

ಕಟ್ಟಡವನ್ನು ವಿಸ್ತರಿಸಿ, ಧಾರ್ಮಿಕ ಪೂಜಾ ಕಾರ್ಯಕ್ಕೆ ಅನುಕೂಲವಾಗಲು ಹಾಗೂ ಮಾದೇಶ್ವರ ಸ್ವಾಮಿಯ ಅಭಿಷೇಕದ ನೀರಿಗಾಗಿ ಬಾವಿ ತೋಡಿಸಿದರು.೧೯೪೦ ರಲ್ಲಿ ಬೆಳ್ಳಿಯ ವೃಷಭ ವಾಹನ ಮಾಡಿಸಿದರು. ೧೯೪೧ ರಲ್ಲಿ ಅರವತ್ಮೂರು ಬೆಳ್ಳಿ ದಂಡಗಳನ್ನು ಮಾಡಿಸಿದರು. ಈ ರೀತಿ ಮಠದಲ್ಲಿ ಅವಿಸ್ಮರಣೀಯ ಸೇವೆಯನ್ನು ಮಾಡಿದ ಶ್ರೀ ಇಮ್ಮಡಿ ಶಾಂತಲಿಂಗ ಸ್ವಾಮಿಗಳು ತಮ್ಮ ಕರಕಮಲ ಸಂಜಾತ ಶ್ರೀ ಇಮ್ಮಡಿ ಮುದ್ದುವೀರ ಸ್ವಾಮಿಗಳಿಗೆ ಪಟ್ಟಾಧಿಕಾರ ಮಾಡಿ, ಪರಂಪರೆಯ ಜ್ಯೋತಿಯನ್ನು ಹಚ್ಚಿದರು.

ಶ್ರೀ ಇಮ್ಮಡಿ ಮುದ್ದುವೀರ ಸ್ವಾಮಿಗಳು ಏಳು ದಶಕಗಳ ಕಾಲ ಮಠ ಮತ್ತು ದೇವಸ್ಥಾನದ ಅಭಿವೃದ್ಧಿಗೆ ದುಡಿದರು. ತಮ್ಮ ಜೀವನಾನುಭವದ ಸಂಪತ್ತಿನಿಂದ ಧಾರ್ಮಿಕವಾಗಿ ಹಾಗೂ ಸಾಮಾಜಿಕವಾಗಿ ಈ ಕ್ಷೇತ್ರವನ್ನು ಬಹುಮುಖವಾಗಿ ಬೆಳೆಸಿದರು. ೧೯೪೮ ರಲ್ಲಿ ತಾಳು ಬೆಟ್ಟದಿಂದ ನಡುಮಲೆ ಅರಣ್ಯ ಗರ್ಭದಲ್ಲಿ ಸ್ಥಾಪಿತವಾಗಿರುವ ಸಾಲೂರು ಮಠ ಮತ್ತು ಮಾದೇಶ್ವರ ದೇವಸ್ಥಾನಕ್ಕೆ ಘಾಟು ರಸ್ತೆಯನ್ನು ಮಾಡಿಸಿದರು. ಕಾರಣಾಂತರದಿಂದ ನಿಂತುಹೋಗಿದ್ದ ಅಗ್ನಿಕೊ(ಕೆ)ಂಡೋತ್ಸವ ವನ್ನು ಪುನರಾರಂಭಗೊಳಿಸಿದರು. ಮೈಸೂರು ಮಹಾರಾಜ ಜಯಚಾಮರಾಜ ಒಡೆಯರು ಸಾಲೂರು ಮಠಕ್ಕೆ ಧರ್ಮ ಛತ್ರವನ್ನು ಕಟ್ಟಿಸಿದರು. ಈ ರೀತಿ ಶ್ರೀ ಇಮ್ಮಡಿ ಮುದ್ದವೀರಸ್ವಾಮಿಗಳು ಅನೇಕ ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಮಠದ ವತಿಯಿಂದ ಜ್ಞಾನಜ್ಯೋತಿ ಹಚ್ಚಲು 'ಶ್ರೀ ಮಾದೇಶ್ವರಸ್ವಾಮಿ ಕೃಪ ವಿದ್ಯಾಸಂಸ್ಥೆ'ಯನ್ನು ಸ್ಥಾಪಿಸಿದರು.

ಜಂಗಮ ಜ್ಯೋತಿ: ಬಾಲ್ಯದಲ್ಲೇ ಮಾದೇಶ್ವರರ ಪ್ರಭಾವಕ್ಕೆ ಒಳಗಾಗಿದ್ದ ಕೊಳ್ಳೆಗಾಲ ತಾಲ್ಲೂಕಿನ ಶಾಗ್ಯ ಗ್ರಾಮದ ಶ್ರೀ ಮಹದೇವ ಸ್ವಾಮಿಗಳು ಹಿರಿಯ ಗುರುಗಳಾದ ಇಮ್ಮಡಿ ಮುದ್ದುವೀರ ಸ್ವಾಮಿಗಳ ಅಪ್ಪಣೆಯಂತೆ, ಮಾದೇಶ್ವರ ಕ್ಷೇತ್ರಕ್ಕೆ ಆಗಮಿಸಿ ಮಠದ ಆಡಳಿತವನ್ನು ವಹಿಸಿಕೊಂಡರು. ಜೋಳಿಗೆ ಹಿಡಿದು ಹಳ್ಳಿಹಳ್ಳಿಗಳನ್ನು ಸುತ್ತಿ ಧರ್ಮಪ್ರಚಾರ ಮಾಡಿದರು. ಇವರ ಕಾಲದಲ್ಲಿ ಜ್ಞಾನದಾಸೋಹದ ಕಾರ್ಯಕ್ಕೆ ಒಂದು ಹೊಸ ಆಯಾಮ ದೊರೆಯಿತು. ಸಾಮಾನ್ಯರಲ್ಲಿ ಸಾಮಾನ್ಯರಾಗಿ ಬದುಕಿದ್ದ ಶ್ರೀ ಮಹದೇವ ಸ್ವಾಮಿಗಳು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಹಿತ್ಯಿಕವಾಗಿ ಮಠವನ್ನು ಶ್ರೇಯೋಭಿವೃದ್ಧಿಗೆ ಕೊಂಡೊಯ್ದರು. ಬೇಸಾಯಗಾರರಾಗಿ, ಶಿಕ್ಷಣತಜ್ಞರಾಗಿ, ಆತ್ಮಜ್ಞಾನವುಳ್ಳ ಮಹಾಯೋಗಿಗಳಾಗಿ, ತತ್ತ್ವಚಿಂತಕರಾಗಿ ಎಲ್ಲಾ ಕ್ಷೇತ್ರಗಳಲ್ಲೂ ಅನುಭವ ಸಂಪಾದಿಸಿದ್ದ ಇವರು ಮಠವನ್ನು ಉದ್ಧರಿಸಿದ ಜಂಗಮಜ್ಯೋತಿಯಾಗಿ ಉತ್ತರೋತ್ತರಕ್ಕೆ ಬೆಳೆಸಿದರು.

ಬೆಳಗಿದ ಜ್ಞಾನಜ್ಯೋತಿ: ಶ್ರೀ ಇಮ್ಮಡಿ ಮುದ್ದುವೀರ ಸ್ವಾಮಿಗಳು ಸ್ಥಾಪಿಸಿದ ವಿದ್ಯಾಸಂಸ್ಥೆಯಲ್ಲಿ ಜ್ಞಾನಜ್ಯೋತಿ ಹಚ್ಚಿದ ಶ್ರೀ ಮಹದೇವ ಸ್ವಾಮಿಗಳು ವೇದ,ಆಗಮ ಹಾಗೂ ಸಂಸ್ಕೃತ ಪಾಠ ಶಾಲೆಗಳನ್ನು ಪ್ರಾರಂಭಿಸಿದರು. ಪ್ರಾಥಮಿಕ ಶಾಲೆ, ಪ್ರೌಢಶಾಲೆ ಹಾಗೂ ಪದವಿಪೂರ್ವಕಾಲೇಜುಗಳನ್ನು ಪ್ರಾರಂಭಿಸಿದರು. ಗಿರಿಜನ,ಹರಿಜನ,ದೀನದಲಿತ ಹಾಗೂ ದುರ್ಬಲ ವರ್ಗದ ಮಕ್ಕಳಿಗೆ ಊಟ ವಸತಿ ಕಲ್ಪಿಸಿಕೊಟ್ಟು, ಆಶ್ರಯದಾತರಾಗಿ ಎಲ್ಲಾ ಹಳ್ಳಿಗಳ ಜನ ವಿದ್ಯಾವಂತರಾಗಿ ಮುಂದುವರಿ ಯಬೇಕು ಎಂಬ ಕನಸು ಕಂಡರು. ಇವರ ಕಾಲದಲ್ಲಿ ಮಠದ ಸಮುಚ್ಚಯದಲ್ಲಿ ಶಿಕ್ಷಣಸಂಸ್ಥೆಗಳ ಕಟ್ಟಡಗಳು ಬೃಹದಾಕಾರವಾಗಿ ಬೆಳೆದವು. ಶಿಕ್ಷಣದಿಂದ ಗ್ರಾಮೋದ್ಧಾರ ಸಾಧ್ಯ ಎಂದು ಜ್ಞಾನಜ್ಯೋತಿಯನ್ನು ಗ್ರಾಮಾಂತರ ಪ್ರದೇಶಕ್ಕೂ ವಿಸ್ತರಿಸಿದ್ದರ ಫಲವೇ, ಹಳೆಯೂರು, ಕೊಳ್ಳೆಗಾಲ, ಪಿ.ಜಿ.ಪಾಳ್ಯ, ಒಡೆಯರ ಪಾಳ್ಯ, ಹೊಸ ಪಾಳ್ಯಗಳಲ್ಲಿ ಸಂಸ್ಕೃತ ಶಾಲೆಗಳು ಹಾಗೂ ಪ್ರೌಢಶಾಲೆಗಳು ಪ್ರಾರಂಭಗೊಂಡವು. ಕಾಡುಜನರ ಅಜ್ಞಾನವನ್ನು ಅಕ್ಷರ ಎಂಬ ಜ್ಞಾನಜ್ಯೋತಿಯಲ್ಲಿ ಬೆಳಗಿಸತೊಡಗಿದರು.

ಜನಕಲ್ಯಾಣ ಕಾರ್ಯ: ಮಠದ ಜತೆಗೆ ಮಾದೇಶ್ವರ ದೇವಸ್ಥಾನ ಸಮಿತಿಯ ಅಧ್ಯಕ್ಷರಾಗಿದ್ದ ಶ್ರೀ ಮಹದೇವ ಸ್ವಾಮಿಗಳ ಕಾಲದಲ್ಲಿ, ಬಂದ ಭಕ್ತರಿಗೆ ದಾಸೋಹ ವ್ಯವಸ್ಥೆ, ರಥೋತ್ಸವಕ್ಕೆ ಚಿನ್ನದರಥ, ವಸತಿ ಸೌಕರ್ಯಕ್ಕಾಗಿ ಇಪ್ಪತ್ತು ಕಟ್ಟಡಗಳು, ಬೆಂಗಳೂರಿನಲ್ಲಿ ಒಂದು ಕೋಟಿ ರೂಪಾಯಿ ವೆಚ್ಚದಲ್ಲಿ ಮಾದೇಶ್ವರ ವಾರ್ತಾಭವನ, ಜಡೆಕಲ್ಲು ಮಂಟಪ ಹಾಗೂ ಶಿವದರ್ಶಿನಿ ಕಟ್ಟಡವನ್ನು ನಿರ್ಮಾಣ ಮಾಡಿದರು. ಮಹಾದ್ವಾರ ನಿರ್ಮಾಣ ಹೀಗೆ ನೂರಾರು ಜನಕಲ್ಯಾಣ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿ ನಾಡಿನ ಭಕ್ತರನ್ನು ಆಕರ್ಷಿಸಿದರು. ಶ್ರೀ ಮಹದೇವ ಸ್ವಾಮಿಗಳು ಸಾರ್ಥಕತೆಯ ಜೀವನವನ್ನು ನಡೆಸಿ, ೧೯೯೫ ರ ಜನವರಿ ಇಪ್ಪತ್ತೊಂಬತ್ತರಂದು ಲಿಂಗೈಕ್ಯರಾದರು.

ವಿಶೇಷ ಸಂಪ್ರದಾಯ: ಈ ಮಠದಲ್ಲಿ ಚರ ಮತ್ತು ಸ್ಥಿರ ಪಟ್ಟಾಧಿಕಾರವು ಏಕಕಾಲಕ್ಕೆ ಇಬ್ಬರು ಗುರುಗಳಿಗೆ ನಡೆಯುತ್ತಾ ಬಂದಿದೆ. ಈ ಸಂಪ್ರದಾಯದ ಪ್ರಕಾರವಾಗಿ ಶ್ರೀ ಗುರುಸ್ವಾಮಿಗಳು ಮತ್ತು ಶ್ರೀ ಮಹದೇವ ಸ್ವಾಮಿಗಳಿಗೆ ಪಟ್ಟಾಧಿಕಾರ ನಡೆದಿದೆ. ಈ ಗುರುಗಳಲ್ಲಿ ಒಬ್ಬರು ಆಡಳಿತ ಧರ್ಮ ಕಾರ್ಯ ಮತ್ತು ಹೊರಗಿನ ಎಲ್ಲಾ ವ್ಯವಹಾರಗಳನ್ನು ನೋಡಿಕೊಂಡರೆ ಇನ್ನೊಬ್ಬರು ಮಠದಲ್ಲಿಯೇ ಇದ್ದು ಶಿಕ್ಷಣ ಸಂಸ್ಥೆಗಳ ಆಡಳಿತ , ದಾಸೋಹ ಕ್ರಿಯೆಗಳು ಹಾಗೂ ಮಠದ ಆಂತರಿಕ ವ್ಯವಹಾರಗಳ ಉಸ್ತುವಾರಿ ನೋಡಿಕೊಂಡು ಹೋಗುತ್ತಾರೆ.

ದೇವಸ್ಥಾನ ಮತ್ತು ಮಠದ ಸಂಬಂಧ: ವೀರಶೈವ ಸಂಪ್ರದಾಯದ ವಿಶೇಷ ಕ್ರಿಯೆಯಾದ ಪಾದೋದಕ ಕ್ರಿಯೆಯನ್ನು ಶ್ರೀ ಮಾದೇಶ್ವರರಿಗೆ ಮೊದಲಿನಿಂದಲೂ ಸಾಲೂರು ಮಠವೇ ನೀಡುತ್ತಿತ್ತು. ಈಗಲೂ ದೇವಸ್ಥಾನದ ಪೂಜಾ ಸಂದರ್ಭದಲ್ಲಿ ಸಾಲೂರು ಮಠದ ಸ್ವಾಮಿಗಳ ಸಮ್ಮುಖದಲ್ಲಿಯೇ ಪ್ರಸಾದ ನೈವೇದ್ಯ ನಡೆಯುತ್ತಿದೆ. ಇದು ಜಂಗಮ, ಲಿಂಗದ ಸಂಬಂಧವನ್ನು ತೋರಿಸುತ್ತಿದೆ. ಈ ಸಂಪ್ರದಾಯವು ಈ ತನಕ ನಡೆಯುತ್ತ ಬಂದಿದೆ. ಪ್ರತಿಜಾತ್ರೆಯ ರಥೋತ್ಸವ ಮತ್ತು ತೆಪ್ಪೋತ್ಸವ, ಗೌರಿ ಹಬ್ಬದ ಐದು ದಿನಗಳು, ದಸರಾದ ಹತ್ತು ದಿನ, ದೀಪಾವಳಿಯ ವಿಶೇಷ ಪೂಜೆಗಳಲ್ಲಿ ಮಠದ ಸ್ವಾಮಿಗಳು ಕಡ್ಡಾಯವಾಗಿ ದೇವಸ್ಥಾನದಲ್ಲಿ ಇರುತ್ತಾರೆ. ಈ ಸಂದರ್ಭಗಳಲ್ಲಿ ದೇವಸ್ಥಾನದಿಂದ ಬಿಳಿ ಛತ್ರಿ, ಬಿರುದಾವಳಿಗಳು ಹಾಗೂ ವಾದ್ಯ ಸಮೇತವಾಗಿ ಮಠಕ್ಕೆ ಬಂದು ಗುರುಗಳನ್ನು ಗೌರವದಿಂದ ಕರೆದೊಯ್ಯುತ್ತಾರೆ. ಅನಾದಿ ಕಾಲದಿಂದಲು ನಡೆದು ಬಂದ ಈ ಸಂಪ್ರದಾಯ ಈಗಲೂ ಮುಂದುವರೆದಿದೆ. ಅದೇರೀತಿ ಆಯುಧಪೂಜೆ, ಕಾರ್ತೀಕದ ಕೊನೆಯ ದಿನ, ಮಾರ್ಗಶಿರದ ಕೊನೆಯ ಏಳು ದಿನಗಳು, ಗೌರಿಹಬ್ಬದ ದಿನ, ಮಹಾಶಿವರಾತ್ರಿ ನಂತರದ ನಾಲ್ಕು ದಿನಗಳಲ್ಲಿ ಮಹಾರುದ್ರಾಭಿಷೇಕ ಮಠದವತಿಯಿಂದ ನಡೆಯುತ್ತಾ ಬಂದಿದೆ. ಈ ರೀತಿ ಮಠ ಮತ್ತು ದೇವಸ್ಥಾನದ ಸಂಬಂಧ ಅನೂಚಾನವಾಗಿ ಬೆಳೆದು ಬಂದಿದೆ.

೧೯೪೯ ರ ಡಿಸೆಂಬರ್ ಇಪ್ಪತ್ತೆರಡರಂದು ಅಂದಿನ ಗುರುಗಳಾದ ಶ್ರೀ ಮುದ್ದುವೀರ ಸ್ವಾಮಿಗಳು ಮಾದೇಶ್ವರಸ್ವಾಮಿ ದೇವಸ್ಥಾನದ ಆಡಳಿತ ನೋಡಿಕೊಳ್ಳಲು ಮತ್ತು ಅಭಿವೃದ್ಧಿಪಡಿಸಲು ಆಗಿನ ತಮಿಳುನಾಡಿನ ರಾಜ್ಯಸರ್ಕಾರಕ್ಕೆ ವಹಿಸಿಕೊಟ್ಟಿದ್ದರು. ನಂತರ ರಾಜ್ಯಗಳ ಮರುವಿಂಗಡಣೆಯಾದ ಮೇಲೆ ನಡುಮಲೆ ಅರಣ್ಯ ಪ್ರದೇಶವು ಕರ್ನಾಟಕಕ್ಕೆ ಸೇರ್ಪಡೆಗೊಂಡಿತು. ಹಾಗೆ ಮಾದೇಶ್ವರಸ್ವಾಮಿ ದೇವಸ್ಥಾನದ ಆಡಳಿತವು ಕರ್ನಾಟಕ ಸರ್ಕಾರದ ಧಾರ್ಮಿಕ ದತ್ತಿ ಇಲಾಖೆಗೆ ಒಳಪಟ್ಟಿತು. ದೇವಸ್ಥಾನದ ಆಡಳಿತ ಮಂಡಳಿ ರಚಿಸುವಾಗ ದೇವಸ್ಥಾನ ಮತ್ತು ಸಾಲೂರು ಮಠಕ್ಕೆ ಇದ್ದ ಸಂಬಂಧವನ್ನು ಪರಿಗಣಿಸಿ ಮಠದ ಗುರುಗಳನ್ನು ಆಡಳಿತ ಮಂಡಳಿ ಸಮಿತಿಗೆ ಅಧ್ಯಕ್ಷರನ್ನಾಗಿ ಸರ್ಕಾರ ನೇಮಿಸುತ್ತಿತ್ತು.ನಂತರ ಈ ಅಧಿಕಾರವನ್ನು ತಪ್ಪಿಸಿ ಖಾಯಂ ಸದಸ್ಯರನ್ನಾಗಿ ನೇಮಿಸತೊಡಗಿತು. ಆಗಿನ ಗುರುಗಳು ಈ ಬಗ್ಗೆ ಪ್ರತಿಭಟನೆ ತೋರಿಸಲಿಲ್ಲ. ಈಗ ಸರ್ಕಾರ ಖಾಯಂ ಸದಸ್ಯಸ್ಥಾನದಿಂದಲೂ ಮಠದ ಗುರುಗಳನ್ನು ಕೈಬಿಟ್ಟಿದೆ. ಈ ಬಗ್ಗೆ ಪ್ರತಿರೋಧ ವ್ಯಕ್ತಪಡಿಸಿದ ಶ್ರೀ ಗುರುಸ್ವಾಮಿಗಳು ಕಾನೂನು ಹಾಗು ಸಂಘಟಿತ ಹೋರಾಟದಿಂದ ದೇವಸ್ಥಾನ ಮತ್ತು ಮಠಕ್ಕೆ ಇದ್ದ ಸಂಬಂಧದ ಹಕ್ಕನ್ನು ಉಳಿಸಿಕೊಳ್ಳಲು ಹೋರಾಟ ಮಾಡುತ್ತಿದ್ದಾರೆ.

ವೀರಶೈವ ಧರ್ಮದ ದಾಸೋಹ, ಧರ್ಮ ಹಾಗೂ ಕಾಯಕ ಈ ಮೂರು ವಿಶಿಷ್ಟ ಪದಗಳಿಗೆ ಅರ್ಥ ಬರುವಂತೆ ಶ್ರಮಿಸುತ್ತಿದ್ದಾರೆ. ಹಿಂದಿನ ಎಲ್ಲಾ ಗುರುಗಳು ಮಾಡಿದ ಸಾಧನೆಗಿಂತ ಇನ್ನೂ ಮಹತ್ತರವಾದುದ್ದನ್ನು ಸಾಧಿಸಿ, ಮಠದ ಗುರು ಪರಂಪರೆ ಪ್ರಗತಿದಾಯಕವಾಗಿ ಬೆಳೆಯುತ್ತಿದೆ ಎಂಬುದನ್ನು ಮುಂದಿನವರು ಗುರುತಿಸಬೇಕು ಎಂಬುದು ಶ್ರೀ ಗುರುಸ್ವಾಮಿಗಳ ಮಹಾದಾಸೆಯಾಗಿದೆ. ಮಠದ ಸರ್ವಾಂಗೀಣ ಅಭಿವೃದ್ಧಿಗೆ ಶ್ರೀ ಗುರುಸ್ವಾಮಿಗಳು ಹಾಗೂ ಶ್ರೀ ಮಹದೇವ ಸ್ವಾಮಿಗಳು ಕಂಕಣ ತೊಟ್ಟು ದುಡಿಯುತ್ತಿದ್ದಾರೆ.

ವಿಳಾಸ: ಶ್ರೀ ಗುರುಸ್ವಾಮಿಗಳು, ಶ್ರೀಸಾಲೂರುಮಠ,ಮಲೆಮಾದೇಶ್ವರಬೆಟ್ಟ, ಕೊಳ್ಳೆಗಾಲ ತಾಲ್ಲೂಕು,ಚಾಮರಾಜನಗರ ಜಿಲ್ಲೆ.

ಮಧುವನಹಳ್ಳಿ

ಕೊಳ್ಳೆಗಾಲ ತಾಲ್ಲೂಕಿನ ಮಧುವನಹಳ್ಳಿಯು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಮೂರು ಕಿ.ಮೀ. ದೂರದಲ್ಲಿದೆ.

ಇಲ್ಲಿ ಪುರಾತನ ಕಾಲದ ಪಂಚಪೀಠಗಳಲ್ಲಿ ಒಂದಾದ ಜಗದ್ಗುರು ಶ್ರೀ ರಂಭಾಪುರಿ ಪೀಠದ ಶ್ರೀ ಚಿಕ್ಕಮಠ ಮತ್ತು ಶ್ರೀಶೈಲ ಪೀಠದ ಶ್ರೀ ಜಾಲಿಕಂತೆ ಮಠ ಸ್ಥಾಪನೆಯಾಗಿ, ಈ ಗ್ರಾಮವನ್ನು ಜಾಗೃತ ಸ್ಥಳವನ್ನಾಗಿಸಿವೆ.

ಚಿಕ್ಕಮಠ: ಮಧುವನಹಳ್ಳಿಯ ಹೆಬ್ಬಾಗಿಲು ಬಳಿ ಎಡಭಾಗಕ್ಕೆ ತಿರುಗಿದರೆ ಸಿಗುವ ಮಠವೇ ಶ್ರೀ ಚಿಕ್ಕಮಠ. ಈ ಮಠವು ಶ್ರೀ ರಂಭಾಪುರಿ ಪೀಠದ ಶಾಖಾ ಮಠವಾಗಿ, ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಲೋಕಸಂಚಾರ ಮಾಡುತ್ತಾ, ಧರ್ಮಪ್ರಚಾರಕ್ಕೆ ಬಂದ ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು ಈ ಗ್ರಾಮದಲ್ಲಿ ನೆಲೆಸಿ ಮಠ ಸ್ಥಾಪನೆ ಮಾಡಿದರು. ಇವರ ನಂತರ ಮೂರು ಜನ ಸ್ವಾಮಿಗಳು ಅಧಿಕಾರಕ್ಕೆ ಬಂದಿದ್ದಾರೆ.

ಪರಂಪರೆ:
೧. ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯಸ್ವಾಮಿಗಳು (ಕರ್ತೃ ಗುರುಗಳು)
೨. ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯಸ್ವಾಮಿಗಳು.
೩. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು.
೪. ಷ.ಬ್ರ.ಶ್ರೀ ಶಿವರುದ್ರ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆ ಬೆಳೆದು, ತನ್ನ ಜೀವಂತಿಕೆಯನ್ನು ಉಳಿಸಿಕೊಂಡು ಬಂದಿದೆ. ಕರ್ತೃಗುರುಗಳ ನಂತರ ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಅಭಿವೃದ್ಧಿಪಡಿಸಿ, ದಾಸೋಹ ಹಾಗೂ ಧಾರ್ಮಿಕ ಚಟುವಟಿಕೆಯನ್ನು ನಡೆಸಿ ಮಠವನ್ನು ಶ್ರೀಮಂತಗೊಳಿಸಿದರು. ಇವರ ನಂತರ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದು, ಮಠಕ್ಕೆ ತೊಟ್ಟಿಯಾಕಾರದ ಕೈಹೆಂಚಿನ ಕಟ್ಟಡವನ್ನು ನಿರ್ಮಿಸಿದರು. ಇವರು ಜೀವಿತಾವಧಿಯಲ್ಲೇ ಶ್ರೀ ಗುರುಲಿಂಗ ದೇವರು ಮತ್ತು ಶ್ರೀಮತಿ ಪುಟ್ಟಮ್ಮನವರ ಪುತ್ರರಾಗಿ ೧೯೨೮ ರಲ್ಲಿ ಜನಿಸಿದ ತಮ್ಮ ಸಹೋದರ ಸಂಬಂಧಿ ಶ್ರೀ ಶಿವರುದ್ರ ಶಿವಾಚಾರ್ಯ ಸ್ವಾಮಿಗಳನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿಕೊಂಡು, ಪಟ್ಟಾಧಿಕಾರದ ಅನುಗ್ರಹ ನೀಡಿದರು. ಗುರುಗಳು ಸಂಸ್ಕೃತ, ವೇದ,ಆಗಮ ಕಲಿತು ಪುತ್ರವರ್ಗದ ಈ ಮಠದ ಆಡಳಿತ ನೋಡಿಕೊಂಡು ಬರುತ್ತಿದ್ದಾರೆ.ಈಗಿನ ಸ್ವಾಮಿಗಳು ಧಾರ್ಮಿ ಕ ಚಟುವಟಿಕೆಗಳನ್ನು ನಡೆಸುತ್ತಾ ಭಕ್ತರ ಧಾರ್ಮಿಕ ಕ್ರಿಯಾದಿಗಳು, ಬಿನ್ನಹಗಳನ್ನು ತೀರಿಸಿಕೊಂಡು ಭಕ್ತರಿಗೆ ನೆರವಾಗುತ್ತಿದ್ದಾರೆ.

ವಿಳಾಸ:ಷ.ಬ್ರ.ಶ್ರೀ ಶಿವರುದ್ರ ಶಿವಾಚಾರ್ಯಸ್ವಾಮಿಗಳು, ಶ್ರೀ ಚಿಕ್ಕಮಠ, ಮಧುವನಹಳ್ಳಿ,ಕೊಳ್ಳೆಗಾಲ ತಾ, ಚಾಮರಾಜನಗರಜಿಲ್ಲೆ.

ಜಾಲಿಕಂತೆ ಮಠ: ಮಧುವನಹಳ್ಳಿ ಗ್ರಾಮದ ಮಧ್ಯದಲ್ಲಿ ಸ್ಥಾಪಿತವಾಗಿರುವ ಶ್ರೀ ಜಾಲಿಕಂತೆ ಮಠವು, ಶ್ರೀಶೈಲ ಪೀಠದ ಶಾಖಾಮಠವಾಗಿ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿದೆ. ಪಂಚಪೀಠಗಳ ಪರಂಪರೆಯಲ್ಲಿ ಬರುವ ಜಾಲಿಕಂತೆ, ಮುತ್ತಿನಕಂತೆ, ಉಕ್ಕಿನಕಂತೆ ಸಂಪ್ರದಾಯದಲ್ಲಿ ಒಂದಾದ ಶ್ರೀ ಜಾಲಿಕಂತೆ ಮಠವಾಗಿ ಬೆಳೆದು ಬಂದಿದೆ. ಶ್ರೀ ತೋಂಟದಾರ್ಯ ಸ್ವಾಮಿಗಳ ಕಾಲದಲ್ಲಿ ಪ್ರಾರಂಭವಾಗಿ ಈತನಕ ಬೆಳೆದು ಬಂದಿದೆ.

ಪರಂಪರೆ:
೧. ಷ.ಬ್ರ.ಶ್ರೀ ತೋಂಟದಾರ್ಯ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಮರಿತೋಂಟದಾರ್ಯ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಚಿಕ್ಕತೋಂಟದಾರ್ಯ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಚನ್ನಮಲ್ಲ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಶಿವಕುಮಾರ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಶ್ರೀ ಚನ್ನಮಲ್ಲ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಹೆಚ್ಚು ಪ್ರಬುದ್ಧತೆಗೆ ಬಂದ ಮಠವು ಆರ್ಥಿಕ ಸ್ವಾವಲಂಬನೆ ಪಡೆಯುತ್ತದೆ. ಶ್ರೀ ಚನ್ನಮಲ್ಲ ಶಿವಾಚಾರ್ಯ ಸ್ವಾಮಿಗಳು ಲೋಕಸಂಚಾರ ಮಾಡುತ್ತಾ, ಅನೇಕ ಪುಣ್ಯ ಸ್ಥಳಗಳಲ್ಲಿ ಅನುಷ್ಠಾನಗೊಂಡು ಜಾಗೃತಗೊಳಿಸಿ ಭಕ್ತರನ್ನು ಸಂಘಟಿಸಿ ವೀರಶೈವ ಧರ್ಮವನ್ನು ಬೆಳೆಸಲು

ಶ್ರಮ ಪಟ್ಟಿದ್ದಾರೆ. ಇವರು ತಮ್ಮ ಸಹೋದರ ಸಂಬಂಧಿ ಶ್ರೀ ಬಸವಲಿಂಗ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ಆಯ್ಕೆಮಾಡಿಕೊಂಡು ೧೯೦೭ ರಲ್ಲಿ ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳೆಂದು ಅಭಿಧಾನವಿತ್ತು ಪಟ್ಟಾಧಿಕಾರ ಮಾಡಿದರು. ಸುಮಾರು ನಲವತ್ತೇಳು ವರ್ಷಗಳ ಕಾಲ ಆಡಳಿತ ನಡೆಸಿದ ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ತಮ್ಮ ಜೀವಿತಾವಧಿಯಲ್ಲೇ ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ಆಯ್ಕೆಮಾಡಿಕೊಂಡು, ೧೯೫೨ ರ ಮಾರ್ಚ್ ಎರಡರಂದು ಪಟ್ಟಾಧಿಕಾರ ಮಾಡಿದರು. ಗುರುಗಳು ಅಧಿಕಾರ ವಹಿಸಿಕೊಂಡ ಮೇಲೆ ಮಠವನ್ನು ಬೆಳೆಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಕರ್ತೃಗುರುಗಳ ಗದ್ದುಗೆಯೂ ಸೇರಿದಂತೆ ಮಠದ ಆವರಣದಲ್ಲಿ ಒಟ್ಟು ಆರು ಗದ್ದುಗೆಗಳನ್ನು ನಿರ್ಮಿಸಲಾಗಿದೆ. ಈ ಗದ್ದುಗೆಗಳಿಗೆ ನಿತ್ಯಪೂಜೆ, ಶ್ರಾವಣ, ಕಾರ್ತೀಕ ಮಾಸಗಳಲ್ಲಿ ವಿಶೇಷ ಪೂಜೆ ಹಾಗೂ ಹಿರಿಯ ಗುರುಗಳ ಪುಣ್ಯಾರಾಧನೆ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಗಣೇಶ ಚತುರ್ಥಿಯ ಸಂದರ್ಭದಲ್ಲಿ ಮಠದಲ್ಲಿರುವ ಜಂಗಮ ಜೋಳಿಗೆ, ಒಂಬತ್ತು ಗಣ್ಣುಗಳ ಬಿದಿರುದಂಡ ಹಾಗೂ ಜಾಲಿಕಂತೆಯನ್ನು ಗಣಪತಿ ಬಳಿ ಇಟ್ಟು ಪೂಜೆ ಮಾಡಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಜಾಲಿಕಂತೆ ಮಠ, ಮಧುವನಹಳ್ಳಿ, ಕೊಳ್ಳೆಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ಮುಡಿಗುಂಡಂ

ಕೊಳ್ಳೆಗಾಲ ತಾಲ್ಲೂಕಿನ ಮುಡಿಗುಂಡಂ ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಎರಡೂವರೆ ಕಿ.ಮೀ.ದೂರದಲ್ಲಿದೆ. ಇಲ್ಲಿ ಹದಿನಾಲ್ಕನೆಯ ಶತಮಾನದಲ್ಲಿ ಸ್ಥಾಪನೆಯಾಗಿರುವ ಶ್ರೀ ವಿರಕ್ತಮಠ ಅಸ್ತಿತ್ವದಲ್ಲಿದೆ.

ವಿರಕ್ತಮಠ: ಮುಡಿಗುಂಡಂ ಗ್ರಾಮದ ಹೊರವಲಯದ ಜಾಗದಲ್ಲಿ ಶ್ರೀ ಮಲೆಮಹಾದೇಶ್ವರರು ನೆಲೆಸಿ ಅನುಷ್ಠಾನಗೊಂಡಿದ್ದರೆಂದು ಹೇಳಲಾಗುತ್ತಿದೆ. ಈ ಸ್ಥಳದಲ್ಲಿ ವಿರಕ್ತಮಠವು ಸ್ಥಾಪನೆಯಾಗಿದೆ.

ಮಠ ಸ್ಥಾಪನೆ: ಶ್ರೀ ನಿರಂಜನ ಸ್ವಾಮಿಗಳು ಈ ಜಾಗೃತ ಸ್ಥಳದಲ್ಲಿ ನೆಲೆ ನಿಂತು ಮಠವನ್ನು ಪ್ರಾರಂಭಿಸಿದರು. ಗುರುಗಳು ಧಾರ್ಮಿಕ ಕಾರ್ಯಗಳನ್ನು ನಡೆಸುವ ಮೂಲಕ ಭಕ್ತರನ್ನು ಸಂಘಟಿಸಿ, ವೀರಶೈವ ಧರ್ಮ ಬೆಳೆಯುವಂತೆ ಮಾಡಿದರು. ಇವರು ಲಿಂಗೈಕ್ಯರಾದ ನಂತರ ೧೯೨೬ ರವರೆಗೆ ಮಠವು ಖಾಲಿ ಉಳಿಯಿತು. ನಂತರ ಹರವೆ ವಿರಕ್ತಮಠದ ಶ್ರೀ ಶಿವರುದ್ರ ಸ್ವಾಮಿಗಳು ಇಂತಹ ಜಾಗೃತ ಸ್ಥಳದಲ್ಲಿ ಧಾರ್ಮಿಕ ಚಟುವಟಿಕೆಗಳು ನಿರಂತರವಾಗಿ ನಡೆಯಬೇಕು ಎಂಬ ಹಂಬಲದಿಂದ, ಜಮೀನು ಖರೀದಿಸಿ ಮಠವನ್ನು ಕಟ್ಟಿ ಬೆಳಸಿದರು. ಶ್ರೀ ಶಿವರುದ್ರ ಸ್ವಾಮಿಗಳು ೧೯೨೬ ರಿಂದ ೧೯೬೨ ರ ತನಕ ಇಲ್ಲೇ ನೆಲೆಸಿ, ಮಠವನ್ನು ಹೆಚ್ಚು ಅಭಿವೃದ್ಧಿಗೆ ತಂದು ೧೯೬೨ ರಲ್ಲಿ ಲಿಂಗೈಕ್ಯರಾದರು.ನಂತರ ಮಠವು ಉತ್ತರಾಧಿಕಾರಿಗಳಿಲ್ಲದೆ ೧೯೬೨ ರಿಂದ ೧೯೭೪ ರವರೆಗೆ ಖಾಲಿ ಉಳಿಯಿತು. ಆದರೆ ಮಠದಲ್ಲಿ ಸ್ಥಾಪಿಸಲಾದ ಶ್ರೀ ಶಿವರುದ್ರ ಸ್ವಾಮಿಗಳು ಹಾಗೂ ಶ್ರೀ ಶಿವಮಲ್ಲ ಸ್ವಾಮಿಗಳ ಗದ್ದುಗೆಗೆ ಪೂಜಾ ಕಾರ್ಯ ನಡೆಸುತ್ತಾ ಮಠವು ಜೀವಂತಿಕೆ ಉಳಿಸಿಕೊಂಡಿತ್ತು.

ಬೆಳೆದ ಪರಂಪರೆ: ಮಠದಲ್ಲಿ ಗುರುಗಳು ಇಲ್ಲದ ಸಂದರ್ಭದಲ್ಲಿ ಹರವೆ ವಿರಕ್ತ ಮಠದ ಗುರುಗಳೇ ಇಲ್ಲಿನ ಜವಾಬ್ದಾರಿ ನೋಡಿಕೊಂಡು, ಈ ಮಠಕ್ಕೆ ಸಮರ್ಥರನ್ನು ಆಯ್ಕೆಮಾಡುವ ಸಲುವಾಗಿ ಪುತ್ರವರ್ಗದ ಉತ್ತರಾಧಿಕಾರಿಗಳಿಗಾಗಿ ಅನ್ವೇಷಣೆ ನಡೆಸಿದರು. ನಂಜನಗೂಡು ತಾಲ್ಲೂಕಿನ ಸುತ್ತೂರು ಗ್ರಾಮದ ಶ್ರೀ ಶಿವಸ್ವಾಮಿ ಮತ್ತು ಶ್ರೀಮತಿ ಸುಂದರಮ್ಮನವರ ಪುತ್ರರಾಗಿ ೧೯೬೧ ರ ಮಾರ್ಚ್ ಇಪ್ಪತ್ತೇಳರಂದು ಜನಿಸಿದ ಶ್ರೀ ಶ್ರೀಕಂಠದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿ, ಹದಿಮೂರನೆಯ ವರ್ಷದಲ್ಲೇ ಹರವೆ ಶ್ರೀ ಶಿವನಂಜ ಸ್ವಾಮಿಗಳು ಅನುಗ್ರಹ ನೀಡಿ ೧೯೭೪ ಮೇ ಹನ್ನೊಂದರಂದು ಪಟ್ಟಾಧಿಕಾರ ಮಾಡಲಾಯಿತು. ನಂತರ ಗುರುಗಳನ್ನು ವಿದ್ಯಾಭ್ಯಾಸಕ್ಕೆ ಕಳುಹಿಸಲಾಯಿತು. ಸಿದ್ಧಗಂಗೆಯಲ್ಲಿ ಪದವಿ ಪಡೆದು ಧಾರವಾಡ ವಿಶ್ವವಿದ್ಯಾನಿಲಯದಲ್ಲಿ ತತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಗಳಿಸಿ, ಮುಡಿಗುಂಡಂಗೆ ಆಗಮಿಸಿ ಮಠದ ಆಡಳಿತವನ್ನು ವಹಿಸಿಕೊಂಡರು.

ಸುತ್ತೂರು, ಸಿದ್ಧಗಂಗೆ, ಹರವೆ ಗುರುಗಳ ಮಾರ್ಗದರ್ಶನದಿಂದ ರೂಪುಗೊಂಡ ಶ್ರೀ ಶ್ರೀಕಂಠ ಸ್ವಾಮಿಗಳು ವಿಚಾರವಂತರಾಗಿ, ಚಿಂತಕರಾಗಿ ಮಠದ ಅಧಿಕಾರಕ್ಕೆ ಬಂದರು. ಧಾರ್ಮಿಕ ಪ್ರಜ್ಞೆ ಮರೆಯಾಗುತ್ತಿರುವ ಈ ಕಾಲದಲ್ಲಿ ಧರ್ಮವನ್ನು ವೈಜ್ಞಾನಿಕ ಚಿಂತನೆಗೆ ಒಳಪಡಿಸಿ ಎಲ್ಲರಿಗೂ ಮುಟ್ಟಿಸಬೇಕು ಎಂಬ ಹಂಬಲದಿಂದ ಶ್ರೀ ಶ್ರೀಕಂಠ ಸ್ವಾಮಿಗಳು, ನಿಧಾನವಾಗಿ ಧಾರ್ಮಿಕ ವಿಚಾರಗಳನ್ನು ಸಮಾಜದ ಮೇಲೆ ಹರಿಯ ಬಿಡುತ್ತಿದ್ದಾರೆ. ಚಿಕ್ಕವಯಸ್ಸಿನಲ್ಲೇ ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ ಉಪನ್ಯಾಸ ನೀಡಿ, ಜನರನ್ನು ಜಾಗೃತರನ್ನಾಗಿ ಮಾಡುತ್ತಿದ್ದಾರೆ. ಮಠದಲ್ಲಿ ಅನೇಕ ಪುಸ್ತಕಗಳನ್ನು ಸಂಗ್ರಹಿಸಿರುವ ಗುರುಗಳು ಸದಾ ಅಧ್ಯಯನಶೀಲರಾಗಿ, ಎಲ್ಲಾ ಧರ್ಮಗಳ ಧರ್ಮ ಗ್ರಂಥಗಳನ್ನು ಅಭ್ಯಸಿಸಿ ಶರಣ ತತ್ತ್ವದ ಪೂರ್ಣ ಸಾರವನ್ನು ಮನನ ಮಾಡಿಕೊಂಡು ಅಪಾರ ಜ್ಞಾನಸಿದ್ಧಿ ಪಡೆದಿದ್ದಾರೆ ಗುರುಗಳು ವಿಮರ್ಶಕರಾಗಿ, ಧರ್ಮಪ್ರಚಾರಕರಾಗಿ ವೀರಶೈವ ಧರ್ಮವನ್ನು ಬೆಳೆಸುವ ಹಾಗೂ ಶರಣ ತತ್ತ್ವಗಳನ್ನು ಜನರಿಗೆ ಮುಟ್ಟಿಸುವ ಹಂಬಲವನ್ನು ಹೊಂದಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಶಿವರುದ್ರ ಸ್ವಾಮಿಗಳ ಕಾಲದಲ್ಲಿ ಮಠದ ಕಟ್ಟಡವನ್ನು ಆವಶ್ಯಕತೆಗೆ ತಕ್ಕಷ್ಟು ಸೀಮಿತವಾಗಿ ಕಟ್ಟಿ ಕೊಂಡಿದ್ದರು. ನಂತರ ಬಂದ ಶ್ರೀ ಶ್ರೀಕಂಠ ಸ್ವಾಮಿಗಳು ಮಠದ ಕಟ್ಟಡವನ್ನು ವಿಸ್ತಾರಗೊಳಿಸಿದರು. ಶ್ರೀ ಶಿವರುದ್ರ ಸ್ವಾಮಿಗಳ ಗದ್ದುಗೆಗೆ ಮಂಟಪ ಕಟ್ಟಿಸಿ ಪೂಜಾ ಸ್ಥಳವಾಗಿ ಮಾರ್ಪಡಿಸಿದರು. ಮಠದ ಪರಿಸರ ಸ್ವಚ್ಛ ಹಾಗೂ ಪ್ರಶಾಂತವಾಗಿರ ಬೇಕೆಂದು ಅನೇಕ ಜಾತಿಯ ಹೂ ಗಿಡಗಳನ್ನು ಬೆಳೆಸಿ, ಮಠದ ವಾತಾವರಣ ನಿರ್ಮಲವಾಗಿ ಕಂಗೊಳಿಸುವಂತೆ ಮಾಡಿದ್ದಾರೆ. ಮಠದ ಆಸ್ತಿಯಾದ ಏಳು ಎಕರೆ ಜಮೀನನ್ನು ಅಭಿವೃದ್ಧಿ ಪಡಿಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಶ್ರೀಕಂಠ ಸ್ವಾಮಿಗಳು, ಶ್ರೀ ವಿರಕ್ತಮಠ, ಮುಡಿಗುಂಡಂ, ಕೊಳ್ಳೆಗಾಲ ತಾ, ಚಾಮರಾಜನಗರ ಜಿಲ್ಲೆ.

ಹೊಂಡರಬಾಳು

ಕೊಳ್ಳೆಗಾಲ ತಾಲ್ಲೂಕಿನ ಹೊಂಡರಬಾಳು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ನಾಲ್ಕು ಕಿ.ಮೀ.ದೂರದಲ್ಲಿದೆ. ದೊಡ್ಡ ಹೊಂಡದ ದಂಡೆಯಲ್ಲಿ ನಿರ್ಮಿತವಾಗಿರುವುದರಿಂದ ಈ ಗ್ರಾಮಕ್ಕೆ 'ಹೊಂಡರಬಾಳು' ಎಂಬ ಹೆಸರು ಬಂದಿದೆ. ಇಲ್ಲಿ ಶ್ರೀ ಶಂಖಿನ ಸ್ವಾಮಿಗಳು ಸ್ಥಾಪಿಸಿದ ಶ್ರೀ ಶಂಖಿನ ಮಠವು ಅಸ್ತಿತ್ವದಲ್ಲಿದೆ.

ಶಂಖಿನಮಠ: ಶ್ರೀ ಮಲೆಮಹಾದೇಶ್ವರಬೆಟ್ಟದಲ್ಲಿ ಮಹಾದೇಶ್ವರರು ಅನೇಕ ಪವಾಡಗಳನ್ನು ಮಾಡುತ್ತಿದ್ದ ವಿಚಾರ ಲೋಕ ಕ್ಕೆಲ್ಲಾ ಪ್ರಚಾರವಾಗಿತ್ತು. ಇದನ್ನು ನೋಡಲು ಉತ್ತರದ ಕಡೆಯಿಂದ ಬರುತ್ತಿದ್ದ ಮಹಾಪುರುಷರು, ಭಕ್ತರು ಈ ಗ್ರಾಮದ ಮೂಲಕವೇ ಹಾದು ಹೋಗಬೇಕಾಗಿತ್ತು. ಕೆಲವರು ಇಲ್ಲಿ ನೆಲೆನಿಂತು ವಿಶ್ರಾಂತಿ ಪಡೆದು ಇಲ್ಲಿನ ಹೊಂಡದಲ್ಲಿ ಸ್ನಾನಮುಗಿಸಿ ಮುಂದೆ ಹೋಗುತ್ತಿದ್ದರು. ಈ ರೀತಿ ಅನೇಕ ಸಿದ್ಧಿಪುರುಷರು ಇಲ್ಲಿ ತಂಗಿ, ಈ ಗ್ರಾಮವನ್ನು ಪಾವನ ಕ್ಷೇತ್ರವನ್ನಾಗಿ ಬೆಳೆಸಿದರು.

ಉತ್ತರದ ಕಡೆಯಿಂದ ತಮ್ಮ ಗುರುಗಳ ಜೊತೆಯಲ್ಲಿ ಬಂದ ಶ್ರೀ ಶಂಖಿನ ಸ್ವಾಮಿಗಳು, ಹೊಂಡರಬಾಳು ಸಮೀಪ ಇರುವ ಬೆಟ್ಟದಲ್ಲಿ ವಿಶ್ರಾಂತಿಗೆಂದು ತಂಗಿದ್ದ ಸಂದರ್ಭದಲ್ಲಿ ಶಂಖಿನ ಸ್ವಾಮಿಗಳ ಗುರುಗಳು ಲಿಂಗೈಕ್ಯರಾಗುತ್ತಾರೆ. ನಂತರ ಗುರುಗಳ ಅಂತ್ಯ ಕ್ರಿಯಾದಿಗಳನ್ನು ಮುಗಿಸಿದ ಶಂಖಿನ ಸ್ವಾಮಿಗಳು ಗುರುಗಳ ಸೇವೆಯಿಂದ ಲಭಿಸಿದ ಗುರುತ್ವ ಶಕ್ತಿ ಮತ್ತು ಯೋಗಸಿದ್ಧಿಯ ಸಾಧನೆಯಿಂದ ಮಹಾಪುರುಷರಾಗಿದ್ದರು. ಬೆಟ್ಟದಲ್ಲಿ ನಿರ್ಮಿಸಿದ ಗುರುಗಳ ಗದ್ದುಗೆಯ ಸಮೀಪ ವಾಸ ಮಾಡುತ್ತಿದ್ದ ಶ್ರೀ ಶಂಖಿನ ಸ್ವಾಮಿಗಳು, ಅನೇಕ ಪವಾಡಗಳನ್ನು ಮಾಡಿ ಅಧರ್ಮವನ್ನು ಮೆಟ್ಟಿನಿಂತು ಇಲ್ಲಿ ಸಂಸ್ಕಾರ ನೆಲೆಸುವಂತೆ ಮಾಡಿ ಜನರಲ್ಲಿ ಜಾಗೃತಿ ಮೂಡಿಸಿದರು. ಇವರಿಗಾಗಿ ಗ್ರಾಮಸ್ಥರು ಮಠವನ್ನು ಸ್ಥಾಪಿಸಿಕೊಟ್ಟರು.

ಪರಂಪರೆ:

೧. ಷ.ಬ್ರ.ಶ್ರೀ ಶಂಖಿನ ಶಿವಾಚಾರ್ಯಸ್ವಾಮಿಗಳು

೨. ಷ.ಬ್ರ.ಶ್ರೀ ನೀಲಕಂಠ ಶಿವಾಚಾರ್ಯಸ್ವಾಮಿಗಳು

೩. ಷ.ಬ್ರ.ಶ್ರೀ ಶಿವಪ್ಪ ಶಿವಾಚಾರ್ಯಸ್ವಾಮಿಗಳು

೪. ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯಸ್ವಾಮಿಗಳು

(೫.ರಿಂದ ೧೩ ನೇಯ ಪಟ್ಟಾಧ್ಯಕ್ಷರುಗಳ ಹೆಸರು ತಿಳಿದಿಲ್ಲ)
೧೪. ಷ.ಬ್ರ.ಶ್ರೀ ಪ್ರಸನ್ನ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು
೧೫. ಷ.ಬ್ರ.ಶ್ರೀ ಶಂಕರ ಶಿವಾಚಾರ್ಯಸ್ವಾಮಿಗಳು
೧೬. ಷ.ಬ್ರ.ಶ್ರೀ ನೀಲಕಂಠ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಒಂಬತ್ತು ಜನ ಸ್ವಾಮಿಗಳ ಹೆಸರುಗಳು ಲಭ್ಯವಿಲ್ಲ. ಮಠದ ಆವರಣದಲ್ಲಿ ಒಟ್ಟು ಹದಿನಾಲ್ಕು ಗದ್ದುಗೆಗಳಿವೆ. ಕರ್ತೃಗುರು ಶ್ರೀ ಶಂಖನ ಸ್ವಾಮಿಗಳ ಗದ್ದುಗೆ ಮಠದಲ್ಲಿ ನಿರ್ಮಾಣವಾಗಿದೆ. ಮಠದ ಹೊರಆವರಣದಲ್ಲಿ ಬಸವನ ಎದುರು ಒಂದು ಗದ್ದುಗೆಯನ್ನು ನಿರ್ಮಿಸಲಾಗಿದೆ. ಈ ಕಾರಣದಿಂದ ಮಠದ ಪರಂಪರೆಯಲ್ಲಿ ಹದಿನಾರು ಪಟ್ಟಾಧ್ಯಕ್ಷರು ಅಧಿಕಾರ ನಡೆಸಿದ್ದಾರೆ ಎಂದು ಹೇಳಬಹುದು.

ಪರಂಪರೆಯ ಹದಿನೈದನೆಯ ಪಟ್ಟಾಧ್ಯಕ್ಷರಾದ ಶ್ರೀ ಶಂಕರ ಸ್ವಾಮಿಗಳು ೧೯೭೪ ರಲ್ಲಿ ಲಿಂಗೈಕ್ಯರಾದ ಮೇಲೆ ಶ್ರೀ ನಂಜುಂಡಸ್ವಾಮಿ ಮತ್ತು ಶ್ರೀಮತಿ ಪುಷ್ಪಲಿಂಗಮ್ಮನವರ ಪುತ್ರರಾಗಿ ೧೯೫೧ ರ ಡಿಸೆಂಬರ್ ಹತ್ತರಂದು ಜನಿಸಿದ ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳಿಗೆ ೧೯೭೭ ರ ಜುಲೈ ಹದಿನೇಳರಂದು ಪಟ್ಟಾಧಿಕಾರ ಮಾಡಲಾಗಿದೆ. ಇವರು ಸಂಸ್ಕೃತದಲ್ಲಿ ಎಂ.ಎ.ಪದವಿಪಡೆದು ಮಹಾದೇಶ್ವರ ಬೆಟ್ಟದಲ್ಲಿ ಸಂಸ್ಕೃತ ಕಾಲೇಜಿನ ಅಧ್ಯಾಪಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಕಳೆದ ಹದಿನೈದು ವರ್ಷಗಳ ಈಚೆಗೆ ಮಠದ ಅಭಿವೃದ್ಧಿಯಾಗಿದೆ. ಮುರಿದು ಬಿದ್ದಿದ್ದ ಮಠದ ಹಳೆಯ ಕಟ್ಟಡವನ್ನು ತೆಗೆದು ಹತ್ತು ಲಕ್ಷರೂಪಾಯಿ ವೆಚ್ಚದಲ್ಲಿ ನೂತನ ಕಟ್ಟಡವನ್ನು ನಿರ್ಮಿಸಲಾಗಿದೆ. ಭಕ್ತರ ನೆರವು ಮತ್ತು ವೃತ್ತಿಯಿಂದ ಬಂದ ಹಣವನ್ನು ಅಭಿವೃದ್ಧಿಗೆ ಬಳಸಿ ಮಠವನ್ನು ಬೆಳೆಸಿದ್ದಾರೆ. ಮಠದ ಆವರಣದಲ್ಲಿರುವ ಸಿದ್ಧೇಶ್ವರ ಸ್ವಾಮಿಗಳ ದೇವಾಲಯವನ್ನು ನವೀಕರಿಸಿದ್ದಾರೆ. ಹನ್ನೆರಡು ಗದ್ದುಗೆಗಳು ಮಠದ ಪಕ್ಕದಲ್ಲಿ ನಿರ್ಮಿತವಾಗಿವೆ. ಇತ್ತೀಚೆಗೆ ಆರು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಹನ್ನೆರಡು ಗದ್ದುಗೆಗಳಿಗೂ ಮಂಟಪವನ್ನು ನಿರ್ಮಿಸಲಾಗಿದೆ. ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳು ಮಠದ ಸರ್ವಾಂಗೀಣ ಅಭಿವೃದ್ಧಿಗೆ ಹದಿನೈದು ವರ್ಷಗಳಿಂದ ಶ್ರಮಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಉಜ್ಜಯಿನಿ ಪೀಠದ ಶಾಖಾಮಠವಾದ ಈ ಮಠವು ಭಿಕ್ಷದ ಸಂಪ್ರದಾಯದಲ್ಲಿ ಬೆಳೆದಿದೆ. ಭಿಕ್ಷದ ಮರಿ ಗಳನ್ನು ನೇಮಿಸಿಕೊಂಡು ನಿತ್ಯ ಎರಡು ವೇಳೆ ಕಂತೆ ಭಿಕ್ಷ ಮಾಡಿಸಿ, ಪ್ರಸಾದ ವಿನಿಯೋಗದ ಕಾಯಕವನ್ನು ಮಾಡುತ್ತಾ ಬಂದಿದೆ. ಪ್ರತಿನಿತ್ಯ ಮಠದಲ್ಲಿ ಭಜನೆ, ವಾರಕ್ಕೆ ಒಂದು ದಿನ ಪ್ರವಚನ ಕಾರ್ಯಕ್ರಮ ಹಾಗೂ ಪ್ರತಿವರ್ಷ ಒಬ್ಬರು ಹಿರಿಯ ಗುರುಗಳ ಆರಾಧನೆ ಕಾರ್ಯಕ್ರಮವನ್ನು ನೆರವೇರಿಸಲಾಗುತ್ತಿದೆ. ಸಿದ್ಧೇಶ್ವರ ಜಾತ್ರೆಯ ಸಂದರ್ಭದಲ್ಲಿ ಅನ್ನದಾಸೋಹದ ವ್ಯವಸ್ಥೆ ಯನ್ನು ಮಾಡಿಸುತ್ತಿದೆ. ಗದ್ದುಗೆಗಳಿಗೆ ದಿನದ ಎರಡು ವೇಳೆ ಹಾಗೂ ಕರ್ತೃ ಗದ್ದುಗೆಗೆ ತ್ರಿಕಾಲ ಪೂಜೆಯನ್ನು ನಡೆಸಲಾಗುತ್ತಿದೆ. ಬಡ ವಿದ್ಯಾರ್ಥಿಗಳಿಗೆ ಮಠದಲ್ಲಿ ಆಶ್ರಯ ಕಲ್ಪಿಸಲಾಗಿದೆ.

ವಿಳಾಸ:ಷ.ಬ್ರ.ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳು, ಶ್ರೀ ಶಂಖನಮಠ, ಹೊಂಡರಬಾಳು, ಮಧುವನಹಳ್ಳಿಅಂಚೆ, ಕೊಳ್ಳೆಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

❑

ಗುಂಡ್ಲುಪೇಟೆ ತಾಲ್ಲೂಕು

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆಯು ಪ್ರಕೃತಿಯ ಶ್ರೀಮಂತಿಕೆಯಿಂದ ಮೈದಳೆದಿದೆ. ದೇಶದ ದಟ್ಟಾರಣ್ಯಗಳಲ್ಲಿ ಒಂದಾದ ನಾಗರಹೊಳೆ ಅಭಯಾರಣ್ಯವು ಈ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುತ್ತದೆ. ಇಂತಹ ಪ್ರಸಿದ್ಧ ತಾಲ್ಲೂಕಿನಲ್ಲಿ ವೀರಶೈವ ಧರ್ಮ ಬಲಿಷ್ಠವಾಗಿ ಬೆಳೆದಿದೆ. ಪ್ರಸ್ತುತ ಈ ತಾಲ್ಲೂಕಿನಲ್ಲಿ ಹದಿನಾರು ಮಠಗಳು ಅಸ್ತಿತ್ವದಲ್ಲಿವೆ.

ಕಬ್ಬಹಳ್ಳಿ

ಗುಂಡ್ಲುಪೇಟೆ ತಾಲ್ಲೂಕಿನ ಕಬ್ಬಹಳ್ಳಿಯು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಹದಿನೆಂಟು ಕಿ.ಮೀ.ದೂರದಲ್ಲಿದೆ. ದಾನಶೀಲರು, ಜನಾನುರಾಗಿಗಳು, ನೀತಿಪರರು ಹಾಗೂ ಧರ್ಮಾಭಿಮಾನಿಗಳಾದ ಶ್ರೀ ಚನ್ನಬಸಪ್ಪನವರಂತಹ ಮಹನೀಯರಿಗೆ ಜನ್ಮನೀಡಿದೆ. ರಾಜಕಾರಣದಲ್ಲಿದ್ದು ಎಲ್ಲರಿಗೂ ಆದರ್ಶಪ್ರಾಯರಾಗಿದ್ದ ಕೆ.ಎಸ್. ನಾಗರತ್ನಮ್ಮನವರಂತಹವರು ಬಾಳಿ ಬದುಕಿದ ಈ ಗ್ರಾಮ ಸಜ್ಜನರ ತಾಣವಾಗಿದೆ. ಇಲ್ಲಿ ಪ್ರಾಚೀನ ಕಾಲದಿಂದಲೂ ಶ್ರೀ ಜಂಗಮ ಮಠ ಹಾಗೂ ದೇವನೂರು ಶಾಖೆಯ ಶ್ರೀ ದಾಸೋಹ ಮಠವು ಸ್ಥಾಪನೆಗೊಂಡು, ಧಾರ್ಮಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಪ್ರಗತಿಗೆ ನಾಂದಿಯಾಗಿದೆ.

ಜಂಗಮ ಮಠ: ಕಬ್ಬಹಳ್ಳಿಯ ಮಧ್ಯ ಭಾಗದಲ್ಲಿ ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿ ಶ್ರೀ ಜಂಗಮಮಠವು ಸ್ಥಾಪನೆಯಾಗಿದೆ. ಸುಮಾರು ೩೦೦ ವರ್ಷಗಳ ಹಿಂದೆ ಲೋಕಸಂಚಾರ ಕೈಗೊಂಡಿದ್ದ, ಶ್ರೀ ರಾಚೋಟಿ ಒಡೆಯರು ಈ ನೆಲದಲ್ಲಿ ನೆಲೆಸಿ, ದೀರ್ಘ ಅನುಷ್ಠಾನಗೊಂಡು ಮಠ ಸ್ಥಾಪನೆ ಮಾಡಿದ್ದಾರೆ. ಶ್ರೀ ರಾಚೋಟಿ ಸ್ವಾಮಿಗಳ ಕೃಪಾ ದೃಷ್ಟಿಯಿಂದ ಈ ಹಳ್ಳಿ ಸಂಸ್ಕಾರಗೊಂಡು ಮನುಷ್ಯರು ಮಾನವೀಯತೆಯಿಂದ ಪರಸ್ಪರ ಹೊಂದಾಣಿಕೆ ಜೀವನ ಸಾಗಿಸತೊಡಗಿ, ಬದುಕಿನಲ್ಲಿ ನೆಮ್ಮದಿ ಕಾಣತೊಡಗಿದರು. ಮಠವನ್ನು ಸ್ಥಾಪಿಸಿ ಧಾರ್ಮಿಕ ಕಾರ್ಯಗಳು ವ್ಯವಸ್ಥಿತವಾಗಿ ನಡೆಯುವಂತೆ ಮಾಡಿದ ಶ್ರೀ ರಾಚೋಟಿ ಸ್ವಾಮಿಗಳು ಲಿಂಗೈರಾದರು.

ಪರಂಪರೆ:

೧. ಷ.ಬ್ರ.ಶ್ರೀ ರಾಚೋಟಿ ಒಡೆಯರು
೨. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ವೀರಕ್ತ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಈ ರೀತಿ ಬೆಳೆದ ಪರಂಪರೆಯಲ್ಲಿ ಶ್ರೀ ರಾಚೋಟಿ ಒಡೆಯರ ನಂತರ ಅಧಿಕಾರಕ್ಕೆ ಬಂದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀಮಂತ ಭಕ್ತರ ಸಹಕಾರವನ್ನು ಬಳಸಿಕೊಂಡು ಮಠವನ್ನು ಅಭಿವೃದ್ಧಿಗೊಳಿಸಿದರು.ಮಠದ ಕಟ್ಟಡವನ್ನು ವಿಸ್ತರಿಸಿ ದಾಸೋಹ ಕ್ರಿಯೆಗೆ ಮಹತ್ವ ಕೊಟ್ಟರು. ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ವಿರಕ್ತ ಶಿವಾಚಾರ್ಯ ಸ್ವಾಮಿಗಳು ಲೌಕಿಕ ಪ್ರಜ್ಞೆ ಕಳೆದುಕೊಂಡು ಧ್ಯಾನ, ಯೋಗಗಳನ್ನೇ ಅನ್ನ, ನೀರು ಮಾಡಿಕೊಂಡು ಬದುಕಿದ ಮಹಾಮಹಿಮರು. ಇವರ ಕಾಲದಲ್ಲಿ ದಾಸೋಹಕ್ರಿಯೆ ಮಹತ್ತರವಾಗಿ ನಡೆದು ಹೆಚ್ಚು ಪ್ರಚಾರಕ್ಕೆ ಬಂದಿತು. ಊರಿನ ಜನರು ಶ್ರೀ ರಾಚೋಟಿ ಸ್ವಾಮಿಗಳಲ್ಲಿದ್ದ ಗುಣಗಳನ್ನು ಇವರಲ್ಲಿಯೂ ಕಂಡುಕೊಂಡು ಗುರುಗಳು ಕೈಗೊಳ್ಳುತ್ತಿದ್ದ ಎಲ್ಲಾ ಕಾರ್ಯಗಳಿಗೆ ಬೆಂಬಲ ನೀಡತೊಡಗಿದರು. ಶ್ರೀ ವೀರಕ್ತ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಊರಿನ ಜನ ಉತ್ತರಾಧಿಕಾರಿಗಳನ್ನು ಆಯ್ಕೆ ಮಾಡುವಲ್ಲಿ ನಿರುತ್ಸಾಹ ತೋರಿಸಿದ ಕಾರಣ, ಮಠ ಅನೇಕ ವರ್ಷಗಳ ಕಾಲ ಖಾಲಿ ಉಳಿಯಿತು.

ಪುನರಾರಂಭ: ೧೯೪೩ರಲ್ಲಿ ಜಂಗಮ ಮಠದ ಪರಂಪರೆಯ ಬಳ್ಳಿ ಕುಡಿಯೊಡೆದು ಚಿಗುರತೊಡಗಿತು. ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ೧೯೩೪ ರಲ್ಲಿ ಕಬ್ಬಹಳ್ಳಿಯಲ್ಲಿ ಜನಿಸಿ, ಇಲ್ಲೇ ವಿದ್ಯಾಭ್ಯಾಸ ಮುಗಿಸಿ ಮೈಸೂರಿನ ಸಂಸ್ಕೃತ ಪಾಠಶಾಲೆ ಯಲ್ಲಿ ಸಂಸ್ಕೃತ, ವೇದ, ಆಗಮ ಹಾಗೂ ಜ್ಯೋತಿಷ್ಯವನ್ನು ಕಲಿತು ಜ್ಯೋತಿಷ್ಯಗಾರರಾಗಿ ಹೊರಹೊಮ್ಮಿ, ಜಂಗಮ ಮಠದ ಜ್ಯೋತಿಯನ್ನು ಹಚ್ಚಿ ಪ್ರಕಾಶಗೊಳಿಸಿದರು.

ಧಾರ್ಮಿಕ ಕಾರ್ಯಗಳು: ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಪರಂಪರೆಯ ಗದ್ದುಗೆಗಳ ಪತ್ತೆ ಕಾರ್ಯಕ್ಕೆ ಮುಂದಾದರು. ಇದರ ಶ್ರಮವೇ ಮಠದ ಆವರಣದಲ್ಲಿ ಮೂರು ಗದ್ದುಗೆಗಳು ದೊರೆತವು. ಹಿಂದೆ ಮಠ ವಿಸ್ತರಣೆಯ ಸಂದರ್ಭದಲ್ಲಿ ಕರ್ತೃಗುರು ಶ್ರೀ ರಾಚೋಟಿ ಸ್ವಾಮಿಗಳ ಗದ್ದುಗೆಯು ಗೋಡೆಯೊಳಗೆ ಸೇರಿಹೋಗಿದೆ. ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯಪೂಜೆ ಹಾಗೂ ಹಿರಿಯ ಗುರುಗಳ ಆರಾಧನಾ ಕಾರ್ಯಕ್ರಮವನ್ನು ಮಠಕ್ಕೆ ಸೀಮಿತಗೊಳಿಸಿ ಆಚರಣೆ ಮಾಡುತ್ತಾರೆ. ಶ್ರಾವಣ, ಕಾರ್ತೀಕ ಹಾಗೂ ಧನುರ್ಮಾಸಗಳಲ್ಲಿ ವಿಶೇಷ ಪೂಜೆ ನಡೆಸಿ, ನಿತ್ಯಕನಿಷ್ಟ ಐವತ್ತು ಜನರಿಗೆ ಅನ್ನದಾಸೋಹ ನಡೆಸಲಾಗುತ್ತಿದೆ. ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಮಠಕ್ಕೆ ಭೇಟಿ ನೀಡಿ, ಇಲ್ಲಿ ನಡೆಯುತ್ತಿದ್ದ ದಾಸೋಹ ಮತ್ತು ಧರ್ಮಜಾಗೃತಿಯನ್ನು ಕಣ್ಣಾರೆ ಕಂಡು ಈ ಕ್ರಿಯೆಗಳು ಸದಾ ನಡೆಯುತ್ತಿದ್ದು, ನಾಡು ಸಂಸ್ಕಾರವಂತ ನಾಡಾಗಿ ಧಾರ್ಮಿಕ ಸುಭಿಕ್ಷೆ ನೆಲೆಸಲಿ ಎಂಬ ಕಾರಣಕ್ಕೆ ಭೂಮಿಯನ್ನು ಕಾಣಿಕೆಯಾಗಿ ನೀಡಿದ್ದರು. ಇದರಿಂದ ಮಠವು ಅಭಿವೃದ್ಧಿಯನ್ನು ಕಾಣಲು ಸಹಾಯಕವಾಗಿದೆ.

ಶೈಕ್ಷಣಿಕ ಕಾರ್ಯಗಳು: ಕಬ್ಬಹಳ್ಳಿಯಲ್ಲಿ ಧರ್ಮಜಾಗೃತಿ ಮೂಡಿಸಿದ ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ಇಲ್ಲಿ ಹೆಣ್ಣುಮಕ್ಕಳ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿ, ಜಾತಿಯ ಸೋಂಕಿಲ್ಲದೆ ಎಲ್ಲಾ ವರ್ಗದ ಹೆಣ್ಣು ಮಕ್ಕಳಿಗೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಇದರಿಂದ ಗ್ರಾಮಾಂತರ ಮಹಿಳೆಯರೂ ವಿದ್ಯಾವಂತರಾಗುವಂತಾಗಿದೆ. ಜ್ಯೋತಿಷ್ಯ ಶಾಸ್ತ್ರ ಹೇಳುವ ಪರಿಪಾಠವನ್ನು ಬೆಳೆಸಿಕೊಂಡಿರುವ ಗುರುಗಳು, ಅಪೇಕ್ಷಿತರಿಗೆ ಜ್ಯೋತಿಷ್ಯ ಹೇಳುತ್ತಾರೆ.

ವಿಳಾಸ: ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು, ಶ್ರೀ ಜಂಗಮ ಮಠ, ಕಬ್ಬಳ್ಳಿ, ಗುಂಡ್ಲುಪೇಟೆ ತಾಲ್ಲೂಕು. ಚಾಮರಾಜನಗರ ಜಿಲ್ಲೆ.

ದಾಸೋಹಮಠ: ಕಬ್ಬಹಳ್ಳಿ ಗ್ರಾಮದ ಮುಖ್ಯ ರಸ್ತೆಯಲ್ಲಿ ಪ್ರಥಮವಾಗಿ ಸಿಗುವ ದಾಸೋಹ ಮಠವು ದೇವನೂರು ಶಾಖಾಮಠವಾಗಿ, ಭಿಕ್ಷದ ಶ್ರೀ ರಾಚಪ್ಪ ಸ್ವಾಮಿಗಳ ಕಾಲದಲ್ಲಿ ಸ್ಥಾಪನೆಯಾಗಿದೆ. ಕೆ.ಎಸ್.ನಾಗರತ್ನಮ್ಮನವರ ಮನೆತನದವರು ಈ ಮಠ ಸ್ಥಾಪನೆಗೆ ನಿವೇಶನವನ್ನು ದಾನವಾಗಿ ನೀಡಿದ್ದು, ಇಲ್ಲೇ ಮಠ ಸ್ಥಾಪನೆಯಾಗಿದೆ. ಕಂತೆ ಭಿಕ್ಷದ ಕಾಯಕದಿಂದ ಈ ಮಠ ತನ್ನ ಚಟುವಟಿಕೆಗಳನ್ನು ಮುಂದುವರೆಸುತ್ತಾ ಬಂದಿದೆ. ಈಗ ಭಿಕ್ಷದ ಶ್ರೀ ಸೋಮದೇವರು ಭಿಕ್ಷಾಕಾಯಕ ನಡೆಸಿ, ದಾಸೋಹ ಕಾಯಕವನ್ನು ಮುನ್ನಡೆಸಿದ್ದಾರೆ. ಮಠದಲ್ಲಿ ಪ್ರತಿ ಸೋಮವಾರ ಭಜನಾ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ.

ವಿಳಾಸ:ಶ್ರೀ ಭಿಕ್ಷದ ಸೋಮದೇವರು, ಶ್ರೀ ದಾಸೋಹಮಠ, ಕಬ್ಬಹಳ್ಳಿ, ಗುಂಡ್ಲುಪೇಟೆ ತಾಲ್ಲೂಕು,ಚಾಮರಾಜನಗರ ಜಿಲ್ಲೆ.

ಕುರುಬರಹುಂಡಿ

ಗುಂಡ್ಲುಪೇಟೆ ತಾಲ್ಲೂಕಿನ ಕುರುಬರಹುಂಡಿಯು ತಾಲ್ಲೂಕು ಕೇಂದ್ರದಿಂದ ವಾಯವ್ಯಕ್ಕೆ ಇಪ್ಪತ್ತೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಚಿಕ್ಕತುಪ್ಪೂರು ಶಿವಪೂಜೆ ಮಠದ ಶಾಖಾಮಠವಾಗಿ ಶ್ರೀ ಕುರುಬರಹುಂಡಿ ಮಠವು ಸ್ಥಾಪನೆಯಾಗಿದೆ.

ಕುರುಬರಹುಂಡಿಮಠ: ಸುತ್ತೂರು ಶ್ರೀ ಶಿವರಾತ್ರಿ ಮಠದ ಮಂತ್ರಮಹರ್ಷಿ ಶ್ರೀ ಶಿವರಾತ್ರೇಶ್ವರ ಸ್ವಾಮಿಗಳ ಕೃಪಾಶೀರ್ವಾದದಿಂದ ಕುರುಬರಹುಂಡಿಯಲ್ಲಿ ಪ್ರಾರಂಭವಾದ ಮಠವು ಈತನಕ ಬೆಳೆದು ಬಂದಿದೆ. ೧೯೨೬ ರಲ್ಲಿ ಶ್ರೀ ಶಿವಲಿಂಗ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಬೆಳೆಸಿದರು. ಶ್ರೀ ಶಿವಲಿಂಗ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಇವರ ಗದ್ದುಗೆಯನ್ನು ಚಿಕ್ಕತುಪ್ಪೂರು ಮಠದಲ್ಲಿ ಸ್ಥಾಪಿಸಲಾಗಿದೆ. ನಂತರ ಚಿಕ್ಕತುಪ್ಪೂರಿನ ಮಠಾಧೀಶರೇ ಈ ಮಠದ ಆಡಳಿತ ಹಾಗೂ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ ಬಂದಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಚನ್ನವೀರ ಸ್ವಾಮಿಗಳು, ಶ್ರೀ ಶಿವಪೂಜೆಮಠ,ಚಿಕ್ಕತುಪ್ಪೂರು, ಗುಂಡ್ಲುಪೇಟೆ ತಾ, ಚಾಮರಾಜನಗರ ಜಿಲ್ಲೆ.

ಗೋಪಾಲಪುರ

ಗುಂಡ್ಲುಪೇಟೆ ತಾಲ್ಲೂಕಿನ ಗೋಪಾಲಪುರವು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಹದಿನಾಲ್ಕು ಕಿ.ಮೀ.

ದೂರದಲ್ಲಿದೆ. ಇಲ್ಲಿ ರಂಭಾಪುರಿ ಪೀಠದ ಶಾಖಾಮಠ ಹಾಗೂ ಸೋಮಹಳ್ಳಿಯ ಶಾಖಾಮಠ ಪ್ರಾರಂಭವಾಗಿ, ಧಾರ್ಮಿಕ ನೆಲೆಯನ್ನು ಕಲ್ಪಿಸಿವೆ.

ಕಬ್ಬಿಣಕೋಲೇಶ್ವರ ಮಠ: ಗೋಪಾಲಪುರದ ಹೊರಭಾಗದ ಪಶ್ಚಿಮದಲ್ಲಿ ಸ್ಥಾಪನೆಯಾಗಿರುವ ಕಬ್ಬಿಣ ಕೋಲೇಶ್ವರ ಮಠವು ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿ ಬೆಳೆದಿದೆ. ಈ ಮಠವನ್ನು ಶ್ರೀ ಕಬ್ಬಿಣ ಕೋಲೇಶ್ವರರು ಪ್ರಾರಂಭಮಾಡಿದ್ದರಿಂದ 'ಶ್ರೀ ಕಬ್ಬಿಣ ಕೋಲೇಶ್ವರಮಠ' ಎಂಬ ಹೆಸರು ಬಂದಿದೆ. ಶ್ರೀ ಶಿವಲಿಂಗ ಶಿವಯೋಗಿಗಳು ಲೋಕಸಂಚಾರ ಮಾಡುವಾಗ ಕಬ್ಬಿಣದ ಕೋಲನ್ನು ಇಟ್ಟುಕೊಂಡಿರುತ್ತಿದ್ದರು. ಶಿವಯೋಗಿಗಳು ಗೋಪಾಲಪುರಕ್ಕೆ ಬಂದು ಈ ಪ್ರಶಾಂತ ಸ್ಥಳದಲ್ಲಿ ಅನುಷ್ಠಾನಗೊಂಡರು. ಮಳೆ ಯಿಲ್ಲದ ಸಂದರ್ಭದಲ್ಲಿ ಮಳೆ ತರಿಸಿ ಪವಾಡವನ್ನು ಮಾಡಿ ಭಕ್ತರನ್ನು ಉದ್ಧರಿಸಿದ್ದರೆಂಬುದು ಜನಪದ ಕಥೆಯಿಂದ ತಿಳಿಯುತ್ತಿದೆ.

ಮಠ ಸ್ಥಾಪನೆ: ಪವಾಡ ಪುರುಷರಾದ ಶ್ರೀ ಶಿವಯೋಗಿ ಶಿವಲಿಂಗೇಶ್ವರ ಯಾನೆ ಕಬ್ಬಿಣ ಕೋಲೇಶ್ವರರಿಗೆ ಇಲ್ಲಿನ ಜನ ಮಠ ಸ್ಥಾಪನೆ ಮಾಡಿಕೊಡುತ್ತಾರೆ. ಅಂದಿನಿಂದ ಪ್ರತಿದಿನ ನೂರಾರು ಜನರಿಗೆ ಹುರುಳಿ,ಅಂಬಲಿ ದಾಸೋಹ ನಡೆಯಲು ಪ್ರಾರಂಭವಾಯಿತು. ದಿನದಿಂದ ದಿನಕ್ಕೆ ಜನರ ಸಂಪರ್ಕ ಹೆಚ್ಚಿಸಿಕೊಂಡು ಮಠವನ್ನು ಹೆಚ್ಚು ಪ್ರಚಾರಕ್ಕೆ ತಂದರು. ಗೋಪಾಲಪುರ ಬೆಟ್ಟಕ್ಕೆ ಬರುವ ಭಕ್ತರು ಕಬ್ಬಿಣಕೋಲೇಶ್ವರ ಮಠಕ್ಕೆ ಭೇಟಿ ಕೊಡಲು ಮುಂದಾದರು. ಶ್ರೀ ಕಬ್ಬಿಣ ಕೋಲೇಶ್ವರರು ತಮ್ಮ ಕರ್ತೃತ್ವ ಶಕ್ತಿಯಿಂದ ಅಗಾಧವಾದದ್ದನ್ನು ಸಾಧಿಸಿ, ಭಕ್ತರು ಧರ್ಮಮಾರ್ಗದಲ್ಲಿ ಮುನ್ನಡೆಯಲು ಪ್ರೇರೇಪಣೆ ನೀಡಿ ತಮ್ಮ ಕೆಲಸ ಮುಗಿಯಿತೆಂದು ನಿರ್ವಿಕಲ್ಪ ಸಮಾಧಿಯಾದರು.

ಬೆಳೆದ ಪರಂಪರೆ:

೧. ಷ.ಬ್ರ.ಶ್ರೀ ಕಬ್ಬಿಣಕೋಲೇಶ್ವರರು ಯಾನೆ ಶಿವಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ಎರಡನೆಯ ಶಿವಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಜಡೆ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಪಟ್ಟದ ವೀರಭದ್ರ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಗಂಗಾಧರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ.ಮಠವು ಶ್ರೀ ಪಟ್ಟದ ವೀರಭದ್ರ ಸ್ವಾಮಿಗಳ ಕಾಲದಲ್ಲಿ ವೈಭವಪಡೆದು ಪ್ರಬುದ್ಧಮಾನಕ್ಕೆ ಬಂದಿದೆ. ಗುರುಗಳು ಅಧಿಕಾರಕ್ಕೆ ಬಂದ ಮೇಲೆ ಮಠದ ಆಸ್ತಿಯನ್ನು ಅಭಿವೃದ್ಧಿ ಪಡಿಸಿ ಆದಾಯ ಬರುವಂತೆ ಮಾಡಿದರು. ಇವರು ಮಠದ ಕಟ್ಟಡವನ್ನು ವಿಸ್ತಾರಗೊಳಿಸಿ ನೂತನ ಕಟ್ಟಡವನ್ನು ನಿರ್ಮಿಸಿದ್ದಾರೆ. ನಾಲ್ವಡಿ ಕೃಷ್ಣರಾಜ ಒಡೆಯರು ಶ್ರೀ ವೀರಭದ್ರ ಸ್ವಾಮಿಗಳ ಕಾಯಕವನ್ನು ತಿಳಿದುಕೊಂಡು ಇಂತಹ ಯೋಗಿಗಳ ಪಾದ ಸ್ಪರ್ಶದಿಂದ ಅರಮನೆ ಪಾವನವಾಗುತ್ತದೆ ಎಂದು, ಗುರುಗಳನ್ನು ಅರಮನೆಗೆ ಕರೆಸಿ ಗೌರವಿಸಿ ಮಠದ ಅಭಿವೃದ್ಧಿಗೆ ಆಸ್ತಿಯನ್ನು ಉಂಬಳಿಯಾಗಿ ನೀಡಿರುತ್ತಾರೆ. ಇವರ ಕಾಲದಲ್ಲಿ ಮಠ ಸ್ವಾವಲಂಬನೆ ಸಾಧಿಸಿತು. ಇಂತಹ ಮಹಾನ್ ಸಾಧಕರು ೧೯೭೭ ರಲ್ಲಿ ಲಿಂಗೈಕ್ಯರಾದರು.

೧೯೫೫ ರ ಮಾರ್ಚ್ ಹದಿನಾರಂದು ನಂಜನಗೂಡು ತಾಲ್ಲೂಕಿನ ಯಾಳೆಹಳ್ಳಿಯಲ್ಲಿ ಶ್ರೀ ಕಾಡಪ್ಪದೇವರು ಮತ್ತು ಶ್ರೀಮತಿ ಸುಬ್ಬಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಗಂಗಾಧರ ದೇವರು, ಹುಲ್ಲಳ್ಳಿ ಮತ್ತು ಮೈಸೂರು ಗುರುಕುಲದಲ್ಲಿ ವಿದ್ಯೆ ಕಲಿತು ಸೋಮಹಳ್ಳಿಯ ಶ್ರೀ ಸಿದ್ಧಮಲ್ಲ ಸ್ವಾಮಿಗಳಿಂದ ಅನುಗ್ರಹ ಪಡೆದು, ೧೯೭೮ ರಲ್ಲಿ ಈ ಮಠದ ಐದನೆಯ ಗುರುಗಳಾಗಿ ಅಧಿಕಾರಕ್ಕೆ ಬಂದರು. ಇವರು ಮಠವನ್ನು ಅಗತ್ಯಕ್ಕೆ ತಕ್ಕಷ್ಟು ನವೀಕರಿಸಿ ಕರ್ತೃಗುರುಗಳ ಗದ್ದುಗೆಗೆ ಮಂಟಪ ಕಟ್ಟಿಸಿ, ಮಠದ ಇಪ್ಪತ್ತೈದು ಎಕರೆ ಜಮೀನನ್ನು ಅಭಿವೃದ್ಧಿಗೊಳಿಸಿದ್ದಾರೆ. ಗೋಪಾಲಪುರ ಮುಖ್ಯರಸ್ತೆಯಿಂದ ಮಠಕ್ಕೆ ತಿರುಗುವ ತಿರುವಿನಲ್ಲಿ ಸ್ವಾಗತ ಕಮಾನು ಮಂಟಪ ಕಟ್ಟಿಸಿ, ಮಠದ ವೈಭವದ ಜೊತೆಗೆ ಗ್ರಾಮದ ಮೆರುಗನ್ನು ಹೆಚ್ಚಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ವರ್ಷಕ್ಕೊಮ್ಮೆ ಮಠದ ಸ್ಥಾಪಕರಾದ ಶ್ರೀ ಕಬ್ಬಿಣಕೋಲೇಶ್ವರರ ಆರಾಧನೆಯ ದಿನ ಧಾರ್ಮಿಕ ಸಭೆ ನಡೆಸಿ ನಾಡಿನ ಅನೇಕ ಮಠಾಧೀಶರು, ಹೆಸರಾಂತ ಉಪನ್ಯಾಸಕರನ್ನು ಕರೆಸಿ ಗ್ರಾಮದ ಜನರಿಗೆ ಹೊಸಹೊಸ ವಿಚಾರಗಳನ್ನು

ಮುಟ್ಟಿಸುತ್ತಾ ಅರ್ಥಬದ್ಧವಾಗಿ ನೆರವೇರಿಸುತ್ತಾರೆ. ಮೂಲಗುರುಗಳು ಬಳಸುತ್ತಿದ್ದ ಕಬ್ಬಿಣದ ಕೋಲು, ಕಮಂಡಲ, ಪಾದುಕೆಗಳಿಗೆ ಹಾಗೂ ಮಠದಲ್ಲಿರುವ ನಾಲ್ಕು ಗದ್ದುಗೆಗಳಿಗೆ ನಿತ್ಯಪೂಜೆ ಸಲ್ಲುತ್ತಿದೆ. ಶ್ರಾವಣ,ಕಾರ್ತೀಕ ಹಾಗೂ ಧನುರ್ಮಾಸಗಳಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ.

ಶೈಕ್ಷಣಿಕ ಕಾರ್ಯಗಳು: ಶ್ರೀ ಗಂಗಾಧರ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಸೋಮಹಳ್ಳಿಯ ಮಠದ ಸಹಕಾರ ಪಡೆದು ಶ್ರೀ ಗಂಗಾಧರೇಶ್ವರ ಪ್ರೌಢಶಾಲೆಯನ್ನು ಪ್ರಾರಂಭಿಸಿದ್ದು,ಶಾಲಾಕಟ್ಟಡ ಸಂಕೀರ್ಣ ವನ್ನು ನಿರ್ಮಿಸಿದ್ದಾರೆ. ಕಲಿಯುವ ಬಡ ಮಕ್ಕಳ ಅನುಕೂಲಕ್ಕಾಗಿ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿದ್ದಾರೆ. ಒಂದು ಅನಾಥಾಲ ಯವನ್ನು ಪ್ರಾರಂಭಿಸಿ, ಇಪ್ಪತ್ತೈದು ಜನ ದಿಕ್ಕಿಲದ ಮಕ್ಕಳಿಗೆ ಆಶ್ರಯವನ್ನು ಕಲ್ಪಿಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕಬ್ಬಿಣಕೋಲೇಶ್ವರ ಮಠ, ಗೋಪಾಲಪುರ, ಕನ್ನೇಗಾಲ ಅಂಚೆ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ಭಿಕ್ಷದ ಮಠ: ಗೋಪಾಲಪುರದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಭಿಕ್ಷದಮಠವು ಸೋಮಹಳ್ಳಿಯ ಶಾಖಾಮಠವಾಗಿ ಬೆಳೆದಿದೆ. ಸೋಮಹಳ್ಳಿಯ ಶ್ರೀ ಸಿದ್ಧಮಲ್ಲ ಸ್ವಾಮಿಗಳು ಇಲ್ಲಿನ ಭಿಕ್ಷದ ಮಠಕ್ಕೆ ಶ್ರೀ ಸುಬ್ಬಪ್ಪ ಸ್ವಾಮಿಗಳನ್ನು ನೇಮಿಸಿ, ದಾಸೋಹ ಕಾಯಕವನ್ನು ಪ್ರಾರಂಭಿಸಿದ್ದರು. ನಂತರ ಶ್ರೀ ಬಸಪ್ಪ ಸ್ವಾಮಿಗಳನ್ನು ಭಿಕ್ಷಾ ಕಾಯಕಕ್ಕೆ ನೇಮಿಸಿದ್ದಾರೆ. ಶ್ರೀ ಬಸಪ್ಪ ಸ್ವಾಮಿಗಳು ದಿನದ ಎರಡೂ ವೇಳೆ ಕಂತೆ ಭಿಕ್ಷೆ ಕಾಯಕ ಮಾಡಿಕೊಂಡು, ಮಠದ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಬಸಪ್ಪಸ್ವಾಮಿಗಳು, ಶ್ರೀ ಭಿಕ್ಷದಮಠ, ಗೋಪಾಲಪುರ, ಕನ್ನೇಗಾಲ ಅಂಚೆ, ಗುಂಡ್ಲುಪೇಟೆ ತಾ, ಚಾಮರಾಜನಗರಜಿಲ್ಲೆ.

ಚಿಕ್ಕತುಪ್ಪೂರು

ಗುಂಡ್ಲುಪೇಟೆ ತಾಲ್ಲೂಕಿನ ಚಿಕ್ಕತುಪ್ಪೂರು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಮೂರು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ಶಿವಪೂಜೆಮಠ ಸ್ಥಾಪನೆಯಾಗಿದೆ.

ಶಿವಪೂಜೆ ಮಠ: ಚಿಕ್ಕತುಪ್ಪೂರು ಗ್ರಾಮದಲ್ಲಿ ಸುತ್ತೂರು ಶ್ರೀ ಶಿವರಾತ್ರೀಶ್ವರ ಮಠದ ಶಾಖಾಮಠವಾದ ಶ್ರೀ ಶಿವಪೂಜೆಮಠ ಸ್ಥಾಪನೆಯಾಗಿ, ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ ಬಂದಿದೆ. ಶ್ರೀ ಚನ್ನವೀರ ದೇವರು ಶಿವಪೂಜಾ ಕಾಯಕದಿಂದ ಅನುಷ್ಠಾನಗೊಂಡ ಜಾಗೃತ ಸ್ಥಳದಲ್ಲಿ ೧೯೨೬ ರಲ್ಲಿ ಮಠವು ಸ್ಥಾಪನೆಯಾಗಿದ್ದರಿಂದ ಈ ಮಠಕ್ಕೆ 'ಶ್ರೀ ಶಿವಪೂಜೆ ಮಠ' ಎಂಬ ಹೆಸರು ಬಂದಿದೆ.

ಮನಸೋತ ಗುರುಗಳು: ಒಮ್ಮೆ ಬೆಟ್ಟದಪುರದ ಶ್ರೀ ಚಿಕ್ಕವೀರ ದೇಶಿಕೇಂದ್ರ ಸ್ವಾಮಿಗಳು ಮಲ್ಲನಮೂಲೆ ಮಠದಲ್ಲಿ ಶ್ರೀ ಕಂಬಳೇಶ್ವರರ ಗದ್ದುಗೆ ಮಂಟಪ ಕಾರ್ಯದಲ್ಲಿ ತೊಡಗಿದ್ದಾಗ, ಶ್ರೀ ಚನ್ನವೀರದೇವರ ಶಿವಪೂಜೆ ಕಾಯಕವನ್ನು ಕೇಳಿ ತಿಳಿದು ನೋಡಬೇಕೆಂದು ಅಪೇಕ್ಷೆಪಟ್ಟು ಚಿಕ್ಕತುಪ್ಪೂರಿಗೆ ಆಗಮಿಸುತ್ತಾರೆ. ಶ್ರೀ ಚಿಕ್ಕವೀರ ದೇಶಿಕೇಂದ್ರ ಸ್ವಾಮಿಗಳು ಗುರುಗಳ ಶಿವಪೂಜೆಗೆ ಮನಸೋತು ಎರಡು ದಿನ ಈ ಪೂಜೆಯಲ್ಲಿ ತಾವೂ ಭಾಗವಹಿಸಿ, ಈ ಪವಿತ್ರ ಜಾಗದಲ್ಲಿ ಮಠ ಸ್ಥಾಪನೆ ಮಾಡಬೇಕೆಂದು ತಮ್ಮ ಇಚೆಯನ್ನು ವ್ಯಕ್ತಪಡಿಸಿದ್ದರು. ಬೆಟ್ಟದಪುರದ ಗುರುಗಳು ಬಂದು ಹೋದ ಅನೇಕ ವರ್ಷಗಳ ತರುವಾಯ ಸುತ್ತೂರು ಪಟ್ಟದ ಶ್ರೀ ಶಿವರಾತ್ರಿ ಸ್ವಾಮಿಗಳು ೧೯೨೬ ರಲ್ಲಿ ಮಠ ಸ್ಥಾಪನೆ ಮಾಡಿ, ಶ್ರೀ ಶಿವಲಿಂಗ ಸ್ವಾಮಿಗಳನ್ನು ಮೊದಲ ಪಟ್ಟಾಧಿಕಾರಿಗಳನ್ನಾಗಿ ನೇಮಿಸಿ ಅನುಗ್ರಹಿಸುತ್ತಾರೆ.

ಮೊದಲ ಗುರು: ಶ್ರೀ ಶಿವಲಿಂಗ ಸ್ವಾಮಿಗಳು ಧರ್ಮ ಜಾಗೃತಿ ಉಂಟು ಮಾಡಿ ಧರ್ಮಾಚರಣೆಯ ಬಗ್ಗೆ ಭಕ್ತರಿಗೆ ಪ್ರೇರಣೆ ಮಾಡಿ ಸಂಸ್ಕಾರ ನೀಡಿದರು. ಕೆಲವೇ ವರ್ಷಗಳಲ್ಲಿ ಶಿವಪೂಜೆ ಮಠ ಹೆಚ್ಚು ಪ್ರಸಿದ್ಧಿಗೆ ಬರಲು ಕಾರಣರಾದ ಶ್ರೀ ಶಿವಲಿಂಗ ಸ್ವಾಮಿಗಳು ಬೆಟ್ಟದಪುರ ಮಠದ ಶಾಖಾಮಠವಾದ ಕುರುಬರ ಹುಂಡಿ ಮಠಕ್ಕೆ ತೆರಳುತ್ತಾರೆ. ಇದರಿಂದ ಶಿವಪೂಜೆಮಠ

ಕೆಲವೇ ವರ್ಷಗಳಲ್ಲಿ ಮಠಾಧೀಶರಿಲ್ಲದೆ ಖಾಲಿ ಉಳಿಯಿತು.

ಬೆಳೆದ ಪರಂಪರೆ: ನಂತರ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಶ್ರೀ ದಯಾನಂದ ಸ್ವಾಮಿಗಳನ್ನು ಕರೆತಂದು ೧೯೪೨ರಲ್ಲಿ ಪಟ್ಟಾಧಿಕಾರದ ಅನುಗ್ರಹನೀಡಿ ಅಧಿಕಾರಕ್ಕೆ ತಂದರು. ನಲ್ವತ್ತೊಂಬತ್ತು ವರ್ಷಗಳ ದೀರ್ಘ ಅಧಿಕಾರ ನಡೆಸಿದ ಶ್ರೀ ದಯಾನಂದ ಸ್ವಾಮಿಗಳು,ಚಿಕ್ಕತುಪ್ಪೂರಿನಲ್ಲಿ ಮಾಡಿದ ಧಾರ್ಮಿಕ ಕಾರ್ಯಗಳಿಂದ ಗ್ರಾಮ ಸಂಸ್ಕಾರ ಪಡೆಯಿತು.ಅಲ್ಲದೆ ಇವರ ಕಾಯಕನಿಷ್ಠೆಯಿಂದ ಮಠದ ಕಟ್ಟಡ ನವೀಕರಣಗೊಂಡು ವಿಸ್ತಾರಗೊಂಡಿತು. ಎಪ್ಪತ್ತೆಂಟು ವರ್ಷದ ವಯೋ ವೃದ್ಧರಾದ ಶ್ರೀ ದಯಾನಂದ ಸ್ವಾಮಿಗಳು ಈಗಲೂ ಚಟುವಟಿಕೆಯಿಂದ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿದ್ದಾರೆ.

ಶ್ರೀ ದಯಾನಂದ ಸ್ವಾಮಿಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ಸುತ್ತೂರು ಜಗದ್ಗುರುಗಳ ಸೇವೆ ಮಾಡಿಕೊಂಡಿದ್ದು, ಗುರುಗಳ ಒಡನಾಟದಲ್ಲಿ ಧಾರ್ಮಿಕಸಂಸ್ಕಾರ ಪಡೆದುಕೊಂಡಿದ್ದ,ಶ್ರೀ ಚನ್ನವೀರ ಸ್ವಾಮಿಗಳಿಗೆ ೧೯೯೧ರ ಸೆಪ್ಟೆಂಬರ್ ಮೂರ ರಂದು ನೂತನ ಮಠಾಧಿಪತಿಯ ಅಧಿಕಾರ ನೀಡಿದರು. ಶ್ರೀ ಚನ್ನವೀರ ಸ್ವಾಮಿಗಳು ಪದವಿ ಶಿಕ್ಷಣ ಪಡೆದು ವೇದ,ಸಂಸ್ಕೃತ ಹಾಗೂ ಆಗಮಗಳ ಅಧ್ಯಯನ ಮಾಡಿದ್ದು, ಸುತ್ತೂರು ಜಗದ್ಗುರುಗಳ ಮಾರ್ಗದರ್ಶನದಲ್ಲಿ ಮಠವನ್ನು ಮುನ್ನಡೆಸುತ್ತಿದ್ದಾರೆ.

ಗದ್ದುಗೆಗಳು: ಶಿವಪೂಜೆ ಕಾಯಕದ ಶ್ರೀ ಚನ್ನವೀರ ದೇವರ ಗದ್ದುಗೆಯನ್ನು ನಿರ್ಮಿಸಲಾಗಿದೆ. ಪ್ರಥಮ ಗುರುಗಳಾದ ಶ್ರೀ ಶಿವಲಿಂಗ ಸ್ವಾಮಿಗಳು ಮಠ ತೊರೆದು ಕುರುಬರಹುಂಡಿಗೆ ಹೋಗಿ ಲಿಂಗೈಕ್ಯರಾದ ಮೇಲೆ ಚಿಕ್ಕತುಪ್ಪೂರಿನ ಭಕ್ತರು ಹಾಗೂ ಶಿವಪೂಜೆ ಮಠದ ಗುರುಗಳು ಲಿಂಗೈಕ್ಯ ಗುರುಗಳ ಪಾರ್ಥಿವಶರೀರವನ್ನು ತಂದು ಇಲ್ಲಿ ಸಮಾಧಿ ಮಾಡಿ ಗದ್ದುಗೆ ನಿರ್ಮಿಸಿದ್ದಾರೆ. ಈ ಎರಡೂ ಗದ್ದುಗೆಗಳು ಗ್ರಾಮದ ಪಶ್ಚಿಮದಲ್ಲಿರುವ ಮಠದ ತೋಟದಲ್ಲಿ ನಿರ್ಮಿತವಾಗಿವೆ. ಈ ತೋಟದಲ್ಲಿ ಐದುಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ನೂತನ ಕಟ್ಟಡಕ್ಕೆ ಮಠದ ಆಡಳಿತವನ್ನು ಸ್ಥಳಾಂತರಿಸಲಾಗಿದೆ.

ಧಾರ್ಮಿಕ ಕಾರ್ಯಗಳು: ಅಮಾವಾಸ್ಯೆ, ಹುಣ್ಣಿಮೆ, ಶ್ರಾವಣ, ಕಾರ್ತೀಕ ಹಾಗೂ ಧನುರ್ಮಾಸಗಳಲ್ಲಿ ಮಠದಲ್ಲಿ ವಿಶೇಷ ಪೂಜೆ ನಡೆಸಲಾಗುತ್ತಿದೆ. ಬಸವ ಜಯಂತಿಯನ್ನು ಆಚರಿಸಲಾಗುತ್ತಿದೆ. ಜನರಲ್ಲಿ ಬಸವತತ್ತ್ವದ ಬಗ್ಗೆ ಅರಿವು ಮೂಡಿಸಲು ಈ ಸಂದರ್ಭಗಳಲ್ಲಿ ಉಪನ್ಯಾಸ, ಉಪದೇಶ ನೀಡಲಾಗುತ್ತಿದೆ. ಭಕ್ತರ ಧಾರ್ಮಿಕ ಕ್ರಿಯೆಗಳಲ್ಲಿ ಪಾಲ್ಗೊಂಡು ಬಿನ್ನಹ ತೀರಿಸುತ್ತಾ, ಭಕ್ತರಲ್ಲಿ ಧಾರ್ಮಿಕ ಪ್ರಜ್ಞೆ ಬೆಳೆಸಲು ಮಠವು ಪ್ರಜ್ಞಾಪೂರ್ವಕವಾಗಿ ಕರ್ತವ್ಯ ನಿರ್ವಹಿಸುತ್ತಿದೆ.

ವಿಳಾಸ: ಷ.ಬ್ರ.ಶ್ರೀ.ಚನ್ನವೀರ ಸ್ವಾಮಿಗಳು, ಶ್ರೀಶಿವಪೂಜೆಮಠ, ಚಿಕ್ಕತುಪ್ಪೂರು, ಗುಂಡ್ಲುಪೇಟೆ ತಾ. ಚಾಮರಾಜನಗರ ಜಿಲ್ಲೆ.

ತೆರಕಣಾಂಬಿ

ಗುಂಡ್ಲುಪೇಟೆ ತಾಲ್ಲೂಕಿನ ತೆರಕಣಾಂಬಿಯು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹನ್ನೊಂದು ಕಿ. ಮೀ. ದೂರದಲ್ಲಿದೆ. ಶಿವನಸಮುದ್ರದ ರಾಜಮಾಂಡವರಾಯ, ಹೊಯ್ಸಳರು, ವಿಜಯನಗರದ ಅರಸರು ತೆರಕಣಾಂಬಿಯನ್ನು ಆಳಿದರು. ಹದಿನಾರನೆಯ ಶತಮಾನದ ಉಮ್ಮತ್ತೂರು ದೊರೆಗಳ ನಂತರ ೧೬೨೪ ರಲ್ಲಿ ತೆಲುಗಿ ಪಾಳೆಗಾರ ಜಗಮಲ್ಲ ಎಂಬುವನು ಆಳ್ವಿಕೆ ನಡೆಸಿದನು. ನಂತರ ಮುಸ್ಲಿಮರು ಕೆಲವು ವರ್ಷ ಆಡಳಿತ ನಡೆಸಿ ತೆರಕಣಾಂಬಿಯನ್ನು ಅಭಿವೃದ್ಧಿಗೊಳಿಸಿದರು. ಇಂತಹ ಐತಿಹಾಸಿಕ ಸ್ಥಳದಲ್ಲಿ ಹನ್ನೆರಡಕ್ಕೂ ಹೆಚ್ಚು ದೇವಸ್ಥಾನಗಳು ಸ್ಥಾಪನೆಯಾಗಿವೆ. ಜಗಪತಿಯ ಆಡಳಿತ ಕಾಲದಲ್ಲಿ ಶ್ರೀ ಮದ್ದಾನೇಶ್ವರ ಶಿವಯೋಗಿಗಳ ಪ್ರಭಾವದಿಂದ ಇಲ್ಲಿ ವೀರಶೈವಧರ್ಮ ಬೆಳೆದಿದೆ. ಚಾರಿತ್ರಿಕವಾಗಿ ಈ ಗ್ರಾಮಕ್ಕೆ ತನ್ನದೇ ಆದ ಇತಿಹಾಸವಿದೆ. ಇಲ್ಲಿ ಧರ್ಮದ ಆಚರಣೆಗೆ ೧೯೩೨ ರಲ್ಲಿ ಈ ಮಠವನ್ನು ಸ್ಥಾಪನೆ ಮಾಡಲಾಗಿದೆ.

ಪಟ್ಟದಮಠ: ತೆರಕಣಾಂಬಿ ಗ್ರಾಮದಲ್ಲಿ ವೀರಶೈವರಿಗೆ ಸಂಸ್ಕಾರ ನೀಡಲಿಕ್ಕಾಗಿ ಹಾಗೂ ಸಮಾಜದ ಸಂಘಟನೆಗಾಗಿ ಶ್ರೀ ಚನ್ನವೀರ ದೇವರು ತಮ್ಮ ಮನೆಯನ್ನೇ ಮಠವನ್ನಾಗಿ ಪರಿವರ್ತಿಸಿದರು. ಇವರು ತಮ್ಮ ಸಹೋದರರಾದ ಶ್ರೀ ಚನ್ನಬಸವರ ಪುತ್ರರಾಗಿ ೧೯೩೧ರಲ್ಲಿ ಜನಿಸಿದ ಶ್ರೀ ಮಹಾದೇವರನ್ನು, ನೂತನ ಮಠದ ಮರಿದೇವರಾಗಿ ಆಯ್ಕೆಮಾಡಿದರು. ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿ ಪ್ರಾರಂಭಗೊಂಡ ಈ ಮಠದ ಪ್ರಥಮ ಉತ್ತರಾಧಿಕಾರಿಗಳಾದ ಶ್ರೀ ಮಹಾದೇವರಿಗೆ ಉತ್ತಮ

ಶಿಕ್ಷಣಕೊಡಿಸಿ, ೧೯೩೨ ರಲ್ಲಿ ಶ್ರೀ ಮಹಾದೇವ ಶಿವಾಚಾರ್ಯಸ್ವಾಮಿಗಳೆಂದು ಅಭಿಧಾನವಿತ್ತು ಪಟ್ಟಾಧಿಕಾರ ಮಾಡಲಾಯಿತು.

ಇಲ್ಲಿ ಮಠ ಸ್ಥಾಪನೆಗೊಂಡಿದ್ದರಿಂದ ಈ ಭಾಗದ ವೀರಶೈವರಿಗೆ ಹೊಸತನ ಬಂದಂತಾಯಿತು.ನೂತನ ಮಠವು ಧಾರ್ಮಿಕ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿ ಬೆಳೆಯತೊಡಗಿತು. ಮಠದ ಧಾರ್ಮಿಕ ಚಟುವಟಿಕೆಗಳು ಸುಗಮವಾಗಿ ನಡೆಯಲು ಶ್ರೀ ಚನ್ನ ವೀರ ದೇವರು ತಮ್ಮ ಸ್ವಂತ ಆಸ್ತಿಯಲ್ಲಿ ಆರುಎಕರೆ ಜಮೀನು ಮತ್ತು ಒಂದು ಎಕರೆ ತೋಟವನ್ನು ಮಠಕ್ಕೆ ಬರೆದು ಕೊಟ್ಟರು. ಈ ರೀತಿ ವೀರಶೈವ ಧರ್ಮದ ಉದ್ಧಾರಕ್ಕೆ ತಮ್ಮ ಆಸ್ತಿಯನ್ನು ತ್ಯಾಗ ಮಾಡಿ ಶ್ರಮಿಸಿದರು. ಶ್ರೀ ಮಹಾದೇವ ಶಿವಾಚಾರ್ಯ ಸ್ವಾಮಿಗಳು ಧಾರ್ಮಿಕ ತಳಹದಿಯ ಮೇಲೆ ಸಮಾಜವನ್ನು ಸಂಘಟಿಸಿ, ಸಂಸ್ಕಾರ ನೀಡಿ ಧರ್ಮ ಬೆಳೆಯಲು ನೆರವಾಗಿದ್ದಾರೆ. ಕಾಯಕದಿಂದ ಜಮೀನನ್ನು ಅಭಿವೃದ್ಧಿಪಡಿಸಿ, ಮಠವು ಸ್ವಾವಲಂಬಿಯಾಗುವಂತೆ ಮಾಡಿದರು.

ಧಾರ್ಮಿಕ ಕಾರ್ಯಗಳು: ೧೯೩೨ ರಲ್ಲಿ ಪಟ್ಟಾಧಿಕಾರ ವಹಿಸಿಕೊಂಡ ಮೊದಲ ಗುರುಗಳು ಈಗ ಎಂಬತ್ತೊಂದು ವರ್ಷಗಳ ತುಂಬು ಜೀವನ ನಡೆಸಿ ಮಠದ ಸರ್ವತೋಮುಖ ಅಭಿವೃದ್ಧಿಗೆ ಕಂಕಣತೊಟ್ಟಿದ್ದಾರೆ. ಮಹಾದೇವದೇವಾಲಯದಲ್ಲಿ ನಡೆಯುವ ಕೊನೆಯ ಕಾರ್ತೀಕೋತ್ಸವವನ್ನು ಮಠದ ವತಿಯಿಂದ ಆಚರಿಸಿ, ಉತ್ಸವಕ್ಕೆ ಸೇರುವ ಭಕ್ತರಿಗೆ ಅನ್ನದಾಸೋಹವನ್ನು ಏರ್ಪಡಿಸಲಾಗು ತ್ತಿದೆ. ದೀಪಾರಾಧನೆಯ ಪೂರ್ಣ ಖರ್ಚನ್ನು ಮಠವೇ ಭರಿಸುತ್ತಿದೆ. ಈ ರೀತಿ ಭಕ್ತರಲ್ಲಿ ಒಂದಾಗಿ ಗ್ರಾಮದ ಚಟುವಟಿಕೆಯ ಜೊತೆಗೆ ಮಠದ ಧಾರ್ಮಿಕ ಕೆಲಸಗಳನ್ನು ಮುಂದುವರೆಸಿಕೊಂಡು ಬರುತ್ತಿದೆ.

ವಿಳಾಸ: ಷ.ಬ.ಶ್ರೀ ಮಹಾದೇವ ಸ್ವಾಮಿಗಳು, ಶ್ರೀ ಪಟ್ಟದ ಮಠ, ತೆರಕಣಾಂಬಿ, ಗುಂಡ್ಲುಪೇಟೆ ತಾ, ಚಾಮರಾಜನಗರ ಜಿಲ್ಲೆ.

ಪಡಗೂರು

ಗುಂಡ್ಲುಪೇಟೆ ತಾಲ್ಲೂಕಿನ ಪಡಗೂರು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಆರು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಅಡವಿಮಠವು ಸ್ಥಾಪನೆಯಾಗಿದೆ.

ಅಡವಿಮಠ: ಪಡಗೂರು ಗ್ರಾಮದ ವಾಯುವ್ಯಕ್ಕೆ ಶ್ರೀ ಅಡವಿ ಮಠವು ಸ್ಥಾಪನೆಯಾಗಿದೆ. ಈ ಮಠವು ಶ್ರೀ ಸಿದ್ಧಲಿಂಗೇಶ್ವರರ ಕಾಲದ ವಿರಕ್ತರಲ್ಲಿ ಒಬ್ಬರಾದ ಶ್ರೀ ಮದ್ದಾನೇಶ್ವರರಿಂದ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ.

ಮಠ ಸ್ಥಾಪನೆಯ ಹಿನ್ನಲೆ: ಶ್ರೀ ತೋಂಟದ ಸಿದ್ಧಲಿಂಗೇಶ್ವರರು ವೀರಶೈವ ಧರ್ಮದ ಉದ್ಧಾರಕ್ಕಾಗಿ ೭೦೧ ವಿರಕ್ತರಿಗೆ ಒಂದೊಂದು ಕಾರ್ಯಕ್ಷೇತ್ರಗಳನ್ನು ಗುರುತಿಸಿ, ನಾಡಿನ ನಾನಾ ಭಾಗಗಳಿಗೆ ಕಳುಹಿಸಿ ಕೊಡುತ್ತಾರೆ. ಈ ಸಂದರ್ಭದಲ್ಲಿ ಶ್ರೀಮದ್ದಾನೆ ಶಾಂತರು ಯಾನೆ ಶ್ರೀ ಕೋಲ ಶಾಂತೇಶ್ವರರು ಮತ್ತು ಅವರ ಕರಕಮಲ ಸಂಜಾತ ಶ್ರೀ ನಾಗಲಿಂಗ ದೇವರಿಗೆ ಮಹಿಷಿ ಮಂಡಲ (ಈಗಿನ ಚಾಮರಾಜನಗರ ಜಿಲ್ಲೆ) ಮತ್ತು ಉದಕಮಂಡಲ ಪ್ರಾಂತ್ಯವನ್ನು ನಿಗಧಿಗೊಳಿಸುತ್ತಾರೆ. ಈ ಜವಾಬ್ದಾರಿಯನ್ನು ಹೊತ್ತ ಶರಣರು ದಕ್ಷಿಣಾಭಿಮುಖವಾಗಿ ಮಹಿಷಿಮಂಡಲದ ಕಡೆಗೆ ಪ್ರಯಾಣ ಬೆಳೆಸಿ, ಗುಂಡ್ಲುಪೇಟೆ ತಾಲ್ಲೂಕನ್ನು ಪ್ರವೇಶಿಸಿ ತಮ್ಮ ಕಾರ್ಯಕ್ಷೇತ್ರಕ್ಕೆ ಬಂದು ನೆಲೆಸಿದರು.

ಗುಂಡ್ಲುಪೇಟೆ ತಾಲ್ಲೂಕಿನ ಕೌಂಡಿನ್ಯ ನದೀತೀರದ ತೆರಕಣಾಂಬಿಯ ಸುತ್ತಮುತ್ತ ವೀರಶೈವ ಧರ್ಮ ವಿನಾಶದ ಅಂಚಿಗೆ ಬಂದಿತ್ತು. ಇಂತಹ ಪರಿಸ್ಥಿತಿಯಲ್ಲಿ ಶ್ರೀ ಮದ್ದಾನೇಶ್ವರರು ಯಾನೆ ಶ್ರೀ ಕೋಲೇಶ್ವರರು ತೆರಕಣಾಂಬಿ ಪ್ರವೇಶಿಸಿ ಇಲ್ಲೇ ನೆಲೆಸಿ ಧರ್ಮಪ್ರಚಾರ ಕೈಗೊಂಡು, ವೀರಶೈವ ಸಂಸ್ಕೃತಿಯನ್ನು ಬೆಳೆಸತೊಡಗಿದರು. ಇದನ್ನು ಕಂಡ ವೈಷ್ಣವರು ತೆರಕಣಾಂಬಿಯ ದೊರೆ ಜಗಪತಿಗೆ ದೂರು ನೀಡಿದರು. ಜಗಪತಿ ಶಿವಯೋಗಿಯ ಮೇಲೆ ಕಟ್ಟೆಚ್ಚರವಹಿಸಲು ಆದೇಶಿಸಿದರು. ದಿನದಿಂದ ದಿನಕ್ಕೆ ಕೋಲಶಾಂತೇಶ್ವರರ ಧರ್ಮಪ್ರಚಾರ ಚುರುಕುಗೊಂಡಾಗ ಕಿಡಿಕಿಡಿಯಾದ ವೀರಶೈವ ವಿರೋಧಿ ದೊರೆ ಶ್ರೀ ಕೋಲಶಾಂತೇಶ್ವರರನ್ನು ಸೋಮೇಶ್ವರ ದೇವಾಲಯಕ್ಕೆ ನೂಕಿ, ಕಠಿಣಶಿಕ್ಷೆ ಕೊಡುವಂತೆ ಆದೇಶ ನೀಡಿದನು. ಶ್ರೀಶಾಂತೇಶ್ವರರು ರಾಜಾಜ್ಞೆಯನ್ನು ಪಾಲಿಸಿ ಬಂಧಿಯಾಗಿ, ಅನೇಕ ಹಿಂಸೆಗಳಿಗೆ ಗುರಿಯಾಗಿ ನೋವನ್ನು ಅನುಭವಿಸಿದರು.

ಶಾಂತಗೊಂಡ ಮದ್ದಾನೆ: ಶ್ರೀ ಶಾಂತೇಶ್ವರರಿಗೆ ಶಿಕ್ಷೆಕೊಟ್ಟು ಸುಸ್ತಾದ ಸೇವಕರು, ದೇವಾಲಯದ ಬಾಗಿಲುಗಳನ್ನು ಮುಚ್ಚಿ

ಬೀಗ ಹಾಕಿಕೊಂಡು ಕಾವಲನ್ನು ಬಿಗಿಗೊಳಿಸಿ ಹೊರಟರು. ಶ್ರೀ ಶಿವಯೋಗಿ ಶಾಂತೇಶ್ವರರು ಶಿವಯೋಗದಲ್ಲಿ ಮಗ್ನರಾಗಿ ಸಮಾಧಿ ಸ್ಥಿತಿ ತಲುಪಿ ತಪೋಮಗ್ನರಾಗಿದ್ದರು. ಬೆಳಗಾದೊಡನೆ ತಪೋಭಂಗಿಯಿಂದ ಮೇಲೆದ್ದು ತಮ್ಮ ಪವಾಡ ತೋರಿಸಿ ಧರ್ಮಜಾಗೃತಿ ಮಾಡಲು ಇದು ಒಳ್ಳೆಯ ಸಮಯ ಎಂದು, ರಾಜಸೇವಕರು ಬರುವ ವೇಳೆಗೆ ಅದೃಶ್ಯರಾಗಿ ವೀರ ಶೈವರ ಬೀದಿಯಲ್ಲಿ ಬಿನ್ನ ತೀರಿಸಿಕೊಂಡು ರಾಜಬೀದಿಗೆ ಬಂದರು. ರಾಜಸೇವಕರು ಶ್ರೀ ಶಿವಯೋಗಿ ಶಾಂತೇಶ್ವರರನ್ನು ನೋಡಿ ಗಾಬರಿಗೊಂಡರು. ತಕ್ಷಣ ತಮ್ಮ ಕಣ್ಣನ್ನು ನಂಬದೆ ಗಡಿಬಿಡಿಯಿಂದ ಸೋಮೇಶ್ವರದೇವಾಲಯಕ್ಕೆ ಬಂದು ನೋಡು ತ್ತಾರೆ ತಾವು ಹಾಕಿದ ಬೀಗ ಸರಿಯಾಗಿದೆ. ದೇವಸ್ಥಾನದ ಸುತ್ತ ಇದ್ದ ಕಾವಲುಗಾರರು ತಮ್ಮ ಕರ್ತವ್ಯದಲ್ಲಿ ಮಗ್ನರಾಗಿದ್ದರು. ರಾಜನ ಬಳಿಗೆ ಹೋಗಿ ನೋಡಿದ ಘಟನೆಯನ್ನು ವಿವರಿಸಿದರು. ರಾಜ ಕೋಪಗೊಂಡು ಅರಮನೆಗೆ ಕರೆಸಿ ಮಣಿಸಲು ಯತ್ನಿಸಿ ವಿಫಲನಾದನು. ಶಿವಯೋಗಿಯ ಸೊಕ್ಕು ಮುರಿಯಲು ಮದ್ದಾನೆಯನ್ನು ಮೈದಾನಕ್ಕೆ ಬಿಡಿಸಿದ. ಮದ್ದಾನೆ ತನ್ನ ನೆರಳನ್ನೇ ಮತ್ತೊಂದು ಆನೆ ಎಂದು ತಿಳಿದು ತುಳಿಯಲು ಮನಸಾ ಇಚ್ಚೆ ಮೈದಾನದಲ್ಲಿ ಸಂಚರಿಸಿತು. ಕೊನೆಗೆ ಕೆಂಡಮಂಡಲ ಗೊಂಡ ಆನೆ ಸಿಕ್ಕಿದ್ದನ್ನು ಪುಡಿಪುಡಿ ಮಾಡಿ ಮುನ್ನುಗ್ಗಿತು. ಶಿವಯೋಗಿಗಳು ಆನೆಯ ಕಣ್ಣಿಗೆ ಬಿದ್ದೊಡನೆಯೇ ಅವರ ಮೇಲೆರಗಲು ಮುನ್ನುಗ್ಗಿತು. ಮದ್ದಾನೆ ಶಿವಯೋಗಿಗಳ ಬಳಿ ಬರುತ್ತಿದ್ದಂತೆಯೆ ಗುರುಗಳ ಎದುರು ಮಂಡಿಯೂರಿ ನಮಸ್ಕರಿಸಿತು.

ಶರಣಾದ ರಾಜ: ಜಗಪತಿಗೆ ತನ್ನ ತಪ್ಪಿನ ಅರಿವಾಗಿ ಶ್ರೀ ಗುರುಶಾಂತೇಶ್ವರರ ಬಳಿಗೆ ಹೋಗಿ ಕ್ಷಮಿಸಿ ಉದ್ಧರಿಸಬೇಕೆಂದು ಶರಣಾಗುತ್ತಾನೆ. ನಂತರ ಗುರುಗಳನ್ನು ಅರಮನೆಗೆ ಕರೆಸಿ'ಮದ್ದಾನೆ ಮಣಿಸಿದ ಮದ್ದಾನೇಶ್ವರರು' ಎಂಬ ಬಿರುದು ನೀಡಿ, ತೆರಕಣಾಂಬಿಯಲ್ಲಿ ಮೆರವಣಿಗೆ ಮಾಡಿಸಿ ಸತ್ಕರಿಸುತ್ತಾನೆ.

ಮಠ ಸ್ಥಾಪನೆ: ಈ ರೀತಿ ತೆರಕಣಾಂಬಿಯಲ್ಲಿ ಅನೇಕ ಪವಾಡಗಳನ್ನು ನಡೆಸಿ ಶಿವಯೋಗ ಸಾಧನೆಗೆ ಅರಮನೆ ಸೂಕ್ತವಲ್ಲ ಎಂದು ಹೇಳಿ, ಪಡುಗೂರಿನ ಕೌಂಡಿನ್ಯ ನದೀತೀರದ ಅಡವಿಗೆ ಬಂದರು. ಜಗಪತಿಯು ಗುರುಗಳು ಇಷ್ಟಪಟ್ಟ ಜಾಗದಲ್ಲಿ ಮಠ ಕಟ್ಟಿಸಿ ಶ್ರೀ ಮದ್ದಾನೇಶ್ವರರನ್ನು ಕರೆತಂದು ನೂತನ ಮಠಕ್ಕೆ ಪಟ್ಟಾಧಿಕಾರ ಮಾಡಿಸಿ, ತಮ್ಮ ಕೊನೆಯ ಮಗ ಶಿವಲಿಂಗ ದೇವರನ್ನು ಗುರು ಸೇವೆಗೆ ನೇಮಿಸಿದನು.

ಗುರುವಾದ ಅರಸ: ಶ್ರೀ ಮದ್ದಾನೇಶ್ವರರು, ಶ್ರೀ ಜಗಪತಿ ಮತ್ತು ಶ್ರೀಮತಿ ಅಂಬಿಕಾದೇವಿಯ ಪುತ್ರರಾದ ಶಿವಲಿಂಗದೇವರಿಗೆ ಮಠದ ಪಟ್ಟಾಧಿಕಾರ ನೀಡಲು ನಿಶ್ಚಯಿಸಿ ಸಕಲ ಸಿದ್ಧತೆ ಮಾಡಿಕೊಂಡು ನಾಡಿನ ಎಲ್ಲಾ ಮಠಗಳಿಗೆ ಕರೆಯೋಲೆ ಕಳುಹಿಸಿದರು. ಅರಮನೆಯ ಕುಡಿ ಗುರುಮನೆಯ ಅಧಿಕಾರ ವಹಿಸಿಕೊಳ್ಳುವುದನ್ನು ನೋಡಲು ನಾಡಿನ ಹರಗುರುಚರಮೂರ್ತಿಗಳು, ರಾಜರು, ಸಾಮಂತರು ಹಾಗೂ ನಾಡಿನ ಎಲ್ಲಾ ಪ್ರಮುಖರು ಸೇರಿದ ಮೇಲೆ ಶ್ರೀ ಮದ್ದಾನೇಶ್ವರರು ಅದ್ದೂರಿಯಾಗಿ ಶ್ರೀ ಶಿವಲಿಂಗದೇವರಿಗೆ ನಿರಂಜನ ಪಟ್ಟಾಧಿಕಾರ ನೀಡಿದರು. ಇದಾದ ನಂತರ ಶ್ರೀ ಮದ್ದಾನೇಶ್ವರರು ಜೀವಂತ ಸಮಾಧಿಯಾಗುವ ಇಚ್ಚೆಯನ್ನು ವ್ಯಕ್ತಪಡಿಸಿದರು. ಗುರುಗಳ ಅಪ್ಪಣೆಯಂತೆ ಮಠದ ಉತ್ತರಕ್ಕೆ ಸಮಾಧಿ ತೆಗೆಸಿ, ನಿರ್ವಿಕಲ್ಪಗೊಳ್ಳಲು ಎಲ್ಲಾ ವ್ಯವಸ್ಥೆ ಮಾಡಿಸಿದರು. ಶಿವರಾತ್ರಿಯ ದಿನ ಸಮಾಧಿಯೊಳಗೆ ಕುಳಿತು ಧ್ಯಾನಾಸಕ್ತರಾಗಿ ಐಕ್ಯಗೊಂಡರು.

ಪರಂಪರೆ:

೧. ಶ್ರೀ ಮ.ನಿ.ಪ್ರ. ಮದ್ದಾನೇಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಶಿವಲಿಂಗಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಜಡೆಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಮಹಾಂತ ದೇಶಿಕೇಂದ್ರಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ವಿರಕ್ತಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಶಿವಕುಮಾರಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಶಿವಲಿಂಗೇಂದ್ರಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಶ್ರೀ ಶಿವಲಿಂಗ ಸ್ವಾಮಿಗಳ ನಂತರ ಬಂದ ಶ್ರೀ ಜಡೆಸ್ವಾಮಿಗಳು

ಮಹಾಪವಾಡ ಪುರುಷರಾಗಿ, ಹಠಯೋಗ ಶಿವಯೋಗವನ್ನು ಅಂತರ್ಗತ ಮಾಡಿಕೊಂಡು ಮಹಾಯೋಗಿಗಳಾಗಿದ್ದರು. ಇವರ ಕಾಲದಲ್ಲಿ ಅನೇಕರು ವೀರಶೈವ ಧರ್ಮ ಸೇರಿ ಇಷ್ಟಲಿಂಗ ದಾರಿಗಳಾದರು. ಈ ರೀತಿ ವೀರಶೈವ ಧರ್ಮದ ಅಭಿವೃದ್ಧಿ ಹಾಗೂ ಧರ್ಮದ ತತ್ತ್ವಗಳನ್ನು ನಾಡಿಗೆ ಸಾರಿ ಅಡವಿ ಮಠವನ್ನು ಹೆಚ್ಚು ಪ್ರಚಾರಕ್ಕೆ ತಂದು ಲಿಂಗೈಕ್ಯರಾದರು.ಇವರ ನಂತರ ಅನೇಕ ವರ್ಷಗಳ ಕಾಲ ಮಠಾಧೀಶರರು ಇಲ್ಲದೆ ಮಠ ಖಾಲಿ ಉಳಿಯಿತು. ಭಕ್ತರು ಗದ್ದುಗೆಗೆ ಪೂಜೆ ಕಾರ್ಯ ನಡೆಸುತ್ತಾ ಮಠವು ಜೀವಂತವಾಗಿ ಉಳಿಯುವಂತೆ ಮಾಡಿದ್ದರು.

ಹತ್ತೊಂಬತ್ತನೆಯ ಶತಮಾನದಲ್ಲಿ ಶ್ರೀ ಮಹಾಂತ ದೇಶಿಕೇಂದ್ರ ಸ್ವಾಮಿಗಳಿಗೆ ಪಟ್ಟಾಧಿಕಾರ ಮಾಡಿ,ಧಾರ್ಮಿಕ ಚಟುವಟಿಕೆ ಗಳು ನಡೆಯುವಂತೆ ಮಾಡಿದರು. ಶ್ರೀ ಮಹಾಂತ ದೇಶಿಕೇಂದ್ರ ಸ್ವಾಮಿಗಳು ಕುಂತೂರಿನ ಶ್ರೀಮಾದಾರ್ಯ ಮತ್ತು ಶ್ರೀಮತಿ ಲಿಂಗಾಂಬೆಯವರ ಪುತ್ರರಾಗಿ ೧೮೩೮ ರಲ್ಲಿ ಜನಿಸಿದರು. ತಮ್ಮ ಹನ್ನೆರಡನೆಯ ವರ್ಷದಲ್ಲಿ ಮನೆ ತೊರೆದು ಲೋಕಸಂಚಾರ ಮಾಡುತ್ತಾ ಅನೇಕ ಜಂಗಮರ ಜತೆ ಕಾಲ ಕಳೆದು, ಶ್ರೀ ಬಸವಲಿಂಗ ದೇಶಿಕೇಂದ್ರ ಸ್ವಾಮಿಗಳಿಂದ ವಿರಕ್ತಾಶ್ರಮದ ಅನುಗ್ರಹ ಪಡೆದು ಪಡಗೂರಿನ ಅಡವಿ ಮಠದಲ್ಲಿ ನೆಲೆಗೊಂಡರು. ಶ್ರೀ ಮಹಾಂತ ದೇಶಿಕೇಂದ್ರ ಸ್ವಾಮಿಗಳು ಮಠದ ಆಡಳಿತ ವಹಿಸಿಕೊಂಡ ಮೇಲೆ ದಾಸೋಹಕ್ರಿಯೆ ಮತ್ತು ಧಾರ್ಮಿಕ ಆಚರಣೆಗಳನ್ನು ವೈಭವಯುತವಾಗಿ ನಡೆಸತೊಡಗಿ ದರು. ಇವರು ಗದ್ದುಗೆಗಳಿಗೆ ಮಂಟಪವನ್ನು ಕಟ್ಟಿಸಿದ್ದಾರೆ. ಇವರ ತರುವಾಯ ಮುಡಗೂರಿನ ಶ್ರೀ ವಿರಕ್ತಸ್ವಾಮಿಗಳು ಈ ಮಠದ ಆಡಳಿತ ಸೂತ್ರ ವಹಿಸಿಕೊಂಡು, ಪಡಗೂರು ಮತ್ತು ಮುಡಗೂರು ಮಠಗಳೆರಡನ್ನು ಅಭಿವೃದ್ಧಿಗೆ ತಂದರು. ಇವರ ನಂತರ ಮಠವು ಪುನಃ ಅಧಿಕಾರಿಗಳು ಇಲ್ಲದೆ ಖಾಲಿ ಉಳಿಯಿತು. ಈ ಸಂದರ್ಭದಲ್ಲಿ ಮಠದ ಆಸ್ತಿಯನ್ನು ಕಬಳಿಸಲು ಕೆಲವರಿಂದ ಪ್ರಯತ್ನ ನಡೆಯುತ್ತಿದ್ದಾಗ, ಮುಡಗೂರಿನ ವಿರಕ್ತ ಮಠದ ಶ್ರೀ ಚನ್ನಬಸವ ಸ್ವಾಮಿಗಳು ಅಡವಿ ಮಠಕ್ಕೆ ಉತ್ತರಾಧಿಕಾರಿಗಳನ್ನು ನೇಮಿಸಿ ಘೋಷಣೆ ಮಾಡಿದರು.

ಪಟ್ಟಾಧಿಕಾರ: ಮುಡಗೂರಿನ ಶ್ರೀ ಶಾಂತವೀರ ದೇವರು ಮತ್ತು ಶ್ರೀಮತಿ ಗಿರಿಜಮ್ಮನವರ ಪುತ್ರರಾಗಿ ೧೯೧೭ ರ ಜೂನ್ ಇಪ್ಪತ್ತೈದರಂದು ಜನಿಸಿದ ಹನ್ನೊಂದು ವರ್ಷದ ಶ್ರೀ ಶಿವಕುಮಾರ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿ, ೧೯೨೮ ರ ಫೆಬ್ರುವರಿ ತಿಂಗಳಲ್ಲಿ ಪಡಗೂರು ಅಡವಿ ಮಠಕ್ಕೆ ಪಟ್ಟಾಧಿಕಾರ ಮಾಡಲಾಯಿತು. ಇವರು ಚಾಮರಾಜನಗರ, ಮೈಸೂರಿನಲ್ಲಿ ವಿದ್ಯಾಭ್ಯಾಸ ಮುಗಿಸಿ, ಸುತ್ತೂರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಆಪ್ತರಲ್ಲಿ ಒಬ್ಬರಾಗಿ ಬೆಳೆದರು.

ಅಭಿವೃದ್ಧಿ ಕಂಡಕಾಲ: ಶ್ರೀ ಶಿವಕುಮಾರ ಸ್ವಾಮಿಗಳು ಅಧಿಕಾರ ವಹಿಸಿಕೊಂಡ ಮೇಲೆ ಶ್ರೀ ಮದ್ದಾನೇಶ್ವರರ ಯೋಗ ಮಂಟಪ, ಶ್ರೀ ಮದ್ದಾನೇಶ್ವರರು, ಶ್ರೀ ಶಿವಲಿಂಗ ಸ್ವಾಮಿಗಳು, ಶ್ರೀ ಜಡೆಸ್ವಾಮಿಗಳು ಮತ್ತು ಶ್ರೀ ಮಹಾಂತ ಸ್ವಾಮಿಗಳ ಗದ್ದುಗೆಗಳಿಗೆ ಗರ್ಭಾಂಕಣ ಮತ್ತು ಪ್ರಾರ್ಥನ ಅಂಕಣ ನಿರ್ಮಿಸಿದ್ದಾರೆ. ಮಠದ ಕಟ್ಟಡವನ್ನು ವಿಸ್ತರಿಸಿ, ವೈಭವ ಹೆಚ್ಚಿಸಲು ಬೃಹದಾಕಾರದ ಪ್ರವೇಶದ್ವಾರವನ್ನು ನಿರ್ಮಿಸಿ ಬಸವನ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ದೂರದಿಂದಲೇ ನೋಡುಗರಿಗೆ ಮಠದ ಕಲ್ಪನೆ ಮೂಡಿಸುವ ಈ ಕಟ್ಟಡ ಸಮುಚ್ಚಯ ಶ್ರೀ ಶಿವಕುಮಾರ ಸ್ವಾಮಿಗಳ ಶ್ರಮದ ಫಲಶೃತಿಯಾಗಿದೆ. ಶ್ರೀ ಶಿವಕುಮಾರ ಸ್ವಾಮಿಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ಮುಡಗೂರು ಮಠದ ಶ್ರೀ ಚನ್ನಬಸವದೇವರ ಪುತ್ರರಾಗಿ ೧೯೮೭ರ ಫೆಬ್ರುವರಿ ಹನ್ನೊಂದರಂದು ಜನಿಸಿದ ಶ್ರೀ ಶಿವಲಿಂಗೇಂದ್ರ ಸ್ವಾಮಿಗಳನ್ನು ನೇಮಕಮಾಡಿಕೊಂಡರು. ಇವರು ಮುಡಗೂರಿನಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ, ಮೈಸೂರಿನಲ್ಲಿ ಪ್ರೌಢಶಿಕ್ಷಣದಿಂದ ಸ್ನಾತಕೋತ್ತರ ಪದವಿಯವರೆಗೆ ಅಭ್ಯಾಸ ಮಾಡಿ ಸದಾಚಾರ ಸಂಪನ್ನತೆಯನ್ನು ಮೈಗೂಡಿಸಿ ಕೊಂಡರು. ಇವರು ಶ್ರೀ ಶಿವಕುಮಾರ ಸ್ವಾಮಿಗಳ ಅನುಗ್ರಹದಿಂದ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡರು.

ಸಾಮಾಜಿಕ,ಶೈಕ್ಷಣಿಕ ಸೇವೆ: ಶ್ರೀ ಶಿವಕುಮಾರ ಸ್ವಾಮಿಗಳು ಶಿಕ್ಷಣದ ವಿಚಾರದಲ್ಲಿ ಸಾಕಷ್ಟು ಆಸಕ್ತಿ ತೋರಿಸಿದ್ದಾರೆ ಇದರ ಫಲವಾಗಿ ಕಬ್ಬಹಳ್ಳಿಯಲ್ಲಿ ಪ್ರೌಢಶಾಲೆ ಮತ್ತು ಶ್ರೀ ಮದ್ದಾನೇಶ್ವರ ಸಾರ್ವಜನಿಕ ವಿದ್ಯಾರ್ಥಿನಿಲಯ, ಗುಂಡ್ಲು ಪೇಟೆಯಲ್ಲಿ ಶ್ರೀ ಮದ್ದಾನೇಶ್ವರ ಸಾರ್ವಜನಿಕ ವಿದ್ಯಾರ್ಥಿನಿಲಯ ಮತ್ತು ಮೈಸೂರಿನಲ್ಲಿ ಮದ್ದಾನೇಶ್ವರ ವಿದ್ಯಾರ್ಥಿನಿಲಯ ರೂಪುಗೊಂಡಿವೆ. ಮೈಸೂರು ನಗರದಲ್ಲಿ ಅಡವಿ ಮಠದ ಶಾಖೆಯನ್ನು ಬಿಲ್ವವನದಲ್ಲಿ ಪ್ರಾರಂಭಿಸಿ, ಇಲ್ಲಿಯೂ ವಿದ್ಯಾರ್ಥಿ

ನಿಲಯವನ್ನು ಪ್ರಾರಂಭಿಸಿ ಅನೇಕ ವಿದ್ಯಾರ್ಥಿಗಳಿಗೆ ನೆರವಾಗಿದ್ದಾರೆ.

ಪಡುಗೂರಿನಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ಆಸ್ಪತ್ರೆಯನ್ನು ಕಟ್ಟಿಸಿಕೊಟ್ಟಿದ್ದಾರೆ. ಆರ್ಥಿಕವಾಗಿ ಅಸಹಾಯಕರಾದ ಅನೇಕ ಬಡಜನರಿಗೆ ಸಹಾಯ ನೀಡಿ, ಆಶೀರ್ವದಿಸಿದ ಫಲವಾಗಿ ಇಂದು ಅನೇಕ ಜನ ಕಾಯಕದಲ್ಲಿ ತೊಡಗಿ ಸ್ಥಿತಿವಂತ ರಾಗಿದ್ದಾರೆ. ಈ ರೀತಿ ಗುರುಗಳು ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕವಾಗಿ ಅನೇಕ ಜನಪರ ಕಾರ್ಯಕ್ರಮಗಳನ್ನು ಮಾಡುವ ಮೂಲಕ ಮಠವನ್ನು ಪ್ರಸಿದ್ಧಿಗೆ ತಂದಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಶಿವಲಿಂಗೇಂದ್ರ ಸ್ವಾಮಿಗಳು, ಶ್ರೀ ಅಡವಿಮಠ, ಪಡುಗೂರು, ಗುಂಡ್ಲುಪೇಟೆ ತಾ, ಚಾಮರಾಜನಗರಜಿಲ್ಲೆ.

ಬೊಮ್ಮನಹಳ್ಳಿ

ಗುಂಡ್ಲುಪೇಟೆ ತಾಲ್ಲೂಕಿನ ಬೊಮ್ಮನಹಳ್ಳಿಯು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಹದಿನೈದು ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ದೇವನೂರು ಶಾಖೆಯ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠ ಹಾಗೂ ಊರಿನ ಮಧ್ಯಭಾಗದಲ್ಲಿ ಶ್ರೀ ಪಟ್ಟದ ಮಠವು ಸ್ಥಾಪನೆಯಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿವೆ.

ಗುರುಮಲ್ಲೇಶ್ವರ ದಾಸೋಹ ಮಠ: ಬೊಮ್ಮನಹಳ್ಳಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಗುರುಮಲ್ಲೇಶ್ವರ ದಾಸೋಹ ಮಠವು ಇಲ್ಲಿ ಕಂತೆ ಭಿಕ್ಷ ಮಾಡುವ ಮೂಲಕ ದಾಸೋಹಕ ಕ್ರಿಯೆಯನ್ನು ನಡೆಸುವ ಮೂಲಕ ಮಠವನ್ನು ಅಭಿವೃದ್ಧಿಪಡಿಸುತ್ತಿವೆ. ಮಲ್ಲನಮೂಲೆಯಲ್ಲಿ ಶ್ರೀ ಕಂಬಳೇಶ್ವರರ ಗದ್ದುಗೆ ನಿರ್ಮಾಣ ಕಾಲದಲ್ಲಿ ಸೋಮಹಳ್ಳಿಯ ಶ್ರೀ ಸಿದ್ಧಮಲ್ಲಿಕಾರ್ಜುನಸ್ವಾಮಿಗಳನ್ನು ಇಲ್ಲಿನ ಭಕ್ತರು ಬೊಮ್ಮನಹಳ್ಳಿಗೆ ಕರೆತಂದು ಗೌರವಿಸಿ, ಧರ್ಮಾಚರಣೆಗೆ ನೆರವಾಗಲು ಮಠ ಸ್ಥಾಪಿಸಬೇಕೆಂದು ಒತ್ತಾಯಿಸಿದ್ದರು. ಇದರ ಫಲವಾಗಿ ನೂರುವರ್ಷಗಳ ಹಿಂದೆ ದೇವನೂರಿನ ಭಿಕ್ಷದ ಶ್ರೀ ರಾಚಪ್ಪ ಸ್ವಾಮಿಗಳು ಬೊಮ್ಮನಹಳ್ಳಿಗೆ ಬಂದು ಹುಬ್ಬಳ್ಳಿ ಸ್ವಾಮಿಗಳ ಗದ್ದುಗೆಯ ಬಳಿ ಮಠ ಸ್ಥಾಪನೆ ಮಾಡಲು ನಿರ್ಧಾರ ಕೈಗೊಂಡರು.

ಹುಬ್ಬಳ್ಳಿ ಸ್ವಾಮಿಗಳು: ಉತ್ತರದ ಕಡೆಯಿಂದ ಬಂದಿದ್ದ ಹುಬ್ಬಳ್ಳಿಯ ಶ್ರೀ ಚನ್ನಬಸವೇಶ್ವರ ಸ್ವಾಮಿಗಳು ಬೊಮ್ಮನಹಳ್ಳಿಯಲ್ಲಿ ನೆಲೆಸಿ,ಈ ಗ್ರಾಮವನ್ನು ಧಾರ್ಮಿಕವಾಗಿ ಉದ್ಧರಿಸಿ ಇಲ್ಲೇ ಲಿಂಗೈಕ್ಯರಾದರು. ಹುಬ್ಬಳ್ಳಿ ಸ್ವಾಮಿಗಳು ವೀರಶೈವಧರ್ಮ ಮತ್ತು ಭಕ್ತರ ಉದ್ಧಾರಕ್ಕೆ ಶ್ರಮಿಸಿದ್ದರು. ಇಲ್ಲಿ ಇವರ ಗದ್ದುಗೆಯನ್ನು ಸ್ಥಾಪಿಸಿ ಒಂದು ಧಾರ್ಮಿಕ ಸ್ಥಳವನ್ನಾಗಿ ರೂಪಿಸಿ ನಿತ್ಯ ಪೂಜೆ ಮಾಡತೊಡಗಿದರು. ಈ ಸ್ಥಳದಲ್ಲಿ ಶ್ರೀ ರಾಚಪ್ಪ ಸ್ವಾಮಿಗಳು ದಾಸೋಹ ಮಠವನ್ನು ಸ್ಥಾಪಿಸಿ ಧಾರ್ಮಿಕ ಚಟುವಟಿಕೆಗಳು ಚುರುಕುಗೊಳ್ಳುವಂತೆ ಮಾಡಿದರು. ಮೊದಲ ಭಿಕ್ಷದ ಗುರುಗಳ ತರುವಾಯ ಮಠ ಖಾಲಿ ಉಳಿಯಿತು. ಈ ಸಂದರ್ಭದಲ್ಲಿ ಶ್ರೀ ಗಡ್ಡದ ಸ್ವಾಮಿಗಳು ೧೯೭೪ ರಲ್ಲಿ ಮಠಕ್ಕೆ ಬಂದು, ಧಾರ್ಮಿಕ ಚಟುವಟಿಕೆಗಳನ್ನು ನಡೆಸಿ ಮಠವನ್ನು ಬೆಳೆಸಿದರು. ೧೯೯೬ ರಿಂದ ಶ್ರೀ ಮಹಾದೇವ ಸ್ವಾಮಿಗಳು ಮಠದಲ್ಲಿ ನೆಲೆಸಿ ದಾಸೋಹ ಕಾರ್ಯವನ್ನು ನಡೆಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಮುಂದೆ ನಿರ್ಮಿಸಿರುವ ಗದ್ದುಗೆಗಳಿಗೆ ಪೂಜೆ, ಅಮಾವಾಸ್ಯೆಯಲ್ಲಿ ವಿಶೇಷ ಪೂಜೆ, ಪ್ರತಿ ರಾತ್ರಿ ಭಜನೆ, ಶ್ರಾವಣ, ಕಾರ್ತೀಕ ಹಾಗೂ ಧನುರ್ಮಾಸಗಳಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಕಲಿಯುವ ಮಕ್ಕಳಿಗೆ ಮಠದಲ್ಲಿ ಆಶ್ರಯ ಕಲ್ಪಿಸಿ ಕೊಡಲಾಗಿದೆ.

ವಿಳಾಸ:ಶ್ರೀ ಭಿಕ್ಷದ ಮಹಾದೇವಸ್ವಾಮಿಗಳು, ಶ್ರೀ ಗುರುಮಲ್ಲೇಶ್ವರದಾಸೋಹಮಠ, ಬೊಮ್ಮನಹಳ್ಳಿ, ಗುಂಡ್ಲುಪೇಟೆ ತಾಲ್ಲೂಕು,, ಚಾಮರಾಜನಗರ ಜಿಲ್ಲೆ.

ಪಟ್ಟದಮಠ: ಬೊಮ್ಮನಹಳ್ಳಿ ಗ್ರಾಮದ ಮಧ್ಯದಲ್ಲಿ ಶ್ರೀಶೈಲ ಪೀಠದ ಶಾಖಾಮಠವಾಗಿ, ಶ್ರೀ ಪಟ್ಟದ ಮಠವು ಬೆಳೆದಿದೆ. ಕಳೆದ ಎರಡು ತಲೆಮಾರುಗಳಲ್ಲಿ ಸ್ಥಾಪನೆಯಾದ ಈ ಮಠವು ಇಲ್ಲಿನ ಭಕ್ತರ ಧಾರ್ಮಿಕ ಕ್ರಿಯಾದಿಗಳನ್ನು ನಡೆಸಿಕೊಡುತ್ತಾ ಬೆಳೆದಿದೆ. ನೂತನ ಮಠದ ಪ್ರಥಮ ಗುರುಗಳಾಗಿ ಶ್ರೀ ಪಟ್ಟದ ಶಾಂತಮಲ್ಲ ಶಿವಾಚಾರ್ಯರು ಹಂಗಳದ ಮಠಾಧೀಶರಿಂದ ಅನುಗ್ರಹ ಪಡೆದು, ೧೯೭೦ ರ ತನಕ ಅಧಿಕಾರ ನಡೆಸಿ ಸಮಾಜವನ್ನು ಸಂಘಟಿಸುವಲ್ಲಿ ಯಶಸ್ವಿಯಾಗಿದ್ದಾರೆ. ಮೊದಲ

ಗುರುಗಳು ತಮ್ಮ ಕಾಲದಲ್ಲಿ ಮಠಕ್ಕೆ ಸುಸಜ್ಜಿತವಾದ ದೊಡ್ಡ ಕಟ್ಟಡವನ್ನು ಕಟ್ಟಿಸಿದ್ದಾರೆ. ಮಠದ ಐವತ್ತುಎಕರೆ ಭೂಮಿಯನ್ನು ಸಾಗುವಳಿ ಮಾಡಿ, ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ಇವರು ೧೯೭೦ ರ ಆಗಸ್ಟ್ ಇಪ್ಪತ್ತೆಂಟರಂದು ಲಿಂಗೈಕ್ಯರಾದರು. ನಂತರ ೧೯೫೫ ರಲ್ಲಿ ಜನಿಸಿದ ಶ್ರೀ ಕರಿವೃಷಭ ರಾಜೇಂದ್ರ ಸ್ವಾಮಿಗಳು ೧೯೭೧ ರ ಜನವರಿಯಲ್ಲಿ ಪಟ್ಟಾಧಿಕಾರ ಪಡೆದು, ಮಠದ ಧಾರ್ಮಿಕ ಕಾರ್ಯಗಳ ಜೊತೆಗೆ ಗ್ರಾಮದ ಎಲ್ಲಾ ಧಾರ್ಮಿಕ ಆಚರಣೆಗಳಿಗೆ ಸ್ಪಂದಿಸುತ್ತಾ ಮಠವನ್ನು ಬೆಳೆಸಿದ್ದಾರೆ.

ವಿಳಾಸ:ಷ.ಬ್ರ.ಶ್ರೀ ಕರಿವೃಷಭ ರಾಜೇಂದ್ರಸ್ವಾಮಿಗಳು, ಶ್ರೀಪಟ್ಟದಮಠ, ಬೊಮ್ಮನಹಳ್ಳಿ,ಗುಂಡ್ಲುಪೇಟೆ ತಾ, ಚಾಮರಾಜನಗರಜಿಲ್ಲೆ.

ಮಾದಾಪಟ್ಟಣ

ಗುಂಡ್ಲುಪೇಟೆ ತಾಲ್ಲೂಕಿನ ಮಾದಾಪಟ್ಟಣವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹದಿನೈದು ಕಿ.ಮೀ. ದೂರದಲ್ಲಿದೆ. ನಂಜನಗೂಡು-ಗುಂಡ್ಲುಪೇಟೆ ರಸ್ತೆಯ ಎಡಭಾಗದ ಸೋಮಹಳ್ಳಿ ರಸ್ತೆಯಲ್ಲಿ ತಿರುಗಿ ಐದು ಕಿ.ಮೀ.ಒಳಸಾಗಿದರೆ ಸಿಗುವ ಮಾದಾಪಟ್ಟಣದಲ್ಲಿ ಶ್ರೀ ವಿರಕ್ತಮಠವು ಸ್ಥಾಪನೆಯಾಗಿದೆ.

ವಿರಕ್ತಮಠ: ಮಾದಾಪಟ್ಟಣದಲ್ಲಿ ಹಿಂದೆ ದಾಸೋಹಮಠವಾಗಿದ್ದ ಭಿಕ್ಷದಮಠವು ವಿರಕ್ತಮಠವಾಗಿ ಶ್ರೀ ಚನ್ನಬಸವಸ್ವಾಮಿಗಳ ಕಾಲದಲ್ಲಿ ಪರಿವರ್ತನೆಗೊಂಡಿದೆ. ಸುಮಾರು ಇನ್ನೂರು ವರ್ಷಗಳ ಇತಿಹಾಸ ಇರಬಹುದಾದ ಈ ಮಠದಲ್ಲಿ ಆರು ಗದ್ದುಗೆಗಳು ನೋಡಸಿಗುತ್ತಿವೆ. ಹಿಂದಿನ ಶ್ರೀ ಚನ್ನಬಸವ ಸ್ವಾಮಿಗಳ ಗದ್ದುಗೆ ಒಂದನ್ನು ಹೊರತುಪಡಿಸಿ, ಉಳಿದ ಐದು ಗದ್ದುಗೆಗಳನ್ನು ದಾಸೋಹ ಸಂಪ್ರದಾಯದ ಗುರುಗಳದ್ದೆಂದು ಗುರುತಿಸಲಾಗಿದೆ. ಆದರೆ ಅವರುಗಳ ಹೆಸರುಗಳು ಲಭ್ಯವಿಲ್ಲ.

ಪರಂಪರೆ: ಕ್ರಿಯಾಶೀಲ ವ್ಯಕ್ತಿತ್ವ ಹೊಂದಿದ್ದ ಶ್ರೀ ಚನ್ನಬಸವ ಸ್ವಾಮಿಗಳು, ಮಠದ ಸರ್ವಾಂಗೀಣ ಅಭಿವೃದ್ಧಿಯ ಹರಿಕಾರರಾಗಿ ದುಡಿದು ಮಠಕ್ಕೆ ನೂತನ ಕಟ್ಟಡವನ್ನು ನಿರ್ಮಿಸಿದರು. ಪರಂಪರೆಯ ಗುರುಗಳ ಗದ್ದುಗೆಗಳಿಗೆ ಮಂಟಪ ನಿರ್ಮಿಸಿ, ಮಠಕ್ಕೆ ಒಂದು ಹೊಸ ರೂಪು ಕೊಟ್ಟು ಆಸ್ತಿಯನ್ನು ವಿಸ್ತರಿಸಿದರು. ಇವರ ಕಾಲದಲ್ಲಿ ಮಠವು ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸಿತು. ವಿಸ್ತರಿಸಿದ ಆಸ್ತಿಯಲ್ಲಿ ಕಾಯಕ ನಿರತರಾಗಿ ತೆಂಗಿನ ತೋಟವನ್ನು ಬೆಳೆಸಿ, ಹೆಚ್ಚು ಆದಾಯ ಬರುವಂತೆ ಮಾಡಿ ಮಠಕ್ಕೆ ಸ್ಥಿರತೆಯನ್ನು ತಂದುಕೊಟ್ಟರು.

ವಿರಕ್ತಮಠವಾದರೂ ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದ ಈ ಮಠದ ಸಂಪ್ರದಾಯದಂತೆ ೧೯೭೨ ರಲ್ಲಿ ಪಟ್ಟಾಧಿ ಕಾರಿಗಳಾದ ಶ್ರೀ ಸದಾಶಿವ ಸ್ವಾಮಿಗಳು, ತಮ್ಮ ಗುರುಗಳ ಕಾಯಕ ಗುಣಗಳು ಮತ್ತು ಕ್ರಿಯಾಶೀಲ ವ್ಯಕ್ತಿತ್ವವನ್ನು ಮೈಗೂಡಿಸಿ ಕೊಂಡಿದ್ದಾರೆ. ಸ್ನಾತಕೋತ್ತರ ಪದವಿ ಪಡೆದು ಪಾಂಡಿತ್ಯವನ್ನು ಸಂಪಾದಿಸಿಕೊಂಡ ಗುರುಗಳು, ಮಠವನ್ನು ವೈಚಾರಿಕವಾಗಿ ಉನ್ನತೋನ್ನತಿಗೆ ಕೊಂಡೊಯ್ಯುತ್ತಿದ್ದಾರೆ. ಹಿಂದಿನ ಗುರುಗಳಿಗೆ ತಕ್ಕಂತೆ ಸಮರ್ಥ ಗುರುಗಳಾಗಿ ಮಠದ ಸರ್ವತೋಮುಖ ಅಭಿವೃದ್ಧಿಗೆ ಕಂಕಣತೊಟ್ಟು, ಗ್ರಾಮದ ಧಾರ್ಮಿಕ ಕ್ರಿಯಾಶೀಲತೆಗೆ ಒತ್ತುಕೊಟ್ಟು ಮಠವನ್ನು ಬೆಳೆಸಿದರು.

ಕಳೆದ ಇಪ್ಪತ್ತೆಂಟು ವರ್ಷಗಳ ಪರಿಶ್ರಮದಿಂದ ಮಠವನ್ನು ಬೆಳೆಸಿದ ಗುರುಗಳು, ತೋಟದಲ್ಲಿ ವಿಶಾಲ ಸುಸಜ್ಜಿತವಾದ ಕಟ್ಟಡವನ್ನು ನಿರ್ಮಿಸಿ ಅಲ್ಲಿಗೆ ಸ್ಥಳಾಂತರಿಸಿದ್ದಾರೆ. ಮೂಲ ಮಠದಲ್ಲಿ ನಿರ್ಮಿಸಿರುವ ತಮ್ಮ ಹಿಂದಿನ ಗುರುಗಳ ಗದ್ದುಗೆಗೆ ಮಂಟಪ ನಿರ್ಮಿಸಲಾಗಿದ್ದು ಇದನ್ನು ನವೀಕರಿಸಿದ್ದಾರೆ. ಮಠದ ಆಸ್ತಿಯನ್ನು ಮತ್ತಷ್ಟು ವಿಸ್ತರಿಸಿದ ಶ್ರೀ ಸದಾಶಿವ ಸ್ವಾಮಿಗಳು ಒಟ್ಟು ಇಪ್ಪತ್ತಾರು ಎಕರೆ ಜಮೀನಿನಲ್ಲಿ ತೆಂಗಿನ ತೋಟ ಬೆಳೆಸಿದ್ದು, ಉಳಿದ ಜಮೀನಿನಲ್ಲಿ ಬಾಳೆ ಇತರೆ ಆರ್ಥಿಕ ರೂಪದ ಬೆಳೆಗಳನ್ನು ಬೆಳೆಸಿ ಮಠವನ್ನು ಹೆಚ್ಚು ಶ್ರೀಮಂತಗೊಳಿಸಿದ್ದಾರೆ.

ಧಾರ್ಮಿಕಕಾರ್ಯಗಳು: ಕಾರ್ತೀಕ ಹಾಗೂ ಶ್ರಾವಣಮಾಸಗಳಲ್ಲಿ ವಿಶೇಷಪೂಜೆ ನಡೆಸಲಾಗುತ್ತಿದೆ. ಮಠಕ್ಕೆ ಬರುವ ಭಕ್ತರಿಗೆ ದಾಸೋಹ ಹಾಗೂ ವಸತಿಯನ್ನು ಕಲ್ಪಿಸಲಾಗುತ್ತಿದೆ. ಪ್ರತಿದಿನ ಮಠದಲ್ಲಿ ಭಜನೆ ಮಾಡಲಾಗುತ್ತಿದೆ. ಪರಂಪರೆಯ ಗುರುಗಳ ಗದ್ದುಗೆಗಳಿಗೆ ಪೂಜೆ ಮತ್ತು ಶ್ರೀ ಚನ್ನಬಸವ ಸ್ವಾಮಿಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಶ್ರೀ ಸದಾಶಿವ ಸ್ವಾಮಿಗಳಿಗೆ ಸಂಗೀತದಲ್ಲಿ ಅಭಿರುಚಿಯಿದ್ದು ಬಿಡುವಿನ ವೇಳೆಯಲ್ಲಿ ಸಂಗೀತಾಭ್ಯಾಸ ಹಾಗೂ ಧರ್ಮೋಪದೇಶವನ್ನು ಮಾಡುತ್ತಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಸದಾಶಿವ ಸ್ವಾಮಿಗಳು ಎಂ.ಎ., ಶ್ರೀವಿರಕ್ತಮಠ, ಮಾದಾಪಟ್ಟಣ,ಗುಂಡ್ಲುಪೇಟೆ ತಾ, ಚಾಮರಾಜನಗರಜಿಲ್ಲೆ.

ಮೂಡಗೂರು

ಗುಂಡ್ಲುಪೇಟೆ ತಾಲ್ಲೂಕಿನ ಮೂಡಗೂರು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಏಳು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತ ಮಠವು ಸ್ಥಾಪನೆಯಾಗಿ, ಈ ಗ್ರಾಮಕ್ಕೆ ಧಾರ್ಮಿಕ ಮೆರುಗನ್ನು ನೀಡಿದೆ.

ವಿರಕ್ತಮಠ: ಮೂಡಗೂರು ಗ್ರಾಮದಲ್ಲಿ ಸ್ಥಾಪನೆಯಾಗಿರುವ ವಿರಕ್ತಮಠವು ಜಿಲ್ಲೆಯ ಪ್ರಗತಿಪರ ಮಠಗಳಲ್ಲಿ ಒಂದಾಗಿ ನಾಡಿನಲ್ಲೇ ಹೆಸರು ಮಾಡಿದೆ. ಪುತ್ರವರ್ಗದ ಮಠವಾದ ಈ ವಿರಕ್ತಮಠವು ಊರಿನ ಉತ್ತರಕ್ಕೆ ಒಂದು ಕಿ.ಮೀ.ದೂರ ಹೊರಭಾಗದಲ್ಲಿ ಸ್ಥಾಪನೆಗೊಂಡಿದೆ.

ಶ್ರೀ ಉದ್ದಾನೇಶ್ವರ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿರಬಹುದೆಂದು ನಂಬಲಾಗಿದೆ. ಇವರು ಲೋಕಸಂಚಾರ ಮಾಡುತ್ತಾ ಮೂಡಗೂರು ಗ್ರಾಮದ ದಟ್ಟ ಅಡವಿಯ ಈ ಪ್ರಶಾಂತ ಸ್ಥಳದಲ್ಲಿ ಅನುಷ್ಠಾನಗೊಂಡು, ತಪೋಮಗ್ನರಾಗಿ ಇಲ್ಲೇ ನೆಲೆಸಿದರು. ಗುರುಗಳು ನಿತ್ಯ ದೈನಂದಿನ ಚಟುವಟಿಕೆಗಳ ಜೊತೆಗೆ ಅನೇಕ ಪವಾಡಗಳನ್ನು ಮಾಡಿ, ಭಕ್ತರನ್ನು ಧಾರ್ಮಿಕವಾಗಿ ಸರಿ ದಾರಿಗೆ ತಂದು ಮಹಾನ್‌ಯೋಗಿಗಳಾಗಿ ಮೆರೆದರು. ಭಕ್ತರು ಗುರುಗಳಿಗಾಗಿ ಮಠವನ್ನು ಕಟ್ಟಿಸಿಕೊಟ್ಟರು.

ಪರಂಪರೆ:

೧. ಶ್ರೀ ಮ.ನಿ.ಪ್ರ ಉದ್ದಾನಸ್ವಾಮಿಗಳು
೨. ಶ್ರೀ ಮ.ನಿ.ಪ್ರ ಶಿವಲಿಂಗಸ್ವಾಮಿಗಳು
೩. ಶ್ರೀ ಮ.ನಿ.ಪ್ರ ಚನ್ನಬಸವಸ್ವಾಮಿಗಳು
೪. ಶ್ರೀ ಮ.ನಿ.ಪ್ರ ಮಹಾದೇವಸ್ವಾಮಿಗಳು

ಈ ರೀತಿ ಪರಂಪರೆ ಬೆಳೆದು ಬಂದಿದೆ. ಶ್ರೀ ಉದ್ದಾನ ಸ್ವಾಮಿಗಳ ನಂತರ ಅನೇಕ ಜನ ಗುರುಗಳು ಅಧಿಕಾರ ನಡೆಸಿರಬಹುದೆಂದು ಹೇಳಲಾಗುತ್ತಿದೆ. ಈ ಬಗ್ಗೆ ಸರಿಯಾದ ಆಧಾರಗಳು ಸಿಗದೆ ಇರುವುದರಿಂದ ಮಠದ ಆಡಳಿತದಲ್ಲಿ ನಾಲ್ಕು ಜನ ಪಟ್ಟಾಧ್ಯಕ್ಷರುಗಳನ್ನು ಗುರುತಿಸಬಹುದಾಗಿದೆ. ಶ್ರೀ ಉದ್ದಾನ ಸ್ವಾಮಿಗಳ ನಂತರ ಅನೇಕ ವರ್ಷಗಳ ತರುವಾಯ ಪರಂಪರೆಯ ಮಠಾಧ್ಯಕ್ಷರಾಗಿ ಅಧಿಕಾರ ನಡೆಸಿದ ಶ್ರೀ ಶಿವಲಿಂಗ ಸ್ವಾಮಿಗಳು ಮತ್ತು ಶ್ರೀ ಚನ್ನಬಸವ ಸ್ವಾಮಿಗಳನ್ನು ಗುರುತಿಸಬಹುದಾಗಿದೆ. ಇವರುಗಳ ಕಾಯಕ ಯೋಗದಿಂದ ಮಠ ಅನೇಕ ಸುಧಾರಣೆ ಕಂಡು, ಸಮಾಜದ ಒಂದು ಭಾಗವಾಗಿ ಬೆಳೆಯಿತು.

ಶ್ರೀ ಚನ್ನಬಸವ ಸ್ವಾಮಿಗಳ ನಂತರ ಇವರ ಸಹೋದರ ಸಂಬಂಧಿ ಶ್ರೀ ಶಾಂತವೀರ ದೇವರು ಮತ್ತು ಶ್ರೀಮತಿ ಗಿರಿಜಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಮಹಾದೇವ ಸ್ವಾಮಿಗಳು ತಮ್ಮ ಹನ್ನೆರಡನೆಯ ವರ್ಷದಲ್ಲೇ ಪಟ್ಟಾಧಿಕಾರ ಪಡೆದ ುಕೊಂಡರು. ಗುರುಗಳು ವಿದ್ಯಾಭ್ಯಾಸವನ್ನು ಮುಗಿಸಿ ಮಠದ ಪೂರ್ಣಅಧಿಕಾರವನ್ನು ಕೈಗೆತ್ತಿಕೊಂಡರು. ಮಠವು ಶಿಥಿಲಗೊಂಡಿದ್ದು ಗುರುಗಳ ಕಾಯಕಯೋಗದ ಫಲವಾಗಿ ೧೯೭೫ ರಲ್ಲಿ ಬೃಹತ್ತಾದ ತೊಟ್ಟಿಯಾಕಾರದ ಹನ್ನೆರಡು ಕಂಬಗಳ ಮಠದ ಕಟ್ಟಡ ನಿರ್ಮಾಣವಾಯಿತು. ಇವರ ಕಾಲದಲ್ಲಿ ಮಠವು ಆರ್ಥಿಕವಾಗಿ ಸ್ವಾವಲಂಬನೆಯನ್ನು ಸಾಧಿಸಿತು.

ಧಾರ್ಮಿಕ ಕಾರ್ಯಗಳು: ಮೂಲ ಕರ್ತೃ ಶ್ರೀ ಉದ್ದಾನ ಸ್ವಾಮಿಗಳ ಗದ್ದುಗೆ ಹಾಗೂ ಇನ್ನೆರಡು ಗದ್ದುಗೆಗಳು ಮಠದ ನೂತನ ಕಟ್ಟಡದೊಳಗೆ ನಿರ್ಮಾಣಗೊಂಡಿದೆ. ಇವುಗಳಿಗೆ ನಿತ್ಯ ಪೂಜೆ, ಶ್ರಾವಣ, ಕಾರ್ತೀಕಮಾಸ, ಧನುರ್ಮಾಸಗಳಲ್ಲಿ ವಿಶೇಷ ಪೂಜೆ, ಶ್ರೀ ಉದ್ದಾನ ಸ್ವಾಮಿಗಳ ಹಾಗೂ ಹಿರಿಯ ಗುರುಗಳ ಆರಾಧನೆಯನ್ನು ನಡೆಸಲಾಗುತ್ತಿದೆ. ಮಠಕ್ಕೆ ಬರುವ ಭಕ್ತರಿಗೆ ದಾಸೋಹದ ವ್ಯವಸ್ಥೆಯನ್ನು ಮಾಡಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ.ಮಹಾದೇವ ಸ್ವಾಮಿಗಳು, ಶ್ರೀ ವಿರಕ್ತಮಠ,ಮೂಡಗೂರು,ಗುಂಡ್ಲುಪೇಟೆ ತಾ,ಚಾಮರಾಜನಗರ ಜಿಲ್ಲೆ.

ಸೋಮಹಳ್ಳಿ

ಗುಂಡ್ಲುಪೇಟೆ ತಾಲ್ಲೂಕಿನ ಸೋಮಹಳ್ಳಿಯು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹದಿನೈದು ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಮಧ್ಯ ಭಾಗದಲ್ಲಿ ಶ್ರೀ ವೀರಸಿಂಹಾಸನ ಶಿಲಾಮಠವು ಸ್ಥಾಪನೆಯಾಗಿದೆ.

ವೀರಸಿಂಹಾಸನ ಶಿಲಾಮಠ: ಸೋಮಹಳ್ಳಿಯಲ್ಲಿ ಸ್ಥಾಪನೆಯಾಗಿರುವ ಶ್ರೀ ವೀರಸಿಂಹಾಸನ ಶಿಲಾಮಠವು ಮಹಾತಪಸ್ವಿ ಶ್ರೀ ಗಂಗಾಧರೇಶ್ವರ ಸ್ವಾಮಿಗಳಿಂದ ಪ್ರಾರಂಭವಾಗಿ ಭಿಕ್ಷದ ಶ್ರೀ ರಾಚಪ್ಪ ಸ್ವಾಮಿಗಳಿಂದ ಮರು ಹುಟ್ಟು ಪಡೆದು ನಾಡಿನಾದ್ಯಂತ ತನ್ನ ಶಾಖೋಪ ಶಾಖೆಗಳನ್ನು ಪ್ರಾರಂಭಿಸಿ, ಹಸಿದ ಹೊಟ್ಟೆಗಳಿಗೆ ಅನ್ನ ನೀಡಿ ಬದುಕಿಗೆ ಚೈತನ್ಯ ಮೂಡಿಸಿದೆ. ಕಾಯಕ ಯೋಗದಿಂದ ಸಂಸ್ಕಾರವಂತ ಸಮಾಜವನ್ನು ರೂಪಿಸುತ್ತಿದೆ.

ಮಠ ಸ್ಥಾಪನೆ: ಪುರಾತನ ಕಾಲದಲ್ಲಿ ಶಿವಯೋಗಿ ಮಹಾಪವಾಡ ಪುರುಷ ಶ್ರೀ ಗಂಗಾಧರೇಶ್ವರರು ಲೋಕಸಂಚಾರ ಮಾಡುತ್ತಾ, ಅನೇಕ ಸ್ಥಳಗಳಲ್ಲಿ ಅನುಷ್ಠಾನಗೊಂಡು ಜಾಗೃತಗೊಳಿಸಿ ಸೋಮಹಳ್ಳಿಗೆ ಬಂದು ನೆಲಸುತ್ತಾರೆ. ಊರ ಹೊರಗಿನ ಈ ಪ್ರಶಾಂತ ಸ್ಥಳದಲ್ಲಿ ಅನುಷ್ಠಾಗೊಂಡ ಶ್ರೀ ಗಂಗಾಧರೇಶ್ವರರು ತಮ್ಮ ಲೀಲೆಗಳನ್ನು ಪ್ರದರ್ಶಿಸಿ, ಇಲ್ಲೇ ನೆಲೆಗೊಳ್ಳಲು ತೀರ್ಮಾನಿಸಿ ದೀರ್ಘ ತಪಸ್ಸನ್ನು ಆಚರಿಸತೊಡಗಿದರು. ಧೀರ್ಘಾನುಷ್ಠಾನದಿಂದ ಎಚ್ಚೆತ್ತ ಮಹಾಯೋಗಿ ಶ್ರೀ ಗಂಗಾಧರೇಶ್ವರರು ಭಕ್ತರ ಕೈಂಕಾರ್ಯವನ್ನು ನೋಡಿ ಸಂತೋಷಗೊಂಡು ಅವರ ಒತ್ತಾಸೆಯಂತೆ ಇಲ್ಲಿಯೇ ನೆಲೆಸಿ ಮಠವನ್ನು ಸ್ಥಾಪಿಸಿದರು.

ದಿನದಿಂದ ದಿನಕ್ಕೆ ಗುರುಗಳ ದರ್ಶನಕ್ಕೆ ಬರುವ ಭಕ್ತರ ಸಂಖ್ಯೆ ಹೆಚ್ಚಾದಂತೆಲ್ಲಾ ಇಲ್ಲಿನ ವ್ಯವಸ್ಥೆಗಳು ವಿಸ್ತಾರಗೊಳ್ಳ ತೊಡಗಿದವು. ಧಾರ್ಮಿಕ ಕಾರ್ಯಗಳಿಗೆ ಶಿಸ್ತುಬದ್ಧ ವ್ಯವಸ್ಥೆ ಕಲ್ಪಿಸಿದ ಶ್ರೀ ಗಂಗಾಧರೇಶ್ವರ ಸ್ವಾಮಿಗಳು ಪ್ರತಿದಿನ ಪ್ರಾತಃ ಕಾಲದಲ್ಲಿ ಪ್ರಾರ್ಥನೆ, ಸಂಜೆ ಉಪದೇಶ ನೀಡುವ ವ್ಯವಸ್ಥೆಯನ್ನು ಜಾರಿಗೆ ತಂದರು. ಅನ್ನದಾಸೋಹ ಹಾಗೂ ವಸತಿಯ ವ್ಯವಸ್ಥೆಗಳನ್ನು ಮಾಡಿ ಸೋಮಹಳ್ಳಿಯ ಖ್ಯಾತಿಯು ಸುತ್ತ ಹರಡುವಂತೆ ಮಾಡಿದರು.

ಶರಣಾದ ೬೩ಪಾಳೆಗಾರರು: ಸೋಮಹಳ್ಳಿಯ ಮಠಕ್ಕೆ ಸಾವಿರಾರು ಜನರು ಭೇಟಿಕೊಟ್ಟು ಗುರುಗಳು ನೀಡುವ ಉಪದೇಶದಿಂದ ಸಂತುಷ್ಟಗೊಂಡು ಸನ್ಮಾರ್ಗದಲ್ಲಿ ನಡೆಯತೊಡಗಿದರು. ಇದನ್ನು ಕೇಳಿ ತಿಳಿದುಕೊಂಡಿದ್ದ ಈ ನಾಡಿನ ಸುತ್ತಲಿನ ಅರವತ್ತಮೂರು ಪಾಳೆಗಾರರು ಮಹಾಯೋಗಿ ಶ್ರೀ ಗಂಗಾಧರೇಶ್ವರ ಸ್ವಾಮಿಗಳನ್ನು ದರ್ಶನ ಮಾಡಲು ಭೇಟಿಕೊಟ್ಟರು. ಮಠದ ಆವರಣಕ್ಕೆ ಬಂದ ಪಾಳೆಗಾರರು ಇಲ್ಲಿನ ಧಾರ್ಮಿಕ ವೈಭವವನ್ನು ನೋಡಿ ಬೆರಗಾಗಿ, ಗುರುಗಳ ಬಳಿಗೆ ಬಂದು ತಾವು ತಂದಿದ್ದ ಕಾಣಿಕೆಗಳನ್ನು ಸಮರ್ಪಿಸಿ ಆಶೀರ್ವಾದ ಪಡೆದರು. ಒಮ್ಮೆ ಪಾಳೆಗಾರನೊಬ್ಬನ ಪಟ್ಟದ ಆನೆ ಇದ್ದಕ್ಕಿದ್ದ ಹಾಗೆ ಸಾಯುತ್ತದೆ. ಇದನ್ನು ಅಂತರ್ ಜ್ಞಾನದಿಂದ ನೋಡಿದ ಮಹಾಯೋಗಿ ಶ್ರೀ ಗಂಗಾಧರೇಶ್ವರ ಸ್ವಾಮಿಗಳು ಪಾಳೆಗಾರನ ಬಳಿಗೆ ಹೋಗಿ ಸತ್ತ ಆನೆಗೆ ಜೀವಕೊಟ್ಟು ತಮ್ಮ ಜತೆ ಸೋಮಹಳ್ಳಿಗೆ ಕರೆತಂದರು. ಗುರುಗಳು ಪವಾಡ ಪುರುಷರಾಗಿ, ಜನರ ಮನಗೆದ್ದು ಜೀವಂತ ಸಮಾಧಿಯಾದರು. ಇವರ ಗದ್ದುಗೆಯನ್ನು ಮಠದ ಒಳಕೋಣೆಯಲ್ಲಿ ಸ್ಥಾಪಿಸಿದ್ದು ಇದಕ್ಕೆ ಬಹಳ ನಿಯಮದಿಂದ ತ್ರಿಕಾಲ ಪೂಜೆಯನ್ನು ಸಲ್ಲಿಸಲಾಗುತ್ತಿದೆ. ಗದ್ದುಗೆಯ ಬಲಬದಿಯಲ್ಲಿ ಬಸವನಮೂರ್ತಿ ಮತ್ತು ಪಾದುಕೆಗಳನ್ನು ಪ್ರತಿಷ್ಠಾಪಿಸಲಾಗಿದೆ.

ಶ್ರೀ ಗಂಗಾಧರೇಶ್ವರ ಸ್ವಾಮಿಗಳು ಜೀವಂತ ಸಮಾಧಿಯಾಗಿದ್ದರೂ, ಈ ನೆಲದಲ್ಲಿ ಇನ್ನೂ ನೆಲೆಸಿ ದೇವಮಾನವರಾಗಿ ಭಕ್ತರನ್ನು ಮುನ್ನಡೆಸುತ್ತಿದ್ದಾರೆ ಎಂಬ ನಂಬಿಕೆ ಜನಜನಿತವಾಗಿದೆ. ರಾತ್ರಿ ವೇಳೆ ಅನೇಕ ದೇವ ಮಾನವರು ಮಹಾಯೋಗಿ ಶ್ರೀ ಗಂಗಾಧರೇಶ್ವರ ಸ್ವಾಮಿಗಳಲ್ಲಿಗೆ ಬಂದು ಪೂಜೆ ಮಾಡಿಕೊಂಡು ಹೋಗುತ್ತಾರೆ ಎಂಬ ನಂಬಿಕೆಯಿಂದ ಮಠದ ಒಳಗೆ ಹೋಗಲು ದಾರಿ ಬಿಟ್ಟು ಮಲಗುತ್ತಾರೆ.

ಪರಂಪರೆ:
೧. ಷ.ಬ್ರ.ಶ್ರೀ ಗಂಗಾಧರೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಸಿದ್ಧ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಗುರುಮಲ್ಲ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಸಿದ್ಧಮಲ್ಲ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಮಹಾಯೋಗಿ ಶ್ರೀ ಗಂಗಾಧರೇಶ್ವರ ಸ್ವಾಮಿಗಳ ನಂತರ ಯಾರೂ ಉತ್ತ ರಾಧಿಕಾರಿಗಳಾಗಿ ನೇಮಕಗೊಳ್ಳದ ಅನೇಕ ವರ್ಷಗಳ ಕಾಲ ಮಠ ಖಾಲಿ ಇದ್ದರೂ ಧಾರ್ಮಿಕ ಕೆಲಸಗಳು ಜೀವಂತಿಕೆ

ಪಡೆದು ಮೊದಲಿನಂತೆ ನಡೆಯುತ್ತಿದ್ದವು. ಪಟ್ಟದದೇವರಾದ ಶ್ರೀ ಗಂಗಾಧರಸ್ವಾಮಿಗಳು ಮಠದ ಧಾರ್ಮಿಕ ಹಾಗೂ ದಾಸೋಹ ಕ್ರಿಯೆಗಳನ್ನು ನೋಡಿಕೊಂಡು ಬರುತ್ತಿದ್ದರು. ನಂತರ ಶ್ರೀ ಗುರುಮಲ್ಲೇಶ್ವರರ ಶಿಷ್ಯರಾದ ಭಿಕ್ಷದ ಶ್ರೀ ರಾಚಪ್ಪ ಸ್ವಾಮಿಗಳು ಸೋಮಹಳ್ಳಿ ಕ್ಷೇತ್ರಕ್ಕೆ ಶ್ರೀ ಸಿದ್ಧಮಲ್ಲಿಕಾರ್ಜುನ ಸ್ವಾಮಿಗಳನ್ನು ೧೯೨೨ ರ ಆಗಸ್ಟ್ ಆರರಂದು ಪಟ್ಟಾಧಿಕಾರ ಮಾಡಿಸಿ, ಮಠದ ಚಟುವಟಿಕೆಗಳು ಕ್ರಮಬದ್ಧವಾಗಿ ನಡೆಯಲು ಅವಕಾಶ ಮಾಡಿದರು. ಶ್ರೀ ಪಟ್ಟದ ಸಿದ್ಧಮಲ್ಲಿಕಾರ್ಜುನ ಸ್ವಾಮಿಗಳ ಕಾಲದಲ್ಲಿ ಹಿಂದಿನಂತೆಯೇ ದಾಸೋಹ ಕಾರ್ಯಗಳು ನಡೆಯತೊಡಗಿದವು. ಇವರು ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ ಭಕ್ತರನ್ನು ಸಂಘಟಿಸಿದರು. ಕಂತೆಭಿಕ್ಷೆ ಕಾಯಕದಿಂದ ದಾಸೋಹಕ್ರಿಯೆಯನ್ನು ಶ್ರೀಮಂತಗೊಳಿಸಿದ ಹಿರಿಯ ಚೇತನ ೧೯೫೦ರ ಮಾರ್ಚ್ ಐದರಂದು ಲಿಂಗೈಕ್ಯರಾದರು. ನಂತರ ಬಂದ ಶ್ರೀ ಪಟ್ಟದ ಗುರುಮಲ್ಲ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿದರು.

ಮಹಾ ದಾಸೋಹಿ: ಈಗಿನ ಪಟ್ಟಾಧ್ಯಕ್ಷರಾದ ಶ್ರೀ ಸಿದ್ಧಮಲ್ಲ ಶಿವಾಚಾರ್ಯ ಸ್ವಾಮಿಗಳು ೧೯೭೫ ರಲ್ಲಿ ಅಧಿಕಾರ ಪಡೆದು, ಮಠದ ಸರ್ವಾಂಗೀಣ ಅಭಿವೃದ್ಧಿಗೆ ಕಾರಣಕರ್ತರಾಗಿದ್ದಾರೆ. ಮಹಾಯೋಗಿ ಶ್ರೀ ಗಂಗಾಧರೇಶ್ವರ ಸ್ವಾಮಿಗಳ ಕಾಲದಲ್ಲಿ ಕಟ್ಟಿದ ಮಠದ ಕಟ್ಟಡವನ್ನು ಅಗತ್ಯಕ್ಕೆ ಬೇಕಾದಷ್ಟು ವಿಸ್ತರಿಸಿ ನವೀಕರಣಗೊಳಿಸಿದ್ದಾರೆ. ಶ್ರೀ ಪಟ್ಟದ ಸಿದ್ಧಮಲ್ಲ ಸ್ವಾಮಿಗಳು ಮೈಸೂರು ಪ್ರಾಂತ್ಯವನ್ನೆಲ್ಲಾ ಸುತ್ತಿ ಭಕ್ತರನ್ನು ಸಂಘಟಿಸಿ, ಶಾಖಾಮಠಗಳನ್ನು ಸ್ಥಾಪಿಸಿದ್ದಾರೆ. ಈ ಮಠಗಳಿಗೆ ಭಿಕ್ಷದ ಮರಿಗಳನ್ನು ನೇಮಿಸಿ, ಉಳ್ಳವರಿಂದ ಭಿಕ್ಷೆ ಎತ್ತಿ ಹಸಿದವರಿಗೆ ಅನ್ನ ನೀಡುವಲ್ಲಿ ನೆರವಾಗಿದ್ದಾರೆ. ಮಠವು ಸಾಮಾಜಿಕ ಹಾಗೂ ಶೈಕ್ಷಣಿಕ ಪ್ರಗತಿಯನ್ನು ಸಾಧಿಸಿಸಲು ನೆರವಾಗಿದ್ದಾರೆ.

ಶೈಕ್ಷಣಿಕ ಪ್ರಗತಿ: ಹಸಿದ ಹೊಟ್ಟೆಗೆ ಕೇವಲ ಅನ್ನ ನೀಡಿದರೆ ಸಂಸ್ಕಾರ ಬರುವುದಿಲ್ಲ ಎಂದು ಅರಿತ ಶ್ರೀ ಪಟ್ಟದ ಸಿದ್ಧಮಲ್ಲ ಸ್ವಾಮಿಗಳು, ಮನಸ್ಸಿನ ಹಸಿವನ್ನು ನೀಗಿಸುವ ಪ್ರಯತ್ನಕ್ಕೆ ಮುಂದಾಗಿ ಶ್ರೀ ಗಂಗಾಧರೇಶ್ವರ ವಿದ್ಯಾಸಂಸ್ಥೆಯನ್ನು ಪ್ರಾರಂಭಿಸಿ ಸೋಮಹಳ್ಳಿ, ಕೊತ್ತಲವಾಡಿ, ಗೋಪಾಲಪುರ, ಬಸಲುವಾಡಿ, ಕೋಣನೂರು, ಅರಳಿಕಟ್ಟೆ ಹಾಗೂ ಕಲ್ಲಂಬಾಳುಗಳಲ್ಲಿ ಪ್ರೌಢಶಾಲೆಗಳನ್ನು ಪ್ರಾರಂಭಿಸಿ, ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವಲ್ಲಿ ಯಶಸ್ವಿಯಾಗಿದ್ದಾರೆ. ಕಲಿಯುವ ಬಡಮಕ್ಕಳಿಗೆ ನೆರವಾಗಲು ಸೋಮಹಳ್ಳಿ, ಗೋಪಾಲಪುರ, ಕೊತ್ತಲವಾಡಿಯಲ್ಲಿ ಉಚಿತ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿದ್ದಾರೆ. ಸೋಮನಹಳ್ಳಿಯಲ್ಲಿ ಸಂಸ್ಕೃತ ಪಾಠಶಾಲೆ ನಡೆಸುತ್ತಿದ್ದು ಸಂಸ್ಕೃತ,ವೇದ ಹಾಗೂ ಆಗಮಗಳನ್ನು ಕಲಿಸಿಕೊಡಲಾಗುತ್ತಿದೆ.

ಧಾರ್ಮಿಕ ಕಾರ್ಯಗಳು: ಕಳೆದ ಇಪ್ಪತ್ತೈದು ವರ್ಷಗಳ ಸುದೀರ್ಘ ಆಡಳಿತ ಅನುಭವದಿಂದ ಶ್ರೀ ಸಿದ್ಧಮಲ್ಲಸ್ವಾಮಿಗಳು ಮಠದ ಮೂಲ ಕೆಲಸ ಧರ್ಮಾಚರಣೆಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು, ಪ್ರತಿವರ್ಷ ಹಿರಿಯ ಗುರುಗಳ ಆರಾಧನೆಯನ್ನು ಹಮ್ಮಿಕೊಂಡು ಹರಗುರು ಚರಮೂರ್ತಿಗಳಿಂದ ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳ ಮೇಲೆ ಉಪನ್ಯಾಸ ಕೊಡಿಸುವುದು ವಾಡಿಕೆಯಂತೆ ನಡೆಸಿಕೊಂಡು ಬಂದಿದ್ದಾರೆ. ಹುಣ್ಣಿಮೆ, ಅಮಾವಾಸ್ಯೆಗಳಲ್ಲಿ ವಿಶೇಷಪೂಜೆ ನಡೆಸಲಾಗುತ್ತಿದೆ. ಶ್ರಾವಣ,ಕಾರ್ತೀಕ ಹಾಗೂ ಧನುರ್ಮಾಸಗಳಲ್ಲಿ ವಿಶೇಷ ಪೂಜೆ ನಡೆಸಿ, ಮಠಕ್ಕೆ ಬರುವ ನೂರಾರು ಭಕ್ತರಿಗೆ ನಿತ್ಯ ದಾಸೋಹ ಕಲ್ಪಿಸಲಾಗಿದೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧಮಲ್ಲ ಶಿವಾಚಾರ್ಯ ಸ್ವಾಮಿಗಳು, ಶ್ರೀ ವೀರಸಿಂಹಾಸನ ಶಿಲಾಮಠ, ಸೋಮಹಳ್ಳಿ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ಹಂಗಳ

ಗುಂಡ್ಲುಪೇಟೆ ತಾಲ್ಲೂಕಿನ ಹಂಗಳ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಎಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠ ಮತ್ತು ಶ್ರೀ ಪಟ್ಟದಮಠ ಸ್ಥಾಪನೆಯಾಗಿ, ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ಬೆಳೆದಿವೆ.

ಹಳ್ಳದ ವಿರಕ್ತಮಠ: ಹಂಗಳದ ಪೂರ್ವಕ್ಕೆ ಒಂದು ಕಿ.ಮೀ.ದೂರದಲ್ಲಿ ತಗ್ಗಿನ ಪ್ರದೇಶದಲ್ಲಿ ಶ್ರೀ ವಿರಕ್ತಮಠವು ಸ್ಥಾಪನೆಯಾಗಿರುವುದರಿಂದ 'ಹಳ್ಳದ ವಿರಕ್ತಮಠ' ಎಂಬ ಹೆಸರು ಬಂದಿದೆ. ಚೀಲಾಳ ಸಮಯದ ಈ ಮಠದ ಸ್ಥಾಪಕರಾದ ಶ್ರೀನಿರಂಜನ ಶಿವಯೋಗಿಗಳು ಕುಣಿಗಲ್ ತಾಲ್ಲೂಕಿನ ಚಿಕ್ಕಮಸಕಲ್ಲು ಗ್ರಾಮದಿಂದ ಲೋಕಸಂಚಾರ ಕೈಗೊಂಡು ಇಲ್ಲಿಗೆ ಬಂದು, ಇಲ್ಲಿನ ಪ್ರಶಾಂತ ಸ್ಥಳದಲ್ಲಿ ನೆಲೆನಿಂತು ಅನುಷ್ಠಾನಗೊಂಡಿದ್ದರು. ದಟ್ಟಅಡವಿಯಾಗಿದ್ದ ಈ ಪ್ರದೇಶದಲ್ಲಿ ಶ್ರೀ ನಿರಂಜನ

ಶಿವಯೋಗಿಗಳು ಜನರ ಕಣ್ಣಿಗೆ ಬೀಳದಂತೆ ತಪೋ ಮಗ್ನರಾಗಿರುವ ವಿಚಾರ ಹಂಗಳದ ದನ ಕಾಯುವವನಿಗೆ ತಿಳಿದು ಊರ ಜನರಿಗೆ ವಿಷಯ ಮುಟ್ಟಿಸುತ್ತಾನೆ. ಊರಿನ ಜನ ಶಿವಯೋಗಿಗಳ ದರ್ಶನಕ್ಕೆ ಬರತೊಡಗಿದರು. ತಪಸ್ಸಿಗೆ ಭಂಗ ಉಂಟಾಗಿ ಗುರುಗಳು ಈ ಸ್ಥಳವನ್ನು ತ್ಯಜಿಸಿ ಮುಂದೆ ಹೋಗಲು ಹೊರಟಾಗ ಭಕ್ತರು ಇಲ್ಲೇ ನೆಲೆ ನಿಲ್ಲಬೇಕೆಂದು ಬೇಡಿಕೊಂಡಾಗ ಅವರ ಅಪೇಕ್ಷೆಗೆ ಒಲಿದು ಮುಂದೆ ಹೋಗುವ ತಮ್ಮ ನಿರ್ಧಾರವನ್ನು ಕೈಬಿಟ್ಟು ಇಲ್ಲೇ ನೆಲೆಸಿದರು ಎಂದು ಹೇಳುವ ಜನಪದ ಕಥೆ ಕೇಳಿಬರುತ್ತಿದೆ. ತುಮಕೂರು ಜಿಲ್ಲೆಯ ಗುಬ್ಬಿಯಲ್ಲಿ ಮಹಾ ಶಿವಯೋಗಿ ಶ್ರೀ ಅಡವಿ ಸ್ವಾಮಿಗಳ ಒಡನಾಟದಿಂದ ಹೆಚ್ಚು ಸಿದ್ಧಿ ಪಡೆದಿದ್ದ ಶ್ರೀ ನಿರಂಜನ ಶಿವಯೋಗಿಗಳು ಇಲ್ಲಿ ಮಠ ಸ್ಥಾಪಿಸಿ, ತಮ್ಮ ತಪೋಶಕ್ತಿಯಿಂದ ವೀರಶೈವ ಧರ್ಮವನ್ನು ಬೆಳೆಸಿದರು.

ಪರಂಪರೆ:

೧. ಶ್ರೀ ಮ.ನಿ.ಪ್ರ. ನಿರಂಜನ ಶಿವಯೋಗಿಗಳು
೨. ಶ್ರೀ ಮ.ನಿ.ಪ್ರ. ಮುದ್ದು ವೀರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಜಡೆಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಎರಡನೆಯ ನಿರಂಜನಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಎರಡನೆಯ ಜಡೆಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃ ಗುರುಗಳಾದ ಶ್ರೀ ನಿರಂಜನ ಸ್ವಾಮಿಗಳು ಇಲ್ಲಿ ಅನೇಕ ವರ್ಷಗಳು ನೆಲೆಸಿ, ಈ ಮಠದ ಜ್ಯೋತಿಯನ್ನು ಬೆಳಗಿಸಿ ಮುಂದೆ ಹೊರಟಿರಬಹುದೆಂದು ಅಂದಾಜಿಸಲಾಗಿದೆ. ಇವರ ನಂತರ ಬಂದ ಶ್ರೀ ಮುದ್ದವೀರ ಸ್ವಾಮಿಗಳು ಮಠದ ಅಭಿವೃದ್ಧಿಯ ಜತೆಗೆ ಧರ್ಮ ಸಾಕಾರಗೊಳ್ಳುವಂತೆ ಮಾಡಿ ಈ ಕ್ಷೇತ್ರವನ್ನು ಹೆಚ್ಚು ಪ್ರಚಾರಕ್ಕೆ ತಂದರು. ಇವರ ನಂತರ ಅಧಿಕಾರಕ್ಕೆ ಬಂದ ಶ್ರೀ ಜಡೆ ಸ್ವಾಮಿಗಳು ಸಹ ಮಹಾತಪಸ್ವಿಗಳಾಗಿ, ಹಿರಿಯ ಗುರುಗಳು ತೋರಿಸಿಕೊಟ್ಟ ಧರ್ಮ ಮಾರ್ಗದಲ್ಲಿ ಮಠವನ್ನು ಮುನ್ನಡೆಸಿ ಮಠ ಮತ್ತು ಭಕ್ತರನ್ನು ಉದ್ಧರಿಸಿ ಲಿಂಗೈಕ್ಯರಾದರು.

ಈ ಮಠದ ಪರಂಪರೆಯಲ್ಲಿ ಬರುವ ಎಲ್ಲಾ ಗುರುಗಳು ಮಹಾತಪಸ್ವಿಗಳಾಗಿ ಧರ್ಮವನ್ನು ತಮ್ಮ ಉಸಿರಾಗಿಸಿ ಕೊಂಡಿದ್ದರು. ಇಂತಹ ಮಹಾತ್ಮರ ಪರಂಪರೆಯ ನಾಲ್ಕನೆಯ ಮಠಾಧ್ಯಕ್ಷರಾದ ಶ್ರೀ ನಿರಂಜನ ಸ್ವಾಮಿಗಳು ೧೯೫೫ ರಲ್ಲಿ ಅಧಿಕಾರಕ್ಕೆ ಬಂದು, ಮೂವತ್ತೊಂಬತ್ತು ವರ್ಷಗಳ ಕಾಲ ಅವಿರತ ಶ್ರಮದಿಂದ ಸಮಾಜ ಮತ್ತು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಕಾಯಕಯೋಗಿಗಳಾದ ಶ್ರೀ ನಿರಂಜನ ಸ್ವಾಮಿಗಳು ಮಠವು ಸ್ವಾವಲಂಬನೆ ಸಾಧಿಸಲು ಕಾರಣಕರ್ತರಾದರು. ತಮ್ಮ ಜೀವಿತಾವಧಿ ಯಲ್ಲೇ ಶ್ರೀ ಜಡೆಸ್ವಾಮಿಗಳನ್ನು ಮರಿ ದೇವರಾಗಿ ಆಯ್ಕೆ ಮಾಡಿಕೊಂಡಿರುತ್ತಾರೆ. ೧೯೪೬ರ ಏಪ್ರಿಲ್ ಹತ್ತರಂದು ಜನಿಸಿದ ಶ್ರೀ ಜಡೆಸ್ವಾಮಿಗಳು ಮಠದ ಪಟ್ಟಾಧಿಕಾರ ಪಡೆದು ಹಂಗಳ, ಸಿದ್ಧಗಂಗೆ ಮಠದಲ್ಲಿ ವಿದ್ಯಾಭ್ಯಾಸವನ್ನು ಪಡೆದು, ಸಿದ್ಧಗಂಗೆಯ ಹಿರಿಯ ಚೇತನ ಶ್ರೀ ಶಿವಕುಮಾರ ಸ್ವಾಮಿಗಳ ಸೇವೆ ಮಾಡಿ, ನಂತರ ಮೈಸೂರಿನಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ೧೯೭೪ ರಲ್ಲಿ ಮಠದ ಪೂರ್ಣ ಅಧಿಕಾರ ವಹಿಸಿಕೊಂಡು, ಧಾರ್ಮಿಕ ಕಾರ್ಯಗಳನ್ನು ಮುನ್ನಡೆಸಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಕರ್ತೃಗುರುಗಳ ಗದ್ದುಗೆ ಹೊರತುಪಡಿಸಿ, ಉಳಿದ ಪರಂಪರೆಯ ಶ್ರೀ ಮುದ್ದುವೀರ ಸ್ವಾಮಿಗಳು, ಶ್ರೀ ಜಡೆ ಸ್ವಾಮಿಗಳು ಮತ್ತು ಶ್ರೀ ನಿರಂಜನ ಸ್ವಾಮಿಗಳ ಗದ್ದುಗೆಗಳು ಮಠದ ಆವರಣದಲ್ಲಿ ಸ್ಥಾಪನೆಯಾಗಿವೆ. ಇವುಗಳಿಗೆ ತ್ರಿಕಾಲ ಪೂಜೆ, ಮಹಾಶಿವರಾತ್ರಿಯಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಬಸವಜಯಂತಿ, ಗ್ರಾಮದೇವತೆಗಳ ಹಬ್ಬ ಹರಿದಿನಗಳಲ್ಲಿ ಭಕ್ತರಿಗೆ ಎಲ್ಲಾ ರೀತಿಯ ಪ್ರೋತ್ಸಾಹ, ಸಹಕಾರ ನೀಡಿ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಹಿರಿಯ ಗುರುಗಳ ಆರಾಧನೆಯನ್ನು ಫೆಬ್ರವರಿ ತಿಂಗಳಲ್ಲಿ ಅದ್ಧೂರಿಯಾಗಿ ನಡೆಸಿ ಅಂದು ಸಾಹಿತ್ಯ ಹಾಗೂ ಸಾಂಸ್ಕೃತಿಕ ವಿಚಾರಗಳ ಮೇಲೆ ಬೆಳಕು ಚೆಲ್ಲುವ ಉಪನ್ಯಾಸ, ಉಪದೇಶವನ್ನು ಏರ್ಪಡಿಸಲಾಗುತ್ತಿದೆ.

ಆಸ್ತಿವಂತ ಮಠ: ರಾಜಾಶ್ರಯ ಸಿಗದಿದ್ದರೂ ನಾಲ್ಕನೆಯ ಮಠಾಧ್ಯಕ್ಷರಾದ ಶ್ರೀ ನಿರಂಜನ ಸ್ವಾಮಿಗಳು ಕ್ರಿಯಾತ್ಮಕಶಕ್ತಿಯಿಂದ ಮಠಕ್ಕೆ ಅರವತ್ತು ಎಕರೆ ಜಮೀನನ್ನು ಸಂಪಾದಿಸಿದ್ದರು. ಈ ಭೂಮಿಗೆ ನೀರಾವರಿ ಸೌಕರ್ಯ ಕಲ್ಪಿಸಿ ಬಾಳೆ ಮತ್ತು ತೆಂಗು

ಬೆಳೆದು ಮಠಕ್ಕೆ ಅಧಿಕ ಆದಾಯ ಬರುವಂತೆ ಮಾಡಿದ್ದರು. ಹಿರಿಯ ಸ್ವಾಮಿಗಳ ಗುಣಗಳನ್ನು ಮೈಗೂಡಿಸಿಕೊಂಡಿರುವ ಈಗಿನ ಎರಡನೆಯ ಶ್ರೀ ಜಡೆ ಸ್ವಾಮಿಗಳು ಮಠವನ್ನು ಉನ್ನತ ಸ್ಥಿತಿಗೆ ಕೊಂಡೊಯ್ದಿದ್ದಾರೆ.

ಶೈಕ್ಷಣಿಕ ಸೇವೆ: ಶ್ರೀ ಜಡೆಸ್ವಾಮಿಗಳು ೧೯೯೦ ರಲ್ಲಿ ಶ್ರೀ ನಿರಂಜನ ಶಿವಯೋಗಿಗಳ ಹೆಸರಿನಲ್ಲಿ ವಿದ್ಯಾ ಸಂಸ್ಥೆಯನ್ನು ಪ್ರಾರಂಭಿಸಿ ಒಂದು ನರ್ಸರಿಶಾಲೆ, ಕಿರಿಯ ಪ್ರಾಥಮಿಕಶಾಲೆ, ಒಂದು ಹಿರಿಯ ಪ್ರಾಥಮಿಕಶಾಲೆ, ಒಂದು ಪ್ರೌಢಶಾಲೆಯನ್ನು ಪ್ರಾರಂಭಿಸಿದ್ದಾರೆ. ಬಡಮಕ್ಕಳಿಗೆ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿ, ಗ್ರಾಮಾಂತರ ಮಕ್ಕಳ ಕಲಿಕೆಗೆ ನೆರವಾಗಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಜಡೆಸ್ವಾಮಿಗಳು, ಶ್ರೀ ಹಳ್ಳದ ಪಟ್ಟದಮಠ, ಹಂಗಳ, ಗುಂಡ್ಲುಪೇಟೆ ತಾ, ಚಾಮರಾಜನಗರ ಜಿಲ್ಲೆ.

ಪಟ್ಟದಮಠ: ಹಂಗಳ ಗ್ರಾಮದ ಮಧ್ಯದಲ್ಲಿ ಸ್ಥಾಪಿತವಾಗಿರುವ ಪಟ್ಟದಮಠವು ಶ್ರೀಶೈಲ ಪೀಠದ ಶಾಖಾಮಠವಾಗಿ ಇಲ್ಲಿನ ಕೇಂದ್ರ ಸ್ಥಾನವಾಗಿ ಬೆಳೆದಿದೆ. ಹಂಗಳದಲ್ಲಿ ಹಿಂದೆ ಮಾಗಲನಾಡು ಕೋಟೆ ಎಂದು ಪ್ರಸಿದ್ಧವಾದ ಕೋಟೆಯೊಂದಿತ್ತು. ಇಲ್ಲಿನ ಪಾಳೆಗಾರ, ದೊಡ್ಡದೇವರಾಜ ಒಡೆಯರ ಕಾಲದಲ್ಲಿ ಚಿಕ್ಕದೇವರಾಜ ಒಡೆಯರು ಬಹಳ ತುಂಟಾಟ ಮಾಡುತ್ತಿದ್ದರೆಂದು ಮಾಗಲಕೋಟೆಯಲ್ಲಿಟ್ಟು ಜನಸಂಪರ್ಕ ತಪ್ಪಿಸಿ ಧಾರ್ಮಿಕ ಸಂಸ್ಕಾರ ನೀಡಿ ಅವರಲ್ಲಿದ್ದ ಅತಿಯಾದ ತುಂಟಾಟವನ್ನು ಶಮನಗೊಳಿಸಲು ಧಾರ್ಮಿಕ ವಿಚಾರಗಳಲ್ಲಿ ಆಪಾರ ಜ್ಞಾನವನ್ನು ಸಂಪಾದಿಸಿಕೊಂಡಿದ್ದ ಜಂಗಮಮೂರ್ತಿ ಶ್ರೀ ಶಾಂತ ಬಸವಲಿಂಗ ಒಡೆಯರಿಂದ ಮಾರ್ಗದರ್ಶನ ಕೊಡಿಸುವ ಸಲುವಾಗಿ ಕೋಟೆಯಲ್ಲಿ ಮಠ ಕಟ್ಟಿಸಿಕೊಡುತ್ತಾರೆ.

ಮಠ ಸ್ಥಾಪನೆ: ಚಿಕ್ಕದೇವರಾಜ ಒಡೆಯರಿಗೆ ಸಂಸ್ಕಾರ ಕಲಿಸಿ ತುಂಟಾಟ ಮಾಡುವುದನ್ನು ಹಂತಹಂತವಾಗಿ ನಿಲ್ಲಿಸುತ್ತಾ ಬಂದ ಶ್ರೀ ಶಾಂತಬಸವಲಿಂಗ ಸ್ವಾಮಿಗಳು, ಚಿಕ್ಕದೇವರಾಜ ಒಡೆಯರನ್ನು ಸಂಪೂರ್ಣವಾಗಿ ನಯವಿನಯತೆಯ ಮೂರ್ತಿಯನ್ನಾಗಿ ಪರಿವರ್ತಿಸಿ ಪಾಳೆಗಾರ ಕೊಟ್ಟ ಜವಾಬ್ದಾರಿಯನ್ನು ವರ್ಷ ಪೂರ್ಣಗೊಳ್ಳುವುದರೊಳಗೆ ಪೂರೈಸಿದರು. ಈ ಪವಾಡ ನೋಡಿದ ಪಾಳೆಗಾರ ದೊಡ್ಡದೇವರಾಜ ಒಡೆಯ ಹೊರಕೆರೆ, ಬಾಚಳ್ಳಿ ಹಾಗೂ ಹಂಗಳದ ಪಶ್ಚಿಮಕ್ಕಿರುವ ಹಂಗಳಪುರವನ್ನು ಉಂಬಳಿಯಾಗಿ ನೀಡಿ, ಮಠ ಬೆಳೆಯಲು ಸಹಾಯಕರಾಗಿದ್ದರು ಎಂದು ಹೇಳಲಾಗುತ್ತಿದೆ.

ಸ್ಥಳಾಂತರ: ಕಾಲಾನಂತರ ಮಾಗಲನಾಡುಕೋಟೆ ಹಾಗೂ ಕೋಟೆಯಲ್ಲಿದ್ದ ಮಠವು ಶಿಥಿಲಗೊಂಡಾಗ, ಮಠದ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹಂಗಳ ಗ್ರಾಮಕ್ಕೆ ಸ್ಥಳಾಂತರಿಸಲಾಯಿತು. ಅಂದು ಊರು ಮಧ್ಯದಲ್ಲಿ ತನ್ನ ಘನತೆಗೆ ತಕ್ಕಂತೆ ಅರವತ್ತಾರು ಅಂಕಣಗಳ ಕಲ್ಲು ಮಠ ಸ್ಥಾಪನೆಗೊಂಡು ಧಾರ್ಮಿಕ ಕೆಲಸ ನಡೆಸಿದೆ. ನಂತರ ಮುಸ್ಲಿಮರ ದಾಳಿಗೆ ತುತ್ತಾಗಿ ಮಠ ನಾಶವಾಯಿತು.'ಮಠದ ಕಟ್ಟಡ ಹೋದರೇನಂತೆ ಘಟ ಉಳಿದಿದೆ'ಅರವತ್ತಾರರ ಬದಲಿಗೆ ಆರುಅಂಕಣ ಇರಲಿ ಎಂದು, ಅದೇ ಜಾಗದಲ್ಲಿ ಮಠ ಪುನಃ ತನ್ನ ಧಾರ್ಮಿಕ ಚಟುವಟಿಕೆಯನ್ನು ಪ್ರಾರಂಭಿಸಲಾಯಿತು ಎಂದು ಹೇಳಲಾಗುತ್ತಿದೆ.

ಪರಂಪರೆ:

೧. ಷ.ಬ್ರ.ಶ್ರೀ ಶಾಂತಬಸವಲಿಂಗ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಶಾಂತವೀರ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಆಧಾರಗಳ ಕೊರತೆಯಿಂದ ಪರಂಪರೆಯ ಗುರುಗಳ ಕೆಲವು ಹೆಸರುಗಳನ್ನು ದಾಖಲಿಸಲಾಗಿದೆ. ಉಳಿದ ಎರಡು ಜನ ಸ್ವಾಮಿಗಳ ಹೆಸರು ತಿಳಿದು ಬಂದಿಲ್ಲ. ೧೯೫೫ ರಲ್ಲಿ ಲಿಂಗೈಕ್ಯರಾದ ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ತಮ್ಮ ಆಡಳಿತ ಕಾಲದಲ್ಲಿ ಆರು ಅಂಕಣದ ಮೂಲ ಮಠವನ್ನು ಭವ್ಯವಾಗಿ ಕಟ್ಟಿಸಿದ್ದಾರೆ. ಕಾಯಕಯೋಗಿಗಳಾಗಿ, ಮಹಾ ತಪಸ್ವಿಗಳಾಗಿ ಜನರನ್ನು ಸನ್ಮಾರ್ಗದಲ್ಲಿ ನಡೆಸಿ ಮಠ ಮತ್ತು ಸಮಾಜವನ್ನು ಮುನ್ನಡೆಸಿದರು. ೧೯೩೧ ರಲ್ಲಿ ಜನಿಸಿದ ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳು ಇಂಟರ್‌ಮೀಡಿಯಟ್ ಓದು ಮುಗಿಸಿದ ಮೇಲೆ ಪುತ್ರವರ್ಗದ ಈ ಮಠಕ್ಕೆ ಆಯ್ಕೆಗೊಂಡರು. ಶ್ರೀ ಚನ್ನಬಸವ ಸ್ವಾಮಿಗಳು ಜೀವಿತಾವಧಿಯಲ್ಲೇ ತಮ್ಮ ಉತ್ತರಾಧಿಕಾರಿಗಳನ್ನು ನೇಮಿಸಿಕೊಂಡು ಅಧಿಕಾರ ನೀಡಿ, ಮಠದ ಜವಾಬ್ದಾರಿಯಿಂದ ಮುಕ್ತರಾಗಿ ಶಿವಧ್ಯಾನದಲ್ಲಿ ಮಗ್ನರಾಗಿ ೧೯೫೫ ರಲ್ಲಿ ಲಿಂಗೈಕ್ಯರಾದರು. ಶ್ರೀ ಶಾಂತವೀರ ಶಿವಾಚಾರ್ಯ

ಸ್ವಾಮಿಗಳು ಮಠವನ್ನು ಅಭಿವೃದ್ಧಿ ಪಡಿಸಿ, ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಸ್ಥಾಪಕ ಗುರುಗಳ ಆರಾಧನೆಯನ್ನು ನಡೆಸಲಾಗುತ್ತಿದೆ. ಶ್ರಾವಣ ಮತ್ತು ಕಾರ್ತೀಕ ಮಾಸಗಳಲ್ಲಿ ವಿಶೇಷ ಪೂಜೆ ನಿರಂತರವಾಗಿ ನಡೆದು ಬಂದಿದೆ. ತಮಿಳುನಾಡು, ಕೇರಳರಾಜ್ಯಗಳಲ್ಲಿ ಭಕ್ತರ ಸಂಖ್ಯೆಹೆಚ್ಚಾಗಿದ್ದು ಅವರ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಂಡು ಧಾರ್ಮಿಕಸಂಸ್ಕಾರ ನೀಡುವ ಮೂಲಕ ತನ್ನ ಧಾರ್ಮಿಕಕಾರ್ಯಗಳನ್ನು ಮುನ್ನಡೆಸಿಕೊಂಡು ಬರುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಪಟ್ಟದಮಠ, ಹಂಗಳ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರಜಿಲ್ಲೆ.

ಹಂಗಳಪುರ

ಗುಂಡ್ಲುಪೇಟೆ ತಾಲ್ಲೂಕಿನ ಹಂಗಳಪುರವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಐದು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ಪಟ್ಟದ ಮಠವು ಸ್ಥಾಪನೆಯಾಗಿದೆ.

ಪಟ್ಟದ ಮಠ: ಹಂಗಳಪುರ ಗ್ರಾಮದ ಮಧ್ಯ ಭಾಗದಲ್ಲಿ ಸುತ್ತೂರು ಶಾಖಾಮಠವಾದ ಶ್ರೀ ಪಟ್ಟದ ಮಠವು ಸ್ಥಾಪನೆಯಾಗಿ, ಇಲ್ಲಿನ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ಪರಂಪರೆ: ಪುತ್ರವರ್ಗ ಸಂಪ್ರದಾಯದ ಈ ಮಠಕ್ಕೆ ಶ್ರೀ ಬಸವಲಿಂಗದೇವರು, ಶ್ರೀ ಚನ್ನಬಸವ ಸ್ವಾಮಿಗಳು ಹಾಗೂ ಈಗಿನ ಶ್ರೀ ಚನ್ನಬಸವ ಸ್ವಾಮಿಗಳು ಪಟ್ಟಾಧಿಕಾರ ಪಡೆದ ದಾಖಲೆಗಳು ಸಿಗುತ್ತಿವೆ. ಉಳಿದಂತೆ ಈ ಮಠದ ಸ್ಥಾಪಕರು ಯಾರು, ಯಾರ ಕಾಲದಲ್ಲಿ ಮಠ ಸ್ಥಾಪನೆಯಾಗಿದೆ ಎಂಬುದರ ಬಗ್ಗೆ ಆಧಾರಗಳಿಲ್ಲ. ಮಠದಲ್ಲಿ ಎರಡು ಗದ್ದುಗೆಗಳು ನೋಡಸಿಗುತ್ತಿವೆ.

ಶ್ರೀ ಬಸವಲಿಂಗ ಸ್ವಾಮಿಗಳ ಕಾಲದಲ್ಲಿ ಮಠದ ಕಟ್ಟಡ ನಿರ್ಮಾಣಗೊಂಡಿದೆ. ನಂತರ ಶ್ರೀ ಚನ್ನಬಸವ ಸ್ವಾಮಿಗಳ ಕಾಲದಲ್ಲಿ ಮಠ ಸುಸ್ಥಿತಿಯಲ್ಲಿ ರೂಪುಗೊಂಡು ಆರ್ಥಿಕ ಸದೃಢತೆ ಪಡೆದಿದೆ. ಮೂರನೆಯ ಮಠಾಧೀಶರಾದ ಶ್ರೀ ಚನ್ನಬಸವ ಸ್ವಾಮಿಗಳು ೧೯೪೩ ರಲ್ಲಿ ಜನಿಸಿ, ೧೯೭೦ ರಲ್ಲಿ ಪಟ್ಟಾಧಿಕಾರ ಪಡೆದು ಮಠವನ್ನು ಧಾರ್ಮಿಕವಾಗಿ ಮುನ್ನಡೆಸುತ್ತಾ ಮಠದ ಆಸ್ತಿಯಾಗಿರುವ ನಲವತ್ತು ಎಕರೆ ಜಮೀನನ್ನು ಬೇಸಾಯಕ್ಕೆ ಅಣಿಗೊಳಿಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು, ಶ್ರೀ ಪಟ್ಟದಮಠ, ಹಂಗಳಪುರ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

❑

ಚಾಮರಾಜನಗರ ತಾಲ್ಲೂಕು

ಚಾಮರಾಜನಗರ ಜಿಲ್ಲೆಯ ಒಂದು ತಾಲ್ಲೂಕಾಗಿ ರೂಪುಗೊಂಡಿರುವ ಚಾಮರಾಜನಗರ ತಾಲ್ಲೂಕು ನೀರಾವರಿ ಹಾಗೂ ಒಣಬೇಸಾಯ ಎರಡನ್ನು ಒಳಗೊಂಡಿದೆ. ಈ ತಾಲ್ಲೂಕಿನಲ್ಲಿ ಶ್ರೀಮಂತಿಕೆ ಮತ್ತು ಬಡತನ ಎರಡು ಸಮಾನವಾಗಿವೆ. ಇಂತಹ ವಿವಿಧತೆಯನ್ನು ಹೊಂದಿರುವ ಈ ತಾಲ್ಲೂಕಿನಲ್ಲಿ ವೀರಶೈವ ಧರ್ಮ ಪ್ರಮುಖವಾಗಿ ಬೆಳೆದಿದೆ. ಇಲ್ಲಿ ಹದಿಮೂರು ಮಠಗಳು ಅಸ್ತಿತ್ವದಲ್ಲಿದ್ದು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಅಂಡರಕಳ್ಳಿ

ಚಾಮರಾಜನಗರ ತಾಲ್ಲೂಕಿನ ಅಂಡರಕಳ್ಳಿಯು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಎಂಟು ಕಿ.ಮೀ.ದೂರದಲ್ಲಿದೆ. ಹಿಂದೆ ಚೋಳರ ಕಾಲದಲ್ಲಿ 'ನಾಲ್ಪಪುರಿ'ಎಂದು ಹೆಸರು ಪಡೆದಿದ್ದು, ಈಗ 'ಅಂಡರಕಳ್ಳಿ'ಯಾಗಿ ರೂಪಾಂತರ ಪಡೆದಿದೆ. ಈ ಗ್ರಾಮದಲ್ಲಿ ಶ್ರೀಶೈಲ ಪೀಠದ ಶಾಖಾಮಠವು ಸ್ಥಾಪನೆಯಾಗಿ ಇಲ್ಲಿನ ಧಾರ್ಮಿಕ ಚಟುವಟಿಕೆಯ ಕೇಂದ್ರವಾಗಿ ರೂಪುಗೊಂಡಿದೆ.

ಶ್ರೀಶೈಲ ಶಾಖಾಮಠ: ಅಂಡರಕಳ್ಳಿಯ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಮದ್‌ಗಿರಿರಾಜ ಸೂರ್ಯಸಿಂಹಾಸನ ಮಠವನ್ನು ಉತ್ತರದ ಕಡೆಯಿಂದ ಬಂದ ಕಾಯಕ ಸ್ವಾಮಿಗಳು ಪ್ರಾರಂಭ ಮಾಡಿದ್ದಾರೆ. ಲೋಕಸಂಚಾರ ಕೈಗೊಂಡಿದ್ದ ಸ್ವಾಮಿಗಳು ಈ ಗ್ರಾಮಕ್ಕೆ ಬಂದು ಗುಡಿಸಲು ಕಟ್ಟಿಕೊಂಡು ವಾಸಿಸತೊಡಗಿದರು. ಪ್ರತಿನಿತ್ಯ ಕೆರೆಯ ಹತ್ತಿರದ ಪಾದ್ರಿಮರದಲ್ಲಿ ಬ್ರಾಹ್ಮೀಮುಹೂರ್ತದಲ್ಲಿ ಮೊಳಕಾಲುಗಳ ಸಹಾಯದಿಂದ ಮರದಲ್ಲಿ ತಲೆಕೆಳಗೆ ಜೋತುಬಿದ್ದು ಕೈಮುಗಿದು ಧ್ಯಾನ ಮಾಡುವುದೇ ಇವರ ಕಾಯಕವಾಗಿತ್ತು. ಈ ಸಂದರ್ಭದಲ್ಲಿ ಭಕ್ತನೊಬ್ಬ ಮೂರುಕಾಸಿನ ನಾಣ್ಯವನ್ನು ಗುರುಗಳಿಗೆ ಕಾಣಿಕೆಯಾಗಿ ನೀಡಿಹೋಗುತ್ತಿದ್ದ. ಗುರುಗಳು ಧ್ಯಾನದಿಂದ ಎಚ್ಚೆತ್ತು ಕಾಣಿಕೆಯಾಗಿ ಬಂದ ಮೂರು ಕಾಸನ್ನು ತೆಗೆದುಕೊಂಡು ಮಠಕ್ಕೆ ಬಂದು ದಾಸೋಹಕ್ಕೆ ಬೇಕಾಗುವ ಸಾಮಾನು ಪಡೆದು ಪ್ರಸಾದ ಕ್ರಿಯೆಗೆ ಅಣಿಗೊಳಿಸುತ್ತಿದ್ದರು. ಈ ರೀತಿಯ ಕಾಯಕ ನಡೆಸುತ್ತಿದ್ದರಿಂದ ಇವರಿಗೆ '**ಶ್ರೀ ಕಾಯಕ ಸ್ವಾಮಿ**'ಗಳೆಂದು ರೂಢಿಗತವಾಗಿ ಕರೆಯತೊಡಗಿ ಅದೇ ಹೆಸರು ಶಾಶ್ವತವಾಯಿತು. ಗುರುಗಳು ನಡೆಸುತ್ತಿದ್ದ ಧಾರ್ಮಿಕ ಕಾರ್ಯಗಳಿಂದ ಸಂಸ್ಕಾರ ಪಡೆದ ಭಕ್ತರು ಮಠವನ್ನು ಸ್ಥಾಪಿಸಿ, ಕಟ್ಟಡವನ್ನು ನಿರ್ಮಿಸಿ, ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದರು.

ಪರಂಪರೆ:

೧. ಷ.ಬ್ರ.ಶ್ರೀ ಕಾಯಕ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಶಿವಾನಂದ ಪಂಚಾಕ್ಷರಿ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಪರ್ವತ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಪಂಚಾಕ್ಷರಿ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃ ಗುರುಗಳು ಈ ಮಠವನ್ನು ಅಭಿವೃದ್ಧಿಗೊಳಿಸಿ ಲಿಂಗೈಕ್ಯರಾದ ಮೇಲೆ ಈ ಮಠಕ್ಕೆ ಎರಡನೆಯ ಗುರುಗಳಾಗಿ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಪಟ್ಟಾಧಿಕಾರಕ್ಕೆ ಬಂದರು. ಇವರು ಲೋಕಸಂಚಾರ ಮಾಡುತ್ತಾ ಐಶಾರಾಮದ ಜೀವನ ಸಾಗಿಸುತ್ತಿದ್ದುದನ್ನು ನೋಡಿದ ಭಕ್ತರು ಗುರುಗಳ ಮೇಲೆ ಅಸಮಾಧಾನ ಗೊಂಡು, ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳ ಕಿರಿಯ ಸಹೋದರರಾದ ಶ್ರೀ ಶಿವಾನಂದ ಪಂಚಾಕ್ಷರಿ ಸ್ವಾಮಿಗಳನ್ನು ಪಟ್ಟಾಧಿ ಕಾರಕ್ಕೆ ತರುತ್ತಾರೆ. ಈ ವಿಚಾರ ಕೇಳಿದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಪುನಃ ಊರಿಗೆ ಬರದೆ ಲೋಕಸಂಚಾರ ಕೈಗೊಂಡು ಯರಗಂಬಳಿಯಲ್ಲಿ ನೆಲೆಸಿ ಅಲ್ಲೇ ಲಿಂಗೈಕ್ಯರಾದರು.

ಶ್ರೀ ಶಿವಾನಂದ ಪಂಚಾಕ್ಷರಿ ಸ್ವಾಮಿಗಳು ಪಟ್ಟಾಧಿಕಾರ ಪಡೆದು ಮಠದ ಧಾರ್ಮಿಕ ಚಟುವಟಿಕೆಗಳನ್ನು ಚುರುಕುಗೊಳಿಸಿ ಧರ್ಮ ಪ್ರಸಾರ ಕೈಗೊಂಡರು. ಭಕ್ತರು ಮೊದಲಿನಂತೆ ಮಠದ ಕಡೆ ಮುಖ ಮಾಡುವಂತೆ ಮಾಡಿದರು. ಈ

ಸಂದರ್ಭವನ್ನು ಬಳಸಿಕೊಂಡ ಶ್ರೀ ಶಿವಾನಂದ ಪಂಚಾಕ್ಷರಿ ಸ್ವಾಮಿಗಳು ಮಠಕ್ಕೆ ಗುಡಿಸಲು ತೆಗೆದು ಕಟ್ಟಡವನ್ನು ಕಟ್ಟಿಸಿದರು. ಅಲ್ಲದೆ ಮಠದ ಅಧೀನದಲ್ಲಿದ್ದ ಜಮೀನಿನಲ್ಲಿ ಬಾವಿ ತೆಗೆದು ನೀರಾವರಿ ಸೌಕರ್ಯ ಮಾಡಿಸಿಕೊಂಡು, ಅಭಿವೃದ್ಧಿಪಡಿಸಿ ಬೆಳೆಯನ್ನು ತೆಗೆಯತೊಡಗಿದರು. ಇವರು ಮಠ ಸ್ಥಾಪನೆಯ ಹೆಗ್ಗುರುತಾಗಿ ನಾಲ್ಕು ದಿಕ್ಕುಗಳಿಗೂ ಲಿಂಗಮುದ್ರೆ ಕಲ್ಲುಗಳನ್ನು ಪ್ರತಿಷ್ಠಾಪಿಸಿದರು. ಮಠದಲ್ಲಿ ಅನೇಕ ಅಭಿವೃದ್ಧಿ ಕೆಲಸಗಳನ್ನು ಮಾಡಿ ಸಾಧಕರಾಗಿ, ಮಠದ ಇತಿಹಾಸದಲ್ಲಿ ಮರೆಯಲಾಗ ದಂತಹ ಚೇತನವಾಗಿ ಬೆಳಗಿದರು.

ಸಾಧನೆಯ ಶಿಖರ ಮುಟ್ಟಿದ್ದ ಶ್ರೀಶಿವಾನಂದ ಪಂಚಾಕ್ಷರಿ ಶಿವಾಚಾರ್ಯ ಸ್ವಾಮಿಗಳು, ತಮ್ಮ ಜೀವಿತಾವಧಿಯಲ್ಲೇ ವೀರಶೈವ ಆಗಮಪಂಡಿತರಾದ ಶ್ರೀ ಪರ್ವತ ಶಾಸ್ತ್ರಿಗಳನ್ನು ಪಟ್ಟಾಧಿಕಾರಕ್ಕೆ ತರುವ ಪ್ರಯತ್ನದಲ್ಲಿದ್ದರು. ಶ್ರೀ ಪರ್ವತ ಶಾಸ್ತ್ರಿಗಳಿಗೆ ಕಾವಿ ತೊಡಿಸಿ ಮಠಕ್ಕೆ ಬೆಳಕು ತರುವ ಪ್ರಯತ್ನ ನಡೆಯುತ್ತಿರುವಂತೆಯೇ ಶ್ರೀ ಶಿವಾನಂದ ಪಂಚಾಕ್ಷರಿ ಸ್ವಾಮಿಗಳು ಲಿಂಗೈಕ್ಯರಾದರು.ಇದರಿಂದ ಬಹಳ ಮನನೊಂದ ಶ್ರೀ ಪರ್ವತ ಶಾಸ್ತ್ರಿಗಳು ಯೋಗ ತಾ ಬಯಸಿದರೆ ಬರುವಂತಹದ್ದಲ್ಲ. ಇದಕ್ಕೆ ಇಚ್ಛಾಶಕ್ತಿಬೇಕು ಎಂದು ಅರಿತು, ತಮ್ಮ ಸಹೋದರರ ವಂಶ ಕುಡಿಯಾಗಿದ್ದ ಹದಿಮೂರು ವರ್ಷದ ಪಂಚಾಕ್ಷರಿ ದೇವರಿಗೆ ೧೯೭೨-೭೩ ರಲ್ಲಿ ಸುತ್ತೂರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು, ಸಿದ್ಧಗಂಗೆಯ ಹಿರಿಯ ಚೇತನ ಶ್ರೀ ಶಿವ ಕುಮಾರ ಸ್ವಾಮಿಗಳ ಸಮ್ಮುಖದಲ್ಲಿ ಪಟ್ಟಾಧಿಕಾರದ ಅನುಗ್ರಹವನ್ನು ಕೊಡಿಸುತ್ತಾರೆ. ಹದಿಮೂರನೆಯ ವರ್ಷಕ್ಕೆ ಪಟ್ಟಾಧಿಕಾರಕ್ಕೆ ಬಂದ ಪಟ್ಟದ ಶ್ರೀ ಪಂಚಾಕ್ಷರಿ ಶಿವಾಚಾರ್ಯ ಸ್ವಾಮಿಗಳು ಸಿದ್ಧಗಂಗೆಯಲ್ಲಿ ಸತತವಾಗಿ ಹದಿನಾರು ವರ್ಷಗಳ ಕಾಲ ವಿದ್ಯಾಭ್ಯಾಸ ಮಾಡಿ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತ ಎಂ.ಎ.ಪದವಿಯನ್ನು ಪಡೆದು ಮಠದ ಪೂರ್ಣ ಜವಾಬ್ದಾರಿಯನ್ನು ಕೈಗೆತ್ತಿಕೊಂಡು, ಮಠವನ್ನು ಅಭಿವೃದ್ಧಿಪಡಿಸಿದರು.

ಕಾಯಕಯೋಗಿ: ಶ್ರೀ ಪಟ್ಟದ ಪಂಚಾಕ್ಷರಿ ಶಿವಾಚಾರ್ಯ ಸ್ವಾಮಿಗಳು ತಮ್ಮ ಹಿಂದಿನ ಗುರುಗಳು ಗಳಿಸಿಕೊಟ್ಟು ಹೋಗಿರುವ ಆಸ್ತಿ ವ್ಯರ್ಥವಾಗಬಾರದೆಂದು, ಕಾಯಕದಿಂದ ಮುಕ್ತಿ ಎಂದು ನಂಬಿ ಮಠದ ಇಪ್ಪತ್ತು ಎಕರೆ ಜಮೀನಿನಲ್ಲಿ ಕಾಯಕ ಯೋಗಿಗಳಾಗಿ ದುಡಿದು ಅಭಿವೃದ್ಧಿಪಡಿಸಿದ್ದಾರೆ. ಮಠದ ಹಳೆಯ ಕಟ್ಟಡದ ಶಿಥಿಲಗೊಂಡ ಭಾಗವನ್ನು ತೆಗೆಸಿ ನವೀಕರಣಗೊಳಿಸಿ ವಿಸ್ತರಿಸಿಕೊಂಡಿರುವ ಗುರುಗಳು, ಊರಿನ ಗಜಿಬಿಜಿಯಿಂದ ದೂರ ಇರಲು ಪ್ರಯತ್ನಿಸಿ ಸದಾ ತೋಟದಲ್ಲಿ ನೆಲೆಸಿ ಕಾಯಕ ಯೋಗದಿಂದ ಶಿವನನ್ನು ಒಲಿಸಿಕೊಳ್ಳುವ ಮಾರ್ಗವನ್ನು ಕಂಡುಕೊಂಡಿದ್ದಾರೆ. ಕಲಿತ ವಿದ್ಯೆಯು ಸದುಪಯೋಗವಾಗಬೇಕೆಂದು ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ, ಧರ್ಮೋಪದೇಶಗಳನ್ನು ನೀಡಿ ಧರ್ಮ ಜಾಗೃತಿಯನ್ನುಂಟು ಮಾಡುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಗ್ರಾಮದ ಹೊರಭಾಗದ ಪಾದ್ರಿಮರದ ಕೆಳಗೆ ಸ್ಥಾಪಿತವಾಗಿರುವ ಮಠದ ಮೂಲ ಕರ್ತೃ ಗುರುಗಳಾದ ಶ್ರೀ ಕಾಯಕ ಸ್ವಾಮಿಗಳ ಗದ್ದುಗೆಗೆ ನಿತ್ಯ ಪೂಜೆಯ ವ್ಯವಸ್ಥೆ ಮಾಡಲಾಗಿದೆ. ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳ ಗದ್ದುಗೆ ಯಳಂದೂರು ತಾಲ್ಲೂಕಿನ ಯರಗಂಬಳಿ ಮಹಾಂತ ದೇವರ ಜಮೀನಿನಲ್ಲಿ ನಿರ್ಮಿಸಲಾಗಿದೆ. ಶ್ರೀ ಶಿವಾನಂದ ಪಂಚಾಕ್ಷರಿ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಯನ್ನು ಮಠದಲ್ಲಿ ನಿರ್ಮಿಸಲಾಗಿದೆ. ಪಟ್ಟಾಧಿಕಾರ ಆಗದಿದ್ದರೂ ಮಠದ ಒಂದು ಅಂಗವಾಗಿ ಮಠದ ಅಭಿವೃದ್ಧಿಯಲ್ಲಿ ಪಾಲ್ಗೊಂಡ ಶ್ರೀ ಪರ್ವತ ಶಾಸ್ತ್ರಿಗಳ ಗದ್ದುಗೆಯನ್ನು ಮಠದ ಬಾವಿಯ ಹತ್ತಿರ ನಿರ್ಮಿಸಲಾಗಿದೆ. ಮಠದ ಆವರಣದಲ್ಲಿರುವ ಈ ಗದ್ದುಗೆಗಳಿಗೆ ನಿತ್ಯ ಪೂಜೆ, ಕಾರ್ತೀಕ, ಶ್ರಾವಣ ಮಾಸಗಳಲ್ಲಿ ವಿಶೇಷ ಪೂಜೆ ಮತ್ತು ಹಿರಿಯ ಗುರುಗಳ ಆರಾಧನಾ ಕಾರ್ಯ ನಡೆಸಿ, ಅನ್ನ ಹಾಗೂ ಜ್ಞಾನ ದಾಸೋಹವನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಪಂಚಾಕ್ಷರಿ ಶಿವಾಚಾರ್ಯ ಸ್ವಾಮಿಗಳು, ಶ್ರೀಶೈಲ ಶಾಖಾಮಠ, ಅಂಡರಕಳ್ಳಿ, ಚಾಮರಾಜನಗರ ತಾಲ್ಲೂಕು.

ಅರಕಲವಾಡಿ

ಚಾಮರಾಜನಗರ ತಾಲ್ಲೂಕಿನ ಅರಕಲವಾಡಿಯು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತೊಂದು ಕಿ.ಮೀ.ದೂರದಲ್ಲಿದೆ. ಈ ಗ್ರಾಮದಲ್ಲಿ ಶ್ರೀ ಸಿದ್ಧಮಲ್ಲೇಶ್ವರ ದಾಸೋಹಮಠ ಸ್ಥಾಪನೆಯಾಗಿದೆ.

ಪಟ್ಟದಮಠ: ಅರಕಲವಾಡಿಯಲ್ಲಿ ಸೋಮಹಳ್ಳಿ ಶಿಲಾಮಠದ ಶಾಖಾಮಠವಾದ ಪಟ್ಟದಮಠವು ಅಸ್ತಿತ್ವದಲ್ಲಿದೆ. ದೊಡ್ಡ

ರಾಮಪೇಟೆಯ ಶ್ರೀ ಮಹಾಂತದೇವರು ಮತ್ತು ಶ್ರೀಮತಿ ಶಿವರುದ್ರಮ್ಮನವರ ಪುತ್ರರಾಗಿ ಜನಿಸಿದ ಶ್ರೀ ವೇದಮೂರ್ತಿ ವೀರಭದ್ರ ದೇವರಿಗೆ ಶ್ರೀ ಬಸವಣ್ಣ ಸ್ವಾಮಿಗಳೆಂದು ಅಭಿಧಾನ ಮಾಡಿ, ೧೯೯೭ ರ ಆಗಸ್ಟ್ ಇಪ್ಪತ್ತೇಳರಂದು ಸೋಮಹಳ್ಳಿ ಮಠದ ಶ್ರೀ ಸಿದ್ಧಮಲ್ಲ ಸ್ವಾಮಿಗಳ ಅನುಗ್ರಹದಿಂದ ಅಧಿಕಾರಕ್ಕೆ ಬಂದರು. ಶ್ರೀ ಬಸವಣ್ಣ ದೇವರು ಮಠದ ಅಧಿಕಾರ ವಹಿಸಿಕೊಂಡ ಮೇಲೆ ಭಿಕ್ಷದ ಮರಿಗಳನ್ನು ನೇಮಕ ಮಾಡಿಕೊಂಡು, ದಾಸೋಹ ಕ್ರಿಯೆಯನ್ನು ನಡೆಸುತ್ತಾ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿದ್ದಾರೆ.

ವಿಳಾಸ: ಶ್ರೀ ಬಸವಣ್ಣ ಸ್ವಾಮಿಗಳು, ಶ್ರೀ ಸಿದ್ಧಮಲ್ಲೇಶ್ವರ ದಾಸೋಹಮಠ, ಅರಕವಾಡಿ, ಚಾಮರಾಜನಗರ ತಾಲ್ಲೂಕು.

ಉಗನೇದಹುಂಡಿ

ಚಾಮರಾಜನಗರ ತಾಲ್ಲೂಕಿನ ಉಗನೇದಹುಂಡಿಯು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿನೆಂಟು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠವು ಅಸ್ತಿತ್ವದಲ್ಲಿದೆ.

ಗುರುಮಲ್ಲೇಶ್ವರ ದಾಸೋಹ ಮಠ: ಉಗನೇದಹುಂಡಿಯಲ್ಲಿ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠವು ೧೯೫೨ ರಲ್ಲಿ ಶ್ರೀ ಮಹಾಂತ ಸ್ವಾಮಿಗಳಿಂದ ಪ್ರಾರಂಭವಾಗಿದೆ. ದೇವನೂರಿನ ಶ್ರೀ ತೋಂಟದಾರ್ಯ ಸ್ವಾಮಿಗಳಿಂದ ಅನುಗ್ರಹ ಪಡೆದು, ಪಟ್ಟಾಧಿಕಾರ ಪಡೆದ ಶ್ರೀ ಮಹಾಂತ ಸ್ವಾಮಿಗಳು ಕಂತೆ ಭಿಕ್ಷದಿಂದ ಪ್ರಸಾದ ಸಂಗ್ರಹಿಸಿ, ಮಠದಲ್ಲಿ ಕಲಿಯುವ ಮಕ್ಕಳಿಗೆ ಹಾಗೂ ಮಠಕ್ಕೆ ಬರುವ ಭಕ್ತರಿಗೆ ಪ್ರಸಾದ ನೀಡಿ, ದಾಸೋಹ ಕಾಯಕವನ್ನು ಮಾಡುತ್ತಾ ಮಠವನ್ನು ಮುನ್ನಡೆಸುತ್ತಿದ್ದಾರೆ.

ವಿಳಾಸ: ಶ್ರೀ ಮಹಾಂತ ಸ್ವಾಮಿಗಳು, ಶ್ರೀ ಗುರುಮಲ್ಲೇಶ್ವರ ದಾಸೋಹ ಮಠ, ಉಗನೇದಹುಂಡಿ, ಚಾಮರಾಜನಗರ ತಾಲ್ಲೂಕು.

ಕಟ್ನವಾಡಿ

ಚಾಮರಾಜನಗರ ತಾಲ್ಲೂಕಿನ ಕಟ್ನವಾಡಿಯು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹದಿನೈದು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಗುರುಮಲ್ಲೇಶ್ವರ ದಾಸೋಹಮಠವು ಅಸ್ತಿತ್ವದಲ್ಲಿದೆ.

ದಾಸೋಹಮಠ: ಕಟ್ನವಾಡಿ ಗ್ರಾಮದ ಮಧ್ಯಭಾಗದಲ್ಲಿ ೧೯೨೫ರಲ್ಲಿ ಶ್ರೀ ಗುರುಮಲ್ಲೇಶ್ವರ ದಾಸೋಹಮಠವು ಸ್ಥಾಪನೆಯಾಗಿದೆ. ದೇವನೂರಿನ ಭಿಕ್ಷದ ಶ್ರೀ ರಾಚಪ್ಪ ಸ್ವಾಮಿಗಳಿಂದ ಪ್ರಾರಂಭವಾದ ಈ ದಾಸೋಹ ಮಠವು, ಭಿಕ್ಷದ ಗುರುಗಳು ನಡೆಸಿದ ಕಾಯಕಯೋಗದಿಂದ ಆಸ್ತಿವಂತ ಮಠವಾಗಿ ರೂಪುಗೊಂಡಿದೆ. ಭಿಕ್ಷದ ಗುರುಗಳು ಪ್ರತಿನಿತ್ಯ ಮಧ್ಯಾಹ್ನ ಮತ್ತು ರಾತ್ರಿ ವೇಳೆ ಕಂತೆಭಿಕ್ಷೆ ಕಾಯಕ ಮಾಡುವ ಮೂಲಕ ಅನ್ನದಾಸೋಹ ನಡೆಸಿ ಅಭಿವೃದ್ಧಿಗೊಳಿಸಿದ್ದಾರೆ. ಈ ಮಠವು ಪರಂಪರೆಯಲ್ಲಿ ಬಂದಂತಹ ಶ್ರೀ ರಾಚಪ್ಪ ಸ್ವಾಮಿಗಳ ಕಾಲದಲ್ಲಿ ಪುಸ್ತಕ ಪ್ರಕಾಶನ ಸಂಸ್ಥೆಯನ್ನು ಪ್ರಾರಂಭಿಸಿ, ಸಾಹಿತ್ಯ ಕ್ಷೇತ್ರಕ್ಕೂ ತನ್ನ ಸೇವೆಯನ್ನು ಸಲ್ಲಿಸಿದೆ.

ಈಗ ಶ್ರೀ ಪ್ರಭುಸ್ವಾಮಿಗಳು ಮಠದ ಆಡಳಿತ ನೋಡಿಕೊಂಡು, ಭಿಕ್ಷದ ಮರಿಗಳನ್ನು ನೇಮಿಸಿಕೊಂಡು ಕಾಯಕ ಮುಂದುವರೆಸಿದ್ದಾರೆ. ಅಲ್ಲದೆ ಸುಗ್ಗಿಯ ಕಾಲದಲ್ಲಿ ಸುತ್ತಲ ಹಳ್ಳಿಗಳಲ್ಲಿ ಭಿಕ್ಷೆಎತ್ತಿ ವರ್ಷಕ್ಕೆ ಬೇಕಾಗುವಷ್ಟು ದವಸ ಧಾನ್ಯವನ್ನು ಸಂಗ್ರಹಿಸುತ್ತಾರೆ. ಮಠದ ಆಸ್ತಿಯಲ್ಲಿ ಹೆಚ್ಚು ಆದಾಯ ಬರುವಂತೆ ಮಾಡಿ, ಮಠವನ್ನು ಹೆಚ್ಚು ಅಭಿವೃದ್ಧಿಪಡಿಸಿದ್ದಾರೆ.

ವಿಳಾಸ: ಶ್ರೀ ಪ್ರಭುಸ್ವಾಮಿಗಳು, ಶ್ರೀ ದಾಸೋಹ ಮಠ, ಕಟ್ನವಾಡಿ, ಕೊತ್ತಲವಾಡಿ ಅಂಚೆ, ಚಾಮರಾಜನಗರ ತಾಲ್ಲೂಕು.

ಕುದೇರು

ಚಾಮರಾಜನಗರ ತಾಲ್ಲೂಕಿನ ಕುದೇರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಹದಿನೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಶಂಕರದೇವರಮಠ, ಶ್ರೀ ಹೊಸಮಠ ಹಾಗೂ ಶ್ರೀ ಗುರುಮಲ್ಲೇಶ್ವರ ದಾಸೋಹಮಠ ಎಂಬ ಮೂರು ಮಠಗಳು ಇದ್ದು, ವೀರಶೈವ ಧರ್ಮವನ್ನು ಅಭಿವೃದ್ಧಿಪಡಿಸಿ ಕುದೇರ ಗ್ರಾಮವನ್ನು ಧಾರ್ಮಿಕವಾಗಿ ಶ್ರೀಮಂತಗೊಳಿಸಿವೆ.

ಶಂಕರದೇವರಮಠ: ಸುತ್ತೂರು ಶಿವರಾತ್ರೀಶ್ವರ ಮಠದ ಶಾಖಾಮಠವಾದ ಕುದೇರಿನ ಶಂಕರ ದೇವರ ಮಠವು ಪುತ್ರವರ್ಗದ ಸಂಪ್ರದಾಯ ಮಠವಾಗಿ ಕಳೆದ ಒಂದು ಶತಮಾನದಿಂದ ಧಾರ್ಮಿಕ ಕ್ರಿಯೆಗಳನ್ನು ಮಾಡುತ್ತಾ ಬಂದಿದೆ. ಶ್ರೀ ಶಂಕರ ದೇವರು ಈ ಮಠವನ್ನು ಸ್ಥಾಪನೆ ಮಾಡಿದ್ದರಿಂದ ಈ ಮಠಕ್ಕೆ 'ಶಂಕರದೇವರ ಮಠ' ಎಂದು ಕರೆಯುತ್ತಾರೆ. ಇವರ ನಂತರ ಶ್ರೀ ಮಹಾಂತ ಸ್ವಾಮಿಗಳು ಅಧಿಕಾರಕ್ಕೆ ಬಂದು, ಮಠವನ್ನು ಧಾರ್ಮಿಕವಾಗಿ ಶ್ರೀಮಂತಗೊಳಿಸಿದರು.

ಮಠದ ಮೂರನೆಯ ಪಟ್ಟಾಧಿಕಾರಿಗಳಾಗಿ ೧೯೭೬ ರಲ್ಲಿ ಅಧಿಕಾರಕ್ಕೆ ಬಂದ ಶ್ರೀ ನಟರಾಜ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡು, ಮೈಸೂರಿನ ಗುರುಕುಲದಲ್ಲಿ ಸಂಸ್ಕೃತ, ವೇದ ಹಾಗೂ ಆಗಮಗಳನ್ನು ಕಲಿತಿದ್ದಾರೆ. ಗ್ರಾಮದ ಭಕ್ತರು ಗದ್ದುಗೆ ಪೂಜೆ ಹಾಗೂ ಮಠದ ಧಾರ್ಮಿಕ ಕೆಲಸ ಕಾರ್ಯಗಳಿಗೆ ನೆರವಾಗಲು ಎರಡು ಎಕರೆ ಫಲವತ್ತಾದ ಭೂಮಿಯನ್ನು ನೀಡಿದ್ದಾರೆ. ಈ ಆಸ್ತಿಯಲ್ಲಿ ಬೆಳೆಯನ್ನು ಬೆಳೆದು ಅಧಿಕ ಲಾಭ ಪಡೆಯುತ್ತಿದ್ದಾರೆ.

ವಿಳಾಸ:ಷ.ಬ್ರ.ಶ್ರೀ ನಟರಾಜ ಸ್ವಾಮಿಗಳು, ಶ್ರೀ ಶಂಕರದೇವರಮಠ, ಕುದೇರ,ಚಾಮರಾಜನಗರ ತಾ, ಚಾಮರಾಜನಗರ ಜಿಲ್ಲೆ.

ಹೊಸಮಠ: ಕುದೇರ ಗ್ರಾಮದ ಮಧ್ಯಭಾಗದಲ್ಲಿರುವ ಹೊಸಮಠವು, ಉಜ್ಜಯಿನಿ ಪೀಠದ ಶಾಖಾಮಠವಾಗಿ ಬೆಳೆದಿದ್ದು ಶಿಷ್ಯವರ್ಗದ ಪರಂಪರೆಯನ್ನು ಹೊಂದಿದೆ. ಶ್ರೀ ಹೊಸಮಠಕ್ಕೆ ಮೊದಲು 'ಅರಿಶಿಣ ಮಠ 'ಎಂದು ಕರೆಯಲಾಗುತ್ತಿತ್ತು. ಮಠದ ಎರಡನೆಯ ಪಟ್ಟಾಧ್ಯಕ್ಷರಾದ ಶ್ರೀ ಜಯದೇವ ಸ್ವಾಮಿಗಳ ತಾಯಿಯವರು ಶಿಥಿಲಗೊಂಡ ಮಠದ ಕಟ್ಟಡ ತೆಗೆಸಿ ಹೊಸಮಠವನ್ನು ಕಟ್ಟಿಸಿದಾಗಿನಿಂದ 'ಹೊಸಮಠ' ಎಂದು ಹೆಸರು ಬಂದಿದೆ.

ಪುರಾತನ ಕಾಲದ ಈ ಮಠವು ಅಸ್ತಿತ್ವ ಕಳೆದುಕೊಳ್ಳುತ್ತಿದ್ದ ಸಂದರ್ಭದಲ್ಲಿ ಪರಮೇಶ್ವರಪ್ಪ ಸ್ವಾಮಿಗಳು ಶ್ರೀ ಚನ್ನಬಸಪ್ಪ ಶಿವಾಚಾರ್ಯ ಸ್ವಾಮಿಗಳನ್ನು ಕರೆತಂದು, ಪಟ್ಟಾಧಿಕಾರ ಮಾಡಿ ಮಠದ ಜ್ಯೋತಿ ಬೆಳಗುವಂತೆ ಮಾಡಿದರು. ಪಟ್ಟಾಧಿಕಾರಕ್ಕೆ ಬಂದು ಹೊಸದಾಗಿ ಎಲ್ಲವನ್ನೂ ರೂಪಿಸಿಕೊಂಡ ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ನಾಡನ್ನೆಲ್ಲಾ ಸುತ್ತಿ ಭಕ್ತರಲ್ಲಿ ಧರ್ಮಜಾಗೃತಿಯನ್ನು ಉಂಟುಮಾಡಿದರು. ಹತ್ತಾರು ವರ್ಷ ಸಂಚಾರದಲ್ಲಿಯೇ ತೊಡಗಿ ಅನೇಕರಿಗೆ ಲಿಂಗದೀಕ್ಷೆ ನೀಡಿ ಧರ್ಮವನ್ನು ಬೆಳೆಸಿದರು. ಗುರುಗಳು ಅಪಾರ ಭಕ್ತ ಸಮೂಹದಿಂದ ಮಠವನ್ನು ಹೆಚ್ಚು ಅಭಿವೃದ್ಧಿಪಡಿಸಿದರು.

ಪರಂಪರೆ:

೧. ಷ.ಬ್ರ.ಶ್ರೀ ಚನ್ನಬಸಪ್ಪ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಜಯದೇವಸ್ವಾಮಿಗಳು
೩. ಷ.ಬ್ರ.ಶ್ರೀ ನಿತ್ಯಾನಂದಸ್ವಾಮಿಗಳು
೪. ಷ.ಬ್ರ.ಶ್ರೀ ಗುರುಸ್ವಾಮಿಗಳು
೫. ಷ.ಬ್ರ.ಶ್ರೀ ಜಯದೇವ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಮೊದಲ ಗುರುಗಳಾದ ಶ್ರೀ ಚನ್ನಬಸಪ್ಪ ಶಿವಾಚಾರ್ಯ ಸ್ವಾಮಿಗಳು ದೀರ್ಘ ಕಾಲ ಆಡಳಿತ ನಡೆಸಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಎರಡನೆಯವರಾಗಿ ಅಧಿಕಾರಕ್ಕೆ ಬಂದ ಶ್ರೀ ಜಯದೇವ ಸ್ವಾಮಿಗಳು, ಹಿರಿಯ ಗುರುಗಳಂತೆ ಭಕ್ತರ ಸಂಪರ್ಕ ಇಟ್ಟುಕೊಂಡು ಮಠವನ್ನು ಬೆಳೆಸಿ ಲಿಂಗೈಕ್ಯರಾದರು. ನಂತರ ಶ್ರೀ ನಿತ್ಯಾನಂದ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದು ಧರ್ಮನಿಷ್ಠರಾಗಿ ಪಾರಮಾರ್ಥಿಕದ ಕಡೆ ಹೆಚ್ಚು ಒಲವು ತೋರಿ ಮಠವನ್ನು ಬೆಳೆಸಿದರು. ಇವರ ನಂತರ ಶ್ರೀ ಗುರುಸ್ವಾಮಿಗಳು ಮಠದ ಆಡಳಿತ ವಹಿಸಿಕೊಂಡು ಕಾರ್ಯ ನಿರ್ವಹಿಸಿ ಲಿಂಗೈಕ್ಯರಾದರು. ನಂತರ ಮಠವು ಉತ್ತರಾಧಿಕಾರಿಗಳಿಲ್ಲದೆ ಸುಮಾರು ಹತ್ತು ವರ್ಷ ಖಾಲಿ ಉಳಿಯಿತು. ನಂತರ ಧಾರವಾಡ ಜಿಲ್ಲೆ ಶಿರಹಟ್ಟಿ ತಾಲ್ಲೂಕಿನ ಕಿಗ್ಗಾವಿ ಗ್ರಾಮದ ಶ್ರೀ ಜಯದೇವ ಶಿವಾಚಾರ್ಯರನ್ನು ಕರೆದು ತಂದು ಉಜ್ಜಯಿನಿ ಜಗದ್ಗುರುಗಳ ಸಾನಿಧ್ಯದಲ್ಲಿ ೧೯೬೦ರ ನವಂಬರ್ ಒಂದರಂದು ಪಟ್ಟಾಧಿಕಾರ ಮಾಡಿದರು. ಖಾಲಿ ಇದ್ದ ಮಠದಲ್ಲಿ ಪುನಃ ಜ್ಯೋತಿ ಬೆಳಗತೊಡಗಿತು. ಕಾಲಕ್ರಮೇಣ ಇವರೂ ಸಹ ಮಠದಲ್ಲಿ ನೆಲೆಸದೆ ಹೋದ ಕಾರಣ ಮಠವು ಖಾಲಿ ಉಳಿದಿದೆ.

ವಿಳಾಸ: ಶ್ರೀ ಹೊಸಮಠ, ಕುದೇರು, ಚಾಮರಾಜನಗರ ತಾಲ್ಲೂಕು.

ಗುರುಮಲ್ಲೇಶ್ವರ ದಾಸೋಹಮಠ: ಕುದೇರು ಗ್ರಾಮದ ಮಧ್ಯದಲ್ಲಿ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠವು ೧೯೬೦ ರಲ್ಲಿ ಪ್ರಾರಂಭವಾಗಿದೆ. ದೇವನೂರಿನ ಶಾಖೆಯ ಈ ಮಠಕ್ಕೆ ಶ್ರೀ ಮಹಾದೇವ ಸ್ವಾಮಿಗಳು ಭಿಕ್ಷದ ಗುರುಗಳಾಗಿ ನೇಮಕಗೊಂಡಿದ್ದು, ದಿನದ ಎರಡು ವೇಳೆ ಕಂತೆ ಭಿಕ್ಷ ಕಾಯಕ ಮಾಡಿ ದಾಸೋಹ ಕ್ರಿಯೆಯನ್ನು ನಡೆಸುತ್ತಿದ್ದಾರೆ.

ವಿಳಾಸ: ಶ್ರೀ ಭಿಕ್ಷದ ಮಹಾದೇವ ಸ್ವಾಮಿಗಳು,ಶ್ರೀ ಗುರುಮಲ್ಲೇಶ್ವರ ದಾಸೋಹಮಠ,ಕುದೇರು, ಚಾಮರಾಜನಗರ ತಾಲ್ಲೂಕು.

ಕೊತ್ತಲವಾಡಿ

ಚಾಮರಾಜನಗರ ತಾಲ್ಲೂಕಿನ ಕೊತ್ತಲವಾಡಿಯು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿನೈದು ಕಿ.ಮೀ ದೂರದಲ್ಲಿದೆ. ಇಲ್ಲಿ ದಾಸೋಹ ಮಠವು ಅಸ್ತಿತ್ವದಲ್ಲಿದೆ.

ದಾಸೋಹ ಮಠ: ಕೊತ್ತಲವಾಡಿ ಗ್ರಾಮದ ಪೂರ್ವಭಾಗದ ಕೆರೆಯ ಪಕ್ಕದಲ್ಲಿ ದಾಸೋಹ ಮಠವು ಸ್ಥಾಪನೆಯಾಗಿದೆ. ೧೯೩೨ ರಲ್ಲಿ ಸೋಮಹಳ್ಳಿಯ ಶ್ರೀ ಸಿದ್ಧಮಲ್ಲಿಕಾರ್ಜುನ ಸ್ವಾಮಿಗಳು ಕೊತ್ತಲವಾಡಿಯಲ್ಲಿ ಮಠವನ್ನು ಪ್ರಾರಂಭ ಮಾಡಿ ಶ್ರೀ ಚನ್ನಬಸವ ಸ್ವಾಮಿಗಳನ್ನು ನೇಮಿಸಿದ್ದರು. ಇವರು ೧೯೩೨ ರಿಂದ ೧೯೮೮ ರವರೆಗೆ ನಿರಂತರವಾಗಿ ಕಂತೆಭಿಕ್ಷ ಕಾಯಕ ಮಾಡಿ ಮಠವನ್ನು ಪುರೋಭಿವೃದ್ಧಿಗೆ ತಂದಿದ್ದಲ್ಲದೆ ಹದಿನೈದು ಎಕರೆ ಜಮೀನನ್ನು ರೂಢಿಸಿಕೊಟ್ಟರು. ದಾಸೋಹದಲ್ಲಿ ನಿಷ್ಠೆಯುಳ್ಳ ಗುರುಗಳು ೧೯೮೮ ರಲ್ಲಿ ಲಿಂಗೈಕ್ಯರಾದರು.

ಈಗ ಸೋಮಹಳ್ಳಿಯ ಶ್ರೀ ಗುರುಸ್ವಾಮಿಗಳು ಮಠದ ಧಾರ್ಮಿಕ ಚಟುವಟಿಕೆಗಳನ್ನು ಮುನ್ನಡೆಸಿಕೊಂಡು ಬರುತ್ತಿದ್ದಾರೆ. ಕಂತೆಭಿಕ್ಷದ ಮರಿಯನ್ನು ನೇಮಿಸಿಕೊಂಡು ಹಿರಿಯ ಗುರುಗಳ ಕಾಲದಲ್ಲಿ ನಡೆಯುತ್ತಿದ್ದ ದಾಸೋಹವನ್ನು ಈಗಲೂ ನಡೆಸುತ್ತಿದ್ದಾರೆ. ವರ್ಷಕ್ಕೊಮ್ಮೆ ಸುಗ್ಗಿಕಾಲದಲ್ಲಿ ಭಿಕ್ಷಕ್ಕೆ ಹೋಗಿ, ವರ್ಷಕ್ಕೆ ಬೇಕಾಗುವಷ್ಟು ದವಸದಾನ್ಯವನ್ನು ಸಂಗ್ರಹಿಸಿಕೊಳ್ಳಲಾಗುತ್ತಿದೆ.

ಧಾರ್ಮಿಕ ಕೆಲಸ: ಶ್ರೀ ಚನ್ನಬಸವ ಸ್ವಾಮಿಗಳ ವಾರ್ಷಿಕ ಆರಾಧನೆ ನಡೆಸಿ, ಅಂದು ಸೇರುವ ಸಹಸ್ರಾರು ಜನ ಭಕ್ತರಿಗೆ ಪ್ರಸಾ ದದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ನಿತ್ಯ ಹಿರಿಯ ಗುರುಗಳ ಗದ್ದುಗೆಪೂಜೆ ಹಾಗೂ ಗ್ರಾಮದ ಭಕ್ತರ ಮನೆಗಳಲ್ಲಿ ಧರ್ಮಕ್ರಿಯೆಗಳಲ್ಲಿ ಪಾಲ್ಗೊಂಡು ಬಿನ್ನ ತೀರಿಸುವುದು. ಈ ರೀತಿ ಧರ್ಮದ ಆಚರಣೆಯನ್ನು ಮಾಡಲಾಗುತ್ತಿದೆ. ಮಠದ ಜಮೀನನ್ನು ಅಭಿವೃದ್ಧಿಪಡಿಸಿ ಬೆಳೆ ಬೆಳೆಯಲಾಗುತ್ತಿದೆ. ಇದರಿಂದ ಬರುವ ಆದಾಯವನ್ನು ಬಳಸಿಕೊಂಡು ಕಲ್ಯಾಣ ಮಂಟಪ ವನ್ನು ನಿರ್ಮಿಸಲಾಗಿದೆ. ಕಲಿಯುವ ಬಡ ಮಕ್ಕಳಿಗೆ ವಿದ್ಯಾರ್ಥಿನಿಲಯ, ಉಚಿತ ಊಟ ಹಾಗೂ ವಸತಿಯನ್ನು ಕಲ್ಪಿಸಲಾಗಿದೆ.

ವಿಳಾಸ: ಶ್ರೀ ಗುರುಸ್ವಾಮಿಗಳು, ಶ್ರೀ ದಾಸೋಹ ಮಠ, ಕೊತ್ತಲವಾಡಿ, ಚಾಮರಾಜನಗರ ತಾಲ್ಲೂಕು.

ಚಾಮರಾಜನಗರ

ಜಿಲ್ಲಾ ಕೇಂದ್ರ ಸ್ಥಳವಾದ ಚಾಮರಾಜನಗರದಲ್ಲಿ ಶ್ರೀ ಸಿದ್ಧಮಲ್ಲೇಶ್ವರ ವಿರಕ್ತಮಠವು, ೧೯೫೮ ರಲ್ಲಿ ಪ್ರಾರಂಭವಾಗಿ ಜಿಲ್ಲೆಯ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಪ್ರಗತಿಯ ಕೇಂದ್ರ ಬಿಂದುವಾಗಿ ಬೆಳೆದಿದೆ.

ಸಿದ್ಧಮಲ್ಲೇಶ್ವರ ವಿರಕ್ತಮಠ: ೧೯೫೮ ರಲ್ಲಿ ಚಾಮರಾಜನಗರದಲ್ಲಿ ವೀರಶೈವರ ಧಾರ್ಮಿಕ ಕ್ಷೇತ್ರದ ಆವಶ್ಯಕತೆ ಇರುವುದನ್ನು ಮನಗಂಡು, ಸೋಮಹಳ್ಳಿಯ ಶ್ರೀ ವೀರಸಿಂಹಾಸನಾ ಶಿಲಾ ಮಠಾಧ್ಯಕ್ಷರಾದ ಪಟ್ಟದ ಶ್ರೀ ಸಿದ್ಧ ಮಲ್ಲಿಕಾರ್ಜುನ ಸ್ವಾಮಿಗಳು ಮಠ ಕಟ್ಟಲು ನಿರ್ಧಾರ ಕೈಗೊಂಡರು. ಈ ನಿರ್ಧಾರ ಕೇವಲ ಕೆಲವೇ ದಿನಗಳಲ್ಲಿ ಕೈಗೂಡುತ್ತದೆ ಎಂದು ಯಾರೂ ನಂಬಿರಲಿಲ್ಲ.

ತಮಿಳುನಾಡಿನ ಕಾಟೇರಿಯಲ್ಲಿ ೧೯೧೯ ರಂದು ಜನಿಸಿದ ಶ್ರೀ ಬಸವರಾಜ ಸ್ವಾಮಿಗಳನ್ನು ನೂತನ ಮಠದ ಉತ್ತರಾಧಿಕಾರಿಗಳ ನೇಮಕಮಾಡಿ, ಬೆಂಗಳೂರಿನ ಶ್ರೀ ಸರ್ಪಭೂಷಣ ಮಠದ ಶ್ರೀ ಮಹಾದೇವ ಸ್ವಾಮಿಗಳು ಮತ್ತು ಕನಕಪುರದ ಶ್ರೀ ನಿರ್ವಾಣ ಸ್ವಾಮಿಗಳ ಉತ್ಸವವನ್ನು ನಗರದಲ್ಲಿ ಅದ್ಧೂರಿಯಾಗಿ ನೆರವೇರಿಸಿ, ೧೯೫೮ ರ ಡಿಸೆಂಬರ್

ಎಂಟರಂದು ನೂತನ ಮಠಕ್ಕೆ ಶ್ರೀ ಬಸವರಾಜ ಸ್ವಾಮಿಗಳಿಗೆ ಪಟ್ಟಾಧಿಕಾರ ಮಾಡಲಾಯಿತು.

ಮೊದಲ ಗುರು: ನೂತನ ಮಠದ ಮೊದಲ ಪಟ್ಟಾಧ್ಯಕ್ಷರಾಗಿ ಅಧಿಕಾರ ಪಡೆದ ಶ್ರೀ ಬಸವರಾಜ ಸ್ವಾಮಿಗಳು ಆಡಳಿತ ವಹಿಸಿಕೊಂಡು, ಧಾರ್ಮಿಕ ಕಾರ್ಯಗಳ ಜೊತೆಗೆ ಮಠದ ಅಭಿವೃದ್ಧಿಯ ಕಡೆಗೆ ಗಮನ ಹರಿಸಿದರು.ಸುತ್ತಲಿನ ಗ್ರಾಮದ ಜನರು ತಮ್ಮ ಕೆಲಸ ಕಾರ್ಯಗಳ ನಿಮಿತ್ತ ನಗರಕ್ಕೆ ಬಂದರೆ ನಮ್ಮ ಮಠ ಇದೆ ಎಂಬ ಅಭಿಮಾನದಿಂದ ಊಟ,ವಸತಿಗಾಗಿ ಮಠವನ್ನು ಆಶ್ರಯಿಸಿಕೊಳ್ಳತೊಡಗಿದರು. ಈ ಖರ್ಚುವೆಚ್ಚವನ್ನೆಲ್ಲ ಸರಿದೂಗಿಸಲು ಗುರುಗಳು ಕ್ರಿಯಾಶೀಲರಾಗಿ, ತಮ್ಮ ಕಾಯಕ ನಡೆಸಿ ಜೋಳಿಗೆ ಹಿಡಿದು ಭಕ್ತರ ಬಳಿಗೆ ಬಂದರು. ಈ ರೀತಿ ಸಂಪಾದಿಸಿದ್ದನ್ನು ದಾಸೋಹ ಕ್ರಿಯೆಗೆ ವಿನಿಯೋಗಿಸತೊಡಗಿ, ಮಠವು ಹೆಚ್ಚು ಜನಸಂಪರ್ಕ ಪಡೆಯುವಂತೆ ಮಾಡಿದರು.

ಶ್ರೀ ಬಸವರಾಜ ಸ್ವಾಮಿಗಳು ೧೯೬೨ ರಲ್ಲಿ ತುಮಕೂರು ಜಿಲ್ಲೆಯ ಹುಳಿಯಾರು ಸಮೀಪದಲ್ಲಿ ದೀರ್ಘ ಅನುಷ್ಠಾನ ಗೊಂಡು, ಉತ್ತರದಿಕ್ಕಿನ ದಾವಣಗೆರೆ, ಚಳ್ಳಕೆರೆ,ಜಗಳೂರು,ಚಿತ್ರದುರ್ಗ,ಬಳ್ಳಾರಿ,ಹುಬ್ಬಳ್ಳಿ,ಹರಪನಹಳ್ಳಿ ಮುಂತಾದ ಕಡೆ ಸಂಚಾರ ಗೊಂಡು ಭಕ್ತರನ್ನು ಸಂಘಟಿಸಿದರು. ನೀಲಿಗಿರಿ, ಕೊಡಗು, ಕೊಯಮತ್ತೂರು, ತಿರುಚನಾಪಳ್ಳಿ, ಸೇಲಂ ಮುಂತಾದ ಭಾಗಗಳಲ್ಲಿ ಸಂಚರಿಸಿ ಶಿಷ್ಯರನ್ನು ಸಂಪಾದಿಸಿಕೊಂಡರು. ಶರಣತತ್ತ್ವವನ್ನು ಪ್ರಚಾರ ಮಾಡಬೇಕೆಂಬ ಉದ್ದೇಶವನ್ನಿಟ್ಟು ಕೊಂಡು ತಾಲ್ಲೂಕುಮಟ್ಟದ ಬಸವಸಮಿತಿಯನ್ನು ಹುಟ್ಟು ಹಾಕಿದರು. ಬಸವಪ್ರಿಯ ಭಕ್ತರನ್ನು ಪದಾಧಿಕಾರಿಗಳನ್ನಾಗಿ ನೇಮಿಸಿ ಕೊಂಡು ಬಸವ ತತ್ತ್ವಪ್ರಚಾರ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾ, ಬಸವಜಯಂತಿಯನ್ನು ವರ್ಷಕ್ಕೊಮ್ಮೆ ಆಚರಿಸಲು ಸಂಪೂರ್ಣನೆರವಾಗಿದ್ದಾರೆ.

ಶಿಕ್ಷಣ: ಕೇವಲ ಕೆಲವೇ ವರ್ಷಗಳಲ್ಲಿ ಗುರುಗಳು ತಮ್ಮ ಕ್ರಿಯಾಶೀಲ ಗುಣಗಳಿಂದ ಮಠವನ್ನು ಹೆಚ್ಚು ಪ್ರಚಾರಪಡಿಸಿ ಅಭಿವೃದ್ಧಿಯ ಕಕ್ಷೆಗೆ ಸೇರಿಸಿದರು. ಅಕ್ಷರ ಜ್ಞಾನ ಸಮಾಜವನ್ನು ಸುಧಾರಣೆ ಮಾಡಲು ಸಹಾಯಕವಾಗಬಹುದೆಂದು ಅರಿತು, ಪ್ರಥಮವಾಗಿ ಮಠದ ಆವರಣದಲ್ಲಿ ಶಿಕ್ಷಣಕಲಿಕೆಗೆ ಅವಕಾಶ ಕಲ್ಪಿಸಿದರು. ೧೯೬೧ ರಲ್ಲಿ ಸುತ್ತೂರು ಮಠದ ರಾಜಗುರುತಿಲಕ ಡಾ.ಶಿವರಾತ್ರಿರಾಜೇಂದ್ರಸ್ವಾಮಿಗಳ ಸಾನಿಧ್ಯದಲ್ಲಿ ಆಗಿನ ಮುಖ್ಯಮಂತ್ರಿ ಬಿ.ಡಿ.ಜತ್ತಿಯವರ ಅಧ್ಯಕ್ಷತೆಯಲ್ಲಿ ಎಸ್.ನಿಜ ಲಿಂಗಪ್ಪ ಹಾಗೂ ಇತರೆ ಗಣ್ಯರ ಸಮ್ಮುಖದಲ್ಲಿ ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭ ಮಾಡಿದರು ಗ್ರಾಮಾಂತರ ಮಕ್ಕಳ ಕಲಿಕೆಗೆ ನೆರವಾಗಲು ಉಚಿತ ವಿದ್ಯಾರ್ಥಿನಿಲಯ ಸ್ಥಾಪಿಸಿ ಊಟ ಮತ್ತು ವಸತಿಗೆ ವ್ಯವಸ್ಥೆ ಕಲ್ಪಿಸಿಕೊಟ್ಟರು. ಈ ರೀತಿ ಶಿಕ್ಷಣ ಕ್ಷೇತ್ರಕ್ಕೆ ಪಾದರ್ಪಣೆ ಮಾಡಿದ ಗುರುಗಳು, ತಮ್ಮ ಉತ್ತರಾಧಿಕಾರಿಗಳನ್ನು ನೇಮಿಸಿಕೊಳ್ಳಲು ಮುಂದಾದರು.

ಎರಡನೆಯಗುರು: ದೇವನೂರಿನ ಗುರುಮಲ್ಲೇಶ್ವರ ಮಠದಲ್ಲಿ ಸೇವೆಯಲ್ಲಿದ್ದ ಶ್ರೀ ಸಿದ್ಧರಾಮ ದೇವರನ್ನು ಉತ್ತರಾಧಿಕಾರಿ ಗಳನ್ನಾಗಿ ನೇಮಕಮಾಡಿಕೊಂಡು, ತುಮಕೂರಿನ ಸಿದ್ಧಗಂಗಾ ಮಠದ ಡಾ.ಶ್ರೀ ಶಿವಕುಮಾರ ಸ್ವಾಮಿಗಳು ಹಾಗೂ ಸುತ್ತೂರು ಜಗದ್ಗುರುಗಳ ನೇತೃತ್ವದಲ್ಲಿ ಕನಕಪುರದ ಶ್ರೀ ಮಹಾಲಿಂಗ ಸ್ವಾಮಿಗಳಿಂದ ಅನುಗ್ರಹ ಕೊಡಿಸಿ ಶ್ರೀ ಸಿದ್ಧರಾಮ ದೇವರಿಗೆ ಶ್ರೀ ಸಿದ್ಧಬಸವರಾಜ ಸ್ವಾಮಿಗಳೆಂದು ಅಭಿದಾನವಿತ್ತು, ೧೯೮೫ರ ಮೇ ಇಪ್ಪತ್ತೆರಡರಂದು ಪಟ್ಟಾಧಿಕಾರ ನೀಡಿದರು.

ದಾಸೋಹ ಮೂರ್ತಿ: ಗುಂಡ್ಲುಪೇಟೆ ತಾಲ್ಲೂಕಿನ ಪರಮಾಪುರದ ಶರಣ ದಂಪತಿಗಳಾದ ಶ್ರೀ ಪುಟ್ಟಪ್ಪ ಮತ್ತು ಶ್ರೀಮತಿ ಗೌರಮ್ಮನವರ ಪುತ್ರರಾಗಿ ೧೯೫೦ ರ ಮೇ ಇಪ್ಪತ್ತೈದರಂದು ಜನಿಸಿದ ಶ್ರೀ ಸಿದ್ಧರಾಮ ದೇವರು ತಮ್ಮ ಹದಿನೈದನೆಯ ವಯಸ್ಸಿನಲ್ಲೇ ಭೋಗಪುರದ ಶ್ರೀ ಬಸಪ್ಪ ಸ್ವಾಮಿಗಳಿಂದ ಜಂಗಮದೀಕ್ಷೆಪಡೆದು ನಂಜೇದೇವನ ಪುರದ ದಾಸೋಹ ಮಠದಲ್ಲಿ ನಾಲ್ಕು ವರ್ಷಗಳ ಕಾಲ ಕಂತೆ ಭಿಕ್ಷ ಕಾಯಕವನ್ನು ಬಹಳ ನಿಷ್ಠೆಯಿಂದ ಮಾಡಿದ್ದರು. ನಂತರ ೧೯೭೪ ರಲ್ಲಿ ದೇವನೂರಿನ ಶ್ರೀ ಗುರುಮಲ್ಲೇಶ್ವರ ಮಹಾಮನೆಗೆ ಬಂದು ಒಂದು ವರ್ಷ ಸೇವೆಗೈದು ೧೯೭೫ ರಲ್ಲಿ ಕಂತೆಭಿಕ್ಷದ ಕಾಯಕ ಪ್ರಾರಂಭಿಸಿ ಸತತ ನಾಲ್ಕು ವರ್ಷ ಕಾಯಕ ಮಾಡಿದ ಇವರು ಶ್ರೀ ಸಿದ್ಧಮಲ್ಲೇಶ್ವರ ವಿರಕ್ತ ಮಠದ ಪರಂಪರೆಯ ಎರಡನೆಯ ಗುರುಗಳಾಗಿ ಬಂದಿದ್ದು ಮಠದ ಅಭಿವೃದ್ಧಿ ಸಾಧಿಸಲು ಶಕ್ತಿ ಬಂದಂತಾಯಿತು.

ಅಭಿವೃದ್ಧಿ ಕಾರ್ಯಗಳು: ಈ ಮಠವು ಅನೇಕ ಜನೋಪಯೋಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರ ಫಲವೇ

ನಿತ್ಯ ಮಠಕ್ಕೆ ಭೇಟಿಕೊಡುವ ಭಕ್ತರ ಅನುಕೂಲಕ್ಕಾಗಿ ದಾಸೋಹ ಮಂದಿರ ನಿರ್ಮಾಣ ಮಾಡಿಸಿದ್ದಾರೆ. ಅಲ್ಲದೆ ಒಂದು ಕಲ್ಯಾಣ ಮಂಟಪ ಹಾಗೂ ಶಾಲಾ ಕಟ್ಟಡಗಳನ್ನು ನಿರ್ಮಿಸಿದ್ದಾರೆ. ಗುರುಗಳಿಬ್ಬರೂ ನಾಡಿನಾದ್ಯಂತ ಸಂಚರಿಸಿ ಧರ್ಮಪ್ರಚಾರ ಕೈಗೊಂಡು ವೀರಶೈವ ಧರ್ಮ ಹೆಚ್ಚು ಪ್ರಚಾರವಾಗಲು ಕಾರಣೀಭೂತರಾಗಿದ್ದಾರೆ.

ವಿಳಾಸ: ಶ್ರೀ.ಮ.ನಿ.ಪ್ರ ಸಿದ್ಧಬಸವರಾಜ ಸ್ವಾಮಿಗಳು, ಶ್ರೀ ಸಿದ್ಧಮಲ್ಲೇಶ್ವರ ವಿರಕ್ತಮಠ, ಬಿ.ರಾಚಯ್ಯ ರಸ್ತೆ,ಚಾಮರಾಜನಗರ.

ಮರೆಯಾಲ

ಚಾಮರಾಜನಗರ ತಾಲ್ಲೂಕಿನ ಮರೆಯಾಲವು ತಾಲ್ಲೂಕು ಕೇಂದ್ರ ಸ್ಥಳದಿಂದ ವಾಯುವ್ಯಕ್ಕೆ ಹತ್ತು ಕಿ. ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ೧೫೦ ವರ್ಷಗಳ ಹಿಂದೆ ಪ್ರಾರಂಭಗೊಂಡ ಶ್ರೀ ಮುರುಘರಾಜೇಂದ್ರ ಮಠವು ಶಿಷ್ಯವರ್ಗದ ಮಠವಾಗಿ ಬೆಳೆದಿದ್ದು, ಇಲ್ಲಿನ ಧಾರ್ಮಿಕ ಹಾಗೂ ಶೈಕ್ಷಣಿಕ ಚಟುವಟಿಕೆಯ ಕೇಂದ್ರಬಿಂದುವಾಗಿ ಬೆಳೆದಿದೆ.

ಮುರುಘರಾಜೇಂದ್ರಮಠ: ಮರೆಯಾಲ ಗ್ರಾಮದಲ್ಲಿ ಶ್ರೀ ಗುರುಮಲ್ಲೇಶ್ವರರು ಹಾಗೂ ಮಲ್ಲನ ಮೂಲೆಯ ಶ್ರೀ ಕಂಬಳೇಶ್ವರರ ಸಮಕಾಲೀನರಾದ ಶ್ರೀ ಮುರುಘರಾಜೇಂದ್ರ ಸ್ವಾಮಿಗಳು ಈ ಮಠವನ್ನು ಸ್ಥಾಪನೆಮಾಡಿರುವುದರಿಂದ 'ಶ್ರೀ ಮುರುಘರಾಜೇಂದ್ರ ಮಠ' ಎಂಬ ಹೆಸರು ಬಂದಿದೆ. ಉತ್ತರದ ಕಡೆಯಿಂದ ಲೋಕಸಂಚಾರ ಮಾಡುತ್ತಾ ದೇವನೂರು, ಕಾರ್ಯ ಮತ್ತು ಯಲಗೂರುಗಳಲ್ಲಿ ನೆಲೆಗೊಂಡು ಕೆಲವು ದಿನ ಅನುಷ್ಠಾನಗೊಂಡು ಮರೆಯಾಲಕ್ಕೆ ಬಂದರು. ಕೊನೆಗೆ ಈ ನೆಲದಲ್ಲಿ ನೆಲೆಸಬೇಕೆಂಬ ಮಹಾದಾಸೆಯಿಂದ ಮಹಾದೇಶ್ವರ ದೇವಸ್ಥಾನದಲ್ಲಿ ನೆಲೆಗೊಂಡು ಅನುಷ್ಠಾನಗೊಂಡರು. ನಂತರ ದೇವಸ್ಥಾನದಲ್ಲಿ ನೆಲೆಸುವುದಕ್ಕಿಂತ ಈ ನೆಲದಲ್ಲಿ ಧಾರ್ಮಿಕ ಕೇಂದ್ರವನ್ನು ಸ್ಥಾಪಿಸಿ ವೀರಶೈವ ಧರ್ಮ ನೆಲೆಗೊಳ್ಳುವಂತೆ ಮಾಡಬೇಕು ಎಂದು, ಚಿಕ್ಕದಾದ ಜೋಪಡಿಯನ್ನು ನಿರ್ಮಿಸಿಕೊಂಡು ಉಪದೇಶ ನೀಡುತ್ತಾ ಭಕ್ತರು ಧರ್ಮಮಾರ್ಗದಲ್ಲಿ ಸಾಗುವಂತೆ ಮಾಡತೊಡಗಿದರು. ಅನೇಕ ಪವಾಡಗಳನ್ನು ಮಾಡಿ ಮಠವನ್ನು ಹೆಚ್ಚು ಅಭಿವೃದ್ಧಿಪಡಿಸಿದರು. ಮಠದ ಧಾರ್ಮಿಕ ಚಟುವಟಿಕೆಗಳಿಗೆ ನೆರವಾಗಲು ಊರಿನ ಭಕ್ತರು ನಾಲ್ಕುಎಕರೆ ಭೂಮಿಯನ್ನು ಗುರುಗಳಿಗೆ ಒಪ್ಪಿಸಿದ್ದಾರೆ. ಶ್ರೀ ಮುರುಘ ರಾಜೇಂದ್ರ ಸ್ವಾಮಿಗಳ ಮಹದಾಸೆಯಂತೆ ಇಂದಿಗೂ ಮಠ ಕ್ರಿಯಾತ್ಮಕ ಚಟುವಟಿಕೆ ಯಿಂದ ಬೆಳೆದಿದೆ.

ಪರಂಪರೆ:
೧. ಷ.ಬ್ರ.ಶ್ರೀ ಮುರುಘ ರಾಜೇಂದ್ರಸ್ವಾಮಿಗಳು
೨. ಷ.ಬ್ರ.ಶ್ರೀ ಮಹಂತ ದೇಶಿಕೇಂದ್ರಸ್ವಾಮಿಗಳು
೩. ಷ.ಬ್ರ.ಶ್ರೀ ಸದಾಶಿವಸ್ವಾಮಿಗಳು
೪. ಷ.ಬ್ರ.ಶ್ರೀ ಇಮ್ಮಡಿ ಮಹಾಂತಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃ ಗುರುಗಳಾದ ಶ್ರೀ ಮುರುಘ ರಾಜೇಂದ್ರ ಸ್ವಾಮಿಗಳು ೧೯೧೬ ರಲ್ಲಿ ಲಿಂಗೈಕ್ಯರಾದರು. ಇವರ ನಂತರ ಕೆಲವು ವರ್ಷಗಳಕಾಲ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿದಿತ್ತು. ನಂತರ ಶ್ರೀ ಮಹಂತ ದೇಶಿಕೇಂದ್ರ ಸ್ವಾಮಿಗಳು ಅಧಿಕಾರ ವಹಿಸಿಕೊಂಡು ಮಠವನ್ನು ಮುನ್ನಡೆಸಿದರು. ನಂತರ ಬಂದ ಶ್ರೀ ಸದಾಶಿವ ಸ್ವಾಮಿಗಳು ಕರ್ತೃತ್ವ ಶಕ್ತಿಯಿಂದ ಆಸ್ತಿವಂತ ಮಠವಾಗಿ ಬೆಳೆಯಿತು. ಇವರ ನಂತರ ಬಂದ ಶ್ರೀಇಮ್ಮಡಿ ಮಹಾಂತ ಸ್ವಾಮಿಗಳು ೧೯೭೮ ರ ನವಂಬರ್ ಹದಿನಾರರಂದು ಪಟ್ಟಾಧಿಕಾರ ವಹಿಸಿಕೊಂಡರು. ಗುರುಗಳ ಕರ್ತೃತ್ವ ಶಕ್ತಿ ಹಾಗೂ ಹಿರಿಯರ ಮಾರ್ಗ ದರ್ಶನದ ಹಾಗೂ ತಮ್ಮ ಇಚ್ಛಾಶಕ್ತಿಯ ಫಲವಾಗಿ ಮಠದ ಸರ್ವಾಂಗೀಣ ಅಭಿವೃದ್ಧಿಗೆ ಹತ್ತು ಹಲವು ಯೋಜನೆಗಳು ರೂಪುಗೊಂಡು ಮಠವು ನವೀಕರಣಗೊಂಡಿತು. ಪರಂಪರೆಯ ಗುರುಗಳ ಗದ್ದುಗೆಗಳನ್ನು ನವೀಕರಣ ಮಾಡಿ ಮಂಟಪವನ್ನು ನಿರ್ಮಿಸಿದರು. ಈ ರೀತಿ ಇತಿಹಾಸ ಉಳಿಸುವಂತಹ ಅನೇಕ ಕೆಲಸಗಳು ಜಾರಿಗೆ ಬಂದವು.

ಶ್ರೀ ಇಮ್ಮಡಿ ಮಹಾಂತ ಸ್ವಾಮಿಗಳು ಕಾಯಕಯೋಗಿಗಳಾಗಿ, ನೇಗಿಲು ಹಿಡಿದು ಶ್ರಮಿಸಿದ್ದರ ಫಲ ಇಂದು ಮಠಕ್ಕೆ ಸುಮಾರು ಎಪ್ಪತ್ತು ಎಕರೆ ಜಮೀನನ್ನು ಸಂಪಾದಿಸಲು ಸಾಧ್ಯವಾಯಿತು. ಇಂದು ಈ ಜಮೀನನ್ನು ಫಲವತ್ತತೆಗೊಳಿಸಿ ಆರ್ಥಿಕ ಬೆಳೆಯನ್ನು ಬೆಳೆದು, ಮಠಕ್ಕೆ ಆದಾಯದ ಮೂಲ ಮಾಡಿಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಹಿರಿಯ ಗುರುಗಳ ಆರಾಧನೆಯನ್ನು ನಡೆಸಲಾಗುತ್ತಿದೆ. ಧರ್ಮೋಪದೇಶ ಹಾಗೂ ಅನ್ನದಾಸೋಹ ಕಾರ್ಯಗಳು ನಡೆಯುತ್ತಿವೆ. ಶ್ರಾವಣ ಮತ್ತು ಕಾರ್ತೀಕ ಮಾಸಗಳಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಅಲ್ಲದೆ ಭಕ್ತರ ಮನೆಗಳಿಗೆ ಹೋಗಿ ಧಾರ್ಮಿಕ ಕ್ರಿಯೆಯಲ್ಲಿ ಭಾಗವಹಿಸಿ ಸಂಸ್ಕಾರ ನೀಡುತ್ತಿದ್ದಾರೆ.

ಶೈಕ್ಷಣಿಕ ಸೇವೆ: ಸಮಾಜದಲ್ಲಿ ನೈತಿಕತೆ ಬೆಳೆಸಲು ಧರ್ಮ ಒಂದೇ ಸಾಧನ ಅಲ್ಲ, ಧರ್ಮದ ಸಾರವನ್ನು ಸರಿಯಾಗಿ ಅರ್ಥೈಸಿಕೊಳ್ಳಲು ಅಕ್ಷರಜ್ಞಾನ ಆವಶ್ಯಕ ಎಂದು ಅರಿತ ಸ್ವಾಮಿಗಳು 'ಶ್ರೀ ಮುರುಘರಾಜೇಂದ್ರ ವಿದ್ಯಾಸಂಸ್ಥೆ'ಯನ್ನು ಪ್ರಾರಂಭಿಸಿ ಪ್ರೌಢಶಾಲೆ ಹಾಗೂ ಸಂಸ್ಕೃತ ಪಾಠಶಾಲೆಯನ್ನು ಮರಿಯಾಲದ ಮಠದ ಆವರಣದಲ್ಲಿ ಪ್ರಾರಂಭಿಸಿದ್ದಾರೆ. ಕಲಿಯುವ ಬಡ ಮಕ್ಕಳ ಅನುಕೂಲಕ್ಕಾಗಿ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಿ, ಉಚಿತ ಮತ್ತು ಊಟ ವಸತಿಯನ್ನು ಕಲ್ಪಿಸಿಕೊಟ್ಟಿದ್ದಾರೆ.

ವಿಳಾಸ: ಶ್ರೀ ಇಮ್ಮಡಿ ಮಹಾಂತ ಶಿವಾಚಾರ್ಯಸ್ವಾಮಿಗಳು, ಶ್ರೀಮುರುಘರಾಜೇಂದ್ರಮಠ, ಮರೆಯಾಲ, ಚಾಮರಾಜನಗರ ತಾ.

ಹರವೆ

ಚಾಮರಾಜನಗರ ತಾಲ್ಲೂಕಿನ ಹರವೆ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿನೆಂಟು ಕಿ.ಮೀ. ದೂರದಲ್ಲಿದೆ. ಇಲ್ಲಿ ಪುರಾತನ ಕಾಲದ ಶ್ರೀ ವಿರಕ್ತ ಮಠ ಮತ್ತು ಇತ್ತೀಚಿನ ಕಾಲದ ಶ್ರೀ ದಾಸೋಹಮಠ ಸ್ಥಾಪನೆಯಾಗಿದ್ದು, ಎರಡೂ ಮಠಗಳು ಗ್ರಾಮದ ಧಾರ್ಮಿಕ ಕೇಂದ್ರ ಬಿಂದುಗಳಾಗಿ ಬೆಳೆದಿವೆ.

ವಿರಕ್ತಮಠ: ಶ್ರೀ ವಿರಕ್ತ ಒಡೆಯರೆಂಬ ಜಂಗಮರು, ಉತ್ತರದ ಕಡೆಯಿಂದ ಲೋಕಸಂಚಾರ ಮಾಡುತ್ತಾ, ಬಂದು ಹರವೆ ಗ್ರಾಮದಲ್ಲಿ ನೆಲೆ ನಿಂತರು. ಪ್ರತಿದಿನ ಸಂಜೆ ದೇವಸ್ಥಾನದಲ್ಲಿ ಉಪನ್ಯಾಸ ನೀಡಿ ಜನರಲ್ಲಿ ಧರ್ಮ ಜಾಗೃತಿಉಂಟು ಮಾಡಿ, ವೀರಶೈವ ಧರ್ಮ ಮತ್ತು ಶರಣ ತತ್ತ್ವವನ್ನು ಬೆಳೆಸಲು ನೆರವಾದರು. ದೇವಸ್ಥಾನಕ್ಕೆ ಬಂದ ಜನ ಅಲ್ಲಿ ಬಿಡಾರ ಬಿಟ್ಟಿದ್ದ ವಿರಕ್ತ ಒಡೆಯರ ದರ್ಶನ ಪಡೆದು ಹೋಗುತ್ತಿದ್ದರು. ಈ ರೀತಿ ಧಾರ್ಮಿಕ ಚಟುವಟಿಕೆ ಹೆಚ್ಚಾದಂತೆಲ್ಲಾ ದೇವಸ್ಥಾನದ ಬದಲಿಗೆ ಪ್ರತ್ಯೇಕ ವಾಸ್ತವ್ಯ ಕಲ್ಪಿಸಿಕೊಡಬೇಕು ಎಂದು ನಿರ್ಧರಿಸಿದ ಭಕ್ತರು ಗುರುಗಳಿಗೆ ಮಠ ಕಟ್ಟಿಸಿಕೊಡುತ್ತಾರೆ. ಗುರುಗಳು ತಮ್ಮ ಜೀವಿತದ ಕೊನೆಯ ದಿನಗಳವರೆಗೆ ಉಪದೇಶ ನೀಡಿ, ಜನರಲ್ಲಿ ಸಂಸ್ಕಾರ ಮೂಡಿಸಿ ಶಿವೈಕ್ಯಗೊಂಡರು

ಪರಂಪರೆ:

೧. ಶ್ರೀ ಮ.ನಿ.ಪ್ರ. ವಿರಕ್ತ ಒಡೆಯರು
೨. ಶ್ರೀ ಮ.ನಿ.ಪ್ರ. ಚನ್ನಬಸವಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಶಿವಲಿಂಗಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಶ್ರೀಕಂಠಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಶಿವನಂಜಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಸರ್ಪಭೂಷಣಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಗ್ರಾಮದ ಧಾರ್ಮಿಕ ಸೆಲೆಯಾಗಿದ್ದ ಕರ್ತೃಗುರುಗಳು ಲಿಂಗೈಕ್ಯರಾದ ಮೇಲೆ ಮಠ ಖಾಲಿ ಬೀಳಬಾರದೆಂದು ಗ್ರಾಮಸ್ಥರು ಶ್ರೀ ಚನ್ನಬಸಪ್ಪ ಸ್ವಾಮಿಗಳನ್ನು ನೇಮಿಸಿ, ಮಠದ ಪರಂಪರೆ ಬೆಳೆಯಲು ನೆರವಾದರು. ಗುರುಗಳು ಧಾರ್ಮಿಕ ಚಟುವಟಿಕೆಗಳಿಂದ ಮಠವನ್ನು ಅಭಿವೃದ್ಧಿಪಡಿಸಿದ ಇವರು ಶ್ರೀ ಶಿವಲಿಂಗ ಸ್ವಾಮಿಗಳಿಗೆ ಪಟ್ಟಾಧಿಕಾರ ನೀಡಿದರು. ಶ್ರೀ ಶಿವಲಿಂಗ ಸ್ವಾಮಿಗಳು ಅನೇಕ ವರ್ಷಗಳ ಕಾಲ ಮಠದ ಆಡಳಿತವನ್ನು ನಡೆಸಿ, ತಮ್ಮ ಸಹೋದರ ಸಂಬಂಧಿ ಶ್ರೀ ಶ್ರೀಕಂಠ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿಕೊಂಡರು. ಶ್ರೀ ಶ್ರೀಕಂಠ ಸ್ವಾಮಿಗಳು ಸಂಸ್ಕೃತ, ವೇದ ಹಾಗೂ ಆಗಮ ಕಲಿತು ಧಾರ್ಮಿಕ ಚಟುವಟಿಕೆಗಳನ್ನು ಶ್ರೀಮಂತಗೊಳಿಸಿ ೧೯೩೦ರಲ್ಲಿ ಲಿಂಗೈಕ್ಯರಾದರು. ನಂತರ ಶ್ರೀ ರುದ್ರಪ್ಪ ದೇವರು ಮತ್ತು ಶ್ರೀಮತಿ ಶಿವಲಿಂಗಮ್ಮನವರ ಪುತ್ರರಾಗಿ ೧೯೨೮ರ ಜೂನ್ ಆರರಂದು ಜನಿಸಿದ ಶ್ರೀ ಶಿವನಂಜ ದೇವರು ೧೯೩೫ ರಲ್ಲಿ ಪಟ್ಟಾಧಿಕಾರ ಪಡೆದರು. ಇವರು ತುಮಕೂರಿನ ಸಿದ್ಧಗಂಗೆ ಮಠದಲ್ಲಿ ನೆಲೆಸಿ ಸಂಸ್ಕೃತ ಹಾಗೂ ಸಾಹಿತ್ಯವನ್ನು ಅಭ್ಯಾಸ ಮಾಡಿ ಉತ್ತಮ ವಾಗ್ಮಿಗಳಾಗಿ ರೂಪುಗೊಂಡು, ಹರವೆಗೆ

ಬಂದು ಮಠದ ಜವಾಬ್ದಾರಿಯನ್ನು ವಹಿಸಿಕೊಂಡರು.

ಮಠದಲ್ಲಿ ಇರುವ ಶ್ರೀ ವಿರಕ್ತ ಒಡೆಯರ ಗದ್ದುಗೆಗೆ ಮಂಟಪ ಕಟ್ಟಿಸಿದ ಶ್ರೀ ಶಿವನಂಜ ಸ್ವಾಮಿಗಳು, ಮಠದ ಹೊರಭಾಗದಲ್ಲಿರುವ ಮೂರು ಗದ್ದುಗೆಗಳಿಗೆ ಮಂಟಪ ಕಟ್ಟಿಸಿದ್ದಾರೆ. ವಂಶಪರಂಪರೆಯ ಮಠದ ಧಾರ್ಮಿಕ ಕಾರ್ಯಗಳ ಜೊತೆಗೆ ತಾಲ್ಲೂಕಿನಾದ್ಯಂತ ಸಂಚರಿಸಿ ಪ್ರವಚನ ನೀಡಿ ಜನರನ್ನು ಜಾಗೃತರನ್ನಾಗಿ ಮಾಡಿದ್ದಾರೆ. ಗ್ರಾಮ ಭಾಷೆಯಲ್ಲಿ ಉಪದೇಶ ನೀಡಿ ಜನರ ಒಲವನ್ನು ಗಳಿಸಿಕೊಂಡಿದ್ದ ಗುರುಗಳು, ೨೦೦೦ ನೆಯ ಇಸವಿಯಲ್ಲಿ ಲಿಂಗೈಕ್ಯರಾದರು. ಈಗ ಶ್ರೀ ಸರ್ಪಭೂಷಣ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡು ಪುರಾತನ ಪರಂಪರೆಯ ಮಠವನ್ನು ಮುನ್ನಡೆಸುತ್ತಿದ್ದಾರೆ.

ಸಮಾಜ ಸೇವೆ: ಧಾರ್ಮಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಬಗ್ಗೆ ಕಳಕಳಿ ಹೊಂದಿದ್ದ ಶ್ರೀ ಶಿವನಂಜ ಸ್ವಾಮಿಗಳು ತಮ್ಮ ಅಧಿಕಾಕಾವಧಿಯಲ್ಲಿ ಮಠದ ಆಸ್ತಿಯನ್ನು ವಿಸ್ತರಿಸಿದ್ದರು. ಮಠದ ಭೂಮಿಯಲ್ಲಿ ಪಶುವೈದ್ಯ ಆಸ್ಪತ್ರೆಯನ್ನು ಕಟ್ಟಿಸಿ ಸರ್ಕಾರಕ್ಕೆ ಬಿಟ್ಟುಕೊಟ್ಟಿದ್ದಾರೆ. ಒಂದು ಎಕರೆ ಭೂಮಿಯನ್ನು ಹೆರಿಗೆ ಆಸ್ಪತ್ರೆ ಕಟ್ಟಲು ಸರ್ಕಾರಕ್ಕೆ ಉಂಬಳಿಯಾಗಿ ಕೊಟ್ಟಿದ್ದಾರೆ. ಶಿಕ್ಷಣಕ್ಕೆ ಒತ್ತುಕೊಟ್ಟಿದ್ದ ಗುರುಗಳು ಪ್ರಾಥಮಿಕ, ಪ್ರೌಢಶಾಲೆ ಹಾಗೂ ಕಾಲೇಜುಗಳಿಗೆ ಕಟ್ಟಡಗಳನ್ನು ಕಟ್ಟಲು ಮೂರು ಎಕರೆ ಜಮೀನನ್ನು ದಾನ ಮಾಡಿದ್ದರು. ಈ ರೀತಿ ಮಠದ ಹತ್ತು ಎಕರೆ ಪ್ರದೇಶವನ್ನು ಸಾರ್ವಜನಿಕ ಉಪಯೋಗಕ್ಕೆ ಬಳಸಿಕೊಳ್ಳಲು ಸರ್ಕಾರಕ್ಕೆ ದಾನ ರೂಪದಲ್ಲಿ ನೀಡಿದ್ದರು. ಇತ್ತೀಚೆಗೆ ವಿದ್ಯಾರ್ಥಿನಿಲಯ ಸ್ಥಾಪನೆಗೆ ಸರ್ಕಾರಕ್ಕೆ ಐದುಎಕರೆ ಭೂಮಿಯನ್ನು ದಾನನೀಡಿದ್ದಾರೆ.

ಧಾರ್ಮಿಕ ಸೇವೆ: ಧರ್ಮದಿಂದ ನಾಡನ್ನು ಸಚ್ಚಾರಿತ್ರೆಯಿಂದ ಕಟ್ಟಲು ಸಾಧ್ಯ ಎಂದು ನಂಬಿದ ಗುರುಗಳು ಧರ್ಮ ಬೋಧನೆ, ಧರ್ಮಾಚರಣೆಗೆ ಹೆಚ್ಚು ಅವಕಾಶ ಕೊಟ್ಟು 'ವಿಚಾರ, ಬೋಧನೆಗೆ ಮಾತ್ರ ಅಲ್ಲ ಆಚರಣೆಯಲ್ಲಿಯೂ ಇರಬೇಕು'ಎಂದು ನಡೆ ನುಡಿಯಲ್ಲಿ ಒಂದಾಗಿ ದೀರ್ಘ ಬದುಕನ್ನು ನಡೆಸಿದ ಶ್ರೀ ಶಿವನಂಜ ಸ್ವಾಮಿಗಳು, ಮಠದ ಪರಂಪರೆಯ ಎಲ್ಲಾ ಗುರುಗಳ ಗದ್ದುಗೆಗಳನ್ನು ನವೀಕರಿಸಿ ಮಂಟಪ ಕಟ್ಟಿಸಿದ್ದರು. ಈ ಗದ್ದುಗೆಗಳಿಗೆ ನಿತ್ಯ ಪೂಜೆ ನಡೆಯುತ್ತಿದೆ.

ವಿಳಾಸ: ಶ್ರೀ ವಿರಕ್ತಮಠ, ಹರವೆ, ಚಾಮರಾಜನಗರ ತಾಲ್ಲೂಕು.

ದಾಸೋಹ ಮಠ: ಹರವೆಯಿಂದ ನಂಜನಗೂಡಿಗೆ ಹೋಗುವ ರಸ್ತೆಯಲ್ಲಿ ಶ್ರೀ ಗುರು ಮಲ್ಲೇಶ್ವರ ದಾಸೋಹ ಮಠವು ೧೯೨೮ ರಲ್ಲಿ ಸ್ಥಾಪನೆಯಾಗಿದೆ. ಅಂದಿನ ಭಿಕ್ಷದ ಶ್ರೀ ರಾಚಪ್ಪ ಸ್ವಾಮಿಗಳು ಇಲ್ಲಿ ಮಠ ಸ್ಥಾಪಿಸಿ ಶ್ರೀ ಭಿಕ್ಷದ ಸ್ವಾಮಿಗಳನ್ನು ನೇಮಿಸಿ, ಕಂತೆ ಭಿಕ್ಷದ ಮೂಲಕ ದಾಸೋಹ ನಡೆಯುವಂತೆ ಮಾಡಿದರು. ಈಗ ಶ್ರೀ ಗುರು ಸ್ವಾಮಿಗಳು ಕಂತೆ ಭಿಕ್ಷ ಕಾಯಕವನ್ನು ನಡೆಸುತ್ತಿದ್ದಾರೆ.

ವಿಳಾಸ: ಭಿಕ್ಷದ ಶ್ರೀ ಗುರುಸ್ವಾಮಿಗಳು, ಶ್ರೀ ಗುರುಮಲ್ಲೇಶ್ವರ ದಾಸೋಹ ಮಠ, ಹರವೆ, ಚಾಮರಾಜನಗರ ತಾಲ್ಲೂಕು.

ಹುರುಳಿನಂಜನಪುರ

ಚಾಮರಾಜನಗರ ತಾಲ್ಲೂಕಿನ ಹುರುಳಿನಂಜನಪುರವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹದಿನೈದು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಸುತ್ತೂರು ಶಾಖಾಮಠವಾದ ಶ್ರೀ ಪಟ್ಟದಮಠವು ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ.

ಪಟ್ಟದಮಠ: ಸುಮಾರು ೧೫೦ ವರ್ಷಗಳ ಹಿಂದೆ ಉತ್ತರದ ಕಡೆಯಿಂದ ಬಂದ ಶರಣರೊಬ್ಬರು ಹುರುಳಿನಂಜನಪುರ ಗ್ರಾಮದಲ್ಲಿ ಅನುಷ್ಠಾನಗೊಂಡು, ಅನೇಕ ಪವಾಡಗಳನ್ನು ಮಾಡಿ ಜನರ ಮನಗೆದ್ದು ಇಲ್ಲಿ ಮಠವನ್ನು ಸ್ಥಾಪಿಸಿ ಅಧರ್ಮ, ಅನೀತಿಗಳನ್ನು ದೂರ ಮಾಡಿ ಧರ್ಮಸಾಕಾರಗೊಳ್ಳುವಂತೆ ಮಾಡಿದ್ದರು. ಮೈಸೂರು ಒಡೆಯರು, ಟಿಪ್ಪುಸುಲ್ತಾನ ಈ ಭಾಗಕ್ಕೆ ಬಂದ ಸಂದರ್ಭದಲ್ಲಿ ಈ ಜಂಗಮ ಮೂರ್ತಿಗಳ ಶರಣ ಲೀಲೆಗಳನ್ನು ಕೇಳಿತಿಳಿದು ಮಠಕ್ಕೆ ಭೇಟಿ ನೀಡಿ, ಗುರುಗಳಿಂದ ಆಶೀರ್ವಾದ ಪಡೆದು ಮಠದ ಅಭಿವೃದ್ಧಿಗೆ ಅನೇಕ ಬಗೆಯ ಕಾಣಿಕೆಗಳನ್ನು ನೀಡಿ ಗೌರವಿಸಿದ್ದರು ಎಂದು ಈ

ಮಠದ ಮೂಲಗಳು ತಿಳಿಸುತ್ತಿವೆ. ಮಠದ ಆವರಣದಲ್ಲಿ ನಾಲ್ಕು ಗದ್ದುಗೆಗಳಿದ್ದು ಅವುಗಳಲ್ಲಿ ಮೂರು ಗದ್ದುಗೆಗಳ ಹೆಸರು ತಿಳಿದಿಲ್ಲ. ೧೯೯೬ ರಲ್ಲಿ ಲಿಂಗೈಕ್ಯರಾದ ವಿದ್ವಾನ್ ಪಟ್ಟದ ಶ್ರೀ ಗುರುಸ್ವಾಮಿಗಳ ಗದ್ದುಗೆಯನ್ನು ಮಾತ್ರ ಗುರುತಿಸಬಹುದಾಗಿದೆ. ಕರ್ತೃಗುರುಗಳ ಗದ್ದುಗೆ ಎಲ್ಲಿದೆ ಎಂದು ಪತ್ತೆಯಾಗಿಲ್ಲ. ಪಟ್ಟದ ಶ್ರೀ ಗುರುಸ್ವಾಮಿಗಳು ಲಿಂಗೈಕ್ಯ ರಾಗುವ ಮುನ್ನ ೧೯೮೮ರಲ್ಲಿ ಹನ್ನೊಂದು ವರ್ಷದ ಬಾಲಕನಿಗೆ ಪಟ್ಟಾಧಿಕಾರ ನೀಡಿ ಶ್ರೀ ಸದಾನಂದ ಸ್ವಾಮಿಗಳು ಎಂದು ಅಭಿಧಾನ ನೀಡಿ ಅಧಿಕಾರಕ್ಕೆ ತರಲಾಗಿದೆ. ಈಗ ಗುರುಗಳು ಸುತ್ತೂರು ಮಠದ ಗುರುಕುಲದಲ್ಲಿ ಜ್ಯೋತಿಷ್ಯ, ಸಂಸ್ಕೃತ ಹಾಗೂ ವೇದವನ್ನು ಅಭ್ಯಾಸ ಮಾಡುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸದಾನಂದ ಸ್ವಾಮಿಗಳು, ಶ್ರೀ ಪಟ್ಟದಮಠ, ಹುರಳಿನಂಜನಪುರ, ಚಾಮರಾಜನಗರ ತಾಲ್ಲೂಕು.

❑

ಯಳಂದೂರು ತಾಲ್ಲೂಕು

ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೂಕು ಜಿಲ್ಲೆಯ ಅತ್ಯಂತ ಚಿಕ್ಕ ತಾಲ್ಲೂಕಾಗಿ ರೂಪುಗೊಂಡಿದೆ. ನೀರಾವರಿಯ ಸೌಕರ್ಯದಿಂದ ಶ್ರೀಮಂತಿಕೆ ಪಡೆದಿದೆ. ಇಲ್ಲಿ ವೀರಶೈವಧರ್ಮವು ಪ್ರಬಲವಾಗಿ ಬೆಳೆದಿರುವುದಲ್ಲದೆ, ಕನ್ನಡ ಸಾಹಿತ್ಯ ಲೋಕದಲ್ಲಿ ಮಿನುಗುತಾರೆಗಳಂತಿರುವ ಶ್ರೀ ಷಡಕ್ಷರಿ ದೇವರು ಹಾಗೂ ಶ್ರೀ ಮುಪ್ಪಿನ ಷಡಕ್ಷರಿ ಈ ತಾಲ್ಲೂಕಿನಲ್ಲಿ ನೆಲೆಸಿ, ತಮ್ಮ ಕಾರ್ಯಕ್ಷೇತ್ರವನ್ನಾಗಿ ರೂಪಿಸಿಕೊಂಡಿದ್ದರು. ಶ್ರೀ ಮುಪ್ಪಿನ ಷಡಕ್ಷರಿಯವರು ಯರಗಂಬಳಿಯಲ್ಲಿ ಲಿಂಗೈಕ್ಯರಾಗಿದ್ದು, ಅವರ ಗದ್ದುಗೆಯನ್ನು ಇಲ್ಲಿ ಸ್ಥಾಪಿಸಲಾಗಿದೆ. ಪ್ರಸ್ತುತ ದುಗ್ಗಟ್ಟಿ ವೀರಭದ್ರಪ್ಪನವರು ಈ ಗದ್ದುಗೆಯ ಜೀರ್ಣೋದ್ಧಾರದ ಕಾರ್ಯ ಹಾಗೂ ಶ್ರೀ ಮುಪ್ಪಿನ ಷಡಕ್ಷರಿಯವರ ಸಾಹಿತ್ಯವನ್ನು ಸಂರಕ್ಷಿಸಲು ಶ್ರಮಿಸುತ್ತಿದ್ದಾರೆ. ಅದೇ ರೀತಿ ಯಳಂದೂರು ಪಟ್ಟಣದಲ್ಲಿ ಶ್ರೀ ಷಡಕ್ಷರಿ ದೇವರ ಗದ್ದುಗೆಯು ಸ್ಥಾಪನೆಯಾಗಿದೆ. ಈ ರೀತಿ ತಾಲ್ಲೂಕಿನಾದ್ಯಂತ ಅನೇಕ ಶರಣರ ಗದ್ದುಗೆಗಳು ಸ್ಥಾಪನೆಯಾಗಿರುವುದಲ್ಲದೆ, ಐದು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಅಗರ

ಯಳಂದೂರು ತಾಲ್ಲೂಕಿನ ಅಗರವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ನಾಲ್ಕು ಕಿ.ಮೀ ದೂರದಲ್ಲಿದೆ. ಇಲ್ಲಿ ವಿರಕ್ತ ಸಂಪ್ರದಾಯದ ಶ್ರೀ ವಿರಕ್ತಮಠವು ಸ್ಥಾಪನೆಯಾಗಿದೆ.

ವಿರಕ್ತಮಠ: ಅಗರ ಗ್ರಾಮದಲ್ಲಿ ೧೫೦ ವರ್ಷಗಳ ಹಿಂದೆ ಸ್ಥಾಪನೆಯಾದ ವಿರಕ್ತಮಠವು ಈತನಕ ಬೆಳೆದು ಧಾರ್ಮಿಕ ಕೇಂದ್ರಬಿಂದುವಾಗಿ ಬೆಳೆದಿದೆ. ಮುರುಘಾ ಸಮಯದ ಪರಂಪರೆಯಲ್ಲಿ ಬೆಳೆದಿದೆ. ಪುರಾತನ ಪರಂಪರೆಯ ಈ ಮಠದಲ್ಲಿ ಅನೇಕ ಗುರುಗಳು ಅಧಿಕಾರ ನಡೆಸಿದ್ದಾರೆ ಎಂದು ಹೇಳಲಾಗುತ್ತದೆ. ಆದರೆ ಈ ಕೆಳಗಿನ ಆರು ಜನ ಗುರುಗಳ ಹೆಸರುಗಳನ್ನು ಮಾತ್ರ ದಾಖಲಿಸಬಹುದು.

ಪರಂಪರೆ:

೧. ಶ್ರೀ ಮ.ನಿ.ಪ್ರ ನೀಲಕಂಠಸ್ವಾಮಿಗಳು
೨. ಶ್ರೀ ಮ.ನಿ.ಪ್ರ ನಮಃ ಶಿವಾಯಸ್ವಾಮಿಗಳು
೩. ಶ್ರೀ ಮ.ನಿ.ಪ್ರ ಬಸವಪ್ರಭುಸ್ವಾಮಿಗಳು
೪. ಶ್ರೀ ಮ.ನಿ.ಪ್ರ ಚನ್ನವೀರಒಡೆಯರು
೫. ಶ್ರೀ ಮ.ನಿ.ಪ್ರ ಪ್ರಭುಸ್ವಾಮಿಗಳು
೬. ಶ್ರೀ ಮ.ನಿ.ಪ್ರ ಸಿದ್ಧಮಲ್ಲಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದಿದೆ. ಮೈಸೂರಿನ ನೀಕಂಠಸ್ವಾಮಿ ಮಠದ ಸ್ಥಾಪಕರಾದ ಶ್ರೀ ನೀಲಕಂಠ ಸ್ವಾಮಿಗಳು ಈ ಮಠವನ್ನು ಬೆಳಸಿದರೆಂದು ತಿಳಿದುಬರುತ್ತದೆ. ತದನಂತರ ನೀಲಕಂಠಸ್ವಾಮಿ ಮಠದ ಶಾಖಾಮಠವಾಗಿ ಬೆಳೆದು ಬಂದಿದೆ. ಪರಂಪರೆಯ ಎಲ್ಲಾ ಗುರುಗಳು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಈಗ ಶ್ರೀ ಸಿದ್ಧಮಲ್ಲ ಸ್ವಾಮಿಗಳು ಮಠದ ಆಡಳಿತವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದಾರೆ. ಗುರುಗಳು ಮೈಸೂರಿನ ನೀಲಕಂಠಸ್ವಾಮಿ ಮಠದ ಅಧಿಕಾರವನ್ನು ವಹಿಸಿಕೊಂಡ ಈ ಎರಡೂ ಮಠಗಳ ಗುರುಗಳಾಗಿ ಮಠವನ್ನು ಬೆಳೆಸುತ್ತಿದ್ದಾರೆ. ಮಠದ ಆವರಣದಲ್ಲಿ ನಾಲ್ಕು ಗದ್ದುಗೆಗಳು ಸ್ಥಾಪನೆಯಾಗಿವೆ. ಈ ಗದ್ದುಗೆಗಳಿಗೆ ನಿತ್ಯಪೂಜೆ, ಶ್ರಾವಣಮಾಸದಲ್ಲಿ ಪುರಾಣ ಪ್ರವಚನ, ವಿಶೇಷಪೂಜೆಯ ವ್ಯವಸ್ಥೆ ಮಾಡಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಸಿದ್ಧಮಲ್ಲ ಸ್ವಾಮಿಗಳು, ಶ್ರೀ ವಿರಕ್ತಮಠ, ಅಗರ, ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ಕಾರಾಪುರ

ಯಳಂದೂರು ತಾಲ್ಲೂಕಿನ ಕಾರಾಪುರವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಒಂದು ಕಿ. ಮೀ.ದೂರದಲ್ಲಿದೆ.

ಸುವರ್ಣವತಿ ನದಿಯ ದಡದಲ್ಲಿ ಕಂಗೊಳಿಸುವ ಹಸಿರು ತೋಟದ ಮಧ್ಯೆ ಸ್ಥಾಪನೆಯಾಗಿರುವ ಕಾರಾಪುರ ವಿರಕ್ತ ಮಠವು, ಯಳಂದೂರು ತಾಲ್ಲೂಕಿನ ಧಾರ್ಮಿಕ ಕೇಂದ್ರವಾಗಿ ರೂಪುಗೊಂಡಿದೆ.

ವಿರಕ್ತಮಠ: ಕಾರಾಪುರ ಗ್ರಾಮದಲ್ಲಿ ವಿರಕ್ತ ಸಂಪ್ರದಾಯದ ಮುರುಘಾ ಸಮಯದ ಮಠವು ಸ್ಥಾಪನೆಯಾಗಿದೆ. ಇಲ್ಲಿ ವೈರಾಗ್ಯ ನಿಧಿ ಅಲ್ಲಮ ಪ್ರಭುಗಳು, ಶ್ರೀ ಮಲೆಮಹಾದೇಶ್ವರರು, ಅಥಣಿಯ ಶ್ರೀ ಮುರುಗೇಂದ್ರ ಶಿವಯೋಗಿಗಳು ಹಾಗೂ ಹಾನಗಲ್ಲಿನ ಶ್ರೀ ಕುಮಾರ ಸ್ವಾಮಿಗಳು ಅನುಷ್ಠಾನಗೊಂಡು ಪುಣ್ಯ ಕ್ಷೇತ್ರವಾಗಿದೆ.

ಕಾರ್ಯಾಲೋಚನೆಯ ಕೇಂದ್ರ: ಈ ವಿರಕ್ತ ಮಠದ ಉತ್ತರಕ್ಕೆ ಎಡಭಾಗದಲ್ಲಿ ಅರವತ್ತ್ಮೂರು ಹುಲ್ಲಿನ ಮಠಗಳು, ಬಲಭಾಗದಲ್ಲಿ ಅರವತ್ತ್ಮೂರು ಕಲ್ಲಿನ ಮಠಗಳು ಸ್ಥಾಪನೆಯಾಗಿದ್ದು, ಈ ಎಲ್ಲಾ ೧೨೬ ಮಠಗಳ ಮಠಾಧೀಶ್ವರರು ಜ್ಞಾನಿಗಳು, ತಪೋನಿಷ್ಠರು ಆಗಿದ್ದರು. ಬಸವಣ್ಣನವರ ಕಾಯಕಯೋಗದ ಬಗ್ಗೆ ನಂಬಿಕೆಯಿಟ್ಟು ಧರ್ಮಪ್ರಚಾರ ಕೈಗೊಂಡ ಮಹಾ ಮಹಿಮ ರಾಗಿದ್ದ ಶರಣರು ಧರ್ಮ ಜಾಗೃತಿಗಾಗಿ, ಸಮಾಜ ಸುಧಾರಣೆಗಾಗಿ ಕೆಲವು ಯೋಜನೆಗಳನ್ನು ರೂಪಿಸಿ, ಇವುಗಳನ್ನು ಅನುಷ್ಠಾನಕ್ಕೆ ತರುವ ಮುನ್ನ ಒಂದೆಡೆ ಸೇರಿ ಕಾರ್ಯಾಲೋಚನೆ ಮಾಡುತ್ತಿದ್ದ ಸ್ಥಳವೇ ಕಾಲಕ್ರಮೇಣ'ಕಾರಾಪುರ'ವಾಗಿ ಹೆಸರು ಪಡೆಯಿತು. ಈ ಚಟುವಟಿಕೆಗಳಿಗೆ ಇಲ್ಲಿನ ಶ್ರೀ ವಿರಕ್ತ ಮಠವು ಮೂಲವಾಗಿತ್ತು. ಅಂದಿನಿಂದ ಇಂದಿನ ತನಕ ತನ್ನ ಅಸ್ತಿತ್ತ್ವವನ್ನು ಉಳಿಸಿಕೊಂಡು ಧಾರ್ಮಿಕ ಪ್ರಭೆಯನ್ನು ಬೀರುತ್ತಾ ಬಂದಿದೆ.

ಹನ್ನೆರಡನೆಯ ಶತಮಾನದ ಅನುಭವಮಂಟಪದೋಪಾದಿಯಲ್ಲಿ ರಚಿತಗೊಂಡಿದ್ದು, ಇಲ್ಲಿನ ಕಾರ್ಯಾಲೋಚನಾ ಸಭೆಗಳಂತಹವು ಬೇರೆ ಎಲ್ಲಿಯೂ ರೂಪಿತಗೊಂಡಿಲ್ಲ. ಆದ್ದರಿಂದ ಈಮಠ ಸಂಶೋಧನೆಗೆ ಒಳ್ಳೆಯ ವಸ್ತುವಾಗಬಲ್ಲದು. ೧೨೬ ಮಠಗಳು ಒಂದೆಡೆ ಸ್ಥಾಪಿತವಾಗಿರುವ ಉಲ್ಲೇಖಗಳು ಬೇರೆ ಎಲ್ಲಿಯೂ ಸಿಕ್ಕದೆ ಇರುವುದರಿಂದ, ಕಾರಾಪುರ ಒಂದು ವಿಶೇಷ ಸ್ಥಳವಾಗಿ ಉಳಿದಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಚಾಮರಾಜ ದೇಶಿಕೇಂದ್ರಸ್ವಾಮಿಗಳು (ಕರ್ತೃಗುರುಗಳು)
೨. ಶ್ರೀ ಮ.ನಿ.ಪ್ರ. ಮಹಾಲಿಂಗಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಗುರುಸಿದ್ಧ ದೇಶಿಕೇಂದ್ರಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಶಿವಕುಮಾರೇಂದ್ರಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಚಂದ್ರಶೇಖರಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಶಿವಲಿಂಗಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಮಹಾಂತಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಚನ್ನಬಸಪ್ಪಸ್ವಾಮಿಗಳು
೯. ಶ್ರೀ ಮ.ನಿ.ಪ್ರ. ಮಹಾಲಿಂಗಸ್ವಾಮಿಗಳು
೧೦. ಶ್ರೀ ಮ.ನಿ.ಪ್ರ. ಶಾಂತಲಿಂಗಸ್ವಾಮಿಗಳು
೧೧. ಶ್ರೀ ಮ.ನಿ.ಪ್ರ. ಪ್ರಭುಲಿಂಗಸ್ವಾಮಿಗಳು
೧೨. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು
೧೩. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು
೧೪. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು
೧೫. ಶ್ರೀ ಮ.ನಿ.ಪ್ರ. ಬಸವರಾಜಸ್ವಾಮಿಗಳು (ಈಗಿನ ಗುರುಗಳು)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಮೂಲ ಕರ್ತೃ ಶ್ರೀ ಚಾಮರಾಜ ದೇಶಿಕೇಂದ್ರ ಸ್ವಾಮಿಗಳಿಂದ ಪ್ರಾರಂಭವಾಗಿ, ಈಗಿನ ಶ್ರೀ ಬಸವರಾಜ ಸ್ವಾಮಿಗಳ ತನಕ ಒಟ್ಟು ಹದಿನೈದು ಜನ ಸ್ವಾಮಿಗಳು ನಿರಂತರವಾಗಿ ಮಠದ ಆಡಳಿತವನ್ನು ನಡೆಸಿಕೊಂಡು ಬಂದು ನಾಡಿಗೆ ಕೀರ್ತಿಪ್ರಾಯರಾಗಿದ್ದಾರೆ. ಲಿಂಗೈಕ್ಯರಾದ ಹದಿನಾಲ್ಕು ಜನ ಸ್ವಾಮಿಗಳ ಪೈಕಿ ಹದಿಮೂರು

ಗದ್ದುಗೆಗಳು ಕಾರಾಪುರದ ಮೂಲಮಠದಲ್ಲಿವೆ. ಅಣ್ಣಿಗೆರೆಯಲ್ಲಿ ಒಂದು ಗದ್ದುಗೆಯು ನಿರ್ಮಾಣವಾಗಿದೆ.

ಶಿವಯೋಗಿಗಳಿಗೆ ಶಿವದೀಕ್ಷೆ ಕೊಟ್ಟ ಮಠ: ವೀರಶೈವ ಮಹಾಸಭೆಯ ಸಂಸ್ಥಾಪಕರು, ಶಿವಯೋಗ ಮಂದಿರದ ಸಂಸ್ಥಾಪಕರು ಆದ ಹಾನಗಲ್ಲು ಶ್ರೀ ಕುಮಾರ ಸ್ವಾಮಿಗಳು, ಶಿವಯೋಗ ಸಿದ್ಧಿಗಾಗಿ ಉತ್ತರದಿಂದ ದಕ್ಷಿಣದ ಕಡೆ ಲೋಕಸಂಚಾರ ಕೈಗೊಂಡು ಯಳಂದೂರಿನಲ್ಲಿ ಶ್ರೀ ಬಸವಲಿಂಗ ಸ್ವಾಮಿಗಳ ಸೇವೆಗೈದು ಲಿಂಗಾಂಗ ಸಾಮರಸ್ಯದ ಅರಿವನ್ನು ಪಡೆದುಕೊಂಡರು. ಅನೇಕ ವರ್ಷಗಳ ಕಾಲ ಕಾರಾಪುರ ವಿರಕ್ತ ಮಠದಲ್ಲಿ ನೆಲೆಸಿ ಅನುಷ್ಠಾನಗೊಂಡು, ಶ್ರೀ ಬಸವಲಿಂಗ ಸ್ವಾಮಿಗಳಿಂದ ಚಿನ್ಮಯದೀಕ್ಷೆ ಪಡೆದು ಧರ್ಮಪ್ರಚಾರಕ್ಕಾಗಿ ಉತ್ತರದ ಕಡೆಗೆ ಪ್ರಯಾಣ ಬೆಳೆಸಿದರು.

ರಾಜರ ಕೊಡುಗೆ: ಚೋಳರ ಕಾಲದಲ್ಲಿ ನಿರ್ಮಿತವಾದ ಕಲ್ಲಿನ ಕಟ್ಟಡವು ಶಿಲ್ಪ ಕಲೆಯ ಕೆತ್ತನೆಯಿಂದ ನಿರ್ಮಿತವಾಗಿದ್ದು, ಗುರುಗಳ ಭಕ್ತರಾಗಿದ್ದ ಚೋಳರು ಈ ಮಠವನ್ನು ಕಟ್ಟಿಸಿಕೊಟ್ಟಿದ್ದಾರೆ. ಚೋಳರು ಈ ಮಠದ ಅಭಿವೃದ್ಧಿಗೆ ಅನೇಕ ಕಾಣಿಕೆಗಳನ್ನು ನೀಡಿದ್ದಾರೆ. ಇದೇ ರೀತಿ ಟಿಪ್ಪುಸುಲ್ತಾನ್ ಹಾಗೂ ಮೈಸೂರು ಒಡೆಯರು ದತ್ತಿಗಳನ್ನು ನೀಡಿದ್ದಾರೆ. ಮಠದ ಧಾರ್ಮಿಕ ಚಟುವಟಿಕೆಗಳು ನಿರಂತರವಾಗಿ ಯಾವ ಅಡೆತಡೆಯೂ ಇಲ್ಲದಂತೆ ನಡೆಯಲು, ಅನೇಕ ಸ್ಥಿರ ಆಸ್ತಿಗಳನ್ನು ನೀಡಿ ನೆರವಾಗಿದ್ದಾರೆ ಎಂದು ಹೇಳಲಾಗುತ್ತಿದೆ.

ಗಣಾರಾಧನೆ: ಪ್ರತಿವರ್ಷ ಫಾಲ್ಗುಣ ಮಾಸದಲ್ಲಿ ಸಂಪ್ರದಾಯದ ರೀತಿಯಲ್ಲಿ ನಡೆದುಕೊಂಡು ಬಂದ ಪ್ರಮಥರ ಗಣಾರಾಧನೆ ಹಿಂದಿನಿಂದಲೂ ಬಹಳ ವೈಭವಯುತವಾಗಿ ನಡೆಯುತ್ತಾ ಬಂದಿದೆ. ಸುತ್ತಲ ಗ್ರಾಮಸ್ಥರು ಒಟ್ಟಿಗೆ ಸೇರಿ ಸಡಗರ ಸಂಭ್ರಮಗಳಿಂದ ಗಣಾರಾಧನೆಯ ಕೆಲಸಗಳನ್ನು ಎಲ್ಲರೂ ಹಂಚಿಕೊಂಡು ಸಾಂಘವಾಗಿ ನಡೆಸುತ್ತಾರೆ. ಈ ಆರಾಧನೆಗೆ ಪ್ರತಿ ವರ್ಷವು ಚಿತ್ರದುರ್ಗ ಬೃಹನ್ಮಠದ ಲಿಂಗೈಕ್ಯ ಜಗದ್ಗುರು ಶ್ರೀ ಜಯದೇವ ಮುರುಘರಾಜೇಂದ್ರ ಸ್ವಾಮಿಗಳು ತಪ್ಪದೆ ಬಂದು ಹೋಗುತ್ತಿದ್ದರು.

ಮೂರು ದಿನಗಳ ಕಾಲ ನಡೆಯುವ ಗಣಾರಾಧನೆಯ ಕಾರ್ಯದಲ್ಲಿ ಅನ್ನದಾಸೋಹದ ಜತೆಗೆ ಜ್ಞಾನ ದಾಸೋಹವನ್ನು ನೀಡುತ್ತಾ ಬಂದಿದೆ. ನಾಡಿನ ಹೆಸರಾಂತ ವಿದ್ವಾಂಸರನ್ನು ಕರೆಸಿ ವಿಶೇಷ ಉಪನ್ಯಾಸ ನೀಡಿಸುವುದು, ಅನೇಕ ಹರಗುರು ಚರಮೂರ್ತಿ ಗಳನ್ನು ಕರೆಸಿ ಭಕ್ತರಿಗೆ ದರ್ಶನಾವಕಾಶ ಕಲ್ಪಿಸುವುದು ವಾಡಿಕೆಯಂತೆ ನಡೆದು ಬಂದಿದೆ.

ಶ್ರೀ ಬಸವರಾಜ ಸ್ವಾಮಿಗಳು: ಇತಿಹಾಸ ಪ್ರಸಿದ್ಧ ಮಠಕ್ಕೆ ಹದಿನೈದನೆಯ ಗುರುಗಳಾಗಿ ನೇಮಕಗೊಂಡ ಶ್ರೀ ಬಸವರಾಜ ಸ್ವಾಮಿಗಳು, ೧೯೬೩ ರಲ್ಲಿ ಕನಕಪುರದ ಸ್ವಾಮಿಗಳ ಅನುಗ್ರಹದಿಂದ ಪಟ್ಟಾಧಿಕಾರ ಪಡೆದು ಮಠದ ಅಧಿಕಾರ ವಹಿಸಿಕೊಂಡರು. ಇವರು ಮಠದ ಸರ್ವತೋಮುಖ ಪ್ರಗತಿಗೆ ಗಮನ ಕೊಟ್ಟು, ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಹಿರಿಯ ಗುರುಗಳಾದ ಶ್ರೀ ಬಸವಲಿಂಗ ಸ್ವಾಮಿಗಳ ಕರಕಮಲ ಸಂಜಾತರಾಗಿ ಸಾಹಿತ್ಯಿಕ ಗುಣಗಳನ್ನು ಮೈಗೂಡಿಸಿಕೊಂಡು ಮಠವನ್ನು ಮುನ್ನಡೆಸುತ್ತಿದ್ದಾರೆ. ಮಠದ ಆಸ್ತಿಯಾಗಿ ನಲವತ್ತು ಎಕರೆ ಜಮೀನಿದ್ದು ಇದನ್ನೇ ನಂದನವನವನ್ನಾಗಿಸಿರುವ ಶ್ರೀ ಬಸವರಾಜ ಸ್ವಾಮಿಗಳು ಸ್ವಾವಲಂಬನೆ ಸಾಧಿಸಿದ್ದಾರೆ. ಮಠದ ಆಸ್ತಿಯಿಂದ ಬರುವ ಆದಾಯವನ್ನು ದಾಸೋಹಕ್ಕೆ ಹಾಗೂ ಧಾರ್ಮಿಕ ಕಾರ್ಯಗಳಿಗೆ ಬಳಸಿಕೊಂಡು ಮಠವನ್ನು ಮುನ್ನಡೆಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಬಸವರಾಜ ಸ್ವಾಮಿಗಳು, ಶ್ರೀ ವಿರಕ್ತಮಠ, ಕಾರಾಪುರ, ಯಳಂದೂರು ತಾ.ಚಾಮರಾಜನಗರ ಜಿಲ್ಲೆ.

ಕೆಸ್ತೂರು

ಯಳಂದೂರು ತಾಲ್ಲೂಕಿನ ಕೆಸ್ತೂರು ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಏಳು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ಪಟ್ಟದ ಮಠವು ಅಸ್ತಿತ್ವದಲ್ಲಿದೆ.

ಪಟ್ಟದಮಠ: ಕೆಸ್ತೂರು ಗ್ರಾಮದ ಮಧ್ಯದಲ್ಲಿ ಶ್ರೀ ಪಟ್ಟದ ಮಠವು ಸ್ಥಾಪನೆಯಾಗಿ, ಧಾರ್ಮಿಕ ಕೇಂದ್ರಬಿಂದುವಾಗಿ ಕಂಗೊಳಿಸುತ್ತಿದೆ. ಸುಮಾರು ೧೧೦ ವರ್ಷಗಳ ಹಿಂದೆ ಮನೆಯಲ್ಲೇ ಭಿಕ್ಷಾ ಕಾಯಕ ಮಾಡಿಕೊಂಡಿದ್ದ ಹಿಂದಿನ ಗುರುಗಳ

ನಂತರ, ಈ ಮನೆಯನ್ನೇ ಮಠವನ್ನಾಗಿ ಪರಿವರ್ತಿಸಿದರು ಎಂದು ಹೇಳಲಾಗುತ್ತಿದೆ.

ಪರಂಪರೆ: ೧. ಶ್ರೀ ನಾಗಲಿಂಗಸ್ವಾಮಿಗಳು
೨. ಶ್ರೀ ಸಿದ್ಧರಾಮಸ್ವಾಮಿಗಳು
೩. ಶ್ರೀ ತೋಂಟದಾರ್ಯಸ್ವಾಮಿಗಳು (ಈಗಿನವರು)

ದೇವನೂರಿನ ಶ್ರೀ ತೋಂಟದಾರ್ಯ ಸ್ವಾಮಿಗಳ ಮರಿಯಾಗಿದ್ದ ಶ್ರೀ ನಾಗಲಿಂಗ ಸ್ವಾಮಿಗಳು ಕೆಸ್ತೂರಲ್ಲಿ ಮಠವನ್ನು ಪುನರ್ ಸ್ಥಾಪಿಸಿ, ಮಠದ ಕಾರ್ಯಚಟುವಟಿಕೆಗಳು ಪುನಃ ಪ್ರಾರಂಭವಾಗಲು ಕಾರಣೀಭೂತರಾಗಿದ್ದಾರೆ. ಇವರು ದೀರ್ಘಕಾಲ ಮಠದ ಆಡಳಿತ ನೋಡಿಕೊಂಡು ದಾಸೋಹ ಕ್ರಿಯೆಯನ್ನು ಮಠದಲ್ಲಿ ಅಭಿವೃದ್ಧಿಪಡಿಸಿ ಲಿಂಗೈಕ್ಯರಾಗಿದ್ದಾರೆ. ನಂತರ ಬಂದ ಶ್ರೀ ಸಿದ್ಧರಾಮ ಸ್ವಾಮಿಗಳು ಹಿರಿಯ ಗುರುಗಳ ಮಾರ್ಗದರ್ಶನದಲ್ಲಿ ದಾಸೋಹದ ಕಾಯಕವನ್ನು ಚುರುಕುಗೊಳಿಸಿದ್ದು, ಭಿಕ್ಷದ ಮಠವನ್ನು ಪಟ್ಟದ ಮಠವನ್ನಾಗಿ ಪರಿವರ್ತಿಸಿದ್ದರು.

ಶ್ರೀ ತೋಂಟದಾರ್ಯ ಸ್ವಾಮಿಗಳನ್ನು ಕರೆತಂದು ೧೯೯೨ರಲ್ಲಿ ಪಟ್ಟಾಧಿಕಾರ ಮಾಡಿಸಿ, ಹಿರಿಯ ಗುರುಗಳಾದ ಶ್ರೀ ಸಿದ್ಧರಾಮ ಸ್ವಾಮಿಗಳು ಶತಾಯುಷಿಗಳಾಗಿ ಅಕ್ಟೋಬರ್ ೨೦೦೦ದಲ್ಲಿ ಲಿಂಗೈಕ್ಯರಾದರು. ಈಗ ಮಠದ ಆಡಳಿತವನ್ನು ನೋಡಿಕೊಳ್ಳುತ್ತಿರುವ ಶ್ರೀ ತೋಂಟದಾರ್ಯ ಸ್ವಾಮಿಗಳು, ೧೯೬೭ರಲ್ಲಿ ಹೆಗ್ಗಡದೇವನಕೋಟೆ ತಾಲ್ಲೂಕು ಆಲನಹಳ್ಳಿಯಲ್ಲಿ ಶ್ರೀ ಚನ್ನಪ್ಪ ಮತ್ತು ಶ್ರೀಮತಿ ಗೌರಮ್ಮನವರ ಪುತ್ರರಾಗಿ ಜನಿಸಿದ ಇವರು ಮಠದ ಅಧಿಕಾರವನ್ನು ವಹಿಸಿಕೊಂಡರು. ಹಿಂದಿನ ಗುರುಗಳ ಮಾರ್ಗದಲ್ಲಿ ಮುನ್ನಡೆಯುತ್ತಾ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ತಮ್ಮ ಪಟ್ಟಾಧಿಕಾರವಾದ ಐದು ವರ್ಷಗಳಲ್ಲಿ ಮೂಲಮಠದ ಕಟ್ಟಡವನ್ನು ತೆಗೆಸಿ, ೧೯೯೭ರಲ್ಲಿ ನೂತನ ಕಟ್ಟಡವನ್ನು ನಿರ್ಮಿಸಿದ್ದಾರೆ. ಮಠದ ಆಸ್ತಿಯಲ್ಲಿ ಕಾಯಕಯೋಗದಿಂದ ಬೆಳೆ ತೆಗೆಯುತ್ತಿರುವ ಶ್ರೀ ತೋಂಟದಾರ್ಯ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಶ್ರೀ ನಾಗಲಿಂಗ ಸ್ವಾಮಿಗಳ ಮತ್ತು ಶ್ರೀ ಸಿದ್ಧರಾಮ ಸ್ವಾಮಿಗಳ ಗದ್ದುಗೆಗಳಿಗೆ ನಿತ್ಯಪೂಜೆ, ಶ್ರಾವಣ ಮತ್ತು ಕಾರ್ತೀಕಮಾಸಗಳಲ್ಲಿ ವಿಶೇಷ ಪೂಜೆ ಹಾಗೂ ಹಿರಿಯ ಗುರುಗಳ ಆರಾಧನೆ ಕಾರ್ಯವನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ತೋಂಟದಾರ್ಯ ಸ್ವಾಮಿಗಳು, ಶ್ರೀ ಪಟ್ಟದಮಠ, ಕೆಸ್ತೂರು, ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ಗೌಡಹಳ್ಳಿ

ಯಳಂದೂರು ತಾಲ್ಲೂಕಿನ ಗೌಡಹಳ್ಳಿಯು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಎಂಟು ಕಿ.ಮೀ.ದೂರದಲ್ಲಿದೆ. ಇಲ್ಲಿ ಮುರುಘಾ ಸಮಯದ ವಿರಕ್ತಮಠವು ಸ್ಥಾಪನೆಯಾಗಿದೆ.

ಗೌಡಹಳ್ಳಿ ಮಠ: ಉತ್ತರದ ಕಡೆಯಿಂದ ಬಂದ ಬಳ್ಳಾರಿ ಶ್ರೀ ಮಹಾಂತ ಸ್ವಾಮಿಗಳು ದೇವನಹಳ್ಳಿಯಲ್ಲಿ ನೆಲೆಸಿ, ನಂತರ ಗೌಡಹಳ್ಳಿಗೆ ಬಂದು ಮಠವನ್ನು ಸ್ಥಾಪನೆ ಮಾಡಿದ್ದಾರೆ. ಇವರ ನಂತರ ಶ್ರೀ ಸಿದ್ಧಲಿಂಗ ಸ್ವಾಮಿಗಳು ಮಠದ ಅಧಿಕಾರ ನಡೆಸಿ, ನೂರು ವರ್ಷಗಳ ತುಂಬು ಜೀವನ ನಡೆಸಿ ೧೯೪೪ ರಲ್ಲಿ ಲಿಂಗೈಕ್ಯರಾಗಿದ್ದಾರೆ ಎಂಬ ಆಧಾರವನ್ನು ಬಿಟ್ಟರೆ, ಈ ಹಿಂದೆ ಮಠದ ಅಧಿಕಾರ ವಹಿಸಿಕೊಂಡ ಗುರುಗಳ ಹೆಸರುಗಳು ಎಲ್ಲಿಯೂ ದಾಖಲಾಗಿಲ್ಲ. ಈ ಮಠ ಬಳ್ಳಾರಿ ಶ್ರೀ ಮಹಾಂತ ಸ್ವಾಮಿಗಳ ನಂತರ ಅಸ್ತಿತ್ವದಲ್ಲಿ ಇತ್ತೇ ಇಲ್ಲವೆ ಎಂಬುದರ ಬಗ್ಗೆ ನಿಖರವಾದ ಮಾಹಿತಿಗಳು ಲಭ್ಯವಿಲ್ಲ.

ಪರಂಪರೆ: ೧. ಶ್ರೀ ಮ.ನಿ.ಪ್ರ.ಬಳ್ಳಾರಿ ಮಹಾಂತಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಮರಿತೋಂಟದಾರ್ಯಸ್ವಾಮಿಗಳು. (ಈಗಿನವರು)

ಈ ರೀತಿ ಮಠದ ಪರಂಪರೆಯಲ್ಲಿ ಮೂರು ಜನರನ್ನು ಉಲ್ಲೇಖಿಸಬಹುದು. ಹಿಂದಿನ ಶ್ರೀ ಸಿದ್ಧಲಿಂಗ ಸ್ವಾಮಿಗಳು ತಮ್ಮ

ಪರಿಶ್ರಮದಿಂದ ಮಠದ ಅಭಿವೃದ್ಧಿಗೆ ಶ್ರಮಿಸಿ, ಹಂಚಿಹೋಗಿದ್ದ ಮಠದ ಆಸ್ತಿಯನ್ನು ಗುರುತಿಸಿ ಮಠಕ್ಕೆ ಒಂದು ರೂಪುಕೊಟ್ಟರು. ನಂತರ ಮಠದ ಆಸ್ತಿಯಾಗಿ ಉಳಿದಿದ್ದ ಐದು ಎಕರೆಯನ್ನು ಅಭಿವೃದ್ಧಿಪಡಿಸಿ ಮಠಕ್ಕೆ ತನ್ನದೇ ಆದಾಯವನ್ನು ರೂಪಿಸಿಕೊಂಡರು. ಈ ರೀತಿ ಹಂತಹಂತವಾಗಿ ಮಠ ಬೆಳಕಿಗೆ ಬರಲು ಕಾರಣರಾದ ಶ್ರೀ ಸಿದ್ಧಲಿಂಗ ಸ್ವಾಮಿಗಳು, ಧಾರ್ಮಿಕ ವಿಧಿವಿಧಾನಗಳ ಬಿನ್ನಹ ತೀರಿಸಿಕೊಂಡು ಭಕ್ತರಿಗೆ ನೆರವಾಗಿದ್ದರು. ಶ್ರೀ ಸಿದ್ಧಲಿಂಗ ಸ್ವಾಮಿಗಳ ಕರಕಮಲಸಂಜಾತರಾಗಿ ಬಂದ ಶ್ರೀ ಮರಿತೋಂಟ ದಾರ್ಯ ಸ್ವಾಮಿಗಳಿಗೆ ೧೯೮೧ ರಲ್ಲಿ ಹಿರಿಯ ಗುರುಗಳ ಸಮ್ಮುಖದಲ್ಲಿ, ನಂಜನಗೂಡು ತಾಲ್ಲೂಕು ಹುಲ್ಲಳ್ಳಿಯ ಹಿರಿಯ ಸ್ವಾಮಿಗಳ ಅನುಗ್ರಹದಿಂದ ಪಟ್ಟಾಧಿಕಾರ ಮಾಡಲಾಯಿತು. ಜೀರ್ಣಾವಸ್ಥೆಯಲ್ಲಿರುವ ಮಠದ ಕಟ್ಟಡ ಶ್ರೀ ಮರಿತೋಂಟದಾರ್ಯ ಸ್ವಾಮಿಗಳ ಕಾಲದಲ್ಲಿ ಜೀರ್ಣೋದ್ಧಾರವಾಗಬೇಕಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಮರಿತೋಂಟದಾರ್ಯ ಸ್ವಾಮಿಗಳು, ಶ್ರೀ ಗೌಡಹಳ್ಳಿಮಠ, ಗೌಡಹಳ್ಳಿ, ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ಹೊನ್ನೂರು

ಯಳಂದೂರು ತಾಲ್ಲೂಕಿನ ಹೊನ್ನೂರು ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಹತ್ತು ಕಿ.ಮೀ. ದೂರದಲ್ಲಿದೆ. ಇಲ್ಲಿ ಪಟ್ಟದ ಮಠವು ಅಸ್ತಿತ್ವದಲ್ಲಿದೆ.

ಪಟ್ಟದಮಠ: ಹಚ್ಚ ಹಸುರಿನ ಮಧ್ಯೆ ಕಂಗೊಳಿಸುತ್ತಿರುವ ಹೊನ್ನೂರು ಗ್ರಾಮದಲ್ಲಿ ಪಟ್ಟದಮಠವು ೧೯೦೨ರಲ್ಲಿ ಪ್ರಾರಂಭವಾಗಿದೆ. ಗ್ರಾಮದ ಜನರು ಊರು ನೈತಿಕವಾಗಿ ಬಲಗೊಳ್ಳಲು ಮಠಾಧೀಶರ ನೇಮಕಮಾಡಬೇಕೆಂದು ನಿಶ್ಚಯಿಸಿ, ನಂಜನಗೂಡು ತಾಲ್ಲೂಕಿನ ಮಲ್ಲನ ಮೂಲೆಯ ಶ್ರೀ ಕಂಬಳೇಶ್ವರ ಮಠದ ಶಾಖಾಮಠವನ್ನು ಪ್ರಾರಂಭಿಸಿದರು. ಮಠಕ್ಕಾಗಿ ನಾಲ್ಕುಅಂಕಣದ ಕಟ್ಟಡವನ್ನು ಸಿದ್ಧಗೊಳಿಸಿ, ಸುತ್ತೂರಿನ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ನೇತೃತ್ವದಲ್ಲಿ ಶ್ರೀ ಪುಟ್ಟಬಸಪ್ಪ ಸ್ವಾಮಿಗಳಿಗೆ ಮಲ್ಲನ ಮೂಲೆ ಮಠದ ಸ್ವಾಮಿಗಳಿಂದ ಪಟ್ಟಾಧಿಕಾರದ ಅನುಗ್ರಹ ಕೊಡಿಸಿದರು.

ಸಾಲ ತೀರಿಸಿದ ಭಕ್ತರು: ಕಾಯಕಯೋಗಿ, ಮಹಾತಪಸ್ವಿ ಶ್ರೀ ಪುಟ್ಟಬಸಪ್ಪ ಸ್ವಾಮಿಗಳನ್ನು ನೂತನ ಮಠದ ಅಧಿಕಾರಕ್ಕೆ ತರಬೇಕೆಂದು ನಿರ್ಧರಿಸಿದ ಜನರು, ಶ್ರೀ ಪುಟ್ಟಬಸಪ್ಪನವರಲ್ಲಿಗೆ ಹೋಗಿ ತಮ್ಮ ಅನಿಸಿಕೆಗಳನ್ನು ಮುಂದಿಟ್ಟರು. ಆಗ ಅವರ ಮನೆಯ ಪರಿಸ್ಥಿತಿ ಕೆಟ್ಟುಹೋಗಿತ್ತು, ತಂದೆ ಮಾಡಿದ ಸಾಲ ಹೆಚ್ಚಾಗಿತ್ತು. ಈ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲಾಗದೆ ಮನೆಯ ಪರಿಸ್ಥಿತಿಯನ್ನು ಬಂದ ಭಕ್ತರ ಮುಂದೆ ಹೇಳಿ, ಮೊದಲು ಮನೆಯ ಮಗನಾಗಿ ತಂದೆ ತಾಯಿಗಳಿಗೆ ನೆರವಾಗಬೇಕು, ನಂತರ ಮುಂದಿನದನ್ನು ಯೋಚನೆ ಮಾಡುತ್ತೇನೆ ಎಂದು ಹೇಳಿದರು. ಆಗ ಬಂದ ಭಕ್ತರು ಇಂತಹ ಕಾಯಕ ನಿಷ್ಠೆಯ ಮರಿದೇವರನ್ನು ಬಿಟ್ಟರೆ ಸರಿಯಾಗದು ಎಂದು ಅರಿತು ಶ್ರೀ ಪುಟ್ಟಬಸಪ್ಪ ಸ್ವಾಮಿಗಳ ತಂದೆ ಮಾಡಿದ ಸಾಲವನ್ನು ಭಕ್ತರೇ ತೀರಿಸಲು ನಿರ್ಧರಿಸಿ, ಶ್ರೀ ಪುಟ್ಟಬಸಪ್ಪ ದೇವರನ್ನು ಸಾಲದಿಂದ ಮುಕ್ತಗೊಳಿಸಿ ಮಠಕ್ಕೆ ಕರೆದುಕೊಂಡು ಬಂದು ಪಟ್ಟಾಧಿಕಾರ ಮಾಡಿದರು.

ದೀರ್ಘ ಆಡಳಿತ: ಸುಮಾರು ಐವತ್ತು ವರ್ಷಗಳ ಕಾಲ ದಾಸೋಹಕ್ಕೆ ಭಿಕ್ಷಾ ಕಾಯಕ ನಡೆಸಿದ ಶ್ರೀ ಪುಟ್ಟಬಸಪ್ಪ ಸ್ವಾಮಿಗಳು ಎಂದೂ ಹಣಕ್ಕೆ ಆಸೆ ಮಾಡದೆ ದಾಸೋಹಕ್ಕೆ ತಮ್ಮ ಬದುಕನ್ನು ಸೀಮಿತಗೊಳಿಸಿ ಧರ್ಮಪ್ರಚಾರ ಮಾಡುವುದರಲ್ಲಿ ಮಗ್ನರಾಗಿದ್ದಾಗಲೇ, ಮಠದಲ್ಲಿ ನಡೆದ ಕಹಿ ಘಟನೆಯಿಂದ ಬೇಸತ್ತು ಮಠ ಬಿಟ್ಟು ಹೊರನಡೆದರು. ಕಾಯಕಯೋಗಿಗಳಾದ ಶ್ರೀ ಪುಟ್ಟಬಸಪ್ಪ ಸ್ವಾಮಿಗಳು ಮಠದ ಹಿಂದೆ ಇದ್ದ ಕೆರೆಯಲ್ಲಿ ಸ್ನಾನಮಾಡಿ, ಪೂಜೆಯ ನಂತರ ಭಿಕ್ಷದಕಾಯಕ ನಡೆಸುತ್ತಾ ಸುಮಾರು ಒಂದು ವರ್ಷ ಕಳೆದರು. ಈ ವೇಳೆಯಲ್ಲಿ ಗುರುಗಳ ಎರಡೂ ಕಣ್ಣುಗಳೂ ಕಾಣಿಸದಂತಾದವು. ಈ ಸಂದರ್ಭದಲ್ಲಿಯೂ ಶ್ರೀ ಪುಟ್ಟಬಸಪ್ಪ ಸ್ವಾಮಿಗಳು ಯಾರಿಗೂ ಭಾರವಾಗದೆ ಒಪ್ಪತ್ತು ಪ್ರಸಾದ ಸ್ವೀಕರಿಸಿ, ಕುಳಿತಲ್ಲೇ ಧ್ಯಾನಾಸಕ್ತರಾಗಿ ಇರುತ್ತಿದ್ದರು. ಈ ಸಂದರ್ಭದಲ್ಲಿ ಒಬ್ಬ ಭಕ್ತ ಮಾತ್ರ ಪ್ರತಿನಿತ್ಯ ಬಂದು ಅವರ ಸೇವೆ ಮಾಡಿ ಹೋಗುತ್ತಿದ್ದರು. ನಂತರ ಮೂರು ವರ್ಷಗಳು ಬಿಟ್ಟು ಯಾವುದೇ ಚಿಕಿತ್ಸೆಇಲ್ಲದೆ ಕಣ್ಣುಗಳಿಗೆ ದೃಷ್ಟಿ ಬಂದಿದ್ದು ಇನ್ನೂ ಚಿದಂಬರ ರಹಸ್ಯವಾಗಿದೆ.

ಇದಾದ ನಂತರ ಶ್ರೀ ಪುಟ್ಟಬಸಪ್ಪ ಸ್ವಾಮಿಗಳನ್ನು ಪುನಃ ಮಠಕ್ಕೆ ಕರೆತಂದರು. ಗುರುಗಳು ಹಿಂದಿನ ಎಲ್ಲಾ ಕಹಿ ಘಟನೆಗಳನ್ನು ಮರೆತು ತಮ್ಮ ಕೊನೆಯ ದಿನದ ಬದುಕನ್ನು ಸಾರ್ಥಕವಾಗಿ ಕಳೆದು, ಮಠದ ಜ್ಯೋತಿಯಾಗಿ ಬೆಳಗಿ ೧೯೭೨ ರಂದು ಶಿವೈಕ್ಯರಾಗುತ್ತಾರೆ.

ವಿಸ್ತಾರಗೊಂಡ ಮಠ: ಗುರುಗಳು ಲಿಂಗೈಕ್ಯರಾದ ಮೇಲೆ ಇದೇ ಗ್ರಾಮದ ಎಚ್.ವಿ.ಮಲ್ಲಪ್ಪ ಮತ್ತು ಎಚ್.ವಿ.ಶಿವಣ್ಣನವರು ನಾಲ್ಕು ಅಂಕಣದ ಮಠವನ್ನು ತೆಗೆಸಿ, ವಿಶಾಲವಾದ ಮಠ ಕಟ್ಟಿಸಿ ಪುನಃ ೧೯೭೬ ಜೂನ್ ಎರಡರಂದು ಉದ್ಘಾಟನೆ ಮಾಡಿಸಿರುತ್ತಾರೆ. ಮಠ ಖಾಲಿ ಬೀಳಬಾರದೆಂದು ೧೯೮೪ ರ ಮೇ ಹದಿನಾರರಂದು ಶ್ರೀ ಸಾಂಬಸದಾಶಿವ ಸ್ವಾಮಿಗಳನ್ನು ಕರೆತಂದು ಪಟ್ಟಾಧಿಕಾರ ಮಾಡಿದರು. ಭಿಕ್ಷದ ದಾಸೋಹ ಮಠವನ್ನು ಶ್ರೀ ಸಾಂಬಸದಾಶಿವ ಸ್ವಾಮಿಗಳು ಪಟ್ಟದ ಮಠವಾಗಿ ಪರಿವರ್ತಿಸಿ, ಮಠದ ಆಸ್ತಿಯನ್ನು ಅಭಿವೃದ್ಧಿಗೊಳಿಸಿ ಹೆಚ್ಚು ಆದಾಯ ಬರುವಂತೆ ಮಾಡಿರುತ್ತಾರೆ. ಗುರುಗಳು ಧಾರ್ಮಿಕ ವಲಯದಲ್ಲಿ ತಮ್ಮ ಪ್ರಭಾವವನ್ನು ಮೂಡಿಸಿ, ಧಾರ್ಮಿಕ ಆಚರಣೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸಾಂಬಸದಾಶಿವ ಶಿವಾಚಾರ್ಯ ಸ್ವಾಮಿಗಳು, ಶ್ರೀ ಪಟ್ಟದ ಮಠ, ಹೊನ್ನೂರು, ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ.

❑

ಚಿಕ್ಕಮಗಳೂರು ಜಿಲ್ಲೆ



ಚಿಕ್ಕಮಗಳೂರು ತಾಲ್ಲೂಕು : ೧. ಹಿರೇಕಾನು, ೨. ಹಿರೇಕೊಳಲೆ, ೩. ಮುತ್ತಿನ ಪುರ, ೪. ಸಿಂದಗೆರೆ, ೫. ಹೊಸಳ್ಳಿ, ೬. ಆರದವಳ್ಳಿ, ೭. ಬೇರಗಂಡಿಮಠ, ೮. ಕಂಚಕಲ್ಲು ದುರ್ಗ

ನರಸಿಂಹರಾಜಪುರ ತಾಲ್ಲೂಕು : ೧. ಬಾಳೆಹೊನ್ನೂರು

ಕಡೂರು ತಾಲ್ಲೂಕು : ೧. ಗಿರಿಯಾಪುರ, ೨. ಬೀರೂರು, ೩. ಮಾದಾಪುರ, ೪. ಕೆ.ಬಿದರೆ, ೫. ಹುಲಿಕೆರೆ, ೬. ಸಖರಾಯಪಟ್ಟಣ

ತರಿಕೆರೆ ತಾಲ್ಲೂಕು : ೧. ಹುಣಸಘಟ್ಟ, ೨. ಹಣ್ಣೆ, ೩. ನಂದೀಪುರ, ೪. ನಂದಿ

ಸಖರಾಯಪಟ್ಟಣದ ದೊರೆ ರುಕ್ಮಾಂಗದನು ತನ್ನ ಇಬ್ಬರು ಹೆಣ್ಣುಮಕ್ಕಳ ಮದುವೆಯ ಸಂದರ್ಭದಲ್ಲಿ ಹಿರಿಯ ಮಗಳಿಗೆ ಒಂದು ಊರನ್ನ, ಚಿಕ್ಕಮಗಳಿಗೆ ಒಂದು ಊರನ್ನು ಬಳುವಳಿಯಾಗಿ ನೀಡಿದ ಊರುಗಳೇ ಹಿರೇಮಗಳೂರು ಹಾಗೂ ಚಿಕ್ಕಮಗಳೂರು ಆಗಿವೆ ಎಂದು ಸ್ಥಳ ಪುರಾಣಗಳಿಂದ ತಿಳಿದು ಬರುತ್ತಿದೆ. ಈ ಅವಳಿ ಊರುಗಳಲ್ಲಿ ಚಿಕ್ಕಮಗಳೂ ರು ಬೆಳೆದು ಜಿಲ್ಲಾಕೇಂದ್ರವಾಗಿದೆ. ಶಿವಮೊಗ್ಗ,ಚಿತ್ರದುರ್ಗ,ಹಾಸನ,ದಕ್ಷಿಣಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಗಡಿಪ್ರದೇಶಗಳಿಂದ ಆವೃತಗೊಂಡ ಈ ಜಿಲ್ಲೆಯು ಚಿಕ್ಕಮಗಳೂರು, ಕಡೂರು, ನರಸಿಂಹರಾಜಪುರ, ಕೊಪ್ಪ, ಶೃಂಗೇರಿ ಮತ್ತು ಮೂಡಿಗೆರೆ ತಾಲ್ಲೂಕುಗಳನ್ನು ಒಳಗೊಂಡಿದೆ.

ಕಾಫಿಯ ಕಂಪಿನ ಜತೆಗೆ ಭದ್ರಾ, ತುಂಗೆ, ಹೇಮಾವತಿ, ನೇತ್ರಾವತಿ, ವೇದಾವತಿ ಹಾಗೂ ಯಗಚಿ ನದಿಗಳು ಈ ಜಿಲ್ಲೆಯಲ್ಲಿ ಹುಟ್ಟಿ ನಾಡನ್ನು ಪಾವನಗೊಳಿಸಿವೆ. ದಕ್ಷಿಣ ಭಾರತದಲ್ಲೇ ಅತ್ಯಂತ ಎತ್ತರದ ಗಿರಿಶ್ರೇಣಿಯೆಂದು ಹೆಸರು ಗಳಿಸಿರುವ ಮುಳ್ಳಯ್ಯನಗಿರಿ, ಚಂದ್ರದ್ರೋಣ ಪರ್ವತ, ಕುದುರೆಮುಖ, ಕಲ್ಲತ್ತಗಿರಿ, ಕೆಮ್ಮಣ್ಣುಗುಂಡಿ ಮುಂತಾದ ರಮ್ಯ ಸ್ಥಳಗಳನ್ನು ಒಳಗೊಂಡು ಗಿರಿಕಂದರಗಳಿಂದ ಜಿಲ್ಲೆ ಪ್ರಾಕೃತಿಕವಾಗಿ ಎಷ್ಟು ಶ್ರೀಮಂತಿಕೆ ಪಡೆದಿದೆಯೋ,ಅಷ್ಟೇ ಶ್ರೀಮಂತಿಕೆ ಯನ್ನು ಧಾರ್ಮಿಕವಾಗಿಯೂ ಪಡೆದಿದೆ. ಪಂಚ ಪೀಠಗಳಲ್ಲಿ ಒಂದಾದ ಶ್ರೀರಂಭಾಪುರಿಪೀಠ ಬಾಳೆಹೊನ್ನೂರಿನ ಭದ್ರಾ ನದಿಯ ದಡದಲ್ಲಿ ಸ್ಥಾಪನೆಯಾಗಿರುವುದು ಜಿಲ್ಲೆಯ ಹೆಗ್ಗಳಿಕೆ.

ಜಗದ್ಗುರು ಶ್ರೀ ರೇಣುಕಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಶ್ರೀ ರಂಭಾಪುರಿ ಪೀಠ ಒಂದೆಡೆಯಾದರೆ, ೧೨ ನೆಯ ಶತಮಾನದಲ್ಲಿ ಕಲ್ಯಾಣಕ್ರಾಂತಿಯ ನಂತರ ಶರಣ ನುಲಿಯಚಂದಯ್ಯ ಹಾಗೂ ಶರಣೆ ಅಕ್ಕನಾಗಮ್ಮನವರು ಈ ಜಿಲ್ಲೆಗೆ ಬಂದು ತರೀಕೆರೆ ಬಳಿ ಲಿಂಗೈಕ್ಯರಾಗಿದ್ದಾರೆ. ಆಲ್ದೂರು ಸಮೀಪದ ಬೇರುಗಂಡಿಮಠದಲ್ಲಿ ವಚನದ ಕಟ್ಟುಗಳು ದೊರೆತಿದ್ದು, ಪಂಚಪೀಠದ ಮಠವೊಂದು ೧೨ ನೆಯ ಶತಮಾನದ ಶರಣರಿಗೆ ಆಶ್ರಯ ಸ್ಥಾನವಾಗಿತ್ತು ಎಂದು ಹೇಳಲಾಗಿದೆ.

ಜಿಲ್ಲೆಯಲ್ಲಿ ಪುರಾತನ ಕಾಲದಿಂದ ಎಪ್ಪತ್ತೇಳು ಮಠಗಳು ಸ್ಥಾಪನೆಯಾಗಿದ್ದವು ಎಂಬ ಮಾಹಿತಿ ದೊರೆತಿದೆ. ಈ ಮಾಹಿತಿಯ ಆಧಾರದ ಮೇಲೆ ಶೋಧನೆಗೆ ಹೋದಾಗ ಮೂವತ್ನಾಲ್ಕು ಮಠಗಳು ದೊರೆತಿವೆ. ಉಳಿದವುಗಳು ಹೇಳಲು ಹೆಸರಿಲ್ಲದಂತಾಗಿರುವುದು ನೋವಿನ ಸಂಗತಿ. ಮೂವತ್ನಾಲ್ಕು ಮಠಗಳಲ್ಲಿ ಹದಿನಾರು ಮಠಗಳು ಮಾತ್ರ ಕ್ರಿಯಾತ್ಮಕವಾಗಿ ಕಾರ್ಯನಿರ್ವಹಿಸುತ್ತಿವೆ. ಉಳಿದ ಮಠಗಳು ಮಠಾಧೀಶರಿಲ್ಲದೆ ಕೇವಲ ಗದ್ದುಗೆ ಪೂಜೆಗಷ್ಟೇ ಸೀಮಿತವಾಗಿವೆ. ಇಲ್ಲಿನ ಮಠಗಳಿಗೆ ಕೆಳದಿ ಅರಸರು (೧೪೯೯-೧೭೬೩),ಮೈಸೂರಿನ ಒಡೆಯರು (೧೭೯೪-೧೯೪೭) ಹಾಗೂ ತರೀಕೆರೆಯ ಪಾಳೆಗಾರರ (೧೮-೧೯ಶತಮಾನ) ಕಾಲದಲ್ಲಿ ಹೆಚ್ಚು ಪ್ರೋತ್ಸಾಹ ಸಿಕ್ಕಿದೆ.

ಶೃಂಗೇರಿ ಶಾರದಾಪೀಠ ಹಾಗೂ ರಂಭಾಪುರಿ ಪೀಠದ ಸಂಬಂಧ ಅನ್ಯೋನ್ಯತೆಯಿಂದ ಕೂಡಿದೆ. ಅಲ್ಲದೆ ದತ್ತಾತ್ರೇಯರು ಚಂದ್ರದ್ರೋಣ ಪರ್ವತಕ್ಕೆ ಆಗಮಿಸಿದ ಸಂದರ್ಭದಲ್ಲಿ ಇಲ್ಲಿನ ವೀರಶೈವ ಮಠಗಳಾದ ಶ್ರೀ ಬಿಸಗ್ನಿ ಮಠ, ಶ್ರೀ ಫಲಹಾರೇಶ್ವರ ಮಠವು ಆಶ್ರಯ ನೀಡಿ ದತ್ತಾತ್ರೇಯರು ಇಲ್ಲಿ ತಪೋನುಷ್ಠಾನಗೊಳ್ಳಲು ಸಹಾಯಕವಾಗಿವೆ. ಅದೇ ರೀತಿ ದತ್ತಾತ್ರೇಯ ಪೀಠ ಹಾಗೂ ಬಾಬಾಬುಡನ್ ದರ್ಗಾವು ಒಂದೆಡೆ ಸ್ಥಾಪನೆಗೊಂಡು ಧರ್ಮ ಭಾವೈಕ್ಯತೆಯನ್ನು ಮೂಡಿಸಿವೆ.

ಕಡೂರು ತಾಲ್ಲೂಕು

ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕು ಐತಿಹಾಸಿಕವಾಗಿ ಹಾಗೂ ಆರ್ಥಿಕವಾಗಿ ಹೆಸರು ಪಡೆದಂತೆಯೆ ಧಾರ್ಮಿಕವಾಗಿಯೂ ಹೆಸರು ಗಳಿಸಿದೆ. ಈ ತಾಲ್ಲೂಕಿನಲ್ಲಿ ಈಗ ಅಸ್ತಿತ್ವದಲ್ಲಿರುವ ಮಠಗಳ ಜತೆಗೆ ಯಳ್ಳಂಬಳಸೆ, ಬಿ.ಮಲ್ಲೇನಹಳ್ಳಿ,ಚೌಳಹಿರಿಯೂರು ಇನ್ನೂ ಮುಂತಾದ ಕಡೆ ಅನೇಕ ಮಠಗಳು ಅಸ್ತಿತ್ವದಲ್ಲಿದ್ದವೆಂದು ಹೇಳಲಾಗುತ್ತದೆ.

ಕಡೂರು

ಜಿಲ್ಲಾಕೇಂದ್ರದಿಂದ ಈಶಾನ್ಯಕ್ಕೆ ನಲವತ್ತು ಕಿ.ಮೀ ದೂರದಲ್ಲಿದೆ. ಈ ಹಿಂದೆ ಜಿಲ್ಲಾ ಕೇಂದ್ರ ಸ್ಥಳವಾಗಿತ್ತು. ಬದಲಾದ ರಾಜಕೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ೧೮೬೬ರಲ್ಲಿ ಬದಲಾವಣೆಗೊಂಡು ಈಗ ತಾಲ್ಲೂಕು ಕೇಂದ್ರ ಸ್ಥಳವಾಗಿ ಉಳಿದಿದೆ.

ಯಳನಾಡು ಮಠ: ಕಡೂರಿನಲ್ಲಿ ಅರಸೀಕೆರೆಯ ಶ್ರೀ ಯಳನಾಡುಮಠದ ಶಾಖಾಮಠವಾಗಿ ಈ ಮಠವು ಸ್ಥಾಪನೆಯಾಗಿದೆ. ಶ್ರೀ ಬಸವರಾಜ ದೇಶಿಕೇಂದ್ರ ಸ್ವಾಮಿಗಳಿಂದ ಸ್ಥಾಪನೆಯಾದ ಮಠಕ್ಕೆ ಶರಣೆ ಗೌರಮ್ಮ ಎಂಬ ಭಕ್ತೆ ತಮ್ಮ ಆಸ್ತಿಯನ್ನು ನೀಡಿ, ವಿದ್ಯಾರ್ಥಿನಿಲಯವು ಸ್ಥಾಪನೆಯಾಗಲು ಕಾರಣರಾದರು. ಅಂದು ಸ್ಥಾಪನೆಗೊಂಡಿದ್ದ ವಿದ್ಯಾರ್ಥಿನಿಲಯ ಇಂದು ವಿಸ್ತಾರಗೊಂಡಿದೆ. ಯಳನಾಡುಮಠದ ಶ್ರೀ ಜ್ಞಾನಪ್ರಭು ಸಿದ್ಧರಾಮ ದೇಶಿಕೇಂದ್ರ ಸ್ವಾಮಿಗಳು ಅರಸೀಕೆರೆ ಮತ್ತು ಕಡೂರಿನ ಈ ಮಠಗಳನ್ನು ನೋಡಿಕೊಂಡು, ಕಡೂರಿನ ಮಠದಲ್ಲಿ ನೆಲೆಸಿ ಧಾರ್ಮಿಕ ಹಾಗೂ ಆಡಳಿತ ಕಾರ್ಯಗಳನ್ನು ನಡೆಸತೊಡಗಿದ್ದಾರೆ.

ಸೊಲ್ಲಾಪುರ ಗ್ರಾಮದಲ್ಲಿ ಜನಿಸಿದ ಶ್ರೀ ಜ್ಞಾನಪ್ರಭು ಸಿದ್ಧರಾಮ ದೇಶಿಕೇಂದ್ರ ಸ್ವಾಮಿಗಳು, ವಿದ್ಯಾಭ್ಯಾಸವನ್ನು ಮುಗಿಸಿದ ಮೇಲೆ ಅರಸೀಕೆರೆಯ ಮೂರುಕಳಸ ಮಠದ ಅಧಿಕಾರವನ್ನು ವಹಿಸಿಕೊಂಡರು. ಇವರು ಅಧಿಕಾರಕ್ಕೆ ಬಂದ ಮೇಲೆ ಕಡೂರಿನ ಮಠವನ್ನು ಅಭಿವೃದ್ಧಿಪಡಿಸಿ, ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದ್ದಾರೆ. ಈಗಲೂ ವಿದ್ಯಾರ್ಥಿನಿಲಯ ವ್ಯವಸ್ಥಿತವಾಗಿ ನಡೆಯುತ್ತಾ ಬಂದಿದೆ.

ವಿಳಾಸ: ಶ್ರೀ ಜ್ಞಾನಪ್ರಭು ಸಿದ್ಧರಾಮ ದೇಶಿಕೇಂದ್ರ ಸ್ವಾಮಿಗಳು, ಶ್ರೀ ಯಳನಾಡುಮಠ, ಕಡೂರು, ಚಿಕ್ಕಮಗಳೂರು ಜಿಲ್ಲೆ.

ಕಂಚಗಲ್‌ಬಿದರೆ

ಕಡೂರು ತಾಲ್ಲೂಕಿನ ಕಂಚಗಲ್‌ಬಿದರೆಯು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹದಿನೆಂಟು ಕಿ.ಮೀ ದೂರದಲ್ಲಿದೆ. ಈ ಗ್ರಾಮವು ರಾಜ್ಯದ ಅನೇಕ ಮಠಗಳಿಗೆ ಮಠಾಧೀಶರನ್ನು ನೀಡಿದ ಹೆಗ್ಗಳಿಕೆ ಇದೆ.

ದೊಡ್ಡಮಠ: ಆದಿಗುರು ಶ್ರೀ ರೇಣುಕಾಚಾರ್ಯರು ಮಲಯಾಚಲಕ್ಕೆ ಹೋಗುವ ಮುನ್ನ ಕಂಚಗಲ್‌ಬಿದರೆಯಲ್ಲಿ ಕೆಲವು ದಿನ ನೆಲೆ ನಿಂತು ಮಠವನ್ನು ಸ್ಥಾಪಿಸಿ, ತಮ್ಮ ಶಿಷ್ಯರನ್ನು ನೆಲೆಗೊಳಿಸಿ ಹೋದರೆಂದು ಹೇಳಲಾಗುತ್ತಿದೆ. ಇಂತಹ ಪೌರಾಣಿಕ ಸ್ಥಳದಲ್ಲಿ ಅಂದು ಸ್ಥಾಪನೆಗೊಂಡ ಮಠ ಬೆಳೆದು, ಧಾರ್ಮಿಕ ಕೇಂದ್ರಬಿಂದುವಾಗಿ ರೂಪುಗೊಂಡಿದೆ. ಶ್ರೀರಂಭಾಪುರಿ ಪೀಠದ ಶಾಖಾಮಠವಾಗಿ, ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿರುವ ಶ್ರೀ ದೊಡ್ಡಮಠವು ಗುರು-ವಿರಕ್ತರ ಸಂಗಮ ಕ್ಷೇತ್ರವಾಗಿದೆ.

ಪರಂಪರೆ: ಶ್ರೀ ರೇಣುಕಾಚಾರ್ಯರು ಸ್ಥಾಪನೆ ಮಾಡಿದ ಮಠದಲ್ಲಿ ಆದಿಯಿಂದ ಅಧಿಕಾರಕ್ಕೆ ಬಂದ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ಲಭ್ಯವಿಲ್ಲ. ಜಗದ್ಗುರುಗಳ ಆಶೀರ್ವಾದದಿಂದ ಈ ಮಠವು ನಿರಂತರವಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದಿದೆಯಾದರೂ, ಆಧಾರಗಳ ಕೊರತೆಯಿಂದ ಪರಂಪರೆಯನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ.

೧. ಷ.ಬ್ರ.ಶ್ರೀ ಪ್ರಭುಸ್ವಾಮಿಗಳು (ದೊಡ್ಡಜ್ಜಯ್ಯ)

೨. ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಪ್ರಭುಕುಮಾರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಘನಲಿಂಗ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಪ್ರಭುಕುಮಾರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯನ್ನು ಗುರುತಿಸಬಹುದಾಗಿದೆ. ಶ್ರೀ ಪ್ರಭು ಸ್ವಾಮಿಗಳು (ದೊಡ್ಡಜ್ಜಯ್ಯ) ಅಧಿಕಾರಕ್ಕೆ ಬರುವ ತನಕ ಮಠದ ಪರಂಪರೆಯು ಅಸ್ಪಷ್ಟವಾಗಿದೆ. ಶ್ರೀ ಪ್ರಭುಸ್ವಾಮಿಗಳು ಪಂಚಪೀಠಾಧೀಶರ ಸಮ್ಮುಖದಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡು ಶ್ರೀ ದೊಡ್ಡಮಠವನ್ನು ಅಭಿವೃದ್ಧಿಪಡಿಸಿದರು. ಇವರು ದೀರ್ಘಕಾಲ ಬದುಕಿ ಮಠವನ್ನು ಜನಮನದ ಹತ್ತಿರ ಕೊಂಡೊಯ್ದು, ವೀರಶೈವಧರ್ಮ ಬೆಳೆಯುವಂತೆ ಮಾಡಿದ್ದರು. ಇವರ ವ್ಯಕ್ತಿತ್ವವನ್ನು ಗುರುತಿಸಿದ ಭಕ್ತರು ರೂಢಿಗತವಾಗಿ 'ಶ್ರೀ ದೊಡ್ಡಜ್ಜಯ್ಯ' ಎಂದು ಕರೆಯುತ್ತಿದ್ದರು.

ಶ್ರೀ ಪ್ರಭುಸ್ವಾಮಿಗಳು (ದೊಡ್ಡಜ್ಜಯ್ಯ) ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳನ್ನು ನೇಮಕಮಾಡಿಕೊಂಡು, ಪಟ್ಟಾಧಿಕಾರದ ಅನುಗ್ರಹವನ್ನು ನೀಡಿದರು. ಹಿರಿಯ ಗುರುಗಳ ಮಾರ್ಗದರ್ಶನ ದಲ್ಲಿ ಆಧ್ಯಾತ್ಮಸಾಧಕರಾಗಿ ಬೆಳೆದ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಪ್ರಭುಸ್ವಾಮಿಗಳ (ದೊಡ್ಡಜ್ಜಯ್ಯ) ಆಶೀರ್ವಾದ ಪಡೆದು ಲೋಕಸಂಚಾರಕ್ಕೆ ಹೋದರು. ನಂತರ ಹಿರಿಯ ಗುರುಗಳಾದ ಶ್ರೀ ಪ್ರಭುಸ್ವಾಮಿಗಳು (ದೊಡ್ಡಜ್ಜಯ್ಯ) ಶ್ರೀ ಯೋಗಿರಾಜ ಪ್ರಭುಕುಮಾರ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡು ವಿದ್ಯಾ ಭ್ಯಾಸಕ್ಕಾಗಿ ಶಿವಯೋಗ ಮಂದಿರಕ್ಕೆ ಕಳುಹಿಸಿಕೊಟ್ಟರು. ಶ್ರೀ ಯೋಗಿರಾಜ ಪ್ರಭುಕುಮಾರ ಸ್ವಾಮಿಗಳು ಹಾನಗಲ್ಲಿನ ಶ್ರೀ ಕುಮಾರ ಸ್ವಾಮಿಗಳ ಪರಮ ಶಿಷ್ಯರಾಗಿ, ಅವರ ಮಾರ್ಗದರ್ಶನದಲ್ಲಿ ಯೋಗವಿದ್ಯೆಯನ್ನು ಕಲಿತು ಕಂಚಗಲ್ ಬಿದರೆಗೆ ಬಂದು ದೊಡ್ಡಜ್ಜಯ್ಯನವರ ಇಷ್ಟದಂತೆ ಮಠದ ಅಧಿಕಾರವನ್ನು ವಹಿಸಿಕೊಂಡು ಭಕ್ತರ ಒಳಿತಿಗಾಗಿ ಯೋಗ ಪ್ರದರ್ಶನ ಮಾಡುತ್ತಾ, ದೇಶಸಂಚಾರಕ್ಕೆ ಹೊರಟು, ಕಡೂರು ತಾಲ್ಲೂಕಿನ ಗಿರಿಯಾಪುರದಲ್ಲಿ ಭಕ್ತರ ಅಪೇಕ್ಷೆಯ ಮೇರೆಗೆ ತಮ್ಮ ಕೊನೆಯ ದಿನಗಳನ್ನು ಕಳೆದು, ಅಲ್ಲೇ ಲಿಂಗೈಕ್ಯರಾದರು.

ಕಣ್ಮರೆಯಾದ ಹಿರಿಯ ಚೇತನ: ಶ್ರೀ ಪ್ರಭುಸ್ವಾಮಿಗಳು (ದೊಡ್ಡಜ್ಜಯ್ಯ) ದೀರ್ಘಕಾಲ ಬದುಕಿ, ಕಂಚಗಲ್ ಬಿದರೆ ಯಲ್ಲಿ ಮಠವು ಧಾರ್ಮಿಕ ಕೇಂದ್ರವಾಗಿ ಬೆಳೆಯಲು ಭದ್ರಬುನಾದಿಯನ್ನು ಹಾಕಿ, ಹಿರಿತನದ ಗೌರವ ಸದಾ ಸಲ್ಲುವಂತೆ ಮಾಡಿ ಲಿಂಗೈಕ್ಯರಾದರು. ಶ್ರೀ ಪ್ರಭುಸ್ವಾಮಿಗಳ (ದೊಡ್ಡಜ್ಜಯ್ಯ) ಅಪೇಕ್ಷೆಯಂತೆ ಕೆರೆದಡದಲ್ಲಿ ಇರುವ ಕಲ್ಲೇಶ್ವರ ದೇವಸ್ಥಾನ ಮತ್ತು ಶ್ರೀ ಹಾಲುಸ್ವಾಮಿಗಳ ಗದ್ದುಗೆಯ ಹತ್ತಿರ ಭಕ್ತರು ಅವರ ಗದ್ದುಗೆಯನ್ನು ನಿರ್ಮಿಸಿದ್ದಾರೆ.

ಶ್ರೀ ಪ್ರಭುಸ್ವಾಮಿಗಳು (ದೊಡ್ಡಜ್ಜಯ್ಯ) ಲಿಂಗೈಕ್ಯರಾದ ಮೇಲೆ ಮಠವು ಉತ್ತರಾಧಿಕಾರಿಗಳಿಲ್ಲದೆ ಖಾಲಿ ಉಳಿ ಯಿತು. ನಂತರ ಸಖರಾಯಪಟ್ಟಣ-ಹುಣಸಘಟ್ಟದ ಶ್ರೀ ಸದಾಶಿವ ಶಿವಾಚಾರ್ಯ ಹಾಲುಸ್ವಾಮಿಗಳ ಅನುಗ್ರಹದಿಂದ ಶ್ರೀ ಘನಲಿಂಗ ಶಿವಾಚಾರ್ಯ ಸ್ವಾಮಿಗಳು ತಮ್ಮ ಹದಿನಾರನೆಯ ವಯಸ್ಸಿನಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಹಿರಿಯ ಗುರುಗಳಾದ ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳು ತೋರಿಸಿಕೊಟ್ಟ ಮಾರ್ಗದರ್ಶನದಲ್ಲಿ ಮಠವನ್ನು ಮುನ್ನಡೆಸಿಕೊಂಡು ಬಂದರು. ಇವರು ಕಾಯಕಯೋಗಿಗಳಾಗಿ, ಶಿವಪೂಜಾನಿಷ್ಠರಾಗಿ ಹಾಗೂ ಸರಳ ಸಂಪನ್ನರಾಗಿ ಮಠವನ್ನು ಅಭಿವೃದ್ಧಿಪಡಿಸಿದರು. ಶ್ರೀ ಘನಲಿಂಗ ಶಿವಾಚಾರ್ಯರು ತಮ್ಮ ವೃದ್ಧಾಪ್ಯದಲ್ಲಿಯೂ ಚಟುವಟಿಕೆಯಿಂದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಗುರುಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಪ್ರಭುಕು ಮಾರ ಶಿವಾಚಾರ್ಯ ಸ್ವಾಮಿಗಳನ್ನು ನೇಮಿಸಿಕೊಂಡು, ೧೯೯೩ರ ಏಪ್ರಿಲ್ ಇಪ್ಪತ್ತಾರರಂದು ಪಟ್ಟಾಧಿಕಾರದ ಅನುಗ್ರಹ ನೀಡಿದ್ದಾರೆ. ಶ್ರೀ ಪ್ರಭುಕುಮಾರ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡ ನಂತರ ಉನ್ನತ ವಿದ್ಯಾ ಭ್ಯಾಸವನ್ನು ಮುಗಿಸಿ ಮಠಕ್ಕೆ ಆಗಮಿಸಿ, ಹಿರಿಯ ಗುರುಗಳ ಮಾರ್ಗದರ್ಶನದಲ್ಲಿ ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಹಿರಿಯ ಚೇತನ ಶ್ರೀ ಘನಲಿಂಗ ಶಿವಾಚಾರ್ಯ ಸ್ವಾಮಿಗಳು ತಮ್ಮ ಕಾಯಕಯೋಗದಿಂದ

ಮಠದ ಆಸ್ತಿಯಲ್ಲಿ ಆದಾಯ ಬರುವಂತೆ ಮಾಡಿ, ಅಭಿವೃದ್ಧಿ ಕಾರ್ಯಗಳಿಗೆ ತೊಡಗಿಸಿದರು. ದೈವಭಕ್ತರಾದ ಶ್ರೀಎ.ಸಿ. ಚಂದ್ರೇಗೌಡರು ಉಂಬಳಿಯಾಗಿ ಕೊಟ್ಟಂತಹ ತೆಂಗಿನ ತೋಟವನ್ನು ಅಭಿವೃದ್ಧಿಪಡಿಸಿದ್ದಾರೆ. ಭಕ್ತರ ನೆರವು ಪಡೆದು ೧೯೮೪ರಲ್ಲಿ ಶ್ರೀ ದೊಡ್ಡಮಠಕ್ಕೆ ನೂತನ ಕಟ್ಟಡವನ್ನು ನಿರ್ಮಿಸಿದ್ದಾರೆ. ಈಗಿನ ಗುರುಗಳಾದ ಶ್ರೀ ಪ್ರಭು ಕುಮಾರ ಶಿವಾಚಾರ್ಯ ಸ್ವಾಮಿಗಳ ಪಟ್ಟಾಧಿಕಾರದ ಸಂದರ್ಭದ ಸವಿನೆನಪಿಗಾಗಿ ಶ್ರೀ ಎ.ಸಿ.ಚಂದ್ರೇಗೌಡರ ಪುತ್ರರಾದ ಶ್ರೀ ಎ.ಸಿ.ಪ್ರಭು ರಾಜಶೇಖರ್‌ರವರ ಕೊಡುಗೆಯಿಂದ ೧೯೯೪ರಲ್ಲಿ ಮಠಕ್ಕೆ ದ್ವಾರಮಂಟಪವನ್ನು ನಿರ್ಮಿಸಲಾಗಿದೆ.

ಧಾರ್ಮಿಕ ಕಾರ್ಯಗಳು: ಪುರಾತನ ಪರಂಪರೆಯ ಮಠದ ಗುರುಗಳ ಗದ್ದುಗೆಗಳಿಗೆ ನಿತ್ಯಪೂಜೆ, ಶ್ರಾವಣಮಾಸದಲ್ಲಿ ವಿಶೇಷಪೂಜೆ, ಕಾರ್ತೀಕದಲ್ಲಿ ದೀಪೋತ್ಸವವನ್ನು ಕೇವಲ ಧಾರ್ಮಿಕ ಆಚರಣೆಯಾಗಿ ಆಚರಿಸದೆ ಸಾಹಿತ್ಯೋತ್ಸವವನ್ನಾಗಿ ಆಚರಿಸಲಾಗುತ್ತಿದೆ.ಈ ಸಂದರ್ಭದಲ್ಲಿ ನಾಡಿನ ಬೇರೆಬೇರೆ ಭಾಗಗಳಿಂದ ಸಾಹಿತಿಗಳು ಹಾಗೂ ವಿದ್ವಾಂಸರನ್ನು ಬರ ಮಾಡಿಕೊಂಡು ಉಪನ್ಯಾಸ ಮಾಡಿಸುವುದಲ್ಲದೆ, ವಿವಿಧ ಕ್ಷೇತ್ರಗಳಲ್ಲಿ ದುಡಿದ ಗಣ್ಯರಿಗೆ ಸನ್ಮಾನಮಾಡಿ ಪುರಸ್ಕರಿಸುವುದು ವಾಡಿಕೆಯಾಗಿ ಬೆಳೆದು ಬಂದಿದೆ. ಶ್ರೀ ದೊಡ್ಡಜ್ಜಯ್ಯನವರನ್ನು ಕುರಿತು 'ಶ್ರೀಪ್ರಭುವರೇಣ್ಯಚರಿತ್ರೆ'ಯನ್ನುಪ್ರಕಟಿಸಲಾಗಿದೆ.

ವಿಳಾಸ:ಷ.ಬ್ರ.ಶ್ರೀ.ಘನಲಿಂಗ ಶಿವಾಚಾರ್ಯಸ್ವಾಮಿಗಳು, ಶ್ರೀ ದೊಡ್ಡಮಠ,ಕಂಚುಗಲ್‌ಬಿದರೆ,ಕಡೂರು ತಾ, ಚಿಕ್ಕಮಗಳೂರುಜಿಲ್ಲೆ.

ಗಿರಿಯಾಪುರ

ಕಡೂರು ತಾಲ್ಲೂಕಿನ ಗಿರಿಯಾಪುರ ಗ್ರಾಮವು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಹದಿನಾಲ್ಕು ಕಿ.ಮೀ ದೂರದಲ್ಲಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಾದರಿ ಗ್ರಾಮವೆಂದು ಹೆಸರು ಪಡೆದ ಗಿರಿಯಾಪುರವು ಧಾರ್ಮಿಕ ಕ್ಷೇತ್ರದಲ್ಲಿಯೂ ಹೆಸರು ಪಡೆದಿದೆ.

ಗುರುಕುಮಾರಾಶ್ರಮ: ಸಖರಾಯಪಟ್ಟಣ ಮತ್ತು ಹುಣಸಘಟ್ಟದ ಶ್ರೀ ಹಾಲುಸ್ವಾಮಿ ಮಠದ ಮಠಾಧೀಶರಾಗಿದ್ದ, ಶ್ರೀ ಸದಾಶಿವ ಶಿವಾಚಾರ್ಯ ಹಾಲುಸ್ವಾಮಿಗಳು ಇಲ್ಲಿ ನೆಲೆಸಿ ಆಶ್ರಮವನ್ನು ಸ್ಥಾಪಿಸಿದ್ದರು. ಗ್ರಾಮದ ಪೂರ್ವಕ್ಕೆ ಹೊರಭಾಗದಲ್ಲಿ ಆಶ್ರಮವು ಸ್ಥಾಪನೆಯಾಗಿ, ಧಾರ್ಮಿಕ ಚಟುವಟಿಕೆಯ ಕೇಂದ್ರಬಿಂದುವಾಗಿ ರೂಪುಗೊಂಡಿದೆ.

ಆಶ್ರಮ ಸ್ಥಾಪನೆ: ಕಂಚಗಲ್‌ಬಿದರೆಯ ಶ್ರೀ ದೊಡ್ಡಮಠದ ಶ್ರೀ ಶಿವಯೋಗಿ ಪ್ರಭುಕುಮಾರ ಸ್ವಾಮಿಗಳು ತಮ್ಮ ಕೊನೆಯ ದಿನಗಳನ್ನು ಗಿರಿಯಾಪುರದಲ್ಲಿ ಕಳೆದು ಲಿಂಗೈಕ್ಯರಾದರು. ಇವರ ಗದ್ದುಗೆಯು ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ ದೇವಸ್ಥಾನದ ಪಕ್ಕದಲ್ಲಿ ಸ್ಥಾಪನೆಯಾಗಿದೆ. ಈ ಗದ್ದುಗೆಗೆ ನಿತ್ಯ ಪೂಜೆ ನಡೆಯಲು ನೆರವಾಗಲು ತರೀಕೆರೆ ತಾಲ್ಲೂಕಿನ ಚನ್ನಾಪುರ ಗ್ರಾಮದ ಶ್ರೀ ಸಿ.ಎ.ನಾಗಪ್ಪಗೌಡರು ಏಳುಎಕರೆ ಜಮೀನನ್ನು ದಾನವಾಗಿ ನೀಡಿದ್ದಾರೆ. ಶ್ರೀ ಸದಾಶಿವ ಶಿವಾಚಾರ್ಯ ಹಾಲುಸ್ವಾಮಿಗಳು ಗಿರಿಯಾಪುರಕ್ಕೆ ಆಗಮಿಸಿ, ಶ್ರೀ ಶಿವಯೋಗಿ ಪ್ರಭುಕುಮಾರ ಸ್ವಾಮಿಗಳ ಸೇವೆಯನ್ನು ಮಾಡಿದರು. ಶ್ರೀ ಪ್ರಭುಕುಮಾರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಶ್ರೀ ಸದಾಶಿವ ಸ್ವಾಮಿಗಳು ಇಲ್ಲಿಯೇ ನೆಲೆಸಿ, ಊರಿನ ಹಿರಿಯರು ಹಾಗೂ ದೈವಭಕ್ತರಾದ ಶ್ರೀ ಜಿ.ಸಿ.ಶಿವರುದ್ರಪ್ಪನವರ ನೆರವಿನಿಂದ ಊರಿನ ಪೂರ್ವಭಾಗದಲ್ಲಿ ೧೯೬೬ರಲ್ಲಿ ಆಶ್ರಮ (ಮಠ)ವನ್ನು ಕಟ್ಟಿಸಿದರು. ಹಿರಿಯ ಗುರುಗಳಾದ ಲಿಂಗೈಕ್ಯ ಶ್ರೀ ಪ್ರಭು ಕುಮಾರ ಸ್ವಾಮಿಗಳ ನೆನಪಿಗಾಗಿ 'ಶ್ರೀ ಗುರುಕುಮಾರಾಶ್ರಮ' ಎಂದು ನಾಮಕರಣ ಮಾಡಿದರು.

ಶ್ರೀ ಸದಾಶಿವ ಶಿವಾಚಾರ್ಯ ಹಾಲುಸ್ವಾಮಿಗಳು ಇಲ್ಲಿ ನೆಲೆಸಿದ ಸಂದರ್ಭದಲ್ಲಿ ಧರ್ಮೋಪದೇಶ ಕಾರ್ಯಕ್ರಮಗಳು ಹಾಗೂ ಅನ್ನ ದಾಸೋಹವನ್ನು ನಡೆಸತೊಡಗಿದರು. ಗುರುಗಳ ಮಾರ್ಗದರ್ಶನದಲ್ಲಿ ಗ್ರಾಮವು ಧಾರ್ಮಿಕವಾಗಿ ಶ್ರೀಮಂತಗೊಂಡಿತು. ಗುರುಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ಕಡೂರು ತಾಲ್ಲೂಕಿನ ಕಲ್ಕೆರೆ ಗ್ರಾಮದ ಶ್ರೀ ಶಿವಮೂರ್ತಯ್ಯ ಮತ್ತು ಶ್ರೀಮತಿ ಗಂಗಮ್ಮನವರ ಪುತ್ರರಾಗಿ ೧೯೫೮ರಲ್ಲಿ ಜನಿಸಿದ ಶ್ರೀ ವೇದಮೂರ್ತಿ ದೇವರನ್ನು ನೇಮಿಸಿಕೊಂಡರು.

ಶ್ರೀ ವೇದಮೂರ್ತಿ ದೇವರ ಪ್ರೌಢಶಿಕ್ಷಣ ಗಿರಿಯಾಪುರದಲ್ಲಿ ಮುಗಿದ ಮೇಲೆ ಶಿವಯೋಗಮಂದಿರಕ್ಕೆ ಹೋಗಿ ಅಲ್ಲಿ ಸಂಸ್ಕೃತ, ವೇದ ಹಾಗೂ ಯೋಗವನ್ನು ಅಭ್ಯಾಸ ಮಾಡಿ ಸಂಸ್ಕಾರವಂತ ವಟುವಾಗಿ ಬೆಳೆದರು. ಇವರ ಪಾಂಡಿತ್ಯ ವನ್ನು ಗುರುತಿಸಿದ ಹಾವೇರಿ ಜಿಲ್ಲೆಯ ಹಾನಗಲ್ಲು ವಿರಕ್ತ ಮಠದ ಭಕ್ತರು ತಮ್ಮ ಮಠದ ಉತ್ತರಾಧಿಕಾರಿ ಗಳನ್ನಾಗಿ ನೇಮಿಸಿಕೊಂಡು, 'ಶ್ರೀಕುಮಾರಸ್ವಾಮಿ'ಗಳೆಂಬ ಅಭಿಧಾನದೊಂದಿಗೆ ಪಟ್ಟಾಧಿಕಾರ ಮಾಡಿದರು. ಇದರಿಂದ ಗಿರಿಯಾಪುರದ ಶ್ರೀ ಗುರುಕುಮಾರಾಶ್ರಮವು ಖಾಲಿಉಳಿಯಿತು. ಹಾನಗಲ್ಲು ವಿರಕ್ತಮಠದ ಶ್ರೀ ಕುಮಾರಸ್ವಾಮಿಗಳು ಗಿರಿಯಾಪುರದ ಆಶ್ರಮದ ಸಂಪರ್ಕವನ್ನು ದೂರಮಾಡದೆ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಈಗ ಹುಬ್ಬಳ್ಳಿ ಮೂರುಸಾವಿರ ಮಠದ ಜಗದ್ಗುರುಗಳಾಗಿ ಅಧಿಕಾರವನ್ನು ವಹಿಸಿಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಆಶ್ರಮದ ಆವರಣದಲ್ಲಿರುವ ಉಜ್ಜಯಿನಿ ಮರುಳಸಿದ್ಧೇಶ್ವರ ದೇವಸ್ಥಾನ, ಬಸವಮಂದಿರ, ಆಶ್ರಮದ ಸ್ಥಾಪಕರಾದ ಶ್ರೀ ಸದಾಶಿವ ಶಿವಾಚಾರ್ಯ ಹಾಲುಸ್ವಾಮಿಗಳ ಗದ್ದುಗೆ ಹಾಗೂ ಶ್ರೀ ಶಿವರುದ್ರಪ್ಪನವರ ಗದ್ದುಗೆಗಳಿಗೆ ಪೂಜೆ ನಡೆಯುತ್ತಿದೆ. ಶಿವರಾತ್ರಿಯ ವೇಳೆಯಲ್ಲಿ ನಡೆಯುವ ಮೂರುದಿನದ ಶಿವಾನುಭವ ಸಮ್ಮೇಳನದಲ್ಲಿ ನಾಡಿನವಿದ್ವಾಂಸರಿಂದ ಪ್ರವಚನ ಕಾರ್ಯಕ್ರಮ ನಡೆಯುತ್ತಿದೆ.ಈ ಸಂದರ್ಭದಲ್ಲಿ ದಾಸೋಹವನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಗುರುಕುಮಾರಾಶ್ರಮ, ಗಿರಿಯಾಪುರ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ಬೀರೂರು

ಕಡೂರು ತಾಲ್ಲೂಕಿನ ಬೀರೂರು ಪಟ್ಟಣವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಏಳು ಕಿ.ಮೀ ದೂರದಲ್ಲಿದೆ. ಹಿಂದೆ ಈ ಪಟ್ಟಣವು ವೀರಶೈವ ಧರ್ಮದ ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ಬೆಳೆದಿತ್ತು. ಇಲ್ಲಿ ನಲವತ್ತು ವೀರಶೈವ ಮಠಗಳು ಸ್ಥಾಪನೆಯಾದ್ದವು ಎಂಬ ಮಾಹಿತಿ ದೊರೆಯುತ್ತದೆ. ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿದ್ದ ಮಠವೊಂದು ವೀರಶೈವ ಧರ್ಮದ ಆಚರಣೆಗಳಿಗೆ ಹಾಗೂ ಇಲ್ಲಿ ಸ್ಥಾಪನೆಗೊಂಡಿದ್ದ ಮಠಗಳಿಗೆ ಕೇಂದ್ರಬಿಂದುವಾಗಿ ರೂಪು ಗೊಂಡಿತ್ತು ಎಂದು ಹೇಳಲಾಗುತ್ತದೆ. ಹಾರನಹಳ್ಳಿ ಕೋಡಿಮಠದ ಶಾಖಾಮಠವು ಸಹ ಅಸ್ತಿತ್ವದಲ್ಲಿತ್ತು.

ಶ್ರೀ ರಂಭಾಪುರಿ ಪೀಠದ ಶಾಖಾ ಮಠವು ಅಂದು ಸಂಸ್ಕೃತ ಹಾಗೂ ವೇದಾಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಆಶ್ರಯ ಸ್ಥಾನವಾಗಿತ್ತು. ಇಲ್ಲಿನ ಗುರುಕುಲವು ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಬೆಳೆದು ನಾಡಿನ ಅನೇಕ ಪ್ರತಿಭಾವಂತ ಪಂಡಿತರನ್ನು ಇಲ್ಲಿ ನೆಲೆಗೊಳ್ಳುವಂತೆ ಮಾಡಿ ಶಿಕ್ಷಣವನ್ನು ನೀಡುತ್ತಿತ್ತೆಂದು ಹೇಳಲಾಗುತ್ತದೆ. ವೀರಶೈವ ಮಠಗಳಿಗೆ ನೇಮಕಗೊಂಡ ವಟುಗಳಿಗೆ ಇದು ಧಾರ್ಮಿಕ ಸಂಸ್ಕಾರಕೊಡುವ ಕೇಂದ್ರವಾಗಿಯೂ ರೂಪುಗೊಂಡಿತ್ತೆಂದು ಹೇಳಲಾಗುತ್ತದೆ. ಈ ಬಗ್ಗೆ ಸಂಶೋಧನೆ ನಡೆಸಿದರೆ ಹೆಚ್ಚು ಮಾಹಿತಿ ಲಭ್ಯವಾಗುತ್ತದೆ. ೨೦೦೧ರಲ್ಲಿ ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿ ಶ್ರೀ ಶಿವಾನಂದ ಮಠವನ್ನು ಸ್ಥಾಪಿಸಲಾಗಿದೆ.

ಮಾದಾಪುರ

ಕಡೂರು ತಾಲ್ಲೂಕಿನ ಯಳ್ಳಂಬಳಸೆ ಬಳಿ ಇರುವ ಮಾದಾಪುರವು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಈ ಗ್ರಾಮವು ಧಾರ್ಮಿಕ ಕ್ಷೇತ್ರದಲ್ಲಿ ಹೆಚ್ಚು ಹೆಸರು ಪಡೆದಿದೆ.

ಮರುಳಸಿದ್ಧೇಶ್ವರಮಠ: ಈ ಗ್ರಾಮದ ದಕ್ಷಿಣದ ಹೊರಭಾಗದ ವೇದಾವತಿ ನದಿಯ ದಡದಲ್ಲಿ ಶ್ರೀ ಮರುಳಸಿದ್ಧೇಶ್ವರ ಮಠವು ಸ್ಥಾಪನೆಯಾಗಿ ಈ ಸ್ಥಳ ಜಾಗೃತ ಕ್ಷೇತ್ರವಾಗಿ ರೂಪುಗೊಂಡು, ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿದೆ.

ಮಠ ಸ್ಥಾಪನೆ: ಕಡೂರು ತಾಲ್ಲೂಕಿನ ನಿಡುವಳ್ಳಿಯಲ್ಲಿ ಜನಿಸಿದ ಶ್ರೀ ಮರುಳಸಿದ್ಧೇಶ್ವರ ಸ್ವಾಮಿಗಳು ಬಾಲ್ಯದಲ್ಲೇ ಆಧ್ಯಾತ್ಮವನ್ನು ಮೈಗೂಡಿಸಿಕೊಂಡು, ಪ್ರೌಢಾವಸ್ಥೆಗೆ ಬಂದ ಮೇಲೆ ಲೋಕಸಂಚಾರ ಕೈಗೊಂಡು ನಾಡಲ್ಲೆಲ್ಲಾ ಸಂಚರಿಸಿ ದರು. ಗುರುಗಳು ಅನುಷ್ಠಾನಗೊಂಡ ಸ್ಥಳಗಳು ಇಂದಿಗೂ ಜಾಗೃತಸ್ಥಳಗಳಾಗಿ ರೂಪುಗೊಂಡಿವೆ. ಚಿಕ್ಕಮಗಳೂರು

ಜಿಲ್ಲೆಯ ತರೀಕೆರೆ ತಾಲ್ಲೂಕಿನ ಬುಕ್ಕಾಂಬುದಿಯ ಬೆಟ್ಟದ ಮೇಲೆ ಅನುಷ್ಠಾನಗೊಂಡು ನಂತರ ಪಕ್ಕದ ನಾರಣಾಪುರ ಗ್ರಾಮಕ್ಕೆ ಬಂದು ಜಟಡಪ್ಪ ಎಂಬುವರ ಮನೆಯಲ್ಲಿ ಒಬ್ಬ ಮುದುಕಿಯ ಶವಕ್ಕೆ ಜೀವಕೊಟ್ಟು, ಆ ಮುದುಕಿ ಕೈಯಲ್ಲಿ ಅಡುಗೆ ಮಾಡಿಸಿ ಕೊಂಡು ಪ್ರಸಾದವನ್ನು ಸ್ವೀಕರಿಸಿ ಹೋದರೆಂದು ಹೇಳುವ ಜನಪದ ಕಥೆ ಕೇಳಿಬರುತ್ತಿದೆ. ಶ್ರೀಮರುಳ ಸಿದ್ಧ ಸ್ವಾಮಿಗಳು ಮುದುಕಿಯ ಹತ್ತಿರ ಅಡುಗೆ ಮಾಡಿಸಿಕೊಳ್ಳುತ್ತಿದ್ದ ಸಂದರ್ಭದಲ್ಲಿ ನೀರಿಲ್ಲದಿದ್ದಾಗ ತಮ್ಮ ತಪೋಶಕ್ತಿ ಯಿಂದ ಬೆತ್ತದಿಂದ ಬಾವಿತೋಡಿದರಂತೆ. ಗುರುಗಳ ಪವಾಡದಿಂದ ತಯಾರಾದ ಬಾವಿ ಈಗಲೂ ಜಾಗೃತ ಸ್ಥಳವಾಗಿದೆ. ಜಟಡಪ್ಪನ ಮನೆತನದ ಶ್ರೀ ಕರಿಬಸಪ್ಪನವರ ಮಕ್ಕಳಾದ ಶ್ರೀ ಎನ್.ಕೆ. ಶಿವರುದ್ರಪ್ಪನವರು ಈ ಬಾವಿಗೆ ನಿತ್ಯಪೂಜೆ ಯನ್ನು ಮಾಡುತ್ತ ಸ್ಮಾರಕದಂತೆ ಉಳಿಸಿಕೊಂಡಿದ್ದಾರೆ. ನಾರಣಾಪುರದಲ್ಲಿ ಪವಾಡವನ್ನು ಮಾಡಿದ ಶ್ರೀ ಮರುಳಸಿದ್ಧೇಶ್ವರ ಸ್ವಾಮಿಗಳು ಕಡೂರು ತಾಲ್ಲೂಕಿನ ಮಾದಾಪುರಕ್ಕೆ ಬಂದು, ವೇದಾನದಿ ದಡದಲ್ಲಿ ಅನುಷ್ಠಾನ ಕುಳಿತು ಈ ಪ್ರಾಂತ್ಯವನ್ನು ತಪೋಭೂಮಿಯನ್ನಾಗಿ ಮಾಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಶ್ರೀ ಮರುಳಸಿದ್ಧೇಶ್ವರ ಸ್ವಾಮಿಗಳು ಅನುಷ್ಠಾನ ಕುಳಿತ ಜಾಗೃತಸ್ಥಳದಲ್ಲಿ ಮಠವನ್ನು ಕಟ್ಟಿ, ತೋರುಗದ್ದುಗೆಯನ್ನು ಸ್ಥಾಪಿಸಲಾಗಿದೆ. ಶ್ರೀ ಮರುಳಸಿದ್ಧೇಶ್ವರ ಸ್ವಾಮಿಗಳ ಭಕ್ತರು ವಿಶ್ವಸ್ಥ ಸಮಿತಿಯನ್ನು ಸ್ಥಾಪಿಸಿ ಮಠದಲ್ಲಿ ಧಾರ್ಮಿಕ ಕಾರ್ಯಗಳು ನಡೆಯಲು ವ್ಯವಸ್ಥೆ ಮಾಡಿದ್ದಾರೆ. ನಿತ್ಯ ರುದ್ರಾಭಿಷೇಕ ಪೂಜೆ ಹಾಗೂ ಅನ್ನ ದಾಸೋಹ ಕಾರ್ಯಕ್ರಮ ಪ್ರತಿ ತಿಂಗಳ ಅಮಾವಾಸ್ಯೆಯಲ್ಲಿ ವಿಶೇಷ ಪೂಜೆ ನಡೆಯುತ್ತಿದೆ.

ವಿಳಾಸ: ಶ್ರೀ ಮರುಳುಸಿದ್ಧೇಶ್ವರಮಠ, ಮಾದಾಪುರ, ಯಳ್ಳಂಬಳಸೆ ಅಂಚೆ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ಸಖರಾಯಪಟ್ಟಣ

ಕಡೂರು ತಾಲ್ಲೂಕಿನ ಸಖರಾಯಪಟ್ಟಣ ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಐತಿಹಾಸಿಕ ಮತ್ತು ಪೌರಾಣಿಕ ಹಿನ್ನೆಲೆ ಇರುವ ಈ ಗ್ರಾಮದಲ್ಲಿ ಶ್ರೀ ಕಲ್ಮುರುಡೇಶ್ವರಮಠ ಮತ್ತು ಶ್ರೀ ಹಾಲುಸ್ವಾಮಿ ಮಠ ಎಂಬ ಎರಡು ವೀರಶೈವ ಮಠಗಳು ಸ್ಥಾಪನೆಯಾಗಿವೆ.

ಹಾಲುಸ್ವಾಮಿಮಠ: ಉತ್ತರದ ಕಡೆಯಿಂದ ಲೋಕಸಂಚಾರ ಕೈಗೊಂಡು ಇಲ್ಲಿ ಅನುಷ್ಠಾನ ಕೈಗೊಂಡಿದ್ದ ಓರ್ವ ಗುರು ಗಳು ಅನೇಕ ಪವಾಡಗಳನ್ನು ಮಾಡಿ ಭಕ್ತರನ್ನು ಉದ್ಧರಿಸಿ'ಶ್ರೀ ಹಾಲುಸ್ವಾಮಿ'ಗಳೆಂದು ಪ್ರಸಿದ್ಧಿ ಪಡೆದರು. ಇವರ ಹೆಸರಿನಲ್ಲಿ 'ಶ್ರೀಹಾಲುಸ್ವಾಮಿಮಠ' ಸ್ಥಾಪನೆಯಾಗಿ, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರಲಾಗಿತ್ತು. ಈಗ ಈ ಮಠವು ತರೀಕೆರೆ ತಾಲ್ಲೂಕಿನ ಹುಣಸಘಟ್ಟದ ಶ್ರೀ ಹಾಲುಸ್ವಾಮಿ ಮಠದ ಆಡಳಿತಕ್ಕೆ ಒಳಪಟ್ಟು, ಹುಣಸಘಟ್ಟ ಮಠದ ಮಠಾಧೀಶರ ಉಸ್ತುವಾರಿಯಲ್ಲಿ ಮುನ್ನಡೆಯುತ್ತಿದೆ. ಈಗ ನಾರಣಾಪುರದ ಶ್ರೀ ಲಿಂಗಯ್ಯನವರು ಇಲ್ಲಿ ನೆಲೆಸಿ ಮಠದ ಪರಂಪರೆಯ ಐದುಗದ್ದುಗೆಗಳಿಗೆ ನಿತ್ಯಪೂಜೆಯನ್ನು ಮಾಡುತ್ತಾ, ಧಾರ್ಮಿಕಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಗುರುಮೂರ್ತಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಾಲುಸ್ವಾಮಿಮಠ, ಮೊಕ್ಕಾಂ ಹುಣಸೆಘಟ್ಟ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ಕಲ್ಮುರುಡೇಶ್ವರ ಮಠ: ಸಖರಾಯಪಟ್ಟಣದ ನೈರುತ್ಯಕ್ಕೆ ವೇದಾವತಿ ನದಿಯ ದಡದ ಬಿಲ್ವಪತ್ರೆ ವನದಲ್ಲಿ ಶ್ರೀ ಕಲ್ಮುರುಡೇಶ್ವರ ಮಠವು ಸ್ಥಾಪನೆಯಾಗಿದೆ. ಸಿಂದಿಗೆರೆಯ ಸಮೀಪದ ಕರಡಿಗವಿಯಲ್ಲಿ ಅನುಷ್ಠಾನಕ್ಕೆ ಕುಳಿತಿದ್ದ ಶ್ರೀ ಕಲ್ಮುರುಡೇಶ್ವರರು ಹುಲಿಕೆರೆ ಭಕ್ತರ ಒತ್ತಾಯಕ್ಕೆ ಮಣಿದು ಹುಲಿಕೆರೆಗೆ ಬಂದು ನೆಲೆಸಿ, ನಂತರ ಸಖರಾಯಪಟ್ಟಣದ ಈ ಪ್ರಶಾಂತ ಸ್ಥಳದಲ್ಲಿ ಅನುಷ್ಠಾನಗೊಂಡು ಲಿಂಗೈಕ್ಯರಾದರು. ಗುರುಗಳು ಲಿಂಗೈಕ್ಯರಾದ ನಂತರ ಅವರ ಗದ್ದುಗೆಯ ಮೇಲೆ ಶ್ರೀ ಕಲ್ಮುರುಡೇಶ್ವರ ಮಠವು ಸ್ಥಾಪನೆಯಾಗಿ, ಧರ್ಮಜಾಗೃತಿ ಸ್ಥಳವಾಗಿ ಪ್ರಸಿದ್ಧಿಪಡೆದಿದೆ.

ದತ್ತಿ ಸಮಿತಿ: ಧರ್ಮಪ್ರಕಾಶ ಅರಳಗುಪ್ಪೆ ಶ್ರೀ ಚಂದ್ರೇಗೌಡರಿಗೆ ಬಹಳ ದಿನಗಳಿಂದ ಕಾಡುತ್ತಿದ್ದ ಮಾನಸಿಕ ಚಿಂತೆ

ಕಲ್ಮುರುಡೇಶ್ವರ ಪೀಠ ದರ್ಶನದಿಂದ ಪರಿಹಾರವಾಯಿತು. ಅಂದಿನಿಂದ ಈ ಮಠದ ಜೀರ್ಣೋದ್ಧಾರ ಕಾರ್ಯಕೈಗೊಂಡ ಚಂದ್ರೇಗೌಡರು, ಮಠದ ಧಾರ್ಮಿಕ ಕಾರ್ಯಗಳು ನಿರಂತರವಾಗಿ ನಡೆಯಲೆಂಬ ಉದ್ದೇಶದಿಂದ ದತ್ತಿಸಮಿತಿಯನ್ನು ಸ್ಥಾಪಿಸಿದ್ದರು. ಅಂದಿನಿಂದ ಅರಳುಗುಪ್ಪೆ ಚಂದ್ರೇಗೌಡರ ಮನೆತನದ ಮಠವಾಗಿ ರೂಪುಗೊಂಡು ಬೆಳೆದಿದೆ.

ಮಠದ ದತ್ತಿ ಸಮಿತಿಯ ಅಧ್ಯಕ್ಷರಾಗಿದ್ದ ಶ್ರೀ ಎ.ಎಂ.ಬಸವೇಗೌಡರ ಕಾಲದಲ್ಲಿ ಮಠಕ್ಕೆ ನೂತನ ಕಟ್ಟಡವನ್ನು ನಿರ್ಮಿಸಿದ್ದರು. ದಾಸೋಹ ಮಂಟಪ ಹಾಗೂ ಇಲ್ಲಿಗೆ ಬರುವ ಭಕ್ತರಿಗೆ ವಸತಿ ಗೃಹಗಳನ್ನು ನಿರ್ಮಿಸಿ ಅನುಕೂಲ ಕಲ್ಪಿಸಿದ್ದಾರೆ. ಶ್ರೀ ಬಸವೇಗೌಡರು ಲಿಂಗೈಕ್ಯರಾದ ಮೇಲೆ ಅವರ ಪತ್ನಿ ಶ್ರೀಮತಿ ಗೌರಮ್ಮ ಬಸವೇಗೌಡರು ಮತ್ತು ಅರಳಗುಪ್ಪೆ ಮನೆತನದ ಪ್ರಮುಖರಾದ ಶ್ರೀ ಎ.ಸಿ. ಶಾಂತಮಲ್ಲೇಗೌಡರು, ಶ್ರೀ ಎ.ಎಂ. ಸೋಮೇಗೌಡರು, ಶ್ರೀಡಾ.ಎ.ಎಂ. ಶಂಕರೇಗೌಡರು, ಶ್ರೀ ಎ.ಎಂ. ಚನ್ನಬಸವೇಗೌಡರು, ಶ್ರೀಮತಿ ಶಿವಮ್ಮ ದೇವೆಗೌಡರು, ಶ್ರೀಎ.ಎನ್. ದೇವರಾಜ ಗೌಡರು, ಶ್ರೀ ಎ.ಎಂ. ಮಲ್ಲೇಶಗೌಡರು, ಶ್ರೀಮತಿ ಭಾಗೀರಥಿ ಶಿವೇಗೌಡರು, ಶ್ರೀಮತಿ ಲೇಖಾ ಚಂದ್ರ ಶೇಖರ್ ಇನ್ನು ಮುಂತಾದ ಸದಸ್ಯರ ನೇತೃತ್ವದಲ್ಲಿ ಈ ಪುರಾತನ ಮಠದ ಎರಡು ಪ್ರವೇಶದ್ವಾರಗಳಿಗೆ ದ್ವಾರ ಮಂಟಪ ಗಳನ್ನು ನಿರ್ಮಿಸಿ (೨೦೦೧ರ ಏಪ್ರಿಲ್ ಮೂವತ್ತರಂದು) ಕಲ್ಮುರುಡೇಶ್ವರ ಮಠಕ್ಕೆ ಭವ್ಯತೆಯನ್ನು ತಂದುಕೊಟ್ಟಿದ್ದಾರೆ.

ವಿಳಾಸ: ಶ್ರೀ ಕಲ್ಮುರುಡೇಶ್ವರ ದತ್ತಿಸಂಸ್ಥೆ, ಕಲ್ಮುರುಡೇಶ್ವರಮಠ, ಸಖರಾಯಪಟ್ಟಣ,ಕಡೂರು ತಾ, ಚಿಕ್ಕಮಗಳೂರು ಜಿಲ್ಲೆ.

ಹುಲಿಕೆರೆ

ಕಡೂರು ತಾಲ್ಲೂಕಿನ ಹುಲಿಕೆರೆ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತೆರಡು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಶ್ರೀಶೈಲ ಪೀಠದ ಶಾಖಾಮಠವಾದ ಶ್ರೀ ದೊಡ್ಡಮಠವು ಸ್ಥಾಪನೆಯಾಗಿದೆ.

ದೊಡ್ಡಮಠ: ಹುಲಿಕೆರೆ ಮತ್ತು ಸುತ್ತಲಿನ ಗ್ರಾಮಗಳ ಧಾರ್ಮಿಕ ಕೇಂದ್ರಬಿಂದುವಾಗಿ ಶ್ರೀ ದೊಡ್ಡ ಮಠವು ಬೆಳೆದಿದೆ. ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳಿಂದ ಪ್ರಾರಂಭವಾದ ಈ ಮಠವು ಈತನಕ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದಿದೆ.

ಮಠ ಸ್ಥಾಪನೆ: ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳು ಸಿಂದಿಗೆರೆ ಸಮೀಪದ ಕರಡಿಗವಿಯಲ್ಲಿ ಅನುಷ್ಠಾನ ಕುಳಿತು, ಹುಲಿಕೆರೆಯ ಭಕ್ತರ ಒತ್ತಾಸೆಯಂತೆ ಇಲ್ಲಿಗೆ ಬಂದು ನೆಲೆಸಿ ನಂತರ ಸಮೀಪದ ಸಖರಾಯಪಟ್ಟಣದಲ್ಲಿ ನೆಲೆಗೊಂಡಿದ್ದರು. ಈ ಸಂದರ್ಭದಲ್ಲಿ ನೀಲಮ್ಮ ಎಂಬ ಮಹಿಳೆ ತನ್ನ ಎರಡು ಗಂಡು ಮಕ್ಕಳ ಜತೆಯಲ್ಲಿ ಉತ್ತರದ ಕಡೆಯಿಂದ ಬಂದು ಗುರುಗಳ ಆಶೀರ್ವಾದ ಪಡೆದು, ತನ್ನ ಮಕ್ಕಳಿಗೆ ಆಶ್ರಯ ದೊರಕಿಸಿಕೊಡಲು ಬಿನ್ನವಿಸಿಕೊಂಡಳಂತೆ. ಆಗ ಗುರುಗಳು ಹುಲಿಕೆರೆಯಲ್ಲಿ ಸ್ಥಾಪಿಸಿದ ಮಠಕ್ಕೆ ಕಿರಿಯ ಮಗನನ್ನು ನೇಮಿಸಿ, ಮೊದಲನೆಯ ಮಗನನ್ನು ಈ ಮಠದ ಧಾರ್ಮಿಕ ಕಾರ್ಯಗಳನ್ನು ನಿರ್ವಹಿಸಲು ಅಪ್ಪಣೆ ಕೊಟ್ಟು ಕಳುಹಿಸಿದರೆಂದು ಹೇಳುವ ಜನಪದ ಕಥೆ ಕೇಳಿ ಬರುತ್ತಿದೆ. ಇದಕ್ಕೆ ಪೂರಕವೆಂಬಂತೆ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದ ಮಠಕ್ಕೆ ಮನೆತನದ ಕಿರಿಯ ಮಗ ಪಟ್ಟದದೇವರಾಗಿ ಆಯ್ಕೆಯಾಗುತ್ತಾ ಬಂದಿದ್ದಾರೆ.

ಪರಂಪರೆ:

೧. ಷ.ಬ್ರ.ಶ್ರೀ ಮರುಳಸಿದ್ಧ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಮರುಳಪ್ಪ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಜಡೆಮರುಳಸಿದ್ಧ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಶಿವನಂಜುಂಡ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಮರುಳಸಿದ್ಧ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಶಿವಬಸವ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಬಸವರಾಜ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು

೮. ಷ.ಬ್ರ.ಶ್ರೀ ಜಠಾಧರ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ವಿರೂಪಾಕ್ಷಲಿಂಗ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳ ನಂತರ ನೇಮಕಗೊಂಡ ಶ್ರೀ ಮರುಳಪ್ಪ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿದರು. ಇವರ ನಂತರ ಶ್ರೀಬಸವರಾಜ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳ ತನಕ ಅಧಿಕಾರ ನಡೆಸಿದ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಪರಂಪರೆಯ ಏಳನೆಯ ಗುರುಗಳಾಗಿ ಅಧಿಕಾರಕ್ಕೆ ಬಂದ ಶ್ರೀ ಬಸವರಾಜ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಮಠದ ಕಟ್ಟಡ ನವೀಕರಣಗೊಂಡಿದೆ. ಇವರ ನಂತರ ಅಧಿಕಾರಕ್ಕೆ ಬಂದ ಶ್ರೀಜಠಾಧರ ಶಿವಾಚಾರ್ಯಸ್ವಾಮಿಗಳು ಶಿವಪೂಜಾನಿಷ್ಠರಾಗಿ ಮಠವನ್ನು ಬೆಳೆಸಿದರು. ಇವರ ನಂತರ ಶ್ರೀ ವಿರೂಪಾಕ್ಷಲಿಂಗ ಶಿವಾಚಾರ್ಯ ಸ್ವಾಮಿಗಳು, ತಮ್ಮ ಹನ್ನೊಂದನೆಯ ವಯಸ್ಸಿನಲ್ಲಿ ಪಂಚಾಚಾರ್ಯರ ಸಮ್ಮುಖದಲ್ಲಿ ಫಲಹಾರೇಶ್ವರ ಮಠದ ಶ್ರೀಮರುಳಯ್ಯ ಫಲಾಹಾರೇಶ್ವರ ಸ್ವಾಮಿಗಳಿಂದ ಅನುಗ್ರಹ ಪಡೆದು, ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಗುರುಗಳು ಪುರಾತನ ಪರಂಪರೆಯ ಮಠವನ್ನು ಸರ್ವತೋಮುಖವಾಗಿ ಅಭಿವೃದ್ಧಿಪಡಿಸಿದ್ದಾರೆ.

ರಾಜಾಶ್ರಯ: ಕೆಳದಿ ಅರಸರ ಕಾಲದಲ್ಲಿ ಈ ಮಠಕ್ಕೆ ಯಥೇಚ್ಛವಾದ ದಾನ ದತ್ತಿಗಳು ದೊರೆತು ಮಠವು ಅಭಿವೃದ್ಧಿಗೊಂಡಿದೆ. ಹಿಂದೆ ನಿತ್ಯ ಅನ್ನದಾಸೋಹ ಹಾಗೂ ಜ್ಞಾನದಾಸೋಹ ನಡೆಯಲು ಎಲ್ಲ ರೀತಿಯ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದ್ದರು ಎಂದು ಹೇಳಲಾಗುತ್ತಿದೆ. ಚೆನ್ನಮ್ಮಾಜಿಯು ಈ ಮಠದ ಗುರುಗಳ ಪ್ರಭಾವಕ್ಕೆ ಒಳಗಾಗಿ ಬಂಗಾರದ ಪಾದುಕೆ (ಹಾವುಗೆ) ಮಾಡಿಸಿಕೊಟ್ಟಳೆಂದು ತಿಳಿದುಬಂದಿದೆ. ಆದರೆ ಈ ಪಾದುಕೆಗಳು ಇಂದು ಮಠದಲ್ಲಿ ಲಭ್ಯವಿಲ್ಲ. ಮಠದ ಧಾರ್ಮಿಕ ಕಾರ್ಯಗಳು ನಿರಂತರವಾಗಿ ನಡೆದುಕೊಂಡು ಬರುವಂತೆ ಜಮೀನನ್ನು ಉಂಬಳಿಯಾಗಿ ನೀಡಿದ್ದಾರೆ. ಈ ಬಗ್ಗೆ ಕೆಳದಿಅರಸರು ಬರೆಸಿಕೊಟ್ಟ ತಾಮ್ರ ಶಾಸನಗಳು ಲಭ್ಯ ಇವೆ. ಸಖರಾಯಪಟ್ಟಣದ ರಾಜ ರುಕ್ಮಾಂಗದನು ಮಾಡಿಸಿಕೊಟ್ಟಿರುವುದು ಎಂದು ಹೇಳಲಾಗುವ ಪಲ್ಲಕ್ಕಿಯೊಂದು ಮಠದಲ್ಲಿದೆ.

ಧಾರ್ಮಿಕ ಕಾರ್ಯಗಳು: ಈ ಮಠದ ಆವರಣದಲ್ಲಿ ಕ್ಷೇತ್ರಪಾಲಕರಾದ ಜಠ್ಠಪ್ಪ ಮತ್ತು ಚೌಡೇಶ್ವರಿ ಹಾಗೂ ಮಠದ ಪರಂಪರೆಯ ಗುರುಗಳ ಗದ್ದುಗೆಗಳಿಗೆ ನಿತ್ಯಪೂಜೆ, ಶ್ರಾವಣಮಾಸದಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಪ್ರತಿವರ್ಷ ಶಿವಾನುಭವ ಕಾರ್ಯಕ್ರಮವನ್ನು ನಡೆಸಿ ನಾಡಿನ ಹಿರಿಯ ವಿದ್ವಾಂಸರು ಸೇರಿದಂತೆ, ಬೇರೆ ಬೇರೆ ಕಡೆಗಳಿಂದ ಗುರುಗಳನ್ನು ಬರಮಾಡಿಕೊಂಡು ಉಪದೇಶ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಸಾಹಿತಿಗಳು ಹಾಗೂ ರಾಜಕೀಯ ಮುಖಂಡರು ಸೇರಿದಂತೆ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಸಾಧಕರಿಗೆ ಸನ್ಮಾನವನ್ನು ಮಾಡಲಾಗುತ್ತಿದೆ. ಈ ವಿಶೇಷ ಸಂದರ್ಭಗಳಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನೂ ಮಾಡಲಾಗುತ್ತಿದೆ.

ಶೈಕ್ಷಣಿಕ ಕಾರ್ಯಗಳು: ಶ್ರೀ ವಿರೂಪಾಕ್ಷಲಿಂಗ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಶ್ರೀ ಕಲ್ಮುರುಡೇಶ್ವರ ವಿದ್ಯಾಸಂಸ್ಥೆಯನ್ನು ಸ್ಥಾಪಿಸಿ, ಗ್ರಾಮಾಂತರ ಮಕ್ಕಳ ಅಭ್ಯುದಯಕ್ಕಾಗಿ ದೊಡ್ಡಪಟ್ಟಣಗೆರೆ, ಮರ್ಲೆ, ಹುಲಿಕೆರೆ ಮತ್ತು ಸರಸ್ವತಿಪುರದಲ್ಲಿ ಪ್ರೌಢಶಾಲೆಗಳನ್ನು ಪ್ರಾರಂಭಿಸಿರುವುದಲ್ಲದೆ, ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಿದ್ದಾರೆ. ಹುಲಿಕೆರೆಯಲ್ಲಿ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿ, ಬಡಮಕ್ಕಳಿಗೆ ಆಶ್ರಯ ಕಲ್ಪಿಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ವಿರೂಪಾಕ್ಷಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ದೊಡ್ಡಮಠ, ಹುಲಿಕೆರೆ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

❑

ಚಿಕ್ಕಮಗಳೂರು ತಾಲ್ಲೂಕು

ಜಿಲ್ಲೆಯ ಕೇಂದ್ರ ಸ್ಥಳವಾದ ಚಿಕ್ಕಮಗಳೂರು, ಕಾಫಿ ತವರಿನ ಹೆಬ್ಬಾಗಿಲಾಗಿದ್ದು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಹೆಸರು ಪಡೆದಿದೆ. ರಾಜಕೀಯ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಹೆಸರು ಪಡೆದಿರುವ ಚಿಕ್ಕಮಗಳೂರು ತಾಲ್ಲೂಕು ಧಾರ್ಮಿಕ ಕ್ಷೇತ್ರದಲ್ಲಿಯೂ ಹೆಚ್ಚು ಹೆಸರು ಪಡೆದಿದೆ. ಇಲ್ಲಿ ಅಸ್ತಿತ್ವದಲ್ಲಿರುವ ಮಠಗಳ ಜತೆಗೆ ವಸ್ತಾರೆಮಠ, ಮೂಗ್ತಿಹಳ್ಳಿಮಠ, ಉಪ್ಪಳ್ಳಿಮಠ, ಸಿರವಾಸೆಯ ಸಪ್ಪೆದೇವರಮಠ, ಮೇಲುಹುಲುವತ್ತಿಯ ಕಾವಿಕಲ್ಲುಮಠ, ಅಂಬಳೆಮಠ, ಮುಗುಳುವಳ್ಳಿಮಠ, ಇಳೇಖಾನು ಹಿರೇಮಠ, ಹಾಂದಿಯ ಹೊಸಮಠ,ಹುಕ್ಕುಂದದ ಶ್ರೀ ಸಿದ್ಧಲಿಂಗೇಶ್ವರಮಠ, ಶ್ರೀವಿರಕ್ತಮಠಗಳು ಹಾಗೂ ಇಂದಾವರದ ಶ್ರೀ ಚೌಕಿಮಠ-ಹೀಗೆ ಅನೇಕ ಮಠಗಳು ಹಿಂದೆ ಸ್ಥಾಪನೆಯಾಗಿ ಕಾಲಾನಂತರ ತಮ್ಮ ಅಸ್ಥಿತ್ವವನ್ನು ಕಳೆದುಕೊಂಡು ಜನಮನದಿಂದ ಮರೆಯಾಗಿವೆ.

ಆರದವಳ್ಳಿ

ಚಿಕ್ಕಮಗಳೂರು ತಾಲ್ಲೂಕಿನ ಆರದವಳ್ಳಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ನಾಲ್ಕು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿ ಶಿಷ್ಯವರ್ಗದ ಪರಂಪರೆಯ ಶ್ರೀ ಶಂಕರ ದೇವರ ಮಠವು ಸ್ಥಾಪನೆಯಾಗಿದೆ.

ಶಂಕರದೇವರ ಮಠ: ಆರದವಳ್ಳಿ ಗ್ರಾಮದ ಹೊರಭಾಗದಲ್ಲಿ ಶ್ರೀ ಶಂಕರದೇವರ ಮಠವು ಸ್ಥಾಪನೆಯಾಗಿದ್ದು, ಈ ಭಾಗದ ಗ್ರಾಮಗಳ ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ಬೆಳೆದಿದೆ.

ಮಠಸ್ಥಾಪನೆ: ಪುರಾತನ ಕಾಲದಲ್ಲಿ ಶಿವಯೋಗಿಗಳೊಬ್ಬರು ಲೋಕಸಂಚಾರ ಕೈಗೊಂಡು,ಇಲ್ಲಿಗೆ ಸಮೀಪದ ಕುರುವಂಗಿಯಲ್ಲಿ ನೆಲೆಸಿದ್ದರು. ತಪೋನಿಷ್ಠರಾಗಿದ್ದ ಗುರುಗಳು ಜನಜಂಗುಳಿಯ ಕಾಟ ತಡೆಯಲಾರದೆ ಮುಂದೆ ಹೊರಟು ಈಗ ಮಠ ಸ್ಥಾಪನೆಯಾಗಿರುವ ಸ್ಥಳದಲ್ಲಿ ಬಂದು ನೆಲೆಸಿ, ದಟ್ಟಅಡವಿಯ ಗವಿಯಲ್ಲಿ ತಪೋಮಗ್ನರಾಗಿ ಕುಳಿತರು. ಈ ಸಮಯದಲ್ಲಿ ಕಳ್ಳರು ಗವಿಯ ಹಿಂದೆ ಕದ್ದಮಾಲನ್ನು ಹಂಚಿಕೊಳ್ಳಲು ಬಂದಾಗ, ಗುರುಗಳ ಓಂಕಾರ ನಾದ ಕೇಳಿ ತಮ್ಮ ಕಳ್ಳತನದ ಅರಿವು ಬೇರೆಯವರಿಗೆ ಗೊತ್ತಾಗಿದೆ ಎಂದು ತಿಳಿದು, ತಮ್ಮಲ್ಲಿದ್ದ ಮಾರಕಾಸ್ತ್ರಗಳಿಂದ ಗುರುಗಳನ್ನು ಹತ್ಯೆಮಾಡಲು ಮುಂದಾದರು. ಗುರುಗಳ ತಪೋಶಕ್ತಿಯಿಂದ, ಕಳ್ಳರ ಎತ್ತಿದ ಕೈಗಳು ತಟಸ್ಥವಾದವು. ಆಗ ಗುರುಗಳು 'ಏಕೆ ಚೌಡಮ್ಮ, ಅವರ ಎತ್ತಿದ ಕೈಗಳನ್ನು ಹಾಗೇ ಇಟ್ಟುಕೊಂಡಿದ್ದೀಯ ಬಿಡು' ಎಂದು ಆಜ್ಞಾಪಿಸಿದಾಗ ಕಳ್ಳರ ಕೈಗಳು ಕೆಳಗೆ ಹೋದವಂತೆ. ಆಗ ತಮ್ಮ ತಪ್ಪಿನ ಅರಿವಿನಿಂದ ಕಳ್ಳರು ಶಿವಯೋಗಿಗಳಿಗೆ ಶರಣಾಗಿ,ತಾವು ಕಳ್ಳತನದಲ್ಲಿ ತಂದಿದ್ದ ವಸ್ತುಗಳನ್ನು ಶಿವಯೋಗಿಗಳಿಗೆ ಒಪ್ಪಿಸಿ ಪರಿವರ್ತನೆಗೊಂಡರಂತೆ. ಈ ವಿಚಾರ ಸುತ್ತಲಿನ ಗ್ರಾಮಗಳಿಗೆ ತಿಳಿದು ಪವಾಡ ಪುರುಷರ ದರ್ಶನ ಪಡೆದ ಭಕ್ತರು, ಇಲ್ಲಿ ಮಠವನ್ನು ಸ್ಥಾಪಿಸಿದರೆಂದು ಹೇಳುವ ಜನಪದ ಕಥೆ ಜನಜನಿತವಾಗಿದೆ.

ಶ್ರೀ ಶಿವಯೋಗಿಗಳಿಂದ ಪ್ರಾರಂಭಗೊಂಡ ಮಠವು ಕಾಲಾನಂತರ ಕ್ಷೀಣಿಸಿ ನಂತರ ಶ್ರೀ ಶಂಕರ ಸ್ವಾಮಿಗಳ (೧೪೮೦)ಕಾಲದಲ್ಲಿ ಪ್ರಸಿದ್ಧಿ ಪಡೆಯಿತು. ಅಡಿಕೆ ವ್ಯಾಪಾರಿಯೊಬ್ಬರು ಗುರುಗಳ ತಪೋಶಕ್ತಿಗೆ ಶರಣಾಗಿ ಮಠವನ್ನು ಸ್ಥಾಪಿಸಿ, ಮಠದ ಕಟ್ಟಡವನ್ನು ನಿರ್ಮಿಸಿಕೊಟ್ಟರೆಂದು ಹೇಳಲಾಗುತ್ತಿದೆ. ಕಲ್ಲು ಬಂಡೆಗಳು, ಕೆರೆ ಹೊಂಡಗಳು ಹಾಗೂ ಮರಗಳ ತೋಪಿನ ಮಧ್ಯದಲ್ಲಿ ಪ್ರಶಾಂತವಾದ ಸ್ಥಳದಲ್ಲಿ ಸ್ಥಾಪನೆಗೊಂಡ ಮಠವು ಶ್ರೀ ಶಂಕರ ಸ್ವಾಮಿಗಳಿಂದ ಹೆಚ್ಚು ಪ್ರಸಿದ್ಧಿ ಪಡೆದಿದ್ದರಿಂದ 'ಶ್ರೀ ಶಂಕರದೇವರಮಠ'ಎಂಬ ಹೆಸರು ಬಂದಿದೆ. ಶ್ರೀ ಶಂಕರ ಸ್ವಾಮಿಗಳ ಕಾಲದಲ್ಲಿ ಶಿವಾನುಭವಗೋಷ್ಠಿಗಳು ಹಾಗೂ ಧರ್ಮೋಪದೇಶ ಕಾರ್ಯಗಳು ನಿರಂತರವಾಗಿ ನಡೆದು ಧಾರ್ಮಿಕ ಜಾಗೃತಿಯನ್ನುಂಟು ಮಾಡಿದ್ದರು. ಇವರ ಕಾಲದಲ್ಲಿ ದಾಸೋಹಕ್ರಿಯೆ ನಿರಂತರವಾಗಿ ನಡೆಯುತ್ತಿತ್ತು ಎಂದು ಹೇಳಲಾಗುತ್ತಿದೆ. ಜಾತಿಬೇಧವಿಲ್ಲದೆ ಎಲ್ಲಾ ಕೋಮಿನ ಜನ ಮಠದ ಭಕ್ತರಾಗಿ ಅಭಿವೃದ್ಧಿಗೆ ನೆರವಾಗಿದ್ದರೆಂದು ಹೇಳಲಾಗುತ್ತಿದೆ. ಶ್ರೀ ಶಂಕರ ಸ್ವಾಮಿಗಳು

ಮಲೆನಾಡು ಪ್ರಾಂತ್ಯದಲ್ಲಿ ಎಪ್ಪತ್ತೆರಡು ಶಾಖಾಮಠಗಳನ್ನು ಸ್ಥಾಪನೆ ಮಾಡಿದ್ದರೆಂದು ಹೇಳಲಾಗುತ್ತಿದೆ.

ಪರಂಪರೆ:
೧. ಷ.ಬ್ರ.ಶ್ರೀ ಶಿವಯೋಗಿ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಶಂಕರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಗಂಗಾಧರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು

ಆಧಾರಗಳ ಕೊರತೆಯಿಂದ ಮಠದ ಪರಂಪರೆಯ ಗುರುಗಳ ಕೆಲವು ಹೆಸರುಗಳನ್ನು ಮಾತ್ರ ದಾಖಲಿಸಲಾಗಿದೆ. ಪುರಾತನ ಪರಂಪರೆಯ ಈ ಮಠದಲ್ಲಿ ಕರ್ತೃಗುರುಗಳಾದ ಶ್ರೀ ಶಿವಯೋಗಿಗಳ ನಂತರ ಅನೇಕ ಗುರುಗಳು ಧಾರ್ಮಿಕ ಕಾರ್ಯಗಳನ್ನು ನಡೆಸಿರಬಹುದೆಂದು ಹೇಳಲಾದರೂ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಶ್ರೀ ಶಂಕರ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಪುನರುಜ್ಜೀವನಗೊಂಡ ಮಠದಲ್ಲಿ ಅನೇಕ ಗುರುಗಳು ಅಧಿಕಾರವನ್ನು ನಡೆಸಿ, ಮಠದ ಅಸ್ತಿತ್ವ ವನ್ನು ಉಳಿಸಿಕೊಂಡು ಬಂದಿದ್ದಾರೆ. ಮಠದಲ್ಲಿ ಹನ್ನೊಂದು ಗದ್ದುಗೆಗಳು ನೋಡಲು ದೊರೆಯುತ್ತಿವೆ. ನಂತರ ಶ್ರೀಗಂಗಾಧರ ಶಿವಾಚಾರ್ಯ ಸ್ವಾಮಿಗಳು ಮಠದ ಆಡಳಿತವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ಗುರುಗಳು ೧೯೮೨ ರಲ್ಲಿ ಲಿಂಗೈಕ್ಯರಾದ ಮೇಲೆ ಮಠವು ಖಾಲಿ ಉಳಿಯಿತು. ಆಗ ಚಿಕ್ಕಮಗಳೂರು ತಾಲ್ಲೂಕಿನ ವೀರಶೈವ ಸಮಾಜದವರು ಕಾಫಿ ಬೆಳೆಗಾರರಾದ ಶ್ರೀ ಎ.ಎಂ.ಬಸವೇಗೌಡರ ಮುಂದಾಳತ್ವದಲ್ಲಿ ಹಾವೇರಿ ತಾಲ್ಲೂಕಿನ ಕನವಳ್ಳಿಯ ಮಠದಲ್ಲಿ ಉತ್ತರಾಧಿಕಾರಿಗಳಾಗಿ ನೇಮಕಗೊಂಡಿದ್ದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿ ಗಳನ್ನು ಮಠಕ್ಕೆ ಕರೆತಂದರು. ನೊಣವಿನಕೆರೆಯ ಶ್ರೀ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು, ಕರ್ಜಿಗೆ ಗೌರಿಮಠದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು, ಕುಪ್ಪೂರು ಗದ್ದುಗೆಮಠದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿ ಗಳು ಹಾಗೂ ಜಾಬಾಲಿಪುರಮಠದ ಶ್ರೀ ಜಯಚಂದ್ರಶೇಖರ ಸ್ವಾಮಿಗಳ ಸಮ್ಮುಖದಲ್ಲಿ ೧೯೯೦ರ ಮೇ ಹನ್ನೊಂದ ರಂದು ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳನ್ನು ಶ್ರೀ ಶಂಕರದೇವರ ಮಠಕ್ಕೆ ಪಟ್ಟಾಧಿಕಾರ ಮಾಡಲಾಯಿತು.

ಶ್ರೀ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು ಹೊನ್ನಾಳಿಯಲ್ಲಿ ವೇದಾಧ್ಯಯನ ಮಾಡಿ ಬೆಂಗಳೂರಿನಲ್ಲಿ ಸಂಸ್ಕೃತ, ಸಾಹಿತ್ಯ ಹಾಗೂ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ನಂತರ ಶಿಥಿಲಾವಸ್ಥೆಗೊಂಡಿದ್ದ ಮಠದ ಕಟ್ಟಡವನ್ನು ನವೀಕರಣಗೊಳಿಸಿ ದರು. ಮಠದ ಆಸ್ತಿಯಾಗಿ ನಲವತ್ತೆರಡು ಎಕರೆ ಜಮೀನಿದ್ದು, ಇದರಿಂದ ಬರುವ ಆದಾಯವನ್ನು ಬಳಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದಲ್ಲಿರುವ ಪರಂಪರೆಯ ಹನ್ನೊಂದು ಗದ್ದುಗೆಗಳಲ್ಲಿ ಶ್ರೀ ಶಂಕರ ಶಿವಾಚಾರ್ಯ ಸ್ವಾಮಿಗಳು ಹಾಗೂ ಶ್ರೀಗಂಗಾಧರ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಗಳನ್ನು ಮಾತ್ರ ಗುರುತಿಸಬಹುದಾಗಿದ್ದು, ಉಳಿದವುಗಳನ್ನು ಆಧಾರಗಳ ಕೊರತೆಯಿಂದ ಗುರುತಿಸಲು ಸಾಧ್ಯವಾಗುತ್ತಿಲ್ಲ. ಈ ಎಲ್ಲಾ ಗದ್ದುಗೆಗಳನ್ನು ನವೀಕರಣ ಗೊಳಿಸಿ ನಿತ್ಯ ಪೂಜೆಯನ್ನು ಮಾಡಲಾಗುತ್ತಿದೆ. ಕಾರ್ತೀಕಮಾಸದಲ್ಲಿ ದೀಪೋತ್ಸವವನ್ನು ನಡೆಸಲಾಗುತ್ತಿದೆ. ಈ ಸಂದರ್ಭ ದಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಶ್ರೀ ಶಂಕರ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಶಿವಮ್ಮ ಎಂಬ ಶಿವಭಕ್ತೆ ಮಠದ ಪೂಜಾಕಾರ್ಯಗಳಿಗೆ ಅನುಕೂಲವಾಗಲೆಂದು ೧೮೯೧ರಲ್ಲಿ ಕಟ್ಟಿಸಿದ್ದ ಕಲ್ಯಾಣಿಯನ್ನು ದುರಸ್ತಿಪಡಿಸಿ, ಸ್ಮಾರಕವನ್ನಾಗಿ ಉಳಿಸಿಕೊಳ್ಳಲಾಗಿದೆ.

ವಿಳಾಸ:ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು,ಶ್ರೀ ಶಂಕರದೇವರಮಠ,ಅರದಹಳ್ಳಿ, ಮರ್ಲೆಅಂಚೆ, ಚಿಕ್ಕಮಗಳೂರುತಾ.

ಕಂಚಗಲ್ಲುದುರ್ಗ

ಚಿಕ್ಕಮಗಳೂರು ತಾಲ್ಲೂಕಿನ ಕಂಚಗಲ್ಲುದುರ್ಗ ಗ್ರಾಮವು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಇಪ್ಪತ್ತೇಳು

ಕಿ.ಮೀ ದೂರದಲ್ಲಿದೆ. ಈ ಗ್ರಾಮವು ಐತಿಹಾಸಿಕ ಸ್ಥಳವಾಗಿದ್ದು ಇಲ್ಲಿ ಶ್ರೀ ಮುಳ್ಳಯ್ಯಸ್ವಾಮಿ ಮಠವು ಸ್ಥಾಪನೆಯಾಗಿದೆ. ದುರ್ಗದ ಕಲ್ಲುಗಳು ಕಂಚಿನ ಬಣ್ಣದಂತಿರುವ ಕಾರಣ 'ಕಂಚಗಲ್ಲುದುರ್ಗ' ಎಂಬ ಹೆಸರು ಬಂದಿದೆ. ಹಿಂದೆ ಪಾಳೆಗಾರಿಕೆಯ ಆಳ್ವಿಕೆಗೆ ಒಳಪಟ್ಟಿದ್ದ ಈ ಸ್ಥಳದಲ್ಲಿ ಕೋಟೆಯು ನಿರ್ಮಾಣಗೊಂಡಿದೆ.

ಮುಳ್ಳಯ್ಯಸ್ವಾಮಿ ಮಠ: ಕಂಚಗಲ್ಲು ದುರ್ಗದ ತುತ್ತ ತುದಿಯ ಪ್ರಕೃತಿ ಸೌಂದರ್ಯದ ಮಡಿಲಲ್ಲಿ ಕೋಟೆಯ ಒಳಭಾಗದಲ್ಲಿ ಸ್ಥಾಪನೆಗೊಂಡಿರುವ ಶ್ರೀ ಮುಳ್ಳಯ್ಯಸ್ವಾಮಿ ಮಠವು ಈ ಭಾಗದ ಧಾರ್ಮಿಕ ಕಾರ್ಯಗಳ ಕೇಂದ್ರಬಿಂದುವಾಗಿ ಬೆಳೆದಿದೆ.

ಶ್ರೀ ಮುಳ್ಳಯ್ಯ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಎತ್ತರದ ಗಿರಿಗಳ ಸಾಲುಗಳಲ್ಲಿ ಅನುಷ್ಠಾನಗೊಂಡು ಬರುತ್ತಿದ್ದ ಸಂದರ್ಭದಲ್ಲಿ, ಕಂಚಗಲ್ಲುದುರ್ಗದ ಕಲ್ಲುಬೆಟ್ಟದ ಮೇಲೆ ಅನುಷ್ಠಾನಗೊಂಡು ಜಾಗೃತ ಸ್ಥಳವನ್ನಾಗಿ ಮಾಡಿ ನಂತರ ಚಂದ್ರದ್ರೋಣ ಪರ್ವತಕ್ಕೆ ಪ್ರಯಾಣ ಬೆಳೆಸಿದರು ಎಂದು ಹೇಳಲಾಗುತ್ತಿದೆ. ಕಂಚಗಲ್ಲುದುರ್ಗದ ಗುಡ್ಡದ ಮೇಲ್ಭಾಗದಲ್ಲಿ ಸ್ಥಾಪನೆಯಾಗಿರುವ ಹಳೆಯ ಮಠದ ಪಕ್ಕದಲ್ಲಿ'ಗಂಗೆಬಾವಿ'ಎಂಬ ಹೆಸರಿನ ನೀರಿನ ಕೊಳ ಇದೆ. ಇಲ್ಲಿ ಪ್ರತಿ ಶಿವರಾತ್ರಿ, ಗೌರಿಹಬ್ಬ ಹಾಗೂ ದೀಪಾವಳಿಯಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಕಾಲಾನಂತರ ಧಾರ್ಮಿಕ ಕಾರ್ಯಗಳಿಗೆ ಅನುಕೂಲವಾಗಲೆಂದು ಗುಡ್ಡದ ಮೇಲಿನ ಮಠವನ್ನು ಕಂಚಗಲ್ಲುದುರ್ಗದಲ್ಲಿ ಸ್ಥಾಪಿಸಲಾಗಿದೆ. ಇಲ್ಲಿಯೂ ಸಹ ನಿತ್ಯ ಪೂಜೆಯನ್ನು ನಡೆಸಲಾಗುತ್ತಿದೆ. ಮಠದಲ್ಲಿ ನಡೆಯುವ ಜಾತ್ರೆಯ ಸಂದರ್ಭದಲ್ಲಿ ಎಲ್ಲಾ ಕೋಮಿನ ಜನ ಒಂದೆಡೆ ಕಲೆತು ಜಾತ್ರೆಯನ್ನು ನಡೆಸುವುದು ಒಂದು ವಿಶೇಷವಾಗಿದೆ. ಮಠದ ವಂಶಸ್ಥರಾದ ಶ್ರೀ ಚಂದ್ರಶೇಖರಯ್ಯನವರು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಚಂದ್ರಶೇಖರಯ್ಯ, ಶ್ರೀ ಮುಳ್ಳಯ್ಯನಮಠ, ಕಂಚಗಲ್ಲುದುರ್ಗ, ಆಲ್ದೂರು ಹೋಬಳಿ, ಚಿಕ್ಕಮಗಳೂರು ತಾಲ್ಲೂಕು.

ಚಿಕ್ಕಮಗಳೂರು

ಚಿಕ್ಕಮಗಳೂರು ನಗರವು ಪುರಾತನ ಕಾಲದಿಂದಲೂ ವೀರಶೈವ ಧರ್ಮದ ಚಟುವಟಿಕೆಗಳ ಕೇಂದ್ರವಾಗಿ ಬೆಳೆದಿದೆ. ಇದಕ್ಕೆ ಪೂರಕವೆಂಬಂತೆ ಶ್ರೀ ಉಪ್ಪಳ್ಳಿಮಠ, ಶ್ರೀ ಹೊಸಮಠ, ಶ್ರೀ ಕರಿಸಿದ್ಧೇಶ್ವರಮಠ, ಶ್ರೀ ಪತ್ರೆಮಠ, ಶ್ರೀ ಬಳಂದೇರಲುಮಠ, ಶ್ರೀ ನಲ್ಲೂರುಮಠ, ಕಲ್ಯಾಣನಗರ ಬಡಾವಣೆಯ ಶ್ರೀ ಜಾಬಾಲಪುರಿಮಠ ಹಾಗೂ ಶ್ರೀ ಬಸವಮಂದಿರ ಎಂಬ ಎಂಟು ಮಠಗಳು ಸ್ಥಾಪನೆಯಾಗಿವೆ. ಇವುಗಳಲ್ಲಿ ಶ್ರೀ ಜಾಬಾಲಪುರಿಮಠ ಹಾಗೂ ಶ್ರೀ ಬಸವತತ್ತ್ವಪೀಠ ಅಸ್ತಿತ್ವದಲ್ಲಿದ್ದು ಧಾರ್ಮಿಕ ಚಟುವಟಿಕೆಗಳ ಕೇಂದ್ರವಾಗಿ ಬೆಳೆದಿವೆ.

ಜಾಬಾಲಪುರಿ ಮಠ: ಚಿಕ್ಕಮಗಳೂರು ನಗರದ ಪೂರ್ವಭಾಗದಲ್ಲಿರುವ ಕಲ್ಯಾಣನಗರ ಬಡಾವಣೆಯಲ್ಲಿ (ದೊಡ್ಡಕುರುಬರಹಳ್ಳಿ) ಪುರಾತನ ಇತಿಹಾಸವುಳ್ಳ ಶ್ರೀ ಜಾಬಾಲಪುರಿ ಮಠ ಸ್ಥಾಪನೆಯಾಗಿದೆ. ಈ ಮಠವು ಸಿರಿಗೆರೆಯ ತರಳಬಾಳು ಬೃಹನ್ಮಠದ ಶಾಖಾಮಠವಾಗಿ ಬೆಳೆದಿದೆ.

ಮಠದ ಅಸ್ತಿತ್ವ: ಕ್ರಿ.ಶ.೧೮೭೮ ರ ಸುಮಾರಿನಲ್ಲಿ ಈ ಮಠದ ಅಧಿಕಾರಸ್ಥರಾಗಿದ್ದ ಶ್ರೀ ಶಿಖಾಮಣಿ ದೇವರಿಗಿಂತಲೂ ಹಿಂದೆಯೇ ಜಾಬಾಲಪುರಿಮಠ ಅಸ್ತಿತ್ವದಲ್ಲಿತ್ತು ಎಂದು ಹೇಳಲಾಗುತ್ತಿದೆ. ಇದಕ್ಕೆ ಈ ಮಠದ ಆವರಣದಲ್ಲಿರುವ ಗದ್ದುಗೆಗಳೇ ಸಾಕ್ಷಿಯಾಗಿವೆ. ಮೂರು ತಲೆಮಾರುಗಳ ಹಿಂದೆ ಶ್ರೀ ಚಂದ್ರಶೇಖರ ಸ್ವಾಮಿಗಳ ಕಾಲದಲ್ಲಿ ನಿರ್ಮಿತವಾಗಿರುವ ಮಾವಿನತೋಪಿನ ಮಧ್ಯೆ, ಈ ಮಠವು ತನ್ನ ಪರಂಪರೆಯ ಐತಿಹ್ಯಗಳನ್ನು ಬಿಂಬಿಸುತ್ತಾ ನಿಂತಿದೆ. ಕರ್ತೃಗುರುಗಳಾದ ಶ್ರೀಸಿದ್ಧೇಶ್ವರರ ಗದ್ದುಗೆಯ ಕಲ್ಲುಕಟ್ಟಡ ಮಠದ ಕಲ್ಪನೆಗೆ ಅನುಗುಣವಾಗಿದೆ. ಹದಿನೆಂಟು ಅಂಕಣದ ದೊಡ್ಡದಾದ ಸೀಮೆಹೆಂಚಿನ ಕಟ್ಟಡ ನಿರ್ಮಿತವಾಗಿದೆ.

ಈ ಮಠದಲ್ಲಿ ಮೂರುಗದ್ದುಗೆಗಳನ್ನು ಒಳಗೊಂಡ ಕಲ್ಲುಮಂಟಪ, ಈ ಮಂಟಪದ ಪಕ್ಕದಲ್ಲಿ ಸ್ಥಾಪಿತವಾದ

ಎರಡು ಗದ್ದುಗೆಗಳು, ಮಠದ ಕಟ್ಟಡದ ಬಲಬದಿಯಲ್ಲಿ ನಿರ್ಮಿಸಿರುವ ಎರಡು ಗದ್ದುಗೆಗಳು ಸೇರಿದಂತೆ ಒಟ್ಟು ಎಂಟು ಗದ್ದುಗೆಗಳನ್ನು ನಾವು ನೋಡಬಹುದಾಗಿದೆ. ಅಲ್ಲದೆ ಮಠದ ಬಲಬದಿಯಲ್ಲಿರುವ ಚೌಡೇಶ್ವರಿ ದೇವರು, ಹಿಂದೆ ಅದ್ದೂರಿಯಾಗಿ ನಡೆಯುತ್ತಿದ್ದ ಜಾತ್ರೆಯ ಸಂದರ್ಭದಲ್ಲಿ ದೇವರನ್ನು ಕುಳ್ಳಿರಿಸಲು ನಿರ್ಮಿಸಿದ ಕಲ್ಲುಕಟ್ಟೆ ಹಾಗೂ ಪುರಾತನ ಕಾಲದಲ್ಲಿ ನಿರ್ಮಿಸಿದ ಬಾವಿ ಜಾಬಾಲಪುರಿ ಮಠದ ಇತಿಹಾಸವನ್ನು ಹೇಳುತ್ತವೆ.

ಪರಂಪರೆ:
೧. ಶ್ರೀ ಸಿದ್ಧೇಶ್ವರಸ್ವಾಮಿಗಳು
೨. ಶ್ರೀ ಶಿವಯೋಗಿ ಶಿಖಾಮಣಿ ದೇವರು
೩. ಶ್ರೀ ರುದ್ರಮುನಿಸ್ವಾಮಿಗಳು
೪. ಶ್ರೀ ರೇವಣಸಿದ್ಧಸ್ವಾಮಿಗಳು
೫. ಶ್ರೀ ಸಿದ್ಧಲಿಂಗಸ್ವಾಮಿಗಳು
೬. ಶ್ರೀ ಚಂದ್ರಶೇಖರಸ್ವಾಮಿಗಳು
೭. ಶ್ರೀ ಪ್ರಭುಲಿಂಗಸ್ವಾಮಿಗಳು

ಆಧಾರಗಳ ಕೊರತೆಯಿಂದ ಮಠದ ಪರಂಪರೆಯ ಗುರುಗಳ ಕೆಲವು ಹೆಸರುಗಳನ್ನು ಮಾತ್ರ ದಾಖಲಿಸಲಾಗಿದೆ. ಕರ್ತೃ ಗುರುಗಳಾದ ಶ್ರೀ ಸಿದ್ಧೇಶ್ವರ ಸ್ವಾಮಿಗಳ ನಂತರ ಪರಂಪರೆಯಲ್ಲಿ ಆಡಳಿತ ನಡೆಸಿದ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ಲಭ್ಯವಿಲ್ಲ. ಲೋಕಕಲ್ಯಾಣಾರ್ಥ ಸಂಚಾರಕ್ಕೆ ಹೊರಟ ಶ್ರೀ ಶಿಖಾಮಣಿದೇವರು ಮಠದ ಅಧಿಕಾರವನ್ನು ಹಾಸನ ಜಿಲ್ಲೆಯ ಯಲಹಂಕಮಠದ ಶ್ರೀ ಶಿವನಂಜುಂಡಸ್ವಾಮಿಗಳಿಗೆ ವಹಿಸಿಕೊಟ್ಟರೆಂದು ಹೇಳಲಾಗುತ್ತದೆ. ತಮ್ಮ ವಶಕ್ಕೆ ತೆಗೆದುಕೊಂಡ ಶ್ರೀ ಶಿವನಂಜುಂಡ ಸ್ವಾಮಿಗಳು ಬೆಣ್ಣೂರಿನ ಶ್ರೀ ರುದ್ರಮುನಿಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ಆಯ್ಕೆಮಾಡಿ, ಸಮಾಜದ ಭಕ್ತರ ಸಮ್ಮುಖದಲ್ಲಿ ಪಟ್ಟಾಧಿಕಾರ ಮಾಡಿಸಿ, ಜಾಬಾಲಪುರಿಮಠದ ಪರಂಪರೆಗೆ ಧಕ್ಕೆ ಬರದಂತೆ ಧಾರ್ಮಿಕ ಕಾರ್ಯಗಳು ನಡೆದುಕೊಂಡು ಹೋಗುವಂತೆ ಮಾಡಿದರು ಎಂದು ಹೇಳಲಾಗುತ್ತಿದೆ.

ಶ್ರೀ ರುದ್ರಮುನಿ ಸ್ವಾಮಿಗಳ ನಂತರ ಅಧಿಕಾರ ನಡೆಸಿದ ಶ್ರೀ ರೇವಣಸಿದ್ಧ ಸ್ವಾಮಿಗಳು ಮತ್ತು ಶ್ರೀ ಸಿದ್ಧಲಿಂಗ ಸ್ವಾಮಿಗಳ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ನಂತರ ಅಧಿಕಾರಕ್ಕೆ ಬಂದ ಶ್ರೀ ಚಂದ್ರಶೇಖರ ಸ್ವಾಮಿಗಳು ಚಿಕ್ಕಮಗಳೂರು ನಗರದಲ್ಲಿ ವೀರಶೈವ ವಿದ್ಯಾರ್ಥಿನಿಲಯವನ್ನು ೧೯೧೩ರಲ್ಲಿ ಸ್ಥಾಪಿಸಿದರು. ಇದು ಈ ಭಾಗದ ಪ್ರಥಮ ವಿದ್ಯಾರ್ಥಿನಿಲಯ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಗುರುಗಳು ನಾಲ್ವಡಿ ಕೃಷ್ಣರಾಜ ಒಡೆಯರನ್ನು ಕರೆಸಿ ವಿದ್ಯಾರ್ಥಿ ನಿಲಯದ ಶಂಕುಸ್ಥಾಪನೆ ಮಾಡಿಸಿದ್ದರು. ಗುರುಗಳು ಕೇವಲ ಐದು ವರ್ಷಗಳಲ್ಲಿ ಬೃಹತ್ ಕಟ್ಟಡ ವನ್ನು ನಿರ್ಮಿಸಿ ಈ ಭಾಗದ ವೀರಶೈವ ವಿದ್ಯಾರ್ಥಿಗಳ ಕಲಿಕೆಗೆ ನೆರವುಮಾಡಿಕೊಟ್ಟರು. ಗುರುಗಳು ಮಠದ ಜಮೀನನ್ನು ಅಭಿವೃದ್ಧಿಪಡಿಸಿ ಮಠದ ಸುತ್ತ ಮಾವಿನ ತೋಟವನ್ನು ನಿರ್ಮಿಸಿದರು. ಇವರ ಕ್ರಿಯಾಶೀಲ ಚಟುವಟಿಕೆಯಿಂದ ಮಠವು ಪ್ರಸಿದ್ಧಿ ಪಡೆಯಿತು. ಇವರು ೧೯೬೮ ರಲ್ಲಿ ಲಿಂಗೈಕ್ಯರಾದ ನಂತರ ಶ್ರೀ ಪ್ರಭುಲಿಂಗ ಸ್ವಾಮಿಗಳು ಮಠದ ಆಡಳಿತವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದರು. ಗುರುಗಳು ತಮ್ಮ ಜೀವಿತಾವಧಿಯಲ್ಲಿ ಮಲ್ಲೇದೇವರಹಳ್ಳಿಯ ಶ್ರೀ ಜಯ ಚಂದ್ರಶೇಖರ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕಮಾಡಿಕೊಂಡು, ಮಠದ ಪಟ್ಟಾಧಿಕಾರದ ಅನುಗ್ರಹವನ್ನು ನೀಡಿದರು. ನಂತರ ಶ್ರೀ ಜಯ ಚಂದ್ರಶೇಖರ ಸ್ವಾಮಿಗಳು ಮಠದಲ್ಲಾದ ಕೆಲವು ಘಟನೆಗಳಿಂದ ಮಠವನ್ನು ತೊರೆದು ಬಸವಮಂದಿರವನ್ನು ಪ್ರಾರಂಭಿಸಿದರು. ನಂತರ ಮಠದ ಆಡಳಿತವನ್ನು ಮೂಲಮಠವಾದ ಸಿರಿಗೆರೆ ತರಳಬಾಳು ಬೃಹನ್ಮಠವು ನಡೆಸತೊಡಗಿದೆ.

ಚಟುವಟಿಕೆಗಳು: ಪುರಾತನ ಪರಂಪರೆಯ ಮಠದಲ್ಲಿ ಪರಂಪರೆಯ ಗುರುಗಳ ಗದ್ದುಗೆಗಳಿಗೆ ನಿತ್ಯಪೂಜೆ ನಡೆಯುತ್ತಿದೆ. ಜಗದ್ಗುರುಗಳು ಸಂದರ್ಭಕ್ಕನುಸಾರ ಆಗಮಿಸಿ ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿದ್ದಾರೆ. ಹಿಂದೆ ಶ್ರೀ ಚಂದ್ರಶೇಖರ ಸ್ವಾಮಿಗಳು ಸ್ಥಾಪಿಸಿದ ವಿದ್ಯಾರ್ಥಿನಿಲಯದಲ್ಲಿ ಈಗ ಮಠದ ವತಿಯಿಂದ ಭುವನೇಶ್ವರಿ ಬಾಲಕಿಯರ ಪ್ರೌಢ

ಶಾಲೆ, ಶ್ರೀ ತರಳಬಾಳು ಜಗದ್ಗುರು ಮಹಿಳಾ ಪದವಿಪೂರ್ವ ಕಾಲೇಜು ಹಾಗೂ ಮಹಿಳಾ ಪ್ರಥಮದರ್ಜೆ ಕಾಲೇಜು ನಡೆಯುತ್ತಿದೆ.

ವಿಳಾಸ: ಶ್ರೀ ಜಾಬಾಲಪುರಿ ಮಠ, ಕಲ್ಯಾಣನಗರ ಬಡಾವಣೆ. (ದೊಡ್ಡಕುರುಬರಹಳ್ಳಿ) ಚಿಕ್ಕಮಗಳೂರು.

ಬಸವಮಂದಿರ: ಚಿಕ್ಕಮಗಳೂರು ನಗರದ ಹೊರವಲಯದ ಹೊಸ ಬಡಾವಣೆಯಾದ ಕಲ್ಯಾಣ ನಗರದಲ್ಲಿ (ದೊಡ್ಡ ಕುರುಬರಹಳ್ಳಿ) ಶ್ರೀ ಬಸವಮಂದಿರವು ಶ್ರೀ ಜಯಚಂದ್ರಶೇಖರ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟಿದೆ. ಈ ಮಠವು ಬಸವತತ್ತ್ವ ಪ್ರಚಾರವನ್ನು ಮೂಲ ಉದ್ದೇಶವನ್ನಾಗಿಟ್ಟುಕೊಂಡು ಸ್ಥಾಪನೆಯಾಗಿದೆ.

ಮಠ ಸ್ಥಾಪನೆ: ಶ್ರೀ ಜಯಚಂದ್ರಶೇಖರ ಸ್ವಾಮಿಗಳು ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿ ಶ್ರೀ ಜಾಬಾಲಿಪುರ ಮಠದಲ್ಲಿ ಹಿರಿಯ ಗುರುಗಳಾಗಿದ್ದ ಶ್ರೀ ಪ್ರಭುಲಿಂಗ ಸ್ವಾಮಿಗಳ ಸಾನ್ನಿಧ್ಯದಲ್ಲಿ, ಮಾಡಾಳು ವಿರಕ್ತಮಠದ ಶ್ರೀ ಚಂದ್ರ ಶೇಖರ ಸ್ವಾಮಿಗಳು ಹಾಗೂ ಹಾಸನ ಜಿಲ್ಲೆಯ ನಾಗೇನಹಳ್ಳಿಮಠದ ಶ್ರೀ ಶಾಂತಮಲ್ಲ ದೇಶಿಕೇಂದ್ರ ಸ್ವಾಮಿಗಳ ಸಮ್ಮುಖದಲ್ಲಿ ಅನುಗ್ರಹ ಪಡೆದು, ೧೯೬೦ರಲ್ಲಿ ಜಾಬಾಲಿಪುರಿಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡು, ಕೆಲವು ದಿನಗಳ ಕಾಲ ಮಠದಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದರು. ಈ ಸಂದರ್ಭದಲ್ಲಿ ಉಂಟಾದ ಕೆಲವು ಘಟನೆಗಳಿಂದ ಬೇಸತ್ತು ಭಕ್ತರ ನೆರವಿನಿಂದ ಬಸವ ಮಂದಿರವನ್ನು ನೂತನವಾಗಿ ಪ್ರಾರಂಭಿಸಿದರು. ಅಂದಿನಿಂದ ಧಾರ್ಮಿಕ ಕಾರ್ಯಗಳ ಜೊತೆಗೆ ಶರಣ ಸಾಹಿತ್ಯವನ್ನು ಜನರ ಮನದಲ್ಲಿ ಬಿತ್ತಿ ಸಮಾಜವನ್ನು ನೈತಿಕ ನೆಲೆಗಟ್ಟಿನಲ್ಲಿ ಬೆಳೆಸುವ ಪ್ರಯತ್ನಕ್ಕೆ ನಾಂದಿಹಾಡಿದ್ದರು.

ಶ್ರೀ ಜಯಚಂದ್ರಶೇಖರ ಸ್ವಾಮಿಗಳು ಸಿದ್ಧಗಂಗಾ, ಮೈಸೂರು ಹಾಗೂ ಚಿಕ್ಕಮಗಳೂರಿನಲ್ಲಿ ವಿದ್ಯಾಭ್ಯಾಸಮಾಡಿ ಮಠದಲ್ಲಿ ನೆಲೆಸಿದ್ದರು. ಸೂಕ್ಷ್ಮಮತಿ ಹಾಗೂ ದಯಾಪರರಾದ ಗುರುಗಳು ಸದಾ ಬಸವತತ್ತ್ವದ ಚಿಂತನೆಯಲ್ಲಿ ಕಾಲ ಕಳೆಯತೊಡಗಿ ಧಾರ್ಮಿಕ ವಿಚಾರಗಳಲ್ಲಿ ಪಕ್ವಗೊಂಡರು. ಗುರುಗಳು ಶರಣರ ಚಿಂತನೆಯನ್ನು ಸಮಾಜದ ಎಲ್ಲಾ ಸ್ತರದ ಜನರಿಗೆ ಮುಟ್ಟಿಸಲು ಶ್ರಮಿಸಿದರು. ಈ ಕಾರಣದಿಂದ ಜನಮನದಲ್ಲಿ ಬೇರೂರಿದ ಗುರುಗಳು ತಾವು ಕಟ್ಟಿದ ಬಸವ ಮಂದಿರವನ್ನು ಅಭಿವೃದ್ಧಿಪಡಿಸಿದರು.

ಧಾರ್ಮಿಕ ಕಾರ್ಯಗಳು: ಶ್ರೀ ಬಸವಮಂದಿರಕ್ಕೆ ಆಸ್ತಿ ಇಲ್ಲದಿದ್ದರೂ ಭಕ್ತರೇ ಆಸ್ತಿಯಾದರು. ತಿಂಗಳಿಗೊಮ್ಮೆ ಶರಣ ಸಾಹಿತ್ಯ ಮತ್ತು ಶರಣರ ಬಗ್ಗೆ ಉಪನ್ಯಾಸ ಕಾರ್ಯಕ್ರಮಗಳನ್ನು ನಡೆಸತೊಡಗಿದರು. ಈ ಕಾರ್ಯಕ್ರಮವು ಮಾಸಿಕ ಶಿವಾನುಭವ ಕಾರ್ಯಕ್ರಮವಾಗಿ ಈತನಕವೂ ನಡೆಯುತ್ತಾ ಬಂದಿದೆ. ಈ ಸಂದರ್ಭದಲ್ಲಿ ತಿಂಗಳಿಗೊಮ್ಮೆ ಒಬ್ಬ ಶರಣರ ಕುರಿತಂತೆ ಉಪನ್ಯಾಸವನ್ನು ಏರ್ಪಡಿಸಿ, ವಿಚಾರಮಂಥನ ಮಾಡಲು ಅನುವುಮಾಡಿಕೊಟ್ಟಿದ್ದಾರೆ. ಇಷ್ಟಲ್ಲದೆ ಪ್ರತಿವರ್ಷ ಮಠದ ಆಶ್ರಯದಲ್ಲಿ ವಿವಿಧ ವಿದ್ವಾಂಸರು ಹಾಗೂ ವಿವಿಧ ಮಠಾಧೀಶ್ವರರನ್ನು ಕರೆಸಿ ಶರಣ ಸಮ್ಮೇಳನ ವನ್ನು ಆಚರಿಸಿ ಭಕ್ತರಿಗೆ ಜ್ಞಾನದಾಸೋಹದ ಜೊತೆಗೆ ಅನ್ನದಾಸೋಹವನ್ನು ನೀಡಿ, ಬಸವಮಂದಿರ ಹೆಚ್ಚು ಪ್ರಸಿದ್ಧಿಗೊಳ್ಳಲು ಕಾರಣಕರ್ತರಾದರು.

ಮರಣವೇ ಮಹಾನವಮಿ: ಶ್ರೀ ಜಯಚಂದ್ರಶೇಖರ ಸ್ವಾಮಿಗಳು ಶರಣರ ತತ್ತ್ವಗಳ ಹಿನ್ನೆಲೆಯಲ್ಲಿ ಸಮಾಜವನ್ನು ರೂಪಿಸಲು ಪರಿಶ್ರಮಪಡುತ್ತಿರುವಾಗಲೇ, ಕರುಳುಬೇನೆ ಗುರುಗಳನ್ನು ಕಾಡಿಸತೊಡಗಿತು. ಆದರೂ ಯಾರಿಗೂ ಹೇಳದೆ ಬಾಹ್ಯ ನೋವುಗಳ ಜೊತೆಗೆ ಆಂತರಿಕ ನೋವನ್ನು ತಾವೊಬ್ಬರೇ ಉಂಡು 'ಮರಣವೇ ಮಹಾನವಮಿ' ಎನ್ನುತ್ತ ೧೯೯೬ ರಲ್ಲಿ ವಿಧಿವಶರಾದದ್ದು, ಭಕ್ತ ಸಮೂಹಕ್ಕೆ ಆಘಾತವನ್ನು ತಂದಿತು.

ಶರಣಧರ್ಮವನ್ನು ಎಲ್ಲಾ ವರ್ಗದ, ಎಲ್ಲಾ ಜಾತಿಯ ಜನರಿಗೆ ಅಲ್ಪಾವಧಿಯಲ್ಲಿ ಮುಟ್ಟಿಸಿ ಎಲ್ಲರ ಪ್ರೀತಿ ಯನ್ನು ಸಂಪಾದಿಸಿಕೊಂಡಿದ್ದ ಶ್ರೀ ಜಯಚಂದ್ರಶೇಖರ ಸ್ವಾಮಿಗಳ ಅಂತಿಮ ಯಾತ್ರೆಗೆ ಸೇರಿದ್ದ ಜನಸ್ತೋಮ ಇಂದಿಗೂ

ಅವಿಸ್ಮರಣೀಯ. ಅಂತಹ ಅಪಾರ ಭಕ್ತ ಸಮೂಹವನ್ನು ಸಂಪಾದಿಸಿಕೊಂಡಿದ್ದ ಚೇತನ ಜೀವಿತದ ಕೊನೆಯ ಕ್ಷಣಗಳಲ್ಲಿ ಶ್ರೀ ಜಯ ಬಸವಾನಂದ ಸ್ವಾಮಿಗಳನ್ನು ಉತ್ತಾರಾಧಿಕಾರಿಗಳನ್ನಾಗಿ ನೇಮಕಮಾಡಿಕೊಂಡು, ಪಟ್ಟಾಧಿಕಾರ ನಡೆಸಿ ನಂತರ ಧರ್ಮ ಸಭೆಯಲ್ಲಿ ಎಂದಿನಂತೆ ಪಾಲ್ಗೊಂಡು ಲಿಂಗೈಕ್ಯರಾದರು.

ಬೆಳೆದ ಪರಂಪರೆ: ಹಿರಿಯ ಗುರುಗಳ ಸಮ್ಮುಖದಲ್ಲಿ ಪಟ್ಟಾಧಿಕಾರ ವಹಿಸಿಕೊಂಡ ಶ್ರೀ ಜಯಬಸವಾನಂದ ಸ್ವಾಮಿಗಳು ಚಿಕ್ಕಮಗಳೂರು ತಾಲ್ಲೂಕಿನ ಲಕ್ಷ್ಮೀಪುರದಲ್ಲಿ ಜನಿಸಿ, ಚಿಕ್ಕಮಗಳೂರು ಹಾಗೂ ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ವಿದ್ಯಾಭ್ಯಾಸ ಮಾಡಿ ಮಠದ ಜವಬ್ದಾರಿಯನ್ನು ವಹಿಸಿಕೊಂಡರು. ಲಿಂಗೈಕ್ಯ ಗುರುಗಳಾದ ಶ್ರೀ ಜಯಚಂದ್ರಶೇಖರ ಸ್ವಾಮಿಗಳು ನಡೆಸುತ್ತಿದ್ದ ಶರಣಧರ್ಮ ಪ್ರಚಾರ ಕಾರ್ಯವನ್ನು ಈಗಲೂ ನಡೆಸಿಕೊಂಡು ಬಂದಿದ್ದಾರೆ. ಹಿರಿಯ ಗುರುಗಳ ಗದ್ದುಗೆಗೆ ಐಕ್ಯ ಮಂಟಪವನ್ನು ೨೦೦೧ ರಲ್ಲಿ ನಿರ್ಮಾಣಮಾಡಿಸಿದ್ದಾರೆ. ಶ್ರೀ ಜಯಚಂದ್ರಶೇಖರ ವಿದ್ಯಾ ಸಂಸ್ಥೆಯನ್ನು ಪ್ರಾರಂಭಿಸಿ, ಪ್ರಾಥಮಿಕ ಶಾಲೆಯನ್ನು ನಡೆಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಜಯಬಸವಾನಂದ ಸ್ವಾಮಿಗಳು, ಶ್ರೀ ಬಸವಮಂದಿರ, ಕಲ್ಯಾಣನಗರ, ಜ್ಯೋತಿನಗರ ಅಂಚೆ, ಚಿಕ್ಕಮಗಳೂರು ತಾಲ್ಲೂಕು.

ಮಾಚಗೊಂಡನಹಳ್ಳಿ

ಚಿಕ್ಕಮಗಳೂರು ತಾಲ್ಲೂಕಿನ ಮಾಚಗೊಂಡನಹಳ್ಳಿಯು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಹದಿನೆಂಟು ಕಿ.ಮೀ ದೂರದಲ್ಲಿದೆ. ಇಲ್ಲಿನ ಕಾಫಿ ತೋಟಗಳ ಮಧ್ಯೆ ಶ್ರೀ ಬೇರುಗಂಡಿಮಠವು ಸ್ಥಾಪನೆಯಾಗಿದೆ.

ಬೇರುಗಂಡಿಮಠ: ಮಾಚಗೊಂಡನಹಳ್ಳಿಯಲ್ಲಿ ಸ್ಥಾಪನೆಯಾಗಿರುವ ಶ್ರೀ ಬೇರುಗಂಡಿಮಠವು ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿ, ಶಿಷ್ಯವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಪುರಾತನ ಕಾಲದ ಪರಂಪರೆಯ ಮಠವು ಈಗ ಜೀರ್ಣಾಭಿವೃದ್ಧಿಗೊಂಡು, ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ಬೆಳೆದಿದೆ.

ಮಠ ಸ್ಥಾಪನೆ: ಹನ್ನೆರಡನೆಯ ಶತಮಾನಕ್ಕೂ ಮೊದಲು ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಸ್ಥಾಪಿಸಿ ವೀರಶೈವ ತತ್ತ್ವಗಳನ್ನು ಪ್ರಚಾರ ಪಡಿಸುತ್ತಿದ್ದರು. ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದ ಕ್ರಾಂತಿಯ ನಂತರ ಶರಣರು ದಕ್ಷಿಣಾಭಿಮುಖವಾಗಿ ಬಂದ ಸಂದರ್ಭದಲ್ಲಿ ಕೆಲವು ಶರಣರು ಈ ಮಠದಲ್ಲಿ ನೆಲೆಸಿದ್ದರು ಎಂದು ಹೇಳಲಾಗುತ್ತಿದೆ. ಈ ಹೇಳಿಕೆಯನ್ನು ಸಾಕ್ಷೀಕರಿಸಲು ಗುರುಸ್ಥಲದ ಈ ಮಠದಲ್ಲಿ ವಚನಗಳ ತಾಡೋಲೆಗಳು ದೊರೆತಿವೆ. ಈ ಗ್ರಂಥಗಳನ್ನು ಕಾಫಿ ಬೆಳೆಗಾರರಾದ ಶ್ರೀ ಬಿ.ಬಿ.ರೇಣುಕಾರ್ಯರವರ ಮನೆಯಲ್ಲಿ ಸಂರಕ್ಷಿಸಲಾಗಿದೆ.

ಪರಂಪರೆ: ಪುರಾತನ ಕಾಲದ ಈ ಮಠವು ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳಿಂದಲೇ ಪ್ರಾರಂಭಗೊಂಡಿದೆ ಎಂದು ಹೇಳಲಾಗುತ್ತಿದೆ. ಕರ್ತೃಗುರುಗಳ ನಂತರ ಅಧಿಕಾರ ನಡೆಸಿದ ಮಠಾಧೀಶರ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಮಠದ ಆವರಣದಲ್ಲಿ ಕರ್ತೃಗುರುಗಳ ಗದ್ದುಗೆ ಹಾಗೂ ಇನ್ನೊಂದು ಗದ್ದುಗೆ ನೋಡಲು ಸಿಗುತ್ತಿವೆ. ಅನೇಕ ವರ್ಷಗಳಿಂದ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿದು ಶಿಥಿಲಗೊಂಡಿತ್ತು. ಈ ಸಂದರ್ಭದಲ್ಲಿ ಜಂಗಮ ಕುಟುಂಬವೊಂದು ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿತ್ತು. ಮಠದಲ್ಲಿ ಗುರುಗಳು ಇಲ್ಲದೇ ಹೋದಕಾರಣ ಮಠದ ಆಸ್ತಿಯು ಅನ್ಯರ ಪಾಲಾಗಿತ್ತು. ಇದನ್ನು ಮನಗಂಡ ಆಲ್ದೂರು, ಮಾಚಗೊಂಡನಹಳ್ಳಿ, ಹಾಂದಿ, ಯಲಗುಡಿಗೆ, ತೋರಣಮಾವು ಹಾಗೂ ಕಟಾರದಹಳ್ಳಿ ಇನ್ನೂ ಮುಂತಾದ ಗ್ರಾಮದ ಪ್ರಮುಖರು ಸೇರಿ ಆಲ್ದೂರು ರೇಣುಕಾರ್ಯರು, ಹಾಂದಿಯ ಬೊಮ್ಮೇಗೌಡರು, ಕೆಳಗೂರಿನ ವೀರೇಗೌಡರು ಹಾಗೂ ಕಟಾರದಹಳ್ಳಿಯ ನಂಜೇಗೌಡರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿ ಸುಮಾರು ಹತ್ತುಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕರ್ತೃಗುರುಗಳ ಗದ್ದುಗೆ ಹಾಗೂ ಮಠದ ನೂತನ ಕಟ್ಟಡವನ್ನು ಅಭಿವೃದ್ಧಿಗೊಳಿಸಿದರು. ಮಠದ ಮೂವತ್ತುಎಕರೆ ಜಮೀನನ್ನು ಕ್ರಮಬದ್ಧಗೊಳಿಸಿ,

ಶ್ರೀಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿದರು.

ಬೆಳಗಾಂ ಜಿಲ್ಲೆಯ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಶ್ರೀಶೈಲದಲ್ಲಿ ವೇದ ಪಾಠಶಾಲೆಯಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ, ಬೇರುಗಂಡಿ ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡ ಮೇಲೆ ವೃತ್ತಿಯಿಂದ ನಿವೃತ್ತಿಗೊಂಡು ಮಾಚಗೊಂಡನಹಳ್ಳಿಗೆ ಆಗಮಿಸಿದರು. ಶ್ರೀ ರಂಭಾಪುರಿಪೀಠ ಹಾಗೂ ಶ್ರೀಶೈಲ ಪೀಠದ ಜಗದ್ಗುರುಗಳ ಸಾನ್ನಿಧ್ಯದಲ್ಲಿ, ಪುರಾತನ ಮಠದ ಹೊಸಕೊಂಡಿಯಾಗಿ ೧೯೬೭ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡರು.

ಅಭಿವೃದ್ಧಿಕಾರ್ಯಗಳು: ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಆಡಳಿತವನ್ನು ವಹಿಸಿಕೊಂಡ ಮೇಲೆ ಮಠದ ಜಮೀನನ್ನು ಅಭಿವೃದ್ಧಿಗೊಳಿಸಿದರು. ಗುರುಗಳು ಸ್ವತಃ ಗುದ್ದಲಿ ಹಿಡಿದು ಕಾಫಿ ಹಾಗೂ ಭತ್ತವನ್ನು ಬೆಳೆದು ಮಠದ ಅಭಿವೃದ್ಧಿಗೆ ಬಳಸಿಕೊಂಡರು. ಗುರುಗಳು ಕ್ರಿಯಾಶೀಲರಾಗಿ, ಕಾಯಕಯೋಗಿಗಳಾಗಿ ಪಟ್ಟಾಧಿಕಾರ ವಹಿಸಿಕೊಂಡ ಮೂರು ವರ್ಷಗಳಲ್ಲಿ ಮಠವನ್ನು ಪ್ರಸಿದ್ಧಿಗೊಳಿಸಿದರು. ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಭಕ್ತರು ಕೊಟ್ಟ ಜವಾಬ್ದಾರಿಯನ್ನು ಮರೆಯದೆ ವೇದ ಪಾಠಶಾಲೆಯನ್ನು ಪ್ರಾರಂಭಿಸಿ, ಶಿಷ್ಯರ ಬಳಗವನ್ನು ಹೆಚ್ಚಿಸಿಕೊಂಡರು. ಗುರುಗಳು ವೇದ ಪಾಠಶಾಲೆಯ ಶಿಷ್ಯರಿಗೆ ವೇದಾಧ್ಯಯನದ ಜೊತೆಗೆ ಕಾಯಕಯೋಗದ ಬಗ್ಗೆ ಅರಿವು ಮೂಡಿಸಿ, ಮೂವತ್ತು ಎಕರೆ ಆಸ್ತಿಯನ್ನು ನಂದನವನವನ್ನಾಗಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯ ತ್ರಿಕಾಲಪೂಜೆ, ಪ್ರತಿ ಅಮಾವಾಸ್ಯೆಯಲ್ಲಿ ಶಿವಾನುಭವಗೋಷ್ಠಿ ಹಾಗೂ ಅನ್ನದಾಸೋಹ ನಡೆಯುತ್ತಿವೆ. ಗುರುಗಳು ಶಿವಪೂಜಾ ನಿಷ್ಠರಾಗಿ ಮಠವನ್ನು ಬೆಳೆಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಬೇರುಗುಂಡಿಮಠ,ಮಾಚಗೊಂಡನಹಳ್ಳಿ, ಆಲ್ದೂರು ಹೋಬಳಿ ಚಿಕ್ಕಮಗಳೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ಮುತ್ತಿನಪುರ

ಚಿಕ್ಕಮಗಳೂರು ತಾಲ್ಲೂಕಿನ ಮುತ್ತಿನಪುರವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಚಂದ್ರದ್ರೋಣ ಪರ್ವತದ ಶ್ರೇಣಿಯಲ್ಲಿ ಬರುವ ಮುತ್ತಿನಪುರವು ಧಾರ್ಮಿಕ ಕ್ಷೇತ್ರವಾಗಿ ಬೆಳೆದಿದೆ. ಇಲ್ಲಿ ಶ್ರೀಫಲಾಹಾರಸ್ವಾಮಿ ಮಠವು ಸ್ಥಾಪನೆಯಾಗಿದೆ.

ಫಲಾಹಾರಸ್ವಾಮಿ ಮಠ: ಮುತ್ತಿನಪುರದಲ್ಲಿ ಶ್ರೀ ಫಲಾಹಾರಸ್ವಾಮಿ ಮಠವು ಸ್ಥಾಪನೆಯಾಗಿದ್ದು, ಈ ಮಠವು ಶ್ರೀನಿರ್ವಾಣ ಸ್ವಾಮಿಮಠ, ಶ್ರೀ ಮುಳ್ಳಯ್ಯನಮಠ, ಶ್ರೀ ಸೀತಾಳಯ್ಯನಮಠ ಹಾಗೂ ಶ್ರೀ ಬಿಸಲಗ್ಗಣಿಮಠ ಎಂಬ ನಾಲ್ಕು ಮಠಗಳು ಸ್ಥಾಪನೆಗೊಂಡ ಸಂದರ್ಭದಲ್ಲಿ ಸ್ಥಾಪನೆಯಾಗಿರಬಹುದೆಂದು ಹೇಳಲಾಗುತ್ತಿದೆ.

ಮಠ ಸ್ಥಾಪನೆ: ಶ್ರೀಶೈಲ ಪೀಠದ ಶಾಖಾಮಠವಾಗಿರುವ ಈ ಮಠವು ಶಿಷ್ಯವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ.ಪುರಾತನ ಕಾಲದ ಈ ಮಠದ ಸ್ಥಾಪಕರಾದ ಶಿವಯೋಗಿಗಳು ಉತ್ತರದ ಕಡೆಯಿಂದ ಲೋಕಸಂಚಾರ ಕೈಗೊಂಡು, ಇಲ್ಲಿನ ರುದ್ರರಮಣೀಯ ಸ್ಥಳದಲ್ಲಿ ಶ್ರೀ ವಿರೂಪಾಕ್ಷೇಶ್ವರ ದೇವಾಲಯದಲ್ಲಿ ಅನುಷ್ಠಾನಗೊಂಡು ಮಠವನ್ನು ಸ್ಥಾಪಿಸಿದ್ದಾರೆ. ಶಿವಯೋಗಿಗಳು ಫಲಾಹಾರವನ್ನಷ್ಟೇ ಸೇವಿಸುತ್ತಿದ್ದ ಕಾರಣ ಗುರುಗಳಿಗೆ ರೂಢಿಗತವಾಗಿ 'ಶ್ರೀಫಲಾಹಾರಸ್ವಾಮಿ' ಗಳೆಂದು ಕರೆಯತೊಡಗಿದರು. ಇವರಿಂದ ಸ್ಥಾಪಿಸಿಲ್ಪಟ್ಟ ಮಠಕ್ಕೆ 'ಶ್ರೀ ಫಲಾಹಾರಸ್ವಾಮಿ ಮಠ' ಎಂದು ಕರೆಯತೊಡಗಿದರು.

ಪರಂಪರೆ: ಹೊಯ್ಸಳರ ಕಾಲದಲ್ಲಿ ಕ್ಷೇತ್ರನಾಥ ವಿರೂಪಾಕ್ಷೇಶ್ವರ ದೇವಾಲಯವನ್ನು ನಿರ್ಮಿಸಲಾಗಿದೆ. ಕೆತ್ತನೆಯ ಕಲ್ಲು

ಗಳಿಂದ ಕಲಾತ್ಮಕವಾಗಿ ದೇವಾಲಯ ನಿರ್ಮಾಣವಾಗಿದ್ದು, ಇಂದು ಸರಿಯಾದ ಉಸ್ತುವಾರಿ ಇಲ್ಲದೆ ಶಿಥಿಲಗೊಂಡಿದೆ. ಪುರಾತನ ಮಠದ ಪರಂಪರೆಯಲ್ಲಿ ಅನೇಕ ಗುರುಗಳು ಅಧಿಕಾರವನ್ನು ನಡೆಸಿ ಧರ್ಮಪ್ರಚಾರವನ್ನು ಕೈಗೊಂಡ ಬಗ್ಗೆ ಉಲ್ಲೇಖಗಳು ದೊರೆಯುತ್ತಿವೆ. ಆದರೆ ಅವರುಗಳ ಕಾಲಮಾನದ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಪರಂಪರೆಯ ಗುರುಗಳ ಎಂಟು ಗದ್ದುಗೆಗಳು ಸ್ಥಾಪನೆಯಾಗಿವೆ. ಪರಂಪರೆಯಲ್ಲಿ ಬಂದ ಗುರುಗಳು ಶ್ರೀ ಫಲಾಹಾರೇಶ್ವರ ಶಿವಾಚಾರ್ಯ ಸ್ವಾಮಿಗಳೆಂದು ಕರ್ತೃಗುರುಗಳ ಹೆಸರನ್ನೇ ಅಭಿಧಾನ ಪಡೆದು ಅಧಿಕಾರಕ್ಕೆ ಬರುತ್ತಿದ್ದ ಕಾರಣ ಪರಂಪರೆಯನ್ನು ಒಂದೇ ಹೆಸರಿನಲ್ಲಿ ಗುರುತಿಸಲಾಗಿದೆ. ಇತ್ತೀಚಿನ ತನಕ ಅಧಿಕಾರ ನಡೆಸಿದ ಶ್ರೀ ಮರುಳಯ್ಯ ಫಲಹಾರೇಶ್ವರ ಶಿವಾಚಾರ್ಯ ಸ್ವಾಮಿಗಳು ಶಿವಪೂಜಾ ನಿಷ್ಠರಾಗಿ, ಆಧ್ಯಾತ್ಮದ ಒಲವಿನಿಂದ ಮಠವನ್ನು ಮುನ್ನಡೆಸಿದರೇ ವಿನಾ ಅಭಿವೃದ್ಧಿಯ ಕಡೆಗೆ ಗಮನಕೊಡಲಿಲ್ಲ. ಗುರುಗಳು ೧೯೯೦ರ ಸೆಪ್ಟೆಂಬರ್ ಏಳರಂದು ಲಿಂಗೈಕ್ಯರಾದರು. ನಂತರ ಉತ್ತರಾಧಿಕಾರಿಗಳಾಗಿ ಮುಗುಳುವಳ್ಳಿ ಶ್ರೀ ಮುರುಘೇಂದ್ರದೇವರು ನೇಮಕಗೊಂಡಿದ್ದಾರೆ. ಇವರು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದಲ್ಲಿ ಸ್ಥಾಪನೆಯಾಗಿರುವ ಗದ್ದುಗೆಗಳಿಗೆ ನಿತ್ಯಪೂಜೆ, ಶಿವರಾತ್ರಿ, ದೀಪಾವಳಿ ಮತ್ತು ಕಾರ್ತೀಕಮಾಸದಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಮಠದ ಸಮೀಪವಿರುವ ಶ್ರೀ ವಿರೂಪಾಕ್ಷೇಶ್ವರ ದೇವಾಲಯ ಹಾಗೂ ಭಂಡಾರಲಕ್ಷ್ಮಿದೇವಸ್ಥಾನಗಳಿಗೂ ಪೂಜೆಯನ್ನು ನಡೆಸಲಾಗುತ್ತಿದೆ. ಈ ಮಠದ ಪ್ರಭಾವಕ್ಕೆ ಒಳಗಾಗಿದ್ದ ಹೊಯ್ಸಳ ದೊರೆ ವೀರಬಲ್ಲಾಳ ಹಾಗೂ ಕೆಳದಿ ಅರಸರು ಅನೇಕ ದಾನದತ್ತಿಗಳನ್ನು ನೀಡಿ ಮಠದ ಅಭಿವೃದ್ಧಿಗೆ ನೆರವಾಗಿದ್ದಾರೆ.

ವಿಳಾಸ: ಶ್ರೀ ಮುರುಘೇಂದ್ರದೇವರು, ಶ್ರೀ ಫಲಹಾರಸ್ವಾಮಿಮಠ,ಮುತ್ತಿನಪುರಗ್ರಾಮ,ಜಾಗರ ಹೋಬಳಿ, ಚಿಕ್ಕಮಗಳೂರು ತಾ.

ಸಿಂದಿಗೆರೆ

ಚಿಕ್ಕಮಗಳೂರು ತಾಲ್ಲೂಕಿನ ಸಿಂದಿಗೆರೆ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಮೂವತ್ತು ಕಿ.ಮೀ. ದೂರದಲ್ಲಿದೆ. ಈ ಗ್ರಾಮವು ಧಾರ್ಮಿಕ ಸ್ಥಳವಾಗಿ ಹೆಸರು ಪಡೆದಿದೆ.

ಕರಡಿಗವಿಮಠ: ಸಿಂದಿಗೆರೆ ಗ್ರಾಮದ ಪಶ್ಚಿಮದ ಹೊರಭಾಗದಲ್ಲಿ ಕಲ್ಲುಬೆಟ್ಟದ ಮಧ್ಯೆ ವಿರಕ್ತಸಂಪ್ರದಾಯದ ಶ್ರೀಕರಡಿಗವಿಮಠವು ಸ್ಥಾಪನೆಯಾಗಿ, ಚೀಲಾಳಸಮಯದ ಪರಂಪರೆಯಲ್ಲಿ ಬೆಳೆದಿದೆ. ಹದಿನಾರನೆಯ ಶತಮಾನದಲ್ಲಿ ಶ್ರೀಕಲ್ಮುರುಡೇಶ್ವರರು ನೈಸರ್ಗಿಕವಾಗಿ ರೂಪುಗೊಂಡಿದ್ದ ಕರಡಿಗವಿಯಲ್ಲಿ ಅನುಷ್ಠಾನಗೊಂಡಿದ್ದರಿಂದ ಈ ಮಠಕ್ಕೆ 'ಶ್ರೀಕರಡಿಗವಿಮಠ' ಎಂಬ ಹೆಸರು ಬಂದಿದೆ.

ಮಠ ಸ್ಥಾಪನೆ: ಸಿಂದಿಗೆರೆ ಗ್ರಾಮದ ಸರಹದ್ದಿಗೆ ಒಳಪಟ್ಟು ಕಲ್ಲುಬೆಟ್ಟಗಳಲ್ಲಿ ಬೆಳೆದ ಕುರುಚಲು ಗಿಡಗಳಿಂದ ಆವೃತವಾಗಿರುವ ಈ ಬೆಂಗಾಡು ಹಿಂದೆ ಅಡವಿಯಾಗಿತ್ತು. ಇದು ಕರಡಿಗಳು ವಾಸಿಸುವ ತಾಣವಾಗಿ ಬೆಳೆದಿತ್ತು. ಶ್ರೀಮರುಳಸಿದ್ಧ ಎಂಬ ಹೆಸರಿನ ಶಿವಯೋಗಿಗಳು ಕರಡಿಗವಿಯಲ್ಲಿ ಅನುಷ್ಠಾನಕ್ಕೆ ಕುಳಿತರು. ಗುರುಗಳು ದೀರ್ಘತಪಸ್ಸನ್ನು ಆಚರಿಸಿ ಅನೇಕ ಪವಾಡಗಳಿಂದ ಪ್ರಸಿದ್ಧಿಯಾದರು. ಗುರುಗಳು ಕಲ್ಲುಬೆಟ್ಟಗಳ ಮಧ್ಯೆ ತಪಸ್ಸನ್ನು ಆಚರಿಸಿದ್ದರಿಂದ 'ಶ್ರೀಕಲ್ಮುರುಡೇಶ್ವರ' ರಾಗಿ ಹೆಸರು ಪಡೆದರು. ಗುರುಗಳು ಇಲ್ಲಿ ಅನುಷ್ಠಾನಕ್ಕೆ ಕುಳಿತ ವಿಚಾರ ಸುತ್ತಲ ಗ್ರಾಮಗಳ ಭಕ್ತರಿಗೆ ತಿಳಿದು ಗುರುಗಳ ದರ್ಶನಕ್ಕೆ ತಂಡೋಪತಂಡವಾಗಿ ಸೇರತೊಡಗಿದರು. ಸಮೀಪದ ಹುಲಿಕೆರೆಗೂ ಈ ವಿಷಯ ತಿಳಿದ ತಕ್ಷಣ ಮುಖಂಡರು ಸಮಸ್ತ ಜನರೊಂದಿಗೆ ಬಂದು ಸಂನ್ಯಾಸಿ ಶ್ರೀ ಕಲ್ಮುರುಡೇಶ್ವರರನ್ನು ಮಂಗಳವಾದ್ಯದೊಂದಿಗೆ ಪಲ್ಲಕ್ಕಿಮೇಲೆ ಹುಲಿಕೆರೆಗೆ ಕರೆತಂದರು. ನಂತರ ಸಖರಾಯಪಟ್ಟಣದ ಭಕ್ತರು ತಮ್ಮಲ್ಲಿಗೆ ಗುರುಗಳನ್ನು ಆಹ್ವಾನಿಸಿ ಕೊಂಡು ಅಲ್ಲಿಯೇ ನೆಲೆಸುವಂತೆ ವ್ಯವಸ್ಥೆ ಮಾಡಿದರು. ಈ ಕಾರಣದಿಂದ ಶ್ರೀ ಕಲ್ಮುರಡೇಶ್ವರರ ಗದ್ದುಗೆ ಸಖರಾಯ ಪಟ್ಟಣದಲ್ಲಿ ಸ್ಥಾಪನೆಯಾಗಿದೆ ಎಂಬ ಜನಪದ ಕಥೆ ಕೇಳಿಬರುತ್ತಿದೆ.

ಶ್ರೀ ಕಲ್ಮುರುಡೇಶ್ವರರು ಮೊದಲು ಅನುಷ್ಠಾನಗೊಂಡ ಸಿಂದಿಗೆರೆಯ ಕರಡಿಗವಿಯು ಜಾಗೃತ ಸ್ಥಳವಾಗಿ ರೂಪುಗೊಂಡಿತ್ತು. ಈ ಸ್ಥಳದಲ್ಲಿ ೧೯೨೭-೨೮ರಲ್ಲಿ ಶ್ರೀ ಅಜ್ಜಯ್ಯ ಸ್ವಾಮಿಗಳು ಸ್ಥಾಪಿಸಿದ ಈ ಮಠ ಧಾರ್ಮಿಕ ಚಟುವಟಿಕೆಗಳ ಕೇಂದ್ರ ಸ್ಥಳವಾಗಿ ರೂಪುಗೊಂಡಿದೆ. ಮಾಚೇನಹಳ್ಳಿಯ ಗೃಹಸ್ಥರಾದ ಶ್ರೀ ಅಜ್ಜಯ್ಯನವರು ವೈರಾಗ್ಯ ಪಡೆದು ಈ ಕ್ಷೇತ್ರಕ್ಕೆ ಆಗಮಿಸಿ ಮಠವನ್ನು ಸ್ಥಾಪಿಸಿದರು. ಇವರ ಕರ್ತೃತ್ವ ಶಕ್ತಿಯಿಂದ ಮಠವು ಅಭಿವೃದ್ಧಿಗೊಂಡಿತು. ಶ್ರೀ ಕಲ್ಮುರುಡೇಶ್ವರರು ಅನುಷ್ಠಾನಕ್ಕೆ ಕುಳಿತಿದ್ದ ಕರಡಿಗವಿಯ ಸಮೀಪದಲ್ಲೇ ಮಠದ ಕಟ್ಟಡವನ್ನು ಸ್ಥಾಪಿಸಿದರು. ಅಲ್ಲದೆ ಮಠದ ಸುತ್ತಲಿನ ಜಾಗವನ್ನು ಅಭಿವೃದ್ಧಿಗೊಳಿಸಿ, ಮಠಕ್ಕೆ ಆದಾಯ ಬರುವಂತೆ ಮಾಡಿ ದಾಸೋಹಕ್ರಿಯೆಯನ್ನು ಪ್ರಾರಂಭಿಸಿದರು. ಗುರುಗಳು ನಿತ್ಯ ಶಿವಾನುಭವಗೋಷ್ಠಿಯನ್ನು ನಡೆಸಿ ಭಕ್ತರನ್ನು ಬೆಳೆಸಿದರು.

ಪರಂಪರೆ: ಶ್ರೀ ಅಜ್ಜಯ್ಯ ಸ್ವಾಮಿಗಳು, ಸಖರಾಯಪಟ್ಟಣದ ಸಮೀಪದ ಅಗ್ರಹಾರದ ಶ್ರೀ ಶಂಕರಾನಂದ ಸ್ವಾಮಿಗಳನ್ನು ಐದು ತಿಂಗಳ ಹಾಲುಗಲ್ಲದ ಹಸುಳೆಯಾಗಿದ್ದಾಗಲೇ ಮಠಕ್ಕೆ ಕರೆತಂದು ಸಂಸ್ಕಾರವಂತ ಶಿಶುವನ್ನಾಗಿ ಬೆಳೆಸಿದರು. ನಂತರ ೧೯೬೧ರ ಡಿಸೆಂಬರ್ ಹನ್ನೆರಡರಂದು ಮಠದ ಉತ್ತರಾಧಿಕಾರಿಗಳನ್ನಾಗಿ ನೇಮಿಸಿ ಲಿಂಗೈಕ್ಯರಾದರು. ಶ್ರೀಅಜ್ಜಯ್ಯ ಸ್ವಾಮಿಗಳ ಅಪೇಕ್ಷೆಯಂತೆ ಭಕ್ತರು ಶ್ರೀ ಶಂಕರಾನಂದ ಸ್ವಾಮಿಗಳನ್ನು ವಿದ್ಯಾವಂತರನ್ನಾಗಿ ಮಾಡಿ ೧೯೭೫ರಲ್ಲಿ ಪಟ್ಟಾಧಿಕಾರವನ್ನು ಮಾಡಿದರು. ಇವರಿಗೆ ಕನಕಪುರದ ಶ್ರೀ ದೇಗುಲಮಠದ ಶ್ರೀ ಮಹಾಲಿಂಗ ಸ್ವಾಮಿಗಳು ನಿರಂಜನ ಪಟ್ಟಾಧಿಕಾರವನ್ನು ನೀಡಿದರು. ಮಠದ ಮೊದಲ ಗುರುಗಳಾಗಿ ಪಟ್ಟಾಧಿಕಾರ ವಹಿಸಿಕೊಂಡ ಶ್ರೀ ಶಂಕರಾ ನಂದ ಸ್ವಾಮಿಗಳು ಬಸವಾದಿ ಶರಣರ ತತ್ತ್ವಗಳನ್ನು ಜನಮನಕ್ಕೆ ಮುಟ್ಟಿಸಲು ಶ್ರಮಿಸುತ್ತಿದ್ದಾರೆ. ಮಠದ ಅಭಿವೃದ್ಧಿಯ ಬಗ್ಗೆ ಚಿಂತಿಸಿ ಮಠವನ್ನು ಬೆಳೆಸಿದ್ದಾರೆ. ಗುರುಗಳು ತಿಪಟೂರು, ಚಿಕ್ಕನಾಯಕನಹಳ್ಳಿ ಹಾಗೂ ತುಮಕೂರು ಜಿಲ್ಲೆಯ ವಿವಿಧ ಭಾಗದ ಭಕ್ತರನ್ನು ಸಂಪಾದಿಸಿಕೊಂಡು, ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ಶೈಕ್ಷಣಿಕ ಕಾರ್ಯಗಳು: ಶ್ರೀ ಕಲ್ಮುರುಡೇಶ್ವರ ಮಠವನ್ನು ಧಾರ್ಮಿಕ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿಪಡಿಸಿದ ಗುರುಗಳು ಗ್ರಾಮಾಂತರ ಮಕ್ಕಳ ಅಭ್ಯುದಯಕ್ಕಾಗಿ'ಶ್ರೀ ಕಲ್ಮುರುಡೇಶ್ವರ ಗುರುಕುಲ ವಿದ್ಯಾಪೀಠ'ವನ್ನು ಸ್ಥಾಪಿಸಿ ಎಸ್.ಬಿದರೆ, ಕ್ಯಾಮನಹಳ್ಳಿ ಹಾಗೂ ಸಿಂದಿಗೆರೆಯಲ್ಲಿ ಪ್ರೌಢಶಾಲೆಗಳನ್ನು ಪ್ರಾರಂಭಿಸಿದ್ದಾರೆ. ಅಲ್ಲದೆ ಕಲಿಯುವ ಬಡಮಕ್ಕಳಿಗೆ ಮಠದಲ್ಲಿ ಆಶ್ರಯ ಕಲ್ಪಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಶ್ರೀ ಕಲ್ಮುರುಡೇಶ್ವರರು ಅನುಷ್ಠಾನ ಕುಳಿತ ಗವಿಯಲ್ಲಿ ಇವರ ತೋರುಗದ್ದುಗೆ ಸ್ಥಾಪಿಸಲಾಗಿದೆ. ಮಠದ ಆವರಣದಲ್ಲಿ ಶ್ರೀ ಅಜ್ಜಯ್ಯಸ್ವಾಮಿಗಳ ಗದ್ದುಗೆ ಇದ್ದು ನಿತ್ಯಪೂಜೆಯನ್ನು ನಡೆಸಲಾಗುತ್ತಿದೆ. ಪ್ರತಿ ಅಮಾವಾಸ್ಯೆಯಲ್ಲಿ ಗವಿ ಮತ್ತು ಮಠದಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಪೂಜೆಗೆಂದು ಬರುವ ಭಕ್ತ ಸಮೂಹಕ್ಕೆ ದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಪ್ರತಿ ಯುಗಾದಿಯಲ್ಲಿ ಶ್ರೀ ಕಲ್ಮುರುಡೇಶ್ವರ ಜಾತ್ರೆಯನ್ನು ನಡೆಸಲಾಗುತ್ತಿದೆ. ಜಾತಿ ಭೇದವಿಲ್ಲದೆ ಈ ಪ್ರಾಂತ್ಯದ ಎಲ್ಲಾ ಜನರು ಶ್ರೀ ಕರಡಿಗವಿ ಮಠಕ್ಕೆ ಭಕ್ತರಾಗಿದ್ದಾರೆ. ಭಕ್ತರ ಭಾವನೆಗೆ ಎಂದೂ ಕುಂದು ಉಂಟಾಗದ ಹಾಗೆ ಶ್ರೀ ಶಂಕರಾನಂದ ಸ್ವಾಮಿಗಳು ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಕಾಯಕಯೋಗಿಗಳಾಗಿ, ಧರ್ಮನಿಷ್ಠರಾಗಿ, ಧರ್ಮಜಾಗೃತಿಯನ್ನುಂಟುಮಾಡಿ ಸಮಾಜವನ್ನು ಬೆಳೆಸಿದ್ದಾರೆ. ಶ್ರೀ ಅಜ್ಜಯ್ಯ ಸ್ವಾಮಿಗಳು ೧೯೨೮ರಲ್ಲಿ ಕಟ್ಟಿಸಿದ ಮಠದ ಕಟ್ಟಡ ಈಗ ವಿಸ್ತಾರಗೊಂಡಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಶಂಕರಾನಂದ ಸ್ವಾಮಿಗಳು, ಶ್ರೀ ಕರಡಿಗವಿಮಠ, ಸಿಂದಿಗೆರೆ ಅಂಚೆ, ಚಿಕ್ಕಮಗಳೂರು ತಾಲ್ಲೂಕು.

ಹಿರೇಕೊಳಲೆ

ಚಿಕ್ಕಮಗಳೂರು ತಾಲ್ಲೂಕಿನ ಹಿರೇಕೊಳಲೆಯು ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಹದಿನೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ನಾರುಕಂತೆ ಮಠವು ಸ್ಥಾಪನೆಯಾಗಿದೆ.

ನಾರುಕಂತೆ ಮಠ: ಹಿರೇಕೊಳಲೆಯಲ್ಲಿ ಶ್ರೀಶೈಲ ಪೀಠದ ಶಾಖಾಮಠವಾಗಿ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದ ಶ್ರೀ ನಾರುಕಂತೆ ಮಠವು ಸ್ಥಾಪನೆಯಾಗಿದೆ.

ಮಠ ಸ್ಥಾಪನೆ: ಲೋಕಸಂಚಾರ ಕೈಗೊಂಡು ಈ ಸ್ಥಳಕ್ಕೆ ಆಗಮಿಸಿದ ಶ್ರೀ ನಾರುಕಂತೆ ಶಿವಯೋಗಿಗಳು ಇಲ್ಲಿ ನೆಲೆಸಿ ಮಠವನ್ನು ಸ್ಥಾಪಿಸಿದ್ದಾರೆ. ಗುರುಗಳು ಈ ಮಲೆನಾಡಿನ ಪ್ರಾಂತ್ಯದಲ್ಲಿ ಮಠವನ್ನು ಸ್ಥಾಪಿಸಿ ವೀರಶೈವ ಧರ್ಮ ಬೆಳೆಯುವಂತೆ ಮಾಡಿದರು. ಇವರ ನಂತರ ಅಧಿಕಾರ ನಡೆಸಿದ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ಲಭ್ಯವಿಲ್ಲ. ಮಠದ ಆವರಣದಲ್ಲಿ ಹೆಸರು ಲಭ್ಯವಿಲ್ಲದ ಒಂದು ಗದ್ದುಗೆ ಸ್ಥಾಪನೆಯಾಗಿದ್ದು, ಕರ್ತೃಗದ್ದುಗೆಯಂತೆ ಈ ಗದ್ದುಗೆಯು ಪೂಜನೆಗೆ ಒಳಗಾಗಿದೆ. ಈಗ ಈ ಮಠದ ಉಸ್ತುವಾರಿಯನ್ನು ಬಸವರಾಜಯ್ಯ ಎಂಬುವರು ನೋಡಿಕೊಳ್ಳುತ್ತಾ ಮಠವನ್ನು ಮುನ್ನಡೆಸುತ್ತಿದ್ದಾರೆ. ಹಿರೇಕೊಳಲೆ ಮತ್ತು ಸುತ್ತಮುತ್ತಲಿನ ಮೂರು ಹಳ್ಳಿಯ ಗ್ರಾಮಸ್ಥರು ಮಠದ ಭಕ್ತರಾಗಿದ್ದು ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಂಡು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ವಿಳಾಸ: ಶ್ರೀ ಬಸವರಾಜಯ್ಯನವರು, ಶ್ರೀ ನಾರುಕಂತೆಮಠ, ಹಿರೇಕೊಳಲೆ, ಚಿಕ್ಕಮಗಳೂರು ತಾಲ್ಲೂಕು.

ಹಿರೇಕಾನು

ಚಿಕ್ಕಮಗಳೂರು ತಾಲ್ಲೂಕಿನ ಹಿರೇಕಾನು ತಾಲ್ಲೂಕು ಕೇಂದ್ರದಿಂದ ಇಪ್ಪತ್ನಾಲ್ಕು ಕಿ.ಮೀ ದೂರದಲ್ಲಿದೆ. ಚಂದ್ರದ್ರೋಣ ಪರ್ವತದ ಶ್ರೇಣಿಯಲ್ಲಿ ಬರುವ ಈ ಗ್ರಾಮವು ಧಾರ್ಮಿಕವಾಗಿ ಹೆಸರು ಪಡೆದಿದೆ.

ಬಿಸಲಗ್ಗಣಿಮಠ: ಹಿರೇಕಾನು ಗ್ರಾಮದ ಸಮೀಪದಲ್ಲಿ ಶ್ರೀ ಬಿಸಲಗ್ಗಣಿಮಠವು ಸ್ಥಾಪನೆಯಾಗಿದೆ. ಈ ಮಠವು ಶ್ರೀಶೈಲ ಪೀಠದ ಶಾಖಾಮಠವಾಗಿದೆ. ಶ್ರೀ ಬಿಸಲಗ್ಗಣಿ ಮಠಕ್ಕೆ 'ಶ್ರೀ ಹಿರೇಕಾನುಮಠ' ಎಂದೂ ಸಹ ಕರೆಯಲಾಗುತ್ತಿದೆ.

ಮಠದ ಸ್ಥಾಪನೆಯ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಶ್ರೀ ಹಿರೇಕಾನು ಸಿದ್ಧರು ಈ ಮಠದ ಕರ್ತೃ ಗುರುಗಳೆಂದು ಹೇಳಲಾಗುತ್ತಿದೆ. ಚಂದ್ರದ್ರೋಣ ಪರ್ವತದ ತಪ್ಪಲಿನಲ್ಲಿ ಸ್ಥಾಪನೆಯಾಗಿರುವ ಈ ಮಠವು ವೀರಶೈವ ಧರ್ಮದ ತತ್ತ್ವವನ್ನು ಪ್ರಚಾರಪಡಿಸುವಲ್ಲಿ ಮುಂದಾಗಿ ಮಲೆನಾಡಿನಲ್ಲಿ ವೀರಶೈವಧರ್ಮ ಬೆಳೆಯುವಂತೆ ಮಾಡಿದೆ. ಮಠದ ಪರಂಪರೆಯ ಗುರುಗಳಾಗಿ ಶ್ರೀ ಪ್ರಭುಲಿಂಗ ಸ್ವಾಮಿಗಳು, ಶ್ರೀ ವೀರಭದ್ರ ಸ್ವಾಮಿಗಳು ಹಾಗೂ ಶ್ರೀ ಚನ್ನವೀರ ಸ್ವಾಮಿಗಳು ಅಧಿಕಾರ ನಡೆಸಿರುವರೆಂದು ಹೇಳಲಾಗುತ್ತಿದೆ. ಹದಿನೇಳನೆಯ ಶತಮಾನದಲ್ಲಿ ಶ್ರೀ ಪ್ರಭುಲಿಂಗ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಗುರುಗಳು ಮಹಾಪವಾಡ ಪುರುಷರಾಗಿ ಮಠವನ್ನು ಅಭಿವೃದ್ಧಿಗೊಳಿಸಿದ್ದರು. ಗುರುಗಳು ಕುದಿಯುತ್ತಿದ್ದ ನೀರಿನಲ್ಲಿ ಸ್ನಾನ ಮಾಡುತ್ತಿದ್ದ ಕಾರಣದಿಂದ'ಶ್ರೀ ಬಿಸಲಗ್ಗಣಿಸ್ವಾಮಿ'ಗಳು ಎಂದು ರೂಢಿಗತ ವಾಗಿ ಕರೆಯುತ್ತಿದ್ದರು. ಇವರ ಕಾಲದಿಂದ ಹೀರೇಕಾನು ಮಠಕ್ಕೆ ಶ್ರೀ ಬಿಸಲಗ್ಗಣಿಮಠ ಎಂಬ ಹೆಸರು ಬಂದಿದೆ ಎಂದು ಹೇಳಲಾಗುತ್ತಿದೆ. ಪರಂಪರೆಯ ಗುರುಗಳಾದ ಶ್ರೀ ಚನ್ನವೀರ ಸ್ವಾಮಿಗಳು ಶಿವಪೂಜಾನಿಷ್ಠರಾಗಿ ಮಠವನ್ನು ಅಭಿವೃದ್ಧಿ ಪಡಿಸಿದ್ದರು. ಇವರು ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಬಸವರಾಜಯ್ಯನವರನ್ನು ನೇಮಿಸಿಕೊಂಡು ೧೯೪೯ರಲ್ಲಿ ಲಿಂಗೈಕ್ಯರಾದರು. ಶ್ರೀ ಬಸವರಾಜಯ್ಯನವರು ಮಠಾಧೀಶರಾಗದ ಕಾರಣ ಮಠವು ಖಾಲಿ ಉಳಿಯಿತು. ಇವರು ಅಂದಿ ನಿಂದ ಮಠದ ಸಂಬಂಧವನ್ನು ಬಿಡದೆ ಧರ್ಮದರ್ಶಿಗಳಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಕೆಳದಿ ಅರಸರಾದ ಸೋಮಶೇಖರ ನಾಯಕನು (ಕ್ರಿ.ಶ.೧೬೬೩-೧೬೭೧) ಈ ಮಠದ ಪ್ರಭಾವವನ್ನು ಕೇಳಿ ಮಠಕ್ಕೆ ಆಗಮಿಸಿ, ಮಠದ ಧಾರ್ಮಿಕ ಕಾರ್ಯಗಳಿಗೆ ಅನುಕೂಲವಾಗಲು ಶಿವಮೊಗ್ಗ, ತರೀಕೆರೆ ಹಾಗೂ ಮಠದ ಸುತ್ತ ಜಮೀನನ್ನು ಇನಾಂ ನೀಡಿ,ಅಭಿವೃದ್ಧಿಗೆ ಕಾರಣಕರ್ತರಾಗಿದ್ದಾರೆ. ಇವರ ನಂತರ ಅಧಿಕಾರಕ್ಕೆ ಬಂದ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿಲಭ್ಯವಿಲ್ಲ. ಈಗ ಗುರುಗಳಿಲ್ಲದೆ ಮಠವು ಖಾಲಿ ಉಳಿದಿದೆ. ಮಠದ ವಂಶಸ್ಥರು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಮಠವನ್ನು ಮುನ್ನಡೆಸಿಕೊಂಡು ಬರುತ್ತಿದ್ದಾರೆ. ಈ ಮಠಕ್ಕೂ ಇನಾಂ ದತ್ತಾತ್ರೇಯ ಪೀಠಕ್ಕೂ ಸಂಬಂಧವಿದ್ದು ಅಲ್ಲಿನ ಪೂಜಾ ಕಾರ್ಯಗಳನ್ನ ಈ ಮಠವೇ ನಡೆಸಿಕೊಂಡು ಬರುತ್ತಿತ್ತು. ದತ್ತಾತ್ರೇಯರು

ಇಲ್ಲಿಗೆ ಆಗಮಿಸಿದಾಗ ಶ್ರೀ ಬಿಸಲಗ್ಗಣಿಮಠವು ದತ್ತಾತ್ರೇಯರು ಅನುಷ್ಠಾನಗೊಳ್ಳಲು ನೆರವು ನೀಡಿತ್ತು. ಅಲ್ಲದೆ ಅರೇಬಿಯಾದಿಂದ ಬಂದ ದಾದಾಪೀರ್ ಹಯತ್ ಖಲಂದರ್ ಹಾಗೂ ಅವರ ಸಹಚರರಿಗೆ ನೆರವು ನೀಡಿ ಅನುಷ್ಠಾನಗೊಳ್ಳಲು ನೆರವು ನೀಡಿತ್ತೆಂದು ಹೇಳಲಾಗುತ್ತಿದೆ. ಈ ರೀತಿ ಧಾರ್ಮಿಕ ಭಾವೈಕ್ಯತೆಯು ಬೆಳೆಯಲು ಮಠವು ನೆರವಾಗಿತ್ತು.

ವಿಳಾಸ: ಶ್ರೀ ಬಸವರಾಜಯ್ಯನವರು, ಧರ್ಮದರ್ಶಿಗಳು, ಶ್ರೀ ಬಿಸಲಗ್ಗಣಿಮಠ, ಹಿರೇಕಾನು, ಚಿಕ್ಕಮಗಳೂರು ತಾಲ್ಲೂಕು.

ಹೊಸಳ್ಳಿ

ಚಿಕ್ಕಮಗಳೂರು ತಾಲ್ಲೂಕಿನ ಹೊಸಳ್ಳಿಯು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಎಂಟು ಕಿ.ಮೀ.ದೂರದಲ್ಲಿದೆ. ಈ ಗ್ರಾಮಕ್ಕೆ ಒಂದು ಕಿ.ಮೀ ದೂರದಲ್ಲಿ ಶ್ರೀ ನಿರ್ವಾಣಸ್ವಾಮಿ ಮಠವು ಸ್ಥಾಪನೆಯಾಗಿದೆ.

ನಿರ್ವಾಣಸ್ವಾಮಿಮಠ: ಹೊಸಳ್ಳಿಯ ಸಮೀಪದಲ್ಲಿ ಶ್ರೀ ನಿರ್ವಾಣಸ್ವಾಮಿ ಮಠವು ಸ್ಥಾಪನೆಯಾಗಿದೆ. ಶ್ರೀ ನಿರ್ವಾಣ ಸಿದ್ಧ ತಪಸ್ವಿಗಳು ಲೋಕಸಂಚಾರ ಕೈಗೊಂಡು ಈ ಸ್ಥಳದಲ್ಲಿ ನೆಲೆಸಿ ಮಠ ಸ್ಥಾಪನೆಯಾಗಲು ಕಾರಣರಾಗಿದ್ದಾರೆ. ಈ ಮಠವು ಶ್ರೀ ನಿರ್ವಾಣ ಸಿದ್ಧರಿಂದ ಸ್ಥಾಪನೆಗೊಂಡಿದ್ದರಿಂದ 'ಶ್ರೀ ನಿರ್ವಾಣಸ್ವಾಮಿ ಮಠ' ಎಂಬ ಹೆಸರು ಬಂದಿದೆ.

ಶ್ರೀ ನಿರ್ವಾಣ ಸ್ವಾಮಿಗಳ ಕಾಲಮಾನದ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಆದರೆ ಜನಪದ ಕಥೆಯ ಆಧಾರದ ಹಿನ್ನೆಲೆಯಲ್ಲಿ, ಹನ್ನೆರಡನೆಯ ಶತಮಾನದ ಕಲ್ಯಾಣದ ಶರಣರಲ್ಲಿ ಒಬ್ಬರಾಗಿದ್ದ ನಿರ್ವಾಣಯ್ಯ ಸ್ವಾಮಿಗಳು ಅಕ್ಕನಾಗಮ್ಮ ಮತ್ತು ನುಲಿಯಚಂದಯ್ಯನವರ ಜತೆಯಲ್ಲಿ ಆಗಮಿಸಿ, ಇಲ್ಲಿ ನೆಲೆಸಿದರೆಂದು ಹೇಳಲಾಗುತ್ತದೆ. ಗುರುಗಳು ಲೋಕ ಸಂಚಾರ ಮಾಡುತ್ತಾ ಕಡೂರು ಸಮೀಪದ ತುರವನಹಳ್ಳಿಯಲ್ಲಿ ಕೆಲವು ದಿನ ನೆಲೆಸಿ ಅನೇಕ ಪವಾಡಗಳನ್ನು ಮಾಡಿ, ಹಾಲುಮತಸ್ಥ ಭಕ್ತರನ್ನು ಉದ್ಧರಿಸಿ ಸಖರಾಯಪಟ್ಟಣ ಮಾರ್ಗವಾಗಿ ಚಂದ್ರದ್ರೋಣ ಪರ್ವತಕ್ಕೆ ಆಗಮಿಸಿದರು ಎಂದು ಹೇಳುವ ಜನಪದ ಕಥೆ ಜನಜನಿತವಾಗಿದೆ. ಚಂದ್ರದ್ರೋಣ ಪರ್ವತದ ನಿಸರ್ಗದ ಮಡಿಲಲ್ಲಿ ಮಲ್ಲೇಶ್ವರ ದೇವಸ್ಥಾನವು ಪುರಾತನ ಕಾಲದಲ್ಲಿಯೇ ಸ್ಥಾಪನೆಯಾಗಿತ್ತು. ಗುರುಗಳಾದ ಶ್ರೀ ನಿರ್ವಾಣ ಸ್ವಾಮಿಗಳು ಇಲ್ಲಿಗೆ ಆಗಮಿಸಿದಾಗ ಇಲ್ಲೇ ನೆಲೆಸಲು ಶ್ರೀ ಗುರುಲಿಂಗದೇವರು ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟರು. ಶ್ರೀ ನಿರ್ವಾಣ ಸ್ವಾಮಿಗಳು ಇಲ್ಲಿ ಅನೇಕ ಪವಾಡಗಳನ್ನು ಮಾಡಿ, ಭಕ್ತರನ್ನು ಉದ್ಧರಿಸಿ ದೀರ್ಘತಪಸ್ಸನ್ನು ಮಾಡಿ ನಿರ್ವಿಕಲ್ಪ ಸಮಾದಿಯಾಗಿದ್ದಾರೆ. ಶ್ರೀ ನಿರ್ವಾಣ ಸ್ವಾಮಿಗಳು ಅನುಷ್ಠಾನಗೊಂಡು ಜೀವಂತ ಸಮಾಧಿಯಾದ ಸ್ಥಳ ಜಾಗೃತಸ್ಥಳವಾಗಿ ರೂಪುಗೊಂಡಿದೆ. ಇವರ ಗದ್ದುಗೆಯ ಮೇಲೆ ಸ್ಥಾಪಿತಗೊಂಡ ಮಠಕ್ಕೆ ಕೆಳದಿಯ ಅರಸರು ಅನೇಕ ದಾನದತ್ತಿ ನೀಡಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಶ್ರೀ ನಿರ್ವಾಣ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಈ ಮಠಕ್ಕೆ ಮಠಾಧೀಶರು ಯಾರೂ ನೇಮಕಗೊಳ್ಳಲಿಲ್ಲ. ಅಂದಿನಿಂದ ಈತನಕ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದ ಮನೆತನವೇ ಈಗಲೂ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದಿದೆ. ಈಗ ಶ್ರೀ ಮಹೇಶ್ ಎಂಬುವರು ಮಠವನ್ನು ಅಭಿವೃದ್ಧಿಪಡಿಸಿ ಧಾರ್ಮಿಕ ಹಾಗೂ ಅನ್ನದಾಸೋಹ ಕಾರ್ಯವನ್ನು ನಡೆಸತೊಡಗಿದ್ದಾರೆ.

ವಿಳಾಸ: ಮಹೇಶ್, ಧರ್ಮದರ್ಶಿಗಳು, ಶ್ರೀ ನಿರ್ವಾಣಸ್ವಾಮಿಮಠ, ಹೊಸಳ್ಳಿ, ಕೈಮಾರಅಂಚೆ, ಚಿಕ್ಕಮಗಳೂರು ತಾಲ್ಲೂಕು.

❑

ತರೀಕೆರೆ ತಾಲ್ಲೂಕು

ಚಿಕ್ಕಮಗಳೂರು ಜಿಲ್ಲೆಯ ಪ್ರಮುಖ ತಾಲ್ಲೂಕುಗಳಲ್ಲಿ ಒಂದಾದ ತರೀಕೆರೆಯು ಐತಿಹಾಸಿಕ ಹಾಗೂ ಧಾರ್ಮಿಕವಾಗಿ ಮಹತ್ವವನ್ನು ಪಡೆದಿದೆ. ಈ ತಾಲ್ಲೂಕಿನಲ್ಲಿ ವೀರಶೈವ ಧರ್ಮ ಪ್ರಬಲವಾಗಿ ಬೆಳೆದು ನಾಡಿಗೆ ಸಂಸ್ಕಾರವನ್ನು ನೀಡಿದೆ. ಈಗ ಅಸ್ತಿತ್ವದಲ್ಲಿರುವ ಮಠಗಳ ಜತೆಗೆ ಅನೇಕ ಮಠಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡು ಮರೆಯಾಗಿವೆ. ಅವುಗಳಲ್ಲಿ ಬಾವಿಕೆರೆಮಠ, ಹಾದಿಕೆರೆಮಠ, ಉಡೇವುಮಠ ಮುಖ್ಯವಾದವುಗಳು.

ತರೀಕೆರೆ

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯು ಜಿಲ್ಲಾ ಕೇಂದ್ರದಿಂದ ಉತ್ತರ ಭಾಗಕ್ಕೆ ಐವತ್ತು ಕಿ.ಮೀ ದೂರದಲ್ಲಿದೆ. ತಾಲ್ಲೂಕು ಕೇಂದ್ರವಾಗಿರುವ ತರೀಕೆರೆ ಪಟ್ಟಣವು, ವೀರಶೈವ ಧರ್ಮದ ಚಟುವಟಿಕೆಯ ಕೇಂದ್ರವಾಗಿ ರೂಪುಗೊಂಡಿದೆ. ಹನ್ನೆರಡನೆಯ ಶತಮಾನ ಹಾಗೂ ಅದಕ್ಕೂ ಮೊದಲು ಇಲ್ಲಿ ಮಠಗಳು ಅಸ್ತಿತ್ವದಲ್ಲಿದ್ದು ವೀರಶೈವ ಧರ್ಮ ಬೆಳೆಯಲು ಪ್ರೋತ್ಸಾಹಿಸಿವೆ. ಈ ಪಟ್ಟಣದಲ್ಲಿ ಪುರಾತನ ಕಾಲದ ಶ್ರೀ ಎಣ್ಣೆಹೊಳೆಮಠ ಹಾಗೂ ಶ್ರೀ ಕುಂಬಾರಗೇರಿಮಠ ಎಂಬ ಎರಡು ಮಠಗಳು ಸ್ಥಾಪನೆಯಾಗಿವೆ. ಈ ಮಠಗಳಲ್ಲಿ ಶ್ರೀ ಕುಂಬಾರಗೇರಿ ಮಠವು ಜೀರ್ಣಾವಸ್ಥೆಗೆ ಬಂದಿದೆ. ಶ್ರೀಎಣ್ಣೆಹೊಳೆ ಮಠವು ನಂದಿಯ ನುಲಿಯ ಚಂದಯ್ಯನವರ ಮಠದ ಶಾಖಾಮಠವಾಗಿ ಬೆಳೆದಿದೆ.

ಎಣ್ಣೆಹೊಳೆಮಠ: ಹನ್ನೆರಡನೆಯ ಶತಮಾನಕ್ಕೂ ಮೊದಲೇ ಸ್ಥಾಪನೆಗೊಂಡಿದ್ದ ಶ್ರೀ ಎಣ್ಣೆಹೊಳೆ ಮಠವು ನುಲಿಯ ಚಂದಯ್ಯ ಹಾಗೂ ಅಕ್ಕನಾಗಮ್ಮನವರು ಆಗಮಿಸಿ, ಅನುಷ್ಠಾನಗೊಂಡ ಮೇಲೆ ಹೆಚ್ಚುಪ್ರಸಿದ್ಧಿ ಪಡೆದು ಬೆಳೆದಿದೆ. ವಿರಕ್ತ ಸಂಪ್ರದಾಯದ ಸಂಪಾದನೆ ಸಮಯದ ಈ ಮಠವು, ತರೀಕೆರೆ ಪಟ್ಟಣದ ದಕ್ಷಿಣದ ಹೊರಭಾಗದಲ್ಲಿ ಸ್ಥಾಪನೆಯಾಗಿದೆ.

ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದ ಕ್ರಾಂತಿಯ ನಂತರ ಬಸವಣ್ಣನವರ ಸಹೋದರಿ ಅಕ್ಕನಾಗಮ್ಮನವರು ಹಾಗೂ ಕಾಯಕಯೋಗಿ ನುಲಿಯ ಚಂದಯ್ಯನವರು ಕಾರವಾರ ಜಿಲ್ಲೆಯ ಉಳವಿಯ ತನಕ ಚನ್ನಬಸವಣ್ಣನವರ ಜೊತೆಯಲ್ಲಿ ಆಗಮಿಸಿ, ಕೆಲವು ದಿನ ಉಳವಿಯಲ್ಲಿ ನೆಲೆನಿಂತು ನಂತರ ಭದ್ರಾವತಿ ತಾಲ್ಲೂಕಿನ ಗೋಣಿಬೀಡಿಗೆ ಆಗಮಿಸಿ ಅಲ್ಲಿ ಮಠವನ್ನು ಸ್ಥಾಪಿಸಿ, ನಂತರ ತರೀಕೆರೆಗೆ ಆಗಮಿಸಿ ಶ್ರೀ ಎಣ್ಣೆಹೊಳೆ ಮಠದಲ್ಲಿ ನೆಲೆಗೊಂಡರು. ತರೀಕೆರೆಗೆ ಬರುವ ವೇಳೆಗೆ ಅಕ್ಕನಾಗಮ್ಮನವರು ಬಳಲಿದ್ದರು. ಇವರು ಶರಣ ಸಾಹಿತ್ಯವನ್ನು ಪ್ರಚಾರಪಡಿಸಿ ತರೀಕೆರೆ ಶ್ರೀ ಎಣ್ಣೆಹೊಳೆಮಠದ ಸಮೀಪದಲ್ಲಿ ಲಿಂಗೈಕ್ಯರಾದರು. ಈಗ ಶಿಥಿಲಾವಸ್ಥೆಯಲ್ಲಿರುವ ಒಂದು ಗದ್ದುಗೆಯಿದೆ.

ಅಕ್ಕನಾಗಮ್ಮನವರು ಲಿಂಗೈಕ್ಯರಾದ ಮೇಲೆ ಶ್ರೀ ನುಲಿಯ ಚಂದಯ್ಯನವರು ಲೋಕಸಂಚಾರ ಕೈಗೊಂಡು ಪುನಃ ನಂದಿ ಗ್ರಾಮಕ್ಕೆ ಬಂದು ಲಿಂಗೈಕ್ಯರಾದರು. ನಂತರ ಮಠವು ಅವರ ಪರಂಪರೆಯಲ್ಲೇ ಬೆಳೆದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದಿದೆ. ಈಗ ಶ್ರೀ ವೃಷಭೇಂದ್ರ ಸ್ವಾಮಿಗಳು ಮಠದ ಆಡಳಿತವನ್ನು ನಡೆಸುತ್ತಿದ್ದಾರೆ. ಗುರುಗಳು ಕ್ರಿಯಾಶೀಲರಾಗಿ, ಶರಣ ತತ್ತ್ವಗಳನ್ನು ಪ್ರಚಾರಪಡಿಸುವಲ್ಲಿ ನಿರತರಾಗಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ವೃಷಭೇಂದ್ರ ಸ್ವಾಮಿಗಳು, ಶ್ರೀ ಎಣ್ಣೆಹೊಳೆಮಠ, ತರೀಕೆರೆ, ಚಿಕ್ಕಮಗಳೂರು ಜಿಲ್ಲೆ.

ನಂದಿ

ತರೀಕೆರೆ ತಾಲ್ಲೂಕಿನ ನಂದಿಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಎಂಟು ಕಿ.ಮೀ.ದೂರದಲ್ಲಿದೆ. ತರೀಕೆರೆ ಮತ್ತು ಲಿಂಗದಹಳ್ಳಿ ರಸ್ತೆಯ ಮಧ್ಯದಲ್ಲಿ ಸ್ವಲ್ಪ ಒಳಭಾಗಕ್ಕೆ ಹೋದರೆ ಸಿಗುವ ನಂದಿ ಗ್ರಾಮವು ಅಭಿವೃದ್ಧಿಯ ಪಥದಲ್ಲಿ ನಡೆದಿದೆ. ಈ ಗ್ರಾಮವು ಧಾರ್ಮಿಕವಾಗಿ ಹೆಚ್ಚು ಹೆಸರು ಪಡೆದಿದೆ.

ನುಲಿಯ ಚಂದಯ್ಯಮಠ: ನಂದಿ ಗ್ರಾಮದಲ್ಲಿ ಹನ್ನೆರಡನೆಯ ಶತಮಾನದಲ್ಲಿ ಕಾಯಕಯೋಗಿ ಶ್ರೀ ನುಲಿಯ

ಚಂದಯ್ಯನವರು ಕಲ್ಯಾಣದಿಂದ ಆಗಮಿಸಿ ಇಲ್ಲಿ ಬಂದು ಮಠವನ್ನು ಸ್ಥಾಪಿಸಿ, ವೀರಶೈವ ಧರ್ಮದ ಪ್ರಸಾರ ಕಾರ್ಯವನ್ನು ಕೈಗೊಂಡರು. ಶ್ರೀ ನುಲಿಯ ಚಂದಯ್ಯನವರು ಮಠವನ್ನು ಸ್ಥಾಪನೆ ಮಾಡಿದ್ದರಿಂದ ಈ ಮಠಕ್ಕೆ 'ಶ್ರೀ ನುಲಿಯ ಚಂದಯ್ಯನಮಠ' ಎಂಬ ಹೆಸರು ಬಂದಿದೆ.

ಮಠ ಸ್ಥಾಪನೆ: ಶ್ರೀ ನುಲಿಯ ಚಂದಯ್ಯನವರು ಬಿಜಾಪುರ ಜಿಲ್ಲೆಯ ಶಿವಣಗಿ ಗ್ರಾಮದಲ್ಲಿ ಜನಿಸಿ, ಬಸವಣ್ಣನವರ ಪ್ರಭಾವಕ್ಕೆ ಒಳಗಾಗಿ ಕಲ್ಯಾಣದ ಅನುಭವ ಮಂಟಪವನ್ನು ಸೇರಿದರು. ನೀರಿನಲ್ಲಿ ಬೆಳೆಯುವ ಹೊಡಕೆ ಹುಲ್ಲನ್ನು ಕೊಯ್ದು ಇದರಿಂದ ನಾರನ್ನು ತಯಾರಿಸಿ ಹಗ್ಗವನ್ನು ನುಲಿಯುವುದು ಇವರ ಕಾಯಕವಾಗಿತ್ತು. ಇವರು ಕಲ್ಯಾಣಕ್ಕೆ ಬಂದರೂ ತಮ್ಮ ಕಾಯಕವನ್ನು ಬಿಡದೆ ಹಗ್ಗವನ್ನು ಮಾರಿ ಜಂಗಮದಾಸೋಹ ಮಾಡುತ್ತಿದ್ದರು. ಒಂದು ದಿನ ನುಲಿಯ ಚಂದಯ್ಯನವರು ಹುಲ್ಲನ್ನು ಕೊಯ್ದು ಹೊರೆಯನ್ನು ಕಟ್ಟುತ್ತಿರುವಾಗ ಲಿಂಗವು ಕೊರಳಿನಿಂದ ಜಾರಿ ನೀರಿನಲ್ಲಿ ಮುಳುಗಿತು. ಚಂದಯ್ಯನಿಗೆ ಇದರ ಪರಿವು ಇಲ್ಲದಾಯಿತು. ಹೊರೆಯನ್ನು ಕಟ್ಟಿದ ಮೇಲೆ ಇಷ್ಟಲಿಂಗವು ತನ್ನಿಂದ ಜಾರಿ ಬಿದ್ದುದ್ದನ್ನು ಗಮನಿಸಿದರೂ, ಜಂಗಮ ದಾಸೋಹಕ್ಕೆ ವಿಳಂಬವಾಗುತ್ತದೆ ಎಂಬ ಕಾರಣದಿಂದ ಇಷ್ಟಲಿಂಗವನ್ನು ಬಿಟ್ಟು ಲಿಂಗಪೂಜೆಯ ಬದಲಿಗೆ ಜಂಗಮ ದಾಸೋಹದಲ್ಲಿ ಲಿಂಗವ ಕಾಣುವೆ ಎಂದು ಹೇಳಿದ ಧೈರ್ಯವಂತ ಕಾಯಕಯೋಗಿ. ಇಂತಹ ಮಹಾಪುರುಷ ಕಲ್ಯಾಣದ ಕ್ರಾಂತಿಯ ನಂತರ ಅಕ್ಕನಾಗಮ್ಮನವರ ಜೊತೆಯಲ್ಲಿ ತರೀಕೆರೆಯ ಶ್ರೀ ಎಣ್ಣೆಹೊಳೆ ಮಠಕ್ಕೆ ಬಂದು ನಂತರ ನಂದಿಯಲ್ಲಿ ಮಠವನ್ನು ಸ್ಥಾಪಿಸಿ ಐಕ್ಯಗೊಂಡಿದ್ದಾರೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ನುಲಿಯ ಚಂದಯ್ಯನವರು
೨. ಶ್ರೀ ಮ.ನಿ.ಪ್ರ. ಚಂದ್ರಶೇಖರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ವೃಷಭೇಂದ್ರಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಬಸವರಾಜೇಂದ್ರಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಸಿದ್ಧವೀರಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ವೃಷಭೇಂದ್ರಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಅನೇಕ ವರ್ಷಗಳ ಕಾಲ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿದಿದೆ. ನಂತರ ಮೇಲೆ ದಾಖಲಿಸಿರುವ ಪರಂಪರೆಯ ಗುರುಗಳು ಮಠದ ಆಡಳಿತವನ್ನು ವಹಿಸಿಕೊಂಡು ಅಭಿವೃದ್ಧಿಪಡಿಸಿದ್ದಾರೆ. ಶ್ರೀ ಸಿದ್ಧವೀರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಮಠವು ಪುನಃ ಮಠಾಧೀಶರಿಲ್ಲದೆ ಖಾಲಿ ಉಳಿಯಿತು. ಆಗ ಕೆಳದಿಯ ಶ್ರೀ ಗುರುಸಿದ್ಧದೇವ ಸ್ವಾಮಿಗಳು ೧೯೬೧ರಲ್ಲಿ ಶ್ರೀ ಮಹಾಲಿಂಗ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿದರು. ಶ್ರೀ ಮಹಾಲಿಂಗದೇವರು ಮಠದ ಉತ್ತರಾಧಿಕಾರಿಗಳಾಗಿ ಆಯ್ಕೆಗೊಂಡ ಮೇಲೆ, ಶಿವಯೋಗ ಮಂದಿರಲ್ಲಿ ವಿದ್ಯಾಭ್ಯಾಸವನ್ನು ಮಾಡಿ ಮಠಕ್ಕೆ ಆಗಮಿಸಿದರು. ನಂತರ ಮೈಸೂರಿನಲ್ಲಿ ಸಂಸ್ಕೃತ ಹಾಗೂ ವೇದಾಧ್ಯಯನವನ್ನು ಮಾಡಿ ೧೯೭೭ರಲ್ಲಿ 'ಶ್ರೀ ವೃಷಭೇಂದ್ರ ಸ್ವಾಮಿ'ಗಳೆಂಬ ಅಭಿದಾನದೊಂದಿಗೆ ಪುರಾತನ ಮಠದ ಅಧಿಕಾರವನ್ನು ವಹಿಸಿಕೊಂಡು ಮಠದ ಆಸ್ತಿಯನ್ನು ಕ್ರಮಬದ್ಧಗೊಳಿಸಿದರು. ಹಂತಹಂತವಾಗಿ ಆದಾಯವನ್ನು ಹೆಚ್ಚಿಸತೊಡಗಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಶ್ರೀ ನುಲಿಯ ಚಂದಯ್ಯನವರು ಲಿಂಗೈಕ್ಯರಾದ ಮೇಲೆ ಅವರು ಉಪಯೋಗಿಸುತ್ತಿದ್ದ ಜೋಳಿಗೆ, ಬೆತ್ತ, ರುದ್ರಾಕ್ಷಿ ಹಾಗೂ ಪಾದುಕೆಗಳನ್ನು ಗದ್ದುಗೆಯ ಬಳಿಇಟ್ಟು ಪೂಜೆಯನ್ನು ಮಾಡಲಾಗುತ್ತಿದೆ. ಜೋಳಿಗೆ, ಬೆತ್ತ ಇಂದಿಗೂ ನೋಡ ಸಿಗುತ್ತಿವೆ. ಮಠದ ಆವರಣದ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ಗದ್ದುಗೆಗಳಿಗೆ ನಿತ್ಯಪೂಜೆಯನ್ನು ಮಾಡಲಾಗುತ್ತಿದೆ. ಪ್ರತಿವರ್ಷ ಆಶ್ವೀಜಮಾಸದ ಮೊದಲ ಸೋಮವಾರ ಶ್ರೀ ನುಲಿಯ ಚಂದಯ್ಯನವರ ಜಾತ್ರೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ನಾಡಿನ ಹೆಸರಾಂತ ವಿದ್ವಾಂಸರಿಂದ ಉಪನ್ಯಾಸ ಮಾಡಿಸಿ,

ನುಲಿಯ ಚಂದಯ್ಯನವರ ತತ್ತ್ವಗಳನ್ನು ಜನರಿಗೆ ಮುಟ್ಟಿಸಲಾಗುತ್ತಿದೆ. ಕಾರ್ತೀಕ, ಧನುರ್ಮಾಸ ಹಾಗೂ ಶಿವರಾತ್ರಿಯಲ್ಲಿ ವಿಶೇಷ ಪೂಜೆಯು ನಡೆಯುತ್ತಿದೆ. ತರೀಕೆರೆಯ ಶ್ರೀ ಎಣ್ಣೆಹೊಳೆ ಮಠ ಹಾಗೂ ನಂದಿ ಗ್ರಾಮದ ಮಧ್ಯದಲ್ಲಿರುವ ಶ್ರೀ ಸಿದ್ದೇಶ್ವರ ಮಠದ ಧಾರ್ಮಿಕ ಕಾರ್ಯಗಳು ಸುಗಮವಾಗಿ ನಡೆಯುವಂತೆ ನೋಡಿಕೊಳ್ಳಲಾಗುತ್ತಿದೆ.

ಅಭಿವೃದ್ಧಿ ಕಾರ್ಯಗಳು: ಮಠಕ್ಕೆ ೧೯೨೨ರಲ್ಲಿ ನೂತನ ಕಟ್ಟಡವನ್ನು ನಿರ್ಮಿಸಲಾಗಿದೆ. ಮಠದ ಆವರಣದಲ್ಲಿ ಒಂದು ಶಿಲಾಶಾಸನ ದೊರೆತಿದೆ. ಅಲ್ಲದೆ ಮಠಕ್ಕೆ ಬರುವ ಭಕ್ತರ ವಸತಿಗಾಗಿ ಕೊಠಡಿಗಳನ್ನು ನಿರ್ಮಿಸಲಾಗಿದೆ. ಅನ್ನದಾಸೋಹ ಮಂದಿರ ಹಾಗೂ ಉಗ್ರಾಣ ಕೇಂದ್ರವನ್ನು ನಿರ್ಮಿಸಲಾಗಿದೆ. ಈ ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಭಕ್ತಮಂಡಳಿ ಮಾಡುತ್ತ ಬಂದಿದೆ ಎಂದು ಶ್ರೀ ವೃಷಭೇಂದ್ರ ಸ್ವಾಮಿಗಳು ಹೇಳುತ್ತಾರೆ. ಮಠದ ಆಸ್ತಿಯಲ್ಲಿ ತೆಂಗು ಮತ್ತು ಭತ್ತದ ಬೆಳೆ ಬೆಳೆಯಲಾಗುತ್ತಿದೆ. ಇದರಿಂದ ಬರುವ ಆದಾಯದಿಂದ ಮಠದಲ್ಲಿ ನಿತ್ಯ ಅನ್ನದಾಸೋಹದ ವ್ಯವಸ್ಥೆ ಮಾಡಲಾಗಿದೆ. ತರೀಕೆರೆಯ ಶ್ರೀಎಣ್ಣೆಹೊಳೆ ಮಠವನ್ನು ಅಭಿವೃದ್ಧಿಪಡಿಸಿ, ಮಠದ ಆವರಣದಲ್ಲಿರುವ ಗದ್ದುಗೆಗಳನ್ನು ನವೀಕರಿಸಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ.ವೃಷಭೇಂದ್ರ ಸ್ವಾಮಿಗಳು, ಶ್ರೀ ನುಲಿಯಚಂದಯ್ಯಮಠ, ನಂದಿ, ತರೀಕೆರೆ ತಾ, ಚಿಕ್ಕಮಗಳೂರು ಜಿಲ್ಲೆ.

ನಂದೀಪುರ

ತರೀಕೆರೆ ತಾಲ್ಲೂಕಿನ ನಂದೀಪುರ ಗ್ರಾಮವು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಮೂವತ್ತೆಂಟು ಕಿ.ಮೀ ದೂರದಲ್ಲಿದೆ. ಜಿಲ್ಲೆಯ ಗಡಿಭಾಗದಲ್ಲಿರುವ ನಂದೀಪುರವು ಅಭಿವೃದ್ಧಿಯನ್ನು ಕಾಣಬೇಕಾಗಿದೆ. ಇಂತಹ ಗ್ರಾಮದಲ್ಲಿ ಉಜ್ಜಯನಿ ಶಾಖಾಮಠವು ಸ್ಥಾಪನೆಯಾಗಿದೆ.

ಉಜ್ಜಯಿನಿ ಶಾಖಾಮಠ: ಉಜ್ಜಯನಿ ಪೀಠದ ಶಾಖಾಮಠವಾದ ಹಿರೇಮಠವು ಸ್ಥಾಪನೆಯಾಗಿದೆ. ಪುತ್ರವರ್ಗದ ಪರಂಪರೆಯಲ್ಲಿ ಬೆಳೆದ ಮಠವು, ಈ ಭಾಗದ ಧಾರ್ಮಿಕ ಚಟುವಟಿಕೆಗಳ ಕೇಂದ್ರ ಬಿಂದುವಾಗಿ ಬೆಳೆದಿದೆ.

ಮಠ ಸ್ಥಾಪನೆ: ಪುರಾತನ ಕಾಲದಲ್ಲಿ ಶ್ರೀ ಜಡೆಮಹಾಂತೇಶ ಶಿವಾಚಾರ್ಯ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಈ ಗ್ರಾಮದ ಹೊರಭಾಗದಲ್ಲಿ ಅನುಷ್ಠಾನಕ್ಕೆ ಕುಳಿತರು.ಗುರುಗಳು ಇಲ್ಲಿ ಧರ್ಮೋಪದೇಶವನ್ನು ಮಾಡುವ ಮೂಲಕ ಭಕ್ತರಲ್ಲಿ ಧಾರ್ಮಿಕ ಜಾಗೃತಿಯನ್ನುಂಟುಮಾಡಿದರು. ಗುರುಗಳು ಸಣ್ಣ ಜೋಪಡಿಯಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿದ್ದರು. ನಂತರ ಗ್ರಾಮಸ್ಥರು ಗುರುಗಳಿಗಾಗಿ ಗ್ರಾಮದ ಒಳಭಾಗದಲ್ಲಿ ಮಠವನ್ನು ಸ್ಥಾಪಿಸಿಕೊಟ್ಟರು. ಇಲ್ಲಿ ನೆಲೆಸಿ ಆಚಾರ್ಯರ ತತ್ತ್ವಗಳನ್ನು ಪ್ರಚಾರಪಡಿಸಿದ ಗುರುಗಳು ಈ ಮಠದಲ್ಲಿ ಲಿಂಗೈಕ್ಯರಾದ ಮೇಲೆ ಗದ್ದುಗೆಯನ್ನು ಸ್ಥಾಪಿಸಿ ಧಾರ್ಮಿಕ ಕಾರ್ಯಗಳನ್ನು ಮುಂದುವರೆಸಲಾಗಿದೆ. ಕರ್ತೃಗುರುಗಳಾದ ಶ್ರೀ ಜಡೆಮಹಾಂತೇಶ ಸ್ವಾಮಿಗಳು ಉದ್ದನೆಯ ಜಡೆ ಹಾಗೂ ಗಡ್ಡವನ್ನು ಬೆಳೆಸಿದ್ದರಿಂದ ಇವರನ್ನು'ಶ್ರೀ ಗಡ್ಡದಸ್ವಾಮಿ'ಗಳೆಂದು ರೂಢಿಗತವಾಗಿ ಕರೆಯುತ್ತಿದ್ದರು. ಅಲ್ಲದೆ ಊರ ಒಳಭಾಗದಲ್ಲಿರುವ ಮಠಕ್ಕೆ ಈಗಲೂ 'ಶ್ರೀ ಗಡ್ಡದೇಶಮಠ'ಎಂದು ಕರೆಯಲಾಗುತ್ತಿದೆ.

ಪರಂಪರೆ:

೧. ಷ.ಬ್ರ.ಶ್ರೀ ಜಡೆಮಹಾಂತ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಮಹಾಲಿಂಗ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಮರುಳಸಿದ್ಧ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ನಂದೀಶ್ವರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ಜಡೆಮಹಾಂತ ಶಿವಾಚಾರ್ಯ ಸ್ವಾಮಿಗಳ ನಂತರ ಶ್ರೀ ಮಹಾಲಿಂಗ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ನಡೆಸಿ, ಮಠವನ್ನು ಅಭಿವೃದ್ಧಿಪಡಿಸಿ ಲಿಂಗೈಕ್ಯ ರಾದರು. ಇವರ ಗದ್ದುಗೆಯನ್ನು ಊರ ಹೊರಗಿನ ಮಠದ ಜಮೀನಿನಲ್ಲಿ ಮಾಡಲಾಗಿದೆ. ನಂತರ ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡು, ತಮ್ಮ ಶಿವಪೂಜಾ ಶಕ್ತಿಯಿಂದ ಭಕ್ತರನ್ನು ಉದ್ಧರಿಸಿ ದರು. ಗುರುಗಳು ಭಕ್ತರ ಸಂಘಟನೆಯನ್ನು ಮಾಡಿ ಸಮಾಜವನ್ನು ಅಭಿವೃದ್ಧಿಪಡಿಸಿ, ೧೯೬೦ರಲ್ಲಿ ಲಿಂಗೈಕ್ಯರಾದರು.

ಇವರ ಗದ್ದುಗೆಯನ್ನೂ ಸಹ ಊರ ಹೊರಗಿನ ಮಠದ ಜಮೀನಿನಲ್ಲಿ ಮಾಡಲಾಗಿದೆ.

ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳ ನಂತರ ಮೂವತ್ತೆಂಟು ವರ್ಷಗಳ ಕಾಲ ಮಠ ಅಧಿಕಾರಸ್ಥರು ಇಲ್ಲದೆ ಖಾಲಿ ಉಳಿಯಿತು. ಈ ಕಾಲದಲ್ಲಿ ಊರ ಒಳಗೆ ಇದ್ದ ಮಠ ಪೂರ್ಣ ಜೀರ್ಣಗೊಳ್ಳತೊಡಗಿತು. ಆಗ ಈ ಮಠಕ್ಕೆ ಶ್ರೀನಂದೀಶ್ವರ ಶಿವಾಚಾರ್ಯ ಸ್ವಾಮಿಗಳನ್ನು ನೇಮಕ ಮಾಡಲಾಯಿತು. ಗುರುಗಳು ನಂದೀಪುರ, ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ವೀರಾಪುರದಲ್ಲಿ ಸಂಸ್ಕೃತ ಹಾಗೂ ವೇದವನ್ನು ಕಲಿತು ಮಠಕ್ಕೆ ಆಗಮಿಸಿದರು. ಗ್ರಾಮದ ಒಳಭಾಗದಲ್ಲಿದ್ದ ಮಠದ ಜಾಗವು ಕಿರಿದಾದ ಕಾರಣ ಹೊಸ ಕಟ್ಟಡವನ್ನು ನಿರ್ಮಿಸಲು ತೊಂದರೆ ಉಂಟಾಯಿತು. ಆಗ ಊರಿನ ಹೊರಭಾಗದಲ್ಲಿ ಪರಂಪರೆಯ ಗುರುಗಳ ಗದ್ದುಗೆಗಳನ್ನು ನಿರ್ಮಿಸಿದ ಜಾಗದಲ್ಲಿ ನೂತನ ಕಟ್ಟಡವನ್ನು ಸ್ಥಾಪಿಸಿ ಲಾಯಿತು. ಅಲ್ಲದೆ ಶ್ರೀ ನಂದೀಶ್ವರ ಶಿವಾಚಾರ್ಯ ಸ್ವಾಮಿಗಳಿಗೆ ವೀರಾಪುರದ ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳ ನೇತೃತ್ವದಲ್ಲಿ ೧೯೯೮ ರ ಫೆಬ್ರವರಿ ಐದರಂದು ಶ್ರೀ ರಂಭಾಪುರಿ ಹಾಗೂ ಶ್ರೀ ಉಜ್ಜಯಿನಿ ಜಗದ್ಗುರುಗಳ ಸಮ್ಮುಖದಲ್ಲಿ ಪಟ್ಟಾಧಿಕಾರವನ್ನು ಮಾಡಲಾಯಿತು.

ಧಾರ್ಮಿಕ ಕಾರ್ಯಗಳು: ಮಠದ ಕರ್ತೃಗುರುಗಳ ಗದ್ದುಗೆ ಹಾಗೂ ಪರಂಪರೆಯ ಗುರುಗಳ ಗದ್ದುಗೆಗಳಿಗೆ ನಿತ್ಯ ಪೂಜೆ, ಅಮಾವಾಸ್ಯೆಯಲ್ಲಿ ನಡೆಯುವ ವಿಶೇಷ ಪೂಜೆಗೆ ಆಗಮಿಸುವ ಸುತ್ತಲಿನ ಏಳು ಹಳ್ಳಿಗಳ ಜನರಿಗೆ ಪ್ರವಚನ ಹಾಗೂ ಅನ್ನದಾಸೋಹವನ್ನು ನಡೆಸಲಾಗುತ್ತಿದೆ. ಮಠದಲ್ಲಿ ಪುರಾತನ ಕಾಲದ ಪೂಜೆಯತಟ್ಟೆ, ಪ್ರಸಾದದ ಬಟ್ಟಲು, ಕರಕಮಲ, ಧಾರಾಪಾತ್ರೆ, ಬೆಳ್ಳಿ ನಾಗಾಭರಣ, ರುದ್ರಾಕ್ಷಿ, ಸ್ಪಟಿಕದಸರ ಹಾಗೂ ಶ್ರೀಗಂಧದ ಮರದಲ್ಲಿ ರಚಿಸಿದ ಕರಡಿಗೆ ಸಿಕ್ಕಿವೆ. ಈ ಗ್ರಾಮದಲ್ಲಿ ನಂದೀಶ್ವರ, ಭೈರಲಿಂಗ, ಆಂಜನೇಯ ಹಾಗೂ ವೀರಭದ್ರಸ್ವಾಮಿ ದೇವಸ್ಥಾನಗಳು ಕೆತ್ತನೆ ಕಲ್ಲುಗಳಿಂದ ನಿರ್ಮಿತವಾಗಿ ಬಹಳ ವೈಭವ ಪಡೆದಿದ್ದವು ಎಂಬ ಕುರುಹುಗಳು ಸಿಗುತ್ತಿವೆ. ಗ್ರಾಮದೇವರಾದ ನಂದೀಶ್ವರ ದೇವಾಲಯ ಇಂದು ತಿಪ್ಪೇಗುಂಡಿಗಳ ಮಧ್ಯೆ ಪೂರ್ಣ ಜೀರ್ಣಗೊಂಡು ಮಲಗಿದೆ. ಮೂಲ ವಿಗ್ರಹ ಚೋರರಿಂದ ಅಪಹರಿಸಲ್ಪಟ್ಟಿದೆ. ಈ ಗ್ರಾಮದಲ್ಲಿ ಮಠದ ಪುನರ್‌ಸ್ಥಾಪನೆಯಿಂದಾಗಿ, ಧಾರ್ಮಿಕಜಾಗೃತಿ ಮೂಡತೊಡಗಿದೆ.

ಈಗ ಧಾರ್ಮಿಕ ಜವಾಬ್ದಾರಿಯನ್ನು ಕೈಗೆತ್ತಿಕೊಂಡಿರುವ ಶ್ರೀ ನಂದೀಶ್ವರ ಶಿವಾಚಾರ್ಯ ಸ್ವಾಮಿಗಳು ಮಠದ ಅಭಿವೃದ್ಧಿಯ ಜೊತೆಗೆ, ನಂದೀಪುರದ ಇತಿಹಾಸವನ್ನು ಹೇಳಬಲ್ಲಂತಹ ಗುಡಿಗೋಪುರಗಳನ್ನು ಪುನರ್‌ನಿರ್ಮಿಸಲು ಬೃಹತ್ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕಾಗಿದೆ.

ವಿಳಾಸ: ಷ.ಬ್ರ.ಶ್ರೀ ನಂದೀಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಉಜ್ಜಯಿನಿ ಶಾಖಾಮಠ, ನಂದಿಪುರ, ಶಿವನಿ ಹೋಬಳಿ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ಹಣ್ಣೆ

ತರೀಕೆರೆ ತಾಲ್ಲೂಕಿನ ಹಣ್ಣೆಗ್ರಾಮವು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಇಪ್ಪತ್ತೆರಡು ಕಿ.ಮೀ ದೂರದಲ್ಲಿದೆ. ಅಜ್ಜಂಪುರ ಮತ್ತು ಬುಕ್ಕಾಂಬುದಿ ರಸ್ತೆಯ ಮಧ್ಯದಲ್ಲಿ ಸಿಗುವ ಹಣ್ಣೆ ಗ್ರಾಮ ಪೌರಾಣಿಕ ಪ್ರಸಿದ್ಧಸ್ಥಳ. ತ್ರೇತಾಯುಗ ದಲ್ಲಿ ರಾಮಲಕ್ಷ್ಮಣರು ಸೀತೆಯನ್ನು ಹುಡುಕಿಕೊಂಡು ಬರುವ ದಾರಿಮಧ್ಯೆ ಇಲ್ಲಿನ ಹಣ್ಣೆ ಗುಡ್ಡದ ಮೇಲುಗವಿಯಲ್ಲಿ ನೆಲೆಸಿ, ವಿಶ್ರಾಂತಿ ಪಡೆದು ಗಂಗೆಗುಡಿಯಲ್ಲಿ ಸಿಗುವ ನೀರಿನಲ್ಲಿ ಸ್ನಾನ ಮಾಡಿ ಹೋದರೆಂದು ಹೇಳುವ ಜನಪದ ಐತಿಹ್ಯ ಜನಜನಿತವಾಗಿದ್ದು, ಈ ಪ್ರದೇಶ ಇಂದಿಗೂ ಧಾರ್ಮಿಕ ಕ್ಷೇತ್ರವಾಗಿ ಬೆಳೆದಿದೆ.

ಶ್ರೀಶೈಲ ಶಾಖಾ ಹಣ್ಣೆಮಠ: ಪೌರಾಣಿಕವಾಗಿ ಹೆಸರು ಪಡೆದ ಹಣ್ಣೆ ಗ್ರಾಮದ ಹೊರಭಾಗದಲ್ಲಿ ಬಿಲ್ವ ಮತ್ತು ಬನ್ನಿಪತ್ರೆ ಗಿಡಗಳು ಬೆಳೆದಿದ್ದು, ಈ ತಪೋಭೂಮಿಯಲ್ಲಿ ಶ್ರೀಶೈಲ ಪೀಠದ ಶಾಖಾಮಠವಾಗಿ ಪುತ್ರವರ್ಗದ ಪರಂಪರೆ ಯಲ್ಲಿ ಬೆಳೆದಿರುವ ಹಿರೇಮಠವು ಸ್ಥಾಪನೆಯಾಗಿದೆ. ಈ ಮಠವು ಸುತ್ತಲ ಹಳ್ಳಿಗಳಿಗೆ ಧಾರ್ಮಿಕ ಮಾರ್ಗದರ್ಶನ ನೀಡುತ್ತಾ, ಧಾರ್ಮಿಕ ಚಟುವಟಿಕೆಯ ಕೇಂದ್ರಬಿಂದುವಾಗಿ ಬೆಳೆದಿದೆ.

ಮಠ ಸ್ಥಾಪನೆ: ಪುರಾತನ ಕಾಲದಲ್ಲಿ ಸ್ಥಾಪನೆಯಾದ ಮಠದ ಕಾಲಮಾನದ ಬಗ್ಗೆ ಸ್ಪಷ್ಟ ಮಾಹಿತಿಗಳು ಲಭ್ಯವಿಲ್ಲ. ಶ್ರೀರಾಚೋಟಿ ಸ್ವಾಮಿಗಳ ಕಾಲದಲ್ಲಿ ಅಭಿವೃದ್ಧಿಗೊಂಡ ಮಠವು ಜನಮನದಲ್ಲಿ ಉಳಿಯಿತು. ನಂತರ ತರೀಕೆರೆಯ ಪಾಳೆ ಗಾರರು ಹಾಗೂ ಚಿತ್ರದುರ್ಗದ ನಾಯಕರು ಅದಕ್ಕೂ ಮೊದಲು ಕೆಳದಿ ಅರಸರ ಆಶ್ರಯದಲ್ಲಿ ಅಭಿವೃದ್ಧಿಗೊಂಡಿದೆ ಎಂದು ಹೇಳಬಹುದು. ಇಂತಹ ಇತಿಹಾಸ ಪ್ರಸಿದ್ಧ ಮಠಕ್ಕೆ ಈ ನಾಡಿನ ಸಮಸ್ತ ಕುಲಭಾಂದವರು ಭಕ್ತರಾಗಿ ನಡೆದು ಕೊಳ್ಳುತ್ತಿದ್ದಾರೆ.

ಶ್ರೀಶೈಲದಿಂದ ಬಂದ ಭಕ್ತರು: ಆಂಧ್ರಪ್ರದೇಶದ ಶ್ರೀಶೈಲ ಪೀಠದ ಸುತ್ತಮುತ್ತ ಬರಗಾಲ ಬಂದಾಗ ಪೀಠದ ಪರಮ ಭಕ್ತರು ಹಾಗೂ ಹೇಮರೆಡ್ಡಿ ಮಲ್ಲಮ್ಮನವರ ಕುಲಸ್ಥರು ವಲಸೆ ಹೊರಟಾಗ, ಆಗಿನ ಶ್ರೀಶೈಲಪೀಠದ ಜಗದ್ಗುರುಗಳು ಶ್ರೀ ರಾಚೋಟಿ ಶಿವಾಚಾರ್ಯ ಸ್ವಾಮಿಗಳ ನೇತೃತ್ವದಲ್ಲಿ ಈ ತಂಡವನ್ನು ಬಾಳೆಹೊನ್ನೂರಿನ ಶ್ರೀ ರಂಭಾಪುರಿ ಪೀಠದ ಆಶ್ರಯದಲ್ಲಿ ಬದುಕನ್ನು ರೂಪಿಸಿಕೊಳ್ಳಲು ಏರ್ಪಾಡು ಮಾಡಿ ಕಳುಹಿಸಿಕೊಟ್ಟರು ಈ ತಂಡವು ಶ್ರೀ ರಂಭಾಪುರಿಪೀಠದ ಜಗದ್ಗುರುಗಳ ಮಾರ್ಗದರ್ಶನದ ಮೇರೆಗೆ ಈಗಿನ ತರೀಕೆರೆ ತಾಲ್ಲೂಕಿನ ನಾರಣಾಪುರ, ಗೊಂಡೇದಹಳ್ಳಿ, ಬಗ್ಗವಳ್ಳಿ, ಗೌರಾಪುರ, ಚನ್ನಾಪುರ, ಹೆಬ್ಬೂರು ಹಾಗೂ ಕಡೂರು ತಾಲ್ಲೂಕಿನ ಗಿರಿಯಾಪುರ, ಹಿರೇನಲ್ಲೂರು, ಚಿಕ್ಕಬಾಸೂರು ಹಾಗೂ ಆಡಿಗೆರೆ ಗ್ರಾಮಗಳಲ್ಲೂ ನೆಲೆಗೊಂಡರು. ಶ್ರೀಶೈಲಪೀಠದ ಭಕ್ತರಿಗೆ ಹೀಗೆ ನೆಲೆಯನ್ನು ತೋರಿಸಿಕೊಟ್ಟರು. ಆಗಿನ ಹಣ್ಣೆಮಠದ ಮಠಾಧಿಪತಿಗಳಾಗಿದ್ದ, ಶ್ರೀ ರಾಚೋಟಿಸ್ವಾಮಿಗಳು ಭಕ್ತರಿಗೆ ಮಾರ್ಗದರ್ಶನ ನೀಡಿ ಉದ್ಧರಿಸಿದರು. ಎಂದು ಜನಪದ ಐತಿಹ್ಯದಿಂದ ತಿಳಿದುಬರುತ್ತದೆ.

ಪರಂಪರೆ:

೧. ಷ.ಬ್ರ.ಶ್ರೀ ರಾಚೋಟಿ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಮರುಳಸಿದ್ಧ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಶಿವಾನಂದ ಶಿವಾಚಾರ್ಯಸ್ವಾಮಿಗಳು

ಮಠದ ಪರಂಪರೆಯನ್ನು ದಾಖಲಿಸಿಡದ ಕಾರಣ ಕೆಲವು ಗುರುಗಳ ಹೆಸರುಗಳನ್ನು ಮಾತ್ರ ದಾಖಲಿಸಲಾಗಿದೆ. ೧೮೮೪ ರಲ್ಲಿ ತರೀಕೆರೆಯ ಪಾಳೆಗಾರನಾದ ರಾಜಾಸರ್ಜಾ ಹನುಮಪ್ಪ ನಾಯಕನು ಅಂದಿನ ಶ್ರೀ ರಾಚೋಟಿ ಶಿವಾಚಾರ್ಯ ಸ್ವಾಮಿಗಳಿಗೆ ಜಮೀನನ್ನು ಇನಾಂ ನೀಡಿ ಮಠವು ಅಭಿವೃದ್ಧಿಗೊಳ್ಳಲು ಸಹಾಯಕನಾಗಿದ್ದಾನೆ. ಪರಂಪರೆಯ ಗುರುಗಳಾಗಿ ಹೆಚ್ಚು ಪ್ರಸಿದ್ಧ ರಾದ ಶ್ರೀ ರಾಚೋಟಿ ಶಿವಾಚಾರ್ಯ ಸ್ವಾಮಿಗಳು ತಪೋನಿಷ್ಠರಾಗಿ ಅನೇಕ ಪವಾಡಗಳನ್ನು ಮಾಡಿ ಭಕ್ತರನ್ನು ಉದ್ಧರಿಸಿದ್ದ ರೆಂದು ಹೇಳಲಾಗುತ್ತಿದೆ. ಇವರ ನಂತರ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ನಂತರ ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳು ಆಡಳಿತ ನಡೆಸಿದ್ದಾರೆ. ಇವರ ಬಗ್ಗೆಯೂ ಹೆಚ್ಚು ಮಾಹಿತಿ ಲಭ್ಯವಿಲ್ಲ. ಇವರುಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಶಿವಪೂಜಾನಿಷ್ಠರಾಗಿ ಸಂಸ್ಕೃತ, ವೇದ ಹಾಗೂ ಆಗಮಗಳ ಬಗ್ಗೆ ಹೆಚ್ಚು ತಿಳಿದುಕೊಂಡಿದ್ದರು. ಇವರು ಪಂಚಪೀಠದ ಜಗದ್ಗುರುಗಳ ಸಂಪರ್ಕದಿಂದ ಮಠವನ್ನು ಅಭಿವೃದ್ಧಿಪಡಿಸಿದ್ದರು. ಇವರ ಕಾಲದಲ್ಲಿ ಶ್ರೀ ರಂಭಾಪುರಿಪೀಠದ ಆಗಿನ ಜಗದ್ಗುರುಗಳಾದ ಶ್ರೀ ರಾಜೇಂದ್ರ ಭಗವತ್ಪಾದರು ಸತತ ಮೂರು ತಿಂಗಳು ಈ ಮಠದಲ್ಲಿ ಅನುಷ್ಠಾನ ಕೈಗೊಂಡಿದ್ದರು ಎಂಬುದು ಈ ಮಠದ ಪ್ರಭಾವ ವನ್ನು ವ್ಯಕ್ತಪಡಿಸುತ್ತದೆ. ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಪಂಚಪೀಠಗಳ ಬಹುತೇಕ ಎಲ್ಲಾ ಜಗದ್ಗುರುಗಳು ಈ ತಪೋಭೂಮಿಯಲ್ಲಿ ಅನುಷ್ಠಾನ ಕೈಗೊಂಡು ಮಠವನ್ನು ಜಾಗೃತಸ್ಥಳವನ್ನಾಗಿ ರೂಪಿಸಿದ್ದಾರೆ. ಪ್ರಭಾವಶಾಲಿಗಳಾದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು ಹಿರೇಮಠವನ್ನು ಅಭಿವೃದ್ಧಿಪಡಿಸಿ ಲಿಂಗೈಕ್ಯರಾದರು.

ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳ ನಂತರ ಶ್ರೀ ಶಿವಾನಂದಶಿವಾಚಾರ್ಯ ಸ್ವಾಮಿಗಳು ಅಜ್ಜಂಪುರ ಹಾಗೂ ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡಿ, ಮಠಕ್ಕೆ ಆಗಮಿಸಿ ಆಡಳಿತವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿ

ಪಡಿಸಿದ್ದಾರೆ. ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ಸರಳತೆ, ಶಿಸ್ತು, ನೇರನುಡಿ, ಸಮಯಪ್ರಜ್ಞೆ ಹಾಗೂ ಪ್ರಶಾಂತ ಮುಖಮುದ್ರೆಯ ಮೂರ್ತಿಗಳಾಗಿ, ಈ ಭಾಗದ ಭಕ್ತರ ಮನಗೆದ್ದು ಜಾತ್ಯಾತೀತ ನಿಲುವಿನ ಮನೋಭಾವ ಬೆಳೆಸಿಕೊಂಡು ಸಮಾಜದಲ್ಲಿ ಜಾಗೃತಿಯನ್ನುಂಟುಮಾಡಿದ್ದಾರೆ. ಇವರು ಪ್ರಗತಿಪರ ಚಿಂತನೆಗಳಿಂದ ಮಠವನ್ನು ಅಭಿವೃದ್ಧಿಪಡಿಸಿ ಎಲ್ಲರ ಅಭಿಮಾನಕ್ಕೆ ಪಾತ್ರರಾಗಿದ್ದಾರೆ.

ಮಠದ ಆವರಣದಲ್ಲಿ ಪರಂಪರೆಯನ್ನು ಗುರುತಿಸಲು ನಾಲ್ಕು ಗದ್ದುಗೆಗಳು ದೊರೆಯುತ್ತವೆ. ಉಳಿದಂತೆ ಶಾಖಾ ಮಠಗಳಾದ ಅರೆಬಿಳಚಿ, ಆಂಧ್ರಪ್ರದೇಶದ ತಿರುಪತಿಯ ಹತ್ತಿರ ಇರುವ ಪಲುನ್ಮನೆರ್ಮೆಯಲ್ಲಿ ತಲ ಒಂದೊಂದು ಗದ್ದುಗೆಗಳು ನೋಡಸಿಗುತ್ತವೆ.

ಸಾಹಿತ್ಯ ಸೇವೆ: ಸಾಮಾಜಿಕ ಕಳಕಳಿಯನ್ನು ಹೊಂದಿರುವ ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ಉತ್ತಮ ಭಾಷಣಕಾರರಾಗಿ, ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ ಉಪದೇಶವನ್ನು ನೀಡುವುದರ ಮೂಲಕ ಪ್ರಖ್ಯಾತರಾಗಿದ್ದಾರೆ. ಪರಿಸರದ ಬಗ್ಗೆ ವಿಶೇಷ ಕಳಕಳಿ ಇಟ್ಟುಕೊಂಡು ಜನರಲ್ಲಿ ಜಾಗೃತಿ ಮೂಡಿಸಿದ್ದಾರೆ. ಪರಿಸರವನ್ನು ಕುರಿತು ಮಾಡಿರುವ ಭಾಷಣಗಳು ಆಕಾಶವಾಣಿಯಲ್ಲಿ ಬಿತ್ತರಗೊಂಡಿವೆ. ಪರಿಸರ ಹಾಗೂ ವೈಜ್ಞಾನಿಕ ವಿಚಾರಗಳ ಬಗ್ಗೆ ಬರೆದ ಚಿಂತನಶ್ರೀ, ತಮಸೋಮ.....! ಕರುನಾಳು ಬಾ ಬೆಳಕೆ-ಹೀಗೆ ಅನೇಕ ಕೃತಿಗಳನ್ನು ರಚಿಸಿ ಪ್ರಕಟಿಸಿದ್ದಾರೆ. ಶ್ರೀ ಶಿವಾನಂದ ಶಿವಾಚಾರ್ಯರು ೧೯೮೭ ರಲ್ಲಿ ಉತ್ತರಭಾರತ ಪ್ರವಾಸ ಮಾಡಿದ್ದಾರೆ. ೧೯೮೫ರಲ್ಲಿ ಕೇದಾರಪೀಠದ ಪಟ್ಟಾಭಿಷೇಕದ ಸಂದರ್ಭದಲ್ಲಿ ಪಾಲ್ಗೊಂಡಿದ್ದಾರೆ. ೧೯೮೭ರಲ್ಲಿ ನೇಪಾಳದ ಕಠ್ಮಂಡುವಿನಲ್ಲಿ ನಡೆದ ವಿಶ್ವಹಿಂದೂ ಮಹಾ ಸಮ್ಮೇಳನ ದಲ್ಲಿ ಭಾಗವಹಿಸಿದ್ದು ಗುರುಗಳ ಪಾಂಡಿತ್ಯಕ್ಕೆ ಸಾಕ್ಷಿಯಾಗಿದೆ. ಈ ಪ್ರವಾಸದ ಬಗ್ಗೆ ಬರೆದಿರುವ ಗಂಗೆಯ ತಡೆಯಲ್ಲಿ ಎಂಬ ಪ್ರವಾಸ ಗ್ರಂಥವು ಸಾಹಿತ್ಯ ಲೋಕಕ್ಕೆ ಒಂದು ಉತ್ತಮ ಕೊಡುಗೆಯಾಗಿದೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಶಿವಾನಂದ ಸ್ವಾಮಿಗಳು ಪಾಂಡಿತ್ಯ ಪಡೆದು ಹೆಸರುಗಳಿಸಿದ್ದರೂ ಕಾಯಕವನ್ನು ಬಿಡದೆ, ಮಠದ ಜಮೀನನ್ನು ಅಭಿವೃದ್ಧಿಪಡಿಸಿ ಐದುನೂರು ತೆಂಗಿನ ಗಿಡಗಳನ್ನು ಬೆಳೆಸಿ ಮಠಕ್ಕೆ ಆದಾಯದ ಮೂಲವವನ್ನಾಗಿ ಮಾಡಿಕೊಂಡಿದ್ದಾರೆ. ಮಠದ ಹಳೆಯ ಕಟ್ಟಡದ ಬದಲಿಗೆ ನೂತನ ಕಟ್ಟಡ ಹಾಗೂ ಪ್ರಾರ್ಥನಾ ಮಂದಿರವನ್ನು ಹತ್ತು ಲಕ್ಷರೂಪಾಯಿಗಳ ಯೋಜನೆಯಲ್ಲಿ ಪೂರೈಸಿದ್ದಾರೆ. ವ್ಯಾಪಾರ ಹಾಗೂ ಶಿಕ್ಷಣ ಕೇಂದ್ರವಾಗಿ ಬೆಳೆಯುತ್ತಿರುವ ಅಜ್ಜಂಪು ರದಲ್ಲೊಂದು ಸಾರ್ವಜನಿಕ ಉಚಿತ ವಿದ್ಯಾರ್ಥಿ ಪ್ರಸಾದನಿಲಯ ಪ್ರಾರಂಭಿಸಬೇಕೆಂಬುದು ಗುರುಗಳ ಸಂಕಲ್ಪವಾಗಿದೆ. ಈ ಬಗ್ಗೆ ಭಕ್ತರನ್ನು ಒಟ್ಟುಗೂಡಿಸಿಕೊಂಡು ಯೋಜನೆ ತಯಾರಿಸಿಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಪರಂಪರೆಯ ಎರಡು ಗದ್ದುಗೆಗಳು ಹಾಗೂ ಮಠದ ಜಮೀನಿ ನಲ್ಲಿರುವ ಎರಡು ಗದ್ದುಗೆಗಳಿಗೆ ನಿತ್ಯಪೂಜೆ ಹಾಗೂ ಶ್ರಾವಣಮಾಸದಲ್ಲಿ ವಿಶೇಷಪೂಜೆಯನ್ನು ನಡೆಸಲಾಗುತ್ತಿದೆ. ಗುರು ಗಳು ಧನುರ್ಮಾಸದಲ್ಲಿ ತಮ್ಮ ವ್ಯಾಪ್ತಿಯ ಗ್ರಾಮಗಳಲ್ಲಿ ಧರ್ಮಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಉಪ ನ್ಯಾಸವನ್ನು ಮಾಡುತ್ತಿದ್ದಾರೆ. ವರ್ಷಕ್ಕೊಮ್ಮೆ ಹಿರಿಯಗುರುಗಳ ಪುಣ್ಯಾರಾಧನೆ ನಡೆಸಿ ಅನ್ನದಾಸೋಹವನ್ನು ನಡೆಸುತ್ತಾರೆ.

ವಿಳಾಸ: ಷ.ಬ್ರ.ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು, ಶ್ರೀಶೈಲಶಾಖಾ ಹಣ್ಣೆಮಠ, ತರೀಕೆರೆ ತಾ, ಚಿಕ್ಕಮಗಳೂರು ಜಿಲ್ಲೆ.

ಹುಣಸಘಟ್ಟ

ತರೀಕೆರೆ ತಾಲ್ಲೂಕಿನ ಹುಣಸಘಟ್ಟ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹತ್ತು ಕಿ.ಮೀ ದೂರದ ಲ್ಲಿದೆ. ಆರ್ಥಿಕವಾಗಿ ಮುನ್ನಡೆ ಸಾಧಿಸಿರುವ ಈ ಗ್ರಾಮವು ಧಾರ್ಮಿಕವಾಗಿಯೂ ಹೆಸರು ಮಾಡಿದೆ.

ಹಾಲುಸ್ವಾಮಿ ಮಠ: ಹುಣಸಘಟ್ಟದಲ್ಲಿ ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿ, ಶಿಷ್ಯವರ್ಗದ ಪರಂಪರೆಯಲ್ಲಿ ಬೆಳೆದಿರುವ ಶ್ರೀ ಹಾಲುಸ್ವಾಮಿ ಮಠವು ಸ್ಥಾಪನೆಯಾಗಿದೆ. ಪುರಾತನ ಪರಂಪರೆಯುಳ್ಳ ಶ್ರೀ ಹಾಲುಸ್ವಾಮಿ ಮಠವು

ಸಖರಾಯಪಟ್ಟಣದಲ್ಲಿ ಮೂಲ ಮಠವನ್ನು ಹೊಂದಿದೆ. ಕಾಲಾನಂತರ ಮಠದ ಆಡಳಿತವನ್ನು ಹುಣಸಘಟ್ಟಕ್ಕೆ ಸ್ಥಳಾಂತರಿಸಿಕೊಂಡು, ಧಾರ್ಮಿಕ ಚಟುವಟಿಕೆಗಳನ್ನು ನಡೆಸುತ್ತಾ ಬಂದಿದೆ.

ಮಠ ಸ್ಥಾಪನೆ: ಶ್ರೀ ಶಿವಯೋಗಿಗಳೊಬ್ಬರು ಲೋಕಸಂಚಾರ ಕೈಗೊಂಡು ಸಖರಾಯಪಟ್ಟಣದಲ್ಲಿ ಅನುಷ್ಠಾನ ಕೈಗೊಂಡಿದ್ದರು. ಈ ಸಂದರ್ಭದಲ್ಲಿ ರುಕ್ಮಾಂಗದ ದೊರೆಯ ಆಸ್ಥಾನದ ದನಗಳು ಸಖರಾಯಪಟ್ಟಣದ ಸಮೀಪದ ಶ್ರೀಗಂಧಗುತ್ತಿಯಲ್ಲಿ ಮೇಯಲು ಹೋಗುತ್ತಿದ್ದವು. ಪ್ರತಿದಿನ ಹಾಲು ಕರೆಯುವ ಒಂದು ಹಸು ಬಂದು ಹುತ್ತದ ಮೇಲೆ ಸ್ವಇಚ್ಛೆಯಿಂದ ಹಾಲು ಕರೆದು ಬರುತ್ತಿತ್ತು. ಇತ್ತ ಆಸ್ಥಾನದಲ್ಲಿ ಹಸು ಹಾಲನ್ನೇಕೆ ಕರೆಯುತ್ತಿಲ್ಲ ಎಂದು ಯೋಚಿಸಿ, ದನಕಾಯುವವನು ಅಡವಿ ಯಲ್ಲಿ ಹಾಲನ್ನು ಕದ್ದು ಕರೆದು ಮಾರುತ್ತಿರಬಹುದೆಂದು ಶಂಕಿಸಿ ಪರೀಕ್ಷಿಸಲು ಆಸ್ಥಾನದ ಸೇವಕರು ಅಡವಿಗೆ ಬಂದರು. ಹುತ್ತದ ಮೇಲೆ ಹಸು ಹಾಲು ಕರೆಯುವುದನ್ನು ನೋಡಿ, ಆಶ್ಚರ್ಯಗೊಂಡು ದೊರೆಗೆ ಈ ವಿಚಾರವನ್ನು ಮುಟ್ಟಿಸಿದರಂತೆ. ದೊರೆಯು ಅದನ್ನು ಕೇಳಿ ಆಶ್ಚರ್ಯಚಕಿತನಾಗಿ ಮರುದಿನ ತನ್ನ ಪರಿಚಾರಕರೊಡನೆ ಅಡವಿಗೆ ಹೋಗಿ ಹಸು ಮಾಡುತ್ತಿದ್ದ ಕಾರ್ಯವನ್ನು ಕಣ್ಣಾರೆಕಂಡು, ಹತ್ತಿರ ಹೋಗಿ ನೋಡಿದಾಗ ಅನುಷ್ಠಾನಕ್ಕೆ ಕುಳಿತ ಸಂನ್ಯಾಸಿಗಳ ಸುತ್ತ ಹುತ್ತ ಬೆಳೆದಿತ್ತು. ಯೋಗಮುದ್ರೆಯಲ್ಲಿ ಕುಳಿತ ಸಂನ್ಯಾಸಿಗಳನ್ನು ನೋಡಿ, ಎಚ್ಚರಗೊಳಿಸಿ ಪಟ್ಟಣಕ್ಕೆ ಬರಲು ಬಿನ್ನವಿಸಿಕೊಂಡನು. ಸಖರಾಯ ಪಟ್ಟಣಕ್ಕೆ ಸಂನ್ಯಾಸಿಗಳನ್ನು ಕರೆತಂದು ಇಲ್ಲಿಯೇ ನೆಲೆಸುವಂತೆ ಬೇಡಿಕೊಂಡು, ಮಠ ಸ್ಥಾಪನೆ ಮಾಡಿಕೊಟ್ಟನೆಂದು ಹೇಳುವ ಜನಪದ ಕಥೆ ಕೇಳಿ ಬರುತ್ತಿದೆ.

ಇನ್ನೊಂದು ಜನಪದ ಕಥೆಯ ಪ್ರಕಾರ,ರುಕ್ಮಾಂಗದ ದೊರೆಯ ಮಗನು ಗುರುಗಳಾದ ಶ್ರೀ ಹಾಲುಸ್ವಾಮಿಗಳನ್ನು ಪರೀಕ್ಷೆ ಮಾಡಲು, ಹಾಲುಸ್ವಾಮಿಗಳೆಂದು ಹೆಸರು ಗಳಿಸಿರುವ ನಿಮ್ಮ ಮೈಯಲ್ಲಿ ರಕ್ತತುಂಬಿರುವ ಬದಲು ಹಾಲುತುಂಬಿ ಕೊಂಡಿದೆಯೇ ಎಂದು ಪ್ರಶ್ನಿಸಿದನು. ಆಗ ಗುರುಗಳು ಕೊಪ್ಪರಿಗೆಯನ್ನು ತರಿಸಿ ಬಲಗೈನ ಐದು ಬೆರಳುಗಳನ್ನು ಕೊಪ್ಪರಿಗೆಯ ಮೇಲೆ ಹಿಂಡಿದಾಗ, ಕೊಪ್ಪರಿಗೆ ತುಂಬುವತನಕ ಧಾರಾಕಾರವಾಗಿ ಹಾಲು ಹರಿಯಿತಂತೆ. ಮೇಲಿನ ಎರಡು ಕಥೆಗಳೊಂದಿಗೆ ಸಖರಾಯಪಟ್ಟಣದ ಸುತ್ತಮುತ್ತಲಿನ ಹಾಲು ಮತಸ್ಥರು ಈ ಮಠದ ಭಕ್ತರಾಗಿ ಮಠದ ಅಭಿವೃದ್ಧಿಗೆ ಕಾರಣಕರ್ತರಾಗಿರುವುದು ಕಂಡುಬರುತ್ತದೆ. ಈ ಕಾರಣದಿಂದ ಗುರುಗಳಿಗೆ'ಶ್ರೀ ಹಾಲುಸ್ವಾಮಿ'ಗಳೆಂದೂ ಈ ಮಠಕ್ಕೆ 'ಶ್ರೀಹಾಲುಸ್ವಾಮಿ ಮಠ' ಎಂದೂ ಹೆಸರು ಬಂದಿತೆಂದು ಕೇಳಿಬರುತ್ತಿದೆ. ಇಂತಹ ಪವಾಡ ಪುರುಷರು ಸ್ಥಾಪಿಸಿದ ಮಠವು ಹುಣಸಘಟ್ಟದಲ್ಲಿ ತನ್ನ ಪರಂಪರೆಯನ್ನು ಬೆಳೆಸಿಕೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ಪರಂಪರೆ:

೧. ಶ್ರೀ ಹಾಲುಸ್ವಾಮಿ ಶಿವಾಚಾರ್ಯಸ್ವಾಮಿಗಳು (ಕರ್ತೃಗುರುಗಳು)
೨. ಶ್ರೀ ಹಾಲುಸ್ವಾಮಿ ಶಿವಾಚಾರ್ಯಸ್ವಾಮಿಗಳು
೩. ಶ್ರೀ ಸದಾಶಿವ ಶಿವಾಚಾರ್ಯಹಾಲುಸ್ವಾಮಿಗಳು
೪. ಶ್ರೀ ಬಸವಲಿಂಗ ಶಿವಾಚಾರ್ಯಹಾಲುಸ್ವಾಮಿಗಳು
೫. ಶ್ರೀ ಗುರುಮೂರ್ತಿ ಶಿವಾಚಾರ್ಯಹಾಲುಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯ ಗುರುಗಳ ಕೆಲವು ಹೆಸರುಗಳನ್ನು ದಾಖಲಿಸಲಾಗಿದೆ. ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಬಹುತೇಕ ಗುರುಗಳು ಕರ್ತೃಗುರುಗಳ ಹೆಸರನ್ನು ಅಭಿಧಾನ ಪಡೆದ ಕಾರಣ ಪರಂಪರೆಯ ಗುರುಗಳ ಹೆಸರುಗಳನ್ನು ದಾಖಲಿಸಲು ಸಾಧ್ಯವಾಗುತ್ತಿಲ್ಲ. ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳು ಸಖರಾಯಪಟ್ಟಣದ ಮೂಲ ಮಠದಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡು, ಈ ಮಠದ ಶಾಖಾಮಠಗಳಾದ ಕೆ.ಬಿದರೆ, ಗಿರಿಯಾಪುರ ಹಾಗೂ ಹುಣಸಘಟ್ಟ ಮಠ ಗಳನ್ನು ಅಭಿವೃದ್ಧಿಪಡಿಸಿದರು. ಗಿರಿಯಾಪುರದಲ್ಲಿ ಸ್ಥಾಪನೆಯಾಗಿದ್ದ ಮಠದ ಪರಂಪರೆಯ ಗುರುಗಳ ಗದ್ದುಗೆಗಳನ್ನು ನವೀಕರಿಸಿ ಸ್ಮಾರಕಗಳನ್ನಾಗಿ ಮಾಡಿದರು.

ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳು, ಶಿವಯೋಗಮಂದಿರದಲ್ಲಿ ಅಧ್ಯಯನ ಅನುಷ್ಠಾನಗಳನ್ನು ನಡೆಸಿ ಶಿವಯೋಗ ಮತ್ತು ಶೀಲ ಸಂಪತ್ತಿಗೆ ಹೆಸರಾದರು. ಶ್ರೀ ಹಾನಗಲ್ಲ ಕುಮಾರ ಶಿವಯೋಗಿಗಳ ಅತ್ಯಂತ ನಿಷ್ಠ

ಸಾಧಕರಾಗಿದ್ದ ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳು ಕಡೂರು ತಾಲ್ಲೂಕಿನ ಗಿರಿಯಾಪುರದಲ್ಲಿ 'ಶ್ರೀ ಹಾನಗಲ್ಲು ಕುಮಾರ ಶಿವಯೋಗಿ ಸ್ಮಾರಕ ಶಿವಾದ್ವೈತ ತತ್ತ್ವ ಪ್ರಚಾರಕ ಸಂಸ್ಥೆ'ಯನ್ನು ಸ್ಥಾಪಿಸಿ ಪ್ರತಿವರ್ಷ ಶಿವಾನುಭವ ಸಮ್ಮೇಳನ ನಡೆಸಿಕೊಂಡು ಬರುತ್ತಿದ್ದರು. ಸಂಸ್ಥೆಯ ಆಶ್ರಯದಲ್ಲಿ ಅನೇಕ ಗ್ರಂಥಗಳನ್ನು ಪ್ರಕಟಿಸಿದರು.

ಭಕ್ತಸಮುದಾಯದಲ್ಲಿ ಸಾಂಸ್ಕೃತಿಕ ಶೀಲ ಸಂಪತ್ತನ್ನು ಬೆಳಸಲು ಅಹರ್ನಿಶಿ ದುಡಿದ ಪೂಜ್ಯರಿಗೆ ಅರವತ್ತ್ಮೂರು ವರ್ಷ ತುಂಬಿದಾಗ ಭಕ್ತರೆಲ್ಲಾ ಸೇರಿ ಅವರಿಗೆ ಅರ್ಪಿಸಿದ ವಿಭೂತಿ ಎಂಬ ಅಭಿನಂದನಾ ಗ್ರಂಥ ಕನ್ನಡ ಸಾಹಿತ್ಯ ಲೋಕ ದಲ್ಲಿ ಒಂದು ಮಹತ್ವಪೂರ್ಣ ಗ್ರಂಥವಾಗಿದೆ. ಪೂಜ್ಯ ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳು ಸ್ವತಹ ಲೇಖಕರಾಗಿ ಅಮೂಲ್ಯವಾದ ಆಧ್ಯಾತ್ಮಿಕ ಕೃತಿಗಳನ್ನು ರಚಿಸಿದ್ದರು. ಗುರುಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಬಸವಲಿಂಗ ಶಿವಾಚಾರ್ಯ ಹಾಲುಸ್ವಾಮಿಗಳನ್ನು ನೇಮಿಸಿ, ಗಿರಿಯಾಪುರದ ಶ್ರೀ ಗುರುಕುಮಾರ ಆಶ್ರಮದಲ್ಲಿ ವಿಶ್ರಾಂತ ಜೀವನವನ್ನು ನಡೆಸಿ ಅಲ್ಲಿಯೇ ಲಿಂಗೈಕ್ಯರಾದರು. ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ಬಾದಾಮಿ ತಾಲ್ಲೂಕಿನ ಚೊಳ ಚಗುಡ್ಡದಲ್ಲಿ ಜನಿಸಿ, ಸಂಸ್ಕೃತ ಹಾಗೂ ವೇದಾಧ್ಯಯನವನ್ನು ಮಾಡಿ ಮಠವನ್ನು ಧಾರ್ಮಿಕವಾಗಿ ಹೆಚ್ಚು ಅಭಿವೃದ್ಧಿ ಪಡಿಸಿದರು. ಗುರುಗಳು ತಪೋನುಷ್ಠಾನಿಗಳಾಗಿ ಹೆಸರುಮಾಡಿದರು. ಸಖರಾಯಪಟ್ಟಣದ ಮೂಲ ಮಠದ ಆಡಳಿತವನ್ನು ಹುಣಸಘಟ್ಟಕ್ಕೆ ಬದಲಾಯಿಸಿ, ತಮ್ಮ ಶಾಖಾಮಠಗಳು ಹಾಗೂ ಮೂಲ ಮಠದ ಅಭಿವೃದ್ಧಿಯನ್ನು ಕೈಗೊಂಡರು. ಇವರು ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಗುರುಮೂರ್ತಿ ಶಿವಾಚಾರ್ಯ ಹಾಲುಸ್ವಾಮಿಗಳನ್ನು ನೇಮಕಮಾಡಿ ಕೊಂಡು, ಪಟ್ಟಾಧಿಕಾರವನ್ನು ಮಾಡಿ ವಿಶ್ರಾಂತ ಜೀವನವನ್ನು ನಡೆಸುತ್ತಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಗುರುಮೂರ್ತಿ ಶಿವಾಚಾರ್ಯ ಹಾಲುಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠವು ಅಮೂಲಾಗ್ರವಾಗಿ ಬದಲಾವಣೆ ಕಂಡಿತು. ಗುರುಗಳು ಹುಣಸಘಟ್ಟ ಮಠದಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡು ಮಠದ ಆಸ್ತಿಯಾಗಿದ್ದ ಜಮೀನನ್ನು ಅಭಿವೃದ್ಧಿಪಡಿಸಿ, ಅಡಿಕೆ ಮತ್ತು ತೆಂಗನ್ನು ಬೆಳೆದು ಮಠದ ಆರ್ಥಿಕ ಮೂಲವನ್ನು ರೂಢಿಸಿಕೊಂಡಿದ್ದಾರೆ. ಹುಣಸಘಟ್ಟ ಗ್ರಾಮದ ಮಧ್ಯಭಾಗದಲ್ಲಿದ್ದ ಹಳೆಯ ಕಟ್ಟಡದ ಬದಲಿಗೆ ಗ್ರಾಮದ ವಾಯುವ್ಯ ಭಾಗದಲ್ಲಿರುವ ಮಠದ ತೋಟದಲ್ಲಿ ವಿಶಾಲವಾದ ಕಟ್ಟಡವನ್ನು ನಿರ್ಮಿಸಿ, ಮಠದ ಆಡಳಿತವನ್ನು ಸ್ಥಳಾಂತರಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಶ್ರೀ ಹಾಲುಸ್ವಾಮಿ ಮಠದ ಮೂಲ ಮಠವಾದ ಸಖರಾಯಪಟ್ಟಣದಲ್ಲಿ ಐದು ಗದ್ದುಗೆಗಳು, ಕಡೂರು ತಾಲ್ಲೂಕಿನ ಕೆ.ಬಿದರೆ ಹಾಗೂ ಗಿರಿಯಾಪುರದಲ್ಲಿ ತಲಾ ಒಂದು ಗದ್ದುಗೆ, ತರೀಕೆರೆ ತಾಲ್ಲೂಕಿನ ಗೊಂಡೇದಹಳ್ಳಿಯಲ್ಲಿ ಒಂದು ಗದ್ದುಗೆ ಸ್ಥಾಪನೆಯಾಗಿದ್ದು ಇವುಗಳಿಗೆ ನಿತ್ಯಪೂಜೆಗೆ ವ್ಯವಸ್ಥೆ ಮಾಡಲಾಗಿದೆ. ಗುರುಗಳು ಬೀರೂರಿನ ಶಿವಾನಂದಾಶ್ರಮದಲ್ಲಿ ಪ್ರತಿ ತಿಂಗಳು ಶಿವಾನುಭವ ಕಾರ್ಯಕ್ರಮವನ್ನು ನಡೆಸಿಕೊಡುತ್ತಿದ್ದಾರೆ. ಮಠದಲ್ಲಿ ಕರ್ತೃಗುರುಗಳ ತೋರು ಗದ್ದುಗೆ ಹಾಗೂ ಶ್ರೀ ರೇಣುಕಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ.

ವಿಳಾಸ: ಷ.ಬ್ರ.ಶ್ರೀ ಗುರುಮೂರ್ತಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಾಲುಸ್ವಾಮಿಮಠ, ಹುಣಸಘಟ್ಟ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

❑

ನರಸಿಂಹರಾಜಪುರ ತಾಲ್ಲೂಕು

ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ತಾಲ್ಲೂಕು, ಮಲೆನಾಡಿನ ಶ್ರೀಮಂತ ತಾಲ್ಲೂಕುಗಳಲ್ಲಿ ಒಂದು. ಅಡಿಕೆ, ಸಾಂಬಾರು ಪದಾರ್ಥ ಹಾಗೂ ಕಾಫಿಯನ್ನು ಬೆಳೆಯುವ ಈ ನಾಡು ಧಾರ್ಮಿಕ ಕ್ಷೇತ್ರದಲ್ಲಿ ಪ್ರಸಿದ್ಧಿ ಪಡೆದಿದೆ. ತಾಲ್ಲೂಕಿನ ಕೇಂದ್ರ ಸ್ಥಳವಾದ ನರಸಿಂಹರಾಜಪುರದಲ್ಲಿ ಶ್ರೀ ರಂಭಾಪುರಿ ಪೀಠದ ಶಾಖಾಮಠ, ಬಾಳೆಹೊನ್ನೂರಿನಲ್ಲಿ ಶ್ರೀ ಕಾಡುಮಠ ಹಾಗೂ ಮುತ್ತಿನಕೊಪ್ಪ-ಹೀಗೆ ಅನೇಕ ಮಠಗಳು ಹಿಂದೆ ಅಸ್ತಿತ್ವದಲ್ಲಿದ್ದವೆಂದು ಹೇಳಲಾಗುತ್ತದೆ. ಈಗ ಬಾಳೆಹೊನ್ನೂರಿನ ಶ್ರೀಮದ್ ಜಗದ್ಗುರು ರಂಭಾಪುರಿಪೀಠ ಅಸ್ತಿತ್ವದಲ್ಲಿದ್ದು ಹೆಚ್ಚು ಹೆಸರು ಮಾಡಿದೆ.

ಬಾಳೆಹೊನ್ನೂರು

ನರಸಿಂಹರಾಜಪುರ ತಾಲ್ಲೂಕಿನ ಬಾಳೆಹೊನ್ನೂರು ಪಟ್ಟಣವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ನಲವತ್ತು ಕಿ.ಮೀ ದೂರದಲ್ಲಿದೆ. ಮಲೆನಾಡಿನ ಹಸಿರಿನ ಮಧ್ಯೆ ಭದ್ರಾನದಿ ದಡದಲ್ಲಿ ಸ್ಥಾಪಿತವಾಗಿದೆ.

ಶ್ರೀಮದ್ ಜಗದ್ಗುರು ಶ್ರೀ ರಂಭಾಪುರಿಪೀಠ: ಬಾಳೆಹೊನ್ನೂರು ಪಟ್ಟಣದ ಉತ್ತರಭಾಗದಲ್ಲಿ ಜಗದ್ಗುರು ಶ್ರೀರಂಭಾಪುರಿ ಪೀಠವು ಸ್ಥಾಪನೆಯಾಗಿ ವೀರಶೈವ ಧರ್ಮದವರಿಗೆ ಪುಣ್ಯಸ್ಥಳವಾಗಿದೆ. ಈ ಮಠವು ಪ್ರಾಚೀನ ಕಾಲದಲ್ಲಿ ಸ್ಥಾಪನೆಗೊಂಡು ದೇಶದ ನಾನಾ ಭಾಗಗಳಲ್ಲಿ ಅನೇಕ ಶಾಖಾಮಠಗಳನ್ನು ಹೊಂದಿದೆ. ವೀರಶೈವ ಮಠಗಳಲ್ಲಿಯೆ ಹಿರಿಯಣ್ಣನಂತೆ ಇದ್ದು ಚಿಕ್ಕಮಗಳೂರು ಜಿಲ್ಲೆಗೆ ಖ್ಯಾತಿ ತಂದುಕೊಟ್ಟಿದೆ.

ಪುರಾಣ ಹಾಗೂ ಶಿವಾಗಮಗಳ ಆಧಾರಿತ: ಶಿವನ ಅಪ್ಪಣೆಯ ಮೇರೆಗೆ ಭೂಲೋಕದಲ್ಲಿ ವೀರಶೈವ ಧರ್ಮದ ಸ್ಥಾಪನೆಗಾಗಿ ಅವತರಿಸಿದ ಶ್ರೀ ರೇಣುಕಾಚಾರ್ಯ, ಶ್ರೀ ಮರುಳಸಿದ್ಧ, ಶ್ರೀ ಏಕೋರಾಮೋರಾಧ್ಯ, ಶ್ರೀ ಪಂಡಿತಾರಾಧ್ಯ ಮತ್ತು ಶ್ರೀ ವಿಶ್ವರಾಧ್ಯರೆಂಬ ಶಿವಗಣರೆ ಜಗದ್ಗುರು ಪಂಚಾಚಾರ್ಯರೆಂಬ ನಾಮದಿಂದ ಪ್ರಖ್ಯಾತರಾಗಿದ್ದಾರೆ. ಇವರಲ್ಲಿ ಜಗದ್ಗುರು ಶ್ರೀ ರೇಣುಕಾಚಾರ್ಯರು ರಂಭಾಪುರಿ ಮಹಾಪೀಠದ ಕರ್ತೃಗಳಾಗಿದ್ದಾರೆ. ಪೀಠದ ಪರಂಪರೆಯ ಆಧಾರದಿಂದ ಇವರೇ ಕೃತಯುಗದಲ್ಲಿ ಶ್ರೀ ಏಕಾಕ್ಷರ ಶಿವಾಚಾರ್ಯರೆಂದು, ತ್ರೇತಾಯುಗದಲ್ಲಿ ಶ್ರೀ ಏಕವಕ್ತ್ರ ಶಿವಾಚಾರ್ಯರೆಂದು, ದ್ವಾಪರಯುಗದಲ್ಲಿ ಶ್ರೀ ರೇಣುಕಾಚಾರ್ಯರೆಂದು ಮತ್ತು ಕಲಿಯುಗದಲ್ಲಿ ಶ್ರೀ ರೇವಣಸಿದ್ಧರೆಂದು ಖ್ಯಾತರಾದರೆಂದು ತಿಳಿದುಬರುತ್ತದೆ. ಆಂಧ್ರಪ್ರದೇಶದ ಕೊಲ್ಲಿಪಾಕಿಯ ಶ್ರೀ ಸೋಮೇಶ್ವರ ಲಿಂಗದಿಂದ ಅವಿರ್ಭವಿಸಿ ಶ್ರೀ ರೇಣುಕಾಚಾರ್ಯರು ಅಲ್ಲಿಂದ ಮಲಯಾಚಲದಲ್ಲಿಯ ಅಗಸ್ತ್ಯನಿಗೆ ಶಿವಾದ್ವೈತ ಸಿದ್ಧಾಂತವನ್ನು ಬೋಧಿಸಿ ವೀರಶೈವ ಧರ್ಮವನ್ನು ಸ್ಥಾಪನೆಗೊಳಿಸಿದರು. ಮಹರ್ಷಿ ಅಗಸ್ತ್ಯನಿಗೆ ಅಂದು ಬೋಧಿಸಿದ ಆ ಬೋಧನೆಯೇ ಇಂದು ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥರೂಪದಲ್ಲಿ ಲಭ್ಯವಿದೆ. ಅಂದು ಶ್ರೀ ರೇಣುಕಾಚಾರ್ಯರು ಧರ್ಮಪ್ರಚಾರಕ್ಕೆ ಹೊರಟು ಎಲ್ಲೆಲ್ಲಿ ನೆಲೆನಿಂತು ಅನುಷ್ಠಾನಗೊಂಡರೋ ಅಲ್ಲೆಲ್ಲ ಧಾರ್ಮಿಕ ಜಾಗೃತಸ್ಥಳಗಳಾಗಿ ಇಂದಿಗೂ ಪೂಜ್ಯತೆಗೆ ಒಳಪಟ್ಟಿವೆ. ಶ್ರೀ ರೇಣುಕಾಚಾರ್ಯರನ್ನು ಕುರಿತು ಅನೇಕ ವಿದ್ವಾಂಸರು ತಮ್ಮ ಕೃತಿಗಳಲ್ಲಿ ಮತಪ್ರವರ್ತಕರೆಂದು ಉಲ್ಲೇಖಿಸಿರುವು ದಲ್ಲದೆ, ವೀರಶೈವ ಧರ್ಮದ ಪ್ರಥಮ ಮತ ಪ್ರವರ್ತಕರು ಶ್ರೀ ರೇಣುಕರೆಂದು ಶ್ರೀ ಮರಿ ತೋಂಟದಾರ್ಯರು ಉಲ್ಲೇಖಿಸಿದ್ದಾರೆ. ಭಾರತೀಯ ಇತಿಹಾಸ ದರ್ಶನ, ಶ್ರೀ ಸಿದ್ಧಾಂತ ಶಿಖಾಮಣಿ, ವೀರಾಗಮ ಮುಂತಾದ ಕೃತಿಗಳಲ್ಲಿ ಶ್ರೀರೇಣುಕಾಚಾರ್ಯರ ಬಗ್ಗೆ ಉಲ್ಲೇಖಗಳು ಪ್ರಕಟಗೊಂಡಿವೆ.

ಜಗದ್ಗುರು ಶ್ರೀ ರೇಣುಕಾಚಾರ್ಯರು ಹಾಗೂ ಸಮಾನ ಪೀಠಗಳ ಸ್ಥಾಪಕರು ಜೊತೆ ಸೇರಿ ವೀರಶೈವ ಧರ್ಮಕ್ಕೆ ಶಾಸನಬದ್ಧ ರೂಪವನ್ನುಕೊಟ್ಟು, ಮಂಡಲಕ್ಕೊಬ್ಬರು ಶಿವಾಚಾರ್ಯರನ್ನು ನೇಮಿಸಿ, ಇವರ ಅಧೀನದಲ್ಲಿ ಗ್ರಾಮಕ್ಕೊಂದು ಮಠದ ಮನೆಯನ್ನು ಸ್ಥಾಪಿಸಿ ಜಂಗಮರನ್ನು ನೆಲೆಗೊಳಿಸಿ ಧಾರ್ಮಿಕ ಕಾರ್ಯಗಳು ಹಾಗೂ ವೀರಶೈವ ಧರ್ಮದ ಪ್ರಚಾರ ಕಾರ್ಯ ನಡೆಯುವಂತೆ ಮಾಡಿದರು.

ಲಂಕೆಯ ರಾವಣನ ತಮ್ಮ ವಿಭೀಷಣನ ಭಕ್ತಿಯ ಆಗ್ರಹಕ್ಕೆ ಒಲಿದು ಲಂಕೆಯಲ್ಲಿ ಏಕಕಾಲದಲ್ಲಿ ಮೂರು

ಕೋಟಿ ಲಿಂಗಗಳನ್ನು ಸ್ಥಾಪಿಸಿರುವುದು ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಉಲ್ಲೇಖವಾಗಿದೆ. ಈ ಕಲಿಯುಗದಲ್ಲಿ ಶ್ರೀ ರೇವಣಸಿದ್ಧರೆಂದು ವಿಖ್ಯಾತರಾದ ಜಗದ್ಗುರು ಶ್ರೀ ರೇಣುಕರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೇಶ್ವರ ಲಿಂಗವನ್ನು ಮತ್ತು ರತ್ನಗರ್ಭಗಣಪತಿಯನ್ನು ಅನುಗ್ರಹಿಸಿ ಧರ್ಮಸಾಮರಸ್ಯವನ್ನು ತಂದರು. ಅಲ್ಲದೆ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಸಂಚರಿಸಿ ವೀರಶೈವ ಧರ್ಮವನ್ನು ಬೆಳೆಸಿದರು ಎಂಬ ಉಲ್ಲೇಖ ರೇಣುಕವಿಜಯ ಪುರಾಣದಲ್ಲಿ ನಮೂದಿಸಲ್ಪಟ್ಟಿದೆ. ಈ ರೀತಿ ಪೀಠದ ಪರಂಪರೆ ಉಜ್ವಲವಾಗಿ ಬೆಳೆದು ಮೂಲ ಕರ್ತೃಗಳಿಂದ ಈಗಿನ ಜಗದ್ಗುರುಗಳವರೆಗೆ ಅವಿರತವಾಗಿ ಧಾರ್ಮಿಕ ನೆಲೆಗಟ್ಟಿನಲ್ಲಿ 'ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ'ಎಂದು ಸಮಾಜವನ್ನು ಮುನ್ನಡೆಸುತ್ತಿದ್ದಾರೆ. ಬಾಳೆಹೊನ್ನೂರಿನ ಶ್ರೀ ರಂಭಾಪುರಿ ಪೀಠದ ಜಗದ್ಗುರುಗಳಾಗಿ ಈವರೆಗೆ ಒಟ್ಟು ೧೨೧ ಜಗದ್ಗುರುಗಳು ಆಡಳಿತ ನಡೆಸಿರ ಬಹುದೆಂದು ದೊರೆತ ಹೆಸರುಗಳ ಆಧಾರದ ಮೇಲೆ ದಾಖಲಿಸಬಹುದಾಗಿದೆ.

ಪೀಠದ ಜಗದ್ಗುರುಗಳು ಕೈಗೊಂಡಿದ್ದ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳನ್ನು ಗಮನಿಸಿದ ವಿಜಯ ನಗರ,ಕೆಳದಿ, ಚೆಂಗಳ್ವಾರರು, ಹೊಯ್ಸಳರು, ಚಾಲುಕ್ಯರು,ಗಂಗರು, ರಾಷ್ಟ್ರಕೂಟರು,ಮೈಸೂರಿನ ಅರಸರು ಹಾಗೂ ಕೊಡಗಿನ ಹಾಲೇರಿಅರಸರು ಈ ಪೀಠಕ್ಕೆ ಭೇಟಿ ನೀಡಿ, ಅನೇಕ ದಾನದತ್ತಿಗಳನ್ನು ನೀಡಿ ತಮ್ಮ ಭಕ್ತಿ ಗೌರವ ಅರ್ಪಿಸಿದ್ದಾರೆ.

ಪರಂಪರೆ:
ಶ್ರೀ ಜಗದ್ಗುರು ಏಕಾಕ್ಷರ ಶಿವಾಚಾರ್ಯ ಭಗವತ್ಪಾದರು (ಕೃತಯುಗದ ಆದಿ)
ಶ್ರೀ ಜಗದ್ಗುರು ಏಕವಕ್ತ್ರ ಶಿವಾಚಾರ್ಯ ಭಗವತ್ಪಾದರು (ತ್ರೇತಾಯುಗದ ಆದಿ)
ಶ್ರೀ ಜಗದ್ಗುರು ರೇಣುಕ ಶಿವಾಚಾರ್ಯ ಭಗವತ್ಪಾದರು (ದ್ವಾಪರಯುಗದ ಆದಿ)

೧. ಶ್ರೀ ಜಗದ್ಗುರು ರೇವಣಸಿದ್ಧ ಶಿವಾಚಾರ್ಯರು
೨. ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು
೩. ಶ್ರೀ ಜಗದ್ಗುರು ಮುಕ್ತಿಮುನೀಶ್ವರ ಶಿವಾಚಾರ್ಯರು
೪. ಶ್ರೀ ಜಗದ್ಗುರು ದಿಗಂಬರ ಮುಕ್ತಿ ಮುನೀಶ್ವರ ಶಿವಾಚಾರ್ಯರು
೫. ಶ್ರೀ ಜಗದ್ಗುರು ತ್ರಿಲೋಚನ ಶಿವಾಚಾರ್ಯರು
೬. ಶ್ರೀ ಜಗದ್ಗುರು ಯೋಗಿನಾಥ ಶಿವಾಚಾರ್ಯರು
೭. ಶ್ರೀ ಜಗದ್ಗುರು ಮೃತ್ಯುಂಜಯ ಶಿವಾಚಾರ್ಯರು
೮. ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು
೯. ಶ್ರೀ ಜಗದ್ಗುರು ಗುರುಪಾದ ಶಿವಾಚಾರ್ಯರು
೧೦. ಶ್ರೀ ಜಗದ್ಗುರು ಷಣ್ಮುಖ ಶಿವಾಚಾರ್ಯರು
೧೧. ಶ್ರೀ ಜಗದ್ಗುರು ಶಿವಲಿಂಗ ಶಿವಾಚಾರ್ಯರು
೧೨. ಶ್ರೀ ಜಗದ್ಗುರು ನಿತ್ಯಾನಂದ ಶಿವಾಚಾರ್ಯರು
೧೩. ಶ್ರೀ ಜಗದ್ಗುರು ಮುಕ್ತಿನಾಥ ಶಿವಾಚಾರ್ಯರು
೧೪. ಶ್ರೀ ಜಗದ್ಗುರು ಷಡಕ್ಷರ ಶಿವಾಚಾರ್ಯರು
೧೫. ಶ್ರೀ ಜಗದ್ಗುರು ಗುರುಸಿದ್ಧ ಶಿವಾಚಾರ್ಯರು
೧೬. ಶ್ರೀ ಜಗದ್ಗುರು ಶಿವಲಿಂಗ ಶಿವಾಚಾರ್ಯರು
೧೭. ಶ್ರೀ ಜಗದ್ಗುರು ನೀಲಕಂಠ ಶಿವಾಚಾರ್ಯರು
೧೮. ಶ್ರೀ ಜಗದ್ಗುರು ಕೈವಲ್ಯನಾಥ ಶಿವಾಚಾರ್ಯರು

೧೯. ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರು
೨೦. ಶ್ರೀ ಜಗದ್ಗುರು ಸರ್ವೇಶ್ವರ ಶಿವಾಚಾರ್ಯರು
೨೧. ಶ್ರೀ ಜಗದ್ಗುರು ಶಂಭುದೇವ ಶಿವಾಚಾರ್ಯರು
೨೨. ಶ್ರೀ ಜಗದ್ಗುರು ಕಾಲಾಂತಕ ಶಿವಾಚಾರ್ಯರು
೨೩. ಶ್ರೀ ಜಗದ್ಗುರು ಶಾಂತವೀರ ಶಿವಾಚಾರ್ಯರು
೨೪. ಶ್ರೀ ಜಗದ್ಗುರು ಮುಕ್ತಿನಾಥ ಶಿವಾಚಾರ್ಯರು
೨೫. ಶ್ರೀ ಜಗದ್ಗುರು ಶಂಕರಸ್ವಾಮಿ ಶಿವಾಚಾರ್ಯರು
೨೬. ಶ್ರೀ ಜಗದ್ಗುರು ಸದಾಶಿವ ಶಿವಾಚಾರ್ಯರು
೨೭. ಶ್ರೀ ಜಗದ್ಗುರು ಮಹಾದೇವ ಶಿವಾಚಾರ್ಯರು
೨೮. ಶ್ರೀ ಜಗದ್ಗುರು ಗುರುಲಿಂಗ ಶಿವಾಚಾರ್ಯರು
೨೯. ಶ್ರೀ ಜಗದ್ಗುರು ರೇವಣಸಿದ್ಧ ಶಿವಾಚಾರ್ಯರು
೩೦. ಶ್ರೀ ಜಗದ್ಗುರು ಪಶುಪತಿ ಶಿವಾಚಾರ್ಯರು
೩೧. ಶ್ರೀ ಜಗದ್ಗುರು ಶಂಭುಲಿಂಗ ಶಿವಾಚಾರ್ಯರು
೩೨. ಶ್ರೀ ಜಗದ್ಗುರು ಗುರುಪಾದ ಶಿವಾಚಾರ್ಯರು
೩೩. ಶ್ರೀ ಜಗದ್ಗುರು ಶ್ರೀಕಂಠಮೂರ್ತಿ ಶಿವಾಚಾರ್ಯರು
೩೪. ಶ್ರೀ ಜಗದ್ಗುರು ಸಿದ್ಧನಾಥ ಶಿವಾಚಾರ್ಯರು
೩೫. ಶ್ರೀ ಜಗದ್ಗುರು ಮೃತ್ಯುಂಜಯ ಶಿವಾಚಾರ್ಯರು
೩೬. ಶ್ರೀ ಜಗದ್ಗುರು ನೀಲಕಂಠ ಶಿವಾಚಾರ್ಯರು
೩೭. ಶ್ರೀ ಜಗದ್ಗುರು ಸೋಮಶೇಖರ ಶಿವಾಚಾರ್ಯರು
೩೮. ಶ್ರೀ ಜಗದ್ಗುರು ವೀರಭದ್ರ ಶಿವಾಚಾರ್ಯರು
೩೯. ಶ್ರೀ ಜಗದ್ಗುರು ಜಗನ್ನಾಥ ಶಿವಾಚಾರ್ಯರು
೪೦. ಶ್ರೀ ಜಗದ್ಗುರು ಪಂಚಾನನ ಶಿವಾಚಾರ್ಯರು
೪೧. ಶ್ರೀ ಜಗದ್ಗುರು ಕೆಂಜಡೆ ರಾಜಶೇಖರ ಶಿವಾಚಾರ್ಯರು
೪೨. ಶ್ರೀ ಜಗದ್ಗುರು ನಗರಾರಂಭ ಶಿವಾಚಾರ್ಯರು
೪೩. ಶ್ರೀ ಜಗದ್ಗುರು ಸಿದ್ಧನಾಥ ಶಿವಾಚಾರ್ಯರು
೪೪. ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು
೪೫. ಶ್ರೀ ಜಗದ್ಗುರು ಕಲ್ಯಾಣ ಸುಂದರ ಶಿವಾಚಾರ್ಯರು
೪೬. ಶ್ರೀ ಜಗದ್ಗುರು ಗಂಗಾಧರ ಶಿವಾಚಾರ್ಯರು
೫೭. ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರು
೪೮. ಶ್ರೀ ಜಗದ್ಗುರು ಚಿದಂಬರದೇವ ಶಿವಾಚಾರ್ಯರು
೪೯. ಶ್ರೀ ಜಗದ್ಗುರು ಶಿವಪ್ರಸಾದ ಶಿವಾಚಾರ್ಯರು
೫೦. ಶ್ರೀ ಜಗದ್ಗುರು ವೀರಭದ್ರ ಶಿವಾಚಾರ್ಯರು
೫೧. ಶ್ರೀ ಜಗದ್ಗುರು ಶಿವಾನಂದ ಶಿವಾಚಾರ್ಯರು
೫೨. ಶ್ರೀ ಜಗದ್ಗುರು ಅವಿಮುಕ್ತ ಶಿವಾಚಾರ್ಯರು

೫೩. ಶ್ರೀ ಜಗದ್ಗುರು ರೇವಣಸಿದ್ಧ ಶಿವಾಚಾರ್ಯರು
೫೪. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯರು
೫೫. ಶ್ರೀ ಜಗದ್ಗುರು ಪಶುಪತಿ ಶಿವಾಚಾರ್ಯರು
೫೬. ಶ್ರೀ ಜಗದ್ಗುರು ರೇವಣಸಿದ್ಧ ಶಿವಾಚಾರ್ಯರು
೫೭. ಶ್ರೀ ಜಗದ್ಗುರು ಪ್ರಮಥನಾಥ ಶಿವಾಚಾರ್ಯರು
೫೮. ಶ್ರೀ ಜಗದ್ಗುರು ಗುರುದೇವ ಶಿವಾಚಾರ್ಯರು
೫೯. ಶ್ರೀ ಜಗದ್ಗುರು ಗಂಗಾಧರ ಶಿವಾಚಾರ್ಯರು
೬೦. ಶ್ರೀ ಜಗದ್ಗುರು ನಂದಿನಾಥ ಶಿವಾಚಾರ್ಯರು
೬೧. ಶ್ರೀ ಜಗದ್ಗುರು ಮುಕ್ತಿಮುನೀಶ್ವರ ಶಿವಾಚಾರ್ಯರು
೬೨. ಶ್ರೀ ಜಗದ್ಗುರು ಶಂಭುದೇವ ಶಿವಾಚಾರ್ಯರು
೬೩. ಶ್ರೀ ಜಗದ್ಗುರು ತಾಡವಾಲೆ ಪಂಚಾಕ್ಷರ ಶಿವಾಚಾರ್ಯರು
೬೪. ಶ್ರೀ ಜಗದ್ಗುರು ಗುರುದೇವ ಶಿವಾಚಾರ್ಯರು
೬೫. ಶ್ರೀ ಜಗದ್ಗುರು ಜಟಾವೀರಭದ್ರ ಶಿವಾಚಾರ್ಯರು
೬೬. ಶ್ರೀ ಜಗದ್ಗುರು ಶಿವಲಿಂಗ ಶಿವಾಚಾರ್ಯರು
೬೭. ಶ್ರೀ ಜಗದ್ಗುರು ವಿರೂಪಾಕ್ಷ ಶಿವಾಚಾರ್ಯರು
೬೮. ಶ್ರೀ ಜಗದ್ಗುರು ಶ್ರೀಕಂಠ ಶಿವಾಚಾರ್ಯರು
೬೯. ಶ್ರೀ ಜಗದ್ಗುರು ಅಘೋರ ಶಿವಾಚಾರ್ಯರು
೭೦. ಶ್ರೀ ಜಗದ್ಗುರು ಗುರುಪಾದ ಶಿವಾಚಾರ್ಯರು
೭೧. ಶ್ರೀ ಜಗದ್ಗುರು ಈಶಾನ್ಯದೇವ ಶಿವಾಚಾರ್ಯರು
೭೨. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯರು
೭೩. ಶ್ರೀ ಜಗದ್ಗುರು ಚರಲಿಂಗ ಶಿವಾಚಾರ್ಯರು
೭೪. ಶ್ರೀ ಜಗದ್ಗುರು ಪುಣ್ಯಶ್ಲೋಕ ಶಿವಾಚಾರ್ಯರು
೭೫. ಶ್ರೀ ಜಗದ್ಗುರು ಗಂಗಾಧರ ಶಿವಾಚಾರ್ಯರು
೭೬. ಶ್ರೀ ಜಗದ್ಗುರು ಸೋಮನಾಥ ಶಿವಾಚಾರ್ಯರು
೭೭. ಶ್ರೀ ಜಗದ್ಗುರು ಪೃಥ್ವೀಧ್ವಜ ಮಹೇಶ್ವರ ಶಿವಾಚಾರ್ಯರು
೭೮. ಶ್ರೀ ಜಗದ್ಗುರು ವೀರೇಶ್ವರ ಶಿವಾಚಾರ್ಯರು
೭೯. ಶ್ರೀ ಜಗದ್ಗುರು ಘಂಟಾಸಿದ್ಧ ಶಿವಾಚಾರ್ಯರು
೮೦. ಶ್ರೀ ಜಗದ್ಗುರು ವೃಷಭೇಂದ್ರ ಶಿವಾಚಾರ್ಯರು
೮೧. ಶ್ರೀ ಜಗದ್ಗುರು ಸದಾನಂದ ಶಿವಾಚಾರ್ಯರು
೮೨. ಶ್ರೀ ಜಗದ್ಗುರು ಗುರುಲಿಂಗ ಶಿವಾಚಾರ್ಯರು
೮೩. ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು
೮೪. ಶ್ರೀ ಜಗದ್ಗುರು ವೀರಭದ್ರ ಶಿವಾಚಾರ್ಯರು
೮೫. ಶ್ರೀ ಜಗದ್ಗುರು ಗಣನಾಥ ಶಿವಾಚಾರ್ಯರು
೮೬. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯರು

೮೭. ಶ್ರೀ ಜಗದ್ಗುರು ಶಕ್ತಿಧರ ಶಿವಾಚಾರ್ಯರು
೮೮. ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರು
೮೯. ಶ್ರೀ ಜಗದ್ಗುರು ಚಿತ್‌ಪ್ರಕಾಶ ಶಿವಾಚಾರ್ಯರು
೯೦. ಶ್ರೀ ಜಗದ್ಗುರು ಶಂಭುದೇವ ಶಿವಾಚಾರ್ಯರು
೯೧. ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು
೯೨. ಶ್ರೀ ಜಗದ್ಗುರು ಸಾರಂಗಧರ ಶಿವಾಚಾರ್ಯರು
೯೩. ಶ್ರೀ ಜಗದ್ಗುರು ಕುಮಾರದೇವ ಶಿವಾಚಾರ್ಯರು
೯೪. ಶ್ರೀ ಜಗದ್ಗುರು ಶಿವಪ್ರಸಾದ ಶಿವಾಚಾರ್ಯರು
೯೫. ಶ್ರೀ ಜಗದ್ಗುರು ಚಂದ್ರಶೇಖರ ಶಿವಾಚಾರ್ಯರು
೯೬. ಶ್ರೀ ಜಗದ್ಗುರು ಚನ್ನವೀರದೇವ ಶಿವಾಚಾರ್ಯರು
೯೭. ಶ್ರೀ ಜಗದ್ಗುರು ವಾಮದೇವ ಶಿವಾಚಾರ್ಯರು
೯೮. ಶ್ರೀ ಜಗದ್ಗುರು ನೀಲಕಂಠದೇವ ಶಿವಾಚಾರ್ಯರು
೯೯. ಶ್ರೀ ಜಗದ್ಗುರು ರೇವಣಸಿದ್ಧ ಶಿವಾಚಾರ್ಯರು
೧೦೦. ಶ್ರೀ ಜಗದ್ಗುರು ಶಿವಲಿಂಗ ಶಿವಾಚಾರ್ಯರು
೧೦೧. ಶ್ರೀ ಜಗದ್ಗುರು ಚಿದ್ಘನದೇವ ಶಿವಾಚಾರ್ಯರು
೧೦೨. ಶ್ರೀ ಜಗದ್ಗುರು ನಾಗನಾಥ ಶಿವಾಚಾರ್ಯರು
೧೦೩. ಶ್ರೀ ಜಗದ್ಗುರು ಗಂಗಾಧರ ಶಿವಾಚಾರ್ಯರು
೧೦೪. ಶ್ರೀ ಜಗದ್ಗುರು ಚಂದ್ರಶೇಖರ ಶಿವಾಚಾರ್ಯರು
೧೦೫. ಶ್ರೀ ಜಗದ್ಗುರು ಪೂರ್ಣಜ್ಞಾನ ಶಿವಾಚಾರ್ಯರು
೧೦೬. ಶ್ರೀ ಜಗದ್ಗುರು ಶಂಭುಲಿಂಗ ಶಿವಾಚಾರ್ಯರು
೧೦೭. ಶ್ರೀ ಜಗದ್ಗುರು ಚನ್ನವೃಷಭಲಿಂಗ ಶಿವಾಚಾರ್ಯರು
೧೦೮. ಶ್ರೀ ಜಗದ್ಗುರು ಜಟಾವೃಷಭಲಿಂಗ ಶಿವಾಚಾರ್ಯರು
೧೦೯. ಶ್ರೀ ಜಗದ್ಗುರು ಶಾಂತದೇವ ಶಿವಾಚಾರ್ಯರು
೧೧೦. ಶ್ರೀ ಜಗದ್ಗುರು ಗುರುವೃಷಭರಾಜೇಂದ್ರ ಶಿವಾಚಾರ್ಯರು
೧೧೧. ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರು
೧೧೨. ಶ್ರೀ ಜಗದ್ಗುರು ಗುರುಸಿದ್ಧಸ್ವಾಮಿ ಶಿವಾಚಾರ್ಯರು
೧೧೩. ಶ್ರೀ ಜಗದ್ಗುರು ಚಂದ್ರರಾಜೇಂದ್ರ ಶಿವಾಚಾರ್ಯರು
೧೧೪. ಶ್ರೀ ಜಗದ್ಗುರು ಚಂದ್ರಶೇಖರ ದೇಶಿಕೇಂದ್ರ ಶಿವಾಚಾರ್ಯರು
೧೧೫. ಶ್ರೀ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯರು
೧೧೬. ಶ್ರೀ ಜಗದ್ಗುರು ಗುರುವೃಷಭರಾಜೇಂದ್ರ ಶಿವಾಚಾರ್ಯರು
೧೧೭. ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರು
೧೧೮. ಶ್ರೀ ಜಗದ್ಗುರು ಅಭಿನವರೇಣುಕ ಶಿವಾನಂದ ಶಿವಾಚಾರ್ಯರು
೧೧೯. ಶ್ರೀ ಜಗದ್ಗುರು ಪ್ರಸನ್ನರೇಣುಕ ವೀರಗಂಗಾಧರ ಶಿವಾಚಾರ್ಯರು
೧೨೦. ಶ್ರೀ ಜಗದ್ಗುರು ರುದ್ರಮುನಿ ಶಿವಾಚಾರ್ಯರು
೧೨೧. ಶ್ರೀ ಜಗದ್ಗುರು ಪ್ರಸನ್ನರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯರು

ಈ ರೀತಿ ರಂಭಾಪುರಿ ಪೀಠದ ಪರಂಪರೆ ಬೆಳೆದು ಬಂದಿದೆ. ಪೀಠದ ಜಗದ್ಗುರುಗಳಾಗಿ ಪೀಠಾರೋಹಣ ಮಾಡಿದ ಬಹುತೇಕ ಎಲ್ಲಾ ಗುರುಗಳು ಪೀಠದ ಹಾಗೂ ವೀರಶೈವಧರ್ಮದ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಜಗದ್ಗುರು ಶ್ರೀ ರುದ್ರಮುನೀಶ್ವರರು, ಜಗದ್ಗುರು ಶ್ರೀ ಮುಕ್ತೀಶ್ವರರು, ಜಗದ್ಗುರು ಶ್ರೀ ರೇವಣಸಿದ್ಧೇಶ್ವರರು ಮೊದಲಾದ ತಪೋನಿಷ್ಠರು ವೀರಶೈವ ಧರ್ಮವನ್ನು ವಿಧಿವತ್ತಾಗಿ ಬೆಳೆಸಿದರು. ಅಲ್ಲದೆ ಪೀಠಕ್ಕೆ ವೈಭವವನ್ನು ತಂದುಕೊಟ್ಟು ಜನಮನ್ನಣೆಗೆ ಪಾತ್ರರಾದರು. ಇತ್ತೀಚಿನ ಜಗದ್ಗುರುಗಳಾಗಿದ್ದ ನೂರಹದಿನಾಲ್ಕನೆಯ ಪೀಠಾಚಾರ್ಯರಾದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ರಾಜಮನ್ನಣೆಗೆ ಪಾತ್ರರಾಗಿ ಪೀಠವನ್ನು ಅಭಿವೃದ್ಧಿಪಡಿಸಿದರು. ನೂರಹದಿನಾರನೆಯ ಜಗದ್ಗರುಗಳಾದ ಶ್ರೀವೃಷಭ ರಾಜೇಂದ್ರ ಶಿವಾಚಾರ್ಯ ಭಗವತ್ಪಾದರು ಕಾಶಿಯಲ್ಲಿ ಹದಿನೈದು ವರ್ಷಗಳ ಕಾಲ ಅಧ್ಯಯನ ಮಾಡಿ ವಿದ್ಯಾಭೂಷಣರಾಗಿ ಅಧಿಕಾರ ವಹಿಸಿಕೊಂಡು ಪೀಠವನ್ನು ಪ್ರಗತಿದಾಯಕವಾಗಿ ಬೆಳೆಸಿದರು. ನಂತರ ಬಂದ ಜಗದ್ಗುರು ಶ್ರೀ ಪಂಚಾಕ್ಷರ ಶಿವಾಚಾರ್ಯ ಭಗವತ್ಪಾದರಿಗೆ ಕಾಶಿಯಲ್ಲಿ ಪಂಚಪೀಠಾಧೀಶ್ವರರ ಸಮ್ಮೇಳನವನ್ನು ನಡೆಸಿ, ವೀರಶೈವ ಧರ್ಮದ ಪ್ರಗತಿಗೆ ಅನೇಕ ನಿರ್ಣಯಗಳನ್ನು ಕೈಗೊಂಡು ಕಾರ್ಯಗತಗೊಳಿಸಿದ ಕೀರ್ತಿಸಲ್ಲುತ್ತದೆ.

ಅಭಿನವ ರೇಣುಕರು: ಉಜ್ಜಯನಿಪೀಠದ ಮಹಾತಪಸ್ವಿ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಭಗವತ್ಪಾದರ ಕೃಪಾಶೀರ್ವಾದದಿಂದ ೧೯೨೫ ರ ನವೆಂಬರ್ ಇಪ್ಪತ್ತೆರಡರಂದು ಅಧಿಕಾರಕ್ಕೆ ಬಂದ ಜಗದ್ಗುರು ಶ್ರೀ ಶಿವಾನಂದ ರಾಜೇಂದ್ರ ಶಿವಾಚಾರ್ಯ ಭಗವತ್ಪಾದರು ಅನುಷ್ಠಾನ ಮೂರ್ತಿಗಳಾಗಿ, ಕ್ರಿಯಾಶೀಲರಾಗಿ ಪೀಠವನ್ನು ಉತ್ತುಂಗಕ್ಕೆ ಕೊಂಡೊಯ್ದರು. ಗುರುಗಳ ಪಾಂಡಿತ್ಯ ಹಾಗೂ ಕ್ರಿಯಾಶೀಲತೆಗೆ ಶರಣಾದ ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರು ಶ್ರೀ ಶಿವಾನಂದ ರಾಜೇಂದ್ರ ಶಿವಾಚಾರ್ಯ ಭಗವತ್ಪಾದರ ಪಟ್ಟಾಧಿಕಾರದಿಂದ ಹಿಡಿದು ನಂತರದ ಎಲ್ಲಾ ಕಾರ್ಯಗಳಿಗೆ ನೆರವು ನೀಡಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಶ್ರೀಶಿವಾನಂದ ರಾಜೇಂದ್ರ ಶಿವಾಚಾರ್ಯರು ಶಿಥಿಲಗೊಂಡಿದ್ದ ಪೀಠದ ಕಟ್ಟಡವನ್ನು ನವೀಕರಣಗೊಳಿಸಿ ವೀರೇಶಮಂದಿರ, ಶ್ರೀ ರೇಣುಕಾಚಾರ್ಯ ಮಂದಿರದ ಜೀರ್ಣೋದ್ಧಾರ ಮಾಡಿದ್ದಲ್ಲದೆ, ಭತ್ತದಗದ್ದೆ, ಏಲಕ್ಕಿ, ಕಾಫಿ, ಅಡಿಕೆ ಹಾಗೂ ತೆಂಗಿನ ತೋಟಗಳನ್ನು ಅಭಿವೃದ್ಧಿಪಡಿಸಿ ಪೀಠಕ್ಕೆ ಬೆಳ್ಳಿ ಮತ್ತು ಬಂಗಾರದ ಪೂಜಾ ಸಾಮಾಗ್ರಿಗಳನ್ನು ಸಂಪಾದಿಸಿ ಪೀಠದಲ್ಲಿ ಪುನಃ ರಾಜವೈಭವ ಮೆರೆಯುವಂತೆ ಮಾಡಿದರು. ಪೀಠದ ಅಭಿವೃದ್ಧಿಯ ಜೊತೆಗೆ ಧರ್ಮಪ್ರಚಾರಕ್ಕಾಗಿ ನಾಡಿನ ಉಪಾಚಾರ್ಯರನ್ನೆಲ್ಲ ಸಂಘಟಿಸಿ ವೀರಶೈವ ಧರ್ಮದ ಪ್ರಚಾರಕ್ಕೆ ಪ್ರೋತ್ಸಾಹಿಸಿದರು. ಶ್ರೀ ಶಿವಾನಂದ ರಾಜೇಂದ್ರ ಶಿವಾಚಾರ್ಯ ಭಗವತ್ಪಾದರು ಸಂಘಟನೆಯ ಮೂಲಕ ಧಾರ್ಮಿಕ ಹಾಗೂ ಸಾಮಾಜಿಕ ಪ್ರಗತಿಯನ್ನು ಸಾಧಿಸಿ 'ಅಭಿನವ ರೇಣುಕ'ರೆಂದು ಹೆಸರು ಪಡೆದರು. ಮಹಾಂತಿನಮಠದಲ್ಲಿ ಅಧಿಕಾರದಲ್ಲಿದ್ದ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಕಮಾಡಿಕೊಂಡು ೧೯೫೮ರ ಆಗಸ್ಟ್ ಒಂದರಂದು ಲಿಂಗೈಕ್ಯರಾದರು.

ಮಹಾತಪಸ್ವಿಗಳು: ೧೧೯ನೆಯ ಜಗದ್ಗುರುಗಳಾಗಿ ಶ್ರೀ ಪ್ರಸನ್ನರೇಣುಕ ವೀರಗಂಗಾಧರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು ೧೯೫೭ರ ಮೇ ಎರಡರಂದು ಪೀಠದ ಅಧಿಕಾರವನ್ನು ವಹಿಸಿಕೊಂಡರು. ಸುಮಾರು ಮೂವತ್ತೈದು ವರ್ಷಗಳ ಕಾಲ ಪೀಠಾಧ್ಯಕ್ಷರಾಗಿದ್ದ ಜಗದ್ಗುರು ಶ್ರೀ ಪ್ರಸನ್ನರೇಣುಕ ವೀರಗಂಗಾಧರ ಶಿವಾಚಾರ್ಯ ಸ್ವಾಮಿಗಳು 'ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ'ಎಂಬ ಘೋಷಣೆಯೊಂದಿಗೆ ಧರ್ಮಪ್ರಚಾರಕ್ಕೆಂದು ಕರ್ನಾಟಕ, ಆಂಧ್ರ, ಮಹಾರಾಷ್ಟ್ರ,ತಮಿಳುನಾಡು, ಉತ್ತರಪ್ರದೇಶ ಹಾಗೂ ಮಧ್ಯಪ್ರದೇಶಗಳೇ ಅಲ್ಲದೆ ನೆರೆಯ ರಾಷ್ಟ್ರವಾದ ಶ್ರೀಲಂಕಾದಲ್ಲಿಯೂ ಪ್ರವಾಸ ಮಾಡಿ, ವೀರಶೈವ ಸಿದ್ಧಾಂತವನ್ನು ಬೋಧಿಸಿ ದೀನ ದಲಿತರು ಹಾಗೂ ನೊಂದವರನ್ನು ಮೇಲಕ್ಕೆ ತರಲು ಶ್ರಮಿಸಿದರು. ಇವರ ಕಾಲದಲ್ಲಿ ಶಕ್ತಿವಿಶಿಷ್ಟಾದ್ವೈತ ದರ್ಶನ, ಶಿವಾಗಮ ಸಂಶೋಧಿತ ಜಗದ್ಗುರು ಆದಿರೇಣುಕರು, ಶ್ರೀ ರೇಣುಕಾ ಗೀತ ಮುಂತಾದ ಗ್ರಂಥಗಳ ಪ್ರಕಟಣೆಗೆ ಪ್ರೋತ್ಸಾಹಕರಾಗಿದ್ದಾರೆ. ಗುರುಗಳು ೧೯೩೨ರಲ್ಲಿ ಶಿರಹಟ್ಟಿ ತಾಲ್ಲೂಕಿನ ಹರ್ಲಾಪುರದ ಸಮೀಪದಲ್ಲಿ ಸ್ಥಾಪಿಸಿದ್ದ ಮುಕ್ತಿಮಂದಿರದಲ್ಲಿ ವಿಶ್ರಾಂತ ಜೀವನ ನಡೆಸಿ ಲಿಂಗೈಕ್ಯರಾದರು.

ಚತುರ್ಭಾಷಾ ವಿಶಾರದರು: ೧೯೬೨ ರಲ್ಲಿ ೧೨೦ ನೆಯ ಪೀಠಾಧ್ಯಕ್ಷರಾಗಿ ಬಂದ ಜಗದ್ಗುರು ಶ್ರೀ ರುದ್ರಮುನಿದೇವ ಶಿವಾಚಾರ್ಯರು ಮಹಾರಾಷ್ಟ್ರದಲ್ಲಿ ಜನಿಸಿ, ಗುರುಗಳ ಅಪೇಕ್ಷೆಯ ಮೇರೆಗೆ ಶ್ರೀ ರಂಭಾಪುರಿಪೀಠದ ಅಧಿಕಾರ ವಹಿಸಿ ಕೊಂಡರು. ಜಗದ್ಗುರುಗಳು ಸಂಸ್ಕೃತ, ಕನ್ನಡ, ಹಿಂದಿ ಹಾಗೂ ಮರಾಠಿ ಭಾಷೆಗಳಲ್ಲಿ ಪಾಂಡಿತ್ಯವನ್ನು ಪಡೆದು 'ಚತುರ್ಭಾಷಾ ವಿಶಾರದ'ರೆಂದು ಖ್ಯಾತಿ ಪಡೆದಿದ್ದರು. ಇವರ ಕಾಲದಲ್ಲಿ ಮಠವು ಹೊಸ ಕಾಯಕಲ್ಪವನ್ನು ಪಡೆದು ಅಭಿವೃದ್ಧಿಯತ್ತ ಮುಖ ಮಾಡಿತು. ಗುರುಗಳು ಕೃಷಿಕ್ಷೇತ್ರಕ್ಕೆ ಹೆಚ್ಚು ಆದ್ಯತೆ ನೀಡಿದರು. ಶ್ರೀ ವೀರರುದ್ರಮುನಿ ಶಿವಾ ಚಾರ್ಯ ಭಗವತ್ಪಾದರು ಪೀಠದ ಕಟ್ಟಡವನ್ನು ನವೀಕರಿಸಿದ್ದಲ್ಲದೆ, ಪೀಠಕ್ಕೆ ನೂತನ ಗೋಪುರ, ಜಗದ್ಗುರು ಶಿವಾನಂದ ಪ್ರಸಾದನಿಲಯ, ಅತಿಥಿಗೃಹ ಹಾಗೂ ಬಾಳೆಹೊನ್ನೂರಿನಲ್ಲಿ ಶ್ರೀ ರೇಣುಕಾಚಾರ್ಯರ ಪ್ರೌಢಶಾಲೆ, ತಾಂತ್ರಿಕ ಕಾಲೇಜು, ವೇದಶಾಲೆಗಳನ್ನು ನಿರ್ಮಾಣ ಮಾಡಿದ್ದಲ್ಲದೆ, ಚಿಕ್ಕಮಗಳೂರು ನಗರದಲ್ಲಿ ಶ್ರೀ ರೇಣುಕಾಚಾರ್ಯ ಕಲ್ಯಾಣಮಂಟಪ ವನ್ನು ನಿರ್ಮಿಸಲು ನೆರವಾದರು. ಬೆಂಗಳೂರಿನ ಜಗದ್ಗುರು ರೇಣುಕಾಚಾರ್ಯ ವಿದ್ಯಾಸಂಸ್ಥೆಯ ಆಶ್ರಯದಲ್ಲಿ ಮಹಿಳಾ ಕಾಲೇಜು,ಪ್ರಾಥಮಿಕ ಹಾಗೂ ಪ್ರೌಢಶಾಲೆಗಳನ್ನು ತೆರೆಯಲು ಪ್ರೋತ್ಸಾಹಿಸಿದರು. ಇವರ ಕಾಲದಲ್ಲಿ ಪೀಠವು ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿಯನ್ನು ಕಂಡಿತು.

ಅಭಿವೃದ್ಧಿಯ ಹರಿಕಾರರು: ಶ್ರೀ ರೇಣುಕಾಚಾರ್ಯರ ಉದ್ಭವಮೂರ್ತಿ ಕೊಲ್ಲಿಪಾಕಿಯ ಶ್ರೀ ಸೋಮೇಶ್ವರಲಿಂಗದ ನಾಮಾಂಕಿತದಿಂದ ಈಗಿನ ಪೀಠಾಧಿಪತಿಗಳಾದ ಜಗದ್ಗುರು ಶ್ರೀ ಪ್ರಸನ್ನರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು, ಪೀಠದ ನೂರಇಪ್ಪತ್ತೊಂದನೆಯ ಜಗದ್ಗುರುಗಳಾಗಿ ೧೯೯೨ ನೆಯ ಫೆಬ್ರವರಿ ಆರರಂದು ಸಮಾನಪೀಠದ ಪೀಠಾಚಾರ್ಯರ ಸಮ್ಮುಖದಲ್ಲಿ ಅಧಿಕಾರವನ್ನು ವಹಿಸಿಕೊಂಡರು. ಗುರುಗಳು ಅಭಿವೃದ್ಧಿಯ ಹರಿಕಾರರಾಗಿ, ಪೀಠ ಮತ್ತು ವೀರಶೈವ ಸಮಾಜವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲ್ಲೂಕಿನ ಹಳಿಯಾಳ ಗ್ರಾಮದ ಶ್ರೀ ಚನ್ನಬಸವಾರ್ಯರು ಹಾಗೂ ಶ್ರೀಮತಿ ಚನ್ನಬಸವಾಂಬೆಯವರ ಪುತ್ರರಾಗಿ ೧೯೫೬ ರ ಜನವರಿ ಏಳರಂದು ಶ್ರೀ ಸಿದ್ಧಲಿಂಗ ಸ್ವಾಮಿಗಳು (ಶ್ರೀ ಪ್ರಸನ್ನರೇಣುಕ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು) ಜನಿಸಿದರು. ಗುರುಗಳು ಬಾಲ್ಯದಲ್ಲೇ ನಯವಿನಯ ಹಾಗೂ ಆಚಾರ ವಿಚಾರಗಳನ್ನು ಮೈಗೂಡಿಸಿಕೊಂಡು ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು. ಪ್ರಾಥಮಿಕ ಶಿಕ್ಷಣವನ್ನು ಹಳಿಯಾಳದಲ್ಲಿ ಮುಗಿಸಿ, ಮಾಧ್ಯಮಿಕ ಶಿಕ್ಷಣವನ್ನು ಗದಗದಲ್ಲಿ ಪಡೆದರು. ೧೯೬೬ರ ಏಪ್ರಿಲ್ ಹನ್ನೊಂದರಂದು ರಂಭಾಪುರಿ, ಉಜ್ಜ ಯಿನಿ, ಕೇದಾರ, ಶ್ರೀಶೈಲ, ಕಾಶಿಜಗದ್ಗುರುಗಳ ದಿವ್ಯಸಾನ್ನಿಧ್ಯದಲ್ಲಿ ಹಳಿಯಾಳ ಪುತ್ರವರ್ಗದ ಮಠದ ಅಧಿಕಾರ ವಹಿಸಿ ಕೊಂಡರು. ಶ್ರೀಮದ್‌ರಂಭಾಪುರಿ ಜಗದ್ಗುರು ವೀರಗಂಗಾಧರ ಭಗವತ್ಪಾದರ ಅಪ್ಪಣೆಯ ಮೇರೆಗೆ ಬೆಂಗಳೂರಿನ ಮಹಂತರಮಠದಲ್ಲಿ ಆಶ್ರಯಪಡೆದು, ಪದವಿ ಹಾಗೂ ಶಕ್ತಿವಿಶಿಷ್ಟಾದ್ವೈತ ಧರ್ಮಸಿದ್ಧಾಂತಗಳನ್ನು ಅಧ್ಯಯನಮಾಡಿದರು. ಈ ವೇಳೆಯಲ್ಲಿ ರಂಭಾಪುರಿ ಜಗದ್ಗುರುಗಳಾಗಿದ್ದ ಶ್ರೀ ರುದ್ರಮುನಿ ಭಗವತ್ಪಾದರ ಕೃಪಾಕಟಾಕ್ಷಕ್ಕೆ ಒಳಗಾಗಿದ್ದರು.

ಶ್ರಾವಣಮಾಸದ ಅನುಷ್ಠಾನಾರ್ಥ ಹಳಿಯಾಳ, ಕೊಟ್ಟೂರು, ಹೂಲಿ, ಬಾಳೆಹೊನ್ನೂರು ಹಾಗೂ ಕುಂದಗೋಳ ದಲ್ಲಿ ಪ್ರವಚನಮಾಡಿ'ಮಹಾಚಾರ್ಯತತ್ತ್ವಪ್ರಚಾರಕ'ಎಂಬ ಬಿರುದನ್ನು ಜಗದ್ಗುರುಗಳಿಂದ ಪಡೆದಿದ್ದರು. ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಚಿಕ್ಕವಯಸ್ಸಿನಲ್ಲಿಯೇ ಹಿರಿದಾದುದನ್ನು ಸಾಧಿಸಿ ಹಿರಿಯರಿಂದ ಪ್ರಶಂಸೆಗೆ ಒಳಗಾಗಿ, ಶಿವ ಗಂಗೆಯ ಶ್ರೀ ಮೇಲಣ ಗವಿಮಠದ ಅಧಿಕಾರವನ್ನು ವಹಿಸಿಕೊಂಡು ಕೇವಲ ಒಂಬತ್ತು ವರ್ಷಗಳಲ್ಲಿ ಅಗಾಧವಾದುದನ್ನು ಸಾಧಿಸಿ ಜನಮನ್ನಣೆಗೆ ಹಾಗೂ ಗುರುಮನ್ನಣೆಗೆ ಪಾತ್ರರಾದರು. ಇದರ ಪ್ರತಿಫಲವಾಗಿ 'ಶ್ರೀ ಪ್ರಸನ್ನರೇಣುಕ ವೀರ ಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು' ಎಂಬ ಅಭಿಧಾನ ಪಡೆದು ಶ್ರೀ ರಂಭಾಪುರಿಪೀಠದ ಜಗದ್ಗುರುಗಳಾಗಿ ನೇಮಕಗೊಂಡರು.

ಎಂಟು ಯೋಜನೆಗಳು: ಜಗದ್ಗುರು ಶ್ರೀ ಪ್ರಸನ್ನರೇಣುಕ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಪಟ್ಟಾಧಿ ಕಾರವನ್ನು ವಹಿಸಿ ಕೊಳ್ಳುವ ಸಂದರ್ಭದಲ್ಲಿ ಪೀಠದ ಅಭಿವೃದ್ಧಿಗಾಗಿ ನಿತ್ಯ ಅನ್ನದಾಸೋಹ, ಪೀಠದ ಆಡಳಿತ ಚುರುಕು

ಗೊಳಿಸುವುದು, ಪೀಠದಲ್ಲಿ ಗುರುಕುಲ ಸ್ಥಾಪನೆಮಾಡುವುದು, ಜಗದ್ಗುರು ಶ್ರೀ ರೇಣುಕಾಚಾರ್ಯ ಶಿಕ್ಷಣ ಪ್ರತಿಷ್ಠಾನವನ್ನು ಸ್ಥಾಪಿಸಿ ನಾಡಿನಾ ದ್ಯಂತ ಶಿಕ್ಷಣ ಸಂಸ್ಥೆಗಳಿಗೆ ಪ್ರೋತ್ಸಾಹಿಸಿ ಶಿಕ್ಷಣ ಮತ್ತು ಸಂಸ್ಕೃತಿಗಳನ್ನು ಬೆಳಗಿಸುವುದು, ವೀರಶೈವ ಧಾರ್ಮಿಕ ಸಾಹಿತ್ಯವನ್ನು ಪ್ರಕಟಿಸಿ ಮನೆಮನೆಗೆ ತಲುಪಿಸುವುದು, ರಾಷ್ಟ್ರದ ಪ್ರಚಾರ ಮತ್ತು ಪ್ರಸಾರ ಮಾಧ್ಯಮಗಳನ್ನು ಬಳಸಿಕೊಳ್ಳುವುದು, ಪ್ರತಿವರ್ಷದ ಶ್ರಾವಣಮಾಸದಲ್ಲಿ ತಪೋನುಷ್ಠಾನದಲ್ಲಿದ್ದು ಪೀಠಕ್ಕೂ ಹಾಗೂ ಭಕ್ತರಿಗೂ ನಿಕಟ ವಾದ ಸಂಪರ್ಕವನ್ನು ಏರ್ಪಡಿಸುವುದು, ಪೀಠದಲ್ಲಿ ಪೀಠಾಚಾರ್ಯರ ವಾಸ್ತವ್ಯದ ಅವಧಿಯನ್ನು ಹೆಚ್ಚಿಸುವುದು ಮತ್ತು ಪ್ರತಿ ಹುಣ್ಣಿಮೆಯಂದು ಪೀಠದಲ್ಲಿಯೇ ಇದ್ದು ಭಕ್ತಾದಿಗಳಿಗೆ ದರ್ಶನ ನೀಡುವುದು ಹೀಗೆ ಎಂಟು ಅಂಶಗಳ ಕಾರ್ಯ ಕ್ರಮಗಳನ್ನು ಪ್ರಕಟಿಸಿದ್ದರು. ಈ ನಿಟ್ಟಿನಲ್ಲಿ ಜಗದ್ಗುರುಗಳು ಕಾರ್ಯೋನ್ಮುಖರಾಗಿ ಧರ್ಮಪ್ರಸಾರ ಹಾಗೂ ಪೀಠದ ಅಭಿವೃದ್ಧಿ ಎರಡನ್ನೂ ಏಕ ಕಾಲದಲ್ಲಿ ದ್ವಿಗುಣಗೊಳಿಸಿ, ಪೀಠದ ಅಭಿವೃದ್ಧಿಯನ್ನು ಕೇವಲ ಎಂಟು ವರ್ಷಗಳಲ್ಲಿ ವಿಸ್ತರಿಸಿದ್ದು ಜಗದ್ಗುರುಗಳ ಕ್ರಿಯಾ ಶೀಲ ಗುಣ ಹಾಗೂ ಅವರ ಅವಿರತ ಶ್ರಮವೇ ಕಾರಣವಾಗಿದೆ.

ಗುರುಗಳು ಸಾಹಿತ್ಯ ಪ್ರಿಯರಾಗಿದ್ದು'ಸಾಹಿತ್ಯ ಸಂಸ್ಕೃತಿ ಸಂವರ್ಧಿಸಲಿ, ಶಾಂತಿ ಸಮೃದ್ಧಿ ಸರ್ವರಿಗಿರಲಿ'ಎಂಬ ಘೋಷಣೆಯ ಅನುಷ್ಠಾನಕ್ಕಾಗಿ ಇಡೀ ದೇಶವನ್ನೆಲ್ಲಾ ಸುತ್ತಿ ಧರ್ಮಪ್ರಸಾರವನ್ನು ಕೈಗೊಂಡಿರುವುದಲ್ಲದೆ ಸಂಘಟನಾತ್ಮಕ ಸಮಾಜವನ್ನು ರೂಪಿಸುತ್ತಿದ್ದಾರೆ. ಫಲವಾಗಿ ಶ್ರೀ ರಂಭಾಪುರಿಪೀಠಕ್ಕೆ ಅಭಿವೃದ್ಧಿಯ ಮಹಾಪೂರ ಹರಿದು ಬಂದಿದೆ. ಇವರ ಕಾಲದಲ್ಲಿ ಪೀಠ ಹಿಂದೆದೂ ಕಾಣದ ಅಭಿವೃದ್ಧಿಯನ್ನು ಕಾಣತೊಡಗಿದೆ. ಭಕ್ತರ ವಸತಿಗಾಗಿ ಶ್ರೀ ಶಿವಾನಂದ ಜ್ಯೋತಿ, ಶ್ರೀ ರುದ್ರಜ್ಯೋತಿ ಹಾಗೂ ಇತರೆ ಅತಿಥಿಗೃಹಗಳನ್ನು ಸ್ಥಾಪಿಸಿದ್ದಲ್ಲದೆ ಶ್ರೀ ರುದ್ರಮುನೀಶ್ವರ ಶಾಂತಿಧಾಮ ಎಂಬ ನೂತನ ವಿದ್ಯಾರ್ಥಿನಿಲಯ ಹಾಗೂ ಕೋಟ್ಯಾಂತರ ರೂಪಾಯಿಗಳ ವೆಚ್ಚದಲ್ಲಿ ವಸತಿ ಸಮುಚ್ಚಯವು ತಲೆ ಎತ್ತಿದೆ. ಒಂದು ಕೋಟಿ ರೂಪಾಯಿ ವೆಚ್ಚದ ಸಮುದಾಯ ಭವನ, ಮಠದ ಪರಂಪರೆಯ ಹಿಂದಿನ ಜಗದ್ಗುರುಗಳ ಗದ್ದುಗೆಗಳ ಸಮುಚ್ಚಯ, ಜಗದ್ಗುರು ಶ್ರೀ ರುದ್ರಮುನಿ ಶಿವಾಚಾರ್ಯ ಭಗವತ್ಪಾದರ ಗದ್ದುಗೆ ಮಂಟಪಗಳು ವಿಶೇಷವಾಗಿ ನಿರ್ಮಾಣಗೊಂಡಿವೆ. ಚೌಡೇಶ್ವರಿ ದೇವಸ್ಥಾನ, ಕ್ಷೇತ್ರನಾಥ ವೀರಭದ್ರಸ್ವಾಮಿ ದೇವಸ್ಥಾನದ ನವೀಕರಣ, ಮಹಾದ್ವಾರ ಮಂಟಪ ಈ ರೀತಿ ಅನೇಕ ಅಭಿವೃದ್ಧಿ ಕಾರ್ಯಗಳು ನಡೆದಿದೆ. ಅಲ್ಲದೆ ನಾಡಿನ ನಾನಾ ಭಾಗಗಳಲ್ಲಿ ಪೀಠವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಭಕ್ತರನ್ನು ಆಕರ್ಷಿಸಿಕೊಳ್ಳುವಂತೆ ತಲೆ ಎತ್ತಿ ನಿಂತಿದೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಕರ್ತೃಗುರುಗಳಾದ ಶ್ರೀ ರೇಣುಕಾಚಾರ್ಯರ ಗದ್ದುಗೆ, ಪರಂಪರೆಯ ಗದ್ದುಗೆಗಳು ಹಾಗೂ ಕ್ಷೇತ್ರನಾಥ ವೀರಭದ್ರಸ್ವಾಮಿ, ಚೌಡೇಶ್ವರಿ ದೇವಸ್ಥಾನಗಳಿಗೆ ನಿತ್ಯಪೂಜೆ, ಪ್ರತಿ ಹುಣ್ಣಿಮೆಯಲ್ಲಿ ವಿಶೇಷಪೂಜೆ, ವೀರಭದ್ರಸ್ವಾಮಿ ರಥೋತ್ಸವ ಹಾಗೂ ಧರ್ಮಸಭೆಗಳು ಜಗದ್ಗುರುಗಳ ಸಾನಿಧ್ಯದಲ್ಲಿ ನಡೆಯುತ್ತಿವೆ. ಪರಂಪರೆಯ ಲಿಂಗೈಕ್ಯ ಜಗದ್ಗುರುಗಳಾದ ಶ್ರೀ ಶಿವಾನಂದ ಶಿವಾಚಾರ್ಯ ಭಗವತ್ಪಾದರು, ಶ್ರೀ ವೀರ ಗಂಗಾಧರ ಶಿವಾಚಾರ್ಯ ಭಗವತ್ಪಾದರು ಮತ್ತು ಜಗದ್ಗುರು ಶ್ರೀ ವೀರರುದ್ರಮುನಿ ಶಿವಾಚಾರ್ಯ ಭಗವತ್ಪಾದರ ಪುಣ್ಯಾರಾಧನೆ ಕಾರ್ಯಕ್ರಮವು ನಡೆಯುತ್ತಿದೆ. ಸಮಾನ ಪೀಠಾಚಾರ್ಯರುಗಳಾದ ಶ್ರೀ ಪಂಡಿತಾರಾಧ್ಯರು, ಶ್ರೀ ವಿಶ್ವಾರಾಧ್ಯರು, ಶ್ರೀ ಏಕೋರಾಮಾರಾಧ್ಯರ ಹಾಗೂ ಶ್ರೀದಾರುಕಾಚಾರ್ಯರ ಜಯಂತೋತ್ಸವಗಳನ್ನು ಪೀಠದಲ್ಲಿ ನಡೆಸಲಾಗುತ್ತಿದೆ. ಶ್ರಾವಣಮಾಸದಲ್ಲಿ ಜಗದ್ಗುರುಗಳು ಪೀಠದಲ್ಲಿಯೇ ವಾಸ್ತವ್ಯಮಾಡಿ, ಧರ್ಮೋಪದೇಶವನ್ನು ಮಾಡುತ್ತಾ ವೀರಶೈವಧರ್ಮದ ಪ್ರಚಾರವನ್ನು ಮಾಡುತ್ತಿದ್ದಾರೆ.

ಶ್ರೀ ರಂಭಾಪುರಿ ಪೀಠದ ಜಗದ್ಗುರುಗಳ ದಸರಾ ಶರನ್ನವರಾತ್ರಿ ಕಾರ್ಯಕ್ರಮವು ನಾಡಿನಾದ್ಯಂತ ಒಂಬತ್ತು ದಿನಗಳ ಕಾಲ ಸಾಂಸ್ಕೃತಿಕ ನಾಡ ಹಬ್ಬವಾಗಿ ಆಚರಣೆಗೊಳ್ಳುತ್ತಿದೆ. ಈ ಸಂದರ್ಭದಲ್ಲಿ ಪ್ರತಿನಿತ್ಯ ನಾಡಿನ ಪಂಡಿತರನ್ನು, ಕಲಾವಿದರನ್ನು ಹಾಗೂ ಸಾಧಕರನ್ನು ಗುರುತಿಸಿ ಜನಸಮುದಾಯಕ್ಕೆ ಪರಿಚಯಿಸಲಾಗುತ್ತಿದೆ. ಭಕ್ತರೇ ನಡೆಸುವ ಈ ಕಾರ್ಯಕ್ರಮ ಪೀಠದ ಅತ್ಯಂತ ವೈಭವ ಕಾರ್ಯಕ್ರಮಗಳಲ್ಲಿ ಒಂದಾಗಿದೆ.

ಜಗದ್ಗುರು ಶ್ರೀ ರೇಣುಕಜಯಂತಿಯು ಪೀಠದಲ್ಲಿ ಪ್ರತಿವರ್ಷ ನಡೆಯುವ ಮತ್ತೊಂದು ಅದ್ದೂರಿ ಕಾರ್ಯ

ಕ್ರಮವಾಗಿದೆ. ಕಾರ್ಯಕ್ರಮವು ಮೂರುದಿನಗಳ ಕಾಲ ಪೀಠದಲ್ಲಿಯೇ ನಡೆಯುತ್ತಿದೆ. ಈ ಸಂದರ್ಭದಲ್ಲಿ ಜನಜಾಗೃತಿ, ಧರ್ಮಜಾಗೃತಿಗಾಗಿ ವಿದ್ವಾಂಸರಿಂದ ಉಪನ್ಯಾಸ ಹಾಗೂ ಧರ್ಮಗುರುಗಳಿಂದ ಉಪದೇಶವನ್ನು ಮಾಡಿಸಲಾಗುತ್ತಿದೆ.

ಸಾಮಾಜಿಕ ಕಾರ್ಯಗಳು: ಜಗದ್ಗುರು ಶ್ರೀ ಪ್ರಸನ್ನರೇಣುಕ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಅಧಿಕಾರಕ್ಕೆ ಬಂದ ಮೇಲೆ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಾ, ಸಾಮಾಜಿಕ ಕಾರ್ಯಗಳಿಗೆ ಸ್ಪಂದಿಸುತ್ತಿದ್ದಾರೆ. ಇದಕ್ಕೆ ನಿದರ್ಶನ ವೆಂಬಂತೆ ಲಾಥೂರು ಹಾಗೂ ಗುಜರಾತ್‌ನಲ್ಲಿ ಸಂಭವಿಸಿದ ಭೀಕರ ಭೂಕಂಪದ ಸಂತ್ರಸ್ತರಿಗೆ ಸಾಂತ್ವನ ಹೇಳಿ ಭಾರೀ ಮೊತ್ತದ ಪರಿಹಾರವನ್ನು ನೀಡಿದ್ದಾರೆ. ಈ ಸಂದರ್ಭಗಳಲ್ಲಿ ಏರ್ಪಡಿಸಲಾದ ಅಡ್ಡಪಲ್ಲಕ್ಕಿ ಉತ್ಸವಗಳನ್ನು ತ್ಯಜಿಸಿ, ಪಾದಯಾತ್ರೆಯ ಮೂಲಕ ತಮ್ಮ ಧಾರ್ಮಿಕ ಕಾರ್ಯಗಳನ್ನು ನಡೆಸಿ,ಹೋದ ಕಡೆಯಲ್ಲೆಲ್ಲಾ ಸಂತ್ರಸ್ತರ ಪರಿಹಾರಕ್ಕೆ ನಿಧಿ ಸಂಗ್ರಹಿಸಿದ್ದು ಗುರುಗಳ ಸಾಮಾಜಿಕ ಕಳಕಳಿಗೆ ಹಿಡಿದ ಕೈಗನ್ನಡಿಯಾಗಿದೆ. ನಾಡಿನಾದ್ಯಂತ ಸಾಮಾಜಿಕ ಕಾರ್ಯಗಳನ್ನು ನಡೆಸಲು ಸಂಸ್ಥೆಗಳನ್ನು ಪ್ರಾರಂಭಿಸಿದ್ದಾರೆ.

ಸಾಮಾಜಿಕ ಕಾರ್ಯದಲ್ಲಿ ತೊಡಗಿದ ಸಂಸ್ಥೆಗಳು:

೧. ಶ್ರೀ ರಂಭಾಪುರಿ ಜಗದ್ಗುರು ಶಿವಾನಂದಾಶ್ರಮ ಟ್ರಸ್ಟ್ (ರಿ), ಬೀರೂರು
೨. ಶ್ರೀ ಜಗದ್ಗುರು ರೇಣುಕಾಚಾರ್ಯ ಚಾರಿಟೆಬಲ್ ಟ್ರಸ್ಟ್ (ರಿ), ಬಾಳೆಹೊನ್ನೂರು
೩. ಶ್ರೀ ಜಗದ್ಗುರು ರೇಣುಕಾಚಾರ್ಯ ನಿತ್ಯ ದಾಸೋಹ ಟ್ರಸ್ಟ್, ರಂಭಾಪುರಿಪೀಠ
೪. ಶ್ರೀ ಜಗದ್ಗುರು ಅಭಿನವ ರೇಣುಕಮಂದಿರ, ದಾವಣಗೆರೆ
೫. ಶ್ರೀ ಜಗದ್ಗುರು ರೇಣುಕಾಚಾರ್ಯ ಕಲ್ಯಾಣ ಮಂಟಪ ಟ್ರಸ್ಟ್, ಚಿಕ್ಕಮಗಳೂರು
೬. ಶ್ರೀ ರಂಭಾಪುರಿ ಜಗದ್ಗುರು ವೀರಗಂಗಾಧರ ಗದ್ದುಗೆ ಟ್ರಸ್ಟ್, ಮುಕ್ತಿಮಂದಿರ
೭. ಶ್ರೀ ಜಗದ್ಗುರು ಪಂಚಾಚಾರ್ಯ ಮಾಂಗಲ್ಯ ಮಂದಿರ, ಗದಗ
೮. ಶ್ರೀ ಜಗದ್ಗುರು ರೇಣುಕ ಮಂದಿರ, ಹಾವೇರಿ
೯. ಶ್ರೀ ಜಗದ್ಗುರು ರೇಣುಕಾಚಾರ್ಯ ಮಂಗಲ ಭವನ, ಕುಷ್ಟಗಿ
೧೦. ಶ್ರೀ ರಂಭಾಪುರಿ ಜಗದ್ಗುರು ವೀರಗಂಗಾಧರ ಮಂಗಲ ಭವನ, ಹುಬ್ಬಳ್ಳಿ

ಈ ರೀತಿ ಹಲವಾರು ಸಂಸ್ಥೆಗಳನ್ನು ಪೀಠದ ಆಶ್ರಯದಲ್ಲಿ ನಡೆಸುತ್ತಾ ಸಾಮಾಜಿಕ ಕಾರ್ಯಕ್ರಮಗಳಲ್ಲಿ ತೊಡಗಿಸಿದ್ದಾರೆ.

ಶೈಕ್ಷಣಿಕ ಕಾರ್ಯಗಳು: ಪೀಠದಲ್ಲಿ ಜಗದ್ಗುರು ಶ್ರೀ ರೇಣುಕಾಚಾರ್ಯ ಶಿಕ್ಷಣ ಪ್ರತಿಷ್ಠಾನವನ್ನು ಸ್ಥಾಪಿಸಿ ಇದರ ವತಿಯಿಂದ ನಾಡಿನಾದ್ಯಂತ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸುತ್ತಿದೆ.

೧. ಶ್ರೀ ಜಗದ್ಗುರು ರೇಣುಕಾಚಾರ್ಯ ಗುರುಕುಲ, ರಂಭಾಪುರಿ ಪೀಠ
೨. ಶ್ರೀ ಜಗದ್ಗುರು ರೇಣುಕಾಚಾರ್ಯ ಕೈಗಾರಿಕಾ ತರಬೇತಿ ಕೇಂದ್ರ, ಬಾಳೆಹೊನ್ನೂರು
೩. ಶ್ರೀ ಜಗದ್ಗುರು ರುದ್ರಮುನೀಶ್ವರ ವಸತಿ ಪ್ರೌಢಶಾಲೆ, ರಂಭಾಪುರಿಪೀಠ
೪. ಶ್ರೀ ಜಗದ್ಗುರು ರಂಭಾಪುರಿ ವೀರಗಂಗಾಧರ ಪ್ರೌಢಶಾಲೆ, ತಿರುಮಲಕೊಪ್ಪ, (ತಡಸಕ್ರಾಸ್)
೫. ಶ್ರೀ ಜಗದ್ಗುರು ಶಿವಾನಂದ ವಿದ್ಯಾರ್ಥಿ ಪ್ರಸಾದನಿಲಯ, ರಂಭಾಪುರಿಪೀಠ
೬. ಶ್ರೀ ಗುಬ್ಬಿ ತೋಟದಪ್ಪನವರ ಸಂಸ್ಕೃತ ವಿದ್ಯಾರ್ಥಿ ಪ್ರಸಾದನಿಲಯ, ರಂಭಾಪುರಿಪೀಠ
೭. ಶ್ರೀ ಜಗದ್ಗುರು ರೇಣುಕಾಚಾರ್ಯ ಗ್ರಾಮೀಣ ವಿದ್ಯಾಪೀಠ, ಶಿಗ್ಗಾಂವಿ
೮. ಶ್ರೀ ಜಗದ್ಗುರು ರಂಭಾಪುರೀಶ್ವರ ಪ್ರೌಢಶಾಲೆ, ಝಳಕಿ, ಇಂಡಿ ತಾಲ್ಲೂಕು

ಈ ರೀತಿ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ ಶೈಕ್ಷಣಿಕ ಪ್ರಗತಿಗೂ ಉತ್ತೇಜನ ನೀಡತೊಡಗಿದೆ.

ಸಾಹಿತ್ಯ ಸೇವೆ: ಜಗದ್ಗುರು ಶ್ರೀ ಪ್ರಸನ್ನ ರೇಣುಕ ವೀರಸೋಮೇಶ್ವರ ಭಗವತ್ಪಾದರು ಅಧಿಕಾರಕ್ಕೆ ಬಂದ ಮೇಲೆ

ಸಾಹಿತ್ಯ ಸಂವರ್ಧನೆಗಾಗಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಒಂದುಲಕ್ಷ ರೂಪಾಯಿಗಳ ದತ್ತಿ ನಿಧಿಯನ್ನು ನೀಡಿದ್ದಾರೆ. ಇದರಿಂದ ಉಜ್ಜ ನೀಶಕೃತ ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ಪೀಠದ ಪ್ರಕಾಶನ ಸಂಸ್ಥೆಯಿಂದ ನಿಶ್ಚಿತಾತ್ಮ ವಿರಚಿತ ಶರಭಚರಿತ್ರೆ, ಸಿದ್ಧಾಂತ ಶಿಖಾಮಣಿ, ವೀರಾಗಮ, ಡಾ.ಪಂಚಾಕ್ಷರಿ ಹಿರೇಮಠರವರ ಸಂಪಾದಕತ್ವದಲ್ಲಿ ಗುರುಕಾರುಣ್ಯ ಗ್ರಂಥ ಹಾಗೂ ಶ್ರೀ ರಂಭಾಪುರಿಪೀಠ ದರ್ಶನ ಮುಂತಾದ ಮೌಲಿಕ ಕೃತಿಗಳನ್ನು ಪ್ರಕಟಿಸಲಾಗಿದೆ. ಪೀಠದ ವತಿಯಿಂದ' ರಂಭಾಪುರಿಬೆಳಗು' ಎಂಬ ದ್ವೈಮಾಸಿಕಪತ್ರಿಕೆಯನ್ನು ಹೊರತರಲಾಗುತ್ತಿದೆ. ಗುರುಗಳು ಸಾಹಿತ್ಯಾಸಕ್ತರಾಗಿದ್ದು,ಅನೇಕ ಉದಯೋನ್ಮುಖ ಲೇಖಕರ ಕೃತಿಗಳು ಪ್ರಕಟವಾಗಲು ನೆರವು ನೀಡಿ ಮೌಲಿಕಕೃತಿಗಳು ಹೊರಬರಲು ಸಹಾಯಕರಾಗಿದ್ದಾರೆ.

ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕವಾಗಿ ಪೀಠವು ಅಭಿವೃದ್ಧಿಯನ್ನು ಸಾಧಿಸಿದೆ. ಈಗಿನ ಜಗದ್ಗುರುಗಳಾದ ಶ್ರೀ ಪ್ರಸನ್ನರೇಣುಕ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಪ್ರಗತಿಪರ ಚಿಂತಕರಾಗಿ ವಾಸ್ತವತೆಗೆ ಹೆಚ್ಚು ಒತ್ತುಕೊಟ್ಟು, ಪೀಠವನ್ನು ಸಮಾಜಮುಖಿಯಾಗಿ ಬೆಳೆಸುತ್ತಾ ಅಭಿವೃದ್ಧಿಪಡಿಸುತ್ತಿ ರುವುದು ಇವರ ಆತ್ಮ ಸ್ಥೈರ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ರಾಜಾಶ್ರಯ: ರಾಜಾಶ್ರಯದಿಂದ ಬೆಳೆದ ಶ್ರೀ ರಂಭಾಪುರಿ ಪೀಠವು ಜಗದ್ಗುರುಗಳ ಸಂಚಾರ ಕಾಲದಲ್ಲಿ, ರಾಜ ಮರ್ಯಾದೆಯೊಂದಿಗೆ ಮೈಸೂರು ಅರಮನೆಯಿಂದ ನೇಮಿಸಿದ್ದ ಸಿಬ್ಬಂದಿಯು ಗುರುಗಳ ಜೊತೆಗೆ ಇರುತ್ತಿತ್ತು. ಅರಮನೆಯ ವತಿಯಿಂದ ಪೀಠಕ್ಕೆ ಒಂದು ಪಟ್ಟದಆನೆ, ಪಟ್ಟದ ಕುದುರೆ, ನಿಶಾನೆಸಹಿತ ಒಂದು ಆನೆ,ಎರಡು ಸಾಮಾನ್ಯ ಆನೆಗಳು, ನಾಲ್ಕು ಒಂಟೆ, ಮೂವತ್ತು ಕುದುರೆಗಳು, ಇಪ್ಪತ್ತು ಗೋವುಗಳು, ನೂರಾಆರು ಎತ್ತುಗಳು, ಒಂದು ಬೆಳ್ಳಿ ಪಲ್ಲಕ್ಕಿ, ಒಂದು ಸಾದಾ ಪಲ್ಲಕ್ಕಿ, ಎರಡು ಮೇನೆ, ನಾಲ್ಕು ರಥಗಳು, ಹನ್ನೊಂದು ಜನ ವೇದ ಘೋಷಕರು, ಐದುಜನ ಆಸ್ಥಾನ ಪಂಡಿತರು, ಆರು ಜನ ಶಾಸ್ತ್ರಿಗಳು, ಎಂಟು ಜನ ಪಂಡಿತರು, ಇಪ್ಪತ್ತೈದು ಜನ ಛಡಿಯವರು, ಐದು ಜನ ಫೌಜುದಾರರು, ಐವತ್ತು ಜನ ಬಿಲ್ಲೆ ಜವಾನರು, ಇಪ್ಪತ್ನಾಲ್ಕು ಜನ ಬೋವಿಯವರು, ಎಂಟು ಜನ ಅಂಗರಕ್ಷಕರು, ಇನ್ನೂರು ಜನ ಸಿಬ್ಬಂದಿಗಳು, ನಾಲ್ಕು ಪೆಟ್ಟಿಗೆ ಬಂಡಿಗಳು ಹಾಗೂ ಐವತ್ತು ಚಕ್ಕಡಿ ಬಂಡಿಗಳನ್ನು ಮೈಸೂರಿನ ಅರಸರು ಶ್ರೀ ಶಿವಾನಂದ ರಾಜೇಂದ್ರ ಶಿವಾಚಾರ್ಯ ಭಗವತ್ಪಾದರ ಕಾಲದಲ್ಲಿ (೧೯೨೬) ಪೀಠಕ್ಕೆ ನೀಡಿ ಗೌರವಿಸಿದ್ದರು.


ರಾಜ ಬಿರುದುಗಳು: ನವಪತ್, ಮೋರ್ಚಾಲ್, ಸೂರ್ಯಪಾನ, ಮಕರತೋರಣ, ಹಗಲು ದೀವಟಿಗೆ, ಧವಳಶಂಖ, ಅಪ್ತಗಿರಿ ಎಂಬ ರಾಜ ಬಿರುದುಗಳ ಜೊತೆಗೆ ಭರ್ಜರಿ ಛತ್ರಿ, ಆನೆಯ ಮೇಲೆ ನಗಾರಿ, ಒಂಟೆಯ ಮೇಲೆ ನಗಾರಿ, ಕುದುರೆಯ ಮೇಲೆ ಡಂಕ, ಬಿಳಿ ಹಾಗೂ ಕೆಂಪು ಬಣ್ಣದ ಕಂಬಳಿ ಮತ್ತು ಕಾವಿ ನಿಶಾನಿಗಳು, ಉಭಯಚಾಮರ, ಎರಡು ಭೂಚಕ್ರದ ಕೊಡೆ, ಬಿಳಿ,ಕೆಂಪು, ಹಸಿರು ಮತ್ತು ಹಳದಿಬಣ್ಣದ ಛತ್ರಿಗಳು, ಸೂರ್ಯವಾದ್ಯ, ಚಂದ್ರವಾದ್ಯ, ಒಂಟೆ ಮೇಲೆ ನಿಶಾನಿ, ನಾಲ್ಕು ಚಾಮರ ಹಾಗೂ ನಾಲ್ಕು ಚೌರಿ ಈ ವಿಶೇಷ ಬಿರುದಾವಳಿಗಳನ್ನು ಮೈಸೂರಿನ ಅರಸರು ಶ್ರೀ ರಂಭಾಪುರಿ ಪೀಠಕ್ಕೆ ನೀಡಿ ಗೌರವಿಸಿದ್ದರು.

ಪುರಾತನ ವಸ್ತುಗಳು: ಪೀಠದಲ್ಲಿ ಪುರಾತನ ಕಾಲದ ಪಚ್ಚೆಶಿವಲಿಂಗ, ರಜತಸಿಂಹಾಸನ, ರತ್ನಖಚಿತ ಚಿನ್ನದ ಕಿರೀಟ, ಬೆಳ್ಳಿ ಪಾದುಕೆಗಳು, ಶಂಖ, ವಜ್ರದಹಾರ, ಪಂಚಮುದ್ರೆ ಸಮೇತ ಆಭರಣಗಳು, ಪ್ರಾಚೀನ ಕಾಲದ ಕಮಂಡಲು, ರಥ ದೀಪಗಳು, ಆಯುಧಗಳು ಹಾಗೂ ತಾಡೋಲೆ ಗ್ರಂಥಗಳನ್ನು ಸಂರಕ್ಷಿಸಲ್ಪಟ್ಟಿವೆ.

ವಿಳಾಸ: ಶ್ರೀಮದ್ ರಂಭಾಪುರಿ ವೀರಸಿಂಹಾಸನಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜ ದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು, ಶ್ರೀ ರಂಭಾಪುರಿಪೀಠ, ಬಾಳೆಹೊನ್ನೂರು, ನರಸಿಂಹರಾಜಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ಆಧಾರ: 'ಗುರುಕಾರುಣ್ಯ' ಸಂಪಾದಕರು: ಡಾ.ಪಂಚಾಕ್ಷರಿ ಹಿರೇಮಠ,ಲೇಖಕರು: ಡಾ.ಶಿವಾನಂದ ಶಿವಾಚಾರ್ಯ ಸ್ವಾಮಿಗಳು
'ಕಲ್ಯಾಣದ ಹಾದಿ' ಸಂಪಾದಕರು: ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ, ಲೇಖಕರು: ಜಿ.ವಿ.ಶಿವಸ್ವಾಮಿ
'ಗುರುವರ್ಗ ದರ್ಪಣ' ಗ್ರಂಥಕರ್ತರು: ಶ್ರೀ ವಿರೂಪಾಕ್ಷ ಶಾಸ್ತ್ರಿಗಳು

ಚಿತ್ರದುರ್ಗ ಜಿಲ್ಲೆ


ಚಿತ್ರದುರ್ಗ ಜಿಲ್ಲೆ
ಮೊಳಕಾಲ್ಮೂರು
ಬಳ್ಳಾರಿ ಜಿಲ್ಲೆ
ದಾವಣಗೆರೆ ಜಿಲ್ಲೆ
ಚಳ್ಳಕೆರೆ
ಚಿತ್ರದುರ್ಗ
ಹೊಳಲ್ಕೆರೆ
ಹಿರಿಯೂರು
ಹೊಸದುರ್ಗ
ಚಿಕ್ಕಮಗಳೂರು ಜಿಲ್ಲೆ
ತುಮಕೂರು ಜಿಲ್ಲೆ

ಬಯಲು ನಾಡಾದ ಚಿತ್ರದುರ್ಗ ಜಿಲ್ಲೆಯು ಚಿತ್ರದುರ್ಗ, ಹೊಳಲ್ಕೆರೆ, ಹೊಸದುರ್ಗ, ಹಿರಿಯೂರು, ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲ್ಲೂಕುಗಳನ್ನು ಒಳಗೊಂಡಿದೆ. ಬಳ್ಳಾರಿ, ದಾವಣಗೆರೆ, ಚಿಕ್ಕಮಗಳೂರು ಮತ್ತು ತುಮಕೂರು ಜಿಲ್ಲೆಗಳ ಗಡಿ ಪ್ರದೇಶಗಳಿಗೆ ಹೊಂದಿಕೊಂಡಿರುವುದಲ್ಲದೆ, ಆಂಧ್ರಪ್ರದೇಶದ ಗಡಿ ಅಂಚಿನಲ್ಲಿ ಇರುವ ಈ ಜಿಲ್ಲೆಯಲ್ಲಿ ಚಿತ್ರದುರ್ಗ, ಹಿರಿಯೂರು ಮತ್ತು ಚಳ್ಳಕೆರೆ ಪಟ್ಟಣಗಳು ವ್ಯಾಪಾರ ಕೇಂದ್ರಗಳಾಗಿ ಬೆಳೆದು ಈ ಜಿಲ್ಲೆಯನ್ನು ಶ್ರೀಮಂತಗೊಳಿಸಿವೆ. ಆಂಧ್ರ ಪ್ರದೇಶದ ಗಡಿಭಾಗದ ಪ್ರದೇಶವು ತೆಲುಗು ಭಾಷೆಯ ಪ್ರಭಾವದಿಂದ ಬೆಳೆದಿದೆ.

ಚಿಕ್ಕಮಗಳೂರು ಜಿಲ್ಲೆಯಿಂದ ಹರಿದು ಬರುವ ವೇದಾವತಿ ನದಿಯು ಬಯಲು ನಾಡುಗಳಾದ ಹೊಸದುರ್ಗ, ಹಿರಿಯೂರು ಮತ್ತು ಚಳ್ಳಕೆರೆ ತಾಲ್ಲೂಕುಗಳಲ್ಲಿ ಹರಿದು ಆಂಧ್ರಪ್ರದೇಶವನ್ನು ಪ್ರವೇಶಿಸುತ್ತದೆ. ಈ ಜಿಲ್ಲೆಯಲ್ಲಿ ಹರಿಯುವ ಇನ್ನೊಂದು ನದಿಯಾದ ಚನ್ನಹಗರಿ ನದಿಯು ಬಳ್ಳಾರಿ ಜಿಲ್ಲೆಯಿಂದ ಹರಿದು ಬಂದು ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲ್ಲೂಕುಗಳಲ್ಲಿ ಹರಿದು ಆಂಧ್ರಪ್ರದೇಶವನ್ನು ಪ್ರವೇಶಿಸಿ ಈ ಜಿಲ್ಲೆಯನ್ನು ಪ್ರಾಕೃತಿಕವಾಗಿ ಶ್ರೀಮಂತಗೊಳಿಸಿವೆ.

ಚಿತ್ರದುರ್ಗ ಜಿಲ್ಲೆಯು ವಿಜಯನಗರದ ಅರಸರ ಆಳ್ವಿಕೆಗೆ ಒಳಪಟ್ಟು ನಂತರ ಚಿತ್ರದುರ್ಗ, ನಾಯಕನಹಟ್ಟಿ, ಮತ್ತೋಡು, ಬಾಗೂರು, ಹರ್ತಿಕೋಟೆಯ ನಾಯಕರು ಪ್ರಮುಖರು. ಇವರುಗಳಲ್ಲಿ ಚಿತ್ರದುರ್ಗದ ನಾಯಕರು ಪ್ರಬಲರಾಗಿ ಮತ್ತು ಶ್ರೀಮಂತ ರಾಗಿ ಈ ಜಿಲ್ಲೆಗೆ ಐತಿಹಾಸಿಕ ಸ್ಥಾನಮಾನ ಬರುವಂತೆ ಮಾಡಿದ್ದಾರೆ. ಸಾಮಾನ್ಯ ಮಹಿಳೆಯಾದ ಒನಕೆ ಓಬವ್ವ ಈ ಜಿಲ್ಲೆಯ ಇತಿಹಾಸದ ಪುಟಗಳಲ್ಲಿ ಅಮರಳಾಗಿದ್ದಾಳೆ. ಚಿತ್ರದುರ್ಗದ ಏಳುಸುತ್ತಿನ ಕೋಟೆ ಕನ್ನಡ ನಾಡಿನ ಐತಿಹಾಸಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸ್ಥಾನವನ್ನು ಪಡೆದಿದೆ.

ಚಳ್ಳಕೆರೆ ತಾಲ್ಲೂಕಿನ ನಾಯಕನಹಟ್ಟಿ, ಹೊಳಲ್ಕೆರೆ ತಾಲ್ಲೂಕಿನ ರಾಮಗಿರಿಯ ಕರಿಸಿದ್ಧೇಶ್ವರಬೆಟ್ಟ, ಹೊಸದುರ್ಗ ತಾಲ್ಲೂಕಿನ ಶ್ರೀರಾಂಪುರ ಮತ್ತು ವಜ್ರಕ್ಷೇತ್ರಗಳು ಈ ಜಿಲ್ಲೆಯ ಧಾರ್ಮಿಕ ಕ್ಷೇತ್ರಗಳು ಪ್ರಸಿದ್ಧವಾಗಿವೆ. ಈ ಜಿಲ್ಲೆಯಲ್ಲಿ ಸಂಖ್ಯಾ ದೃಷ್ಟಿಯಿಂದ ವೀರಶೈವ ಮಠಗಳು ಪ್ರಾಬಲ್ಯತೆಯನ್ನು ಸಾಧಿಸದಿದ್ದರೂ ಸಾಧನೆಯ ದೃಷ್ಟಿಯಿಂದ ಅಸ್ತಿತ್ವದಲ್ಲಿರುವ ನಾಲ್ಕು ಮಠಗಳಲ್ಲಿ ಚಿತ್ರದುರ್ಗದ ಬೃಹನ್ಮಠ, ಸಿರಿಗೆರೆಯ ತರಳಬಾಳು ಬೃಹನ್ಮಠ ಮತ್ತು ಸಾಣೆಹಳ್ಳಿಯ ಮಠಗಳು, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಖ್ಯಾತಗೊಂಡಿವೆ. ಇಲ್ಲಿ ಅಸ್ತಿತ್ವದಲ್ಲಿರುವ ಕೆಲವೇ ಮಠಗಳಾದರೂ ಬಹಳ ಪ್ರಭಾವಿ ಮಠಗಳಾಗಿ ವೀರಶೈವ ಧರ್ಮ ಧ್ವಜವನ್ನು ಎತ್ತಿ ಹಿಡಿದಿವೆ.

ಈ ಜಿಲ್ಲೆಯಲ್ಲಿ ಪುರಾತನ ಕಾಲದಲ್ಲಿ ಒಟ್ಟು ನಲವತ್ತೆಂಟು ಮಠಗಳು ಅಸ್ತಿತ್ವಗೊಂಡಿದ್ದವೆಂದು ಮಾಹಿತಿ ದೊರೆತಿದೆ. ಆದರೆ ಈ ಮಾಹಿತಿಯ ಆಧಾರದ ಮೇಲೆ ಶೋಧನೆಗೆ ಹೋದಾಗ ಹನ್ನೆರಡು ಮಠಗಳು ದೊರೆತಿದ್ದು ಉಳಿದ ಹನ್ನೆರಡು ಮಠಗಳು ಎಲ್ಲಿ? ಯಾವಾಗ? ಸ್ಥಾಪನೆಯಾದವು ಎಂಬ ಬಗ್ಗೆ ಆಧಾರಗಳು ಸಿಗುತ್ತಿಲ್ಲ. ಲಭ್ಯಗೊಂಡ ಹನ್ನೆರಡು ಮಠಗಳಲ್ಲಿ ಹೊಸದುರ್ಗದ ಮಠ, ಹಿರಿಯೂರಿನ ಮಠ, ರಾಮಗಿರಿಯ ಶ್ರೀ ಕರಿಸಿದ್ಧೇಶ್ವರಮಠ, ನುಲೆನೂರಿನ ನುಲಿಯ ಚಂದಯ್ಯಮಠ, ಚಳ್ಳಕೆರೆ ತಾಲ್ಲೂಕಿನ ಪರಶುರಾಮಪುರದಮಠ, ಮೊಳಕಾಲ್ಮೂರಿನ ಶ್ರೀ ಹಿರೇಮಠ ಹಾಗೂ ಮೊಳಕಾಲ್ಮೂರು ತಾಲ್ಲೂಕಿನ ಆನೆ ಸಿದ್ದಾಪುರದ ಹಿರೇಮಠಗಳು ಇಂದು ಮಠಾಧೀಶರರು ಇಲ್ಲದೆ ಕೇವಲ ಗದ್ದುಗೆ ಪೂಜೆಗೆ ಮಾತ್ರ ಸೀಮಿತವಾಗಿವೆ.

ಚಳ್ಳಕೆರೆ ತಾಲ್ಲೂಕು

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕು ಕೃಷಿ ಹಾಗೂ ವ್ಯಾಪಾರವನ್ನು ಅವಲಂಬಿಸಿದೆ. ಒಂದು ಕಾಲದಲ್ಲಿ ಎಣ್ಣೆ ಕಾಳು ಉತ್ಪಾದನೆಯಲ್ಲಿ ಹೆಚ್ಚು ಹೆಸರು ಮಾಡಿದ್ದ ಈ ತಾಲ್ಲೂಕು ಇಂದು ಪ್ರಕೃತಿಯ ವೈಪರೀತ್ಯದಿಂದ ಅನೇಕ ಬದಲಾವಣೆಗಳನ್ನು ಕಂಡಿದೆ. ತೆಲುಗು ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿರುವ ಈ ಗಡಿ ತಾಲ್ಲೂಕು ಎಲ್ಲಾ ವರ್ಗದ ಜನರನ್ನು ಒಳಗೊಂಡಿದೆ. ಇಂತಹ ತಾಲ್ಲೂಕಿನಲ್ಲಿ ವೀರಶೈವಧರ್ಮ ತನ್ನ ಪ್ರಭಾವವನ್ನು ಬೆಳೆಸಿಕೊಂಡ ಲಕ್ಷಣಗಳು ಕಂಡು ಬಂದಿಲ್ಲ. ಹಿಂದೆ ಎಡೆಯೂರು ಸಿದ್ಧಲಿಂಗೇಶ್ವರರ ಕಾಲದಲ್ಲಿ ಇಲ್ಲಿ ಧಾರ್ಮಿಕ ಆಂದೋಲನ ಏರ್ಪಟ್ಟಿತ್ತಾದರೂ ಮುಂದೆ ಅದು ಬೆಳೆಯಲಿಲ್ಲ ಎಂಬುದು ಪ್ರಸ್ತುತ ಪರಿಸ್ಥಿತಿಯಿಂದ ಅರ್ಥವಾಗುತ್ತದೆ.

ಹಿಂದೆ ಈ ತಾಲ್ಲೂಕಿನಲ್ಲಿ ಹನ್ನೆರಡು ಮಠಗಳು ಅಸ್ತಿತ್ವದಲ್ಲಿದ್ದವೆಂಬ ಮಾತು ಕೇಳಿ ಬರುತ್ತದೆ. ಕಾಲಕ್ರಮೇಣ ಈ ಮಠಗಳು ಸಹ ಇಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ವಿಫಲವಾಗಿವೆ. ಹಿಂದೆ ಸ್ಥಾಪನೆಯಾಗಿದ್ದ ಮಠಗಳ ಶೋಧನೆಗೆ ಹೋದಾಗ ಈ ಮಠಗಳ ಅಸ್ತಿತ್ವವಾಗಲಿ ಕೊನೆಗೆ ಅವುಗಳ ಹೆಸರಾದರೂ ದೊರೆಯುವುದಿಲ್ಲ. ೧೯೩೭ರಲ್ಲಿ ಪ್ರಕಟಗೊಂಡ ಶ್ರೀ ವಿರೂಪಾಕ್ಷ ಶಾಸ್ತ್ರೀಗಳ ಗುರುವರ್ಗ ದರ್ಪಣದಲ್ಲಿ ಒಂದು ಮಠದ ಉಲ್ಲೇಖವನ್ನು ಹೊರತುಪಡಿಸಿದರೆ ಬೇರೆ ಗುರುಸ್ಥಲ ಮಠಗಳ ಪರಿಚಯವೂ ಲಭ್ಯವಿಲ್ಲ. ಇಲ್ಲಿ ಲಭ್ಯವಿರುವ ಮಾಹಿತಿಯ ಆಧಾರದ ಮೇಲೆ ಸಾಂಕೇತಿಕವಾಗಿ ಕಾಲ್ವಿಹಳ್ಳಿ ಮಠದ ಪರಿಚಯವನ್ನು ಮಾಡಿಕೊಡಲಾಗಿದೆ.

ಪರಶುರಾಂಪುರ

ಚಳ್ಳಕೆರೆ ತಾಲ್ಲೂಕಿನ ಪರಶುರಾಂಪುರವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತೆರಡು ಕಿ. ಮೀ. ದೂರದಲ್ಲಿದೆ. ಆಂಧ್ರಪ್ರದೇಶದ ಗಡಿಗ್ರಾಮವಾದ ಇಲ್ಲಿ ಶ್ರೀ ಕಾಲ್ವಿಹಳ್ಳಿ ಹಿರೇಮಠವು ಹಿಂದೆ ಅಸ್ತಿತ್ವದಲ್ಲಿತ್ತು.

ಕಾಲ್ವಿಹಳ್ಳಿ ಶ್ರೀ ಹಿರೇಮಠ: ಪರಶುರಾಂಪುರದಲ್ಲಿ ರಂಭಾಪುರಿ ಪೀಠದ ಶಾಖಾಮಠವಾದ ಕಾಲ್ವಿಹಳ್ಳಿ ಹಿರೇಮಠವು ಅಸ್ತಿತ್ವದಲ್ಲಿತ್ತು. ಪುತ್ರ ವರ್ಗದ ಪರಂಪರೆಯಲ್ಲಿ ಬೆಳೆದ ಹಿರೇಮಠವು ಕಾಲ್ವಿಹಳ್ಳಿಯಿಂದ ಪರಶುರಾಂಪುರಕ್ಕೆ ಸ್ಥಳಾಂತರಿಸಲ್ಪಟ್ಟ ಕಾರಣ ಈ ಮಠಕ್ಕೆ 'ಕಾಲ್ವಿಹಳ್ಳಿ ಹಿರೇಮಠ' ಎಂದು ಹೆಸರು ಬಂದಿದೆ. ಧಾರ್ಮಿಕ ಆಚರಣೆಗಾಗಿ ಭಕ್ತರ ಅಪೇಕ್ಷೆಯಂತೆ ಕಾಲ್ವಿಹಳ್ಳಿಯಿಂದ ಪರಶುರಾಂಪುರಕ್ಕೆ ಸ್ಥಳಾಂತರಗೊಂಡ ಮಠವು ಧಾರ್ಮಿಕ ಕ್ರಿಯೆಗಳಿಂದ ಹೆಚ್ಚು ಹೆಸರು ಮಾಡಿತ್ತು. ವೀರಶೈವ ಸಿದ್ಧಾಂತಗಳನ್ನು ಮತ್ತು ಆಚಾರ ವಿಚಾರಗಳನ್ನು ಭಕ್ತರಿಗೆ ಮುಟ್ಟಿಸಿ ವೀರಶೈವ ಧರ್ಮ ಬೆಳೆಯುವಂತೆ ಪರಂಪರೆಯ ಗುರುಗಳು ಮಾಡಿದ್ದಾರೆ. ಈ ಮಠದ ಪರಂಪರೆಯು ಬೆಳೆದ ಬಗ್ಗೆ ಆಧಾರಗಳು ಲಭ್ಯವಿಲ್ಲದಿರುವ ಕಾರಣ ಪರಂಪರೆಯ ಗುರುಗಳ ಹೆಸರುಗಳನ್ನು ದಾಖಲಿಸಲಾಗುತ್ತಿಲ್ಲ.

ಮಠದ ಪರಂಪರೆಯಲ್ಲಿ ಬರುವ ಶ್ರೀ ಗಂಗಾಧರ ಶಾಸ್ತ್ರಿಗಳು ಸಂಸ್ಕೃತ ಮತ್ತು ಕನ್ನಡ ಭಾಷೆಯಲ್ಲಿ ಪ್ರಕಾಂಡ ಪಂಡಿತರಾಗಿ ಹೆಚ್ಚು ಹೆಸರು ಮಾಡಿರುತ್ತಾರೆ. ಮುಕ್ತಿಮಂದಿರದಲ್ಲಿ ಕೆಲವು ದಿನಗಳ ಕಾಲ ಸಂಸ್ಕೃತ ಭಾಷೆಯ ಉಪಾಧ್ಯಾಯರಾಗಿದ್ದರು. ಉತ್ತಮ ಪ್ರವಚನಕಾರರಾಗಿ ವೀರಶೈವ ಧರ್ಮದ ಪ್ರಚಾರ ಕಾರ್ಯವನ್ನು ಯಶಸ್ವಿಯಾಗಿ ನಡೆಸಿದ್ದರು ಎಂದು ಹೇಳಲಾಗುತ್ತಿದೆ. ಶ್ರೀ ಗಂಗಾಧರ ಶಾಸ್ತ್ರಿಗಳ ವಿದ್ವತ್ ಪಾಂಡಿತ್ಯ ಮತ್ತು ಆಡಳಿತ ದಕ್ಷತೆಯನ್ನು ಗುರುತಿಸಿ ೧೯೬೦ ರ ಸುಮಾರಿನಲ್ಲಿ ಶ್ರೀ ರಂಭಾಪುರಿಪೀಠದ ಏಜೆಂಟರಾಗಿ ನೇಮಕಗೊಂಡು ಪೀಠದ ಜಗದ್ಗುರುಗಳಿಗೆ ಸಹಾಯಕರಾಗಿ ಪೀಠದ ಆಡಳಿತವನ್ನು ಸಮರ್ಥವಾಗಿ ಮುನ್ನಡೆಸಿರುತ್ತಾರೆ. ಇವರ ನಂತರ ಕಾಲ್ವಿಹಳ್ಳಿ ಹಿರೇಮಠದಲ್ಲಿ ಮಠಾಧೀಶರು ಯಾರೂ ಇಲ್ಲದೆ ಮಠವು ಖಾಲಿ ಉಳಿಯಿತು. ಪ್ರಸ್ತುತ ಮಠದ ವಂಶಸ್ಥರೇ ಗದ್ದುಗೆ ಪೂಜೆ ಮತ್ತು ಭಕ್ತರ ಮನೆಗಳಲ್ಲಿ ಬಿನ್ನ ತೀರಿಸಿಕೊಂಡು ಧಾರ್ಮಿಕ ಕಾರ್ಯಗಳಲ್ಲಿ ನೆರವಾಗುತ್ತಾ ಬಂದಿದ್ದಾರೆ.

ವಿಳಾಸ: ಕಾಲ್ವಿಹಳ್ಳಿ ಶ್ರೀ ಹಿರೇಮಠ, ಪರಶುರಾಂಪುರ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.

ಆಧಾರ: 'ಗುರುವರ್ಗದರ್ಪಣ'

ಚಿತ್ರದುರ್ಗ ತಾಲ್ಲೂಕು

ಚಿತ್ರದುರ್ಗ ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಒಂದಾದ ಚಿತ್ರದುರ್ಗ ತಾಲ್ಲೂಕು ಬಹಳ ಪ್ರಸಿದ್ಧಿಗೊಂಡಿದೆ. ಕಾರಣ, ಚಿತ್ರದುರ್ಗದ ಶ್ರೀ ಮುರುಘರಾಜೇಂದ್ರ ಬೃಹನ್ಮಠ ಹಾಗೂ ಸಿರಿಗೆರೆಯ ಶ್ರೀ ತರಳಬಾಳು ಬೃಹನ್ಮಠ ಈ ತಾಲ್ಲೂಕಿನಲ್ಲಿ ಸ್ಥಾಪನೆಗೊಂಡಿರುವುದು. ಈ ಮಠಗಳು ನಡೆಸಿರುವ ಧಾರ್ಮಿಕ ಆಂದೋಲನದಿಂದ ಸಮಾಜ ಬೆಳಕು ಕಂಡಿದೆ. ಇಂತಹ ಧಾರ್ಮಿಕ ಪ್ರಸಿದ್ಧಿಯನ್ನು ಪಡೆದ ಈ ತಾಲ್ಲೂಕಿನಲ್ಲಿ ಒಟ್ಟು ಹದಿನೆಂಟು ಮಠಗಳು ಸ್ಥಾಪನೆಯಾಗಿದ್ದವೆಂಬ ಮಾಹಿತಿ ದೊರೆಯುತ್ತದೆ. ಆದರೆ ಇಂದು ಮೂರು ಮಠಗಳು ಮಾತ್ರ ಅಸ್ತಿತ್ವದಲ್ಲಿವೆ.

ಚಿತ್ರದುರ್ಗ

ಜಿಲ್ಲಾ ಕೇಂದ್ರವಾದ ಚಿತ್ರದುರ್ಗವು ಐತಿಹಾಸಿಕ ಮಹತ್ವ ಪಡೆದ ಕ್ಷೇತ್ರವಾಗಿದೆ. ಇಂತಹ ನಗರದಲ್ಲಿ ವೀರಶೈವ ಧರ್ಮಪ್ರಬಲವಾಗಿ ಬೆಳೆದಿದೆ. ಹಿಂದೆ ಇಲ್ಲಿ ಆರು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಪ್ರಸ್ತುತ ಶ್ರೀಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ, ಶ್ರೀ ಉಜ್ಜಯಿನಿಮಠ ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ. ಇತ್ತೀಚೆಗೆ ಶ್ರೀ ರಂಭಾಪುರಿಪೀಠದ ಶಾಖಾಮಠವು ಪುನರುಜ್ಜೀವನ ಪಡೆದು ಧಾರ್ಮಿಕ ಕಾರ್ಯಗಳನ್ನು ನಡೆಸತೊಡಗಿದೆ.

ಮುರುಘರಾಜೇಂದ್ರ ಬೃಹನ್ಮಠ: ಕರ್ನಾಟಕದ ಧಾರ್ಮಿಕ ಇತಿಹಾಸದಲ್ಲಿ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠವು ಎದ್ದು ಕಾಣುವ ಒಂದು ಹಿರಿಯ ಮಠ. ಈ ಮಠವು ಚಿತ್ರದುರ್ಗ ನಗರದ ಪಶ್ಚಿಮ ಭಾಗದ ಸುಂದರ ಹಾಗೂ ಪ್ರಶಾಂತ ವಾತಾವರಣದಲ್ಲಿದೆ. ಮೂರು ಶತಮಾನಗಳಿಗೂ ಮಿಕ್ಕ ಭವ್ಯ ಪರಂಪರೆಯುಳ್ಳ ಈ ಮಠವು ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆ ಗಳಲ್ಲಿ ತನ್ನನ್ನು ತೊಡಗಿಸಿಕೊಂಡು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಅನುಪಮ ಸೇವೆ ಸಲ್ಲಿಸುತ್ತಿದೆ. ಹಾಗಾಗಿ ನಾಡಿನ ಒಂದು ದೊಡ್ಡ ಆಸ್ತಿಯಾಗಿರುವುದಲ್ಲದೆ, ಈ ಮಠವು ಧಾರ್ಮಿಕ ಕ್ಷೇತ್ರದಲ್ಲಿ ಒಂದು ಮಹತ್ತರ ಸ್ಥಾನವನ್ನು ಪಡೆದುಕೊಂಡಿದೆ.

ಮುರಿಗಿಮಠ, ಮುರುಘಾಮಠ, ಮುರುಘಮಠ, ಬೃಹನ್ಮಠ, ವಿಶಾಲಮಠ ಮತ್ತು ಮಹಾಮಠ ಮುಂತಾದ ಹೆಸರುಗಳಿಂದ ಕರೆಯಲ್ಪಟ್ಟರೂ, ಈ ಮಠವು ಮುರುಗಿಮಠ ಎಂಬ ಹೆಸರಿನಿಂದಲೇ ಜನಪ್ರಿಯವಾಗಿದೆ.

ಕಲ್ಯಾಣದ ಶರಣರ ಸಂಬಂಧ: ಹದಿನೇಳನೆಯ ಶತಮಾನದಲ್ಲಿ ಸ್ಥಾಪಿತವಾಗಿದ್ದರೂ ಈ ಮಠ ಹನ್ನೆರಡನೆಯ ಶತಮಾನದ ಬಸವಾದಿ ಶಿವಶರಣರ ತತ್ತ್ವಾದರ್ಶಗಳ ಅಡಿಗಲ್ಲಿನ ಮೇಲೆ ತನ್ನ ಪರಂಪರೆಯನ್ನು ಮುಂದುವರೆಸಿಕೊಂಡು ಬರುತ್ತಿದೆ. ಬಸವಣ್ಣನವರಿಂದ ಸ್ಥಾಪಿತವಾಗಿ, ಅಲ್ಲಮಪ್ರಭು ಸಿಂಹಾಸನಾರೋಹಣ ಮಾಡಿ, ತದನಂತರದಲ್ಲಿ ಚನ್ನಬಸವಣ್ಣ ಉತ್ತರಾಧಿಕಾರಿಗಳಾಗಿ ವಿಜೃಂಭಿಸಿದ ಶೂನ್ಯಪೀಠವೇ ಪಾರಂಪರಿಕವಾಗಿ ಮುರುಘಾ ಮಠವಾಗಿರಬೇಕು ಎಂದು ಇತಿಹಾಸ ಹೇಳುತ್ತದೆ.

ಈ ಪೀಠಕ್ಕೆ ಉತ್ತರಾಧಿಕಾರಿಗಳಾಗಿ ಮಹಾನ್‌ಚೇತನಗಳಾದ ಶ್ರೀ ತೋಂಟದಸಿದ್ಧಲಿಂಗ ಯತಿಗಳು, ಶ್ರೀ ಸಿದ್ಧವೀರಣ್ಣ ಒಡೆಯರು, ಶ್ರೀ ಗಗನದಯ್ಯ ಮತ್ತು ಕಟ್ಟಿಗೆಹಳ್ಳಿ ಶ್ರೀ ಸಿದ್ಧಲಿಂಗದೇವರು ಮಠದ ಪರಂಪರೆಯನ್ನು ಮುಂದುವರೆಸಿಕೊಂಡು ಬಂದ ತರುವಾಯದ ದಿವಸಗಳಲ್ಲಿ, ಶ್ರೀ ಶಾಂತವೀರದೇಶಿಕ ಸ್ವಾಮಿಗಳು (ಮೊದಲನೆಯ ಮುರುಗಿಸ್ವಾಮಿಗಳು) ಮುರುಘಾ ಮಠವನ್ನು ಚಿತ್ರದುರ್ಗದಲ್ಲಿ ಸ್ಥಿರಗೊಳಿಸಿದರು.

ಮಠ ಸ್ಥಾಪನೆ: ಶ್ರೀ ಮುರಿಗಿ ಶಾಂತವೀರ ಸ್ವಾಮಿಗಳು ತಮ್ಮ ಜೀವಿತದ ಬಹು ಸಮಯವನ್ನು ಧಾರ್ಮಿಕ ಪ್ರಸಾರದಲ್ಲಿ ಕಳೆದರು. ತಮ್ಮ ಮಾಗಿದ ವಯಸ್ಸಿನಲ್ಲಿ ಚಿತ್ರದುರ್ಗದ ಪಾಳೆಗಾರನಾದ ಭರಮಣ್ಣನಾಯಕನ ಭಕ್ತಿ, ಗೌರವಗಳಿಗೆ ಪಾತ್ರರಾಗಿ, ಕೊನೆಯ ದಿವಸಗಳನ್ನು ಚಿತ್ರದುರ್ಗದಲ್ಲಿಯೇ ಕಳೆಯಲು ನಿಶ್ಚಯಿಸಿದರು.ನಾಯಕರು ಸ್ವಾಮಿಗಳಿಗೆ ಎರಡು ಮಠಗಳನ್ನು ಕಟ್ಟಿಸಿಕೊಟ್ಟರು.ಒಂದನ್ನು ಬೆಟ್ಟದ ಮೇಲೆ, ಮತ್ತೊಂದನ್ನು ಬೆಟ್ಟದಡಿಯ ಪಶ್ಚಿಮಭಾಗದಲ್ಲಿ ಕಟ್ಟಿಸಲಾಗಿದೆ. ಹೀಗಾಗಿ

ಆರಂಭದ ಶತಮಾನಗಳಲ್ಲಿ ಚರವಾಗಿದ್ದ ಶೂನ್ಯ ಪೀಠವು ಈ ಸಂದರ್ಭದಲ್ಲಿ ಸ್ಥಿರೀಕರಣಗೊಂಡಿತು. ಬೆಟ್ಟದತಪ್ಪಲಿನ ಮಠದಲ್ಲಿ ವಾಸ್ತವ್ಯ ಮಾಡಿದ್ದ ಸ್ವಾಮಿಗಳು ಜುಲೈ ಐದು ೧೭೦೩ ರಲ್ಲಿ ಲಿಂಗೈಕ್ಯರಾದರು. ಕರ್ತೃಗುರುಗಳ ಸಮಾಧಿಯ ಮೇಲೆ ಗದ್ದುಗೆ ನಿರ್ಮಿಸಿ ಮಂಟಪವನ್ನು ಕಟ್ಟಲಾಗಿದೆ.

ಸ್ವಾಮಿಗಳ ಧಾರ್ಮಿಕ ಪ್ರವಾಸದ ಸಂದರ್ಭದಲ್ಲಿ ಅವರನ್ನು ಮೈಸೂರಿನ ದೊಡ್ಡದೇವರಾಜ ಮತ್ತು ಚಿಕ್ಕದೇವರಾಜ, ಭಾಗಾ ನಗರದ (ಗೋಲ್ಕಂಡ)ಕುತುಬ್ ಬಾದಷಾಹ, ಮರಾಠ ಛತ್ರಪತಿ ಶಿವಾಜಿ, ಗದಗದ ದಾಸದೇಸಾಯಿ, ಹರಪನಹಳ್ಳಿಯ ಬಸವಂತ ನಾಯಕ, ಹಾವನೂರಿನ ರಾಜ ಮುಂತಾದವರು ಗೌರವಿಸಿ ಸನ್ಮಾನಿಸಿದ್ದಾರೆ. ಬೇರೆ ಬೇರೆ ರಾಜ್ಯಗಳ ಭಕ್ತಾದಿಗಳೂ ಕೂಡ ಸ್ವಾಮಿಗಳಿಗೆ ಗುರುನಮನ ಹಾಗೂ ಭಕ್ತಿಪುರಸ್ಕಾರದ ಗೌರವ ಸಲ್ಲಿಸಿದ್ದಾರೆ. ಗುರುಗಳು ವೇದಾಂತ ಮತ್ತು ಸಾಹಿತ್ಯದ ಮೇಲೆ ಅನೇಕ ಕೃತಿಗಳನ್ನು ರಚಿಸಿದ್ದಾರೆ.

ಬೆಳೆದ ಪರಂಪರೆ: ಇವರ ಬಳಿಕ ಬಂದ ಶ್ರೀ ಇಮ್ಮಡಿ ಮುರುಗಿ ಸ್ವಾಮಿಯವರೆಂದೇ ಕರೆಯಲ್ಪಡುತ್ತಿದ್ದ ಶ್ರೀ ಗುರುಸಿದ್ಧಸ್ವಾಮಿಗಳನ್ನು ಭರಮಣ್ಣನಾಯಕ ಮತ್ತು ಇವನ ಮಗ ಹಿರೇಮದಕರಿ ನಾಯಕ (೧೭೨೧-೧೭೪೮) ರಾಜಗುರು ಎಂಬ ಅಭಿಧಾನವನ್ನಿತ್ತು ಗೌರವಿಸಿದರು. ಇವರು ಮಠದ ಪೀಠಾಧಿಕಾರಿಯಾಗಿ ೧೭೨೯ ರವರೆಗೂ ಮುಂದುವರೆದರು. ಕನ್ನಡ ಮತ್ತು ಸಂಸ್ಕೃತಗಳೆರಡರಲ್ಲೂ ಪ್ರಕಾಂಡ ಪಂಡಿತರಾಗಿದ್ದು, ಕಾವ್ಯಪ್ರತಿಭೆಯನ್ನೂ ಕೂಡ ಹೊಂದಿದ್ದರು. ಇವರು ಎರಡೂ ಭಾಷೆಗಳಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾರೆ.

ಮುಂದಿನ ಉತ್ತರಾಧಿಕಾರಿಗಳಾದ ಶ್ರೀ ಸ್ವಾದಿ ಚನ್ನಬಸವಸ್ವಾಮಿಗಳು, ಶಿರಹಟ್ಟಿ ಶ್ರೀ ಸಿದ್ಧಲಿಂಗ ಸ್ವಾಮಿಗಳು, ನಾಯಕನ ಹಟ್ಟಿ ಶ್ರೀ ದೊಡ್ಡ ಗುರುಪಾದ ಸ್ವಾಮಿಗಳು, ಮೂರು ಸಾವಿರದ ಶ್ರೀ ಸಣ್ಣಗುರುಪಾದ ಸ್ವಾಮಿಗಳನ್ನು ಚಿತ್ರದುರ್ಗದ ಪಾಳೆಗಾರರಾದ ಹಿರೇಮದಕರಿನಾಯಕ, ಕಸ್ತೂರಿ ರಂಗಪ್ಪನಾಯಕ (೧೭೫೪- ೧೭೭೯) ಮತ್ತು ಕಡೇ ಮದಕರಿನಾಯಕರು (೧೭೫೪- ೧೭೭೯) ರಾಜಗುರುಗಳೆಂಬ ಅಭಿಧಾನವನ್ನಿತ್ತು ಗೌರವಾದರಗಳಿಂದ ನಡೆಸಿಕೊಂಡರು. ೧೭೭೯ ರಲ್ಲಿ ಚಿತ್ರದುರ್ಗದ ಪಾಳೇಗಾರಿಕೆ ಪತನಾನಂತರವೂ ಮಠದ ಪರಂಪರೆ ಮುಂದುವರೆಯಿತು.

ಮಠವು ಸ್ಥಾಪನೆಯಾದ ಎರಡು, ಮೂರು ದಶಕಗಳಲ್ಲಿಯೇ ಜನರ ಮೇಲಾದ ಧಾರ್ಮಿಕ ಪ್ರಭಾವದಿಂದಾಗಿ, ದಕ್ಷಿಣ ಭಾರತದ ವಿವಿಧ ಭಾಗಗಳಲ್ಲಿ ನೂರಾರು ಶಾಖಾಮಠಗಳು ಅಸ್ತಿತ್ವಕ್ಕೆ ಬಂದವು. ಸ್ಥಳೀಯ ಭಕ್ತರು ಆಯಾಯ ಶಾಖಾಮಠಗಳನ್ನು ಭಕ್ತಿಯ ಪ್ರತೀಕವಾಗಿ ಮುರುಗಿ ಮಠಗಳೆಂದು ಕರೆಯಲಾರಂಭಿಸಿದರು.

ದೊರೆಗಳ ನೆರವು: ಕೆಳದಿ ಅರಸರು, ಕೊಡಗು, ಸೋದೆ, ಹರಪನಹಳ್ಳಿ, ಮತ್ತೋಡು, ತರೀಕೆರೆ, ಹಾಗಲವಾಡಿ, ಸವಣೂರು, ಸಿರಸಂಗಿ, ಲಕ್ಷ್ಮೀಶ್ವರ, ಮೈಸೂರು, ಉಮ್ಮತ್ತೂರು,ಪುಂಗನೂರು, ಕೊಲ್ಹಾಪುರ ಮುಂತಾದ ಸಂಸ್ಥಾನಗಳ ದೊರೆಗಳು, ಮುಸ್ಲಿಂ ನವಾಬರುಗಳು ಮತ್ತು ಎಲ್ಲಾ ಜನಾಂಗಗಳ ಪ್ರಜೆಗಳು ಈ ವಿರಕ್ತ ಮಠಗಳಿಗೆ ಗೌರವಾಧರ ತೋರಿಸುವುದಲ್ಲದೆ ಧನ ಸಹಾಯವನ್ನು ನೀಡಿದ್ದಾರೆ. ಇದು ಮಠದ ಜಾತ್ಯಾತೀತತೆ ಮತ್ತು ಭವ್ಯತೆಗೆ ನಿದರ್ಶನ. ಗತಶತಮಾನದ ಮತ್ತು ವರ್ತಮಾನ ಶತಮಾನದ ಇಬ್ಬರು ಪಾಶ್ಚಿಮಾತ್ಯ ವಿದ್ವಾಂಸರುಗಳು ಮಠದ ಮಹತ್ವದ ಬಗ್ಗೆ ವ್ಯಾಖ್ಯಾನಿಸಿರುವ ವ್ಯಾಖ್ಯಾನಗಳೇ ಇದಕ್ಕೆ ಸಾಕ್ಷಿ.'ಕನ್ನಡಸಾಹಿತ್ಯ ಇತಿಹಾಸ' ಖ್ಯಾತಿಯ ಇ.ಪಿ.ರೈಸ್ ರವರು ವೀರಶೈವಧರ್ಮದ ಬಗ್ಗೆ ಬರೆಯುತ್ತಾ ೧೩೯೯ ರಿಂದ ೧೬೧೦ರವರೆಗೆ ಆಳಿದ ಮೈಸೂರು ಮತ್ತು ಉಮ್ಮತ್ತೂರಿನ ಆರಂಭದ ಒಡೆಯರುಗಳು ಮತ್ತು ೧೫೫೦ ರಿಂದ ೧೭೬೩ರವರೆಗೆ ಆಳಿದ ಕೆಳದಿ (ಇಕ್ಕೇರಿ ಅಥವಾ ಬಿದನೂರು) ನಾಯಕರುಗಳು ವೀರಶೈವ ಧರ್ಮವನ್ನು ಸಂಸ್ಥಾನದ ಧರ್ಮವನ್ನಾಗಿ ಸ್ವೀಕರಿಸಿದ್ದರೆಂದು ದಾಖಲಿಸಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ವೀರಶೈವರ ಪ್ರಮುಖ ಮಠ ಚಿತ್ರದುರ್ಗದಲ್ಲಿತ್ತೆಂದು ಗುರುತಿಸಿದ್ದಾರೆ. ದಕ್ಷಿಣ ಭಾರತದ ಪಂಗಡಗಳು ಮತ್ತು ಜಾತಿಗಳು ಎಂಬುದರ ಬಗ್ಗೆ ಸರ್ವೇಕ್ಷಣೆ ಮಾಡಿದ ಎಡ್ಗರ್ ಥರ್ಸ್ಟನ್ ಎಂಬುವನು ವೀರಶೈವ ಮಠಗಳನ್ನು ಕುರಿತು ಹೇಳುತ್ತಾ ಎಲ್ಲಾ ವಿರಕ್ತ ಮಠಗಳು ಚಿತ್ರದುರ್ಗದ ಮುರುಗಿ ಮಠಕ್ಕೆ ನೇರವಾಗಿ ಸಂಬಂಧ ಇಟ್ಟುಕೊಂಡಿದ್ದವು ಎಂದು ದಾಖಲಿಸಿದ್ದಾನೆ. ಒಂದನೆಯ ಮುರುಗಿ ಸ್ವಾಮಿಗಳಿಂದ ಪ್ರಾರಂಭವಾಗಿ ಇಂದಿನ ಶ್ರೀ ಶಿವಮೂರ್ತಿ ಸ್ವಾಮಿಗಳವರೆಗೆ ಇಪ್ಪತ್ತು ಜನ ಸ್ವಾಮಿಗಳು ಮಠದ ಧಾರ್ಮಿಕ ಸಿಂಹಾಸನವನ್ನು ಅಲಂಕರಿಸಿದ್ದಾರೆ.

ಇಪ್ಪತ್ತನೆಯ ಶತಮಾನದಲ್ಲಿ ಶ್ರೀ ಜಯದೇವ ಸ್ವಾಮಿಗಳು ಪ್ರಾತಃಸ್ಮರಣೀಯ ಸ್ವಾಮಿಗಳಾಗಿದ್ದರು. ಅವರ ಅವಧಿಯಲ್ಲಿ ಶಿಕ್ಷಣ ಪ್ರಸಾರವೇ ಪ್ರಮುಖ ಗುರಿಯಾಗಿತ್ತು.

ಶ್ರೀ ಜಯದೇವ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಶ್ರೀ ಬೃಹನ್ಮಠವು ಕರ್ನಾಟಕದಲ್ಲೇ ಅಲ್ಲದೆ ಮುಂಬೈ ಪ್ರಾಂತ್ಯದಲ್ಲೂ ಹೆಚ್ಚು ಹೆಸರು ಪಡೆಯಿತು. ಗುರುಗಳು ಈ ಪ್ರಾಂತ್ಯದಲ್ಲಿ ಸಂಚಾರ ಕೈಗೊಂಡು ಅನೇಕ ವಿದ್ಯಾ ಸಂಸ್ಥೆಗಳು, ವಾಚನಾಲಯಗಳು, ಪ್ರಸಾದ ನಿಲಯಗಳು, ಆಸ್ಪತ್ರೆ ಮುಂತಾದ ಜನಪಯೋಗಿ ಕಾರ್ಯಗಳನ್ನು ಮಾಡಿ ಸಮಾಜವನ್ನು ಉದ್ಧರಿ ಸಿದರು. ಇವರ ಸಾಮಾಜಿಕ ಕಾರ್ಯಗಳನ್ನು ಕೇಳಿ ತಿಳಿದುಕೊಂಡ ಮಹಾತ್ಮಗಾಂಧೀಜಿಯವರು ೧೯೩೪ ರಲ್ಲಿ ಹಾವೇರಿಯಲ್ಲಿ ಶ್ರೀ ಜಯದೇವ ಸ್ವಾಮಿಗಳನ್ನು ಭೇಟಿ ಮಾಡಿ ರಾಷ್ಟ್ರದ ಸ್ವಾತಂತ್ರ್ಯ ಚಳುವಳಿ ಹಾಗೂ ಅಸ್ಪೃಶ್ಯತೆ ನಿವಾರಣೆ ಇವೇ ಮೊದಲಾದ ಗಂಭೀರ ವಿಷಯಗಳ ಬಗ್ಗೆ ಚರ್ಚೆ ನಡೆಸಿದ್ದು ಮಠದ ಇತಿಹಾಸದಲ್ಲಿ ದಾಖಲಾರ್ಹ ವಿಚಾರವಾಗಿದೆ. ಗುರುಗಳು ಗಾಂಧೀಜಿ ಯವರ ಪ್ರಭಾವಕ್ಕೆ ಒಳಗಾಗಿ ಸ್ವಯಂ ಖಾದಿಧಾರಿಗಳಾಗಲು ನಿರ್ಧರಿಸಿ ಗಾಂಧಿ ಚಳುವಳಿಯನ್ನು ಬೆಂಬಲಿಸಿದರು. ಗುರುಗಳು ಧಾರ್ಮಿಕ ಕಾರ್ಯಗಳ ಜೊತೆಗೆ ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕವಾಗಿ ಹೆಚ್ಚು ಒಲವು ತೋರಿಸಿ ಜನಸಮುದಾಯವನ್ನು ಎಚ್ಚರಗೊಳಿಸಿದರು. ಅವರು ಬಡ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾರ್ಥಿ ನಿಲಯಗಳು, ಸಾರ್ವಜನಿಕ ಉಪಯುಕ್ತತೆಯ ಅನೇಕ ಕಟ್ಟಡಗಳು, ಆಸ್ಪತ್ರೆಗಳು ಮತ್ತು ಕ್ರೀಡಾಂಗಣಗಳಿಗೆ ಆರ್ಥಿಕ ಸಹಾಯ, ಅಸ್ಪೃಶ್ಯತೆಯ ನಿವಾರಣೆ ಮತ್ತು ತುಳಿತಕ್ಕೊಳಗಾದವರ ಅಭಿವೃದ್ಧಿಕಾರ್ಯಗಳಿಗೆ ನೆರವಾದರು.

ಶಿಕ್ಷಣದ ಕನಿಷ್ಠ ಸೌಲಭ್ಯವೂ ಇಲ್ಲದ ಅನೇಕ ಗ್ರಾಮಗಳಲ್ಲಿ ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಅನುಕೂಲವಾಗುವಂತೆ ಉಚಿತ ವಿದ್ಯಾರ್ಥಿನಿಲಯಗಳನ್ನು ಕಟ್ಟಿಸಿದ ಕೀರ್ತಿ ಇವರಿಗೆ ಸೇರುತ್ತದೆ. ಶಿಕ್ಷಣಕ್ಕೆ ಸ್ವಾಮಿಗಳು ಇಷ್ಟೊಂದು ಶ್ರಮಿಸದಿದ್ದರೆ, ನಾವು ಈ ದಿನ ಕಾಣುತ್ತಿರುವ ಅಭಿವೃದ್ಧಿ ಸಾಧ್ಯವಾಗುತ್ತಿರಲಿಲ್ಲ ಎಂದು ಹೇಳಿದರೆ ಅದು ಉತ್ಪ್ರೇಕ್ಷೆಯ ಮಾತಾಗಲಾರದು.ತಮ್ಮ ಆಧ್ಯಾತ್ಮ ಬಲದೊಡನೆ ಶ್ರೀ ಜಯದೇವ ಸ್ವಾಮಿಗಳು ಒಬ್ಬ ಆದರ್ಶ ಹಾಗೂ ಅನುಕರಣೀಯರಾಗಿ ಸಾಮಾಜಿಕ ಕ್ಷೇತ್ರದಲ್ಲಿ ಧೃವತಾರೆಯಂತೆ ಮಿಂಚಿದ್ದಾರೆ. ಇಂತಹ ಮಹಾನ್ ಸಾಧಕರು ೧೯೫೬ ರಲ್ಲಿ ಲಿಂಗೈಕ್ಯರಾದರು.

ಶ್ರೀ ಜಯದೇವ ಸ್ವಾಮಿಗಳ ಉತ್ತರಾಧಿಕಾರಿಗಳಾದ ಶ್ರೀ ಜಯವಿಭವ ಸ್ವಾಮಿಗಳು ೧೯೧೨ ರ ಮೇ ಇಪ್ಪತ್ತೊಂ‌ದು ನವಿಲುಗುಂದ ತಾಲ್ಲೂಕಿನ ಬಲ್ಲರವಾಡದಲ್ಲಿ ಜನಿಸಿದ ಗುರುಗಳು ಗದಗ ತಾಲ್ಲೂಕಿನ ಮುಳುಗುಂದದ ಶ್ರೀ ಬಾಲಲೀಲಾ ಮಹಾಂತ ಮಠದಲ್ಲಿ ಸಂಸ್ಕಾರವನ್ನು ಪಡೆದರು. ನಂತರ ಶ್ರೀ ಜಯದೇವ ಸ್ವಾಮಿಗಳ ಕೃಪಾಶೀರ್ವಾದಕ್ಕೆ ಒಳಗಾಗಿ ಮುರುಘಾ ಮಠದ ಉತ್ತರಾಧಿಕಾರಿಗಳಾಗಿ ೧೯೪೪ರಲ್ಲಿ ಶೂನ್ಯ ಸಂಪಾದನ ಪೀಠವನ್ನು ಅಲಂಕರಿಸಿದರು. ಶ್ರೀ ಜಯದೇವ ಸ್ವಾಮಿಗಳಲ್ಲಿದ್ದ ಮಾನವೀಯ ಮೌಲ್ಯಗಳು ಶ್ರೀ ಜಯವಿಭವ ಸ್ವಾಮಿಗಳಲ್ಲಿ ಮೂರ್ತಗೊಂಡಿದ್ದವು. ಇದರ ಪರಿಣಾಮವೇ ಹಿರಿಯರು ಹಾಕಿಕೊಟ್ಟ ಮೇಲ್ಪಂಕ್ತಿಯಲ್ಲಿಯೇ ನಡೆದು ಅನೇಕ ಯೋಜನೆಗಳನ್ನು ಕಾರ್ಯಗತಗೊಳಿಸಿದ್ದಾರೆ. ಇವುಗಳಲ್ಲಿ ಅತ್ಯಮೂಲ್ಯ ವಾದದ್ದು ೧೯೬೨ರ ಚೀನಾ ಆಕ್ರಮಣದ ಸಂಕಷ್ಟದಲ್ಲಿದ್ದಾಗ ಮಠದ ಚಿನ್ನದ ಕಿರೀಟ, ಉಂಗುರಗಳು ಹಾಗೂ ಸಾವಿರಾರು ರೂಪಾಯಿ ಬೆಲೆಬಾಳುವ ಆಭರಣಗಳು ಹಾಗೂ ನಗದು ಹಣವನ್ನು ಸರ್ಕಾರಕ್ಕೆ ದೇಣಿಗೆಯಾಗಿ ನೀಡಿದ್ದು ಇವರ ರಾಷ್ಟ್ರಾಭಿ ಮಾನಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಗುರುಗಳು ಅಧಿಕಾರಕ್ಕೆ ಬಂದ ಮೇಲೆ ಮಠವನ್ನು ಆರ್ಥಿಕವಾಗಿ ಸದೃಢಗೊಳಿಸಿದರು. ಇವರ ಕಾಲದಲ್ಲಿ ಶ್ರೀ ಮುರುಘಾಮಠವು ಹೆಚ್ಚು ಹೆಸರು ಪಡೆಯಿತು. ಪಟ್ಟಾಧಿಕಾರದಿಂದ ಹಿಡಿದು ತಮ್ಮ ಜೀವಿತದ ಅಂತ್ಯದವರೆಗೂ ಬಸವಾದಿ ಪ್ರಮುಥರ ತತ್ತ್ವಗಳನ್ನು ನಾಡಿನಲ್ಲಿ ಪ್ರಚಾರಪಡಿಸಿ ೧೯೬೪ ರಲ್ಲಿ ಇವರು ಲಿಂಗೈಕ್ಯರಾದರು.

೧೯೬೪ ರಲ್ಲಿ ಶ್ರೀ ಜಯವಿಭವ ಸ್ವಾಮಿಗಳ ಉತ್ತರಾಧಿಕಾರಿಗಳಾಗಿ ಬಂದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಕಾಶಿಯಲ್ಲಿ ಸಂಸ್ಕೃತ, ತತ್ತ್ವಶಾಸ್ತ್ರ ಮತ್ತು ಶಿವಶರಣ ಸಾಹಿತ್ಯದಲ್ಲಿ ಘನವಿದ್ವಾಂಸರಾಗಿದ್ದರು. ಇವರ ಕಾಲದಲ್ಲಿ ಮಠದ ಶೈಕ್ಷಣಿಕ ಚಟುವಟಿಕೆಗಳು ಹೊಸ ತಿರುವನ್ನು ಪಡೆದುಕೊಂಡವು. ಇವರು ಎಸ್.ಜೆ.ಎಂ. ವಿದ್ಯಾಪೀಠವನ್ನು ಸ್ಥಾಪಿಸಿ ಇದರ ಮೂಲಕ ಕಲಾ, ವಿಜ್ಞಾನ, ವಾಣಿಜ್ಯ, ಫಾರ್ಮಸಿ, ಇಂಜಿನಿಯರಿಂಗ್, ದಂತವಿಜ್ಞಾನ ಕಾಲೇಜುಗಳನ್ನಲ್ಲದೆ, ರಾಜ್ಯದ ಎಲ್ಲಾ ಕಡೆ ವೃತ್ತಿಪರ ಶಿಕ್ಷಣ ಸಂಸ್ಥೆಗಳು ಮತ್ತು ವಿದ್ಯಾರ್ಥಿ ನಿಲಯಗಳ ಸ್ಥಾಪನೆಗೆ ನಾಂದಿಹಾಡಿದರು. ವಿವಿಧ ಕ್ಷೇತ್ರಗಳ ಪ್ರತಿಭಾವಂತ

ವ್ಯಕ್ತಿಗಳನ್ನು, ವಿದ್ಯಾರ್ಥಿಗಳನ್ನು ಹಾಗೂ ಅನೇಕ ಲೇಖಕರನ್ನು ಗುರುತಿಸಿ ಪುರಿದುಂಬಿಸಿದರು. ಲಿಂಗೈಕ್ಯರಾಗುವ ಮೊದಲೇ ಇವರು ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಶಿವಮೂರ್ತಿ ಸ್ವಾಮಿಗಳನ್ನು ನೇಮಿಸಿಕೊಂಡು ೧೯೯೧ ರಲ್ಲಿ ಅಧಿಕಾರವನ್ನು ನೀಡಿದರು. ನಂತರ ಮೂರುವರ್ಷಗಳ ಕಾಲ ವಿಶ್ರಾಂತ ಜೀವನ ನಡೆಸಿ ೧೯೯೪ ರಲ್ಲಿ ಲಿಂಗೈಕ್ಯರಾದರು.

ಶ್ರೀ ಶಿವಮೂರ್ತಿ ಶರಣರು: ೧೯೯೧ ರಲ್ಲಿ ಮಠದ ಅಧಿಕಾರವನ್ನು ವಹಿಸಿಕೊಂಡ ಶ್ರೀ ಶಿವಮೂರ್ತಿ ಶರಣರು ಇದಕ್ಕೂ ಪೂರ್ವದಲ್ಲಿ ಶಿರ್ಶಿ (ಉತ್ತರ ಕನ್ನಡ) ಮತ್ತು ಹಾವೇರಿ ಶಾಖಾಮಠಗಳ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು. ಹಾವೇರಿ ಯಲ್ಲಿ ಇದ್ದಾಗ ಅಂಧರ ಮತ್ತು ಅಂಗವಿಕಲರಿಗೆ ಆಶಾಕಿರಣವಾಗುವ ಶಾಲೆಯೊಂದನ್ನು ತೆರೆದರು. ಶರಣರು ಹಾವೇರಿ ಮಠದಲ್ಲಿದ್ದಾಗಲೇ ಸಾಮಾಜಿಕ, ಸಾಹಿತ್ಯಿಕ ಹಾಗೂ ವೈಚಾರಿಕ ವಿಚಾರಗಳಿಂದ ಪ್ರೌಢಿಮೆ ಸಾಧಿಸಿದ್ದರು. ತದನಂತರದಲ್ಲಿ ಇವರು ಮಠದ ಪೀಠಾಧಿಕಾರಿಗಳಾಗಿ ಅಧಿಕಾರ ವಹಿಸಿಕೊಂಡ ಮೇಲೆ ಸಾಹಿತ್ಯ ಮತ್ತು ಸಾಮಾಜಿಕ ಸೇವೆಯಲ್ಲಿ ಅತೀವ ಕಾಳಜಿ ತೋರಿಸುತ್ತಿದ್ದಾರೆ. ಹಿರಿಯ ಸ್ವಾಮಿಗಳ ನಿಧನಾನಂತರ ಹಿರಿಯ ಮಠದ ದೊಡ್ಡಹೊರೆ ಇವರ ಎಳೆ ಹೆಗಲುಗಳ ಮೇಲೆ ಬಿತ್ತು. ಇವರು ಅದನ್ನು ಸಮರ್ಥವಾಗಿ ನಿಭಾಯಿಸಿಕೊಂಡು ಹೋಗುತ್ತಿದ್ದಾರೆ.

ಶ್ರೀ ಶಿವಮೂರ್ತಿ ಶರಣರು ಉತ್ಸಾಹಿಗಳೂ ಸರಳರೂ, ಶರಣಪಂಥದ ಕಟ್ಟಾ ಅನುಯಾಯಿಗಳೂ ಆಗಿರುವ ಇವರು ಅಧಿಕಾರಕ್ಕೆ ಬಂದ ಮೇಲೆ ಮಠದ ಹಿರಿಯ ಗುರುಗಳ ಅನೇಕ ಯೋಜನೆಗಳನ್ನು ಪೂರೈಸಿದ್ದಲ್ಲದೆ ಮಠವನ್ನು ಹೊಸದಿಕ್ಕಿನಲ್ಲಿ ಕೊಂಡೊಯ್ಯಲು ತಮ್ಮದೇ ಆದ ಕಲ್ಪನೆಯಂತೆ ಬೆಳೆಸತೊಡಗಿದ್ದಾರೆ. ಹಳ್ಳಿಗರಿಗೆ ಪ್ರಯೋಜನವಾಗುವ ಶ್ರೀ ಬಸವೇಶ್ವರ ಗ್ರಾಮವಿಕಾಸ ವೇದಿಕೆಯನ್ನು ಸ್ಥಾಪಿಸಿ ಗ್ರಾಮಗಳಲ್ಲಿ ಪಾದಯಾತ್ರೆಯ ಮೂಲಕ ಜನರಲ್ಲಿ ಜಾಗೃತಿಯುಂಟು ಮಾಡುವ ಉಪದೇಶ ಗಳು, ದೃಶ್ಯರೂಪಕಗಳನ್ನು ನೀಡಿತ್ತಾ, ವರದಕ್ಷಿಣೆ, ಮೂಢನಂಬಿಕೆ, ದುಶ್ಚಟ ಇವುಗಳನ್ನು ತೊರೆಯುವಂತೆ ಪ್ರೇರೆಪಿಸಿ ಸಾಕ್ಷರತೆ, ವೈಚಾರಿಕತೆ, ಪರಿಸರ ಸಂರಕ್ಷಣೆ ಇವುಗಳ ಬಗ್ಗೆ ತಿಳುವಳಿಕೆ ನೀಡಿ ಗ್ರಾಮೀಣ ಪ್ರದೇಶದಲ್ಲಿ ಚಳುವಳಿಯನ್ನೇ ಮಾಡಿದ್ದಾರೆ. ಇವರ ಕಲ್ಪನೆಯ ಪ್ರಸಾದ ಬಸವಕೇಂದ್ರವನ್ನು ಸ್ಥಾಪಿಸಿ ನಾಡಿನ ನಾನಾ ಭಾಗಗಳಲ್ಲಿ ಇದರ ಉಪಶಾಖೆಗಳನ್ನು ಪ್ರಾರಂಭಿಸಿ ಈ ಮೂಲಕ ಶರಣರು ಸಂದೇಶಗಳನ್ನು ಸಾರುವ ವೇದಿಕೆಗಳನ್ನಾಗಿ ರೂಪಿಸಿ ವಚನ ಸಾಹಿತ್ಯವನ್ನು ಜನರಿಗೆ ಮುಟ್ಟಿಸುವ ನಿಟ್ಟಿನಲ್ಲಿ ಯಶಸ್ವಿಯಾಗುತ್ತಿದ್ದಾರೆ.

ಶರಣ ಸ್ಮರಣೋತ್ಸವಗಳು: ಶ್ರೀ ಶಿವಮೂರ್ತಿ ಶರಣರು ಪ್ರಾರಂಭಿಸಿದ ಶರಣಸ್ಮರಣೋತ್ಸವ ಕಾರ್ಯಕ್ರಮ ವಿನೂತನ ವಾಗಿದೆ. ಶರಣರ ಜೀವನ ಭೋದನೆ ಮತ್ತು ಸಾಧನೆಗಳನ್ನು ಸ್ಮರಿಸಿ ಶರಣ ಸಾಹಿತ್ಯ ಸಂವರ್ಧನೆಗೆ ಶರಣಸ್ಮರಣೋತ್ಸವವನ್ನು ಪ್ರಾರಂಭಿಸಿ ಪ್ರತಿ ತಿಂಗಳು ಐದರಂದು ಸಂಜೆ ಮಠದ ಆವರಣದಲ್ಲಿ ಕಾರ್ಯಕ್ರಮವನ್ನು ರೂಪಿಸಿ ವೈಚಾರಿಕ ಉಪನ್ಯಾಸಗಳು, ಶರಣತತ್ತ್ವ ಪ್ರಸಾರ ಮಾಡುವ ವೇದಿಕೆಯನ್ನಾಗಿ ರೂಪಿಸಿಕೊಂಡಿದ್ದಾರೆ. ಈ ಕಾರ್ಯಕ್ರಮವನ್ನು ನಾಡಿನ ತಮ್ಮ ಎಲ್ಲಾ ಶಾಖಾಮಠಗಳಲ್ಲಿಯೂ ಬೇರೆ ಬೇರೆ ದಿನಗಳಲ್ಲೂ ನಡೆಯುವಂತೆ ಮಾಡಿರುವುದಲ್ಲದೆ ಗುರುಗಳು ಈ ನಿಗಧಿತ ಕಾರ್ಯಕ್ರಮ ಗಳಲ್ಲಿ ಪಾಲ್ಗೊಂಡು ಶರಣತತ್ತ್ವವನ್ನು ಪ್ರಚಾರ ಪಡಿಸುತ್ತಿದ್ದಾರೆ.

ಸಹಜ ಶಿವಯೋಗ: ವೀರಶೈವ ಧರ್ಮದ ಬಗ್ಗೆ ತಿಳುವಳಿಕೆ ಕೊಡುವ ಸಲುವಾಗಿ ಸಹಜ ಶಿವಯೋಗ ಶಿಬಿರವನ್ನು ಪ್ರಾರಂಭಿಸಿ ಹತ್ತು ದಿನಗಳ ಕಾಲ ಈ ಶಿಬಿರದಲ್ಲಿ ಶರಣರ ಆಚಾರ ವಿಚಾರ, ಪಂಚಾಚಾರ, ಷಟ್‌ಸ್ಥಲ, ಅಷ್ಟಾವರಣ, ಲಿಂಗಪೂಜೆ, ಶಿವಯೋಗ ಮುಂತಾದ ಧಾರ್ಮಿಕ ಸೂಕ್ಷ್ಮಗಳನ್ನು ಉದಾಹರಣೆ ಮತ್ತು ನಿದರ್ಶನಗಳೊಂದಿಗೆ ತಿಳಿಸಲಾಗುವುದು ಈ ಶಿಬಿರದಲ್ಲಿ ಎಲ್ಲಾ ಜಾತಿಯ ಆಸಕ್ತರಿಗೆ ಅವಕಾಶವನ್ನು ಕಲ್ಪಿಸಿಕೊಡಲಾಗುತ್ತದೆ. ಅಲ್ಲದೆ ಶರಣ ಧರ್ಮದ ವ್ಯಾಪಕ ಅಧ್ಯಯನ ಮಾಡುವ ಆಸಕ್ತರಿಗಾಗಿ ಬಸವತತ್ತ್ವ ಮಹಾವಿದ್ಯಾಲಯವನ್ನು ಸ್ಥಾಪಿಸಲಾಗಿದೆ. ಮತ್ತು ಮನೆಯಲ್ಲಿ ಮಹಾಮನೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಆಸಕ್ತರ ಗಮನ ಸೆಳೆದಿದ್ದಾರೆ. ಪ್ರಸಿದ್ಧ ದಸರ ಉತ್ಸವವನ್ನು ಇವರು ಶರಣ ಸಾಂಸ್ಕೃತಿಕ ಉತ್ಸವ ಎಂದು ಮರುನಾಮಕರಣ ಮಾಡಿ ಇದರಡಿಯಲ್ಲಿ ಅನೇಕ ಪ್ರಗತಿಪರ ಕಾರ್ಯಕ್ರಮಗಳ ಅಳವಡಿಕೆಗೆ ಕಾರಣಕರ್ತರಾಗಿದ್ದಾರೆ.

ನಿರಾಡಂಬರ: ಶ್ರೀ ಶಿವಮೂರ್ತಿ ಶರಣರು ಅವೈಜ್ಞಾನಿಕ, ವಾಸ್ತವಿಕವಲ್ಲದ ವಿಚಾರಗಳ ವಿರೋಧಿಗಳು. ಇವರು ಸಂಪ್ರದಾಯ

ದಲ್ಲಿರುವಂತಹ ಮೂಢನಂಬಿಕೆಗಳನ್ನು ಧಿಕ್ಕರಿಸಿ ವೈಚಾರಿಕ ಪ್ರಜ್ಞೆಯಿಂದ ವಾಸ್ತವ ಬದುಕನ್ನು ರೂಢಿಸಿಕೊಂಡರು. ಇದರ ಫಲವೇ ಪರಂಪರೆಯಿಂದ ಬಂದಿದ್ದ ಜಗದ್ಗುರು ಎಂಬ ಪದವನ್ನು ತ್ಯಜಿಸಿ ಜಗಜ್ಯೋತಿ ಬಸವೇಶ್ವರರೇ ಜಗದ್ಗುರುಗಳು ನಾವು ಅವರ ಅನುಯಾಯಿಗಳು, ತತ್ತ್ವಪ್ರಚಾರಕರು ಎಂದು ಸ್ಪಷ್ಟೀಕರಣ ನೀಡಿದರು. ಇಂತಹ ಉದಾತ್ತ ಧ್ಯೇಯೋದ್ದೇಶಗಳನ್ನು ಹೊಂದಿರುವ ಇವರು ತಮ್ಮ ಹೆಸರಿಗಂಟಿಕೊಂಡಿದ್ದ ಸ್ವಾಮಿಗಳು ಎಂಬ ಪದವನ್ನೂ ತ್ಯಜಿಸಿ ಸ್ವಾಮಿಗಳು ಎಂಬ ಪದದ ಬದಲಿಗೆ ಶರಣರು ಎಂಬ ಪದವನ್ನು ಸೇರಿಸಿ ನಿಜವಾದ ಶರಣ ತತ್ತ್ವಪ್ರಚಾರಕರಾಗಿರುವ ಇವರು ಸದಾ ಸಂಚಾರಮೂರ್ತಿಗಳಾಗಿ ಜಂಗಮ ಪದಕ್ಕೆ ನಿಜರೂಪವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕೇವಲ ಪೂಜೆಯಿಂದ ಆತ್ಮೋದ್ಧಾರ ಸಾಧ್ಯವಿಲ್ಲ ಕಾಯಕದಿಂದ ಆತ್ಮೋದ್ಧಾರ ಸಾಧ್ಯ ಎಂಬುದನ್ನು ನಂಬಿ ಆಡಂಬರದ ಅಡ್ಡ ಪಲ್ಲಕ್ಕಿ ಉತ್ಸವಕ್ಕೆ ಬದಲಾಗಿ ಇವರು ನಿರಾಡಂಬರ ಪಾದಯಾತ್ರೆಯನ್ನು ಇಷ್ಟಪಡುತ್ತಾರೆ. ಸಮಾಜದ ಹಿಂದುಳಿದ ಜನಾಂಗದ ದಲಿತರು, ನಾಯಕರು, ಕುರುಬರು ಮುಂತಾದವರಿಗೆ ಲಿಂಗದೀಕ್ಷೆ ನೀಡುವುದರ ಮೂಲಕ ಇವರು ವಿಶಾಲ ದೃಷ್ಟಿ ಕೋನವನ್ನು ತೋರಿಸಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ತಾಲ್ಲೂಕಿನಲ್ಲಿ ವಾಸಿಸುತ್ತಿರುವ ಬಗ್ಗರು (ತರೀಕೆರೆ ತಾಲ್ಲೂಕಿನ ಬಗ್ಗವಳ್ಳಿ ಗ್ರಾಮದ ಮೂಲವಾಸಿಗಳು ಇವರಾಗಿದ್ದು ದುಡಿಮೆಯ ದೃಷ್ಟಿಯಿಂದ ಇಲ್ಲಿಗೆ ಬಂದು ನೆಲೆಸಿದ್ದಾರೆ) ಎಂಬ ಜನಾಂಗಕ್ಕೆ ಸಾಮೂಹಿಕವಾಗಿ ಲಿಂಗದೀಕ್ಷೆ ನೀಡಿ ವೀರಶೈವರಾಗಿ ಪರಿವರ್ತಿಸಿರುವುದು ಇವರ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಅತಿ ಮುಖ್ಯವಾದ ಸಾಧನೆಯಾಗಿದೆ. ಪೂಜೆ ಮತ್ತು ಇತರೆ ಧಾರ್ಮಿಕ ವಿಧಿಗಳಲ್ಲಿ ಸಂಸ್ಕೃತದ ಮಂತ್ರಗಳಿಗೆ ಬದಲಾಗಿ ಶರಣರ ವಚನಗಳಿಗೆ ಆದ್ಯತೆ ನೀಡುತ್ತಾರೆ. ಹಿಂದೂ ಮುಸಲ್ಮಾನರ ಗಲಭೆಗಳು ತಲೆದೋರಿದಾಗ, ಸಮಾಜದಲ್ಲಿ ಶಾಂತಿ ಸಾಮರಸ್ಯ ಕಾಪಾಡಲು ಸರ್ವತಾ ಹೆಣಗುತ್ತಾರೆ. ಸವರ್ಣೀಯರು ಮತ್ತು ದಲಿತರ ನಡುವೆ ಗಲಭೆ ಆದಾಗಲೂ ಅಷ್ಟೆ. ಇತ್ತೀಚಿನ ಭೂಕಂಪದಲ್ಲಿ ನೊಂದ ಸಂತ್ರಸ್ತರಿಗೆ ಆರ್ಥಿಕ ಸಹಾಯ ಮಾಡಿದ್ದಾರೆ. ಯಾವಯಾವ ಜಾತ್ರೆ ಉತ್ಸವಗಳಲ್ಲಿ ಮಹಿಳೆಯರಿಗೆ ಪ್ರವೇಶ ನಿಷಿದ್ಧವಾಗಿತ್ತೋ ಅಂಥಕಡೆಗಳಲ್ಲಿ ಅವರಿಗೆ ಪ್ರವೇಶಾವಕಾಶ ಕೊಡಿಸುವ ಅಸೀಮ ಧೈರ್ಯ ಮತ್ತು ಮಾನವೀಯ ಗುಣತೋರಿಸಿದ್ದಾರೆ. ಸೆರೆ ಮನೆಗಳಿಗೆ ಭೇಟಿ ನೀಡಿ ಧೈರ್ಯಗುಂದಿದ ಸೆರೆಯಾಳುಗಳಿಗೆ ಸಾಂತ್ವನ ಹೇಳುವ ಕಾರ್ಯವನ್ನು ಮಾಡುತ್ತಾರೆ. ಇವರು ಪರಂಪರಾನುಗತವಾಗಿ ಬಂದ ಜಗದ್ಗುರು ಎಂಬ ನಾಮಾಂಕಿತವನ್ನು ತ್ಯಜಿಸಿದ್ದಾರೆ.

ಧಾರ್ಮಿಕ ಸಂಸ್ಥೆಯ ಮುಖ್ಯಸ್ಥರಾಗಿದ್ದರೂ ಕೂಡ ಇವರು ತಮ್ಮ ಕಾರ್ಯ ಮತ್ತು ಆಲೋಚನೆಗಳಲ್ಲಿ ಪ್ರಗತಿ ಪರರು ಹಾಗೂ ವಿಚಾರವಂತರು ಆಗಿದ್ದಾರೆ. ಇವರು ಅನೇಕ ವೈಚಾರಿಕ ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಚಿಂತನ ತರಂಗ, (ಭಾಗ ಒಂದು ಮತ್ತು ಎರಡು) ವಚನ ಸುಮನ, ನಿಮ್ಮೊಂದಿಗೆ, ನಮ್ಮ ಸುತ್ತ, ಅರಿವಿನ ಗುರು, ಶ್ರೀ ಜಯದೇವ ಜಗದ್ಗುರುಗಳು ಮತ್ತು ಬೆಳಕಿನೆಡೆಗೆ ಮುಖ್ಯವಾದವುಗಳು. ಅವುಗಳಲ್ಲಿ ಕೆಲವು ಆಂಗ್ಲಭಾಷೆಗೆ ಅನುವಾದಗೊಂಡಿವೆ.

ತನ್ನ ಸಾಮಾಜಿಕ ಕಳಕಳಿಯಿಂದಾಗಿ ಬೃಹನ್ಮಠವು ಅಪಾರ ಜನಪ್ರಿಯತೆ ಹಾಗೂ ಜನಮನ್ನಣೆ ಗಳಿಸಿದೆ. ಭಕ್ತರ ಕಾಣಿಕೆಯನ್ನು ಸಮಾಜದ ರಚನಾತ್ಮಕ ಕಾರ್ಯಗಳಿಗೆ ತೊಡಗಿಸುತ್ತದೆ. ಸ್ವಾಮಿಗಳ ಉದಾರ ನೀತಿ, ಕೆಲಸಗಾರರ ತಂಡಗಳನ್ನೇ ನಿರ್ಮಿಸಿ, ಸಾಮಾಜಿಕ ಚಟುವಟಿಕೆಗಳ ಅನುಷ್ಠಾನಕ್ಕೆ ಕಂಕಣ ಬದ್ಧರನ್ನಾಗುವಂತೆ ಮಾಡಿರುವುದು ನಿಜಕ್ಕೂ ಶ್ಲಾಘನೀಯವಾದುದೇ ಆಗಿದೆ.

ಪೀಠದ ಗುರುಗಳು:

ಗುರುಗಳ ಹೆಸರುಗಳು	ಐಕ್ಯಸ್ಥಳ	ಇಸವಿ
೧. ಶ್ರೀ ಮುರಿಗಿ ಶಾಂತವೀರದೇಶಿಕರು (ಮುರಿಗಿ ಸ್ವಾಮಿಗಳು ೧.)	ಚಿತ್ರದುರ್ಗ	(೧೬೪೨-೧೭೦೩)
೨. ಶ್ರೀ ಗುರುಸಿದ್ಧ ಸ್ವಾಮಿಗಳು (ಮುರಿಗಿ ಸ್ವಾಮಿಗಳು ೨.)	ಆನಂದಪುರ	(೧೭೦೩-೧೭೨೫)

೩. ಶ್ರೀ ಸ್ವಾದಿ ಚನ್ನಬಸವ ಸ್ವಾಮಿಗಳು	ಹಿರೇಮಾಗಡಿ	(೧೭೨೯-?)
೪. ಶ್ರೀ ಶಿರಟ್ಟಿ ಸಿದ್ಧಲಿಂಗ ಸ್ವಾಮಿಗಳು	ಚಂಗಡಿಹಳ್ಳಿ	(?-೧೭೫೭)
೫. ಶ್ರೀ ನಾಯಕನಹಟ್ಟಿ (ದೊಡ್ಡ) ಗುರುಪಾದ ಸ್ವಾಮಿಗಳು	ಗುರುಮಠಕಲ್ಲು	(೧೭೫೭-?)
೬. ಶ್ರೀ ಮೂರು ಸಾವಿರದ ಸಣ್ಣ ಗುರುಪಾದ ಸ್ವಾಮಿಗಳು	ಚಿತ್ರದುರ್ಗ	(?-೧೭೭೯)
೭. ಶ್ರೀ ಮೂರು ಸಾವಿರದ ಸಿದ್ಧಲಿಂಗ ಸ್ವಾಮಿಗಳು	ಹಿರೇಮಾಗಡಿ	(೧೭೭೯-?)
೮. ಶ್ರೀ ಒಪ್ಪತ್ತಿನ ಚನ್ನವೀರ ಸ್ವಾಮಿಗಳು	ತಿಳುವಳ್ಳಿ	(?-?)
೯. ಶ್ರೀ ವ್ಯಾಕರಣದ ಸಿದ್ಧಲಿಂಗ ಸ್ವಾಮಿಗಳು	ಹಿರೇಮಾಗಡಿ	(?-?)
೧೦. ಶ್ರೀ ನೈಘಂಟಿನ ಸಿದ್ಧಬಸವ ಸ್ವಾಮಿಗಳು	ಹಾವೇರಿ	(?-೧೭೯೬)
೧೧. ಶ್ರೀ ಸಣ್ಣಬರಹದ ರಾಚವಟಿ ಸ್ವಾಮಿಗಳು	ಚಿತ್ರದುರ್ಗ	(೧೭೯೬-೧೮೩೨)
೧೨. ಶ್ರೀ ಸಾವಳಗಿ ಗುರುಶಾಂತ ಸ್ವಾಮಿಗಳು	ಚಿತ್ರದುರ್ಗ	(೧೮೩೨/೩೫-೧೮೪೫)
೧೩. ಶ್ರೀ ಸಣ್ಣಪಾದದ ಚನ್ನವೀರ ಸ್ವಾಮಿಗಳು	ಚಿತ್ರದುರ್ಗ	(೧೮೪೫-೧೮೬೨)
೧೪. ಶ್ರೀ ಸಿರಸಂಗಿ ಮಹಾಲಿಂಗ ಸ್ವಾಮಿಗಳು	ಸಿರಸಂಗಿ	(೧೮೬೩-೧೮೭೯)
೧೫. ಶ್ರೀ ಹೆಬ್ಬಾಳು ರುದ್ರ ಸ್ವಾಮಿಗಳು	ಚಿತ್ರದುರ್ಗ	(೧೮೭೮/೭೯-೧೮೮೧)
೧೬. ಶ್ರೀ ಬ್ಯಾಡಗಿ ಮುಪ್ಪಿನ ಸ್ವಾಮಿಗಳು	ಬ್ಯಾಡಗಿ	(೧೮೮೧-೧೯೦೩)
೧೭. ಶ್ರೀ ಜಯದೇವ ಸ್ವಾಮಿಗಳು	ದೇವನಗಿರಿ	(೧೯೦೩-೧೯೫೬)
೧೮. ಶ್ರೀ ಜಯ ವಿಭವ ಸ್ವಾಮಿಗಳು	ಚಿತ್ರದುರ್ಗ	(೧೯೪೯/ ೫೬-೧೯೬೪)
೧೯. ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು	ಹೊಳಲ್ಕೆರೆ	(೧೯೬೪-೧೯೯೪)
೨೦. ಶ್ರೀ ಶಿವಮೂರ್ತಿ ಸ್ವಾಮಿಗಳು (ಈಗಿನವರು)		(೧೯೯೧ -?)

ಈ ರೀತಿ ಮಠದ ಪರಂಪರೆ ಬೆಳೆದುಬಂದಿದ್ದು ಪರಂಪರೆಯ ಎಲ್ಲಾ ಗುರುಗಳು ಒಂದಲ್ಲಾ ಒಂದುವಿಧದಲ್ಲಿ ಸಾಧನೆಯಶಿಖರವನ್ನುಮುಟ್ಟಿ ಮುರುಘಾಮಠವನ್ನು ಪ್ರಬುದ್ಧಗೊಳಿಸಿದ್ದಾರೆ.ಶರಣಧರ್ಮವನ್ನು ಪ್ರಚಾರಪಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಶೈಕ್ಷಣಿಕ ಸೇವೆ: ಸಮಾಜದಲ್ಲಿ ಅಕ್ಷರಜ್ಞಾನ ಇಲ್ಲದೆ ಹೋದರೆ ಜ್ಞಾನದ ಜ್ಯೋತಿಯನ್ನು ಬೆಳಗಿಸುವುದು ಕಷ್ಟ ಎಂಬುದನ್ನು ಅರಿತು ಪತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿಯೇ ಶ್ರೀ ಮಹಾಲಿಂಗ ಸ್ವಾಮಿಗಳು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ಜ್ಞಾನದದೀವಿಗೆಯನ್ನು ಹಚ್ಚಿದ್ದರು. ನಂತರ ಶ್ರೀ ಜಯದೇವ ಸ್ವಾಮಿಗಳ ಕಾಲದಲ್ಲಿ ಶಿಕ್ಷಣ ಕ್ಷೇತ್ರ ವಿಸ್ತಾರಗೊಂಡಿತು. ನಂತರ ಶ್ರೀ ಮಲ್ಲಿಕಾರ್ಜುನ ಮುರುಘ ರಾಜೇಂದ್ರ ಸ್ವಾಮಿಗಳ ಕಾಲದಲ್ಲಿ ಹೊಸ ಆಯಾಮವನ್ನು ಪಡೆದು ಬೆಳೆಯಿತು. ಪ್ರಸ್ತುತ ಗುರುಗಳಾದ ಶ್ರೀ ಶಿವಮೂರ್ತಿ ಸ್ವಾಮಿಗಳ ಅವಧಿಯಲ್ಲಿ ಇನ್ನೂ ಹೆಚ್ಚು ಹೆಚ್ಚು ಅಭಿವೃದ್ಧಿ ಪಥದಲ್ಲಿ ಸಾಗುವ ಆಶಾದಾಯಕ ಶುಭ ಸೂಚನೆಗಳು ಕಾಣುತ್ತಿವೆ.

ಮಠದ ವತಿಯಿಂದ ವೃತ್ತಿಶಿಕ್ಷಣ ಸಂಸ್ಥೆಗಳನ್ನೂ ಸ್ಥಾಪಿಸಲಾಗಿದೆ. ಇದರಲ್ಲಿ ಉಲ್ಲೇಖಾರ್ಹ ಅಂಶವೆಂದರೆ ಈ ಸಂಸ್ಥೆಗಳಲ್ಲಿ ಅಭ್ಯಾಸಮಾಡುತ್ತಿರುವ ಮುಕ್ಕಾಲು ಪಾಲು ವಿದ್ಯಾರ್ಥಿಗಳು ಗ್ರಾಮೀಣ ಹಿನ್ನೆಲೆಯಿಂದ ಬಂದವರು. ಶಿಕ್ಷಣದ ವ್ಯಾಪಕ ಪ್ರಸಾರಕ್ಕಾಗಿ ಮಠವು ಉಚಿತಪ್ರಸಾದ ನಿಲಯಗಳನ್ನು ಸ್ಥಾಪಿಸಿರುವುದು ಮಹತ್ತರವಾಗಿದೆ. ಪೀಠದಿಂದ ನಡೆಸಲ್ಪಡುತ್ತಿರುವ ಈ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣ ಪಡೆದ ಅಸಂಖ್ಯಾತ ವಿದ್ಯಾರ್ಥಿಗಳು ದೇಶವಿದೇಶಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ಅನುಪಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಇವರು ಪೀಠದಿಂದ ಪಡೆದ ಮೌಲ್ಯಯುತ ಶಿಕ್ಷಣಕ್ಕೆ ಮಠವನ್ನು ಎಂದಿಗೂ ಕೃತಜ್ಞತೆಯಿಂದ ಸ್ಮರಿಸುತ್ತಾರೆ. ನರ್ಸರಿಯಿಂದ ಇಂಜಿನೀಯರಿಂಗ್ ಕಾಲೇಜವರೆಗೆ ವಿದ್ಯಾಸಂಸ್ಥೆಗಳು ಕವಲೊಡೆದು ಬೆಳೆದಿವೆ. ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ ಅಕ್ಷರ ಕಲಿಕೆಯಿಂದ ವಂಚಿತರಾಗುತ್ತಿದ್ದ ಗ್ರಾಮೀಣ ಮಕ್ಕಳಿಗೆ ಅಕ್ಷರ ಜ್ಞಾನವನ್ನು ನೀಡುವ ನಿಟ್ಟಿನಲ್ಲಿ ಮಠವು ಮಹತ್ತರವಾದ ಸಾಧನೆಯನ್ನು ಮಾಡಿದೆ.

ಮಠದ ವಿವಿಧ ಸಂಸ್ಥೆಗಳು:

- ಬಾಲವಿಹಾರ (೨)
- ಶಿಶುವಿಹಾರ (೪)
- ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳು (೪೦)
- ಪ್ರೌಢಶಾಲೆಗಳು (೨೫)
- ತಾಂತ್ರಿಕ ಕಾಲೇಜು (೧)
- ವಿದ್ಯಾರ್ಥಿನಿಲಯಗಳು (೧೫)
- ಕೈಗಾರಿಕಾ ತರಬೇತಿ ಕೇಂದ್ರಗಳು (೩)
- ಗ್ರಂಥಾಲಯ (೧)
- ಸಂಗೀತ, ಕಲೆ ಮತ್ತು ನಾಟಕ ಶಾಲೆ (೧)
- ವಚನ ಶಾಲೆ(೧)
- ನರ್ಸಿಂಗ್ ಕಾಲೇಜು (೧)
- ಫಾರ್ಮಸಿ ಕಾಲೇಜು (೧)
- ದಂತ ಆಸ್ಪತ್ರೆ (೧)
- ಪದವಿ ಪೂರ್ವಕಾಲೇಜುಗಳು (೭)
- ಪದವಿ ಕಾಲೇಜುಗಳು (೮)
- ಕಾನೂನು ಕಾಲೇಜು (೧)
- ಪಾಲಿಟೆಕ್ನಿಕ್ ಕಾಲೇಜುಗಳು (೩)
- ದಂತ ವೈದ್ಯಕೀಯ ಕಾಲೇಜು (೧)
- ವಾಚನಾಲಯಗಳು (೨)
- ಚಿತ್ರಕಲಾ ಶಾಲೆ(೧)
- ಅಂಗವಿಕಲ ಮಕ್ಕಳ ಶಾಲೆಗಳು (೬)
- ವೃದ್ಧಾಶ್ರಮ (೧)
- ಮಠಗಳುಮತ್ತು ದೇವಾಲಯಗಳು (೧೮೦)
- ಸಾಮಾಜಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳು (೫)
- ವಿಶ್ವಸ್ಥ ಮಂಡಳಿಗಳು (೨)

ಗ್ರಾಮ ವಿಕಾಸ ವೇದಿಕೆ: ಗ್ರಾಮೀಣರಲ್ಲಿ ವೈಜ್ಞಾನಿಕ ಆಲೋಚನಾ ಕ್ರಮ ಮತ್ತು ಜಾಗೃತಿಯನ್ನು ಉತ್ತೇಜಿಸುವ ಸಲುವಾಗಿ, ಈ ವೇದಿಕೆಯು ೧೯೭೨ ರಲ್ಲಿ ಶ್ರೀ ಶಿವಮೂರ್ತಿ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟಿತು. ಈ ವೇದಿಕೆಯು ಮಹತ್ವ ಪೂರ್ಣ ಗುರಿಯನ್ನಿಟ್ಟುಕೊಂಡು ಕಾರ್ಯ ನಿರ್ವಹಿಸುತ್ತಿದೆ.

೧. ಮದ್ಯಸೇವನೆ,ಧೂಮಪಾನ,ವರದಕ್ಷಿಣೆ,ಮಹಿಳೆ ಮತ್ತು ದಲಿತರ ಬಗೆಗಿನ ತಾತ್ಸಾರಭಾವನೆ ಮುಂತಾದವುಗಳ ನಿವಾರಣೆ.

೨. ಸಂಪೂರ್ಣ ಸಾಕ್ಷರತೆ, ಮಹಿಳಾ ಶಿಕ್ಷಣ,ಅಂತರ ಜಾತೀಯ ವಿವಾಹಗಳು, ವಿಧವಾ ವಿವಾಹಗಳು, ಕರ್ತವ್ಯದ ಬಗ್ಗೆ ಮಾಹೇಶ್ವರ ನಿಷ್ಠೆ, ಸ್ವಚ್ಛತೆ, ಪರಿಸರ ಸಂರಕ್ಷಣೆ, ಸಣ್ಣಉಳಿತಾಯ ಯೋಜನೆ, ಪುರಾತನ ವಸ್ತುಗಳು, ಸ್ಮಾರಕಗಳು ಹಾಗೂ ತಾಳೆಗರಿಗಳ ಸಂಗ್ರಹಣೆ ಮತ್ತು ಸಂರಕ್ಷಣೆ, ಶರಣರ ತತ್ವಗಳನ್ನು ಪ್ರಸಾರ ಮಾಡುವುದು ಮುಂತಾದ ಕಾರ್ಯಗಳನ್ನು ಪ್ರೋತ್ಸಾಹಿಸುವುದು.

ಪೀಠದಲ್ಲಿ ಕನಿಷ್ಠ ಪಕ್ಷ ಒಂದು ದಿವಸ ವೇದಿಕೆಯು ಒಂದು ಹಳ್ಳಿಯಲ್ಲಿ ಕಾರ್ಯಕ್ರಮವೊಂದನ್ನು ಹಮ್ಮಿಕೊಂಡು, ತನ್ನ ಧ್ಯೇಯೋದ್ದೇಶಗಳನ್ನು ಹಾಡುಗಳು, ನಾಟಕಗಳು, ರೂಪಕಗಳು, ಭಿತ್ತಿ ಪತ್ರ, ಉಪನ್ಯಾಸ ಮುಂತಾದವುಗಳ ಮೂಲಕ ಮನವರಿಕೆ ಮಾಡಿಕೊಡಲು ಪ್ರಯತ್ನಿಸುತ್ತಿದೆ. ಹಳ್ಳಿಯ ಬೀದಿಬೀದಿಗಳಲ್ಲಿ, ದಲಿತರ ಕಾಲೋನಿಯ ಬೀದಿಯಾದಿಯಾಗಿ ಪಾದಯಾತ್ರೆಗಳನ್ನು ಏರ್ಪಡಿಸಲಾಗುತ್ತಿದೆ. ಇಲ್ಲಿಯವರೆಗೆ ಎಂಬತ್ತು ಹಳ್ಳಿಗಳಲ್ಲಿ ಈ ಬಗೆಯ ಕಾರ್ಯಕ್ರಮಗಳನ್ನು ಮುಗಿಸಿ ರುವ ವೇದಿಕೆಯು, ಆಯಾಯ ಹಳ್ಳಿಗಳಲ್ಲಿ ಈ ಕಾರ್ಯ ಮುಂದುವರೆಸಿಕೊಂಡು ಹೋಗಲು ಸ್ಥಳೀಯ ಶಾಖೆಗಳನ್ನು ಪ್ರಾರಂಭಿಸಿದೆ. ಪ್ರಾಯೋಗಿಕವಾಗಿ ಚಿತ್ರದುರ್ಗ ಸಮೀಪದ ಪುಟ್ಟ ಹಳ್ಳಿಯೊಂದನ್ನು ವೇದಿಕೆಯು ದತ್ತು ತೆಗೆದುಕೊಂಡು ವಿವಿಧ ಅಭಿವೃದ್ಧಿ ಯೋಜನೆಗಳ ಮೂಲಕ ಅದನ್ನು ಮಾದರಿ ಗ್ರಾಮವಾಗಿ ಅಭಿವೃದ್ಧಿಪಡಿಸಲು ಶ್ರಮಿಸುತ್ತಿದೆ.

ಗ್ರಾಮೀಣಾಭಿವೃದ್ಧಿ: ಗ್ರಾಮೀಣ ಪ್ರದೇಶಧ ಅಭಿವೃದ್ಧಿಯ ದೃಷ್ಟಿಯಿಂದ ಅದರಲ್ಲೂ ಗೃಹ ಕೈಗಾರಿಕೆಗಳ ಬೆಳವಣಿಗೆಗಳ ದೃಷ್ಟಿಯಿಂದ, ಎಸ್.ಜೆ.ಎಂ. ಗ್ರಾಮೀಣಾಭಿವೃದ್ಧಿ ಪ್ರತಿಷ್ಠಾನ ಮತ್ತು ಎಸ್.ಜೆ.ಎಂ.ಖಾದಿ ಗ್ರಾಮೋದ್ಯೋಗ ಸಹಕಾರ ಸಂಘ ಇವುಗಳನ್ನು ಸ್ಥಾಪಿಸಿ ಗ್ರಾಮಾಂತರ ಯುವಕರ ಅಭ್ಯುದಯಕ್ಕೆ ತೋಟಗಾರಿಕೆ, ಹೈನುಗಾರಿಕೆ, ಕೃಷಿ ಸಂಬಂಧಿ ತರಬೇತಿ ಕಾರ್ಯಕ್ರಮಗಳನ್ನು ನಡೆಸಿ ಸ್ವಾವಲಂಬನೆಯ ಬದುಕನ್ನು ರೂಪಿಸಿಕೊಳ್ಳಲು ನೆರವಾಗಿದೆ.

ಗ್ರಾಮಾಂತರ ಪ್ರದೇಶದ ಜನರಲ್ಲಿ ಹೊಸ ಜಾಗೃತಿಯನ್ನು ಮೂಡಿಸಲು ಶ್ರೀ ಬಸವೇಶ್ವರ ಗ್ರಾಮ ವಿಕಾಸ

ವೇದಿಕೆಯನ್ನು ಸ್ಥಾಪಿಸಿ ಈ ಮೂಲಕ ಮದ್ಯಪಾನ ಮೊದಲಾದ ದುಶ್ಚಟಗಳ ನಿರ್ಮೂಲನೆ, ವರದಕ್ಷಿಣೆ ನಿರ್ಮೂಲನೆ, ದಲಿತರು ಮತ್ತು ಸ್ತ್ರೀಯರ ಬಗೆಗಿನ ಕೀಳರಿಮೆ ನಿವಾರಣೆ, ಸಾಕ್ಷರತೆ, ವಿಧವಾ ವಿವಾಹ, ಸಾಮೂಹಿಕ ವಿವಾಹಗಳು, ಅಂತರ್‌ಜಾತಿ ವಿವಾಹಗಳು, ಪರಿಸರ ಸಂರಕ್ಷಣೆ, ಶರಣತತ್ತ್ವ ಪ್ರಚಾರ ಇವೇ ಮೊದಲಾದ ಧ್ಯೆಯೋದ್ದೇಶಗಳ ಅನುಷ್ಠಾನಕ್ಕಾಗಿ ತಿಂಗಳಿಗೊಂದರಂತೆ ಒಂದು ಗ್ರಾಮದಲ್ಲಿ ಕಾರ್ಯಕ್ರಮವನ್ನು ರೂಪಿಸಿ ಗ್ರಾಮೀಣ ಜನರಲ್ಲಿ ಜಾಗೃತಿಯನ್ನುಂಟು ಮಾಡಲಾಗುತ್ತಿದೆ. ಶ್ರೀ ಬಸವೇಶ್ವರ ಗ್ರಾಮವಿಕಾಸ ವೇದಿಕೆಯಡಿ ಒಂದು ಸಣ್ಣ ಗ್ರಾಮವನ್ನು ದತ್ತು ತೆಗೆದುಕೊಂಡು ಮಾದರಿ ಗ್ರಾಮವನ್ನಾಗಿ ರೂಪಿಸುವ ನಿಟ್ಟಿನಲ್ಲಿ ವೇದಿಕೆ ಕಾರ್ಯೋನ್ಮುಖವಾಗಿದೆ. ಈಗ ಬಸವಕೇಂದ್ರ ಸ್ಥಾಪನೆಗೊಂಡ ಮೇಲೆ ಈ ಎಲ್ಲಾ ಕಾರ್ಯಗಳು ಬಸವಕೇಂದ್ರದ ಅಡಿಯಲ್ಲಿ ಮುಂದುವರೆದಿದ್ದು ಗ್ರಾಮೀಣರ ಬದುಕಿನಲ್ಲಿ ಆಶಾಕಿರಣವನ್ನು ಮೂಡಿಸಿದೆ.

ಸಹಾಯ ಹಸ್ತ: ಸಂಕಷ್ಟದಲ್ಲಿರುವವರಿಗೆ ಬೃಹನ್ಮಠವು ಸಹಾಯ ಹಸ್ತ ನೀಡುತ್ತಾ ಬಂದಿದೆ. ಕಳೆದ ಶತಕದಲ್ಲಿ ಭೀಕರ ಬರಗಾಲ ತಲೆದೋರಿದಾಗ, ಈ ಮಠವು ಗಂಜಿ ಕೇಂದ್ರಗಳನ್ನು ತೆರೆದು ಅನೇಕ ಜನರ ಜೀವ ಕಾಪಾಡಿತು. ಬಡ ಕುಟುಂಬಗಳಿಂದ ಬರುವ ವಿದ್ಯಾರ್ಥಿಗಳ ಸಲುವಾಗಿ ಉಚಿತ ಪ್ರಸಾದ ನಿಲಯಗಳನ್ನು ತೆರೆಯಲಾಗಿದೆ. ನಿರಾಶ್ರಿತ ದಲಿತರು ಹಾಗೂ ಹಿಂದುಳಿದವರಿಗೆ ತಮ್ಮ ಸ್ವಂತ ಮನೆ ಕಟ್ಟಿಸಿಕೊಳ್ಳಲು ಮಠವು ಉಚಿತ ನಿವೇಶನಗಳನ್ನು ಹಂಚಿದೆ. ಅನೇಕ ವರ್ಷಗಳಿಂದಲೂ ಈ ಮಠವು ಸಾರ್ವಜನಿಕರಿಗೆ ನ್ಯಾಯವನ್ನು ಒದಗಿಸುವ ನ್ಯಾಯಾಲಯವಾಗಿ ಸೇವೆ ಸಲ್ಲಿಸುತ್ತಿದೆ. ಸರಳ ಸಾಮೂಹಿಕ ವಿವಾಹಗಳನ್ನು ನಡೆಸುವಲ್ಲಿ ದಾಖಲೆಯನ್ನು ಸ್ಥಾಪಿಸಿದೆ. ಮಠಕ್ಕೆ ಬಂದು ಹೋಗುವ ಪರಸ್ಥಳದವರಿಗೆ ನಿತ್ಯ ದಾಸೋಹ, ತಾತ್ಕಾಲಿಕವಾಗಿ ತಂಗಲು ವಸತಿ ವ್ಯವಸ್ಥೆ, ವಿವಿಧ ಸಂಘ ಸಂಸ್ಥೆಗಳು ನಡೆಸುವ ರಚನಾತ್ಮಕ ಕಾರ್ಯಗಳಿಗೆ ಉದಾರವಾದ ಧನ ಸಹಾಯ, ಅಂಗ ವಿಕಲರಿಗಾಗಿ ಅನಾಥಾಲಯಗಳು, ಮಹಿಳಾ ಸಮಾಜ, ಅಂಜುಮನ್-ಎ-ಇಸ್ಲಾಂದಂಥ ಸಂಸ್ಥೆಗಳಿಗೆ ನೆರವು, ಆಸ್ಪತ್ರೆ, ಕ್ರಿಡಾಂಗಣ ನಿರ್ಮಾಣಕ್ಕೆ ಉದಾರ ದೇಣಿಗೆಯನ್ನು ನೀಡಿ ಸಮಾಜ ಪ್ರಗತಿದಾಯಕವಾಗಿ ಬೆಳೆಯಲು ಸಹಾಯ ಹಸ್ತ ನೀಡಿದೆ.

ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘ: ತನ್ನೆಲ್ಲಾ ಚಟುವಟಿಕೆಗಳಿಂದ ಪ್ರಸಿದ್ಧಿಯಾದ ಈ ಯುವಕ ಸಂಘವು, ರಕ್ತದಾನ ಶಿಬಿರಗಳು, ಕ್ರೀಡಾ ಮೇಳಗಳು, ಉಚಿತ ಸರಳ ಸಾಮೂಹಿಕ ವಿವಾಹ, ರಾಜ್ಯದ ಆಡಳಿತ ಭಾಷೆಯಾಗಿ ಕನ್ನಡದ ಬಳಕೆ, ಯುವ ಕಲಾವಿದರು ಮತ್ತು ಬರಹಗಾರರಿಗೆ ಕಾರ್ಯಗಾರಗಳು, ರಾಜ್ಯಮಟ್ಟದ ಯುವ ಮೇಳಗಳು ಮತ್ತು ನಾಟಕೋತ್ಸವಗಳನ್ನು ನಡೆಸಿಕೊಂಡು ಬರುತ್ತಿದೆ.

ಇತ್ತೀಚಿನ ದಿವಸಗಳಲ್ಲಿ ಎಸ್.ಜೆ.ಎಂ.ಸಿ.ಎ.ದ ಪ್ರಮುಖ ಕೊಡುಗೆ ಎಂದರೆ ಅದರ ರಂಗಭೂಮಿ ಪ್ರದರ್ಶನಗಳು. ಇದರ ಕಲಾವಿದರಿಗೆ ಅನೇಕ ನಾಟಕಗಳನ್ನು ನಿರ್ದೇಶಿಸಿರುವ ಪ್ರಖ್ಯಾತ ನಿರ್ದೇಶಕರುಗಳಿಂದ ತರಬೇತಿ ನೀಡಲಾಗುತ್ತದೆ. ಸ್ತುತ್ಯಾರ್ಹವಾದ ನಿರ್ಮಾಣಗಳೆಂದರೆ ಪ್ರಭುದೇವ, ಜಗಜ್ಯೋತಿ ಬಸವೇಶ್ವರ ಮತ್ತು ರಾಜಾವೀರ ಮದಕರಿ ನಾಯಕ. ಇವು ಅಪರೂಪದ ಕಲಾಕುಸುರಿಗಳು. ಇವುಗಳನ್ನು ಕರ್ನಾಟಕದ ಒಳಗೂ ಹೊರಗೂ ಅಭಿನಯಿಸಲಾಗಿದೆ. ಮೊದಲು ದಲಿತನಾಗಿದ್ದು, ಕಳ್ಳತನದಿಂದ ಜೀವನ ಹೊರೆಯುತ್ತಿದ್ದ ಉರಿಲಿಂಗ ಪೆದ್ದಿಯ ಜೀವನವನ್ನು ಆಧರಿಸಿದ ನಾಟಕ 'ಬೆಳಕಿನೆಡೆಗೆ' ಎಂಬ ಕೃತಿಯನ್ನು ಶ್ರೀ ಶಿವಮೂರ್ತಿ ಸ್ವಾಮಿಗಳೇ ರಚಿಸಿದ್ದಾರೆ.

ಅಲ್ಲದೆ ಎಸ್.ಜೆ.ಎಂ.ಕ್ರೀಡೆ ಮತ್ತು ಸಾಂಸ್ಕೃತಿಕ ಸಂಘವು ಅಭಿನಯಿಸಿದ ಭಾವೈಕ್ಯ ರೂಪಕವು ಅಶೋಕ ಬಾದರದಿನ್ನಿಯವರಿಂದ ನಿರ್ದೇಶಿಸಲ್ಪಟ್ಟು ಅಪಾರ ಜನಮನ್ನಣೆ ಗಳಿಸಿರುವುದಲ್ಲದೆ, ರಾಷ್ಟ್ರೀಯ ಭಾವೈಕ್ಯತೆಯ ಸಂದೇಶ ಇರುವುದರಿಂದ ಕರ್ನಾಟಕ ಘನ ಸರ್ಕಾರ ಕೊಡಮಾಡಿದ ಒಂದು ಲಕ್ಷರೂಪಾಯಿಗಳ ವಿಶೇಷ ಪ್ರಶಸ್ತಿಗೆ ಪಾತ್ರವಾಗಿದೆ. ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘದ ಅಧ್ಯಕ್ಷರಾಗಿರುವ ಶ್ರೀ ಎಸ್.ಕೆ.ಬಸವರಾಜನ್‌ರವರು ಯುವಜನ ಸೇವಾ ಚಟುವಟಿಕೆಗಳಲ್ಲಿ ವಿಶೇಷ ಪಾತ್ರವಹಿಸಿದ್ದಕ್ಕಾಗಿ ಕರ್ನಾಟಕ ಸರ್ಕಾರದ ರಾಜ್ಯಯುವ ಪ್ರಶಸ್ತಿಯು ೧೯೯೭ ರಲ್ಲಿ ಇವರಿಗೆ ದೊರಕಿದೆ.

ಪುರಾತನ ದಾಖಲೆ,ವಸ್ತುಗಳು: ಕನ್ನಡ, ಸಂಸ್ಕೃತ ಮತ್ತು ತೆಲುಗು ಸಾಹಿತ್ಯಿಕ ಮತ್ತು ವೇದಾಂತದ ಕೃತಿಗಳನ್ನು ಒಳಗೊಂಡ

ನಾಲ್ಕು ಸಾವಿರ ಸಂಖ್ಯೆಯಷ್ಟಿರುವ ತಾಳೆಗರಿ ಮತ್ತು ಕಾಗದ ಕೈಬರಹಗಳ ದೊಡ್ಡ ಕಣಜವನ್ನೇ ಈ ಮಠವು ಹೊಂದಿದೆ. ಹೆಚ್ಚಿನ ಹಸ್ತಪ್ರತಿಗಳು ಅಪ್ರಕಟಿತವಾಗಿದ್ದು ಮುಂಬರುವ ವರ್ಷಗಳಲ್ಲಿ ಇವುಗಳ ವಿಮರ್ಶಾತ್ಮಕ ಸಂಪಾದನೆಗಳನ್ನು ಹೊರತರಲು ಮಠವು ಕ್ರಮ ತೆಗೆದುಕೊಂಡಿದೆ.

ಹದಿನೆಂಟನೆಯ ಶತಮಾನದಿಂದ ಈ ಶತಮಾನದ ಆದಿಭಾಗದವರೆಗೂ ಅನೇಕ ರಾಜರುಗಳು, ಮಠಾಧಿಪತಿಗಳು, ಅಧಿಕಾರಿಗಳು ಮತ್ತು ಸಾರ್ವಜನಿಕರು ನೀಡಿದ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಮಹತ್ವವುಳ್ಳ ಕನ್ನಡ, ಮರಾಠಿ, ಪರ್ಷಿಯನ್ ಮತ್ತು ಆಂಗ್ಲ ಭಾಷೆಯಲ್ಲಿರುವ ಸಾವಿರಾರು ಕಾಗದಗಳು ಮತ್ತು ತಾಳೆ ಪತ್ರಗಳ ದಾಖಲೆಗಳಲ್ಲದೆ, ಕೆಲವು ತಾಮ್ರದ ಶಾಸನಗಳೂ ಕೂಡ ಮಠದಲ್ಲಿವೆ. ಪುರಾತತ್ತ್ವ ಸಂಗ್ರಹಾಲಯವನ್ನು ತೆರೆಯುವ ಹಂಬಲ ಮಠಕ್ಕೆ ಇದೆ. ಅದು ಮಠದ ಆವರಣದಲ್ಲಿಯೇ ಇದ್ದು, ಸಾರ್ವಜನಿಕರಿಗೆ ಗತ ಕಾಲದ ಇತಿಹಾಸದ ಸಾಂಸ್ಕೃತಿಕ ಭವ್ಯ ಪರಂಪರೆಯ ಬಗ್ಗೆ ಹೆಮ್ಮೆ ತಳೆಯುವಂತೆ ಮಾಡಬಹುದು. ಸಾಹಿತ್ಯ ಸೇವೆ: ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಪ್ರಾರಂಭಿಸಿದ ಪ್ರಕಟಣಾ ವಿಭಾಗವು ಈ ಮಠದಲ್ಲಿದೆ. ಇದುವರೆಗೆ ಕನ್ನಡ ಮತ್ತು ಸಂಸ್ಕೃತದಲ್ಲಿ ಶ್ರೀ ಜಗದ್ಗುರು ಜಯದೇವ ದಿಗ್ವಿಜಯ (ಡಾ.ಕಣಕುಪ್ಪಿ ಕೊಟ್ರೂರು ಬಸವಪ್ಪ), ಬಸವಗೀತಾ (ಟಿ.ಜಿ. ಸಿದ್ಧಪ್ಪಾರಾಧ್ಯ), ಭಗವದ್ಗೀತಾ ವೀರಶೈವಭಾಷ್ಯಂ (ಟಿ.ಜಿ.ಸಿದ್ಧಪ್ಪಾರಾಧ್ಯ), ಶೂನ್ಯಸಂಪಾದನೆ (ಡಾ.ಎಲ್. ಬಸವರಾಜು), ಶಬ್ದಮಣಿ ದರ್ಪಣಂ (ಡಾ.ಎಲ್.ಬಸವರಾಜು),ಮಹಾಲಿಂಗೇಂದ್ರ ವಿಜಯ (ಡಾ.ಎಲ್.ಬಸವರಾಜು), ಮುರಿಗಿ ಶಾಂತವೀರ ಸ್ವಾಮಿಗಳ ಕೃತಿಗಳು (ಎಸ್.ಶಿವಣ್ಣ), ಇಮ್ಮಡಿ ಮುರಿಗಿಗುರುಸಿದ್ಧ ಶಿವಯೋಗಿಯ ಕೃತಿಗಳು (ಭಾಗ-೧) (ಡಾ.ವಿದ್ಯಾಶಂಕರ) ಇನ್ನೂ ಮುಂತಾದ ಅರವತ್ತಕ್ಕೂ ಹೆಚ್ಚು ಅಮೂಲ್ಯ ಗ್ರಂಥಗಳನ್ನು ಪ್ರಕಟಿಸಿದೆ. ಪ್ರಕಟಣೆ ತತ್ತ್ವಶಾಸ್ತ್ರ ಗ್ರಂಥಗಳಿಗಷ್ಟೇ ಸೀಮಿತವಾಗಿರದೆ ಅದು ಸಾಹಿತ್ಯ ಮತ್ತು ಇತರೇ ಕೃತಿಗಳನ್ನೂ ಕೂಡ ಬೆಳಕಿಗೆ ತಂದು ಕನ್ನಡ ಮತ್ತು ಸಂಸ್ಕೃತ ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿದೆ. ಈಗಿನ ಗುರುಗಳಾದ ಶ್ರೀ ಶಿವಮೂರ್ತಿ ಮುರುಘ ರಾಜೇಂದ್ರ ಶರಣರು ಲೇಖಕರಾಗಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಚಿಂತನ ತರಂಗ, ವಚನಸುಮನ, ವಚನಕ್ರಾಂತಿ, ನಿಮ್ಮೊಂದಿಗೆ, ನಮ್ಮಸುತ್ತ, ಸುಳಿಯೊಡೆದ ಬೆಳೆ, ಅರಿವಿನ ಗೂಡು, ಅಂತರಾಳ, ಜಗವ ಸುತ್ತಿದೆ. ಝೇಂಕಾರ ಮೊದಲಾದ ಕೃತಿಗಳನ್ನು ರಚಿಸಿದ್ದು ಇವುಗಳು ಪ್ರಕಟಗೊಂಡಿರುವುದಲ್ಲದೆ ಕೆಲವು ಕೃತಿಗಳು ಆಂಗ್ಲಭಾಷೆಗೂ ಅನುವಾದಗೊಂಡಿವೆ. ಶ್ರೀ ಶಿವಮೂರ್ತಿ ಶರಣರು ಅಧಿಕಾರಕ್ಕೆ ಬಂದ ಮೇಲೆ ಬಸವಾದಿ ಶರಣರ ಆದರ್ಶಗಳ ದಾರಿಯಲ್ಲಿ ಸಾಧನೆ ಮಾಡಿದವರಿಗೆ ಬಸವಶ್ರೀ ಪ್ರಶಸ್ತಿಯನ್ನು ನೀಡಲು ಮುಂದಾಗಿದ್ದಾರೆ.

ಇವೆಲ್ಲದರ ಮಧ್ಯೆ ಈ ಮಠವು ಶೈಕ್ಷಣಿಕ ಮಹತ್ವದ ತ್ರೈಮಾಸಿಕ ಪತ್ರಿಕೆಯನ್ನು ಕೂಡ ಹೊರತರುತ್ತಿದೆ. 'ಸತ್ಯ ಶುದ್ಧ ಕಾಯಕ' ಎಂಬ ನಾಮಾಂಕಿತದ ಈ ಪತ್ರಿಕೆಯಲ್ಲಿ ಸಾಹಿತ್ಯ, ಐತಿಹಾಸಿಕ ಸಂಶೋಧನೆ, ವಿಮರ್ಶೆ ಮತ್ತು ಧಾರ್ಮಿಕ ವಿಷಯದ ಮೇಲಿನ ಲೇಖನಗಳು ಪ್ರಕಟಗೊಳ್ಳುತ್ತವೆ. ೧೯೯೨ ರಲ್ಲಿ ಬೃಹನ್ಮಠದ ವತಿಯಿಂದ ಜನವಾಹಿನಿ ಎಂಬ ದೈನಿಕವನ್ನು ಚಿತ್ರದುರ್ಗ ದಲ್ಲಿ ಪ್ರಾರಂಭಿಸಿತ್ತು. ನಂತರ ದಾವಣಗೆರೆಗೆ ಸ್ಥಳಾಂತರಿಸಿ ಚಿತ್ರದುರ್ಗ, ದಾವಣಗೆರೆ ಹಾಗೂ ಹಾವೇರಿ ಜಿಲ್ಲೆಗಳನ್ನು ಒಳಗೊಂಡತೆ ಪ್ರಚಾರ ಸಂಖ್ಯೆಯನ್ನು ಹೆಚ್ಚಿಸಿ ಪ್ರಕಟ ಮಾಡುತ್ತಿದೆ.

ಶರಣರ ವಚನಗಳನ್ನು ಹಿಂದಿ ಮತ್ತು ಆಂಗ್ಲಭಾಷೆಗೆ ಭಾಷಾಂತರಿಸಲು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಒಂದೂವರೆ ಲಕ್ಷ ದೇಣಿಗೆ ನೀಡಿದೆ. ಶರಣ ಸಾಹಿತ್ಯ ಕುರಿತಂತೆ, ಶರಣರ ಬದುಕು, ಸಾಧನೆ ಬಿಂಬಿಸುವ ಪ್ರತಿಗಳನ್ನು ಪ್ರಕಟಿಸಲು ಅನುವಾಗುವಂತೆ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಇವರಿಗೆ ಒಂದು ಲಕ್ಷ ರೂಪಾಯಿ ದತ್ತಿ ನೀಡಿದೆ. ಈ ಮಠವು ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ತನ್ನ ಸಹಾಯ ಹಸ್ತದಿಂದ, ಚಿತ್ರದುರ್ಗದ ಹಸ್ತ ಪ್ರತಿಶಾಸ್ತ್ರ ಮತ್ತು ಇತಿಹಾಸ ವಿಭಾಗಗಳನ್ನು ತೆರೆಯಲು ಉದಾರ ಧನ ಸಹಾಯ ಮಾಡಿದೆ. ಒಂದು ಲಕ್ಷ ರೂಪಾಯಿ ಮೊತ್ತದ ಬಸವ ಪ್ರಶಸ್ತಿಯನ್ನು ಸೃಜನೇತರ ಸಾಹಿತ್ಯಕ್ಕೆ ಸಂಬಂಧಿಸಿದ ಅತ್ಯುತ್ತಮ ಕೃತಿಗೆ ನೀಡುವ ತನ್ನ ತೀರ್ಮಾನ ಘೋಷಿಸಿದೆ.

ಶ್ರೀ ಬೃಹನ್ಮಠವು ಅನೇಕ ಮೌಲಿಕ ಕೃತಿಗಳನ್ನು ಪ್ರಕಟಿಸಿರುವುದಲ್ಲದೆ ಹಲವು ಲೇಖಕರಿಗೆ ಅವರ ಕೃತಿಗಳನ್ನು ಪ್ರಕಟಿಸಲು ಧನ ಸಹಾಯವನ್ನು ನೀಡಿದೆ. ಶಿಕ್ಷಣ ಹಾಗೂ ಜ್ಞಾನ ಪ್ರಸಾರ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡಿದೆ.

ಮುರುಘಾ ವನ: ಕಳೆದ ಶತಮಾನದ ಮಧ್ಯಭಾಗದಲ್ಲಿ ಆಗಿನ ಪೀಠಾಧಿಪತಿಗಳಾಗಿದ್ದ ಶ್ರೀ ಶಿವಲಿಂಗ ಗುರುಶಾಂತ ಸ್ವಾಮಿಗಳು ಮಠದ ಪಕ್ಕದಲ್ಲಿಯೇ ಫಲಪುಷ್ಪ ಬಿಡುವ ತರುಲತೆಗಳ ಚಿದಾರಣ್ಯ ತೋಟವನ್ನು ಸ್ಥಾಪಿಸಿದ್ದರು.ಅದೇ ತದನಂತರದಲ್ಲಿ ಹಾಳಾಗಿ ಕೆಲವು ಕಾಲ ಬಂಜರು ಭೂಮಿಯಾಗಿತ್ತು. ಮುರುಘಾವನ ಎಂಬ ನೂತನ ಹೆಸರಿನಲ್ಲಿ ಅದು ಈಗ ಮರಳಿ ಜೀವ ಪಡೆದಿದೆ.

ಕೂಡಲ ಸಂಗಮದ ಐಕ್ಯ ಮಂಟಪದ ಪ್ರತಿರೂಪ ಸರೋವರ, ವಚನಗಳನ್ನು ರಚಿಸುತ್ತಿರುವ ಬಸವೇಶ್ವರರ ವಿಗ್ರಹ, ಶ್ರೀ ಮುರುಗಿ ಶಾಂತವೀರ ಸ್ವಾಮಿಗಳು ಮತ್ತು ಭರಮಣ್ಣ ನಾಯಕರ ವಿಗ್ರಹಗಳು ನೋಡುಗರ ಮನಸ್ಸಿಗೆ ಮುದ ನೀಡುವುದಲ್ಲದೆ ಗತ ಇತಿಹಾಸದ ಭವ್ಯತೆಯನ್ನು ಕಣ್ಮುಂದೆ ತಂದು ನಿಲ್ಲಿಸುತ್ತವೆ. ಔಷಧೀಯ ಗುಣ್ಯ ' ಗಿಡಗಳನ್ನು ಬೆಳೆಸಲಾಗಿದೆ. ಗಿಡ ಮರಗಳ ಹಸಿರು ಸಿರಿ, ಮಕ್ಕಳ ಆಟೋಪಕರಣಗಳು ಹಾಗೂ ಬಿಜ್ಜಳ ಕ್ಯಾಂಟೀನು ಇವುಗಳೆಲ್ಲವೂ ಪ್ರವಾಸಿಗರಿಗೆ ನಗರದ ಜಂಜಾಟವನ್ನು ಮರೆಸಿ ಮತ್ತೆ ಮತ್ತೆ ಬರುವಂತೆ ಮಾಡುವ ಆಕರ್ಷಣೀಯ ಸ್ಥಳಗಳಾಗಿವೆ.

ವಿಳಾಸ: ಶ್ರೀ ಶಿವಮೂರ್ತಿ ಮುರುಘ ರಾಜೇಂದ್ರ ಸ್ವಾಮಿಗಳು,ಬೃಹನ್ಮಠ,(ಚಿನ್ಮೂಲಾದ್ರಿ ಮುರುಘಾಮಠ) ಪಿ.ಬಿ. ರಸ್ತೆ, ಚಿತ್ರದುರ್ಗ.
ಆಧಾರ: ಶ್ರೀ ಜಗದ್ಗುರು ಮುರುಘ ರಾಜೇಂದ್ರ ಬೃಹನ್ಮಠದ ದರ್ಶನ ಇಂಗ್ಲಿಷ್ ಆವೃತ್ತಿ.

ಉಜ್ಜಯಿನಿಮಠ: ಚಿತ್ರದುರ್ಗದ ಕೋಟೆಯ ಒಳಭಾಗದ ರಂಗಯ್ಯನ ಬಾಗಿಲಬಳಿ ಉಜ್ಜಯಿನಿ ಮಠವು ಸ್ಥಾಪನೆಗೊಂಡಿದೆ. ಚಿತ್ರದುರ್ಗದಲ್ಲಿ ಪಂಚಪೀಠಗಳ ಐದು ಮಠಗಳು ಏಕಕಾಲದಲ್ಲಿ ಸ್ಥಾಪನೆಯಾಗಿದ್ದು, ಉಜ್ಜಯಿನಿ ಪೀಠದ ಶಾಖಾಮಠವಾಗಿ ಈ ಮಠವು ತನ್ನ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದಿದೆ. ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿರುವ ಈ ಮಠದ ಮಠಾಧೀಶರುಗಳ ವಂಶಸ್ಥರು ಚಿತ್ರದುರ್ಗ, ಕೂಲಂಬಿ, ಕಂದಗಲ್ಲು ಗ್ರಾಮಗಳಲ್ಲಿ ನೆಲೆಸಿದ್ದಾರೆ. ಕಾಳಿಕಾ ಉಜ್ಜಯಿನಿ ನಗರದ ಹತ್ತಿರದ ಬಾನುಮತಿ ಪಟ್ಟಣದಿಂದ ಕರ್ನಾಟಕಕ್ಕೆ ಉಜ್ಜಯಿನಿ ಪೀಠದ ಮೂಲ ಜಗದ್ಗುರು ಶ್ರೀ ಮರುಳಾರಾಧ್ಯರ ಜೊತೆ ಬಂದು ಇಲ್ಲಿ ನೆಲೆಸಿ ಮಠವನ್ನು ಸ್ಥಾಪಿಸಿದರೆಂದು ತಿಳಿದು ಬರುತ್ತದೆ.

ಪರಂಪರೆ:

೧. ಷ.ಬ್ರ.ಶ್ರೀ ಪಟ್ಟದ ಮರುಳಸಿದ್ಧ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಮಲ್ಲಿಕಾರ್ಜುನಲಿಂಗ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಪರದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಪಾಲ್ಗುಣ ಶಿವಯೋಗಿ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಗುರುಸಿದ್ಧ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ಪರಮೇಶ್ವರ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಪರಂಪರೆಯ ಗುರುಗಳು ಚಿತ್ರದುರ್ಗದ ಸುತ್ತಮುತ್ತಲ ಭಕ್ತರಿಗೆ ಧಾರ್ಮಿಕ ಉಪದೇಶವನ್ನು ನೀಡಿ ಮಠವನ್ನು ಬೆಳೆಸಿದರು. ಉಜ್ಜಯಿನಿ ಸದ್ಧರ್ಮ ಪೀಠಾಧೀಶ್ವರರಾಗಿದ್ದ ೧೦೩ ನೆಯ ಜಗದ್ಗುರು ಶ್ರೀ ಪಟ್ಟದ ಚನ್ನವೀರ ರಾಜದೇಶಿಕೇಂದ್ರ ಸ್ವಾಮಿಗಳು, ತಮ್ಮ ಕಾಲದಲ್ಲಿ ಈ ಮಠದ ಏಳನೆಯ ಶ್ರೀ ಸಿದ್ಧಲಿಂಗ ಸ್ವಾಮಿಗಳಿಗೆ ಉಜ್ಜಯಿನಿ ಪೀಠದಲ್ಲಿಯೆ ಪಟ್ಟಾಧಿಕಾರ ಮಾಡಿದ್ದರು. ಈ ಸಂಪ್ರದಾಯ ಪ್ರಾಚೀನದಿಂದಲೂ ಬೆಳೆದು ಬಂದಿದೆ. ಇದೇ ರೀತಿ ಈ ಹಿಂದಿನ ಶ್ರೀ ಪರಮೇಶ್ವರ ಶಿವಾಚಾರ್ಯ ಸ್ವಾಮಿಗಳಿಗೂ ಉಜ್ಜಯಿನಿ ಪೀಠದಲ್ಲಿಯೇ ಪಟ್ಟಾಧಿಕಾರವನ್ನು ಮಾಡಲಾಗಿತ್ತು. ಇವರು ಕೂಲಂಬಿ ಮಠದ ಶ್ರೀ ಗುರುಸಿದ್ದಯ್ಯನವರ ಪುತ್ರರಾಗಿ ಚಿಕ್ಕ ವಯಸ್ಸಿನಲ್ಲೇ ತಾಯಿಯನ್ನು ಕಳೆದುಕೊಂಡು ತಮ್ಮ ಅಕ್ಕನ ಪೋಷಣೆಯಲ್ಲಿ ಬೆಳೆದು, ಚಿತ್ರದುರ್ಗ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದರು. ವೀರಶೈವ ತತ್ವ ಹಾಗೂ ತಪೋನುಷ್ಠಾನದಲ್ಲಿ ಹೆಚ್ಚು ಪರಿಣಿತಿ ಪಡೆದಿದ್ದರೆಂದು ತಿಳಿದು ಬರುತ್ತಿದೆ. ಇವರ ಕಾಲದಲ್ಲಿ

ಮಠವು ವಿಸ್ತಾರವಾಗಿ ಬೆಳೆದು ಹೆಚ್ಚು ಭಕ್ತರನ್ನು ಸಂಪಾದಿಸಿಕೊಂಡಿತು. ಇವರ ನಂತರ ಈಗಿನ ಮಠಾಧೀಶರಾದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ೧೯೮೩ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದಾರೆ. ಇವರು ಶ್ರೀ ಕೊಟ್ರಯ್ಯ ಮತ್ತು ಶ್ರೀಮತಿ ರತ್ನಮ್ಮನವರ ಪುತ್ರರಾಗಿ ೧೯೫೮ ರಲ್ಲಿ ಜನಿಸಿ, ಚಿತ್ರದುರ್ಗದಲ್ಲಿ ಪದವಿ ಶಿಕ್ಷಣ ಮತ್ತು ಸಂಸ್ಕೃತ ವೇದಾಧ್ಯಯನ ಮಾಡಿ ಮಠಕ್ಕೆ ಆಗಮಿಸಿದರು. ಗುರುಗಳು ಅಧಿಕಾರವನ್ನು ವಹಿಸಿಕೊಂಡ ಮೇಲೆ ಹಳೆಯ ಕಟ್ಟಡವನ್ನು ತೆಗೆಸಿ ಅಗತ್ಯಕ್ಕನುಗುಣವಾಗಿ ಮಠವನ್ನು ವಿಸ್ತರಿಸಿಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಉಜ್ಜಯಿನಿ ಪೀಠದ ಜಗದ್ಗುರು ಶ್ರೀ ಮರುಳಾರಾಧ್ಯ ಶಿವಾಚಾರ್ಯ ಭಗವತ್ಪಾದರ ಗದ್ದುಗೆ ಈ ಮಠದಲ್ಲಿ ಸ್ಥಾಪನೆಯಾಗಿದೆ. ಈ ಗದ್ದುಗೆಗೆ ನಿತ್ಯ ಎರಡು ವೇಳೆ ಪೂಜೆ, ಏಪ್ರಿಲ್ ಮೂರರಂದು ಪುಣ್ಯಾರಾಧನೆ ಹಾಗೂ ಶ್ರಾವಣಮಾಸದಲ್ಲಿ ಪುರಾಣ ಪ್ರವಚನ ನಡೆಸಲಾಗುತ್ತಿದೆ.

ಶೈಕ್ಷಣಿಕ ಕಾರ್ಯಗಳು: ೧೯೪೭ ರಲ್ಲಿ ಉಜ್ಜಯಿನಿ ಜಗದ್ಗುರು ವಿದ್ಯಾಪೀಠವನ್ನು ಸ್ಥಾಪಿಸಿ ಸಂಸ್ಕೃತ ಪಾಠಶಾಲೆ, ಸಿದ್ಧೇಶ್ವರ ಪ್ರಸಾದ ನಿಲಯ, ಪಟ್ಟದ ಪರಮೇಶ್ವರಸ್ವಾಮಿ ಪ್ರಾಥಮಿಕ ಶಾಲೆಯನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು, ಶ್ರೀ ಉಜ್ಜಯಿನಿ ಮಠ, ರಂಗಯ್ಯನ ಬಾಗಿಲು, ಚಿತ್ರದುರ್ಗ.

ಸಿರಿಗೆರೆ

ಚಿತ್ರದುರ್ಗ ತಾಲ್ಲೂಕಿನ ಸಿರಿಗೆರೆಯು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತೈದು ಕಿ.ಮೀ ದೂರದಲ್ಲಿದೆ. ಒಂದು ಚಿಕ್ಕ ಗ್ರಾಮವಾದ ಸಿರಿಗೆರೆಯಲ್ಲಿ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದ ಸ್ಥಾಪನೆಯಿಂದಾಗಿ ಇಂದು ವಿಶ್ವವಿಖ್ಯಾತಗೊಂಡು ಸುಕ್ಷೇತ್ರವಾಗಿದೆ. ಅಲ್ಲದೆ ದೇಶವಿದೇಶದ ಜನ ಭಾರತೀಯ ಭೂಪಟದಲ್ಲಿ ಗುರುತಿಸುವಂತಾಗಿದೆ. ಧಾರ್ಮಿಕ ಕ್ಷೇತ್ರದ ಜತೆಗೆ ಶೈಕ್ಷಣಿಕ, ಸಾಮಾಜಿಕ, ವೈಜ್ಞಾನಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕವಾಗಿ ಅಭಿವೃದ್ಧಿಯನ್ನು ಕಂಡಿದೆ.

ಜಗದ್ಗುರು ತರಳಬಾಳು ಬೃಹನ್ಮಠ: ಪ್ರಮುಖ ವೀರಶೈವ ಮಠಗಳಲ್ಲಿ ಒಂದಾಗಿ ಬೆಳೆದಿರುವ ಸಿರಿಗೆರೆಯ ತರಳಬಾಳು ಬೃಹನ್ಮಠವು ಧಾರ್ಮಿಕ ಮೌಢ್ಯತೆ, ಸಾಮಾಜಿಕ ಅಸಮಾನತೆಯ ನಿವಾರಣೆಗಾಗಿ ಹುಟ್ಟಿಕೊಂಡು, ಹತ್ತು ಹಲವು ನೋವನ್ನು ಅನುಭವಿಸಿ, ಸ್ವಾಭಿಮಾನ, ಸಧೃಡತೆಯಿಂದ ತಲೆ ಎತ್ತಿ ನಿಂತು ಈಗ ವಿಶ್ವಮಾನ್ಯತೆ ಪಡೆದಿದೆ. ಇದಕ್ಕೆ ಈ ಪೀಠದ ಪೀಠಾಧಿಕಾರಿಗಳು ಕೈಗೊಂಡ ಅವಿರತ ಶ್ರಮವೇ ಕಾರಣವಾಗಿದೆ.

ಪೀಠದ ಬೇರು : ಸಿರಿಗೆರೆಯ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದ ಇತಿಹಾಸವನ್ನು ಅವಲೋಕಿಸುವ ಮುನ್ನ ಸಿರಿಗೆರೆ ಪೀಠದ ಬೇರಾದ ಉಜ್ಜಯಿನಿಯ ಬಗ್ಗೆ ತಿಳಿದುಕೊಳ್ಳುವುದು ಅತ್ಯಾವಶ್ಯಕವಾಗಿದೆ. ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನ ಉಜ್ಜಯಿನಿ ಸಮೀಪದ ಕಗ್ಗಲ್ಲಪುರದ ಗುರು-ಲಿಂಗ-ಜಂಗಮ ಪ್ರಿಯರಾದ ಶ್ರೀ ಕೂಚಿಮಾರ ಮತ್ತು ಶ್ರೀಮತಿ ಸುಪ್ರಭೆ ದಂಪತಿಗಳಿಗೆ ಪುತ್ರರಾಗಿ ಜನಿಸಿದ ಶ್ರೀ ಮರುಳಸಿದ್ಧರು ತಮ್ಮ ತಂದೆ ತಾಯಿಯರನ್ನು ಕಳೆದುಕೊಂಡು ಊರಿನ ದೊರೆ ಬಾಚಣ್ಣ ಹಾಗೂ ಶ್ರೀಮತಿ ಮಲ್ಲಮ್ಮನ ಪುತ್ರರಾಗಿ ಬೆಳೆಯತೊಡಗಿದರು.

ಶ್ರೀ ಮರುಳಸಿದ್ಧರು ಬೆಳೆದು ಬಾಲ್ಯಾವಸ್ಥೆಗೆ ಬಂದ ಸಂದರ್ಭದಲ್ಲಿ ಈ ಪ್ರಾಂತ್ಯಕ್ಕೆ ಬರಗಾಲ ಬಂದು ಜನರು ತತ್ತರಿಸತೊಡಗಿದರು. ಬರ ಬಂದರೆ ಊರ ಮಾರಿಗೆ ಪೂಜೆ ಮಾಡಿ ಬಲಿಕೊಡುವ ಸಂಪ್ರದಾಯ ಬೆಳೆದು ಬಂದಿತ್ತು. ಈ ಸಂಪ್ರದಾಯದ ಆಚರಣೆಗೆ ಕಗ್ಗಲ್ಲುಪುರ ಸಿದ್ಧಗೊಳ್ಳತೊಡಗಿತು. ಈ ಜಾತ್ರೆಯ ಸಂದರ್ಭದಲ್ಲಿ ಜನರು ಮದ್ಯಸೇವನೆ, ಪ್ರಾಣಿಬಲಿ ಮೊದಲಾದ ವಾಮಾಚಾರಗಳಿಗೆ ಸಿದ್ಧರಾಗುತ್ತಿದ್ದುದನ್ನು ಕಂಡ ಬಾಲಕ ಮರುಳಸಿದ್ಧರಿಗೆ ಅಸಹ್ಯವೆನಿಸುತ್ತದೆ. ಪುರದ ಜನರು ಹಾಗೂ ಪುರದ ದೊರೆಯಾದ ತಮ್ಮ ಸಾಕು ತಂದೆ ಬಾಚಣ್ಣಗೌಡರ ಎದುರಿಗೆ ಮರುಳಸಿದ್ಧರು ಚಂಗನೆ ಹಾರಿ ಗಂಡುಕೊಡಲಿಯನ್ನು ಹಿಡಿದು ಕಟುಕನ ಕೈಯನ್ನು ತಡೆದು ಪ್ರಾಣಿಬಲಿಯ ಬದಲಿಗೆ ನನ್ನನ್ನೇ ವಧಿಸಿ ಎಂದು ವಧೆ

ಗಂಬಕ್ಕೆ ತಲೆಯೊಡ್ಡಿ ನಿಲ್ಲುತ್ತಾರೆ. ಬಾಲಕ ಮರುಳಸಿದ್ಧರು ಊರ ಗೌಡನ ಮಗನಾದ್ದರಿಂದ ಪೂಜಾರಿ, ಪುರೋಹಿತಿಗಳೆಲ್ಲ ಮುಂದೆ ಏನು ಮಾಡಬೇಕೆಂದು ದಿಕ್ಕುತೋಚದೆ ಚಡಪಡಿಸುತ್ತಾರೆ. ಆಗ ಮರುಳಸಿದ್ಧರು ದೇವರು-ಧರ್ಮ-ಸಂಪ್ರದಾಯಗಳ ಬಗ್ಗೆ ವೈಚಾರಿಕವಾಗಿ ಜನರಿಗೆ ತಿಳುವಳಿಕೆ ಹೇಳಿ ಬಲಿಯನ್ನು ನಿಲ್ಲಿಸಲು ಪ್ರಯತ್ನಿಸಿದರು. ಮದ್ಯ, ಮಾಂಸ ಸೇವಿಸಬೇಡಿ ಪೂಜಾರಿ ಪುರೋಹಿತರ ಮಾತುಗಳನ್ನು ಕೇಳಬೇಡಿ ಎಂದು ಜನರಿಗೆ ವಿನಂತಿಸಿಕೊಂಡು ಬದುಕಿನ ಅರ್ಥವನ್ನು ತಿಳಿಸುತ್ತಾರೆ.

ಅಜ್ಞಾನ, ಅಂಧಕಾರದಲ್ಲಿದ್ದ ಜನರನ್ನು ಪೂಜಾರಿಗಳು, ಪುರೋಹಿತರು ತಮ್ಮ ಸ್ವಾರ್ಥಸಾಧನೆಗಾಗಿ ಹೇಗೆ ಶೋಷಣೆ ಮಾಡುತ್ತಿದ್ದರೆಂಬುದನ್ನು ವಿವರಿಸುತ್ತಾರೆ. ಬಾಲಕ ಮರುಳಸಿದ್ಧರ ಅಗಾಧ ಪಾಂಡಿತ್ಯಕ್ಕೆ ಮೆಚ್ಚಿ ಸನ್ಮಾರ್ಗದಲ್ಲಿ ಜನ ನಡೆಯತೊಡಗುತ್ತಾರೆ. ತಾವು ಕೈಗೊಂಡ ನಿರ್ಧಾರದಿಂದ ಜನ ಪರಿವರ್ತನೆಯಾಗಿದ್ದನ್ನು ಃ ಗಗಂಡ ಮರುಳಸಿದ್ಧರು ಲೋಕಾನುಭವ ಪಡೆದುಕೊಳ್ಳಲು ಲೋಕಸಂಚಾರಕ್ಕೆ ಹೋಗಿ ಅನೇಕ ಪವಾಡಗಳನ್ನು ಮಾಡಿ ಪುನಃ ಉಜ್ಜಯಿನಿಗೆ ಬಂದು, ವಿಶ್ವಬಂಧುವಾಗಿ ಸದ್ಧರ್ಮಪೀಠವನ್ನು ಸ್ಥಾಪಿಸುತ್ತಾರೆ. ತೆಲುಗುಬಾಳು ಸಿದ್ಧಯ್ಯನಿಗೆ ಅಧಿಕಾರ ನೀಡಿ **'ತರಳ,ಬಾಳು'** ಎಂದು ಆಶೀರ್ವಾದ ಮಾಡಿ ಲಿಂಗೈಕ್ಯರಾಗುತ್ತಾರೆ. ಹೀಗೆ ಮಾಘ ಶುದ್ಧ ಹುಣ್ಣಿಮೆಯ ದಿನದಿಂದ ತರಳಬಾಳು ಪೀಠದ ಪರಂಪರೆಯು ಮೊಳಕೆಯೊಡೆದು ಚಿಗುರತೊಡಗಿತು. ವಿಶ್ವಬಂಧು ಮರುಳಸಿದ್ಧರಿಂದ ಅಧಿಕಾರ ಪಡೆದ ತರಳಬಾಳು ಸಿದ್ಧೇಶ್ವರರು ತಮ್ಮ ಗುರುವಿನ ತತ್ತ್ವಗಳನ್ನು ಪ್ರಚಾರಪಡಿಸಿ ಲೋಕೋದ್ಧಾರದ ಅನೇಕ ಕಾರ್ಯಗಳನ್ನು ಕೈಗೊಂಡು, ಗಡ್ಡದ ಶ್ರೀ ಸಿದ್ಧಲಿಂಗದೇವರಿಗೆ ಅಧಿಕಾರ ನೀಡಿ ಲಿಂಗೈಕ್ಯರಾಗುತ್ತಾರೆ. ಈ ನಂತರ ಹತ್ತು ಜನ ಮಠಾಧೀಶರು ಉಜ್ಜಯಿನಿಯಲ್ಲಿ ಅಧಿಕಾರವನ್ನು ಪಡೆದು ಮರುಳಸಿದ್ಧರ ತತ್ತ್ವಗಳನ್ನು ಪ್ರಚಾರಪಡಿಸಿ ಅಮರರಾಗಿದ್ದಾರೆ.

ಚಿಗುರೊಡೆದ ಗುರು ಪರಂಪರೆ:
೧. ಶ್ರೀ ತರಳ ಬಾಳು ಸಿದ್ಧೇಶ್ವರರು
೨. ಶ್ರೀ ಗಡ್ಡದ ಸಿದ್ಧಲಿಂಗ ದೇವರು
೩. ಶ್ರೀ ಕೆಂಪಪ್ಪ ದೇವರು
೪. ಶ್ರೀ ಚೆನ್ನಬಸವ ದೇವರು
೫. ಶ್ರೀ ಗುರುಸಿದ್ಧ ದೇವರು
೬. ಶ್ರೀ ಶಿವಲಿಂಗ ದೇವರು
೭. ಶ್ರೀ ಗುರುಬಸವ ದೇವರು
೮. ಶ್ರೀ ಕರಿಸಿದ್ಧ ದೇವರು
೯. ಶ್ರೀ ಶಾಂತವೀರ ದೇವರು
೧೦. ಶ್ರೀ ಕರಿಸಿದ್ಧದೇವರು
೧೧. ಶ್ರೀ ಜಂಬಪ್ಪ ದೇವರು

ಸಿರಿಗೆರೆಗೆ ಸ್ಥಾನಾಂತರ: ಉಜ್ಜಯಿನಿಯಲ್ಲಿ ಶ್ರೀ ಜಂಬಪ್ಪದೇವರು ಧರ್ಮಕಾರ್ಯ ಮಾಡುತ್ತಿರುವ ಸಂದರ್ಭದಲ್ಲಿ ಉಜ್ಜಯಿನಿ ಕ್ಷೇತ್ರದ ದೊರೆಯಾದ ಜರಮಲೇನಾಯಕರಿಗೂ, ಹರಪನಹಳ್ಳಿಯ ನಾಯಕರಿಗೂ ಲಿಂಗಧಾರಣೆಯ ವಿಚಾರವಾಗಿ ವಿವಾದವು ಉದ್ಭವಿಸುತ್ತದೆ. ಈ ವಿವಾದವು ಕದನವಾಗಿ ರೂಪುಗೊಂಡು ಉಜ್ಜಯಿನಿಯ ದೊರೆ ಜರಮಲೇನಾಯಕನು ಸೋಲನ್ನು ಅನುಭವಿಸಬೇಕಾಯಿತು. ಇದಾದ ನಂತರ ನಡೆದ ಹಲವು ಘಟನೆಗಳಿಂದ ಬೇಸತ್ತು ಶ್ರೀ ಜಂಬಪ್ಪ ದೇವರು ಹಾಗೂ ಅವರ ಶಿಷ್ಯ ಶ್ರೀ ಸಪ್ಪೆಸಿದ್ಧಲಿಂಗ ದೇವರು ಉಜ್ಜಯಿನಿಯನ್ನು ತ್ಯಜಿಸಿ ಎರಡು ಕವಲುಗಳಾಗಿ ಹೊರಡುತ್ತಾರೆ. ಜಂಬಪ್ಪದೇವರು ಸಿರಿಗೆರೆಯಲ್ಲಿಯೂ, ಶ್ರೀ ಸಪ್ಪೆಸಿದ್ಧಲಿಂಗದೇವರು ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ ಪಾಲ್ಕುರಿಕೆಯಲ್ಲೂ ನೆಲೆನಿಂತು ಮಠವನ್ನು ಸ್ಥಾಪನೆ ಮಾಡುತ್ತಾರೆ. ಶ್ರೀ ಜಂಬಪ್ಪದೇವರು ಸಿರಿಗೆರೆಯಲ್ಲಿ ನೆಲೆನಿಂತು ಶಿಷ್ಯವರ್ಗದ ಸಹಾಯದಿಂದ ಮಠವನ್ನು ಸ್ಥಾಪನೆ ಮಾಡಿದ್ದಾರೆ. ಈ ರೀತಿ ಉಜ್ಜಯಿನಿಯ ಮೂಲ ಬೇರು ಸಿರಿಗೆರೆಯಲ್ಲಿ ಕಾಂಡವಾಗಿ ಬೆಳೆದು ಹೆಮ್ಮರವಾಗಿ ನಿಲ್ಲಲು ಶ್ರೀ ಜಂಬಪ್ಪ ದೇವರ ಮನೋಸ್ಥೈರ್ಯ ಹಾಗೂ ಅವರ ಅವಿರತ ಶ್ರಮವೇ ಕಾರಣವಾಗಿದೆ.

ಸಿರಿಗೆರೆಯಲ್ಲಿ ಬೆಳೆದ ಪರಂಪರೆ: ೧೨. ಶ್ರೀ ಗುರುಸಿದ್ಧ ದೇವರು

೧೩. ಶ್ರೀ ಸಿದ್ಧಲಿಂಗದೇವರು

೧೪. ಶ್ರೀ ಎರಡನೆಯ ಗುರುಸಿದ್ಧದೇವರು

೧೫. ಶ್ರೀ ಶಿವಲಿಂಗ ದೇಶಿಕೇಂದ್ರ ಸ್ವಾಮಿಗಳು

೧೬. ಶ್ರೀ ಗುರುಸಿದ್ಧ ದೇಶಿಕೇಂದ್ರಸ್ವಾಮಿಗಳು

೧೭. ಶ್ರೀ ಶಿವಲಿಂಗ ದೇಶಿಕೇಂದ್ರಸ್ವಾಮಿಗಳು

೧೮. ಶ್ರೀ ಗುರುಶಾಂತ ರಾಜ ದೇಶಿಕೇಂದ್ರಸ್ವಾಮಿಗಳು

೧೯. ಶ್ರೀ ಶಿವಕುಮಾರ ಶಿವಾಚಾರ್ಯಸ್ವಾಮಿಗಳು

೨೦. ಶ್ರೀ ಡಾ.ಶಿವಮೂರ್ತಿ ಶಿವಾಚಾರ್ಯಸ್ವಾಮಿಗಳು (ಈಗಿನ ಜಗದ್ಗುರುಗಳು)

ಈ ರೀತಿ ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ ಶ್ರೀ ತರಳಬಾಳು ಬೃಹನ್ಮಠದ ಜಗದ್ಗುರುಗಳ ಪರಂಪರೆಯು ಹೆಮ್ಮರವಾಗಿ ಬೆಳೆದು ಸಮಾಜದ ನಾನಾ ಪ್ರಕಾರಗಳಲ್ಲಿ ಕವಲೊಡೆದು ತನ್ನ ಬಾಹುಗಳನ್ನು ವಿಸ್ತರಿಸಿದೆ.

ಉದ್ಧಾರಕರು: ಸಿರಿಗೆರೆಯಲ್ಲಿ ಶ್ರೀ ಶಿವಲಿಂಗದೇಶಿಕೇಂದ್ರ ಸ್ವಾಮಿಗಳು ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಕೆಲವರು ಸಿರಿಗೆರೆ ಮಠಕ್ಕೆ ಧಾಳಿಇಟ್ಟು ಮಠದ ಕೆಲಸ ಕಾರ್ಯಗಳಿಗೆ ಅಡ್ಡಿಪಡಿಸಿ, ನಿಯಮಾನುಸಾರವಾಗಿ ರಚಿತವಾದ ಮಠ ಇದಲ್ಲ ಎಂದು ಸಿರಿಗೆರೆ ಪೀಠದ ಅಸ್ತಿತ್ತ್ವವನ್ನು ಪ್ರಶ್ನಿಸಿ ನ್ಯಾಯಾಲಯಕ್ಕೆ ಹೋದರು. ನ್ಯಾಯಾಲಯವು ಸಿರಿಗೆರೆ ಪೀಠವು ನ್ಯಾಯಸಮ್ಮತವಾಗಿ ರಚಿತವಾಗಿದೆ ಎಂದು ತೀರ್ಪು ನೀಡಿತು. ನಂತರ ಅನೇಕರು ಅನ್ಯಮಾರ್ಗಗಳಿಂದ ಪುನಃ ಕಿರುಕುಳವನ್ನು ನೀಡತೊಡಗಿದರು. ಸಿರಿಗೆರೆಯಲ್ಲಿಯೇ ಪರ್ಯಾಯವಾಗಿ ಇನ್ನೊಂದು ಹೊಸ ಮಠವನ್ನು ಸ್ಥಾಪಿಸಿ ಆ ಮೂಲಕ ನಿತ್ಯ ಕಿರಿಕುಳ ನೀಡಲು ಆರಂಭಿಸಿದರು. ಕೆಲವರ ದುರುದ್ದೇಶ ಬೇರೆಯವರಿಗೆ ಉಪಕಾರ ಎಂಬುದನ್ನು ಅರಿತ ಶ್ರೀ ಶಿವಲಿಂಗ ರಾಜ ದೇಶಿಕೇಂದ್ರ ಸ್ವಾಮಿಗಳು ಕಿರುಕುಳವನ್ನು ಸಹಿಸಿಕೊಂಡು, ಚರಮೂರ್ತಿ ಶ್ರೀ ಸಿದ್ಧಲಿಂಗ ದೇವರ ಸಂಘಟನೆಯ ಚತುರತೆಯನ್ನು ಗಮನಿಸಿ, ಅವರ ಸಹಕಾರದಿಂದ ಸಿರಿಗೆರೆಯ ಪೀಠವು ಕಾನೂನುಬದ್ಧವಾಗಿ ನೆಲೆಸುವಂತೆ ಹೋರಾಡಿ, ಪೀಠಕ್ಕೆ ಭದ್ರತೆಯನ್ನು ತಂದುಕೊಟ್ಟರು. ಈ ಕಾರಣದಿಂದಲೇ ತರಳಬಾಳು ಗುರು ಪರಂಪರೆಯ ಉದ್ಧಾರಕರೆಂದು ಇವರು ಮಾನ್ಯತೆ ಪಡೆದಿದ್ದಾರೆ. ೧೯೦೬ರಲ್ಲಿ ಪಟ್ಟಕ್ಕೆ ಬಂದ ಕೋಣನೂರು ಶ್ರೀ ಶಿವಲಿಂಗ ಸ್ವಾಮಿಗಳವರು ೧೯೧೨ರಲ್ಲಿ ಶಿವೈಕ್ಯ ರಾದರು. ನಂತರ ೧೯೧೬ರವರೆಗೆ ಹುಲ್ಲೇಹಾಳು ಗ್ರಾಮದ ಶ್ರೀ ಮರುಳಸಿದ್ಧ ಸ್ವಾಮಿಗಳವರು ಚರಮೂರ್ತಿಗಳಾಗಿಯೂ, ಹೊಳಲ್ಕೆರೆ ತಾಲ್ಲೂಕು ಇಡೇಹಳ್ಳಿ ಗ್ರಾಮದ ಶ್ರೀ ಗುರುಸಿದ್ಧ ಸ್ವಾಮಿಗಳು ವಿರಕ್ತಸ್ವಾಮಿಗಳಾಗಿಯೂ ಇದ್ದರು. ಈ ಇಬ್ಬರು ಶ್ರೀ ಮಠದ ಆಡಳಿತವನ್ನು ಪರಂಪರೆಯಂತೆ ನಡೆಸಿಕೊಂಡು ಹೋಗುತ್ತಿದ್ದರು. ಶ್ರೀ ಗುರುಸಿದ್ಧ ದೇಶಿಕೇಂದ್ರ ಸ್ವಾಮಿಗಳು ತಮ್ಮ ಆಡಳಿತಾವಧಿಯಲ್ಲಿ ಜಗಳೂರು, ತರೀಕೆರೆ, ಬುಕ್ಕಾಂಬುದಿಯಲ್ಲಿ ಯಶಸ್ವಿ ಸಂಚಾರವನ್ನು ನಡೆಸಿ ಜನರನ್ನು ಸಂಘಟಿಸಿದರು. ಅಲ್ಲದೆ ೧೯೦೦ರಲ್ಲಿ ಸಿರಿಗೆರೆಯ ಪೀಠಕ್ಕೆ ಭವ್ಯ ಕಟ್ಟಡವನ್ನು ಕಟ್ಟಿಸಿದರು.

ಒಂದಾಗಿ ಬೆಳೆದ ಕಾಲ: ತರಳಬಾಳು ಸಂತತಿಯ ವಟುವಾಗಿದ್ದ ಶ್ರೀ ಗುರುಶಾಂತ ರಾಜ ದೇಶಿಕೇಂದ್ರ ಸ್ವಾಮಿಗಳು ೧೯೧೭ ರಲ್ಲಿ ಪಟ್ಟಾಧಿಕಾರಕ್ಕೆ ಬಂದರು. ಶ್ರೀ ಗುರುಸಿದ್ಧ ದೇಶಿಕೇಂದ್ರ ಸ್ವಾಮಿಗಳ ಆಸೆಯನ್ನು ಅರಿತಿದ್ದ ಶ್ರೀ ಗುರುಶಾಂತ ರಾಜ ದೇಶಿಕೇಂದ್ರ ಸ್ವಾಮಿಗಳು ಎರಡೂ ಕಡೆಯ ಭಕ್ತರನ್ನು ಕರೆದು ಚರ್ಚಿಸಿ,ಸಿರಿಗೆರೆಯಲ್ಲಿ ಸ್ಥಾಪಿತವಾಗಿದ್ದ ಹೊಸಮಠವು ಮೂಲ ಮಠಕ್ಕೆ ವಿಲೀನಗೊಳ್ಳ ಬೇಕೆಂಬುದು ತಮ್ಮ ಒತ್ತಾಸೆ ಎಂದು ಭಕ್ತರಿಗೆ ಮನವರಿಕೆ ಮಾಡಿಕೊಟ್ಟರು. ಸಿರಿಗೆರೆಯ ಬೃಹನ್ಮಠದ ವಿರೋಧಿಗಳೆಲ್ಲ ತಮ್ಮ ಹಳೆಯ ಕಹಿ ಘಟನೆಗಳನ್ನು ಮರೆತು ಬೃಹನ್ಮಠಕ್ಕೆ ಶರಣಾದರು. ಬುಡದಲ್ಲಿದ್ದ ವಿರೋಧವು ಮಾಯವಾಗಿ ಸಿರಿಗೆರೆಯ ಬೃಹನ್ಮಠಕ್ಕೆ ಆನೆಯ ಬಲ ಬಂದಂತಾಯಿತು. ತರಳಬಾಳು ಪೀಠದ ಇತಿಹಾಸದಲ್ಲಿ ಈ ಕಾಲಾವಧಿಯ ಘಟನೆಗಳು ಸಾಮಾಜಿಕ, ಧಾರ್ಮಿಕ ಹಾಗೂ ಶೈಕ್ಷಣಿಕ ದೃಷ್ಟಿಯಿಂದ ಗಮನಾರ್ಹವಾಗಿವೆ.

ಶ್ರೀ ಗುರುಶಾಂತ ರಾಜ ದೇಶಿಕೇಂದ್ರ ಸ್ವಾಮಿಗಳು ೧೯೧೭ ರಿಂದ ೧೯೩೮ ರ ವರಗೆ ಸಿರಿಗೆರೆಯ ಪೀಠಕ್ಕೆ ಒಂದು

ಹೊಸ ಆಯಾಮವನ್ನು ತಂದುಕೊಟ್ಟರು. ಬಳ್ಳಾರಿ ಜಿಲ್ಲೆಯಲ್ಲಿ ಪ್ರವಾಸವನ್ನು ಕೈಗೊಂಡ ಶ್ರೀ ಗುರುಶಾಂತ ರಾಜ ದೇಶಿಕೇಂದ್ರ ಸ್ವಾಮಿಗಳಿಗೆ ವಿರೋಧ ಬಂದರೂ, ಪ್ರೀತಿ ತೋರಿಸಿ ಭಕ್ತರನ್ನು ತಮ್ಮತ್ತ ಸೆಳೆದುಕೊಂಡರು. ಬೇಸಾಯವೇ ಮುಖ್ಯ ಕಸುಬಾಗಿದ್ದ ಶಿಷ್ಯವರ್ಗದ ಅಜ್ಞಾನ, ದಾರಿದ್ರ್ಯ ನಿವಾರಣೆಯಾಗಬೇಕಾದರೆ ಅಕ್ಷರಜ್ಞಾನ ಆವಶ್ಯಕ ಎಂದು ತಿಳಿದು ದಾವಣಗೆರೆಯಲ್ಲಿ ೧೮,೦೦೦ ರೂ ವೆಚ್ಚದಲ್ಲಿ ವಿದ್ಯಾರ್ಥಿನಿಲಯವನ್ನು ಪ್ರಾರಂಭ ಮಾಡಿದ್ದರು. ಶಿಷ್ಯವರ್ಗದ ಸರ್ವತೋಮುಖ ಅಭಿವೃದ್ಧಿಗೆ 'ಶ್ರೀಮತ್‌ಸಾಧು ಸದ್ಧರ್ಮ ವೀರಶೈವಸಂಘ'ವನ್ನು ಸ್ಥಾಪಿಸಿದರು. ಅನೇಕ ನಿರ್ಗತಿಕ ಬಾಲಕರಿಗೆ ಆರ್ಥಿಕ ಸಹಾಯ ನೀಡಿ ವಿದ್ಯಾಭ್ಯಾಸವನ್ನು ಕೊಡಿಸಿದರು.

ಶ್ರೀ ಗುರುಶಾಂತ ರಾಜದೇಶಿಕೇಂದ್ರ ಸ್ವಾಮಿಗಳು ಚಿಕ್ಕಮಗಳೂರು, ಶಿವಮೊಗ್ಗ, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಶಿಷ್ಯವರ್ಗವನ್ನು ಸಂಘಟಿಸಿದರು. ಕುಗ್ರಾಮವಾಗಿದ್ದ ಸಿರಿಗೆರೆಯು ಇವರ ಕಾಲದಲ್ಲಿ ಅಭಿವೃದ್ಧಿಗೊಂಡಿತು. ಭಕ್ತರು ಪೀಠಕ್ಕೆ ಬರುವಂತಹ ವ್ಯವಸ್ಥೆಯನ್ನು ಮಾಡಿದರು. ಅಲ್ಲದೇ ಮಠದ ಆಸ್ತಿಯನ್ನು ವಿಸ್ತರಿಸಿದರು. ಈ ರೀತಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ನಾಡೇ ಬೆರಗಾಗುವಂತೆ ಮಾಡಿದರು.

ಶ್ರೀ ಗುರುಶಾಂತರಾಜ ದೇಶಿಕೇಂದ್ರ ಸ್ವಾಮಿಗಳ ಸಂಘಟನೆಯಿಂದ ಹೊಸಬದುಕನ್ನು ಕಾಣತೊಡಗಿದ ಭಕ್ತರು, ಗುರುಗಳು ಪಟ್ಟಾಧಿಕಾರ ಪಡೆದು ಹನ್ನೆರೆಡು ವರ್ಷ ಪೂರೈಸಿದ ಸವಿನೆನಪಿಗಾಗಿ ರಜತೋತ್ಸವವನ್ನು ವೈಭವಯುತವಾಗಿ ನಡೆಸಲು ನಿರ್ಧರಿಸಿದರು. ೧೯೨೯ರಲ್ಲಿ ನಡೆದ ಈ ರಜತೋತ್ಸವಕ್ಕೆ ನಾನಾ ಕಡೆಗಳಿಂದ ಬಂದ ಭಕ್ತರು ಸಿರಿಗೆರೆ ತರಳಬಾಳು ಸದ್ಧರ್ಮಪೀಠದ ಅಂತಸ್ತು ಬೇರೆ ಯಾವ ಮಠಗಳಿಗಿಂತಲೂ ಕಡಿಮೆ ಇರಬಾರದೆಂದು ಮನಗಂಡು ಸಮಸ್ತ ಭಕ್ತರೆಲ್ಲರೂ ಸೇರಿ ಬೆಳ್ಳಿ ಮತ್ತು ಬಂಗಾರದಿಂದ ರಚಿತವಾದ ಸಿಂಹಾಸನವನ್ನೂ, ಹೊನ್ನಾಳಿ ತಾಲ್ಲೂಕಿನ ಹೊಳೆಬೆನಕನಹಳ್ಳಿಯ ಸಿದ್ಧಪ್ಪಗೌಡರು ಬೆಳ್ಳಿ ಮತ್ತು ಬಂಗಾರದಿಂದ ರಚಿತವಾದ ಪಲ್ಲಕ್ಕಿಯನ್ನೂ, ಹರಪನಹಳ್ಳಿ ತಾಲ್ಲೂಕಿನ ಬೆಣ್ಣೆಹಳ್ಳಿ ಗ್ರಾಮದ ಭಕ್ತರು ಮೋಟಾರು ಕಾರನ್ನೂ, ತರೀಕೆರೆ ತಾಲ್ಲೂಕಿನ ಕುಡ್ಲೂರು ಗ್ರಾಮದ ಭಕ್ತರು ಬಂಗಾರದ ಶಿವಪೂಜಾ ಸಾಮಗ್ರಿಗಳನ್ನೂ ಕಾಣಿಕೆಯಾಗಿ ನೀಡಿದರು.

ಗದ್ದುಗೆ ಏರಿದ ಮಹಾನ್ ಸಾಧಕ: ಉಜ್ಜಯಿನಿಯಿಂದ ಎರಡು ಕವಲುಗಳಾಗಿ ಬೆಳೆದ ಸಿರಿಗೆರೆ ಮತ್ತು ಪಾಲ್ಕುರಿಕೆ-ಯಲಹಂಕ ಮಠಗಳನ್ನು ಒಂದು ಮಾಡುವ ಸಂಕಲ್ಪತೊಟ್ಟ ಶ್ರೀ ಗುರುಶಾಂತ ರಾಜ ದೇಶಿಕೇಂದ್ರ ಸ್ವಾಮಿಗಳು ಈ ಪ್ರಯತ್ನಕ್ಕೆ ಮುಂದಾದರು. ಈ ಸಂದರ್ಭದಲ್ಲಿಯೇ ಪಾಲ್ಕುರಿಕೆ ಮತ್ತು ಯಲಹಂಕ ಮಠದ ಚರಮೂರ್ತಿಗಳಾಗಿದ್ದ ಶ್ರೀ ಚನ್ನವೃಷಭ ದೇಶಿಕೇಂದ್ರ ಸ್ವಾಮಿಗಳು ೧೯೨೯ರಲ್ಲಿ ಲಿಂಗೈಕ್ಯರಾದರು. ಶ್ರೀ ಗುರುಶಾಂತರಾಜ ದೇಶಿಕೇಂದ್ರ ಸ್ವಾಮಿಗಳು ತಮ್ಮ ಕರಕಮಲ ಸಂಜಾತರಾದ ರೇವಣಸಿದ್ದಯ್ಯ ಎಂಬ ವಟುವನ್ನು ಪಾಲ್ಕುರಿಕೆ-ಯಲಹಂಕ ಮಠದ ಅಧಿಕಾರಕ್ಕೆ ತರಲು ಆ ಮಠದ ಭಕ್ತರ ಮನವೊಲಿಸಿದರು. ಹೊಳಲ್ಕೆರೆ ತಾಲ್ಲೂಕಿನ ಮುತ್ತಗದೂರಿನ ಶ್ರೀ ಮಹದೇವಯ್ಯ ಮತ್ತು ಶ್ರೀಮತಿ ಬಸಮ್ಮನವರ ಪುತ್ರರಾಗಿ ೧೯೧೪ ಏಪ್ರಿಲ್ ಇಪ್ಪತ್ತೆಂಟರಂದು ಜನಿಸಿದ ಶ್ರೀ ರೇವಣಸಿದ್ಧಯ್ಯನವರು ಆಗ ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. ಬೇಸಿಗೆ ರಜೆಕ್ಕೆಂದು ಕಾಶಿಯಿಂದ ಹಿಂದಿರುಗಿದ ಅವರನ್ನು ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳೆಂದು ಅಭಿಧಾನವಿತ್ತು ಪಾಲ್ಕುರಿಕೆ-ಯಲಹಂಕ ಮಠಕ್ಕೆ ಪಟ್ಟಾಧಿಕಾರವನ್ನು ಮಾಡಲಾಯಿತು. ಪಟ್ಟಾಧಿಕಾರ ಆದ ನಂತರ ಕಾಶಿಯಲ್ಲಿ ಕೆಲಕಾಲ ವಿದ್ಯಾಭ್ಯಾಸ ಮುಂದುವರೆಸಿದ ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳು ಸಮಾಜದ ಅಭಿವೃದ್ಧಿ, ಉಭಯ ಮಠಗಳ ಸ್ಥಿತಿಯನ್ನು ಗಮನಿಸಿ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿ ಯಲಹಂಕದಲ್ಲಿ ಬಂದು ನೆಲೆಸತೊಡಗಿದರು.

ಈ ಸಂದರ್ಭದಲ್ಲಿ ಶ್ರೀ ಗುರುಶಾಂತರಾಜ ದೇಶಿಕೇಂದ್ರ ಸ್ವಾಮಿಗಳು ತಮ್ಮ ಸಂಕಲ್ಪವನ್ನು ಅನುಷ್ಠಾನಗೊಳಿಸಲು ಮುಂದಾದರು. ಇದರ ಫಲವೇ ಕಡೂರು ಹೊಸಳ್ಳಿಯ ಸಾಧುವೀರಶೈವ ಸಭೆ. ಉಜ್ಜಯಿನಿಂದ ಹೊರಟು ಕವಲೊಡೆದಿದ್ದ ಪಾಲ್ಕುರಿಕೆ-ಸಿರಿಗೆರೆ ಮಠಗಳ ಏಕೀಕರಣದ ತೀರ್ಮಾನ. ಬೇರೆ ಬೇರೆಯಾಗಿದ್ದ ಶಿಷ್ಯವರ್ಗ ಒಂದುಗೂಡಿತು. ಶಿವರಾತ್ರಿಯಂದು ಚಿಕ್ಕಮಗಳೂರು ಜಿಲ್ಲೆಯ ಬಾಣೂರಿನಲ್ಲಿ ಶ್ರೀ ಶಿವಕುಮಾರ ಶಿವಾಚಾರ್ಯರು ಬಿಡಾರ ಮಾಡಿದ್ದಾರೆ ಎಂಬ ವಿಚಾರ ತಿಳಿ

ದು ಶ್ರೀ ಗುರುಶಾಂತ ರಾಜ ದೇಶಿಕೇಂದ್ರ ಸ್ವಾಮಿಗಳು ಬಾಣೂರಿಗೆ ಆಗಮಿಸಿದರು. ಶಿವಯೋಗದಲ್ಲಿ ಗುರುಯೋಗವೆಂದರು. ಭಕ್ತರು ಮತ್ತು ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳ ಜೊತೆ ಚರ್ಚಿಸಿ ಎರಡೂ ಮಠಗಳ ಆಡಳಿತವು ಒಂದಾಗುವಂತೆ ನಿರ್ಧಾರ ಕೈಗೊಳ್ಳಲು ತಿಳಿಸಿ ಸಿರಿಗೆರೆಗೆ ಹಿಂದಿರುಗಿದರು. ಇಂತಹ ಮಹತ್ವಪೂರ್ಣ ತೀರ್ಮಾನದ ನಂತರ ಕೆಲವೇ ದಿನಗಳಲ್ಲಿ ಕೆಲವೊಂದು ದುಷ್ಟ ಶಕ್ತಿಗಳ ಕೈವಾಡದಿಂದ ೧೯೩೮ನೇ ಇಸವಿ ಆಗಸ್ಟ್ ಹನ್ನೊಂದರಂದು ಅಕಾಲ ಮೃತ್ಯುವಿಗೆ ಒಳಗಾದರು.

೧೯೪೦ರ ಮೇ ಎರಡರ ಬಸವ ಜಯಂತಿಯಂದು ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳು ಸಿರಿಗೆರೆ ಶ್ರೀ ತರಳಬಾಳು ಜಗದ್ಗುರು ಪೀಠದ ಅಧಿಕಾರವನ್ನು ವಹಿಸಿಕೊಂಡು ಎರಡೂ ಮಠಗಳ ಆಡಳಿತವನ್ನು ಒಂದುಮಾಡಿ ತಮ್ಮ ಗುರುಗಳ ಅಭಿಲಾಷೆಯನ್ನು ಪೂರೈಸಿದರು. ನಂತರ ಸಮಾಜದ ಸಂಘಟನೆ, ಶ್ರೀ ಮರುಳಸಿದ್ಧರ ತತ್ತ್ವಪ್ರಚಾರದ ಜತೆಗೆ ವೀರಶೈವ ಧರ್ಮವನ್ನು ಒಂದು ಜಾತಿ ಎಂದು ತಿಳಿಯದೆ ಬಸವಾದಿಪ್ರಮಥರ ತತ್ತ್ವಗಳನ್ನು ನಾಡು-ನಾಡಿನಾಚೆ ಪ್ರಸಾರಗೊಳಿಸುವ ಉದ್ದೇಶವನ್ನು ಇಟ್ಟುಕೊಂಡು ದುಡಿಯತೊಡಗಿದರು. ಅಲ್ಲದೆ ಶಿಕ್ಷಣವಿಲ್ಲದೆ ಸಮಾಜದ ಉದ್ಧಾರ ಸಾಧ್ಯವಿಲ್ಲ ಎಂದು ಅರಿತ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು ಸಿರಿಗೆರೆಯಲ್ಲಿ ಪ್ರಥಮವಾಗಿ ೧೯೪೬ರಲ್ಲಿ ಶ್ರೀ ತರಳಬಾಳು ಜಗದ್ಗುರು ಪ್ರೌಢಶಾಲೆಯನ್ನು ಪ್ರಾರಂಭಿಸಿ, ಎಲ್ಲಾ ವರ್ಗದ ಬಡಮಕ್ಕಳು ಕಲಿಯಲು ಅನುವು ಮಾಡಿಕೊಟ್ಟರು. ೧೯೬೨ ರಲ್ಲಿ ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯನ್ನು ಸ್ಥಾಪಿಸಿ ರಾಜ್ಯಾದ್ಯಂತ ಹಳ್ಳಿಗಳಲ್ಲಿ ಶಾಲಾ ಕಾಲೇಜುಗಳು-ವಿದ್ಯಾರ್ಥಿನಿಲಯಗಳನ್ನು ತೆರೆಯಲು ಅವಕಾಶಮಾಡಿಕೊಟ್ಟು, ಶ್ರೀ ಗುರು ಶಾಂತರಾಜ ದೇಶಿಕೇಂದ್ರ ಸ್ವಾಮಿಗಳ ಕನಸನ್ನು ನನಸು ಮಾಡತೊಡಗಿದರು.

ಶ್ರೀ ತರಳಬಾಳು ಜಗದ್ಗುರು, ಶ್ರೀ ಶಿವಕುಮಾರ ಸ್ವಾಮಿಗಳು ಗ್ರಾಮಾಂತರ ಬಡಮಕ್ಕಳಿಗೂ ಶಿಕ್ಷಣ ಸಿಗಬೇಕು ಎಂಬ ಮಹಾದಾಸೆಯಿಂದ ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯನ್ನು ಪ್ರಾರಂಭಿಸಿ ನಾಡಿನ ಹಲವೆಡೆ ಗಂಡು ಮತ್ತು ಹೆಣ್ಣು ಮಕ್ಕಳು ಒಟ್ಟಿಗೆ ಕಲಿಯುವ ಅರವತ್ತೇಳು ಪ್ರೌಢಶಾಲೆಗಳು, ಬಾಲಕಿಯರಿಗಾಗಿ ಪ್ರತ್ಯೇಕವಾದ ಎಂಟು ಪ್ರೌಢಶಾಲೆಗಳು, ಆರು ಸ್ವತಂತ್ರ ಪದವಿಪೂರ್ವ ಕಾಲೇಜುಗಳು, ಐದು ಸಂಯುಕ್ತ ಪದವಿಪೂರ್ವಕಾಲೇಜುಗಳು, ಐದು ಪದವಿ ಕಾಲೇಜುಗಳು, ದಾವಣಗೆರೆಯಲ್ಲಿ ಶಿಕ್ಷಣಕಾಲೇಜು, ಹೊಳಲ್ಕೆರೆ, ಹರಪನಹಳ್ಳಿ, ಸಿರಿಗೆರೆ, ಚಿಕ್ಕಮಗಳೂರುಗಳಲ್ಲಿ ವೃತ್ತಿಶಿಕ್ಷಣ ಕಾಲೇಜುಗಳು, ವೇದ, ಸಂಸ್ಕೃತ ಮತ್ತು ಜ್ಯೋತಿಷ್ಯದ ನಾಲ್ಕು ಪಾಠಶಾಲೆಗಳು, ರಾಜ್ಯದ ಹತ್ತು ಕಡೆ ಶಿಶುವಿಹಾರ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳು, ಸಿರಿಗೆರೆಯಲ್ಲಿ ಒಂದು ಅಂಗನವಾಡಿ ತರಬೇತಿ ಕೇಂದ್ರ ಮತ್ತು ಬೆರಳಚ್ಚು ಶಾಲೆಯನ್ನು ಪ್ರಾರಂಭಿಸಿ ಸುಮಾರು ೨೦೦೦ಕ್ಕೂ ಹೆಚ್ಚು ಜನರಿಗೆ ನೌಕರಿಯನ್ನು ನೀಡಿದ್ದಾರೆ. ಈ ಸಂಸ್ಥೆಗಳಲ್ಲಿ ಸುಮಾರು ಮೂವತ್ತು ಸಾವಿರ ವಿದ್ಯಾಥಿಗಳು ವಿದ್ಯಾದಾನ ಪಡೆಯುತ್ತಿದ್ದಾರೆ. ನಲವತ್ತೈದು ವಿದ್ಯಾಥಿನಿಲಯಗಳನ್ನು ಸ್ಥಾಪಿಸಿ ವರ್ಷದಲ್ಲಿ ಸುಮಾರು ಐದು ಸಾವಿರ ವಿದ್ಯಾರ್ಥಿಗಳಿಗೆ ತರಳಬಾಳು ಬೃಹನ್ಮಠವು ಅನ್ನದಾನದ ಆಶ್ರಯ ತಾಣವಾಗಿದೆ.

ದಂದಣ-ದತ್ತಣಗೋಷ್ಠಿ : ಬಾಲಕರ ಬೌದ್ಧಿಕ ಮಟ್ಟವನ್ನು ವಿಕಾಸಗೊಳಿಸಲು ಪ್ರಾಥಮಿಕ ಹಾಗೂ ಪ್ರೌಢಶಾಲಾ ಮಕ್ಕಳಿಗಾಗಿ ದಂದಣ-ದತ್ತಣಗೋಷ್ಠಿ ಎಂಬ ವಿಶಿಷ್ಟ ಕಾರ್ಯಕ್ರಮವನ್ನು ಏರ್ಪಡಿಸಿದರು. ಪ್ರತಿ ೧೫ ದಿನಕ್ಕೊಮ್ಮೆ ಒಂದು ವಿಷಯದ ಮೇಲೆ ನುರಿತ ವಿದ್ವಾಂಸರಿಂದ ಉಪನ್ಯಾಸ ನಂತರ ಪ್ರತಿಬಾರಿ ಸರದಿಯಂತೆ ನಾಲ್ಕು ಜನ ವಿದ್ಯಾರ್ಥಿಗಳಿಂದ ಒಂದು ವಿಷಯದ ಮೇಲೆ ಭಾಷಣ ಅಲ್ಲದೆ ಈ ಕಾರ್ಯಕ್ರಮವನ್ನು ರೂಪಿಸಿ ನಿರ್ವಹಿಸುವುದು ಶಾಲಾ ಮಕ್ಕಳೇ ಆಗಿದ್ದು ಕೊನೆಯಲ್ಲಿ ಮಕ್ಕಳಿಂದ ವಿದ್ವಾಂಸರ ಜೊತೆ ಸಂವಾದ ಕಾರ್ಯಕ್ರಮ. ಅನುಭವ ಮಂಟಪದ ಕಲ್ಪನೆಯಲ್ಲಿ ರೂಪಿತಗೊಂಡ ಈ ಗೋಷ್ಠಿಯು ವಿದ್ಯಾರ್ಥಿಗಳ ಮಾನಸಿಕ ವಿಕಾಸಕ್ಕೆ ಬಹಳ ಉಪಯೋಗವಾಗಿದ್ದು ಅನೇಕ ವಿದ್ವಾಂಸರಿಂದ ಪ್ರಶಂಸೆಗೆ ಒಳಗಾಗಿದೆ.

ತರಳಬಾಳು ಹುಣ್ಣಿಮೆ: ತರಳಬಾಳು ಗುರುಪರಂಪರೆಯ ಮೂಲ ಪುರುಷ ವಿಶ್ವಬಂಧು ಶ್ರೀ ಮರುಳಸಿದ್ಧರು ತಾವು ನಡೆಸಿದ ಹೋರಾಟವನ್ನು ಮುಂದುವರೆಸಲು ಉಜ್ಜಯಿನಿಯಲ್ಲಿ ಸದ್ಧರ್ಮಪೀಠವನ್ನು ಸ್ಥಾಪಿಸಿ, ತೆಲುಗು ಬಾಳು ಸಿದ್ಧಯ್ಯನನ್ನು ನೆಲೆಗಳಿಸಿ 'ತರಳಬಾಳು 'ಎಂದು ಹರಸಿ ಉಪದೇಶ ನೀಡಿದರು. ಪೀಠದ ಈ ಇತಿಹಾಸಕ್ಕನುಗುಣವಾಗಿ ಮಠದಲ್ಲಿ ಸಾಂಪ್ರದಾಯಿಕವಾಗಿ ನಡೆದುಕೊಂಡು ಬಂದಿದ್ದ ತರಳಬಾಳು ಹುಣ್ಣಿಮೆಯನ್ನು ಪ್ರತಿವರ್ಷ ಮಾಘಶುದ್ಧ ಸಪ್ತಮಿಯಿಂದ

ಹುಣ್ಣಿಮೆಯವರೆಗೆ ಒಂಬತ್ತು ದಿನಗಳ ಕಾಲ ನಾಡಿನ ನಾನಾ ಭಾಗಗಳಲ್ಲಿ ಧಾರ್ಮಿಕ, ಸಾಹಿತ್ಯಿಕ, ಶೈಕ್ಷಣಿಕ, ಪ್ರಾಕೃತಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ನಾಡ ಹಬ್ಬವಾಗಿ ರೂಪುಗೊಳಿಸಿದ ರೂವಾರಿಗಳು ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳವರು. ಕಳೆದ ಅರ್ಧ ಶತಮಾನಕ್ಕೂ ಹೆಚ್ಚು ಕಾಲ ನಾಡಿನ ಒಳ ಹೊರಗೆ ಆಚರಿಸಿಕೊಂಡು ಬಂದಿರುವ ಈ ತರಳಬಾಳುಹುಣ್ಣಿಮೆಯು ನಾಡಿನ ಎಲ್ಲಾ ಧಾರ್ಮಿಕ ಸಮಾರಂಭಗಳಿಗೆ ಮಾತೃಸ್ವರೂಪದಂತಿದೆ. ಲಕ್ಷೋಪಲಕ್ಷ ಜನರನ್ನು ತನ್ನತ್ತ ಆಕರ್ಷಿಸಿ ನಾಡಿನ ಜನಮನದಲ್ಲಿ ಭಾವೈಕ್ಯತೆಯ ಬೀಜವನ್ನು ಬಿತ್ತುತ್ತಾ ಬಂದಿದೆ.

ಉನ್ನತ ಆದರ್ಶಗಳನ್ನು ಇಟ್ಟುಕೊಂಡು ಆರಂಭವಾಗುವ ಕೆಲಸಗಳು ನಂತರ ಕೇವಲ ಆಚರಣೆಗಳಾಗಿ ಮೂಲ ಆಶಯವನ್ನೇ ಮರೆತು ಸಂಪ್ರದಾಯವಾಗುವುದು ಈ ದೇಶದಲ್ಲಿ ಸಹಜ ಸಂಗತಿ. ನಂತರ ಇಂತಹ ಆಚರಣೆಗಳನ್ನು ಬಿಡಲು ಸಾಧ್ಯವಾಗದೆ ಮುಂದುವರೆಸಿಕೊಂಡು ಹೋಗದ ಗೊಂದಲ ಸ್ಥಿತಿಯು ಉಂಟಾಗುತ್ತದೆ. ಆದರೆ ತರಳಬಾಳು ಹುಣ್ಣಿಮೆ ಮಹೋತ್ಸವ ಸಂಪ್ರದಾಯದಂತೆ ನಡೆದರೂ, ಗೊಂದಲದ ಸ್ಥಿತಿಯನ್ನು ತಂದುಕೊಳ್ಳದೆ ಕಾಲಾನುಕಾಲಕ್ಕೆ ತನ್ನ ಮೌಲ್ಯಗಳನ್ನು ಪುನರ್ವಿಮರ್ಶಿಸಿಕೊಂಡು ವೈಚಾರಿಕತೆಯನ್ನು ಮೈಗೂಡಿಸಿಕೊಳ್ಳುತ್ತ ಬಂದಿದೆ.

ವಿಶೇಷ ಸಂಪ್ರದಾಯ: ಪ್ರಜಾಪ್ರಭುತ್ವದಲ್ಲಿ ನಂಬಿಕೆಯನ್ನು ಇಟ್ಟುಕೊಂಡಿದ್ದ ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳು ತಮ್ಮ ಜೀವಿತಾವಧಿಯಲ್ಲೇ ಉತ್ತರಾಧಿಕಾರಿಗಳನ್ನು ಆಯ್ಕೆಮಾಡಿಕೊಳ್ಳಲು ನಿರ್ಧರಿಸಿ ತಮ್ಮ ಅರವತ್ತನೆಯ ವಯಸ್ಸಿನಲ್ಲಿ ಪೀಠದ ಅಧಿಕಾರದಿಂದ ನಿವೃತ್ತಿಯನ್ನು ಘೋಷಿಸಿಕೊಂಡರು. ದೀರ್ಘಾವಧಿಯಲ್ಲಿ ಒಬ್ಬವ್ಯಕ್ತಿಯು ಇಂತಹ ಜವಾಬ್ದಾರಿ ಸ್ಥಾನದಲ್ಲಿ ಮುಂದುವರಿಯುವುದು ಸೂಕ್ತವಾಗಿ ಕಾಣುವುದಿಲ್ಲ ಎಂಬ ಉದ್ದೇಶವನ್ನಿಟ್ಟುಕೊಂಡು, ತಮ್ಮ ನಿವೃತ್ತಿಯನ್ನು ಪೀಠದ ಆಗು ಹೋಗುಗಳ ಬಗ್ಗೆ ಹೊಣೆ ಹೊತ್ತಿರುವ ಮತ್ತು ಪೀಠದ ಶಿಷ್ಯಮಂಡಳಿಯ ಪ್ರಾತಿನಿಧಿಕ ಸಂಸ್ಥೆಯಾದ ಶ್ರೀಮತ್ ಸಾಧು ಸದ್ಧರ್ಮ ವೀರಶೈವ ಸಂಘಕ್ಕೆ ತಮ್ಮ ತ್ಯಾಗಪತ್ರವನ್ನು ಒಪ್ಪಿಸಿ, ಪೀಠದ ತತ್ತ್ವ ಸಿದ್ಧಾಂತಗಳಿಗೆ ಅನುಗುಣವಾಗುವ ಯೋಗ್ಯ ಉತ್ತರಾಧಿಕಾರಿಗಳನ್ನು ನೇಮಿಸಬೇಕು ಎಂದು ೧೯೭೪ ರ ತ್ಯಾಗಪತ್ರದಲ್ಲಿ ಸೂಚಿಸಿದರು. ಬೇರೆ ಯಾವ ಪೀಠದಲ್ಲೂ ನಡೆಯದಿದ್ದ ಈ ಸತ್ಸಂಪ್ರದಾಯ ಸಿರಿಗೆರೆ ಬೃಹನ್ಮಠದಲ್ಲಿ ನಡೆದಿದ್ದು ಒಂದು ಐತಿಹಾಸಿಕ ದಾಖಲೆಯಾಗಿದೆ. ಅಲ್ಲದೆ ಬೇರೆಯವರಿಗೆ ಅನುಕರಣೀಯವಾಗಿದೆ.

ಅದಮ್ಯ ಚೇತನದ ಆಗಮನ: ೧೯೭೯ರ ಫೆಬ್ರವರಿ ಹನ್ನೊಂದರಂದು ತರಳಬಾಳು ಗುರುಪರಂಪರೆಯ ಇಪ್ಪತ್ತೊಂದನೆಯ ಜಗದ್ಗುರುಗಳಾಗಿ ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡರು. ಹಿರಿಯ ಜಗದ್ಗುರುಗಳಾದ ಶ್ರೀ ಶಿವಕುಮಾರ ಶಿವಾಚಾರ್ಯಸ್ವಾಮಿಗಳು ನಲವತ್ತು ವರ್ಷಗಳ ಅವಿರತ ಪರಿಶ್ರಮದಿಂದ ರಾಜ್ಯದಲ್ಲಿ ಬೃಹದಾಕಾರವಾಗಿ ಬೆಳೆದ ಸಿರಿಗೆರೆಯ ಬೃಹನ್ಮಠದ ಕೀರ್ತಿಯು ಮಹಾನ್ ಶಕ್ತಿಯ ಅದಮ್ಯ ಚೇತನವಾದ ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯಸ್ವಾಮಿಗಳು ಅಧಿಕಾರ ಪಡೆದಂದಿನಿಂದ ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಪಡೆಯಲು ಕಾರಣವಾಯಿತು.

೧೯೪೭ರ ಜೂನ್ ಹದಿನಾರರಂದು ಶಿವಮೊಗ್ಗ ತಾಲ್ಲೂಕು ಸೂಗೂರು ಗ್ರಾಮದಲ್ಲಿ ಶರಣತತ್ತ್ವ ಜೀವಿಗಳಾದ ಶ್ರೀ ಈಶ್ವರಯ್ಯ ಮತ್ತು ಶ್ರೀಮತಿ ಗಂಗಮ್ಮನವರ ಪುಣ್ಯಗರ್ಭದಲ್ಲಿ ಜನಿಸಿದ ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು ಶ್ರೀ ಕಾಶಿಮಹಾಲಿಂಗ ಸ್ವಾಮಿಗಳಿಂದ ಲಿಂಗದೀಕ್ಷೆ ಮತ್ತು ನಾಮಕರಣವನ್ನು ಪಡೆದವರು. ೧೯೬೩ರಲ್ಲಿ ಶಿವಮೊಗ್ಗ ಸರ್ಕಾರಿ ಪ್ರೌಢಶಾಲೆಯಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ಪ್ರಥಮ ಶ್ರೇಣಿಯಲ್ಲಿ ಮುಗಿಸಿ, ೧೯೬೭ರಲ್ಲಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ಕನ್ನಡ ಮತ್ತು ಸಂಸ್ಕೃತವನ್ನು ಪ್ರಮುಖ ವಿಷಯಗಳಾಗಿ ತೆಗೆದುಕೊಂಡು ಬಿ.ಎ. ಪದವಿಯಲ್ಲಿ ಏಳನೆಯ ರ್‍ಯಾಂಕ್ ಪಡೆದು ಚಿನ್ನದ ಪದಕವನ್ನು ಗಳಿಸಿದರು. ವಿದ್ಯಾಭ್ಯಾಸದ ಜತೆಗೆ ಸಾಹಿತ್ಯಾಸಕ್ತಿಯನ್ನು ಬೆಳೆಸಿಕೊಂಡಿದ್ದ ಗುರುಗಳು ಇದೇ ವರ್ಷದಲ್ಲಿ 'ಅಣ್ಣನವರ ನುಡಿಮುತ್ತುಗಳು' ಎಂಬ ಕೃತಿಯನ್ನು ರಚಿಸಿದರು. ನಂತರ ೧೯೬೯ರಲ್ಲಿ ವಾರಣಾಸಿಯ ಬನಾರಸ್ ಹಿಂದು ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತ ಎಂ.ಎ.ಪದವಿಯಲ್ಲಿ ಪ್ರಥಮ ಶ್ರೇಣಿಯೊಂದಿಗೆ ಉತ್ತೀರ್ಣರಾದರಲ್ಲದೆ ಅದೇ ವರ್ಷ ಕರ್ನಾಟಕ ಸಂಗೀತ ಡಿಪ್ಲೊಮೋವನ್ನು ಪ್ರಥಮ ರ್‍ಯಾಂಕ್‌ನೊಂದಿಗೆ ಪಡೆದರು. ಅದೇ

ವರ್ಷವೇ 'ಮರುಳಸಿದ್ಧ ದೇವರ ಚರಿತ್ರೆ' ಎಂಬ ಸಂಪಾದನಾ ಕೃತಿಯನ್ನು ಹೊರತಂದರು.

ವಿದೇಶ ಪ್ರಯಾಣ: ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು ೧೯೭೨ರಲ್ಲಿ ಜರ್ಮನ್ ಭಾಷೆಯಲ್ಲಿ ಸ್ನಾತಕೋತ್ತರ ಡಿಪ್ಲೊಮೋ, ೧೯೭೫-೭೬ ರಲ್ಲಿ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಭೋದನಾನುಭವ ಪಡೆಯುತ್ತಿದ್ದ ಸಂದರ್ಭದಲ್ಲಿಯೇ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಿಂದ ಅವರ 'ಎ ಕ್ರಿಟಿಕಲ್ ಸ್ಟಡೀ ಆಫ್‌ದ ಸೂತ-ಸಂಹಿತಾ' ಎಂಬ ವಿಷಯದ ಮಹಾ ಪ್ರಬಂಧಕ್ಕೆ ಪಿಎಚ್.ಡಿ. (ಡಾಕ್ಟರೇಟ್) ಪದವಿಯು ಮಾನ್ಯವಾಯಿತು. ಯುರೋಪ್ ಖಂಡದಲ್ಲಿರುವ ಆಸ್ಟ್ರಿಯಾ ದೇಶದ ವಿಯೆನ್ನಾ ವಿಶ್ವವಿದ್ಯಾನಿಲಯದಲ್ಲಿ ಡಾಕ್ಟರೇಟ್ ನಂತರದ ಸಂಶೋಧನೆಗೆ ಎರಡು ವರ್ಷಗಳ ಕಾಲಾವಧಿಗೆ ಆಫ್ರೋಏಷಿಯನ್ ಇನ್‌ಸ್ಟಿಟ್ಯೂಟ್‌ನಿಂದ ಶಿಷ್ಯ ವೇತನ ಪಡೆದು ೧೯೭೭ನೆಯ ಫೆಬ್ರವರಿ ಇಪ್ಪತ್ತೇಳರಂದು ವಿದೇಶ ಪ್ರಯಾಣ ಮಾಡಿದರು. ಅದೇ ವರ್ಷ ಜೂನ್ ಇಪ್ಪತ್ತರಿಂದ ಇಪ್ಪತ್ತೈದರವರೆಗೆ ಪ್ಯಾರಿಸ್‌ನಲ್ಲಿ ನಡೆದ ಮೂರನೆಯ ವಿಶ್ವ ಸಂಸ್ಕೃತ ಸಮ್ಮೇಳನದಲ್ಲಿ ಪ್ರಬಂಧ ಮಂಡನೆ ಮಾಡಿ ವಿಶ್ವದ ಗಮನವನ್ನು ಸೆಳೆದರು. ಪುನಃ ಅದೇ ವರ್ಷ ಜೂನ್ ಮೂವತ್ತರಿಂದ ಜುಲೈ ಎಂಟರವರೆಗೆ ಇಂಗ್ಲೆಂಡಿಗೆ ಭೇಟಿ ನೀಡಿ ಜಗತ್ತಿನ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಾದ ಆಕ್ಸ್‌ಫರ್ಡ್ ಮತ್ತು ಕೇಂಬ್ರಿಡ್ಜ್‌ಗೆ ಭೇಟಿ ನೀಡಿದರು.

೧೯೭೭ರ ಸೆಪ್ಟೆಂಬರ್ ಎಂಟರಂದು ಗ್ರಾತ್ಸ್ ನಗರದ ಚರ್ಚ್‌ನಲ್ಲಿ ಇಷ್ಟಲಿಂಗ ಪೂಜೆ ನಡೆಸಿ, ಲಿಂಗ ಪೂಜೆಯ ಬಗ್ಗೆ ಯುರೋಪ್ ಜನತೆಗೆ ತಿಳುವಳಿಕೆ ನೀಡಿದ್ದು ಒಂದು ಮಹತ್ತರ ಸಾಧನೆಯಾಗಿದೆ. ಅಲ್ಲದೆ ಅದೇ ವರ್ಷ ಸೆಪ್ಟೆಂಬರ್ ಹದಿನಾಲ್ಕರಿಂದ ಇಪ್ಪತ್ತೆರಡರವರೆಗೆ ರೋಮ್‌ನಲ್ಲಿ ನಡೆದ ಸಮ್ಮೇಳನವೊಂದರ ಸಂಚಾಲಕತ್ವ ಪಡೆದು ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು. ಪುನಃ ಅದೇ ವರ್ಷ ಕ್ರೈಸ್ತ ಧರ್ಮದ ಪವಿತ್ರ ಕ್ಷೇತ್ರವಾದ ವ್ಯಾಟಿಕನ್ ನಗರಕ್ಕೆ ಭೇಟಿ ನೀಡಿ ಬಂದರು. ೧೯೭೮ ರ ಜುಲೈ ಹದಿನಾಲ್ಕರಿಂದ ಸೆಪ್ಟೆಂಬರ್‌ಹದಿಮೂರರವರಗೆ ಜರ್ಮನಿ, ಸ್ವಿಡ್ಜರ್‌ಲ್ಯಾಂಡ್, ಹಾಲೆಂಡ್, ಸ್ಪೇನ್, ಪೋರ್ಚುಗಲ್, ಸ್ವೀಡನ್ ಇತ್ಯಾದಿ ಐರೋಪ್ಯ ರಾಷ್ಟ್ರಗಳಿಗೆ ಭೇಟಿ ನೀಡಿದ್ದಲ್ಲದೆ, ೧೯೭೯ರ ಜನವರಿಯಲ್ಲಿ ಅಮೆರಿಕಾ ಮತ್ತು ಕೆನಡಾ ದೇಶಗಳಿಗೆ ಭೇಟಿ ನೀಡಿ ಸ್ವದೇಶಕ್ಕೆ ಮರಳಿ ತರಳಬಾಳು ಬೃಹನ್ಮಠದ ಅಧಿಕಾರ ವಹಿಸಿಕೊಂಡರು. ಮಠದ ನೆರಳಲ್ಲಿ ಬೆಳೆದ ಜಗದ್ಗುರು ಡಾ.ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳನ್ನು ಹಿರಿಯ ಗುರುಗಳು ತಮ್ಮ ಕನಸಿನ ಪ್ರತೀಕವಾಗಿ ಬೆಳೆಸಿದ್ದಲ್ಲದೆ, ತಾಯ್ತನದ ಪ್ರೀತಿ ತೋರಿಸಿ ಅಗಾಧ ಪಾಂಡಿತ್ಯದ ಗಣಿಯಾಗಿ ಬೆಳೆಸಿದರು. ಈ ಕಾರಣಕ್ಕಾಗಿಯೇ ಜಗದ್ಗುರು ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು ಹಿರಿಯ ಗುರುಗಳ ಮೇಲೆ ಅಪಾರ ಪ್ರೀತ್ಯಾದರಗಳನ್ನು ಇಟ್ಟುಕೊಂಡಿದ್ದು, 'ಮೊದಲು ನಾವು ತುಂಗಾನದಿಯ ದಡದಲ್ಲಿ ಬಿದ್ದಿದ್ದ ಒಂದು ಕಾಡುಗಲ್ಲು, ಅಂತಹ ಕಲ್ಲನ್ನು ಬಡಿದು ಕುಟ್ಟಿ ಶಿವಮೂರ್ತಿಯನ್ನಾಗಿ ಸಂಸ್ಕರಿಸಿ ಸದ್ಧರ್ಮ ಗದ್ದುಗೆಯನ್ನೇರಿಸಿ ಜಗದ್ವಂದ್ಯರನ್ನಾಗಿಸಿದ್ದಾರೆ' ಎಂದು ತಮ್ಮ ಪರಮಾರಾಧ್ಯ ಗುರುಗಳ ಬಗ್ಗೆ ಎದೆ ತುಂಬಿ ಹೇಳಿಕೊಳ್ಳುತ್ತಾರೆ. ಮಗು ತನ್ನ ತಾಯಿಗೆ ತೋರುವ ಪ್ರೀತಿಯಂತೆ ಹಿರಿಯ ಗುರುಗಳ ಮೇಲೆ ಪ್ರೀತಿ ತೋರಿಸಿ ಅವರ ಕನಸುಗಳನ್ನು ಈಡೇರಿಸಿದ್ದಾರೆ. ತಮ್ಮ ವಿಶಿಷ್ಟ ಗುಣಗಳಿಂದ ಪೀಠಕ್ಕೆ ಮತ್ತಷ್ಟು ಗೌರವ ಹೆಚ್ಚಿಸಿ ನಾಡಿನಾಚೆಗೆ ಹರಡುವಂತೆ ಮಾಡಿ ಪಾಶ್ಚಿಮಾತ್ಯ ಮೌಲ್ಯಗಳು ಮತ್ತು ಭಾರತೀಯ ಮೌಲ್ಯಗಳನ್ನು ಸಮನ್ವಯಗೊಳಿಸಿ ಶರಣಧರ್ಮವು ವಿಶ್ವವ್ಯಾಪಿಯಾಗಿ ಬೆಳೆಯಲು ಚಾಲನೆ ನೀಡಿದ್ದಕ್ಕೆ ಇಡೀ ನಾಡೇ ಹೆಮ್ಮೆಪಡಬೇಕು.

ಶ್ರೀ ತರಳಬಾಳು ಜಗದ್ಗುರು ಡಾ.ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು ಪಟ್ಟಾಧಿಕಾರ ವಹಿಸಿಕೊಂಡ ನಂತರ ವಿದೇಶಿ ಸಂಪರ್ಕಗಳು ಹೆಚ್ಚತೊಡಗಿ ವಿಶ್ವದ ಬಹುತೇಕ ಎಲ್ಲಾ ದೇಶಗಳಿಗೆ ಭೇಟಿ ನೀಡಿ, ಅಲ್ಲಿನ ವಿಶ್ವವಿದ್ಯಾನಿಲಯಗಳಲ್ಲಿ ವಿಶೇಷ ಉಪನ್ಯಾಸ ನೀಡಿ, ಸಮ್ಮೇಳನಗಳಲ್ಲಿ ಭಾಗವಹಿಸಿ ವಿವೇಕಾನಂದರ ನಂತರ ದೇಶದ ಗೌರವ ಹೆಚ್ಚಿಸಿದ ಎರಡನೆಯ ಧರ್ಮಗುರು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಶಿಸ್ತು, ಅಚ್ಚುಕಟ್ಟುತನಕ್ಕೆ ಹೆಸರಾದ ಜಗದ್ಗುರು ಡಾ.ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು ನಗುಮುಖ, ಅರ್ಥತಪ್ಪದ ಮೆಲುಧ್ವನಿ, ವಿದ್ವತ್‌ಪೂರ್ಣ ಉಪನ್ಯಾಸ, ಜಾತ್ಯಾತೀತ ನಿಲುವು ಮತ್ತು ವೈಚಾರಿಕ ಮನೋಭಾವ ಇವುಗಳ ಮೊತ್ತವಾಗಿ ಮಠದ ಘನತೆಯನ್ನು ಮೇರು ಸ್ಥಿತಿಗೆ ಕೊಂಡೊಯ್ದಿದ್ದಾರೆ. ಹೊಸಹೊಸ ವಿಚಾರಧಾರೆಗಳನ್ನು ತಮ್ಮ

ಮನದಾಳದಲ್ಲಿ ಬೆಳೆಸಿಕೊಂಡು, ತಮ್ಮ ಎಲ್ಲಾ ವಿಚಾರಗಳಿಗೆ ಮೂರ್ತ ರೂಪುಕೊಟ್ಟು ಎಲ್ಲಾ ಧರ್ಮದವರ ದೃಷ್ಟಿ ಬೃಹನ್ಮಠದ ಕಡೆಗೆ ತಿರುಗುವಂತೆ ಮಾಡಿದ್ದು ಗುರುಗಳ ಕ್ರಿಯಾಶೀಲತೆಯ ಗುಣ. ಅಭಿವೃದ್ಧಿಪರ ಚಿಂತನೆಗಳ ಜತೆ ವಿದೇಶಗಳೊಡನೆ ಇಟ್ಟುಕೊಂಡಿರುವ ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಪರ್ಕಗಳಿಂದ ನಮ್ಮ ನಾಡುನುಡಿ ಧರ್ಮ ಹಾಗೂ ತರಳಬಾಳು ಬೃಹನ್ಮಠಕ್ಕೆ ವಿಶ್ವ ಮಾನ್ಯತೆಯನ್ನು ತಂದುಕೊಟ್ಟಿದ್ದಾರೆ.

ಹಳ್ಳಿ ಮರೆಯದ ಗುರುಗಳು: ವಿದ್ವತ್ತು,ಪಾಂಡಿತ್ಯ, ವಿದೇಶಿ ವಿದ್ವಾಂಸರ ಸಂಪರ್ಕ ಇರುವ ಜಗದ್ಗುರು ಡಾ.ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು ಹಳ್ಳಿಗಳನ್ನು ಎಂದೂ ಮರೆಯದೆ, ಹಳ್ಳಿಗರ ಅನಕ್ಷರತೆ, ಬಡತನ ನಿವಾರಣೆಗೆ ಹೆಚ್ಚು ಕಾಲ ಶ್ರಮಿಸಿ ಆರ್ಥಿಕ, ನೈತಿಕ ಸದೃಢತೆ ತರುವಲ್ಲಿ ತಮ್ಮ ಹಿರಿಯ ಗುರುಗಳು ತೋರಿಸಿಕೊಟ್ಟ ಮಾರ್ಗದಲ್ಲಿ ನಡೆಯುತ್ತಿದ್ದಾರೆ. ಇಂದಿಗೂ ಹಳ್ಳಿಗಳ ಬಗ್ಗೆ ಹೆಚ್ಚು ಚಿಂತನೆ ನಡೆಸುವ ಗುರುಗಳು ತರಳಬಾಳು ಗ್ರಾಮೀಣ ಅಭಿವೃದ್ಧಿಸಂಸ್ಥೆ ಸ್ಥಾಪಿಸಿ ಈ ಮೂಲಕ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದಾರೆ. ೨೦೦೧ರಿಂದ ಪ್ರತಿ ಸೋಮವಾರ ಬೃಹನ್ಮಠದಲ್ಲಿ ಮೊಕ್ಕಾಂ ಮಾಡಿ ಭಕ್ತರಿಗೆ ದರ್ಶನ ನೀಡಿ ಭಕ್ತರ ಕಷ್ಟ ಸುಖಗಳಿಗೆ ಸ್ಪಂದಿಸುವ ಹೊಸ ಕಾಯಕವನ್ನು ಹಮ್ಮಿಕೊಂಡಿದ್ದು ಇದು ಹೆಚ್ಚು ಜನಪ್ರಿಯಗೊಂಡಿದೆ. ಅಲ್ಲದೆ ಅನೇಕ ಸಮಸ್ಯೆಗಳನ್ನು ಬಗೆಹರಿಸುವ ವೇದಿಕೆಯಾಗಿದೆ.

ಸಾಹಿತ್ಯ ಸೇವೆ: ಕೃಷ್ಣ ಮೇಲ್ದಂಡೆಯಲ್ಲಿ ಮುಳುಗಡೆಯಾಗುತ್ತಿದ್ದ ಕೂಡಲ ಸಂಗಮ ದೇವಾಲಯದ ಸ್ಥಳಾಂತರದ ಯೋಜನೆಗೆ ಚಾಲನೆ ನೀಡಿ ಸಾರ್ವಜನಿಕರ ಮತ್ತು ಸರ್ಕಾರದ ಗಮನ ಸೆಳೆದು ಕೂಡಲ ಸಂಗಮದ ಅಭಿವೃದ್ಧಿಗೆ ಅಡಿಪಾಯವನ್ನು ಹಾಕಿದವರೆಂದರೆ ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯಸ್ವಾಮಿಗಳು. ಈ ಸಂಬಂಧವಾಗಿ ಅವರು ಪಟ್ಟ ಶ್ರಮ ಅವರಿಂದಲೇ ರಚಿತವಾದ 'ಕೂಡಲ ಸಂಗಮದ ಅಳಿವು-ಉಳಿವು' ಎಂಬ ಗ್ರಂಥದಲ್ಲಿ ದಾಖಲಾಗಿದೆ. ಸ್ವತಃ ಸಾಹಿತಿಗಳಾದ ಗುರುಗಳು ತರಳಬಾಳು ಪ್ರಕಾಶನದಿಂದ ಆಧ್ಯಾತ್ಮಿಕ, ಧಾರ್ಮಿಕ, ಸಾಮಾಜಿಕ ಮತ್ತು ಶೈಕ್ಷಣಿಕ ವಿಚಾರಗಳನ್ನೊಳಗೊಂಡ ಅನೇಕ ಗ್ರಂಥಗಳನ್ನು ಹೊರತಂದಿದ್ದಾರೆ. ಅಲ್ಲದೆ 'ತರಳ ಬಾಳು' ತ್ರೈಮಾಸಿಕ ಹಾಗೂ ಮಾಸಿಕ ಪತ್ರಿಕೆಯಾದ 'ತರಳ ಬಾಳು ವಾರ್ತಾಪತ್ರ'ವನ್ನು ಹೊರತರುತ್ತಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಒಂದುಲಕ್ಷ ರೂಪಾಯಿಗಳ ದತ್ತಿಯನ್ನು ಸ್ಥಾಪಿಸಿ ಸಾಹಿತ್ಯ ಚಟುವಟಿಕೆ ನಿರಂತರವಾಗಿ ನಡೆಯುವಂತೆ ಮಾಡಿದ್ದಾರೆ. ಅನೇಕ ಯುವ ಸಾಹಿತಿಗಳಿಗೆ ನೆರವಾಗಿ ವಿವಿಧ ಬಗೆಯ ಪ್ರೌಢಕೃತಿಗಳು ಹೊರಬರಲು ನೆರವಾಗಿದ್ದಾರೆ. ಇದೇ ರೀತಿ ಹಿಂದಿನ ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳೂ ಸಹ ಸ್ವತಃ ಲೇಖಕರಾಗಿ 'ಮರಣವೇ ಮಹಾನವಮಿ', 'ವಿಶ್ವಬಂಧು ಮರುಳಸಿದ್ಧ' ಎಂಬ ಎರಡು ನಾಟಕಗಳು ಹಾಗೂ ತಾವು ಅನೇಕ ಕಡೆ ಮಾಡಿದ ಆಶೀರ್ವಚನಗಳ ಸಂಗ್ರಹದ ಕಿರುಹೊತ್ತಿಗೆಯ ಜತೆಗೆ ತಾವು ಭೇಟಿಕೊಟ್ಟ ಅನೇಕ ಪುಣ್ಯ ಸ್ಥಳಗಳ, ಐತಿಹಾಸಿಕ ಸ್ಥಳಗಳ ಸ್ಥಳಪುರಾಣಗಳು ಈ ರೀತಿ ಕನ್ನಡ ಸಾಹಿತ್ಯದ ಅನೇಕ ಕೃತಿಗಳು ಹೊರಬರಲು ನೆರವಾಗಿದ್ದನ್ನು ಮತ್ತು ಬಸವಣ್ಣನ ವಚನಗಳನ್ನು ಆಂಗ್ಲ, ತೆಲುಗು, ಹಿಂದಿ ಭಾಷೆಗಳಿಗೆ ಭಾಷಾಂತರಿಸಲು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಒಂದೂವರೆ ಲಕ್ಷ ರೂಗಳ ದತ್ತಿಯನ್ನು ಸ್ಥಾಪಿಸಿದ್ದು ವಚನಗಳನ್ನು ಬೇರೆಬೇರೆ ಭಾಷೆಗಳಲ್ಲಿ ಪ್ರಕಟಿಸಲು ನೆರವಾಗಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದಲ್ಲಿ ಮುದ್ರಣಾಲಯವನ್ನು ಸ್ಥಾಪಿಸಿದ್ದು ಅನೇಕ ಕೃತಿಗಳು ಇಲ್ಲಿ ಮುದ್ರಣಗೊಳ್ಳಲು ಅವಕಾಶವನ್ನು ಕಲ್ಪಿಸಲಾಗಿದೆ.

ಸಂಶೋಧನೆ: ಕ್ರಿ.ಪೂ.ಐದನೆಯ ಶತಮಾನದ ಪಾಣಿನಿಯ ಸಂಸ್ಕೃತ ವ್ಯಾಕರಣವನ್ನು ಆಧುನಿಕ ಆವಿಷ್ಕಾರವಾದ ಕಂಪ್ಯೂಟರ್‌ಗೆ ಅಳವಡಿಸಲು ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು ತಮ್ಮ ಅಗಾಧ ಪ್ರತಿಭೆಯಿಂದ ಒಂದು ಸಾಫ್ಟ್‌ವೇರ್ ತಯಾರಿಸಿ, ಅಂತರಾಷ್ಟ್ರೀಯ ವಿದ್ವಾಂಸರ ಮನ್ನಣೆಗೆ ಪಾತ್ರರಾಗಿದ್ದಾರೆ. ಪಾಣಿನಿಯ ಅಷ್ಟಾಧ್ಯಾಯಿಯನ್ನು ಕಂಪ್ಯೂಟರ್‌ಗೆ ಅಳವಡಿಸಿ 'ಗಣಕಾಷ್ಟಾಧ್ಯಾಯಿ'ಎಂದು ಹೆಸರಿಸಿ, ೧೯೯೪ ರ ಜನವರಿಯಲ್ಲಿ ಆಸ್ಟ್ರೇಲಿಯಾದ ಮೆಲ್ಬೋರ್ ನಗರದಲ್ಲಿ ನಡೆದ ಒಂಬತ್ತನೆಯ ವಿಶ್ವ ಸಂಸ್ಕೃತ ಸಮ್ಮೇಳನದಲ್ಲಿ ಪ್ರದರ್ಶಿಸಿ ವಿಶ್ವದ ಸಂಸ್ಕೃತ ವಿದ್ವಾಂಸರು ಕುತೂಹಲದಿಂದ ಗಮನಿಸುವಂತೆ ಮಾಡಿದರು. ಇಂತಹ ಅದ್ಭುತ ಶಕ್ತಿ ಪಡೆದ ಶ್ರೀ ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ಗೆ ಸಂಸ್ಕೃತದಲ್ಲಿ ಅನುಕ್ರಮವಾಗಿ 'ಪರುಷಗಣಕಂ' ಮತ್ತು 'ಮೃದು ಗಣಕಂ' ಎಂಬ

ಎರಡು ಶಬ್ದಗಳನ್ನು ಅವಿಷ್ಕಾರ ಮಾಡಿದ್ದಾರೆ. ಹೊಸ ಹೊಸ ಪ್ರಯೋಗವನ್ನು ಮಾಡಿ ಬೆರಗುಗೊಳಿಸಿದ್ದಾರೆ. ಬಸವಾದಿ ಶಿವಶರಣರ ಸಮಗ್ರ ವಚನಗಳನ್ನು ಒಳಗೊಂಡ 'ಗಣಕ ವಚನ ಸಂಪುಟ' ಎಂಬ ಇನ್ನೊಂದು ಸಾಫ್ಟ್‌ವೇರ್‌ನ್ನು ಸಿದ್ದಪಡಿಸಿ ಇಂಟರ್‌ನೆಟ್‌ಗೆ ಅಳವಡಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇದರಿಂದಾಗಿ ಪ್ರಪಂಚದಾದ್ಯಂತ ವಚನಗಳಲ್ಲಿ ಆಸಕ್ತಿಯಿರುವವರು ಕಂಪ್ಯೂಟರ್ ಮೂಲಕ ಅಧ್ಯಯನ ಮಾಡಲು ಅವಕಾಶವಾಗಿದ್ದು, ಸದ್ಯ ನಾಲ್ಕೈದು ಪಂಡಿತರು ಇದರ ಉಪಯೋಗವನ್ನು ಪಡೆಯುತ್ತಿದ್ದಾರೆ.

ಬಸವಣ್ಣನವರ ಸುಮಾರು ೩೦೦ ವಚನಗಳ ತಮಿಳು ಅನುವಾದವುಳ್ಳ ಓಲೆಗರಿಯು ಫ್ರಾನ್ಸ್ ದೇಶದ ರಾಜಧಾನಿಯಾದ ಪ್ಯಾರೀಸ್ ಮಹಾನಗರದ ರಾಷ್ಟ್ರೀಯ ಗ್ರಂಥಾಲಯದಲ್ಲಿರುವುದನ್ನು ಸಂಶೋಧಿಸಿದ ಕೀರ್ತಿಯು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯರಿಗೆ ಸಲ್ಲುತ್ತದೆ. ಈ ಓಲೆಗರಿಯನ್ನು ತುಂಬಾ ಪರಿಶ್ರಮದಿಂದ ಯಥಾವತ್ತಾಗಿ ತಮಿಳು ಲಿಪಿಯಲ್ಲಿಯೇ ಸ್ವತಃ ಪ್ರತಿಲಿಪಿ ಮಾಡಿಕೊಂಡು ಬಂದಿರುವ ಅವರ ಅಪರೂಪದ ಹಸ್ತಪ್ರತಿಯನ್ನು ಮಠದ ಗ್ರಂಥಾಲಯದಲ್ಲಿ ನೋಡಬಹುದಾಗಿದೆ. ಈ ಓಲೆಗರಿಯ ಅಧ್ಯಯನಕ್ಕಾಗಿ ಗುರುಗಳು ತಮಿಳು ಭಾಷೆಯನ್ನು ಕಲಿತಿರುವುದು ಅವರ ಆಸಕ್ತಿ ಹಾಗು ಅಧ್ಯಯನಶೀಲ ಗುಣವನ್ನು ಪ್ರತಿಬಿಂಬಿಸುತ್ತದೆ.

ತರಳಬಾಳು ಕೇಂದ್ರ: ಹೊಸಹೊಸ ಪ್ರಯೋಗಗಳನ್ನು ರೂಪಿಸಿ ಅನುಷ್ಠಾನಗೊಳಿಸುವ ಶ್ರೀ ಜಗದ್ಗುರುಗಳವರು ತಮ್ಮ ಕ್ರಿಯಾಶೀಲತೆಯಿಂದ ಪೀಠವು ಹೆಚ್ಚು ವಿಸ್ತಾರಗೊಳ್ಳುವಂತೆ ಮಾಡಿದ್ದಲ್ಲದೆ, ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ 'ತರಳಬಾಳು ಕೇಂದ್ರ'ವನ್ನು ಸ್ಥಾಪಿಸಿದ್ದಾರೆ. ಧಾರ್ಮಿಕ ವಿಷಯಗಳ ಬಗ್ಗೆ ಅದರಲ್ಲಿಯೂ ವೀರಶೈವಧರ್ಮ ಮತ್ತು ವಚನಸಾಹಿತ್ಯದ ಬಗ್ಗೆ ಹೆಚ್ಚು ಅಧ್ಯಯನ ಮಾಡುವ ಆಸಕ್ತರಿಗೆ ಸೌಲಭ್ಯವನ್ನು ಕಲ್ಪಿಸುವುದು, ಧಾರ್ಮಿಕ ಮತ್ತು ಸಾಂಸ್ಕೃತಿಕ ವಿನಿಮಯದ ಅಂತರರಾಷ್ಟ್ರೀಯ ಕಾರ್ಯಕ್ರಮಗಳನ್ನು ಏರ್ಪಡಿಸುವುದು, ವೀರಶೈವ ಧರ್ಮ ಬೋಧನೆ ಮತ್ತು ಅದರ ಮೌಲ್ಯಗಳನ್ನು ಪ್ರಸಾರ ಮಾಡುವುದಲ್ಲದೆ ವೀರಶೈವರ ದೀಕ್ಷಾ ಸಂಸ್ಕಾರಕ್ಕೆ ಅವಕಾಶ ಕಲ್ಪಿಸಿ ಕೊಡುವುದು, ಒಳನಾಡು ಮತ್ತು ಹೊರ ದೇಶದಲ್ಲಿಯ ವೀರಶೈವ ಯುವ ಜನಾಂಗಕ್ಕೆ ಧಾರ್ಮಿಕ ಸಂಸ್ಕಾರವನ್ನು ನೀಡುವ ಕಾರ್ಯಕ್ರಮವನ್ನು ರೂಪಿಸಿ, ವಿಶ್ವ ಸಂಬಂಧಗಳ ಅಭಿವೃದ್ಧಿಗೆ ನೆರವಾಗುವಂತಹ ಆಂತರರಾಷ್ಟ್ರೀಯ ವೇದಿಕೆಯನ್ನಾಗಿ ತರಳಬಾಳು ಕೇಂದ್ರವನ್ನು ವಿಕಾಸಗೊಳಿಸಬೇಕೆಂಬ ತಮ್ಮ ಉದ್ದೇಶವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತಾ ಬಂದಿದ್ದಾರೆ. ೧೯೯೭ರಲ್ಲಿ ಈ ಕೇಂದ್ರದಲ್ಲಿ ಹತ್ತನೆಯ ವಿಶ್ವ ಸಂಸ್ಕೃತ ಸಮ್ಮೇಳನ ನಡೆದು ವಿಶ್ವದೆಲ್ಲೆಡೆಯಿಂದ ಸುಮಾರು ೨ ಸಾವಿರ ಸಂಸ್ಕೃತ ವಿದ್ವಾಂಸರು ಆಗಮಿಸಿ ಪಾಲ್ಗೊಂಡದ್ದು ಸ್ಮರಣೀಯವಾಗಿದೆ.

ಸಾಮಾಜಿಕ ಸುಧಾರಣೆ: ಸಾಮಾಜಿಕ ಸುಧಾರಣೆಯಲ್ಲಿ ಶ್ರೀ ತರಳಬಾಳು ಬೃಹನ್ಮಠವು ವಿಶ್ವಬಂಧು ಮರುಳಸಿದ್ಧರಿಂದ ಪ್ರಾರಂಭವಾಗಿ ಈಗಿನ ಶ್ರೀ ಜಗದ್ಗುರುಗಳಾದ ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳ ತನಕ ಅವಿರತವಾಗಿ ನಡೆಯುತ್ತಾ ಬಂದಿದೆ ಎಂದರೆ ತಪ್ಪಾಗಲಾರದು. ಜಾತಿ ಪದ್ಧತಿ ನಿವಾರಣೆಗೆ ಅಂತರ್ಜಾತಿ ವಿವಾಹವು ಮೂಲಮದ್ದು ಎಂದು ಅರಿತು ಇದಕ್ಕೆ ಪ್ರೋತ್ಸಾಹವನ್ನು ನೀಡಿ, ಪೀಠದ ವತಿಯಿಂದ ಅನೇಕ ಅಂತರ್ಜಾತಿ ವಿವಾಹಗಳನ್ನು ಮಾಡಿಸಿಕೊಟ್ಟಿದ್ದಾರೆ. ಅದಕ್ಕಿಂತಲೂ ಮಿಗಿಲಾಗಿ ಸಂಪ್ರದಾಯವಾದಿಗಳು ಹುಬ್ಬು ಗಂಟಿಕ್ಕಿಕೊಳ್ಳುವಂತೆ ೧೯೮೩ರ ಫೆಬ್ರವರಿ ಹದಿನಾಲ್ಕರಂದು ವಿಧವಾವಿವಾಹವನ್ನು ನಡೆಸಿ, ಬೃಹನ್ಮಠದಲ್ಲಿ ಕ್ರಾಂತಿಯನ್ನು ಮಾಡಿದರು. ಗ್ರಾಮೀಣ ಜನರು ಮದ್ಯಪಾನದಂತಹ ದುಶ್ಚಟಗಳಿಗೆ ಬಲಿಯಾಗುತ್ತಿರುವುದನ್ನು ಗಮನಿಸಿದ ಶ್ರೀ ಜಗದ್ಗುರುಗಳವರು ಪಾನ ನಿಷೇಧ ಚಳುವಳಿಯನ್ನು ಒಂದು ಆಂದೋಲನದ ರೀತಿಯಲ್ಲಿ ನಡೆಸುತ್ತಾ ಬಂದಿದ್ದಾರೆ. ಈ ಚಳುವಳಿಗೆ ಕೆಲವು ಮಠಾಧೀಶರುಗಳು ಬೆಂಬಲವನ್ನು ಸೂಚಿಸಿ ಚಳುವಳಿಯಲ್ಲಿ ಭಾಗವಹಿಸಿದರು. ಆ ನಿಷೇಧ ಚಳುವಳಿಯು ನಾಡಿನಲ್ಲಿ ಜನಜಾಗೃತಿಯನ್ನು ಉಂಟುಮಾಡಿ ಹೋರಾಟಕ್ಕೆ ಒಂದು ಚಾಲನೆಯನ್ನು ತಂದುಕೊಟ್ಟಿದೆ.

ಸಾಮಾಜಿಕ ಸುಧಾರಣೆಯಾಗಬೇಕಾದರೆ ಆಡಳಿತ ನಡೆಸುವ ಪ್ರತಿನಿಧಿಗಳು ಸಚ್ಚಾರಿತ್ರ್ಯ ಹೊಂದಿರಬೇಕು ಎಂಬುದನ್ನು ಮನಗಂಡ ತರಬಾಳು ಬೃಹನ್ಮಠವು ನೇರವಾಗಿ ರಾಜಕೀಯಕ್ಕೆ ಇಳಿಯದೆ, ಜನರಲ್ಲಿ ರಾಜಕೀಯ ಪ್ರಜ್ಞೆ ಜಾಗೃತವಾಗುವಂತೆ

ಮಾಡಿದೆ. ಕೆಲವೊಮ್ಮೆ ನೇರವಾಗಿ ರಾಜಕೀಯ ಮಾರ್ಗದರ್ಶನ ಮಾಡಿದ್ದೂ ಉಂಟು. ಈ ರೀತಿ ತರಳಬಾಳು ಬೃಹನ್ಮಠವು ಪರಿಸ್ಥಿತಿಗೆ ಅನುಗುಣವಾಗಿ ಸ್ಪಂದಿಸಿ ಎಲ್ಲಾ ಕ್ಷೇತ್ರಗಳಲ್ಲಿ ಪರಿಪೂರ್ಣವಾಗಿ ತನ್ನನ್ನು ತೊಡಗಿಸಿಕೊಂಡಿದೆ.

ಭವ್ಯ ಮಂಟಪ ಸಮುಚ್ಚಯ: ೧೯೯೨ರ ಸೆಪ್ಟಂಬರ್ ಇಪ್ಪತ್ನಾಲ್ಕರಂದು ಲಿಂಗೈಕ್ಯರಾದ ಶ್ರೀ ಜಗದ್ಗುರು ಶಿವಕುಮಾರ ಸ್ವಾಮಿಗಳ ಗದ್ದುಗೆಯು ಭಾರತೀಯ ಧಾರ್ಮಿಕ ವಾಸ್ತುಶಿಲ್ಪಕ್ಕೆ ಅನುಗುಣವಾಗಿ ಷಟ್‌ಸ್ಥಲಾ ಕೃತಿಯಲ್ಲಿ ಕೋಟ್ಯಾಂತರ ರೂ ವೆಚ್ಚದಲ್ಲಿ ನಿರ್ಮಾಣವಾಗಿದೆ. ನೆಲ ಅಂತಸ್ತಿನಲ್ಲಿ ಶ್ರೀ ಶಿವಕುಮಾರ ಸ್ವಾಮಿಗಳ ಗದ್ದುಗೆ ನಿರ್ಮಿಸಿದ್ದು, ಮೇಲಂತಸ್ತಿನಲ್ಲಿ ಶ್ರೀ ಗುರುಶಾಂತ ರಾಜದೇಶಿಕೇಂದ್ರ ಸ್ವಾಮಿಗಳ ವಿಗ್ರಹವನ್ನು ನಿರ್ಮಿಸಲಾಗಿದೆ. ದೂರದಿಂದಲೇ ಭಕ್ತರನ್ನು ಆಕರ್ಷಿಸುವ ಈ ಐಕ್ಯಮಂಟಪವು ತರಳಬಾಳು ಬೃಹನ್ಮಠದ ಭವ್ಯತೆಗೆ ಸಾಕ್ಷಿಯಾಗಿ ರೂಪುಗೊಂಡಿರುವುದನ್ನು ನೋಡಿಯೇ ಅನುಭವಿಸಬೇಕು.

ಪಶ್ಚಿಮಾಭಿಮುಖವಾಗಿ ನಿರ್ಮಿಸಿರುವ ಪೀಠದ ಕಟ್ಟಡದಲ್ಲಿ ಈಗ ಶಾಖಾಮಠಗಳ ಗುರುಗಳಿಗೆ ವಾಸ್ತವ್ಯ, ಅನ್ನದಾಸೋಹ ಮಂದಿರ, ಪೂಜಾಕೊಠಡಿ, ಅಭ್ಯಾಸ ಕೊಠಡಿಯನ್ನು ಒಳಗೊಂಡಂತೆ ಒಂದು ದೊಡ್ಡ ಹಜಾರವನ್ನು ಹೊಂದಿದೆ. ಈ ಕಟ್ಟಡಕ್ಕೆ ಹೊಂದಿಕೊಂಡಂತೆ ಚರ ಪಟ್ಟಾಧ್ಯಕ್ಷರ ವಾಸ್ತವ್ಯ ಮಂಟಪ, ವಿದ್ಯಾರ್ಥಿನಿಲಯದ ಕಟ್ಟಡವೂ ಇದೆ. ಈ ಕಟ್ಟಡದ ಎದುರು ಜಗದ್ಗುರುಗಳ ವಾಸ್ತವ್ಯದ ಮಂಟಪ ಹಾಗೂ ಮಠದ ಹೆಬ್ಬಾಗಿಲು ಬಳಿ ಇರುವ ಲತಾಮಂಟಪವನ್ನು ಒಳಗೊಂಡಂತೆ ಪೀಠದ ಸಮುಚ್ಚಯ ಹಸಿರಿನ ಮಧ್ಯೆ ಕಂಗೊಳಿಸುತ್ತಿದೆ. ಇದಕ್ಕೆ ಕಳಶ ಇಟ್ಟಂತೆ ಪೀಠದ ಮಹಾದ್ವಾರ ಮಂಟಪವು ಭವ್ಯತೆಯ ಸಂಕೇತವಾಗಿ ಮಠದ ಇತಿಹಾಸವನ್ನು ಸಾರುವ ರೀತಿಯಲ್ಲಿ ನಿಂತಿದೆ. ಈ ಸಮುಚ್ಚಯದ ಒಳ ಆವರಣದಲ್ಲಿ ಐದು ಗದ್ದುಗೆಗಳು ನಿರ್ಮಾಣವಾಗಿದ್ದು ಉಳಿದಂತೆ ಊರ ಹೊರಗಿನ ಮಾವಿನ ತೋಪಿನಲ್ಲಿ ಉಳಿದ ಗದ್ದುಗೆಗಳು ನಿರ್ಮಾಣವಾಗಿವೆ.

ಶಾಖಾಮಠಗಳು: ಜಂಬಪ್ಪದೇವರ ಕಾಲದಲ್ಲಿ ಎರಡು ಕವಲುಗಳಾಗಿ ಬೆಳೆದು ಸಿರಿಗೆರೆ ಮತ್ತು ಪಾಲ್ಕುರಿಕೆಮಠದ ಪರಂಪರೆಯು ನಾಡಿನ ಅನೇಕ ಭಾಗಗಳಲ್ಲಿ ವಿಸ್ತಾರಗೊಂಡು ಶಾಖಾ ಮಠಗಳಾಗಿ ನಿರ್ಮಾಣಗೊಳ್ಳಲು ಸಹಾಯಕವಾದವು. ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಸಾಣೇಹಳ್ಳಿ, ಬೇಲೂರು ತಾಲ್ಲೂಕಿನ ಯಲಹಂಕ, ಚಿಕ್ಕಮಗಳೂರು ಸಮೀಪದ ಕಲ್ಯಾಣ ನಗರದ (ದೊಡ್ಡ ಕುರುಬರಹಳ್ಳಿ) ಜಾಬಾಲಿಪುರಮಠ, ಮಾಗಡಿ ತಾಲ್ಲೂಕಿನ ಹುಲಿಯೂರಿನ ಶುಂಠಿಮಠ, ಹಾವೇರಿ ತಾಲ್ಲೂಕಿನ ಕರ್ಜಿಗಿಮಠ, ಸಂಡೂರು ತಾಲ್ಲೂಕಿನ ಭುಜಂಗನಗರ ಮಠ, ರಾಣೆಬೆನ್ನೂರು ತಾಲ್ಲೂಕಿನ ಸುಣಕಲ್ಲುಬಿದರೆ, ರಾಣೆಬೆನ್ನೂರು, ಶಿಕಾರಿಪುರ ತಾಲ್ಲೂಕಿನ ಶಿವನಪಾದ, ಅರಸೀಕೆರೆ ತಾಲ್ಲೂಕಿನ ಹರಳಕಟ್ಟ ಹಾಗೂ ಮಾಡಾಳು ಈ ರೀತಿ ಹಲವಾರು ಮಠಗ ಳು ಸ್ಥಾಪನೆಗೊಂಡವು. ನಂತರ ಶ್ರೀ ಗುರುಶಾಂತ ರಾಜ ದೇಶಿಕೇಂದ್ರ ಸ್ವಾಮಿಗಳ ಕಾಲದಲ್ಲಿ ಈ ಎಲ್ಲಾ ಮಠಗಳ ಆಡಳಿತ ಒಂದಾಗುವ ಪ್ರಯತ್ನ ನಡೆದು, ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಒಂದೇ ಆಡಳಿತಕ್ಕೆ ಒಳಪಟ್ಟು, ಅಭಿವೃದ್ಧಿಯನ್ನು ಕಾಣತೊಡಗಿದವು. ಹೊಸದುರ್ಗ ತಾಲ್ಲೂಕಿನ ಸಾಣೇಹಳ್ಳಿ ಮಠದಲ್ಲಿ ಮಠಾಧೀಶರಿದ್ದಾರೆ. ಉಳಿದ ಶಾಖಾಮಠಗಳಲ್ಲಿ ಮಠಾಧೀಶರಿಲ್ಲ, ಬೃಹನ್ಮಠದ ಜಗದ್ಗುರುಗಳು ಹಾಗೂ ಚರಪಟ್ಟಾಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಈ ಶಾಖಾಮಠಗಳಿಗೆ ಭೇಟಿ ಕೊಟ್ಟು ಅಲ್ಲಿನ ಧಾರ್ಮಿಕ, ಸಾಮಾಜಿಕ ಕಾರ್ಯಗಳಿಗೆ ಸ್ಪಂದಿಸುತ್ತಾ ಬಂದಿದ್ದಾರೆ.

ವಿಳಾಸ: ಶ್ರೀ ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು, ಶ್ರೀಮದ್ ಉಜ್ಜಯಿನಿ ಸದ್ಧರ್ಮ ಸಿಂಹಾಸನ ಶ್ರೀ ತರಳಬಾಳು ಬೃಹನ್ಮಠ, ಸಿರಿಗೆರೆ, ಚಿತ್ರದುರ್ಗ ಜಿಲ್ಲೆ.
ಆಧಾರ: 'ದಿಟ್ಟ ಹೆಜ್ಜೆ ಧೀರಕ್ರಮ' ಗ್ರಂಥ ಕರ್ತರು : ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳು

❑

ಮೊಳಕಾಲ್ಮೂರು ತಾಲ್ಲೂಕು

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕು, ಅಭಿವೃದ್ಧಿ ಕಾಣಬೇಕಾಗಿದೆ. ಪ್ರಕೃತಿಯ ವೈಪರೀತ್ಯದಿಂದ ಇಲ್ಲಿನ ಜನಜೀವನ ಅನೇಕ ನೋವುಗಳನ್ನು ಅನುಭವಿಸಿದ ಉದಾಹರಣೆಗಳು ದೊರೆಯುತ್ತವೆ. ಇಂತಹ ತಾಲ್ಲೂಕಿನಲ್ಲಿ ವೀರಶೈವ ಧರ್ಮ ಅಷ್ಟೇನು ಪ್ರಭಾವಿಯುತವಾಗಿ ಬೆಳೆದ ಲಕ್ಷಣಗಳು ಗೋಚರಿಸುವುದಿಲ್ಲ. ತೆಲಗು ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿರುವ ಈ ಗಡಿ ತಾಲ್ಲೂಕಿನಲ್ಲಿ ಹಿಂದೆ ಹತ್ತು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಪ್ರಸ್ತುತ ಮೂರು ಮಠಗಳು ನೋಡಲು ಸಿಗುತ್ತವೆ.

ಆನೆಸಿದ್ಧಾಪುರ

ಮೊಳಕಾಲ್ಮೂರು ತಾಲ್ಲೂಕಿನ ಆನೆಸಿದ್ಧಾಪುರವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹದಿನಾಲ್ಕು ಕಿ. ಮೀ. ದೂರದಲ್ಲಿರುವ ಆಂಧ್ರಪ್ರದೇಶದ ಗಡಿ ಗ್ರಾಮ. ಇಲ್ಲಿ ಉಜ್ಜಯಿನಿ ಪೀಠದ ಶಾಖಾಮಠವಾದ ಹಿರೇಮಠವು ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಈ ಪ್ರಾಂತ್ಯದಲ್ಲಿ ಹೆಚ್ಚು ಹೆಸರು ಮಾಡಿದ್ದು, ಈಗ ಮಠಾಧೀಶ್ವರರು ಇಲ್ಲದೆ ಜೀರ್ಣಗೊಂಡಿದೆ.

ಹಿರೇಮಠ: ಆನೆಸಿದ್ಧಾಪುರ ಗ್ರಾಮದ ಮಧ್ಯದಲ್ಲಿ ಸ್ಥಾಪನೆಗೊಂಡ ಹಿರೇಮಠದಲ್ಲಿ ಹಿಂದೆ ಅನೇಕ ಗುರುಗಳ ಪಟ್ಟಾಧಿಕಾರವಾಗಿ ಧರ್ಮ ಕಾರ್ಯಗಳನ್ನು ನಡೆಸಿಕೊಂಡು ಬಂದಿದ್ದು ಈಗ ಅವರುಗಳ ಹೆಸರುಗಳು ಲಭ್ಯವಾಗಿಲ್ಲ. ಶ್ರೀ ತ್ರಿಲೋಚನ ಶಿವಾಚಾರ್ಯ ಸ್ವಾಮಿಗಳು ೧೯೩೦ರ ಸುಮಾರಿನಲ್ಲಿ ತಮ್ಮ ಹನ್ನೊಂದನೆಯ ವಯಸ್ಸಿನಲ್ಲಿ ಪಟ್ಟಾಧಿಕಾರವನ್ನು ಪಡೆದು ಹಿರೇಮಠದ ಗುರುಗಳಾಗಿ ಅಧಿಕಾರವನ್ನು ವಹಿಸಿಕೊಂಡಿದ್ದರು ಎಂದು ಹೇಳಲಾಗುತ್ತದೆ. ಶ್ರೀ ತ್ರಿಲೋಚನ ಶಿವಾಚಾರ್ಯ ಸ್ವಾಮಿಗಳು ಕಾಶಿಯಲ್ಲಿ ಸಂಸ್ಕೃತ ಭಾಷೆಯಲ್ಲಿ ಉನ್ನತ ಶಿಕ್ಷಣವನ್ನು ಪಡೆದು ಬಂದು ವಿದ್ವನ್ಮಣಿಗಳಾಗಿ ಹೆಸರು ಪಡೆದಿದ್ದರು. ಇವರ ಪಾಂಡಿತ್ಯಕ್ಕೆ ಗೌರವ ಕೊಟ್ಟು ಉಜ್ಜಯಿನಿ ಪೀಠದ ಜಗದ್ಗುರುಗಳನ್ನಾಗಿ ನೇಮಕಮಾಡಲು ಪಂಚಪೀಠಗಳ ಜಗದ್ಗುರುಗಳು ಮತ್ತು ಸಮಾಜ ನಿರ್ಧರಿಸಿತು.

ಉಜ್ಜಯಿನಿ ಪೀಠದ ಉತ್ತರಾಧಿಕಾರಿಗಳ ಆಯ್ಕೆಗಾಗಿ ನಡೆದ ವಟು ಚುನಾವಣೆಯಲ್ಲಿ ಶ್ರೀ ತ್ರಿಲೋಚನ ಶಿವಾಚಾರ್ಯ ಸ್ವಾಮಿಗಳು ಆಯ್ಕೆಯಾದರು. ೧೯೩೬ರ ಫೆಬ್ರವರಿ ಎರಡರಂದು ರಂಭಾಪುರಿ ಪೀಠದ ಜಗದ್ಗುರುಗಳಾದ ಶ್ರೀ ಶಿವಾನಂದ ಶಿವಾಚಾರ್ಯ ಭಗವತ್ಪಾದರು ಮತ್ತು ಕೇದಾರಪೀಠದ ಜಗದ್ಗುರು ಶ್ರೀ ಚಿದ್ಘನ ಶಿವಾಚಾರ್ಯ ಭಗವತ್ಪಾದರ ಸಾನ್ನಿಧ್ಯದಲ್ಲಿ ಉಜ್ಜಯಿನಿಪೀಠದ ಜಗದ್ಗುರುಗಳಾಗಿ, ಜಗದ್ಗುರು ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಭಗವತ್ಪಾದರೆಂದು ಅಭಿಧಾನವನ್ನು ಪಡೆದು ಉಜ್ಜಯಿನಿಪೀಠದ ಪಟ್ಟಾಧಿಕಾರವನ್ನು ವಹಿಸಿಕೊಂಡಿರುತ್ತಾರೆ. ಇವರ ನಂತರ ಮಠವು ಮಠಾಧೀಶ್ವರರು ಇಲ್ಲದೆ ಖಾಲಿ ಉಳಿಯುತ್ತದೆ. ಪ್ರಸ್ತುತ ಮಠದ ವಂಶಸ್ಥರೇ ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ ಬಂದಿದ್ದಾರೆ.

ವಿಳಾಸ: ಶ್ರೀ ಹಿರೇಮಠ, ಆನೆ ಸಿದ್ಧಾಪುರ, ಮೊಳಕಾಲ್ಮೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.
ಆಧಾರ: 'ಗುರುವರ್ಗದರ್ಪಣ'

ಮೊಳಕಾಲ್ಮೂರು

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕು ಕೇಂದ್ರ ಸ್ಥಳ. ಈ ಪಟ್ಟಣದಲ್ಲಿ ಪಂಚ ಪೀಠಗಳಲ್ಲಿ ಒಂದಾದ ಉಜ್ಜಯಿನಿ ಪೀಠದ ಶಾಖಾ ಮಠವಾದ ಹಿರೇಮಠವು ಸ್ಥಾಪನೆಯಾಗಿ, ಇಲ್ಲಿನ ಧಾರ್ಮಿಕ ಕೇಂದ್ರ ಸ್ಥಳವಾಗಿ ಮೆರೆದಿತ್ತು.

ಹಿರೇಮಠ: ಮೊಳಕಾಲ್ಮೂರು ಪಟ್ಟಣದಲ್ಲಿ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದ ಹಿರೇಮಠವು ಅನೇಕ ಶತಮಾನಗಳ ಕಾಲ ಧಾರ್ಮಿಕ ಚಟುವಟಿಕೆಗಳನ್ನು ನಡೆಸಿ ವೀರಶೈವ ಧರ್ಮವನ್ನು ಬೆಳೆಸಿ ಭಕ್ತರಲ್ಲಿ ಆಚಾರ ವಿಚಾರಗಳನ್ನು ಮೂಡಿಸುವಲ್ಲಿ ಯಶಸ್ವಿಯಾಗಿತ್ತು. ಉಜ್ಜಯಿನಿ ಪೀಠಾಧ್ಯಕ್ಷರಾದ ಜಗದ್ಗುರು ಶ್ರೀ ಸಿದ್ಧಲಿಂಗ ಶಿವಾಚಾರ್ಯ ಭಗವತ್ಪಾದರ ಕಾಲದಲ್ಲಿ ಹಿರೇಮಠದ ಮಠಾಧ್ಯಕ್ಷರಾಗಿದ್ದ ಶ್ರೀ ಚಿದ್ಘನ ಶಿವಾಚಾರ್ಯ ಸ್ವಾಮಿಗಳು ಸಂಸ್ಥಾನ ಪೀಠದ ಜಗದ್ಗುರುಗಳು ಸರ್ಕೀಟು

(ಪರ್ಯಟನೆಗೆ)ಹೊರಟಾಗ ಜಗದ್ಗುರುಗಳ ಜತೆಯಲ್ಲಿ ಹೋಗಿ ಧಾರ್ಮಿಕ ಪ್ರಚಾರಕಾರ್ಯವನ್ನು ಕೈಗೊಳ್ಳುತ್ತಿದ್ದರು ಎಂದು ಹೇಳಲಾಗುತ್ತಿದೆ. ಮಹಾರಾಷ್ಟ್ರದ ಸೋಲಾಪುರ ಪ್ರಾಂತ್ಯದಲ್ಲಿ ಪೀಠದ ಪರವಾಗಿ ೧೯೩೩-೩೪ ರಲ್ಲಿ ಶ್ರೀ ಚಿದ್ಘನ ಶಿವಾಚಾರ್ಯ ಸ್ವಾಮಿಗಳೇ ಪರ್ಯಟನೆಯನ್ನು ಕೈಗೊಂಡು ಧರ್ಮಪ್ರಚಾರವನ್ನು ಕೈಗೊಳ್ಳುತ್ತಿದ್ದರು ಇವರು ವೀರಶೈವಧರ್ಮದ ಬಗ್ಗೆ ಅಪಾರ ಪಾಂಡಿತ್ಯವನ್ನು ಗಳಿಸಿದ್ದರು. ಎಂದು 'ಗುರುವರ್ಗದರ್ಪಣ'ದ ಶ್ರೀ ಚರಾಪಟ್ಟಧಿಕಾರಿಗಳ ಪರಿಚಯದಲ್ಲಿ ದಾಖಲಿಸಲಾಗಿದೆ.

ಹಿರೇಮಠವು ಮೊಳಕಾಲ್ಮೂರಿನಲ್ಲಿ ಸ್ಥಾಪನೆಯಾದಾಗಿನಿಂದ (ಕಾಲತಿಳಿದು ಬಂದಿಲ್ಲ) ಧಾರ್ಮಿಕ ಕಾರ್ಯಗಳ ಅನುಷ್ಠಾನದಲ್ಲಿ ಮಹತ್ತರ ಸಾಧನೆಯನ್ನು ಸಾಧಿಸಿ ಹೆಚ್ಚುಹೆಸರು ಪಡೆದಿತ್ತು ಎಂದು ಹೇಳಲಾಗುತ್ತಿದೆ. ವಿಜಯನಗರದ ಅರಸರ ಕಾಲದಲ್ಲಿ ಈ ಮಠಕ್ಕೆ ಜಮೀನು ಇನಾಂ ದೊರೆತಿದ್ದು ಅಪಾರ ಭಕ್ತರನ್ನು ಸಂಪಾದಿಸಿಕೊಂಡಿತ್ತು ಎಂದು ಹೇಳಲಾಗುತ್ತದೆ. ೧೯೩೩ರಲ್ಲಿ ಆಡಳಿತವನ್ನು ನಡೆಸಿದ ಶ್ರೀ ಚಿದ್ಘನ ಶಿವಾಚಾರ್ಯ ಸ್ವಾಮಿಗಳು ಕಾಶಿಯಲ್ಲಿ ವ್ಯಾಕರಣತೀರ್ಥ ಪರೀಕ್ಷೆಯನ್ನು ಬರೆದು ಉತ್ತೀರ್ಣರಾಗಿ ಬಂದವರಾಗಿದ್ದರು. ಇವರ ಪಾಂಡಿತ್ಯಕ್ಕೆ ಮನಸೋತ ನಾಡೇ ಮನ್ನಣೆಕೊಡುತ್ತಿತ್ತು ಎಂದು ಹೇಳಲಾಗುತ್ತದೆ. ಶ್ರೀ ಚಿದ್ಘನ ಶಿವಾಚಾರ್ಯ ಸ್ವಾಮಿಗಳ ನಂತರ ಮತ್ತು ಅದಕ್ಕೂ ಮೊದಲು ಮಠದ ಅಧಿಕಾರವನ್ನು ನಡೆಸಿದವರ ಬಗ್ಗೆ ಆಧಾರಗಳು ಲಭ್ಯವಾಗಿಲ್ಲ. ಪ್ರಸ್ತುತ ಈ ಮಠದಲ್ಲಿ ಮಠಾಧೀಶ್ವರರು ಇಲ್ಲದೆ ಈ ಮಠದ ವಂಶಸ್ಥರು ಗದ್ದುಗೆ ಪೂಜೆ ಮತ್ತು ಭಕ್ತರ ಮನೆಗಳಲ್ಲಿ ನಡೆಯುವ ಧಾರ್ಮಿಕ ಕಾರ್ಯಗಳಲ್ಲಿ ಧರ್ಮಕ್ರಿಯೆಗಳನ್ನು ಮಾಡುತ್ತಾ ಬಂದಿದ್ದಾರೆ.

ವಿಳಾಸ: ಶ್ರೀ ಹಿರೇಮಠ, ಮೊಳಕಾಲ್ಮೂರು, ಮೊಳಕಾಲ್ಮೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.

ಸಿದ್ಧಯ್ಯನಕೋಟೆ

ಮೊಳಕಾಲ್ಮೂರು ತಾಲ್ಲೂಕಿನ ಸಿದ್ದಯ್ಯನಕೋಟೆಯು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹದಿಮೂರು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಗುರುಮಹಾಂತ ಮಠವು ಅಸ್ತಿತ್ವದಲ್ಲಿದೆ.

ಗುರುಮಹಾಂತಮಠ: ಸಿದ್ಧಯ್ಯನಕೋಟೆಯಲ್ಲಿ ಇಳಕಲ್ಲು ಶ್ರೀ ವಿಜಯಮಹಾಂತ ಮಠದ ಶಾಖಾಮಠವಾದ ಶ್ರೀ ಗುರುಮಹಾಂತ ಮಠವು ಸ್ಥಾಪನೆಯಾಗಿದೆ. ವಿರಕ್ತ ಸಂಪ್ರದಾಯದ ಈ ಮಠವು ಬಸವಾದಿ ಪ್ರಮುಥರ ಕಲ್ಪನೆಯಂತೆ ರೂಪುಗೊಂಡಿದೆ. ಹಿಂದೆ ಸ್ಥಾಪನೆಯಾಗಿದ್ದ ಈ ಮಠದ ಪರಂಪರೆಯನ್ನು ಮುಂದುವರಿಸುವ ಸಲುವಾಗಿ ಇಳಕಲ್ಲು ವಿಜಯ ಮಹಾಂತ ಮಠದಿಂದ ನಿಯೋಜನೆಗೊಂಡ ಶ್ರೀ ಬಸವಲಿಂಗ ಸ್ವಾಮಿಗಳು ಅಧಿಕಾರವನ್ನು ನಡೆಸುತ್ತಿದ್ದಾರೆ.

ಪರಿಶಿಷ್ಟ ವರ್ಗದ ಸಂಸ್ಕಾರವಂತ ವಟುವನ್ನು ಆಯ್ಕೆಮಾಡಿಕೊಂಡ ಶ್ರೀ ಮಹಾಂತ ಸ್ವಾಮಿಗಳು ಶರಣತತ್ತ್ವದ ಬಗ್ಗೆ ಅಧ್ಯಯನ ಮಾಡಲು ಅವಕಾಶ ಕಲ್ಪಿಸಿಕೊಟ್ಟರು. ನುಡಿದಂತೆ ನಡೆಯಬೇಕೆಂಬ ತತ್ತ್ವಕ್ಕೆ ಬದ್ಧವಾಗಿ ಸಿದ್ಧಯ್ಯನಕೋಟೆಯ ತಮ್ಮ ಶಾಖಾಮಠದ ಉತ್ತರಾಧಿಕಾರಿಗಳನ್ನಾಗಿ ಪರಿಶಿಷ್ಟ ವರ್ಗದ ವಟುವನ್ನು ಶ್ರೀ ಬಸವಲಿಂಗ ಸ್ವಾಮಿಗಳು ಎಂಬ ಅಭಿಧಾನದೊಂದಿಗೆ ಅಧಿಕಾರಕ್ಕೆ ತಂದರು. ಪ್ರಾರಂಭದಲ್ಲಿ ವಿರೋಧ ಕಂಡು ಬಂದರೂ ನಂತರ ಶರಣತತ್ತ್ವವನ್ನು ಒಪ್ಪುವ ಎಲ್ಲರೂ ಇದನ್ನು ಸ್ವಾಗತಿಸಿದರು. ಎಂದು ಶ್ರೀ ವಿಜಯಮಹಾಂತ ಮಠದ ಶ್ರೀ ಮಹಾಂತ ಸ್ವಾಮಿಗಳು ಅಭಿಪ್ರಾಯಿಸುತ್ತಾರೆ.

ಸಿದ್ದಯ್ಯನಕೋಟೆಯ ಶ್ರೀ ಗುರುಮಹಾಂತ ಮಠದ ಪಟ್ಟಾಧಿಕಾರಿಗಳಾದ ಶ್ರೀ ಬಸವಲಿಂಗ ಸ್ವಾಮಿಗಳು ಆಳವಾದ ಅಧ್ಯಯನ, ಗಂಭೀರ ನಡತೆಯಿಂದ ಶರಣ ತತ್ತ್ವವನ್ನು ಪ್ರಚಾರಪಡಿಸುತ್ತಾ ಜಾತ್ಯಾತೀತ ಸಮಾಜವನ್ನು ರೂಪಿಸುತ್ತಿದ್ದಾರೆ. ಮೂಲ ಮಠದ ಸಂಪ್ರದಾಯದಂತೆ ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ಪೂಜೆಯ ಬದಲಿಗೆ ಗದ್ದುಗೆಗಳ ಮೇಲೆ ವಚನದ ಕಟ್ಟನ್ನು ಇಟ್ಟು ವಚನಪಠಣ ಮಾಡುವ ಮೂಲಕ ಪೂಜೆಯನ್ನು ಸಲ್ಲಿಸಲಾಗುತ್ತಿದೆ. ಪ್ರತಿ ಸೋಮವಾರ ಶಿವಾನುಭವ ಗೋಷ್ಠಿ ಯನ್ನು ನಡೆಸಿ ಶರಣಸಾಹಿತ್ಯದ ಬಗ್ಗೆ ಉಪನ್ಯಾಸ ಮಾಲಿಕೆಗಳನ್ನು ಏರ್ಪಡಿಸಿ ಜ್ಞಾನ ದಾಸೋಹ ಹಾಗೂ ಅನ್ನದಾಸೋಹದ ಮೂಲಕ ಮಠವನ್ನು ಬೆಳಕಿಗೆ ತಂದಿದ್ದಾರೆ.

ವಿಳಾಸ:ಶ್ರೀ ಮ.ನಿ.ಪ್ರ.ಬಸವಲಿಂಗಸ್ವಾಮಿಗಳು, ಶ್ರೀಗುರುಮಹಾಂತಮಠ, ಸಿದ್ಧಯ್ಯನಕೋಟೆ ಮೊಳಕಾಲ್ಮೂರು ತಾ.ಚಿತ್ರದುರ್ಗಜಿಲ್ಲೆ.

❑

ಹೊಸದುರ್ಗ ತಾಲ್ಲೂಕು

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕು ಐತಿಹಾಸಿಕ ಮಹತ್ವವನ್ನು ಪಡೆದಿದೆ. ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆದಿದೆ. ಈ ತಾಲ್ಲೂಕಿನಾದ್ಯಂತ ಒಟ್ಟು ಎಂಟು ಮಠಗಳು ಸ್ಥಾಪನೆ ಯಾಗಿದ್ದವೆಂದು ಹೇಳಲಾಗುತ್ತದೆ. ಇಂದು ಹೊಸದುರ್ಗದ ಶ್ರೀ ಗದ್ದುಗೆಮಠ ಉತ್ತರಾಧಿಕಾರಿಗಳಿಲ್ಲದೆ ಕೇವಲ ಗದ್ದುಗೆ ಪೂಜೆಗಷ್ಟೇ ಸೀಮಿತಗೊಂಡಿದೆ. ಸಾಣೆಹಳ್ಳಿ ಮಠವು ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ಅಪಾರವಾದ ಕೊಡುಗೆಯನ್ನು ನೀಡಿ ಮುನ್ನಡೆದಿದೆ. ಉಳಿದ ಮಠಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ದೊರೆಯದಾಗಿದೆ.

ಸಾಣೇಹಳ್ಳಿ

ಅಜ್ಜಂಪುರ-ಹೊಸದುರ್ಗ ಮುಖ್ಯ ರಸ್ತೆಯ ನೀರಗುಂದ ತಿರುವಿನ ಬಳಿ 'ಶರಣರ ಬರುವೆಮಗೆ ಪ್ರಾಣಜೀವಾಳವಯ್ಯ' ಎಂಬ ಸಂಸ್ಥಾನ ಮಠದ ಸ್ವಾಗತ ಕಮಾನು ಮಂಟಪ ಭಕ್ತರನ್ನು ಸಾಣೇಹಳ್ಳಿಗೆ ಸ್ವಾಗತಿಸುತ್ತದೆ. ಇಲ್ಲಿಂದ ಮೂರುವರೆ ಕಿ.ಮೀ. ದಾರಿ ಸವೆಸಿದರೆ ಸಿಗುವ ಅಭಿವೃದ್ಧಿಶೀಲ ಗ್ರಾಮವೇ ಸಾಣೇಹಳ್ಳಿ. ತೆಂಗುಗಳ ಸೆರಗಿನಲ್ಲಿ ನೆಮ್ಮದಿಯ ಬದುಕ ಬದುಕುತ್ತಿರುವ ಈ ಗ್ರಾಮ ಎಪ್ಪತ್ತರ ದಶಕದಿಂದ ತನ್ನ ಬದುಕಿನ ರೀತಿಯನ್ನೇ ಬದಲಿಸಿಕೊಂಡು ವೈಚಾರಿಕತೆ ಹಾಗೂ ಸಾಂಸ್ಕೃತಿಕವಾಗಿ ಕನ್ನಡ ನಾಡಿಗೆ ಚಿರಪರಿಚಿತವಾದದ್ದು ಒಂದು ಪವಾಡವೇ ಸರಿ.

ಬಾಗೂರು ಪಾಳೆಗಾರರು ತಮ್ಮ ಪಾಳೆಪಟ್ಟನ್ನು ಕಾಯ್ದುಕೊಳ್ಳಲು ತಮ್ಮ ಆಯುಧಗಳಿಗೆ ಸಾಣೆ ಹಿಡಿಸಿಕೊಳ್ಳುತ್ತಿದ್ದ ಸ್ಥಳವಾಗಿದ್ದು ಈ ಊರಿಗೆ 'ಸಾಣೇಹಳ್ಳಿ' ಎಂಬ ಹೆಸರು ಬಂದಿರಬೇಕು. ಇಂತಹ ಐತಿಹಾಸಿಕ ಗ್ರಾಮದಲ್ಲಿ ಸಿರಿಗೆರೆ ತರಳಬಾಳು ಬೃಹನ್ಮಠದ ಶಾಖಾಮಠವು ಅಸ್ತಿತ್ವದಲ್ಲಿದೆ.

ತರಳಬಾಳು ಸಂಸ್ಥಾನ ಮಠ: ಸಾಣೇಹಳ್ಳಿ ಅಂದು ನಿರಕ್ಷರತೆ, ಧಾರ್ಮಿಕ ಮೌಢ್ಯತೆಯಿಂದ ಬಳಲುತ್ತಿತ್ತು. ಇದಕ್ಕೆ ಹೊಸದಿಕ್ಕು ತೋರಿಸಿದ ಸಿರಿಗೆರೆಯ ಬೃಹನ್ಮಠದ ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳು ಇಪ್ಪತ್ತೊಂದು ವರ್ಷಗಳ ಕಾಲ ಮಠಾಧೀಶ್ವರರಿಲ್ಲದೆ ಖಾಲಿ ಇದ್ದ ಸಾಣೇಹಳ್ಳಿಯ ತರಳಬಾಳು ಜಗದ್ಗುರು ಪೀಠದ ಶಾಖಾ ಸಂಸ್ಥಾನ ಮಠಕ್ಕೆ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳನ್ನು ಪಟ್ಟಾಧಿಕಾರಕ್ಕೆ ಆಯ್ಕೆಮಾಡಿ ಅಧಿಕಾರ ಕೊಡಿಸಿದರು. ಮೌಢ್ಯತೆಯಿಂದ ತುಕ್ಕು ಹಿಡಿದಿದ್ದ ಸಮಾಜಕ್ಕೆ ಅಂದಿನಿಂದ ಸಾಣೆ ಹಿಡಿದ ಗುರುಗಳು, ಗ್ರಾಮೀಣರ ಬದುಕು ಸಾಣೆ ಹಿಡಿದ ಕತ್ತಿಯಂತೆ ಝಳಪಿಸುವಂತೆ ಮಾಡಿದರು.

ಮಠದ ಸ್ಥಾಪನೆ: ಸಾಣೇಹಳ್ಳಿ ಗ್ರಾಮದ ಪಶ್ಚಿಮಕ್ಕೆ ಒಂದು ಕಿ.ಮೀ. ದೂರದಲ್ಲಿರುವ ಹಾಲುಮಲ್ಲೇಶ್ವರ ಗುಡ್ಡದ ಗವಿಯಲ್ಲಿ ಮಲ್ಲೇದೇವರು ಎಂಬ ವಿರಕ್ತರು ಎಲ್ಲಿಂದಲೋ ಬಂದು ಅನುಷ್ಠಾನಕ್ಕೆ ಕುಳಿತಿದ್ದರು.ಇವರ ದರ್ಶನಕ್ಕೆಂದು ಬರುತ್ತಿದ್ದ ಭಕ್ತರನ್ನು ಆಶೀರ್ವದಿಸಿ ಕಳುಹಿಸಿ ಕೊಡುತ್ತಿದ್ದುದಲ್ಲದೆ, ಅನಾರೋಗ್ಯದಿಂದ ಬಳಲುತ್ತಿದ್ದವರಿಗೆ ಔಷಧೋಪಚಾರ ನೀಡಿ ಕೆಲವರಿಗೆ ಮಂತ್ರ ತಂತ್ರದಿಂದ ಉಪಚಾರ ಮಾಡಿ ಅವರ ತೊಂದರೆಗಳನ್ನು ಪರಿಹರಿಸುತ್ತಿದ್ದರು.ಕಾಲಕ್ರಮೇಣ ಮಲ್ಲೇದೇವರ ಕೀರ್ತಿ ಸಾಣೇಹಳ್ಳಿಯ ಸುತ್ತಮುತ್ತ ಪ್ರಚಾರವಾಗಿ ಸ್ವಾಮಿಗಳ ದರ್ಶನಕ್ಕೆ ಬರುವ ಭಕ್ತರ ಸಂಖ್ಯೆ ಹೆಚ್ಚಾಯಿತು. ನಂತರ ಮಲ್ಲೇದೇವರು ಅನುಷ್ಠಾನಗೊಂಡ ಗುಡ್ಡ 'ಮಲ್ಲೇದೇವರಗುಡ್ಡ'ವಾಗಿ ಹೆಸರಾಯಿತು. ಸಾಣೇಹಳ್ಳಿಯ ಭಕ್ತರು ಮಲ್ಲೇದೇವರಿಗಾಗಿ ಊರಲ್ಲಿ ಮಠ ಕಟ್ಟಿಸಿ ಇಲ್ಲೇ ನೆಲೆಸುವಂತೆ ಬೇಡಿಕೊಂಡ ಕಾರಣಕ್ಕೆ ಮಲ್ಲೇದೇವರು ಮಠದಲ್ಲಿ ನೆಲೆಸತೊಡಗುತ್ತಾರೆ.

ದೊರೆಯ ನೆರವು: ಇದೇ ಸಮಯದಲ್ಲಿ ಅಂದರೆ ೧೬೬೫ ರಲ್ಲಿ ಸಾಣೇಹಳ್ಳಿಯ ಉತ್ತರಕ್ಕೆ ಈಗಿನ ಬಾಗೂರು ಆಗ ಭಾಗ್ಯಪುರಿ ಎಂದು ಹೆಸರು ಪಡೆದು ಪಾಳೆಗಾರರ ಆಳ್ವಿಕೆಯ ರಾಜಧಾನಿಯಾಗಿತ್ತು. ಭಾಗ್ಯಪುರಿ ಪಾಳೆಪಟ್ಟಿನ ದೊರೆಯಾದ ಬಸಪ್ಪನಾಯಕನು ಹೊರಗಿನವರ ಕಿರುಕುಳ ಇಲ್ಲದೆ ನೆಮ್ಮದಿಯ ಬದುಕನ್ನು ನಡೆಸುತ್ತಿದ್ದನು. ಆದರೆ ಇದೇ ಸಂದರ್ಭದಲ್ಲಿ ಪಾಳೆಗಾರನ ಮಗಳು ಅನಾರೋಗ್ಯದಿಂದ ಬಳಲತೊಡಗಿದಳು. ಆಗ ಬಸಪ್ಪನಾಯಕನು ತನ್ನ ಪಾಳೆಪಟ್ಟಿನ ಎಲ್ಲಾ ಪಂಡಿತರಿಂದ

ಚಿಕಿತ್ಸೆ ಕೊಡಿಸಿದರೂ ಫಲಕಾರಿಯಾಗಲಿಲ್ಲ. ಮಗಳ ಸ್ಥಿತಿ ದಿನ ಕಳೆದಂತೆ ಚಿಂತಾಜನಕ ಸ್ಥಿತಿ ತಲುಪುತ್ತಿದ್ದಾಗ ಚೌಡಿ ಕಾಟವೇ ಇರಬೇಕೆಂದು ಮನಗಂಡು ಮಾಂತ್ರಿಕರಿಂದ ಮಂತ್ರ ಮಾಡಿಸಿದರೂ ಪ್ರಯೋಜನವಾಗಲಿಲ್ಲ. ಇದರಿಂದ ಬಸಪ್ಪನಾಯಕ ಚಿಂತೆಗೊಳಗಾಗಿ ಕುಳಿತಿದ್ದ ಸಂದರ್ಭದಲ್ಲಿ 'ಸಾಣೇಹಳ್ಳಿಯಲ್ಲಿ ಮಲ್ಲೇದೇವರೆಂಬ ವಿರಕ್ತರು ನೆಲೆಸಿದ್ದಾರೆ, ಅವರಲ್ಲಿಗೆ ನಿಮ್ಮ ಮಗಳನ್ನು ಕರೆದೊಯ್ದರೆ ಗುಣಮುಖ ವಾದರೂ ಆಗಬಹುದು' ಎಂದು ಆಪ್ತರು ಸಲಹೆ ಕೊಟ್ಟ ಮೇಲೆ, ಪಾಳೆಗಾರ ತನ್ನ ಮಗಳನ್ನು ಬದುಕಿಸಿಕೊಳ್ಳಬೇಕೆಂಬ ಒಂದೇ ಆಸೆಯಿಂದ ಗುರುಗಳ ದರ್ಶನಕ್ಕೆ ಸಕಲ ಸಿದ್ಧತೆ ಮಾಡಿಕೊಂಡು ಮರುದಿನವೇ ಸಾಣೇಹಳ್ಳಿಗೆ ಬರುತ್ತಾನೆ.

ಪಾಳೆಗಾರ ಮತ್ತು ಆತನ ಮಗಳಿಗೆ ದರ್ಶನಕೊಟ್ಟ ಸ್ವಾಮಿಗಳು ತಮ್ಮ ಮಂತ್ರ ವಿದ್ಯೆ ಪ್ರಯೋಗಿಸಿ ಚೌಡಿಯ ಉಪಟಳ ವನ್ನು ದೂರಮಾಡಿ 'ಇನ್ನು ಮುಂದೆ ನಿಮಗೆ ಇನ್ನಾವುದೇ ತೊಂದರೆ ಬರಲಾರದು, ನಿಮಗೆ ಉಪಟಳ ಕೊಡುತ್ತಿದ್ದ ಚೌಡಿಯನ್ನು ತಮ್ಮ ಮಠದಲ್ಲಿ ನೆಲೆಸಿಕೊಳ್ಳುತ್ತೇನೆ'ಎಂದು ಹೇಳಿ, ಚೌಡಿಯಿಂದ ಯಾರಿಗೂ ತೊಂದರೆ ಬರದಂತೆ ನೋಡಿ ಕೊಳ್ಳುವ ಸಲುವಾಗಿ ಪಾಳೆಗಾರನ ಎದುರೇ ಒಂದು ಕಲ್ಲಿಗೆ ಪ್ರತಿಷ್ಠಾಪಿಸಿದ ಗುರುಗಳು, ನೀವು ಇನ್ನು ಮುಂದೆ ನೆಮ್ಮದಿಯಿಂದ ಭಾಗ್ಯಪುರಿಗೆ ಹೋಗಬಹು ದೆಂದು ಕಳುಹಿಸಿ ಕೊಡುತ್ತಾರೆ. ಅಂದು ಚೌಡಿಯನ್ನು ಪ್ರತಿಷ್ಠಾಪಿಸಿದ ಕಲ್ಲು ಇಂದಿಗೂ ಮಠದ ಹಳೆಯ ಕಟ್ಟಡದಲ್ಲಿ ನೋಡಲು ಸಿಗುತ್ತದೆ. ಈ ಕಲ್ಲಿಗೆ ಊರ ಜನ ಭಯ ಭಕ್ತಿಯಿಂದ ಪೂಜೆ ಸಲ್ಲಿಸುತ್ತಿದ್ದಾರೆ.

ಗುರುಗಳ ಆಶೀರ್ವಾದ ಪಡೆದು ಬಂದ ಪಾಳೆಗಾರನು ತನ್ನ ಮಗಳು ಒಂದು ವಾರದೊಳಗೆ ಲವಲವಿಕೆಯಿಂದ ಓಡಾಡುವುದನ್ನು ನೋಡಿ ಸಂತೋಷಗೊಂಡು ತನ್ನ ಪರಿವಾರ ಸಮೇತ ಸಾಣೇಹಳ್ಳಿ ಮಠಕ್ಕೆ ಬಂದು ಗುರುಗಳಿಗೆ ಕಾಣಿಕೆ ನೀಡಿ ನನ್ನ ಪ್ರಾಂತ್ಯದಲ್ಲಿ ನೆಲೆನಿಂತು ನಮ್ಮನ್ನು ಉದ್ಧರಿಸಿದ್ದೀರಿ, ಈ ಕಾರಣಕ್ಕೆ ಮಠದ ಅಭಿವೃದ್ಧಿಗೆ ಎಂದೂ ಕೊರತೆಯಾಗ ಬಾರದೆಂದು ಅರವತ್ತನಾಲ್ಕು ಎಕರೆ ಫಲವತ್ತಾದ ಜಮೀನನ್ನು ಉಂಬಳಿಯಾಗಿ ಕೊಟ್ಟು ಆಶೀರ್ವಾದ ಪಡೆದು ಹೋಗುತ್ತಾನೆ.

ಈ ರೀತಿ ಮಲ್ಲೇದೇವರಿಂದ ಪ್ರಾರಂಭವಾದ ಮಠವು ನಂತರ ಸ್ವತಂತ್ರ ಸಂಸ್ಥಾನ ಮಠವಾಗಿ ಬೆಳೆಯಿತು. ಕಾಲಾನಂತರ ಸಿರಿಗೆರೆ ತರಳಬಾಳು ಬೃಹನ್ಮಠದ ಶಾಖಾಮಠವಾಗಿ ಪರಿವರ್ತಿತವಾಗಿ ೩೫೦ ವರ್ಷಗಳ ಉಜ್ವಲ ಇತಿಹಾಸವನ್ನು ಹೊಂದಿ ತನ್ನ ಪರಂಪರೆಯನ್ನು ಈತನಕ ಉಳಿಸಿಕೊಂಡು ಬಂದು ನಾಡಿಗೆ ದಾರಿದೀಪವಾಗಿರುವುದು ನಾಡಿನ ಸುದೈವವಾಗಿದೆ.

ಪರಂಪರೆ:

೧. ಶ್ರೀ ಮಲ್ಲೇದೇವರು (ಕರ್ತೃಗುರುಗಳು)
೨. ಶ್ರೀ ಮಹಾಂತಸ್ವಾಮಿಗಳು
೩. ಶ್ರೀ ಮಲ್ಲಪ್ಪಸ್ವಾಮಿಗಳು
೪. ಶ್ರೀ ಚನ್ನಬಸವಸ್ವಾಮಿಗಳು
೫. ಶ್ರೀ ಗುರುಪಾದ ದೇಶಿಕೇಂದ್ರಸ್ವಾಮಿಗಳು
೬. ಶ್ರೀ ಮರುಳಸಿದ್ಧಸ್ವಾಮಿಗಳು
೭. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಈ ರೀತಿ ಶ್ರೀ ಸಂಸ್ಥಾನದ ಮಠದ ಪರಂಪೆಯು ಏಳು ತಲೆಮಾರುಗಳವರೆಗೆ ಬೆಳೆದು ಬಂದಿದ್ದು, ೩೫೦ವರ್ಷಗಳ ಕಾಲಾವಧಿ ಯಲ್ಲಿ ಕರ್ತೃಗುರುಗಳನ್ನು ಹೊರತುಪಡಿಸಿ, ಶ್ರೀ ಗುರುಪಾದದೇಶಿಕೇಂದ್ರ ಸ್ವಾಮಿಗಳು ಪವಾಡಪುರುಷರಾಗಿ ಭಕ್ತರ ಮನದಲ್ಲಿ ಅಚ್ಚಳಿಯದೆ ಉಳಿದಿದ್ದಾರೆ. ನಂತರ ಬಂದ ಆರನೆಯ ಮಠಾಧ್ಯಕ್ಷರಾದ ಶ್ರೀ ಮರುಳಸಿದ್ದ ಸ್ವಾಮಿಗಳು ಮಠದ ಅಭಿವೃದ್ಧಿಗೆ ಶ್ರಮಿಸಿ ೧೯೫೨ರಲ್ಲಿ ಲಿಂಗೈಕ್ಯರಾದರು. ಈ ಸಂದರ್ಭದಲ್ಲಿ ಚರ ಪಟ್ಟಾಧ್ಯಕ್ಷರಾಗಿದ್ದ ಶ್ರೀ ಚಂದ್ರಶೇಖರ ಸ್ವಾಮಿಗಳು ಮಠದ ಪೂರ್ಣಜವಾಬ್ದಾರಿಯನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿದ್ದಲ್ಲದೆ, ಮೂಲಮಠದ ಪಕ್ಕದಲ್ಲೇ ನೂತನ ಕಟ್ಟಡ ವನ್ನು ಕಟ್ಟಿಸಿದರು. ಇವರ ಕಾಲದಲ್ಲಿ ಮಠದ ಜಮೀನು ಬೇಸಾಯಕ್ಕೆ ಸಜ್ಜುಗೊಂಡು ಆದಾಯವನ್ನು ತರುವಂತಾಯಿತು.

ಧಾರ್ಮಿಕವಾಗಿ ಸದಾ ಜೀವಂತಿಕೆಯಿಂದಿದ್ದ ಸಂಸ್ಥಾನ ಮಠವು ಇವರ ಕಾಲದಲ್ಲಿ ಅಭಿವೃದ್ಧಿಯನ್ನು ಕಂಡು

ಆರ್ಥಿಕವಾಗಿ ಸ್ವಾವಲಂಬನೆಯನ್ನು ಕಾಣುವ ಪ್ರಯತ್ನ ನಡೆಸಿತು. ಈ ಸಂದರ್ಭದಲ್ಲೇ ಜೂನ್ ಹದಿನೇಳು ೧೯೫೬ ರಲ್ಲಿ ಶ್ರೀ ಚಂದ್ರಶೇಖರ ಸ್ವಾಮಿಗಳು ಲಿಂಗೈಕ್ಯರಾಗಿದ್ದು ಭಕ್ತರಿಗೆ ಆಘಾತ ತಂದಿತು.ಶ್ರೀ ಚಂದ್ರಶೇಖರ ಸ್ವಾಮಿಗಳು ಲಿಂಗೈಕ್ಯರಾದ ವಿಚಾರವನ್ನು ಭಕ್ತರು ಸಿರಿಗೆರೆಯ ಬೃಹನ್ಮಠಕ್ಕೆ ತಿಳಿಸಿದರು. ಈ ವಿಚಾರವನ್ನು ತಿಳಿದ ತಕ್ಷಣ ತರಳಬಾಳು ಶ್ರೀ ಜಗದ್ಗುರು ಶಿವಕುಮಾರ ಶಿವಾಚಾರ್ಯ ಸ್ವಾಮಿಗಳು ಸಾಣೇಹಳ್ಳಿಗೆ ಆಗಮಿಸಿ ಅಂತ್ಯ ಕ್ರಿಯಾದಿಗಳನ್ನು ಮುಗಿಸಿದರು.

ಸಮಿತಿ ರಚನೆ: ಶ್ರೀ ಚಂದ್ರಶೇಖರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಮಠವು ಅನಾಥವಾಗಬಾರದೆಂದು ಸಾಣೇಹಳ್ಳಿ ಮಠದ ಭಕ್ತರು ಸಿರಿಗೆರೆ ಮಠದ ಹಿರಿಯ ಗುರುಗಳಲ್ಲಿ ಅರಿಕೆ ಮಾಡಿಕೊಂಡಾಗ, ಒಂದು ಸಮಿತಿಯನ್ನು ರಚಿಸಿ ಈ ಸಮಿತಿಗೆ ಮಠದ ಎಲ್ಲಾ ಜವಾಬ್ದಾರಿಗಳನ್ನು ಒಪ್ಪಿಸಿ ಮಠದ ಆಸ್ತಿಯು ದಿವಾಳಿಯಾಗದಂತೆ ನೋಡಿಕೊಳ್ಳಬೇಕೆಂದು ನಿರ್ಧರಿಸಿದರು. ಆಗ ಭಕ್ತರು ಸಮಿತಿಯು ತಮ್ಮ ಅಧ್ಯಕ್ಷತೆಯಲ್ಲಿ ರಚಿತವಾಗಬೇಕು ಎಂದು ಒತ್ತಾಯಿಸಿದಾಗ ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳು ತಮ್ಮ ಅಧ್ಯಕ್ಷತೆಯಲ್ಲಿ, ಆಸಂದಿಯ ಎಂ.ಎಸ್.ಬಸಪ್ಪನವರನ್ನು ಉಪಾಧ್ಯಕ್ಷರನ್ನಾಗಿ, ಅನುವನಹಳ್ಳಿಯ ಬಿ. ಮಹೇಶ್ವರಪ್ಪನವರನ್ನು ಕಾರ್ಯದರ್ಶಿಯನ್ನಾಗಿ, ಹೊಸದುರ್ಗ, ಕಡೂರು ಹಾಗೂ ತರೀಕೆರೆ ತಾಲ್ಲೂಕುಗಳ ಆಯ್ದ ಒಂಬತ್ತು ಜನ ಭಕ್ತರನ್ನು ಸದಸ್ಯರನ್ನಾಗಿ ನೇಮಿಸಿಕೊಂಡು ಕಾರ್ಯಕಾರಿ ಸಮಿತಿಯನ್ನು ರಚಿಸಿದರು.

ಸಮಿತಿಯ ನೇತೃತ್ವದಲ್ಲಿ ಮಠದ ಚಟುವಟಿಕೆಗಳು ಚುರುಕುಗೊಂಡು ಸಾಣೇಹಳ್ಳಿಯಲ್ಲಿ ಗ್ರಾಮಾಂತರ ಪ್ರೌಢಶಾಲೆಯನ್ನು ಪ್ರಾರಂಭಿಸಲು ಮುಂದಾದರು. ಆದರೆ ಈ ಸಣ್ಣ ಹಳ್ಳಿಯಲ್ಲಿ ಏಕೋಪಾಧ್ಯಾಯ ಶಿಕ್ಷಕರ ಒಂದು ಕಿರಿಯ ಶಾಲೆ ಇದ್ದು ಈ ಸ್ಥಿತಿಯಲ್ಲಿ ಪ್ರೌಢಶಾಲೆಯನ್ನು ಪ್ರಾರಂಭ ಮಾಡುವುದು ಹೇಗೆ ಎಂದು ಚಿಂತಿಸಿದರು. ೧೯೬೪ರ ಜೂನ್ ಇಪ್ಪತ್ತನಾಲ್ಕರಂದು ಶ್ರೀ ತರಳಬಾಳುಜಗದ್ಗುರು ವಿದ್ಯಾಸಂಸ್ಥೆಯ ಆಶ್ರಯದಲ್ಲಿ ಪ್ರೌಢಶಾಲೆಯನ್ನು ಪ್ರಾರಂಭಿಸಿ ಈ ಶಾಲೆಗೆ ಪವಾಡ ಪುರುಷರಾಗಿ ಜನಮನದಲ್ಲಿ ಹೆಸರು ಪಡೆದಿದ್ದ ಶ್ರೀ ಗುರುಪಾದ ದೇಶಿಕೇಂದ್ರ ಸ್ವಾಮಿಗಳ ಹೆಸರನ್ನು ಇಟ್ಟು, ಸಾಣೇಹಳ್ಳಿಯಲ್ಲಿ ವಿದ್ಯಾಜ್ಯೋತಿಯನ್ನು ಹಚ್ಚಿದರು. ನಂತರ ೧೯೬೫ರ ಜುಲೈನಲ್ಲಿ ಶಾಲೆಗೆ ಹೊಂದಿಕೊಂಡಂತೆ ಶ್ರೀ ರೇವಣಸಿದ್ಧ ಅನಾಥಾಲಯವನ್ನು ಪ್ರಾರಂಭಿಸಿದರು. ಹೀಗೆ ಒಂದೊಂದೇ ಅಭಿವೃದ್ಧಿ ಕಾರ್ಯಗಳು ಶ್ರೀ ಜಗದ್ಗುರು ಶಿವಕುಮಾರ ಶಿವಾಚಾರ್ಯ ಸ್ವಾಮಿಗಳ ನೇತೃತ್ವದಲ್ಲಿ ನಡೆಯತೊಡಗಿ ಗ್ರಾಮದ ರಸ್ತೆಗಳು, ಪಶುವೈದ್ಯಶಾಲೆ, ವಿದ್ಯುಚ್ಛಕ್ತಿ, ಅಂಚೆ, ಮಾಧ್ಯಮಿಕ ಶಾಲೆಯನ್ನು ಸರ್ಕಾರದಿಂದ ಮಂಜೂರು ಮಾಡಿಸಿದ್ದಲ್ಲದೆ ಮಠದ ವತಿಯಿಂದ ಅತಿಥಿ ಗೃಹವನ್ನು ನಿರ್ಮಿಸಿ, ಬಸಪ್ಪನಾಯಕನು ಉಂಬಳಿಯಾಗಿ ಕೊಟ್ಟಿದ್ದ ಜಮೀನಿನಲ್ಲಿ ಎರಡುಸಾವಿರ ತೆಂಗಿನ ಗಿಡಗಳನ್ನು ನೆಟ್ಟು ಅಭಿವೃದ್ಧಿಪಡಿಸಿ ಹೆಚ್ಚು ಆದಾಯ ಬರುವಂತೆ ಮಾಡಿ ಮಠವು ಉತ್ತರೋತ್ತರವಾಗಿ ಬೆಳೆಯಲು ಸಜ್ಜುಗೊಳಿಸಿದರು.

ಅಂದು ರಚಿತಗೊಂಡಿದ್ದ ಸಮಿತಿಯು ಈಗ ಮಠದ ಅಭಿವೃದ್ಧಿ ಸಮಿತಿಯಾಗಿ ಪರಿವರ್ತನೆಗೊಂಡು ಅನೇಕ ಅಭಿವೃದ್ಧಿ ಕಾರ್ಯಗಳನ್ನು ಗುರುಗಳ ನೇತೃತ್ವದಲ್ಲಿ ನಡೆಸುತ್ತಾ ಬಂದಿರುವುದು ಒಂದು ದಾಖಲಾರ್ಹ ವಿಚಾರವಾಗಿದೆ. ತರೀಕೆರೆ ತಾಲ್ಲೂಕಿನ ಅಬ್ಬಿನಹೊಳಲು ದೇವಿರಪ್ಪ ಅನೇಕ ವರ್ಷಗಳ ಕಾಲ ಈ ಸಮಿತಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಅವರು ಲಿಂಗೈಕ್ಯರಾದ ನಂತರ ಅಜ್ಜಂಪುರದ ಎ.ಸಿ.ಚಂದ್ರಪ್ಪ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ತತ್ತ್ವಜ್ಞಾನಿಯ ಪ್ರವೇಶ: ೧೯೭೭ರ ಡಿಸೆಂಬರ್ ಇಪ್ಪತ್ತೈದರಂದು ಸಾಣೇಹಳ್ಳಿಸಂಸ್ಥಾನದ ಆಧಿಕಾರ ವಹಿಸಿಕೊಂಡ ಶ್ರೀಪಂಡಿತಾರಾಧ್ಯ ಸ್ವಾಮಿಗಳು ಅಂದು ಸಾರ್ವಜನಿಕರೆದುರು ನಡೆದ ಧರ್ಮಸಭೆಯಲ್ಲಿ 'ಎಲ್ಲರ ತಲೆಗೆ ಹೂವ ತರುವೆನಲ್ಲದೆ ಹುಲ್ಲತಾರೆನೆಂಬ' ಪ್ರತಿಜ್ಞೆಯನ್ನು ಮಾಡಿ, ನುಡಿದಂತೆ ನಡೆದು ಸಾಣೇಹಳ್ಳಿಯನ್ನು ವೈಚಾರಿಕ ಗ್ರಾಮವಾಗಿ ಬೆಳೆಯಲು ಅವಕಾಶ ಮಾಡಿಕೊಟ್ಟು ಧ್ವನಿ ಇಲ್ಲದವರಿಗೆ ಧ್ವನಿ ನೀಡಿ ಕಲೆ,ಸಾಹಿತ್ಯ,ಸಂಸ್ಕೃತಿ ಬೆಳೆಯುವಂತೆ ಮಾಡಿದ್ದನ್ನು ಇತಿಹಾಸ ಮರೆಯುವುದಿಲ್ಲ.

ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲ್ಲೂಕಿನ ಹೆಡೆಯಾಲ ಗ್ರಾಮದ ಶ್ರೀ ನಾಗಯ್ಯ ಮತ್ತು ಶ್ರೀಮತಿ ಶಿವಮ್ಮನವರ ಎರಡನೆಯ ಪುತ್ರರಾಗಿ ಪಂಡಿತಾರಾಧ್ಯಮಠ ೧೯೫೧ ರ ಸೆಪ್ಟೆಂಬರ್ ನಾಲ್ಕರ ಮಂಗಳವಾರದಂದು ಜನಿಸಿದರು. ಇವರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಹಡೆಯಾಲದಲ್ಲಿ ಮುಗಿಸಿ, ಪ್ರೌಢಶಾಲೆಯ ವಿದ್ಯಾಭ್ಯಾಸವನ್ನು ರಾಣೆಬೆನ್ನೂರು ತಾಲ್ಲೂಕಿನ ಸುಣಕಲ್ಲು ಬಿದರೆಯ ಸಿರಿಗೆರೆ ಬೃಹನ್ಮಠದ ವಿದ್ಯಾಸಂಸ್ಥೆಯಾದ ಶ್ರೀ ಸದ್ಗುರು ಶಿವಾನಂದ ಪ್ರೌಢಶಾಲೆಯಲ್ಲಿ

ಮುಗಿಸಿದರು. ತಂದೆ ನಾಗಯ್ಯನವರು ನೌಕರಿಗಾಗಿ ಮಗನನ್ನು ಸಿರಿಗೆರೆಗೆ ಕರೆತಂದರು. ಆಗ ಹಿರಿಯ ಗುರುಗಳಾದ ಶ್ರೀಶಿವಕುಮಾರ ಶಿವಾಚಾರ್ಯ ಸ್ವಾಮಿಗಳು ಪಂಡಿತಾರಾಧ್ಯಮಠರಿಗೆ ಮಠದಲ್ಲಿ ಕಾಯಕಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಲ್ಲದೆ ಕಲಿಯಲು ಅವಕಾಶವನ್ನು ಕಲ್ಪಿಸಿಕೊಟ್ಟರು. ಇದರಿಂದ ಪಂಡಿತಾರಾಧ್ಯಮಠರ ವಿದ್ಯಾಭ್ಯಾಸ ಹಿರಿಯ ಗುರುಗಳ ಆರೈಕೆಯಲ್ಲಿ ನಡೆಯತೊಡಗುತ್ತದೆ. ಇವರ ನಯವಿನಯ ಮತ್ತು ಬುದ್ಧಿಶಕ್ತಿಯನ್ನು ಗಮನಿಸಿದ ಹಿರಿಯ ಸ್ವಾಮಿಗಳು ಆರ್ಥಿಕ ನೆರವನ್ನು ನೀಡಿ ಮುನ್ನಡೆಸಿದರು. ೧೯೭೪ ರಲ್ಲಿ ಬಿ.ಎ. ಮುಗಿಸಿ ತಮ್ಮ ನೆಚ್ಚಿನ ತತ್ತ್ವಶಾಸ್ತ್ರದ ವಿಷಯವನ್ನು ಐಚ್ಛಿಕವಾಗಿ ಆಯ್ಕೆಮಾಡಿ ಕೊಂಡು, ಮೈಸೂರಿನ ಮಾನಸಗಂಗೋ ತ್ರಿಯಲ್ಲಿ ಸ್ನಾತಕೋತ್ತರ ಶಿಕ್ಷಣಕ್ಕೆ ಸೇರಿ ೧೯೭೬ರಲ್ಲಿ ಪ್ರಥಮ ರ್‍ಯಾಂಕ್‌ನೊಂದಿಗೆ ಎಂ.ಎ. ಪದವಿಯನ್ನು ಮುಗಿಸಿದರು.

ವಿದ್ಯಾರ್ಥಿ ದೆಸೆಯಲ್ಲಿಯೇ ಸರಳ ಜೀವನ ಮತ್ತು ಪ್ರೌಢ ಚಿಂತನೆಗೆ ಗಮನ ಕೊಟ್ಟರು. ಪುರಸ್ಕಾರ, ಹೊಗಳಿಕೆಗೆ ಎಂದೂ ಮನ ಸೋತವರಲ್ಲ. ಎಂ.ಎ.ನಲ್ಲಿ ರ್‍ಯಾಂಕ್ ಪಡೆದ ಶ್ರೀ ಪಂಡಿತಾರಾಧ್ಯ ಸ್ವಾಮಿಗಳಿಗೆ ಬಂಗಾರದ ಪದಕ ಲಭಿಸಿತ್ತು. ಈ ಪದಕಕ್ಕೆ ಇಟ್ಟಿರುವ ನಿಧಿ ಕಡಿಮೆಯಾಗಿದ್ದ ಕಾರಣ ವಿಶ್ವವಿದ್ಯಾನಿಲಯದ ಆಡಳಿತ ಮಂಡಳಿ ಹೆಚ್ಚುವರಿ ಹಣವನ್ನು ಕಳುಹಿಸಿಕೊಡಿ ಎಂದು ಶ್ರೀ ಪಂಡಿತಾರಾಧ್ಯ ಸ್ವಾಮಿಗಳಿಗೆ ಪತ್ರ ಬರೆದರು. ಈ ಪತ್ರವನ್ನು ನೋಡಿ ಕೆರಳಿದ ಶ್ರೀ ಪಂಡಿತಾರಾಧ್ಯ ಸ್ವಾಮಿಗಳು ವಿಶ್ವವಿದ್ಯಾನಿಲಯದ ಪತ್ರವನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿ ನಾವು ಹಣ ನೀಡಿ ಪದಕ ಮಾಡಿಸಿ ಹಾಕಿಕೊಂಡು ಬಂಗಾರದ ಪದಕ ವಿಜೇತ ಎನಿಸಿಕೊಳ್ಳಬೇಕೆ ವಿದ್ಯಾವಂತನಿಗೆ ಇದಕ್ಕಿಂತ ಅವಮಾನ ಬೇರೆ ಇಲ್ಲ ಎಂದು ಈ ಘಟನೆಯನ್ನು ಖಂಡಿಸಿದರು. ಈ ರೀತಿ ತಪ್ಪು ಎಂದು ಕಂಡಿದ್ದನ್ನು ಖಂಡಿಸದೇ ಬಿಟ್ಟವರಲ್ಲ.

ಮೌಢ್ಯತೆ ಬಯಲು: ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದ ಸಂದರ್ಭದಲ್ಲಿ ವಿದೇಶದಿಂದ ಹಿಂದಿರುಗಿ ಬಂದಿದ್ದ ಸ್ವಾಮಿಗಳೊಬ್ಬರು ವಿದ್ಯಾರ್ಥಿಗಳ ಜತೆ ಚರ್ಚೆ ನಡೆಸುತ್ತಿದ್ದಾಗ, ವಿದೇಶಿಯನೊಬ್ಬನಿಗೆ ಲಿಂಗ ಕೊಟ್ಟಿದ್ದಾಗ್ಯೂ ಆ ಲಿಂಗದಲ್ಲಿ ಆತನಿಗೆ ಜ್ಯೋತಿ ಕಾಣಿಸಿದುದಾಗಿಯೂ ಹೇಳುತ್ತಿದ್ದರು. ಬೇರೆ ವಿದ್ಯಾರ್ಥಿಗಳು ಈ ವಿಷಯವನ್ನು ಆಶ್ಚರ್ಯ ಚಕಿತರಾಗಿ ಕೇಳುತ್ತಿರುವಾಗ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಸುಮ್ಮನಿರಲಾಗದೇ, ಹಾಗಾದರೆ ನನಗೂ ಜ್ಯೋತಿ ಕಾಣಿಸುತ್ತದೆಯೇ ಎಂದು ತಕ್ಷಣ ಕೇಳಿದರು.ಆಗ ಆ ಸ್ವಾಮಿಗಳು ಜ್ಯೋತಿ ಕಾಣಬೇಕಾದರೆ ಸಾಧನೆ ಬೇಕಾಗುತ್ತದೆ ಎಂದು ಹೇಳಿದರು. ಅಷ್ಟಕ್ಕೂ ಸುಮ್ಮನಿರದ ಪಂಡಿತಾರಾಧ್ಯರು ಲಿಂಗದಲ್ಲಿ ಜ್ಯೋತಿಯನ್ನು ನೋಡಿದ ವಿದೇಶಿಯ ಅದಕ್ಕೂ ಮೊದಲು ಲಿಂಗತತ್ತ್ವವನ್ನು ಬಲ್ಲವನಾಗಿದ್ದಾನೆ ಎಂದು ಪ್ರಶ್ನಿಸಿ ನಾನು ವೀರ ಶೈವ ಧರ್ಮದಲ್ಲಿ ಜನಿಸಿ ಸಂಸ್ಕಾರವನ್ನು ಬೆಳೆಸಿಕೊಂಡವನು, ನನಗೇಕೆ ಕಾಣಬಾರದು ಎಂದು ಪ್ರಶ್ನೆಗಳ ಸುರಿಮಳೆಗರೆದು ಆ ಸ್ವಾಮಿಗಳು ಅಲ್ಲಿಂದ ಪಲಾಯನ ಮಾಡುವಂತೆ ಮಾಡಿದರು. ಈ ರೀತಿ ಮೌಢ್ಯತೆ, ಅಂಧಕಾರ ಬಿಂಬಿಸುವ ಕಡೆ ತಟ್ಟನೆ ಪ್ರತಿಕ್ರಿಯಿಸಿ ಖಂಡಿಸಿ ಧರ್ಮಕ್ಕೆ ವೈಚಾರಿಕತೆಯ ನೆಲೆ ಕೊಡುತ್ತಿದ್ದರು.

ಸಾಮಾಜಿಕ ಕಳಕಳಿ: ಸಾಮಾಜಿಕ ಕಳಕಳಿ ಹೊಂದಿದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಸಮಾಜವನ್ನು ನಿಂತ ನೀರಾಗಲು ಬಿಡದೆ ಹರಿಯುವ ತೊರೆಯಂತೆ ನೋಡಿಕೊಳ್ಳಲು ಪ್ರಯತ್ನಿಸಿ ಯಶಸ್ವಿಯಾದವರು. ಮಠಮಾನ್ಯಗಳಿಂದ ಸಮಾಜಕ್ಕೆ ಏನಾದರೂ ಮಾಡಬಹುದೆಂದು ನಂಬಿಕೆ ಇಟ್ಟುಕೊಂಡು ಭಕ್ತರಲ್ಲಿ ಬೇರೂರಿದ್ದ ಕಂದಾಚಾರಗಳನ್ನು ಕಿತ್ತೊಗೆಯುತ್ತಾ ಜಾಗೃತಿಮೂಡಿಸಲು ಹಂತಹಂತವಾಗಿ ಜನರ ಮನಸ್ಸನ್ನು ಹದಕ್ಕೆತಂದು ತಮ್ಮ ಪ್ರಯೋಗಗಳನ್ನು ಮಾಡತೊಡಗಿದರು.

ಪ್ರತಿ ತಿಂಗಳು ನಡೆಯುವ ಮಾಸಿಕ ಶಿವಾನುಭವ ಕಾರ್ಯಕ್ರಮಗಳನ್ನು ಮೌಢ್ಯತೆಯಿಂದ ವೈಚಾರಿಕತೆಯೆಡೆಗೆ ಕೊಂಡೊಯ್ಯುವ ವೇದಿಕೆಯನ್ನಾಗಿ ಪರಿವರ್ತಿಸಿದ್ದು, ಇಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಪುರುಷ,ಸ್ತ್ರೀ ಎಂಬ ಭೇದ ಇಲ್ಲದೇ ಧಾರ್ಮಿಕ ವಿಚಾರಗಳ ಬಗ್ಗೆ ಚರ್ಚಿಸಲು ಮುಕ್ತ ಅವಕಾಶವನ್ನು ಕಲ್ಪಿಸಲಾಗಿದೆ, ಈ ರೀತಿ ಮಠದ ವತಿಯಿಂದ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ತಮ್ಮತ್ತ ಭಕ್ತರನ್ನು ಸೆಳೆದುಕೊಂಡ ಗುರುಗಳು, ನಂತರದ ದಿನಗಳಲ್ಲಿ ಊರ ಗ್ರಾಮಸ್ಥರೇ ಕಾರ್ಯಕ್ರಮಗಳನ್ನು ರೂಪಿಸುವಂತೆ ಮಾಡಿದ್ದು ಒಂದು ಸಾಧನೆಯೇ ಸರಿ. ಗ್ರಾಮೀಣಜನರು ಹಿಂದೆ ಭಾಷಣ ಎಂದರೆ ಮೂಗು ಮುರಿಯುತ್ತಿದ್ದವರು, ಈಗ ಆಧುನಿಕ ನಾಟಕಗಳ ಬಗ್ಗೆ ವಿಮರ್ಶೆ ಮಾಡುವ ಮಟ್ಟಕ್ಕೆ ಹೋಗಿದ್ದಾರೆ. ಇದು ಶ್ರೀ ಪಂಡಿತಾರಾಧ್ಯ ಸ್ವಾಮಿಗಳ ಕ್ರಿಯಾಶೀಲ ಪ್ರಯೋಗದ ಫಲವಾಗಿದೆ.

ದಂದಣ-ದತ್ತಣ: ಸಾಣೇಹಳ್ಳಿಯ ವಯಸ್ಕರರ ಜತೆ ಬಾಲಕರ ಬೌದ್ಧಿಕ ಮಟ್ಟವನ್ನು ವಿಕಾಸಗೊಳಿಸಲು ಪ್ರಾಥಮಿಕ ಹಾಗೂ ಪ್ರೌಢಶಾಲಾ ಮಕ್ಕಳಿಗಾಗಿ'ದಂದಣ-ದತ್ತಣ'ಎಂಬ ವಿಶಿಷ್ಟ ಕಾರ್ಯಕ್ರಮವನ್ನು ಏರ್ಪಡಿಸಿ ಪ್ರತಿ ಹದಿನೈದು ದಿನಕ್ಕೊಮ್ಮೆ ಒಂದು ವಿಷಯದ ಮೇಲೆ ನುರಿತ ವಿದ್ವಾಂಸರಿಂದ ಉಪನ್ಯಾಸವನ್ನು ಏರ್ಪಡಿಸಿ, ನಂತರ ಪ್ರತಿ ಬಾರಿ ಸರದಿಯಂತೆ ಮೂರು ಜನ ವಿದ್ಯಾರ್ಥಿಗಳಿಂದ ವಿಷಯದ ಮೇಲೆ ಭಾಷಣವನ್ನು ಮಾಡಿಸುತ್ತಾರೆ. ಅಲ್ಲದೆ ಈ ಕಾರ್ಯಕ್ರಮವನ್ನು ರೂಪಿಸಿ ನಿರ್ವಹಿಸುವುದು ಶಾಲಾ ಮಕ್ಕಳೇ ಆಗಿದ್ದು ಕೊನೆಯಲ್ಲಿ ಮಕ್ಕಳಿಂದ ವಿದ್ವಾಂಸರ ಜತೆ ಸಂವಾದ ಕಾರ್ಯಕ್ರಮ ನಡೆಯುತ್ತಿದೆ. ಅನುಭವ ಮಂಟಪದ ಕಲ್ಪನೆಯಲ್ಲಿ ರೂಪಿತಗೊಂಡ ಈ ಕಾರ್ಯಕ್ರಮವು ವಿದ್ಯಾರ್ಥಿಗಳ ಮಾನಸಿಕ ವಿಕಾಸಕ್ಕೆ ಬಹಳ ಉಪಯೋಗವಾಗಿದ್ದು ಅನೇಕ ವಿದ್ವಾಂಸರಿಂದ ಪ್ರಶಂಸೆಗೆ ಒಳಗಾಗಿದೆ.

ಶಿವಸಂಚಾರ: ವಿದ್ಯಾರ್ಥಿಯಾಗಿದ್ದಾಗ ಅನೇಕ ನಾಟಕಗಳಲ್ಲಿ ಅಭಿನಯಿಸಿದ್ದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಕಲೆ, ಸಾಹಿತ್ಯ, ಸಂಗೀತಗಳ ಪೋಷಕರಾಗಿದ್ದು, ಸಾಣೇಹಳ್ಳಿಯಂತಹ ಪುಟ್ಟಹಳ್ಳಿಯಲ್ಲಿ ಶ್ರೀ ಶಿವಕುಮಾರ ಹವ್ಯಾಸಿ ಕಲಾಸಂಘವನ್ನು ೧೯೮೭ ರಲ್ಲಿ ಸ್ಥಾಪಿಸಿದರು. ರಾಜ್ಯ ಮತ್ತು ರಾಷ್ಟ್ರಮಟ್ಟದ ಅನೇಕ ರಂಗ ತರಬೇತಿದಾರರನ್ನು ಕರೆಸಿ, ಕಲಾಸಂಘದ ಕಲಾವಿದರಿಗೆ ತರಬೇತಿಯನ್ನು ಕೊಡಿಸಿ ಉತ್ತಮ ನಾಟಕಗಳನ್ನು ಪ್ರದರ್ಶಿಸಿದ್ದಾರೆ. ಒಂದುದಶಕ ಕಾಲ ನಿರಂತರವಾಗಿ ರಂಗ ಚಟುವಟಿಕೆಯಲ್ಲಿ ತೊಡಗಿಸಿಕೊಂಡ ಕಾರಣ ನೀನಾಸಂ ತಿರುಗಾಟದ ರೀತಿಯಲ್ಲಿ'ಶಿವಸಂಚಾರ'ವನ್ನು ೧೯೯೭ರಲ್ಲಿ ಪ್ರಾರಂಭ ಮಾಡಲಾಯಿತು. ನಾಟಕಗಳನ್ನು ಸಮರ್ಥವಾಗಿ ಅಭಿನಯಿಸಿ ನಾಡಿನಾದ್ಯಂತ ರಂಗಾಸಕ್ತರ ಗಮನವನ್ನು ಸೆಳೆಯಲಾಯಿತು. ಪ್ರತಿ ವರ್ಷದ ತಿರುಗಾಟಕ್ಕೂ ಹೊಸಹೊಸ ಪ್ರಯೋಗಗಳನ್ನು ನೀಡುವ ಶಿವಸಂಚಾರ, ಕಡಿಮೆ ಅವಧಿಯಲ್ಲಿ ಹೆಚ್ಚು ಪ್ರಚಾರವನ್ನು ಪಡೆಯಿತು.

ಸಾಹಿತ್ಯ: ಪಂಚಪೀಠಗಳನ್ನು ಹೊರತುಪಡಿಸಿದರೆ ಹನ್ನೆರಡನೆಯ ಶತಮಾನದ ಕಲ್ಯಾಣಕ್ರಾಂತಿಯ ನಂತರ ರಚಿತವಾದ ಮಠಗಳು ಶರಣ ಸಾಹಿತ್ಯವನ್ನು ಜನರಿಗೆ ಮುಟ್ಟಿಸಿ, ಈ ಮೂಲಕ ಸಮಾಜವನ್ನು ನೈತಿಕವಾಗಿ ರೂಪಿಸಬೇಕು ಎಂಬ ಕಾರಣಕ್ಕೆ ಹುಟ್ಟಿಕೊಂಡವು. ಆದರೆ ಬರುಬರುತ್ತಾ ಈ ಉದ್ದೇಶಕ್ಕಾಗಿ ಹುಟ್ಟಿಕೊಂಡ ಮಠಗಳು ತಮ್ಮ ಮೂಲ ಉದ್ದೇಶವನ್ನೇ ಮರೆತು ವೈದಿಕ ಸಂಸ್ಕೃತಿಗೆ ಜೋತು ಬಿದ್ದಿದ್ದು ಒಂದು ವಿಪರ್ಯಾಸ. ಆದರೆ ಸಾಣೇಹಳ್ಳಿಯ ಪೀಠಾಧ್ಯಕ್ಷರಾಗಿದ್ದು, ತತ್ತ್ವಶಾಸ್ತ್ರದ ವಿದ್ಯಾರ್ಥಿಯಾಗಿದ್ದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ವೈಚಾರಿಕ ತಳಹದಿಯ ಮೇಲೆ ಬೆಳೆದ ಶರಣ ಸಂಸ್ಕೃತಿಯನ್ನು, ಶರಣಧರ್ಮಕ್ಕೆ ಅನುಗುಣವಾಗಿ ಪ್ರಚಾರಗೊಳಿಸಿದ ನಿಷ್ಠಾವಂತ ಧರ್ಮ ಗುರುಗಳು.

ಸ್ವತಃ ಸಾಹಿತಿಗಳಾದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಜೀವನ ದರ್ಶನ, ಹುಟ್ಟು ಸಾವುಗಳ ಮಧ್ಯೆ, ಸಮಾಧಿಯ ಮೇಲೆ ಬದುಕು, ಸಮರಸ, ಸಮಕಾಲೀನತೆ-ವಚನಸಾಹಿತ್ಯ, ಮಹಾಬೆಳಕು, ಮರುಭೂಮಿ, ಜೀವದ ಉಳುವಿಗೆ ಅಳಿಲುಸೇವೆ ಮುಂತಾದ ಹಲವು ಮೌಲಿಕ ಕೃತಿಗಳನ್ನು ರಚಿಸಿದ್ದಾರಲ್ಲದೆ ನಾಡಿನ ಹಲವು ಪತ್ರಿಕೆಗಳಿಗೆ ವಿದ್ವತ್‌ಪೂರ್ಣ ಲೇಖನ ಗಳನ್ನು ಬರೆದು ಸುವಿಖ್ಯಾತರಾಗಿದ್ದಾರೆ.

ಮಠದ ಆಶ್ರಯದಲ್ಲಿ, ೧೯೯೪ ರ ಫೆಬ್ರವರಿ ಐದು ಮತ್ತು ಆರರಂದು ಜಿಲ್ಲಾ ಮಟ್ಟದ ನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸಿ ನಾಡಿನ ಹೆಸರಾಂತ ಸಾಹಿತಿಗಳನ್ನು ಬರಮಾಡಿಕೊಂಡು, ಗೌರವಿಸಿ ಕಳುಹಿಸಿ ಕೊಟ್ಟಿದ್ದಾರೆ. ಈ ರೀತಿ ಕನ್ನಡ ಸಾಹಿತ್ಯ ಪರವಾದ ಹಲವಾರು ಕೆಲಸಗಳನ್ನು ಮಾಡಿ ಸಾಹಿತ್ಯ ಮತ್ತು ಧಾರ್ಮಿಕ ಕ್ಷೇತ್ರಗಳೆರಡರಲ್ಲಿಯೂ ಸಮಾನವಾದ ಹೆಸರು ಪಡೆದಿದ್ದಾರೆ.

ಶಿಕ್ಷಣ ಸೇವೆ: ೧೯೬೪ ರಲ್ಲಿ ಪ್ರಾರಂಭಿಸಿರುವ ಪ್ರೌಢಶಾಲೆಯ ಜತೆಗೆ ಶ್ರೀ ಶಿವಕುಮಾರಸ್ವಾಮಿ ಪಾಠಶಾಲೆಯನ್ನು ಇತ್ತೀಚೆಗೆ ತೆರೆಯಲಾಗಿದ್ದು, ವಸತಿಶಾಲೆಯನ್ನು ಪ್ರಾರಂಭಿಸಲಾಗಿದೆ. ಅಲ್ಲದೆ ಮುನ್ನೂರು ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾರ್ಥಿನಿಲಯವನ್ನು ನಡೆಸುತ್ತಿದ್ದು ಬಾಲಕಿಯರಿಗೂ ಸಹ ವಿದ್ಯಾರ್ಥಿನಿಲಯವನ್ನು ನಡೆಸಲಾಗುತ್ತಿದೆ. ನರ್ಸರಿಯಿಂದ ಕಾಲೇಜಿನವರೆಗೂ ಶಿಕ್ಷಣ ಸಂಸ್ಥೆಗಳನ್ನು ತೆರೆಯಲಾಗಿದ್ದು ಗ್ರಾಮಾಂತರ ವಿದ್ಯಾರ್ಥಿಗಳಿಗೆ ನೆರವಾಗಿದೆ.

ಮಠದ ಸಮುಚ್ಚಯ: ಮಠದ ಹಳೆಯ ಕಟ್ಟಡವು ಸಾಣೇಹಳ್ಳಿಯ ಊರೊಳಗಿದ್ದು ಈ ಕಟ್ಟಡಗಳನ್ನು ಈಗ ವಿದ್ಯಾರ್ಥಿನಿಲಯಗಳನ್ನಾಗಿ ಬಳಸಿಕೊಳ್ಳಲಾಗುತ್ತಿದೆ. ಈ ಹಳೆಯ ಕಟ್ಟಡದ ಒಳಭಾಗದಲ್ಲಿ ಚೌಡಿಕಲ್ಲು ನೋಡಸಿಗುತ್ತಿದೆ. ಊರ ಹೊರಗಿನ ಪೂರ್ವಭಾಗದಲ್ಲಿ ೧೯೮೬ರಲ್ಲಿ ನಿರ್ಮಿಸಿದ ಮಠದ ನೂತನ ಕಟ್ಟಡವು ಶ್ರೀ ಶಿವಾಚಾರ್ಯ ಪಂಡಿತಾರಾಧ್ಯ ಸ್ವಾಮಿಗಳ ಕಾಲದಲ್ಲಿ ನಿರ್ಮಾಣವಾಗಿದೆ. ಈ ಕಟ್ಟಡದಲ್ಲಿ ಅಧ್ಯಯನ ಕೋಣೆ, ಅತಿಥಿಗೃಹಗಳು, ಭಕ್ತರಿಗೆ ದರ್ಶನ ಕೊಡುವ ಹಜಾರ ಇದೆ. ಈ ನೂತನ ಕಟ್ಟಡದ ಎದುರು ಭಾಗದಲ್ಲಿ ಶಾಲೆಕಾಲೇಜುಗಳು, ವಿದ್ಯಾರ್ಥಿನಿಲಯದ ಕಟ್ಟಡಗಳು, ೧೯೯೮ ರಲ್ಲಿ ನಿರ್ಮಿಸಿದ ದಾಸೋಹದ ಮಹಾಮನೆ, ಬಯಲು ರಂಗಮಂದಿರ, ಸಂಸ್ಥೆಯ ನೌಕರರ ವಸತಿ ಗೃಹಗಳನ್ನು ಒಳಗೊಂಡ ಮಠದ ಸಮುಚ್ಚಯ ವಿಸ್ಮಯಗೊಳ್ಳುವಂತೆ ಕೇವಲ ಎರಡು ದಶಕಗಳಲ್ಲಿ ರೂಪಿತವಾಗಿದೆ.

ಗದ್ದುಗೆಗಳು: ಸಂಸ್ಥಾನ ಮಠದ ಇತಿಹಾಸದಲ್ಲಿ ಬರುವ ಆರು ಜನ ಲಿಂಗೈಕ್ಯ ಗುರುಗಳ ಜತೆ ಚರ ಪಟ್ಟಾಧ್ಯಕ್ಷರಾಗಿದ್ದ ಶ್ರೀಚಂದ್ರಶೇಖರ ಸ್ವಾಮಿಗಳೂ ಸೇರಿದಂತೆ ಒಟ್ಟು ಏಳು ಗದ್ದುಗೆಗಳು ನಿರ್ಮಾಣವಾಗಿವೆ. ಇವುಗಳಲ್ಲಿ ಹಳೆಯ ಮಠದ ಕಟ್ಟಡದಲ್ಲಿ ಒಂದು ಗದ್ದುಗೆ, ನೂತನ ಮಠದ ಕಟ್ಟಡದ ಪಶ್ಚಿಮ ದಿಕ್ಕಿನಲ್ಲಿ ಬಿಲ್ವಪತ್ರೆ ವನದಲ್ಲಿ ನಿರ್ಮಾಣಗೊಂಡಿರುವ ನಾಲ್ಕು ಗದ್ದುಗೆಗಳನ್ನು ನೋಡಬಹುದಾಗಿದೆ. ತರೀಕೆರೆ ತಾಲ್ಲೂಕಿನ ಹಲಸೂರು ಗ್ರಾಮದಲ್ಲಿ ಒಂದು ಗದ್ದುಗೆ, ಅರಸೀಕೆರೆ ತಾಲ್ಲೂಕಿನ ಹಗ್ಗುಂದದಲ್ಲಿ ಒಂದು ಗದ್ದುಗೆ ನಿರ್ಮಾಣವಾಗಿದೆ. ಈ ರೀತಿ ಒಟ್ಟು ಏಳು ಗದ್ದುಗೆಗಳು ಸಿಗುತ್ತಿವೆ.

ಹಳೆಯ ಮಠದಲ್ಲಿ ಹಿಂದಿನ ಸ್ವಾಮಿಗಳು ಒಂದೆಡೆಯಿಂದ ಇನ್ನೊಂದೆಡೆಗೆ ಹೋಗಲು ಬಳಸುತ್ತಿದ್ದ ಮೇನೆ ಇದೆ. ಹಳೆಯ ಕಾಲದ ಪೂಜಾ ಸಾಮಗ್ರಿಗಳು, ಮುದ್ರೆಉಂಗುರ, ಬಲಮುರಿ ಶಂಖ, ಕೆಲವು ಪೂಜಾ ಪರಿಕರಗಳು ನೋಡ ಸಿಗುತ್ತಿವೆ.

ಗುರು-ವಿರಕ್ತರ ಬಗ್ಗೆ ಇರುವ ಗೊಂದಲ ಕೆಲವರು ಸೃಷ್ಟಿಸಿದ ವಿಚಾರ. ಈ ಬಗ್ಗೆ ತಲೆಕೆಡಿಸಿಕೊಳ್ಳದೆ ಸಮಾಜದ ಕೊಳೆತೊಳೆಯಲು ಮುಂದಾಗಬೇಕು ಎಂದು ಅಭಿಪ್ರಾಯಿಸುವ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಜನರು ಕೆಲಸ ಮಾಡುವವರ ಬಗ್ಗೆ ಗೌರವ ಭಾವನೆ ಗಳಿಸಿಕೊಳ್ಳಬೇಕು. 'ಜನರು ಗುರು-ವಿರಕ್ತ ಎಂದು ಮೆರೆಯುತ್ತಿದ್ದಾರೆ, ಕೆಲವೇ ವರ್ಷಗಳಲ್ಲಿ ಇದು ಮರೆಯಾಗಿ ಕೆಲಸ ಮಾಡುವ ಮಠಾಧೀಶರಿಗೆ ಮನ್ನಣೆ ದೊರೆಯುತ್ತದೆ' ಎಂಬುದು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳ ಅಭಿಪ್ರಾಯವಾಗಿದೆ.


ವಿಳಾಸ: ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ಶ್ರೀ ತರಳಬಾಳು ಶಾಖಾಸಂಸ್ಥಾನ ಮಠ, ಸಾಣೇಹಳ್ಳಿ-೫೭೭ ೫೧೫, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.

ಹೊಳಲ್ಕೆರೆ ತಾಲ್ಲೂಕು

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕು ಕೃಷಿ ಅವಲಂಬಿತ ಪ್ರದೇಶ. ಇಲ್ಲಿ ಪುರಾತನ ಕಾಲದಿಂದ ವೀರಶೈವ ಧರ್ಮ ಪ್ರಮುಖ ಧರ್ಮವಾಗಿ ಬೆಳೆದ ಲಕ್ಷಣಗಳು ಕಂಡುಬರುತ್ತವೆ. ಪ್ರಸ್ತುತ ಈ ತಾಲ್ಲೂಕಿನಲ್ಲಿ ಒಂಟಿಕಲ್ಮಠ, ನುಲೆನೂರಿನ ನುಲಿಯ ಚಂದಯ್ಯನ ಮಠ, ರಾಮಗಿರಿಯ ಕರಿಸಿದ್ಧೇಶ್ವರ ಮಠ. ಹೊಳಲ್ಕೆರೆಯ ಗಡ್ಡದದೇವರ ಮಠ, ಈ ರೀತಿ ಅನೇಕ ಮಠಗಳನ್ನು ಹೆಸರಿಸಬಹುದಾದರು ಯಾವುದೇ ಮಠದಲ್ಲಿ ಗುರುಗಳಿಲ್ಲದಿರುವುದನ್ನು ಗಮನಿಸಬಹುದು.

❑

ತುಮಕೂರು ಜಿಲ್ಲೆ



ತುಮಕೂರು ತಾಲ್ಲೂಕು : ೧. ಚಿಕ್ಕತೊಟ್ಟಿಲುಕೆರೆ ೨. ಬೆಳ್ಳಾವಿ ೩. ರಾಮೇನಹಳ್ಳಿ ತಿಪಟೂರು ತಾಲ್ಲೂಕು : ೧. ಹೊನ್ನವಳ್ಳಿ ೨. ರಂಗಾಪುರ ೩. ನೊಣವಿನ ಕೆರೆ ತುರುವೆಕೆರೆ ತಾಲ್ಲೂಕು : ೧. ಅಂಬಲ ದೇವರಹಳ್ಳಿ ಗುಬ್ಬಿ ತಾಲ್ಲೂಕು ೧. ಜಿಟವ ಹಳ್ಳಿ ೨. ಗೊಲ್ಲಹ್ಳಿ ೩. ಬಿದರೆ ಕುಣಿಗಲ್ ತಾಲ್ಲೂಕು : ೧. ಯಡಿಯೂರು ೨. ಬೆಟ್ಟಹಳ್ಳಿ ೩. ಹುಲಿಯೂರು ದುರ್ಗ ೪. ಅಂಕನ ಹಳ್ಳಿ ಚಿಕ್ಕನಾಯಕನ ಹಳ್ಳಿ ತಾಲ್ಲೂಕು : ೧. ಕುಪ್ಪೂರು ೨. ಗೋಡೆ ಕೆರ

ಕೊಬ್ಬರಿಯ ಕಣಜ ಎಂದು ಹೆಸರು ಪಡೆದ ತುಮಕೂರು ಜಿಲ್ಲೆಯು ತುಮಕೂರು, ಕುಣಿಗಲ್ಲು, ತುರುವೇಕೆರೆ, ಗುಬ್ಬಿ, ತಿಪಟೂರು, ಚಿಕ್ಕನಾಯಕನಹಳ್ಳಿ, ಶಿರಾ, ಕೊರಟಗೆರೆ, ಮಧುಗಿರಿ ಮತ್ತು ಪಾವಗಡ ಎಂಬ ಹತ್ತು ತಾಲ್ಲೂಕುಗಳನ್ನು ಒಳಗೊಂಡಿದೆ. ಜಿಲ್ಲೆಯ ಪೂರ್ವ ಭಾಗದಲ್ಲಿ ಚಿತ್ರದುರ್ಗ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಯ ಗಡಿ, ಪೂರ್ವ ಭಾಗದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಮತ್ತು ಕೋಲಾರ ಜಿಲ್ಲೆಯ ಗಡಿ, ದಕ್ಷಿಣದಲ್ಲಿ ಮಂಡ್ಯ ಜಿಲ್ಲೆಯ ಗಡಿ ಹಾಗೂ ಉತ್ತರಭಾಗದಲ್ಲಿ ಆಂಧ್ರಪ್ರದೇಶದ ಗಡಿಯಂಚಿಗೆ ಹೊಂದಿಕೊಂಡಿದೆ.

ತುಮಕೂರು ಜಿಲ್ಲೆಯು ವಿಜಯನಗರದ ಅರಸರು, ಕೆಳದಿ ಅರಸರು ಹಾಗೂ ಯಲಹಂಕದ ದೊರೆಗಳು, ಹಾಗಲವಾಡಿ, ಚಿಕ್ಕನಾಯಕನಹಳ್ಳಿ, ಹುಲಿಯೂರುದುರ್ಗ, ಮಧುಗಿರಿ ಮತ್ತು ಏಳುನಾಡು ಪ್ರಭುಗಳು ಇನ್ನೂ ಮುಂತಾದ ಅನೇಕ ರಾಜಮನೆತನ ಗಳು ಆಳ್ವಿಕೆ ನಡೆಸಿರುವುದರಿಂದ ಐತಿಹಾಸಿಕವಾಗಿ ಮಾನ್ಯತೆ ಪಡೆದಿದೆ.

ಸಿದ್ಧಗಂಗೆ ಬೆಟ್ಟ, ದೇವರಾಯನಬೆಟ್ಟ, ಸಿದ್ಧರಗಿರಿ ಬೆಟ್ಟಗಳಲ್ಲಿ ಗವಿಗಳು ನೈಸರ್ಗಿಕವಾಗಿ ರಚನೆಯಾಗಿವೆ. ಸಾಧು ಸಂತರಿಗೆ ಆಶ್ರಯ ತಾಣವಾಗಿದ್ದರಿಂದ ಜಿಲ್ಲೆ ಧಾರ್ಮಿಕವಾಗಿ ಬೆಳೆಯುವಂತೆ ಮಾಡಿದೆ. ಜಿಲ್ಲೆಯಲ್ಲಿ ಶಿಂಷ, ಜಯಮಂಗಲಿ ಹಾಗೂ ಕುಮದ್ವತಿ ನದಿಗಳು ಈ ಜಿಲ್ಲೆಯಲ್ಲಿ ಹರಿದಿವೆ. ಇಂತಹ ನೈಸರ್ಗಿಕ ಲಕ್ಷಣಗಳಿರುವ ಜಿಲ್ಲೆಗೆ ಹದಿನಾಲ್ಕನೆಯ ಶತಮಾನದಲ್ಲಿ ಚಾಮರಾಜನಗರ ಜಿಲ್ಲೆಯ ಹರದನಹಳ್ಳಿಯ ಶ್ರೀ ಗೋಸಲ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಬಂದು ಸಿದ್ಧಗಂಗೆಯಲ್ಲಿ ನೆಲೆಸಿ ಧರ್ಮಕ್ಷೇತ್ರದ ಉದಯಕ್ಕೆ ಕಾರಣರಾಗಿದ್ದಾರೆ. ನಂತರ ಬಂದ ಶ್ರೀ ಗೋಸಲ ಚನ್ನಬಸವೇಶ್ವರರು ಗುಬ್ಬಿಯಲ್ಲಿ ನೆಲೆಗೊಂಡರು. ಹದಿನೈದನೆಯ ಶತಮಾನದಲ್ಲಿ ನಡೆದ ಧಾರ್ಮಿಕ ಆಂದೋಲನಕ್ಕೆ ತುಮಕೂರು ಕೇಂದ್ರಬಿಂದು ವಾಗಿತ್ತು ಎಂಬುದು ಈ ಜಿಲ್ಲೆಯ ಹೆಗ್ಗಳಿಕೆ. ಆಂದೋಲನದ ನೇತಾರರಾದ ಶ್ರೀ ತೋಂಟದ ಸಿದ್ಧಲಿಂಗೇಶ್ವರರು ಸಿದ್ಧಗಂಗೆಯಲ್ಲಿ ನೆಲೆಸಿ ನಂತರ ಕುಣಿಗಲ್ ತಾಲ್ಲೂಕಿನ ಎಡೆಯೂರಿಗೆ ಬಂದು ನೆಲೆಗೊಂಡರು.

ಹದಿನೈದನೆಯ ಶತಮಾನದ ಧಾರ್ಮಿಕ ಆಂದೋಲನದಲ್ಲಿ ಚಿಕ್ಕನಾಯಕನಹಳ್ಳಿ,ಗುಬ್ಬಿ.ತುರುವೇಕೆರೆ, ಕುಣಿಗಲ್ ಮತ್ತು ತುಮಕೂರು ತಾಲ್ಲೂಕುಗಳಲ್ಲಿ ನಡೆದ ಬಿರುಸಿನ ಚಟುವಟಿಕೆಗಳು ಶಿರಾ, ಮಧುಗಿರಿ, ಕೊರಟಗೆರೆ, ಪಾವಗಡದಲ್ಲಿ ನಡೆದ ಲಕ್ಷಣಗಳು ಕಂಡುಬರುತ್ತಿಲ್ಲ. ಇದಕ್ಕೆ ನಿದರ್ಶನ ಎಂಬಂತೆ ಈ ನಾಲ್ಕು ತಾಲ್ಲೂಕುಗಳಲ್ಲಿ ಯಾವುದೇ ಮಠಗಳೂ ಅಸ್ತಿತ್ವದಲಿಲ್ಲ. ಈ ನಾಲ್ಕು ತಾಲ್ಲೂಕುಗಳಲ್ಲಿ ಶ್ರೀ ಸಿದ್ಧಲಿಂಗೇಶ್ವರರಿಗಿಂತಲೂ ಮೊದಲು ಸ್ಥಾಪನೆಗೊಂಡಿದ್ದ ಕೆಲವು ಹಿರೇಮಠಗಳು ಸ್ಥಾಪನೆಗೊಂಡು ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿದ್ದು, ಕಾಲಾನಂತರ ಈ ಮಠಗಳೂ ಸಹ ಅಸ್ತಿತ್ವವನ್ನು ಕಳೆದುಕೊಂಡಿವೆ.

ತುಮಕೂರು ಜಿಲ್ಲೆಯ ಹತ್ತು ತಾಲ್ಲೂಕುಗಳಲ್ಲಿ ಒಟ್ಟು ನೂರಎಂಟು ವೀರಶೈವ ಮಠಗಳು ಸ್ಥಾಪನೆಗೊಂಡ ಬಗ್ಗೆ ಮಾಹಿತಿ ದೊರೆಯುತ್ತದೆ. ಈ ಮಾಹಿತಿಗಳ ಆಧಾರದ ಮೇಲೆ ಶೋಧನೆಗೆ ತೊಡಗಿದಾಗ ಐವತ್ತಾಲ್ಕು ವೀರಶೈವ ಮಠಗಳು ದೊರೆತಿದ್ದು ಇವುಗಳಲ್ಲಿ ಮುವತ್ತೆಳು ಮಠಗಳು ಅಸ್ತಿತ್ತ್ವವನ್ನು ಉಳಿಸಿಕೊಂಡು ಧಾರ್ಮಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು ತಿಳಿದು ಬರುತ್ತದೆ. ಉಳಿದ ಮಠಗಳು ಹೇಳಲು ಹೆಸರಿಲ್ಲದಂತಾಗಿವೆ. ಅಸ್ತಿತ್ವದಲ್ಲಿರುವ ವೀರಶೈವ ಮಠಗಳು ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಮಾರ್ಗದರ್ಶಕವಾಗಿ ಬೆಳೆದಿವೆ.

ಕುಣಿಗಲ್ ತಾಲ್ಲೂಕು

ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕು ಪ್ರತಿಷ್ಠಿತ ತಾಲ್ಲೂಕುಗಳಲ್ಲಿ ಒಂದಾಗಿದೆ. ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸಿರುವ ಈ ತಾಲ್ಲೂಕಿನಲ್ಲಿ ವೀರಶೈವ ಧರ್ಮ ಪ್ರಬಲವಾಗಿ ಬೆಳೆದಿದೆ. ಸಿದ್ಧಲಿಂಗೇಶ್ವರರ ಕಾಲದಲ್ಲಿ ನಡೆದ ಧಾರ್ಮಿಕ ಆಂದೋಲನದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಈ ತಾಲ್ಲೂಕು ಧಾರ್ಮಿಕ ಕೇಂದ್ರವಾಗಿ ರೂಪುಗೊಂಡಿದೆ. ಪ್ರಸ್ತುತ ಒಂಭತ್ತು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿವೆ.

ಅಂಕನಹಳ್ಳಿ

ಕುಣಿಗಲ್ ತಾಲ್ಲೂಕಿನ ಅಂಕನಹಳ್ಳಿಯು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಮೂವತ್ತು ಕಿ.ಮೀ. ದೂರದಲ್ಲಿದೆ. ಇಲ್ಲಿ ಗವಿಮಠವು ಸ್ಥಾಪನೆಯಿಂದಾಗಿ ಪ್ರಸಿದ್ಧಿ ಪಡೆದಿದೆ.

ಗವಿಮಠ: ಅಂಕನಹಳ್ಳಿ ಗ್ರಾಮದ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ಬಾಳೆಹೊನ್ನೂರಿನ ರಂಭಾಪುರಿ ಪೀಠದ ಶಾಖಾ ಮಠವು ಇಲ್ಲಿ ಧರ್ಮಪ್ರಸಾರದ ಕೇಂದ್ರವಾಗಿ ಪುರಾತನ ಕಾಲದಿಂದಲೂ ಬೆಳೆದಿದೆ. ಶ್ರೀ ಫಿರಂಗಿ ಸ್ವಾಮಿಗಳ ಕಾಲದಲ್ಲಿ ಮೈಸೂರು ಒಡೆಯರು ಈ ಮಠದ ಜಾಗವನ್ನು ಉಂಬಳಿಯಾಗಿ ನೀಡಿ ಮಠವನ್ನು ಸ್ಥಾಪನೆ ಮಾಡಿದ್ದರು. ಇಲ್ಲಿ ಮಠ ಸ್ಥಾಪನೆಯಾಗುವ ಮೊದಲು ಕುಣಿಗಲ್ ಸಮೀಪದ ಗವಿಮಠವೇ ಮೂಲ ಮಠವಾಗಿತ್ತು. ನಂತರ ಕುಣಿಗಲ್‌ನಿಂದ ಅಂಕನಹಳ್ಳಿಗೆ ಸ್ಥಳಾಂತರಗೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸತೊಡಗಿದೆ.

ಈ ಸುಕ್ಷೇತ್ರದಲ್ಲಿ ಎಡೆಯೂರು ಶ್ರೀ ಸಿದ್ಧಲಿಂಗೇಶ್ವರರು, ಗುಬ್ಬಿ ಶ್ರೀ ಗೋಸಲ ಚನ್ನಬಸವೇಶ್ವರರು, ಕುಪ್ಪೂರು ಗದ್ದುಗೆ ಶ್ರೀ ಮರುಳಸಿದ್ಧೇಶ್ವರರು ಮತ್ತು ಬೆಟ್ಟದಹಳ್ಳಿಯ ಶ್ರೀಉರುಲಿಂಗ ಶಿವಾಚಾರ್ಯರು ಅನುಷ್ಠಾನಗೊಂಡು ಗವಿ ಮಠವನ್ನು ಜಾಗೃತ ಸ್ಥಳವನ್ನಾಗಿ ಪರಿವರ್ತಿಸಿದ್ದಾರೆ. ಎತ್ತರವಾದ ಬಂಡೆಗಳಿಂದ ಕೂಡಿದ ವಿಶಾಲ ಪ್ರದೇಶದ ಈ ಗವಿಯಲ್ಲಿ ಮಠವು ಸ್ಥಾಪನೆಯಾಗಿರುವುದರಿಂದ 'ಶ್ರೀ ಗವಿಮಠ' ಎಂದು ಹೆಸರು ಬರಲು ಕಾರಣವಾಗಿದೆ.

ಫಿರಂಗಿ ದಾಳಿ : ಮೈಸೂರು ಅರಸರಾದ ದೊಡ್ಡ ದೇವರಾಜ ಒಡೆಯರ ಆಳ್ವಿಕೆಯಲ್ಲಿ ಮಾಗಡಿಯ ಮುಮ್ಮಡಿ ಕೆಂಪೇಗೌಡನ ಅಧೀನದಲ್ಲಿದ್ದ ಸಾವನದುರ್ಗ, ಹುಲಿಯೂರು ದುರ್ಗ ಮತ್ತು ಕುಣಿಗಲ್ ಪ್ರದೇಶಗಳನ್ನು ವಶಪಡಿಸಿಕೊಂಡು, ಮೈಸೂರಿಗೆ ಹಿಂದಿರುಗಿ ಬರುತ್ತಿರುವಾಗ ದೊಡ್ಡ ದೇವರಾಜ ಒಡೆಯರು ತಮ್ಮ ಸೈನ್ಯ ಸಮೇತ ಈ ಸುಕ್ಷೇತ್ರದ ಬಂಡೆಗಳ ಬಯಲಿನಲ್ಲಿ ವಿಶ್ರಾಂತಿಗೆಂದು ಬಿಡಾರವನ್ನು ಹೂಡಿದರು. ಈ ಸಂದರ್ಭದಲ್ಲಿ ಗುರುಗಳ ಮಂತ್ರೋಚ್ಚಾರಣೆಯ ಶಬ್ಧವು ಸೈನ್ಯದ ಕಿವಿಗೆ ಬೀಳುತ್ತದೆ. ಯುದ್ಧದ ಗುಂಗಿನಲ್ಲಿದ್ದ ಸೈನಿಕರು ಹಾಗೂ ದೊಡ್ಡ ದೇವರಾಜ ಒಡೆಯರು ಗವಿಯ ಒಳಗೆ ಶತ್ರು ಸೈನ್ಯವು ಅಡಗಿ ಕೊಂಡು ನಮ್ಮ ಮೇಲೆರಗಲು ಈ ಕುತಂತ್ರವನ್ನು ರೂಪಿಸುತ್ತಿರಬೇಕು ಎಂದು ತಿಳಿದು ಗವಿಯ ಮೇಲೆ ಫಿರಂಗಿ ದಾಳಿಯನ್ನು ಮಾಡತೊಡಗಿದರು. ಫಿರಂಗಿಗಳು ಸಿಡಿಯುತ್ತಲೇ ಗವಿಯಬಳಿ ಬಂದು ಹೂವುಗಳಾಗಿ ಸುರಿಯುತ್ತಿದ್ದವು. ಇದನ್ನು ನೋಡಿದ ದೊಡ್ಡ ದೇವರಾಜ ಒಡೆಯರು ಆಶ್ಚರ್ಯಗೊಂಡು ದಾಳಿಯನ್ನು ನಿಲ್ಲಿಸಿ ಗವಿಯ ಬಾಗಿಲಿಗೆ ಹೋಗಿ ನಿಂತುಕೊಂಡರು. ತಪೋ ಭಂಗಿಯಲ್ಲಿ ಕುಳಿತಿದ್ದ ಶ್ರೀ ಸಿದ್ಧವೀರ ಶಿವಾಚಾರ್ಯರು ಧ್ಯಾನದಿಂದ ಮೇಲೆದ್ದು ಗವಿಯಿಂದ ಹೊರ ಬರುತ್ತಾರೆ. ದೊಡ್ಡ ದೇವರಾಜ ಒಡೆಯರು ಗುರುಗಳ ಕಾಲಿಗೆ ಎರಗಿ ತಮ್ಮ ತಪ್ಪನ್ನು ಮನ್ನಿಸಬೇಕೆಂದು ವಿನಂತಿಸಿಕೊಳ್ಳುತ್ತಾನೆ. ಕ್ಷತ್ರಿಯನಾದ ನೀನು ನಿನ್ನ ಗುಣಗಳಿಗೆ ಅನುಸಾರವಾಗಿ ನಿನ್ನ ಕಾರ್ಯವನ್ನು ಮಾಡಿರುವೆ, ರಾಜ್ಯ ವಿಸ್ತಾರವು ಕ್ಷತ್ರಿಯರ ಕೆಲಸ, ಇದರ ಜತೆಗೆ ಧರ್ಮಾಭಿಮಾನವನ್ನು ಇಟ್ಟುಕೊಂಡು ಧರ್ಮಮಾರ್ಗದಲ್ಲಿ ಸಮಾಜವನ್ನು ಬೆಳೆಸಲು ಕ್ಷತ್ರಿಯರು ಗುರುಗಳ ಕಾರ್ಯಗಳಿಗೆ ನೆರವಾಗಬೇಕು. ಆಗ ಸಮಾಜದಲ್ಲಿ ಸುಭಿಕ್ಷೆಯು ನೆಲೆಸುತ್ತದೆ ಎಂದು ಉಪದೇಶಮಾಡಿ ಆಶೀರ್ವದಿಸಿ ಕಳಿಸಿಕೊಡುತ್ತಾರೆ.

ಗುರುಗಳ ಮಾರ್ಗದರ್ಶನದಿಂದ ಪ್ರಭಾವಿತರಾದ ದೊಡ್ಡದೇವರಾಜ ಒಡೆಯರು ಧರ್ಮ ಕಾರ್ಯಗಳು ನಿರಂತರವಾಗಿ

ನಡೆಯಬೇಕು ಎಂದು ಅಂಕನಹಳ್ಳಿಯ ಗವಿ ಮಠದ ಜತೆಗೆ ಎಲಗಲಹಳ್ಳಿ ಗವಿಮಠ, ತಾವರೆಕೆರೆ ಗವಿಮಠ, ಹುಲಿಕಟ್ಟೆ ಗವಿಮಠ ಮತ್ತು ವಿರುಪಸಂದ್ರದ ಗವಿಮಠಗಳನ್ನು ಸ್ಥಾಪಿಸಿ ಪ್ರತಿ ಮಠದ ಧಾರ್ಮಿಕ ಚಟುವಟಿಕೆಗಳಿಗೆ ಅರವತ್ತು ಎಕರೆ ಭೂಮಿಯನ್ನು ನೀಡಿದನು. ಫಿರಂಗಿ ದಾಳಿಯಿಂದ ಪವಾಡ ಸೃಷ್ಟಿಯಾಗಿದ್ದ ಈ ಮಠಕ್ಕೆ'ಶ್ರೀ ಫಿರಂಗಿ ಗವಿಮಠ' ಎಂದು ನಾಮಕರಣ ಮಾಡಿ ಗುರುಗಳಿಂದ ಆಶೀರ್ವಾದವನ್ನು ಪಡೆದು ಹೊರಟರು. ಈ ಘಟನೆಯ ನಂತರ ನಾಡಿನಾದ್ಯಂತ ಈ ಪವಾಡವು ಪ್ರಚಾರವಾಗಿ ಶ್ರೀ ಸಿದ್ಧವೀರ ಶಿವಾಚಾರ್ಯ ಸ್ವಾಮಿಗಳಿಗೆ ಶ್ರೀ ಫಿರಂಗಿ ಸ್ವಾಮಿಗಳೆಂದು ರೂಢಿಗತವಾಗಿ ಕರೆಯತೊಡಗಿದರು. ಶ್ರೀ ಸಿದ್ಧವೀರ ಶಿವಾಚಾರ್ಯ ಸ್ವಾಮಿಗಳು ನಾಡನ್ನೆಲ್ಲಾ ಸುತ್ತಿ ಜನರನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸಿ ತಮ್ಮ ಮಠದ ಪರಂಪರೆಯು ಬೆಳೆಯಲು ಮಠವನ್ನು ವ್ಯವಸ್ಥಿತ ಗೊಳಿಸಿದರು.

ಪರಂಪರೆ:

೧. ಷ.ಬ್ರ.ಶ್ರೀ ಗವಿಗುರುಬಸವ ಶಿವಾಚಾರ್ಯಸ್ವಾಮಿಗಳು (ಕುಣಿಗಲ್ ಗವಿಮಠ)
೨. ಷ.ಬ್ರ.ಶ್ರೀ ಗುರುಬಸವ ಶಿವಾಚಾರ್ಯಸ್ವಾಮಿಗಳು (ಕುಣಿಗಲ್ ಗವಿಮಠ)
೩. ಷ.ಬ್ರ.ಶ್ರೀ ಸಿದ್ಧವೀರ ಶಿವಾಚಾರ್ಯಸ್ವಾಮಿಗಳು (ಫಿರಂಗಿಸ್ವಾಮಿಗಳು)
೪. ಷ.ಬ್ರ.ಶ್ರೀ ಬಾಳೇಶ್ವರ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಗುರುದತ್ತ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಬಸವಯ್ಯ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ಶಿವರುದ್ರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಈತನಕ ಬೆಳೆದು ಬಂದಿದ್ದು ಇನ್ನೂ ಕೆಲವು ಮಠಾಧೀಶ್ವರರು ಆಡಳಿತವನ್ನು ನೆಡೆಸಿದ್ದರೂ, ಆಧಾರಗಳ ಕೊರತೆಯಿಂದ ಅವರ ಹೆಸರುಗಳು ತಿಳಿದಿಲ್ಲ.

ಕುಣಿಗಲ್‌ನಲ್ಲಿ ಮಠಸ್ಥಾಪನೆ: ಗವಿಮಠದಲ್ಲಿ ಶ್ರೀ ಗವಿಗುರುಬಸವೇಶ್ವರ ಸ್ವಾಮಿಗಳು ಕುಣಿಗಲ್ಲು ಸಮೀಪದ ಗವಿ ಯಲ್ಲಿ ಅನುಷ್ಠಾನಗೊಂಡು ಮಠವನ್ನು ಸ್ಥಾಪಿಸಿದ್ದು ಧರ್ಮ ಜಾಗೃತಸ್ಥಳವನ್ನಾಗಿ ರೂಪಿಸಿದ್ದಾರೆ. ಇವರ ಗದ್ದುಗೆಯು ಕುಣಿಗಲ್ ಸಮೀಪದ ಗವಿಮಠದಲ್ಲಿ ಸ್ಥಾಪನೆಯಾಗಿದೆ. ನಂತರ ಎರಡನೆಯ ಗುರುಗಳಾಗಿ ಅಧಿಕಾರಕ್ಕೆ ಬಂದ ಶ್ರೀ ಗುರುಬಸವ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಯು ಕುಣಿಗಲ್ ಸಮೀಪದ ಗವಿಮಠದಲ್ಲಿ ಇದೆ.

ಮೂರನೆಯ ಮಠಾಧೀಶ್ವರರಾದ ಶ್ರೀ ಫಿರಂಗಿ ಸ್ವಾಮಿಗಳು ಪವಾಡ ಪುರುಷರಾಗಿ ಎಲ್ಲಾ ವರ್ಗದ ಜನರನ್ನು ಸಮಾನವಾಗಿ ನೋಡಿ ಧರ್ಮೋಪದೇಶವನ್ನುನೀಡಿ ಸನ್ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸುತ್ತಿದ್ದರು. ಈ ಕಾರಣಕ್ಕೆ ಗವಿಮಠವು ಜನಾನುರಾಗ ಪಡೆದು ಬೆಳೆಯಿತು. ಇವರ ನಂತರ ಅಧಿಕಾರಕ್ಕೆ ಬಂದ ಶ್ರೀ ಬಾಳೇಶ್ವರ ಸ್ವಾಮಿಗಳು ಲೋಕ ಸಂಚಾರ ಮೂರ್ತಿಗಳಾಗಿ ನಾಡಿನ ನಾನಾ ಭಾಗಗಳಲ್ಲಿ ಅನುಷ್ಠಾನಗೊಂಡು ಜನರಲ್ಲಿ ಧರ್ಮಜಾಗೃತಿಯನ್ನುಂಟು ಮಾಡಿದ್ದಾರೆ. ಈ ಗುರುಗಳು ಲೋಕಸಂಚಾರದಲ್ಲಿ ಇದ್ದಾಗ ಹೊಸೂರು ತಾಲ್ಲೂಕಿನ ನಂದಿಪುರ ಗ್ರಾಮದಲ್ಲಿ ಲಿಂಗೈಕ್ಯರಾಗಿದ್ದು ಅವರ ಗದ್ದುಗೆಯು ಅಲ್ಲಿ ಸ್ಥಾಪನೆಯಾಗಿದೆ.

ಅಂಕನಹಳ್ಳಿಗೆ ಸ್ಥಳಾಂತರ: ಐದನೆಯ ಗುರುಗಳಾದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಕುಣಿಗಲ್ಲು ಮಠ ಮತ್ತು ಅಂಕನಹಳ್ಳಿಯ ಗವಿಮಠದಲ್ಲಿ ವಾಸ್ತವ್ಯ ಮಾಡಿ, ಧರ್ಮಪ್ರಚಾರದಲ್ಲಿ ತೊಡಗಿದ್ದರು. ಶಿವಯೋಗಿ ಪಂಚಾಕ್ಷರಿ ಮಂತ್ರವನ್ನು ಸಿದ್ಧಿಮಾಡಿಕೊಂಡು ವಾಕ್‌ಸಿದ್ಧಿಯನ್ನು ಪಡೆದಿದ್ದರು. ಇವರ ಕಾಲದಲ್ಲಿ ಮಠದ ಭಕ್ತರಾಗಿ ಅಪಾರ ಜನ ಸಮೂಹವು ರೂಪುಗೊಂಡಿತು. ಇವರ ಗದ್ದುಗೆಯು ಕುಣಿಗಲ್ಲು ತಾಲ್ಲೂಕಿನ ಹಾಲಕೆರೆಯಲ್ಲಿ ಸ್ಥಾಪನೆಯಾಗಿವೆ.

ಆರನೆಯ ಗುರುಗಳಾದ ಶ್ರೀ ಗುರುದತ್ತ ಸ್ವಾಮಿಗಳು ಅಂಕನಹಳ್ಳಿಯಲ್ಲಿ ಇದ್ದುಕೊಂಡು ಧಾರ್ಮಿಕ ಚಟುವಟಿಕೆಗಳನ್ನು

ನಡೆಸಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಇವರು ಭಕ್ತರ ಅಪೇಕ್ಷೆಯಂತೆ ಕನಕಪುರ ತಾಲ್ಲೂಕಿನಲ್ಲಿ ಸಂಚಾರದಲ್ಲಿದ್ದಾಗ ಲಿಂಗೈಕ್ಯರಾಗಿದ್ದಾರೆ. ಇವರ ಗದ್ದುಗೆಯನ್ನು ಕನಕಪುರ ತಾಲ್ಲೂಕಿನ ಮೂಗಂಡುಗ ಸೀಮೆಯಲ್ಲಿ ಸ್ಥಾಪನೆ ಮಾಡಲಾಗಿದೆ. ಇವರ ನಂತರ ಐದಾರು ಜನ ಗುರುಗಳು ಮಠದ ಆಡಳಿತವನ್ನು ನಡೆಸಿ ಲಿಂಗೈಕ್ಯರಾಗಿದ್ದಾರೆ. ಇದಕ್ಕೆ ಸಾಕ್ಷಿಯಾಗಿ ಕುಣಿಗಲ್‌ಗವಿಮಠ, ಹುಲಿಕಟ್ಟೆ ಮತ್ತು ತಾವರೆಕೆರೆ ಗವಿ ಮಠದಲ್ಲಿ ಕೆಲವು ಗದ್ದುಗೆಗಳು ಇವೆ. ಈ ಮಠದ ಬಸವಯ್ಯ ಸ್ವಾಮಿಗಳೂ ಸಹ ಫಿರಂಗಿ ಸ್ವಾಮಿಗಳ ಪವಾಡಗಳನ್ನು ಕೇಳಿ ತಿಳಿದು ಅವರ ಪ್ರಭಾವಕ್ಕೆ ಒಳಗಾಗಿ ಈ ಮಠದ ಗುರುಗಳಾಗಿ ಅಧಿಕಾರವನ್ನು ವಹಿಸಿಕೊಂಡು, ಫಿರಂಗಿ ಮಠವನ್ನು ಜೀರ್ಣೋದ್ಧಾರ ಮಾಡಿಸಿದರು. ಶ್ರೀ ಫಿರಂಗಿ ಸ್ವಾಮಿಗಳ ಗದ್ದುಗೆ ಮತ್ತು ದೇವಾಲಯವನ್ನು ಅಭಿವೃದ್ಧಿಪಡಿಸಿ, ಸುತ್ತಲೂ ಗೋಡೆಯನ್ನು ನಿರ್ಮಿಸಿದರು. ಶಿವ[illegible]ಜಾತ್ರೆಯನ್ನು ವಿಶೇಷವಾಗಿ ವೈಭವಯುತವಾಗಿ ಆಚರಿಸಲು ವ್ಯವಸ್ಥೆಗೊಳಿಸಿ ದರು. ಮಠದಲ್ಲಿ ದಾಸೋಹ ಕ್ರಿಯೆಯನ್ನು ಪ್ರಾರಂಭಿಸಿ ಮಠದ ಆಸ್ತಿಯಲ್ಲಿ ತಮ್ಮ ಕಾಯಕಯೋಗದಿಂದ ಆದಾಯ ಬರುವಂತೆ ಮಾಡಿ, ಮಠವು ಸ್ವಾವಲಂಬಿಯಾಗಿ ಬೆಳೆಯಲು ಅನುವು ಮಾಡಿಕೊಟ್ಟರು. ಮಠದ ಆಡಳಿತವನ್ನು ದೀರ್ಘಕಾಲ ನಡೆಸಿ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿ ಲಿಂಗೈಕ್ಯರಾಗುತ್ತಾರೆ. ಇವರ ಗದ್ದುಗೆಯು ಅಂಕನ ಹಳ್ಳಿಯ ಗವಿಮಠದಲ್ಲಿ ಸ್ಥಾಪನೆಯಾಗಿದೆ.

ಹಿರಿಯ ಚೇತನ: ಶ್ರೀ ಬಸವಯ್ಯ ಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಗವಿ ಮಠವನ್ನು ಅಭಿವೃದ್ಧಿಗೊಳಿಸಿದ ಹರಿಕಾರರು ಎಂದೇ ಹೆಸರು ಪಡೆದಿದ್ದಾರೆ.ರಾಮನಗರ ತಾಲ್ಲೂಕಿನ ಹುಣಸೇದೊಡ್ಡಿಯಲ್ಲಿ ಶ್ರೀ ಚನ್ನಬಸವಯ್ಯ ಮತ್ತು ಶ್ರೀಮತಿ ಭದ್ರಮ್ಮನವರ ಪುತ್ರರಾಗಿ ಜನಿಸಿದರು. ಇವರು ಅಂಕನಹಳ್ಳಿಯ ಗವಿಮಠಕ್ಕೆ ಉತ್ತರಾಧಿಕಾರಿ ಗಳಾಗಿ ನೇಮಕಗೊಂಡು,೧೯೩೫ ರಲ್ಲಿ ಪಟ್ಟಾಧಿಕಾರ ಪಡೆದ ಮೇಲೆ ರಂಭಾಪುರಿ ಜಗದ್ಗುರು ಶ್ರೀ ಶಿವಾನಂದ ಶಿವಾಚಾರ್ಯ ಭಗವತ್ಪಾದರ ಕೃಪಾಶೀರ್ವಾದಕ್ಕೆ ಪಾತ್ರರಾಗಿ, ಜಗದ್ಗುರುಗಳ ಜತೆ ಲೋಕಸಂಚಾರ ಕೈಗೊಂಡು ಜಗದ್ಗುರುಗಳ ಆಶೀರ್ವಾದದಿಂದ ಜ್ಞಾನಿಗಳಾಗಿ ಬೆಳೆದರು.

ತುಮಕೂರಿನ ಸಿದ್ಧಗಂಗೆಯ ಶಿಕ್ಷಣಕ್ಷೇತ್ರದ ಸಾಧನೆಯನ್ನು ನೋಡಿ ಅದರಿಂದ ಪ್ರೇರಣೆ ಪಡೆದು, ಅಂಕನಹಳ್ಳಿಯಲ್ಲಿ ಗ್ರಾಮಾಂತರ ಮಕ್ಕಳ ಅನುಕೂಲಕ್ಕಾಗಿ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಲು ಯೋಚಿಸಿದರು. ಈ ಹಿಂದೆ ಲೋಕಸಂಚಾರ ಕೈಗೊಂಡ ಕಾಲದಲ್ಲಿ ಮಠದ ಆಸ್ತಿಯಲ್ಲಿ ಆದಾಯ ಬರುವುದು ನಿಂತ ಕಾರಣಕ್ಕೆ ಮಠವು ಆರ್ಥಿಕ ದುಸ್ಥಿತಿಯನ್ನು ಕಂಡಿತು. ಇದನ್ನೆಲ್ಲಾ ಗಮನಿಸಿದ ಗುರುಗಳು ಶಿಥಿಲಗೊಂಡ ಮಠದಕಟ್ಟಡವನ್ನು ಅಭಿವೃದ್ಧಿಪಡಿಸಿದರು. ಮಠಕ್ಕೆ ಬರುವ ಭಕ್ತರಿಗೆ ಹಿಂದಿನಂತೆ ದಾಸೋಹಕ್ಕೆ ಅನುಕೂಲ ಕಲ್ಪಿಸಿಕೊಡುವುದು, ಇದಕ್ಕೆ ನೆರವಾಗಲು ಮಠದ ಜಮೀನನ್ನು ವಿಸ್ತರಿಸಿ ಅಭಿವೃದ್ಧಿಪಡಿಸುವುದು ಈ ರೀತಿ ಅನೇಕ ಯೋಜನೆಗಳನ್ನು ಹಮ್ಮಿಕೊಂಡು ಮಠವನ್ನು ಮುನ್ನಡೆಸತೊಡಗಿದರು.

ವೀರಶೈವ ಧರ್ಮದ ಆಚರಣೆಗಳನ್ನು ಅನುಷ್ಠಾನಗೊಳಿಸಲು ಬಹಳವಾಗಿಯೇ ಶ್ರಮಿಸಿ, ನಾಡಿನಾದ್ಯಂತ ಸುತ್ತಿ ವೀರಶೈವ ಆಚಾರ ವಿಚಾರಗಳನ್ನು ತಿಳಿಹೇಳಿ ಜನರನ್ನು ಸನ್ಮಾರ್ಗದಲ್ಲಿ ಬೆಳೆಸಿದರು. ಶ್ರೀ ಫಿರಂಗಿ ಸ್ವಾಮಿಗಳ ಪವಾಡಗಳನ್ನು ಜನಮನಕ್ಕೆ ಮುಟ್ಟಿಸಿ ಮಠಕ್ಕೆ ಅಪಾರ ಭಕ್ತರನ್ನು ಬೆಳೆಸಿದರು.

ತುಮಕೂರು, ಮಂಡ್ಯ, ಮೈಸೂರು ಮತ್ತು ಬೆಂಗಳೂರು ನಗರಗಳಲ್ಲಿ ಪ್ರವಾಸ ಮಾಡಿ ಧನ ಸಂಪತನ್ನು ಸಂಗ್ರಹಿಸಿ ಮಠದ ಕಟ್ಟಡವನ್ನು ಆಮೂಲಾಗ್ರವಾಗಿ ಬದಲಿಸಿ ನೂತನ ಕಟ್ಟಡವನ್ನು ನಿರ್ಮಿಸಿದರು. ಗ್ರಾಮಾಂತರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶ್ರೀ ಫಿರಂಗಿಸ್ವಾಮಿ ಗುರುಕುಲಾಶ್ರಮ ವಿದ್ಯಾಪೀಠವನ್ನು ೧೯೫೦ರಲ್ಲಿ ಸ್ಥಾಪಿಸಿ ಮಾಧ್ಯಮಿಕ ಶಾಲೆಯನ್ನು ಪ್ರಾರಂಭಿಸಿದ್ದರು. ೧೯೫೪ ರಲ್ಲಿ ಪ್ರೌಢಶಾಲೆ, ಸಂಸ್ಕೃತ, ವೇದ ಪಾಠಶಾಲೆಗಳನ್ನು ಪ್ರಾರಂಭಿಸಿದರು. ವಿದ್ಯಾರ್ಥಿನಿಲಯ, ಅನಾಥಾಲಯಕ್ಕೆ ಕಟ್ಟಡವನ್ನು ನಿರ್ಮಿಸಿದರು. ಪುನಃ ಮಠದ ಆವರಣದಲ್ಲಿ ೧೯೬೧ ರಂದು ಪ್ರೌಢಶಾಲೆ ಮತ್ತು ೧೯೬೭ ರಲ್ಲಿ ಮಾಧ್ಯಮಿಕ ಶಾಲೆಯನ್ನು ಮತ್ತು ದೈಹಿಕ ಶಿಕ್ಷಣ ತರಬೇತಿ ಕಾಲೇಜನ್ನು ಪ್ರಾರಂಭಿಸಿದರು. ಅಭಿವೃದ್ಧಿಯ ಕನಸುಕಂಡ ಕೆಲವೇ ವರ್ಷಗಳಲ್ಲಿ ಎಲ್ಲವನ್ನೂ ಸಾಧಿಸಿದ ಹಿರಿಯ ಚೇತನವು ೧೫೦೦ ವಿದ್ಯಾರ್ಥಿಗಳ ಕಲಿಕೆಗೆ ನೆರವಾಗಿದ್ದು, ೩೦೦ ಜನ ಬಡ ವಿದ್ಯಾರ್ಥಿಗಳಿಗೆ ಮಠದಲ್ಲಿ ಆಶ್ರಯ ನೀಡಿ ಅವರ ಬಾಳಿನ ಬೆಳಕಾದರು.

ಶ್ರೀಗಂಧ,ಕರ್ಪೂರಗಳಂತೆ ತಮ್ಮನ್ನು ತಾವೇ ಸವೆಸಿಕೊಂಡು ಕಂಪು ನೀಡಿದ ಮಹಾಯೋಗಿ ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು ತಮ್ಮ ಕರಕಮಲಸಂಜಾತ ಶ್ರೀ ಶಿವರುದ್ರ ಶಿವಾಚಾರ್ಯ ಸ್ವಾಮಿಗಳಿಗೆ ಅಧಿಕಾರವನ್ನು ನೀಡಿ ವಿಶ್ರಾಂತಿ ಜೀವನ ನಡೆಸಿ, ಜೂನ್‌ಇಪ್ಪತ್ತೆರಡು ೧೯೯೨ರಲ್ಲಿ ಲಿಂಗೈಕ್ಯರಾದರು. ಅಂಕನಹಳ್ಳಿಮಠದಲ್ಲಿ ಇವರ ಗದ್ದುಗೆಯನ್ನು ಸ್ಥಾಪಿಸಲಾಗಿದೆ. ಶ್ರೀ ಶಿವರುದ್ರ ಶಿವಾಚಾರ್ಯ ಸ್ವಾಮಿಗಳು ಹಿರಿಯ ಗುರುಗಳಿಂದ ಪಟ್ಟಾಧಿಕಾರವನ್ನು ಪಡೆದು ಗುರುಗಳ ಕೃಪಾಶೀರ್ವಾದದಿಂದ ಬೆಳೆದು, ಗುರುಗಳು ಬೆಳೆಸಿದ ಮಠವನ್ನು ಅಭಿವೃದ್ಧಿಪಡಿಸಿದರು. ಇವರು ಶಿಕ್ಷಣ ಸಂಸ್ಥೆಗಳನ್ನೂ ಸಹ ವ್ಯವಸ್ಥಿತವಾಗಿ ನಡೆಸುತ್ತಿದ್ದಾರೆ. ಮಠದ ಜಮೀನನ್ನು ಆಸ್ಪತ್ರೆ ಮತ್ತು ರೇಷ್ಮೆ ಇಲಾಖೆಗೆ ಕಟ್ಟಡವನ್ನು ನಿರ್ಮಿಸಲು ದಾನವಾಗಿ ನೀಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದಲ್ಲಿ ಶ್ರಾವಣ, ಕಾರ್ತೀಕಮಾಸಗಳಲ್ಲಿ ಮತ್ತು ಅಮಾವಾಸ್ಯೆ ಹುಣ್ಣಿಮೆಗಳಲ್ಲಿ ವಿಶೇಷ ಪೂಜೆಯನ್ನು ಏರ್ಪಡಿಸಿ, ಮಠದಲ್ಲಿ ಈ ಸಂದರ್ಭದಲ್ಲಿ ಅನ್ನ ದಾಸೋಹವನ್ನು ನಡೆಸಿ ಹೆಚ್ಚು ಜನರನ್ನು ಬರಮಾಡಿಕೊಳ್ಳುತ್ತಿದ್ದಾರೆ. ಈಶ್ವರಲಿಂಗ, ರೇಣುಕಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲಾಗಿದೆ. ಹಿಂದಿನ ಪರಂಪರೆಯ ಮೇಲ್ಪಂಕ್ತಿಯಲ್ಲಿ ಬೆಳೆಯುತ್ತಿರುವ ಗುರುಗಳು ಮಠವನ್ನು ಹೆಚ್ಚು ಅಭಿವೃದ್ಧಿಪಡಿಸಿದ್ದಾರೆ.

ವಿಳಾಸ: ಶ್ರೀ ಶಿವರುದ್ರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಗವಿಮಠ, ಅಂಕನಹಳ್ಳಿ, ಕುಣಿಗಲ್ ತಾಲ್ಲೂಕು, ತುಮಕೂರುಜಿಲ್ಲೆ.
ಆಧಾರ: 'ಗವಿಮಠದ ಗುರು ಪರಂಪರೆ' ವಿದ್ವಾನ್ ಜಿ.ವಿ. ಶಿವಸ್ವಾಮಿಯವರ ಲೇಖನ.

ಆಲಕೆರೆ

ಕುಣಿಗಲ್ಲು ತಾಲ್ಲೂಕಿನ ಆಲಕೆರೆಯು ತಾಲ್ಲೂಕು ಕೇಂದ್ರದ ಆಗ್ನೇಯಕ್ಕೆ ಎಂಟು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿತ್ತು.

ವಿರಕ್ತಮಠ: ಆಲಕೆರೆ ಗ್ರಾಮದಲ್ಲಿ ಚಿಲ್ಲಾಳ ಸಮಯದ ವಿರಕ್ತಮಠವು ಸ್ಥಾಪನೆಗೊಂಡಿದೆ. ಹದಿನೈದನೆಯ ಶತಮಾನದಲ್ಲಿ ಶ್ರೀ ಸಿದ್ಧಲಿಂಗೇಶ್ವರರು ಅನುಷ್ಠಾನಗೊಂಡು ಈ ಕ್ಷೇತ್ರವನ್ನು ಜಾಗೃತಗೊಳಿಸಿದ್ದಾರೆ. ಶ್ರೀ ಸಿದ್ಧಲಿಂಗೇಶ್ವರರ ನಂತರ ಮಠವು ಸ್ಥಾಪನೆಗೊಂಡು ಪರಂಪರೆಯನ್ನು ಬೆಳೆಸಿ, ಕಾಲಾನಂತರದಲ್ಲಿ ಮಠದಲ್ಲಿ ಗುರುಗಳಿಲ್ಲದೆ ಖಾಲಿ ಉಳಿದಿದೆ.

ಈಗ ಸಿದ್ಧಗಂಗೆಯ ಗುರುಗಳು ಈ ಮಠದ ಆಡಳಿತವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಈ ಮಠದಲ್ಲಿ ಎರಡು ಗದ್ದುಗೆಗಳು ಇದ್ದು ಇವುಗಳಿಗೆ ನಿತ್ಯ ಪೂಜೆ ನಡೆಸಲಾಗುತ್ತಿದೆ. ಮಠದ ಆಸ್ತಿಯಾಗಿ ಹದಿನಾರು ಎಕರೆ ಜಮೀನು ಇದೆ.

ಎಡೆಯೂರು

ಕುಣಿಗಲ್ ತಾಲ್ಲೂಕಿನ ಎಡೆಯೂರು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತೊಂದು ಕಿ.ಮೀ ದೂರದಲ್ಲಿದೆ. ನಾಗಿಣಿ ಮತ್ತು ಕದಂಬ ನದಿಗಳ ಮಧ್ಯದ ಪ್ರದೇಶವಾದ ಎಡೆಯೂರಿನಲ್ಲಿ ಶ್ರೀ ಸಿದ್ಧಲಿಂಗೇಶ್ವರರು ಜೀವಂತ ಸಮಾಧಿಯಾದ ಕಾರಣಕ್ಕೆ ಈ ಕ್ಷೇತ್ರ ನಾಡಿನಾದ್ಯಂತ ಹೆಸರು ಪಡೆದಿದೆ. ಎಡೆಯೂರು ದೇವಸ್ಥಾನದ ಪಕ್ಕದಲ್ಲಿಯೇ ಬಾಳೆಹೊನ್ನೂರು ಖಾಸಾಶಾಖಾ ಮಠವು ಪುರಾತನ ಕಾಲದಿಂದಲೂ ಸ್ಥಾಪನೆಯಾಗಿ ಈ ನಾಡನ್ನು ಬೆಳೆಸಿದೆ.

ಬಾಳೆಹೊನ್ನೂರು ಖಾಸಾ ಶಾಖಾಮಠ: ಎಡೆಯೂರು ಸಿದ್ಧಲಿಂಗೇಶ್ವರರ ಮಠದ (ದೇವಸ್ಥಾನದ) ಬಲ ಬದಿಯಲ್ಲಿರುವ ಬಾಳೆಹೊನ್ನೂರು ಖಾಸಾ ಶಾಖಾ ಮಠವು ಪುರಾತನ ಕಾಲದಿಂದಲೂ ಅಸ್ತಿತ್ವದಲ್ಲಿದ್ದು ಈ ನಾಡಿಗೆ ಬೆಳಕಾಗಿದೆ. ಬಾಳೆಹೊನ್ನೂರಿನ ಜಗದ್ಗುರುಗಳು ಮಳೆಗಾಲದಲ್ಲಿ ಎಡೆಯೂರಿಗೆ ಬಂದು ದೀರ್ಘ ಕಾಲದವರೆಗೆ ಮೊಕ್ಕಾಂ ಮಾಡುತ್ತಿದ್ದರಿಂದ ಈ ಮಠಕ್ಕೆ 'ಬಾಳೆಹೊನ್ನೂರು ಖಾಸಾ ಶಾಖಾಮಠ' ಎಂಬ ಹೆಸರು ಬಂದಿದೆ.

ಚಿಟ್ಟಿಗದೇವ: ಎಡೆಯೂರಿನ ಪಟ್ಟದಮಠದ ರೇಣುಕ ಪೀಠದ ಶಾಖಾಮಠದ ಗುರುವಾಗಿ ಅಧಿಕಾರ ನಡೆಸುತ್ತಿದ್ದ ಶ್ರೀಚಿಟ್ಟಿಗ ದೇವರು ಹರದನಹಳ್ಳಿಯ ಜಂಗಮಜ್ಯೋತಿಯು ನಾಡನ್ನೆಲ್ಲಾ ಧಾರ್ಮಿಕಪ್ರಭೆಯಿಂದ ಬೆಳಗಿಸುತ್ತಿರುವುದನ್ನು ನೋಡಿ

ಸಂತೋಷಗೊಂಡು ಅವರ ಪ್ರಭಾವಕ್ಕೆ ಒಳಗಾಗಿದ್ದರು. ಶ್ರೀ ಸಿದ್ಧಲಿಂಗೇಶ್ವರರು ನಾಡನ್ನೆಲ್ಲಾ ಸುತ್ತಿ ಧರ್ಮಪ್ರಚಾರ ಕೈಗೊಂಡು ಎಡೆಯೂರಿಗೆ ಬರುತ್ತಾರೆ ಎಂಬ ವಿಷಯ ತಿಳಿದ ಮೇಲೆ ಶ್ರೀ ಚನ್ನವೀರಣ್ಣ ಒಡೆಯರು ಮತ್ತು ಶ್ರೀಮತಿ ಪಾರ್ವತಮ್ಮ ದಂಪತಿಗಳ ಹರಕೆಯ ಮೇರೆಗೆ ಶ್ರೀ ಚಿಟ್ಟಿಗದೇವರು ಶ್ರೀ ಸಿದ್ಧಲಿಂಗೇಶ್ವರರಿಗಾಗಿ ಕಲ್ಲುಮಠವನ್ನು ಕಟ್ಟಿಸಿದ್ದಾರೆ ಎಂದು ಎಡೆಯೂರು ದೇವಸ್ಥಾನದ ಆವರಣದಲ್ಲಿನ ಶಾಸನದಲ್ಲಿ (ಕ್ರಿ.ಶ ೧೫೦೦) ಉಲ್ಲೇಖಿತವಾಗಿದೆ.

ಗುರುವಿರಕ್ತರ ಅನ್ಯೋನ್ಯತೆ: ಶ್ರೀಸಿದ್ಧಲಿಂಗೇಶ್ವರರು ಎಡೆಯೂರಿನ ಚಿಟ್ಟಿಗದೇವರ ಮಠಕ್ಕೆ ಬಂದಾಗ ಪ್ರಥಮವಾಗಿ ಗುರುಗಳು ಗುರುವಿನ ಸ್ನಾನಪೂಜೆ ಕಾರ್ಯಕ್ಕೆ ಅಣಿಗೊಳಿಸಿ ಪ್ರಥಮವಾಗಿ ಪಾನಕ ಫಲಹಾರ ನೀಡಿ ಸತ್ಕರಿಸಿದ್ದರು. ಇದರ ದ್ಯೋತಕವಾಗಿ ಶ್ರೀ ಸಿದ್ಧಲಿಂಗೇಶ್ವರರು ರಥೋತ್ಸವ ಹೊರಡುವ ಮುನ್ನ ಸಂಪ್ರದಾಯಬದ್ಧವಾಗಿ ಶ್ರೀ ಸಿದ್ಧಲಿಂಗೇಶ್ವರರ ಮಠದಿಂದ ವಾದ್ಯಗಳೊಂದಿಗೆ ಬಂದು ಬಾಳೆಹೊನ್ನೂರು ಖಾಸಾ ಶಾಖಾ ಮಠದ ಗುರುಗಳಿಗೆ ಆಹ್ವಾನ ನೀಡುತ್ತಾರೆ. ನಂತರ ಗುರುಗಳು ಬಂದವರಿಗೆ ಪಾನಕಫಲಾಹಾರವನ್ನು ನೀಡಿ ಉಪಚರಿಸಿ ನಂತರ ರಥೋತ್ಸವಕ್ಕೆ ಹೊರಡುತ್ತಾರೆ. ಗುರುಗಳು ದೇವಸ್ಥಾನಕ್ಕೆ ಹೋಗಿ ರಥದ ಮೇಲೆ ಪವಡಿಸಿದ ಶ್ರೀ ಸಿದ್ಧಲಿಂಗೇಶ್ವರರಿಗೆ ಪೂಜೆ ಸಲ್ಲಿಸಿ ತೆಂಗಿನಕಾಯಿ ಒಡೆದ ಮೇಲೆ ರಥೋತ್ಸವವು ಪ್ರಾರಂಭವಾಗುತ್ತದೆ. ಈ ಪರಿಪಾಠ ಶ್ರೀ ಸಿದ್ಧಲಿಂಗೇಶ್ವರರು ಮತ್ತು ಬಾಳೆಹೊನ್ನೂರಿನ ಖಾಸಾ ಶಾಖಾ ಮಠದ ಅನ್ಯೋನ್ಯ ಸಂಬಂಧವನ್ನು ಪ್ರತಿಬಿಂಬಿಸುತ್ತದೆ.

ರಂಭಾಪುರಿ ಗುರುಗಳ ಅನುಷ್ಠಾನ: ಶ್ರೀ ಜಗದ್ಗುರು ರಂಭಾಪುರಿ ಪೀಠದ ಎಲ್ಲಾ ಜಗದ್ಗುರುಗಳು ಈ ಮಠದಲ್ಲಿ ನೆಲೆಸಿ ದೀರ್ಘ ಅನುಷ್ಠಾನಗೊಂಡಿದ್ದಾರೆ. ಅದರಲ್ಲಿಯೂ ದಾಖಲೆಯಾಗಿ ಉಳಿಯಬಲ್ಲಂತಹ ಪೂಜಾಕಾರ್ಯವನ್ನು ಜಗದ್ಗುರು ಶ್ರೀ ವೀರಗಂಗಾಧರ ಶಿವಾಚಾರ್ಯ ಭಗವತ್ಪಾದರು ಮಾಡಿದ್ದಾರೆ. ಈ ಪೂಜಾ ಅನುಷ್ಠಾನದಲ್ಲಿ ಮೈಸೂರು ಜಯಚಾಮರಾಜ ಒಡೆಯರು ಆಗಮಿಸಿ ಪೂಜಾಕಾರ್ಯದಲ್ಲಿ ಭಾಗವಹಿಸಿಹೋಗಿದ್ದರು. ಅಂದಿನ ಅನುಷ್ಠಾನ ಕಾರ್ಯದಲ್ಲಿ ನಾಡಿನ ಅನೇಕ ಶಿವಾಚಾರ್ಯರು ಆಗಮಿಸಿದ್ದರು ಎಂದು ಹೇಳಲಾಗಿದೆ.

ಪರಂಪರೆ: ಪುರಾತನ ಕಾಲದಲ್ಲಿ ಸ್ಥಾಪನೆಯಾಗಿದ್ದ ಈ ಮಠಕ್ಕೆ ನಿರಂತರವಾಗಿ ಮಠಾಧೀಶ್ವರರು ಆಡಳಿತವನ್ನು ನಡೆಸಿದ್ದಾರೆ ಎಂದು ಹೇಳಲಾದರೂ ಆಧಾರಗಳ ಕೊರತೆಯಿಂದ ಗುರುಗಳ ಹೆಸರು ಲಭ್ಯವಿಲ್ಲ.

ರೇಣುಕರು: ತರೀಕೆರೆ ತಾಲ್ಲೂಕಿನ ಗೊಂಡೇದಹಳ್ಳಿಯಲ್ಲಿ ೧೯೬೮ರ ಸೆಪ್ಟೆಂಬರ್ ಆರರಂದು ಜನಿಸಿ, ಸಂಸ್ಕೃತ, ವೇದ, ಆಗಮಗಳು ಹಾಗೂ ವೀರಶೈವ ಸಿದ್ಧಾಂತದ ಬಗ್ಗೆ ಅಪಾರ ಜ್ಞಾನವನ್ನು ಪಡೆದ ಶ್ರೀರೇಣುಕ ಶಿವಾಚಾರ್ಯರು ೧೯೭೭ರ ಮೇ ಒಂದರಂದು ತಾವರೆಕೆರೆ ಶಿಲಾಮಠದ ಅಧ್ಯಕ್ಷರಾಗಿ ರಂಭಾಪುರಿ ಜಗದ್ಗುರು ಶ್ರೀ ವೀರ ಗಂಗಾಧರ ಶಿವಾಚಾರ್ಯ ಭಗವತ್ಪಾದರಿಂದ ಅನುಗ್ರಹವನ್ನು ಪಡೆದು ಅಧಿಕಾರಕ್ಕೆ ಬಂದು, ತಾವರೆಕೆರೆ ಶಿಲಾಮಠವನ್ನು ಅಭಿವೃದ್ಧಿಯ ಪಥಕ್ಕೆ ತಂದರು. ೧೯೯೮ ರ ಮೇ ಹದಿನಾಲ್ಕರಂದು ಎಡೆಯೂರು ಕ್ಷೇತ್ರದ ಪುರಾತನ ಮಠದ ಅಧಿಕಾರವನ್ನು ರಂಭಾಪುರಿ ಪೀಠದ ಗುರುಗಳಾದ ಶ್ರೀ ಪ್ರಸನ್ನ ರೇಣುಕವೀರ ಸೋಮೇಶ್ವರ ಶಿವಾಚಾರ್ಯ ಭಗವತ್ಪಾದರಿಂದ ಪಟ್ಟಾಧಿಕಾರದ ಅನುಗ್ರಹ ಪಡೆದು ಪಂಚಪೀಠಾಧೀಶ್ವರರ ಸಮ್ಮುಖದಲ್ಲಿ ಅಧಿಕಾರವನ್ನು ವಹಿಸಿಕೊಂಡಿದ್ದಾರೆ.

ವಿರಕ್ತ ಮತ್ತು ಗುರು ಪೀಠಗಳ ಸಂಬಂಧವು ಕೆಲವು ಸ್ವಾರ್ಥ ಸಾಧಕರಿಂದ ಹದಗೆಟ್ಟಿದೆ. ಈ ಸಂಬಂಧವನ್ನು ಬೆಸೆಯಬೇಕಾಗಿದೆ. ಶ್ರೀ ಸಿದ್ಧಲಿಂಗೇಶ್ವರರ ಕಾಲದಲ್ಲಿ ಇದ್ದ ಅನ್ಯೋನ್ಯತೆ ಈಗ ಮತ್ತೆ ಬರಬೇಕಾಗಿದೆ. ಈ ಸಂಬಂಧವನ್ನು ಬೆಸೆಯಲು ಎಲ್ಲರೂ ತಯಾರಾಗಬೇಕಾಗಿದೆ ಎಂದು ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು ಅಭಿಪ್ರಾಯಿಸುತ್ತಾರೆ.

ಧಾರ್ಮಿಕ ಕಾರ್ಯಗಳು: ಗುರುಗಳು ಬಾಳೆಹೊನ್ನೂರು ಖಾಸಾ ಶಾಖಾ ಮಠದ ಅಧಿಕಾರವನ್ನು ಪಡೆದ ಮೇಲೆ ಪ್ರತಿ ತಿಂಗಳು ಕಡೆಯ ಭಾನುವಾರದಂದು ಚಿಂತನ ಮಂಥನ ಗೋಷ್ಠಿಯನ್ನು ನಡೆಸುತ್ತಾ, ವೀರಶೈವ ಧರ್ಮದ ಅನೇಕ ವಿಚಾರಗಳು ಚಿಂತನೆಗೆ ಒಳಗಾಗುವಂತೆ ಮಾಡಿದ್ದಾರೆ. ಶ್ರಾವಣಮಾಸದಲ್ಲಿ ವಿಶೇಷ ಪೂಜಾ ಕಾರ್ಯಕ್ರಮವನ್ನು ಏರ್ಪಡಿಸಲಾಗುತ್ತಿದೆ. ಹಾಗೂ ಮಠಕ್ಕೆ ಭೇಟಿ ನೀಡುವ ಭಕ್ತರಿಗೆ ಅನ್ನದಾಸೋಹವನ್ನು ಮಾಡಲಾಗುತ್ತಿದೆ.

ಅಭಿವೃದ್ಧಿ ಕಾರ್ಯ: ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು ಅಖಿಲಭಾರತ ವೀರಶೈವ ಶಿವಾಚಾರ್ಯ ಸಂಸ್ಥೆಯ ಗೌರವ ಕಾರ್ಯದರ್ಶಿಯಾಗಿ ನಾಡಿನಲ್ಲಿ ಧರ್ಮಗುರುಗಳ ಪಾತ್ರ ಮತ್ತು ಅವರ ಸ್ಥಾನಮಾನದ ಬಗ್ಗೆ ಚಿಂತನೆ ನಡೆಸಿ ಸಂಘಟಿತ ಪ್ರಯತ್ನಕ್ಕೆ ಮುಂದಾಗಿರುವಂತೆಯೇ, ಎಡೆಯೂರು ಸುಕ್ಷೇತ್ರದ ಅಧಿಕಾರವನ್ನು ಪಡೆದ ಮೇಲೆ ಮಠದಲ್ಲಿ ಅತಿಥಿಗೃಹ, ಕಲ್ಯಾಣಮಂಟಪ ನಿರ್ಮಿಸಿ ವ್ಯಾಪಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮುನ್ನಡೆದಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು, ಶ್ರೀ ಬಾಳೆಹೊನ್ನೂರು ಖಾಸಾ ಶಾಖಾಮಠ, ಎಡೆಯೂರು, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ.

ಕುಣಿಗಲ್ಲು

ತುಮಕೂರು ಜಿಲ್ಲೆಯ ಕುಣಿಗಲ್ಲು, ತಾಲ್ಲೂಕಿನ ಕೇಂದ್ರಸ್ಥಳ. ಈ ಪಟ್ಟಣದಲ್ಲಿ ಪ್ರಾಚೀನ ಕಾಲದ ಹಿರೇಮಠ ಹಾಗೂ ಗವಿಮಠಗಳು ಪ್ರಾರಂಭಗೊಂಡು ಈ ಭಾಗದಲ್ಲಿ ಧಾರ್ಮಿಕ ಜಾಗೃತಿಯನ್ನು ಉಂಟುಮಾಡಿವೆ. ಗವಿಮಠವು, ಅಂಕನಹಳ್ಳಿ ಗವಿಮಠದ ಮೂಲ ಮಠವಾಗಿದ್ದು ಈ ಮಠದಲ್ಲಿ ಶ್ರೀ ಗುರು ಫಿರಂಗೀಶ್ವರರು ಅನುಷ್ಠಾನ ಮಾಡಿದ ಸ್ಥಳ ಇದಾಗಿದ್ದು ಇಲ್ಲಿ ಅಂಕನಹಳ್ಳಿ ಮಠದ ವತಿಯಿಂದ ಮಾಧ್ಯಮಿಕ ಶಾಲೆ ಮತ್ತು ಪ್ರೌಢಶಾಲೆಗಳು ನಡೆಯುತ್ತಿವೆ. ಇಲ್ಲಿನ ಗದ್ದುಗೆಗಳಿಗೆ ನಿತ್ಯ ಪೂಜೆಮಾಡಲು ವ್ಯವಸ್ಥೆಮಾಡಲಾಗಿದೆ.

ಹಿರೇಮಠ: ಕುಣಿಗಲ್ಲು ಪಟ್ಟಣದ ಕೋಟೆ ಬಡಾವಣೆಯಲ್ಲಿ ಸ್ಥಾಪನೆಯಾಗಿರುವ ಹಿರೇಮಠವು ರಂಭಾಪುರಿ ಪೀಠದ ಶಾಖಾಮಠವಾ ಗಿದ್ದು ಪ್ರಾಚೀನ ಕಾಲದಿಂದಲೂ ಇಲ್ಲಿ ಸ್ಥಾಪನೆಗೊಂಡು ತನ್ನ ಧಾರ್ಮಿಕ ಚಟುವಟಿಕೆಗಳಿಂದ ಹೆಸರು ಪಡೆದಿದೆ. ಈ ಮಠದ ಸ್ಥಾಪಕರು ಯಾರು ಎಂಬ ಬಗ್ಗೆ ನಿಖರವಾದ ಮಾಹಿತಿಗಳು ದೊರೆಯದಾಗಿದೆ. ಆದರೆ ಮಠದಲ್ಲಿ ಸ್ಥಾಪನೆಯಾಗಿರುವ ಮೂಲ ಗದ್ದುಗೆಯ ಹೆಸರು ಸಿದ್ದೇಶ್ವರ ಶಿವಾಚಾರ್ಯರದು ಎಂದು ಹೇಳಲಾಗುತ್ತಿದೆ. ಕೋಟೆ ಬಡಾವಣೆಯಲ್ಲಿರುವ ಈ ಮಠವು ಈ ಪಟ್ಟಣದ ಧಾರ್ಮಿಕ ಆಚರಣೆಯ ಕೇಂದ್ರಬಿಂದುವಾಗಿ ನೆಲೆನಿಂತಿದೆ.

ಗುರುಗಳು: ಈ ಮಠದ ಆಡಳಿತದ ಸೂತ್ರವನ್ನು ವಹಿಸಿಕೊಂಡಿರುವ ಶ್ರೀಶಿವಕುಮಾರ ಶಿವಾಚಾರ್ಯ ಸ್ವಾಮಿಗಳ ಹೆಸರನ್ನು ಮಠದ ಪರಂಪರೆಯಲ್ಲಿ ಗುರುತಿಸಬಹುದು. ಗುರುಗಳು ಅಧಿಕಾರ ವಹಿಸಿಕೊಂಡ ಮೇಲೆ ತಮ್ಮ ವಾಸ್ತವ್ಯಕ್ಕಾಗಿ ಸಿದ್ಧೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಮಠದ ಆವರಣದಲ್ಲಿ ಇರುವ ಗದ್ದುಗೆಗಳನ್ನು ನವೀಕರಣ ಗೊಳಿಸಿ ಮಠವನ್ನು ಸರ್ವರೀತಿಯಲ್ಲಿಯೂ ಅಭಿವೃದ್ಧಿಪಡಿಸಿದ್ದಾರೆ.

ನೆರವಾದವರು: ಕುಣಿಗಲ್ಲು ಪಟ್ಟಣದ ವೀರಶೈವ ಸಮಾಜದ ಶೆಟ್ಟರು ಮತ್ತು ಯಜಮಾನರುಗಳು ಮಠದ ಸರ್ವಾಂಗೀಣ ಅಭಿವೃದ್ಧಿಗೆ ನೆರವಾಗಿದ್ದಾರೆ.ಗುರುಗಳು ಅಧಿಕಾರಕ್ಕೆ ಬಂದಮೇಲೆ ಧಾರ್ಮಿಕ ಚಟುವಟಿಕೆಗಳಿಂದ ಮಠವನ್ನು ಅಭಿವೃದ್ಧಿಪಡಿಸಿ ಜನರ ಮನಸ್ಸಿನಿಂದ ದೂರ ಸರಿಯುತ್ತಿದ್ದ ಈ ಮಠದ ಪ್ರಭಾವವನ್ನು ಭಕ್ತರ ಮನದಾಳದಲ್ಲಿ ಪುನರ್ ಪ್ರತಿಷ್ಠಾಪಿಸಿದ್ದಾರೆ.

ಧಾರ್ಮಿಕ ಕಾರ್ಯ: ಕುಣಿಗಲ್ ಪಟ್ಟಣದಿಂದ ಎರಡು ಕಿ.ಮೀ.ದೂರದಲ್ಲಿರುವ ನೀಲಮ್ಮ ಮತ್ತು ಬಸವಣ್ಣದೇವರ ದೇವಸ್ಥಾನ ಹಾಗೂ ಕೆರೆಯ ಹತ್ತಿರ ಸ್ಥಾಪಿಸಲ್ಪಟ್ಟಿರುವ ವೀರಭದ್ರಸ್ವಾಮಿ ಹಾಗೂ ಮಠದ ಆವರಣದಲ್ಲಿರುವ ಸಿದ್ಧೇಶ್ವರಸ್ವಾಮಿ ದೇವಸ್ಥಾನಗಳಿಗೆ ಮಠದ ವತಿಯಿಂದ ಪೂಜಾಕಾರ್ಯವನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಶಿವಕುಮಾರ ಶಿವಾಚಾರ್ಯಸ್ವಾಮಿಗಳು,ಶ್ರೀ ಹಿರೇಮಠ, ಕೋಟೆ ಬಡಾವಣೆ,ಕುಣಿಗಲ್ಲು, ತುಮಕೂರು

ಬೆಟ್ಟಹಳ್ಳಿ

ಕುಣಿಗಲ್ ತಾಲ್ಲೂಕಿನ ಬೆಟ್ಟಹಳ್ಳಿಯು ತಾಲ್ಲೂಕು ಕೇಂದ್ರದ ಆಗ್ನೇಯಕ್ಕೆ ಹದಿನೈದು ಕಿ.ಮೀ. ದೂರದಲ್ಲಿದೆ. ಹುತ್ರಿ ದುರ್ಗದ ತಪ್ಪಲಿನಲ್ಲಿ ಶ್ರೀಮದ್ ರಂಭಾಪುರಿ ಪೀಠದ ಶಾಖಾ ಮಠವಾದ ಬೆಟ್ಟಹಳ್ಳಿ ಮಠವು ಸ್ಥಾಪನೆಗೊಂಡು, ಈ

ಭಾಗದಲ್ಲಿ ಧಾರ್ಮಿಕವಾಗಿ ಮತ್ತು ಶೈಕ್ಷಣಿಕವಾಗಿ ಪ್ರಗತಿಯನ್ನು ಸಾಧಿಸಿ ಹೆಸರು ಪಡೆದಿದೆ.

ಬೆಟ್ಟಹಳ್ಳಿ ಮಠ: ಬೆಟ್ಟಹಳ್ಳಿಯಿಂದ ಎರಡು ಕಿ.ಮೀ. ಹೊರಭಾಗದಲ್ಲಿ ದಕ್ಷಿಣಕ್ಕೆ ಬೆಟ್ಟಳ್ಳಿಮಠವು ಸ್ಥಾಪನೆಯಾಗಿದೆ. ಗಿರಿಕಂದರಗಳ ನಡುವೆ, ಕಲ್ಲುಬಂಡೆಯ ಶಿಖರವೊಂದರ ಮಧ್ಯದಲ್ಲಿ ಸ್ಥಾಪನೆಯಾಗಿರುವ ಈ ಮಠವು ಸದಾ ಜನಜಂಗುಳಿಯ ಕೇಂದ್ರವಾಗಿ, ನಿತ್ಯ ಅನ್ನ ದಾಸೋಹವನ್ನು ನಡೆಸಿ ನಾಡಿನಲ್ಲೇ ಹೆಸರಾಂತ ಮಠವಾಗಿ ರೂಪುಗೊಂಡು, ಧಾರ್ಮಿಕ ಪ್ರಭೆಯನ್ನು ಎಲ್ಲೆಡೆಯಲ್ಲೂ ಬೀರಿದೆ.

ಮಠ ಸ್ಥಾಪನೆ: ಕಲಿಯುಗದ ಆಚಾರ್ಯ ಶ್ರೀ ರೇವಣಸಿದ್ಧೇಶ್ವರರು ಲೋಕಸಂಚಾರ ಕೈಗೊಂಡು ಅನುಷ್ಠಾನಗೊಂಡ ಕಡೆ ಮಠವನ್ನು ಸ್ಥಾಪಿಸಿ, ಗೋತ್ರ ಪುರುಷನಾದ ವೀರಭದ್ರನನ್ನು ಸ್ಥಾಪಿಸಿ ಬರುತ್ತಿದ್ದರು. ಈ ಪ್ರಕಾರವಾಗಿ ಸ್ಥಾಪನೆಗೊಂಡ ಬೆಟ್ಟಹಳ್ಳಿಯ ಮಠವು ಧರ್ಮಜಾಗೃತಿಗಾಗಿ ಸ್ಥಾಪನೆ ಮಾಡಿದ ಮಠವಾಗಿದೆ.

ಪರಂಪರೆ: ಜಗದ್ಗುರು ಶ್ರೀ ರೇವಣಸಿದ್ಧೇಶ್ವರರು ತಮ್ಮ ಶಿಷ್ಯರಲ್ಲೊಬ್ಬರಾದ ಶ್ರೀ ವೀರಭದ್ರ ಶಿವಾಚಾರ್ಯರಿಗೆ ಈ ಮಠದ ಅಧಿಕಾರವಿತ್ತು ಮುಂದೆ ಸಾಗಿದ್ದಾರೆ. ಈ ರೀತಿ ರೇವಣಸಿದ್ಧೇಶ್ವರರಿಂದ ಅನುಗ್ರಹ ಪಡೆದು ಶ್ರೀ ವೀರಭದ್ರ ಶಿವಾಚಾರ್ಯರಿಂದ ಪ್ರಾರಂಭಗೊಂಡ ಮಠದ ಪರಂಪರೆಯು ಹನ್ನೊಂದನೆಯ ಶತಮಾನದಿಂದ ಬೆಳೆದು ಬಂದಿದೆ.

೧. ಷ.ಬ್ರ.ಶ್ರೀ ವೀರಭದ್ರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಶಿವಾನಂದ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಪಟ್ಟದ ಚನ್ನವೀರಾರಾಧ್ಯ ಶಿವಾಚಾರ್ಯಸ್ವಾಮಿಗಳು (ಉರಿಲಿಂಗ ಸ್ವಾಮಿಗಳು)
೭. ಷ.ಬ್ರ.ಶ್ರೀ ಸ್ವಾಮಿ ಬಸಪ್ಪ ಒಡೆಯರ್ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ಗುರುಸಿದ್ಧ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೧೦. ಷ.ಬ್ರ.ಶ್ರೀ ರಾಚವಟಿರಾಧ್ಯ ಶಿವಾಚಾರ್ಯಸ್ವಾಮಿಗಳು
೧೧. ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯಸ್ವಾಮಿಗಳು
೧೨. ಷ.ಬ್ರ.ಶ್ರೀ ನೀಲಕಂಠ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯು ಬೆಳೆದು ಈತನಕ ನಡೆದುಬಂದಿದೆ. ಮಠದ ಅಧಿಕಾರ ವಹಿಸಿಕೊಂಡ ಎಲ್ಲಾ ಗುರುಗಳು ಧರ್ಮ ಪ್ರಚಾರ ಕಾರ್ಯವನ್ನು ಕೈಗೊಳ್ಳುತ್ತಾ ಬಂದಿದ್ದಾರೆ.

ಹುತ್ರಿದುರ್ಗದ ಬೆಟ್ಟವು ಸಮುದ್ರ ಮಟ್ಟದಿಂದ ೩೭೧೩ ಅಡಿ ಎತ್ತರದಲ್ಲಿದ್ದು, ವಿಶಾಲವಾಗಿರುವ ಈ ಬೆಟ್ಟದಲ್ಲಿ ಶ್ರೀ ರೇವಣಸಿದ್ಧೇಶ್ವರರು ಸ್ಥಾಪಿಸಿದ ಈ ಮಠದ ಗುರುಗಳಾಗಿ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳು ಈ ಕಲ್ಲುಗುಡ್ಡವನ್ನೇ ಧರ್ಮಪ್ರಸಾರದ ಕೇಂದ್ರವನ್ನಾಗಿ ಪರಿವರ್ತಿಸಿದರು. ವೀರಶೈವ ಸಿದ್ಧಾಂತದ ಬಗ್ಗೆ ಭಕ್ತರಿಗೆ ತಿಳಿಸಿ ವೀರಶೈವರನ್ನು ಉದ್ಧರಿಸಿದರು. ಲೋಕಕಲ್ಯಾಣಾರ್ಥ ಲೋಕಸಂಚಾರಕ್ಕೆ ಹೋಗಿದ್ದ ಶ್ರೀ ವೀರಭದ್ರಸ್ವಾಮಿಗಳು ಮಠಕ್ಕೆ ಹಿಂದಿರುಗಿ ಬರುವ ವೇಳೆಗೆ ಪ್ಲೇಗ್ ರೋಗವು ಹಬ್ಬಿ ಇಡೀ ಊರನ್ನೇ ಬಲಿ ತೆಗೆದುಕೊಂಡಿತ್ತು. ಗುರುಗಳು ಬಂದವರೇ ಬೆಟ್ಟಹಳ್ಳಿಯಲ್ಲಿ ಶಿವಪೂಜೆಗೆ ಕುಳಿತು ಭಕ್ತರಿಗೆ ವಿಭೂತಿ ತೀರ್ಥವನ್ನು ಕೊಟ್ಟು ಕಳುಹಿಸಿದರು. ಗುರುಗಳು ದೀರ್ಘವಾಗಿ ಈ ದೇವಾಲಯದಲ್ಲಿ ಅನುಷ್ಠಾನಕ್ಕೆ ಕುಳಿತರು. ಪ್ಲೇಗ್ ಮಾರಿಬೇನೆಯು ಊರು ಬಿಟ್ಟು ಹೋಯಿತು. ಗುರುಗಳ ಈ ಪವಾಡವನ್ನು ನೋಡಿ ತಂಡೋಪತಂಡವಾಗಿ ಬಂದ ಭಕ್ತರಿಗೆ ಗುರುಗಳು ಪ್ರತ್ಯಕ್ಷ ಮೃತ್ಯುಂಜಯರಾಗಿ ಕಾಣತೊಡಗಿದರು. ಈ ಜನರ ಬದುಕಿನ ಆಶಾಜ್ಯೋತಿಯಾಗಿ, ಅಜ್ಞಾನವನ್ನು ತೊಡೆದು ಹಾಕುವ ಸದ್ಗುರುವಾಗಿ ಬೆಳೆದರು. ಶಿವಯೋಗ ಸಿದ್ಧಿ ಪಡೆದ ಶ್ರೀ ವೀರಭದ್ರ ಶಿವಾಚಾರ್ಯ

ಸ್ವಾಮಿಗಳು ಹುತ್ರಿದುರ್ಗದ ಬೆಟ್ಟದಲ್ಲಿ ಜೀವಂತ ಸಮಾಧಿಯಾದರು. ಇವರ ಗದ್ದುಗೆಯು ಈಗಲೂ ಹುತ್ರಿದುರ್ಗದ ಬೆಟ್ಟದಲ್ಲಿಯೇ ಪೂಜ್ಯತೆಗೆ ಒಳಪಟ್ಟಿದೆ. ಅಲ್ಲದೆ ಕಾಡಿನಲ್ಲಿರುವ ಕಾರಣ 'ಕಾಡಮ್ಮನಮಠ'ವೆಂದು ಕರೆಯಲಾಗುತ್ತದೆ.

ನಂತರ ಅಧಿಕಾರಕ್ಕೆ ಬಂದ ಗುರುಗಳು ಪವಾಡ ಪುರುಷರಾಗಿ, ಸಮಾಜವನ್ನು ಧಾರ್ಮಿಕ ಸನ್ಮಾರ್ಗದಲ್ಲಿ ಬೆಳೆಸಲು ನೆರವಾಗಿದ್ದರು. ಇವರ ನಂತರ ಬಂದ ಶ್ರೀ ಪಟ್ಟದ ಚನ್ನವೀರಾರಾಧ್ಯ ಸ್ವಾಮಿಗಳು ಬೆಟ್ಟಹಳ್ಳಿ ಮಠದ ತಪೋನಿಧಿಗಳೆಂದು ಹೆಸರು ಮಾಡಿದ್ದಾರೆ. ಈ ಗುರುಗಳ ಲೋಕಕಲ್ಯಾಣ ಕಾರ್ಯಗಳನ್ನು ಗಮನಿಸಿದ ಶ್ರೀರಂಗಪಟ್ಟಣ ಮತ್ತು ಮೈಸೂರುಅರಸರು ಹಾಗೂ ಅನೇಕ ಉನ್ನತ ಅಧಿಕಾರಿಗಳು ಮುಂತಾದ ಮಂದಿ ಮಾಗದರು ಮಠಕ್ಕೆ ಕಾಣಿಕೆಗಳನ್ನು ನೀಡಿ ಮಠವನ್ನು ಬೆಳೆಸಿದ್ದಾರೆ. ೧೭೧೪ ರಲ್ಲಿ ಪಾಳೆಗಾರರಾದ ಮುಮ್ಮಡಿ ಕೆಂಪ ವೀರಪ್ಪಗೌಡರು ಮೈಸೂರಿನ ಒಂದನೆಯ ಕೃಷ್ಣರಾಜರ ಅಧೀನನೆಂದು ಒಪ್ಪಿಕೊಂಡು ಬೆಟ್ಟಹಳ್ಳಿ ಮಠಕ್ಕೆ ಭೂಮಿಯನ್ನು ದಾನನೀಡಿದ ಬಗ್ಗೆ ಉಲ್ಲೇಖ ಇದೆ. ನಂತರ ಅನೇಕ ಪವಾಡಗಳನ್ನು ಮಾಡಿ ಜನಮನದಲ್ಲಿ ಸ್ಥಿರವಾಗಿ ನಿಂತರು.ನಂತರ ಬಂದ ಶ್ರೀ ಸ್ವಾಮಿ ಬಸಪ್ಪ ಒಡೆಯರು ಶಿವಯೋಗಾನುಷ್ಠಾನವನ್ನು ಆಚರಿಸಿ ಧರ್ಮಜಾಗೃತಿಯನ್ನು ಮಾಡಿದರು. ಶಿವರಾತ್ರಿಯ ದಿನ ಲಿಂಗೈಕ್ಯರಾಗಿದ್ದು ಇವರ ಗದ್ದುಗೆಯು ಬೆಟ್ಟಹಳ್ಳಿ ಮಠದಲ್ಲಿ ಸ್ಥಾಪನೆಯಾಗಿದೆ. ನಂತರ ಬಂದ ಅನೇಕ ಗುರುಗಳು ತಪೋನಿಷ್ಠರಾಗಿ ಜನ ಮತ್ತು ರಾಜಮನ್ನಣೆಗೂ ಪಾತ್ರರಾಗಿದ್ದರು.

ಹನ್ನೊಂದನೆಯ ಗುರುಗಳಾಗಿ ಅಧಿಕಾರ ವಹಿಸಿಕೊಂಡ ಶ್ರೀ ಪಟ್ಟದ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ನೀಲಸಂದ್ರದ ಶ್ರೀ ಸಿದ್ಧಲಿಂಗ ಒಡೆಯರು ಮತ್ತು ಶ್ರೀಮತಿ ಸಿದ್ಧಮ್ಮನವರ ಪುತ್ರರಾಗಿ ಜನಿಸಿದರು. ಶ್ರೀ ಸಿದ್ಧಲಿಂಗಯ್ಯನವರು ಬಾಲ್ಯದಲ್ಲೇ ನಯ-ವಿನಯವನ್ನು ಮೈಗೂಡಿಸಿಕೊಂಡಿದ್ದರು. ಒಮ್ಮೆ ಬೆಟ್ಟಹಳ್ಳಿಯ ಶ್ರೀ ರಾಚವಟಿರಾಧ್ಯ ಶಿವಾಚಾರ್ಯ ಸ್ವಾಮಿಗಳು ಆಗಮಿಸಿ ಇವರ ಮನೆಯಲ್ಲಿ ಶಿವಪೂಜೆಯನ್ನು ನಡೆಸುತ್ತಿದ್ದಾಗ, ಬಾಲಕನ ಆಟ ಪಾಠಗಳನ್ನು ನೋಡಿ ತಮ್ಮ ಶಿಷ್ಯನನ್ನಾಗಿ ಮಾಡಿಕೊಂಡರು. ನಂತರ ೧೯೦೮ ರ ಏಪ್ರಿಲ್ ಇಪ್ಪತ್ತರಂದು ಪಟ್ಟಾಧಿಕಾರ ಕೊಟ್ಟು ಲಿಂಗೈಕ್ಯರಾದರು.

ಪಟ್ಟಾಧಿಕಾರ ಪಡೆದ ಮೇಲೆ ಕರ್ನಾಟಕದ ಎಲ್ಲಾ ಪುಣ್ಯ ಸ್ಥಳಗಳನ್ನು ಸಂದರ್ಶಿಸಿ ಬಂದ ಗುರುಗಳು ಅಪಾರ ಜ್ಞಾನ ಸಂಪತ್ತನ್ನು ಪಡೆದಿದ್ದರು. ಕಾಯಕಯೋಗದಿಂದ ಬದುಕಬೇಕೆಂದು ಉಪದೇಶಿಸುತ್ತಾ, ತಾವೂ ಅದರಂತೆಯೇ ಬದುಕಿ, ಭಕ್ತರಿಗೆ ಅನುಕರಣೀಯರಾಗಿದ್ದರು. ತ್ರಿಕಾಲದಲ್ಲೂ ಶಿವಪೂಜೆ ಮಾಡುತ್ತಾ ಸಿದ್ಧಾಂತಶಿಖಾಮಣಿ, ಕೈವಲ್ಯಪದ್ಧತಿ, ಶತಕತ್ರಯ, ಸಿದ್ಧಲಿಂಗೇಶ್ವರರ ವಚನ, ಅಖಂಡೇಶ್ವರರ ವಚನ ಮುಂತಾದವುಗಳನ್ನು ಪಠನ ಮಾಡುತ್ತಿದ್ದರು. ಆ ಕಾಲದಲ್ಲೇ ತಮ್ಮ ಮಠದಲ್ಲಿ ಸಂಸ್ಕೃತ, ವೇದ ಪಾಠಶಾಲೆಯನ್ನು ತೆರೆದು, ವರ್ಷದಲ್ಲಿ ಸುಮಾರು ಐವತ್ತು ಜನ ವಿದ್ಯಾರ್ಥಿಗಳಿಗೆ ಆಶ್ರಯವನ್ನು ಕಲ್ಪಿಸಿಕೊಟ್ಟಿದ್ದರು. ಈ ರೀತಿ ಅನೇಕ ಧಾರ್ಮಿಕ, ಸಾಮಾಜಿಕ ಮತ್ತು ಶೈಕ್ಷಣಿಕ ವಿಚಾರಗಳಲ್ಲಿ ಪ್ರಗತಿ ಸಾಧಿಸಿದ್ದ ಗುರುಗಳು ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳಿಗೆ ಅಧಿಕಾರವನ್ನು ನೀಡಿ ಮೇ ಇಪ್ಪತ್ತೆಂಟು ೧೯೭೩ ರಲ್ಲಿ ಲಿಂಗೈಕ್ಯರಾಗಿದ್ದಾರೆ.

ಸಾಧಕರಿಗೆ ಪಟ್ಟಾಧಿಕಾರ: ಹುಲಿಯೂರು ದುರ್ಗ ಹೋಬಳಿಯ ನೀಲಸಂದ್ರ ಗ್ರಾಮದ ಶ್ರೀ ಸಿದ್ಧವೀರಯ್ಯ ಮತ್ತು ಶ್ರೀಮತಿ ವೀರಮ್ಮನವರ ಪುತ್ರರಾಗಿ ಜನಿಸಿದ ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳು, ಮೈಸೂರು ಮತ್ತು ಬೆಂಗಳೂರಿನಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ಬೆಟ್ಟಹಳ್ಳಿಗೆ ಬಂದು ೧೯೫೧ರ ಮೇ ಹನ್ನೊಂದರಂದು ಪಟ್ಟಾಧಿಕಾರವನ್ನು ಪಡೆದರು. ಮಠದ ಪರಂಪರೆಯ ಎಲ್ಲಾ ಗುರುಗಳ ಚರಿತ್ರೆಯನ್ನು ತಿಳಿದುಕೊಂಡು ಎಲ್ಲಾ ಹಿರಿಯ ಗುರುಗಳ ಮೇಲ್ಪಂಕ್ತಿಯಲ್ಲಿ ಬೆಳೆಯ ತೊಡಗಿದರು. ಪಟ್ಟಾಧಿಕಾರ ಪಡೆದ ಮೇಲೆ ಹಿರಿಯ ಗುರುಗಳಾದ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳ ಮಾರ್ಗದರ್ಶನದ ಮೇರೆಗೆ ಕಾಶಿ, ಕೇದಾರ, ಹರಿದ್ವಾರ, ಹೃಷಿಕೇಶ, ಕನ್ಯಾಕುಮಾರಿ, ರಾಮೇಶ್ವರ, ಪಳನಿ, ಕುಂಭಕೋಣಂ, ಉಜ್ಜಯಿನಿ, ಬಾಳೆಹೊನ್ನೂರು, ಶೃಂಗೇರಿ, ಗೋಕರ್ಣ, ಧರ್ಮಸ್ಥಳ, ಶಿವಗಂಗಾ, ಸಿದ್ಧಗಂಗಾ, ಮಹಾದೇಶ್ವರಬೆಟ್ಟ, ರೇವಣಸಿದ್ಧೇಶ್ವರಬೆಟ್ಟ ಮತ್ತು ಎಡೆಯೂರು ಕ್ಷೇತ್ರ ಮುಂತಾದ ಧರ್ಮ ಕ್ಷೇತ್ರಗಳನ್ನು ಸಂದರ್ಶಿಸಿ ಬಂದರು. ಸಿದ್ಧಗಂಗಾ, ಸುತ್ತೂರು, ಕನಕಪುರ, ಮಹಂತರಮಠ, ಅಂಕನಹಳ್ಳಿಮಠ, ಬಂಡೆಯ ಮಠಗಳಿಗೆ ಹೋಗಿ ಅಲ್ಲಿನ ಅನ್ನದಾಸೋಹ, ಜ್ಞಾನದಾಸೋಹವನ್ನು ನೋಡಿ ಬಂದರು. ಈ ರೀತಿ ಪ್ರತ್ಯಕ್ಷವಾಗಿ ನೋಡಿ ಮಠದಲ್ಲಿ ಒಂದೊಂದನ್ನೇ ಅಳವಡಿಸತೊಡಗಿ ಮಠವನ್ನು ಸರ್ವಾಂಗೀಣ ಅಭಿವೃದ್ಧಿಗೆ ತರತೊಡಗಿದರು.

ಶೈಕ್ಷಣಿಕ ಸಾಧನೆ: ಶ್ರೀ ನೀಲಕಂಠ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಾಡಿದ ಅತಿ ಮುಖ್ಯ ಕೆಲಸವೆಂದರೆ ಮಠದ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿದ್ದು. ಮಠದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಸಂಚಾರ ಮಾಡಿ ಗ್ರಾಮಾಂತರ ಮಕ್ಕಳ ವಿದ್ಯಾಭ್ಯಾಸಕ್ಕೆ ಮಾಧ್ಯಮಿಕ ಪಾಠಶಾಲೆ ಇಲ್ಲದಿರುವುದನ್ನು ಪ್ರತ್ಯಕ್ಷವಾಗಿ ನೋಡಿ ಬಂದರು. ೧೯೫೨ ನೆಯ ಮೇ ಇಪ್ಪತ್ತೆರಡರಂದು ಮಾಧ್ಯಮಿಕ ಶಾಲೆಯನ್ನು ಮಠದಲ್ಲಿ ಪ್ರಾರಂಭಿಸಿದರು. ಶಾಲಾಮಕ್ಕಳಿಗೆ ಒಂದು ಪ್ರಸಾದನಿಲಯವನ್ನು ತೆರೆದರು. ಮಠದಲ್ಲಿ ಶಾಲೆ ಪ್ರಾರಂಭವಾಗಿದ್ದೇ ತಡ, ಗ್ರಾಮಾಂತರ ಮಕ್ಕಳು ಬೆಟ್ಟಹಳ್ಳಿ ಮಠದಲ್ಲಿ ಆಶ್ರಯ ಪಡೆದರು. ೧೯೬೦ರಲ್ಲಿ ವೇದ, ಸಂಸ್ಕೃತ ಪಾಠಶಾಲೆ ಪ್ರಾರಂಭವಾಯಿತು. ಮಾಧ್ಯಮಿಕಶಾಲೆ ಓದನ್ನು ಮುಗಿಸಿದ ಮೇಲೆ ಮಕ್ಕಳು ದೂರದ ಕುಣಿಗಲ್ಲು ಅಥವಾ ಮಾಗಡಿಗೆ ಹೋಗ ಬೇಕಿತ್ತು. ಇದನ್ನು ಅರಿತು ಶ್ರೀ ಉರಿಲಿಂಗೇಶ್ವರ ಎಂಬ ಹೆಸರಿನಲ್ಲಿ ಪ್ರೌಢಶಾಲೆಯನ್ನು ೧೯೬೪ ರ ಜೂನ್ ಒಂದರಂದು ಪ್ರಾರಂಭಿಸಿದರು. ಜತೆಗೆ ೨೨೫ ಬಡ ವಿದ್ಯಾರ್ಥಿಗಳಿಗೆ ಆಶ್ರಯವನ್ನು ಕಲ್ಪಿಸಿಕೊಟ್ಟರು. ಮಾಗಡಿ ತಾಲ್ಲೂಕು ಕಲ್ಯಾ ಗ್ರಾಮದಲ್ಲಿ ಪ್ರೌಢಶಾಲೆಯನ್ನು ಪ್ರಾರಂಭಿಸಿದರು. ಮಠದ ಆವರಣದಲ್ಲಿ ಪದವಿಪೂರ್ವ ಕಾಲೇಜನ್ನು ಪ್ರಾರಂಭಿಸಿ ನೆರವಾಗಿದ್ದಾರೆ.

ರಾಜಾಶ್ರಯ: ಶ್ರೀರಂಗಪಟ್ಟಣದ ಸುಲ್ತಾನರು, ಪಾಳೆಗಾರ ಮುಮ್ಮಡಿ ಕೆಂಪವೀರಪ್ಪಗೌಡರು ೧೭೧೪ ರಲ್ಲಿ ಮಠಕ್ಕೆಜಮೀನು ನೀಡಿ ಶಾಸನವನ್ನು ಬರೆಸಿಕೊಟ್ಟಿದ್ದಾರೆ. ಮೈಸೂರು ಅರಸರು ಮೈಸೂರು ರಾಜ್ಯದಲ್ಲಿ ಧರ್ಮ ಪ್ರಚಾರ ಮಾಡಲು ಕೆಲವು ಬಿರುದಾವಳಿಗಳನ್ನು ನೀಡಿ ಗೌರವಿಸಿ, ನಂದಿಧ್ವಜ(೧), ಪಲ್ಲಕ್ಕಿ(೧), ಮೇನೆ(೧),ಛತ್ರಿ(೨), ಚಾಮರ(೨), ಕೊಂಬು(೧), ಕಹಳೆ(೨), ನಗಾರಿ(೨), ಕುದುರೆ(೨), ಬಸವ(೨), ಡಮರುಗ(೧), ಬಿಲ್ಲೆಜವಾನರು(೨), ಬಂದೂಕ(೨), ಸಿಬ್ಬಂದಿಜನ(೧೦), ಬಂಡಿ(೨) ಇವುಗಳನ್ನು ನೀಡಿ ಧರ್ಮಪ್ರಚಾರಕ್ಕೆ ನೆರವಾಗಿದ್ದಾರೆ.ನಂತರ ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಮೈಸೂರಿನ ಅರಸರು ಶಿವರಾತ್ರಿಯ ಉತ್ಸವದ ದಾಸೋಹಕ್ಕೆ ಕಾಣಿಕೆಯನ್ನು ಕಳುಹಿಸಿಕೊಟ್ಟಿದ್ದಾರೆ. ಈ ರೀತಿ ಅನೇಕ ದಾನ ದತ್ತಿ ಸಿಕ್ಕಿದ್ದು ಮಠವು ಅಭಿವೃದ್ಧಿಯಾಗಲು ನೆರವಾಗಿದೆ.

ಧಾರ್ಮಿಕ ಕಾರ್ಯಗಳು: ಮಹಾಶಿವರಾತ್ರಿಯಂದು ವಿಶೇಷ ಪೂಜೆ ಮತ್ತು ದನಗಳ ಜಾತ್ರೆಯನ್ನು ಏರ್ಪಡಿಸಲಾಗುತ್ತಿದೆ.ಈ ಸಂದರ್ಭದಲ್ಲಿ ಐದರಿಂದ ಆರುಸಾವಿರ ಜನರಿಗೆ ಅನ್ನದಾಸೋಹದ ವ್ಯವಸ್ಥೆಯಾಗುತ್ತಿದೆ. ಪ್ರತಿ ಅಮಾವಾಸ್ಯೆ, ಹುಣ್ಣಿಮೆಯಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಈ ದಿನಗಳಲ್ಲಿ ೪೦೦ ರಿಂದ ೫೦೦ ಜನರಿಗೆ ದಾಸೋಹವನ್ನು ಏರ್ಪಡಿಸಲಾಗುತ್ತದೆ. ಶ್ರಾವಣ,ಕಾರ್ತೀಕ ಮಾಸಗಳಲ್ಲಿ ಪ್ರತಿನಿತ್ಯವೂ ರುದ್ರಾಭಿಷೇಕ, ಪೂಜೆ ನಡೆಯುತ್ತಿದೆ. ಪ್ರತಿದಿನ ೧೨೫ ಜನರು ಪ್ರಸಾದವನ್ನು ಸ್ವೀಕರಿಸುತ್ತಾರೆ. ಈ ರೀತಿ ನಿತ್ಯವು ಮಠದಲ್ಲಿ ಅನ್ನ ದಾಸೋಹವನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳು, ಶ್ರೀ ಬೆಟ್ಟಹಳ್ಳಿಮಠ, ಬೆಟ್ಟಹಳ್ಳಿ, ಕುಣಿಗಲ್ಲು ತಾ, ತುಮಕೂರು ಜಿಲ್ಲೆ.
ಆಧಾರ: 'ಶ್ರೀ ಉರಿಲಿಂಗ ಶಿವಾಚಾರ್ಯರ ಚರಿತ್ರೆ' ಲೇಖಕರು : ವಿದ್ವಾನ್ ಜಿ.ವಿ.ಶಿವಸ್ವಾಮಿ

ಹುಲಿಯೂರುದುರ್ಗ

ಕುಣಿಗಲ್ಲು ತಾಲ್ಲೂಕಿನ ಹುಲಿಯೂರುದುರ್ಗವು ತಾಲ್ಲೂಕು ಕೇಂದ್ರದ ದಕ್ಷಿಣಕ್ಕೆ ಇಪ್ಪತ್ತೈದು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠ ಅಥವಾ ಸಿದ್ಧಗಂಗಾ ಶಾಖಾಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಹುಲಿಯೂರುದುರ್ಗದಲ್ಲಿ ಚೀಲಾಳ ಸಮಯದ ವಿರಕ್ತ ಮಠವು ಅಸ್ತಿತ್ವಗೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ಹಿಂದೆ ಶ್ರೀಸಿದ್ಧಲಿಂಗೇಶ್ವರರು ತಮ್ಮ ಏಳುನೂರೊಂದು ವಿರಕ್ತರ ಜತೆ ಲೋಕಸಂಚಾರ ಕೈಗೊಂಡು ಹುಲಿಯೂರು ದುರ್ಗಕ್ಕೆ ಬಂದು ಈ ನೆಲದಲ್ಲಿ ಅನುಷ್ಠಾನಗೊಂಡಿದ್ದ ಸಂದರ್ಭದಲ್ಲಿ, ಶಿವಪೂಜೆಗೆ ನೀರು ಸಿಗದಿದ್ದಾಗ ತಮ್ಮ ತಪೋಶಕ್ತಿಯಿಂದ ಒಂದು ಕಲ್ಲನ್ನು ಭೂಮಿಗೆ ಒತ್ತಿದಾಗ ಜಲ ಉದ್ಭವವಾಗಿದೆ. ಈ ಜಲದಲ್ಲಿ ಗುರುಗಳು ಪೂಜೆ ನಡೆಸಿ ಈ ಪವಿತ್ರ ಸ್ಥಳದಲ್ಲಿ ಅನುಷ್ಠಾನಗೊಂಡು, ಇಲ್ಲಿ ಕೆಲವು ದಿನ ಕಾಲ ಕಳೆದು ಭಕ್ತರಿಗೆ ಉಪದೇಶ ನೀಡಿ ಮುಂದೆ ಹೊರಡಲು ಅನುವಾದರು. ಆಗ ಭಕ್ತರು ಗುರುಗಳು ಮುಂದೆ ಹೋಗದೆ ಈ ಗ್ರಾಮದಲ್ಲಿ ನೆಲೆಸಿ ಧಾರ್ಮಿಕ ಮಾರ್ಗದರ್ಶನ

ನೀಡಿ ಮುನ್ನಡೆಸಬೇಕೆಂದು ಮನವಿ ಮಾಡಿಕೊಂಡರು. ಭಕ್ತರ ಒತ್ತಾಯಕ್ಕೆ ತಮ್ಮ ಶಿಷ್ಯರನ್ನು ಅಲ್ಲೇ ನೆಲೆಗೊಳಿಸಿ ಮಠವನ್ನು ಸ್ಥಾಪಿಸಿದ ಶ್ರೀ ಸಿದ್ಧಲಿಂಗೇಶ್ವರರು ಮಠವನ್ನು ಬೆಳೆಸಲು ಆಶೀರ್ವದಿಸಿದರು. ಶ್ರೀ ಸಿದ್ಧಲಿಂಗೇಶ್ವರರ ತೋರುಗದ್ದುಗೆಯು ಈ ಮಠದ ಕೇಂದ್ರಬಿಂದುವಾಗಿ, ಭಕ್ತರ ಆರಾಧ್ಯ ದೈವವಾಗಿ ಪ್ರಭಾವವನ್ನು ಬೀರಿದೆ.

ಪರಂಪರೆ:
೧. ಶ್ರೀ ಮ.ನಿ.ಪ್ರ.ಸಂಗಪ್ಪಸ್ವಾಮಿಗಳು
೨. ಶ್ರೀ ಮ.ನಿ.ಪ್ರ.ತೋಂಟದಾರ್ಯಸ್ವಾಮಿಗಳು
೩. ಶ್ರೀ ಮ.ನಿ.ಪ್ರ.ಶಿವಾನಂದಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯು ಬೆಳೆದು ಮಠದ ಧಾರ್ಮಿಕ ಕಾರ್ಯಗಳನ್ನು ಮುನ್ನೆಡೆಸಿಕೊಂಡು ಬರಲಾಗುತ್ತಿದೆ. ಶ್ರೀತೋಂಟದಾರ್ಯ ಸ್ವಾಮಿಗಳು ತಮ್ಮ ಹಿರಿಯ ವಯಸ್ಸಿನಲ್ಲಿ ಕರಕಮಲ ಸಂಜಾತರಾಗಿ ಶ್ರೀ ಶಿವಾನಂದ ಸ್ವಾಮಿಗಳನ್ನು ನೇಮಕ ಮಾಡಿಕೊಳ್ಳುತ್ತಾರೆ. ಈಗಿನ ಕಿರಿಯ ಗುರುಗಳಿಗೆ ಹದಿನಾಲ್ಕನೆಯ ವಯಸ್ಸಿನಲ್ಲಿ ಪಟ್ಟಾಧಿಕಾರವಾಗಿದ್ದು, ನಂತರ ವಿದ್ಯಾಭ್ಯಾಸವನ್ನು ಮುಂದುವರೆಸಿದ ಕ್ರಿಯಾಶೀಲ ಗುಣಗಳ ಶ್ರೀ ಶಿವಾನಂದ ಸ್ವಾಮಿಗಳು ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಮಠದ ಸರ್ವಾಂಗೀಣ ಅಭಿವೃದ್ಧಿಗೆ ಕಾರ್ಯಯೋಜನೆಗಳನ್ನು ತಯಾರಿಸಿಕೊಂಡು ಮಠದಲ್ಲಿ ಕ್ರಿಯಾತ್ಮಕ ಕಾರ್ಯಗಳನ್ನು ಮಾಡುವ ಮೂಲಕ ಭಕ್ತರನ್ನು ಆಕರ್ಷಿಸಿಕೊಳ್ಳುತ್ತಿದ್ದಾರೆ.

ವಿಳಾಸ:ಶ್ರೀ ಮ.ನಿ.ಪ್ರ. ಶಿವಾನಂದಸ್ವಾಮಿಗಳು ಎಂ.ಎ., ಶ್ರೀ ವಿರಕ್ತಮಠ, ಹುಲಿಯೂರುದುರ್ಗ,ಕುಣಿಗಲ್ ತಾ, ತುಮಕೂರುಜಿಲ್ಲೆ.

ಹೊಸಕೆರೆ

ಕುಣಿಗಲ್ ತಾಲ್ಲೂಕಿನ ಹೊಸಕೆರೆಯು ತಾಲ್ಲೂಕು ಕೇಂದ್ರದ ದಕ್ಷಿಣಕ್ಕೆ ಹತ್ತು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀತ್ರಿಪುರಾಂತಕೇಶ್ವರ ಮಠವು ಅಸ್ತಿತ್ವದಲ್ಲಿದೆ.

ತ್ರಿಪುರಾಂತಕೇಶ್ವರ ಮಠ: ಹೊಸಕೆರೆ ಗ್ರಾಮದಲ್ಲಿ ಶ್ರೀಶೈಲ ಪೀಠದ ಶಾಖಾ ಮಠವಾದ ತ್ರಿಪುರಾಂತಕೇಶ್ವರ ಮಠವು ಸ್ಥಾಪನೆಯಾಗಿ ಈ ನಾಡಿನಲ್ಲಿ ಧಾರ್ಮಿಕ ಜಾಗೃತಿಯನ್ನು ಉಂಟುಮಾಡಿ ಹೆಚ್ಚು ಪ್ರಚಾರಗೊಂಡಿದೆ.

ಮಠಸ್ಥಾಪನೆ: ಶ್ರೀ ತ್ರಿಪುರಾಂತಕೇಶ್ವರ ಮಠದ ಮೂಲ ಗುರುಗಳು ನೀಲಸಂದ್ರದಿಂದ ಇಲ್ಲಿಗೆ ಬಂದು ನೆಲೆಸಿ ಮಠ ಸ್ಥಾಪನೆ ಮಾಡಿದ ಬಗ್ಗೆ ಈ ವಿರಕ್ತ ಮಠದ ಹಿರಿಯರು ಅಭಿಪ್ರಾಯಿಸುತ್ತಾರೆ. ಹೊಸಕೆರೆ ಊರಿನ ಹೊರಭಾಗದ ಹಸಿರು ತಾಣದಲ್ಲಿ ನಿರ್ಮಾಣಗೊಂಡಿರುವ ಈ ಮಠವು ಸೀನಪ್ಪನ ಹಳ್ಳಿಯ ಹತ್ತಿರ ಜಂಗಮ ಮಠವಾಗಿ ಪ್ರಾರಂಭಗೊಂಡು ಶ್ರೀ ತ್ರಿಪುರಾಂತಕೇಶ್ವರ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಹೊಸಕೆರೆಯ ಈ ಪ್ರದೇಶದಲ್ಲಿ ಸ್ಥಾಪನೆಯಾಗಿರಬಹುದೆಂದು ಹೇಳಲಾಗುತ್ತಿದೆ.
ಪರಂಪರೆ: ಶ್ರೀ ತ್ರಿಪುರಾಂತಕೇಶ್ವರ ಸ್ವಾಮಿಗಳ ನಂತರ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳ ಹೆಸರು ಈ ಮಠದ ಪರಂಪರೆಯಲ್ಲಿ ದಾಖಲಾಗಿದೆ ಈ ಮಠದಲ್ಲಿ ಇನ್ನೂ ಎರಡು ಜನ ಗುರುಗಳು ಅಧಿಕಾರ ನಡೆಸಿರುವ ಬಗ್ಗೆ ಇಲ್ಲಿನ ಗದ್ದುಗೆಗಳು ದಾಖಲೆಯಾಗಿ ಸಿಗುತ್ತಿವೆ. ಮಠದ ಆವರಣದಲ್ಲಿ ಶ್ರೀ ತ್ರಿಪುರಾಂತಕೇಶ್ವರ ಶಿವಾಚಾರ್ಯ ಸ್ವಾಮಿಗಳು ಹಾಗೂ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಯೂ ಸೇರಿದಂತೆ ಒಟ್ಟು ನಾಲ್ಕು ಗದ್ದುಗೆಗಳು ನೋಡಸಿಗುತ್ತಿವೆ. ಆದರೆ ಎರಡು ಜನ ಗುರುಗಳ ಹೆಸರುಗಳು ತಿಳಿದುಬರುತ್ತಿಲ್ಲ.

ಖಾಲಿ ಉಳಿದ ಮಠ: ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳ ನಂತರ ಮಠವು ಮಠಾಧೀಶ್ವರರು ಇಲ್ಲದೆ ೧೯೮೫ರ ತನಕ ಖಾಲಿ ಉಳಿದಿತ್ತು. ಈ ಸಂದರ್ಭದಲ್ಲಿ ಮಠದ ಧಾರ್ಮಿಕ ಕೆಲಸಗಳು ಕುಂಠಿತಗೊಂಡಿದ್ದವು. ಮಠದ ಗದ್ದುಗೆಗಳು ಮತ್ತು ವೀರಭದ್ರಸ್ವಾಮಿ ದೇವಸ್ಥಾನದ ಪೂಜಾಕಾರ್ಯಗಳನ್ನು ಮಠದ ವಂಶಸ್ಥರೇ ನೋಡಿಕೊಂಡು ಬರುತ್ತಿದ್ದರು. ಪುರಾತನ ಸಂಪ್ರದಾಯವುಳ್ಳ ಈ ಮಠದ ಆಡಳಿತವನ್ನು ನೋಡಿಕೊಳ್ಳಲು ಗುರುಗಳು ಇಲ್ಲದೆ ಹೋದರೆ ಮಠದ ಅಸ್ತಿತ್ವ ನಶಿಸಿ ಹೋಗಬಹುದೆಂಬ ಹಿಂಜರಿಕೆಯು ಮಠದ ವಂಶಸ್ಥರಲ್ಲಿ ಕಾಡಿ ಗುರುಗಳ ನೇಮಕಕ್ಕೆ ತೀರ್ಮಾನ ಕೈಗೊಂಡರು.

ಪಟ್ಟಾಧಿಕಾರ: ಹೊಸಕೆರೆಯಲ್ಲಿ ಖಾಲಿ ಉಳಿದಿದ್ದ ಮಠಕ್ಕೆ ೧೯೭೫ ರಲ್ಲಿ ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿ, ಶ್ರೀಶೈಲ ಪೀಠದ ಶಾಖಾನುವರ್ತಿ ಮಠದ ಗುರುಗಳಿಂದ ಪಟ್ಟಾಧಿಕಾರದ ಅನುಗ್ರಹ ಕೊಡಿಸಲಾ ಯಿತು. ಕ್ರಿಯಾಶೀಲ ವ್ಯಕ್ತಿತ್ವ, ವೈಚಾರಿಕ ಗುಣಗಳನ್ನು ಮೈಗೂಡಿಸಿಕೊಂಡಿರುವ ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳು ಜೀರ್ಣಗೊಂಡ ಮಠವನ್ನು ಅಭಿವೃದ್ಧಿಪಡಿಸಿ, ಧಾರ್ಮಿಕ ಚಟುವಟಿಕೆಗಳಿಗೆ ಒಂದು ಹೊಸ ಆಯಾಮ ರೂಪಿಸಿ ಹಿಂದಿನಂತೆ ನಡೆಯಲು ವ್ಯವಸ್ಥೆಗೊಳಿಸಿದ್ದಾರೆ. ವೀರಭದ್ರಸ್ವಾಮಿ ದೇವಸ್ಥಾನದ ಅಭಿವೃದ್ಧಿಯೂ ಸೇರಿದಂತೆ ಮಠದ ಆಸ್ತಿಯಾಗಿದ್ದ ಹದಿನೈದು ಎಕರೆ ಜಮೀನನ್ನು ಅಭಿವೃದ್ಧಿಪಡಿಸಿ ಮಠಕ್ಕೆ ಆದಾಯದ ಮೂಲವನ್ನಾಗಿ ಮಾಡಿಕೊಂಡಿದ್ದಾರೆ.

ಶಿಕ್ಷಣ ಸೇವೆ : ಮಠದ ಅಧಿಕಾರ ವಹಿಸಿಕೊಂಡ ನಂತರ ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳು ಧರ್ಮಬೋಧನೆಯಿಂದ ಸಾಮಾಜಿಕ ಸುಧಾರಣೆ ಸಾಲದು, ಗ್ರಾಮಾಂತರ ಪ್ರದೇಶದಲ್ಲಿ ಕಲಿಯುವ ಮಕ್ಕಳಿಗೆ ಅನುಕೂಲವಾಗಲೆಂದು ಹೊಸಕೆರೆ ಮತ್ತು ಇಪ್ಪಾಡಿಯಲ್ಲಿ ಹಿರಿಯ ಪ್ರಾಥಮಿಕ ಶಾಲೆ, ಎರಡು ಸಂಸ್ಕೃತ ಪಾಠಶಾಲೆಗಳನ್ನು ಪ್ರಾರಂಭಿಸಿದ್ದಾರೆ. ಕಲಿಯುವ ಕೆಲವು ಬಡ ಮಕ್ಕಳಿಗೆ ಮಠದಲ್ಲಿ ಆಶ್ರಯವನ್ನು ಕಲ್ಪಿಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳು, ಶ್ರೀ ತ್ರಿಪುರಾಂತಕೇಶ್ವರಮಠ, ಹೊಸಕೆರೆ, ಸೀನಪ್ಪನಹಳ್ಳಿ ಅಂಚೆ, ಕುಣಿಗಲ್ಲು ತಾಲ್ಲೂಕು, ತುಮಕೂರು ಜಿಲ್ಲೆ.

ಹೊಸಹಳ್ಳಿ

ಕುಣಿಗಲ್ಲು ತಾಲ್ಲೂಕಿನ ಹೊಸಹಳ್ಳಿಯ ಸರಹದ್ದಿಗೆ ಬರುವ ಭದ್ರಗಿರಿ ಮಠವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಮೂವತ್ತೈದು ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ವೀರಭದ್ರಸ್ವಾಮಿ ದೇವಸ್ಥಾನ ಸ್ಥಾಪನೆಯಾಗಿರುವುದಲ್ಲದೆ.

ಭದ್ರಗಿರಿಮಠ: ಹೊಸಹಳ್ಳಿ ವ್ಯಾಪ್ತಿಯಲ್ಲಿ ಬರುವ ಭದ್ರಗಿರಿಯಲ್ಲಿ ರಂಭಾಪುರಿ ಪೀಠದ ಶಾಖಾ ಮಠವಾಗಿ ಭದ್ರಗಿರಿ ಮಠವು ಸ್ಥಾಪನೆಯಾಗಿ ನಾಡಿಗೆ ಧಾರ್ಮಿಕ ಬೆಳಕನ್ನು ನೀಡುತ್ತಿದೆ.

ಕ್ಷೇತ್ರನಾಥ: ಭದ್ರಗಿರಿಯ ಶಿಖರದ ಮೇಲೆ ವೀರಭದ್ರ ಮತ್ತು ಭದ್ರಕಾಳಮ್ಮನವರು ನೆಲೆಗೊಂಡಿದ್ದು ವೀರಭದ್ರಸ್ವಾಮಿ ದೇವಸ್ಥಾನದ ಅಭಿವೃದ್ಧಿಗೆ ಈ ಹಿಂದೆ ಅನೇಕ ಪ್ರಯತ್ನಗಳು ನಡೆದು, ಈಗ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳ ಕಾಲ ದಲ್ಲಿ ಜೀರ್ಣೋದ್ಧಾರಗೊಂಡು ಸರ್ವಾಂಗೀಣವಾಗಿ ಅಭಿವೃದ್ಧಿಯನ್ನು ಕಂಡಿದೆ. ಮಠದ ವತಿಯಿಂದ ವಿಶೇಷ ಪೂಜೆಗೆ ವ್ಯವಸ್ಥೆ ಮಾಡಿದ್ದು, ಹೆಚ್ಚು ಭಕ್ತರನ್ನು ಆಕರ್ಷಿಸಿಕೊಳ್ಳುತ್ತಿದ್ದಾರೆ.

ಗುರುಗಳು: ಈ ಮಠದ ಪರಂಪರೆಯಲ್ಲಿ ಬಂದಂತಹ ಗುರುಗಳ ವಿವರ ಲಭ್ಯವಾಗಿಲ್ಲ. ಈಗ ಪಟ್ಟಾಧಿಕಾರಿಗಳಾಗಿರುವ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳು ಈ ಮಠದ ಅಧಿಕಾರವನ್ನು ವಹಿಸಿಕೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಪಟ್ಟಾಧಿಕಾರ ಆದ ಕೆಲವು ದಿನಗಳ ನಂತರ ಅಂಕನಹಳ್ಳಿಯ ಮಠದಲ್ಲಿ ಸ್ವಲ್ಪ ದಿನಗಳು ನೆಲೆಸಿ ಗುರುಗಳ ಸಾನ್ನಿಧ್ಯದಲ್ಲಿ ಅವರ ಮಾರ್ಗದರ್ಶನವನ್ನು ಪಡೆದು, ಇಲ್ಲಿಗೆ ಬಂದು ನೆಲೆಸಿದ್ದಾರೆ. ಮಠವು ಭದ್ರಗಿರಿಯ ತಪ್ಪಲಲ್ಲಿ ಸ್ಥಾಪಿತವಾ ಗಿದ್ದು, ಮಠದ ಆವರಣದಲ್ಲಿ ಬಸವಣ್ಣನ ದೇವಸ್ಥಾನವು ಸ್ಥಾಪನೆಯಾಗಿದೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ವೀರಭದ್ರ ಶಿವಾಚಾರ್ಯಸ್ವಾಮಿಗಳು ಅಧಿಕಾರ ವಹಿಸಿಕೊಂಡ ಮೇಲೆ ಭಕ್ತರ ನೆರವು ಪಡೆದು ಗಿರಿಯ ವೀರಭದ್ರಸ್ವಾಮಿ ದೇವಸ್ಥಾನವನ್ನು ಅಭಿವೃದ್ಧಿಪಡಿಸಿ ಮಠದ ಕಟ್ಟಡವನ್ನು ನವೀಕರಿಸಿದ್ದಾರೆ. ಮಠದ ಹತ್ತು ಎಕರೆ ಜಮೀನನ್ನು ಅಭಿವೃದ್ಧಿಪಡಿಸಿ ಹೆಚ್ಚು ಆದಾಯ ತರುವಂತಹ ಮೂಲವನ್ನಾಗಿ ರೂಪಿಸಿಕೊಂಡಿದ್ದಾರೆ. ಮಠದ ಆವರಣದಲ್ಲಿ ಒಂದು ಗದ್ದುಗೆ ಇದ್ದು, ಇದನ್ನು ನವೀಕರಿಸಿ ಪೂಜೆಗೆ ವ್ಯವಸ್ಥೆಗೊಳಿಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ವೀರಭದ್ರ ಶಿವಾಚಾರ್ಯಸ್ವಾಮಿಗಳು, ಶ್ರೀ ಭದ್ರಗಿರಿಮಠ, ಹೊಸಳ್ಳಿ ಅಂಚೆ, ಕುಣಿಗಲ್ಲು ತಾ, ತುಮಕೂರುಜಿಲ್ಲೆ.

❑

ಗುಬ್ಬಿ ತಾಲ್ಲೂಕು

ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕು ಸಾಂಸ್ಕೃತಿಕ, ಸಾಹಿತ್ಯಿಕ ಹಾಗೂ ಧಾರ್ಮಿಕವಾಗಿ ಶ್ರೀಮಂತಿಕೆ ಪಡೆದಿದೆ. ಈ ತಾಲ್ಲೂಕಿನಲ್ಲಿ ಪುರಾತನ ಕಾಲದಿಂದಲೂ ವೀರಶೈವ ಧರ್ಮ ಪ್ರಬಲವಾಗಿ ಬೆಳೆದಿದೆ. ಹಿಂದೆ ಹೊನ್ನುಡಿಕೆ ಗ್ರಾಮದಲ್ಲಿ ಶ್ರೀ ಉಪ್ಪರಿಗೆಮಠ, ಶ್ರೀ ಕರಡಿಗೆಮಠ, ಶ್ರೀ ಹೊಸಮಠ ಮತ್ತು ಶ್ರೀ ಮುರುಘಾಮಠ ಎಂಬ ಮಠಗಳು ಅಸ್ತಿತ್ವದಲ್ಲಿದ್ದವು. ಗೂಳೂರು ಮತ್ತು ಸುತ್ತಮುತ್ತಲಿನಲ್ಲಿ ಶ್ರೀ ಉಪ್ಪರಿಗೆಮಠ, ಶ್ರೀ ಮಾನಂಗಿಮಠ, ಶ್ರೀ ಕಲ್ಮಠ, ಶ್ರೀನಡುವಲಮಠ, ಶ್ರೀ ಗೂಳೂರುಮಠ, ಶ್ರೀ ಹಿರೇಮಠ ಮತ್ತು ಶ್ರೀ ಬ್ಯಾಲದಕಾಯಿಮಠ ಅಸ್ತಿತ್ವದಲ್ಲಿದ್ದವು. ಈಗ ಈ ಮಠಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡು ಕೇವಲ ಜನರ ಬಾಯಲ್ಲಿ ಉಳಿದಿವೆ. ಪ್ರಸ್ತುತ ತಾಲ್ಲೂಕಿನಲ್ಲಿ ಏಳು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಗುಬ್ಬಿ

ತುಮಕೂರು ಜಿಲ್ಲೆಯ ಗುಬ್ಬಿ ಪಟ್ಟಣವು ತಾಲ್ಲೂಕು ಕೇಂದ್ರಸ್ಥಳ. ಗುಬ್ಬಿಯು ಅಮರಗೊಂಡ ಎಂಬ ಹೆಸರಿನಿಂದ ಗುರುತಿಸಲ್ಪಟ್ಟಿದ್ದು, ಮಹಾನ್ ವಿದ್ವನ್ಮಣಿಗಳನ್ನು ಒಳಗೊಂಡ ಸುಕ್ಷೇತ್ರ.ಮಲ್ಲಣಾರ್ಯರೆಂಬ ಮಹಾಶಿವಯೋಗಿ ವೀರಶೈವಾಮೃತ ಮಹಾಪುರಾಣ ಎಂಬ ವಿದ್ವತ್ಪೂರ್ಣ ಬೃಹತ್ ಗ್ರಂಥವನ್ನು ರಚಿಸಿ ನಾಡಿಗೆ ನೀಡಿದ ಕೀರ್ತಿಗೆ ಒಳಗಾಗಿದ್ದಾರೆ. ಅದೇ ರೀತಿ ಮಲ್ಲಣಾರ್ಯರ ತಂದೆ ಮಲ್ಲಣರು ಮಹಾ ವಿದ್ವಾಂಸರಾಗಿದ್ದರು. ನಂತರ ಮಲ್ಲಣಾರ್ಯರ ಪುತ್ರರಾದ ಶಾಂತೇಶರನ್ನೂ ಕೂಡ ದೊಡ್ಡ ವಿದ್ವಾಂಸರು ಹಾಗೂ ಅನುಭಾವಿಗಳೆಂದು ಗುರುತಿಸಲಾಗಿದೆ. ಇಂತಹ ಮಹಾ ಮಹಿಮಾ ವಿದ್ವಾಂಸರು ಬದುಕಿದ್ದ ಸುಕ್ಷೇತ್ರ ಇದಾಗಿದೆ.

ಒಮ್ಮೆ ಋಷಿಮುನಿಯಿಂದ ಶಾಪಕ್ಕೆ ಒಳಗಾದ ದಂಪತಿಗಳು ಗುಬ್ಬಿಗಳಾಗಿ ಶಾಪ ವಿಮೋಚನೆಗೆ ಅಮರಗೊಂಡ ಕ್ಷೇತ್ರಕ್ಕೆ ಬರುತ್ತವೆ. ಇಲ್ಲಿ ಮಲ್ಲಣಾರ್ಯರು ನಡೆಸಿಕೊಡುತ್ತಿದ್ದ ಬಸವಪುರಾಣವನ್ನು ಕೇಳಲು ಪ್ರತಿದಿನ ಬಂದು ಕುಳಿತ ಗುಬ್ಬಿಗಳು ಶ್ರದ್ಧಾಭಕ್ತಿಯಿಂದ ಪುರಾಣವನ್ನು ಆಲಿಸಿ ಹೋಗುತ್ತಿದ್ದವು. ಇದನ್ನು ಮೊದಲಿನಿಂದಲೂ ಗಮನಿಸುತ್ತಾ ಬಂದಿದ್ದ ಜನರು ಆಶ್ಚರ್ಯ ಚಕಿತರಾಗಿದ್ದರು. ಬಸವ ಪುರಾಣದ ಕೊನೆಯ ದಿನದ ತನಕ ಪುರಾಣವನ್ನು ಕೇಳಿ ಮಹಾ ಮಂಗಳಾರತಿ ನಡೆಯುತ್ತಿದ್ದ ಸಂದರ್ಭದಲ್ಲಿ ಮುಕ್ತಿ ಹೊಂದಿದವು. ಈ ನೆನಪಿಗಾಗಿ ಗುಬ್ಬಿಗಳು ಮುಕ್ತಿಕಂಡ ಜಾಗದಲ್ಲಿ ಸಮಾಧಿ ಮಾಡಿ ಬಸವಣ್ಣನ ವಿಗ್ರಹ ವನ್ನು ಪ್ರತಿಷ್ಠಾಪಿಸಲಾಯಿತು. ಈ ಗುಬ್ಬಿಗಳ ನೆನಪಿಗಾಗಿ ಅಮರಗೊಂಡವನ್ನು'ಗುಬ್ಬಿ'ಎಂದು ನಾಮಕರಣ ಮಾಡಲಾಯಿತು. ಈ ರೀತಿ ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನೆಲೆಯುಳ್ಳ ಈ ಕ್ಷೇತ್ರಕ್ಕೆ ಶ್ರೀ ತೋಂಟದ ಸಿದ್ಧಲಿಂಗೇಶ್ವರರ ಗುರುಗಳಾದ ಶ್ರೀ ಗೋಸಲ ಚನ್ನಬಸವೇಶ್ವರರನ್ನು ಕರೆತಂದ ಮಲ್ಲಣಾರ್ಯರು ಎಪ್ಪತ್ತೆರೆಡು ಬಿರುದಾವಳಿಗಳನ್ನು ನೀಡಿ ಇಲ್ಲೇ ನೆಲೆಸುವಂತೆ ಬೇಡಿಕೊಳ್ಳುತ್ತಾರೆ. ನಂತರ ಶ್ರೀ ಅಡವಿ ಸ್ವಾಮಿಗಳು ಇಲ್ಲಿಗೆ ಬಂದು ನೆಲೆಸಿ, ಬೆಣಚುಕಲ್ಲನ್ನೇ ಗೆಣಸನ್ನಾಗಿ ಮಾಡಿ ಹಸಿದವರಿಗೆ ನೀಡಿ ಮಹಾ ಪವಾಡವನ್ನೇ ನಡೆಸಿ ಈ ಕ್ಷೇತ್ರವನ್ನು ಸುಕ್ಷೇತ್ರವನ್ನಾಗಿ ಮಾಡಿರುತ್ತಾರೆ. ಈ ರೀತಿ ಧಾರ್ಮಿಕವಾಗಿ, ಸಾಹಿತ್ಯಿಕವಾಗಿ ಬೆಳೆದ ಈ ಕ್ಷೇತ್ರದಲ್ಲಿ ಗುಬ್ಬಿ ವೀರಣ್ಣನವರು ಜನ್ಮ ತಳೆದು ಸಾಂಸ್ಕೃತಿಕವಾಗಿಯೂ ಈ ಕ್ಷೇತ್ರವನ್ನು ಶ್ರೀಮಂತಗೊಳಿಸಿ ಜನಮನದಲ್ಲಿ ಉಳಿದು ಬೆಳೆಯುವಂತೆ ಮಾಡಿದ್ದಾರೆ.

ಗುಬ್ಬಿಯಲ್ಲಿ ಹಿಂದೆ ಶ್ರೀ ಹೊಸಮಠ, ಶ್ರೀ ಹಂಪಿಲಿಂಗಯ್ಯನಮಠ, ಶ್ರೀ ದೇಶಮಠ, ಶ್ರೀ ನಾಗಲಿಂಗಸ್ವಾಮಿಮಠ, ಶ್ರೀ ಕೋಟೆಒಡೆಯರಮಠ ಹಾಗೂ ಶ್ರೀ ತೊರೆಮಠ ಸ್ಥಾಪನೆಯಾಗಿದ್ದವು. ಇಂದು ಈ ಮಠಗಳಲ್ಲಿ ಶ್ರೀ ತೊರೆಮಠವನ್ನು ಹೊರತುಪಡಿಸಿ, ಉಳಿದೆಲ್ಲಾ ಮಠಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡು ಜನರಿಂದ ಮರೆಯಾಗಿವೆ.

ತೊರೆಮಠ: ಗುಬ್ಬಿಯ ಚನ್ನಬಸವೇಶ್ವರ ದೇವಸ್ಥಾನದ ಸಮೀಪ ತೊರೆಮಠವು ಸ್ಥಾಪನೆಯಾಗಿದೆ. ತೊರೆಯ ದಡದಲ್ಲಿ ಸ್ಥಾಪನೆಗೊಂಡ ಕಾರಣ ಈ ಮಠಕ್ಕೆ 'ತೊರೆಮಠ'ಎಂದು ಹೆಸರು ಬಂದಿದೆ. ಈ ಮಠದ ಸ್ಥಾಪಕರಾದ ಶ್ರೀ ಅಡವಿಸ್ವಾಮಿಗಳು ಉತ್ತರದ ಅಂಕಲಗಿಯಿಂದ ಹೊರಟು ಹತ್ತರಗಿ, ಮಂಟೂರು, ಬೆಳ್ಳಿಗಟ್ಟೆ, ಬೊಮ್ಮನಕಟ್ಟೆ ಮುಂತಾದ ಕ್ಷೇತ್ರಗಳಲ್ಲಿ

ಅನುಷ್ಠಾನಗೊಂಡು ಚಿಕ್ಕಮಗಳೂರು ಜಿಲ್ಲೆಯ ಗಡಿಗಿರಿಯಾಪುರದಲ್ಲಿ ನೆಲೆಸಿ ಪವಾಡಗಳನ್ನು ಮಾಡಿ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕೆಂಕೆರೆಯ ಮಾರ್ಗವಾಗಿ ಗುಬ್ಬಿಗೆ ಆಗಮಿಸುತ್ತಾರೆ.

ಮಠಸ್ಥಾಪನೆ: ಹಠಯೋಗಿ,ಮಹಾತೇಜೋಮೂರ್ತಿ ಶ್ರೀ ಅಡವಿಸ್ವಾಮಿಗಳು ಗುಬ್ಬಿಗೆ ಆಗಮಿಸುವ ವಿಚಾರ ತಿಳಿದು ಗ್ರಾಮಸ್ಥರು ಅದ್ದೂರಿಯಿಂದ ಸ್ವಾಗತಮಾಡಿಕೊಳ್ಳುತ್ತಾರೆ. ಊರಿಗೆ ಬಂದ ಮೊದಲ ದಿನವೇ ಶ್ರೀ ಅಡವಿ ಸ್ವಾಮಿಗಳನ್ನು ಪಲ್ಲಕಿಯ ಮೇಲೆ ಕೂರಿಸಿ ಪಟ್ಟಣದ ಬೀದಿಗಳಲ್ಲಿ ಉತ್ಸವ ಮಾಡುತ್ತಾರೆ. ಉತ್ಸವ ಮುಗಿದ ನಂತರ ಆಶೀರ್ವದಿಸಿ ಶ್ರೀಗೋಸಲ ಚನ್ನಬಸವೇಶ್ವರರ ದೇವಸ್ಥಾನದಲ್ಲಿ ವಾಸ್ತವ್ಯ ಪಡೆಯುತ್ತಾರೆ.ಪ್ರತಿನಿತ್ಯ ಪ್ರಾತಃಕಾಲದಲ್ಲಿ ಎದ್ದು ದೇವಸ್ಥಾನದ ಪಕ್ಕದಲ್ಲಿದ್ದ ತೊರೆಯಲ್ಲಿ ಮಿಂದು ತೊರೆಯ ದಡದ ಪ್ರಶಾಂತ ಸ್ಥಳದಲ್ಲಿ ಅನುಷ್ಠಾನಕ್ಕೆ ಕುಳಿತುಕೊಳ್ಳುತ್ತಿದ್ದರು. ಅನುಷ್ಠಾನ ದಿಂದ ಎಚ್ಚೆತ್ತ ಮೇಲೆ ಭಕ್ತರು ತಂದಿಡುತ್ತಿದ್ದ ಹಾಲು ಮತ್ತು ಹಣ್ಣನ್ನು ಸ್ವೀಕರಿಸುತ್ತಿದ್ದರು. ಮುಂದೆ ಈ ಸ್ಥಳವೇ ಶ್ರೀಅಡವಿ ಸ್ವಾಮಿಗಳ ಖಾಯಂ ಪೂಜಾಸ್ಥಳವಾಗಿ ತೊರೆಮಠದ ಸ್ಥಾಪನೆಗೆ ನಾಂದಿಯಾಯಿತು. ಇದೇ ವೇಳೆಗೆ ಶ್ರೀ ಅಡವಿ ಸ್ವಾಮಿಗಳ ಜತೆಗೆ ಶ್ರೀ ಉದ್ದಾನ ಶಿವಯೋಗಿಗಳೂ ಬಂದು ಸೇರುತ್ತಾರೆ.

ಸಿದ್ಧಗಂಗಾ ಕ್ಷೇತ್ರಕ್ಕೆ: ಶ್ರೀ ಅಡವಿಸ್ವಾಮಿಗಳು ಗುಬ್ಬಿಗೆ ಬಂದು ವರ್ಷಗಳು ಕಳೆದ ಮೇಲೆ ಜನರ ಒತ್ತಡ ಇಲ್ಲದ ಕಡೆ ಅನು ಷ್ಠಾನಕ್ಕೆ ಕುಳಿತುಕೊಳ್ಳಬೇಕೆಂಬ ಮಹಾದಾಸೆಯಿಂದ ಶ್ರೀ ಉದ್ದಾನ ಶಿವಯೋಗಿಗಳು ಹಾಗೂ ಶ್ರೀ ಸಿದ್ಧವೀರ ಸ್ವಾಮಿಗಳ ಜತೆ ಸಿದ್ಧಗಂಗಾ ಕ್ಷೇತ್ರಕ್ಕೆ ಬರುತ್ತಾರೆ. ಸಿದ್ಧಗಂಗಾ ಕ್ಷೇತ್ರವನ್ನು ಚಿಕ್ಕವಯಸ್ಸಿನಿಂದಲೇ ಬಲ್ಲವರಾಗಿದ್ದ ಶ್ರೀ ಉದ್ದಾನ ಶಿವಯೋಗಿಗಳು ಶ್ರೀ ಅಡವಿಸ್ವಾಮಿಗಳ ತಪಸ್ಸಿಗೆ ಬೆಟ್ಟದ ಗವಿಯಲ್ಲಿ ವ್ಯವಸ್ಥೆ ಮಾಡುತ್ತಾರೆ. ಶ್ರೀ ಅಡವಿಸ್ವಾಮಿಗಳು ಇಲ್ಲಿ ದೀರ್ಘ ತಪಸ್ಸನ್ನು ಆಚರಿಸಿ ಈ ತಪೋಭೂಮಿಯನ್ನು ಧರ್ಮ, ದಾಸೋಹ, ವಿದ್ಯಾಕೇಂದ್ರ ಸ್ಥಳವಾಗಿ ಬೆಳೆಸಬೇಕೆಂದು ಅಭಿಲಾಷೆ ಪಟ್ಟು 'ಇಂದು ಹಾಕಿದ ಬೆಂಕಿ ಮುಂದೆ ಎಂದೂ ಆರದಿರಲಿ, ಇಂದು ಪ್ರಾರಂಭಗೊಂಡ ಅನ್ನದಾಸೋಹ ಎಂದೆಂದಿಗೂ ನಿಲ್ಲದಿರಲಿ'ಎಂದು ಹಾರೈಸಿ ಬಂದರು.ಅಂದು ಸಿದ್ಧಗಂಗಾ ಕ್ಷೇತ್ರದಲ್ಲಿ ಶ್ರೀ ಅಡವಿಸ್ವಾಮಿಗಳು ಹತ್ತಿಸಿದ ಒಲೆಯ ಬೆಂಕಿ ಇಂದಿಗೂ ಆರದೆ ಅನ್ನದಾಸೋಹವು ನಿರಂತರವಾಗಿ ನಡೆಯುತ್ತಾ ಬಂದಿದ್ದು ನಾಡಿಗೆ ಚೇತನ ನೀಡುವ ಜ್ಯೋತಿಯಾಗಿ ಬೆಳಗಿದೆ. ಗುಬ್ಬಿಯ ಶ್ರೀ ಚನ್ನಬಸವೇಶ್ವರಸ್ವಾಮಿ ಜಾತ್ರೆ ಮಹೋತ್ಸವ ನಡೆಯುವ ಸಂದರ್ಭದಲ್ಲಿ ಗುಬ್ಬಿಯ ಭಕ್ತರ ಆಹ್ವಾನದ ಮೇರೆಗೆ ಗುಬ್ಬಿಗೆ ಆಗಮಿಸುತ್ತಾರೆ.'ನಭ ತೋ ನ ಭವಿಷ್ಯತಿ ' ಎಂಬಂತೆ ಜಾತ್ರೆ ಮತ್ತು ದಾಸೋಹಕ್ರಿಯೆಯನ್ನು ನಡೆಸಿದರು. ದಾಸೋಹಕ್ರಿಯೆ ನಡೆಯುತ್ತಿದ್ದಾಗ ಮಳೆ ಧೋ ಎಂದು ಸುರಿಯತೊಡಗಿತು. ಆಗ ಶ್ರೀ ಅಡವಿ ಸ್ವಾಮಿಗಳು ಪವಾಡವನ್ನು ಪ್ರದರ್ಶಿಸಿ ಊಟ ನಡೆಯುತ್ತಿದ್ದ ಸ್ಥಳದಲ್ಲಿ ಮಳೆ ಬರದಂತೆ ತಡೆದರು. ಭಕ್ತರು ಗುರುಗಳ ಪವಾಡವನ್ನು ಕಣ್ಣಾರೆ ಕಂಡು ಆನಂದಿಸಿದರು.

ಚನ್ನಶೆಟ್ಟಿ ಹಳ್ಳಿಯ ಕಲ್ಮನೆ ರುದ್ರಪ್ಪನ ಮನೆಯಲ್ಲಿ ಪವಾಡ ಮಾಡಿದ ಶ್ರೀ ಅಡವಿ ಸ್ವಾಮಿಗಳು ಗುಬ್ಬಿಯ ಭಕ್ತರು ಶ್ರೀ ಗೋಸಲ ಚನ್ನಬಸವೇಶ್ವರ ದೇವರ ಉತ್ಸವಕ್ಕೆ ಬೆಳ್ಳಿ ಪಲ್ಲಕ್ಕಿ ಮಾಡಿಸಿಕೊಡದಿದ್ದಾಗ ತಾವೇ ಬೆಳ್ಳಿ ಪಲ್ಲಕ್ಕಿ ಮಾಡಿಸಿ, ಹೊಸ ಬೆಳ್ಳಿ ಪಲ್ಲಕ್ಕಿಯಲ್ಲಿ ಸ್ವಾಮಿಗಳ ಉತ್ಸವ ನಡೆಸಿ ಜನಮನದಲ್ಲಿ ಉಳಿದರು. ಕುಣಿಗಲ್‌ನಲ್ಲಿ ಪವಾಡ ಮಾಡಿ ಭಕ್ತರನ್ನು ರಕ್ಷಿಸಿ ಚಿಕ್ಕತೊಟ್ಟಿಲು ಕೆರೆಯ ಬೇಟೆಗಾರರನ್ನು ಪರಿವರ್ತಿಸಿ ಅಹಿಂಸಾಮಾರ್ಗವನ್ನು ಕಲಿಸಿಕೊಟ್ಟರು. ಈ ರೀತಿ ಅನೇಕ ಪವಾಡ ಗಳಿಂದ ಜನಮನ ಗೆದ್ದ ಶ್ರೀ ಅಡವಿ ಸ್ವಾಮಿಗಳು ಚನ್ನಬಸವೇಶ್ವರಸ್ವಾಮಿ ದೇವಸ್ಥಾನದ ಪಕ್ಕ ಪಾಪನಾಶಿನಿ ಕೊಳವನ್ನು ಊರಿನ ಭಕ್ತರ ನೆರವು ಪಡೆದು ನಿರ್ಮಿಸಿದರು.

ಶ್ರೀ ಅಡವಿ ಸ್ವಾಮಿಗಳು ಗುಬ್ಬಿಯಲ್ಲಿಯೇ ನಿರ್ವಿಕಲ್ಪ ಸಮಾಧಿಯಾಗಬೇಕೆಂದು ತಮ್ಮ ಜೀವಿತಾವಧಿಯಲ್ಲೇ ಸಮಾಧಿಯನ್ನು ಮಾಡಿಕೊಂಡಿದ್ದರು. ತಮ್ಮ ಕೊನೆಯ ದಿನಗಳಲ್ಲಿ ಭಕ್ತರೊಬ್ಬರ ಅಪೇಕ್ಷೆಯ ಮೇರೆಗೆ ಗುಬ್ಬಿಯಿಂದ ದೂರದ ಗ್ರಾಮಕ್ಕೆ ಪೂಜೆಗೆಂದು ಹೋಗಿ ಹಿಂದಿರುಗಿ ಬರುವ ವೇಳೆಗೆ ಅವರ ಜೀವಿತಾವಧಿ ಮುಗಿದಿತ್ತು. ಆಗ ಗುರುಗಳು ತಮ್ಮ ಗಾಡಿ ನಡೆಸುತ್ತಿರುವವನಿಗೆ'ನಮ್ಮ ಜೀವಿತದ ಅವಧಿ ಮುಗಿದಿದೆ, ನಾವು ಧ್ಯಾನಾಸಕ್ತರಾಗಿ ಗಾಡಿಯಲ್ಲಿ ಕುಳಿತಿರುತ್ತೇವೆ. ಗುಬ್ಬಿ ಬಂದಾಗ ಎಚ್ಚರಿಸು. ನಾವು ಗುಬ್ಬಿಯಲ್ಲಿ ನಿರ್ವಿಕಲ್ಪ ಸಮಾಧಿಯಾಗುತ್ತೇವೆ. ನೀನು ಎಲ್ಲಿಯೂ ಬೇರೆಯ ಜಾಗದಲ್ಲಿ

ಎಚ್ಚರಿಸಬೇಡ! ನಾವು ಕಣ್ಣು ತೆರೆದರೆ ಅದೇ ಜಾಗದಲ್ಲಿ ನಿರ್ವಿಕಲ್ಪ ಸಮಾಧಿಯನ್ನು ಹೊಂದಬೇಕಾಗುತ್ತದೆ'ಎಂದು ಹೇಳಿದ್ದರು. ಆದರೆ ಗಾಡಿಯನ್ನು ಹೊಡೆಯುತ್ತಿದ್ದ ಸೇವಕ ಚಿಕ್ಕತೊಟ್ಟಿಲಕೆರೆಯವನಾಗಿದ್ದರಿಂದ ಶ್ರೀ ಅಡವಿ ಸ್ವಾಮಿಗಳು ನಮ್ಮ ಊರಲ್ಲೇ ನೆಲೆನಿಂತರೆ ನಮ್ಮ ಊರಿಗೆ ಹೆಸರು ಬರುತ್ತದೆ ಎಂಬ ಅಂಧಶ್ರದ್ಧೆಯಿಂದ ಚಿಕ್ಕತೊಟ್ಟಿಲಕೆರೆಯಲ್ಲಿ ಶ್ರೀ ಅಡವಿಸ್ವಾಮಿಗಳೇ ಪುನರ್ ಸ್ಥಾಪಿಸಿದ್ದ ಓಂಕಾರೇಶ್ವರ ಮಠದ ಸಮೀಪ ಬಂದು, ಮಠದ ಹತ್ತಿರಕ್ಕೆ ಬಂದಿದ್ದೇವೆ, ಎಂದು ಗುರುಗಳನ್ನು ಎಚ್ಚರಿಸಿದನು. ಗುರುಗಳು ಕಣ್ಣುಬಿಟ್ಟು ನೋಡಿ, ಸುಳ್ಳು ಹೇಳಿದ ನಿನ್ನ ವಂಶ ನಿರ್ವಂಶವಾಗಲಿ ಎಂದು ಶಾಪಕೊಟ್ಟು ತಾವು ಅನುಷ್ಠಾನ ಕುಳಿತುಕೊಳ್ಳುತ್ತಿದ್ದ ಗವಿಯ ಒಳಗೆ ಹೋಗಿ ನಿರ್ವಿಕಲ್ಪ ಸಮಾಧಿಯಾದರು. ಓಂಕಾರೇಶ್ವರ ಮಠದಲ್ಲಿದ್ದ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಗಳು ಗುಬ್ಬಿಯಲ್ಲಿದ್ದ ಶ್ರೀ ಉದ್ಧಾನ ಸ್ವಾಮಿಗಳಿಗೂ, ಸಿದ್ಧಗಂಗೆಯಲ್ಲಿದ್ದ ಶ್ರೀ ಸಿದ್ಧವೀರ ಸ್ವಾಮಿಗಳಿಗೂ ಕರೆ ಕಳಿಸಿ ನಾಡಿನ ಎಲ್ಲಾ ಭಕ್ತರಿಗೂ, ಹರಗುರು ಚರಮೂರ್ತಿಗಳಿಗೂ ವಿಷಯವನ್ನು ತಿಳಿಸಿ, ನಿರ್ವಿಕಲ್ಪ ಸಮಾಧಿಯಾದ ಸ್ಥಳದಲ್ಲಿ ಅಂತಿಮ ವಿಧಿ ವಿಧಾನಗಳನ್ನು ಮುಗಿಸಿದರು.

ಪರಂಪರೆ:

೧. ಶ್ರೀ ಮ.ನಿ.ಪ್ರ ಶಿವಯೋಗಿ ಅಡವಿಸ್ವಾಮಿಗಳು
೨. ಶ್ರೀ ಮ.ನಿ.ಪ್ರ ಸಿದ್ಧವೀರಸ್ವಾಮಿಗಳು (ಚಿಕ್ಕ ಅಡವಿ ಸ್ವಾಮಿಗಳು)
೩. ಶ್ರೀ ಮ.ನಿ.ಪ್ರ ನೀಲಕಂಠಸ್ವಾಮಿಗಳು
೪. ಶ್ರೀ ಮ.ನಿ.ಪ್ರ ರಾಜಶೇಖರಸ್ವಾಮಿಗಳು

ಈ ರೀತಿ ತೊರೆ ಮಠದ ಗುರುಪರಂಪರೆಯು ಶ್ರೀ ಅಡವಿ ಸ್ವಾಮಿಗಳಿಂದ ಶ್ರೀ ಚಿಕ್ಕಅಡವಿ ಸ್ವಾಮಿಗಳು, ಶ್ರೀ ನೀಲಕಂಠ ಸ್ವಾಮಿಗಳು, ಶ್ರೀ ರಾಜಶೇಖರ ಸ್ವಾಮಿಗಳವರಗೆ ಮಠದ ಬೆಳಕು ನಂದದೆ ನಾಡಿನ ಜನಮನಕ್ಕೆ ದಾರಿದೀಪವಾಗಿದೆ.

ಶ್ರೀ ಚಿಕ್ಕ ಅಡವಿ ಸ್ವಾಮಿಗಳು: ಸಿದ್ಧಗಂಗೆಯಲ್ಲಿ ನೆಲೆ ನಿಂತಿದ್ದ ಶ್ರೀ ಸಿದ್ಧವೀರ ಸ್ವಾಮಿಗಳು, ಶ್ರೀ ಅಡವಿ ಸ್ವಾಮಿಗಳು ನಿರ್ವಿಕಲ್ಪ ಸಮಾಧಿಯಾದ ಮೇಲೆ ಗುಬ್ಬಿಗೆ ಬಂದು ಪಟ್ಟಾಧಿಕಾರ ಸ್ವೀಕರಿಸುತ್ತಾರೆ. ಶ್ರೀ ಅಡವಿ ಸ್ವಾಮಿಗಳ ಒಡನಾಟದಲ್ಲಿ ಬೆಳೆದು ಅವರಂತೆ ಧಾರ್ಮಿಕ ನಿಷ್ಠರಾಗಿದ್ದ ಕಾರಣ ಸಿದ್ಧವೀರಸ್ವಾಮಿಗಳನ್ನು ಶ್ರೀ ಚಿಕ್ಕಅಡವಿ ಸ್ವಾಮಿಗಳೆಂದು ಕರೆಯುತ್ತಿದ್ದರು. ಹಿರಿಯ ಗುರುಗಳ ಕಾಲದಲ್ಲಿ ನಡೆಯುತ್ತಿದ್ದ ದಾಸೋಹ ಕ್ರಿಯೆಯನ್ನು ಮುನ್ನಡೆಸಿ, ಮಠವನ್ನು ಅಭಿವೃದ್ಧಿಗೆ ತಂದರು.

ಸಮರ್ಥ ಉತ್ತರಾಧಿಕಾರಿ: ವಯೋವೃದ್ಧರಾಗಿದ್ದ ಶ್ರೀ ಚಿಕ್ಕಅಡವಿ ಸ್ವಾಮಿಗಳು ಉತ್ತರಾಧಿಕಾರಿಗಳನ್ನು ಆಯ್ಕೆಮಾಡಿಕೊಳ್ಳುವ ಸಂದರ್ಭದಲ್ಲಿ ಧಾರವಾಡ ಮುರುಘಾ ಮಠದ ಶ್ರೀ ಮೃತ್ಯುಂಜಯ ಸ್ವಾಮಿಗಳ ಜತೆಗೆ ಶ್ರೀ ನೀಲಕಂಠ ಸ್ವಾಮಿಗಳು ಗುಬ್ಬಿಗೆ ಆಗಮಿಸುತ್ತಾರೆ. ಆಗ ಗುಬ್ಬಿ ವೀರಣ್ಣನವರು ಮತ್ತು ಶ್ರೀ ಚಿಕ್ಕಅಡವಿ ಸ್ವಾಮಿಗಳು ಸಮರ್ಥ ಉತ್ತರಾಧಿಕಾರಿಬೇಕೆಂದು ತಾವೇ ಈ ಜವಾಬ್ದಾರಿ ತೆಗೆದುಕೊಂಡು ನೇಮಕ ಮಾಡಿಕೊಡಬೇಕೆಂದು ಶ್ರೀ ಮೃತ್ಯುಂಜಯ ಸ್ವಾಮಿಗಳಿಗೆ ಬಿನ್ನವಿಸಿಕೊಳ್ಳುತ್ತಾರೆ. ಇವರ ಅಪೇಕ್ಷೆಯ ಮೇರೆಗೆ ಶ್ರೀ ಮೃತ್ಯುಂಜಯ ಸ್ವಾಮಿಗಳು ಗುಬ್ಬಿಮಠಕ್ಕೆ ಶ್ರೀ ನೀಲಕಂಠ ಸ್ವಾಮಿಗಳೇ ಸಮರ್ಥ ಉತ್ತರಾಧಿಕಾರಿ ಎಂದು ಅರಿತು ಅವರ ಅನುಮತಿ ಪಡೆದು ನಂತರ ಅವರಿಗೆ ಒಪ್ಪಿಗೆ ಕೊಟ್ಟರು. ಆಕಸ್ಮಿಕವಾಗಿ ಗುಬ್ಬಿಗೆ ಆಗಮಿಸಿದ ಶ್ರೀ ನೀಲಕಂಠ ಸ್ವಾಮಿಗಳು ಈ ಮಠದ ಅಧಿಕಾರಿಗಳಾಗುವ ಯೋಗ ದೊರೆತಿದ್ದು ಗುಬ್ಬಿಯ ತೊರೆ ಮಠದ ಯೋಗಾಯೋಗವೇ ಸರಿ.

ಬೆಳಗಾಂ ಜಿಲ್ಲೆಯ ಸಿರಸಂಗಿಯ ಶ್ರೀ ದುಂಡಯ್ಯ ಹಿರೇಮಠ ಹಾಗೂ ಶ್ರೀಮತಿ ನಾಗಮ್ಮನವರ ಪುತ್ರರಾಗಿ ೧೯೦೩ರ ಡಿಸೆಂಬರ್ ಇಪ್ಪತ್ತಮೂರರಂದು ಜನಿಸಿದ ಮಡಿವಾಳಯ್ಯನು ಎಂಟು ವರ್ಷದ ಬಾಲಕನಾಗಿದ್ದಾಗಲೇ ಸಿರಸಂಗಿಯ ಬಿಶಾಗ್ನಿ ಮಠದ ಉತ್ತರಾಧಿಕಾರಿಗಳಾಗಿ ಆಯ್ಕೆಯಾಗಿ, ಪ್ರಾಥಮಿಕ ವಿದ್ಯಾಭ್ಯಾಸ ಮುಗಿದ ಮೇಲೆ ಸಿರಸಂಗಿಯ ಲಿಂಗರಾಜು ದೇಸಾಯಿಯವರು ಬಿಶಾಗ್ನಿ ಮಠದ ಉತ್ತರಾಧಿಕಾರಿಗೆ ಹೆಚ್ಚು ಶಿಕ್ಷಣ ಕೊಡಿಸಲು ಹಾನಗಲ್ ಶ್ರೀ ಕುಮಾರ ಸ್ವಾಮಿಗಳಿಗೆ ಒಪ್ಪಿಸುತ್ತಾರೆ. ಹಾನಗಲ್ ಶ್ರೀ ಕುಮಾರ ಸ್ವಾಮಿಗಳ ಶಿಷ್ಯರಾಗಿ ಶಿವಯೋಗ ಮಂದಿರದಲ್ಲಿ ಬೆಳೆದ ಶ್ರೀ ನೀಲಕಂಠ ಸ್ವಾಮಿಗಳು ಇಂದು ವೀರಶೈವ ಸಮಾಜ ಅಭಿಮಾನ ಪಡುವಂಥ ಮಹಾ ಚೇತನವಾಗಿ ಬೆಳೆದರು. ಶಿವಯೋಗ ಮಂದಿರದಲ್ಲಿ ಕಲಿಯುತ್ತಿರುವಾಗಲೇ ಗುಳೇದ ಗುಡ್ಡದ ಮುರುಘಾ ಮಠಕ್ಕೆ ಉತ್ತರಾಧಿಕಾರಿಯ ಆವಶ್ಯಕತೆಯಿತ್ತು. ಬಿಶಾಗ್ನಿ ಮಠದ ಉತ್ತರಾಧಿಕಾರಿಗಳಾಗಿ

ಆಯ್ಕೆ ಗೊಂಡಿದ್ದ ಶ್ರೀ ನೀಲಕಂಠ ಸ್ವಾಮಿಗಳು ೧೯೩೦ರಲ್ಲಿ ಗುಳೇದ ಗುಡ್ಡದ ಮುರುಘಾ ಮಠದ ಪಟ್ಟಾಧಿಕಾರವನ್ನು ಪಡೆದು, ಪುನಃ ಗುಬ್ಬಿಯಲ್ಲಿ ೧೯೫೮ ರಲ್ಲಿ ಪಟ್ಟಾಧಿಕಾರವನ್ನೂ ಪಡೆದುಕೊಳ್ಳುತ್ತಾರೆ.

ಅರವತ್ತಮೂರು ಲಿಂಗ ಸ್ಥಾಪನೆ: ಧರ್ಮದ ನೆರಳಲ್ಲಿ ಮನುಷ್ಯ ಬದುಕಿನ ಸಾರ್ಥಕತೆ ಕಂಡುಕೊಳ್ಳಬೇಕು ಎಂಬ ಮಹದಾಸೆಯನ್ನು ಇಟ್ಟುಕೊಂಡಿದ್ದ ಶ್ರೀ ನೀಲಕಂಠ ಸ್ವಾಮಿಗಳು, ಮಠದ ಆಡಳಿತವನ್ನು ವಹಿಸಿಕೊಂಡ ಕೆಲವೇ ದಿನಗಳಲ್ಲಿ ಗುಬ್ಬಿಯ ಸುತ್ತಮುತ್ತಲ ಗ್ರಾಮಗಳ ಭಕ್ತರ ಮನಗೆದ್ದು ಅನೇಕ ಅಸಹಾಯಕರಿಗೆ ಮನಃಸ್ಥೈರ್ಯ ನೀಡಿ ಅಭಿವೃದ್ಧಿಯಾಗಲು ಕಾರಣೀಭೂತರಾದರು. ಹಿರಿಯ ಶ್ರೀ ಅಡವಿ ಸ್ವಾಮಿಗಳು ಚನ್ನಬಸವೇಶ್ವರ ದೇವಾಲಯದ ಪಕ್ಕದಲ್ಲಿ ನಿರ್ಮಿಸಿದ್ದ ಪಾಪನಾಶಿನಿ ಕೊಳದಲ್ಲಿ ಪಂಚ ಸೂತ್ರಕ್ಕೆ ಸರಿಯಾಗಿ ಅರವತ್ತಮೂರು ಲಿಂಗಗಳನ್ನು ಅರವತ್ಮೂರು ಜನ ಗುರುಗಳ ಕೈಯ್ಯಲ್ಲಿ ಪ್ರತಿಷ್ಠಾಪಿಸಿದರು.

ನಗೆಯ ಮಾರಿತಂದೆ: ನಕ್ಕು ನಗಿಸುವ ಕಲೆಯಿಂದ ನಗೆಯ ಮಾರಿತಂದೆಯಾಗಿ ಸದಾ ಹಸನ್ಮುಖಿಗಳಾಗಿರುತ್ತಿದ್ದು, ನೋವು ನಲಿವುಗಳನ್ನು ಸಮಾನವಾಗಿ ನೋಡಿದ ಗುರುಗಳು 'ಚಿಂತೆಯೇ ಮುಪ್ಪು,ನಗುವೇ ಯೌವ್ವನ'ಎಂದು ನಗುವನ್ನು ಆಯ್ಕೆಮಾಡಿಕೊಂಡು ತಮ್ಮ ಬಾಳಿನ ಬೆಳಕಾಗಿಸಿಕೊಂಡಿದ್ದರು. ಭಕ್ತರಿಗೆ ತಾಯ್ತನದ ಪ್ರೀತಿಯನ್ನು ತೋರಿಸಿ ಭಕ್ತರ ನೋವು ನಲಿವುಗಳಲ್ಲಿ ಸ್ಪಂದಿಸಿ ಭಕ್ತರನ್ನು ಉದ್ಧರಿಸಿದ್ದರು. ಗುಬ್ಬಿ ಮಠಕ್ಕೆ ಶ್ರೀ ರಾಜಶೇಖರ ಸ್ವಾಮಿಗಳನ್ನು ಉತ್ತರಾಧಿಕಾರಿಗಳಾಗಿ ನೇಮಿಸಿ, ಗುಳೇದಗುಡ್ಡದಲ್ಲಿ ತಮ್ಮ ವಿಶ್ರಾಂತ ಜೀವನವನ್ನು ನಡೆಸಿ ಶತಾಯುಷಿಗಳಾಗಿ ಗುಳೇದ ಗುಡ್ಡದ ಮಠದಿಂದ ಗುಬ್ಬಿಗೆ ಬಂದು ನೆಲೆಸಿದರು. ಗುರುಗಳ ಶತಮಾನೋತ್ಸವವನ್ನು ಶ್ರೀ ರಾಜಶೇಖರ ಸ್ವಾಮಿಗಳು ಮತ್ತು ಭಕ್ತರು ಸೇರಿ ೧೯೯೯ ರ ನವೆಂಬರ್ ಹದಿನೆಂಟರಂದು ಅದ್ದೂರಿಯಾಗಿ ಆಚರಿಸಿದರು. ಶ್ರೀ ನೀಲಕಂಠ ಸ್ವಾಮಿಗಳು ಶತಾಯುಷಿಗಳಾಗಿ ೧೯೯೯ರ ಡಿಸೆಂಬರ್‌ನಲ್ಲಿ ಲಿಂಗೈಕ್ಯರಾದರು. ಹಿರಿಯ ಶ್ರೀ ಅಡವಿ ಸ್ವಾಮಿಗಳು ತಮಗಾಗಿ ಮಾಡಿಕೊಂಡಿದ್ದ ಸಮಾಧಿಯಲ್ಲಿ ಶ್ರೀ ನೀಲಕಂಠ ಸ್ವಾಮಿಗಳನ್ನು ಸಮಾಧಿ ಮಾಡಲಾಯಿತು. ಈ ಯೋಗಾಯೋಗದ ಸಂಬಂಧದ ಬಗ್ಗೆ ಭಕ್ತರು ಆಶ್ಚರ್ಯಗೊಂಡರು.

ತೋರೆಮಠದ ನಾಲ್ಕನೆಯ ಪಟ್ಟಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿರುವ ಶ್ರೀ ರಾಜಶೇಖರ ಸ್ವಾಮಿಗಳು ಧಾರವಾಡದ ಶ್ರೀ ಚನ್ನಬಸವಯ್ಯ ಸ್ವಾಮಿಗಳು ಮತ್ತು ಶ್ರೀಮತಿ ನೀಲಮ್ಮನವರ ಪುತ್ರರಾಗಿ ೧೯೪೯ ನೆಯ ಸೆಪ್ಟೆಂಬರ್ ಹತ್ತೊಂಬತ್ತರಂದು ಜನಿಸಿ, ಪ್ರೌಢಶಿಕ್ಷಣದ ವರೆಗೆ ಧಾರವಾಡದಲ್ಲಿ ವಿದ್ಯಾಭ್ಯಾಸ ಮಾಡಿ ಆಧ್ಯಾತ್ಮದ ಒಲವಿನಿಂದ ಧಾರವಾಡದ ಸುತ್ತಮುತ್ತಲಿನ ಮಠಗಳಿಗೆ ಭೇಟಿಕೊಟ್ಟು ಗುರುಗಳ ದರ್ಶನ ಪಡೆದು ಅಲೌಕಿಕ, ಪಾರಮಾರ್ಥದ ಬಗ್ಗೆ ಚರ್ಚೆ ನಡೆಸಿ ತಮ್ಮ ಜ್ಞಾನವನ್ನು ವಿಕಾಸಗೊಳಿಸಿಕೊಂಡರು. ಧಾರವಾಡದ ಸುತ್ತಮುತ್ತ ಪ್ರತಿದಿನ ಇಪ್ಪತ್ತರಿಂದ ನಲವತ್ತು ಕಿ.ಮೀ ಸೈಕಲ್‌ನಲ್ಲಿ ಸುತ್ತಿ ಒಬ್ಬೊಬ್ಬರು ಗುರುಗಳನ್ನು ಭೇಟಿ ಮಾಡಿ ಆಧ್ಯಾತ್ಮಿಕ ಹಸಿವನ್ನು ನೀಗಿಸಿಕೊಂಡರು. ಧಾರವಾಡದ ತಪೋವನದ ಶ್ರೀ ಕುಮಾರ ಸ್ವಾಮಿಗಳ ಭಾಷಣವನ್ನು ಕೇಳಿ ಮನಸೋತು ಯೋಗದ ಬಗ್ಗೆ ಒಲವು ತೋರಿಸಿ ಕುಂಡಲಿಯೋಗದ ಸಾಧನೆಯನ್ನು ಮಾಡತೊಡಗಿ, ಯೋಗವನ್ನು ಚಿಕ್ಕ ವಯಸ್ಸಿನಲ್ಲಿಯೇ ಕರಗತಮಾಡಿಕೊಂಡು ಯೋಗಪುರುಷರಾದರು. ಯೋಗ ಪ್ರದರ್ಶನಕ್ಕೆ ಫ್ರಾನ್ಸಿಗೆ ಆಹ್ವಾನ ಬಂದಾಗ ನಿರಾಕರಿಸಿ ಇಲ್ಲಿಯೇ ತಮ್ಮ ಜವಾಬ್ದಾರಿಯ ಕಡೆಗೆ ಗಮನಕೊಟ್ಟರು.

ಈ ರೀತಿ ಚಿಕ್ಕ ವಯಸ್ಸಿನಲ್ಲಿಯೇ ವಿಶೇಷ ಸಾಧನೆಗೈದ ಶ್ರೀರಾಜಶೇಖರ ಸ್ವಾಮಿಗಳು ಧಾರವಾಡ ವಿಶ್ವವಿದ್ಯಾನಿಲಯದಲ್ಲಿ ವೃತ್ತಿಯನ್ನು ಆರಂಭಿಸಿ ತಮ್ಮ ಕುಟುಂಬದ ನಿರ್ವಹಣೆ ಮಾಡತೊಡಗಿದರು. ಸಂಸಾರದ ಒಳಗೆ ಇದ್ದರೂ ಸಂಸಾರವನ್ನು ಮೈಗೆ ಅಂಟಿಸಿಕೊಳ್ಳದೆ, ಆಧ್ಯಾತ್ಮ ಚಿಂತಕರಾಗಿ ಹಿಮಾಲಯ ಹಾಗೂ ಇತರೆ ಪುಣ್ಯ ಕ್ಷೇತ್ರಗಳನ್ನು ಸುತ್ತಿ ಧರ್ಮದ ಆಳ ಅರಿವುಗಳನ್ನು ಕಂಡುಕೊಳ್ಳತೊಡಗಿದರು. ಶ್ರೀ ರಾಜಶೇಖರ ಸ್ವಾಮಿಗಳು ಧಾರವಾಡ ಮುರುಘಾ ಮಠದ ಮಹಂತಪ್ಪನವರ ಮಾರ್ಗದರ್ಶನದ ಮೇಲೆ ಮತ್ತೆ ತೋರೆಮಠದ ಉತ್ತರಾಧಿಕಾರಿಗಳಾಗಿ ಆಯ್ಕೆಗೊಂಡು ಪ್ರಥಮ ಬಾರಿಗೆ ಗುಬ್ಬಿಗೆ ಆಗಮಿಸಿ ಮಠವನ್ನು ನೋಡಿಕೊಂಡು ಹೋಗುತ್ತಾರೆ. ಇದಾದ ನಂತರ ೧೯೮೮ರ ಮಾರ್ಚ್ ಇಪ್ಪತ್ತೇಳರಂದು ತೊರೆ ಮಠದ ಪಟ್ಟಾಧಿಕಾರವನ್ನು ಪಡೆಯುತ್ತಾರೆ. ಪಟ್ಟಾಧಿಕಾರ ಪಡೆದ ನಂತರವೂ ವೃತ್ತಿಯನ್ನು ಮುಂದುವರೆಸಿದ ಶ್ರೀ ರಾಜಶೇಖರ ಸ್ವಾಮಿಗಳು ೧೯೯೪ ರಲ್ಲಿ ವೃತ್ತಿಗೆ ತಿಲಾಂಜಲಿ ಇಟ್ಟು ಗುಬ್ಬಿಗೆ ಬಂದು ಪೂರ್ಣ ಅಧಿಕಾರವನ್ನು ಪಡೆದುಕೊಳ್ಳುತ್ತಾರೆ.

ಗುಬ್ಬಿಗೆ ಬಂದ ಗುರುಗಳು ಸಿದ್ಧಗಂಗೆಯಲ್ಲಿ ತಿಂಗಳುಗಳ ಕಾಲ ಅನುಷ್ಠಾನಗೊಂಡು ಇಲ್ಲಿನ ಭಕ್ತರ ಮನ ಗೆದ್ದರು.

೧೯೯೫ ರಿಂದ ಶ್ರೀ ಅಡವಿ ಸ್ವಾಮಿಗಳ ಜಾತ್ರೆಯು ನಡೆಯುವಂತೆ ವ್ಯವಸ್ಥೆಗೊಳಿಸಿ ಮಠದಲ್ಲಿ ಧಾರ್ಮಿಕ ಕಾರ್ಯಗಳು ನಡೆಯಲು ವ್ಯವಸ್ಥೆ ಮಾಡಿ ಮಠವನ್ನು ಹಿರಿಯ ಗುರುಗಳ ಮೇಲ್ಪಂಕ್ತಿಯಲ್ಲಿ ಬೆಳೆಸಲು ಮುಂದಾಗಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ರಾಜಶೇಖರ ಸ್ವಾಮಿಗಳು, ಶ್ರೀ ತೊರೆಮಠ, ಗುಬ್ಬಿ, ತುಮಕೂರು ಜಿಲ್ಲೆ.
ಆಧಾರ: ತೊರೆಮಠದ ಮಹಾಬೆಳಕು, ಲೇಖಕರು ಚಂದ್ರಶೇಖರ ನಾರಣಾಪುರ
'ನಮಃ ಶಿವಾಯ' ಸ್ಮರಣ ಸಂಚಿಕೆ, ಬಿಡಿ ಲೇಖನಗಳು - ಡಾ. ಬಿ. ನಂಜುಂಡಸ್ವಾಮಿಯವರ

ಗುಬ್ಬಿಹೊಸಳ್ಳಿ

ಗುಬ್ಬಿ ತಾಲ್ಲೂಕಿನ ಗುಬ್ಬಿ ಹೊಸಳ್ಳಿಯು ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಎಂಟು ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ವಿಜಯನಗರದ ಸಾಮಂತರಾಗಿ ಆಡಳಿತ ನಡೆಸಿದ ಇಲ್ಲಿನ ಏಳುನಾಡು ಭೂಪಾಲರು ಈ ಪ್ರಾಂತ್ಯದಲ್ಲಿ ಗುಬ್ಬಿ ಹೊಸಳ್ಳಿಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಏಳುನಾಡು ಭೂಪಾಲರ ಅರಮನೆಯು ನೆಲಸಮವಾಗಿದ್ದು ಇಲ್ಲಿ ಅರಮನೆ ಇತ್ತು ಎಂದು ತೋರಿಸುವ ಕಲ್ಲುಕಂಬಗಳು, ತಳಪಾಯ ತಮ್ಮ ಅಸ್ತಿತ್ವವನ್ನು ಬಿಂಬಿಸುತ್ತಿವೆ. ಇಂತಹ ಐತಿಹಾಸಿಕ ಸ್ಥಳದಲ್ಲಿ ಧಾರ್ಮಿಕ ನೆಲೆ ರೂಪಿಸಲು ನಾಲ್ಕು ಮಠಗಳು ಅಸ್ತಿತ್ವಗೊಂಡು ಈ ನಾಡಿಗೆ ಧಾರ್ಮಿಕ ಸಂಸ್ಕಾರವನ್ನು ರೂಪಿಸಿವೆ. ಅಂದು ಸ್ಥಾಪನೆಗೊಂಡ ಮಠಗಳಲ್ಲಿ ತೆಂಕಲಮಠ ಮತ್ತು ಬಿಡಗಲ್ ಮಠಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿವೆ. ಈಗ ಪಡುವಲ ಮಠ ಮತ್ತು ಚೌಕೀಮಠ (ಮೂಡಲುಮಠ) ಗಳು ಅಸ್ತಿತ್ವದಲ್ಲಿದ್ದು ತಮ್ಮ ಧಾರ್ಮಿಕ ಕೆಲಸಗಳನ್ನು ಮಾಡಿಕೊಂಡು ಈ ನಾಡಿನಲ್ಲಿ ಧಾರ್ಮಿಕ ಪ್ರಜ್ಞೆ ಬೆಳೆಸುವತ್ತ ಪ್ರಯತ್ನಿಸುತ್ತಿವೆ.

ಪಡುವಲಮಠ: ಗುಬ್ಬಿ ಹೊಸಳ್ಳಿಯ ಪಶ್ಚಿಮಕ್ಕೆ ಒಂದು ಕಿ.ಮೀ ದೂರದಲ್ಲಿ ಪಡುವಲ ಮಠವು ಸ್ಥಾಪನೆಯಾಗಿದೆ. ವಿರಕ್ತ ಸಂಪ್ರದಾಯದ ಮುರುಘಾ ಸಮಯದ ಈ ಮಠವು ಶ್ರೀ ಮುರುಘರಾಜೇಂದ್ರ ಸ್ವಾಮಿಗಳಿಂದ ಹದಿನೇಳನೆಯ ಶತಮಾನದ ಏಳುನಾಡು ಅರಸರ ಕಾಲದಲ್ಲಿ ಸ್ಥಾಪನೆಯಾಗಿದೆ. ಶ್ರೀ ಮುರುಘರಾಜೇಂದ್ರ ಸ್ವಾಮಿಗಳು ಲೋಕಸಂಚಾರಕ್ಕೆ ಬಂದವರು ತಮ್ಮ ಪವಾಡಗಳಿಂದ ಭಕ್ತರನ್ನು ಸನ್ಮಾರ್ಗದಲ್ಲಿ ನಡೆಸುತ್ತಾ ಏಳುನಾಡು ಅರಸರ ಪ್ರಾಂತ್ಯದಲ್ಲಿ ಹೆಚ್ಚು ಹೆಸರು ಗಳಿಸಿದ್ದರು. ಈ ವಿಚಾರ ಅರಸರಿಗೆ ತಿಳಿದು (ಹೆಸರು ತಿಳಿದು ಬಂದಿಲ್ಲ) ಗುರುಗಳನ್ನು ಗೌರವಗಳೊಂದಿಗೆ ಅರಮನೆಗೆ ಕರೆಸಿ ಪೂಜೆ ಮಾಡಿಸಿ, ರಾಜಗುರುಗಳನ್ನಾಗಿ ಮಾಡಿಕೊಂಡು, ಗುಬ್ಬಿ ಹೊಸಳ್ಳಿಯಲ್ಲಿ ಮಠವನ್ನು ಕಟ್ಟಿಸಿಕೊಡುತ್ತಾರೆ.

ಪರಂಪರೆ: ಶ್ರೀ ಮುರುಘ ರಾಜೇಂದ್ರ ಸ್ವಾಮಿಗಳು ಅರಸ-ಬಡವ ಎಂಬ ಭೇದ ತೋರಿಸದೆ ಎಲ್ಲರನ್ನೂ ಒಂದೇ ಭಾವನೆಯಿಂದ ನೋಡುತ್ತಾ ಸಮಾಜವನ್ನು ಬೆಳೆಸಿ, ಮಠವನ್ನು ಅಭಿವೃದ್ಧಿಪಡಿಸಿದರು.

೧. ಶ್ರೀ ಮ.ನಿ.ಪ್ರ. ಮುರುಘ ರಾಜೇಂದ್ರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಶಾಂತವೀರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಜಡೆಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಮಲ್ಲಿಕಾರ್ಜುನಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕೆಲವು ವೇಳೆ ಗುರುಗಳು ಇಲ್ಲದೆ ಮಠವು ಖಾಲಿ ಉಳಿದಿದ್ದು ಮಠ ಪ್ರಾರಂಭವಾದಾಗಿನಿಂದ ಈ ತನಕ ನಾಲ್ಕು ಜನ ಗುರುಗಳನ್ನು ಕಂಡಿದೆ ಎಂಬುದು ಇದಕ್ಕೆ ಸಾಕ್ಷಿಯಾಗಿದೆ.

ಕರ್ತೃಗುರುಗಳ ನಂತರ ಆಡಳಿತಕ್ಕೆ ಬಂದಿರುವ ಗುರುಗಳಾದ ಶ್ರೀ ಶಾಂತವೀರ ಸ್ವಾಮಿಗಳು ಮತ್ತು ಶ್ರೀ ಜಡೆ ಸ್ವಾಮಿಗಳ ಕಾರ್ಯ ವೈಖರಿಯ ಬಗ್ಗೆ ಆಧಾರಗಳ ಕೊರತೆಯಿಂದ ಏನನ್ನೂ ದಾಖಲಿಸಲಾಗುತ್ತಿಲ್ಲ. ಆದರೆ ಶ್ರೀ ಜಡೆಸ್ವಾಮಿಗಳು ಜೂನ್ ಒಂಬತ್ತು ೧೯೩೬ರಲ್ಲಿ ಲಿಂಗೈಕ್ಯರಾಗಿರುತ್ತಾರೆ ಎಂಬ ವಿಚಾರ ಉಲ್ಲೇಖವಾಗಿದೆ. ಅಂದಿನಿಂದ ೧೯೬೧ರ ವರೆಗೆ ಖಾಲಿ ಉಳಿದ ಮಠವು ಪೂರ್ಣ ಜೀರ್ಣಗೊಂಡಿತ್ತು. ನಂತರ ೧೯೬೧ ರ ಜನವರಿ ಒಂದರಂದು ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳಿಗೆ ಪಟ್ಟಾಧಿಕಾರ ಮಾಡುವ ಮೂಲಕ ಖಾಲಿ ಉಳಿದಿದ್ದ ಮಠದ ಪೀಠಕ್ಕೆ ಅಧಿಕಾರಿಗಳನ್ನು ತರಲಾಯಿತು.

ಹಾವೇರಿ ಜಿಲ್ಲೆ ಶಿಗ್ಗಾವಿ ತಾಲ್ಲೂಕಿನ ಸದಾಶಿವಪೇಟೆಯ ಗಡಿಗೇಶ್ವರ ವಿರಕ್ತ ಮಠದ ಪಟ್ಟಾಧಿಕಾರಿಗಳಾಗಿದ್ದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳನ್ನು, ಈ ಮಠದ ಉತ್ತರಾಧಿಕಾರಿಗಳನ್ನಾಗಿ ಆಯ್ಕೆಮಾಡಿ ನಲವತ್ತೈದು ವರ್ಷಗಳಿಂದ ಖಾಲಿ ಉಳಿದಿದ್ದ ಮಠಕ್ಕೆ ಪಟ್ಟಾಧಿಕಾರ ಮಾಡಿ, ಧರ್ಮಜ್ಯೋತಿಯು ಬೆಳಗುವಂತೆ ಮಾಡಿದರು. ಚಿತ್ರದುರ್ಗದ ಬೃಹನ್ಮಠದ ಹಿಂದಿನ ಲಿಂಗೈಕ್ಯ ಗುರುಗಳಾದ ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮಿಗಳು ಮುತುವರ್ಜಿ ವಹಿಸಿದ್ದ ಫಲವಾಗಿ, ಜೀರ್ಣಗೊಂಡ ಮಠವು ಮತ್ತೆ ತಲೆಎತ್ತಿ ನಿಲ್ಲುವಂತಾಯಿತು.

ಎರಡು ಜವಾಬ್ದಾರಿಗಳು: ಚನ್ನಗಿರಿ ತಾಲ್ಲೂಕಿನ ನಲ್ಲೂರು ಗ್ರಾಮದಲ್ಲಿ ಜನಿಸಿದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಪ್ರಾಥ ಮಿಕ ಹಾಗೂ ಪ್ರೌಢಶಿಕ್ಷಣವನ್ನು ನಲ್ಲೂರು, ಚನ್ನಗಿರಿಯಲ್ಲಿ ಮುಗಿಸಿ ಮುಂದಿನ ಕಲಿಕೆಗೆ ಶಿವಯೋಗಮಂದಿರಕ್ಕೆ ಹೋಗಿ ೧೯೬೬ ರಿಂದ ೧೯೭೭ ರವರೆಗೆ ವಿದ್ಯಾಭ್ಯಾಸವನ್ನು ಮಾಡಿ ಸಂಸ್ಕೃತ, ವೇದ, ಆಗಮಗಳಲ್ಲಿ ಪಾಂಡಿತ್ಯವನ್ನು ಪಡೆದರು. ಶಿವಯೋಗ ಮಂದಿರದಿಂದ ಬಂದು ಗಡಿಗೇಶ್ವರ ಮಠದ ಅಧಿಕಾರವನ್ನು ವಹಿಸಿಕೊಳ್ಳುತ್ತಾರೆ. ಈಗ ಪುನಃ ಗುಬ್ಬಿ ಹೊಸಳ್ಳಿಯಲ್ಲಿ ಎರಡನೆಯ ಅಧಿಕಾರವನ್ನು ಪಡೆದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಎರಡೂ ಕಡೆಯ ಆಡಳಿತವನ್ನು ನೋಡಿಕೊಂಡು, ಎರಡೂ ಮಠಗಳನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ಹಚ್ಚಿದ ದೀಪ: ಶಿಥಿಲಗೊಂಡ ಮಠದಲ್ಲಿ ವಾಸಿಸುವುದೇ ದುಸ್ತರವಾಗಿತ್ತು. ಅಧಿಕಾರಕ್ಕೆ ಬಂದ ಮೇಲೆ ವಾಸ್ತವ್ಯದ ಅಗತ್ಯಕ್ಕೆ ತಕ್ಕಷ್ಟು ಕಟ್ಟಡವನ್ನು ನವೀಕರಿಸಿದ ಗುರುಗಳು ಚಿಕ್ಕಕೊಠಡಿಯಲ್ಲಿ ಬದುಕನ್ನು ಸಾಗಿಸತೊಡಗಿದರು. ಮಠದಲ್ಲಿ ದೀಪಹಚ್ಚಿ ಧರ್ಮದ ಬೆಳಕನ್ನು ನೀಡತೊಡಗಿದರು. ಮಠದಲ್ಲಿ ಧರ್ಮದ ದೀಪವನ್ನು ಹಚ್ಚಿದ ಮೇಲೆ ಭಕ್ತರು ಮಠದ ಕಡೆ ನೋಡತೊಡಗಿ ದರು. ಭಕ್ತರಿಂದ ಸಿಕ್ಕಷ್ಟು ನೆರವು ಪಡೆದು ಮಠದ ಅಭಿವೃದ್ಧಿಯ ಒಂದೊಂದೇ ಕಾರ್ಯಗಳನ್ನು ಮಾಡತೊಡಗಿದರು.ಮೊದಲ ಹಂತವಾಗಿ ಮಠದ ಆಸ್ತಿಯಾಗಿದ್ದ ಹದಿನಾರು ಎಕರೆ ಜಮೀನನ್ನು ತಮ್ಮ ಅಧೀನಕ್ಕೆ ಪಡೆದುಕೊಂಡು, ಮಠದ ಆಸ್ತಿಯನ್ನು ಗುರುತಿಸಿ ರಕ್ಷಣೆ ಮಾಡಿ ಬೇಸಾಯಕ್ಕೆ ಯೋಗ್ಯಗೊಳಿಸಿ ತೆಂಗು, ಮಾವು ಬೆಳೆಸಿದ್ದಾರೆ. ಹಾಳು ಬಿದ್ದಿದ್ದ ಮಠ ಮತ್ತು ಮಠದ ಜಮೀನು ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳ ಕಾಲದಲ್ಲಿ ಅಭಿವೃದ್ಧಿ ಕಾಣತೊಡಗಿತು.

ಧಾರ್ಮಿಕ ಕಾರ್ಯಗಳು: ಮಠದ ಕೆಲಸ, ಸಮಾಜದಲ್ಲಿ ಧಾರ್ಮಿಕ ಸಂಸ್ಕಾರ ನೀಡುವುದು, ಈ ಮೂಲಕ ಜನರನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಮಾಡುವುದಾಗಿದೆ. ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ತಿಂಗಳಿಗೊಮ್ಮೆ ಧರ್ಮೋಪದೇಶ ಸಭೆ ಹಮ್ಮಿಕೊಳ್ಳುತ್ತಿದ್ದಾರೆ. ಬಹಳ ವರ್ಷಗಳಿಂದ ಮಠದ ಸಂಪರ್ಕ ಕಳೆಚಿಕೊಂಡಿದ್ದ ಜನರು ಈಗ ಸ್ಪಂದಿಸುವಲ್ಲಿ ವಿಫಲರಾಗಿದ್ದಾರೆ. ಆದರೂ ತಮ್ಮ ಕಾಯಕವನ್ನು ಬಿಡದೆ ಮಾಡತೊಡಗಿದ್ದಾರೆ.

ಶೈಕ್ಷಣಿಕ ರಂಗ: ಗ್ರಾಮೀಣರಲ್ಲಿ ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಪ್ರಜ್ಞೆ ಬರುವಂತೆ ಮಾಡುವ ಹಂಬಲ ಹೊಂದಿದ್ದ ಶ್ರೀಮಲ್ಲಿಕಾರ್ಜುನ ಸ್ವಾಮಿಗಳು ಎದುರಾದ ಎಲ್ಲಾ ಕಷ್ಟಗಳನ್ನು ಸಹಿಸಿಕೊಂಡು ಏಕಚಿತ್ತದಿಂದ ಧರ್ಮಾನುಷ್ಠಾನ ಮಾಡುವುದೇ ನಮ್ಮ ಉದ್ದೇಶ ಎಂದು ನಂಬಿದ್ದಾರೆ. ಶೈಕ್ಷಣಿಕ ಸೇವೆಯ ಮೂಲಕ ಭಕ್ತರನ್ನು ಮಠದ ಕಡೆ ಒಲಿಸಿಕೊಳ್ಳುವ ಹಂಬಲದಿಂದ ಅಂಗವಿಕಲ ಮಕ್ಕಳ ಪಾಠಶಾಲೆಯನ್ನು ಪ್ರಾರಂಭಿಸಿದರು. ನಂತರ ದೈಹಿಕ ಶಿಕ್ಷಣ ತರಬೇತಿ ಕಾಲೇಜನ್ನು ಪ್ರಾರಂಭಿಸಿ, ಸಾರ್ವಜನಿಕ ರಿಂದ ಪ್ರೋತ್ಸಾಹ ಸಿಕ್ಕದ ಕಾರಣ ಪ್ರಾರಂಭಿಸಿದ ಶಿಕ್ಷಣ ಸಂಸ್ಥೆಗಳನ್ನು ಎರಡು ವರ್ಷದಲ್ಲಿ ಮುಚ್ಚಿದರು. ಈಗ ಧರ್ಮಪ್ರಚಾರ ಮತ್ತು ಆರ್ಥಿಕವಾಗಿ ಮಠವನ್ನು ಸದೃಢಪಡಿಸುವ ಎರಡೂ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ಶ್ರಮಿಸುತ್ತಿದ್ದಾರೆ.

ವಿಳಾಸ: ಶ್ರೀ.ಮ.ನಿ.ಪ್ರ.ಮಲ್ಲಿಕಾರ್ಜುನ ಸ್ವಾಮಿಗಳು, ಶ್ರೀ ಪಡುವಲ ಮಠ, ಗುಬ್ಬಿಹೊಸಳ್ಳಿ, ಗುಬ್ಬಿ ತಾ, ತುಮಕೂರು ಜಿಲ್ಲೆ.

ಚೌಕಿಮಠ: ಗುಬ್ಬಿಹೊಸಳ್ಳಿಯ ಮಧ್ಯಭಾಗದಲ್ಲಿ ಅರಮನೆಯ ಪಕ್ಕದಲ್ಲಿ ಸ್ಥಾಪನೆಯಾಗಿರುವ ಚೌಕಿಮಠವು, ರಂಭಾಪುರಿ ಪೀಠದ ಶಾಖಾಮಠವಾಗಿ ರೂಪುಗೊಂಡಿದೆ. ಈ ಮಠ ಪುತ್ರವರ್ಗದ ಮಠವಾಗಿ ಬೆಳೆದು ಧಾರ್ಮಿಕಕ್ರಿಯಾದಿಗಳನ್ನು ನಡೆಸಿಕೊಂಡು ಬಂದಿದೆ. ಹಿಂದೆ ಈ ಗ್ರಾಮದ ಪೂರ್ವಭಾಗದಲ್ಲಿದ್ದು ಇದು'ಮೂಡಲ ಮಠ'ಎಂದು ಹೆಸರು ಪಡೆದಿತ್ತು. ಈಗ ಮಠವು

ಗ್ರಾಮದ ಒಳಭಾಗಕ್ಕೆ ಸ್ಥಳಾಂತರಗೊಂಡು ಧಾರ್ಮಿಕ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದೆ. ಶ್ರೀ ಮಲ್ಲಣ ದೇವರು ಲಿಂಗೈಕ್ಯ ರಾದ ಮೇಲೆ ಕೆಲವು ದಿನ ಮಠವು ಮಠಾಧೀಶ್ವರರಿಲ್ಲದೆ ಖಾಲಿ ಉಳಿದಿತ್ತು. ಈಗ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಅಧಿಕಾರ ವಹಿಸಿಕೊಂಡು ಐವತ್ತು ವರ್ಷಗಳಾಗಿದ್ದು, ದೀರ್ಘ ಕಾಲದಿಂದ ಅಧಿಕಾರ ನಡೆಸಿಕೊಂಡು ಬಂದಿದ್ದು ತಮ್ಮ ವಂಶಪಾರಂಪರ್ಯದ ಮರಿಯನ್ನು ನೇಮಿಸಿಕೊಳ್ಳಲು ತಯಾರಿ ನಡೆಸಿದ್ದಾರೆ. ಮುಪ್ಪಿನ ಮುಮ್ಮಡಿ ಏಳುನಾಡು ಪ್ರಭುಗಳಿಂದ ಈ ಮಠಕ್ಕೆ ಹೆಚ್ಚು ನೆರವು ಸಿಕ್ಕಿದ್ದು, ಅರಮನೆಯ ಧಾರ್ಮಿಕ ಕಾರ್ಯಗಳಿಗೆ ಹಾಗೂ ಪಾದೋದಕ ಕ್ರಿಯೆಗೆ ಗುರುಗಳು ಅರಮನೆಯ ಪಕ್ಕದಲ್ಲಿ ಇರಲಿ ಎಂದು ಗುರುಮನೆಯನ್ನು ಪಕ್ಕದಲ್ಲೇ ಸ್ಥಾಪಿಸಿಕೊಡುತ್ತಾರೆ.

ಶಾಖಾಮಠಗಳು: ಈ ಹಿಂದೆ ಗುಬ್ಬಿಹೊಸಳ್ಳಿಯ ಈ ಮಠಕ್ಕೆ ಮಧುಗಿರಿ ತಾಲ್ಲೂಕಿನ ಕೋರ, ಶಂಭೋನಹಳ್ಳಿ, ಮಲ್ಲೇನಹಳ್ಳಿ, ದೊಡ್ಡಅಣ್ಣೆಗೆರೆ, ತೊರೆಯೂರು ಮಠಗಳು ಶಾಖಾಮಠಗಳಾಗಿದ್ದವು. ಮುಪ್ಪಿನ ಮುಮ್ಮಡಿ ಏಳುನಾಡ ಪ್ರಭುಗಳು ಈ ಮಠಗಳನ್ನು ಸ್ಥಾಪಿಸಿ ಧಾರ್ಮಿಕ ಆಚರಣೆಗಳು ನಡೆಯಲು ದಾನದತ್ತಿಗಳನ್ನು ನೀಡಿ ನೆರವಾಗಿದ್ದರು. ಈ ಎಲ್ಲಾ ಮಠಗಳಿಗೆ ಗುಬ್ಬಿಹೊಸಳ್ಳಿಯನ್ನು ಕೇಂದ್ರ ಮಠವನ್ನಾಗಿ ರೂಪಿಸಿದ್ದರು. ಈಗ ಎಲ್ಲಾ ಸ್ವತಂತ್ರ ಮಠಗಳಾಗಿ ರೂಪುಗೊಂಡಿವೆ ಎಂದು ಹಿರಿಯರಾದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಹೇಳುತ್ತಾರೆ.

ವಿಳಾಸ: ಷ.ಬ್ರ.ಶ್ರೀಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಚೌಕಿಮಠ, ಗುಬ್ಬಿಹೊಸಳ್ಳಿ,ಗುಬ್ಬಿತಾ, ತುಮಕೂರು ಜಿಲ್ಲೆ.

ಗೊಲ್ಲಳ್ಳಿ

ಗುಬ್ಬಿ ತಾಲ್ಲೂಕಿನ ಗೊಲ್ಲಳ್ಳಿಯು ತಾಲ್ಲೂಕು ಕೇಂದ್ರದ ಪಶ್ಚಿಮಕ್ಕೆ ಹದಿನೈದು ಕಿ.ಮೀ. ದೂರದಲ್ಲಿದೆ. ಕಳೆದ ಹತ್ತಾರು ವರ್ಷಗಳಿಂದೀಚೆಗೆ ಜಂಗಮಮಠವು ಅಸ್ತಿತ್ವದಲ್ಲಿದೆ.

ಜಂಗಮಮಠ: ಗೊಲ್ಲಳ್ಳಿ ಗ್ರಾಮದಲ್ಲಿ ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿದೆ. ಶ್ರೀ ಗೌರಿಶಂಕರ ಸ್ವಾಮಿಗಳಿಗೆ ತುಮಕೂರು ಸಮೀಪದ ಸಿದ್ಧಗಂಗೆಯಲ್ಲಿ ಪಟ್ಟಾಧಿಕಾರವಾಗಿ ನಂತರ ಅಲ್ಲಿನ ವ್ಯಾಜ್ಯ ದಿಂದ ಬೇಸತ್ತು ಧಾರ್ಮಿಕ ಪ್ರಸಾರಕ್ಕಾಗಿ ಕೊಲ್ಲಳ್ಳಿಗೆ ಬಂದು ಭಕ್ತರ ಸಹಕಾರ ಪಡೆದು ಮಠವನ್ನು ಸ್ಥಾಪನೆ ಮಾಡಿದ್ದಾರೆ.

ಭಕ್ತರ ನೆರವು: ತುಮಕೂರು ಜಿಲ್ಲೆಯ ಗೊಲ್ಲಳ್ಳಿ, ತಿಪ್ಪೂರು, ಮಧನಘಟ್ಟ, ಹೆಸರಳ್ಳಿ, ಅಮ್ಮನಘಟ್ಟ, ಬಾಗೂರು, ಉದ್ದೇಹೊಸ ಕೆರೆ, ಕೊಡೆ ನಾಗೇನಹಳ್ಳಿ, ರಾಂಪುರ ಸೇರಿದಂತೆ ಒಟ್ಟು ಮೂವತ್ತಮೂರು ಹಳ್ಳಿಗಳ ಭಕ್ತರು ಶ್ರೀ ಗೌರೀಶಂಕರ ಸ್ವಾಮಿಗಳಿಗೆ ಗೊಲ್ಲಳ್ಳಿಯಲ್ಲಿ ಮಠವನ್ನು ಸ್ಥಾಪಿಸಿದ್ದಾರೆ. ಮಠದ ಧಾರ್ಮಿಕ ಚಟುವಟಿಕೆಗಳನ್ನು ಮುನ್ನಡೆಸಲು ಅನುಕೂಲ ವಾಗಲಿ ಎಂದು ಫಲ ನೀಡುವ ಒಂದು ನೂರು ತೆಂಗಿನ ಮರಗಳನ್ನು ಮಠಕ್ಕೆ ಬರೆದುಕೊಟ್ಟಿರುತ್ತಾರೆ. ಈ ರೀತಿ ಭಕ್ತರ ನೆರವಿನಿಂದ ಸ್ಥಾಪನೆಗೊಂಡ ಮಠವು ಶರಣಾದಿ ಪ್ರಮಥರ ತತ್ತ್ವಗಳನ್ನು ಸಾರುತ್ತಾ, ಭಕ್ತರ ಮಾರ್ಗದರ್ಶಕರಾಗಿ ಶ್ರೀ ಗೌರೀಶಂಕರ ಸ್ವಾಮಿಗಳು ತಮ್ಮ ಆಡಳಿತವನ್ನು ನಡೆಸಿಕೊಂಡು ಬಂದಿದ್ದಾರೆ. ಕಲಿಯುವ ವಿದ್ಯಾರ್ಥಿಗಳಿಗೆ ಮಠದಲ್ಲಿ ಆಶ್ರಯ ಕಲ್ಪಿಸಿಕೊಟ್ಟಿದ್ದು, ಮಠವನ್ನು ಯಶಸ್ವಿ ಯಾಗಿ ಮುನ್ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಗೌರೀಶಂಕರ ಸ್ವಾಮಿಗಳು, ಶ್ರೀ ಜಂಗಮಮಠ, ಗೊಲ್ಲಳ್ಳಿ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ.

ದೊಡ್ಡಗುಣಿ

ಗುಬ್ಬಿ ತಾಲ್ಲೂಕಿನ ದೊಡ್ಡಗುಣಿಯು ಗುಬ್ಬಿಯಿಂದ ಪಶ್ಚಿಮಕ್ಕೆ ಇಪ್ಪತ್ತೈದು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀಹಿರೇಮಠವು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕೇಂದ್ರವಾಗಿ ಬೆಳೆದಿದೆ.

ಹಿರೇಮಠ: ದೊಡ್ಡಗುಣಿ ಗ್ರಾಮದ ಹೊರಭಾಗದಲ್ಲಿ ರಂಭಾಪುರಿ ಪೀಠದ ಶಾಖೆಯ ಪುತ್ರವರ್ಗದ ಮಠವು ಪುರಾತನ ಕಾಲದಿಂದಲೂ ಬೆಳೆದು ಬಂದಿದೆ. ಮಠವು ಮೊದಲು ದೊಡ್ಡಗುಣಿಯ ಊರಮಧ್ಯದಲ್ಲಿ ಅಸ್ತಿತ್ವದಲ್ಲಿತ್ತು. ೧೯೫೨ ರಲ್ಲಿ ಈಗಿರುವ ಜಾಗಕ್ಕೆ ಸ್ಥಳಾಂತರಗೊಂಡಿದೆ.

ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಬೀರೂರಿನಲ್ಲಿ ಶಿವಾನಂದಾಶ್ರಮದ ವೇದ, ಜ್ಯೋತಿಷ್ಯ ಪಾಠಶಾಲೆಯ ಅಧಿಪತಿಗಳಾಗಿ ಸೇವೆ ಸಲ್ಲಿಸಿ, ಬಾಳೆಹೊನ್ನೂರು ರಂಭಾಪುರಿ ಪೀಠದ ಜಗದ್ಗುರು ಶ್ರೀ ಶಿವಾನಂದ ಶಿವಾಚಾರ್ಯ ಭಗವತ್ಪಾದರ ಆಪ್ತ ಶಿಷ್ಯರಾಗಿ ಬೆಳೆದ ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಅಭಿವೃದ್ಧಿ ಪಡಿಸಿದ್ದಾರೆ. ಆದರೆ ಇದಕ್ಕೂ ಮೊದಲು ಮಠವು ಅಸ್ತಿತ್ವದಲ್ಲಿ ಇದ್ದರೂ ಆ ಗುರುಗಳ ಹೆಸರುಗಳು ಎಲ್ಲಿಯೂ ದಾಖಲಾಗಿಲ್ಲ. ಈ ಕಾರಣಕ್ಕೆ ಶ್ರೀ ಗುರುಲಿಂಗ ಶಿವಾಚಾರ್ಯರಿಂದ ಈ ಮಠದ ಪರಂಪರೆಯನ್ನು ದಾಖಲಿಸಬಹುದಾಗಿದೆ. ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು ಆ ಕಾಲದಲ್ಲಿಯೇ ತಮ್ಮ ವಿದ್ವತ್ತಿನಿಂದ ಬಹಳ ಪ್ರಭಾವಿಗಳಾಗಿದ್ದರು. ಇವರ ಕಾಲದಲ್ಲಿ ಮಠವು ಹೆಚ್ಚು ಅಭಿವೃದ್ಧಿಗೊಂಡು ಮಠಕ್ಕೆ ಆದಾಯ ತರುವಂತಹ ತೆಂಗಿನ ತೋಟವು ರೂಪುಗೊಂಡಿರುತ್ತದೆ. ಮಠದ ಅಭಿವೃದ್ಧಿಗಾಗಿ ಮತ್ತು ವೀರಶೈವ ಧರ್ಮದ ಬೆಳವಣಿಗೆಗಾಗಿ ಅವಿರತವಾಗಿ ಶ್ರಮಿಸಿದ ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು ೧೯೪೭ ರಲ್ಲಿ ಲಿಂಗೈಕ್ಯರಾಗಿರುತ್ತಾರೆ.

ಪರಂಪರೆ:
೧. ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ರೇಣುಕ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ರೇವಣಸಿದ್ಧೇಶ್ವರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಪರಂಪರಾಗತ ಮಠದಲ್ಲಿ ಮೂರು ಜನ ಗುರುಗಳ ಹೆಸರನ್ನು ಇಲ್ಲಿ ದಾಖಲಿಸಬಹುದಾಗಿದೆ. ವಿದ್ವತ್ ಚೇತನ ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳ ನಂತರ ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು ೧೯೫೨ ರಲ್ಲಿ ಶ್ರೀ ರಂಭಾಪುರಿ ಪೀಠದ ಜಗದ್ಗುರು ಶ್ರೀ ವೀರ ಗಂಗಾಧರ ಶಿವಾಚಾರ್ಯ ಭಗವತ್ಪಾದರಿಂದ ಅನುಗ್ರಹ ಪಡೆದು ಅಧಿಕಾರವನ್ನು ಪಡೆಯುತ್ತಾರೆ. ಇವರ ಕಾಲದಲ್ಲಿ ಧಾರ್ಮಿಕ ಚಟುವಟಿಕೆಗಳು ವಿಸ್ತಾರಗೊಂಡವು. ವಿಸ್ತಾರಗೊಂಡ ಚಟುವಟಿಕೆಗಳಿಗೆ ಚಿಕ್ಕದಾದ ಹಳೆಯ ಕಟ್ಟಡವು ಸಾಕಾಗದೆ ಹೋದ ಕಾರಣ ಮಠವನ್ನು ತೋಟದ ವಿಶಾಲ ಜಾಗಕ್ಕೆ ಸ್ಥಳಾಂತರಿಸುವ ನಿರ್ಧಾರ ಕೈಗೊಂಡು ವಿಶಾಲವಾದ ಕಟ್ಟಡವನ್ನು ನಿರ್ಮಿಸಿದರು. ಇವರ ಕಾಲದಲ್ಲಿ ಮಠವು ಹೆಚ್ಚು ಪ್ರಸಿದ್ಧಿ ಪಡೆದು ವೀರಶೈವ ಆಚಾರಗಳು ಹೆಚ್ಚು ಬೆಳಕಿಗೆ ಬಂದವು.ಅಷ್ಟಾವರಣ, ಪಂಚಾಚಾರ ಮತ್ತು ಷಟ್‌ಸ್ಥಲಗಳನ್ನು ಒಳಗೊಂಡ ವೀರಶೈವ ಧರ್ಮದ ಆಚರಣೆಯ ಯಶಸ್ಸಿಗೆ ಶ್ರಮಿಸಿ, ಭಕ್ತರ ಮಾರ್ಗದರ್ಶಕರಾಗಿದ್ದು ೧೯೬೫ ರಲ್ಲಿ ಲಿಂಗೈಕ್ಯರಾಗಿರುತ್ತಾರೆ.

ರೇವಣಸಿದ್ಧರು: ಹಿರಿಯ ಗುರುಗಳ ಕರಕಮಲ ಸಂಜಾತರಾಗಿ ಬೆಳೆದ ಶ್ರೀ ರೇವಣಸಿದ್ದೇಶ್ವರ ಶಿವಾಚಾರ್ಯ ಸ್ವಾಮಿಗಳು ಮೈಸೂರು ಮತ್ತು ಬೆಂಗಳೂರಿನಲ್ಲಿ ವಿದ್ಯಾಭ್ಯಾಸವನ್ನು ಪಡೆದು, ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದುಬಂದರು. ಬಾಳೆಹೊನ್ನೂರಿನ ಜಗದ್ಗುರು ಶ್ರೀ ರುದ್ರಮುನಿ ಶಿವಾಚಾರ್ಯ ಭಗವತ್ಪಾದರಿಂದ ಅನುಗ್ರಹ ಪಡೆದು ೧೯೮೭ ರಲ್ಲಿ ಪಟ್ಟಾಧಿಕಾರ ವನ್ನು ಪಡೆದು ಅಧಿಕಾರಕ್ಕೆ ಬಂದಿದ್ದಾರೆ.

ವಿದ್ವತ್‌ಸಂಪನ್ನತೆ ಪಡೆದಿರುವ ಗುರುಗಳು ವೀರಶೈವ ಧರ್ಮದ ಆಚಾರ ವಿಚಾರಗಳು ಬಹಳ ಸರಳವಾಗಿರುವುದರಿಂದ ಧರ್ಮನಿಷ್ಠೆಯಿಂದ ಸರ್ವರೂ ಆಚರಿಸಬೇಕು. ರುದ್ರಾಕ್ಷಿ, ವಿಭೂತಿ ಮತ್ತು ಲಿಂಗಧಾರಣೆ ವೀರಶೈವರ ಲಕ್ಷಣಗಳು, ಇವುಗಳ ಬಳಕೆಯಿಂದ ಸಂಸ್ಕಾರ ಪಡೆದು ಸನ್ಮಾರ್ಗದಲ್ಲಿ ಹೋಗಬಹುದು ಎಂದು ಅಭಿಪ್ರಾಯಿಸುವ ಗುರುಗಳು, ಸಮಾಜದಲ್ಲಿ ಧರ್ಮ ಪ್ರಚಾರವನ್ನು ನಡೆಸಿ ಭಕ್ತರನ್ನು ಸನ್ಮಾರ್ಗದಲ್ಲಿ ಮುನ್ನಡೆಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಧರ್ಮದ ಪ್ರಚಾರವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಪ್ರತಿವರ್ಷ ಧಾರ್ಮಿಕ ಸಮಾರಂಭಗಳನ್ನು ಏರ್ಪಡಿಸಿ ಗುರು-ವಿರಕ್ತರು ಎಂಬ ಭೇದವಿಲ್ಲದೆ ಎಲ್ಲರೂ ಒಂದೇ ಎಂಬ ಭಾವನೆಯನ್ನು ಇಟ್ಟುಕೊಂಡು ಎಲ್ಲಾ ಗುರುಗಳನ್ನು ಕರೆಸಿ ಒಂದೇ ವೇದಿಕೆಯಲ್ಲಿ ಕೂರಿಸಿ, ವೀರಶೈವ ಧರ್ಮದ ಮಹತ್ವದ ಬಗ್ಗೆ ಉಪದೇಶವನ್ನು ಮಾಡಿಸುತ್ತಾರೆ. ಇಲ್ಲಿ ಸೇರುವ ಸಾವಿರಾರು ಭಕ್ತರಿಗೆ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಿಸಲಾಗುತ್ತದೆ. ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ಪೂಜೆ ನಡೆಸುವುದು ಮಠದ ಮುಖ್ಯ ಧಾರ್ಮಿಕ ಕೆಲಸವಾಗಿದೆ. ಲೋಕಕಲ್ಯಾಣಕ್ಕಾಗಿ ಕುಂಭಾಭಿಷೇಕ, ರುದ್ರಹೋಮ ಮತ್ತು ನವಗ್ರಹ ಹೋಮವನ್ನು ೧೯೯೮ ರ ಜೂನ್ ಇಪ್ಪತ್ತೆರಡರಂದು ಏರ್ಪಡಿಸಿದ್ದರು. ಅದೇ ದಿನ ಧರ್ಮಜಾಗೃತಿಗಾಗಿ ಸರ್ವ

ಧರ್ಮ ಸಮ್ಮೇಳನವನ್ನು ನಡೆಸಿದ್ದಾರೆ. ರೈತಹಿತಚಿಂತನಗೋಷ್ಠಿಯನ್ನು ಏರ್ಪಡಿಸಿ ಅನೇಕ ವಿಚಾರಗಳ ಬಗ್ಗೆ ಚಿಂತನೆ ನಡೆಸಲು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದರು. ಈ ರೀತಿ ಅನೇಕ ಜನಪರ ಕಾರ್ಯಕ್ರಮಗಳನ್ನು, ಹಮ್ಮಿಕೊಂಡು ಮಠವನ್ನು ಜನರ ಬಳಿಗೆ ಕೊಂಡೊಯ್ದು ಅಭಿವೃದ್ಧಿಪಡಿಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ದೊಡ್ಡಗುಣಿ, ಗುಬ್ಬಿ ತಾ, ತುಮಕೂರು ಜಿಲ್ಲೆ.

ಬಿದರೆ

ಗುಬ್ಬಿತಾಲ್ಲೂಕಿನ ಬಿದರೆ ಗ್ರಾಮವು ತಾಲ್ಲೂಕು ಕೇಂದ್ರದ ಆಗ್ನೇಯಕ್ಕೆ ಸುಮಾರು ಹನ್ನೆರಡು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ರುದ್ರನಮಠವು ಅಸ್ತಿತ್ವದಲ್ಲಿದೆ.

ರುದ್ರನ ಮಠ: ಬಿದರೆ ಗ್ರಾಮದಲ್ಲಿ ಬಾಳೆಹೊನ್ನೂರು ರಂಭಾಪುರಿ ಪೀಠದ ಶಾಖಾಮಠವಾದ ರುದ್ರನಮಠವು ಸ್ಥಾಪನೆಯಾಗಿದೆ. ಪುರಾತನ ಪರಂಪರೆಯ ಈ ಮಠದಲ್ಲಿ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳ ಹೆಸರನ್ನು ಬಿಟ್ಟರೆ ಉಳಿದ ಹೆಸರುಗಳು ಲಭ್ಯವಿಲ್ಲ. ಹಿಂದೆ ಉತ್ತರಾಧಿಕಾರಿಗಳನ್ನು ನೇಮಿಸಲಾಯಿತ್ತು. ಅವರು ಗುಬ್ಬಿ ಚನ್ನಬಸವೇಶ್ವರ ದೇವಸ್ಥಾನದ ಆಗಮಿಕರಾಗಿ ಕೆಲಸ ನಿರ್ವಹಿಸತೊಡಗಿ ದ್ದರಿಂದ ಹಿರಿಯ ಚೇತನ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳೇ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ರುದ್ರನ ಮಠ, ಬಿದರೆ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ.

ಬೆಟ್ಟದಹಳ್ಳಿ

ಗುಬ್ಬಿ ತಾಲ್ಲೂಕಿನ ಬೆಟ್ಟದಹಳ್ಳಿಯು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿನೆಂಟು ಕಿ. ಮೀ. ದೂರದಲ್ಲಿದೆ. ಈ ಬೆಟ್ಟದಹಳ್ಳಿಯು ಗವಿ ಮಠದ ಸ್ಥಾಪನೆಯಿಂದ ಹೆಚ್ಚು ಹೆಸರು ಪಡೆದುಕೊಂಡಿದೆ.

ಗವಿಮಠ: ಬೆಟ್ಟದಹಳ್ಳಿ ಗ್ರಾಮದ ಸಮೀಪ ಇರುವ ಬೆಟ್ಟದ ಮೇಲೆ ಗವಿಮಠವು ಸ್ಥಾಪನೆಯಾಗಿದೆ. ಹನ್ನೆರಡನೆಯ ಶತಮಾನದಲ್ಲಿ ಉಂಟಾದ ಕಲ್ಯಾಣದಕ್ರಾಂತಿಯ ನಂತರ ಅಲ್ಲಿನ ಶರಣರಲ್ಲಿ ಬಹುತೇಕರು ದಕ್ಷಿಣ ಕರ್ನಾಟಕದ ಕಡೆಗೆ ಹೊರಟು ನೆಲೆನಿಂತ ಕಡೆಯಲ್ಲೆಲ್ಲಾ ಧರ್ಮಪ್ರಸಾರ ಮಾಡಿದರು. ಈ ರೀತಿ ಶರಣರು ಗುಬ್ಬಿತಾಲ್ಲೂಕಿನ ಈ ಪ್ರದೇಶಗಳಲ್ಲಿ ಸಂಚರಿಸಿ ಕಲ್ಯಾಣದಲ್ಲಿ ಹಚ್ಚಿದ್ದ ಧರ್ಮದ ದೀಪವನ್ನು ಈ ನಾಡಿಗೂ ಹಚ್ಚಿ, ಶರಣಧರ್ಮವು ಬೆಳಗುವಂತೆ ಮಾಡಿದರು.

ಬೆಟ್ಟದಹಳ್ಳಿಯ ಗವಿಯಲ್ಲಿ ಶರಣರು ವಾಸ್ತವ್ಯ ಹೂಡಿ ಅನುಷ್ಠಾನಗೊಂಡು ಈ ಕ್ಷೇತ್ರವನ್ನು ಜಾಗೃತ ಸ್ಥಳವನ್ನಾಗಿ ರೂಪಿಸಿದ್ದಾರೆ. ಗವಿ ಮಠದ ಸುತ್ತ ಮುತ್ತಲಿನ ಪರಿಸರವು ಅವರ್ಣನೀಯವಾಗಿದೆ. ಶರಣರು ನೆಲೆಗೊಂಡ ನಂತರದಲ್ಲಿ ಅನೇಕ ಭಕ್ತರು ಈ ಕ್ಷೇತ್ರದಲ್ಲಿ ನೆಲೆಗೊಂಡು ಧರ್ಮ ಪ್ರಸಾರವನ್ನು ಕೈಗೊಂಡಿದ್ದಾರೆ. ಅಂತಹವರಲ್ಲಿ ಪ್ರಮುಖರೆಂದರೆ

೧. ಶ್ರೀ ಬೆಟ್ಟದ ಗವಿಸ್ವಾಮಿಗಳು
೨. ಶ್ರೀ ಸಿದ್ಧಲಿಂಗಸ್ವಾಮಿಗಳು
೩. ಶರಣೆ ಗುಡ್ಡದ ಶರಣಮ್ಮ

ಇವರುಗಳು ಮಠದಲ್ಲಿ ಪಟ್ಟಾಧಿಕಾರಗೊಳ್ಳದೆ ಇಲ್ಲಿ ನೆಲೆಸಿ ಅನುಷ್ಠಾನಗೊಂಡು ಮುಂದೆ ಹೋಗಿದ್ದರು. ಈ ರೀತಿ ಹನ್ನೆರಡನೆಯ ಶತಮಾನದಿಂದಲೂ ಧರ್ಮಜಾಗೃತಿಯನ್ನು ಮೂಡಿಸುತ್ತಾ ಬಂದ ಈ ಪ್ರದೇಶಕ್ಕೆ ವಿರಕ್ತ ಸ್ವಾಮಿಗಳು ಆಗಮಿಸಿದ್ದಾರೆ. ಶ್ರೀ ವಿರಕ್ತ ಸ್ವಾಮಿಗಳು ಅರಸೀಕೆರೆ ತಾಲ್ಲೂಕಿನ ಜೇನುಕಲ್ಲು ಬೆಟ್ಟದ ಬಳಿಯ ಕೆಂಗಲ್ ಸಿದ್ಧಾಶ್ರಮದಲ್ಲಿ ನೆಲೆಸಿದ್ದರು. ಇವರನ್ನು ಕೆಲವು ಭಕ್ತರು ಬೆಟ್ಟದಹಳ್ಳಿ ಗವಿಮಠಕ್ಕೆ ಕರೆತಂದು ಧರ್ಮಪ್ರಚಾರಕ್ಕೆ ಹಾಗೂ ಧರ್ಮದ ಆಚರಣೆಗಳಿಗೆ ನೆರವಾಗುವಂತೆ ಮಾಡಿರುತ್ತಾರೆ. ವಿರಕ್ತ ಸ್ವಾಮಿಗಳು ಈ ಬೆಟ್ಟದಹಳ್ಳಿಯ ಗವಿಮಠದಲ್ಲಿ ಆರು ತಿಂಗಳು ಬದುಕಿದ್ದ ಸಂದರ್ಭದಲ್ಲಿ ಆಸ್ತಿಕರಿಗೆ ವೀರಶೈವ ಧರ್ಮದ ಬಗ್ಗೆ ತಿಳಿಹೇಳಿ, ಅವರ ಅಂಧಃಶ್ರದ್ಧೆಯನ್ನು ಖಂಡಿಸಿ ನಿಜವಾದ ಧರ್ಮದ ಬಗ್ಗೆ

ಅರ್ಥೈಸುತ್ತಿದ್ದರು. ಇವರ ಉಪದೇಶವನ್ನು ಕೇಳಲು ದೂರದ ಊರುಗಳಿಂದ ಬರುತ್ತಿದ್ದ ಭಕ್ತರು ಆಶೀರ್ವಾದ ಪಡೆದು ಹೋಗುತ್ತಿದ್ದರು. ಒಂದು ದಿನ ಮುಂಜಾನೆ ಲಿಂಗೈಕ್ಯರಾಗುವುದಾಗಿ ಭಕ್ತರಿಗೆ ಹೇಳಿ ಶಿವಪೂಜೆಗೆ ಕುಳಿತು ಲಿಂಗೈಕ್ಯರಾದರು. ಗವಿಮಠದಲ್ಲಿ ಇವರ ಸಮಾಧಿಯನ್ನು ಮಾಡಿ ಗದ್ದುಗೆಯನ್ನು ನಿರ್ಮಿಸಲಾಗಿದೆ.

ಇವರ ನಂತರ ಅನೇಕ ವರ್ಷಗಳ ಕಾಲ ಮಠಾಧೀಶ್ವರರಿಲ್ಲದೆ ಮಠವು ಖಾಲಿ ಉಳಿಯಿತು. ಈ ಸಂದರ್ಭದಲ್ಲಿ ಭಕ್ತರೇ ಭಜನೆ ಕಾರ್ಯಗಳನ್ನು ನಡೆಸಿ, ಈ ಕ್ಷೇತ್ರದಲ್ಲಿ ಧಾರ್ಮಿಕ ಆಚರಣೆಗಳನ್ನು ನಡೆಸಿ ಮಠದ ಜೀವಂತಿಕೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಸಿದ್ಧಗಂಗೆಯ ಶ್ರೀ ಶಿವಕುಮಾರ ಸ್ವಾಮಿಗಳಲ್ಲಿ ಈ ಮಠಕ್ಕೆ ಗುರುಗಳನ್ನು ನೇಮಿಸಿಕೊಡಬೇಕೆಂದು ಮನವಿ ಮಾಡಿಕೊಂಡರು. ಒಮ್ಮೆ ಸಿದ್ಧಗಂಗೆಯ ಜಂಗಮ ಜ್ಯೋತಿ ಶ್ರೀ ಶಿವಕುಮಾರ ಸ್ವಾಮಿಗಳು ಬೆಟ್ಟದಹಳ್ಳಿಗೆ ಬಂದು ಗವಿಮಠ ಮತ್ತು ಇಲ್ಲಿನ ಪರಿಸರವನ್ನು ನೋಡಿ, ಇಲ್ಲಿಗೆ ಜಂಗಮ ಮೂರ್ತಿಯು ಆವಶ್ಯಕತೆ ಇದೆ ಎಂದು ನಂದೀಶಯ್ಯ ಎಂಬ ವಟುವನ್ನು ನೇಮಿಸುವುದಾಗಿ ಭಕ್ತರಿಗೆ ಹೇಳಿದರು.

ತುಮಕೂರು ತಾಲ್ಲೂಕಿನ ಬೆಳ್ಳಾವೆ ಹೋಬಳಿಯ ಕೊಟ್ನಹಳ್ಳಿಯ ಶ್ರೀ ನಂಜುಂಡಪ್ಪನವರ ಐದನೆಯ ಪುತ್ರರಾದ ಕೆ. ಎಸ್. ನಂದೀಶಯ್ಯನವರು ಸಿದ್ಧಗಂಗಾ ಗುರುಕುಲದಲ್ಲಿ ಚಿಕ್ಕವಯಸ್ಸಿನಿಂದಲೇ ಕಲಿಕೆ ಆರಂಭಿಸಿದರು. ಸಿದ್ಧಗಂಗೆಗೆ ಬಂದಾಗಿನಿಂದ ಶ್ರೀ ಶಿವಕುಮಾರ ಸ್ವಾಮಿಗಳ ಕೃಪಾದೃಷ್ಟಿಗೆ ಬಿದ್ದು ಬೆಳೆದಿದ್ದರು.

೧೯೭೫ ರಲ್ಲಿ ಕನಕಪುರದ ಶ್ರೀ ಮಹಾಲಿಂಗ ಸ್ವಾಮಿಗಳ ಅಮೃತ ಹಸ್ತದಿಂದ ಷಟ್‌ಸ್ಥಲ ಉಪದೇಶ ಪಡೆದು ಸಿದ್ಧಗಂಗೆಯ ಶ್ರೀ ನಂದೀಶಯ್ಯನವರು ಶ್ರೀ ಚಂದ್ರಶೇಖರ ಸ್ವಾಮಿಗಳಾಗಿ ಅಭಿಧಾನ ಪಡೆದು ವಿರಕ್ತಾಶ್ರಮದ ಪಟ್ಟಾಧಿಕಾರ ಪಡೆದರು. ನಂತರ ಐದು ವರ್ಷಗಳ ಕಾಲ ವಿದ್ಯಾಭ್ಯಾಸವನ್ನು ಮುಂದುವರೆಸಿ ಡಾ. ಶ್ರೀ ಶಿವಕುಮಾರ ಸ್ವಾಮಿಗಳ ಆರೈಕೆಯಲ್ಲಿ ಬೆಳೆದು, ಅಪಾರ ವಿದ್ವತ್ತನ್ನು ಸಂಪಾದಿಸಿಕೊಂಡು, ೧೯೭೭ ರಲ್ಲಿ ಗವಿಮಠಕ್ಕೆ ಬಂದು ಪೂರ್ಣ ಅಧಿಕಾರವನ್ನು ಪಡೆದಿದ್ದಾರೆ. ಮಠದ ಪರಿಸ್ಥಿತಿ: ೧೯೭೭ ರಲ್ಲಿ ಮಠಕ್ಕೆ ಆಗಮಿಸಿದ ಗುರುಗಳನ್ನು ಶಿಥಿಲಗೊಂಡ ಮಠವು ಸ್ವಾಗತಿಸಿತು. ಅನೇಕ ವರ್ಷಗಳಿಂದ ಮಠಾಧ್ಯಕ್ಷರು ಇಲ್ಲದೆ ಸಹಜವಾಗಿಯೇ ಶಿಥಿಲಗೊಂಡ ಮಠದಲ್ಲಿ ಆಶ್ರಯ ಪಡೆದ ಶ್ರೀ ಚಂದ್ರಶೇಖರ ಸ್ವಾಮಿಗಳು ಆವಶ್ಯಕತೆಗೆ ಅನುಗುಣವಾಗಿ ಶಿಥಿಲಗೊಂಡ ಮಠವನ್ನು ಜೀರ್ಣಾಭಿವೃದ್ಧಿಗೊಳಿಸಿ, ೧೯೭೭ ರಲ್ಲಿ ಶ್ರೀ ಮಲ್ಲಿಕಾರ್ಜುನ ವಿದ್ಯಾಸಂಸ್ಥೆಯನ್ನು ಸ್ಥಾಪಿಸಿ ಮಠದಲ್ಲಿ ಒಂದು ಸಂಸ್ಕೃತ ಶಾಲೆಯನ್ನು ಪ್ರಾರಂಭಿಸಿ, ಮಠದಲ್ಲಿ ಪ್ರಾರ್ಥನಾ ಕಾರ್ಯಗಳು ನಡೆಯುವಂತೆ ಮಾಡಿದರು.

ಮಠದ ಅಭಿವೃದ್ಧಿ: ಮಠದಲ್ಲಿ ಹಿಂದಿನಿಂದ ನಡೆಯುತ್ತಾ ಬಂದಿದ್ದ ಭಜನೆಗಳಿಗೆ ಮತ್ತು ಧಾರ್ಮಿಕ ಆಚರಣೆಗಳಿಗೆ ಶಿಸ್ತುಬದ್ಧ ರೂಪುಕೊಟ್ಟು ಮಠದಲ್ಲಿ ಜೀವಕಳೆ ತಂದರು. ವೇದಿಕೆಯ ಮೇಲೆ ನಿಂತು ಉಪನ್ಯಾಸ ಮಾಡಿದರೆ, ಲೇಖನಗಳನ್ನು ಬರೆಸಿ ಹಂಚಿದರೆ ಈ ಸಮಾಜದ ಡೊಂಕು ಸರಿಯಾಗುವುದಿಲ್ಲ. ಆದ್ದರಿಂದ ಸಮಸ್ಯೆಯ ಮೂಲಕ್ಕೆ ಹೋಗಿ ಪರಿಹರಿಸಬೇಕು. ಹೀಗಾದಾಗ ಮಾತ್ರ ಸಮಸ್ಯೆಗಳಿಗೆ ಪರಿಹಾರ ದೊರೆತು ಆರೋಗ್ಯಕರ ವಾತಾವರಣ ಮೂಡುತ್ತದೆ ಎಂದು ನಂಬಿ, ಭಕ್ತರ ಬಳಿಗೆ ಹೋಗಿ ಸಮಸ್ಯೆಗಳನ್ನು ಪರಿಹರಿಸಿ ಧರ್ಮೋಪದೇಶ ನೀಡಲು ಮುಂದಾದರು. ಭಕ್ತರ ಸಂಘಟನೆಗೆ ಮುಂದಾಗಿ ಗುಬ್ಬಿಯ ಶ್ರೀ ಸಿದ್ಧರಾಮೇಶ್ವರ ಜಯಂತಿ ಉತ್ಸವದ ನೇತೃತ್ವವನ್ನು ವಹಿಸಿಕೊಂಡು ಅದ್ದೂರಿಯಾಗಿ ಆಚರಿಸಿದರು. ಸಮಾಜದಲ್ಲಿ ಧರ್ಮಪ್ರಜ್ಞೆ, ಸಂಘಟಿತ ಶಕ್ತಿ ಬಂದ ಮೇಲೆ ಮಠದ ಅಭಿವೃದ್ಧಿಗೆ ಹಂತಹಂತವಾಗಿ ಯೋಜನೆಗಳನ್ನು ರೂಪಿಸಿಕೊಂಡು, ಕೇವಲ ಕೆಲವೇ ವರ್ಷಗಳಲ್ಲಿ ಅದ್ದೂರಿಯಾಗಿ ಬೆಟ್ಟದಗವಿ ಮಠದ ಸಮುಚ್ಚಯವನ್ನು ನಿರ್ಮಾಣ ಮಾಡಿದರು.

ಶಿಕ್ಷಣ ಸೇವೆ: ೧೯೭೭ ರಲ್ಲಿ ಶ್ರೀ ಮಲ್ಲಿಕಾರ್ಜುನ ವಿದ್ಯಾಸಂಸ್ಥೆಯನ್ನು ಪ್ರಾರಂಭಿಸಿದ ಗುರುಗಳು ಬೆಟ್ಟದಹಳ್ಳಿಯಲ್ಲಿ ಪದವಿ ಪೂರ್ವ ಕಾಲೇಜು, ಬೆಟ್ಟದಹಳ್ಳಿ, ತಿಪ್ಪೂರು, ಚೇಳೂರು, ಕಡಬದಲ್ಲಿ ಪ್ರೌಢಶಾಲೆಗಳನ್ನು, ಬೆಟ್ಟದಹಳ್ಳಿ, ಚೇಳೂರು, ಮೂಗನಾ ಯಕನಕೋಟೆ, ತ್ಯಾಗಟೂರು, ದೊಡ್ಡಸಾರಂಗಿ ಮತ್ತು ತಿಪ್ಪೂರುಗಳಲ್ಲಿ ಸಂಸ್ಕೃತ ಪಾಠಶಾಲೆಗಳನ್ನು, ವೃತ್ತಿ ತರಬೇತಿ ಕೇಂದ್ರಗಳಾದ ಸರ್ವೆ ಕಾಲೇಜು, ಟೈಲರಿಂಗ್ ತರಬೇತಿಕೇಂದ್ರವನ್ನು ಪ್ರಾರಂಭಿಸಿದ್ದಾರೆ. ಚೇಳೂರು ಮತ್ತು ಕಡಬದಲ್ಲಿ

ಹಿರಿಯ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದ್ದಾರೆ. ಬೆಟ್ಟದಹಳ್ಳಿಯಲ್ಲಿ ಒಂದು ಕಾನ್ವೆಂಟ್ ಶಾಲೆಯನ್ನು ತೆರೆದಿದ್ದಾರೆ. ಶ್ರೀ ಸಿದ್ಧರಾಮೇಶ್ವರ ವಿದ್ಯಾರ್ಥಿನಿಲಯ ಮತ್ತು ಶ್ರೀ ಮಲ್ಲಿಕಾರ್ಜುನ ಅನಾಥಾಲಯವನ್ನು ಗವಿಮಠದಲ್ಲಿ ಪ್ರಾರಂಭಿಸಲಾಗಿದ್ದು ಇನ್ನೂರು ವಿದ್ಯಾರ್ಥಿ ಗಳಿಗೆ ಆಶ್ರಯವನ್ನು ಕಲ್ಪಿಸಿ ನೆರವಾಗಿದ್ದಾರೆ.

ಧಾರ್ಮಿಕ ಆಚರಣೆಗಳು: ಬೆಟ್ಟದ ನೆತ್ತಿಯ ಮೇಲೆ ಶ್ರೀ ಮಲ್ಲಿಕಾರ್ಜುನ ದೇವಸ್ಥಾನವಿದೆ. ಮಠದ ಸುತ್ತಮುತ್ತ ಅನೇಕ ಗವಿಗಳೂ ಇವೆ. ಇವುಗಳಲ್ಲಿ ಕೆಲವು ಶಿಥಿಲಗೊಂಡು ಕುಸಿದಿವೆ. ಸುಸ್ಥಿತಿಯಲ್ಲಿರುವ ಗವಿಯಲ್ಲಿ ರುದ್ರನಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಹಾಗೂ ಬೆಟ್ಟದ ಈ ಗವಿಯ ಪಕ್ಕದ ಬಯಲಿನಲ್ಲಿ ಬಿಸಿಲಿನ ಮಲ್ಲಪ್ಪ ಎಂಬ ಲಿಂಗಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಬೆಟ್ಟದ ಹಿಂಬದಿಯ ಒಂದು ಸ್ವಾಭಾವಿಕ ಗವಿಯೇ ಮೂಲ ಮಠ. ಈ ಮೂಲ ಮಠದ ಸುತ್ತ ಶ್ರೀ ಚಂದ್ರಶೇಖರ ಸ್ವಾಮಿಗಳು ಕೋಟ್ಯಾಂತರ ರೂಪಾಯಿಗಳ ವೆಚ್ಚದಲ್ಲಿ ಆಧುನಿಕ ಕಟ್ಟಡಗಳನ್ನು ನಿರ್ಮಿಸಿದ್ದಾರೆ.

ಈ ರೀತಿ ಆಧುನಿಕತೆಯ ರೂಪ ಪಡೆದ ಗವಿ ಮಠದಲ್ಲಿ ಶ್ರಾವಣ ಮತ್ತು ಕಾರ್ತೀಕ ಮಾಸಗಳಲ್ಲಿ ವಿಶೇಷ ಪೂಜೆಯನ್ನು ನೆಡೆಸಲಾಗುತ್ತಿದೆ. ಪ್ರತಿ ಹುಣ್ಣಿಮೆಯದಿನ ವಿಶೇಷ ಪೂಜೆ ಹಾಗೂ ಉಪನ್ಯಾಸಗಳು ನೆಡೆಯುತ್ತವೆ. ಬಸವಜಯಂತಿಯ ದಿನ ಲಿಂಗೈಕ್ಯ ಗುರುಗಳಾದ ವಿರಕ್ತಸ್ವಾಮಿಗಳ ಆರಾಧನೆಯನ್ನು ಮಾಡಲಾಗುತ್ತಿದೆ. ನಿತ್ಯ ಭಕ್ತರಿಗೆ ಅನ್ನದಾಸೋಹವನ್ನು ನಡೆಸಲಾಗುತ್ತಿದೆ. ತಿಂಗಳಿಗೆ ದಾಸೋಹಕ್ಕೆ ಇಪ್ಪತ್ತು ಚೀಲ ಅಕ್ಕಿ, ಇಪ್ಪತ್ತೈದು ಚೀಲ ರಾಗಿ ಬೇಕಾಗುತ್ತದೆ ಎಂದು ಗುರುಗಳು ಹೇಳುತ್ತಾರೆ.

ಸಾಹಿತ್ಯ: ಶರಣರ ವಚನಶಾಸ್ತ್ರದ ಅಧ್ಯಯನ ಕೇಂದ್ರವನ್ನು ೧೯೯೭ರಲ್ಲಿ ಪ್ರಾರಂಭಿಸಿ, ನಿಟ್ಟೂರಿನ ಸಮೀಪ ಬಿ.ಎಚ್. ರಸ್ತೆಯಲ್ಲಿ ಇದಕ್ಕೆ ಕಟ್ಟಡವನ್ನು ನಿರ್ಮಾಣ ಮಾಡಿದ್ದಾರೆ. ಶರಣ ಸಾಹಿತ್ಯದ ಬಗ್ಗೆ ಅಧ್ಯಯನ ಮಾಡುವ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ವಿಚಾರ ಸಂಕಿರಣಗಳನ್ನು ನಡೆಸುತ್ತಾ ಮುಕ್ತ ಚರ್ಚೆಗೆ ಅವಕಾಶವನ್ನು ಕಲ್ಪಿಸಿಕೊಟ್ಟು ಶರಣ ತತ್ತ್ವಗಳನ್ನು ಪ್ರಚಾರಗೊಳಿಸುತ್ತಿದ್ದಾರೆ. ಸಿದ್ಧರಾಮನ ಆಯ್ದ ನೂರೊಂದು ವಚನಗಳ ಸಂಗ್ರಹದ ಎರಡು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ವೀರಶೈವ ಪಂಚಾಚಾರದ ಬಗ್ಗೆ ಪುಸ್ತಕವನ್ನು ಪ್ರಕಟಿಸಿದ್ದಾರೆ.

ಈ ರೀತಿ ಧಾರ್ಮಿಕ, ಶೈಕ್ಷಣಿಕ ಮತ್ತು ಸಾಹಿತ್ಯಿಕವಾಗಿ ಮಠದಲ್ಲಿ ಚಟುವಟಿಕೆಗಳನ್ನು ನೆಡೆಸಿರುವ ಗುರುಗಳು, ಗುರು-ವಿರಕ್ತರ ಬಗ್ಗೆ ಸಾಮರಸ್ಯ ಮೂಡಬೇಕಾಗಿದೆ. ಗುರು-ಲಿಂಗ-ಜಂಗಮದಲ್ಲಿ ಭೇದ ಇಲ್ಲ. ಗುರು-ವಿರಕ್ತರಲ್ಲಿ ಆಚಾರ ವಿಚಾರಗಳು ಒಂದೇ ಆಗಿವೆ. ಈಗಿರುವ ಸಮಾಜದ ಒಳಿತಿಗಾಗಿ ಗುರು-ವಿರಕ್ತ ಎಂಬ ಭೇದ ಮರೆತು ಒಂದಾಗಬೇಕಾಗಿದೆ. ಇದು ಎಲ್ಲರಲ್ಲಿಯೂ ಮೂಡಬೇಕು ಎಂದು ಗುರುಗಳು ಕರೆ ಕೊಡುತ್ತಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಚಂದ್ರಶೇಖರ ಸ್ವಾಮಿಗಳು, ಶ್ರೀ ಗವಿಮಠ, ಬೆಟ್ಟದಹಳ್ಳಿ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ.
ಆಧಾರ: 'ಶಿವಯೋಗಿ ಶ್ರೀ' ಬೆಟ್ಟಹಳ್ಳಿ ಗವಿಮಠದ ಪ್ರಕಟಿತ ಸಂಚಿಕೆ

❑

ಚಿಕ್ಕನಾಯಕನಹಳ್ಳಿ ತಾಲ್ಲೂಕು

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ತೆಂಗು ಬೆಳೆಯಿಂದ ಶ್ರೀಮಂತಗೊಂಡಿದೆ. ಈ ತಾಲ್ಲೂಕಿನಲ್ಲಿ ವೀರಶೈವ ಧರ್ಮ ಪ್ರಬಲವಾಗಿ ಬೆಳೆದಿದೆ. ಇಲ್ಲಿ ಪ್ರಸ್ತುತ ಆರು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಕುಪ್ಪೂರು

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕುಪ್ಪೂರು, ತಾಲ್ಲೂಕು ಕೇಂದ್ರದ ನೈರುತ್ಯಕ್ಕೆ ಹದಿನಾಲ್ಕು ಕಿ.ಮೀ.ದೂರದಲ್ಲಿದೆ. ಧಾರ್ಮಿಕ ಸುಕ್ಷೇತ್ರವೆನಿಸಿರುವ ಇಲ್ಲಿ ಶ್ರೀ ಮರುಳಸಿದ್ಧೇಶ್ವರ ಗದ್ದುಗೆ ಮಠವು ಅಸ್ತಿತ್ವದಲ್ಲಿದೆ.

ಮರುಳಸಿದ್ಧೇಶ್ವರ ಗದ್ದುಗೆ ಮಠ: ಕುಪ್ಪೂರು ಗ್ರಾಮದ ಹೊರಭಾಗದಲ್ಲಿ ಶ್ರೀ ಮರುಳಸಿದ್ಧೇಶ್ವರ ಗದ್ದುಗೆ ಮಠವು ಹದಿನೆಂಟನೆಯ ಶತಮಾನದಲ್ಲಿ ಸ್ಥಾಪನೆಗೊಂಡು ನಾಡಿಗೆ ಧರ್ಮಪ್ರಭೆಯನ್ನು ಬೀರಿದೆ.

ಮಠ ಸ್ಥಾಪನೆಯ ಹಿನ್ನೆಲೆ: ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ನಿಡುವಳ್ಳಿ ಗ್ರಾಮದ ಬಸವಲಿಂಗಯ್ಯ ಮತ್ತು ಸಿದ್ಧಾಂಬೆಯವರ ಪುತ್ರರಾಗಿ ಶ್ರೀ ಮರುಳಸಿದ್ಧರು ಜಂಗಮ ಜ್ಯೋತಿಯಾಗಿ ಧರೆಗಿಳಿದರು.'ಬೆಳೆಯುವ ಸಿರಿ ಮೊಳಕೆಯಲ್ಲಿ' ಎನ್ನುವಂತೆ ತಮ್ಮ ಅಲೌಕಿಕ ಪ್ರಜ್ಞೆಯನ್ನು ತೋರ್ಪಡಿಸಿ ಆಧ್ಯಾತ್ಮ ಚಿಂತನೆಗೆ ತಮ್ಮ ಮನಸ್ಸನ್ನು ತೆರೆದಿಟ್ಟು, ಲೌಕಿಕ ವಿಚಾರಗಳು ಮನದೊಳಗೆ ಹೋಗದಂತೆ ತಡೆಯೊಡ್ಡಿದರು. ಪೂಜೆ ಹಾಗೂ ದೀನ ದಲಿತರ ಸೇವೆಯಲ್ಲಿ ದಿನಗಳನ್ನು ಕಳೆಯುತ್ತಿದ್ದ ಬಾಲಕ ಮರುಳಸಿದ್ಧರು ಧರ್ಮ ನೀತಿಯಿಂದ ನಿರ್ಲಿಪ್ತ ಬದುಕನ್ನು ಕಳೆಯತೊಡಗಿದ್ದರು.

ಚಿಕ್ಕವಯಸ್ಸಿನಲ್ಲೇ ಆಧ್ಯಾತ್ಮ ಚಿಂತನೆಯಲ್ಲಿ ತೊಡಗಿದ್ದ ಮರುಳಸಿದ್ಧರು ನಿಡುವಳ್ಳಿಯ ಹಿರೇಮಠಕ್ಕೆ ಸೂಕ್ತವ್ಯಕ್ತಿ ಎಂದು ತಿಳಿದ ಗ್ರಾಮಸ್ಥರು ಪಟ್ಟಾಧಿಕಾರ ಮಾಡಿದರು. ಶ್ರೀ ಮರುಳಸಿದ್ಧರು ಪಟ್ಟಾಧಿಕಾರದ ಹೆಸರಲ್ಲಿ ಒಂದೇ ಕಡೆ ಕುಳಿತು ಧರ್ಮಕಾರ್ಯಗಳನ್ನು ನಡೆಸದೆ, ಲೋಕಸಂಚಾರ ಮಾಡಿ ಜ್ಞಾನವನ್ನು ಸಂಪಾದಿಸಿ ಲೋಕೋದ್ಧಾರದ ಕೆಲಸ ಮಾಡಬೇಕು ಎಂದು ಅರಿತು ಪಟ್ಟಾಧಿಕಾರ ಪಡೆದ ಕೆಲವೇ ವರ್ಷಗಳಲ್ಲಿ ನಿಡುವಳ್ಳಿಯ ಮಠವನ್ನು ತ್ಯಜಿಸಿ ರಂಭಾಪುರಿ, ಶ್ರೀಶೈಲ, ಕಂಚಿ, ಕಾಳಹಸ್ತಿ, ಮಹಾನಂದಿ, ಕಲ್ಯಾಣ, ಕೇದಾರ ಈರೀತಿ ಅನೇಕ ಪುಣ್ಯ ಸ್ಥಳಗಳಿಗೆ ಭೇಟಿಕೊಟ್ಟು, ಅಲ್ಲಿನ ಜಂಗಮ ಮೂರ್ತಿಗಳ ದರ್ಶನವನ್ನು ಪಡೆದು, ಉಪದೇಶವನ್ನು ಆಲಿಸಿ ಅಪಾರ ಜ್ಞಾನವನ್ನು ಸಂಪಾದಿಸಿಕೊಂಡರು. ಜ್ಞಾನಸಿದ್ಧಿಯಾಗಿ, ಯೋಗಸಿದ್ಧಿ ಯಾಗಿ ಶಿವಯೋಗವನ್ನು ಗೆದ್ದು ಅನೇಕ ಪವಾಡಗಳನ್ನು ಮಾಡಿ ಉತ್ತರದ ಕಡೆಯಿಂದ ದಕ್ಷಿಣದ ಕಡೆಗೆ ಬಂದು ಕ್ಷೇತ್ರಕ್ಕೆ ಹಿಂದಿರುಗಿದರು. ಈ ಮಧ್ಯೆ ಚಿಕ್ಕಮಗಳೂರು ಜಿಲ್ಲೆಯ ಬುಕ್ಕಾಂಬುದಿ ಮತ್ತು ನಾರಣಾಪುರದಲ್ಲಿ ಅನುಷ್ಠಾನಗೊಂಡು ಪವಾಡಗಳನ್ನು ನಡೆಸಿ ಮಾದಾಪುರಕ್ಕೆ ಬಂದು ಅನೇಕ ದಿನಗಳ ಕಾಲ ವೇದಾವತಿನದಿಯ ಎಡಬದಿಯ ದಂಡೆಯಲ್ಲಿ ಅನುಷ್ಠಾನ ಗೊಂಡು ಅನೇಕ ಪವಾಡಗಳನ್ನು ನಡೆಸಿದರು. ಈ ರೀತಿ ನಾಡನ್ನೆಲ್ಲಾ ಸುತ್ತಿ ಕೆಂಕೆರೆಯಲ್ಲಿ ಅನುಷ್ಠಾನಗೊಂಡು ಚಿಕ್ಕಬಿದರೆ, ದೊಡ್ಡಬಿದರೆ, ಚಿಕ್ಕನಾಯಕನಹಳ್ಳಿ ಮಾರ್ಗವಾಗಿ ಕುಪ್ಪೂರಿಗೆ ಬಂದು ನೆಲೆಸುತ್ತಾರೆ. ಇಲ್ಲಿ ನೆಲೆಸಿ ದೀರ್ಘಕಾಲ ಅನುಷ್ಠಾನ ಗೊಳ್ಳುತ್ತಾರೆ. ಕುಪ್ಪೂರಿನ ಚನ್ನೇಗೌಡರು ಮರುಳಸಿದ್ಧರ ಭಕ್ತರಾಗಿ ಗುರುಗಳ ಸೇವೆ ಮಾಡಿಕೊಂಡು ಇರತೊಡಗಿದರು. ಕುಪ್ಪೂರು ಗ್ರಾಮ ಹಾಗೂ ಸುತ್ತಲಿನ ಗ್ರಾಮದ ಜನರು ಮರುಳಸಿದ್ಧರ ಭಕ್ತರಾಗಿ ಸೇವೆಯನ್ನು ಮಾಡತೊಡಗಿದರು.

ಶ್ರೀ ಗುರು ಮರುಳಸಿದ್ಧರು ಅನುಷ್ಠಾನಮೂರ್ತಿಗಳಾಗಿ ಧರ್ಮವನ್ನು ಈ ನೆಲದಲ್ಲಿ ಸಾಕಾರಗೊಳಿಸಿ ಭಕ್ತರನ್ನು ಸನ್ಮಾರ್ಗದಲ್ಲಿ ಮುನ್ನಡೆಸಿದರು. ಇವರ ಪವಾಡಗಳನ್ನು ಮತ್ತು ಧಾರ್ಮಿಕ ಪ್ರಬುದ್ಧತೆಯನ್ನು ನೋಡಿ ಎಲ್ಲಾ ವರ್ಗದ ಜನರು ಇವರ ಭಕ್ತರಾಗಿದ್ದರು. ಇವರಲ್ಲಿ ಮುಸ್ಲಿಂ ಹೈದರ್‌ಖಾನ್ ಎಂಬಾತನು ಪ್ರಮುಖನಾಗಿದ್ದನು. ಈ ರೀತಿ ಭಕ್ತರ ಸಂಪತ್ತನ್ನು ಗಳಿಸಿಕೊಂಡಿದ್ದ ಶ್ರೀ ಮರುಳಸಿದ್ಧರು ಧಾರ್ಮಿಕ ಕಾರ್ಯಗಳನ್ನು ಮುನ್ನಡೆಸುವಂತೆ ಹೇಳಿ ಭಕ್ತರಿಗೇ ಜವಾಬ್ದಾರಿಯನ್ನು ಕೊಟ್ಟು ನಿರ್ವಿಕಲ್ಪ ಸಮಾಧಿಯಾದರು. ತಮ್ಮ ಬದುಕಿಗೆ ಧರ್ಮಸಂಸ್ಕಾರ ನೀಡಿದ್ದ ಗುರುಗಳು ಐಕ್ಯರಾದ

ಮೇಲೆ ಅವರ ಪರಮ ಭಕ್ತರಾಗಿದ್ದ ಚನ್ನೇಗೌಡರು, ಮರುಳಸಿದ್ಧರ ಸಮಾಧಿಯ ಎದುರೇ ಲಿಂಗೈಕ್ಯರಾದರು.

ಮಠ ಸ್ಥಾಪನೆ: ಶ್ರೀ ಮರುಳಸಿದ್ಧೇಶ್ವರರು ನಿರ್ವಿಕಲ್ಪ ಸಮಾಧಿಯಾದ ತಾಣವು ಧರ್ಮಕ್ಷೇತ್ರವಾಗಿ ರೂಪುಗೊಂಡಿತು. ನಾಡಿನಾದ್ಯಂತ ಭಕ್ತಾದಿಗಳನ್ನೂ ಆಕರ್ಷಿಸಿತು. ಇಲ್ಲಿ ತ್ರಿಕಾಲ ಪೂಜೆ, ನಿತ್ಯ ದಾಸೋಹ ವ್ಯವಸ್ಥೆಗೊಂಡವು. ಮರುಳಸಿದ್ಧೇಶ್ವರರ ಭಕ್ತನಾಗಿದ್ದ ಹೈದರ್‌ಖಾನ್ ಎಂಬಾತನು ಗುರುಗಳ ನಿರ್ವಿಕಲ್ಪ ಗದ್ದುಗೆಗೆ ಕಲ್ಲಿನ ಮಂಟಪವನ್ನು ಕಟ್ಟಿಸಿದ್ದಾನೆ. ಈ ರೀತಿ ಒಂದೊಂದೇ ಕಾರ್ಯಗಳು ನಡೆಯತೊಡಗಿ, ಧಾರ್ಮಿಕ ಸುಕ್ಷೇತ್ರವಾಗಿ ಬೆಳೆಯತೊಡಗಿತು. ದಿನದಿಂದದಿನಕ್ಕೆ ಹೆಚ್ಚಾದ ವ್ಯವಸ್ಥೆಗೆ ಮೇಲ್ವಿಚಾರಣೆ ನೋಡಿಕೊಳ್ಳಲು ಸಮರ್ಥ ಗುರುಗಳು ಅವಶ್ಯ ಎಂದು ಅರಿತು ಶ್ರೀ ಮರುಳಸಿದ್ಧೇಶ್ವರರ ಗದ್ದುಗೆ ಮಠಕ್ಕೆ ಶ್ರೀ ನಂಜುಂಡ ದೇವರನ್ನು ಪಟ್ಟಾಧಿಕಾರಿಗಳನ್ನಾಗಿ ನೇಮಕಮಾಡಲಾಯಿತು.

ಪರಂಪರೆ:

೧. ಷ.ಬ್ರ.ಶ್ರೀ ಶಿವಯೋಗಿ ಮರುಳಸಿದ್ಧೇಶ್ವರರು
೨. ಷ.ಬ್ರ.ಶ್ರೀ ನಂಜುಂಡ ದೇವರು
೩. ಷ.ಬ್ರ.ಶ್ರೀ ಚೆನ್ನವೀರ ದೇವರು
೪. ಷ.ಬ್ರ.ಶ್ರೀ ಬಸವಲಿಂಗಾರಾಧ್ಯರು
೫. ಷ.ಬ್ರ.ಶ್ರೀ ಗುರುಬಸವ ದೇಶಿಕರು
೬. ಷ.ಬ್ರ.ಶ್ರೀ ಬಸವ ಮರಿಗಳು
೭. ಷ.ಬ್ರ.ಶ್ರೀ ಮರುಳಮರಿಗಳು
೮. ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ಯತೀಶ ಶಿವಾಚಾರ್ಯಸ್ವಾಮಿಗಳು (ಈಗಿನ ಪಟ್ಟಾಧಿಕಾರಿಗಳು)

ಈ ರೀತಿ ಗುರು ಪರಂಪರೆಯು ಬೆಳೆದು ಬಂದಿದೆ. ರಂಭಾಪುರಿ ಪೀಠದ ಶಾಖಾಮಠವಾಗಿ ಬೆಳೆದು ವೀರಶೈವ ಧರ್ಮವನ್ನು ಬೆಳೆಸಿ ಜನಮನಕ್ಕೆ ಹತ್ತಿರವಾಗಿದೆ. ಗುರುಪರಂಪರೆಯ ಆರನೆಯ ಗುರುಗಳ ತನಕ ಮಠದ ಧಾರ್ಮಿಕ ಕಾರ್ಯಗಳು ಒಬ್ಬರ ಕಾಲಕ್ಕಿಂತ ಮತ್ತೊಬ್ಬರ ಕಾಲದಲ್ಲಿ ಅಭಿವೃದ್ಧಿಗೊಳ್ಳುತ್ತಾ ಬಂದವು. ಆದರೆ ಮರುಳ ಮರಿಗಳ ಕಾಲದಲ್ಲಿ ಮಠದಲ್ಲಿ ಧಾರ್ಮಿಕ ಕಾರ್ಯಗಳು ಕುಂಠಿತಗೊಂಡ ಬಗ್ಗೆ ಉಲ್ಲೇಖ ದೊರೆಯುತ್ತದೆ.ಈ ಸಂದರ್ಭದಲ್ಲಿ ನಂಜಮಾಂಬೆ ಎಂಬುವರು ಮಠದ ಧಾರ್ಮಿಕ ಕಾರ್ಯಗಳನ್ನು ಭಕ್ತಿಯಿಂದ ನಡೆಸಿ ಮಠದ ಇತಿಹಾಸದಲ್ಲಿ ದಾಖಲಾಗಿದ್ದಾರೆ.

ಒಡೆದ ಕೆರೆ: ೧೯೬೧ ರಲ್ಲಿ ಕುಪ್ಪೂರು ಹಾಗೂ ಸುತ್ತಮುತ್ತ ಮಾಯದಂಥ ಮಳೆ ಬಂದು ಈ ಭಾಗದ ಕೆರೆಗಳೆಲ್ಲಾ ಒಡೆದು ಮಠದ ಹಿಂಭಾಗದಲ್ಲಿದ್ದ ಕೆರೆಗೆ ನೀರು ಹರಿದು ಬರುತ್ತಿತ್ತು. ಇದರಿಂದ ಈ ಕೆರೆಯೂ ಒಡೆಯುವುದು ನಿಶ್ಚಿತವಾದಾಗ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಮರುಳಸಿದ್ಧೇಶ್ವರರಿಗೆ ಮಂಗಳಾರತಿಯನ್ನು ಮಾಡಿ ತುಂಬಿದ ಕೆರೆಗೆ ಕರ್ಪೂರವನ್ನು ಹಚ್ಚಿ ತೇಲಿ ಬಿಟ್ಟು, ಏಕಚಿತ್ತದಿಂದ ಕೆರೆ ಏರಿಯ ಮೇಲೆ ಕುಳಿತರು. ನಿರೀಕ್ಷಿಸಿದಂತೆ ಕೆರೆ ಒಡೆದು ಮಠವು ನೀರಿನಿಂದ ಮುಚ್ಚಿ ಹೋಯಿತು. ತೆಂಗಿನ ಮರಗಳು ಬೇರು ಸಮೇತ ಕಿತ್ತು ಜಲಪ್ರಳಯದಲ್ಲಿ ಕೊಚ್ಚಿ ಹೋದವು. ನೀರಿನ ಭೋರ್ಗರೆತ ಕಡಿಮೆಯಾಗಿ ಒಡೆದ ಕೆರೆಯಲ್ಲಿ ಹರಿಯುವ ನೀರು ಕಡಿಮೆಯಾದ ಮೇಲೆ ಮಠದ ಕಟ್ಟಡವು ಒಂದಿಂಚೂ ಮುಕ್ಕಾಗದೆ ನಿಂತಿದ್ದನ್ನು ನೋಡಿದ ಜನರು ಆಶ್ಚರ್ಯಗೊಂಡರು. ಇದೊಂದು ಪವಾಡವೆಂದು ಈಗಲೂ ಬಣ್ಣಿಸುವುದು ಕೇಳಿಬರುತ್ತಿದೆ.

ವಿದೇಶಕ್ಕೆ ಪ್ರಯಾಣ: ಗುರುಗಳು ೧೯೮೯ ರ ಏಪ್ರಿಲ್ ನಾಲ್ಕರಂದು ಸಿಂಗಾಪೂರ್, ಹಾಂಗ್‌ಕಾಂಗ್, ಬ್ಯಾಂಕಾಕ್ ಮಾರ್ಗವಾಗಿ ಅಮೆರಿಕಾ, ಕೆನಡಾ ದೇಶಗಳಲ್ಲಿ ನಾಲ್ಕು ತಿಂಗಳು ಪ್ರವಾಸಮಾಡಿ, ಎಂಟು ಸ್ಥಳಗಳಲ್ಲಿ ನೂರಾರು ಭಕ್ತರಿಗೆ ವೀರಶೈವ ಧರ್ಮದ ಬಗ್ಗೆ ಉಪದೇಶ ನೀಡಿ ಬಂದಿರುತ್ತಾರೆ.

ಉತ್ತರಾಧಿಕಾರಿ ನೇಮಕ: ಅರವತ್ತಾರು ವರ್ಷಗಳ ದೀರ್ಘಕಾಲ ಮಠದ ಆಡಳಿತವನ್ನು ನೋಡಿಕೊಂಡು ಮಠವನ್ನು ಸರ್ವ ರೀತಿಯಲ್ಲೂ ಸುವ್ಯವಸ್ಥೆಗೆ ತಂದು, ಮಠಕ್ಕೆ ಆರ್ಥಿಕ ಸದೃಢತೆಯನ್ನು ಕೊಟ್ಟ ಹಿರಿಯ ಚೇತನ ಶ್ರೀ ಚಂದ್ರಶೇಖರ

ಶಿವಾಚಾರ್ಯ ಸ್ವಾಮಿಗಳು ತಮ್ಮ ಸಹೋದರ ಸಂಬಂಧಿ ಲಿಂಗೈಕ್ಯ ಶ್ರೀ ವ್ಯೋಮ ಕೇಶವಮೂರ್ತಿಯವರ ಕಿರಿಯ ಪುತ್ರರಾದ ಶ್ರೀಯತೀಶರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕಮಾಡಿಕೊಂಡು, ೧೯೬೦ರ ಡಿಸೆಂಬರ್ ಎರಡರಂದು ಶ್ರೀ ಯತೀಶ ಶಿವಾಚಾರ್ಯ ಸ್ವಾಮಿಗಳೆಂದು ಅಭಿಧಾನವಿತ್ತು ಪಟ್ಟಾಧಿಕಾರವನ್ನು ಮಾಡಿಸಿದರು.. ರಂಭಾಪುರಿ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಕಾಶಿ ಜಗದ್ಗುರುಗಳು ಪಟ್ಟ ಪ್ರದಾನಮಾಡಿ ಆಶೀರ್ವದಿಸಿ ವಿಶ್ರಾಂತ ಜೀವನ ನಡೆಸಿದರು. ಇಂತಹ ಹಿರಿಯ ಚೇತನ ೨೦೦೧ರಲ್ಲಿ ಲಿಂಗೈಕ್ಯರಾದರು. ಹಿರಿಯ ಗುರುಗಳ ಸಮ್ಮುಖದಲ್ಲಿ ಪಟ್ಟಾಧಿಕಾರ ಪಡೆದ ಶ್ರೀ ಯತೀಶ ಶಿವಾಚಾರ್ಯಸ್ವಾಮಿಗಳು ವೀರಶೈವ ತತ್ವಗಳು ಮತ್ತು ಆಚಾರ ವಿಚಾರಗಳ ಬಗ್ಗೆ ಅಧ್ಯಯನವನ್ನು ನಡೆಸಿದ್ದು ಮಠದ ಪರಂಪರೆಯನ್ನು ಮುನ್ನಡೆಸುತ್ತಾ ಬಂದಿದ್ದಾರೆ. ಕ್ರಿಯಾಶೀಲ ಗುಣಗಳನ್ನು ಮೈಗೂಡಿಸಿಕೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿದ್ದಾರೆ.

ಧಾರ್ಮಿಕ ಕಾರ್ಯ: ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ ಕಾರ್ಯ ನಿತ್ಯ ನಡೆಯುವುದು ಒಂದು ವಿಶೇಷ. ಈ ಬಿಲ್ವಾರ್ಚನೆ ಕಾರ್ಯವು ನಿರಂತರವಾಗಿ ನಡೆಯಬೇಕು ಎಂಬ ಮಹದಾಕಾಂಕ್ಷೆಯಿಂದ ಶ್ರೀ ಚಂದ್ರಶೇಖರ ಸ್ವಾಮಿಗಳು ೩೬೫ ಜನರಿಂದ ತಲಾ ಒಂದು ಸಾವಿರ ರೂಗಳನ್ನು ವಂತಿಗೆ ಪಡೆದು ಈ ಹಣವನ್ನು ಠೇವಣಿಯಾಗಿ ಇರಿಸಿ ಬಂದ ಬಡ್ಡಿಯಿಂದ ರುದ್ರಾಭಿಷೇಕ ಮತ್ತು ಬಿಲ್ವಾರ್ಚನೆ ಕಾರ್ಯವು ಪ್ರತಿದಿನ ಒಬ್ಬೊಬ್ಬರ ಹೆಸರಿನಲ್ಲಿ ನಿರಂತರವಾಗಿ ನಡೆಯುತ್ತಾ ಬರುವಂತೆ ಮಾಡಿಸಿರುತ್ತಾರೆ. ಪ್ರತಿವರ್ಷ ಕಾರ್ತೀಕೋತ್ಸವ ಬಹಳ ವಿಜೃಂಭಣೆಯಿಂದ ನಡೆಯುತ್ತಿದೆ.

ಶ್ರಾವಣಮಾಸದ ಒಂದು ತಿಂಗಳ ಅನುಷ್ಠಾನ ಜನಪ್ರಿಯವಾಗಿದೆ. ಪೂಜೆಯ ನಂತರ ಎಲ್ಲಾ ವರ್ಗದ ಜನರ ಜತೆ ಸಹಪಂಕ್ತಿಯಲ್ಲಿ ಭೋಜನ ಸ್ವೀಕರಿಸುವ ರೀತಿ ಅನುಕರಣೀಯವಾಗಿದೆ. ನಿತ್ಯ ಕನಿಷ್ಠ ಐವತ್ತರಿಂದ ಅರವತ್ತು ಜನರಿಗೆ ಅನ್ನ ದಾಸೋಹ ನಡೆದೇ ಇರುತ್ತದೆ. ವಿಶೇಷ ಸಂದರ್ಭಗಳಲ್ಲಿ ೧೦೦ ರಿಂದ ೧೫೦ ಜನರಿಗೆ ಅನ್ನದಾಸೋಹ ನಡೆಯುತ್ತಿದೆ. ಕಾರ್ತೀಕೋತ್ಸವ, ಜಾತ್ರೆ ಸಂದರ್ಭಗಳಲ್ಲಿ ಸಾವಿರಾರು ಜನರಿಗೆ ಅನ್ನದಾಸೋಹ ನಡೆಯುತ್ತದೆ. ಪ್ರತಿ ಮಾಗಶಿರಶುದ್ಧ ಪೂರ್ಣಿಮೆಯಲ್ಲಿ ಜಾತ್ರೆ ನಡೆಯುತ್ತಿದೆ. ಅಂದು ಪಟ್ಟದ ಬಸವನಿಗೆ ಅಲಂಕಾರ ಮಾಡಿ ವೃಷಭೋತ್ಸವವನ್ನು ಆಚರಣೆ ಮಾಡಲಾಗುತ್ತಿದೆ. ಅಲಂಕಾರ ಮಾಡಿದ ವೃಷಭನನ್ನು ಮುಂದೆ ಬಿಟ್ಟು ಉತ್ಸವ ಹಿಂದೆ ಹೋಗುತ್ತದೆ. ಸಂಜೆ ಧಾರ್ಮಿಕ ಸಭೆ ನಡೆಯುತ್ತಿದೆ. ಅಂದಿನ ಮಹಾ ದಾಸೋಹ ಕಾರ್ಯದಲ್ಲಿ ಸುಮಾರು ೨೦೦೦ ಜನ ಭಾಗವಹಿಸುತ್ತಾರೆ.

ಸಾಹಿತ್ಯ ಸೇವೆ: ಶ್ರೀ ಗುರುಮರುಳಸಿದ್ಧೇಶ್ವರ ಮಹಾಪುರಾಣ, ಸಾಮರಸ್ಯದ ಶಿಲ್ಪಿ, ಅಷ್ಟೋತ್ತರ ನಾಮಾವಳಿ, ಮರುಳ ಸಿದ್ಧೇಶ್ವರ ಸುಪ್ರಭಾತ ಹಾಗೂ ಭಕ್ತಿಗೀತೆಗಳ ಧ್ವನಿಸುರುಳಿಗಳು ಪ್ರಕಟವಾಗಿವೆ. ಅಲ್ಲದೆ ಪ್ರತಿ ವರ್ಷಮಠದ ಕಾರ್ತೀಕೋತ್ಸವ ದಲ್ಲಿ ವಿಶೇಷ ಸಂಚಿಕೆಯನ್ನು ಹೊರತಂದು ಅನೇಕ ಧಾರ್ಮಿಕ ವಿಚಾರಗಳ ಬಗ್ಗೆ ಲೇಖನಗಳನ್ನು ಪ್ರಕಟಿಸುವುದು ರೂಢಿಗತ ವಾಗಿದೆ. ಈ ರೀತಿ ಧಾರ್ಮಿಕ,ಸಾಮಾಜಿಕ ಹಾಗೂ ಸಾಹಿತ್ಯಿಕವಾಗಿ ಬೆಳೆದ ಮಠವು ನಾಡಿನ ಜನರ ಅಂಧಕಾರವನ್ನು ತೊಲಗಿಸಲು ಪ್ರಯತ್ನ ನಡೆಸಿದೆ.

ವಿಳಾಸ:ಷ.ಬ್ರ.ಶ್ರೀ ಯತೀಶ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕುಪ್ಪೂರು ಗದ್ದುಗೆಮಠ, ಕುಪ್ಪೂರು, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ.
ಆಧಾರ: 'ಸಾಮರಸ್ಯದ ಶಿಲ್ಪಿ' ಲೇಖಕರು : ಸಾ.ಶಿ.ಮರುಳಯ್ಯ. 'ಮರುಳಸಿದ್ಧ' ಸ್ಮರಣ ಸಂಚಿಕೆ.

ಗೋಡೆಕೆರೆ

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಗೋಡೆಕೆರೆಯು ಅಭಿವೃದ್ಧಿಶೀಲ ಗ್ರಾಮವಾಗಿದೆ. ಈ ಗ್ರಾಮವು ತಾಲ್ಲೂಕು ಕೇಂದ್ರದ ಆಗ್ನೇಯಕ್ಕೆ ಹದಿನೆಂಟು ಕಿ.ಮೀ. ದೂರದಲ್ಲಿದೆ. ಇಲ್ಲಿ ಸಂಸ್ಥಾನದ ಸ್ಥಿರ ಪಟ್ಟಾಧ್ಯಕ್ಷರಮಠ ಮತ್ತು ಚರ ಪಟ್ಟಾಧ್ಯಕ್ಷರ ಮಠಗಳು ಸ್ಥಾಪನೆಯಾಗಿ ಈ ಕ್ಷೇತ್ರವನ್ನು ಧರ್ಮದ ತಳಹದಿಯ ಮೇಲೆ ಬೆಳೆಸಿವೆ.

ಸಂಸ್ಥಾನ ಸ್ಥಿರ ಪಟ್ಟಾಧ್ಯಕ್ಷರ ಮಠ: ೧೬೭೨ ರ ಸುಮಾರಿಗೆ ಶ್ರೀಮದ್ ರಂಭಾಪುರಿ ಪೀಠದ ಜಗದ್ಗುರುಗಳಾದ ಶ್ರೀಶಾಂತದೇಶಿಕೇಂದ್ರ ಸ್ವಾಮಿಗಳು ಲೋಕ ಸಂಚಾರದಲ್ಲಿದ್ದಾಗ ಗೋಡೆಕೆರೆಗೆ ಆಗಮಿಸಿ ಪಟ್ಟದ ಮಠವನ್ನು ಸ್ಥಾಪನೆ

ಮಾಡಿರುತ್ತಾರೆ. ಅಲ್ಲಿ ಎಂಟು ವರ್ಷಗಳ ಕಾಲ ಅನುಷ್ಠಾನಗೊಂಡು ೧೬೮೦ ರಲ್ಲಿ ಶ್ರೀ ಶಿವನಂಜುಂಡ ದೇಶಿಕೇಂದ್ರ ಸ್ವಾಮಿಗಳನ್ನು ಪಟ್ಟಾಧಿಕಾರಕ್ಕೆ ತಂದು ರಂಭಾಪುರಿ ಪೀಠಕ್ಕೆ ಹಿಂದಿರುಗುತ್ತಾರೆ.

ಪ್ರಾರಂಭದಲ್ಲಿ ಗೋಡೆಕೆರೆ ಮತ್ತು ಅರಸೀಕೆರೆಯಲ್ಲಿ ಸ್ಥಾಪನೆಗೊಂಡ ಎರಡೂ ಮಠಗಳ ಆಡಳಿತವನ್ನು ನೋಡಿಕೊಳ್ಳುತ್ತಾ ಶ್ರೀಶ್ರೀಶ್ರೀ ಶಿವನಂಜುಂಡ ದೇಶಿಕೇಂದ್ರ ಸ್ವಾಮಿಗಳು ಮಠದ ಅಭಿವೃದ್ಧಿಗೆ ಶ್ರಮಿಸಿರುತ್ತಾರೆ. ವೀರಶೈವ ಧರ್ಮ ಸಮಾಜದಲ್ಲಿ ನೆಲೆಗೊಳ್ಳುವಂತೆ ಮಾಡಿ ಮಠವು ಸುವ್ಯವಸ್ಥಿತವಾಗಿ ನಡೆದುಕೊಂಡು ಹೋಗುವಂತೆ ಭದ್ರ ಬುನಾದಿಯನ್ನು ಹಾಕಿ ಬೆಳೆಸಿರುತ್ತಾರೆ.

ಬೆಳೆದ ಪರಂಪರೆ:

೧.	ಶ್ರೀ ಶ್ರೀ ಶ್ರೀ ಶಿವನಂಜುಂಡ ದೇಶಿಕೇಂದ್ರಸ್ವಾಮಿಗಳು	(ಕ್ರಿ.ಶ.೧೬೮೦)
೨.	ಶ್ರೀ ಶ್ರೀ ಶ್ರೀ ಗುರುಸಿದ್ಧ ದೇಶಿಕೇಂದ್ರಸ್ವಾಮಿಗಳು	(ಕ್ರಿ.ಶ.೧೭೧೦)
೩.	ಶ್ರೀ ಶ್ರೀ ಶ್ರೀ ಸಿದ್ಧಬಸವ ದೇಶಿಕೇಂದ್ರಸ್ವಾಮಿಗಳು	(ಕ್ರಿ.ಶ೧೭೫೦)
೪.	ಶ್ರೀ ಶ್ರೀ ಶ್ರೀ ಸಿದ್ಧರಾಮ ದೇಶಿಕೇಂದ್ರಸ್ವಾಮಿಗಳು	(ಕ್ರಿ.ಶ೧೭೮೦)
೫.	ಶ್ರೀ ಶ್ರೀ ಶ್ರೀ ಬಸವಪ್ರಭುಸ್ವಾಮಿಗಳು	(ಕ್ರಿ.ಶ೧೮೨೦)
೬.	ಶ್ರೀ ಶ್ರೀ ಶ್ರೀ ಎರಡನೆಯಗುರುಸಿದ್ಧ ದೇಶಿಕೇಂದ್ರಸ್ವಾಮಿಗಳು	(ಕ್ರಿ.ಶ೧೯೬೮)
೭.	ಶ್ರೀ ಶ್ರೀ ಶ್ರೀ ಚಂದ್ರಶೇಖರ ಭಾರತಿಸ್ವಾಮಿಗಳು	(ಕ್ರಿ.ಶ೧೯೪೯)
೮.	ಶ್ರೀ ಶ್ರೀ ಶ್ರೀ ಎರಡನೆಯ ಸಿದ್ಧರಾಮ ದೇಶಿಕೇಂದ್ರಸ್ವಾಮಿಗಳು	(ಕ್ರಿ.ಶ೧೯೭೫) (ಈಗಿನವರು)

ಈ ರೀತಿ ಮಠದ ಪರಂಪರೆಯು ಬೆಳೆದು ಈತನಕ ಮುಂದುವರಿದಿದೆ. ಶ್ರೀ ಶಿವನಂಜುಂಡ ದೇಶಿಕೇಂದ್ರ ಸ್ವಾಮಿಗಳ ನಂತರ ಶ್ರೀ ಗುರುಸಿದ್ಧ ದೇಶಿಕೇಂದ್ರ ಸ್ವಾಮಿಗಳು (೧೭೧೦) ಮಠವನ್ನು ಬೆಳೆಸಿದ್ದಲ್ಲದೆ ಸಿದ್ಧರಾಮೇಶ್ವರ ದೇವಾಲಯದ ಅಭಿವೃದ್ಧಿಗೆ ಶ್ರಮಿಸಿದರು. ಗುರುಗಳು ದೇವಾಲಯದಲ್ಲೇ ನೆಲೆಸಿ ಆಧ್ಯಾತ್ಮದ ಒಲವಿನಿಂದ ತಪೋನುಷ್ಠಾನಗೊಂಡು ಗೋಡೆಕೆರೆ ಮತ್ತು ಸುತ್ತುಮುತ್ತಲ ಗ್ರಾಮಗಳಲ್ಲಿ ಜನಪ್ರಿಯರಾದರು. ನಂತರ ಬಂದ ಶ್ರೀ ಸಿದ್ಧಬಸವ ದೇಶಿಕೇಂದ್ರ ಸ್ವಾಮಿಗಳೂ (೧೭೫೦) ಸಹ ಹಿರಿಯ ಗುರುಗಳ ದಾರಿಯಲ್ಲಿ ನಡೆದು ಮಠ ಮತ್ತು ಶ್ರೀ ಸಿದ್ಧರಾಮೇಶ್ವರ ದೇವಸ್ಥಾನವನ್ನು ತಮ್ಮ ಕಾಲಾವಧಿಯಲ್ಲಿ ಬೆಳೆಸಿ ೧೭೮೦ರಲ್ಲಿ ಶ್ರೀ ಸಿದ್ಧರಾಮ ದೇಶಿಕೇಂದ್ರ ಸ್ವಾಮಿಗಳಿಗೆ ಅಧಿಕಾರ ನೀಡಿ ಲಿಂಗೈಕ್ಯರಾಗಿದ್ದಾರೆ. ನಂತರ ಬಂದ ಶ್ರೀ ಸಿದ್ಧರಾಮ ಸ್ವಾಮಿಗಳು ಮಠ ಮತ್ತು ದೇವಾಲಯಗಳಿಗೆ ಜೀವಂತಿಕೆಯನ್ನು ತುಂಬಿ ೧೮೨೦ ರಲ್ಲಿ ಪಟ್ಟದ ಶ್ರೀ ಬಸವ ಪ್ರಭು ಸ್ವಾಮಿಗಳಿಗೆ ಅಧಿಕಾರವನ್ನು ನೀಡಿ ಲಿಂಗೈಕ್ಯರಾಗಿರುತ್ತಾರೆ.

ಅಭಿವೃದ್ಧಿಯ ರೂವಾರಿ: ಮಹಾ ಮೇಧಾವಿಗಳಾದ ಶ್ರೀ ಬಸವಪ್ರಭುಸ್ವಾಮಿಗಳು ವೀರಶೈವ ಧರ್ಮದ ಬೆಳವಣಿಗೆಗೆ ಬಹಳವಾಗಿ ಶ್ರಮಿಸಿದ್ದಾರೆ. ಸಂಸ್ಕೃತ, ವೇದ, ಆಗಮಗಳಲ್ಲಿ ಅಪಾರ ಜ್ಞಾನ ಸಂಪಾದಿಸಿಕೊಂಡಿದ್ದ ಇವರ ವಿದ್ವತ್ತಿಗೆ ಮನಸೋತ ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರು ೧೮೨೬ರಲ್ಲಿ ಅರಮನೆಗೆ ಕರೆಸಿ ಗೌರವಿಸಿ ಅನೇಕ ಬಿರುದಾವಳಿಗಳನ್ನು ನೀಡಿ ಕಳುಹಿಸಿಕೊಟ್ಟರು.

ಚಿಕ್ಕನಾಯಕನಹಳ್ಳಿ ಹಾಗೂ ಹಾಗಲವಾಡಿ ಪಾಳೆಗಾರರ ಮನೆತನದ ರಾಜಗುರುಗಳಾಗಿ ಮಾರ್ಗದರ್ಶನ ನೀಡಿ ಈ ರಾಜಮನೆತನಗಳನ್ನು ಬೆಳೆಸಿದರು. ಅಲ್ಲದೆ ವೀರಶೈವಧರ್ಮದ ಪ್ರಚಾರಕ್ಕೆ ಮಠವನ್ನು ಅಭಿವೃದ್ಧಿಗೊಳಿಸಿದರು. ಶ್ರೀ ಸಿದ್ಧರಾಮೇಶ್ವರ ದೇವಾಲಯದಲ್ಲಿ ನಿತ್ಯ ಅನ್ನದಾಸೋಹ ನಡೆಯುವಂತೆ ವ್ಯವಸ್ಥೆ ಮಾಡಿದರು. ಪ್ರತಿನಿತ್ಯ ಪ್ರವಚನ ಏರ್ಪಡಿಸಿ ಸುತ್ತಮುತ್ತಲಿನ ಜನರನ್ನು ಮಠದ ಭಕ್ತರನ್ನಾಗಿ ಮಾಡಿಕೊಂಡು ಸನ್ಮಾರ್ಗದಲ್ಲಿ ನಡೆಯುವಂತೆ ಪ್ರೇರಣೆ ನೀಡಿದರು. ಇವರ ಕಾಲದಲ್ಲಿ ಮಠವು ಕಂಡರಿಯದ ರೀತಿಯಲ್ಲಿ ಬೆಳೆಯಿತು. ಮೈಸೂರು ಅರಸರಿಂದ ಅನೇಕ ದತ್ತಿನಿಧಿಯು ದೊರಕಿತು. ಹಾಗಲವಾಡಿಯ ಪಾಳೆಗಾರರಿಂದ ಇನಾಂ ಭೂಮಿ ದೊರೆತು ಮಠ ಹೆಚ್ಚು ಅಭಿವೃದ್ಧಿಯಾಗಲು ಕಾರಣವಾಯಿತು. ಈ ರೀತಿ ಬಂದ ಎಲ್ಲಾ ಅವಕಾಶಗಳನ್ನೂ ಬಳಸಿಕೊಂಡು ಮಠವು ಸ್ವಾವಲಂಬನೆಯಿಂದ ಕಾರ್ಯನಿರ್ವಹಿಸುವಂತೆ ಮಾಡಿದರು. ಈ ಕಾರಣಕ್ಕೆ ಈ ಮಠದ ಪರಂಪರೆಯ ಅಭಿವೃದ್ಧಿಯ ರೂವಾರಿಗಳಾಗಿ ಇತಿಹಾಸದಲ್ಲಿ ದಾಖಲಾಗಿದ್ದಾರೆ.

ಅಧಿಕಾರ ಹಂಚಿಕೆ: ಶ್ರೀ ಬಸವಪ್ರಭು ಸ್ವಾಮಿಗಳ ಕಾಲದಲ್ಲಿ ಮಠದ ಆಡಳಿತವನ್ನು ನೋಡಿಕೊಳ್ಳಲು ಮತ್ತು ಒಬ್ಬರೇ ಗುರುಗಳಿಗೆ ಸಾಕಾಗದೇ ಹೋದ ಕಾರಣಕ್ಕೆ ಚರ ಪಟ್ಟಾಧ್ಯಕ್ಷರನ್ನು ನೇಮಿಸಿ ಮಠವನ್ನು ಅಭಿವೃದ್ಧಿ ಪಡಿಸಿದ್ದಾರೆ. ಶ್ರೀ ಬಸವ ಸ್ವಾಮಿಗಳ ನಂತರ ೧೯೩೮ ರಲ್ಲಿ ಶ್ರೀ ಗುರುಸಿದ್ಧ ದೇಶಿಕೇಂದ್ರ ಸ್ವಾಮಿಗಳು ಅಧಿಕಾರಕ್ಕೆ ಬಂದು ತಮ್ಮ ಹಿರಿಯ ಗುರುಗಳು ಬೆಳೆಸಿದ್ದ ಧಾರ್ಮಿಕ ಆಚರಣೆಗಳು ಮತ್ತು ಸಾಮಾಜಿಕ ಆಚರಣೆಗಳನ್ನು ನಡೆಸುತ್ತಾ ಮಠದ ಹಿರಿತನವನ್ನು ಕಾಪಾಡಿಕೊಂಡು ಬಂದು ಶ್ರೀ ಚಂದ್ರಶೇಖರಭಾರತಿ ಸ್ವಾಮಿಗಳನ್ನು ತಮ್ಮ ಉತ್ತರಾಧಿಕಾರಿಗಳಾಗಿ ೧೯೪೯ ರಲ್ಲಿ ನೇಮಿಸಿದ ನಂತರ ಲಿಂಗೈಕ್ಯ ರಾಗುತ್ತಾರೆ. ಶ್ರೀ ಚಂದ್ರಶೇಖರ ಭಾರತಿ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಅನೇಕ ಸುಧಾರಣೆಗಳನ್ನು ಮಾಡಿ ಮಠದ ಚಟುವಟಿಕೆಗಳನ್ನು ವಿಸ್ತಾರಗೊಳಿಸಲು ಶ್ರಮಿಸಿದ್ದಾರೆ. ಮಠದ ಪರಂಪರೆಯ ಹಿರಿತನಕ್ಕೆ ತಕ್ಕಂತೆ ತಮ್ಮ ಕಾರ್ಯತಂತ್ರವನ್ನು ರೂಪಿಸಿ ಮಠವನ್ನು ಬೆಳೆಸಿ ತಮ್ಮ ಕರಕಮಲ ಸಂಜಾತ ಶ್ರೀ ಸಿದ್ಧರಾಮ ದೇಶಿಕೇಂದ್ರ ಸ್ವಾಮಿಗಳಿಗೆ ೧೯೭೪ ರಲ್ಲಿ ಪಟ್ಟಾಧಿಕಾರ ನೀಡಿ ವಿಶ್ರಾಂತಿ ಜೀವನ ನಡೆಸತೊಡಗಿದರು.

ಶಿಕ್ಷಣಕ್ಕೆ ತೆರೆದ ಬಾಗಿಲ: ಹಿರಿತನದ ಗೌರವ ಇರುವ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡ ಶ್ರೀ ಸಿದ್ಧರಾಮ ದೇಶಿಕೇಂದ್ರ ಸ್ವಾಮಿಗಳು ಅಧಿಕಾರ ಪಡೆದ ಮೇಲೆ ತತ್ತ್ವಜ್ಞಾನ, ಆಧ್ಯಾತ್ಮ ಚಿಂತನೆಗಳ ಬಗ್ಗೆ ಹೆಚ್ಚು ಅಧ್ಯಯನ ನಡೆಸಿ ೧೯೮೪ ರಲ್ಲಿ ಮಠಕ್ಕೆ ಆಗಮಿಸಿ ಮಠದ ಅಧಿಕಾರವನ್ನು ಪೂರ್ಣವಾಗಿ ವಹಿಸಿಕೊಂಡು ಮಠವನ್ನು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕವಾಗಿ ಬೆಳೆಸಲು ಮುಂದಾದರು. ಇದರ ಫಲವಾಗಿ ೧೯೮೪ ರಲ್ಲಿ ಶ್ರೀಮದ್ ರಂಭಾಪುರಿ ವಿದ್ಯಾಸಂಸ್ಥೆಯನ್ನು ನೋಂದಾ ಯಿಸಿ ೧೯೮೬ರಲ್ಲಿ ದೈಹಿಕ ಶಿಕ್ಷಕರ ಎರಡು ತರಬೇತಿ ಕಾಲೇಜುಗಳನ್ನು ಪ್ರಾರಂಭಿಸಿದರು. ಭದ್ರಾವತಿ ಮತ್ತು ಸಿಂಗನಮನೆಯಲ್ಲಿ ಶ್ರೀಮದ್ ರಂಭಾಪುರಿ ಪ್ರಥಮದರ್ಜೆ ಕಾಲೇಜನ್ನು ಪ್ರಾರಂಭಿಸಿದರು. ಗೋಡೆಕೆರೆ, ತುರುವೆಕೆರೆ ತಾಲ್ಲೂಕಿನ ಮಾಚೇನಹಳ್ಳಿ, ಭದ್ರಾಪ್ರಾಜೆಕ್ಟಿನಲ್ಲಿ ಸಂಸ್ಕೃತ ಪಾಠಶಾಲೆಗಳು ಪ್ರಾರಂಭಗೊಂಡವು., ಮಠದ ಆವರಣದಲ್ಲಿ ಶ್ರೀಮದ್ ರಂಭಾಪುರಿ ಗುರುಕುಲ ಅನಾಥಾಶ್ರಮ ಮತ್ತು ಶ್ರೀ ಸಿದ್ಧರಾಮ ದೇಶಿಕೇಂದ್ರ ಉಚಿತ ವಿದ್ಯಾರ್ಥಿನಿಲಯಗಳು ಪ್ರಾರಂಭಗೊಂಡು ಕಲಿಯುವ ಮಕ್ಕಳಿಗೆ ಮಠವು ಶೈಕ್ಷಣಿಕವಾಗಿ ತನ್ನ ಬಾಗಿಲನ್ನು ತೆರೆಯಿತು.

ನವೀಕರಣ: ಜೀರ್ಣಾವಸ್ಥೆಯಲ್ಲಿದ್ದ ಮಠದ ಹಳೆಯ ಕಟ್ಟಡವನ್ನು ಪೂರ್ಣ ತೆಗೆಸಿದ ಶ್ರೀ ಸಿದ್ಧರಾಮ ದೇಶಿಕೇಂದ್ರ ಸ್ವಾಮಿಗಳು ೧೯೯೮ ರಲ್ಲಿ ಮಠಕ್ಕೆ ನೂತನ ಕಟ್ಟಡವನ್ನು ನಿರ್ಮಿಸಿದ್ದಾರೆ. ಊರಿನ ಮಧ್ಯಭಾಗದಲ್ಲಿ ನವೀಕರಣಗೊಂಡ ಮಠದ ಕಟ್ಟಡವು ಭವ್ಯವಾಗಿ ಹಾಗೂ ಹೆಚ್ಚು ವಿಶಾಲವಾಗಿ ರೂಪುಗೊಂಡಿದೆ. ಈ ಹಿಂದೆ ಶ್ರೀ ಬಸವಪ್ರಭು ಸ್ವಾಮಿಗಳ ಕಾಲದಲ್ಲಿ ರೂಢಿಸಿದ್ದ ಆಸ್ತಿಯನ್ನು ಈಗಿನ ಗುರುಗಳು ತಮ್ಮ ಕಾಯಕಯೋಗದ ಫಲದಿಂದ ಅಭಿವೃದ್ಧಿಗೊಳಿಸಿ ೭೦೦ ತೆಂಗಿನ ಗಿಡಗಳನ್ನು ಬೆಳೆಸಿದ್ದಾರೆ. ಅಲ್ಲದೆ ಮೂರು ಎಕರೆ ಜಮೀನನ್ನು ನೀರಾವರಿಗೆ ವ್ಯವಸ್ಥೆಗೊಳಿಸಿ, ಉಳಿದ ಹತ್ತು ಎಕರೆಯಲ್ಲಿ ಮಳೆ ಆಧಾರಿತ ಬೆಳೆಗಳನ್ನು ಬೆಳೆದು ಮಠವನ್ನು ಶ್ರೀಮಂತವಾಗಿ ಬೆಳೆಸಿದ್ದಾರೆ.

ಸಾಹಿತ್ಯ-ಸಾಮಾಜಿಕ ಸೇವೆ: ಷಟ್‌ಸ್ಥಲ ದರ್ಪಣ,ವಿಭೂತಿ ಮಹಿಮೆ, ಪಂಚಾಚಾರರ ವಿವರಣೆ ಹಾಗೂ ವೀರಶೈವ ಮಠಸ್ಥಾಪಕರ ವಿಚಾರ ಈ ಕೃತಿಗಳನ್ನು ಪ್ರಕಟಿಸಲಾಗಿದ್ದು, ಮಠದ ಚರಿತ್ರೆ ಹಾಗೂ ಸ್ಥಿರ ಪಟ್ಟಾಧ್ಯಕ್ಷರ ಕೃತಿಗಳನ್ನು ಪ್ರಕಟಿಸಲು ಗುರುಗಳು ಸಿದ್ಧತೆಯನ್ನು ನಡೆಸಿಕೊಂಡಿದ್ದಾರೆ. ಸಿದ್ಧರಾಮಣ್ಣನವರ ಬಗ್ಗೆ ಪ್ರವಚನವನ್ನು ಏರ್ಪಡಿಸಿ ಸಿದ್ಧರಾಮಣ್ಣನವರ ವಚನಗಳನ್ನು ಜನರಿಗೆ ಮುಟ್ಟಿಸುವ ಕಾರ್ಯದಲ್ಲಿ ಗುರುಗಳು ಯಶಸ್ವಿಯಾಗಿದ್ದಾರೆ. ಹುಣ್ಣಿಮೆಯಲ್ಲಿ ಪ್ರತಿ ತಿಂಗಳು ಭಜನೆ ಹಾಗೂ ಶ್ರಾವಣಮಾಸದಲ್ಲಿ ಪ್ರವಚನವನ್ನು ಏರ್ಪಡಿಸಿ ವೀರಶೈವ ಸಿದ್ಧಾಂತ ಹಾಗೂ ಶರಣರ ತತ್ತ್ವಗಳನ್ನು ಭಕ್ತರಿಗೆ ಮುಟ್ಟಿಸಿ ಸನ್ಮಾರ್ಗದಲ್ಲಿ ನಡೆಯಲು ಪ್ರೇರಕರಾಗಿದ್ದಾರೆ. ಉಚಿತ ಆರೋಗ್ಯ ತಪಾಸಣೆಯನ್ನು ಗುರುಗಳು ಮಠದ ವತಿಯಿಂದ ಏರ್ಪಡಿಸಿ ಗ್ರಾಮಾಂತರ ಪ್ರದೇಶದಲ್ಲಿ ಉಚಿತವಾಗಿ ಚಿಕಿತ್ಸೆ ದೊರೆಯಲು ನೆರವಾಗಿದ್ದಾರೆ. ತಾಲ್ಲೂಕು ಮಟ್ಟದ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಿ ಕ್ರೀಡಾಪಟುಗಳಿಗೆ ಪ್ರೋತ್ಸಾಹವನ್ನು ನೀಡುತ್ತಿದ್ದಾರೆ. ಪ್ರತಿವರ್ಷ ಕಾಲೇಜು ಮಟ್ಟದಲ್ಲಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಕೆಲಸವನ್ನು ಗುರುಗಳು ಮಾಡಿಕೊಂಡು ಬಂದಿದ್ದಾರೆ.

ಪ್ರಾಚೀನ ವಸ್ತುಗಳು: ಮೈಸೂರು ಅರಸರು ಕೊಟ್ಟ ಸನ್ನದು, ಕೆಂಪು ಛತ್ರಿ, ಬಿಳಿ ಛತ್ರಿ, ಮೂರು ತಾಮ್ರದ ಶಾಸನಗಳು

ಹಾಗೂ ಮೂರು ತಾಳೆಗರಿ ಓಲೆಗಳು ಇವೆ. ಅಲ್ಲದೆ ಪರಂಪರೆಯಿಂದ ಬಂದಂತಹ ಜಾಗಟೆ, ಘಂಟೆ, ಕರಕಮಲ ದಾರಾಪಾತ್ರೆ, ಕತ್ತಿಗಳು, ತ್ರಿಶೂಲಗಳು ಮಠದಲ್ಲಿ ನೋಡಲು ಸಿಗುತ್ತವೆ.

ವಿಳಾಸ: ಶ್ರೀಶ್ರೀಶ್ರೀ ಸಿದ್ಧರಾಮ ದೇಶಿಕೇಂದ್ರ ಸ್ವಾಮಿಗಳು, ಶ್ರೀ ಸ್ಥಿರಪಟ್ಟಾಧ್ಯಕ್ಷಮಠ, ಗೋಡೆಕೆರೆ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ.
ಆಧಾರ: 'ಹೇಮಗಿರಿ' ಸ್ಮರಣ ಸಂಚಿಕೆ

ಸಂಸ್ಥಾನ ಚರಪಟ್ಟಾಧ್ಯಕ್ಷರ ಮಠ: ರಂಭಾಪುರಿ ಪೀಠದ ಜಗದ್ಗುರು ಪಟ್ಟದ ಶಾಂತದೇಶಿಕೇಂದ್ರ ಸ್ವಾಮಿಗಳು ಸ್ಥಾಪಿಸಿದ ಸಂಸ್ಥಾನ ಮಠದ ಆಡಳಿತವು ವಿಸ್ತಾರಗೊಂಡಾಗ, ಶ್ರೀ ಬಸವಪ್ರಭು ಸ್ವಾಮಿಗಳ ಕಾಲದಲ್ಲಿ ಮಠದ ಆಂತರಿಕ ಮತ್ತು ಬಾಹ್ಯ ಚಟುವಟಿಕೆಗಳ ಹಾಗೂ ಧರ್ಮಾಚರಣೆಯ ಸಲುವಾಗಿ ಚರ ಪಟ್ಟಾಧ್ಯಕ್ಷರನ್ನಾಗಿ ಶ್ರೀ ಸಿದ್ಧಲಿಂಗ ಸ್ವಾಮಿಗಳನ್ನು (ಕ್ರಿ.ಶ.೧೮೩೦) ನೇಮಿಸಿಕೊಂಡಿದ್ದರಿಂದ ಈ ಗ್ರಾಮದಲ್ಲಿ ಕಾಲಕ್ರಮೇಣ ಚರಪಟ್ಟಾಧ್ಯಕ್ಷರ ಮಠವಾಗಿ ಬೆಳೆಯಲು ಕಾರಣವಾಗಿದೆ.

ಒಂದೇ ಸಂಪ್ರದಾಯದ, ಒಂದೇ ಆಡಳಿತದ ಅಡಿಯಲ್ಲಿ ಬೆಳೆದು ಬಂದ ಪರಂಪರೆಯು ಕಾಲಘಟ್ಟದಲ್ಲಿ ಆದ ಕೆಲವು ಬದಲಾವಣೆಗಳಿಂದ ಮಠದ ಆಡಳಿತವು ಪ್ರತ್ಯೇಕಗೊಂಡು, ಚರ ಪಟ್ಟಾಧ್ಯಕ್ಷರ ಮಠ ಎಂದು ಹೆಸರು ಪಡೆದು ಧರ್ಮಕಾರ್ಯಗಳನ್ನು ನಡೆಸುತ್ತಾ ಬಂದಿದೆ.

ಬೆಳೆದ ಪರಂಪರೆ: ಸ್ಥಿರ ಪಟ್ಟಾಧ್ಯಕ್ಷರ ಮಠದ ಪರಂಪರೆಯೇ ಈ ಮಠದ ಪರಂಪರೆಯಾಗಿದ್ದು, ಚರ ಪಟ್ಟಾಧ್ಯಕ್ಷರಾಗಿ ಈ ಮಠದ ಪ್ರಥಮ ಗುರುಗಳಾಗಿ ಶ್ರೀ ಸಿದ್ಧಲಿಂಗ ಸ್ವಾಮಿಗಳು, ಸ್ಥಿರ ಪಟ್ಟಾಧ್ಯಕ್ಷರಾಗಿದ್ದ ಆಗಿನ ಶ್ರೀಬಸವಪ್ರಭು ಸ್ವಾಮಿಗಳಿಂದ ಅಧಿಕಾರವನ್ನು ಪಡೆದು ನೇಮಕಗೊಂಡಿದ್ದರು. ನಂತರ ಪ್ರತ್ಯೇಕಗೊಂಡ ಆಡಳಿತದಲ್ಲಿ ಚರಪಟ್ಟಾಧ್ಯಕ್ಷರ ಪರಂಪರೆಯೇ ಪ್ರತ್ಯೇಕವಾಗಿ ಬೆಳೆಯುತ್ತಿದೆ. ಈ ಕಾರಣಕ್ಕೆ ಚರ ಪಟ್ಟಾಧ್ಯಕ್ಷರ ಪರಂಪರೆಯನ್ನು ಈ ಕೆಳಗಿನಂತೆ ಗುರುತಿಸಬಹುದು.

೧. ಶ್ರೀ ಶ್ರೀ ಶ್ರೀ ಸಿದ್ಧಲಿಂಗ ದೇಶಿಕೇಂದ್ರಸ್ವಾಮಿಗಳು
೨. ಶ್ರೀ ಶ್ರೀ ಶ್ರೀ ಬಸವಲಿಂಗ ಪ್ರಭುಸ್ವಾಮಿಗಳು
೩. ಶ್ರೀ ಶ್ರೀ ಶ್ರೀ ಮೃತ್ಯುಂಜಯ ದೇಶಿಕೇಂದ್ರಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಚರ ಪಟ್ಟಾಧ್ಯಕ್ಷರಾಗಿ ಮೊದಲ ಅಧಿಕಾರ ಪಡೆದ ಶ್ರೀ ಸಿದ್ಧಲಿಂಗ ದೇಶಿಕೇಂದ್ರ ಸ್ವಾಮಿಗಳು ಆಧ್ಯಾತ್ಮ ಜೀವಿಗಳಾಗಿ, ಪವಾಡ ಪುರುಷರಾಗಿ ಮೆರೆದು ತಮ್ಮ ಧಾರ್ಮಿಕ ಕ್ರಿಯೆಗಳಿಂದ ಜನರ ಮನಸ್ಸನ್ನು ಸೂರೆಗೊಂಡಿದ್ದರು. ಇವರು ೧೦೮ ವರ್ಷ ಬದುಕಿ ೧೯೨೨ ರಲ್ಲಿ ಲಿಂಗೈಕ್ಯರಾಗಿರುತ್ತಾರೆ. ಇವರ ನಂತರ ಶ್ರೀಬಸವಲಿಂಗ ಪ್ರಭುಸ್ವಾಮಿಗಳು ಅಧಿಕಾರವನ್ನು ಪಡೆದು ಮಠದ ಸರ್ವತೋಮುಖ ಬೆಳವಣಿಗೆಗೆ ಕಾರಣಕರ್ತರಾಗಿದ್ದಾರೆ.

ಚಿನ್ನದ ಕಳಶ: ೧೯೨೮ ರ ಸುಮಾರಿನಲ್ಲಿ ಮಠಕ್ಕೆ ನೂತನ ಕಟ್ಟಡವನ್ನು ನಿರ್ಮಿಸಿದ ಶ್ರೀ ಬಸವಲಿಂಗ ಪ್ರಭುಸ್ವಾಮಿಗಳು ಮಠವನ್ನು ಆರ್ಥಿಕವಾಗಿ ಸದೃಢಗೊಳಿಸಿದರು. ಧರ್ಮಜಾಗೃತಿಗಾಗಿ ಗೋಡೆಕೆರೆ ಸುತ್ತಮುತ್ತ ಪ್ರಚಾರಕಾರ್ಯ, ಅನುಷ್ಠಾನ ಕಾರ್ಯಗಳನ್ನು ಕೈಗೊಂಡು ಹೆಚ್ಚು ಜನಪ್ರಿಯರಾಗಿದ್ದಾರೆ. ಶ್ರೀಗಳು ತಮ್ಮ ಕಾಲದಲ್ಲಿ ಸಿಕ್ಕಿದ ಎಲ್ಲಾ ಅವಕಾಶಗಳನ್ನು ಬಳಸಿಕೊಂಡು ಮಠವನ್ನು ಶ್ರೀಮಂತಗೊಳಿಸಿದರು. ಇವರ ಕಾಲದಲ್ಲಿ ಮಠಕ್ಕೆ ಗೋಪುರ ನಿರ್ಮಾಣಗೊಂಡಿತು. ಅಲ್ಲದೆ ಗೋಪುರಕ್ಕೆ ಚಿನ್ನದ ಕಳಶಗಳನ್ನು ಮಾಡಿಸಿ ಕಳಶಾರೋಹಣ ಕಾರ್ಯವನ್ನು ನೆರವೇರಿಸಿದರು. ಈ ರೀತಿ ಅನೇಕ ಪ್ರಗತಿಪರ ಕಾರ್ಯಗಳನ್ನು ನೆರವೇರಿಸಿ ಮಠವನ್ನು ಬೆಳೆಸಿ ೧೯೭೪ ರಲ್ಲಿಲಿಂಗೈಕ್ಯರಾಗಿರುತ್ತಾರೆ.

೧೯೮೩ ರಲ್ಲಿ ಶ್ರೀ ಮೃತ್ಯುಂಜಯ ಸ್ವಾಮಿಗಳು, ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ನಂದಿಗುಡಿಯ ವೃಷಭಪುರಿ ಸಂಸ್ಥಾನ ಮಠದ ಗುರುಗಳಾದ ಶ್ರೀ ಬಸವರಾಜ ದೇಶಿಕೇಂದ್ರ ಸ್ವಾಮಿಗಳಿಂದ ಅನುಗ್ರಹ ಪಡೆದು, ಚರಪಟ್ಟಾಧ್ಯಕ್ಷರ

ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಮಠದ ಆಸ್ತಿಯನ್ನು ಅಭಿವೃದ್ಧಿಪಡಿಸಿ ಮಠವನ್ನು ಶ್ರೀಮಂತಗೊಳಿಸಿದ್ದಾರೆ.
ಧಾರ್ಮಿಕ ಆಚರಣೆ: ಪ್ರತಿ ಅಮಾವಾಸ್ಯೆಯಲ್ಲಿ ವಿಶೇಷ ಪೂಜೆ, ಕಾರ್ತಿಕಮಾಸದಲ್ಲಿ ಲಕ್ಷದೀಪೋತ್ಸವವನ್ನು ಆಚರಿಸಲಾಗುತ್ತಿದೆ. ಶ್ರೀ ಸಿದ್ಧರಾಮೇಶ್ವರ ದೇವಸ್ಥಾನದಲ್ಲಿ ಹನ್ನೆರಡು ವರ್ಷಕ್ಕೆ ಒಮ್ಮೆ ನಡೆಯುವ ಜಾತ್ರೆಯನ್ನು ವಿಜೃಂಭಣೆಯಿಂದ ನಡೆಸಲಾಗುತ್ತಿದೆ. ಮಠದ ಪರಂಪರೆಯ ಗುರುಗಳ ಗದ್ದುಗೆಗೆ ಪೂಜೆಯನ್ನು ನಡೆಸಲಾಗುತ್ತಿದೆ.

ಪ್ರಾಚೀನ ವಸ್ತುಗಳು: ಪಾದುಕೆಗಳು, ಇನ್ನೂರು ವರ್ಷಗಳಷ್ಟು ಹಳೆಯದಾದ ವಿಭೂತಿ ಗಟ್ಟಿ, ತ್ರಿಶೂಲ, ಗುರಾಣಿಗಳು, ಕತ್ತಿಗಳು, ಬಲಮುರಿಶಂಖ, ಪಾತ್ರೆ,ಲಿಂಗ,ಬಸವವಿಗ್ರಹಗಳು ಈ ರೀತಿ ಅನೇಕ ಪ್ರಾಚೀನ ವಸ್ತುಗಳನ್ನು ನೋಡಬಹುದಾಗಿದೆ.

ವಿಳಾಸ: ಶ್ರೀ ಶ್ರೀ ಶ್ರೀ ಮೃತ್ಯುಂಜಯದೇಶಿಕೇಂದ್ರ ಸ್ವಾಮಿಗಳು, ಶ್ರೀ ಚರಪಟ್ಟಾಧ್ಯಕ್ಷರಮಠ, ಗೋಡೆಕೆರೆ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ.
ಆಧಾರ: 'ಹೇಮಗಿರಿ' ವಿಶೇಷ ಸಂಚಿಕೆ

ತಮ್ಮಡಿಹಳ್ಳಿ

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ತಮ್ಮಡಿಹಳ್ಳಿಯು ತಾಲ್ಲೂಕು ಕೇಂದ್ರದ ದಕ್ಷಿಣಕ್ಕೆ ಹದಿನಾಲ್ಕು ಕಿ. ಮೀ. ದೂರದಲ್ಲಿದೆ. ಅಭಿವೃದ್ಧಿ ಕಾಣಬೇಕಾಗಿರುವ ಈ ಗ್ರಾಮದಲ್ಲಿ ಶ್ರೀ ವಿರಕ್ತ ಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ತಮ್ಮಡಿಹಳ್ಳಿ ಗ್ರಾಮದಲ್ಲಿ ಚಿಲ್ಲಾಳಸಮಯದ ವಿರಕ್ತಮಠವು ಸ್ಥಾಪನೆಯಾಗಿದೆ. ತಿಪಟೂರು ತಾಲ್ಲೂಕಿನ ಕಟ್ಟಿಗೆಹಳ್ಳಿಯಲ್ಲಿ ಮೂಲಮಠ ಇದ್ದು ಹದಿನೆಂಟನೆಯ ಶತಮಾನದಲ್ಲಿ ತಮ್ಮಡಿಹಳ್ಳಿಗೆ ಸ್ಥಳಾಂತರಗೊಂಡಿದೆ.

ಸ್ಥಳಾಂತರ: ಈ ಮಠದ ಕರ್ತೃಗಳು ಯಾರು ಎಂಬುದು ಈವರೆವಿಗೂ ತಿಳಿದು ಬಂದಿಲ್ಲ. ಕಟ್ಟಿಗೆಹಳ್ಳಿಯಲ್ಲಿ ಮೂಲ ಮಠ ಇತ್ತು ಎಂದು ಸಾಕ್ಷೀಕರಿಸಲು ಕಟ್ಟಿಗೆಹಳ್ಳಿಯಲ್ಲಿ ಒಂದು ಗದ್ದುಗೆ ಇದ್ದು ಈ ಗದ್ದುಗೆಯನ್ನು ಕರ್ತೃಗದ್ದುಗೆ ಎಂದು ಪೂಜೆ ಮಾಡಿಕೊಂಡು ಬರಲಾಗುತ್ತಿದೆ.ಈ ವಿರಕ್ತ ಮಠವು ಕಟ್ಟಿಗೆಹಳ್ಳಿಯಿಂದ ತಮ್ಮಡಿಹಳ್ಳಿಗೆ ಬರುವ ಮೊದಲು ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕಗಚೆಗಟ್ಟದ ಬಿಲ್ವವನದಲ್ಲಿ ಕೆಲವು ದಿನ ಧರ್ಮ ಕಾರ್ಯವನ್ನು ನಡೆಸಿ ನಂತರ ತಮ್ಮಡಿಹಳ್ಳಿಯಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಬಹುದು. ಇದಕ್ಕೆ ಪೂರಕವಾಗಿ ಈ ಮಠದ ಪರಂಪರೆಗೆ ಸೇರಿದ ಮೂರು ಗದ್ದುಗೆಗಳು ಬಿಲ್ವವನದಲ್ಲಿ ಸ್ಥಾಪನೆಯಾಗಿವೆ. ಆದರೆ ಆ ಸ್ವಾಮಿಗಳ ಹೆಸರು ತಿಳಿದು ಬಂದಿಲ್ಲ.

ರಾಜಾಶ್ರಯ: ಹದಿನೆಂಟನೆಯ ಶತಮಾನದ ಅಂತ್ಯದಲ್ಲಿ ಅಂದರೆ ೧೭೭೦-೧೭೪೦ ರಲ್ಲಿ ಶ್ರೀ ಮುಪ್ಪಿನ ಸ್ವಾಮಿಗಳ ಕಾಲದಲ್ಲಿ ತಮ್ಮಡಿಹಳ್ಳಿಯಲ್ಲಿ ಮಠವು ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತದೆ. ಈ ಸಂದರ್ಭದಲ್ಲಿ ಹಾಗಲವಾಡಿಯ ಪಾಳೆಗಾರನಾದ ಎರಡನೆಯ ಮುದಿಯಪ್ಪನಾಯಕನು ಆಡಳಿತವನ್ನು ನಡೆಸುತ್ತಿದ್ದನು. ಈ ನಾಯಕನಿಗೂ ಮತ್ತು ಮುಪ್ಪಿನ ಸ್ವಾಮಿಗಳಿಗೂ ಗುರುಶಿಷ್ಯರ ಅವಿನಾಭಾವ ಸಂಬಂಧ ಇದ್ದ ಕಾರಣ ಮಠದ ಅಭಿವೃದ್ಧಿಗೆ ಮುದಿಯಪ್ಪ ನಾಯಕನು ಬಹಳವಾಗಿ ಶ್ರಮಿಸಿದ್ದಾನೆ. ಶ್ರೀ ಮುಪ್ಪಿನ ಸ್ವಾಮಿಗಳು ತಮ್ಮಡಿಹಳ್ಳಿಯ ಊರಿನ ಹೊರಭಾಗದಲ್ಲಿ ಮಠವನ್ನು ಸ್ಥಾಪಿಸಿ ಸಮಾಜವನ್ನು ಸನ್ಮಾರ್ಗದಲ್ಲಿ ನಡೆಸಿದರು. ಇವರ ನಂತರ ಮೂರು ಜನ ಗುರುಗಳು ಅಧಿಕಾರ ನಡೆಸಿದ ಬಗ್ಗೆ ಹೇಳಲಾಗುತ್ತಿದೆ. ಆದರೆ ಇವರುಗಳ ಬಗ್ಗೆ ಮಾಹಿತಿ ಲಭ್ಯವಿಲ್ಲವಾದರೂ ಅವರ ಗದ್ದುಗೆಗಳು ಬಿಲ್ವವನದಲ್ಲಿ ಸ್ಥಾಪನೆಯಾಗಿವೆ.

ಗುರು ಪರಂಪರೆ:
೧. ಶ್ರೀ ಮ.ನಿ.ಪ್ರ. ಮುಪ್ಪಿನಸ್ವಾಮಿಗಳು (೧೭೭೦-೧೭೪೦)
೨. ಶ್ರೀ ಮ.ನಿ.ಪ್ರ. ಕರಿಬಸವಸ್ವಾಮಿಗಳು (೧೮೪೦)
೩. ಶ್ರೀ ಮ.ನಿ.ಪ್ರ. ಚನ್ನಮಲ್ಲಿಕಾರ್ಜುನಸ್ವಾಮಿಗಳು (೧೯೦೯)
೪. ಶ್ರೀ ಮ.ನಿ.ಪ್ರ. ಮಲ್ಲಿಕಾರ್ಜುನ ದೇಶಿಕೇಂದ್ರಸ್ವಾಮಿಗಳು (೧೯೭೫) (ಈಗಿನವರು)

ಈ ರೀತಿ ಮಠದ ಗುರು ಪರಂಪರೆಯು ಬೆಳೆದು ಬಂದಿದ್ದು ಶ್ರೀ ಮುಪ್ಪಿನ ಸ್ವಾಮಿಗಳ ನಂತರ ಆಡಳಿತ ನಡೆಸಿದ ಮೂರು

ಜನ ಗುರುಗಳ ನಂತರ ೧೮೪೦ ರ ಸುಮಾರಿನಲ್ಲಿ ಅಧಿಕಾರಕ್ಕೆ ಬಂದ ಶ್ರೀ ಕರಿಬಸವ ದೇಶಿಕೇಂದ್ರ ಸ್ವಾಮಿಗಳು ಆಧ್ಯಾತ್ಮ ಚಿಂತಕರೂ ಕಾಯಕಯೋಗಿಗಳೂ ಆಗಿದ್ದರು. ಇವರ ಕಾಲದಲ್ಲಿ ಮಠವು ಸರ್ವಾಂಗೀಣವಾಗಿ ಅಭಿವೃದ್ಧಿ ಕಂಡಿದೆ. ಶ್ರೀ ಮುಪ್ಪಿನ ಸ್ವಾಮಿಗಳ ಕಾಲದಲ್ಲಿ ಕಟ್ಟಿಸಿದ್ದ ಮಠದ ಹಳೆಯ ಕಟ್ಟಡವನ್ನು ತೆಗೆಸಿ ಆವಶ್ಯಕತೆಗೆ ತಕ್ಕಷ್ಟು ವಿಸ್ತಾರವಾಗಿ ನೂತನ ಕಟ್ಟಡವನ್ನು ನಿರ್ಮಿಸಿದ್ದಾರೆ. ಅಲ್ಲದೆ ನೂತನ ಕಟ್ಟಡದ ಉದ್ಘಾಟನೆಯ ದಿನವೇ (೧೯೫೧) ಶ್ರೀ ಚನ್ನಮಲ್ಲಿಕಾರ್ಜುನ ದೇಶಿಕೇಂದ್ರ ಸ್ವಾಮಿಗಳಿಗೆ ಪಟ್ಟಾಧಿಕಾರ ವನ್ನು ಮಾಡಿರುತ್ತಾರೆ. ತಮ್ಮ ಕರಕಮಲ ಸಂಜಾತ ಶ್ರೀ ಮಲ್ಲಿಕಾರ್ಜುನ ದೇಶಿಕೇಂದ್ರ ಸ್ವಾಮಿಗಳಿಗೆ ಗುರುವಿನ ಗುರುವಾಗಿ ಮಾರ್ಗದರ್ಶನ ನೀಡಿ ಧರ್ಮಬೋಧನೆಗೆ ಸಿದ್ಧಗೊಳಿಸಿ, ಹಾಸನ ಜಿಲ್ಲೆಯ ಆಲೂರು ತಾಲ್ಲೂಕಿನ ದೊಡ್ಡಿಹಳ್ಳಿಯಲ್ಲಿ ಲಿಂಗೈಕ್ಯರಾಗಿರುತ್ತಾರೆ. ಅವರ ಗದ್ದುಗೆಯು ಇಂದಿಗೂ ದೊಡ್ಡಿಹಳ್ಳಿಯಲ್ಲಿದ್ದು ಸ್ಮಾರಕವಾಗಿದೆ.

ಕಾಯಕಯೋಗಿಯಾದ ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮಿಗಳು ಹಾಗಲವಾಡಿಯ ನಾಯಕರಿಂದ ಸಿಕ್ಕಿದ್ದ ಜಮೀನನ್ನು (ದಾಖಲೆ ಇಲ್ಲ) ಅಭಿವೃದ್ಧಿಪಡಿಸಿ ಬೇಸಾಯಕ್ಕೆ ಅಣಿಗೊಳಿಸುತ್ತಾರೆ. ಮಠಕ್ಕೆ ಹೆಚ್ಚು ಆದಾಯ ಬರುವಂತೆ ಮಾಡಿ ಮಠವು ಸ್ವಾವಲಂಬಿಯಾಗಿ ಕಾರ್ಯ ನಡೆಸುವಂತೆ ಮಾಡಿದರು. ಹಾಗೂ ಹಿರಿಯ ಗುರುಗಳು ಕಟ್ಟಿಸಿದ್ದ ಮಠದ ಕಟ್ಟಡವನ್ನು ವಿಸ್ತಾರಗೊಳಿಸಿ ನವೀಕರಣಗೊಳಿಸಿದರು. ಮಠದಲ್ಲಿ ಧಾರ್ಮಿಕ ಚಟುವಟಿಕೆಯನ್ನು ಚುರುಕುಗೊಳಿಸಿ ಪ್ರವಚನ, ಕೀರ್ತನೆಗಳ ಮೂಲಕ ಧರ್ಮಪ್ರಸಾರವನ್ನು ಕೈಗೊಂಡಿದ್ದರು. ಶಿವಪೂಜಾ ನಿಷ್ಠರಾಗಿದ್ದ ಇವರ ಪೂಜಾವಿಧಿವಿಧಾನ ಬಹಳ ವೈಭವಯುತ ವಾಗಿ ನಡೆಯುತ್ತಿತ್ತೆಂದು ಹೇಳಲಾಗುತ್ತಿದೆ. ಶ್ರೀ ಚನ್ನಮಲ್ಲಿಕಾರ್ಜುನ ದೇಶಿಕೇಂದ್ರ ಸ್ವಾಮಿಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಮಲ್ಲಿಕಾರ್ಜುನ ದೇಶಿಕೇಂದ್ರ ಸ್ವಾಮಿಗಳನ್ನು ೧೯೫೭ ರಲ್ಲಿ ನೇಮಿಸಿಕೊಂಡು, ೧೯೬೪ ರಲ್ಲಿ ಲಿಂಗೈಕ್ಯರಾದರು.

ಸಮರ್ಥಗುರು: ಹಿರಿಯ ಚೇತನ ಶ್ರೀ ಚನ್ನಮಲ್ಲಿಕಾರ್ಜುನ ದೇಶಿಕೇಂದ್ರ ಸ್ವಾಮಿಗಳು ಲಿಂಗೈಕ್ಯರಾಗುವ ಮೊದಲೇ (೧೯೬೪) ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದ ಶ್ರೀ ಮಲ್ಲಿಕಾರ್ಜುನ ದೇಶಿಕೇಂದ್ರ ಸ್ವಾಮಿಗಳು ಹಿರಿಯ ಗುರುಗಳು ನಡೆದು ಬಂದ ದಾರಿಯಲ್ಲೇ ನಡೆದು ಕಾಯಕಯೋಗ ಮತ್ತು ಶಿವಪೂಜಾನಿಷ್ಠೆ, ಅನುಷ್ಠಾನವನ್ನು ನೆರವೇರಿಸಿಕೊಂಡು ಬರುತ್ತಿದ್ದಾರೆ. ಇವರ ಕಾಯಕದಿಂದ ಮಠದ ಆಸ್ತಿಯು ವಿಸ್ತಾರಗೊಂಡಿತು. ಅಭಿವೃದ್ಧಿ ಕಾರ್ಯಗಳೂ ಚುರುಕುಗೊಂಡವು. ಗುರುಗಳ ಕ್ರಿಯಾಶೀಲತೆಯಿಂದ ಮಠವು ಹೊಸ ಆಯಾಮ ಪಡೆಯಿತು. ಕೆಲವೇ ವರ್ಷಗಳಲ್ಲಿ ಆರ್ಥಿಕ ಮೂಲವಾಗಿ ತೆಂಗಿನ ತೋಟವು ತಲೆ ಎತ್ತಿನಿಂತಿತು.

ಶಿಕ್ಷಣ ಪ್ರೇಮಿ: ಶ್ರೀ ಮಲ್ಲಿಕಾರ್ಜುನ ದೇಶಿಕೇಂದ್ರ ಸ್ವಾಮಿಗಳು ಕಾಯಕನಿಷ್ಠೆಯ ಜತೆಗೆ ಶೈಕ್ಷಣಿಕ ಕಾರ್ಯಗಳಿಗೆ ಒತ್ತುಕೊಟ್ಟು ಶ್ರಮಿಸಿದ ಫಲವಾಗಿ ತಮ್ಮಡಿಹಳ್ಳಿ, ಮತ್ತಿಗಟ್ಟ ಮತ್ತು ತಿಪಟೂರು ತಾಲ್ಲೂಕಿನ ಗೌಡನಕಟ್ಟೆಯಲ್ಲಿ ಪ್ರೌಢಶಾಲೆ ಗಳು, ಮತ್ತಿಘಟ್ಟದಲ್ಲಿ ಪದವಿಪೂರ್ವ ಕಾಲೇಜು ಮತ್ತು ಪ್ರಥಮದರ್ಜೆ ಕಾಲೇಜುಗಳು ಸ್ಥಾಪನೆಯಾಗಿವೆ. ಚಿಕ್ಕನಾಯಕನಹಳ್ಳಿ ಮತ್ತು ಮತ್ತಿಘಟ್ಟದಲ್ಲಿ ವೃತ್ತಿ ತರಬೇತಿ ಕೇಂದ್ರಗಳು ಸ್ಥಾಪನೆಗೊಂಡಿವೆ. ತಮ್ಮಡಿಹಳ್ಳಿ, ಮತ್ತಿಘಟ್ಟದಲ್ಲಿ ತಲಾ ಒಂದೊಂದು ವಿದ್ಯಾರ್ಥಿ ನಿಲಯಗಳು ತಲೆ ಎತ್ತಿ ನಿಂತಿವೆ. ತಮ್ಮಡಿಹಳ್ಳಿ, ಮತ್ತಿಗಟ್ಟ, ಚಿಕ್ಕನಾಯಕನಹಳ್ಳಿಯಲ್ಲಿ ಸಂಸ್ಕೃತ ಪಾಠಶಾಲೆಗಳನ್ನು ಪ್ರಾರಂಭಿಸಿ ವೇದ, ಜ್ಯೋತಿಷ್ಯ ಹಾಗೂ ಆಗಮಗಳನ್ನು ಕಲಿಸಲಾಗುತ್ತಿದೆ. ಈ ರೀತಿ ಗ್ರಾಮಾಂತರ ಮಕ್ಕಳ ಅಭ್ಯುದಯಕ್ಕಾಗಿ ಒಟ್ಟು ಹನ್ನೆರಡು ವಿದ್ಯಾಸಂಸ್ಥೆಗಳನ್ನು ಪ್ರಾರಂಭಿಸಿ ನೆರವಾಗಿದ್ದಾರೆ.

ಅಭಿವೃದ್ಧಿಯ ಸಾಧನೆ: ವಿರಕ್ತಮಠವು ಶ್ರೀ ಮಲ್ಲಿಕಾರ್ಜುನ ದೇಶಿಕೇಂದ್ರ ಸ್ವಾಮಿಗಳ ಕಾಲದಲ್ಲಿ ಆರ್ಥಿಕ, ಧಾರ್ಮಿಕ, ಶೈಕ್ಷ ಣಿಕವಾಗಿ ಅಭಿವೃದ್ಧಿಯನ್ನು ಸಾಧಿಸಿ ಸದೃಢವಾಗಿ ರೂಪುಗೊಂಡಿತು. ಹಿಂದೆ ಶ್ರೀ ಮುಪ್ಪಿನ ಸ್ವಾಮಿಗಳ ಕಾಲದಲ್ಲಿ ಊರ ಹೊರಗೆ ಸ್ಥಾಪನೆಗೊಂಡಿದ್ದ ಮಠವು ಈಗ ಊರು ಬೆಳೆದಂತೆ ಊರಿನ ಮಧ್ಯದಲ್ಲಿ ಸೇರಿಕೊಂಡಿದೆ. ಈ ಕಾರಣಕ್ಕೆ ಈಗಿನ ಗುರುಗಳು ಮಠವನ್ನು ಊರೊರಗಿನ ಮಲ್ಲಿಕಾರ್ಜುನಸ್ವಾಮಿ ಬೆಟ್ಟದ ತಪ್ಪಲಿಗೆ ಸ್ಥಳಾಂತರಿಸಲು ಯೋಜನೆಯನ್ನು ರೂಪಿಸಿಕೊಂಡು ಇಪ್ಪತ್ತೈದು ಲಕ್ಷ ರೂಪಾಯಿ ವೆಚ್ಚದಲ್ಲಿ ಮಠದ ಸಮುಚ್ಚಯವನ್ನು ನಿರ್ಮಿಸಿದ್ದಾರೆ.

ಧಾರ್ಮಿಕ ಕಾರ್ಯ: ಮಠದಲ್ಲಿ ನಿರ್ಮಿತವಾಗಿರುವ ಶ್ರೀ ಚನ್ನಮಲ್ಲಿಕಾರ್ಜುನ ದೇಶಿಕೇಂದ್ರ ಸ್ವಾಮಿಗಳ ಗದ್ದುಗೆಗೆ ನಿತ್ಯ

ಪೂಜಾಕಾರ್ಯ, ಶ್ರಾವಣ ಮತ್ತು ಕಾರ್ತೀಕಮಾಸಗಳಲ್ಲಿ ವಿಶೇಷ ಪೂಜೆ, ಅಮಾವಾಸ್ಯೆಯಲ್ಲಿ ವಿಶೇಷ ಪೂಜೆಯನ್ನು ಏರ್ಪಡಿಸಿ, ಜೆಟ್ಟಿದ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಧರ್ಮಸಭೆಯನ್ನು ನಡೆಸಿಕೊಂಡು ಬರಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ.ಮಲ್ಲಿಕಾರ್ಜುನ ದೇಶಿಕೇಂದ್ರ ಸ್ವಾಮಿಗಳು, ಶ್ರೀ ವಿರಕ್ತಮಠ, ತಮ್ಮಡಿಹಳ್ಳಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ.
ಆಧಾರ: 'ಹೇಮಗಿರಿ' ವಿಶೇಷ ಸಂಚಿಕೆ

ಮಾದಿಹಳ್ಳಿ

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಮಾದಿಹಳ್ಳಿಯು ತಾಲ್ಲೂಕು ಕೇಂದ್ರದ ನೈರುತ್ಯಕ್ಕೆ ಹದಿನಾರು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಮಾದಿಹಳ್ಳಿ ಗ್ರಾಮದಲ್ಲಿ ಶ್ರೀಶೈಲ ಪೀಠದ ಶಾಖಾಮಠವಾಗಿ ಹಿರೇಮಠವು ಸ್ಥಾಪನೆಯಾಗಿದೆ. ಪುತ್ರವರ್ಗದ ಈ ಮಠದ ಸ್ಥಾಪನೆಯ ಬಗ್ಗೆ ನಿಖರವಾದ ಮಾಹಿತಿ ದೊರೆತಿಲ್ಲ.

ಮಠದ ಪರಂಪರೆಯಲ್ಲಿ ಬಂದಿರುವ ಗುರುಗಳ ಬಗ್ಗೆ ಈಗಿನ ಮಠಾಧೀಶ್ವರರಿಗೆ ಮಾಹಿತಿ ಇಲ್ಲದ ಕಾರಣ ಹಾಗೂ ಮಠದ ಆವರಣದಲ್ಲಿರುವ ಗದ್ದುಗೆಗಳ ಆಧಾರದ ಮೇಲೆ ಮಠದ ಇತಿಹಾಸವನ್ನು ಅಳೆಯಬಹುದಾಗಿದೆ. ಮಠದಲ್ಲಿ ಶ್ರೀ ಮಹಾದೇವ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬರುವ ಮೊದಲು ಪಟ್ಟಾಧ್ಯಕ್ಷರು ಯಾರೂ ಇಲ್ಲದೆ ಖಾಲಿ ಉಳಿದಿದ್ದರಿಂದ ಮಠದ ನಿರ್ವಹಣೆ ಇಲ್ಲದೆ ಕಟ್ಟಡವು ಶಿಥಿಲಗೊಂಡಿತ್ತು. ಈ ಸಂದರ್ಭದಲ್ಲಿ ಮಠದಲ್ಲಿ ಇದ್ದ ಗದ್ದುಗೆಗಳು ನಶಿಸಿಹೋಗಿರಬಹು ದೆಂದು ಅಂದಾಜಿಸಲಾಗಿದೆ.

ಈಗ ಹಾಲಿ ಇರುವ ಹಿರಿಯ ಗುರುಗಳು ಶ್ರೀ ಮಹಾದೇವ ಸ್ವಾಮಿಗಳು ಮತ್ತು ಅವರ ಕರಕಮಲ ಸಂಜಾತರಾದ ಶ್ರೀ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳ ಹೆಸರುಗಳನ್ನು ದಾಖಲಿಸಬಹುದಷ್ಟೆ. ಶ್ರೀ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ೧೯೯೪ ರಲ್ಲಿ ಪಟ್ಟಾಧಿಕಾರ ವಹಿಸಿಕೊಂಡಿದ್ದು, ಮಠದ ಆಡಳಿತವನ್ನು ನೋಡಿಕೊಳ್ಳುತ್ತಿದ್ದಾರೆ. ಶಿವಮೊಗ್ಗ ಜಿಲ್ಲೆಯ ವೀರಾಪುರದಲ್ಲಿ ಗುರುಗಳು ಜ್ಯೋತಿಷ್ಯ ಅಧ್ಯಯನ ಮಾಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಗದ್ದುಗೆಗಳಿಗೆ ನಿತ್ಯಪೂಜೆ ನಡೆಯುತ್ತಿದೆ, ಈಶ್ವರಲಿಂಗವನ್ನು ಪ್ರತಿಷ್ಠಾಪಿಸಿದ್ದು ದಿನದ ಎರಡೂ ವೇಳೆ ಪೂಜೆ ನಡೆಸಲಾಗುತ್ತಿದೆ. ಗುರುಗಳು ಭಕ್ತರ ಬೇನ್ನ ತೀರಿಸುವ ಮೂಲಕ ಭಕ್ತರ ಧಾರ್ಮಿಕ ಕ್ರಿಯಾದಿಗಳಿಗೆ ಸಹಕಾರನೀಡಿ ಆಶೀರ್ವದಿಸುತ್ತಿದ್ದಾರೆ. ಮಠಕ್ಕೆ ಇರುವ ಆಸ್ತಿಯನ್ನು ಅಭಿವೃದ್ಧಿಪಡಿಸಿ ಧಾರ್ಮಿಕ ಚಟುವಟಿಕೆಗಳಿಗೆ ಆದಾಯವನ್ನು ತರಬಲ್ಲ ಮೂಲವನ್ನಾಗಿ ಮಾಡಿಕೊಂಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಮಾದಿಹಳ್ಳಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ.

ಮುದ್ದೇನಹಳ್ಳಿ

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಮುದ್ದೇನಹಳ್ಳಿಯು ತಾಲ್ಲೂಕು ಕೇಂದ್ರದ ಉತ್ತರಕ್ಕೆ ಹದಿನೆಂಟು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಬಯಲು ಬಸವೇಶ್ವರಮಠ ಅಸ್ತಿತ್ವದಲ್ಲಿದೆ.

ಬಯಲುಬಸವೇಶ್ವರ ಮಠ: ಮುದ್ದೇನಹಳ್ಳಿಯಲ್ಲಿ ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ಕ್ರಾಂತಿಯಾದಾಗ ಅಲ್ಲಿನ ಶರಣರು ದಕ್ಷಿಣಾಭಿಮುಖವಾಗಿ ಬಂದ ಸಂದರ್ಭದಲ್ಲಿ ಬಸವೇಶ್ವರ ಎಂಬ ಶರಣರು ಈ ನೆಲದಲ್ಲಿ ನೆಲೆಸಿ ಮಠವನ್ನು ಸ್ಥಾಪನೆ ಮಾಡಿದ್ದಾರೆಂದು ಹೇಳಲಾಗುತ್ತಿದೆ. ಮುರುಘಾ ಸಮಯದ ಈ ವಿರಕ್ತ ಮಠವನ್ನು ಬಸವೇಶ್ವರರು ಮುದ್ದೇನಹಳ್ಳಿಯ ಬಯಲು ಪ್ರದೇಶದಲ್ಲಿ ಸ್ಥಾಪನೆ ಮಾಡಿರುವ ಕಾರಣಕ್ಕೆ ಈ ಮಠಕ್ಕೆ ಬಯಲು ಬಸವೇಶ್ವರ ಮಠ ಅಥವಾ ಬಯಲಪ್ಪನ

ಮಠ ಎಂದು ಕರೆಯುತ್ತಾರೆ.

ಮುದ್ದೇನಹಳ್ಳಿಯ ಪಶ್ಚಿಮದ ಬಯಲಿನಲ್ಲಿ ಸ್ಥಾಪನೆಯಾಗಿರುವ ಈ ಮಠದ ಹೊರ ಆವರಣದಲ್ಲಿ ಆಂಜನೇಯ ದೇವಸ್ಥಾನ, ದುರ್ಗಮ್ಮದೇವಿ ಮತ್ತು ಕೆಂಚರಾಯ ದೇವಸ್ಥಾನಗಳನ್ನು ನೋಡಬಹುದಾಗಿದೆ. ಅಲ್ಲದೆ ಈ ಮಠಕ್ಕೆ ಸಂಪ್ರದಾಯದಂತೆ ಬಿಡಲಾಗಿದ್ದ ಬಸವನ ಗದ್ದುಗೆಗಳು ಸ್ಥಾಪನೆಯಾಗಿವೆ. ಇಂತಹ ಧಾರ್ಮಿಕ ಪರಿಸರದ ಹಿನ್ನೆಲೆಯಲ್ಲಿ ತಲೆ ಎತ್ತಿ ನಿಂತಿರುವ ಬಯಲು ಬಸವೇಶ್ವರ ಮಠವು ಈ ಗ್ರಾಮದ ಧಾರ್ಮಿಕ ಕೇಂದ್ರ ಬಿಂದುವಾಗಿ ಬೆಳೆದಿದೆ.

ಪರಂಪರೆ: ಶ್ರೀ ಬಸವೇಶ್ವರ ಸ್ವಾಮಿಗಳು ಈ ಗ್ರಾಮದಲ್ಲಿ ನೆಲೆನಿಂತ ಸಂದರ್ಭದಲ್ಲಿ, ಜನರು ಗುರುಗಳ ಪೂಜೆ ಮತ್ತು ಪ್ರಸಾದಕ್ಕೆ ವ್ಯವಸ್ಥೆಗೊಳಿಸಿ, ಗುರುಗಳಿಗಾಗಿ ಮಠವನ್ನು ಕಟ್ಟಿಸಿಕೊಡುತ್ತಾರೆ. ಶ್ರೀ ಬಸವೇಶ್ವರ ಸ್ವಾಮಿಗಳು ಶರಣರ ತತ್ತ್ವಗಳನ್ನು ಪ್ರಚಾರ ಮಾಡಲು ನಿತ್ಯ ಪ್ರವಚನಗಳನ್ನು ಏರ್ಪಡಿಸಿ ಭಕ್ತರಿಗೆ ಧರ್ಮದ ಮಾರ್ಗದರ್ಶನವನ್ನು ನೀಡಿ ಹೆಚ್ಚು ಹೆಸರು ಪಡೆದಿದ್ದಾರೆ. ಈ ರೀತಿ ದೀರ್ಘಕಾಲ ಧರ್ಮ ಜಾಗೃತಿಯನ್ನುಂಟು ಮಾಡಿ ಮಠವನ್ನು ಬೆಳೆಸಿರುವುದಲ್ಲದೇ, ವೀರಶೈವ ಧರ್ಮದ ಆಚಾರವಿಚಾರಗಳನ್ನು ಭಕ್ತರು ಅನುಸರಿಸಲು ಪ್ರೇರಣೆಯನ್ನು ನೀಡಿ ಮಠದ ಪರಂಪರೆಯನ್ನು ಬೆಳೆಸಿದರು.

೧. ಶ್ರೀ ಮ.ನಿ.ಪ್ರ. ಬಯಲು ಬಸವೇಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಜಡೆಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಪಂಚಾಕ್ಷರಿಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ತೋಂಟದಾರ್ಯಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಫಲಹಾರಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಎರಡನೆಯ ಜಡೆಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಗುರುಬಸವರಾಜೇಂದ್ರಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯಲ್ಲಿ ಶ್ರೀ ಬಯಲು ಬಸವೇಶ್ವರರು ಲಿಂಗೈಕ್ಯರಾದ ಮೇಲೆ ಈಗಿನ ಗುರುಗಳು ಸೇರಿದಂತೆ ಆರು ಜನ ಗುರುಗಳು ಅಧಿಕಾರವನ್ನು ವಹಿಸಿಕೊಂಡು, ಮಠದ ಧಾರ್ಮಿಕ ಚಟುವಟಿಕೆಗಳನ್ನು ಮುನ್ನಡೆಸಿಕೊಂಡು ಮಠದ ಜೀವಂತಿಕೆ ಯನ್ನು ಉಳಿಸಿಕೊಂಡು ಬಂದಿದ್ದಾರೆ.

ಅಭಿವೃದ್ಧಿಕಂಡ ಕಾಲ: ಶ್ರೀ ಎರಡನೆಯ ಜಡೆ ಸ್ವಾಮಿಗಳ ಕಾಲದಲ್ಲಿ ಮಠವು ಆಮೂಲಾಗ್ರವಾಗಿ ಬದಲಾವಣೆಗೊಂಡಿದೆ. ಮಠದ ಹಳೆಯ ಕಟ್ಟಡವನ್ನು ತೆಗೆಸಿ ಮಣ್ಣಿನ ಗಚ್ಚಿನಿಂದ ಹೊಸ ಕಟ್ಟಡವನ್ನು ಸ್ಥಾಪಿಸಿರುತ್ತಾರೆ. ನೂತನ ಕಟ್ಟಡವನ್ನು ಕರ್ತೃಗುರುಗಳ ಗದ್ದುಗೆಯನ್ನು ಕೇಂದ್ರವಾಗಿರಿಸಿಕೊಂಡು ನಿರ್ಮಿಸಿದ್ದಾರೆ. ಮಠಕ್ಕೆ ಆಸ್ತಿಯನ್ನು ಸಂಪಾದಿಸಿದ ಶ್ರೀ ಎರಡನೆಯ ಜಡೆ ಸ್ವಾಮಿಗಳು ಮಠವು ಆರ್ಥಿಕವಾಗಿ ಬೆಳೆದು ಸ್ವಾವಲಂಬನೆಯನ್ನು ಸಾಧಿಸಲು ಕಾರಣಕರ್ತರಾಗಿದ್ದಾರೆ. ಇವರ ಕಾಲದಲ್ಲಿ ಮಠವು ಅಭಿವೃದ್ಧಿ ಕಂಡಿತಲ್ಲದೆ ಧಾರ್ಮಿಕ ಕಾರ್ಯಗಳು ಚುರುಕುಗೊಂಡು ಜನಮನದಲ್ಲಿ ಬೆಳೆಯಿತು. ಎರಡನೆಯ ಶ್ರೀ ಜಡೆಸ್ವಾಮಿಗಳು ಈ ಮಠದ ಶಾಖಾ ಮಠವಾದ ಬಾಣಾವರ ಹೋಬಳಿಯ ರಾಂಪುರದ ಗವಿಮಠದಲ್ಲಿ ತಮ್ಮ ಜೀವಿತದ ಕೊನೆಯ ದಿನಗಳನ್ನು ಕಳೆದು ಅಲ್ಲೇ ಲಿಂಗೈಕ್ಯರಾಗಿರುತ್ತಾರೆ.

ಕಾಯಕಯೋಗಿ: ೧೯೮೫-೮೬ ರ ಸಾಲಿನಲ್ಲಿ ಪಟ್ಟಾಧಿಕಾರ ವಹಿಸಿಕೊಂಡಿರುವ ಶ್ರೀ ಗುರುಬಸವರಾಜೇಂದ್ರರ ಸ್ವಾಮಿಗಳು ಪರಂಪರೆಯ ಎಲ್ಲಾ ಧಾರ್ಮಿಕ ಆಚರಣೆಗಳನ್ನು ನೆಡೆಸಿಕೊಂಡು ಬಂದಿದ್ದಾರೆ. ಪರಂಪರೆಯ ಗುರುಗಳ ಗದ್ದುಗೆಗೆ ಮಂಟಪವನ್ನು ನಿರ್ಮಿಸಿದ್ದಾರೆ. ತಮ್ಮ ಹಿರಿಯ ಗುರುಗಳು ಐಕ್ಯಗೊಂಡ ಗವಿ ಮಠದಲ್ಲಿ ಗುರುಗಳ ಗದ್ದುಗೆಗೆ ಮಂಟಪವನ್ನು ನಿರ್ಮಿಸಿ, ನಿತ್ಯ ಪೂಜೆ ನಡೆಯಲು ವ್ಯವಸ್ಥೆಯನ್ನು ಮಾಡಿದ್ದಾರೆ.

ಮಠದ ಆಸ್ತಿಯಾಗಿರುವ ಇಪ್ಪತ್ತು ಎಕರೆ ಜಮೀನನ್ನು ಅಭಿವೃದ್ಧಿಪಡಿಸಿ ಸ್ವತಃ ನೇಗಿಲ ಮೇಣಿ ಹಿಡಿದು ಕಾಯಕ ನಡೆಸುವ ಗುರುಗಳು ಕಾಯಕಯೋಗಿಗಳಾಗಿದ್ದಾರೆ. 'ಗುರುವಾದರೂ ಕಾಯಕದಿಂದಲೇ ಬದುಕಬೇಕು'ಎಂಬ ಶರಣರ

ವಾಣಿಯನ್ನು ಜೀವನದಲ್ಲಿ ಅಳವಡಿಸಿಕೊಂಡು, ಸಮಾಜಕ್ಕೆ ಮಾರ್ಗದರ್ಶನ ನೀಡುವ ನಿಟ್ಟಿನಲ್ಲಿ ಬೆಳೆದು ಮಠವನ್ನು ಸುಸ್ಥಿತಿಯಲ್ಲಿ ಇಟ್ಟುಕೊಂಡಿದ್ದಾರೆ. ಸಮಾಜದ ಅಭಿವೃದ್ಧಿಯಲ್ಲಿ ಮಠದ ಅಭಿವೃದ್ಧಿಯನ್ನು ಕಂಡುಕೊಂಡಿರುವ ಗುರುಗಳು ಧರ್ಮನಿಷ್ಠರಾಗಿ ಸಮಾಜದಲ್ಲಿ ವೀರಶೈವ ಧರ್ಮವು ಬೆಳೆಯುವಂತೆ ಮಾಡಿದ್ದಾರೆ.

ಪುರಾತನ ಸಾಮಗ್ರಿಗಳು: ಪುರಾತನ ಇತಿಹಾಸ ಇರುವ ಈ ಮಠದಲ್ಲಿ ಪರಂಪರೆಯ ಗುರುಗಳು ಉಪಯೋಗಿಸುತ್ತಿದ್ದ ವಿಶಿಷ್ಟ ಕೆತ್ತನೆಯ ಮಂಟಪ, ಏಕನಾದ, ಭಜನೆ ವಾದ್ಯಗಳು ಹಾಗೂ ಸಿಂಹಾಸನಗಳು ಇವೆ.

ಧಾರ್ಮಿಕ ಕಾರ್ಯಗಳು: ಮಠದಲ್ಲಿ ಸ್ಥಾಪನೆಗೊಂಡಿರುವ ಗದ್ದುಗೆಗಳಿಗೆ ನಿತ್ಯ, ಎರಡೂವೇಳೆ ಪೂಜೆ ನಡೆಯುತ್ತಿದೆ. ಶ್ರಾವಣ, ಕಾರ್ತೀಕ ಮಾಸಗಳಲ್ಲಿ ರುದ್ರಾಭಿಷೇಕದ ಪೂಜೆಯು ನಡೆಯುತ್ತಿದೆ. ಈ ಸಂದರ್ಭದಲ್ಲಿ ಅನೇಕ ಭಕ್ತರು ಮಠಕ್ಕೆ ಬಂದು ವಿಶೇಷ ಪೂಜೆಯಲ್ಲಿ ಪಾಲ್ಗೊಂಡು ತೀರ್ಥ, ಪ್ರಸಾದವನ್ನು ಸ್ವೀಕರಿಸಿ ಹೋಗುತ್ತಾರೆ. ಮಠದ ಬಯಲಿನಲ್ಲಿ ಸ್ಥಾಪನೆಗೊಂಡಿರುವ ದೇವಾಲಯಗಳಿಗೆ ಮತ್ತು ಬಸವನ ಗದ್ದುಗೆಗಳಿಗೆ ನಿತ್ಯ ಪೂಜೆ ಮಾಡಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಗುರುಬಸವರಾಜೇಂದ್ರ ಸ್ವಾಮಿಗಳು, ಶ್ರೀ ಬಯಲು ಬಸವೇಶ್ವರ ಮಠ, ಮುದ್ದೇನಹಳ್ಳಿ, ಚಿಕ್ಕನಾಯಕನ ಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ.

❑

ತಿಪಟೂರು ತಾಲ್ಲೂಕು

ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕು ಕೊಬ್ಬರಿಯ ಗಣಜವೆಂದು ಹೆಸರು ಪಡೆದಿದೆ. ಇಂತಹ ಶ್ರೀಮಂತ ತಾಲ್ಲೂಕಿನಲ್ಲಿ ವೀರಶೈವ ಧರ್ಮ ತನ್ನ ಪ್ರಾಬಲ್ಯವನ್ನು ಬೆಳೆಸಿಕೊಂಡಿದೆ. ಇಲ್ಲಿ ಪ್ರಸ್ತುತ ಆರು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸುವ ಮೂಲಕ ಸಮಾಜವನ್ನು ಬೆಳೆಸಿವೆ.

ತಿಪಟೂರು

ತಾಲ್ಲೂಕು ಕೇಂದ್ರ ಸ್ಥಳವಾದ ತಿಪಟೂರು ನಗರವು ವಾಣಿಜ್ಯೋದ್ಯಮ ಕೇಂದ್ರವಾಗಿ ಬೆಳೆದಿದೆ. ಇಲ್ಲಿ ಎರಡು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಪ್ರಗತಿಯನ್ನು ಮಾಡಿವೆ.

ಶಿಡ್ಲೆಹಳ್ಳಿ-ಬಳ್ಳೆಕಟ್ಟೆ ಸಂಸ್ಥಾನಮಠ: ತಿಪಟೂರು ತಾಲ್ಲೂಕಿನ ಶಿಡ್ಲೆಹಳ್ಳಿಯು ತಾಲ್ಲೂಕು ಕೇಂದ್ರದ ಆಗ್ನೇಯಕ್ಕೆ ಹದಿನೈದು ಕಿ.ಮೀ.ದೂರದಲ್ಲಿದೆ. ಅಭಿವೃದ್ಧಿಗೊಂಡ ಈ ಗ್ರಾಮದಲ್ಲಿ ಸಂಸ್ಥಾನಮಠವು ಹದಿನೆಂಟನೆಯ ಶತಮಾನದಲ್ಲಿ ಪ್ರಾರಂಭ ಗೊಂಡಿತ್ತು. ಈ ಮಠವು ಈಗ ತಿಪಟೂರು ನಗರಕ್ಕೆ ಸ್ಥಳಾಂತರಗೊಂಡು ತನ್ನ ಧಾರ್ಮಿಕ ಕಾರ್ಯಗಳನ್ನು ವಿಸ್ತರಿಸಿಕೊಂಡಿದೆ.
ಮಠ ಸ್ಥಾಪನೆಯ ಹಿನ್ನೆಲೆ: ಚಿಕ್ಕನಾಯಕನಹಳ್ಳಿಯ ಪಾಳೆಗಾರರೆಂದು ಪ್ರಸಿದ್ಧಿಗೆ ಬಂದಿದ್ದ ರಾಜ ಮನೆತನದ ಸ್ಥಾಪಕರಾದ ಎರೆಕಟ್ಟೆ ಮಾದನಾಯಕರಿಗೆ ಬಳ್ಳಾರಿ ಜಿಲ್ಲೆಯ ಉಜ್ಜಯಿನಿ ಸದ್ಧರ್ಮಪೀಠದ ಜಗದ್ಗುರುಗಳಾದ ಶ್ರೀ ಕೋರಾರಾಧ್ಯರು ವೀರಶೈವ ದೀಕ್ಷೆಯನ್ನು ನೀಡಿ ಶೈವನಾಗಿದ್ದ ರಾಜನನ್ನು ವೀರಶೈವನನ್ನಾಗಿ ಪರಿವರ್ತಿಸಿದ್ದರು. ಅಂದಿನಿಂದ ಈ ರಾಜ ಮನೆತನವು ಉಜ್ಜಯಿನಿ ಪೀಠಕ್ಕೆ ಭಕ್ತಿಯಿಂದ ನಡೆದುಕೊಳ್ಳುತ್ತಿತ್ತು. ಇಮ್ಮಡಿಮುದಿಯಪ್ಪ ನಾಯಕನು (೧೭೨೦-೧೭೪೦) ಧರ್ಮಪೀಠಗಳ ಬಗ್ಗೆ ಅಪಾರ ಗೌರವ ಇಟ್ಟುಕೊಂಡಿದ್ದು, ತಮ್ಮಡಿಹಳ್ಳಿಯ ಗುರುಗಳ ಬಗ್ಗೆ ಅಪಾರ ವಿಶ್ವಾಸವನ್ನು ಇಟ್ಟುಕೊಂಡು ಅವರ ಮಾರ್ಗದರ್ಶನದಲ್ಲಿ ರಾಜ್ಯಭಾರ ಮಾಡುತ್ತಿದ್ದನು. ಒಮ್ಮೆ ಗುರುಗಳು ರಾಜ ಮುದಿಯಪ್ಪ ನಾಯಕನಿಗೆ ಹಾಗಲವಾಡಿಯಲ್ಲಿ ಮಠವನ್ನು ಕಟ್ಟಿಸಿ ರಾಜ ಮನೆತನದ ಪೀಠವಾದ ದಾರುಕಾಚಾರ್ಯ ಪರಂಪರಾಗತ ಶ್ರೀ ಕೋರಾರಾಧ್ಯರ ಪರಂಪರೆಯ ಶ್ರೀಸಿದ್ಧಲಿಂಗ ಶಿವಾಚಾರ್ಯ ರನ್ನು ಕರೆತರಲು ಅಪ್ಪಣೆ ಕೊಡಿಸಿದರು. ಗುರುಗಳ ಅಪ್ಪಣೆಗೆ ಮರುಮಾತನಾಡದೆ ಹಾಗಲವಾಡಿಯಲ್ಲಿ ಮಠವನ್ನು ಕಟ್ಟಿಸಿ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳನ್ನು ಕರೆತಂದು ತಮ್ಮಡಿಹಳ್ಳಿಯ ಶ್ರೀಮುದ್ದುವೀರ ಸ್ವಾಮಿಗಳ ನೇತೃತ್ವದಲ್ಲಿ ಪಟ್ಟಾಧಿಕಾರ ವನ್ನು ನೆರವೇರಿಸಿದರು. ಈ ರೀತಿ ಹಾಗಲವಾಡಿಯಲ್ಲಿ ಪ್ರಾರಂಭಗೊಂಡ ಮಠವು ಹತ್ತೊಂಬತ್ತನೆಯ ಶತಮಾನದಲ್ಲಿ ಶ್ರೀ ಗುರುಸಿದ್ಧವೀರ ಸ್ವಾಮಿಗಳ ಕಾಲದಲ್ಲಿ ಶಿಡ್ಲೆಹಳ್ಳಿಗೆ ಸ್ಥಳಾಂತರಗೊಳ್ಳುತ್ತದೆ.

ಮಠ ಸ್ಥಾಪನೆ: ಶ್ರೀ ಗುರುಸಿದ್ಧವೀರ ಸ್ವಾಮಿಗಳು ತಪೋನಿಷ್ಠರು. ಇವರ ಪ್ರಭಾವಕ್ಕೆ ಒಳಗಾಗಿದ್ದ ಶಿಡ್ಲೆಹಳ್ಳಿಯ ಭಕ್ತರು ಗುರುಗಳು ಅನುಷ್ಠಾನಗೊಂಡ ಜಾಗದಲ್ಲಿ ಮಠವನ್ನು ಕಟ್ಟಿಸಿ ಧಾರ್ಮಿಕ ಚಟುವಟಿಕೆಗಳು ಪ್ರಾರಂಭಗೊಳ್ಳುವಂತೆ ಮಾಡಿದರು. ಎಂದಿನಂತೆ ಧಾರ್ಮಿಕ ಚಟುವಟಿಕೆಗಳು ಪ್ರಾರಂಭಗೊಂಡ ಮೇಲೆ ತಮ್ಮಡಿಹಳ್ಳಿಯ ಮಲ್ಲಿಕಾರ್ಜುನ ಬೆಟ್ಟದಲ್ಲಿ ಶ್ರೀಸಿದ್ಧವೀರ ಸ್ವಾಮಿಗಳು ದೀರ್ಘ ಅನುಷ್ಠಾನಕ್ಕೆಂದು ಕುಳಿತ ಸಂದರ್ಭದಲ್ಲಿ (೧೮೩೦) ಲಿಂಗೈಕ್ಯರಾಗಿರುತ್ತಾರೆ. ಗುರುಗಳ ಸಮಾಧಿಯನ್ನು ಮಲ್ಲಿಕಾರ್ಜುನಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ನೆರವೇರಿಸಿ ಗದ್ದುಗೆಯನ್ನು ನಿರ್ಮಿಸಲಾಗಿದೆ.

ಗುರುಪರಂಪರೆ:	೧. ಶ್ರೀ ಸಿದ್ಧವೀರ ಶಿವಾಚಾರ್ಯಸ್ವಾಮಿಗಳು	(? -೧೮೩೦)
	೨. ಶ್ರೀ ಸಿದ್ಧಮಲ್ಲ ದೇಶಿಕೇಂದ್ರಸ್ವಾಮಿಗಳು	(೧೮೩೦-೧೯೦೮)
	೩. ಶ್ರೀ ಕರಿಬಸವ ದೇಶಿಕೇಂದ್ರಸ್ವಾಮಿಗಳು	(೧೯೦೮-೧೯೭೭)
	೪. ಶ್ರೀ ಚನ್ನಮಲ್ಲಿಕಾರ್ಜುನ ದೇಶಿಕೇಂದ್ರಸ್ವಾಮಿಗಳು	(೧೯೭೭-೧೯೯೩)
	೫. ಶ್ರೀ ಇಮ್ಮಡಿ ಕರಿಬಸವ ದೇಶಿಕೇಂದ್ರಸ್ವಾಮಿಗಳು	(೧೯೯೩-) (ಈಗಿನವರು)

ಈ ರೀತಿ ಶಿಡ್ಲೆಹಳ್ಳಿಯ ಗುರುಪರಂಪರೆಯು ಬೆಳೆದು ಬಂದಿದೆ. ಶ್ರೀ ಸಿದ್ಧವೀರ ಶಿವಾಚಾರ್ಯ ಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಸಿದ್ಧಮಲ್ಲ ದೇಶಿಕೇಂದ್ರ ಸ್ವಾಮಿಗಳು ಹಠಯೋಗ ಮತ್ತು ಶಿವಯೋಗದ ಬಗ್ಗೆ ಹೆಚ್ಚು ಸಮರ್ಥರಾಗಿದ್ದರು. ಶ್ರೀ ಸಿದ್ಧರಾಮ ದೇಶಿಕೇಂದ್ರ ಸ್ವಾಮಿಗಳು ತಪೋನಿಷ್ಠರು. ಇಂತಹ ಶಿವಯೋಗಿಗಳು ೧೦೮ ವರ್ಷಗಳು ಬದುಕಿ ಈ ನಾಡಿನಲ್ಲಿ ಧಾರ್ಮಿಕ ಪ್ರಭೆಯನ್ನು ಬೆಳಗಿಸಿ ಈ ಮಠವನ್ನು ಹೆಚ್ಚು ಅಭಿವೃದ್ಧಿಗೆ ತಂದರು. ಶ್ರೀ ಸಿದ್ಧಮಲ್ಲ ದೇಶಿಕೇಂದ್ರ ಸ್ವಾಮಿಗಳು ಸಿದ್ಧಲಿಂಗೇಶ್ವರರ ದೇವಾಲಯವನ್ನು ಕಟ್ಟಿಸಿ ಸಾರ್ಥಕ ಬದುಕನ್ನು ಬದುಕಿ ೧೯೦೮ ರಲ್ಲಿ ಶ್ರೀ ಕರಿಬಸವ ದೇಶಿಕೇಂದ್ರ ಸ್ವಾಮಿಗಳಿಗೆ ಪಟ್ಟಾಧಿಕಾರವನ್ನು ನೀಡಿ ಲಿಂಗೈಕ್ಯರಾಗಿರುತ್ತಾರೆ.

ಉದ್ಭಾಮ ಪಂಡಿತ: ಶ್ರೀ ಕರಿಬಸವ ದೇಶಿಕೇಂದ್ರ ಸ್ವಾಮಿಗಳು ಮಹಾವಿದ್ವಾಂಸರು. ಕಾಶಿಯಲ್ಲಿ ವಿದ್ವತ್, ತರ್ಕ, ನ್ಯಾಯ, ಸಂಸ್ಕೃತ, ವೇದಾಂತ, ತತ್ತ್ವಶಾಸ್ತ್ರವನ್ನು ಅಧ್ಯಯನ ಮಾಡಿ ವಾಮನಚರಣ ಭಟ್ಟಾಚಾರ್ಯರಲ್ಲಿ ಶಿಕ್ಷಣವನ್ನು ಪಡೆದು ಸಂಸ್ಕೃತದಲ್ಲಿ ಉದ್ಭಾಮ ಪಂಡಿತರಾಗಿ ಬಂದರು. ಕಲ್ಕತ್ತದಲ್ಲಿ ಹದಿನೆಂಟು ದಿನಗಳ ಕಾಲ ನಡೆದ ಸಾಹಿತ್ಯತೀರ್ಥ, ವ್ಯಾಕರಣತೀರ್ಥ, ತರ್ಕ ವಿದ್ವಾನ್ ಪರೀಕ್ಷೆಗಳಲ್ಲಿ ಉನ್ನತಶ್ರೇಣಿಯಲ್ಲಿ ಉತ್ತೀರ್ಣರಾಗಿ ಶಿಡ್ಲೆಹಳ್ಳಿ ಮಠಕ್ಕೆ ಬರುತ್ತಾರೆ. ಈ ರೀತಿ ವಿದ್ಯಾ ಸಂಪನ್ನರಾದ ಗುರುಗಳು ಸದಾ ಸಮಷ್ಟಿ ಸಮಾಜದ ಏಳಿಗೆಗೆ ದುಡಿದವರಾಗಿದ್ದಾರೆ. ೧೯೧೮ ರಲ್ಲಿ ವೀರಶೈವರಲ್ಲಿ ಒಡಕನ್ನು ಉಂಟುಮಾಡಲು ಕೆಲವು ಕುಹಕಿಗಳು ಭಕ್ತ ಮತ್ತು ಜಂಗಮ ಎಂಬ ಭೇದಭಾವವನ್ನು ಸೃಷ್ಟಿಸಿದರು. ಈ ವಿಷಯದಲ್ಲಿ ಕೆಲವರಲ್ಲಿ ಗೊಂದಲ ಸೃಷ್ಟಿಯಾಗಿ ಹಾವೇರಿ ನ್ಯಾಯಾಲಯಕ್ಕೆ ಹೋಯಿತು. ಗುರುಗಳು ವಾದಮಾಡಿ ಜಂಗಮ ಎಂಬುದು ಜಾತಿಯ ಸೂಚಕ ಅಲ್ಲ, ಅದು ನಮ್ಮ ಸಂಸ್ಕಾರದಿಂದ ಉಂಟಾಗಿರುವುದು ಎಂದು ವಾದ ಮಾಡಿ ಜಯಗಳಿಸಿ ಈ ವಿವಾದಕ್ಕೆ ತೆರೆ ಎಳೆದರು.

ಮತ್ತೊಮ್ಮೆ ಸ್ಥಳಾಂತರ: ಮಹಾನ್ ವಿದ್ವಾಂಸರಾದ ಶ್ರೀ ಕರಿಬಸವ ದೇಶಿಕೇಂದ್ರ ಸ್ವಾಮಿಗಳು ಶಿಡ್ಲೆಹಳ್ಳಿ ಮಠದ ಘನತೆಯನ್ನು ಹೆಚ್ಚಿಸಿದರು. ಇವರ ಕಾಲದಲ್ಲಿ ಮಠದ ಆಡಳಿತದ ವ್ಯಾಪ್ತಿವಿಸ್ತಾರವಾದಂತೆಲ್ಲಾ ಭಕ್ತರ ನಿಕಟ ಸಂಪರ್ಕವಿಟ್ಟುಕೊಳ್ಳಲು ತಿಪಟೂರಿಗೆ ಮಠದ ಆಡಳಿತ ಮತ್ತು ವಾಸ್ತವ್ಯವನ್ನು ೧೯೨೨ರಲ್ಲಿ ಸ್ಥಳಾಂತರಿಸುತ್ತಾರೆ. ತಿಪಟೂರಿಗೆ ಸ್ಥಳಾಂತರಗೊಂಡ ಮೇಲೆ, ಮಠದ ಆವರಣದಲ್ಲಿ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿ ಕಲಿಯುವ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿಕೊಟ್ಟರು.

ಆಶ್ರಯದಾತರು: ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರು ಶ್ರೀ ಕರಿಬಸವ ದೇಶಿಕೇಂದ್ರ ಸ್ವಾಮಿಗಳ ಪಾಂಡಿತ್ಯವನ್ನು ಕೇಳಿ ತಿಳಿದುಕೊಂಡರು. ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ದುಡಿಯುತ್ತಿದ್ದುದನ್ನು ಗಮನಿಸಿ ಅರಮನೆಗೆ ಕರೆಸಿ ರಾಜ ಮರ್ಯಾ ದೆಯ ಜತೆಗೆ ಅನೇಕ ಬಿರುದಾವಳಿಗಳನ್ನು ನೀಡಿ ಗೌರವಿಸಿ ಕಳಿಸಿಕೊಟ್ಟಿರುತ್ತಾರೆ. ೧೯೪೨ ರಲ್ಲಿ ಗುರುಗಳು ತುಮಕೂರಿನಲ್ಲಿ ವೀರಶೈವ ಗುರುಕುಲ ಮತ್ತು ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿದರು. ಬೆಂಗಳೂರಿನ ಕಂಬಿಸಿದ್ಧ ರಾಮಣ್ಣನ ವರು ಸ್ಥಿರಚರ ಆಸ್ತಿಯನ್ನು ವೀರಶೈವ ಸಮಾಜ ಸುಧಾರಣಾ ಸಂಘಕ್ಕೆ ಬರೆದು ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲು ನೆರವಾದರು. ಅಲ್ಲದೆ ಅರಸೀಕೆರೆ, ಕಡೂರು, ದಾವಣಗೆರೆ, ಹಾಸನ, ನಂದಿಗುಡಿ ಮತ್ತು ಚಿಲ್ಲೂರುಗಳಲ್ಲಿ ವಿದ್ಯಾರ್ಥಿನಿಲಯ ಗಳನ್ನು ಸ್ಥಾಪಿಸಿ ಕಲಿಯುವ ಮಕ್ಕಳಿಗೆ ಆಶ್ರಯದಾತರಾದರು.

ಸಾಹಿತ್ಯಾಸಕ್ತಿ: ವಿದ್ಯಾರ್ಥಿನಿಲಯದಲ್ಲಿ ಕಲಿಯುವ ಮಕ್ಕಳಿಗೆ ಅನುಕೂಲವಾಗಲಿ ಎಂದು ಶಾರದಾಭಂಡಾರ (ಗ್ರಂಥಾಲಯ) ಸ್ಥಾಪನೆಮಾಡಿದ್ದಾರೆ. ಶ್ರೀ ಕರಿಬಸವ ದೇಶಿಕೇಂದ್ರ ಸ್ವಾಮಿಗಳು ರಚಿಸಿದ ಅಪ್ರಕಟಿತ ಕವಿಕರ್ಣರಾಸಾಯನ ಎಂಬ ಸಂಸ್ಕೃತ ಗ್ರಂಥವು ಈ ಮಠದಲ್ಲಿ ಲಭ್ಯವಿದೆ. ಬಸವರಾಜ ಶಾಸ್ತ್ರಿಯವರ ಗ್ರಂಥಗಳು ಹಾಗೂ ಅನುಭವಮುಕುರ ಸ್ವಾಮಿಗಳ ಗ್ರಂಥಗಳು ಭಂಡಾರದಲ್ಲಿ ದೊರೆತ ಪ್ರಾಚೀನ ಕೃತಿಗಳಾಗಿವೆ. ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಸಾಹಿತ್ಯಿಕವಾಗಿ ಮಠವನ್ನು ಅಭಿವೃದ್ಧಿಗೊಳಿಸಿದ್ದಲ್ಲದೆ ಮಠಕ್ಕೆ ಆರ್ಥಿಕ ಸದೃಢತೆ ತಂದುಕೊಟ್ಟು ನವೆಂಬರ್ ಇಪ್ಪತ್ತೊಂದು ೧೯೫೪ ರಲ್ಲಿ ತಿಪಟೂರಿನ ಮಠದಲ್ಲಿ ಲಿಂಗೈಕ್ಯರಾಗಿರುತ್ತಾರೆ.

ವಿಲೀನಗೊಂಡ ಬಳ್ಳೇಕಟ್ಟೆಮಠ: ಶ್ರೀ ಕರಿಬಸವ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಮಠದ ಉತ್ತರಾಧಿಕಾರಿಗಳು ಯಾರೂ ಇಲ್ಲದ ಕಾರಣ ಮಠದ ಆಡಳಿತವನ್ನು ಬಳ್ಳೇಕಟ್ಟೆ ಮಠದ ಶ್ರೀ ಚನ್ನಮಲ್ಲಿಕಾರ್ಜುನ ದೇಶಿಕೇಂದ್ರ ಸ್ವಾಮಿಗಳು

ನೋಡಿಕೊಳ್ಳ ತೊಡಗಿದರು. ತಿಪಟೂರು ತಾಲ್ಲೂಕಿನ ಬಳ್ಳೇಕಟ್ಟೆಯ ಮಠ ಮತ್ತು ಈ ಮಠವು ಒಂದೇ ಸಂಪ್ರದಾಯದಲ್ಲಿ ಬೆಳೆದು ಬಂದಿದ್ದರಿಂದ ಶ್ರೀ ಚನ್ನಮಲ್ಲಿಕಾರ್ಜುನ ದೇಶಿಕೇಂದ್ರ ಸ್ವಾಮಿಗಳ ಕಾಲದಲ್ಲಿ ಎರಡೂ ಮಠಗಳ ಆಡಳಿತವನ್ನು ವಿಲೀನಗೊಳಿಸಿ (ಶಿಡ್ಲೆಹಳ್ಳಿ ಮತ್ತು ಬಳ್ಳೇಕಟ್ಟೆ) ಮಠಗಳನ್ನು ಒಂದೇ ಆಡಳಿತಕ್ಕೆ ತಂದರು. ಇದರಿಂದ ಇನ್ನೂ ಹೆಚ್ಚು ಬಲವರ್ಧನೆಗೊಂಡ ಮಠವು ತನ್ನ ವಿಸ್ತಾರವನ್ನು ಹಿಗ್ಗಿಸಿಕೊಂಡಿತು.

ತಿಪಟೂರು ತಾಲ್ಲೂಕಿನ ದೊಡ್ಡಮಾರ್ಪನಹಳ್ಳಿಯಲ್ಲಿ ೧೯೧೩ ರಲ್ಲಿ ಜನಿಸಿದ ಶ್ರೀ ಚನ್ನಮಲ್ಲಿಕಾರ್ಜುನ ದೇಶಿಕೇಂದ್ರ ಸ್ವಾಮಿಗಳು ೧೯೩೭ ರಲ್ಲಿ ಬಳ್ಳೇಕಟ್ಟೆ ಮಠದ ಆಡಳಿತವನ್ನು ವಹಿಸಿಕೊಂಡರು. ೧೯೧೦ ರಲ್ಲಿ ಪ್ರಾರಂಭವಾಗಿದ್ದ ಬಳ್ಳೇಕಟ್ಟೆ ಮಠದ ಅಧಿಕಾರವನ್ನು ಮಠದ ಸ್ಥಾಪಕ ಗುರುಗಳಾದ ಶ್ರೀ ಸೋಮಶೇಖರ ದೇಶಿಕೇಂದ್ರ ಸ್ವಾಮಿಗಳ ಕೃಪಾಶೀರ್ವಾದ ಪಡೆದು (೧೯೨೦) ಮಠವನ್ನು ಆರ್ಥಿಕವಾಗಿ ಸದೃಢಗೊಳಿಸಿದರು. ಶಿವಪೂಜಾನಿಷ್ಠರು,ಕಾಯಕಯೋಗಿಗಳೂ ಆಗಿದ್ದ ಗುರುಗಳು ಯಾವತ್ತೂ ಲೌಕಿಕ ವ್ಯಾಮೋಹಕ್ಕೆ ಒಳಗಾದವರಲ್ಲ. ಬೇಸಾಯಗಾರರಾಗಿ ಆದರ್ಶರೀತಿಯಲ್ಲಿ ಬೆಳೆ ಬೆಳೆಯುತ್ತಿದ್ದರು. ಇದನ್ನು ಗಮನಿಸಿದ ಸರ್ಕಾರವು ಮಾದರಿ ಕೃಷಿಕ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದು ಇಲ್ಲಿ ಉಲ್ಲೇಖಾರ್ಹವಾಗಿದೆ. ಧರ್ಮ ನಿಷ್ಠರೂ ಕಾಯಕಯೋಗಿ ಗಳೂ, ನೀತಿಪರರೂ ಆಗಿದ್ದ ಗುರುಗಳು ೧೯೨೦ರಲ್ಲಿ ಅಧಿಕಾರವನ್ನು ಪಡೆದು ಮಠವನ್ನು ಆರ್ಥಿಕವಾಗಿ ಸದೃಢಗೊಳಿಸಿದರು. ಧರ್ಮಪ್ರಜ್ಞೆಯು ಎಲ್ಲರಲ್ಲಿಯೂ ಬೆಳೆಯುವಂತೆ ಮಾಡಿದ್ದಾರೆ.

ಜಾತಿಭೂತ: ಬಳ್ಳೇಕಟ್ಟೆ ಮಠವನ್ನು ಅರ್ಥಿಕವಾಗಿ ಸಧೃಡಪಡಿಸಿದ ಗುರುಗಳು ಮಠಕ್ಕೆ ನೂತನ ಕಟ್ಟಡವನ್ನು ಕಟ್ಟಿಸಿ ೧೯೫೪ರ ಡಿಸೆಂಬರ್ ಐದರಂದು ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಿದ್ದರು. ಉದ್ಘಾಟನೆಯ ಅಂಗವಾಗಿ ಸರ್ವಶರಣರ ಸಮಾವೇಶ ವನ್ನು ಏರ್ಪಡಿಸಿ ಬಿ.ಡಿ.ಜತ್ತಿ,ಸಿರಿಗೆರೆಯ ಹಿಂದಿನ ಲಿಂಗೈಕ್ಯ ಗುರುಗಳು, ಸರ್ವೋದಯ ಕಾರ್ಯಕರ್ತ ದಾಸಪ್ಪನ ವರು ಹಾಗೂ ಅನೇಕ ನಾಯಕರನ್ನು ಜಾತಿ ಭೇದವಿಲ್ಲದೆ ಮಠಕ್ಕೆ ಕರೆಸಿದ್ದರು. ಅಲ್ಲದೆ ಅಂದು ಸಹಪಂಕ್ತಿ ಭೋಜನವನ್ನು ಏರ್ಪಡಿಸಿ ಒಂದು ಸಾಧನೆಯನ್ನು ಸಾಧಿಸಿ ಜಾತಿಯ ಭೂತವನ್ನು ಬಿಡಿಸಿದ್ದರು. ಇದಕ್ಕಾಗಿ ಕೆಲವರಿಂದ ವಿರೋಧವನ್ನೂ ಎದುರಿಸಿದ್ದರು. ಗುರುಗಳ ಸೇವಾಮನೋಭಾವವನ್ನು ನೋಡಿದ ಸರ್ಕಾರವು ಮಠಕ್ಕೆ ಇಪ್ಪತ್ತೈದು ಎಕರೆ ಜಮೀನನ್ನು ನೀಡಲು ಬಂದಾಗ ಜಾತಿ ಭೇದವಿಲ್ಲದೆ ಜಮೀನು ರಹಿತ ಬಡ ಕುಟುಂಬಗಳಿಗೆ ತಲಾ ಎರಡು ಎಕರೆಯಂತೆ ಜಮೀನನ್ನು ಹಂಚಿಸಿ ಸರ್ಕಾರದಿಂದ ಮಂಜೂರು ಮಾಡಿಸಿ ಕೊಟ್ಟರು. ಈ ರೀತಿ ಜಾತಿಭೇದವಿಲ್ಲದೆ ಸಮಷ್ಟಿ ಸಮಾಜದ ಉದ್ಧಾರಕ್ಕೆ ದುಡಿದ ಗುರುಗಳು ಬಳ್ಳೇಕಟ್ಟೆ ಮಠದ ಆಡಳಿತವನ್ನು ನೋಡಿಕೊಳ್ಳಲೆಂದು ೧೯೬೦ರಲ್ಲಿ ಶ್ರೀ ಸಿದ್ಧಲಿಂಗ ಶಿವಾಚಾರ್ಯರನ್ನು ನೇಮಿಸಿ ತಿಪಟೂರಿನ ಶಿಡ್ಲೇಹಳ್ಳಿ ಮಠದಲ್ಲಿ ವಿಶ್ರಾಂತ ಜೀವನ ಸಾಗಿಸತೊಡಗಿದ್ದರು.

ಇಮ್ಮಡಿ ಕರಿಬಸವ ದೇಶಿಕೇಂದ್ರರು: ತಿಪಟೂರು ತಾಲ್ಲೂಕಿನ ದೊಡ್ಡಮಾರ್ಪನ ಹಳ್ಳಿಯ ಶ್ರೀ ಮಲ್ಲಯ್ಯ ಮತ್ತು ಶ್ರೀಮತಿ ಚನ್ನಬಸಮ್ಮನವರ ಪುತ್ರರಾದ ಸಿದ್ಧಲಿಂಗ ಮೂರ್ತಿಯನ್ನು ಶ್ರೀ ಚನ್ನಮಲ್ಲಿಕಾರ್ಜುನ ದೇಶಿಕೇಂದ್ರ ಸ್ವಾಮಿಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ಅಯ್ಕೆ ಮಾಡಿಕೊಂಡು, ಬಳ್ಳೇಕಟ್ಟೆ ಮಠಕ್ಕೆ ಶ್ರೀ ಸಿದ್ಧಲಿಂಗ ಶಿವಾಚಾರ್ಯರೆಂದು ಅಭಿಧಾನ ವಿತ್ತು ಪಟ್ಟಾಧಿಕಾರ ಮಾಡಿದರು. ನಂತರ ಶಿಡ್ಲೆಹಳ್ಳಿ ಮತ್ತು ಬಳ್ಳೇಕಟ್ಟೆ ಮಠದ ಭಕ್ತರು ಎರಡೂ ಮಠದ ಅಧಿಕಾರಿಗಳು ಒಬ್ಬರೇ ಇರಲಿ ಎಂಬ ಒತ್ತಾಸೆಗೆ ಶ್ರೀ ಸಿದ್ಧಲಿಂಗ ಶಿವಾಚಾರ್ಯರಿಗೆ, ಶ್ರೀ ಇಮ್ಮಡಿ ಕರಿಬಸವ ದೇಶಿಕೇಂದ್ರ ಸ್ವಾಮಿಗಳು ಎಂದು ಅಭಿಧಾನವಿತ್ತು ಎರಡೂ ಮಠಗಳ ಆಡಳಿತವನ್ನು ನೋಡಿಕೊಳ್ಳಲು ೧೯೬೩ರಲ್ಲಿ ಪೂರ್ಣ ಅಧಿಕಾರವನ್ನು ಕೊಟ್ಟರು. ಮಾರ್ಗ ದರ್ಶನ ನೀಡುತ್ತಾ ವಿಶ್ರಾಂತ ಜೀವನ ನೆಡೆಸಿದ ಶ್ರೀ ಚನ್ನಮಲ್ಲಿಕಾರ್ಜುನ ದೇಶಿಕೇಂದ್ರ ಸ್ವಾಮಿಗಳು ನವೆಂಬರ್ ಇಪ್ಪತ್ತೊಂದು ೧೯೬೪ರಲ್ಲಿ ಲಿಂಗೈಕ್ಯರಾಗಿರುತ್ತಾರೆ. ಹಿರಿಯ ಗುರುಗಳ ಮಾರ್ಗದರ್ಶನದಿಂದ ಶ್ರೀ ಇಮ್ಮಡಿ ಕರಿಬಸವ ದೇಶಿಕೇಂದ್ರ ಸ್ವಾಮಿಗಳು ಮಠವನ್ನು ಮುನ್ನಡೆಸಿಕೊಂಡು ಬಂದಿದ್ದಾರೆ.

ಶಿಡ್ಲೆಹಳ್ಳಿ, ತಿಪಟೂರು, ಬಳ್ಳೇಕಟ್ಟೆ ಈ ಮೂರು ಸ್ಥಳಗಳ ಮಠದ ಆಸ್ತಿಯನ್ನು ಅಭಿವೃದ್ಧಿಪಡಿಸಿರುವ ಗುರುಗಳು ತಿಪಟೂರಿನ ಕೆ.ಅರ್.ಬಡಾವಣೆಯಲ್ಲಿರುವ ವೀರಶೈವ ಗುರುಕುಲಾನಂದಾಶ್ರಮವನ್ನು ತಮ್ಮ ಕೇಂದ್ರ ಕಚೇರಿಯನ್ನಾಗಿ ಮಾಡಿ ಕೊಂಡು ಆಡಳಿತವನ್ನು ನಡೆಸತೊಡಗಿದ್ದಾರೆ. ತಿಪಟೂರಿನಲ್ಲಿ ಭವ್ಯಕಟ್ಟಡವನ್ನು ನಿರ್ಮಿಸಿದ್ದಾರೆ. ಕಲ್ಯಾಣಮಂಟಪ,

ವಿದ್ಯಾರ್ಥಿ ನಿಲಯದ ಕಟ್ಟಡ ಈ ರೀತಿ ಮಠದ ಕಟ್ಟಡ ಸಮುಚ್ಚಯವನ್ನು ನಿರ್ಮಿಸಿದ್ದ ಗುರುಗಳು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕವಾಗಿ ಮಠವನ್ನು ಬೆಳೆಸಿ ಆದರ್ಶಪ್ರಾಯರಾಗಿದ್ದಾರೆ.

ಶೈಕ್ಷಣಿಕ ಸೇವೆ: ಬಳ್ಳೇಕಟ್ಟೆ,ಕಡದಾಳು,ಕುಪ್ಪಾಳು ಗ್ರಾಮಗಳಲ್ಲಿ ತಲಾ ಒಂದೊಂದು ಪ್ರೌಢಶಾಲೆ ಅಲ್ಲದೆ ಬಳ್ಳೇಕಟ್ಟೆ, ಕುಪ್ಪಾಳು, ಬಿಳಿಗೆರೆ ಮತ್ತು ತಿಪಟೂರುಗಳಲ್ಲಿ ಸಂಸ್ಕೃತ ಪಾಠಶಾಲೆ, ಕುಪ್ಪಾಳಿನಲ್ಲಿ ಪದವಿಪೂರ್ವ ಕಾಲೇಜನ್ನು ಪ್ರಾರಂಭಿಸಿದ್ದಾರೆ. ಹಿಂದಿನ ಗುರುಗಳು ಪ್ರಾರಂಭಿಸಿದ್ದ ವಿದ್ಯಾರ್ಥಿನಿಲಯಗಳನ್ನು ಸುವ್ಯವಸ್ಥಿತವಾಗಿ ನಡೆಸಿಕೊಂಡು ಬಂದಿದ್ದಾರೆ.

ಗದ್ದುಗೆಗಳು: ಶಿಡ್ಲೆಹಳ್ಳಿಯಲ್ಲಿ ಮಠಸ್ಥಾಪಿಸಿದ ಶ್ರೀ ಗುರು ಸಿದ್ಧದೇಶಿಕೇಂದ್ರ ಸ್ವಾಮಿಗಳ ಗದ್ದುಗೆಯು ತಮ್ಮಡಿಹಳ್ಳಿಯಲ್ಲಿ ಸ್ಥಾಪನೆಯಾಗಿದೆ. ೧೦೮ ವರ್ಷ ಬದುಕಿದ್ದ ಶ್ರೀ ಸಿದ್ಧಮಲ್ಲ ದೇಶಿಕೇಂದ್ರ ಸ್ವಾಮಿಗಳ ಗದ್ದುಗೆಯು ಶಿಡ್ಲೆಹಳ್ಳಿಯಲ್ಲಿ ಸ್ಥಾಪಿತ ವಾಗಿದೆ. ಶ್ರೀ ಕರಿಬಸವ ದೇಶಿಕೇಂದ್ರಸ್ವಾಮಿಗಳ ಗದ್ದುಗೆಯು ತಿಪಟೂರಿನಲ್ಲಿ ಈಗಿನ ಮಠದ ಆವರಣದಲ್ಲಿ ಸ್ಥಾಪನೆಯಾಗಿದೆ. ಶ್ರೀ ಚನ್ನಮಲ್ಲಿಕಾರ್ಜುನ ದೇಶಿಕೇಂದ್ರಸ್ವಾಮಿಗಳ ಗದ್ದುಗೆಯು ಬಳ್ಳೇಕಟ್ಟೆ ಮಠದಲ್ಲಿ ಸ್ಥಾಪಿತವಾಗಿದೆ ಎಂದು ಗುರುಗಳು ಅಭಿಪ್ರಾಯಿಸುತ್ತಾರೆ. ಅಲ್ಲದೆ ಬಳ್ಳೇಕಟ್ಟೆಯ ಮಠ ಸ್ಥಾಪಕರಾದ ಶ್ರೀ ಸೋಮಶೇಖರ ದೇಶಿಕೇಂದ್ರ ಸ್ವಾಮಿಗಳ ಗದ್ದುಗೆಯು ಬಳ್ಳೇಕಟ್ಟೆ ಮಠದಲ್ಲಿ ಸ್ಥಾಪನೆಯಾಗಿದೆ.

ಧಾರ್ಮಿಕ ಕಾರ್ಯಗಳು: ಶಿಡ್ಲೆಹಳ್ಳಿ, ಬಳ್ಳೇಕಟ್ಟೆ, ತಿಪಟೂರುಗಳಲ್ಲಿ ಗದ್ದುಗೆಗೆ ಪೂಜೆ, ಶ್ರಾವಣ,ಕಾರ್ತೀಕಮಾಸಗಳಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಪ್ರತಿ ಹುಣ್ಣಿಮೆ ಮತ್ತು ಅಮಾವಾಸ್ಯೆಗಳಲ್ಲಿ ವಿಶೇಷ ಪೂಜೆ, ಹಿರಿಯ ಗುರುಗಳ ಪುಣ್ಯ ಸ್ಮರಣೆಯನ್ನು ಅದ್ದೂರಿಯಾಗಿ ಆಚರಿಸಿ ಧಾರ್ಮಿಕ ಸಭೆಯನ್ನು ನಡೆಸಲಾಗುತ್ತಿದೆ. ಮಠಕ್ಕೆ ಜೀವನೀಡುವ ಭಕ್ತರಿಗೆ ನಿತ್ಯ ಅನ್ನ ದಾಸೋಹವನ್ನು ನಡೆಸಲಾಗುತ್ತಿದೆ.

ಪ್ರಾಚೀನ ವಸ್ತುಗಳು: ಈ ಮಠದಲ್ಲಿ ಕೈಲಾಸದ ಕಲ್ಪನೆ ಬರುವಂತೆ ರಚಿತವಾಗಿರುವ ತೈಲಚಿತ್ರ ಹಾಗೂ ಮೈಸೂರು ಅರಸರು ಕೊಟ್ಟ ತಾಮ್ರದ ಬಿಲ್ಲೆ ಇದೆ. ಪರಂಪರಾಗತವಾಗಿ ಬಂದ ಪೂಜಾ ಸಾಮಗ್ರಿಗಳು ಮಠದಲ್ಲಿ ಇವೆ. ೧೯೧೮ ರಲ್ಲಿ ಹಾವೇರಿಯ ನ್ಯಾಯಾಲಯ ನೀಡಿದ ಆದೇಶ ಪತ್ರವನ್ನು ಸಂರಕ್ಷಿಸಲಾಗಿದೆ.

ವಿಳಾಸ: ಶ್ರೀ ಇಮ್ಮಡಿ ಕರಿಬಸವ ದೇಶಿಕೇಂದ್ರ ಸ್ವಾಮಿಗಳು, ಶ್ರೀ ಶಿಡ್ಲೆಹಳ್ಳಿ ಸಂಸ್ಥಾನ ಮಠ, ಶ್ರೀ ವೀರಶೈವ ಗುರುಕುಲಾನಂದಾಶ್ರಮ, ಕೆ.ಆರ್. ಬಡಾವಣೆ, ತಿಪಟೂರು, ತುಮಕೂರು ಜಿಲ್ಲೆ.
ಆಧಾರ: 'ತಾರಕ ರತ್ನ' ಮತ್ತು 'ಹೇಮಗಿರಿ ' ಸ್ಮರಣ ಸಂಚಿಕೆ

ಷಡಕ್ಷರಿ ಮಠ: ತಿಪಟೂರು ನಗರದ ಮಧ್ಯಭಾಗದ ಷಡಕ್ಷರಿ ಬಡಾವಣೆಯಲ್ಲಿ ಸ್ಥಾಪಿತವಾಗಿರುವ ಹುಬ್ಬಳ್ಳಿ ಮೂರುಸಾವಿರ ಮಠದ ಶಾಖಾಮಠವು ವಿರಕ್ತ ಸಂಪ್ರದಾಯದ ಕುಮಾರ ಸಮಯಕ್ಕೆ ಸೇರಿದ್ದಾಗಿದೆ. ಈ ಮಠವನ್ನು ೧೯೪೫ ರಲ್ಲಿ ಶ್ರೀ ಮ.ನಿ.ಪ್ರ. ಷಡಕ್ಷರಿ ಸ್ವಾಮಿಗಳು ಸ್ಥಾಪಿಸಿದ್ದಾರೆ.ಈ ಕಾರಣಕ್ಕಾಗಿ ಈ ಮಠವು ಷಡಕ್ಷರಿ ಮಠ ಎಂದು ನಾಮಕರಣಗೊಂಡಿದೆ.
ಗುರುಗಳ ಆಗಮನ: ಶ್ರೀ ಷಡಕ್ಷರಿ ಸ್ವಾಮಿಗಳು ಆಧ್ಯಾತ್ಮ ಜೀವಿಗಳಾಗಿ, ಬಳ್ಳಾರಿ ಜಿಲ್ಲೆಯಿಂದ ಲೋಕಸಂಚಾರ ಕೈಗೊಂಡು ಅನೇಕ ಧಾರ್ಮಿಕ ಕ್ಷೇತ್ರಗಳನ್ನು ಸುತ್ತಿ ಲೋಕಾನುಭವ ಪಡೆದು ತಿಪಟೂರಿಗೆ ಬಂದು ಊರಿನ ಹೊರಗಿನ ಪ್ರಶಾಂತ ಸ್ಥಳದಲ್ಲಿ ಅನುಷ್ಠಾನಗೊಳ್ಳುತ್ತಾರೆ. ತಿಪಟೂರಿನ ಧರ್ಮಪರರಾದ ಕೆಲವರು ಊರಿಗೆ ಆಗಮಿಸಿ ತಪೋನುಷ್ಠಾನ ಕೈಗೊಂಡಿದ್ದ ಗುರುಗಳ ಬಗ್ಗೆ ಆಸಕ್ತಿ ವಹಿಸಿ ಸೇವೆ ಮಾಡತೊಡಗಿದರು. ಗುರುಗಳ ಆಧ್ಯಾತ್ಮ ಚಿಂತನೆಗಳು ತಿಪಟೂರು ಭಕ್ತರಿಗೆ ಒಪ್ಪಿಗೆಯಾಗಿ ಗುರುಗಳು ಮುಂದೆ ಸಂಚಾರಗೊಳ್ಳದೆ ಇಲ್ಲೇ ನೆಲೆಸಬೇಕೆಂದು ಒತ್ತಾಯ ತಂದು ಗುರುಗಳಿಗಾಗಿ ಮಠವನ್ನು ಸ್ಥಾಪಿದರು.

ಬೆಳಕಾದ ಮಠ: ಇತ್ತೀಚಿನ ಕಾಲಮಾನದಲ್ಲಿ ಪ್ರಾರಂಭಗೊಂಡ ಮಠವು ಇದಾಗಿದೆ. ಮಠವು ರೂಪುಗೊಂಡ ಮೇಲೆ ಇಲ್ಲಿ ಧಾರ್ಮಿಕ ಕಾರ್ಯಗಳು ಚುರುಕುಗೊಂಡು ಈ ಭಾಗದ ಜನರ ಸಂಸ್ಕಾರಕ್ಕೆ ದಾರಿ ದೀಪವಾಗಿ ಬೆಳೆಯಿತು. ಗುರುಗಳ ಮತ್ತು ಭಕ್ತರ ಸಂಬಂಧ ಅನ್ಯೋನ್ಯತೆಯಿಂದ ಕೂಡಿದ್ದು ಭಕ್ತರು ಮಠಕ್ಕೆ ತನು ಮನ ಧನ ನೆರವಿನ ಮೂಲಕ ಕೆಲವೇ ವರ್ಷಗಳಲ್ಲಿ ಪ್ರಬುದ್ಧತೆಗೆ ಬರುವಂತೆ ಬೆಳೆಸಿದರು. ದಾಸೋಹ ಕ್ರಿಯೆಗಳು ನಿರಂತರವಾಗಿ ನಡೆಯತೊಡಗಿ, ಮಠದಲ್ಲಿ ಅನ್ನದಾಸೋಹದ

ಜತೆಗೆ ಜ್ಞಾನದಾಸೋಹವನ್ನು ನೀಡಲು ಶಿಕ್ಷಣ ಸಂಸ್ಥೆಗಳು ಹುಟ್ಟಿಕೊಂಡವು. ಈ ರೀತಿ ಕೆಲವೇ ವರ್ಷಗಳಲ್ಲಿ ಮಠವು ಜನಮನದಲ್ಲಿ ಉಳಿಯುವಂತೆ ಮಾಡಿದ ಶ್ರೀ ಷಡಕ್ಷರಿ ಸ್ವಾಮಿಗಳು ಡಿಸೆಂಬರ್ ಒಂದು ೧೯೫೫ ರಲ್ಲಿ ಲಿಂಗೈಕ್ಯರಾದರು.
ನಿಲ್ಲದ ಕಾರ್ಯ: ಹಿರಿಯ ಗುರುಗಳು ಲಿಂಗೈಕ್ಯರಾದ ಮೇಲೆ ಉತ್ತರಾಧಿಕಾರಿಗಳು ಇಲ್ಲದೆ ಮಠದ ಪೀಠವು ಖಾಲಿ ಉಳಿಯಿತು. ಈ ಸಂದರ್ಭದಲ್ಲಿ ಹುಬ್ಬಳ್ಳಿ ಮೂರುಸಾವಿರ ಮಠದ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳು ಧಾರ್ಮಿಕ ಚಟುವಟಿಕೆಗಳು ನಡೆಯುವಂತೆ ವ್ಯವಸ್ಥೆ ಮಾಡಿದರು.

ಶಿಕ್ಷಣ ಸಂಸ್ಥೆಗಳು: ೧೯೫೦ರಲ್ಲಿ ಮೂಲಮಠವಾದ ಹುಬ್ಬಳ್ಳಿ ಮೂರುಸಾವಿರ ಮಠದ ಜಗದ್ಗುರುಗಳ ನೆರವು ಪಡೆದು ಶ್ರೀ ಷಡಕ್ಷರಿ ಸ್ವಾಮಿಗಳು ಮಠಕ್ಕೆ ಭವ್ಯ ಕಟ್ಟಡವನ್ನು ನಿರ್ಮಿಸಿದ್ದರು. ಈ ಭವ್ಯ ಕಟ್ಟಡದಲ್ಲಿ ೧೯೬೭ರಲ್ಲಿ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿದರು.

ಮಠದ ವಿಶೇಷತೆ: ಶ್ರೀ ಷಡಕ್ಷರಿ ಸ್ವಾಮಿಗಳು ಲಿಂಗೈಕ್ಯರಾದ ನಂತರ ಈ ಮಠದ ಉತ್ತರಾಧಿಕಾರಿಗಳಾಗಿ ಶ್ರೀ ಚರಲಿಂಗದೇವರು ಮತ್ತು ಶ್ರೀ ರೇಣುಕದೇವರು ನೇಮಕಗೊಂಡು ಇವರಲ್ಲಿ ಯಾರೂ ಇಲ್ಲಿ ಪಟ್ಟಾಧಿಕಾರಿಗಳಾಗದೆ ಹೋಗಿದ್ದಾರೆ. ಶ್ರೀರೇಣುಕದೇವರು ನೇಮಕಗೊಂಡು ಕೆಲವು ದಿನ ಇಲ್ಲಿ ನೆಲೆಸಿ ನಿಪ್ಪಾಣಿ ತಾಲ್ಲೂಕಿನ ನೀಡಸೋಸಿ ಸಂಸ್ಥಾನ ಮಠದಲ್ಲಿ ಜಗದ್ಗುರುಗಳಾಗಿ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಅದೇ ರೀತಿ ಶ್ರೀ ಚರಲಿಂಗದೇವರೂ ಸಹ ಇಲ್ಲಿಗೆ ನೇಮಕಗೊಂಡು ಕೆಲವು ದಿನಗಳು ಇಲ್ಲೇ ನೆಲೆಸಿ ಪಟ್ಟಾಧಿಕಾರವಾಗದೆ ಹರಪನಹಳ್ಳಿ ತಾಲ್ಲೂಕಿನ ನೀಲಗುಂದ ಮಠದಲ್ಲಿ ಪಟ್ಟಾಧಿಕಾರಿಗಳಾಗಿ ಅಧಿಕಾರವನ್ನು ವಹಿಸಿಕೊಂಡಿದ್ದಾರೆ.

ಹುಬ್ಬಳ್ಳಿ ಮೂರು ಸಾವಿರ ಮಠದ ಗುರುಗಳು ಶ್ರೀರುದ್ರಮುನಿ ದೇವರನ್ನು ೧೯೮೩ ರಲ್ಲಿ ಇಲ್ಲಿಗೆ ನೇಮಕ ಮಾಡಿದ್ದಾರೆ. ಹಾಸನ ಜಿಲ್ಲೆಯ ಹಾರನಹಳ್ಳಿಯ ಶ್ರೀ ಶಿವಲಿಂಗಯ್ಯ ಮತ್ತು ಶ್ರೀಮತಿ ಶಿವರುದ್ರಮ್ಮನವರ ಪುತ್ರರಾಗಿ ೧೯೫೫ರ ಫೆಬ್ರವರಿ ಹನ್ನೊಂದರಂದು ಜನಿಸಿದ ಶ್ರೀ ರುದ್ರಮುನಿ ದೇವರು ಹಾರನಹಳ್ಳಿಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಮುಗಿಸಿ, ತಿಪಟೂರಿನಲ್ಲಿ ಪದವಿಯನ್ನು ಪಡೆದರು. ನಂತರ ಉನ್ನತ ಶಿಕ್ಷಣವನ್ನು ಪಡೆಯುವ ಹಂಬಲದೊಂದಿಗೆ ಮೈಸೂರಿನಲ್ಲಿ ನೆಲೆಸಿ ಕನ್ನಡದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು, ೧೯೮೧ ರಲ್ಲಿ ಮಠಕ್ಕೆ ಬಂದು ನೆಲೆಸಿದ್ದಾರೆ. ಈಗಲೂ ಈ ಗುರುಗಳೇ ಮಠದ ಆಡಳಿತವನ್ನು ನೋಡಿಕೊಳ್ಳುತ್ತಿದ್ದಾರೆ.

ವಿಳಾಸ: ಶ್ರೀ ರುದ್ರಮುನಿ ದೇವರು, ಶ್ರೀ ಷಡಕ್ಷರಿ ಮಠ, ತಿಪಟೂರು, ತುಮಕೂರು ಜಿಲ್ಲೆ.

ನೊಣವಿನಕೆರೆ

ತಿಪಟೂರು ತಾಲ್ಲೂಕಿನ ನೊಣವಿನಕೆರೆಯು ತಾಲ್ಲೂಕು ಕೇಂದ್ರದ ಆಗ್ನೇಯಕ್ಕೆ ಇಪ್ಪತ್ತು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ಕಾಡಸಿದ್ಧೇಶ್ವರ ಮಠವು ಅಸ್ತಿತ್ವದಲ್ಲಿದೆ.

ಕಾಡಸಿದ್ಧೇಶ್ವರಮಠ: ನೊಣವಿನಕೆರೆಯ ತೊನೆಯುವ ತೆಂಗಿನ ತೋಟಗಳ ಮಧ್ಯೆ ಶ್ರೀ ಕಾಡಸಿದ್ಧೇಶ್ವರಮಠವು ಸ್ಥಾಪನೆಯಾಗಿದೆ. ಈ ಗ್ರಾಮವು ಆರ್ಥಿಕ ಶ್ರೀಮಂತಿಕೆಯ ಜತೆಗೆ ಧಾರ್ಮಿಕ ಶ್ರೀಮಂತಿಕೆಯನ್ನು ಪಡೆದು ನಾಡಿನಲ್ಲೇ ಹೆಸರಾಗಿದೆ.
ಗುರುಗಳ ಆಗಮನ: ನೊಣವಿನಕೆರೆಯ ಪೂರ್ವದಿಕ್ಕಿನಲ್ಲಿ ಸ್ಥಾಪನೆಯಾಗಿರುವ ಚೀಲಾಳ ಸಮಯದ ವಿರಕ್ತಮಠವು ಶ್ರೀಕರಿಸಿದ್ಧೇಶ್ವರರಿಂದ ಪ್ರಾರಂಭವಾಗಿದೆ. ಉತ್ತರದ ಕಡೆಯಿಂದ ಲೋಕಸಂಚಾರ ಕೈಗೊಂಡು ಈ ಕ್ಷೇತ್ರಕ್ಕೆ ಬಂದ ಶಿವಯೋಗಿ ಶ್ರೀ ಕರಿಸಿದ್ಧೇಶ್ವರರು ನೊಣವಿನಕೆರೆಯ ಹೊರಭಾಗದ ಈ ನಿರ್ಜನ ಪ್ರದೇಶದ ಗವಿಯಲ್ಲಿ ಅನುಷ್ಠಾನಗೊಳ್ಳುತ್ತಾರೆ. ಒಂದು ದಿನ ಪಾಳೆಗಾರರೊಬ್ಬರು ಈ ಕಾಡಿನಲ್ಲಿ ಬೇಟೆಗೆಂದು ಬಂದವರು ಅನುಷ್ಠಾನದಲ್ಲಿ ಕುಳಿತ ಗುರುಗಳನ್ನು ಸರಿಯಾಗಿ ಪರೀಕ್ಷಿಸದೆ ಯಾವುದೋ ಕಾಡು ಪ್ರಾಣಿಯೆಂದು ತಿಳಿದು ಬಾಣ ಬಿಡುತ್ತಾನೆ. ಬಿಟ್ಟ ಬಾಣವು ನೇರವಾಗಿ ಶಿವಯೋಗಿಗಳ ಎದೆಗೆ ಚುಚ್ಚಿಕೊಳ್ಳುತ್ತದೆ. ತನ್ನ ಬೇಟೆ ಏನಿರಬಹುದು ಎಂದು ಹತ್ತಿರ ಹೋಗಿನೋಡುತ್ತಾನೆ, ಶಿವಯೋಗಿಗಳ ಎದೆಗೆ ಚುಚ್ಚಿರುತ್ತದೆ. ಪಾಳೆಗಾರನನ್ನು ನೋಡಿದ ಗುರುಗಳು ತಮ್ಮ ಎದೆಗೆ ಚುಚ್ಚಿದ್ದ ಬಾಣವನ್ನು ತೆಗೆದು ಪಾಳೆಗಾರನಿಗೆ ಕೊಟ್ಟರು. ಈ

ಪವಾಡವನ್ನು ನೋಡಿ ಆಶ್ಚರ್ಯಗೊಂಡು ಈ ಪವಾಡ ಪುರಷರನ್ನು ನೋಡದೆ ಬಾಣದಿಂದ ಗಾಯಗೊಳಿಸಿದ್ದಕ್ಕೆ ವ್ಯಥೆಪಟ್ಟು ಗುರುಗಳ ಹತ್ತಿರ ಕ್ಷಮೆಯನ್ನು ಕೇಳುತ್ತಾನೆ.

ಮಠಸ್ಥಾಪನೆ: ಆಗ ಶಿವಯೋಗಿ ಶ್ರೀ ಕರಿಸಿದ್ದೇಶ್ವರರು'ದಯೆಯೇ ಧರ್ಮದಮೂಲ',ಸಕಲ ಪ್ರಾಣಿಗಳಿಗೆ ಲೇಸನ್ನೇ ಬಯಸ ಬೇಕು. ನಮ್ಮ ಬದುಕಿಗಾಗಿ ಇತರೆ ಪ್ರಾಣಿಯನ್ನು ಬೇಟೆಯಾಡುವುದು ಯಾವ ಧರ್ಮ ಎಂದು ಉಪದೇಶವನ್ನು ನೀಡಿ ಶರಣತತ್ತ್ವಗಳನ್ನು ತಿಳಿಸಿ ಪಾಳೆಗಾರನ ಕಣ್ಣನ್ನು ತೆರೆಸುತ್ತಾರೆ. ಗುರುಗಳ ಎದೆಗೆ ಬಾಣ ಚುಚ್ಚಿದ್ದರೂ ಎದೆಯಿಂದ ಬಾಣವನ್ನು ತೆಗೆದು ಕೈಗೆ ನೀಡಿ ಉಪದೇಶ ನೀಡಿದ ಗುರುಗಳು ಸಾಮಾನ್ಯರಲ್ಲ,ಇವರು ದೈವಾಂಶ ಸಂಭೂತರು ಎಂದು ಅವರ ಪಾದಗಳಿಗೆ ಎರಗಿ ಕಣ್ಣುತೆರೆಸಿದ್ದಕ್ಕಾಗಿ ಗುರುಗಳನ್ನು ಅಭಿನಂದಿಸುತ್ತಾನೆ. ಮರುದಿನ ಗುರುಗಳನ್ನು ಗೌರವಾದರಗಳೊಂದಿಗೆ ಅರಮನೆಗೆ ಕರೆಸಿ ಗೌರವಿಸಿ ಪಾದಪೂಜೆ ಮಾಡಿ ಕಳುಹಿಸಿಕೊಡುತ್ತಾನೆ. ಇದಾದ ನಂತರ ಗುರುಗಳು ಅನುಷ್ಠಾನಗೊಂಡ ಕ್ಷೇತ್ರದಲ್ಲಿ ಕಲ್ಲಿನ ಕಟ್ಟಡವನ್ನು ಕಟ್ಟಿಸಿ, ಮಠವನ್ನು ಸ್ಥಾಪಿಸಿಕೊಡುತ್ತಾನೆ. ಕಲ್ಲಿನಮಠದಲ್ಲಿ ಗುರುಗಳು ಅಧಿಕಾರಕ್ಕೆ ರೂಢರಾಗುವದಿನ ಚಿನ್ನದ ತಟ್ಟೆಯಲ್ಲಿ ಬಿರುದಾವಳಿಗಳೊಂದಿಗೆ ಕಾಲುಕಡಗ, ಜೋಡಿ ರಥ, ಕೈಗಳ ತೋಳಿಗೆ ಕಟ್ಟುವ ಬೆಳ್ಳಿಯ ಒಡವೆ (ಕೈ ಪೋಜಾ) ತಿ ಗಳನ್ನು ಅರ್ಪಿಸಿ ಪಾಳೆಗಾರ ಮಠದ ಮೊದಲ ಶಿಷ್ಯನಾದನು ಎಂದು ಹೇಳುವ ಜನಪದ ಕಥೆ ಈಗಲೂ ಜನಜನಿತವಾಗಿದೆ.

ಶ್ರೀ ಕರಿಸಿದ್ದೇಶ್ವರ ದೇಶಿಕೇಂದ್ರ ಸ್ವಾಮಿಗಳು ಉತ್ತರದಿಂದ ಲೋಕಸಂಚಾರಕ್ಕೆ ಬಂದಾಗ ಲಕ್ಷ್ಮೇಶ್ವರ, ಸೋಮನಾಥೇಶ್ವರ, ಉಕ್ಕಡಗಾತ್ರಿಯಲ್ಲಿ ನೆಲೆನಿಂತು ಅನುಷ್ಠಾನಗೊಂಡು ಅನೇಕ ಪವಾಡಗಳನ್ನು ಮಾಡಿಬರುತ್ತಾರೆ. ಉಕ್ಕಡಗಾತ್ರಿಯಲ್ಲಿ ಈಗಲೂ ಕರಿಬಸವೇಶ್ವರರ ಗದ್ದುಗೆಯು ಬಹಳ ಪ್ರಸಿದ್ಧಿಗೆ ಬಂದಿದೆಯೆಂದು ಗುರುಗಳು ಹೇಳುತ್ತಾರೆ.

ಗುರುಗಳು ಅನೇಕ ಕ್ಷೇತ್ರಗಳನ್ನು ಸುತ್ತಿ ತುಮಕೂರಿಗೆ ಬಂದು ನೆಲೆನಿಲ್ಲುತ್ತಾರೆ. ಚೋಳೂರು, ಮಾಗಡಿ, ಹಾಗಲವಾಡಿಯಲ್ಲಿ ನೆಲೆಸಿ ಸೋಮಕಟ್ಟೆಗೆ ಬಂದ ನಂತರ ಸೊಣವಿನಕೆರೆಗೆ ಬಂದು ನೆಲೆಸುತ್ತಾರೆ. ತುಮಕೂರಿನಲ್ಲಿ ನೆಲೆನಿಂತ ಜಾಗದಲ್ಲಿ ಮಠವು ಸ್ಥಾಪನೆಯಾಗಿದೆ. ಚೋಳೂರಿನಲ್ಲಿ ಗವಿಮಠ ಸ್ಥಾಪನೆಯಾಗಿದೆ. ಮಾಗಡಿ ಹೊಂಬಾಳಮ್ಮನ ಮಠದಲ್ಲಿ ಸಿದ್ಧೇಶ್ವರರ ಗದ್ದುಗೆ ಸ್ಥಾಪನೆಯಾಗಿದೆ ಎಂದು ಶ್ರೀ ಶಿವಯೋಗೀಶ್ವರ ದೇಶಿಕೇಂದ್ರ ಸ್ವಾಮಿಗಳು ಹೇಳುತ್ತಾರೆ. ಈ ಎಲ್ಲಾ ಗದ್ದುಗೆಗಳಿಗೂ ಈ ಮಠದ ಕರ್ತೃ ಗುರುಗಳಾದ ಶ್ರೀ ಕರಿಬಸವದೇಶಿಕೇಂದ್ರ ಸ್ವಾಮಿಗಳಿಗೂ ಇರುವ ಸಂಬಂಧದ ಬಗ್ಗೆ ಜನಪದ ಕಥೆಗಳು ಕೇಳಿಬರುತ್ತವೆ. ಆದರೆ ಐತಿಹಾಸಿಕ ಆಧಾರಗಳು ಸಿಗುತ್ತಿಲ್ಲ, ಈ ಬಗ್ಗೆ ಸಮಗ್ರವಾದ ಸಂಶೋಧನೆ ನಡೆಯಬೇಕೆಂದು ಈಗಿನ ಸ್ವಾಮಿಗಳು ಅಭಿಪ್ರಾಯಿಸುತ್ತಾರೆ.

ಪರಂಪರೆ: ಶ್ರೀ ಕರಿ ಬಸವದೇಶಿಕೇಂದ್ರ ಸ್ವಾಮಿಗಳ ನಂತರ ಮಠದಲ್ಲಿ ಅಧಿಕಾರ ನಡೆಸಿದ ಗುರುಗಳ ಹೆಸರುಗಳು ಲಭ್ಯವಾಗುತ್ತಿಲ್ಲ. ಶ್ರೀ ಚನ್ನವೀರ ದೇಶಿಕೇಂದ್ರ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠದ ಪರಂಪರೆಯನ್ನು ಬೆಳೆಸಿದ್ದಾರೆ. ಶ್ರೀ ಚನ್ನವೀರ ದೇಶಿಕೇಂದ್ರ ಸ್ವಾಮಿಗಳು ಉದ್ದಾಮ ಪಂಡಿತರಾಗಿ, ಧರ್ಮನಿಷ್ಠರಾಗಿ ಈ ನಾಡನ್ನು ಧಾರ್ಮಿಕವಾಗಿ ಶ್ರೀಮಂತಗೊಳಿಸಿದ್ದಾರೆ. ಕಾಯಕಯೋಗಿಗಳಾದ ಶ್ರೀ ಚನ್ನವೀರ ದೇಶಿಕೇಂದ್ರ ಸ್ವಾಮಿಗಳು ಮಠವನ್ನು ಸ್ವಾವಲಂಬಿಯಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸುವಂತೆ ಸಧೃಡಗೊಳಿಸಿದರು.

೧೯೮೫ ರ ನವಂಬರ್ ಹದಿನೈದರಂದು ಪಟ್ಟಾಧಿಕಾರ ಪಡೆದ ಶ್ರೀ ಶಿವಯೋಗೀಶ್ವರ ದೇಶಿಕೇಂದ್ರಸ್ವಾಮಿಗಳು ಮಠದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಮಠದ ಪರಂಪರೆಯ ಬಗ್ಗೆ ನಿಖರವಾದ ದಾಖಲೆಗಳ ಸಂಗ್ರಹಕ್ಕೆ ಪ್ರಯತ್ನಿಸುತ್ತಿ ರುವುದು ಇವರ ಇತಿಹಾಸ ಪ್ರಜ್ಞೆಗೆ ಒಂದು ಉದಾಹರಣೆ. ಮಠದಲ್ಲಿ ಓಲೆಗರಿಗಳು ಮತ್ತು ತಾಮ್ರಶಾಸನಗಳು ದೊರೆತಿದ್ದು, ಇವುಗಳ ಸಂಶೋಧನೆಗೆಂದು ಧಾರವಾಡ ವಿಶ್ವವಿದ್ಯಾನಿಲಯದ ವಿದ್ವಾಂಸರು ಕೊಂಡೊಯ್ದಿದ್ದಾರೆ ಎಂದು ಗುರುಗಳು ಹೇಳುತ್ತಾರೆ.

ಗುರುಗಳು ಕಾಯಕ ಯೋಗಿಗಳಾಗಿ ಮಠದ ಆಸ್ತಿಯಲ್ಲಿ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ಭಕ್ತರನ್ನು ಸಂಘಟಿಸಿ ಧಾರ್ಮಿಕ ವಿಚಾರಗಳನ್ನು ಪ್ರಚಾರಗೊಳಿಸಿ ಸಮಾಜದಲ್ಲಿ ಧಾರ್ಮಿಕಪ್ರಜ್ಞೆ ಬೆಳೆಯುವಂತೆ ಮಾಡಿದ್ದಾರೆ. ಸಂಘಟನೆ

ಗೊಂಡ ಭಕ್ತರು ಧಾರ್ಮಿಕ ಅರಿವನ್ನು ಪಡೆದು ಸಮಾಜ ಮತ್ತು ಮಠದ ಶ್ರೇಯೋಭಿವೃದ್ಧಿಗೆ ಗುರುಗಳಿಗೆ ನೆರವಾಗಿದ್ದಾರೆ. ಈ ಕಾರಣದಿಂದಾಗಿ ಮಠವು ಜೀರ್ಣೋದ್ಧಾರಗೊಂಡಿದೆ. ಕರ್ತೃ ಗುರುಗಳ ಗದ್ದುಗೆಯೂ ಸೇರಿದಂತೆ ಮಠದ ಆವರಣದಲ್ಲಿರುವ ಗದ್ದುಗೆಗಳನ್ನು ನವೀಕರಿಸಿ ಸುಸ್ಥಿತಿಗೆ ತಂದಿದ್ದಾರೆ.

ಗದ್ದುಗೆಗಳು: ಮಠದ ಆವರಣದಲ್ಲಿ ನಾಲ್ಕು ಗದ್ದುಗೆಗಳು ನೋಡಸಿಗುತ್ತವೆ. ಇವುಗಳಲ್ಲಿ ಕರ್ತೃಗುರುಗಳಾದ ಶ್ರೀ ಕರಿಸಿದ್ದೇಶ್ವರ ಗದ್ದುಗೆ, ೧೯೨೫ ರಲ್ಲಿ ಲಿಂಗೈಕ್ಯರಾದ ಶ್ರೀ ಚನ್ನವೀರ ದೇಶಿಕೇಂದ್ರ ಸ್ವಾಮಿಗಳ ಗದ್ದುಗೆಗಳನ್ನು ಗುರುತಿಸಬಹುದಾಗಿದ್ದು, ಉಳಿದ ಎರಡು ಗದ್ದುಗೆಗಳ ಗುರುಗಳ ಹೆಸರು ಸಿಗುತ್ತಿಲ್ಲ.

ಶಿಕ್ಷಣ ಸೇವೆ: ಜೀರ್ಣೋದ್ಧಾರಗೊಂಡ ಮಠದಲ್ಲಿ ಧಾರ್ಮಿಕ ಕಾರ್ಯಗಳು ಚುರುಕುಗೊಂಡವು. ನಿತ್ಯ ಅನ್ನ ದಾಸೋಹ ಪ್ರಾರಂಭಗೊಂಡಿತು. ಸಮಾಜದ ಪರಿವರ್ತನೆಗೆ ಅಕ್ಷರ ಜ್ಞಾನ ಆವಶ್ಯಕ ಎಂದು ಅರಿತ ಗುರುಗಳು ಶಿಕ್ಷಣದಿಂದ ವಂಚಿತರಾಗುತ್ತಿದ್ದ ಗ್ರಾಮೀಣ ಮಕ್ಕಳಿಗಾಗಿಯೇ ಹಿರಿಯ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಗಳನ್ನು ಪ್ರಾರಂಭಿಸಿದ್ದಾರೆ. ಮಠದಲ್ಲಿ ವೇದ,ಸಂಸ್ಕೃತ ಮತ್ತು ಆಗಮ ಪಾಠಶಾಲೆಗಳನ್ನು ಸ್ಥಾಪನೆ ಮಾಡಿ ಕಲಿಯುವ ಮಕ್ಕಳಿಗೆ ಮಠದಲ್ಲಿ ಆಶ್ರಯ ನೀಡಿದ್ದಾರೆ.

ಧಾರ್ಮಿಕ ಆಚರಣೆ: ಮಠದ ಗದ್ದುಗೆಗಳಿಗೆ ದಿನನಿತ್ಯ ಪೂಜೆ, ಶ್ರಾವಣ, ಕಾರ್ತೀಕ ಮತ್ತು ಅಮಾವಾಸ್ಯೆ, ಹುಣ್ಣಿಮೆಗಳಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ವರ್ಷಕ್ಕೊಮ್ಮೆ ಹಿರಿಯ ಗುರುಗಳ ಆರಾಧನೆಯನ್ನು ನಡೆಸಿ ಧಾರ್ಮಿಕ ಸಭೆಯನ್ನು ನಡೆಸಿ ಧರ್ಮಜಾಗೃತಿಯನ್ನು ಉಂಟುಮಾಡುತ್ತಿದ್ದಾರೆ.

ವಿಳಾಸ: ಶ್ರೀ.ಮ.ನಿ.ಪ್ರ.ಶಿವಯೋಗೀಶ್ವರ ದೇಶಿಕೇಂದ್ರ ಸ್ವಾಮಿಗಳು, ಶ್ರೀ ಕಾಡಸಿದ್ದೇಶ್ವರ ಮಠ, ನೊಣವಿನಕೆರೆ.ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ.

ಪಾಲ್ಕುರಿಕೆ

ತಿಪಟೂರು ತಾಲ್ಲೂಕಿನ ಪಾಲ್ಕುರಿಕೆ ತಾಲ್ಲೂಕು ಕೇಂದ್ರಕ್ಕೆ ಹದಿಮೂರು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ತರಳಬಾಳು ಬೃಹನ್ಮಠದ ಶಾಖಾಮಠವು ಅಸ್ತಿತ್ವದಲ್ಲಿದೆ.

ತರಳಬಾಳು ಶಾಖಾಮಠ: ಪಾಲ್ಕುರಿಕೆಲ್ಲಿ ತರಳಬಾಳು ಬೃಹನ್ಮಠದ ಶಾಖಾಮಠವಿದ್ದು ಈ ಮಠದ ಆಡಳಿತವನ್ನು ಸಿರಿಗೆರೆಯ ಜಗದ್ಗುರುಗಳು ನೋಡಿಕೊಳ್ಳುತ್ತಿದ್ದಾರೆ. ಹದಿನಾರನೆಯ ಶತಮಾನದಲ್ಲಿ ಉಜ್ಜಯಿನಿಯಲ್ಲಿ ಉಂಟಾದ ಧಾರ್ಮಿಕ ಕ್ಷೋಭೆಯಿಂದ ಬೇಸತ್ತು, ಜಂಬಪ್ಪದೇವರ ಜತೆಯಲ್ಲಿ ಉಜ್ಜಯಿನಿ ತೊರೆದ ಸಪ್ಪೆಸಿದ್ಧಲಿಂಗ ದೇವರು ನಂತರ ಜಂಬಪ್ಪದೇವರಿಂದ ಬೇರೆಯಾಗಿ ಇಲ್ಲಿಗೆ ಬಂದು ನೆಲೆಸಿದರೆಂದು ಮಠದ ದಾಖಲೆಗಳು ಹೇಳುತ್ತವೆ. ಸಪ್ಪೆಸಿದ್ಧಲಿಂಗದೇವರು ಇಲ್ಲಿ ನೆಲೆಸಿದ್ದು ನಿಜವಾದರೂ ನಂತರ ಪಾಲ್ಕುರಿಕೆಯನ್ನು ಯಾವ ಕಾರಣಕ್ಕಾಗಿ ತೊರೆದು ಎಲ್ಲಿ ಹೋದರು ಎಂಬ ಮಾಹಿತಿ ದೊರೆಯದಾಗಿದೆ. ಶ್ರೀ ಸಪ್ಪೆಸಿದ್ಧಲಿಂಗದೇವರು ಬಂದ ನೆಲೆಸಿದ ಸ್ವಲ್ಪ ದಿನಗಳ ಕಾಲ ಧರ್ಮ ನಡೆಸಿ ತಾವು ಸ್ಥಾಪಿಸಿದ ಮಠವನ್ನು ಅಭಿವೃದ್ಧಿಪಡಿಸಿದ್ದು ನಿಜವಿರುವ ಕಾರಣಕ್ಕೆ ಅವರ ಅಸ್ತಿತ್ವ ಇಂದಿಗೂ ಉಳಿಯಲು ಸಾಧ್ಯವಾಗಿದೆ. ಸಿರಿಗೆರೆಯ ತರಳಬಾಳು ಬೃಹನ್ಮಠದ ಹಿರಿಯ ಗುರುಗಳಾದ ಶ್ರೀ ಶಿವಕುಮಾರ ಸ್ವಾಮಿಗಳ ಅಭಿಪ್ರಾಯದ ಪ್ರಕಾರ ಶ್ರೀ ಸಪ್ಪೆಸಿದ್ಧಲಿಂಗ ದೇವರ ವಂಶಸ್ಥರು ಕಾರಣಾಂತರದಿಂದ ಪಾಲ್ಕುರಿಕೆಯನ್ನು ತೊರೆದು ಬೇಲೂರು ತಾಲ್ಲೂಕು ಯಲಹಂಕಕ್ಕೆ ಬರುತ್ತಾರೆ.

ಯಲಹಂಕದಲ್ಲಿದ್ದು ಪಾಲ್ಕುರಿಕೆ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಶ್ರೀ ಶಿವನಂಜುಂಡ ಸ್ವಾಮಿಗಳ ಕಾಲದಲ್ಲಿ ಪಾಲ್ಕುರಿಕೆ ಯಲ್ಲಿ ವೀರಶೈವ ಮಠ ಇರಕೂಡದೆಂದು ಅಲ್ಲಿಯ ಸ್ಥಳೀಯ ಬ್ರಾಹ್ಮಣರೊಬ್ಬರು ತಗಾದೆ ತೆಗೆದರು. ಪಾಲ್ಕುರಿಕೆ ಗ್ರಾಮವು ವ್ಯಾಸರಾಯ ಮಠಕ್ಕೆ ಇನಾಂತಿಯಾಗಿದೆ ಆದ್ದರಿಂದ ವ್ಯಾಸರಾಯ ಮಠದ ಮುಂದೆ ಯಾರೂ ಪಲ್ಲಕ್ಕಿಯಲ್ಲಿ ಹೋಗಕೂಡದೆಂದು ವ್ಯಾಜ್ಯ ತೆಗೆದರು. ಈ ಸಂದರ್ಭದಲ್ಲಿ ಹನಿಕೆ ಶ್ರೀ ಶಿವನಂಜುಂಡ ಸ್ವಾಮಿಗಳು ಊರಲ್ಲಿಯೇ ವ್ಯಾಜ್ಯವನ್ನು ಪರಿಹರಿಸಲು ಪ್ರಯತ್ನಪಟ್ಟರು. ಆದರೆ ಇದು ಫಲಕಾರಿಯಾಗದೆ ನ್ಯಾಯಾಲಯಕ್ಕೆ ಹೋಗಬೇಕಾಯಿತು. ನ್ಯಾಯಾಲಯ ಪಾಲ್ಕುರಿಕೆಯಲ್ಲಿ ವ್ಯಾಸರಾಯ ಮಠವೇ ಇಲ್ಲವೆಂದು ತೀರ್ಪು ನೀಡಿ, ಸಾರ್ವಜನಿಕ ಬೀದಿಯಲ್ಲಿ ಉತ್ಸವ ವಗೈರೆ ಹೋಗಕೂಡ

ದೆಂದು ತಗಾದೆ ತೆಗೆಯುವುದು ಉಚಿತ ಅಲ್ಲ ಎಂದು ತೀರ್ಪುನೀಡಿತು ಎಂದು ಹಿರಿಯ ತರಳಬಾಳು ಜಗದ್ಗುರು ಶ್ರೀ ಶಿವಕುಮಾರ ಸ್ವಾಮಿಗಳು ತಮ್ಮ 'ದಿಟ್ಟ ಹೆಜ್ಜೆ ಧೀರ ಕ್ರಮ' ಎಂಬ ಕೃತಿಯಲ್ಲಿ ದಾಖಲಿಸಿದ್ದಾರೆ.

ಹದಿನಾರನೆಯ ಶತಮಾನದಿಂದ ಈ ರೀತಿ ತೊಂದರೆಗಳನ್ನು ಅನುಭವಿಸಿದರೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದ ಪಾಲ್ಕುರಿಕೆ ತರಳಬಾಳು ಮಠದಲ್ಲಿ ಈಗ ಒಂದು ಪ್ರೌಢಶಾಲೆ ನಡೆಯುತ್ತಿದ್ದು ಮಠದ ಜಮೀನನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಮಠದ ಪೂರ್ಣ ಅಧಿಕಾರನ್ನು ಮೂಲ ಮಠದ ಸಿರಿಗೆರೆಯ ಜಗದ್ಗುರುಗಳು ನೋಡಿಕೊಳ್ಳುತ್ತಿದ್ದಾರೆ.

ವಿಳಾಸ: ಶ್ರೀ ತರಳಬಾಳು ಜಗದ್ಗುರು ಸಂಸ್ಥಾನ ಮಠ, ಪಾಲ್ಕುರಿಕೆ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ.

ರಂಗಾಪುರ

ತಿಪಟೂರು ತಾಲ್ಲೂಕಿನ ರಂಗಾಪುರವು ತಾಲ್ಲೂಕು ಕೇಂದ್ರದ ದಕ್ಷಿಣಕ್ಕೆ ಕೇವಲ ಆರು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಕೆರೆಗೋಡಿ-ರಂಗಾಪುರ ಮಠವು ಅಸ್ತಿತ್ವದಲ್ಲಿದ್ದು ಧಾರ್ಮಿಕ ಹಾಗೂ ಶೈಕ್ಷಣಿಕ ಜಾಗೃತಿಯನ್ನುಂಟು ಮಾಡಿದೆ.

ಕೆರೆಗೋಡಿ-ರಂಗಾಪುರ ಮಠ: ರಂಗಾಪುರ ಗ್ರಾಮ ಠಾಣೆಯಲ್ಲಿ ಕೆರೆಗೋಡಿ-ರಂಗಾಪುರ ಮಠವು ಸ್ಥಾಪನೆಯಾಗಿ ಈ ಗ್ರಾಮವನ್ನು ಸುಪ್ರಸಿದ್ಧಿಗೆ ತಂದಿದೆ. ಜಾತಿಮತಗಳ ಎಲ್ಲೆಮೀರಿ ಸರ್ವರನ್ನೂ ಸ್ವಾಗತಿಸಿ ಮನುಕುಲ ಒಂದೇ ಎಂದು ಸಾರುವ ಧ್ಯೇಯೋದ್ದೇಶಗಳನ್ನು ಇಟ್ಟುಕೊಂಡು, ಜ್ಞಾನ ದಾಸೋಹ ಮತ್ತು ಅನ್ನದಾಸೋಹ ವನ್ನು ನೀಡುತ್ತಿರುವ ಈ ಮಠವು ವಿಶಿಷ್ಟ ಮಠವಾಗಿ ತನ್ನ ಧಾರ್ಮಿಕ ಚಟುವಟಿಕೆಗಳನ್ನು ನಡೆಸುತ್ತಾ ಬಂದಿದೆ.

ವೀರಶೈವ ಮಠಗಳು ಕೇವಲ ಶೈವ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು, ವೈದಿಕ ಸಂಪ್ರದಾಯಗಳ ಆಚರಣೆಗಳನ್ನು ಜಾರಿಗೆತಂದು ಇವನ್ನು ಪ್ರಚಾರ ಮಾಡುವ ಮತ್ತು ಮಾರ್ಗದರ್ಶನ ನೀಡುವ ಪರಿಪಾಠವನ್ನು ಬೆಳೆಸಿಕೊಂಡಿವೆ. ಆದರೆ ಕೆರೆಗೋಡಿ-ರಂಗಾಪುರ ಮಠವು ವೈಷ್ಣವ ಸಂಪ್ರದಾಯಕ್ಕೂ ಮಾನ್ಯತೆಯನ್ನು ನೀಡಿ ಸಮಷ್ಟಿಸಮಾಜದ ಅಭ್ಯುದಯಕ್ಕೆ ಶ್ರಮಿಸುತ್ತಿರುವುದು ಒಂದು ವಿಶಿಷ್ಟ ಸಂಪ್ರದಾಯವಾಗಿದೆ.

ಮಠ ಪ್ರಾರಂಭ: ೧೬೦೦ ರಲ್ಲಿ ಶಿವಯೋಗಿಗಳೊಬ್ಬರು ಲೋಕಸಂಚಾರ ಮಾಡುತ್ತಾ ರಂಗಾಪುರಕ್ಕೆ ಬಂದು, ಇಲ್ಲಿನ ಸೀಗೆ ಮೆಳೆಯ ವನದ ನಿರ್ಜನ ಪ್ರದೇಶದಲ್ಲಿ ದೀರ್ಘ ತಪಸ್ಸನ್ನು ಆಚರಿಸುತ್ತಿದ್ದರು. ಸಂಚಾರಮೂರ್ತಿಗಳಾದ ಯೋಗಿಗಳು ಇಲ್ಲಿನ ಪ್ರಶಾಂತ ವಾತಾವರಣಕ್ಕೆ ಮನಸೋತು ಇಲ್ಲೇ ನೆಲಸಬೇಕೆಂಬ ಮಹಾದಾಸೆಯಿಂದ ಈ ನೆಲದಲ್ಲಿ ನೆಲೆನಿಲ್ಲುತ್ತಾರೆ. ಈ ಸಂದ ರ್ಭದಲ್ಲಿ-ಗ್ರಾಮದ ಜನರು ಯೋಗಿಗಳನ್ನು ಗಮನಿಸಿದ್ದಲ್ಲದೆ ಯೋಗಿಗಳ ಜತೆಯಲ್ಲಿದ್ದ ಕುದುರೆಯನ್ನು ನೋಡಿ ಗುರುಗಳ ಬಳಿಗೆ ಬರುತ್ತಾರೆ. ಗುರುಗಳ ಪೂಜೆಗೆ ಹಾಗೂ ಪ್ರಸಾದಕ್ಕೆ ವ್ಯವಸ್ಥೆಮಾಡತೊಡಗುತ್ತಾರೆ. ಗುರುಗಳು ಅನುಷ್ಠಾನಕ್ಕೆ ಕುಳಿತ ಜಾಗದ ಸುತ್ತಮುತ್ತ ಇದ್ದ ಸೀಗೆ ಮೆಳೆಯನ್ನು ತೆಗಿಸಿ ಬಯಲು ಮಾಡಿ ಗುರುಗಳಿಗೊಂದು ಮಠವನ್ನು ಕಟ್ಟಿಸಿಕೊಡುತ್ತಾರೆ. ಗುರುಗಳು ಮತ್ತು ಭಕ್ತರ ಒಡನಾಟ ಹೆಚ್ಚಾದಂತೆಲ್ಲಾ ಮಠದ ಚಟುವಟಿಕೆಗಳು ಚುರುಕುಗೊಳ್ಳ ತೊಡಗಿದವು. ಇಷ್ಟಾದರೂ ಗುರುಗಳು ಯಾರು ಎಲ್ಲಿಂದ ಬಂದರು ಗುರುಗಳ ಹೆಸರು ಏನು ಎಂಬುದು ಯಾರಿಗೂ ತಿಳಿಯದಾಗಿತ್ತು. ಗುರುಗಳನ್ನು ತಮ್ಮ ಹೆಸರೇನೆಂದು ಭಕ್ತರು ಕೇಳಿದರೆ ನಾನು ಪರದೇಶಿ ಎಂದು ಹೇಳುತ್ತಿದ್ದರು. ಈ ಕಾರಣಕ್ಕೆ ರೂಢಿಗತವಾಗಿ ಶ್ರೀ ಪರದೇಶಿಕೇಂದ್ರ ಸ್ವಾಮಿಗಳು ಎಂಬ ಹೆಸರು ಬಳಕೆಯಾಗತೊಡಗಿ, ಈ ಮಠದ ಸಂಪ್ರದಾಯದ ಎಲ್ಲಾ ಗುರುಗಳಿಗೂ ಶ್ರೀ ಪರದೇಶಿಕೇಂದ್ರ ಸ್ವಾಮಿಗಳೆಂದು ಅಭಿಧಾನ ಬಂದಿದೆ.

ಈ ರೀತಿ ದಿನಕಳೆದಂತೆ ಗುರುಗಳ ತಪೋಗುಣಗಳ ಪ್ರಭಾವವು ಹೆಚ್ಚಾಗಿ ಈ ಕ್ಷೇತ್ರದ ಸುತ್ತಮುತ್ತಲ ಗ್ರಾಮಗಳ ಜನರು ಮಠದ ಭಕ್ತರಾಗಿ ಬರತೊಡಗಿದರು. ಬರುವ ಭಕ್ತರಿಗೆ ದರ್ಶನ ಕೊಟ್ಟು ಉಪದೇಶ ನೀಡಿ ಜೀವನ ಮೌಲ್ಯಗಳನ್ನು ಮೈಗೂಡಿಸಿಕೊಳ್ಳುವ ಬಗ್ಗೆ ಮಾರ್ಗದರ್ಶನ ನೀಡತೊಡಗಿದರು.ಇದೇ ರೀತಿ ಮಠದ ಕಾರ್ಯಗಳು ನಡೆಯತೊಡಗಿ ಶಾಸ್ತ್ರಬದ್ಧವಾದ ಕಾರ್ಯಗಳನ್ನು ರೂಪಿಸಿಕೊಂಡು ಗುರುಗಳೇ ಭಕ್ತರ ಬಳಿಗೆ ಹೋಗಿ ಧರ್ಮಬೋಧನೆ ಮಾಡತೊಡಗಿದರು. ಭಿಕ್ಷಾಟನೆ ಮಾಡಿ ಮಠದ ದಾಸೋಹ ಕ್ರಿಯೆಯನ್ನು ಚುರುಕುಗೊಳಿಸಿದರು. ದಿನದಿಂದದಿನಕ್ಕೆ ಧಾರ್ಮಿಕ ಕಾರ್ಯಗಳು

ವಿಸ್ತಾರಗೊಳ್ಳುತ್ತಾ ಬಂದವು.

ಶೈವ-ವೈಷ್ಣವರ ಸಮ್ಮಿಲನ: ಕೆರೆಗೋಡಿ ಮತ್ತು ರಂಗಾಪುರಗಳು ಅವಳಿ ಊರುಗಳು. ಕೆರೆಯ ಏರಿಗೆ ಅಂಟಿಕೊಂಡಂತೆ ಶಂಕರೇಶ್ವರ ದೇವಾಲಯ ಇದ್ದು ಶೈವರ ಪುಣ್ಯಕ್ಷೇತ್ರವಾಗಿದೆ. ಈ ದೇವಾಲಯದಲ್ಲಿ ಶಂಕರೇಶ್ವರರ ಅಕ್ಕಪಕ್ಕದಲ್ಲಿ ಪಾರ್ವತಿ ಮತ್ತು ಗಣಪತಿ ವಿಗ್ರಹಗಳಿವೆ. ಇಲ್ಲಿ ನಿತ್ಯ ಪೂಜೆ ನಡೆಯುತ್ತಿದೆ. ಪರದೇಶಿ ಮಠದ ಸಮುಚ್ಚಯದಲ್ಲಿ ಪೂರ್ವಾಭಿಮುಖವಾಗಿ ರಂಗನಾಥಸ್ವಾಮಿ ದೇವಾಲಯ ಸ್ಥಾಪನೆಗೊಂಡು ವೈಷ್ಣವರ ಪುಣ್ಯಕ್ಷೇತ್ರವಾಗಿದೆ. ಈ ದೇವಾಲಯದಲ್ಲಿ ರಂಗನಾಥ, ಶ್ರೀದೇವಿ ಮತ್ತು ಭೂದೇವಿಯರ ವಿಗ್ರಹಗಳಿವೆ.ಇಲ್ಲಿನ ವೈಶಿಷ್ಟ್ಯ ಎಂದರೆ ವೀರಶೈವ ಅರ್ಚಕರು ಪೂಜೆಯನ್ನು ಸಲ್ಲಿಸುತ್ತಿದ್ದಾರೆ. ಈ ದೇವಾಲಯವನ್ನು ಶ್ರೀರಂಗಪಟ್ಟಣದ ದೊರೆ ಟಿಪ್ಪುಸುಲ್ತಾನರ ಕಾಲದಲ್ಲಿ ನಿರ್ಮಿಸಲಾಗಿದೆ ಎಂದು ಹೇಳಲಾಗುತ್ತಿದೆ. ಈ ಹೇಳಿಕೆಗೆ ಪೂರಕವಾಗಿ ಈ ದೇವಸ್ಥಾನದಲ್ಲಿ ಶ್ರೀರಂಗಪಟ್ಟಣದ ಅರಮನೆಯಲ್ಲಿ ಕಂಡುಬರುವ ಚಿತ್ರಕಲೆಯನ್ನು ಇಲ್ಲಿ ನೋಡಬಹುದಾಗಿದೆ. ದೇವಾಲಯದ ಆವರಣದಲ್ಲಿ ಬೃಂದಾವನ, ನಾಗರಪಂಚಮಿಯಲ್ಲಿ ಪೂಜೆಮಾಡುವ ನಾಗರ ಕಲ್ಲುಗಳು ಮತ್ತು ಮೂವತ್ತುಅಡಿ ಎತ್ತರದ ದೀಪಸ್ತಂಭಗಳು ಸ್ಥಾಪನೆಗೊಂಡಿವೆ. ರಂಗನಾಥಸ್ವಾಮಿಗೆ ವಿಭೂತಿ ಮತ್ತು ನಾಮಗಳೆರಡನ್ನೂ ಧರಿಸಲಾಗುತ್ತದೆ. ಇಂತಹ ವಿಶಿಷ್ಟ ರೀತಿಯ ಸಂಪ್ರದಾಯದ ಈ ದೇವಾಲಯಗಳನ್ನು ಗುರುಗಳು ಜೀರ್ಣೋದ್ಧಾರ ಮಾಡಿಸಿದ್ದಾರೆ. ಈ ದೇವಸ್ಥಾನಗಳಿಗೆ ಮತ್ತು ಮಠಕ್ಕೆ ಮುಸ್ಲಿಮರು ಜಾತ್ರೆ ಮತ್ತು ವಿಶೇಷ ಸಂದರ್ಭಗಳಲ್ಲಿ ಗಾಡಿಕಟ್ಟಿಕೊಂಡು ಬಂದು ವೀರಶೈವರು, ಶೈವರು, ವೈಷ್ಣವರಂತೆ ಭಾಗಿಗಳಾಗುತ್ತಾರೆ. ಹೀಗೆ ಇದು ಸರ್ವಧರ್ಮ ಸಮನ್ವಯ ಕ್ಷೇತ್ರವಾಗಿದೆ.

ಪರಂಪರೆ: ಮೊದಲನೆಯ ಶ್ರೀ ಪರದೇಶಿಕೇಂದ್ರ ಸ್ವಾಮಿಗಳು ಜೋಳಿಗೆ ಹಿಡಿದು ಹಳ್ಳಿ ಹಳ್ಳಿಗಳನ್ನು ಸುತ್ತಿ ಭಿಕ್ಷಾಟನೆ ಮಾಡಿ ಮಠವನ್ನು ದೇವಸ್ಥಾನಗಳನ್ನು ಅಭಿವೃದ್ಧಿಪಡಿಸಿದರು. ಸಮಷ್ಟಿ ಸಮಾಜದ ಒಳಿತಿಗಾಗಿ ದುಡಿದು ಎಲ್ಲಾ ವರ್ಗದ, ಎಲ್ಲಾ ಜನರ ಪ್ರೀತಿಗೆ ಪಾತ್ರರಾಗಿ ನಿರ್ವಿಕಲ್ಪ ಸಮಾಧಿಯಾದರು. ಇವರ ನಂತರ ಬಂದ ಎರಡನೆಯ ಶ್ರೀ ಗುರು ಪರದೇಶಿಕೇಂದ್ರ ಸ್ವಾಮಿಗಳು ಹಿರಿಯ ಗುರುಗಳು ಹಾಕಿಕೊಟ್ಟ ಮಾರ್ಗದಲ್ಲಿ ಮಠವನ್ನು ಮುನ್ನಡೆಸಿದರು. ಹಿರಿಯ ಗುರುಗಳು ಮಾಡುತ್ತಿದ್ದ ಭಿಕ್ಷಾವೃತ್ತಿಯನ್ನು ಮುಂದುವರೆಸಿ ಊರು ಊರಿಗೆ, ಮನೆಮನೆಗಳಿಗೆ ಹೋಗಿ ಈ ಪ್ರಾಂತ್ಯವನ್ನೆಲ್ಲಾ ಸುತ್ತಿ ಜನರ ಕಷ್ಟ ಸುಖಗಳನ್ನು ವಿಚಾರಿಸಿ, ಉಳ್ಳವರಿಂದ ಪಡೆದು ನಿರ್ಗತಿಕರಿಗೆ ಹಂಚಿ ಸಮಾನತೆ ತರಲು ಬಹಳವಾಗಿ ಶ್ರಮಿಸಿದರು. ಮಠದಲ್ಲಿ ನಿತ್ಯ ಅನ್ನ ದಾಸೋಹವನ್ನು ನಡೆಸುತ್ತಾ, ಧಾರ್ಮಿಕ ಕಾರ್ಯಗಳನ್ನು ಹಿಂದಿಗಿಂತ ಇಂದೇ ಚೆನ್ನಾಗಿ ನಡೆಯುವಂತೆ ಹಿರಿಯ ಗುರುಗಳ ಮೇಲ್ಪಂಕ್ತಿಯನ್ನು ಅನುಸರಿಸಿ, ಇಪ್ಪತ್ತು ವರ್ಷಗಳ ಕಾಲ ಮಠದ ಆಡಳಿತವನ್ನು ನಡೆಸಿ ಲಿಂಗೈಕ್ಯರಾಗಿರುತ್ತಾರೆ.

ನಂತರ ಬಂದ ಮೂರನೆಯ ಶ್ರೀ ಗುರು ಪರದೇಶಿಕೇಂದ್ರ ಸ್ವಾಮಿಗಳು ಸಂಚಾರ ಮೂರ್ತಿಗಳಾಗಿ ಅನೇಕ ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡಿಸಿದ್ದಾರೆ. ಮಠಕ್ಕೆ ಸ್ಥಿರ ಆಸ್ತಿಯನ್ನು ಸಂಪಾದಿಸಿ ಮಠವು ಸ್ವಾವಲಂಬಿಯಾಗಿ ದಾಸೋಹ ಕ್ರಿಯೆಯನ್ನು ನಡೆಸುವ ಶಕ್ತಿಯನ್ನು ತಂದುಕೊಟ್ಟರು. ಇವರ ನಂತರ ನಾಲ್ಕನೆಯ ಶ್ರೀ ಗುರುಪರ ದೇಶಿಕೇಂದ್ರ ಸ್ವಾಮಿಗಳು ಕುದುರೆಯ ಮೇಲೆ ಊರೂರು ಸುತ್ತಿ ಭಿಕ್ಷಾವೃತ್ತಿ ಮಾಡಿ, ಅನೇಕ ಪವಾಡಗಳಿಂದ ಅನ್ಯಮತೀಯರನ್ನು ಗೆದ್ದು ತಮ್ಮ ಭಕ್ತರನ್ನಾಗಿ ಮಾಡಿಕೊಂಡರು. ಇವರ ಕಾಯಕನಿಷ್ಠೆಯಿಂದ ಮಠದ ಸ್ಥಿರ ಆಸ್ತಿಯು ಅಭಿವೃದ್ಧಿಗೊಂಡು ಮಠಕ್ಕೆ ಆದಾಯದ ಮೂಲವಾಯಿತು. ಇವರ ಕಾಲದಲ್ಲಿ ತೇರು ಮನೆ,ಕಲ್ಲುಬಾವಿ,ಮಜ್ಜನಬಾವಿ, ರಥೋತ್ಸವಕ್ಕೆ ಸುಂದರವಾದ ರಥವನ್ನು ಮಾಡಿಸಿರುತ್ತಾರೆ.

ಮಠದ ಭವಿಷ್ಯನಿಧಿಯಾಗಿ ಇರಲಿ ಎಂಬ ಕಾರಣಕ್ಕೆ ಅಪಾರ ಬೆಳ್ಳಿ ನಾಣ್ಯಗಳನ್ನು ಸಂಪಾದಿಸಿದ್ದರು. ಜಾತ್ರೆಯ ಸಂದರ್ಭದಲ್ಲಿ ಅನ್ನ ದಾಸೋಹಕ್ಕೆ ಅನುಕೂಲವಾಗಲು ದೊಡ್ಡ ಹಂಡೆಗಳನ್ನು ಮತ್ತು ಕೊಪ್ಪರಿಗೆಗಳನ್ನು ಮಾಡಿಸಿದ್ದಾರೆ. ಇವುಗಳು ಈಗಲೂ ನೋಡಸಿಗುತ್ತಿವೆ. ಈ ರೀತಿ ಇಪ್ಪತ್ತಾರು ವರ್ಷಗಳ ಕಾಲ ಮಠದ ಆಡಳಿತವನ್ನು ನಡೆಸಿದರು. ರಂಗಾಪುರದ ಶ್ರೀ ಸುಬ್ಬೇಗೌಡರು ಮತ್ತು ಶ್ರೀಮತಿ ಪಾರ್ವತಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಶಂಕರದೇವರು ಬಾಲ್ಯದಲ್ಲಿಯೇ ಆಧ್ಯಾತ್ಮ ಗುಣಗಳನ್ನು ಬೆಳೆಸಿಕೊಂಡಿದ್ದರು. ಇವರ ಧಾರ್ಮಿಕ ಪ್ರಜ್ಞೆಯನ್ನು ಗಮನಿಸಿದ ನಾಲ್ಕನೆಯ ಶ್ರೀ ಪರದೇಶಿಕೇಂದ್ರ ಸ್ವಾಮಿಗಳು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿ ಬೆಳೆಸಿದರು. ವಿದ್ವತ್ ಸಂಪಾದಿಸಲೆಂದು ಬೆಂಗಳೂರಿಗೆ ಹೋಗಿ ವೇದ, ಸಂಸ್ಕೃತ

ಹಾಗೂ ಆಗಮಗಳನ್ನು ಕಲಿತು ಬಂದರು. ವಿದ್ಯಾಸಂಪನ್ನರಾಗಿ, ಆಧ್ಯಾತ್ಮ ಮೂರ್ತಿಯಾಗಿ ರೂಪುಗೊಂಡು ಬಂದ ಶ್ರೀ ಶಂಕರ ದೇವರಿಗೆ ೧೯೨೫ ರಲ್ಲಿ ಪಟ್ಟಾಭಿಷೇಕ ಮಾಡಿಸಿ ಹಿರಿಯ ಗುರುಗಳು ಲಿಂಗೈಕ್ಯರಾಗಿರುತ್ತಾರೆ.

ಹಿರಿಯ ಗುರುಗಳು ಲಿಂಗೈಕ್ಯರಾದ ಮೇಲೆ ಐದನೆಯ ಶ್ರೀ ಪರದೇಶಿಕೇಂದ್ರ ಸ್ವಾಮಿಗಳು ಮಠದ ಪೂರ್ಣ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಆರ್ಥಿಕವಾಗಿ ಅಭಿವೃದ್ಧಿಗೊಳಿಸಿ, ಧಾರ್ಮಿಕವಾಗಿ ಮಠವನ್ನು ಹೆಚ್ಚು ಬೆಳೆಸಿದರು. ಊರೂರು ಸುತ್ತಿ ಧರ್ಮಬೋಧನೆ ಮಾಡಿ ಜನರನ್ನು ಸನ್ಮಾರ್ಗದಲ್ಲಿ ಮುನ್ನಡೆಸಿದರು. ಇವರ ಆಡಳಿತಾವಧಿಯಲ್ಲಿ ಈ ಭಾಗದಲ್ಲಿ ಮಳೆ ಇಲ್ಲದೆ ರೈತರು ಬರದ ದವಡೆಗೆ ಸಿಕ್ಕಿದರು. ಈ ಸಂದರ್ಭದಲ್ಲಿ ಗುರುಗಳು ಭಕ್ತರಿಗೆ ಆತ್ಮಸ್ಥೈರ್ಯ ತುಂಬಿ ಆಧ್ಯಾತ್ಮ ಚಿಂತನೆಯತ್ತ ಜನರ ಮನಸ್ಸುಗಳನ್ನು ಪರಿವರ್ತಿಸಿದರು. ಜನರು ನೋವಿನಲ್ಲಿ ಆತ್ಮಸ್ಥೈರ್ಯ ಕಳೆದುಕೊಳ್ಳದೆ, ಬದುಕಿಗಾಗಿ ದುರ್ಮಾರ್ಗವನ್ನು ಹಿಡಿಯದೆ, ಧರ್ಮದ ನೆರಳಿನಲ್ಲಿ ಬದುಕುವುದನ್ನು ಕಲಿಸಿದರು. ಈ ಸಂದರ್ಭದಲ್ಲಿ ಮಠದ ದಾಸೋಹ ಕ್ರಿಯೆಯು ಕಂಡರಿಯದಂತೆ ನಡೆಯತೊಡಗಿತು. ಗುರುಗಳ ದಾಸೋಹಕ್ರಿಯೆಗೆ ಧವಸಧಾನ್ಯವನ್ನು ಹೊರಗಿನಿಂದ ತಂದು ಶೇಖರಣೆ ಮಾಡಿದರು. ಈ ಕಾಲದಲ್ಲಿ ಭಕ್ತರ ಸಂಖ್ಯೆ ಸಾಗರದಂತೆ ಬೆಳೆಯಿತು. ಭಕ್ತರಲ್ಲಿ ಈ ಕ್ಷೇತ್ರದ ಬಗ್ಗೆ ಅಪಾರ ಗೌರವ ಭಾವನೆಗಳು ಬೆಳೆದವು.

ತಪೋನಿಷ್ಠರೂ, ಮಹಾಯೋಗಿಗಳೂ ಆದ ಐದನೆಯ ಶ್ರೀ ಪರದೇಶಿಕೇಂದ್ರ ಸ್ವಾಮಿಗಳು ೧೯೪೦ ರಲ್ಲಿ ಉತ್ತರಾಧಿಕಾರಿಗ ಳಿಗೆ ಅಧಿಕಾರವನ್ನು ನೀಡಿ ವಿಶ್ರಾಂತ ಜೀವನವನ್ನು ನಡೆಸಲು ಮುಂದಾದರು. ಶ್ರೀ ಶಂಕರೇಶ್ವರ ಸ್ವಾಮಿಯ ಜಾತ್ರೆಯ ದಿನ ಓಲಗದ ನರಸಿಂಹಯ್ಯನವರನ್ನು ಕರೆಸಿ ಪ್ರಯಾಣ ಹೊರಡುತ್ತದೆ, ನಮ್ಮ ನೆಲೆಗೆ ಹೋಗುವ ತನಕ ವಾದ್ಯ ನುಡಿಸುತ್ತಿರು ಎಂದು ಹೇಳಿ, ಮಠಕ್ಕೆ ಬಂದು ಭಜನೆಯನ್ನು ನಡೆಸಲು ಹೇಳಿ ಎಲ್ಲರ ಮುಂದೆ ಧ್ಯಾನಾಸಕ್ತರಾಗಿ ಕುಳಿತ ಗುರುಗಳು ಮಾರ್ಚ್ ಎಂಟು ೧೯೪೭ ರಲ್ಲಿ ಜೀವಂತ ಸಮಾಧಿಯಾದರು.

ಐದನೆಯ ಗುರುಗಳ ಕರಕಮಲ ಸಂಜಾತರಾಗಿ ೧೯೪೦ರಲ್ಲಿ ಅಧಿಕಾರವನ್ನು ವಹಿಸಿಕೊಂಡಿದ್ದ ಆರನೆಯ ಶ್ರೀ ಪರದೇಶಿ ಕೇಂದ್ರ ಸ್ವಾಮಿಗಳು ರಂಗಾಪುರದ ಶ್ರೀ ದೊಡ್ಡೇಗೌಡರು ಮತ್ತು ಶ್ರೀಮತಿ ಗೋಪಮ್ಮನವರ ಪುತ್ರರಾಗಿ ೧೯೧೬ ರಲ್ಲಿ ಜನಿಸಿದರು. ಶ್ರೀ ಸಣ್ಣನಂಜಪ್ಪದೇವರು ಕಿರಿಯ ವಯಸ್ಸಿನಲ್ಲಿಯೇ ಗುರುಹಿರಿಯರ ಮೇಲಿಟ್ಟಿದ್ದ ಭಕ್ತಿ, ದೈವನಿಷ್ಠೆಗಳನ್ನು ನೋಡಿದ ಐದನೆಯ ಗುರುಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡರು. ಚಿಕ್ಕವಯಸ್ಸಿನಲ್ಲಿಯೇ ಗುರುಗಳ ಸೇವೆ ಮಾಡತೊಡಗಿ ಸಂಸ್ಕಾರ ಪಡೆದಿದ್ದ ಆರನೆಯ ಗುರುಗಳು ಹಿರಿಯ ಗುರುಗಳು ಲಿಂಗೈಕ್ಯರಾದ ಮೇಲೆ ಮಹಾ ಕಾಯಕ ಯೋಗಿಗಳಾಗಿ, ಹಿಂದಿನ ಎಲ್ಲಾ ಗುರುಗಳ ಮೇಲ್ಪಂಕ್ತಿಯಲ್ಲಿ ಮಠವನ್ನು ಬೆಳೆಸಲು ಮುಂದಾದರು. ಇವರ ಕಾಲದಲ್ಲಿ ಬಿ.ಕೆ. ನಾರಾಯಣಸಿಂಗ್ ಎಂಬ ಮಠದ ಭಕ್ತರು ಐದನೆಯ ಗುರುಗಳ ಪರಮಾಪ್ತ ಶಿಷ್ಯರಾಗಿದ್ದು ಮಠದ ಸ್ವರೂಪವನ್ನು ಬದಲಿಸಲು ತಮ್ಮ ಆಸ್ತಿಯನ್ನೆಲ್ಲಾ ಮಠಕ್ಕೆ ಅರ್ಪಿಸಿ ಕೃತಾರ್ಥರಾದರು. ಇದರ ಫಲವಾಗಿಯೇ ಐದನೆಯ ಗುರುಗಳ ಸಮಾಧಿ ಸ್ಥಳದಲ್ಲಿ ಸ್ಫಟಿಕ ಲಿಂಗದಿಂದ ಕೂಡಿದ ಗದ್ದುಗೆಯನ್ನು, ಸುಂದರ ಮಂಟಪವನ್ನು ನಿರ್ಮಿಸಿದರು. ೧೯೫೬ ರ ಫೆಬ್ರವರಿ ಹದಿನೇಳರಂದು ಉದ್ಘಾಟಿಸಿದರು.

ಆರನೆಯ ಶ್ರೀ ಪರದೇಶಿಕೇಂದ್ರ ಸ್ವಾಮಿಗಳು ಸಿಕ್ಕ ಎಲ್ಲಾ ಅವಕಾಶಗಳನ್ನು ಬಳಸಿಕೊಂಡು ಮಠವನ್ನು ಸರ್ವಾಂಗೀಣವಾಗಿ ಅಭಿವೃದ್ಧಿಗೆ ತರತೊಡಗಿದರು. ಮಠವು ಧಾರ್ಮಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಪ್ರಗತಿ ಸಾಧಿಸಲು ನೆರವಾಗಿ ಮಠದ ಸಮುಚ್ಛಯವನ್ನು ಶ್ರೀಮಂತಗೊಳಿಸಿದರು. ಪರಂಪರಾಗತವಾಗಿ ಮಠದ ಧಾರ್ಮಿಕ ಕಾರ್ಯಗಳು ಉನ್ನತೋನ್ನತಿ ಸಾಧಿಸಲು ನೆರವಾಗುವ ಎಲ್ಲ ಭವಿಷ್ಯ ಯೋಜನೆಗಳನ್ನೂ ರೂಪಿಸಿ ಮಠವನ್ನು ಸುಸ್ಥಿತಿಗೆ ತಂದರು. ದಾಸೋಹ ಕ್ರಿಯೆ ಹಿಂದಿಗಿಂತ ಅದ್ದೂರಿಯಾಗಿ ನಡೆಯಲು ವ್ಯವಸ್ಥೆಗೊಳಿಸಿದರು. ಈ ರೀತಿ ಮಠವನ್ನು ಅಭಿವೃದ್ಧಿಪಡಿಸಿ, ೧೯೭೬ ಫೆಬ್ರವರಿ ೪ ರಂದು ತಮ್ಮ ಉತ್ತರಾಧಿಕಾರಿಗೆ ಪಟ್ಟಾಧಿಕಾರವನ್ನು ನೆರವೇರಿಸಿ ವಿಶ್ರಾಂತ ಜೀವನ ನಡೆಸತೊಡಗಿದರು.

ಅದಮ್ಯ ಚೇತನಮೂರ್ತಿ: ರಂಗಾಪುರದ ಶ್ರೀ ಮಹಲಿಂಗಪ್ಪ ಮತ್ತು ಶ್ರೀಮತಿ ಪಾರ್ವತಮ್ಮನವರ ತೃತೀಯ ಮಗನಾಗಿ ಜನಿಸಿದ ಶ್ರೀ ಪಂಚಾಕ್ಷರಿಮೂರ್ತಿಯು ಬಾಲ್ಯದಲ್ಲಿಯೇ ಸದಾಚಾರ ಸಂಪನ್ನರಾಗಿ, ಕ್ರಿಯಾಶೀಲ ಗುಣಗಳನ್ನು ಮೈಗೂಡಿಸಿ

ಕೊಂಡಿದ್ದ ಕಾರಣ ಆರನೆಯ ಪರದೇಶಿಕೇಂದ್ರ ಸ್ವಾಮಿಗಳ ದೃಷ್ಟಿ ಅವರ ಮೇಲೆ ಬೀಳುವಂತಾಯಿತು. ಬಾಲಕನ ಸದ್ಗುಣಗಳನ್ನು ಗಮನಿಸಿ ತಮ್ಮ ಉತ್ತರಾಧಿಕಾರಿಯನ್ನಾಗಿ ಆಯ್ಕೆಮಾಡಿಕೊಂಡರು.

ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಓದನ್ನು ರಂಗಾಪುರದಲ್ಲಿಯೇ ಮುಗಿಸಿ, ತಿಪಟೂರಿಗೆ ಬಂದು ಗುರುಕುಲದಲ್ಲಿ ನೆಲೆಸಿ ಪದವಿ ಶಿಕ್ಷಣವನ್ನು ಪಡೆದು ವೇದ ಸಂಸ್ಕೃತಗಳನ್ನು ಕಲಿತು, ಹಿರಿಯ ಗುರುಗಳ ನಿರ್ದೇಶನದಂತೆ ೧೯೭೬ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಳ್ಳುತ್ತಾರೆ. ಏಳನೆಯ ಪರದೇಶಿಕೇಂದ್ರ ಸ್ವಾಮಿಗಳೆಂದು ಅಭಿದಾನ ಪಡೆದು ಅಧಿಕಾರಕ್ಕೆ ಬಂದು, ಹಿರಿಯ ಆರು ಜನ ಗುರುಗಳ ಎಲ್ಲಾ ಶಕ್ತಿಗಳನ್ನು ಮೈಗೂಡಿಸಿಕೊಂಡು ಅದಮ್ಯಚೇತನ ಮೂರ್ತಿಯಾಗಿ ಮಠವನ್ನು ಮುನ್ನಡೆಸುತ್ತಿದ್ದಾರೆ. ಪ್ರಾತಃ ಕಾಲದಲ್ಲಿ ಎದ್ದು ತಮ್ಮ ದೈನಂದಿನ ಎಲ್ಲಾ ಕೆಲಸಗಳನ್ನು ಮುಗಿಸಿ ಮಠದ ನಿತ್ಯದ ಕಾರ್ಯಕ್ರಮದ ಪಟ್ಟಿಯನ್ನು ತಯಾರಿಸಿಕೊಂಡು ಶಿಸ್ತುಬದ್ಧವಾಗಿ ನಡೆಯುವಂತೆ ಕಾರ್ಯವನ್ನು ರೂಪಿಸಿದ್ದಾರೆ. ದಿನದ ಹದಿನೆಂಟು ಗಂಟೆಗಳ ಕಾಲ ಅವಿರತವಾಗಿ ದುಡಿದು ಮಠದ ಏಳಿಗೆಯನ್ನು ಸಾಧಿಸಿದ್ದಾರೆ.

ಸದಾ ಕಲರವ: ಮಠದ ಸಮುಚ್ಚಯದಲ್ಲಿ ಸದಾ ಭಕ್ತರಿಂದ ತುಂಬಿ ತುಳುಕುವ ಈ ಕ್ಷೇತ್ರದಲ್ಲಿ ಗದ್ದುಗೆ ವನದ ಹಕ್ಕಿಗಳ ಕಲರವ, ಜನರ ಭಕ್ತಿಯ ಪ್ರಾರ್ಥನೆ, ಗಂಟೆಗಳ ನಿನಾದದಲ್ಲಿ ಮಠದ ವಾತಾವರಣವು ಭಕ್ತಿಯ ಕಳೆ ಕಟ್ಟುತ್ತದೆ. ಎಂತಹ ನಾಸ್ತಿಕರಿಗೂ ಧರ್ಮ ಮತ್ತು ದೈವತ್ವದ ಬಗ್ಗೆ ಚಿಂತಿಸಲು ಪ್ರೇರೇಪಿಸುತ್ತದೆ ಎಂದರೆ ಅತಿಶಯೋಕ್ತಿಯಾಗಲಾರದು.

ವಿಸ್ತಾರಗೊಂಡ ಕಾರ್ಯಗಳು: 'ಮಣ್ಣು ಬಿಟ್ಟು ಮಡಕೆ ಇಲ್ಲ, ಧರ್ಮ ಬಿಟ್ಟು ಬದುಕು ಇಲ್ಲ' ಆದ್ದರಿಂದ ಸರ್ವ ಕಾಲಕ್ಕೂ ಸಲ್ಲುವಂತಹ ವೀರಶೈವ ಧರ್ಮವನ್ನು ಆಚರಣೆಗೆ ತಂದರೆ ಸಮಾಜದ ಬದುಕು ಸರಳವಾಗುತ್ತದೆ ಎಂದು ಅಭಿಪ್ರಾಯಿಸುವ ಗುರುಗಳು, ಶರಣರ ಅನುಭವದ ಮಾತುಗಳನ್ನು ನಮ್ಮನಮ್ಮ ಕಾರ್ಯಕ್ಷೇತ್ರಗಳಲ್ಲಿ ಅಳವಡಿಸಿಕೊಂಡು ನಾಗರಿಕರಾಗಿ, ಸುಸಂಸ್ಕೃತ ರಾಗಿ ಬದುಕುವುದನ್ನು ಕಲಿಯಬೇಕು ಎಂಬ ಹಂಬಲ ಹೊತ್ತ ಏಳನೆಯ ಶ್ರೀ ಪರದೇಶೀಕೇಂದ್ರ ಸ್ವಾಮಿಗಳು, ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿದರು. ದಾಸೋಹ ಮಂದಿರವನ್ನು ಅಭಿವೃದ್ಧಿಪಡಿಸಿ, ಅನ್ನದಾಸೋಹ ಮತ್ತು ಜ್ಞಾನ ದಾಸೋಹಗಳು ನಿರಂತರವಾಗಿ ನಡೆಯುವಂತೆ ವ್ಯವಸ್ಥೆ ಮಾಡಿದರು.

ಶಿಕ್ಷಣ ಸೇವೆ: ಧಾರ್ಮಿಕ ಕೇಂದ್ರವಾಗಿದ್ದ ಕೆರೆಗೋಡಿ ರಂಗಾಪುರ ಮಠವನ್ನು ವಿದ್ಯಾಕೇಂದ್ರವನ್ನಾಗಿ ಆರನೆಯ ಗುರುಗಳು ಪರಿವರ್ತಿಸಿದರು. ೧೯೬೩- ೬೪ ನೆಯ ಸಾಲಿನಲ್ಲಿ ಶ್ರೀ ಪರದೇಶಿಕೇಂದ್ರ ಸ್ವಾಮಿಗಳು ವಿದ್ಯಾಪೀಠವನ್ನು ಸ್ಥಾಪಿಸಿ, ಈ ಕ್ಷೇತ್ರದಲ್ಲಿ ಶ್ರೀ ಪರದೇಶಿಕೇಂದ್ರ ಸ್ವಾಮಿಗಳು ಪ್ರೌಢಶಾಲೆಯನ್ನು ಪ್ರಾರಂಭಿಸಿದರು. ನಲವತ್ತು ವಿದ್ಯಾರ್ಥಿಗಳಿಂದ ಪ್ರಾರಂಭವಾದ ಈ ಶಾಲೆಯು ಈಗ ೪೫೦ ವಿದ್ಯಾರ್ಥಿಗಳನ್ನು ಹೊಂದಿದೆ. ಆರ್ಥಿಕ ದುಸ್ಥಿತಿಯಿಂದ ಅಥವಾ ಶೈಕ್ಷಣಿಕ ಸೌಲಭ್ಯದ ಕೊರತೆಯಿಂದ ವಂಚಿತರಾಗಿರುವ ಗ್ರಾಮೀಣ ಪ್ರದೇಶದ ಬಡಮಕ್ಕಳಿಗೆ ಮಠದಲ್ಲಿ ವಸತಿ ಕಲ್ಪಿಸಲು ೧೯೬೩-೬೪ ನೆಯ ಸಾಲಿನಲ್ಲಿ ಶ್ರೀ ಪರದೇಶಿಕೇಂದ್ರ ಸ್ವಾಮಿಗಳು ಅನಾಥಾಲಯವನ್ನು ತೆರೆದು ನಾಡಿನ ಎಲ್ಲಾ ಕಡೆಯಿಂದ ಬಂದಿರುವ ನಾನಾ ವರ್ಗದ ಜಾತಿಯ ಐವತ್ತು ಮಕ್ಕಳಿಗೆ ಆಶ್ರಯವನ್ನು ಕಲ್ಪಿಸಿರುವ ಈ ಅನಾಥಾಲಯದಲ್ಲಿ ಈಗ ೫೦೦ ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸೌಲಭ್ಯವನ್ನು ಪಡೆದಿದ್ದಾರೆ. ಕಲಿಯುವ ಈ ಮಕ್ಕಳಿಗೆ ಶಿಸ್ತು, ಸಂಯಮ ಕಲಿಸಲು ಪ್ರತಿನಿತ್ಯ ಸಾಮೂಹಿಕ ಪ್ರಾರ್ಥನೆ, ಸಹಪಂಕ್ತಿ ಭೋಜನ, ಶ್ರಮದಾನವನ್ನು ಮಾಡಿಸಲಾಗುತ್ತದೆ.

ಪ್ರತಿ ವಿದ್ಯಾರ್ಥಿಯು ಐದುಗಂಟೆಗೆ ಎದ್ದು ವ್ಯಾಯಾಮ, ಮೌನಪಠನ, ಸಂಸ್ಕೃತ ಅಭ್ಯಾಸ ಮಾಡಿ ನಂತರ ಭೋಜನ ವನ್ನು ಮುಗಿಸಿದ ಮಕ್ಕಳು ತಮ್ಮ ಶಾಲಾ ಚಟುವಟಿಕೆಗಳಲ್ಲಿ ಪಾಲ್ಗೊಂಡು, ಸಂಜೆ ಆರುವರೆ ಗಂಟೆಗೆ ಸಾಮೂಹಿಕ ಪ್ರಾರ್ಥನೆ ಮಾಡುತ್ತಾರೆ. ಬಿಳಿದೋತರ, ಕೆಂಪು ವಸ್ತ್ರವನ್ನು ತೊಟ್ಟು, ಹಣೆಯಲ್ಲಿ ವಿಭೂತಿ ಧರಿಸಿ ಗುರುಗಳ ಸುತ್ತಾ ಕುಳಿತುಕೊಳ್ಳುತ್ತಾರೆ. ಗುರುಗಳು ಮಕ್ಕಳಿಗೆ ಜೀವನದ ಬಗ್ಗೆ ಮತ್ತು ಧರ್ಮದ ಬಗ್ಗೆ ಉಪದೇಶವನ್ನು ನೀಡುತ್ತಾರೆ. ಉಪದೇಶವು ಮುಗಿದ ಮೇಲೆ ಎಂಟುಗಂಟೆಯ ಒಳಗೆ ಊಟವನ್ನು ಮುಗಿಸುತ್ತಾರೆ. ಈ ರೀತಿ ದಿನಚರಿಯನ್ನು ರೂಪಿಸಿದ್ದಾರೆ. ೧೯೭೮-೭೯ ನೆಯ ಸಾಲಿನಲ್ಲಿ ಶ್ರೀ ಪರದೇಶಿಕೇಂದ್ರ ವಿದ್ಯಾಪೀಠದ ವತಿಯಿಂದ ವೇದ, ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಿ, ಗ್ರಾಮೀಣ ಮಕ್ಕಳು

ಸಂಸ್ಕೃತವನ್ನು ಕಲಿಯಲು ಅವಕಾಶ ಕಲ್ಪಿಸಿಕೊಟ್ಟಿದ್ದಾರೆ.

ವಿದ್ಯಾಸಂಸ್ಥೆಗಳು:

ವಿದ್ಯಾಸಂಸ್ಥೆ	ಕಾಲ	ಸ್ಥಳ
೧. ಹಿರಿಯ ಪ್ರಾಥಮಿಕ ಶಾಲೆ	೧೯೮೦-೮೧	ಮಠದ ಆವರಣ
೨. ಶ್ರೀ ರಂಗನಾಥ ಪ್ರೌಢಶಾಲೆ	೧೯೮೧-೮೨	ಕೊನೆಹಳ್ಳಿ (ತುಮಕೂರು ಜಿಲ್ಲೆ)
೩. ಶ್ರೀ ಶಂಕರೇಶ್ವರ ವೈಹಿಕ ಶಿಕ್ಷಣ ತರಬೇತಿ ಕೇಂದ್ರ	೧೯೮೧-೮೨	ಮಠದ ಆವರಣ
೪. ಶ್ರೀ ಶಂಕರೇಶ್ವರ ಪ್ರೌಢಶಾಲೆ	---------	ಅತ್ತಿಕಟ್ಟೆ (ಗುಬ್ಬಿ ತಾಲ್ಲೂಕು)
೫. ಪದವಿ ಪೂರ್ವಕಾಲೇಜು	೧೯೮೪-೮೫	ಮಠದ ಆವರಣ
೬. ಶ್ರೀ ಶಂಕರೇಶ್ವರ ಕೈಗಾರಿಕಾ ತರಬೇತಿ ಕೇಂದ್ರ	೧೯೮೪-೮೫	ರಂಗಾಪುರ
೭. ಶ್ರೀ ಗುರುಸಿದ್ಧ ಮಲ್ಲಾರ್ಯ ಪ್ರೌಢಶಾಲೆ	೧೯೮೫-೮೬	ಕುರಾದ (ಅರಸೀಕೆರೆ ತಾಲ್ಲೂಕು)
೮. ಶ್ರೀ ಸದ್ಗುರು ಸಿದ್ಧಮಲ್ಲಾರ್ಯ ಪ್ರೌಢಶಾಲೆ	೧೯೮೯-೯೦	ಚಲುವನಹಳ್ಳಿಗವಿಮಠ (ತಿಪಟೂರು ತಾ)

ಈ ರೀತಿ ಗ್ರಾಮೀಣ ಪ್ರದೇಶದಲ್ಲಿ ಗ್ರಾಮೀಣ ಜನರ ಶೈಕ್ಷಣಿಕ ಪ್ರಗತಿಗೆ ಸಹಾಯ ಹಸ್ತವನ್ನು ನೀಡಿದ್ದಾರೆ. ವಿದ್ಯಾ ಸಂಸ್ಥೆಗಳಲ್ಲಿ ೧೫೧೦ ಮಂದಿ ವಿದ್ಯಾರ್ಥಿಗಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಉತ್ತಮ ಗ್ರಂಥಾಲಯವನ್ನು ತೆರೆದಿದ್ದಾರೆ. ಕ್ರೀಡೆಗೆ ಪ್ರೋತ್ಸಾಹಕೊಟ್ಟು, ಪಠ್ಯೇತರ ಚಟುವಟಿಕೆಗಳಲ್ಲಿ ಮಕ್ಕಳು ಪಾಲ್ಗೊಳ್ಳುವಂತೆ ವ್ಯವಸ್ಥೆಯನ್ನು ಮಾಡಿದ್ದಾರೆ. ಈ ಶಿಕ್ಷಣ ಸಂಸ್ಥೆಗಳಲ್ಲಿ ಕಲಿತ ವಿದ್ಯಾರ್ಥಿಗಳು, ಹಿರಿಯ ವಿದ್ಯಾರ್ಥಿ ಹಾಗೂ ಅಭಿಮಾನಿಗಳ ಸಂಘವನ್ನು ಕಟ್ಟಿಕೊಂಡು ಮಠದ ವಿಶೇಷ ಸಂದರ್ಭಗಳಲ್ಲಿ ಪಾಲ್ಗೊಂಡು, ಸ್ವಯಂ ಸೇವಕರಾಗಿ ದುಡಿದು ಮಠದ ಸಂಬಂಧವನ್ನು ಉಳಿಸಿ ಬೆಳೆಸಿಕೊಂಡು ಬರುತ್ತಿದ್ದಾರೆ.

ಭಜನೆ: ರಂಗಾಪುರ ಮಠದ ಗುರುಸನ್ನಿಧಿಯಲ್ಲಿ ನಡೆಯುವ ಭಜನೆಗೆ ಒಂದು ವಿಶೇಷ ಸ್ಥಾನ ಇದೆ. ಅಮಾವಾಸ್ಯೆ, ಹುಣ್ಣಿಮೆಯ ಸಪ್ತಾಹ ಮುಂತಾದ ವಿಶೇಷ ಸಂದರ್ಭಗಳು ಶ್ರೀ ಗುರು ಭಜನೆಗೆಂದೇ ರೂಪಿತವಾಗಿವೆ. ಭಜನೆ ಸಪ್ತಾಹದ ದಿನ ಹಳ್ಳಿಹಳ್ಳಿಗಳಿಂದ ಭಜನೆತಂಡಗಳು ಬರುತ್ತವೆ. ಸಪ್ತಾಹವು ಉದ್ಘಾಟನೆಗೊಂಡು ಏಳು ದಿನಗಳ ಕಾಲ ನಿರಂತರವಾಗಿ ಹಗಲಿರುಳು ಶ್ರೀ ಗುರುವಿನ ಆರಾಧನೆಯು ಭಜನೆಯ ಮೂಲಕ ನಡೆಯುತ್ತದೆ. ಈ ಸಂದರ್ಭದಲ್ಲಿ ಸಹಸ್ರಾರು ಮಂದಿಗೆ ಅನ್ನ ದಾಸೋಹವು ನಡೆಯುತ್ತಿದೆ. ಆಧುನಿಕತೆಯು ಎಲ್ಲಾ ಕ್ಷೇತ್ರಗಳ ಮೇಲೆ ಪ್ರಭಾವ ಬೀರಿದ್ದರೂ ಭಜನೆಯು ತನ್ನ ಮೂಲ ಪರಿಕರಗಳಿಂದ ಆಧುನಿಕತೆಯ ಅಬ್ಬರದ ನಡುವೆಯೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬೆಳೆದು ಬಂದಿರುವುದು ಒಂದು ವಿಶೇಷವಾಗಿದೆ.

ಸಾಮಾಜಿಕ ಕೆಲಸ: ಸಾಮಾಜಿಕ ಅಭಿವೃದ್ಧಿಗಾಗಿ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿದ ಮಠವು ಕರ್ತೃಗುರುಗಳ ಕಾಲದಲ್ಲಿಯೇ ಮಡೆನೂರಿನಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಬಾವಿಯನ್ನು ತೆಗೆಸಿದೆ. ವಾಸುದೇವರ ಹಳ್ಳಿಯಲ್ಲಿ ಕಲ್ಯಾಣಿ, ರಂಗಾಪುರದಲ್ಲಿ ಕಟ್ಟೆಗಳು, ಕೆರೆಗೋಡಿಯಲ್ಲಿಕೆರೆ, ಜಯಪುರದ ಕೆರೆ, ಹೊನ್ನವಳ್ಳಿಕೆರೆ, ಸೂಗೂರಿನಲ್ಲಿ ಕಲ್ಯಾಣಿಗಳನ್ನುನಿರ್ಮಾಣ ಮಾಡಿದ್ದಲ್ಲದೆ ಚಟ್ಟನಹಳ್ಳಿ ಮತ್ತು ಹೊನ್ನೇನಹಳ್ಳಿ ಮಧ್ಯೆ ವಿರೂಪಾಕ್ಷ ದೇವಾಲಯವನ್ನು ನಿರ್ಮಿಸಿದ್ದಾರೆಂದು ಹೇಳಲಾಗಿದೆ. ಈ ಮಠದ ಪರಂಪರೆಯ ಎಲ್ಲಾ ಗುರುಗಳು ಸಾಮಾಜಿಕ ಅಭಿವೃದ್ಧಿಗೆ ಶ್ರಮಿಸಿದವರಾಗಿದ್ದಾರೆ.

ಗದ್ದುಗೆಗಳ ವನ: ಜೀವಂತ ಸಮಾಧಿಯಾದ ಕರ್ತೃಗುರುಗಳ ಗದ್ದುಗೆಯು ಉದ್ಯಾನವನದ ಪಶ್ಚಿಮಭಾಗದಲ್ಲಿ ನಿರ್ಮಾಣವಾಗಿ ದೊಡ್ಡ ಗದ್ದುಗೆ ಎಂದೇ ಪ್ರಖ್ಯಾತಿ ಪಡೆದಿದೆ. ಎರಡು,ಮೂರು ಮತ್ತು ನಾಲ್ಕನೆಯ ಗುರುಗಳ ಗದ್ದುಗೆಯನ್ನು ಒಂದರ ಪಕ್ಕದಲ್ಲಿ ಒಂದನ್ನು ನಿರ್ಮಿಸಲಾಗಿದೆ. ಈ ಗದ್ದುಗೆಗಳಿಗೆ ಮಂಟಪವನ್ನು ಕಟ್ಟಿಸಿ ದಿನನಿತ್ಯ ಪೂಜೆಗೆ ವ್ಯವಸ್ಥೆ ಮಾಡಲಾಗಿದೆ. ಐದನೆಯ ಶ್ರೀ ಪರದೇಶಿಕೇಂದ್ರ ಸ್ವಾಮಿಗಳ ಗದ್ದುಗೆಯನ್ನು ಭವ್ಯವಾಗಿ ನಿರ್ಮಿಸಲಾಗಿದೆ.ಗದ್ದುಗೆಯ ಮೇಲೆ ಸ್ಫಟಿಕ ಲಿಂಗವನ್ನು ಪ್ರತಿಷ್ಠಾಪಿಸಿದ್ದು ನಿತ್ಯಪೂಜೆ ಮಾಡಲಾಗುತ್ತಿದೆ. ಆರನೆಯ ಶ್ರೀ ಪರದೇಶಿಕೇಂದ್ರ ಸ್ವಾಮಿಗಳ ಗದ್ದುಗೆಯನ್ನು ಉದ್ಯಾನವನದ ಪೂರ್ವಭಾಗಕ್ಕೆ ನಿರ್ಮಿಸಲಾಗಿದ್ದು ಕಲ್ಲಿನ ಭವ್ಯ ಮಂಟಪವನ್ನು ಕಟ್ಟಿಸಲಾಗಿದೆ.

ಉರಿಗದ್ದುಗೆ ಇರುವ ಸ್ಥಳ ಮೊದಲನೆಯ ಶ್ರೀ ಪರದೇಶಿಕೇಂದ್ರ ಸ್ವಾಮಿಗಳು ಅನುಷ್ಠಾನಗೊಳ್ಳುತ್ತಿದ್ದ ಸ್ಥಳ ಎಂದು ಈ ಸ್ಥಳವನ್ನು ಸ್ಮಾರಕವಾಗಿ ಉಳಿಸಿಕೊಳ್ಳಲು ಈಗಿನ ಗುರುಗಳು ಮಂಟಪವನ್ನು ಕಟ್ಟಿಸಿದ್ದಾರೆ. ಈ ಮಠದ ಗದ್ದುಗೆಗಳು ನ್ಯಾಯಾಲಯಗಳಾಗಿ ರೂಪಿತವಾಗಿವೆ. ಈ ಪ್ರದೇಶದ ಯಾವುದೇ ಸಣ್ಣಪುಟ್ಟ ವ್ಯಾಜ್ಯಗಳು ಗುರುಗಳ ಬಳಿಗೆ ಬರುತ್ತವೆ. ಗುರು ಗಳು ಗದ್ದುಗೆ ವನಕ್ಕೆ ಬಂದು ಸತ್ಯ ವಿಚಾರಗಳನ್ನು ಪರಾಮರ್ಶಿಸಿ ನ್ಯಾಯ ಕೊಡುತ್ತಾರೆ. ಅನ್ಯಾಯ ಮಾಡಿದಾತನಿಗೆ ಸನ್ಮಾರ್ಗದಲ್ಲಿ ಹೋಗಲು ಗುರುಗಳು ಆಶೀರ್ವದಿಸಿ ಪ್ರಸಾದ ಕೊಟ್ಟು ಹೇಳಿಕಳಿಸುತ್ತಾರೆ. ಗದ್ದುಗೆ ವನವು ಮಠದ ಸಮುಚ್ಛಯದಲ್ಲಿಯೇ ಹೆಚ್ಚು ಪಾವಿತ್ರತೆಯನ್ನು ಪಡೆದಿದೆ. ಈ ಗದ್ದುಗೆ ವನದಲ್ಲಿ ವಿವಿಧ ಜಾತಿಯ ಹೂಗಿಡಗಳು ಎತ್ತರಕ್ಕೆ ಬೆಳೆದು, ವಿವಿಧ ಜಾತಿಯ ಗಿಡಮರಗಳ ಮಧ್ಯೆ ಆರು ಗದ್ದುಗೆಗಳು ರಾರಾಜಿಸುತ್ತಿವೆ. ಉದ್ಯಾನವನದ ವಾಯುವ್ಯ ಮೂಲೆಯಲ್ಲಿ ಬಲಮುರಿ ಗಣಪತಿ ವಿಗ್ರಹವನ್ನು ಮತ್ತು ಬುದ್ಧ ಭಗವಾನನ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ.

ಧಾರ್ಮಿಕ ಕೆಲಸ: ಪ್ರತಿವರ್ಷ ಮಾರ್ಚ್ ತಿಂಗಳಲ್ಲಿ ಶ್ರೀ ಶಂಕರೇಶ್ವರರ ಜಾತ್ರೆ, ಹಿರಿಯ ಗುರುಗಳ ನೆನಪಿಗಾಗಿ ಶ್ರೀ ಗುರು ಸಪ್ತಾಹವನ್ನು ಮಾಘಮಾಸದ ಮೊದಲನೆಯ ವಾರದಲ್ಲಿ ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ವಿಶೇಷಪೂಜೆ, ಭಜನೆಗಳು ನಡೆಯುತ್ತವೆ. ಜೇಷ್ಠ ಬಹುಳ ತ್ರಯೋದಶಿಯಂದು ಮೂಲ ಗುರುಗಳ ಗದ್ದುಗೆಗೆ ವಿಶೇಷ ಪೂಜೆ, ಅಮಾವಾಸ್ಯೆ, ಪೌರ್ಣಮಿಗಳಲ್ಲಿ ಮತ್ತು ಕಾರ್ತೀಕ, ಶ್ರಾವಣಮಾಸಗಳಲ್ಲಿ ವಿಶೇಷ ಕಾರ್ಯಕ್ರಮವನ್ನು ಏರ್ಪಡಿಸಲಾಗುತ್ತಿದೆ.

ಅನ್ನದಾಸೋಹ: ಈ ಮಠದಲ್ಲಿ ಸ್ಥಾಪನೆಯಾಗಿರುವ ವಿದ್ಯಾರ್ಥಿನಿಲಯದ ಮಕ್ಕಳು ಮತ್ತು ಮಠಕ್ಕೆ ಭೇಟಿನೀಡುವ ಭಕ್ತರು ಸೇರಿ ದಿನ ಒಂದಕ್ಕೆ ಸರಾಸರಿ ೧೫೫೦ ಜನರಿಗೆ ನಿತ್ಯ ಅನ್ನದಾಸೋಹವನ್ನು ನಡೆಸಲಾಗುತ್ತಿದೆ. ಅನ್ನದಾಸೋಹ ಕ್ರಿಯೆಯನ್ನು ವಿಸ್ತಾರಗೊಳಿಸಿದ ಗುರುಗಳು ಸುಸಜ್ಜಿತವಾದ ಆಧುನಿಕ ಸ್ಟೀಮ್ ಸಿಸ್ಟಮ್ ಅಡುಗೆ ಕೋಣೆಯನ್ನು ನಿರ್ಮಿಸಿದ್ದಾರೆ. ವಿಶಾಲ ವಾದ ಪ್ರಸಾದ ನಿಲಯವನ್ನು ಸ್ಥಾಪಿಸಿದ್ದಾರೆ. ಮಠದ ದಾಸೋಹಕ್ಕೆ ದಿನ ಒಂದಕ್ಕೆ ಎರಡು ಚೀಲ ಅಕ್ಕಿ ಮತ್ತು ನಾಲ್ಕು ಚೀಲ ರಾಗಿ ಬೇಕಾಗುತ್ತದೆ. ಬೆಳಿಗ್ಗೆ ಒಂಬತ್ತೂವರೆ ಗಂಟೆಯಿಂದ ದಾಸೋಹ ಕ್ರಿಯೆ ಪ್ರಾರಂಭಗೊಂಡು ರಾತ್ರಿ ಒಂಬತ್ತುಗಂಟೆ ತನಕ ನಿರಂತರವಾಗಿ ನಡೆಯುತ್ತಿರುತ್ತದೆ. ಮಠದ ದಾಸೋಹ ಕ್ರಿಯೆಗೆ ಬೇಕಾಗುವ ಹಿಟ್ಟನ್ನು ತಯಾರಿಸಲು ಮಠಕ್ಕಾಗಿಯೇ ಪ್ರತ್ಯೇಕ ಹಿಟ್ಟಿನ ಗಿರಣಿಯನ್ನು ಸ್ಥಾಪಿಸಿದ್ದಾರೆ. ಮಠದ ದಾಸೋಹಕ್ಕೆ ಸಂಗ್ರಹಿಸುವ ದವಸಧಾನ್ಯದ ಉಗ್ರಾಣ ಕೇಂದ್ರವು ತುಂಬಿತುಳುಕುತ್ತಿರುತ್ತದೆ.

ಈ ನಿರಂತರ ಮಹಾದಾಸೋಹಕ್ಕೆ ಸ್ವಾಮಿಗಳು ಭಿಕ್ಷಾಟನೆಗೆ ಹೋದಾಗ ಭಕ್ತರು ಮಠಕ್ಕೆಂದು ಮೀಸಲಿರಿಸಿದ ಧಾನ್ಯ, ಕಾಳುಗಳು ಮತ್ತು ತೆಂಗಿನ ಕಾಯಿಗಳನ್ನು ಕಾಣಿಕೆಯಾಗಿ ನೀಡುತ್ತಾರೆ. ಊರಿಗೆ ವರ್ಷಕ್ಕೊಮ್ಮೆ ಭಿಕ್ಷೆಗೆ ಹೋಗಲಾಗುತ್ತದೆ. ಇದರಿಂದ ಸಂಗ್ರಹಿಸಿದ ದವಸಧಾನ್ಯವನ್ನು ಮಹಾದಾಸೋಹಕ್ಕೆ ಬಳಕೆ ಮಾಡಿಕೊಳ್ಳಲಾಗುತ್ತದೆ. ಅಲ್ಲದೆ ಮಠಕ್ಕೆ ಇಪ್ಪತ್ತು ಎಕರೆ ಜಮೀನು, ಮೂನ್ನೂರು ತೆಂಗಿನಮರಗಳು ಇದ್ದು ಮಠಕ್ಕೆ ಆದಾಯದ ಮೂಲವನ್ನಾಗಿ ಮಾಡಿಕೊಳ್ಳಲಾಗಿದೆ. ಭಕ್ತರು ನೀಡುವ ನೆರವು ಮಠದ ಆರ್ಥಿಕ ಶಕ್ತಿಯಾಗಿದೆ ಎಂದು ಗುರುಗಳು ಅಭಿಮಾನದಿಂದ ಹೇಳುತ್ತಾರೆ.

ವಿಳಾಸ:ಶ್ರೀ ಏಳನೆಯ ಪರದೇಶಿಕೇಂದ್ರ ಸ್ವಾಮಿಗಳು, ಶ್ರೀ ಕೆರೆಗೋಡಿ-ರಂಗಾಪುರಮಠ, ರಂಗಾಪುರ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ.

ಆಧಾರ: 'ಗುರುಶ್ರೀ' ಮಠದಿಂದ ಪ್ರಕಟಿತ ಸಂಚಿಕೆ.

ಹೊನ್ನವಳ್ಳಿ

ತಿಪಟೂರು ತಾಲ್ಲೂಕಿನ ಹೊನ್ನವಳ್ಳಿಯು ತಾಲ್ಲೂಕು ಕೇಂದ್ರದ ಪಶ್ಚಿಮಕ್ಕೆ ಹದಿನಾರು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಕರಿಸಿದ್ಧೇಶ್ವರ ಸ್ವಾಮಿ ಮಠವು ಅಸ್ತಿತ್ವದಲ್ಲಿದೆ.

ಕರಿಸಿದ್ಧೇಶ್ವರಸ್ವಾಮಿ ಮಠ: ಹೊನ್ನವಳ್ಳಿ ಶ್ರೀ ರಂಭಾಪುರಿಪೀಠದ ಶಾಖಾಮಠವಾಗಿ ಶ್ರೀ ಕರಿಸಿದ್ಧೇಶ್ವರ ಸ್ವಾಮಿ ಮಠವು ಸ್ಥಾಪನೆಯಾಗಿದೆ. ಶ್ರೀ ಕರಿಸಿದ್ಧೇಶ್ವರ ಸ್ವಾಮಿಗಳು ಮಠವನ್ನು ಸ್ಥಾಪಿಸಿದ್ದರಿಂದ ಈ ಮಠಕ್ಕೆ 'ಶ್ರೀ ಕರಿಸಿದ್ಧೇಶ್ವರಸ್ವಾಮಿಮಠ'

ಎಂದು ಕರೆಯಲಾಗುತ್ತಿದೆ.

ಪರಂಪರೆ: ಮಠದ ಪರಂಪರೆಯನ್ನು ಹೇಳುವ ಯಾವುದೇ ದಾಖಲೆಗಳಾಗಲೀ, ಜನಪದ ಕಥೆಗಳಾಗಲಿ ಮಠದಲ್ಲಿ ಸಿಗುತ್ತಿಲ್ಲ. ೧೯೭೭ರಲ್ಲಿ ಲಿಂಗೈಕ್ಯರಾಗಿರುವ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಮತ್ತು ೧೯೭೩ರಲ್ಲಿ ಪಟ್ಟಾಧಿಕಾರ ವಹಿಸಿಕೊಂಡಿರುವ ಶ್ರೀ ಶಿವಪ್ರಕಾಶ ಶಿವಾಚಾರ್ಯ ಸ್ವಾಮಿಗಳ ಹೆಸರನ್ನು ಮಾತ್ರ ದಾಖಲಿಸಬಹುದಾಗಿದೆ. ಪರಂಪರೆಯನ್ನು ಗುರುತಿಸಲು ಮಠದ ಆವರಣದಲ್ಲಿ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಯೊಂದನ್ನು ಬಿಟ್ಟರೆ ಬೇರೆ ಯಾವ ಗದ್ದುಗೆಗಳೂ ಕಾಣಬರುತ್ತಿಲ್ಲ.

ಗುರುಮನೆಯಾದ ಅರಮನೆ: ಸೋಮಶೇಖರ ಮತ್ತು ಚಿತ್ರಶೇಖರರ ಕಾಲದಲ್ಲಿ ಅರಮನೆಯು ಸ್ಥಾಪಿತವಾಗಿತ್ತು. ನಾಯಕರು ತಮ್ಮ ಈ ಅರಮನೆಯನ್ನು ಗುರುಗಳಿಗೆ ನೀಡಿ ಗುರುಮನೆಯನ್ನಾಗಿ ಮಾಡಿದರೆಂದು ಹೇಳುವ ಕಥೆ ಇದೆಯಾದರೂ, ಇದಕ್ಕೆ ಸಂಬಂಧಪಟ್ಟ ಯಾವ ದಾಖಲೆಗಳೂ ಇಲ್ಲ. ಈಗಿನ ಮಠವನ್ನು ಒಳಗೊಂಡಂತೆ ಊರಿನ ಸುತ್ತ ಕೋಟೆಇತ್ತು ಎಂದು ಹೇಳಲು ಅಳಿದುಳಿದ ಕೋಟೆಯ ಅವಶೇಷಗಳನ್ನು ಈಗಲೂ ನೋಡಬಹುದು.

ಶ್ರೀ ಕರಿಸಿದ್ದೇಶ್ವರರು ಪವಾಡ ಪುರುಷರಾಗಿ ಆಧ್ಯಾತ್ಮ ಸಾಧಕರಾಗಿದ್ದರು. ಇವರ ವಿದ್ವತ್ತಿಗೆ ಮೆಚ್ಚಿ ಸೋಮಶೇಖರ ಮತ್ತು ಚಿತ್ರಶೇಖರರು ಗ್ರಾಮದ ಹೊರಗೆ ಅನುಷ್ಠಾನಕ್ಕೆ ಕುಳಿತಿದ್ದ ಗುರುಗಳನ್ನು ಹೊನ್ನವಳ್ಳಿಗೆ ಕರೆಸಿ ಅವರಿಗೆ ಮಠವನ್ನು ಕಟ್ಟಿಸಿಕೊಡುತ್ತಾರೆ. ಚರಮೂರ್ತಿಯಾದ ಶ್ರೀ ಕರಿಸಿದ್ದೇಶ್ವರರು ಇಲ್ಲಿ ನೆಲೆಸದೆ ಚಿತ್ರದುರ್ಗ ಜಿಲ್ಲೆಯ ರಾಮಗಿರಿಗೆ ಹೋಗುತ್ತಾರೆ. ಕರಿಸಿದ್ದ ಸ್ವಾಮಿಗಳಿಗೆ ಕಟ್ಟಿಸಿದ್ದ ಮಠದಲ್ಲಿ ಗುರುಗಳು ಮುಂದುವರೆದ ಬಗ್ಗೆ ಯಾವುದೇ ದಾಖಲೆಗಳು ಇಲ್ಲ. ಅಲ್ಲದೆ ನಾಯಕರು ಅರಮನೆಯನ್ನು ಗುರುಗಳಿಗೆ ಒಪ್ಪಿಸಲಾಗಿದ್ದು ಅಂದಿನಿಂದ ಈ ಅರಮನೆಯು ಜೀರ್ಣಗೊಳ್ಳದೆ ಕೆತ್ತನೆಯ ಕಂಬಗಳು, ಭವ್ಯ ಹಜಾರ ಸುಸ್ಥಿತಿಯಲ್ಲಿವೆ. ಇಂತಹ ಇತಿಹಾಸವನ್ನು ಹೊಂದಿದ್ದ ಮಠದಲ್ಲಿ ಪರಂಪರೆ ಸಿಕ್ಕದಿರುವುದು ದುರ್ದೈವವೇ ಸರಿ. ಶ್ರೀ ಕರಿಸಿದ್ದೇಶ್ವರರು ರಾಮಗಿರಿ ಬೆಟ್ಟದ ಮೇಲೆ ಅನುಷ್ಠಾನಗೊಂಡ ನಂತರದ ದಿನಗಳಲ್ಲಿ ಹೊನ್ನವಳ್ಳಿಯ ಭೈರಪ್ಪ ಎಂಬುವವರಿಗೆ ಕರಿಸಿದ್ದೇಶ್ವರರು ಕನಸಿನಲ್ಲಿ ಬಂದು ಖಾಲಿ ಇರುವ ಮಠಕ್ಕೆ ರಾಮಗಿರಿಯಲ್ಲಿ ನೆಲೆಸಿರುವ ನನ್ನ ವಂಶಜರನ್ನು ನೇಮಿಸು, ಎಂದು ಅಪ್ಪಣೆ ಕೊಟ್ಟ ಮೇಲೆ, ಭೈರಪ್ಪನವರು ರಾಮಗಿರಿಗೆ ಬಂದು ಸಮೀಪದ ಗುಂಡಸಮುದ್ರದ ರಾಮಗಿರಿ ಅಪ್ಪಯ್ಯ ಎಂಬುವವರ ಕುಟುಂಬವನ್ನು ಕರೆತಂದು ಈ ವಂಶದ ಶ್ರೀ ಚನ್ನವೀರ ಸ್ವಾಮಿಗಳಿಗೆ ಪಟ್ಟಾಧಿಕಾರ ಮಾಡಿರುತ್ತಾರೆ.

ತಾಳೆಗರಿಗಳು: ಮಠದಲ್ಲಿ ತಾಳೆಗರಿಯ ಎಪ್ಪತ್ತು ಕಟ್ಟುಗಳು ದೊರೆತಿವೆ. ಇವುಗಳು ಶ್ರೀ ಸಿದ್ಧರಾಮ ವಿರಚಿತ ವಚನಗಳೆಂದು ಉಲ್ಲೇಖಿತವಾಗಿದೆ. ಈ ತಾಳೆಗರಿಗಳು ಸಂರಕ್ಷಣೆ ಇಲ್ಲದೆ ನೀರಿನಲ್ಲಿ ತೊಯ್ದು ಜೀರ್ಣಾವಸ್ಥೆಗೆ ಬಂದಿವೆ. ಅಲ್ಲದೆ ಸೋಮನಕಟ್ಟೆ, ಮಠಕ್ಕೆ ಸಂಬಂಧಿಸಿದ ಆರುಸಾವಿರ ವಚನಗಳುಳ್ಳ ತಾಳೆಗರಿಯ ಕಟ್ಟುಗಳು ದೊರೆತಿವೆ.

ಧಾರ್ಮಿಕ ಕಾರ್ಯಗಳು: ಕಾರ್ತೀಕ ದ್ವಿತೀಯಪಾದದಲ್ಲಿ ಕರ್ಪೂರಸೇವೆ ವಿಶೇಷವಾಗಿ ನಡೆಯುತ್ತಿದೆ. ಪ್ರತಿ ಅಮಾವಾಸ್ಯೆಯಲ್ಲಿ ರುದ್ರಾಭಿಷೇಕ ಪೂಜೆ, ನಿತ್ಯ ಗದ್ದುಗೆ ಪೂಜೆ, ವರ್ಷಕ್ಕೊಮ್ಮೆ ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಶಿವಪ್ರಕಾಶ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕರಿಸಿದ್ದೇಶ್ವರಮಠ, ಹೊನ್ನವಳ್ಳಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ. ❑

ತುಮಕೂರು ತಾಲ್ಲೂಕು

ತುಮಕೂರು ಜಿಲ್ಲೆಯ ಹತ್ತು ತಾಲ್ಲೂಕುಗಳಲ್ಲಿ ತುಮಕೂರು ತಾಲ್ಲೂಕೂ ಒಂದು. ವಾಣಿಜ್ಯ ಮತ್ತು ಕೃಷಿ ಅವಲಂಬಿತವಾಗಿರುವ ಈ ತಾಲ್ಲೂಕಿನಲ್ಲಿ ಪ್ರಾಚೀನ ಕಾಲದಿಂದಲೂ ವೀರಶೈವಧರ್ಮ ಪ್ರಭಾವಿಯುತವಾಗಿ ಬೆಳೆದಿದೆ. ಎಡೆಯೂರು ಶ್ರೀ ಸಿದ್ಧಲಿಂಗೇಶ್ವರರ ಧಾರ್ಮಿಕ ಆಂದೋಲನದ ಕಾರ್ಯಕ್ಷೇತ್ರವಾಗಿದ್ದ ಇಲ್ಲಿ ಪ್ರಸ್ತುತ ಎಂಟು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಚಿಕ್ಕತೊಟ್ಲುಕೆರೆ

ತುಮಕೂರು ತಾಲ್ಲೂಕಿನ ಚಿಕ್ಕತೊಟ್ಲುಕೆರೆಯು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹದಿನೆಂಟು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಅಡವಿಸ್ವಾಮಿ ಮಠವು ಅಸ್ತಿತ್ವದಲ್ಲಿದೆ.

ಅಡವಿಸ್ವಾಮಿ ಮಠ: ಚಿಕ್ಕತೊಟ್ಲುಕೆರೆ ಗ್ರಾಮದ ಈಶಾನ್ಯ ಭಾಗಕ್ಕೆ ಒಂದೂವರೆ ಕಿ.ಮೀ.ದೂರದಲ್ಲಿ ಶ್ರೀ ಅಡವಿಸ್ವಾಮಿ ಮಠವು ಸ್ಥಾಪನೆಗೊಂಡಿದೆ. ಪ್ರಾಚೀನ ಕಾಲದಲ್ಲಿ ಸ್ಥಾಪನೆಗೊಂಡಿದ್ದ ಈ ಮಠಕ್ಕೆ ಹಠಯೋಗಿ, ಮಹಾತೇಜೋಮೂರ್ತಿಗಳಾದ ಶ್ರೀ ಅಡವಿಸ್ವಾಮಿಗಳು ಆಗಮಿಸಿ ಅನೇಕ ದಿನಗಳ ಕಾಲ ಅನುಷ್ಠಾನಗೊಂಡಿದ್ದರು. ನಂತರ ಗುಬ್ಬಿಯ ತೋರೆಮಠ ಮತ್ತು ಸಿದ್ಧಗಂಗಾ ಮಠಗಳನ್ನು ಬೆಳೆಸಿ ಈ ಪುಣ್ಯಸ್ಥಳದಲ್ಲಿ ಜೀವಂತ ಸಮಾಧಿಯಾದ ಕಾರಣ ಈ ಮಠವು ಅಡವಿಸ್ವಾಮಿಗಳ ಹೆಸರಿನಲ್ಲಿ ಪ್ರಚಾರಕ್ಕೆ ಬಂದಿತು.

ಮಠ ಸ್ಥಾಪನೆ: ಶ್ರೀ ಓಂಕಾರ ಸ್ವಾಮಿಗಳು ಈ ಮಠದ ಸ್ಥಾಪಕರೆಂದು ಹೇಳಲಾಗುತ್ತಿದೆ. ಉತ್ತರದ ಕಡೆಯಿಂದ ಲೋಕಸಂಚಾರ ಮಾಡುತ್ತಾ ಬಂದವರು ಚಿಕ್ಕತೊಟ್ಲುಕೆರೆಯ ವನಪ್ರದೇಶದ ಪ್ರಶಾಂತ ಸ್ಥಳದಲ್ಲಿ ಅನುಷ್ಠಾನಗೊಂಡು ಈ ತಪೋ ಭೂಮಿಯಲ್ಲಿ ಮಠವನ್ನು ಸ್ಥಾಪಿಸಿರುತ್ತಾರೆ. ಶ್ರೀ ಓಂಕಾರ ಸ್ವಾಮಿಗಳು ಮಹಾತಪಸ್ವಿಗಳಾಗಿ ತಾವು ಸಿದ್ಧಿಸಿಕೊಂಡಿದ್ದ ಜ್ಞಾನವನ್ನು ಭಕ್ತಸಮೂಹಕ್ಕೆ ಪ್ರಚಾರಪಡಿಸಿ, ವೀರಶೈವ ಧರ್ಮವು ಈ ನೆಲದಲ್ಲಿ ಬೆಳೆಯುವಂತೆ ಮಾಡಿದರು.

ಪರಂಪರೆ:

೧. ಶ್ರೀ ಮ.ನಿ.ಪ್ರ. ಓಂಕಾರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಜಡೆಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಅಡವಿಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಸಿದ್ಧಲಿಂಗೇಶ್ವರಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಶಿವಲಿಂಗಸ್ವಾಮಿಗಳು (ಈಗಿನವರು)

ಈರೀತಿ ಅಡವಿಸ್ವಾಮಿಮಠದ ಪರಂಪರೆಯು ಬೆಳೆದು ಬಂದಿದೆ. ಮೂಲ ಕರ್ತೃಗಳಾದ ಶ್ರೀ ಓಂಕಾರೇಶ್ವರ ಸ್ವಾಮಿಗಳು ನಿರ್ವಿಕಲ್ಪ ಸಮಾಧಿ ಹೊಂದಿದ ಮೇಲೆ ಶ್ರೀ ಜಡೆಸ್ವಾಮಿಗಳು ಅಧಿಕಾರ ವಹಿಸಿಕೊಂಡಿರುತ್ತಾರೆ. ಇವರೂ ಸಹ ಲೋಕಸಂಚಾರ ಮಾಡುತ್ತಾ, ಈ ಪ್ರಾಂತ್ಯಕ್ಕೆ ಆಗಮಿಸಿ ಶ್ರೀ ಓಂಕಾರ ಸ್ವಾಮಿಗಳ ಪೂಜಾನಿಷ್ಠೆಯನ್ನು ಅರಿತು ಚಿಕ್ಕತೊಟ್ಲುಕೆರೆಗೆ ಆಗಮಿಸುತ್ತಾರೆ. ಬಹಳ ದಿನಗಳ ಕಾಲ ಅನುಷ್ಠಾನಗೊಂಡು ಶ್ರೀ ಓಂಕಾರೇಶ್ವರ ಸ್ವಾಮಿಗಳ ಸೇವೆಮಾಡಿಕೊಂಡು ಈ ಕ್ಷೇತ್ರದಲ್ಲಿ ನೆಲೆಸಿದ್ದರು. ಶ್ರೀ ಓಂಕಾರ ಸ್ವಾಮಿಗಳ ನಂತರ ಈ ಮಠದ ಅಧಿಕಾರವನ್ನು ವಹಿಸಿಕೊಂಡು ಅನೇಕ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಿ ಪ್ರಸಿದ್ಧಿಗೆ ಬಂದರು. ಇವರ ನಂತರ ಶ್ರೀಅಡವಿ ಸ್ವಾಮಿಗಳು ಅಧಿಕಾರಕ್ಕೆ ಬಂದರು.

ಶ್ರೀ ಅಡವಿಸ್ವಾಮಿಗಳು ಗುಬ್ಬಿ ಕ್ಷೇತ್ರದಲ್ಲಿ ತೋರೆಮಠವನ್ನು ಸ್ಥಾಪಿಸಿದ ನಂತರ ಚಿಕ್ಕತೊಟ್ಲುಕೆರೆಗೆ ಆಗಮಿಸಿ ಗುರುಗಳಿಲ್ಲದೆ ಖಾಲಿ ಉಳಿದಿದ್ದ ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಬೆಳಗಿಸಿದರು. ೧೯೦೧ರಲ್ಲಿ ಈ ಮಠದಲ್ಲಿಯೇ ನಿರ್ವಿಕಲ್ಪ ಸಮಾಧಿ ಹೊಂದಿದರು. ಈ ಸಂದರ್ಭದಲ್ಲಿ ಶ್ರೀ ಅಡವಿಸ್ವಾಮಿಗಳ ಕರಸಂಜಾತರಾದ ಶ್ರೀಸಿದ್ಧಲಿಂಗೇಶ್ವರ ಸ್ವಾಮಿಗಳು ಶ್ರೀ ಅಡವಿ ಸ್ವಾಮಿಗಳಿಂದ ಅನುಗ್ರಹ ಪಡೆದು ಈ ಮಠದ ಅಧಿಕಾರವಹಿಸಿಕೊಂಡು

ಆಡಳಿತ ನಡೆಸುತ್ತಿದ್ದರು. ಶ್ರೀ ಸಿದ್ದಲಿಂಗೇಶ್ವರರು ಹಿರಿಯ ಗುರುಗಳ ಮಾರ್ಗದರ್ಶನದಲ್ಲಿ ಮಠವನ್ನು ಮುನ್ನಡೆಸಿ ೧೯೫೦ರಲ್ಲಿ ಲಿಂಗೈಕ್ಯರಾಗಿರುತ್ತಾರೆ.ಇವರ ನಂತರ ಮಠವು ಮಠಾಧೀಶ್ವರರಿಲ್ಲದೆ ಖಾಲಿ ಉಳಿದಿತ್ತು. ಈ ಸಂದರ್ಭದಲ್ಲಿ ಮಠದ ಧಾರ್ಮಿಕ ಕಾರ್ಯಗಳನ್ನು ಭಕ್ತರೇ ಮುನ್ನಡೆಸಿದರು. ಅಲ್ಲದೆ ಶ್ರೀ ಸಿದ್ದಲಿಂಗೇಶ್ವರ ವಿದ್ಯಾಪೀಠವನ್ನು ಪ್ರಾರಂಭಿಸಿ ಶಾಲಾಕಾಲೇಜುಗಳನ್ನು ತೆರೆದು, ಗ್ರಾಮೀಣ ಪ್ರದೇಶದ ಮಕ್ಕಳಿಗೆ ಜ್ಞಾನ ದಾಸೋಹವನ್ನು ನೀಡಲು ವ್ಯವಸ್ಥೆಗೊಳಿಸಿದರು.

ಈ ಸ್ಥಳದ ತಪ್ರೋಶಕ್ತಿಗೆ ಮನಸೋತ ಶಿರಸಿ ಬಣ್ಣದ ಮಠದ ಶ್ರೀ ಶಿವಲಿಂಗ ಸ್ವಾಮಿಗಳು ಈ ಕ್ಷೇತ್ರಕ್ಕೆ ಬಂದು ಇಲ್ಲಿ ನಡೆಯುತ್ತಿದ್ದ ಧಾರ್ಮಿಕ ಚಟುವಟಿಕೆಗಳಿಗೆ ಮಾರ್ಗದರ್ಶನ ನೀಡತೊಡಗಿದರು.ನಂತರ ಭಕ್ತರ ಅಪೇಕ್ಷೆಯ ಮೇರೆಗೆ ಈ ಮಠದ ಅಧಿಕಾರವನ್ನು ನೋಡಿಕೊಳ್ಳತೊಡಗಿದ್ದಾರೆ.

ಧಾರ್ಮಿಕ ಕೆಲಸಗಳು: ಮಠದ ಆವರಣದಲ್ಲಿರುವ ನಾಲ್ಕು ಗದ್ದುಗೆಗಳಿಗೆ ನಿತ್ಯ ಪೂಜೆ, ಅಮಾವಾಸ್ಯೆ, ಹುಣ್ಣಿಮೆ, ಶ್ರಾವಣ ವಿಶೇಷ ಪೂಜೆ, ಪ್ರತಿವರ್ಷ ಕಾರ್ತೀಕಶುದ್ಧ ದಶಮಿಯ ದಿನ ಶ್ರೀ ಅಡವಿಸ್ವಾಮಿಗಳ ಜಾತ್ರೆಯನ್ನು ನಡೆಸಲಾಗುತ್ತಿದೆ. ಮಠದ ಅಸ್ತಿಯಾಗಿ ಹದಿನಾರುಎಕರೆ ಮಾವಿನತೋಟ ಹಾಗೂ ಇತರೆ ಜಮೀನಿದ್ದು ಮಠಕ್ಕೆ ಆದಾಯ ತರುವ ಮೂಲವಾಗಿದೆ. ಇದನ್ನು ಬಳಸಿಕೊಂಡು ಮಠದ ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ. ಮಠದ ವಿಶಾಲ ಆವರಣದಲ್ಲಿ ಇನ್ನೂರು ಬಿಲ್ವಪತ್ರೆ ಮರಗಳನ್ನು ಬೆಳೆಸಿ ಮಠದ ವಾತಾವರಣವನ್ನು ಶ್ರೀಮಂತಗೊಳಿಸಿದ್ದಾರೆ.

ವಿಳಾಸ:ಶ್ರೀ ಮ.ನಿ.ಪ್ರ.ಶಿವಲಿಂಗಸ್ವಾಮಿಗಳು, ಶ್ರೀಅಡವಿಸ್ವಾಮಿಗಳಮಠ, ಚಿಕ್ಕತೊಟ್ಲುಕೆರೆ, ತುಮಕೂರು ತಾ, ತುಮಕೂರು ಜಿಲ್ಲೆ.

ತುಮಕೂರು

ಜಿಲ್ಲೆಯ ಕೇಂದ್ರ ಸ್ಥಳವಾದ ತುಮಕೂರು ನಗರವು ಧಾರ್ಮಿಕ ಮತ್ತು ಶೈಕ್ಷಣಿಕವಾಗಿ ಹೆಚ್ಚು ಹೆಸರನ್ನು ಪಡೆದಿದೆ. ಈ ನಗರದಲ್ಲಿ ಪುರಾತನ ಕಾಲದಿಂದಲೂ ವೀರಶೈವ ಮಠಗಳು ಸ್ಥಾಪನೆಗೊಂಡು ವೀರಶೈವ ಧರ್ಮವನ್ನು ಬೆಳೆಸುವಲ್ಲಿ ಸಹಾಯಕವಾಗಿದೆ. ತುಮಕೂರಿನಲ್ಲಿ ಹದಿನೈದು ಮಠಗಳು ಸ್ಥಾಪನೆಗೊಂಡಿವೆ ಎಂದು ಹೇಳಲಾಗುತ್ತಿದೆ.

ತುಮಕೂರು ನಗರದ ಹೊರವಲಯದಲ್ಲಿ ಸ್ಥಾಪನೆಗೊಂಡ ಸಿದ್ಧಗಂಗಾಮಠ, ಕೋಟೆ ಪ್ರದೇಶದಲ್ಲಿರುವ ಫಲಹಾರ ಸ್ವಾಮಿಗಳ ಕೊಪ್ಪಲು, ಶ್ರೀ ಮುತ್ತಿನಕಂತೆರುದ್ರಮಠ ಮತ್ತು ಶ್ರೀ ಸಿದ್ಧೇಶ್ವರ ಮಠಗಳು, ಪೇಟೆ ಪ್ರದೇಶದಲ್ಲಿರುವ ಶ್ರೀಹಿರೇ ಮಠ, ಶ್ರೀ ಕರಿಬಸವಸ್ವಾಮಿಮಠ, ಶ್ರೀ ಜಡೆಸ್ವಾಮಿಮಠ, ಶ್ರೀ ಪುರದಮಠ, ಶ್ರೀ ಸಂಪಾದನೆ ಮಠ, ಶ್ರೀ ಸೋಮಕಟ್ಟೆಮಠ, ಶ್ರೀ ಗುರುಶಾಂತಯ್ಯನಮಠ, ಶ್ರೀ ವಿರಕ್ತಮಠ, ಶ್ರೀ ದೇಶಮಠ, ಶ್ರೀ ಚೌಕಿಮಠ, ಶ್ರೀ ಗುರುಪಾದಯ್ಯನಮಠ, ಹಾಗೂ ಶ್ರೀ ಮಹಂತಿನಮಠ ಎಂಬ ಹದಿನೈದು ಮಠಗಳು ಸ್ಥಾಪನೆಯಾಗಿವೆ. ಇವುಗಳಲ್ಲಿ ಶ್ರೀ ಸಿದ್ಧಗಂಗಾಮಠ, ಶ್ರೀ ಹಿರೇಮಠ, ಶ್ರೀ ಕರಿಬಸವೇಶ್ವರಮಠ ಮತ್ತು ಶ್ರೀ ಪುರದಮಠಗಳು ಅಸ್ತಿತ್ವವನ್ನು ಉಳಿಸಿಕೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿವೆ. ಉಳಿದ ಹನ್ನೊಂದು ಮಠಗಳಲ್ಲಿ ಮಠಾಧೀಶರಿಲ್ಲದೆ ತಮ್ಮ ಅಸ್ತಿತ್ವವನ್ನು ಕಳೆದುಕೊಂಡು ಇತಿಹಾಸವನ್ನು ಸೇರಿವೆ.

ಸಿದ್ಧಗಂಗಾ ಮಠ: ಜಿಲ್ಲೆಯ ಕೇಂದ್ರಸ್ಥಳ ತುಮಕೂರಿನಿಂದ ಪೂರ್ವಕ್ಕೆ ನಾಲ್ಕುವರೆ ಕಿ.ಮೀ.ದೂರದಲ್ಲಿರುವ ಸಿದ್ಧಗಂಗೆಯು ಜಂಗಮಮೂರ್ತಿ, ಪ್ರಸಿದ್ಧ ದಾಸೋಹಿ ಇಪ್ಪತ್ತನೆಯ ಶತಮಾನದ ಶಕಪುರುಷ ನಿರಂಜನ ಪ್ರಣವ ಸ್ವರೂಪಿ ಡಾ. ಶ್ರೀ ಶಿವ ಕುಮಾರ ಸ್ವಾಮಿಗಳ ಕರ್ತೃತ್ವದ ಶಕ್ತಿಯಿಂದ ನಾಡು ನಾಡಿನಾಚೆಗೆ ತನ್ನ ಸಾಧನೆಯ ಬೆಳಕನ್ನು ಪಸರಿಸಿದೆ.

ಕ್ಯಾತಸಂದ್ರದಿಂದ ಉತ್ತರಕ್ಕೆ ಕೇವಲ ಒಂದು ಕಿ.ಮೀ. ದೂರದಲ್ಲಿರುವ ಸಿದ್ಧಗಂಗಾ ಮಠವು, ಚೋಳರ ಕಾಲದಲ್ಲಿ ಪ್ರಖ್ಯಾತಿಯನ್ನು ಪಡೆದ ದೇವರಾಯನ ದುರ್ಗ, ರಾಮಲಿಂಗಬೆಟ್ಟ, ಸಿದ್ಧರಬೆಟ್ಟ ಮತ್ತು ದಕ್ಷಿಣಕಾಶಿ ಎಂದೇ ಹೆಸರು ಪಡೆದ ಶಿವಗಂಗೆಯನ್ನು ಒಳಗೊಂಡಂತೆ ಸಿದ್ಧಗಂಗಾಬೆಟ್ಟವು, ತನ್ನ ಸುತ್ತ ವೀರಶೈವ ಇತಿಹಾಸ ಇರುವ ಕ್ಷೇತ್ರಗಳಿಂದ ಆವೃತವಾಗಿ ಪ್ರಾಚೀನ ಇತಿಹಾಸವನ್ನು ಪಡೆದಿದೆ. ಸಿದ್ಧಗಂಗೆ ಬೆಟ್ಟದಲ್ಲಿ ಅನೇಕ ಗುಹೆಗಳು ನಿರ್ಮಿತವಾಗಿದ್ದು ಈ ಗುಹೆಗಳಲ್ಲಿ ಕ್ರಿ.ಶ. ೧೩೦೦ರಿಂದಲೂ ಶಿವಶರಣರು ತಪೋನುಷ್ಠಾನಗೊಂಡ ಬಗ್ಗೆ ಉದ್ಭಾನೇಶ ಚರಿತೆಯಲ್ಲಿ ಪಂಡಿತ ಚನ್ನಪ್ಪ

ಎರೇಸೀಮೆಯವರು ಸವಿವರವಾಗಿ ವಿವರಿಸಿದ್ದಾರೆ.

ಮಠ ಸ್ಥಾಪನೆ: ಗೋಸಲ ಸಿದ್ಧೇಶ್ವರರು ಹರದನಹಳ್ಳಿಯ (ಚಾಮರಾಜನಗರ ಜಿಲ್ಲೆ) ಪೀಠಾಚಾರ್ಯರಲ್ಲಿ ಹದಿನೈದನೆಯ ಗುರುಗಳಾದ ಶ್ರೀ ಶಂಕರಾಚಾರ್ಯರಿಗೆ ಪಟ್ಟಾಧಿಕಾರ ಮಾಡಿ ಮಠವನ್ನು ಬಿಟ್ಟು ತಮ್ಮ ಅನುಯಾಯಿಗಳಾದ ನೂರೊಂದು ವಿರಕ್ತರ ಜತೆ ಧರ್ಮಜಾಗೃತಿಗಾಗಿ ಲೋಕಸಂಚಾರಕ್ಕೆ ಹೊರಟು, ಅನೇಕ ಪುಣ್ಯ ಕ್ಷೇತ್ರಗಳಲ್ಲಿ ಅನುಷ್ಠಾನಗೊಂಡು ಶಿವಗಂಗೆಗೆ ಬಂದು ಅನೇಕ ದಿನಗಳ ಕಾಲ ಶಿವಗಂಗೆ ಬೆಟ್ಟದಲ್ಲಿ ನೆಲೆಸಿ ಹಲವು ಧರ್ಮಜಾಗೃತಿ ಕಾರ್ಯಗಳನ್ನು ಮಾಡಿ ಸಿದ್ಧಗಂಗೆ ಬೆಟ್ಟಕ್ಕೆ ಬಂದು ನೆಲೆಸುತ್ತಾರೆ. ಅನೇಕ ಗವಿಗಳಿಂದ ಆವೃತ್ತವಾದ ಈ ಕ್ಷೇತ್ರದಲ್ಲಿ ಎಲ್ಲಾ ವಿರಕ್ತರೂ ಆಶ್ರಯ ಪಡೆದು ಲೋಕೋಭಿವೃದ್ಧಿಗಾಗಿ ಅನುಷ್ಠಾನಕ್ಕೆ ಕುಳಿತರು. ಇದೇ ಸಂದರ್ಭದಲ್ಲಿ (ಕ್ರಿ.ಶ. ೧೩೦೦-೧೩೫೦) ಭಕ್ತರ ನೆರವಿನಿಂದ ಮಠವನ್ನು ಸ್ಥಾಪಿಸಿದರು.

ಸಿದ್ಧಗಂಗೆ: ಮಠವು ಸ್ಥಾಪನೆಯಾದ ಮೇಲೆ ನೂರೊಂದು ವಿರಕ್ತರು ಜಂಗಮ ದಾಸೋಹ ಕ್ರಿಯೆಗಳಲ್ಲಿ ತೊಡಗಿ ನಾಡನ್ನು ಬೆಳಗಿಸಲು ಮುಂದಾದರು. ಒಂದು ದಿನ ನೂರೊಂದು ಶರಣರಲ್ಲಿ ಸಿದ್ಧೇಶ್ವರರ ಹಿರಿಯ ಶಿಷ್ಯರಾಗಿದ್ದ ವಯೋವೃದ್ಧರೊಬ್ಬರು ಮಧ್ಯರಾತ್ರಿಯಲ್ಲಿ ಬಾಯಾರಿಕೆಯಿಂದ ಬಳಲಿದರು. ಗವಿಯಲ್ಲಿ ವಾಸಮಾಡುತ್ತಿದ್ದ ಈ ವಿರಕ್ತರು ಮಧ್ಯರಾತ್ರಿಯಲ್ಲಿ ಎಲ್ಲಿಂದ ನೀರು ತರುವುದು ಎಂದು ಯೋಚಿಸತೊಡಗಿದರು. ಶ್ರೀ ಗೋಸಲ ಸಿದ್ಧೇಶ್ವರಿಗೆ ತಮ್ಮ ಶಿಷ್ಯನ ಸಂಕಟ ಮನಸ್ಸಿಗೆ ಗೋಚರವಾದ ತಕ್ಷಣ ಹಿರಿಯ ವಿರಕ್ತರು ವಾಸಮಾಡುತ್ತಿದ್ದ ಗವಿಯ ಬಳಿಗೆ ಬಂದು ನೀರಿಗಾಗಿ ತಾವು ನಿಂತಲ್ಲಿ ತಮ್ಮ ಪಾದದಿಂದ ಬಂಡೆಯನ್ನು ತುಳಿದರು. ಆಗ ಗಂಗೋದ್ಭವವಾಯಿತು. ಬಾಯಾರಿಕೆಯಿಂದ ಬಳಲಿದ್ದ ವಯೋವೃದ್ಧರಿಗೆ ಸ್ನಾನಮಾಡಿಸಿ, ಭಸ್ಮ ಧರಿಸಿ, ಲಿಂಗಾರ್ಚನೆ ಮಾಡಿಸಿ ನೀರನ್ನು ಕುಡಿಸಿದರು. ಸಿದ್ಧೇಶ್ವರರ ಪವಾಡದಿಂದ ಉದ್ಭವಿಸಿದ ಗಂಗೆ 'ಸಿದ್ಧಗಂಗೆ'ಯಾಗಿ ಹೆಸರಾಯಿತು. ಅಂದಿನಿಂದ ಇದೇ ಹೆಸರು ಮುಂದುವರೆದಿದೆ.

ಸಿದ್ಧಲಿಂಗೇಶ್ವರರ ಆಗಮನ: ಶ್ರೀ ಸಿದ್ಧಲಿಂಗೇಶ್ವರರು ತಮ್ಮ ಗುರುವರ್ಗದವರ ರೀತಿಯಲ್ಲಿ ಹರದನಹಳ್ಳಿಯ ಮಠದ ಜವಾಬ್ದಾರಿಯನ್ನು ತಮ್ಮ ಶಿಷ್ಯರಿಗೆ ವಹಿಸಿಕೊಟ್ಟು ಏಳುನೂರೊಂದು ಜನ ವಿರಕ್ತರ ಜತೆ ಹರದನಹಳ್ಳಿಯನ್ನು ಬಿಟ್ಟು ದೇಶ ಸಂಚಾರ ಕೈಗೊಂಡು, ವೃದ್ಧಾಪ್ಯದ ವೇಳೆ ಅಂದರೆ ಸುಮಾರು ೧೪೭೦-೮೦ರ ವೇಳೆಗೆ ಸಿದ್ಧಗಂಗಾ ಕ್ಷೇತ್ರಕ್ಕೆ ಬರುತ್ತಾರೆ. ಸಿದ್ಧಗಂಗಾ ಕ್ಷೇತ್ರದಲ್ಲಿ ಅನೇಕ ವರ್ಷಗಳ ಕಾಲ ಪೂಜಾನುಷ್ಠಾನಗೊಂಡು ಅನೇಕ ಪವಾಡಗಳನ್ನು ಮಾಡುತ್ತಾರೆ. ಶ್ರೀ ಸಿದ್ಧೇಶ್ವರರ ನಂತರ ಹರದನಹಳ್ಳಿಯ ನಿರಂಜನ ಜಗದ್ಗುರುಪೀಠದವರೇ ಆದ ಶ್ರೀ ತೋಂಟದ ಸಿದ್ಧಲಿಂಗೇಶ್ವರರು ಸಿದ್ಧಗಂಗೆ ಕ್ಷೇತ್ರವನ್ನು ಮತ್ತೊಮ್ಮೆ ಪಾವನಗೊಳಿಸಿ ಧರ್ಮಪ್ರಚಾರದ ಕೇಂದ್ರವನ್ನಾಗಿ ಮಾಡಿಕೊಂಡು ಪ್ರಸಿದ್ಧಿಗೆ ತಂದಿದ್ದಾರೆ.

ಸಿದ್ಧಗಂಗೆಯಲ್ಲಿ ನೆಲೆಸಿದ ಸಂದರ್ಭದಲ್ಲಿ ತಮಿಳು ಭಾಷೆಯ ವೀರಣ್ಣಾರ್ಯನೆಂಬ ವ್ಯಕ್ತಿಯು ಚರ್ಮ ರೋಗದಿಂದ ಬಳಲಿ, ಸಿದ್ಧಲಿಂಗೇಶ್ವರರ ಪವಾಡಗಳನ್ನು ಕೇಳಿ ತಿಳಿದುಕೊಂಡು ಗುಣವಾಗದ ತನ್ನ ರೋಗವನ್ನು ನಿವಾರಣೆ ಮಾಡಲು ಬೇಡಿಕೊಂಡನು. ಆಗ ಶ್ರೀ ಸಿದ್ಧಲಿಂಗೇಶ್ವರರು 'ಸಿದ್ಧಗಂಗಾ ಜಲದಲ್ಲಿ ಸ್ನಾನಮಾಡು' ಎಂದು ಅಪ್ಪಣೆ ಕೊಟ್ಟರು. ಗುರುಗಳ ಅಪ್ಪಣೆಯಂತೆ ವೀರಣ್ಣಾರ್ಯರು ಸಿದ್ಧಗಂಗಾ ಜಲದಲ್ಲಿ ಸ್ನಾನ ಮಾಡಿದಾಕ್ಷಣ ಚರ್ಮರೋಗವು ಗುಣವಾಯಿತು. ಆಗ ವೀರಣ್ಣಾ ರ್ಯರು ಸಿದ್ಧಗಂಗಾ ಜಲವನ್ನು ತಮಿಳುಭಾಷೆಯಲ್ಲಿ ಸ್ತೋತ್ರ ಮಾಡಲು ತೊಡಗಿದಾಗ ಸಿದ್ಧಲಿಂಗೇಶ್ವರರು ತಮ್ಮ ಬಳಿ ಇದ್ದ ಶಿಷ್ಯ ಸಿದ್ಧಲಿಂಗೇಶರನ್ನು ಕರೆದು, ವೀರಣ್ಣಾರ್ಯರಿಗೆ ಕನ್ನಡ ಭಾಷೆ ಕಲಿಸು, ಕನ್ನಡದಲ್ಲಿ ಸಿದ್ಧಗಂಗೆಯನ್ನು ವರ್ಣಿಸಲಿ ಎಂದು ಅಪ್ಪಣೆಕೊಟ್ಟರು. ಸಿದ್ಧಲಿಂಗೇಶ್ವರರು ವೀರಣ್ಣಾರ್ಯರಿಗೆ ಕನ್ನಡ ಭಾಷೆಯನ್ನು ಕಲಿಸಿಕೊಡುತ್ತಾರೆ.

ಶ್ರೀ ಸಿದ್ಧಲಿಂಗೇಶ್ವರರು ಮಠದ ಪಕ್ಕದಲ್ಲಿದ್ದ ದೇವರಾಯ ಪಟ್ಟಣದಲ್ಲಿ ಒಂದು ಮಡಕೆ ಅನ್ನವನ್ನು ಐನೂರು ಜನ ಜಂಗಮರಿಗೆ ಬಡಿಸಿ ಪವಾಡ ಮಾಡಿದ್ದು ಜನಜನಿತವಾಗಿದೆ. ಈ ರೀತಿ ಅನೇಕ ಪವಾಡಗಳನ್ನು ಮಾಡಿ ನಾಡಿನ ಮೂಲೆಮೂಲೆಗಳಲ್ಲಿ ಜನರು ಜಾಗೃತರಾಗುವಂತೆ ಮಾಡಿ, ಅಂಧಕಾರವನ್ನು ತೊಡೆದು ಧರ್ಮದ ಬೆಳಕಿನಲ್ಲಿ ಸಮಷ್ಟಿ ಸಮಾಜವು ಸನ್ಮಾರ್ಗದಲ್ಲಿ ನಡೆಯುವಂತೆ ಮಾಡಿದರು.

ಖಾಲಿ ಉಳಿದ ಮಠ: ಶ್ರೀ ಸಿದ್ಧಲಿಂಗೇಶ್ವರರು ಈ ಮಠದಲ್ಲಿ ಅನೇಕ ಪವಾಡಗಳನ್ನು ಮಾಡಿ ನಂತರ ಎಡೆಯೂರು ಕ್ಷೇತ್ರಕ್ಕೆ ಹೊರಡುತ್ತಾರೆ. ಶ್ರೀ ಸಿದ್ಧಲಿಂಗೇಶ್ವರರ ನಂತರ ಮಠದ ಪೀಠವು ಖಾಲಿ ಉಳಿಯುತ್ತದೆ. ಆದರೂ ಇಲ್ಲಿ ಶ್ರೀ ಸಿದ್ಧಲಿಂಗೇಶ್ವರರ ಪ್ರಭಾವಕ್ಕೆ ಒಳಗಾಗಿದ್ದ ನೂರಾರು ಶಿಷ್ಯರು ಈ ನೆಲದ ಗವಿಗಳಲ್ಲಿ ಅನುಷ್ಠಾನಗೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸಿದರು. ಶ್ರೀ ಸಿದ್ಧಲಿಂಗೇಶ್ವರರು ಎಡೆಯೂರಿನಲ್ಲಿ ಐಕ್ಯಗೊಂಡ ನಂತರವೂ ಸಿದ್ಧಗಂಗೆಯು ಧರ್ಮಕ್ಷೇತ್ರವಾಗಿ ಹಿಂದಿನಂತೆಯೇ ಅನೇಕ ಯೋಗಿಗಳು ಮತ್ತು ಸಿದ್ಧಪುರುಷರನ್ನು ಆಕರ್ಷಿಸಿಕೊಂಡು ನಾಡಿನಲ್ಲಿ ಧಾರ್ಮಿಕ ಮೌಲ್ಯಗಳು ಬೆಳೆಯುವಂತೆ ಮಾಡಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಗೋಸಲ ಸಿದ್ಧೇಶ್ವರಸ್ವಾಮಿಗಳು (೧೪ನೆಯ ಶತಮಾನ)
೨. ಶ್ರೀ ಮ.ನಿ.ಪ್ರ. ತೋಂಟದ ಸಿದ್ಧಲಿಂಗೇಶ್ವರರು (೧೫ನೆಯ ಶತಮಾನ)
೩. ಶ್ರೀ ಮ.ನಿ.ಪ್ರ. ಮುಪ್ಪಿನಾರ್ಯರು (೧೮-೧೯ನೆಯ ಶತಮಾನ)
೪. ಶ್ರೀ ಮ.ನಿ.ಪ್ರ. ರುದ್ರಸ್ವಾಮಿಗಳು (೧೯ನೆಯ ಶತಮಾನ)
೫. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು (೧೯ನೆಯ ಶತಮಾನ)
೬. ಶ್ರೀ ಮ.ನಿ.ಪ್ರ. ಅಡವಿಸ್ವಾಮಿಗಳು (೧೯ನೆಯ ಶತಮಾನ)
೭. ಶ್ರೀ ಮ.ನಿ.ಪ್ರ. ಉದ್ದಾನಸ್ವಾಮಿಗಳು (೨೦ನೆಯ ಶತಮಾನ)
೮. ಶ್ರೀ ಮ.ನಿ.ಪ್ರ. ಡಾ. ಶಿವಕುಮಾರಸ್ವಾಮಿಗಳು (ಈಗಿನವರು) (೨೦-೨೧ನೆಯ ಶತಮಾನ)

ಈ ರೀತಿ ಸಿದ್ಧಗಂಗಾ ಮಠದ ಪರಂಪರೆಯಲ್ಲಿ ನೇಮಕಗೊಂಡ ಗುರುಗಳ ಹೆಸರನ್ನು ಸಿಕ್ಕಿರುವ ಆಧಾರದ ಮೇಲೆ ಗುರುತಿಸ ಬಹುದಾಗಿದೆ. ಶ್ರೀ ಸಿದ್ಧಲಿಂಗ ಸ್ವಾಮಿಗಳು ಮಠದಲ್ಲಿ ಆಡಳಿತ ನೋಡಿಕೊಳ್ಳುತ್ತಿದ್ದ ಕಾಲಕ್ಕಿಂತ ಹಿಂದೆ ಬಹುತೇಕರು ಆಡಳಿತ ನಡೆಸಿದ್ದರೂ ದಾಖಲೆಗಳು ದೊರೆಯುತ್ತಿಲ್ಲ. ಒಂದು ಶತಮಾನ ಕಾಲ ಮಠ ಖಾಲಿ ಉಳಿದಿರಲಿಕ್ಕಿಲ್ಲ. ಮಠಾಧೀಶರರು ಆಡಳಿತ ನಡೆಸಿದ್ದರೂ ಅವರುಗಳು ಮೌನಕ್ರಾಂತಿಯಿಂದ ಸಮಾಜವನ್ನು ಮುನ್ನಡೆಸಿ ತಮ್ಮ ಪರಂಪರೆಯ ಇತಿಹಾಸವನ್ನು ದಾಖಲಿಸಲು ಹೋಗಲಿಲ್ಲವೋ ಅಥವಾ ದಾಖಲೆಗಳು ಶಿಥಿಲವಾಗಿರಬಹುದೋ ಎಂಬ ಜಿಜ್ಞಾಸೆ ಇತಿಹಾಸಕಾರರನ್ನು ಕಾಡುತ್ತಿದೆ. ಶ್ರೀಸಿದ್ಧಲಿಂಗ ಸ್ವಾಮಿಗಳ ಕಾಲಮಾನವನ್ನು ಸ್ಪಷ್ಟವಾಗಿ ಹೇಳಿದಂತೆ, ಶ್ರೀ ಮುಪ್ಪಿನಾರ್ಯರು ಮತ್ತು ಶ್ರೀ ರುದ್ರ ಸ್ವಾಮಿಗಳ ಕಾಲಮಾನವನ್ನು ನಿಖರವಾಗಿ ಹೇಳುವಂತಹ ಆಧಾರಗಳು ಯಾವುವೂ ಇಲ್ಲ. ಆದರೆ ಈ ಇಬ್ಬರು ಶರಣರು ಈ ನೆಲದಲ್ಲಿ ಅನುಷ್ಠಾನಗೊಂಡು ಮಠದ ಆಡಳಿತ ನಡೆಸಿಕೊಂಡು ಹೋಗಿರುವುದಂತೂ ಸ್ಪಷ್ಟವಾಗಿದೆ.

ಅಡವಿ ಸ್ವಾಮಿಗಳ ಆಗಮನ: ಹತ್ತೊಂಬತ್ತನೆಯ ಶತಮಾನದಲ್ಲಿ ಶ್ರೀ ಅಡವಿಸ್ವಾಮಿಗಳು ಉತ್ತರದ ಕಡೆಯಿಂದ ಬಂದು ಗುಬ್ಬಿಯಲ್ಲಿ ಕೆಲವು ದಿನ ಅನುಷ್ಠಾನಗೊಂಡು ಸಿದ್ಧಗಂಗೆಯಲ್ಲಿ ಅನುಷ್ಠಾನಗೊಳ್ಳಬೇಕೆಂಬ ಮಹದಾಸೆಯಿಂದ ಸಿದ್ಧಗಂಗೆಗೆ ೧೮೬೫ ರಲ್ಲಿ ಬರುತ್ತಾರೆ. ಶ್ರೀ ಅಡವಿಸ್ವಾಮಿಗಳು ಈ ನೆಲಕ್ಕೆ ಬಂದು ನೆಲೆ ನಿಂತ ಮೇಲೆ ಈ ಪುಣ್ಯ ಭೂಮಿಯ ವೈಭವವು ಗತಕಾಲದ ವೈಭವವನ್ನು ಹೋಲುವಂತೆ ಬೆಳೆಯುತ್ತದೆ. ಶ್ರೀ ಅಡವಿಸ್ವಾಮಿಗಳು ಸಿದ್ಧಗಂಗೆಗೆ ಬಂದಾಗ ಶ್ರೀ ಸಿದ್ಧಲಿಂಗ ಸ್ವಾಮಿಗಳು ಆಡಳಿತ ನೋಡಿಕೊಳ್ಳುತ್ತಿದ್ದರು. ಇವರು ಅನುಷ್ಠಾನ ಮೂರ್ತಿಗಳಾಗಿ ಸದಾ ಧ್ಯಾನಮಗ್ನರಾಗಿ ಮಠದ ಅಭಿವೃದ್ಧಿಯ ಕಡೆ ಗಮನ ಕೊಡಲಿಲ್ಲ. ಈ ಕಾರಣಕ್ಕಾಗಿ ಪೂರ್ವ ಇತಿಹಾಸವುಳ್ಳ ಸಿದ್ಧಗಂಗೆಯ ಮಠವು ಜೀರ್ಣಾವಸ್ಥೆಗೆ ಬಂದಿತ್ತು. ಅಡವಿ ಸ್ವಾಮಿಗಳು ಮಠಕ್ಕೆ ಬಂದವರೇ ದಾಸೋಹಕ್ರಿಯೆ ಮೊದಲಾದವುಗಳನ್ನು ಪ್ರಾರಂಭಿಸಿದರು. ಮುಪ್ಪಿನಲ್ಲಿದ್ದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಅಡವಿಸ್ವಾಮಿಗಳ ಕ್ರಿಯಾಶೀಲ ಗುಣಗಳನ್ನು ಗಮನಿಸಿ ಮಠದ ಪೂರ್ಣಅಧಿಕಾರವನ್ನು ಶ್ರೀ ಅಡವಿ ಸ್ವಾಮಿಗಳಿಗೆ ಒಪ್ಪಿಸುತ್ತಾರೆ. ಅಡವಿ ಸ್ವಾಮಿಗಳು ಮಠದ ಸಮಸ್ತ ಆಡಳಿತವನ್ನು ವಹಿಸಿಕೊಂಡು ಗವಿ ಒಂದರಲ್ಲಿ ದೀರ್ಘ ಅನುಷ್ಠಾನಗೊಂಡು ಈ ತಪೋಭೂಮಿಯನ್ನು ಧರ್ಮ, ದಾಸೋಹ,ವಿದ್ಯಾಕೇಂದ್ರ ಸ್ಥಳವಾಗಿ ಬೆಳೆಸಲು ಶ್ರಮಿಸಿದರು. ದಾಸೋಹಕ್ರಿಯೆಗೆ ಮಹತ್ವ ಕೊಟ್ಟು ಅಡವಿ ಸ್ವಾಮಿಗಳು ದಾಸೋಹಕ್ಕಾಗಿ 'ಇಂದು ಹಾಕಿದ ಬೆಂಕಿ ಮುಂದೆ ಎಂದೂ ಆರದಿರಲಿ, ಇಂದು ಪ್ರಾರಂಭಗೊಂಡ ಅನ್ನದಾಸೋಹ ಎಂದೆಂದಿಗೂ ನಿಲ್ಲದಿರಲಿ' ಎಂದು ಹಾರೈಸಿ ಪ್ರಾರಂಭಮಾಡಿದರು. ಅಂದು

ಪ್ರಾರಂಭಗೊಂಡ ಅನ್ನ ದಾಸೋಹ ಕ್ರಿಯೆ ಅಂದಿನಿಂದ ಹತ್ತುಪಟ್ಟು,ನೂರು ಪಟ್ಟು ಬೆಳೆದು ಈಗ ಸಾವಿರ ಪಟ್ಟು ಬೆಳೆದು ಇಂದು ದಾಸೋಹ ಕ್ಷೇತ್ರವಾಗಿ ವಿಶ್ವದ ಗಮನವನ್ನು ಸೆಳೆದಿದೆ.

ನೆಲೆಗೊಂಡ ಉದ್ಧಾನ ಸ್ವಾಮಿಗಳು: ಶ್ರೀ ಅಡವಿ ಸ್ವಾಮಿಗಳು ಸಿದ್ಧಗಂಗಾ ಕ್ಷೇತ್ರವನ್ನು ಪಾವನಗೊಳಿಸಿ, ಹಿಂದಿನಂತೆಯೇ ವೈಭವಯುತವಾಗಿ ಧಾರ್ಮಿಕ ಸುಕ್ಷೇತ್ರವಾಗಿ ಬೆಳೆಯಲು ತಮ್ಮ ಶಕ್ತಿ ಮೀರಿ ದುಡಿದರು. ಇದರ ಫಲವೇ ಕೆಲವೇ ದಿನಗಳಲ್ಲಿ ಸಿದ್ಧಗಂಗಾ ಕ್ಷೇತ್ರವು ಧಾರ್ಮಿಕ ಮೌಲ್ಯಗಳನ್ನು ಹಿಂದಿನಂತೆಯೇ ಪ್ರಭಾವಯುತವಾಗಿ ಪ್ರಚಾರಪಡಿಸುವ ಶಕ್ತಿಯನ್ನು ಪಡೆಯಿತು. ಈ ವೇಳೆಗಾಗಲೇ ಮುಪ್ಪಿನಲ್ಲಿದ್ದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಲಿಂಗೈಕ್ಯರಾಗಿರುತ್ತಾರೆ. ಶ್ರೀ ಅಡವಿಸ್ವಾಮಿಗಳು ಪುನಃ ಗುಬ್ಬಿಗೆ ಹಿಂದಿರುಗಬೇಕಾಗಿದ್ದ ಕಾರಣ ತಮ್ಮ ಸೇವೆಯಲ್ಲಿ ತೊಡಗಿದ್ದ ಅಪ್ರತಿಮ ಪೂಜಾನಿಷ್ಠರಾದ ಶ್ರೀ ಉದ್ಧಾನ ಶಿವಯೋಗಿಗಳನ್ನು ಸಿದ್ಧಗಂಗೆಯ ಧಾರ್ಮಿಕ ಹಾಗೂ ದಾಸೋಹ ಕ್ರಿಯೆಗಳನ್ನು ಮುನ್ನಡೆಸಿಕೊಂಡು ಹೋಗಲು ನೆಲೆಗೊಳಿಸಿ ಗುಬ್ಬಿಗೆ ಹಿಂದಿರುಗಿ ಚಿಕ್ಕತೊಟ್ಲಿಲಗೆರೆಯಲ್ಲಿ ನಿರ್ವಿಕಲ್ಪ ಸಮಾಧಿ ಪಡೆಯುತ್ತಾರೆ.

ಶ್ರೀ ಉದ್ಧಾನ ಶಿವಯೋಗಿಗಳು, ಶ್ರೀ ಅಡವಿ ಸ್ವಾಮಿಗಳ ಪರಮಾಪ್ತ ಶಿಷ್ಯರಾಗಿ ಸೇವೆ ಸಲ್ಲಿಸಿ ಅವರ ಪ್ರೀತಿ ವಾತ್ಸಲ್ಯದಲ್ಲಿ ಬೆಳೆದು,ಅಪಾರಜ್ಞಾನ ಮತ್ತು ವೈರಾಗ್ಯವನ್ನು ಸಂಪಾದಿಸಿಕೊಂಡಿದ್ದರು. ಶ್ರೀ ಉದ್ಧಾನ ಶಿವಯೋಗಿಗಳ ಗುರುನಿಷ್ಠೆ ಮತ್ತು ವೀರಶೈವ ಸಿದ್ಧಾಂತದ ಮೇಲೆ ಇಟ್ಟಿದ್ದ ನಂಬಿಕೆ ಹಾಗೂ ಅವರು ಮಾಡುತ್ತಿದ್ದ ಆಚರಣೆಗಳು ಶ್ರೀ ಅಡವಿ ಸ್ವಾಮಿಗಳಿಗೆ ಮೆಚ್ಚುಗೆಯಾಗಿದ್ದವು. ಈ ಕಾರಣಕ್ಕೆ ಶ್ರೀ ಅಡವಿಸ್ವಾಮಿಗಳು, ಶ್ರೀ ಉದ್ಧಾನ ಶಿವಯೋಗಿಗಳ ಅದಮ್ಯ ಶಕ್ತಿಯನ್ನು ಗುರುತಿಸಿ, ಇಂತಹ ದೊಡ್ಡ ಸತ್ಕಾರ್ಯಕ್ಕೆ ಬಳಸಿಕೊಳ್ಳಲು,ತಮ್ಮ ಪ್ರಭಾವಲಯದಲ್ಲಿ ಬೆಳೆಯಲು ಅವಕಾಶ ಮಾಡಿಕೊಟ್ಟಿದ್ದರು. ಶ್ರೀ ಉದ್ಧಾನ ಶಿವಯೋಗಿಗಳ ಅಂತಃಶಕ್ತಿಯನ್ನು ಹಾಗೂ ತೇಜೋ ವಿಶೇಷತೆಯನ್ನು ಶ್ರೀ ಅಡವಿ ಸ್ವಾಮಿಗಳೊಬ್ಬರೇ ಅರ್ಥ ಮಾಡಿಕೊಂಡಿದ್ದರು ಎಂದು ಹೇಳುವ ಉದ್ಧಾನ ಚರಿತೆಯ ಕಥಾಸಾರಾಂಶದ ಮಾತುಗಳು ಸತ್ಯವೆನಿಸಿವೆ.

ಸಿದ್ಧಗಂಗೆಯ ಸಮೀಪದ ಲಕ್ಕೂರಿನಲ್ಲಿ ಕ್ರಿ.ಶ.೧೮೬೦ರಲ್ಲಿ ಜನಿಸಿದ ಶ್ರೀ ಉದ್ಧಾನ ಸ್ವಾಮಿಗಳು, ಬಾಲ್ಯವನ್ನು ಸಿದ್ಧಗಂಗೆ, ಸಿದ್ಧರಬೆಟ್ಟದಲ್ಲಿ ಕಳೆದು, ಇಲ್ಲಿನ ತಪೋಭೂಮಿಯ ಪ್ರಭಾವಕ್ಕೆ ಒಳಗಾಗಿ ಇಲ್ಲಿನ ಪರಿಸರದಿಂದಲೇ ಸಂಸ್ಕಾರ ಪಡೆದು ಮಹಾಚೇತನವನ್ನು ಮೈಗೂಡಿಸಿಕೊಂಡಿದ್ದರು. ಶ್ರೀ ಅಡವಿ ಸ್ವಾಮಿಗಳು ಗುಬ್ಬಿಗೆ ಬಂದಿದ್ದಾರೆ ಎಂಬ ವಿಚಾರ ತಿಳಿದು, ಈ ಮಹಾಪುರುಷರ ಪವಾಡ ಕಥೆಗಳನ್ನು ಕೇಳಿ ತಿಳಿದುಕೊಂಡಿದ್ದ ಶ್ರೀ ಉದ್ಧಾನ ಶಿವಯೋಗಿಗಳು,ನೋಡುವ, ನೋಡಿ ಸೇವೆ ಮಾಡುವ ತವಕದಲ್ಲಿ ಮನೆಬಿಟ್ಟು ಶ್ರೀ ಅಡವಿ ಸ್ವಾಮಿಗಳ ಸಾನ್ನಿಧ್ಯಕ್ಕೆ ಓಡೋಡಿ ಬರುತ್ತಾರೆ. ಅಂದಿನಿಂದ ಶ್ರೀ ಅಡವಿ ಸ್ವಾಮಿಗಳ ಒಡನಾಟದಲ್ಲಿ ಬೆಳೆದು ನಂತರ ಶ್ರೀ ಗೋಸಲ ಸಿದ್ಧೇಶ್ವರರು ಪ್ರಾರಂಭಿಸಿದ ನೆಲೆ, ಶ್ರೀ ತೋಂಟದ ಸಿದ್ಧಲಿಂಗೇಶ್ವರರು ತಮ್ಮ ಪವಾಡಗಳಿಂದ ಮೆರೆಸಿದ ಈ ಸಿದ್ಧಗಂಗೆ ಕ್ಷೇತ್ರದ ಸೇವೆಗೆ ಸಮರ್ಥ ಪುರುಷರಾಗಿ ನೇಮಕಗೊಂಡಿದ್ದು ಯೋಗಾಯೋಗವೇ ಸರಿ. ಕಾರಣ ಬಾಲಕರಾಗಿದ್ದಾಗ ತಪಸ್ವಿಗಳನ್ನು ಮತ್ತು ಸಿದ್ಧಗಂಗಾ ಬೆಟ್ಟವನ್ನು ದೂರದಿಂದ ನೋಡಿ ಕೈ ಮುಗಿಯುತ್ತಿದ್ದ ಬಾಲಕ ಇಂದು ಈ ಮಹಾ ಕ್ಷೇತ್ರದ ಅಧಿಕಾರದ ಚುಕ್ಕಾಣಿಹಿಡಿದುಕೊಳ್ಳುವುದು ಎಂದರೆ ಸಾಮಾನ್ಯವೇ ಶ್ರೀ ಅಡವಿಸ್ವಾಮಿಗಳ ಕಾರುಣ್ಯ ಬಲದಿಂದ ಲಭ್ಯವಾದ ಸಿದ್ಧಗಂಗಾ ಮಠದ ಅಧಿಕಾರ ವಹಿಸಿಕೊಂಡ ಮೇಲೆ ಮುಂದೇನು ಮಾಡಬೇಕು ಎಂದು ತೋಚದಂತಾಗುತ್ತದೆ. ಆದರೆ ಕಾರ್ಯಸಿದ್ಧಿಪುರುಷರಾದ ಶ್ರೀ ಉದ್ಧಾನ ಶಿವಯೋಗಿಗಳು ದೊಡ್ಡ ಮಠದ ಗುರುತರ ಜವಾಬ್ದಾರಿಯನ್ನು ವಹಿಸಿಕೊಂಡು ಮಠದಲ್ಲಿ ನಡೆಸುತ್ತಿದ್ದ ಅನ್ನದಾಸೋಹವನ್ನು ಒಂಟಿಯಾಗಿ ಮುನ್ನಡೆಸುವ ಪರಿಯೆಂತು ಎಂದು ಯೋಚಿಸಿ, ಮಠದ ಅಭಿವೃದ್ಧಿ ಮತ್ತು ದಾಸೋಹದ ಕ್ರಿಯೆಗಳ ಬಗ್ಗೆ ಯೋಜನೆಯನ್ನು ತಯಾರಿಸಿಕೊಂಡು, ಹಿಂಜರಿಯದೆ ಮುನ್ನಡೆಯತೊಡಗಿದರು. ಕಾಯಕ ಯೋಗಿಯಾಗಿ ದುಡಿಯ ಹೊರಟಿದ್ದ ಗುರುಗಳು ಬಾವಿ ತೆಗೆದರು. ಕಲ್ಯಾಣಿಯನ್ನು ಕಟ್ಟಿದರು. ಇವರ ಕಾಲದಲ್ಲಿ ದಾಸೋಹ ಗೃಹಗಳು ತಲೆ ಎತ್ತಿದವು. ಭಕ್ತರು ಶ್ರೀ ಉದ್ಧಾನ ಶಿವಯೋಗಿಗಳ ಕಾರ್ಯ ವೈಖರಿಯನ್ನು ನೋಡಿ ಗುರುಗಳ ಜತೆಗೆ ಮಠದ ಕೈಂಕರ್ಯಗಳಿಗೆ ಹೆಗಲು ಕೊಟ್ಟು ದುಡಿಯತೊಡಗಿದರು. ಮಠದ ಹಳೆಯ ವೈಭವಗಳೆಲ್ಲ ಮತ್ತೆ ಕಾಣಿಸಿಕೊಳ್ಳತೊಡಗಿದವು. ಮಠಕ್ಕೆ ಭೇಟಿ ಕೊಡುವ ಭಕ್ತರ ಸಂಖ್ಯೆ ಹೆಚ್ಚಾಯಿತು. ಸದಾ ಜನರಿಂದ ಗಿಜಿಗುಡತೊಡಗಿತು. ಶಿಕ್ಷಣ ಸಂಸ್ಥೆಗಳು ಹಾಗೂ ವಿದ್ಯಾರ್ಥಿನಿಲಯಗಳು ಸ್ಥಾಪನೆಗೊಂಡು ಶ್ರೀ ಅಡವಿ

ಸ್ವಾಮಿಗಳು ಮಾಡಬೇಕು ಅಂದುಕೊಂಡಿದ್ದ ಎಲ್ಲಾ ಸಂಕಲ್ಪಗಳನ್ನೂ ಕಾರ್ಯರೂಪಕ್ಕೆ ತಂದು ಅದ್ಭುತ ಕ್ರಿಯೆ ಮಾಡತೊಡಗಿದರು. ಸಮಷ್ಟಿ ಸಮಾಜದ ಒಳಿತಿಗಾಗಿ ಧರ್ಮ,ಶಿಕ್ಷಣ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಗಳ ಬೆಳವಣಿಗೆಗೆ ಕಾರಣೀಭೂತರಾಗಿ, ಸಮರ್ಥ ದಾಸೋಹಮೂರ್ತಿ ಶ್ರೀ ಶಿವಕುಮಾರ ಸ್ವಾಮಿಗಳಿಗೆ ಅಧಿಕಾರ ನೀಡಿ ೧೯೪೧ರಲ್ಲಿ ಲಿಂಗೈಕ್ಯರಾದರು.

ವೀರಾಪುರದಲ್ಲಿ ಉದಯ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ವೀರಾಪುರದಲ್ಲಿ ಶ್ರೀ ಹೊನ್ನೇಗೌಡರು ಮತ್ತು ಶ್ರೀಮತಿ ಗಂಗಾಂಬೆಯವರ ಹದಿಮೂರನೆಯ ಪುತ್ರರಾಗಿ ೧೯೦೮ರಲ್ಲಿ ಶಿವಣ್ಣನವರು ಜನಿಸಿದರು. ಶಿವಣ್ಣ ತನ್ನ ಬಾಲ್ಯದಲ್ಲಿಯೇ ಗುರುಹಿರಿಯರ ಜತೆಯಲ್ಲಿ ಭಕ್ತಿ ಭಾವಗಳಿಂದ ನಡೆದುಕೊಳ್ಳುತ್ತಾ, ಧಾರ್ಮಿಕ ಪ್ರಜ್ಞೆಯನ್ನು ಮೈಗೂಡಿಸಿಕೊಂಡು ಬೆಳೆದರು. ವೀರಾಪುರದ ಹತ್ತಿರದ ಶಿವಗಂಗೆಗೆ ತನ್ನ ತಾಯಿ ಗಂಗಾಂಬಿಕೆಯ ಜತೆ ಭೇಟಿಕೊಟ್ಟು, ಹೊನ್ನಮ್ಮನ ಗವಿ ಮಠದಲ್ಲಿ ಪ್ರಸಾದ ಸ್ವೀಕರಿಸಿ ಬರುತ್ತಿದ್ದರು. ತಾಯಿಯು ತನ್ನ ಮಗನಿಗೆ ಶಿವಗಂಗೆಯ ಪರಿಚಯವನ್ನು ಮಾಡಿಕೊಡುತ್ತಿದ್ದಳು. ದಿನಕಳೆದಂತೆ ಬಾಲಕ ಶಿವಣ್ಣನಲ್ಲಿ ದೈವಭಕ್ತಿ ಹೆಚ್ಚಾಗತೊಡಗಿತ್ತು.

ಒಂದು ದಿನ ವೀರಾಪುರದಲ್ಲಿ ಹಸ್ತರೇಖೆಗಳನ್ನು ನೋಡಿ ಭವಿಷ್ಯ ಹೇಳುವ ನೈಮಿತ್ತಿಕನು ಶಿವಣ್ಣನ ಹಸ್ತ ರೇಖೆಯನ್ನು ನೋಡಿ ಮಹಾಜ್ಞಾನಿಯಾಗಿ ಲೋಕವನ್ನೇ ಮೆರೆಯುವ ಮಹಾ ಪುರುಷನಾಗುತ್ತಾನೆಂದು ಭವಿಷ್ಯವನ್ನು ನುಡಿದಿದ್ದರು. ಶಿವಣ್ಣನವರು ತಮ್ಮ ಎಂಟನೆಯ ವರ್ಷದವರೆಗೆ ವೀರಾಪುರದ ಕೂಲಿ ಮಠದಲ್ಲಿ ವಿದ್ಯಾಭ್ಯಾಸ ಮಾಡಿದರು. ಈ ವೇಳೆಗಾಗಲೇ ಪ್ರೀತಿಯಿಂದ ಸಾಕಿದ ತಮ್ಮ ತಾಯಿಯನ್ನು ಕಳೆದುಕೊಂಡರು. ಚಿಕ್ಕವಯಸ್ಸಿನಲ್ಲಿಯೇ ತಮ್ಮ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದ ಶಿವಣ್ಣನವರನ್ನು ಹಿರಿಯ ಸಹೋದರಿ ನಾಗವಲ್ಲಿಯು ತಮ್ಮ ಮನೆಗೆ ಕರೆದೊಯ್ದು ಮಾಧ್ಯಮಿಕ ಶಾಲೆಯವರೆಗೆ ಕಲಿಸಿದರು. ಮುಂದೆ ಓದುವ ಹಂಬಲದಿಂದ ಇಡೀ ನಾಡಿಗೆ ಅನ್ನದಾಸೋಹವನ್ನು ನೀಡುತ್ತಿದ್ದ ಸಿದ್ಧಗಂಗೆಗೆ ಬಂದರೆ ಮಠದಲ್ಲಿ ಆಶ್ರಯ ದೊರೆಯದೆ ಹೋಯಿತು. ಸ್ಥಾನ ದೊರೆಯಲಿಲ್ಲ ಎಂದು ಬೇಸರ ಪಡದೆ ಸಿದ್ಧಗಂಗೆ ಮಠದ ಶ್ರೀ ಉದ್ದಾನ ಶಿವಯೋಗಿಗಳು ಮತ್ತು ಅವರ ಶಿಷ್ಯರಾಗಿದ್ದ ಮರುಳಾರಾಧ್ಯರ ಸಂಪರ್ಕದಿಂದ ದೂರವಾಗದೆ, ಬೇರೆ ಕಡೆ ವಾಸ್ತವಕ್ಕೆ ವ್ಯವಸ್ಥೆಮಾಡಿಕೊಂಡು ವಿದ್ಯಾಭ್ಯಾಸ ಮಾಡಿದರು. ಇಂಟರ್ ಮೀಡಿಯಟ್ ಪರೀಕ್ಷೆಗೆ ಓದುತ್ತಿರುವಾಗ ಕೊನೆಯ ಗಳಿಗೆಯಲ್ಲಿ ಮಠದ ವಿದ್ಯಾನಿಲಯದಲ್ಲಿ ಇದ್ದು ಓದಲು ಶ್ರೀ ಉದ್ದಾನ ಸ್ವಾಮಿಗಳು ಅವಕಾಶ ಮಾಡಿಕೊಟ್ಟರು. ಮಠದಲ್ಲಿ ಆಶ್ರಯ ಪಡೆದ ಶಿವಣ್ಣನವರ ಆಚಾರವಿಚಾರಗಳು, ಗುರುಹಿರಿಯರಿಗೆ ತೋರಿಸುತ್ತಿದ್ದ ಗೌರವ, ಸರಳ ಸಜ್ಜನಿಕೆಯ ನಡುವಳಿಕೆಯ ಜತೆಗೆ ಚಿಕ್ಕವಯಸ್ಸಿನಲ್ಲಿ ಮೈಗೂಡಿಸಿಕೊಂಡಿದ್ದ ಧಾರ್ಮಿಕ ಆಸಕ್ತಿಯನ್ನು ಉದ್ದಾನ ಸ್ವಾಮಿಗಳು ಗಮನಿಸಿದರು. ತುಮಕೂರಿನಲ್ಲಿ ಇಂಟರ್ ಮೀಡಿಯಟ್ ಶಿಕ್ಷಣವನ್ನು ಮುಗಿಸಿದ ಶಿವಣ್ಣನವರು ಕಾಲೇಜು ಶಿಕ್ಷಣಕ್ಕಾಗಿ ಉದ್ದಾನ ಶಿವಯೋಗಿಗಳ ಅಪ್ಪಣೆ ಪಡೆದು ಬೆಂಗಳೂರಿಗೆ ಬಂದರು. ಸೆಂಟ್ರಲ್ ಕಾಲೇಜಿಗೆ ಸೇರಿಕೊಂಡು ಊಟ ಮತ್ತು ವಸತಿಗಾಗಿ ತೋಟದಪ್ಪನವರ ವಿದ್ಯಾರ್ಥಿನಿಲಯದಲ್ಲಿ ಆಶ್ರಯ ಪಡೆದುಕೊಂಡರು.

ಉತ್ತರಾಧಿಕಾರಿಯಾಗಿ ಆಯ್ಕೆ: ಶಿವಣ್ಣನವರು ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗ ಸಿದ್ಧಗಂಗಾ ಮಠದ ಉತ್ತರಾಧಿಕಾರಿಯಾದ ಶ್ರೀ ಮರುಳಾರಾಧ್ಯರು ಆಕಸ್ಮಿಕವಾಗಿ ಲಿಂಗೈಕ್ಯರಾಗುತ್ತಾರೆ. ಈ ವಿಷಯ ತಿಳಿದು ಶಿವಣ್ಣನವರು ಅಂತ್ಯಕ್ರಿಯೆಗಾಗಿ ಬೆಂಗಳೂರಿನಿಂದ ಸಿದ್ಧಗಂಗೆಗೆ ಆಗಮಿಸುತ್ತಾರೆ. ಈ ಸಮಯದಲ್ಲಿ ಶಿವಣ್ಣನವರ ಮೇಲೆ ದೃಷ್ಟಿ ಹರಿಸಿದ ಶ್ರೀ ಉದ್ದಾನ ಸ್ವಾಮಿಗಳು ಉತ್ತರಾಧಿಕಾರಿಯಾಗಿ ಶಿವಣ್ಣನವರನ್ನು ನೇಮಕಮಾಡಿಕೊಳ್ಳಲು ಮನದಲ್ಲೇ ನಿರ್ಧರಿಸಿಕೊಂಡರು. ಅಂತ್ಯಕ್ರಿಯೆ ಮುಗಿಸಿದ ಮೇಲೆ ಶಿವಣ್ಣನವರನ್ನು ಕರೆಸಿ ಶ್ರೀ ಉದ್ದಾನ ಸ್ವಾಮಿಗಳು ತಮ್ಮ ನಿರ್ಧಾರವನ್ನು ತಿಳಿಸಿದರು. ಈ ವಿಚಾರವನ್ನು ಕೇಳಿ ಆಶ್ಚರ್ಯಗೊಂಡ ಶಿವಣ್ಣನವರು ಗುರುಗಳಿಗೆ ಏನು ಹೇಳಬೇಕು ಎಂದು ತಿಳಿಯದಾಗಿ ಮೌನವಾಗುತ್ತಾರೆ. ಆಗ ಶ್ರೀ ಉದ್ದಾನಶಿವಯೋಗಿಗಳು 'ನೀನೇ ಉತ್ತರಾಧಿಕಾರಿಯೆಂದು ಕ್ಷೇತ್ರನಾಥ ಶ್ರೀ ಸಿದ್ಧಲಿಂಗೇಶ್ವರರು ಅಪ್ಪಣೆ ಕೊಟ್ಟಿದ್ದಾರೆ, ಈ ಆಜ್ಞೆಯನ್ನು ಪಾಲಿಸು'ಎಂದು ಶಿವಣ್ಣನವರ ತಲೆಯ ಮೇಲೆ ಕೈಯಿಟ್ಟು ಒಪ್ಪಿದ ಬಗ್ಗೆ ನಮಸ್ಕಾರ ಹಾಕು ಎಂದು ಅಪ್ಪಣೆ ಕೊಟ್ಟರು. ಶ್ರೀ ಉದ್ದಾನ ಶಿವಯೋಗಿಗಳು ಈ ರೀತಿ ಒತ್ತಾಯ ಮಾಡುತ್ತಿದ್ದಾರೆ ಎಂದ ಮೇಲೆ ಒಪ್ಪಿಗೆ ಕೊಡದಿದ್ದರೆ ಅನರ್ಥವಾಗಬಹುದು ಎಂದು ಒಪ್ಪಿಗೆ ಕೊಟ್ಟು ನಮಸ್ಕರಿಸಿದರು. ಶಿವಣ್ಣನವರ ಈ ಸಮಯೋಚಿತ ನಿರ್ಣಯದಿಂದ ಶ್ರೀ

ಉದ್ದಾನ ಶಿವಯೋಗಿಗಳು ಸಂತೋಷಗೊಂಡರು. ಅಂತಿಮ ವರ್ಷದ ಪದವಿ ಪರೀಕ್ಷೆಯನ್ನು ಮುಗಿಸಿಬರಲು ಕಳಿಸಿಕೊಟ್ಟರು.

ನಮಸ್ಕರಿಸಿದ ತಂದೆ: ಮಗ ಪದವೀಧರನಾಗಿ ಉದ್ಯೋಗಕ್ಕೆ ಸೇರಿ ಕುಟುಂಬಕ್ಕೆ ಆಸರೆಯಾಗುತ್ತಾನೆ ಎಂದು ನಂಬಿದ್ದ ಶಿವಣ್ಣನವರ ತಂದೆ ಹೊನ್ನೇಗೌಡರು ಈ ವಿಷಯ ಕೇಳಿ ಕೋಪಗೊಂಡರು. ಬಾಲ್ಯದಿಂದಲೂ ಧರ್ಮನಿಷ್ಠೆ ತೋರಿಸುತ್ತಿದ್ದ ಶಿವಣ್ಣನು ತಮ್ಮ ಯೋಗ್ಯತೆಗೆ ತಕ್ಕಂತಹ ಕೆಲಸವನ್ನೇ ಮಾಡಿದ್ದಾನೆ ಎಂದು ಹೊನ್ನೇಗೌಡರ ಒಂದು ಮನಸ್ಸು ಹೇಳಿದರೂ, ಇಷ್ಟೆಲ್ಲಾ ವಿದ್ಯೆ ಪಡೆದು ಮಠದ ಗುರುಗಳಾಗಿ ಸಾಧಿಸುವುದಾದರೂ ಏನು, ಎಂದು ಹೊನ್ನೇಗೌಡರ ಲೌಕಿಕ ಮನಸ್ಸು ಹೇಳತೊಡಗಿತು. ಉತ್ತರಾಧಿಕಾರಿಯಾಗುವುದಕ್ಕೆ ಒಪ್ಪಿರುವ ಮಗನ ಮನಸ್ಸನ್ನು ಬದಲಿಸಿ ಪರೀಕ್ಷೆ ಮುಗಿದ ನಂತರ ಉದ್ಯೋಗಕ್ಕೆ ಸೇರಲು ಒತ್ತಾಯ ತರಬೇಕೆಂದು ಬೆಂಗಳೂರಿಗೆ ಬಂದರು.

ಉತ್ತರಾಧಿಕಾರಿಯಾಗಿ ನೇಮಕಗೊಂಡ ಕ್ಷಣದಿಂದಲೇ ಶಿವಣ್ಣನವರು , ಶ್ರೀ ಶಿವಕುಮಾರ ಸ್ವಾಮಿಗಳಾಗಿ ಅಭಿದಾನ ಪಡೆದು ಕಾವಿವಸ್ತ್ರ ಧರಿಸಿಯೇ ಬೆಂಗಳೂರಿಗೆ ಬಂದಿದ್ದರು. ಕಾವಿ ವಸ್ತ್ರದಾರಿಯಾದ ಮಗನನ್ನು ನೋಡಿ ಹೊನ್ನೇಗೌಡರು ಆಶ್ಚರ್ಯಗೊಂಡರು. ಇದನ್ನು ಮಗನಿಗೆ ತೋರ್ಪಡಿಸದೆ ಈ ನಿರ್ಧಾರವನ್ನು ಕೈಬಿಟ್ಟು ಮನೆಗೆ ಬರುವಂತೆ ವಿಧವಿಧವಾಗಿ ಬುದ್ಧಿ ಹೇಳಿದರು. ಶ್ರೀ ಶಿವಕುಮಾರ ಸ್ವಾಮಿಗಳು ಕೈಗೊಂಡ ನಿರ್ಧಾರವನ್ನು ಬದಲಿಸದೆ, ಶ್ರೀ ಉದ್ದಾನ ಶಿವಯೋಗಿಗಳಿಗೆ ಕೊಟ್ಟ ಮಾತಿಗೆ ವಿರುದ್ಧವಾಗಿ ನಡೆಯಲಾರೆ, ನನ್ನ ಪಾಡಿಗೆ ನನ್ನನ್ನು ಬಿಟ್ಟು ಊರಿಗೆ ಹೋಗಿ ಎಂದು ನಿಷ್ಠುರವಾಗಿ ಹೇಳಿದರು. ಮಗನ ಬುದ್ಧಿಯನ್ನು ಬಲ್ಲವರಾಗಿದ್ದ ಹೊನ್ನೇಗೌಡರು ಸಿದ್ಧಗಂಗೆಯ ಉತ್ತರಾಧಿಕಾರಿಗೆ ನಮಸ್ಕರಿಸಿ ಹಿಂದಿರುಗಿದರು.

ಜಂಗಮ ಜ್ಯೋತಿಗೆ ಅಧಿಕಾರ: ಶ್ರೀ ಶಿವಕುಮಾರ ಸ್ವಾಮಿಗಳ ವಿದ್ಯಾಭ್ಯಾಸವು ಮುಗಿದ ಮೇಲೆ ೧೯೩೦ ನೆಯ ಮಾರ್ಚ್ ಮೂರರಂದು ವಿಧ್ಯುಕ್ತವಾಗಿ ಮಠದ ಉತ್ತರಾಧಿಕಾರ ನೀಡಿದರು. ಸಮರ್ಥ ಶಿಷ್ಯನಿಗೆ ಮಠದ ಅಧಿಕಾರ ಮಹೋತ್ಸವ ಮುಗಿಸಿದ ಶ್ರೀ ಉದ್ದಾನ ಶಿವಯೋಗಿಗಳು ತಪೋಮಗ್ನರಾಗಿ ಶಿವಚಿಂತನೆಯಲ್ಲಿ ಮುಳುಗಿದರು. ಶ್ರೀ ಶಿವಕುಮಾರ ಸ್ವಾಮಿಗಳು ಮಠದ ಪೂರ್ಣ ಅಧಿಕಾರವನ್ನು ವಹಿಸಿಕೊಂಡ ಹೊಸದರಲ್ಲಿ ನಿರ್ವಹಿಸಲು ಕಷ್ಟಪಟ್ಟರು. ಎದುರಾದ ಕಷ್ಟಗಳೇ ಶ್ರೀ ಶಿವ ಕುಮಾರ ಜಂಗಮ ಜ್ಯೋತಿಯಾಗಿ ಬೆಳಗತೊಡಗಿದರು.

ಅನ್ನದಾಸೋಹದ ನಿರ್ವಹಣೆ, ಪೂಜಾನಿಷ್ಠೆ ಮತ್ತು ಭಕ್ತರ ಆತಿಥ್ಯ ಮಾಡುವುದನ್ನು ನೋಡಿದ ಶ್ರೀ ಉದ್ದಾನ ಸ್ವಾಮಿಗಳು ತಮ್ಮ ಕರಕಮಲ ಸಂಜಾತ ಶ್ರೀ ಶಿವಕುಮಾರ ಸ್ವಾಮಿಗಳ ಕ್ರಿಯಾಶೀಲತೆಯನ್ನು ನೋಡಿ ಮನದಲ್ಲೇ ಸ್ವಾಮಿಗಳಿಗೆ ಅನುಭವವನ್ನು ಕಲಿಸಿ ಗಟ್ಟಿಗೊಳಿಸುತ್ತಿದ್ದವು. ಈ ರೀತಿ ಬದುಕಿನ ಜೀವನಾನುಭವಗಳಿಂದ ಪಾಠ ಕಲಿಯುತ್ತಾ ಸಂತೋಷ ಗೊಂಡರು. ಬೆಳೆದ ಮಠವನ್ನು ಸಮರ್ಥರ ಕೈಯಲ್ಲಿ ಕೊಟ್ಟಿದ್ದಕ್ಕೆ ತೃಪ್ತಿಗೊಂಡರು. ಇಷ್ಟಕ್ಕೂ ಸಾಲದೆಂಬಂತೆ ಶ್ರೀ ಉದ್ದಾನ ಶಿವಯೋಗಿಗಳು ಕಿರಿಯ ಗುರುಗಳಿಗೆ ಮಾಡುವ ಕೆಲಸದಲ್ಲಿ ಕಿರಿಕಿರಿ ಉಂಟುಮಾಡಿ ಇದಕ್ಕೆ ಬರುವ ಪ್ರತಿಕ್ರಿಯೆಗಳನ್ನು ಪರೀಕ್ಷೆಮಾಡಿ ನೆಮ್ಮದಿ ಕಂಡರು. ತಮ್ಮ ಶಿಷ್ಯ ಶ್ರೀ ಶಿವಕುಮಾರ ಸ್ವಾಮಿಗಳಿಗೆ ಕೊಡಬೇಕಾಗಿದ್ದನ್ನೆಲ್ಲಾ ಕೊಟ್ಟಿದ್ದರು. ಆದರೆ ಕೊನೆಯಲ್ಲಿ ಕೊಡಬೇಕಾಗಿದ್ದ ತೇಜೋಗುಣವನ್ನು ಕೊಟ್ಟು ಜನವರಿ ಹನ್ನೊಂದು ೧೯೪೧ರಲ್ಲಿ ಲಿಂಗೈಕ್ಯರಾದರು.

ಶ್ರೀ ಉದ್ದಾನ ಶಿವಯೋಗಿಗಳು ಲಿಂಗೈಕ್ಯರಾದ ಮೇಲೆ ಮಾರ್ಗದರ್ಶನಕ್ಕೆಂದು ಇದ್ದ ಗುರುಗಳು ಇಲ್ಲವಾದ ಮೇಲೆ ಮಾನಸಿಕವಾಗಿ ತಳಮಳಗೊಂಡ ಶ್ರೀ ಶಿವಕುಮಾರ ಸ್ವಾಮಿಗಳು ಕಾಲಕ್ರಮೇಣ ಮಠದ ಬಿಡುವಿಲ್ಲದ ಕಾರ್ಯದಲ್ಲಿ ಮಗ್ನರಾಗಿ ಹೋದರು. ಶ್ರೀ ಶಿವಕುಮಾರ ಸ್ವಾಮಿಗಳು ಸಿದ್ಧಗಂಗೆಯಲ್ಲಿ ಕೈಗೊಂಡ ಕಾರ್ಯಗಳು ನಾಡಿನ ಜನರಿಗೆಲ್ಲಾ ತಿಳಿದು, ಈ ಕಾರ್ಯಕ್ಷೇತ್ರವನ್ನು ನೋಡಲು ಜನರು ಜಾತ್ರೆಗೆ ಬರುವಂತೆ ಬರತೊಡಗಿದರು. ಇದರಿಂದ ದಾಸೋಹದ ಕಾರ್ಯಗಳ ಖರ್ಚು ವೆಚ್ಚಗಳು ಅಧಿಕಗೊಳ್ಳತೊಡಗಿದವು.ಇದರಿಂದ ಧೈರ್ಯಗುಂದದೆ ನಿರ್ವಿಘ್ನವಾಗಿ ನಡೆಸತೊಡಗಿದರು. ತ್ರಿಕಾಲ ಪೂಜೆ, ನಿರಂತರ ದಾಸೋಹವನ್ನು ನಾಡಿನ ಜನರು ಕಣ್ಣಾರೆ ಕಂಡು ಆನಂದಿಸಿದರು.

ಒಮ್ಮೆ ಈ ನಾಡಿನ ಸುತ್ತಮುತ್ತ ಅನಾವೃಷ್ಟಿ ಸಂಭವಿಸಿ, ಜನರು ಅನ್ನ ನೀರಿಗಾಗಿ ಹಾಹಾಕಾರ ಪಡತೊಡಗಿದರು. ಸಿದ್ಧಗಂಗೆಯಲ್ಲಿ ದಿನನಿತ್ಯವೂ ಪವಾಡದಂತೆ ಅನ್ನ ದಾಸೋಹವು ನಡೆಯುತ್ತದೆ ಎಂಬ ವಿಷಯ ಗೊತ್ತಿದ್ದ ಜನರು

ಸಿದ್ಧಗಂಗೆಯ ಕಡೆ ಪ್ರಯಾಣ ಬೆಳೆಸತೊಡಗಿದರು. ದಾಸೋಹದ ಉಗ್ರಾಣದಲ್ಲಿ ದವಸಧಾನ್ಯ ಇರುವವರೆಗೆ ಅನ್ನ ದಾಸೋಹವನ್ನು ನಿಶ್ಚಿಂತೆಯಿಂದ ಮಾಡಿದರಾಯಿತು, ನಂತರ ಶಿವನು ಪರೀಕ್ಷೆ ಮಾಡಲು ಈ ರೀತಿ ಮಾಡಿದ್ದಾನೆ ಎಂದು ಹೇಳುತ್ತಾ, ಮಠಕ್ಕೆ ಬರತೊಡಗಿದ ಸಹಸ್ರ ಸಂಖ್ಯೆಯ ಹಸಿದ ಹೊಟ್ಟೆಗಳಿಗೆ ಅನ್ನ ನೀಡಿ ತೃಪ್ತಿಪಡಿಸತೊಡಗಿದರು. ಈ ಪವಾಡವನ್ನು ನೋಡಲು ಅಂದಿನ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪನವರು ತಮ್ಮ ಸಕಲ ಸಹೋದ್ಯೋಗಿಗಳೊಂದಿಗೆ ಬಂದು ಈ ಪವಾಡವನ್ನು ನೋಡಿ, ಸರ್ಕಾರ ಮಾಡಲಾಗದಿದ್ದು ದನ್ನು ಒಂದು ಮಠವು ಮಾಡುತ್ತಿರುವುದನ್ನು ಗಮನಿಸಿ ಈ ಅನ್ನದಾಸೋಹಕ್ಕೆ ನೆರವು ನೀಡಿದರು. ಬರದ ಬವಣೆಯಲ್ಲಿದ್ದ ಜನರು ಗುರುಗಳ ಆಶ್ರಮದಲ್ಲಿ ಶಾಂತಿಯನ್ನು ಕಂಡರು.

ಸಿದ್ಧಗಂಗೆಯ ಕಾಯಕಯೋಗಿಗಳು ಸಮಾಜದಲ್ಲಿ ಧರ್ಮ ಪ್ರಜ್ಞೆ ಬೆಳೆಯಲು ಶ್ರಮಿಸಿದರು. ಜಾತಿ ಭೇದ ತೋರದೆ ಸಮಾಜವನ್ನು ಸಮಷ್ಟಿಯಾಗಿ ನೋಡಿ ದೀನ ದರಿದ್ರರನ್ನು ಪ್ರೀತಿಯಿಂದ ಮಕ್ಕಳಂತೆ ಕಂಡು ನೆರವಾಗಿದ್ದಾರೆ. ಲಕ್ಷೋಪಲಕ್ಷ ಬಡವಿದ್ಯಾರ್ಥಿಗಳಿಗೆ ಅನ್ನನೀರು ಕೊಟ್ಟು ಅವರ ಕತ್ತಲೆಯ ಬಾಳಿನಲ್ಲಿ ಬೆಳಕಿನ ಜ್ಯೋತಿಯನ್ನು ಬೆಳಗಿಸಿದ್ದಾರೆ. ಅಡವಿ ಸ್ವಾಮಿಗಳು ಮತ್ತು ಶ್ರೀ ಉದ್ಧಾನ ಶಿವಯೋಗಿಗಳ ಆಶಯದಂತೆ ಶ್ರೀ ಶಿವಕುಮಾರ ಸ್ವಾಮಿಗಳ ಕಾಲದಲ್ಲಿ ನಡೆಯುತ್ತಿರುವ ಸಿದ್ಧಗಂಗೆಯ ದಾಸೋಹ ಕಾರ್ಯವು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರುಗಳಿಸಿದೆ.

ಉತ್ತರಾಧಿಕಾರಿ: ಶ್ರೀ ಶಿವಕುಮಾರ ಸ್ವಾಮಿಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಸಿದ್ಧಲಿಂಗ ಸ್ವಾಮಿಗಳನ್ನು ೧೯೮೮ ರ ಮಾರ್ಚ್ ಮೂವತ್ತರಂದು ನೇಮಕ ಮಾಡಿಕೊಂಡಿದ್ದಾರೆ. ಶ್ರೀ ಸಿದ್ಧಲಿಂಗ ಸ್ವಾಮಿಗಳು ಹಿರಿಯ ಗುರುಗಳ ಮಾರ್ಗದರ್ಶನ ದಂತೆ ಮಠದ ಆಡಳಿತವನ್ನು ನೋಡಿಕೊಂಡು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಶೈಕ್ಷಣಿಕ ಸಾಧನೆ: ಶ್ರೀ ಉದ್ಧಾನ ಶಿವಯೋಗಿಗಳ ಕಾಲದಲ್ಲಿ ಸ್ಥಾಪನೆಗೊಂಡಿದ್ದ ಗುರುಕುಲದ ಪಾಠಶಾಲೆಗಳು ಶ್ರೀ ಶಿವಕು ಮಾರ ಸ್ವಾಮಿಗಳ ಕಾಲದಲ್ಲಿ ಆಲದ ಮರದಂತೆ ಬೆಳೆದಿವೆ. ಶೋಷಿತ ಜನಾಂಗ, ದೀನದಲಿತರು, ಅನಾಥರು ಹಾಗೂ ಹಿಂದುಳಿದ ವರ್ಗದವರು, ಈ ರೀತಿ ಎಲ್ಲಾ ವರ್ಗದ ಮಕ್ಕಳಿಗೆ ಸಮಾನ ಅವಕಾಶ ನೀಡಿ ಕಲಿಯಲು ನೆರವಾಗಿದ್ದಾರೆ. ಸಿದ್ಧಗಂಗೆಯಲ್ಲಿ ಉಚಿತ ಪ್ರಸಾದ ನಿಲಯವನ್ನು ಪ್ರಾರಂಭಿಸಿ, ಎಂಟುಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ (ಒಂದು ತಿಂಡಿ ಎರಡು ಊಟ) ಉಚಿತ ಪ್ರಸಾದ ಹಾಗೂ ವಸತಿ ವ್ಯವಸ್ಥೆಯನ್ನು ಮಾಡಿರುವುದು ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದಿದೆ. ಶ್ರೀ ಸಿದ್ಧಗಂಗಾ ವಿದ್ಯಾಪೀಠದ ಆಶ್ರಯದಲ್ಲಿ ನಾಡಿನ ನಾನಾ ಭಾಗಗಳಲ್ಲಿ ಹದಿನೆಂಟು ಸಂಸ್ಕೃತ ಪಾಠಶಾಲೆಗಳು, ಹನ್ನೆರಡು ಪ್ರಾಥಮಿಕ ಶಾಲೆಗಳು, ನಲವತ್ತೈದು ಪ್ರೌಢಶಾಲೆಗಳು, ಒಂಬತ್ತು ಪದವಿಪೂರ್ವ ಕಾಲೇಜುಗಳು, ಮೂರು ಪ್ರಥಮ ದರ್ಜೆ ಕಾಲೇಜುಗಳು, ಒಂದು ಫಾರ್ಮಸಿಕಾಲೇಜು, ಒಂದು ತಾಂತ್ರಿಕ ಕಾಲೇಜು, ಎರಡು ಶಿಕ್ಷಕರ ತರಬೇತಿ ಕೇಂದ್ರಗಳು, ಒಂದು ಕನ್ನಡ ಪಂಡಿತ ಕಾಲೇಜು, ಒಂದು ಅಂಧಮಕ್ಕಳ ಪಾಠಶಾಲೆ ಹಾಗೂ ಒಂದು ಪಾಲಿಟೆಕ್ನಿಕ್ ಕಾಲೇಜು ಈ ರೀತಿ ನೂರ ಹದಿನೆಂಟಕ್ಕೂ ಹೆಚ್ಚು ವಿದ್ಯಾ ಸಂಸ್ಥೆಗಳನ್ನು ಗ್ರಾಮಾಂತರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಪ್ರಾರಂಭಿಸಿ, ಶಿಕ್ಷಣ ಕ್ಷೇತ್ರಕ್ಕೆ ಅಪಾರ ಕೊಡುಗೆಯನ್ನು ನೀಡಿರುವುದಲ್ಲದೆ, ನೂರಾರು ನಿರುದ್ಯೋಗಿಗಳಿಗೆ ಉದ್ಯೋಗವನ್ನು ದೊರಕಿಸಿಕೊಟ್ಟಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಶಿವಕುಮಾರ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠವು ಅಭಿವೃದ್ಧಿಯತ್ತ ದಾಪುಗಾಲು ಹಾಕಿದೆ. ಮಠದ ಸಮುಚ್ಚಯದಲ್ಲಿ ವಜ್ರಮಹೋತ್ಸವದ ಸ್ಮಾರಕ ಭವನಗಳಾದ ಬೃಹತ್ತಾದ ವಿದ್ಯಾರ್ಥಿ ನಿಲಯ, ದಾಸೋಹ ಮಂದಿರ ಹಾಗೂ ಶಾಲಾ ಕಟ್ಟಡಗಳನ್ನು ನಿರ್ಮಿಸಿ ಒಂದು ಪ್ರೇಕ್ಷಣೀಯ ಸ್ಥಳವನ್ನಾಗಿ ರೂಪಿಸಿದ್ದಾರೆ. ಬೆಟ್ಟದ ಮೇಲಿರುವ ಶ್ರೀ ಸಿದ್ಧಲಿಂಗೇಶ್ವರ ಹಾಗೂ ಸಿದ್ಧಗಂಗಾ ತೀರ್ಥಕುಂಡದದೇವ ಮಂದಿರಗಳು, ಬೆಟ್ಟದ ಮೇಲೆ ಗೋಸಲ ಸಿದ್ಧೇಶ್ವರಸ್ವಾಮಿ ಗಳಿಂದ ಸ್ಥಾಪಿತವಾದ ಮಠದ ಹಳೆಯ ಕಟ್ಟಡ, ಇದರ ಪಕ್ಕದಲ್ಲಿರುವ ಶ್ರೀ ಉದ್ದಾನ ಶಿವಯೋಗಿಗಳ ಗದ್ದುಗೆ, ತೇರುಮನೆ, ಅತಿಥಿಗೃಹಗಳು, ಗೋಶಾಲೆ, ಗುರುಗಳ ದರ್ಶನಮಂಟಪ, ಮುದ್ರಣಾಲಯ, ಶ್ರೀ ಉದ್ದಾನೇಶ್ವರರ ಸಮುದಾಯ ಭವನ, ಬೃಹತ್ತಾದಕಲ್ಯಾಣಿ ಹಾಗೂ ಅಕ್ಕಿಗಿರಣಿ ಮುಂತಾದ ಅಭಿವೃದ್ಧಿ ಕಾರ್ಯಗಳನ್ನು ಮಾಡಿ ಮಠವನ್ನು ಸದೃಢವಾಗಿ ಬೆಳೆಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದಲ್ಲಿ ಸಿದ್ಧಲಿಂಗೇಶ್ವರ ದೇವಸ್ಥಾನ, ಶ್ರೀ ಉದ್ದಾನ ಸ್ವಾಮಿಗಳ ಗದ್ದುಗೆ ಹಾಗೂ ಶ್ರೀ

ಅಡವಿ ಸ್ವಾಮಿಗಳ ತೋರುಗದ್ದುಗೆ ಸೇರಿದಂತೆ ಪರಂಪರೆಯ ಗುರುಗಳ ಗದ್ದುಗೆಗಳಿಗೆ ನಿತ್ಯ ಪೂಜೆ ನಡೆಯುತ್ತಿದೆ. ಹಿರಿಯ ಗುರುಗಳಾದ ಶ್ರೀ ಉದ್ದಾನ ಸ್ವಾಮಿಗಳ ಪುಣ್ಯಾರಾಧನೆಯನ್ನು ಜನವರಿ ಹದಿನಾಲ್ಕರಂದು ನಡೆಸಲಾಗುತ್ತಿದೆ. ಅಂದೇ ಗ್ರಾಮಾಂತರ ಬಸವ ಜಯಂತಿ ವಾರ್ಷಿಕ ಸಮಾರೋಪ ಸಮಾರಂಭವನ್ನು ನಡೆಸಲಾಗುತ್ತಿದೆ. ೧೯೬೩ರಿಂದ ಪ್ರತಿ ಹುಣ್ಣಿಮೆ ಯಲ್ಲಿ ಶಿವಾನುಭವ ಕಾರ್ಯಕ್ರಮವನ್ನು ಏರ್ಪಡಿಸಿ, ಶೂನ್ಯ ಸಂಪಾದನೆ ಗ್ರಂಥವನ್ನು ಕುರಿತು ಗೋಷ್ಠಿಯನ್ನು ಏರ್ಪಡಿಸ ಲಾಗುತ್ತಿದೆ. ೧೯೮೮ರಿಂದ ಶರಣಮೇಳವನ್ನು ನಿರಂತರವಾಗಿ ನಡೆಸಿಕೊಂಡು ಬರಲಾಗುತ್ತಿದೆ. ಶ್ರೀ ಸಿದ್ಧಲಿಂಗೇಶ್ವರ ಜಾತ್ರೆಯನ್ನು ವೈಭವವಾಗಿ ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಕೃಷಿ ಹಾಗೂ ಕೈಗಾರಿಕೆ ವಸ್ತುಪ್ರದರ್ಶನವನ್ನು ಹದಿನೈದು ದಿನಗಳ ಕಾಲ ನಡೆಸುವುದಲ್ಲದೆ ಸಾಂಸ್ಕೃತಿಕ ಕಾರ್ಯಕ್ರಮವನ್ನು ಸಹ ಆಯೋಜಿಸಲಾಗುತ್ತಿದೆ.

ಸಾಹಿತ್ಯ ಚಟುವಟಿಕೆಗಳು: 'ಶ್ರೀ ಸಿದ್ಧಲಿಂಗ ಪ್ರಕಾಶನ ಸಂಸ್ಥೆ 'ಯನ್ನು ಪ್ರಾರಂಭಿಸಿರುವ ಗುರುಗಳು ಶ್ರೀ ಬಸವೇಶ್ವರ ಹಾಗೂ ಅವರ ಸಮಕಾಲೀನರು ಎಂಬ ಬೃಹತ್ ಗ್ರಂಥ, ಕರ್ಮಯೋಗಿ ಸಿದ್ಧರಾಮ, ಕರ್ತಾರನ ಕಮ್ಮಟ, ಶಿವಯೋಗಿ ಉದ್ದಾನ ಯತೀಶ್ವರ, ವಚನಗಂಗ, ಸಿದ್ಧಗಂಗಶ್ರೀ, ದಾಸೋಹಸಿರಿ ಹಾಗೂ ವಚನಶಿಲ್ಪ ಮುಂತಾದ ಕೃತಿಗಳನ್ನು ಪ್ರಕಟಿಸಲಾಗಿದೆ. 'ಸಿದ್ಧಗಂಗಾ' ಎಂಬ ಮಾಸಿಕ ಪತ್ರಿಕೆಯನ್ನು ೧೯೬೫ ರಿಂದ ನಿರಂತರವಾಗಿ ಪ್ರಕಟಿಸಲಾಗುತ್ತಿದೆ.

ಸಾಂಸ್ಕೃತಿಕ ಚಟುವಟಿಕೆಗಳು: ಶ್ರೀ ಸಿದ್ಧಲಿಂಗೇಶ್ವರ ನಾಟಕ ಮಂಡಳಿಯನ್ನು ಸ್ಥಾಪಿಸಿ ೫೪೫ ನಾಟಕಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರದರ್ಶಿಸಲಾಗಿದೆ. ಈ ನಾಟಕ ಮಂಡಳಿಯು ಈವರೆಗೆ ಭಕ್ತಮಾರ್ಕಂಡೇಯ, ಎಚ್ಚಮನಾಯಕ, ರಾಜಶೇಖರ ವಿಲಾಸ, ಮಹಾಬೆಳಗು ಹಾಗೂ ಶ್ರೀ ಜಗಜ್ಯೋತಿ ಬಸವೇಶ್ವರ ಮುಂತಾದ ನಾಟಕಗಳನ್ನು ಪ್ರಯೋಗಿಸಿದೆ. ಇವುಗಳಲ್ಲಿ ಶ್ರೀ ಜಗಜ್ಯೋತಿ ಬಸವೇಶ್ವರ ನಾಟಕವು ನಾಡು ಹಾಗೂ ನಾಡಿನಾಚೆ ಐನೂರು ಪ್ರದರ್ಶನಗಳನ್ನು ನೀಡಿ ಜನಮನ್ನಣೆ ಪಡೆದಿದೆ. ಗ್ರಾಮಾಂತರ ಬಸವಜಯಂತಿ ಯನ್ನು ೧೯೭೮ ರಿಂದ ನಿರಂತರವಾಗಿ ಆಚರಿಸಿಕೊಂಡು ಬರಲಾಗುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ಬಸವಜಯಂತಿಯ ಅಂಗವಾಗಿ ಬಸವತತ್ತ್ವವನ್ನು ಪ್ರಚಾರಪಡಿಸಿ, ಗ್ರಾಮೀಣ ಜನರಲ್ಲಿ ಜಾಗೃತಿಯನ್ನುಂಟು ಮಾಡಲಾಗುತ್ತಿದೆ. ಮಠದಲ್ಲಿ ಹಳೆಯ ವಿದ್ಯಾರ್ಥಿಗಳ ಸಂಘವನ್ನು ೧೯೫೪ ನೆಯ ಅಕ್ಟೋಬರ್ ನಾಲ್ಕರಂದು ಸ್ಥಾಪಿಸಲಾಗಿದೆ. ಈ ಸಂಘವು ಮಠದ ಕಾರ್ಯಕ್ರಮಗಳಲ್ಲಿ ಮಠದ ಜೊತೆಗೆ ಸ್ಪಂದಿಸುತ್ತಿದೆ.

ಅನ್ನದಾಸೋಹ: ವಿದ್ಯಾರ್ಥಿ ನಿಲಯದ ಐದುಸಾವಿರ ಜನ ವಿದ್ಯಾರ್ಥಿಗಳು, ಕ್ಷೇತ್ರಕ್ಕೆ ಬರುವ ಭಕ್ತರು ಹಾಗೂ ಪ್ರವಾಸಿಗರು ಸೇರಿದಂತೆ ೧೫೦೦ ಜನ, ಈ ರೀತಿ ದಿನವೊಂದಕ್ಕೆ ೧೦,೦೦೦ ಜನಗಳಿಗೆ ನಿತ್ಯ ಪ್ರಸಾದದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ದಿನವೊಂದಕ್ಕೆ ಸರಾಸರಿಯಂತೆ ಹದಿನೈದು ಕ್ವಿಂಟಾಲ್ ಅಕ್ಕಿ, ಹನ್ನೊಂದು ಕ್ವಿಂಟಾಲ್ ರಾಗಿಹಿಟ್ಟು, ಒಂದೂವರೆ ಕ್ವಿಂಟಾಲ್ ತೊಗರಿಬೇಳೆ, ಎಪ್ಪತ್ತೈದರಿಂದ ಎಂಬತ್ತು ಕೇಜಿ ಸಾಂಬಾರುಪುಡಿ, ನಾಲ್ಕು ಕ್ವಿಂಟಾಲ್ ತರಕಾರಿ, ನೂರೈವತ್ತು ತೆಂಗಿನಕಾಯಿ, ಒಂದು ಕ್ವಿಂಟಾಲ್ ಈರುಳ್ಳಿ, ಇನ್ನೂರು ಲೀಟರ್ ಹಾಲು, ಐವತ್ತು ಲೀಟರ್ಎಣ್ಣೆ ಹಾಗೂ ಒಂದು ಕ್ವಿಂಟಾಲ್ ಉಪ್ಪು ಬೇಕಾಗುತ್ತದೆ. ಇಷ್ಟಲ್ಲದೆ ಹಬ್ಬ ಹರಿದಿನಗಳಲ್ಲಿ ಹೋಳಿಗೆ, ತಂಬಿಟ್ಟು, ಬೂಂದಿ ಹಾಗೂ ಮಾಲದಿಯನ್ನು ಮಾಡಲಾಗುತ್ತಿದೆ.

ಜಾತ್ರಾ ಸಮಯದಲ್ಲಿ ಹದಿನೈದು ದಿನಗಳ ಕಾಲ ನಿರಂತರವಾಗಿ ಮಹಾದಾಸೋಹ ನಡೆಯುತ್ತಿರುತ್ತದೆ. ಈ ಸಂದರ್ಭ ದಲ್ಲಿ ಆರುನೂರರಿಂದ ಏಳುನೂರು ಕ್ವಿಂಟಾಲ್ ಅಕ್ಕಿ, ನಾನೂರರಿಂದ ಆರುನೂರು ಚೀಲ ರಾಗಿಹಿಟ್ಟು, ನೂರು ಕ್ವಿಂಟಾಲ್ ಬೆಲ್ಲ, (ಪಾಯಸಕ್ಕೆ) ೧೩.೨೦ ಕೆ.ಜಿ ಮೆಣಸಿನಕಾಯಿ, ಮೂವತ್ತೈದು ಮೂಟೆ ದನಿಯ, ಆರುಮೂಟೆ ಜೀರಿಗೆ, ಮೂರುಮೂಟೆ ಮೆಣಸು, ಒಂದು ಮೂಟೆ ಸಾಸುವೆ, ಮೂರು ಕ್ವಿಂಟಾಲ್ ಹೆಸರುಕಾಳು, ಮೂರು ಕ್ವಿಂಟಾಲ್ ಕಡಲೆಕಾಳು, ಮೂರು ಕ್ವಿಂಟಾಲ್ ತೊಗರಿಬೇಳೆ, ಮೂರು ಕ್ವಿಂಟಾಲ್ ಉದ್ದಿನಬೇಳೆ, ಮೂರು ಕ್ವಿಂಟಾಲ್ ಗೋಧಿ, ಮೂರು ಕ್ವಿಂಟಾಲ್ ಅರಿಶಿನ ಹಾಗೂ ಎರಡು ಕ್ವಿಂಟಾಲ್ ಹುರುಳಿಕಾಳು ಈ ಪ್ರಮಾಣದ ದಾಸೋಹ ಪದಾರ್ಥಗಳು ಹದಿನೈದು ದಿನಗಳ ದಾಸೋಹಕ್ಕೆ ಬೇಕಾಗುತ್ತದೆ.

ವಿಳಾಸ: ಶ್ರೀ ಮ.ನಿ.ಪ್ರ. ಡಾ.ಶಿವಕುಮಾರ ಸ್ವಾಮಿಗಳು, ಶ್ರೀ ಸಿದ್ಧಗಂಗಾ ಮಠ, ಸಿದ್ಧಗಂಗೆ, ಕ್ಯಾತಸಂದ್ರ, ತುಮಕೂರು.

ಆಧಾರ: 'ಉದ್ದಾನೇಶ ಚರಿತೆ ' ಚನ್ನಪ್ಪ ಎರೇಸೀಮೆ

'ಕಲ್ಯಾಣದ ಹಾದಿ' ಸಂಪಾದಕರು : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ, ಲೇಖಕರು : ಹೆಚ್.ವಿ.ವೀರಭದ್ರಯ್ಯ

ಹಿರೇಮಠ: ತುಮಕೂರು ನಗರದ ಚಿಕ್ಕಪೇಟೆಯಲ್ಲಿ ಪುರಾತನ ಕಾಲದಲ್ಲಿ ಸ್ಥಾಪನೆಗೊಂಡ ಹಿರೇಮಠವು ಅಸ್ತಿತ್ವದಲ್ಲಿದೆ. ಜಗದ್ಗುರು ಶ್ರೀಶೈಲ ಪೀಠದ ಶಾಖಾಮಠವಾಗಿರುವ ಹಿರೇಮಠವು ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಯ ಕೇಂದ್ರ ಬಿಂದುವಾಗಿ ಬೆಳೆದಿದೆ.

ಪುರಾತನ ಕಟ್ಟಡ: ಪುರಾತನ ಕಾಲದಲ್ಲಿ ನಿರ್ಮಿಸಲ್ಪಟ್ಟ ಕಲ್ಲು ಕಟ್ಟಡವು ಕೆತ್ತನೆಯ ಕಲ್ಲು ಕಂಬಗಳಿಂದ ರಚಿತವಾಗಿದೆ. ಏಳು ಅಂಕಣಗಳನ್ನು ಒಳಗೊಂಡಿರುವ ಹಿರೇಮಠದ ಕಟ್ಟಡದ ಪ್ರವೇಶ ದ್ವಾರದ ಬಾಗಿಲುನಿಲಗಳಲ್ಲಿ ದ್ವಾರಪಾಲಕರ ಕೆತ್ತನೆ, ಇದನ್ನು ದಾಟಿದ ತಕ್ಷಣ ಸಿಗುವ ಹಜಾರ, ನಂತರ ಕರ್ತೃಗುರುಗಳಾದ ಶ್ರೀಮಲ್ಲಿಕಾರ್ಜುನ ಸ್ವಾಮಿಗಳ ಗದ್ದುಗೆಯನ್ನು ನಿರ್ಮಿಸಿರುವ ಗರ್ಭಗುಡಿ ರಚನೆಗೊಂಡಿದೆ. ಗರ್ಭಗುಡಿಯಲ್ಲಿ ಕರ್ತೃಗುರುಗಳಾದ ಶ್ರೀಮಲ್ಲಿಕಾರ್ಜುನ ಸ್ವಾಮಿಗಳ ಗದ್ದುಗೆಯ ಮೇಲೆ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಅಲ್ಲದೆ ಶಿವಲಿಂಗದ ಎದುರು ನಂದಿಯ ವಿಗ್ರಹವಿದೆ.

ಪುರಾತನ ಕಲ್ಲು ಕಟ್ಟಡದ ಮೇಲೆ ಇತ್ತೀಚೆಗೆ ಸಿಮೆಂಟ್ ಕಟ್ಟಡವನ್ನು ನಿರ್ಮಿಸಿ ಅಗತ್ಯಕ್ಕೆ ತಕ್ಕಂತೆ ವಿಸ್ತರಿಸಿಕೊಳ್ಳಲಾಗಿದೆ. ಮಠದ ಮುಂಭಾಗದಲ್ಲಿ ಬಾವಿಯನ್ನು ನಿರ್ಮಿಸಲಾಗಿದ್ದು, ಈ ಬಾವಿಯನ್ನು 'ಮಜ್ಜನಬಾವಿ'ಎಂದು ಕರೆಯಲಾಗುತ್ತಿದೆ. ಮಠದ ಪೂಜಾ ಕಾರ್ಯಗಳಿಗೆ ಈ ಬಾವಿಯ ನೀರನ್ನೇ ಉಪಯೋಗಿಸಲಾಗುತ್ತಿದೆ.

ಮಠ ಸ್ಥಾಪನೆ: ಹಿರೇಮಠದ ಆವರಣದಲ್ಲಿ ಕರ್ತೃಗುರುಗಳಾದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳ ಗದ್ದುಗೆಯನ್ನು ಕೇಂದ್ರವಾಗಿ ಇಟ್ಟುಕೊಂಡು ಮಠದ ಕಟ್ಟಡ ಸ್ಥಾಪನೆಯಾಗಿರುವುದರಿಂದ, ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳೇ ಈ ಮಠವನ್ನು ಸ್ಥಾಪಿಸಿರಬಹುದೆಂದು ಅಂದಾಜಿಸಲಾಗಿದೆ. ಕರ್ತೃಗುರುಗಳ ಕಾಲಮಾನದ ಬಗ್ಗೆ ಸ್ಪಷ್ಟ ದಾಖಲೆಗಳು ದೊರೆಯುತ್ತಿಲ್ಲ. ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳ ನಂತರ ಮಠದಲ್ಲಿ ಧರ್ಮ ಕಾರ್ಯ ಮಾಡಿದ ಗುರುಗಳ ಹೆಸರು ಲಭ್ಯವಾಗಿಲ್ಲ. ಇಪ್ಪತ್ತನೆಯ ಶತಮಾನದ ಮಧ್ಯಭಾಗದಲ್ಲಿ ಶ್ರೀ ಹುಚ್ಚಪ್ಪದೇವರು ಆಡಳಿತವನ್ನು ನಡೆಸಿದ ಬಗ್ಗೆ ಮಾಹಿತಿ ಲಭ್ಯವಾಗಿದೆ. ಶ್ರೀ ಹುಚ್ಚಪ್ಪದೇವರು ಶಿವಪೂಜಾ ನಿಷ್ಠರು, ಮಹಾತಪಸ್ವಿಗಳಾಗಿದ್ದರು. ವೀರಶೈವ ಧರ್ಮದ ಆಚರಣೆಯ ಬಗ್ಗೆ ಜನ ಸಾಮಾನ್ಯರಿಗೆ ತಿಳುವಳಿಕೆ ಹೇಳಿ ಧರ್ಮವು ಬೆಳೆಯುವಂತೆ ಮಾಡಿದ್ದರು. ಭಕ್ತರ ಉದ್ಧಾರಕ್ಕಾಗಿ ಮನೆ ಮನೆಗಳಿಗೆ ಭೇಟಿ ನೀಡಿ ಧಾರ್ಮಿಕ ಕ್ರಿಯಾದಿಗಳಲ್ಲಿ ನೆರವಾಗುತ್ತಿದ್ದರು. ಮಠದಲ್ಲಿ ಶಿವಾನುಭವ ಗೋಷ್ಠಿಗಳನ್ನು ನಡೆಸಿ ವೀರಶೈವ ಧರ್ಮದ ಬಗ್ಗೆ ಉಪನ್ಯಾಸವನ್ನು ನೀಡಿ, ಜನಮನದಲ್ಲಿ ವೀರಶೈವ ಧರ್ಮ ಬೆಳೆಯುವಂತೆ ಮಾಡಿದ್ದರು.

ಧಾರ್ಮಿಕ ಆಚರಣೆಗೆ ಹೆಚ್ಚು ಒತ್ತು ಕೊಟ್ಟು ವೀರಶೈವ ಧರ್ಮವು ಬೆಳೆಯಲು ಪ್ರೇರಕರಾಗಿದ್ದ ಶ್ರೀ ಹುಚ್ಚಪ್ಪದೇವರು ಮಠದಲ್ಲಿ ವಿದ್ಯಾರ್ಥಿಗಳಿಗೆ ಆಶ್ರಯ ಕಲ್ಪಿಸಿಕೊಟ್ಟು, ಶೈಕ್ಷಣಿಕ ಪ್ರಗತಿಗೆ ಪ್ರೇರಕರಾಗಿದ್ದರು. ಮಠದಲ್ಲಿ ಆಶ್ರಯ ಪಡೆದಿದ್ದ ವಿದ್ಯಾರ್ಥಿಗಳಿಗೆ ವೇದ,ಸಂಸ್ಕೃತ, ಆಗಮಗಳ ಬಗ್ಗೆ ತಾವೇ ಬೋಧನೆ ಮಾಡಿ ಅವರ ಶ್ರೇಯೋಭಿವೃದ್ಧಿಗೆ ಶ್ರಮಿಸಿದವರಾಗಿದ್ದರು. ಈ ರೀತಿ ವೀರಶೈವ ಧರ್ಮದ ಪ್ರಗತಿಯ ಬಗ್ಗೆ ಒಂದಲ್ಲ ಒಂದು ಕಾರ್ಯಕ್ರಮಗಳನ್ನು ಕೈಗೊಂಡು ತಮ್ಮ ಬದುಕನ್ನು ಸಾರ್ಥಕಪಡಿಸಿಕೊಂಡಿದ್ದ ಗುರುಗಳು ನೂರಾ ಹದಿನೈದು ವರ್ಷಗಳ ಕಾಲ ಬದುಕಿ ಮಠದ ಇತಿಹಾಸದಲ್ಲಿ ದಾಖಲಾಗಿದ್ದಾರೆ.

ಖಾಲಿ ಉಳಿದ ಮಠ: ಶ್ರೀ ಹುಚ್ಚಪ್ಪದೇವರು ಲಿಂಗೈಕ್ಯರಾದ ಮೇಲೆ ೧೯೪೮ ರ ತನಕ ಹಿರೇಮಠವು ಮಠಾಧೀಶ್ವರರು ಯಾರೂ ಇಲ್ಲದೆ ಖಾಲಿ ಉಳಿಯಿತು. ಪುರಾತನ ಮಠದಲ್ಲಿ ಧಾರ್ಮಿಕ ಚಟುವಟಿಕೆಗಳು ಸ್ಥಗಿತಗೊಂಡಿದ್ದನ್ನು ಮನಗಂಡ, ತುಮಕೂರು ನಗರದ ವೀರಶೈವ ಸಮಾಜವು ಸಮರ್ಥ ಉತ್ತರಾಧಿಕಾರಿಗಳನ್ನು ನೇಮಿಸುವ ಬಗ್ಗೆ ತೀರ್ಮಾನವನ್ನು ಕೈಗೊಂಡಿತು. ಇದರ ಫಲವಾಗಿ ಡಾ. ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ಹಿರೇಮಠದ ಅಧಿಕಾರವನ್ನು ವಹಿಸಿಕೊಳ್ಳಬೇಕಾಯಿತು.

ಬೆಳಕು ಕಂಡ ಮಠ: ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ೧೯೯೬ ರಲ್ಲಿ ಆಗಮಿಸಿ, ಮಠಕ್ಕೆ ಕವಿದಿದ್ದ ಕತ್ತಲೆಯನ್ನು ದೂರ ಮಾಡಿದರು. ಇವರು ಬಿಜಾಪುರದ ಶ್ರೀ ನಿಜಗುಣಯ್ಯಮಠ ಮತ್ತು ಶ್ರೀಮತಿ ಶಾಂತಾಬಾಯಿಯವರ ಪುತ್ರರಾಗಿ ೧೯೬೧ರ ಮಾರ್ಚ್ ಇಪ್ಪತ್ತೊಂಬತ್ತರಂದು ಜನಿಸಿದರು. ತಂದೆ ತಾಯಿಯವರ ಸಂಸ್ಕಾರ ಶ್ರೀ ಶಿವಾನಂದ ಶಿವಾಚಾರ್ಯರಲ್ಲಿಯೂ ಮೈಗೂಡಿತ್ತು. ಚಿಕ್ಕ ವಯಸ್ಸಿನಲ್ಲಿಯೇ ಅಪ್ರತಿಮ ಪ್ರತಿಭಾವಂತರಾಗಿದ್ದರು. ಪ್ರಾಥಮಿಕ, ಮಾಧ್ಯಮಿಕ ಹಾಗೂ

ಪದವಿ ಶಿಕ್ಷಣವನ್ನು ಬಿಜಾಪುರದಲ್ಲಿ ಪಡೆದರು.ನಂತರ ಕರ್ನಾಟಕ ವಿಶ್ವವಿದ್ಯಾನಿಲಯದ ಸಂಸ್ಕೃತ ವಿಭಾಗದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು, ಎರಡು ಸುವರ್ಣ ಪದಕಗಳನ್ನು ತಮ್ಮದಾಗಿಸಿಕೊಂಡರು. ಹುಟ್ಟು ಪ್ರತಿಭಾವಂತರಾದ ಶ್ರೀಶಿವಾನಂದ ಶಿವಾಚಾರ್ಯ ಸ್ವಾಮಿಗಳು ತಮ್ಮ ವಿದ್ವತ್ತಿಗನುಗುಣವಾಗಿ 'ಜಾನಕೀ ಹರಣಂ' ಎಂಬ ಮಹಾಕಾವ್ಯದ ಮೇಲೆ ಸಂಶೋಧನೆಯನ್ನು ಕೈಗೊಂಡು ಡಾಕ್ಟರೇಟ್ ಪದವಿಯನ್ನು ಪಡೆದರು. ನಂತರ ಬೆಂಗಳೂರಿನ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ಅನುಭವ ಸಂಪಾದಿಸಿಕೊಂಡಿರುತ್ತಾರೆ.

ಕಾಶಿಯಲ್ಲಿ ಉನ್ನತ ಶಿಕ್ಷಣ: ಡಾ. ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳಿಗೆ ಡಾಕ್ಟರೇಟ್ ಪದವಿ ಪಡೆದ ನಂತರವೂ ಉನ್ನತ ಶಿಕ್ಷಣಕ್ಕಾಗಿ ಮನಸ್ಸು ತುಡಿಯುತ್ತಿತ್ತು. ಈ ಕಾರಣಕ್ಕಾಗಿ ಉಪನ್ಯಾಸ ವೃತ್ತಿಗೆ ತಿಲಾಂಜಲಿಯಿತ್ತು, ಕಾಶಿಗೆ ತೆರಳಿದರು. ವೀರಶೈವಧರ್ಮ ಸಿದ್ಧಾಂತವಾದ ವಿಶಿಷ್ಟಾದ್ವೈತ ವೇದಾಂತವನ್ನು ಅಧ್ಯಯನ ಮಾಡಿ ವೇದಾಂತಚಾರ್ಯ ಪರೀಕ್ಷೆಯನ್ನು ಪ್ರಥಮ ಶ್ರೇಣಿಯಲ್ಲಿ ಮುಗಿಸಿದರು. ನಂತರ ಕಾಶಿಯ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಕಾನೂನು ಪದವಿಯನ್ನು ಮುಗಿಸಿದರು. ವಿದ್ಯಾಭ್ಯಾಸದ ನಂತರ ಗುಳೇದಗುಡ್ಡದ ಅಮರೇಶ್ವರ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡರು.

ತುಮಕೂರು ಭಕ್ತರ ಒತ್ತಾಸೆಯ ಮೇರೆಗೆ ರಂಭಾಪುರಿ ಪೀಠದ ಜಗದ್ಗುರುಗಳಾದ ಶ್ರೀ ಪ್ರಸನ್ನ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು, ತುಮಕೂರಿನ ಹಿರೇಮಠಕ್ಕೆ ಡಾ.ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ಸಮರ್ಥ ಉತ್ತರಾಧಿಕಾರಿ ಎಂದು ಅರಿತು, ಅಮರೇಶ್ವರ ಮಠದಿಂದ ತುಮಕೂರಿನ ಹಿರೇಮಠಕ್ಕೆ ಕರೆತಂದರು. ಡಾ. ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ಪಟ್ಟಾಧಿಕಾರವನ್ನು ವಹಿಸಿಕೊಳ್ಳುವ ಮುನ್ನವೇ ಮಠದಲ್ಲಿ ನೆಲೆಸಿ, ಶಿಥಿಲಗೊಂಡಿದ್ದ ಮಠದ ಕಟ್ಟಡವನ್ನು ಜೀರ್ಣಾಭಿವೃದ್ಧಿಗೊಳಿಸಿ ಮಠವನ್ನು ಸುಸ್ಥಿತಿಗೆ ತಂದರು. ಅನೇಕ ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಭಕ್ತರು ಮಠದ ಕಡೆಗೆ ಆಕರ್ಷಿತರಾಗುವಂತೆ ಮಾಡಿದರು.

ಪಟ್ಟಾಧಿಕಾರ: ಡಾ.ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಸರ್ವತೋಮುಖ ಅಭಿವೃದ್ಧಿಗೊಳಿಸಿ ೧೯೯೮ ರ ಮೇ ಆರರಂದು, ಪಂಚಪೀಠಾಧೀಶ್ವರರಾದ ಶ್ರೀ ರಂಭಾಪುರಿ ಜಗದ್ಗುರುಗಳು, ಶ್ರೀ ಉಜ್ಜಯಿನಿ ಜಗದ್ಗುರುಗಳು, ಶ್ರೀ ಕೇದಾರ ಜಗದ್ಗುರುಗಳು, ಶ್ರೀಶೈಲ ಜಗದ್ಗುರುಗಳು ಹಾಗೂ ಶ್ರೀ ಕಾಶಿ ಜಗದ್ಗುರುಗಳ ದಿವ್ಯ ಸಾನಿಧ್ಯದಲ್ಲಿ ತಾವೇ ಅಭಿವೃದ್ಧಿ ಪಡಿಸಿದ ಹಿರೇಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಇದೇ ದಿನದಂದು ಹಿರೇಮಠದ ಸುತ್ತ ನಿರ್ಮಿಸಿದ ವಸತಿ ಸಂಕೀರ್ಣವನ್ನು ಉದ್ಘಾಟನೆ ಮಾಡಿಸಿದರು.

ಡಾ.ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡ ಮೇಲೆ ಮಠದ ಪರಂಪರೆಯ ಧಾರ್ಮಿಕ ಕಾರ್ಯಕ್ರಮಗಳ ಜತೆಗೆ ಜನಪರ ಕಾಳಜಿಯಿಂದ ಅನೇಕ ಕಾರ್ಯಕ್ರಮಗಳನ್ನು ರೂಪಿಸಿಕೊಂಡು, ವೈಚಾರಿಕ ನೆಲೆಗಟ್ಟಿನ ಮೇಲೆ ಸಮಾಜವನ್ನು ಬೆಳೆಸತೊಡಗಿದರು. ತುಮಕೂರಿನಲ್ಲಿ ಇತಿಹಾಸದ ಪುಟಗಳನ್ನು ಸೇರಲಿದ್ದ ಹಿರೇಮಠವನ್ನು ಪುನರುಜ್ಜೀವನ ಗೊಳಿಸಿದರು. ಮಠಕ್ಕೆ ಆಸ್ತಿ ಇಲ್ಲದಿದ್ದರೂ ಭಕ್ತ ಸಮೂಹವನ್ನೇ ಮಠದ ಆಸ್ತಿಯನ್ನಾಗಿ ಮಾಡಿಕೊಂಡು, ತುಮಕೂರಿನ ಧಾರ್ಮಿಕ ವಲಯದಲ್ಲಿ ಒಂದು ಹೊಸ ಅಲೆಯನ್ನು ಸೃಷ್ಟಿಸಿದರು.

ಹೊರದೇಶಗಳಲ್ಲಿ ಪಾಂಡಿತ್ಯಪ್ರದರ್ಶನ: ಡಾ.ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ಕೇವಲ ನಾಲ್ಕು ವರ್ಷಗಳಲ್ಲಿ ತುಮಕೂರು ಜಿಲ್ಲೆಯಲ್ಲದೆ ದೇಶದ ಹೊರಭಾಗದಲ್ಲಿಯೂ ತಮ್ಮ ಪಾಂಡಿತ್ಯವನ್ನು ಪ್ರದರ್ಶನ ಮಾಡಿದ್ದಾರೆ. ಅಮೇರಿಕ ಮತ್ತು ಐರೋಪ್ಯ ರಾಷ್ಟ್ರಗಳಲ್ಲಿ ನಡೆದ ಧಾರ್ಮಿಕ ಮಹಾ ಸಭೆಗಳಲ್ಲಿ ಮತ್ತು ವೀರಶೈವ ಸಮ್ಮೇಳನಗಳಲ್ಲಿ ಭಾಗವಹಿಸಿ ವೀರಶೈವ ಧರ್ಮದ ಸಿದ್ಧಾಂತದ ಬಗ್ಗೆ ಉಪನ್ಯಾಸ ನೀಡಿ ವೀರಶೈವ ಧರ್ಮವು ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಳೆಯುವಂತೆ ಮಾಡಿದ ಕೆಲವೇ ಗುರುಗಳಲ್ಲಿ ಇವರು ಒಬ್ಬರಾಗಿದ್ದಾರೆ. ಈ ರೀತಿ ಧರ್ಮಪ್ರಚಾರಕ್ಕೆಂದು ಹೊರದೇಶಗಳಿಗೆ ಮೂರು ಬಾರಿ ಪ್ರಯಾಣ ಬೆಳೆಸಿರುವುದು ಒಂದು ದಾಖಲೆಯಾಗಿದೆ.

ಸಾಹಿತ್ಯಸೇವೆ: ಡಾ. ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ಧರ್ಮನಿಷ್ಠರಾಗಿರುವುದರ ಜತೆಗೆ ಧಾರ್ಮಿಕ ವಿಚಾರಗಳ

ಬಗ್ಗೆ ಬೆಳಕು ಚೆಲ್ಲುವಂತಹ ಭಾವಗುಚ್ಛ, ಪಂಚಪೀಠಗಳ ಬಗ್ಗೆ ಬರೆದ ಪ್ರತ್ಯೇಕ ಐದು ಆವೃತ್ತಿಗಳು, ಸಾಯದ ಸಾವು ಮತ್ತು ಸ್ವರ್ಗಕ್ಕೆ ಪ್ರತಿಸ್ಪರ್ಧಿ, ಬೋಧಗಂಗಾ, ಶಿವಾನಂದ ಉವಾಚ ಈ ರೀತಿ ಅನೇಕ ಸಾಹಿತ್ಯ ಕೃತಿಗಳನ್ನು ರಚಿಸಿ ಧಾರ್ಮಿಕ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. 'ಶಿವದುಂದುಭಿ'ಎಂಬ ಮಾಸಿಕ ಪತ್ರಿಕೆಯನ್ನು ಪ್ರಕಟಿಸುತ್ತಿದ್ದು ಇದರಲ್ಲಿ ಧಾರ್ಮಿಕ, ಸಾಮಾಜಿಕ, ವೈಚಾರಿಕ ಹಾಗೂ ನೈತಿಕ ಗುಣಮಟ್ಟ ಹೆಚ್ಚಿಸಬಲ್ಲಂತಹ ಲೇಖನಗಳನ್ನು ಪ್ರಕಟಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಡಾ.ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ತುಮಕೂರಿನ ಹಿರೇಮಠಕ್ಕೆ ಪಾದಾರ್ಪಣೆ ಮಾಡಿದ ದಿನದಿಂದ ಮಠದಲ್ಲಿ ಧಾರ್ಮಿಕ ಚಟುವಟಿಕೆಗಳು ಚುರುಕುಗೊಂಡವು. ಮಠದ ಆವರಣದಲ್ಲಿರುವ ಕರ್ತೃ ಗದ್ದುಗೆಗೆ ಪೂಜೆ ನಡೆಸುವುದಲ್ಲದೆ ಲೋಕಕಲ್ಯಾಣಾರ್ಥ ಪ್ರತಿ ಅಮಾವಾಸ್ಯೆ ದಿನ ಮುಂಜಾನೆ ಐದು ಗಂಟೆಯಿಂದ ಹತ್ತು ಮೂವತ್ತರವರೆಗೆ ಮಠದಲ್ಲಿ ಪೂಜೆ, ಮಂತ್ರ ಪಠಣಗಳು ಶ್ರದ್ಧಾಭಕ್ತಿಯಿಂದ ನಡೆಯುತ್ತಿವೆ. ನಂತರ ಗುರುಗಳ ಸಾನಿಧ್ಯದಲ್ಲಿ ನಡೆಯುವ ಧರ್ಮ ಚಿಂತನಗೋಷ್ಠಿಯಲ್ಲಿ ಮೊದಲೇ ನಿರ್ಧಾರಗೊಂಡ ವಿಚಾರಗಳ ಬಗ್ಗೆ ಉಪನ್ಯಾಸಗಳು ನಡೆಯುತ್ತಿವೆ. ಈ ಸಂದರ್ಭಗಳಲ್ಲಿ ಶ್ರೀಗಳು ಹೊಸಹೊಸ ವಿಚಾರಗಳ ಬಗ್ಗೆ ನುಡಿಮುತ್ತುಗಳನ್ನು ಹೇಳಿ ಭಕ್ತರ ಮನ ಪರಿವರ್ತನೆಗೆ ಪ್ರಯತ್ನಿಸುತ್ತಾರೆ. ತಿಂಗಳಿಗೊಮ್ಮೆ ನಡೆಯುವ ಈ ಕಾರ್ಯಕ್ರಮವು ಬಹಳ ಯಶಸ್ವಿಯಾಗಿ ನಡೆಯುತ್ತಿದ್ದು ಭಕ್ತರ ಬಾಳಿಗೆ ಬೆಳಕು ನೀಡುವ ದೀವಟಿಕೆಯಾಗಿದೆ. ಭಕ್ತರ ಧಾರ್ಮಿಕಕ್ರಿಯಾದಿಗಳನ್ನು ನೆರವೇರಿಸುತ್ತಾ ಭಕ್ತರಿಗೆ ಮಾರ್ಗದರ್ಶಕರಾಗಿದ್ದಾರೆ. ನಾಡಿನ ನಾನಾ ಭಾಗಗಳಲ್ಲಿ ನಡೆಯುವ ಧಾರ್ಮಿಕ ಸಭೆಗಳಲ್ಲಿ ಭಾಗವಹಿಸಿ ಧರ್ಮಪ್ರಚಾರವನ್ನು ಕೈಗೊಂಡಿದ್ದಾರೆ. ಧಾರ್ಮಿಕ ವಲಯದಲ್ಲಿ ಭರವಸೆಯನ್ನು ಮೂಡಿಸಿರುವ ಗುರುಗಳಾಗಿ ಬೆಳೆಯುತ್ತಿದ್ದಾರೆ.

ವಿಳಾಸ: ಡಾ.ಷ.ಬ್ರ.ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಚಿಕ್ಕಪೇಟೆ, ತುಮಕೂರು.

ಕರಿಬಸವಸ್ವಾಮಿ ಮಠ: ತುಮಕೂರು ನಗರದ ಹೊರ ಪೇಟೆ ರಸ್ತೆಯಲ್ಲಿರುವ ಕರಿಬಸವಸ್ವಾಮಿಮಠವು ಉರವಕೊಂಡ ಮಠದ ಶಾಖಾ ಮಠವಾಗಿ ಬೆಳೆದಿದೆ. ಉರವಕೊಂಡ,ನಾರದಗಡ್ಡೆ, ಬಳ್ಳಾರಿ, ಆದವಾನಿ ಈ ನಾಲ್ಕು ಮಠಗಳು ಬೇರೆ ಬೇರೆಯಾಗಿದ್ದರೂ ಒಂದೇ ಪರಂಪರೆಗೆ ಸೇರಿವೆ. ತುಮಕೂರು ನಗರದಲ್ಲಿ ಸ್ಥಾಪನೆಯಾಗಿರುವ ಶ್ರೀ ಕರಿಬಸವ ಸ್ವಾಮಿಗಳ ಮಠದ ಮೂಲ ಮಠವು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಉರವಕೊಂಡದಲ್ಲಿ ಸ್ಥಾಪನೆಯಾಗಿದೆ. ಈ ಮೂಲ ಮಠದ ಆರಂಭದ ಬಗ್ಗೆ ಸ್ಪಷ್ಟವಾದ ದಾಖಲೆಗಳು ಸಿಗದ ಕಾರಣ, ಈ ಪರಂಪರೆಯನ್ನು ಎಡೆಯೂರು ಶ್ರೀ ಸಿದ್ಧಲಿಂಗೇಶ್ವರರ ಕಾಲದಿಂದ ಗುರುತಿಸಲಾಗುತ್ತದೆ. ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಗಳ ಪ್ರಭಾವದಿಂದ ನಾಡಿನ ನಾನಾ ಭಾಗಗಳಲ್ಲಿ ಅಸಂಖ್ಯಾತ ಶಿಷ್ಯರು ಬೆಳೆದು ಅವರೆಲ್ಲರೂ ವೀರಶೈವ ಪರಂಪರೆಯು ಬೆಳೆಯಲು ಬೆಳಕಾದರು.

ಎಡೆಯೂರು ಶ್ರೀ ಸಿದ್ಧಲಿಂಗೇಶ್ವರರು ತಮ್ಮ ಪ್ರವಾಸ ಕಾಲದಲ್ಲಿ ಉರವಕೊಂಡ ಗವಿಯಲ್ಲಿ ಅನುಷ್ಠಾನಗೊಂಡಿದ್ದು, ನಂತರ ಈ ಸ್ಥಳದಲ್ಲಿ ಮಠಸ್ಥಾಪನೆಯಾಯಿತೆಂದು ಹೇಳಲಾಗುತ್ತಿದೆ. ಉರವಕೊಂಡ ಗವಿಮಠದ ಗುರುಗಳಿಗೆ ಶಿವಾನುಭವ ಚರಚಕ್ರವರ್ತಿ ಎಂಬ ಬಿರುದು ಇದೆ. ಉರವಕೊಂಡ ಮಠದ ಮೊದಲ ಗುರುಗಳಾಗಿ ಶಿವಾನುಭವಚರಚಕ್ರವರ್ತಿ ಶ್ರೀ ಗುರುಸಿದ್ಧ ಸ್ವಾಮಿಗಳು ಮಠವನ್ನು ಬೆಳೆಸಿದರು. ಅಲ್ಲದೆ ಪ್ರಥಮವಾಗಿ ಯದುವೀರರ ಇಚ್ಛೆಯಂತೆ ಆದವಾನಿಯಲ್ಲಿ ಮಠ ಸ್ಥಾಪಿಸಿದರಂತೆ. ಈರೀತಿ ಬೆಳೆದ ಮಠದ ಪರಂಪರೆಯಲ್ಲಿ ಬರುವ ಶ್ರೀ ಕರಿಬಸವ ಸ್ವಾಮಿಗಳ ಕಾಲದಲ್ಲಿ ತುಮಕೂರಿನಲ್ಲಿ ಉರವಕೊಂಡ ಮಠದ ಶಾಖಾಮಠ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತದೆ.

ಮಠ ಸ್ಥಾಪನೆ: ಶ್ರೀ ಕರಿಬಸವ ಸ್ವಾಮಿಗಳು ವಿದ್ಯುತ್ ಶಕ್ತಿ ಪಡೆದ ಮಹಾಪುರುಷರು.ಇವರ ಪ್ರಭಾವ ಬಹಳವಾಗಿತ್ತು. ಮೈಸೂರು ದೊರೆ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರು ಶ್ರೀ ಕರಿಬಸವ ಸ್ವಾಮಿಗಳನ್ನು ಅರಮನೆಗೆ ಕರೆಸಿ ಪಾದ ಪೂಜೆ ಮಾಡಿಸಿ, ಮೊಳಕಾಲ್ಮೂರು ತಾಲ್ಲೂಕಿನ ಬಂಡೆನಹಳ್ಳಿ ಗ್ರಾಮವನ್ನು ಜಹಗೀರಾಗಿ ನೀಡಿ ರತ್ನಖಚಿತವಾದ ಕಾಲ್ಪೆಂಡೆಯನ್ನು ಬಿರುದಾಗಿ ನೀಡಿ, ಅಡ್ಡಪಲ್ಲಕ್ಕಿ ಉತ್ಸವ ಮಾಡಿಸಿ ಸತ್ಕರಿಸಿ ಮೈಸೂರಿನಲ್ಲಿ ಕಾರಂಜಿಮಠ ಮತ್ತು ತುಮಕೂರಿನ ಈ ಮಠವನ್ನು ೧೮೩೩ರಲ್ಲಿ ಸ್ಥಾಪಿಸಿದರು.

ಉರವಕೊಂಡ ಪರಂಪರೆ:

೧. ಶಿವಾನುಭವ ಚರಚಕ್ರವರ್ತಿ ಜಗದ್ಗುರು ಶ್ರೀ ಕರಿಬಸವ ರಾಜೇಂದ್ರಸ್ವಾಮಿಗಳು
೨. ಶಿವಾನುಭವ ಚರಚಕ್ರವರ್ತಿ ಜಗದ್ಗುರು ಶ್ರೀ ಚನ್ನಬಸವೇಶ್ವರಸ್ವಾಮಿಗಳು
೩. ಶಿವಾನುಭವ ಚರಚಕ್ರವರ್ತಿ ಜಗದ್ಗುರು ಶ್ರೀ ಕರಿಬಸವಸ್ವಾಮಿಗಳು
೪. ಶಿವಾನುಭವ ಚರಚಕ್ರವರ್ತಿ ಜಗದ್ಗುರು ಶ್ರೀ ಚನ್ನಬಸವಸ್ವಾಮಿಗಳು
೫. ಶಿವಾನುಭವ ಚರಚಕ್ರವರ್ತಿ ಜಗದ್ಗುರು ಶ್ರೀ ಕರಿಬಸವಸ್ವಾಮಿಗಳು
೬. ಶಿವಾನುಭವ ಚರಚಕ್ರವರ್ತಿ ಜಗದ್ಗುರು ಶ್ರೀ ಚನ್ನಬಸವಸ್ವಾಮಿಗಳು
೭. ಶಿವಾನುಭವ ಚರಚಕ್ರವರ್ತಿ ಜಗದ್ಗುರು ಶ್ರೀ ಕರಿಬಸವಸ್ವಾಮಿಗಳು
೮. ಶಿವಾನುಭವ ಚರಚಕ್ರವರ್ತಿ ಜಗದ್ಗುರು ಶ್ರೀ ಚನ್ನಬಸವಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಶ್ರೀ ಕರಿಬಸವ ಸ್ವಾಮಿಗಳ ಕಾಲದಲ್ಲಿ ಸ್ಥಾಪನೆಯಾದ ಈ ಮಠವು ನಂತರ ಉರವಕೊಂಡಮಠದ ಶಾಖಾಮಠವಾಗಿ ಬೆಳೆಯಿತು. ನಂತರ ಬಂದ ಪರಂಪರೆಯ ಗುರುಗಳು ಈ ಮಠದ ಅಭಿವೃದ್ಧಿಗೆ ಶ್ರಮಿಸಿ ಮಠವನ್ನು ಬೆಳೆಸಿದ್ದಾರೆ. ೧೯೬೧ರಲ್ಲಿ ಅಧಿಕಾರಕ್ಕೆ ಬಂದ ಈಗಿನ ಶ್ರೀ ಚನ್ನಬಸವ ಸ್ವಾಮಿಗಳು ಮಠವನ್ನು ಸರ್ವಾಂಗೀಣವಾಗಿ ಬೆಳಸಿದರು. ಗುರುಗಳು ಪುನಃ ೧೯೮೪ರಲ್ಲಿ ಉರವಕೊಂಡ ಮೂಲಮಠದ ಅಧಿಕಾರವನ್ನು ವಹಿಸಿಕೊಂಡರು. ಮೂಲಮಠಕ್ಕೆ ೭೭೦ ಶಾಖಾಮಠಗಳಿದ್ದವು. ಇಂದು ಅನೇಕ ಶಾಖಾಮಠಗಳು ಸ್ವತಂತ್ರ ಮಠಗಳಾಗಿ ಕಾರ್ಯ ನಿರ್ವಹಿಸುತ್ತಿವೆ. ಉಳಿದ ಮಠಗಳ ಉಸ್ತುವಾರಿಯನ್ನು ಶ್ರೀ ಚನ್ನಬಸವ ಸ್ವಾಮಿಗಳೇ ನೋಡಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ತುಮಕೂರಿನ ಶಾಖಾಮಠದಲ್ಲಿ ಶ್ರೀ ರಾಚೋಟಿ ಸ್ವಾಮಿಗಳ ಹಾಗೂ ಶ್ರೀ ಚನ್ನಬಸವ ಸ್ವಾಮಿಗಳ ಗದ್ದುಗೆಯು ಸ್ಥಾಪನೆಯಾಗಿದ್ದು, ಈ ಗದ್ದುಗೆಗಳಿಗೆ ನಿತ್ಯಪೂಜೆ ನಡೆಯುತ್ತಿದೆ. ಮೂಲಮಠದಲ್ಲಿ ಹಂಪಿ ಹುಣ್ಣಿಮೆಯ ದಿನ ಜಾತ್ರೆಯು ನಡೆಯುತ್ತಿದೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಚನ್ನಬಸವ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಈ ಮಠದ ಅಭಿವೃದ್ಧಿ ಕಾರ್ಯಗಳು ಚುರುಕುಗೊಂಡವು. ಮೂಲಮಠದ ಆಸ್ತಿಯಾಗಿ ದೇಶಾದ್ಯಂತ ೩೫೦೦ ಎಕರೆ ಜಮೀನು ಇತ್ತು. ಇಂದು ಕೆಲವು ಭಾಗ ಅನ್ಯರ ಪಾಲಾಗಿದ್ದು ಇದನ್ನು ಕಾನೂನುಬದ್ಧಗೊಳಿಸಲು ಶ್ರೀ ಚನ್ನಬಸವ ಸ್ವಾಮಿಗಳು ಬಹಳವಾಗಿ ಶ್ರಮಿಸಿದ್ದಾರೆ. ತುಮಕೂರಿನ ಈ ಮಠದ ಸುತ್ತ ಕಟ್ಟಡವನ್ನು ನಿರ್ಮಿಸಿ ಮಠದ ಹಳೆಯ ಕಟ್ಟಡವನ್ನು ನವೀಕರಿಸಿದ್ದಾರೆ.

ವಿಳಾಸ: ಜಗದ್ಗುರು ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕರಿಬಸವಸ್ವಾಮಿಮಠ, ಹೊರಪೇಟೆ, ತುಮಕೂರು.

ಪುರದಮಠ: ತುಮಕೂರು ನಗರದ ಚಿಕ್ಕಪೇಟೆ ಬಡಾವಣೆಯ ಗಾರ್ಡನ್ ರಸ್ತೆಯಲ್ಲಿ ಸ್ಥಾಪಿತವಾಗಿರುವ ಪುರದ ಮಠವು, ಬಾಳೆಹೊನ್ನೂರು ರಂಭಾಪುರಿ ಪೀಠದ ಶಾಖಾಮಠವಾಗಿ, ಕಳೆದ ನಲವತ್ತು ವರ್ಷಗಳ ಹಿಂದೆ ಈ ನಗರದಲ್ಲಿ ಪ್ರಾರಂಭವಾಗಿ, ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿದೆ. ಪುರಾತನ ಕಾಲದಲ್ಲಿ ನಿಟ್ಟೂರುಪುರದಲ್ಲಿ ಈ ಮಠವು ಸ್ಥಾಪನೆಯಾಗಿದ್ದು ೧೯೫೭ರ ತನಕ ನಿಟ್ಟೂರು ಪುರದಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸಿ ಹೆಸರುವಾಸಿಯಾಗಿದ್ದ ಈ ಮಠವು ಕಾರಣಾಂತರಗಳಿಂದ ಇಲ್ಲಿಗೆ ಸ್ಥಳಾಂತರಗೊಂಡಿದೆ.

ಪರಂಪರೆ: ಮಠದ ಪರಂಪರೆಯ ಗುರುಗಳ ಹೆಸರುಗಳು ಲಭ್ಯವಿಲ್ಲದ ಕಾರಣ ಈ ಮಠದ ಪರಂಪರೆಯನ್ನು ನಿಖರವಾಗಿ ಗುರುತಿಸಲು ಅಸಾಧ್ಯವಾಗಿದೆ. ನಿಟ್ಟೂರುಪುರದಲ್ಲಿ ಮೂರು ಗದ್ದುಗೆಗಳು ಸ್ಥಾಪನೆಯಾಗಿವೆ. ಕಲ್ಲೇಶ್ವರಸ್ವಾಮಿ ದೇವಸ್ಥಾನವು ಸಹ ಮಠದ ಆವರಣದಲ್ಲಿದ್ದು ಪುರಾತನ ಮಠ ಇತ್ತು ಎಂಬ ಸಾಕ್ಷಿಗಳನ್ನು ದೃಢಪಡಿಸುತ್ತದೆ.

೧೯೫೬ರಲ್ಲಿ ನಿಟ್ಟೂರುಪುರದ ಮಠದಲ್ಲಿ ಪಟ್ಟಾಧಿಕಾರ ವಹಿಸಿಕೊಂಡು ಶ್ರೀ ಚಿಕ್ಕವೀರ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು ಆಡಳಿತ ನಡೆಸಿದ್ದರು. ತಮ್ಮ ಹನ್ನೆರಡನೆಯ ವರ್ಷದಲ್ಲಿ ಪಟ್ಟಾಧಿಕಾರ ಪಡೆದು ಗುರುತರ ಜವಾಬ್ದಾರಿಯನ್ನು

ವಹಿಸಿಕೊಂಡು, ಮಠದ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬಂದ ಗುರುಗಳು, ಇಲ್ಲಿನ ವಾತಾವರಣ ಸರಿಬರದ ಕಾರಣ ಮಠವನ್ನು ೧೯೫೪ರಲ್ಲಿ ತುಮಕೂರು ನಗರಕ್ಕೆ ವರ್ಗಾಯಿಸಲಾಯಿತು ಎಂದು ವಯೋವೃದ್ಧರಾದ ಗುರುಗಳು ಹೇಳುತ್ತಾರೆ.ಇಲ್ಲಿಗೆ ವರ್ಗಾವಣೆಗೊಂಡ ಮೇಲೆ ಧಾರ್ಮಿಕ ಚಟುವಟಿಕೆಗಳನ್ನು ಪ್ರಾರಂಭಿಸಿ ಧಾರ್ಮಿಕ ಕ್ರಿಯಾದಿಗಳಲ್ಲಿ ಭಕ್ತರಿಗೆ ನೆರವಾಗಿ ಧರ್ಮವನ್ನು ಬೆಳೆಸಿದ್ದಾರೆ. ಮಠದ ಆವರಣದಲ್ಲಿ ಪ್ರಥಮವಾಗಿ ವೈದಿಕ ಪಾಠಶಾಲೆಯನ್ನು ಪ್ರಾರಂಭಿಸಿ ಧರ್ಮಮಾರ್ಗದ ಬಗ್ಗೆ ಹಾಗೂ ಶಾಸ್ತ್ರೋಕ್ತಗಳನ್ನು ಕಲಿಯುವ ಜಂಗಮ ಮಕ್ಕಳಿಗೆ ಅನುಕೂಲ ಕಲ್ಪಿಸಿಕೊಟ್ಟಿದ್ದರು. ಈಗ ಗುರುಗಳು ವಯೋವೃದ್ಧರಾಗಿರುವ ಕಾರಣ ವೈದಿಕ ಪಾಠಶಾಲೆಯನ್ನು ನಿಲ್ಲಿಸಲಾಗಿದೆ. ಈ ಹಿಂದೆ ಉತ್ತರಾಧಿಕಾರಿಗಳನ್ನು ನೇಮಿಸಿತ್ತಾದರೂ ಕಾರಣಾಂತರಗಳಿಂದ ಆ ಗುರುಗಳು ಬಿಟ್ಟು ಹೋಗಿದ್ದಾರೆ. ಈಗ ಪುನಃ ತಮ್ಮ ಸಹೋದರ ಸಂಬಂಧಿಗಳಲ್ಲಿ ಒಬ್ಬರನ್ನು ನೇಮಿಸಿಕೊಳ್ಳುವ ಯೋಚನೆಯಲ್ಲಿದ್ದಾರೆ. ನಿಟ್ಟೂರುಪುರದಲ್ಲಿ ಗದ್ದೆ, ಹೊಲ ಇದ್ದು ಅದನ್ನು ಕೃಷಿಗೆ ಅಣಿಗೊಳಿಸಿ ಆದಾಯ ಬರುವಂತೆ ಮಾಡಲಾಗಿದೆ. ತುಮಕೂರು ನಗರದಲ್ಲಿ ಸ್ಥಾಪನೆಗೊಂಡ ಮಠದ ಸುತ್ತಲಿನ ಮಳಿಗೆಗಳನ್ನು ಬಾಡಿಗೆ ನೀಡಿದ್ದು ಇದರಿಂದ ಬರುವ ಆದಾಯವನ್ನು, ಧಾರ್ಮಿಕ ಹಾಗೂ ಅಭಿವೃದ್ಧಿಕಾರ್ಯಗಳಿಗೆ ಬಳಕೆ ಮಾಡಿಕೊಳ್ಳಲಾಗುತ್ತಿದೆ.

ವಿಳಾಸ:ಷ.ಬ್ರ.ಶ್ರೀ ಚಿಕ್ಕವೀರ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಪುರದಮಠ, ಚಿಕ್ಕಪೇಟೆ, ಗಾರ್ಡನ್ ರಸ್ತೆ, ತುಮಕೂರು.

ಬೆಳ್ಳಾವಿ

ತುಮಕೂರು ತಾಲ್ಲೂಕಿನ ಬೆಳ್ಳಾವಿಯು, ತಾಲ್ಲೂಕು ಕೇಂದ್ರದ ಪಶ್ಚಿಮಕ್ಕೆ ಹನ್ನೆರಡು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ರುದ್ರನ ಮಠವು ಅಸ್ತಿತ್ವದಲ್ಲಿದೆ.

ರುದ್ರನಮಠ: ಬೆಳ್ಳಾವಿ ಹಳ್ಳಿಯಲ್ಲಿ ರಂಭಾಪುರಿ ಪೀಠದ ಶಾಖಾಮಠವಾದ ರುದ್ರನ ಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದಲ್ಲಿ ತುಮಕೂರು ತಾಲ್ಲೂಕಿನ ಹಾಲನೂರು ಗ್ರಾಮದಲ್ಲಿ ಸ್ಥಾಪನೆಯಾಗಿತ್ತು. ಕಾರಣಾಂತರದಿಂದ ಇಲ್ಲಿಗೆ ಸ್ಥಳಾಂತರ ಗೊಂಡು ಧಾರ್ಮಿಕ ಆಚರಣೆಗಳನ್ನು ನೆಡೆಸಿಕೊಂಡು ಬಂದಿದೆ.

ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿರುವ ಈ ಮಠವು ಈ ಭಾಗದ ಧಾರ್ಮಿಕ ಚಟುವಟಿಕೆಗಳಲ್ಲಿ ಪಾಲ್ಗೊಂಡು, ಧರ್ಮದ ಸಾರವನ್ನು ಜನರಿಗೆ ತಿಳಿಯಪಡಿಸಿ ಜನರನ್ನು ಸನ್ಮಾರ್ಗದಲ್ಲಿ ಮುನ್ನಡೆಸುತ್ತಿದೆ. ಹಾಲನೂರು ಗ್ರಾಮದಿಂದ ಇಲ್ಲಿಗೆ ಮಠವನ್ನು ಸ್ಥಳಾಂತರಿಸಿದ ಶಿವಯೋಗಿ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು, ಮಹಾನ್ ಯೋಗಪುರುಷ ರಾಗಿ ಅನೇಕ ಪವಾಡಗಳನ್ನು ಮಾಡಿ ಜನಮನದಲ್ಲಿ ಉಳಿದಿದ್ದರು. ಇವರು ಲೋಕಸಂಚಾರ ಕೈಗೊಂಡು ಬೆಳ್ಳಾವಿಗೆ ಬಂದು ಅನುಷ್ಠಾನ ಗೊಂಡ ಸಂದರ್ಭದಲ್ಲಿ ಅನೇಕ ಪವಾಡಗಳನ್ನು ಸೃಷ್ಟಿಸಿ ದುಷ್ಟ ಶಕ್ತಿಗಳ ಶಿಕ್ಷಕರಾಗಿ ಶಿಷ್ಟಶಕ್ತಿಗಳ ರಕ್ಷಕರಾಗಿ ಈ ಗ್ರಾಮದಲ್ಲಿ ಧರ್ಮದ ಅಲೆಯನ್ನು ಎಬ್ಬಿಸಿ ಧರ್ಮ ಸಂಸ್ಕಾರವಂತ ನಾಡನ್ನಾಗಿ ಪರಿವರ್ತಿಸಿದ್ದರು.

ಪರಂಪರೆ: ಧರ್ಮ ಸಂಸ್ಕಾರ ನೀಡಿದ ಗುರುಗಳಿಗೆ ಇಲ್ಲಿನ ಭಕ್ತರು ಮಠವನ್ನು ಕಟ್ಟಿಸಿಕೊಟ್ಟು ಇಲ್ಲೇ ನೆಲೆ ನಿಲ್ಲುವಂತೆ ಮಾಡಿರುತ್ತಾರೆ. ಗುರುಗಳು ಇಲ್ಲಿ ನೆಲೆನಿಂತ ಮೇಲೆ ಗುರುಗಳ ವಂಶಸ್ಥರು ಗುರುಗಳ ಸೇವೆ ಮತ್ತು ಮಠದ ಧಾರ್ಮಿಕ ಚಟುವಟಿಕೆಗಳ ನಿರ್ವಹಣೆಗಾಗಿ ಗುರುಗಳು ನೆಲೆನಿಂತ ಬೆಳ್ಳಾವಿಗೆ ಆಗಮಿಸಿದರು. ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಧಾರ್ಮಿಕ ಕ್ಷೇತ್ರದಲ್ಲಿ ಅನೇಕ ಪವಾಡಗಳನ್ನು ಮಾಡಿ ಹೆಸರು ಪಡೆದು ಲಿಂಗೈಕ್ಯರಾಗಿರುತ್ತಾರೆ.

೧. ಷ.ಬ್ರ.ಶ್ರೀ ಶಿವಯೋಗಿ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ಶಿವರುದ್ರಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಗುರುವೀರಾರಾಧ್ಯ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು

ಈ ರೀತಿ ಬೆಳ್ಳಾವಿಯಲ್ಲಿ ರುದ್ರನ ಮಠದ ಪರಂಪರೆಯು ಬೆಳೆದು ಬಂದಿದೆ. ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಬಹುತೇಕ ಎಲ್ಲಾ ಗುರುಗಳು ಮಠದ ಸತ್ ಸಂಪ್ರದಾಯದಂತೆ ಹಿಂದಿನ ಗುರುಗಳು ಹಾಕಿ

ಕೊಟ್ಟ ಧರ್ಮಮಾರ್ಗದಲ್ಲಿ ಮುನ್ನಡೆಯುತ್ತಾ ಬಂದಿದ್ದಾರೆ. ಈ ಗ್ರಾಮದ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿನ ಭಕ್ತರ ಧಾರ್ಮಿಕ ಚಟುವಟಿಕೆಗಳಲ್ಲಿ ಪಾಲ್ಗೊಂಡು ಮಠ ಮತ್ತು ಸಮಾಜವನ್ನು ಮುನ್ನಡೆಸುತ್ತಾ ಬಂದಿದ್ದಾರೆ.

ಇಪ್ಪತ್ತನಾಲ್ಕು ವರ್ಷಗಳ ಹಿಂದೆ ಪಟ್ಟಾಧಿಕಾರ ವಹಿಸಿಕೊಂಡಿರುವ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಈ ಮಠವನ್ನು ಅಭಿವೃದ್ಧಿಪಡಿಸಿದ್ದು ಇತ್ತೀಚೆಗೆ ಹೊಸಕಟ್ಟಡವನ್ನು ನಿರ್ಮಿಸಿದ್ದು, ಧಾರ್ಮಿಕ ಕ್ರಿಯೆಗಳನ್ನು ಯಶಸ್ವಿಯಾಗಿ ಆಚರಣೆ ಮಾಡುತ್ತಾ ಬಂದಿದ್ದಾರೆ. ಇತ್ತೀಚೆಗೆ ಮಠದ ಆವರಣದಲ್ಲಿ ವೀರಭದ್ರ ದೇವಸ್ಥಾನವನ್ನು ಸ್ಥಾಪಿಸಿರುತ್ತಾರೆ. ಮಠದಲ್ಲಿ ಶ್ರಾವಣ,ಕಾರ್ತೀಕ ಮಾಸಗಳಲ್ಲಿ ವಿಶೇಷ ಪೂಜೆಗಳನ್ನು ನಡೆಸಲಾಗುತ್ತಿದೆ. ಶಿವರಾತ್ರಿಯಲ್ಲಿ ವಿಶೇಷ ಪೂಜೆ ಏರ್ಪಡಿಸಲಾಗುತ್ತದೆ.

ಮಠದ ಪರಂಪರೆಯಲ್ಲಿ ಬರುವ ಗುರುಗಳ ಗದ್ದುಗೆಗಳು ಮಠದ ಜಮೀನಿನಲ್ಲಿ ಇದ್ದು ಇವುಗಳನ್ನು ಸಂರಕ್ಷಿಸಿ ಪೂಜೆ ಮಾಡಿಕೊಂಡು ಬರಲಾಗುತ್ತಿದೆ. ಮೂಲ ಮಠದಲ್ಲಿ ಆಧಿಕಾರ ನಡೆಸಿದ ಶ್ರೀ ನಂಜುಂಡ ಶಿವಯೋಗಿಗಳ ಗದ್ದುಗೆಯು ಹಾಲನೂರು ಗ್ರಾಮದಲ್ಲಿ ಸ್ಥಾಪನೆಗೊಂಡಿದ್ದು ಈ ಗದ್ದುಗೆಗೆ ಪೂಜೆಯ ವ್ಯವಸ್ಥೆ ಮಾಡಿಸಲಾಗಿದೆ.

ವಿನೂತನ ಸಂಪ್ರದಾಯ: ಈ ಮಠದ ವಿಶೇಷ ಸಂಪ್ರದಾಯವೆಂದರೆ ಮಠದ ಪಟ್ಟಾಧಿಕಾರ ವಹಿಸಿಕೊಂಡ ಗುರುಗಳು ಪಟ್ಟಾಧಿಕಾರದ ಅನುಗ್ರಹವನ್ನು ತಮ್ಮ ಉತ್ತರಾಧಿಕಾರಿಗಳಿಗೆ ನೀಡಿದ ನಂತರ ಗೃಹಸ್ಥಾಶ್ರಮ ಸೇರುವುದು ಈ ಅವಕಾಶ ಬೇರೆ ಎಲ್ಲೂ ನೋಡದ ಒಂದು ವಿಶೇಷತೆಯಾಗಿದೆ. ಮಠಕ್ಕೆ ಈ ಹಿಂದೆ ನೂರಾ ಮೂರು ಎಕರೆ ಜಮೀನು ಇತ್ತು. ಈಗ ಎಲ್ಲಾ ಆಸ್ತಿ ಹೋಗಿ ಕೇವಲ ನಾಲ್ಕು ಎಕರೆ ಮಾತ್ರ ಉಳಿದಿದೆ.

ಈ ರೀತಿ ವಿಶೇಷ ಸಂಪ್ರದಾಯಗಳನ್ನು ಒಳಗೊಂಡ ರುದ್ರನ ಮಠವು ಧಾರ್ಮಿಕ ಆಚಾರ ವಿಚಾರಗಳನ್ನು ಈ ತನಕವು ಮುನ್ನೆಡೆಸಿಕೊಂಡು ಆಧುನಿಕ ಆವಿಷ್ಕಾರಗಳ ಜತೆಜತೆಗೆ ಮುನ್ನಡೆಯುತ್ತಾ ಸಾಗಿದೆ.

ವಿಳಾಸ:ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು,ಶ್ರೀರುದ್ರನ ಮಠ,ಬೆಳ್ಳಾವಿ,ತುಮಕೂರು ತಾ, ತುಮಕೂರು ಜಿಲ್ಲೆ.

ರಾಮೇನಹಳ್ಳಿ

ತುಮಕೂರು ತಾಲ್ಲೂಕಿನ ರಾಮೇನಹಳ್ಳಿಯು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಸುಮಾರು ಹದಿನೈದು ಕಿ.ಮೀ. ದೂರದಲ್ಲಿದೆ. ಇಲ್ಲಿ ವಿರಕ್ತ ಮಠವು ಸ್ಥಾಪನೆಯಾಗಿ ಈ ಗ್ರಾಮದಲ್ಲಿ ಧಾರ್ಮಿಕ ಪ್ರಜ್ಞೆಯನ್ನು ಬೆಳೆಸಿದೆ.

ರಾಮೇನಹಳ್ಳಿಮಠ: ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಗಳು ಲೋಕಸಂಚಾರದಲ್ಲಿದ್ದಾಗ ರಾಮೇನಹಳ್ಳಿಯಲ್ಲಿ ತಪಸ್ಸುಮಾಡಿ ಈ ಜಾಗವನ್ನು ಪಾವನಗೊಳಿಸಿದ್ದಾರೆ. ಶ್ರೀ ಸಿದ್ಧಲಿಂಗೇಶ್ವರರು ಈ ಸ್ಥಳವನ್ನು ತೊರೆದು ಹೋದ ಮೇಲೆ, ಈ ಜಾಗದಲ್ಲಿ ಮಠವು ಸ್ಥಾಪನೆಯಾಗಿ ಬೆಳೆದಿದೆ.

ಪರಂಪರೆ: ಈ ರೀತಿ ಧರ್ಮ ಕ್ಷೇತ್ರದಲ್ಲಿ ಧರ್ಮಪ್ರಚಾರಕ್ಕಾಗಿ ಹುಟ್ಟಿಕೊಂಡ ಈ ಮಠದ ಪರಂಪರೆಯಲ್ಲಿ ನಾಲ್ಕು ಜನ ಗುರುಗಳು ಅಧಿಕಾರ ಪಡೆದು ಮಠವನ್ನು ಬೆಳೆಸಿದ್ದಾರೆ

೧. ಶ್ರೀ ಮ.ನಿ.ಪ್ರ. ಗಂಗಾಧರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ರುದ್ರಮುನಿಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಶಿವಯೋಗಿ ಪಂಚಾಕ್ಷರಿಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಶಿವಪಂಚಾಕ್ಷರಿಸ್ವಾಮಿಗಳು

ಹದಿನೈದನೆಯ ಶತಮಾನದಲ್ಲಿ ಪ್ರಾರಂಭಗೊಂಡ ಮಠದ ಸಂಪ್ರದಾಯದ ನಾಲ್ಕನೆಯ ಗುರುಗಳಾದ ಶ್ರೀ ಶಿವಪಂಚಾಕ್ಷರಿ ಸ್ವಾಮಿಗಳು ೧೯೭೪ರ ಏಪ್ರಿಲ್ ಹತ್ತರಂದು ಪಟ್ಟಾಧಿಕಾರ ಪಡೆದು ಈ ಮಠದ ಆಡಳಿತವನ್ನು ವಹಿಸಿಕೊಂಡ ಮೇಲೆ ಮಠದ ಅಭಿವೃದ್ಧಿಗೆ ಹೊಸಹೊಸ ಯೋಜನೆಗಳನ್ನು ಹಮ್ಮಿಕೊಂಡರು.

ಸಂಘಟನೆ: ಶ್ರೀ ಶಿವಪಂಚಾಕ್ಷರಿ ಸ್ವಾಮಿಗಳು ಸಿದ್ಧಗಂಗೆಯಲ್ಲಿ ವಿದ್ಯಾಭ್ಯಾಸ ಮಾಡಿ, ಸಂಸ್ಕೃತ, ವೇದ ಮತ್ತು ಆಗಮಗಳ ಅಧ್ಯಯನ ನಡೆಸಿ, ವೀರಶೈವ ಧರ್ಮವನ್ನು ಆಚರಣೆಗೆ ತರುವಂತೆ ಸಮಾಜದಲ್ಲಿ ಭಕ್ತರ ಮೇಲೆ ಪ್ರಭಾವ ಬೀರಿ ಧರ್ಮವನ್ನು ಬೆಳೆಸಲು ಸಹಾಯಕರಾಗಿದ್ದಾರೆ. ಸಮಾಜದ ಭಕ್ತರನ್ನು ಸಂಘಟನೆ ಮಾಡಿದ ಗುರುಗಳು, ಸಂಘಟನೆಗೊಂಡ ಸಮಾಜದಿಂದ ಮಠದ ಅಭಿವೃದ್ಧಿಗೆ ಪ್ರೇರಣೆ ದೊರೆತಿದೆ. ಇದರ ಸಲುವಾಗಿ ಮಠದಲ್ಲಿ ಸರ್ವಾಂಗೀಣ ಅಭಿವೃದ್ಧಿ ಕಾರ್ಯಗಳು ನಡೆದು, ಮಠವು ಕೇವಲ ಕೆಲವೇ ವರ್ಷಗಳಲ್ಲಿ ಅಭಿವೃದ್ಧಿಯನ್ನು ಕಾಣುವಂತಾಯಿತು.

ಅಭಿವೃದ್ಧಿ: ಶ್ರೀ ಸಿದ್ಧಲಿಂಗೇಶ್ವರರ ತೋರು ಗದ್ದುಗೆಯನ್ನು ಮಠದ ಮೂಲ ಪೂಜಾ ಸ್ಥಳವನ್ನಾಗಿ ಮಾಡಿ ಸಿದ್ಧಲಿಂಗೇಶ್ವರರ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಅಲ್ಲದೆ ಈ ಪರಂಪರೆಯ ಗುರುಗಳ ಗದ್ದುಗೆಗಳಿಗೆ ಕಲ್ಲುಮಂಟಪವನ್ನು ಕಟ್ಟಿಸಲಾಗಿದೆ. ಸಮುದಾಯ ಭವನ ನಿರ್ಮಾಣವು ಸೇರಿದಂತೆ ಸಿದ್ಧಲಿಂಗೇಶ್ವರರ ತೋರುಗದ್ದುಗೆಯ ಮಂಟಪದ ಸುತ್ತ ಮಠದ ಕಟ್ಟಡವನ್ನು ನೂತನವಾಗಿ ವಿಸ್ತರಿಸಿ ಅಭಿವೃದ್ಧಿಪಡಿಸಲಾಗಿದೆ.

ಧಾರ್ಮಿಕ ಆಚರಣೆಗಳು: ಎಡೆಯೂರಿನಲ್ಲಿ ಶ್ರೀ ಸಿದ್ಧಲಿಂಗೇಶ್ವರರ ಜಾತ್ರೆಯ ದಿನವೇ ರಾಮೇನಹಳ್ಳಿಯಲ್ಲಿ ಜಾತ್ರೆಯನ್ನು ನಡೆಸಲಾಗುತ್ತಿದೆ. ಶ್ರಾವಣ ಮತ್ತು ಕಾರ್ತೀಕ ಮಾಸ ಹಾಗೂ ಪ್ರತಿ ಹುಣ್ಣಿಮೆಯ ದಿನ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಈ ದಿನಗಳಲ್ಲಿ ಬರುವ ಭಕ್ತರಿಗೆ ಅನ್ನ ದಾಸೋಹವನ್ನು ಕಲ್ಪಿಸಲಾಗುತ್ತಿದೆ.

ವಿಳಾಸ: ಶ್ರೀ ಶಿವಪಂಚಾಕ್ಷರಿ ಸ್ವಾಮಿಗಳು, ಶ್ರೀ ವಿರಕ್ತಮಠ, ರಾಮೇನಹಳ್ಳಿ, ತುಮಕೂರು ಜಿಲ್ಲೆ.

ಹೆಬ್ಬೂರು

ತುಮಕೂರು ತಾಲ್ಲೂಕಿನ ಹೆಬ್ಬೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹದಿನೈದು ಕಿ.ಮೀ. ದೂರದಲ್ಲಿದೆ. ಶ್ರೀ ಅತಿಥಿಮಠವು ಅಸ್ತಿತ್ವದಲ್ಲಿತ್ತು.

ಅತಿಥಿ ಮಠ: ಹೆಬ್ಬೂರು ಗ್ರಾಮದಲ್ಲಿ ರಂಭಾಪುರಿಪೀಠದ ಪುತ್ರವರ್ಗದ ಮಠವು ಅಸ್ತಿತ್ವಗೊಂಡು ಈ ನಾಡಿನಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದಿತ್ತು. ಈಗ ಮಠದಲ್ಲಿ ಉತ್ತರಾಧಿಕಾರಿಗಳು ಯಾರೂ ಇಲ್ಲದೆ ಹಿಂದಿನ ಗುರುಗಳ ವಂಶಸ್ಥರೇ ಮಠದ ಗದ್ದುಗೆಗಳಿಗೆ ಪೂಜೆ ಮತ್ತು ಗ್ರಾಮದ ಭಕ್ತರ ಮನೆಯ ಧಾರ್ಮಿಕ ಕ್ರಿಯಾದಿಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಈ ಮಠದ ಆವರಣದಲ್ಲಿ ಈಶ್ವರ ದೇವಸ್ಥಾನ ಇದ್ದು ಇಲ್ಲಿಗೂ ಪೂಜೆ ನಡೆಸಲಾಗುತ್ತಿದೆ. ಶ್ರಾವಣ, ಕಾರ್ತೀಕ ಮತ್ತು ಶಿವರಾತ್ರಿಯ ದಿನಗಳಲ್ಲಿ ವಿಶೇಷ ಪೂಜೆಯನ್ನು ಮಾಡಲಾಗುತ್ತಿದೆ.

❑

ತುರುವೇಕೆರೆ ತಾಲ್ಲೂಕು

ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕು ಕೃಷಿ ಅವಲಂಬಿತ ಪ್ರದೇಶ ಈ ತಾಲ್ಲೂಕಿನಲ್ಲಿ ವೀರಶೈವರ ಸಂಖ್ಯೆ ಕಡಿಮೆ ಇದ್ದರೂ ಧರ್ಮದ ಬೆಳವಣಿಗೆಗೆ ಈ ತಾಲ್ಲೂಕು ತನ್ನ ಕಿರುಕಾಣಿಕೆಯನ್ನು ನೀಡಿದೆ. ಈ ತಾಲ್ಲೂಕಿನಲ್ಲಿ ಎರಡು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ಅಂಬಲದೇವರಹಳ್ಳಿ

ತುರವೇಕೆರೆ ತಾಲ್ಲೂಕಿನ ಅಂಬಲದೇವರಹಳ್ಳಿಯು ತಾಲ್ಲೂಕು ಕೇಂದ್ರದ ಪೂರ್ವಕ್ಕೆ ಎಂಟು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ಉಜ್ಜಿನೇಶ್ವರ ಮಠವು ಅಸ್ತಿತ್ವದಲ್ಲಿದೆ.

ಉಜ್ಜಿನೇಶ್ವರ ಮಠ: ಅಂಬಲದೇವರಹಳ್ಳಿಯ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ಉಜ್ಜಿನೇಶ್ವರ ಮಠವು ಬಾಳೆಹೊನ್ನೂರು ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿ ಪುರಾತನ ಕಾಲದಿಂದಲೂ ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದಿದೆ.

ಶ್ರೀ ಉಜ್ಜಿನೇಶ್ವರ ಶಿವಾಚಾರ್ಯ ಸ್ವಾಮಿಗಳು ಈ ನೆಲದಲ್ಲಿ ಅನುಷ್ಠಾನಗೊಂಡು ಈ ಗ್ರಾಮದ ಭಕ್ತರ ಅಪೇಕ್ಷೆಯ ಮೇರೆಗೆ ಈ ನೆಲದಲ್ಲಿ ಉಳಿಯಲು ನಿರ್ಧರಿಸುತ್ತಾರೆ. ಗುರುಗಳ ಈ ನಿರ್ಧಾರಕ್ಕೆ ಸಂತೋಷಗೊಂಡ ಭಕ್ತರು ಮಠವನ್ನು ಕಟ್ಟಿಸಿ ಧಾರ್ಮಿಕ ಚಟುವಟಿಕೆಗಳು ನಡೆಯುವಂತೆ ಅನುವು ಮಾಡಿಕೊಟ್ಟರು. ಇಲ್ಲಿ ನೆಲೆಸಿದ ಗುರುಗಳು ಅನೇಕ ಪವಾಡಗಳನ್ನು ಸೃಷ್ಟಿಸಿ ಧರ್ಮಜಾಗೃತಿಯನ್ನುಂಟು ಮಾಡಿದರು. ಈ ಗುರುಗಳ ನಂತರದ ಮಠಾಧೀಶ್ವರರು ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿದ್ದು ಕಾಲಾನಂತರ ಮಠಾಧೀಶ್ವರರಿಲ್ಲದೆ ಖಾಲಿ ಉಳಿಯಿತು.

ದೀರ್ಘಕಾಲದ ನಂತರ ಅಧಿಕಾರ: ಕಳೆದ ಐವತ್ತು ವರ್ಷಗಳ ಹಿಂದೆ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಅಧಿಕಾರ ನಡೆಸಿದ್ದಾರೆ. ಆದರೆ ಈ ಗುರುಗಳ ಗದ್ದುಗೆ ಎಲ್ಲಿ ನಿರ್ಮಾಣವಾಗಿದೆ ಎಂದು ಪತ್ತೆಯಾಗಿಲ್ಲ. ನಂತರ ಕಳೆದ ಐವತ್ತು ವರ್ಷಗಳಿಂದ ಮಠಾಧೀಶ್ವರರಿಲ್ಲದೆ ಖಾಲಿ ಉಳಿದಿದ್ದ ಮಠಕ್ಕೆ ೧೯೮೭ರ ಮೇ ಹತ್ತರಂದು ಶ್ರೀ ಉಜ್ಜಿನೇಶ್ವರ ಶಿವಾಚಾರ್ಯ ಸ್ವಾಮಿಗಳಿಗೆ ಪಟ್ಟಾಧಿಕಾರವನ್ನು ಮಾಡಲಾಗಿದ್ದು, ಕಳೆದ ಐವತ್ತು ವರ್ಷಗಳಿಂದ ಖಾಲಿ ಉಳಿದು ಜೀರ್ಣಗೊಂಡಿದ್ದ ಮಠವನ್ನು ಶ್ರೀ ಉಜ್ಜಿನೇಶ್ವರ ಶಿವಾಚಾರ್ಯ ಸ್ವಾಮಿಗಳು ತಮ್ಮ ಅವಿರತ ಶ್ರಮದಿಂದ ಅಭಿವೃದ್ಧಿಪಡಿಸಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಮಠದ ಆಸ್ತಿಯಾಗಿರುವ ಎರಡೂವರೆ ಎಕರೆ ಜಮೀನನ್ನು ಅಭಿವೃದ್ಧಿಪಡಿಸಿ ಮಠಕ್ಕೆ ಆದಾಯ ಬರುವಂತೆ ಮಾಡಿದ್ದಾರೆ. ೧೯೯೦ರಲ್ಲಿ ಕರ್ತೃಗುರುಗಳ ಗದ್ದುಗೆಯ ಸುತ್ತ ಕಾಂಪೌಂಡ್ ನಿರ್ಮಿಸಿ ಮುಜರಾಯಿ ಇಲಾಖೆಯಿಂದ ಮಠದ ಕಟ್ಟಡದ ನವೀಕರಣವನ್ನು ಮಾಡಿಸುವ ಯೋಜನೆಯನ್ನು ರೂಪಿಸಿಕೊಂಡಿದ್ದಾರೆ. ಕೇವಲ ಐದು-ಆರು ವೀರಶೈವ ಕುಟುಂಬಗಳಿರುವ ಈ ಗ್ರಾಮದಲ್ಲಿ ಭಕ್ತರ ನೆರವು ಸಿಗುವುದು ದೂರದ ಮಾತಾಗಿದೆ. ಈ ಕಾರಣಕ್ಕೆ ಈಗಿನ ಗುರುಗಳು ನಾಡಿನ ನಾನಾಕಡೆ ಸಂಚರಿಸಿ ಮಠವನ್ನು ಅಭಿವೃದ್ಧಿಪಡಿಸಲು ಶ್ರಮಿಸುತ್ತಿದ್ದಾರೆ. ಮಠದ ಕರ್ತೃ ಗುರುಗಳ ಗದ್ದುಗೆಗೆ ದಿನನಿತ್ಯ ಪೂಜೆ ಮಾಡಲಾಗುತ್ತಿದೆ. ಅಂಬಲದೇವರಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಕ್ತರ ಧಾರ್ಮಿಕ ಕ್ರಿಯಾದಿಗಳಲ್ಲಿ ಪಾಲ್ಗೊಂಡು ಧಾರ್ಮಿಕ ಮಾರ್ಗದರ್ಶನ ನೀಡುತ್ತಿದ್ದಾರೆ. ೧೯೯೯ರ ಮೇ ಇಪ್ಪತ್ತೇಳರಂದು ಮಠದ ಆವರಣದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ಈ ಸಂದರ್ಭದಲ್ಲಿ ಈಗಿನ ಗುರುಗಳ ಪಟ್ಟಾಭಿಷೇಕದ ದ್ವಾದಶ ಮಹೋತ್ಸವವನ್ನು ಆಚರಣೆ ಮಾಡಲಾಗಿದೆ. ಶ್ರೀ ಉಜ್ಜಿನೇಶ್ವರ ಸ್ವಾಮಿಗಳು ಮಠದ ಧಾರ್ಮಿಕ ಚಟುವಟಿಕೆಗಳಲ್ಲಿ ಜೀವಂತಿಕೆ ತಂದು ಮಠವನ್ನು ಬೆಳೆಸತೊಡಗಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಉಜ್ಜಿನೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಉಜ್ಜಿನೇಶ್ವರ ಮಠ, ಅಂಬಲದೇವರಹಳ್ಳಿ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ.

ತುರುವೇಕೆರೆ

ತುಮಕೂರು ಜಿಲ್ಲೆಯ ತುರುವೇಕೆರೆಯು ತಾಲ್ಲೂಕಿನ ಕೇಂದ್ರಸ್ಥಳ. ಸಂಖ್ಯಾ ದೃಷ್ಟಿಯಿಂದ ವೀರಶೈವರ ಸಂಖ್ಯೆ ಕಡಿಮೆ ಇರುವ ಇಲ್ಲಿ ವೀರಶೈವ ಧರ್ಮವನ್ನು ಬೆಳೆಸಲು ಶ್ರೀ ಶಿವಯೋಗಮಂದಿರ ವಿರಕ್ತಮಠವು ಸ್ಥಾಪನೆಯಾಗಿದೆ.

ಶಿವಯೋಗಮಂದಿರ ವಿರಕ್ತಮಠ: ತುರುವೇಕೆರೆ ಪಟ್ಟಣದ ಪೂರ್ವಭಾಗದಲ್ಲಿ ಚೀಲಾಳ ಸಮಯದ ವಿರಕ್ತ ಮಠವು ಕಳೆದ ಒಂದು ದಶಕದಿಂದ ಪುನರ್‌ಸ್ಥಾಪನೆಗೊಂಡು, ಇಲ್ಲಿನ ಧಾರ್ಮಿಕ ಚಟುವಟಿಕೆಯ ಕೇಂದ್ರಬಿಂದುವಾಗಿ ರೂಪುಗೊಂಡು ಇಲ್ಲಿನ ವೀರಶೈವರ ಧಾರ್ಮಿಕ ಕೇಂದ್ರಬಿಂದುವಾಗಿ ಬೆಳೆದಿದ್ದ ಮಠವು ಕಾರಣಾಂತರಗಳಿಂದ ಜೀರ್ಣಗೊಂಡು ತನ್ನ ಅಸ್ತಿತ್ವವನ್ನು ಕಳೆದುಕೊಂಡಿತ್ತು. ಊರಿನ ಪ್ರಮುಖರು ಜೀರ್ಣಗೊಂಡಿದ್ದ ಮಠವನ್ನು ಪುನರ್‌ಸ್ಥಾಪಿಸುವ ಬಗ್ಗೆ ಚಿಂತನೆ ನಡೆಸಿದರು. ಈ ಭಾಗದಲ್ಲಿ ವೀರಶೈವ ಧರ್ಮಾಚರಣೆಯನ್ನು ನಡೆಸಿಕೊಂಡು ಹೋಗಲು ಗುರುಗಳ ಮಾರ್ಗದರ್ಶನ ಆವಶ್ಯಕ ಎಂದು ತೀರ್ಮಾನಿಸಿದರು. ಪಟ್ಟಣದ ವೀರಶೈವ ಮುಖಂಡರು ತಮ್ಮ ನಿರ್ಧಾರವನ್ನು ತಿಳಿಸಲು ನೊಣವಿನಕೆರೆಯ ಗುರುಗಳಲ್ಲಿಗೆ ಬಂದರು. ತಮ್ಮ ನಿರ್ಧಾರಗಳನ್ನು ಗುರುಗಳಿಗೆ ತಿಳಿಸಿದ ಭಕ್ತರು ತುರುವೇಕೆರೆಯ ಜೀರ್ಣಗೊಂಡ ಮಠವನ್ನು ತಮ್ಮ ವಶಕ್ಕೆ ತೆಗೆದುಕೊಂಡು ಜೀರ್ಣೋದ್ಧಾರ ಮಾಡಬೇಕಲ್ಲದೆ, ತುರುವೇಕೆರೆಯಲ್ಲಿ ಧಾರ್ಮಿಕ ಜ್ಯೋತಿಯನ್ನು ಬೆಳಗಿಸಬೇಕೆಂದು ಮನವಿ ಯನ್ನು ಸಲ್ಲಿಸಿದರು.

ಒಪ್ಪಿದ ಗುರುಗಳು: ತುರುವೇಕೆರೆಯ ಭಕ್ತರ ಮನವಿಗೆ ಸ್ಪಂದಿಸಿದ ಗುರುಗಳು ಮಠದ ಜೀರ್ಣೋದ್ಧಾರ ಹಾಗೂ ಮುಂದಿನ ಧಾರ್ಮಿಕ ಚಟುವಟಿಕೆಗಳಿಗೆ ಅದಾಯದ ಮೂಲವನ್ನು ನೀಡುವುದಾದಲ್ಲಿ ಜೀರ್ಣಗೊಂಡ ಮಠವನ್ನು ಅಭಿವೃದ್ಧಿಪಡಿಸುವ ಭರವಸೆಯನ್ನು ನೀಡಿದರು. ಗುರುಗಳು ಒಪ್ಪಿದ ಮೇಲೆ ಭಕ್ತರು ಮಠದ ಎರಡು ಎಕರೆ ಜಮೀನಿನ ಜತೆಗೆ ಇನ್ನೂ ಇಪ್ಪತ್ತು ಎಕರೆ ಜಮೀನನ್ನು ರೂಢಿಸಿಕೊಡುವ ತೀರ್ಮಾನ ಕೈಗೊಂಡರು. ಈ ಎಲ್ಲಾ ಪ್ರಕ್ರಿಯೆಗಳು ಮುಗಿದ ಮೇಲೆ ಮಠದ ಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡ ನೊಣವಿನಕೆರೆಯ ಶ್ರೀ ಶಿವಯೋಗೀಶ್ವರ ದೇಶಿಕೇಂದ್ರ ಸ್ವಾಮಿಗಳು ಮೂಲ ಮಠದ ಸನಿಹದಲ್ಲಿ ಚಿಕ್ಕದಾಗಿ ಮಠವನ್ನು ನಿರ್ಮಿಸಿದರು.

ಅಭಿವೃದ್ಧಿ: ಚಿಕ್ಕದಾಗಿ ನಿರ್ಮಾಣಗೊಂಡ ಮಠದಲ್ಲಿ ಧಾರ್ಮಿಕ ಕಾರ್ಯಗಳು ಪ್ರಾರಂಭಗೊಂಡವು. ತುರುವೇಕೆರೆಯ ಮೂಲ ಮಠದ ಗದ್ದುಗೆಗಳನ್ನು ನವೀಕರಣಗೊಳಿಸಿ ಮಠದಿಂದ ಪೂಜೆಗೆ ವ್ಯವಸ್ಥೆ ಮಾಡಿಸಿದರು. ಮಠದ ಕಟ್ಟಡವನ್ನು ವಿಸ್ತರಿಸಲು ಯೋಜನೆ ತಯಾರಿಸಿ ಕಾರ್ಯರಂಭ ಮಾಡಿದರು. ಇದಕ್ಕೆ ಮೊದಲ ಹಂತವಾಗಿ ಮಠದ ಕರ್ತೃಗುರುಗಳಾದ ಕಲ್ಮಠಾಧೀಶ್ವರರ ಪೂರ್ವಗದ್ದುಗೆಗೆ ಕಲ್ಲಿನ ಮಂಟಪವನ್ನು ನಿರ್ಮಿಸಿದರು. ಉರಿಗದ್ದುಗೆಗೆ ಮಂಟಪವನ್ನು ನಿರ್ಮಿಸಿ ಸೋಮೇಶ್ವರರ ಗದ್ದುಗೆಗೆ ಮಂಟಪವನ್ನು ನಿರ್ಮಿಸಿದ್ದಾರೆ. ನಾಗರು ಹಾಗೂ ಲಿಂಗಸ್ಥಾಪನೆಯನ್ನು ಮಾಡಿ ಪೂಜಾ ಕಾರ್ಯವನ್ನು ನಡೆಸಿದ್ದಾರೆ.

ಪೂರ್ವ ಮಠದ ಎರಡು ಎಕರೆ ಜಮೀನಿನ ಜತೆಗೆ ಭಕ್ತರು ರೂಢಿಸಿಕೊಟ್ಟ ಇಪ್ಪತ್ತು ಎಕರೆ ಜಮೀನನ್ನು ನೀರಾವರಿಗೆ ಯೋಗ್ಯಗೊಳಿಸಿ ಹೆಚ್ಚು ಆದಾಯ ಬರುವಂತೆ ಮಾಡಿದರು. ಮಠದ ಸುತ್ತ ಇದ್ದ ಜಮೀನಿನಲ್ಲಿ ತೆಂಗಿನತೋಟವು ತಲೆಎತ್ತಿತು. ಕೆಲವೇ ವರ್ಷಗಳಲ್ಲಿ ಮಠವು ಜೀವಂತಿಕೆ ಪಡೆದು ತಾಲ್ಲೂಕು ಕೇಂದ್ರದಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರಬಿಂದುವಾಗಿ ಬೆಳೆದಿರುವುದನ್ನು ನೋಡಿದ ಇಲ್ಲಿನ ಭಕ್ತರು ಹಿರಿಹಿರಿ ಹಿಗ್ಗಿದರು.ಮಠದ ಎಲ್ಲಾ ಕಾರ್ಯ ಚಟುವಟಿಕೆಗಳಲ್ಲಿ ಸ್ವಯಂ ಸೇವಕರಾಗಿ ದುಡಿಯತೊಡಗಿದರು. ಗುರುಗಳು ಇಲ್ಲಿನ ಭಕ್ತರ ನೆರವು ಪಡೆದು ಮಠದ ಆವರಣದಲ್ಲಿ ಕಲ್ಯಾಣ ಮಂಟಪವನ್ನು ನಿರ್ಮಿಸಿ, ಸಾರ್ವಜನಿಕ ಉಪಯೋಗಕ್ಕೆ ನೀಡಿದ್ದಾರೆ.

ಸಾಮಾಜಿಕ ಕಾರ್ಯಗಳು: ಮಠವು ತನ್ನ ಧಾರ್ಮಿಕ ಕಾರ್ಯಗಳನ್ನು ಪುನರ್‌ಪ್ರಾರಂಭ ಮಾಡಿದ ಮೇಲೆ ಪ್ರಥಮವಾಗಿ ಐವತ್ತೆರಡು ಜೋಡಿಗಳ ಸಾಮೂಹಿಕ ವಿವಾಹವನ್ನು ನೆರವೇರಿಸಿದರು. ಭಕ್ತರ ಸಂಘಟನೆಯನ್ನು ಮಾಡತೊಡಗಿದ ಗುರುಗಳು ಪಾರ್ವತಿ ಬಳಗ ಹಾಗೂ ಬಸವೇಶ್ವರ ಯುವಕ ಸಂಘಗಳನ್ನು ಪ್ರಾರಂಭಿಸುವಂತೆ ಪ್ರೇರೇಪಿಸಿ ಸಮಾಜದಲ್ಲಿ ಸರ್ವ ರೀತಿಯ

ಅಭಿವೃದ್ಧಿ ಸಂಘಟನೆಗಳನ್ನು ಧಾರ್ಮಿಕ ಮತ್ತು ಸಾಂಸ್ಕೃತಿಕ ವಿಚಾರ ವೇದಿಕೆಗಳನ್ನಾಗಿ ರೂಪಿಸಿ ಬೆಳೆಸಿದರು.

ಧಾರ್ಮಿಕ ಕಾರ್ಯಗಳು: ಕಳೆದ ಒಂದು ದಶಕದಲ್ಲಿ ಪ್ರಾರಂಭಗೊಂಡ ಈ ಮಠದಲ್ಲಿ ಗದ್ದುಗೆಗಳ ಪೂಜೆ, ಇತ್ತೀಚೆಗೆ ಸ್ಥಾಪಿಸಲ್ಪಟ್ಟ ಲಿಂಗ, ನಾಗಮೂರ್ತಿಗಳಿಗೆ ಪೂಜಾ ವ್ಯವಸ್ಥೆ ದಿನ ನಿತ್ಯದ ಧಾರ್ಮಿಕ ಕಾರ್ಯಕ್ರಮಗಳಾಗಿವೆ. ಪ್ರತಿ ಹುಣ್ಣಿಮೆಯಲ್ಲಿ ಉಚಿತ ಸಾಮೂಹಿಕ ವಿವಾಹಗಳನ್ನು ಏರ್ಪಡಿಸಿ ಬಡವರ ಬದುಕಿಗೆ ಹೊರೆಯಾಗುವುದನ್ನು ತಪ್ಪಿಸಿದ್ದಾರೆ. ಪ್ರತಿ ತಿಂಗಳ ಹುಣ್ಣಿಮೆ ಕಾರ್ಯಕ್ರಮದಲ್ಲಿ ಧಾರ್ಮಿಕ ವಿಚಾರ ಗೋಷ್ಠಿಗಳನ್ನು ಏರ್ಪಡಿಸಿ ನಾಡಿನ ಹೆಸರಾದಂಥ ವಿಚಾರವಂತರು ಹಾಗೂ ಹಿರಿಕಿರಿಯ ಮಠಾಧೀಶ್ವರರನ್ನು ಕರೆಸಿ ಉಪನ್ಯಾಸ ಮತ್ತು ಉಪದೇಶಗಳನ್ನು ಮಾಡಿಸುತ್ತಾರೆ. ಈ ಮೂಲಕ ಧಾರ್ಮಿಕ ವಿಚಾರಗಳನ್ನು ಭಕ್ತರಿಗೆ ಮುಟ್ಟಿಸಿ ವೀರಶೈವ ಧರ್ಮವನ್ನು ಬೆಳೆಸುತ್ತಿದ್ದಾರೆ. ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯವಾಗಿ ದುಡಿದ ಗಣ್ಯರಿಗೆ ಸನ್ಮಾನ ನೀಡಿ ಗೌರವಿಸುವುದು ಇಲ್ಲಿನ ವಾಡಿಕೆಯಾಗಿದೆ. ಪ್ರತಿ ಶಿವರಾತ್ರಿ ಹಾಗೂ ಬಸವ ಜಯಂತಿಯನ್ನು ಅರ್ಥ ಪೂರ್ಣವಾಗಿ ಆಚರಿಸುತ್ತಾ ಬಂದಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಶಿವಯೋಗೀಶ್ವರ ದೇಶಿಕೇಂದ್ರ ಸ್ವಾಮಿಗಳು, ಶ್ರೀ ಶಿವಯೋಗಮಂದಿರ ವಿರಕ್ತಮಠ, ತುರುವೇಕೆರೆ, ತುಮಕೂರು ಜಿಲ್ಲೆ.

❑

ದಕ್ಷಿಣಕನ್ನಡ ಜಿಲ್ಲೆ

ದಕ್ಷಿಣ ಕನ್ನಡ ಜಿಲ್ಲೆ



ಮಂಗಳೂರು ತಾಲ್ಲೂಕು : ೧. ಗುರುಪುರ
ಬಂಟವಾಳ ತಾಲ್ಲೂಕು : ೧. ಕರ್ನಾಡು ೨. ವಿಟ್ಲ
ಬೆಳ್ತಂಗಡಿ ತಾಲ್ಲೂಕು : ೧. ಉಪ್ಪಿನ ಅಂಗಡಿ
ಸುಳ್ಯ ತಾಲ್ಲೂಕು : ೧. ಸುಬ್ರಹ್ಮಣ್ಯ

ರಾಜ್ಯದ ಕರಾವಳಿ ಜಿಲ್ಲೆಯಾದ ದಕ್ಷಿಣಕನ್ನಡ ಜಿಲ್ಲೆಯು ಉಡುಪಿ, ಚಿಕ್ಕಮಗಳೂರು, ಹಾಸನ ಹಾಗೂ ಕೊಡಗು ಜಿಲ್ಲೆಗಳಿಂದ ಸುತ್ತುವರೆದಿರುವುದಲ್ಲದೆ, ಕೇರಳ ಗಡಿ ಪ್ರದೇಶವನ್ನು ಒಳಗೊಂಡಿದೆ. ೧೯೯೭ ರಲ್ಲಿ ಹೊಸ ಜಿಲ್ಲೆಗಳು ರಚನೆಗೊಂಡ ಸಂದರ್ಭದಲ್ಲಿ ವಿಭಜನೆಗೊಂಡ ದಕ್ಷಿಣಕನ್ನಡ ಜಿಲ್ಲೆಯು ಮಂಗಳೂರು, ಬಂಟವಾಳ, ಬೆಳ್ತಂಗಡಿ, ಪುತ್ತೂರು ಮತ್ತು ಸೂಳ್ಯ ತಾಲ್ಲೂಕುಗಳನ್ನು ಒಳಗೊಂಡು ಪುನರ್‌ರಚಿತಗೊಂಡಿತು.

ಸಾಗರೋತ್ಪನ್ನಗಳು,ಗೋಡಂಬಿ ಹಾಗೂ ಅಡಿಕೆ ಬೆಳೆಯಿಂದ ಹೆಚ್ಚು ಶ್ರೀಮಂತಗೊಂಡ ಜಿಲ್ಲೆಯಾಗಿ, ಪ್ರಾಕೃತಿಕವಾಗಿಯೂ ಸಹ, ರಾಜ್ಯದ ಬೇರೆ ಜಿಲ್ಲೆಗಳಿಗಿಂತ ಹೆಚ್ಚು ರಮಣೀಯವಾಗಿದೆ. ಗಿರಿಕಂದರಗಳ ಈ ನಾಡು ಐತಿಹಾಸಿಕವಾಗಿಯೂ ಹೆಚ್ಚು ಶ್ರೀಮಂತಗೊಂಡಿದೆ. ಈ ಜಿಲ್ಲೆಯನ್ನು ಕೆಳದಿ ಅರಸರು ಬಹಳ ಕಾಲದವರೆಗೆ ಆಳ್ವಿಕೆ ಮಾಡಿ ಶ್ರೀಮಂತ ಹಾಗೂ ಸಂಸ್ಕಾರವಂತ ಜಿಲ್ಲೆಯನ್ನಾಗಿ ರೂಪಿಸಿದ್ದಾರೆ.

ಮಂಗಳೂರಿನಿಂದ ದಕ್ಷಿಣಕ್ಕಿರುವ ಉಳ್ಳಾಲವನ್ನು ಚೌಟರಸರು ಇಪ್ಪತ್ತೈದು ವರ್ಷಗಳ ಕಾಲ ಆಳಿದರು. ಇವರಲ್ಲಿ ರಾಣಿ ಅಬ್ಬಕ್ಕ ದೇವಿ ಹೆಚ್ಚು ಪ್ರಸಿದ್ಧಿಯಾಗಿದ್ದಳು. ಜೈನರಾದ ಅಜಿಲಾರು, ಬಂಕಿ ಅರಸರು, ಹೆಗ್ಗಡೆಯವರು, ಕೆಳದಿ ಮತ್ತು ವಿಜಯನಗರದ ರಾಜರು ಸಾಮಂತರಾಗಿ ಆಳ್ವಿಕೆಯನ್ನು ನಡೆಸಿ ಧಾರ್ಮಿಕ, ಸಾಂಸ್ಕೃತಿಕ ಮತ್ತು ಐತಿಹಾಸಿಕವಾಗಿ ಈ ಜಿಲ್ಲೆಯು ಹೆಸರು ಮಾಡಲು ಸಹಕಾರಿಯಾಗಿದ್ದಾರೆ.

ಐತಿಹಾಸಿಕ, ಪ್ರಾಕೃತಿಕ ಮತ್ತು ಆರ್ಥಿಕವಾಗಿ ಶ್ರೀಮಂತಗೊಂಡಿರುವ ಈ ಜಿಲ್ಲೆಯು, ಧಾರ್ಮಿಕ ಕ್ಷೇತ್ರದಲ್ಲಿಯೂ ಹೆಚ್ಚು ಶ್ರೀಮಂತವಾಗಿ ಬೆಳೆದಿದೆ. ಬೆಳ್ತಂಗಡಿ ತಾಲ್ಲೂಕಿನ ಧರ್ಮಸ್ಥಳವು ನಡೆಸುತ್ತಿರುವ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳು ಕನ್ನಡ ನಾಡಿಗೆ ಸೀಮಿತವಾಗದೆ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲೂ ಹೆಚ್ಚು ಹೆಸರು ಮಾಡಿದೆ. ಕುಕ್ಕೆ ಸುಬ್ರಹ್ಮಣ್ಯ, ಕಟೀಲದ ದೇವಾಲಯಗಳು ಜಿಲ್ಲೆಯ ಧಾರ್ಮಿಕ ಕ್ಷೇತ್ರದಲ್ಲಿ ಹೆಚ್ಚು ಹೆಸರು ಮಾಡಿವೆ. ಧಾರ್ಮಿಕವಾಗಿ ನಾಡಿಗೆ ತನ್ನದೇ ಆದ ಕೊಡುಗೆಯನ್ನು ನೀಡಿರುವ ದಕ್ಷಿಣಕನ್ನಡ ಜಿಲ್ಲೆಯಲ್ಲಿ, ವೀರಶೈವ ಧರ್ಮವು ಹದಿನೈದನೆಯ ಶತಮಾನದಲ್ಲಿ ಚಿಗುರೊಡೆದು ಕೆಳದಿಯ ಸದಾಶಿವ ನಾಯಕನ ಕಾಲದಲ್ಲಿ (ಕ್ರಿ.ಶ.೧೫೧೩) ಪ್ರಬಲವಾಗಿ ಬೆಳೆಯತೊಡಗಿತು ಎಂದು ಹೇಳಬಹುದು.

ಎಡೆಯೂರು ಶ್ರೀ ಸಿದ್ಧಲಿಂಗೇಶ್ವರರು ತಮ್ಮ ೭೦೧ ವಿರಕ್ತರೊಡನೆ ಲೋಕಸಂಚಾರಕ್ಕೆ ಬಂದವರು ಕೇರಳ ರಾಜ್ಯದಲ್ಲಿ ಸಂಚಾರವನ್ನು ಮುಗಿಸಿ, ದಕ್ಷಿಣಕನ್ನಡ ಜಿಲ್ಲೆಯ ಅನೇಕ ಸ್ಥಳಗಳಲ್ಲಿ ನೆಲೆನಿಂತು ಧರ್ಮ ಜಾಗೃತಿಯನ್ನುಂಟು ಮಾಡಿ ಮಠಗಳನ್ನು ಸ್ಥಾಪಿಸಿ ಬಂದಿರುತ್ತಾರೆ. ಅಂದು ಶ್ರೀ ಸಿದ್ಧಲಿಂಗೇಶ್ವರರ ಕಾಲದಲ್ಲಿ ಸ್ಥಾಪನೆಗೊಂಡ ಮಠಗಳಿಗೆ ಕೆಳದಿ ಅರಸರು ಆಶ್ರಯವನ್ನು ನೀಡಿ ಬೆಳೆಯಲು ಕಾರಣಕರ್ತರಾದರು. ಸದಾಶಿವ ನಾಯಕನ ನಂತರ ಹಿರಿಯ ವೆಂಕಟಪ್ಪ ನಾಯಕ (ಕ್ರಿ.ಶ.೧೫೮೨-೧೬೩೦), ಶಿವಪ್ಪ ನಾಯಕ (ಕ್ರಿ.ಶ.೧೬೪೬-೧೬೬೧), ಕಿರಿಯ ಸೋಮಶೇಖರ ನಾಯಕ (ಕ್ರಿ.ಶ.೧೬೬೨-೧೬೭೧) ಮತ್ತು ಚನ್ನಮ್ಮಾಜಿ (ಕ್ರಿ.ಶ.೧೬೭೨-೧೬೯೮) ಕಾಲದಲ್ಲಿ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಮತ್ತಷ್ಟು ಮಹಂತಿನ ಮಠಗಳು ಸ್ಥಾಪನೆಗೊಂಡಿವೆ ಎಂದು ತಿಳಿದು ಬಂದಿದೆ.

ಕೆಳದಿ ಅರಸರು ಕಡಲಾಚೆಯ ದೇಶಗಳೊಂದಿಗೆ ಸಂಬಾರ ಪದಾರ್ಥಗಳ ವ್ಯಾಪಾರ ಸಂಪರ್ಕವನ್ನು

ಇಟ್ಟುಕೊಂಡಿದ್ದರಿಂದ ಮಂಗಳೂರಿನ ಬಂದರು ಪ್ರದೇಶಗಳಿಗೆ ವ್ಯವಹಾರದ ನಿಮಿತ್ತ ಬಂದು ಹೋಗುತ್ತಿದ್ದರು. ಅವರ ಆಡಳಿತ ವ್ಯಾಪ್ತಿಯು ಸಹ್ಯಾದ್ರಿ ಸಾಲಿನ ಘಟ್ಟದ ಮೇಲಿನ ಶಿವಮೊಗ್ಗ, ಚಿಕ್ಕಮಗಳೂರು ಪ್ರದೇಶಗಳನ್ನು ಒಳಗೊಂಡು, ಘಟ್ಟದ ಕೆಳಗಿನ ಮಂಗಳೂರು, ಉಡುಪಿ ಮತ್ತು ಕಾಸರಗೋಡು ಪ್ರದೇಶಗಳ ವ್ಯಾಪ್ತಿಗೂ ವಿಸ್ತಾರಗೊಂಡಿತ್ತು. ಕೆಳದಿ ಅರಸರು ಆಡಳಿತ ದೃಷ್ಟಿಯಿಂದ ಈ ಪ್ರದೇಶಗಳಲ್ಲಿ ಸಂಚಾರವನ್ನು ಕೈಗೊಳ್ಳುತ್ತಿದ್ದ ಕಾರಣಕ್ಕೆ ತಮ್ಮ ವಾಸ್ತವ್ಯದ ಸ್ಥಳಗಳಲ್ಲಿ ವೀರಶೈವ ಮಠಗಳನ್ನು ಸ್ಥಾಪನೆ ಮಾಡಿರುತ್ತಾರೆ. ಶ್ರೀ ಸಿದ್ಧಲಿಂಗೇಶ್ವರರ ಕಾಲದಲ್ಲಿ ಸ್ಥಾಪನೆಗೊಂಡ ವೀರಶೈವ ಮಠಗಳಿಗೂ ನೆರವನ್ನು ನೀಡಿರುತ್ತಾರೆ.

ವೀರಶೈವರಾದ ಕೆಳದಿ ಅರಸರು ಲಿಂಗಪೂಜಾ ನಿಷ್ಠರಾಗಿ ಜಂಗಮ ಪಾದೋದಕವಿಲ್ಲದೆ ಪ್ರಸಾದವನ್ನು ಸ್ವೀಕರಿಸುತ್ತಿರಲಿಲ್ಲ. ಈ ಕಾರಣಕ್ಕಾಗಿ ದಕ್ಷಿಣಕನ್ನಡ ಜಿಲ್ಲೆಯಲ್ಲಿ ನಲವತ್ತು ಮಠಗಳನ್ನು ಸ್ಥಾಪಿಸಿರುತ್ತಾರೆ ಎಂದು ಗುರುತಿಸಲಾಗಿದೆ. ಕೆಳದಿ ಅರಸರ ಕಾಲದಲ್ಲಿ ಮಹತ್ತಿನ ಮಠ, ಮಹಾಮಹತ್ತಿನ ಮಠಗಳು ಹೆಚ್ಚು ಪ್ರಮಾಣದಲ್ಲಿ ಸ್ಥಾಪನೆಗೊಂಡಿವೆ. ಅವರ ಕಾಲದಲ್ಲಿ ಸ್ಥಾಪನೆ ಗೊಂಡ ವಿರಕ್ತ ಮಠಗಳಿಗೆ ಮಂಗಳೂರು ಸಮೀಪದ ಗುರುಪುರ ಕೇಂದ್ರಬಿಂದುವಾಗಿದ್ದರೆ, ಮಹತ್ತಿನ ಮತ್ತು ಮಹಾಮಹತ್ತಿನ ಮಠಗಳಿಗೆ ಬಾಳೆಹಳ್ಳಿ ರಂಭಾಪುರಿ ಪೀಠ ಕೇಂದ್ರವಾಗಿತ್ತು. ಕೆಳದಿ ಅರಸರು ಮೂಲತಃ ವೀರಶೈವರಾದರು ವೀರಶೈವ ಧರ್ಮಕ್ಕೆ ಕೊಟ್ಟಷ್ಟೇ ಪ್ರಾಮುಖ್ಯತೆಯನ್ನು ದ್ವೈತ, ಅದ್ವೈತ ಮಠಗಳು ಹಾಗೂ ಜೈನ ಧರ್ಮ, ಕ್ರಿಶ್ಚಿಯನ್ ಮಿಷನರಿಗಳಿಗೂ ನೀಡಿದ್ದನ್ನು ಡಾ. ಕೆ.ಜಿ.ವೆಂಕಟೇಶ್ ಜೋಯಿಸರ ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನದಿಂದ ದೃಡಪಡಿಸಿಕೊಳ್ಳಬಹುದು. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕೆಳದಿ ಅರಸರ ಆಡಳಿತ ಕಾಲ ಮತ್ತು ಅದಕ್ಕೂ ಮೊದಲು ಸ್ಥಾಪನೆಗೊಂಡ ವೀರಶೈವ ಮಠಗಳನ್ನು ದಾಖಲಿಸಬಹುದಾಗಿದೆ.

❑

ಪುತ್ತೂರು ತಾಲ್ಲೂಕು

ದಕ್ಷಿಣಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕು ಕೇರಳ ಗಡಿಗೆ ಹೊಂದಿಕೊಂಡಿದ್ದು, ಇಲ್ಲಿ ಕೆಳದಿ ಅರಸರ ಕಾಲದಲ್ಲಿ ವೀರಶೈವ ಧರ್ಮ ಬೆಳೆದಿತ್ತು. ನಂತರ ಕ್ಷೀಣಿಸಿದೆ. ಅಂದು ತಾಲ್ಲೂಕಿನಾದ್ಯಂತ ಹತ್ತು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಆದರೆ ಈ ಎಲ್ಲಾ ಮಠಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡು ಸಂಸಾರಿ ಮಠಗಳಾಗಿ ಪರಿವರ್ತನೆಯಾಗಿವೆ. ಪ್ರಸ್ತುತ ಶ್ರೀ ಕೋಯಿಲಮಠ, ಶ್ರೀ ಕಡಬದಮಠ, ಶ್ರೀ ಕಲ್ಲಾಪುರಮಠ, ಶ್ರೀ ಕಿರುವಾಸಿಮಠ, ಶ್ರೀ ಕಿರಂಪಾಡಿಮಠ ಎಂಬ ಐದು ಮಠಗಳನ್ನು ಇಂದು ನೋಡಬಹುದಾಗಿದೆ. ಆದರೆ ಇವುಗಳ ಇತಿಹಾಸದ ಬಗ್ಗೆ ಮಾಹಿತಿ ದೊರೆಯುತ್ತಿಲ್ಲ. ಈ ಕಾರಣಕ್ಕೆ ಇವುಗಳ ಹೆಸರನ್ನು ಮಾತ್ರ ದಾಖಲಿಸಲಾಗಿದೆ.

ಬಂಟವಾಳ ತಾಲ್ಲೂಕು

ದಕ್ಷಿಣಕನ್ನಡ ಜಿಲ್ಲೆಯ ಬಂಟವಾಳ ತಾಲ್ಲೂಕು ಕೇರಳ ಗಡಿಗೆ ಹೊಂದಿಕೊಂಡಿದೆ. ಈ ತಾಲ್ಲೂಕಿನಲ್ಲಿಯೂ ಸಹ ಕೆಳದಿ ಅರಸರ ಕಾಲದಲ್ಲಿ ವೀರಶೈವಧರ್ಮ ಬೆಳೆದು ಅಭಿವೃದ್ಧಿಗೊಂಡಿತ್ತು. ಈ ಕಾಲದಲ್ಲಿ ತಾಲ್ಲೂಕಿನಾದ್ಯಂತ ಸುಮಾರು ಎಂಟು ಮಠಗಳು ಸ್ಥಾಪನೆಯಾಗಿದ್ದವೆಂಬ ಮಾಹಿತಿ ದೊರೆಯುತ್ತದೆ. ಪ್ರಸ್ತುತ ಎರಡು ಮಠಗಳನ್ನು ನಾವು ನೋಡಬಹುದಾಗಿದೆ.

ಕಾರ್ನಾಡು

ಬಂಟವಾಳ ತಾಲ್ಲೂಕಿನ ಕಾರ್ನಾಡು, ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಇಪ್ಪತ್ತು ಕಿ.ಮೀ. ದೂರದಲ್ಲಿದೆ. ಇಲ್ಲಿ ಮಠವೊಂದು ಸ್ಥಾಪನೆಯಾಗಿತ್ತು.

ಕಾರ್ನಾಡುಮಠ: ಕಾರ್ನಾಡು ಗ್ರಾಮದಲ್ಲಿ ಸ್ಥಾಪನೆಯಾಗಿದ್ದ ವೀರಶೈವ ಮಠವು ಶ್ರೀ ಕಗ್ಗರೆ ಕಾಳಯ್ಯ ಸ್ವಾಮಿಗಳ ಕಾಲದಲ್ಲಿ ಬಹಳ ಪ್ರಸಿದ್ಧಿ ಪಡೆದಿತ್ತು ಎಂದು ಹೇಳಲಾಗುತ್ತಿದೆ. ಆದರೆ ಈಗ ಮಠದ ಇತಿಹಾಸ ತಿಳಿಸುವ ಯಾವುದೇ ಕುರುಹುಗಳು ಸಿಗುತ್ತಿಲ್ಲ.

ವಿಟ್ಲ

ಬಂಟವಾಳ ತಾಲ್ಲೂಕಿನ ವಿಟ್ಲ ಗ್ರಾಮವು ತಾಲ್ಲೂಕು ಕೇಂದ್ರದ ಉತ್ತರಕ್ಕೆ ಇಪ್ಪತ್ತು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಕಾಡುಮಠವು ಸ್ಥಾಪನೆಯಾಗಿ ವೀರಶೈವ ಧರ್ಮವನ್ನು ಹೆಚ್ಚು ಪ್ರಚಾರಕ್ಕೆ ತಂದಿತ್ತು.

ಕಾಡುಮಠ: ವಿಟ್ಲ ಗ್ರಾಮದಲ್ಲಿ ಪುರಾತನ ಕಾಲದಲ್ಲಿ ಸ್ಥಾಪನೆಯಾಗಿದ್ದ ಶ್ರೀ ಕಾಡು ಮಠವು, ಕೆಳದಿಯ ಸೋಮಶೇಖರ ನಾಯಕನ ಕಾಲದಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ವಿಟ್ಲ ಪ್ರಾಂತ್ಯದ ಸಾಮಂತನಾಗಿದ್ದ ನರಸಿಂಹರಸ ಎಂಬ ಹೆಗಡೆಯು ಶ್ರೀ ನಿರ್ವಾಣಶೆಟ್ಟಿಗೆ ಕೆಲವು ಗ್ರಾಮಗಳನ್ನು ಕಾಡು ಮಠದ ನಿರ್ವಹಣೆಗೆಂದು ಬಿಟ್ಟು ಕೊಟ್ಟಿರುವ ಉಲ್ಲೇಖ ದೊರೆಯುತ್ತದೆ. ಈ ಮಠವು ದಕ್ಷಿಣ ಕನ್ನಡ ಜಿಲ್ಲೆಯ ಮಠಗಳಲ್ಲಿ ಅತ್ಯಂತ ಶ್ರೀಮಂತ ಮಠವಾಗಿತ್ತೆಂದು ಹೇಳಲಾಗುತ್ತಿದೆ. ಈಗ ಸಂಸಾರಿ ಮಠವಾಗಿ ಪರಿವರ್ತನೆಯಾಗಿದ್ದು, ಮಠದ ವಂಶಸ್ಥರಾದ ಶ್ರೀ ಮಹಾಬಲಶೆಟ್ಟಿ ಅವರು ಆಡಳಿತವನ್ನು ನೋಡಿಕೊಂಡು ಹೋಗುತ್ತಿದ್ದಾರೆ.

ಬೆಳ್ತಂಗಡಿ ತಾಲ್ಲೂಕು

ದಕ್ಷಿಣಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕು ಸಹ್ಯಾದ್ರಿ ಸಾಲಿನ ಪ್ರಕೃತಿಯ ಐಸಿರಿಯಲ್ಲಿ ಮೈದಳೆದಿದೆ. ಧಾರ್ಮಿಕ ಸುಕ್ಷೇತ್ರಗಳನ್ನು ಹೊಂದಿರುವ ಈ ತಾಲ್ಲೂಕು ಹೆಚ್ಚು ಪ್ರಸಿದ್ಧಿ ಪಡೆದಿದೆ. ಈ ತಾಲ್ಲೂಕಿನಲ್ಲಿ ಕೆಳದಿ ಅರಸರ ಕಾಲದಲ್ಲಿ ವೀರಶೈವಧರ್ಮ ಪ್ರಾಬಲ್ಯತೆ ಪಡೆದಿತ್ತು. ಹಿಂದೆ ಶ್ರೀ ಎಡೆಯೂರು ಸಿದ್ಧಲಿಂಗೇಶ್ವರರು ಹಾಗೂ ಕೆಳದಿ ಅರಸರ ಕಾಲದಲ್ಲಿ

ಸುಮಾರು ಹದಿನೆಂಟು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಆದರೆ ಇಂದು ಕೇವಲ ಎಂಟು ಮಠಗಳನ್ನು ಮಾತ್ರ ಗುರುತಿಸಬಹುದಾಗಿದೆ.

ಉಪ್ಪಿನಂಗಡಿ

ಬೆಳ್ತಂಗಡಿ ತಾಲ್ಲೂಕಿನ ಉಪ್ಪಿನಂಗಡಿಯು ತಾಲ್ಲೂಕು ಕೇಂದ್ರದ ಉತ್ತರಕ್ಕೆ ಇಪ್ಪತ್ತೈದು ಕಿ.ಮೀ.ದೂರದಲ್ಲಿದೆ. ಕುಮಾರ ಧಾರೆ ಮತ್ತು ನೇತ್ರಾವತಿ ನದಿಗಳ ಸಂಗಮ ಕ್ಷೇತ್ರವಾದ ಉಪ್ಪಿನಂಗಡಿಯ ಪೂರ್ವ ಭಾಗದಲ್ಲಿ ಶ್ರೀ ಕಟ್ಟೆ ಮಠವು ಪುರಾತನ ಕಾಲದಲ್ಲಿ ಸ್ಥಾಪನೆಯಾಗಿ ಸುವಿಖ್ಯಾತವಾಗಿದೆ.

ಕಟ್ಟೆ ಮಠ: ಉಪ್ಪಿನಂಗಡಿ ಗ್ರಾಮದಲ್ಲಿ ಕಟ್ಟೆಮಠವು ಸ್ಥಾಪನೆಯಾಗಿ ಹೆಚ್ಚು ಪ್ರಸಿದ್ಧಿ ಪಡೆದಿತ್ತು. ೧೬೫೦ ಕ್ಕೂ ಮೊದಲು ಸ್ಥಾಪನೆಯಾಗಿದ್ದ ಈ ಮಠವು ಅನ್ನದಾಸೋಹದಿಂದ ಹೆಚ್ಚು ಹೆಸರು ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಈ ಮಠದಲ್ಲಿ ನಡೆಯುತ್ತಿದ್ದ ಅನ್ನ ದಾಸೋಹಕ್ಕಾಗಿ ದೂರದ ಮಂಗಳೂರಿ ನಿಂದ ಉಪ್ಪನ್ನು ಸರಬರಾಜು ಮಾಡಲಾಗುತ್ತಿತ್ತು. ದಿನವೂ ಉಪ್ಪನ್ನು ಸರಬರಾಜು ಮಾಡುವುದು ಕಷ್ಟವಾದಾಗ ಕಟ್ಟೆ ಮಠದ ಹತ್ತಿರ 'ಉಪ್ಪನ್ನು ಮಾರುವ ಅಂಗಡಿ'ಪ್ರಾರಂಭವಾಗಿ, ಪ್ರಸಿದ್ಧಿ ಪಡೆದ ಹಿನ್ನೆಲೆಯಲ್ಲಿ 'ಉಪ್ಪಿನಂಗಡಿ'ಎಂಬ ಹೆಸರು ರೂಢಿಗತವಾಗಿ ಕರೆಯಲ್ಪಟ್ಟಿತು ಎಂದು ಹೇಳಲಾಗುತ್ತಿದೆ. ಈ ರೀತಿ ತನ್ನದೇ ಆದ ಪ್ರಭಾವವನ್ನು ಬೆಳೆಸಿಕೊಂಡು ಶ್ರೀಮಂತಿಕೆಯನ್ನು ಪಡೆದು ಕೊಂಡಿದ್ದ ಈ ಮಠವನ್ನು ಹೆಚ್ಚು ಪ್ರಸಿದ್ಧಿಗೆ ತಂದವರಲ್ಲಿ ಶ್ರೀ ಗುರುಶಾಂತಯ್ಯ ಸ್ವಾಮಿಗಳು ಒಬ್ಬರಾಗಿದ್ದಾರೆ.

ಕೆಳದಿ ಅರಸರ ಶ್ರೇಯಸ್ಸನ್ನೇ ಬಯಸಿದ್ದ ಶ್ರೀ ಗುರುಶಾಂತಯ್ಯನವರನ್ನು ೧೭೮೦ ರಲ್ಲಿ ಟಿಪ್ಪುಸುಲ್ತಾನನು ಬಂಧಿಸಿ ಕರೆದೊಯ್ಯುವಾಗ ಚಿನ್ನದ ನಾಣ್ಯಗಳನ್ನು ತಮ್ಮ ಖಾವಿಯ ನಿಲುವಂಗಿಯಲ್ಲಿ ತುಂಬಿಸಿಕೊಂಡು ದಾರಿಯುದ್ದಕ್ಕೂ ಬಡಬಗ್ಗರಿಗೆ ದಾನಮಾಡುತ್ತ ಹೋದರೆಂದು ಹೇಳುವ ಜನಪದ ಕಥೆ ಈಗಲು ಕೇಳಿಬರುತ್ತಿದೆ. ಇಂತಹ ಶ್ರೀಮಂತಿಕೆಯಿಂದ ಮೆರೆದ ಮಠದಲ್ಲಿ ಇಂದು ತನ್ನ ಅಸ್ತಿತ್ತ್ವವನ್ನು ತೋರಿಸಲು ಗಣಪತಿ ದೇವಾಲಯ ಮಾತ್ರ ಉಳಿದಿದೆ.

ಬೊಪ್ಪನಾಳು

ಬೆಳ್ತಂಗಡಿ ತಾಲ್ಲೂಕಿನ ಬೊಪ್ಪನಾಳು ಗ್ರಾಮದಲ್ಲಿ ವಿರಕ್ತ ಸಂಪ್ರದಾಯದ ಶ್ರೀ ಚರಂತಿ ಮಠ ಮತ್ತು ಶ್ರೀ ಮಹಾಂತಿನ ಮಠವು ಅಸ್ತಿತ್ವದಲ್ಲಿದ್ದವು.

ಚರಂತಿಮಠ: ಬೊಪ್ಪನಾಳು ಗ್ರಾಮದಲ್ಲಿ ಸ್ಥಾಪನೆಯಾಗಿದ್ದ ಶ್ರೀ ಚರಂತಿಮಠವು ಶ್ರೀ ಎಡೆಯೂರು ಸಿದ್ಧಲಿಂಗೇಶ್ವರರ ಕಾಲದಲ್ಲಿ ಸ್ಥಾಪನೆಯಾಗಿದೆ. ಶ್ರೀ ಸಿದ್ಧಲಿಂಗೇಶ್ವರರು ಮಲೆಯಾಳದಲ್ಲಿ ಸಂಚಾರ ಕೈಗೊಂಡು ಈ ಪ್ರದೇಶಕ್ಕೆ ಬಂದು ನೆಲೆಸಿ, ಧರ್ಮ ಜಾಗೃತಿಯನ್ನುಂಟು ಮಾಡಿ ಮಠವನ್ನು ಸ್ಥಾಪಿಸಿದ್ದರು. ಗುರುಗಳು ಇಲ್ಲಿಗೆ ಬಂದಂತಹ ಸಂದರ್ಭದಲ್ಲಿ ಮುಸಲ್ಮಾನ್ ಬಂಧುವೊಬ್ಬರು ಶ್ರೀ ಸಿದ್ಧಲಿಂಗೇಶ್ವರರ ಸೇವೆಯನ್ನು ಮಾಡಿ, ಗುರುಗಳು ನಿರ್ಗಮಿಸಿದ ನಂತರ ಶ್ರೀ ಸಿದ್ಧಲಿಂಗೇಶ್ವರರ ದೇವಾಲಯವನ್ನು ಸ್ಥಾಪಿಸಿದರೆಂದು ಹೇಳಲಾಗುತ್ತಿದೆ. ಇಂದಿಗೂ ಉತ್ಸವದ ಸಂದರ್ಭದಲ್ಲಿ ಶ್ರೀ ಬೊಪ್ಪಬ್ಯಾರಿಯವರು ಸೇವೆ ಯನ್ನು ಮಾಡಿದ ನಂತರವೆ ಉಳಿದವರು ಸೇವೆ ಸಲ್ಲಿಸುವ ಪರಿಪಾಠವುಂಟು.

ಮಹಾಂತಿನ ಮಠ: ಬೊಪ್ಪನಾಳು ಗಾಮದಲ್ಲಿ ಗುರು ಪೀಠದ ಶ್ರೀ ಮಹಂತಿನ ಮಠವು ಸ್ಥಾಪನೆಯಾಗಿದೆ. ಹನ್ನೆರ ಡನೆಯ ಶತಮಾನಕ್ಕೂ ಪೂರ್ವದಲ್ಲಿಯೇ ಸ್ಥಾಪನೆಯಾಗಿತ್ತೆಂದು ಹೇಳಲಾಗುತ್ತಿದೆ. ಮಠವು ಅಳಿದರು ಆವರಣದಲ್ಲಿ ಶ್ರೀ ಚಂದ್ರಮೌಳೇಶ್ವರ ದೇವಸ್ಥಾನವು ತನ್ನ ಅಸ್ತಿತ್ತ್ವವನ್ನು ಉಳಿಸಿಕೊಂಡಿದೆ.

ಮೇಲಿನ ಈ ಮೂರು ಮಠಗಳ ಜತೆಗೆ ಶ್ರೀ ಗುರುವಾಯಕೆರೆಮಠ, ಶ್ರೀ ಕೊಕ್ಕರಮಠ, ಶ್ರೀ ವೇಣೂರುಮಠ, ಶ್ರೀ ಬೆಳ್ತಂಗಡಿಮಠ, ಶ್ರೀ ನಾರಾವಿಮಠ, ಶ್ರೀ ಪುದೋಟಿಮಠ ಹಾಗೂ ಶ್ರೀ ಭಾರ್ಯಮಠ - ಎಂಬ ಏಳು ಮಠಗಳನ್ನು ಇಂದು ಗುರುತಿಸಬಹುದಾಗಿದೆ.

ಮಂಗಳೂರು ತಾಲ್ಲೂಕು

ದಕ್ಷಿಣಕನ್ನಡ ಜಿಲ್ಲೆಯ ಐದು ತಾಲ್ಲೂಕುಗಳಲ್ಲಿ ಒಂದಾದ ಮಂಗಳೂರು ತಾಲ್ಲೂಕು ವಾಣಿಜ್ಯ ಕ್ಷೇತ್ರದಲ್ಲಿ ಪ್ರಮುಖ ಪಾತ್ರ ವಹಿಸಿದೆ. ಪ್ರಾಚೀನ ಕಾಲದಿಂದಲೂ ವಿದೇಶದೊಂದಿಗೆ ತನ್ನ ವ್ಯಾವಹಾರಿಕ ಸಂಬಂಧವನ್ನು ಇಟ್ಟುಕೊಂಡು ಈವರೆಗೂ ಉಳಿಸಿಕೊಂಡು ಬಂದಿದೆ. ಕರಾವಳಿಯ ಪ್ರದೇಶವನ್ನು ಹೊಂದಿರುವ ಈ ಶ್ರೀಮಂತ ತಾಲ್ಲೂಕಿನಲ್ಲಿ ಕೆಳದಿ ಅರಸರ ಕಾಲದಲ್ಲಿ ಸ್ಥಾಪನೆಗೊಂಡ ಹದಿನೆಂಟು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಪ್ರಸ್ತುತ ಎರಡು ಮಠಗಳು ಅಸ್ತಿತ್ವದಲ್ಲಿದ್ದು, ಈ ಕರಾವಳಿ ಪ್ರದೇಶದಲ್ಲಿ ವೀರಶೈವಧರ್ಮ ಅಸ್ತಿತ್ವದಲ್ಲಿ ಉಳಿಯುವಂತೆ ಮಾಡಿವೆ. ಉಳಿದಂತೆ ಎಂಟು ಮಠಗಳನ್ನು ಗುರುತಿಸಬಹುದಾಗಿದೆ.

ಗುರುಪುರ

ಮಂಗಳೂರು ತಾಲ್ಲೂಕಿನ ಗುರುಪುರವು ತಾಲ್ಲೂಕು ಕೇಂದ್ರದ ಈಶಾನ್ಯಕ್ಕೆ ಹದಿನೈದು ಕಿ.ಮೀ. ದೂರದಲ್ಲಿದೆ. ಗುರುಪುರದ ಮೂಲ ಹೆಸರು 'ಮೂಳೂರು'ಎಂಬುದಾಗಿತ್ತು. ಇಲ್ಲಿ ಮಠ ಸ್ಥಾಪನೆಯಾದ ಮೇಲೆ ಗುರುಗಳ ಪ್ರಭಾವದಿಂದ ಈ ಗ್ರಾಮಕ್ಕೆ 'ಗುರುಪುರ'ಎಂದು ಹೆಸರು ಬರಲು ಕಾರಣವಾಗಿದೆ ಎಂದು ಹೇಳಲಾಗುತ್ತಿದೆ.

ಜಂಗಮ ಮಠ: ಗುರುಪುರದಲ್ಲಿ ಸ್ಥಾಪನೆಯಾದ ಶ್ರೀ ಜಂಗಮಮಠವು ಹದಿನೈದನೆಯ ಶತಮಾನದಲ್ಲಿ ಸ್ಥಾಪನೆಯಾಗಿದೆ. ಎಡೆಯೂರಿನ ಶ್ರೀ ತೋಂಟದ ಸಿದ್ಧಲಿಂಗೇಶ್ವರರು ಲೋಕಸಂಚಾರಕ್ಕೆ ಬಂದ ಸಂದರ್ಭದಲ್ಲಿ ಈ ನೆಲದಲ್ಲಿ ನೆಲೆನಿಂತು ಅನುಷ್ಠಾನಗೊಂಡ ಕಾರಣ ಈ ಜಾಗೃತ ಸ್ಥಳದಲ್ಲಿ ಮಠ ಸ್ಥಾಪನೆಯಾಗಿದೆ ಎಂದು ತಿಳಿದು ಬರುತ್ತದೆ.

ನಾಯಕರ ವಾಸ್ತವ್ಯ: ವಿರಕ್ತ ಸಂಪ್ರದಾಯದ ಈ ಮಠವು ಕೆಳದಿ ನಾಯಕರ ಕಾಲದಲ್ಲಿ ರಾಜಾಶ್ರಯ ಸಿಕ್ಕಿ ಪ್ರಬಲವಾಗಿ ಬೆಳೆದಿದೆ. ಕೆಳದಿ ನಾಯಕರು ತಮ್ಮ ವ್ಯಾಪಾರ ಮತ್ತು ರಾಜ್ಯಾಡಳಿತವನ್ನು ನೋಡಿಕೊಳ್ಳುವ ಸಲುವಾಗಿ ಈ ಪ್ರಾಂತ್ಯಕ್ಕೆ ಆಗಾಗ್ಗೆ ಬರುತ್ತಿದ್ದರು. ಹೀಗೆ ಬಂದಾಗಲೆಲ್ಲ ಈ ಮಠದಲ್ಲಿ ನಾಯಕರು ತಮ್ಮ ವಾಸ್ತವ್ಯ ಮಾಡುತ್ತಿದ್ದ ಕಾರಣ ಈ ಮಠವು ಸಕಲ ವ್ಯವಸ್ಥೆಯೊಂದಿಗೆ ರೂಪುಗೊಂಡಿತ್ತೆಂದು ಹೇಳಲಾಗುತ್ತಿದೆ.

ಮಠ ಸ್ಥಾಪನೆ: ಮಠದ ಪ್ರಥಮ ಗುರುಗಳೆಂದು ಹೇಳಲಾಗುವ ಶ್ರೀ ನೀಲಕಂಠೇಶ್ವರ ಸ್ವಾಮಿಗಳು ಮಹಾತಪಸ್ವಿಗಳು. ಇವರು ಕರಾವಳಿಯ ಈ ನಾಡಿನಲ್ಲಿ ವೀರಶೈವ ಧರ್ಮ ಬೆಳೆಯಲು ಭದ್ರಬುನಾದಿಯನ್ನು ಹಾಕಿದರು. ಪ್ರತಿದಿನ ಸಂಜೆ ಶಿವಾನುಭವ ಗೋಷ್ಠಿಯನ್ನು ಏರ್ಪಡಿಸಿ ಧರ್ಮ ಜಾಗೃತಿಯನ್ನುಂಟು ಮಾಡುತ್ತಿದ್ದರು. ವೀರಶೈವತತ್ತ್ವ ಸಿದ್ಧಾಂತಗಳನ್ನು ಜನಮನಕ್ಕೆ ಮುಟ್ಟಿಸುವಲ್ಲಿ ಯಶಸ್ವಿಯಾಗಿದ್ದರು. ಇವರ ಕಾಲದಲ್ಲಿ ಜಾತಿ ಭೇದವಿಲ್ಲದೆ ಎಲ್ಲ ವರ್ಗದ ಜನರು ಸಹಬಾಳ್ವೆಯನ್ನು ನಡೆಸುತ್ತಿದ್ದರು. ಇದಕ್ಕೆ ಸಾಕ್ಷಿಎಂಬಂತೆ ಈಗಲು ಎಲ್ಲ ವರ್ಗದ ಜನರು ಮಠದ ಭಕ್ತರಾಗಿ ನಡೆದುಕೊಳ್ಳುತ್ತಿದ್ದಾರೆ.

ಶ್ರೀ ನೀಲಕಂಠೇಶ್ವರ ಸ್ವಾಮಿಗಳು ಭಕ್ತರನ್ನು ಸನ್ಮಾರ್ಗಕ್ಕೆ ತಂದು ಸಮಾಜವನ್ನು ಮುನ್ನಡೆಸುತ್ತಿದ್ದರು. ಒಂದುದಿನ ಮಠದಲ್ಲಿ ಭಕ್ತರನ್ನು ಪೂಜೆಗೆ ಕೂರಿಸಿ ಗುರುಗಳು ಹಿಂಭಾಗದಲ್ಲಿರುವ ಚಿಲುಮೆ ಕೋಡಿಗೆ ಸ್ನಾನ ಮಾಡಲು ಹೋದರು. ಗುರುಗಳು ಇನ್ನೂ ಬರಲಿಲ್ಲ ಎಂದು ಭಕ್ತರು ಆತಂಕಗೊಂಡು ಚಿಲುಮೆ ಕೋಡಿಗೆ ಬಂದು ನೋಡುತ್ತಾರೆ. ಗುರುಗಳು ಸ್ನಾನ ಪೂಜಾಕಾರ್ಯಗಳನ್ನು ಮುಗಿಸಿ ಹೋಗಿದ್ದ ಕುರುಹುಗಳು ಮಾತ್ರ ಕಾಣುತ್ತಿದ್ದವು. ಧಾರ್ಮಿಕ ಮಾರ್ಗದರ್ಶನ ನೀಡಿ ಉದ್ಧರಿಸಿದ್ದ ಗುರುಗಳು ಮಾಯವಾಗಿದ್ದನ್ನು ನೋಡಿ ವ್ಯಥೆಪಟ್ಟರು. ಗುರುಗಳ ಸ್ಮರಣಾರ್ಥ ಮಠದಲ್ಲಿ ತೋರು ಗದ್ದುಗೆಯನ್ನು ಸ್ಥಾಪಿಸಿ, ಕಾರ್ತೀಕಮಾಸದಲ್ಲಿ ಜಾತ್ರೆ ನಡೆಯುವಂತೆ ವ್ಯವಸ್ಥೆಯನ್ನು ಮಾಡುತ್ತಾರೆ. ಅಂದು ಪ್ರಾರಂಭಗೊಂಡ ಜಾತ್ರಾ ಮಹೋತ್ಸವವು ಈ ತನಕವು ನಡೆಯುತ್ತ ಬಂದಿದೆ. ಜಾತ್ರೆಯ ದಿನ ಮಠದಲ್ಲಿ ಪೂಜೆ ಮಾಡಿದ ನಂತರ ಚಿಲುಮೆ ಕೋಡಿಗೆ ಹೋಗಿ ಪೂಜೆ ಸಲ್ಲಿಸಿ ಬರುವ ಸಂಪ್ರದಾಯ ನಡೆದುಕೊಂಡು ಬಂದಿದೆ.

ಪರಂಪರೆ: ೧. ಶ್ರೀ ಮ.ನಿ.ಪ್ರ. ನೀಲಕಂಠೇಶ್ವರಸ್ವಾಮಿಗಳು

೨. ಶ್ರೀ ಮ.ನಿ.ಪ್ರ. ರುದ್ರಮುನಿಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಸೋಮಶೇಖರಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಚನ್ನಬಸವಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಎರಡನೆಯ ಸೋಮಶೇಖರಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಕರಿಸಿದ್ಧಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಎರಡನೆಯ ಚನ್ನಬಸವಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಶಿವಪ್ರಕಾಶಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃ ಗುರುಗಳ ನಂತರ ಆಡಳಿತ ನಡೆಸಿದ ಗುರುಗಳ ಕಾಲಮಾನದ ಬಗ್ಗೆ ನಿಖರವಾದ ಮಾಹಿತಿಗಳು ದೊರೆಯದಾಗಿವೆ. ಮೇಲೆ ದಾಖಲಿಸಿರುವ ಎಂಟು ಜನ ಗುರುಗಳ ಹೆಸರಿನ ಜೊತೆಗೆ ಗೋಣಿಕೊಪ್ಪದಲ್ಲಿ ಗದ್ದುಗೆಯಾಗಿರುವ ಶ್ರೀ ಮುಪ್ಪಿನ ಸ್ವಾಮಿಗಳು ಈ ಮಠದ ಪರಂಪರೆಯ ಗುರುಗಳು ಎಂದು ಹೇಳಲಾಗುತ್ತಿದೆ.

ಮಠದ ಪರಂಪರೆಯಲ್ಲಿ ಬರುವ ಒಂದನೆಯ ಶ್ರೀ ಚನ್ನಬಸವ ಸ್ವಾಮಿಗಳು ಮಠವನ್ನು ಸರ್ವಾಂಗೀಣ ರೀತಿಯಲ್ಲಿ ಅಭಿವೃದ್ಧಿಪಡಿಸಿ ಮಠದ ಕಟ್ಟಡವನ್ನು ನವೀಕರಣಗೊಳಿಸಿದ್ದರು. ಇವರ ತರುವಾಯ ಮಠವು ಯಾವುದೇ ಗುರುತರ ಕಾರ್ಯಗಳನ್ನು ಕೈಗೊಳ್ಳದೆ ಕೇವಲ ಧಾರ್ಮಿಕ ಕಾರ್ಯಗಳಿಗಷ್ಟೆ ಸೀಮಿತಗೊಂಡಿತ್ತು. ಈಗಿನ ಗುರುಗಳಾದ ಶ್ರೀ ಶಿವಪ್ರಕಾಶ ಸ್ವಾಮಿಗಳು ಅಧಿಕಾರಕ್ಕೆ ಬರುವ ಮೊದಲು ಆಡಳಿತ ನಡೆಸುತ್ತಿದ್ದ ಎರಡನೆಯ ಶ್ರೀ ಚನ್ನಬಸವ ಸ್ವಾಮಿಗಳು ತಮ್ಮ ಆಡಳಿತ ಅವಧಿಯಲ್ಲಿ ಧಾರ್ಮಿಕ ಕಾರ್ಯಗಳಿಂದ ಹೆಸರು ಮಾಡಿದ್ದರು. ಇಂತಹ ಧಾರ್ಮಿಕ ಮಹಾಪುರುಷರು ೧೯೭೮ ರ ಆಗಸ್ಟ್ ಇಪ್ಪತ್ನಾಲ್ಕರಂದು ಲಿಂಗೈಕ್ಯರಾಗಿರುತ್ತಾರೆ. ಇವರ ತರುವಾಯ ಶ್ರೀ ಶಿವಪ್ರಕಾಶ ಸ್ವಾಮಿಗಳು ೧೯೮೦ ರಲ್ಲಿ ಕನಕಪುರದ ದೇಗುಲಮಠದ ಶ್ರೀ ಮಹಾಲಿಂಗ ಸ್ವಾಮಿಗಳಿಂದ ಅನುಗ್ರಹ ಪಡೆದು ಪಟ್ಟಾಧಿಕಾರಕ್ಕೆ ಬಂದಿರುತ್ತಾರೆ. ಮೂಡುಬಿದರೆಯಲ್ಲಿ ಜನಿಸಿದ ಶ್ರೀ ಶಿವಪ್ರಕಾಶ ಸ್ವಾಮಿಗಳು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಗುರುಪುರದಲ್ಲಿ ಮುಗಿಸಿ, ಹಿರಿಯ ಗುರುಗಳ ಸಾನ್ನಿಧ್ಯದಲ್ಲಿ ಧಾರ್ಮಿಕ ಸಂಸ್ಕಾರವನ್ನು ಪಡೆದವರಾಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಪ್ರಧಾನವಾಗಿ ನಿರ್ಮಿಸಿರುವ ಶ್ರೀ ನೀಲಕಂಠೇಶ್ವರ ಸ್ವಾಮಿಗಳ ಗದ್ದುಗೆಯು ಸೇರಿದಂತೆ ಉಳಿದ ಗದ್ದುಗೆಗಳಿಗೆ ನಿತ್ಯ ಪೂಜೆ, ಶ್ರಾವಣ, ಕಾರ್ತೀಕಮಾಸಗಳಲ್ಲಿ ನಿತ್ಯ ರುದ್ರಾಭಿಷೇಕ, ಪೂಜೆಯ ಜೊತೆಗೆ ತಾಂಬೂಲ ಪತ್ರೆ ಪೂಜೆ ವಿಶೇಷವಾಗಿ ನಡೆಯುತ್ತಿವೆ. ಶಿವರಾತ್ರಿ,ಗಣೇಶನ ಹಬ್ಬಗಳು ವಿಜೃಂಭಣೆಯಿಂದ ನಡೆಯುತ್ತಿವೆ. ಕಾರ್ತೀಕ ಮಾಸದಲ್ಲಿ ಶ್ರೀ ನೀಲಕಂಠೇಶ್ವರರ ಜಾತ್ರೆ ಅದ್ದೂರಿಯಾಗಿ ನಡೆಯುತ್ತಿದೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಶಿವಪ್ರಕಾಶ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠವನ್ನು ಧಾರ್ಮಿಕ, ಸಾಮಾಜಿಕ ಹಾಗೂ ಆರ್ಥಿಕವಾಗಿ ಅಭಿವೃದ್ಧಿಪಡಿಸಿದರು. ೧೯೮೭ ರಲ್ಲಿ ಶ್ರೀ ನೀಲಕಂಠೇಶ್ವರ ಸ್ವಾಮಿಗಳ ಗದ್ದುಗೆಯನ್ನು ನವೀಕರಣಗೊಳಿಸಿ ದರು. ಕೆಳದಿ ಅರಸರ ಕಾಲದಲ್ಲಿ ಮಠದ ಕೆತ್ತನೆಯ ಕಲಾಕೃತಿಗಳಿಂದ ನಿರ್ಮಿಸಲ್ಪಟ್ಟಿದ್ದ ಕಟ್ಟಡವನ್ನು ಮೂಲ ಕೃತಿಗೆ ದಕ್ಕೆ ಬರದಂತೆ ನವೀಕರಿಸಿ, ಮಠದ ಕೆತ್ತನೆಯ ಕಲಾಕೃತಿಗಳನ್ನು ಜೀವಂತವಾಗಿ ಉಳಿಸಿಕೊಂಡಿದ್ದಾರೆ. ಮಠದ ಆಸ್ತಿಯಾಗಿ ಉಳಿದಿರುವ ಹದಿನೈದು ಎಕರೆ ಜಮೀನನ್ನು ಅಭಿವೃದ್ಧಿಪಡಿಸಿ ಆದಾಯ ಬರುವಂತೆ ಮಾಡಿದ್ದಾರೆ.

ಶೈಕ್ಷಣಿಕ ಕಾರ್ಯಗಳು: ಗ್ರಾಮಾಂತರ ಮಕ್ಕಳ ಅಭ್ಯುದಯವನ್ನು ಬಯಸಿ ಶ್ರೀ ನೀಲಕಂಠೇಶ್ವರ ವಿದ್ಯಾಸಂಸ್ಥೆಯನ್ನು ಸ್ಥಾಪಿಸಿ, ಪ್ರಾಥಮಿಕ ಹಾಗೂ ಪ್ರೌಢಶಾಲೆಗಳನ್ನು ನಡೆಸುತ್ತಿದ್ದಾರೆ. ಕೆಲವು ಬಡಮಕ್ಕಳಿಗೆ ಮಠದಲ್ಲಿ ಆಶ್ರಯವನ್ನು ಕಲ್ಪಿಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಶಿವಪ್ರಕಾಶ ಸ್ವಾಮಿಗಳು, ಶ್ರೀ ಜಂಗಮಮಠ, ಗುರುಪುರ, ಮಂಗಳೂರು ತಾಲ್ಲೂಕು, ದಕ್ಷಿಣಕನ್ನಡ ಜಿಲ್ಲೆ.

ಮಂಗಳೂರು

ದಕ್ಷಿಣಕನ್ನಡ ಜಿಲ್ಲೆಯ ಕೇಂದ್ರ ಸ್ಥಳವಾದ ಮಂಗಳೂರು ನಗರದಲ್ಲಿ ಕೆಳದಿ ಅರಸರ ಕಾಲ ಮತ್ತು ಅದಕ್ಕೂ ಮೊದಲು ಎಡೆಯೂರು ಸಿದ್ಧಲಿಂಗೇಶ್ವರರ ಕಾಲದಲ್ಲಿ ಅನೇಕ ವೀರಶೈವ ಮಠಗಳು ಸ್ಥಾಪನೆಯಾಗಿದ್ದವು. ಅಂದು ಸ್ಥಾಪನೆಗೊಂಡ ಅನೇಕ ಮಠಗಳು ಅನ್ಯರ ಆಕ್ರಮಣಕ್ಕೆ ಒಳಗಾಗಿ ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿವೆ. ಪ್ರಸ್ತುತ ಬಸವನಗುಡಿಮಠ ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ಬಸವನಗುಡಿಮಠ: ಮಂಗಳೂರಿನ ಹೃದಯ ಭಾಗದಲ್ಲಿ ಬಸವನಗುಡಿ ಮಠವು ಸ್ಥಾಪನೆಯಾಗಿದೆ. ಬಹಳ ಪುರಾತನ ಕಾಲದ ಈ ಮಠವು ಕೆಳದಿಅರಸರ ನಂತರ ಟಿಪ್ಪು ಸುಲ್ತಾನನ ಆಡಳಿತದ ಅವಧಿಯಲ್ಲಿ ಹೆಚ್ಚು ಆಶ್ರಯ ದೊರೆತು ಅಭಿವೃದ್ಧಿಯಾಗಿದೆ ಎಂದು ಹೇಳಲಾಗುತ್ತಿದೆ. ಪುರಾತನವಾದ ಈ ಮಠದಲ್ಲಿ ಆಡಳಿತವನ್ನು ನಡೆಸಿದ ಮಠಾಧೀಶರುಗಳ ವಿವರಗಳು ಲಭ್ಯವಿಲ್ಲ. ಈ ಮಠದಲ್ಲಿ ನಂದಿಯ ಒಂದು ವಿಗ್ರಹವು ಇರುವುದರಿಂದ 'ಬಸವನಗುಡಿ ಮಠ' ಎಂಬ ಹೆಸರು ಬಂದಿದೆ.

ಶ್ರೀ ಚನ್ನಬಸವ ಸ್ವಾಮಿಗಳು ಆಡಳಿತ ನಡೆಸುತ್ತಿದ್ದ ಕಾಲದಲ್ಲಿ ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲ್ಲೂಕಿನ ಹೊಟ್ಯಾಪುರ ಗ್ರಾಮದ ಹಿರೇಮಠದ ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಮಂಗಳೂರಿನ ಬಸವನಗುಡಿ ಮಠಕ್ಕೆ ಬಂದು ನೆಲೆಸುತ್ತಾರೆ. ಇಲ್ಲಿ ಬಂದು ನೆಲೆ ನಿಂತ ಗುರುಗಳಿಗೆ ಶ್ರೀ ಚನ್ನಬಸಪ್ಪ ಸ್ವಾಮಿಗಳು ಮಠದ ಪೂರ್ಣ ಅಧಿಕಾರ ವನ್ನು ವಹಿಸಿ ವಿಶ್ರಾಂತಿ ಜೀವನ ನಡೆಸುತ್ತಾರೆ. ಸ್ವಾತಂತ್ರ್ಯಾ ನಂತರದ ದಿನಗಳಲ್ಲಿ ಈ ಮಠದ ಅಧಿಕಾರವನ್ನು ವಹಿಸಿಕೊಂಡ ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ಜೀರ್ಣಗೊಂಡಿದ್ದ ಮಠದ ಕಟ್ಟಡವನ್ನು ಅಭಿವೃದ್ಧಿಪಡಿಸಿದರು. ಅನ್ಯರ ಪಾಲಾಗಿದ್ದ ಮಠದ ಆಸ್ತಿಯನ್ನು ಮಠದ ವಶಕ್ಕೆ ಪಡೆಯಲು ಕಾನೂನಿನ ಹೋರಾಟ ನಡೆಸಿ ಯಶಸ್ವಿಯಾದರು.

ಮಠದ ಆಸ್ತಿಯನ್ನು ವ್ಯವಸ್ಥಿತಗೊಳಿಸಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿ ಹೊಟ್ಯಾಪುರ ಮತ್ತು ಮಂಗಳೂರು ಎರಡೂ ಕಡೆ ಆಡಳಿತ ನಡೆಸಿದ ಗುರುಗಳು ತಮ್ಮ ಉತ್ತರಾಧಿಕಾರಿಗಳನ್ನು ನೇಮಕ ಮಾಡಿಕೊಂಡು ಪಟ್ಟಾಧಿಕಾರ ಮಾಡುವ ಮೊದಲೆ ೧೯೮೮ ರಲ್ಲಿ ಲಿಂಗೈಕ್ಯರಾದರು. ಮಂಗಳೂರು ಮತ್ತು ಹೊಟ್ಯಾಪುರ ಈ ಎರಡು ಮಠಗಳಲ್ಲಿ ಈಗ ಶ್ರೀ ಸತೀಶ ದೇವರು ಉತ್ತರಾಧಿಕಾರಿಗಳಾಗಿ ಆಡಳಿತವನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಪಂಚ ಪೀಠಗಳಲ್ಲಿ ಒಂದಾದ ಉಜ್ಜಯಿನಿ ಪೀಠದ ಶಾಖಾಮಠವಾಗಿ ಬೆಳೆಯುತ್ತಿರುವ ಈ ಮಠವು ಗುರು-ವಿರಕ್ತರೆಂಬ ಭೇದವಿಲ್ಲದೆ ಸಮಾನ ದೃಷ್ಟಿಕೋನದೊಂದಿಗೆ ಮುನ್ನಡೆಯುತ್ತಿದೆ. ಬಸವಜಯಂತಿಯನ್ನು ಆಚರಿಸಲಾಗುತ್ತಿದೆ. ಪದವಿ ಶಿಕ್ಷಣವನ್ನು ಮುಗಿಸಿ ಹೊನ್ನಾಳಿಯ ಹಿರೇಕಲ್ಮಠದಲ್ಲಿ ಧಾರ್ಮಿಕ ವಿದ್ಯಾಭ್ಯಾಸವನ್ನು ಮಾಡುತ್ತಿರುವ ಶ್ರೀ ಸತೀಶ ದೇವರು ವಿದ್ಯಾಭ್ಯಾಸ ಪೂರ್ಣಗೊಂಡ ನಂತರ ಎರಡು ಮಠಗಳ ಪಟ್ಟಾಧಿಕಾರ ಪಡೆಯಲಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸತೀಶ ದೇವರು, ಶ್ರೀ ಬಸವನಗುಡಿ ಮಠ, ನ್ಯೂ ಚಿತ್ರ ಮಂದಿರ, ಬಸವನಗುಡಿ ರಸ್ತೆ, ಮಂಗಳೂರು.

ಮಂಗಳೂರು ತಾಲ್ಲೂಕಿನಲ್ಲಿ ಮೇಲಿನ ಮಠಗಳ ಜತೆಗೆ ಶ್ರೀ ಮುರುಘಾಮಠ, ಶ್ರೀ ಬಲಮಠ, ಶ್ರೀ ಹೊಸಮಠ, ಶ್ರೀ ಬೋಳೂರು ಮಠ, ಶ್ರೀ ಗಂಜಿಮಠ, ಶ್ರೀ ಸುರತ್ಕಲ್ಲು ಮಠ, ಶ್ರೀ ಉಳ್ಳಾಲಮಠ, ಶ್ರೀ ಸೋಮೇಶ್ವರಮಠ ಈ ರೀತಿ ಎಂಟು ಮಠಗಳನ್ನು ಗುರುತಿಸಬಹುದಾಗಿದೆ. ಆದರೆ ಇವುಗಳ ಬಗ್ಗೆ ಹೆಚ್ಚು ಮಾಹಿತಿ ಲಭ್ಯವಿಲ್ಲ.

ಸೂಳ್ಯ ತಾಲ್ಲೂಕು

ಮಂಗಳೂರು ತಾಲ್ಲೂಕಿನ ಸೂಳ್ಯ ತಾಲ್ಲೂಕು ಕೇರಳ ರಾಜ್ಯಕ್ಕೆ ಹೊಂದಿಕೊಂಡಿದೆ. ಇಲ್ಲಿಯೂ ಸಹ ಕೆಳದಿ ಅರಸರು ಮತ್ತು ಎಡೆಯೂರು ಸಿದ್ಧಲಿಂಗೇಶ್ವರರ ಕಾಲದಲ್ಲಿ ಸುಮಾರು ಎಂಟು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಪ್ರಸ್ತುತ ಸುಬ್ರಮಣ್ಯದಲ್ಲಿ ಸ್ಥಾಪನೆಯಾಗಿದ್ದ ನಾಲ್ಕು ಮಠಗಳ ಬಗ್ಗೆ ಮಾಹಿತಿ ದೊರೆಯುತ್ತದೆ. ಉಳಿದ ಯಾವ ಮಠಗಳ ಬಗ್ಗೆಯೂ ಮಾಹಿತಿ ಲಭ್ಯವಿಲ್ಲ.

ಸುಬ್ರಹ್ಮಣ್ಯ

ಸುಬ್ರಹ್ಮಣ್ಯ ಪಟ್ಟಣವು ಸೂಳ್ಯ ತಾಲ್ಲೂಕಿನಿಂದ ಪೂರ್ವಕ್ಕೆ ಇಪ್ಪತ್ತೆರಡು ಕಿ.ಮೀ.ದೂರದಲ್ಲಿದೆ. ಈ ಪಟ್ಟಣದ ಸಮೀಪದ ಬೆಟ್ಟದ ಮೇಲೆ ನಾಲ್ಕು ಮಠಗಳು ಸ್ಥಾಪಿತವಾಗಿದ್ದವು ಎಂದು ಹೇಳಲಾಗುತ್ತಿದೆ. ಈ ಹೇಳಿಕೆಗೆ ಪೂರಕವೆಂಬಂತೆ ಇಷ್ಟಲಿಂಗಗಳು ಈ ಬೆಟ್ಟದ ಮೇಲೆ ದೊರೆತಿರುವುದು ಈ ಸ್ಥಳದಲ್ಲಿ ವೀರಶೈವ ಮಠಗಳು ಸ್ಥಾಪನೆಯಾಗಿದ್ದವೆಂಬುದನ್ನು ಸ್ಪಷ್ಟೀಕರಿಸುತ್ತದೆ.

ಹೀಗೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ, ಒಟ್ಟು ಅರವತ್ತೆರಡು ಮಠಗಳು ಸ್ಥಾಪನೆಗೊಂಡಿದ್ದವು ಎಂದು ಹೇಳಬಹುದಾದರೂ ಇಪ್ಪತ್ತು ಮಠಗಳ ಹೆಸರುಗಳನ್ನು ಈಗ ದಾಖಲಿಸಬಹುದಾಗಿದೆ. ಅಂದು ರಾಜಾಶ್ರಯದಲ್ಲಿ ಬೆಳೆದ ಮಠಗಳು ಉಂಬಳಿಯಾಗಿ ದೊರೆತಿದ್ದ ಆಸ್ತಿಯನ್ನೆಲ್ಲ ಇಂದು ಕಳೆದುಕೊಂಡ ಮಠಗಳು ತಮ್ಮ ಕುರುಹುಗಳನ್ನು ಮಾತ್ರ ಉಳಿಸಿಕೊಂಡು ಸಂಸಾರಿ ಮನೆಗಳಾಗಿ ಉಳಿದಿವೆ. ಇನ್ನುಳಿದ ಕೆಲವು ಮಠಗಳು ತಮ್ಮ ಕುರುಹುಗಳನ್ನು ಸಹ ಉಳಿಸದೆ ಹೋಗಿರುವುದು ಒಂದು ದುರ್ದೈವದ ಸಂಗತಿಯಾಗಿದೆ.

ಆಧಾರ: ೧. ಬಸವ ಪಥ, ಮಾರ್ಚ್ ೧೯೮೬ ರ ಸಂಚಿಕೆ-೧೨. ಲೇಖಕರು - ಕೆ.ಪಿ. ಶಿವಲಿಂಗಯ್ಯ
೨. ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ - ಡಾ. ಕೆ.ಜಿ. ವೆಂಕಟೇಶ ಜೋಯಿಸ್
೩. ಅಪ್ರಕಟಿತ ಚಾರಿತ್ರಿಕ ದಾಖಲೆ / ದಕ್ಷಿಣ ಕನ್ನಡದ ಇತಿಹಾಸ, ದರ್ಶನ - ಗುಂಡಾ ಜೋಯಿಸ್

❑

ದಾವಣಗೆರೆ ಜಿಲ್ಲೆ

ದಾವಣಗೆರೆ ಜಿಲ್ಲೆ



ದಾವಣಗೆರೆ ತಾಲ್ಲೂಕು : ೧. ಅವರಗೊಳ, ೨. ಹೆಬ್ಬಾಳು

ಹರಪನಹಳ್ಳಿ ತಾಲ್ಲೂಕು : ೧. ನೀರಗುಂದ, ೨. ರಾಮಘಟ್ಟ

ಜಗಳೂರು ತಾಲ್ಲೂಕು : ೧. ಕಣ್ವಕುಪ್ಪ, ೨. ಮುಷ್ಟೂರು

ಹರಿಹರ ತಾಲ್ಲೂಕು : ೧. ನಂದಿಗುಡಿ

ಹೊನ್ನಾಳಿ ತಾಲ್ಲೂಕು : ೧. ರಾಮಪುರ, ೨. ಹೊಟ್ಯಾಪುರ

ಚೆನ್ನಗಿರಿ ತಾಲ್ಲೂಕು : ೧. ಬಸವಪಟ್ಟಣ, ೨. ಪಾಂಡುಮಟ್ಟಿ, ೩. ತಾವರೇಕೆರೆ

೧೯೯೭ ರಲ್ಲಿ ಹೊಸ ಜಿಲ್ಲೆಯಾಗಿ ರಚನೆಗೊಂಡ ದಾವಣಗೆರೆ ಜಿಲ್ಲೆಯು ದಾವಣಗೆರೆ, ಚನ್ನಗಿರಿ, ಹೊನ್ನಾಳಿ, ಹರಿಹರ, ಹರಪನಹಳ್ಳಿ ಮತ್ತು ಜಗಳೂರು ತಾಲ್ಲೂಕುಗಳನ್ನು ಒಳಗೊಂಡಿದೆ. ಹೀಗೆ ಒಟ್ಟು ಆರು ತಾಲ್ಲೂಕುಗಳನ್ನು ಒಳಗೊಂಡ ಜಿಲ್ಲೆಯು ಕೈಗಾರಿಕೆ, ಕೃಷಿ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆಯನ್ನು ಸಾಧಿಸಿ ಕರ್ನಾಟಕದ ಶ್ರೀಮಂತ ಜಿಲ್ಲೆಗಳಲ್ಲಿ ಒಂದಾಗಿ ಬೆಳೆದಿದೆ. ಶಿವಮೊಗ್ಗ, ಹಾವೇರಿ, ಬಳ್ಳಾರಿ, ಚಿತ್ರದುರ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಯ ಗಡಿಪ್ರದೇಶಗಳಿಂದ ಆವೃತ್ತಗೊಂಡಿದೆ. ಈ ಜಿಲ್ಲೆಯಲ್ಲಿ ತುಂಗಭದ್ರಾ ನದಿಯು ಹರಿದು ಜಿಲ್ಲೆಗೆ ಜೀವಕಳೆಯನ್ನು ತಂದಿದೆ. ಭದ್ರಾ ಜಲಾಶಯ ಯೋಜನೆಯಿಂದ ಚನ್ನಗಿರಿ, ಹೊನ್ನಾಳಿ, ಹರಿಹರ ಮತ್ತು ದಾವಣಗೆರೆ ತಾಲ್ಲೂಕುಗಳು ನೀರಾವರಿ ಸೌಲಭ್ಯವನ್ನು ಪಡೆದು ಸದಾ ಹಸಿರಿನ ನಾಡಾಗಿ ಕಂಗೊಳಿಸುತ್ತಿವೆ.

ವಿಜಯ ನಗರ ಸಾಮ್ರಾಜ್ಯದ ಆಡಳಿತಕ್ಕೆ ಒಳಪಟ್ಟಿದ್ದ ಈ ಜಿಲ್ಲೆಯು ಶ್ರೀಮಂತಗೊಂಡಿದೆ. ಅಲ್ಲದೆ ಹರಪನಹಳ್ಳಿಯ ಪಾಳೆಗಾರರು, ಕೆಳದಿಯ ಅರಸರು ಮತ್ತು ಮೈಸೂರಿನ ಅರಸರು ಆಳ್ವಿಕೆ ನಡೆಸಿ ಈ ಜಿಲ್ಲೆಯು ಐತಿಹಾಸಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬೆಳೆಯಲು ಕಾರಣಕರ್ತರಾಗಿದ್ದಾರೆ. ಚನ್ನಗಿರಿ ತಾಲ್ಲೂಕಿನ ಸೂಳೆಕೆರೆಯ ಸಿದ್ಧೇಶ್ವರ ಕ್ಷೇತ್ರ, ಹೊನ್ನಾಳಿಯ ಹಿರೇಕಲ್ಮಠ, ಹರಿಹರದ ಹರಿಹರೇಶ್ವರ ದೇವಸ್ಥಾನ, ಹರಿಹರ ತಾಲ್ಲೂಕಿನ ಉಕ್ಕಡಗಾತ್ರಿ ಮತ್ತು ಹರಪನಹಳ್ಳಿ ತಾಲ್ಲೂಕಿನ ಉಚ್ಚಂಗಿದುರ್ಗ ಮುಂತಾದ ಕ್ಷೇತ್ರಗಳು ದಾವಣಗೆರೆ ಜಿಲ್ಲೆಯು ಧಾರ್ಮಿಕವಾಗಿ ಹೆಚ್ಚು ಹೆಸರು ಮಾಡುವಂತೆ ಮಾಡಿವೆ.

ಈ ಎಲ್ಲಾ ಹಿನ್ನೆಲೆಗಳನ್ನು ಒಳಗೊಂಡ ದಾವಣಗೆರೆ ಜಿಲ್ಲೆಯಲ್ಲಿ ವೀರಶೈವ ಧರ್ಮವು ವೈಭವದಿಂದ ಬೆಳೆದಿದೆ. ಈ ಜಿಲ್ಲೆಯಲ್ಲಿಒಟ್ಟು ಐವತ್ತಾರು ಮಠಗಳು ಸ್ಥಾಪನೆಗೊಂಡ ಬಗ್ಗೆ ಮಾಹಿತಿ ದೊರೆತಿದೆ. ಈ ಆಧಾರದ ಮೇಲೆ ಮಠಗಳ ಶೋಧನೆಗೆ ಹೋದಾಗ ಮೂವತ್ತೊಂಬತ್ತು ಮಠಗಳು ಪತ್ತೆಯಾಗಿದ್ದು, ಉಳಿದ ಹದಿನೇಳು ಮಠಗಳು ಹೇಳಲು ಹೆಸರಿಲ್ಲದಂತೆ ಇತಿಹಾಸದ ಪುಟದಿಂದ ದೂರವಾಗಿವೆ. ದೊರೆತಿರುವ ಮೂವತ್ತೊಂಬತ್ತು ಮಠಗಳಲ್ಲಿ ಇಪ್ಪತ್ತು ಮಠಗಳು ಅಸ್ತಿತ್ವವನ್ನು ಉಳಿಸಿಕೊಂಡು, ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ಬೆಳೆದಿವೆ.

ದಾವಣಗೆರೆ ನಗರದ ಶ್ರೀ ಮೈಸೂರು ಮಠ. ಶ್ರೀ ತಿರುಕಪ್ಪನಮಠ, ದೊಡ್ಡಪೇಟೆಯ ಶ್ರೀ ವಿರಕ್ತಮಠ ಹಾಗೂ ದಾವಣಗೆರೆ ತಾಲ್ಲೂಕಿನ ಗುಮ್ಮ[illegible] ಮಠ, ಗೋದಾಳಿನ ಮಠ, ಅಣಜಿಯ ಮಠ ಮತ್ತು ದೊಡ್ಡಬಾತಿಯ ಶ್ರೀಮುರುಘಾ ಮಠ, ಜಗಳೂರಿನ ಮಠ, ಹರಿಹರ ಪಟ್ಟಣದಲ್ಲಿರುವ ಶ್ರೀ ಮುರುಘಾ ಮಠ, ಚನ್ನಗಿರಿ ತಾಲ್ಲೂಕಿನ ತ್ಯಾವಣಗಿಯ ಶ್ರೀ ವಿರಕ್ತಮಠ, ಕೂಲಂಬಿ ಮಠ, ಬಿಳಿಗೆರೆ ಮಠ, ಹೊನ್ನಾಳಿ ತಾಲ್ಲೂಕಿನ ನ್ಯಾಮತಿಯ ಮಠ, ಗೋವಿನಕೋವಿಯ ಮಠ, ಅಸನಗೋಡು ಮಠ ಮತ್ತು ಹೊನ್ನೂರಿನ ಶ್ರೀ ಜಡೆಸ್ವಾಮಿ ಮಠ ಸೇರಿದಂತೆ ಒಟ್ಟು ಹದಿನಾರು ಮಠಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿದ್ದರೂ ಮಠಾಧೀಶರಿಲ್ಲದೆ ಗದ್ದುಗೆ ಪೂಜೆಗೆ ಮಾತ್ರ ಸೀಮಿತವಾಗಿ ಉಳಿದಿವೆ. ಹರಪನಹಳ್ಳಿ ಹಾಗೂ ಹೊನ್ನಾಳಿ ಮಠಗಳು ಜಿಲ್ಲೆಯ ಅಭಿವೃದ್ಧಿಗೆ ಪ್ರೇರಕವಾಗಿ ಕಾರ್ಯ ನಿರ್ವಹಿಸಿವೆ ಎಂಬುದನ್ನು ಯಾರೂ ಅಲ್ಲಗಳೆಯುವುದಿಲ್ಲ. ಜಿಲ್ಲೆಯಲ್ಲಿ ಸ್ಥಾಪನೆಗೊಂಡ ಬಹುತೇಕ ಎಲ್ಲಾ ವೀರಶೈವ ಮಠಗಳು ತಮ್ಮ ಶಕ್ತ್ಯಾನುಸಾರ ಜಿಲ್ಲೆಯ ಧಾರ್ಮಿಕ ಕ್ಷೇತ್ರವನ್ನು ಶ್ರೀಮಂತಗೊಳಿಸಿದಂತೆ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಅಪಾರವಾದ ಕೊಡುಗೆಯನ್ನು ನೀಡಿ ಜಿಲ್ಲೆಯನ್ನು ಸಂಸ್ಕಾರಯುತವಾಗಿ ಬೆಳೆಸಿವೆ.

ಚನ್ನಗಿರಿ ತಾಲ್ಲೂಕು

ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕು ಶ್ರೀಮಂತ ತಾಲ್ಲೂಕುಗಳಲ್ಲಿ ಒಂದಾಗಿದೆ. ಸಹ್ಯಾದ್ರಿಯ ಪರ್ವತಗಳು ಹಾಗೂ ಬಯಲುಸೀಮೆ ಎರಡನ್ನು ಹೊಂದಿರುವ ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆದಿದೆ. ಕೆಳದಿ ಅರಸರ ಕಾಲದಲ್ಲಿ ವೀರಶೈವ ಮಠಗಳು ಆರ್ಥಿಕವಾಗಿ ಸಧೃಡತೆಯನ್ನು ಕಂಡಿದ್ದವು. ಅಂದು ಸ್ಥಾಪನೆಗೊಂಡ ಮಠಗಳಲ್ಲಿ ಕೇವಲ ಆರು ಮಠಗಳು ಇಂದು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಅರಿಸಿನಘಟ್ಟ

ಚನ್ನಗಿರಿ ತಾಲ್ಲೂಕಿನ ಅರಿಸಿನಘಟ್ಟವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಎಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಓಂಕಾರೇಶ್ವರ ಮಠವು ಇತ್ತೀಚೆಗೆ ಸ್ಥಾಪನೆಯಾಗಿದೆ.

ಓಂಕಾರೇಶ್ವರಸ್ವಾಮಿ ಮಠ: ಅರಿಸಿನಘಟ್ಟ ಗ್ರಾಮದ ಹೊರಭಾಗದಲ್ಲಿ ಶ್ರೀ ಓಂಕಾರೇಶ್ವರ ಮಠವು ಸ್ಥಾಪನೆಯಾಗಿದೆ. ಶ್ರೀ ಓಂಕಾರೇಶ್ವರ ಸ್ವಾಮಿಗಳು ಇಲ್ಲಿಗೆ ಆಗಮಿಸಿ ಮಠವನ್ನು ಸ್ಥಾಪಿಸಿದ್ದರಿಂದ ಈ ಹೆಸರು ಬಂದಿದೆ. ಮಠದಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಯುತ್ತಿವೆ.

ವಿಳಾಸ: ಶ್ರೀ ಓಂಕಾರೇಶ್ವರ ಸ್ವಾಮಿಗಳು, ಶ್ರೀ ಓಂಕಾರೇಶ್ವರ ಮಠ, ಅರಿಸಿನಘಟ್ಟ, ಚನ್ನಗಿರಿ ತಾಲ್ಲೂಕು,ದಾವಣಗೆರೆ ಜಿಲ್ಲೆ.

ಚನ್ನಗಿರಿ

ದಾವಣಗೆರೆ ಜಿಲ್ಲೆಯ ಚನ್ನಗಿರಿಯು ಜಿಲ್ಲಾ ಕೇಂದ್ರದಿಂದ ದಕ್ಷಿಣಭಾಗಕ್ಕೆ ಮೂವತ್ತೆಂಟು ಕಿ.ಮೀದೂರದಲ್ಲಿದೆ. ಇಲ್ಲಿ ಶ್ರೀ ಹಾಲುಸ್ವಾಮಿ ವಿರಕ್ತಮಠ, ಶ್ರೀ ಹಿರೇಮಠ, ಶ್ರೀ ಶಾಂತವೀರಪ್ಪ ದೇವರ ಮಠ, ಶ್ರೀ ಪುಟ್ಟಬಸಪ್ಪ ದೇವರ ಮಠ, ಶ್ರೀ ಹಾಲಸಿದ್ಧ ದೇವರ ಮಠ, ಶ್ರೀ ಹಾರೋವೀರಯ್ಯನವರ ಮಠ, ಶ್ರೀ ಸೀಗೆಮಠ, ಶ್ರೀ ಜಂಗಮ ವಿಶ್ವನಾಥ ಮಠ ಹಾಗೂ ಶ್ರೀ ಕಲ್ಮಠ ಈ ರೀತಿ ಒಟ್ಟು ಒಂಬತ್ತು ಮಠಗಳು ಸ್ಥಾಪನೆಯಾಗಿವೆ. ಇವುಗಳಲ್ಲಿ ಶ್ರೀ ಹಾಲು ಸ್ವಾಮಿ ವಿರಕ್ತಮಠ ಹಾಗೂ ಶ್ರೀ ಹಿರೇಮಠ ಎರಡು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿದೆ. ಉಳಿದ ಮಠಗಳು ಅಸ್ತಿತ್ವ ಕಳೆದುಕೊಂಡಿವೆ.

ಹಾಲುಸ್ವಾಮಿ ವಿರಕ್ತಮಠ: ಚನ್ನಗಿರಿ ಪಟ್ಟಣದ ಮಧ್ಯ ಭಾಗದಲ್ಲಿ ಮುರುಘಾ ಸಮಯದ ಶ್ರೀ ಹಾಲುಸ್ವಾಮಿ ವಿರಕ್ತಮಠವು ಸ್ಥಾಪನೆಯಾಗಿದೆ. ಈ ಮಠವನ್ನು ಶ್ರೀ ಹಾಲು ಸ್ವಾಮಿಗಳು ಸ್ಥಾಪನೆ ಮಾಡಿರುವುದರಿಂದ 'ಶ್ರೀ ಹಾಲುಸ್ವಾಮಿ ಮಠ' ಎಂದು ಹೆಸರು ಬಂದಿದೆ. ಚಿತ್ರದುರ್ಗದ ಬೃಹನ್ಮಠದಲ್ಲಿ ತಪೋನುಷ್ಠಾನ ಕೈಗೊಂಡಿದ್ದ ಶ್ರೀ ಹಾಲು ಸ್ವಾಮಿಗಳು ಲೋಕಸಂಚಾರ ಕೈಗೊಂಡು ಚನ್ನಗಿರಿಗೆ ಬಂದರು. ಚನ್ನಗಿರಿಯ ಕಲ್ಮಠದಲ್ಲಿ ನೆಲೆಸಿದ್ದ ಶ್ರೀ ಶಿವಲಿಂಗೇಶ್ವರರ ದರ್ಶನ ಪಡೆದು ಕಲ್ಮಠದಲ್ಲಿ ಕೆಲವು ದಿನ ಅನುಷ್ಠಾನಗೊಂಡರು. ನಂತರ ಚನ್ನಗಿರಿಯಲ್ಲಿ ಉಳಿಯಲು ನಿರ್ಧರಿಸಿ ಪ್ರತ್ಯೇಕ ವಿರಕ್ತ ಮಠವನ್ನು ಸ್ಥಾಪಿಸಿದರು. ಈ ಸಂದರ್ಭದಲ್ಲಿ ಕಲ್ಮಠದ ಗುರುಗಳಾದ ಶ್ರೀ ಶಿವಲಿಂಗೇಶ್ವರರು ಲಿಂಗೈಕ್ಯರಾದ ಮೇಲೆ ಕಲ್ಮಠದ ಆಡಳಿತವನ್ನು ನೋಡಿ ಕೊಂಡು ಬರತೊಡಗಿದರು. ಎಂದು ಈಗಿನ ಗುರುಗಳಾದ ಶ್ರೀ ಜಯದೇವ ಸ್ವಾಮಿಗಳು ಅಭಿಪ್ರಾಯಿಸುತ್ತಾರೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಹಾಲುಸ್ವಾಮಿಗಳು

೨. ಶ್ರೀ ಮ.ನಿ.ಪ್ರ. ಶ್ರೀಕಂಠ ಸ್ವಾಮಿಗಳು

೩. ಶ್ರೀ ಮ.ನಿ.ಪ್ರ. ಜಯದೇವ ಸ್ವಾಮಿಗಳು (ಈಗಿನವರು)

ಈ ರೀತಿ ಶ್ರೀ ಹಾಲುಸ್ವಾಮಿ ವಿರಕ್ತ ಮಠದ ಪರಂಪರೆಯ ಬೆಳೆದಿದೆ. ಮಹಾ ತಪೋನಿಧಿ ಶ್ರೀ ಹಾಲು ಸ್ವಾಮಿಗಳಿಂದ ಬೆಳೆದು ಈಗ ಪ್ರಬುದ್ಧತೆಯನ್ನು ಸಾಧಿಸಿದೆ. ಶ್ರೀ ಹಾಲುಸ್ವಾಮಿಗಳು ಕಲ್ಮಠದ ಆಡಳಿತವನ್ನು ಶ್ರೀ ಮುರುಘೇಂದ್ರ ಸ್ವಾಮಿಗಳಿಗೆ

ನೀಡಿ ಧಾರ್ಮಿಕ ಕಾರ್ಯಗಳು ನಡೆಸಲು ಅನುವು ಮಾಡಿಕೊಟ್ಟರು. ಶ್ರೀ ಮುರುಘೇಂದ್ರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಪುನಃ ಕಲ್ಮಠದ ಆಡಳಿತವನ್ನು ಶ್ರೀ ಹಾಲುಸ್ವಾಮಿ ಮಠವೇ ನೋಡಿಕೊಂಡು ಬಂದಿದೆ. ಶ್ರೀ ಹಾಲುಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಶ್ರೀ ಶ್ರೀಕಂಠ ಸ್ವಾಮಿಗಳು ಅಧಿಕಾರಕ್ಕೆ ಬಂದು ಎರಡೂ ಮಠಗಳನ್ನು ಅಭಿವೃದ್ಧಿಪಡಿಸಿ ಧಾರ್ಮಿಕ ಕಾರ್ಯಗಳಿಂದ ಹೆಚ್ಚು ಪ್ರಸಿದ್ಧಿ ಪಡೆದರು. ಇವರ ನಂತರ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿಯಿತು. ಈ ಸಂದರ್ಭದಲ್ಲಿ ಎರಡು ಮಠಗಳು ಶಿಥಿಲಗೊಂಡವು. ನಂತರ ಭಕ್ತರು, ಚಿತ್ರದುರ್ಗ ಬೃಹನ್ಮಠದ ಜಗದ್ಗುರುಗಳ ಜೊತೆ ಚರ್ಚಿಸಿ ಶ್ರೀ ಜಯದೇವ ಸ್ವಾಮಿಗಳನ್ನು ಮಠದ ಪಟ್ಟಾಧಿಕಾರಕ್ಕೆ ತರಲು ನಿಶ್ಚಯಿಸಿದರು.

ಸಮರ್ಥರ ಆಗಮನ: ಶ್ರೀ ಹಾಲುಸ್ವಾಮಿ ಮಠದ ಉತ್ತರಾಧಿಕಾರಿಯಾಗಿ ನೇಮಕಗೊಂಡ ಶ್ರೀ ಜಯದೇವ ಸ್ವಾಮಿಗಳು ೧೯೮೫ ರ ನವೆಂಬರ್ ಇಪ್ಪತ್ತೈದರಂದು ಬೃಹನ್ಮಠದ ಜಗದ್ಗುರು ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳ ನೇತೃತ್ವದಲ್ಲಿ ಧಾರವಾಡದ ಮುರುಘಾ ಮಠದ ಶ್ರೀ ಮಹಂತಪ್ಪನವರಿಂದ ಅನುಗ್ರಹ ಪಡೆದು ಅಧಿಕಾರವನ್ನು ವಹಿಸಿಕೊಂಡರು. ಶ್ರೀ ಜಯದೇವ ಸ್ವಾಮಿಗಳು ಅಧಿಕಾರ ಪಡೆದ ಮೇಲೆ ತಮ್ಮ ಸಂಘಟನೆಯ ಚತುರತೆಯಿಂದ ಭಕ್ತರನ್ನು ಸಂಘಟಿಸತೊಡಗಿದರು. ಸಂಘಟನೆಯ ಜತೆಗೆ ಧಾರ್ಮಿಕ ವಿಚಾರಗಳಿಂದ ಸಮಾಜವನ್ನು ಧಾರ್ಮಿಕ ತಳಹದಿಯ ಮೇಲೆ ಬೆಳೆಸತೊಡಗಿದರು. ಗುರುಗಳು ನಿರೀಕ್ಷಿಸಿದಂತೆ ಭಕ್ತರು ಧಾರ್ಮಿಕವಾಗಿ ಎಚ್ಚೆತ್ತುಕೊಂಡು ಧರ್ಮಾಚರಣೆ ಮಾಡತೊಡಗಿದ ಮೇಲೆ ಶಿಥಿಲಗೊಂಡ ಮಠದ ಅಭಿವೃದ್ಧಿಗೆ ಯೋಜನೆ ರೂಪಿಸಿಕೊಂಡು, ಮಠದ ಕಟ್ಟಡವನ್ನು ನೂತನವಾಗಿ ನಿರ್ಮಿಸಿದರು. ಅಲ್ಲದೆ ಶ್ರೀ ಶಿವಲಿಂಗೇಶ್ವರ ಮಠ (ಕಲ್ಮಠ) ದಲ್ಲಿ ಭೋಜನ ಶಾಲೆಯನ್ನು ನಿರ್ಮಿಸಿದರು. ಶ್ರೀ ಜಯದೇವ ಸ್ವಾಮಿಗಳು ಅಧಿಕಾರಕ್ಕೆ ಬಂದ ದಶಕದಲ್ಲಿಯೇ ಧಾರ್ಮಿಕ ವಾತಾವರಣವು ಸೃಷ್ಟಿಯಾಗಿ ಮಠದ ಪರಿಸರ ಆಮೂಲಾಗ್ರವಾಗಿ ಬದಲಾವಣೆಗೊಂಡಿತು.

ಗದ್ದುಗೆಗಳು: ಶ್ರೀ ಹಾಲುಸ್ವಾಮಿ ಮಠದ ಆವರಣದಲ್ಲಿ ಶ್ರೀ ಹಾಲುಸ್ವಾಮಿಗಳು ಮತ್ತು ಶ್ರೀ ಶ್ರೀಕಂಠ ಸ್ವಾಮಿಗಳ ಗದ್ದುಗೆಗಳು ನಿರ್ಮಾಣಗೊಂಡಿದ್ದು ಶ್ರೀ ಜಯದೇವ ಸ್ವಾಮಿಗಳು ಈ ಎರಡೂ ಗದ್ದುಗೆಗಳಿಗೆ ಮಂಟಪವನ್ನು ನಿರ್ಮಿಸಿದ್ದಾರೆ. ಕಲ್ಮಠದಲ್ಲಿ ಶ್ರೀ ಮುರುಘೇಂದ್ರ ಸ್ವಾಮಿಗಳ ಗದ್ದುಗೆಯನ್ನು ನಿರ್ಮಿಸಲಾಗಿದೆ. ಕಲ್ಮಠದ ಕರ್ತೃಗುರುಗಳಾದ ಶ್ರೀ ಶಿವಲಿಂಗೇಶ್ವರರ ಗದ್ದುಗೆಯು ಚಿಕ್ಕ ಹುಲಿಕೆರೆಯ ಶಾಖಾಮಠದಲ್ಲಿ ಸ್ಥಾಪನೆಯಾಗಿದ್ದು, ಈ ಗದ್ದುಗೆಗೆ ಮಂಟಪ ನಿರ್ಮಿಸಿ ನಿತ್ಯಪೂಜೆ, ಕಲ್ಮಠದಲ್ಲಿ ಬಸವೇಶ್ವರ ಮತ್ತು ಈಶ್ವರ ಲಿಂಗವನ್ನು ಪ್ರತಿಷ್ಠಾಪಿಸಿದ್ದು ಇವುಗಳಿಗೆ ನಿತ್ಯಪೂಜೆ, ಶ್ರಾವಣ, ಕಾರ್ತೀಕಮಾಸಗಳಲ್ಲಿ ವಿಶೇಷ ಪೂಜೆ, ಭಜನೆ, ಬಸವಜಯಂತಿಯ ಆಚರಣೆ ಹಾಗೂ ಹಿರಿಯ ಗುರುಗಳ ಆರಾಧನೆ ಕಾರ್ಯವನ್ನು ನಡೆಸಲಾಗುತ್ತಿದೆ.

ಅಭಿವೃದ್ಧಿ ಕಾರ್ಯಗಳು: ಧಾರ್ಮಿಕ ಹಾಗೂ ಸಾಮಾಜಿಕವಾಗಿ ಮಠವನ್ನು ಪ್ರಚಾರಕ್ಕೆ ತಂದ ಗುರುಗಳು ಮಠದ ವತಿಯಿಂದ ಕಲ್ಯಾಣ ಮಂಟಪ, ಶಿವಾನುಭವ ಮಂಟಪ ಹಾಗೂ ಭೋಜನ ಶಾಲೆಯನ್ನು ನಿರ್ಮಿಸಿದ್ದಾರೆ. ಅಲ್ಲದೆ ಚನ್ನಗಿರಿಯಲ್ಲಿ ಪ್ರಥಮ ದರ್ಜೆ ಕಾಲೇಜಿಗೆ ಬೇಕಾದ ನಾಲ್ಕೂವರೆ ಎಕರೆ ಜಾಗವನ್ನು ದಾನ ರೂಪದಲ್ಲಿ ನೀಡಿದ್ದಾರೆ.

ಶಾಖಾಮಠಗಳು: ಚನ್ನಗಿರಿಯಲ್ಲಿಯ ಶ್ರೀ ಸೀಗೆಮಠ, ಶ್ರೀ ಚೌಕಿಮಠ, ಶ್ರೀ ಕಲ್ಮಠ ಸೇರಿದಂತೆ ಶ್ರೀ ಶಿವಲಿಂಗೇಶ್ವರರು ಐಕ್ಯಗೊಂಡ ಚಿಕ್ಕ ಹುಲಿಕೆರೆಮಠ, ಸಂತೇಬೆನ್ನೂರಿನ ಶ್ರೀ ವಿರಕ್ತಮಠ, ಬಸವಪಟ್ಟಣದ ಶ್ರೀ ಗೋಂದಿಮಠ ಈ ಮಠಗಳು ಶಾಖಾಮಠಗಳಾಗಿ ಬೆಳೆಯುತ್ತಿವೆ. ಚೌಕಿಮಠದಲ್ಲಿ ಎರಡು ಗದ್ದುಗೆಗಳು ಹಾಗು ಸೀಗೆ ಮಠದಲ್ಲಿ ಪುರಾತನ ಕಾಲದ ಒಂದು ಗದ್ದುಗೆ ನಿರ್ಮಾಣಗೊಂಡಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಜಯದೇವ ಸ್ವಾಮಿಗಳು, ಶ್ರೀ ಹಾಲುಸ್ವಾಮಿ ವಿರಕ್ತಮಠ, ಚನ್ನಗಿರಿ, ದಾವಣಗೆರೆ ಜಿಲ್ಲೆ.

ಹಿರೇಮಠ: ಚನ್ನಗಿರಿ ಪಟ್ಟಣದ ಮಧ್ಯ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ಪಂಚಪೀಠಗಳಲ್ಲಿ ಒಂದಾದ ಕೇದಾರಪೀಠದ ಪರಂಪರೆಯ ಶಿಷ್ಯವರ್ಗದ ಮಠವಾಗಿದ್ದು, ತನ್ನ ಧಾರ್ಮಿಕ ಚಟುವಟಿಕೆಯನ್ನು ನಡೆಸಿಕೊಂಡು ಬಂದಿದೆ.

ಈ ಮಠದ ಸ್ಥಾಪನೆಯ ಕಾಲಮಾನದ ಬಗ್ಗೆ ನಿಖರವಾಗಿ ಹೇಳುವ ಆಧಾರಗಳು ಲಭ್ಯವಿಲ್ಲ. ಪುರಾತನ ಮಠ ಎಂದು ಹೇಳಲು ಈ ಮಠದ ಕಟ್ಟಡ ಒಂದೇ ಸಾಕ್ಷಿಯಾಗಿದೆ. ಈ ಮಠಕ್ಕೆ ಚನ್ನಗಿರಿಯ ಸುತ್ತಲ ಗ್ರಾಮಗಳಲ್ಲಿ ಶಿಷ್ಯರಿದ್ದು,

ಈ ಹಳ್ಳಿಗಳ ಜನರು ಪರಂಪರೆಯಿಂದ ಈ ಮಠದ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಂಡು ಸಹಕಾರ ನೀಡುತ್ತಿದ್ದಾರೆ.

ಪರಂಪರೆ: ಎಂಬತ್ತು ವರ್ಷಗಳ ದೀರ್ಘಕಾಲ ಬದುಕಿದ್ದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ತಮ್ಮ ಜೀವಿತಾವಧಿಯಲ್ಲಿ ಲೌಕಿಕವಾಗಿ ಏನನ್ನೂ ಬಯಸದೆ ಆಧ್ಯಾತ್ಮ ಚಿಂತನೆಯಲ್ಲಿ ತಪೋನುಷ್ಠಾನಗೊಂಡು ಸಾಮಾಜಿಕ, ಧಾರ್ಮಿಕ ಅಭಿವೃದ್ಧಿಯ ಬಗ್ಗೆ ಚಿಂತಿಸಿ ಲೋಕೋದ್ಧಾರಕ್ಕಾಗಿ ತಪಸ್ಸನ್ನು ಆಚರಿಸಿ ಲಿಂಗೈಕ್ಯರಾದರು. ಹಿರಿಯ ಗುರುಗಳು ಲಿಂಗೈಕ್ಯರಾದ ಮೇಲೆ ಹೊನ್ನಾಳಿ ಕಲ್ಮಠದ ಗುರುಗಳು ಈ ಮಠಕ್ಕೆ ಉತ್ತರಾಧಿಕಾರಿಗಳನ್ನು ನೇಮಿಸಿದರು. ಭಕ್ತರು ಸೇರಿ ಕೇದಾರ ಜಗದ್ಗುರುಗಳ ಸಾನ್ನಿಧ್ಯದಲ್ಲಿ, ೧೯೬೨ ರಲ್ಲಿ ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳಿಗೆ ಪಟ್ಟಾಧಿಕಾರವನ್ನು ಮಾಡಲಾಯಿತು.

ಪಟ್ಟಾಧಿಕಾರ ಸ್ವೀಕರಿಸಿದ ಶ್ರೀ ನೀಲಕಂಠ ಸ್ವಾಮಿಗಳು ಮೈಸೂರಿನ ಜಪದಕಟ್ಟೆ ಮಠದಲ್ಲಿ ವಾಸ್ತವ್ಯ ಪಡೆದು ವಿದ್ಯಾಭ್ಯಾಸ ಪಡೆದು ಮಠಕ್ಕೆ ಆಗಮಿಸಿ ಧಾರ್ಮಿಕ ಆಚರಣೆಗಳು ನಡೆಸ ತೊಡಗಿದ್ದಾರೆ. ಗುರುಗಳು ಮಠದ ಆಸ್ತಿಯನ್ನು ಕಾನೂನು ಬದ್ಧಗೊಳಿಸಿ ಮಠವನ್ನು ಬೆಳೆಸತೊಡಗಿದ್ದಾರೆ. ಶ್ರೀ ಸಿದ್ಧಲಿಂಗೇಶ್ವರ ಕಾನ್ವೆಂಟ್‌ನ್ನು (ಕ್ರಿ.ಶ.೨೦೦೦) ಸ್ಥಾಪಿಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಚನ್ನಗಿರಿ, ದಾವಣಗೆರೆ ಜಿಲ್ಲೆ.

ತಾವರೆಕೆರೆ

ಚನ್ನಗಿರಿ ತಾಲ್ಲೂಕಿನ ತಾವರೆಕೆರೆಯು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಇಪ್ಪತ್ತೈದು ಕಿ.ಮೀ.ದೂರದಲ್ಲಿದೆ. ಈ ಪಟ್ಟಣಕ್ಕೆ ಹಿಂದೆ'ಕಮಲಾವತಿ'ಪಟ್ಟಣ ಎಂದು ಕರೆಯಲಾಗುತ್ತಿತ್ತು, ನಂತರ'ತಾವರೆಕೆರೆ 'ಎಂಬ ಹೆಸರು ಬಂದಿದೆ. ಈ ಗ್ರಾಮದ ಸುತ್ತ ಮುತ್ತ ಹದಿನಾರು ಕೆರೆಗಳಿದ್ದು, ಈ ಕೆರೆಗಳಿಂದ ಸುತ್ತುವರೆದ ಭೂಪ್ರದೇಶ ತಾವರೆಯಂತಿರುವುದರಿಂದ 'ತಾವರೆಕೆರೆ' ಎಂಬ ಹೆಸರು ಬರಲು ಕಾರಣವಾಗಿದೆ ಎಂದು ಸ್ಥಳನಾಮದ ಬಗ್ಗೆ ಜನಪದವಾಗಿ ಒಂದೊಂದು ಕತೆ ರೂಪುಗೊಂಡಿದೆ. ಇಲ್ಲಿ ಶ್ರೀ ಶಿಲಾಮಠವು ಅಸ್ತಿತ್ವದಲ್ಲಿದೆ.

ಶಿಲಾಮಠ: ತಾವರೆಕೆರೆ ಪಟ್ಟಣದಲ್ಲಿ ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿ ಶಿಷ್ಯವರ್ಗದ ಪರಂಪರೆಯ ಶ್ರೀ ಶಿಲಾಮಠವು ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳಿಂದ ಹೆಸರು ಮಾಡಿದೆ. ಈ ಮಠವನ್ನು ಕಲ್ಲಿನಿಂದ ನಿರ್ಮಿಸಲ್ಪಟ್ಟಿರುವುದರಿಂದ 'ಶ್ರೀ ಶಿಲಾಮಠ' ಎಂಬ ಹೆಸರು ಬಂದಿದೆ. ಕೆಳದಿ ಚನ್ನಮ್ಮಾಜಿಯ ಕಾಲದಲ್ಲಿ ಈ ಮಠವನ್ನು ಸ್ಥಾಪನೆ ಮಾಡಲಾಗಿದೆ ಎಂದು ಹೇಳಲಾಗುತ್ತಿದೆ.

ಪರಂಪರೆ:

೧. ಷ.ಬ್ರ.ಶ್ರೀ ರೇವಣಸಿದ್ಧ ಶಿವಾಚಾರ್ಯಸ್ವಾಮಿಗಳು (ಕರ್ತೃಗುರುಗಳು)
೨. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ರೇಣುಕ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯ ಗುರುಗಳ ಕೆಲವು ಹೆಸರುಗಳನ್ನು ಮಾತ್ರ ದಾಖಲಿಸಲಾಗಿದೆ. ಉಳಿದ ಗುರುಗಳ ಹೆಸರುಗಳನ್ನು ದಾಖಲಿಸಿಡದೆ ಇರುವ ಕಾರಣ ಅವರುಗಳ ಬಗ್ಗೆ ಮಾಹಿತಿ ಲಭ್ಯವಿಲ್ಲ. ಕರ್ತೃ ಗುರುಗಳಾದ ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ಅಧಿಕಾರ ನಡೆಸಿದ ನಂತರ ಮಠದ ಪರಂಪರೆಯಲ್ಲಿ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಈ ಮಠದ ಅಧಿಕಾರ ವಹಿಸಿಕೊಂಡಿದ್ದಾರೆ ಎಂದು ದಾಖಲಿಸಲಾಗಿದೆ. ಇವರು ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಈ ಮಠವು ಪೂರ್ಣ ಜೀರ್ಣಗೊಂಡು ಶಿಥಿಲಾವಸ್ಥೆಯಲ್ಲಿತ್ತು. ಈ ಸಂದರ್ಭದಲ್ಲಿ ಮಠದ ಆಡಳಿತದ ಜತೆ ಧಾರ್ಮಿಕ ಆಚರಣೆಗಳನ್ನು ನೋಡಿಕೊಂಡು ಮಠವನ್ನು ಸುವ್ಯವಸ್ಥೆಗೊಳಿಸಿರುವ ಗುರುಗಳು ಮಠದ ಪರಂಪರೆಯ ಗದ್ದುಗೆಗಳ ಸಂರಕ್ಷಣೆ ಮಾಡಿದ್ದಾರೆ ಇದರಿಂದ ಮಠದ ಇತಿಹಾಸವನ್ನು ಗುರುತಿಸಲು ಸಾಧ್ಯವಾಗಿದೆ.

ಪವಾಡ ಪುರುಷರು: ಕಡೂರು ತಾಲ್ಲೂಕು ಗಿರಿಯಾಪುರದ ದೇವರಮನೆ ವಂಶಸ್ಥರು ತಾವರೆಕೆರೆ ಶಿಲಾಮಠದ ಸದ್ಭಕ್ತರಾಗಿದ್ದರು.

ಈ ವಂಶಸ್ಥರಲ್ಲಿ ಹಿರಿಯವರಾದ ನಂಜೇಗೌಡರು ಮತ್ತು ತಾವರೆಕೆರೆಯ ಸಣ್ಣವೀರಪ್ಪಗೌಡರು ಜೀರ್ಣಗೊಳ್ಳುತ್ತಿರುವ ಮಠಕ್ಕೆ ಉತ್ತರಾಧಿಕಾರಿಗಳು ಇಲ್ಲದಿರುವ ಬಗ್ಗೆ ಚಿಂತಿಸಿ, ಚರ್ಚಿಸಿ ಉತ್ತರಾಧಿಕಾರದ ವಿಚಾರವಾಗಿ ಗಿರಿಯಾಪುರದ ಶ್ರೀ ಗುರುಸಿದ್ಧಯ್ಯ ಮತ್ತು ಶ್ರೀಮತಿ ಚಂದಮ್ಮನವರ ಪುತ್ರರಾದ ಸಿದ್ಧಲಿಂಗಯ್ಯನವರನ್ನು ನೇಮಕ ಮಾಡುವುದು ಸೂಕ್ತ ಎಂದು ನಿರ್ಧರಿಸಿದರು. ನಿರ್ಧಾರ ಕೈಗೊಂಡ ಕೆಲವೇ ದಿನಗಳಲ್ಲಿ ಸಿದ್ಧಲಿಂಗಯ್ಯನವರ ತಾಯಿ ಮತ್ತು ಸಹೋದರ ನಂಜಯ್ಯನವರಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಿ ಒಪ್ಪಿಗೆ ಪಡೆದರು. ನಂತರ ಶಿಕ್ಷಕ ವೃತ್ತಿಯಲ್ಲಿದ್ದ ಶ್ರೀ ಸಿದ್ಧಲಿಂಗಯ್ಯನವರಲ್ಲಿ ಈ ವಿಚಾರವಾಗಿ ಪ್ರಸ್ತಾಪಿಸಿ ಒಪ್ಪಿಗೆಯನ್ನು ಪಡೆದುಕೊಂಡರು.

ಉತ್ತರಾಧಿಕಾರಿ ಆಯ್ಕೆಯ ಎಲ್ಲಾ ಕಾರ್ಯಗಳೂ ಮುಗಿದ ಮೇಲೆ ಬಾಳೆಹೊನ್ನೂರಿನ ಶ್ರೀ ರಂಭಾಪುರಿ ಪೀಠಕ್ಕೆ ಬಂದ ಇವರುಗಳು ಆಗಿನ ಜಗದ್ಗುರುಗಳಾಗಿದ್ದ ಶ್ರೀ ಪಂಚಾಕ್ಷರಿ ಶಿವಾಚಾರ್ಯ ಸ್ವಾಮಿಗಳ ದರ್ಶನವನ್ನು ಪಡೆದು ಪಟ್ಟಾಧಿಕಾರದ ನಿರೂಪಣಾ ಪತ್ರವನ್ನು ಪಡೆದು ೧೯೧೮ ರ ಮಾರ್ಚ್ ಹದಿನಾರರಂದು ಪಟ್ಟಾಧಿಕಾರ ಮಾಡಲಾಯಿತು. ಪಟ್ಟಾಧಿಕಾರ ಪಡೆದ ಮೇಲೆ ವೀರಶೈವ ಸಿದ್ಧಾಂತದ ಬಗ್ಗೆ ಹೆಚ್ಚು ತಿಳಿದುಕೊಳ್ಳುವ ಬಯಕೆಯಿಂದ ಶಿವಯೋಗ ಮಂದಿರಕ್ಕೆ ಬಂದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಸಂಸ್ಕೃತ, ವೇದ, ಆಗಮ ಹಾಗೂ ಯೋಗದ ಬಗ್ಗೆ ಅಭ್ಯಾಸ ಮಾಡಿ ಬಂದು ಮಠವನ್ನು ಧಾರ್ಮಿಕವಾಗಿ ಅಭಿವೃದ್ಧಿಪಡಿಸಿದರು. ಮಠದ ಜಮೀನನ್ನು ಅಭಿವೃದ್ಧಿಪಡಿಸಿ ಮಠದಲ್ಲಿ ಗೋವುಗಳನ್ನು ಸಾಕಿ ಗ್ರಾಮದಲ್ಲಿ ಹಾಲಿಲ್ಲದೇ ನರಳುತ್ತಿದ್ದ ಹಸುಳೆಗಳಿಗೆ ಹಾಲನ್ನು ನೀಡಿದ ಕರುಣಾಮೂರ್ತಿಗಳೆನಿಸಿಕೊಂಡರು.

ಪ್ರತಿದಿನ ಪ್ರಾತಃ ಕಾಲದಲ್ಲಿ ಎದ್ದು ಯೋಗವನ್ನು ಮುಗಿಸಿ ನಸುಕಿನಲ್ಲಿ ಸಂಚಾರ ಹೊರಟು ಪೂಜೆಗೆ ಬೇಕಾದ ಪತ್ರೆ ಪುಷ್ಪಗಳನ್ನು ಸಂಗ್ರಹಿಸಿ ವಿಧಿವತ್ತಾದ ಶಿವಪೂಜೆ ಮುಗಿಸುತ್ತಿದ್ದರು.ಅಥರ್ವಣವೇದವನ್ನು ಕರಗತ ಮಾಡಿಕೊಂಡಿದ್ದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ನಿತ್ಯ ಸಂಚಾರ ಕೈಗೊಂಡು ಭಕ್ತರ ಒಳಿತಿಗಾಗಿ ಶ್ರಮಿಸುತ್ತಿದ್ದರು. ಸಂಸಾರದ ಹಲವು ತಾಪತ್ರಯಗಳಿಂದ ನೊಂದವರು, ಗ್ರಹಪೀಡೆಗೆ ತುತ್ತಾದವರು, ಮಂತ್ರ ತಂತ್ರ ನಿಯಂತ್ರಿತರು ಗುರುಗಳ ದರ್ಶನಕ್ಕೆ ಬಂದು ಹೋಗುತ್ತಿದ್ದರು. ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಬೂದಿ ಕೊಟ್ಟರೂ ಸಿದ್ಧಿ ಸಿಗುತ್ತಿತ್ತು, ದಾರ ಕಟ್ಟಿದರೂ ಒಳ್ಳೆಯದಾಗುತ್ತಿತ್ತು. ಇಂತಹ ನಂಬಿಕೆಯಿಂದ ಗುರುಗಳು ಜನಮನದಲ್ಲಿ ಉಳಿದರು. ಪ್ರತಿದಿನ ಕುದುರೆ ಮೇಲೆ ರಾತ್ರಿಹಗಲು ಎಂಬ ವ್ಯತ್ಯಾಸವಿಲ್ಲದ ಸಂಚರಿಸಿ ಗಿಡಮೂಲಿಕೆಗಳನ್ನು ಸಂಗ್ರಹಿಸುತ್ತಿದ್ದರು. ಇವರು ಕೊಡುತ್ತಿದ್ದ ಸಿದ್ಧ ಔಷದಿಯು ಯಾವ ರೋಗವನ್ನಾದರೂ ನಿವಾರಣೆ ಮಾಡುವ ಶಕ್ತಿ ಪಡೆದುಕೊಂಡಿತ್ತು ಎಂಬುದನ್ನು ಈಗಲೂ ಜನರ ಬಾಯಲ್ಲಿ ಕೇಳಬಹುದಾಗಿದೆ.

ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ಚನ್ನಗಿರಿ ತಾಲ್ಲೂಕು ಶಂಕರಪುರದ ಶ್ರೀ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳಿಗೆ, ೧೯೫೦ರ ಆಗಸ್ಟ್ ಇಪ್ಪತ್ತೈದರಂದು ಪಟ್ಟಾಧಿಕಾರ ಮಾಡಿ ವಿಶ್ರಾಂತ ಜೀವನ ನಡೆಸತೊಡಗಿದರು. ಆದರೆ ಕಿರಿಯ ಸ್ವಾಮಿಗಳು ಪಟ್ಟಾಧಿಕಾರ ಆದ ಕೆಲವೇ ವರ್ಷಗಳಲ್ಲಿ ಲಿಂಗೈಕ್ಯರಾದರು.ತಮ್ಮ ಕರಕಮಲ ಸಂಜಾತರ ಪಟ್ಟಾಧಿಕಾರ ಮತ್ತು ಅಂತ್ಯಕ್ರಿಯೆ ಎರಡನ್ನೂ ಮುಗಿಸಿದ ಗುರುಗಳು ತರೀಕೆರೆ ತಾಲ್ಲೂಕು ಗೊಂಡೇದ ಹಳ್ಳಿಯ ಶ್ರೀ ಮರಿದೇವರು ಮತ್ತು ಶ್ರೀಮತಿ ಹಾಲಮ್ಮನವರ ಪುತ್ರರಾಗಿ ಜನಿಸಿದ ಐದು ವರ್ಷದ ಬಾಲಕ ರೇಣುಕಾರಾಧ್ಯರನ್ನು ಉತ್ತರಾಧಿಕಾರಿಗಳನ್ನಾಗಿ ಆಯ್ಕೆಮಾಡಿಕೊಂಡರು. ಉತ್ತರಾಧಿಕಾರಿ ಸಮರ್ಥವಾಗಬೇಕೆಂದು ಗೊಂಡೇದಹಳ್ಳಿ, ತಾವರೆಕೆರೆ, ಗಿರಿಯಾಪುರ, ಶಿವಯೋಗ ಮಂದಿರ ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡಿಸಿದರು. ಆದರೆ ಗುರುಗಳು ತಮ್ಮ ಕರಕಮಲಸಂಜಾತ ಶ್ರೀ ರೇಣುಕಾರಾಧ್ಯರಿಗೆ ಪಟ್ಟಾಧಿಕಾರ ಮಾಡಿಸುವ ಮುನ್ನವೇ ಲಿಂಗೈಕ್ಯರಾದರು.

ರೇಣುಕರ ಆಗಮನ: ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು ವಿದ್ಯಾಸಂಪನ್ನರಾಗಿ ವೀರಶೈವ ಧರ್ಮದ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲದ ಬಗ್ಗೆ ಅಪಾರ ಜ್ಞಾನವನ್ನು ಸಂಪಾದಿಸಿದವರಾಗಿದ್ದರು. ಇಂತಹ ಸಮರ್ಥ ಯೋಗ್ಯತೆಗಳನ್ನು ಪಡೆದು ತಾವರೆಕೆರೆ ಶಿಲಾಮಠದ ಅಧಿಕಾರಿಗಳಾಗಿ, ೧೯೭೪ ರ ಮೇ ಒಂದರಂದು ರಂಭಾಪುರಿ ಜಗದ್ಗುರು ಶ್ರೀ ವೀರಗಂಗಾಧರ ಭಗವತ್ಪಾದರಿಂದ ಪಟ್ಟಾಧಿಕಾರದ ಅನುಗ್ರಹವನ್ನು ಪಡೆದರು. ಈ ಸಂದರ್ಭದಲ್ಲಿ ನಾರಣಾಪುರ, ಗೊಂಡೇದಹಳ್ಳಿ ಹಾಗೂ ಗಿರಿಯಾಪುರವು ಸೇರಿದಂತೆ ಒಂಬತ್ತು ಹಳ್ಳಿಯ ಭಕ್ತರು ಹಾಗೂ ತಾವರೆಕೆರೆ, ಬುಕ್ಕಾಂಬುದಿಯ ಸುತ್ತಮುತ್ತಲ ಗ್ರಾಮಗಳ

ಅಪಾರ ಭಕ್ತರು ಸೇರಿದ್ದರು. ಹಿರಿಯ ಗುರುಗಳ ಸದಿಚ್ಛೆಯಂತೆ ಅಧಿಕಾರ ಪಡೆದು ಮಠದ ವ್ಯವಸ್ಥೆಯನ್ನು ಸರಿಪಡಿಸಿದರು. ಪ್ರಾಚೀನ ಮಠದ ಪರಂಪರೆಯ ಧಾರ್ಮಿಕ ವಿಧಿವಿಧಾನಗಳ ಆಚರಣೆಯ ಮೂಲಕ ವೀರಶೈವ ಸಿದ್ಧಾಂತಗಳನ್ನು ಅನುಷ್ಠಾನ ಗೊಳಿಸುತ್ತಾ ಭಕ್ತರನ್ನು ಸಂಘಟಿಸತೊಡಗಿದರು.

ಅಭಿವೃದ್ಧಿ ಕಾರ್ಯಗಳು: ಶಿಥಿಲಗೊಂಡ ಮಠದ ಕಟ್ಟಡವನ್ನು ತೆಗೆಸಿ ನೂತನ ಕಟ್ಟಡವನ್ನು ಕಟ್ಟಿಸಿದರು. ಹತ್ತು ಲಕ್ಷರೂ ಯೋಜನೆಯಲ್ಲಿ ಗದ್ದುಗೆಗೆ ಮಂಟಪ ನಿರ್ಮಿಸಿದ್ದಲ್ಲದೆ, ಮಠದ ಸಮುಚ್ಛಯವನ್ನು ಆಮೂಲಾಗ್ರವಾಗಿ ನವೀಕರಿಸಿ ಮಠಕ್ಕೆ ಹೊಸಕಳೆ ಕೊಟ್ಟರು. ಮಠವು ಆರ್ಥಿಕವಾಗಿ ಸದೃಢವಾಗಬೇಕೆಂದು ಮಠದ ಆಸ್ತಿಯನ್ನು ಅಭಿವೃದ್ಧಿಪಡಿಸಿ, ಕಾಯಕಯೋಗ ದಿಂದ ೬೦೦ ಗಿಡ ತೆಂಗು, ಆರು ಎಕರೆಯಲ್ಲಿ ಅಡಿಕೆ ಗಿಡಗಳನ್ನು ಬೆಳೆಸಿ ಆದಾಯದ ಮೂಲವನ್ನಾಗಿ ಮಾಡಿಕೊಂಡರು.

ಹೆಚ್ಚುವರಿ ಅಧಿಕಾರ: ಕಾಯಕಯೋಗಿಗಳಾಗಿ, ಧಾರ್ಮಿಕ ಚಿಂತಕರಾಗಿ, ಉತ್ತಮ ಸಂಘಟಿಕರಾಗಿ ದುಡಿದ ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳನ್ನು ಶ್ರೀ ರಂಭಾಪುರಿ ಪೀಠದ ಜಗದ್ಗುರು ಶ್ರೀ ಪ್ರಸನ್ನರೇಣುಕ ವೀರಸೋಮೇಶ್ವರ ಭಗವತ್ಪಾದರು ತಮ್ಮ ಖಾಸಾ ಶಾಖಾಮಠವಾದ ಎಡೆಯೂರು ಮಠಕ್ಕೆ ೧೯೯೮ ರ ಮೇ ಹದಿನಾಲ್ಕರಂದು ಪಟ್ಟಾಧಿಕಾರವನ್ನು ಮಾಡಿ ಹೆಚ್ಚಿನ ಜವಾಬ್ದಾರಿಯನ್ನು ವಹಿಸಿದ್ದಾರೆ. ಜಗದ್ಗುರುಗಳ ನಂಬಿಕೆಗೆ ಅರ್ಹವಾಗಿ ತಾವರೆಕೆರೆ, ಎಡೆಯೂರು ಎರಡೂ ಮಠಗಳ ಧಾರ್ಮಿಕ ಆಚರಣೆಗಳನ್ನು ಮಾಡುತ್ತಾ ಅಧಿಕಾರವನ್ನು ನಡೆಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು, ಶ್ರೀ ಶಿಲಾಮಠ, ತಾವರೆಕೆರೆ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ.

ಪಾಂಡುಮಟ್ಟಿ

ಚನ್ನಗಿರಿ ತಾಲ್ಲೂಕಿನ ಪಾಂಡುಮಟ್ಟಿಯು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಪಾಂಡುಮಟ್ಟಿಯಲ್ಲಿ ಶ್ರೀ ವಿರಕ್ತ ಮಠವನ್ನು ೧೯೬೧ ರಲ್ಲಿ ಶ್ರೀ ಸಂಗಮನಾಥ ಸ್ವಾಮಿಗಳು ಸ್ಥಾಪಿಸಿದರು. ಇವರು ಕಮ್ಮತ್ತಳ್ಳಿಯಿಂದ ಹೊರಟು ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ ಬಿಲ್ಲಹಳ್ಳಿಗೆ ಆಗಮಿಸಿದರು. ಇಲ್ಲಿ ಕೆಲವು ದಿನ ಅನುಷ್ಠಾನಗೊಂಡು ಪಾಂಡುಮಟ್ಟಿಗೆ ಬಂದು ನೆಲೆಸಿ, ಮಠವನ್ನು ಸ್ಥಾಪಿಸಿ ೧೯೬೨ ರಲ್ಲಿ ಲಿಂಗೈಕ್ಯರಾದರು.

ಪರಂಪರೆ:

೧. ಶ್ರೀ ಮ.ನಿ.ಪ್ರ. ಸಂಗಮನಾಥಸ್ವಾಮಿಗಳು

೨. ಶ್ರೀ ಮ.ನಿ.ಪ್ರ. ಚನ್ನಬಸವಸ್ವಾಮಿಗಳು

೩. ಶ್ರೀ ಮ.ನಿ.ಪ್ರ. ಗುರುಬಸವಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಮಠದ ಕರ್ತೃಗುರುಗಳು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಾ, ೧೯೫೬ರಲ್ಲಿ ಶ್ರೀ ಚನ್ನಬಸವ ಸ್ವಾಮಿಗಳನ್ನು ಬಿಲ್ಲಹಳ್ಳಿಮಠಕ್ಕೆ ಪಟ್ಟಾಧಿಕಾರ ಮಾಡಿದರು. ಹಿರಿಯ ಗುರುಗಳಾದ ಶ್ರೀಸಂಗಮನಾಥ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಶ್ರೀ ಚನ್ನಬಸವ ಸ್ವಾಮಿಗಳು ಪಾಂಡುಮಟ್ಟಿಗೆ ಬಂದು ನೆಲೆ ನಿಲ್ಲುತ್ತಾರೆ. ಗುರುಗಳು ಶಿವಪೂಜಾ ನಿಷ್ಠರಾಗಿ, ಆಧ್ಯಾತ್ಮ ಸಾಧನೆಯಲ್ಲಿಯೇ ಕಾಲ ಕಳೆದರೇ ವಿನಾ ಲೌಕಿಕ ವಿಚಾರಗಳ ಕಡೆ ಗಮನ ಕೊಡದೆ ಮಠದ ಅಭಿವೃದ್ಧಿಯನ್ನು ಕಡೆಗಣಿಸಿದರು. ಈ ಕಾರಣಕ್ಕಾಗಿ ಶ್ರೀಮಂತ ಭಕ್ತರನ್ನು ಗಳಿಸಿಕೊಂಡಿರುವ ಮಠವು ಆರ್ಥಿಕವಾಗಿ ಹಿಂದೆ ಉಳಿಯಿತು. ಗುರುಗಳು ಸದಾ ಶರಣತತ್ತ್ವ ವಿಚಾರಗಳನ್ನು ಜನರಿಗೆ ಮುಟ್ಟಿಸುತ್ತಾ, ಸಂಚಾರ ಮೂರ್ತಿ ಗಳಾಗಿ ನಾಡನ್ನೆಲ್ಲಾ ಸಂಚರಿಸಿ ನಿಜವಾದ ವಿರಕ್ತರೆನಿಸಿಕೊಂಡರು. ಇಂತಹ ಮಹಾಚೇತನಶಾಲಿ ಗುರುಗಳು ೧೯೮೩ರಲ್ಲಿ ಶ್ರೀಗುರುಬಸವ ಸ್ವಾಮಿಗಳಿಗೆ ಪಟ್ಟಾಧಿಕಾರವನ್ನು ನೀಡಿ, ವಿಶ್ರಾಂತ ಜೀವನ ನಡೆಸುತ್ತಿದ್ದಾರೆ.

ಈಗಿನ ಮಠಾಧ್ಯಕ್ಷರಾದ ಶ್ರೀ ಗುರುಬಸವ ಸ್ವಾಮಿಗಳು ಚನ್ನಗಿರಿ ತಾಲ್ಲೂಕಿನ ಗರಗ ಗ್ರಾಮದ ಶ್ರೀ ನಾಗೇಂದ್ರ ಮತ್ತು ಶ್ರೀಮತಿ ಸಾಕಮ್ಮನವರ ಪುತ್ರರಾಗಿ ೧೯೬೮ರಲ್ಲಿ ಜನಿಸಿದರು. ಇವರು ಸಿದ್ಧಗಂಗೆಯಲ್ಲಿ ವಿದ್ಯಾಭ್ಯಾಸ ಮುಗಿಸಿ

ಶರಣ ಸಾಹಿತ್ಯದ ಬಗ್ಗೆ ಅಪಾರ ಜ್ಞಾನವನ್ನು ಸಂಪಾದಿಸಿಕೊಂಡಿದ್ದಾರೆ. ಪ್ರಗತಿಪರ ಚಿಂತಕರಾದ ಇವರು ಮಠಕ್ಕೆ ಆಗಮಿಸಿ ಧಾರ್ಮಿಕ ಕಾರ್ಯಗಳ ಜೊತೆಗೆ ಮಠದ ಅಭಿವೃದ್ಧಿಯನ್ನು ಮಾಡತೊಡಗಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಈವರೆಗೆ ಅಭಿವೃದ್ಧಿಯನ್ನು ಕಾಣದ ಶ್ರೀ ವಿರಕ್ತಮಠವು ೧೯೯೪ ರಿಂದ ಅಭಿವೃದ್ಧಿಯಾಗತೊಡಗಿದೆ. ಈಗ ಮಠಕ್ಕೆ ನೂತನ ಕಟ್ಟಡ, ಕಲ್ಯಾಣಮಂಟಪ, ಗುರುಗಳ ವಾಸ್ತವ್ಯ ಕೊಠಡಿ ಹಾಗೂ ಪೂಜಾ ಕೊಠಡಿಗಳನ್ನು ನಿರ್ಮಿಸಲಾಗಿದೆ. ಭಕ್ತರನ್ನು ಬಳಸಿಕೊಂಡು ಮಠದ ಸಮುಚ್ಚಯವನ್ನು ಅಗತ್ಯಕ್ಕನುಗುಣವಾಗಿ ನಿರ್ಮಿಸತೊಡಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಶರಣ ತತ್ತ್ವವನ್ನು ಪ್ರಚಾರ ಪಡಿಸುವ ಏಕ ಉದ್ದೇಶದಿಂದ ಸ್ಥಾಪನೆಗೊಂಡ ವಿರಕ್ತಮಠವು ಬಸವತತ್ತ್ವ ಕೇಂದ್ರವನ್ನು ಸ್ಥಾಪಿಸಿ, ೧೯೬೨ ರಿಂದ ಪ್ರತಿ ತಿಂಗಳ ಮೂರನೆಯ ಶನಿವಾರದಂದು ಶಿವಾನುಭವ ಗೋಷ್ಠಿಯನ್ನು ನಡೆಸಿಕೊಂಡು ಬರುತ್ತಿರುವುದು ದಾಖಲೆಯ ವಿಚಾರವಾಗಿದೆ. ವರ್ಷದ ಕಾರ್ಯಕ್ರಮಗಳಾದ ಶ್ರೀ ಸಂಗಮನಾಥ ಶಿವಾಚಾರ್ಯ ಸ್ವಾಮಿಗಳ ಆರಾಧನೆಯನ್ನು, ಜ್ಞಾನ ದಾಸೋಹ ಹಾಗೂ ಅನ್ನ ದಾಸೋಹದ ಮೂಲಕ ಆಚರಣೆ ಮಾಡಿ ಶರಣತತ್ತ್ವವನ್ನು ಪ್ರಚಾರಪಡಿಸುವ ವೇದಿಕೆಯನ್ನಾಗಿ ಮಾಡಿಕೊಂಡಿದ್ದಾರೆ. ಮಠದಲ್ಲಿ ಶ್ರೀ ಸಂಗಮನಾಥ ಸ್ವಾಮಿಗಳ ಗದ್ದುಗೆಯನ್ನು ಸ್ಥಾಪಿಸಿದ್ದು ಇದಕ್ಕೆ ನಿತ್ಯ ಪೂಜೆ ಮಾಡಲಾಗುತ್ತಿದೆ. ಹಿರಿಯ ಗುರುಗಳಾದ ಶ್ರೀ ಚನ್ನಬಸವ ಸ್ವಾಮಿಗಳು ಸ್ಥಾವರಕ್ಕೆ ಅಳಿವುಂಟು, ಜಂಗಮಕ್ಕೆ ಅಳಿವಿಲ್ಲ ಎಂಬ ಅರ್ಥದ ಮೇಲೆ ಬದುಕನ್ನು ರೂಪಿಸಿಕೊಂಡು ಬಂದ ಕಾರಣ ಮಠ ಆರ್ಥಿಕವಾಗಿ ಅಭಿವೃದ್ಧಿ ಯಾಗದೆ, ಧಾರ್ಮಿಕವಾಗಿ ಸದೃಢವಾಗಿ ಬೆಳೆಯಿತು.

ವಿಳಾಸ: ಶ್ರೀ ಮ.ನಿ.ಪ್ರ.ಗುರುಬಸವ ಸ್ವಾಮಿಗಳು, ಶ್ರೀ ವಿರಕ್ತಮಠ, ಪಾಂಡುಮಟ್ಟಿ,ಚನ್ನಗಿರಿ ತಾಲ್ಲೂಕು,ದಾವಣಗೆರೆ ಜಿಲ್ಲೆ.

ಬಸವಪಟ್ಟಣ

ಚನ್ನಗಿರಿ ತಾಲ್ಲೂಕಿನ ಬಸವಪಟ್ಟಣವು ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಇಪ್ಪತ್ನಾಲ್ಕು ಕಿ.ಮೀ ದೂರದಲ್ಲಿದೆ. ಈ ಗ್ರಾಮದ ಹೊರಭಾಗದಲ್ಲಿ ಎರಡೂವರೆ ಕಿ.ಮೀ ದೂರದ ಗುಡ್ಡದ ಮೇಲೆ ಶ್ರೀ ಹಾಲುಸ್ವಾಮಿ ಗವಿ ಮಠವು ಅಸ್ತಿತ್ವದಲ್ಲಿದೆ.

ಹಾಲುಸ್ವಾಮಿಮಠ: ಬಸವಪಟ್ಟಣ ಗ್ರಾಮ ಠಾಣ ವ್ಯಾಪ್ತಿಯಲ್ಲಿ ಶ್ರೀ ಹಾಲುಸ್ವಾಮಿ ಮಠವು ಸ್ಥಾಪನೆಯಾಗಿದೆ. ಶ್ರೀಹಾಲುಸ್ವಾಮಿಗಳು ಇಲ್ಲಿ ಪವಾಡವನ್ನು ಮಾಡಿದ ಮೇಲೆ ಇದು 'ಹಾಲುಸ್ವಾಮಿ ಗಿರಿ' ಎಂದು ಹೆಸರು ಪಡೆದಿದೆ. ಗುರುಗಳು ಇಲ್ಲಿ ನೆಲೆಸಿ, ಭೂತಪ್ರೇತ ಪಿಶಾಚಿಗಳನ್ನು ಹೊಡೆದೋಡಿಸಿ ಚೌಡೇಶ್ವರಿಯಿಂದ ಪಾದಪೂಜೆ ಮಾಡಿಸಿಕೊಂಡ ಈ ಮಹಾ ಕ್ಷೇತ್ರವು ಇಂದು ಪ್ರಖ್ಯಾತಗೊಂಡಿದೆ. ಈ ಮಠದ ಪರಂಪರೆ ಹಾಗೂ ರಾಂಪುರದ ಪರಂಪರೆ ಒಂದೇ ಆಗಿದ್ದು, ಈಗ ಎರಡೂ ಮಠಗಳು ಒಂದೇ ಆಡಳಿತಕ್ಕೆ ಒಳಪಟ್ಟಿವೆ. ಕಾಶಿ ಪೀಠದ ಶಾಖಾಮಠವಾದ ಈ ಮಠದಲ್ಲಿ ಪುರಾತನ ಕಾಲದಿಂದಲೂ ಪರಂಪರೆಯ ಎಲ್ಲಾ ಗುರುಗಳು ಕರ್ತೃ ಗುರುಗಳು ಅನುಷ್ಠಾನಗೊಂಡ ಗವಿಯಲ್ಲಿ, ಶ್ರಾವಣ ಮಾಸದಲ್ಲಿ ಅನುಷ್ಠಾನಕ್ಕೆ ಕುಳಿತುಕೊಳ್ಳುತ್ತಾರೆ. ಇದು ಪರಂಪರೆಯ ವಾಡಿಕೆಯಂತೆ ನಡೆದುಕೊಂಡು ಬಂದಿದೆ. ಈಗಿನ ಮಠಾಧ್ಯಕ್ಷರಾದ ಶ್ರೀ ವಿಶ್ವೇಶ್ವ ರಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಮುನ್ನಡೆಸಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಸ್ಥಾಪಕ ಗುರುಗಳಾದ ಶ್ರೀ ಹಾಲುಸ್ವಾಮಿಗಳು ಅನುಷ್ಠಾನಗೊಂಡ ಮೂಲ ಗವಿ ಹಾಗೂ ಚೌಡಿ ಗದ್ದುಗೆ, ಭೂತಪ್ಪ ಇತ್ತೀಚೆಗೆ ಸ್ಥಾಪಿಸಲಾದ ವಿಶ್ವಾರಾಧ್ಯ ಮೂರ್ತಿ ಈ ಮಠದ ಪೂಜನೀಯ ಸ್ಥಳಗಳಾಗಿದ್ದು, ಇಲ್ಲಿ ನಿತ್ಯ ಎರಡು ವೇಳೆ ಪೂಜೆಯನ್ನು ನಡೆಸಲಾಗುತ್ತಿದೆ. ಈ ಕ್ಷೇತ್ರವು ಜಾಗೃತ ಸ್ಥಳವಾಗಿರುವುದರಿಂದ ಇಲ್ಲಿಗೆ ಅಪಾರ ಸಂಖ್ಯೆಯಲ್ಲಿ ಬರುವ ಭಕ್ತರಿಗೆ ನಿತ್ಯ ಅನ್ನದಾಸೋಹಕ್ಕೆ ವ್ಯವಸ್ಥೆ ಮಾಡಲಾಗಿದೆ. ಸೀಗೆಹುಣ್ಣಿಮೆಯ ದಿನ ಈ ಮಠದಲ್ಲಿ ಮುಳ್ಳುತ್ಸವ ನಡೆಯುತ್ತಿದೆ. ಆಗ ಗುರುಗಳು ಮುಳ್ಳಿನ ಮೇಲೆ ಅನುಷ್ಠಾನ ಕೈಗೊಂಡು ಕಾರ್ಣಿಕ (ಭವಿಷ್ಯ)ವನ್ನು ನುಡಿಯುತ್ತಾರೆ.

ವಿಳಾಸ: ಷ.ಬ್ರ.ಶ್ರೀ ವಿಶ್ವೇಶ್ವರಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಾಲುಸ್ವಾಮಿ ಗವಿಮಠ, ಬಸವಪಟ್ಟಣ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ.

❑

ಜಗಳೂರು ತಾಲ್ಲೂಕು

ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕು ಕೃಷಿ ಪ್ರಧಾನ ತಾಲ್ಲೂಕು. ಪ್ರಾಚೀನ ಕಾಲದಿಂದಲೂ ವೀರಶೈವ ಧರ್ಮ ಪ್ರಬಲವಾಗಿ ಬೆಳೆದಿದೆಯಾದರೂ ತಾಲ್ಲೂಕಿನಲ್ಲಿ ಎರಡು ಮಠಗಳು ಮಾತ್ರ ಅಸ್ತಿತ್ವದಲ್ಲಿವೆ.

ಕಣ್ವಕುಪ್ಪೆ

ಜಗಳೂರು ತಾಲ್ಲೂಕಿನ ಕಣ್ವಕುಪ್ಪೆಯು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಮೂರು ಕಿ. ಮೀ. ದೂರದಲ್ಲಿದೆ. ಈ ಗ್ರಾಮದ ಹೊರಭಾಗದಲ್ಲಿ ಕಲ್ಲುಗುಡ್ಡದ ಮೇಲೆ ಸ್ಥಾಪನೆಯಾಗಿರುವ ಕಣ್ವಕುಪ್ಪೆ ಗವಿಮಠವು ಪೌರಾಣಿಕ ಸಂಬಂಧ ಪಡೆದು, ಆ ನಂಬಿಕೆಯನ್ನು ಉಳಿಸಿಕೊಂಡು ಈತನಕವೂ ಬೆಳೆದು ಬಂದಿದೆ.

ಪೌರಾಣಿಕ ಹಿನ್ನೆಲೆ: ಕಣ್ವಮಹರ್ಷಿಗಳು ತಪಸ್ಸನ್ನು ಆಚರಿಸುತ್ತಿದ್ದ ಈ ತಪೋಭೂಮಿಯಲ್ಲಿ ಹನ್ನೆರಡು ವರ್ಷಕ್ಕೆ ಒಂದೇ ಹಣ್ಣನ್ನು ಬಿಡುತ್ತಿದ್ದ ಜಂಬೂ ನೇರಳೆಮರ ಬೆಳೆದಿತ್ತು. ಕಣ್ವ ತಪಸ್ವಿಗಳು ಹನ್ನೆರಡು ವರ್ಷಕ್ಕೆ ತಮ್ಮ ತಪೋನುಷ್ಠಾನದಿಂದ ಮೇಲೆದ್ದು ಈ ಹಣ್ಣನ್ನು ಸ್ವೀಕರಿಸುತ್ತಿದ್ದರು. ಇಂತಹ ತಪೋಭೂಮಿಗೆ ವನವಾಸದಲ್ಲಿದ್ದ ಪಾಂಡವರು ಆಗಮಿಸಿದರು. ಈ ಸ್ಥಳದಲ್ಲಿ ವಿಶ್ರಾಂತಿಗೆಂದು ತಂಗಿದ್ದ ಸಂದರ್ಭದಲ್ಲಿ ದ್ರೌಪದಿಗೆ ಆ ಹಣ್ಣಿನ ಮೇಲೆ ಕಣ್ಣು ಬೀಳುತ್ತದೆ. ಜತೆಯಲ್ಲಿದ್ದ ನಕುಲ, ಸಹದೇವರು ಆ ಹಣ್ಣನ ಮಹತ್ವ ಅರಿಯದೆ ಕಿತ್ತು ದ್ರೌಪದಿಗೆ ಕೊಡುತ್ತಾರೆ. ದ್ರೌಪದಿ ಆ ಹಣ್ಣನ್ನು ತಿನ್ನುವ ವೇಳೆಗೆ ಅದನ್ನು ಗಮನಿಸಿದ ಧರ್ಮರಾಯನು ತಡೆದು ಆ ಹಣ್ಣು ಕಣ್ವ ಮಹರ್ಷಿಗಳ ಪ್ರಸಾದಕ್ಕೆಂದು ಪ್ರಕೃತಿ ನೀಡಿದ ಫಲ. ಈ ಹಣ್ಣನ್ನು ತಿಂದು ಶಾಪಕ್ಕೆ ಗುರಿಯಾಗುವುದು ಬೇಡ ಎಂದು ತಡೆ ಹಿಡಿದನು. ಕಿತ್ತ ಹಣ್ಣನ್ನು ಮರದ ತೊಟ್ಟಿಗೆ ಸೇರಿಸುವ ಬಗೆ ಹೇಗೆ ಎಂದು ಯೋಚಿಸತೊಡಗಿದನು. ಆಗ ದ್ರೌಪದಿ ಕೃಷ್ಣನನ್ನು ಮನದಲ್ಲಿ ನೆನೆದುಕೊಳ್ಳುತ್ತಾಳೆ. ಕೃಷ್ಣ ದ್ರೌಪದಿಯ ಮೊರೆಗೆ ಸ್ಪಂದಿಸಿ ಪ್ರತ್ಯಕ್ಷನಾಗಿ ಹಣ್ಣನ್ನು ಮರದ ತೊಟ್ಟಿಗೆ ಸೇರಿಸಬೇಕಾದರೆ ಆತ್ಮ ಪರೀಕ್ಷೆಯಾಗಬೇಕೆಂದು ಹೇಳಿ ದ್ರೌಪದಿಯ ಆತ್ಮ ಪರೀಕ್ಷೆ ಮಾಡಿದ. ನಂತರ ಹಣ್ಣು ಮರದ ತೊಟ್ಟಿಗೆ ಸೇರಿಕೊಳ್ಳುತ್ತದೆ.

ಈ ಘಟನೆ ನಡೆದ ಮೇಲೆ ಪಾಂಡವರು ಕೆಲವು ದಿನ ಈ ತಪೋಭೂಮಿಯಲ್ಲಿ ನೆಲೆಸಿ ನಂತರ ಪ್ರಯಾಣ ಮುಂದುವರೆಸಿದರು. ಹನ್ನೆರಡು ವರ್ಷಗಳ ತಪೋನುಷ್ಠಾನದಿಂದ ಎಚ್ಚೆತ್ತ ಕಣ್ವರು ನೇರಳೆ ಮರದ ಕಡೆಗೆ ತಮ್ಮ ದೃಷ್ಟಿ ಹಾಯಿಸುತ್ತಾರೆ. ಮಾಗಿದ ಹಣ್ಣು ಗುರುಗಳ ಕೈಗೆ ಸೇರುತ್ತದೆ. ಫಲ ಸ್ಪರ್ಶವಾಗುತ್ತಿದ್ದಂತೆಯೇ ಈ ಹಣ್ಣಿನ ಬಗ್ಗೆ ಬೇರೊಬ್ಬರು ಆಸೆಪಟ್ಟು ಕಿತ್ತಿದ್ದು ಗೋಚರವಾಗಿ ಈ ತಾಣದಲ್ಲಿ ತಪೋನುಷ್ಠಾನದ ಋಣ ಮುಗಿಯಿತು ಎಂದು ಮುಂದೆ ಹೋದರು. ಕಣ್ವ ಮಹರ್ಷಿಗಳು ತಪಸ್ಸನ್ನು ಆಚರಿಸಿದ್ದರಿಂದ ಈ ಗ್ರಾಮಕ್ಕೆ ಕಣ್ವಕುಪ್ಪೆ ಎಂಬ ಹೆಸರು ಬಂದಿದೆ.

ಗವಿಮಠ: ಇಂತಹ ಪೌರಾಣಿಕ ಹಿನ್ನೆಲೆ ಇರುವ ತಾಣದಲ್ಲಿ ಉಜ್ಜಯಿನಿ ಪೀಠದ ಜಗದ್ಗುರು ಶ್ರೀ ಗುರುಸಿದ್ಧ ಶಿವಾಚಾರ್ಯ ಸ್ವಾಮಿಗಳು ತಪೋನುಷ್ಠಾನಗೊಂಡು ಈ ಕ್ಷೇತ್ರವನ್ನು'ಗವಿಮಠ'ಎಂದು ಕರೆದು ತಮ್ಮ ಶಾಖಾಮಠವಾಗಿ ನಾಮಕರಣ ಮಾಡಿರುತ್ತಾರೆ. ನಂತರ ಲೋಕಸಂಚಾರಕ್ಕೆ ಬಂದ ಶ್ರೀ ಶಾಂತವೀರ ಸ್ವಾಮಿಗಳು ಉಜ್ಜಯಿನಿ ಪೀಠದ ಗುರುಗಳ ಅಪ್ಪಣೆ ಮೇರೆಗೆ ಗವಿ ಮಠಕ್ಕೆ ಬಂದು, ಮಠವನ್ನು ಅಭಿವೃದ್ಧಿಪಡಿಸಿದರು. ಇದಾದ ಕೆಲವು ದಿನಗಳ ನಂತರ ಶ್ರೀ ಶಾಂತಲಿಂಗ ಸ್ವಾಮಿಗಳು ಗವಿಮಠವನ್ನು ಬಿಟ್ಟು ಜಗಳೂರಿನಲ್ಲಿ ವಾಸ್ತವ್ಯ ಮಾಡಿ ಲಿಂಗೈಕ್ಯರಾದರು.

ಬೆಳೆದ ಪರಂಪರೆ: ಶ್ರೀ ಶಾಂತಲಿಂಗ ಸ್ವಾಮಿಗಳ ನಂತರ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ರಾಮಲಿಂಗಪುರದ ಇಮ್ಮಡಿ ಶ್ರೀ ಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ಈ ಗುಹೆಯಲ್ಲಿ ತಪಸ್ಸನ್ನು ಆಚರಿಸಿದರು. ಅಧಿಕಾರ ವಹಿಸಿಕೊಂಡು ಕೆಲವು ದಿನಗಳು ಈ ಗವಿಯಲ್ಲಿ ನೆಲೆಸಿ ಧರ್ಮಪ್ರಚಾರ ಮಾಡಿ, ಲೋಕೋದ್ಧಾರಕ್ಕೆಂದು ಸಂಚಾರಕ್ಕೆ ಹೊರಟರು. ಗುರುಗಳು ಪುನಃ ಈ ಕ್ಷೇತ್ರಕ್ಕೆ ಬರದೆ ಲೋಕಸಂಚಾರದಲ್ಲಿ ಇದ್ದ ಕಡೆಯಲ್ಲಿಯೇ ಲಿಂಗೈಕ್ಯರಾದರು. ಇದಾದ ನಂತರ ಅನೇಕ ವರ್ಷಗಳ ಕಾಲ ಮಠಾಧೀಶರು ಇಲ್ಲದೆ ಮಠ ಖಾಲಿ ಉಳಿದಿತ್ತು. ಈ ಸಂದರ್ಭದಲ್ಲಿ ಅನೇಕ ತಪಸ್ವಿಗಳು ಇಲ್ಲಿ ತಪೋನುಷ್ಠಾನಗೊಂಡು

ಈ ಭೂಮಿಯನ್ನು ತಪೋ ಭೂಮಿಯನ್ನಾಗಿ ಬೆಳೆಸಿದ್ದಾರೆ.

ಗುರುಗಳ ಆಗಮನ: ಶ್ರೀ ಮುರುಘೇಂದ್ರಯ್ಯ ಸ್ವಾಮಿಗಳು ಹರಪನಹಳ್ಳಿ ತಾಲ್ಲೂಕಿನ ಹಲುವಾಗಲು ಗ್ರಾಮದ ಶ್ರೀಚನ್ನಬಸಯ್ಯ ಮತ್ತು ಶ್ರೀಮತಿ ನೀಲಮ್ಮನವರ ಜೇಷ್ಠ ಪುತ್ರರಾಗಿ ೧೯೫೭ರ ಮಾರ್ಚ್ ಮೂವತ್ತರಂದು ಜನಿಸಿದರು. ಇವರು ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ ಪ್ರೌಢಾವಸ್ಥೆಗೆ ಬಂದ ವೇಳೆಗೆ ಆಧ್ಯಾತ್ಮದ ಕಡೆಗೆ ಒಲವು ಬೆಳೆದು ಹಾವೇರಿಯ ಹಿರೇಮಠದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರ ಸೇವೆ ಮಾಡಿಕೊಂಡು ಅವರ ಕೃಪೆಯಿಂದ, ಆಧ್ಯಾತ್ಮ ದೀಕ್ಷೆಯನ್ನು ಪಡೆದುಕೊಂಡರು.

೧೯೭೮ರ ಆಗಸ್ಟ್ ಇಪ್ಪತ್ತರಂದು ಶ್ರೀ ಮುರುಘೇಂದ್ರಸ್ವಾಮಿ ದೇವರು ಕಣ್ವಕುಪ್ಪೆಗೆ ಆಗಮಿಸಿ ಅನುಷ್ಠಾನ ಕೈಗೊಂಡು ೧೯೮೭ ರ ಏಪ್ರಿಲ್ ಒಂದರಂದು ಉಜ್ಜಯಿನಿ ಜಗದ್ಗುರುಗಳ ಸಮ್ಮುಖದಲ್ಲಿ ಶ್ರೀ ಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳೆಂದು ಅಭಿದಾನ ಪಡೆದು ಪಟ್ಟಾಧಿಕಾರವನ್ನು ವಹಿಸಿಕೊಂಡರು. ನಂತರ ಗವಿಮಠದಲ್ಲಿ ಒಂಬತ್ತು ತಿಂಗಳ ಕಾಲ ಅನುಷ್ಠಾನವನ್ನು ಕೈಗೊಂಡರು. ಲೌಕಿಕಕ್ಕಿಂತ ಅಲೌಕಿಕದ ಕಡೆಗೆ ಹೆಚ್ಚು ಒಲವು ಇದ್ದು ಆತ್ಮ ಸಂಸ್ಕಾರಕ್ಕಾಗಿ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಕಲ್ಯಾಣದುರ್ಗದ ಮುಪ್ಪಲಕುಂಟೆಯಲ್ಲಿ ಇಪ್ಪತ್ತೊಂದುತಿಂಗಳ ಮೌನ ಅನುಷ್ಠಾನ ಮಾಡಿ ಸಾಧನೆ ಮಾಡಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಮುಮ್ಮಡಿ ಶಾಂತಲಿಂಗ ಶಿವಾಚಾರ್ಯರು ಗವಿ ಮಠಕ್ಕೆ ಪಾದಾರ್ಪಣೆ ಮಾಡಿದ ಮೇಲೆ ಗವಿಮಠವು ಸರ್ವಾಂಗೀಣವಾಗಿ ಅಭಿವೃದ್ಧಿಯನ್ನು ಕಾಣತೊಡಗಿತು. ಗವಿಮಠಕ್ಕೆ ನೂತನ ಕಟ್ಟಡ, ಗೋಶಾಲೆ, ಬಿಲ್ವವನ, ಕಲ್ಯಾಣಮಂಟಪ, ಕಣ್ವಜಲ, ಗದ್ದುಗೆಮಂಟಪ, ಪಾಠಶಾಲೆ ಕಟ್ಟಡ ಮತ್ತು ಸಮುದಾಯ ಭವನದ ನಿರ್ಮಾಣವನ್ನು ಕಲ್ಲು ಬಂಡೆಯ ಶಿಖರದಲ್ಲಿ ನಿರ್ಮಿಸಿದ್ದಾರೆ. ಮಠದ ಸಮುಚ್ಛಯಕ್ಕೆ ಕಮಾನು ಮಹಾದ್ವಾರವನ್ನು ನಿರ್ಮಿಸಿದ್ದಾರೆ. ನೈಸರ್ಗಿಕ ಹಿನ್ನೆಲೆಯಲ್ಲಿ ಬೆಳೆದ ಮಠಕ್ಕೆ ಆಧುನಿಕ ಮೆರುಗನ್ನು ನೀಡಿ ಆಕರ್ಷಕಗೊಳಿಸಿದ್ದಾರೆ.

ಹಾನಗಲ್ಲು ತಾಲ್ಲೂಕಿನ ಕೋಡಿಮಲ್ಲಾಪುರದಲ್ಲಿ ಶಾಖಾಮಠವನ್ನು ಸ್ಥಾಪಿಸಿ ರೇಣುಕಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ಕರ್ನಾಟಕ, ಆಂಧ್ರಪ್ರದೇಶಗಳನ್ನು ಸುತ್ತಿ ಶಿವದೀಕ್ಷೆ ಮತ್ತು ವೀರಶೈವ ಧರ್ಮದ ಬಗ್ಗೆ ಪ್ರವಚನ ಮಾಡುತ್ತಾ ಧರ್ಮವನ್ನು ಬೆಳೆಸುವ ಮೂಲಕ ಕಣ್ವಕುಪ್ಪೆ ಗವಿಮಠವನ್ನು ಹೆಚ್ಚು ಪ್ರಚಾರಕ್ಕೆ ತಂದಿದ್ದಾರೆ.

ಧಾರ್ಮಿಕ ಕಾರ್ಯಗಳು: ಶ್ರಾವಣ ಮಾಸದಲ್ಲಿ ಮಹಾಪೂಜೆ, ಶ್ರೀ ಇಮ್ಮಡಿ ಶಾಂತಲಿಂಗ ಸ್ವಾಮಿಗಳ ಪುಣ್ಯತಿಥಿ, ದಸರಾ ಮಹೋತ್ಸವ, ಕಾರ್ತೀಕ ದೀಪೋತ್ಸವ ಹಾಗೂ ಶಿವರಾತ್ರಿಯನ್ನು ಆಚರಿಸಿ ಜನರಲ್ಲಿ ಧಾರ್ಮಿಕ ಪ್ರಜ್ಞೆ ಬೆಳೆಯುವಂತೆ ಮಾಡಿದ್ದಾರೆ. ಮಠದ ಸುತ್ತಲ ಪ್ರದೇಶವನ್ನು ಅಭಿವೃದ್ಧಿಪಡಿಸಿದ್ದಾರೆ. ಮಠದಲ್ಲಿ ವೇದ, ಸಂಸ್ಕೃತ ಹಾಗೂ ಆಗಮ ಪಾಠಶಾಲೆಯನ್ನು ಪ್ರಾರಂಭಿಸಿದ್ದಾರೆ. ಕಲಿಯುವ ಬಡಮಕ್ಕಳಿಗೆ ಮಠದಲ್ಲಿ ಆಶ್ರಯ ಕಲ್ಪಿಸಿಕೊಟ್ಟಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಮುಮ್ಮಡಿ ಶಾಂತಲಿಂಗ ಶಿವಾಚಾರ್ಯಸ್ವಾಮಿಗಳು, ಶ್ರೀ ಗವಿಮಠ, ಕಣ್ವಕುಪ್ಪೆ, ಜಗಳೂರು ತಾ, ದಾವಣಗೆರೆಜಿಲ್ಲೆ.

ಮುಸ್ಟೂರು

ಜಗಳೂರು ತಾಲ್ಲೂಕಿನ ಮುಸ್ಟೂರು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಇಪ್ಪತ್ತು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ಓಂಕಾರೇಶ್ವರ ದಾಸೋಹ ಮಠವು ಅಸ್ತಿತ್ವದಲ್ಲಿದೆ.

ಓಂಕಾರೇಶ್ವರಮಠ: ಮುಸ್ಟೂರಿನಲ್ಲಿ ಶ್ರೀ ರಂಭಾಪುರಿ ಪೀಠದ ಪರಂಪರೆಯ ಶಿಷ್ಯವರ್ಗದ ಶ್ರೀ ಓಂಕಾರೇಶ್ವರ ಮಠವು ಸ್ಥಾಪನೆಯಾಗಿದೆ. ಇಪ್ಪತ್ತನೆಯ ಶತಮಾನದಲ್ಲಿ ಶ್ರೀ ನಾಗಲಿಂಗ ಸ್ವಾಮಿಗಳು ಮಠವನ್ನು ಸ್ಥಾಪಿಸಿ ಬೆಳಕಿಗೆ ತಂದಿದ್ದಾರೆ. ಮುಸ್ಟೂರಿನಲ್ಲಿ ಜನಿಸಿ ಇಲ್ಲೇ ವಿದ್ಯಾಭ್ಯಾಸವನ್ನು ಮುಗಿಸಿ, ಆಧ್ಯಾತ್ಮದ ಹುಚ್ಚಿನಿಂದ ಬಾಲ್ಯದಲ್ಲೇ ಲೀಲೆಗೈದ ಮಹಾಪುರುಷರಿವರು. ಶಿವನ ಧ್ಯಾನದ ಹುಚ್ಚಿನಿಂದ ವರ್ತಿಸತೊಡಗಿ'ಶ್ರೀ ಹುಚ್ಚಪ್ಪ ಸ್ವಾಮಿ'ಗಳೆಂದು ಹೆಸರು ಪಡೆದರು. ಆಧ್ಯಾತ್ಮದ ಹುಚ್ಚಪ್ಪರಾಗಿ ಲೋಕಸಂಚಾರ ಮಾಡಿ ಶಿವಯೋಗಿಗಳ ದರ್ಶನವನ್ನು ಪಡೆದು, ಆಧ್ಯಾತ್ಮದ ತೃಷೆಯನ್ನು

ತೀರಿಸಿಕೊಳ್ಳಲು ಮುಂದಾದ ಶ್ರೀ ನಾಗಲಿಂಗ ಸ್ವಾಮಿಗಳು ಅನೇಕ ಧರ್ಮಕ್ಷೇತ್ರಗಳನ್ನು ಸುತ್ತಿ ಬಂದರು. ಮುಸ್ಟೂರಿನ ಓಂಕಾರೇಶ್ವರ ದೇವಾಲಯದ ಹಳೆಯ ಕಟ್ಟಡವನ್ನು ತೆಗೆಸಿ ನೂತನ ಕಟ್ಟಡವನ್ನು ನಿರ್ಮಿಸಿದ್ದಾರೆ. ದೇವಾಲಯದ ಪಕ್ಕದಲ್ಲಿ ನೂತನ ಮಠಕ್ಕೆ ಹೊಸ ಕಟ್ಟಡವನ್ನು ನಿರ್ಮಿಸಿದರು. ಓಂಕಾರೇಶ್ವರ ಗುಡಿಗೆ ಕಲಶವೇರಿಸಿ, ಪುನಃ ದಕ್ಷಿಣಾಭಿಮುಖವಾಗಿ ಶಿವಕ್ಷೇತ್ರಗಳ ದರ್ಶನಕ್ಕೆ ಹೊರಟರು. ಗದಗ, ನಾಯಕನಹಟ್ಟಿ, ಉಜ್ಜಯಿನಿ, ಮೈಸೂರು, ಸುತ್ತೂರು ಈ ರೀತಿ ಅನೇಕ ಕ್ಷೇತ್ರಗಳಲ್ಲಿ ಸಂಚರಿಸಿ, ಮುಸ್ಟೂರಿಗೆ ಬಂದು ಜೀವಂತ ಸಮಾಧಿಯಾದರು.

ಪರಂಪರೆ:
೧. ಷ.ಬ್ರ.ಶ್ರೀ ನಾಗಲಿಂಗ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ಬಸಪ್ಪ ಶಿವಾಚಾರ್ಯ ಸ್ವಾಮಿಗಳು
೩. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮೂರು ತಲೆಮಾರುಗಳನ್ನು ಕಂಡಿರುವ ಈ ದಾಸೋಹ ಮಠಕ್ಕೆ, ೧೯೭೬ ರಲ್ಲಿ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಪಟ್ಟಾಧಿಕಾರ ವಹಿಸಿಕೊಂಡು ಆಡಳಿತವನ್ನು ನಡೆಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಕರ್ತೃ ಗುರುಗಳ ಗದ್ದುಗೆಗೆ ನಿತ್ಯ ರುದ್ರಾಭಿಷೇಕದ ಪೂಜೆ, ನಿತ್ಯ ಅನ್ನಸಂತರ್ಪಣೆ ಕಾರ್ಯವು ನಡೆಯುತ್ತಿದೆ. ಅಮಾವಾಸ್ಯೆ ಮತ್ತು ಹುಣ್ಣಿಮೆಗಳಲ್ಲಿ ಮಹಾರುದ್ರಾಭಿಷೇಕ, ಪ್ರತಿ ಸೋಮವಾರ ಮುಸ್ಟೂರೇಶ್ವರ (ಓಂಕಾರೇಶ್ವರ) ದೇವರ ಪಲ್ಲಕಿ ಉತ್ಸವವು ನಡೆಯುತ್ತಿದೆ. ಅಲ್ಲದೆ ಮಠದ ಪರಂಪರೆಯ ಎರಡನೆಯ ಗುರುಗಳಾದ ಶ್ರೀ ಬಸಪ್ಪ ಸ್ವಾಮಿಗಳ ಗದ್ದುಗೆಯನ್ನು ಕಾಲೇಜು ಆವರಣದಲ್ಲಿ ನಿರ್ಮಿಸಿದ್ದು, ಇಲ್ಲಿಯೂ ನಿತ್ಯ ಪೂಜೆ ನಡೆಯುತ್ತಿದೆ.

ಶೈಕ್ಷಣಿಕ ಸೇವೆ: ಧಾರ್ಮಿಕವಾಗಿ ಹೆಚ್ಚು ಹೆಸರು ಪಡೆದಿರುವ ಈ ಮಠವು ಅನ್ನದಾಸೋಹದಲ್ಲಿಯೂ ಹೆಸರನ್ನು ಪಡೆದಿದೆ. ಇತ್ತೀಚೆಗೆ ಜ್ಞಾನ ದಾಸೋಹಕ್ಕೂ ಮುಂದಾಗಿ ಕೂಡ್ಲಿಗಿ ತಾಲ್ಲೂಕಿನ ಮಹಾದೇವಪುರ, ಸಂಡೂರು ತಾಲ್ಲೂಕಿನ ಸುಲೇನಹಳ್ಳಿ, ಹಾವೇರಿ ಜಿಲ್ಲೆಯ ಸವಣೂರು ತಾಲ್ಲೂಕಿನ ಎಲುಮಿಗಿ ಹಾಗೂ ಮುಸ್ಟೂರಿನಲ್ಲಿ ಪ್ರೌಢಶಾಲೆಗಳು, ಕಾಲೇಜು ಹಾಗೂ ನಾಯಕನಹಟ್ಟಿ ಮತ್ತು ದಾವಣಗೆರೆಯಲ್ಲಿ ಅನಾಥ ಸೇವಾಶ್ರಮಗಳನ್ನು ಮಠದ ವತಿಯಿಂದ ಸ್ಥಾಪನೆ ಮಾಡಲಾಗಿದೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಬಸಪ್ಪ ಸ್ವಾಮಿಗಳ ಕಾಲದಲ್ಲಿ ಹತ್ತು ಎಕರೆ ತೆಂಗಿನ ತೋಟವನ್ನು ಮಾಡಲಾಗಿದೆ. ಅಲ್ಲದೆ ಅನಾಥಾಶ್ರಮಗಳನ್ನು ಸ್ಥಾಪಿಸಿ ಅನಾಥರಿಗೆ ನೆರವಾಗಿದ್ದಾರೆ. ಮಠದ ಸಮುಚ್ಚಯವನ್ನು ಅಭಿವೃದ್ಧಿಪಡಿಸಿರುವ ಈಗಿನ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಮಠದಲ್ಲಿ ದಾಸೋಹ ಕ್ರಿಯೆಗೆ ಹೆಚ್ಚು ಪ್ರಾಮುಖ್ಯತೆಕೊಟ್ಟು, ಮಠವನ್ನು ಬೆಳೆಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ಓಂಕಾರೇಶ್ವರ ದಾಸೋಹಮಠ, ಮುಸ್ಟೂರು, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ.
ಆಧಾರ: 'ಶ್ರೀಗುರು ನಾಗಲಿಂಗಲೀಲೆ'

❑

ದಾವಣಗೆರೆ ತಾಲ್ಲೂಕು

ದಾವಣಗೆರೆ ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಒಂದಾದ ದಾವಣಗೆರೆ ವಾಣಿಜ್ಯೋದ್ಯಮ ಕೇಂದ್ರ. ಶೈಕ್ಷಣಿಕ ಪ್ರಗತಿಯಿಂದ ರಾಷ್ಟ್ರದಲ್ಲಿಯೇ ದಾವಣಗೆರೆ ಪ್ರಸಿದ್ಧಿ ಪಡೆದಿದೆ. ಇಂತಹ ತಾಲ್ಲೂಕಿನಲ್ಲಿ ವೀರಶೈವ ಧರ್ಮ ಪ್ರಬಲವಾಗಿ ಬೆಳೆದಿದೆ. ಪ್ರಸ್ತುತ ಇಲ್ಲಿ ಮೂರು ಮಠಗಳು ಅಸ್ತಿತ್ವದಲ್ಲಿದ್ದು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಆವರಗೊಳ್ಳ

ದಾವಣಗೆರೆ ತಾಲ್ಲೂಕಿನ ಆವರಗೊಳ್ಳವು ತಾಲ್ಲೂಕು ಕೇಂದ್ರದಿಂದ ಹತ್ತು ಕಿ.ಮೀ.ದೂರದಲ್ಲಿದೆ. ಇಲ್ಲಿ ಜಂಗಮರೇ ಅಧಿಕ ಸಂಖ್ಯೆಯಲ್ಲಿದ್ದು ಇದೊಂದು ಜಂಗಮಕ್ಷೇತ್ರವೆಂದು ಹೆಸರು ಗಳಿಸಿದೆ. ಈಗಲೂ ಜಂಗಮ ಸಂತತಿಯೇ ಹೆಚ್ಚಾಗಿರುವ ಈ ಗ್ರಾಮಕ್ಕೆ ಹಿಂದೆ 'ಅಮರಗಣಂಗಳ್'ಎಂಬ ಹೆಸರಿತ್ತು. ಈ ಹೆಸರು ಅಪಭ್ರಂಶವಾಗಿ'ಆವರಗೊಳ್ಳ'ವಾಗಿರಬಹುದು ಈ ಗ್ರಾಮದ ಪುರಾತನ ದೇವಾಲಯಗಳು ಇಲ್ಲಿನ ಧಾರ್ಮಿಕ ಇತಿಹಾಸವನ್ನು ಸಾರುತ್ತಿವೆ. ಇಂತಹ ಧಾರ್ಮಿಕ ಹಿನ್ನಲೆಯುಳ್ಳ ಗ್ರಾಮದಲ್ಲಿ ಶ್ರೀ ಚೌಸಷ್ಟಿ ಗ್ರಾಮದ ಪುರವರ್ಗದ ಹಿರೇಮಠವು ಅಸ್ತಿತ್ವದಲ್ಲಿದೆ.

ಚೌಸಷ್ಟಿ ಗ್ರಾಮದ ಪುರವರ್ಗದ ಹಿರೇಮಠ: ಆವರಗೊಳ್ಳ ಗ್ರಾಮದಲ್ಲಿ ಮುನ್ನೂರುವರ್ಷಗಳ ಹಿಂದೆ ಹಿರೇಮಠವು ಸ್ಥಾಪನೆಯಾಗಿದೆ. ಶ್ರೀ ರಂಭಾಪುರಿ ಪೀಠದ ಶಾಖೆಯ ಪುತ್ರವರ್ಗದ ಚೌಸಷ್ಟಿ ಗ್ರಾಮದ ಪುರವರ್ಗದ ಹಿರೇಮಠವು ತನ್ನ ಕರ್ತೃತ್ವ ಶಕ್ತಿಯಿಂದ ಈ ಭಾಗದಲ್ಲಿ ಹೆಸರು ಮಾಡಿದೆ. ಗುರುವರ್ಗದಲ್ಲಿ ಮಾನ್ಯತೆ ಪಡೆದುಕೊಂಡು, ಪಂಚಪೀಠಗಳಲ್ಲಿ ಸ್ಥಾನಮಾನ ಉಳಿಸಿಕೊಂಡು ಬಂದಿರುವ ಹಿರೇಮಠವು ಭಕ್ತರನ್ನು ಬೆಳಕಿನತ್ತ ಕೊಂಡೊಯ್ಯುವ ದೀಪವಾಗಿ ಬೆಳಗುತ್ತಿದೆ.

ರಾಜರ ಆಶ್ರಯ: ೬೦೦ ವರ್ಷಗಳ ಹಿಂದೆ ಪೇಶ್ವೆಗಳ ಕಾಲದಲ್ಲಿ ಮಹಾ ಗಣಾಧೀಶ್ವರರ ವಂಶಜರು ದೆಹಲಿಯ ದೊರೆಯತನಕ ಹೋದ ದೂರನ್ನು ಬಗೆಹರಿಸಿದ್ದರು. ಈ ಕಾರಣಕ್ಕೆ 'ಅಗಣಿತಶಾಸ್ತ್ರ ಪ್ರವೀಣರು'ಎಂಬ ಬಿರುದಿನೊಂದಿಗೆ ದೆಹಲಿಯ ದೊರೆ ಈ ಜಾಗದಲ್ಲಿ ಗ್ರಾಮ ಕಟ್ಟಿಸುತ್ತಾನೆ. ಅಲ್ಲದೆ ಪ್ರಥಮವಾಗಿ ಕನ್ನೇಶ್ವರ ಹಾಗೂ ವೀರಭದ್ರೇಶ್ವರ ದೇವಸ್ಥಾನವನ್ನು ಕಟ್ಟಿಸಿ, ಈ ದೇವಸ್ಥಾನಗಳ ಪೂಜಾಕಾರ್ಯ ಸಾಂಗವಾಗಿ ನಡೆದುಕೊಂಡು ಹೋಗಲು ಅರವತ್ನಾಲ್ಕು ಗ್ರಾಮಗಳನ್ನು ಜಹಗೀರಾಗಿ ನೀಡಿದ ಬಗ್ಗೆ ಇತಿಹಾಸ ಇದೆ. ಹರಿಹರ, ದಾವಣಗೆರೆಯನ್ನು ಒಳಗೊಂಡಂತೆ ಸುತ್ತಲ ಅರವತ್ನಾಲ್ಕು ಗ್ರಾಮಗಳನ್ನು ಈ ಮಠದ ವ್ಯಾಪ್ತಿಗೆ ಒಳಪಡಿಸಿದರು. ಮಠಕ್ಕೆ ಪ್ರತಿವರ್ಷ ಖಾಯಂ ಕಾಣಿಕೆ ಬರುವ ವ್ಯವಸ್ಥೆಯನ್ನು ಸವಣೂರು ಮಹಾರಾಜರು ಮಾಡಿಸುತ್ತಾರೆ. ಜತೆಗೆ ಕಂಠೀಹಾರವನ್ನು ಗುರುಗಳಿಗೆ ಅರ್ಪಿಸಿದ ಬಗ್ಗೆ ದಾಖಲೆಗಳು ಮಠದಲ್ಲಿವೆ.ಸುತ್ತಲ ರಾಜರು ಮಠದ ಪ್ರಭಾವಕ್ಕೆ ಒಳಗಾಗಿ ಭಕ್ತರಾಗಿದ್ದರು ಎಂಬುದು ಐತಿಹ್ಯಗಳಿಂದ ತಿಳಿದು ಬರುತ್ತದೆ. ಹಿಂದಿನಿಂದಲೂ ವೀರಭದ್ರಸ್ವಾಮಿ ದೇವಸ್ಥಾನ ಮತ್ತು ಮಠ ಬೇರೆಯಲ್ಲ ಎಂಬಂತೆ ಒಂದಕ್ಕೊಂದು ಸಂಬಂಧ ಹೆಣೆದುಕೊಂಡು ಬಂದಿದ್ದು ಮಹಾಗಣಂಗಳ ಸಮಾರಾಧನೆ, ಪೂಜಾ ಕಾರ್ಯಗಳು ವಿಧಿವತ್ತಾಗಿ ನಡೆದುಕೊಂಡು ಬಂದಿವೆ.

ಮಠ ಸ್ಥಾಪನೆ: ಈ ನಡುವೆ ವೀರಶೈವ ಮಠ ಸ್ಥಾಪನೆಯಾಗಿ ಕೂಚರಾಜ ವಂಶದ ಸೋಮತ್ಸರಾಜ ವಲ್ಲಭ ಮಹಾದೇವರಾಯ ೧೬೦೦ ಎಕರೆ ಜಾಗವನ್ನು ಉಂಬಳಿಯಾಗಿ ನೀಡಿದ ಬಗ್ಗೆ ಉಲ್ಲೇಖ ಇದೆ. ಮಠ ಸ್ಥಾಪನೆಗೆ ಸಮಸ್ತ ಗಣಂಗಳ ಪ್ರೇರಣೆ ಹಾಗೂ ಅಗ್ರವಣಿ ಶ್ರೀ ಚನ್ನಬಸಪ್ಪ ಸ್ವಾಮಿಗಳ ಕರ್ತೃತ್ವ ಶಕ್ತಿಯ ಕಾರಣವಾಗಿ ಮಠವು ಸ್ಥಾಪನೆಯಾಗುತ್ತದೆ. ಪ್ರಥಮ ಗುರುಗಳಾಗಿ ಅಧಿಕಾರ ಪಡೆದ ಶ್ರೀ ಚನ್ನಬಸಪ್ಪ ಸ್ವಾಮಿಗಳು ಮಠವನ್ನು ಬೆಳೆಸಿದ್ದಾರೆ.

ದೇವಸ್ಥಾನ ಸಮುಚ್ಚಯ: ಇತಿಹಾಸ ಪ್ರಸಿದ್ಧ ಈ ಗ್ರಾಮದಲ್ಲಿ ಮಠಕ್ಕೆ ಹೊಂದಿಕೊಂಡಂತೆ ಕನ್ನೇಶ್ವರ ದೇವಾಲಯ, ವೀರಭದ್ರಸ್ವಾಮಿ, ಮಾಯಾಂಬಿಕ ದೇವಾಲಯ, ಚೌಡಾಂಬಿಕೆ, ದುರ್ಗಾಂಬಿಕಾದೇವಿ, ನಂದಿಬಸವೇಶ್ವರ, ಉಯ್ಯಾಲೆ ಕಟ್ಟೆಯ ಮೇಲಿರುವ ವಿಘ್ನೇಶ್ವರ ಹಾಗೂ ಆಂಜನೇಯ ದೇವಸ್ಥಾನಗಳು ಈ ಕ್ಷೇತ್ರದ ಧಾರ್ಮಿಕ ಹಿನ್ನೆಲೆಯನ್ನು ಸಾರುತ್ತಿವೆ. ಅಲ್ಲದೆ ಇಲ್ಲಿನ ವೀರಭದ್ರ ಸ್ವಾಮಿ ದೇವಾಸ್ಥಾನದ ಕೆತ್ತನೆ ಕಲಾಕೌಶಲ್ಯ, ಗೋಪುರಗಳ ವಿನ್ಯಾಸ ನೋಡಲು ಆಕರ್ಷಣೀಯವಾಗಿದೆ.

ಪರಂಪರೆ: ಇಂತಹ ಇತಿಹಾಸ ಪ್ರಸಿದ್ಧ ಗ್ರಾಮದ ಊರ ಹೆಬ್ಬಾಗಿಲಲ್ಲಿ ಸ್ಥಾಪನೆಯಾದ ಚೌಸಷ್ಟಿ ಗ್ರಾಮದ ಪುರವರ್ಗ ಹಿರೇಮಠದಲ್ಲಿ ಶ್ರೀ ಅಗ್ಗವಣಿ ಬಸವಣ್ಣಪ್ಪ ಸ್ವಾಮಿಗಳು, ಶ್ರೀ ಮುದ್ದು ವೀರಪ್ಪಯ್ಯ ಸ್ವಾಮಿಗಳ ಗದ್ದುಗೆಗಳು ಮಾತ್ರ ಇದ್ದು, ಉಳಿದಂತೆ ಈ ಮಠದ ಮಠಾಧೀಶ್ವರರ ಗದ್ದುಗೆಗಳು ಬೇರೆ ಬೇರೆ ಕಡೆ ಇರಬಹುದಾಗಿದೆ ಎಂದು ಈಗಿನ ಶ್ರೀಗಳು ಹೇಳುತ್ತಾರೆ. ಆದರೆ ಯಾವುದೇ ಆಧಾರಗಳು ಲಭ್ಯವಿಲ್ಲ.

ಭಕ್ತರ ಒತ್ತಾಸೆ, ಪಂಚಪೀಠಗಳ ಜಗದ್ಗುರುಗಳ ಆಶೀರ್ವಾದದಿಂದ ೧೯೯೫ ರ ಆಗಸ್ಟ್ ಎರಡರಂದು ಶ್ರೀ ಓಂಕಾರ ಶಿವಾಚಾರ್ಯ ಸ್ವಾಮಿಗಳನ್ನು ಮಠದ ಉತ್ತರಾಧಿಕಾರಿಗಳಾಗಿ ನೇಮಕ ಮಾಡಿಕೊಳ್ಳಲಾಗಿತ್ತು. ೧೯೯೫ ರ ಆಗಸ್ಟ್ ಒಂಬತ್ತರಂದು ದೀಕ್ಷಾಗುರುಗಳಾದ ಉಚ್ಚಂಗಿ ದುರ್ಗ ಕಟ್ಟಿಮನಿ ರಾಜಗುರು ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು, ಪುರವರ್ಗ ಹಿರೇಮಠ ರಾಮಘಟ್ಟ ಇವರಿಂದ ವೀರಮಾಹೇಶ್ವರ ದೀಕ್ಷಾನುಗ್ರಹ ನೀಡಿ ವೀರಶೈವ ಶಿಷ್ಟಾಚಾರಗಳ ನಿಯಮಾನುಸಾರ ಪಟ್ಟಾಧಿಕಾರ ಮಾಡುತ್ತಾರೆ. ಕೆಲಕಾಲ ಮಠಾಧೀಶ್ವರರು ಇಲ್ಲದೆ ಖಾಲಿ ಇದ್ದ ಮಠದ ಅಧಿಕಾರ ಪಡೆದು ಅಭಿವೃದ್ಧಿ ಪಡಿಸಿದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮಿಗಳು, ಚೇತೋಹಾರಿಗಳಾಗಿ ಊರಿನ, ಮಠದ ಧಾರ್ಮಿಕ ಕೇಂದ್ರಬಿಂದುವಾಗಿ, ಭಕ್ತರ ಮಾರ್ಗದರ್ಶಕರಾಗಿ ರಾರಾಜಿಸತೊಡಗಿದ್ದಾರೆ.

ಧರ್ಮಕಾರ್ಯ: ೧೯೨೯ ರಲ್ಲಿ ರಂಭಾಪುರಿ ಪೀಠದ ಜಗದ್ಗುರು ಶ್ರೀ ಶಿವಾನಂದ ರಾಜೇಂದ್ರ ಸ್ವಾಮಿಗಳು ಈ ಮಠದಲ್ಲಿ ಮೂರು ತಿಂಗಳುಗಳ ಕಾಲ ಅನುಷ್ಠಾನಗೊಂಡಿದ್ದರು.ನಂತರ ೧೯೭೩ರಲ್ಲಿ ಜಗದ್ಗುರು ಶ್ರೀ ವೀರಗಂಗಾಧರೇಶ್ವರ ಸ್ವಾಮಿಗಳು ಒಂದೂವರೆ ತಿಂಗಳ ಕಾಲ ಅನುಷ್ಠಾನಗೊಂಡಿದ್ದರು. ಇದರ ನೆನಪಿಗಾಗಿ ಜಗದ್ಗುರುಗಳು ಅನುಷ್ಠಾನಕ್ಕೆ ಕುಳಿತ ಸ್ಥಳದಲ್ಲಿ ತೋರುಗದ್ದುಗೆಯನ್ನು ನಿರ್ಮಿಸಲಾಗಿದೆ. ೧೯೮೦ ರಲ್ಲಿ ಭಕ್ತರೆಲ್ಲ ಸೇರಿ ರೇಣುಕಾಚಾರ್ಯ ಮೂರ್ತಿ ಸ್ಥಾಪನೆ ಮಾಡಿಸಿದ್ದಾರೆ. ೧೯೮೫ ರಲ್ಲಿ ಕೇದಾರ,ಬಾಳೇಹೊನ್ನೂರು, ಕಾಶಿಜಗದ್ಗುರುಗಳ ನೇತೃತ್ವದಲ್ಲಿ ಮಠಕ್ಕೆ ಹೊಂದಿಕೊಂಡಂತೆ ಇರುವ ವೀರಭದ್ರಸ್ವಾಮಿ ದೇವಸ್ಥಾನಕ್ಕೆ ಕಳಸ ಸ್ಥಾಪನೆ ಮಾಡಿಸಲಾಗಿದೆ. ಗುರುಗಳು ಶುಕ್ರವಾರ, ಮಂಗಳವಾರ, ಹುಣ್ಣಿಮೆ ಮತ್ತು ಅಮಾವಾಸ್ಯೆ ದಿನ ಮಠ ಬಿಟ್ಟು ಎಲ್ಲಿಯೂ ಹೋಗದೆ ವಿಶೇಷ ಪೂಜೆ ನಡೆಸಿ ಮಠಕ್ಕೆ ಬರುವ ಭಕ್ತರಿಗೆ ದರ್ಶನ ನೀಡುವ ಮೂಲಕ ಭಕ್ತರ ಕಷ್ಟ ಸುಖಗಳಿಗೆ ಸ್ಪಂದಿಸುವರು. ಲೋಕಕಲ್ಯಾಣಕ್ಕೆ ಮೂರುವರ್ಷ ಅನುಷ್ಠಾನಕ್ಕೆಗೊಂಡು ಧಾರ್ಮಿಕ ನೆಲೆಗಟ್ಟಿನ ಮೇಲೆ ಸಮಾಜವನ್ನು ಬೆಳೆಸಲು ಕೆಲವು ರೂಪುರೇಷೆಗಳನ್ನು ಇಟ್ಟುಕೊಂಡು,ಭಕ್ತರ ಉದ್ಧಾರವೇ ಸಮಾಜದ ಉದ್ಧಾರವೆಂದು ನಂಬಿಕೊಂಡಿದ್ದಾರೆ. ಪ್ರಾಚೀನ ಇತಿಹಾಸವುಳ್ಳ ಈ ಮಠದಲ್ಲಿ ಹಳೆಯಕಾಲದ ಶಂಖ, ಮುದ್ರೆ,ಬಟ್ಟಲು, ಕಮಂಡಲ ಹಾಗೂ ಬೆತ್ತ ಇವೆ. ಅಲ್ಲದೆ ಮಠದ ಜಮೀನಿನಲ್ಲಿ ಶಿಲಾಶಾಸನ ಇದೆ. ಇಲ್ಲಿನ ವೀರಭದ್ರ ದೇವಸ್ಥಾನ, ಕನ್ನೇಶ್ವರ ದೇವಸ್ಥಾನಗಳಲ್ಲಿ ಶಿಲಾಶಾಸನಗಳು ದೊರೆತಿವೆ.

ವಿಳಾಸ: ಷ.ಬ್ರ.ಶ್ರೀ ಓಂಕಾರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಚೌಸಷ್ಟಿ ಗ್ರಾಮದ ಪುರವರ್ಗದ ಹಿರೇಮಠ, ಆವರಗೊಳ್ಳ, ದಾವಣಗೆರೆ ತಾಲ್ಲೂಕು.

ದಾವಣಗೆರೆ

ಜಿಲ್ಲಾ ಕೇಂದ್ರವಾದ ದಾವಣಗೆರೆಯು ವ್ಯಾಪಾರ ಹಾಗೂ ಶೈಕ್ಷಣಿಕವಾಗಿ ಹೆಚ್ಚು ಅಭಿವೃದ್ಧಿ ಸಾಧಿಸಿ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚು ಹೆಸರು ಗಳಿಸಿದೆ. ಇಂತಹ ಶ್ರೀಮಂತ ನಗರದಲ್ಲಿ ಪುರಾತನ ಕಾಲದಲ್ಲಿ ಅಷ್ಟ ಮಠಗಳು ಸ್ಥಾಪನೆಯಾಗಿ ವೀರಶೈವ ಧರ್ಮವನ್ನು ಬೆಳೆಸಿ ಸಂಸ್ಕಾರವಂತ ಸಮಾಜವನ್ನು ರೂಪಿಸಿದ್ದವು ಎಂಬ ಮಾಹಿತಿ ದೊರೆಯುತ್ತದೆ. ಈಗ ಶ್ರೀ ಹಿರೇಮಠ, ಶ್ರೀ ಮೈಸೂರುಮಠ, ಶ್ರೀ ತಿರುಕಪ್ಪನಮಠ ಹಾಗೂ ದೊಡ್ಡಪೇಟೆಯ ಶ್ರೀ ವಿರಕ್ತಮಠ ಈ ನಾಲ್ಕು ಮಠಗಳು ಲಭ್ಯ ಇವೆ. ಉಳಿದ ಮಠಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡು ಮರೆಯಾಗಿವೆ. ಅಸ್ತಿತ್ವದಲ್ಲಿರುವ ಮಠಗಳಲ್ಲಿ ಶ್ರೀ ಹಿರೇಮಠವು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ಉಳಿದ ಮಠಗಳಲ್ಲಿ ಗುರುಗಳಿಲ್ಲದೆ ಖಾಲಿಉಳಿದಿವೆ.

ಹಿರೇಮಠ: ದಾವಣಗೆರೆ ನಗರದ ಹಳೇಪೇಟೆ ಬಡಾವಣೆಯಲ್ಲಿ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ. ಪುತ್ರವರ್ಗದ

ಪರಂಪರೆಯಲ್ಲಿ ಬೆಳೆದಿರುವ ಈ ಮಠವು ಶ್ರೀ ರಂಭಾಪುರಿ ಪೀಠದ ಶಾಖಾನುವರ್ತಿ ಮಠವಾಗಿ ಬೆಳೆದಿದೆ. ದಾವಣಗೆರೆ ನಗರದ ಪ್ರಾಚಿನ ಮಠವೆಂದು ಹೆಸರು ಗಳಿಸಿರುವ ಈ ಮಠವು ಈತನಕ ಅಸ್ತಿತ್ವದಲ್ಲಿದ್ದು, ವೀರಶೈವ ಧರ್ಮದ ಆಚರಣೆಗಳನ್ನು ನೆರವೇರಿಸುತ್ತಾ ಧರ್ಮವನ್ನು ಬೆಳೆಸಿದೆ.

ಮಠ ಸ್ಥಾಪನೆ: ಹಿರೇಮಠದ ಸ್ಥಾಪನೆಯ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಪ್ರಾಚೀನ ಕಾಲದಿಂದ ನಡೆದು ಬಂದ ಸಂಪ್ರದಾಯದಂತೆ ಧಾರ್ಮಿಕ ಕ್ರಿಯಾದಿಗಳನ್ನು ನಡೆಸಿಕೊಂಡು ಬಂದಿದೆಯಾದರೂ ಪರಂಪರೆಯ ಇತಿಹಾಸವನ್ನು ಕಾಯ್ದಿರಿಸುವ ಬಗ್ಗೆ ಗಮನ ಹರಿಸಿದಂತೆ ಕಂಡುಬಂದಿಲ್ಲ. ಪಂಚಪೀಠಗಳು ಸ್ಥಾಪನೆಗೊಂಡ ಮೇಲೆ ಶಾಸನಬದ್ಧ ರಚನೆಯಂತೆ ನಾಡಿನ ನಾನಾ ಭಾಗಗಳಲ್ಲಿ ಅಸ್ತಿತ್ವಗೊಂಡ ಹಿರೇಮಠಗಳಲ್ಲಿ ಈ ಮಠವು ಒಂದಾಗಿದೆ ಎಂದು ಹೇಳಲಾಗುತ್ತದೆ.

ಪರಂಪರೆ: ಮೇಲೆ ತಿಳಿಸಿದಂತೆ ಮಠದ ಪರಂಪರೆಯನ್ನು ದಾಖಲಿಸಿಡದ ಕಾರಣ ಪರಂಪರೆಯ ಸ್ಪಷ್ಟತೆ ಮರೆಯಾಗಿದೆ. ೧೮೮೨ರ ಏಪ್ರಿಲ್ ಇಪ್ಪತ್ತೇಳರಂದು ಅಧಿಕಾರಕ್ಕೆ ಬಂದಿದ್ದ, ಶ್ರೀ ಮಹಾಲಿಂಗ ಶಿವಾಚಾರ್ಯ ಸ್ವಾಮಿಗಳ ಹೆಸರನ್ನು ಇಲ್ಲಿ ದಾಖಲಿಸಬಹುದಾಗಿದೆ. ಗುರುಗಳು ತಮ್ಮ ಕಾಲಾವಧಿಯಲ್ಲಿ ತತ್ತ್ವನಿಷ್ಠ ಬದುಕನ್ನು ಬದುಕಿ ವೀರಶೈವ ಧರ್ಮಾಚರಣೆಗಳನ್ನು ಅನುಷ್ಠಾನಕ್ಕೆ ತಂದು, ಸಮಾಜವನ್ನು ಅಭಿವೃದ್ಧಿಪಡಿಸಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಇಂತಹ ಮಹಾನೀಯರು ೧೯೦೯ರ ಡಿಸೆಂಬರ್ ಹದಿನಾರರಂದು ಲಿಂಗೈಕ್ಯರಾದರು. ಇವರ ನಂತರ ಮಠವು ಕೆಲವು ವರ್ಷಗಳ ಕಾಲ ಖಾಲಿ ಉಳಿಯುತ್ತದೆ. ಪುತ್ರವರ್ಗದ ಪರಂಪರೆಯ ಮಠವಾಗಿದ್ದರಿಂದ ಮಠದ ವಂಶಸ್ಥರೇ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಮಠ ಮತ್ತು ಭಕ್ತರ ಸಂಬಂಧ ಕಳಚದಂತೆ ನೋಡಿಕೊಂಡಿದ್ದಾರೆ.

ಅನೇಕ ವರ್ಷಗಳ ಕಾಲ ಮಠಾಧೀಶರಿಲ್ಲದೆ ಖಾಲಿ ಉಳಿದಿದ್ದ ಹಿರೇಮಠಕ್ಕೆ ಆಸ್ಥಾನ ವಿದ್ವಾನ್ ವೇದಮೂರ್ತಿ ಶಿವಾನಂದಸ್ವಾಮಿ ಶಾಸ್ತ್ರೀಗಳು ಮತ್ತು ಪಾರ್ವತಾದೇವಿಯವರ ಪುತ್ರರಾಗಿ ೧೯೪೩ರ ಏಪ್ರಿಲ್ ಒಂದರಂದು ಜನಿಸಿದ ಶ್ರೀಸದ್ಯೋಜಾತ ಶಿವಾಚಾರ್ಯ ಸ್ವಾಮಿಗಳು ಉತ್ತರಾಧಿಕಾರಿಗಳಾಗಿ ನೇಮಕಗೊಂಡರು. ಗುರುಗಳು ಹತ್ತು ವರ್ಷಗಳನ್ನು ಪೂರೈಸಿದ ನಂತರ ೧೯೫೩ರ ಆಗಸ್ಟ್ ಹದಿನೈದರಂದು ವಿದ್ಯುಕ್ತವಾಗಿ ಹಿರೇಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡರು.

ಶ್ರೀ ಸದ್ಯೋಜಾತ ಶಿವಾಚಾರ್ಯ ಸ್ವಾಮಿಗಳು ಮಠದ ಆಡಳಿತವನ್ನು ವಹಿಸಿಕೊಂಡ ನಂತರ ರಂಭಾಪುರಿಪೀಠದ ಜಗದ್ಗುರು ಶ್ರೀ ವೀರಗಂಗಾಧರ ಶಿವಾಚಾರ್ಯ ಭಗವತ್ಪಾದರ ಕರಕಮಲ ಸಂಜಾತರಾಗಿ ಬೆಳೆದು, ಅವರ ಕೃಪಾಶೀರ್ವಾದದಿಂದ ಉನ್ನತ ವಿದ್ಯಾಭ್ಯಾಸ ಮಾಡಿದರು. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಇತಿಹಾಸದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ನಂತರ 'ಶೈವ ಅಂಡ್ ವೀರಶೈವ ಮಠಾಸ್ ಇನ್ ಕರ್ನಾಟಕ' ಎಂಬ ವಿಷಯದಲ್ಲಿ ಮಹಾಪ್ರಬಂಧವನ್ನು ಮಂಡಿಸಿ ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಪಿಹೆಚ್.ಡಿ. ಪಡೆದು ಅಪಾರ ವಿದ್ವತ್ತಿನೊಂದಿಗೆ ಮಠದ ಆಡಳಿತವನ್ನು ವಹಿಸಿಕೊಂಡರು.

ಗುರುಗಳು ಮಠಾಧೀಶರಾದರೂ ಕಲಿತ ವಿದ್ಯೆ ವ್ಯರ್ಥವಾಗಬಾರದೆಂಬ ಕಾರಣದಿಂದ ದಾವಣಗೆರೆಯಲ್ಲಿ ಪ್ರಾಂಶುಪಾಲ ಹುದ್ದೆಯನ್ನು ಅಲಂಕರಿಸಿ ತಮ್ಮ ಐವತ್ತೆಂಟನೆ ವರ್ಷದ ತನಕ ಕಾಯಕ ಮಾಡಿ ನಿವೃತ್ತಿಯಾಗಿದ್ದಾರೆ. ಗುರುಗಳು ತಮ್ಮ ಕಾಯಕದಿಂದ ಬಂದ ಹಣವನ್ನು ಮಠದ ಅಭಿವೃದ್ಧಿಗೆ ಬಳಸಿ ಶಾಮನೂರು ರಸ್ತೆಯಲ್ಲಿ ನೂತನ ಕಟ್ಟಡವನ್ನು ನಿರ್ಮಿಸಿ ಮಠದ ಆಡಳಿತವನ್ನು ಸ್ಥಳಾಂತರಿಸಿದ್ದಾರೆ. ಸದಾ ಚಟುವಟಿಕೆಯಿಂದ ಒಂದಲ್ಲ ಒಂದು ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡ ಗುರುಗಳು ಸಂಘಟಿತ ಬೆಳವಣಿಗೆಯಿಂದ ಧರ್ಮವನ್ನು ಅಭಿವೃದ್ಧಿಪಡಿಸಬಹುದೆಂದು ನಂಬಿ ಶಿವಾಚಾರ್ಯ ಒಕ್ಕೂಟದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಹಳೇಪೇಟೆ ಬಡಾವಣೆಯಲ್ಲಿರುವ ಮಠದಲ್ಲಿ ಒಂದು ಗದ್ದುಗೆ ಇದ್ದು ಈ ಗದ್ದುಗೆಗೆ ನಿತ್ಯ ಪೂಜೆ ನಡೆಯುತ್ತಿದೆ. ಗುರುಗಳು ಪ್ರಾಂಶುಪಾಲ ಹುದ್ದೆಯಿಂದ ನಿವೃತ್ತಿ ಹೊಂದಿದ ಮೇಲೆ ಮಠದಲ್ಲಿ ಪ್ರತಿ ಅಮಾವಸ್ಯೆಯ ದಿನ ವಿಶೇಷ ಪೂಜೆ, ಉಪನ್ಯಾಸ ಕಾರ್ಯಕ್ರಮ ಹಾಗೂ ದಾಸೋಹದ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಡಾ. ಸದ್ಯೋಜಾತ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಹಳೇಪೇಟೆ, ದಾವಣಗೆರೆ.

ಹೆಬ್ಬಾಳು

ದಾವಣಗೆರೆ ತಾಲ್ಲೂಕಿನ ಹೆಬ್ಬಾಳು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಇಪ್ಪತ್ತು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ರುದ್ರೇಶ್ವರ ವಿರಕ್ತಮಠವು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕೇಂದ್ರವಾಗಿ ಬೆಳೆದಿದೆ.

ರುದ್ರೇಶ್ವರ ವಿರಕ್ತಮಠ: ಹೆಬ್ಬಾಳು ಗ್ರಾಮದಲ್ಲಿ ಮುನ್ನೂರ ಹತ್ತು ವರ್ಷಗಳ ಹಿಂದೆ ಉತ್ತರದ ಕಡೆಯಿಂದ ಆಗಮಿಸಿದ ಶ್ರೀ ರುದ್ರೇಶ್ವರ ಸ್ವಾಮಿಗಳು ಹಿರೇಗುಡ್ಡದಲ್ಲಿ ಅನುಷ್ಠಾನಗೊಂಡಿದ್ದರು. ಇವರ ತಪೋಶಕ್ತಿಗೆ ಬೆರಗಾದ ಭಕ್ತರು ನಿರ್ಜನ ಪ್ರದೇಶದಲ್ಲಿ ಗುರುಗಳು ವಾಸಿಸುವುದು ಬೇಡ ಎಂದು ಹೆಬ್ಬಾಳಿಗೆ ಕರೆತಂದರು. ಗುರುಗಳು ಬಂದ ಮೇಲೆ ಗುರುಗಳಿಗಾಗಿ ಮಠ ಸ್ಥಾಪನೆ ಮಾಡಿದ ಭಕ್ತರು ಧಾರ್ಮಿಕ ಕಾರ್ಯಕ್ರಮಗಳ ಕೇಂದ್ರಬಿಂದುವಾಗಿ ರೂಪಿಸಿದರು. ವಿರಕ್ತ ಸಂಪ್ರದಾಯದ ಮುರುಘಾ ಸಮಯದ ಶ್ರೀ ರುದ್ರೇಶ್ವರ ವಿರಕ್ತ ಮಠವು ಶ್ರೀ ರುದ್ರೇಶ್ವರ ಸ್ವಾಮಿಗಳ ಆಧ್ಯಾತ್ಮ ಚಟುವಟಿಕೆಯಿಂದ ಬಹಳ ಬೇಗನೆ ಹೆಸರು ಪಡೆಯಿತು. ವೀರಶೈವ ಧರ್ಮದ ಆಚರಣೆ, ಶರಣಾದಿ ಪ್ರಮಥರ ತತ್ವಗಳನ್ನು ಬೋಧಿಸಿ ಗುರುಗಳು ಜನಮನ್ನಣೆ ಪಡೆದರು.

ಪರಂಪರೆ:

೧. ಶ್ರೀ ಮ.ನಿ.ಪ್ರ. ರುದ್ರೇಶ್ವರಸ್ವಾಮಿಗಳು (ಕರ್ತೃಗುರುಗಳು)
೨. ಶ್ರೀ ಮ.ನಿ.ಪ್ರ. ಬಸವಲಿಂಗರುದ್ರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಈಶ್ವರ ರುದ್ರೇಶ್ವರಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಬಾಲಾಜಿ ರುದ್ರೇಶ್ವರಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಮರಿ ಬಾಲಾಜಿರುದ್ರೇಶಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಮಹಾಂತ ರುದ್ರೇಶ್ವರಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯು ಬೆಳೆದು ಕರ್ತೃ ಗುರುಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಬಸವಲಿಂಗ ರುದ್ರ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠವನ್ನು ಬೆಳೆಸಿ ಈಶ್ವರ ರುದ್ರೇಶ್ವರ ಸ್ವಾಮಿಗಳಿಗೆ ಅಧಿಕಾರವನ್ನು ನೀಡಿದ್ದರು. ಶ್ರೀ ಈಶ್ವರ ರುದ್ರೇಶ್ವರ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ ಮೂಲ ಮಠವನ್ನು ನವೀಕರಿಸಿ ಮಠದಲ್ಲಿ ಧಾರ್ಮಿಕ ಚಟುವಟಿಕೆಗಳು ಚುರುಕುಗೊಳ್ಳುವಂತೆ ಮಾಡಿದ್ದರು. ಆಯುರ್ವೇದ್ಯ ಪದ್ಧತಿಯಲ್ಲಿ ಭಕ್ತರ ರೋಗಗಳನ್ನು ಗುಣಮುಖಗೊಳಿಸಿ, ಹಳ್ಳಿ ವೈದ್ಯರಾಗಿಯೂ ಹೆಚ್ಚು ಹೆಸರು ಪಡೆದಿದ್ದರು. ಜನ, ಜಾನುವಾರುಗಳಿಗೆ ಗಿಡಮೂಲಿಕೆಗಳಿಂದ ಸ್ಥಳದಲ್ಲೇ ಔಷಧಿ ತಯಾರಿಸಿ ನೀಡಿ ಗುಣಮುಖವಾಗುವಂತೆ ಮಾಡುತ್ತಿದ್ದರು ಎಂದು ಹೇಳಲಾಗುತ್ತಿದೆ. ಇದರಿಂದ ಈ ಮಠವು ಹೆಚ್ಚು ಪ್ರಬುದ್ಧಮಾನಕ್ಕೆ ಬಂದಿತು.

ಖಾಲಿ ಉಳಿದ ಮಠ: ಶ್ರೀ ಈಶ್ವರ ರುದ್ರೇಶ್ವರ ಸ್ವಾಮಿಗಳ ನಂತರ ಮಠವು ಬಹಳ ದಿನಗಳು ಖಾಲಿ ಉಳಿದು ಜೀರ್ಣಗೊಳ್ಳ ತೊಡಗಿತು. ಈ ಕಾಲದಲ್ಲಿ ಊರೊರಗಿದ್ದ ಮಠದಲ್ಲಿ ಗುರುಗಳಿಲ್ಲದೆ ಜನರ ಸಂಪರ್ಕ ದೂರವಾಗತೊಡಗಿತು. ಈ ಕಾರಣದಿಂದ ಮಠ ಮತ್ತು ಭಕ್ತರ ಅಂತರ ದೂರವಾಗತೊಡಗಿತು. ಇದನ್ನು ಅರಿತ ಊರಿನ ಭಕ್ತರು ಎಚ್ಚೆತ್ತುಕೊಂಡು ಊರಿನ ಧಾರ್ಮಿಕ ಚಟುವಟಿಕೆಗಳಿಗೆ ಹಾಗೂ ಭಕ್ತರ ಮಾರ್ಗದರ್ಶನಕ್ಕೆ ಗುರುಗಳು ಆವಶ್ಯಕ ಎಂದು ಅರಿತು, ಊರಿನಿಂದ ಪೂರ್ಣ ಹೊರಗುಳಿದಿದ್ದ ಮಠದ ಬದಲಿಗೆ ಗ್ರಾಮದ ಮಧ್ಯ ಭಾಗದಲ್ಲಿ ಮಠಕ್ಕೆ ನೂತನ ಕಟ್ಟಡವನ್ನು ನಿರ್ಮಿಸಿ ಶ್ರೀ ಬಾಲಾಜಿ ರುದ್ರೇಶ್ವರ ಸ್ವಾಮಿಗಳನ್ನು ಪಟ್ಟಾಧಿಕಾರಕ್ಕೆ ತಂದರು. ಆಧ್ಯಾತ್ಮ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಸಾಧಿಸಿದ್ದ ಶ್ರೀ ಬಾಲಾಜಿ ರುದ್ರೇಶ್ವರ ಸ್ವಾಮಿಗಳು, ಮಠದಲ್ಲಿ ಧಾರ್ಮಿಕ ಕ್ರಿಯೆಗಳ ಜತೆಗೆ ದಾಸೋಹ ಕ್ರಿಯೆಗೂ ಹೆಚ್ಚು ಒತ್ತುಕೊಟ್ಟು ಮಠವನ್ನು ಬೆಳೆಸಿದರು. ಇವರ ಕಾಲದಲ್ಲಿ ಮಠವು ಮತ್ತೊಮ್ಮೆ ನವೀಕರಣಗೊಂಡು ವಿಸ್ತಾರವಾಯಿತು.

ಮತ್ತೊಮ್ಮೆ ಖಾಲಿ ಉಳಿದ ಮಠ: ಶ್ರೀ ಬಾಲಾಜಿ ರುದ್ರೇಶ್ವರ ಸ್ವಾಮಿಗಳ ನಂತರ ಮತ್ತೊಮ್ಮೆ ಮಠದಲ್ಲಿ ಕಾರಣಾಂತರಗಳಿಂದ ಮಠಾಧೀಶ್ವರರಿಲ್ಲದೆ ಖಾಲಿ ಉಳಿಯಿತು. ಈ ಕಾಲದಲ್ಲಿ ಮಠದ ಭಕ್ತರೇ ಪೂಜೆ ಕಾರ್ಯನೋಡಿಕೊಂಡು ಮಠದಲ್ಲಿ ದೀಪ ಬೆಳಗುವಂತೆ ವ್ಯವಸ್ಥೆ ಮಾಡಿಕೊಂಡಿದ್ದರು. ನಂತರ ಶ್ರೀ ಮರಿ ಬಾಲಾಜಿ ರುದ್ರೇಶ್ವರ ಸ್ವಾಮಿಗಳಿಗೆ ಪಟ್ಟಾಧಿಕಾರವನ್ನು

ಮಾಡಲಾ ಯಿತು. ಇದರಿಂದ ಮಠದಲ್ಲಿ ಧರ್ಮಾಚರಣೆಗಳು ಪುನಃ ಚಾಲನೆಗೊಂಡ ನಂತರ ಭಕ್ತರು ಮಠದ ಎಲ್ಲಾ ಚಟುವಟಿಕೆಗಳಿಗೆ ಸ್ಪಂದಿಸತೊಡಗಿದರು. ಭಕ್ತರ ನೆರವು ಪಡೆದು ಶ್ರೀ ಈಶ್ವರ ರುದ್ರೇಶ್ವರರು ಸಂಪಾದಿಸಿದ್ದ ಐವತ್ತು ಎಕರೆ ಜಮೀನನ್ನು ಅಭಿವೃದ್ಧಿಪಡಿಸಿ ಮಠಕ್ಕೆ ಆದಾಯ ಬರುವಂತೆ ಮಾಡಿ ಮಠವನ್ನು ಅಭಿವೃದ್ಧಿಪಡಿಸಿದ್ದರು. ಇವರ ನಂತರ ಶ್ರೀ ಮಹಾಂತ ರುದ್ರೇಶ್ವರ ಸ್ವಾಮಿಗಳು ೧೯೮೦ ರಲ್ಲಿ ಅಧಿಕಾರವಹಿಸಿಕೊಂಡರು. ಪರಂಪರೆಯ ಹೊಸ ಕೊಂಡಿಯಾದ ಶ್ರೀ ಮಹಾಂತ ಸ್ವಾಮಿಗಳು, ಕಾಯಕಯೋಗದಿಂದ ಮಠವನ್ನು ಬೆಳೆಸಿದ್ದಾರೆ.

ಧಾರ್ಮಿಕ ಕೆಲಸ: ಕರ್ತೃಗುರುಗಳ ಗದ್ದುಗೆಯು ಮೂಲ ಮಠದಲ್ಲಿ ಇದೆ. ಜೀರ್ಣಗೊಂಡ ಕಾರಣಕ್ಕೆ ಸ್ಥಳಾಂತರಗೊಂಡ ಈ ಮಠದಲ್ಲಿ ತೋರು ಗದ್ದುಗೆಯನ್ನು ನಿರ್ಮಿಸಲಾಗಿದೆ. ಅಲ್ಲದೆ ನಿತ್ಯ ಪೂಜೆಗೆ ವ್ಯವಸ್ಥೆ ಮಾಡಲಾಗಿದೆ. ಮಠದ ಆವರಣದಲ್ಲಿ ಚೌಡಮ್ಮ ದೇವತೆ ಸ್ಥಾಪನೆಯಾಗಿದೆ. ಮಠದಲ್ಲಿ ಶ್ರಾವಣ, ಕಾರ್ತೀಕ ಮಾಸಗಳಲ್ಲಿ ಪುರಾಣ ಪ್ರವಚನ ಏರ್ಪಡಿಸಲಾಗುತ್ತಿದೆ. ವರ್ಷಕ್ಕೊಮ್ಮೆ ಅರವತ್ತ್ಮೂರು ಪುರಾತನರ ಪೂಜೆಯನ್ನು ನಡೆಸಲಾಗುತ್ತಿದೆ. ಅಮಾವಾಸ್ಯೆಯಲ್ಲಿ ವಿಶೇಷ ಪೂಜೆ ಹಾಗೂ ಈ ವಿಶೇಷ ದಿನಗಳಲ್ಲಿ ಮಠದಲ್ಲಿ ಪ್ರಸಾದದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ಶೈಕ್ಷಣಿಕ ಕಾರ್ಯಗಳು: ಹೆಬ್ಬಾಳು ಗ್ರಾಮದಲ್ಲಿ ನರ್ಸರಿಯಿಂದ ಪ್ರೌಢಶಾಲೆ,ಸಂಸ್ಕೃತ ಪಾಠಶಾಲೆ ಮತ್ತು ಕಲಿಯುವ ಮಕ್ಕಳಿಗೆ ನೆರವಾಗಲು ಉಚಿತ ಪ್ರಸಾದ ನಿಲಯವನ್ನು ಪ್ರಾರಂಭಿಸಲಾಗಿದೆ. ಮಠದ ವತಿಯಿಂದ ಆಯುರ್ವೇದ ಆಸ್ಪತ್ರೆಯನ್ನು ಪ್ರಾರಂಭ ಮಾಡಿ, ಉಚಿತ ಚಿಕಿತ್ಸೆ ನೀಡುವಲ್ಲಿ ಮಠವು ಮುಂದಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ.ಮಹಾಂತ ರುದ್ರೇಶ್ವರ ಸ್ವಾಮಿಗಳು, ಶ್ರೀ ರುದ್ರೇಶ್ವರ ವಿರಕ್ತಮಠ, ಹೆಬ್ಬಾಳು, ದಾವಣಗೆರೆ ತಾಲ್ಲೂಕು.

❑

ಹರಪನಹಳ್ಳಿ ತಾಲ್ಲೂಕು

ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಅರ್ಧಭಾಗ ನೀರಾವರಿಯನ್ನು ಕಂಡಿದೆ. ಉಳಿದರ್ಧ ಭಾಗ ಮಳೆ ಆಶ್ರಿತ ಬೇಸಾಯವನ್ನು ಅವಲಂಬಿಸಿದೆ.ಇಂತಹ ಭೌಗೋಳಿಕ ಹಿನ್ನಲೆಯುಳ್ಳ ಈ ತಾಲ್ಲೂಕು ಧಾರ್ಮಿಕವಾಗಿ ಶ್ರೀಮಂತ ಗೊಂಡಿದೆ. ಪ್ರಸ್ತುತ ತಾಲ್ಲೂಕಿನಲ್ಲಿ ನಾಲ್ಕು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿವೆ.

ದುಗ್ಗಾವತಿ

ಹರಪನಹಳ್ಳಿ ತಾಲ್ಲೂಕಿನ ದುಗ್ಗಾವತಿಯು ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಮೂವತ್ತೆಂಟು ಕಿ.ಮೀ. ದೂರದಲ್ಲಿದೆ. ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ದುಗ್ಗಾವತಿಯಲ್ಲಿ ಶ್ರೀಶೈಲ ಪೀಠದ ಶಾಖಾಮಠವಾಗಿ ಪುತ್ರವರ್ಗದ ಪರಂಪರೆಯ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ. ಈ ಗ್ರಾಮದ ಮಧ್ಯಭಾಗದಲ್ಲಿ ಸಂಸಾರದ ಮನೆಯಲ್ಲಿ ಈಗಿನ ಮಠಾಧೀಶರಾದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಮಠದ ಧಾರ್ಮಿಕ ಚಟುವಟಿಕೆ ಕಾರ್ಯಗಳು ನಡೆಸುತ್ತಿದ್ದಾರೆ.

ಪರಂಪರೆ:

೧. ಷ.ಬ್ರ.ಶ್ರೀ ಕೆಂಚವೀರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ರಾಚೋಟಪ್ಪ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಹುಚ್ಚವೀರಪ್ಪ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ರುದ್ರಪ್ಪ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಮಡಿವಾಳ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಮಠದ ಪರಂಪರೆಯಲ್ಲಿ ಈಗ ಹೆಸರಿಸಿರುವ ಗುರುಗಳ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಶ್ರೀ ಕೆಂಚವೀರ ಸ್ವಾಮಿಗಳ ಗದ್ದುಗೆಯು ಮಠದಲ್ಲಿ ನಿರ್ಮಾಣವಾಗಿರುವುದರಿಂದ ಇವರೇ ಕರ್ತೃ ಗುರುಗಳೆಂದು ಊಹೆ ಮಾಡಬಹುದಷ್ಟೆ. ಉಳಿದಂತಹ ಗುರುಗಳಾದ ಶ್ರೀ ರಾಚೋಟಪ್ಪ ಸ್ವಾಮಿಗಳು, ಶ್ರೀ ಹುಚ್ಚವೀರಪ್ಪ ಸ್ವಾಮಿಗಳು, ಶ್ರೀ ರುದ್ರಪ್ಪ ಸ್ವಾಮಿಗಳ ಗದ್ದುಗೆಗಳು ಹೊಲದಲ್ಲಿ ನಿರ್ಮಿತವಾಗಿವೆ. ಶ್ರೀ ಮಡಿವಾಳ ಸ್ವಾಮಿಗಳ ಗದ್ದುಗೆ ಎಲ್ಲಿ ನಿರ್ಮಾಣವಾಗಿದೆ ಎಂಬುದು ತಿಳಿದು ಬಂದಿಲ್ಲ. ಶ್ರೀ ಮಡಿವಾಳ ಸ್ವಾಮಿಗಳ ನಂತರ ಉತ್ತರಾಧಿಕಾರಿಗಳಿಲ್ಲದೆ ಮಠವು ಖಾಲಿ ಉಳಿದಿತ್ತು. ಈಗ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಅಧಿಕಾರಕ್ಕೆ ಬಂದು ಆಡಳಿತವನ್ನು ನಡೆಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು, ಶ್ರೀಹಿರೇಮಠ, ದುಗ್ಗಾವತಿ, ಹರಪನಹಳ್ಳಿ ತಾಲ್ಲೂಕು,ದಾವಣಗೆರೆ ಜಿಲ್ಲೆ.

ನೀಲಗುಂದ

ಹರಪನಹಳ್ಳಿ ತಾಲ್ಲೂಕಿನ ನೀಲಗುಂದವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹದಿನೈದು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಗುಡ್ಡದ ವಿರಕ್ತಮಠವು ಅಸ್ತಿತ್ವದಲ್ಲಿದೆ.

ಗುಡ್ಡದ ವಿರಕ್ತಮಠ: ನೀಲಗುಂದ ಗ್ರಾಮದ ಪಶ್ಚಿಮಕ್ಕೆ ಗುಡ್ಡದ ತಪ್ಪಲಿನ ಕೆರೆಯ ದಡದಲ್ಲಿ ಶ್ರೀ ಗುಡ್ಡದ ವಿರಕ್ತ ಮಠವು ಸ್ಥಾಪನೆಯಾಗಿದೆ. ಕಲ್ಲಿನಗುಡ್ಡದ ಪಕ್ಕದಲ್ಲಿ ಸ್ಥಾಪನೆಯಾದ ಕಾರಣ ಈ ಮಠಕ್ಕೆ 'ಶ್ರೀ ಗುಡ್ಡದ ವಿರಕ್ತಮಠ' ಎಂದು ಹೆಸರು ಬಂದಿದೆ.

ಲೋಕಸಂಚಾರಿ ಶ್ರೀ ಸಿದ್ಧರಾಮ ಸ್ವಾಮಿಗಳು ಕೊಂಕಣ ಹೊಸೂರು, ಗುಂಡಗತ್ತಿ, ಹರಿಹರ ತಾಲ್ಲೂಕಿನ ಗಂಗನಹರಸಿ ಮುಂತಾದ ಕಡೆ ಅನುಷ್ಠಾನಗೊಂಡು ಆ ಸ್ಥಳಗಳನ್ನು ಜಾಗೃತ ಸ್ಥಳಗಳನ್ನಾಗಿ ಮಾಡಿ ನೀಲಗುಂದಕ್ಕೆ ಬಂದು ಕೆಲವು ದಿನ

ನೆಲೆಸಿ ಇಲ್ಲೇ ಲಿಂಗೈಕ್ಯರಾದರು. ಶ್ರೀ ಸಿದ್ಧರಾಮ ಸ್ವಾಮಿಗಳು ಇಲ್ಲಿ ನೆಲೆಸಿದ್ದ ಕಾಲದಲ್ಲಿ ಕೆರೆ, ಬಾವಿ ಕಟ್ಟಿಸಿರುತ್ತಾರೆ. ಈ ಕಾರಣಕ್ಕಾಗಿ ಜನಾನುರಾಗಿಯಾಗಿ ತಪೋನಿಷ್ಠರಾಗಿದ್ದ ಶ್ರೀ ಸಿದ್ಧರಾಮ ಸ್ವಾಮಿಗಳನ್ನು ಇಲ್ಲಿನ ಜನ ಅಪಾರ ಭಕ್ತಿಯಿಂದ ನೋಡಿಕೊಳ್ಳುತ್ತಿದ್ದ ಕಾರಣಕ್ಕೆ ಗುರುಗಳು ಲಿಂಗೈಕ್ಯರಾದ ಮೇಲೆ ಅವರ ಸಮಾಧಿಗೆ ಗದ್ದುಗೆಯನ್ನು ನಿರ್ಮಿಸಿ ಹರಪನಹಳ್ಳಿಯ ನೀಲಮ್ಮ ಎಂಬುವರು ತ್ರಿಕಾಲ ಪೂಜೆ ನಡೆಯುವಂತೆ ನೋಡಿಕೊಂಡಿದ್ದರು.

ಪರಂಪರೆ: ಈ ರೀತಿ ಆಧ್ಯಾತ್ಮಗೊಂಡ ಮಠಕ್ಕೆ ಶ್ರೀ ಚನ್ನಬಸವ ಸ್ವಾಮಿಗಳ ನಂತರ ಗಡ್ಡದ ಅಜ್ಜ ಎಂದೇ ಹೆಸರಾಗಿದ್ದ ಶ್ರೀ ನೀಲಕಂಠ ಸ್ವಾಮಿಗಳು ಗುಡ್ಡದ ವಿರಕ್ತಮಠದ ಧಾರ್ಮಿಕ ಕಾರ್ಯವನ್ನು ನಡೆಸಿ ಮಠವನ್ನು ಬೆಳೆಸಿದ್ದಾರೆ. ಇವರ ಕಾಲದಲ್ಲಿ ದನ ಕರುಗಳ ಹಾಗೂ ಜಾನುವಾರುಗಳ ಉಪಯೋಗಕ್ಕಾಗಿ ಕೆರೆ ಕಟ್ಟಿಸಿದರೆಂದು ಹೇಳಲಾಗುತ್ತಿದೆ. ಇವರು ಮಠದ ಮುಂದೆ ಅರಳಿ, ಬೇವಿನ ಮರಗಳನ್ನು ಬೆಳೆಸಿ ಲೋಕ ಸಂಚಾರಕ್ಕೆ ಹೊರಟು ನೀಲಗುಂದ ಶಾಖಾಮಠದ ಕಟ್ಟಿಗಿಹಳ್ಳಿ ಮಠದಲ್ಲಿದ್ದು ಲಿಂಗೈಕ್ಯರಾದರು. ನಂತರ ಸುಮಾರು ವರ್ಷಗಳ ಕಾಲ ಮಠದಲ್ಲಿ ಮಠಾಧೀಶ್ವರಿಲ್ಲದೆ ಮಠ ಖಾಲಿ ಉಳಿದಿತ್ತು.

ಬೇಸತ್ತ ಉತ್ತರಾಧಿಕಾರಿ: ನೀಲಗುಂದದ ಗ್ರಾಮಸ್ತರು ಖಾಲಿ ಉಳಿದಿದ್ದ ಮಠಕ್ಕೆ ಗುರುಗಳನ್ನು ನೇಮಿಸಬೇಕೆಂದು ಶಿವಯೋಗ ಮಂದಿರಕ್ಕೆ ಹೋಗಿ ಹೊಳೇಇಟ್ಟಿಗೆ ನಾಗಭೂಷಣ ಸ್ವಾಮಿಗಳನ್ನು ಕರೆತಂದು ಮಠದಲ್ಲಿ ನೆಲೆಗೊಳಿಸಿದರು. ಶ್ರೀ ನಾಗಾಭೂಷಣ ಸ್ವಾಮಿಗಳು ದಾಸೋಹ, ಸಂಸ್ಕೃತ ಪಾಠಶಾಲೆ ನಡೆಸುತ್ತಾ ಮಠದ ಧಾರ್ಮಿಕ ಚಟುವಟಿಕೆಗಳು ಚುರುಕುಗೊಳ್ಳು ವಂತೆ ಮಾಡುವ ವೇಳೆಗೆ ಗ್ರಾಮದಲ್ಲಿ ಮಠದ ವಿಚಾರವಾಗಿ ವ್ಯಾಜ್ಯ ಪ್ರಾರಂಭವಾಗುತ್ತದೆ. ಇದರಿಂದ ಬೇಸರಗೊಂಡ ಶ್ರೀ ನಾಗಾ ಭೂಷಣ ಸ್ವಾಮಿಗಳು ಮಠವನ್ನು ತ್ಯಜಿಸಿ ಹೊಳೇಇಟ್ಟಿಗೆಗೆ ಬಂದು ಇಲ್ಲಿನ ಮಠದ ಅಧಿಕಾರ ಪಡೆಯುತ್ತಾರೆ. ಇದೇ ವೇಳೆಗೆ ಮಠದ ವ್ಯಾಜ್ಯ ನ್ಯಾಯಾಲಯಕ್ಕೆ ಹೋಗಿ ಮಠದ ಭಕ್ತರ ಪರವಾಗಿ ತೀರ್ಪು ಹೊರಬರುತ್ತದೆ.

ಖಾಲಿ ಉಳಿದ ಮಠ: ಈ ವೇಳೆಗೆ ಶ್ರೀ ನಾಗಭೂಷಣ ಸ್ವಾಮಿಗಳು ಬೇರೆ ಮಠಕ್ಕೆ ಪಟ್ಟಾಧಿಕಾರ ಪಡೆದುಕೊಂಡಿದ್ದರಿಂದ ಉತ್ತರಾಧಿಕಾರಗಳು ಯಾರೂ ಇಲ್ಲದೆ ಮಠ ಖಾಲಿ ಉಳಿಯುತ್ತದೆ. ಈ ಸಂದರ್ಭದಲ್ಲಿ ಶ್ರೀ ಜವಳ್ಳಪ್ಪದೇವರು ಎಂಬುವರು ಮಠದಲ್ಲಿಇದ್ದು ಮಠದ ಜಮೀನನ್ನು ಬೇಸಾಯಕ್ಕೆ ಯೋಗ್ಯಗೊಳಿಸಿ ಆದಾಯ ಬರುವಂತೆ ಮಾಡಿ ಮಠದ ಧಾರ್ಮಿಕ ಕಾರ್ಯ ಗಳನ್ನು ನಡೆಸಿಕೊಂಡು ಬಂದರು. ಈ ವೇಳೆಗಾಗಲೇ ಗ್ರಾಮದ ಹಿರಿಯರು ಮಠದ ಸಂಪರ್ಕವನ್ನು ಕಳಚಿಕೊಂಡು ಮಠದಿಂದ ದೂರ ಸರಿಯುತ್ತಿದ್ದ ವೇಳೆಗೆ ನಿಡುಗುಂದಿ ಮಲ್ಲಿಕಾರ್ಜುನ ಸ್ವಾಮಿಗಳು ನೀಲಗುಂದಕ್ಕೆ ಬಂದು ಗುಡ್ಡದ ವಿರಕ್ತ ಮಠದ ಅಧಿಕಾರವನ್ನು ವಹಿಸಿಕೊಂಡರು. ಕಾರಣಾಂತರದಿಂದ ಈ ಗುರುಗಳು ಮಠವನ್ನು ತ್ಯಜಿಸಿದ ಮೇಲೆ ಪುನಃ ಮಠ ಖಾಲಿ ಉಳಿಯಿತು. ನಂತರ ಚನ್ನಪ್ಪಯ್ಯನವರು ಮಠದ ಧಾರ್ಮಿಕ ಕಾರ್ಯವನ್ನು ನಡೆಸಿಕೊಂಡು ಮಠವನ್ನು ಮುನ್ನಡೆಸಿದರು. ಈ ರೀತಿ ಹದಿನೈದು ವರ್ಷಗಳ ಕಾಲ ಮಠ ಖಾಲಿ ಇದ್ದು ಪೂರ್ಣ ಜೀರ್ಣಗೊಂಡಿತ್ತು.

ಉತ್ತರಾಧಿಕಾರಿ ಆಯ್ಕೆ: ಗ್ರಾಮಸ್ಥರು ಪುನಃ ಮಠದ ಉತ್ತರಾಧಿಕಾರಿಯ ಆಯ್ಕೆಗೆ ಮುಂದಾದರು. ಈ ಸಂದರ್ಭದಲ್ಲಿ ಹುಬ್ಬಳ್ಳಿಯ ಮೂರು ಸಾವಿರ ಮಠದಲ್ಲಿ ಅಧ್ಯಯನ ಮಾಡುತ್ತಿದ್ದ ಚರಲಿಂಗ ದೇವರನ್ನು ಆಯ್ಕೆಮಾಡಿ ಅಕ್ಕಿ ಆಲೂರು ವಿರಕ್ತ ಮಠದ ಶ್ರೀ ವಿರೂಪಾಕ್ಷ ಸ್ವಾಮಿಗಳ ಸಮ್ಮುಖದಲ್ಲಿ ಮರಿದೇವರನ್ನು ೧೯೮೬ ರ ಏಪ್ರಿಲ್ ನಾಲ್ಕರಂದು ಪುರಪ್ರವೇಶ ಮಾಡಿಸಿ ಕೊಂಡರು. ನಂತರ ೧೯೮೬ ರ ಜೂನ್ ಹನ್ನೊಂದರಂದು ಲಿಂಗನಾಯಕನಹಳ್ಳಿಯ ಮಠಾಧೀಶ್ವರರ ಸಮ್ಮುಖದಲ್ಲಿ ಚರಲಿಂಗ ದೇವರಿಗೆ ಶ್ರೀ ಚನ್ನಬಸವ ಶಿವಯೋಗಿಗಳೆಂದು ಅಭಿದಾನವಿತ್ತು ಪಟ್ಟಾಧಿಕಾರವನ್ನು ನೆರವೇರಿಸಿದರು.

ಶ್ರೀ ಚನ್ನಬಸವ ಶಿವಯೋಗಿಗಳು ಪಟ್ಟಾಧಿಕಾರವಾದ ಮೇಲೆ ಜೀರ್ಣಗೊಂಡ ಮಠದಲ್ಲಿ ಒಂಟಿ ಜೀವನವನ್ನು ಪ್ರಾರಂಭಿಸಿ ಅನೇಕ ತೊಂದರೆ ನೋವುಗಳನ್ನು ಅನುಭವಿಸಿ, ಹಂತಹಂತವಾಗಿ ಜೀರ್ಣಗೊಂಡ ಮಠವನ್ನು ಅಭಿವೃದ್ಧಿಪಡಿಸ ತೊಡಗಿದ್ದಾರೆ. ಮಠದಲ್ಲಿ ವಾಸಿಸಲು ಯೋಗ್ಯವಾಗಿ ಮಾಡಿಕೊಂಡ ಮೇಲೆ ಧಾರ್ಮಿಕ ಕಾರ್ಯಗಳನ್ನು ಪ್ರಾರಂಭಿಸಿ ಪ್ರವಚನ, ಅನುಷ್ಠಾನ ಮಾಡುತ್ತಾ ಭಕ್ತರು ಮಠದ ಕಡೆ ನೋಡುವಂತೆ ಮಾಡಿದರು.

ಚಟುವಟಿಕೆ: ದೀರ್ಘಕಾಲ ಖಾಲಿ ಇದ್ದು ಮಠದ ಚಟುವಟಿಕೆಗಳು ಗುರುಗಳು ಅಧಿಕಾರಕ್ಕೆ ಬಂದ ಮೇಲೆ ಚುರುಕು

ಗೊಂಡವು. ಕ್ರಿಯಾಶೀಲ ಗುಣಗಳನ್ನು ಮೈಗೂಡಿಸಿಕೊಂಡ ಶ್ರೀ ಚನ್ನಬಸವ ಸ್ವಾಮಿಗಳು ಪ್ರಾಥಮಿಕ ಶಾಲೆ, ಶಿಶುವಿಹಾರ, ಕಲಿಯುವ ಮಕ್ಕಳಿಗೆ ಅನುಕೂಲವಾಗಲೆಂದು ಉಚಿತ ವಿದ್ಯಾರ್ಥಿನಿಲಯ ಹಾಗೂ ಸಾರ್ವಜನಿಕ ಗ್ರಂಥಾಲಯವನ್ನು ಪ್ರಾರಂಭಿಸಿದರು. ಗ್ರಾಮದ ಭಕ್ತರ ನೆರವು ಪಡೆದು ಸಮುದಾಯ ಭವನ ನಿರ್ಮಿಸಿದ್ದಾರೆ.

ಧಾರ್ಮಿಕ ಚಟುವಟಿಕೆ: ಶ್ರೀ ಚನ್ನಬಸವ ಶಿವಯೋಗಿಗಳು ಅಧಿಕಾರಕ್ಕೆ ಬಂದ ಮೇಲೆ ಕೀರ್ತನೆ, ಪ್ರವಚನಗಳಿಂದ ಹೆಸರು ಸಂಪಾದಿಸಿದ ಗುರುಗಳು ಜನರನ್ನು ಭಕ್ತಿ ಮಾರ್ಗಕ್ಕೆ ಕೊಂಡೊಯ್ಯುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ಶ್ರಾವಣಮಾಸದಲ್ಲಿ ಪುರಾಣ ಪ್ರವಚನಗಳನ್ನು ಹಮ್ಮಿಕೊಂಡು ಜನರನ್ನು ಧಾರ್ಮಿಕ ತಳಹದಿಯ ಮೇಲೆ ನಡೆಯಲು ಪ್ರೇರಣೆ ನೀಡುತ್ತಿದ್ದಾರೆ. ಕತ್ತಲೆ ತುಂಬಿದ ಮಠಕ್ಕೆ ಬೆಳಕು ನೀಡಿ ಧಾರ್ಮಿಕ ಪ್ರಭೆಯನ್ನು ಸುತ್ತಲೂ ಹರಡುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಚನ್ನಬಸವಶಿವಯೋಗಿಗಳು, ಶ್ರೀ ಗುಡ್ಡದವಿರಕ್ತಮಠ, ನೀಲಗುಂದ, ಹರಪನಹಳ್ಳಿ ತಾ. ದಾವಣಗೆರೆಜಿಲ್ಲೆ.

ರಾಮಘಟ್ಟ

ಹರಪನಹಳ್ಳಿ ತಾಲ್ಲೂಕಿನ ರಾಮಘಟ್ಟವು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಇಪ್ಪತ್ತೈದು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ಉಚ್ಚಂಗಿದುರ್ಗ ಕಟ್ಟಿಮನಿ ಮಠವು ಅಸ್ತಿತ್ವದಲ್ಲಿದೆ.

ಉಚ್ಚಂಗಿದುರ್ಗ ಕಟ್ಟಿಮನಿಮಠ: ರಾಮಘಟ್ಟ ಗ್ರಾಮದಲ್ಲಿ ರಂಭಾಪುರಿ ಪೀಠದ ಶಾಖಾಮಠ ಶ್ರೀ ಉಚ್ಚಂಗಿದುರ್ಗ ಕಟ್ಟಿಮನಿ ಮಠವು ಸ್ಥಾಪನೆಯಾಗಿದೆ. ೬೭೫ ವರ್ಷಗಳ ಹಿಂದೆ ಉಚ್ಚಂಗಿ ದುರ್ಗದ ರಂಗಪ್ಪನಾಯಕರ ಕಾಲದಲ್ಲಿ ಸ್ಥಾಪನೆಯಾದ ಈ ಮಠಕ್ಕೆ ರಂಗಪ್ಪ ನಾಯಕನು ರಾಮಘಟ್ಟದ ಸುತ್ತಲಿನ ಮೂವತ್ತೆರಡು ಗ್ರಾಮಗಳನ್ನು ಬಿಟ್ಟುಕೊಟ್ಟು ಇಲ್ಲಿನ ಮಂಗಳ ಕಾರ್ಯದಲ್ಲಿ ಕಟ್ಟಿಮನಿ ಮಠವು ವೀಳ್ಯಪಡೆಯುವ ಅಧಿಕಾರ ನೀಡಿ ಗೌರವಿಸಿರುತ್ತಾನೆ. ಸಂಸ್ಥಾನದ ಧಾರ್ಮಿಕ ಚಟುವಟಿಕೆ ಹಾಗೂ ಪಾಳೆಗಾರರಿಗೆ ಮಾರ್ಗದರ್ಶನ ನೀಡುತ್ತಿದ್ದ ಈ ಮಠವು ರಾಜಗುರು ಮಠವಾಗಿ ಬೆಳೆಯಿತು.

ಮಠ ಸ್ಥಾಪನೆ: ಕಾಶ್ಮೀರದ ಅನಂತನಾಗ ಜಿಲ್ಲೆಯ ರಾಮಘಾಟ್‌ನಲ್ಲಿದ್ದ ಪಟ್ಟದಮಠದ ಗುರುಗಳಾದ ಶ್ರೀ ಗುರು ರೇವಣ ಸಿದ್ಧೇಶ್ವರ ಸ್ವಾಮಿಗಳು ಲೋಕಸಂಚಾರ ಮಾಡುತ್ತಾ, ಇಡೀ ಭರತ ಖಂಡವನ್ನೆಲ್ಲ ಸಂಚರಿಸಿ ಈ ನಿರ್ಜನ ಪ್ರದೇಶದಲ್ಲಿ ಅನುಷ್ಠಾನಕ್ಕೆ ಕುಳಿತ ಈ ಸಂದರ್ಭದಲ್ಲಿ ರಾಜ ರಂಗಪ್ಪನಾಯಕನ ಪರಿವಾರವು ಉಚ್ಚಂಗಿ ದುರ್ಗಕ್ಕೆ ಪೂಜೆಗೆ ಬಂದಿದ್ದರು. ಇದೇ ವೇಳೆಗೆ ಉಚ್ಚಂಗಿ ದೇವಿಯ ದರ್ಶನಕ್ಕೆ ಶ್ರೀ ಗುರು ರೇವಣಸಿದ್ಧೇಶ್ವರ ಸ್ವಾಮಿಗಳು ಹೋಗಿದ್ದರು. ಗುರುಗಳ ಆಧ್ಯಾತ್ಮ ಚಿಂತನೆಗೆ ಬೆರಗಾದ ನಾಯಕರು ಉಚ್ಚಂಗಿ ದುರ್ಗದಲ್ಲಿ ನೆಲೆಸಿ ಧಾರ್ಮಿಕ ಕಾರ್ಯ ನೆರವೇರಿಸಿ ಕೊಡುವಂತೆ ಬಿನ್ನವಿಸಿಕೊಂಡರು. ಪರಂಪರಾಗತವಾಗಿ ಉಚ್ಚಂಗಿ ದೇವಿಯ ಪೂಜೆ ಮಾಡಿಕೊಂಡು ಬಂದಿದ್ದ ಕಲ್ಲೂರು ಮಠದವರಿಗೆ ತೊಂದರೆಯಾಗಬಾರದೆಂಬ ಕಾರಣಕ್ಕೆ, ಅಲ್ಲಿಯ ಸೀಮಿತ ಬದುಕಿನಲ್ಲಿ ಬದುಕಲು ಇಷ್ಟಪಡದೆ ನಾಯಕನ ಬೇಡಿಕೆಯನ್ನು ನಯವಾಗಿ ತಿರಸ್ಕರಿಸಿ'ಈ ಸಂನ್ಯಾಸಿಗೆ ಹಂಗಿನ ಬದುಕು ಏಕೆ, ನಮಗೆ ಕಾಡಿದೆ. ಆಧ್ಯಾತ್ಮಿಕ ತೃಷೆ ಇದ್ದವರು ನಮ್ಮಲ್ಲಿಗೆ ಬರುತ್ತಾರೆ.' ಎಂದು ಹೇಳಿ ನಾಯಕನ ಕುಟುಂಬ ವರ್ಗಕ್ಕೆ ಆಶೀರ್ವದಿಸಿ ಹೊರಟರು. ಇಂತಹ ಮಹಾತಪಸ್ವಿಗಳು ನಮ್ಮಗಡಿ ಬಿಟ್ಟು ಹೋಗಬಾರದು, ಮಹಾತ್ಮರು ಇಲ್ಲಿ ನೆಲೆಸಿದರೆ ನಮಗೆ ಶ್ರೇಯಸ್ಸು ಎಂದು ಅರಿತ ನಾಯಕನು ಶ್ರೀ ರೇವಣಸಿದ್ಧೇಶ್ವರರು ತಪೋನುಷ್ಠಾನಕ್ಕೆ ಕುಳಿತಿದ್ದ ಸುತ್ತಲ ಜಮೀನು ಈ ಗುರುಗಳ ಧರ್ಮ ಕ್ಷೇತ್ರವಾಗಬೇಕು ಎಂದು ನಾಲ್ಕು ದಿಕ್ಕಿಗೂ ಲಿಂಗಮುದ್ರೆ ಕಲ್ಲುಗಳನ್ನು ಸ್ಥಾಪಿಸುತ್ತಾನೆ. ಮಠವನ್ನು ಸ್ಥಾಪಿಸಿ ಮಠದ ಧಾರ್ಮಿಕ ಕಾರ್ಯಗಳಿಗೆ ನೆರವು ನೀಡಿದ್ದರು.

ಜಾಗೃತ ಸ್ಥಳ: ಕಾಲಕ್ರಮೇಣ ಮಠದ ಸುತ್ತ ಊರು ಬೆಳೆದು ಮಠವು ಊರಿನ ಮಧ್ಯಭಾಗಕ್ಕೆ ಸೇರಿದೆ. ಈ ಗ್ರಾಮ ಜಾಗೃತ ಸ್ಥಳವಾದ ಕಾರಣ ಯಾವುದೇ ವಾಹನದಲ್ಲಿ ಬಂದರೂ ಹೆಬ್ಬಾಗಿಲ ಬಳಿ ನಿಲ್ಲಿಸಿ ಊರೊಳಗೆ ನಡೆದೇ ಹೋಗಬೇಕು. ಈ ಸಂಪ್ರದಾಯ ಅಂದಿನಿಂದ ಈತನಕ ನಡೆಯುತ್ತಾ ಬಂದಿದೆ. ಅಲ್ಲದೆ ಬೇಸಾಯಕ್ಕೆ ಹೋಗುವಾಗ ನೇಗಿಲುಗಳನ್ನು ಎತ್ತುಗಳಿಗೆ ನೊಗ ಕಟ್ಟಿಕೊಂಡು ಹೋದರೆ ಬರುವಾಗ ಹೆಬ್ಬಾಗಿಲಲ್ಲಿ ನಿಲ್ಲಿಸಿ ಎತ್ತುಗಳ ಹೆಗಲು ಮೇಲಿನಿಂದ ನೊಗ ತೆಗೆದು ನೇಗಿಲುಗಳನ್ನು ಮನುಷ್ಯರೇ ಹೊತ್ತುಕೊಂಡು ಹೋಗುವ ಸಂಪ್ರದಾಯ ಬೆಳೆದು ಬಂದಿದೆ.

ಪರಂಪರೆ: ೧. ಷ.ಬ್ರ.ಶ್ರೀ ಗುರುರೇವಣಸಿದ್ಧೇಶ್ವರ ಶಿವಾಚಾರ್ಯಸ್ವಾಮಿಗಳು (ಕರ್ತೃ ಗುರುಗಳು)
೨. ಷ.ಬ್ರ.ಶ್ರೀ ಮುರುಘೇಂದ್ರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಸಿದ್ಧವೀರ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಶಿವರುದ್ರ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಸಿದೇಶ್ವರ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯು ಬೆಳೆದುಬಂದಿದೆ. ಮಠದ ಪರಂಪರೆಯಲ್ಲಿ ಈಗಿನ ಗುರುಗಳು ಹದಿಮೂರನೆಯವರು ಎಂದು ಹೇಳಲಾಗಿದೆ ಅದರೂ ಈ ಬಗ್ಗೆ ನಿಖರವಾದ ಮಾಹಿತಿ ಇಲ್ಲ. ಮೊದಲ ಗುರುಗಳ ಕರ್ತೃತ್ವಶಕ್ತಿಯಿಂದ ಬೆಳೆದ ಮಠ ಅಂದಿನಿಂದ ಈತನಕ ಸಮಾಜದಲ್ಲಿ ಧಾರ್ಮಿಕ ಜಾಗೃತಿಯನ್ನು ಮೂಡಿಸಿ ಜನರನ್ನು ಸನ್ಮಾರ್ಗದಲ್ಲಿ ಮುನ್ನಡೆಸುತ್ತಿದೆ.

ಈಗಿನ ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ೧೯೭೪ರ ಮೇ ಒಂದರಂದು ಶ್ರೀ ತೆಗ್ಗಿನ ಮಠದ ಶ್ರೀಚಂದ್ರಮೌಳೇಶ್ವರ ಶಿವಾಚಾರ್ಯ ಸ್ವಾಮಿಗಳಿಂದ ಅನುಗ್ರಹ ಪಡೆದು ಅಧಿಕಾರಕ್ಕೆ ಬಂದಿದ್ದಾರೆ. ಇಪ್ಪತ್ತೈದು ವರ್ಷ ಮಠದಲ್ಲಿ ಮಠಾಧಿಪತಿಗಳು ಯಾರೂ ಇಲ್ಲದೆ ಮಠದ ಕಟ್ಟಡವು ಜೀರ್ಣಾವಸ್ಥೆಗೆ ಬಂದಿತ್ತು. ಈ ಮಠವನ್ನು ಸುಸ್ಥಿತಿಗೆ ತಂದ ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ಮಠದ ಜಮೀನನ್ನು ಅಭಿವೃದ್ಧಿಪಡಿಸಿ ಆದಾಯ ಬರುವಂತೆ ಮಾಡಿದ್ದಾರೆ. ಬಂದ ಆದಾಯವನ್ನು ಮಠದ ಅಭಿವೃದ್ಧಿ ಕಾರ್ಯಗಳಿಗೆ ಬಳಸಿಕೊಂಡು ಶಿವಪೂಜಾ ಮಂದಿರ ಮತ್ತು ಪ್ರಾರ್ಥನ ಮಂದಿರಗಳನ್ನು ನಿರ್ಮಿಸಿದ್ದಾರೆ. ಪ್ರತಿ ವರ್ಷ ಇಪ್ಪತ್ತೈದರಿಂದ ನಲವತ್ತು ಜನ ವೀರಶೈವ ಮಕ್ಕಳಿಗೆ ಶಿವದೀಕ್ಷೆ, ಉಚಿತ ವಿವಾಹ ಕಾರ್ಯಗಳು ಇವೇ ಮುಂತಾದ ಧಾರ್ಮಿಕ, ಸಾಮಾಜಿಕ ಕಾರ್ಯಗಳನ್ನು ಮಾಡುತ್ತಾ ಮಠವನ್ನು ಮುನ್ನಡೆಸಿದ್ದಾರೆ.

ಪರಂಪರೆಯ ಕಾಯಕ: ವಿಭೂತಿ ತಯಾರಿಕೆ ಈ ಮಠದಲ್ಲಿ ಪರಂಪರಾಗತವಾಗಿ ನಡೆದುಕೊಂಡು ಬಂದಿದೆ. ವಿಭೂತಿಗೆ ಬೇಕಾದ ಗೋವುಗಳ ಸಗಣಿಗಾಗಿ ಮಠದಲ್ಲಿ ಗೋಶಾಲೆಯನ್ನು ತೆರೆಯಲಾಗಿದೆ. ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ಶ್ರೀಗುರು ರೇವಣಸಿದ್ಧೇಶ್ವರ ಗೋಶಾಲೆಯನ್ನು ಮಠದ ಕಟ್ಟಡಕ್ಕಿಂತಲೂ ಚೆನ್ನಾಗಿ ನಿರ್ಮಿಸಿದ್ದಾರೆ. ನೂರಾರು ಹಸುಗಳನ್ನು ಸಾಕಿರುವ ಗುರುಗಳು ಸರ್ಕಾರ ಜಾಗ ಕೊಟ್ಟರೆ ಗೋಶಾಲೆ ಅಭಿವೃದ್ಧಿಯೋಜನೆ ಹಾಗೂ ಜಾನುವಾರುಗಳನ್ನು ಸಂರಕ್ಷಿಸುವ ಯೋಜನೆಯನ್ನು ಇಟ್ಟುಕೊಂಡಿದ್ದಾರೆ. ಎಲ್ಲಾ ಕಡೆ ಕಂತೆ ಭಿಕ್ಷ, ದವಸಧಾನ್ಯ ಭಿಕ್ಷೆ ಮಾಡಿದರೆ ಇಲ್ಲಿ ಗೋವುಗಳಿಗಾಗಿ ಮೇವಿನ ಭಿಕ್ಷೆ ಮಾಡುತ್ತಾರೆ. ಭಕ್ತರಿಗಾಗಿ ಪರಿಶುದ್ಧವಾದ ವಿಭೂತಿ ತಯಾರಿಕೆಯಲ್ಲಿ ತೊಡಗಿದ್ದಾರೆ.

ಧಾರ್ಮಿಕ ಕೆಲಸ: ಗದ್ದುಗೆಗಳಿಗೆ ನಿತ್ಯ ಪೂಜೆ, ಶ್ರಾವಣಮಾಸದಲ್ಲಿ ರುದ್ರಾಭಿಷೇಕ, ಶಿವಭಜನೆ, ಮಹಾಗಣಾರಾಧನೆ ಹಾಗೂ ಕಾರ್ತೀಕ ಮಾಸದಲ್ಲಿ ದೀಪೋತ್ಸವವನ್ನು ಮಾಡಲಾಗುತ್ತಿದೆ. ಭಕ್ತರ ಧಾರ್ಮಿಕ ಕ್ರಿಯಾದಿಗಳಲ್ಲಿ ಪಾಲ್ಗೊಂಡು ಧಾರ್ಮಿಕ ಸಂಸ್ಕಾರ ನೀಡುತ್ತಾ ಬಂದಿದ್ದಾರೆ. ಗುರುಗಳು ಕಾಯಕಯೋಗಿಯಾಗಿ, ದಾಸೋಹ ಮೂರ್ತಿಯಾಗಿ ಮಠವನ್ನು ಬೆಳೆಸುತ್ತಿದ್ದಾರೆ.

ಪುರಾತನ ಸಾಮಗ್ರಿಗಳು: ಮಠದ ಕಟ್ಟಡವನ್ನು ದುರಸ್ತಿಗೊಳಿಸಿ ನವೀಕರಿಸಿದ ಸಂದರ್ಭದಲ್ಲಿ ಹಿತ್ತಾಳೆಯ ಕಾಳಿಕಾದೇವಿ ಹಾಗೂ ಪಾರ್ವತಿಯ ಶಿಲಾಮೂರ್ತಿ ಸಿಕ್ಕಿದ್ದು ಪಾರ್ವತಿ ದೇವಿಯು ತನ್ನ ಬಗಲಲ್ಲಿ ಗಣಪತಿಯನ್ನು ಎತ್ತಿಕೊಂಡಿರುವ ಅಪರೂಪದ ಮೂರ್ತಿ ಇದಾಗಿದೆ. ವಿಭೂತಿಯನ್ನು ಶೇಖರಿಸಿಟ್ಟಿದ್ದ ಗಡಿಗೆಗಳು ಸಿಕ್ಕಿವೆ. ಮಠದ ಪರಂಪರೆಯಲ್ಲಿ ಬಂದಂತಹ ಬೆತ್ತದ ಕೋಲು,ಕಠಾರಿ,ವೀರಭದ್ರದೇವರು ಮತ್ತು ತ್ರಿಶೂಲ ಇವುಗಳನ್ನು ಈಗಲೂ ಮಠದ ಪೂಜಾ ಸ್ಥಳದಲ್ಲಿಟ್ಟು ಪೂಜೆ ಮಾಡಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು, ಶ್ರೀ ಉಚ್ಚಂಗಿದುರ್ಗ ಕಟ್ಟಿಮನಿಮಠ, ರಾಮಘಟ್ಟ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.

ಹರಪನಹಳ್ಳಿ

ಬಳ್ಳಾರಿ ಜಿಲ್ಲೆಯಿಂದ ಬೇರ್ಪಟ್ಟು ದಾವಣಗೆರೆ ಜಿಲ್ಲೆಗೆ ಸೇರ್ಪಡೆಗೊಂಡ ಹರಪನಹಳ್ಳಿಯು ತಾಲ್ಲೂಕಿನ ಕೇಂದ್ರ ಸ್ಥಳ. ಕೆಳದಿ ನಾಯಕರು ಮತ್ತು ಅನೇಕ ಪಾಳೆಗಾರರ ಪಾಳೆಯ ಪಟ್ಟಾಗಿದ್ದ ಈ ಪಟ್ಟಣವು ಐತಿಹಾಸಿಕ ಹಿನ್ನೆಲೆಯನ್ನು ಪಡೆದಿದೆ. ಇಂತಹ ಐತಿಹಾಸಿಕ ಪಟ್ಟಣದಲ್ಲಿ ಹಿಂದೆ ನಾಲ್ಕು ಮಠಗಳು ಸ್ಥಾಪನೆಯಾಗಿ ಧಾರ್ಮಿಕ ಚಟುವಟಿಕೆಯನ್ನು ನಡೆಸಿಕೊಂಡು ಬಂದಿವೆ. ಅವುಗಳಲ್ಲಿ ಶ್ರೀ ಹಿರೇಮಠ (ತೆಗ್ಗಿನ ಮಠ), ಶ್ರೀ ಗುರುಪಾದ ದೇವರ ಮಠ, ಶ್ರೀ ಸಲಫಲದೇವರ ಮಠ ಮತ್ತು ಶ್ರೀ ರಂಭಾಪುರಿ ಶಾಖೆಯ ಶ್ರೀ ಕಲ್ಮಠ ಈ ರೀತಿ ನಾಲ್ಕು ಮಠಗಳು ಸ್ಥಾಪನೆಗೊಂಡಿವೆ. ಇವುಗಳಲ್ಲಿ ಶ್ರೀ ಹಿರೇಮಠ ತನ್ನ ಅಸ್ತಿತ್ವವನ್ನು ಉಳಿಸಿ ಉಳಿದ ಮಠಗಳು ಅಸ್ತಿತ್ವವನ್ನು ಕಳೆದುಕೊಂಡಿವೆ.

ತೆಗ್ಗಿನಮಠ: ಕೆಳದಿಯ ಸೋಮಶೇಖರನ (ಕ್ರಿ.ಶ.೧೬೬೩-೧೬೭೧) ಕಾಲದಲ್ಲಿ ಕೋಟೆಯ ಒಳಗಡೆ ಹಿರೇಮಠ ಸ್ಥಾಪನೆಯಾಗಿತ್ತು. ಇದಕ್ಕೆ ಕುರುಹಾಗಿ ಕೋಟೆಯಲ್ಲಿ ಮಠದ ಜಾಗ ಇದೆ. ಕಾಲಾನಂತರ ಕೋಟೆಯು ನಶಿಸಿ ಹೋದ ಮೇಲೆ ಮಠವು ನಶಿಸಿ ಹೋಗಿದೆ. ಈ ಸಂದರ್ಭದಲ್ಲಿ ಕೋಟೆಯಿಂದ ಹಿರೇಮಠ ಊರ ಸಮೀಪದ ತಗ್ಗಿನ ಜಾಗಕ್ಕೆ ಸ್ಥಳಾಂತರಗೊಂಡಿರುತ್ತದೆ. ತಗ್ಗಿನ ಪ್ರದೇಶದಲ್ಲಿ ಮಠ ಸ್ಥಾಪನೆಗೊಂಡಿದ್ದರಿಂದ ಹಿರೇಮಠಕ್ಕೆ 'ತಗ್ಗಿನಮಠ'ಅಥವಾ'ತೆಗ್ಗಿನ ಮಠ' ಎಂಬ ರೂಢಿಗತ ಹೆಸರು ಬಂದಿದೆ. ಜಗದ್ಗುರು ರಂಭಾಪುರಿ ಪೀಠದ ಶಾಖಾಮಠವಾಗಿರುವ ಶ್ರೀ ತೆಗ್ಗಿನ ಮಠವು ಪುತ್ರವರ್ಗದ ಮಠವಾಗಿ ಬೆಳೆದಿದೆ.

ಪರಂಪರೆ:

೧. ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಗುರುಬಸವ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಕಾಳಪ್ಪ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಚಂದ್ರಮೌಳೇಶ್ವರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯಲ್ಲಿ ಐದು ಜನ ಗುರುಗಳನ್ನು ದಾಖಲಿಸಬಹುದಾಗಿದೆ. ೧೭೦೦ರಲ್ಲಿ ಪ್ರಾರಂಭವಾಗಿರಬಹುದಾದ ಈ ಮಠದ ಪರಂಪರೆಯ ಬಗ್ಗೆ ನಿಖರವಾಗಿ ಹೇಳಲು ಆಧಾರಗಳು ಲಭ್ಯವಿಲ್ಲ. ಕೋಟೆಯ ಒಳಗೆ ಪ್ರಾರಂಭವಾಗಿ ನಂತರ ಊರ ಒಳಗೆ ಸ್ಥಳಾಂತರಗೊಂಡು ಪುನಃ ಈಗಿನ ಸ್ಥಳಕ್ಕೆ ವರ್ಗಾವಣೆಗೊಂಡಿರುವುದರಿಂದ ಪರಂಪರೆಯ ಕುರುಹುಗಳು ಉಳಿದಿಲ್ಲ. ಸದ್ಯ ಶ್ರೀ ಚನ್ನವೀರ ಶಿವಾಚಾರ್ಯಸ್ವಾಮಿಗಳು ಮತ್ತು ಶ್ರೀ ಗುರುಬಸವ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಗಳು ಊರ ಹೊರಗೆ ಸ್ಥಾಪನೆಯಾಗಿವೆ. ಅಲ್ಲದೆ ಶ್ರೀ ಕಾಳಪ್ಪ ಶಿವಾಚಾರ್ಯ ಸ್ವಾಮಿಗಳ ಗದ್ದುಗೆ ಹೂವಿನ ಹಡಗಲಿಯ ಶಾಖಾ ಮಠದಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ೧೯೪೮ರಲ್ಲಿ ಲಿಂಗೈಕ್ಯರಾದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಯನ್ನು ಈಗಿನ ಮಠದ ಆವರಣದಲ್ಲಿ ನಿರ್ಮಿಸಲಾಗಿದೆ.

ಹಿರಿಯ ಜೀವನ: ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಕಾಯಕನಿಷ್ಠರು, ಧರ್ಮ ತತ್ಪರರಾಗಿದ್ದರು. ಬೆಳಗಿನಜಾವ ಎದ್ದು ಏಕಾಂತದಲ್ಲಿ ಸುಶ್ರಾವ್ಯವಾಗಿ ಭಕ್ತಿತುಂಬಿ,ಮನತುಂಬಿ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರ ಸ್ತುತಿ ಗೀತೆಗಳನ್ನು ಹಾಡುತ್ತಿದ್ದರಂತೆ. ನಂತರ ಮೂರು ಕಿ.ಮೀ.ದೂರ ಸಂಚಾರ ಕೈಗೊಂಡು ತಮ್ಮ ಪ್ರಾತಃರ್ವಿಧಿಗಳನ್ನು ಮುಗಿಸಿ, ತಮ್ಮ ಬಟ್ಟೆಗಳನ್ನು ಶುಚಿಗೊಳಿಸಿಕೊಂಡು ಸೂರ್ಯೋದಯವಾಗುವುದರೊಳಗೆ ಮಠವನ್ನು ಸೇರಿ ಪ್ರಾತಃ ಕಾಲದಲ್ಲಿ ಪೂಜಾ ಕಾರ್ಯಗಳನ್ನು ಮುಗಿಸುತ್ತಿದ್ದರು ಎಂದು ತಿಳಿದು ಬಂದಿದೆ. ಮಠದಲ್ಲಿ ವೇದ, ಜ್ಯೋತಿಷ್ಯ ಮತ್ತು ಸಂಗೀತವನ್ನು ಅಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿಗಳಿಗೆ ಪೂಜೆ ಪ್ರಸಾದಗಳಿಗೆ ಏರ್ಪಾಡು ಮಾಡಿ ನಂತರ ಮಠಕ್ಕೆ ಬಂದ ಭಕ್ತರಿಗೆ ದರ್ಶನಕೊಟ್ಟು ಆಶೀರ್ವದಿಸಿ ಅವರಿಗೂ ಪ್ರಸಾದ ಕಾರ್ಯ ಏರ್ಪಡಿಸಿ, ಜ್ಯೋತಿಷ್ಯ ಶಾಲೆಗಳಲ್ಲಿ ಪಾಠ ಪ್ರವಚನಗಳಲ್ಲಿ ಮಗ್ನರಾಗಿರುತ್ತಿದ್ದರು ಎಂದು ಹೇಳಲಾಗುತ್ತಿದೆ. ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ನಿತ್ಯ ನೂರಾರು ಜನರಿಗೆ ಪ್ರಸಾದದ

ವ್ಯವಸ್ಥೆ ನಡೆದಿರುತ್ತಿತ್ತು. ಈ ಕಾರಣಕ್ಕೆ ಅಂದೇ ಶ್ರೀ ತೆಗ್ಗಿನ ಮಠಕ್ಕೆ 'ದಾಸೋಹ ಮಠ' ಎಂದು ಕರೆಯುತ್ತಿದ್ದರು. ಇವರು ತಮ್ಮ ಸಹೋದರ ಸಂಬಂಧಿ ಶ್ರೀ ಚಂದ್ರಮೌಳೇಶ್ವರ ದೇವರನ್ನು ಬಾಲ್ಯದಲ್ಲೇ ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡಿದ್ದರು.

ಅದಮ್ಯ ಚೇತನದ ಗಣಿ: ಬಾಲ್ಯದಲ್ಲಿಯೇ ಚುರುಕುತನವನ್ನು ಮೈಗೂಡಿಸಿಕೊಂಡಿದ್ದ ಶ್ರೀ ಚಂದ್ರಮೌಳೇಶ್ವರ ಶಿವಾಚಾರ್ಯ ಸ್ವಾಮಿಗಳು ಪರಿಶ್ರಮದಿಂದ ವಿದ್ಯೆಯನ್ನು ವಶೀಕರಣ ಮಾಡಿಕೊಂಡು ತತ್ತ್ವ ಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರು. ೧೯೬೪ ರಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ಗುಲ್ಬರ್ಗದ ಶ್ರೀ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಕೆಲವು ವರ್ಷ ಸೇವೆ ಸಲ್ಲಿಸಿದರು. ಇವರ ಆಡಳಿತ ದೃಷ್ಟಿಕೋನ, ಬೋಧನಾ ಸಾಮರ್ಥ್ಯವನ್ನು ಗುರುತಿಸಿದ ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಹರಿಹರದ ನೂತನ ಮಹಾವಿದ್ಯಾಲಯಕ್ಕೆ ಪ್ರಾಂಶುಪಾಲರನ್ನಾಗಿ ಮಾಡಿದರು. ಜಗದ್ಗುರುಗಳ ನಿರೀಕ್ಷೆಗೆ ಮೀರಿ ದುಡಿದು ವಿದ್ಯಾಲಯವನ್ನು ಬೆಳೆಸಿದರು.

ಶ್ರೀ ತೆಗ್ಗಿನ ಮಠದ ಉತ್ತರಾಧಿಕಾರಿಯಾಗಿದ್ದುಕೊಂಡು ಅನುಭವಗಳಿಕೆಗಾಗಿ ದಶಕಗಳ ಕಾಲ ಹರಿಹರದಲ್ಲಿ ಸೇವೆ ಸಲ್ಲಿಸಿದ ಶ್ರೀ ಚಂದ್ರಮೌಳೇಶ್ವರಸ್ವಾಮಿಗಳು ಹರಪನಹಳ್ಳಿಯಲ್ಲಿ 'ಶ್ರೀ ತೆಗ್ಗಿನಮಠ ಆರ್ಟ್ಸ್ ಅಂಡ್ ಎಜುಕೇಷನ್ ಸೊಸೈಟಿ' ಎಂಬ ಸಂಸ್ಥೆಯನ್ನು ೧೯೬೯ರಲ್ಲಿ ಸ್ಥಾಪಿಸಿದರು. ಇದೇ ವರ್ಷ ಈ ಸಂಸ್ಥೆಯಡಿಯಲ್ಲಿ ಸಂಸ್ಕೃತ ಪಾಠಶಾಲೆ ಮತ್ತು ಪಂಡಿತ ಬಸವಲಿಂಗ ಶಾಸ್ತ್ರಿ ಗ್ರಂಥಾಲಯವನ್ನು ಪ್ರಾರಂಭಿಸಿ ಬೆಳೆಸಿದರು. ನಂತರ ಉದ್ಯೋಗದ ಮೂಲ ಶಿಕ್ಷಣ ನೀಡಬೇಕೆಂಬ ಕಾರಣಕ್ಕೆ ೧೯೭೦ರಲ್ಲಿ ಶಿಕ್ಷಕರ ತರಬೇತಿ ಶಾಲೆಯನ್ನು ಪ್ರಾರಂಭಿಸಿದರು. ೧೯೭೨ ರಲ್ಲಿ ಪದವಿಪೂರ್ವ ಕಾಲೇಜನ್ನು ಪ್ರಾರಂಭಿಸಿ, ಉಜ್ಜಯಿನಿ ಸಂಸ್ಥಾನ ಪೀಠದ ಜ್ಞಾನಗುರು ವಿದ್ಯಾಪೀಠಕ್ಕೆ ವಹಿಸಿಕೊಟ್ಟಿದ್ದಾರೆ. ನಂತರ ತಮ್ಮ ಪಟ್ಟಾಧಿಕಾರವಾದ ವರ್ಷದಲ್ಲಿ ಬಿ.ಇಡಿ ತರಬೇತಿ ಸಂಸ್ಥೆಯನ್ನು ಪ್ರಾರಂಭಿಸಿ, ನಾಡಿನ ಹಾಗೂ ಹೊರನಾಡಿನ ವಿದ್ಯಾರ್ಥಿಗಳಿಗೆ ನೆರವು ಕಲ್ಪಿಸಿದರು.

ಸಾಧನೆ ನಂತರ ಅಧಿಕಾರಕ್ಕೆ: ತೆಗ್ಗಿನ ಮಠದಲ್ಲಿ ಧರ್ಮಜ್ಯೋತಿಯ ಜತೆಗೆ ವಿದ್ಯಾಜ್ಯೋತಿಯನ್ನು ಹಚ್ಚಿದ ಶ್ರೀ ಚಂದ್ರಮೌಳೇಶ್ವರ ಶಿವಾಚಾರ್ಯ ಸ್ವಾಮಿಗಳು ೧೯೭೩ರ ಫೆಬ್ರವರಿ ಆರರಂದು ಪಟ್ಟಾಧಿಕಾರ ಪಡೆದರು. ಶ್ರೀ ರಂಭಾಪುರಿ ಪೀಠದ ಅಂದಿನ ಜಗದ್ಗುರು ಶ್ರೀ ಪ್ರಸನ್ನ ರೇಣುಕ ವೀರ ಗಂಗಾಧರ ಶಿವಾಚಾರ್ಯ ಭಗವತ್ಪಾದರು ಪಟ್ಟಾಧಿಕಾರದ ಅನುಗ್ರಹ ನೀಡಿ ಆಶೀರ್ವದಿಸಿದ್ದರು.

ಅಭಿವೃದ್ಧಿ ಕಾರ್ಯಗಳು: ಅಧಿಕಾರಕ್ಕೆ ಬಂದ ಶ್ರೀ ಚಂದ್ರಮೌಳೇಶ್ವರ ಶಿವಾಚಾರ್ಯ ಸ್ವಾಮಿಗಳು ಮಠದ ಹಳೆಯ ಕಟ್ಟಡವನ್ನು ನವೀಕರಿಸಿ ವಿಸ್ತರಿಸಿದರು. ಅತಿಥಿಗೃಹ, ದಾಸೋಹಮಂದಿರ, ಕಲ್ಯಾಣಮಂಟಪಗಳನ್ನು ನಿರ್ಮಿಸಿ ಸಾರ್ವಜನಿಕರಿಗೆ ಅನುಕೂಲವನ್ನು ಕಲ್ಪಸಿದ್ದಾರೆ. ಶ್ರೀ ತೆಗ್ಗಿನಮಠದ ಆವರಣದಲ್ಲಿ ಐವತ್ತುಲಕ್ಷ ರೂಪಾಯಿ ಯೋಜನೆಯ ಅಭಿವೃದ್ಧಿ ಕಾರ್ಯವನ್ನು ಕೈಗೊಂಡು ಮಠದ ಸಮುಚ್ಚಯವನ್ನು ಅಭಿವೃದ್ಧಿಪಡಿಸಿದ್ದಾರೆ. ಹಿರಿಯ ಗುರುಗಳಾದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಗೆ ಮಂಟಪವನ್ನು ಕಟ್ಟಿಸಿ ತ್ರಿಕಾಲ ಪೂಜೆಗೆ ವ್ಯವಸ್ಥೆ ಮಾಡಿಸಿದ್ದಾರೆ. ಊರಿನ ಹೊರಗಿರುವ ಗದ್ದುಗೆಗಳನ್ನು ನವೀಕರಣಗೊಳಿಸಿ ಸ್ಮಾರಕಗಳನ್ನಾಗಿ ರೂಪಿಸಿದ್ದಾರೆ.

ಧರ್ಮ ಮತ್ತು ಶಿಕ್ಷಣ ತೆಗ್ಗಿನಮಠದ ಜೋಡಿದೀಪಗಳು. ಈ ದೀಪಗಳನ್ನು ಬೆಳಗಿಸುವ ಎಣ್ಣೆಯಾಗಿರುವ ಶ್ರೀಚಂದ್ರ ಮೌಳೇಶ್ವರ ಶಿವಾಚಾರ್ಯ ಸ್ವಾಮಿಗಳು ಶಿಕ್ಷಣ ಸಂಸ್ಥೆಗಳನ್ನು ಬಳ್ಳಾರಿ, ದಾವಣಗೆರೆ , ಚಿತ್ರದುರ್ಗ, ಶಿವಮೊಗ್ಗ, ಹಾವೇರಿ, ಧಾರವಾಡ ಮತ್ತು ಕೊಪ್ಪಳ ಜಿಲ್ಲೆಗಳಿಗೆ ವಿಸ್ತರಿಸಿದ್ದಾರೆ. ಈವರೆವಿಗೆ ಆರು ಪ್ರೌಢಶಾಲೆಗಳು, ಹನ್ನೊಂದು ಐ.ಟಿ.ಐ.ಕಾಲೇಜುಗಳು, ಎರಡು ಪಾಲಿಟೆಕ್ನಿಕ್ ಕಾಲೇಜುಗಳು, ಎರಡು ಆಯುರ್ವೈದ್ಯ ಕಾಲೇಜುಗಳು, ಎರಡು ಶಿಕ್ಷಣ ಮಹಾ ವಿದ್ಯಾಲಯಗಳು (ಬಿ.ಇಡಿ ಕಾಲೇಜುಗಳು) ಎರಡು ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿ ಕಾಲೇಜುಗಳು, ಅಂಗನವಾಡಿ ತರಬೇತಿ ಕೇಂದ್ರ, ಆರು ಉಚಿತ ವಿದ್ಯಾರ್ಥಿನಿಲಯಗಳು ಸೇರಿದಂತೆ ಕೀರ್ತನೆ ತರಬೇತಿ ಮಹಾ ವಿದ್ಯಾನಿಲಯ, ಮೂರು ಫಾರ್ಮಸಿ ಕಾಲೇಜುಗಳು, ಒಂದು ಸಂಸ್ಕೃತ ಪಾಠಶಾಲೆ, ಎರಡು ದೈಹಿಕ ಶಿಕ್ಷಕರ ತರಬೇತಿ ಕಾಲೇಜುಗಳು ಈ ರೀತಿ ಎಲ್ಲಾ ಬಗೆಯ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ, ಗ್ರಾಮಾಂತರ ಮಕ್ಕಳ ಕಲಿಕೆಗೆ ನೆರವು ನೀಡಿದ್ದಾರೆ. ಒಟ್ಟು ನಲವತ್ತು ಸಂಸ್ಥೆಗಳ

ಸಿಬ್ಬಂದಿ ವರ್ಗಕ್ಕೆ ಅನ್ನದಾತರಾಗಿದ್ದಾರೆ. ಉನ್ನತ ಶಿಕ್ಷಣ ಸಂಸ್ಥೆಯಿಂದ ಬಂದ ಹಣವನ್ನು ಮಠದ ಸರ್ವಾಂಗೀಣ ಅಭಿವೃದ್ಧಿಗೆ ಬಳಕೆ ಮಾಡಿಕೊಂಡು ಮಠವನ್ನು ಉನ್ನತೋನ್ನತಿಗೆ ಕೊಂಡೊಯ್ಯುತ್ತಿದ್ದಾರೆ.

ಜ್ಯೋತಿಷ್ಯಕ್ಕೆ ಆಶ್ರಯಕೊಟ್ಟ ಮಠ: ಜ್ಯೋತಿಷ್ಯ, ವೈದಿಕ ಹಾಗೂ ಆಗಮಗಳನ್ನು ಕಲಿಯುವ ಪಂಡಿತರಿಗೆ ಆಶ್ರಯ ಕೊಟ್ಟಿದೆ. ಆಸ್ಥಾನ ಪಂಡಿತರಾಗಿದ್ದ ಶ್ರೀ ಬಸವಲಿಂಗ ಶಾಸ್ತ್ರಿಗಳು ಕಾಶಿಯಲ್ಲಿ ಪಾಂಡಿತ್ಯ ಸಂಪಾದಿಸಿ ಈ ಮಠದಲ್ಲಿ ಆಶ್ರಯ ಪಡೆದು, ತಮ್ಮ ವಿದ್ವತ್ತನ್ನು ಪ್ರದರ್ಶಿಸಿ ಅನೇಕ ಪಂಡಿತರನ್ನು ಸೃಜಿಸಿದ್ದಾರೆ. ಚನ್ನವೀರಪ್ಪಯ್ಯನವರೂ ಸಹ ಈ ಮಠದಲ್ಲಿ ಆಶ್ರಯ ಪಡೆದು ಜ್ಯೋತಿಷ್ಯ, ವೈದಿಕ ಹಾಗೂ ಆಗಮ ಕಲಿತು ಇಲ್ಲೇ ಇದ್ದು ಬೋಧನೆ ಕಾರ್ಯ ಕೈಗೊಂಡಿದ್ದರು. ಇವರ ಪ್ರಭಾವಕ್ಕೆ ಒಳಗಾಗಿ ಮುಸಲ್ಮಾನ್ ಧರ್ಮದ ಹಯಾತ್‌ಸಾಬ್ ಜ್ಯೋತಿಷ್ಯ, ವೈದಿಕ, ಆಗಮ ಕಲಿತು 'ಹಯಾತ್ ಶಾಸ್ತ್ರಿ' ಯಾಗಿ, ಮಠದ ಜ್ಯೋತಿಷ್ಯ ಪಾಠಶಾಲೆಯಲ್ಲಿ ವೀರಶೈವ ಜಂಗಮ ಮಕ್ಕಳಿಗೆ ಬೋಧನೆ ಕಾರ್ಯ ಕೈಗೊಂಡಿದ್ದರೆಂದರೆ ಈ ಮಠದ ಪ್ರಭಾವ ಯಾವ ಮಟ್ಟಿಗೆ ಬೆಳೆದಿತ್ತು ಎಂಬುದನ್ನು ನಾವು ಅರ್ಥೈಸಿಕೊಳ್ಳಬಹುದಾಗಿದೆ. ಅಲ್ಲದೆ ಈ ಮಠದಲ್ಲಿ ಆಶ್ರಯ ಪಡೆದ ಗದುಗಿನ ತೋಟಪ್ಪ ಶಾಸ್ತ್ರಿಗಳು, ಮೊಗರುದ್ರಾರಾಧ್ಯ ಶಾಸ್ತ್ರಿಗಳು ಈ ಮಠದಲ್ಲಿ ಜ್ಯೋತಿಷ್ಯ ಕಲಿತು ಮಹಾಪಂಡಿತರಾಗಿ ಬೆಳೆದು ಬಂದಿದ್ದು ಒಂದು ಹೆಗ್ಗಳಿಕೆಯಾಗಿದೆ.

ಬೆಳ್ಳಿಹಬ್ಬ-ಸಾಹಿತ್ಯ: ೧೯೯೮ ರ ಫೆಬ್ರವರಿ ಒಂದರಂದು ಪಟ್ಟಾಧಿಕಾರದ ಬೆಳ್ಳಿ ಹಬ್ಬ ಕಂಡ ಗುರುಗಳು ಇದೇ ಸಂದರ್ಭದಲ್ಲಿ ಷಷ್ಟ್ಯಬ್ದಿ ಶಾಂತಿ ಕಾರ್ಯಕ್ರಮವನ್ನು ಆಚರಿಸಿಕೊಂಡು, ಬತ್ತದ ಚಿಲುಮೆಯಾಗಿ ತೆಗ್ಗಿನ ಮಠವನ್ನು ಆರ್ಥಿಕ ಸದೃಢತೆಯಿಂದ ಬೆಳೆಸಿದ್ದಾರೆ. 'ಶ್ರೀ ಜಗದ್ಗುರು ರೇಣುಕಾಚಾರ್ಯ ಪ್ರಕಾಶನ ಸಂಸ್ಥೆ'ಯನ್ನು ಪ್ರಾರಂಭಿಸಿರುವ ಗುರುಗಳು ವೀರಶೈವ ಧರ್ಮದ ಸಂಶೋಧನೆಗೆ ನೆರವಾಗಬಲ್ಲಂತಹ ನಿಗಮಾಗಮ ಮತ್ತು ಶೂನ್ಯ ಸಂಪಾದನೆ ಒಂದು ಸಮೀಕ್ಷೆ, ವೀರಶೈವ ದರ್ಶನ ಮೀಮಾಂಸೆ ಮುಂತಾದ ಅನೇಕ ಮೌಲಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ವೀರಶೈವ ಸಾಹಿತ್ಯದ ಪ್ರಕಟಣೆಗೆ ನೆರವು ನೀಡಿ ಅನೇಕ ಸಾಹಿತ್ಯ ಕೃತಿಗಳು ಬೆಳಕು ಕಾಣಲು ನೆರವಾಗಿದ್ದಾರೆ.

ಧಾರ್ಮಿಕ, ಶೈಕ್ಷಣಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕವಾಗಿ ಮಹತ್ವದ ಸಾಧನೆಯನ್ನು ಸಾಧಿಸಿ, ಮಾಡಬೇಕಾಗಿರುವುದು ಏನೂ ಇಲ್ಲವೆಂಬಂತೆ ಮಾಡಿ ಹರಪನಹಳ್ಳಿಯನ್ನು ಶ್ರೀಮಂತಗೊಳಿಸಿದ್ದಾರೆ. ಊರೊರಗಿನ ಬಯಲು ಪ್ರದೇಶದಲ್ಲಿ ಸ್ಥಾಪನೆಯಾದ ಶಿಕ್ಷಣ ಸಮುಚ್ಚಯ ಶ್ರೀ ಚಂದ್ರಮೌಳೇಶ್ವರ ಶಿವಾಚಾರ್ಯ ಸ್ವಾಮಿಗಳ ಸಾಧನೆಯ ಪ್ರತೀಕವಾಗಿ ತಲೆ ಎತ್ತಿನಿಂತಿದೆ.

ವಿಳಾಸ: ಷ.ಬ್ರ.ಶ್ರೀ ಚಂದ್ರಮೌಳೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ತೆಗ್ಗಿನಮಠ, ಹರಪನಹಳ್ಳಿ, ದಾವಣಗೆರೆ ಜಿಲ್ಲೆ.

❑

ಹರಿಹರ ತಾಲ್ಲೂಕು

ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕು ನೀರಾವರಿ ಯೋಜನೆಯಿಂದಾಗಿ ಆರ್ಥಿಕವಾಗಿ ಶ್ರೀಮಂತಿಕೆ ಪಡೆದಿದೆ. ವೀರಶೈವ ಧರ್ಮವು ಪ್ರಾಚೀನ ಕಾಲದಿಂದಲೂ ಪ್ರಬಲವಾಗಿ ಬೆಳೆದು ಬೇರೂರಿದೆ. ಈ ತಾಲ್ಲೂಕಿನಲ್ಲಿ ಹನ್ನೆರಡು ಮಠಗಳು ಸ್ಥಾಪನೆಗೊಂಡಿದ್ದವೆಂದು ಹೇಳಲಾಗುತ್ತದೆ. ಹರಿಹರ ನಗರದ ಮಧ್ಯಭಾಗದಲ್ಲಿ ಚಿತ್ರದುರ್ಗ ಬೃಹನ್ಮಠದ ಶಾಖಾಮಠವಾದ ಶ್ರೀ ಮುರುಘಾಮಠವು ಅಸ್ತಿತ್ವದಲ್ಲಿದೆ. ಆದರೆ ಗುರುಗಳು ಇಲ್ಲ. ನಂದಿಗುಡಿಯಲ್ಲಿರುವ ಬೃಹನ್ಮಠವು ತಾಲ್ಲೂಕಿಗೆ ಏಕೈಕ ಮಠವಾಗಿ ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ.

ನಂದಿಗುಡಿ

ಹರಿಹರ ತಾಲ್ಲೂಕಿನ ನಂದಿಗುಡಿಯು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಇಪ್ಪತ್ತೆಂಟು ಕಿ.ಮೀ.ದೂರದಲ್ಲಿದೆ. ನೊಳಂಬ ರಾಜರ ಲಾಂಛನವಾಗಿದ್ದ ನಂದಿಯನ್ನೇ ಹೋಲುವ ಬೃಹತ್ ಆಕೃತಿಯ ನಂದಿಯು ಇಲ್ಲಿ ಸ್ಥಾಪನೆಯಾಗಿರುವುದರಿಂದ ಈ ಗ್ರಾಮಕ್ಕೆ'ನಂದಿಗುಡಿ' ಎಂದು ಹೆಸರು ಬಂದಿದೆ. ಮಲ್ಲಿಕಾರ್ಜುನ ಲಿಂಗದ ಎದುರು ಎಡಗಾಲನ್ನು ಮುಂದಿಟ್ಟುಕೊಂಡು ಮಲಗಿರುವ ನಂದಿಯ ಎಡಬಲ ಬದಿಯಲ್ಲಿ ಭೈರವ ಮೂರ್ತಿಗಳು ಮತ್ತು ನಂದಿಯ ಹಿಂಬದಿಯ ಗರ್ಭ ಗುಡಿಯಲ್ಲಿ ಸೂರ್ಯದೇವನ ಮೂರ್ತಿ ಹಾಗೂ ದೇವಸ್ಥಾನದ ಒಳಗಡೆ ಅನೇಕ ಆಕರ್ಷಕ ಶಿಲೆಯ ಮೂರ್ತಿಗಳು ಇದ್ದರೂ, ಹೊರನೋಟದಲ್ಲಿ ದೇವಸ್ಥಾನ ಆಕರ್ಷಕವಾಗಿಲ್ಲ.

ಬೃಹನ್ಮಠ: ನಂದಿಗುಡಿಯ ತುಂಗಭದ್ರ ನದಿಯ ಎಡ ದಡದ ಮೇಲೆ ಸ್ಥಾಪಿತವಾಗಿರುವ ಬೃಹನ್ಮಠವು ಎಂಟುನೂರು ವರ್ಷಗಳಿಗಿಂತಲೂ ಹಿಂದೆ ಸ್ಥಾಪನೆಯಾಗಿರಬಹುದೆಂದು ಊಹೆ ಮಾಡಲಾಗಿದೆ. ಶ್ರೀಶೈಲ ಶಾಖಾನುವರ್ತಿಯಾದ ಈ ಸಂಸ್ಥಾನ ಮಠವು ನೊಳಂಬ ರಾಜರ ಕಾಲದಲ್ಲಿ ಸ್ಥಾಪನೆಯಾಗಿತ್ತೆಂದೂ ಸಹ ಹೇಳಲಾಗುತ್ತಿದೆ. ಇಪ್ಪತ್ತೈದಕ್ಕೂ ಹೆಚ್ಚು ಮಠಾಧೀಶರು ಬೃಹನ್ಮಠದ ಅಧಿಕಾರಕ್ಕೆ ಬಂದು ಹೋಗಿರಬಹುದೆಂದು ಅಂದಾಜಿಸಲಾಗಿದೆ. ಇದಕ್ಕೆ ಸಂಬಂಧಪಟ್ಟ ದಾಖಲೆಗಳು ಅಥವಾ ಕುರುಹುಗಳು ತುಂಗಾಭದ್ರಾ ನದಿಯ ಪ್ರವಾಹದಲ್ಲಿ ಕೊಚ್ಚಿಹೋಗಿವೆ ಎಂದು ತಿಳಿದು ಬರುತ್ತದೆ. ಅಲ್ಲದೆ ಹಿಂದೆ ಇದ್ದ ಮಠದ ಹಳೆಯ ಕಟ್ಟಡ ಶಿಥಿಲಗೊಂಡು ಬಿದ್ದು ಹೋದ ಸಂದರ್ಭದಲ್ಲಿ ಅಳಿದುಳಿದಿದ್ದ ದಾಖಲೆಗಳು ಕಣ್ಮರೆಯಾಗಿರಬಹುದೆಂದು ಹೇಳಲಾಗುತ್ತಿದೆ. ಈ ಕಾರಣಕ್ಕೆ ಪರಂಪರೆಯ ಗುರುಗಳ ಬಗ್ಗೆ ನಿಖರ ಮಾಹಿತಿಗಳು ಸದ್ಯಕ್ಕೆ ಲಭ್ಯವಿಲ್ಲ.ಸದ್ಯ ಏಳು ಮಠಾಧೀಶರ ಹೆಸರುಗಳು ಮಾತ್ರ ದಾಖಲಾಗಿವೆ.

೧. ಷ.ಬ್ರ.ಶ್ರೀ ಕೆಂಚವೀರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಕರಿಬಸವೇಶ್ವರ ಶಿವಯೋಗಿಸ್ವಾಮಿಗಳು (ಆರನೆಯ ಪಟ್ಟಾಧ್ಯಕ್ಷರು)
೩. ಷ.ಬ್ರ.ಶ್ರೀ ಕರಿಬಸವೇಶ್ವರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಶಿವಾಲಯ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಶಿವನಂಜುಂಡೇಶ್ವರ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಚಂದ್ರಶೇಖರ ಭಾರತಿ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಮೃತ್ಯುಂಜಯ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ಬಸವರಾಜ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ನಂದೀಶ್ವರ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಶ್ರೀ ಕೆಂಚವೀರ ಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಐದು ಜನ ಸ್ವಾಮಿಗಳ ಹೆಸರುಗಳು ಕಣ್ಮರೆಯಾಗಿವೆ. ನಂತರ ಆರನೆಯ ಪಟ್ಟಾಧಿಕಾರಿಯಾಗಿ ಅಧಿಕಾರಕ್ಕೆ ಬಂದ ಶ್ರೀ ಕರಿಬಸವೇಶ್ವರ ಶಿವಯೋಗಿ ಸ್ವಾಮಿಗಳು ಮಹಾ ಪ್ರವಚನಕಾರರು. ಇವರು ಧರ್ಮಪ್ರಸಾರಕ್ಕೆಂದು ದೀರ್ಘ ಕಾಲ ಬೇರೆಡೆಗೆ ಹೋಗಿ ಬರುತ್ತಿದ್ದರು. ಒಮ್ಮೆ ಅವರು ವೃದ್ಧಾಪ್ಯದಲ್ಲಿ ಧರ್ಮ

ಪ್ರಸಾರಕ್ಕೆ ಪಶ್ಚಿಮಾಭಿಮುಖವಾಗಿ ಹೋಗಿದ್ದವರು ಮಠಕ್ಕೆ ಹಿಂದಿರುಗಿ ಬರುವ ವೇಳೆಗೆ ತುಂಗಾಭದ್ರಾ ನದಿಯು ತುಂಬಿ ಹರಿಯತೊಡಗಿತ್ತು. ಇದನ್ನು ದಾಟಿ ಮಠಕ್ಕೆ ಬರಲಾಗದೆ ಉಕ್ಕಡಗಾತ್ರಿಯಲ್ಲಿ ಲಿಂಗೈಕ್ಯರಾದರು. ಇವರ ನಂತರ ಶ್ರೀ ಶಿವಾಲಯ ಸ್ವಾಮಿಗಳು ಮಠದ ಆಡಳಿತವನ್ನು ನೋಡಿಕೊಂಡು ಮಠವನ್ನು ಅಭಿವೃದ್ಧಿಪಡಿಸಿರುತ್ತಾರೆ. ಇವರ ನಂತರ ಇಬ್ಬರು ಸ್ವಾಮಿಗಳು ಅಧಿಕಾರವನ್ನು ನಡೆಸಿದ್ದಾರೆಂದು ಹೇಳಬಹುದಾದರೂ ಇವರ ಹೆಸರು ಎಲ್ಲಿಯೂ ಲಭ್ಯವಿಲ್ಲ. ನಂತರ ಶ್ರೀ ಶಿವನಂಜುಂಡೇಶ್ವರ ಸ್ವಾಮಿಗಳು ಅಧಿಕಾರಕ್ಕೆ ಬಂದಿದ್ದಾರೆ. ಧರ್ಮದುರಂಧರರಾಗಿ, ಧರ್ಮಪ್ರಸಾರ ಮಾಡಿ ವೀರಶೈವ ಧರ್ಮವನ್ನು ಬೆಳೆಸಿದ್ದಾರೆ. ಇವರ ನಂತರ ಶ್ರೀ ಚಂದ್ರಶೇಖರ ಭಾರತಿ ಸ್ವಾಮಿಗಳು, ಮೃತ್ಯುಂಜಯ ಸ್ವಾಮಿಗಳು ಮತ್ತು ಬಸವರಾಜ ದೇಶಿಕೇಂದ್ರ ಸ್ವಾಮಿಗಳು ಅಧಿಕಾರಕ್ಕೆ ಬಂದು ಆಧ್ಯಾತ್ಮದ ಬಗ್ಗೆ ಹೆಚ್ಚು ಒಲವು ತೋರಿಸಿ ಮಠವನ್ನು ಧಾರ್ಮಿಕವಾಗಿ ಬೆಳಗಿಸಿದರು. ಅಲ್ಲದೆ ಇವರ ಆಡಳಿತ ಕಾಲದಲ್ಲಿ ಮಠಕ್ಕೆ ಸುಸಜ್ಜಿತ ಕಟ್ಟಡವು ನಿರ್ಮಾಣಗೊಂಡು ಮಠವನ್ನು ಹೆಚ್ಚು ಪ್ರಚಾರಕ್ಕೆ ತಂದರು.

ನಂದೀಶ್ವರರು: ಶ್ರೀ ನಂದೀಶ್ವರ ಶಿವಾಚಾರ್ಯ ಸ್ವಾಮಿಗಳು ೧೯೬೭ರ ಡಿಸಂಬರ್ ಇಪ್ಪತ್ತಾರರಂದು ಹಾಸನ ಜಿಲ್ಲೆ, ಹಾಸನ ತಾಲ್ಲೂಕಿನ ಇಬ್ಬದಾಣಿ ಗ್ರಾಮದಲ್ಲಿ ಶ್ರೀ ನಂಜುಂಡಯ್ಯ ಮತ್ತು ಶ್ರೀಮತಿ ಅಪರ್ಣಮ್ಮನವರ ಪುತ್ರರಾಗಿ ಜನಿಸಿ, ಮೈಸೂರಿನಲ್ಲಿ ಪದವಿಯನ್ನು ಪಡೆದು, ಹಾಸನ ತಾಲ್ಲೂಕಿನ ಯಲಗುಂದ ಮಠದ ಮಠಾಧೀಶ್ವರರಾಗಿ ಅಧಿಕಾರ ವಹಿಸಿ ಕೊಂಡರು. ನಂದಿಗುಡಿಯ ಶ್ರೀ ಬಸವರಾಜ ದೇಶಿಕೇಂದ್ರ ಸ್ವಾಮಿಗಳ ಆಶಯದಂತೆ ವೃಷಭಪುರಿ ಸಂಸ್ಥಾನಾಧೀಶರಾಗಿ ೧೯೯೩ರ ನವೆಂಬರ್ ಇಪ್ಪತ್ತೆಂಟರಂದು ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ.

ಸಂಘಟನೆ ಯತ್ನ: ಶ್ರೀ ನಂದೀಶ್ವರ ಶಿವಾಚಾರ್ಯ ಸ್ವಾಮಿಗಳು ಮಠಕ್ಕೆ ಬರುವ ವೇಳೆಗೆ ಮಠ ಮತ್ತು ಸಮಾಜದ ಒಂದೊಂದೇ ಕೊಂಡಿಗಳು ಕಳಚಿಕೊಳ್ಳುತ್ತಾ ಬಂದಿದ್ದವು. ದೂರವಾಗುತ್ತಿದ್ದ ಸಂಬಂಧಗಳನ್ನು ಹತ್ತಿರ ಮಾಡಿಕೊಂಡರು. ಸಂಘಟನೆ ದೃಷ್ಟಿಯಿಂದ ನುಚ್ಚುನೂರಾಗಿದ್ದ ನೊಳಂಬ ಸಮಾಜವನ್ನು ಪುನರ್ ಸಂಘಟನೆ ಮಾಡಿದರು. ಅಲ್ಲದೆ ಆರ್ಥಿಕವಾಗಿ ಸದೃಢತೆ ಸಾಧಿಸದಿದ್ದರೆ ಮಠ ಮತ್ತು ಸಮಾಜದ ಅಂತರ ಇನ್ನೂ ದೂರವಾಗುತ್ತದೆ ಎಂದು ಭಾವಿಸಿದ ಗುರುಗಳು ಪಾಳು ಬಿದ್ದಿದ್ದ ಮಠದ ಐವತ್ತುಎಕರೆ ಜಮೀನನ್ನು ಅಭಿವೃದ್ಧಿಪಡಿಸಲು ಪ್ರಯತ್ನಿಸಿದರು. ಇಲ್ಲಿಯೂ ಸರಿಯಾದ ಸಹಕಾರ ಸಿಕ್ಕದಿದ್ದಾಗ, ಈ ನೋವೇ ಗೆಲುವಿನ ಸೋಪಾನ ಎಂದು ಅರಿತು ತಾವೇ ಗದ್ದೆಗೆ ಇಳಿದು ಕಾಯಕ ಮಾಡತೊಡಗಿದರು. ಇದರ ಫಲವೇ ನೂರಾರು ಚೀಲ ಭತ್ತ ಬೆಳೆಯಲು ಸಾಧ್ಯವಾಯಿತು. ಈ ಭಾಗದ ವೀರಶೈವರನ್ನೆಲ್ಲ ಒಂದು ಮಾಡಿ ಒಬ್ಬರಿಗೊಬ್ಬರ ಮುಖ ನೋಡಿಕೊಳ್ಳದಂತಿದ್ದ ಭಕ್ತರು ಒಬ್ಬರಿಗೊಬ್ಬರು ಪ್ರೀತಿಸುವಂತೆ ಮಾಡಿದರು.

ವಿಸ್ತಾರಗೊಂಡ ಕಾರ್ಯವ್ಯಾಪ್ತಿ: ಮಠ ಮತ್ತು ಸಮಾಜದಲ್ಲಿದ್ದ ತೊಡಕುಗಳನ್ನು ಬಗೆಹರಿಸತೊಡಗಿದ ಶ್ರೀ ನಂದೀಶ್ವರ ಶಿವಾಚಾರ್ಯ ಸ್ವಾಮಿಗಳು ಭಕ್ತರ ಉದ್ಧಾರವೇ ಮಠದ ಉದ್ಧಾರ ಎಂದು ಅರಿತು ದಾವಣಗೆರೆ, ಹೊಸದುರ್ಗ, ಹೊಳಲ್ಕೆರೆ, ಚನ್ನಗಿರಿ, ಭದ್ರಾವತಿ, ಶಿವಮೊಗ್ಗ, ಹೊನ್ನಾಳಿ, ಶಿಕಾರಿಪುರ, ಸೊರಬ, ಹಾನಗಲ್, ಬ್ಯಾಡಗಿ, ಹಿರೇಕೆರೂರ್, ರಾಣಿಬೆನ್ನೂರು, ಹಾಸನ, ಅರಸೀಕೆರೆ ಮುಂತಾದ ತಾಲ್ಲೂಕುಗಳಿಗೆ ತಮ್ಮ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಂಡರು.

ಅಭಿವೃದ್ಧಿ ಕಾರ್ಯಗಳು: ಮಠದ ಹಳೆಯ ಆವರಣದಲ್ಲಿ ಹದಿನೈದು ಲಕ್ಷರೂಪಾಯಿ ವೆಚ್ಚದಲ್ಲಿ ವಸತಿ ಗೃಹವನ್ನು ನಿರ್ಮಿಸಿದ್ದಾರೆ. ಇಪ್ಪತ್ತೆರಡು ಲಕ್ಷರೂಪಾಯಿ ಯೋಜನೆಯ ಕಲ್ಯಾಣಮಂಟಪವನ್ನು ಕಟ್ಟಿಸಲು ಯೋಜನೆ ತಯಾರಿಸಿಕೊಂಡು, ಕಲ್ಯಾಣಮಂಟಪ ಸ್ಥಾಪನೆಯಾಗುವ ಜಾಗದಲ್ಲಿದ್ದ ಖಾಸಗಿ ವ್ಯಕ್ತಿಗಳ ಎರಡು ಮನೆಗಳನ್ನು ಬೇರೆ ಕಡೆಗೆ ಸ್ಥಳಾಂತರಿಸಿ ಕಲ್ಯಾಣ ಮಂಟಪವನ್ನು ಸ್ಥಾಪಿಸಿದ್ದಾರೆ. ಎರಡು ಎಕರೆ ಜಾಗದಲ್ಲಿ ಮಠಕ್ಕೆ ನೂತನ ಕಟ್ಟಡ ಕಟ್ಟಿಸಲು ಯೋಜನೆ ರೂಪುಗೊಂಡಿದೆ. ಮಠದ ಹಿಂಬದಿಯಲ್ಲಿ ಇರುವ ನಂದಿ ದೇವಸ್ಥಾನವನ್ನು ಬೃಹತ್ ಯೋಜನೆಯಲ್ಲಿ ನಿರ್ಮಿಸುವ ಯೋಜನೆ ತಯಾರಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ನಂದೀಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ವೃಷಭಪುರಿ ಸಂಸ್ಥಾನ ಮಠ, (ಬೃಹನ್ಮಠ) ನಂದಿಗುಡಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.

❑

ಹೊನ್ನಾಳಿ ತಾಲ್ಲೂಕು

ದಾವಣಗೆರೆ ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಒಂದಾದ ಹೊನ್ನಾಳಿಯು ಧಾರ್ಮಿಕವಾಗಿ ಹೆಸರು ಪಡೆದಿದೆ. ಈ ತಾಲ್ಲೂಕಿನಲ್ಲಿ ನಾಲ್ಕು ವೀರಶೈವ ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿವೆ.

ಕತ್ತಿಗೆ

ಹೊನ್ನಾಳಿ ತಾಲ್ಲೂಕಿನ ಕತ್ತಿಗೆಯು ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಹತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀಕತ್ತಿಗೆ ಮಠವು ಅಸ್ತಿತ್ವದಲ್ಲಿದೆ.

ಕತ್ತಿಗೆಮಠ: ಕತ್ತಿಗೆಯಲ್ಲಿ ಶ್ರೀಶೈಲ ಪೀಠದ ಶಾಖಾಮಠವಾದ ಶ್ರೀ ಕತ್ತಿಗೆಮಠವು ಸ್ಥಾಪನೆಯಾಗಿ, ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಶ್ರೀ ಹಾಲುಸ್ವಾಮಿಗಳ ಶಿಷ್ಯ ಪರಂಪರೆಯ ಶ್ರೀ ನಾಗಪ್ಪ ಸ್ವಾಮಿಗಳು ಮತ್ತು ಶ್ರೀ ಚನ್ನಪ್ಪಸ್ವಾಮಿಗಳು ಉತ್ತರದಿಂದ ಧರ್ಮ ಪ್ರಚಾರ ಮಾಡಿಕೊಂಡು ಬಂದು ಕತ್ತಿಗೆಯಲ್ಲಿ ನೆಲೆನಿಲ್ಲುತ್ತಾರೆ. ಭಕ್ತರ ಅಪೇಕ್ಷೆಯಂತೆ ಶ್ರೀ ಚನ್ನಪ್ಪ ಸ್ವಾಮಿಗಳು ಹೊನ್ನಾಳಿಗೆ ಹೋಗಿ ನೆಲೆಸುತ್ತಾರೆ. ಶ್ರೀ ನಾಗಪ್ಪ ಸ್ವಾಮಿಗಳು ಇಲ್ಲೇ ನೆಲೆನಿಂತು ಮಠವನ್ನು ಸ್ಥಾಪನೆ ಮಾಡಿ ಧರ್ಮ ಜಾಗೃತಿಯ ನ್ನುಂಟು ಮಾಡಿರುತ್ತಾರೆ.

ಪರಂಪರೆ: ಮಠದ ಪರಂಪರೆಯಲ್ಲಿ ಎಷ್ಟು ಜನ ಗುರುಗಳು ಆಡಳಿತವನ್ನು ನಡೆಸಿದ್ದಾರೆ ಎಂಬುದರ ಬಗ್ಗೆ ಸರಿಯಾದ ಉಲ್ಲೇಖಗಳು ದೊರೆತಿಲ್ಲ. ಮಠದ ಆವರಣದಲ್ಲಿ ಸ್ಥಾಪನೆಯಾಗಿರುವ ಗದ್ದುಗೆಗಳ ಆಧಾರದ ಮೇಲೂ ಮಠದ ಕಾಲಮಾನವನ್ನು ಗುರುತಿಸಲಾಗುತ್ತಿಲ್ಲ, ಮಠದ ಜಮೀನಿನಲ್ಲಿ ಕೆಲವು ಗದ್ದುಗೆಗಳು ಅಸ್ತಿತ್ವದಲ್ಲಿವೆ ಎಂದು ಹೇಳಲಾಗುತ್ತಿದ್ದರೂ, ಇವುಗಳ ಸಂರಕ್ಷಣೆ ಮಾಡದೆ ಇರುವ ಕಾರಣ ಈಗ ಗುರುತಿಸಲಾಗುತ್ತಿಲ್ಲ.

೧. ಷ.ಬ್ರ.ಶ್ರೀ ನಾಗಪ್ಪ ಶಿವಾಚಾರ್ಯಸ್ವಾಮಿಗಳು (ಕರ್ತೃಗುರುಗಳು)
೨. ಷ.ಬ್ರ.ಶ್ರೀ ರುದ್ರಪ್ಪ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಪರಮೇಶ್ವರಪ್ಪಯ್ಯ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಈ ರೀತಿ ಈ ಮೂರು ಜನ ಗುರುಗಳ ಹೆಸರನ್ನು ಗುರುತಿಸಬಹುದಾಗಿದೆ. ಅಲ್ಲದೆ ಇತ್ತೀಚೆಗೆ ನೂತನ ಕಟ್ಟಡವನ್ನು ನಿರ್ಮಿಸಲು ತಳಪಾಯ ತೆಗೆಯುವಾಗ ಸಮಾಧಿಯೊಂದು ಸಿಕ್ಕಿದೆ. ಇದು ಹಿರಿಯ ಗುರುಗಳ ಗದ್ದುಗೆ ಎಂದು ಗುರುತಿಸಲಾಗಿದೆ.

ಅಭಿವೃದ್ಧಿ ಕಾರ್ಯಗಳು: ಕಳೆದ ಮೂವತ್ತೈದು ವರ್ಷಗಳ ಹಿಂದೆ ಅಧಿಕಾರ ವಹಿಸಿಕೊಂಡ ಶ್ರೀ ಪರಮೇಶ್ವರಪ್ಪಯ್ಯ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಹಳೆಯ ಕಟ್ಟಡವನ್ನು ತೆಗೆಸಿ ಕರ್ತೃಗುರುಗಳ ಹಾಗೂ ಶ್ರೀ ರುದ್ರಪ್ಪ ಸ್ವಾಮಿಗಳ ಗದ್ದುಗೆಯನ್ನು ಕೇಂದ್ರವನ್ನಾಗಿ ಮಾಡಿ ಮಠಕ್ಕೆ ನೂತನ ಕಟ್ಟಡವನ್ನು ನಿರ್ಮಿಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಪರಮೇಶ್ವರಪ್ಪಯ್ಯ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕತ್ತಿಗೆಮಠ, ಕತ್ತಿಗೆ, ಹೊನ್ನಾಳಿ ತಾ, ದಾವಣಗೆರೆ ಜಿಲ್ಲೆ.

ರಾಂಪುರ

ಹೊನ್ನಾಳಿ ತಾಲ್ಲೂಕಿನ ರಾಂಪುರವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಆರು ಕಿ.ಮೀ ದೂರದಲ್ಲಿದೆ. ರಾಮನಿಂದ ಸ್ಥಾಪಿಸಲ್ಪಟ್ಟ ದೇವಾಲಯ ಇಲ್ಲಿರುವುದರಿಂದ ಈ ಗ್ರಾಮಕ್ಕೆ 'ರಾಂಪುರ'ಎಂಬ ಹೆಸರು ಬಂದಿದೆ ಎಂದು ಸ್ಥಳ ಪುರಾಣ ತಿಳಿಸುತ್ತಿದೆ. ಇಂತಹ ಪುರಾಣ ಪ್ರಸಿದ್ಧ ಗ್ರಾಮದ ಹೊರಭಾಗದಲ್ಲಿ ತುಂಗಾ ಮತ್ತು ಭದ್ರ ನದಿಗಳ ದಡದಲ್ಲಿ ಶ್ರೀ ಹಾಲು ಸಿದ್ಧೇಶ್ವರ ಬೃಹನ್ಮಠವು ಸ್ಥಾಪನೆಯಾಗಿದೆ.

ಹಾಲುಸಿದ್ಧೇಶ್ವರ ಬೃಹನ್ಮಠ: ರಾಂಪುರದಲ್ಲಿ ಹಾಲು ಸಿದ್ಧೇಶ್ವರ ಬೃಹನ್ಮಠವನ್ನು ಶ್ರೀ ಹಾಲುಸಿದ್ಧೇಶ್ವರರು ಸ್ಥಾಪಿಸಿದರು. ಹಿಂದೆ ಆಚರಣೆಯಲ್ಲಿ ಕುಂಟಿತಗೊಂಡು ವೀರಶೈವ ಧರ್ಮವು ಕ್ಷೀಣಿಸುತ್ತಿರುವುದನ್ನು ಮನಗಂಡ ಪಂಚಪೀಠಗಳ ಪರಂಪರೆಗೆ

ಸೇರಿದ ಶ್ರೀ ಹಾಲುಸಿದ್ಧೇಶ್ವರರು, ಶ್ರೀ ಹಾಲುಶಂಕರರು ಮತ್ತು ಶ್ರೀ ಹಾಲುಸೋಮೇಶ್ವರರು ಎಂಬ ಶಿವಯೋಗಿಗಳು ವೀರಶೈವ ಧರ್ಮದ ಉದ್ಧಾರಕ್ಕಾಗಿ ಮೂರು ಕಡೆಗೆ ಪ್ರಯಾಣ ಬೆಳೆಸಿದರು. ಶ್ರೀ ಹಾಲುಸಿದ್ಧೇಶ್ವರರು ರಾಂಪುರದಲ್ಲಿ, ಶ್ರೀಹಾಲು ಶಂಕರರು ಬಸವಪಟ್ಟಣದಲ್ಲಿ ಮತ್ತು ಶ್ರೀ ಹಾಲುಸೋಮೇಶ್ವರರು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ಗುಂಡೇರಿಯಲ್ಲಿ ನೆಲೆಗೊಂಡು, ವೀರಶೈವ ಧರ್ಮವನ್ನು ಬೆಳೆಸಲು ಮುಂದಾದರು. ಮುಂದೆ ಬಸವಪಟ್ಟಣದ ಪಂಚವಣ್ಣಿಗೆ ಮಠದ ವಂಶಸ್ಥರಾದ ಶ್ರೀ ಬಸವಲಿಂಗಾರ್ಯರು ಮತ್ತು ಶ್ರೀಮತಿ ಚನ್ನವೀರಾಂಬೆಯವರ ಪುತ್ರರಾಗಿ (ಕ್ರಿ.ಶ.೮೦೫) ಜನಿಸಿದ ಶ್ರೀ ಹಾಲುಸ್ವಾಮಿಗಳು ಈ ಪರಂಪರೆಯ ಮಠಗಳನ್ನು ಬೆಳೆಸಿ ವೀರಶೈವ ಧರ್ಮ ಬೆಳೆಯಲು ಕಾರಣೀಭೂತರಾದರು.

ಶ್ರೀ ಹಾಲುಸ್ವಾಮಿಗಳು ಬಾಲ್ಯಾವಸ್ಥೆಯಲ್ಲೇ ಅನೇಕ ಪವಾಡಗಳನ್ನು ಮಾಡಿ ಜನರನ್ನು ಚಕಿತಗೊಳಿಸಿದರು. ಇವರು ಮುಳ್ಳು ಗದ್ದುಗೆಯ ಮೇಲೆ ಪವಡಿಸಿ, ಅನುಷ್ಠಾನಗೊಂಡ ಪವಾಡವನ್ನು ಇಂದಿಗೂ ಈ ಮಠದ ಪರಂಪರೆಯ ಗುರುಗಳು ಸೀಗೆ ಹುಣ್ಣಿಮೆಯ ದಿನ ನಡೆಯುವ ಉತ್ಸವದಲ್ಲಿ ಮಾಡಿ ತೋರಿಸುತ್ತಾರೆ. ಶ್ರೀ ಹಾಲುಸ್ವಾಮಿಗಳು ಬಸವಪಟ್ಟಣದಿಂದ ರಾಂಪುರಕ್ಕೆ ಆಗಮಿಸಿ ತುಂಬಿ ಹರಿಯುತ್ತಿದ್ದ ತುಂಗಭದ್ರಾನದಿಯ ನೀರಿನ ಮೇಲೆ ಬಾಳೆಎಲೆಯನ್ನು ಹಾಸಿ ಅದರ ಮೇಲೆ ಕುಳಿತು ಆಚೆಯ ದಡವನ್ನು ಸೇರಿ ಪವಾಡ ಮಾಡಿದರಂತೆ. ಇಂತಹ ನೂರಾರು ಪವಾಡದ ಕಥೆಗಳು ಇಲ್ಲಿನ ಭಕ್ತರ ಬಾಯಲ್ಲಿ ಜನಜನಿತವಾಗಿವೆ. ಶ್ರೀ ಹಾಲುಸಿದ್ಧೇಶ್ವರರು, ಶ್ರೀ ಹಾಲುಶಂಕರರು ಹಾಗೂ ಶ್ರೀ ಹಾಲುಸೋಮೇಶ್ವರರಿಂದ ಪ್ರಾರಂಭಗೊಂಡ ಈ ಪರಂಪರೆ ಶ್ರೀ ಹಾಲುಸ್ವಾಮಿಗಳಿಂದ ಒಂದಾಗಿ ಬೆಳೆದು ಈ ಮೂರು ಮಠಗಳನ್ನು ಒಳಗೊಂಡಂತೆ ರಾಂಪುರದಲ್ಲಿ ಮಠವನ್ನು ಸ್ಥಾಪಿಸಿ, ಧರ್ಮ ಕಾರ್ಯವನ್ನು ಕೈಗೊಂಡು ಜೀವಂತ ಸಮಾಧಿಯಾದರು.

ಪರಂಪರೆ:

೧. ಷ.ಬ್ರ.ಶ್ರೀ ಹಾಲುಸ್ವಾಮಿಗಳು (ಕ್ರಿ.ಶ.೮೦೫)
೨. ಷ.ಬ್ರ.ಶ್ರೀ ಎರಡನೆಯ ಹಾಲುಸ್ವಾಮಿಗಳು (೧೮೪೦-೧೯೨೦)
೩. ಷ.ಬ್ರ.ಶ್ರೀ ಮೂರನೆಯ ಹಾಲುಸ್ವಾಮಿಗಳು (೧೯೨೦-೧೯೩೪)
೪. ಷ.ಬ್ರ.ಶ್ರೀ ವಿಶ್ವಾರಾಧ್ಯ ಶಿವಾಚಾರ್ಯ ಹಾಲುಸ್ವಾಮಿಗಳು (೧೯೩೪-೧೯೯೫)
೫. ಷ.ಬ್ರ.ಶ್ರೀ ವಿಶ್ವೇಶ್ವರ ಶಿವಾಚಾರ್ಯ ಹಾಲುಸ್ವಾಮಿಗಳು (೧೯೯೫-)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಮಠದ ಕರ್ತೃ ಗುರುಗಳಾದ ಶ್ರೀ ಹಾಲುಸ್ವಾಮಿಗಳು ರಾಂಪುರದಲ್ಲಿ ಜೀವಂತ ಸಮಾಧಿಯಾದ ಮೇಲೆ ಎರಡನೆಯ ಶ್ರೀ ಹಾಲುಸ್ವಾಮಿಗಳು ಮಠದ ಅಧಿಕಾರಕ್ಕೆ ಬಂದು ಅನೇಕ ಪವಾಡಗಳನ್ನು ಮಾಡಿ, ವೀರಶೈವ ಸಿದ್ಧಾಂತವನ್ನು ಬೋಧಿಸಿ ಧರ್ಮವನ್ನು ಬೆಳೆಸಿದ್ದಾರೆ. ಇವರು ಕರ್ತೃ ಗುರುಗಳ ಉತ್ಸವವನ್ನು ಪ್ರಾರಂಭಿಸಿ, ನಿತ್ಯ ಧರ್ಮೋಪದೇಶ ಹಾಗೂ ಅನ್ನ ದಾಸೋಹ ನಡೆಯುವಂತೆ ಮಾಡಿದರು. ಇಂತಹ ಮಹಾಮಹಿಮಾ ಶಾಲಿಗಳು ೧೭೨೭ ರಲ್ಲಿ ಲಿಂಗೈಕ್ಯರಾದರು. ಇವರ ನಂತರ ಶ್ರೀ ಸಣ್ಣಹಾಲಪ್ಪಯ್ಯ ಮತ್ತು ಶ್ರೀಮತಿ ಹಾಲಮ್ಮನವರ ದ್ವಿತೀಯ ಪುತ್ರರಾಗಿ ಜನಿಸಿದ ಶ್ರೀ ಹಾಲುಸ್ವಾಮಿಗಳು ಹಾಲುಸ್ವಾಮಿ ಬೃಹನ್ಮಠದ ಮೂರನೆಯ ಮಠಾಧ್ಯಕ್ಷರಾಗಿ ೧೯೨೦ ರಲ್ಲಿ ಅಧಿಕಾರವನ್ನು ವಹಿಸಿಕೊಂಡರು. ಇವರು ಅನೇಕ ಪವಾಡಗಳನ್ನು ಮಾಡಿ ನಾಲ್ಕನೆಯ ಗುರುಗಳಾದ ಶ್ರೀ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮಿಗಳಿಗೆ ೧೯೩೪ ರಲ್ಲಿ ಪಟ್ಟಾಧಿಕಾರವನ್ನು ನೀಡಿ ಸಂಚಾರಕ್ಕೆ ಹೊರಟರು. ಗುರುಗಳು ಸಂಚಾರದಲ್ಲಿದ್ದ ಸಂದರ್ಭದಲ್ಲಿ ಗುಂಡೇರಿ ಮಠದಲ್ಲಿ ೧೯೪೮ ರಲ್ಲಿ ಲಿಂಗೈಕ್ಯರಾದರು.

ಈಗಿನ ಹಿರಿಯ ಗುರುಗಳಾದ ಶ್ರೀ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮಿಗಳು ರಾಂಪುರದ ಶ್ರೀ ಚನ್ನಬಸವಯ್ಯ ಮತ್ತು ಶ್ರೀಮತಿ ವೀರಮ್ಮನವರ ಪುತ್ರರಾಗಿ ಜನಿಸಿದರು. ಇವರು ಹತ್ತನೆಯ ವಯಸ್ಸಿನಲ್ಲಿ ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡು ನಾಲ್ಕನೆಯ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿ, ನಂತರ ಹಿರಿಯ ಗುರುಗಳ ಸಮ್ಮುಖದಲ್ಲಿ ಮಠದಲ್ಲೇ ಅಮರಕೋಶ, ಸಿದ್ಧಾಂತ ಶಿಖಾಮಣಿ, ರಾಜಶೇಖರ ವಿಳಾಸ ಮುಂತಾದ ಅನೇಕ ಗ್ರಂಥಗಳನ್ನು ಅಭ್ಯಾಸ ಮಾಡಿದರು. ಮುಳ್ಳು ಗದ್ದುಗೆಯ ಪವಾಡವನ್ನು ಮಾಡಿ ಲೋಕಸಂಚಾರಕ್ಕೆ ಹೊರಟು ತಮ್ಮ ಶಾಖಾಮಠಗಳಲ್ಲಿ ಅನುಷ್ಠಾನಕ್ಕೈಗೊಂಡು ಮಠಕ್ಕೆ ಆಗಮಿಸಿ, ಧಾರ್ಮಿಕ ಕಾರ್ಯಗಳನ್ನು ಸುವ್ಯವಸ್ಥಿತವಾಗಿ ನಡೆಸಿ ಮಠ ಮತ್ತು ಸಮಾಜವನ್ನು

ಅಭಿವೃದ್ಧಿಗೊಳಿಸಿದರು. ಶ್ರೀ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಮಠದ ಆಡಳಿತದಿಂದ ನಿವೃತ್ತಿಗೊಂಡು, ಶ್ರೀ ವಿಶ್ವೇಶ್ವರ ಶಿವಾಚಾರ್ಯ ಸ್ವಾಮಿಗಳಿಗೆ ಅಧಿಕಾರವನ್ನು ನೀಡಿದ್ದಾರೆ.

ಐದನೆಯ ಪಟ್ಟಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಚನ್ನಬಸವ ಸ್ವಾಮಿಗಳು ಮತ್ತು ಶ್ರೀಮತಿ ಗಿರಿಜಮ್ಮನವರ ಪುತ್ರರಾಗಿ ಜನಿಸಿದರು. ಇವರು ಹೊನ್ನಾಳಿ, ಮೈಸೂರು, ಶಿವಮೊಗ್ಗ ಹಾಗೂ ಭದ್ರಾವತಿಯಲ್ಲಿ ವಿದ್ಯಾಭ್ಯಾಸವನ್ನು ಮಾಡಿ, ಕಾನೂನು ಪದವಿ ಪಡೆದು, ಸಂಸ್ಕೃತ ಮತ್ತು ಆಂಗ್ಲ ಭಾಷೆಯಲ್ಲಿ ಡಿಪ್ಲೋಮ ಪದವಿಯನ್ನು ಪಡೆದು ಮಠಕ್ಕೆ ಆಗಮಿಸಿ ೧೯೮೫ ರ ಜನವರಿ ಇಪ್ಪತ್ತೊಂದರಂದು ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಗುರುಗಳು ಮಠದ ಪರಂಪರೆಯ ಶಾಖಾಮಠಗಳ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗದ್ದುಗೆಗಳಿಗೆ ನಿತ್ಯಪೂಜೆ, ಅಮಾವಾಸ್ಯೆ, ಹುಣ್ಣಿಮೆಯಲ್ಲಿ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ ಹಾಗೂ ಶ್ರಾವಣ ಮಾಸದಲ್ಲಿ ಪ್ರತಿದಿನ ರುದ್ರಾಭಿಷೇಕ ಪೂಜೆ ನಡೆಯುತ್ತಿದೆ. ಪ್ರತಿ ಅಮಾವಾಸ್ಯೆಯಲ್ಲಿ ಐದುನೂರರಿಂದ ಎಂಟುನೂರು ಜನ ಮಠಕ್ಕೆ ಆಗಮಿಸುತ್ತಾರೆ. ಈ ಸಂದರ್ಭದಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗು ತ್ತಿದೆ. ಮಾಘ ಬಹುಳ ಬಿದಿಗೆಯಂದು ಶ್ರೀ ಹಾಲುಸ್ವಾಮಿಗಳ ರಥೋತ್ಸವ ನಡೆಯುತ್ತಿದೆ. ಈ ಸಂದರ್ಭದಲ್ಲಿ ಇಪ್ಪತ್ತು ದಿನಗಳ ಕಾಲ ಪುರಾಣ ಪ್ರವಚನವನ್ನು ನಡೆಸಲಾಗುತ್ತಿದೆ. ಈ ಮಠದ ಪರಂಪರೆಯ ಮುಳ್ಳು ಗದ್ದುಗೆಯ ಮೇಲೆ ಅನುಷ್ಠಾನಗೊಂಡು ಮುಂದೆ ನಡೆಯಬಹುದಾದ ಘಟನೆಗಳ ಬಗ್ಗೆ ಕಾರ್ಣಿಕ (ಭವಿಷ್ಯ) ವನ್ನು ಹೇಳುವುದು ವಿಶೇಷವಾಗಿರುತ್ತದೆ.

ಶೈಕ್ಷಣಿಕ ಸೇವೆ: ೧೯೯೨ರಲ್ಲಿ 'ಶ್ರೀ ಹಾಲುಸ್ವಾಮಿ ವಿದ್ಯಾಪೀಠ'ವನ್ನು ಸ್ಥಾಪಿಸಿ ಪ್ರಾಥಮಿಕ ಶಾಲೆ ಹಾಗೂ ಉಚಿತ ಪ್ರಸಾದ ನಿಲಯವನ್ನು ಪ್ರಾರಂಭಿಸಲಾಗಿದೆ. ಮಠದ ವತಿಯಿಂದ ಕಲಿಯುವ ಬಡಮಕ್ಕಳಿಗೆ ನೆರವುನೀಡಿ ಕಲಿಕೆಗೆ ಪ್ರೋತ್ಸಾಹಿಸಲಾಗುತ್ತಿದೆ.

ಪರಂಪರೆಯ ವಿಶೇಷತೆ: ಪರಂಪರೆಯ ಗುರುಗಳು ಸಂನ್ಯಾಸಾಶ್ರಮವನ್ನು ತೊರೆದು ಮಠದ ಪಟ್ಟಾಧಿಕಾರವನ್ನು ಉತ್ತರಾಧಿಕಾರಿಗಳಿಗೆ ನೀಡಿ ಗೃಹಸ್ಥಾಶ್ರಮವನ್ನು ಸ್ವೀಕರಿಸುವ ವಿಶೇಷ ಸಂಪ್ರದಾಯ, ಈ ಮಠದ ಪರಂಪರೆಯಲ್ಲಿ ಬೆಳೆದು ಬಂದಿದೆ.

ವಿಳಾಸ:ಷ.ಬ್ರ.ಶ್ರೀ ವಿಶ್ವೇಶ್ವರ ಶಿವಾಚಾರ್ಯ ಹಾಲುಸ್ವಾಮಿಗಳು, ಶ್ರೀ ಹಾಲುಸ್ವಾಮಿ ಬೃಹನ್ಮಠ, ರಾಂಪುರ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.
ಆಧಾರ: 'ಶ್ರೀ ಗುರುಹಾಲೇಶ ಮಹಿಮಾಮೃತ' **ಲೇಖಕರು:** ಶ್ರೀ ಎಂ.ಹಾಲಸಿದ್ದಯ್ಯ ಸ್ವಾಮಿ.

ಹೊನ್ನಾಳಿ

ದಾವಣಗೆರೆ ಜಿಲ್ಲೆಯ ಹೊನ್ನಾಳಿಯು ಜಿಲ್ಲಾ ಕೇಂದ್ರದಿಂದ ನೈರುತ್ಯಕ್ಕೆ ಮೂವತ್ತು ಕಿ.ಮೀ.ದೂರದಲ್ಲಿದೆ. ತಾಲ್ಲೂಕಿನ ಕೇಂದ್ರ ಸ್ಥಳವಾಗಿರುವ ಹೊನ್ನಾಳಿಯಲ್ಲಿ ಶ್ರೀ ಹಿರೇಕಲ್ಮಠವು ಸ್ಥಾಪನೆಯಾಗಿ ಈ ಕ್ಷೇತ್ರವು ಪ್ರಸಿದ್ಧಿ ಪಡೆಯಲು ಕಾರಣವಾಗಿದೆ. ಹಿಂದೆ ಬಿದರಳ್ಳಿ, ಎಂಬ ಹೆಸರಿತ್ತು. ಕ್ರಿ.ಶ. ೯೫೦-೧೦೦೦ ಸುಮಾರಿನಲ್ಲಿ ಶ್ರೀಶೈಲ ಪೀಠದ ಜಗದ್ಗುರುಗಳಾದ ಶ್ರೀ ಜಡೇಶಂಕರ ಶಿವಾಚಾರ್ಯಸ್ವಾಮಿಗಳು ಇಲ್ಲಿ ತಮ್ಮ ತಪೋಶಕ್ತಿಯಿಂದ ಒಣಗಿದ ಅರಳಿಮರವನ್ನು ಚಿಗುರುವಂತೆ ಮಾಡಿ ಆದರಿಂದ ಹೊನ್ನುಗಳನ್ನು ಸುರಿಸಿದರಂತೆ. ಅಂದಿನಿಂದ ಸುವರ್ಣಪುರ ಎಂದು ಹೆಸರು ಪಡೆಯಿತು. ಕಾಲಕ್ರಮೇಣ ಹೊನ್ನಾರಳಿಯಾಗಿ ಈಗ ಹೊನ್ನಾಳಿಯಾಗಿದೆ ಎಂದು ತಿಳಿದುಬರುತ್ತದೆ.

ಹಿರೇಕಲ್ಮಠ: ಹೊನ್ನಾಳಿ ಪಟ್ಟಣದ ಪಶ್ಚಿಮದ ಹೊರಭಾಗದಲ್ಲಿ ಶ್ರೀಶೈಲ ಪೀಠದ ಶಾಖಾಮಠವಾದ ಶ್ರೀ ಹಿರೇಕಲ್ಮಠವು ತುಂಗಭದ್ರಾ ನದಿಯ ಎಡದಂಡೆಯ ಮೇಲೆ ಸ್ಥಾಪನೆಯಾಗಿದೆ. ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಹಿತ್ಯಿಕವಾಗಿ ಪ್ರಗತಿ ಕಾರ್ಯಗಳನ್ನು ಕೈಗೊಂಡಿದೆ. ಅನ್ನದಾಸೋಹ ಮತ್ತು ಜ್ಞಾನದಾಸೋಹದಿಂದ ಸಾಮಾಜಿಕ ಸೇವೆಯಲ್ಲಿ ತನ್ನನ್ನು ತೊಡಗಿಸಿಕೊಂಡು ಜನಮನದಲ್ಲಿ ಉಳಿದು ಬೆಳೆದಿದೆ.

ಮಠ ಸ್ಥಾಪನೆ: ಶ್ರೀ ಜಡೇಶಂಕರ ಶಿವಾಚಾರ್ಯ ಸ್ವಾಮಿಗಳು ಶ್ರೀಶೈಲದಿಂದ ಬಾಳೆಹೊನ್ನೂರಿನ ಶ್ರೀ ರಂಭಾಪುರಿ ಪೀಠಕ್ಕೆ

ಆಗಮಿಸುತ್ತಿದ್ದ ಸಂದರ್ಭದಲ್ಲಿ ಇಲ್ಲಿನ ಅರಳಿಮರದ ಕೆಳಗೆ ವಿಶ್ರಾಂತಿಗೆಂದು ತಂಗಿದರು. ಇದೇ ಸಂದರ್ಭದಲ್ಲಿ ತಮ್ಮ ಪವಾಡದಿಂದ ಹೊನ್ನನ್ನು ಸುರಿಸಿದ್ದಲ್ಲದೆ ಭಕ್ತರನ್ನು ಉದ್ಧರಿಸಿ ಇಲ್ಲಿಯೆ ಲಿಂಗೈಕ್ಯರಾದರೆಂದು ಮಠದ ಪುರಾಣ ತಿಳಿಸುತ್ತದೆ. ಇವರ ನಂತರ ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮಿಗಳು ಲೋಕಸಂಚಾರ ಮಾಡುತ್ತ ಇಲ್ಲಿಗೆ ಆಗಮಿಸಿ ಜಗದ್ಗುರುಗಳ ಗದ್ದುಗೆಯ ಮೇಲೆ ಮಠವನ್ನು ಸ್ಥಾಪಿಸಿ ಬೆಳೆಸಿದರು.

ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮಿಗಳು ಇಲ್ಲಿ ನೆಲೆನಿಂತ ಮೇಲೆ ಧಾರ್ಮಿಕ ವಿಚಾರಗಳಿಂದ ಇಲ್ಲಿನ ಭಕ್ತರ ಮನಗೆದ್ದು ಬಡವ ಬಲ್ಲಿದ, ದೀನ ದಲಿತರೆನ್ನದೆ ಸಮಷ್ಟಿಸಮಾಜದ ಅಭಿವೃದ್ಧಿಗೆ ಶ್ರಮಿಸಿ,ಎಲ್ಲಾ ವರ್ಗದ ಜನರ ಗುರುಗಳಾಗಿ ಬೆಳಗಿದರು. ಶ್ರೀ ಚನ್ನಪ್ಪಸ್ವಾಮಿ ಎಂದೇ ಹೆಸರು ಪಡೆದ ಗುರುಗಳು ತಮ್ಮ ಕಾಲದಲ್ಲಿ ಅಚ್ಚಳಿಯದ ಕಲ್ಮಠವನ್ನು ಸ್ಥಾಪಿಸಿದ್ದಾರೆ.

ಕತ್ತಿಗೆಗಿರಿಯಿಂದ ಕಲ್ಲುಗಳನ್ನು ತರಿಸಿ ಶ್ರಮಕ್ಕೆ ತಕ್ಕಷ್ಟು ಕೂಲಿನೀಡಿ ಶ್ರಮಿಕರಿಗೆ ಅನ್ನದಾತರಾಗಿ, ಕೈತುಂಬಾ ಕಾಯಕ ಸೃಷ್ಟಿಮಾಡಿದರು. ಅಂದೇ ಅಂತಹ ಭವ್ಯಕಟ್ಟಡ ನಿರ್ಮಿಸಿದ ಗುರುಗಳು ಈ ಸಂದರ್ಭದಲ್ಲಿ ಅನೇಕ ಪವಾಡಗಳನ್ನು ಮಾಡಿ ಜನರನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಮಾಡಿದರು. ಮಾರಿಕೊಪ್ಪದಲ್ಲಿ ದೇವರಿಗೆ ಪಶುಬಲಿ ಕೊಡುತ್ತಿದ್ದುದನ್ನು ನಿಲ್ಲಿಸಿ, 'ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿ ಬದುಕಬೇಕು' ಎಂದು ಭಕ್ತರಿಗೆ ಉಪದೇಶವನ್ನು ನೀಡಿ ಉದ್ಧರಿಸಿದರು. ಈ ರೀತಿ ಸಾಮಾಜಿಕ ಕ್ರಾಂತಿ ಮಾಡಿ, ವೀರಶೈವ ಧರ್ಮದ ತತ್ವಗಳ ತಳಹದಿಯ ಮೇಲೆ ಸಮಾಜವನ್ನು ಬೆಳೆಸಿ ಮಹಾತ್ಮರಾಗಿದ್ದಾರೆ.

ಪರಂಪರೆ:

೧. ಷ.ಬ್ರ.ಶ್ರೀ ಚನ್ನಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಮರಿ ಜಡೆಯಶಂಕರ ದೇವರು
೩. ಷ.ಬ್ರ.ಶ್ರೀ ಗಿರಿಮಲ್ಲೇಶ ದೇವರು
೪. ಷ.ಬ್ರ.ಶ್ರೀ ಕರಿಬಸವ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಚನ್ನಗುರುಮಲ್ಲಯ್ಯ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ವೀರಭದ್ರ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ಕೆಂಚವೀರ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ಚನ್ನಪ್ಪಯ್ಯ ಶಿವಾಚಾರ್ಯಸ್ವಾಮಿಗಳು
೧೦. ಷ.ಬ್ರ.ಶ್ರೀ ಗುರುಸಿದ್ಧ ಶಿವಾಚಾರ್ಯಸ್ವಾಮಿಗಳು
೧೧. ಷ.ಬ್ರ.ಶ್ರೀ ಒಡೆಯರ್ ಚನ್ನಮಲ್ಲಪ್ಪಯ್ಯ ಶಿವಾಚಾರ್ಯಸ್ವಾಮಿಗಳು
೧೨. ಷ.ಬ್ರ.ಶ್ರೀ ಒಡೆಯರ್ ಮುರುಘೇಂದ್ರ ಶಿವಾಚಾರ್ಯಸ್ವಾಮಿಗಳು
೧೩. ಷ.ಬ್ರ.ಶ್ರೀ ಒಡೆಯರ್ ರುದ್ರಮುನಿ ಶಿವಾಚಾರ್ಯಸ್ವಾಮಿಗಳು
೧೪. ಷ.ಬ್ರ.ಶ್ರೀ ಒಡೆಯರ್ ರುದ್ರಮುನಿ ಶಿವಾಚಾರ್ಯಸ್ವಾಮಿಗಳು
೧೫. ಷ.ಬ್ರ.ಶ್ರೀ ಒಡೆಯರ್ ಮೃತ್ಯುಂಜಯ ಶಿವಾಚಾರ್ಯಸ್ವಾಮಿಗಳು
೧೬. ಷ.ಬ್ರ.ಶ್ರೀ ಒಡೆಯರ್ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಈ ಮಠದ ಎಲ್ಲಾ ಗುರುಗಳೂ ಕ್ರಿಯಾಶೀಲರಾಗಿ, ಪವಾಡಗಳನ್ನು ಮಾಡಿ ಮಠವು ಜನಮನದಲ್ಲಿ ಅಚ್ಚಳಿಯದಂತೆ ಮಾಡಿದ್ದಾರೆ. ಮಠದ ನಾಲ್ಕನೆಯ ಶ್ರೀ ಚನ್ನಬಸವಸ್ವಾಮಿ ಶಿವಾಚಾರ್ಯ ಸ್ವಾಮಿಗಳು ಕೆಳದಿ ಅರಸರ ಗುರುಗಳಾಗಿ, ಅವರ ಇಷ್ಟಾರ್ಥ ಸಿದ್ಧಿಗೆ ಆಶೀರ್ವಾದ ನೀಡಿ ಅನೇಕ ಗೌರವ ಕಾಣಿಕೆಗಳನ್ನು ಸ್ವೀಕರಿಸಿ ಮಠವನ್ನು ಉದ್ಧರಿಸಿದ್ದಾರೆ. ಏಳನೆಯ ಗುರುಗಳಾದ ಶ್ರೀ ಕೆಂಚವೀರೇಶ್ವರ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ, ಧರ್ಮಪ್ರಸಾರಕ್ಕೆ ಲೋಕಸಂಚಾರ ಕೈಗೊಂಡು ಹರಿಹರಪುರ ತಾಲ್ಲೂಕಿನ ನಂದಿಗುಡಿಯಲ್ಲಿ ಲಿಂಗೈಕ್ಯರಾಗಿದ್ದಾರೆ. ಹನ್ನೊಂದನೆಯ ಗುರುಗಳಾದ ಶ್ರೀ ಚನ್ನದೇಶಿಕ ರುದ್ರಸ್ವಾಮಿಗಳ ಪಟ್ಟಾಧಿಕಾರಕ್ಕೆ ಆಗಮಿಸಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಪಟ್ಟಾಭಿಷೇಕ ಕಾರ್ಯವನ್ನು ಕಣ್ಣಾರೆ ನೋಡಿ ಸಂತೋಷಗೊಂಡು ಪರಂಪರೆಯ ಪಟ್ಟದ ಸ್ವಾಮಿಗಳಿಗೆ 'ಒಡೆಯರ್' ಎಂಬ ಬಿರುದನ್ನು

ನೀಡಿ ಗೌರವಿಸುತ್ತಾರೆ. ಅಂದಿನಿಂದ ಈ ಪರಂಪರೆಯ ಗುರುಗಳು ಹೆಸರಿನ ಜತೆಗೆ ಒಡೆಯರ್ ಎಂಬುದನ್ನು ಸೇರಿಸಿಕೊಂಡಿದ್ದಾರೆ.

ಹದಿನೈದನೆಯ ಪಟ್ಟಾಧ್ಯಕ್ಷರಾದ ಶ್ರೀ ಮೃತ್ಯುಂಜಯ ಶಿವಾಚಾರ್ಯ ಒಡೆಯರು ಶಿರಹಟ್ಟಿ ತಾಲ್ಲೂಕಿನ ಮಾದಹಳ್ಳಿ ಹಿರೇಮಠದಲ್ಲಿ ಜನಿಸಿ, ಅಧಿಕಾರವನ್ನು ವಹಿಸಿಕೊಳ್ಳುತ್ತಾರೆ. ಅಖಂಡ ಪಂಡಿತರಾಗಿ ವೇದ, ಸಂಸ್ಕೃತ, ಆಗಮಗಳನ್ನು ಅಭ್ಯಾಸ ಮಾಡಿದ್ದ ಗುರುಗಳು ಸಂಗೀತಕ್ಕೆ ಹೆಚ್ಚು ಪ್ರೋತ್ಸಾಹ ನೀಡಿ ಬೆಳೆಸಿದ್ದಾರೆ. ಇವರ ಕಾಲದಲ್ಲಿ ಮಠವು ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯಿಕ ಹಾಗೂ ಶೈಕ್ಷಣಿಕವಾಗಿ ಹೆಚ್ಚು ಸಾಧನೆ ಸಾಧಿಸಿತ್ತು. ೧೯೨೯ ರಲ್ಲಿ ಮಠದ ಅಧಿಕಾರ ವಹಿಸಿಕೊಂಡ ಗುರುಗಳು ಸಂಗೀತ ಮತ್ತು ಸಂಸ್ಕೃತ ಪಾಠಶಾಲೆಗಳನ್ನು ಪ್ರಾರಂಭಿಸಿದರು. ಮಠದ ಆವರಣದಲ್ಲಿ ಪ್ರತಿ ಅಮಾವಾಸ್ಯೆಯ ರಾತ್ರಿ ಪುರಾಣ ಪ್ರವಚನ ಹಾಗೂ ಕೀರ್ತನೆಯನ್ನು ಏರ್ಪಡಿಸಲಾಗುತ್ತಿದೆ.

ಶ್ರೀ ಒಡೆಯರ್ ಚಂದ್ರಶೇಖರ ಶಿವಾಚಾರ್ಯರು: ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನ ಕಂದಗಲ್ಲುಪುರ ಗ್ರಾಮದ ಸೋಗಿಪುರವರ್ಗ ಕಟ್ಟಿಮನೆಮಠದ ವಂಶಸ್ಥರಾದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಹಿರೇಕಲ್ಮಠಕ್ಕೆ ಉತ್ತರಾಧಿಕಾರಿಗಳಾಗಿ ವಿಧ್ಯುಕ್ತವಾಗಿ ಆಯ್ಕೆಯಾದ ಮೇಲೆ ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಿದರು. ಇವರು ಸ್ನಾತಕೋತ್ತರ ಪದವಿಯನ್ನು ಮುಗಿಸಿ, ವಿದ್ವತ್ ಸಂಪಾದಿಸಿಕೊಂಡು ಬಂದು ೧೯೭೨ರ ನವೆಂಬರ್ ಆರರಂದು ಹಿರೇಕಲ್ಮಠದ ಅಧಿಕಾರವನ್ನು ವಹಿಸಿಕೊಳ್ಳುತ್ತಾರೆ. ಅಂದಿನ ಪಟ್ಟಾಧಿಕಾರದ ಸಂದರ್ಭಕ್ಕೆ ಶ್ರೀಶೈಲ ಪೀಠದ ಜಗದ್ಗುರು ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು ಹಾಗೂ ರಂಭಾಪುರಿ ಪೀಠದ ಜಗದ್ಗುರು ಶ್ರೀ ಪ್ರಸನ್ನರೇಣುಕ ವೀರಗಂಗಾಧರ ಶಿವಾಚಾರ್ಯ ಭಗವತ್ಪಾದರು ಆಗಮಿಸಿ ಆಶೀರ್ವದಿಸಿದರು. ಪಟ್ಟಾಧಿಕಾರದ ಅನುಗ್ರಹವನ್ನು ಬಳ್ಳಾರಿ ಜಿಲ್ಲೆಯ ಸೋಗಿಪುರವರ್ಗದ ಕಟ್ಟೀಮನಿ ಮಠದ ಶ್ರೀ ಸಿದ್ಧವೀರ ಶಿವಾಚಾರ್ಯ ಸ್ವಾಮಿಗಳು ನೀಡಿರುತ್ತಾರೆ.

ಬೆಳೆದ ಸಿರಿ: ವಿದ್ಯಾಭೂಷಣರಾಗಿ, ಪ್ರಗತಿಪರ ಚಿಂತಕರಾಗಿ ಮಠದ ಅಧಿಕಾರ ವಹಿಸಿಕೊಂಡ ಶ್ರೀ ಒಡೆಯರ್ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಸರಳಜೀವಿಗಳಾಗಿ, ಶಿವಪೂಜಾ ನಿಷ್ಠರಾಗಿ ಸಂಯಮದಿಂದ ಸಮಷ್ಟಿ ಸಮಾಜವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ತಮ್ಮ ಮಠದ ಚಟುವಟಿಕೆಗಳನ್ನು ವಿಸ್ತರಿಸತೊಡಗಿದರು. ಪಂಚಾಚಾರ್ಯರ ತತ್ತ್ವಗಳನ್ನು ಸಮಾಜಕ್ಕೆ ತಿಳಿಸಲು ಹೊರಟ ಒಡೆಯರ್ ಶ್ರೀ ಚಂದ್ರಶೇಖರ ಶಿವಾಚಾರ್ಯರು ವೀರಶೈವ ಸಿದ್ಧಾಂತವನ್ನು ಜನಮನಕ್ಕೆ ಮುಟ್ಟುವಂತೆ ತಿಳಿ ಹೇಳಿ, ಪರಂಪರೆಯ ಸಮರ್ಥ ಗುರುಗಳಾಗಿ ಮಠದ ವೈಭವವನ್ನು ಇನ್ನೂ ಹೆಚ್ಚಿಸುತ್ತಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಒಡೆಯರ್ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಕೆಳದಿ ಅರಸರು ಮತ್ತು ಮೈಸೂರು ಒಡೆಯರು ನೀಡಿದ ಆಸ್ತಿಯನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಮುಂದಾದರು. ಮಠಕ್ಕೆ ಹೆಚ್ಚು ಆದಾಯ ಬರುವಂತೆ ಮಾಡತೊಡಗಿ, ಮಠದ ಸಮುಚ್ಚಯದಲ್ಲಿ ಹತ್ತು ಹಲವು ಅಭಿವೃದ್ಧಿ ಯೋಜನೆಗಳನ್ನು ಕೈಗೊಂಡಿದ್ದಾರೆ. ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಿ ವೇದ, ಆಗಮ ಹಾಗೂ ಜ್ಯೋತಿಷ್ಯವನ್ನು ಕಲಿಸಿಕೊಡುತ್ತಿದ್ದಾರೆ.

ಶಿವಪೂಜಾ ನಿಷ್ಠರು: ಗುರುಗಳು ಪ್ರಾತಃಕಾಲದಲ್ಲಿ ಎದ್ದು ಶಿವಪೂಜೆಗೆ ಕುಳಿತರೆಂದರೆ ಅಂಗಲಿಂಗದ ಭೇದವು ತಿಳಿಯದಂತೆ, ಲಿಂಗದಲ್ಲಿ ಬೆರೆತು ಲಿಂಗ ರೂಪವಾಗಿ ಆನಂದ ಹೊಂದುತ್ತಾರೆ. ಲಿಂಗಾಂಗ ಸಾಮರಸ್ಯದಲ್ಲಿ ಆನಂದ ಕಂಡ ಶ್ರೀ ಒಡೆಯರ್ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಪೂಜೆಯ ನಂತರ ಪ್ರಸಾದ ಸ್ವೀಕರಿಸಿ ಮೇಲೆದ್ದು ಮಠದ ಪರಂಪರೆಯ ಓಲಗ, ತಾಳ ಮದ್ದಳೆಯ ಜತೆ ಕರ್ತೃಗುರು ಶ್ರೀ ಚನ್ನಮಲ್ಲಿಕಾರ್ಜುನ ಶಿವಾಚಾರ್ಯರ ಜೀವಂತ ಸಮಾಧಿಯ ಗದ್ದುಗೆಗೆ ನಿರ್ಮಿಸಿರುವ ಮಂಟಪ, ಗುರುನಿವಾಸ ಮಠ, ಚೌಡಾಂಬಿಕೆ, ವೀರಭದ್ರಸ್ವಾಮಿ ಸೇರಿದಂತೆ ಮಠದಲ್ಲಿರುವ ಹನ್ನೆರಡು ಗದ್ದುಗೆಗಳಿಗೆ ಮಡಿಯುಟ್ಟು ಪೂಜೆ ಸಲ್ಲಿಸಿ ದರ್ಶನ ಪಡೆದು ಸಮಾಜಕ್ಕೆ ಸರ್ವಮಂಗಳವಾಗಲಿ ಎಂದು ಪ್ರಾರ್ಥನೆ ಸಲ್ಲಿಸುವ ದೃಶ್ಯವನ್ನು ನೋಡಲೇಬೇಕು. ಬೆಳಗಿನ ಎಳೆ ಬಿಸಿಲಿನಲ್ಲಿ ಕರ್ಪೂರ, ದೂಪದ ವಾಸನೆಯೊಂದಿಗೆ ಗುರುಗಳ ಹಿಂದೆ ನೂರಾರು ಭಕ್ತರು ಮೆರವಣಿಗೆಯಲ್ಲಿ ಸಾಗಿದಂತೆ ಸಾಗಿ ಪೂಜಾಕಾರ್ಯ ನೋಡಿ ಆನಂದಿಸುವುದು ಅವರ್ಣನೀಯ. ಈ ರೀತಿ ಬೆಳಗಿನ ದಿನಚರಿ ಪ್ರಾರಂಭಿಸುವ ಗುರುಗಳು ಸಂಜೆ ತನಕ ಭಕ್ತರಿಗೆ ದರ್ಶನ ನೀಡಿ ಧಾರ್ಮಿಕ, ಸಾಮಾಜಿಕ ಚಟುವಟಿಕೆಯಲ್ಲಿ ಭಾಗವಹಿಸಿ ಧರ್ಮಪ್ರಸಾರ ಮಾಡುವುದು ಇವರ ದಿನಚರಿಯಾಗಿದೆ.

ಶಿಕ್ಷಣ: ಅನ್ನ ದಾಸೋಹ ಮತ್ತು ಧರ್ಮಪ್ರಸಾರದಿಂದ ಮಾತ್ರ ಸಮಾಜವು ಸಮರ್ಥವಾಗಿ ಬೆಳೆಯಲಾರದು, ಜ್ಞಾನದಿಂದ ಸಮಾಜ ವಿಕಾಸವಾಗಬಲ್ಲದೆಂದು ಶ್ರೀ ಒಡೆಯರ್ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಹೊನ್ನಾಳಿಯಲ್ಲಿ ಶ್ರೀಚನ್ನಪ್ಪ ಸ್ವಾಮಿ ವಿದ್ಯಾಪೀಠವನ್ನು ೧೯೭೪ರಲ್ಲಿ ಪ್ರಾರಂಭಿಸಿ ಹೊನ್ನಾಳಿಯಲ್ಲಿ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಕಿರಿಯ ಕಾಲೇಜು, ಪ್ರಥಮದರ್ಜೆ ಕಾಲೇಜು ಹಾಗೂ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಪ್ರಾರಂಭಿಸಿದ್ದಾರೆ. ಮಾವಿನಹೊಳೆಯಲ್ಲಿ ಪ್ರೌಢಶಾಲೆ, ಚನ್ನಗಿರಿ, ನ್ಯಾಮತಿಯಲ್ಲಿ ಕಾಲೇಜು ಈ ರೀತಿ ಬಾಲವಾಡಿಯಿಂದ ಪದವಿ ಕಾಲೇಜುಗಳ ತನಕ ವಿದ್ಯಾಸಂಸ್ಥೆಗಳನ್ನು ತೆರೆದಿದ್ದಾರೆ.

ಸಾಹಿತ್ಯ-ಕಲೆ: ಸಾಂಸ್ಕೃತಿಕ ಕಲೆಗಳನ್ನು ಬೆಳೆಸಿ ಪ್ರೋತ್ಸಾಹಿಸಲು ಮಠದಲ್ಲಿ ಚನ್ನಮಲ್ಲಿಕಾರ್ಜುನ ಗಾನ ಕಲಾಸಂಘವನ್ನು ಪ್ರಾರಂಭಿಸಿ, ಕಲಾವಿದರಿಗೆ ಪ್ರೋತ್ಸಾಹ ನೀಡಿ ಬೆಳೆಸುತ್ತಿದ್ದಾರೆ. ಸಿದ್ಧಾಂತ ಶಿಖಾಮಣಿ ಹಾಗೂ ಶ್ರೀ ಚನ್ನಮಲ್ಲಿಕಾರ್ಜುನ ಪುರಾಣ ಇನ್ನು ಮುಂತಾದ ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

೧೯೭೬ ರ ಮಾರ್ಚ್ ಹನ್ನೆರಡರಂದು ಹಿರೇಕಲ್ಮಠದಲ್ಲಿ ಶ್ರೀ ರಂಭಾಪುರಿ ಜಗದ್ಗುರು ಶ್ರೀ ಪ್ರಸನ್ನ ವೀರ ಗಂಗಾಧರ ಶಿವಾಚಾರ್ಯ ಭಗವತ್ಪಾದರ ಸನ್ನಿಧಾನದಲ್ಲಿ ಏಕೋತ್ತರ ಷಟ್‌ಸ್ಥಲಗಳ ಸ್ಮಾರಕವಾಗಿ, ನೂರೊಂದು ಗುರುಗಳ ಪಾದಪೂಜೆಯನ್ನು ನಡೆಸಿದರು. ಉಜ್ಜಯಿನಿ ಪೀಠದ ಜಗದ್ಗುರುಗಳ ಸನ್ನಿಧಾನದಲ್ಲಿ ಹಿರಿಯ ಗುರುಗಳ ಸಂಸ್ಮರಣೆಗಾಗಿ ನೂರೊಂದು ಮಂಟಪ ಪೂಜೆ ಮಾಡಿಸಿದ್ದು ಮಠದ ಇತಿಹಾಸದಲ್ಲಿ ಅಮರವಾಗಿದೆ.

ಧರ್ಮ ಸಂಸ್ಕೃತಿ: ಗುರುಗಳು ತಮ್ಮ ತಪೋಶಕ್ತಿಯಿಂದ ಸಮಾಜಕ್ಕೆ ಒಳಿತು ಬಯಸಲು ಮತ್ತು ಧರ್ಮಸಂಸ್ಕೃತಿಗಳ ಜಾಗೃತಿಗಾಗಿ ಅಮಾವಸ್ಯೆ, ಶ್ರಾವಣ, ಶರನ್ನವರಾತ್ರಿ, ಶಿವರಾತ್ರಿ ಮುಂತಾದ ವಿಶಿಷ್ಟ ದಿನಗಳಲ್ಲಿ ವಿಶೇಷ ಕಾರ್ಯಕ್ರಮಗಳನ್ನು ನಡೆಸುತ್ತಾರೆ. ವರ್ಷಕ್ಕೊಮ್ಮೆ ಸಾಮೂಹಿಕ ವಿವಾಹಗಳನ್ನು ಏರ್ಪಡಿಸಿ,ಬಡವರಿಗೆ ಹೊರೆಯಾಗದಂತೆ ಉಚಿತವಾಗಿ ನಡೆಸಿಕೊಡುತ್ತಿದ್ದಾರೆ. ದೀನ ದಲಿತರ ಬಂಧುಗಳಾಗಿ, ಸಮಷ್ಟಿ ಸಮಾಜದ ಚಿಂತಕರಾಗಿ ಸಂಸ್ಕಾರವಂತ ಸಮಾಜವನ್ನು ರೂಪಿಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಒಡೆಯರ್ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಕಲ್ಮಠ, ಹೊನ್ನಾಳಿ, ದಾವಣಗೆರೆ ಜಿಲ್ಲೆ.
ಆಧಾರ: 'ಶ್ರೀ ಚನ್ನಮಲ್ಲಿಕಾರ್ಜುನ ಪುರಾಣ' ಲೇಖಕರು : ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು

ಹೊಟ್ಯಾಪುರ

ಹೊನ್ನಾಳಿ ತಾಲ್ಲೂಕಿನ ಹೊಟ್ಯಾಪುರವು ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಹದಿನೆಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಹೊಟ್ಯಾಪುರ ಗ್ರಾಮದಲ್ಲಿ ಉಜ್ಜಯಿನಿಪೀಠದ ಶಾಖಾಮಠವಾದ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದ ಈ ಮಠವನ್ನು ಶ್ರೀ ಹಾಲು ಒಡೆಯರು ಸ್ಥಾಪನೆ ಮಾಡಿದ್ದಾರೆ. ಇವರು ಕೊಟ್ಟೂರಿನಿಂದ ಆಗಮಿಸಿ ಕುಂಬಾರಕಟ್ಟೆಯಲ್ಲಿ ಬಂದು ನೆಲೆಸಿದ್ದರು. ಇಲ್ಲಿನ ಪಾಳೆಗಾರನೊಬ್ಬನ ಆನೆಯು ಹಳ್ಳದಲ್ಲಿ ಬಿದ್ದು ಮೇಲೇಳಲಾಗದ ಸ್ಥಿತಿಯಲ್ಲಿರುತ್ತದೆ. ಆಗ ಪಾಳೆಗಾರನು ಎಲ್ಲಾ ಪ್ರಯತ್ನಗಳನ್ನು ಮಾಡಿದರೂ ವಿಫಲಗೊಳ್ಳುತ್ತಾನೆ. ಕುಂಬಾರಕಟ್ಟೆಯಲ್ಲಿ ಶ್ರೀ ಹಾಲು ಒಡೆಯರು ತಪೋನುಷ್ಠಾನಕ್ಕೆ ಕುಳಿತ ವಿಚಾರವನ್ನು ತಿಳಿದುಕೊಂಡು ಪಾಳೆಗಾರ ಗುರುಗಳಲ್ಲಿಗೆ ಬಂದು ತಮ್ಮ ತಪೋಶಕ್ತಿಯಿಂದ ಆನೆಯನ್ನು ಬದುಕಿಸಿ ಕೊಡಬೇಕೆಂದು ಭಿನ್ನವಿಸಿಕೊಳ್ಳುತ್ತಾನೆ. ಆಗ ಗುರುಗಳು ತಮ್ಮ ತಪೋಶಕ್ತಿಯನ್ನು ಪ್ರಯೋಗಿಸಿ ಆನೆಯನ್ನು ಮೇಲೇಳುವಂತೆ ಮಾಡಿದರು. ಇದರಿಂದ ಪಾಳೆಗಾರನು ಹೊಟ್ಯಾಪುರದಲ್ಲಿ ಮಠವನ್ನು ಕಟ್ಟಿಸಿಕೊಟ್ಟು, ಧಾರ್ಮಿಕ ಕಾರ್ಯಗಳು ನಡೆಯಲು ಭೂಮಿಯನ್ನು ಉಂಬಳಿಯನ್ನಾಗಿ ನೀಡಿದನು. ಅಂದಿನಿಂದ ಗುರುಗಳು ಇಲ್ಲಿ ನೆಲೆಸಿ ಮಠವನ್ನು ಬೆಳೆಸಿದರು.

ಪರಂಪರೆ:
೧. ಷ.ಬ್ರ.ಶ್ರೀ ಹಾಲು ಒಡೆಯರು
೨. ಷ.ಬ್ರ.ಶ್ರೀ ಶಿವಬಸವ ಶಿವಾಚಾರ್ಯಸ್ವಾಮಿಗಳು

೩. ಷ.ಬ್ರ.ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು
೪. ಷ.ಬ್ರ.ಶ್ರೀ ಸತೀಶ ದೇವರು

ಈ ಮಠದಲ್ಲಿ ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಗುರುಗಳ ಹೆಸರು ಹಾಗೂ ಮಾಹಿತಿ ಲಭ್ಯವಿಲ್ಲದ ಕಾರಣ ಮಠದ ಪರಂಪರೆಯ ಗುರುಗಳ ಕೆಲವು ಹೆಸರುಗಳನ್ನು ದಾಖಲಿಸಲಾಗಿದೆ. ಶ್ರೀ ಶಿವಬಸವ ಶಿವಾಚಾರ್ಯ ಸ್ವಾಮಿಗಳು ಇಲ್ಲಿ ನೆಲೆಸಿ ಮಠವನ್ನು ಅಭಿವೃದ್ಧಿಪಡಿಸಿ, ಹೊನ್ನಾಳಿ ಶ್ರೀ ಹಿರೇಕಲ್ಮಠದಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಶ್ರೀರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದಿದ್ದಾರೆ. ಇವರು ಸದಾ ಲೋಕಸಂಚಾರಿಗಳಾಗಿ ಧರ್ಮವನ್ನು ಬೆಳೆಸಿದರು. ಇವರ ಕಾಲದಲ್ಲಿ ಮಠವು ಆರ್ಥಿಕ ಸದೃಢತೆಯನ್ನು ಕಂಡುಕೊಂಡಿತು. ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಸಂಚಾರದಲ್ಲಿದ್ದಾಗ ಮಂಗಳೂರಿನ ಬಸವನಗುಡಿ ಮಠದ ಜವಾಬ್ದಾರಿಯನ್ನು ವಹಿಸಿಕೊಂಡು ಅಭಿವೃದ್ಧಿಪಡಿಸಿ, ಹೊಟ್ಯಾಪುರದ ಹಿರೇಮಠದ ಶಾಖಾಮಠವಾಗಿ ಬೆಳೆಯುವಂತೆ ಮಾಡಿದರು. ಗುರುಗಳು ಮಠ ಮತ್ತು ಸಮಾಜವನ್ನು ಬೆಳೆಸಿ ೧೯೮೮ ರಲ್ಲಿ ಲಿಂಗೈಕ್ಯರಾದರು.

ಶ್ರೀ ಸತೀಶ ದೇವರು ಹಿರಿಯ ಗುರುಗಳು ಇರುವಾಗಲೇ ಉತ್ತರಾಧಿಕಾರಿಗಳಾಗಿ ನೇಮಕಗೊಂಡಿದ್ದರು. ಇವರು ಶ್ರೀ ಚಂದ್ರಶೇಖರಯ್ಯ ಮತ್ತು ಶ್ರೀಮತಿ ಪಾರ್ವತಮ್ಮನವರ ಪುತ್ರರಾಗಿ ೧೯೬೩ ರಲ್ಲಿ ಜನಿಸಿದರು. ಗುರುಗಳು ಮಂಗಳೂರು ಮತ್ತು ಹೊನ್ನಾಳಿಯಲ್ಲಿ ವಿದ್ಯಾಭ್ಯಾಸವನ್ನು ಮಾಡಿ ಧಾರವಾಡದಲ್ಲಿ ಪದವಿ ಶಿಕ್ಷಣವನ್ನು ಮುಗಿಸಿದ್ದಾರೆ. ಈಗ ಹೊಟ್ಯಾಪುರ ಮತ್ತು ಮಂಗಳೂರು ಮಠದಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಕರ್ತೃ ಗುರುಗಳ ಗದ್ದುಗೆ ಸೇರಿದಂತೆ ಮೂರು ಗದ್ದುಗೆಗಳು ಸ್ಥಾಪನೆಗೊಂಡಿವೆ. ಇವುಗಳಿಗೆ ನಿತ್ಯಪೂಜೆ, ಶ್ರಾವಣಮಾಸದಲ್ಲಿ ನಿತ್ಯ ರುದ್ರಾಭಿಷೇಕ ಪೂಜೆ, ಫೆಬ್ರವರಿಯಲ್ಲಿ ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆ ಮತ್ತು ಕಾರ್ತೀಕ ಮಾಸದಲ್ಲಿ ಶ್ರೀ ಹಾಲು ಒಡೆಯರ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಎಳೆಯಾಷ್ಟಮಿಯ ದಿನ ಸುತ್ತಲಿನ ಹನ್ನೆರಡ ಗ್ರಾಮಗಳ ಭಕ್ತರು ಮಠಕ್ಕೆ ಆಗಮಿಸಿ ಎಳೆಯನ್ನು ವಿತರಣೆ ಮಾಡುತ್ತಾರೆ.

ವಿಳಾಸ: ಷ.ಬ್ರ.ಶ್ರೀ ಸತೀಶ ದೇವರು, ಶ್ರೀ ಹಿರೇಮಠ, ಹೊಟ್ಯಾಪುರ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.

❑

ಧಾರವಾಡ ಜಿಲ್ಲೆ

ಧಾರವಾಡ ಜಿಲ್ಲೆ



ಧಾರವಾಡ ತಾಲ್ಲೂಕು : ೧. ಅಮ್ಮಿನ ಭಾವಿ ೨. ಹೆಬ್ಬಳ್ಳಿ ೩. ಗರಗ

ಹುಬ್ಬಳ್ಳಿ ತಾಲ್ಲೂಕು : ೧. ಸುಳ್ಳ ೨. ಮಂಟೂರು ೩. ಇಂಗಳ ಹಳ್ಳಿ
೪. ಬ್ಯಾಹಟ್ಟಿ ೫. ರಾಯನ ಹಾಳು

ಕಲಘಟಗಿ ತಾಲ್ಲೂಕು : ೧. ಜೋಡಿ ಹಳ್ಳಿ ೨. ಬಮ್ಮಿ ಗಟ್ಟಿ

ನವಿಲು ಗುಂದ ತಾಲ್ಲೂಕು : ೧. ಅಡ್ನೂರು ೨. ಶಲವಡಿ ೩. ಅಣ್ಣೇಗೆರೆ
೪. ಮೊರಬ

ಕುಂದಗೋಳ ತಾಲ್ಲೂಕು : ೧. ಸಂಸೆ ೨. ಪಶುಪತಿಹಾಳು

ಸಹ್ಯಾದ್ರಿ ಬೆಟ್ಟದ ಸಾಲಿನ ಅಂಚಿನಲ್ಲಿ ಬರುವ ಧಾರವಾಡ ಜಿಲ್ಲೆಯು ಮಲೆನಾಡು, ಅರೆಮಲೆನಾಡು ಹಾಗೂ ಬಯಲು ಪ್ರದೇಶವನ್ನು ಒಳಗೊಂಡಿದೆ. ೧೯೯೭ ರವರೆಗೆ ಈಗಿನ ಗದಗ ಜಿಲ್ಲೆಯ ಐದು, ಹಾವೇರಿ ಜಿಲ್ಲೆಯ ಏಳು ತಾಲ್ಲೂಕುಗಳು ಸೇರಿದಂತೆ ಒಟ್ಟು ಹದಿನೇಳು ತಾಲ್ಲೂಕುಗಳನ್ನು ಒಳಗೊಂಡಿತ್ತು. ಜಿಲ್ಲೆಗಳ ಪುನರ್ ವಿಂಗಡಣೆಯಾದಾಗ ಧಾರವಾಡ, ಹುಬ್ಬಳ್ಳಿ, ನವಿಲಗುಂದ, ಕುಂದಗೋಳ ಹಾಗೂ ಕಲಘಟಗಿ ತಾಲ್ಲೂಕುಗಳನ್ನು ಒಳಗೊಂಡು ಪುನರ್ ರಚಿತ ಜಿಲ್ಲೆಯಾಗಿದೆ.

ಬೆಳಗಾಂ, ಬಾಗಲಕೋಟೆ, ಕೊಪ್ಪಳ, ಹಾವೇರಿ ಹಾಗೂ ಉತ್ತರಕನ್ನಡ ಜಿಲ್ಲೆಗಳ ಗಡಿಗಳಿಂದ ಆವೃತಗೊಂಡು ನಾಡಿನ ಸಾಂಸ್ಕೃತಿಕ ಬೀಡಾಗಿ ಮೈದಳೆದು ನಿಂತಿದೆ. ಪುರಾತನ ಪರಂಪರೆಯ ಧಾರವಾಡ ನಗರ ಸಾಂಸ್ಕೃತಿಕ ರಾಜಧಾನಿಯಾಗಿ ಹೆಸರು ಮಾಡಿದೆ. ವಿಜಯನಗರ, ಕೆಳದಿ ಅರಸರು, ಬಿಜಾಪುರದ ಆದಿಲ್‌ಶಾಹಿ ಹಾಗೂ ಸವಣೂರಿನ ನವಾಬರು ಮೊದಲಾದವರ ಆಡಳಿತದಿಂದ ಧಾರವಾಡ ಜಿಲ್ಲೆ ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿದೆ. ಧಾರವಾಡ, ಹುಬ್ಬಳ್ಳಿ ಹಾಗೂ ಕಲಘಟಗಿಯ ಕೆಲವು ಭಾಗ ಮಲೆನಾಡು ಹಾಗೂ ಅರೆಮಲೆನಾಡಾಗಿ ನೈಸರ್ಗಿಕವಾಗಿ ಹೆಚ್ಚು ಶ್ರೀಮಂತಗೊಂಡಿದೆ. ನವಿಲಗುಂದ, ಕುಂದಗೋಳ ಹಾಗೂ ಶಿಗ್ಗಾಂವಿ ತಾಲ್ಲೂಕುಗಳು ಬಯಲು ನಾಡಾಗಿ ಈರುಳ್ಳಿ, ಮೆಣಸಿನಕಾಯಿ ಹಾಗೂ ಹತ್ತಿ ಬೆಳೆಯಿಂದ ಶ್ರೀಮಂತಗೊಂಡು ವ್ಯವಸಾಯ ಹಾಗೂ ವ್ಯಾಪಾರ ಕೇಂದ್ರವಾಗಿವೆ.

ಈ ಜಿಲ್ಲೆಯಲ್ಲಿ ವೀರಶೈವ ಧರ್ಮ ಅನಾದಿ ಕಾಲದಿಂದಲೂ ಪ್ರಬಲವಾಗಿ ಬೆಳೆದು ಸಾಮರಸ್ಯವನ್ನು ಮೂಡಿಸಿದೆ. ಧಾರವಾಡ ಜಿಲ್ಲೆಯ ಐದು ತಾಲ್ಲೂಕುಗಳಲ್ಲಿ ಈವರೆಗೆ ಒಟ್ಟು ತೊಂಬತ್ತೈದು ಮಠಗಳು ಸ್ಥಾಪನೆಗೊಂಡಿವೆ ಎಂಬ ಮಾಹಿತಿ ತಿಳಿದು ಬರುತ್ತದೆ. ಈ ಮಾಹಿತಿಯ ಆಧಾರದ ಮೇಲೆ ಶೋಧನೆ ನಡೆಸಿದಾಗ ಐವತ್ತೆರಡು ಮಠಗಳನ್ನು ಗುರುತಿಸಬಹುದು ಇವುಗಳಲ್ಲಿ ನಲವತ್ತೆರಡು ಮಠಗಳು ಅಸ್ತಿತ್ವದಲ್ಲಿದ್ದು, ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿವೆ. ಉಳಿದ ಮಠಗಳಲ್ಲಿ ಕೆಲವೇ ಮಠಗಳು ಕೇವಲ ಗದ್ದುಗೆಗಳ ಪೂಜೆಗಷ್ಟೇ ಸೀಮಿತವಾಗಿ ಜನಮನದಿಂದ ದೂರವಾಗುತ್ತಿವೆ. ಉಳಿದ ಮಠಗಳು ಹೇಳಲು ಹೆಸರಿಲ್ಲದಂತಾಗಿ ರುವುದು ನೋವಿನ ವಿಚಾರವಾಗಿದೆ.

ಧಾರವಾಡದ ಶ್ರೀ ಮುರುಘಾಮಠ, ಹುಬ್ಬಳ್ಳಿಯ ಶ್ರೀ ಮೂರುಸಾವಿರಮಠ ಸಮಾಜದ ಸಾಮರಸ್ಯಕ್ಕೆ ಹಾಗೂ ಅಭಿವೃದ್ಧಿಗೆ ಪ್ರೇರಕ ಶಕ್ತಿಗಳಾಗಿರುವುದನ್ನು ಯಾರೂ ಅಲ್ಲಗಳೆಯಲಾರರು. ಈ ಎರಡೂ ಮಠಗಳು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಹಿತ್ಯಿಕವಾಗಿ ಅಪಾರವಾದುದ್ದನ್ನು ಸಾಧಿಸಿ ಜಿಲ್ಲೆಯು ಸರ್ವತೋಮುಖವಾಗಿ ಅಭಿವೃದ್ಧಿಯಾಗಲು ಸಹಾಯಕವಾಗಿವೆ. ಹುಬ್ಬಳ್ಳಿಯ ಮೂರುಸಾವಿರ ಮಠವು ಸರ್ಕಾರ ಮಾಡಲಾರದಂತಹ ಅನೇಕ ಕಾರ್ಯಗಳನ್ನು ಮಾಡಿ ಜನಮನ ಗೆದ್ದಿದೆ. ಜಿಲ್ಲೆಯ ಬಹುತೇಕ ಮಠಗಳು ತಮ್ಮ ವ್ಯಾಪ್ತಿಯಲ್ಲಿ ಅನೇಕ ಜನಪರ ಕಾರ್ಯಗಳನ್ನು ಮಾಡಿ ಸಂಸ್ಕಾರವಂತ ಸಮಾಜವನ್ನು ರೂಪಿಸಿವೆ. ಧಾರವಾಡದ ಶ್ರೀ ಮೃತ್ಯುಂಜಯ ಸ್ವಾಮಿಗಳು ಹಾಗೂ ಹುಬ್ಬಳ್ಳಿಯ ಹಿರಿಯ ಗುರುಗಳಾದ ಶ್ರೀ ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳು ಮಾಡಿರುವ ಸೇವೆಯಿಂದ ಧ್ರುವತಾರೆಗಳಾಗಿ ಈ ಜಿಲ್ಲೆಯ ಇತಿಹಾಸದ ಪುಟಗಳಲ್ಲಿ ನಿಲ್ಲುತ್ತಾರೆ. ಸಂಗೀತ ಲೋಕದ ಮಹಾ ಸಾಧಕರಾದ ಬಸವರಾಜ ರಾಜಗುರು, ಮಲ್ಲಿಕಾರ್ಜುನ ಮನ್ಸೂರ ಮತ್ತು ಗಂಗೂಬಾಯಿ ಹಾನಗಲ್ಲು ಈ ಜಿಲ್ಲೆಯವರಾಗಿರುವುದು ಒಂದು ಹೆಗ್ಗಳಿಕೆಯ ವಿಚಾರ.

ಕಲಘಟಗಿ ತಾಲ್ಲೂಕು

ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕು ಅಭಿವೃದ್ಧಿ ಕಾಣಬೇಕಾಗಿದೆ. ಇಲ್ಲಿ ವೀರಶೈವಧರ್ಮ ಬೆಳೆದು ಸಮಾಜವನ್ನು ಬೆಳೆಸಿದೆ. ಪ್ರಸ್ತುತ ಮೂರು ಮಠಗಳು ಅಸ್ತಿತ್ವದಲ್ಲಿವೆ.

ಕಲಘಟಗಿ

ಧಾರವಾಡ ಜಿಲ್ಲೆಯ ಕಲಘಟಗಿ ಪಟ್ಟಣವು ಜಿಲ್ಲಾ ಕೇಂದ್ರದಿಂದ ದಕ್ಷಿಣಕ್ಕೆ ನಲವತ್ತು ಕಿ.ಮೀ ದೂರದಲ್ಲಿದೆ. ಕಲಘಟಗಿ ಪಟ್ಟಣವು ತಾಲ್ಲೂಕು ಕೇಂದ್ರವಾಗಿದ್ದು, ಇಲ್ಲಿ ಶ್ರೀ ಹನ್ನೆರಡು ಮಠವು ಅಸ್ತಿತ್ವದಲ್ಲಿದೆ.

ಹನ್ನೆರಡುಮಠ: ಕಲಘಟಗಿಯಲ್ಲಿ ನಲವತ್ತೈದು ವರ್ಷಗಳ ಹಿಂದೆ ಶ್ರೀ ಹನ್ನೆರಡು ಮಠವು ಸ್ಥಾಪನೆಯಾಗಿದೆ. ಶ್ರೀರಂಭಾಪುರಿಪೀಠದ ಶಾಖಾಮಠವಾದ ಈ ಮಠವು ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ.

ಮಠ ಸ್ಥಾಪನೆ: ಹುಬ್ಬಳ್ಳಿಯಲ್ಲಿ ಸ್ಥಾಪನೆಯಾಗಿರುವ ಹನ್ನೆರಡು ಮಠವು ಈ ಮಠದ ಮೂಲ ಮಠವಾಗಿದೆ. ಶ್ರೀ ಮಡಿವಾಳ ಸ್ವಾಮಿಗಳು ಲೋಕಸಂಚಾರ ಕೈಗೊಂಡು, ಕಲಘಟಗಿ ಗ್ರಾಮಕ್ಕೆ ಬಂದಾಗ ವೀರಶೈವರಿಗೆ ಸಂಸ್ಕಾರ ನೀಡಬಲ್ಲಂತಹ ಧಾರ್ಮಿಕ ಕೇಂದ್ರಗಳು ಯಾವುವೂ ಇಲ್ಲದಿದ್ದಾಗ ಭಕ್ತರ ಒತ್ತಾಸೆಯ ಮೇರೆಗೆ ಇಲ್ಲಿ ಮಠವನ್ನು ಸ್ಥಾಪಿಸಿದ್ದರು. ಗ್ರಾಮಸ್ಥರು ಒಂದು ಎಕರೆ ಆರು ಗುಂಟೆ ಜಮೀನನ್ನು ಕಲಘಟಗಿಯ ಉತ್ತರದ ಹೊರ ಭಾಗದಲ್ಲಿ ನೀಡಿದರು. ಈ ಜಾಗದಲ್ಲಿ ಕುಟೀರವನ್ನು ಕಟ್ಟಿಕೊಂಡು ವೀರಭದ್ರ ದೇವಸ್ಥಾನವನ್ನು ಪ್ರಥಮವಾಗಿ ಸ್ಥಾಪಿಸಿರುತ್ತಾರೆ. ಅಂದಿನಿಂದ ಮಠದ ವಿಧಿವತ್ತಾದ ಧಾರ್ಮಿಕ ಕಾರ್ಯಗಳು ನಡೆಯತೊಡಗಿದವು.

ಶ್ರೀ ಮಡಿವಾಳ ಶಿವಾಚಾರ್ಯ ಸ್ವಾಮಿಗಳು ಇಲ್ಲಿ ಮಠವನ್ನು ಸ್ಥಾಪಿಸಿದ ಮೇಲೆ ವೀರಶೈವ ಧರ್ಮದ ತತ್ತ್ವಾಚರಣೆಗಳನ್ನು ಭಕ್ತರಿಗೆ ತಿಳಿಯಪಡಿಸಿ ಅಷ್ಟಾವರಣ, ಪಂಚಾಚಾರ ಹಾಗೂ ಷಟ್‌ಸ್ಥಲಗಳ ಬಗ್ಗೆ ಭಕ್ತರಿಗೆ ಉಪದೇಶ ನೀಡಿ, ಗುರು, ಲಿಂಗ, ಜಂಗಮದ ಕಲ್ಪನೆಯನ್ನು ಮೂಡಿಸಿದರು. ಗುರುಗಳು ಇಲ್ಲಿ ಧರ್ಮ ಜಾಗೃತಿಯನ್ನುಂಟುಮಾಡಿ ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳನ್ನು ನೇಮಿಸಿ, ೧೯೯೦ ರ ನವೆಂಬರ್ ಹದಿನೈದರಂದು ಲಿಂಗೈಕ್ಯರಾದರು.

ಈಗಿನ ಗುರುಗಳಾದ ಶ್ರೀ ರೇವಣಸಿದ್ಧ ಸ್ವಾಮಿಗಳು ಶ್ರೀ ಗಂಗಾಧರಯ್ಯ ಮತ್ತು ಶ್ರೀಮತಿ ಸಾವಿತ್ರಮ್ಮನವರ ಪುತ್ರರಾಗಿ ೧೯೬೪ ರಲ್ಲಿ ಜನಿಸಿದರು. ಇವರು ಹಿರಿಯ ಗುರುಗಳ ಹತ್ತಿರ ವಿದ್ಯಾಭ್ಯಾಸವನ್ನು ಮಾಡಿ ೧೯೭೧ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಮಠದಲ್ಲಿ ನಿತ್ಯಪೂಜೆ, ಅಮಾವಾಸ್ಯೆ, ಹುಣ್ಣಿಮೆಯಲ್ಲಿ ವಿಶೇಷಪೂಜೆ ಹಾಗೂ ಅನ್ನದಾಸೋಹವನ್ನು ನಡೆಸಲಾಗುತ್ತಿದೆ. ಶ್ರಾವಣಮಾಸದಲ್ಲಿ ಪುರಾಣ ಪ್ರವಚನ ಹಾಗೂ ಕಾರ್ತೀಕ ಬಹುಳ ತ್ರಯೋದಶಿಯಲ್ಲಿ ಶ್ರೀ ಮಡಿವಾಳ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಮಠದಲ್ಲಿ ಸಾಮೂಹಿಕ ವಿವಾಹಗಳನ್ನು ನಡೆಸುತ್ತಾ ಸಮಾಜದ ಅಭಿವೃದ್ಧಿಗೆ ಪೂರಕವಾಗುವಂತಹ ಧಾರ್ಮಿಕ ಆಚರಣೆಗಳನ್ನು ನಡೆಸುತ್ತ, ಸಂಸ್ಕಾರವಂತ ಸಮಾಜವನ್ನು ರೂಪಿಸುವ ನಿಟ್ಟಿನಲ್ಲಿ ಈ ಮಠವು ಸಾಗಿದೆ. ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ತಮ್ಮ ಮೂಲ ಮಠವಾದ ಹುಬ್ಬಳ್ಳಿಯ ಮಠದಲ್ಲೂ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹನ್ನೆರಡುಮಠ, ಕಲಘಟಗಿ, ಧಾರವಾಡ ಜಿಲ್ಲೆ.

ಬಮ್ಮಿಗಟ್ಟಿ

ಕಲಘಟಗಿ ತಾಲ್ಲೂಕಿನ ಬಮ್ಮಿಗಟ್ಟಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಎಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಅಡವಿ ಸ್ವಾಮಿಗಳ ಮಠವು ಅಸ್ತಿತ್ವದಲ್ಲಿತ್ತು.

ಅಡವಿಸ್ವಾಮಿ ಮಠ: ಶ್ರೀ ಅಡವಿ ಸಿದ್ಧೇಶ್ವರ ಸ್ವಾಮಿಗಳು ಬಮ್ಮಿಗಟ್ಟಿ ಗ್ರಾಮದ ಹೊರ ಭಾಗದ ಗುಡ್ಡದ ಮೇಲೆ ನೆಲೆ ನಿಂತ ಈ ಸ್ಥಳ ಜಾಗೃತ ಸ್ಥಳವಾಗಿ ರೂಪುಗೊಂಡಿದೆ. ಇಲ್ಲಿ ಗ್ರಾಮದ ಭಕ್ತರು ಮಠವನ್ನು ಸ್ಥಾಪಿಸಿ ಶ್ರೀ ಅಡವಿ ಸ್ವಾಮಿಗಳ ತೋರು ಗದ್ದುಗೆಯನ್ನು ನಿರ್ಮಿಸಿ,ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದ್ದಾರೆ. ಸುಂದರ ಪರಿಸರದಲ್ಲಿ ಸ್ಥಾಪನೆಯಾಗಿರುವ ಶ್ರೀ ಅಡವಿ ಸ್ವಾಮಿಗಳ ಮಠದಲ್ಲಿ ನಿತ್ಯ ಪೂಜಾವ್ಯವಸ್ಥೆ ಹಾಗೂ ವಾರ್ಷಿಕ ಜಾತ್ರೆಯನ್ನು ಗ್ರಾಮಸ್ಥರೇ ನಡೆಸಿಕೊಂಡು ಬರುತ್ತಿದ್ದಾರೆ.

ಜೋಡಿಹಳ್ಳಿ

ಕಲಘಟಗಿ ತಾಲ್ಲೂಕಿನ ಜೋಡಿಹಳ್ಳಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ದೇವಲಿಂಗಿಕೊಪ್ಪಾ ಮತ್ತು ದಾಸನೂರು ಗ್ರಾಮಗಳು ಒಂದಾಗಿ ಬೆಳೆದು 'ಜೋಡಿಹಳ್ಳಿ'ಯಾಗಿದೆ. ಈ ಗ್ರಾಮದಲ್ಲಿ ಕೇದಾರ ಪೀಠದ ಶಾಖಾ ಮಠವಾದ ಶ್ರೀ ಹೂಲಿಶಾಂಬಯ್ಯನ ಮಠವು ಸ್ಥಾಪನೆಯಾಗಿದೆ.

ಹೂಲಿಶಾಂಬಯ್ಯನ ಮಠ: ಜೋಡಿಹಳ್ಳಿ ಗ್ರಾಮದಲ್ಲಿ ಹೂಲಿಯ ಶ್ರೀ ಶಾಂಬಯ್ಯನಮಠವು ಸ್ಥಾಪನೆಯಾಗಿ ಧಾರ್ಮಿಕ ವಾಗಿ ಹೆಸರು ಮಾಡಿದೆ. ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಹೂಲಿಯ ಶ್ರೀ ಶಾಂಬಯ್ಯನಮಠದ ಮಠಾಧೀಶರಾದ ಶ್ರೀ ಸಂಗಮೇಶ್ವರ ಶಿವಾಚಾರ್ಯ ಸ್ವಾಮಿಗಳು, ಲೋಕಸಂಚಾರ ಕೈಗೊಂಡು ಈ ಗ್ರಾಮದಲ್ಲಿ ನೆಲೆಸಿ ಅನುಷ್ಠಾನ ಮಾಡಿ, ಮಠವನ್ನು ಸ್ಥಾಪಿಸಿ ಧಾರ್ಮಿಕ ಕಾರ್ಯಗಳನ್ನು ಕೈಗೊಂಡು, ಸಂಸ್ಕಾರವಂತ ಸಮಾಜವನ್ನು ರೂಪಿಸಿ ಇಲ್ಲಿಯೇ ಲಿಂಗೈಕ್ಯರಾಗಿ ದ್ದಾರೆ. ಇಲ್ಲಿ ಇವರ ಗದ್ದುಗೆಯನ್ನು ಸ್ಥಾಪಿಸಿ ಮಂಟಪವನ್ನು ನಿರ್ಮಿಸಲಾಗಿದೆ. ಬಿಲ್ವಪತ್ರೆ ಮರಗಳು, ಬಾಳೆಗಿಡ ಹಾಗೂ ತೆಂಗಿನ ಮರಗಳು ಈ ಮಠದ ವಾತಾವರಣವನ್ನು ಸುಂದರಗೊಳಿಸಿವೆ.

ಹೂಲಿಯ ಶ್ರೀ ಶಾಂಬಯ್ಯನ ಮಠದ ಶ್ರೀ ಉಮೇಶ್ವರ ಶಿವಾಚಾರ್ಯ ಸ್ವಾಮಿಗಳು ಈ ಮಠದ ಆಡಳಿತ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಮಠದ ಆವರಣದಲ್ಲಿ ಗುರುಗಳಿಗೆ ವಾಸ್ತವ್ಯ ಕೊಠಡಿ ಹಾಗೂ ಪೂಜಾ ಕೊಠಡಿಯನ್ನು ನಿರ್ಮಿಸಿರುವು ದಲ್ಲದೆ ಮಠಕ್ಕೆ ಆಗಮಿಸುವ ಭಕ್ತರಿಗೆ ನಿತ್ಯ ದಾಸೋಹಕ್ಕೆ ವ್ಯವಸ್ಥೆ ಮಾಡಲಾಗಿದೆ. ಬಯಲು ರಂಗಮಂದಿರ ಹಾಗೂ ಸಮುದಾಯ ಭವನವನ್ನು ನಿರ್ಮಿಸಲಾಗಿದೆ. ಈ ಕ್ಷೇತ್ರದಲ್ಲಿ ಶ್ರೀ ಬಸವೇಶ್ವರ ಮೂರ್ತಿಯನ್ನು ಸ್ಥಾಪಿಸಿ ನಿತ್ಯಪೂಜೆ, ಅಮಾವಾಸ್ಯೆಯಲ್ಲಿ ವಿಶೇಷ ಪೂಜೆ, ಹಾಗೂ ಪ್ರತಿವರ್ಷ ಶ್ರೀ ಸಂಗಮೇಶ್ವರ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಉಮೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹೂಲಿ ಶಾಂಬಯ್ಯನ ಮಠ, ಜೋಡಿಹಳ್ಳಿ, ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ.

❑

ಕುಂದಗೋಳ ತಾಲ್ಲೂಕು

ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕು ಕೃಷಿ ಆಧಾರಿತ ಪ್ರದೇಶವಾಗಿದ್ದು ಆರ್ಥಿಕವಾಗಿ ಸಬಲವಾಗಿದೆ. ಈ ತಾಲ್ಲೂಕಿನಲ್ಲಿ ವೀರಶೈವ ಧರ್ಮ ಬಲಿಷ್ಠವಾಗಿ ರೂಪುಗೊಂಡಿದೆ. ಇದಕ್ಕೆ ಕಾರಣ ಇಲ್ಲಿ ಸ್ಥಾಪನೆಗೊಂಡ ಮಠಗಳು. ಪ್ರಸ್ತುತ ಐದು ಮಠಗಳು ಅಸ್ತಿತ್ವದಲ್ಲಿವೆ.

ಕುಂದಗೋಳ

ಧಾರವಾಡ ಜಿಲ್ಲೆಯ ಕುಂದಗೋಳವು ಜಿಲ್ಲಾ ಕೇಂದ್ರದಿಂದ ಆಗ್ನೇಯಕ್ಕೆ ನಲವತ್ತು ಕಿ.ಮೀ ದೂರದಲ್ಲಿದೆ. ತಾಲ್ಲೂಕಿನ ಕೇಂದ್ರ ಸ್ಥಳವಾದ ಕುಂದಗೋಳ ಪಟ್ಟಣವು ವೀರಶೈವ ಧರ್ಮದ ಕೇಂದ್ರವಾಗಿ ಬೆಳೆದಿದೆ. ಈ ಗ್ರಾಮದಲ್ಲಿ ಶ್ರೀ ಪಂಚಗ್ರಹ ಹಿರೇಮಠ ಹಾಗೂ ಶ್ರೀ ಶಿವಾನಂದ ಮಠವು ಸ್ಥಾಪನೆಯಾಗಿ, ಧಾರ್ಮಿಕ ಚಟುವಟಿಕೆಗಳು ಕ್ರಿಯಾತ್ಮಕವಾಗಿ ನಡೆಯುತ್ತಿವೆ.

ಪಂಚಗ್ರಹ ಹಿರೇಮಠ: ಕುಂದಗೋಳ ನಗರದ ಮಧ್ಯ ಭಾಗದಲ್ಲಿ ಶ್ರೀ ಪಂಚಗ್ರಹ ಹಿರೇಮಠವು ಸ್ಥಾಪನೆಯಾಗಿದೆ. ಕಾಶಿ ಪೀಠದ ಶಾಖಾ ಮಠವಾದ ಈ ಮಠವು ಬಿಜಾಪುರದ ಆದಿಲ್‌ಶಾಹಿಯ ಕಾಲದಲ್ಲಿ (ಹದಿನಾರನೆಯ ಶತಮಾನ) ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಈ ಮಠದ ಸ್ಥಾಪಕ ಗುರುಗಳು ಶ್ರೀ ಶಿಥಕಂಠೇಶ್ವರ ಶಿವಾಚಾರ್ಯ ಸ್ವಾಮಿಗಳೆಂದು ಹೇಳಲಾಗುತ್ತಿದೆ. ಗುರುಗಳು ಪವಾಡ ಪುರುಷರಾಗಿ ಅನೇಕ ಶಿಷ್ಯ ಮಂಡಳಿಯನ್ನು ಹೊಂದಿದ್ದರು. ಗುರುಗಳು ಕೈಗೊಂಡಿದ್ದ ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಗಳನ್ನು ನೋಡಿ ಬಿಜಾಪುರದ ಆದಿಲ್‌ಶಾಹಿಯು ತೊಂಬತ್ತಾರು ಎಕರೆ ಭೂಮಿಯನ್ನು ಇನಾಂ ನೀಡಿ, ಮಠವು ಸತ್ಕಾರ್ಯಗಳನ್ನು ನಡೆಸಲು ಪ್ರೋತ್ಸಾಹಿಸಿದ್ದನು ಎಂದು ಹೇಳಲಾಗುತ್ತಿದೆ.

ಪರಂಪರೆ:

೧. ಷ.ಬ್ರ.ಶ್ರೀ ಶಿಥಕಂಠೇಶ್ವರ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು
೩. ಷ.ಬ್ರ.ಶ್ರೀ ಪ್ರಭುದೇವ ಶಿವಾಚಾರ್ಯ ಸ್ವಾಮಿಗಳು
೪. ಷ.ಬ್ರ.ಶ್ರೀ ಗುರುಪಾದೇಶ್ವರ ಶಿವಾಚಾರ್ಯ ಸ್ವಾಮಿಗಳು
೫. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು
೬. ಷ.ಬ್ರ.ಶ್ರೀ ಪ್ರಭುಚನ್ನಬಸವ ಶಿವಾಚಾರ್ಯ ಸ್ವಾಮಿಗಳು
೭. ಷ.ಬ್ರ.ಶ್ರೀ ಜಡೆಸಿದ್ಧ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು
೮. ಷ.ಬ್ರ.ಶ್ರೀ ಸಿದ್ಧಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು
೯. ಷ.ಬ್ರ.ಶ್ರೀ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು
೧೦. ಷ.ಬ್ರ.ಶ್ರೀ ಗುರುಪಾದೇಶ್ವರ ಶಿವಾಚಾರ್ಯ ಸ್ವಾಮಿಗಳು
೧೧. ಷ.ಬ್ರ.ಶ್ರೀ ಸಿದ್ಧಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು
೧೨. ಷ.ಬ್ರ.ಶ್ರೀ ಶಿಥಕಂಠೇಶ್ವರ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಚರ ಮತ್ತು ಸ್ಥಿರ ಪಟ್ಟಾಧಿಕಾರವನ್ನು ಹೊಂದುತ್ತಾ ಬಂದಿದೆ. ಹಿಂದಿನ ಚರ ಪಟ್ಟಾಧ್ಯಕ್ಷರಾದ ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ಮತ್ತು ಸ್ಥಿರ ಪಟ್ಟಾಧ್ಯಕ್ಷರಾದ ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳು ಶಿವಪೂಜಾನಿಷ್ಠರಾಗಿ ಮಠವನ್ನು ಹೆಚ್ಚು ಪ್ರಚಾರಕ್ಕೆ ತಂದರು. ಉಭಯ ಮಠಾಧೀಶರುಗಳು ಮಠದ ಆಡಳಿತವನ್ನು ಸುವ್ಯವಸ್ಥೆಗೆ ತಂದು, ಜಗದ್ಗುರುಗಳ ಸಮ್ಮುಖದಲ್ಲಿ ಮಠಕ್ಕೆ ಚರ ಮತ್ತು ಸ್ಥಿರ ಎಂಬ ಪಟ್ಟಾಧಿಕಾರದ ಬದಲಿಗೆ ಒಂದೇ ಅಧಿಕಾರವನ್ನು ನೀಡುವ ಬಗ್ಗೆ ನಿಯಮಾವಳಿಯನ್ನು ರಚಿಸಿ ನೊಂದಾಯಿಸಿ, ಮಠದ ಆಡಳಿತದ ಸಂಪ್ರದಾಯವನ್ನು ಬದಲಾವಣೆ ಮಾಡಿದರು. ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳು ಕ್ರಿಯಾಶೀಲರಾಗಿ ಸಮಾಜವನ್ನು ಬೆಳೆಸುವ ಮಹದಾಸೆಯಿಂದ ಶ್ರೀ ವಿಶ್ವಾರಾಧ್ಯ ಉಚಿತ ಪ್ರಸಾದನಿಲಯ ಹಾಗೂ ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಿ, ವೀರಶೈವ ಧರ್ಮದ ಅಭಿವೃದ್ಧಿಗೆ

ಹಾಗೂ ಶಿಕ್ಷಣ ಪ್ರಗತಿಗೆ ಪ್ರಯತ್ನಿಸಿದರು. ಇವರು ಮಠದ ಅಭಿವೃದ್ಧಿಯನ್ನು ಸಾಧಿಸಿ ೧೯೫೦ ರಲ್ಲಿ ಲಿಂಗೈಕ್ಯರಾದರು.

ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳ ನಂತರ ಶಿಗ್ಗಾಂವಿ ತಾಲ್ಲೂಕಿನ ಹಿರೇಹರಕುಣಿ ಗ್ರಾಮದ ಶ್ರೀ ಈಶ್ವರಯ್ಯ ಮತ್ತು ಶ್ರೀಮತಿ ನೀಲಾಂಬ ದೇವಿಯವರ ಪುತ್ರರಾಗಿ ಜನಿಸಿದ ಶ್ರೀ ಸಿದ್ಧಲಿಂಗ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿ, ೧೯೫೧ರ ಮೇ ಒಂದರಂದು ಕಾಶಿ ಪೀಠದ ಜಗದ್ಗುರುಗಳ ಸಮ್ಮುಖದಲ್ಲಿ ಪಟ್ಟಾಧಿಕಾರವನ್ನು ಮಾಡಲಾಯಿತು. ಶ್ರೀ ಸಿದ್ಧ ಲಿಂಗ ಶಿವಾಚಾರ್ಯ ಸ್ವಾಮಿಗಳು ವಿದ್ಯಾವಂತರಾಗಿ ಅಪಾರ ಜ್ಞಾನ ಸಂಪತ್ತನ್ನು ಪಡೆದುಕೊಂಡಿದ್ದರು. ಇವರು 'ಪುರಾಣಕಂಠೀರವ' ಹಾಗೂ 'ಪ್ರವಚನಾಚಾರ್ಯ'ಎಂಬ ಬಿರುದುಗಳನ್ನು ಪಡೆದುಕೊಂಡಿದ್ದರು. ಸಿದ್ಧಾಂತ ಶಿಖಾಮಣಿಯ ಬಗ್ಗೆ ಅಧಿಕೃತವಾಗಿ ಮಾತನಾಡಬಲ್ಲಂತಹ ಪ್ರಾವೀಣ್ಯತೆಯನ್ನು ಪಡೆದುಕೊಂಡಿದ್ದ ಗುರುಗಳು ಪಂಚಪೀಠಗಳ ಜಗದ್ಗುರುಗಳಿಂದ ಗೌರವಿಸಲ್ಪಟ್ಟಿದ್ದರು. ಇಂತಹ ಮಹಾ ಯೋಗಿಗಳು ೧೯೯೬ ರ ಶ್ರಾವಣ ಮಾಸದಲ್ಲಿ ಲಿಂಗೈಕ್ಯರಾದರು.

ಶ್ರೀ ಗಂಗಾಧರಯ್ಯ ಮತ್ತು ಶ್ರೀಮತಿ ವಿಜಯ ದೇವಿಯವರ ಪುತ್ರರಾಗಿ ೧೯೭೦ ರ ಆಗಸ್ಟ್ ಏಳರಂದು ಜನಿಸಿದ ಶ್ರೀ ಶಿಥಕಂಠೇಶ್ವರ ಶಿವಾಚಾರ್ಯ ಸ್ವಾಮಿಗಳು, ೧೯೯೭ ರ ಫೆಬ್ರವರಿ ಹದಿನಾರರಂದು ಈ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಈಗ ಕಾಶಿಯಲ್ಲಿ ಸಂಸ್ಕೃತ, ವೇದಾಧ್ಯಯನವನ್ನು ಮಾಡುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದಲ್ಲಿ ಕರ್ತೃಗದ್ದುಗೆ ಸೇರಿದಂತೆ ಎರಡು ಗದ್ದುಗೆಗಳು ಹಾಗೂ ಮಠದ ಹೊಲದಲ್ಲಿ ಹತ್ತು ಗದ್ದುಗೆಗಳು ಸ್ಥಾಪನೆಯಾಗಿವೆ. ಧಾರವಾಡದ ಶಾಖಾ ಮಠದಲ್ಲಿ ಒಂದು ಗದ್ದುಗೆ ಸ್ಥಾಪನೆಯಾಗಿದೆ. ಈ ಗದ್ದುಗೆಗಳಿಗೆ ನಿತ್ಯ ಪೂಜೆ, ಪ್ರತಿ ಸೋಮವಾರ ಮತ್ತು ಅಮಾವಾಸ್ಯೆಯಲ್ಲಿ ಶಿವಾನುಭವಗೋಷ್ಠಿ, ಶಿವರಾತ್ರಿ ಹಾಗೂ ಶ್ರಾವಣ ಮಾಸದಲ್ಲಿ ಪುರಾಣ ಪ್ರವಚನವನ್ನು ನಡೆಸಲಾಗುತ್ತಿದೆ. ಶ್ರಾವಣ ಮಾಸದಲ್ಲಿ ಪುಣ್ಯತಿಥಿ, ಯುಗಾದಿ ಮತ್ತು ಬಸವ ಜಯಂತಿಯಂದು ಸಾಮೂಹಿಕ ವಿವಾಹಗಳನ್ನು ನಡೆಸಲಾಗುತ್ತಿದೆ. ಈ ಸಂದರ್ಭಗಳಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

೧೯೫೪ ರಲ್ಲಿ ಮಠದ ಕಟ್ಟಡವು ನಿರ್ಮಾಣಗೊಂಡಿದ್ದು, ಮಠದ ಕರ್ತೃಗುರುಗಳ ಕಾಲದಲ್ಲಿ ಆದಿಲ್‌ಶಾಹಿಯ ನೆರವು ಪಡೆದು ನಿರ್ಮಿಸಿರಬಹುದೆಂದು ಹೇಳಲಾಗುತ್ತಿದೆ. ಬೃಹದಾಕಾರದ ಮರದ ಕಂಬಗಳಿಂದ ಮೂವತ್ತಾರು ಅಂಕಣದ, ತೊಟ್ಟಿಯಾಕಾರದ ಎರಡಂತಸ್ತಿನ ಕಟ್ಟಡವನ್ನು ನಿರ್ಮಿಸಲಾಗಿದೆ. ಶ್ರೀ ಸಿದ್ಧಲಿಂಗ ಸ್ವಾಮಿಗಳ ಕಾಲದಲ್ಲಿ ನವೀಕರಣಗೊಂಡಿರುವ ಈ ಕಟ್ಟಡವು ಒಂದು ಐತಿಹಾಸಿಕ ಸ್ಮಾರಕದಂತಿದೆ. ಇಂತಹ ಪುರಾತನ ಮಠದಲ್ಲಿ ಶ್ರೀ ಸಿದ್ಧಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು ಉಚಿತ ಪ್ರಸಾದ ನಿಲಯವನ್ನು ಪ್ರಾರಂಭಿಸಿ, ಗ್ರಾಮಾಂತರ ಮಕ್ಕಳ ಕಲಿಕೆಗೆ ನೆರವಾಗಿದ್ದರು.

ವಿಳಾಸ: ಷ.ಬ್ರ.ಶ್ರೀ ಶಿಥಕಂಠೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಪಂಚಗ್ರಹ ಹಿರೇಮಠ,ಕ ುಂದಗೋಳ, ಧಾರವಾಡ ಜಿಲ್ಲೆ.

ಶಿವಾನಂದಮಠ: ಕುಂದಗೋಳ ಪಟ್ಟಣದ ಹೊರ ಭಾಗದಲ್ಲಿ ಶ್ರೀ ಶಿವಾನಂದ ಮಠವು ಸ್ಥಾಪನೆಯಾಗಿದೆ. ಈ ಮಠವು ಗದಗದ ಶ್ರೀ ಶಿವಾನಂದ ಬೃಹನ್ಮಠದ ಶಾಖಾ ಮಠವಾಗಿದೆ. ಶ್ರೀ ಬಸವೇಶ್ವರ ಸ್ವಾಮಿಗಳು ಶ್ರೀ ಶಿವಾನಂದರ ಶಿಷ್ಯರಾಗಿದ್ದು ೧೯೫೬ ರಲ್ಲಿ ಗದಗದಿಂದ ಇಲ್ಲಿಗೆ ಬಂದು ನೆಲೆಸಿದ್ದರು. ಇವರು ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಿಕೊಂಡು ಕಲಿಯುವ ಬಡ ಮಕ್ಕಳಿಗೆ ನೆರವಾಗುತ್ತಾ, ದಾಸೋಹವನ್ನು ತಮ್ಮ ಮೂಲ ಉದ್ದೇಶವನ್ನಾಗಿ ಮಾಡಿಕೊಂಡು ಮಠವನ್ನು ಸ್ಥಾಪಿಸಿದ್ದಾರೆ.

ಹಿರಿಯ ಗುರುಗಳು ೧೯೮೬ರಲ್ಲಿ ಲಿಂಗೈಕ್ಯರಾದ ಮೇಲೆ ಬಿಜಾಪುರದ ಶ್ರೀ ಬಸವರಾಜ ಸ್ವಾಮಿಗಳು ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡು, ಮಠವನ್ನು ಅಭಿವೃದ್ಧಿಪಡಿಸತೊಡಗಿದ್ದಾರೆ. ಗುರುಗಳು ವೀರಶೈವ ಧರ್ಮವನ್ನೇ ಅಲ್ಲದೆ ಎಲ್ಲಾ ಧರ್ಮಗಳ ಬಗ್ಗೆಯೂ ವಿಶೇಷ ಅರಿವು ಮೂಡಿಸಿಕೊಂಡು ಬಿಜಾಪುರದ ಶ್ರೀ ಸಿದ್ಧೇಶ್ವರ ಸ್ವಾಮಿಗಳ ನೇತೃತ್ವದಲ್ಲಿ ಬೆಳೆದು ಅಪಾರ ಪಾಂಡಿತ್ಯವನ್ನು ಸಂಪಾದಿಸಿಕೊಂಡರು. ಇವರು ಜ್ಞಾನದ ಗಣಿಯಾಗಿ ಕಲಿಯುವ ಮಕ್ಕಳಿಗೆ ಮಾರ್ಗದರ್ಶಕರಾಗಿ ಹಾಗೂ ಗುರುಗಳಾಗಿ ಮಠವನ್ನು ಮುನ್ನಡೆಸುತ್ತಿದ್ದಾರೆ. ಮಠದಲ್ಲಿ ಕರ್ತೃ ಗುರುಗಳ ಗದ್ದುಗೆಗೆ ನಿತ್ಯಪೂಜೆ, ಪ್ರತಿದಿನ ಬೆಳಿಗ್ಗೆ ಸಾಮೂಹಿಕ ಪ್ರಾರ್ಥನೆ ಹಾಗೂ ಫೆಬ್ರವರಿ ಇಪ್ಪತ್ತೇಳರಂದು ಗುರುಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಬಸವರಾಜ ಸ್ವಾಮಿಗಳು, ಶ್ರೀ ಶಿವಾನಂದ ಮಠ, ಕುಂದಗೋಳ, ಧಾರವಾಡ ಜಿಲ್ಲೆ.

ಪಶುಪತಿಹಾಳ

ಕುಂದಗೋಳ ತಾಲ್ಲೂಕಿನ ಪಶುಪತಿಹಾಳ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹದಿಮೂರು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಮುರುಘಾಮಠವು ಅಸ್ತಿತ್ವದಲ್ಲಿದೆ.

ಮುರುಘಾಮಠ: ಪಶುಪತಿಹಾಳ ಗ್ರಾಮದಲ್ಲಿ ಇತ್ತೀಚೆಗೆ ಶ್ರೀ ಮುರುಘಾಮಠ ಸ್ಥಾಪನೆಗೊಂಡಿದೆ. ಧಾರವಾಡದ ಮುರುಘಾಮಠದ ಈಗಿನ ಗುರುಗಳಾದ ಶ್ರೀ ಶಿವಯೋಗಿ ಸ್ವಾಮಿಗಳ ಜನ್ಮಸ್ಥಳ ಹಾಗೂ ಹಿಂದಿನ ಲಿಂಗೈಕ್ಯ ಗುರುಗಳಾದ ಶ್ರೀ ಮಹಾಂತಪ್ಪನವರ ಕಾರ್ಯಕ್ಷೇತ್ರ ಇದಾಗಿದ್ದು, ಶ್ರೀ ಮಹಾಂತ ಸ್ವಾಮಿಗಳ ತೋರು ಗದ್ದುಗೆಯನ್ನು ಸ್ಥಾಪಿಸಿ ಗುರುಗಳ ಹೆಸರಿನಲ್ಲಿ ಮಠವನ್ನು ಸ್ಥಾಪನೆ ಮಾಡಲಾಗಿದೆ. ಇಲ್ಲಿ ನಿತ್ಯ ಧಾರ್ಮಿಕ ಆಚರಣೆಗಳು ನಡೆಯುತೊಡಗಿವೆ.

ವಿಳಾಸ: ಶ್ರೀ ಮ.ನಿ.ಪ್ರ. ಶಿವಯೋಗಿ ಸ್ವಾಮಿಗಳು, ಶ್ರೀ ಮುರುಘಾ ಮಠ, ಪಶುಪತಿಹಾಳ, ಕುಂದಗೋಳ ತಾ, ಧಾರವಾಡ ಜಿಲ್ಲೆ.

ಸಂಸೆ

ಕುಂದಗೋಳ ತಾಲ್ಲೂಕಿನ ಸಂಸೆ, ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹತ್ತು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಶ್ರೀ ಫಕೀರೇಶ್ವರ ಮಠ ಮತ್ತು ಶ್ರೀ ವಿರಕ್ತಮಠ ಸ್ಥಾಪನೆಯಾಗಿ, ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುಗಳಾಗಿ ಬೆಳೆದಿವೆ.

ಫಕೀರೇಶ್ವರಮಠ: ಸಂಸೆಯ ಉತ್ತರದ ಹೊರ ಭಾಗದಲ್ಲಿ ಶ್ರೀ ಫಕೀರೇಶ್ವರ ಮಠವು ಸ್ಥಾಪನೆಯಾಗಿದೆ. ಶ್ರೀ ಫಕೀರೇಶ್ವರರು ಬಿಜಾಪುರ ಸಮೀಪದ ಮಂಜಲಪುರದಿಂದ ಹೊರಟು ಹಿಂದೂ ಮತ್ತು ಮುಸ್ಲಿಂ ಭಾವೈಕ್ಯತೆಯ ಸಂಕೇತವಾಗಿ ವೀರಶೈವ ಧರ್ಮವನ್ನು ಪ್ರಚಾರ ಪಡಿಸುತ್ತಾ, ನಾಡನ್ನೆಲ್ಲಾ ಸುತ್ತಿ ಸಂಸೆಗೆ ಆಗಮಿಸಿದ್ದರು. ಗುರುಗಳು ಅನೇಕ ವರ್ಷಗಳ ಕಾಲ ಇಲ್ಲೇ ನೆಲೆ ನಿಂತು ಮಠವನ್ನು ಸ್ಥಾಪಿಸಿ, ಧರ್ಮಬೋಧನೆಯನ್ನು ಮಾಡಿ ಭಕ್ತರಲ್ಲಿದ್ದ ಅಂಧಕಾರವನ್ನು ನಿವಾರಣೆ ಮಾಡಿದ್ದಾರೆ.

ನಂತರ ಶ್ರೀ ಫಕೀರೇಶ್ವರರು ಇಲ್ಲಿಂದ ಮುಂದೆ ಹೊರಟಾಗ ಗ್ರಾಮದ ಭಕ್ತರು ಶ್ರೀ ಫಕೀರೇಶ್ವರರ ತೋರು ಗದ್ದುಗೆಯನ್ನು ಸ್ಥಾಪಿಸಿಕೊಂಡು, ನಿತ್ಯ ಪುರಾಣಪ್ರವಚನವನ್ನು ಮಾಡುವ ಮೂಲಕ ಮಠವನ್ನು ಜೀವಂತವಾಗಿ ಉಳಿಸಿಕೊಂಡರು. ಶ್ರೀ ಫಕೀರೇಶ್ವರರು ಶಿರಹಟ್ಟಿಯಲ್ಲಿ ಮಠವನ್ನು ಸ್ಥಾಪಿಸಿ ಅನೇಕ ಪವಾಡಗಳನ್ನು ಮಾಡಿ, ಸಂಸೆಯ ತಮ್ಮ ಶಾಖಾಮಠಕ್ಕೆ ಬಂದು ಧಾರ್ಮಿಕ ಕಾರ್ಯಗಳನ್ನು ನಡೆಸತೊಡಗಿ ಭಕ್ತರನ್ನು ಉದ್ಧರಿಸಿದರು. ಅಂದಿನಿಂದ ಶಿರಹಟ್ಟಿ ಮೂಲಮಠದ ಸಂಪರ್ಕದೊಂದಿಗೆ ಬೆಳೆದು ಬಂದಿದೆ. ಈ ಮಠಕ್ಕೆ ಶಿರಹಟ್ಟಿ ಫಕೀರೇಶ್ವರ ಮಠದ ಪರಂಪರೆಯ ಎಲ್ಲಾ ಮಠಾಧೀಶರು ಬಂದು ಕೆಲವು ದಿನ ನೆಲೆಸಿ, ಭಕ್ತರಿಗೆ ಧರ್ಮೋಪದೇಶ ಮಾಡುವ ಕಾಯಕ ನಡೆದು ಬಂದಿದೆ. ಈ ಪರಂಪರೆಯ ಹನ್ನೆರಡನೆಯ ಜಗದ್ಗುರುಗಳಾಗಿದ್ದ ಶ್ರೀ ಫಕೀರೇಶ್ವರ ಸ್ವಾಮಿಗಳು ಸಂಸೆಯಲ್ಲಿ ಜನಿಸಿ, ವಿದ್ಯಾಭ್ಯಾಸವನ್ನುಮಾಡಿ ಶಿರಹಟ್ಟಿ ಮಠಕ್ಕೆ ಜಗದ್ಗುರುಗಳಾಗಿ ನೇಮಕಗೊಂಡರು. ಇವರು ಅನೇಕ ಸತ್ಕಾರ್ಯಗಳನ್ನು ಮಾಡುವ ಮೂಲಕ ಮಠವನ್ನು ಸಮಾಜ ಮುಖಿಯಾಗಿ ಬೆಳೆಯುವಂತೆ ಮಾಡಿದ್ದರು. ಅಲ್ಲದೆ ಸಂಸೆಯ ಮಠವನ್ನು ಅಭಿವೃದ್ಧಿಪಡಿಸಿದರು.

ಶ್ರೀ ಫಕೀರೇಶ್ವರ ಸ್ವಾಮಿಗಳು ತಮ್ಮ ಉತ್ತರಾಧಿಕಾರಿಗಳಾದ ಜಗದ್ಗುರು ಶ್ರೀ ಫಕೀರೇಶ್ವರ ಸಿದ್ಧರಾಮ ಸ್ವಾಮಿಗಳಿಗೆ ಮೂಲಮಠದಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಟ್ಟು ಸಂಸೆ ಮಠದಲ್ಲಿ, ವಿಶ್ರಾಂತ ಜೀವನವನ್ನು ಕಳೆದು, ಡಿಸೆಂಬರ್ ೨೦೦೦ದಲ್ಲಿ ಲಿಂಗೈಕ್ಯರಾದರು. ಇವರ ಗದ್ದುಗೆಯನ್ನು ಶಿರಹಟ್ಟಿಯ ಮೂಲ ಮಠದಲ್ಲಿ ನಿರ್ಮಿಸಲಾಗಿದೆ. ಈಗಿನ ಗುರುಗಳಾದ ಶ್ರೀ ಫಕೀರೇಶ್ವರ ಸಿದ್ಧರಾಮ ಸ್ವಾಮಿಗಳು ಸಂಸೆಮಠದ ಬಗ್ಗೆ ಅಭಿಮಾನ ಹೊಂದಿದ್ದು, ಸಂದರ್ಭಕ್ಕನುಸಾರವಾಗಿ ಮಠಕ್ಕೆ ಆಗಮಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಪುರಾತನ ಕಾಲದ ಮಠದ ಕಟ್ಟಡವು ವಿಶಾಲ ತಳಹದಿಯ ಮೇಲೆ ಮಣ್ಣಿನಗಚ್ಚಿನಿಂದ ನಿರ್ಮಾಣಗೊಂಡಿದೆ. ಮಠದ ಬಲಬದಿಯಲ್ಲಿ ಪುರಾತನ ಕಾಲದ ಬಾವಿ ನಿರ್ಮಾಣಗೊಂಡಿದ್ದು ಹಿಂದೆ ಗ್ರಾಮದ ಜನರು ಈ ಬಾವಿಯನ್ನು ಕುಡಿ ಯುವ ನೀರಿಗಾಗಿ ಬಳಕೆ ಮಾಡಿಕೊಳ್ಳುತ್ತಿದ್ದರು. ಮಠ ಮತ್ತು ಗ್ರಾಮದ ಒಂದು ಅಂಗವಾಗಿರುವ ಈ ಬಾವಿಗೆ ಶ್ರೀ ಮಲ್ಲಿಕಾರ್ಜುನ

ಗೌಡ ಲಕ್ಕನಗೌಡ ಹಾಗೂ ಶ್ರೀ ದ್ಯಾಮನಗೌಡ ಲಕ್ಕನಗೌಡ ಇವರು ಕಲ್ಲಿನ ಕಟ್ಟೆಯನ್ನು ನಿರ್ಮಿಸಿ, ಬಾವಿಯನ್ನು ದುರಸ್ತಿಗೊಳಿಸಿ ಪುರಾತನ ಕಾಲದ ಬಾವಿಯು ಒಂದು ಸ್ಮಾರಕವಾಗಿ ಉಳಿಯುವಂತೆ ಮಾಡಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಜಗದ್ಗುರು ಶ್ರೀ ಫಕೀರೇಶ್ವರ ಸಿದ್ಧರಾಮ ಸ್ವಾಮಿಗಳು, ಶ್ರೀ ಫಕೀರೇಶ್ವರಮಠ, ಸಂಸೆ, ಕುಂದಗೋಳ ತಾಲ್ಲೂಕು, ಧಾರವಾಡ ಜಿಲ್ಲೆ.

ವಿರಕ್ತಮಠ: ಸಂಸೆ ಗ್ರಾಮದ ಹೊರಭಾಗದಲ್ಲಿ ಶ್ರೀ ವಿರಕ್ತಮಠವು ಸ್ಥಾಪನೆಯಾಗಿದೆ. ಮುರುಘಾ ಸಮಯದ ವಿರಕ್ತ ಸಂಪ್ರದಾಯದ ಈ ಮಠದ ಸ್ಥಾಪನೆಯ ಕಾಲಮಾನದ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಶ್ರೀ ಶಿವಪೂಜಾ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಇಲ್ಲಿಗೆ ಆಗಮಿಸಿ ನೆಲೆಗೊಂಡು, ಅನೇಕ ಪವಾಡಗಳನ್ನು ಮಾಡಿ ಮಠವನ್ನು ಸ್ಥಾಪಿಸಿದರೆಂದು ಹೇಳಲಾಗುತ್ತಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಶಿವಪೂಜಾಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಅನ್ನದಾನಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ದೊಡ್ಡಚನ್ನಬಸವಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಸಣ್ಣ ಚನ್ನಬಸವಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಚನ್ನಬಸವ ದೇವರು

ಈ ರೀತಿ ಮಠದ ಪರಂಪರೆಯನ್ನು ಗುರುತಿಸಲಾಗಿದೆ. ಕರ್ತೃ ಗುರುಗಳ ನಂತರ ಶ್ರೀ ಅನ್ನದಾನ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಇವರ ನಂತರ ಅಧಿಕಾರಕ್ಕೆ ಬಂದ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಅನೇಕ ವರ್ಷಗಳಿಂದ ಮಠವು ಖಾಲಿ ಉಳಿದಿತ್ತು. ಪುರಾತನ ಪರಂಪರೆಯ ಮಠವು ನಶಿಸಿ ಹೋಗುವುದು ಸೂಕ್ತವಲ್ಲ ಎಂದು ಅರಿತು ಈಚೆಗೆ ಉತ್ತರಾಧಿಕಾರಿಯನ್ನು ನೇಮಿಸಲಾಗಿದೆ.

ಶ್ರೀ ಪಟ್ಟದಯ್ಯ ಮತ್ತು ಶ್ರೀಮತಿ ಶಾಂತಮ್ಮನವರ ಪುತ್ರರಾಗಿ ೧೯೭೦ ರ ಜುಲೈ ಇಪ್ಪತ್ತೊಂದರಂದು ಜನಿಸಿದ, ಶ್ರೀ ಚನ್ನಬಸವ ದೇವರು ಶಿವಯೋಗ ಮಂದಿರದಲ್ಲಿ ವೇದ ಮತ್ತು ಯೋಗವನ್ನು ಕಲಿತು, ಚಿತ್ರದುರ್ಗ ಬೃಹನ್ಮಠದ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಸ್ವಾಮಿಗಳ ಆಶೀರ್ವಾದದ ಮೇರೆಗೆ ಉತ್ತರಾಧಿಕಾರಿಗಳಾಗಿ ನೇಮಕಗೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠವು ಮಣ್ಣಿನ ಹಳೆಯ ಕಟ್ಟಡವನ್ನು ಹೊಂದಿದ್ದು, ಮಠದ ಆವರಣದ ಒಳಭಾಗದಲ್ಲಿ ಎರಡು ಗದ್ದುಗೆಗಳು ಹಾಗೂ ಹೊರ ಭಾಗದಲ್ಲಿ ಎರಡು ಗದ್ದುಗೆಗಳು ಸ್ಥಾಪನೆಗೊಂಡಿವೆ. ಈ ಗದ್ದುಗೆಗಳಿಗ ನಿತ್ಯಪೂಜೆ, ಕಾರ್ತೀಕ ಮಾಸದಲ್ಲಿ ದೀಪೋತ್ಸವ ಹಾಗೂ ಬಸವ ಜಯಂತಿಯನ್ನು ಆಚರಿಸಲಾಗುತ್ತಿದೆ. ಮಠದ ಆಸ್ತಿಯಾಗಿ ಐದು ಎಕರೆ ಜಮೀನಿದ್ದು, ಇದು ಈ ಗ್ರಾಮದ ಸ್ಮಶಾನ ಭೂಮಿಯಾಗಿದೆ. ಈ ಜಮೀನನ್ನು ಅಭಿವೃದ್ಧಿಪಡಿಸಿ ಮಠದ ಆದಾಯದ ಮೂಲವನ್ನಾಗಿ ಮಾಡಿಕೊಂಡಿದ್ದಾರೆ. ಗುರುಗಳು ಆಯುರ್ವೇದ ಔಷಧಿಯನ್ನು ನೀಡುತ್ತಾ, ಹಳ್ಳಿ ವೈದ್ಯರಾಗಿ ಹೆಸರು ಪಡೆದಿದ್ದಾರೆ. ಮಠದ ಅಭಿವೃದ್ಧಿ ಕಾರ್ಯಗಳು ಮುಗಿದ ಮೇಲೆ ಪಟ್ಟಾಧಿಕಾರವನ್ನು ವಹಿಸಿಕೊಳ್ಳಲಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಚನ್ನಬಸವ ದೇವರು, ಶ್ರೀ ವಿರಕ್ತಮಠ, ಸಂಸೆ, ಕುಂದಗೋಳ ತಾಲ್ಲೂಕು, ಧಾರವಾಡ ಜಿಲ್ಲೆ.

❑

ಧಾರವಾಡ ತಾಲ್ಲೂಕು

ಧಾರವಾಡ ಜಿಲ್ಲೆಯ ಐದು ತಾಲ್ಲೂಕುಗಳಲ್ಲಿ ಒಂದಾದ ಧಾರವಾಡ ತಾಲ್ಲೂಕು ಸಾಂಸ್ಕೃತಿಕ ಹಾಗೂ ಸಾಹಿತ್ಯಿಕವಾಗಿ ಶ್ರೀಮಂತಿಕೆ ಪಡೆದಿದೆ. ಇಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆದಿದೆ. ಹಿಂದೆ ಅನೇಕ ಮಠಗಳು ಸ್ಥಾಪನೆಯಾಗಿ ಧಾರ್ಮಿಕವಾಗಿ ಈ ಜಿಲ್ಲೆಯನ್ನು ಶ್ರೀಮಂತಗೊಳಿಸಿದ್ದವು. ಪ್ರಸ್ತುತ ಆರು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಹಿತ್ಯಿಕವಾಗಿ ಅಭಿವೃದ್ಧಿ ಕಾಣಲು ನೆರವು ನೀಡಿವೆ.

ಅಮ್ಮಿನಬಾವಿ

ಧಾರವಾಡ ತಾಲ್ಲೂಕಿನ ಅಮ್ಮಿನಬಾವಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಹನ್ನೊಂದು ಕಿ.ಮೀ ದೂರದಲ್ಲಿದೆ. ಸಾಂಗ್ಲಿ ಸಂಸ್ಥಾನದ ಆಡಳಿತಕ್ಕೆ ಒಳಪಟ್ಟಿದ್ದ ಈ ಪ್ರದೇಶವನ್ನು ಹನುಮ ಎಂಬ ಪಾಳೆಗಾರನು ಆಳುತ್ತಿದ್ದನು. ಇವನ ಕಾಲದಲ್ಲಿ ಗ್ರಾಮದ ಹೆಬ್ಬಾಗಿಲಿನಲ್ಲಿ ಬೃಹದಾಕಾರದ ಬಾವಿಯನ್ನು ತೋಡಿಸಿ, ಕಲ್ಲಿನ ಕಟ್ಟಡವನ್ನು ನಿರ್ಮಿಸಿದನು. ಇದರಿಂದ ಈ ಗ್ರಾಮಕ್ಕೆ'ಹನುಮನಬಾವಿ'ಎಂದು ಹೆಸರಾಯಿತು. ಈ ಪದವು ಕಾಲಾನಂತರ 'ಅಮ್ಮಿನಬಾವಿ'ಯಾಗಿ ರೂಪಾಂತರ ಪಡೆದು ಕೊಂಡಿದೆ ಎಂದು ಸ್ಥಳ ಪುರಾಣವು ತಿಳಿಸುತ್ತಿದೆ. ಇಂತಹ ಇತಿಹಾಸ ಪ್ರಸಿದ್ಧ ಗ್ರಾಮದಲ್ಲಿ ಶ್ರೀ ರಂಭಾಪುರಿ ಪೀಠದ ಶಾಖಾ ಮಠವಾದ ಶ್ರೀ ಪಂಚಗ್ರಹ ಹಿರೇಮಠವು ಸ್ಥಾಪನೆಯಾಗಿದೆ.

ಪಂಚಗ್ರಹ ಹಿರೇಮಠ: ಅಮ್ಮಿನಬಾವಿ ಗ್ರಾಮದ ಮಧ್ಯಭಾಗದಲ್ಲಿ ಶ್ರೀ ಪಂಚಗ್ರಹ ಹಿರೇಮಠವು ಸ್ಥಾಪನೆಯಾಗಿದೆ. ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನ ಬ್ಯಾಲೆಹುಣಸೆ ಗ್ರಾಮದಲ್ಲಿ ತುಂಗಭದ್ರಾನದಿಯ ದಂಡೆ ಯಲ್ಲಿ ಸ್ಥಾಪನೆಯಾಗಿದ್ದ ಶ್ರೀ ಹಿರೇಮಠದ ಶ್ರೀ ಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ಕಾರಣಾಂತರದಿಂದ ಮಠವನ್ನು ತೊರೆದು ಶಿರಹಟ್ಟಿ ತಾಲ್ಲೂಕಿನ ಸಾಸಲವಾಡದ ತುಂಗಭದ್ರಾ ನದಿಯ ದಡದಲ್ಲಿ ನೆಲೆಗೊಂಡ ಮೇಲೆ ಮಠವನ್ನು ಸ್ಥಾಪಿಸಿ, ಈಶ್ವರಲಿಂಗ ವನ್ನು ಪ್ರತಿಷ್ಠಾಪಿಸಿ, ವೀರಭದ್ರಸ್ವಾಮಿ ದೇವಸ್ಥಾನವನ್ನು ನಿರ್ಮಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸತೊಡಗಿದರು. ಗುರುಗಳು ಇಲ್ಲಿ ಅನುಷ್ಠಾನಗೊಂಡು ನಂತರ ಸಾಕ್ಷಾತ್ಕಾರಕ್ಕಾಗಿ ಲೋಕಸಂಚಾರವನ್ನು ಕೈಗೊಂಡು ಅಮ್ಮಿನಬಾವಿಗೆ ಆಗಮಿಸಿದರು. ಗುರುಗಳು ಇಲ್ಲಿನ ಹೊಂಡದಲ್ಲಿ (ಈಗ ಬೃಹದಕಾರದ ಬಾವಿ ಸ್ಥಾಪನೆಯಾಗಿದೆ) ಸ್ನಾನಮಾಡಿ ದಂಡೆಯ ಮೇಲೆ ಕುಳಿತಿದ್ದ ಸಂದರ್ಭದಲ್ಲಿ, ಗ್ರಾಮದ ಭಕ್ತರು ಗುರುಗಳನ್ನು ಗಮನಿಸಿ ಇಲ್ಲೇ ನೆಲೆಸಬೇಕೆಂದು ಒತ್ತಾಯ ಪಡಿಸಿದರು. ಭಕ್ತರ ಒತ್ತಾಸೆ ಯಂತೆ ಅಮ್ಮಿನಬಾವಿಯಲ್ಲಿ ನೆಲೆಸಲು ಗುರುಗಳು ಒಪ್ಪಿಗೆ ಕೊಟ್ಟರು. ಶ್ರೀ ಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ಇಲ್ಲಿ ನೆಲೆಸಲು ಸಮ್ಮತಿ ಸೂಚಿಸಿದ ಮೇಲೆ ಗ್ರಾಮಸ್ಥರು ಗುರುಗಳಿಗಾಗಿ ಕುಟೀರವನ್ನು ಸ್ಥಾಪಿಸಿದರು. ಗುರುಗಳು ಇಲ್ಲಿ ನೆಲೆಗೊಂಡು ತಮ್ಮ ಇಚ್ಛಾಶಕ್ತಿಯ ಬಲದಿಂದ ಮಠವನ್ನು ದೊಡ್ಡ ಸಂಸ್ಥಾನವನ್ನಾಗಿ ರೂಪಿಸಿದರು.

ಪರಂಪರೆ: ಕರ್ತೃಗುರುಗಳಾದ ಶ್ರೀ ಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳ ನಂತರ ಹದಿನಾರು ಜನ ಗುರುಗಳು ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡು ಧಾರ್ಮಿಕ ಆಚರಣೆಗಳನ್ನು ನಡೆಸಿದ್ದಾರೆ. ಈ ಎಲ್ಲಾ ಗುರುಗಳು ಕರ್ತೃಗುರುಗಳ ಹೆಸರನ್ನೇ ಅಭಿಧಾನ ಪಡೆದು ಅಧಿಕಾರಕ್ಕೆ ಬಂದಿದ್ದಾರೆ. ಈಗಿನ ಶ್ರೀ ಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ಶ್ರೀ ಅಜ್ಜಯ್ಯ ಮತ್ತು ಶ್ರೀಮತಿ ಸುಶೀಲ ತಾಯಿಯವರ ಪುತ್ರ ರಾಗಿ ೧೯೩೪ರ ಆಗಸ್ಟ್ ಹದಿಮೂರರಂದು ಜನಿಸಿದರು. ಇವರು ಐದು ವರ್ಷದ ಬಾಲಕರಾಗಿರುವಾಗಲೇ ಮಠದ ಪಟ್ಟಾಧಿ ಕಾರವನ್ನು (೧೯೩೯) ವಹಿಸಿಕೊಂಡಿದ್ದಾರೆ.ಇವರು ಮಠದಲ್ಲೇ ಸಂಸ್ಕೃತ, ವೇದಾಧ್ಯಯ ಮಾಡಿ ಸಂಸ್ಕಾರವನ್ನು ಪಡೆದುಕೊಂಡರು. ಗುರುಗಳು ತಮ್ಮ ಅಧಿಕಾರಾವಧಿಯಲ್ಲೇ ಮಠವನ್ನು ಅಭಿವೃದ್ಧಿಪಡಿಸಿ ದರು. ಶ್ರೀ ಶಿವಾನಂದ ಮತ್ತು ಶ್ರೀಮತಿ ಉಷಾ ಇವರ ಪುತ್ರರಾಗಿ ಜನಿಸಿದ ಶ್ರೀ ಅಜ್ಜಯ್ಯ ಸ್ವಾಮಿಗಳನ್ನು ಉತ್ತರಾಧಿಕಾರಿ ಗಳನ್ನಾಗಿ ೨೦೦೦ದಲ್ಲಿ ನೇಮಕ ಮಾಡಿಕೊಳ್ಳಲಾಗಿದೆ.

ಧಾರ್ಮಿಕ ಕಾರ್ಯಗಳು: ಪುರಾತನ ಪರಂಪರೆಯ ಮಠದ ಕಟ್ಟಡವನ್ನು ಕಟ್ಟಿಗೆಯಲ್ಲಿ ಭವ್ಯವಾಗಿ ನಿರ್ಮಿಸಲಾಗಿದೆ. ಎರ ಡಂತಸ್ತಿನ ಕಟ್ಟಡವು ಒಂದು ಕಲಾಕೃತಿಯಂತೆ ನಿರ್ಮಾಣಗೊಂಡಿದೆ. ಮಠದ ಪರಂಪರೆಯ ಗುರುಗಳ ಗದ್ದುಗೆಗಳು ಸಾಸಲವಾಡ

(ಒಂದು) ಮತ್ತು ಅಮ್ಮಿನಬಾವಿಯಲ್ಲಿ ಸ್ಥಾಪನೆಯಾಗಿದ್ದು, ಈ ಗದ್ದುಗೆಗಳಿಗೆ ನಿತ್ಯ ಪೂಜೆಯನ್ನು ನಡೆಸಲಾಗುತ್ತಿದೆ. ಶ್ರಾವಣಮಾಸದಲ್ಲಿ ಪುರಾಣ, ಕೀರ್ತನೆ, ಅಮಾವಾಸ್ಯೆಯಲ್ಲಿ ಶಿವಾನುಭವಗೋಷ್ಠಿ ಹಾಗೂ ಆಷಾಢಶುದ್ಧ ಬಿದಿಗೆಯಲ್ಲಿ ಹಿರಿಯ ಲಿಂಗೈಕ್ಯ ಗುರುಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಮಠದ ಆವರಣದಲ್ಲಿ ಗ್ರಾಮದೇವತೆಯಾದ ದೇವಿಗುಡಿಯು ಸ್ಥಾಪನೆಯಾಗಿದೆ. ಇಲ್ಲಿಯೂ ನಿತ್ಯಪೂಜೆಯನ್ನು ಮಾಡಲಾಗುತ್ತಿದೆ. ಮಠದಲ್ಲಿ ವಿಶೇಷ ಸಂದರ್ಭಗಳಲ್ಲಿ ಹಾಗೂ ನಿತ್ಯ ಅನ್ನ ದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಮರೇವಾಡ, ತಿಮ್ಮಾಪುರ, ಕರಡಿಗುಡ್ಡ ಹಾಗೂ ಕವಲಗೇರಿಯಲ್ಲಿ ಶಾಖಾ ಮಠಗಳು ಸ್ಥಾಪನೆಗೊಂಡಿದ್ದವು. ಈಗ ಕರಡಿಗುಡ್ಡದ ಮಠ ಮಾತ್ರ ಅಸ್ತಿತ್ವದಲ್ಲಿದ್ದು, ಇಲ್ಲಿ ಧಾರ್ಮಿಕ ಕಾರ್ಯಗಳು ನಡೆಯುತ್ತಿವೆ.

ವಿಶೇಷತೆ: ಮಠದ ಗುರುಗಳನ್ನು ಗ್ರಾಮಸ್ಥರು ಪಾದಪೂಜೆಗೆ ಅಥವಾ ಪೂಜೆಗೆ ಆಹ್ವಾನಿಸಿದರೆ ಪಲ್ಲಕ್ಕಿಯಲ್ಲಿ ಕರೆದೊಯ್ದು, ಪುನಃ ಮಠಕ್ಕೆ ತಂದು ಬಿಡುವ ಸಂಪ್ರದಾಯ ಹಿಂದಿನಿಂದಲೂ ನಡೆದು ಬಂದಿದ್ದು ಈಗಲೂ ನಡೆಯುತ್ತಿದೆ. ಮಠದಲ್ಲಿ ಪುರಾತನ ಕಾಲದ ಮೇನೆ ಹಾಗೂ ಪಲ್ಲಕ್ಕಿಗಳು ಇವೆ. ವರ್ಷಕ್ಕೊಮ್ಮೆ ಪಂಚಪೀಠಗಳ ಜಗದ್ಗುರುಗಳನ್ನು ಕರೆಸಿ ಅಡ್ಡ ಪಲ್ಲಕ್ಕಿ ಉತ್ಸವ ಮತ್ತು ಮಹಾ ಪೂಜೆಯನ್ನು ನಡೆಸಲಾಗುತ್ತಿದೆ.

ಶೈಕ್ಷಣಿಕ ಸೇವೆ: ಮಠದ ವತಿಯಿಂದ ೧೯೬೫ ರಲ್ಲಿ ಪ್ರೌಢಶಾಲೆ, ೧೯೯೧ ರಲ್ಲಿ ನರ್ಸರಿಶಾಲೆ ಹಾಗೂ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಲಾಗಿದೆ. ಅಲ್ಲದೆ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಿ, ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ನೆರವಾಗಿದೆ.

ವಿಳಾಸ: ಷ.ಬ್ರ.ಶ್ರೀ ಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳು,ಶ್ರೀ ಪಂಚಗ್ರಹ ಹಿರೇಮಠ, ಅಮ್ಮಿನಬಾವಿ, ಧಾರವಾಡ ತಾಲ್ಲೂಕು.

ಗರಗ

ಧಾರವಾಡ ತಾಲ್ಲೂಕಿನ ಗರಗ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹದಿನಾರು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಶ್ರೀ ಮಡಿವಾಳ ಶಿವಯೋಗಿಗಳ ಮಠವು (ಹದಿನೆಂಟನೆಯ ಶತಮಾನ) ಸ್ಥಾಪನೆಯಾಗಿದೆ.

ಮಡಿವಾಳ ಶಿವಯೋಗಿಗಳಮಠ: ಗರಗ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಮಠವನ್ನು ಶ್ರೀ ಮಡಿವಾಳ ಶಿವಯೋಗಿಗಳು ಸ್ಥಾಪಿಸಿದ್ದರಿಂದ 'ಶ್ರೀ ಮಡಿವಾಳ ಶಿವಯೋಗಿಗಳ ಮಠ' ಎಂಬ ಹೆಸರು ಬಂದಿದೆ. ಮಠವು ಇಲ್ಲಿನ ಧಾರ್ಮಿಕ ಚಟುವಟಿಕೆಗಳ ಕೇಂದ್ರ ಬಿಂದುವಾಗಿ ಬೆಳೆದಿದೆ.

ಮಠಸ್ಥಾಪನೆ: ಕಿತ್ತೂರಿನ ಕಲ್ಮಠದಲ್ಲಿ ನೆಲೆಸಿದ್ದ ಶ್ರೀ ಮರಿಮಡಿವಾಳೇಶ್ವರ ಶಿವಯೋಗಿಗಳು ಬಾಲ್ಯದಲ್ಲೇ ಅನೇಕ ಲೀಲೆಗಳನ್ನು ಮಾಡಿ ಮಲ್ಲಸರ್ಜ ದೊರೆ ಹಾಗೂ ಮಠದ ಹಿರಿಯ ಗುರುಗಳನ್ನು ಬೆರಗುಗೊಳಿಸಿದ್ದಲ್ಲದೆ, ಕಿತ್ತೂರಿನ ಪ್ರಜೆಗಳು ಭಯ ಭಕ್ತಿಯಿಂದ ನಡೆದುಕೊಳ್ಳುವಂತೆ ಮಾಡಿದ್ದರು ಎಂದು ಹೇಳಲಾಗುತ್ತಿದೆ. ಕಿತ್ತೂರಿನಲ್ಲಿ ವಿದ್ಯಾಭ್ಯಾಸ ಮಾಡಿ, ಆಧ್ಯಾತ್ಮ ಸಿದ್ಧಿಯಿಂದ ಮೆರೆದ ಇವರು ಲೋಕೋದ್ಧಾರಕ್ಕೆಂದು, ತಮ್ಮ ಹದಿನೆಂಟನೆಯ ವಯಸ್ಸಿನಲ್ಲಿ ಕಿತ್ತೂರನ್ನು ತೊರೆದು, ೧೭೮೫ ರಲ್ಲಿ ಸಂಚಾರವನ್ನು ಮಾಡುತ್ತಾ ಗರಗ ಗ್ರಾಮಕ್ಕೆ ಬಂದು ನೆಲೆ ನಿಂತರು. ಗುರುಗಳು ಇಲ್ಲಿ ಮಠವನ್ನು ಸ್ಥಾಪಿಸಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದರು. ಶ್ರೀ ಮಡಿವಾಳ ಶಿವಯೋಗಿಗಳು ಅನೇಕ ಪವಾಡಗಳನ್ನು ಮಾಡಿ ಭಕ್ತರನ್ನು ಉದ್ಧರಿಸಿ, ಮಠವನ್ನು ಅಭಿವೃದ್ಧಿಪಡಿಸಿ ಲಿಂಗೈಕ್ಯರಾದರು.

ಪರಂಪರೆ:

೧. ಶ್ರೀ ಮ.ನಿ.ಪ್ರ. ಮಡಿವಾಳಶಿವಯೋಗಿಗಳು
೨. ಶ್ರೀ ಮ.ನಿ.ಪ್ರ. ಚನ್ನಬಸವಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಮಡಿವಾಳಶಿವಯೋಗಿಗಳು
೪. ಶ್ರೀ ಮ.ನಿ.ಪ್ರ. ಮಡಿವಾಳಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಚನ್ನಬಸವಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃ ಗುರುಗಳಾದ ಶ್ರೀ ಮಡಿವಾಳೇಶ್ವರರು ಲಿಂಗೈಕ್ಯರಾದ ಮೇಲೆ ಶ್ರೀ ಚನ್ನಬಸವ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಅಭಿವೃದ್ಧಿಪಡಿಸಿ, ೧೯೪೩ ರ ಜೂನ್ ಇಪ್ಪತ್ತೇಳರಂದು ಲಿಂಗೈಕ್ಯರಾದರು. ನಂತರ ಬಯಲುಹೊಂಗಲ ತಾಲ್ಲೂಕಿನ ಮುಡುಕಿಬಾವಿಯಲ್ಲಿ ಜನಿಸಿದ ಶ್ರೀ ಮಡಿವಾಳ ಶಿವಯೋಗಿಗಳು ಅಧಿಕಾರಕ್ಕೆ ಬಂದು ಮಠವನ್ನು ಅಭಿವೃದ್ಧಿಪಡಿಸಿದರು. ನಂತರ ಮೂರನೆಯ ಶ್ರೀ ಮಡಿವಾಳ ಸ್ವಾಮಿಗಳು ೧೯೬೬ ರಲ್ಲಿ ಅಧಿಕಾರಕ್ಕೆ ಬಂದರು. ಇವರು ತಪೋನಿಷ್ಠರಾಗಿ ಧಾರ್ಮಿಕ ಕಾರ್ಯಗಳಿಂದ ಹೆಸರು ಪಡೆದು ಮಠವನ್ನು ಪ್ರಸಿದ್ಧಿಗೆ ತಂದರು. ಇವರ ನಂತರ ನೇಗಿನಾಳು ಗ್ರಾಮದ ಶ್ರೀ ಬಸವಲಿಂಗಪ್ಪ ಮತ್ತು ಶ್ರೀಮತಿ ಗುಂಡಮ್ಮನವರ ಪುತ್ರರಾಗಿ ೧೯೪೫ ರಲ್ಲಿ ಜನಿಸಿದ ಶ್ರೀ ಚನ್ನಬಸವ ಸ್ವಾಮಿಗಳು ಗದಗದಲ್ಲಿ ವಿದ್ಯಾಭ್ಯಾಸ ಮಾಡಿ, ೧೯೮೧ರಲ್ಲಿ ಪರಂಪರೆಯ ಹದಿನೈದನೆಯ ಗುರುಗಳಾಗಿ ಪಟ್ಟಾಧಿಕಾರ ವಹಿಸಿಕೊಂಡಿದ್ದಾರೆ.

ಶ್ರೀ ಚನ್ನಬಸವ ಸ್ವಾಮಿಗಳು ಅಧಿಕಾರ ವಹಿಸಿಕೊಂಡ ಮೇಲೆ ಈ ಪುರಾತನ ಮಠಕ್ಕೆ ವಿಶಾಲವಾದ ಕಟ್ಟಡವನ್ನು ನಿರ್ಮಿಸಿದರು. ಅಲ್ಲದೆ ಕರ್ತೃ ಗುರುಗಳಾದ ಶ್ರೀ ಮಡಿವಾಳೇಶ್ವರ ಶಿವಯೋಗಿಗಳ ಗದ್ದುಗೆಗೆ ಭವ್ಯವಾದ ಕಟ್ಟಡವನ್ನು ನಿರ್ಮಿಸಿದರು. ಶರಣೆ ಅಕ್ಕಮಹಾದೇವಿ ಗುಡಿ, ನವಗ್ರಹ ಗುಡಿ ಹಾಗೂ ಗಣಪತಿ ಗುಡಿಗಳನ್ನು ಸ್ಥಾಪಿಸಿದ್ದಾರೆ. ಶಿವಾನುಭವ ಮಂಟಪ ಹಾಗೂ ಪರಂಪರೆಯ ಗುರುಗಳ ಗದ್ದುಗೆಗಳಿಗೆ ಮಂಟಪವನ್ನು ನಿರ್ಮಿಸಿ, ಮಠವನ್ನು ಅಭಿವೃದ್ಧಿಪಡಿಸಿದರು.

ಧಾರ್ಮಿಕ ಕಾರ್ಯಗಳು: ಕರ್ತೃಗದ್ದುಗೆ, ಇತರೇ ಗದ್ದುಗೆಗಳು ಹಾಗೂ ಮಠದ ಸಮುಚ್ಚಯದಲ್ಲಿ ಸ್ಥಾಪನೆಗೊಂಡ ದೇವಸ್ಥಾನಗಳಲ್ಲಿ ನಿತ್ಯ ಎರಡೂ ವೇಳೆ ಪೂಜೆ, ಪ್ರತಿ ಅಮಾವಾಸ್ಯೆಯಲ್ಲಿ ಬೆಳಿಗ್ಗೆ ಪಲ್ಲಕ್ಕಿ ಉತ್ಸವ, ಭಜನೆ ಕಾರ್ಯಕ್ರಮ, ಶ್ರಾವಣಮಾಸದ ಕಡೆ ಸೋಮವಾರ ರಥೋತ್ಸವವನ್ನು ನಡೆಸಲಾಗುತ್ತಿದೆ. ಭರತ ಹುಣ್ಣಿಮೆಯ ಮಾಘ ಬಹುಳ ತದಿಗೆಯಲ್ಲಿ ಶ್ರೀ ಮಡಿವಾಳೇಶ್ವರ ಜಾತ್ರೆಯು ಮೂರು ದಿನಗಳಕಾಲ ನಡೆಯುತ್ತಿದೆ. ಗುರುಗಳು ಈ ಸಂದರ್ಭದಲ್ಲಿ ಹದಿನೈದು ದಿನಗಳ ಕಾಲ ಸುತ್ತಲಿನ ಗ್ರಾಮಗಳಲ್ಲಿ ಪಾದಯಾತ್ರೆಯನ್ನುಮಾಡಿ ಧರ್ಮಜಾಗೃತಿಯನ್ನುಂಟು ಮಾಡುತ್ತಾರೆ. ರಥೋತ್ಸವದ ನಿಮಿತ್ತ ಹದಿನೈದು ದಿನಗಳು ಬಸವ ಪುರಾಣವನ್ನು ನಡೆಸಲಾಗುತ್ತಿದೆ. ದನಗಳ ಪ್ರದರ್ಶನ ಹಾಗೂ ಮಾರಾಟದ (ಜಾತ್ರೆ) ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಮಠದಲ್ಲಿ ವಿಶೇಷ ಸಂದರ್ಭಗಳಲ್ಲಿಯೇ ಅಲ್ಲದೆ ನಿತ್ಯ ಅನ್ನದಾಸೋಹದ ವ್ಯವಸ್ಥೆಯನ್ನು ನಡೆಸಲಾಗುತ್ತಿದೆ.

ಶೈಕ್ಷಣಿಕ ಸೇವೆ: ಶ್ರೀ ಮಡಿವಾಳೇಶ್ವರ ವಿದ್ಯಾ ಸಂಸ್ಥೆಯನ್ನು ಪ್ರಾರಂಭಿಸಿ, ಗರಗದಲ್ಲಿ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜನ್ನು ಪ್ರಾರಂಭಿಸಲಾಗಿದೆ. ಮಠದಲ್ಲಿ ಉಚಿತ ಪ್ರಸಾದ ನಿಲಯವನ್ನು ಪ್ರಾರಂಭಿಸಿ, ಗ್ರಾಮಾಂತರ ಮಕ್ಕಳಿಗೆ ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಚನ್ನಬಸವ ಸ್ವಾಮಿಗಳು, ಶ್ರೀ ಮಡಿವಾಳ ಶಿವಯೋಗಿಗಳ ಮಠ, ಗರಗ, ಧಾರವಾಡ ತಾಲ್ಲೂಕು.

ಧಾರವಾಡ

'ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ' ಎಂದು ಹೆಸರು ಪಡೆದಿರುವ ಧಾರವಾಡ ನಗರವು ವೀರಶೈವ ಧರ್ಮದ ಕೇಂದ್ರಬಿಂದುವಾಗಿ ರೂಪುಗೊಂಡಿದೆ. ಇತಿಹಾಸ ಪ್ರಸಿದ್ಧ ಈ ನಗರದಲ್ಲಿ ಹನ್ನೆರಡು ಮಠಗಳು ಸ್ಥಾಪನೆಗೊಂಡಿದ್ದವು ಎಂದು ಹೇಳಲಾಗುತ್ತಿದೆ. ಆದರೆ ಈಗ ಶ್ರೀ ಮುರುಘಾಮಠ, ಶ್ರೀ ಓಂಮಠ, ಶ್ರೀ ತಪೋವನಮಠ, ಶರಣೆ ಅಕ್ಕಮಹಾದೇವಿ ಮಠ, ಹುಬ್ಬಳ್ಳಿ ಮೂರು ಸಾವಿರ ಮಠದ ಶಾಖಾಮಠ ಹಾಗೂ ಶ್ರೀ ಹಿರೇಮಠ ಎಂಬ ಐದು ಮಠಗಳು ಅಸ್ತಿತ್ವದಲ್ಲಿವೆ. ಇವುಗಳಲ್ಲಿ ಮೂರುಸಾವಿರ ಮಠ ಹುಬ್ಬಳ್ಳಿ ಮಠದ ಶಾಖಾ ಮಠವಾಗಿ ಅಭಿವೃದ್ಧಿಗೊಂಡಿದೆ. ಶ್ರೀ ಹಿರೇಮಠವು ಕುಂದಗೋಳ ಪಂಚಗ್ರಹ ಹಿರೇಮಠದ ಶಾಖಾಮಠವಾಗಿ ಅಭಿವೃದ್ಧಿಗೊಳ್ಳುತ್ತಿದೆ.

ಮುರುಘಾಮಠ: ಧಾರವಾಡದ ಮೃತ್ಯುಂಜಯ ನಗರದ ಸವದತ್ತಿ ರಸ್ತೆಯಲ್ಲಿ ಶ್ರೀ ಮುರುಘಾ ಮಠವು ಸ್ಥಾಪನೆಯಾಗಿದೆ. ಹಿಂದೆ ಮಣ್ಣಿನ ಗಚ್ಚಿನಿಂದ ನಿರ್ಮಿಸಲ್ಪಟ್ಟ, ಚಿಕ್ಕದಾದ ಕಟ್ಟಡದಲ್ಲಿ ವೀರಶೈವ ಧರ್ಮದ ಆಚರಣೆಗಳ ಮೂಲಕ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದ್ದ ಶ್ರೀ ಮುರುಘಾ ಮಠವು, ಇಂದು ಭವ್ಯ ಕಟ್ಟಡಗಳ ಸಮುಚ್ಚಯದಿಂದ, ಸದಾ ಜನ

ಸಂದಣಿಯಿಂದ ತುಂಬಿ ತನ್ನ ಸಾಧನೆಯನ್ನು ಪ್ರತಿಬಿಂಬಿಸುತ್ತಿದೆ. ಕಳೆದ ಶತಮಾನದಲ್ಲಿ ಶ್ರೀ ಮೃತ್ಯುಂಜಯ ಸ್ವಾಮಿಗಳು ಈ ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ಮಠವು ಕರ್ನಾಟಕದ ಪ್ರತಿಷ್ಠಿತ ಮಠಗಳಲ್ಲಿ ಒಂದಾಗಿ ಬೆಳೆಯಿತು.

ಮುರುಘಾ ಸಮಯದ ವಿರಕ್ತ ಪರಂಪರೆಯ ಈ ಮಠವು, ಹನ್ನೆರಡನೆಯ ಶತಮಾನದ ಬಸವಾದಿ ಪ್ರಮಥರ ತತ್ತ್ವಗಳನ್ನು ಪ್ರಚಾರಪಡಿಸುವ ಉದ್ದೇಶದಿಂದ ಸ್ಥಾಪನೆಗೊಂಡಿದೆ.ಆರುನೂರು ವರ್ಷಗಳ ಹಿಂದೆ ಶ್ರೀ ರುದ್ರಮುನಿ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿ, ವೀರಶೈವ ಧರ್ಮದ ಆಚರಣೆಗಳನ್ನು ಅನುಷ್ಠಾನಕ್ಕೆ ತಂದು ಭಕ್ತರನ್ನು ಸನ್ಮಾರ್ಗಕ್ಕೆ ಕೊಂಡೊಯ್ದಿದ್ದರು. ಇವರು ಮಹಾ ತಪಸ್ವಿಗಳಾಗಿ ಆಚಾರವಂತರಾಗಿ ಹೆಸರು ಪಡೆದಿದ್ದರು. ಶ್ರೀ ರುದ್ರಮುನಿ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಉತ್ತರಾಧಿಕಾರಿಗಳು ನೇಮಕಗೊಂಡ ಬಗ್ಗೆ ಸ್ಪಷ್ಟ ಆಧಾರಗಳು ಮಠದಲ್ಲಿ ಲಭ್ಯವಿಲ್ಲ. ಶ್ರೀ ಮೃತ್ಯುಂಜಯ ಸ್ವಾಮಿಗಳು ೧೯೧೭ರಲ್ಲಿ ಅಧಿಕಾರಕ್ಕೆ ಬಂದ ಮೇಲೆ ಮಠದ ವಾತಾವರಣವು ಆಮೂಲಾಗ್ರವಾಗಿ ಪರಿವರ್ತನೆಗೊಂಡಿತು.

ಸಾಧಕರ ಆಗಮನ: ಶ್ರೀ ಮೃತ್ಯುಂಜಯ ಸ್ವಾಮಿಗಳು ಹುಬ್ಬಳ್ಳಿ ತಾಲ್ಲೂಕಿನ ಇಂಗಳಳ್ಳಿ ಗ್ರಾಮದ ಶ್ರೀ ತಪ್ಪಯ್ಯ ತರಬೇತಿ ಮಠ ಹಾಗೂ ಶ್ರೀಮತಿ ಚನ್ನವೀರಮ್ಮನವರ ಪುತ್ರರಾಗಿ ೧೮೮೮ ನೆಯ ಏಪ್ರಿಲ್ ಒಂಬತ್ತರಂದು ಜನಿಸಿದರು. ಇಂಗಳಳ್ಳಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿ,ಧಾರವಾಡದ ಹಿರೇಮಠ, ಹೂಲಿಮಠದ ಪಾಠಶಾಲೆಯಲ್ಲಿ ಸಂಸ್ಕೃತ ಅಭ್ಯಾಸವನ್ನು ಮಾಡಿದರು. ಶ್ರೀ ಮೃತ್ಯುಂಜಯ ಸ್ವಾಮಿಗಳಿಗೆ ಹನ್ನೊಂದು ವರ್ಷ ತುಂಬುವ ವೇಳೆಗೆ ಗುರುಗಳ ತಂದೆ ತಾಯಿಗಳು ಬಾಲಕ ಮೃತ್ಯುಂಜಯ ಸ್ವಾಮಿಗಳನ್ನು ಗದಗದ ತೋಂಟದಾರ್ಯ ಮಠಕ್ಕೆ ಒಪ್ಪಿಸಿದರು.

ಗದಗಿನಲ್ಲಿ ಶ್ರೀ ಮೃತ್ಯುಂಜಯ ಸ್ವಾಮಿಗಳು ಸಂಸ್ಕೃತ ಅಭ್ಯಾಸವನ್ನು ಮುಂದುವರೆಸಿ, ಮಗ್ಗೆಯ ಮಾಯಿದೇವರ ಶತಕತ್ರಯ ಹಾಗೂ ನಿಜಲಿಂಗ ಶತಕ ಮೊದಲಾದವುಗಳ ಅಭ್ಯಾಸವನ್ನು ನಡೆಸಿದರು. ನಂತರ ಗುರುಗಳು ಶಾಸ್ತ್ರೀಯ ಸಂಗೀತವನ್ನು ಕಲಿತು ಶ್ರೀ ಮುಪ್ಪಿನ ಷಡಾಕ್ಷರಿಗಳು, ಶ್ರೀ ನಿಜಗುಣ ಶಿವಯೋಗಿಗಳು, ಶ್ರೀ ಸರ್ಪಭೂಷಣ ಶಿವಯೋಗಿಗಳು, ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ತತ್ತ್ವಪದಗಳನ್ನು ರಾಗಬದ್ಧವಾಗಿ ಹಾಡಲು ಕಲಿತರು. ಬಾಲ್ಯದಲ್ಲೇ ತಮ್ಮ ತಂದೆ ತಾಯಿ, ಬಂಧು-ಬಾಂಧವರ ಮೋಹವನ್ನು ತ್ಯಜಿಸಿ, ಒಂದೆಡೆ ನಿಲ್ಲದೆ ತೀರ್ಥ ಕ್ಷೇತ್ರಗಳನ್ನು ಸಂದರ್ಶಿಸಿ ಮಹಾತ್ಮರ ಹಾಗೂ ಶಿವಶರಣರ ದರ್ಶನ ಪಡೆದು ಸಂಸ್ಕಾರವನ್ನು ಬೆಳೆಸಿಕೊಂಡರು. ಗುರುಗಳು ಸಂಚಾರ ಕಾಲದಲ್ಲಿ ಶ್ರೀ ಸಕ್ಕರಿ ಕರಡಪ್ಪನವರ ಪಾಠಶಾಲೆಯಲ್ಲೇ ಕೆಲವು ದಿನ ಉಳಿದು ಸಂಸ್ಕೃತ ಅಭ್ಯಾಸವನ್ನು ಮಾಡಿ ಸೊನ್ನಲಾಪುರ, ರೇವಣಸಿದ್ಧೇಶ್ವರ ಬೆಟ್ಟ, ಬಳಗಾನೂರು, ಉಜ್ಜಯಿನಿ, ಹರಪನಹಳ್ಳಿ ಹಾಗೂ ಅಂಕಲಗಿಯ ಶ್ರೀ ಅಡವಿಸ್ವಾಮಿ ಮಠ ಮುಂತಾದ ಕ್ಷೇತ್ರಗಳನ್ನು ಸಂದರ್ಶಿಸಿದರು.

ಶಿವಯೋಗಿಗಳ ಸೇವೆ: ಕಾಶಿ ವಿಶ್ವನಾಥನ ದರ್ಶನಕ್ಕೆ ಹೋಗುವ ಹಂಬಲವನ್ನು ಹೊಂದಿದ್ದ ಶ್ರೀ ಮೃತ್ಯುಂಜಯ ಸ್ವಾಮಿಗಳು, ಅಥಣಿಯ ಶ್ರೀ ಮುರುಘೇಂದ್ರ ಶಿವಯೋಗಿಗಳ ದರ್ಶನ ಪಡೆದು,ಗುರುಗಳ ಸೇವೆಯನ್ನು ಮಾಡಿದ ಮೇಲೆ ಅಥಣಿಗಿಂತ ಕಾಶಿ ದೊಡ್ಡದಲ್ಲ, ವಿಶ್ವನಾಥ ಅಥಣಿ ಶಿವಯೋಗಿಗಳಿಗಿಂತ ದೊಡ್ಡವನಲ್ಲ ಎಂಬುದನ್ನು ಅರಿತು ಕಾಶಿಗೆ ಹೋಗುವ ಹಂಬಲ ಬಿಟ್ಟು ಅಥಣಿ ಶಿವಯೋಗಿಗಳ ಸೇವೆಯಲ್ಲಿ ನಿರತರಾದರು. ಅಥಣಿ ಶಿವಯೋಗಿಗಳು ತಮ್ಮ ಕರಕಮಲಸಂಜಾತ ಶ್ರೀ ಮೃತ್ಯುಂಜಯ ಸ್ವಾಮಿಗಳಿಗೆ ಜೋಳಿಗೆ ಹಾಗೂ ರುದ್ರಾಕ್ಷಿ ಸರವನ್ನು ನೀಡಿ, ನೀನು ಧಾರವಾಡಕ್ಕೆ ಹೋಗಿ ಸಮಾಜವನ್ನು ಉದ್ಧರಿಸು ಎಂದು ಆಶೀರ್ವದಿಸಿ ಕಳುಹಿಸಿದರು. ಗುರುಗಳು ಧಾರವಾಡಕ್ಕೆ ಬರುವ ಮೊದಲು ದಾವಣಗೆರೆಯಲ್ಲಿ ಕೆಲವು ದಿನ ನೆಲೆಸಿ, ಅಲ್ಲಿನ ವಿರಕ್ತ ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸುತ್ತಿದ್ದರು. ನಂತರ ಭಕ್ತರ ಒತ್ತಾಸೆಯಿಂದ ಧಾರವಾಡಕ್ಕೆ ಆಗಮಿಸಿ, ಜೀರ್ಣಾವಸ್ಥೆಗೊಂಡಿದ್ದ ಮಠಕ್ಕೆ ಬಂದು ೧೯೧೭ ರ ಅಕ್ಟೋಬರ್ ಹನ್ನೊಂದರಂದು ಶ್ರೀ ಮುರುಘಾ ಮಠದ ಮಠಾಧೀಶರಾಗಿ ಪಟ್ಟಾಧಿಕಾರವನ್ನು ವಹಿಸಿಕೊಂಡರು.

ಅಭಿವೃದ್ಧಿಗೊಂಡಮಠ: ಶ್ರೀ ಮೃತ್ಯುಂಜಯ ಸ್ವಾಮಿಗಳು ಪಟ್ಟಾಧಿಕಾರವನ್ನು ವಹಿಸಿಕೊಂಡ ಮೇಲೆ ಮುಳ್ಳಿನ ಗಿಡಗಂಟೆಗಳಿಂದ ಆವೃತಗೊಂಡಿದ್ದ ಮಠವನ್ನು ಸ್ವಚ್ಛಗೊಳಿಸಿ, ಸರ್ವಾಂಗ ಸುಂದರವಾಗಿ ಬೆಳೆಸಿದರು. ಗುರುಗಳು ಶಿವಾನುಭವಗೋಷ್ಠಿ

ಗಳನ್ನು ನಡೆಸತೊಡಗಿ ಮಠದಲ್ಲಿ ಧಾರ್ಮಿಕ ಆಚರಣೆಗಳು ಚಾಲನೆಗೊಳ್ಳುವಂತೆ ಮಾಡಿದರು. ಅಧಿಕಾರವನ್ನು ವಹಿಸಿಕೊಂಡು ವರ್ಷ ತುಂಬುವುದರೊಳಗಾಗಿ, ಶ್ರೀ ಜಗದ್ಗುರು ಮುರುಘ ರಾಜೇಂದ್ರ ಪ್ರಸಾದ ನಿಲಯವನ್ನು ೧೯೧೨ ರ ಮಾರ್ಚ್ ಇಪ್ಪತ್ತೇಳ ರಂದು ಪ್ರಾರಂಭಿಸಿ, ವೀರಶೈವ ಬಡಮಕ್ಕಳಿಗೆ ಆಶ್ರಯ ಕಲ್ಪಿಸಿ ಶೈಕ್ಷಣಿಕ ಪ್ರಗತಿಗೆ ನಾಂದಿಹಾಡಿದರು. ಇದಾದ ಕೆಲವೇ ದಿನಗಳಲ್ಲಿ ಮುಳಗುಂದ, ಹಂಸಬಾವಿ, ಹಿರೇಕೆರೂರು, ಶಿರಾಳಕೊಪ್ಪ,ಸಾಗರ, ಸೂಳೀಬಾವಿ,ಗುರುಮಠಕಲ್ಲು, ಮುಂಬೈ ಹಾಗೂ ಮಡಗಾಂವ್ ಮುಂತಾದ ಸ್ಥಳಗಳಲ್ಲಿ ಶಿಕ್ಷಣ ಸಂಸ್ಥೆಗಳು, ಧಾರ್ಮಿಕ ಹಾಗೂ ಸಾಮಾಜಿಕ ಸಂಸ್ಥೆಗಳನ್ನು ಪ್ರಾರಂಭಿಸಿ, ಧರ್ಮ ಮತ್ತು ಶಿಕ್ಷಣವನ್ನು ಬೆಳೆಸಿ ಸಮಾಜವನ್ನು ಅಭಿವೃದ್ಧಿಪಡಿಸಿದರು.

ಮಠದ ಪ್ರಸಾದ ನಿಲಯಕ್ಕೆ ಸುಸಜ್ಜಿತವಾದ ಕಟ್ಟಡವನ್ನು ನಿರ್ಮಿಸಿ, ಐದುನೂರು ವಿದ್ಯಾರ್ಥಿಗಳ ವಸತಿಗೆ ವ್ಯವಸ್ಥೆ ಮಾಡಿದರು. ನಂದಿಧ್ವಜಸ್ತಂಭ, ಶಿವಾನುಭವಮಂಟಪ, ಬಾಲಲೀಲಾಮಹಾಂತ ಶಿವಯೋಗೀಶ್ವರಮಂಟಪ ಹಾಗೂ ಗ್ರಂಥ ಮಾಲೆ ಕಟ್ಟಡವನ್ನು ನಿರ್ಮಿಸಿ ಮಠದ ಸಮುಚ್ಚಯವನ್ನು ಶ್ರೀಮಂತಗೊಳಿಸಿದರು. ಶ್ರೀ ಮೃತ್ಯುಂಜಯ ಸ್ವಾಮಿಗಳು ಕೈಗೊಂಡ ಧಾರ್ಮಿಕ ಜಾಗೃತಿ ಹಾಗೂ ಸಾಮಾಜಿಕ ಸುಧಾರಣೆಯಿಂದ ವೀರಶೈವ ಸಮಾಜ ಶ್ರೀಮಂತಗೊಳ್ಳಲು ಕಾರಣ ವಾಯಿತು. ಗುರುಗಳ ಸಾಧನೆಯನ್ನು ಮೈಸೂರಿನ ಚಾಮರಾಜ ಒಡೆಯರು ಕಣ್ಣಾರೆ ನೋಡಿ ಸಂತೋಷಪಟ್ಟಿದ್ದರಂತೆ.

ಬೆಳೆದ ಪರಂಪರೆ: ಏನೂ ಇಲ್ಲದ ಮಠದ ಅಧಿಕಾರ ವಹಿಸಿಕೊಂಡ ಶ್ರೀ ಮೃತ್ಯುಂಜಯಸ್ವಾಮಿಗಳು ಎಲ್ಲವನ್ನೂ ಸಾಧಿಸಿ, ೧೯೬೪ರಲ್ಲಿ ಲಿಂಗೈಕ್ಯರಾದರು. ಇವರ ನಂತರ ಶ್ರೀ ಮೃತ್ಯುಂಜಯ ಸ್ವಾಮಿಗಳ ಕರಕಮಲ ಸಂಜಾತರಾಗಿ ಬೆಳೆದಿದ್ದ ಶ್ರೀ ಮಹಾಂತ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡರು. ಶ್ರೀ ಮಹಾಂತ ಸ್ವಾಮಿಗಳು ಹಿರಿಯ ಗುರುಗಳ ಸೇವೆಯನ್ನು ಮಾಡಿ, ಅವರ ಒಡನಾಟದಿಂದ ಸಮರ್ಥ ಗುರುವಾಗಿ ರೂಪುಗೊಂಡಿದ್ದರು.

ಶ್ರೀ ಮಹಾಂತ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಪ್ರಸಾದ ನಿಲಯದ ಸುತ್ತ ನೂರಾರು ತೆಂಗಿನ ಸಸಿಗಳನ್ನು ಬೆಳೆಸಿ, ಹೊಸ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ ಹೊಸ ಕಟ್ಟಡಗಳನ್ನು ನಿರ್ಮಿಸಿದರು. ಅಲ್ಲದೆ ಮಠ ಮತ್ತು ಶಿಕ್ಷಣ ಸಂಸ್ಥೆಗಳ ಆಡಳಿತ ನಿರ್ವಹಣೆಗಾಗಿ ಕಟ್ಟಡವನ್ನು ನಿರ್ಮಿಸಿದರು. ಅಥಣಿ ಶ್ರೀ ಶಿವಯೋಗಿಗಳ ಅಮೃತ ಶಿಲಾಮೂರ್ತಿಯ ಪಕ್ಕದಲ್ಲಿ ಶ್ರೀ ಮೃತ್ಯುಂಜಯ ಸ್ವಾಮಿಗಳ ಶಿಲಾಮೂರ್ತಿಯನ್ನು ಪ್ರತಿಷ್ಠಾಪಿಸಿದರು. ಶ್ರೀ ಮಹಾಂತ ಸ್ವಾಮಿಗಳು ಮಠವನ್ನು ಮತ್ತಷ್ಟು ಬೆಳೆಸಿ ಸದೃಢಗೊಳಿಸಿ, ೧೯೯೩ರ ಜೂನ್ ಇಪ್ಪತ್ತೆರಡರಂದು ಲಿಂಗೈಕ್ಯರಾದರು. ಶ್ರೀ ಮಹಾಂತ ಸ್ವಾಮಿಗಳ ನಂತರ ಕುಂದಗೋಳು ತಾಲ್ಲೂಕಿನ ಪಶುಪತಿಹಾಳು ಗ್ರಾಮದ, ಶ್ರೀ ವೀರಯ್ಯ ಮತ್ತು ಶ್ರೀಮತಿ ಬಸವಲಿಂಗಮ್ಮನವರ ಪುತ್ರರಾಗಿ ೧೯೬೬ರ ಜನವರಿಯಲ್ಲಿ ಜನಿಸಿದ ಶ್ರೀ ಶಿವಯೋಗಿ ಸ್ವಾಮಿಗಳಿಗೆ ೧೯೮೮ರಲ್ಲಿ ಪಟ್ಟಾಧಿಕಾರವನ್ನು ಮಾಡಲಾಯಿತು. ಶ್ರೀ ಮಹಾಂತ ಸ್ವಾಮಿಗಳ ನಿಕಟ ಸಂಪರ್ಕದಲ್ಲಿ ಬೆಳೆದಿದ್ದ ಶ್ರೀ ಶಿವಯೋಗಿ ಸ್ವಾಮಿಗಳು ವಿದ್ಯಾ ಸಂಪನ್ನರಾಗಿ ಹಾಗೂ ಉತ್ತಮ ಆಡಳಿತಗಾರರಾಗಿ ಮಠವನ್ನು ಸಮರ್ಥವಾಗಿ ನಿಭಾಯಿಸಿಕೊಂಡು ಮುನ್ನಡೆಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದಲ್ಲಿ ನಿರ್ಮಾಣಗೊಂಡ ಗದ್ದುಗೆಗಳಿಗೆ ನಿತ್ಯಪೂಜೆ, ಶ್ರಾವಣ ಮಾಸದಲ್ಲಿ ಪುರಾಣ ಪ್ರವಚನ ಹಾಗೂ ವರ್ಷಕ್ಕೊಮ್ಮೆ ಜಾತ್ರೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಧಾರ್ಮಿಕ ಸಭೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಗಳನ್ನು ಏರ್ಪಡಿಸಲಾಗುತ್ತಿದೆ. ಮಠದಲ್ಲಿ ಬಸವಜಯಂತಿ ಕಾರ್ಯಕ್ರಮವನ್ನು ಅರ್ಥಬದ್ಧವಾಗಿ ಆಚರಿಸಲಾಗುತ್ತಿದೆ. ಶಿವಾನುಭವ ಸಂಸ್ಥೆಯನ್ನು ಸ್ಥಾಪಿಸಿ ನಾಡಿನ ನಾನಾ ಭಾಗಗಳಲ್ಲಿ ಶಿವಾನುಭವ ಕಾರ್ಯಕ್ರಮಗಳನ್ನು ನೆರವೇರಿಸಿ, ವೀರಶೈವ ಸಮಾಜದ ಅಭಿವೃದ್ಧಿಗೆ ಹಾಗೂ ಸಂಘಟನೆಗೆ ಈ ಸಂಸ್ಥೆಯನ್ನು ಬಳಸಿಕೊಂಡು ಶರಣ ತತ್ತ್ವಗಳನ್ನು ಪ್ರಚುರ ಪಡಿಸಲಾಗುತ್ತಿದೆ. ಸಾಮೂಹಿಕ ವಿವಾಹ, ಅಯ್ಯಾಚಾರ ಹಾಗೂ ಶಿವಾನುಭವ ಪರೀಕ್ಷೆಗಳನ್ನು ನಡೆಸುವ ಮೂಲಕ ಧರ್ಮವನ್ನು ಬೆಳೆಸಲಾಗುತ್ತಿದೆ.

ಸಾಹಿತ್ಯಸೇವೆ: ಮಠದ ವತಿಯಿಂದ ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥ ಮಾಲೆಯನ್ನು ಪ್ರಾರಂಭಿಸಿ ವೀರಶೈವ ಸಾಹಿತ್ಯವನ್ನು ಕುರಿತು ಸಂಶೋಧನೆ, ಪ್ರಕಟಣೆ ಹಾಗೂ ಪ್ರಸಾರವನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಬಂದಿದೆ. ವಚನ ಸಾಹಿತ್ಯದ ಪ್ರಕಟಣೆಗೆ ಮೊದಲ ಆದ್ಯತೆ ನೀಡಿ ಅಖಂಡೇಶ್ವರ ವಚನಗಳು, ಆದಯ್ಯನ ವಚನಗಳು, ತೋಂಟದಾರ್ಯರ

ಷಟ್‌ಸ್ಥಲ ಜ್ಞಾನಸಾರಾಮೃತ, ಬಸವಣ್ಣನವರ ಷಟ್‌ಸ್ಥಲ ವಚನಗಳು, ರಾಘವಾಂಕ ಚರಿತ್ರೆ, ಪ್ರೌಢದೇವರಾಯನ ಕಾವ್ಯಕಥಾ ಸಾರ, ಶ್ರೀಮದ್ ಅಥಣಿ ಶಿವಯೋಗೀಶ್ವರ ಚರಿತ್ರೆ, ವೀರಶೈವ ತತ್ತ್ವಶಾಸ್ತ್ರ ಹಾಗೂ ಪದ್ಮರಾಜ ಪುರಾಣ ಮುಂತಾದ ನೂರಾಹತ್ತು ಪುಸ್ತಕಗಳನ್ನು ಪ್ರಕಟಿಸಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದೆ.

ಶೈಕ್ಷಣಿಕ ಸೇವೆ: ಶ್ರೀ ಮುರುಘಾ ಮಠವು ಧಾರ್ಮಿಕ ಮತ್ತು ಸಾಮಾಜಿಕ ಅಭಿವೃದ್ಧಿಯ ಜೊತೆಗೆ ಶೈಕ್ಷಣಿಕ ಕ್ಷೇತ್ರಕ್ಕೂ ಒತ್ತು ಕೊಟ್ಟಿದೆ.ಮಠದ ಆವರಣದಲ್ಲಿ ಶ್ರೀ ಮಹಾಂತೇಶ ಶಿಶುವಿಹಾರ, ಶ್ರೀ ಮಹಾಂತೇಶ ಪ್ರಾಥಮಿಕಶಾಲೆ, ಶ್ರೀ ಮೃತ್ಯುಂಜ ಯ ಮಾಧ್ಯಮಿಕ ಶಾಲೆ, ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಶ್ವರ ಗ್ರಂಥಮಾಲೆ, ಶಿವಾನುಭವ ಸಂಸ್ಥೆ, ಶ್ರೀ ಜಗದ್ಗುರು ಮುರುಘರಾಜೇಂದ್ರ ಪ್ರಸಾದ ನಿಲಯವನ್ನು ಪ್ರಾರಂಭಿಸಿ ಲಕ್ಷೋಪಲಕ್ಷ ವಿದ್ಯಾರ್ಥಿಗಳ ಬಾಳಿಗೆ ಬೆಳಕಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಶಿವಯೋಗಿ ಸ್ವಾಮಿಗಳು, ಶ್ರೀ ಮುರುಘಾಮಠ, ಮೃತ್ಯುಂಜಯ ನಗರ, ಧಾರವಾಡ.
ಆಧಾರ: 'ನೈವೇದ್ಯ', ಸಂಪಾದಕರು : ಚನ್ನವೀರ ಕಣವಿ ಮತ್ತು ಡಾ. ಡಿ.ಎಸ್.ಕರ್ಕಿ

ಓಂಮಠ: ಧಾರವಾಡ ನಗರದ ದಕ್ಷಿಣದ ಹೊರಭಾಗದಲ್ಲಿ ಶ್ರೀ ಓಂಮಠವು ಸ್ಥಾಪನೆಯಾಗಿದೆ. ೧೯೬೮ರಲ್ಲಿ ಶ್ರೀ ಯೋಗೀಶ್ವರ ಸ್ವಾಮಿಗಳಿಂದ ಪ್ರಾರಂಭಗೊಂಡ ಈ ಮಠವು ಯೋಗ ಸಾಧನೆಯ ಕೇಂದ್ರಬಿಂದುವಾಗಿ ರೂಪುಗೊಂಡಿದೆ. ಶಿವಯೋಗ ಮತ್ತು ಹಠಯೋಗದ ಸಾಧನೆಯನ್ನು ಸಾಧಿಸಿದ ಶ್ರೀ ಶಿವಯೋಗೀಶ್ವರರು, ಇಲ್ಲಿಗೆ ಬಂದು ನೆಲೆಸಿ ಮಠವನ್ನು ಸ್ಥಾಪಿಸಿದ್ದಾರೆ.

ಶ್ರೀ ಶಿವಯೋಗೀಶ್ವರ ಸ್ವಾಮಿಗಳು ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಆಸಂಗಿಯ ಶ್ರೀ ಅಲ್ಲಮ ಪ್ರಭು ಮತ್ತು ಶ್ರೀಮತಿ ದುಂಡಮ್ಮನವರ ಪುತ್ರರಾಗಿ, ೧೯೨೨ರ ಅಕ್ಟೋಬರ್ ಇಪ್ಪತ್ತೆರಡರಲ್ಲಿ ಜನಿಸಿದರು. ಇವರು ಜನಿಸುವ ಮೊದಲೇ ಅಥಣಿ ಶಿವಯೋಗಿಗಳು ಶ್ರೀಮತಿ ದುಂಡಮ್ಮನವರನ್ನು ಅಥಣಿಗೆ ಕರೆಸಿ, ಮುಂದೆ ಜನಿಸುವ ಶಿವಯೋಗಿಗೆ ಧಾರಣೆ ಮಾಡಬೇಕೆಂದು ಹೇಳಿ ಲಿಂಗುವನ್ನು ನೀಡಿದ್ದರಂತೆ.

ನಂತರ ಅಥಣಿ ಶಿವಯೋಗಿಗಳ ಅಪೇಕ್ಷೆಯಂತೆ, ಶ್ರೀಮತಿ ದುಂಡಮ್ಮನವರು ಶಿವಯೋಗಿಯ ಜನನವಾದ ನಂತರ ಅಥಣಿಗೆ ಕರೆದೊಯ್ದು ಶ್ರೀ ಸಿದ್ಧಲಿಂಗ ಸ್ವಾಮಿಗಳಿಂದ ಲಿಂಗಧಾರಣೆ ಮಾಡಿಸಿಕೊಂಡು ಬಂದಿದ್ದರು. ಅಥಣಿ ಶ್ರೀ ಶಿವಯೋಗಿಗಳಿಂದ ಅನುಗ್ರಹ ಪಡೆದು ಜನಿಸಿದ ಶಿವಯೋಗಿಗಳು, ಬಾಲ್ಯದಲ್ಲಿಯೇ ಆಧ್ಯಾತ್ಮವನ್ನು ಮೈಗೂಡಿಸಿಕೊಂಡು ಬೆಳೆದರು. ಇವರು ಪ್ರೌಢಾವಸ್ಥೆಗೆ ಬಂದ ಮೇಲೆ ಹಿಮಾಲಯಕ್ಕೆ ತೆರಳಿ ಯೋಗಸಾಧನೆಯನ್ನು ಸಾಧಿಸಿಕೊಂಡು ಇಲ್ಲಿಗೆ ಬಂದು ನೆಲೆಸಿದರು. ಇಲ್ಲಿ ನೆಲೆ ನಿಂತ ಮೇಲೆ ಆಸಕ್ತರಿಗೆ ಯೋಗಾಸನವನ್ನು ಕಲಿಸುತ್ತಿದ್ದಾರೆ. ಈಗ 'ಶ್ರೀ ಯೋಗೀಶ್ವರ ಸ್ವಾಮೀಜಿಯೋಗ ಡೆವಲಪ್‌ಮೆಂಟ್ ಆರ್ಗನೈಜೇಶನ್'ಎಂಬ ಹೆಸರಲ್ಲಿ ವಿಶ್ವಸ್ಥ ಮಂಡಳಿಯನ್ನು ಸ್ಥಾಪಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ನವರಾತ್ರಿ ಗುರು ಪೂರ್ಣಿಮೆಯಲ್ಲಿ ಧಾರ್ಮಿಕ ಕಾರ್ಯಕ್ರಮಗಳನ್ನು ಆಚರಿಸಿ ಯೋಗದ ಬಗ್ಗೆ ಅರಿವನ್ನು ಮೂಡಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಉತ್ತರ ಭಾರತ ಮತ್ತು ಹೊರದೇಶಗಳಿಂದ ಭಕ್ತರು ಆಗಮಿಸಿ, ಯೋಗ ಸಾಧನೆಯ ಶಿಬಿರದಲ್ಲಿ ಪಾಲ್ಗೊಳ್ಳುತ್ತಾರೆ. ಕರ್ನಾಟಕ ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರಾದ ಯೋಗದ ಸಂಶೋಧಕ ರಾದ ಡಾ.ಎನ್.ವಿ.ಕೊಪ್ಪಳ್ ಎಂಬ ಮಹಿಳಾ ಸಾಧಕರು ಮಠದಲ್ಲಿ ನೆಲೆಸಿ, ಶಿವಯೋಗಿಗಳು ನಡೆಸುವ ಯೋಗದ ಕಾರ್ಯಕ್ರಮಗಳಿಗೆ ನೆರವಾಗುತ್ತಿದ್ದಾರೆ.

ವಿಳಾಸ: ಶ್ರೀ ಶಿವಯೋಗಿಶ್ವರ ಸ್ವಾಮಿಗಳು, ಶ್ರೀ ಓಂ ಮಠ, ವಿಶ್ವವಿದ್ಯಾನಿಲಯ ಸಮೀಪ, ಧಾರವಾಡ.

ನವಕಲ್ಯಾಣಮಠ-ತಪೋವನ: ಧಾರವಾಡ ನಗರದ ಮಧ್ಯಭಾಗದಲ್ಲಿ ಪಶುಪತಿ ವಂಶಸ್ಥರೆಂಬ ಜಂಗಮರಿಂದ ಶ್ರೀ ನವ ಕಲ್ಯಾಣಮಠವು ಸ್ಥಾಪನೆಯಾಗಿದೆ. ಈ ಮಠವು ಆಧ್ಯಾತ್ಮಿಕ ವಿಚಾರಗಳನ್ನು ಪ್ರಚಾರಪಡಿಸಿ, ವೀರಶೈವ ಧರ್ಮ ಬೆಳೆಯುವಂತೆ ಮಾಡಿದೆ. ಈ ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡ ಶ್ರೀ ಕುಮಾರ ಸ್ವಾಮಿಗಳು ನವಕಲ್ಯಾಣ ಮಠವನ್ನು ಅಭಿವೃದ್ಧಿಪಡಿಸಿ, ಶಿವಯೋಗ ತತ್ತ್ವದಿಂದ ಹೆಚ್ಚು ಪ್ರಚಾರಪಡಿಸಿದರು.

ತಪೋವನದ ಸೃಷ್ಟಿ: ಶ್ರೀ ಕುಮಾರ ಸ್ವಾಮಿಗಳು ಧಾರವಾಡ ತಾಲ್ಲೂಕಿನ ಹುಣಸೀಕಟ್ಟೆಯಲ್ಲಿ ೧೯೦೯ ರಲ್ಲಿ ಜನಿಸಿ, ಏಳನೆಯ ವರ್ಷದಲ್ಲಿಯೇ ಆತ್ಮಸಂಸ್ಕಾರಕ್ಕೆ ಹಂಬಲಿಸಿ ಶಿವಯೋಗ ಮಂದಿರವನ್ನು ಸೇರಿದರು. ಗುರುಗಳು ಬಾಲ್ಯದಲ್ಲೇ ಯೋಗಸಿದ್ಧಿಯನ್ನು ಸಾಧಿಸಿ ಹಿರಿಯ ಗುರುಗಳನ್ನು ಬೆರಗುಗೊಳಿಸಿದರು. ಶ್ರೀ ಕುಮಾರ ಸ್ವಾಮಿಗಳು ಶಿವಯೋಗ ಮಂದಿರದಲ್ಲಿ ಯೋಗಾಭ್ಯಾಸವನ್ನು ಮುಗಿಸಿ, ಧಾರವಾಡದ ಶ್ರೀ ನವಕಲ್ಯಾಣ ಮಠದಲ್ಲಿ ನೆಲೆಸಿ, ಧಾರ್ಮಿಕ ಕಾರ್ಯಗಳ ಜೊತೆಗೆ ಯೋಗ ಸಾಧನೆಗೆ ಮುಂದಾದರು.

ಆತ್ಮಸಂಸ್ಕಾರಕ್ಕಾಗಿ ಶಿವಯೋಗದ ಪರಿಕಲ್ಪನೆಯನ್ನು ಭಕ್ತರಲ್ಲಿ ಮೂಡಿಸಿ, ಆರೋಗ್ಯವಂತ ಸಮಾಜವನ್ನು ರೂಪಿಸ ಬೇಕೆಂಬ ಮಹದಾಸೆಯಿಂದ ಶ್ರೀ ಕುಮಾರ ಸ್ವಾಮಿಗಳು ಯೋಗದ ಕೇಂದ್ರವನ್ನು ಸ್ಥಾಪಿಸಿದರು. ಈ ಕೇಂದ್ರಕ್ಕೆ **'ತಪೋವನ'** ಎಂದು ನಾಮಕರಣ ಮಾಡಿ ಯೋಗದ ಬಗ್ಗೆ ಹೊಸ ಹೊಸ ಆಯಾಮಗಳನ್ನು ಪರಿಚಯಿಸುತ್ತಾ ಹಠಯೋಗ, ಶಿವಯೋಗ ಹಾಗೂ ಕುಂಡಲಿನಿ ಯೋಗದ ಬಗ್ಗೆ ಹೊಸ ಸಂಶೋಧನೆಗಳನ್ನು ನಡೆಸಿದರು. ಗುರುಗಳು ಭಾರತ ಹಾಗೂ ಹೊರ ರಾಷ್ಟ್ರಗಳಲ್ಲಿ ವೀರಶೈವ ಧರ್ಮ ಹಾಗೂ ಇಷ್ಟಲಿಂಗದ ಬಗ್ಗೆ ತಮ್ಮದೇ ಆದಂತಹ ಪರಿಕಲ್ಪನೆಯಲ್ಲಿ ವ್ಯಾಖ್ಯಾನಿಸಿ, ಯೋಗದ ಜೊತೆ ಧರ್ಮವನ್ನು ಸಮೀಕರಿಸಿ ಒಂದು ಹೊಸ ಆಯಾಮವನ್ನು ಸೃಷ್ಟಿಸಿದ್ದರು.

ಪೋಪ್‌ಗೆ ಇಷ್ಟಲಿಂಗ: ಶ್ರೀ ಕುಮಾರ ಸ್ವಾಮಿಗಳು ಅನೇಕ ದೇಶಗಳಲ್ಲಿ ಪ್ರವಾಸ ಮಾಡಿ ಇಷ್ಟಲಿಂಗ ಪೂಜೆ ಹಾಗೂ ಶಿವಯೋಗದ ಬಗ್ಗೆ ಪ್ರಚಾರ ಮಾಡಿದರು. ಇವರು ಯೂರೋಪ್‌ನಲ್ಲಿ ಪ್ರವಾಸದಲ್ಲಿದ್ದಾಗ (೧೯೭೨) ಕ್ರೈಸ್ತ ಧರ್ಮಗುರು ಪೋಪ್‌ರವರ ಕೈಯಲ್ಲಿ ಇಷ್ಟಲಿಂಗವನ್ನು ಕೊಟ್ಟು, ಇಷ್ಟಲಿಂಗದ ಮಹತ್ವ ಹಾಗೂ ಅದರ ಪರಿಕಲ್ಪನೆಯನ್ನು ವಿವರಿಸಿ ವೀರಶೈವ ಧರ್ಮದ ಸಿದ್ಧಾಂತವನ್ನು ಬೋಧಿಸಿದ್ದರು. ಇಂದು ಇಂಗ್ಲೆಂಡಿನಲ್ಲಿ ಇಷ್ಟಲಿಂಗ ಸೊಸೈಟಿಯನ್ನು ಸ್ಥಾಪಿಸಲಾಗಿದೆ. ಫ್ರಾನ್ಸ್ ಹಾಗೂ ನೆದರ್‌ಲ್ಯಾಂಡ್‌ನಲ್ಲಿ ವೀರಶೈವ ಧರ್ಮ ಮತ್ತು ಇಷ್ಟಲಿಂಗದ ಬಗ್ಗೆ ಹಲವಾರು ಗ್ರಂಥಗಳನ್ನು ಪ್ರಕಟಿಸಿ, ವೀರಶೈವ ಧರ್ಮದ ಪ್ರಚಾರವನ್ನು ಕೈಗೊಂಡು, ಇದರಿಂದ ಉತ್ತಮ ಪ್ರತಿಕ್ರಿಯೆ ಬಂದಿದ್ದು, ಇಟಲಿಯ ಕೆಲವರು ವೀರಶೈವ ಧರ್ಮವನ್ನು ಕನ್ನಡದಲ್ಲಿಯೇ ಅಭ್ಯಸಿಸುವ ಸಾಹಸವನ್ನು ಮಾಡಿದ್ದಾರೆ. ಹೀಗೆ ಇಷ್ಟಲಿಂಗ ಮತ್ತು ಶಿವಯೋಗವನ್ನು ಆಧ್ಯಾತ್ಮ ವಿಜ್ಞಾನವನ್ನಾಗಿಸಿ ದೇಶ, ಕಾಲ ಹಾಗೂ ಜನಾಂಗವನ್ನು ಮೀರಿ ಪ್ರಚಾರಕ್ಕೆ ತಂದು ೧೯೯೬ ರಲ್ಲಿ ಲಿಂಗೈಕ್ಯರಾದರು.

ಶ್ರೀ ಕುಮಾರ ಸ್ವಾಮಿಗಳು ಬೋಧಿಸಿದ ಇಷ್ಟಲಿಂಗ ಹಾಗೂ ಶಿವಯೋಗದ ತತ್ತ್ವಕ್ಕೆ ನಾಡಿನಾದ್ಯಂತ ಅನೇಕ ಭಕ್ತರು ಸೃಷ್ಟಿಯಾಗಿದ್ದಾರೆ. ಗುರುಗಳ ತತ್ತ್ವವನ್ನು ಜಾಗತಿಕವಾಗಿ ಪ್ರಚಾರಪಡಿಸಲು ಸಿದ್ಧರಾಗಿದ್ದಾರೆ. ಯೂರೋಪ್‌ನಲ್ಲಿ ಇಷ್ಟಲಿಂಗ ಬೋಧನ ಕೇಂದ್ರವನ್ನು ಸ್ಥಾಪಿಸಿ, ವಿಶ್ವವಿದ್ಯಾನಿಲಯದಿಂದ ಮನ್ನಣೆ ಗಳಿಸಿಕೊಂಡಿದ್ದಾರೆ. ಇಂತಹ ವ್ಯಾಪಕ ಪ್ರಯತ್ನಗಳು ಹೊರನಾಡಿನಲ್ಲಿ ನಡೆದಿರುವುದು ಶ್ರೀ ಕುಮಾರ ಸ್ವಾಮಿಗಳ ಕರ್ತೃತ್ವಶಕ್ತಿಗೆ ಉದಾಹರಣೆಯಾಗಿದೆ.

ವಿಶ್ವಸ್ಥ ಮಂಡಳಿ: ಶ್ರೀ ಕುಮಾರಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಸಿ.ಬಿ.ಪಾಟೀಲರ ಅಧ್ಯಕ್ಷತೆಯಲ್ಲಿ ಇಪ್ಪತ್ತೈದು ಜನರ ವಿಶ್ವಸ್ಥ ಮಂಡಳಿಯನ್ನು ರಚಿಸಿಕೊಂಡು, ಗುರುಗಳು ಸಾಧಿಸಿದ ಸಾಧನೆಯನ್ನು ಮುಂದುವರಿಸಿಕೊಂಡು ಹೋಗುವ ಪ್ರಯತ್ನ ವನ್ನು ನಡೆಸಿದ್ದಾರೆ. ತಪೋವನದ ಆವರಣದಲ್ಲಿ, ಶಿವಯೋಗ ಮಂದಿರ ಹಾಗೂ ಪ್ರಾರ್ಥನಾ ಮಂದಿರವನ್ನು ಸ್ಥಾಪಿಸಿರುವು ದಲ್ಲದೆ, ಗುರುಗಳ ಸಮಾಧಿ ಸ್ಥಳವನ್ನು ಅಭಿವೃದ್ಧಿಪಡಿಸಿದ್ದಾರೆ. ಗುರುಗಳ ಬಗ್ಗೆ ಹಾಗೂ ಇವರು ಪ್ರತಿಪಾದಿಸಿದ ಇಷ್ಟಲಿಂಗ ಹಾಗೂ ಶಿವಯೋಗದ ಬಗ್ಗೆ ವೀರಶೈವ ದರ್ಶನ, ಶಿವಯೋಗ ರಹಸ್ಯ, ಬುದ್ಧ ಮತ್ತು ಬಸವ, ರಿಲೀಜಿಯನ್ ಅಂಡ್ ಡೆಮಾಕ್ರಸಿ ಮುಂತಾದ ಒಟ್ಟು ಮೂವತ್ತು ಪುಸ್ತಕಗಳನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಪ್ರಕಟಿಸಲಾಗಿದೆ.

ವಿಳಾಸ: ಅಧ್ಯಕ್ಷರು, ಮಹಾತಪಸ್ವಿ ಶ್ರೀ ಕುಮಾರ ಸ್ವಾಮೀಜಿ ಫೌಂಡೇಶನ್, ತಪೋವನ, ಧಾರವಾಡ - ೫೮೦ ೦೦೩.

ಹೆಬ್ಬಳ್ಳಿ

ಧಾರವಾಡ ತಾಲ್ಲೂಕಿನ ಹೆಬ್ಬಳ್ಳಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹದಿನಾಲ್ಕು ಕಿ.ಮೀ ದೂರದಲ್ಲಿದೆ.

ಈ ಗ್ರಾಮದಲ್ಲಿ ಗದಗ ಶಿವಾನಂದ ಮಠದ ಶಾಖಾಮಠವಾದ ಶ್ರೀ ಶಿವಾನಂದಮಠವು ಸ್ಥಾಪನೆಯಾಗಿದೆ.

ಶಿವಾನಂದಮಠ: ಹೆಬ್ಬಳ್ಳಿ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ಶಿವಾನಂದಮಠವು ೧೯೬೮ರಲ್ಲಿ ಶ್ರೀ ವಾಸುದೇವ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟಿದೆ. ಮಠವನ್ನು ಸ್ಥಾಪಿಸಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದ್ದರು. ಇವರು ಬಾದಾಮಿ ತಾಲ್ಲೂಕಿನ ಕೊಪ್ಪ ಗ್ರಾಮದಲ್ಲಿ ಜನಿಸಿ, ಗದಗದ ಶ್ರೀ ಶಿವಾನಂದ ಸ್ವಾಮಿಗಳ ಕೃಪಾಶೀರ್ವಾದಕ್ಕೆ ಒಳಗಾಗಿ ಇಲ್ಲಿ ಮಠವನ್ನು ಸ್ಥಾಪಿಸಿ ಅಭಿವೃದ್ಧಿಪಡಿಸಿದರು. ಇವರು ೧೯೮೦ ರಲ್ಲಿ ಲಿಂಗೈಕ್ಯರಾದರು.

ಶ್ರೀ ವಾಸುದೇವ ಸ್ವಾಮಿಗಳು ಲಿಂಗೈಕ್ಯರಾದ ನಂತರ ಶ್ರೀ ಬಸವರಾಜ ಸ್ವಾಮಿಗಳು (೧೯೮೦) ಪಟ್ಟಾಧಿಕಾರಕ್ಕೆ ಬಂದರು. ಇವರು ಸೋಲಾಪುರದ ಗುರುಕುಲದಲ್ಲಿ ವಿದ್ಯಾಭ್ಯಾಸ ಮುಗಿಸಿ, ಮಠಕ್ಕೆ ಆಗಮಿಸಿ ಅಭಿವೃದ್ಧಿಪಡಿಸಿದ್ದಾರೆ. ಮಠದ ಆವರಣದಲ್ಲಿರುವ ಗದ್ದುಗೆಗೆ ನಿತ್ಯಪೂಜೆ ಮತ್ತು ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ನಡೆಸುತ್ತಿದ್ದಾರೆ. ಗುರುಗಳು ಕಾಯಕ ಯೋಗಿಗಳಾಗಿ, ಮಠದ ಆಸ್ತಿಯಾಗಿರುವ ಹತ್ತುವರೆ ಎಕರೆ ಜಮೀನನ್ನು ಅಭಿವೃದ್ಧಿಪಡಿಸಿ ಆದಾಯ ಬರುವಂತೆ ಮಾಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಬಸವರಾಜ ಶಿವಾಚಾರ್ಯ ಸ್ವಾಮಿಗಳು, ಶ್ರೀ ಶಿವಾನಂದಮಠ, ಹೆಬ್ಬಳ್ಳಿ, ಧಾರವಾಡ ತಾಲ್ಲೂಕು.

❑

ನವಿಲುಗುಂದ ತಾಲ್ಲೂಕು

ಧಾರವಾಡ ಜಿಲ್ಲೆಯ ನವಿಲುಗುಂದ ತಾಲ್ಲೂಕು ಐತಿಹಾಸಿಕ ಪರಂಪರೆಯುಳ್ಳದ್ದಾಗಿದೆ. ಇಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆದಿದೆ. ಪ್ರಾಚೀನ ಕಾಲದಿಂದ ಈತನಕ ಅನೇಕ ಮಠಗಳು ಸ್ಥಾಪನೆಯಾಗಿ ಸಮಾಜವನ್ನು ಬೆಳೆಸಿವೆ. ಪ್ರಸ್ತುತ ಹದಿಮೂರು ಮಠಗಳು ಅಸ್ತಿತ್ವದಲ್ಲಿದ್ದು, ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿವೆ.

ಅಣ್ಣಿಗೇರಿ

ನವಿಲುಗುಂದ ತಾಲ್ಲೂಕಿನ ಅಣ್ಣಿಗೇರಿಯು ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಇಪ್ಪತ್ತು ಕಿ.ಮೀ. ದೂರದಲ್ಲಿದೆ. ಆದಿಕವಿ ಪಂಪನ ನಾಡಾದ ಈ ಗ್ರಾಮವು ಧಾರ್ಮಿಕ ಕ್ಷೇತ್ರದಲ್ಲಿ ಹೆಚ್ಚು ಹೆಸರು ಮಾಡಿದೆ. ಈ ಗ್ರಾಮದಲ್ಲಿ ಶ್ರೀ ತೋಂಟದಾರ್ಯಮಠ, ಶ್ರೀ ಅನ್ನದಾನೇಶ್ವರಮಠ, ಶ್ರೀ ಹಿರೇಮಠ ಈ ರೀತಿ ಒಟ್ಟು ಮೂರು ಮಠಗಳು ಸ್ಥಾಪನೆಯಾಗಿವೆ. ಪುರಾತನ ಕಾಲದಲ್ಲಿ ಸ್ಥಾಪನೆಗೊಂಡ ಈ ಮಠಗಳು ಧಾರ್ಮಿಕ ಕಾರ್ಯಗಳನ್ನು ನಡೆಸಿ ಈ ಗ್ರಾಮದಲ್ಲಿ ಧಾರ್ಮಿಕ ಶ್ರೀಮಂತಿಕೆಯನ್ನು ಹೆಚ್ಚಿಸಿವೆ.

ತೋಂಟದಾರ್ಯಮಠ: ಗ್ರಾಮದ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ತೋಂಟದಾರ್ಯಮಠವು ತೋಂಟದ ಶ್ರೀ ಸಿದ್ಧಲಿಂಗ ಸ್ವಾಮಿಗಳ ಪರಂಪರೆಯಲ್ಲಿ ಬೆಳೆದು ಬಂದಿದೆ. ಈ ಮಠವು ಹದಿನೈದನೆಯ ಶತಮಾನದಲ್ಲಿ ಪ್ರಾರಂಭಗೊಂಡು ಈತನಕ ತನ್ನ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ಗದಗಿನ ತೋಂಟದಾರ್ಯ ಮಠದ ಶಾಖಾ ಮಠವಾಗಿ ಬೆಳೆದಿರುವ ಈ ಮಠದಲ್ಲಿ ಸ್ಥಳೀಯ ವಿಶ್ವಸ್ಥ ಸಮಿತಿಯ ನೇತೃತ್ವದಲ್ಲಿ ಆಡಳಿತ ಕಾರ್ಯಗಳು ನಡೆಯುತ್ತಿವೆ. ಜಗದ್ಗುರು ಶ್ರೀ ಡಾ. ತೋಂಟದ ಸಿದ್ಧಲಿಂಗ ಸ್ವಾಮಿಗಳು ಈ ಮಠದ ಉಸ್ತುವಾರಿಯನ್ನು ನೋಡಿಕೊಂಡು ಅಭಿವೃದ್ಧಿ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಗದಗಿನ ತೋಂಟದಾರ್ಯ ಮಠದ ಹತ್ತನೆಯ ಜಗದ್ಗುರುಗಳಾದ ಶ್ರೀ ಈಸೂರು ನಂದೀಶ್ವರ ಸ್ವಾಮಿಗಳು (೧೭೨೫-೧೭೭೦) ಇಲ್ಲಿಗೆ ಬಂದು ನೆಲೆಸಿ ಗ್ರಾಮದ ಬಜಾರ್ ರಸ್ತೆಯಲ್ಲಿರುವ ಶ್ರೀ ಅನ್ನದಾನೇಶ್ವರ ಮಠದಲ್ಲಿ ಲಿಂಗೈಕ್ಯರಾಗಿದ್ದಾರೆ. ನಂತರ ಗದಗ ತೋಂಟದಾರ್ಯ ಮಠದ ಅಧಿಕಾರಕ್ಕೆ ಬಂದ ಉಗ್ಗದ ಶ್ರೀ ಸಿದ್ಧಲಿಂಗ ಸ್ವಾಮಿಗಳು (೧೭೭೦-೧೭೭೬) ಅಣ್ಣಿಗೇರೆಯ ತೋಂಟದಾರ್ಯ ಮಠಕ್ಕೆ ಬಂದು ನೆಲೆಸಿ ಲಿಂಗೈಕ್ಯ ರಾಗಿದ್ದಾರೆ. ಹಾನಗಲ್ಲು ಶ್ರೀ ಕುಮಾರ ಸ್ವಾಮಿಗಳ ಅನುಗ್ರಹ ಗುರುಗಳಾದ ಚಾಮರಾಜನಗರ ತಾಲ್ಲೂಕಿನ ಯಳಂದೂರು ಮಠದ ಶ್ರೀ ಬಸವಲಿಂಗ ಸ್ವಾಮಿಗಳು ಈ ಮಠದಲ್ಲಿಯೇ ಲಿಂಗೈಕ್ಯರಾಗಿದ್ದಾರೆ. ಈ ರೀತಿ ಹಿರಿಯ ಗುರುಗಳು ಲಿಂಗೈಕ್ಯರಾದ ಈ ಜಾಗೃತ ಸ್ಥಳದಲ್ಲಿ ನಿತ್ಯ ಧಾರ್ಮಿಕ ಆಚರಣೆಗಳು ನಡೆಯುತ್ತಿವೆ. ಈ ಮಠಕ್ಕೆ ಇಲ್ಲಿನ ಶ್ರೀ ದೇಶಪಾಂಡೆಯವರು (೧೭೨೫-೧೭೭೦) ನಲವತ್ತು ಕೂರಿಗೆ ಜಮೀನನ್ನು ಉಂಬಳಿಯಾಗಿ ನೀಡಿದ್ದಾರೆ. ಇಲ್ಲಿ ವಿರೂಪಾಕ್ಷೇಶ್ವರ ದೇವಾಲಯ ಸ್ಥಾಪನೆಯಾಗಿದೆ. ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿ ಕಲಿಯುವ ಬಡಮಕ್ಕಳಿಗೆ ಆಶ್ರಯ ಕಲ್ಪಿಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಡಾ. ತೋಂಟದ ಸಿದ್ಧಲಿಂಗ ಸ್ವಾಮಿಗಳು, ಶ್ರೀ ತೋಂಟದಾರ್ಯ ಮಠ, ಅಣ್ಣಿಗೇರಿ, ನವಿಲುಗುಂದ ತಾಲ್ಲೂಕು, ಧಾರವಾಡ ಜಿಲ್ಲೆ.

ಅನ್ನದಾನೇಶ್ವರ ಮಠ: ಅಣ್ಣಿಗೇರಿ ಪಟ್ಟಣದ ಮಧ್ಯಭಾಗದ ಬಜಾರ್‌ನಲ್ಲಿ ಸ್ಥಾಪನೆಯಾಗಿರುವ ಶ್ರೀ ಅನ್ನದಾನೇಶ್ವರ ಮಠವು ಇಲ್ಲಿನ ಧಾರ್ಮಿಕ ಚಟುವಟಿಕೆಯ ಜಾಗೃತ ಸ್ಥಳವಾಗಿದೆ. ಪುರಾತನ ಕಾಲದಲ್ಲಿ ಸ್ಥಾಪನೆಯಾಗಿರುವ ಮಠದ ಕಟ್ಟಡವು ಕೆತ್ತನೆಯ ಕಲ್ಲಿನಿಂದ ನಿರ್ಮಿಸಲ್ಪಟ್ಟಿದೆ. ಇಲ್ಲಿನ ಶ್ರೀ ದೇಸಾಯಿ ಮತ್ತು ಶ್ರೀ ದೇಶಪಾಂಡೆಯವರ ಹಿರಿತನದಲ್ಲಿ ಕಟ್ಟಡವು ನಿರ್ಮಾಣ ಗೊಂಡಿದೆ ಎಂದು ಹೇಳಲಾಗುತ್ತಿದೆ.

ಶ್ರೀ ಈಸೂರು ನಂದೀಶ್ವರ ಸ್ವಾಮಿಗಳು ಊರಹೊರಗಿನ ತೋಂಟದಾರ್ಯ ಮಠದಲ್ಲಿ ನೆಲೆ ನಿಲ್ಲುತ್ತಿದ್ದರಿಂದ ಭಕ್ತರ ದರ್ಶನಕ್ಕೆ ಅನುಕೂಲ ಮಾಡಿಕೊಡಲು ಇಲ್ಲಿ ಮಠವನ್ನು ಸ್ಥಾಪನೆ ಮಾಡಿರುತ್ತಾರೆ ಎಂದು ಹೇಳಲಾಗುತ್ತಿದೆ. ಅಂದು

ಸ್ಥಾಪನೆಗೊಂಡ ಮಠದ ಸುತ್ತ ೧೯೫೭ರಲ್ಲಿ ರಕ್ಷಣಾ ಗೋಡೆಯನ್ನು ನಿರ್ಮಿಸಲಾಗಿದೆ. ಈ ಮಠದಲ್ಲಿ ಶ್ರೀ ಈಸೂರು ನಂದೀಶ್ವರ ಸ್ವಾಮಿಗಳು ಲಿಂಗೈಕ್ಯರಾಗಿದ್ದು, ಇವರ ಗದ್ದುಗೆಯನ್ನು ನಿರ್ಮಿಸಲಾಗಿದೆ. ನಿತ್ಯ ಗದ್ದುಗೆಗೆ ಪೂಜೆ ಮಾಡಲು ವ್ಯವಸ್ಥೆ ಮಾಡಲಾಗಿದೆ. ಈ ಮಠವು ಸಹ ಗದುಗಿನ ತೋಂಟದಾರ್ಯ ಮಠದ ಶಾಖಾ ಮಠವಾಗಿ ಬೆಳೆದಿದೆ.

ವಿಳಾಸ : ಶ್ರೀ ಮ.ನಿ.ಪ್ರ. ಡಾ. ತೋಂಟದ ಸಿದ್ಧಲಿಂಗ ಸ್ವಾಮಿಗಳು, ಶ್ರೀ ಅನ್ನದಾನೇಶ್ವರ ಮಠ, ಬಜಾರ್ ರಸ್ತೆ, ಅಣ್ಣಿಗೇರಿ, ನವಿಲುಗುಂದ ತಾಲ್ಲೂಕು, ಧಾರವಾಡ ಜಿಲ್ಲೆ.

ಹಿರೇಮಠ: ಅಣ್ಣಿಗೇರಿ ಪಟ್ಟಣದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಹಿರೇಮಠವು ರಂಭಾಪುರಿ ಪೀಠದ ಶಾಖಾ ಮಠವಾಗಿ ಬೆಳೆದಿದೆ. ಪುತ್ರವರ್ಗದ ಪರಂಪರೆಯ ಈ ಮಠವು ಶ್ರೀ ರಾಚೋಟಿ ವೀರಭದ್ರೇಶ್ವರ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಈ ಪುರಾತನ ಮಠದಲ್ಲಿ ಐದು ಜನ ಮಠಾಧೀಶರು ಆಡಳಿತ ನಡೆಸಿ ಲಿಂಗೈಕ್ಯರಾಗಿದ್ದಾರೆ. ಇವರುಗಳಲ್ಲಿ ಕರ್ತೃಗುರುಗಳು ಹಾಗೂ ೧೯೮೧ರಲ್ಲಿ ಲಿಂಗೈಕ್ಯರಾದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳ ಹೆಸರುಗಳನ್ನು ಮಾತ್ರ ದಾಖಲಿಸಬಹುದಾಗಿದೆ. ಮಠದ ಹಿಂಭಾಗದಲ್ಲಿ ಒಟ್ಟು ಐದು ಗದ್ದುಗೆಗಳು ಸ್ಥಾಪನೆಯಾಗಿವೆ. ಪ್ರಸ್ತುತ ಮಠವು ಉತ್ತರಾಧಿಕಾರಿಗಳಿಲ್ಲದೆ ಖಾಲಿ ಉಳಿದಿದೆ. ಮಠದ ವಂಶಸ್ಥರು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿದ್ದಾರೆ.

ವಿಳಾಸಃ ಶ್ರೀ ಹಿರೇಮಠ, ಅಣ್ಣಿಗೇರಿ, ನವಿಲುಗುಂದ ತಾಲ್ಲೂಕು, ಧಾರವಾಡ ಜಿಲ್ಲೆ.

ಅಡ್ನೂರು

ನವಿಲುಗುಂದ ತಾಲ್ಲೂಕಿನ ಅಡ್ನೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತನಾಲ್ಕು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ದಾಸೋಹಮಠವು ಅಸ್ತಿತ್ವದಲ್ಲಿದ್ದು ಧಾರ್ಮಿಕ ಹಾಗೂ ಶೈಕ್ಷಣಿಕ ಕಾರ್ಯವನ್ನು ನಡೆಸಿಕೊಂಡು ಬರುತ್ತಿದೆ.

ದಾಸೋಹಮಠ: ಅಡ್ನೂರು ಗ್ರಾಮದ ಹೊರಭಾಗದಲ್ಲಿರುವ ಶ್ರೀ ದಾಸೋಹ ಮಠವು ಶ್ರೀ ಫಕೀರೇಶ್ವರ ಶಿವಾಚಾರ್ಯ ಸ್ವಾಮಿಗಳಿಂದ ಪ್ರಾರಂಭಗೊಂಡಿದೆ ಎಂದು ಹೇಳಲಾಗುತ್ತಿದೆ. ನೂರು ವರ್ಷಗಳ ಇತಿಹಾಸ ಇರುವ ಈ ಮಠದ ಶ್ರೀನಾಗಲಿಂಗ ಸ್ವಾಮಿಗಳು, ಹಾನಗಲ್ಲು ಶ್ರೀ ಕುಮಾರ ಸ್ವಾಮಿಗಳ ಕೃಪಾದೃಷ್ಟಿಗೆ ಒಳಗಾಗಿ ಆಧ್ಯಾತ್ಮ ಲೋಕಕ್ಕೆ ಆಗಮಿಸಿದ ವರು. ಗೊಬ್ಬರಗುಂಪಿ ಗ್ರಾಮದವರಾದ ಶ್ರೀ ನಾಗಲಿಂಗ ಸ್ವಾಮಿಗಳು ಸಂಸಾರವನ್ನು ತ್ಯಜಿಸಿ ಅಡ್ನೂರಿಗೆ ಬಂದು ನೆಲೆಸಿದರು. ಪುರಾಣ ಪ್ರವಚನಗಳನ್ನು ಹೇಳುತ್ತಾ ಆಧ್ಯಾತ್ಮ ಚಿಂತನೆಯಲ್ಲಿ ಸಾಧನೆ ಮಾಡಿ ಸಾಧಕರಾದರು. ಇವರ ಸಾಧನೆಯಿಂದ ಪ್ರಭಾವಿತರಾದ ಇಲ್ಲಿನ ಶ್ರೀ ಪ್ರಭುಗೌಡ ಪಾಟೀಲರು ಹತ್ತು ಗುಂಟೆ ಜಾಗವನ್ನು ದಾನವಾಗಿ ನೀಡಿ ಮಠವು ಸ್ಥಾಪನೆಯಾಗಲು ಕಾರಣರಾಗಿದ್ದಾರೆ.

ಬೆಳೆದ ಪರಂಪರೆ: ಶ್ರೀಶೈಲದ ಶಾಖಾ ಮಠವಾದ ಈ ಮಠವು ಶ್ರೀ ನಾಗಲಿಂಗ ಸ್ವಾಮಿಗಳ ಕೋರಿಕೆಯ ಮೇರೆಗೆ ಹಾನಗಲ್ಲು ಶ್ರೀ ಕುಮಾರ ಸ್ವಾಮಿಗಳು ಮತ್ತು ಶ್ರೀ ಫಕೀರೇಶ್ವರ ಸ್ವಾಮಿಗಳು ಅನುಗ್ರಹ ನೀಡಿ ಮಠದ ಅಧಿಕಾರವನ್ನು ವಹಿಸಿಕೊಳ್ಳಲು ಆಶೀರ್ವದಿಸಿದ್ದರು. ಮಠದ ಸ್ಥಾಪನೆಗೆ ಕಾರಣಕರ್ತರಾದ ಶ್ರೀ ನಾಗಲಿಂಗ ಸ್ವಾಮಿಗಳು ಮಠಕ್ಕೆ ಇಪ್ಪತ್ತೈದು ಎಕರೆ ಜಮೀನನ್ನು ರೂಢಿಸಿಕೊಟ್ಟರು.ಅಲ್ಲದೆ ಔಷಧೋಪಚಾರವನ್ನು ನೀಡುವುದರ ಮೂಲಕ ಗ್ರಾಮಾಂತರ ಭಾಗದ ಭಕ್ತರ ಸೇವೆಯನ್ನು ಮಾಡಿ ಸುಮಾರು ೧೯೩೦ ರಲ್ಲಿ ಲಿಂಗೈಕ್ಯರಾದರು. ಇವರು ಮಠದ ಪರಂಪರೆಯ ಗುರುಗಳಾಗದಿದ್ದರೂ ಮಠ ಸ್ಥಾಪನೆಗೆ ಕಾರಣೀ ಭೂತರಾಗಿ, ಮಠದ ಇತಿಹಾಸದಲ್ಲಿ ಮರೆಯದ ಚೇತನರಾಗಿದ್ದಾರೆ. ಮಠದ ಕರ್ತೃ ಗುರುಗಳಾದ ಶ್ರೀ ಫಕೀರೇಶ್ವರ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಬೆಳೆಸಿ ಧಾರ್ಮಿಕ ಮತ್ತು ಸಾಮಾಜಿಕವಾಗಿ ಮಠವು ಹೆಸರು ಗಳಿಸಲು ಕಾರಣರಾದರು. ಇವರ ತರುವಾಯ ಶ್ರೀ ಸಿದ್ಧವೀರ ದೇವರು ಅಧಿಕಾರಕ್ಕೆ ಬಂದು ನವಿಲುಗುಂದ ಗವಿಮಠದ ಅಧಿಕಾರವನ್ನು ಪಡೆದು ಹೋದರು. ನಂತರ ಶ್ರೀ ಚಂದ್ರಶೇಖರ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿ ಶಿವಯೋಗ ಮಂದಿರಕ್ಕೆ ವಿದ್ಯಾಭ್ಯಾಸಕ್ಕೆ ಕಳುಹಿಸಲಾಯಿತು. ಶ್ರೀ ಚಂದ್ರಶೇಖರ ದೇವರು ಕಲಿಕೆಯಲ್ಲಿ ಮುಂದಿದ್ದು, ಅವರ ವಾಕ್‌ಚತುರತೆಯನ್ನು ಗಮನಿಸಿದ ಕೋಲಾರ ಜಿಲ್ಲೆಯ ಗೂಳೂರು ನಿಡುಮಾಮಿಡಿ ಮಠದ ಗುರುಗಳು ಗೂಳೂರಿಗೆ

ಕರೆದೊಯ್ದು ಪಟ್ಟಾಧಿಕಾರ ಮಾಡಿದರು. ಇವರೇ ಶ್ರೀ ಜ.ಚ.ನಿ. ಎಂಬ ಹೆಸರಿನಿಂದ ಪ್ರಖ್ಯಾತರಾಗಿ ಧಾರ್ಮಿಕ ಮತ್ತು ಸಾಹಿತ್ಯ ಲೋಕದ ಧ್ರುವತಾರೆಯಾಗಿ ಮಿಂಚಿದವರು. ಶಿಗ್ಗಾಂವ್ ತಾಲ್ಲೂಕಿನ ಹುಲುಗೂರು ಗ್ರಾಮದ ಶ್ರೀ ಗಂಗಾಧರಯ್ಯ ಮತ್ತು ಶ್ರೀಮತಿ ಸಾವಿತ್ರಮ್ಮನವರ ಪುತ್ರರಾಗಿ ೧೯೪೬ ರಲ್ಲಿ ಶ್ರೀ ಪಂಚಾಕ್ಷರ ದೇವರು ಜನಿಸಿದರು. ನಂತರ ಸಿಂದಗಿ ಶಾಂತವೀರ ಪಟ್ಟಾಧ್ಯಕ್ಷರ ಆರೈಕೆಯಲ್ಲಿ ಬೆಳೆದು ಸಂಸ್ಕೃತ, ಪುರಾಣ ಪ್ರವಚನ ಹಾಗೂ ಸಂಗೀತ ಕಲೆಗಳ ಬಗ್ಗೆ ಅಭ್ಯಾಸ ಮಾಡಿ ೧೯೬೮ರಲ್ಲಿ ಶ್ರೀ ದಾಸೋಹ ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಗುರುಗಳು ಅಧಿಕಾರ ವಹಿಸಿಕೊಂಡ ಮೇಲೆ ಮಠವನ್ನು ಸರ್ವಾಂಗೀಣವಾಗಿ ಅಭಿವೃದ್ಧಿಪಡಿಸಿ ಹೆಚ್ಚು ಪ್ರಚಾರಕ್ಕೆ ತಂದಿದ್ದಾರೆ.

ಸಾಮಾಜಿಕ ಹಾಗೂ ಸಾಹಿತ್ಯ ಸೇವೆ: ಶ್ರೀ ಪಂಚಾಕ್ಷರ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠದ ಧಾರ್ಮಿಕ ಚಟುವಟಿಕೆಯ ಜೊತೆಗೆ ಸಾಹಿತ್ಯಿಕ ಚಟುವಟಿಕೆಗಳು ರೂಪುಗೊಳ್ಳುವಂತೆ ಮಾಡಿದರು. ಇದರ ಫಲವೇ ಡಾ. ಶ್ರೀ ಜ.ಚ.ನಿ ಸಾಹಿತ್ಯ ಜ್ಯೋತಿಯನ್ನು ಪ್ರಾರಂಭಿಸಿ ಕವನ, ವಚನಗಳು ಹಾಗೂ ಅನೇಕ ವಿಚಾರವಂತ ಸಾಹಿತ್ಯ ಕೃತಿಗಳು ಪ್ರಕಟಗೊಳ್ಳಲು ಸಹಾಯಕರಾಗಿದ್ದಾರೆ. ಮಠದಲ್ಲಿ ಸಂಗೀತ ಕಾರ್ಯಕ್ರಮಗಳು ಪುರಾಣ, ಪ್ರವಚನಗಳು ಹಾಗೂ ಉಪನ್ಯಾಸ ಮಾಲಿಕೆಯನ್ನು ಏರ್ಪಡಿಸಿ ಸಮಾಜವನ್ನು ತಿದ್ದುವ ಕಾರ್ಯದಲ್ಲಿ ಮುಂದಾಗಿದ್ದಾರೆ. ೧೯೯೬ ರಲ್ಲಿ ಡಾ. ವರಕವಿ ಬೇಂದ್ರೆ ಪ್ರತಿಷ್ಠಾನವನ್ನು ಸ್ಥಾಪಿಸಿ ಈ ಮೂಲಕ ಸಾಹಿತ್ಯ ಸೇವೆಯನ್ನು ಮಾಡತೊಡಗಿದ್ದಾರೆ.

ಶೈಕ್ಷಣಿಕ ಸೇವೆ: ೧೯೭೨ರಲ್ಲಿ ಶ್ರೀ ಕಲ್ಲೇಶ್ವರ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿ, ಶ್ರೀ ಜ.ಚ.ನಿ. ಕನ್ನಡ ಕಾನ್ವೆಂಟ್ ಶಾಲೆಯನ್ನು ಪ್ರಥಮವಾಗಿ ಪ್ರಾರಂಭಿಸಿದರು. ನಂತರ ಶ್ರೀ ಶಾಂತವೀರ ಪಟ್ಟಾಧ್ಯಕ್ಷರ ಸಂಸ್ಕೃತ ಪಾಠಶಾಲೆ, ಗ್ರಾಮೀಣ ವಿಜ್ಞಾನ ಕೇಂದ್ರ, ಕಲ್ಲೇಶ್ವರ ಪ್ರೌಢಶಾಲೆಯನ್ನು ಪ್ರಾರಂಭಿಸಿ ಗ್ರಾಮಾಂತರ ಮಕ್ಕಳ ಕಲಿಕೆಗೆ ನೆರವಾಗಿದ್ದಾರೆ. ಶ್ರೀ ಫಕೀರೇಶ್ವರ ಉಚಿತ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿ ಕಲಿಯುವ ಬಡಮಕ್ಕಳಿಗೆ ನೆರವಾಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದಲ್ಲಿರುವ ಗದ್ದುಗೆಗಳಿಗೆ ನಿತ್ಯ ರುದ್ರಾಭಿಷೇಕ ಪೂಜೆ, ವಿಜಯದಶಮಿಯಂದು ಹಿರಿಯ ಗುರುಗಳ ಸ್ಮರಣೋತ್ಸವ, ಒಂಬತ್ತುದಿನಗಳ ಕಾಲ ದೇವಿಪುರಾಣ ಮತ್ತು ಉತ್ಸವ ನಡೆಯುತ್ತಿದೆ. ಕೊಪ್ಪಳ ಜಿಲ್ಲೆಯ ರಾಜೂರಿನಲ್ಲಿ ಶರಣಬಸವೇಶ್ವರ ಸುಕ್ಷೇತ್ರವನ್ನು ನಿರ್ಮಾಣ ಮಾಡಲಾಗಿದೆ. ಇಲ್ಲಿ ರಥ ಸಪ್ತಮಿಯ ದಿನದಂದು ರಥೋತ್ಸವ, ಮೂರು ದಿನಗಳ ಕಾಲ ಕಾರ್ಯಕ್ರಮವನ್ನು ನಡೆಸಿ ಸಾಹಿತ್ಯ ಗೋಷ್ಠಿಗಳು, ಸಾಮೂಹಿಕ ವಿವಾಹಗಳು ಹಾಗೂ ಶಿವದೀಕ್ಷಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ಸಂದರ್ಭದಲ್ಲಿ ಮಹಾದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಪಂಚಾಕ್ಷರ ಶಿವಾಚಾರ್ಯಸ್ವಾಮಿಗಳು, ಶ್ರೀ ದಾಸೋಹಮಠ, ಅಡ್ನೂರು, ನವಿಲುಗುಂದ ತಾ, ಧಾರವಾಡಜಿಲ್ಲೆ.

ತುಪ್ಪದ ಕುರಹಟ್ಟಿ

ನವಿಲುಗುಂದ ತಾಲ್ಲೂಕಿನ ತುಪ್ಪದ ಕುರಹಟ್ಟಿ ಗ್ರಾಮವು ತಾಲ್ಲೂಕು ಕೇಂದ್ರದ ಆಗ್ನೇಯ ದಿಕ್ಕಿಗೆ ಹದಿನೆಂಟು ಕಿ.ಮೀ ದೂರದಲ್ಲಿದೆ. ಗ್ರಾಮದ ಮಧ್ಯ ಭಾಗದಲ್ಲಿ ಶ್ರೀ ಭೂಸನೂರು ಸಂಸ್ಥಾನ (ಕಟ್ಟಿಮನಿ) ಬೃಹನ್ಮಠವು ಸ್ಥಾಪನೆಯಾಗಿ, ಸಂಸ್ಕಾರವಂತ ಗ್ರಾಮವಾಗಿ ರೂಪುಗೊಂಡಿದೆ.

ಭೂಸನೂರು ಸಂಸ್ಥಾನ ಬೃಹನ್ಮಠ: ತುಪ್ಪದ ಕುರಹಟ್ಟಿಯಲ್ಲಿ ಸ್ಥಾಪನೆಯಾಗಿರುವ ಶ್ರೀ ಭೂಸನೂರು ಸಂಸ್ಥಾನ ಮಠವು ಶ್ರೀ ರಂಭಾಪುರಿ ಪೀಠದ ಶಾಖಾ ಮಠವಾಗಿ, ಹನ್ನೊಂದನೆಯ ಶತಮಾನದಲ್ಲಿ ಸ್ಥಾಪನೆಯಾಗಿದೆ ಎಂದೂ ಪುರಾತನ ಕಾಲದ ಈ ಮಠದ ಸ್ಥಾಪಕರು ಶ್ರೀ ಮಡಿವಾಳೇಶ್ವರ ಶಿವಾಚಾರ್ಯ ಸ್ವಾಮಿಗಳೆಂದೂ ಹೇಳಲಾಗುತ್ತಿದೆ. ಶ್ರೀ ಮಡಿವಾಳೇಶ್ವರರು ತಪೋನಿಷ್ಠರಾಗಿ ಲೋಕಸಂಚಾರದಿಂದ ಅನೇಕ ಸುಕ್ಷೇತ್ರಗಳನ್ನು ಸಂದರ್ಶಿಸಿ ಸತ್‌ಸಂಗದಿಂದ ಪವಾಡ ಪುರುಷರಾಗಿ, ಸಿದ್ಧಪುರುಷರಾಗಿದ್ದರು ಎಂದು ಜನಪದ ಕಥೆ ಹೇಳುತ್ತದೆ. ಗುರುಗಳು ಲೋಕಸಂಚಾರ ಕೈಗೊಂಡು ಸಾಧನೆಯ ಸಿದ್ಧಿಯನ್ನು ತಲುಪಿದ ಮೇಲೆ ಶಿವಯೋಗ ಅನುಷ್ಠಾನ ಕೈಗೊಳ್ಳಲು ತುಪ್ಪದಕುರಹಟ್ಟಿಗೆ ಬಂದು ನೆಲೆಸಿದರು. ಗುರುಗಳು ನೆಲೆ ನಿಂತ ಸ್ಥಳ ಬೃಹನ್ಮಠವಾಗಿ ಬೆಳೆಯಿತು. ಇಂತಹ ಹಿರಿತನದಲ್ಲಿ ಬೆಳೆದ ಮಠದ ಪರಂಪರೆಯಲ್ಲಿ ಈವರೆಗೆ ಮೂವತ್ತೊಂಬತ್ತು ಜನ

ಗುರುಗಳು ಅಧಿಕಾರ ನಡೆಸಿದ್ದಾರೆಂದು ಹೇಳಲಾಗುತ್ತಿದೆ.

ಪರಂಪರೆ:
೧. ಷ.ಬ್ರ.ಶ್ರೀ ಮಡಿವಾಳೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಕೆಂಜಡೇಶ್ವರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಸಂಗಮೇಶ್ವರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃ ಗುರುಗಳಾದ ಶ್ರೀ ಮಡಿವಾಳೇಶ್ವರ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾದ ನಂತರ ಸುಮಾರು ಮೂವತ್ತೆರಡು ಜನ ಗುರುಗಳು ಪಟ್ಟಾಧಿಕಾರವನ್ನು ಪಡೆದು ಮಠವನ್ನು ಮುನ್ನಡೆಸಿದ್ದರೆಂದು ಹೇಳಲಾಗುತ್ತಿದೆ. ಆದರೆ ಪೂರಕವಾಗುವಂತಹ ಆಧಾರಗಳು ದೊರೆತಿಲ್ಲ. ಮಠದ ಆವರಣದಲ್ಲಿ ಒಟ್ಟು ಹತ್ತು ಗದ್ದುಗೆಗಳನ್ನು ಮಾತ್ರ ಗುರುತಿಸಬಹುದಾಗಿದ್ದು, ಉಳಿದ ಗದ್ದುಗೆಗಳು ಎಲ್ಲಿ ಸ್ಥಾಪನೆಗೊಂಡಿವೆ ಎಂದು ತಿಳಿಯುತ್ತಿಲ್ಲ. ಜನಪದರ ಈ ನಂಬಿಕೆಯು ಆಳವಾಗಿ ಬೇರೂರಿದ್ದು ಭಕ್ತರು ಇಂದಿಗೂ ಈ ಹೇಳಿಕೆಯನ್ನು ಬಲವಾಗಿ ನಂಬಿದ್ದಾರೆ. ಈ ಭಾಗದ ಅತ್ಯಂತ ಪ್ರಭಾವಿ ಮಠವಾಗಿ ರೂಪುಗೊಂಡಿರುವ ಶ್ರೀ ಭೂಸನೂರು ಸಂಸ್ಥಾನ ಬೃಹನ್ಮಠವು ಶ್ರೀ ಗುರು ಕೆಂಜಡೇಶ್ವರ ಶಿವಾಚಾರ್ಯ ಸ್ವಾಮಿಗಳಿಂದ ಮತ್ತಷ್ಟು ಬೆಳೆಯಿತು. ನಂತರ ಬಂದ ಶ್ರೀ ಸಂಗಮೇಶ್ವರ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಸರ್ವಾಂಗೀಣ ವಾಗಿ ಅಭಿವೃದ್ಧಿಪಡಿಸಿದರು. ಇವರ ತರುವಾಯ ಶ್ರೀ ಕೆಂಜಡೆಯ್ಯ ಮತ್ತು ಶ್ರೀಮತಿ ಅನ್ನಪೂರ್ಣ ದೇವಿಯವರ ಪುತ್ರರಾಗಿ ಜನಿಸಿರುವ ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಉತ್ತರಾಧಿಕಾರಿಗಳಾಗಿ ನೇಮಕಗೊಂಡಿದ್ದಾರೆ. ಪ್ರಾಥಮಿಕ ಶಿಕ್ಷಣವನ್ನು ತುಪ್ಪದಕುರಹಟ್ಟಿಯಲ್ಲಿ ಮುಗಿಸಿ ಈಗ ಶಿವಯೋಗಮಂದಿರದಲ್ಲಿ ಧಾರ್ಮಿಕ ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಕರ್ತೃಗುರುಗಳ ಗದ್ದುಗೆ ಹಾಗೂ ಇನ್ನಿತರ ಗದ್ದುಗೆಗಳಿಗೆ ನಿತ್ಯ ಎರಡು ವೇಳೆ ಪೂಜೆ ಮಾಡಲಾಗುತ್ತಿದೆ. ಶ್ರಾವಣ,ವೈಶಾಖ ಹಾಗೂ ಕಾರ್ತೀಕಮಾಸಗಳಲ್ಲಿ ಪುರಾಣ ಪ್ರವಚನವನ್ನು ಏರ್ಪಡಿಸಲಾಗುತ್ತಿದೆ. ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ಉಪನ್ಯಾಸ, ದಾಸೋಹ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡುವ ಮೂಲಕ ಅರ್ಥಪೂರ್ಣವಾಗಿ ಆಚರಣೆ ಮಾಡಲಾಗುತ್ತಿದೆ. ಹೊರಗಿನಿಂದ ಬರುವ ಭಕ್ತರಿಗೆ ನಿತ್ಯ ಅನ್ನದಾಸೋಹದ ವ್ಯವಸ್ಥೆ ಹಾಗೂ ವಸತಿ ವ್ಯವಸ್ಥೆಯನ್ನು ಕಲ್ಪಿಸಿಕೊಡಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ಶ್ರೀ ಭೂಸನೂರು ಸಂಸ್ಥಾನ ಬೃಹನ್ಮಠ, ತುಪ್ಪದಕುರಹಟ್ಟಿ, ನವಿಲುಗುಂದ ತಾಲ್ಲೂಕು, ಧಾರವಾಡ ಜಿಲ್ಲೆ.

ದಟನಾಳ

ನವಿಲುಗುಂದ ತಾಲ್ಲೂಕಿನ ದಟನಾಳ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತೆರಡು ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ಗದಗದ ಜಗದ್ಗುರು ಶಿವಾನಂದ ಮಠದ ಶಾಖಾಮಠವು ೧೯೮೦ ರಲ್ಲಿ ಸ್ಥಾಪನೆಯಾಗಿದೆ.

ಶಿವಾನಂದಮಠ: ಶ್ರೀ ಶಿವಾನಂದ ಜಗದ್ಗುರುಗಳು ಲೋಕಸಂಚಾರ ಕೈಗೊಂಡ ಸಂದರ್ಭದಲ್ಲಿ ದಟನಾಳ ಗ್ರಾಮದಲ್ಲಿ ನೆಲೆಸಿ ಅನುಷ್ಠಾನಗೊಂಡ ಕಾರಣ ಶ್ರೀ ಬಸವರಾಜ ಸ್ವಾಮಿಗಳು ಶಿವಾನಂದ ಮಠವನ್ನು ಸ್ಥಾಪನೆ ಮಾಡಿರುತ್ತಾರೆ. ಬಸವತತ್ತ್ವ ಪುರಾಣವನ್ನು ಮಾಡಿ ವೀರಶೈವ ಧರ್ಮದ ಪ್ರಸಾರವನ್ನು ತಮ್ಮ ವ್ಯಾಪ್ತಿಯಲ್ಲಿಯೇ ಕೈಗೊಂಡಿರುವ ಗುರುಗಳು ಸಮಾಜದ ಸಂಘಟನೆಗೆ ತೊಡಗಿದ್ದಾರೆ.

ವಿಳಾಸ: ಶ್ರೀ ಬಸವರಾಜ ಸ್ವಾಮಿಗಳು, ಶ್ರೀ ಶಿವಾನಂದ ಮಠ, ದಟನಾಳ, ನವಿಲುಗುಂದ ತಾಲ್ಲೂಕು, ಧಾರವಾಡ ಜಿಲ್ಲೆ.

ನವಿಲುಗುಂದ

ಧಾರವಾಡ ಜಿಲ್ಲೆಯ ನವಿಲುಗುಂದ ಪಟ್ಟಣವು ಜಿಲ್ಲಾ ಕೇಂದ್ರದಿಂದ ಉತ್ತರಭಾಗಕ್ಕೆ ನಲವತ್ತೈದು ಕಿ.ಮೀ.

ದೂರದಲ್ಲಿದೆ. ಪುರಾತನ ಕಾಲದಲ್ಲಿ ಊರಿನ ಗುಡ್ಡದ ಮೇಲೆ ನವಿಲುಗಳು ತಂಡೋಪತಂಡವಾಗಿ ನರ್ತನ ಮಾಡುತ್ತಿದ್ದವು. ಇದನ್ನು ನೋಡುವುದು ಒಂದು ಸೊಗಸಾಗಿತ್ತು. ಆದ್ದರಿಂದ ಈ ಪಟ್ಟಣಕ್ಕೆ 'ನವಿಲುಗುಂದ' ಎಂಬ ಹೆಸರು ಬಂದಿದೆ ಎಂದು ಸ್ಥಳನಾಮ ಹೇಳುತ್ತದೆ. ಇಂತಹ ನೈಸರ್ಗಿಕ ಪರಂಪರೆ ಇರುವ ಈ ಪಟ್ಟಣದಲ್ಲಿ ಶ್ರೀ ಪಂಚಗೃಹ ಹಿರೇಮಠ, ಶ್ರೀ ಗವಿ ಮಠ, ಶ್ರೀ ಕೋಣನಕೇರಿಮಠ, ಶ್ರೀ ಗುಡ್ಡದಮಠ, ಶ್ರೀ ಜಡೆಮಠ, ಶ್ರೀ ತಡಿಮಠ ಮತ್ತು ಶ್ರೀ ಸಾವಳಗಿ ಶಿವಲಿಂಗೇಶ್ವರ ಮಠ ಈ ರೀತಿ ಒಟ್ಟು ಏಳು ಮಠಗಳು ಸ್ಥಾಪನೆಯಾಗಿವೆ. ಇವುಗಳಲ್ಲಿ ಶ್ರೀ ಪಂಚಗೃಹ ಹಿರೇಮಠ ಮತ್ತು ಶ್ರೀ ಗವಿಮಠ ಅಸ್ತಿತ್ವದಲ್ಲಿದ್ದು ಉಳಿದವುಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿವೆ.

ಪಂಚಗೃಹ ಹಿರೇಮಠ: ನವಿಲುಗುಂದ ಪಟ್ಟಣದ ಮಧ್ಯಭಾಗದ ಹಳ್ಳದ ಓಣಿಯಲ್ಲಿ ಸ್ಥಾಪನೆಯಾಗಿರುವ ಪಂಚಗೃಹ ಹಿರೇಮಠವು ಆರುನೂರು ವರ್ಷಗಳ ಹಿಂದೆ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಪಂಚಗೃಹ ಹಿರೇಮಠಗಳು ಈ ಭಾಗದ ನವಿಲುಗುಂದ, ನರಗುಂದ, ಕುಂದಗೋಳ, ಅಮ್ಮಿನಬಾವಿ ಮತ್ತು ಸುಳ್ಳದಲ್ಲಿವೆ. ಇವುಗಳಲ್ಲಿ ನವಿಲುಗುಂದ ಮಠದಲ್ಲಿರುವ ಕೆತ್ತನೆಯ ಕಲಾಕುಸರಿ ಬೇರೆ ಯಾವ ಮಠದಲ್ಲಿಯೂ ನೋಡಸಿಗದು. ಕೆಳದಿಯ ಶಿವಪ್ಪನಾಯಕ ಯುದ್ಧವನ್ನು ಮುಗಿಸಿಕೊಂಡು ತನ್ನ ಸೈನ್ಯದ ಜೊತಗೆ ಕೆಳದಿಗೆ ಹಿಂದಿರುಗುತ್ತಿದ್ದಾಗ ದಾರಿಯ ಮಧ್ಯದಲ್ಲಿ ಆಹಾರದ ಕೊರತೆಯಾಯಿತು. ಆಗ ಚಿಂತಾಕ್ರಾಂತನಾಗಿ ನವಿಲು ಗುಂದದ ಗುರುಗಳ ಪ್ರಭಾವವನ್ನು ಕೇಳಿ ತಿಳಿದುಕೊಂಡು ಗುರುಗಳ ಬಳಿಗೆ ಬರುತ್ತಾನೆ. ಆಗ ಗುರುಗಳು ತಮ್ಮ ಜೋಳಿಗೆಯಿಂದ ದವಸ ಧಾನ್ಯವನ್ನು ನೀಡಿ ಪವಾಡವನ್ನು ಮಾಡಿದರು. ಗುರುಗಳ ಪ್ರಭಾವಕ್ಕೆ ಮನಸೋತು ಮಠದ ಭಕ್ತನಾಗಿ ರಾಜಧಾನಿಗೆ ಹಿಂದಿರುಗುತ್ತಾನೆ. ವಿಜಯೋತ್ಸವವನ್ನು ಆಚರಿಸಿದ ಶಿವಪ್ಪನಾಯಕ ಮರುದಿನವೇ ಸಕಲ ಐಶ್ವರ್ಯ ಹಾಗೂ ಸಕಲ ಪರಿವಾರ ದೊಂದಿಗೆ ನವಿಲುಗುಂದಕ್ಕೆ ಬಂದು ಗುರುಗಳು ವಾಸಿಸುತ್ತಿದ್ದ ಕುಟೀರವನ್ನು ತೆಗೆಸಿ ಅದೇ ಜಾಗದಲ್ಲಿ ಭವ್ಯವಾದ ಕಟ್ಟಡವನ್ನು ಕಟ್ಟಿಸಿದನೆಂದು ಹೇಳಲಾಗುತ್ತಿದೆ.

ಶಿವಪ್ಪನಾಯಕನ ಕಾಲದಲ್ಲಿ (ಕ್ರಿ.ಶ. ೧೬೪೬-೧೬೬೧) ಕಟ್ಟಿಸಿದ ಅರಮನೆಯೇ ಇರಲಿ ಗುರುಮನೆಯೇ ಇರಲಿ ಬಹುತೇಕ ಎಲ್ಲವೂ ಕಟ್ಟಿಗೆಯಿಂದ ಬಳಸಿ ಕಟ್ಟಿದವುಗಳಾಗಿವೆ ಎಂಬುದನ್ನು ಅವಲೋಕಿಸಿದರೆ ಈ ಮಠವನ್ನು ಶಿವಪ್ಪನಾಯ ಕನು ಕಟ್ಟಿಸಿದ್ದ ನೆಂಬ ಹೇಳಿಕೆ ಸತ್ಯ ಎಂದು ಸ್ಪಷ್ಟವಾಗುತ್ತದೆ. ಇಂತಹ ಕಾಷ್ಟ ಕಲೆಯ ಕೌಶಲ್ಯವಿರುವ ಮಠದ ಪರಂಪರೆಯಲ್ಲಿ ಇಪ್ಪತ್ತನಾಲ್ಕು ಜನ ಗುರುಗಳು ಅಧಿಕಾರ ನಡೆಸಿದ್ದಾರೆ ಎಂದು ಹೇಳಲಾಗುತ್ತಿದೆ. ಇದಕ್ಕೆ ಪೂರಕವೆಂಬಂತೆ ಇಲ್ಲಿ ಇಪ್ಪತ್ತಮೂರು ಗದ್ದುಗೆಗಳು ಸ್ಥಾಪನೆಯಾಗಿವೆ.

ಪರಂಪರೆ: ಪಂಚಪೀಠಗಳಲ್ಲಿ ಒಂದಾದ ಕಾಶಿಪೀಠದ ಶಾಖಾಮಠವಾದ ಪಂಚಗೃಹ ಹಿರೇಮಠವು ಪುತ್ರವರ್ಗ ಪರಂಪರೆಯಲ್ಲಿ ಬೆಳೆದು ಬಂದಿದೆ. ಪುರಾತನ ಇತಿಹಾಸ ಇರುವ ಈ ಮಠದ ಕರ್ತೃ ಗುರುಗಳು ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳೆಂದು ಹೇಳಲಾಗುತ್ತಿದೆ. ನಂತರ ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ಪರಂಪರೆಯ ಎರಡನೆಯ ಗುರುಗಳಾಗಿ ಮಠದ ಅಧಿಕಾರವನ್ನು ವಹಿಸಿಕೊಂಡಿದ್ದರು. ಇವರು ತಪಸ್ವಿಗಳಾಗಿ ಬಹಳ ಪ್ರಭಾವವನ್ನು ಬೆಳೆಸಿಕೊಂಡಿದ್ದ ಕಾರಣದಿಂದ ಈ ಮಠದ ಪರಂಪರೆಯ ಎಲ್ಲಗುರುಗಳು ಪಟ್ಟಾಧಿಕಾರದ ಸಂದರ್ಭದಲ್ಲಿ ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳೆಂದೇ ಅಭಿಧಾನ ಪಡೆದು ಪಟ್ಟಾಧಿಕಾರಕ್ಕೆ ಬಂದಿದ್ದಾರೆಂದು ಹೇಳಲಾಗುತ್ತಿದೆ. ಈಗ ಅಧಿಕಾರದಲ್ಲಿರುವ ಗುರುಗಳು ಈ ಸಂಪ್ರದಾಯ ದಿಂದ ಮಠದ ಇತಿಹಾಸವನ್ನು ಗುರುತಿಸಲು ಗೊಂದಲವಾಗುತ್ತದೆ ಎಂಬ ಕಾರಣದಿಂದ, ಪಟ್ಟಾಧಿಕಾರದ ಸಂದರ್ಭದಲ್ಲಿ ಕರ್ತೃಗುರುಗಳ ಹೆಸರಾದ ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳೆಂದು ಅಭಿಧಾನ ಪಡೆದು ಅಧಿಕಾರಕ್ಕೆ ಬಂದಿದ್ದಾರೆ.

ಪರಂಪರೆಯ ಕರ್ತೃಗುರುಗಳ ನಂತರ ಬಂದಂತಹ ಇಪ್ಪತ್ತನೆಯ ಗುರುಗಳ ತನಕ ಅವರುಗಳ ಬಗ್ಗೆ ಮಾಹಿತಿ ಸ್ಪಷ್ಟವಾಗಿ ತಿಳಿಯದೆ ಇರುವುದರಿಂದ ಆ ಗುರುಗಳ ಬಗ್ಗೆ ದಾಖಲಿಸಲು ಸಾಧ್ಯವಾಗುತ್ತಿಲ್ಲ. ಪರಂಪರೆಯ ಇಪ್ಪತ್ತೊಂದನೆಯ ಗುರುಗಳು ಮಹಾತಪಸ್ವಿಗಳಾಗಿ ಹೆಸರು ಪಡೆದಿದ್ದರು. ಇವರ ಪ್ರಭಾವಕ್ಕೆ ಒಳಗಾಗಿ ಲಿಂಗರಾಜ ದೇಸಾಯಿಯವರು ಮಠದ ಭಕ್ತರಾಗಿದ್ದರು. ಇಪ್ಪತ್ತೆರಡನೆಯ ಗುರುಗಳು ಮಹಾಸಿದ್ಧ ಪುರುಷರಾಗಿ ಅಪಾರ ಶಿಷ್ಯಸಂಪತ್ತನ್ನು ಗಳಿಸಿಕೊಂಡು ಮಠವನ್ನು ಹೆಚ್ಚು ಅಭಿವೃದ್ಧಿ ಪಡಿಸಿ ೧೯೬೧ ರಲ್ಲಿ ಲಿಂಗೈಕ್ಯರಾದರು.

ರೋಣ ತಾಲ್ಲೂಕಿನ ಕರಮುಡಿ ಗ್ರಾಮದ ಶ್ರೀ ಬಸವರಾಧ್ಯ ಮತ್ತು ಶ್ರೀಮತಿ ಶಿವಮ್ಮನವರ ಪುತ್ರರಾಗಿ ಜನಿಸಿದ ಇಪ್ಪತ್ತೊಮ್ಮರನೆಯ ಬಸವಲಿಂಗ ಸ್ವಾಮಿಗಳು ೧೯೭೪ರಲ್ಲಿ ಅಧಿಕಾರ ವಹಿಸಿಕೊಂಡರು.ಇವರು ಅಧಿಕಾರವಹಿಸಿಕೊಂಡ ಮೇಲೆ ಕಟ್ಟಿಗೆಯ ಕೆತ್ತನೆಯ ಕಲಾಕುಸರಿಯ ಮಠವನ್ನು ನವೀಕರಣಗೊಳಿಸಿ ಅಭಿವೃದ್ಧಿಪಡಿಸಿದರು. ಅಲ್ಲದೆ ಧಾರ್ಮಿಕ ಕಾರ್ಯಗಳನ್ನು ವ್ಯವಸ್ಥಿತವಾಗಿ ನಡೆಯುವಂತೆ ಮಾಡಿ ಭಕ್ತರನ್ನು ಹೆಚ್ಚಿಸಿಕೊಂಡರು. ಮಠದ ಆಸ್ತಿಯನ್ನು ವ್ಯವಸ್ಥಿತಗೊಳಿಸಿ ಮಠಕ್ಕೆ ಶಿಸ್ತುಬದ್ಧ ಆಡಳಿತವನ್ನು ತಂದುಕೊಟ್ಟು ೧೯೮೧ರಲ್ಲಿ ಲಿಂಗೈಕ್ಯರಾದರು. ಇವರ ನಂತರ ಕರಮುಡಿ ಗ್ರಾಮದ ಶ್ರೀ ವೀರಭದ್ರಯ್ಯ ಮತ್ತು ಶ್ರೀಮತಿ ನೀಲಮ್ಮನವರ ಪುತ್ರರಾಗಿ ೧೯೬೯ ರ ಜೂನ್ ಆರರಂದು ಜನಿಸಿದ ಶ್ರೀ ಸಿದ್ಧೇಶ್ವರ ದೇವರು ಪದವಿ ಶಿಕ್ಷಣ ಪಡೆದು ಶಿವಯೋಗಮಂದಿರ, ಹರಪನಹಳ್ಳಿ ಹಾಗೂ ಸೊಲ್ಲಾಪುರದಲ್ಲಿ ಧಾರ್ಮಿಕ ವಿದ್ಯಾಭ್ಯಾಸ ಮಾಡಿ ೧೯೮೧ರಲ್ಲಿ ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡರು. ೧೯೯೪ ರ ಮೇ ಇಪ್ಪತ್ತೊಂದರಂದು ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳೆಂದು ಅಭಿಧಾನ ಪಡೆದು ಪಟ್ಟಾಧಿಕಾರವನ್ನು ಪಡೆದುಕೊಂಡರು.

ಅಭಿವೃದ್ಧಿ ಕಾರ್ಯಗಳು: ಇಪ್ಪತ್ತೊಂದನೆಯ ಗುರುಗಳ ಕಾಲದಲ್ಲಿ ಲಿಂಗರಾಜ ದೇಸಾಯಿಗಳು ಮಠದ ಭಕ್ತರಾಗಿ ಮಠವು ಹೆಚ್ಚು ಅಭಿವೃದ್ಧಿಯಾಗಲು ಕಾರಣರಾಗಿದ್ದಾರೆ. ಇವರ ಕಾಲದಲ್ಲಿ ನೂರಾರು ಎಕರೆ ಜಮೀನನ್ನು ಮಠಕ್ಕೆ ಉಂಬಳಿಯಾಗಿ ನೀಡಿದ್ದಾರೆ. ಪರಂಪರೆಯ ಇಪ್ಪತ್ತಮೂರನೆಯ ಗುರುಗಳ ಕಾಲದಲ್ಲಿ ಮತ್ತಷ್ಟು ಅಭಿವೃದ್ಧಿಗೊಂಡು ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಬೆಳೆಯಿತು. ಇವರ ಕಾಲದಲ್ಲಿ ಪ್ರೌಢಶಾಲೆ, ಪದವಿಪೂರ್ವ ಕಾಲೇಜು ಮತ್ತು ಪದವಿ ಕಾಲೇಜುಗಳನ್ನು ಪ್ರಾರಂಭಿಸಿ ಸುಸಜ್ಜಿತ ಕಟ್ಟಡಗಳನ್ನು ನಿರ್ಮಿಸಿದರು. ಇವರ ಕಾಲದಲ್ಲಿ ಮಠದ ಜಮೀನು ಅಭಿವೃದ್ಧಿಗೊಂಡಿತು. ಈಗಿನ ಗುರುಗಳು ಮಠಕ್ಕೆ ಸುತ್ತ ಆವರಣ, ಮಹಾದ್ವಾರ ಹಾಗೂ ಕಲ್ಯಾಣ ಮಂಟಪಗಳನ್ನು ನಿರ್ಮಿಸಲು ವ್ಯವಸ್ಥೆಗೊಳಿಸುತ್ತಿದ್ದಾರೆ.

ಕಲಾತ್ಮಕ ಕಟ್ಟಡ: ಈ ಮಠದ ಕಟ್ಟಡವು ಪ್ರಮುಖವಾಗಿ ಮೂರು ಹಂತಗಳಲ್ಲಿ ನಿರ್ಮಾಣಗೊಂಡಿದೆ. ಕರ್ತೃಗುರುಗಳ ಗದ್ದುಗೆ ಗೃಹ, ಇದರ ಮುಂದೆ ದೊಡ್ಡದಾದ ಹದಿನಾರು ಅಂಕಣದ ಸಭಾಂಗಣ, ಈ ಸಭಾಂಗಣವನ್ನು ಶಿವದೀಕ್ಷಾ ಮಂಟಪವೆಂದು ಕರೆಯಲಾಗುತ್ತಿದೆ. ಇಲ್ಲಿ ಒಂದು ಕಡೆ ಕಟ್ಟಿಗೆಯಿಂದ ತಯಾರಿಸಿದ ಪಲ್ಲಕ್ಕಿ ಹಾಗೂ ಒಡವೆವಸ್ತುಗಳನ್ನು ಇಡುವ ಮಂಚಗಳು ಈ ಸಭಾಂಗಣದ ಎಡ ಬದಿಯಲ್ಲಿರುವ ಕೊಠಡಿಯಲ್ಲಿವೆ. ಈ ಸಭಾಂಗಣವನ್ನು ನಿರ್ಮಿಸಲು ಬಳಸಿರುವ ಮರದ ಕಂಬಗಳು, ಜಂತಿ, ತೊಲೆಗಳು ಕೆತ್ತನೆಯಿಂದ ಅಲಂಕೃತಗೊಂಡಿವೆ. ಬೇರೆ ಎಲ್ಲಿಯೂ ಸಿಗದಂತಹ ಕೆತ್ತನೆಯ ಕುಸರಿಕೆಲಸ. ಬಹಳ ನಾಜೂಕಾಗಿ ನಿರ್ಮಿಸಲ್ಪಟ್ಟಿದೆ. ಚೌಕಾಕಾರದ ಮಂಟಪದ ಕಂಬಗಳಿಗೆ ಹೊಂದಿಕೊಂಡು ಐದು ಸಾಲಿನ ಅಡ್ಡ ತೊಲೆ ಪಟ್ಟಿಕೆಗಳನ್ನು ಜೋಡಿಸಿದ್ದು ಅದನ್ನು ಮಂಡಲವೆನ್ನುತ್ತಾರೆ. ಅದರ ಎಂಟು ದಿಕ್ಕುಗಳಿಗೆ ಅಷ್ಟ ದಿಕ್ಪಾಲಕರ ವಿಗ್ರಹಗಳಿದ್ದು, ತಲಾ ಒಂದೊಂದು ದಿಕ್ಪಾಲಕರ ಬದಿಗಳಲ್ಲಿ ಮೂರು ಮೂರು ವಿವಿಧ ದೇವ-ದೇವತೆ, ಋಷಿ ಮುನಿಗಳು ಮತ್ತು ನೃತ್ಯಗಾರ್ತಿಯರ ವಿಗ್ರಹಗಳನ್ನು ಕೆತ್ತಲಾಗಿದೆ. ಪೂರ್ವಕ್ಕೆ ಪೂರ್ವನಾಥ, ಆಗ್ನೇಯಕ್ಕೆ ಹೊನ್ನೊಪಾವಕಲೋಚನ, ದಕ್ಷಿಣಕ್ಕೆ ಯಮ, ನೈರುತ್ಯಕ್ಕೆ ಸರ್ಪಭೂಷಣ, ಪಶ್ಚಿಮಕ್ಕೆ ವಾಮದೇವ, ವಾಯುವ್ಯಕ್ಕೆ ಕಾಮಸುಂದರ, ಉತ್ತರಕ್ಕೆ ವಿರೂಪಾಕ್ಷ, ಈಶಾನ್ಯಕ್ಕೆ ಬೃಂಗಿ ಈ ರೀತಿ ಎಂಟು ದಿಕ್ಕಿಗೂ ದೇವತೆಗಳನ್ನು ಸೃಷ್ಟಿಸಿ ಒಂದೊಂದು ದಿಕ್ಕಿನ ಒಂದೊಂದು ಪಟ್ಟಿಯಲ್ಲಿ ವಿವಿಧ ದೇವರುಗಳನ್ನು ಕಲಾತ್ಮಕವಾಗಿ ಸೃಷ್ಟಿಸಲಾಗಿದೆ. ಪಶ್ಚಿಮ ಪಟ್ಟಿಯಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ, ದಕ್ಷಿಣಪಟ್ಟಿಯಲ್ಲಿ ಯಮ, ಪೂರ್ವ ಪಟ್ಟಿಯಲ್ಲಿ ಇಂದ್ರ, ಉತ್ತರ ಪಟ್ಟಿಯಲ್ಲಿ ಕುಬೇರ ಈ ರೀತಿ ಹಂತ ಹಂತವಾಗಿ ಕಟ್ಟಿಗೆಯಲ್ಲಿ ಕುಸರಿ ಕೆಲಸವನ್ನು ನಿರ್ಮಿಸಲಾಗಿದೆ.

ದೀಕ್ಷಾ ಮಂಟಪದ ಮೊಗಸಾಲೆಯಲ್ಲಿರುವ ನಾಲ್ಕು ಕಂಬಗಳಲ್ಲಿ ಒಂದು ಕಂಬಕ್ಕಿರುವ ಹೋಲಿಕೆ ಇನ್ನೊಂದು ಕಂಬಕ್ಕಿಲ್ಲ. ನಾಲ್ಕು ಕಂಬಗಳು ವಿಶಿಷ್ಟ ರೀತಿಯ ನಾಲ್ಕು ಕಲಾಕೃತಿಗಳಾಗಿ ನಿಂತಿವೆ. ವಿಶಾಲವಾದ ಮೊಗಸಾಲೆಯಲ್ಲಿರುವ ತೊಲೆಗಳಲ್ಲಿ ಮಿಥುನ, ಪ್ರಾಣಿ, ಇಷ್ಟಲಿಂಗ, ಉಪಾಸಕರು, ದೇವ ದೇವತೆಯರು ಹಾಗೂ ಕಥಾನಕ ವಿಷಯವುಳ್ಳ ಚಿತ್ರಗಳು ವೈವಿಧ್ಯಮಯವಾಗಿ ರೂಪುಗೊಂಡಿವೆ. ಒಟ್ಟು ನೂರಾಒಂದು ಅಂಕಣದ ಈ ಬೃಹತ್ತಾದ ಮಠವು ಕಲಾಕೌಶಲ್ಯವನ್ನು ಮೈತುಂಬಿಕೊಂಡು ನಿಂತಿದೆ.

ಧಾರ್ಮಿಕ ಕಾರ್ಯಗಳು : ಮಠದ ಆವರಣದಲ್ಲಿ ಇಪ್ಪತ್ತಮೂರು ಗದ್ದುಗೆಗಳು ಹಾಗೂ ವೀರಭದ್ರಸ್ವಾಮಿಯ ದೇವಸ್ಥಾನ ನಿರ್ಮಿತವಾಗಿದ್ದು, ಪ್ರತಿನಿತ್ಯ ಎರಡು ವೇಳೆ ಪೂಜೆ ನಡೆಯುತ್ತಿದೆ. ಶ್ರಾವಣಮಾಸದಲ್ಲಿ ಶಿವಾನುಭವಗೋಷ್ಠಿ, ಕಾರ್ತೀಕ ಮಾಸದಲ್ಲಿ ದೀಪೋತ್ಸವ, ಡಿಸೆಂಬರ್ ಇಪ್ಪತ್ತೈದರಂದು ಹಿರಿಯ ಗುರುಗಳ ಪುಣ್ಯ ತಿಥಿಯನ್ನು ಆಚರಣೆ ಮಾಡಲಾಗುತ್ತಿದೆ. ಮಠದ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಂಡು ಸಹಾಯಕರಾಗಿರಲು ಪರಂಪರೆಯಿಂದ ಬಂದಂತಹ ಹೂವನ್ನು ಸರಬರಾಜು ಮಾಡುವ ಹೂಗಾರ ಮತ್ತು ಪೂಜಾ ಸಮಯದಲ್ಲಿ ಭಜಂತಿ ಬಾರಿಸುವ ಕುಟುಂಬಗಳಿಗೆ ಮಠದ ವತಿಯಿಂದ ತಲಾ ನಾಲ್ಕು ಕೂರಿಗೆ ಜಮೀನನ್ನು ಉಂಬಳಿಯಾಗಿ ನೀಡಲಾಗಿದೆ. ಇವರುಗಳು ಪರಂಪರಾಗತವಾಗಿ ಮಠದ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಾರೆ.

ಸಾಮಾಜಿಕ-ಶೈಕ್ಷಣಿಕ ಸೇವೆ: ಸಮಾಜದ ಪ್ರಗತಿಗಾಗಿ ಶ್ರಮಿಸಿರುವ ಮಠವು ಈಗಿನ ಗುರುಗಳ ಕಾಲದಲ್ಲಿ ಸಾಮರಸ್ಯ ಮೂಡಿಸಲು ಹಿಂದೂ ಮತ್ತು ಮುಸ್ಲಿಂ ಧರ್ಮೀಯರನ್ನು ಒಂದೇ ವೇದಿಕೆಯಡಿ ಸೇರಿಸಿ ರುದ್ರಾಕ್ಷಿಯನ್ನು ಕಟ್ಟಿ ಸಾಮರಸ್ಯದ ವಾತಾವರಣ ಬೆಳೆಯಲು ನೆರವಾಗಿದೆ. ಅಲ್ಲದೆ ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಸುತ್ತಲ ಗ್ರಾಮಗಳ ಮನೆಮನೆಗೆ ಹೋಗಿ ಭಕ್ತರ ಮನ ಪರಿವರ್ತನೆಗೆ ಪ್ರಯತ್ನಿಸಿದ್ದಾರೆ. ಮಠದ ವತಿಯಿಂದ ನವಿಲುಗುಂದ ತಾಲ್ಲೂಕು ಶಿಕ್ಷಣ ಸಮಿತಿಯನ್ನು ೧೯೫೦ ರಲ್ಲೇ ರಚಿಸಿದ್ದು ಕಾಲೇಜುಶಿಕ್ಷಣ ಸಂಸ್ಥೆಗಳ ಜೊತೆಗೆ ಸ್ವಯಂ ಉದ್ಯೋಗ ತರಬೇತಿ ಕೇಂದ್ರಗಳು, ಕಂಪ್ಯೂಟರ್ ಶಿಕ್ಷಣವನ್ನು ನೀಡಲಾಗುತ್ತಿದೆ. ಅನ್ನಪೂರ್ಣೇಶ್ವರಿ ಬೋರ್ಡಿಂಗ್ ಸಂಸ್ಥೆಯನ್ನು ೧೯೭೪ ರಲ್ಲಿ ಸ್ಥಾಪಿಸಿ ಅನಾಥ ಮಕ್ಕಳಿಗೆ ಮತ್ತು ಕಲಿಯುವ ಬಡಮಕ್ಕಳಿಗೆ ಆಶ್ರಯ ಕಲ್ಪಿಸಿ ನೆರವಾಗಿದ್ದಾರೆ. ಕರ್ತೃ ಗುರುಗಳ ಹಾಗೂ ಶ್ರೀ ಬಸವಲಿಂಗ ಸ್ವಾಮಿಗಳ ನಾಮಾವಳಿಗಳನ್ನು ಪ್ರಕಟಿಸಲಾಗಿದೆ. ಈ ರೀತಿ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಹಿತ್ಯಿಕವಾಗಿ ತೊಡಗಿಸಿ ಕೊಂಡು ಮಠವನ್ನು ಸಮಾಜಮುಖಿಯಾಗಿ ಬೆಳೆಸಲು ಈಗಿನ ಗುರುಗಳು ಪ್ರಯತ್ನ ನಡೆಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಪಂಚಗೃಹ ಹಿರೇಮಠ, ನವಿಲುಗುಂದ, ಧಾರವಾಡ ಜಿಲ್ಲೆ.
ಆಧಾರ: 'ನವಿಲಗರಿ' ಸ್ಮರಣ ಸಂಚಿಕೆ, ಲೇಖನ : ಡಾ. ಸಂಗಮೇಶ ಹಂಡಗಿ ಹಾಗೂ ಆರ್.ಎಂ. ಷಡಕ್ಷರಯ್ಯ.

ಗವಿಮಠ: ನವಿಲುಗುಂದ ನಗರದ ಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಗವಿಮಠವು ಪುರಾತನ ಇತಿಹಾಸವನ್ನು ಹೊಂದಿದ್ದು, ಈ ಪಟ್ಟಣದ ಧಾರ್ಮಿಕ ಕೇಂದ್ರಬಿಂದುವಾಗಿ ಬೆಳೆದಿದೆ. ಹದಿನೈದನೆಯ ಶತಮಾನದಲ್ಲಿ ಶ್ರೀ ತೋಂಟದ ಸಿದ್ಧಲಿಂಗ ಶಿವಯೋಗಿಗಳು ತಮ್ಮ ವಿರಕ್ತರ ಗುಂಪಿನೊಂದಿಗೆ ಲೋಕಸಂಚಾರ ಕೈಗೊಂಡಿದ್ದ ಸಂದರ್ಭದಲ್ಲಿ ಈ ಕ್ಷೇತ್ರಕ್ಕೆ ಬಂದು ಕೆಲವು ದಿನ ಅನುಷ್ಠಾನಗೊಂಡು ತಮ್ಮ ಶಿಷ್ಯರಾದ ಶ್ರೀ ಜಡೆಸಿದ್ಧ ಸ್ವಾಮಿಗಳನ್ನು ಇಲ್ಲಿ ನೆಲೆಸುವಂತೆ ಮಾಡಿ ಧರ್ಮ ಬೆಳೆಯಲು ಆಶೀರ್ವದಿಸಿದ್ದಾರೆ.

ಮಠ ಸ್ಥಾಪನೆ: ನವಿಲುಗುಂದವು ಆ ಸಂದರ್ಭದಲ್ಲಿ ಜೈನಧರ್ಮದ ಕೇಂದ್ರವಾಗಿ ಬೆಳೆದಿತ್ತು. ನವಿಲುಗುಂದದ ಗೌಡರು ಜೈನರಾಗಿದ್ದರು. ಗಿಡಮರಗಳು, ಮುಳ್ಳುಪೊದೆಗಳಿಂದ ಈ ಗವಿಯು ಆವೃತವಾಗಿತ್ತು. ಜನಸಂಪರ್ಕದಿಂದ ದೂರವಾಗಿ ಶ್ರೀ ಜಡೆಸ್ವಾಮಿಗಳು ತಪೋನುಷ್ಠಾನ ಕೈಗೊಂಡಿದ್ದರು. ಒಂದು ದಿನ ಗವಿಯಿಂದ ಹೊರಬಂದು ಕುಳಿತಿರುವ ಸಂದರ್ಭದಲ್ಲಿ ಜೈನಗೌಡ ಚಿಂತಾಕ್ರಾಂತರಾಗಿ ಬರುತ್ತಿರಲು ಗುರುಗಳ ದರ್ಶನವಾಯಿತು. ತಕ್ಷಣ ತಮ್ಮ ನೋವನ್ನು ಗುರುಗಳಲ್ಲಿ ಬಿನ್ನವಿಸಿ ಕೊಂಡರು. ಆಗ ಶ್ರೀ ಜಡೆಸ್ವಾಮಿಗಳು ಬಾವಿಯಲ್ಲಿ ಶಿವಪೂಜೆ ಮಾಡಿ ಗಂಗೆಯನ್ನು ತರಿಸಿದರಂತೆ. ಅಂದಿನಿಂದಲೂ ಈ ಪವಾಡದ ಕಥೆ ಜನಜನಿತವಾಗಿದೆ. ಗುರುಗಳ ಪವಾಡಕ್ಕೆ ಮನಸೋತ ಜೈನಗೌಡರು ಭೂಮಿಯನ್ನು ಗುರುಗಳಿಗೆ ದಾನ ನೀಡಿದರು. ಅಂದಿನಿಂದ ನವಿಲುಗುಂದದಲ್ಲಿ ಗವಿಮಠ ಪ್ರಾರಂಭವಾಗಿ ಸಮಾಜಕ್ಕೆ ದಾರಿದೀಪವಾಗಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಜಡೆಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಅಭಿನವ ಬಸವಲಿಂಗಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃ ಗುರುಗಳಾದ ಶ್ರೀ ಜಡೆ ಸ್ವಾಮಿಗಳ ನಂತರ ಮಠದ ಪರಂಪರೆಯಲ್ಲಿ ಅನೇಕ ಗುರುಗಳು ಅಧಿಕಾರವನ್ನು ವಹಿಸಿಕೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸಿ ಮಠವನ್ನು ಅಭಿವೃದ್ಧಿ ಪಡಿಸಿದ ಬಗ್ಗೆ ಹೇಳಲಾಗುತ್ತಿದೆ. ಆದರೆ ಶ್ರೀ ಸಿದ್ಧಲಿಂಗ ಸ್ವಾಮಿಗಳ ತನಕ ಪರಂಪರೆಯ ಗುರುಗಳ ಹೆಸರುಗಳು ಲಭ್ಯವಿರುವುದಿಲ್ಲ.

ಶ್ರೀ ಸಿದ್ಧಲಿಂಗ ಸ್ವಾಮಿಗಳು ಅಧಿಕಾರಕ್ಕೆ ಬಂದು ಭಕ್ತರ ಉದ್ಧಾರಕ್ಕೆ ಅನೇಕ ಕಾರ್ಯಗಳನ್ನು ಹಮ್ಮಿಕೊಂಡು ಹೆಸರು ಮಾಡಿದರು. ನಂತರ ಇವರ ಕರಕಮಲ ಸಂಜಾತರಾಗಿ ತಿರ್ಲಾಪುರ ಗ್ರಾಮದ ಶ್ರೀ ಬಸವಲಿಂಗ ದೇವರನ್ನು ವಟುವಾಗಿ ಸ್ವೀಕರಿಸಿ ಮಠದಲ್ಲಿಯೇ ಸಾಕಿಕೊಂಡು ಲೌಕಿಕ ಅಕ್ಷರಾಭ್ಯಾಸದ ಜೊತೆಗೆ ಆಧ್ಯಾತ್ಮಿಕ ಶಿಕ್ಷಣವನ್ನು ನೀಡಿ ಸಂಸ್ಕಾರವಂತರನ್ನಾಗಿ ಬೆಳೆಸಿದರು. ಎಂಟನೆಯ ವರ್ಷದಲ್ಲಿ ಸಿರಸಂಗಿಯ ಲಿಂಗರಾಜ ದೇಸಾಯಿಯವರ ಹಿರಿತನದಲ್ಲಿ ದೀಕ್ಷೆಯನ್ನು ಮಾಡಿಸಲಾಯಿತು. ೧೯೦೪ರಲ್ಲಿ ಧಾರವಾಡ ಹುಲಿಮಠದ ಸಂಸ್ಕೃತ ಪಾಠಶಾಲೆಯಲ್ಲಿ ಪ್ರವೇಶ ಪಡೆದರು. ನಂತರ ಹುಬ್ಬಳ್ಳಿ ಮೂರುಸಾವಿರ ಮಠದಲ್ಲಿ ಆಶ್ರಯ ಪಡೆದು ಸಂಸ್ಕೃತ ಕಾವ್ಯವನ್ನು ವ್ಯಾಸಂಗ ಮಾಡಿದರು. ೧೯೦೯ರಲ್ಲಿ ಹಳ್ಯಾಳದಲ್ಲಿ ವಾರದ ಮನೆಯಲ್ಲಿ ಪ್ರಸಾದ ಸ್ವೀಕಾರ ಮಾಡಿ ವಿದ್ಯೆ ಕಲಿತರು. ನಂತರ ಶಿವಯೋಗ ಮಂದಿರದ ಸ್ಥಾಪನೆಯ ವರ್ಷದ ಸಪ್ತಜನ ಸಾಧಕರಲ್ಲಿ ಒಬ್ಬರಾಗಿ ಶ್ರೀ ಹಾನಗಲ್ಲು ಕುಮಾರ ಸ್ವಾಮಿಗಳ ಕೃಪಾಶೀರ್ವಾದಕ್ಕೆ ಒಳಗಾದರು. ಶ್ರೀ ಹಾನಗಲ್ಲು ಕುಮಾರ ಸ್ವಾಮಿಗಳ ಅಪ್ಪಣೆಯ ಮೇರೆಗೆ ಪುರಾತನ ಗವಿಮಠದ ಮಠಾಧ್ಯಕ್ಷರಾಗಿ ಅಧಿಕಾರವನ್ನು ವಹಿಸಿಕೊಂಡು, ಮಠವನ್ನು ಅಭಿವೃದ್ಧಿಗೊಳಿಸಿ ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳನ್ನು ಶ್ರೀಮಂತಗೊಳಿಸಿದರು. ಗುರುಗಳು ಬಾಗಲಕೋಟೆಯಲ್ಲಿ ಶ್ರೀ ಬಸವೇಶ್ವರ ಕಾಲೇಜು ಸ್ಥಾಪಿಸಿದರಲ್ಲದೆ. ಉತ್ತರ ಕರ್ನಾಟಕಕ್ಕೆ ವೈದ್ಯಕೀಯ ಸೇವೆ ಲಭಿಸಲಿ ಎಂದು ಅಂದಿನ ಆರೋಗ್ಯ ಮಂತ್ರಿಗಳಲ್ಲಿ ಒತ್ತಡ ತಂದು ನವಿಲುಗುಂದ ಹಾಗೂ ಹುಬ್ಬಳ್ಳಿಯಲ್ಲಿ ಆರೋಗ್ಯ ಕೇಂದ್ರವನ್ನು ಸ್ಥಾಪಿಸಿದರು. ಎಡೆಯೂರು ಕ್ಷೇತ್ರದಲ್ಲಿ ಮಹಾದಾಸೋಹ ಶ್ರೀ ಬಸವಲಿಂಗ ಸ್ವಾಮಿಗಳ ಅಮೃತ ಹಸ್ತದಿಂದ ಪ್ರಾರಂಭವಾಗಿ ಇಂದಿಗೂ ನಿರಂತರವಾಗಿ ನಡೆಯುತ್ತ ಬಂದಿದೆ ಎಂಬುದು ಈ ಮಠದ ಹೆಗ್ಗಳಿಕೆ.

ಗುರುಗಳು ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳ ಜೊತೆಗೆ ಸಾಹಿತ್ಯದ ಬಗ್ಗೆಯೂ ಒಲವನ್ನು ಮೂಡಿಸಿಕೊಂಡಿದ್ದರು. ೧೯೪೦ರಲ್ಲಿ ಧಾರವಾಡ ಜಿಲ್ಲೆಯ ಸಾಹಿತ್ಯ ಸಮ್ಮೇಳನವನ್ನು ಮಠದಲ್ಲಿಯೇ ನಡೆಸಿಕೊಟ್ಟ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಆಧುನಿಕ ವಚನಕಾರರ ಪ್ರಥಮ ಸಮ್ಮೇಳನವನ್ನು ನಡೆಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಜೀವ ಸದಸ್ಯತ್ವ ಪಡೆದ ಮೊದಲ ಮಠಾಧೀಶರಾಗಿದ್ದಾರೆ. ಸಾಹಿತ್ಯ ಪ್ರಕಟಣೆಗಳ ನೆರವಿಗೆ ಬರುವುದು, ಉದಯೋನ್ಮುಖ ಸಾಹಿತಿಗಳಿಗೆ ಬೆನ್ನು ತಟ್ಟಿ ಪ್ರೋತ್ಸಾಹಿಸುವುದು ಗುರುಗಳ ಸಾಹಿತ್ಯಾಭಿಮಾನವನ್ನು ತೋರಿಸುತ್ತದೆ. ಈ ರೀತಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ದುಡಿದು ಹೆಸರು ಗಳಿಸಿದ ಗುರುಗಳು ತುಂಬು ಜೀವನವನ್ನು ನಡೆಸಿ ಮಠಕ್ಕೆ ಉತ್ತರಾಧಿಕಾರಿಯನ್ನು ನೇಮಿಸಿ ಲಿಂಗೈಕ್ಯರಾಗಿದ್ದಾರೆ.

ಉತ್ತರಾಧಿಕಾರಿ: ಬಾದಾಮಿ ತಾಲ್ಲೂಕಿನ ಶ್ರೀ ಸಂಗಯ್ಯ ಮತ್ತು ಶ್ರೀಮತಿ ಬಸಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಬಸವಲಿಂಗದೇವರು, ಬಾಲ್ಯದಲ್ಲೇ ಮಾತಾಪಿತೃಗಳನ್ನು ಕಳೆದುಕೊಂಡು, ಹಾನಗಲ್ಲು ವಿರಕ್ತಮಠದ ಶ್ರೀ ಸದಾಶಿವ ಸ್ವಾಮಿಗಳ ಕೃಪಾಶೀರ್ವಾದಕ್ಕೆ ಒಳಗಾಗಿ ಹೊಸಮಠದ ಶ್ರೀ ಷಣ್ಮುಖ ಸ್ವಾಮಿಗಳ ಆರೈಕೆಯಲ್ಲಿ ಬೆಳೆದರು. ಬೆಳವಲಕೊಪ್ಪದಲ್ಲಿ ಪ್ರಾಥಮಿಕ ಶಿಕ್ಷಣ, ಶಿವಯೋಗಮಂದಿರದಲ್ಲಿ ಸಂಸ್ಕೃತ ವ್ಯಾಸಂಗ ಹಾಗೂ ಯೋಗಸಾಧನೆ ಮಾಡಿದರು. ನಂತರ ಹುಬ್ಬಳ್ಳಿ ಮೂರುಸಾವಿರ ಮಠದಲ್ಲಿ ಆಶ್ರಯಪಡೆದು ಪದವಿ ಶಿಕ್ಷಣ ಮುಗಿಸಿದರು. ೧೯೯೨ರಲ್ಲಿ ಮಠಕ್ಕೆ ಆಗಮಿಸಿ ಮೂರುಸಾವಿರ ಮಠದ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳ ಕೃಪಾಶೀರ್ವಾದ ಹಾಗೂ ಮಾರ್ಗದರ್ಶನದಲ್ಲಿ ಮಠದ ಅಧಿಕಾರವನ್ನು ನಡೆಸತೊಡಗಿದರು. ಶ್ರೀ ಬಸವಲಿಂಗ ಶಿವಯೋಗಿಗಳ ತಪೋಬಲದಿಂದ ಸರ್ವಧರ್ಮ ಸಮನ್ವಯದ ಸ್ಫೂರ್ತಿಯ ಕೇಂದ್ರ, ಕವಿ, ಸಾಹಿತಿಗಳು ಹಾಗೂ ಗಾಯಕರ ಅಭಿಮಾನದ ಕ್ಷೇತ್ರವಾಗಿರುವ ಗವಿಮಠದ ಉತ್ತರಾಧಿಕಾರಿಗಳಾಗಿ ಬಂದು ಜೀರ್ಣಗೊಂಡ ಮಠದ ಕಟ್ಟಡವನ್ನು ನವೀಕರಣಗೊಳಿಸಿ ಸುಸ್ಥಿತಿಗೆ ತಂದರು. ಅಲ್ಲದೆ ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಶ್ರೀ ಬಸವ ಲಿಂಗ ಶಿವಯೋಗಿಗಳ ಸ್ಮಾರಕ ಸಂಪುಟವನ್ನು 'ಸಮನ್ವಯ'ಎಂಬ ಹೆಸರಿನಲ್ಲಿ ಗ್ರಂಥವಾಗಿ

ಹೊರತಂದು ೧೯೯೫ ರಲ್ಲಿ ಪ್ರಕಟಿಸಿದರು. ೧೯೯೯ ರ ಏಪ್ರಿಲ್ ಇಪ್ಪತ್ತಮೂರರಂದು ಮೂರುಸಾವಿರ ಮಠದ ನೂತನ ಗುರುಗಳಾದ ಶ್ರೀ ಜಗದ್ಗುರು ಗುರುಸಿದ್ಧ ರಾಜಯೋಗೀಂದ್ರ ಸ್ವಾಮಿಗಳಿಂದ ಅನುಗ್ರಹ ಪಡೆದು ಅಧಿಕಾರಕ್ಕೆ ಬಂದಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗುರುಗಳ ಗದ್ದುಗೆಗಳನ್ನು ನವೀಕರಣಗೊಳಿಸಿ ನಿತ್ಯ ಪೂಜೆಗೆ ವ್ಯವಸ್ಥೆಗೊಳಿಸಿದ್ದಾರೆ. ಮಠದಲ್ಲಿ ಮಾಸಿಕ ಶಿವಾನುಭವ ಗೋಷ್ಠಿಯನ್ನು ಏರ್ಪಡಿಸಿ ಶರಣರ ತತ್ತ್ವಗಳನ್ನು ಭಕ್ತರಿಗೆ ಮುಟ್ಟಿಸುವ ಕಾಯಕವನ್ನು ಮಾಡತೊಡಗಿದ್ದಾರೆ. ಮಠದಲ್ಲಿ ಬಡವಿದ್ಯಾರ್ಥಿಗಳಿಗೆ ಆಶ್ರಯ ಕಲ್ಪಿಸಿ ಕಲಿಕೆಗೆ ನೆರವಾಗಿದ್ದಾರೆ. ನಿತ್ಯ ಅನ್ನ ದಾಸೋಹವನ್ನು ವ್ಯವಸ್ಥೆಗೊಳಿಸಿದ್ದಾರೆ. ಪ್ರತಿ ಶ್ರಾವಣದಲ್ಲಿ ಪುರಾಣ ಪ್ರವಚನಗಳನ್ನು ಹಮ್ಮಿಕೊಂಡು ಧರ್ಮಪ್ರಸಾರ ಮಾಡುವ ಮೂಲಕ ಭಕ್ತರನ್ನು ಸನ್ಮಾರ್ಗಕ್ಕೆ ತರುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಅಭಿನವ ಬಸವಲಿಂಗ ಸ್ವಾಮಿಗಳು, ಶ್ರೀ ಗವಿಮಠ, ನವಿಲುಗುಂದ, ಧಾರವಾಡ ಜಿಲ್ಲೆ.
ಆಧಾರ: 'ಸಮನ್ವಯ' ಸಂಪಾದಕರು: ಡಾ. ಸಂಗಮೇಶ ಹಂಡಿಗಿ, ಶ್ರೀ ಜಿ.ಎಂ. ಉಮಾಪತಿಶಾಸ್ತ್ರಿ.

ನಾಯಕನೂರು

ನವಿಲುಗುಂದ ತಾಲ್ಲೂಕಿನ ನಾಯಕನೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಹದಿಮೂರು ಕಿ.ಮೀ. ದೂರದಲ್ಲಿದೆ. ಇಲ್ಲಿ ಶಕ್ತಿಮಂದಿರ ಅಸ್ತಿತ್ವದಲ್ಲಿದೆ.

ಶಕ್ತಿಮಂದಿರ: ನಾಯಕನೂರು ಗ್ರಾಮದಲ್ಲಿ ಕಳೆದ ಹತ್ತುವರ್ಷಗಳ ಹಿಂದೆ ಪ್ರಾರಂಭಗೊಂಡ ಶರಣಸ್ಥಲದ ಶಕ್ತಿಮಂದಿರವನ್ನು ಶ್ರೀ ಮೌನತಪಸ್ವಿ ಶರಣಮ್ಮ ತಾಯಿ ಮಠವನ್ನು ಸ್ಥಾಪಿಸಿದ್ದಾರೆ. ಎಂಬತ್ತು ವರ್ಷ ವಯಸ್ಸಿನ ಈ ಶರಣೆ ನಾಡಿನಾದ್ಯಂತ ಬಸವತತ್ತ್ವ ಪ್ರಚಾರವನ್ನು ಕೈಗೊಂಡು ಧರ್ಮವನ್ನು ಬೆಳೆಸಿದರು. ಪುರಾಣ ಪ್ರವಚನಗಳನ್ನು ಹೇಳುವ ಮೂಲಕ ಹೆಸರು ಗಳಿಸಿದ ಈ ಮೌನ ತಪಸ್ವಿಗಳು ತಮ್ಮ ವೃದ್ಧಾಪ್ಯದಲ್ಲಿ ಇಲ್ಲಿ ಬಂದು ಮಠವನ್ನು ಸ್ಥಾಪಿಸಿ, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಮೌನ ತಪಸ್ವಿ ಶರಣಮ್ಮ ತಾಯಿ, ಶ್ರೀ ಶಕ್ತಿಮಂದಿರ, ನಾಯಕನೂರು, ನವಿಲುಗುಂದ ತಾ, ಧಾರವಾಡ ಜಿಲ್ಲೆ.

ಮೊರಬ

ನವಿಲುಗುಂದ ತಾಲ್ಲೂಕಿನ ಮೊರಬ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತನಾಲ್ಕು ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ಶ್ರೀ ಜಡೆಮಠ, ಶ್ರೀ ವಿರಕ್ತಮಠ, ಶ್ರೀ ಹಿರೇಮಠ ಮತ್ತು ಶ್ರೀ ಬಸವಲಿಂಗಸ್ವಾಮಿ ವಿರಕ್ತಮಠ ಎಂಬ ಒಟ್ಟು ನಾಲ್ಕು ಮಠಗಳು ಸ್ಥಾಪನೆಯಾಗಿವೆ. ಪುರಾತನ ಕಾಲದಿಂದಲೂ ಅಸ್ತಿತ್ವದಲ್ಲಿರುವ ಈ ಮಠಗಳು ಗ್ರಾಮದ ಧಾರ್ಮಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಸ್ಪಂದಿಸುತ್ತಾ ಹೆಚ್ಚು ಪ್ರಸಿದ್ಧಿ ಪಡೆದಿವೆ. ಪ್ರಸ್ತುತ ಹಿರೇಮಠ ಮತ್ತು ಬಸವಲಿಂಗ ಸ್ವಾಮಿ ವಿರಕ್ತ ಮಠಗಳಲ್ಲಿ ತಲಾ ಎರಡು ಗದ್ದುಗೆಗಳು ಇದ್ದು, ಉತ್ತರಾಧಿಕಾರಿಗಳಿಲ್ಲದೆ ಮಠವು ಖಾಲಿ ಉಳಿದಿವೆ.

ಜಡೆಮಠ: ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಜಡೆಮಠವು ಪಂಚಪೀಠಗಳಲ್ಲಿ ಒಂದಾದ ಕಾಶಿಪೀಠದ ಶಾಖಾಮಠವಾಗಿ ಬೆಳೆದು ಬಂದಿದೆ. ಪುರಾತನ ಕಾಲದಲ್ಲಿ ಶ್ರೀ ಜಡೆ ಶಿವಯೋಗಿಗಳೆಂಬ ಮಹಾಪುರುಷರು ಈ ಗ್ರಾಮದಲ್ಲಿ ಮಠವನ್ನು ಸ್ಥಾಪನೆ ಮಾಡಿ ವೀರಶೈವಧರ್ಮ ಬೆಳೆಯಲು ಕಾರಣಕರ್ತರಾಗಿದ್ದಾರೆ. ಇವರ ಪ್ರಭಾವಕ್ಕೆ ಒಳಗಾಗಿದ್ದ ಭಕ್ತರು ಮಠವನ್ನು ಬೆಳೆಸಲು ಅನೇಕ ಬಗೆಯ ದಾನ ದತ್ತಿಯನ್ನು ನೀಡಿದ್ದರೆಂದು ಹೇಳಲಾಗುತ್ತಿದೆ. ಶಿವಯೋಗಿಗಳಿಂದ ಪ್ರಾರಂಭಗೊಂಡ ಜಡೆಮಠವು ಈತನಕ ಬೆಳೆದು ಅನೇಕ ಶಿಷ್ಯರನ್ನು ಸಂಪಾದಿಸಿಕೊಂಡಿದೆ.

ಸಾಹಿತ್ಯ ಸಾಧಕರು: ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದು, ಪುರಾತನ ಪರಂಪರೆಯನ್ನು ಬೆಳೆಸಿಕೊಂಡು ಬಂದ ಮಠದಲ್ಲಿ ಈವರೆಗೆ ಎಷ್ಟು ಜನ ಗುರುಗಳು ಅಧಿಕಾರ ನಡೆಸಿದ್ದಾರೆ ಎಂದು ಹೇಳುವಂತಹ ಯಾವುದೇ ಮಾಹಿತಿಗಳು ಲಭ್ಯವಿಲ್ಲ. ಪ್ರಸ್ತುತ

ಈಗಿನ ಗುರುಗಳಾದ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ಮಠದ ಅಧಿಕಾರ ವಹಿಸಿಕೊಂಡು ಮಠವು ಧಾರ್ಮಿಕ, ಸಾಮಾಜಿಕ ಮತ್ತು ಸಾಹಿತ್ಯಿಕವಾಗಿ ಹೆಸರು ಮಾಡುವಂತೆ ಶ್ರಮಿಸಿದ್ದಾರೆ. ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ಸಂಸ್ಕೃತ, ಪ್ರಾಕೃತ ಮತ್ತು ಕನ್ನಡದಲ್ಲಿ ಪಾಂಡಿತ್ಯ ಪಡೆದಿದ್ದಾರೆ. ಶಿವಪೂಜಾ ನಿಷ್ಠರಾದ ಇವರು ಸಾಹಿತ್ಯ ರಚನೆಯ ಗೀಳನ್ನು ಚಿಕ್ಕವಯಸ್ಸಿನಲ್ಲಿಯೇ ಮೈಗೂಡಿಸಿಕೊಂಡು 'ಬಾಲಬೃಹಸ್ಪತಿ', 'ಕವಿವರ' ಎಂದು ಪ್ರಖ್ಯಾತಿ ಪಡೆದಿದ್ದರು. ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗೇಶ್ವರ ಪುರಾಣ, ಶ್ರೀ ರಂಭಾಪುರಿ ಜಗದ್ಗುರು ಶ್ರೀ ಶಿವಾನಂದ ವಿಜಯ, ಭಗವತ್ಪ್ರೇಮ, ಶ್ರೀ ಸಂಗಮೇಶ್ವರಚರಿತ್ರೆ ಇನ್ನು ಮುಂತಾದ ಅನೇಕ ಪುರಾಣಗಳನ್ನು ರಚಿಸಿ ಹೆಸರು ಮಾಡಿದ್ದಾರೆ. ಅಲ್ಲದೆ ಕನ್ನಡ ನ್ಯಾಯಶತಕ ಹಾಗೂ ಮಾಯಾಗರ್ವಭಂಗ ಎಂಬ ನಾಟಕಗಳನ್ನು ರಚಿಸಿರುವ ಇವರು ಬಳ್ಳಾರಿ ಹೊಸಪೇಟೆಯ ರಸ್ತೆಯಲ್ಲಿರುವ ಬೈಲವದ್ದಿಗಿರಿ ಎಂಬಲ್ಲಿ ಶ್ರೀ ಜಗದ್ಗುರು ವಿಶ್ವಾರಾಧ್ಯ ಸೇವಾಶ್ರಮವನ್ನು ೧೯೫೦ ರ ಮಾರ್ಚ್ ಹತ್ತೊಂಬತ್ತ ರಂದು ಸ್ಥಾಪಿಸಿ ವಿಶ್ವಾರಾಧ್ಯರ ಲಿಂಗೋದ್ಭವ ಮೂರ್ತಿಯನ್ನು ಪ್ರತಿಷ್ಠಾಪಿಸಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದ್ದಾರೆ.

ಎಪ್ಪತ್ತೆಂಟು ವರ್ಷ ವಯಸ್ಸಿನ ಗುರುಗಳು ಪುರಾಣ ಪ್ರವಚನ ಮಾಡುತ್ತಾ, ಕನ್ನಡ ಸಾಹಿತ್ಯದ ಬಗ್ಗೆ ಉಪನ್ಯಾಸವನ್ನು ನೀಡುತ್ತಾ ಲೋಕೋದ್ಧಾರಕ್ಕಾಗಿ ದೇಶಸಂಚಾರ ಕೈಗೊಂಡು ಸಮಾಜವು ಸನ್ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಣೆ ನೀಡಿದ್ದಾರೆ. ಪ್ರಸ್ತುತ ಬಾಗಲಕೋಟೆ ಜಿಲ್ಲೆ ಹುನುಗುಂದ ತಾಲ್ಲೂಕಿನ ಗುಡೂರು ಗ್ರಾಮದಲ್ಲಿ ಶಾಖಾಮಠವನ್ನು ಪ್ರಾರಂಭಿಸಿ, ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿದ್ದಾರೆ. ಈ ಎರಡು ಮಠಗಳ ಆಡಳಿತ ನಡೆಸಿಕೊಂಡು ಹೋಗಲು ಶ್ರೀ ಬಸವಲಿಂಗಯ್ಯ ಮತ್ತು ಶ್ರೀಮತಿ ಕಾಳಮ್ಮನವರ ಪುತ್ರರಾಗಿ ೧೯೭೭ರಲ್ಲಿ ಜನಿಸಿದ ತಮ್ಮ ಸಹೋದರ ಸಂಬಂಧಿ ಶ್ರೀ ಸೋಮಶೇಖರ ದೇವರನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿಕೊಂಡರು. ಶ್ರೀ ಸೋಮಶೇಖರಯ್ಯ ದೇವರು ಎಡೆಯೂರಿನಲ್ಲಿ ಸಂಸ್ಕೃತ, ವೇದಾಧ್ಯಯನ ಮಾಡುತ್ತಿದ್ದಾರೆ. ಗುರುಗಳು ವಿದ್ಯಾಭ್ಯಾಸ ಮುಗಿದ ಮೇಲೆ ಮಠದ ಅಧಿಕಾರವನ್ನು ವಹಿಸಿಕೊಳ್ಳಲಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಜಡೆಮಠ, ಮೊರಬ, ನವಿಲುಗುಂದ ತಾ, ಧಾರವಾಡ ಜಿಲ್ಲೆ.
ಆಧಾರ: ಶ್ರೀ ವಿರೂಪಾಕ್ಷಶಾಸ್ತ್ರಿ ವಿರಚಿತ 'ಗುರುವರ್ಗ ದರ್ಪಣ'

ವಿರಕ್ತಮಠ: ಮೊರಬ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ವಿರಕ್ತಮಠವು ಮುರುಘಾಸಮಯದ ಶಾಖಾ ಮಠವಾಗಿ ಬೆಳೆದಿದೆ. ಮಠದ ಪರಂಪರೆಯಲ್ಲಿ ಹನ್ನೆರಡು ಜನ ಗುರುಗಳು ಪಟ್ಟಾಧಿಕಾರ ಪಡೆದು ಅಧಿಕಾರ ನಡೆಸಿದ್ದರೆಂದು ಹೇಳಲಾಗುತ್ತಿದೆ.ಆದರೆ ಈ ಹೇಳಿಕೆಗೆ ಪೂರಕವಾದ ಯಾವುದೇ ಮಾಹಿತಿಗಳು ಲಭ್ಯವಿಲ್ಲ. ಈ ಮಠದ ಮೂಲ ಗುಮ್ಮಗೋಳ ವಾಗಿತ್ತು. ಕಾಲಾನಂತರ ಶ್ರೀ ಯೋಗೀಂದ್ರ ಸ್ವಾಮಿಗಳು ಮಠವನ್ನು ಮೊರಬಕ್ಕೆ ಸ್ಥಳಾಂತರಿಸಿದರು ಎಂದು ಹೇಳಲಾಗುತ್ತಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಮುರುಘೇಂದ್ರ ಶಿವಯೋಗಿಗಳು
೨. ಶ್ರೀ ಮ.ನಿ.ಪ್ರ. ಯೋಗೀಂದ್ರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು

ಈ ರೀತಿ ಮಠದ ಪರಂಪರೆಯ ಈ ಹೆಸರುಗಳು ಮಾತ್ರ ಕೇಳಿ ಬರುತ್ತಿವೆ. ಈ ಮಠದ ಕರ್ತೃ ಗುರುಗಳಾದ ಶ್ರೀ ಮುರುಘೇಂದ್ರ ಶಿವಯೋಗಿಗಳು ಶ್ರೀ ಜಡೆಸ್ವಾಮಿಗಳ ಸಮಕಾಲೀನರಾಗಿದ್ದು ಮಠವನ್ನು ಧಾರ್ಮಿಕವಾಗಿ ಹೆಚ್ಚು ಪ್ರಸಿದ್ಧಿಗೊಳಿಸಿದರು. ಇವರ ತರುವಾಯ ಮಠದ ಪರಂಪರೆ ಬೆಳೆದು ಬಂದಿದೆ. ಆದರೂ ಆಧಾರಗಳ ಕೊರತೆಯಿಂದ ಗುರುತಿಸಲು ಸಾಧ್ಯವಾಗುತ್ತಿಲ್ಲ.

ಶ್ರೀ ಮುರುಘೇಂದ್ರ ಶಿವಯೋಗಿಗಳ ನಂತರ ಶ್ರೀ ಯೋಗೀಂದ್ರ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಬೆಳೆಸಿದ್ದಾರೆ. ಇವರು ಶಿವಪೂಜಾನಿಷ್ಠರಾಗಿ ತಪೋನುಷ್ಠಾನ ಮೂರ್ತಿಗಳಾಗಿದ್ದರು. ಇವರು ಧಾರ್ಮಿಕ ಜಾಗೃತಿಯನ್ನುಂಟು ಮಾಡಿ ಜನಾನುರಾಗಿಗಳಾಗಿದ್ದರು. ಇವರು ಲಿಂಗೈಕ್ಯರಾದ ಮೇಲೆ ಭಕ್ತರು ಗದ್ದುಗೆಯನ್ನು ನಿರ್ಮಾಣಮಾಡಿ ಯೋಗಿಆಶ್ರಮ ವನ್ನು ಸ್ಥಾಪಿಸಿದ್ದಾರೆ. ಇಲ್ಲಿ ಎರಡು ವೇಳೆ ಪೂಜೆ ನಡೆಸಲಾಗುತ್ತಿದೆ. ಇದೊಂದು ಜಾಗೃತ ಸ್ಥಳವಾಗಿ ರೂಪುಗೊಂಡಿದೆ. ಇವರ ತರುವಾಯ ಶ್ರೀ ಬಸವಲಿಂಗ ಸ್ವಾಮಿಗಳು ಅಧಿಕಾರಕ್ಕೆ ಬಂದು, ಮಠವು ಆರ್ಥಿಕವಾಗಿ ಸ್ವಾವಲಂಬನೆ ಪಡೆಯುವಂತೆ

ಮಾಡಿದರು.ಮಠವನ್ನು ಬೆಳೆಸಿ ಧರ್ಮಪ್ರಚಾರ ಕೈಗೊಂಡು ಸಂಸ್ಕಾರವಂತ ಸಮಾಜವನ್ನು ರೂಪಿಸಿಲು ಪ್ರಯತ್ನಿಸಿದರು.ಇವರು ಉತ್ತರಾಧಿಕಾರಿಗಳನ್ನು ಆಯ್ಕೆ ಮಾಡಿಕೊಳ್ಳುವ ಮೊದಲೇ ೧೯೯೨ರಲ್ಲಿ ಲಿಂಗೈಕ್ಯರಾದ ಕಾರಣ ಮಠವು ಖಾಲಿ ಉಳಿದಿದೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಎರಡು ಗದ್ದುಗೆಗಳು ಮತ್ತು ಹೊರಭಾಗದಲ್ಲಿ ಗದ್ದುಗೆಗಳು ನಿರ್ಮಾಣ ಗೊಂಡಿವೆ. ಈ ಗದ್ದುಗೆಗಳಿಗೆ ನಿತ್ಯಪೂಜೆ, ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಕಳೆದ ಎಂಟು ವರ್ಷಗಳಿಂದ ಉತ್ತರಾಧಿಕಾರಿಗಳಿಲ್ಲದೆ ಖಾಲಿ ಉಳಿದಿರುವ ವಿರಕ್ತ ಮಠಕ್ಕೆ ಉತ್ತರಾಧಿಕಾರಿಯನ್ನು ನೇಮಕ ಮಾಡುವ ಸಿದ್ಧತೆ ನಡೆದಿದೆ.

ವಿಳಾಸ: ಶ್ರೀ ಮುರುಘೇಂದ್ರ ಶಿವಯೋಗಿ ವಿರಕ್ತಮಠ, ಮೊರಬ, ನವಿಲುಗುಂದ ತಾಲ್ಲೂಕು, ಧಾರವಾಡ ಜಿಲ್ಲೆ.

ಶಲವಡಿ

ನವಿಲುಗುಂದ ತಾಲ್ಲೂಕಿನ ಶಲವಡಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿಮೂರು ಕಿ.ಮೀ. ದೂರದಲ್ಲಿದೆ. ಈ ಗ್ರಾಮವು ರಾಷ್ಟ್ರಕೂಟರ ಕಾಲದಿಂದಲೂ ಅಸ್ತಿತ್ವದಲ್ಲಿದೆ ಎಂದು ಹೇಳಲಾಗುತ್ತದೆ. ಇದಕ್ಕೆ ಪೂರಕ ವೆಂಬಂತೆ ರಾಷ್ಟ್ರಕೂಟರ ಕಾಲದ ವೀರಗಲ್ಲು, ಸಪ್ತಮಾತೃಕೆ, ಗಜಲಕ್ಷ್ಮಿ, ಶಿವಲಿಂಗಶಿಲ್ಪಗಳು ದೊರೆತಿವೆ. ಕಲ್ಯಾಣಿ ಚಾಲುಕ್ಯರ ಕಾಲದ ಶಿಲ್ಪಗಳು ದೊರೆತಿ ರುವುದರಿಂದ ಈ ಗ್ರಾಮವು ಪುರಾತನ ಇತಿಹಾಸವುಳ್ಳ ಗ್ರಾಮವೆಂದು ಸ್ಪಷ್ಟವಾಗುತ್ತದೆ. ಅಲ್ಲದೆ ಈ ಗ್ರಾಮದಲ್ಲಿ ಹನ್ನೆರಡು ವೀರಶೈವ ಮಠಗಳಿದ್ದವೆಂದು ಹೇಳಲಾಗುತ್ತಿದೆ. ಈ ಮಠಗಳಿಗೆ ವೀರಭದ್ರಗುಡಿಯೇ ಪ್ರಮುಖ ವೆನಿಸಿದಂತಿದೆ. ಇತಿಹಾಸವನ್ನು ಹೊಂದಿದ್ದರೂ ಪ್ರಸ್ತುತದಲ್ಲಿ ಶ್ರೀ ವಿರಕ್ತಮಠ ಮಾತ್ರ ಅಸ್ತಿತ್ವದಲ್ಲಿದ್ದು ಉಳಿದ ಮಠಗಳು ಅಸ್ತಿತ್ವವನ್ನು ಕಳೆದುಕೊಂಡಿವೆ.

ವಿರಕ್ತಮಠ: ಶಲವಡಿಯ ಮಧ್ಯಭಾಗದಲ್ಲಿರುವ ವಿರಕ್ತಮಠವು ಶ್ರೀ ಗುರುಶಾಂತ ಸ್ವಾಮಿಗಳಿಂದ ಪ್ರಾರಂಭವಾಗಿದೆ. ೧೯೩೮ ರ ಜುಲೈ ಒಂದರಂದು ಈ ಮಠ ಸ್ಥಾಪನೆಯಾಗಿದೆ. ಮಠದ ಸ್ಥಾಪಕರಾದ ಶ್ರೀ ಗುರುಶಾಂತ ಸ್ವಾಮಿಗಳು ಕೊಪ್ಪಳ ಜಿಲ್ಲೆಯ ಚಿಕ್ಕಯ್ಯನಕೊಪ್ಪದಿಂದ ಆಗಮಿಸಿ ಇಲ್ಲಿ ಮಠವನ್ನು ಸ್ಥಾಪನೆ ಮಾಡಿದ್ದರು. ಅಂದು ಸ್ಥಾಪನೆಗೊಂಡ ಮಠವು ಈತನಕ ಬೆಳೆದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಗುರುಶಾಂತಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಬಸವರಾಜಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಎರಡನೆಯ ಗುರುಶಾಂತಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದುಬಂದಿದೆ. ಕರ್ತೃಗುರುಗಳು ಆವಶ್ಯಕತೆಗನುಗುಣವಾಗಿ ಮಠದ ಕಟ್ಟಡವನ್ನು ನಿರ್ಮಿಸಿ ಕೊಂಡು ಧರ್ಮಾಚರಣೆಯನ್ನು ಕೈಗೊಂಡಿದ್ದರು. ಹಿರಿಯ ಗುರುಗಳು ಲಿಂಗೈಕ್ಯರಾದ ಮೇಲೆ ಅಧಿಕಾರಕ್ಕೆ ಬಂದ ಶ್ರೀಬಸವ ರಾಜ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ ಕಟ್ಟಡವನ್ನು ವಿಸ್ತರಿಸಿಕೊಂಡರು. ಕರ್ತೃಗದ್ದುಗೆಗೆ ಮಂಟಪವನ್ನು ನಿರ್ಮಿಸಿ ದರು. ಪುರಾತನ ಮಠಗಳಂತೆ ಧಾರ್ಮಿಕ ಆಚರಣೆಗಳನ್ನು ನಡೆಸಿ ೧೯೮೮ರಲ್ಲಿ ಲಿಂಗೈಕ್ಯರಾದರು. ಶ್ರೀ ಬಸವರಾಜಸ್ವಾಮಿಗಳ ಜೀವಿತಾವಧಿಯಲ್ಲಿಯೇ ಈಗಿನ ಶ್ರೀ ಗುರುಶಾಂತ ಸ್ವಾಮಿಗಳಿಗೆ ೧೯೮೫ ರ ಮೇ ಎರಡರಂದು ಪಟ್ಟಾಧಿಕಾರವನ್ನು ನೀಡಿದ್ದರು.

ಸವದತ್ತಿ ತಾಲ್ಲೂಕಿನ ರತ್ನಾಪುರ ಗ್ರಾಮದ ಶ್ರೀ ಲಿಂಗಯ್ಯ ಮತ್ತು ಶ್ರೀಮತಿ ಮುರಿಗವ್ವನವರ ಪುತ್ರರಾಗಿ ಜನಿಸಿ ಶಿವಯೋಗಮಂದಿರದಲ್ಲಿ ಧಾರ್ಮಿಕ ವಿದ್ಯೆಯನ್ನು ಕಲಿತು ಶ್ರೀ ಬಸವರಾಜ ಸ್ವಾಮಿಗಳ ಕರಕಮಲ ಸಂಜಾತರಾಗಿ ಬೆಳೆದು ಮಠದ ಆಡಳಿತವನ್ನು ವಹಿಸಿಕೊಂಡಿದ್ದಾರೆ. ಹಿರಿಯ ಗುರುಗಳು ಲಿಂಗೈಕ್ಯರಾದ ಮೇಲೆ ಮಠದ ಆಡಳಿತವನ್ನು ಪೂರ್ಣವಾಗಿ ಕೊಂಡು ಮುನ್ನಡೆಸುತ್ತಿದ್ದಾರೆ. ಶ್ರೀಗಳು ಹಿರಿಯ ಗುರುಗಳ ಗದ್ದುಗೆ, ಹಾಗೂ ಬಸವನಗುಡಿಯನ್ನು ಅಭಿವೃದ್ಧಿಗೊಳಿಸಿದ್ದಾರೆ. ವೈಶಾಖ ಶುದ್ಧ ತ್ರಯೋದಶಿಯಲ್ಲಿ ಶ್ರೀ ಗುರುಶಾಂತ ಸ್ವಾಮಿಗಳ ಜಾತ್ರೆಯನ್ನು ಎರಡು ದಿನಗಳ ಕಾಲ ನಡೆಸಿ, ಜ್ಞಾನ

ಮತ್ತು ಅನ್ನದಾಸೋಹವನ್ನು ಮಾಡಿಸುತ್ತಾರೆ. ಮಠದ ವತಿಯಿಂದ ಗುರುಶಾಂತ ಸ್ವಾಮಿಗಳ ಪುರಾಣವನ್ನು ಪ್ರಕಟಿಸಲಾಗಿದೆ. ವಿಳಾಸ: ಶ್ರೀ ಮ.ನಿ.ಪ್ರ.ಗುರುಶಾಂತ ಸ್ವಾಮಿಗಳು,ಶ್ರೀ ವಿರಕ್ತಮಠ, ಶಲವಡಿ,ನವಿಲುಗುಂದ ತಾಲ್ಲೂಕು, ಧಾರವಾಡ ಜಿಲ್ಲೆ.

ಶಿರಕೊಳ

ನವಿಲುಗುಂದ ತಾಲ್ಲೂಕಿನ ಶಿರಕೊಳ ಗ್ರಾಮವು ತಾಲ್ಲೂಕು ಕೇಂದ್ರದ ನೈರುತ್ಯ ಭಾಗಕ್ಕೆ ನಲವತ್ತೆರಡು ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ಧಾರ್ಮಿಕ ಕೇಂದ್ರಬಿಂದುವಾಗಿ ಬೆಳೆದಿದೆ.

ಹಿರೇಮಠ: ಶಿರಕೊಳ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ಮಹಾತಪಸ್ವಿ ಶ್ರೀ ಚನ್ನಬಸವೇಶ್ವರ ಸ್ವಾಮಿಗಳಿಂದ ಪ್ರಾರಂಭವಾಗಿದೆ. ಸುಮಾರು ಆರುನೂರು ವರ್ಷಗಳ ಹಿಂದೆ ಶ್ರೀ ಚನ್ನಬಸವೇಶ್ವರ ಸ್ವಾಮಿಗಳು ಸಂಚಾರ ಮಾಡುತ್ತಾ ಈ ಗ್ರಾಮಕ್ಕೆ ಆಗಮಿಸಿದರು. ಇಲ್ಲಿ ಶ್ರೀ ವೇದ ಮುನಿಗಳು ಅನುಷ್ಠಾನ ಕೈಗೊಂಡಿದ್ದರು. ಇಂತಹ ನೆಲದಲ್ಲಿ ಗುರುಗಳು ನೆಲೆನಿಂತರು. ಈ ಸಂದರ್ಭದಲ್ಲಿ ಮಳೆ ಇಲ್ಲದೆ ಜನ ತೊಂದರೆ ಅನುಭವಿಸುತ್ತಿದ್ದರು. ಗ್ರಾಮದ ಭಕ್ತರು ಅನುಷ್ಠಾನಗೊಂಡ ಗುರುಗಳ ಬಳಿ ಬಂದು ಮಳೆ ಇಲ್ಲದಿರುವ ಬಗ್ಗೆ ಮೊರೆ ಇಟ್ಟರು. ಎರಡು ದಿನದ ಒಳಗಾಗಿ ಮಳೆ ತರಿಸುತ್ತೇನೆ ಎಂದು ಅಭಯ ನೀಡಿದರು. ಗುರುಗಳ ಮಾತನ್ನು ಕೆಲವರು ನಂಬಿದರು, ಕೆಲವರು ನಂಬದಾದರು. ಆದರೆ ಗುರುಗಳು ಹೇಳಿದಂತೆ ಎರಡನೆಯ ದಿನಕ್ಕೆ ಮಳೆಬಂದಿತು. ಆಗ ಸಮಸ್ತ ಭಕ್ತರು ಗುರುಗಳಿಗೆ ಗೌರವ ಸಲ್ಲಿಸಿ ಅವರು ಇಲ್ಲಿ ನೆಲೆಗೊಳ್ಳುವಂತೆ ಬಿನ್ನವಿಸಿಕೊಂಡರು.

ಆಗ ಗುರುಗಳು ಇಲ್ಲಿ ಮಠವನ್ನು ಸ್ಥಾಪಿಸಿ ಉತ್ತರಾಧಿಕಾರಿಗಳನ್ನು ನೇಮಕ ಮಾಡುವ ಇಚ್ಛೆ ನಮಗಿದೆ ಎಂದು ಹೇಳಿ ತಮ್ಮ ಬಳಿ ಇದ್ದ ಒಂದು ಸೇರು ಭತ್ತವನ್ನು ತೋರಿಸಿ ನಮ್ಮ ಬಳಿ ಇರುವ ಆಸ್ತಿ ಇಷ್ಟೆ. ಆದರೆ ಮುಂದೆ ಮಠದ ಉತ್ತರಾಧಿಕಾರಿಗಳ ಜೀವನ ಹಾಗೂ ಮಠದ ಕಾರ್ಯಗಳು ಸುಗಮವಾಗಿ ನೆರವೇರಲು ಆಸ್ತಿ ಬೇಕಾಗುತ್ತದೆ. ಈ ಆಸ್ತಿಯನ್ನು ಕೊಡಬಲ್ಲಿರಾ ಎಂದು ಕೇಳಿದರು. ಅದಕ್ಕೆ ಭಕ್ತರು ಒಪ್ಪಿದರು. ಗುರುಗಳು ತಮ್ಮ ಕೈಯಲ್ಲಿದ್ದ ಭತ್ತವನ್ನು ಹಿಮ್ಮುರಿಕೆಯಲ್ಲಿ ಉಗ್ಗಿದರು. ಉಗ್ಗಿದ ಭತ್ತವು ಸುಮಾರು ಅರವತ್ತು ಎಕರೆ ಪ್ರದೇಶದಲ್ಲಿ ಚದುರಿತು. ಗುರುಗಳಿಗೆ ಹೇಳಿದಂತೆ ಗ್ರಾಮಸ್ಥರು ಈ ಜಾಗವನ್ನು ಬಿಟ್ಟುಕೊಟ್ಟರು. ಆ ಸ್ಥಳದಲ್ಲಿ ಶ್ರೀ ಚನ್ನಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಸ್ಥಾಪಿಸಿ ಮಠವು ಬೆಳೆಯಲು ಕಾರಣ ಕರ್ತರಾಗಿದ್ದಾರೆ.

ಬೆಳೆದ ಪರಂಪರೆ: ಮಠದ ಪರಂಪರೆಯಲ್ಲಿ ಆರು ಜನ ಗುರುಗಳು ಶ್ರೀ ಚನ್ನಬಸವೇಶ್ವರ ಶಿವಾಚಾರ್ಯ ಸ್ವಾಮಿಗಳೆಂಬ ಹೆಸರನ್ನು ಅಭಿದಾನ ಪಡೆದು ಪಟ್ಟಾಧಿಕಾರಕ್ಕೆ ಬಂದಿದ್ದಾರೆ. ಈಗಿನ ಗುರುಗಳ ಹಿರಿಯ ಗುರುಗಳಾದ ಆರನೆಯ ಶ್ರೀ ಚನ್ನಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು ಶಿವಪೂಜಾನಿಷ್ಠರಾಗಿ ಹೆಚ್ಚು ಹೆಸರುಗಳಿಸಿ ೧೯೬೯ರ ಏಪ್ರಿಲ್ ಇಪ್ಪತ್ತನಾಲ್ಕರಂದು ಲಿಂಗೈಕ್ಯರಾಗಿದ್ದಾರೆ. ನಂತರ ಬಂದ ಶ್ರೀ ಗುರುಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು, ೧೯೫೮ರಲ್ಲಿ ಶ್ರೀ ಶಿವಪುತ್ರಯ್ಯ ಮತ್ತು ಶ್ರೀಮತಿ ಅನ್ನದಾನಮ್ಮನವರ ಪುತ್ರರಾಗಿ ಜನಿಸಿದರು. ಪದವಿಶಿಕ್ಷಣ ಪಡೆದ ಗುರುಗಳು, ಶಿವಯೋಗಮಂದಿರ ಮತ್ತು ಕಾಶಿಯಲ್ಲಿ ಸಂಸ್ಕೃತ ಸಾಹಿತ್ಯದಲ್ಲಿ ಪಾಂಡಿತ್ಯ ಪಡೆದು ೧೯೭೪ ರಲ್ಲಿ ಪಟ್ಟಾಧಿಕಾರವನ್ನು ಪಡೆದುಕೊಂಡಿದ್ದಾರೆ.

ಅಭಿವೃದ್ಧಿಕಾರ್ಯಗಳು: ಶ್ರೀ ಗುರುಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳನ್ನು ಹಿರಿಯ ಗುರುಗಳು ಲಿಂಗೈಕ್ಯರಾಗುವ ಮೊದಲೇ ಉತ್ತರಾಧಿಕಾರಿಗಳನ್ನಾಗಿ ನೇಮಿಸಿದ್ದರು. ಪ್ರೌಢವಸ್ಥೆಗೆ ಬಂದ ಗುರುಗಳು ಮಠದ ಅಭಿವೃದ್ಧಿಕಾರ್ಯಗಳ ಕಡೆ ಗಮನ ಕೊಡುತ್ತಾ ಜೀರ್ಣಗೊಂಡಿದ್ದ ಮಠದ ಹಳೆಯ ಕಟ್ಟಡವನ್ನು ತೆಗೆಸಿ ೧೯೮೪ ರಲ್ಲಿ ನೂತನ ಕಟ್ಟಡವನ್ನು ನಿರ್ಮಿಸಿದರು. ಹಿಂದೆ ಕೈಬಿಟ್ಟು ಹೋಗಿದ್ದ ಮಠದ ಆಸ್ತಿಯನ್ನು ಪುನಃ ಗಳಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದಾರೆ. ಈಗ ಮಠಕ್ಕೆ ಹದಿನೆಂಟುಎಕರೆ ಆಸ್ತಿ ಇದೆ. ಇದನ್ನು ಅಭಿವೃದ್ಧಿಪಡಿಸಿ ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಲು ಕಾರಣಕರ್ತರಾಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಕರ್ತೃ ಗುರುಗಳ ಗದ್ದುಗೆಯನ್ನು ಕೇಂದ್ರವಾಗಿಟ್ಟು ಕೊಂಡು ಮಠದ ಕಟ್ಟಡ ರೂಪುಗೊಂಡಿದೆ. ಮಠದ ಆವರಣದಲ್ಲಿ ನಾಲ್ಕು ಗದ್ದುಗೆಗಳು ಇದ್ದು ಇವುಗಳನ್ನು ನವೀಕರಣಗೊಳಿಸಿ ನಿತ್ಯ ಎರಡು ವೇಳೆ ಪೂಜೆಗೆ ವ್ಯವಸ್ಥೆಗೊಳಿಸ ಲಾಗಿದೆ. ಗುರುಗಳು ಪ್ರವಚನಕಾರರಾಗಿದ್ದು ಸಿದ್ಧಾಂತ ಶಿಖಾಮಣಿಯ ಬಗ್ಗೆ ಉಪನ್ಯಾಸ ನೀಡಲು ಬೇರೆ ಬೇರೆ ಕಡೆ ಹೋಗುತ್ತಾರೆ. ಅಮಾವಾಸ್ಯೆ ಮತ್ತು ಹುಣ್ಣಿಮೆಗಳಲ್ಲಿ ವಿಶೇಷ ಪೂಜೆ, ಶ್ರಾವಣಮಾಸದಲ್ಲಿ ನಿತ್ಯ ರುದ್ರಾಭೀಷೇಕ ಹಾಗೂ ಭಕ್ತರಿಗೆ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಹಿರಿಯ ಗುರುಗಳ ಸಂಸ್ಮರಣೆ ಕಾರ್ಯಕ್ರಮವನ್ನು ನಡೆಸಿ ಒಂದು ತಿಂಗಳು ಪ್ರವಚನ, ಒಂದು ವಾರಗಳ ಕಾಲ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮಠಾಧೀಶರು ಮತ್ತು ವಿದ್ವಾಂಸರನ್ನು ಕರೆಸಿ ಉಪದೇಶ ಮತ್ತು ಉಪನ್ಯಾಸ ಮಾಡಿಸಲಾಗುತ್ತಿದೆ. ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ದುಡಿದ ಗಣ್ಯರನ್ನು ಸತ್ಕರಿಸಿ ಗೌರವಿಸಲಾಗುತ್ತಿದೆ.

ವಿಳಾಸ:-ಷ.ಬ್ರ.ಶ್ರೀ ಗುರುಸಿದ್ಧೇಶ್ವರ ಶಿವಾಚಾರ್ಯಸ್ವಾಮಿಗಳು, ಶ್ರೀ ಹಿರೇಮಠ, ಶಿರಕೋಳ, ನವಲುಗುಂದ ತಾ, ಧಾರವಾಡಜಿಲ್ಲೆ.

❑

ಹುಬ್ಬಳ್ಳಿ ತಾಲ್ಲೂಕು

ಧಾರವಾಡ ಜಿಲ್ಲೆಯ ಪ್ರಮುಖ ತಾಲ್ಲೂಕುಗಳಲ್ಲಿ ಒಂದಾದ ಹುಬ್ಬಳ್ಳಿಯು ಸಾಂಸ್ಕೃತಿ, ಶೈಕ್ಷಣಿಕ ಹಾಗೂ ಧಾರ್ಮಿಕವಾಗಿ ಹೆಚ್ಚು ಹೆಸರುಪಡೆದಿದೆ. ಕರ್ನಾಟಕದ ಬೇರೆ ತಾಲ್ಲೂಕುಗಳಿಗೆ ಹೋಲಿಕೆ ಮಾಡಿದಾಗ ಇಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆದಿದೆ. ಪ್ರಸ್ತುತ ಹದಿನೈದು ಮಠಗಳು ತಾಲ್ಲೂಕಿನಾದ್ಯಂತ ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿವೆ.

ಇಂಗಳಹಳ್ಳಿ

ಹುಬ್ಬಳ್ಳಿ ತಾಲ್ಲೂಕಿನ ಇಂಗಳಹಳ್ಳಿ ಗ್ರಾಮವು ತಾಲ್ಲೂಕು ಕೇಂದ್ರದ ಪೂರ್ವಕ್ಕೆ ಇಪ್ಪತ್ತೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಮೃತ್ಯುಂಜಯಸ್ವಾಮಿ ಮಠ ಅಸ್ತಿತ್ವದಲ್ಲಿದೆ.

ಮೃತ್ಯುಂಜಯಸ್ವಾಮಿಮಠ: ಇಂಗಳಹಳ್ಳಿ ಗ್ರಾಮದಲ್ಲಿ ಧಾರವಾಡದ ಮುರುಘಾಮಠದ ಶಾಖಾಮಠವಾದ ಶ್ರೀ ಮೃತ್ಯುಂಜಯಸ್ವಾಮಿ ಮಠ ಅಸ್ತಿತ್ವದಲ್ಲಿದೆ. ಧಾರವಾಡದ ಮುರುಘಾ ಮಠದ ಜಗದ್ಗುರುಗಳಾಗಿದ್ದ ಶ್ರೀ ಮೃತ್ಯುಂಜಯ ಸ್ವಾಮಿಗಳು ಈ ಗ್ರಾಮದಲ್ಲಿ ಜನಿಸಿ, ಧಾರ್ಮಿಕ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಮಾಡಿದರು. ಇವರ ಹೆಸರಿನಲ್ಲಿ ತೋರುಗದ್ದುಗೆಯನ್ನು ಸ್ಥಾಪಿಸಿ ಗುರುಗಳ ಹೆಸರು ಚಿರಾಯು ವಾಗಿ ಉಳಿಯುವಂತೆ ಮಾಡಲು ಇಲ್ಲಿ ಮಠವನ್ನು ಸ್ಥಾಪಿಸಲಾಗಿದೆ. ನಿತ್ಯ ಗದ್ದುಗೆಗೆ ಪೂಜೆ, ಅಮಾವಾಸ್ಯೆಯಲ್ಲಿ ವಿಶೇಷ ಪೂಜೆಯ ಜೊತೆಗೆ, ಸಂಜೆ ಭಜನೆ ಕಾರ್ಯಕ್ರಮವನ್ನು ಏರ್ಪಡಿಸಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ.ಶಿವಯೋಗಿ ಸ್ವಾಮಿಗಳು,ಶ್ರೀ ಮೃತ್ಯುಂಜಯಸ್ವಾಮಿಮಠ, ಶ್ರೀ ಮುರುಘಾಮಠ, ಮೊಕ್ಕಾಂ, ಧಾರವಾಡ.

ತಡಸ ಕ್ರಾಸ್

ಹುಬ್ಬಳ್ಳಿ ತಾಲ್ಲೂಕಿನ ತಿರುಮಲಕೊಪ್ಪ ಗ್ರಾಮದ ವ್ಯಾಪ್ತಿಯ ತಡಸ ಕ್ರಾಸ್, ಹುಬ್ಬಳ್ಳಿಯಿಂದ ಪೂರ್ವಕ್ಕೆ ಇಪ್ಪತ್ತೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಜಗದ್ಗುರು ರೇಣುಕಾ ಧರ್ಮನಿವಾಸವು ಅಸ್ತಿತ್ವದಲ್ಲಿದೆ.

ಜಗದ್ಗುರು ರೇಣುಕ ಧರ್ಮ ನಿವಾಸ: ತಡಸ ಕ್ರಾಸ್‌ನಲ್ಲಿ ಶ್ರೀ ಜಗದ್ಗುರು ರೇಣುಕಾ ಧರ್ಮನಿವಾಸವನ್ನು ಶ್ರೀ ರಂಭಾಪುರಿ ಪೀಠದ ಶ್ರೀ ಜಗದ್ಗುರು ಗಂಗಾಧರ ಶಿವಾಚಾರ್ಯ ಸ್ವಾಮಿಗಳು ಸ್ಥಾಪಿಸಿ, ಇಲ್ಲಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದರು. ಜಗದ್ಗುರುಗಳು ಇಲ್ಲಿ ಧರ್ಮನಿವಾಸವನ್ನು ಸ್ಥಾಪಿಸಿದ ಮೇಲೆ ಈ ಭಾಗದಲ್ಲಿ ಸಂಚರಿಸುವಾಗ ಇಲ್ಲಿ ವಿಶ್ರಾಂತಿ ಪಡೆದು ಮುಂದೆ ಹೋಗುವ ಪರಿಪಾಠವನ್ನು ಬೆಳೆಸಿಕೊಂಡರು. ಈಗಿನ ಶ್ರೀ ರಂಭಾಪುರಿ ಜಗದ್ಗುರುಗಳಾದ, ಶ್ರೀ ಪ್ರಸನ್ನ ರೇಣುಕ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಅಧಿಕಾರಕ್ಕೆ ಬಂದ ಮೇಲೆ ಇಲ್ಲಿ ಶಿವಾಚಾರ್ಯರೊಬ್ಬರನ್ನು ನೇಮಿಸಿ, ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದ್ದಾರೆ.

ಶ್ರೀ ನಿಂಗಯ್ಯ ಮತ್ತು ಶ್ರೀಮತಿ ನಿಂಗಮ್ಮನವರ ಪುತ್ರರಾಗಿ ೧೯೫೮ ರಲ್ಲಿ ಜನಿಸಿದ ಶ್ರೀ ಮುಕ್ತಿನಾಥ ಶಿವಾಚಾರ್ಯ ಸ್ವಾಮಿಗಳನ್ನು ೧೯೮೮ ರಲ್ಲಿ ನೇಮಿಸಲಾಗಿದೆ. ಗುರುಗಳು ಇಲ್ಲಿ ನೆಲೆಗೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇಲ್ಲಿ ಶ್ರೀ ಜಗದ್ಗುರು ವೀರ ಗಂಗಾಧರ ಶಿವಾಚಾರ್ಯ ಭಗವತ್ಪಾದರ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಪೀಠದ ವತಿಯಿಂದ ಶ್ರೀ ಜಗದ್ಗುರು ವೀರ ಗಂಗಾಧರ ಪ್ರೌಢಶಾಲೆಯನ್ನು ಪ್ರಾರಂಭಿಸಲಾಗಿದೆ. ಅಲ್ಲದೆ ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಿ, ಗ್ರಾಮಾಂತರ ಮಕ್ಕಳ ಕಲಿಕೆಗೆ ನೆರವಾಗಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಮುಕ್ತಿನಾಥ ಶಿವಾಚಾರ್ಯ ಸ್ವಾಮಿಗಳು, ಶ್ರೀ ಜಗದ್ಗುರು ರೇಣುಕಾ ಧರ್ಮನಿವಾಸ, ತಡಸ ಕ್ರಾಸ್, ತಿರುಮಲಕೊಪ್ಪ, ಹುಬ್ಬಳ್ಳಿ ತಾಲ್ಲೂಕು, ಧಾರವಾಡ ಜಿಲ್ಲೆ.

ಬ್ಯಾಹಟ್ಟಿ

ಹುಬ್ಬಳ್ಳಿ ತಾಲ್ಲೂಕಿನ ಬ್ಯಾಹಟ್ಟಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಒಂಬತ್ತು ಕಿ.ಮೀ ದೂರದಲ್ಲಿದೆ.

ಇಲ್ಲಿ ಪುರಾತನ ಕಾಲದಿಂದ ವೀರಶೈವಧರ್ಮ ಪ್ರಬಲವಾಗಿ ಬೆಳೆದು ಬಂದಿದೆ. ಇದಕ್ಕೆ ಸಾಕ್ಷಿ ಎಂಬಂತೆ ಈ ಗ್ರಾಮದಲ್ಲಿ ಐದು ಮಠಗಳು ಸ್ಥಾಪನೆಯಾಗಿದ್ದವು ಎಂದು ಹೇಳಲಾಗುತ್ತಿದೆ. ಈ ಐದು ಮಠಗಳಲ್ಲಿ ಈಗ ಶ್ರೀ ಹಿರೇಮಠ, ಶ್ರೀ ಕರೆಚರಂತಿಮಠ, ಶ್ರೀ ಕಂಬಾಳುಮಠ ಹಾಗೂ ಶ್ರೀ ವಿರಕ್ತಮಠ ಎಂಬ ನಾಲ್ಕು ಮಠಗಳ ಹೆಸರುಗಳು ಕೇಳಿಬರುತ್ತಿವೆ. ಇವುಗಳಲ್ಲಿ ಶ್ರೀ ಕಂಬಾಳು ಮಠ ಮತ್ತು ಶ್ರೀ ವಿರಕ್ತಮಠದಲ್ಲಿ ಉತ್ತರಾಧಿಕಾರಿಗಳು ಯಾರೂ ಇಲ್ಲದೆ ಖಾಲಿ ಉಳಿದಿವೆ.

ಹಿರೇಮಠ: ಬ್ಯಾಹಟ್ಟಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಕಾಶಿ ಪೀಠದ ಶಾಖಾ ಮಠವಾದ ಈ ಮಠವು, ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಎಂಟುನೂರು ವರ್ಷಗಳ ಹಿಂದೆ ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿ ಅಭಿವೃದ್ಧಿಪಡಿಸಿದ್ದರು. ಅಂದು ಸ್ಥಾಪನೆಗೊಂಡ ಮಠವು ಈತನಕ ಅಭಿವೃದ್ಧಿಗೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ಪರಂಪರೆ:
೧. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಜಡೆಶಾಂತವೀರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಗಂಗಾಧರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ನೀಲಕಂಠ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ದಾರುಕಾಚಾರ್ಯ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆಯ ಕೆಲವು ಗುರುಗಳ ಹೆಸರುಗಳನ್ನು ಮಾತ್ರ ಉಲ್ಲೇಖಿಸಲಾಗಿದೆ. ಕರ್ತೃ ಗುರುಗಳ ನಂತರ ಶ್ರೀ ಜಡೆಶಾಂತವೀರ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ ಹೆಸರು ಪಡೆದರು. ನಂತರ ಬಂದ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ಶತಾಯುಷಿಗಳಾಗಿ ಮಠವನ್ನು ಧಾರ್ಮಿಕವಾಗಿ ಶ್ರೀಮಂತಗೊಳಿಸಿದರು. ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳು ಮತ್ತು ನಂತರ ಬಂದ ಕೆಲವು ಗುರುಗಳ ಹೆಸರುಗಳನ್ನು ಆಧಾರಗಳ ಕೊರತೆಯಿಂದ ಉಲ್ಲೇಖಿಸಲು ಸಾಧ್ಯವಾಗುತ್ತಿಲ್ಲ. ಈಗಿನ ಮಠಾಧೀಶರಾದ ಶ್ರೀ ದಾರುಕಾಚಾರ್ಯಶಿವಾಚಾರ್ಯ ಸ್ವಾಮಿಗಳು ಶ್ರೀ ಸಿದ್ಧಲಿಂಗಯ್ಯ ಮತ್ತು ಶ್ರೀಮತಿ ಪಾರ್ವತಮ್ಮನವರ ಪುತ್ರರಾಗಿ ೧೯೩೦ರಲ್ಲಿ ಜನಿಸಿದರು. ಇವರು ಸೋಲಾಪುರದಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ೧೯೬೭ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಇವರು ಶಿವಪೂಜಾ ನಿಷ್ಠರಾಗಿ ಮಠವನ್ನು ಅಭಿವೃದ್ಧಿಪಡಿಸಿದರು.

ಧಾರ್ಮಿಕ ಕಾರ್ಯಗಳು: ಮಠದಲ್ಲಿ ಪರಂಪರೆಯ ಏಳು ಜನ ಗುರುಗಳ ಗದ್ದುಗೆಗಳು ಸ್ಥಾಪನೆಯಾಗಿವೆ. ಈ ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ, ಶ್ರಾವಣಮಾಸದಲ್ಲಿ ರುದ್ರಾಭಿಷೇಕ ಹಾಗೂ ಪುರಾಣಪ್ರವಚನವನ್ನು ನಡೆಸಲಾಗುತ್ತಿದೆ. ಡಿಸೆಂಬರ್ ನಲ್ಲಿ ಹಿರಿಯ ಗುರುಗಳ ಪುಣ್ಯತಿಥಿ ಹಾಗೂ ಶ್ರೀ ವಿಶ್ವಾರಾಧ್ಯರ ಜಯಂತಿಯನ್ನು ಆಚರಿಸಲಾಗುತ್ತಿದೆ. ಮಠದಲ್ಲಿ ಶಿಲಾಶಾಸನಗಳಿದ್ದು ಸಂರಕ್ಷಣೆ ಇಲ್ಲದೆ ಹಾಳಾಗಿವೆ. ಮೂರು ತಾಮ್ರ ಶಾಸನಗಳನ್ನು ಧಾರವಾಡ ವಿಶ್ವವಿದ್ಯಾನಿಲಯದ ಸಂಶೋಧಕರು ತೆಗೆದುಕೊಂಡು ಹೋಗಿದ್ದಾರೆಂದು ತಿಳಿದು ಬಂದಿದೆ.

ವಿಳಾಸ: ಷ.ಬ್ರ.ಶ್ರೀದಾರುಕಾಚಾರ್ಯ ಶಿವಾಚಾರ್ಯ ಸ್ವಾಮಿಗಳು, ಶ್ರೀಹಿರೇಮಠ, ಬ್ಯಾಹಟ್ಟಿ, ಹುಬ್ಬಳ್ಳಿ ತಾ, ಧಾರವಾಡ ಜಿಲ್ಲೆ.

ಕರೆಚರಂತಿ ಹಿರೇಮಠ: ಬ್ಯಾಹಟ್ಟಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಕರೆಚರಂತಿ ಹಿರೇಮಠವು, ಉಜ್ಜಯಿನಿ ಪೀಠದ ಶಾಖಾಮಠವಾಗಿ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿದೆ. ಶ್ರೀ ಅನ್ನದಾನ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿ ದರೆಂದು ಹೇಳಲಾಗುತ್ತಿದೆ. ಪುರಾತನ ಕಾಲದಲ್ಲಿ ವಿಸ್ತಾರವಾಗಿ ಬೆಳೆದಿದ್ದ ಮಠದ ಕಟ್ಟಡವು ಕಾಲಾನಂತರದಲ್ಲಿ ನಶಿಸಿ ಹೋಗಿದೆ. ಈಗ ಮಠದ ಅಗತ್ಯಕ್ಕೆ ತಕ್ಕಂತೆ ಮೂಲ ಮಠದ ಒಂದು ಭಾಗವನ್ನು ಉಳಿಸಿಕೊಂಡು ನವೀಕರಣ ಮಾಡಿಕೊಳ್ಳಲಾಗಿದೆ.

ಪರಂಪರೆ:
೧. ಷ.ಬ್ರ.ಶ್ರೀ ಅನ್ನದಾನ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯಸ್ವಾಮಿಗಳು

೩. ಷ.ಬ್ರ.ಶ್ರೀ ಫಕೀರೇಶ್ವರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಅನ್ನದಾನ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಶಂಭಲಿಂಗದೇವರು

ಈ ರೀತಿ ಮಠದ ಪರಂಪರೆಯ ಗುರುಗಳ ಕೆಲವು ಹೆಸರುಗಳನ್ನು ಮಾತ್ರ ದಾಖಲಿಸಲಾಗಿದೆ. ಕರ್ತೃ ಗುರುಗಳಿಂದ ಪರಂಪರೆಯ ನಾಲ್ಕನೆಯ ಗುರುಗಳ ತನಕ ಅಧಿಕಾರ ನಡೆಸಿದ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಪರಂಪರೆಯ ಐದನೆಯ ಗುರುಗಳಾದ ಶ್ರೀ ಬಸವಲಿಂಗ ಸ್ವಾಮಿಗಳು ೧೯೬೪ ರಲ್ಲಿ ಲಿಂಗೈಕ್ಯರಾದರು. ಇವರ ನಂತರ ಶ್ರೀ ಶೇಖರಯ್ಯ ಮತ್ತು ಶ್ರೀಮತಿ ಬಸವಣ್ಣಮ್ಮನವರ ಪುತ್ರರಾಗಿ ೧೯೭೨ ರಂದು ಜನಿಸಿದ ಶ್ರೀ ಶಂಭುಲಿಂಗ ದೇವರನ್ನು, ೨೦೦೦ ದ ಡಿಸೆಂಬರ್ ಹದಿಮೂರರಂದು ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ. ಶ್ರೀ ಶಂಭುಲಿಂಗ ದೇವರು ಎಡೆಯೂರಿನಲ್ಲಿ ಸಂಸ್ಕೃತ ಮತ್ತು ವೇದಾಧ್ಯಯನದ ಜೊತೆಗೆ ಪ್ರೌಢ ಶಿಕ್ಷಣವನ್ನು ಪಡೆಯುತ್ತಿದ್ದಾರೆ.

ಮಠದ ಆವರಣದಲ್ಲಿ ಐದು ಗದ್ದುಗೆಗಳು ನಿರ್ಮಾಣಗೊಂಡಿರುವುದಲ್ಲದೆ, ಈಶ್ವರ ದೇವಸ್ಥಾನ ಮತ್ತು ಬಸವನ ಮೂರ್ತಿಯನ್ನು ಸ್ಥಾಪಿಸಲಾಗಿದೆ. ಇಲ್ಲಿ ನಿತ್ಯ ಎರಡು ವೇಳೆ ಪೂಜೆ ಹಾಗೂ ವಾರ್ಷಿಕ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಮಠದ ಆಸ್ತಿಯಾಗಿ ಇಪ್ಪತ್ತುಎಕರೆ ಜಮೀನಿದ್ದು, ಇದನ್ನು ಅಭಿವೃದ್ಧಿಪಡಿಸಿ ಆದಾಯದ ಮೂಲವನ್ನಾಗಿ ಮಾಡಿಕೊಳ್ಳಲಾಗಿದೆ.

ವಿಳಾಸ: ಷ.ಬ್ರ.ಶ್ರೀ ಶಂಭುಲಿಂಗ ದೇವರು, ಶ್ರೀ ಕರೆಚರಂತಿ ಹಿರೇಮಠ,ಬ್ಯಾಹಟ್ಟಿ, ಹುಬ್ಬಳ್ಳಿ ತಾಲ್ಲೂಕು, ಧಾರವಾಡ ಜಿಲ್ಲೆ.

ಮಂಟೂರು

ಹುಬ್ಬಳ್ಳಿ ತಾಲ್ಲೂಕಿನ ಮಂಟೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಅಡವಿಸಿದ್ಧೇಶ್ವರ ಮಠವು ಅಸ್ತಿತ್ವದಲ್ಲಿದೆ.

ಅಡವಿ ಸಿದ್ಧೇಶ್ವರಮಠ: ಮಂಟೂರು ಗ್ರಾಮದಲ್ಲಿ ಶ್ರೀ ಅಡವಿಸಿದ್ಧೇಶ್ವರ ಮಠವು ಸ್ಥಾಪನೆಯಾಗಿ ಈ ಗ್ರಾಮದ ಧಾರ್ಮಿಕ ಕೇಂದ್ರಬಿಂದುವಾಗಿ ಬೆಳೆದಿದೆ. ಶ್ರೀಅಡವಿ ಸ್ವಾಮಿಗಳು ಲೋಕ ಸಂಚಾರಕ್ಕೆಂದು ಬಂದವರು ಮಂಟೂರು ಗ್ರಾಮದಲ್ಲಿ ನೆಲೆಸಿ, ಅನೇಕ ವರ್ಷಗಳ ಕಾಲ ಇಲ್ಲಿ ತಪಸ್ಸನ್ನು ಆಚರಿಸಿ ಈ ಸ್ಥಳವನ್ನು ಪಾವನಗೊಳಿಸಿದ್ದರು.

ಶ್ರೀ ಅಡವಿ ಸಿದ್ಧೇಶ್ವರ ಸ್ವಾಮಿಗಳು ಮಂಟೂರಿನ ಅಡವಿ ಪ್ರದೇಶದಲ್ಲಿ ಅನುಷ್ಠಾನಗೊಂಡಿದ್ದ ಸಂದರ್ಭದಲ್ಲಿ, ಸೌದೆ ತರಲೆಂದು ಅಡವಿಗೆ ಬಂದಿದ್ದ ಜನರು ಗುರುಗಳು ತಪಸ್ಸನ್ನು ಆಚರಿಸುವ ದೃಶ್ಯವನ್ನು ನೋಡಿ ಈ ತೇಜೋಮೂರ್ತಿಯ ದರ್ಶನವನ್ನು ಪಡೆದು ಹೋದ ವಿಚಾರ ಗ್ರಾಮಸ್ಥರಿಗೆ ತಿಳಿಯುತ್ತದೆ. ನಂತರ ಭಕ್ತರು ತಂಡೋಪ ತಂಡವಾಗಿ ಗುರುಗಳ ದರ್ಶನಕ್ಕೆ ಆಗಮಿಸಿ, ಗುರುಗಳಿಂದ ಆಶೀರ್ವಾದ ಪಡೆದು ಹೋಗುತ್ತಿದ್ದರಂತೆ. ಇದು ಸಂಪ್ರದಾಯವಾಗಿ ಬೆಳೆಯಿತು. ಮಳೆಗಾಲ ಪ್ರಾರಂಭವಾದಾಗ ಗುರುಗಳನ್ನು ಗ್ರಾಮಕ್ಕೆ ಕರೆತಂದು ಮಠವನ್ನು ಕಟ್ಟಿಸಿ ಕೊಡಲು ಗ್ರಾಮಸ್ಥರು ನಿರ್ಧರಿಸಿದರು. ಈ ವಿಚಾರವನ್ನು ಗುರುಗಳಿಗೆ ತಿಳಿಸಿದಾಗ ಅವರು ಇದಕ್ಕೊಪ್ಪದೆ ಮರುದಿನವೇ ತಮ್ಮ ಸಂಚಾರವನ್ನು ಕೈಗೊಂಡರಂತೆ.

ಮಠ ಸ್ಥಾಪನೆ: ಶ್ರೀ ಅಡವಿ ಸ್ವಾಮಿಗಳು ಮಂಟೂರನ್ನು ತ್ಯಜಿಸಿ ಮುಂದೆ ಹೋದ ಕೆಲವು ವರ್ಷಗಳ ನಂತರ ಅವರ ಕರ ಕಮಲ ಸಂಜಾತರಾದ ಅಂಕಲಗಿಯ ಶ್ರೀ ಸಿದ್ಧರಾಮ ಸ್ವಾಮಿಗಳು ಮಂಟೂರಿಗೆ ಬಂದು ಶ್ರೀ ಅಡವಿ ಸ್ವಾಮಿಗಳು ನೆಲೆ ನಿಂತ ತಪೋಭೂಮಿಯಲ್ಲಿ ನೆಲೆಸಿ, ಶ್ರೀ ಅಡವಿಸ್ವಾಮಿ ಮಠವನ್ನು ೧೯೦೩ ರಲ್ಲಿ ಸ್ಥಾಪಿಸಿದ್ದರು. ಹಾನಗಲ್ಲು ಶ್ರೀ ಕುಮಾರ ಸ್ವಾಮಿಗಳು ಹಾಗೂ ಹುಬ್ಬಳ್ಳಿ ಮೂರುಸಾವಿರ ಮಠದ ಹಿಂದಿನ ಶ್ರೀ ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳ ನೇತೃತ್ವದಲ್ಲಿ ಮಠವನ್ನು ಸ್ಥಾಪಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸತೊಡಗಿದರು. ಅಂದು ಸ್ಥಾಪನೆಗೊಂಡ ಮಠವು ಈತನಕ ಬೆಳೆದು ಬಂದಿದೆ. ಶ್ರೀ ಸಿದ್ಧರಾಮ ಸ್ವಾಮಿಗಳು ಇಲ್ಲಿ ನೆಲೆಗೊಂಡ ಮೇಲೆ ಮಂಟಪಪೂಜೆಯನ್ನು ಮಾಡಿಸಿ ಧಾರ್ಮಿಕ ವಾತಾವರಣ ವನ್ನು ನಿರ್ಮಿಸಿದರು. ಗುರುಗಳು ಮಹಾ ಪವಾಡಪುರಷರು ವಾಕ್ ಸಿದ್ಧಪುರುಷರೂ ಆಗಿದ್ದರು.

ಪರಂಪರೆ: ಶ್ರೀ ಸಿದ್ಧರಾಮ ಸ್ವಾಮಿಗಳ ನಂತರ ಶ್ರೀ ಅಡವಿ ಸ್ವಾಮಿಗಳು ಮಠಕ್ಕೆ ಆಗಮಿಸಿ ಮಠದ ಕಟ್ಟಡವನ್ನು ನಿರ್ಮಿಸಿ, ಶ್ರೀ ಅಡವಿ ಸ್ವಾಮಿಗಳ ತೋರುಗದ್ದುಗೆ ಹಾಗೂ ಶ್ರೀ ಸಿದ್ಧರಾಮ ಸ್ವಾಮಿಗಳ ಗದ್ದುಗೆಗಳನ್ನು ಸ್ಥಾಪಿಸಿ, ಮಠಕ್ಕೆ ಒಂದು ರೂಪುಕೊಟ್ಟು ೧೯೮೯ ರ ಮೇ ಹನ್ನೊಂದರಂದು ಪಟ್ಟಾಧಿಕಾರವನ್ನು ವಹಿಸಿಕೊಂಡರು. ಹುಬ್ಬಳ್ಳಿ ಮೂರುಸಾವಿರ ಮಠದ ಹಿರಿಯ ಜಗದ್ಗುರುಗಳಾದ ಶ್ರೀ ಗಂಗಾಧರ ರಾಜ ಯೋಗೀಂದ್ರ ಸ್ವಾಮಿಗಳು ಪಟ್ಟಾಧಿಕಾರದ ಅನುಗ್ರಹವನ್ನು ನೀಡಿದರು. ಬೆಳಗಾಂ ನಾಗನೂರು ಮಠದ ಶ್ರೀ ಶಿವಬಸವ ಸ್ವಾಮಿಗಳು ನಿರಂಜನ ಪಟ್ಟಾಧಿಕಾರವನ್ನು ನೀಡಿದರು. ಶ್ರೀ ಅಡವಿ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಆಸ್ತಿಯನ್ನು ಸಂಪಾದಿಸಿ ಅಭಿವೃದ್ಧಿಪಡಿಸಿದ್ದಾರೆ. ಅಲ್ಲದೆ ೧೯೯೨ ರಲ್ಲಿ ಶ್ರೀ ಅಡವಿಸಿದ್ಧೇಶ್ವರ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ, ಶಿಕ್ಷಣ ಕ್ಷೇತ್ರಕ್ಕೂ ತಮ್ಮ ಸೇವೆಯನ್ನು ವಿಸ್ತರಿಸಿಕೊಂಡು ಮಠ ಮತ್ತು ಸಮಾಜವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಅಡವಿ ಸ್ವಾಮಿಗಳು, ಶ್ರೀ ಅಡವಿಸ್ವಾಮಿ ಮಠ, ಮಂಟೂರು, ಹುಬ್ಬಳ್ಳಿ ತಾಲ್ಲೂಕು, ಧಾರವಾಡ ಜಿಲ್ಲೆ.

ರಾಯನಹಾಳು

ಹುಬ್ಬಳ್ಳಿ ತಾಲ್ಲೂಕಿನ ರಾಯನಾಳು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ನಾಲ್ಕು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ರಾಯನಾಳು ಗ್ರಾಮದಲ್ಲಿ ಕುಮಾರಸಮಯದ ಶ್ರೀ ವಿರಕ್ತಮಠವನ್ನು ಶ್ರೀ ರೇವಣಸಿದ್ಧೇಶ್ವರ ಸ್ವಾಮಿಗಳು ಎಂಟುನೂರು ವರ್ಷಗಳ ಹಿಂದೆ ಸ್ಥಾಪಿಸಿದ್ದರೆಂದು ಹೇಳಲಾಗುತ್ತಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ರೇವಣಸಿದ್ಧೇಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ರುದ್ರಸ್ವಾಮಿಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಮಡಿವಾಳಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಪಟ್ಟದಯ್ಯಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ವೀರಯ್ಯಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ರೇವಣಸಿದ್ಧೇಶ್ವರಸ್ವಾಮಿಗಳು

ಈ ರೀತಿ ಮಠದ ಪರಂಪರೆಯ ಕೆಲವು ಗುರುಗಳ ಹೆಸರನ್ನು ದಾಖಲಿಸಲಾಗಿದೆ. ಕರ್ತೃ ಗುರುಗಳಿಂದ ಪರಂಪರೆಯ ಐದನೆಯ ಗುರುಗಳ ತನಕ ಮಾಹಿತಿ ಲಭ್ಯವಿಲ್ಲ. ಮಠದ ಆವರಣದಲ್ಲಿ ಲಿಂಗೈಕ್ಯ ಗುರುಗಳ ಗದ್ದುಗೆಗಳು ಸ್ಥಾಪನೆಯಾಗಿ, ಅವರುಗಳ ಹೆಸರನ್ನು ಮಾತ್ರ ಉಳಿಸಿಕೊಂಡು ಬರಲಾಗಿದೆ. ಶ್ರೀ ಗುರುಪಾದಯ್ಯ ಮತ್ತು ಶ್ರೀಮತಿ ನಿಂಗಮ್ಮನವರ ಪುತ್ರರಾಗಿ ೧೯೨೬ ರಲ್ಲಿಜನಿಸಿದ, ಶ್ರೀ ರೇವಣಸಿದ್ಧೇಶ್ವರ ಸ್ವಾಮಿಗಳು ೧೯೪೭ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಗುರುಗಳು ಅಧಿಕಾರವನ್ನು ವಹಿಸಿಕೊಂಡಾಗ ಮಠವು ಪೂರ್ಣ ಜೀರ್ಣಾವಸ್ಥೆಯಲ್ಲಿತ್ತು. ಅವಶ್ಯಕ್ಕನುಗುಣವಾಗಿ ಈಗ ಮಠದ ಕಟ್ಟಡವನ್ನು ನವೀಕರಿಸಿಕೊಂಡು, ಧಾರ್ಮಿಕ ಕಾರ್ಯಗಳನ್ನು ಮಾಡತೊಡಗಿದ್ದಾರೆ.

ಶ್ರೀ ರೇವಣಸಿದ್ಧೇಶ್ವರ ಸ್ವಾಮಿಗಳು ಪಟ್ಟಾಧಿಕಾರ ವಹಿಸಿಕೊಂಡ ಮೇಲೆ ನಲವತ್ತುವರ್ಷಗಳ ಕಾಲ ಧಾರ್ಮಿಕ ಆಚರಣೆಯ ಮೂಲಕ ಮಠವನ್ನು ಸಮಾಜದ ಮುಖಿಯಾಗಿ ಬೆಳೆಸಿದರು. ಮಠದ ಆಸ್ತಿಯನ್ನು ಅಭಿವೃದ್ಧಿಪಡಿಸಿಕೊಂಡು ಆರ್ಥಿಕ ಕ್ರೋಢೀಕರಣ ಮಾಡಿಕೊಂಡು ೧೯೮೭ ರಲ್ಲಿ ಮಠಕ್ಕೆ ನೂತನ ಕಟ್ಟಡವನ್ನು ನಿರ್ಮಿಸಿದರು. ಮಠದ ಆವರಣದಲ್ಲಿ ಮೂರು ಗದ್ದುಗೆಗಳು ಹಾಗೂ ಮಠದ ಜಮೀನಿನಲ್ಲಿ ಎರಡು ಗದ್ದುಗೆಗಳು ಸ್ಥಾಪನೆಯಾಗಿದ್ದು, ಇವುಗಳನ್ನು ನವೀಕರಿಸಿ ಪೂಜೆಗೆ ವ್ಯವಸ್ಥೆಗೊಳಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗದ್ದುಗೆಗಳಿಗೆ ನಿತ್ಯ ಎರಡು ವೇಳೆ ಪೂಜೆ, ಮಹಾನವಮಿಯಲ್ಲಿ ದೇವಿ

ಪಾರಾಯಣ, ಪ್ರತಿ ಸೋಮವಾರ ಶಿವಾನುಭವಗೋಷ್ಠಿ ಹಾಗೂ ಮೇ ತಿಂಗಳ ಅಗಿ ಹುಣ್ಣಿಮೆಯಲ್ಲಿ ಹಿರಿಯ ಗುರುಗಳ ಪುಣ್ಯಾರಾಧನೆ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಮಠದಲ್ಲಿ ಹೊರಗಿನಿಂದ ಬರುವ ಭಕ್ತರಿಗೆ ನಿತ್ಯ ಅನ್ನದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಶ್ರೀ ರೇವಣಸಿದ್ಧೇಶ್ವರ ಸ್ವಾಮಿಗಳು ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸದಿದ್ದರೂ ಸರ್ಕಾರಿ ಕಾಲೇಜು ಸ್ಥಾಪನೆಗೊಳ್ಳಲು ಮಠದ ಜಮೀನನ್ನು ನೀಡಿ, ಮಠದ ಹೆಸರಿನಲ್ಲಿ ಕಾಲೇಜು ನಡೆಯುವಂತೆ ಮಾಡಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ರೇವಣಸಿದ್ಧೇಶ್ವರ ಸ್ವಾಮಿಗಳು, ಶ್ರೀ ವಿರಕ್ತಮಠ, ರಾಯನಹಾಳು, ಹುಬ್ಬಳ್ಳಿ ತಾ,ಧಾರವಾಡ ಜಿಲ್ಲೆ.

ಸುಳ್ಳ

ಹುಬ್ಬಳ್ಳಿ ತಾಲ್ಲೂಕಿನ ಸುಳ್ಳ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಪಂಚಗ್ರಹ ಹಿರೇಮಠವು ಅಸ್ತಿತ್ವದಲ್ಲಿದೆ.

ಪಂಚಗ್ರಹ ಹಿರೇಮಠ: ಸುಳ್ಳ ಗ್ರಾಮದಲ್ಲಿ ಶ್ರೀ ಪಂಚಗ್ರಹ ಹಿರೇಮಠವು ಸ್ಥಾಪನೆಯಾಗಿ ವೀರಶೈವ ಧರ್ಮವನ್ನು ಬೆಳೆಸಿದೆ. ಶ್ರೀ ರಂಭಾಪುರಿಪೀಠದ ಶಾಖಾಮಠವಾದ ಈ ಮಠವನ್ನು ಶ್ರೀ ಸಿದ್ಧರಾಮ ಸ್ವಾಮಿಗಳು ಪ್ರಥಮವಾಗಿ ಸ್ಥಾಪಿಸಿದ್ದಾರೆಂದು ಹೇಳಲಾಗುತ್ತಿದೆ. ಸುಳ್ಳ, ನರಗುಂದ, ನವಿಲುಗುಂದ, ಅಮ್ಮಿನಬಾವಿ ಹಾಗೂ ಕುಂದಗೋಳ ಸೇರಿದಂತೆ ಒಟ್ಟು ಐದು ಮುಖ್ಯ ಮಠಗಳನ್ನು ಸ್ಥಾಪಿಸಿದ್ದರಿಂದ ಈ ಮಠಗಳಿಗೆ 'ಶ್ರೀ ಪಂಚಗ್ರಹ ಹಿರೇಮಠ ' ಎಂದು ಹೆಸರು ಬಂದಿದೆ.

ಮಠದ ಆವರಣದಲ್ಲಿ ಪಂಚಲಿಂಗೇಶ್ವರ ದೇವಸ್ಥಾನ ಸ್ಥಾಪನೆಯಾಗಿದ್ದು ೨೦೦೦ ವರ್ಷಕ್ಕೂ ಹಿಂದಿನ ಇತಿಹಾಸವಿದೆ. ಮಠಕ್ಕೂ ಈ ಪಂಚಲಿಂಗೇಶ್ವರ ದೇವಸ್ಥಾನಕ್ಕೂ ನಿಕಟವಾದ ಸಂಪರ್ಕ ಪೂರ್ವದಿಂದಲೂ ಬೆಳೆದು ಬಂದಿದೆ ಎಂದು ಹೇಳಲಾಗುತ್ತಿದೆ. ಸವಣೂರಿನ ನವಾಬರು ಈ ಮಠಕ್ಕೆ ಸಾಕಷ್ಟು ನೆರವು ನೀಡಿ ಮಠವನ್ನು ಅಭಿವೃದ್ಧಿ ಪಡಿಸಿದ್ದಾರೆ.

ಪರಂಪರೆ:

೧. ಷ.ಬ್ರ.ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಶಂಭುಲಿಂಗ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಮಡಿವಾಳ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಅಭಿನವ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮಿಗಳು ಮಹಾತಪಸ್ವಿಗಳಾಗಿ ಮಠವನ್ನು ಅಭಿವೃದ್ಧಿ ಪಡಿಸಿದ್ದಾರೆ.ಇವರ ನಂತರ ಅಧಿಕಾರಕ್ಕೆ ಬಂದ ಪರಂಪರೆಯ ನಾಲ್ಕನೆಯ ಗುರುಗಳ ತನಕ ಸ್ಪಷ್ಟವಾದ ಮಾಹಿತಿ ಲಭ್ಯವಿಲ್ಲ. ಪರಂಪರೆಯ ಐದನೆಯ ಗುರುಗಳಾದ ಶ್ರೀ ಸಿದ್ಧರಾಮ ಸ್ವಾಮಿಗಳು ಮಹಾತಪೋನಿಷ್ಠರು ಹಾಗೂ ಶಿವಪೂಜಾ ಧುರೀಣರು ಆಗಿದ್ದರು. ಇವರು ಮಠವನ್ನು ಅಭಿವೃದ್ಧಿ ಪಡಿಸಿದ್ದಲ್ಲದೆ, ಸಿಂದಗಿ ತಾಲ್ಲೂಕಿನ ಅರ್ನಾಳು ಗ್ರಾಮದಲ್ಲಿ ಮಠವನ್ನು ಸ್ಥಾಪಿಸಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದರು. ಇವರು ೧೯೯೮ರಲ್ಲಿ ಲಿಂಗೈಕ್ಯರಾದರು. ಗುರುಗಳು ಅಧಿಕಾರದಲ್ಲಿರುವಾಗಲೇ ಅಭಿನವ ಶ್ರೀ ಸಿದ್ಧರಾಮ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿ, ೧೯೯೫ರಲ್ಲಿಯೇ ಪಟ್ಟಾಧಿಕಾರದ ಅನುಗ್ರಹವನ್ನು ನೀಡಿದ್ದರು. ಅಭಿನವ ಶ್ರೀ ಸಿದ್ಧರಾಮ ಸ್ವಾಮಿಗಳು ಗಂಗಾಧರಯ್ಯ ಮತ್ತು ಶಾಂತಮ್ಮನವರ ಪುತ್ರರಾಗಿ ೧೯೭೫ರ ಮಾರ್ಚ್ ಇಪ್ಪತ್ತೇಳರಂದು ಜನಿಸಿದರು. ಇವರು ಬಿಜಾಪುರ ಹಾಗೂ ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡಿ ಮಠಕ್ಕೆ ಆಗಮಿಸಿ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗುರುಗಳ ಗದ್ದುಗೆಗಳಿಗೆ ನಿತ್ಯಪೂಜೆ, ಅಮಾವಾಸ್ಯೆಯಲ್ಲಿ ರುದ್ರಾಭಿಷೇಕ, ಶ್ರಾವಣ ಮಾಸದಲ್ಲಿ ಹಿರಿಯ ಗುರುಗಳ ಪುಣ್ಯಾರಾಧನೆ ಹಾಗೂ ಮಹಾನವಮಿಯಲ್ಲಿ ಒಂಬತ್ತು ದಿನಗಳ ಕಾಲ ದೇವಿ ಪಾರಾಯಣ ನಡೆಯುತ್ತಿದೆ. ಪಟ್ಟಾಧಿಕಾರದ ಸಂದರ್ಭದಲ್ಲಿ ನೂರಾಎಂಟು ಸಾಮೂಹಿಕ ವಿವಾಹಗಳನ್ನು ನಡೆಸಿದ್ದಲ್ಲದೆ,

ವಾರ್ಷಿಕ ಪುಣ್ಯಾರಾಧನೆ ಸಂದರ್ಭದಲ್ಲಿ ಸಾಮೂಹಿಕ ವಿವಾಹವನ್ನು ನಡೆಸಲಾಗುತ್ತಿದೆ. ಮಠದ ಆಸ್ತಿಯಾಗಿ ಎಂಬತ್ತು ಎಕರೆ ಜಮೀನಿದ್ದು, ಇದನ್ನು ಅಭಿವೃದ್ಧಿಪಡಿಸಿ ಆದಾಯದ ಮೂಲವನ್ನಾಗಿ ಮಾಡಿಕೊಳ್ಳಲಾಗಿದೆ.

ವಿಳಾಸ: ಷ.ಬ್ರ.ಶ್ರೀ ಅಭಿನವ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು, ಶ್ರೀಪಂಚಗ್ರಹ ಹಿರೇಮಠ, ಸುಳ್ಳ, ಹುಬ್ಬಳ್ಳಿ ತಾ, ಧಾರವಾಡಜಿಲ್ಲೆ.

ಹುಬ್ಬಳ್ಳಿ

ಧಾರವಾಡ ಜಿಲ್ಲೆಯ ಹುಬ್ಬಳ್ಳಿ ನಗರವು ಜಿಲ್ಲಾ ಕೇಂದ್ರದಿಂದ ಆಗ್ನೇಯಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಈ ನಗರವು ಪುರಾತನ ಕಾಲದಲ್ಲಿ ಪೂಹಳ್ಳಿ ಎಂದು ಹೆಸರಾಗಿತ್ತು. ಕಾಲಾನಂತರ ಪೂಹಳ್ಳಿ>ಹುಬ್ಬಳ್ಳಿಯಾಗಿ ರೂಪಾಂತರ ಪಡೆದಿದೆ. ರಾಜ್ಯದ ವ್ಯಾಪಾರೋದ್ಯಮದ ಪ್ರಮುಖ ನಗರವಾದ ಹುಬ್ಬಳ್ಳಿಯು ವೀರಶೈವ ಧರ್ಮದ ಕೇಂದ್ರ ಬಿಂದುವಾಗಿ ರೂಪುಗೊಂಡು ಬೆಳೆದಿದೆ. ಇಂತಹ ಪ್ರಸಿದ್ಧ ನಗರದಲ್ಲಿ ಒಟ್ಟು ಹದಿನೆಂಟು ಮಠಗಳು ಸ್ಥಾಪನೆಯಾಗಿದ್ದವು ಎಂದು ಹೇಳಲಾಗುತ್ತಿದೆ. ಇವುಗಳಲ್ಲಿ ಶ್ರೀ ಮೂರುಸಾವಿರ ಮಠ, ಶ್ರೀ ಹೊಸಮಠ, ಶ್ರೀ ಎರಡೆತ್ತಿನಮಠ, ಶ್ರೀ ರುದ್ರಾಕ್ಷಿಮಠ, ಶ್ರೀ ಕಲ್ಯಾಣಮಠ, ಶ್ರೀ ಶಿಗ್ಗಾಂವಿಮಠ, ಶ್ರೀ ಹನ್ನೆರಡೆತ್ತಿನ ಮಠ ಹಾಗೂ ಶ್ರೀಕಲ್ಬುರ್ಗಿಮಠ ಎಂಬ ಎಂಟು ಮಠಗಳು ಅಸ್ತಿತ್ವದಲ್ಲಿ ಉಳಿದಿವೆ.

ಮೂರುಸಾವಿರಮಠ: ಹುಬ್ಬಳ್ಳಿ ನಗರದಲ್ಲಿ ಸ್ಥಾಪನೆಯಾಗಿರುವ ಶ್ರೀ ಮೂರುಸಾವಿರ ಮಠವು ವೀರಶೈವ ಮಠಗಳಲ್ಲಿಯೇ ಅತ್ಯಂತ ಪ್ರಬಲ ಹಾಗೂ ಪ್ರತಿಷ್ಠಿತ ಮಠವಾಗಿ ಬೆಳೆದಿದೆ. ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕವಾಗಿ ವಿಶಿಷ್ಟ ಕೊಡುಗೆಯನ್ನು ನೀಡಿದೆ. ಈ ಮಠವು ಧರ್ಮ ಸಮನ್ವಯತೆಯನ್ನು ಸಾಧಿಸಿಕೊಂಡು, ಸಮಷ್ಟಿ ಸಮಾಜದ ಒಳಿತಿಗಾಗಿ ದುಡಿದು ಎಲ್ಲಾ ವರ್ಗದ ಜನರ ಪ್ರೀತಿಗೆ ಪಾತ್ರವಾಗಿದೆ.

ಮಠ ಸ್ಥಾಪನೆ: ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ನಡೆದ ಧಾರ್ಮಿಕಕ್ರಾಂತಿಯ ನಂತರ ಶರಣರು ತಮ್ಮ ತತ್ತ್ವಗಳನ್ನು ಸಾರಲು ನಾಡಿನಾದ್ಯಂತ ಪ್ರಯಾಣ ಬೆಳೆಸಿದಾಗ, ಮೂರುಸಾವಿರ ಶರಣರ ಗುಂಪು ಉಳವಿಯತ್ತ ಹೊರಟಿತು. ಈ ಶರಣರ ಗುಂಪಿನ ನಾಯಕರಾದ ಶ್ರೀ ಗುರುಸಿದ್ಧ ಸ್ವಾಮಿಗಳು ಮಾರ್ಗ ಮಧ್ಯದ ಹುಬ್ಬಳ್ಳಿಯಲ್ಲಿ ಕೆಲವು ದಿನ ನೆಲೆ ನಿಂತು, ಇಲ್ಲಿಯೇ ಲಿಂಗೈಕ್ಯರಾದರು. ಗುರುಗಳು ಲಿಂಗೈಕ್ಯರಾದ ಮೇಲೆ ಮೂರುಸಾವಿರ ಶರಣರು ಗುರುಗಳ ಗದ್ದುಗೆಯನ್ನು ನಿರ್ಮಿಸಿ, ಗದ್ದುಗೆಯ ಮೇಲೆ ಮಠವನ್ನು ಸ್ಥಾಪಿಸಿದರೆಂದು ಹೇಳಲಾಗುತ್ತಿದೆ.

ಶ್ರೀ ಅಲ್ಲಮ ಪ್ರಭುಗಳಿಂದ ಪ್ರಾರಂಭಗೊಂಡ ಶೂನ್ಯ ಪೀಠವು ಕಲ್ಯಾಣ ಕ್ರಾಂತಿಯ ನಂತರ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಮಧ್ಯಪ್ರದೇಶ ಈ ರೀತಿ ದೇಶದಾದ್ಯಂತ ಶೂನ್ಯ ಪೀಠದ ಪರಂಪರೆಯ ಮಠಗಳು ಸ್ಥಾಪನೆಗೊಂಡವು. ಈ ಸಂದರ್ಭದಲ್ಲಿ ಮೂರುಸಾವಿರ ಮಠವು ಸ್ಥಾಪನೆಯಾಗಿದೆ ಎಂದು ಡಾ. ವರದರಾಜ ಉಮರ್ಜಿ ಅವರ ಶಿರಸಿ ಶಾಸನಗಳು ಎಂಬ ಸಂಶೋಧನೆಯಿಂದ ದೃಢಪಟ್ಟಿದೆ. ಹನ್ನೆರಡನೆಯ ಶತಮಾನದಲ್ಲಿ ಸ್ಥಾಪನೆಗೊಂಡ ಶ್ರೀ ಮೂರುಸಾವಿರ ಮಠವು ಶರಣ ತತ್ತ್ವಗಳನ್ನು ಪ್ರಚಾರಗೊಳಿಸಿ, ಈತನಕ ಬೆಳೆದು ವೀರಶೈವ ಧರ್ಮವನ್ನು ಅಭಿವೃದ್ಧಿಪಡಿಸಿರುವುದಲ್ಲದೆ ಸಮಾಜದ ಒಂದು ಶಕ್ತಿಯಾಗಿ ರೂಪುಗೊಂಡಿದೆ.

ಪರಂಪರೆ: ಬಸವಾದಿ ಪ್ರಮಥರಿಂದ ಸ್ಥಾಪಿಸಲ್ಪಟ್ಟ ಕಲ್ಯಾಣದ ಅನುಭವ ಮಂಟಪದ ಶೂನ್ಯ ಪೀಠದ ಮೊದಲ ಅಧಿಪತಿಯಾದ ಶ್ರೀ ಅಲ್ಲಮಪ್ರಭು ಸ್ವಾಮಿಗಳ ತರುವಾಯ ಬೆಳೆದ, ನಾಲ್ಕು ಸಮಯಗಳಲ್ಲಿ ಕುಮಾರಸಮಯದ ಪರಂಪರೆಯಲ್ಲಿ ಬೆಳೆದ ಶ್ರೀ ಮೂರುಸಾವಿರ ಮಠವು ಆ ಸಮಯದ ಮೂಲ ಮಠವಾಗಿ ಬೆಳೆದಿದೆ. ಈ ಪರಂಪರೆಯಲ್ಲಿ ಕರ್ತೃಗುರುಗಳಾದ ಶ್ರೀ ಗುರುಸಿದ್ಧ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಇವರ ಕರಕಮಲ ಸಂಜಾತರಾಗಿದ್ದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿದರು. ನಂತರ ಅನೇಕ ಜನ ಗುರುಗಳು ಅಧಿಕಾರ ನಡೆಸಿದ್ದಾರೆ. ಪರಂಪರೆಯಲ್ಲಿ ಶ್ರೀ ಗುರುಸಿದ್ಧ ರಾಜಯೋಗೀಂದ್ರ ಸ್ವಾಮಿಗಳು ಹಾಗೂ ಶ್ರೀ ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳು ಎಂಬ ಎರಡು ಹೆಸರುಗಳೇ ಅನುಕ್ರಮಣಿಕೆಯಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಳ್ಳುವ ಸಂದರ್ಭದಲ್ಲಿ ಜಗದ್ಗುರುಗಳಿಗೆ ಅಭಿದಾನಗೊಳ್ಳುತ್ತಾ ಬಂದಿರುವುದರಿಂದ ಪರಂಪರೆಯಲ್ಲಿ ಅಧಿಕಾರ ವಹಿಸಿಕೊಂಡ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ಲಭ್ಯವಿಲ್ಲ.

೧೮೨೦ ರ ಸುಮಾರಿನಲ್ಲಿ ಶ್ರೀ ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಅನೇಕ ಜನಪರ ಕಾರ್ಯಗಳನ್ನು ಮಾಡಿ ಜನಪ್ರಿಯಗೊಂಡರು. ಇವರು ೧೮೨೪ರಲ್ಲಿ ಕಿತ್ತೂರಿನ ಅರಮನೆಯಿಂದ ಕಟ್ಟಿಗೆಯ ಕಂಬಗಳನ್ನು ತರಿಸಿ ಮಠಕ್ಕೆ ನೂತನ ಭವ್ಯವಾದ ಕಟ್ಟಡವನ್ನು ಕಟ್ಟಿಸಿದರು. ಶ್ರೀ ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳು ನಡೆಸುತ್ತಿದ್ದ ಧಾರ್ಮಿಕ ಕಾರ್ಯಗಳಿಗೆ ಭಕ್ತರು ಸ್ಪಂದಿಸತೊಡಗಿದರು. ಗುರುಗಳು ಧಾರ್ಮಿಕ ಕಾರ್ಯಗಳ ಜೊತೆಗೆ ಮಠದ ಅಭಿವೃದ್ಧಿಯ ಕಡೆಗೂ ಹೆಚ್ಚು ಆದ್ಯತೆ ಕೊಟ್ಟು ಮಠವನ್ನು ಅಭಿವೃದ್ಧಿಪಡಿಸಿದರು.

ಚಿಕ್ಕಮಗಳೂರು ಜಿಲ್ಲೆಯ ಅಂಬಳೆ ಗ್ರಾಮದ ದೊಡ್ಡಮಠದ ಶ್ರೀ ವೀರೇಶ ಶಾಸ್ತ್ರಿಗಳು ಶ್ರೀ ಗಂಗಾಧರ ರಾಜ ಯೋಗೀಂದ್ರ ಸ್ವಾಮಿಗಳೆಂಬ ಅಭಿದಾನದಿಂದ ೧೯೦೧ ರಲ್ಲಿ ಪರಂಪರಾಗತ ಮಠದ ಅಧಿಕಾರವನ್ನು ವಹಿಸಿಕೊಂಡರು. ಇವರು ಶಿವಪೂಜಾ ನಿಷ್ಠರಾಗಿ, ವೀರಶೈವ ಧರ್ಮದ ಅಷ್ಟಾವರಣ, ಪಂಚಾಚಾರ ಮತ್ತು ಷಟ್‌ಸ್ಥಲವನ್ನು ಬೋಧಿಸಿ ಆಚಾರವಂತ ಬದುಕನ್ನು ಬದುಕಿದರು. ಗುರುಗಳು ತಮ್ಮ ಕಾಲಾವಧಿಯಲ್ಲಿ ಜನಹಿತ ಕಾರ್ಯಕ್ರಮಗಳನ್ನು ಮಾಡಿ ಜನಮನ್ನಣೆಗೆ ಪಾತ್ರರಾದರು. ಇವರು ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಹಾನಗಲ್ಲು ಶ್ರೀ ಕುಮಾರ ಸ್ವಾಮಿಗಳು ಶಿವಯೋಗ ಮಂದಿರ ಮತ್ತು ಅಖಿಲಭಾರತ ವೀರಶೈವ ಮಹಾಸಭೆಯನ್ನು ಸ್ಥಾಪಿಸಲು ಹೋರಾಟ ನಡೆಸುತ್ತಿದ್ದರು. ಈ ಸಂದರ್ಭದಲ್ಲಿ ಶ್ರೀ ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳು ಹಾನಗಲ್ಲು ಶ್ರೀ ಕುಮಾರಸ್ವಾಮಿಗಳ ಪ್ರಯತ್ನಕ್ಕೆ ಬೆಂಬಲ ನೀಡಿ, ವೀರಶೈವ ಸಮಾಜದ ಸಂಘಟನೆಗೆ ಹಾಗೂ ಅಭಿವೃದ್ಧಿಗೆ ಪ್ರೋತ್ಸಾಹಿಸಿದರು.

ಶ್ರೀ ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳ ನಂತರ ಕೊಣ್ಣೂರಿನ ಶ್ರೀ ಕೆಂಪಯ್ಯ ಸ್ವಾಮಿಗಳು ಜಗದ್ಗುರು ಶ್ರೀ ಗುರುಸಿದ್ಧ ರಾಜಯೋಗೀಂದ್ರ ಸ್ವಾಮಿಗಳು ಎಂಬ ಅಭಿಧಾನ ಪಡೆದು ೧೯೨೫ರಲ್ಲಿ ಮಠದ ಅಧಿಕಾರವನ್ನು ವಹಿಸಿ ಕೊಂಡರು. ಇವರ ಪ್ರಗತಿಪರ ಧೋರಣೆಯಿಂದ ಮಠವು ಮತ್ತಷ್ಟು ಅಭಿವೃದ್ಧಿಗೊಂಡು, ವಿಸ್ತಾರವಾಗಿ ಬೆಳೆಯತೊಡಗಿತು. ಗುರುಗಳು ವೀರಶೈವ ಸಮಾಜದ ಶೈಕ್ಷಣಿಕ ಪ್ರಗತಿಗಾಗಿ ಕೆ.ಎಲ್.ಇ ಸಂಸ್ಥೆಯು ಹುಬ್ಬಳ್ಳಿಯಲ್ಲಿ ಕಾಮರ್ಸ್ ಕಾಲೇಜನ್ನು ಪ್ರಾರಂಭಿಸಲು ಮಹತ್ತರವಾದ ಕಾಣಿಕೆಯನ್ನು ನೀಡಿದರು. ಮಠದ ಅಭಿವೃದ್ಧಿಗೆ ಶ್ರಮಿಸಿ ೧೯೫೮ರಲ್ಲಿ ಲಿಂಗೈಕ್ಯರಾದರು. ನಂತರ ಇಲಕಲ್ಲು ಶ್ರೀ ವಿಜಯ ಮಹಾಂತೇಶ್ವರ ಮಠದಲ್ಲಿ ಉತ್ತರಾಧಿಕಾರಿಗಳಾಗಿ ನೇಮಕಗೊಂಡಿದ್ದ ಶ್ರೀ ಮಹಾಂತ ದೇವರನ್ನು ಹುಬ್ಬಳ್ಳಿಗೆ ಕರೆತಂದು ಶ್ರೀ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳೆಂದು ಅಭಿಧಾನ ಮಾಡಿ, ೧೯೫೮ ರಲ್ಲಿ ಪಟ್ಟಾಧಿಕಾರಕ್ಕೆ ತರಲಾಯಿತು.

ಹಾಸನ ಜಿಲ್ಲೆಯ ಸಸಿವಾಳ ಗ್ರಾಮದ ಕೊಳಗಲ್ಲು ಹಿರೇಮಠದ ಶ್ರೀ ಮರುಳಸಿದ್ಧಯ್ಯ ಮತ್ತು ಶ್ರೀಮತಿ ಚನ್ನಮ್ಮ ನವರ ಪುತ್ರರಾಗಿ ೧೯೨೭ರಲ್ಲಿ ಜನಿಸಿದ ಶ್ರೀ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳು, ಚಿತ್ತರಗಿ ಇಲಕಲ್ಲು ಮಠಗಳ ಗುರುಗಳಾದ ಶ್ರೀ ವಿಜಯ ಮಹಾಂತ ಶಿವಯೋಗಿಗಳ ಕೃಪಾಶೀರ್ವಾದಕ್ಕೆ ಒಳಗಾಗಿ ಆಧ್ಯಾತ್ಮವನ್ನು ಮೈಗೂಡಿಸಿಕೊಂಡರು. ತಮ್ಮ ಐದನೆಯ ವರ್ಷದ ವಯಸ್ಸಿನಲ್ಲೇ ಶಿವಯೋಗ ಮಂದಿರದಲ್ಲಿ ನೆಲೆಸಿ, ಹಾನಗಲ್ಲು ಶ್ರೀ ಕುಮಾರ ಸ್ವಾಮಿಗಳ ಹಾಗೂ ಹಾವೇರಿಯ ಹುಕ್ಕೇರಿ ಮಠದ ಮಠಾಧೀಶರಾದ ಶ್ರೀ ಶಿವಬಸವ ಸ್ವಾಮಿಗಳ ಕೃಪಾಶೀರ್ವಾದ ದಿಂದ ಬೆಳೆದು ಆಚಾರವಂತ ವ್ಯಕ್ತಿತ್ವದಿಂದ ಹೆಸರು ಪಡೆದರು. ಗುರುಗಳು ಶಿವಯೋಗ ಮಂದಿರದಲ್ಲಿ ವಿದ್ಯಾಭ್ಯಾಸ ಮುಗಿಸಿದ ನಂತರ ಕಾಶಿಯಲ್ಲಿ ಅಧ್ಯಯನ ಮಾಡಿ ಕಲ್ಕತ್ತಾದ 'ಕಾವ್ಯತೀರ್ಥ', ಢಾಕಾದ'ಸಾಹಿತ್ಯರತ್ನ' ಹಾಗೂ ಕಾಶಿ ಹಿಂದೂವಿಶ್ವ ವಿದ್ಯಾನಿಲಯದ ಸ್ನಾತಕೋತ್ತರ ಪದವಿ ಗಳನ್ನು (ವೇದಾಂತಚಾರ್ಯ) ಪಡೆದು ಆಂಗ್ಲ ಮತ್ತು ಹಿಂದಿ ಭಾಷೆಗಳಲ್ಲಿ ಹೆಚ್ಚು ಅಧ್ಯಯನ ಮಾಡಿ ಸಂಸ್ಕೃತ, ಹಿಂದಿ, ಆಂಗ್ಲ ಹಾಗೂ ಕನ್ನಡ ಭಾಷೆಗಳಲ್ಲಿ ಅಪಾರ ಪಾಂಡಿತ್ಯವನ್ನು ಸಂಪಾದಿಸಿಕೊಂಡರು.

ಸುವರ್ಣ ಯುಗದ ಕಾಲ: ಶ್ರೀ ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳು ಕ್ರಿಯಾಶೀಲರಾಗಿ, ಪ್ರಗತಿಪರ ಧೋರಣೆಯನ್ನು ಮೈಗೂಡಿಸಿಕೊಂಡಿದ್ದರು. ಇವರು ಸಮಾಜವನ್ನು ಅಭಿವೃದ್ಧಿಪಡಿಸುವ ಮೂಲ ಉದ್ದೇಶವನ್ನು ಹೊಂದಿ ಮಠದ ಆರ್ಥಿಕ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸತೊಡಗಿದರು. ಮಠವು ವರ್ಷದಿಂದ ವರ್ಷಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಸಂಪಾದಿಸುವಂತಾಗಿ ಆರ್ಥಿಕವಾಗಿ ಸದೃಢಗೊಂಡ ಮೇಲೆ ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಘ ಸಂಸ್ಥೆಗಳನ್ನು

ಪ್ರಾರಂಭಿಸಿ ಈ ಮೂಲಕ ಸಮಾಜದ ಸೇವೆಗೆ ಮುಂದಾದರು. ಶ್ರೀ ಮೂರುಸಾವಿರ ಮಠವನ್ನು ಸಾಮಾಜಿಕ,ಧಾರ್ಮಿಕ ಹಾಗೂ ಸಾಂಸ್ಕೃತಿಕ ಕೇಂದ್ರವನ್ನಾಗಿ ಕಟ್ಟಿ ಬೆಳೆಸಿದರು. ಮಠವು ಗುರುಗಳ ಕರ್ತೃತ್ವ ಶಕ್ತಿಯಿಂದ ಅಪಾರವಾದ ಸಾಧನೆಯನ್ನು ಸಾಧಿಸಿತು. ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳ ಆಡಳಿತದ ಅವಧಿ ಮಠದ ಪರಂಪರೆಯ ಇತಿಹಾಸದ ಪುಟಗಳಲ್ಲಿ ಸುವರ್ಣಯುಗವಾಗಿ ದಾಖಲಾಗಲಿದೆ.

ಸಾಮಾಜಿಕ ಸೇವೆ: ಭಾರತದ ಪ್ರಥಮ ರಾಷ್ಟ್ರಪತಿಯಾಗಿದ್ದ ಡಾ. ರಾಜೇಂದ್ರ ಪ್ರಸಾದ್‌ರವರು ೧೯೫೮ ರಲ್ಲಿ ಮೂರುಸಾವಿರ ಮಠಕ್ಕೆ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ "ಮಠವೆಂದರೆ ಕೇವಲ ಧಾರ್ಮಿಕ ಆಚರಣೆಯ ಕೇಂದ್ರವಾಗಿರದೆ, ಧಾರ್ಮಿಕ ಶ್ರದ್ಧಾ ಕೇಂದ್ರವಾಗಿ ಸಮಸ್ತ ಸಮಾಜವನ್ನು ಸಂಘಟನಾತ್ಮಕವಾಗಿ ವಿಕಾಸಗೊಳ್ಳುವಂತೆ ಮಾಡುವ ಪೂಜಾ ಗೃಹಗಳಾಗಿರಬೇಕು" ಎಂದು ಅಭಿಪ್ರಾಯಿಸಿದ್ದರು. ಈ ವಾಖ್ಯಾನಕ್ಕೆ ಅನುಗುಣವಾಗಿ ಶ್ರೀ ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳು ಮಠವನ್ನು ಕೇವಲ ವೀರಶೈವರಿಗಷ್ಟೇ ಸೀಮಿತಗೊಳಿಸದೆ, ಸರ್ವಧರ್ಮಗಳ ಸಮಾಜಕ್ಕೆ ತೆರೆದಿಟ್ಟು ಸಾರ್ವಜನಿಕರ ಗೌರವಕ್ಕೆ ಪಾತ್ರರಾದರು.

ಶ್ರೀ ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳು ಶಿವಯೋಗ ಮಂದಿರದ ಅಧ್ಯಕ್ಷರಾಗಿ ತಮ್ಮ ಕಾಲಾವಧಿಯಲ್ಲಿ ಶಿವಯೋಗ ಮಂದಿರದ ಸುವರ್ಣ ಮಹೋತ್ಸವವನ್ನು ನಡೆಸಿದರು. ಅಖಿಲ ಭಾರತ ವೀರಶೈವ ಮಹಾಸಭೆಯ ಹದಿನೇಳನೆಯ ಮಹಾ ಅಧಿವೇಶನವನ್ನು ಶಿವಯೋಗ ಮಂದಿರದಲ್ಲಿ ನಡೆಸಿರುವುದು ಒಂದು ಸಾಧನೆಯಾಗಿದೆ. ಜಾಗತಿಕ ಶಾಂತಿ ಸಮ್ಮೇಳನದಲ್ಲಿ ಭಾಗವಹಿಲು ಕರೆಬಂದಿದ್ದ ಸಂದರ್ಭದಲ್ಲಿ (೧೯೭೨)ನಾಡಿನಲ್ಲಿ ಅನಾವೃಷ್ಠಿಯಿಂದ ಬಳಲಿದ್ದ ಗುಲ್ಬರ್ಗ, ರಾಯಚೂರು, ಬೀದರ್, ಬಿಜಾಪುರ ಹಾಗೂ ಬೆಳಗಾವಿ ಜಿಲ್ಲೆಗಳ ಸಂತ್ರಸ್ಥರಿಗೆ ನೆರವು ನೀಡುವ ಸಲುವಾಗಿ, ಹುಬ್ಬಳ್ಳಿ ಹಾಗೂ ಧಾರವಾಡ ನಗರಗಳಲ್ಲಿ ಪಾದಯಾತ್ರೆಯನ್ನು ಕೈಗೊಂಡು ಹತ್ತುಲಕ್ಷ ರೂ ನಗದು, ಸಾವಿರಾರು ಚೀಲ ಧಾನ್ಯವನ್ನು ಹಾಗೂ ಲೋಡುಗಟ್ಟಲೆ ರೊಟ್ಟಿಯನ್ನು ಸಂಗ್ರಹಿಸಿಕೊಂಡು ಬರಗಾಲ ಪೀಡಿತ ಜಿಲ್ಲೆಗಳಿಗೆ ಹೋಗಿ ನೂರಾರು ಗಂಜಿ ಕೇಂದ್ರಗಳನ್ನು ಪ್ರಾರಂಭಿಸಿ, ಶ್ರೀ ಕುಮಾರೇಶ್ವರ ಶಿವಯೋಗಿ ಸಂಘದ ಸಾಧಕರನ್ನು ನಿಯೋಜಿಸಿ ಅನೇಕ ತಿಂಗಳು ಗಂಜಿ ಕೇಂದ್ರಗಳು ನಡೆಯುವಂತೆ ಮಾಡಿದರು. ಈ ಸಂದರ್ಭದಲ್ಲಿ ಜಾತಿ ಮತ ಮರೆತು ದಿನವೊಂದಕ್ಕೆ ನಲವತ್ತುಸಾವಿರಕ್ಕೂ ಹೆಚ್ಚು ನಿರ್ಗತಿಕರಿಗೆ ಎರಡು ಹೊತ್ತು ಪ್ರಸಾದದ ವ್ಯವಸ್ಥೆಯನ್ನು ಮಾಡಿಸಿದ ಸೇವಾ ಸಾಧನೆಯು ರಾಷ್ಟ್ರೀಯ ಮಟ್ಟದಲ್ಲಿ ದಾಖಲಾಗಿದೆ. ಜಗದ್ಗುರುಗಳ ದೂರದೃಷ್ಟಿ ಹಾಗೂ ಸಾಮಾಜಿಕ ಚಿಂತನೆಗಳಿಂದ ಶ್ರೀ ಮೂರುಸಾವಿರ ಮಠವು ಸಮಾಜದ ಕಲ್ಯಾಣದ ಕೇಂದ್ರವಾಗಿ ಬೆಳೆದಿದೆ.

ಘಟಪ್ರಭದಲ್ಲಿ ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಸಹಕಾರಿ ಆಸ್ಪತ್ರೆಯನ್ನು ಸ್ಥಾಪಿಸಿ, ಈ ಭಾಗದ ಗ್ರಾಮಾಂತರ ಬಡ ರೋಗಿಗಳಿಗೆ ನೆರವಾಗಿದ್ದಾರೆ. ಇಲ್ಲಿರುವ ಕ್ಷಯ ರೋಗದ ಘಟಕ ರಾಜ್ಯದ ಅತ್ಯುನ್ನತ ಘಟಕವಾಗಿ ಮಾನ್ಯತೆ ಪಡೆದಿದೆ. ಆಸ್ಪತ್ರೆಗೆ ಬರುವ ಬಡ ರೋಗಿಗಳ ಅನುಕೂಲಕ್ಕೆಂದು ಉಚಿತ ಪ್ರಸಾದ ನಿಲಯವನ್ನು ಪ್ರಾರಂಭಿಸಲಾಗಿದೆ.

ಧಾರ್ಮಿಕ ಕಾರ್ಯಗಳು: ಶ್ರೀ ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಶಿವಾನುಭವ ಮಂಟಪ ವನ್ನು ಸ್ಥಾಪಿಸಿ, ಶ್ರೀ ಕುಮಾರೇಶ್ವರ ಶಿವಯೋಗಿ ಸಂಘದ ಸಾಧಕರಿಂದ ವಚನ ಸಾಹಿತ್ಯದ ಪ್ರವಚನವು ನಿರಂತರವಾಗಿ ನಡೆಯುವಂತೆ ಮಾಡಿದ್ದಾರೆ. ಗುರುವಿರಕ್ತ ಮಠಗಳ ಉತ್ತರಾಧಿಕಾರಿಗಳಿಗೆ ತರಬೇತಿ ನೀಡುವ ಸಂಸ್ಥೆಯನ್ನು ಪ್ರಾರಂಭಿಸಿದ್ದಾರೆ. ನಾಡಿನ ಪ್ರಮುಖ ಮಠಗಳಲ್ಲಿ ಅಧಿಕಾರ ವಹಿಸಿಕೊಂಡಿರುವ ಗುರುಗಳು ಇಲ್ಲಿ ಆಶ್ರಯ ಪಡೆದು ಕಲಿತವರಾಗಿದ್ದಾರೆ.

ಮಠದ ಪರಂಪರೆಯ ಕರ್ತೃ ಗುರುಗಳಾದ ಶ್ರೀ ಗುರುಸಿದ್ಧ ಸ್ವಾಮಿಗಳ ಗದ್ದುಗೆಗೆ ನಿತ್ಯ ರುದ್ರಾಭಿಷೇಕ ಹಾಗೂ ಎರಡು ವೇಳೆ ಪೂಜೆಯನ್ನು ನಡೆಸಲಾಗುತ್ತಿದೆ. ಮಠದಲ್ಲಿ ಶ್ರೀ ಗುರುಸಿದ್ಧ ಸ್ವಾಮಿಗಳ ಜಾತ್ರೆಯನ್ನು ವರ್ಷಕ್ಕೊಮ್ಮೆ ನಡೆಸಲಾಗುತ್ತಿದೆ. ನಿತ್ಯ ಅನ್ನದಾಸೋಹದ ವ್ಯವಸ್ಥೆಯನ್ನು ನಡೆಸಲಾಗುತ್ತಿದೆ.

ಶೈಕ್ಷಣಿಕ ಸೇವೆ: ಶ್ರೀ ಜಗದ್ಗುರು ಮೂರುಸಾವಿರ ಮಠದ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿ ಇದರ ಅಡಿಯಲ್ಲಿ

ಶ್ರೀ ಜಗದ್ಗುರು ಗಂಗಾಧರ ಸಂಸ್ಕೃತ ಕಾಲೇಜು, ಶ್ರೀ ಜಗದ್ಗುರು ಗಂಗಾಧರ ಹೈಸ್ಕೂಲು

ಶ್ರೀ ಕುಮಾರೇಶ್ವರ ವೇದ ಜ್ಯೋತಿಷ್ಯ ಪಾಠಶಾಲೆ,
ಶ್ರೀ ಜಗದ್ಗುರು ಗಂಗಾಧರ ಪ್ರಾಥಮಿಕ ಶಾಲೆ,
ಶ್ರೀ ಜಗದ್ಗುರು ಗಂಗಾಧರ ಹಿಂದಿ ವಿದ್ಯಾಲಯ,
ಮಹಿಳಾ ಕೈಗಾರಿಕಾ ತರಬೇತಿ ಸಂಸ್ಥೆ,
ಹುಕ್ಕೇರಿಯಲ್ಲಿ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆ,
ನರ್ಸ್ ಟ್ರೈನಿಂಗ್ ಸ್ಕೂಲ್,
ಶಿರಡಾಣದಲ್ಲಿ ರೆಸಿಡೆನ್ಸಿಯಲ್ ಸ್ಕೂಲ್,
ಕಂಪ್ಯೂಟರ್ ತರಬೇತಿ ಕೇಂದ್ರ,
ಆರ್.ಎಸ್.ಎಸ್. ಮಹಿಳಾ ಮಹಾವಿದ್ಯಾಲಯ
ಶ್ರೀ ಗುರುಸಿದ್ಧೇಶ್ವರ ಶಿಶುವಿಹಾರ
ಶ್ರೀ ವಿಜಯ ಮಹಾಂತೇಶ ಲಲಿತಕಲಾ ಮಹಾವಿದ್ಯಾಲಯ
ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಕೀರ್ತನ ಮಹಾವಿದ್ಯಾಲಯ
ಶ್ರೀ ಹುಕ್ಕೇರಿ ಜಗದ್ಗುರು ಗಂಗಾಧರ ಜ್ಯೂನಿಯರ್ ಕಾಲೇಜು
ಕಲಾ ಮಹಾವಿದ್ಯಾಲಯ
ಶಿರಡಾಣದಲ್ಲಿ ವಸತಿಶಾಲೆ
ಹಿಂದಿ ಬಿ.ಎಡ್ ಕಾಲೇಜು

ಇನ್ನೂ ಮುಂತಾದ ಶಿಕ್ಷಣ ಸಂಸ್ಥೆಗಳನ್ನು ಮಠದ ವತಿಯಿಂದ ಪ್ರಾರಂಭಿಸಿರುವುದಲ್ಲದೆ, ಕರ್ನಾಟಕದಲ್ಲಿ ಪ್ರಾರಂಭಗೊಂಡ ಅನೇಕ ವಿದ್ಯಾ ಸಂಸ್ಥೆಗಳಿಗೆ ನೆರವಾಗಿ ಶಿಕ್ಷಣ ಕ್ಷೇತ್ರ ವ್ಯಾಪಕವಾಗಿ ಬೆಳೆಯುವಂತೆ ಮಾಡಿದ್ದಾರೆ.

ಸಾಹಿತ್ಯಿಕ ಸೇವೆ: ಶ್ರೀ ಜಗದ್ಗುರು ರಾಜಯೋಗೀಂದ್ರ ಸ್ವಾಮಿಗಳು ೧೯೫೭ ರಲ್ಲಿ ಸ್ಥಾಪಿಸಿದ'ಶ್ರೀ ಜಗದ್ಗುರು ಧರ್ಮಪ್ರಸಾರಕ ಧರ್ಮ ಮಂಡಲಿ'ಯು ಧಾರ್ಮಿಕ ಹಾಗೂ ಸಾಹಿತ್ಯಿಕ ಸಂಸ್ಥೆಯಾಗಿ ಬೆಳೆದು, ನೂರಾರು ಸಂಶೋಧಕರಿಗೆ ಸಹಾಯ ನೀಡಿ ಉತ್ತಮ ಸಂಶೋಧನಾ ಕೃತಿಗಳು ಪ್ರಕಟಗೊಳ್ಳುವಂತೆ ಮಾಡಿದೆ. ವೀರಶೈವ ಧರ್ಮ ಮತ್ತು ಸಾಹಿತ್ಯ ಕೃತಿಗಳ ಪ್ರಕಟಣೆಗೆ ಮೂರುಸಾವಿರ ಮಠವು ಕೋಟಿಗಟ್ಟಲೆ ಹಣವನ್ನು ವ್ಯಯ ಮಾಡಿದೆ.'ವೀರಶೈವ ಧರ್ಮ ಭಾರತಿ'ಎಂಬ ಮಾಲಿಕೆಯಡಿ ಚಿಕ್ಕ ಮಕ್ಕಳ ಮನೋವಿಕಾಸಕ್ಕಾಗಿ ಶರಣರ ಚರಿತ್ರೆಯ ಅಂಶಗಳನ್ನು ಒಳಗೊಂಡ ಚಿಕ್ಕ ಪುಸ್ತಕಗಳನ್ನು ಪ್ರಕಟಿಸಲಾಗಿದೆ. ಮಠದಲ್ಲಿ ಗ್ರಂಥ ಪುರಸ್ಕಾರ ಸಮಿತಿಯನ್ನು ರಚಿಸಿದ್ದು, ಇದರಡಿಯಲ್ಲಿ ಕನ್ನಡ ಸಾಹಿತ್ಯದ ಬಗ್ಗೆ ಸಂಶೋಧನಾತ್ಮಕ ಹಾಗೂ ವಿಮರ್ಶಾತ್ಮಕ ಗ್ರಂಥಗಳಿಗೆ ಪ್ರತಿವರ್ಷ ಬಹುಮಾನ ಕೊಡಲಾಗುತ್ತಿದೆ. ಆರೋಗ್ಯದಾಯಕ ದೃಷ್ಟಿಕೋನದಿಂದ ಬರೆದ ಕಥೆ, ಕಾದಂಬರಿ ಹಾಗೂ ಕಾವ್ಯಪ್ರಕಾರಗಳ ಸಾಹಿತ್ಯ ಕೃತಿಗಳಿಗೆ ಪುರಸ್ಕಾರ ನೀಡಲಾಗುತ್ತಿದೆ ಮಠದಿಂದ 'ಪರಂಜ್ಯೋತಿ' ಮಾಸಿಕವನ್ನು ಪ್ರಕಟಿಸಲಾಗುತ್ತಿದೆ.

ಹಿರಿಯ ಜಗದ್ಗುರುಗಳಾದ ಶ್ರೀ ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳು 'ಮೂ.ಜ.ಗಂ.' ಎಂಬ ಕಾವ್ಯ ನಾಮದಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ವಚನಗಳನ್ನು ತ್ರಿಪದಿಯಲ್ಲಿ ಬರೆದು ಪ್ರಕಟಿಸಿದ್ದಾರೆ. ವೀರಶೈವಾನಂದ ಚಂದ್ರಿಕೆ, (ಸಂ. ಗುರುಲಿಂಗ ದೇವರು), ವಿಶೇಷಾರ್ಥ ಪ್ರಕಾಶಿಕಾ (ಮಾಯಿದೇವ ವಿರಚಿತ), ತಂತ್ರಸಂಗ್ರಹ, (ಶಂಕರಪ್ಪ ಟೊಪಿಗಿ) ಸಂಸ್ಕೃತ ವ್ಯಾಕರಣ ದರ್ಪಣ (ಪಂಡಿತ್ ಬಸವರಾಜ ಶಾಸ್ತ್ರಿಗಳು), ಹಾನಗಲ್ಲು ಶ್ರೀ ಕುಮಾರ ಸ್ವಾಮಿಗಳ ಜೀವನ ಚರಿತ್ರೆ, (ಚನ್ನಮಲ್ಲಪ್ಪ ಮಾಸ್ತರ), ಹರಿಹರದೇವ (ಸಂ. ಕೆ.ಜಿ.ಕುಂದಣಗಾರ), ವಿವೇಕ ಚಿಂತಾಮಣಿ (ಸಂ. ಉಮಾಪತಿ ಶಾಸ್ತ್ರಿಗಳು),ಮಣಿ ವಚನಗಳು (ಡಾ.ಜ.ಚ.ನಿ), ವಚನಶಾಸ್ತ್ರ ರಹಸ್ಯ (ಸಂ.ರಂಗನಾಥ ದಿವಾಕರ), ಜೀವನ ವಿಕಾಸ (ಮೂ.ಜ.ಗಂ), ಅಮೃತಬಿಂದು ಭಾಗ.೧ (ಮೂ.ಜ.ಗಂ), ಸಂಸ್ಕೃತಿ (ಸ.ಸ.ಮಾಳವಾಡ), ಮೂರುಸಾವಿರ ಮಠದ ವಿಹಂಗಮ ನೋಟ (ಸಂಗಣ್ಣ ಕಲ್ಲೂರ), ಮೊಗ್ಗೆಯ ಮಾಲೆ (ಮೂ.ಜ.ಗಂ), ಕೋಳೂರು ಕೊಡಗೂಸು (ಹರಿಸರ್ವತೋವಾಚಾರ್ಯ), ಕೊಂಡಗುಳಿ ಕೇಶಿರಾಜನ ಕೃತಿಗಳು (ಡಾ.ಎಂ.ಎಂ.ಕಲಬುರ್ಗಿ), ರಾಮದಾಸರ ಮೇಲಿನ ಕಥೆಗಳು (ಬಿ.ಡಿ.ಜತ್ತಿ), ಆಯ್ದಕ್ಕಿ ಲಕ್ಕಮ್ಮ (ಎಸ್.ಎಸ್. ಭೂಸರೆಡ್ಡಿ), ಬಸವಯುಗದ ಶಿವಶರಣೆಯರು (ಶಾಂತಾದೇವಿ ಮಾಳವಾಡ), ಸಜ್ಜಲಗುಡ್ಡದ ಶರಣಮ್ಮನವರು (ಲಲಿತಾಂಬ ವೃಷಭೇಂದ್ರ ಸ್ವಾಮಿ), ವೀರಶೈವ ಸಂಸ್ಕೃತಿ (ಡಾ.ತಿಪ್ಪೇರುದ್ರಸ್ವಾಮಿ), ಕಾಶ್ಮೀರ ಮಹಾಯೋಗಿನಿ ಲಲ್ಲೇಶ್ವರಿ (ಪಂಚಾಕ್ಷರಿ ಹಿರೇಮಠ), ಶಿವನ ಡಂಗೂರ (ಡಾ. ದೇವೇಂದ್ರಕುಮಾರ ಹಕಾರಿ), ಶ್ರೀ ನಿಜಗುಣ ಶಿವಯೋಗಿಗಳು (ಸಂ. ಜಿ.ಎಂ.ಉಮಾಪತಿ ಶಾಸ್ತ್ರಿಗಳು), ಶರಣ ಮೇದರ ಕೇತಯ್ಯ (ಡಾ.ಎಂ.ಎಸ್.ಲಠ್ಠೆ), ಅಕ್ಕಮ್ಮನ ನೂರೊಂದು ವಚನಗಳು (ಡಾ.ಸಂಗಮೇಶ ಸವದತ್ತಿಮಠ) ಮುಂತಾದ ಕನ್ನಡದ ಕೃತಿಗಳ ಜೊತೆಗೆ ಹಿಂದಿ ಕೃತಿಗಳಾದ ವೀರಶೈವ ತತ್ತ್ವದರ್ಶನ (ಡಾ.ಸರೋಜಿನಿ ಮಹಿಷಿ), ಹಾನಗಲ್ಲು ಶ್ರೀ ಕುಮಾರ ಸ್ವಾಮಿಗಳ ಚರಿತ್ರೆ (ಪ್ರೊ. ರುದ್ರದೇವ ಜಂಬಗಿ), ವಿವಿಧತಾಸೆ ಏಕತಾ (ಮೂ.ಜ.ಗಂ) ಹಾಗೂ ಆಂಗ್ಲ

ಕೃತಿಗಳಾದ ದಿ ಲಿಂಗಾಯಿತ ಮೂಮೆಂಟ್, ದಿ ಮೇಕರ್ಸ್ ಆಫ್ ಮಿಂಟ್ (ಕರ್ತಾರನ ಕಮ್ಮಟಗ್ರಂಥದ ಅನುವಾದ)ಮುಂತಾದ ಒಟ್ಟು ನಾನೂರಕ್ಕೂ ಹೆಚ್ಚು ಕೃತಿಗಳನ್ನು ಮಠದ ವತಿಯಿಂದ ಪ್ರಕಟಿಸಿ, ಕನ್ನಡ ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಲಾಗಿದೆ.

ಸಂದ ಗೌರವ: ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ ಹಾಗೂ ಶೈಕ್ಷಣಿಕವಾಗಿ ಶ್ರೀ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳು ಮಾಡಿದ ಗಣನೀಯ ಸಾಧನೆಯನ್ನು ಗಮನಿಸಿ ಕರ್ನಾಟಕ ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ನೀಡಿದೆ. ಗುರುಗಳ ಸಾಹಿತ್ಯ ಸಾಧನೆ ಹಾಗೂ ಸಾಂಸ್ಕೃತಿಕ ಕಾಳಜಿಯನ್ನು ಮುಖ್ಯವಾಗಿಟ್ಟುಕೊಂಡು ಶ್ರೀ ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳ ಬಗ್ಗೆ ಇಬ್ಬರು ವಿದ್ಯಾರ್ಥಿಗಳು ಸಂಶೋಧನೆಯನ್ನು ನಡೆಸಿ, ಗುರುಗಳು ಮಾಡಿದ ಸಾಧನೆಯ ಫಲಶೃತಿ ಹಾಗೂ ಗುರುಗಳ ಇಚ್ಛಾ ಶಕ್ತಿಯ ಮೇಲೆ ಬೆಳಕು ಚೆಲ್ಲುವಂತಹ ಮಹಾ ಪ್ರಬಂಧವನ್ನು ಮಂಡಿಸಿದ್ದಾರೆ. ಇದು ಹಿರಿಯ ಗುರುಗಳ ಸಾಧನೆಗೆ ಸಂದ ಗೌರವವಾಗಿದೆ.

ಸಮರ್ಥ ಉತ್ತರಾಧಿಕಾರಿ: ಮಠವನ್ನು ಸಾಧನೆಯ ಉತ್ತುಂಗಕ್ಕೆ ಏರಿಸಿದ ಶ್ರೀ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳು ಮಠದ ಪರಂಪರೆಯನ್ನು ಉಳಿಸಿ ಬೆಳೆಸುವಂತಹ ಉತ್ತರಾಧಿಕಾರಿಗಳನ್ನಾಗಿ, ಹಾನಗಲ್ಲು ವಿರಕ್ತ ಮಠದ ಶ್ರೀಅಭಿನವ ಕುಮಾರ ಸ್ವಾಮಿಗಳನ್ನು ನೇಮಕ ಮಾಡಿಕೊಂಡು, ಜಗದ್ಗುರು 'ಶ್ರೀ ಗುರುಸಿದ್ಧ ರಾಜಯೋಗೀಂದ್ರ ಸ್ವಾಮಿ'ಗಳೆಂದು ಅಭಿಧಾನ ಮಾಡಿ ೧೯೯೯ರಲ್ಲಿ ಪಟ್ಟಾಧಿಕಾರವನ್ನು ನೀಡಿದ್ದಾರೆ.

ಶ್ರೀ ಗುರುಸಿದ್ಧ ರಾಜಯೋಗೀಂದ್ರ ಸ್ವಾಮಿಗಳು ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ಕಲ್ಕೆರೆ ಗ್ರಾಮದ ಶ್ರೀ ಶಿವಮೂರ್ತಯ್ಯ ಮತ್ತು ಶ್ರೀಮತಿ ಗಂಗಮ್ಮನವರ ಪುತ್ರರಾಗಿ ೧೯೫೮ ರಲ್ಲಿ ಜನಿಸಿದರು. ಇವರು ಪ್ರಾಥಮಿಕ ಶಿಕ್ಷಣವನ್ನು ಕಲ್ಕೆರೆಯಲ್ಲಿ, ಪ್ರೌಢಶಿಕ್ಷಣವನ್ನು ಗಿರಿಯಾಪುರದಲ್ಲಿ ಮುಗಿಸಿದರು. ಈ ಸಂದರ್ಭದಲ್ಲಿ ಗುರುಕುಮಾರಾಶ್ರಮದ ಶ್ರೀ ಸದಾಶಿವ ಸ್ವಾಮಿಗಳ ಕೃಪಾಶೀರ್ವಾದಕ್ಕೆ ಒಳಗಾಗಿ ಶಿವಯೋಗ ಮಂದಿರಕ್ಕೆ ತೆರಳಿದರು. ಗುರುಗಳು ಸಂಸ್ಕೃತ, ಯೋಗ ಹಾಗೂ ವೇದಾಧ್ಯಯ ನವನ್ನು ಮಾಡಿ ಸಮರ್ಥ ಗುರುಗಳಾಗಿ ರೂಪುಗೊಂಡರು. ಗುರುಗಳ ಸದಾಚಾರ ಸಂಪನ್ನತೆಯನ್ನು ಗುರುತಿಸಿದ ಹಾನಗಲ್ಲಿನ ಹಾನಗಲ್ಲು ವಿರಕ್ತಮಠಕ್ಕೆ ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿಕೊಂಡರು. ನಂತರ ಶ್ರೀಕುಮಾರ ಸ್ವಾಮಿಗಳು ಎಂಬ ಅಭಿಧಾನದೊಂದಿಗೆ ೧೯೮೦ರಲ್ಲಿ ಪರಂಪರಾಗತ ಮಠದ ಅಧಿಕಾರವನ್ನು ವಹಿಸಿಕೊಂಡಿದ್ದರು. ಗುರುಗಳು ತಮ್ಮ ಅಧಿಕಾರದ ಅವಧಿಯಲ್ಲಿ ಸಮರ್ಥವಾದ ಆಡಳಿತವನ್ನು ನೀಡಿದ್ದಲ್ಲದೆ, ವೀರಶೈವ ಧರ್ಮದ ಪ್ರಚಾರ ಕಾರ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿ ಸಮರ್ಥ ಗುರುವಾಗಿ ಹೆಸರು ಪಡೆದುಕೊಂಡರು. ಇದರ ಪ್ರತಿಫಲವೇ ನಾಡಿನ ಹೆಸರಾಂತ ಮಠದ ಜಗದ್ಗುರುಗಳಾಗಲು ಕಾರಣವಾಯಿತು. ಇವರು ಮೂರುಸಾವಿರ ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ಹಿರಿಯ ಗುರುಗಳಾದ ಶ್ರೀ ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳ ಮಾರ್ಗದರ್ಶನದಲ್ಲಿ, ಶ್ರೀಮಂತ ಮಠದ ಆಡಳಿತವನ್ನು ಜವಾಬ್ದಾರಿಯುತವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಸದಾಚಾರ ಸಂಪನ್ನತೆ ಹಾಗೂ ವಿದ್ವತ್‌ಪೂರ್ಣ ಪಾಂಡಿತ್ಯದೊಂದಿಗೆ ವೀರಶೈವ ಧರ್ಮವನ್ನು ಪ್ರಚಾರಪಡಿಸುತ್ತಾ, ಇತಿಹಾಸ ಪ್ರಸಿದ್ಧ ಮಠವನ್ನು ತಮ್ಮ ಚೈತನ್ಯಶೀಲ ಗುಣಗಳಿಂದ ಮತ್ತಷ್ಟು ಬೆಳಗಿಸುವ ನಿಟ್ಟಿನಲ್ಲಿ ಮುಂದಾಗಿದ್ದಾರೆ.

ವಿಳಾಸ:ಶ್ರೀ ಮ.ನಿ.ಪ್ರ.ಜಗದ್ಗುರು ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳು,ಶ್ರೀಮೂರುಸಾವಿರಮಠ,ಹುಬ್ಬಳ್ಳಿ, ಧಾರವಾಡ ಜಿಲ್ಲೆ.
ಆಧಾರ: 'ರಜತ ದೀಪ್ತಿ' ಸಂಪಾದಕರು : ಪ್ರೊ. ಜಿ.ಎಚ್.ಹನ್ನೆರಡು ಮಠ, ಪ್ರೊ. ಎನ್.ವೈ.ಪಾನಿಶೆಟ್ಟರ
'ಪೂರ್ಣಪ್ರಜ್ಞ ಗಂಗಾಧರ' ಲೇಖಕರು : ಜಿ.ಎಚ್.ಹನ್ನೆರಡು ಮಠ

ಹೊಸಮಠ: ಹುಬ್ಬಳ್ಳಿ ನಗರದ ಅಕ್ಕಿಹೊಂಡ ಬಡಾವಣೆಯಲ್ಲಿ ವಿರಕ್ತ ಸಂಪ್ರದಾಯದ ಶ್ರೀ ಹೊಸಮಠವು ಸ್ಥಾಪನೆಯಾಗಿದೆ. ಮುನ್ನೂರು ವರ್ಷಗಳ ಹಿಂದೆ ಶ್ರೀ ಬಸವಲಿಂಗ ಸ್ವಾಮಿಗಳಿಂದ ಸ್ಥಾಪಿತಗೊಂಡ ಈ ಮಠವು ಈತನಕ ಬೆಳೆದು ಇಲ್ಲಿನ ಧಾರ್ಮಿಕ ಚಟುವಟಿಕೆಗಳ ತಾಣವಾಗಿ ಬೆಳೆದಿದೆ.

ಪರಂಪರೆ: ೧. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು

೨. ಶ್ರೀ ಮ.ನಿ.ಪ್ರ. ಶಿವಬಸವಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಚಂದ್ರಶೇಖರಸ್ವಾಮಿಗಳು

ಈ ರೀತಿ ಮಠದ ಪರಂಪರೆಯ ಕೆಲವು ಗುರುಗಳ ಹೆಸರನ್ನು ಮಾತ್ರ ದಾಖಲಿಸಲಾಗಿದೆ. ಹತ್ತು ಜನ ಗುರುಗಳು ಅಧಿಕಾರವನ್ನು ನಡೆಸಿರುವರೆಂದು ಹೇಳಲಾಗುತ್ತಿದೆ. ಉಳಿದ ಗುರುಗಳ ಹೆಸರುಗಳು ಲಭ್ಯವಿಲ್ಲ. ಕರ್ತೃಗುರುಗಳಾದ ಶ್ರೀ ಬಸವಲಿಂಗ ಸ್ವಾಮಿಗಳು ಲೋಕ ಸಂಚಾರ ಮಾಡುತ್ತಾ, ವೀರಶೈವ ಧರ್ಮದ ತತ್ತ್ವಗಳನ್ನು ಪ್ರಚಾರಪಡಿಸಿ ಹುಬ್ಬಳ್ಳಿಗೆ ಬಂದು ನೆಲೆಸಿದರು. ಗುರುಗಳು ಹುಬ್ಬಳ್ಳಿಯ ಹೊರಭಾಗದಲ್ಲಿ ನೆಲೆ ನಿಂತು ಅನುಷ್ಠಾನವನ್ನು ಕೈಗೊಂಡಿದ್ದರು. ಇಂತಹ ಸಂದರ್ಭದಲ್ಲಿ ಹುಬ್ಬಳ್ಳಿಯ ಭಕ್ತರು ಗುರುಗಳನ್ನು ಗಮನಿಸಿ ಇಲ್ಲಿಯೇ ನೆಲೆ ನಿಲ್ಲುವಂತೆ ಮಾಡಿದರು. ನಂತರ ಭಕ್ತರ ಸಹಕಾರ ಪಡೆದು ಮಠವನ್ನು ನಿರ್ಮಿಸಿದರು. ಅಂದು ಪ್ರಾರಂಭಗೊಂಡ ಮಠ ಈತನಕ ಬೆಳೆದು ಶ್ರೀಮಂತಗೊಂಡಿದೆ. ಕರ್ತೃ ಗುರುಗಳ ನಂತರ ಅಧಿಕಾರಕ್ಕೆ ಬಂದ ಶ್ರೀಶಿವಬಸವ ಸ್ವಾಮಿಗಳು ಹಾಗೂ ಶ್ರೀ ಸಿದ್ಧಲಿಂಗ ಸ್ವಾಮಿಗಳ ಬಗ್ಗೆ ಹೆಚ್ಚು ಮಾಹಿತಿ ಲಭ್ಯವಿಲ್ಲ. ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ತಳಕಲ್ಲು ಗ್ರಾಮದ ಶ್ರೀ ವೀರಭದ್ರಯ್ಯ ಮತ್ತು ಶ್ರೀಮತಿ ಗಂಗಮ್ಮನವರ ಪುತ್ರರಾಗಿ ಜನಿಸಿದ ಜಗದ್ಗುರು ಶ್ರೀ ಚಂದ್ರಶೇಖರ ಶಿವಯೋಗಿ ರಾಜಯೋಗೀಂದ್ರ ಸ್ವಾಮಿಗಳು ಮಠದ ಪರಂಪರೆಯ ಹತ್ತನೆಯ ಗುರುಗಳಾಗಿ ೧೯೮೬ರಲ್ಲಿ ಅಧಿಕಾರವನ್ನು ವಹಿಸಿಕೊಂಡು ಆಡಳಿತ ನಡೆಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗುರುಗಳ ಎಂಟು ಗದ್ದುಗೆಗಳು ಮಠದಲ್ಲಿ ಸ್ಥಾಪನೆಯಾಗಿದ್ದು ಇವುಗಳಿಗೆ ನಿತ್ಯಪೂಜೆಯನ್ನು ನಡೆಸಲಾಗುತ್ತಿದೆ. ಒಂಬತ್ತು ದಿನಗಳ ಕಾಲ ವಿವಿಧ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ದಸರಾಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಅಲ್ಲದೆ ಶಿವರಾತ್ರಿ ಉತ್ಸವ ಹಾಗೂ ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಅನ್ನ ದಾಸೋಹವನ್ನು ವ್ಯವಸ್ಥೆ ಮಾಡಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಜಗದ್ಗುರು ಶ್ರೀ ಚಂದ್ರಶೇಖರ ಶಿವಯೋಗಿ ರಾಜಯೋಗೀಂದ್ರ ಸ್ವಾಮಿಗಳು, ಶ್ರೀ ಹೊಸಮಠ, ಹುಬ್ಬಳ್ಳಿ, ಅಕ್ಕಿಹೊಂಡ, ಧಾರವಾಡ ಜಿಲ್ಲೆ.

ಎರಡೆತ್ತಿನಮಠ: ಹುಬ್ಬಳ್ಳಿ ನಗರದ ವೀರಾಪುರ ರಸ್ತೆಯಲ್ಲಿ ಶ್ರೀ ಎರಡೆತ್ತಿನಮಠವು ಸ್ಥಾಪನೆಯಾಗಿದೆ. ವಿರಕ್ತ ಸಂಪ್ರದಾಯದ ಕುಮಾರ ಸಮಯದ ಈ ಮಠವು ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಾ ವೀರಶೈವ ಧರ್ಮವನ್ನು ಬೆಳೆಸಿದೆ. ಈ ಭಾಗದಲ್ಲಿ ಯಾರೂ ಕಟ್ಟಿರದಂತಹ ದೊಡ್ಡದಾದ ಎರಡು ಎತ್ತುಗಳನ್ನು ಕಟ್ಟಿ ಬೇಸಾಯ ಮಾಡುತ್ತಿದ್ದ ಕಾರಣಕ್ಕೆ ಈ ಮಠಕ್ಕೆ ರೂಢಿಗತವಾಗಿ 'ಶ್ರೀ ಎರಡೆತ್ತಿನ ಮಠ' ಎಂದು ಹೆಸರು ಬಂದಿದೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಗುರುಸಿದ್ಧಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಚನ್ನವೀರಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಮರಿದೇವರು
೭. ಶ್ರೀ ಮ.ನಿ.ಪ್ರ. ಚನ್ನವೀರಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು

ಈ ರೀತಿ ಮಠದ ಪರಂಪರೆಯ ಬೆಳೆದು ಬಂದಿದೆ. ಕರ್ತೃ ಗುರುಗಳಿಂದ ಪರಂಪರೆಯ ನಾಲ್ಕನೆಯ ಗುರುಗಳ ತನಕ ಮಾಹಿತಿ ಲಭ್ಯವಿಲ್ಲ. ಐದನೆಯ ಗುರುಗಳಾದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಯಗಟಿ ಗ್ರಾಮದಿಂದ ಲೋಕಸಂಚಾರ ಮಾಡುತ್ತಾ ಹಂಪಿಯಲ್ಲಿ ಕೆಲವು ದಿನ ಅನುಷ್ಠಾನಗೊಂಡಿದ್ದರು. ಗುರುಗಳು

ವಾಕ್‌ಸಿದ್ಧಿಗಳಾಗಿ ಹಾಗೂ ಶಿವಪೂಜಾನಿಷ್ಠರಾಗಿ ಹೆಸರು ಗಳಿಸಿದ್ದರು. ಇವರ ಸದಾಚಾರ ಸಂಪನ್ನತೆಯನ್ನು ಗುರುತಿಸಿದ ಮಠದ ಭಕ್ತರು ಹಂಪಿಯಿಂದ ಕರೆತಂದು ೧೯೪೪ ರಲ್ಲಿ ಪಟ್ಟಾಧಿಕಾರವನ್ನು ಮಾಡಿದ್ದಾರೆ. ಇವರು ಮಠವನ್ನು ಅಭಿವೃದ್ಧಿಪಡಿಸಿ ಜನಮನ್ನಣೆಗೆ ಪಾತ್ರರಾದರು. ಇವರ ನಂತರ ಶ್ರೀ ಮರಿದೇವರು ಅನೇಕ ವರ್ಷಗಳ ಕಾಲ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದು ಮಠವನ್ನು ಅಭಿವೃದ್ಧಿಪಡಿಸಿದರು. ಇವರು ಮಠದ ಅಧಿಕಾರವನ್ನು ವಹಿಸಿಕೊಳ್ಳದೆ ಲಿಂಗೈಕ್ಯರಾದರು. ಇವರ ನಂತರ ಬೆಳಗಾಂ ಜಿಲ್ಲೆಯ ಯಾದವಾಡದ ಶ್ರೀ ಚನ್ನವೀರ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಅಭಿವೃದ್ಧಿಪಡಿಸಿ, ಶ್ರೀ ಸಿದ್ಧಲಿಂಗ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿ ೧೯೭೨ ರಲ್ಲಿ ಲಿಂಗೈಕ್ಯರಾದರು. ಬಾಗಲಕೋಟೆಯ ಶ್ರೀ ವೀರಭದ್ರಯ್ಯ ಮತ್ತು ಶ್ರೀಮತಿ ವೀರಮ್ಮನವರ ಪುತ್ರರಾಗಿ ಜನಿಸಿದ, ಶ್ರೀ ಸಿದ್ಧಲಿಂಗ ಸ್ವಾಮಿಗಳು ಶಿವಯೋಗ ಮಂದಿರ ಹಾಗೂ ಹುಬ್ಬಳ್ಳಿಯಲ್ಲಿ ವಿದ್ಯಾಭ್ಯಾಸ ಮಾಡಿ, ಉನ್ನತ ವಿದ್ಯಾಭ್ಯಾಸಕ್ಕೆಂದು ಕಾಶಿಗೆ ಹೋಗಬೇಕಿತ್ತು. ಆದರೆ ಶ್ರೀ ಚನ್ನವೀರ ಸ್ವಾಮಿಗಳು ಲಿಂಗೈಕ್ಯರಾದ ಕಾರಣ ಮಠಕ್ಕೆ ತೆರಳಿ, ನಾಲ್ಕುವರ್ಷಗಳ ಕಾಲ ಮಠದ ಅಧಿಕಾರವನ್ನು ವಹಿಸಿಕೊಳ್ಳದೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು, ನಂತರ ೧೯೭೬ರಲ್ಲಿ ನಿರಂಜನ ಪಟ್ಟಾಧಿಕಾರ ವನ್ನು ಪಡೆದುಕೊಂಡರು.

ಧಾರ್ಮಿಕ ಕಾರ್ಯಗಳು: ಮಠದಲ್ಲಿ ಪರಂಪರೆಯ ಏಳು ಜನ ಗುರುಗಳ ಗದ್ದುಗೆಗಳು ಸ್ಥಾಪನೆಯಾಗಿವೆ. ಈ ಗದ್ದುಗೆಗಳಿಗೆ ಮೂರು ವೇಳೆ ಪೂಜೆ, ಅಮಾವಾಸ್ಯೆಯಲ್ಲಿ ಶಿವಾನುಭವಗೋಷ್ಠಿ, ಶ್ರಾವಣ ಮಾಸದ ಮೊದಲ ತಿಂಗಳು ಅನುಷ್ಠಾನ, ಪುರಾಣ, ಪ್ರವಚನ ಹಾಗೂ ಹಿರಿಯ ಗುರುಗಳ ಪುಣ್ಯಾರಾಧನೆಯ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಅನ್ನ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಶೈಕ್ಷಣಿಕ ಸೇವೆ: ಧಾರ್ಮಿಕ ಮತ್ತು ಸಾಮಾಜಿಕವಾಗಿ ಗುರುತಿಸಿಕೊಂಡ ಎರಡೆತ್ತಿನ ಮಠವು ಶೈಕ್ಷಣಿಕವಾಗಿಯೂ ಸಾಧನೆ ಮಾಡಿದೆ.'ಶ್ರೀ ಚನ್ನವೀರೇಶ್ವರ ವಿದ್ಯಾವರ್ಧಕ ಸಂಸ್ಥೆ'ಯನ್ನು ಸ್ಥಾಪಿಸಿ ಹಿಂದಿ ವಿದ್ಯಾಪೀಠ, ಶ್ರೀ ಸಿದ್ಧಲಿಂಗೇಶ್ವರ ಟ್ಯುಟೋರಿಯಲ್ಸ್, ಬಿಜಾಪುರ ತಾಲ್ಲೂಕಿನ ನಿಡೋಣಿ ಶಾಖಾ ಮಠದಲ್ಲಿ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜನ್ನು ಪ್ರಾರಂಭಿಸಲಾಗಿದೆ. ಇಲ್ಲಿ ಒಂದು ವಸತಿ ಶಾಲೆಯನ್ನು ನಡೆಸುತ್ತಿದ್ದು ಸುಸಜ್ಜಿತವಾದ ಕಟ್ಟಡವನ್ನು ನಿರ್ಮಿಸಲಾಗಿದೆ.

ಗುರುಗಳು ಕ್ರಿಯಾಶೀಲರಾಗಿ ಪ್ರಗತಿ ಪರ ಧೋರಣೆಯನ್ನು ಹೊಂದಿದ್ದು, ಮಠವನ್ನು ಅಭಿವೃದ್ಧಿಗೊಳಿಸುತ್ತಿದ್ದಾರೆ. ಅಲ್ಲದೆ ಸಾಹಿತ್ಯದ ಒಲವನ್ನು ಬೆಳೆಸಿಕೊಂಡು ಮೂರು ಧಾರ್ಮಿಕ ಗ್ರಂಥಗಳನ್ನು ರಚಿಸಿದ್ದು, ಇವುಗಳು ಪ್ರಕಟಣೆಯ ಹಂತದಲ್ಲಿವೆ. ವಚನಗಳು ಹಾಗೂ ಅನೇಕ ಕವನಗಳನ್ನು ರಚಿಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಸಿದ್ಧಲಿಂಗ ಸ್ವಾಮಿಗಳು, ಶ್ರೀ ಎರಡೆತ್ತಿನ ಮಠ, ಹುಬ್ಬಳ್ಳಿ, ವೀರಾಪುರ ರಸ್ತೆ, ಧಾರವಾಡ ಜಿಲ್ಲೆ.

ಕಲ್ಯಾಣಮಠ: ಹುಬ್ಬಳ್ಳಿ ನಗರದ ಮಂಗಳವಾರ ಪೇಟೆಯಲ್ಲಿ ಸ್ಥಾಪನೆಯಾಗಿರುವ ಶ್ರೀ ಕಲ್ಯಾಣಮಠವು, ಕುಮಾರ ಸಮಯದ ವಿರಕ್ತಮಠವಾಗಿದೆ. ಈ ಮಠವನ್ನು ಹನ್ನೆರಡನೆಯ ಶತಮಾನದಲ್ಲಿ ಶ್ರೀ ಗುರುಸಿದ್ಧೇಶ್ವರ ಸ್ವಾಮಿಗಳು ಸ್ಥಾಪಿಸಿದ್ದರೆಂದು ಹೇಳಲಾಗುತ್ತಿದೆ. ಕಲ್ಯಾಣದ ಕ್ರಾಂತಿಯ ನಂತರ ಮೂರುಸಾವಿರ ವಿರಕ್ತರೊಂದಿಗೆ ಆಗಮಿಸಿದ ಶರಣರ ತಂಡ ಹುಬ್ಬಳ್ಳಿಯಲ್ಲಿ ನೆಲೆಸಿದಾಗ ಶ್ರೀ ಗುರುಸಿದ್ಧೇಶ್ವರರೆಂಬುವರು ಇಲ್ಲಿ ನೆಲೆಗೊಂಡು ಮಠವನ್ನು ಸ್ಥಾಪಿಸಿ ಲಿಂಗೈಕ್ಯರಾಗಿದ್ದಾರೆ ಎಂದು ಹೇಳಲಾಗುತ್ತಿದೆ. ಈ ಮಠವು ಹಿಂದೆ ವೈಭವಯುತವಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬೆಳೆದು ಬಂದಿದೆ. ಪುರಾತನ ಪರಂಪರೆಯನ್ನು ಹೊಂದಿರುವ ಮಠ ಎಂಬುದಕ್ಕೆ ಜೀರ್ಣಾವಸ್ಥೆಯ ಮಠದ ಕಟ್ಟಡವೇ ಸಾಕ್ಷಿಯಾಗಿದೆ. ಮಠದ ಆವರಣದಲ್ಲಿ ಮೂರು ಗದ್ದುಗೆಗಳು ಸ್ಥಾಪನೆಯಾಗಿವೆ. ಆದರೆ ಶ್ರೀ ಗುರುಸಿದ್ಧೇಶ್ವರ ಸ್ವಾಮಿಗಳು ಹಾಗೂ ಶ್ರೀ ಬಸವಲಿಂಗ ಸ್ವಾಮಿಗಳ ಹೆಸರನ್ನು ಹೊರತುಪಡಿಸಿದರೆ ಈ ಮಠದಲ್ಲಿ ಅಧಿಕಾರ ನಡೆಸಿದ ಗುರುಗಳ ಪರಂಪರೆಯ ಬಗ್ಗೆ ಹೇಳುವವರು ಯಾರೂ ಇಲ್ಲ. ಈಗ ಮಠದ ಹೆಸರಿನಲ್ಲಿ ವಿಶ್ವಸ್ಥ ಮಂಡಳಿಯು ರಚನೆಯಾಗಿದೆ. ಅಲ್ಲದೆ ಶ್ರೀ ಚನ್ನವೀರದೇವರು ಮಠಕ್ಕೆ ಬಂದು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಚನ್ನವೀರ ದೇವರು, ಶ್ರೀ ಕಲ್ಯಾಣಮಠ, ಹುಬ್ಬಳ್ಳಿ, ಮಂಗಳವಾರ ಪೇಟೆ, ಧಾರವಾಡ ಜಿಲ್ಲೆ.

ರುದ್ರಾಕ್ಷಿಮಠ: ಹುಬ್ಬಳ್ಳಿ ನಗರದ ಮಂಗಳವಾರ ಪೇಟೆ ಬಡಾವಣೆಯಲ್ಲಿ ಕುಮಾರ ಸಮಯದ, ವಿರಕ್ತ ಮಠವಾದ ಶ್ರೀ ರುದ್ರಾಕ್ಷಿ ಮಠವನ್ನು ಮುನ್ನೂರು ವರ್ಷಗಳ ಹಿಂದೆ ಶ್ರೀ ಬಸವಲಿಂಗ ಶಿವಯೋಗಿಗಳು ಸ್ಥಾಪಿಸಿದರೆಂದು ಹೇಳಲಾಗುತ್ತಿದೆ. ಕರ್ತೃಗುರುಗಳ ಬಗ್ಗೆ ಸ್ಪಷ್ಟವಾದ ಆಧಾರಗಳು ಇಲ್ಲದೆ ಇರುವ ಕಾರಣ ಗುರುಗಳ ಬಗ್ಗೆ ಮಾಹಿತಿ ಲಭ್ಯವಿಲ್ಲ.

ಪರಂಪರೆ: ಶ್ರೀ ಬಸವಲಿಂಗ ಶಿವಯೋಗಿಗಳ ನಂತರ ಅಧಿಕಾರ ನಡೆಸಿದ ಬಹುತೇಕ ಗುರುಗಳು ಕರ್ತೃ ಗುರುಗಳ ಹೆಸರನ್ನೇ ಅಭಿದಾನ ಪಡೆದು ಅಧಿಕಾರಕ್ಕೆ ಬರುತ್ತಿರುವ ಕಾರಣ ಮಠದ ಪರಂಪರೆಯ ಗುರುಗಳ ಬಗ್ಗೆ ಮಾಹಿತಿ ಲಭ್ಯವಿಲ್ಲ. ಶ್ರೀಚನ್ನಮಲ್ಲ ಸ್ವಾಮಿಗಳು ಹಾಗೂ ಶ್ರೀ ರುದ್ರಮುನಿ ಸ್ವಾಮಿಗಳು ಅಧಿಕಾರವನ್ನು ನಡೆಸಿದ ಬಗ್ಗೆ ಮಾಹಿತಿ ಲಭ್ಯವಿದೆ.

ಗರಗ ನಾಗಲಾಪುರ ಗ್ರಾಮದ ಶ್ರೀ ರುದ್ರಮುನಿ ಸ್ವಾಮಿಗಳು ೧೯೭೫ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡು, ಮಠವನ್ನು ಅಭಿವೃದ್ಧಿಪಡಿಸಿ ೧೯೯೨ ರಲ್ಲಿ ಲಿಂಗೈಕ್ಯರಾದರು. ಇವರ ನಂತರ ಹುನಗುಂದ ತಾಲ್ಲೂಕಿನ ವೀರಾಪುರದ ಶ್ರೀಆದಯ್ಯ ಮತ್ತು ಶ್ರೀಮತಿ ಸಿದ್ಧಲಿಂಗಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಬಸವಲಿಂಗ ಸ್ವಾಮಿಗಳು, ೧೯೯೨ರಲ್ಲಿ ಮಠದ ಅಧಿಕಾರವನ್ನು ವಹಿಸಿಕೊಂಡರು. ಗುರುಗಳು ವೀರಾಪುರ, ಹುನಗುಂದ ಹಾಗೂ ಶಿವಯೋಗ ಮಂದಿರದಲ್ಲಿ ವಿದ್ಯಾಭ್ಯಾಸವನ್ನು ಮಾಡಿ ಮಠಕ್ಕೆ ಆಗಮಿಸಿ ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಪರಂಪರೆಯ ಕರ್ತೃ ಗುರುಗಳ ಗದ್ದುಗೆ ಸೇರಿದಂತೆ ಒಟ್ಟು ಐದು ಗದ್ದುಗೆಗಳು ಸ್ಥಾಪನೆಗೊಂಡಿವೆ. ಇವುಗಳಿಗೆ ನಿತ್ಯಪೂಜೆ, ಪ್ರತಿ ಸೋಮವಾರ ಸಂಜೆ ಶಿವಾನುಭವಗೋಷ್ಠಿ, ಬೆಳಿಗ್ಗೆ ಎಂಟರಿಂದ ಒಂಬತ್ತರವರೆಗೆ ಸಾಮೂಹಿಕ ಪ್ರಾರ್ಥನೆ, ಜನವರಿ ಹದಿನಾಲ್ಕರಂದು ಸಿದ್ಧರಾಮೇಶ್ವರ ಜಯಂತಿ, ಕಾರ್ತೀಕಮಾಸದಲ್ಲಿ ಶ್ರೀ ನಿಜಗುಣರ ಜಯಂತಿ ವಿಶೇಷವಾಗಿ ೧೯೫೬ರಿಂದ ನಡೆಯುತ್ತಾ ಬಂದಿದೆ. ಶ್ರೀ ನಿಜಗುಣರ ಬಗ್ಗೆ ವಿಶೇಷ ಗ್ರಂಥಗಳನ್ನು ಪ್ರಕಟಿಸಿದ್ದು ಕೈವಲ್ಯಪದ್ಧತಿ, ವಚನಸುಧೆ, ಅನುಭಾವಿಗಳ ತತ್ತ್ವಪದಗಳು, ನಿಜಗುಣರ ನಾಟಕ ಹಾಗೂ ಶ್ರೀ ಬಸವಲಿಂಗೇಶ್ವರರ ಚರಿತ್ರೆಯನ್ನು ಪ್ರಕಟಿಸಿ ಧಾರ್ಮಿಕ ವಿಚಾರಗಳನ್ನು ಸಾಹಿತ್ಯದ ಮುಖಾಂತರ ಪ್ರಚಾರಪಡಿಸಿದ್ದಾರೆ. ಗೌರಿ ಹುಣ್ಣಿಮೆಯಾದ ಒಂಬತ್ತನೆಯ ದಿನಕ್ಕೆ ನಡೆಯುವ ನೂಲು ಹುಣ್ಣಿಮೆಯು ಮಠದಲ್ಲಿ ನಡೆಯುತ್ತಿದೆ.

ಶೈಕ್ಷಣಿಕ ಸೇವೆ: ಬಯಲುಹೊಂಗಲದಲ್ಲಿ ಶಾಖಾ ಮಠವನ್ನು ಹೊಂದಿದ್ದು, ಈ ಶಾಖಾ ಮಠದಲ್ಲಿ ಧಾರ್ಮಿಕ ಆಚರಣೆಗಳ ಜೊತೆಗೆ ಪ್ರಾಥಮಿಕಶಾಲೆ ಹಾಗೂ ಕನ್ನಡ ಕಾನ್ವೆಂಟ್‌ನ್ನು ಪ್ರಾರಂಭಿಸಲಾಗಿದೆ. ಇಲ್ಲಿ ಶ್ರಾವಣಮಾಸದಲ್ಲಿ ಧಾರ್ಮಿಕ ಕಾರ್ಯಕ್ರಮಗಳನ್ನು ಆಚರಣೆ ಮಾಡಲಾಗುತ್ತಿದೆ. ಹುಬ್ಬಳ್ಳಿಯ ಮಠದಲ್ಲಿ ಕಲಿಯುವ ಮಕ್ಕಳಿಗೆ ಆಶ್ರಯ ಕಲ್ಪಿಸಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಬಸವಲಿಂಗ ಸ್ವಾಮಿಗಳು, ಶ್ರೀ ರುದ್ರಾಕ್ಷಿಮಠ, ಹುಬ್ಬಳ್ಳಿ, ಮಂಗಳವಾರ ಪೇಟೆ, ಧಾರವಾಡ ಜಿಲ್ಲೆ.

ಶಿಗ್ಗಾಂವಿಮಠ: ಹುಬ್ಬಳ್ಳಿ ನಗರದ ಮಂಗಳವಾರ ಪೇಟೆಯಲ್ಲಿ ಸ್ಥಾಪನೆಯಾಗಿರುವ ವಿರಕ್ತ ಸಂಪ್ರದಾಯ ಮುರುಘಾ ಸಮಯದ ಈ ಮಠ ಶಿಗ್ಗಾಂವಿಯ ಶಾಖಾ ಮಠವಾಗಿ ಬೆಳೆದಿದೆ. ಈಗ ಆಡಳಿತ ವಿಚಾರದಲ್ಲಿ ಪ್ರತ್ಯೇಕಗೊಂಡು ಸ್ವತಂತ್ರ ಮಠವಾಗಿ ಬೆಳೆದಿದೆ. ಶಿಗ್ಗಾಂವಿ ವಿರಕ್ತ ಮಠದ ಶಾಖಾ ಮಠವಾಗಿರುವುದರಿಂದ ಈ ಮಠಕ್ಕೆ 'ಶ್ರೀ ಶಿಗ್ಗಾಂವಿ ಮಠ' ಎಂದು ಹೆಸರು ಬಂದಿದೆ. ಶ್ರೀ ರಾಜೇಂದ್ರ ಸ್ವಾಮಿಗಳು ಶ್ರೀ ಶಿಗ್ಗಾಂವಿ ಮಠದಲ್ಲಿ ಅಧಿಕಾರವನ್ನು ವಹಿಸಿಕೊಂಡು ಇಲ್ಲಿ ಬಂದು ನೆಲೆಸಿದರು. ಗುರುಗಳು ಇಲ್ಲಿ ನೆಲೆಗೊಂಡ ಮೇಲೆ ಇದನ್ನು ಪ್ರತ್ಯೇಕವಾದ ಮಠವನ್ನಾಗಿ ಮಾಡಿ ಬೆಳೆಸಿದರು. ಗುರುಗಳು ವೀರಶೈವ ಧರ್ಮವನ್ನು ಬೆಳೆಸಿ ಮಠವನ್ನು ಅಭಿವೃದ್ಧಿಪಡಿಸಿ ೨೦೦೧ರ ಜನವರಿ ಏಳರಂದು ಲಿಂಗೈಕ್ಯರಾದರು. ಇವರು ತಮ್ಮ ಜೀವಿತಾವಧಿಯಲ್ಲಿಯೇ ಶ್ರೀ ಶಿವಾನಂದ ಸ್ವಾಮಿಗಳಿಗೆ ಮಠದ ಆಡಳಿತವನ್ನು ವಹಿಸಿಕೊಟ್ಟು ಮಠದ ಪರಂಪರೆ ಬೆಳೆಯುವಂತೆ ಮಾಡಿದ್ದಾರೆ. ಶ್ರೀಶಿವಾನಂದ ಸ್ವಾಮಿಗಳು ಬೆಳಗಾಂ ಜಿಲ್ಲೆ ನಿಪ್ಪಾಣಿ ತಾಲ್ಲೂಕಿನ ಆಡಿ ಗ್ರಾಮದ ಶ್ರೀಮಲ್ಲಿಕಾರ್ಜುನ ಮಠ ಹಾಗೂ ಹಂದಿಗುಂದಿ ಮಠದ ಅಧಿಕಾರವನ್ನು ವಹಿಸಿಕೊಂಡು, ಮೂರೂ ಮಠಗಳಲ್ಲಿ ಧಾರ್ಮಿಕ ಮತ್ತು ಆಡಳಿತ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಶಿವಾನಂದ ಸ್ವಾಮಿಗಳು, ಶ್ರೀ ಶಿಗ್ಗಾಂವಿ ಮಠ, ಹುಬ್ಬಳ್ಳಿ, ಮಂಗಳವಾರ ಪೇಟೆ, ಧಾರವಾಡ ಜಿಲ್ಲೆ.

ಗುಲ್ಬರ್ಗಮಠ: ಹುಬ್ಬಳ್ಳಿ ನಗರದ ಮಂಗಳವಾರಪೇಟೆ ಬಡಾವಣೆಯಲ್ಲಿ ಸ್ಥಾಪನೆಗೊಂಡಿರುವ ಶ್ರೀ ಗುಲ್ಬರ್ಗ ಮಠವು ಗುಲ್ಬರ್ಗದ ಗದ್ದುಗೆ ಮಠದ ಶಾಖಾ ಮಠವಾಗಿದೆ. ಗದ್ದುಗೆ ಮಠದ ಅಧಿಕಾರಸ್ಥರಾದ ಶ್ರೀ ರೇವಣಸಿದ್ಧ ಸ್ವಾಮಿಗಳು ಸಂದರ್ಭಕ್ಕನುಸಾರವಾಗಿ ಇಲ್ಲಿಗೆ ಆಗಮಿಸಿ, ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ರೇವಣಸಿದ್ಧ ಸ್ವಾಮಿಗಳು, ಶ್ರೀ ಗದ್ದುಗೆ ಮಠ, ಮುಕ್ತಾಂಪುರ, ಗುಲ್ಬರ್ಗ.

ಹನ್ನೆರಡುಮಠ: ಹಳೆಹುಬ್ಬಳ್ಳಿ ನಗರದ ಮಧ್ಯ ಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಹನ್ನೆರಡು ಮಠವು ಶ್ರೀ ರಂಭಾಪುರಿ ಪೀಠದ ಶಾಖಾ ಮಠವಾಗಿ ಬೆಳೆದಿದೆ. ಶ್ರೀ ಮಡಿವಾಳ ಶಿವಾಚಾರ್ಯ ಸ್ವಾಮಿಗಳು ಈ ಮಠದ ಸ್ಥಾಪಕರಾಗಿದ್ದಾರೆ. ಗುರುಗಳು ಧಾರ್ಮಿಕ ಆಚರಣೆಗಾಗಿ ಈ ಮಠವನ್ನು ಸ್ಥಾಪಿಸಿದ್ದಲ್ಲದೆ ಸುತ್ತ ಹನ್ನೆರಡು ಮಠಗಳನ್ನು ಸ್ಥಾಪಿಸಿ, ಎಲ್ಲಾ ಕಡೆ ಧಾರ್ಮಿಕ ಆಚರಣೆಗಳು ನಡೆಯುಂತೆ ಮಾಡಿದ್ದರು. ಇದರಿಂದ ಈ ಮಠಕ್ಕೆ 'ಶ್ರೀ ಹನ್ನೆರಡು ಮಠ' ಎಂಬ ಹೆಸರು ಬಂದಿದೆ. ಕರ್ತೃ ಗುರುಗಳ ಹೆಸರಿನಲ್ಲಿಯೇ ಅಧಿಕಾರಕ್ಕೆ (೧೯೧೬) ಬಂದ ಶ್ರೀ ಮಡಿವಾಳ ಸ್ವಾಮಿಗಳು, ಶಿವಪೂಜಾ ನಿಷ್ಠರಾಗಿ ಜಗದ್ಗುರುಗಳ ನಿಕಟ ಸಂಪರ್ಕದೊಂದಿಗೆ ಧರ್ಮವನ್ನು ಬೆಳೆಸಿದರು.

ಇವರು ಗೋಕರ್ಣದಲ್ಲಿ ವೀರಶೈವರಿಗೆ ಅನುಕೂಲವಾಗುವಂತೆ ಮಠ ಹಾಗೂ ಛತ್ರವನ್ನು ಕಟ್ಟಿಸಿದರು. ಮುಂದೆ ಈ ಮಠದಲ್ಲಿ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಿದ್ದಲ್ಲದೆ, ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಿದರು. ಸದಾ ಸಂಚಾರ ಮೂರ್ತಿಯಾಗಿರುತ್ತಿದ್ದ ಇವರು ಮೂಲ ಮಠವನ್ನು ಅಭಿವೃದ್ಧಿಪಡಿಸಿ ವೀರಶೈವ ಸಮಾಜವನ್ನು ಬೆಳೆಸಿದರು. ಗುರುಗಳು ಕಲಘಟಗಿ ಪಟ್ಟಣದಲ್ಲಿ ನೆಲೆಸಿ ಲಿಂಗೈಕ್ಯರಾದರು. ಇವರ ನಂತರ ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡು, ಕಲಘಟಗಿ ಮತ್ತು ಹನ್ನೆರಡು ಮಠದ ಅಧಿಕಾರವನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಹಳೆಯ ಕಟ್ಟಡವನ್ನು ತೆಗೆದು ನೂತನವಾಗಿ ಕಟ್ಟಡವನ್ನು ನಿರ್ಮಿಸಲಾಗುತ್ತಿದೆ. ವಾಣಿಜ್ಯ ಕೇಂದ್ರವಾದ ಈ ನಗರದಲ್ಲಿ ಮಠಕ್ಕೆ ಆದಾಯ ಬರುವಂತೆ ವಾಣಿಜ್ಯ ಸಂಕೀರ್ಣಗಳನ್ನು ಸ್ಥಾಪಿಸಲಾಗಿದೆ. ಗದ್ದುಗೆಗಳಿಗೆ ನಿತ್ಯಪೂಜೆಯನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹನ್ನೆರಡುಮಠ, ಹಳೆಹುಬ್ಬಳ್ಳಿ, ಧಾರವಾಡ ಜಿಲ್ಲೆ.

❑

ಬಳ್ಳಾರಿ ಜಿಲ್ಲೆ

ಬಳ್ಳಾರಿ ತಾಲ್ಲೂಕು : ೧. ಎಮ್ಮಿಗನೂರು ೨. ಕುರುಗೋಡು
೪. ಸಿರಗಪುರ
ಶಿರಗುಪ್ಪ ತಾಲ್ಲೂಕು : ೧. ಶಿರಿಗೆರೆ ೨. ಹಳೇಕೋಟೆ ೩.
ಹೊಸಪೇಟೆ ತಾಲ್ಲೂಕು : ೧. ಮರಿಯಮ್ಮನ ಹಳ್ಳಿ ೨.
೩. ಕಂಪ್ಲಿ
ಸಂಡೂರು ತಾಲ್ಲೂಕು : ೧. ಯಶವಂತ ನಗರ ೨. ಗರಗ
ಕೂಡ್ಲಿಗಿ ತಾಲ್ಲೂಕು : ೧. ಉಜ್ಜಯನಿ ೨. ಕೊಟ್ಟೂರು ೩.
ಹಗರಿ ಬೊಮ್ಮನ ಹಳ್ಳಿ ತಾಲ್ಲೂಕು : ೧. ಕಡ್ಲೇಬಾ
ಹೂವಿನ ಹಡಗಲಿ ತಾಲ್ಲೂಕು : ೧. ಹಿರೆ ಹಡಗಲಿ ೨
೩. ಹೊಳಗುಂದಿ ೪. ಕಂದಗಲ್ಲುಪುರ ೫. ಕುರುವತ್ತಿ ೬. ಲಿಂಗ



ಬಳ್ಳಾರಿ ಜಿಲ್ಲೆಯು ಕೊಪ್ಪಳ, ಗದಗ, ಹಾವೇರಿ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ಗಡಿ ಹಾಗೂ ಪೂರ್ವಭಾಗದಲ್ಲಿ ಆಂಧ್ರಪ್ರದೇಶದ ಗಡಿ ಪ್ರದೇಶಗಳಿಗೆ ಹೊಂದಿಕೊಂಡಿದೆ. ತುಂಗಭದ್ರಾ, ಹಗರಿ ಮತ್ತು ಚಿನ್ನಹಗರಿ ನದಿಗಳು ಈ ಜಿಲ್ಲೆಯಲ್ಲಿ ಹರಿದರೂ ಬಿಸಿಲಿನ ಧಗೆಯ ಜಿಲ್ಲೆ ಇದು. ಸಂಡೂರಿನ ನಿಸರ್ಗ ಪರಿಸರ ಹಾಗೂ ಹೊಸಪೇಟೆಯ ತುಂಗಭದ್ರಾ ಜಲಾಶಯ ಬಳ್ಳಾರಿ ಜಿಲ್ಲೆಗೆ ಜೀವಕಳೆಯನ್ನು ತುಂಬಿವೆ.

ಬಳ್ಳಾರಿ ಜಿಲ್ಲೆಯು ಬಳ್ಳಾರಿ, ಸಂಡೂರು, ಶಿರಗುಪ್ಪ, ಹೊಸಪೇಟೆ, ಹೂವಿನಹಡಗಲಿ, ಹಗರಿಬೊಮ್ಮನಹಳ್ಳಿ ಮತ್ತು ಕೂಡ್ಲಿಗಿ ಸೇರಿದಂತೆ ಒಟ್ಟು ಎಂಟು ತಾಲ್ಲೂಕುಗಳನ್ನು ಒಳಗೊಂಡಿದೆ. ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಿಂದ ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿದೆ. ಇವರ ಆಳ್ವಿಕೆಯ ಕಾಲದಲ್ಲಿ (ಕ್ರಿ.ಶ.೧೩೩೬-೧೫೬೫) ಹಂಪಿಯ ಸಂತೆಯ ಬೀದಿಗಳಲ್ಲಿ ಮುತ್ತುರತ್ನಗಳನ್ನು ಸೇರಿನಲ್ಲಿ ಅಳೆದು ಮಾರುತ್ತಿದ್ದು, ಸುವರ್ಣಯುಗವನ್ನು ಸೃಷ್ಟಿಸಿದ ಜಿಲ್ಲೆ ಬಳ್ಳಾರಿ ಎಂಬುದು ಒಂದು ಹೆಗ್ಗಳಿಕೆಯ ವಿಚಾರವಾಗಿದೆ.

ವಿಜಯನಗರ ಸಾಮ್ರಾಜ್ಯದ ನಂತರ ಸಂಡೂರಿನ ದೊರೆಗಳು, ತೆಕ್ಕಲಕೋಟೆಯ ಪಾಳೆಗಾರರು ಹಾಗೂ ಇನ್ನೂ ಅನೇಕ ಪಾಳೆಗಾರರ ಗುಂಪುಗಳು ಈ ಜಿಲ್ಲೆಯಲ್ಲಿ ಆಳ್ವಿಕೆಯನ್ನು ನಡೆಸಿ, ಐತಿಹಾಸಿಕವಾಗಿ ಈ ಜಿಲ್ಲೆಯನ್ನು ಶ್ರೀಮಂತಗೊಳಿಸಿವೆ.ಹಂಪಿಯ ಗತಕಾಲದ ವೈಭವವನ್ನು ಸಾರುವ ಇಲ್ಲಿನ ಒಂದೊಂದು ಕಲ್ಲುಗಳೂ ಸ್ಮಾರಕವಾಗಿವೆ. ಅಲ್ಲದೆ ವಿಶ್ವಮಟ್ಟದ ಸ್ಮಾರಕಗಳ ಸಾಲಿಗೆ ಹಂಪಿ ನಿಂತಿರುವುದು ಕನ್ನಡ ನಾಡು ಮತ್ತು ಭರತಖಂಡವೇ ಹೆಮ್ಮೆಪಡುವಂತಹದ್ದು.

ಬಳ್ಳಾರಿ ಜಿಲ್ಲೆ ಐತಿಹಾಸಿಕವಾಗಿ ಹೆಸರು ಮಾಡಿದಂತೆ ಧಾರ್ಮಿಕ ವಿಚಾರದಲ್ಲಿಯೂ ಹೆಚ್ಚು ಪ್ರಸಿದ್ಧಿಯಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ನಡೆಯುವ ಜಾತ್ರೆ ಮಹೋತ್ಸವಗಳ ವೈಭವ ಬೇರೆ ಯಾವ ಜಿಲ್ಲೆಯಲ್ಲಿಯೂ ಕಂಡು ಬರುವುದಿಲ್ಲ. ಉದಾಹರಣೆ ಯಾಗಿ ಕೂಡ್ಲಿಗಿ ತಾಲ್ಲೂಕಿನ ಕೊಟ್ಟೂರು ಬಸವೇಶ್ವರ ಜಾತ್ರೆ, ಹೂವಿನಹಡಗಲಿ ತಾಲ್ಲೂಕಿನ ಮೈಲಾರಲಿಂಗೇಶ್ವರ ಜಾತ್ರೆ, ಶಿರಗುಪ್ಪ ತಾಲ್ಲೂಕಿನ ಎರ್ರಿತಾತನ ಜಾತ್ರೆಗಳನ್ನು ಮುಖ್ಯವಾಗಿ ಹೆಸರಿಸಬಹುದು.

ಪಂಚಪೀಠಗಳಲ್ಲಿ ಒಂದಾದ ಶ್ರೀಮದ್ ಉಜ್ಜಯಿನಿ ಪೀಠವು ಕೂಡ್ಲಿಗಿ ತಾಲ್ಲೂಕಿನಲ್ಲಿ ಸ್ಥಾಪನೆಗೊಂಡಿರುವುದು ಈ ಜಿಲ್ಲೆಯ ಮತ್ತೊಂದು ಹೆಗ್ಗಳಿಕೆ. ಜಿಲ್ಲೆಯ ಎಂಟು ತಾಲ್ಲೂಕುಗಳಲ್ಲಿ ಒಟ್ಟು ೧೧೮ ವೀರಶೈವ ಮಠಗಳು ಸ್ಥಾಪನೆಗೊಂಡ ಬಗ್ಗೆ ಮಾಹಿತಿ ದೊರೆಯುತಿದೆ. ಈ ಆಧಾರದ ಮೇಲೆ ಶೋಧನೆ ನಡೆಸಿದಾಗ ಎಪ್ಪತ್ತೆರಡು ಮಠಗಳು ದೊರೆತಿವೆ. ಇವುಗಳಲ್ಲಿಮೂವತ್ತೊಂಬತ್ತು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಚಟುವಟಿಕೆಗಳನ್ನು ನಡೆಸುತ್ತಿರುವುದು ಗೋಚರವಾಗಿದೆ. ಉಳಿದ ಬಹುತೇಕ ಮಠಗಳು ಹೇಳಲು ಹೆಸರಿಲ್ಲದಂತಾಗಿವೆ.

ಶ್ರೀ ಉಜ್ಜಯಿನಿ ಪೀಠ ಹಾಗೂ ಹೊಸಪೇಟೆಯ ಹೇಮಕೂಟ ಮಠಗಳು ನಡೆಸುತ್ತಿರುವ ಕಾರ್ಯಗಳು ಜಿಲ್ಲೆಯ ಹಾಗೂ ರಾಜ್ಯದ ಅಭಿವೃದ್ಧಿಗೆ ಪೂರಕವಾಗಿರುವುದನ್ನು ಮನಗಾಣಬಹುದಾಗಿದೆ. ಇದರ ಜೊತೆಗೆ ಈಗ ಅಸ್ತಿತ್ವದಲ್ಲಿರುವ ಬಹುತೇಕ ವೀರಶೈವ ಮಠಗಳು ಈ ಜಿಲ್ಲೆಯ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳ ಅಭಿವೃದ್ಧಿಗೆ ತಮ್ಮದೇ ಆದಂತಹ ಕೊಡುಗೆಯನ್ನು ನೀಡಿವೆ.

ಕೂಡ್ಲಿಗಿ ತಾಲ್ಲೂಕು

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕು ಆರ್ಥಿಕವಾಗಿ ಸಬಲಗೊಳ್ಳಬೇಕಾಗಿದೆ. ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಪ್ರಾಚೀನ ಕಾಲದಿಂದಲೂ ಪ್ರಬಲವಾಗಿ ಬೆಳೆದಿದೆ. ಇಲ್ಲಿ ಪ್ರಸ್ತುತ ಏಳು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ ಬಂದಿವೆ.

ಉಜ್ಜಯಿನಿ

ಕೂಡ್ಲಿಗಿ ತಾಲ್ಲೂಕಿನ ಉಜ್ಜಯಿನಿಯು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತೈದು ಕಿ.ಮೀ.ದೂರದಲ್ಲಿದೆ. ಇಲ್ಲಿ ಪಂಚಪೀಠಗಳಲ್ಲಿ ಒಂದಾದ ಶ್ರೀಮದ್ ಉಜ್ಜಯಿನಿ ಸದ್ಧರ್ಮ ಸಿಂಹಾಸನ ಪೀಠವು ಸ್ಥಾಪನೆಯಾಗಿ, ಧಾರ್ಮಿಕ ಕ್ಷೇತ್ರದಲ್ಲಿ ನಾಡಿನಲ್ಲಿ ಹೆಸರುಗಳಿಸಿದೆ.

ಜಗದ್ಗುರು ಉಜ್ಜಯಿನಿ ಪೀಠ: ಶಿವನ ಅಪ್ಪಣೆಯ ಮೇರೆಗೆ ಭೂಲೋಕದಲ್ಲಿ ವೀರಶೈವ ಧರ್ಮವನ್ನು ಸಂಸ್ಥಾಪಿಸುವುದಕ್ಕಾಗಿ ಅವತರಿಸಿದ ಶಿವನ ಪಂಚಗಣರಲ್ಲಿ ಒಬ್ಬರಾದವರೇ ಶ್ರೀ ಮರುಳಸಿದ್ಧರು. ಇವರು ಉಜ್ಜ ಯಿನಿ ಪೀಠ ಪರಂಪರೆಯ ಶಿವಾಗಮಗಳ ಆಧಾರದಿಂದ ಹೇಳುವುದಾದರೆ ಕಲಿಯುಗದ ಆದಿ ಆಚಾರ್ಯರು. ಶ್ರೀ ಮರುಳಸಿದ್ಧರೆ ಕೃತಯುಗದಲ್ಲಿ ದ್ವ್ಯಕ್ಷರ ಶಿವಾಚಾರ್ಯ, ತ್ರೇತಾಯುಗದಲ್ಲಿ ದ್ವಿವಕ್ತ್ರ ಶಿವಾಚಾರ್ಯ, ದ್ವಾಪರಯುಗದಲ್ಲಿ ಶ್ರೀ ದಾರುಕ ಶಿವಾಚಾರ್ಯ ಮತ್ತು ಕಲಿಯುಗದಲ್ಲಿ ಶ್ರೀ ಮರುಳಾರಾಧ್ಯ ಶಿವಾಚಾರ್ಯರೆಂಬ ಅಭಿದಾನದಿಂದ ಅವತರಿಸಿದರೆಂದು ತಿಳಿದುಬರುತ್ತದೆ.

ಸದ್ಧರ್ಮ ಪೀಠಸ್ಥಾಪನೆ: ಶ್ರೀ ದಾರುಕಾರಾಧ್ಯರು ಮಧ್ಯಪ್ರದೇಶದ ಕ್ಷಿಪ್ರಾನದಿ ದಂಡೆಯ ಮೇಲಿರುವ ಉಜ್ಜಯಿನಿಯ ವಟು ಕ್ಷೇತ್ರದ ಸಿದ್ಧೇಶ್ವರ ಲಿಂಗದಿಂದ ಅವತರಿಸಿ ಅಲ್ಲಿಯೇ ಮಹಾಪೀಠವನ್ನು ಸ್ಥಾಪಿಸಿದರು. ನಂತರ ನೈಮಿಷಾರಣ್ಯದಲ್ಲಿ ವಾಸ ಮಾಡುತ್ತಿದ್ದ ದಧೀಚಿ ಮಹರ್ಷಿಗಳಿಗೆ ಶಿವಾದ್ವೈತ ಸಿದ್ಧಾಂತವನ್ನು ಬೋಧಿಸುವುದರ ಮೂಲಕ ಮಧ್ಯಪ್ರದೇಶದಲ್ಲಿ ವೀರಶೈವ ಧರ್ಮವನ್ನು ಸಂಸ್ಥಾಪಿಸಿದರು. ಇವರ ನಂತರ ಕಲಿಯುಗದ ಆರಂಭದಲ್ಲಿ ಶ್ರೀ ಮರುಳಾರಾಧ್ಯರೆಂಬ ನಾಮದಿಂದ ಅವತರಿಸಿ ವೀರಶೈವ ಧರ್ಮಸಿದ್ಧಾಂತವನ್ನು ಪ್ರತಿಷ್ಠಾಪಿಸಿ ಬೆಳೆಸಿದರೆಂದು ಪೀಠದ ಪುರಾಣಗಳಿಂದ ತಿಳಿದುಬರುತ್ತದೆ.

ಸ್ಥಳಾಂತರಗೊಂಡ ಪೀಠ: ಪೀಠ ಸ್ಥಾಪನೆಗೊಂಡ ಮೇಲೆ ಅನೇಕ ವರ್ಷಗಳ ದೀರ್ಘಕಾಲ ವೀರಶೈವ ಧರ್ಮವನ್ನು ಬೆಳೆಸುವುದರ ಮೂಲಕ ಉಜ್ಜಯಿನಿ ಪೀಠದ ಪರಂಪರೆ ಬೆಳೆದು ಬಂದಿತ್ತು. ಇಲ್ಲಿ ನಡೆದ ಬೆಳವಣಿಗೆಗಳ ಹಿನ್ನಲೆಯಲ್ಲಿ ಪೀಠವನ್ನು ಸ್ಥಳಾಂತರಿಸುವ ಸ್ಥಿತಿ ಒದಗಿಬಂದಿತು. ಅಂದು ಪೀಠದ ಜಗದ್ಗುರುಗಳಾಗಿದ್ದ ಶ್ರೀ ಮರುಳಸಿದ್ಧೇಶ್ವರ ಶಿವಾಚಾರ್ಯರು ಲೋಕಸಂಚಾರ ಹೊರಟು ಅನೇಕ ಕ್ಷೇತ್ರಗಳಲ್ಲಿ ನೆಲಸಿ ಬಳ್ಳಾರಿ ಜಿಲ್ಲೆಯ ಈಗಿನ ಉಜ್ಜಯಿನಿಗೆ (ಕ್ರಿ.ಶ.೧೪೬೪ರಲ್ಲಿ) ಬಂದು, ದೇವಸ್ಥಾನದಿಂದ ಸ್ವಲ್ಪ ದೂರದಲ್ಲಿ ಗುಡ್ಡದ ಇಳಿಜಾರಿನಲ್ಲಿರುವ ನೀರಿನ ಕೊಳದ ಹತ್ತಿರ ಬೀಡು ಬಿಟ್ಟರು. ಈ ವಿಚಾರವು ಸುತ್ತಲ ಹಳ್ಳಿಗಳಿಗೆ ತಲುಪಿ ಜನರು ತಪಸ್ವಿಗಳನ್ನು ನೋಡಲು ದಂಡುಗಟ್ಟಿ ಬರುತ್ತಾರೆ. ಬಂದ ಭಕ್ತರಿಗೆ ದರ್ಶನ ಹಾಗೂ ಆಶೀರ್ವಾದ ನೀಡಿ ಕಳಿಸಿಕೊಡುತ್ತಿದ್ದರು. ಜಗದ್ಗುರು ಶ್ರೀಮರುಳ ಸಿದ್ಧ ಶಿವಾಚಾರ್ಯರು ನಡೆಸಿದ ಅನೇಕ ಸತ್ಕಾರ್ಯಗಳಿಂದ ಈ ನಾಡಿನ ಧಾರ್ಮಿಕ ನೆಲೆಗಟ್ಟು ಗಟ್ಟಿಗೊಳ್ಳ ತೊಡಗಿತು. ಗುರುಗಳು ಜನ, ಜಾನುವಾರುಗಳನ್ನು ರಕ್ಷಿಸಿ ಧರ್ಮಪ್ರಭೆಯನ್ನು ಬೆಳಗಿಸುತ್ತಿರುವ ವಿಷಯವು ಈ ನಾಡನ್ನು ಆಳುತ್ತಿದ್ದ ಜರಮಲೆ ರಾಜರಿಗೆ ತಿಳಿದು, ತನ್ನ ಪರಿವಾರದೊಡನೆ ಬಂದು ಜಗದ್ಗುರುಗಳ ಆಶೀರ್ವಾದವನ್ನು ಪಡೆಯುತ್ತಾನೆ. ಗುರುಗಳ ತೇಜೋಮಯ ರೂಪವನ್ನು ನೋಡಿ ಈ ಮಹಾಯೋಗಿಗಳನ್ನು ಈ ನಾಡಿನಲ್ಲೇ ಉಳಿಸಿಕೊಂಡು, ಈ ನೆಲದಲ್ಲಿ ಧರ್ಮವನ್ನು ನೆಲೆಗೊಳಿಸಬೇಕು ಎಂದು ನಿರ್ಧರಿಸಿ ಜಗದ್ಗುರುಗಳಲ್ಲಿ ತನ್ನ ಅಭಿಲಾಷೆಯನ್ನು ವ್ಯಕ್ತಪಡಿಸುತ್ತಾನೆ. ಗುರುಗಳ ಸಂಕಲ್ಪವೂ ಇದೇ ಆಗಿದ್ದು,ದೇವಸ್ಥಾನದ ಪಕ್ಕದಲ್ಲಿ ಪೀಠ ಸ್ಥಾಪಿಸಬೇಕೆಂದು ಹೇಳಿದಾಗ, ಜರಮನೆ ಪಾಳೆಗಾರನು ದೇವಸ್ಥಾನದ ಸುತ್ತ ಒಂಬತ್ತು ಪಾದಗಟ್ಟೆಗಳ ಪ್ರದೇಶವನ್ನು ಜಗದ್ಗುರುಗಳಿಗೆ ಅರ್ಪಿಸಿದನು. ಈ ಮೊದಲು ಇದ್ದ ದೇವಸ್ಥಾನದಲ್ಲಿ ಪ್ರತಿಷ್ಠಾಪಿ

ಸಿದ್ದ ಸಂಪತ್‌ಮಲ್ಲಿಕಾರ್ಜುನ ಲಿಂಗಕ್ಕೆ 'ಸಿದ್ಧೇಶ್ವರಲಿಂಗ' ಎಂದು ಮರುನಾಮಕರಣ ಮಾಡಿ ಈ ಹಳ್ಳಿಗೆ 'ಉಜ್ಜಯಿನಿ' ಎಂದು ಹೆಸರಿಟ್ಟು, ಮಧ್ಯಪ್ರದೇಶದ ತಮ್ಮ ಸದ್ಧರ್ಮ ಸಿಂಹಾಸನ ಪೀಠದ ಪ್ರತೀಕವಾಗಿ ಈ ಪೀಠವನ್ನು ಸ್ಥಾಪನೆ ಮಾಡಿದರು.

ಶ್ರೀ ಮರುಳಸಿದ್ಧೇಶ್ವರರ ನಂತರ: ಜಗದ್ಗುರು ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳು ದಾವಣಗೆರೆ ಜಿಲ್ಲೆಯ ಬಸವಪಟ್ಟಣದ ರಾಜಗುರುಗಳ ವಂಶದವರಾದ ಹರಪನಹಳ್ಳಿ ತಾಲ್ಲೂಕು ಹಿರೇಮೇಗಳಗೇರಿಯ ಮಠದಯ್ಯನವರಾಗಿರುವ ಹಿರೇಮಠದ ಮರಿದೇವರನ್ನು ನೇಮಿಸಿ, ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರೆಂದು ಅಭಿದಾನವಿತ್ತು, ಸದ್ಧರ್ಮ ಜಗದ್ಗುರು ಪಟ್ಟಾಧಿಕಾರವನ್ನು ಮಾಡುತ್ತಾರೆ. ಜಗದ್ಗುರುಗಳು ಉಜ್ಜಯಿನಿಯನ್ನು ಕೇಂದ್ರವಾಗಿಟ್ಟುಕೊಂಡು ಧರ್ಮಪ್ರಸಾರದ ಕಾರ್ಯವನ್ನು ಮುಂದುವರೆಸುತ್ತಾರೆ.

ಉಜ್ಜಯಿನಿ ಸದ್ಧರ್ಮಪೀಠದ ಪರಂಪರೆ:

ಶ್ರೀ ಜಗದ್ಗುರು ದ್ವೈಕ್ಷರ ಶಿವಾಚಾರ್ಯ ಭಗವತ್ಪಾದರು (ಕೃತ ಯುಗದ ಆರಂಭ)
ಶ್ರೀ ಜಗದ್ಗುರು ದ್ವಿವಕ್ತ್ರ ಶಿವಾಚಾರ್ಯ ಭಗವತ್ಪಾದರು (ತ್ರೇತಾಯುಗದ ಆರಂಭ)
ಶ್ರೀ ಜಗದ್ಗುರು ದಾರುಕಾಚಾರ್ಯ ಭಗವತ್ಪಾದರು (ದ್ವಾಪರಯುಗದ ಆರಂಭ)

೧. ಶ್ರೀ ಜಗದ್ಗುರು ಮರುಳಾರಾಧ್ಯ ಶಿವಾಚಾರ್ಯ ಭಗವತ್ಪಾದರು (ಕಲಿಯುಗದ ಆರಂಭ)
೨. ಶ್ರೀ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯರು
೩. ಶ್ರೀ ಜಗದ್ಗುರು ಸಿದ್ಧೇಶ್ವರ ಶಿವಾಚಾರ್ಯರು
೪. ಶ್ರೀ ಜಗದ್ಗುರು ಗುರುನಾಥ ಶಿವಾಚಾರ್ಯರು
೫. ಶ್ರೀ ಜಗದ್ಗುರು ಶಿವಯೋಗೀಂದ್ರ ಶಿವಾಚಾರ್ಯರು
೬. ಶ್ರೀ ಜಗದ್ಗುರು ತ್ರಯಂಬಕ ಶಿವಾಚಾರ್ಯರು
೭. ಶ್ರೀ ಜಗದ್ಗುರು ಶಿವಾನಂದ ಶಿವಾಚಾರ್ಯರು
೮. ಶ್ರೀ ಜಗದ್ಗುರು ಮರುಳಸಿದ್ಧ ಶಿವಾಚಾರ್ಯರು
೯. ಶ್ರೀ ಜಗದ್ಗುರು ಅಮಿತಾನಂದ ಶಿವಾಚಾರ್ಯರು
೧೦. ಶ್ರೀ ಜಗದ್ಗುರು ನೀಲಗ್ರೀವ ಶಿವಾಚಾರ್ಯರು
೧೧. ಶ್ರೀ ಜಗದ್ಗುರು ನಂದೀಶ್ವರ ಶಿವಾಚಾರ್ಯರು
೧೨. ಶ್ರೀ ಜಗದ್ಗುರು ಗುರುರಾಜ ಶಿವಾಚಾರ್ಯರು
೧೩. ಶ್ರೀ ಜಗದ್ಗುರು ಮಹಾದೇವ ಶಿವಾಚಾರ್ಯರು
೧೪. ಶ್ರೀ ಜಗದ್ಗುರು ಮಯಾಂತ ಶಿವಾಚಾರ್ಯರು
೧೫. ಶ್ರೀ ಜಗದ್ಗುರು ಗುರುಶಾಂತ ಶಿವಾಚಾರ್ಯರು
೧೬. ಶ್ರೀ ಜಗದ್ಗುರು ವೃಷಭಧ್ವಜ ಶಿವಾಚಾರ್ಯರು
೧೭. ಶ್ರೀ ಜಗದ್ಗುರು ವೀರವೃಷಭೇಂದ್ರ ಶಿವಾಚಾರ್ಯರು
೧೮. ಶ್ರೀ ಜಗದ್ಗುರು ದ್ವಿತೀಯ ಮಲ್ಲಿಕಾರ್ಜುನ ಶಿವಾಚಾರ್ಯರು
೧೯. ಶ್ರೀ ಜಗದ್ಗುರು ಶಿವಲಿಂಗ ಶಿವಾಚಾರ್ಯರು
೨೦. ಶ್ರೀ ಜಗದ್ಗುರು ದ್ವಿತೀಯ ಸಿದ್ಧೇಶ್ವರ ಶಿವಾಚಾರ್ಯರು
೨೧. ಶ್ರೀ ಜಗದ್ಗುರು ಲಿಂಗಾನಂದ ಶಿವಾಚಾರ್ಯರು
೨೨. ಶ್ರೀ ಜಗದ್ಗುರು ಸೋಮೇಶ್ವರ ಶಿವಾಚಾರ್ಯರು
೨೩. ಶ್ರೀ ಜಗದ್ಗುರು ಮುಕ್ತಿನಾಥ ಶಿವಾಚಾರ್ಯರು

೨೪. ಶ್ರೀ ಜಗದ್ಗುರು ವಾಮದೇವ ಶಿವಾಚಾರ್ಯರು
೨೫. ಶ್ರೀ ಜಗದ್ಗುರು ಜಗದೀಶ್ವರ ಶಿವಾಚಾರ್ಯರು
೨೬. ಶ್ರೀ ಜಗದ್ಗುರು ನಿಜಾನಂದ ಶಿವಾಚಾರ್ಯರು
೨೭. ಶ್ರೀ ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯರು
೨೮. ಶ್ರೀ ಜಗದ್ಗುರು ಮಾಹೇಶ್ವರ ಶಿವಾಚಾರ್ಯರು
೨೯. ಶ್ರೀ ಜಗದ್ಗುರು ಅಘೋರ ಶಿವಾಚಾರ್ಯರು
೩೦. ಶ್ರೀ ಜಗದ್ಗುರು ಚೆನ್ನವೀರ ಶಿವಾಚಾರ್ಯರು
೩೧. ಶ್ರೀ ಜಗದ್ಗುರು ಜಟಾಸಿದ್ಧ ಶಿವಾಚಾರ್ಯರು
೩೨. ಶ್ರೀ ಜಗದ್ಗುರು ಗಂಗಾಧರ ಶಿವಾಚಾರ್ಯರು
೩೩. ಶ್ರೀ ಜಗದ್ಗುರು ಸಿದ್ಧವೀರ ಶಿವಾಚಾರ್ಯರು
೩೪. ಶ್ರೀ ಜಗದ್ಗುರು ರುದ್ರೇಶ್ವರ ಶಿವಾಚಾರ್ಯರು
೩೫. ಶ್ರೀ ಜಗದ್ಗುರು ಶಾಂತಲಿಂಗ ಶಿವಾಚಾರ್ಯರು
೩೬. ಶ್ರೀ ಜಗದ್ಗುರು ವೈII ನಂದೀಶ್ವರ ಶಿವಾಚಾರ್ಯರು
೩೭. ಶ್ರೀ ಜಗದ್ಗುರು ಗಂಗಾಧರ ಶಿವಾಚಾರ್ಯರು
೩೮. ಶ್ರೀ ಜಗದ್ಗುರು ಮಹಾಲಿಂಗ ಶಿವಾಚಾರ್ಯರು
೩೯. ಶ್ರೀ ಜಗದ್ಗುರು ಪಂಚಾನನ ಶಿವಾಚಾರ್ಯರು
೪೦. ಶ್ರೀ ಜಗದ್ಗುರು ಬಿಲ್ವದಳ ಭೂಷಣ ಶಿವಾಚಾರ್ಯರು
೪೧. ಶ್ರೀ ಜಗದ್ಗುರು ಮಾರಮರ್ದನ ಶಿವಾಚಾರ್ಯರು
೪೨. ಶ್ರೀ ಜಗದ್ಗುರು ನಾಗಭೂಷಣ ಶಿವಾಚಾರ್ಯರು
೪೩. ಶ್ರೀ ಜಗದ್ಗುರು ಶ್ಯಾಮಕಂಧರ ಶಿವಾಚಾರ್ಯರು
೪೪. ಶ್ರೀ ಜಗದ್ಗುರು ಚಂದ್ರಶೇಖರ ಶಿವಾಚಾರ್ಯರು
೪೫. ಶ್ರೀ ಜಗದ್ಗುರು ಗುರುಸಿದ್ಧ ಶಿವಾಚಾರ್ಯರು
೪೬. ಶ್ರೀ ಜಗದ್ಗುರು ಭವಹರ ಶಿವಾಚಾರ್ಯರು
೪೭. ಶ್ರೀ ಜಗದ್ಗುರು ಚಂಡೀಶ್ವರ ಶಿವಾಚಾರ್ಯರು
೪೮. ಶ್ರೀ ಜಗದ್ಗುರು ಅಮೃತೇಶ್ವರ ಶಿವಾಚಾರ್ಯರು
೪೯. ಶ್ರೀ ಜಗದ್ಗುರು ಸುಜ್ಞಾನಶೇಖರ ಶಿವಾಚಾರ್ಯರು
೫೦. ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರು
೫೧. ಶ್ರೀ ಜಗದ್ಗುರು ಶೇಷಭೂಷಣ ಶಿವಾಚಾರ್ಯರು
೫೨. ಶ್ರೀ ಜಗದ್ಗುರು ಶಂಕರಾನಂದ ಶಿವಾಚಾರ್ಯರು
೫೩. ಶ್ರೀ ಜಗದ್ಗುರು ಮಹಾಮಲ್ಲಿಕಾರ್ಜುನ ಶಿವಾಚಾರ್ಯರು
೫೪. ಶ್ರೀ ಜಗದ್ಗುರು ಶಂಭುಲಿಂಗ ಶಿವಾಚಾರ್ಯರು
೫೫. ಶ್ರೀ ಜಗದ್ಗುರು ಶಿವಯೋಗಪ್ರಭಾಕರ ಶಿವಾಚಾರ್ಯರು
೫೬. ಶ್ರೀ ಜಗದ್ಗುರು ಚಿನ್ಮಹೋದದಿ ಶಿವಾಚಾರ್ಯರು
೫೭. ಶ್ರೀ ಜಗದ್ಗುರು ಶಿವಜ್ಞಾನಸಂಜೀವನ ಶಿವಾಚಾರ್ಯರು
೫೮. ಶ್ರೀ ಜಗದ್ಗುರು ಗಣೇಂದ್ರಮಂದಾರ ಶಿವಾಚಾರ್ಯರು

೫೯. ಶ್ರೀ ಜಗದ್ಗುರು ಸಿದ್ಧೇಶ್ವರ ಶಿವಾಚಾರ್ಯರು
೬೦. ಶ್ರೀ ಜಗದ್ಗುರು ಪರಸಿದ್ಧೇಶ್ವರ ಶಿವಾಚಾರ್ಯರು
೬೧. ಶ್ರೀ ಜಗದ್ಗುರು ಮಹಾಂತದೇವ ಶಿವಾಚಾರ್ಯರು
೬೨. ಶ್ರಿ ಜಗದ್ಗುರು ಮಲ್ಲಿಕಾರ್ಜುನ ಶಿವಾಚಾರ್ಯರು
೬೩. ಶ್ರೀ ಜಗದ್ಗುರು ವೃಷ್ಟಿಶಂಕರ ಶಿವಾಚಾರ್ಯರು
೬೪. ಶ್ರೀ ಜಗದ್ಗುರು ಶಂಭುಲಿಂಗ ಶಿವಾಚಾರ್ಯರು
೬೫. ಶ್ರೀ ಜಗದ್ಗುರು ಮದನಾರಿ ಶಿವಾಚಾರ್ಯರು
೬೬. ಶ್ರೀ ಜಗದ್ಗುರು ಮಾಯಾಕೋಲಾಹಲ ಶಿವಾಚಾರ್ಯರು
೬೭. ಶ್ರೀ ಜಗದ್ಗುರು ಶಿವಲೀಲಾಚನ್ನವೀರ ಶಿವಾಚಾರ್ಯರು
೬೮. ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರು
೬೯. ಶ್ರೀ ಜಗದ್ಗುರು ಓಂಕಾರ ಶಿವಾಚಾರ್ಯರು
೭೦. ಶ್ರೀ ಜಗದ್ಗುರು ಮುಕ್ತಿನಾಥ ಶಿವಾಚಾರ್ಯರು
೭೧. ಶ್ರೀ ಜಗದ್ಗುರು ಮಹಾದೇವ ಶಿವಾಚಾರ್ಯರು
೭೨. ಶ್ರೀ ಜಗದ್ಗುರು ಭರ್ಗೋದೇವ ಶಿವಾಚಾರ್ಯರು
೭೩. ಶ್ರೀ ಜಗದ್ಗುರು ಬಾಲಸಿದ್ಧೇಶ್ವರ ಶಿವಾಚಾರ್ಯರು
೭೪. ಶ್ರೀ ಜಗದ್ಗುರು ಚನ್ನವೃಷಭ ಶಿವಾಚಾರ್ಯರು
೭೫. ಶ್ರೀ ಜಗದ್ಗುರು ವೃದ್ಧ ವೃಷಭೇಂದ್ರ ಶಿವಾಚಾರ್ಯರು
೭೬. ಶ್ರೀ ಜಗದ್ಗುರು ಚನ್ನಮಲ್ಲಿಕಾರ್ಜುನ ಶಿವಾಚಾರ್ಯರು
೭೭. ಶ್ರೀ ಜಗದ್ಗುರು ಮುಕ್ತಿಮಲ್ಲಿಕಾರ್ಜುನ ಶಿವಾಚಾರ್ಯರು
೭೮. ಶ್ರೀ ಜಗದ್ಗುರು ಸಿದ್ಧಮಲ್ಲಿಕಾರ್ಜುನ ಶಿವಾಚಾರ್ಯರು
೭೯. ಶ್ರೀ ಜಗದ್ಗುರು ಏಕೋದೇವ ಶಿವಾಚಾರ್ಯರು
೮೦. ಶ್ರೀ ಜಗದ್ಗುರು ಆಚಾರ್ಯಭಾಸ್ಕರ ಶಿವಾಚಾರ್ಯರು
೮೧. ಶ್ರೀ ಜಗದ್ಗುರು ಮೋಕ್ಷೇಶ್ವರ ಶಿವಾಚಾರ್ಯರು
೮೨. ಶ್ರೀ ಜಗದ್ಗುರು ಸಿದ್ಧವೀರೇಶ ಶಿವಾಚಾರ್ಯರು
೮೩. ಶ್ರೀ ಜಗದ್ಗುರು ಭದ್ರೇಶ್ವರ ಶಿವಾಚಾರ್ಯರು
೮೪. ಶ್ರೀ ಜಗದ್ಗುರು ಅಮಿತಾನಂದ ಶಿವಾಚಾರ್ಯರು
೮೫. ಶ್ರೀ ಜಗದ್ಗುರು ಷಡಕ್ಷರಿ ಶಿವಾಚಾರ್ಯರು
೮೬. ಶ್ರೀ ಜಗದ್ಗುರು ಭಕ್ತಿವರ್ಧನ ಶಿವಾಚಾರ್ಯರು
೮೭. ಶ್ರೀ ಜಗದ್ಗುರು ಪಾಶಹರ ಶಿವಾಚಾರ್ಯರು
೮೮. ಶ್ರೀ ಜಗದ್ಗುರು ಮಹಿಮಾಕಾರ ಶಿವಾಚಾರ್ಯರು
೮೯. ಶ್ರೀ ಜಗದ್ಗುರು ಶಿವಲಿಂಗ ಶಿವಾಚಾರ್ಯರು
೯೦. ಶ್ರೀ ಜಗದ್ಗುರು ನಯನತ್ರಯ ಶಿವಾಚಾರ್ಯರು
೯೧. ಶ್ರೀ ಜಗದ್ಗುರು ವಿರೂಪಾಕ್ಷ ಶಿವಾಚಾರ್ಯರು
೯೨. ಶ್ರೀ ಜಗದ್ಗುರು ಮರುಳಸಿದ್ಧ ಶಿವಾಚಾರ್ಯರು
೯೩. ಶ್ರೀ ಜಗದ್ಗುರು ಮಹಾಂತಮಲ್ಲಿಕಾರ್ಜುನ ಶಿವಾಚಾರ್ಯರು

೯೪. ಶ್ರೀ ಜಗದ್ಗುರು ವೃಷ್ಟಿಮಲ್ಲಿಕಾರ್ಜುನ ಶಿವಾಚಾರ್ಯರು
೯೫. ಶ್ರೀ ಜಗದ್ಗುರು ಶಿವಲಿಂಗ ಶಿವಾಚಾರ್ಯರು
೯೬. ಶ್ರೀ ಜಗದ್ಗುರು ಬೃಹಚ್ಚನ್ನವೀರ ಶಿವಾಚಾರ್ಯರು
೯೭. ಶ್ರೀ ಜಗದ್ಗುರು ಪರಚನ್ನವೀರ ಶಿವಾಚಾರ್ಯರು
೯೮. ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರು
೯೯. ಶ್ರೀ ಜಗದ್ಗುರು ಮರುಳಸಿದ್ಧ ಶಿವಾಚಾರ್ಯರು
೧೦೦. ಶ್ರೀ ಜಗದ್ಗುರು ಜಟಾಗುರುಸಿದ್ಧ ಶಿವಾಚಾರ್ಯರು
೧೦೧. ಶ್ರೀ ಜಗದ್ಗುರು ಚನ್ನವೃಷಭ ಶಿವಾಚಾರ್ಯರು
೧೦೨. ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರು
೧೦೩. ಶ್ರೀ ಜಗದ್ಗುರು ಚನ್ನವೀರ ಶಿವಾಚಾರ್ಯರು
೧೦೪. ಶ್ರೀ ಜಗದ್ಗುರು ಚನ್ನವೃಷಭ ಶಿವಾಚಾರ್ಯರು
೧೦೫. ಶ್ರೀ ಜಗದ್ಗುರು ಗುರುಸಿದ್ಧ ಶಿವಾಚಾರ್ಯರು
೧೦೬. ಶ್ರೀ ಜಗದ್ಗುರು ಮರುಳಸಿದ್ಧ ಶಿವಾಚಾರ್ಯರು
೧೦೭. ಶ್ರೀ ಜಗದ್ಗುರು ಚನ್ನವೃಷಭ ಶಿವಾಚಾರ್ಯರು
೧೦೮. ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರು
೧೦೯. ಶ್ರೀ ಜಗದ್ಗುರು ಸಿದ್ಧೇಶ್ವರ ಶಿವಾಚಾರ್ಯರು
೧೧೦. ಶ್ರೀಜಗದ್ಗುರು ಮರುಳಾರಾಧ್ಯ ಶಿವಾಚಾರ್ಯರು
೧೧೧. ಶ್ರಿ ಜಗದ್ಗುರು ಮರುಳಸಿದ್ಧ ಶಿವಾಚಾರ್ಯರು (ಈಗಿನವರು)

ಉಜ್ಜಯಿನಿ ಸದ್ಧರ್ಮ ಪೀಠದ ಪರಂಪರೆಯಲ್ಲಿ, ಇದುವರೆಗೆ ಒಟ್ಟು ೧೧೪ ಜಗದ್ಗುರುಗಳು ವೀರಶೈವ ಧರ್ಮವನ್ನು ಉದ್ಧರಿಸಿ ಬೆಳೆಸಿದ್ದಾರೆ. ಈ ಪೀಠದ ೧೦೩ ನೆಯ ಜಗದ್ಗುರುಗಳು ಕೂಡ್ಲಿಗಿ ತಾಲ್ಲೂಕಿನ ನಾಗರಕಟ್ಟೆ ಗ್ರಾಮದ ಹಿರೇಮಠದವರಾಗಿದ್ದು, ಸಕಲ ಕಾರ್ಯಗಳನ್ನು ಶ್ರೇಷ್ಠ ರೀತಿಯಲ್ಲಿ ಜರುಗಿಸಿ ಪೀಠವನ್ನು ಅಭಿವೃದ್ಧಿಗೆ ತಂದಿದ್ದಾರೆ. ಹಿಂದಿನ ಜಗದ್ಗುರುಗಳು ಸಂಪಾದಿಸಿದ್ದ ಭೂಸಂಪತ್ತು ಮತ್ತು ಬೆಳ್ಳಿ, ಬಂಗಾರವನ್ನು ಕಾಪಾಡಿಕೊಂಡು'ಬಾಳೆಹಳ್ಳಿ ದೌಲತ್ತು, ಉಜ್ಜಯಿನಿ ಸಂಪತ್ತು' ಎಂಬ ನಾಣ್ಣುಡಿಯನ್ನು ಸಾರ್ಥಕಗೊಳಿಸಿ, ಹಿರಿಯ ಗುರುಗಳು ಹಾಕಿಕೊಟ್ಟ ಮಾರ್ಗದಲ್ಲಿ ಪೀಠವನ್ನು ಮುನ್ನಡೆಸಿರುತ್ತಾರೆ.

ಮಹಾತಪಸ್ವಿ: ಪೀಠದ ೧೦೮ನೆಯ ಜಗದ್ಗುರುಗಳಾಗಿ ಕ್ರಿ.ಶ. ೧೯೩೬ ರಲ್ಲಿ ಚರಪಟ್ಟಾಧಿಕಾರವನ್ನು ಪಡೆದ ಜಗದ್ಗುರು ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನ ಬಂಗಾರ ನಾಯ್ಕನಹಳ್ಳಿಯ ಹಿರೇಮಠದ ಶ್ರೀ ಚನ್ನಬಸವಾರ್ಯರು ಮತ್ತು ಶ್ರೀಮತಿ ಗುರುಸಿದ್ಧಮ್ಮನವರ ಪುತ್ರರಾಗಿ ಜನಿಸಿದರು. ಇವರು ಬಾಲ್ಯದಲ್ಲಿ ವಿದ್ಯಾಸಂಪನ್ನರಾಗಿ, ಆಚಾರ ವಿಚಾರಗಳನ್ನು ಮೈಗೂಡಿಸಿಕೊಂಡು ಹದಿನೈದನೆಯ ವರ್ಷಕ್ಕೆ ಉಜ್ಜಯಿನಿ ಪೀಠದ ಚರಪಟ್ಟಾಧ್ಯಕ್ಷರಾಗಿ ಅಧಿಕಾರವನ್ನು ವಹಿಸಿಕೊಂಡರು. ಶಿವಪೂಜಾನಿಷ್ಠೆಯಿಂದ ತಪೋಶಕ್ತಿ ಪಡೆದಿದ್ದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಪಂಚಪೀಠಗಳನ್ನು ಜಗತ್ತಿಗೇ ಪರಿಚಯಿಸುವ ಹಂಬಲದಿಂದ ವೀರಶೈವ ಧರ್ಮವನ್ನು ಬೆಳೆಸಿ ಸಮಾಜದಲ್ಲಿ ಧರ್ಮ, ನೀತಿ, ಭಕ್ತಿ, ವಿಶ್ವಾಸ ಬೆಳೆಯಬೇಕೆಂದು ಅತ್ಯಂತ ಕಳಕಳಿಯಿಂದ ಪ್ರಯತ್ನಿಸಿದ ಮಹಾಪುರುಷರಾಗಿದ್ದಾರೆ.

ಪಂಚಪೀಠಗಳಲ್ಲಿ ಒಂದಾದ ಕೇದಾರ ಪೀಠದ ಗುರುಗಳು ಕರ್ನಾಟಕ ಪ್ರಾಂತ್ಯಕ್ಕೆ ಆಗಮಿಸದೆ ಇದ್ದ ಕಾರಣಕ್ಕೆ ಅವರನ್ನು ಬರಮಾಡಿಕೊಂಡು, ಉತ್ಸವಗಳಿಂದ ಸ್ವಾಗತಿಸಿ ಧರ್ಮಸಭೆಗಳನ್ನು ಏರ್ಪಡಿಸಿ ಕೇದಾರ ಗುರುಗಳಿಂದ ಉಪದೇಶಾಮೃತ ನೀಡಿಸಿ ಭಕ್ತರನ್ನು ಪಾವನಗೊಳಿಸಿರುತ್ತಾರೆ. ಕೇದಾರ ಪೀಠದ ಉತ್ತರಾಧಿಕಾರಿ ಆಯ್ಕೆಯ ವಿಚಾರವನ್ನು ತಮ್ಮ ಹೆಗಲ ಮೇಲೆ ಹಾಕಿಕೊಂಡು ಕೇದಾರ ಪೀಠವನ್ನು ಉದ್ಧರಿಸಿರುತ್ತಾರೆ.

ಬಳ್ಳಾರಿಯಲ್ಲಿ ವಿದ್ಯಾವರ್ಧಕ ಸಂಘ ಮತ್ತು ಕೊಟ್ಟೂರಿನಲ್ಲಿ ಶ್ರೀ ದಾರುಕಾಚಾರ್ಯ ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಿದರು. ಉಜ್ಜಯಿನಿ ಪೀಠದ ಕಟ್ಟಡವನ್ನು ಜೀರ್ಣೋದ್ಧಾರ ಮಾಡಿಸಿ, ಭವ್ಯವಾದ ಕಲ್ಲಿನ ಕಟ್ಟಡವನ್ನು ನಿರ್ಮಿಸಿದ್ದಾರೆ. ಉಜ್ಜಯಿನಿ ಪೀಠದಲ್ಲಿ ಸಂಸ್ಕೃತ ಕಾಲೇಜನ್ನು ಸ್ಥಾಪಿಸಲು ಎಪ್ಪತ್ತು ಸಾವಿರ ರೂಪಾಯಿಗಳನ್ನು ಸಂಗ್ರಹಿಸಿದರು. ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಬುಕ್ಕಾಂಬೂದಿಯ ಬೆಟ್ಟದಲ್ಲಿ ದೀರ್ಘ ತಪಸ್ಸನ್ನು ಆಚರಿಸಿ ಈ ನಾಡನ್ನು ಉದ್ಧರಿಸಿದರು. ಇವರ ನಂತರ ಅಧಿಕಾರಕ್ಕೆ ಬಂದ ಗುರುಗಳೆಲ್ಲರೂ ಪೀಠದ ಏಳಿಗೆಗೆ ದುಡಿದು ಉಜ್ಜಯಿನಿ ಪೀಠವನ್ನು ಶ್ರೀಮಂತಗೊಳಿಸಿ, ಭಕ್ತರನ್ನು ಉದ್ಧರಿಸಿ ಸಮಾಜದಲ್ಲಿ ಸಂಘಟನೆಯನ್ನು ಮಾಡಲು ಶ್ರಮಿಸಿದ್ದಾರೆ.

ವಿದ್ವಾಂಸರು: ಪ್ರಸ್ತುತ ಸದ್ಧರ್ಮ ಸಿಂಹಾಸನ ಪೀಠದ ಜಗದ್ಗುರುಗಳಾಗಿ ೧೯೯೫ ರ ಮೇ ಹನ್ನೊಂದರಂದು ಅಧಿಕಾರವನ್ನು ವಹಿಸಿಕೊಂಡಿರುವ ಜಗದ್ಗುರು ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳು, ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಹೀರೆಹಾಳು ಗ್ರಾಮದ ಬೃಹನ್ಮಠದ ಶ್ರೀ ಚನ್ನವೀರಯ್ಯ ಮತ್ತು ಶ್ರೀಮತಿ ಬಸಮ್ಮನವರ ಪುತ್ರರಾಗಿ ೧೯೬೫ರಲ್ಲಿ ಜನಿಸಿದರು. ಎಮ್ಮಿಗನೂರು ಮಠಕ್ಕೆ ನೇಮಕಗೊಂಡಿದ್ದರು. ನಂತರ ಶಿರಗುಪ್ಪ ತಾಲ್ಲೂಕಿನ ಶಿರಿಗೆರೆ ಗ್ರಾಮದ ಪಾಠಶಾಲೆ ಮಠದ ಶ್ರೀವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳ ಅಪೇಕ್ಷೆಯ ಮೇರೆಗೆ ೧೯೮೦ರ ಜೂನ್ ಇಪ್ಪತ್ತಾರರಂದು ಪಟ್ಟಾಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದರು. ಈ ಅವಧಿಯಲ್ಲಿ ಜಗದ್ಗುರು ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳು ಸಿದ್ಧಗಂಗಾ ಮಠದಲ್ಲಿ ನೆಲೆಸಿ ಪದವಿ ಶಿಕ್ಷಣ ಮುಗಿಸಿದರು. ನಂತರ ಉನ್ನತ ವ್ಯಾಸಾಂಗ ಮಾಡಲು ೧೯೮೭ರಲ್ಲಿ ಕಾಶಿಗೆ ತೆರಳಿ ಸಂಸ್ಕೃತ, ವೇದ ಹಾಗೂ ಆಗಮಗಳನ್ನು ಅಭ್ಯಾಸ ಮಾಡಿದರು. ಶೈವಾಗಮಗಳಲ್ಲಿ ವೀರಶೈವಧರ್ಮ ಎಂಬ ವಿಷಯದ ಮೇಲೆ ಅಧ್ಯಯನ ಮಾಡುತ್ತಿರುವ ವೇಳೆಗೆ ಜಗದ್ಗುರು ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಭಗವತ್ಪಾದರು ಮತ್ತು ಪಂಚಪೀಠಾಧ್ಯಕ್ಷರ ಆಜ್ಞೆಯ ಮೇರೆಗೆ ಅಭ್ಯಾಸವನ್ನು ಮೊಟುಕುಗೊಳಿಸಿ ೧೯೯೫ರ ನವೆಂಬರ್ ಐದರಂದು ಉಜ್ಜಯಿನಿ ಪೀಠದ ಜಗದ್ಗುರುಗಳಾಗಿ ಪಟ್ಟಾಧಿಕಾರ ವಹಿಸಿಕೊಂಡರು.

ಅಭಿವೃದ್ಧಿ ಕಾರ್ಯಗಳು: ಜಗದ್ಗುರು ಶ್ರೀ ಮರುಳಸಿದ್ಧೇಶ್ವರ ಶಿವಾಚಾರ್ಯಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ನಿತ್ಯ ಅನ್ನದಾಸೋಹಕ್ಕಾಗಿ ದಾಸೋಹಮಂಟಪ, ಶಾಲಾ ಕಾಲೇಜುಗಳಿಗಾಗಿ ಹೊಸಕಟ್ಟಡಗಳನ್ನು ನಿರ್ಮಿಸಿದರು. ಅಲ್ಲದೆ ಪೀಠದ ಆಸ್ತಿಯನ್ನು'ಶಿಸ್ತುಬದ್ಧಗೊಳಿಸಿ ಆದಾಯದ ಮೂಲವನ್ನು ಹೆಚ್ಚಿಸಿಕೊಂಡರು.

ಮಧ್ಯಪ್ರದೇಶದ ಉಜ್ಜಯಿನಿಯಲ್ಲಿ ಮೊದಲು ಸ್ಥಾಪನೆಗೊಂಡಿದ್ದ ಪೀಠವನ್ನು ಪುನಃ ಸ್ಥಾಪಿಸಲು ಅಲ್ಲಿನ ಸರ್ಕಾರದ ಜತೆಗೆ ಸಂಪರ್ಕವನ್ನು ಬೆಳೆಸಿ ಜಾಗವನ್ನು ಮಂಜೂರು ಮಾಡಿಸಿಕೊಂಡಿದ್ದಾರೆ. ಈ ಪ್ರಯತ್ನವು ನಡೆದು ಮೂಲ ಉಜ್ಜಯಿನಿಯಲ್ಲಿ ಪೀಠವನ್ನು ಪ್ರಾರಂಭಿಸಿದ್ದೇ ಆದರೆ, ಇವರ ಅಧಿಕಾರದ ಅವಧಿಯು ಮೈಲಿಗಲ್ಲಾಗುತ್ತದೆ.

ಪೀಠದ ಸಮುಚ್ಚಯ: ಕರ್ತೃಗುರು ಜಗದ್ಗುರು ಶ್ರೀ ಮರುಳಸಿದ್ಧೇಶ್ವರ ಶಿವಾಚಾರ್ಯರ ಗದ್ದುಗೆಯ ಎಡಭಾಗದಲ್ಲಿ ಗೌರಮ್ಮ, ಪಾರ್ವತಿ, ಹಿಂಭಾಗದಲ್ಲಿ ಶ್ರೀ ಸಿದ್ಧಲಿಂಗ ಗುರುಗಳ ಗದ್ದುಗೆ, ಕೋರುಬಸವ, ಸುವರ್ಣನಂದಿ, ಅಂಕಳ ಬಸವಣ್ಣ, ಪಂಚಪೀಠಾಧೀಶ್ವರ ಶಿಲಾಮಂಟಪ, ಗೋಶಾಲೆ, ಅನ್ನದಾಸೋಹ ಸಭಾಂಗಣ, ಮಠದ ಮುಂಭಾಗದಲ್ಲಿ ಮಹಾದ್ವಾರ, ಹಿಂಭಾಗದಲ್ಲಿ ಕೈಲಾಸದ್ವಾರ, ದೀಕ್ಷಾ ಕಾರ್ಯವನ್ನು ನಡೆಸುವ ಮಹಾಶಿವ ಪೂಜಾಮಂದಿರ,ಏಕಾಂತ ಸ್ಥಳ ಗವಿ, (ಇಲ್ಲಿ ಸಿದ್ಧೇಶ್ವರ ಶಿವಾಚಾರ್ಯರು ಹೆಚ್ಚು ಇರುತ್ತಿದ್ದರು) ನ್ಯಾಯಕಭೇರಿ, (ಭಕ್ತರ ವ್ಯಾಜ್ಯಗಳನ್ನು ಬಗೆಹರಿಸುವ ಜಾಗ) ಲಕ್ಷ್ಮಕಂಭ ಈ ರೀತಿ ಪೀಠದ ಸಮುಚ್ಚಯ ನಿರ್ಮಾಣಗೊಂಡಿದೆ.

ಧಾರ್ಮಿಕ ಆಚರಣೆಗಳು: ಶ್ರೀ ಸಿದ್ಧೇಶ್ವರ ಸ್ವಾಮಿಯ ಪಾಲ್ಕಿಉತ್ಸವವು, ವೈಶಾಖಶುದ್ಧ ಪಂಚಮಿಯಂದು ಪೂಜ್ಯ ಜಗದ್ಗುರು ಶ್ರೀ ದಾರುಕಾಚಾರ್ಯರ ಜಯಂತಿ ಅಂಗವಾಗಿ ನಡೆಯುತ್ತಿದೆ. ಸಿದ್ಧೇಶ್ವರ ಸ್ವಾಮಿಯ ಮಹಾರಥೋತ್ಸವ ನಡೆದ ಮೇಲೆ ವೈಶಾಖ ಶುದ್ಧಷಷ್ಠಿಯಂದು ದೇವಸ್ಥಾನದ ಶಿಖರಕ್ಕೆ ತೈಲಾಭಿಷೇಕ ಮಹೋತ್ಸವ ನಡೆಯುತ್ತಿದೆ. ಭಕ್ತರೆಲ್ಲ ತಮ್ಮ ಹರಕೆಯಂತೆ ತೈಲಾಭಿಷೇಕಕ್ಕೆ ಎಣ್ಣೆ ಹಾಕಿಸುತ್ತಾರೆ. ಜರಮಲೆ ರಾಜಮನೆತನದವರು ಒಂದು ಕುಂಭ ತೈಲವನ್ನು ಭಕ್ತಿಪೂರ್ವಕವಾಗಿ ಕಳುಹಿಸಿ

ಕೊಡುತ್ತಾರೆ. ಜರಮಲೆ ರಾಜಮನೆತನದ ತೈಲಾಭಿಷೇಕವನ್ನು ಪ್ರಥಮವಾಗಿ ಮಾಡಿದ ಮೇಲೆ ಭಕ್ತರ ಅಭಿಷೇಕ ಕಾರ್ಯವು ನಡೆಯುತ್ತದೆ. ವೈಶಾಖಶುದ್ಧ ಸಪ್ತಮಿ-ಅಷ್ಟಮಿಗಳಂದು ಶ್ರೀ ಸಿದ್ಧೇಶ್ವರ ಸ್ವಾಮಿಗೆ ನೈವೇದ್ಯ ಸಮರ್ಪಣೆ ನಡೆಯುತ್ತದೆ. ಸಪ್ತಮಿಯ ದಿನ ಸದ್ಧರ್ಮ ಸಿಂಹಾಸನ ಪೀಠದಲ್ಲಿ ಜಂಗಮ ವಟುಗಳಿಗೆ ಮಾಹೇಶ್ವರ ದೀಕ್ಷೆಕೊಡುವ ಕಾರ್ಯಕ್ರಮವು ನೆರವೇರುತ್ತದೆ. ವೈಶಾಖಶುದ್ಧ ನವಮಿಯ ದಿನ ಕಂಕಣ ವಿಸರ್ಜನಾ ಮಹೋತ್ಸವ ಜರುಗುತ್ತಿದೆ. ಅಂದು ಗುಡಿ ತೊಳೆಯುವ ಕಾರ್ಯಕ್ರಮ ವನ್ನು ಇಟ್ಟುಕೊಂಡು ದೇವಾಲಯವನ್ನೆಲ್ಲಾ ತೊಳೆದು ಶುಚಿಗೊಳಿಸಲಾಗುತ್ತದೆ. ಈ ರಥೋತ್ಸವವು ಉಜ್ಜಯಿನಿ ಕ್ಷೇತ್ರದ ಪ್ರಮುಖ ಕಾರ್ಯಕ್ರಮವಾಗಿದೆ.

ಸಿದ್ಧೇಶ್ವರಲಿಂಗಕ್ಕೆ ಶ್ರಾವಣಮಾಸದಲ್ಲಿ ಮಾತ್ರ ರುದ್ರಾಭಿಷೇಕವನ್ನು ಮಾಡಲಾಗುತ್ತಿತ್ತು. ಈಗ ಪ್ರತಿನಿತ್ಯವು ಜರುಗು ವಂತೆ ವ್ಯವಸ್ಥೆ ಮಾಡಿಸಲಾಗಿದೆ. ವಿಜಯ ದಶಮಿಯಲ್ಲಿ ಬನ್ನಿಮುಡಿಯುವುದು, ಕಾರ್ತೀಕಮಾಸದಲ್ಲಿ ದೀಪೋತ್ಸವ, ಪ್ರತಿವರ್ಷ ಷಷ್ಠಿ ಶುದ್ಧ ಭಾರತ ಹುಣ್ಣಿಮೆಯ ದಿನ ಶ್ರೀ ಸಿದ್ಧೇಶ್ವರ ಸ್ವಾಮಿಯನ್ನು ಒಂಬತ್ತು ಪಾದಗಟ್ಟೆಗಳಿಗೆ ಉತ್ಸವದಲ್ಲಿ ಕರೆದುಕೊಂಡು ಹೋಗುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಪೀಠದಲ್ಲಿ ವಿಭೂತಿ ತಯಾರಿಕೆಯ ಘಟಕವನ್ನು ಪ್ರಾರಂಭಿಸಲಾಗಿದೆ.

ಸಾಹಿತ್ಯ ಸೇವೆ: ಸಾಹಿತ್ಯ ಪ್ರಸಾರಕ್ಕಾಗಿ ಪೀಠದ ವತಿಯಿಂದ ಹಲವಾರು ಕಾರ್ಯ ಚಟುವಟಿಕೆಗಳನ್ನು ಆಯೋಜಿಸಲಾಗಿದೆ. ವೀರಶೈವ ಧರ್ಮದ ಬಗ್ಗೆ ವ್ಯವಸ್ಥಿತವಾದ ಅಧ್ಯಯನ ಮಾಡಲು, ಧರ್ಮ ಮತ್ತು ತತ್ತ್ವ ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಇದರ ಒಂದು ಮುಖ್ಯ ಕಾರ್ಯಕ್ರಮವಾಗಿ ವೀರಶೈವ ಧರ್ಮಗ್ರಂಥವಾದ ಸಿದ್ಧಾಂತಶಿಖಾಮಣಿಯನ್ನು ಆಂಗ್ಲಭಾಷೆಗೆ ಅನುವಾದ ಮಾಡಿಸಿ ಪ್ರಕಟಿಸಲಾಗಿದೆ.ಪೀಠದ ನೂರಆರನೆಯ ಜಗದ್ಗುರು ಶ್ರೀ ಮರುಳಸಿದ್ಧ-ಶಿವಾಚಾರ್ಯರು ಶಿಷ್ಯ ಸಂತಾಪಹರಣ, ಶಿವಾನುಭವ, ಪಂಚಾಂಗ ಯೋಗಶಾಸ್ತ್ರ ಎಂಬ ಗ್ರಂಥಗಳನ್ನು ರಚಿಸಿ ಪ್ರಸಿದ್ಧಿಯಾಗಿದ್ದಾರೆ.

ಸಾಮಾಜಿಕ-ಶಿಕ್ಷಣ ಸೇವೆ: ಶ್ರೀ ಜಗದ್ಗುರು ಸಿದ್ಧೇಶ್ವರರು ಬಳ್ಳಾರಿಯಲ್ಲಿ ಸುಮಾರು ಇಪ್ಪತ್ತೈದು ಲಕ್ಷ ರೂಪಾಯಿ ವೆಚ್ಚದಲ್ಲಿ ಸುಸಜ್ಜಿತವಾದ ಆಸ್ಪತ್ರೆಯನ್ನು ನಿರ್ಮಿಸಿದ್ದಾರೆ. ಉಜ್ಜಯಿನಿ ಪೀಠದಿಂದ ವೀರಶೈವ ವಿದ್ಯಾವರ್ಧಕ ಸಂಘ ಸ್ಥಾಪನೆಗಾಗಿ ೧೯೧೬ರಲ್ಲಿ ಐದುಸಾವಿರ ಬೆಳ್ಳಿ ನಾಣ್ಯಗಳನ್ನು ನೀಡಿ ಸಂಘ ಸ್ಥಾಪನೆಗೆ ನೆರವಾಗಿದೆ. 'ಶ್ರೀ ಉಜ್ಜಯಿನಿ ಸದ್ಧರ್ಮಜ್ಞಾನಗುರು ವಿದ್ಯಾಪೀಠ'ವನ್ನು (೧೯೪೨) ಸ್ಥಾಪಿಸಿದ್ದು, ಇದರ ವತಿಯಿಂದ ಹತ್ತು ಪ್ರೌಢಶಾಲೆಗಳು, ಮೂರು ಪದವಿ ಪೂರ್ವ ಕಾಲೇಜುಗಳು, ಐದು ಪ್ರಸಾದ ನಿಲಯಗಳು ನಡೆಯುತ್ತಿವೆ. ಉಜ್ಜಯಿನಿ ಪೀಠವು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಹಿತ್ಯಿಕವಾಗಿ ಸಮಷ್ಟಿ ಸಮಾಜವನ್ನು ಅಭಿವೃದ್ಧಿಪಡಿಸಿ, ವೀರಶೈವ ಧರ್ಮವನ್ನು ಬೆಳೆಸುವ ಸದುದ್ದೇಶವನ್ನು ಹೊಂದಿದೆ. ಈಗಿನ ಗುರುಗಳು ಕ್ರಿಯಾಶೀಲರಾಗಿರುವ ಕಾರಣ ನೆನೆಗುದಿಗೆ ಬಿದ್ದಿರುವ ಎಲ್ಲಾ ಕೆಲಸಗಳು ಇವರ ಅವಧಿಯಲ್ಲಿ ಮುಗಿಯಲಿವೆ ಎಂದು ಎಲ್ಲಾ ಭಕ್ತರು ನಿರೀಕ್ಷೆಯನ್ನು ಇಟ್ಟುಕೊಂಡಿದ್ದಾರೆ.

ವಿಳಾಸ: ೧೦೦೮ ಜಗದ್ಗುರು ಶ್ರೀಶ್ರೀಶ್ರೀ ಮರುಳಸಿದ್ಧ ಶಿವಾಚಾರ್ಯ ಭಗವತ್ಪಾದರು, ಶ್ರೀಮದ್‌ಉಜ್ಜಯಿನಿ ಪೀಠ, ಉಜ್ಜಯಿನಿ, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.

ಆಧಾರ: 'ಗುರುವರ್ಗ ದರ್ಪಣ' ಗ್ರಂಥಕರ್ತರು : ಶ್ರೀ ವಿರೂಪಾಕ್ಷ ಶಾಸ್ತ್ರಿಗಳು

'ಗುರು ಕಾರುಣ್ಯ' ಸಂಪಾದಕರು : ಡಾ. ಪಂಚಾಕ್ಷರಿ ಹಿರೇಮಠ, ಲೇಖಕರು : ಶ್ರೀ ಡಾ.ಎಂ.ಶಿವಮೂರ್ತಿ

ಕಾನಾಮಡುವು

ಕೂಡ್ಲಿಗಿ ತಾಲ್ಲೂಕಿನ ಕಾನಾಮಡುವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಮೂವತ್ತು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ದಾಸೋಹ ಮಠವು ಅಸ್ತಿತ್ವದಲ್ಲಿದೆ.

ದಾಸೋಹಮಠ: ಕಾನಾಮಡುವು ಗ್ರಾಮದಲ್ಲಿ ಉಜ್ಜಯಿನಿ ಪೀಠದ ಶಾಖಾಮಠವಾದ ಶ್ರೀ ದಾಸೋಹ ಮಠವು ಸ್ಥಾಪನೆ ಯಾಗಿದೆ. ಶ್ರೀ ಶರಣಬಸವೇಶ್ವರರು ಇಲ್ಲಿ ನೆಲೆನಿಂತು ಅನೇಕ ಪವಾಡಗಳನ್ನು ಮಾಡಿ ಈ ಸ್ಥಳವನ್ನು ಸುಕ್ಷೇತ್ರಗೊಳಿಸಿದ್ದಾರೆ. ಮಠ ಸ್ಥಾಪನೆ: ತುಮಕೂರು ಜಿಲ್ಲೆಯ ಅಗಳಿ ಗ್ರಾಮದಲ್ಲಿ ಜನಿಸಿದ ಶ್ರೀ ಶರಣಬಸವೇಶ್ವರರು ಬಾಲ್ಯದಲ್ಲೇ ಆಧ್ಯಾತ್ಮ

ವಿಚಾರಗಳಿಗೆ ಅಂಟಿಕೊಂಡು, ಪುರಾಣ ಪ್ರವಚನಗಳ ಪ್ರೇರಣೆಯಿಂದ ಶಿವಕ್ಷೇತ್ರಗಳ ದರ್ಶನಕ್ಕೆ ಹೊರಡುತ್ತಾರೆ. ಶ್ರೀ ಶರಣ ಬಸವೇಶ್ವರರು ಸಂಚಾರದಲ್ಲಿ ಲೋಕಾನುಭವ ಪಡೆದು, ಅನೇಕ ಶಿವಯೋಗಿಗಳ ದರ್ಶನ ಹಾಗೂ ಉಪದೇಶದಿಂದ ಪಕ್ವಗೊಂಡರು. ಗುರುಗಳು ವೀರಶೈವ ಧರ್ಮವನ್ನು ಅಭಿವೃದ್ಧಿಗೊಳಿಸುವ ನಿರ್ಧಾರ ಕೈಗೊಂಡು ಕಾನಾಮಡುವಿಗೆ ಆಗಮಿಸುತ್ತಾರೆ. ಇಲ್ಲಿ ಕೆಲವು ದಿನ ನೆಲೆನಿಂತು ಧಾರ್ಮಿಕ ಆಚರಣೆಗಳನ್ನು ನಡೆಸಿ ಹೆಸರು ಪಡೆದರು. ನಂತರ ಸಂಚಾರವನ್ನು ಕೈಗೊಂಡು ಕೊಟ್ಟೂರಿನಲ್ಲಿ ಬಂದು ನೆಲೆಸಿದರು. ನಂತರ ಕಾನಾಮಡುವಿನ ಭಕ್ತರ ಅಪೇಕ್ಷೆಯಂತೆ ಪುನಃ ಕಾನಾಮಡುವಿಗೆ ಹೋಗಿ ಮಠವನ್ನು ಸ್ಥಾಪಿಸಿ, ಧಾರ್ಮಿಕ ಕಾರ್ಯಗಳನ್ನು ನಡೆಸಿ ದಾಸೋಹವನ್ನು ಶ್ರೀಮಂತಗೊಳಿಸಿದರು.

ಪರಂಪರೆ:

೧. ಷ.ಬ್ರ.ಶ್ರೀ ಶರಣ ಬಸವೇಶ್ವರರು (ಕರ್ತೃಗುರುಗಳು)
೨. ಷ.ಬ್ರ.ಶ್ರೀ ಚನ್ನಬಸವಣ್ಣಸ್ವಾಮಿಗಳು
೩. ಷ.ಬ್ರ.ಶ್ರೀ ಇಮ್ಮಡಿ ಶರಣಾರ್ಯರು
೪. ಷ.ಬ್ರ.ಶ್ರೀ ಮುಮ್ಮಡಿ ಶರಣಾರ್ಯರು
೫. ಷ.ಬ್ರ.ಶ್ರೀ ನಾಲ್ವಡಿ ಶರಣಾರ್ಯರು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಶ್ರೀ ಶರಣಬಸವೇಶ್ವರರ ನಂತರ ಅವರ ಸಹೋದರ ಸಂಬಂಧಿ ಶ್ರೀ ಚನ್ನಬಸವಣ್ಣ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿದರು. ಇವರ ನಂತರ ಶ್ರೀ ಇಮ್ಮಡಿ ಶರಣಾರ್ಯರು ಅಧಿಕಾರಕ್ಕೆ ಬಂದರು. ಇವರು ಶಿವಯೋಗದ ಬಗ್ಗೆ ಅಪಾರ ಜ್ಞಾನವನ್ನು ಸಂಪಾದಿಸಿಕೊಂಡಿದ್ದರು. ದಾಸೋಹ ಮೂರ್ತಿಗಳಾಗಿ ಗುರು, ಲಿಂಗ, ಜಂಗಮ ಪ್ರೇಮಿಗಳಾಗಿ ಬೆಳೆದು, ಮಠವನ್ನು ಬೆಳೆಸಿದರು. ನಂತರ ಶ್ರೀ ಮುಮ್ಮಡಿ ಶರಣಾರ್ಯರು ಅಧಿಕಾರಕ್ಕೆ ಬಂದು ಮಠವನ್ನು ಸರ್ವಾಂಗೀಣವಾಗಿ ಅಭಿವೃದ್ಧಿಪಡಿಸಿದರು. ಈಗ ಶ್ರೀ ನಾಲ್ವಡಿ ಶರಣಾರ್ಯರು ಅಧಿಕಾರವನ್ನು ವಹಿಸಿಕೊಂಡು ಧರ್ಮೋಪದೇಶ ಹಾಗೂ ದಾಸೋಹವನ್ನು ನಡೆಸಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ಶೈಕ್ಷಣಿಕ ಸೇವೆ: ಮಠದ ವತಿಯಿಂದ ೧೯೩೧ ರಲ್ಲಿ 'ಶ್ರೀ ಶರಣಬಸವೇಶ್ವರ ವಿದ್ಯಾವರ್ಧಕ ಸಂಸ್ಥೆ'ಯನ್ನು ಸ್ಥಾಪಿಸಿ, ಪ್ರಾಥಮಿಕ ಹಾಗೂ ಪ್ರೌಢಶಾಲೆಯನ್ನು ಮಠದಲ್ಲಿ ಪ್ರಾರಂಭಿಸಿ ಗ್ರಾಮಾಂತರ ಪ್ರದೇಶದ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗಿದೆ.

ವಿಳಾಸ: ಶ್ರೀ ಶರಣಾರ್ಯರು, ಶ್ರೀ ದಾಸೋಹಮಠ, ಕಾನಾಮಡುವು, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
ಆಧಾರ: 'ಶ್ರೀ ಶರಣ ಬಸವೇಶ್ವರ ಚರಿತ್ರೆ' ಲೇಖಕರು : ವಿದ್ವಾನ್ ಗುರುಸಿದ್ಧಯ್ಯ ಶಾಸ್ತ್ರಿ.

ಕೂಡ್ಲಿಗಿ

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿಯು ಜಿಲ್ಲಾ ಕೇಂದ್ರದಿಂದ ನೈರುತ್ಯಕ್ಕೆ ನಲವತ್ತೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಸಾಸಲು ವಾಡದ ಶಾಖಾಮಠವು ಅಸ್ತಿತ್ವದಲ್ಲಿದೆ.

ಸಾಸಲುವಾಡ ಶಾಖಾಮಠ: ಕೂಡ್ಲಿಗಿ ಪಟ್ಟಣದಲ್ಲಿ ಸಾಸಲುವಾಡದ ಶಾಖಾಮಠ ಇತ್ತೀಚೆಗೆ ಅಸ್ತಿತ್ವಗೊಂಡು, ಶೈಕ್ಷಣಿಕ ಹಾಗೂ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ಸಾಸಲವಾಡದಿಂದ ಕೂಡ್ಲಿಗಿ ಪಟ್ಟಣಕ್ಕೆ ಮಠದ ಆಡಳಿತವನ್ನು ಸ್ಥಳಾಂತರಿಸಲಾಗಿದೆ. ಈಗ ಶ್ರೀ ಮಲ್ಲಿಕಾರ್ಜುನ ಶಿವಾ ಚಾರ್ಯ ಸ್ವಾಮಿಗಳು ಮಠದ ಆಡಳಿತವನ್ನು ವಹಿಸಿಕೊಂಡು ಪ್ರೌಢಶಾಲೆ ಮತ್ತು ಕಾಲೇಜನ್ನು ನಡೆಸುತ್ತಾ ಶೈಕ್ಷಣಿಕ ಸೇವೆಯ ಜೊತೆಗೆ ಧರ್ಮಪ್ರಚಾರವನ್ನು ಕೈಗೊಂಡಿದ್ದಾರೆ. ಸಾಸಲುವಾಡದಲ್ಲಿರುವ ಮಠದ ಆಸ್ತಿಯನ್ನು ಅಭಿವೃದ್ಧಿಪಡಿಸಲಾಗಿದೆ.

ವಿಳಾಸ:ಷ.ಬ್ರ.ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು, ಶ್ರೀ ಸಾಸಲುವಾಡ ಶಾಖಾಮಠ, ಕೂಡ್ಲಿಗಿ, ಬಳ್ಳಾರಿ ಜಿಲ್ಲೆ.

ಕೊಟ್ಟೂರು

ಕೂಡ್ಲಿಗಿ ತಾಲ್ಲೂಕಿನ ಕೊಟ್ಟೂರು ಪಟ್ಟಣವು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಇಪ್ಪತ್ತು ಕಿ.ಮೀ.ದೂರದಲ್ಲಿದೆ.

ಪೌರಾಣಿಕ ಹಾಗೂ ಐತಿಹಾಸಿಕವಾದ ಈ ಪಟ್ಟಣದಲ್ಲಿ ಶ್ರೀ ದರ್ಬಾರ್‌ಮಠ, ಶ್ರೀ ಗಚ್ಚಿನಮಠ, ಶ್ರೀ ತೊಟ್ಟಿಲುಮಠ, ಶ್ರೀ ಮೂರುಕಲ್ಲುಮಠ, ಶ್ರೀ ಮಹಲ್‌ಮಠ, ಶ್ರೀ ಭೂತಭುಜಂಗಮಠ, ಶ್ರೀ ಡೋಣೂರು ಚಾನುಕೋಟಿ ಮಠ, ಶ್ರೀ ಹೊಸಮಠ, ಶ್ರೀ ವಿರಕ್ತಮಠ,(ಹೇಮಕೂಟದ ಶಾಖೆಮಠ) ಶ್ರೀ ಆಡಾಳುಮಠ, (ಮಠದ ಜಾಗ ಇದೆ) ಶ್ರೀ ಬುಕ್ಕಸಾಗರಶಾಖಾಮಠ, ಶ್ರೀ ಗುಡೆಕೋಟೆಪಟ್ಟದ ದೇವರಮಠ, (ಇದುಹೊಸಪೇಟೆ ಹೇಮಕೂಟ ಶಾಖೆ) ಅರಸೀಕೆರೆ ಶ್ರೀ ಕೋಲಶಾಂತೇಶ್ವರರ ಶಾಖಾಮಠ ಈ ರೀತಿ ಹದಿಮೂರು ಮಠಗಳು ಸ್ಥಾಪನೆಯಾಗಿದೆ. ಇವುಗಳಲ್ಲಿ ಶ್ರೀ ದರ್ಬಾರುಮಠ, ಶ್ರೀ ಗಚ್ಚಿನಮಠ, ಶ್ರೀ ತೊಟ್ಟಿಲುಮಠ ಮತ್ತು ಶ್ರೀ ಮೂರುಕಲ್ಲು ಮಠಗಳು ಶ್ರೀ ಕೊಟ್ಟೂರು ಬಸವೇಶ್ವರ ಮಠಕ್ಕೆ ಸೇರಿದವುಗಳಾಗಿದ್ದು, ಶ್ರೀ ಮಹಲ್‌ಮಠ, ಶ್ರೀ ಭೂತಭುಜಂಗಮಠ ಮತ್ತು ಶ್ರೀ ಡೋಣೂರುಚಾನುಕೋಟಿ ಮಠಗಳಲ್ಲಿ ಮಠಾಧೀಶರಿದ್ದು ಧಾರ್ಮಿಕ ಚಟುವಟಿಕೆಗಳು ನಡೆಯುತ್ತಿವೆ.ಇನ್ನುಳಿದವುಗಳಲ್ಲಿ ಮಠಾಧೀಶರಿಲ್ಲದೆ ಕೇವಲ ಗದ್ದುಗೆ ಪೂಜೆಗಷ್ಟೇ ಸೀಮಿತವಾಗಿವೆ.

ಕೊಟ್ಟೂರೇಶ್ವರಮಠ: ಕೊಟ್ಟೂರಿನ ಮಧ್ಯಭಾಗದಲ್ಲಿ ಶ್ರೀ ಕೊಟ್ಟೂರು ಬಸವೇಶ್ವರ ಮಠವು ಸ್ಥಾಪನೆಯಾಗಿದೆ. ಶ್ರೀ ಬಸವೇಶ್ವರರು ಲೋಕಸಂಚಾರ ಕೈಗೊಂಡು ಅನೇಕ ಪವಾಡಗಳನ್ನು ಮಾಡಿ ಭಕ್ತರನ್ನು ಉದ್ಧರಿಸಿ ಇಲ್ಲಿಗೆ ಬಂದು ನೆಲೆಗೊಂಡರು. ಗುರುಗಳು ಇಲ್ಲಿ ಮಠವನ್ನು ಸ್ಥಾಪಿಸಿ, ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದರು.

ಮಠ ಸ್ಥಾಪನೆ: ಪಂಚಗಣಾಧೀಶ್ವರರಾದ ಶ್ರೀ ಬಸವೇಶ್ವರರು, ಶ್ರೀ ರುದ್ರಮುನಿ ಸ್ವಾಮಿಗಳು, ಶ್ರೀ ಕೋಲಶಾಂತೇಶ ಸ್ವಾಮಿಗಳು, ಶ್ರೀ ಕೆಂಪಯ್ಯ ಸ್ವಾಮಿಗಳು ಮತ್ತು ಶ್ರೀ ಮದ್ದಾನ ಸ್ವಾಮಿಗಳು ಜೊತೆಯಾಗಿ ಲೋಕಸಂಚಾರ ಮಾಡುತ್ತಾ, ವೀರಶೈವ ಧರ್ಮ ವನ್ನು ಉದ್ಧರಿಸಿ ಕೂಡ್ಲಿಗಿ ತಾಲ್ಲೂಕಿನ ಈ ಪ್ರಾಂತ್ಯಕ್ಕೆ ಬಂದು ನೆಲೆಸಿ ಅನೇಕ ಪವಾಡಗಳನ್ನು ಮಾಡಿದರು. ಶ್ರೀ ಬಸವೇಶ್ವರರು ನಾಲ್ವರು ಗಣಾಧೀಶ್ವರರನ್ನು ಕಾಯಕ ನಿಮಿತ್ತ ಬೇರೆ ಬೇರೆಡೆಗೆ ಕಳುಹಿಸಿ ತಾವೂ ಲೋಕಸಂಚಾರ ಮಾಡಿ ಅನೇಕ ಲೀಲೆಗಳನ್ನು ಪ್ರದರ್ಶಿಸಿ, ಅಂಧಕಾರವನ್ನು ತೊಲಗಿಸಿ ವೀರಶೈವ ಧರ್ಮವನ್ನು ಬೆಳಗಿಸಿ ಕೊಟ್ಟೂರು ಕ್ಷೇತ್ರಕ್ಕೆ ಬರುತ್ತಾರೆ. ಕೊಟ್ಟೂರಿನಲ್ಲಿ ಕೌಪೀನಧಾರಿಯಾಗಿ ನೋಡುಗರ ಕಣ್ಣಿಗೆ ಹುಚ್ಚನಂತೆ ಕಾಣಿಸಿಕೊಂಡು ತಿರುಗಾಡಿದರು. ಮೂಢರು ಇವರು ಯಾರು ಎಂದು ಅರಿಯದೆ ಕೈಗೆ ಸಿಕ್ಕ ಕಲ್ಲುಗಳಿಂದ ಹೊಡೆದು ಗಾಯಗೊಳಿಸಿ ಹಿಂಸಿಸಿದರು. ಆದರೆ ಜಂಗಮಜ್ಯೋತಿಗೆ ಇದಾವುದರ ಅರಿವೇ ಇರಲಿಲ್ಲ. ಆ ದುಷ್ಟರನ್ನೆಲ್ಲಾ ಕ್ಷಮಿಸಿ ಮನುಷ್ಯರಾಗಿ ಬದುಕುವ ಮಾರ್ಗವನ್ನು ಕಲಿಸಿ ಆಶೀರ್ವದಿಸಿದರು.

ಒಂದು ದಿನ ಸುರಿಯುವ ಮಳೆಯಲ್ಲಿ ಕೌಪೀನಧಾರಿಯಾದ ಶ್ರೀ ಬಸವೇಶ್ವರರು ನಂಬಿಯಕ್ಕನ ಮನೆಯ ಜಗುಲಿ ಯಲ್ಲಿ ಬಂದು ನಿಂತರು. ದುಷ್ಟರು ಮಾಡಿದ್ದ ಗಾಯಗಳಿಂದ ಕೀವು ಸುರಿಯುತ್ತಿತ್ತು,ಮಳೆಗೆ ಮೈ ಒದ್ದೆಯಾಗಿ ಚಳಿಯಿಂದ ನಡುಗುತ್ತಿದ್ದರು. ಆಗ ನಂಬಿಯಕ್ಕ ಶ್ರೀ ಬಸವೇಶ್ವರರನ್ನು ಒಳಗೆ ಕರೆದು ಉಪಚರಿಸಿದಳು.'ನಿನ್ನನ್ನು ನೋಡಿದರೆ ನನಗೆ ಕನಿಕರ ಬರುತ್ತದೆ. ನೀನು ಯಾರು ಎಂದು ಕೇಳಿದಳು. ಆಗ ಬಸವೇಶ್ವರರು ನಾನೊಬ್ಬ ಅನಾಥ, ನನಗೆ ನೆಲೆಯಿಲ್ಲ' ಎಂದು ಹೇಳಿದರು. ಮಕ್ಕಳಿಲ್ಲದ ನಂಬಿಯಕ್ಕ ಈತನನ್ನು ಮಗನಂತೆ ಸಾಕಿದರೆ ಮಕ್ಕಳಿಲ್ಲದ ಕೊರಗು ಮಾಯವಾಗುತ್ತದೆ ಎಂದು ನಿರ್ಧರಿಸಿ, 'ನೀನು ನನ್ನ ಮನೆಯಲ್ಲಿದ್ದು ಹಸುಗಳನ್ನು ಮೇಯಿಸಿಕೊಂಡು ಬಂದರೆ ನಿನ್ನನ್ನು ಮಗನಂತೆ ಜೋಪಾನವಾಗಿ ಸಾಕುವೆ'ಎಂದು ಹೇಳಿ ಬಸವೇಶ್ವರರಿಗೆ ಹಾಲು ಅನ್ನವನ್ನು ಉಣಬಡಿಸಿ ಉಪಚರಿಸುತ್ತಾಳೆ. ನಂಬಿಯಕ್ಕನ ಕರುಣೆಯಿಂದ ಬೆಳೆದ ಬಸವೇಶ್ವರರು ಅನೇಕ ಪವಾಡಗಳನ್ನು ತೋರಿಸಿ, ಶಿಥಿಲಗೊಂಡಿದ್ದ ಮೂರುಕಲ್ಲುಮಠದಲ್ಲಿ ವಿಷಜಂತುಗಳು ವಾಸಿಸುವ ಜಾಗದಲ್ಲಿ ದೀರ್ಘ ತಪಸ್ಸನ್ನು ಆಚರಿಸಿದರು. ಈ ಸಂದರ್ಭದಲ್ಲಿ ವಿಷ ಸರ್ಪಗಳು ಬಸವೇಶ್ವರರ ಮೈಮೇಲೆ ಹರಿದಾಡಿದರೂ, ಇದರ ಪರಿವೇ ಇಲ್ಲದೆ ಧ್ಯಾನಮಗ್ನರಾಗಿ ಅನುಷ್ಠಾನವನ್ನು ಪೂರೈಸಿದರು. ಇದನ್ನು ನೋಡಿದ ಜನರು ಇವರು ಮಹಾತ್ಮರೇ ಇರಬೇಕು ಎಂದು ಮನವರಿಕೆ ಮಾಡಿಕೊಂಡರು. ಶಿವಗಣಾಧೀಶ್ವರರಲ್ಲಿ ಒಬ್ಬರಾದ ಶ್ರೀ ಕೋಲಶಾಂತೇ ಶ್ವರರು ತಮ್ಮ ಕಾಯಕವನ್ನು ಮುಗಿಸಿ ಕೊಟ್ಟೂರಿಗೆ ಬಂದು ಬಸವೇಶ್ವರರ ಜತೆ ಸೇರಿಕೊಂಡರು. ಭಕ್ತರ ಸಂಖ್ಯೆಯನ್ನು ಹೆಚ್ಚಿಸಿಕೊಂಡ ಕೊಟ್ಟೂರೇಶ್ವರರು ಪ್ರತಿ ದಿನ ಸಂಜೆ ಧರ್ಮಸಭೆಯನ್ನು ನಡೆಸಿ, ಧರ್ಮೋಪದೇಶ ಮಾಡಿ ಜನರಲ್ಲಿ ಸಾಕ್ಷಾತ್ಕಾರ ಮಾಡುತ್ತಿದ್ದ ಸ್ಥಳವೇ ದರ್ಬಾರ್ ಮಠವಾಗಿ ರೂಪುಗೊಂಡಿದೆ. ಬಸವೇಶ್ವರರು ಪವಾಡವನ್ನು ಮಾಡಿದ ಇನ್ನೊಂದು ಸ್ಥಳವೇ ತೊಟ್ಟಿಲು ಮಠವಾಗಿ ರೂಪುಗೊಂಡಿದೆ. ತಮ್ಮ ಎಲ್ಲಾ ಲೀಲೆಗಳನ್ನು ಮುಗಿಸಿ ವೀರಶೈವ ಧರ್ಮವನ್ನು ಬೆಳೆಸಿದ ತೃಪ್ತಿಯು ಸಿಕ್ಕ

ಮೇಲೆ, ಗಚ್ಚಿನ ಮಠದಲ್ಲಿ ಜೀವಂತ ಸಮಾಧಿಯಾಗುತ್ತಾರೆ. ಶ್ರೀ ಕೊಟ್ಟೂರು ಬಸವೇಶ್ವರರು ಲಿಂಗೈಕ್ಯರಾದ ಮೇಲೆ ಮಠದ ಧಾರ್ಮಿಕ ಚಟುವಟಿಕೆಗಳನ್ನು ನಡೆಸುತ್ತಾ ಬಂದಿರುವ ಕೊಟ್ಟೂರೇಶ್ವರರ ಭಕ್ತರು ನಾಡಿನ ಎಲ್ಲಾ ಭಾಗಗಳಲ್ಲೂ ಇದ್ದು ಭಯ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದಾರೆ.

ವಿಳಾಸ: ಆಡಳಿತಾಧಿಕಾರಿಗಳು, ಶ್ರೀ ಕೊಟ್ಟೂರುಸ್ವಾಮಿ ಮಠ, ಕೊಟ್ಟೂರು, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.

ಆಧಾರ: ಕೆ.ಬಸವರಾಜ ಭಾವಿಕಟ್ಟೆ ಇವರ ಕೃತಿ 'ಕೊಟ್ಟೂರು ಶ್ರೀ ಗುರು ಬಸವೇಶ್ವರ ಮಹಿಮಾಮೃತ '

ಮಹಲ್‌ಮಠ: ಕೊಟ್ಟೂರು ಪಟ್ಟಣದ ಮಧ್ಯಭಾಗದಲ್ಲಿ ಶ್ರೀ ಮಹಲ್ ಮಠವು ಸ್ಥಾಪನೆಯಾಗಿದೆ. ಶ್ರೀ ಕೊಟ್ಟೂರು ಬಸವೇಶ್ವರರ ಕ್ರಿಯಾಮೂರ್ತಿಗಳಾಗಿದ್ದ ಶ್ರೀ ಜಗದ್ಗುರು ಶಂಕರ ಸ್ವಾಮಿಗಳು ಇಲ್ಲಿ ಮಠವನ್ನು ಸ್ಥಾಪಿಸಿ, ಧಾರ್ಮಿಕ ಕಾರ್ಯಗಳನ್ನು ನಡೆಸಿ ಕೊಂಡು ಬರತೊಡಗಿದರು. ಅಂದು ಪ್ರಾರಂಭಗೊಂಡ ಮಠವು ಇಂದಿನವರೆಗೂ ಶ್ರೀ ಬಸವೇಶ್ವರ ಮಠದಲ್ಲಿ ಕ್ರಿಯೆ ನೀಡುತ್ತಾ, ಸಂಪ್ರದಾಯವನ್ನು ಮುಂದುವರೆಸಿಕೊಂಡು ಬಂದಿದೆ. ಮುರುಘಾ ಸಮಯದ ವಿರಕ್ತ ಮಠವು, ಶ್ರೀ ಕೊಟ್ಟೂರು ಸ್ವಾಮಿಯ ದರ್ಬಾರ್ ಮಠದ ಸಮೀಪವೇ ಸ್ಥಾಪನೆಯಾಗಿದೆ. ಶ್ರೀ ಮಹಲ್ ಮಠದ ಮೂಲಮಠವು ಹೂವಿನಹಡಗಲಿ ತಾಲ್ಲೂಕು ಹೊಳಗುಂದಿಯಲ್ಲಿ ಸ್ಥಾಪನೆಯಾಗಿದ್ದು, ಈ ಮಠದ ಗುರುಗಳನ್ನು ಹೊಳಗುಂದಿ ಮಠದ ಜಗದ್ಗುರುಗಳು ನೇಮಿಸುತ್ತಾರೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಶಿವಶಂಕರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಕರಿಬಸವಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಶಂಕರಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಸಂಗನಬಸವಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಸದಾಶಿವಮೂರ್ತಿಸ್ವಾಮಿಗಳು

ಈ ರೀತಿ ಪರಂಪರೆಯು ಬೆಳೆದು ತನ್ನ ಸಂಪ್ರದಾಯದ ಕೆಲಸಗಳನ್ನು ಮಾಡುತ್ತಾ ಬರುತ್ತಿದೆ. ಮಠದ ಕರ್ತೃ ಗುರುಗಳಾದ ಶ್ರೀ ಶಂಕರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಹೊಳಗುಂದಿಯಲ್ಲಿ ನೆಲೆಸಿದ ಪರಂಪರೆಯ ಗುರುಗಳು, ಕೊಟ್ಟೂರಿನ ಶ್ರೀ ಮಹಲ್ ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಕಾಲಾನಂತರ ಎರಡೂ ಕಡೆ ಧಾರ್ಮಿಕ ಕಾರ್ಯಗಳನ್ನು ನಡೆಸಲು ತೊಂದರೆಯಾದಾಗ ಗುರುಗಳನ್ನು ನೇಮಿಸುವ ಸಂಪ್ರದಾಯ ಬೆಳೆಯಿತು.ಶ್ರೀ ಸಂಗನಬಸವ ಸ್ವಾಮಿಗಳಿಗೆ ಹೊಳಗುಂದಿಯ ಶಾಖಾಮಠವಾದ ಹನಸಿಯ ಮಠದಲ್ಲಿ ೧೯೭೧ರಲ್ಲಿ ಪಟ್ಟಾಧಿಕಾರವಾಗಿತ್ತು. ಮಹಲ್ ಮಠದಲ್ಲಿ ಉತ್ತರಾಧಿಕಾರಿಗಳು ಯಾರೂ ಇಲ್ಲದೆ ಖಾಲಿ ಉಳಿದ ಸಂದರ್ಭದಲ್ಲಿ, ಮೂಲ ಮಠದ ಗುರುಗಳು ಈ ಮಠಕ್ಕೆ ಶ್ರೀ ಸಂಗನಬಸವ ಸ್ವಾಮಿಗಳನ್ನು ನೇಮಿಸಿದ್ದರು. ಇವರು ಅನೇಕ ವರ್ಷಗಳ ಕಾಲ ಧಾರ್ಮಿಕ ಕಾರ್ಯಗಳನ್ನು ನಡೆಸಿ ಮಠವನ್ನು ಅಭಿವೃದ್ಧಿಪಡಿಸಿದರು. ಇವರ ನಂತರ ಈಗ ಉತ್ತರಾಧಿಕಾರಿಗಳನ್ನಾಗಿ ಶ್ರೀ ಸದಾಶಿವ ಸ್ವಾಮಿಗಳನ್ನು ನೇಮಕ ಮಾಡಲಾಗಿದೆ. ಮಠದ ಆಸ್ತಿಯಾಗಿ ಕೇವಲ ಒಂದು ಎಕರೆ ಗದ್ದೆ ಇದ್ದು ಇದರಲ್ಲಿಯೇ ಆದಾಯವನ್ನು ತೆಗೆಯುತ್ತಿದ್ದಾರೆ. ಶ್ರೀ ಕೊಟ್ಟೂರುಸ್ವಾಮಿ ಮಠದಲ್ಲಿ ಕ್ರಿಯೆ ನೀಡುವ ಕಾರಣ ಸರ್ಕಾರವು ತಿಂಗಳಿಗೊಮ್ಮೆ ಗೌರವಧನವನ್ನು ನೀಡುತ್ತಿದೆ. ಈ ಹಣವನ್ನು ಬಳಸಿಕೊಂಡು ಮಠದ ಧಾರ್ಮಿಕ ಆಚರಣೆಗಳು ಹಾಗೂ ದಾಸೋಹ ಕಾರ್ಯವನ್ನು ನಡೆಸಿಕೊಂಡು ಬರಲಾಗುತ್ತಿದೆ.

ಧಾರ್ಮಿಕ ಕಾರ್ಯಗಳು: ಶ್ರೀ ಸದಾಶಿವ ಸ್ವಾಮಿಗಳು ಕೊಟ್ಟೂರುಸ್ವಾಮಿ ಮಠದ ತ್ರಿಕಾಲ ಪೂಜೆಯಲ್ಲಿ ಕ್ರಿಯಾಪ್ರಸಾದವನ್ನು ನೀಡುವುದರ ಜೊತೆಗೆ, ಧರ್ಮೋಪದೇಶ ಹಾಗೂ ದಾಸೋಹವನ್ನು ನಡೆಸಿ ಮಠವನ್ನು ಜನಪ್ರಿಯಗೊಳಿಸಿದ್ದಾರೆ. ಮಾಘಬಹುಳ ದಶಮಿಯ ಮೂಲಾ ನಕ್ಷತ್ರದ ದಿನ ನಡೆಯುವ ಶ್ರೀ ಬಸವೇಶ್ವರರ ಜಾತ್ರಾ ಸಂದರ್ಭದಲ್ಲಿ ಸ್ವಾಮಿಯು ರಥ ಹತ್ತುವ ಮೊದಲು, ಈ ಮಠದ ಗುರುಗಳು ರಥವನ್ನು ಹತ್ತಿ ಮಂಗಳ ಕಾರ್ಯವನ್ನು ನಡೆಸಿ ಬಸವೇಶ್ವರ ಸ್ವಾಮಿಯನ್ನು ರಥದ ಮೇಲಕ್ಕೆ ಸ್ವಾಗತಿಸಿಕೊಳ್ಳುತ್ತಾರೆ. ಈ ರೀತಿ ಕೊಟ್ಟೂರುಸ್ವಾಮಿ ಮಠದ ಒಂದು ಅಂಗವಾಗಿ ಬೆಳೆದಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಸದಾಶಿವ ಸ್ವಾಮಿಗಳು, ಶ್ರೀ ಮಹಲ್‌ಮಠ, ಕೊಟ್ಟೂರು, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.

ಭೂತಭುಜಂಗನ ಮಠ: ಕೊಟ್ಟೂರಿನ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಭೂತಭುಜಂಗ ಮಠವು ಶ್ರೀ ರಂಭಾಪುರಿ ಪೀಠದ ಶಾಖಾ ಮಠವಾಗಿ ರೂಪುಗೊಂಡಿದೆ. ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಧಾರ್ಮಿಕ ಕಾರ್ಯವನ್ನು ನಡೆಸಿಕೊಂಡು ಬರುತ್ತಿದೆ. ಶ್ರೀ ಭೂತಭುಜಂಗ ಸ್ವಾಮಿಗಳು ಭೂತಗಳ ಒಡನಾಟ ಇಟ್ಟುಕೊಂಡು ಅನೇಕ ಪವಾಡಗಳನ್ನು ಮಾಡಿ ಹೆಸರು ಗಳಿಸಿದ್ದರು. ಇವರು ಮಠ ಸ್ಥಾಪಿಸಿದ್ದರಿಂದ 'ಶ್ರೀ ಭೂತಭುಜಂಗ ಮಠ' ಎಂಬ ಹೆಸರು ಬಂದಿದೆ.

ಉಜ್ಜಯಿನಿ ಸದ್ಧರ್ಮಪೀಠಕ್ಕೆ ಜರಮಲೆ ರಾಜನು ಕೊಟ್ಟ ಒಂಬತ್ತು ಪಾದಗಟ್ಟೆಗಳಲ್ಲಿ ಭೂತಭುಜಂಗ ಪಾದ ಗಟ್ಟೆಯೂ ಒಂದಾಗಿದೆ ಎಂದು ಹೇಳಲಾಗುತ್ತಿದೆ. ಶ್ರೀ ಭೂತಭುಜಂಗ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಬಂಕಾಪುರದಲ್ಲಿ ಮಠವನ್ನು ಸ್ಥಾಪಿಸಿ ಅನೇಕ ಪವಾಡಗಳನ್ನು ಮಾಡಿದ್ದಾರೆ. ಇಂದಿಗೂ ಬಂಕಾಪುರದಲ್ಲಿ ಶ್ರೀ ಭೂತಭುಜಂಗಸ್ವಾಮಿ ಮಠವು ಅಸ್ತಿತ್ವದಲ್ಲಿದೆ. ಇಲ್ಲಿ ಅನುಷ್ಠಾನಗೊಂಡಿದ್ದ ಗುರುಗಳಿಗೆ ಬಸವನಗೌಡ ಎಂಬುವರು ಭೂಮಿಯನ್ನು ದಾನವಾಗಿ ಕೊಟ್ಟು ಗೌರವಿಸಿ ಮಠವನ್ನು ಕಟ್ಟಿಸಿ ಕೊಟ್ಟಿದ್ದಾರೆ ಎಂದು ಹೇಳಲಾಗುತ್ತಿದೆ. ಗುರುಗಳು ಇಲ್ಲಿ ನೆಲೆಗೊಂಡ ನಂತರ ಕೊಟ್ಟೂರಿಗೆ ಬಂದು ನೆಲೆಸಿದರು.

ಪರಂಪರೆ: ಈ ಮಠದ ಎಲ್ಲಾ ಗುರುಗಳು ಶ್ರೀ ಭೂತಭುಜಂಗ ಸ್ವಾಮಿಗಳೆಂದು ಅಭಿದಾನ ಪಡೆದು ಪಟ್ಟಾಧಿಕಾರಕ್ಕೆ ಬಂದಿದ್ದಾರೆ. ಇದರಿಂದ ಪರಂಪರೆಯಲ್ಲಿ ಅಧಿಕಾರ ವಹಿಸಿಕೊಂಡ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ಲಭ್ಯವಿಲ್ಲ. ಪ್ರಸ್ತುತ ಶ್ರೀ ರೇಣುಕ ಭೂತಭುಜಂಗ ಸ್ವಾಮಿಗಳು ೧೯೮೪ ರಲ್ಲಿ ಪಟ್ಟಾಧಿಕಾರವನ್ನು ಪಡೆದು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ರೇಣುಕ ಭೂತಭುಜಂಗ ಸ್ವಾಮಿಗಳು,ಶ್ರೀ ಭೂತಭುಜಂಗಮಠ, ಕೊಟ್ಟೂರು,ಕೂಡ್ಲಿಗಿ ತಾ,ಬಳ್ಳಾರಿ ಜಿಲ್ಲೆ.

ಡೋಣೂರು ಶ್ರೀ ಚಾನುಕೋಟಿ ಮಠ: ಕೊಟ್ಟೂರಿನ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಡೋಣೂರು ಶ್ರೀ ಚಾನುಕೋಟಿ ಮಠವು ಉಜ್ಜಯಿನಿ ಪೀಠದ ಸಂಪ್ರದಾಯದ ಪುತ್ರವರ್ಗದ ಮಠವಾಗಿದೆ. ಬಸವನಬಾಗೇವಾಡಿ ತಾಲ್ಲೂಕಿನ ಡೋಣೂರು ಮಠದ ಶಾಖಾಮಠವಾಗಿ ಕೊಟ್ಟೂರಿ ನಲ್ಲಿ ಬೆಳೆದು, ತನ್ನ ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ.

ಉಜ್ಜಯಿನಿ ಪೀಠದ ಜಗದ್ಗುರು ಶ್ರೀ ಮರುಳಸಿದ್ಧ ಶಿವಾಚಾರ್ಯ ಭಗವತ್ಪಾದರು ಬಸವನಬಾಗೇವಾಡಿಯ ಡೋಣೂರು ಮಠದಲ್ಲಿ ಜೀವಂತ ಸಮಾಧಿಯಾಗಿದ್ದರಿಂದ ಈ ಮಠವು ಹೆಸರು ಪಡೆದಿದೆ. ಡೋಣೂರು ಮಠದ ಗುರುಗಳು ತಮ್ಮ ಶಾಖಾಮಠವಾದ ಕೊಟ್ಟೂರಿನ ಮಠದಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ಪರಂಪರೆ: ಕೊಟ್ಟೂರಿನ ಡೋಣೂರು ಶ್ರೀ ಚಾನುಕೋಟಿ ಮಠವು ಅನೇಕ ವರ್ಷಗಳ ಕಾಲ ಖಾಲಿ ಉಳಿದಿತ್ತು. ಈ ಸಂದರ್ಭದಲ್ಲಿ ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ಡೋಣೂರಿನಲ್ಲಿ ಪಟ್ಟಾಧಿಕಾರವನ್ನು ಪಡೆದು (೧೯೬೩) ಕೊಟ್ಟೂರಿಗೆ ಬಂದು ನೆಲೆಸಿದರು. ಗುರುಗಳು ಇಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸಿ ೧೯೭೮ರಲ್ಲಿ ಲಿಂಗೈಕ್ಯರಾದರು. ನಂತರ ಮಠವು ಮಠಾಧೀಶರಿಲ್ಲದೆ ಪುನಃ ಖಾಲಿ ಉಳಿಯಿತು. ನಂತರ ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು ಶ್ರೀ ರಂಭಾಪುರಿ ಪೀಠ, ಶ್ರೀ ಉಜ್ಜಯಿನಿ ಪೀಠ, ಶ್ರೀ ಕೇದಾರ ಪೀಠ ಮತ್ತು ಶ್ರೀ ಕಾಶಿ ಪೀಠದ ಜಗದ್ಗುರುಗಳ ಸಾನಿಧ್ಯದಲ್ಲಿ ೧೯೭೮ ನೆಯ ಡಿಸೆಂಬರ್ ಇಪ್ಪತ್ತೆರಡರಂದು ಮೂಲಮಠ ಡೋಣೂರಿನಲ್ಲಿ ಪಟ್ಟಾಧಿಕಾರವನ್ನು ಪಡೆದುಕೊಂಡರು.

ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡ ಮೇಲೆ ಕೊಟ್ಟೂರಿನಲ್ಲಿ ನೆಲೆಸಿ ಡೋಣೂರು, ಮುಸಬಿನಾಳ, ಮುಳ್ಳಾಳ, ಯಂಭತ್ನಾಳ ಹಾಗೂ ಚಾಂದಕವಟೆ ಮಠಗಳ ಅಭಿವೃದ್ಧಿಯನ್ನು ಕೈಗೊಂಡರು. ಗುರುಗಳು ಅಧಿಕಾರವನ್ನು ವಹಿಸಿಕೊಂಡ ಮೇಲೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಹೋಗಿ, ಸ್ನಾತಕೋತ್ತರ ಪದವಿಯನ್ನು ಪಡೆದು ಕೊಟ್ಟೂರಿಗೆ ಆಗಮಿಸಿ, ಕೊಟ್ಟೂರು ಬಸವೇಶ್ವರ ಕಾಲೇಜಿನ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದರು. ನಂತರ ಸ್ವಯಂನಿವೃತ್ತಿ ಪಡೆದು, ಧಾರ್ಮಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಮಠವನ್ನು ಅಭಿವೃದ್ಧಿ ಪಡಿಸುತ್ತಿದ್ದಾರೆ.

ಸಾಂಸ್ಕೃತಿಕ ಕಾರ್ಯಗಳು: ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಮಠದಲ್ಲಿ ನೆಲೆಸಿದ ಮೇಲೆ ಧಾರ್ಮಿಕ, ಸಾಂಸ್ಕೃತಿಕ, ಹಾಗೂ ಸಾಹಿತ್ಯಿಕ ವಿಷಯಗಳಲ್ಲಿ ಚರ್ಚಾಗೋಷ್ಠಿಯನ್ನು ಏರ್ಪಡಿಸಿ, ಈ ಕ್ಷೇತ್ರಗಳ ಅಭಿವೃದ್ಧಿಗೆ ಪೂರವಾಗುವಂತೆ ಚಿಂತನ ಮಂಥನ ಕಾರ್ಯಕ್ರಮವನ್ನು ನಡೆಸುತ್ತಿದ್ದಾರೆ. ಸಂಗೀತ, ನಾಟಕ ಮತ್ತು ಕಲೆಗೆ ಪ್ರೋತ್ಸಾಹಿಸಲು ಜೀವನ ದರ್ಶನ ಪರಿಷತ್ತನ್ನು ೧೯೯೨ ರಲ್ಲಿ ಸ್ಥಾಪಿಸಿ ವೇದಿಕೆಯನ್ನು ನಿರ್ಮಿಸಿದ್ದಾರೆ.

ಮಠಕ್ಕೆ ಅಗತ್ಯವಾದ ಕಟ್ಟಡವನ್ನು ನಿರ್ಮಿಸಿರುವುದಲ್ಲದೆ ಸಭಾಭವನವನ್ನು ನಿರ್ಮಿಸಿ, ೧೯೯೨ ರ ಮೇ ಇಪ್ಪತ್ತರಂದು ಪಂಚಪೀಠಾಧೀಶರನ್ನು ಕೊಟ್ಟೂರಿಗೆ ಕರೆಸಿ ಅವರ ಸಮ್ಮುಖದಲ್ಲಿ ಉದ್ಘಾಟನೆಗೊಳಿಸಿದ್ದಾರೆ. ಇದೇ ಸಂದರ್ಭದಲ್ಲಿ ಪತ್ರಕರ್ತರ ಸಮಾವೇಶವನ್ನು ನಡೆಸಿ ಒಂದು ದಾಖಲೆಯನ್ನೇ ನಿರ್ಮಿಸಿದ್ದಾರೆ. ಸಂಗೀತ ಮತ್ತು ಪ್ರಾಥಮಿಕ ಶಾಲೆಯನ್ನು ೧೯೯೩ ಜೂನ್ ಹದಿನೇಳರಂದು ಸ್ಥಾಪಿಸಿದ್ದಾರೆ. ೧೯೯೩ ರಲ್ಲಿ ಮಹಿಳೆಯರಿಗಾಗಿ ಯೋಗಾಸನ ತರಬೇತಿ ಕಾರ್ಯಕ್ರಮಗಳನ್ನು ಮಾಡಿಸಿದ್ದಾರೆ. ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ವಿಷಯದ ಬಗ್ಗೆ ಅನೇಕ ಉಪನ್ಯಾಸಗಳನ್ನು ಏರ್ಪಡಿಸಿ, ಸಮಾಜದ ಸುಧಾರಣೆಗೆ ಪ್ರೋತ್ಸಾಹ ನೀಡಿದ್ದಾರೆ. ಗುರುಗಳು ಸದಾ ಚಿಂತನಶೀಲರಾಗಿ ಮಠ ಮತ್ತು-ಸಮಾಜವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಡೋಣೂರುಚಾನುಕೋಟಿ ಮಠ, ಕೊಟ್ಟೂರು, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.

ಆಧಾರ: 'ಭಾವಾಂಕುರ' ಸಂಪಾದನೆ: ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು

❑

ಬಳ್ಳಾರಿ ತಾಲ್ಲೂಕು

ಬಳ್ಳಾರಿ ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿ ಒಂದಾದ ಬಳ್ಳಾರಿ ತಾಲ್ಲೂಕು ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸಿದೆ. ನೀರಾವರಿ ಯೋಜನೆಯಿಂದ ಅಭಿವೃದ್ಧಿಯನ್ನು ಕಂಡಿರುವ ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆದಿದೆ. ಪುರಾತನ ಕಾಲದಿಂದ ಈತನಕ ಅನೇಕ ಮಠಗಳು ಸ್ಥಾಪನೆಗೊಂಡಿದ್ದವು. ಪ್ರಸ್ತುತ ಎಂಟು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಎಮ್ಮಿಗನೂರು

ಬಳ್ಳಾರಿ ತಾಲ್ಲೂಕಿನ ಎಮ್ಮಿಗನೂರು, ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಇಪ್ಪತ್ತೈದು ಕಿ.ಮೀ. ದೂರದಲ್ಲಿದೆ. ಇಲ್ಲಿ ಇತಿಹಾಸ ಪ್ರಸಿದ್ಧ ಶ್ರೀ ಹಂಪಿಸಾವಿರ ದೇವರು ಮಹಂತರ ಮಠ ಮತ್ತು ಶ್ರೀ ಜಡೆತಾತನವರ ಮಠವು ಸ್ಥಾಪನೆಯಾಗಿವೆ.

ಹಂಪಿಸಾವಿರ ದೇವರ ಮಹಂತರಮಠ: ಎಮ್ಮಿಗನೂರಿನ ಮಧ್ಯಭಾಗದಲ್ಲಿ ಉಜ್ಜಯಿನಿ ಪೀಠದ ಶಾಖಾಮಠವಾದ ಶಿಷ್ಯವರ್ಗದ ಶ್ರೀ ಮಹಂತರಮಠವು ಹದಿನೈದನೆಯ ಶತಮಾನದಲ್ಲಿ ಪ್ರಾರಂಭವಾಗಿದೆ. ಈತನಕ ತನ್ನ ಧಾರ್ಮಿಕ ಚಟುವಟಿಕೆ ಯಿಂದ ರಾಜ ಮಹಾರಾಜರ, ಸಾಹಿತ್ಯ ದಿಗ್ಗಜರ ಮನ್ನಣೆಗೆ ಪಾತ್ರವಾಗಿ ಬೆಳೆದಿದೆ. ವಿಜಯನಗರದ ಅರಸರ ಕಾಲದಲ್ಲಿ ಶ್ರೀ ಹಂಪಿಸಾವಿರ ದೇವರಮಠ, ಶ್ರೀ ಕಲ್ಯಾಣ ಸಾವಿರದೇವರ ಮಠ, ಶ್ರೀ ಶಿವಗಂಗಾಸಾವಿರ ದೇವರ ಮಠ, ಶ್ರೀ ಕಿಲ್ಲಾಬಿಚ್ಚಾಳ ಸಾವಿರ ದೇವರ ಮಠ(ಆಂಧ್ರಪ್ರದೇಶ) ಹಾಗೂ ಶ್ರೀ ಉಳವಿಸಾವಿರ ದೇವರಮಠ, ಎಂಬ ಪಂಚಮಠಗಳು ಸ್ಥಾಪನೆಯಾಗಿದ್ದವು. ವಿಜಯನಗರದ ಅರಸರು ಶ್ರೀ ಹಂಪಿ ಸಾವಿರದೇವರು ಮಹಂತರ ಮಠದ ಗುರುಗಳನ್ನು ತಮ್ಮ ಮನೆ ಗುರುಗಳಾಗಿ ನೇಮಿಸಿ ಕೊಂಡಿದ್ದರು ಇದರಿಂದ ಈ ಮಠವು ಪ್ರಭಾವಿ ಮಠವಾಗಿ ಬೆಳೆಯಿತು.

ರಾಜಗುರುಗಳು: ಶ್ರೀ ಗುರು ವಿರೂಪಾಕ್ಷಮಹಂತ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು ಹಂಪಿಯ ಗುರುಮಠದ ಶ್ರೀ ಶಿವದೇವಯ್ಯ ಮತ್ತು ಶ್ರೀಮತಿ ಗುರುಲಿಂಗಮ್ಮನವರ ಪುತ್ರರಾಗಿ ಜನಿಸಿ,ಎಮ್ಮಿಗನೂರು ಮಠದ ಪಟ್ಟಾಧಿಕಾರವನ್ನು ಪಡೆಯುತ್ತಾರೆ. ನಂತರ ಕಾಶಿಗೆ ತೆರಳಿ ವಿಶ್ವೇಶ್ವರನ ದರ್ಶನ ಪಡೆದು, ಭರತಖಂಡದ ಪುಣ್ಯ ಕ್ಷೇತ್ರಗಳನ್ನು ದರ್ಶನ ಮಾಡಿ ಬಂದು ಹಂಪಿಯ ಪರ್ವತದಲ್ಲಿ ತಪಸ್ಸಿಗೆ ಕುಳಿತುಕೊಂಡರು. ಈ ಸಂದರ್ಭದಲ್ಲಿ ಅನೇಕ ಪವಾಡಗಳನ್ನು ಮಾಡಿದರು. ಈ ವಿಚಾರವು ವಿಜಯನಗರದ ಅರಸರಾದ ಪ್ರೌಢರಾಯರಿಗೆ ತಿಳಿದು ಗುರುಗಳ ದರ್ಶನಕ್ಕೆ ಬರುತ್ತಾರೆ. ನಂತರ ಅರಮನೆಗೆ ಸ್ವಾಗತಿಸಿ ಸತ್ಕರಿಸುತ್ತಾರೆ. ಅರಮನೆ ಯಲ್ಲಿ ಗುರುಗಳು ನೀತಿ ಶಾಸ್ತ್ರವನ್ನು ಬೋಧಿಸಿ,ತಮ್ಮ ಪಾಂಡಿತ್ಯ ಶಕ್ತಿಯಿಂದ ಅರಮನೆಯ ಪಂಡಿತರನ್ನು ಗೆಲ್ಲುತ್ತಾರೆ. ಇವರ ವಿದ್ವತ್ತಿಗೆ ಶರಣಾಗಿ ಪ್ರೌಢದೇವರಾಯರು ಲಿಂಗದೀಕ್ಷೆಯನ್ನು ಪಡೆದುಕೊಳ್ಳುತ್ತಾರೆ. ಅಂದಿನಿಂದ ಪ್ರೌಢದೇವರಾಯರು ಶ್ರೀ ಗುರುವಿರೂಪಾಕ್ಷ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳನ್ನು ರಾಜಗುರುಗಳನ್ನಾಗಿ ನೇಮಿಸಿಕೊಂಡು, ವೀರಶೈವ ಧರ್ಮಪ್ರಚಾರಕ್ಕೆ ಎಲ್ಲಾ ರೀತಿಯ ನೆರವನ್ನು ನೀಡಿದ್ದಾರೆ. ಗುರುಗಳು ಎಮ್ಮಿಗನೂರಿಗೆ ಆಗಮಿಸಿದ ನಂತರ ಶ್ರೀಶೈಲಕ್ಕೆ ಹೋಗಿ ಮಲ್ಲಿಕಾರ್ಜುನನ ದರ್ಶನವನ್ನು ಪಡೆದು ಮರಳಿ ಹಂಪಿಗೆ ಬಂದು ಜೀವಂತ ಸಮಾಧಿಯನ್ನು ಹೊಂದುತ್ತಾರೆ ಎಂದು, ಶ್ರೀ ಗುರುವಿರೂಪಾಕ್ಷ ಮಹಂತ ದೇಶಿಕೇಂದ್ರರ ಮಹಾ ಪುರಾಣದಲ್ಲಿ ಉಲ್ಲೇಖಿತವಾಗಿದೆ.

ಬೆಳೆದ ಪರಂಪರೆ: ಶ್ರೀ ಗುರು ವಿರೂಪಾಕ್ಷ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳಿಂದ ಪ್ರಾರಂಭಗೊಂಡ ಎಮ್ಮಿಗನೂರು ಹಂಪಿ ಸಾವಿರದೇವರು ಮಹಂತರ ಮಠದ ಪರಂಪರೆಯು ಹದಿನೈದು ಗುರುಗಳ ತನಕ ಬೆಳೆದು ಬಂದಿದೆ.

೧. ಷ.ಬ್ರ.ಶ್ರೀ ವಿರೂಪಾಕ್ಷ ಮಹಂತ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಮರುಳಸಿದ್ಧ ಮಹಂತ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಮಡಿವಾಳ ಮಹಂತ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಮಲ್ಲಿಕಾರ್ಜುನ ಮಹಂತ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು

೫. ಷ.ಬ್ರ.ಶ್ರೀ ಪಂಪಾಪತಿ ದೇಶಿಕೇಂದ್ರ ಮಹಂತ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಗುರುಶಾಂತ ಮಹಂತ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಸಿದ್ಧಲಿಂಗ ಮಹಂತ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ಶಾಂತಬಸವ ಮಹಂತ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ಮಳೆ ಪರ್ವತ ಮಹಂತ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
೧೦. ಷ.ಬ್ರ.ಶ್ರೀ ಜಡೆ ಮಹಂತ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
೧೧. ಷ.ಬ್ರ.ಶ್ರೀ ಬಸವಲಿಂಗ ಮಹಂತ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
೧೨. ಷ.ಬ್ರ.ಶ್ರೀ ವಿರೂಪಾಕ್ಷ ಮಹಂತ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
೧೩. ಷ.ಬ್ರ.ಶ್ರೀ ಮಹಂತಜ್ಜ ಮಹಂತ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
೧೪. ಷ.ಬ್ರ.ಶ್ರೀ ಸಿದ್ಧಲಿಂಗ ಮಹಂತ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
೧೫. ಷ.ಬ್ರ.ಶ್ರೀ ವಾಮದೇವ ಮಹಂತ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಈ ರೀತಿ ಶಿಷ್ಯವರ್ಗದ ಪರಂಪರೆಯು ಅವಿಚ್ಛಿನ್ನವಾಗಿ ಬೆಳೆದು ಬಂದಿದೆ. ಮಠದ ಪರಂಪರೆಯಲ್ಲಿ ಬರುವ ಎಲ್ಲಾ ಗುರುಗಳು ವಿದ್ವಾಂಸರಾಗಿ, ಅಪ್ರತಿಮ ಮೇಧಾವಿಗಳಾಗಿ ಪವಾಡಗಳನ್ನು ನಡೆಸುತ್ತಾಬಂದಿದ್ದಾರೆ. ೧೯೪೦ ರ ಮೇ ಹತ್ತೊಂಬತ್ತರಂದು ಹದಿನಾಲ್ಕನೆಯ ಗುರುಗಳಿಗೆ ಪಟ್ಟಾಧಿಕಾರವನ್ನು ಹಿರಿಯ ಗುರುಗಳಾದ ಶ್ರೀ ಮಹಾಂತಜ್ಜ ಮಹಂತ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು ನೆರವೇರಿಸಿ, ಎಮ್ಮಿಗನೂರಿನಲ್ಲಿ ಲಿಂಗೈಕ್ಯರಾಗುತ್ತಾರೆ.

ಹದಿನಾಲ್ಕನೆಯ ಪಟ್ಟಾಧಿಕಾರಿಗಳಾದ ಶ್ರೀ ಸಿದ್ಧಲಿಂಗ ಮಹಂತ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು ಪರಂಪರೆಯ ಕಾಶಿಯ ಜಗದ್ಗುರು ಶ್ರೀ ಚಿದ್ಘನಲಿಂಗ ಶಿವಾಚಾರ್ಯರ ಸನ್ನಿಧಿಯಲ್ಲಿ ವೇದಾಧ್ಯಯನ ಮಾಡಿ ಮಹಾಪಂಡಿತರಾಗಿ, ಅನುಷ್ಠಾನ ಮೂರ್ತಿಗಳಾಗಿ ವೀರಶೈವ ಸಿದ್ಧಾಂತವನ್ನು, ಆಚಾರ ವಿಚಾರಗಳನ್ನು ಪರಿಪಾಲಿಸಿ ವೀರಶೈವ ಧರ್ಮವನ್ನು ಪ್ರಚಾರ ಮಾಡುವ ಕಟ್ಟಾಳಾಗಿ ರೂಪುಗೊಂಡರು. ಅಲ್ಲದೆ ಪರಂಪರೆಯ ಎಮ್ಮಿಗನೂರು ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ತಮ್ಮ ಧಾರ್ಮಿಕಕಾರ್ಯಗಳನ್ನು ಜಗದಗಲ ಮುಟ್ಟಿಸಬೇಕೆಂದು ಹಂಬಲಿಸಿದರು. ಇದರ ಫಲವಾಗಿ 'ಶ್ರೀಮದ್ ಉಜ್ಜಯಿನಿ ಶ್ರೀ ಜಗದ್ಗುರು ಸಿದ್ಧಲಿಂಗೇಶ್ವರ ಗ್ರಂಥಮಾಲೆ 'ಪ್ರಾರಂಭಿಸಿ, ಶ್ರೀ ಮದ್ದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ಶ್ರೀಶ್ರೀ ೧೦೦೮ ಜಗದ್ಗುರು ಸಿದ್ಧಲಿಂಗ ಶಿವಯೋಗಿ ಗುರುಸಾರ್ವಭೌಮರ ವಚನಗಳು, ಶ್ರೀ ಗುರು ಮಹಂತಿನ ಮಠದ ಪ್ರಾಚೀನತ್ವ, ಎಮ್ಮಿಗನೂರು ಮಹಾಮಹಿಮ ಶ್ರೀ ಜಡೆಸಿದ್ಧ ಶಿವಯೋಗಿ ತಾತನವರ ಜೀವನಚರಿತ್ರೆ, ಪಂಡಿತ ಶ್ರೀ ಕಾಶೀನಾಥ, ಕನ್ನಡಿಯು ಕೈ ಜಾರಿತು ಈ ರೀತಿ ಅನೇಕ ಗ್ರಂಥಗಳನ್ನು ಪ್ರಕಟಿಸಿದರು. ತಮ್ಮ ದೀರ್ಘ ಬದುಕಿನಲ್ಲಿ ಅವಿಸ್ಮರಣೀಯ ವಾದಂತಹ ಹಾಗೂ ಇತಿಹಾಸದಲ್ಲಿ ಸೇರುವಂತಹ ಅನೇಕ ಕಾರ್ಯಕ್ರಮಗಳನ್ನು ಮಾಡಿದರು. ಭಕ್ತರು ಬದುಕನ್ನು ಸಾರ್ಥಕ ಮಾಡಿಕೊಳ್ಳಲು ಮಾರ್ಗತೋರಿಸಿ ಮುನ್ನಡೆಸಿದ ಗುರುಗಳು, ತಮ್ಮ ತರುವಾಯ ಮಠವನ್ನು ಮುನ್ನಡೆಸಲು ತಮ್ಮ ಕರಕಮಲ ಸಂಜಾತರನ್ನು ಆಯ್ಕೆಮಾಡಿಕೊಂಡು ಪಟ್ಟಾಧಿಕಾರದ ಅನುಗ್ರಹವನ್ನು ನೀಡಿರುತ್ತಾರೆ.

ವಿದ್ಯಾಸಂಪನ್ನರೂ, ಆಚಾರ ವಿಚಾರವಂತರೂ ಆದ ಶ್ರೀ ವಾಮದೇವ ಮಹಂತ ಶಿವಾಚಾರ್ಯ ಸ್ವಾಮಿಗಳು ಬಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ದೇವರ ಹಿಪ್ಪರಗಿಯಲ್ಲಿ ಜನಿಸಿದರು. ಇವರು ಧಾರ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯಿಕವಾಗಿ ಮಠವನ್ನು ಮುನ್ನಡೆಸಬಲ್ಲರು ಎಂದು ೧೯೯೭ ರ ಮೇ ಹನ್ನೊಂದರಂದು ಪಟ್ಟಾಧಿಕಾರವನ್ನು ಮಾಡಿದರು. ಶ್ರೀ ಸಿದ್ಧಲಿಂಗ ಮಹಂತ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು ತುಂಬು ಜೀವನ ನಡೆಸಿ ೧೯೯೯ ರಂದು ಲಿಂಗೈಕ್ಯರಾದರು.

ಶಾಸನಗಳು: ರಾಜಗುರು ಮನೆತನವಾದ ಈ ಮಠಕ್ಕೆ ಅನೇಕ ಇನಾಂಗಳು ಮತ್ತು ಬಿರುದಾವಳಿಗಳು ಶಾಸನದ ರೂಪದಲ್ಲಿ ಸಿಕ್ಕಿವೆ. ವಿಜಯನಗರದ ಪ್ರೌಢದೇವರಾಯ, ಹೈದರಾಬಾದ್‌ನ ನಿಜಾಮರು ಮಠದ ಧಾರ್ಮಿಕ ಚಟುವಟಿಕೆಗಳಿಗೆ ನೆರವಾಗಲೆಂದು ಅನೇಕ ಗ್ರಾಮಗಳನ್ನು ಇನಾಂನೀಡಿ ಶಾಸನವನ್ನು ಬರೆಸಿಕೊಟ್ಟಿದ್ದಾರೆ. ಬ್ರಿಟಿಷ್ ಚಕ್ರವರ್ತಿಯು ಮಠಕ್ಕೆ ಭೂಮಿಯನ್ನು

ನೀಡಿದ ಬಗ್ಗೆ ಶಾಸನವನ್ನು ಬರೆಸಿಕೊಟ್ಟಿರುತ್ತಾರೆ.

ಶಾಖಾ ಮಠಗಳು: ಹೊಸಪೇಟೆ ತಾಲ್ಲೂಕಿನ ಹಂಪಿ, ಇಟಗಿ, ಮುದ್ದಾಪುರ. ಶಿರಗುಪ್ಪ ತಾಲ್ಲೂಕಿನ ಇಬ್ರಾಂಪುರ, ಬಾಗುವಾಡಿ. ಗಂಗಾವತಿ ತಾಲ್ಲೂಕಿನ ಶಾಲಿಗನೂರು, ಬೆನ್ನೂರು, ಬೂದಗುಂಪ. ಸಿಂದನೂರು ತಾಲ್ಲೂಕಿನ ಚನ್ನಹಳ್ಳಿ ಮತ್ತು ಸಾಲಗುಂದ ಮಠಗಳು ಶಾಖಾಮಠಗಳಾಗಿದ್ದು ಇವುಗಳಿಗೂ ರಾಜಾಶ್ರಯ ಸಿಕ್ಕ ಬಗ್ಗೆ ಶಾಸನಗಳು ಉಲ್ಲೇಖಿಸುತ್ತಿವೆ.

ವಿಳಾಸ: ಷ.ಬ್ರ.ಶ್ರೀ ವಾಮದೇವ ಮಹಂತ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಂಪಿ ಸಾವಿರದೇವರು ಮಹಂತರ ಮಠ, ಎಮ್ಮಿಗನೂರು, ಬಳ್ಳಾರಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
ಆಧಾರ: 'ಶ್ರೀ ಗುರುವಿರೂಪಾಕ್ಷ ಮಹಂತ ದೇಶಿಕರ ಮಹಾ ಪುರಾಣ'

ಜಡೆತಾತನಮಠ: ಎಮ್ಮಿಗನೂರಿನ ಪ್ರವೇಶ ದ್ವಾರದಲ್ಲಿಯೇ ಸಿಗುವ ಶ್ರೀ ಜಡೆತಾತನ ಮಠವು, ವಿರಕ್ತ ಸಂಪ್ರದಾಯದ ಮಠವಾಗಿದೆ. ಶ್ರೀ ಜಡೆ ಶಿವಯೋಗಿಗಳು ಈ ಮಠವನ್ನು ಪ್ರಾರಂಭ ಮಾಡಿರುವುದರಿಂದ 'ಶ್ರೀ ಜಡೆತಾತನ ಮಠ'ಎಂಬ ಹೆಸರು ಬಂದಿದೆ. ಗುರುಗಳು ಲೋಕಸಂಚಾರ ಕೈಗೊಂಡು ಇಲ್ಲಿ ನೆಲೆಸಿ ವೀರಶೈವ ಧರ್ಮ ಬೆಳೆಯುವಂತೆ ಮಾಡಿದರು. ಇವರು ಸುಮಾರು ಮುನ್ನೂರೈವತ್ತು ವರ್ಷಗಳ ಹಿಂದೆ ಮಠವನ್ನು ಸ್ಥಾಪಿಸಿ, ಅನ್ನದಾಸೋಹ ಹಾಗೂ ಶಿವಾನುಭವ ಗೋಷ್ಠಿಗಳನ್ನು ನಡೆಸುವ ಮೂಲಕ ಶರಣ ತತ್ತ್ವವನ್ನು ಪ್ರಚಾರಕ್ಕೆ ತಂದರು.

ಪರಂಪರೆ:

೧. ಶ್ರೀ ಮ.ನಿ.ಪ್ರ. ಜಡೆ ಶಿವಯೋಗಿಗಳು
೨. ಶ್ರೀ ಮ.ನಿ.ಪ್ರ. ಚನ್ನವೀರಯ್ಯಸ್ವಾಮಿಗಳು
೩. ಶ್ರೀ.ಮ.ನಿ.ಪ್ರ. ದೊಡ್ಡ ಜಡೆಸ್ವಾಮಿಗಳು
೪. ಶ್ರೀ.ಮ.ನಿ.ಪ್ರ. ಸಣ್ಣ ಜಡೆಸ್ವಾಮಿಗಳು
೫. ಶರಣೆ ಶಿವರುದ್ರಮ್ಮ
೬. ಶರಣೆ ರುದ್ರಮ್ಮ
೭. ಶರಣೆ ಬಸಮ್ಮ

ಈ ರೀತಿ ಬೆಳೆದ ಪರಂಪರೆಯಲ್ಲಿ ನಾಲ್ಕನೆಯ ಗುರುಗಳ ನಂತರ ಶರಣೆ ಶಿವರುದ್ರಮ್ಮನವರಿಂದ ಆಡಳಿತವು ಪ್ರಾರಂಭವಾಗಿ ಕೊನೆಯ ಶರಣೆ ಬಸಮ್ಮನವರವರೆಗೆ ಮಹಿಳೆಯರೇ ಮಠಾಧಿಕಾರಿಗಳಾಗಿ ಅಧಿಕಾರ ನಡೆಸಿದ್ದು, ಈಗ ಉತ್ತರಾಧಿಕಾರಿಗಳಿಲ್ಲದೆ ಮಠವು ಖಾಲಿ ಉಳಿದಿದೆ. ಭಕ್ತರೇ ಮಠದ ಆಸ್ತಿಯನ್ನು ಅಭಿವೃದ್ಧಿಪಡಿಸಿ, ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಮಠದ ಆವರಣದಲ್ಲಿರುವ ಏಳು ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆಯನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಜಡೆತಾತನ ಮಠ, ಎಮ್ಮಿಗನೂರು, ಬಳ್ಳಾರಿ ತಾಲ್ಲೂಕು.

ಕುರುಗೋಡು

ಬಳ್ಳಾರಿ ತಾಲ್ಲೂಕಿನ ಕುರುಗೋಡು, ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಇಪ್ಪತ್ತೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಇಪ್ಪತ್ತೊಂದು ವೀರಶೈವ ಮಠಗಳು ಸ್ಥಾಪನೆಯಾಗಿದ್ದವು ಎಂದು ಹೇಳಲಾಗುತ್ತಿದೆ. ಈ ಮಠಗಳ ಶೋಧನೆಗೆ ತೊಡಗಿದಾಗ ಶ್ರೀ ರಾಘವಾಂಕಸ್ವಾಮಿಮಠ, ಶ್ರೀ ಹಿರೇಮಠ, ಶ್ರೀ ಮೇಲ್ಮಠ ಹಾಗೂ ಶರಣೆ ನೀಲಮ್ಮನ ಮಠ ಎಂಬ ನಾಲ್ಕು ಮಠಗಳು ದೊರೆತಿವೆ. ಉಳಿದ ಮಠಗಳು ನಶಿಸಿ ಹೋಗಿವೆ. ದೊರೆತ ನಾಲ್ಕು ಮಠಗಳಲ್ಲಿ ಶರಣೆ ನೀಲಮ್ಮನ ಮಠವು ಹೊಸಪೇಟೆಯ ಶ್ರೀ ಹೇಮಕೂಟ ಮಠದ ಶಾಖಾಮಠವಾಗಿ ಬೆಳೆದಿದ್ದು ಶ್ರೀ ರಾಘವಾಂಕಸ್ವಾಮಿ ಮಠವು ಅಸ್ತಿತ್ವದಲ್ಲಿದೆ. ಉಳಿದ ಮಠಗಳು ಕೇವಲ ಗದ್ದುಗೆ ಪೂಜೆಗಷ್ಟೇ ಸೀಮಿತಗೊಂಡಿವೆ.

ರಾಘವಾಂಕಸ್ವಾಮಿಮಠ: ಕುರುಗೋಡು ಗ್ರಾಮದ ಮಧ್ಯಭಾಗದಲ್ಲಿ ಶ್ರೀಶೈಲ ಪೀಠದ ಶಾಖಾಮಠವಾಗಿ, ಪುತ್ರವರ್ಗದ

ಪರಂಪರೆಯಲ್ಲಿ ಬೆಳೆದ ಶ್ರೀ ರಾಘುವಾಂಕಸ್ವಾಮಿ ಮಠವು ಸ್ಥಾಪನೆಯಾಗಿದೆ. ಶ್ರೀ ನೀಲಕಂಠ ಸ್ವಾಮಿಗಳು ಕರ್ತೃ ಗುರುಗಳಾದರೂ ನಂತರ ಬಂದ ಶ್ರೀ ರಾಘುವಾಂಕ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಪ್ರಬುದ್ಧಮಾನಕ್ಕೆ ತಂದಿದ್ದರಿಂದ 'ಶ್ರೀ ರಾಘುವಾಂಕಸ್ವಾಮಿ ಮಠ' ಎಂಬ ಹೆಸರು ಬಂದಿದೆ.

ಉಳಿದ ದೇವಸ್ಥಾನ: ಮಹಾರಾಷ್ಟ್ರದ ರತ್ನಗಿರಿ ತಾಲ್ಲೂಕಿನ ಅಪರಾಪುರ ಗ್ರಾಮದಿಂದ ನೂರಇಪ್ಪತ್ತೈದು ವರ್ಷಗಳ ಹಿಂದೆ ಶ್ರೀ ನೀಲಕಂಠ ಸ್ವಾಮಿಗಳು ಮತ್ತು ಇವರ ಶಿಷ್ಯ ಶ್ರೀ ರಾಘುವಾಂಕರು ದೇಶಸಂಚಾರ ಕೈಗೊಂಡು ಇಲ್ಲಿಗೆ ಆಗಮಿಸಿದರು. ಈ ಸಂದರ್ಭದಲ್ಲಿ ಅನ್ಯಮತಿಯರು ವೀರಶೈವರಿಗೆ ಸೇರಿದ ಬಸವನದೇವಸ್ಥಾನವನ್ನು ನಾಶಮಾಡಲು ಬಂದಿದ್ದಾಗ ಗುರುಶಿಷ್ಯರಿಬ್ಬರೂ ಈ ದಾಳಿಯನ್ನು ತಡೆದು, ದೇವಸ್ಥಾನವು ನಾಶವಾಗುವುದನ್ನು ತಪ್ಪಿಸಿದರು. ಇಬ್ಬರೇ ವ್ಯಕ್ತಿಗಳು ಸಮರ್ಥವಾಗಿ ದಾಳಿಯನ್ನು ಎದುರಿಸಿ ದೇವಸ್ಥಾನವನ್ನು ಉಳಿಸಿರಬೇಕು ಎಂದರೆ ಇವರು ಮಹಾತ್ಮರೇ ಇರಬೇಕೆಂದು ಕುರುಗೋಡು ಗ್ರಾಮದವರು ದೇವಸ್ಥಾನದ ಪೂರ್ಣ ಆಡಳಿತವನ್ನು ಗುರುಶಿಷ್ಯರಿಗೆ ಒಪ್ಪಿಸುತ್ತಾರೆ. ಖಾಲಿಜಾಗದ ನಾಲ್ಕು ದಿಕ್ಕುಗಳಿಗೂ ಲಿಂಗಮುದ್ರೆಕಲ್ಲುಗಳನ್ನು ಸ್ಥಾಪಿಸಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಲು ದೇವಸ್ಥಾನದ ಜಾಗದಲ್ಲಿ ಮಠವನ್ನು ಸ್ಥಾಪಿಸಿದರು. ದೇವಸ್ಥಾನ ಮತ್ತು ಮಠದ ಆಡಳಿತವನ್ನು ನೋಡಿಕೊಳ್ಳಲು ಶ್ರೀ ನೀಲಕಂಠ ಸ್ವಾಮಿಗಳಿಗೆ ಪಟ್ಟಾಧಿಕಾರವನ್ನು ಮಾಡಲಾಗುತ್ತದೆ.

ಪರಂಪರೆ:
೧. ಷ.ಬ್ರ.ಶ್ರೀ ನೀಲಕಂಠ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ರಾಘುವಾಂಕ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಚನ್ನಬಸವಯ್ಯ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ರಾಘುವಾಂಕ ಪಂಡಿತಾರಾಧ್ಯ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಒಂದು ಶತಮಾನದಲ್ಲಿ ಸಾಕಷ್ಟು ಅಭಿವೃದ್ಧಿಯನ್ನು ಕಂಡು ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ಹೆಸರು ಗಳಿಸಿ ಜನಮನದಲ್ಲಿ ಉಳಿದು ಬಂದಿದೆ. ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳಿಂದ ಪ್ರಾರಂಭಗೊಂಡ ಮಠವು ಶ್ರೀ ರಾಘುವಾಂಕ ಸ್ವಾಮಿಗಳ ಕಾಲದಲ್ಲಿ ಹೆಚ್ಚು ಹೆಸರು ಮಾಡಿದೆ. ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಇವರ ಗದ್ದುಗೆಯನ್ನು ದೊಡ್ಡಬಸವೇಶ್ವರ ದೇವಸ್ಥಾನದಲ್ಲಿ ಸ್ಥಾಪಿಸಿ ಮಠದ ಅಧಿಕಾರವನ್ನು ವಹಿಸಿಕೊಂಡ ಶ್ರೀ ರಾಘುವಾಂಕ ಸ್ವಾಮಿಗಳು, ಕುರುಗೋಡು ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ಭಿಕ್ಷೆಎತ್ತಿ ದಾಸೋಹವನ್ನು ಮಾಡುತ್ತಿದ್ದು ಶಿವಯೋಗದ ಬಗ್ಗೆ ಅಪಾರ ಜ್ಞಾನ ಉಳ್ಳವರಾಗಿದ್ದರು. ವೀರಶೈವ ಧರ್ಮದ ಅಷ್ಟಾವರಣ, ಪಂಚಾಚಾರ ಮತ್ತು ಲಿಂಗಾಂಗ ಸಾಮರಸ್ಯದ ಬಗ್ಗೆ ಭಕ್ತರಿಗೆ ಉಪದೇಶ ಮಾಡಿ ಸಮಾಜವನ್ನು ಬೆಳೆಸಿದರು. ಗ್ರಾಮದೇವರಾದ ದೊಡ್ಡಬಸವೇಶ್ವರರ ರಥೋತ್ಸವಕ್ಕೆ ಬರುತ್ತಿದ್ದ ಪರಸ್ಥಳದ ಜನರಿಗೆ ದಾಸೋಹವನ್ನು ಏರ್ಪಡಿಸಿ, ಜನಾನುರಾಗಿಗಳಾದರು. ಇವರು ಶ್ರೀ ಚನ್ನಬಸವಯ್ಯ ಸ್ವಾಮಿಗಳಿಗೆ ಪಟ್ಟಾಧಿಕಾರವನ್ನು ವಹಿಸಿಕೊಟ್ಟು ಲಿಂಗೈಕ್ಯರಾದರು. ಇವರ ಗದ್ದುಗೆಯನ್ನು ಬಸ್ ನಿಲ್ದಾಣದ ಬಳಿ ಇರುವ ಮಠದ ಜಾಗದಲ್ಲಿ ನಿರ್ಮಿಸಲಾಗಿದೆ.

೧೯೫೭ ರಲ್ಲಿ ಪಟ್ಟಾಧಿಕಾರ ವಹಿಸಿಕೊಂಡ ಶ್ರೀ ರಾಘುವಾಂಕ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಹಿಂದಿನ ಎಲ್ಲಾ ಗುರುಗಳ ತತ್ತ್ವಗಳನ್ನು ಪರಿಪಾಲಿಸುತ್ತಾ, ವೀರಶೈವರ ಮೂಲ ಆಚರಣೆಯಾದ ಲಿಂಗಪೂಜೆಗೆ ಹೆಚ್ಚು ಒತ್ತುಕೊಟ್ಟು, ಭಕ್ತರಿಗೆ ಸಂಸ್ಕಾರ ನೀಡಿ ಮಠವನ್ನು ಬೆಳೆಸುತ್ತಿದ್ದಾರೆ.

ಶೈಕ್ಷಣಿಕ-ಸಾಮಾಜಿಕ ಸೇವೆ: ಶ್ರೀ ರಾಘುವಾಂಕ ಪಂಡಿತಾರಾಧ್ಯ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡ ಮೇಲೆ ದೇವಸ್ಥಾನ ಮತ್ತು ಮಠದ ಆಡಳಿತವನ್ನು ಬೇರ್ಪಡಿಸಿ ಗ್ರಾಮಸ್ಥರಿಗೆ ದೇವಸ್ಥಾನದ ಆಡಳಿತವನ್ನು ವಹಿಸಿಕೊಟ್ಟು, ಮಠದ ಚಟುವಟಿಕೆಗೆ ಸೀಮಿತಗೊಂಡರು. ಮಠದ ಸುತ್ತ ಕಟ್ಟಡಗಳನ್ನು ನಿರ್ಮಿಸಿ ಬಾಡಿಗೆಗೆಕೊಟ್ಟು, ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲಾಗದಿದ್ದರೂ ಪ್ರೌಢಶಾಲೆ ಮತ್ತು ವಿದ್ಯಾರ್ಥಿನಿಲಯವನ್ನು ಸ್ಥಾಪಿಸಲು ಜಾಗವನ್ನು ನೀಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ರಾಘುವಾಂಕ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ಶ್ರೀ ರಾಘುವಾಂಕ ಸ್ವಾಮಿಮಠ, ಕುರುಗೋಡು, ಬಳ್ಳಾರಿ ತಾಲ್ಲೂಕು.

ಕುಡುತನಿ

ಬಳ್ಳಾರಿ ತಾಲ್ಲೂಕಿನ ಕುಡುತನಿಯು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿನೆಂಟು ಕಿ.ಮೀ.ದೂರದಲ್ಲಿದೆ. ಇಲ್ಲಿ ಶರಣೆ ನೀಲಮ್ಮನಮಠ, ಶ್ರೀ ಎಮ್ಮೆಬಸಪ್ಪನಮಠ, ಶ್ರೀ ನಯನಸ್ವಾಮಿಮಠ, ಶ್ರೀ ವಿರಕ್ತಮಠ, ಶ್ರೀ ರಾಮಗಿರಿಮಠ, ಶ್ರೀ ಮಳೆಮಠ ಮತ್ತು ಶ್ರೀ ಚನ್ನಸ್ವಾಮಿಮಠ ಎಂಬ ಏಳು ಮಠಗಳು ಸ್ಥಾಪನೆಯಾಗಿ ವೀರಶೈವ ಧರ್ಮವು ಬೆಳೆಯಲು ಸಹಾಯಕವಾಗಿದ್ದವು. ಈಗ ಈ ಮಠಗಳಲ್ಲಿ ಶರಣೆ ನೀಲಮ್ಮನ ಮಠದಲ್ಲಿ ಗುರುಗಳು ನೆಲೆಸಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಉಳಿದ ಮಠಗಳು ಅಸ್ತಿತ್ವದಲ್ಲಿದ್ದರೂ, ಉತ್ತರಾಧಿಕಾರಿಗಳಿಲ್ಲದೆ ಕೇವಲ ಗದ್ದುಗೆ ಪೂಜೆಗಷ್ಟೇ ಸೀಮಿತಗೊಂಡಿವೆ.

ಶರಣೆ ನೀಲಮ್ಮನಮಠ: ಕುಡುತನಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶರಣೆ ನೀಲಮ್ಮನ ಮಠವು, ವಿರಕ್ತ ಸಂಪ್ರದಾಯದ ಚೀಲಾಳ ಸಮಯದ ಮಠವಾಗಿ ಬೆಳೆದಿದೆ. ಈ ಮಠವು ಹದಿನೆಂಟನೆಯ ಶತಮಾನದಲ್ಲಿ ಸ್ಥಾಪನೆಯಾಗಿದ್ದು ಗರಗ-ನಾಗಲಾಪುರದ ವಿರಕ್ತ ಮಠದ ಶಾಖಾಮಠವಾಗಿ ಬೆಳೆದಿದೆ. ಈ ಮಠದ ಪರಂಪರೆಯಲ್ಲಿ ಅಧಿಕಾರ ನಡೆಸಿದ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ಲಭ್ಯವಿಲ್ಲ. ಈಗ ಶ್ರೀ ಮರಿಮಹಂತ ಸ್ವಾಮಿಗಳು ಈ ಮಠದ ಆಡಳಿತವನ್ನು ನೋಡಿಕೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ.ಮ.ನಿ.ಪ್ರ ಮರಿಮಹಾಂತ ಸ್ವಾಮಿಗಳು, ಶರಣೆ ನೀಲಮ್ಮನ ಮಠ, ಕುಡುತನಿ, ಬಳ್ಳಾರಿ ತಾಲ್ಲೂಕು.

ಬಳ್ಳಾರಿ

ಜಿಲ್ಲಾ ಕೇಂದ್ರ ಸ್ಥಳವಾದ ಬಳ್ಳಾರಿಯು ವಾಣಿಜ್ಯ ಕೇಂದ್ರವೂ ಆಗಿದೆ. ಇಲ್ಲಿ ವೀರಶೈವ ಧರ್ಮವು ಅನಾದಿ ಕಾಲ ದಿಂದಲೂ ಬೇರೂರಿ ಬೆಳೆದಿದೆ ಎಂಬುದಕ್ಕೆ ಈ ನಗರದಲ್ಲಿ ಸ್ಥಾಪನೆಯಾಗಿರುವ ಮಠಗಳೇ ಸಾಕ್ಷಿಯಾಗಿವೆ. ಪುರಾತನಕಾಲದಲ್ಲಿ ಸ್ಥಾಪನೆಗೊಂಡ ಮಠಗಳು ಅಂದಿನ ಗುರುಗಳ ಕ್ರಿಯಾಶೀಲತೆಯಿಂದ ಹೆಚ್ಚು ಪ್ರಬುದ್ಧತೆಯನ್ನು ಪಡೆದು,ಧರ್ಮವು ಸಾಕಾರ ಗೊಳ್ಳುವಂತೆ ಮಾಡಿದ್ದವು. ಕಾಲಾನಂತರ ಮಠಾಧಿಪತಿಗಳ ವರ್ಚಸ್ಸು ಕಡಿಮೆಯಾಗಿ ಇಲ್ಲಿನ ಮಠಗಳು ದುಸ್ಥಿತಿಯನ್ನು ಕಂಡಿವೆ. ಬಳ್ಳಾರಿ ನಗರದಲ್ಲಿ ಹನ್ನೊಂದು ವೀರಶೈವ ಮಠಗಳು ಅಸ್ತಿತ್ವದಲ್ಲಿದ್ದವು ಎಂಬ ಮಾಹಿತಿ ದೊರೆತಿದೆ. ಈ ಆಧಾರದ ಮೇಲೆ ಶೋಧನೆ ನಡೆಸಿದಾಗ ಶ್ರೀ ಮದ್ದಾನಸ್ವಾಮಿಮಠ, ಶ್ರೀ ಮರಿಸ್ವಾಮಿಮಠ, ಶ್ರೀ ಶಿವಲಿಂಗಸ್ವಾಮಿಮಠ, ಶ್ರೀ ಮಣ್ಣೂರು ಕೊಟ್ಟೂರುಸ್ವಾಮಿಮಠ, ಶ್ರೀ ಕಲ್ಮಠ, ಶ್ರೀ ಸಿದ್ಧಲಿಂಗಸ್ವಾಮಿಮಠ, ಶ್ರೀ ಕಲ್ಯಾಣಸ್ವಾಮಿಮಠ ಮತ್ತು ಹೊಸಪೇಟೆಯ ಶ್ರೀ ಹೇಮಕೂಟಮಠದ ಶಾಖೆಯೂ ಸೇರಿದಂತೆ ಒಟ್ಟು ಎಂಟು ಮಠಗಳು ಅಸ್ತಿತ್ವದಲ್ಲಿರುವುದು ತಿಳಿಯುತ್ತಿದೆ. ಉಳಿದ ಮೂರು ಮಠಗಳು ಅಸ್ತಿತ್ವವನ್ನು ಕಳೆದುಕೊಂಡಿದ್ದು ಇವುಗಳ ಬಗ್ಗೆ ಮಾಹಿತಿ ಲಭ್ಯವಿಲ್ಲ. ದೊರೆತ ಎಂಟು ಮಠಗಳಲ್ಲಿ ಶ್ರೀ ಮರಿಸ್ವಾಮಿಮಠ, ಶ್ರೀ ಮಣ್ಣೂರು ಕೊಟ್ಟೂರುಸ್ವಾಮಿಮಠ, ಶ್ರೀ ಹೇಮಕೂಟಮಠ ಹಾಗೂ ಶ್ರೀ ಶಿವಲಿಂಗಸ್ವಾಮಿ ಮಠಗಳು ಅಸ್ತಿತ್ವದಲ್ಲಿದ್ದು, ಧಾರ್ಮಿಕಕಾರ್ಯ ಗಳನ್ನು ನಡೆಸಿಕೊಂಡು ಬರುತ್ತಿವೆ. ಉಳಿದ ಮಠಗಳು ಉತ್ತರಾಧಿಕಾರಿಗಳಿಲ್ಲದೆ ಕೇವಲ ಗದ್ದುಗೆ ಪೂಜೆಗಷ್ಟೇ ಸೀಮಿತಗೊಂಡಿವೆ.

ಮರಿಸ್ವಾಮಿಮಠ: ಬಳ್ಳಾರಿ ನಗರದ ಕೊಟ್ಟೂರು ನಗರ ಬಡಾವಣೆಯಲ್ಲಿ ಶ್ರೀ ಮರಿಸ್ವಾಮಿ ಮಠವು ಸ್ಥಾಪನೆಯಾಗಿದೆ. ಶ್ರೀ ರಂಭಾಪುರಿ ಪೀಠದ ಶಾಖಾಮಠವಾದ ಈ ಮಠವು ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು, ಧಾರ್ಮಿಕ ಕಾರ್ಯಗಳನ್ನು ನಡೆಸುವ ಮೂಲಕ ವೀರಶೈವ ಧರ್ಮವನ್ನು ಬೆಳೆಸಿದೆ. ಶ್ರೀ ಮರಿಸ್ವಾಮಿಗಳು ಮಠವನ್ನು ಸ್ಥಾಪಿಸಿದ್ದರಿಂದ ಈ ಮಠಕ್ಕೆ'ಶ್ರೀ ಮರಿಸ್ವಾಮಿ ಮಠ'ಎಂಬ ಹೆಸರು ಬಂದಿದೆ.

ಮಠ ಸ್ಥಾಪನೆ: ಶ್ರೀ ಮರಿಸ್ವಾಮಿಗಳು ಮೈಸೂರು ಅರಮನೆಯಲ್ಲಿ ವೇದಾಂತ ಪಂಡಿತರಾಗಿದ್ದರು. ಅಪಾರಪಾಂಡಿತ್ಯ ಪಡೆದ ಇವರು ವೀರಶೈವ ಧರ್ಮವನ್ನು ಅಭಿವೃದ್ಧಿಪಡಿಸಲು ಅರಮನೆಯನ್ನು ತೊರೆದು ಬಳ್ಳಾರಿಗೆ ಆಗಮಿಸಿದರು. ಸಕ್ಕರೆ ಕರಡೆಪ್ಪನವರು ಗುರುಗಳ ಪ್ರಭಾವಕ್ಕೆ ಮಣಿದು ಮಠ ಸ್ಥಾಪನೆಗೆ ನೆರವು ನೀಡಿದರು ಎಂದು ಹೇಳಲಾಗುತ್ತಿದೆ. ದಿವಾನ್

ಪೂರ್ಣಯ್ಯನವರು ಮರಿಸ್ವಾಮಿಗಳು ಮಠ ಸ್ಥಾಪನೆ ಮಾಡಿದ ವಿಚಾರ ತಿಳಿದ ತಕ್ಷಣ, ಬಳ್ಳಾರಿಗೆ ಬಂದು ಮುಂದೆ ನಿಂತು ಮಠಕ್ಕೆ ಕಟ್ಟಡವನ್ನು ಕಟ್ಟಿಸಿಕೊಟ್ಟು ಗುರುಗಳಿಂದ ಆಶೀರ್ವಾದ ಪಡೆದರು. ಬಳ್ಳಾರಿ ನಗರದಲ್ಲಿ ಮಠ ಸ್ಥಾಪನೆಗೊಂಡ ಮೇಲೆ ಪ್ರತಿದಿನ ಸಂಜೆ ವೀರಶೈವ ಸಿದ್ಧಾಂತ, ಸಿದ್ಧಾಂತ ಶಿಖಾಮಣಿ ಮತ್ತು ಲಿಂಗಾಗ ಸಾಮರಸ್ಯದ ಬಗ್ಗೆ ಪ್ರವಚನವನ್ನು ಏರ್ಪಡಿಸಿ ಭಕ್ತರಿಗೆ ಧಾರ್ಮಿಕ ಸಂಸ್ಕಾರ ನೀಡತೊಡಗಿದರು. ಈ ರೀತಿ ಮಠ ಸ್ಥಾಪನೆಯಿಂದ ವೀರಶೈವ ಧರ್ಮ ಬೆಳೆಯುವಂತೆ ಮಾಡಿದರು. ಗುರುಗಳು ಅನ್ನದಾಸೋಹ ಮತ್ತು ಜ್ಞಾನದಾಸೋಹವನ್ನು ನೀಡಿ'ದಾಸೋಹ ಮೂರ್ತಿ'ಗಳೆಂದು ಹೆಸರು ಪಡೆದು ಲಿಂಗೈಕ್ಯರಾದರು. ಗುರುಗಳು ಲಿಂಗೈಕ್ಯರಾಗುವಾಗ ಬಳ್ಳಾರಿ, ಬೆಂಗಳೂರು ಹಾಗೂ ಬೈರಾಪುರದಲ್ಲಿ ಭಕ್ತರಿಗೆ ದರ್ಶನ ಕೊಟ್ಟು ಲಿಂಗೈಕ್ಯರಾಗಿದ್ದಾರೆ. ಇದಕ್ಕಾಗಿ ಈ ಮೂರು ಸ್ಥಳಗಳಲ್ಲಿ ಗದ್ದುಗೆಗಳನ್ನು ಸ್ಥಾಪಿಸಲಾಗಿದೆ.

ಪರಂಪರೆ: ಶ್ರೀ ಮರಿಸ್ವಾಮಿಗಳ ನಂತರ ಪಟ್ಟದ ಶ್ರೀ ಮರಿಸ್ವಾಮಿಗಳು ಅಧಿಕಾರಕ್ಕೆ ಬಂದು, ಮೊಣಕಾಲ್ಮೂರು ತಾಲ್ಲೂಕಿನ ಬೈರಾಪುರದಲ್ಲಿ ಲಿಂಗೈಕ್ಯರಾಗಿದ್ದಾರೆ. ನಂತರ ಶ್ರೀ ಮರಿಬಸವ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಕೆಲವು ವರ್ಷ ಧಾರ್ಮಿಕ ಆಚರಣೆಗಳನ್ನು ನಡೆಸಿ ವಂಶಾಭಿವೃದ್ಧಿಗೋಸ್ಕರ ವಿವಾಹಿತರಾದರು. ನಂತರ ಶ್ರೀ ಮರಿಸ್ವಾಮಿಗಳು ಅಧಿಕಾರಕ್ಕೆಬಂದು ಮಠವನ್ನು ಮುನ್ನಡೆಸಿದ್ದ ಬಗ್ಗೆ ದಾಖಲೆಗಳು ದೊರೆಯುತ್ತಿವೆ.ಈ ಮಠದಲ್ಲಿ ನಾಲ್ಕುಜನ ಗುರುಗಳು ಅಧಿಕಾರ ನಡೆಸಿಲಿಂಗೈಕ್ಯ ರಾಗಿದ್ದಾರೆ. ಈಗ ಶ್ರೀ ಮರಿಸ್ವಾಮಿಗಳು ಮಠದ ಅಧಿಕಾರ ಪಡೆದು ವೀರಶೈವ ಧರ್ಮವನ್ನು ಪ್ರಚಾರಪಡಿಸುತ್ತಿದ್ದಾರೆ.

ವಿಭೂತಿ ಕಣಜ: ಕರ್ತೃಗುರುಗಳಾದ ಶ್ರೀ ಮರಿಸ್ವಾಮಿಗಳ ಕಾಲದಲ್ಲಿ ಧರ್ಮಪ್ರಚಾರದ ಜೊತೆಗೆ, ಧರ್ಮಾಚರಣೆಯ ಪರಿಕರಗಳ ಬಗ್ಗೆ ಹೆಚ್ಚು ಒತ್ತುಕೊಟ್ಟು ವಿಭೂತಿ, ರುದ್ರಾಕ್ಷಿ ಮತ್ತು ಲಿಂಗಗಳನ್ನು ನೀಡುತ್ತಿದ್ದರು. ವಿಭೂತಿಯನ್ನು ತಯಾರಿಸಿ ಸಂಗ್ರಹಿಸಿ ಕಣಜಗಳಲ್ಲಿ ತುಂಬಿಡುತ್ತಿದ್ದರು. ಈಗಲೂ ಈ ಕಣಜಗಳನ್ನು ನೋಡಬಹುದಾಗಿದೆ. ಕರ್ತೃ ಗುರುಗಳಾದ ಶ್ರೀಮರಿಸ್ವಾಮಿಗಳ ಕಾಲದಲ್ಲಿ ಧರ್ಮಪ್ರಚಾರಕ್ಕೆ ನಿತ್ಯ ಪುರಾಣ ಪ್ರವಚನಗಳು ನಡೆಯುತ್ತಿದ್ದವು ಈಗ ವರ್ಷಕ್ಕೊಮ್ಮೆ ನವರಾತ್ರಿಯಲ್ಲಿ ಮಾತ್ರ ಪ್ರವಚನವನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಮರಿಸ್ವಾಮಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ಮರಿಸ್ವಾಮಿ ಮಠ, ತೇರುಬೀದಿ, ಬಳ್ಳಾರಿ.

ಮಣ್ಣೂರು ಕೊಟ್ಟೂರುಸ್ವಾಮಿಮಠ: ಬಳ್ಳಾರಿ ನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಪಕ್ಕದಲ್ಲಿರುವ ಶ್ರೀಮಣ್ಣೂರು ಕೊಟ್ಟೂರು ಸ್ವಾಮಿ ಮಠವು, ಉಜ್ಜಯಿನಿ ಪೀಠದ ಶಾಖಾ ಮಠವಾಗಿ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಪುರಾತನ ಕಾಲದಿಂದಲೂ ಮಠವು ಅಸ್ತಿತ್ವದಲ್ಲಿದ್ದು ಅತ್ಯಂತ ಕ್ರಿಯಾಶೀಲ ಮಠವಾಗಿ ಕೆಲಸ ಮಾಡಿದೆ ಎಂಬುದು ಮಠದ ಇತಿಹಾಸದಿಂದ ತಿಳಿದು ಬರುತ್ತಿದೆ.

ಮಠ ಸ್ಥಾಪನೆ: ಶ್ರೀ ಭೋಗಯ್ಯ ಶಿವಾಚಾರ್ಯ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಉಜ್ಜಯಿನಿ ಪೀಠದ ಜಗದ್ಗುರುಗಳ ಅಪ್ಪಣೆಯ ಮೇರೆಗೆ ಇಲ್ಲಿ ಮಠವನ್ನು ಸ್ಥಾಪಿಸಿ, ವೀರಶೈವ ತತ್ತ್ವಗಳ ಪ್ರಚಾರ ಹಾಗೂ ವೀರಶೈವರ ಧಾರ್ಮಿಕ ಕ್ರಿಯಾದಿಗಳಲ್ಲಿ ನೆರವಾಗಿ ಭಕ್ತರನ್ನು ಮುನ್ನಡೆಸಿದ್ದಾರೆ. ಉಜ್ಜಯಿನಿ ಜಗದ್ಗುರುಗಳ ಕೃಪಾಶೀರ್ವಾದ ಹಾಗೂ ಭಕ್ತರ ಸಹಕಾರವನ್ನು ಪಡೆದು ಮಠವನ್ನು ಅಭಿವೃದ್ಧಿಯ ಪಥದಲ್ಲಿ ನಡೆಸಿದ್ದಲ್ಲದೆ, ಭಕ್ತರನ್ನು ಸಂಘಟಿಸಿ ವೀರಶೈವ ಧರ್ಮವನ್ನು ಬಲಯುತವಾಗಿ ಬೆಳೆಸಲು ಶ್ರಮಿಸಿದ್ದಾರೆ. ಕರ್ತೃ ಗುರುಗಳಾದ ಶ್ರೀ ಭೋಗಯ್ಯ ಶಿವಾಚಾರ್ಯ ಸ್ವಾಮಿಗಳ ನಂತರ ಮಠದ ಪರಂಪರೆಯು ಈತನಕ ಬೆಳೆದು ಬಂದಿದೆ.

ಪರಂಪರೆ:

೧. ಷ.ಬ್ರ.ಶ್ರೀ ಭೋಗಯ್ಯ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಚನ್ನಬಸವಯ್ಯ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಮಹಾದೇವಯ್ಯ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯಸ್ವಾಮಿಗಳು

ಈ ರೀತಿ ನಾಲ್ಕು ಗುರುಗಳ ಗದ್ದುಗೆಗಳ ಜತೆಗೆ ರಾಯಚೂರು ಜಿಲ್ಲೆಯ ಜಂಬೂನಾಥನಹಳ್ಳಿಯ ಶಾಖಾ ಮಠದಲ್ಲಿ

ಮೂರು ಗದ್ದುಗೆಗಳು ನಿರ್ಮಿತವಾಗಿದ್ದು, ಇವುಗಳು ಈ ಮಠದ ಪರಂಪರೆಯ ಗುರುಗಳ ಗದ್ದುಗೆಗಳು ಎಂದು ಹೇಳಲಾಗುತ್ತಿದೆ. ಈಗ ಉತ್ತರಾಧಿಕಾರಿಗಳು ಯಾರೂ ಇಲ್ಲದಿರುವುದರಿಂದ ಶ್ರೀ ಎಂ.ಗಜದಂಡಯ್ಯ ಸ್ವಾಮಿಗಳು ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಗಜದಂಡಯ್ಯ ಸ್ವಾಮಿಗಳು, ಶ್ರೀ ಮಣ್ಣೂರು ಕೊಟ್ಟೂರು ಸ್ವಾಮಿ ಮಠ, ಎ.ಪಿ.ಎಂ.ಸಿ. ಹತ್ತಿರ, ಬಳ್ಳಾರಿ.

ಶಿವಲಿಂಗಸ್ವಾಮಿಮಠ: ಬಳ್ಳಾರಿ ನಗರದ ಗ್ರಹಂ ರಸ್ತೆಯಲ್ಲಿ ಶ್ರೀ ಶಿವಲಿಂಗಸ್ವಾಮಿ ಮಠವು ಸ್ಥಾಪನೆಯಾಗಿದೆ. ವಿರಕ್ತ ಸಂಪ್ರದಾಯದ ಮುರುಘಾ ಸಮಯದ ಈ ಮಠವು ಶ್ರೀ ಶಿವಲಿಂಗ ಸ್ವಾಮಿಗಳಿಂದ ಪ್ರಾರಂಭಗೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸಿ ಇಲ್ಲಿ ವೀರಶೈವ ಧರ್ಮವು ಬೆಳೆಯಲು ನೆರವಾಗಿದೆ.

ಹದಿನೆಂಟನೆಯ ಶತಮಾನದ ಅಂತ್ಯದಲ್ಲಿ ಪ್ರಾರಂಭಗೊಂಡಿರಬಹುದಾದ ಈ ವಿರಕ್ತಮಠದಲ್ಲಿ ಕರ್ತೃ ಗುರುಗಳಾದ ಶ್ರೀ ಶಿವಲಿಂಗೇಶ್ವರ ಸ್ವಾಮಿಗಳ ಗದ್ದುಗೆ ಹಾಗೂ ಇನ್ನೊಂದು ಗದ್ದುಗೆ ನಿರ್ಮಾಣವಾಗಿ ನಿತ್ಯ ಪೂಜೆಗೆ ಒಳಗಾಗಿವೆ. ಪೂರ್ವದಲ್ಲಿ ಬಳ್ಳಾರಿಯ ಹೊರಭಾಗದಲ್ಲಿ ಸ್ಥಾಪನೆಯಾಗಿದ್ದ ಈ ಮಠವು, ನಗರ ಬೆಳೆದಂತೆ ಅದರ ಒಡಲೊಳಗೆ ಸೇರಿಕೊಂಡಿದೆ. ಮಠದ ಪರಂಪರೆಯಲ್ಲಿ ಅಧಿಕಾರ ವಹಿಸಿಕೊಂಡ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಈಗ ಶ್ರೀ ಕಿಡಿಗಣ್ಣಯ್ಯ ಸ್ವಾಮಿಗಳು ಅಧಿಕಾರವನ್ನು ನಡೆಸುತ್ತಿದ್ದು ಬಸವ ತತ್ತ್ವಪುರಾಣ, ಪ್ರವಚನಗಳ ಮೂಲಕ ಶರಣತತ್ತ್ವಗಳನ್ನು ಪ್ರಚಾರಪಡಿಸುತ್ತಾ ಬಂದಿದ್ದಾರೆ. ಅಮಾವಾಸ್ಯೆ ಮತ್ತು ಹುಣ್ಣಿಮೆಗಳಲ್ಲಿ ವಿಶೇಷ ಪೂಜೆ ಮತ್ತು ಬಂದ ಭಕ್ತರಿಗೆ ಅನ್ನದಾಸೋಹವನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಕಿಡಿಗಣ್ಣಯ್ಯ ಸ್ವಾಮಿಗಳು, ಶ್ರೀ ಶಿವಲಿಂಗ ಸ್ವಾಮಿ ಮಠ, ಗ್ರಹಂ ರಸ್ತೆ, ಬಳ್ಳಾರಿ.

ಸಿರಗುಪುರ

ಬಳ್ಳಾರಿ ತಾಲ್ಲೂಕಿನ ಸಿರಗುಪುರವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ನಾಲ್ಕು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ರೇಣುಕ ಮಠವು ಅಸ್ತಿತ್ವದಲ್ಲಿದೆ.

ರೇಣುಕಮಠ (ಆಶ್ರಮ): ಸಿರಗುಪುರ ಗ್ರಾಮದಲ್ಲಿ ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿ ಶ್ರೀ ರೇಣುಕ ಮಠವು ಸ್ಥಾಪನೆಯಾಗಿದೆ. ಪಟ್ಟದ ಶ್ರೀ ಶಿವದೇವ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಯ ಮೇಲೆ ಮಠವು ರೂಪುಗೊಂಡಿದೆ. ಇಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಿ ನಿತ್ಯ ಪೂಜೆಗೆ ವ್ಯವಸ್ಥೆ ಮಾಡಲಾಗಿದೆ. ಈ ಮಠದಲ್ಲಿ ರೇಣುಕ, ಆಂಜನೇಯ, ಈಶ್ವರರ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದ್ದು ನಿತ್ಯ ಪೂಜೆಯನ್ನು ನಡೆಸಲಾಗುತ್ತಿದೆ. ಇದರ ಉಸ್ತುವಾರಿಗಾಗಿ ಶ್ರೀ ಮಲ್ಲಿಕಾರ್ಜುನ ತಾತನವರನ್ನು ನೇಮಕ ಮಾಡಲಾಗಿದೆ. ಗ್ರಾಮಸ್ಥರು ಈಗ ಉತ್ತರಾಧಿಕಾರಿಗಳನ್ನು ನೇಮಕ ಮಾಡಲು ನಿರ್ಧರಿಸಿದ್ದಾರೆ.

ವಿಳಾಸ: ಶ್ರೀ ಮಲ್ಲಿಕಾರ್ಜುನ ತಾತನವರು, ಶ್ರೀ ರೇಣುಕಮಠ, ಸಿರಗುಪುರ, ಬಳ್ಳಾರಿ ತಾಲ್ಲೂಕು.

❑

ಶಿರಗುಪ್ಪ ತಾಲ್ಲೂಕು

ಬಳ್ಳಾರಿ ಜಿಲ್ಲೆಯ ಶಿರಗುಪ್ಪ ತಾಲ್ಲೂಕು ಆಂಧ್ರಪ್ರದೇಶದ ಗಡಿಗೆ ಹೊಂದಿಕೊಂಡಿದೆ. ತೆಲುಗು ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿರುವ ಈ ತಾಲ್ಲೂಕಿನಲ್ಲಿ ಪ್ರಸ್ತುತು ನಾಲ್ಕು ಮಠಗಳು ಅಸ್ತಿತ್ವದಲ್ಲಿ ಉಳಿದಿವೆ.

ಶಾನವಾಸಪುರ

ಶಿರಗುಪ್ಪ ತಾಲ್ಲೂಕಿನ ಶಾನವಾಸಪುರವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಮೂವತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ದಾರುಕಮಠವು ಅಸ್ತಿತ್ವದಲ್ಲಿದೆ.

ದಾರುಕಮಠ: ಶಾನವಾಸಪುರದಲ್ಲಿ ಉಜ್ಜಯಿನಿ ಪೀಠದ ಶಾಖಾಮಠವಾದ ಶ್ರೀ ದಾರುಕಮಠವು ಸ್ಥಾಪನೆಯಾಗಿದೆ. ಶ್ರೀ ಪ್ರಸನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ೧೯೯೬ ರ ಅಕ್ಟೋಬರ್ ಇಪ್ಪತ್ತೊಂದರಂದು ಮಠವನ್ನು ಸ್ಥಾಪಿಸಿ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಮಠದಲ್ಲಿ ಶ್ರಾವಣ, ಕಾರ್ತೀಕ ಮತ್ತು ಧನುರ್ಮಾಸಗಳಲ್ಲಿ ಪ್ರವಚನ, ಶಿವರಾತ್ರಿ, ನವರಾತ್ರಿಯಲ್ಲಿ ದೇವಿ ಪಾರಾಯಣ ಹಾಗೂ ಕಾರ್ತೀಕ ಮಾಸದಲ್ಲಿ ದೀಪೋತ್ಸವವನ್ನು ಮಾಡಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಪ್ರಸನ್ನಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು,ಶ್ರೀ ದಾರುಕಮಠ,ಶಾನವಾಸಪುರ,ಶಿರಗುಪ್ಪ ತಾ, ಬಳ್ಳಾರಿಜಿಲ್ಲೆ.

ಶಿರಿಗೆರೆ

ಶಿರಗುಪ್ಪ ತಾಲ್ಲೂಕಿನ ಶಿರಿಗೆರೆಯ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತೆಂಟು ಕಿ.ಮೀ ದೂರದಲ್ಲಿದೆ. ಈ ಗ್ರಾಮವು ಹಿಂದೆ ವೀರಶೈವ ಧರ್ಮದ ಕೇಂದ್ರ ಸ್ಥಾನವಾಗಿತ್ತೆಂದು ಹೇಳಲಾಗುತ್ತಿದೆ. ಪುರಾತನ ಕಾಲದಲ್ಲಿ ಒಂಬತ್ತು ಮಠಗಳು ಸ್ಥಾಪನೆಯಾಗಿದ್ದವು ಎಂಬ ಮಾಹಿತಿ ದೊರೆತಿದೆ. ಈಗ ಶ್ರೀ ಚಿಟಗೆ ಮಠ, ಶ್ರೀ ವಿರಕ್ತಮಠ, ಶ್ರೀ ಪಾಠಶಾಲೆ ಮಠ, ಶ್ರೀ ಹಿರೇಮಠ, ಶ್ರೀ ಮಠಪತಿ ಮಠ, ಶ್ರೀ ನಾಗಲಿಂಗಯ್ಯನ ಮಠ ಹಾಗೂ ಶ್ರೀ ಶೀಲವಂತರ ಮಠ ಎಂಬ ಏಳು ಮಠಗಳ ಹೆಸರುಗಳನ್ನು ದಾಖಲಿಸಬಹುದಾಗಿದೆ. ಶ್ರೀ ವಿರಕ್ತಮಠವು ಹೊಸಪೇಟೆಯ ಕೊಟ್ಟೂರುಸ್ವಾಮಿ ಮಠದ ಶಾಖಾಮಠವಾಗಿ ಬೆಳೆದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ಪಾಠಶಾಲೆಮಠ: ಶ್ರೀ ಪಾಠಶಾಲೆ ಮಠವು ಉಜ್ಜಯಿನಿ ಪೀಠದ ಶಾಖಾಮಠವಾಗಿ ಬೆಳೆದಿದೆ. ಪುರಾತನ ಪರಂಪರೆಯ ಈ ಮಠದಲ್ಲಿ ಈವರೆಗೆ ಅಧಿಕಾರ ನಡೆಸಿದ ಅನೇಕ ಗುರುಗಳು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಈ ಭಾಗದ ಪ್ರಮುಖ ಮಠಗಳಲ್ಲಿ ಒಂದಾಗಿ ಬೆಳೆದ ಪಾಠಶಾಲೆ ಮಠವು ಶ್ರೀ ವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಹೆಚ್ಚು ಅಭಿವೃದ್ಧಿ ಗೊಂಡಿದೆ. ಗುರುಗಳು ತಮ್ಮ ಜೀವಿತಾವಧಿಯಲ್ಲಿಯೇ ಹಿರೇಹಾಳು ಬೃಹನ್ಮಠದ ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡು ೧೯೮೦ರ ಜೂನ್ ಇಪ್ಪತ್ತಾರರಂದು ಪಟ್ಟಾಧಿಕಾರ ನೀಡಿ, ೧೯೮೪ರ ಏಪ್ರಿಲ್ ಹದಿನಾರರಂದು ಲಿಂಗೈಕ್ಯರಾದರು. ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠವನ್ನು ಅಭಿವೃದ್ಧಿಪಡಿಸಿದರು. ಇವರ ಕ್ರಿಯಾಶೀಲ ಗುಣಗಳನ್ನು ಗಮನಿಸಿದ ಜಗದ್ಗುರು ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಭಗವತ್ಪಾದರು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡು ೧೯೯೫ರ ನವೆಂಬರ್ ಐದರಂದು ಉಜ್ಜಯಿನಿ ಪೀಠದ ಅಧಿಕಾರವನ್ನು ನೀಡಿದರು.

ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳು ಜಗದ್ಗುರುಗಳಾಗಿ ನೇಮಕಗೊಂಡ ನಂತರ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿದಿದೆ. ಈಗ ಉಜ್ಜಯಿನಿಪೀಠದ ಜಗದ್ಗುರುಗಳೇ ತಮ್ಮ ಪೂರ್ವಾಶ್ರಮವಾದ ಪಾಠಶಾಲೆ ಮಠದಲ್ಲಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದ್ದಾರೆ.

ವಿಳಾಸ: ಜಗದ್ಗುರು ಶ್ರೀ ಮರುಳಸಿದ್ಧ ಶಿವಾಚಾರ್ಯ ಭಗವತ್ಪಾದರು, ಶ್ರೀಮದ್ ಉಜ್ಜಯಿನಿ ಪೀಠ, ಉಜ್ಜಯಿನಿ, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.

ಹಳೆಕೋಟೆ

ಶಿರಗುಪ್ಪ ತಾಲ್ಲೂಕಿನ ಹಳೆಕೋಟೆಯು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ನಲವತ್ತೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಮರಿಸ್ವಾಮಿತಾತನಮಠವು ಅಸ್ತಿತ್ವದಲ್ಲಿದೆ.

ಮರಿಸ್ವಾಮಿತಾತನಮಠ: ಹಳೆಕೋಟೆ ಗ್ರಾಮದಲ್ಲಿ ಶ್ರೀ ಮರಿಸ್ವಾಮಿತಾತನಮಠ ಸ್ಥಾಪನೆಯಾಗಿ, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ಕ್ರಿ.ಶ.೧೫೨೩ ರಲ್ಲಿ ಬಳಗಾನೂರು ಮರಿಸ್ವಾಮಿ ತಾತನವರು ಈ ಮಠವನ್ನು ಸ್ಥಾಪಿಸಿರುವುದರಿಂದ ಈ ಮಠಕ್ಕೆ 'ಶ್ರೀ ಮರಿಸ್ವಾಮಿತಾತನ ಮಠ' ಎಂಬ ಹೆಸರು ಬಂದಿದೆ.

ರಾಯಚೂರು ಜಿಲ್ಲೆ ಬಳಗಾನೂರಿನ ಶ್ರೀ ಮರಿಸ್ವಾಮಿಗಳು ಅಲ್ಲಿನ ವಿರಕ್ತಮಠಕ್ಕೆ ಪಟ್ಟಾಧಿಕಾರಿಗಳಾಗಿ, ಪವಾಡಗಳನ್ನು ಮಾಡಿ ಹೆಸರು ಪಡೆದಿದ್ದರು. ಗುರುಗಳು ಸಾಧನೆಯ ಸಿದ್ಧಿ ಪಡೆಯಲು ಲೋಕಸಂಚಾರ ಕೈಗೊಂಡು ಶಿರಗುಪ್ಪಕ್ಕೆ ಬಂದು ನೆಲೆಸುತ್ತಾರೆ. ಇಲ್ಲಿ ಅನೇಕ ಪವಾಡಗಳನ್ನು ಮಾಡಿ ಭಕ್ತರನ್ನು ಜಾಗೃತಗೊಳಿಸಿ ವೀರಶೈವ ಧರ್ಮವನ್ನು ಬೆಳೆಸಿದರು. ನಂತರ ಗುರುಗಳು ಶಿರಗುಪ್ಪದಿಂದ ಹಳೆಕೋಟೆಗೆ ಬಂದು ನೆಲೆಸುತ್ತಾರೆ. ಹಳೆಕೋಟೆಯ ಸುತ್ತಮುತ್ತ ಮಳೆ ಇಲ್ಲದಿದ್ದಾಗ ಭಕ್ತರ ಕಷ್ಟಗಳನ್ನು ನೋಡಿದ ಗುರುಗಳು ಮಾಯದಂಥ ಮಳೆಯನ್ನು ತರಿಸಿ ಭಕ್ತರನ್ನು ಉದ್ಧರಿಸಿದರಂತೆ. ನಿತ್ಯ ಶಿವಾನುಭವ ಗೋಷ್ಠಿಗಳು ಹಾಗೂ ಅನ್ನದಾಸೋಹವನ್ನು ನಡೆಸಿ ಅಂಧಕಾರದಲ್ಲಿದ್ದ ಸಮಾಜವನ್ನು ಕಣ್ಣುತೆರೆಸಿ ಹಳೆಕೋಟೆಯನ್ನು ಸುಕ್ಷೇತ್ರವನ್ನಾಗಿ ಮಾಡಿ ಜೀವಂತ ಸಮಾಧಿಯಾದರು.

ಮಠ ಸ್ಥಾಪನೆ: ಲಿಂಗೈಕ್ಯ ಗುರುಗಳ ಗದ್ದುಗೆಯ ಮೇಲೆ ಮಠ ಸ್ಥಾಪನೆ ಮಾಡಿದ ಭಕ್ತರು ನಿತ್ಯ ಧಾರ್ಮಿಕ ಆಚರಣೆಗಳನ್ನು ಆಚರಿಸಿ, ಶ್ರೀ ಮರಿಸ್ವಾಮಿ ತಾತನವರ ನೆನಪನ್ನು ಜೀವಂತವಾಗಿ ಉಳಿಸಿದ್ದಾರೆ. ಮಠ ಸ್ಥಾಪನೆಗೊಂಡ ಮೇಲೆ ಅಧಿಕಾರ ವಹಿಸಿಕೊಂಡ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ೧೯೭೪ ರಲ್ಲಿ ಈ ಮಠದ ಉತ್ತರಾಧಿಕಾರಿಗಳಾಗಿ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ನೇಮಕಗೊಂಡಿದ್ದಾರೆ. ಇವರು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಪಲ್ಕಿ ಗ್ರಾಮದಲ್ಲಿ ೧೯೫೮ ರಲ್ಲಿ ಜನಿಸಿದರು. ಗುರುಗಳು ಈ ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡ ಮೇಲೆ ಧಾರ್ಮಿಕ ಚಟುವಟಿಕೆಗಳನ್ನು ನಡೆಸತೊಡಗಿ ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಮಠದಲ್ಲಿ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದ್ದಾರೆ. ಕಲ್ಯಾಣ ಮಂಟಪ, ಶಿವಾನುಭವಮಂಟಪ, ಪ್ರಸಾದನಿಲಯ, ಶಿವಪೂಜಾಮಂದಿರ, ಅನುಗ್ರಹ ಮಂಟಪ ಮತ್ತು ನವಗ್ರಹ ಮಂಟಪ ಈ ರೀತಿ ಮಂಟಪಗಳ ಸಮುಚ್ಚಯಗಳನ್ನು ನಿರ್ಮಿಸಿದ್ದಾರೆ.

ವಿಳಾಸ: ಶ್ರೀ.ಮ.ನಿ.ಪ್ರ ಮಲ್ಲಿಕಾರ್ಜುನ ಸ್ವಾಮಿಗಳು, ಶ್ರೀ ಮರಿಸ್ವಾಮಿ ತಾತನವರ ಮಠ, ಹಳೆಕೋಟೆ, ಶಿರಗುಪ್ಪ ತಾಲ್ಲೂಕು, ಬಳ್ಳಾರಿ ಜಿಲ್ಲೆ.
ಆಧಾರ: 'ಶ್ರೀ ಬಳಗಾನೂರು ಮರಿ ದೇವರ ಜೀವನ ಜ್ಯೋತಿ' ಲೇಖಕರು : ಸಿ.ವ. ಚನ್ನಬಸವೇಶ್ವರರು.

ಹಾಚೋಹಳ್ಳಿ

ಶಿರಗುಪ್ಪ ತಾಲ್ಲೂಕಿನ ಹಾಚೋಹಳ್ಳಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಹದಿನೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಮುತ್ತಿನಪೆಂಡಿಮಠವು ಅಸ್ತಿತ್ವದಲ್ಲಿದೆ.

ಮುತ್ತಿನಪೆಂಡಿಮಠ: ಹಾಚೋಹಳ್ಳಿಯ ತುಂಗಭದ್ರಾ ನದಿಯ ದಡದ ಮೇಲೆ ಸ್ಥಾಪಿತವಾಗಿರುವ ಶ್ರೀ ಮುತ್ತಿನ ಪೆಂಡಿ ಮಠವು, ಶ್ರೀಶೈಲ ಪೀಠದ ಶಾಖಾಮಠವಾಗಿ ಬೆಳೆದಿದೆ. ಶ್ರೀ ಕರಿಸಿದ್ಧೇಶ್ವರ ಸ್ವಾಮಿಗಳು ಈ ಮಠದ ಸ್ಥಾಪಕರೆಂದು ಹೇಳಲಾಗುತ್ತಿದೆ. ಕರ್ತೃ ಗುರುಗಳಾದ ಶ್ರೀ ಕರಿಸಿದ್ಧೇಶ್ವರ ಸ್ವಾಮಿಗಳು ಮಹಾ ಪವಾಡ ಪುರುಷರಾಗಿದ್ದರು. ತುಂಗಾ ನದಿಯಲ್ಲಿ ಹನ್ನೆರಡು ವರ್ಷಕ್ಕೊಮ್ಮೆ ಬರುವ ಭಾಗೀರಥಿಯನ್ನು ನೋಡಲು ಜನ ಸೇರುತ್ತಾರೆ. ಈ ಸಂದರ್ಭದಲ್ಲಿ ಶ್ರೀ ಮುತ್ತಿನಪೆಂಡಿ

ಮಠದ ಗುರುಗಳ ನೇತೃತ್ವದಲ್ಲಿ ಧಾರ್ಮಿಕ ಕಾರ್ಯಗಳು ನಡೆಯುತ್ತವೆ. ಇಂತಹ ಸಂದರ್ಭದಲ್ಲಿ ಶ್ರೀ ಕರಿಸಿದ್ಧೇಶ್ವರರು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿದ್ದರು.

ಇದರಿಂದ ಅಸೂಯೆಗೊಂಡ ಕೆಲವು ಬ್ರಾಹ್ಮಣರು ಶ್ರೀ ಕರಿಸಿದ್ಧೇಶ್ವರರಿಗೆ ತೊಂದರೆ ಮಾಡಬೇಕೆಂಬ ಉದ್ದೇಶವನ್ನಿಟ್ಟು ಕೊಂಡು ಭಾಗೀರಥಿ ದರ್ಶನಕ್ಕೆ ಬಂದಿದ್ದರು. ಸಾವಿರಾರು ಜನರು ನೆರೆದಿದ್ದರು. ಭಾಗೀರಥಿಯು ತುಂಗಭದ್ರಾ ನದಿಯ ಮಧ್ಯದಲ್ಲಿ ಜುಳುಜುಳನೆ ನೊರೆಯುಕ್ಕಿ ಮಾಯವಾಯಿತು. ಆಗ ಜನಸ್ತೋಮ ಜಯಕಾರ ಹಾಕಿದರೆ, ಬ್ರಾಹ್ಮಣರು ಗುರುಗಳಿಗೆ 'ನೀವು ಭಕ್ತರಿಗೆ ಸುಳ್ಳು ಹೇಳಿ ಭಾಗೀರಥಿ ಬಂದಳೆಂದು ಮೋಸ ಮಾಡಿದಿರಿ', ಎಂದರಂತೆ. ಆಗ ಗುರುಗಳು 'ನಾನೇಕೆ ಸುಳ್ಳು ಹೇಳಲಿ ಈಗ ಬಂದು ಹೋದಳಲ್ಲ' ಎಂದು ಪ್ರತ್ಯುತ್ತರ ಕೊಟ್ಟರಂತೆ. ಆಗ ಬ್ರಾಹ್ಮಣರು 'ನಿಜ ರೂಪವ ನೋಡದೆ ಸುಳ್ಳನ್ನು ಏಕೆ ಹೇಳುತ್ತೀರಿ' ಎಂದು ಪ್ರಶ್ನಿಸಿದಾಗ ಶ್ರೀ ಕರಿಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಭಾಗೀರಥಿಗೆ 'ನಿನ್ನ ನಿಜ ರೂಪವ ತೋರಿಸು' ಎಂದು ಪ್ರಾರ್ಥಿಸಿಕೊಳ್ಳುತ್ತಾರಂತೆ. ಆಗ ತುಂಗಭದ್ರಾ ನದಿಯ ಮಧ್ಯದಲ್ಲಿ ಭಾಗೀರಥಿ ತನ್ನ ಕೈಯನ್ನು ಮೇಲೆ ಎತ್ತಿ ಆಶೀರ್ವದಿಸಿದ ಳಂತೆ. ಆಗ ಗುರುಗಳು 'ಈಗಲಾದರೂ ಭಾಗೀರಥಿಯ ದರ್ಶನವನ್ನು ಮಾಡಿದಿ ರಲ್ಲ' ಎಂದು ಕೇಳಿದಾಗ 'ಅದು ಭಾಗೀರಥಿಯ ಕೈಯಲ್ಲ ಅದು ಯಾವುದೋ ಹೆಣದ ಕೈಯಿರಬೇಕು. ನಿಮಗೆ ಭಾಗೀರಥಿಯನ್ನು ಒಲಿಸಿಕೊಳ್ಳುವ ಶಕ್ತಿ ಇದ್ದರೆ ಅವಳ ನಿಜ ರೂಪವನ್ನು ತೋರಿಸಬೇಕು' ಎಂದು ಬ್ರಾಹ್ಮಣರು ಪಟ್ಟು ಹಿಡಿದಾಗ ಮತ್ತೊಮ್ಮೆ ಪ್ರಾರ್ಥಿಸಿಕೊಂಡರಂತೆ. ಆಗ ಭಾಗೀರಥಿಯು 'ನಾನು ದಿಗಂಬರಳಾಗಿರುವೆ ನನ್ನ ನಿಜ ರೂಪವನ್ನು ತೋರಿಸಲಾಗದು, ಒಂದು ವೇಳೆ ತೋರಿಸಿದ್ದೇ ಆದರೆ ಪ್ರಾರ್ಥಿಸಿದ ನಿಮಗೆ ಶಾಪಬರುತ್ತದೆ', ಎಂದು ಹೇಳುತ್ತಾಳಂತೆ. ಆಗ ಗುರುಗಳು 'ಶಾಪ ಬಂದರೂ ಪರವಾಗಿಲ್ಲ ನನ್ನ ತಪೋಶಕ್ತಿಯನ್ನು ಕೆಣಕುತ್ತಿರುವ ಈ ಬ್ರಾಹ್ಮಣರಿಗೆ ನಿನ್ನ ನಿಜ ರೂಪವನ್ನು ತೋರಿಸು' ಎಂದು ಪುನಃ ಪ್ರಾರ್ಥಿಸಿಕೊಂಡರಂತೆ. ಆಗ ಭಾಗೀರಥಿಯು ತನ್ನ ನಿಜ ರೂಪವ ತೋರಿಸುವ ಮೊದಲು ಶ್ರೀ ಕರಿಸಿದ್ಧೇಶ್ವರರಿಗೆ 'ಅಂತರ್ ಪಿಶಾಚಿಯಾಗಿ ತುಂಗಭದ್ರಾ ನದಿಯ ದಡದಲ್ಲಿರುವ ಮಂಚ್ಚಾಲಿ ಎಂಬಲ್ಲಿ ಮೂರು ಹುಣಸೆ ಗಿಡಗಳಿವೆ ಅಲ್ಲಿ ನೆಲೆಸು, ಮೂರು ಗಿಡದಲ್ಲಿರುವ ಎಲೆಗಳ ಸಂಖ್ಯೆಯಲ್ಲಿ ಹುಣಸೆ ಗಿಡಗಳು ಬೆಳೆದ ಮೇಲೆ ನೀನು ಮುಕ್ತಿ ಹೊಂದುತ್ತೀಯ' ಎಂದು ಶಾಪ ಮತ್ತು ಅದರ ವಿಮೋಚನೆಗೆ ದಾರಿ ತೋರಿಸಿ, ತನ್ನ ನಿಜ ರೂಪವನ್ನು ತೋರಿಸುತ್ತಾಳಂತೆ.

ಈ ಶಾಪದಂತೆ ಶ್ರೀ ಕರಿಸಿದ್ಧೇಶ್ವರರು ಮಂಚ್ಚಾಲಿಯಲ್ಲಿ ಪಿಶಾಚಿಯಾಗಿ, ನಂತರ ಮುಕ್ತಿಗೊಂಡು ಲಿಂಗೈಕ್ಯರಾಗಿದ್ದಾರೆ. ಮಂಚ್ಚಾಲಿ ಎಂಬುದು ಈಗ ಮಂತ್ರಾಲಯವಾಗಿ ರೂಪುಗೊಂಡಿದೆ ಎಂದು ಹೇಳುವ ಜನಪದ ಕಥೆ ಈ ಭಾಗದಲ್ಲಿ ಜನಜನಿತ ವಾಗಿದೆ. ಈ ಸ್ಥಳದಲ್ಲಿ ಹಾಚೋಹಳ್ಳಿಯ ಶ್ರೀ ಮುತ್ತಿನ ಪೆಂಡಿ ಮಠದ ಶಾಖಾಮಠವಿದ್ದು, ಧಾರ್ಮಿಕ ಕೆಲಸಗಳನ್ನು ನಡೆಸಿಕೊಂಡು ಬರುತ್ತಿತ್ತು. ಇಂತಹ ಪವಿತ್ರ ಸ್ಥಳದಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ಬೃಂದಾವನವನ್ನು ನಿರ್ಮಿಸಲಾಗಿದೆ.

ಇಂತಹ ಪರಂಪರೆಯುಳ್ಳ ಹಾಚೋಹಳ್ಳಿ ಮುತ್ತಿನ ಪೆಂಡಿ ಮಠದಲ್ಲಿ ಶ್ರೀ ಮರಿಸ್ವಾಮಿಗಳು ಮತ್ತು ಶ್ರೀ ಮಹಾಂತ ಸ್ವಾಮಿಗಳು ಅಧಿಕಾರವನ್ನು ನಡೆಸಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಉತ್ತರಾಧಿಕಾರಿಗಳು ನೇಮಕಗೊಳ್ಳದೆ ಮಠವು ಖಾಲಿ ಉಳಿದಿದೆ. ಗ್ರಾಮಸ್ಥರು ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಾ, ಮಠವನ್ನು ಜೀವಂತವಾಗಿರಿ ಸಿದ್ದಾರೆ.

ವಿಳಾಸ: ಶ್ರೀ ಮುತ್ತಿನಪೆಂಡಿ ಮಠ, ಹಾಚೋಹಳ್ಳಿ, ಶಿರಗುಪ್ಪ ತಾಲ್ಲೂಕು, ಬಳ್ಳಾರಿ ಜಿಲ್ಲೆ.

❑

ಸಂಡೂರು ತಾಲ್ಲೂಕು

ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕು ಜಿಲ್ಲೆಯಲ್ಲಿಯೇ ವಿಶೇಷ ಪ್ರಾಕೃತಿಕ ಸಂಪತ್ತನ್ನು ಪಡೆದಿದೆ. ಗಣಿಗಾರಿಕೆಯಿಂದ ಸ್ವಾವಲಂಬನೆ ಸಾಧಿಸಿರುವ ಈ ತಾಲ್ಲೂಕು ಐತಿಹಾಸಿಕವಾಗಿಯೂ ಪ್ರಸಿದ್ಧಿ ಪಡೆದಿದೆ. ಇಲ್ಲಿ ವೀರಶೈವಧರ್ಮ ಅಭಿವೃದ್ಧಿಗೊಂಡು ಅನೇಕ ಮಠಗಳು ಧರ್ಮಪ್ರಚಾರಕ್ಕೆಂದು ಸ್ಥಾಪನೆಯಾಗಿದ್ದವು. ಅವುಗಳಲ್ಲಿ ಇಂದು ನಾಲ್ಕು ಮಠಗಳು ಮಾತ್ರ ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿವೆ.

ಗರಗ-ನಾಗಲಾಪುರ

ಸಂಡೂರು ತಾಲ್ಲೂಕಿನ ಗರಗ-ನಾಗಲಾಪುರವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿನೆಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಒಪ್ಪತ್ತೇಶ್ವರ ವಿರಕ್ತ ಮಠವು ಸ್ಥಾಪನೆಯಾಗಿದೆ.

ಒಪ್ಪತ್ತೇಶ್ವರ ವಿರಕ್ತಮಠ: ವಿಜಯನಗರದ ಅರಸ ಪ್ರೌಢದೇವರಾಯನ ಮಗ ಸದಾಶಿವರಾಯನು (ಕ್ರಿ.ಶ.೧೪೫೦) ತನ್ನ ತಾಯಿ ನಾಗಲಾಂಬಿಕೆಯ ನೆನಪಿಗಾಗಿ ನಾಗಲಾಪುರದಲ್ಲಿ (ಕ್ರಿ.ಶ.೧೪೫೦) ಮಠವನ್ನು ಸ್ಥಾಪಿಸಿದನು. ಇಲ್ಲಿ ಸ್ಥಾಪನೆಗೊಂಡ ಶ್ರೀ ಒಪ್ಪತ್ತೇಶ್ವರ ವಿರಕ್ತ ಮಠವು ಧಾರ್ಮಿಕ ಕಾರ್ಯಗಳನ್ನು ಪ್ರಾರಂಭಿಸಿ ಸಮಾಜವನ್ನು ಸನ್ಮಾರ್ಗದಲ್ಲಿ ನಡೆಸಿತು.

ನೂರೊಂದು ವಿರಕ್ತರಲ್ಲಿ ಒಬ್ಬರಾದ್ದ ಶ್ರೀ ಒಪ್ಪತ್ತೇಶ್ವರರು ಇಲ್ಲಿ ನೆಲೆಸಿ ಧಾರ್ಮಿಕ ಕಾರ್ಯಗಳನ್ನು ಕೈಗೊಂಡಿದ್ದರು. ಈ ಸಂದರ್ಭದಲ್ಲಿ ಶ್ರೀ ಸದಾಶಿವ ರಾಯನು ಗುರುಗಳಿಗೆ ಮಠವನ್ನು ಸ್ಥಾಪಿಸಿ, ಧಾರ್ಮಿಕ ಕಾರ್ಯಗಳು ನಡೆಯುವಂತೆ ವ್ಯವಸ್ಥೆ ಮಾಡಿ, ಅನೇಕ ದಾನ ದತ್ತಿಗಳನ್ನು ನೀಡಿದನು.

ಪರಂಪರೆ:

೧. ಶ್ರೀ ಮ.ನಿ.ಪ್ರ. ಗುರುಒಪ್ಪತ್ತೇಶ್ವರ ಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ತೋಂಟದಾರ್ಯ ಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಗುರುಒಪ್ಪತ್ತೇಶ್ವರ ಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ತೋಂಟದಾರ್ಯ ಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಗುರುಒಪ್ಪತ್ತೇಶ್ವರ ಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ತೋಂಟದಾರ್ಯ ಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಗುರುಒಪ್ಪತ್ತೇಶ್ವರ ಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ತೋಂಟದಾರ್ಯ ಸ್ವಾಮಿಗಳು
೯. ಶ್ರೀ ಮ.ನಿ.ಪ್ರ. ಗುರುಒಪ್ಪತ್ತೇಶ್ವರ ಸ್ವಾಮಿಗಳು
೧೦. ಶ್ರೀ ಮ.ನಿ.ಪ್ರ. ಚನ್ನಮಲ್ಲ ಸ್ವಾಮಿಗಳು
೧೧. ಶ್ರೀ ಮ.ನಿ.ಪ್ರ. ತೋಂಟದಾರ್ಯ ಸ್ವಾಮಿಗಳು
೧೨. ಶ್ರೀ ಮ.ನಿ.ಪ್ರ. ಗುರುಒಪ್ಪತ್ತೇಶ್ವರ ಸ್ವಾಮಿಗಳು
೧೩. ಶ್ರೀ ಮ.ನಿ.ಪ್ರ. ಮರಿಮಹಾಂತ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಈ ಮಠದ ಪರಂಪರೆಯ ಗುರುಗಳ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಸಂಡೂರು ಮತ್ತು ಯಶವಂತನಗರಗಳಲ್ಲಿನ ವಿರಕ್ತಮಠಗಳೊಂದಿಗೆ ಗರಗ-ನಾಗಲಾಪುರದ ಶ್ರೀ ಒಪ್ಪತ್ತೇಶ್ವರ ಮಠದ ಧಾರ್ಮಿಕ ಸಂಬಂಧವು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಸಂಡೂರು ಮಠದ ಶ್ರೀ ಪ್ರಭುಸ್ವಾಮಿಗಳು, ಯಶವಂತನಗರದ ಶ್ರೀ ಸಿದ್ಧರಾಮ ಸ್ವಾಮಿಗಳು ಮತ್ತು ನಾಗಲಾಪುರದ ಶ್ರೀ ಒಪ್ಪತ್ತೇಶ್ವರ ಸ್ವಾಮಿಗಳು ಒಟ್ಟಿಗೆ ಸೇರಿ ಸಂಚಾರ ಕೈಗೊಳ್ಳುತ್ತಿದ್ದರು. ಒಂದು ಬಾರಿ ಯಶವಂತನಗರದ ಶ್ರೀ ಸಿದ್ಧರಾಮ ಸ್ವಾಮಿಗಳು ಗರಗ-ನಾಗಲಾಪುರದ ಸಮೀಪವಿದ್ದ ಗುಡ್ಡದ ಬಿಲ್ವಪತ್ರೆ ಪೆಂಟೆಯಲ್ಲಿ ಅನುಷ್ಠಾನಕ್ಕೆ ಕುಳಿತಿದ್ದರಂತೆ. ಶ್ರೀ ಒಪ್ಪತ್ತೇಶ್ವರ ಸ್ವಾಮಿಗಳು ಮತ್ತು

ಭಕ್ತರು ವಾದ್ಯವೈಭವದಿಂದ ಅವರನ್ನು ನಾಗಲಾಪುರದ ತಮ್ಮ ಮಠಕ್ಕೆ ಆಹ್ವಾನಿಸುತ್ತಿದ್ದರಂತೆ. ಅಂದಿನಿಂದ ಈವರೆಗೂ ಪ್ರತಿವರ್ಷ ಶ್ರಾವಣಮಾಸದ ಮೂರನೆಯ ಸೋಮವಾರದಂದು ಆ ಪದ್ಧತಿ ನಡೆಯುತ್ತಿದೆ ಹಾಗೂ ಗಣಾರಾಧನೆಯ ಕಾರ್ಯಕ್ರಮವೂ ಕೂಡ ಜರುಗುತ್ತಿದೆ. ಸರ್ವಜನಾಂಗ ದವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದು ಒಂದು ವಿಶೇಷ. ಹರಪನಹಳ್ಳಿಯ ಸೋಮಶೇಖರನಾಯಕ, ನಾರಾಯಣ ದೇವರಕೆರೆಯ ಸೋಮಶೇಖರ ದೊರೆ ಈ ಮಠಕ್ಕೆ ನಡೆದುಕೊಳ್ಳುತ್ತಿದ್ದ ಬಗ್ಗೆ ವಿವರಗಳು ಸಿಗುತ್ತಿವೆ.

ಶಾಖಾಮಠಗಳು: ಮಗಿಮಾವಿನಹಳ್ಳಿ,ಹೊಳಲು,ಹೊಸದುರ್ಗ,ಗುಂಡಾ, ಕುರುವತ್ತಿ ಮುಂತಾದ ಕಡೆಗಳಲ್ಲಿ ಗರಗ-ನಾಗಲಾಪುರದ ಶ್ರೀ ಒಪ್ಪತ್ತೇಶ್ವರ ಮಠದ ಶಾಖಾಮಠಗಳಿವೆ. ಹದಿನೈದು ವರ್ಷಗಳ ಹಿಂದೆ ಗರಗ-ನಾಗಲಾಪುರ ಮಠದ ಆಡಳಿತವು ಅಸ್ತವ್ಯಸ್ತ ಗೊಂಡಾಗ ಅಲ್ಲಿಯ ಭಕ್ತಾಧಿಗಳು ತಮ್ಮ ಊರಿನ ಮಠವನ್ನು ಹೊಸಪೇಟೆಯ ಶ್ರೀ ಸಂಗನ ಬಸವ ಸ್ವಾಮಿಗಳ ಸನ್ನಿಧಿಗೆ ಬರೆದುಕೊಟ್ಟರು. ೧೯೮೮ರಲ್ಲಿ ಹೊಸಪೇಟೆಯ ಶ್ರೀ ಗುರು ಕೊಟ್ಟೂರುಸ್ವಾಮಿ ಮಠದ ಶ್ರೀ ಸಂಗನಬಸವ ಸ್ವಾಮಿಗಳು ಶ್ರೀ ಮರಿಮಹಾಂತ ಸ್ವಾಮಿಗಳನ್ನು ನಾಗಲಾಪುರದ ಮಠಕ್ಕೆ ನೇಮಿಸಿ, ಅಲ್ಲಿಯ ಆಡಳಿತ ವ್ಯವಸ್ಥೆಯನ್ನು ನಡೆಸುತ್ತಾ ಬಂದಿದ್ದಾರೆ.

ಶ್ರೀ ಮರಿಮಹಾಂತ ಸ್ವಾಮಿಗಳು ೧೯೯೩ರಲ್ಲಿ ಅಧಿಕಾರಕ್ಕೆ ಬಂದ ನಂತರ ಶ್ರೀ ಹಾನಗಲ್ ಕುಮಾರೇಶ್ವರ ಸಂಗೀತ ಪಾಠಶಾಲೆಯನ್ನು ಪ್ರಾರಂಭಿಸಿದ್ದಾರೆ. ಶ್ರೀಬಿದರಿ ಕುಮಾರೇಶ್ವರ ಶಿವಾನಂದ ಮಂಟಪವನ್ನು ೧೯೯೩ ರಲ್ಲಿ ಸ್ಥಾಪಿಸಿದ್ದಾರೆ. ಮಠದ ಜೀರ್ಣೋದ್ಧಾರ ಕಾರ್ಯವನ್ನು ಶ್ರೀ ಸಂಗನ ಬಸವ ಸ್ವಾಮಿಗಳ ಮಾರ್ಗದರ್ಶನ ಪಡೆದು ಪೂರ್ಣಗೊಳಿಸುತ್ತಿದ್ದಾರೆ.

ಧಾರ್ಮಿಕ ವೈಶಿಷ್ಟ್ಯಗಳು: ಬ್ರಹ್ಮ ಮತ್ತು ಈಶ್ವರ ದೇವಸ್ಥಾನಗಳು ಮಠದ ಸಮೀಪದಲ್ಲಿವೆ. ವಿಜಯನಗರದ ರಾಜಲಾಂಛನ ಮಠದ ಗೋಡೆಯಲ್ಲಿ ಇದ್ದಿತಂತೆ. ಅದರ ಹಿಂದೆ ಬಂಗಾರ ಇರಬಹುದೆಂದು ಭ್ರಮಿಸಿ ಯಾರೋ ದುಷ್ಕರ್ಮಿಗಳು ಅದನ್ನು ಒಡೆದು ಹಾಳು ಮಾಡಿದ್ದಾರೆ ಎಂದು ಈಗಿನ ಗುರುಗಳು ಹೇಳುತ್ತಾರೆ. ವಿರಕ್ತ ಮಠಗಳಲ್ಲಿ ಸ್ತ್ರೀ ದೇವತೆಗಳಿಗೆ ಆದ್ಯತೆ ಇರುವುದು ಒಂದು ವಿಶೇಷ. ಸಂಡೂರಿನ ಮಠದಲ್ಲಿ ತಾಯಮ್ಮದೇವಿಯಮೂರ್ತಿ ಇದ್ದಂತೆ ನಾಗಲಾಪುರ ಮಠದಲ್ಲಿ ಮಹಾಲಕ್ಷ್ಮೀದೇವಿಯ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಊರಿಗೆ ಕಾಟಕೊಡುವ ಬ್ರಹ್ಮರಾಕ್ಷಸವೊಂದನ್ನು ಶ್ರೀಒಪ್ಪತ್ತೇಶ್ವರ ಸ್ವಾಮಿಗಳು ತಮ್ಮ ಮಹಿಮೆಯಿಂದ ಮಹಾಲಕ್ಷ್ಮಿಯನ್ನಾಗಿಸಿ ಮಠದಲ್ಲಿಯೇ ಉಳಿಯುವಂತೆ ಆಶೀರ್ವದಿಸಿದರಂತೆ.

ಪ್ರತಿವರ್ಷ ಫಾಲ್ಗುಣ ಮಾಸದಲ್ಲಿ ಶ್ರೀ ಒಪ್ಪತ್ತೇಶ್ವರ ಸ್ವಾಮಿಗಳ ರಥೋತ್ಸವವು ವಿಜೃಂಭಣೆಯಿಂದ ಜರುಗುತ್ತಿದೆ. ಪ್ರತಿವರ್ಷ ನವರಾತ್ರಿ ಹಬ್ಬದ ಸಮಯದಲ್ಲಿ ಹದಿನೈದರಿಂದ ಇಪ್ಪತ್ತು ದಿವಸ ಪುರಾಣ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಶ್ರಾವಣಮಾಸದಲ್ಲಿ ವಿಶೇಷ ಪೂಜಾಕಾರ್ಯ ನಡೆಯುತ್ತಿದೆ. ಮಾರ್ಗಶಿರ ಮಾಸದಲ್ಲಿ ಕಾರ್ತೀಕೋತ್ಸವವು ವೈಭವದಿಂದ ಜರುಗು ತ್ತಿದೆ. ಸುತ್ತಮುತ್ತಲಿನ ಊರುಗಳ ಭಕ್ತಾಧಿಗಳು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಭಕ್ತಿಯನ್ನು ಅರ್ಪಿಸುತ್ತಾರೆ. ಶ್ರೀ ಒಪ್ಪತ್ತೇಶ್ವರ ಸ್ವಾಮಿಗಳು ಸಮಾಧಿಹೊಂದಿದ್ದು, ಹೊಸಪೇಟೆಯ ಹತ್ತಿರದ ರಾಯಕೆರೆ ಎಂಬಲ್ಲಿ ಉತ್ಸವದ ದಿನದಂದು ದರ್ಶನ ಕೊಡುತ್ತಾರೆಂಬುದು ಈಗಿನ ಭಕ್ತಾಧಿಗಳ ನಂಬಿಕೆಯಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಮರಿಮಹಾಂತ ಸ್ವಾಮಿಗಳು, ಶ್ರೀ ಒಪ್ಪತ್ತೇಶ್ವರ ವಿರಕ್ತಮಠ, ಗರಗ-ನಾಗಲಾಪುರ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ.

ಆಧಾರ: 'ಪ್ರಭು ಪ್ರಕಾಶ' ಸ್ಮರಣ ಸಂಚಿಕೆ

ಯಶವಂತನಗರ

ಸಂಡೂರು ತಾಲ್ಲೂಕಿನ ಯಶವಂತನಗರವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಸಿದ್ಧರಾಮೇಶ್ವರ ಮಠವು ಅಸ್ತಿತ್ವದಲ್ಲಿದೆ.

ಸಿದ್ಧರಾಮೇಶ್ವರಮಠ: ಯಶವಂತನಗರ ಗ್ರಾಮದಲ್ಲಿ ೩೦೦ವರ್ಷಗಳ ಹಿಂದೆ ಸ್ಥಾಪನೆಯಾದ ಶ್ರೀ ಸಿದ್ಧರಾಮೇಶ್ವರ

ಮಠವು, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕೇಂದ್ರ ಬಿಂದುವಾಗಿ ಬೆಳೆದಿದೆ.

ಈ ಗ್ರಾಮಕ್ಕೆ ಪೂರ್ವದಲ್ಲಿ 'ಕಣಿವೆಹಳ್ಳಿ'ಎಂಬ ಹೆಸರಿದ್ದು, ಇತ್ತೀಚೆಗೆ'ಯಶವಂತನಗರ'ಎಂಬ ಹೆಸರು ಬಂದಿದೆ ಎಂದು ಇಲ್ಲಿನ ಸ್ಥಳೀಯರು ಹೇಳುತ್ತಾರೆ. ಈ ಗ್ರಾಮವು ಗುಡ್ಡಬೆಟ್ಟಗಳಿಂದ ಆವೃತವಾಗಿದೆ. ಸೀಗೆ ಪೊದೆಗಳು ಆವರಿಸಿದ್ದ ಪ್ರದೇಶದಲ್ಲಿ ದನಗಳನ್ನು ಮೇಯಿಸಲು ಮಾತ್ರ ಜನರು ಹೋಗುತ್ತಿದ್ದರು. ಇಂತಹ ನಿರ್ಜನ ಪ್ರದೇಶದಲ್ಲಿ ಹಸುವೊಂದು ಸೀಗೆ ಪೊದೆಯ ಹತ್ತಿರ ಹೋಗಿ ಹಾಲು ಕರೆದು ಬರುತ್ತಿತ್ತು. ಇದನ್ನು ನೋಡಿದ ದನ ಕಾಯುವಾತ ಬಂಜೆಯಾಗಿದ್ದ ಹಸು ಈ ರೀತಿ ಹಾಲು ಕರೆಯುತ್ತದೆ ಎಂದರೆ ಈ ಸ್ಥಳದಲ್ಲಿ ಏನೋ ಮಹಾತ್ಮೆ ಇರಬೇಕು ಎಂದು ತಿಳಿದು, ಕಣಿವೆಹಳ್ಳಿಯ (ಯಶವಂತನಗರ) ಜನರಿಗೆ ತಿಳಿಸಿದನು. ಜನರು ಈ ಮಹಾತ್ಮೆಯ ಸ್ಥಳಕ್ಕೆ ಆಗಮಿಸಿ ನೋಡಿದಾಗ ತಪಸ್ವಿಗಳೊಬ್ಬರು ತಪೋಮಗ್ನರಾಗಿ ಕುಳಿತಿರುವುದನ್ನು ಗಮನಿಸುತ್ತಾರೆ. ಗುರುಗಳ ತಪೋಭಂಗವಾಗಬಾರದೆಂದು ಎಚ್ಚರವಾಗುವವರೆಗೆ ಕಾದು ಎಚ್ಚರಗೊಂಡ ಮೇಲೆ ಗುರುಗಳ ಆಶೀರ್ವಾದ ಪಡೆದು ಕೃಪೆಗೆ ಒಳಗಾಗುತ್ತಾರೆ. ದಿನ ಕಳೆದಂತೆ ಗುರುಗಳು ಮತ್ತು ಭಕ್ತರ ಒಡನಾಟ ಹೆಚ್ಚಾಗಿ ಈ ಜಾಗದಲ್ಲಿ ಮಠವನ್ನು ಕಟ್ಟಿಸಿಕೊಡುತ್ತಾರೆ.

ಈ ಮಠದ ಮೊದಲ ಗುರುಗಳು ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳು ಆಗಿದ್ದ ಕಾರಣ ಈ ಮಠಕ್ಕೆ 'ಶ್ರೀ ಸಿದ್ಧ ರಾಮೇಶ್ವರ ಮಠ' ಎಂದು ನಾಮಕರಣಮಾಡಿ ಮಠವನ್ನು ಮುನ್ನಡೆಸಿದ್ದಾರೆ. ಇವರ ನಂತರ ಶ್ರೀ ಸಂಗನಬಸವ ಸ್ವಾಮಿಗಳು ಅಧಿಕಾರಕ್ಕೆ ಬಂದಿದ್ದಾರೆ. ಇವರ ಕಾಲದಲ್ಲಿ ಮಠವು ಹೆಚ್ಚು ಪ್ರಚಾರಕ್ಕೆ ಒಳಗಾಗಿ ಮಠದ ಸುತ್ತ ಮುತ್ತಲ ಗ್ರಾಮಸ್ಥರು ಮಠಕ್ಕೆ ಜಮೀನನ್ನು ಬಿಟ್ಟುಕೊಡುತ್ತಾರೆ. ಮಠದಲ್ಲಿ ನಡೆಯುವ ಸಿದ್ಧರಾಮೇಶ್ವರ ರಥೋತ್ಸವಕ್ಕಾಗಿ ನೂತನ ರಥವನ್ನು ನಿರ್ಮಿಸಿದ್ದಾರೆ. ಇವರ ಕಾಲದಲ್ಲಿ ಮಠವು ಹೆಚ್ಚು ಅಭಿವೃದ್ಧಿಯನ್ನು ಕಂಡಿದೆ. ಸಂಡೂರಿನ ಮಹಾರಾಜರು ಈ ಮಠದ ಅಭಿವೃದ್ಧಿಗೆ ಭೂಮಿಯನ್ನು ಇನಾಂ ನೀಡಿದ್ದಾರೆ. ಶ್ರೀ ಸಂಗನಬಸವ ಸ್ವಾಮಿಗಳ ಕಾಲದಲ್ಲಿ ಮಠದ ಕರ್ತೃಗುರುಗಳಾದ ಶ್ರೀ ಸಿದ್ಧೇಶ್ವರ ಸ್ವಾಮಿಗಳ ಗದ್ದುಗೆಗೆ ಉತ್ತರಾಭಿಮುಖವಾಗಿ ಮಠವನ್ನು ನವೀಕರಿಸಿ ಭವ್ಯವಾಗಿ ನಿರ್ಮಿಸಿದ್ದಾರೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಸಿದ್ಧರಾಮೇಶ್ವರ ಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಸಂಗನಬಸವ ಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಮೌನಸಿದ್ಧರಾಮ ಸ್ವಾಮಿಗಳು

ಈ ರೀತಿ ಮೂರು ಜನ ಗುರುಗಳ ಹೆಸರುಗಳು ಮಾತ್ರ ಕೇಳಿಬರುತ್ತಿವೆ. ರಾಯಚೂರು ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಜಾಲಿಹಾಳು ಕಡೆಯಿಂದ ಸಂಚಾರಕ್ಕೆ ಬಂದ ಶ್ರೀ ಮೌನ ಸಿದ್ಧರಾಮ ಸ್ವಾಮಿಗಳು (೧೯೫೦) ಈ ಊರಿಗೆ ಬಂದು ಮಠದಲ್ಲಿ ನೆಲೆಸಿ, ಮಠವನ್ನು ಹೆಚ್ಚು ಅಭಿವೃದ್ಧಿಗೆ ತಂದರು.ಮಠವನ್ನು ವಿಸ್ತರಿಸಿ ಧಾರ್ಮಿಕ ಚಟುವಟಿಕೆಗಳನ್ನು ಹೆಚ್ಚಿಸಿದ್ದಲ್ಲದೆ ಸಾಮೂಹಿಕ ವಿವಾಹ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ತಪ್ಪದೆ ಮಾಡುತ್ತಾ, ಹೆಸರು ಮಾಡಿ ೧೯೬೫ರಲ್ಲಿ ಲಿಂಗೈಕ್ಯರಾದರು. ಈ ಮಠಕ್ಕೆ ಇಪ್ಪತ್ತಮೂರು ಎಕರೆ ಜಮೀನಿದ್ದು ಇದರಲ್ಲಿ ಒಂಬತ್ತು ಎಕರೆಗೆ ನೀರಾವರಿ ಸೌಲಭ್ಯ ಇದೆ. ನಾಗಲಾಪುರ ಮತ್ತು ಕೊಟ್ಟೂರಿನ ಶಾಖಾಮಠಗಳಲ್ಲೂ ಈ ಮಠಕ್ಕೆ ಜಮೀನು ಇದೆ. ಶ್ರೀ ಮೌನ ಸಿದ್ಧರಾಮೇಶ್ವರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಗ್ರಾಮಸ್ಥರು ಸಮಿತಿಯನ್ನು ರಚಿಸಿಕೊಂಡಿದ್ದು, ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ಮಠಕ್ಕೆ ಉತ್ತರಾಧಿಕಾರಿಗಳನ್ನು ನೇಮಿಸುವ ಸಿದ್ಧತೆಯಲ್ಲಿದ್ದಾರೆ.

ವಿಳಾಸ: ಶ್ರೀ ಸಿದ್ಧರಾಮೇಶ್ವರ ವಿರಕ್ತಮಠ, ಯಶವಂತ ನಗರ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ.

ಸಂಡೂರು

ಬಳ್ಳಾರಿ ಜಿಲ್ಲೆಯ ಸಂಡೂರು ಜಿಲ್ಲಾ ಕೇಂದ್ರದಿಂದ ನೈರುತ್ಯಕ್ಕೆ ಇಪ್ಪತ್ತೆಂಟು ಕಿ.ಮೀ ದೂರದಲ್ಲಿದೆ. ತಾಲ್ಲೂಕು ಕೇಂದ್ರವಾದ ಸಂಡೂರು ಐತಿಹಾಸಿಕ ಸ್ಥಳವಾಗಿದೆ. ಹಿಂದೆ ಸ್ಕಂದಪುರಿ, ಸಂದೂರು, ಚಂಡೂರು ಎಂಬ ಹೆಸರು ಪಡೆದಿತ್ತೆಂದು ಹೇಳುವ ಸ್ಥಳನಾಮಗಳ ಬಗ್ಗೆ ಹಲವು ಉಲ್ಲೇಖ ದೊರೆಯುತ್ತಿವೆ. ೧೭೦೬ರ ಶಾಸನ ಒಂದರಲ್ಲಿ ಇದನ್ನು'ಸಂಡೂರು'

ಎಂದು ಸ್ಪಷ್ಟವಾಗಿ ಕರೆಯಲಾಗಿದೆ.ಅನಾದಿಕಾಲದಿಂದಲೂ ಈ ಊರಿಗೆ ಸಂಡೂರು ಎಂದು ಕರೆಯಲಾಗಿತ್ತೆಂದು ಸ್ಪಷ್ಟವಾಗುತ್ತದೆ.

ಸಂಡೂರಿನ ಈ ಇತಿಹಾಸ ಪ್ರಸಿದ್ಧ ಕ್ಷೇತ್ರ ಮರಳುಗಾಡಿನ ಓಯಸಿಸ್ ಇದ್ದ ಹಾಗೆ. ಏಕೆಂದರೆ ಬಳ್ಳಾರಿ ಜಿಲ್ಲೆಯು ಬಿಸಿಲಿನ ಬೇಗೆಯಿಂದ ಬೇಯುವ ಅಪ್ಪಟ ಬಯಲು ನಾಡಾಗಿದ್ದು, ಈ ಬಯಲು ಜಿಲ್ಲೆಯಲ್ಲಿ ಸಂಡೂರು ಪಟ್ಟಣದ ಸುತ್ತಮುತ್ತ ಮಲೆನಾಡಿನ ವಾತಾವರಣವಿರುವುದು ಸೃಷ್ಟಿಯ ವೈಚಿತ್ರಗಳಲ್ಲಿ ಒಂದು. ಇಂತಹ ವಿಶೇಷತೆ ಪಡೆದ ಈ ಐತಿಹಾಸಿಕ ಪಟ್ಟಣದಲ್ಲಿ ಶ್ರೀ ಪ್ರಭುದೇವರ ಸಂಸ್ಥಾನ ವಿರಕ್ತ ಮಠ ಮತ್ತು ಶ್ರೀ ಮೌನ ಶರಣ ಮಠಗಳು ಸ್ಥಾಪನೆಗೊಂಡಿವೆ.

ಪ್ರಭುದೇವರ ಸಂಸ್ಥಾನ ವಿರಕ್ತಮಠ: ಸಂಡೂರಿನ ಊರಮಧ್ಯೆ ಸ್ಥಾಪಿತವಾಗಿರುವ ವಿರಕ್ತ ಮಠವು ೧೬೭೫ ರಿಂದ ೧೭೨೫ ರ ಒಳಗಿನ ಕಾಲಮಾನದಲ್ಲಿ ಸ್ಥಾಪಿತವಾಗಿರಬಹುದೆಂದು ಸಂಶೋಧಕರು ಸ್ಪಷ್ಟಪಡಿಸಿರುವುದರಿಂದ ಈ ಮಠಕ್ಕೆ ಸುಮಾರು ೩೦೦ವರ್ಷಗಳ ಇತಿಹಾಸ ಇದೆ. ಶ್ರೀ ಅರ್ಧನಾರೀಶ್ವರರ ಕಾಲದಲ್ಲಿ ಈ ಮಠ ಸ್ಥಾಪನೆಯಾಗಿದೆ. ಶ್ರೀ ಪ್ರಭುಸ್ವಾಮಿಗಳು ಈ ಮಠದ ಸ್ಥಾಪಕರಾದ ಕಾರಣ 'ಪ್ರಭುದೇವರ ವಿರಕ್ತಮಠ 'ಎಂಬ ಹೆಸರು ಬಂದಿದೆ. ವಿರಕ್ತ ಸಂಪ್ರದಾಯದ ಚೀಲಾಳ ಸಮಯದ ಈ ಮಠವು ಧಾರ್ಮಿಕವಾಗಿ ಹೆಸರುಪಡೆದಿದೆ. ಶ್ರೀ ಅರ್ಧನಾರೀಶ್ವರರಿಂದ ಅನುಗ್ರಹ ಪಡೆದು ಅಧಿಕಾರ ಸ್ವೀಕರಿಸಿದ ಶ್ರೀ ಪ್ರಭು ಸ್ವಾಮಿಗಳು ಈ ಭಾಗದಲ್ಲಿ ವೀರಶೈವ ಧರ್ಮವನ್ನು, ಪ್ರಚಾರಪಡಿಸಿ ಸಂಸ್ಕಾರವಂತ ಸಮಾಜವನ್ನು ಬೆಳೆಸಿದರು.

ಪರಂಪರೆ:

೧. ಶ್ರೀ ಮ.ನಿ.ಪ್ರ. ಪ್ರಭು ಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಹುಚ್ಚಪ್ರಭು ಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ವೀರಯ್ಯ ಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ನಾಗಯ್ಯ ಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ವಿಜಯ ಮಹಾಂತ ಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಮಲ್ಲಿಕಾರ್ಜುನ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಮಠದಲ್ಲಿ ಈಗಿನ ಗುರುಗಳು ಸೇರಿದಂತೆ ಏಳು ಜನ ಗುರುಗಳು ಅಧಿಕಾರ ನಡೆಸಿದ್ದಾರೆ ಎಂದು ಹೇಳಲಾಗುತ್ತಿದೆ.ಇದಕ್ಕೆ ಪೂರಕವೆಂಬಂತೆ ಮಠದಲ್ಲಿ ಆರು ಗದ್ದುಗೆಗಳು ನೋಡಸಿಗುತ್ತಿವೆ. ಆದರೆ ಒಬ್ಬರು ಗುರುಗಳ ಹೆಸರು ಲಭ್ಯವಿಲ್ಲ. ಈ ವಿರಕ್ತ ಮಠಕ್ಕೆ ಶ್ರೀ ಪ್ರಭುಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ಲಭ್ಯವಿಲ್ಲ. ೧೭೨೫ ರಿಂದ ೧೯೧೦ರ ವರೆಗೆ ಪರಂಪರೆಯ ಬಗ್ಗೆ ಮಾಹಿತಿಗಳು ಲಭ್ಯವಿಲ್ಲ. ಪರಂಪರೆಯ ಗುರುಗಳಾದ ಶ್ರೀ ಹುಚ್ಚಪ್ರಭು ಸ್ವಾಮಿಗಳು ಪವಾಡ ಪುರುಷರಾಗಿ ನಾಡಲ್ಲೆಲ್ಲಾ ಸಂಚರಿಸಿ ಧರ್ಮಪ್ರಚಾರವನ್ನು ಮಾಡಿ, ಪುನಃ ಸಂಡೂರಿಗೆ ಬಂದು ೧೯೨೦ ರಲ್ಲಿ ಲಿಂಗೈಕ್ಯರಾದರು. ನಂತರ ಶ್ರೀ ವೀರಯ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದರು. ಇವರು ಕಾಯಕಯೋಗಿಗಳಾಗಿ ದುಡಿದು ಇತರರಿಗೆ ಆದರ್ಶಪ್ರಾಯರಾಗಿದ್ದರು. ಸಂಜೆಯ ವೇಳೆ ಭಕ್ತರನ್ನೆಲ್ಲಾ ಸೇರಿಸಿ ಧರ್ಮೋಪದೇಶವನ್ನು ನೀಡುತ್ತಿದ್ದರು. ಶಿವಶರಣರ ಕಥೆಗಳನ್ನು ಹೇಳಿ ಜನರನ್ನು ಜಾಗೃತರನ್ನಾಗಿ ಮಾಡುತ್ತಿದ್ದರಂತೆ. ಇವರ ಕಾಲದಲ್ಲಿ ಅನ್ನದಾಸೋಹ ವ್ಯವಸ್ಥಿತವಾಗಿ ನಡೆಯುತ್ತಿತ್ತು ಎಂದು ಹೇಳಲಾಗುತ್ತಿದೆ.

ಜ್ಞಾನದ ಜ್ಯೋತಿ: ಶ್ರೀ ವೀರಯ್ಯ ಸ್ವಾಮಿಗಳ ನಂತರ ಕಿನ್ನಾಳ ಗ್ರಾಮದವರಾದ ಶ್ರೀ ನಾಗಯ್ಯಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡು, ಹಿರಿಯ ಗುರುಗಳು ನಡೆಸುತ್ತಿದ್ದ ಕಾಯಕಯೋಗ ಮತ್ತು ಅನ್ನದಾಸೋಹವನ್ನು ಮುಂದುವರೆಸಿದರು. ಮಠದಲ್ಲಿ ಹಿಂದೆ ನಡೆಯುತ್ತಿದ್ದ ಪ್ರವಚನ ಕಾರ್ಯವನ್ನು ವ್ಯವಸ್ಥಿತವಾಗಿ ಮುಂದುವರೆಸತೊಡಗಿದರು. ಮಠದಲ್ಲಿ ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಿ ಉದ್ದಾನಯ್ಯ ಮತ್ತು ಬಸಯ್ಯ ಶಾಸ್ತ್ರಿಗಳನ್ನು ನಿಯೋಜಿಸಿಕೊಂಡರು ಎಂದು ಮಠದ ಇತಿಹಾಸದಿಂದ ತಿಳಿಯುತ್ತಿದೆ. ಅನ್ನದಾಸೋಹ ಮತ್ತು ಜ್ಞಾನದಾಸೋಹವನ್ನು ನೀಡತೊಡಗಿದರು.

ಖಾಲಿ ಉಳಿದ ಮಠ: ಶ್ರೀ ನಾಗಯ್ಯ ಸ್ವಾಮಿಗಳ ನಂತರ ಮಠಕ್ಕೆ ಸೂಕ್ತ ಉತ್ತರಾಧಿಕಾರಿಗಳನ್ನು ಆಯ್ಕೆ ಮಾಡದೆ ಇದ್ದ ಕಾರಣ ಅನೇಕ ವರ್ಷಗಳ ಕಾಲ ಮಠವು ಖಾಲಿ ಉಳಿಯಿತು. ಈ ಸಂದರ್ಭದಲ್ಲಿ ಭಕ್ತರು ಮಠದ ಆಡಳಿತವನ್ನು ನೋಡಿಕೊಂಡು

ದಸರಾ ಸಂದರ್ಭದಲ್ಲಿ ಪುರಾಣ ಪ್ರವಚನಗಳನ್ನು ಏರ್ಪಡಿಸುವುದು, ಗದ್ದುಗೆಗಳಿಗೆ ಪೂಜಾಕಾರ್ಯ ಮುಂತಾದ ಧಾರ್ಮಿಕ ಕಾರ್ಯಗಳನ್ನು ನಡೆಸತೊಡಗಿದರು. ವ್ಯವಸ್ಥಿತವಾಗಿ ಮಕ್ಕಳಿಗೆ ವಿದ್ಯಾದಾನ ಮಾಡುತ್ತಿದ್ದ ಮಠದಲ್ಲಿ ಧಾರ್ಮಿಕ ಗುರುಗಳು ಇಲ್ಲದಿರುವುದು ಮಠದ ಭಕ್ತರಿಗೆ ವ್ಯಥೆಯಾಯಿತು.

೧೯೬೯ ರಲ್ಲಿ ಶಿವಯೋಗ ಮಂದಿರದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಶ್ರೀ ವಿಜಯಮಹಾಂತ ಸ್ವಾಮಿಗಳನ್ನು ಆಯ್ಕೆ ಮಾಡಿಕೊಂಡು ಸಂಡೂರಿಗೆ ಕರೆತಂದರು. ಮರಿದೇವರು ವಿದ್ಯಾಭ್ಯಾಸದ ಬಗ್ಗೆ ಹೆಚ್ಚು ಆಸಕ್ತಿಹೊಂದಿದ್ದ ಕಾರಣ ವೀರಶೈವ ಸಮಾಜವು ಸ್ವಾಮಿಗಳು ವಿದ್ಯಾಸಂಪನ್ನರಾದರೆ ಸಮರ್ಥ ಆಡಳಿತವನ್ನು ನೀಡಬಲ್ಲರು ಎಂಬ ಆಶಾಭಾವನೆಯಿಂದ ಗುರುಗಳನ್ನು ಪುನಃ ಮೈಸೂರು ಮತ್ತು ಕಾಶಿಯಲ್ಲಿ ಉನ್ನತ ಶಿಕ್ಷಣ ಕಲಿಯಲು ಕಳುಹಿಸಿಕೊಟ್ಟರು.

ಉನ್ನತ ಶಿಕ್ಷಣವನ್ನು ಪಡೆದು ಮಠಕ್ಕೆ ಬಂದು ಅಧಿಕಾರವನ್ನು ನೋಡಿಕೊಳ್ಳತೊಡಗಿದ ಶ್ರೀ ವಿಜಯಮಹಾಂತ ಸ್ವಾಮಿಗಳು ಉತ್ಸಾಹ ತೋರದೆ ೧೯೮೪ರಲ್ಲಿ ಮಠವನ್ನು ತ್ಯಜಿಸಿದರು. ಇದರಿಂದ ಮಠವು ಉತ್ತರಾಧಿಕಾರಿಗಳಿಲ್ಲದೆ ಖಾಲಿ ಉಳಿಯಿತು. ಪುನಃ ಇಲ್ಲಿನ ವೀರಶೈವ ಮಹಾಸಭೆ ಮತ್ತು ಗದುಗಿನ ಶ್ರೀ ತೋಂಟದಾರ್ಯ ಸ್ವಾಮಿಗಳು ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳನ್ನು ಪಟ್ಟಾಧಿಕಾರಕ್ಕೆ ತರಲು ನಿರ್ಧರಿಸಿದರು.

ಚೈತನ್ಯಮೂರ್ತಿ: ಧಾರವಾಡ ಜಿಲ್ಲೆ ಕುಂದಗೋಳ ತಾಲ್ಲೂಕಿನ ಬದದ್ವಾಡ ಗ್ರಾಮದ ಹಿರೇಮಠದ ಶ್ರೀ ಶೇಖರಯ್ಯ ಮತ್ತು ಶ್ರೀಮತಿ ಪಾರ್ವತಮ್ಮನವರ ಮಗನಾಗಿ ೧೯೫೯ ರ ಜೂನ್ ಒಂದರಂದು ಜನಿಸಿದ ಮಲ್ಲಿಕಾರ್ಜುನಯ್ಯನವರು, ಇಂಗಳಳ್ಳಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿ ಹುಬ್ಬಳ್ಳಿಯ ಮೂರುಸಾವಿರ ಮಠದಲ್ಲಿ ಪ್ರೌಢ ಶಿಕ್ಷಣವನ್ನು ಮುಗಿಸಿದರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಪೀಠದಲ್ಲಿ ಎಂ.ಎ.ಪದವಿಯನ್ನು ಪಡೆದರು. ಚೈತನ್ಯಮೂರ್ತಿಗಳಾಗಿದ್ದ ಶ್ರೀ ಮಲ್ಲಿಕಾರ್ಜುನಯ್ಯನವರನ್ನು ಗುರುತಿಸಿದ ಗದುಗಿನ ಶ್ರೀ ತೋಂಟದಾರ್ಯ ಸ್ವಾಮಿಗಳು ಅನೇಕ ಜವಾಬ್ದಾರಿಯ ಕೆಲಸಗಳನ್ನು ಕೊಟ್ಟು ಅನುಭವವನ್ನುಗಳಿಸಿಕೊಳ್ಳಲು ಅನುವು ಮಾಡಿಕೊಟ್ಟರು. ನಂತರ ೧೯೮೪ ರಲ್ಲಿ ಸಂಡೂರಿಗೆ ಕರೆತಂದು, ೧೯೯೪ ರ ಮೇ ಹದಿನಾರರಂದು ಪಟ್ಟಾಧಿಕಾರವನ್ನು ಮಾಡಿದರು.

ಅಭಿವೃದ್ಧಿ ಕಾರ್ಯಗಳು: ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು, ಮಠದ ಜಮೀನನ್ನು ಅಭಿವೃದ್ಧಿ ಪಡಿಸಲು ಮುಂದಾದರು. ತಾರಾನಗರ, ವಡ್ಡು, ಚಿಮ್ಮನಹಳ್ಳಿ, ಉಳ್ಳಲಗಂಡಿ, ಗೌರೀಪುರ, ತೋರಣಗಲ್ಲು, ದೌಲತ್‌ಪುರ, ನೆಲ್ಕುದ್ರಿ, ಹಗರಿಬೊಮ್ಮನಹಳ್ಳಿ ಹಾಗೂ ದಶಮಾಪುರ ಮುಂತಾದ ಕಡೆಗಳಲ್ಲಿ ಜಮೀನು ಹಾಗೂ ನಿವೇಶನಗಳಿದ್ದು ಅವುಗಳನ್ನೆಲ್ಲಾ ವ್ಯವಸ್ಥಿತವಾಗಿ ಅಭಿವೃದ್ಧಿಪಡಿಸಿ ಆದಾಯದ ಮೂಲವನ್ನು ಮಾಡಿಕೊಂಡರು.

ಸಮಷ್ಟಿ ಸಮಾಜದ ಒಳಿತಿಗಾಗಿ ಕಾರ್ಯಕ್ರಮವನ್ನು ರೂಪಿಸಿಕೊಂಡು ಒಂದೊಂದನ್ನೇ ಕಾರ್ಯಗತ ಮಾಡುತ್ತಾ ಬಂದಿದ್ದಾರೆ. ಹಳೇ ಮಠವನ್ನು ನವೀಕರಿಸಿ ಅಗತ್ಯಕ್ಕೆ ತಕ್ಕಷ್ಟು ವಿಸ್ತರಿಸಿಕೊಂಡಿದ್ದಾರೆ. ಮಠದ ಆವರಣದಲ್ಲಿರುವ ಆರು ಗದ್ದುಗೆಗಳಿಗೆ ಮಂಟಪವನ್ನು ನಿರ್ಮಿಸಿದ್ದಾರೆ.

ಸಾಮಾಜಿಕ ಕಾರ್ಯಗಳು: ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಸಿದ್ಧಲಿಂಗ ಶಾಸ್ತ್ರಿಗಳ ಸ್ಮಾರಕ ಗ್ರಂಥಾಲಯವನ್ನು ಸ್ಥಾಪಿಸಿದರು. ಅಕ್ಕಮಹಾದೇವಿ ಹೊಲಿಗೆ ಕೇಂದ್ರವನ್ನು ಸ್ಥಾಪಿಸಿ ನೂರಾರು ಮಹಿಳೆಯರಿಗೆ ಗೃಹ ಕೈಗಾರಿಕೆಗೆ ಪ್ರೋತ್ಸಾಹವನ್ನು ನೀಡಿದ್ದಾರೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಯನ್ನು ಪ್ರಾರಂಭಿಸಿದ್ದಾರೆ. ಹತ್ತು ಜನ ಕಲಿಯುವ ಬಡ ಮಕ್ಕಳಿಗೆ ಮಠದಲ್ಲಿ ಆಶ್ರಯ ಕೊಟ್ಟು, ಉಚಿತವಾಗಿ ಊಟ ಮತ್ತು ವಸತಿಯನ್ನು ಕಲ್ಪಿಸಿದ್ದಾರೆ. ನಿತ್ಯ ಮಠಕ್ಕೆ ಬರುವ ಭಕ್ತರಿಗೆ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಿಸಲಾಗಿದೆ. ಬಹಳ ವರ್ಷಗಳಿಂದ ಮಠಾಧಿಕಾರಿಗಳಿಲ್ಲದೆ ಗ್ರಹಣ ಹಿಡಿದಿದ್ದ ಮಠಕ್ಕೆ ಜ್ಯೋತಿಯಾಗಿ ಬಂದು, ತಮ್ಮ ಕ್ರಿಯಾಶೀಲತೆಯಿಂದ ಕೇವಲ ಕೆಲವೇ ವರ್ಷಗಳಲ್ಲಿ ಪ್ರಬುದ್ಧತೆಯನ್ನು ಸಾಧಿಸಿದ್ದಾರೆ.

ವಿಳಾಸ:ಶ್ರೀ ಮ.ನಿ.ಪ್ರ. ಮಲ್ಲಿಕಾರ್ಜುನ ಸ್ವಾಮಿಗಳು, ಶ್ರೀ ಪ್ರಭುಸ್ವಾಮಿ ಸಂಸ್ಥಾನ ವಿರಕ್ತಮಠ, ಸಂಡೂರು, ಬಳ್ಳಾರಿ ಜಿಲ್ಲೆ.
ಆಧಾರ: 'ಪ್ರಭು ಪ್ರಕಾಶನ' ಸ್ಮರಣ ಸಂಚಿಕೆ

ಮೌನಶರಣರಮಠ: ಸಂಡೂರಿನ ನಾರಿಹಳ್ಳದ ದಂಡೆಯ ಮೇಲೆ ಮೌನಶರಣರ ಮಠವು ಸ್ಥಾಪನೆಯಾಗಿದೆ. ರಾಯಚೂರು ತಾಲ್ಲೂಕಿನ ದೇವಸೂಗೂರು ಗ್ರಾಮದಲ್ಲಿ ಜನಿಸಿದ ಬಸವರಾಜ ಸ್ವಾಮಿಗಳು ಬಸವಪುರಾಣ, ಸಿದ್ಧಾಂತ ಶಿಖಾಮಣಿ ಮತ್ತು ವೀರಶೈವ ಆಚಾರಗಳ ಬಗ್ಗೆ ವಿಶೇಷವಾದ ಅನುಭವವನ್ನು ಪಡೆದವರಾಗಿದ್ದರು. ಮನೆಯಲ್ಲಿ ನಡೆದ ಒಂದು ಕಹಿ ಘಟನೆಗೆ ಬೇಸತ್ತು ಲೋಕಸಂಚಾರ ಕೈಗೊಂಡು ಮೌನವ್ರತವನ್ನು ಆಚರಿಸುತ್ತಾ 'ಶ್ರೀ ಮೌನಶರಣರೆಂಬ' ಹೆಸರು ಪಡೆದು ಇಲ್ಲಿಗೆ ಬಂದು ನೆಲೆಸಿದರು.

ಇಲ್ಲಿ ನೆಲೆ ನಿಂತ ಶ್ರೀ ಮೌನಶರಣರು, ಸಂಡೂರು ಮತ್ತು ಕೃಷ್ಣ ನಗರದ ಮಧ್ಯದ ನಾರಿಹಳ್ಳದ ದಡದಲ್ಲಿ ೧೯೬೦ರಲ್ಲಿ ಮಠವನ್ನು ನಿರ್ಮಿಸಿದರು. ನಿತ್ಯ ಪೂಜೆ ಪುನಸ್ಕಾರ, ಭಕ್ತರಿಗೆ ಆಶೀರ್ವಾದ ಮಾಡುವುದು ಶರಣರ ಕಾಯಕವಾಗಿತ್ತು. ಬಸವಜಯಂತಿಯಲ್ಲಿ ಪುರಾಣ ಪ್ರವಚನಗಳನ್ನು ಏರ್ಪಡಿಸಿ ಜನರನ್ನು ಸನ್ಮಾರ್ಗದಲ್ಲಿ ಮುನ್ನಡೆಸಿದ್ದರು. ಬದುಕಿನ ಜೀವಿತ ಅವಧಿಯಲ್ಲಿ ಎರಡು ಹುಟ್ಟು ಪಡೆದ ಶ್ರೀ ಮೌನಶರಣರು ೧೯೬೪ ರ ಮಾರ್ಚ್ ಇಪ್ಪತ್ತಮೂರರಂದು ಅನುಷ್ಠಾನಕ್ಕೆ ಕುಳಿತಿದ್ದಾಗಲೇ ಲಿಂಗೈಕ್ಯರಾದರು. ಶ್ರೀ ಮೌನಶರಣರ ಸಮಾಧಿಗೆ ಗದ್ದುಗೆಯನ್ನು ನಿರ್ಮಿಸಿ ನಿತ್ಯ ಪೂಜೆಯನ್ನು ನಡೆಸಲಾಗುತ್ತಿದೆ. ಮೌನ ಶರಣರ ಪರಮಾಪ್ತ ಭಕ್ತರಾಗಿ ಸೇವೆಮಾಡಿದ್ದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಇಲ್ಲಿನ ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಮಲ್ಲಿಕಾರ್ಜುನಯ್ಯ ಸ್ವಾಮಿಗಳು, ಶ್ರೀ ಮೌನಶರಣರ ಮಠ, ಬಳ್ಳಾರಿ ರಸ್ತೆ, ಸಂಡೂರು, ಬಳ್ಳಾರಿ ಜಿಲ್ಲೆ.

❑

ಹಗರಿಬೊಮ್ಮನಹಳ್ಳಿ ತಾಲ್ಲೂಕು

ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕು ತನ್ನದೇ ಆದಂತಹ ಪರಂಪರೆಯನ್ನು ಹೊಂದಿದೆ. ಇಲ್ಲಿ ವೀರಶೈವಧರ್ಮದ ಅನೇಕ ಮಠಗಳು ಸ್ಥಾಪನೆಯಾಗಿದ್ದವು. ಇಂದು ಕೇವಲ ಮೂರು ಮಠಗಳು ಮಾತ್ರ ಅಸ್ತಿತ್ವದಲ್ಲಿವೆ.

ಅಲ್ಲೀಪುರ

ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಅಲ್ಲೀಪುರವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಮಹಾದೇವ ತಾತನವರು ತಪೋನುಷ್ಠಾನಗೊಂಡು ಈ ಸ್ಥಳವನ್ನು ಸುಕ್ಷೇತ್ರಗೊಳಿಸಿದ್ದಾರೆ. ಈ ನೆಲದಲ್ಲಿ ಶ್ರೀಶಿವಕಂಚಿ ಮಠವು ಸ್ಥಾಪನೆಯಾಗಿ, ಇಲ್ಲಿನ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದಿದೆ.

ಶಿವಕಂಚಿಮಠ: ಅಲ್ಲೀಪುರ ಗ್ರಾಮದಲ್ಲಿ ಶ್ರೀ ಶಿವಕಂಚಿ ಮಠವು ಪುರಾತನ ಕಾಲದಿಂದಲೂ ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿತ್ತು. ಕಾಲಾನಂತರ ಮಠವು ಉತ್ತರಾಧಿಕಾರಿಗಳಿಲ್ಲದೆ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತ್ತು. ಇಂತಹ ಸಂದರ್ಭದಲ್ಲಿ ಆಂಧ್ರಪ್ರದೇಶದ ಕಡೆಯಿಂದ ಬಂದ ಶ್ರೀ ಮಹಾದೇವ ತಾತನವರು ಈ ಮಠದಲ್ಲಿ ಅನುಷ್ಠಾನಗೊಂಡು ಪುನರ್ ಸ್ಥಾಪಿಸಿದರು. ಇವರು ಈ ಕ್ಷೇತ್ರವನ್ನು ಉದ್ಧರಿಸಿ ದಕ್ಷಿಣಾಭಿಮುಖವಾಗಿ ಪ್ರಯಾಣ ಬೆಳೆಸಿ, ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಸಂಗಮ ಕ್ಷೇತ್ರದಲ್ಲಿ ನೆಲೆನಿಂತು ಅನುಷ್ಠಾನ ಮಾಡಿ ಅಲ್ಲೇ ಐಕ್ಯರಾಗಿದ್ದಾರೆ.
ಪರಂಪರೆ: ಶ್ರೀ ಮಹಾದೇವ ತಾತನವರು ಶಿವಕಂಚಿ ಮಠವನ್ನು ಬಿಟ್ಟು ಹೋದ ಮೇಲೆ ಶ್ರೀ ಮೌನಯೋಗಿ ಬಸವರಾಜೇಂದ್ರ ದೇಶಿಕೇಂದ್ರ ಸ್ವಾಮಿಗಳು, ಈ ಮಠದಲ್ಲಿ ನೆಲೆಸಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಗುರುಗಳು ಭಕ್ತರ ನೆರವಿನಿಂದ ಮಠದಲ್ಲಿ ದಾಸೋಹ ಹಾಗೂ ಧಾರ್ಮಿಕ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ.

ವಿಳಾಸ: ಶ್ರೀ ಮೌನಯೋಗಿ ಬಸವರಾಜೇಂದ್ರ ದೇಶಿಕೇಂದ್ರ ಸ್ವಾಮಿಗಳು, ಶ್ರೀ ಶಿವಕಂಚಿಮಠ, ಅಲ್ಲೀಪುರ, ಹಗರಿಬೊಮ್ಮನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.

ಕಡಲೆಬಾಳು

ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಕಡಲೆಬಾಳು, ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಗವಿಸಿದ್ಧೇಶ್ವರ ಮಠವು ಅಸ್ತಿತ್ವದಲ್ಲಿದೆ.

ಗವಿಸಿದ್ಧೇಶ್ವರ ಮಠ: ಕಡಲೆಬಾಳು ಗ್ರಾಮದಲ್ಲಿ ಉಜ್ಜಯಿನಿ ಪೀಠದ ಶಾಖಾಮಠವಾದ ಶ್ರೀ ಗವಿಸಿದ್ಧೇಶ್ವರ ಮಠವು ಸ್ಥಾಪನೆಯಾಗಿದೆ. .ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ಶ್ರೀಗವಿಸಿದ್ಧೇಶ್ವರರು ಲೋಕಸಂಚಾರ ಕೈಗೊಂಡು ಇಲ್ಲಿ ನೆಲೆನಿಂತು ಮಠವನ್ನು ಸ್ಥಾಪನೆ ಮಾಡಿದ್ದಾರೆ.

ಪರಂಪರೆ: ಕರ್ತೃ ಗುರುಗಳಾದ ಶ್ರೀ ಗವಿಸಿದ್ಧೇಶ್ವರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಮಠದ ಆಡಳಿತವನ್ನು ನಡೆಸಿದ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ಲಭ್ಯವಿಲ್ಲ. ಈಗ ಶ್ರೀ ಶಶಿಧರ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠದ ಆಡಳಿತವನ್ನು ನೋಡಿಕೊಳ್ಳುತ್ತಿದ್ದಾರೆ. ವಿದ್ಯಾ ಸಂಪನ್ನರಾದ ಗುರುಗಳು ಅಧಿಕಾರಕ್ಕೆ ಬಂದ ಮೇಲೆ ಪುರಾತನ ಮಠವನ್ನು ಅಭಿವೃದ್ಧಿಪಡಿಸಿ ಭಕ್ತರಲ್ಲಿ ಧಾರ್ಮಿಕ ಜಾಗೃತಿಯನ್ನು ಮೂಡಿಸಿದ್ದಾರೆ. ಇವರು ಉತ್ತಮ ವಾಗ್ಮಿಗಳಾಗಿ, ವೀರಶೈವ ಸಿದ್ಧಾಂತವನ್ನು ಪ್ರಚಾರ ಪಡಿಸಲು ಶ್ರಮಿಸುತ್ತಿದ್ದಾರೆ.

ಶೈಕ್ಷಣಿಕ ಸೇವೆ: ಮನುಷ್ಯನ ಜ್ಞಾನತೃಷೆ ತೀರಿಸಲು ಧರ್ಮ ಮತ್ತು ಶಿಕ್ಷಣ ಎರಡೂ ಒಂದಕ್ಕೊಂದು ಪೂರಕವಾಗಿರಬೇಕು. ಇಲ್ಲದಿದ್ದರೆ ಗೋರ್ಕಲ್ಲ ಮೇಲೆ ಮಳೆಸುರಿದಂತಾಗುತ್ತದೆ ಎಂದು ಭಾವಿಸಿದ ಶ್ರೀ ಶಶಿಧರ ಶಿವಾಚಾರ್ಯ ಸ್ವಾಮಿಗಳು ಧರ್ಮ ಪ್ರಸಾರದ ಜತೆಗೆ ಸಮಾಜದ ಅಜ್ಞಾನವನ್ನು ಹೋಗಲಾಡಿಸಲು ಅಕ್ಷರ ಜ್ಞಾನದ ಅರಿವು ಇರಬೇಕಾಗುತ್ತದೆ ಎಂದು

ಸಂಸ್ಕೃತ, ಜ್ಯೋತಿಷ್ಯ ಪಾಠಶಾಲೆ ಹಾಗೂ ಪ್ರೌಢಶಾಲೆಯನ್ನು ಪ್ರಾರಂಭಿಸಿ ಗ್ರಾಮಾಂತರ ಮಕ್ಕಳ ಕಲಿಕೆಗೆ ನೆರವು ನೀಡಿದ್ದಾರೆ. ಕಲಿಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳಿಗೆ ಮಠದಲ್ಲಿ ಆಶ್ರಯ ನೀಡಿ, ಉಚಿತ ಊಟ ಮತ್ತು ವಸತಿಗೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ವೀರಭದ್ರಸ್ವಾಮಿ ದೇವಾಲಯ, ಬಸವಣ್ಣ ಮತ್ತು ಕಲ್ಲೇಶ್ವರ ದೇವಾಲಯ ಹಾಗೂ ಕರ್ತೃಗುರುಗಳ ಗದ್ದುಗೆ ಸ್ಥಾಪನೆಯಾಗಿದೆ. ಇಲ್ಲಿ ನಿತ್ಯ ಪೂಜೆಯನ್ನು ನಡೆಸಲಾಗುತ್ತಿದೆ. ಶ್ರೀ ಶಶಿಧರ ಶಿವಾಚಾರ್ಯ ಸ್ವಾಮಿಗಳು ಮಠದ ಜಮೀನನ್ನು ಅಭಿವೃದ್ಧಿಪಡಿಸಿ ಆದಾಯದ ಮೂಲವನ್ನಾಗಿ ಮಾಡಿಕೊಂಡಿದ್ದಾರೆ. ಜಮೀನಿನಿಂದ ಬಂದ ಆದಾಯವನ್ನು ಬಳಸಿಕೊಂಡು ದಾಸೋಹ ಹಾಗೂ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶಶಿಧರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಗವಿಸಿದ್ಧೇಶ್ವರ ಮಠ, ಕಡಲೆಬಾಳು, ಹಗರಿಬೊಮ್ಮನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.

ನಂದೀಪುರ

ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ನಂದೀಪುರವು ತಾಲ್ಲೂಕು ಕೇಂದ್ರದಿಂದ ಹದಿನಾರು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ದೊಡ್ಡ ಬಸವೇಶ್ವರ ಮಠವು ಸ್ಥಾಪನೆಯಾಗಿದೆ.

ದೊಡ್ಡಬಸವೇಶ್ವರಮಠ: ಗದ್ದೀಕೆರೆಯಿಂದ ಲೋಕಸಂಚಾರಕ್ಕೆ ಹೊರಟು ನಂದೀಪುರದಲ್ಲಿ ನೆಲೆಸಿದ ದೊಡ್ಡಬಸವೇಶ್ವರರು ಇಲ್ಲಿ ಪವಾಡವನ್ನು ಮಾಡಿ, ಭಕ್ತರನ್ನು ಜಾಗೃತಗೊಳಿಸಿ ಮಠವನ್ನು ಸ್ಥಾಪಿಸಿದರು. ಶ್ರೀ ದೊಡ್ಡಬಸವೇಶ್ವರರು ಮಠವನ್ನು ಸ್ಥಾಪಿಸಿದ ಕಾರಣಕ್ಕೆ ಈ ಹೆಸರು ಬಂದಿದೆ.

ಶ್ರೀ ದೊಡ್ಡಬಸವೇಶ್ವರರು ಅನುಷ್ಠಾನಗೊಂಡ ನಂದೀಪುರದಲ್ಲಿ ಇವರ ಶಿಷ್ಯರಾದ ಶ್ರೀ ಚರಂತಪ್ಪಯ್ಯ ಸ್ವಾಮಿಗಳು ಗುರುಗಳ ಹೆಸರಿನಲ್ಲಿ ಮಠವನ್ನು ಸ್ಥಾಪಿಸಿ ಅಭಿವೃದ್ಧಿಪಡಿಸಿದರು. ಮಠದಲ್ಲಿ ಮಾಘಶುದ್ಧ ದಶಮಿಯಲ್ಲಿ ಶ್ರೀ ದೊಡ್ಡಬಸವೇಶ್ವರರ ಜಾತ್ರೆಯನ್ನೂ ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಚರಂತಪ್ಪಯ್ಯ ಸ್ವಾಮಿಗಳು, ಶ್ರೀದೊಡ್ಡಬಸವೇಶ್ವರ ಮಠ, ಹಗರಿಬೊಮ್ಮನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.

❑

ಹೂವಿನಹಡಗಲಿ ತಾಲ್ಲೂಕು

ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕು ಧಾರ್ಮಿಕವಾಗಿ ಪ್ರಸಿದ್ಧಿ ಪಡೆದಿದೆ. ಇಲ್ಲಿ ವೀರಶೈವ ಧರ್ಮ ಪ್ರಬಲವಾಗಿ ಬೆಳೆದು ಇಪ್ಪತ್ತಾರು ಮಠಗಳು ಸ್ಥಾಪನೆಗೊಂಡ ಬಗ್ಗೆ ಮಾಹಿತಿ ದೊರೆಯುತ್ತದೆ. ಅವುಗಳಲ್ಲಿ ಇಂದು ಒಂಭತ್ತು ಮಠಗಳು ಅಸ್ತಿತ್ವದಲ್ಲಿ ಉಳಿದಿವೆ.

ಕಂದಗಲ್ಲುಪುರ

ಹೂವಿನಹಡಗಲಿ ತಾಲ್ಲೂಕಿನ ಕಂದಗಲ್ಲುಪುರವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹನ್ನೆರಡು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಸೋಗಿಪುರವರ್ಗ ಮಠವು ಅಸ್ತಿತ್ವದಲ್ಲಿದೆ.

ಸೋಗಿಪುರವರ್ಗ ಮಠ: ಕಾಶಿಪೀಠದ ಶಾಖಾನುವರ್ತಿ ಮಠವಾಗಿ ಸೋಗಿಪುರವರ್ಗದ ಮಠವು ಸ್ಥಾಪನೆಯಾಗಿದೆ. ಶ್ರೀಚನ್ನವೀರ ಸ್ವಾಮಿಗಳು ಸೋಗಿಗ್ರಾಮವನ್ನು ತೊರೆದು ಲೋಕಸಂಚಾರಕ್ಕೆ ಹೋಗಿ ಅನೇಕ ಪವಾಡಗಳನ್ನು ಮಾಡಿ, ತುಂಗಭದ್ರಾ ನದಿ ತೀರದಲ್ಲಿ (ಶಾ.ಶ. ೧೪೩೨) ಅನುಷ್ಠಾನಕ್ಕೆ ಕುಳಿತುಕೊಳ್ಳುತ್ತಾರೆ. ನಂತರ ಈ ಪ್ರಶಾಂತ ಸ್ಥಳಕ್ಕೆ ಬಂದು ಭಕ್ತರ ಅಪೇಕ್ಷೆಯ ಮೇರೆಗೆ ಮಠವನ್ನು ಸ್ಥಾಪಿಸಿ, ಮಠದ ಪರಂಪರೆಯನ್ನು ಬೆಳೆಸಿದ್ದಾರೆ.

ಮಠದ ಪರಂಪರೆ:
೧. ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ಸಿದ್ಧಬಸವ ಶಿವಾಚಾರ್ಯ ಸ್ವಾಮಿಗಳು
೩. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು
೪. ಷ.ಬ್ರ.ಶ್ರೀ ಗುರುನಂಜಪ್ಪ ಶಿವಾಚಾರ್ಯ ಸ್ವಾಮಿಗಳು
೫. ಷ.ಬ್ರ.ಶ್ರೀ ಎರಡನೆಯ ಚನ್ನವೀರ ಶಿವಾಚಾರ್ಯ ಸ್ವಾಮಿಗಳು
೬. ಷ.ಬ್ರ.ಶ್ರೀ ಮೂರನೆಯ ಚನ್ನವೀರ ಶಿವಾಚಾರ್ಯ ಸ್ವಾಮಿಗಳು
೭. ಷ.ಬ್ರ.ಶ್ರೀ ಅಯ್ಯಪ್ಪಯ್ಯ ಶಿವಾಚಾರ್ಯ ಸ್ವಾಮಿಗಳು
೮. ಷ.ಬ್ರ.ಶ್ರೀ ವಿಶ್ವನಾಥ ಶಿವಾಚಾರ್ಯ ಸ್ವಾಮಿಗಳು
೯. ಷ.ಬ್ರ.ಶ್ರೀ ಎರಡನೆಯ ಗುರುನಂಜಪ್ಪ ಶಿವಾಚಾರ್ಯ ಸ್ವಾಮಿಗಳು
೧೦. ಷ.ಬ್ರ.ಶ್ರೀ ಸಿದ್ಧವೀರ ಶಿವಾಚಾರ್ಯ ಸ್ವಾಮಿಗಳು
೧೧. ಷ.ಬ್ರ.ಶ್ರೀ ಚನ್ನವೀರಪ್ಪ ಶಿವಾಚಾರ್ಯ ಸ್ವಾಮಿಗಳು
೧೨. ಷ.ಬ್ರ.ಶ್ರೀ ಸಿದ್ಧವೀರ ಶಿವಾಚಾರ್ಯ ಸ್ವಾಮಿಗಳು
೧೩. ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಈ ಮಠದಲ್ಲಿ ಇನಾಂಜಮೀನಿದ್ದು ಅನೇಕ ಶಾಖಾಮಠಗಳನ್ನು ಹೊಂದಿದೆ. ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ಹಿರೇಕಲ್ಮಠದ ಅಧಿಕಾರವನ್ನು ನಡೆಸುತ್ತಿರುವ ಶ್ರೀ ಒಡೆಯರ್ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಪೂರ್ವಾಶ್ರಮದಲ್ಲಿ ಈ ಮಠದ ವಂಶದವರು ಎಂಬುದನ್ನು ಇಲ್ಲಿ ದಾಖಲಿಸಬಹುದು. ಶ್ರೀಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಈ ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡು ೧೯೫೬ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಗುರುಗಳು ಅಧಿಕಾರಕ್ಕೆ ಬಂದ ಮೇಲೆ ಮಠವನ್ನು ಅಭಿವೃದ್ಧಿಪಡಿಸಿರುವುದಲ್ಲದೆ ಈ ಮಠದ ಶಾಖಾಮಠಗಳನ್ನು ಸಹ ಅಭಿವೃದ್ಧಿಪಡಿಸಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದ್ದಾರೆ.

ಶಿಕ್ಷಣ ಸೇವೆ: ಶ್ರೀ ಸಿದ್ಧವೀರೇಶ ಗ್ರಾಮೀಣ ವಿದ್ಯಾಪೀಠವನ್ನು ೧೯೮೧ರಲ್ಲಿ ಪ್ರಾರಂಭಿಸಿದ್ದಾರೆ. ಈ ಸಂಸ್ಥೆಯಡಿ ಹೊಳಗುಂದಿ, ಸೋವಿನಹಳ್ಳಿ, ಕತ್ತೆಬೆನ್ನೂರು ಗ್ರಾಮಗಳಲ್ಲಿ ಪ್ರೌಢಶಾಲೆ ಹಾಗೂ ಉಚಿತ ಪ್ರಸಾದನಿಲಯಗಳನ್ನು ಪ್ರಾರಂಭಿಸ

ಲಾಗಿದೆ. ಈ ಎಲ್ಲಾ ಶಾಲೆಗಳಿಗೆ ಸುಸಜ್ಜಿತ ಕಟ್ಟಡಗಳನ್ನು ನಿರ್ಮಿಸಿ, ಗ್ರಾಮೀಣ ಮಕ್ಕಳ ಕಲಿಕೆಗೆ ನೆರವಾಗಿದ್ದಾರೆ.

ವಿಳಾಸ:ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು, ಶ್ರೀಸೋಗಿಪುರವರ್ಗಮಠ, ಕಂದಗಲ್ಲುಪುರ, ಹೂವಿನಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.

ಆಧಾರ: 'ಗುರುವರ್ಗದರ್ಪಣ' ಗ್ರಂಥ ಕರ್ತರು : ವಿರೂಪಾಕ್ಷ ಶಾಸ್ತ್ರಿಗಳು

ಕುರುವತ್ತಿ

ಹೂವಿನಹಡಗಲಿ ತಾಲ್ಲೂಕಿನ ಕುರುವತ್ತಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಅರವತ್ತು ಕಿ.ಮೀ ದೂರದಲ್ಲಿದೆ. ತುಂಗಭದ್ರಾ ನದಿಯು ಪಶ್ಚಿಮ ವಾಹಿನಿಯಾಗಿ ಹರಿಯುತ್ತಿರುವ ಈ ಸ್ಥಳದಲ್ಲಿ ಶ್ರೀ ತೋಂಟದಾರ್ಯ ವಿರಕ್ತ ಮಠವು ಸ್ಥಾಪನೆಯಾಗಿದೆ.

ತೋಂಟದಾರ್ಯ ವಿರಕ್ತಮಠ: ಕುರುವತ್ತಿ ಗ್ರಾಮದ ಹೊರಭಾಗದಲ್ಲಿ ಶ್ರೀ ತೋಂಟದಾರ್ಯ ವಿರಕ್ತಮಠವು ಸ್ಥಾಪನೆಯಾಗಿದೆ. ಶ್ರೀ ತೋಂಟದಾರ್ಯ ಸ್ವಾಮಿಗಳು ಈ ಮಠವನ್ನು ಅಭಿವೃದ್ಧಿಪಡಿಸಿ ಬೆಳೆಸಿದ್ದರಿಂದ ಈ ಹೆಸರು ಬಂದಿದೆ.

ಶ್ರೀ ವಿರಕ್ತ ತೋಂಟದಾರ್ಯ ಸ್ವಾಮಿಗಳು ತುಂಗಭದ್ರಾ ನದಿಯ ದಡದಲ್ಲಿ ಅನುಷ್ಠಾನಕ್ಕೆ ಕುಳಿತಿದ್ದ ಸಂದರ್ಭದಲ್ಲಿ ಬೂದಿಬಸಪ್ಪ ನಾಯಕನು (೧೭೫೦) ಕುರುವತ್ತಿ, ನೀಲಗುಂದ ಮುಂತಾದ ತಮ್ಮ ವಶದ ಪಾಳೆಗಾರಿಕೆಗೆ ಸಂಬಂಧಪಟ್ಟ ಗ್ರಾಮಗಳ ಕಂದಾಯ ವಸೂಲಿಗೆಂದು ಬಂದವನು ಹಿಂದಿರುಗಿ ರಾಜಧಾನಿಗೆ ಹೋಗುವಾಗ ಕತ್ತಲೆಯಾಯಿತು. ಆಗ ಸ್ವಾಮಿಗಳು ಅನುಷ್ಠಾನಕೈಗೊಳ್ಳುತ್ತಿದ್ದ ಸ್ಥಳದಲ್ಲಿ ಬೂದಿಬಸಪ್ಪ ನಾಯಕನ ದಂಡುಬಿಡಾರ ಬಿಟ್ಟು ರಾತ್ರಿ ವಿಶ್ರಾಂತಿ ಪಡೆದು ಬೆಳಿಗ್ಗೆ ಪ್ರಯಾಣ ಬೆಳಸಿತು. ಕಂದಾಯದ ನಾಣ್ಯವನ್ನು ತುಂಬಿಟ್ಟಿದ್ದ ಚೀಲವನ್ನು ಇಲ್ಲಿಯೇ ಬಿಟ್ಟು ಹೋಗಿದ್ದರಂತೆ. ಬೆಳಿಗ್ಗೆ ಗುರುಗಳು ಸಂಚಾರ ಮಾಡುತ್ತಿದ್ದಾಗ ಈ ಚೀಲವನ್ನು ನೋಡಿ ತಮ್ಮ ಕುಟೀರಕ್ಕೆ ತಂದು ಪಾದರಕ್ಷೆಗಳನ್ನು ಬಿಡುವ ಜಾಗದಲ್ಲಿ ಇಟ್ಟು ತಮ್ಮ ಪೂಜಾ ಕಾರ್ಯಗಳಲ್ಲಿ ಮಗ್ನರಾದರಂತೆ. ದಂಡು ಶಿಗ್ಗಾಂವಿ ಸಮೀಪದ ಬಂಕಾಪುರಕ್ಕೆ ತಲುಪಿದ ಮೇಲೆ ಕಂದಾಯದ ನಾಣ್ಯವನ್ನು ತುಂಬಿದ್ದ ಚೀಲವನ್ನು ಬಿಟ್ಟು ಬಂದಿರುವ ವಿಚಾರ ಜ್ಞಾಪಕಕ್ಕೆ ಬಂದು, ಪುನಃ ಹಿಂದಿರುಗಿ ಬಂದು ತಾವು ವಿಶ್ರಾಂತಿ ಪಡೆದಿದ್ದ ಜಾಗದಲ್ಲಿ ಚೀಲವನ್ನು ಹುಡುಕಾಡಿ ಸಿಗದಿದ್ದಾಗ, ಸಮೀಪದಲ್ಲಿದ್ದ ಕುಟೀರಕ್ಕೆ ಬಂದು ಗುರುಗಳನ್ನು ವಿಚಾರಿಸಿದರಂತೆ. ಆಗ ಗುರುಗಳು ಪಾದರಕ್ಷೆಗಳನ್ನು ಬಿಡುವ ಜಾಗದಲ್ಲಿ ಇಟ್ಟಿದ್ದ ಚೀಲವನ್ನು ತೋರಿಸಿ ತೆಗೆದುಕೊಂಡು ಹೋಗಲು ಸೂಚಿಸಿದರಂತೆ. ಈ ವಿಚಾರವನ್ನು ದಂಡಿನ ನಾಯಕ, ಬೂದಿಬಸಪ್ಪ ನಾಯಕನಿಗೆ ತಿಳಿಸಿದನು. ಗುರುಗಳ ಬಿಡಾರದ ಹತ್ತಿರ ಇದ್ದರೂ ನಾವು ಅವರ ಆಶೀರ್ವಾದವನ್ನು ಪಡೆಯದೆ ಹೋದೆವು, ಈ ಕಾರಣಕ್ಕಾಗಿ ನಮಗೆ ಮರೆವು ಬಂದಿರಬಹುದು ಎಂದು ಪಶ್ಚಾತ್ತಾಪಟ್ಟ ಬೂದಿಬಸಪ್ಪ ನಾಯಕನು ಗುರುಗಳಲ್ಲಿಗೆ ಬಂದು ಕ್ಷಮೆಯಾಚಿಸಿದನಂತೆ. ಕೆಳದಿ ಬೂದಿಬಸಪ್ಪ ನಾಯಕನು ೧೭೫೦ ರಲ್ಲಿ ಶ್ರೀ ವಿರಕ್ತ ತೋಂಟದಾರ್ಯರಿಗೆ ಈ ಸ್ಥಳದಲ್ಲಿ ಮಠವನ್ನು ಕಟ್ಟಿಸಿಕೊಟ್ಟು, ಧಾರ್ಮಿಕ ಕಾರ್ಯಗಳಿಗೆ ನೆರವಾಗಲು ಮಠದ ಸುತ್ತಲಿನ ಜಾಗವನ್ನು ಉಂಬಳಿಯಾಗಿ ಕೊಟ್ಟು ಮಠವು ಬೆಳೆಯಲು ಕಾರಣಕರ್ತನಾಗಿದ್ದಾನೆಂದು ಹೇಳಲಾಗುತ್ತಿದೆ.

ಶ್ರೀ ವಿರಕ್ತ ತೋಂಟದಾರ್ಯರು, ಬೂದಿಬಸಪ್ಪ ನಾಯಕನು ಕಟ್ಟಿಸಿಕೊಟ್ಟ ಈ ಮಠದಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದು 'ಶತಕರ್ತೆಯದ ' ಮೇಲೆ ಟೀಕೆಯನ್ನು ಬರೆದು ಪ್ರಖ್ಯಾತಗೊಂಡರು. ಎಡೆಯೂರು ಶ್ರೀ ಸಿದ್ಧಲಿಂಗೇಶ್ವರ ಪುರಾಣ, ಪಾಲ್ಕುರಿಕೆ ಸೋಮನಾಥ ಪುರಾಣ, ಚಿದಾನಂದ ಸಿಂಧು ಮುಂತಾದ ಅನೇಕ ಕೃತಿಗಳನ್ನು ರಚಿಸಿ 'ಶಿವಾನುಭವ ಚರಮೂರ್ತಿ'ಗಳೆಂದು ಹೆಸರು ಪಡೆದು, ಮಠವನ್ನು ಪ್ರಸಿದ್ಧಿಗೆ ತಂದರು. ಮಹಾತಪೋನಿಷ್ಠರಾದ ಇವರು ಮಠ ಮತ್ತು ವೀರಶೈವ ಧರ್ಮವನ್ನು ಬೆಳೆಸಿದ್ದಲ್ಲದೆ, ಕನ್ನಡ ಸಾಹಿತ್ಯ ಲೋಕಕ್ಕೆ ಮೌಲಿಕ ಕೃತಿಗಳನ್ನು ನೀಡಿ ಅಮರರಾಗಿದ್ದಾರೆ.

ಪರಂಪರೆ: ಕರ್ತೃ ಗುರುಗಳಾದ ಶ್ರೀ ವಿರಕ್ತ ತೋಂಟದಾರ್ಯರ ನಂತರ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಅಧಿಕಾರಕ್ಕೆ ಬಂದಿದ್ದಾರೆ. ಇವರೂ ಸಹ ಪವಾಡ ಪುರುಷರಾಗಿ ಮೆರೆದು, ನಂದಿಯನ್ನೇ ತಮ್ಮ ವಾಹನವನ್ನಾಗಿ ಮಾಡಿಕೊಂಡು

ಸಂಚರಿಸುತ್ತಿದ್ದ ರಂತೆ. ಒಮ್ಮೆ ಇಲ್ಲಿಯ ಅರಸನು ಗುರುಗಳ ತಪೋಶಕ್ತಿಯನ್ನು ಪರೀಕ್ಷಿಸಲೆಂದು ಶಿವನ ಕುರುಹನ್ನು ತೋರಿಸಲು ಭಿನ್ನವಿಸಿ ಕೊಂಡನಂತೆ. ಆಗ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಶಿವನ ಕುರುಹನ್ನು ತೋರಿಸಿ ವೃಷಭ ಧ್ವಜವನ್ನು ಎತ್ತಿ ಹಿಡಿದರಂತೆ. ಅಂದಿನಿಂದ ಈ ಪಟ್ಟಣವು 'ಕುರುವೆತ್ತಿ' ಎಂದು ಹೆಸರಾಯಿತು. ನಂತರ ಈ ಪದವು ರೂಢಿಗತವಾಗಿ 'ಕುರುವತ್ತಿ'ಯಾಗಿ ರೂಪಾಂತರ ಪಡೆದಿದೆ. ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಹನ್ನೊಂದು ಜನ ಗುರುಗಳು ಕರ್ತೃ ಗುರುಗಳಾದ 'ಶ್ರೀ ತೋಂಟದಾರ್ಯ' ಎಂಬ ಹೆಸರನ್ನೇ ಅಭಿಧಾನ ಪಡೆದು ಅಧಿಕಾರಕ್ಕೆ ಬಂದಿದ್ದಾರೆ.

ಈಗಿನ ಮಠಾಧ್ಯಕ್ಷರಾದ ಶ್ರೀ ತೋಂಟದಾರ್ಯ ಸ್ವಾಮಿಗಳು ೧೯೭೪ ರಲ್ಲಿ ಪರಂಪರೆಯ ಹದಿಮೂರನೆಯ ಗುರುಗಳಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಗುರುಗಳು ಬಾಗಲಕೋಟೆಯ ಶ್ರೀ ಸಿದ್ಧಯ್ಯ ಸಾಲಿಮಠ ಮತ್ತು ಶ್ರೀಮತಿ ಗಂಗಮ್ಮ ನವರ ಪುತ್ರರಾಗಿ ಜನಿಸಿ, ಬಾಗಲಕೋಟೆ, ಧಾರವಾಡದಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ, ಲಿಂಗನಾಯಕನಹಳ್ಳಿಯ ಗುರುಗಳಿಂದ ಪಟ್ಟಾಧಿ ಕಾರದ ಅನುಗ್ರಹವನ್ನು ಪಡೆದು ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಇವರು ತಪೋನಿಷ್ಠ ರಾಗಿದ್ದು ೧೯೮೯ ರಿಂದ ಮಠವನ್ನು ಬಿಟ್ಟು ಹೊರಗೆ ಬರದೆ ಅನುಷ್ಠಾನವನ್ನು ಕೈಗೊಂಡಿದ್ದಾರೆ. ಗುರುಗಳು ಹನ್ನೆರಡನೆಯ ವರ್ಷಕ್ಕೆ (೨೦೦೧)ಈ ಅನುಷ್ಠಾನವನ್ನು ಪೂರೈಸಲಿದ್ದಾರೆ. ಇವರು ಏಕಾಂತದಲ್ಲಿ ತಪಸ್ಸನ್ನು ಮಾಡುತ್ತಾ ಒಂದು ದೊಡ್ಡ ಸಾಧನೆಯನ್ನೇ ಮಾಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಶ್ರೀ ತೋಂಟದಾರ್ಯ ಸ್ವಾಮಿಗಳು ಪ್ರತಿ ಅಮಾವಾಸ್ಯೆಯಲ್ಲಿ ಪುರಾಣ ಪ್ರವಚನ ಹಾಗೂ ಅನ್ನ ದಾಸೋಹವನ್ನು ನಡೆಸುತ್ತಿದ್ದಾರೆ. ಶಿವರಾತ್ರಿಯ ಸಂದರ್ಭದಲ್ಲಿ ಕರ್ತೃ ಗುರುಗಳ ಜಾತ್ರೆಯನ್ನು ಅದ್ದೂರಿಯಾಗಿ ಆಚರಿಸಲಾಗು ತ್ತಿದೆ. ಗುರುಗಳು ಶ್ರೀ ತೋಂಟದಾರ್ಯ ಶಿವಯೋಗಿ ಗ್ರಂಥ ಮಾಲೆಯನ್ನು ಪ್ರಾರಂಭಿಸಿ ಶ್ರೀ ಮಹದೇಶ್ವರ ನಾಮಾವಳಿ, ಕುರುವತ್ತಿ ಶ್ರೀ ತೋಂಟದಾರ್ಯ ವಿರಕ್ತ ಮುನಿಗಳ ಭಕ್ತಿ ಗೀತೆಗಳನ್ನು ಹೊರತಂದು ಧರ್ಮ ಮತ್ತು ಸಾಹಿತ್ಯವನ್ನು ಬೆಳೆಸಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ತೋಂಟದಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠವನ್ನು ಅಗತ್ಯಕ್ಕನುಗುಣವಾಗಿ ವಿಸ್ತರಿಸಿಕೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿದ್ದಾರೆ. ಮಠದ ಆಸ್ತಿಯಾಗಿರುವ ಮೂವತ್ತು ಎಕರೆ ಜಮೀನನ್ನು ಬೇಸಾಯ ಮಾಡಿಸಿ ಅಧಿಕ ಲಾಭ ಬರುವಂತೆ ಮಾಡಿ, ಆದಾಯದ ಮೂಲವನ್ನಾಗಿ ಮಾಡಿಕೊಂಡಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ತೋಂಟದಾರ್ಯ ಸ್ವಾಮಿಗಳು, ಶ್ರೀ ತೋಂಟದಾರ್ಯ ವಿರಕ್ತಮಠ, ಕುರುವತ್ತಿ, ಹೂವಿನಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.

ಮಾನಿಹಳ್ಳಿ

ಹೂವಿನಹಡಗಲಿ ತಾಲ್ಲೂಕಿನ ಮಾನಿಹಳ್ಳಿಯು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಇಪ್ಪತ್ತು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ಪುರವರ್ಗದಮಠವು ಅಸ್ತಿತ್ವದಲ್ಲಿದೆ.

ಪುರವರ್ಗದ ಮಠ: ಮಾನಿಹಳ್ಳಿ ಗ್ರಾಮದಲ್ಲಿ ಉಜ್ಜಯಿನಿ ಪೀಠದ ಶಾಖಾಮಠವಾದ ಶ್ರೀ ಪುರವರ್ಗದಮಠವು ಸ್ಥಾಪನೆಯಾಗಿ, ಈ ಗ್ರಾಮದ ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿದೆ. ಉಜ್ಜಯಿನಿ ಪೀಠದ ಆಗಿನ ಜಗದ್ಗುರು ಶ್ರೀ ಚನ್ನವೀರ ಸ್ವಾಮಿಗಳು ಪುರವರ್ಗ ಮಠಕ್ಕೆ ಮೂವತ್ಮೂರು ಹಳ್ಳಿಗಳಲ್ಲಿ ಧಾರ್ಮಿಕ ಆಚರಣೆಗಳು, ನ್ಯಾಯ ವಿಚಾರಣೆಗಳನ್ನು ನಡೆಸಲು ಅಧಿಕಾರ ನೀಡಿ, ಮಠದ ಅಭಿವೃದ್ಧಿಗೆ ಪ್ರೇರಕರಾಗಿದ್ದರು.

ಮಠ ಸ್ಥಾಪನೆ: ಶ್ರೀ ಮಳೆಯೋಗೀಶ್ವರ ಶಿವಾಚಾರ್ಯ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಇಲ್ಲಿಗೆ ಬಂದು ಅನುಷ್ಠಾನ ಗೊಂಡರು. ಗುರುಗಳು ಇಲ್ಲಿ ನೆಲೆಸಿದ ಸಂದರ್ಭದಲ್ಲಿ ಭಕ್ತರಿಗೆ ಧರ್ಮೋಪದೇಶನೀಡಿ ಸನ್ಮಾರ್ಗದಲ್ಲಿ ಬೆಳೆಯುವಂತೆ ಮಾಡಿದರು. ಗುರುಗಳು ಇಲ್ಲಿಗೆ ಬಂದ ಮೇಲೆ ಧರ್ಮಸಂಸ್ಕಾರವು ನೆಲೆಗೊಂಡಿದ್ದರಿಂದ ಗ್ರಾಮದ ಹಿರಿಯರಿಗೆ ಸಂತೋಷ ವಾಯಿತು. ಗುರುಗಳು ತಮ್ಮ ಅನುಷ್ಠಾನವನ್ನು ಮುಗಿಸಿ ಮುಂದೆ ಹೊರಡಲು ಅನುವಾದಾಗ ಸಮಸ್ತ ಭಕ್ತರು ಇಲ್ಲೇ

ನೆಲೆಸುವಂತೆ ಮನವಿ ಸಲ್ಲಿಸಿದರು. ಗುರುಗಳು ಭಕ್ತರ ಅಪೇಕ್ಷೆಯನ್ನು ಮೀರಲಾರದೆ ಈ ಗ್ರಾಮದಲ್ಲೇ ನೆಲೆಸಿದರು. ಶ್ರೀ ಮಳೆಯೋಗೀಶ್ವರ ಶಿವಾಚಾರ್ಯ ಸ್ವಾಮಿಗಳಿಗಾಗಿ ಮಠ ಸ್ಥಾಪನೆ ಮಾಡಿ, ಧಾರ್ಮಿಕ ಚಟುವಟಿಕೆಗಳು ನಡೆಯುವಂತೆ ವ್ಯವಸ್ಥೆ ಮಾಡಿದರು. ವಯೋವೃದ್ಧರಾಗಿದ್ದ ಗುರುಗಳು ಮಠದಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸಿ ಲಿಂಗೈಕ್ಯರಾದರು.

ಪರಂಪರೆ: ಶ್ರೀ ಮಳೆಯೋಗೀಶ್ವರ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪನೆಗೊಂಡ ಮಠದ ಪರಂಪರೆಯ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಆದರೆ ಮಠದ ಆವರಣದಲ್ಲಿ ಮೂರು ಗದ್ದುಗೆಗಳು ಸ್ಥಾಪನೆಯಾಗಿದ್ದು, ಈ ಗುರುಗಳ ಬಗ್ಗೆಯೂ ಮಾಹಿತಿ ಲಭ್ಯವಿಲ್ಲ. ಮಠದ ಪರಂಪರೆಯ ಗುರುಗಳು ಕರ್ತೃ ಗುರುಗಳ ಹೆಸರನ್ನೇ ಅಭಿಧಾನ ಪಡೆದು ಅಧಿಕಾರಕ್ಕೆ ಬಂದಿರ ಬಹುದೆಂದು ಈ ಗ್ರಾಮದ ಹಿರಿಯರು ಅಭಿಪ್ರಾಯಿಸುತ್ತಾರೆ. ಈ ಮಠದಲ್ಲಿ ಈಗ ಶ್ರೀ ಮಳೆಯೋಗೀಶ್ವರ ಶಿವಾಚಾರ್ಯ ಸ್ವಾಮಿಗಳು ಅಧಿಕಾರ ವಹಿಸಿಕೊಂಡು, ಧಾರ್ಮಿಕ ಕಾರ್ಯಗಳನ್ನು ನಡೆಸತೊಡಗಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಮಳೆಯೋಗೀಶ್ವರ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠದ ಕಟ್ಟಡವು ವಿಸ್ತಾರವಾಗಿ ರೂಪುಗೊಂಡಿದೆ. ಮಠದ ಆಸ್ತಿಯಾಗಿದ್ದ ಅರವತ್ತುಎಕರೆ ಜಮೀನನ್ನು ಅಭಿವೃದ್ಧಿಪಡಿಸಿ, ಆದಾಯದ ಮೂಲವನ್ನಾಗಿ ಮಾಡಿಕೊಂಡಿದ್ದಾರೆ. ಗುರುಗಳು ಮೂಲಮಠದ ಜೊತೆಗೆ ಜಾಲವಡಿಗಿ ಮಠದಲ್ಲೂ ಧಾರ್ಮಿಕ ಆಚರಣೆಗಳು ವ್ಯವಸ್ಥಿತವಾಗಿ ನಡೆಯುವಂತೆ ಮಾಡಿದ್ದಾರೆ.

ವಿಳಾಸ:ಷ.ಬ್ರ.ಶ್ರೀ ಮಳೆಯೋಗೀಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಪುರವರ್ಗದಮಠ, ಮಾನಿಹಳ್ಳಿ, ಹಿರೇಹಡಗಲಿ ಅಂಚೆ, ಹೂವಿನಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.

ಲಿಂಗನಾಯಕನಹಳ್ಳಿ

ಹೂವಿನಹಡಗಲಿ ತಾಲ್ಲೂಕಿನ ಲಿಂಗನಾಯಕನಹಳ್ಳಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ನಲವತ್ತೈದು ಕಿ.ಮೀ ದೂರದಲ್ಲಿದೆ. ಈ ಗ್ರಾಮದ ಹೊರಭಾಗದಲ್ಲಿ ವಿರಕ್ತ ಪರಂಪರೆಯ ಶ್ರೀ ಹಾಲವರ್ತಿ ಚನ್ನವೀರಸ್ವಾಮಿ ಮಠ ಅಸ್ತಿತ್ವದಲ್ಲಿದೆ.

ಹಾಲವರ್ತಿ ಚನ್ನವೀರ ಸ್ವಾಮಿಗಳ ಮಠ: ಲಿಂಗನಾಯಕನಹಳ್ಳಿ ಗ್ರಾಮದ ಹೊರಭಾಗದಲ್ಲಿ ತುಂಗಾಭದ್ರ ನದಿಯ ದಡದಲ್ಲಿ ಶ್ರೀ ಹಾಲವರ್ತಿ ಚನ್ನವೀರಸ್ವಾಮಿ ಮಠ ಸ್ಥಾಪನೆಯಾಗಿದೆ. ಶ್ರೀ ಚನ್ನವೀರ ಶಿವಯೋಗಿಗಳು ಮಹಾಮಹಿಮಾ ಶಾಲಿಗಳು. ಇವರು ಪಾದವಿಟ್ಟ ಸ್ಥಳದಲ್ಲಿ ಶರಣತತ್ತ್ವ ಪ್ರಸಾರ ಗೊಳ್ಳುತ್ತಿತ್ತು. ಇಂತಹ ಶರಣರು ಲೋಕಸಂಚಾರ ಕೈಗೊಂಡು ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ, ಹಾಲವರ್ತಿ ಬೆಟ್ಟದಲ್ಲಿ ಅನುಷ್ಠಾನಗೊಂಡರು. ಶ್ರೀ ಶಿವಯೋಗಿಗಳು ಇಲ್ಲಿ ಶಿವಾನುಭವ ಕೇಂದ್ರವನ್ನು ಸ್ಥಾಪಿಸಿ, ವೀರಶೈವ ಧರ್ಮದ ತತ್ತ್ವಗಳನ್ನು ಬೋಧನೆ ಮಾಡತೊಡಗಿದರು. ಈ ವಿಷಯ ಈ ಪ್ರಾಂತ್ಯದಲ್ಲಿ ಹಬ್ಬಿ ಭಕ್ತರು ಗುರುಗಳ ಬೋಧನೆಯನ್ನು ಕೇಳಲು ಬರತೊಡಗಿದರು. ದೂರದಿಂದ ಬರುವ ಭಕ್ತರಿಗೆ ಪ್ರಸಾದದ ವ್ಯವಸ್ಥೆ ಪ್ರಾರಂಭಗೊಂಡಿತು. ದಿನ ಕಳೆದಂತೆ ಹಾಲವರ್ತಿ ಕ್ಷೇತ್ರ ಪ್ರಸಿದ್ಧಿಗೊಂಡಿತು. ಗುರುಗಳು ನಂತರ ಕಲ್ಲಳ್ಳಿಯಲ್ಲಿ ಕೆಲವು ದಿನ ನೆಲೆ ನಿಂತು ಲಿಂಗನಾಯಕನಹಳ್ಳಿಗೆ ಆಗಮಿಸಿ ಮಠವನ್ನು ಸ್ಥಾಪಿಸಿದರು. ಶ್ರೀ ಚನ್ನವೀರ ಶಿವಯೋಗಿಗಳು ಹಾಲವರ್ತಿ ಬೆಟ್ಟದಿಂದ ಇಲ್ಲಿಗೆ ಆಗಮಿಸಿದ ಕಾರಣ ಗುರುಗಳ ಹೆಸರಿನ ಜೊತೆಗೆ ಹಾಲವರ್ತಿ ಎಂಬ ಪದವು ಸೇರ್ಪಡೆಗೊಂಡು 'ಹಾಲವರ್ತಿ ಶ್ರೀ ಚನ್ನವೀರ ಶಿವಯೋಗಿಗಳ ಮಠ' ಎಂಬ ಹೆಸರು ಬಂದಿದೆ.

ಮಠ ಸ್ಥಾಪನೆ: ಕಲ್ಲಹಳ್ಳಿಯಿಂದ ಹೊರಟ ಶ್ರೀ ಚನ್ನವೀರ ಶಿವಯೋಗಿಗಳು ಲಿಂಗನಾಯಕನಹಳ್ಳಿ ಗ್ರಾಮದ ಹೊರಭಾಗದ ನಿರ್ಜನ ಪ್ರದೇಶದ ಗವಿಯಲ್ಲಿ ಅನುಷ್ಠಾನಕ್ಕೆ ಕುಳಿತುಕೊಂಡರು. ಜಂಗಮ ಮೂರ್ತಿಗಳಾದದ ಶಿವಯೋಗಿಗಳು ಗವಿಯಲ್ಲಿ ಶಿವಪೂಜಾನಿಷ್ಠರಾಗಿ ತಪಸ್ಸನ್ನು ಆಚರಿಸಿದರು. ಈ ಸಂದರ್ಭದಲ್ಲಿ ಪಕ್ಕದ ಗ್ರಾಮವಾದ ಹರವಿಯ ಪುರಾಣ ಮಠದಯ್ಯನವರ ಆಕಳು ಶ್ರೀ ಚನ್ನವೀರ ಶಿವಯೋಗಿಗಳು ಇದ್ದ ಗವಿಗೆ ಬಂದು ಹಾಲನ್ನು ಕರೆದು ಹೋಗುತ್ತಿತ್ತು. ಮನೆಯಲ್ಲಿ ಹಾಲು ಕೊಡದ ಹಸುವನ್ನು ಪರೀಕ್ಷಿಸಲೆಂದು ಒಂದು ದಿನ ಹಸುವನ್ನು ಹಿಂಬಾಲಿಸಿದರು. ಹಸುವು ಎಂದಿನಂತೆ ಗವಿಯ ಬಳಿ ಬಂದು

ಗವಿಯ ಮುಂದೆ ಇದ್ದ ಅರಿವಾಣದಲ್ಲಿ ಹಾಲನ್ನು ಕರೆದು ಹಿಂದಿರುಗಿತು. ಆಗ ಮಠದಯ್ಯನವರು ಶಿವಯೋಗಿಗಳು ಇಲ್ಲಿ ನೆಲೆಸಿರುವರೆಂದು ಅರಿತು, ಗವಿಯ ಬಳಿ ಬಂದು ಶಿವಯೋಗಿಗಳ ದರ್ಶನ ಪಡೆದರು. ಗುರುಗಳ ಪ್ರಭಾವಕ್ಕೆ ಒಲಿದ ಶ್ರೀ ಮಠದಯ್ಯನವರು ತುಂಗಭದ್ರೆಯ ದಡದಲ್ಲಿ ಮಠವನ್ನು ಸ್ಥಾಪಿಸಿಕೊಟ್ಟರು. ಈ ಮಠದಲ್ಲಿ ಶಿವಾನುಭವ ಗೋಷ್ಠಿಗಳು, ವೀರಶೈವ ಸಿದ್ಧಾಂತದ ಬಗ್ಗೆ ಚರ್ಚೆಗಳು ನಡೆಯತೊಡಗಿದವು. ಹನ್ನೆರಡನೆಯ ಶತಮಾನದ ಅನುಭವ ಮಂಟಪದ ರೀತಿಯಲ್ಲಿ ಅನೇಕ ಜ್ಞಾನಿಗಳು ಇಲ್ಲಿ ನೆಲೆಗೊಂಡರು. ನಂತರ ವೀರಶೈವ ಧರ್ಮದ ಪ್ರಚಾರಕ್ಕೆ ಸಮರ್ಥ ವಟುಗಳನ್ನು ರೂಪಿಸಲು ಮುಂದಾದರು. ಈ ರೀತಿ ವ್ಯಾಪಕವಾದ ಕಾರ್ಯಕ್ರಮಗಳನ್ನು ರೂಪಿಸುವ ಮೂಲಕ ಮಠವು ವಿಸ್ತಾರವಾಗಿ ಬೆಳೆಯಿತು.

ಪರಂಪರೆ:

೧. ಶ್ರೀ ಮ.ನಿ.ಪ್ರ. ಚನ್ನವೀರ ಶಿವಯೋಗಿಗಳು
೨. ಶ್ರೀ ಮ.ನಿ.ಪ್ರ. ಪ್ರಸಾದಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ನಂಜುಂಡಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಗುರುಲಿಂಗಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ತಿಪ್ಪಯ್ಯಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಚನ್ನವೀರಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಚನ್ನವೀರಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಮಠದ ಕರ್ತೃಗುರುಗಳಾದ ಶ್ರೀ ಚನ್ನವೀರ ಶಿವಯೋಗಿಗಳ ಕೃಪಾಶೀರ್ವಾದದಿಂದ ಎರಡನೆಯ ಗುರುಗಳಾಗಿ ಪಟ್ಟಾಧಿಕಾರವನ್ನು ವಹಿಸಿಕೊಂಡ ಶ್ರೀ ಪ್ರಸಾದ ಸ್ವಾಮಿಗಳು, ಗುರುಕರುಣೆಯಿಂದ ಬೆಳೆದರು. ಇವರು ಶಿವಯೋಗ ನಿಷ್ಠರಾಗಿ ಮಠವನ್ನು ಹೆಚ್ಚು ಅಭಿವೃದ್ಧಿಪಡಿಸಿದರು. ನಂತರ ಅಧಿಕಾರಕ್ಕೆ ಬಂದ ಎಲ್ಲಾ ಗುರುಗಳು ಶಿವಪೂಜಾ ನಿಷ್ಠರಾಗಿ ಪರಂಪರೆಯ ಮಠವನ್ನು ಬೆಳೆಸಿ ಅಭಿವೃದ್ಧಿಪಡಿಸಿದರು.

ಏಳನೆಯ ಗುರುಗಳಾದ ಶ್ರೀ ಚನ್ನವೀರ ಸ್ವಾಮಿಗಳು ಹಾವೇರಿ ಜಿಲ್ಲೆಯ ಗುತ್ತಲ ಗ್ರಾಮದ ಶ್ರೀ ಚನ್ನಬಸವಯ್ಯ ಮತ್ತು ಶ್ರೀಮತಿ ಬಸವಲಿಂಗಮ್ಮನವರ ಪುತ್ರರಾಗಿ ೧೯೦೮ರಲ್ಲಿ ಜನಿಸಿದರು. ಬಾಲ್ಯದಲ್ಲೇ ಆಧ್ಯಾತ್ಮದ ಒಲವನ್ನು ಮೈಗೂಡಿಸಿ ಕೊಂಡಿದ್ದ ಇವರಿಗೆ ಗುತ್ತಲ ಚರಂತಿ ಮಠದ ಅಧಿಕಾರವನ್ನು ಕೊಡಬೇಕೆಂಬ ಉದ್ದೇಶದಿಂದ ಸಂಸ್ಕೃತ ಕಲಿಯಲು ಹಾವೇರಿಗೆ ಕಳುಹಿಸಿದರು. ಗುರುಗಳು ಹಾವೇರಿ, ಯಾದಗಿರಿ ಮತ್ತು ಹುಬ್ಬಳ್ಳಿಯಲ್ಲಿ ವಿದ್ಯಾಭ್ಯಾಸ ಮಾಡಿ ಗುತ್ತಲ ಚರಂತಿ ಮಠದ ಬದಲಿಗೆ ಲಿಂಗನಾಯಕನಹಳ್ಳಿ ಮಠಕ್ಕೆ, ಶ್ರೀ ಅನ್ನದಾನೇಶ್ವರ ಸ್ವಾಮಿಗಳಿಂದ ಚಿನ್ಮಯ ದೀಕ್ಷೆ ಪಡೆದು ಅಧಿಕಾರವನ್ನು ವಹಿಸಿ ಕೊಂಡರು. ಇವರು ತೊಂಬತ್ತೂರು ವರ್ಷಗಳ ದೀರ್ಘಕಾಲ ಬದುಕಿ ಮಠವನ್ನು ಧಾರ್ಮಿಕವಾಗಿ ಪ್ರಖ್ಯಾತಗೊಳ್ಳುವಂತೆ ಮಾಡಿದರು. ಗುರುಗಳು ತಮ್ಮ ಜೀವಿತಾವಧಿಯಲ್ಲಿ ಶ್ರೀ ಚಂದ್ರಯ್ಯ ಮತ್ತು ಶ್ರೀಮತಿ ವೀರಮ್ಮನವರ ಪುತ್ರರಾಗಿ ೧೯೬೭ ರಲ್ಲಿ ಜನಿಸಿದ ಶ್ರೀ ಚನ್ನವೀರ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿಕೊಂಡು ೧೯೮೩ ರಲ್ಲಿ ಅಧಿಕಾರವನ್ನು ನೀಡಿದರು. ಕಾಯಕ ಯೋಗಿಗಳಾದ ಗುರುಗಳು, ಹಿರಿಯ ಗುರುಗಳು ಧಾರ್ಮಿಕ ತಳಹದಿಯ ಮೇಲೆ ವಿಸ್ತಾರವಾಗಿ ಬೆಳೆಸಿದ್ದ ಮಠವನ್ನು ಆರ್ಥಿಕವಾಗಿ ಸದೃಢಗೊಳಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಕರ್ತೃ ಗುರುಗಳಾದ ಶ್ರೀ ಚನ್ನವೀರ ಶಿವಯೋಗಿಗಳು ಜೀವಂತ ಸಮಾಧಿಯಾಗಿರುವ ಕಾರಣ, ಗುರುಗಳು ಇನ್ನೂ ಬದುಕಿದ್ದಾರೆಂಬ ನಂಬಿಕೆಯಿಂದ ಗದ್ದುಗೆಯನ್ನು ಸ್ಥಾಪಿಸಿಲ್ಲ. ಈ ಸ್ಥಳದಲ್ಲಿ ಮಂಟಪವನ್ನು ನಿರ್ಮಿಸಿ, ನಿತ್ಯ ಪೂಜೆಯನ್ನು ನಡೆಸಲಾಗುತ್ತಿದೆ. ಮಠದ ಪರಂಪರೆಯ ಗುರುಗಳ ಆರು ಗದ್ದುಗೆಗಳನ್ನು ಮಠದ ಹೊರಭಾಗದಲ್ಲಿ ಸ್ಥಾಪಿಸಲಾಗಿದೆ. ಮಠದಲ್ಲಿ ಪ್ರತಿನಿತ್ಯ ಪೂಜೆ, ಅಮಾವಾಸ್ಯೆಯಲ್ಲಿ ಶಿವಾನುಭವಗೋಷ್ಠಿ, ಕರ್ತೃ ಗುರುಗಳ ಪುಣ್ಯಾರಾಧನೆ ಕಾರ್ಯಕ್ರಮ ಹಾಗೂ ಅನ್ನ ದಾಸೋಹವನ್ನು ನಡೆಸಲಾಗುತ್ತಿದೆ. ತುಂಗಭದ್ರಾ ನದಿಯ ದಡದಲ್ಲಿ ಸ್ಥಾಪನೆಯಾಗಿರುವ ಈ ಮಠದ ಧಾರ್ಮಿಕ ವಾತಾವರಣವನ್ನು ನಿಸರ್ಗವು ಇಮ್ಮಡಿಗೊಳಿಸಿದೆ. ಈ ಮಠವು ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ

ಕ್ಷೇತ್ರದಲ್ಲಿ ಹಿರಿಯಣ್ಣನಂತೆ ಕೆಲಸ ಮಾಡಿ ಧರ್ಮವನ್ನು ಬೆಳೆಸಿದೆ.

ವಿಳಾಸ: ಶ್ರೀ ಮ.ನಿ.ಪ್ರ.ಚನ್ನವೀರ ಸ್ವಾಮಿಗಳು, ಶ್ರೀ ಹಾಲುವರ್ತಿ ಚನ್ನವೀರಸ್ವಾಮಿ ಮಠ, ಲಿಂಗನಾಯಕನಹಳ್ಳಿ, ಹೂವಿನ ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
ಆಧಾರ: 'ಶ್ರೀ ಚನ್ನವೀರ ವಿಲಾಸ' (ಪುರಾಣ) ಲೇಖಕರು : ಶ್ರೀ ಮ.ನಿ.ಪ್ರ. ನಿರೂಪಾದಿ ಸ್ವಾಮಿಗಳು

ಹಿರೇಹಡಗಲಿ

ಹೂವಿನಹಡಗಲಿ ತಾಲ್ಲೂಕಿನ ಹಿರೇಹಡಗಲಿಯು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಎಂಟು ಕಿ.ಮೀ. ದೂರದಲ್ಲಿದೆ. ಇಲ್ಲಿ ಪುರಾತನ ಕಾಲದ ಶ್ರೀ ಹಾಲುಸ್ವಾಮಿ ಮಠವು ಸ್ಥಾಪನೆಯಾಗಿದೆ.

ಹಾಲುಸ್ವಾಮಿಮಠ: ಹಿರೇಹಡಗಲಿ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಾಲುಸ್ವಾಮಿ ಮಠವು ದಾವಣಗೆರೆ ಜಿಲ್ಲೆಯ ರಾಂಪುರದ ಶ್ರೀ ಹಾಲುಸ್ವಾಮಿ ಮಠದ ಪರಂಪರೆಯಲ್ಲಿ ಬೆಳೆದು ಧಾರ್ಮಿಕ ಆಚರಣೆಗಳನ್ನು ನಡೆಸುತ್ತಾ ಅಸ್ತಿತ್ವದಲ್ಲಿ ಉಳಿದು ಬಂದಿದೆ.

ಮಠ ಸ್ಥಾಪನೆ: ನೂರಹದಿನೈದು ವರ್ಷಗಳ ಹಿಂದೆ ಶ್ರೀ ಹಾಲವೀರಪ್ಪಯ್ಯ ಸ್ವಾಮಿಗಳು ಲೋಕಸಂಚಾರ ಕೈಗೊಂಡು ರಾಂಪುರದ ಹಾಲುಸ್ವಾಮಿ ಮಠದ ಗುರುಗಳ ಕೃಪಾಶೀರ್ವಾದದಿಂದ ಇಲ್ಲಿಗೆ ಬಂದು ಅನುಷ್ಠಾನಗೊಂಡು ಮಠ ಸ್ಥಾಪಿಸಿ ಲಿಂಗೈಕ್ಯರಾಗಿದ್ದಾರೆ.

ಪರಂಪರೆ: ಶ್ರೀಶೈಲ ಪೀಠದ ಶಾಖಾಮಠವಾಗಿರುವ ಶ್ರೀ ಹಾಲುಸ್ವಾಮಿ ಮಠಕ್ಕೆ ಎರಡನೆಯ ಗುರುಗಳಾಗಿ ಶ್ರೀ ಹಾಲಶಂಕರ ಸ್ವಾಮಿಗಳು ಅಧಿಕಾರಕ್ಕೆ ಬಂದು ಹೊಸ ಕಟ್ಟಡವನ್ನು ನಿರ್ಮಿಸಿ, ಧರ್ಮೋಪದೇಶವನ್ನು ಮಾಡಿ ಜನಮನ್ನಣೆಗೆ ಪಾತ್ರರಾದರು. ಪರಂಪರೆಯ ಗುರುಗಳು ಮಠದ ವಿಶಿಷ್ಟ ಆಚರಣೆಯಾದ ಮುಳ್ಳು ಗದ್ದುಗೆಯ ಉತ್ಸವವನ್ನು ವಿಶೇಷವಾಗಿ ಆಚರಿಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಹಾಲಶಂಕರ ಸ್ವಾಮಿಗಳು, ಶ್ರೀ ಹಾಲುಸ್ವಾಮಿಮಠ, ಹಿರೇಹಡಗಲಿ, ಹೂವಿನಹಡಗಲಿ ತಾ, ಬಳ್ಳಾರಿ ಜಿಲ್ಲೆ.

ಹೂವಿನಹಡಗಲಿ

ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿಯು ಜಿಲ್ಲಾ ಕೇಂದ್ರದಿಂದ ಪಶ್ಚಿಮಕ್ಕೆ ಎಂಬತ್ತು ಕಿ.ಮೀ ದೂರದಲ್ಲಿದೆ. ತಾಲ್ಲೂಕು ಕೇಂದ್ರಸ್ಥಳವಾಗಿರುವ ಹೂವಿನಹಡಗಲಿಯಲ್ಲಿ ಶ್ರೀ ಕೊಪ್ಪಳ ಗವಿಸಿದ್ಧೇಶ್ವರ ಸಂಸ್ಥಾನಮಠ, ಶ್ರೀ ಮಲ್ಲನಕೆರೆ ಮಠ ಮತ್ತು ಶ್ರೀ ಚರಂತಿ ಮಠಗಳು ಸ್ಥಾಪನೆಗೊಂಡು, ಧಾರ್ಮಿಕ ಚಟುವಟಿಕೆಗಳನ್ನು ನಡೆಸಿ ಧರ್ಮ ಸಂಸ್ಕಾರವನ್ನು ನೀಡಿವೆ.

ಕೊಪ್ಪಳ ಗವಿಸಿದ್ಧೇಶ್ವರ ಸಂಸ್ಥಾನಮಠ: ಹೂವಿನಹಡಗಲಿ ಪಟ್ಟಣದ ಮಧ್ಯದಲ್ಲಿ ಶ್ರೀ ಕೊಪ್ಪಳ ಗವಿಸಿದ್ಧೇಶ್ವರ ಸಂಸ್ಥಾನ ಮಠವು ಸ್ಥಾಪನೆಯಾಗಿದೆ. ಚೀಲಾಳ ಸಮಯದ ವಿರಕ್ತ ಸಂಪ್ರದಾಯದ ಈ ಮಠವು ಹದಿನೆಂಟನೆಯ ಶತಮಾನದಲ್ಲಿ ಶ್ರೀ ಕೊಪ್ಪಳದ ಗವಿಸಿದ್ಧೇಶ್ವರ ಮಠದ ಮಠಾಧೀಶರಾಗಿದ್ದ ಶ್ರೀ ಶಾಂತವೀರ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟಿದೆ. ಅಂದಿನಿಂದ ಈತನಕ ತನ್ನ ಪರಂಪರೆಯನ್ನು ಬೆಳೆಸಿಕೊಂಡು ಧಾರ್ಮಿಕ ಆಚರಣೆಗಳನ್ನು ಮಾಡುವ ಮೂಲಕ ಸಮಾಜವನ್ನು ಬೆಳೆಸಿದೆ.
ಮಠ ಸ್ಥಾಪನೆ: ಕೊಪ್ಪಳ ಗವಿಮಠದ ಮಠಾಧೀಶರಾದ ಮಹಾತಪಸ್ವಿ ಶ್ರೀ ಶಾಂತವೀರಸ್ವಾಮಿಗಳು ಲೋಕಸಂಚಾರ ಕೈಗೊಂಡು ಇಲ್ಲಿ ಬಂದು ನೆಲೆಸಿ, ಅನುಷ್ಠಾನ ಕೈಗೊಂಡು ಭಕ್ತರಿಗೆ ಧರ್ಮೋಪದೇಶವನ್ನು ಮಾಡಿ ಸಮಾಜವನ್ನು ಬೆಳೆಸಿ ಲಿಂಗೈಕ್ಯರಾದರು. ಗುರುಗಳ ಗದ್ದುಗೆಯನ್ನು ಸ್ಥಾಪಿಸಿದ ಭಕ್ತರು ಈ ಜಾಗೃತ ಸ್ಥಳದಲ್ಲಿ ಧರ್ಮಕಾರ್ಯಗಳು ನಿರಂತರವಾಗಿ ನಡೆಯಬೇಕೆಂಬ ಉದ್ದೇಶದಿಂದ ಮಠವನ್ನು ಸ್ಥಾಪಿಸಿದರು.

ಈ ಮಠವನ್ನು ಸ್ಥಾಪಿಸಿದ ನಂತರ ಅಧಿಕಾರಕ್ಕೆ ಬಂದ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ಲಭ್ಯವಿಲ್ಲ. ಶ್ರೀ ಲಿಂಗೇಶ್ವರ ಸ್ವಾಮಿಗಳು ಕೊಪ್ಪಳ ಗವಿ ಮಠದ ಶ್ರೀ ಶಿವಶಾಂತೇಶ್ವರ ಸ್ವಾಮಿಗಳಿಂದ ಅನುಗ್ರಹ ಪಡೆದು, ೧೯೬೨ ರ

ನವೆಂಬರ್ ಎರಡರಂದು ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಗುರುಗಳು ಪುರಾತನ ಮಠ ಮತ್ತು ಸಮಾಜದ ಹೊಸ ಕೊಂಡಿಯಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಪುರಾತನ ಕಾಲದಲ್ಲಿ ನಿರ್ಮಿಸಲಾದ ಕಲ್ಲಿನ ಭವ್ಯ ಕಟ್ಟಡದಲ್ಲಿ ಸ್ಥಾಪನೆಯಾಗಿರುವ ಗದ್ದುಗೆಗಳಿಗೆ ನಿತ್ಯಪೂಜೆ, ಶಿವಾನುಭವ ಕಾರ್ಯಕ್ರಮ, ಶ್ರಾವಣಮಾಸದಲ್ಲಿ ಪುರಾಣ ಪ್ರವಚನ, ಕಾರ್ತೀಕದಲ್ಲಿ ದೀಪೋತ್ಸವವನ್ನು ನಡೆಸಲಾಗು ತ್ತಿದೆ. ಫೆಬ್ರವರಿ ತಿಂಗಳಿನಲ್ಲಿ ಶ್ರೀ ಶಾಂತವೀರ ಸ್ವಾಮಿಗಳ ಪುಣ್ಯಾರಾಧನೆಯನ್ನು ಆಚರಿಸಲಾಗುತ್ತಿದೆ. ಮಠದಲ್ಲಿ ನಿತ್ಯ ಅನ್ನದಾಸೋಹವನ್ನು ನಡೆಸುತ್ತಿದ್ದು, ಇದಕ್ಕಾಗಿ ವಿಶಾಲ ದಾಸೋಹ ಮಂದಿರವನ್ನು ನಿರ್ಮಿಸಲಾಗಿದೆ. ಶ್ರೀ ಲಿಂಗೇಶ್ವರ ಸ್ವಾಮಿಗಳು ತಮ್ಮ ಕ್ರಿಯಾಶೀಲ ಗುಣಗಳಿಂದ ಮಠದಲ್ಲಿ ಧಾರ್ಮಿಕ ಚಟುವಟಿಕೆಗಳನ್ನು ಚುರುಕುಗೊಳಿಸಿ, ಬಸವಾದಿ ಪ್ರಮಥರ ತತ್ತ್ವಗಳನ್ನು ಪ್ರಚಾರ ಮಾಡುತ್ತಾ ಭಕ್ತರ ಮನ ಗೆದ್ದಿದ್ದಾರೆ. ಮಠವನ್ನು ಈ ಪಟ್ಟಣದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿ ಬೆಳೆಸಿ ಸಮಷ್ಟಿ ಜನಾಂಗದ ಒಳಿತಿಗಾಗಿ ಶ್ರಮಿಸುತ್ತಿದ್ದಾರೆ.

ಶೈಕ್ಷಣಿಕ ಕಾರ್ಯಗಳು: ಮಠದ ಆವರಣದಲ್ಲಿ ಸಂಸ್ಕೃತ ಮತ್ತು ವೇದಶಾಲೆಯನ್ನು ಪ್ರಾರಂಭಿಸಲಾಗಿದೆ. ಮಠದಲ್ಲಿ ಇಪ್ಪತ್ತುಜನ ವಿದ್ಯಾರ್ಥಿಗಳಿಗೆ ಆಶ್ರಯ ಕಲ್ಪಿಸಲಾಗಿದೆ. ಇತ್ತೀಚೆಗೆ ಮೂವತ್ತು ಲಕ್ಷರೂಪಾಯಿ ಯೋಜನೆಯಲ್ಲಿ ಕಲ್ಯಾಣ ಮಂಟಪವನ್ನು ನಿರ್ಮಿಸಿ, ಸಾರ್ವಜನಿಕರ ಉಪಯೋಗಕ್ಕೆ ನೀಡಲಾಗಿದೆ. ಮಠದ ಆಸ್ತಿಯನ್ನು ಅಭಿವೃದ್ಧಿಪಡಿಸಿ, ಇದರಿಂದ ಬರುವ ಆದಾಯವನ್ನು ಶಿಕ್ಷಣ ಹಾಗೂ ದಾಸೋಹಕ್ಕೆ ಬಳಕೆ ಮಾಡಿಕೊಳ್ಳಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಲಿಂಗೇಶ್ವರ ಸ್ವಾಮಿಗಳು, ಶ್ರೀ ಕೊಪ್ಪಳ ಗವಿಸಿದ್ಧೇಶ್ವರ ಸಂಸ್ಥಾನಮಠ, ಹೂವಿನಹಡಗಲಿ, ಬಳ್ಳಾರಿ ಜಿಲ್ಲೆ.

ಮಲ್ಲನಕೆರೆಮಠ: ಹೂವಿನಹಡಗಲಿ ಮಧ್ಯದಲ್ಲಿ ಶ್ರೀ ಮಲ್ಲನಕೆರೆ ಮಠವು ಸ್ಥಾಪನೆಯಾಗಿದೆ. ಶ್ರೀ ಚನ್ನಬಸವೇಶ್ವರ ಸ್ವಾಮಿಗಳು ಮಲ್ಲನಕೆರೆಯಿಂದ ಬಂದು ಇಲ್ಲಿ ನೆಲೆಸಿ ಮಠವನ್ನು ಸ್ಥಾಪನೆಮಾಡಿ, ಧಾರ್ಮಿಕ ಆಚರಣೆಗಳನ್ನು ನಡೆಸಿ ಮಠವನ್ನು ಬೆಳಕಿಗೆ ತಂದರು. ಶ್ರೀ ಚನ್ನಬಸವೇಶ್ವರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಮಠವು ಉತ್ತರಾಧಿಕಾರಿಗಳಿಲ್ಲದೆ ಕೆಲವು ವರ್ಷಗಳ ಕಾಲ ಖಾಲಿ ಉಳಿದಿತ್ತು. ಈಗ ಹಿರಿಯ ಗುರುಗಳ ಹೆಸರನ್ನೇ ಅಭಿಧಾನ ಮಾಡಿ ಶ್ರೀ ಚನ್ನಬಸವೇಶ್ವರ ಸ್ವಾಮಿಗಳನ್ನು ಪಟ್ಟಾಧಿಕಾರಕ್ಕೆ ತರಲಾಗಿದೆ. ಗುರುಗಳು ಪರಂಪರಾಗತ ಧಾರ್ಮಿಕ ಕಾರ್ಯಗಳ ಜೊತೆಗೆ ವೀರಶೈವ ಧರ್ಮವನ್ನು ಬೆಳೆಸಿದ್ದಾರೆ.

ವಿಳಾಸ: ಶ್ರೀ ಚನ್ನಬಸವೇಶ್ವರ ಸ್ವಾಮಿಗಳು, ಶ್ರೀ ಮಲ್ಲನಕೆರೆ ಮಠ, ಹೂವಿನಹಡಗಲಿ, ಬಳ್ಳಾರಿ ಜಿಲ್ಲೆ.

ಚರಂತಿಮಠ: ಹೂವಿನಹಡಗಲಿ ಪಟ್ಟಣದ ಪುರಾತನ ಮಠಗಳಲ್ಲಿ ಒಂದಾದ ಶ್ರೀ ಚರಂತಿ ಮಠವು ಶ್ರೀ ರಂಭಾಪುರಿಪೀಠದ ಶಾಖಾಮಠವಾಗಿ ಪುರಾತನ ಕಾಲದಿಂದಲೂ ತನ್ನ ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿದೆ. ಹಿಂದಿನ ಗುರುಗಳು ಆಧ್ಯಾತ್ಮದ ಕಡೆಗೆ ಒಲವು ತೋರಿಸಿ ಮಠವನ್ನು ಆರ್ಥಿಕವಾಗಿ ಸದೃಢ ಪಡಿಸದೆ ಹೋದ ಕಾರಣ ಮಠವು ಇಂದು ದುಸ್ಥಿತಿಗೆ ಬಂದಿದೆ. ಈ ಮಠದ ಕೊನೆಯ ಕೊಂಡಿಯಾಗಿ ಶ್ರೀ ವಿಶ್ವನಾಥ ಶಿವಾಚಾರ್ಯ ಸ್ವಾಮಿಗಳು ಅಧಿಕಾರ ನಡೆಸಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಮಠದ ಧಾರ್ಮಿಕ ಚಟುವಟಿಕೆಗಳು ಸ್ಥಗಿತಗೊಂಡವು. ಇದನ್ನು ಗಮನಿಸಿದ ದೇಶಿಕರೊಬ್ಬರು ಮಠದಲ್ಲಿ ನೆಲೆಸಿ, ಧಾರ್ಮಿಕ ಕಾರ್ಯಗಳನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ದೇಶಿಕರು, ಶ್ರೀ ಚರಂತಿಮಠ, ಹೂವಿನಹಡಗಲಿ, ಬಳ್ಳಾರಿ ಜಿಲ್ಲೆ.

ಹೊಳಗುಂದಿ

ಹೂವಿನಹಡಗಲಿ ತಾಲ್ಲೂಕಿನ ಹೊಳಗುಂದಿಯು ತಾಲ್ಲೂಕು ಕೇಂದ್ರದ ಪೂರ್ವಕ್ಕೆ ಇಪ್ಪತ್ತೈದು ಕಿ.ಮೀ. ದೂರದಲ್ಲಿದೆ. ಇಲ್ಲಿ ಮುರುಘಾ ಸಮಯದ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಹೊಳಗುಂದಿಯಲ್ಲಿ ಸ್ಥಾಪನೆಯಾಗಿರುವ ಶ್ರೀ ವಿರಕ್ತಮಠವನ್ನು ಹನ್ನೆರಡನೆಯ ಶತಮಾನದಲ್ಲಿ ಜಗದ್ಗುರು ಶ್ರೀ ನಿರಾಭಾರಿ ಶೂನ್ಯ ಸಿಂಹಾಸನಾಧೀಶ್ವರ ತರೀಕೇರಿ ಚರವರೇಣ್ಯ ಶ್ರೀ ಕೆಂಪಯ್ಯ ಸ್ವಾಮಿಗಳು ಸ್ಥಾಪನೆಮಾಡಿದ್ದಾರೆ.

ಕೂಡ್ಲಿಗಿ ತಾಲ್ಲೂಕು ಕೊಟ್ಟೂರಿನ ಶ್ರೀ ಬಸವೇಶ್ವರ ಸ್ವಾಮಿಗಳ ಕ್ರಿಯಾಮೂರ್ತಿಗಳಾಗಿ, ಈ ಮಠದ ಮಠಾಧೀಶರು ಕಾರ್ಯ ನಿರ್ವಹಿಸುತ್ತಿದ್ದರು. ಶ್ರೀ ಕೊಟ್ಟೂರು ಬಸವೇಶ್ವರರು ಜೀವಂತ ಸಮಾಧಿಯಾದ ಮೇಲೆ ಅವರ ಗದ್ದುಗೆ ಪೂಜೆಯ ಸಂದರ್ಭದಲ್ಲಿ ಕ್ರಿಯೆ ನೀಡುವ ಪರಂಪರೆಯನ್ನು ಈಗಲೂ ನಡೆಸಿಕೊಂಡು ಬಂದಿದ್ದಾರೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಜಗದ್ಗುರು ನಿರಾಭಾರಿ ಶೂನ್ಯಸಿಂಹಾಸನಾಧೀಶ್ವರ ತರಿಕೇರಿ ಚರವರೇಣ್ಯ ಕೆಂಪಯ್ಯ ಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಜಗದ್ಗುರು ನಿರಾಭಾರಿ ಶೂನ್ಯಸಿಂಹಾಸನಾಧೀಶ್ವರ ಶಂಕರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಜಗದ್ಗುರು ನಿರಾಭಾರಿ ಶೂನ್ಯಸಿಂಹಾಸನಾಧೀಶ್ವರ ಎರಡನೆಯ ಶಂಕರಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಜಗದ್ಗುರು ನಿರಾಭಾರಿ ಶೂನ್ಯಸಿಂಹಾಸನಾಧೀಶ್ವರ ಮೂರನೆಯ ಶಂಕರಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಜಗದ್ಗುರು ನಿರಾಭಾರಿ ಶೂನ್ಯಸಿಂಹಾಸನಾಧೀಶ್ವರ ಶಂಕರಸ್ವಾಮಿಗಳು (ಈಗಿನವರು)

ಪರಂಪರಾಗತ ಮಠದ ಗುರುಗಳ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲದಿರುವುದರಿಂದ ಐದು ಜನ ಗುರುಗಳ ಹೆಸರನ್ನು ಮಾತ್ರ ಗುರುತಿಸಬಹುದಾಗಿದೆ. ಪರಂಪರೆಯ ಗುರುಗಳು ಅಧಿಕಾರವನ್ನು ವಹಿಸಿಕೊಳ್ಳುವ ಸಂದರ್ಭದಲ್ಲಿ ಶ್ರೀ ಶಂಕರಸ್ವಾಮಿ ಎಂದು ಹಿರಿಯ ಗುರುಗಳ ಹೆಸರನ್ನೇ ಅಭಿಧಾನ ಪಡೆದು, ಅಧಿಕಾರಕ್ಕೆ ಬರುತ್ತಿರುವ ಕಾರಣ ಪರಂಪರೆಯನ್ನು ಸ್ಪಷ್ಟವಾಗಿ ಗುರುತಿಸಲು ತೊಡಕಾಗಿದೆ.

ದಾನ ಚಿಂತಾಮಣಿ: ಈಗಿನ ಗುರುಗಳಾದ ಶ್ರೀ ಶಂಕರ ಸ್ವಾಮಿಗಳು ೧೯೬೫ ರಲ್ಲಿ ಪಟ್ಟಾಧಿಕಾರ ಪಡೆದು ಮಠದ ಅಧಿಕಾರ ವಹಿಸಿಕೊಂಡರು. ಗುರುಗಳು ಶಿವಪೂಜಾನಿಷ್ಠರಾಗಿ ಧಾರ್ಮಿಕ ಆಚರಣೆಗಳನ್ನು ನಡೆಸುತ್ತಾ ಸಮಾಜ ಮತ್ತು ಮಠವನ್ನು ಬೆಳೆಸಿದರು. ಗುರುಗಳು ವೀರಶೈವ ಧರ್ಮದ ಅಭ್ಯುದಯಕ್ಕಾಗಿ ಸದಾ ಶ್ರಮಿಸುತ್ತಾ ತಮ್ಮ ಶಾಖಾಮಠಗಳಾದ ಕೊಟ್ಟೂರು, ಉತ್ತಂಗಿ, ಉಜ್ಜಯಿನಿ, ಹನಸಿ ಮತ್ತು ಎಂ.ಬಿ.ಐನಹಳ್ಳಿ ಮಠಗಳಲ್ಲಿ ಧಾರ್ಮಿಕ ಚಟುವಟಿಕೆಗಳು ನಡೆಯುವಂತೆ ಮಾಡಿದ್ದಾರೆ. ಸಾರ್ವಜನಿಕ ಉಪಯೋಗಕ್ಕಾಗಿ ಮಠದ ಭೂಮಿಯನ್ನು ದಾನಮಾಡಿ 'ದಾನಚಿಂತಾಮಣಿ' ಎಂದು ಹೆಸರು ಪಡೆದಿದ್ದಾರೆ.

ಶಿಕ್ಷಣ: ಹನಸಿ, ಮಾಲವಿಯಲ್ಲಿ ಒಂದೊಂದು ಪ್ರೌಢಶಾಲೆ, ಕೊಟ್ಟೂರಿನಲ್ಲಿ ಸಂಸ್ಕೃತ ಪಾಠಶಾಲೆ ಹಾಗೂ ಹೊಳಗುಂದಿಯಲ್ಲಿ ಸಾರ್ವಜನಿಕ ಗ್ರಂಥಾಲಯವನ್ನು ಪ್ರಾರಂಭಿಸಿ ಜ್ಞಾನಾರ್ಜನೆಗೆ ನೆರವಾಗಿದ್ದಾರೆ. ಹೊಳಗುಂದಿಯಲ್ಲಿ ಸರ್ಕಾರಿ ಪ್ರೌಢಶಾಲೆ ಮತ್ತು ಕಿರಿಯ ಕಾಲೇಜು ನಿರ್ಮಿಸಲು ಹನ್ನೊಂದು ಎಕರೆ ಭೂಮಿ, ಹನಸಿ ಗ್ರಾಮದಲ್ಲಿ ಸಾರ್ವಜನಿಕ ವಿದ್ಯಾರ್ಥಿನಿಲಯ ಸ್ಥಾಪಿಸಲು ಸರ್ಕಾರಕ್ಕೆ ಏಳು ಎಕರೆ ಭೂಮಿ, ಕೊಟ್ಟೂರಿನಲ್ಲಿ ಶಾಲೆ ನಿರ್ಮಿಸಲು ಸರ್ಕಾರಕ್ಕೆ ಭೂಮಿಯನ್ನು ದಾನಮಾಡಿ, ಜ್ಞಾನಜ್ಯೋತಿ ಬೆಳಗುವಂತೆ ಮಾಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯಪೂಜೆ ಮತ್ತು ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಹೊರಗಿನಿಂದ ಬರುವ ಭಕ್ತರಿಗೆ ಮಠದಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗಿದೆ. ಪರಂಪರಾಗತ ವಾಗಿ ಬಂದ ಗುರುಗಳ ಪೂಜಾ ಸಾಮಗ್ರಿಗಳು ಲಭ್ಯ ಇವೆ.

ವಿಳಾಸ: ಶ್ರೀ ಮ.ನಿ.ಪ್ರ.ಶಂಕರ ಸ್ವಾಮಿಗಳು, ಶ್ರೀ ವಿರಕ್ತಮಠ, ಹೊಳಗುಂದಿ, ಹೂವಿನಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.

❑

ಹೊಸಪೇಟೆ ತಾಲ್ಲೂಕು

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕು ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಅಭಿವೃದ್ಧಿಯನ್ನು ಸಾಧಿಸಿದೆ. ಇಂತಹ ಶ್ರೀಮಂತ ತಾಲ್ಲೂಕಿನಲ್ಲಿ ಪ್ರಸ್ತುತ ಐದು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯ ನಡೆಸುತ್ತಿವೆ.

ಕಂಪ್ಲಿ

ಹೊಸಪೇಟೆ ತಾಲ್ಲೂಕಿನ ಕಂಪ್ಲಿಯು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಇಪ್ಪತ್ತೇಳು ಕಿ.ಮೀ. ದೂರದಲ್ಲಿದೆ. ಇಲ್ಲಿ ಚೀಲಾಳ ಸಮಯದ ಶ್ರೀ ಕಲ್ಮಠ ಮತ್ತು ಶ್ರೀ ರಂಭಾಪುರಿ ಪೀಠದ ತಗ್ಗಿನ ಮಠ ಸ್ಥಾಪನೆಯಾಗಿವೆ.

ಕಲ್ಮಠ: ಕಂಪ್ಲಿ ಗ್ರಾಮದ ನೈರುತ್ಯದ ಹೊರಭಾಗದಲ್ಲಿ ತುಂಗಭದ್ರಾ ನದಿಯ ದಡದ ಮೇಲೆ ಶ್ರೀ ಕಲ್ಮಠವು ಸ್ಥಾಪನೆಯಾಗಿದೆ. ಸುಮಾರು ಆರುನೂರು ವರ್ಷಗಳ ಹಿಂದೆ ಪ್ರಾರಂಭವಾಗಿರಬಹುದಾದ ಈ ಮಠವು ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಪ್ರಗತಿಯನ್ನು ಸಾಧಿಸಿ ಈ ಗ್ರಾಮದ ಧಾರ್ಮಿಕ ಚಟುವಟಿಕೆಯ ಕೇಂದ್ರ ಸ್ಥಾನವಾಗಿ ಬೆಳೆದಿದೆ.

ಮಠಸ್ಥಾಪನೆ: ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಲ್ಲಿ ಎರಡಕೆರೆ ಗ್ರಾಮದ ವಿರಕ್ತಮಠದ ಶ್ರೀ ಗುರುಸಿದ್ಧೇಶ್ವರ ಸ್ವಾಮಿಗಳು ಲೋಕಸಂಚಾರ ಕೈಗೊಂಡು ತುಂಗಭದ್ರಾ ನದಿಯ ಈ ಪ್ರಶಾಂತ ಸ್ಥಳದಲ್ಲಿ ಅನುಷ್ಠಾನಗೊಂಡರು. ಇವರು ಇಲ್ಲಿ ನೆಲೆ ನಿಂತು ಭಕ್ತರಿಗೆ ಧರ್ಮೋಪದೇಶವನ್ನು ನೀಡಿ ಜಾಗೃತಗೊಳಿಸಿದರು. ಇದರಿಂದ ಮಠವು ಹೆಚ್ಚು ಹೆಸರು ಪಡೆಯಿತು. ದಿನದಿನಕ್ಕೆ ಮಠ ದಲ್ಲಿ ಧಾರ್ಮಿಕ ಕಾರ್ಯಗಳು ಹೆಚ್ಚಾಗತೊಡಗಿದವು. ಇದನ್ನು ಕೇಳಿ ತಿಳಿದ ವಿಜಯನಗರದ ಅರಸರು ವಿಶಾಲವಾದ ಹಾಗೂ ಸುಸಜ್ಜಿತವಾದ ಕಲ್ಮಠವನ್ನು ನಿರ್ಮಿಸಿಕೊಟ್ಟರು

ಪರಂಪರೆ: ಕರ್ತೃಗುರುಗಳಾದ ಶ್ರೀ ಗುರುಸಿದ್ಧ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಅಧಿಕಾರಕ್ಕೆ ಬಂದ ಶ್ರೀ ಪ್ರಭುಸ್ವಾಮಿಗಳು, ಸಂಚಾರ ಕೈಗೊಂಡು ಭಕ್ತರನ್ನು ಸಂಘಟಿಸಿ ಧರ್ಮಜಾಗೃತಿ ಮಾಡಿದರು. ಬಸವಾದಿ ಶರಣರು ಸಾರಿದ ತತ್ತ್ವಗಳನ್ನು ಭಕ್ತರಿಗೆ ಮುಟ್ಟಿಸಿದರು. ಎರಡನೆಯ ಶ್ರೀ ಪ್ರಭುಸ್ವಾಮಿಗಳು ಹಿರಿಯ ಗುರುಗಳು ನಡೆಸುತ್ತಿದ್ದ ಧಾರ್ಮಿಕ ಕಾರ್ಯಗಳನ್ನು ಮುಂದುವರೆಸಿ ಜನಮನ್ನಣೆ ಪಡೆದುಕೊಂಡರು. ಇವರ ಕಾಲದಲ್ಲಿ ಮಠವು ನವೀಕರಣಗೊಂಡು ವಿಸ್ತಾರವಾಗಿ ಬೆಳೆಯಿತು. ನಂತರ ಅಧಿಕಾರಕ್ಕೆ ಬಂದ ಹತ್ತುಜನ ಗುರುಗಳು ಶ್ರೀ ಪ್ರಭುಸ್ವಾಮಿಗಳೆಂದು ಅಭಿಧಾನ ಪಡೆದುಕೊಂಡು ಅಧಿಕಾರಕ್ಕೆ ಬಂದಿದ್ದಾರೆ.

೧೯೫೭ ರಲ್ಲಿ ಪಟ್ಟಾಧಿಕಾರಕ್ಕೆ ಬಂದ ಒಂಬತ್ತನೆಯ ಶ್ರೀ ಪ್ರಭುಸ್ವಾಮಿಗಳು ಮಠವು ಶೈಕ್ಷಣಿಕವಾಗಿ ಸೇವೆ ಸಲ್ಲಿಸಲು ಅನುವು ಮಾಡಿಕೊಟ್ಟರು. ಕ್ರಿಯಾಶೀಲರಾಗಿ ಆಂಧ್ರಪ್ರದೇಶದಲ್ಲಿರುವ ಶಾಖಾಮಠಗಳನ್ನು ಅಭಿವೃದ್ಧಿಪಡಿಸಿ ಧರ್ಮಪ್ರಚಾರ ಕೈಗೊಂಡು ಮಠದ ಭಕ್ತರಿಗೆ ಧಾರ್ಮಿಕ ಸಂಸ್ಕಾರವನ್ನು ನೀಡಿ ಬೆಳೆಸಿದರು. ಪರಂಪರೆಯ ಹತ್ತನೆಯ ಗುರುಗಳಾಗಿ ಅಧಿಕಾರ ವಹಿಸಿಕೊಂಡ ಶ್ರೀ ಪ್ರಭುಸ್ವಾಮಿಗಳು ಧಾರ್ಮಿಕ ಕಾರ್ಯಗಳ ಜೊತೆಗೆ ಶೈಕ್ಷಣಿಕ ಪ್ರಗತಿಯನ್ನು ಸಾಧಿಸಿ ಮಠವನ್ನು ಬೆಳೆಸಿದರು.

ಧಾರ್ಮಿಕ ಕಾರ್ಯಗಳು: ಕರ್ತೃಗುರು ಶ್ರೀ ಗುರುಸಿದ್ಧೇಶ್ವರ ಸ್ವಾಮಿಗಳು, ಶ್ರೀ ಪ್ರಭುಸ್ವಾಮಿಗಳು, ಎರಡನೆಯ ಶ್ರೀ ಪ್ರಭುಸ್ವಾಮಿಗಳು ಹಾಗೂ ಒಂಬತ್ತನೆಯ ಶ್ರೀ ಪ್ರಭು ಸ್ವಾಮಿಗಳ ಗದ್ದುಗೆಗಳು ಮಠದ ಆವರಣದಲ್ಲಿವೆ. ಕಂಪ್ಲಿ ಗ್ರಾಮದ ಒಳಗೆ ಶ್ರೀ ಪ್ರಭುಸ್ವಾಮಿಗಳೊಬ್ಬರ ಗದ್ದುಗೆಯು ನಿರ್ಮಾಣವಾಗಿದೆ. ಹಿರಿಯಾಳ ಶಾಖಾಮಠದಲ್ಲಿ ಶ್ರೀ ಪ್ರಭು ಸ್ವಾಮಿಗಳ ಗದ್ದುಗೆಯು ಸ್ಥಾಪಿತವಾಗಿದೆ. ಈ ಗದ್ದುಗೆಗಳಿಗೆ ನಿತ್ಯಪೂಜೆ, ಕಾರ್ತೀಕ,ಶ್ರಾವಣ ಮಾಸಗಳಲ್ಲಿ ವಿಶೇಷ ಪೂಜೆ, ಹಿರಿಯ ಗುರುಗಳ ಪುಣ್ಯಾರಾಧನೆ, ಅನ್ನದಾಸೋಹ ಮತ್ತು ಜ್ಞಾನದಾಸೋಹವನ್ನು ನಡೆಸಲಾಗುತ್ತಿದೆ.

ಶಿಕ್ಷಣ ಸೇವೆ: ಕಲ್ಮಠದ ವತಿಯಿಂದ'ಶ್ರೀ ಪ್ರಭುಸ್ವಾಮಿ ಶಿಕ್ಷಣ ಸಂಸ್ಥೆ'ಯನ್ನು ಪ್ರಾರಂಭಿಸಿ, ಮಠದ ಆವರಣದಲ್ಲಿ ಪ್ರೌಢಶಾಲೆ, ಪದವಿಪೂರ್ವ ಕಾಲೇಜು, ಕೈಗಾರಿಕಾ ತರಬೇತಿ ಸಂಸ್ಥೆ ಹಾಗೂ ವಸತಿ ಶಾಲೆಯನ್ನು ಪ್ರಾರಂಭಿಸಿ ಕಂಪ್ಲಿ ಮತ್ತು ಸುತ್ತಲ ಗ್ರಾಮಗಳು ಶೈಕ್ಷಣಿಕವಾಗಿ ಬೆಳೆಯಲು ಅನುವು ಮಾಡಲಾಗಿದೆ. ತಮ್ಮ ಶಾಖಾಮಠಗಳಾದ ಗಾದಿಗನೂರು,

ಆಂಧ್ರಪ್ರದೇಶದ ದರ್ಗಾಹೊನ್ನೂರು, ಉಂತತಕಲ್ಲು, ಹಿರಿಯಾಳಗಳಲ್ಲಿ ಶಿಕ್ಷಣ ಸಂಸ್ಥೆಯ ಜತೆಗೆ ಮಠವನ್ನು ಅಭಿವೃದ್ಧಿಪಡಿಸಿ, ಧಾರ್ಮಿಕ ಚಟುವಟಿಕೆಯನ್ನು ಚುರುಕುಗೊಳಿಸಲು ಯೋಜನೆಯನ್ನು ಸಿದ್ಧಪಡಿಸಿದ್ದಾರೆ. ಈಗಾಗಲೇ ಈ ಶಾಖಾಮಠಗಳಲ್ಲಿರುವ ಆಸ್ತಿಯನ್ನು ಅಭಿವೃದ್ಧಿಪಡಿಸಿ, ಇದರಿಂದ ಬಂದ ಆದಾಯವನ್ನು ಬಳಸಿಕೊಂಡು ಮಠದ ಧಾರ್ಮಿಕ ಕಾರ್ಯ ಹಾಗೂ ಅನ್ನದಾಸೋಹವನ್ನು ಮಾಡಲಾಗುತ್ತಿದೆ.

ವಿಳಾಸ:ಶ್ರೀ ಮ.ನಿ.ಪ್ರ.ಪ್ರಭುಸ್ವಾಮಿಗಳು, ಶ್ರೀ ಕಲ್ಮಠ, ಕಂಪ್ಲಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ.

ತಗ್ಗಿನಮಠ: ಕಂಪ್ಲಿಯ ಊರೊಳಗೆ ಸ್ಥಾಪನೆಯಾಗಿರುವ ಶ್ರೀ ತಗ್ಗಿನ ಮಠವು, ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿದೆ. ಪುರಾತನ ಕಾಲದ ಈ ಮಠದಲ್ಲಿ ಮೂರು ಗದ್ದುಗೆಗಳು ಸ್ಥಾಪನೆಯಾಗಿವೆ. ಈ ಹಿಂದೆ ಶ್ರೀ ಕೊಟ್ಟೂರು ಸ್ವಾಮಿಗಳು ಅಧಿಕಾರವನ್ನು ನಡೆಸಿ ಮಠವನ್ನು ಅಭಿವೃದ್ಧಿಪಡಿಸಿ ೧೯೪೦ ರಲ್ಲಿ ಲಿಂಗೈಕ್ಯರಾದರೆಂದು ದಾಖಲಾಗಿದೆ. (ಗುರುವರ್ಗ ದರ್ಪಣ ಕೃತಿ) ಇವರ ನಂತರ ಉತ್ತರಾಧಿಕಾರಿಗಳಿಲ್ಲದೆ ಮಠ ಖಾಲಿ ಉಳಿದಿದೆ. ಪುತ್ರವರ್ಗದ ಮಠವಾಗಿರುವುದರಿಂದ ಈ ಮಠದ ವಂಶಸ್ಥರು ಮಠದ ಆಡಳಿತವನ್ನು ನೋಡಿಕೊಂಡು, ಧಾರ್ಮಿಕ ಕಾರ್ಯಗಳನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ತಗ್ಗಿನ ಮಠ, ಕಂಪ್ಲಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ.

ಬುಕ್ಕಸಾಗರ

ಹೊಸಪೇಟೆ ತಾಲ್ಲೂಕಿನ ಬುಕ್ಕಸಾಗರವು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ವಿಶ್ವವಿಖ್ಯಾತ ಹಂಪಿಯ ಸಮೀಪ ಇರುವ ಈ ಗ್ರಾಮವು ವಿಜಯನಗರದ ಬುಕ್ಕರಾಯನಿಂದ ಸ್ಥಾಪಿತವಾಗಿದೆ. ಇಲ್ಲಿ ಕಾಶಿ ಪೀಠದ ಶಾಖಾಮಠವಾದ ಶ್ರೀ ಗುರುಕರಿಸಿದ್ಧೇಶ್ವರ ಸಂಸ್ಥಾನ ಮಠವು ಅಸ್ತಿತ್ವದಲ್ಲಿದೆ.

ಗುರು ಕರಿಸಿದ್ಧೇಶ್ವರ ಸಂಸ್ಥಾನಮಠ: ಇತಿಹಾಸ ಪ್ರಸಿದ್ಧ ಬುಕ್ಕಸಾಗರದಲ್ಲಿ ಶ್ರೀ ಗುರುಕರಿಸಿದ್ಧೇಶ್ವರ ಸಂಸ್ಥಾನ ಮಠವು ಸ್ಥಾಪನೆಯಾಗಿದೆ. ಪಂಪಕ್ಷೇತ್ರದ ಎಂಟುದಿಕ್ಕಿನಲ್ಲಿ ಒಂದಾದ ಈಶಾನ್ಯ ಉಪದ್ವಾರದಲ್ಲಿ ಶ್ರೀ ಸಿದ್ಧೇಶ್ವರ ಕ್ಷೇತ್ರವು ಹೆಸರಾಗಿತ್ತು. ಇಲ್ಲಿ ಪಂಪಾವಿರೂಪಾಕ್ಷನು 'ಸಿದ್ಧೇಶ್ವರ'ನೆಂಬ ಅಭಿಧಾನದಿಂದ ನೆಲೆಸಿರುವನೆಂದು ಪಂಪಾ ಮಹಾತ್ಮೆಯಲ್ಲಿ ವರ್ಣಿಸಲಾಗಿದೆ. ಇಂತಹ ಪುಣ್ಯಕ್ಷೇತ್ರದಲ್ಲಿ ಶ್ರೀ ಕರಿಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ನೆಲೆಗೊಂಡು ಮಠವನ್ನು ಸ್ಥಾಪಿಸಿದ್ದಾರೆ.

ಮಠ ಸ್ಥಾಪನೆ: ಲೋಕಸಂಚಾರದಲ್ಲಿದ್ದ ಚರಮೂರ್ತಿ ಶ್ರೀ ಕರಿಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ನಾಡಿನ ಅನೇಕ ಭಾಗಗಳಲ್ಲಿ ಅನುಷ್ಠಾನಗೊಂಡು ಜಾಗೃತ ಸ್ಥಳಗಳನ್ನಾಗಿ ರೂಪಿಸಿ, ಇಲ್ಲಿಗೆ ಆಗಮಿಸಿ ಮಠವನ್ನು ಸ್ಥಾಪಿಸಿ ಸುಕ್ಷೇತ್ರವನ್ನಾಗಿ ಮಾಡಿದರು. ಇಲ್ಲಿ ನೆಲೆಗೊಂಡ ಮೇಲೆ ಧಾರ್ಮಿಕ ಕಾರ್ಯಗಳು ನಡೆಯತೊಡಗಿ ಸಂಸ್ಕಾರವಂತ ಸಮಾಜ ರೂಪುಗೊಂಡಿತು. ಇವರು ಲಿಂಗೈಕ್ಯರಾದ ಮೇಲೆ ಗದ್ದುಗೆಯನ್ನು ಸ್ಥಾಪಿಸಿ ಶ್ರೀ ಸಿದ್ಧನಂಜ ಸ್ವಾಮಿಗಳನ್ನು ಅಧಿಕಾರಕ್ಕೆ ತರಲಾಯಿತು.

ಪರಂಪರೆ: ಪುರಾತನ ಪರಂಪರೆಯ ಈ ಮಠದಲ್ಲಿ ಈವರೆಗೆ ಮೂವತ್ಮೂರು ಗುರುಗಳು ಪಟ್ಟಾಧಿಕಾರವನ್ನು ಪಡೆದು ಮಠ ವನ್ನು ಬೆಳೆಸಿದ್ದಾರೆ. ಪರಂಪರೆಯಲ್ಲಿ ಬರುವ ಬಹುತೇಕ ಎಲ್ಲಾ ಗುರುಗಳು ಪವಾಡ ಪುರುಷರಾಗಿ ಹೆಸರುಗಳಿಸಿ, ರಾಜ ಹಾಗೂ ಜನಮನ್ನಣೆಗೆ ಪಾತ್ರರಾಗಿದ್ದಾರೆ. ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಸಿದ್ಧನಂಜ ಸ್ವಾಮಿಗಳು ಮಠವನ್ನು ಹೆಚ್ಚು ಪ್ರಚಾರಕ್ಕೆ ತಂದರು. ಪರಂಪರೆಯ ಗುರುಗಳಾದ ಶ್ರೀ ಚಿಕ್ಕ ಕರಿಸಿದ್ಧೇಶ್ವರ ಸ್ವಾಮಿಗಳು ಮಹಾಯೋಗಿಗಳು, ಪಂಡಿತರಾಗಿದ್ದು ಮಠದಲ್ಲಿ ಅನ್ನದಾನ, ಜಂಗಮಾರ್ಚನೆ ನಡೆಸುತ್ತಿದ್ದರು. ಇವರು ವಿಭೂತಿ, ರುದ್ರಾಕ್ಷಿ ಮತ್ತು ಲಿಂಗಾಂಗ ಸಂಬಂಧದ ಬಗ್ಗೆ ಅಪಾರ ಜ್ಞಾನವನ್ನು ಸಂಪಾದಿಸಿ, ವೀರಶೈವ ಆಚಾರ ವಿಚಾರಗಳ ಬಗ್ಗೆ ಭಕ್ತರಿಗೆ ತಿಳಿವಳಿಕೆ ನೀಡಿ ಸದಾಚಾರ ಸಂಪನ್ನರನ್ನಾಗಿ ಪರಿವರ್ತಿಸಿದ್ದರು. ವೀರಶೈವ ಧರ್ಮವನ್ನಷ್ಟೇ ಅಲ್ಲದೆ ಜೈನ, ಬೌದ್ಧ ಧರ್ಮಗಳಲ್ಲೂ ಅಪಾರ ಜ್ಞಾನವನ್ನು ಸಂಪಾದಿಸಿಕೊಂಡು ಎಲ್ಲರಿಂದ ಮಾನ್ಯತೆ ಪಡೆದವರಾಗಿದ್ದರು.

ಪರಂಪರೆಯ ಹದಿಮೂರನೆಯವರಾದ ಶ್ರೀ ಯರಗಂಬಳಿ ಸ್ವಾಮಿಗಳು ಪವಾಡಪುರುಷರಾಗಿ ಮಠವನ್ನು ಹೆಚ್ಚು ಪ್ರಚಾರಕ್ಕೆ ತಂದಿದ್ದಾರೆ. ಗುರುಗಳು ಒಮ್ಮೆ ಕಂಬಳಿ ಮೇಲೆ ಕುಳಿತು ಹೊಳೆಯನ್ನು ದಾಟಿ ಆನೆಗುಂದಿ ಅರಸರ ಅರಮನೆಗೆ ಹೋಗಿದ್ದಾಗ, ಅರಮನೆಯ ಬ್ರಾಹ್ಮಣರು ಸ್ವಾಮಿಗಳ ಹೆಗಲ ಮೇಲಿದ್ದ ಕಂಬಳಿ ಮತ್ತು ಕೈಯ್ಯಲ್ಲಿದ್ದ ಕೋಲನ್ನು ನೋಡಿ ಇವನ್ಯಾವ ಪಂಡಿತ ಎಂದು ಕೀಟಲೆ ಮಾಡಿದಾಗ ಕ್ಷಣಾರ್ಧದಲ್ಲಿ ನೂರಾರು ಹುಲಿಗಳನ್ನು ಸೃಷ್ಟಿಸಿ, ಕೀಟಲೆ ನಡೆಸಿದ ಬ್ರಾಹ್ಮಣರ ಎದುರಿಗೆ ನಿಲ್ಲಿಸಿ ಅವರ ಗರ್ವಭಂಗ ಮಾಡಿದರು. ಇದನ್ನು ನೋಡಿದ ಆನೆಗುಂದಿ ಅರಸನು ಗುರುಗಳನ್ನು ಗೌರವಿಸಿ ವಿಶೇಷ ಸ್ಥಾನ ನೀಡಿದನೆಂದು ಜನಪದ ಕಥೆ ಕೇಳಿ ಬರುತ್ತಿದೆ.

ಸಂಸ್ಥಾನ ಮಠದ ಮೂವತ್ತೊಂದನೆಯ ಗುರುಗಳಾಗಿ ಅಧಿಕಾರ ಪಡೆದುಕೊಂಡ ಶ್ರೀ ಚನ್ನವೀರ ಸ್ವಾಮಿಗಳು, ಮಠದಲ್ಲಿ ಹೆಚ್ಚು ದಿನ ನೆಲೆಸದೆ ದಾವಣಗೆರೆ ಜಿಲ್ಲೆಯ ದೇವರಬೆಳಲಕೇರಿ, ಹುರುಡಿ, ಹರಿಹರ ಹಾಗೂ ಬಾಡಗಳಲ್ಲಿ ನೆಲೆಸಿದ ಕಾರಣಕ್ಕೆ ಬುಕ್ಕಸಾಗರ ಮಠದಲ್ಲಿ ಧಾರ್ಮಿಕ ಚಟುವಟಿಕೆಗಳು ಕುಂಠಿತಗೊಳ್ಳತೊಡಗಿದವು. ಇದನ್ನು ಸ್ವತಃ ಗಮನಿಸಿದ ಗುರುಗಳು ಬುಕ್ಕಸಾಗರ'ದಲ್ಲಿ ಬಂದು ನೆಲೆಸತೊಡಗಿದರು. ಗುರುಗಳು ಇಲ್ಲದೆ ಬಿಕೋ ಎನ್ನುತ್ತಿದ್ದ ಮಠದ ಸಂಬಂಧವನ್ನು ಕಳಚಿಕೊಂಡಿದ್ದ ಭಕ್ತರು ಗುರುಗಳು ಬಂದ ಮೇಲೆ ಮಠಕ್ಕೆ ಬಂದು ಹೋಗತೊಡಗಿದರು. ಈ ವೇಳೆಗಾಗಲೇ ಗುರುಗಳು ಅನಾರೋಗ್ಯಕ್ಕೆ ತುತ್ತಾಗಿಬಳಲಿ ಲಿಂಗೈಕ್ಯರಾದರು. ಇದರಿಂದ ಸಂಸ್ಥಾನ ಮಠವು ಗುರುಗಳಿಲ್ಲದೆ ಐವತ್ತು ವರ್ಷಗಳ ಕಾಲ ಖಾಲಿ ಉಳಿಯಿತು. ನಂತರ ಮೂವತ್ತೆರಡ ನೆಯ ಗುರುಗಳಾಗಿ ಶ್ರೀ ಗುರುಕರಿಸಿದ್ಧೇಶ್ವರ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳಿಗೆ ೧೯೬೪ರಲ್ಲಿ ಪಟ್ಟಾಧಿಕಾರ ಮಾಡಲಾಯಿತು.

ಕ್ರಿಯಾಶೀಲರು: ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ಬೆಳಲಗೆರೆಗ್ರಾಮದ ದೊಡ್ಡಮಠದ ಶ್ರೀಬಸಪ್ಪಯ್ಯ ಮತ್ತುಶ್ರೀಮತಿ ಗಂಗಮ್ಮನವರ ಪುತ್ರರಾಗಿ ೧೯೩೩ನೆಯ ಫೆಬ್ರವರಿ ಇಪ್ಪತ್ತರಂದು ಜನಿಸಿದ ಶ್ರೀ ಮಹಾದೇವ ಸ್ವಾಮಿಗಳು, ಬೆಳಲಗೆರೆ ಯಲ್ಲಿಯೇ ಪ್ರಾಥಮಿಕ ಶಿಕ್ಷಣವನ್ನು ಪಡೆದು ಕೋಲಾಳ, ತ್ಯಾವಣಿಗೆಯಲ್ಲಿ ಪ್ರೌಢಶಿಕ್ಷಣವನ್ನು ಮುಗಿಸಿದರು. ನಂತರ ಶ್ರೀಶೈಲ ಪೀಠದ ಧಾರ್ಮಿಕ ಪರಿಸರದಲ್ಲಿ ನೆಲೆಸಿ ಪೀಠದ ಸಮಗ್ರ ಅಭಿವೃದ್ಧಿಗೆ ನೀಲಿ ನಕ್ಷೆಯನ್ನು ತಯಾರಿಸಿ ಜಗದ್ಗುರುಗಳ ಆಶೀರ್ವಾದದಿಂದ ನಿಧಿ ಸಂಗ್ರಹಿಸಿ, ಪೀಠದಲ್ಲಿ ನಿತ್ಯ ಅನ್ನ ದಾಸೋಹಕ್ಕೆ ವ್ಯವಸ್ಥೆ ಮಾಡಿದರು. ಈ ರೀತಿ ಅನೇಕ ಅಭಿವೃದ್ಧಿ ಕಾರ್ಯಗಳಿಗೆ ನೆರವಾಗಿ ಅನುಭವವನ್ನು ಸಂಪಾದಿಸಿಕೊಂಡು, ಬುಕ್ಕಸಾಗರ ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡರು.

ಬೆಳಕಾಗಿ ಬಂದವರು: ಕಾಶಿ ಪೀಠದ ಜಗದ್ಗುರು ಶ್ರೀ ವಿಶ್ವೇಶ್ವರ ಶಿವಾಚಾರ್ಯ ಸ್ವಾಮಿಗಳಿಂದ ಅನುಗ್ರಹ ಪಡೆದು, ಶ್ರೀ ಗುರು ಕರಿಸಿದ್ಧೇಶ್ವರ ಶಿವಯೋಗಿ ಶಿವಾಚಾರ್ಯರೆಂಬ ಅಭಿಧಾನದಿಂದ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಗುರುಗಳು ಅಧಿಕಾರ ವಹಿಸಿಕೊಂಡ ಮೇಲೆ ಮಠದ ಸ್ಥಿತಿಯನ್ನು ನೋಡಿ ನಿರಾಶರಾಗದೆ ಜೀರ್ಣಾವಸ್ಥೆಯ ಮಠವನ್ನು ಅಭಿವೃದ್ಧಿಪಡಿಸಿದರು. ತಪೋನಿಷ್ಠರಾದ ಇವರು ದೀರ್ಘ ಅನುಷ್ಠಾನವನ್ನು ಮಾಡಿ ಮಠದಲ್ಲಿ ಹಂತಹಂತವಾಗಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿ, ಭಕ್ತರನ್ನು ಎಚ್ಚರಗೊಳಿಸಿದರು. ಹಳ್ಳಿಹಳ್ಳಿಗಳನ್ನು ಸುತ್ತಿ ಭಕ್ತರನ್ನು ಸಂಘಟಿಸಿದ ಗುರುಗಳು ಸಮಾಜ ಮತ್ತು ಮಠವನ್ನು ಅಭಿವೃದ್ಧಿಪಡಿಸಿದರು. ಇವರ ಕಾಲದಲ್ಲಿ ಮಠದ ಸಮುಚ್ಚಯ ಶ್ರೀಮಂತವಾಗಿ ಬೆಳೆಯಿತು. ಗುರುಗಳು ದೀರ್ಘ ಕಾಲ ಆಡಳಿತ ನಡೆಸಿ ೧೯೯೮ರ ಫೆಬ್ರವರಿಯಲ್ಲಿ ಶ್ರೀ ಕರಿಸಿದ್ಧೇಶ್ವರ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮಿಗಳಿಗೆ ಪಟ್ಟಾಧಿಕಾರ ವನ್ನು ನೀಡಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ಕಿರಿಯ ಸ್ವಾಮಿಗಳು ಹಿರಿಯ ಗುರುಗಳ ಮಾರ್ಗದರ್ಶನದಿಂದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಶಾಖಾಮಠಗಳು: ಶ್ರೀ ಚರಮೂರ್ತಿ ಕರಿಸಿದ್ಧೇಶ್ವರ ಶಿವಾಚಾರ್ಯರು ನಾಡಿನುದ್ದಕ್ಕೂ ಸಂಚರಿಸಿ ಅನುಷ್ಠಾನಗೊಂಡ ಸ್ಥಳಗಳೆಲ್ಲಾ ಕರಿಸಿದ್ಧೇಶ್ವರ ಮಠಗಳಾಗಿ ಸ್ಥಾಪಿತಗೊಂಡಿವೆ. ಹಂಪಿಯ ಹುಲಿಮಠ (ಇಲ್ಲಿ ಚಿಕ್ಕಕರಿಸಿದ್ಧ ಸ್ವಾಮಿಗಳು, ಮಹಾಂತ ಸ್ವಾಮಿಗಳು ಮತ್ತು ಚನ್ನಬಸವ ಸ್ವಾಮಿಗಳ ಗದ್ದುಗೆಗಳು ನಿರ್ಮಾಣಗೊಂಡಿವೆ.), ಕೊಪ್ಪಳ ಜಿಲ್ಲೆಯ ಹನುಮಸಾಗರ, ಮುದೋಳ, ಬೂದಗುಂಪ, ಶಿವಮೊಗ್ಗ ಜಿಲ್ಲೆಯ ಬೆಳಲಗೇರಿ, (ಸಿದ್ಧಲಿಂಗ ಸ್ವಾಮಿಗಳು ಮತ್ತು ಚನ್ನಬಸವಲಿಂಗ ಸ್ವಾಮಿಗಳ ಗದ್ದುಗೆಗಳು ನಿರ್ಮಾಣಗೊಂಡಿವೆ.)ರಾಮಪುರ, ಕೆಸೆಟ್ಟಿಹಳ್ಳಿ,(ಗುರುಸಿದ್ಧ ಸ್ವಾಮಿಗಳ ಗದ್ದುಗೆಯು ನಿರ್ಮಾಣಗೊಂಡಿದೆ)

ಸಾಲೂರು, ತೊಗರ್ಸಿ, ಬಳ್ಳಾರಿ ಜಿಲ್ಲೆಯ ಒಡ್ಡಟ್ಟಿ, ಧಾರವಾಡ ಜಿಲ್ಲೆಯ ಕುಂದಗೋಳ, ಲಕ್ಷ್ಮೇಶ್ವರದಲ್ಲಿ ಶಾಖಾಮಠಗಳು ಸ್ಥಾಪನೆಗೊಂಡಿವೆ. ಗುಲ್ಬರ್ಗ ಜಿಲ್ಲೆಯ ಮುದೋಳದ ಶಾಖಾಮಠದಲ್ಲಿ ಶ್ರೀ ಚಿಕ್ಕ ಕರಿಸಿದ್ಧೇಶ್ವರ ಸ್ವಾಮಿಗಳ ಗದ್ದುಗೆಯು ನಿರ್ಮಾಣಗೊಂಡಿದೆ. ರಾಯಚೂರು ಜಿಲ್ಲೆಯ ದೇವದುರ್ಗದಲ್ಲಿ ಶ್ರೀ ಯರಗಂಬಳಿ ಸ್ವಾಮಿಗಳು ಮತ್ತು ಈ ಮಠಕ್ಕೆ ಸಂಬಂಧಿಸಿದ ಗುರುಗಳೊಬ್ಬರ ಗದ್ದುಗೆ ನಿರ್ಮಾಣಗೊಂಡಿವೆ. ಬಿಜಾಪುರ ಜಿಲ್ಲೆಯ ಹೊನ್ನಹುಟ್ಟಿಗೆಯಲ್ಲಿ ಶ್ರೀ ಬಸವಲಿಂಗ ಸ್ವಾಮಿಗಳ ಗದ್ದುಗೆಯು ನಿರ್ಮಾಣಗೊಂಡಿದೆ. ಕೊಪ್ಪಳ ಜಿಲ್ಲೆಯ ಬೂದುಗುಂಪಾದಲ್ಲಿ ಶಾಖಾಮಠ ಇದೆ. (ಇಲ್ಲಿ ಬಾಳೆಬಸವ ಸ್ವಾಮಿಗಳು ಮತ್ತು ವಿರೂಪಾಕ್ಷ ಸ್ವಾಮಿಗಳ ಗದ್ದುಗೆಗಳು ಸ್ಥಾಪನೆಯಾಗಿವೆ.) ಈ ರೀತಿ ಅನೇಕ ಶಾಖಾಮಠಗಳು ಸ್ಥಾಪನೆಗೊಂಡಿದ್ದು ಇದರಲ್ಲಿ ಹಲವು ಮಠಗಳು ನಶಿಸಿಹೋಗಿವೆ. ಅಸ್ತಿತ್ವದಲ್ಲಿರುವ ಮಠಗಳಲ್ಲಿ ಕೆಲವು ಮಠಗಳು ಸ್ವತಂತ್ರವಾಗಿ ಬೆಳೆದಿವೆ. ಇನ್ನೂ ಕೆಲವು ಮಠಗಳು ಈ ಮಠದ ಅಧೀನದಲ್ಲಿದ್ದು, ಧಾರ್ಮಿಕ ಚಟುವಟಿಕೆಗಳನ್ನು ಮುಂದುವರೆಸಿಕೊಂಡು ಹೋಗುತ್ತಿವೆ.

ಧಾರ್ಮಿಕ ಕಾರ್ಯಗಳು: ಶಿವಯೋಗ, ಜಂಗಮಾರ್ಚನೆ, ದಾಸೋಹ, ಲಿಂಗಾನುಷ್ಠಾನಗಳು ನಡೆಯುತ್ತಾ ಬಂದಿವೆ. ೧೯೮೮ ರಲ್ಲಿ 'ನ ಭೂತೋ ನ ಭವಿಷ್ಯತಿ' ಎಂಬಂತೆ ಮಹಾರುದ್ರಯಜ್ಞ, ಪಂಚಾಚಾರ್ಯ ಸಮ್ಮೇಳನವನ್ನು ನಡೆಸಿದ್ದಾರೆ. ಈಗ ಮಠದಲ್ಲಿ ಪ್ರತಿನಿತ್ಯ ರುದ್ರಾಭಿಷೇಕ, ಶ್ರಾವಣಮಾಸದಲ್ಲಿ ಅನುಷ್ಠಾನ ಕುಳಿತು ಲೋಕೋದ್ಧಾರಕ್ಕೆ ಪ್ರಾರ್ಥನೆ ನಡೆಯುತ್ತಿವೆ. ಪ್ರತಿ ಅಮಾವಾ ಸ್ಯೆಯ ದಿನ ಹೆಚ್ಚು ಭಕ್ತರು ಸೇರಿ ಪೂಜಾಕಾರ್ಯದಲ್ಲಿ ತೊಡಗುತ್ತಾರೆ. ಅಂದು ಐದುನೂರು ಜನರಿಗೆ ಪ್ರಸಾದದ ವ್ಯವಸ್ಥೆಯು ನಡೆಯುತ್ತಿದೆ. ಪ್ರತಿನಿತ್ಯ ದಾಸೋಹದಲ್ಲಿ ಐವತ್ತರಿಂದ ನೂರುಜನರು ಮತ್ತು ವಾರ್ಷಿಕ ಆಚರಣೆಯಲ್ಲಿ ಕನಿಷ್ಟ ಒಂದರಿಂದ ಎರಡು ಸಾವಿರ ಜನ ಭಕ್ತರು ದಾಸೋಹ ಕ್ರಿಯೆಯಲ್ಲಿ ಭಾಗವಹಿಸುತ್ತಾರೆ. ಹಂಪಿಯ ವಿರೂಪಾಕ್ಷಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ಸಂಪ್ರದಾಯದಂತೆ ಈ ಮಠವೇ ದಾಸೋಹವನ್ನು ನಡೆಸುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಗುರುಕರಿಸಿದ್ಧೇಶ್ವರ ಶಿವಯೋಗಿ ಶಿವಾಚಾರ್ಯರು, ಶ್ರೀ ಗುರುಕರಿಸಿದ್ಧೇಶ್ವರ ಸಂಸ್ಥಾನಮಠ, ಬುಕ್ಕಸಾಗರ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ.
ಆಧಾರ: 'ಕರಿಸಿದ್ಧಪ್ರಭೆ' ಸ್ಮರಣ ಸಂಚಿಕೆ

ಮರಿಯಮ್ಮನಹಳ್ಳಿ

ಹೊಸಪೇಟೆ ತಾಲ್ಲೂಕಿನ ಮರಿಯಮ್ಮನಹಳ್ಳಿಯು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಗುರುಪಾದರ ದೇವರಮಠವು ಅಸ್ತಿತ್ವದಲ್ಲಿದೆ.

ಗುರುಪಾದ ದೇವರಮಠ: ಮರಿಯಮ್ಮನಹಳ್ಳಿ ಗ್ರಾಮದಲ್ಲಿ ಶ್ರೀಶೈಲಪೀಠದ ಶಾಖಾಮಠವಾಗಿ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದ ಶ್ರೀ ಗುರುಪಾದರ ದೇವರಮಠವು ೧೯೫೩ರಲ್ಲಿ ಸ್ಥಾಪನೆಯಾಗಿ, ಧಾರ್ಮಿಕ ಚಟುವಟಿಕೆಗಳ ಕೇಂದ್ರವಾಗಿ ಬೆಳೆದಿದೆ.

ಸ್ಥಳಾಂತರ: ಹೊಸಪೇಟೆಯಲ್ಲಿ ತುಂಗಭದ್ರಾ ನದಿಗೆ ಅಡ್ಡಲಾಗಿ ಕಟ್ಟಲಾದ ಅಣೆಕಟ್ಟೆಯಲ್ಲಿ ಕಣಿವೆಬಸಾಪುರ ಗ್ರಾಮವು ಮುಳುಗಡೆಯಾದಾಗ ಅಲ್ಲಿ ಸ್ಥಾಪನೆಯಾಗಿದ್ದ ಮಠವು ಮರಿಯಮ್ಮನಹಳ್ಳಿಗೆ ಸ್ಥಳಾಂತರಗೊಂಡಿದೆ. ಆ ಸಂದರ್ಭದಲ್ಲಿ ಅಧಿಕಾರದಲ್ಲಿದ್ದ ಶ್ರೀ ಗುರುಸಿದ್ಧ ಶಿವಾಚಾರ್ಯ ಸ್ವಾಮಿಗಳು ಇಲ್ಲಿ ಮಠವನ್ನು ಪುನರ್ ಸ್ಥಾಪಿಸಿ ಹೆಚ್ಚು ಅಭಿವೃದ್ಧಿಪಡಿಸಿದ್ದಾರೆ.

ಬೆಳೆದ ಪರಂಪರೆ: ಶ್ರೀ ಗುರುಸಿದ್ಧ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಪುನರ್ ಸ್ಥಾಪಿಸಿ ಆರ್ಥಿಕವಾಗಿ ಬರುವಂತಹ ಆದಾಯದ ಮೂಲವನ್ನು ನಿರ್ಮಿಸಿ, ಪರಂಪರಾಗತವಾಗಿ ಬೆಳೆದು ಬಂದ ಮಠಕ್ಕೆ ಭದ್ರಬುನಾದಿಯನ್ನು ಹಾಕಿಕೊಟ್ಟರು. ೧೯೫೬ ರಲ್ಲಿ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ಆಯ್ಕೆಮಾಡಿಕೊಂಡು ವಿದ್ಯಾಭ್ಯಾಸಕ್ಕೆ ಶಿವಯೋಗ ಮಂದಿರಕ್ಕೆ ಕಳುಹಿಸಿಕೊಟ್ಟರು. ಗುರುಗಳು ತಮ್ಮ ಕರಕಮಲ ಸಂಜಾತರಿಗೆ ಪಟ್ಟಾಧಿಕಾರವನ್ನು ಮಾಡುವ ಮುನ್ನವೇ (೧೯೬೭) ಲಿಂಗೈಕ್ಯರಾದರು.

ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಹಿರಿಯ ಗುರುಗಳ ಒತ್ತಾಸೆಯಂತೆ ಸಂಸ್ಕೃತ,ವೇದ ಹಾಗೂ

ಆಗಮ ಶಾಸ್ತ್ರಗಳನ್ನು ಅಭ್ಯಾಸಮಾಡಿ ಮಠಕ್ಕೆ ಬಂದು, ೧೯೭೬ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಇವರು ಧರ್ಮಪ್ರಚಾರ ಮತ್ತು ಭಕ್ತರ ಧಾರ್ಮಿಕ ಕ್ರಿಯೆಗಳಲ್ಲಿ ಪಾಲ್ಗೊಂಡು ಮಠ ಮತ್ತು ಸಮಾಜವನ್ನು ಬೆಳೆಸುತ್ತಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಲಿಂಗೈಕ್ಯ ಗುರುಗಳ ಗದ್ದುಗೆಯನ್ನು ಬಸವೇಶ್ವರ ದೇವಸ್ಥಾನದ ಪಕ್ಕದಲ್ಲಿ ನಿರ್ಮಿಸಿ ಮಂಟಪವನ್ನು ಮಾಡಿಸಲಾಗಿದೆ. ಹೊಳಗುಂದಿಯಲ್ಲಿ ಮಠದ ಜಮೀನಿದ್ದು ಇದನ್ನು ಅಭಿವೃದ್ಧಿಪಡಿಸಿದ್ದಾರೆ. ಜತೆಗೆ ಮರಿಯಮ್ಮನಹಳ್ಳಿಯಲ್ಲಿ ಇರುವ ಗದ್ದೆ, ತೋಟವನ್ನು ಕಾಯಕಯೋಗದಿಂದ ಅಭಿವೃದ್ಧಿಪಡಿಸಿ, ಆದಾಯದ ಮೂಲವನ್ನಾಗಿ ಮಾಡಿಕೊಂಡಿದ್ದಾರೆ.

ಧಾರ್ಮಿಕ ಆಚರಣೆ: ಹಿರಿಯ ಗುರುಗಳ ಗದ್ದುಗೆ ಹಾಗೂ ಮುಳುಗಡೆಗೊಂಡ ಮೂಲಮಠದಿಂದ ತರಲಾದ ಬಸವೇಶ್ವರರ ವಿಗ್ರಹವನ್ನು ಮಠದಲ್ಲಿ ಪ್ರತಿಷ್ಠಾಪಿಸಿ, ನಿತ್ಯ ಪೂಜೆ ಮಾಡಲಾಗುತ್ತಿದೆ. ಶಿವರಾತ್ರಿ, ಶ್ರಾವಣ, ಕಾರ್ತೀಕ ಮಾಸಗಳಲ್ಲಿ ವಿಶೇಷ ಪೂಜೆ ಹಾಗೂ ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ವೈಶಾಖ ಶುದ್ಧ ದಶಮಿಯ ದಿನದಂದು ಮಾಡಲಾಗುತ್ತಿದೆ. ಈ ದಿನಗಳಲ್ಲಿ ಅನ್ನದಾಸೋಹವನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು, ಶ್ರೀ ಗುರುಪಾದದೇವರ ಮಠ, ಮರಿಯಮ್ಮನಹಳ್ಳಿ, ಹೊಸಪೇಟೆ ತಾಲ್ಲೂಕು,ಬಳ್ಳಾರಿ ಜಿಲ್ಲೆ.

ಹೊಸಪೇಟೆ

ತಾಲ್ಲೂಕಿನ ಕೇಂದ್ರ ಸ್ಥಳವಾಗಿರುವ ಹೊಸಪೇಟೆಯು ಐತಿಹಾಸಿಕ ಪಟ್ಟಣ. ಈ ಪಟ್ಟಣ ಇಂದು ಪ್ರವಾಸಿ ತಾಣವಾಗಿ ಧಾರ್ಮಿಕವಾಗಿ ಅಭಿವೃದ್ಧಿಗೊಂಡಿದೆ. ಈ ಪಟ್ಟಣದಲ್ಲಿ ಹಿಂದೆ ಎಂಟು ಮಠಗಳು ಸ್ಥಾಪಿತವಾಗಿದ್ದವೆಂದು ಹೇಳಲಾಗುತ್ತದೆ. ಆದರೆ ಇಂದು ಕೇವಲ ಶ್ರೀ ಕೊಟ್ಟೂರು ಸ್ವಾಮಿ ಮಠವೊಂದೆ ಅಸ್ತಿತ್ವದಲ್ಲಿದೆ.

ಜಗದ್ಗುರು ಹೇಮಕೂಟ ಸಿಂಹಾಸನ ಶ್ರೀ ಕೊಟ್ಟೂರುಸ್ವಾಮಿ ಮಠ: ಬಳ್ಳಾರಿ ಜಿಲ್ಲೆಯ ಪ್ರತಿಷ್ಠಿತ ಮಠಗಳಲ್ಲಿ ಒಂದಾಗಿರುವ ಚೀಲಾಳ ಸಮಯದ, ವಿರಕ್ತಪರಂಪರೆಯ ಶ್ರೀ ಕೊಟ್ಟೂರು ಸ್ವಾಮಿ ಮಠವು ಹದಿನಾರನೆಯ ಶತಮಾನದಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಶ್ರೀ ಕಪ್ಪಿನ ಚನ್ನಬಸವ ಸ್ವಾಮಿಗಳು (ಕ್ರಿ.ಶ.೧೫೫೧) ನಡೆಸಿದ ಧಾರ್ಮಿಕ ಆಂದೋಲನದ ಸಂದರ್ಭದಲ್ಲಿ ಶ್ರೀ ಕೊಟ್ಟೂರುಸ್ವಾಮಿ ಮಠವು ಹೊಸಪೇಟೆ, ಬಳ್ಳಾರಿ, ಹಂಪಿ, ಕುಡುತಿನಿ, ಕುರುಗೋಡು ಮೊದಲಾದ ಸ್ಥಳಗಳಲ್ಲಿ ಸ್ಥಾಪನೆಯಾಗಿವೆ. ಶ್ರೀ ಕಪ್ಪಿನ ಚನ್ನಬಸವ ಸ್ವಾಮಿಗಳು ಈ ಮಠದ ಸ್ಥಾಪಕರಾದರೂ, ನಂತರ ಅಧಿಕಾರಕ್ಕೆ ಬಂದ ಶ್ರೀ ಕೊಟ್ಟೂರು ಸ್ವಾಮಿಗಳು ಬಹಳ ಪ್ರಭಾವಿಗಳಾಗಿ ಜನಮನದಲ್ಲಿ ಹೆಚ್ಚು ಹೆಸರು ಮಾಡಿದ್ದರಿಂದ ರೂಢಿಗತವಾಗಿ ಭಕ್ತರು 'ಶ್ರೀ ಕೊಟ್ಟೂರುಸ್ವಾಮಿ ಮಠ' ಎಂದು ಕರೆಯತೊಡಗಿದರು.

ಶ್ರೀ ಕಪ್ಪಿನ ಚನ್ನಬಸವ ಸ್ವಾಮಿಗಳು ಶ್ರೀ ತೋಂಟದ ಸಿದ್ಧಲಿಂಗ ಯತಿಗಳಂತೆ ಧರ್ಮಪ್ರಚಾರವನ್ನು ಕೈಗೊಂಡು, ಕಲ್ಯಾಣ, ಕಲಬುರ್ಗಿ, ಬಳ್ಳಾರಿ, ಕೊಟ್ಟೂರು, ಕುರುಗೋಡು, ಕಮಲಾಪುರ, ಹುನಗುಂದ, ಗುಳೇದಗುಡ್ಡ, ಬಾದಾಮಿ, ನರಗುಂದ, ನವಿಲುಗುಂದ, ಡಂಬಳ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಗೋಕರ್ಣ, ಕಾಶಿ, ಕೇದಾರ, ಶ್ರೀಶೈಲ, ಶಿವಗಂಗೆ ಮೊದಲಾದ ಕ್ಷೇತ್ರಗಳಲ್ಲಿ ಸಂಚರಿಸಿ, ವೀರಶೈವ ಧರ್ಮ ವ್ಯಾಪಕವಾಗಿ ಬೆಳೆಯಲು ಕಾರಣರಾದರು. ಶ್ರೀ ಕಪ್ಪಿನ ಚನ್ನಬಸವ ಸ್ವಾಮಿಗಳು ಹೊಸಪೇಟೆಯನ್ನು ಕೇಂದ್ರ ಸ್ಥಳವನ್ನಾಗಿ ಮಾಡಿಕೊಂಡು ನಾಡಿನಾದ್ಯಂತ ಧಾರ್ಮಿಕ ಕಾರ್ಯಗಳನ್ನು ನಡೆಸಿ, ಮಠವನ್ನು ಬೆಳೆಸುವ ಮೂಲಕ ಸಮಾಜವನ್ನು ಉನ್ನತಿಗೆ ತಂದರು.

ಪರಂಪರೆ:

೧.	ಶ್ರೀ ಮ.ನಿ.ಪ್ರ. ಕಪ್ಪಿನ ಚನ್ನಬಸವಸ್ವಾಮಿಗಳು	(ಕ್ರಿ.ಶ.೧೫೫೧)
೨.	ಶ್ರೀ ಮ.ನಿ.ಪ್ರ. ಸಿದ್ಧೇಶ್ವರಸ್ವಾಮಿಗಳು	(ಕ್ರಿ.ಶ.೧೫೭೧)
೩.	ಶ್ರೀ ಮ.ನಿ.ಪ್ರ. ನಿರಂಜನಪ್ರಭುಸ್ವಾಮಿಗಳು	(ಕ್ರಿ.ಶ.೧೫೪೬)
೪.	ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು	(ಕ್ರಿ.ಶ.೧೯೭೬)
೫.	ಶ್ರೀ ಮ.ನಿ.ಪ್ರ. ಪಂಚಾಕ್ಷರಿಸ್ವಾಮಿಗಳು	(ಕ್ರಿ.ಶ.೧೫೮೮)

೬. ಶ್ರೀ ಮ.ನಿ.ಪ್ರ. ಸಿದ್ಧರಾಮಸ್ವಾಮಿಗಳು (ಕ್ರಿ.ಶ.೧೬೩೦)
೭. ಶ್ರೀ ಮ.ನಿ.ಪ್ರ. ಮರಿಮಹಾಂತಸ್ವಾಮಿಗಳು (ಕ್ರಿ.ಶ.೧೬೬೨)
೮. ಶ್ರೀ ಮ.ನಿ.ಪ್ರ. ಕೊಟ್ಟೂರುಸ್ವಾಮಿಗಳು (ಕ್ರಿ.ಶ.೧೭೦೭)
೯. ಶ್ರೀ ಮ.ನಿ.ಪ್ರ. ಮರಿತೋಂಟದಾರ್ಯಸ್ವಾಮಿಗಳು (ಕ್ರಿ.ಶ.೧೭೨೭)
೧೦. ಶ್ರೀ ಮ.ನಿ.ಪ್ರ. ಮರಿಮಹಾಂತಸ್ವಾಮಿಗಳು (ಕ್ರಿ.ಶ.೧೭೩೪)
೧೧. ಶ್ರೀ ಮ.ನಿ.ಪ್ರ. ಮರಿಕೊಟ್ಟೂರುಸ್ವಾಮಿಗಳು (ಕ್ರಿ.ಶ.೧೭೩೯)
೧೨. ಶ್ರೀ ಮ.ನಿ.ಪ್ರ. ಚನ್ನಬಸವದೇವರು (ಕ್ರಿ.ಶ.೧೭೪೬)
೧೩. ಶ್ರೀ ಮ.ನಿ.ಪ್ರ. ಮರಿಕೊಟ್ಟೂರುಸ್ವಾಮಿಗಳು (ಕ್ರಿ.ಶ.೧೭೭೩)
೧೪. ಶ್ರೀ ಮ.ನಿ.ಪ್ರ. ಮರಿಮಹಾಂತಸ್ವಾಮಿಗಳು (ಕ್ರಿ.ಶ.೧೮೦೮)
೧೫. ಶ್ರೀ ಮ.ನಿ.ಪ್ರ. ಚನ್ನಬಸವೇಶ್ವರದೇವರು (ಕ್ರಿ.ಶ.೧೮೧೭)
೧೬. ಶ್ರೀ ಮ.ನಿ.ಪ್ರ. ಕೊಟ್ಟೂರುಸ್ವಾಮಿಗಳು (ಕ್ರಿ.ಶ.೧೮೪೭)
೧೭. ಶ್ರೀ ಮ.ನಿ.ಪ್ರ. ಮರಿಕೊಟ್ಟೂರುಸ್ವಾಮಿಗಳು (ಕ್ರಿ.ಶ.೧೮೯೭)
೧೮. ಶ್ರೀ ಮ.ನಿ.ಪ್ರ. ಕೊಟ್ಟೂರುಸ್ವಾಮಿಗಳು (ಕ್ರಿ.ಶ.೧೯೩೨)
೧೯. ಶ್ರೀ ಮ.ನಿ.ಪ್ರ. ಸಂಗನಬಸವಸ್ವಾಮಿಗಳು (ಕ್ರಿ.ಶ.೧೯೭೨)

ಈ ರೀತಿ ಕೊಟ್ಟೂರುಸ್ವಾಮಿ ಮಠದ ಪರಂಪರೆ ಬೆಳೆದು ಬಂದಿದೆ. ಮಠದ ಕರ್ತೃ ಗುರುಗಳಾದ ಶ್ರೀ ಕಪ್ಪಿನ ಚನ್ನಬಸವ ಸ್ವಾಮಿಗಳು ತಮ್ಮ ತರುವಾಯ ತಮ್ಮ ಕರಕಮಲ ಸಂಜಾತರಾಗಿ ಬೆಳೆದಿದ್ದ ಶ್ರೀ ಸಿದ್ಧೇಶ್ವರ ಸ್ವಾಮಿಗಳಿಗೆ ಮಠವನ್ನು ಒಪ್ಪಿಸಿದರು. ಇವರು ತಮ್ಮ ತಪೋಶಕ್ತಿಯಿಂದ ಹೆಸರು ಮಾಡಿದರು.

ಬಳ್ಳಾರಿಯ ರಾಜ ಬಾಲಹನುಮಪ್ಪ ನಾಯಕನು ಗುರುಗಳ ಪ್ರಭಾವವನ್ನು ಕಂಡು ಮಠದಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸಲು ಅಲಕುಂದೆ, ಅಂದ್ರಹಾಳು, ಗೋನಾಳು, ಮುಂಡ್ರಿಗೆ, ಮಿಂಚೇರಿ, ಬೆಳಗಲ್ಲು, ಬೊಬ್ಬುಕುಂಟೆ, ಇಮ್ರಾಪುರ, ಕಪ್ಪಗಲ್ಲು ಮೊದಲಾದ ಗ್ರಾಮಗಳಲ್ಲಿ ಭೂಮಿಯನ್ನು ಉಂಬಳಿಯಾಗಿ ನೀಡಿ ದತ್ತಿ ಪತ್ರಗಳನ್ನು ಬರೆಸಿಕೊಟ್ಟಿರುತ್ತಾನೆ. ಶ್ರೀ ಸಿದ್ಧೇಶ್ವರರ ಪ್ರಭಾವದಿಂದ ಮಠವು ಹೆಚ್ಚು ಶ್ರೀಮಂತವಾಗಿ ಬೆಳೆದು, ವೀರಶೈವ ಧರ್ಮವನ್ನು ವಿಸ್ತಾರವಾಗಿ ಬೆಳೆಸಿದೆ.

ನಂತರದ ಪರಂಪರೆಯ ಗುರುಗಳು ತಮ್ಮ ಪ್ರಭಾವದಿಂದ ಮಠವನ್ನು ಬೆಳೆಸಿದ್ದಾರೆ. ಇವರುಗಳಲ್ಲಿ ಶ್ರೀ ಮರಿ ಕೊಟ್ಟೂರು ಸ್ವಾಮಿಗಳಿಗೆ ೧೭೧೭ರಲ್ಲಿ ಬಳ್ಳಾರಿಯ ರಾಜನಾದ ಅಂಡೆ ಹಿರೇರಾಮಪ್ಪ ನಾಯಕನು ಬಳ್ಳಾರಿ ಸೀಮೆಯಸಂಗನ ಕಲ್ಲು ಗ್ರಾಮವನ್ನು ಒಪ್ಪಿಸಿದ್ದಲ್ಲದೆ, ವರ್ಷಕ್ಕೆ ಸಾವಿರ ವರಹವನ್ನು ನೀಡುವ ದಾನಶಾಸನವನ್ನು ಬರೆಸಿಕೊಟ್ಟಿದ್ದಾನೆ. ಬಳ್ಳಾರಿ, ಕುರುಗೋಡು ಹಾಗೂ ತೆಕ್ಕಲಕೋಟೆ ಮಹಾಲುಗಳ ಜಕಾತಿಯಲ್ಲಿ ಪ್ರತಿ ಮಹಾಲಿಗೂ ವಸೂಲಾದ ಕಾಲುಭಾಗದ ಹಣವನ್ನು ಮಠಕ್ಕೆ ನೀಡಿ, ಶ್ರೀ ಮರಿಕೊಟ್ಟೂರು ಸ್ವಾಮಿಗಳ ಶಿವಪೂಜಾ ಕಾರ್ಯಕ್ಕೆ ದಾನನೀಡಿರುವುದಾಗಿ ದಾನ ಶಾಸನವನ್ನು ಬರೆಸಿಕೊಡಲಾಗಿದೆ.

ಶ್ರೀ ಮರಿತೋಂಟದಾರ್ಯ ಸ್ವಾಮಿಗಳು (೧೭೨೬) ಮಠದ ಆಡಳಿತವನ್ನು ವಹಿಸಿಕೊಂಡು ಪರಂಪರೆಯ ಎಲ್ಲಾ ಶಾಖಾ ಮಠಗಳಲ್ಲಿ ಅಭಿವೃದ್ಧಿಯನ್ನು ಕೈಗೊಂಡಿದ್ದ ಸಂದರ್ಭದಲ್ಲಿ ಗುಡೇಕೋಟೆಯ ಹಿರೇಬೊಮ್ಮತ್ತ ರಾಜರು ಕುಡುತಿನಿ ವಿರಕ್ತ ಮಠದ ಧಾರ್ಮಿಕ ಕಾರ್ಯಗಳಿಗೆ ಹಾಗೂ ಶ್ರೀ ಮರಿತೋಂಟದಾರ್ಯ ಸ್ವಾಮಿಗಳ ಶಿವಪೂಜೆ ಹಾಗೂ ಧಾರ್ಮಿಕ ಪ್ರಸಾರಕ್ಕೆ ನೆರವಾಗಲು ಕುಡುತಿನಿಯ ಸುತ್ತಮುತ್ತಲಿನ ಗ್ರಾಮಗಳನ್ನು ಉಂಬಳಿಯಾಗಿ ನೀಡಿ, ದಾನ ಪತ್ರವನ್ನು ಬರೆಸಿಕೊಟ್ಟಿದ್ದಾನೆ. ನಂತರ ಮಠಾಧೀಶರಾಗಿ ಅಧಿಕಾರಕ್ಕೆ ಬಂದ ಶ್ರೀ ಮರಿಮಹಾಂತ ಸ್ವಾಮಿಗಳು ಧಾರ್ಮಿಕ ಆಚರಣೆಗಳಿಂದ ಹೆಚ್ಚು ಹೆಸರು ಪಡೆದರು. ಇವರ ಧಾರ್ಮಿಕ ಕಾರ್ಯಗಳಿಗೆ ವಿದ್ಯಾನಗರದ ಆನೆಗುಂದಿ ಮಹಾರಾಜ ವೆಂಕಟಪತಿ ರಾಯರು ಕೃಷ್ಣಾಪುರ, ಕಮಲಾಪುರ, ಆನೆಗುಂದಿ, ಸಂಡೂರು ಮುಂತಾದ ಗ್ರಾಮಗಳ ಕಂದಾಯವನ್ನು ಕರ್ಪೂರ ಕಾಣಿಕೆಗೆ ನೀಡಿದ್ದಾನೆ.

ಮಠದ ದಾಸೋಹಕ್ಕೆ ಜಕಾತಿ ಕಟ್ಟೆಗಳ ವಸೂಲಿ ಹಣದಲ್ಲಿ ಮೇಲು ಕಾಸೆಂದು ಹಣವನ್ನು ನೀಡಿದ್ದಲ್ಲದೆ, ಪ್ರತಿನಿತ್ಯ ಆತಿಥ್ಯ, ಶ್ರಾವಣಮಾಸದಲ್ಲಿ ಇಪ್ಪತ್ತು ಗಣಂಗಳಿಗೆ, ಕಾರ್ತೀಕ ಮಾಸದಲ್ಲಿ ನಿತ್ಯ ಐವತ್ತು ಗಣಂಗಳಿಗೆ, ಜಾತ್ರೆಯ ಕಾಲದಲ್ಲಿ ಐದು ದಿವಸ ನಿತ್ಯ ನೂರು ಗಣಂಗಳಿಗೆ, ಆತಿಥ್ಯ ಮತ್ತು ಸತ್ಕಾರ,ಹಂಪಿವಿರೂಪಾಕ್ಷೇಶ್ವರ ದೇವಸ್ಥಾನದಿಂದ ನಡೆಯತಕ್ಕದೆಂದು ಉಲ್ಲೇಖಿಸಿದ್ದು, ಮಾಮೂಲು ರಥೋತ್ಸವದ ಕಾಲದಲ್ಲಿ ಅಗಳ ಕಟ್ಟೆಯ ಮೇಲೆ ಮಠದ ಗುರುಗಳನ್ನು ಕೂರಿಸಿ ಎಪ್ಪತ್ತೈದು ಬಿರುದಾವಳಿಗಳ ಸಮೇತವಾಗಿ ರಥದ ಮೇಲೆ ಮುಹೂರ್ತ ಮಾಡಿಸಿ, ಕಾಣಿಕೆ ಕೊಟ್ಟು ಗೌರವಿಸುವ ಬಗ್ಗೆ ಬರೆಸಿಡ ಪತ್ರವು ಈ ಮಠದ ವಿಶಿಷ್ಟ ದಾಖಲೆಯಾಗಿದೆ.

೧೯೩೨ ರಲ್ಲಿ ಪಟ್ಟಾಧಿಕಾರಕ್ಕೆ ಬಂದ ಶ್ರೀ ಕೊಟ್ಟೂರು ಸ್ವಾಮಿಗಳು ವಾಕ್‌ಸಿದ್ಧಿ ಪುರುಷನಾಗಿದ್ದರು. ಧಾರ್ಮಿಕಪ್ರಜ್ಞೆ ಮೂಡಲು ಭಕ್ತರು ಅಕ್ಷರವಂತರಾಗಬೇಕು ಎಂಬ ಮಹಾದಾಸೆಯಿಂದ, ಬಳ್ಳಾರಿಯಲ್ಲಿ ವೀರಶೈವ ವಿದ್ಯಾವರ್ಧಕ ಸಂಘಕ್ಕೆ ನಾನೂರಅರವತ್ನಾಲ್ಕು ಎಕರೆ ಭೂಮಿಯನ್ನು ದಾನಮಾಡಿದ್ದಾರೆ. ಇದರಿಂದ ವಿದ್ಯಾವರ್ಧಕ ಸಂಘದವರು ಬಳ್ಳಾರಿಯಲ್ಲಿ 'ಶ್ರೀ ಕೊಟ್ಟೂರುಸ್ವಾಮಿ ಕಾಲೇಜು ಆಫ್ ಎಜುಕೇಶನ್' ಎಂಬ ವಿದ್ಯಾಸಂಸ್ಥೆಯನ್ನು ಸ್ಥಾಪಿಸಿ, ಶ್ರೀ ಕೊಟ್ಟೂರುಸ್ವಾಮಿ ಹೆಸರನ್ನು ಶಾಶ್ವತಗೊಳಿಸಿದ್ದಾರೆ. ಗುರುಗಳು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ನೆರವು ನೀಡಿ ೧೯೬೮ರಲ್ಲಿ ಲಿಂಗೈಕ್ಯರಾಗಿದ್ದಾರೆ.

ಸಾಧಕರ ಆಗಮನ: ಹಿರಿಯ ಗುರುಗಳ ಕರ್ತೃತ್ವ ಶಕ್ತಿ ಹಾಗೂ ರಾಜಾಶ್ರಯದಿಂದ ಬೆಳೆದ ಈ ಮಠಕ್ಕೆ ೧೯೭೨ ರಲ್ಲಿ ಶ್ರೀ ಸಂಗನಬಸವ ಸ್ವಾಮಿಗಳು ಪಟ್ಟಾಧಿಕಾರಕ್ಕೆ ಬಂದಿದ್ದು, ಹಂಪಿ ಹೇಮಕೂಟ ಶ್ರೀ ಕೊಟ್ಟೂರುಸ್ವಾಮಿ ಮಠದ ಯೋಗ ಯೋಗಾವೇ ಸರಿ. ಗುರುಗಳ ಪ್ರಗತಿಪರ ಧೋರಣೆ, ಕಾಯಕ ಚಿಂತನೆಯಿಂದ ಹೆಚ್ಚು ಪ್ರಗತಿ ಕಾಣಲು ಸಾಧ್ಯವಾಗಿದೆ.

ಶ್ರೀ ಸಂಗನಬಸವ ಸ್ವಾಮಿಗಳು ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಬಿದರಿ ಗ್ರಾಮದ ಶ್ರೀ ಬಸವಲಿಂಗಯ್ಯ ಮತ್ತು ಶ್ರೀಮತಿ ಗುರುವಮ್ಮನವರ ಪುತ್ರರಾಗಿ ಜನಿಸಿದರು. ಇವರು ಹಾಸನ ಜಿಲ್ಲೆಯ ಹಾರನಹಳ್ಳಿ ಕೋಡಿ ಮಠದ ಹಿರಿಯ ಚೇತನ ಶ್ರೀ ನೀಲಲೋಚನ ಸ್ವಾಮಿಗಳ ಕೃಪಾಕಟಾಕ್ಷದಿಂದ ಜಮಖಂಡಿ ಓಲೆ ಮಠಕ್ಕೆ ಉತ್ತರಾಧಿಕಾರಿ ಗಳಾಗಿ ನೇಮಕಗೊಂಡರು. ನಂತರ ಶಿವಯೋಗಮಂದಿರದಲ್ಲಿ ವಿದ್ಯಾಭ್ಯಾಸವನ್ನು ಮಾಡಿ ಕಾಶಿಯಲ್ಲಿ ಸಂಸ್ಕೃತ, ಹಿಂದಿ ಮತ್ತು ಆಂಗ್ಲ ಭಾಷೆಯಲ್ಲಿ ಪಾಂಡಿತ್ಯ ಪಡೆದು ಓಲೆಮಠದ ಅಧಿಕಾರವನ್ನು ವಹಿಸಿಕೊಂಡಿದ್ದರು. ನಂತರ ಭಕ್ತರ ಒತ್ತಾಸೆಯ ಮೇರೆಗೆ ಓಲೆ ಮಠದ ಅಧಿಕಾರವನ್ನು ಬಿಟ್ಟುಕೊಟ್ಟು ಹೊಸಪೇಟೆ, ಬಳ್ಳಾರಿ ಹಾಗೂ ಹಂಪಿಯ ಶ್ರೀ ಕೊಟ್ಟೂರುಸ್ವಾಮಿ ಮಠದ ಅಧಿಕಾರವನ್ನು ವಹಿಸಿಕೊಂಡರು. ಗುರುಗಳು ಮಠದ ಆಡಳಿತದ ಜೊತೆಗೆ ವೀರಶೈವ ಮಹಾಸಭೆಯ ಅಭಿವೃದ್ಧಿಗೆ ಶ್ರಮಿಸಿ ಸಮಾಜದ ಸಂಘಟನೆಗೆ ದುಡಿಯುತ್ತಿದ್ದಾರೆ. ಶಿವಯೋಗ ಮಂದಿರದ ವಿಶ್ವಸ್ಥ ಸಮಿತಿಯ ಸದಸ್ಯರಾಗಿ, ಕರ್ನಾಟಕ ಮಠಾಧಿಪತಿಗಳ ಸಂಘದ ಸಕ್ರಿಯ ಸದಸ್ಯರಾಗಿ ಸಂಘಟನೆ ಮಾಡಿದ್ದಾರೆ. ಗುರುಗಳು ತಮ್ಮ ಕಾಲಾವಧಿಯಲ್ಲಿ ಧಾರ್ಮಿಕ, ಶೈಕ್ಷಣಿಕ ಸಾಮಾಜಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕವಾಗಿ ಮಠವನ್ನು ಹೆಚ್ಚು ಅಭಿವೃದ್ಧಿಪಡಿಸಿದ್ದಾರೆ.

ರಾಜಾಶ್ರಯ: ಮಠದ ಧಾರ್ಮಿಕ ಕಾರ್ಯಗಳನ್ನು ವ್ಯಾಪಕವಾಗಿ ಬೆಳೆಸಿ, ಸಮಾಜದಲ್ಲಿ ಸಹಬಾಳ್ವೆ ಮೂಡುವಂತೆ ಮಾಡಿದ ಶ್ರೀ ಕೊಟ್ಟೂರುಸ್ವಾಮಿ ಮಠಕ್ಕೆ ಬಳ್ಳಾರಿಯ ಪಾಳೆಗಾರರು (ಕ್ರಿ.ಶ.೧೬೩೦-೧೭೭೪), ಹರಪನಹಳ್ಳಿಯ ಪಾಳೆಗಾರರು (ಕ್ರಿ.ಶ.೧೫೫೮-೧೮೩೩), ಗುಡೆಕೋಟೆ ಪಾಳೆಗಾರರು (ಕ್ರಿ.ಶ.೧೭೫೫),ಆನೆಗುಂದಿ ಪಾಳೆಗಾರರು (ಕ್ರಿ.ಶ.೧೫೭೧-೧೮೦೦) ಹಾಗೂ ಇನ್ನೂ ಅನೇಕ ಪಾಳೆಗಾರರು ಮಠದ ಅಭಿವೃದ್ಧಿಗೆ ನೆರವಾಗಿದ್ದಾರೆ.

ಶಾಖಾಮಠಗಳು: ಕರ್ತೃ ಗುರುಗಳಾದ ಶ್ರೀ ಕಪ್ಪಿನ ಚನ್ನಬಸವ ಸ್ವಾಮಿಗಳು ಲೋಕಸಂಚಾರದಲ್ಲಿದ್ದಾಗ ಸುಮಾರು ಏಳುನೂರ ಎಪ್ಪತ್ತು ಮಠಗಳನ್ನು ಸ್ಥಾಪಿಸಿದ್ದರೆಂದು ಹೇಳಲಾಗುತ್ತಿದೆ. ಆ ಮಠಗಳೆಲ್ಲವು ಹೊಸಪೇಟೆ ಮಠದ ಅಧೀನ ಮಠಗಳಾಗಿದ್ದವಂತೆ. ಹಿಂದೆ ಈ ಎಲ್ಲಾ ಮಠಗಳನ್ನು ಒಳಗೊಂಡಂತೆ ಅರವತ್ತಾರುಸಾವಿರ ಎಕರೆ ಭೂಒಡೆತನವನ್ನು ಸಂಪಾದಿಸಿಕೊಂಡಿತ್ತು ಎಂದು ಹೇಳಲಾಗುತ್ತಿದೆ. ಕಾಲಾನಂತರ ಕೆಲವು ಮಠಗಳು ಸ್ವತಂತ್ರಗೊಂಡು, ಕೆಲವು ಮಠಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿವೆ. ಮೂವತ್ತು ಮಠಗಳು ಶಾಖಾಮಠಗಳಾಗಿ ಅಸ್ತಿತ್ವದಲ್ಲಿವೆ.

ಬಳ್ಳಾರಿ ತಾಲ್ಲೂಕು

ಬಳ್ಳಾರಿ : ೧. ಶ್ರೀ ದಾಸೋಹ ಮಠ, ೨. ಶ್ರೀ ಅಮ್ಮನವರ ಮಠ, ೩. ಶ್ರೀ ವಿರಕ್ತಮಠ, ೪. ಶ್ರೀ ಗವಿಮಠ

ಶ್ರೀಧರ ಗಡ್ಡೆ : ೧. ಶ್ರೀ ಕೊಟ್ಟೂರುಸ್ವಾಮಿ ಮಠ

ಸೋಮಸಮುದ್ರ : ೧. ಶ್ರೀ ವಿರಕ್ತಮಠ

ಕುರುಗೋಡು : ೧. ಶ್ರೀ ಕೊಟ್ಟೂರುಸ್ವಾಮಿ ಮಠ, ೨. ಶ್ರೀ ವಿರಕ್ತಮಠ, ೩. ಶರಣೆ ನೀಲಮ್ಮನ ಮಠ, ೪. ಶ್ರೀ ಕಕ್ಕಯ್ಯನ ಮಠ

ಕುಡುತಿನಿ : ೧. ಶ್ರೀ ವಿರಕ್ತಮಠ, ೨. ಶರಣೆ ನೀಲಮ್ಮನ ಮಠ

ಕೊಳಗಲ್ಲು : ೧. ಶ್ರೀ ಕೊಟ್ಟೂರುಸ್ವಾಮಿ ಮಠ

ಹೊಸಪೇಟೆ ತಾಲ್ಲೂಕು

ಹೊಸಪೇಟೆ : ೧. ಶ್ರೀ ಚೌಕಿಮಠ, ೨. ಶ್ರೀ ಕೊಟ್ಟೂರುಸ್ವಾಮಿ ಮಠ

ಹಂಪಿ : ೧. ಶ್ರೀ ಕಲ್ಮಠ ತುಂಗಭದ್ರಾ ನದಿ ತೀರ

ಕಮಲಾಪುರ : ೧. ಶ್ರೀ ಚೌಕಿಮಠ

ಸಿರಗುಪ್ಪ ತಾಲ್ಲೂಕು

ಸಿರಿಗೆರೆ : ೧. ಶ್ರೀ ವಿರಕ್ತಮಠ

ದರೂರು : ೧. ಶ್ರೀ ಸಂಗನಬಸವ ಸ್ವಾಮಿ ಮಠ

ತೆಕ್ಕಲಕೋಟೆ : ೧. ಶ್ರೀ ಸಿದ್ಧರಾಮಸ್ವಾಮಿ ಮಠ, ೨. ಶ್ರೀ ಗುಳೇರಾಯನ ಮಠ, ೩. ಶ್ರೀ ಚೌಕಿಮಠ

ಕೂಡ್ಲಿಗಿ ತಾಲ್ಲೂಕು

ಗುಡೆಕೋಟೆ : ೧. ಶ್ರೀ ವಿರಕ್ತಮಠ

ಕೊಟ್ಟೂರು : ೧. ಶ್ರೀ ಸಿರಿಮಠ

ಜಗಳೂರು ತಾಲ್ಲೂಕು

ಜಗಳೂರು : ೧. ಶ್ರೀ ಕಲ್ಮಠ

ಗಂಗಾವತಿ ತಾಲ್ಲೂಕು

ಹಿರೇಜಂತಕಲ್ಲು : ೧. ಶ್ರೀ ಕೊಟ್ಟೂರುಸ್ವಾಮಿ ಮಠ

ಬೂದಿಗುಂಪಿ : ೧. ಶ್ರೀ ವಿರಕ್ತಮಠ

ರಾಯಚೂರು ತಾಲ್ಲೂಕು

ರಾಯಚೂರು : ೧. ಶ್ರೀ ಕಲ್ಮಠ

ಶೈಕ್ಷಣಿಕ ಸಾಧನೆ: ಶ್ರೀ ಕೊಟ್ಟೂರು ಸ್ವಾಮಿಗಳ ಕಾಲದಲ್ಲಿ (ಕ್ರಿ.ಶ.೧೯೩೨) ಮಠವು ಶಿಕ್ಷಣಕ್ಕೂ ತನ್ನ ಸೇವಾ ಕ್ಷೇತ್ರವನ್ನು ವಿಸ್ತರಿಸಿಕೊಂಡಿತು. ಶ್ರೀ ಸಂಗನಬಸವ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ 'ಶ್ರೀ ಕೊಟ್ಟೂರುಸ್ವಾಮಿ ಕಲ್ಯಾಣ ಕೇಂದ್ರ'ವನ್ನು ಸ್ಥಾಪಿಸಿ ಹೊಸಪೇಟೆ, ಬೂದಿಗುಂಪ, ಶಿರಗುಪ್ಪ ಮತ್ತು ಬಳ್ಳಾರಿಯಲ್ಲಿ ಪ್ರಾಥಮಿಕ ಶಾಲೆಗಳು. ಹೊಸಪೇಟೆಯಲ್ಲಿ ಪ್ರೌಢಶಾಲೆ, ಸಂಯುಕ್ತ ಪದವಿಪೂರ್ವ ಕಾಲೇಜು, ಶ್ರೀ ಬಿದರಿ ಕುಮಾರೇಶ್ವರ ಸಂಗೀತ ಪಾಠಶಾಲೆ. ಸಿಂದನೂರು, ಸಿರಗುಪ್ಪ ಹಾಗೂ ಬಳ್ಳಾರಿಯಲ್ಲಿ ಕೈಗಾರಿಕಾ ತರಬೇತಿ ಕೇಂದ್ರಗಳು ಈ ರೀತಿ ಹಲವು ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿದ್ದಾರೆ. ಹೊಸಪೇಟೆ ಹಾಗೂ ಬಳ್ಳಾರಿಯಲ್ಲಿ ಉಚಿತ ಪ್ರಸಾದ ನಿಲಯವನ್ನು ಪ್ರಾರಂಭಿಸಿ ಕಲಿಯುವ ಮಕ್ಕಳಿಗೆ ನೆರವಾಗಿದ್ದಾರೆ. ಗ್ರಾಮಾಂತರ ಪ್ರತಿಭಾನ್ವಿತ ಮಕ್ಕಳನ್ನು ಗುರುತಿಸಿ ದತ್ತು ತೆಗೆದುಕೊಂಡು ವಿದ್ಯಾಭ್ಯಾಸವನ್ನು ಮಾಡಿಸುತ್ತಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಸಂಗನಬಸವ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ಹೊಸಪೇಟೆಯ ಕಲ್ಮಠವನ್ನು ಅಗತ್ಯಕ್ಕನುಗುಣವಾಗಿ ನವೀಕರಣಗೊಳಿಸಿದ್ದಾರೆ. ಶಿವಾನುಭವ ಮಂಟಪ, ದಾಸೋಹ ಮಂದಿರ, ಕಲ್ಯಾಣ ಮಂಟಪ, ಕಲ್ಮಠದ ಪಕ್ಕದಲ್ಲಿ ಪೂಜಾಗೃಹ ಹಾಗೂ ಗುರುಗಳ ವಾಸ್ತವ್ಯ ಕೊಠಡಿಯನ್ನು ನಿರ್ಮಿಸಲಾಗಿದೆ. ಬಳ್ಳಾರಿಯಲ್ಲಿ ಮಠದ ಹಳೆಯ ಕಟ್ಟಡವನ್ನು ನವೀಕರಣಗೊಳಿಸಿ, ಮಠದ ಸುತ್ತ ನೂತನವಾಗಿ ಕಟ್ಟಡವನ್ನು ನಿರ್ಮಿಸಲಾಗಿದೆ. ಶಿಕ್ಷಣ ಸಂಸ್ಥೆಗಳಿಗೆ ಸುಸಜ್ಜಿತವಾದ ಕಟ್ಟಡಗಳನ್ನು ನಿರ್ಮಿಸಿದ್ದಾರೆ. ಸಂಡೂರು ಸಮೀಪದ ಜಮೀನಿನಲ್ಲಿ ತೋಟಗಾರಿಕೆ ಬೆಳೆಯನ್ನು ಬೆಳೆಯಲಾಗುತ್ತಿದೆ. ಗುರುಗಳು ಉತ್ತಮ ಕೃಷಿಕರಾಗಿ, ಆಧುನಿಕ ಬೇಸಾಯ ಪದ್ಧತಿಯನ್ನು ಅನುಸರಿಸಿ ಹೆಚ್ಚು ಆದಾಯ ಬರುವಂತೆ ಮಾಡಿರುವುದಲ್ಲದೆ ರೈತರಿಗೆ ಮಾರ್ಗದರ್ಶಕರಾಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಶ್ರೀ ಕೊಟ್ಟೂರುಸ್ವಾಮಿ ಮಠದ ಶಾಖಾಮಠಗಳಲ್ಲಿ ಪೂಜಾಕಾರ್ಯಗಳು ನಡೆಯುವಂತೆ ವ್ಯವಸ್ಥೆಗೊಳಿಸಲಾಗಿದೆ. ಪ್ರತಿ ತಿಂಗಳು ಹದಿನಾರರಂದು ಹೊಸಪೇಟೆಯ ಮಠದಲ್ಲಿ ಶಿವಾನುಭವ ಸಂಪದವನ್ನು ನಡೆಸಲಾಗುತ್ತಿದೆ. ಶ್ರಾವಣ ಮಾಸದಲ್ಲಿ ಪ್ರತಿದಿನ ಪುರಾಣ ಪ್ರವಚನ, ಅಮಾವಾಸ್ಯೆ, ಹುಣ್ಣಿಮೆಯಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ೧೯೭೭ ರಿಂದ ಬಸವಜಯಂತಿಯ ದಿನ ಜಾತ್ಯಾತೀತವಾಗಿ ಸಾಮೂಹಿಕ ವಿವಾಹಗಳನ್ನು ಏರ್ಪಡಿಸಿ ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ. ಈವರೆಗೆ (೨೦೦೦ನೆಯ ಇಸವಿ) ಮಠದಲ್ಲಿ ಮೂರುಸಾವಿರದ ಐದುನೂರು ವಿವಾಹಗಳನ್ನು ಮಾಡಿಸಲಾಗಿದೆ. ಮಠದಲ್ಲಿ ವಿಶೇಷ ಸಂದರ್ಭಗಳಲ್ಲಿಯೇ ಅಲ್ಲದೆ ಪ್ರತಿದಿನ ಅನ್ನದಾಸೋಹವನ್ನು ನಡೆಸಲಾಗುತ್ತಿದೆ.

ಸಾಹಿತ್ಯ ಸೇವೆ: ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳ ಸಾಧನೆಯನ್ನು ಕಾಣಬೇಕಾದರೆ ಸಾಹಿತ್ಯದ ಪ್ರಕಟಣೆ ಹಾಗೂ ಪ್ರಸಾದ ಮುಖ್ಯವೆಂದು ಅರಿತ ಶ್ರೀ ಸಂಗನಬಸವ ಸ್ವಾಮಿಗಳು, ಶ್ರೀ ಕಪ್ಪಿನ ಚನ್ನಬಸವೇಶ್ವರ ಗ್ರಂಥ ಮಾಲೆಯನ್ನು ಪ್ರಾರಂಭಿಸಿ, ಕಾರಣೀಕ ಕರಡೀಶ, ಶ್ರೀ ವಿಜಯ ಮಹಾಂತ ಶಿವಯೋಗಿ ಚರಿತ್ರೆ, ರಸಿಕ ಚಕ್ರಿ ಹರಿಹರ ದೇವ, ಬಸವರಾಜ ದೇವರ ರಗಳೆ, ಕಾಯಕದ ಐದು ರಗಳೆಗಳು, ಶಿವಶರಣೆಯರ ನಾಲ್ಕು ರಗಳೆಗಳು, ರಕ್ಷಾ ಶತಕ ಮತ್ತು ಪಂಪಾ ಶತಕ, ಶಿವಶರಣರ ನಾಲ್ಕು ರಗಳೆಗಳು ಮುಂತಾದ ಮೌಲಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಮಠದ ವತಿಯಿಂದ 'ಹೇಮಕೂಟ' ಮಾಸಪತ್ರಿಕೆಯನ್ನು ೧೯೮೩ ರಿಂದ ನಿರಂತರವಾಗಿ ಪ್ರಕಟಿಸಲಾಗುತ್ತಿದ್ದು, ಧಾರ್ಮಿಕ ಹಾಗೂ ಸಂಶೋಧಾನಾತ್ಮಕ ಲೇಖನಗಳನ್ನು ಪ್ರಕಟಿಸುವ ಮೂಲಕ ಹೊಸ ವಿಚಾರಗಳ ಬಗ್ಗೆ ಚಿಂತನೆ ನಡೆಸುವಂತೆ ಮಾಡಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಜಗದ್ಗುರು ಸಂಗನಬಸವ ಸ್ವಾಮಿಗಳು, ಜಗದ್ಗುರು ಹೇಮಕೂಟ ಸಿಂಹಾಸನ ಶ್ರೀ ಕೊಟ್ಟೂರುಸ್ವಾಮಿ ಮಠ, ಹೊಸಪೇಟೆ, ಬಳ್ಳಾರಿ ಜಿಲ್ಲೆ.
ಆಧಾರ:'ಹೇಮಕೂಟ' ಮಾಸ ಪತ್ರಿಕೆ, ಸಂಪಾದಕರು : ಗೌ.ಮ.ಉಮಾಪತಿ ಶಾಸ್ತ್ರಿ.

❑

ಬಾಗಲಕೋಟೆ ಜಿಲ್ಲೆ



ಬಾಗಲಕೋಟೆ ತಾಲ್ಲೂಕು : ೧. ಮುತ್ತತ್ತಿ ೨. ಕಲಾದಗಿ ೩. ಶಿರೂರು ೪. ಬಿಲ್ವ ಕೆರೂರು

ಬಾದಾಮಿ ತಾಲ್ಲೂಕು : ೧. ಗುಳೇದಗುಡ್ಡ ೨. ಕೆರೂರು

ಹುನಗುಂದ ತಾಲ್ಲೂಕು : ೧. ಅಮೀನಗಡ ೨. ಇಳಕಲ್ಲು ೩. ಕಮ್ಮತಗಿ ೪. ಹಡಗಲಿ ೫. ಕೂಡಲ ಸಂಗಮ ೬. ಗುಡೂರು **ಬೀಳಗಿ ತಾಲ್ಲೂಕು** ೧. ಗಿರಿಸಾಗರ ೨. ಕುಂದರಗಿ ೩. ಬೂದಿ ಹಾಳು ೪. ಗಲಗಲಿ

ಮುಧೋಳ ತಾಲ್ಲೂಕು ೧. ಮಹಲಿಂಗಪುರ ೨. ಲೋಕಾಪುರ

ಜಮಖಂಡಿ ತಾಲ್ಲೂಕು : ೧. ರಬಕವಿ ೨. ಮರೆಗುದ್ದಿ ೩. ಇಪ್ಪರಗಿ ೪. ಚಿಮ್ಮಡ ೫. ತೆರೆದಾಳು ೬. ಬಿದರೆ

ಕರ್ನಾಟಕದ ಕಲೆಯ ತೊಟ್ಟಿಲು ಎಂದು ಹೆಸರು ಗಳಿಸಿರುವ ಬಾಗಲಕೋಟೆ ಜಿಲ್ಲೆಯು ೧೯೯೭ ರಲ್ಲಿ ನಡೆದ ಜಿಲ್ಲೆಗಳ ಪುನರ್ ವಿಂಗಡಣೆಯ ಸಂದರ್ಭದಲ್ಲಿ ಬಿಜಾಪುರ ಜಿಲ್ಲೆಯಿಂದ ಪ್ರತ್ಯೇಕಗೊಂಡು ಹೊಸ ಜಿಲ್ಲೆಯಾಗಿ ರೂಪುಗೊಂಡಿದೆ. ಬಾಗಲಕೋಟೆ, ಬಾದಾಮಿ, ಹುನಗುಂದ, ಮುಧೋಳ, ಜಮಖಂಡಿ, ಹಾಗೂ ಬೀಳಗಿ ಎಂಬ ಆರು ತಾಲ್ಲೂಕುಗಳನ್ನು ಒಳಗೊಂಡಿದೆ. ಬೆಳಗಾಂ, ಧಾರವಾಡ, ಕೊಪ್ಪಳ ಹಾಗೂ ಬಿಜಾಪುರ ಜಿಲ್ಲೆಗಳ ಗಡಿ, ವಾಯುವ್ಯ ಭಾಗದಲ್ಲಿ ಮಹಾರಾಷ್ಟ್ರ ಗಡಿಯಿಂದ ಆವೃತಗೊಂಡಿರುವ ಬಾಗಲಕೋಟೆ ಜಿಲ್ಲೆಯು ಐತಿಹಾಸಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ನಾಡಾಗಿ ಬೆಳೆದಿದೆ.

ಈ ಜಿಲ್ಲೆಯಲ್ಲಿ ಕೃಷ್ಣ, ಘಟಪ್ರಭ ಮತ್ತು ಮಲಪ್ರಭ ನದಿಗಳು ಹರಿದು ಈ ನಾಡನ್ನು ನೈಸರ್ಗಿಕವಾಗಿ ಶ್ರೀಮಂತಗೊಳಿಸಿವೆ. ಬೀಳಗಿ ತಾಲ್ಲೂಕಿನ ಮುತ್ತತ್ತಿ-ಮುರಮಟ್ಟಿಯಲ್ಲಿ ಕೃಷ್ಣ ನದಿಗೆ ಘಟಪ್ರಭ ನದಿಯು ಸಂಗಮಗೊಂಡು ಚಿಕ್ಕಸಂಗಮ ವಾಗಿ ರೂಪುಗೊಂಡು ಮುಂದೆ ಹರಿದ ಕೃಷ್ಣ ನದಿಗೆ ಮಲಪ್ರಭೆಯು ಸಂಗಮಗೊಳ್ಳುತ್ತದೆ. ಈ ಸಂಗಮ ಕ್ಷೇತ್ರವೇ ಬಸವಣ್ಣ ಜ್ಞಾನವಿಕಾಸಗೊಂಡ ಕ್ಷೇತ್ರವಾಗಿದೆ. ಬಸವಣ್ಣನವರು ವೈದಿಕ ಸಂಪ್ರದಾಯವನ್ನು ವಿರೋಧಿಸಿ ಇಲ್ಲಿನ ಜಾತವೇದಮುನಿ ಶಿವಾಚಾರ್ಯ ಸ್ವಾಮಿಗಳಿಂದ ಧಾರ್ಮಿಕ ಸಂಸ್ಕಾರವನ್ನು ಪಡೆದರು. ಕೂಡಲ ಸಂಗಮದೇವನನ್ನು ತನ್ನ ಆರಾಧ್ಯ ದೈವವನ್ನಾಗಿ ಮಾಡಿಕೊಂಡು ವೀರಶೈವ ಧರ್ಮ ಹಾಗೂ ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮವನ್ನು ರೂಪಿಸಿದ ಕ್ಷೇತ್ರ ಇದಾಗಿದೆ.

ಈ ಜಿಲ್ಲೆ ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಯಾದವ, ವಿಜಯನಗರ, ಬಹುಮನಿ ಹಾಗೂ ಮರಾಠರಿಂದ ಆಳಲ್ಪಟ್ಟು ಐತಿಹಾಸಿಕ ಹಾಗೂ ವೈವಿಧ್ಯಮಯ ಸಂಸ್ಕೃತಿಯೊಂದಿಗೆ ರೂಪುಗೊಂಡಿದೆ. ಪಟ್ಟದಕಲ್ಲಿನ ಶಿಲ್ಪ ಸೌಂದರ್ಯ ಮತ್ತು ವಾಸ್ತು ಕೌಶಲ್ಯಗಳು ಹಾಗೂ ಉತ್ತರ ಮತ್ತು ದಕ್ಷಿಣಗಳ ವಾಸ್ತು ಶಿಲ್ಪಗಳು ಸಮ್ಮಿಳನಗೊಂಡ ಕಲಾ ಶ್ರೀಮಂತಿಕೆ ಇಲ್ಲಿ ಮೈದಳೆದಿದೆ. ಐಹೊಳೆಯು ಚಾಲಕ್ಯರ ಪ್ರಥಮ ರಾಜಧಾನಿಯಾಗಿ ಕಲ್ಲಿನ ಗುಹಾಲಯಗಳಿಂದ ವಿಶ್ವದ ಗಮನ ಸೆಳೆದಿದೆ. ಚಾಲುಕ್ಯರ ಮೊದಲ ಪುಲಕೇಶಿಯು (ಕ್ರಿ.ಶ.೫೪೩) ಬಾದಾಮಿಯಲ್ಲಿ ಕೋಟೆಯನ್ನು ನಿರ್ಮಿಸಿ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಇಲ್ಲಿನ ಗುಹಾಲಯಗಳೂ ಸಹ ವಿಶ್ವವಿಖ್ಯಾತವಾಗಿದ್ದು ಪ್ರಾಚ್ಯವಸ್ತು ಸಂಶೋಧಕರಿಗೆ ಈವರೆಗೂ ಒಂದು ಸವಾಲಾಗಿ ನಿಂತಿವೆ. ಬಾದಾಮಿಯು ಇಂದು ವಿಶ್ವಮಟ್ಟದ ಸಂಶೋಧಕರ ಗಮನ ಸೆಳೆದಿದೆ. ಜಮಖಂಡಿಯು ಪಟವರ್ಧನನ ರಾಜಧಾನಿಯಾಗಿ ಹೆಸರು ಪಡೆದಿದೆ. ಇಲ್ಲಿನ ಕೂಡಲಸಂಗಮ, ಮಹಾಕೂಟ, ಬನಶಂಕರಿ, ಮುಧೋಳ, ಗುಳೇದಗುಡ್ಡ ಮುಂತಾದ ಸ್ಥಳಗಳು ಐತಿಹಾಸಿಕ ಸ್ಥಳಗಳಾಗಿ ಪ್ರಸಿದ್ಧಿ ಪಡೆದಿವೆ.

ಇಂತಹ ಐತಿಹಾಸಿಕ ಹಾಗೂ ಸಾಂಸ್ಕೃತಿಕ ನಾಡಿನಲ್ಲಿ ವೀರಶೈವ ಧರ್ಮ ಪ್ರಮುಖವಾಗಿ ಬೆಳೆದಿದೆ. ಈ ಜಿಲ್ಲೆಯಲ್ಲಿ ಹನ್ನೆರಡನೆಯ ಶತಮಾನ ಮತ್ತು ಅದಕ್ಕೆ ಪೂರ್ವದಲ್ಲಿ ಒಟ್ಟು ೩೧೨ ಮಠಗಳು ಸ್ಥಾಪನೆಯಾಗಿದ್ದವು ಎಂದು ಮಾಹಿತಿ ದೊರೆಯುತ್ತದೆ. ಈ ಮಾಹಿತಿಯ ಆಧಾರದ ಮೇಲೆ ಶೋಧನೆಗೆ ಹೋದಾಗ ಎಂಭತ್ತೆಂಟು ಮಠಗಳು ಮಾತ್ರ ಅಸ್ತಿತ್ವದಲ್ಲಿರುವುದು ತಿಳಿದುಬರುತ್ತದೆ. ಇವುಗಳಲ್ಲಿ ಎಪ್ಪತ್ತು ಮಠಗಳಲ್ಲಿ ಕ್ರಿಯಾತ್ಮಕ ಕಾರ್ಯಗಳು ನಡೆಯುತ್ತಿವೆ. ಹದಿನೆಂಟು ಮಠಗಳಲ್ಲಿ ಗುರುಗಳಿಲ್ಲದೆ ಗದ್ದುಗೆ ಪೂಜೆಗೆ ಮಾತ್ರ ಸೀಮಿತಗೊಂಡಿವೆ. ಉಳಿದ ಮೂನ್ನೂರಇಪ್ಪತ್ತೇಳು ಮಠಗಳು ಹೇಳಲು ಹೆಸರಿಲ್ಲದಂತಾಗಿವೆ.

ಜಮಖಂಡಿ ತಾಲ್ಲೂಕು

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕು ಗಂಡುಮೆಟ್ಟಿದ ನೆಲ. ಇಂತಹ ಗಟ್ಟಿನೆಲದಲ್ಲಿ ವೀರಶೈವಧರ್ಮ ಆಳವಾಗಿ ಬೇರೂರಿದೆ. ಪ್ರಾಚೀನ ಕಾಲದಿಂದ ಈತನಕ ಸುಮಾರು ಐವತ್ತೆರಡು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಆದರೆ ಇಂದು ಹದಿನೇಳು ಮಠಗಳು ಅಸ್ತಿತ್ವದಲ್ಲಿವೆ.

ಕೊಣ್ಣೂರು

ಜಮಖಂಡಿ ತಾಲ್ಲೂಕಿನ ಕೊಣ್ಣೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹದಿನೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹೊರಗಿನ ಮಠವು ಅಸ್ತಿತ್ವದಲ್ಲಿದೆ.

ಹೊರಗಿನಮಠ: ಕೊಣ್ಣೂರು ಗ್ರಾಮದಲ್ಲಿ ರಂಭಾಪುರಿ ಪೀಠದ, ಪುತ್ರವರ್ಗದ ಪರಂಪರೆಯಲ್ಲಿ ಬೆಳೆದ ಶ್ರೀ ಹೊರಗಿನ ಮಠವು ಸ್ಥಾಪನೆಯಾಗಿದೆ. ಈ ಮಠದ ಸ್ಥಾಪನೆಯಿಂದಾಗಿ ಈ ಗ್ರಾಮದಲ್ಲಿ ಧಾರ್ಮಿಕ ಕಾರ್ಯಗಳು ನಡೆಯತೊಡಗಿ, ಧಾರ್ಮಿಕ ವಾತಾವರಣ ಸೃಷ್ಟಿಯಾಗಿದೆ. ಪುರಾತನ ಕಾಲದ ಮಠವಾದರೂ ಪರಂಪರೆಯ ಬಗ್ಗೆ ಆಧಾರಗಳನ್ನು ಕಾಯ್ದಿರಿಸದೆ ಹೋದ ಕಾರಣ ಮಠದ ಪರಂಪರೆಯು ಅಸ್ಪಷ್ಟವಾಗಿದೆ. ಈ ಮಠದ ಕರ್ತೃ ಗುರುಗಳು ಶ್ರೀ ಕರಿಬಸವ ಶಿವಾಚಾರ್ಯ ಸ್ವಾಮಿಗಳೆಂದು ಹೇಳಲಾಗುತ್ತಿದೆ. ಕರ್ತೃ ಗುರುಗಳ ನಂತರ ಶ್ರೀಗುರುಪಾದ ಶಿವಾಚಾರ್ಯ ಸ್ವಾಮಿಗಳು ೧೯೫೫ ರಲ್ಲಿ ಮಠದ ಆಡಳಿತವನ್ನು ವಹಿಸಿಕೊಂಡಿದ್ದರೆಂದು ಹೇಳಲಾಗುತ್ತಿದೆ. ಇವರು ಮಠವನ್ನು ಅಭಿವೃದ್ಧಿಪಡಿಸಿದರು. ಇವರು ಕಾರಣಾಂತರದಿಂದ ಗೃಹಾಸ್ಥಶ್ರಮವನ್ನು ಸ್ವೀಕರಿಸಬೇಕಾದಾಗ ಮಠವನ್ನು ತ್ಯಜಿಸಿದರು. ಅಂದಿನಿಂದ ಪರಂಪರಾಗತ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿಯಿತು.

ಮಠದ ಪರಂಪರೆಯಲ್ಲಿ ಏಳು ಜನ ಗುರುಗಳು ಅಧಿಕಾರವನ್ನು ನಡೆಸಿದ್ದಾರೆಂದು ಹೇಳಲಾಗುತ್ತಿದೆ. ಈ ಮಾತನ್ನು ಸಾಕ್ಷೀಕರಿಸುವಂತೆ ಮಠದ ಆವರಣದಲ್ಲಿ ಆರು ಗದ್ದುಗೆಗಳು ಸ್ಥಾಪನೆಯಾಗಿವೆ. ಉಳಿದ ಒಂದು ಗದ್ದುಗೆ ಇಲ್ಲೇ ಸ್ಥಾಪನೆಯಾಗಿದ್ದರೂ ಅದರ ಪತ್ತೆಯಾಗಿಲ್ಲ. ಈಗ ಈ ಮಠದ ಉತ್ತರಾಧಿಕಾರಿಗಳನ್ನಾಗಿ ಶ್ರೀ ಪ್ರಭುದೇವರನ್ನು ನೇಮಕ ಮಾಡಲಾಗಿದೆ. ಶ್ರೀ ಪ್ರಭುದೇವರು ಪುತ್ರ ವರ್ಗದ ಪರಂಪರೆಯ ಈ ಮಠದ ವಂಶದಲ್ಲಿ ೧೯೮೨ ರ ಜುಲೈ ಹತ್ತರಂದು ಜನಿಸಿದ್ದಾರೆ. ಇವರು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಕೊಣ್ಣೂರಿನಲ್ಲಿ ಮುಗಿಸಿ, ಹೊನ್ನಾಳಿಯ ಹಿರೇಕಲ್ಲು ಮಠದಲ್ಲಿ ಹಲವು ದಿನ ವಿದ್ಯಾಭ್ಯಾಸ ಮಾಡಿ, ಈಗ ಮೈಸೂರಿನ ಜಪದಕಟ್ಟೆ ಮಠದಲ್ಲಿ ಆಶ್ರಯ ಪಡೆದು ಸಂಸ್ಕೃತ ಮತ್ತು ಆಗಮವನ್ನು ಕಲಿಯುತ್ತಿದ್ದಾರೆ. ಮಠದಲ್ಲಿ ಪರಂಪರೆಯ ಗದ್ದುಗೆಗಳಿಗೆ ನಿತ್ಯ ಪೂಜೆ ಹಾಗೂ ಹೊರಗಿನಿಂದ ಬರುವ ಭಕ್ತರಿಗೆ ಅನ್ನದಾಸೋಹವನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಪ್ರಭುದೇವರು, ಶ್ರೀ ಹೊರಗಿನಮಠ, ಕೊಣ್ಣೂರು, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.

ಚಿಮ್ಮಡ

ಜಮಖಂಡಿ ತಾಲ್ಲೂಕಿನ ಚಿಮ್ಮಡ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತೊಂದು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಚಿನ್ನದ ವ್ಯಾಪಾರಿಗಳ ಸಂಖ್ಯೆ ಹೆಚ್ಚಾಗಿದ್ದ ಕಾರಣದಿಂದ ಈ ಗ್ರಾಮಕ್ಕೆ'ಚಿನ್ನದಮಡ'ಎಂದು ಕರೆಯಲಾಗುತ್ತಿತ್ತೆಂದು ಹೇಳಲಾಗುತ್ತಿದೆ. ಇದು ಕಾಲಕ್ರಮೇಣ 'ಚಿಮ್ಮಡ'ವಾಗಿ ರೂಪಾಂತಗೊಂಡಿದೆ ಎಂದು ಸ್ಥಳ ಪುರಾಣ ಹೇಳುತ್ತದೆ. ಇಂತಹ ಶ್ರೀಮಂತ ಗ್ರಾಮದಲ್ಲಿ ಅಲ್ಲಮಪ್ರಭುಗಳು ಕಲ್ಯಾಣಕ್ಕೆ ಹೋಗುವ ಮೊದಲು ಕೆಲವು ದಿನ ಅನುಷ್ಠಾನಗೊಂಡು ಈ ಕ್ಷೇತ್ರವನ್ನು ಸುಕ್ಷೇತ್ರವನ್ನಾಗಿ ಮಾಡಿದ್ದಾರೆ ಎಂದು ಹೇಳಲಾಗುತ್ತದೆ. ಆದರೆ ಈ ಬಗ್ಗೆ ಆಧಾರಗಳು ಲಭ್ಯವಿಲ್ಲ.

ವಿರಕ್ತಮಠ: ಚಿಮ್ಮಡ ಗ್ರಾಮದಲ್ಲಿ ಹದಿನೇಳನೆಯ ಶತಮಾನದಲ್ಲಿ ವಿರಕ್ತಮಠವು ಅಸ್ತಿತ್ವಗೊಂಡು ಪ್ರಬುದ್ಧಮಾನಕ್ಕೆ

ಬಂದಿದೆ. ಹದಿನೇಳನೆಯ ಶತಮಾನದಲ್ಲಿ ಅರವತ್ತ್ಮೂರು ಪುರಾತನರಲ್ಲಿ ಒಬ್ಬರಾದ ಶ್ರೀ ಪ್ರಭುದೇವರು (ಮಗ್ಗೆ) ಈ ಪವಿತ್ರ ಸ್ಥಳಕ್ಕೆ ಆಗಮಿಸಿ ಮಠವನ್ನು ಸ್ಥಾಪನೆ ಮಾಡಿದ್ದಾರೆ. ಇವರು ಈ ಸ್ಥಳದಲ್ಲಿ ಬಂದು ನೆಲೆಸಿ ಅನೇಕ ವರ್ಷಗಳ ಕಾಲ ತಪಸ್ಸನ್ನು ಆಚರಿಸಿ ಅನೇಕ ಪವಾಡಗಳನ್ನು ಮಾಡಿ ಭಕ್ತರನ್ನು ಉದ್ಧರಿಸಿದ್ದಾರೆ. ಇವರು ಇಲ್ಲಿ ನೆಲೆಗೊಂಡಿದ್ದ ಸಂದರ್ಭದಲ್ಲಿ ಶರಣ ತತ್ತ್ವದ ಬಗ್ಗೆ ಉಪನ್ಯಾಸಗಳು, ಗಣಾರಾಧನೆ ಹಾಗೂ ಅನ್ನದಾಸೋಹದ ಕಾರ್ಯಗಳು ನಡೆದು ಈ ಸ್ಥಳವು ಒಂದು ಮಹಾ ಕ್ಷೇತ್ರವಾಗಿ ರೂಪುಗೊಂಡಿತು.

ಪರಂಪರೆ:
೧. ಶ್ರೀ ಮ.ನಿ.ಪ್ರ. ಪ್ರಭುದೇವರು (ಮಗ್ಗೆ)
೨. ಶ್ರೀ ಮ.ನಿ.ಪ್ರ. ಮುರುಗಿಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಗುರುಸಿದ್ಧ ಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಗುರುಲಿಂಗ ಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಗುರುಸಿದ್ಧ ಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ವೀರಪ್ಪ ಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಪ್ರಭು ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ಪ್ರಭುದೇವರ (ಮಗ್ಗೆ) ನಂತರ ಶ್ರೀ ಮುರುಗಿಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡರು. ನಂತರ ಬಂದಂತಹ ಶ್ರೀ ಗುರುಸಿದ್ಧ ಸ್ವಾಮಿಗಳು, ಶ್ರೀ ಗುರುಲಿಂಗಸ್ವಾಮಿಗಳು, ಶ್ರೀ ಗುರುಸಿದ್ಧ ಸ್ವಾಮಿಗಳು ಇವರುಗಳು ಬಗ್ಗೆ ಮಾಹಿತಿ ದೊರೆಯುವುದಿಲ್ಲ. ಪರಂಪರೆಯ ಆರನೆಯ ಗುರುಗಳಾದ ಶ್ರೀವೀರಪ್ಪ ಸ್ವಾಮಿಗಳು ಉತ್ತರಾಧಿಕಾರಿಗಳಾಗಿ ನೇಮಕಗೊಂಡರು. ರಬಕವಿಯಲ್ಲಿ ಜನಿಸಿದ ಇವರು ಸಂಸ್ಕೃತ, ಶರಣತತ್ತ್ವವನ್ನು ಆಳವಾಗಿ ಅಭ್ಯಾಸಮಾಡಿದ್ದರು. ಪರಂಪರೆಯ ಐದನೆಯ ಗುರುಗಳಾದ ಶ್ರೀ ಗುರುಸಿದ್ಧಸ್ವಾಮಿಗಳು ಇವರನ್ನುಮಠಕ್ಕೆ ಕರೆತರುತ್ತಾರೆ. ಇವರು ಅಥಣಿ ಶ್ರೀ ಸಿದ್ಧಲಿಂಗ ಸ್ವಾಮಿಗಳ ಸೇವೆಯನ್ನು ಮಾಡಿದವರಾಗಿದ್ದಾರೆ. ಇವರು ಕಾಯಕಯೋಗಿಗಳಾಗಿ ಮಠಕ್ಕೆ ಒಂದು ಬಾವಿಯನ್ನು ತೆಗೆಸಿದ್ದಾರೆ. ಇವರು ನೂರಾಐದು ವರ್ಷಗಳ ದೀರ್ಘಬದುಕನ್ನುಬದುಕಿ ೧೯೮೩ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ೧೯೮೩ ರಲ್ಲಿ ಶ್ರೀ ಪ್ರಭುಸ್ವಾಮಿಗಳು ಉತ್ತರಾಧಿಕಾರಿಗಳಾಗಿ ನೇಮಕಗೊಂಡರು.

ಶ್ರೀ ಪ್ರಭು ಸ್ವಾಮಿಗಳು ಚಿಮ್ಮಡ ಗ್ರಾಮದ ಶ್ರೀ ಗುರುಸಿದ್ಧಯ್ಯ ಮತ್ತು ಶ್ರೀಮತಿ ಚನ್ನಬಸಮ್ಮನವರ ಪುತ್ರರಾಗಿ ೧೯೬೧ರಜನವರಿ ಒಂದರಂದು ಜನಿಸಿದರು. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಮಹಾಲಿಂಗಪುರದಲ್ಲಿ ಮುಗಿಸಿ ಹುಬ್ಬಳ್ಳಿಯಲ್ಲಿ ಉನ್ನತ ಶಿಕ್ಷಣವನ್ನು ಮುಗಿಸಿದರು. ಗುರುಗಳು ಮಠಕ್ಕೆ ಆಗಮಿಸಿದ ಮೇಲೆ ಮಠವು ಅಭಿವೃದ್ಧಿಗೊಳ್ಳತೊಡಗಿತು.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗದ್ದುಗೆಗಳಿಗೆ ಮೂರು ವೇಳೆ ಪೂಜೆ, ಪ್ರತಿ ಹುಣ್ಣಿಮೆಯಲ್ಲಿ ಶಿವಾನುಭವ ಕಾರ್ಯಕ್ರಮ, ಶ್ರಾವಣಮಾಸದಲ್ಲಿ ಶ್ರೀ ಪ್ರಭುದೇವರ ಜಾತ್ರೆ, ದವನದ ಹುಣ್ಣಿಮೆಯಂದು ಶ್ರೀ ವೀರಪ್ಪ ಸ್ವಾಮಿಗಳ ಪುಣ್ಯಾರಾಧನೆಯನ್ನು ಮಾಡಲಾಗುತ್ತಿದೆ. ಮಠದಲ್ಲಿ ನಿತ್ಯ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗಿದೆ.

ಶೈಕ್ಷಣಿಕ ಸೇವೆ: ೧೯೮೫ರಲ್ಲಿ ಶ್ರೀ ಪ್ರಭುಲಿಂಗ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ, ಪ್ರಾಥಮಿಕ ಮತ್ತು ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಲಾಗಿದೆ. ಕಲಿಯುವ ಬಡ ಮಕ್ಕಳಿಗೆ ಮಠದಲ್ಲಿ ಆಶ್ರಯ ಕಲ್ಪಿಸಿ ವಿದ್ಯಾಭ್ಯಾಸಕ್ಕೆ ನೆರವಾಗಿದ್ದಾರೆ. ಮಠದ ಆಶ್ರಯದಲ್ಲಿರುವ ಐವತ್ತು ಎಕರೆ ಜಮೀನನ್ನು ಅಭಿವೃದ್ಧಿಪಡಿಸಿ, ಶಿಕ್ಷಣ ಹಾಗೂ ಧಾರ್ಮಿಕ ಕಾರ್ಯಗಳಿಗೆ ಬಳಸಿಕೊಳ್ಳಲಾಗುತ್ತಿದೆ. ೧೯೮೪ ರಲ್ಲಿ ಮೂವತ್ತು ಲಕ್ಷ ರೂ ಯೋಜನೆಯಲ್ಲಿ ಕಲ್ಯಾಣ ಮಂಟಪವನ್ನು ಸ್ಥಾಪಿಸಿದ್ದಾರೆ. ಗುರುಗಳು ಪ್ರಗತಿಪರ ಧೋರಣೆಯೊಂದಿಗೆ ಮಠದ ಆಡಳಿತ ಮತ್ತು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಾ, ಮಠವನ್ನು ಅಭಿವೃದ್ಧಿಪಡಿಸತೊಡಗಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಪ್ರಭು ಸ್ವಾಮಿಗಳು, ಶ್ರೀ ವಿರಕ್ತ ಮಠ, ಚಿಮ್ಮಡ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.

ಜಮಖಂಡಿ

ಬಾಗಲಕೋಟೆ ಜಿಲ್ಲೆಯ ಜಮಖಂಡಿ ಪಟ್ಟಣವು ಜಿಲ್ಲಾ ಕೇಂದ್ರದಿಂದ ವಾಯುವ್ಯ ದಿಕ್ಕಿಗೆ ಅರವತ್ತು ಕಿ.ಮೀ ದೂರದಲ್ಲಿದೆ. ಆನೆಗಳು ಎಂದರೆ ಜಂಬುಗಳು ವಾಸವಾಗಿದ್ದ ಖಂಡಿ, ಜಂಬುಖಂಡಿಯಾಗಿದೆ. ಜಂಬುಖಂಡಿ ಎಂಬ ಪದವು ಈಗ ಜಮಖಂಡಿಯಾಗಿ ಪರಿವರ್ತನೆಯಾಗಿದೆ ಎಂದು ಡಾ. ಸಂಗಮೇಶ ಬಿರಾದಾರ ಅವರು ಈ ಸ್ಥಳನಾಮದ ಬಗ್ಗೆ ಉಲ್ಲೇಖಿಸುತ್ತಾರೆ. ಈ ಪಟ್ಟಣದಲ್ಲಿ ಜಂಬುಕೇಶ್ವರ ದೇವಸ್ಥಾನ ಸ್ಥಾಪನೆಯಾಗಿರುವುದರಿಂದ ಜಂಬುಖಂಡಿ ಎಂಬ ಹೆಸರು ಬಂದಿದ್ದು, ಈಗ ಜಮಖಂಡಿಯಾಗಿದೆ ಎಂಬ ಜನಪದ ಕಥೆಯೊಂದು ಕೇಳಿ ಬರುತ್ತದೆ. ಇಂತಹ ಸ್ಥಳನಾಮದ ಐತಿಹ್ಯ ಇರುವ ಜಮಖಂಡಿಯು ಕಲ್ಯಾಣದಚಾಲುಕ್ಯರ ಆಳ್ವಿಕೆಗೆ ಒಳಪಟ್ಟ ಒಂದು ಪಟ್ಟಣವಾಗಿತ್ತು. ಇಂತಹ ಐತಿಹಾಸಿಕ ಪಟ್ಟಣದಲ್ಲಿ ವೀರಶೈವ ಧರ್ಮವು ಶ್ರೀಮಂತವಾಗಿ ಬೆಳೆದಿದೆ. ಇದಕ್ಕೆ ಸಾಕ್ಷಿ ಎಂಬಂತೆ ಜಮಖಂಡಿ ಪಟ್ಟಣದಲ್ಲಿ ಶ್ರೀ ಓಲೇಮಠ, ಶ್ರೀಮುತ್ತಿನ ಕಂತೆ ಹಿರೇಮಠ, ಶ್ರೀ ಸಾವಳಗಿಮಠ, ಶ್ರೀ ಕಲ್ಯಾಣಮಠ, ಶ್ರೀ ಚೌಕಿಮಠ, ಶ್ರೀ ಉದೇಶಿಮಠ, ಶ್ರೀ ಹಿಟ್ಟಿನಮಠ, ಶ್ರೀ ಅಂಬಲಿಮಠ, ಶ್ರೀ ಕಲ್ಮಠ ಎಂಬ ಒಂಬತ್ತು ಮಠಗಳು ಸ್ಥಾಪನೆಯಾಗಿವೆ. ಇವುಗಳಲ್ಲಿ ಶ್ರೀ ಓಲೇಮಠ, ಶ್ರೀಕಲ್ಯಾಣಮಠ ಮತ್ತು ಶ್ರೀ ಮುತ್ತಿನಕಂತೆ ಹಿರೇಮಠದಲ್ಲಿ ಮಠಾಧೀಶರಿದ್ದು ಧಾರ್ಮಿಕ ಆಚರಣೆಗಳು ನಡೆಯುತ್ತಾ ಬರುತ್ತಿವೆ.

ಓಲೇಮಠ: ಜಮಖಂಡಿಯ ಮಧ್ಯ ಭಾಗದಲ್ಲಿ ಶ್ರೀ ಓಲೇಮಠ ಅಥವಾ ಓಹಿಲೇಮಠ ಎಂದು ಕರೆಯಲಾಗುವ ಕುಮಾರ ಸಮಯದ ವಿರಕ್ತ ಮಠವು ಸ್ಥಾಪನೆಯಾಗಿದೆ. ಈ ಮಠವು ಹನ್ನೆರಡನೆಯ ಶತಮಾನದಲ್ಲಿ ಶರಣರು ಬರೆದಿಟ್ಟ ತಾಡೋಲೆಗಳ ಸಾಹಿತ್ಯವನ್ನು ಭದ್ರವಾಗಿ ಸಂಗ್ರಹಿಸಿಡುವ ಮಠವಾಗಿತ್ತು ಎಂದು ಹೇಳಲಾಗುತ್ತಿದೆ. ಈ ಮಠಕ್ಕೆ ಯಾವುದೇ ಸ್ಥಾವರ ಆಸ್ತಿಸಂಪತ್ತು ಇರಲಿಲ್ಲವಂತೆ. ಈ ಮಠವು ಶರಣ ಸಾಹಿತ್ಯವನ್ನು ಪಟ್ಟಭದ್ರ ಹಿತಾಸಕ್ತಿಗಳಿಂದ ಕಾಯ್ದಿಟ್ಟುಕೊಂಡು ಶರಣ ಸಂಸ್ಕೃತಿಗೆ ತನ್ನದೇ ಆದಂತಹ ಕೊಡುಗೆಯನ್ನು ನೀಡಿದೆ. ಇಂತಹ ಪರಂಪರಾಗತ ಉದ್ದೇಶವುಳ್ಳ ಈ ಮಠದಲ್ಲಿ ಹದಿನಾರನೆಯ ಶತಮಾನದಲ್ಲಿ ಶ್ರೀ ಗುರುಸಿದ್ಧೇಶ್ವರ ಸ್ವಾಮಿಗಳೆಂಬ ಮಹಾತಪಸ್ವಿಗಳು ನೆಲೆ ನಿಂತರು. ಗುರುಗಳು ಪೂಜಾನಿಷ್ಠರಾಗಿ, ಮಹಾ ಪವಾಡ ಪುರುಷರಾಗಿದ್ದರು ಎಂದು ಮಠದ ದಾಖಲೆಗಳಿಂದ ತಿಳಿದುಬರುತ್ತದೆ. ಗುರುಗಳು ತಮ್ಮ ಕಾಲದಲ್ಲಿ ನಾಡಿನಾದ್ಯಂತ ಅನೇಕ ಶಾಖಾಮಠಗಳನ್ನು ಸ್ಥಾಪಿಸಿ, ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದ್ದರು. ಅಂದು ಸ್ಥಾಪಿತಗೊಂಡ ಶಾಖಾ ಮಠಗಳಲ್ಲಿ ಕಡಕೋಳ ಮತ್ತು ಧಾರವಾಡ ಜಿಲ್ಲೆಯ ಹುಲುಗೂರು ಗ್ರಾಮದ ಮಠಗಳು ಇಂದಿಗೂ ಶಾಖಾಮಠಗಳಾಗಿ ಬೆಳೆದು ಬಂದಿವೆ. ೧೭೩೦ರಲ್ಲಿ ಜಮಖಂಡಿ ಸಂಸ್ಥಾನದ ಕೊಣ್ಣೂರು ದೇಸಾಯಿಯವರು ಶ್ರೀ ಗುರುಸಿದ್ಧೇಶ್ವರ ಸ್ವಾಮಿಗಳಿಗೆ ನೂರತೊಂಬತ್ತು ಎಕರೆ ಜಮೀನನ್ನು ಉಂಬಳಿಯಾಗಿ ನೀಡಿ ದತ್ತಿ ಪತ್ರವನ್ನು ನೀಡಿದ್ದಾರೆ. ಈ ದತ್ತಿ ಪತ್ರದಲ್ಲಿ ಈ ಮಠಕ್ಕೆ ಶ್ರೀ ಓಲೆಮಠ ಉರುಫ್ ದೇಸಾಯಿಯವರ ಮಠ ಎಂದು ಉಲ್ಲೇಖಿಸಿರುವುದನ್ನು ಗಮನಿಸಿದರೆ ಈ ಮಠವು ರಾಜಾಶ್ರಯದಿಂದ ಬೆಳೆದ ಮಠವಾಗಿದೆ ಎಂಬುದು ತಿಳಿಯುತ್ತಿದೆ.

ಪರಂಪರೆ:	೧. ಶ್ರೀ ಮ.ನಿ.ಪ್ರ. ಗುರುಸಿದ್ಧಸ್ವಾಮಿಗಳು	(-೧೭೩೦)
	೨. ಶ್ರೀ ಮ.ನಿ.ಪ್ರ. ಚನ್ನವೀರಸ್ವಾಮಿಗಳು	(೧೮೧೯-೧೮೮೯)
	೩. ಶ್ರೀ ಮ.ನಿ.ಪ್ರ. ಚಂದ್ರಶೇಖರಸ್ವಾಮಿಗಳು	
	೪. ಶ್ರೀ ಮ.ನಿ.ಪ್ರ. ಸಂಗಯ್ಯಸ್ವಾಮಿಗಳು	(೧೯೧೦-೧೯೧೭)
	೫. ಶ್ರೀ ಮ.ನಿ.ಪ್ರ. ಸಂಗನಬಸವಸ್ವಾಮಿಗಳು	(೧೮೧೭-೧೯೩೨)
	೬. ಶ್ರೀ ಮ.ನಿ.ಪ್ರ. ಮಹಾಲಿಂಗ ಸ್ವಾಮಿಗಳು	(೧೯೩೨-೧೯೫೪)
	೭. ಶ್ರೀ ಮ.ನಿ.ಪ್ರ. ಎರಡನೆಯ ಸಂಗನಬಸವಸ್ವಾಮಿಗಳು	(೧೯೫೪-೧೯೭೨)
	೮. ಶ್ರೀ ಮ.ನಿ.ಪ್ರ. ಚನ್ನಬಸವಸ್ವಾಮಿಗಳು	(೧೯೭೨-)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಪರಂಪರೆಯ ಕರ್ತೃ ಗುರುಗಳಾದ ಶ್ರೀ ಗುರುಸಿದ್ಧೇಶ್ವರ ಸ್ವಾಮಿಗಳು

ಮಠವನ್ನು ಅಭಿವೃದ್ಧಿ ಪಡಿಸಿ ಜಮಖಂಡಿ ತಾಲ್ಲೂಕಿನ ಕಡಕೋಳ ಗ್ರಾಮದ ಶಾಖಾ ಮಠದಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ಗದ್ದುಗೆಯನ್ನು ಕಡಕೋಳದಲ್ಲಿ ನಿರ್ಮಿಸಲಾಗಿದೆ. ಇವರ ತರುವಾಯ ಶ್ರೀ ಚನ್ನವೀರ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಅಭಿವೃದ್ಧಿ ಪಡಿಸಿದ್ದಾರೆ. ಗುರುಗಳು ಶಿಶುನಾಳ ಶರೀಫರ ಸಮಕಾಲೀನರೆಂದು ಹೇಳಲಾಗುತ್ತಿದೆ. ಈ ಗುರುಗಳ ಹಾಗೂ ಮಠದ ಬಗ್ಗೆ ಹಾಸನ ಜಿಲ್ಲೆಯ ಹಾರನಹಳ್ಳಿ ಕೋಡಿ ಮಠದಲ್ಲಿ ಕೆಲವು ದಾಖಲೆಗಳು ಇವೆ ಎಂದು ಹೇಳಲಾಗುತ್ತಿದೆ. ಶ್ರೀ ಚನ್ನವೀರ ಸ್ವಾಮಿಗಳು ಹುಲುಗೂರಿನಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಬಂದ ಶ್ರೀ ಚಂದ್ರಶೇಖರ ಸ್ವಾಮಿಗಳು, ಶ್ರೀ ಸಂಗಯ್ಯ ಸ್ವಾಮಿಗಳ ಬಗ್ಗೆಯೂ ಹೆಚ್ಚು ಮಾಹಿತಿ ದೊರೆಯುವುದಿಲ್ಲ. ಇವರ ತರುವಾಯ ಶ್ರೀ ಸಂಗನಬಸವ ಸ್ವಾಮಿಗಳು ಅಧಿಕಾರಕ್ಕೆ ಬಂದಿದ್ದಾರೆ ಇವರ ಬಗೆಗೂ ಹೆಚ್ಚು ವಿಷಯ ತಿಳಿಯದಾಗಿದೆ. ಇವರ ನಂತರ ಅಧಿಕಾರಕ್ಕೆ ಬಂದ ಶ್ರೀ ಮಹಾಲಿಂಗ ಸ್ವಾಮಿಗಳು ಜಮಖಂಡಿ ತಾಲ್ಲೂಕಿನ ಬಿದರಿ ಶ್ರೀ ಕುಮಾರ ಸ್ವಾಮಿಗಳ ವಂಶಸ್ಥರೆಂದು ಹೇಳಲಾಗುತ್ತದೆ. ಶ್ರೀ ಮಹಾಲಿಂಗ ಸ್ವಾಮಿಗಳು ಶಿವಯೋಗ ಮಂದಿರದಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ಮಠಕ್ಕೆ ಆಗಮಿಸಿದಾಗ ಮಠವು ಸುಸ್ಥಿತಿಯಲ್ಲಿಲ್ಲದೆ, ತಮ್ಮ ಪೂಜಾಕಾರ್ಯಗಳಿಗೆ ಹಾಗೂ ತಪಸ್ಸಿಗೆ ತೊಂದರೆ ಉಂಟಾದ ಕಾರಣ ಹಾರನಹಳ್ಳಿಯ ಕೋಡಿಮಠಕ್ಕೆ ೧೯೫೪ ರಲ್ಲಿ ಆಗಮಿಸಿ ಶ್ರೀ ನೀಲಲೋಚನ ಸ್ವಾಮಿಗಳ ಬಳಿ ನೆಲೆಸುತ್ತಾರೆ. ಗುರುಗಳು ಕೋಡಿಮಠದಲ್ಲಿ ಇರುವ ಸಂದರ್ಭದಲ್ಲಿ ಹಾವು ಕಚ್ಚಿತ್ತು. ಅವರನ್ನು ಜಮಖಂಡಿಗೆ ಕರೆತರುವಾಗ ದಾರಿ ಮಧ್ಯ ಹಾವೇರಿಯಲ್ಲಿ ಲಿಂಗೈಕ್ಯರಾದರು. ಇವರ ಗದ್ದುಗೆಯನ್ನು ಹಾವೇರಿಯ ಹುಕ್ಕೇರಿ ಮಠದಲ್ಲಿ ನಿರ್ಮಿಸಲಾಗಿದೆ. ನಂತರ ೧೯೩೮ ರಲ್ಲಿ ಜನಿಸಿದ ಶ್ರೀ ಎರಡನೆಯ ಸಂಗನಬಸವ ಸ್ವಾಮಿಗಳು ಅಧಿಕಾರಕ್ಕೆ ಬಂದಿದ್ದಾರೆ.

ಇವರು ಹಾರನಹಳ್ಳಿಯ ಶ್ರೀ ನೀಲಲೋಚನ ಸ್ವಾಮಿಗಳಿಂದ ಪಟ್ಟಾಧಿಕಾರದ ಅನುಗ್ರಹವನ್ನು ಪಡೆದು ಅಧಿಕಾರಕ್ಕೆ ಬಂದಿದ್ದಾರೆ. ಗುರುಗಳು ಶಿವಯೋಗ ಮಂದಿರ, ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡಿ'ವೇದಾಂತಾಚಾರ್ಯ'ಎಂಬ ಪದವಿಯನ್ನು ಪಡೆದುಕೊಂಡು ಮಠಕ್ಕೆ ಆಗಮಿಸಿದರು. ನಂತರ ಬನಾರಸ್ ವಿಶ್ವವಿದ್ಯಾನಿಲಯದಲ್ಲಿ ೧೯೭೧ರಲ್ಲಿ ಹಿಂದಿಯಲ್ಲಿ ಎಂ.ಎ ಪದವಿಯನ್ನು ಪಡೆದುಕೊಂಡರು. ಪಾಂಡಿತ್ಯವನ್ನು ಗಳಿಸಿಕೊಂಡು ಬಂದ ಶ್ರೀ ಸಂಗನಬಸವ ಸ್ವಾಮಿಗಳು ೧೯೫೪ ರಲ್ಲಿ ಓಲೆಮಠದ ಅಧಿಕಾರವನ್ನು ವಹಿಸಿಕೊಂಡರಾದರೂ, ಈ ಮಠದಲ್ಲಿ ಹೆಚ್ಚು ದಿನ ಇರದೆ ಬಳ್ಳಾರಿ ಮತ್ತು ಹೊಸಪೇಟೆಯ ಹೇಮಕೂಟ ಮಠದ ಅಧಿಕಾರವನ್ನು ವಹಿಸಿಕೊಂಡರು. ಈ ಕಾರಣಕ್ಕಾಗಿ ಶ್ರೀ ಓಲೆಮಠವು ಖಾಲಿ ಉಳಿಯುತ್ತದೆ. ನಂತರ ಶ್ರೀ ಚನ್ನಬಸವ ಸ್ವಾಮಿಗಳು ಉತ್ತರಾಧಿ ಕಾರಿಯಾಗಿ ನೇಮಕಗೊಂಡರು. ಗುರುಗಳು ಶಿವಯೋಗ ಮಂದಿರ, ವಾರಣಾಸಿ, ಕಾಶಿ ವಿದ್ಯಾಪೀಠಗಳಲ್ಲಿ ಸಂಸ್ಕೃತ ಮತ್ತು ಹಿಂದಿಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು, ತಿರುಪತಿ ವಿಶ್ವವಿದ್ಯಾನಿಯಲದಲ್ಲಿ ಆಚಾರ್ಯಪದವಿ ಪಡೆದರು. ನಂತರ ಹಂಪಿ ಕನ್ನಡ ವಿಶ್ವವಿದ್ಯಾನಿಲಯದಲ್ಲಿಮಗ್ಗೆಯ ಮಾಯಿದೇವನ ಶಿವಾನುಭವ ಸೂತ್ರ: ಒಂದು ಅಧ್ಯಯನ ಎಂಬ ಮಹಾಪ್ರಬಂಧವನ್ನು ಮಂಡಿಸಿ ತಮ್ಮ ಜ್ಞಾನ ಸಂಪಾದನೆಯನ್ನು ಪ್ರದರ್ಶಿಸಿ ಪಿಎಚ್.ಡಿ ಪದವಿಯನ್ನು ಪಡೆದು ಮಠಕ್ಕೆ ಆಗಮಿಸಿದರು. ಗುರುಗಳು ಅರವತ್ತೂರು ದಿನಗಳ ಕಾಲ ಜಮಖಂಡಿಯಲ್ಲಿ ಬಸವ ಪುರಾಣವನ್ನು ಏರ್ಪಡಿಸಿ ಧರ್ಮಜಾಗೃತಿಯನ್ನುಂಟು ಮಾಡುವ ಮೂಲಕ ೧೯೬ರಲ್ಲಿ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಗುರುಗಳು ಅಧಿಕಾರವನ್ನು ವಹಿಸಿಕೊಂಡ ಮೇಲೆ ಜೀರ್ಣಗೊಂಡ ಮಠದ ಅಭಿವೃದ್ಧಿಗೆ ನೀಲಿ ನಕ್ಷೆಯನ್ನು ತಯಾರಿಸಿ, ಅದನ್ನು ಕಾರ್ಯಗತಗೊಳಿಸತೊಡಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಗುರುಗಳು ಸಮಾಜವನ್ನು ಅಭಿವೃದ್ಧಿಪಡಿಸುವ ಕಾಳಜಿ ಹೊಂದಿ ಸಂಚಾರಿ ಶಿವಾನುಭವ ಕಾರ್ಯಕ್ರಮವನ್ನು ಹಮ್ಮಿಕೊಂಡು, ಒಂದು ಹಳ್ಳಿಯಲ್ಲಿ ಐದು ದಿನ ನೆಲೆಸಿ ಧರ್ಮೋಪದೇಶಗಳ ಮೂಲಕ ಧರ್ಮ ಜಾಗೃತಿಯನ್ನುಂಟು ಮಾಡುತ್ತಿದ್ದಾರೆ. ೧೯೮೮ ರಲ್ಲಿ ಜಮಖಂಡಿ ತಾಲ್ಲೂಕಿನ ಎಲ್ಲಾ ಹಳ್ಳಿಗಳಿಗೆ ಪಾದಯಾತ್ರೆಯ ಮೂಲಕ ಭೇಟಿ ಕೊಟ್ಟು ಜನ ಜಾಗೃತಿಯನ್ನುಂಟುಮಾಡಿದ್ದಾರೆ. ವಚನ ಪರಿಷತ್ತನ್ನು ಸ್ಥಾಪಿಸಿ ಚಿಂತನ ಗೋಷ್ಠಿಗಳು ಹಾಗೂ ಶರಣ ಸಾಹಿತ್ಯದ ಬಗ್ಗೆ ಉಪನ್ಯಾಸ ಮಾಲಿಕೆಗಳನ್ನು ಏರ್ಪಡಿಸಿ ಧರ್ಮ ಪ್ರಚಾರವನ್ನು ಮಾಡುತ್ತಿದ್ದಾರೆ. ನಿತ್ಯ ಗದ್ದುಗೆಗಳಿಗೆ ಪೂಜೆ, ಶ್ರಾವಣಮಾಸದಲ್ಲಿ ವಿಶೇಷ ಪೂಜೆ, ನಿತ್ಯಪುರಾಣ, ಮಾಸಿಕ ಶಿವಾನುಭವ ಗೋಷ್ಠಿಯನ್ನು ಏರ್ಪಡಿಸಿ ಧರ್ಮಪ್ರಚಾರವನ್ನು ಕೈಗೊಂಡಿದ್ದಾರೆ.

ಶಿಕ್ಷಣ: ಡಾ. ಚನ್ನಬಸವ ಸ್ವಾಮಿಗಳು ೧೯೯೮ ರಲ್ಲಿ ವಿದ್ಯಾವರ್ಧಕ ಟ್ರಸ್ಟ್‌ನ್ನು ಸ್ಥಾಪಿಸಿ ಪ್ರಾಥಮಿಕ ಪಾಠಶಾಲೆಯನ್ನು ಪ್ರಾರಂಭಿಸಿದ್ದಾರೆ. ಈ ಸಾಲಿನ ಶೈಕ್ಷಣಿಕ ವರ್ಷದಿಂದ ಕೈಗಾರಿಕಾ ತರಬೇತಿ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ಮಠದಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ಆಶ್ರಯ ಕಲ್ಪಿಸಿ ನೆರವಾಗಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಗುರುಗಳು ಅಧಿಕಾರಕ್ಕೆ ಬಂದ ಮೇಲೆ ಜೀರ್ಣಗೊಂಡ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಮಠದ ದ್ವಾರಬಾಗಿಲಿಗೆ ದ್ವಾರ ಮಂಟಪವನ್ನು ನಿರ್ಮಿಸಿದ್ದಾರೆ. ಗದ್ದುಗೆಗೆ ಮಂಟಪ ಹಾಗೂ ಕಲ್ಯಾಣ ಮಂಟಪವನ್ನು ನಿರ್ಮಿಸಿದ್ದಾರೆ. ಹಳೆಯ ಕಟ್ಟಡವನ್ನು ಪೂರ್ಣ ತೆಗೆಸಿ ಹಂತ ಹಂತವಾಗಿ ಹೊಸ ಕಟ್ಟಡವನ್ನು ನಿರ್ಮಿಸುತ್ತಿದ್ದಾರೆ. ಮಠದ ಆಸ್ತಿಯಾಗಿರುವ ಅರವತ್ತು ಎಕರೆ ಜಮೀನನ್ನು ಅಭಿವೃದ್ಧಿಪಡಿಸಿ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ಶ್ರೀ ಡಾ. ಚನ್ನಬಸವ ಸ್ವಾಮಿಗಳು ಕ್ರಿಯಾತ್ಮಕ ಚಟುವಟಿಕೆಗಳಿಂದ ಹೆಚ್ಚು ಹೆಸರು ಮಾಡಿದ್ದು, ಧಾರ್ಮಿಕ ವಿಚಾರಗಳನ್ನು ವೈಜ್ಞಾನಿಕ ತಳಹದಿಯ ಮೇಲೆ ಬೆಳೆಸಲು ಮುಂದಾಗಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಡಾ. ಚನ್ನಬಸವ ಸ್ವಾಮಿಗಳು, ಶ್ರೀ ಓಲೇಮಠ, ಜಮಖಂಡಿ, ಬಾಗಲಕೋಟೆ ಜಿಲ್ಲೆ.
ಆಧಾರ: 'ಓಲೆಯ ಶ್ರೀಗಿರಿ ' - ಲೇಖನ: ಡಾ. ಸಂಗಮೇಶ ಬಿರಾದಾರ

ಮುತ್ತಿನಕಂತೆ ಹಿರೇಮಠ: ಜಮಖಂಡಿಯ ಮಧ್ಯ ಭಾಗದ ಜಂಬುಕೇಶ್ವರ ಗಲ್ಲಿಯಲ್ಲಿ ಶ್ರೀ ಮುತ್ತಿನ ಕಂತೆ ಹಿರೇಮಠವು ಸ್ಥಾಪನೆಯಾಗಿದೆ.ಶ್ರೀಶೈಲ ಪೀಠದ ಶಾಖಾ ಮಠವಾಗಿ ಪುತ್ರ ವರ್ಗದ ಪರಂಪರೆಯಲ್ಲಿ ಬೆಳೆದಿರುವ ಈ ಮಠವು ಪುರಾತನ ಕಾಲದಿಂದಲೂ ಅಸ್ತಿತ್ವದಲ್ಲಿದ್ದು ಈ ಪಟ್ಟಣದ ಪ್ರಮುಖ ಮಠಗಳಲ್ಲಿ ಒಂದಾಗಿ ಹೆಸರು ಪಡೆದಿತ್ತು. ಈಗಲೂ ಸಹ ತನ್ನದೇ ಆದಂತಹ ವರ್ಚಸ್ಸಿನಿಂದ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿದೆ.

ಪರಂಪರೆ:

೧. ಷ.ಬ್ರ.ಶ್ರೀ ಇಷ್ಟಲಿಂಗ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಅನ್ನದಾನೇಶ್ವರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ವಿರೂಪಾಕ್ಷ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಶಂಕರ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಶಿವಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ವಿರೂಪಾಕ್ಷ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ಇಷ್ಟಲಿಂಗ ಶಿವಾಚಾರ್ಯ ಸ್ವಾಮಿಗಳು ಮಠ ಸ್ಥಾಪಕರೆಂದು ಹೇಳಲಾದರೂ, ಈ ಗುರುಗಳ ಕಾಲಮಾನದ ಬಗ್ಗೆ ಆಧಾರಗಳ ಕೊರತೆಯಿಂದ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಗುರುಗಳು ಮಠವನ್ನು ಸ್ಥಾಪಿಸಿ ವೀರಶೈವಧರ್ಮ ಈ ನಾಡಿನಲ್ಲಿ ಬೆಳೆಯಲು ಸಹಾಯಕರಾಗಿದ್ದಾರೆ. ಇವರ ಕಾಲದಲ್ಲಿ ಮಠವು ಆರ್ಥಿಕವಾಗಿ ಸದೃಢತೆ ಸಾಧಿಸಿಕೊಂಡಿದೆ. ಕರ್ತೃಗುರುಗಳ ನಂತರ ಮಠದಲ್ಲಿರುವ ದಾಖಲೆಗಳ ಪ್ರಕಾರ ಶ್ರೀ ಅನ್ನದಾನೇಶ್ವರ ಶಿವಾಚಾರ್ಯ ಸ್ವಾಮಿಗಳು ಮಠದ ಆಡಳಿತವನ್ನು ನಡೆಸಿದ್ದಾರೆ. ಇವರ ನಂತರ ಶ್ರೀ ವಿರೂಪಾಕ್ಷ ಸ್ವಾಮಿಗಳು, ತದನಂತರ ಶ್ರೀ ಶಂಕರ ಸ್ವಾಮಿಗಳು ಹಾಗೂ ಶ್ರೀ ಶಿವಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು ಮಠದ ಆಡಳಿತವನ್ನು ನಡೆಸಿದ್ದಾರೆ. ಶ್ರೀ ಶಿವಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು ಮಠದ ಆಡಳಿತವನ್ನು ಸಮರ್ಥವಾಗಿ ನಡೆಸಿ ೧೯೪೨ರಲ್ಲಿ ಲಿಂಗೈಕ್ಯರಾಗಿದ್ದಾರೆ.

ಇವರ ತರುವಾಯ ಶ್ರೀ ಶಂಕರಯ್ಯ ಮತ್ತು ಶ್ರೀಮತಿ ಪಾರ್ವತಮ್ಮನವರ ಪುತ್ರರಾಗಿ ಜನಿಸಿದ ಶ್ರೀ ವಿರೂಪಾಕ್ಷ ದೇವರು ೧೯೫೧ರಲ್ಲಿ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಶ್ರೀ ವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳು ಚಿಕ್ಕ ವಯಸ್ಸಿನಲ್ಲಿಯೇ ಮಠದ ಅಧಿಕಾರವನ್ನು ವಹಿಸಿಕೊಂಡು ನಂತರ ಬೆಂಗಳೂರು ಮಹಾಂತಿನಮಠದಲ್ಲಿ ನೆಲೆಸಿ, ಸಂಸ್ಕೃತ ಅಧ್ಯಯನವನ್ನು ಮಾಡಿ ಮಠಕ್ಕೆ ಆಗಮಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಐದು ಗದ್ದುಗೆಗಳಿಗೆ ನಿತ್ಯ ಪೂಜೆ, ಶ್ರಾವಣ ಮಾಸದಲ್ಲಿ ಪುರಾಣ, ಪ್ರವಚನ ನಡೆಸಲಾಗುತ್ತಿದೆ. ಭಕ್ತರ ಮನೆಗಳಲ್ಲಿ ನಡೆಯುವ ಧಾರ್ಮಿಕ ಕಾರ್ಯಗಳಲ್ಲಿ ಕ್ರಿಯಾಮೂರ್ತಿಗಳಾಗಿ ನೆರವಾಗುತ್ತಿದ್ದಾರೆ. ಗುರುಗಳು ಆಚಾರ್ಯರ ಹಾಗೂ ಶರಣರ ತತ್ತ್ವಗಳನ್ನು ಪ್ರಚಾರ ಪಡಿಸುತ್ತಾ ವೀರಶೈವ ಧರ್ಮವನ್ನು ಬೆಳೆಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳು, ಶ್ರೀ ಮುತ್ತಿನ ಕಂತೆ ಹಿರೇಮಠ, ಜಂಬುಕೇಶ್ವರ ಗಲ್ಲಿ, ಜಮಖಂಡಿ, ಬಾಗಲಕೋಟೆ ತಾಲ್ಲೂಕು.

ಕಲ್ಯಾಣಮಠ: ಜಮಖಂಡಿ ಪಟ್ಟಣದ ಕುಂಬಾರ ಗಲ್ಲಿಯಲ್ಲಿ ಶ್ರೀ ರಂಭಾಪುರಿ ಪೀಠದ ಶಾಖಾಮಠವಾದ ಶ್ರೀ ಕಲ್ಯಾಣ ಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದಲ್ಲಿ ಶ್ರೀ ಮುಪ್ಪಿನಾರಾಧ್ಯ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟ ಈ ಮಠವು ಈತನಕವೂ ತನ್ನ ಪರಂಪರೆಯನ್ನು ಬೆಳಸಿಕೊಂಡು ಬಂದಿದೆ. ಕಲ್ಯಾಣದಿಂದ ಬಂದಂತಹ ಶಿವಯೋಗಿಗಳು ಇಲ್ಲಿನೆಲೆ ನಿಂತು ತಪೋನುಷ್ಠಾನ ಕೈಗೊಂಡು ಮಠವನ್ನು ಸ್ಥಾಪನೆ ಮಾಡಿದ್ದಾರೆ. ಈ ಕಾರಣಕ್ಕಾಗಿ 'ಶ್ರೀ ಕಲ್ಯಾಮಠ 'ಎಂದು ಹೆಸರು ಬಂದಿದೆ ಎಂದು ಹೇಳಲಾಗುತ್ತದೆ. ಶ್ರೀ ಮುಪ್ಪಿನಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಸ್ಥಾಪಿಸಿ, ಮಠದ ಪರಂಪರೆಯನ್ನು ಬೆಳೆಸಲು ಉತ್ತರಾಧಿಕಾರಿಗಳನ್ನು ನೇಮಿಸಿ ಲಿಂಗೈಕ್ಯರಾಗಿದ್ದಾರೆ.

ಪರಂಪರೆ:

೧. ಷ.ಬ್ರ.ಶ್ರೀ ಮುಪ್ಪಿನಾರಾಧ್ಯ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಚರಂತಿ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಕಲ್ಯಾಣಯ್ಯ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ರೇವಣಸಿದ್ದ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ನೀಲಕಂಠ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಮರಿರೇವಣಸಿದ್ಧ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಮಡಿವಾಳ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ಶಿವಲಿಂಗ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ಗೌರಿಶಂಕರ ಶಿವಾಚಾರ್ಯಸ್ವಾಮಿಗಳು

ಮಠದ ಪರಂಪರೆಯು ಕರ್ತೃಗುರುಗಳ ನಂತರ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮಿಗಳ ತನಕ ಬೆಳೆದು ಬಂದಿದ್ದು, ಈ ಅವಧಿಯಲ್ಲಿ ಅಧಿಕಾರ ನಡೆಸಿದ ಗುರುಗಳ ಬಗ್ಗೆ ಆಧಾರದ ಕೊರತೆಯಿಂದ ಮಾಹಿತಿ ಲಭ್ಯವಿಲ್ಲದಂತಾಗಿದೆ. ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಜೀರ್ಣಗೊಂಡಿದ್ದ ಮಠವು ನವೀಕರಣಗೊಂಡು ಸುಸಜ್ಜಿತವಾಗಿ ರೂಪುಗೊಂಡಿತು. ಗುರುಗಳ ಕಾಲದಲ್ಲಿ ಪರಂಪರೆಯ ಗುರುಗಳ ಗದ್ದುಗೆಗಳನ್ನು ಗುರುತಿಸಿ ಮಂಟಪವನ್ನು ನಿರ್ಮಿಸಲಾಗಿದೆ. ಇವರು ಧಾರ್ಮಿಕ ಕಾರ್ಯಗಳನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಬಂದು ೧೯೫೬ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಈಗ ಶ್ರೀ ಗೌರಿಶಂಕರ ಶಿವಾಚಾರ್ಯ ಸ್ವಾಮಿಗಳು ಮಠದ ಆಡಳಿತವನ್ನು ನೋಡಿಕೊಂಡು ಮಠವನ್ನು ಮುನ್ನಡೆಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ, ವಾರ್ಷಿಕ ಪುಣ್ಯಾರಾಧನೆಯ ಸಂದರ್ಭದಲ್ಲಿ ಮೂವತ್ತು ದಿನಗಳ ಕಾಲ ಪುರಾಣ, ಪ್ರವಚನ, ಶಿವದೀಕ್ಷಾ ಕಾರ್ಯಕ್ರಮ, ಸಾಮೂಹಿಕ ವಿವಾಹ ಕಾರ್ಯಕ್ರಮಗಳು ನಡೆಯುತ್ತಿವೆ. ಕಲಿಯುವ ಬಡ ವಿದ್ಯಾರ್ಥಿಗಳಿಗೆ ಮಠದಲ್ಲಿ ಆಶ್ರಯ ಕಲ್ಪಿಸಿ ನೆರವಾಗಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಗೌರಿಶಂಕರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕಲ್ಯಾಣ ಮಠ, ಜಮಖಂಡಿ, ಬಾಗಲಕೋಟೆ ತಾಲ್ಲೂಕು

ತುಬಚಿ

ಜಮಖಂಡಿ ತಾಲ್ಲೂಕಿನ ತುಬಚಿ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಇಪ್ಪತ್ತೆಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಶಿವಲಿಂಗೇಶ್ವರ ಮಠವು ಅಸ್ತಿತ್ವದಲ್ಲಿದೆ.

ಶಿವಲಿಂಗೇಶ್ವರಮಠ: ತುಬಚಿ ಗ್ರಾಮದಲ್ಲಿ ಪುರಾತನ ಕಾಲದ ಶ್ರೀ ಶಿವಲಿಂಗೇಶ್ವರ ಮಠವು ಸ್ಥಾಪನೆಯಾಗಿದೆ. ಹಿರೇ ಸಾವಳಗಿಯ ಶ್ರೀ ಶಿವಲಿಂಗೇಶ್ವರರು ಲೋಕಸಂಚಾರಕ್ಕೆ ಹೊರಟು ದೇಶದ ನಾನಾ ಭಾಗಗಳಲ್ಲಿ ಸಂಚರಿಸಿ ಅನುಷ್ಠಾನಗೊಂಡ ಸ್ಥಳಗಳು ಇಂದಿಗೂ ಜಾಗೃತಸ್ಥಳಗಳಾಗಿ ತಮ್ಮ ಅಸ್ತಿತ್ವ ಉಳಿಸಿಕೊಂಡಿವೆ. ಇಂತಹ ಒಂದು ಪವಿತ್ರ ಸ್ಥಳ ತುಬಚಿ. ಇಲ್ಲಿ ಶ್ರೀ ಶಿವಲಿಂಗೇಶ್ವರರು ಅನುಷ್ಠಾನ ಕೈಗೊಂಡು ಜಾಗೃತ ಸ್ಥಳವನ್ನಾಗಿ ಮಾಡಿದ್ದಾರೆ. ಇಲ್ಲಿ ಮಠವು ಸ್ಥಾಪನೆಯಾಗಿ ವೀರಶೈವ ಧರ್ಮದ ತತ್ವಗಳನ್ನು ಪ್ರಚಾರಪಡಿಸುತ್ತಿದೆ.

ಅಂದು ಪ್ರಾರಂಭಗೊಂಡ ಮಠವು ಈತನಕ ಬೆಳೆದು ಬಂದು ತನ್ನ ಪರಂಪರೆಯನ್ನು ಉಳಿಸಿಕೊಂಡಿದೆ. ಈಗಿನ ಗುರುಗಳಾದ ಶ್ರೀ ಶಿವಲಿಂಗೇಶ್ವರ ಸ್ವಾಮಿಗಳು ಶಿವಯೋಗ ಮಂದಿರದಲ್ಲಿ ಕಲಿತು ಮಠದ ಆಡಳಿತವನ್ನು ವಹಿಸಿಕೊಂಡಿದ್ದಾರೆ. ೧೯೩೫ ರಲ್ಲಿ ಜನಿಸಿದ ಗುರುಗಳು, ಹುಬ್ಬಳ್ಳಿ ಶ್ರೀ ಮೂರುಸಾವಿರ ಮಠದ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳ ಸಹಪಾಠಿಗಳಾಗಿ ಕಲಿತರು. ಈ ಹಿರಿಯ ಸಾಧಕರು ಪರಂಪರೆಯ ಮಠವನ್ನು ಅಭಿವೃದ್ಧಿ ಪಡಿಸಿದ್ದಾರೆ. ಈಗ ಗುರುಗಳು ತಮ್ಮ ಉತ್ತರಾಧಿಕಾರಿಗಳಿಗೆ ಅಧಿಕಾರವನ್ನು ನೀಡಿ ವಿಶ್ರಾಂತ ಜೀವನವನ್ನು ನಡೆಸುತ್ತಿದ್ದಾರೆ. ಮಠದ ಆವರಣದಲ್ಲಿ ಕರ್ತೃ ಗುರುಗಳ ತೋರು ಗದ್ದುಗೆಯನ್ನು ನಿರ್ಮಿಸಿದ್ದು, ಪರಂಪರೆಯ ಎರಡು ಜನ ಗುರುಗಳ ಗದ್ದುಗೆಗಳನ್ನು ನಿರ್ಮಿಸಲಾಗಿದೆ. ಈ ಗದ್ದುಗೆಗಳಿಗೆ ನಿತ್ಯ ಪೂಜೆ, ಅಮಾವಾಸ್ಯೆ ಮತ್ತು ಹುಣ್ಣಿಮೆಗಳಲ್ಲಿ ವಿಶೇಷ ಪೂಜೆ, ಹಿರಿಯ ಗುರುಗಳ ಪುಣ್ಯಾರಾಧನೆ ಕಾರ್ಯಕ್ರವನ್ನು ಆಚರಿಸಿ ಅನ್ನದಾಸೋಹವನ್ನು ನಡೆಸಲಾಗುತ್ತಿದೆ. ಈ ಪುರಾತನ ಮಠಕ್ಕೆ ಮೂವತ್ಮೂರು ಶಾಖಾಮಠಗಳು ಇವೆ ಎಂದು ಹೇಳಲಾಗುತ್ತಿದೆ. ಮಠದ ಆಸ್ತಿಯಾಗಿ ನಲವತ್ತು ಎಕರೆ ಜಮೀನಿದ್ದು ಅದನ್ನು ಅಭಿವೃದ್ಧಿ ಪಡಿಸಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಶಿವಲಿಂಗೇಶ್ವರ ಸ್ವಾಮಿಗಳು, ಶ್ರೀ ಶಿವಲಿಂಗೇಶ್ವರಮಠ, ತುಬಚಿ, ಜಮಖಂಡಿ ತಾ, ಬಾಗಲಕೋಟೆಜಿಲ್ಲೆ.

ತೇರದಾಳು

ಜಮಖಂಡಿ ತಾಲ್ಲೂಕಿನ ತೇರದಾಳು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಮೂವತ್ತೈದು ಕಿ.ಮೀ ದೂರದಲ್ಲಿದೆ. ಈ ಗ್ರಾಮವು ಜಿಲ್ಲೆಯ ಗಡಿಭಾಗವಾಗಿದ್ದು, ಇಲ್ಲಿ ವೀರಶೈವಧರ್ಮ ಬೆಳೆಯಲು ಪುರಾತನ ಕಾಲದಲ್ಲಿ ಹೆಚ್ಚು ಪ್ರೋತ್ಸಾಹ ದೊರೆತಿದೆ. ಇದಕ್ಕೆ ಸಾಕ್ಷಿಎಂಬಂತೆ ಈ ಗ್ರಾಮದಲ್ಲಿ ಶ್ರೀ ಹಿರೇಮಠ, ಶ್ರೀ ವಿರಕ್ತಮಠ ಎಂಬ ಎರಡು ಮಠಗಳು ಸ್ಥಾಪನೆಯಾಗಿವೆ. ಈ ಮಠಗಳ ಸ್ಥಾಪನೆಯಿಂದ ಇಂದಿಗೂ ಇಲ್ಲಿ ವೀರಶೈವ ಧರ್ಮದ ಆಚರಣೆಗಳು ನಡೆಯತೊಡಗಿವೆ.

ಹಿರೇಮಠ: ತೇರದಾಳು ಗ್ರಾಮದ ಮಧ್ಯಭಾಗದಲ್ಲಿ ಹಿರೇಮಠ ಗಲ್ಲಿಯಲ್ಲಿ ಸ್ಥಾಪನೆಯಾಗಿರುವ ಹಿರೇಮಠವು ಪುರಾತನ ಕಾಲದ ರಂಭಾಪುರಿ ಪೀಠದ ಶಾಖಾಮಠವಾಗಿ ಬೆಳೆದಿದೆ. ಈ ಮಠದ ಕರ್ತೃ ಗುರುಗಳ ಬಗ್ಗೆ ಹಾಗೂ ಪರಂಪರೆಯ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ಇಲ್ಲದಿದ್ದರೂ ಮಠದ ಪರಂಪರೆಯಲ್ಲಿ ಹನ್ನೆರಡು ಜನ ಗುರುಗಳು ಅಧಿಕಾರವನ್ನು ನಡೆಸಿದ್ದಾರೆ ಎಂದು ಹೇಳಲಾಗುತ್ತದೆ. ೧೯೬೦ರಲ್ಲಿ ಲಿಂಗೈಕ್ಯರಾದ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ಈ ಮಠದ ಪರಂಪರೆಯ ಕೊನೆಯ ಕೊಂಡಿಯಾಗಿದ್ದರು. ಗುರುಗಳು ಧಾರ್ಮಿಕ ಕಾರ್ಯಗಳನ್ನು ನಡೆಸಿ ಭಕ್ತರನ್ನು ಧರ್ಮವಂತರನ್ನಾಗಿ ಮಾಡುತ್ತಿದ್ದರು. ಇವರು ಶಿವಪೂಜಾನಿಷ್ಠರಾಗಿ ವಾಕ್‌ಸಿದ್ಧಿಯನ್ನು ಪಡೆದಿದ್ದರು. ಇಂತಹ ಹಿರಿಯ ಗುರುಗಳು ಲಿಂಗೈಕ್ಯರಾದ ಮೇಲೆ ಮಠದ ಉತ್ತರಾಧಿಕಾರಿಗಳನ್ನಾಗಿ ಶ್ರೀ ಶಿವಶಂಕರ ದೇವರನ್ನು ನೇಮಕಮಾಡಲಾಗಿತ್ತು. ಇವರೂ ಸಹ ಲಿಂಗೈಕ್ಯರಾದ ಮೇಲೆ ಶ್ರೀ ಬಾಲ ಗಂಗಾಧರ ದೇವರನ್ನು ೨೦೦೦ದ ಇಸವಿಯಲ್ಲಿ ನೇಮಿಸಲಾಗಿದೆ. ಗುರುಗಳು ವಿದ್ಯಾಭ್ಯಾಸದಲ್ಲಿ ತೊಡಗಿದ್ದು ನಂತರ ಅಧಿಕಾರ ನೀಡಲಾಗುತ್ತಿದೆ. ಮಠದ ಆವರಣದಲ್ಲಿರುವ ನಾಲ್ಕು ಗದ್ದುಗೆಗಳಿಗೆ ನಿತ್ಯ ಪೂಜೆಯನ್ನು ಮಾಡಲಾಗುತ್ತಿದೆ. ಹಿರಿಯ ಗುರುಗಳ ಪುಣ್ಯಾರಾಧನೆ ಕಾರ್ಯಕ್ರಮವನ್ನು ಮಾಡಲಾಗುತ್ತಿದೆ.

ವಿಳಾಸ: ಶ್ರೀ ಬಾಲಗಂಗಾಧರ ದೇವರು, ಶ್ರೀ ಹಿರೇಮಠ, ತೇರದಾಳು, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.

ವಿರಕ್ತಮಠ: ತೇರದಾಳು ಗ್ರಾಮದ ಗುಮ್ಮಟಗಲ್ಲಿಯಲ್ಲಿ ಮುರುಘಾ ಸಮಯದ ವಿರಕ್ತಮಠವು ಸ್ಥಾಪನೆಯಾಗಿದೆ. ಹದಿನಾರನೆಯ ಶತಮಾನದಲ್ಲಿ ಸ್ಥಾಪನೆಯಾದ ಈ ಮಠವು ಇಲ್ಲಿನ ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ಬೆಳೆದಿದೆ.

ಶ್ರೀ ಮುಪ್ಪಿನೇಂದ್ರ ಸ್ವಾಮಿಗಳು ಈ ಮಠದ ಸ್ಥಾಪಕರೆಂದು ಹೇಳಲಾಗುತ್ತಿದೆ. ಗುರುಗಳು ಮಹಾ ತಪಸ್ವಿಗಳಾಗಿದ್ದರು. ಇವರು ಲೋಕಸಂಚಾರ ಮಾಡುತ್ತಾ ತೇರದಾಳು ಗ್ರಾಮದ ಹೊರಭಾಗದ ನಿರ್ಜನ ಪ್ರದೇಶದಲ್ಲಿ ಬಂದು ನೆಲೆಸಿ,ತಪಸ್ಸನ್ನು ಆಚರಿಸು ತ್ತಿದ್ದರು. ಇವರ ಪ್ರಭಾವವನ್ನು ಆದಿಲ್‌ಶಾಹಿ ಕೇಳಿ ತಿಳಿದುಕೊಂಡಿದ್ದು, ಗುರುಗಳನ್ನು ದರ್ಶನ ಮಾಡಬೇಕೆಂದು ಅವರು ನೆಲೆ ನಿಂತ ಜಾಗಕ್ಕೆ ಆಗಮಿಸುತ್ತಾನೆ. ಗುರುಗಳನ್ನು ನೋಡಿ ಭಾವುಕನಾದ. ಆಗ ಗುರುಗಳು ಆದಿಲ್‌ಶಾಹಿಗೆ ಧಾರ್ಮಿಕ ಸಂಸ್ಕಾರವನ್ನು ನೀಡಿ ಆಡಳಿತಕ್ಕೆ ನೆರವಾದರು. ಈ ಕಾರಣಕ್ಕಾಗಿ ಆದಿಲ್‌ಶಾಹಿ ಗುರುಮನೆಯನ್ನು ಸ್ಥಾಪಿಸಿಕೊಟ್ಟನು. ಆದಿಲ್‌ಶಾಹಿಯು ಮಠದ ಧಾರ್ಮಿಕ ಕಾರ್ಯಗಳು ನಿರಂತರವಾಗಿ ನಡೆಯಬೇಕೆಂಬ ಉದ್ದೇಶದಿಂದ ಮಠಕ್ಕೆ ಉಂಬಳಿ ಜಮೀನು ನೀಡಿ,ಗುರುಗಳಿಗೆ ಗೌರವ ಸಲ್ಲಿಸಿ ಹೋಗುತ್ತಾನೆ. ಈ ಹಿನ್ನೆಲೆಯಲ್ಲಿ ರೂಪುಗೊಂಡ ಮಠದ ಪರಂಪರೆ ಈತನಕ ಬೆಳೆದು ವೀರಶೈವ ಧರ್ಮವನ್ನು ಬೆಳೆಸಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಮುಪ್ಪಿನೇಂದ್ರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಗುರುಶಾಂತಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಗುರುಸಿದ್ಧಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಶಿವಲಿಂಗಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಅಪ್ಪಯ್ಯಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಅನ್ನದಾನಿಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಶಿವಲಿಂಗೇಶ್ವರಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಮಠದ ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಗುರುಶಾಂತ ಸ್ವಾಮಿ ಗಳು ಹಾಗೂ ಶ್ರೀ ಗುರುಸಿದ್ಧ ಸ್ವಾಮಿಗಳ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ.ನಂತರ ಬಂದ ಶ್ರೀ ಶಿವಲಿಂಗ ಸ್ವಾಮಿಗಳು ಅಥಣಿ ಶಿವಯೋಗಿಗಳ ಸಮಕಾಲೀನರಾಗಿ ಪ್ರಭಾವಿ ಗುರುಗಳಾಗಿ ಬೆಳೆದಿದ್ದರು. ಇವರು ೧೯೪೫ ರಲ್ಲಿ ಲಿಂಗೈಕ್ಯರಾಗಿದ್ದಾರೆ. ನಂತರದ ಶ್ರೀ ಅಪ್ಪಯ್ಯ ಸ್ವಾಮಿಗಳ ಬಗ್ಗೆ ಮಾಹಿತಿ ದೊರೆಯುವುದಿಲ್ಲ. ನಂತರ ಬಂದ ಶ್ರೀ ಅನ್ನದಾನಿ ಸ್ವಾಮಿಗಳು ಮಹಾತಪಸ್ವಿಗಳಾಗಿ ವಾಕ್‌ಸಿದ್ಧಿ ಪುರುಷರಾಗಿ ಹೆಸರು ಗಳಿಸಿದ್ದರು. ಇವರ ಕಾಲದಲ್ಲಿ ಮಠವು ಅಭಿವೃದ್ಧಿ ಗೊಂಡಿತ್ತು. ಇವರು ೧೯೭೯ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿಯಿತು. ಈ ಸಂದರ್ಭದಲ್ಲಿ ಮಠವು ಜೀರ್ಣಾವಸ್ಥೆಗೆ ಬಂದಿತು.

ಈಗಿನ ಗುರುಗಳಾದ ಶ್ರೀ ಶಿವಲಿಂಗೇಶ್ವರ ಸ್ವಾಮಿಗಳು ಅಥಣಿ ತಾಲ್ಲೂಕಿನ ಸಕ್ರಟ್ಟಿ ಗ್ರಾಮದ ಶ್ರೀ ಗುರುಬಸವಯ್ಯ ಮತ್ತು ಶ್ರೀಮತಿ ಅನ್ನಪೂರ್ಣ ದೇವಿಯವರ ಪುತ್ರರಾಗಿ ೧೯೬೦ರಲ್ಲಿ ಜನಿಸಿದರು. ಇವರು ಅಥಣಿ ಗಚ್ಚಿನಮಠದಲ್ಲಿ ಸಂಸ್ಕೃತ ಕಲಿತು ನಂತರ ಧಾರವಾಡದ ಮುರುಘಾ ಮಠದಲ್ಲಿದ್ದು ವಿದ್ಯಾಭ್ಯಾಸವನ್ನು ಮಾಡಿ ೧೯೮೭ ರ ಬಸವ ಜಯಂತಿಯ ದಿನದಂದು ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಗುರುಗಳು ಅಧಿಕಾರವನ್ನು ವಹಿಸಿಕೊಂಡ ಮೇಲೆ ಜೀರ್ಣಾವಸ್ಥೆಗೆ ಬಂದಿದ್ದ ಮಠದ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಂಡರು. ತೇರದಾಳು ಗ್ರಾಮದ ಮಧ್ಯಭಾಗದಲ್ಲಿ ವಿಶಾಲವಾದ ಮೈದಾನದಲ್ಲಿ ಸ್ಥಾಪನೆಯಾಗಿರುವ ಈ ಮಠವು, ಉತ್ತರಾಧಿಕಾರಿಗಳಿಲ್ಲದ ಸಂದರ್ಭದಲ್ಲಿ ಅನ್ಯರ ಪಾಲಾಗಿತ್ತು. ಇದನ್ನು ಕಾನೂನು ರೀತಿಯಲ್ಲಿ ತೆರವುಗೊಳಿಸಿ ಕ್ರಮಬದ್ಧಗೊಳಿಸಿದರು. ಈ ರೀತಿ ಒಂದೊಂದೇ ಕಾರ್ಯಗಳನ್ನು ಮುಗಿಸಿ ಮಠವನ್ನು ಸುಸ್ಥಿತಿಗೆ ತಂದಿದ್ದಾರೆ.

ಧಾರ್ಮಿಕ ಕಾರ್ಯಗಳು: ಪರಂಪರೆಯ ಐದು ಗದ್ದುಗೆಗಳು ಸ್ಥಾಪನೆಯಾಗಿದ್ದು, ನಿತ್ಯ ಎರಡೂ ವೇಳೆಪೂಜೆ ಮಾಡಲಾಗುತ್ತಿದೆ. ಪ್ರತಿ ಸೋಮವಾರ ಶಿವಾನುಭವ ಗೋಷ್ಠಿ, ಶ್ರಾವಣ ಮಾಸದಲ್ಲಿ ಪುರಾಣ ಪ್ರವಚನ, ಭಾದ್ರಪದ ಮಾಸದಲ್ಲಿ ಶ್ರೀ ಶಿವಲಿಂಗ ಸ್ವಾಮಿಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭಗಳಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಮಠದಲ್ಲಿ ಅಕ್ಕನಬಳಗ, ಅಣ್ಣನಬಳಗ ಸ್ಥಾಪನೆಗೊಂಡಿದ್ದು ಇವುಗಳ ಮೂಲಕ ಧಾರ್ಮಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆ

ಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಹದಿನಾರು ಎಕರೆ ಜಮೀನನ್ನು ಅಭಿವೃದ್ಧಿ ಪಡಿಸಿ, ಆದಾಯ ಬರುವಂತೆ ಮಾಡಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಶಿವಲಿಂಗೇಶ್ವರ ಸ್ವಾಮಿಗಳು, ಶ್ರೀ ವಿರಕ್ತಮಠ, ತೇರದಾಳು, ಜಮಖಂಡಿ ತಾ, ಬಾಗಲಕೋಟೆ ಜಿಲ್ಲೆ.

ಬಿದರಿ

ಜಮಖಂಡಿ ತಾಲ್ಲೂಕಿನ ಬಿದರಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಮೂವತ್ತೆರಡು ಕಿ.ಮೀ ದೂರದಲ್ಲಿದೆ. ಕೃಷ್ಣಾ ನದಿಯ ದಂಡೆಯ ಮೇಲೆ ಕುಮಾರ ಸಮಯದ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಬಿದರಿ ಗ್ರಾಮದಲ್ಲಿ ಸ್ಥಾಪನೆಯಾಗಿರುವ ವಿರಕ್ತ ಮಠವು ಇಂದು ಆಲಮಟ್ಟಿ ಅಣೆಕಟ್ಟೆಯ ಹಿನ್ನೀರಿನಿಂದ ಮುಳುಗಡೆಯಾಗಿದೆ. ೧೮೦೦ನೆಯ ಇಸವಿಯಲ್ಲಿ ಶ್ರೀ ವಿರೂಪಾಕ್ಷಸ್ವಾಮಿಗಳಿಂದ ಮಠವು ಸ್ಥಾಪನೆಯಾಗಿದೆ. ಶ್ರೀ ವಿರೂಪಾಕ್ಷ ಸ್ವಾಮಿಗಳಿಂದ ಸ್ಥಾಪಿತವಾದ ಈ ಮಠವು ಶರಣತತ್ತ್ವವನ್ನು ಪ್ರಚಾರ ಪಡಿಸುವ ನಿಟ್ಟಿನಲ್ಲಿ ಅತ್ಯಂತ ಮಹತ್ತರವಾದ ಕಾರ್ಯವನ್ನು ನಿರ್ವಹಿಸಿ, ಈ ಭಾಗದಲ್ಲಿ ವೀರಶೈವಧರ್ಮ ಬೆಳೆಯಲು ಸಹಾಯಕವಾಗಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ವಿರೂಪಾಕ್ಷ ಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಕುಮಾರ ಶಿವಯೋಗಿ ಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಅಪ್ಪಯ್ಯ ಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಮಹಾಲಿಂಗ ಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಶಿವಲಿಂಗ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಮಠದ ಕರ್ತೃ ಗುರುಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಕುಮಾರ ಶಿವಯೋಗಿಗಳು ಶ್ರೀ ಬಿದರಿಕುಮಾರ ಶಿವಯೋಗಿಗಳೆಂದು ಹೆಚ್ಚು ಪ್ರಸಿದ್ಧಿ ಪಡೆದಿದ್ದರು. ಗುರುಗಳು ಅಥಣಿ, ಬೀಳೂರು ಸ್ವಾಮಿಗಳ ಸಮಕಾಲೀನರಾಗಿ ಅಖಿಲ ಭಾರತ ವೀರಶೈವ ಮಹಾಸಭೆಯ ಸಂಸ್ಥಾಪಕರಾದ ಶ್ರೀ ಹಾನಗಲ್ಲು ಕುಮಾರ ಸ್ವಾಮಿಗಳು ಹಾಗೂ ಹಾವೇರಿಯ ಶ್ರೀ ಶಿವಬಸವ ಸ್ವಾಮಿಗಳೀರ್ವರ ಅನುಗ್ರಹ ಗುರುಗಳಾಗಿ ಶ್ರೀ ಕುಮಾರ ಶಿವಯೋಗಿಗಳು ಹೆಚ್ಚು ಹೆಸರು ಪಡೆದಿದ್ದರು. ಇವರು ನವಿಲು ತೀರ್ಥದಲ್ಲಿ ದೀರ್ಘಕಾಲದ ಅನುಷ್ಠಾನವನ್ನು ಕೈಗೊಂಡು ಶಿವಯೋಗ ಸಿದ್ಧಿಯನ್ನು ಸಾಧಿಸಿಕೊಂಡು ಶಿವಯೋಗಿಗಳಾದರು. ಇಂತಹ ಮಹಾಪುರುಷರು ಮಠದ ಪರಂಪರೆಯ ಗುರುಗಳಾಗಿ ಮಠವನ್ನು ಬೆಳೆಸಿದರು. ಇವರ ನಂತರ ಶ್ರೀ ಅಪ್ಪಯ್ಯ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡರು. ಇವರು ಶಿವಯೋಗ ಮಂದಿರ ಪ್ರಾರಂಭವಾದ ಹೊಸದರಲ್ಲಿ ಸಪ್ತ ಸಾಧಕರಲ್ಲಿ ಒಬ್ಬರಾಗಿ ವಿದ್ಯಾಭ್ಯಾಸ ಮಾಡಿ ಪಾಂಡಿತ್ಯವನ್ನು ಸಂಪಾದಿಸಿಕೊಂಡು ಬಂದು ಮಠವನ್ನು ಅಭಿವೃದ್ಧಿಪಡಿಸಿದರು.

ಇವರ ನಂತರ ಶ್ರೀ ಮಹಾಲಿಂಗ ಸ್ವಾಮಿಗಳು ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಇವರ ಕಾಲದಲ್ಲಿ ಮಠವು ಜೀರ್ಣೋದ್ಧಾರಗೊಂಡಿತು. ಈ ಮಠದ ಶಾಖಾ ಮಠವಾಗಿದ್ದ ಸವದತ್ತಿ ಮಠವನ್ನು ಬೆಳೆಸಿದರು. ಶ್ರೀ ಕುಮಾರೇಶ್ವರ ಗ್ರಂಥ ಮಾಲೆಯನ್ನು ಪ್ರಾರಂಭಿಸಿ ಶ್ರೀ ಕುಮಾರೇಶ್ವರ ಪುರಾಣ, ಧರ್ಮದಲ್ಲಿ ವೈಜ್ಞಾನಿಕ ಪರಿಕಲ್ಪನೆ, ಬಸವ ಜ್ಯೋತಿ ಮುಂತಾದ ಮೌಲಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಈ ರೀತಿ ಧಾರ್ಮಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಶ್ರಮಿಸಿ ೧೯೮೫ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಮರೆಗುದ್ದಿ ಶ್ರೀ ಬಸವಲಿಂಗಯ್ಯ ಮತ್ತು ಶ್ರೀಮತಿ ದಾಕ್ಷಾಯಿಣಿ ಇವರ ಪುತ್ರರಾಗಿ ೧೯೬೧ ರಲ್ಲಿ ಜನಿಸಿದ ಶ್ರೀ ಶಿವಲಿಂಗ ಸ್ವಾಮಿಗಳು ೧೯೮೬ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಶ್ರೀ ಶಿವಲಿಂಗ ಸ್ವಾಮಿಗಳು ಮರೆಗುದ್ದಿಯಲ್ಲಿ ಜನಿಸಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಸವದತ್ತಿಯಲ್ಲಿ ಮುಗಿಸಿ, ಶಿವಯೋಗ ಮಂದಿರದಲ್ಲಿ ಆಗಮ, ಉಪನಿಷತ್ತು, ವೇದ, ಯೋಗ ಹಾಗೂ ಪ್ರವಚನ ಕಲೆಯನ್ನು ಕಲಿತು ಮಠಕ್ಕೆ ಆಗಮಿಸಿದರು. ಲೋಕಕಲ್ಯಾಣಾರ್ಥ ಮೌನಾನುಷ್ಠಾನ ನಂತರ, ಧರ್ಮಬೋಧನೆ ನಡೆಸಿದ್ದಾರೆ. ಅಲ್ಲದೆ ಹಳ್ಳಿ ಹಳ್ಳಿಗಳನ್ನು ಸುತ್ತಿ ಭಕ್ತರಲ್ಲಿರುವ ಮೌಢ್ಯ ನಿವಾರಣೆಗಾಗಿ ಸಾಕಷ್ಟು ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಎರಡು ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ, ಪ್ರತಿದಿನ ಸಂಜೆ ಭಜನೆ ಕಾರ್ಯಕ್ರಮ ನಡೆಯುತ್ತಿದೆ. ಅಮಾವಾಸ್ಯೆಯಲ್ಲಿ ಶಿವಾನುಭವಗೋಷ್ಠಿ, ಹುಣ್ಣಿಮೆಯಲ್ಲಿ ಶಾಖಾ ಮಠಗಳಲ್ಲಿ ಶಿವಾನುಭವಗೋಷ್ಠಿ, ಶ್ರಾವಣಮಾಸದಲ್ಲಿ ನಲವತ್ತು ದಿನ ಪುರಾಣ ಪ್ರವಚನ, ಪುಷ್ಯ ಶುದ್ಧ ಪಂಚಮಿಯಂದು ಶ್ರೀ ಕುಮಾರ ಸ್ವಾಮಿಗಳ ಪುಣ್ಯಾರಾಧನೆಯನ್ನು ಐದು ದಿನಗಳ ಕಾಲ ನಡೆಸಲಾಗುತ್ತಿದೆ. ಪಾಲ್ಗುಣ ಬಹುಳ ನವಮಿಯಂದು ಶ್ರೀ ಮಹಾಲಿಂಗ ಸ್ವಾಮಿಗಳ ಪುಣ್ಯಾರಾಧನೆಯನ್ನು ಮಾಡಲಾಗುತ್ತಿದೆ. ಈ ಸಂದರ್ಭದಲ್ಲಿ ಧರ್ಮಗುರುಗಳು ಹಾಗೂ ವಿದ್ವಾಂಸರನ್ನು ಕರೆಸಿ ಉಪದೇಶ ಮತ್ತು ಉಪನ್ಯಾಸವನ್ನು ಮಾಡಿಸಲಾಗುತ್ತಿದೆ.

ಕ್ರಿಯಾಶೀಲರಾಗಿ ಸದಾ ಚಟುವಟಿಕೆಯಿಂದ ಇರುವ ಶ್ರೀ ಶಿವಲಿಂಗ ಸ್ವಾಮಿಗಳು ವೈಜ್ಞಾನಿಕ ಮನೋಭೂಮಿಕೆಯ ಮೇಲೆ ಧರ್ಮವನ್ನು ಪ್ರಚಾರಪಡಿಸುತ್ತಾ ನಾಡಿನ ಅಜ್ಞಾನವನ್ನು ಹೋಗಲಾಡಿಸಲು ಗ್ರಾಮದ ವತಿಯಿಂದ ಶ್ರೀ ಕುಮಾರ ಸ್ವಾಮಿಗಳ ಹೆಸರಿನಲ್ಲಿ ಪ್ರಾರಂಭಿಸಲಾದ ಪ್ರೌಢಶಾಲೆಗೆ ನೆರವು ನೀಡಿ ಶಿಕ್ಷಣ ಸಂಸ್ಥೆ ಬೆಳೆಯಲು ಕಾರಣಕರ್ತರಾಗಿದ್ದಾರೆ. ಮಠದಲ್ಲಿ ಕಲಿಯುವ ಬಡಮಕ್ಕಳಿಗೆ ಆಶ್ರಯ ಕಲ್ಪಿಸಿದ್ದಾರೆ. ಗ್ರಾಮದಲ್ಲಿ ನಡೆಯುವ ಧಾರ್ಮಿಕ, ಸಾಮಾಜಿಕ,ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಸ್ಪಂದಿಸಿ ಸಮಾಜದ ಅಭಿವೃದ್ಧಿಗೆ ದುಡಿಯುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ ಶಿವಲಿಂಗ ಸ್ವಾಮಿಗಳು, ಶ್ರೀ ವಿರಕ್ತಮಠ, ಬಿದರಿ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.

ಮರೇಗುದ್ದಿ

ಜಮಖಂಡಿ ತಾಲ್ಲೂಕಿನ ಮರೇಗುದ್ದಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹನ್ನೆರೆಡು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಶ್ರೀ ಮಹಾಂತ ಮಠ, ಶ್ರೀ ದಿಗಂಬರೇಶ್ವರ ಸಂಸ್ಥಾನ ಮಠ, ಶ್ರೀ ಅಡವಿಸಿದ್ಧೇಶ್ವರ ಮಠ ಎಂಬ ಮೂರು ಮಠಗಳು ಸ್ಥಾಪನೆಯಾಗಿ ಈ ಭಾಗದಲ್ಲಿ ವೀರಶೈವ ಧರ್ಮ ಬೆಳೆಯಲು ಸಹಾಯಕವಾಗಿವೆ.

ಅಡವಿಸಿದ್ಧೇಶ್ವರಮಠ: ಮರೇಗುದ್ದಿ ಗ್ರಾಮದ ಪೂರ್ವದ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಅಡವಿಸಿದ್ಧೇಶ್ವರ ಮಠವು ೧೮೩೦ ರಲ್ಲಿ ಪ್ರಾರಂಭವಾಗಿದೆ. ಕುಮಾರ ಸಮಯದ ವಿರಕ್ತ ಮಠವಾದ ಈ ಮಠವನ್ನು ಶ್ರೀ ಮಡಿವಾಳ ಸ್ವಾಮಿಗಳು ಸ್ಥಾಪಿಸಿದ್ದಾರೆ. ಅಂದು ಸ್ಥಾಪನೆಗೊಂಡ ಶ್ರೀ ಅಡವಿಸಿದ್ಧೇಶ್ವರ ಮಠವು ಅನೇಕ ಸತ್ಕಾರ್ಯಗಳನ್ನು ಮಾಡುವ ಮೂಲಕ ಹೆಚ್ಚು ಹೆಸರು ಪಡೆದಿದೆ. ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತನ್ನದೇ ಆದಂತಹ ಕೊಡುಗೆಯನ್ನು ನೀಡಿ ಈ ಭಾಗದ ಪ್ರಸಿದ್ಧ ಮಠಗಳಲ್ಲಿ ಒಂದಾಗಿ ಬೆಳೆದಿದೆ.

ಮಠ ಸ್ಥಾಪನೆ: ಬೆಳಗಾಂ ಜಿಲ್ಲೆಯ ಗೋಕಾಕು ತಾಲ್ಲೂಕಿನ ಅಂಕಲಗಿ ಗ್ರಾಮದ ಶ್ರೀ ಅಡವಿಸಿದ್ಧೇಶ್ವರ ಮಠದ ಕರ್ತೃ ಗುರುಗಳಾದ ಶ್ರೀ ಅಡವಿಸಿದ್ಧೇಶ್ವರ ಸ್ವಾಮಿಗಳ ಪರಮ ಭಕ್ತರಾಗಿದ್ದ ಶ್ರೀ ಬಾಳಯ್ಯ,ಶ್ರೀ ನಿರುಪಾಧಿ ಸ್ವಾಮಿಗಳು ಹಾಗೂ ಶ್ರೀ ಮಡಿವಾಳೇಶ್ವರರು ಎಂಬ ಮೂರು ಜನ ಶರಣರು ಗುರುಗಳ ಸೇವೆ ಮಾಡಿ ಕೃತಾರ್ಥರಾಗಿದ್ದರು. ಇವರಲ್ಲಿ ಶ್ರೀ ಮಡಿವಾಳೇಶ್ವರರು, ಗುರುಗಳ ಅಪ್ಪಣೆ ಪಡೆದು ಶ್ರೀ ಅಡವಿಸಿದ್ಧೇಶ್ವರರ ಆಜ್ಞೆಯಂತೆ ಮರೇಗುದ್ದಿಗೆ ಬಂದು ಮಠ ಸ್ಥಾಪಿಸಿದರು. ಶ್ರೀ ಮಡಿವಾಳೇಶ್ವರರು ರಾಮಗೊಂಡ ಪರಪ್ಪನೆಂಬ ಭಕ್ತನು ನೀಡಿದ ಭೂಮಿಯಲ್ಲಿ ಮಠವನ್ನು ಸ್ಥಾಪಿಸಿ, ಶ್ರೀಅಡವಿ ಸ್ವಾಮಿಮಠ ಎಂದು ನಾಮಕರಣಮಾಡಿ ಧಾರ್ಮಿಕ ಆಚರಣೆಗಳನ್ನು ಮುನ್ನಡೆಸಿಕೊಂಡು ಬರತೊಡಗಿದರು. ಅಂಕಲಗಿ ಮಠದಲ್ಲಿ ನಡೆಯುವ ಧಾರ್ಮಿಕ ಸಂಪ್ರದಾಯಗಳನ್ನು ಇಲ್ಲಿಯೂ ನಡೆಸತೊಡಗಿದರು. ಪೇಟೆಬಸವನಗುಡಿ, ಕಾಳಿಕಾದೇವಿ ಹಾಗೂ ವೀರಭದ್ರದೇವರ ಮಂದಿರವನ್ನು ಸ್ಥಾಪಿಸಿ ಅಂಬಲಿಯನ್ನು ನಿತ್ಯದ ದಾಸೋಹಕ್ಕೆ ನೀಡುವ ಪರಿಪಾಠವನ್ನು ಪ್ರಾರಂಭಿಸಿದರು. ಈ ರೀತಿ ಸ್ಥಾಪಿತಗೊಂಡ ಮಠದ ಪರಂಪರೆಯು ಈತನಕ ಬೆಳೆದು ಬಂದಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಮಡಿವಾಳಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಪರಮಾರ್ಯಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ರಾಚೋಟೇಶ್ವರಸ್ವಾಮಿಗಳು

೪. ಶ್ರೀ ಮ.ನಿ.ಪ್ರ. ಗುರುಪಾದಸ್ವಾಮಿಗಳು

೫. ಶ್ರೀ ಮ.ನಿ.ಪ್ರ. ನಿರುಪಾಧಿಸ್ವಾಮಿಗಳು

೬. ಶ್ರೀ ಮ.ನಿ.ಪ್ರ. ಗುರುಪಾದದೇವರು

ಈ ರೀತಿ ಮಠದ ಪರಂಪರೆ ಕಳೆದ ನೂರೆಪ್ಪತ್ತು ವರ್ಷಗಳಿಂದ ನಡೆದು ಬಂದಿದೆ. ಕರ್ತೃ ಗುರುಗಳಾದ ಶ್ರೀ ಮಡಿವಾಳೇಶ್ವರರು ತಮ್ಮ ಅಂತಿಮ ಕಾಲದಲ್ಲಿ ಸದ್ಭಕ್ತರ ಸಮ್ಮುಖದಲ್ಲಿ ಹತ್ತು ವರ್ಷದ ಶ್ರೀ ಪರಮಾರ್ಯ ಸ್ವಾಮಿಗಳನ್ನು ಉತ್ತರಾಧಿಕಾರಿಗಳಾಗಿ ನೇಮಕ ಮಾಡಿಕೊಳ್ಳುತ್ತಾರೆ. ಬಾಲಕರಾದ ಉತ್ತರಾಧಿಕಾರಿಗಳು ಗುರುಗಳ ಹಾರೈಕೆಯಲ್ಲಿ ಬೆಳೆದು ಸಂಸ್ಕಾರವಂತರಾಗಿ, ವಿದ್ಯಾ ಪರಾಂಗತರಾಗಿ ಮಠದ ಆಡಳಿತವನ್ನು ವಹಿಸಿಕೊಂಡರು. ಗುರುಗಳು ವಾಕ್ ಸಿದ್ಧಿಗಳಾಗಿ ತ್ರಿಕಾಲ ಪೂಜಾ ನಿಷ್ಠರಾಗಿ ಮಠವನ್ನು ಅಭಿವೃದ್ಧಿಪಡಿಸಿದರು. ಮಠದ ಉತ್ತರಾಧಿಕಾರಿಯನ್ನು ಪೂರ್ವ ಪೀಠಾಧಿಕಾರಿಗಳೇ ನೇಮಕ ಮಾಡಿಕೊಳ್ಳುವ ಪರಿಪಾಠವನ್ನು ಒಂದು ಸಂಪ್ರದಾಯದಂತೆ ಬೆಳೆಸಿದ ಗುರುಗಳು ತಮ್ಮ ಜೀವಿತಾವಧಿಯಲ್ಲಿಯೇ ಶ್ರೀ ರಾಚೋಟೇಶ್ವರ ಸ್ವಾಮಿಗಳನ್ನು ನೇಮಕಮಾಡಿಕೊಂಡು ಗುರುಗಳಿಗೆ ಸಂಸ್ಕಾರ ಕೊಟ್ಟು ಬೆಳೆಸಿದರು. ಗುರುಗಳು ವಿದ್ವತ್‌ಸಂಪನ್ನರಾಗಿ ಬೆಳೆದು ಮಠದ ಆಡಳಿತವನ್ನು ವಹಿಸಿಕೊಂಡು ಮಠವನ್ನು ಹೆಚ್ಚು ಅಭಿವೃದ್ಧಿಪಡಿಸಿದರು. ಇವರ ಕಾಲದಲ್ಲಿ ಮಠವು ಹೆಚ್ಚು ಶ್ರೀಮಂತಗೊಂಡು ಬೆಳೆಯಿತು.

ಶ್ರೀ ರಾಚೋಟೇಶ್ವರ ಸ್ವಾಮಿಗಳ ನಂತರ ಶ್ರೀ ಗುರುಪಾದ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠದ ಅಭಿವೃದ್ಧಿಯನ್ನು ಉತ್ತುಂಗಕ್ಕೆ ಏರಿಸಿದರು. ಇವರ ಕಾಲಾವಧಿಯಲ್ಲಿ ಮಠವು ಅಪಾರ ಭಕ್ತರನ್ನು ಹೆಚ್ಚಿಸಿಕೊಂಡಿತು. ಅಲ್ಲದೆ ಮಠವು ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ಹೆಚ್ಚು ಪ್ರಸಿದ್ಧಿಯನ್ನು ಪಡೆಯಿತು. ಇಂತಹ ಮಹಾಯೋಗಿಗಳು ೧೯೭೪ರ ಜನವರಿ ಮೂರರಂದು ಲಿಂಗೈಕ್ಯರಾದರು. ಇವರ ನಂತರ ಶ್ರೀ ನಿರುಪಾಧಿ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸತೊಡಗಿದ್ದಾರೆ. ಮರೇಗುದ್ದಿಯ ಶ್ರೀಶಿವಲಿಂಗಯ್ಯ ಮತ್ತು ಶ್ರೀಮತಿ ನೀಲಮ್ಮನವರ ಪುತ್ರರಾಗಿ ೧೯೪೨ ರಲ್ಲಿ ಜನಿಸಿದ ಶ್ರೀ ನಿರುಪಾಧಿ ಸ್ವಾಮಿಗಳು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಬಿಜಾಪುರ ತಾಲ್ಲೂಕಿನ ಕಾಖಂಡಕಿ ಗ್ರಾಮದಲ್ಲಿ ಮುಗಿಸಿ, ಮುಧೋಳ ಮತ್ತು ವಾರಣಾಸಿಯಲ್ಲಿ ಉನ್ನತ ಶಿಕ್ಷಣವನ್ನು ಮುಗಿಸಿ,೧೯೬೫ರ ಡಿಸೆಂಬರ್ ಹದಿನೇಳರಂದು ಅಧಿಕಾರಕ್ಕೆ ಬಂದರು. ಗುರುಗಳು ಮಠದ ಅಧಿಕಾರಕ್ಕೆ ಬಂದ ಮೇಲೆ ಮಠವನ್ನು ಸರ್ವತೋಮುಖವಾಗಿ ಅಭಿವೃದ್ಧಿಪಡಿಸಿದರು. ಹಿರಿಯ ಗುರುಗಳು ಲಿಂಗೈಕ್ಯರಾದ ಮೇಲೆ ಮಠದ ಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡು ತಮ್ಮ ಕ್ರಿಯಾಶೀಲ ಚಟುವಟಿಕೆಗಳಿಂದ ಮಠವನ್ನು ಮುನ್ನಡೆಸಿದ್ದಾರೆ. ಇವರು ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಗುರುಪಾದ ದೇವರನ್ನು ೧೯೮೪ ರಲ್ಲಿ ನೇಮಕ ಮಾಡಿಕೊಂಡಿದ್ದಾರೆ.

ಶ್ರೀ ಗುರುಪಾದ ದೇವರು ಮರೇಗುದ್ದಿ ಗ್ರಾಮದ ಶ್ರೀ ಬಾಳಯ್ಯ ಮತ್ತು ಶ್ರೀಮತಿ ರಾಚಮ್ಮನವರ ಪುತ್ರರಾಗಿ ೧೯೭೬ ರ ಜುಲೈ ಹದಿನೈದರಂದು ಜನಿಸಿದರು. ಇವರು ಶಿವಯೋಗ ಮಂದಿರ, ಹುಬ್ಬಳ್ಳಿ, ಮುಂಡರಗಿ ಮುಂತಾದ ಕಡೆ ವಿದ್ಯಾಭ್ಯಾಸವನ್ನು ಮಾಡಿ ಮಠದಲ್ಲಿ ನೆಲೆಸಿದ್ದಾರೆ. ಹಿರಿಯ ಗುರುಗಳು ನಡೆಸುವ ಧಾರ್ಮಿಕ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿ ಹಿರಿಯ ಗುರುಗಳ ಮಾರ್ಗದರ್ಶನದಲ್ಲಿ ಸಂಸ್ಕಾರ ಪಡೆದು ಬೆಳೆಯುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಪೇಟೆ ಬಸವನಗುಡಿ, ಕಾಳಕಾದೇವಿ, ವೀರಭದ್ರದೇವರು ಹಾಗೂ ಶ್ರೀ ಅಡವಿಸಿದ್ಧೇಶ್ವರ ಸ್ವಾಮಿಗಳ ತೋರುಗದ್ದುಗೆ ಹಾಗೂ ಪರಂಪರೆಯ ಗುರುಗಳ ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ ನಡೆಸಲಾಗುತ್ತಿದೆ. ಶಿವರಾತ್ರಿಯಲ್ಲಿ ವಿಶೇಷ ಕಾರ್ಯಕ್ರಮ ಮಾಡುವ ಮೂಲಕ ಜಾಗರಣೆಯನ್ನು ನಡೆಸಲಾಗುತ್ತಿದೆ. ಪುಷ್ಯಮಾಸದ ಶುದ್ಧ ನವಮಿಯಂದು ಶ್ರೀ ಗುರುಪಾದೇಶ್ವರ ಸ್ವಾಮಿಗಳ ಆರಾಧನೆ, ಶುದ್ಧ ದಶಮಿ ದಿನ ಶ್ರೀ ಅಡವಿಸಿದ್ಧೇಶ್ವರ ಸ್ವಾಮಿಗಳ ರಥೋತ್ಸವವನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಿಸಲಾಗುತ್ತಿದೆ.

ಶಿಕ್ಷಣ -ಸಾಹಿತ್ಯ: ಶ್ರೀ ನಿರುಪಾಧಿ ಸ್ವಾಮಿಗಳು ೧೯೯೨ರಲ್ಲಿ ಶ್ರೀ ಅಡವಿಸಿದ್ಧೇಶ್ವರ ವಿದ್ಯಾ ಪೀಠವನ್ನು ಸ್ಥಾಪಿಸಿ ಈ

ಮೂಲಕ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ಪ್ರಾರಂಭಿಸಿದ್ದಾರೆ. ಮಠದಲ್ಲಿ ಉಚಿತ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಿ ಕಲಿಯುವ ಬಡ ಮಕ್ಕಳಿಗೆ ಆಶ್ರಯ ಕಲ್ಪಿಸಿದ್ದಾರೆ. ಮಠವು ಧಾರ್ಮಿಕ ಮತ್ತು ಶೈಕ್ಷಣಿಕ ರಂಗಗಳಿಗೆ ಕೊಟ್ಟ ಕೊಡುಗೆಯ ಜೊತೆಗೆ ಸಾಹಿತ್ಯ ಕ್ಷೇತ್ರಕ್ಕೂ ನೀಡಿದೆ. ಶ್ರೀ ನಿರುಪಾಧಿ ಸ್ವಾಮಿಗಳು ಸ್ವತಃ ಲೇಖಕರಾಗಿ ರಸಗೀತೆ, ಸಪ್ತತೀರ್ಥ, ಮಡಿವಾಳೇಶ್ವರ ಚರಿತೆ, ಶ್ರೀ ಗಣೇಶ ಪುರಾಣ, ವಚನಾಂಕುರ-ಭಾಗ ಒಂದು ಹಾಗೂ ಭಾಗ ಎರಡನ್ನು ಬರೆದು ಪ್ರಕಟಿಸಿದ್ದಾರೆ. ಅದೇ ರೀತಿ ಮರೇಗುದ್ದಿ ಶ್ರೀ ಮಡಿವಾಳೇಶ್ವರ ಮಹಾತ್ಮೆ, ಮರೇಗುದ್ದಿ ಮಹಾಂತ ಮುಂತಾದ ಅನೇಕ ಕೃತಿ ಗಳನ್ನು ಶ್ರೀ ಅಡವಿಸಿದ್ಧೇಶ್ವರ ಗ್ರಂಥ ಮಾಲೆಯ ಮುಖಾಂತರ ಪ್ರಕಟಿಸಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ನಿರುಪಾಧಿ ಸ್ವಾಮಿಗಳು, ಶ್ರೀ ಅಡವಿಸಿದ್ಧೇಶ್ವರಮಠ, ಮರೇಗುದ್ದಿ, ಜಮಖಂಡಿ ತಾ, ಬಾಗಲಕೋಟೆಜಿಲ್ಲೆ.
ಆಧಾರ: 'ಮರೇಗುದ್ದಿ ಮಹಾಂತ'- ಶ್ರೀ ಶಿವಾನಂದ ಗಿರಗಾಂವಿ

ಮಹಾಂತಮಠ: ಮರೇಗುದ್ದಿ ಗ್ರಾಮದ ಪಶ್ಚಿಮದ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಮಹಾಂತ ಮಠವು ಚೀಲಾಳ ಸಮಯದ ವಿರಕ್ತ ಮಠವಾಗಿದೆ. ಈ ಮಠವು ೧೯೮೨ರಲ್ಲಿ ಸ್ಥಾಪನೆಯಾಗಿದ್ದು ಇದರ ಸ್ಥಾಪಕರು ಶ್ರೀ ಗುರು ಮಹಾಂತ ಸ್ವಾಮಿಗಳು. ಗುರುಗಳು ಉತ್ತಮ ವಾಗ್ಮಿಗಳಾಗಿ, ಪುರಾಣ ಪ್ರವಚನಕಾರರಾಗಿ ನಾಡಿನ ಅನೇಕ ಭಾಗಗಳಲ್ಲಿ ಸಂಚರಿಸಿ ಪ್ರವಚವನ್ನು ನಡೆಸಿದರು. ಇವರು ವೀರಶೈವ ಧರ್ಮವನ್ನು ಬೆಳೆಸುವ ಅಭಿಲಾಷೆಯಿಂದ ಮರೇಗುದ್ದಿ ಗ್ರಾಮಕ್ಕೆ ಬಂದು ಮಠವನ್ನು ಸ್ಥಾಪಿಸಿರುತ್ತಾರೆ. ಮಠ ಸ್ಥಾಪನೆಗೆ ಗ್ರಾಮದ ಭಕ್ತರು ಭೂಮಿಯನ್ನು ದಾನವಾಗಿ ನೀಡಿದ್ದಾರೆ.

ರಬಕವಿಯ ಶ್ರೀ ಶಂಕರಪ್ಪ ಮತ್ತು ಶ್ರೀಮತಿ ಗುರಮ್ಮನವರ ಪುತ್ರರಾಗಿ ೧೯೫೨ ರ ಜೂನ್ ಒಂದರಂದು ಜನಿಸಿದರು. ರಬಕವಿಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಮುಗಿಸಿ ಇಳಕಲ್ಲು ಮತ್ತು ಎಡೆಯೂರು ಕ್ಷೇತ್ರಗಳಲ್ಲಿ ಸಂಸ್ಕೃತ, ವೇದ ಹಾಗೂ ಆಗಮನಗಳನ್ನು ಕಲಿತು ಇಳಕಲ್ಲು ಮಠದಲ್ಲಿ ಕೆಲವು ದಿನ ನೆಲೆಗೊಂಡಿದ್ದರು. ನಂತರ ಈ ಗ್ರಾಮಕ್ಕೆ ಬಂದು ನೆಲೆಸಿ ಮಠವನ್ನು ಸ್ಥಾಪಿಸಿರುತ್ತಾರೆ. ಮಠಕ್ಕೆ ಕಟ್ಟಡವನ್ನು ನಿರ್ಮಿಸಿಕೊಂಡ ಗುರುಗಳು ೧೯೯೨ ರಲ್ಲಿ ಇಳಕಲ್ಲು ಶ್ರೀ ಮಹಾಂತ ಸ್ವಾಮಿಗಳಿಂದ ಚಿನ್ಮಯ ದೀಕ್ಷೆ ಪಡೆದು ಪಟ್ಟಾಧಿಕಾರಕ್ಕೆ ಬಂದಿದ್ದಾರೆ. ಬಸವ ತತ್ತ್ವವನ್ನು ಪ್ರಚಾರ ಮಾಡುವ ಏಕೈಕ ಉದ್ದೇಶದಿಂದ ಸ್ಥಾಪನೆಗೊಂಡ ಈ ಮಠದಲ್ಲಿ ವೀರಶೈವ ಧರ್ಮದ ಪ್ರಚಾರ ಕಾರ್ಯ ನಡೆಯತೊಡಗಿದೆ.

ಆಚರಣೆಗಳು: ಶ್ರೀ ಗುರುಮಹಾಂತ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠದಲ್ಲಿ ಧಾರ್ಮಿಕ ಕಾರ್ಯಗಳು ನಡೆಯ ತೊಡಗಿವೆ. ಗುರುಗಳು ಪಾದಯಾತ್ರೆಯ ಮುಖಾಂತರ ಧರ್ಮದ ಪ್ರಚಾರವನ್ನು ಕೈಗೊಂಡಿದ್ದಾರೆ. ಪ್ರತಿ ತಿಂಗಳ ಇಪ್ಪತ್ತರಂದು ಶಿವಾನುಭವ ಗೋಷ್ಠಿಯನ್ನು ನಡೆಸುತ್ತಿದ್ದಾರೆ. ಯುಗಾದಿಯ ಸಮಯದಲ್ಲಿ ಮಠದ ಸ್ಥಾಪನೆಯ ವಾರ್ಷಿಕೋತ್ಸವ ಸಮಾರಂಭವನ್ನು ಏರ್ಪಡಿಸಿ ಹದಿನೈದು ದಿನಗಳ ಕಾಲ ಪುರಾಣ ಪ್ರವಚನವನ್ನು ಏರ್ಪಡಿಸುತ್ತಿದ್ದಾರೆ. ಶ್ರಾವಣ ಮಾಸದಲ್ಲಿ ನಿತ್ಯ ಶಿವಾನುಭವ ಗೋಷ್ಠಿಗಳು ಹಾಗೂ ಅನ್ನ ದಾಸೋಹದ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಆಸ್ತಿ ಇಲ್ಲದ ಈ ಮಠಕ್ಕೆ ಭಕ್ತರೇ ಆಸ್ತಿಯಾಗಿದ್ದಾರೆ. ಅನಾಥ ಮಕ್ಕಳಿಗೆ ಮಠದಲ್ಲಿ ಆಶ್ರಯ ಕಲ್ಪಿಸಿದ್ದಾರೆ. ಗ್ರಾಮಸ್ಥರಲ್ಲಿ ಪ್ರಮುಖರಾದ ಶಂಕರಪ್ಪ ಎಂ.ಕಲ್ಯಾಣಿ ಎಂಬುವರು ಈ ಮಠದ ಅಭಿವೃದ್ಧಿ ಸಮಿತಿಯ ಸ್ಥಾಪಕ ಕಾರ್ಯದರ್ಶಿಗಳಾಗಿ ಮಠದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಅಲ್ಲದೆ ಗ್ರಾಮಸ್ಥರು ಹಾಗೂ ಸಮಿತಿ ಸದಸ್ಯರು ಮಠದ ಪ್ರಗತಿಗೆ ಕೈಜೋಡಿಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಗುರುಮಹಾಂತ ಸ್ವಾಮಿಗಳು, ಶ್ರೀ ಮಹಾಂತಮಠ, ಮರೇಗುದ್ದಿ, ಜಮಖಂಡಿ ತಾ, ಬಾಗಲಕೋಟೆಜಿಲ್ಲೆ.

ದಿಗಂಬರೇಶ್ವರ ಸಂಸ್ಥಾನಮಠ: ಮರೇಗುದ್ದಿ ಗ್ರಾಮದ ಹೊರ ಭಾಗದ ಎತ್ತರದ ಸ್ಥಳದಲ್ಲಿ ಶ್ರೀ ದಿಗಂಬರೇಶ್ವರ ಸಂಸ್ಥಾನ ಮಠವು ಸ್ಥಾಪನೆಯಾಗಿದೆ. ವಿರಕ್ತ ಸಂಪ್ರದಾಯದ ಈ ಮಠವು ಶಿವಾಜಿಯ ಕಾಲದಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಮಠದ ಸ್ಥಾಪಕರಾದ ಶ್ರೀ ದಿಗಂಬರೇಶ್ವರ ಸ್ವಾಮಿಗಳು ನಿರ್ಜನವಾದ ಭಯಾನಕ ಕಾಡಿನಲ್ಲಿ ತಪಸ್ಸನ್ನು ಆಚರಿಸುತ್ತಿದ್ದರಂತೆ, ಈ ಸಂದರ್ಭದಲ್ಲಿ ಶಿವಾಜಿಯು ಬೇಟೆಗೆಂದು ಈ ಕಾಡಿಗೆ ಬರುತ್ತಾನೆ.ಬೇಟೆಯ ಮೃಗವನ್ನು ಅಟ್ಟಿಸಿಕೊಂಡು ಬಂದಾಗ ಗುರುಗಳು ತಪೋ ಮಗ್ನರಾಗಿ ಕುಳಿತಿರುವ ದೃಶ್ಯವನ್ನು ಗಮನಿಸುತ್ತಾನೆ. ನಂತರ ತನ್ನ ಬೇಟೆ

ಕಾರ್ಯವನ್ನು ಬಿಟ್ಟು ಗುರುಗಳ ಸನ್ನಿಧಿಗೆ ಬರುತ್ತಾನೆ. ಆಗ ಗುರುಗಳು ಸಕಲಾತ್ಮರಿಗೆ ಒಳಿತನ್ನು ಬಯಸಬೇಕಾದ ದೊರೆಯೇ ಪ್ರಾಣಿಗಳ ಬೇಟೆಯಾಡುವುದು ಸರಿಯೇ? ಎಂದು ಪ್ರಶ್ನಿಸಿದಾಗ ಶಿವಾಜಿಗೆ ಜ್ಞಾನೋದಯವಾಗಿ, ಗುರುಗಳಲ್ಲಿ ಕ್ಷಮೆ ಕೇಳಿ ಗುರುಗಳು ನೆಲೆ ನಿಂತ ಸ್ಥಳದಲ್ಲಿ ಮಠವನ್ನು ಸ್ಥಾಪಿಸಿ ಮುಧೋಳ ತಾಲ್ಲೂಕಿನ ಮಂಟೂರು, ಭುದ್ನಿ(ಪಿ.ಎಂ)ಜಮಖಂಡಿ, ಮರೇಗುದ್ದಿ ಈ ಗ್ರಾಮಗಳನ್ನು ಉಂಬಳಿಯನ್ನಾಗಿ ನೀಡಿ ಮಠ ಬೆಳೆಯಲು ಕಾರಣ ಕರ್ತನಾಗುತ್ತಾನೆಂದು ಹೇಳಲಾಗುತ್ತಿದೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ದಿಗಂಬರೇಶ್ವರ ಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಅಪ್ಪಯ್ಯ ಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ನಾಗಭೂಷಣ ಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ತೋಂಟದಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಅಪ್ಪಯ್ಯ ಸ್ವಾಮಿಗಳು ಈ ಮಠವನ್ನು ಅಭಿವೃದ್ಧಿ ಪಡಿಸಿ, ತಮ್ಮ ಪವಾಡಗಳಿಂದ ಜನರನ್ನು ಜಾಗೃತಿಗೊಳಿಸಿದರು. ಶ್ರೀ ಅಪ್ಪಯ್ಯ ಸ್ವಾಮಿಗಳ ನಂತರ ಮಠವು ಮಠಾಧೀಶರಿಲ್ಲದೆ ಸ್ಥಗಿತಗೊಂಡಿತು. ನಂತರ ಶ್ರೀ ನಾಗಭೂಷಣ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಶ್ರೀ ನಾಗಭೂಷಣ ಸ್ವಾಮಿಗಳು ಮರೇಗುದ್ದಿಯಲ್ಲಿ ಜನಿಸಿ, ಧಾರವಾಡದ ಮುರುಘಾ ಮಠದಲ್ಲಿದ್ದು ಸಂಸ್ಕೃತ, ವೇದಾಧ್ಯಯನಗಳನ್ನು ಕಲಿತರು. ನಂತರ ಮುಧೋಳ ಗವಿಮಠದಲ್ಲಿ ಆಶ್ರಯ ಪಡೆದು ವ್ಯಾಕರಣ, ತರ್ಕ ಅಭ್ಯಾಸಮಾಡಿ, ಕಾಶಿಯ ಬನಾರಸ್ ಹಿಂದೂವಿಶ್ವವಿದ್ಯಾನಿಲಯದಲ್ಲಿ ಅಭ್ಯಾಸಮಾಡಿ ಚಿನ್ನದ ಪದಕವನ್ನು ಪಡೆದು ಮಠಕ್ಕೆ ಆಗಮಿಸಿದರು. ೧೯೭೮ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿ ೧೯೯೩ರಲ್ಲಿ ಲಿಂಗೈಕ್ಯರಾಗಿದ್ದಾರೆ.ಗುರುಗಳು ತಮ್ಮ ಜೀವಿತಾವಧಿಯಲ್ಲಿಯೇ ಶ್ರೀ ತೋಂಟದಾರ್ಯ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿದ್ದಾರೆ. ಶ್ರೀ ತೋಂಟದಾರ್ಯ ಸ್ವಾಮಿಗಳು ಮರೇಗುದ್ದಿಯ ಶ್ರೀ ಪರಯ್ಯ ಮತ್ತು ಶ್ರೀಮತಿ ಚನ್ನಬಸಮ್ಮನವರ ಪುತ್ರರಾಗಿ ೧೯೬೬ ಜೂನ್ ಆರರಂದು ಜನಿಸಿದ್ದಾರೆ. ಇವರು ಕಾಶಿಯಲ್ಲಿ ಜಂಗಮವಾಡಿ ಮಠದಲ್ಲಿದ್ದು ಶಕ್ತಿ ವಿಶಿಷ್ಟಾದ್ವೈತ ವೇದಾಂತದಲ್ಲಿ ಬನಾರಸ್ ವಿಶ್ವವಿದ್ಯಾನಿಲಯದಿಂದ ಸ್ನಾತಕೋತ್ತರ ಪದವಿಯನ್ನು ಪಡೆದರಲ್ಲದೆ, ಕನ್ನಡದಲ್ಲಿ ಸ್ನಾತಕೋತ್ತರ ಪರೀಕ್ಷೆಯನ್ನು ಪೂರೈಸಿ ೧೯೯೮ರಲ್ಲಿ ಮಠಕ್ಕೆ ಆಗಮಿಸಿ, ಮಠದ ಜೀರ್ಣೋದ್ಧಾರದ ಕೆಲಸವನ್ನು ಕೈಗೊಂಡಿದ್ದಾರೆ. ಮಠದ ಆಸ್ತಿಯನ್ನು ಕಾನೂನುಬದ್ಧಗೊಳಿಸಿ, ಆಧುನಿಕ ಬೇಸಾಯದ ಕ್ರಮದಿಂದ ಹೆಚ್ಚು ಉತ್ಪಾದನೆ ತೆಗೆಯಲು ಮುಂದಾಗಿದ್ದಾರೆ. ಮಠದ ಅಭಿವೃದ್ಧಿ ಕಾರ್ಯಗಳನ್ನು ಮುಗಿಸಿದ ಮೇಲೆ ಪಟ್ಟಾಧಿಕಾರವನ್ನು ವಹಿಸಿಕೊಳ್ಳುವ ನಿರ್ಧಾರದಲ್ಲಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದಲ್ಲಿ ನಿತ್ಯ ಎರಡೂ ವೇಳೆ ಪೂಜೆ, ಶ್ರಾವಣದಲ್ಲಿ ವಿಶೇಷ ಪೂಜೆ, ಹುಣ್ಣಿಮೆಯಲ್ಲಿ ಶಿವಾನುಭವ ಗೋಷ್ಠಿ,ಭಾದ್ರಪದ ಮಾಸದ ಬಹುಳ ತೃತೀಯದಲ್ಲಿ ಲಿಂಗೈಕ್ಯ ಶ್ರೀ ನಾಗಭೂಷಣ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಶಿವದೀಕ್ಷೆ, ಧರ್ಮಸಭೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಅನ್ನ ದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ತೋಂಟದಾರ್ಯ ಸ್ವಾಮಿಗಳು, ಶ್ರೀ ದಿಗಂಬರೇಶ್ವರ ಮಠ, ಮರೇಗುದ್ದಿ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.

ರಬಕವಿ

ಜಮಖಂಡಿ ತಾಲ್ಲೂಕಿನ ರಬಕವಿ ಪಟ್ಟಣವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಈ ಪುರಾತನ ಕಾಲದ ಗ್ರಾಮದಲ್ಲಿ ವೀರಶೈವ ಧರ್ಮ ಪ್ರಬಲವಾಗಿ ಬೆಳೆದಿತ್ತು. ಇದಕ್ಕೆ ಸಾಕ್ಷಿ ಎಂಬಂತೆ ಈ ಪಟ್ಟಣದಲ್ಲಿ ಒಟ್ಟು ಅರವತ್ತೂರು ಮಠಗಳು ಸ್ಥಾಪನೆಯಾಗಿದ್ದವು ಎಂದು ಹೇಳಲಾಗುತ್ತಿದೆ.ವೀರಶೈವ ಧರ್ಮದ ಬೆಳವಣಿಗೆಗೆ ಈ ಮಠಗಳು ಬಹಳವಾಗಿ ಶ್ರಮಿಸಿ ವೀರಶೈವರ ಅಭಿವೃದ್ಧಿಗೆ ಕಾರಣವಾಗಿವೆ. ಅಂದು ಸ್ಥಾಪನೆಗೊಂಡ ಅರವತ್ತೂರು ಮಠಗಳಲ್ಲಿ

ಈಗ ಬೆರಳೆಣಿಕೆಯಷ್ಟು ಮಠಗಳು ಮಾತ್ರ ಜನರ ಮನಸ್ಸಿನಲ್ಲಿ ಉಳಿದಿವೆ. ಶ್ರೀ ವಿರಕ್ತಮಠ, ಶ್ರೀ ಬಾಗೋಜಿಮಠ, ಶ್ರೀ ಗೋಕಾಕ್‌ಮಠ ಎಂಬ ಮೂರು ಮಠಗಳ ಹೆಸರನ್ನು ಮಾತ್ರ ಉಲ್ಲೇಖಿಸಬಹುದಾಗಿದೆ. ಉಳಿದ ಮಠಗಳು ಹೇಳಲು ಹೆಸರಿಲ್ಲದಂತಾಗಿ ಜನರ ಮನಸ್ಸಿನಿಂದ ದೂರವಾಗಿವೆ.

ವಿರಕ್ತಮಠ: ಈ ಗ್ರಾಮದ ಮಧ್ಯಭಾಗದಲ್ಲಿ ಶ್ರೀ ವಿರಕ್ತಮಠವು ಸ್ಥಾಪನೆಯಾಗಿದೆ. ಕಳೆದ ನೂರೈವತ್ತು ವರ್ಷಗಳ ಹಿಂದೆ ಗ್ರಾಮದ ಪೂರ್ವ ಭಾಗದಲ್ಲಿ ಮಠವು ಸ್ಥಾಪನೆಯಾಗಿತ್ತು. ಈ ಮಠವನ್ನು ಶ್ರೀ ಸಿದ್ಧರಾಮ ಸ್ವಾಮಿಗಳು ಪ್ರಾರಂಭ ಮಾಡಿದ್ದಾರೆ. ಗುರುಗಳು ಲೋಕಸಂಚಾರ ಕೈಗೊಂಡು ರಬಕವಿಗೆ ಆಗಮಿಸಿ ಇಲ್ಲಿ ನೆಲೆಗೊಂಡರು. ಗುರುಗಳ ಧಾರ್ಮಿಕ ಕ್ರಿಯೆಗಳಿಗೆ ಮನಸೋತ ಭಕ್ತರು ಗುರುಗಳಿಗಾಗಿ ಮಠವನ್ನು ಕಟ್ಟಿಸಿಕೊಟ್ಟರು. ರಬಕವಿಯಲ್ಲಿ ಮಠ ಸ್ಥಾಪನೆಯಾದ ಮೇಲೆ ನಿತ್ಯ ಶಿವಾನುಭವ ಗೋಷ್ಠಿ, ಧರ್ಮೋಪದೇಶ ಕಾರ್ಯಗಳು ನಡೆಯತೊಡಗಿ, ಭಕ್ತರು ಸಂಸ್ಕಾರಗೊಂಡರು ಇದರಿಂದ ರಬಕವಿ ಸುಸಂಸ್ಕೃತ ನಾಡಾಗಿ ಬೆಳೆಯಿತು. ಗುರುಗಳು ರಬಕವಿಯಲ್ಲಿ ಮಠವನ್ನು ಸ್ಥಾಪಿಸಿ, ಬೆಳೆಸಿ ಲಿಂಗೈಕ್ಯರಾದರು. ಇವರ ನಂತರ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿಯಿತು. ಈ ಸಂದರ್ಭದಲ್ಲಿ ಗ್ರಾಮಸ್ಥರು ಒಂದು ಅಭಿವೃದ್ಧಿ ಸಮಿತಿಯನ್ನು ನೇಮಿಸಿಕೊಂಡು ಮಠದ ಧಾರ್ಮಿಕ ಹಾಗೂ ಆಡಳಿತ ಕಾರ್ಯವನ್ನು ನಡೆಸಿಕೊಂಡು ಬರತೊಡಗಿದರು. ಈ ಸಂದರ್ಭದಲ್ಲಿ ಅನೇಕ ಗುರುಗಳು ಈ ಮಠಕ್ಕೆ ಆಗಮಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದರಾದರೂ ಬಹಳ ದಿನ ಉಳಿಯದೆ ಹೋದರು. ೧೯೩೦ರ ಸುಮಾರಿನಲ್ಲಿ ಶ್ರೀ ಶಿವಲಿಂಗೇಶ್ವರ ಸ್ವಾಮಿಗಳಿಗೆ ಪಟ್ಟಾಧಿಕಾರ ಮಾಡಲಾಯಿತು. ಗುರುಗಳು ಕ್ರಿಯಾತ್ಮಕವಾಗಿ ಕೆಲಸಗಳನ್ನು ಮಾಡಿಕೊಂಡು ಮಠದ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಿದ್ದರು. ಆದರೆ ಕೆಲವು ವಿಚಾರ ಗಳಿಂದ ಆಡಳಿತ ಸಮಿತಿ ಮತ್ತು ಗುರುಗಳಿಗೆ ಹೊಂದಾಣಿಕೆಬಾರದೆ ಗುರುಗಳು ಮಠವನ್ನು ತ್ಯಜಿಸಿ ಹೋದರು. ನಂತರ ಮಠದ ವಿಶ್ವಸ್ಥ ಸಮಿತಿಯು ಆಡಳಿತವನ್ನು ನೋಡಿಕೊಂಡು, ಮಠದ ಹಳೆಯ ಕಟ್ಟಡವನ್ನು ನವೀಕರಣಗೊಳಿಸಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದರು. ಈ ಸಂದರ್ಭದಲ್ಲಿ ಮಠದ ಆದಾಯ ಗಣನೀಯವಾಗಿ ಹೆಚ್ಚಿ ಹಣ ಸಂಗ್ರಹ ಗೊಂಡಿತು. ಈಗ ಶ್ರೀ ಪ್ರಭುದೇವರು ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡು ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಮಠದ ಆವರಣದಲ್ಲಿರುವ ಒಂದು ಗದ್ದುಗೆಗೆ ನಿತ್ಯ ಪೂಜೆ, ಅಮಾವಾಸ್ಯೆ, ಹುಣ್ಣಿಮೆಯಲ್ಲಿ ಶಿವಾನುಭವ ಗೋಷ್ಠಿ ನಡೆಯುತ್ತಿದೆ. ಮಠದ ವತಿಯಿಂದ ಬಸವತತ್ತ್ವ ಪ್ರಸಾರ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳ ಪುಣ್ಯಾರಾಧನೆಯನ್ನು ಮಾಡಲಾಗುತ್ತಿದೆ. ಪ್ರಸ್ತುತ ವಿರಕ್ತ ಮಠದ ಟ್ರಸ್ಟ್ ಮಠದ ಆಡಳಿತ ಕಾರ್ಯವನ್ನು ನಡೆಸಿಕೊಂಡು ಬರುತ್ತಿದೆ.ಈ ಮಠದ ಟ್ರಸ್ಟ್ ನಲ್ಲಿ ಕಾರ್ಯಾಧ್ಯಕ್ಷರಾಗಿ ವೀರಭದ್ರಪ್ಪ ಮಲ್ಲಪ್ಪಾ ಸಾಂಬೋಜಿ, ಟ್ರಸ್ಟಿಗಳಾಗಿ ಶೈಲಪ್ಪ ಮಲ್ಲಪ್ಪ ಸಣಕಾಲ, ವೀರಪ್ಪ ಹೊಳೆಪ್ಪಾ ತೆಗ್ಗಿ, ದುಂಡಪ್ಪಾ ಕೊಟ್ರಪ್ಪಾ ಕೊಟ್ರಶೆಟ್ಟಿ, ಮಲ್ಲೇಶಪ್ಪಾ ಬಸಲಿಂಗಪ್ಪಾ ಬಿಳಿಮಿಸಿ, ಗುರುಲಿಂಗಪ್ಪಾ ಸಿದ್ಧಮಲ್ಲಪ್ಪಾ ಉಮದಿ, ಚನ್ನಬಸಪ್ಪ ಬಸಪ್ಪಾ ಮೂಡಲಗಿ, ದರೆಪ್ಪಾ ಚನ್ನಬಸಪ್ಪಾ ಅಂಗಡಿ, ಬಸವರಾಜ ಮುರುಘಯ್ಯಾ ಬಾಗೋಜಿ, ಎಂ.ಸಿ. ಯಲಗಾರ ಸರ್, ಬಾಬು ಕಾಡಪ್ಪ ಜೋತಾವರ, ಹನುಮಂತರಾವ್ ರಾವೂಜಿಜಾಧವ, ಶ್ರೀಶೈಲ ಎಂ. ಅಮ್ಮಣಗಿ, ಗೌರಿಹರ ವಿ. ಮುತ್ತೂರ ಇವರುಗಳು ಮಠದ ಆಡಳಿತವನ್ನು ಸಮರ್ಥವಾಗಿ ನಡೆಸಿಕೊಂಡು ಗುರುಗಳಿಗೆ ಧಾರ್ಮಿಕ ಕಾರ್ಯಗಳನ್ನು ನಡೆಸಲು ಎಲ್ಲಾ ರೀತಿಯ ನೆರವು ನೀಡುತ್ತಾ ರಬಕವಿಯಲ್ಲಿ ಈ ಮಠವು ಉಳಿಯುವಂತೆ ಮಾಡಿದ್ದಾರೆ. ಅಲ್ಲದೆ ಇಲ್ಲಿನ ವೀರಶೈವರಿಗೆ ಧಾರ್ಮಿಕ ಚಟುವಟಿಕೆಗಳ ಕೇಂದ್ರ ಬಿಂದುವನ್ನಾಗಿ ಮಾಡಿದ್ದಾರೆ. ಈಗಿನ ಗುರುಗಳಾದ ಶ್ರೀ ಪ್ರಭುದೇವರು ಸಹ ಸಮರ್ಥವಾಗಿ ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಪ್ರಭುದೇವರು, ಶ್ರೀ ವಿರಕ್ತ ಮಠ, ರಬಕವಿ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.

ಬಾಗೋಜಿಮಠ: ರಬಕವಿ ಪಟ್ಟಣದ ಮಧ್ಯ ಭಾಗದಲ್ಲಿರುವ ಬಾಗೋಜಿ ಮಠವು ವಿರಕ್ತ ಸಂಪ್ರದಾಯದ ಒಂದು ಪ್ರಾಚೀನ ಮಠ. ಈ ಮಠದ ಮೂಲ ಪುರುಷರು ಶ್ರೀ ಮುರುಘಯ್ಯ ಸ್ವಾಮಿಗಳಾಗಿದ್ದು, ಇವರು ಅಥಣಿ ಶಿವಯೋಗಿಗಳ ಸಂಬಂಧಿಗಳಾಗಿ ಶಿವಯೋಗಿಗಳ ಮಾರ್ಗದರ್ಶನದಲ್ಲಿ ಮಠವನ್ನು ಬೆಳೆಸಿದ್ದಾರೆ. ರಬಕವಿಗೆ ಆಗಮಿಸುವ ಎಲ್ಲಾ ಮಠಾಧೀಶರ ವಿಶ್ರಾಂತಿಯ

ಕೇಂದ್ರ ಸ್ಥಳವಾಗಿ ರೂಪುಗೊಂಡಿದ್ದ ಮಠವು ಅನೇಕ ವರ್ಷಗಳಿಂದ ಮಠಾಧೀಶರಿಲ್ಲದೆ ಖಾಲಿ ಉಳಿದಿದೆ. ಪ್ರಸ್ತುತ ಮಠದ ವಂಶಸ್ಥರಾದ ಶ್ರೀ ಬಸವರಾಜ ಮುರುಘಯ್ಯ ಬಾಗೋಜಿಯವರು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಶಿವಯೋಗ ಶಿಬಿರ, ಶ್ರಾವಣಮಾಸದಲ್ಲಿ ಸಾಮೂಹಿಕ ಲಿಂಗಪೂಜೆ, ವೀರಶೈವ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡುತ್ತಾ ಮಠವನ್ನು ಮುನ್ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಬಸವರಾಜ ಮುರುಘಯ್ಯ ಬಾಗೋಜಿ, ಶ್ರೀ ಬಾಗೋಜಿಮಠ, ರಬಕವಿ, ಜಮಖಂಡಿ ತಾ, ಬಾಗಲಕೋಟೆ ಜಿಲ್ಲೆ.

ಹಿಪ್ಪರಗಿ

ಜಮಖಂಡಿ ತಾಲ್ಲೂಕಿನ ಹಿಪ್ಪರಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿನಾಲ್ಕು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಹಿಪ್ಪರಗಿ ಗ್ರಾಮದಲ್ಲಿ ಪುತ್ರವರ್ಗದ ಪರಂಪರೆಯ ಶ್ರೀಶೈಲ ಪೀಠದ ಶಾಖಾಮಠವಾದ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ. ಪುರಾತನಕಾಲದಲ್ಲಿ ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಸ್ಥಾಪಿಸಿ ಈತನಕ ಬೆಳೆಯುವಂತೆ ಮಾಡಿದ್ದಾರೆ. ಗುರುಗಳು ಲೋಕಸಂಚಾರದಿಂದ ಲೋಕಾನುಭವ ಪಡೆದು ಅನೇಕ ಧರ್ಮ ಕ್ಷೇತ್ರಗಳನ್ನು ಸಂದರ್ಶಿಸಿ ಯೋಗಸಿದ್ಧಿಯನ್ನು ಸಾಧಿಸಿಕೊಂಡಿದ್ದರು. ಇಂತಹ ಮಹಾಪವಾಡ ಪುರುಷರು ಮಠವನ್ನು ಸ್ಥಾಪಿಸಿ ಲಿಂಗೈಕ್ಯರಾಗಿದ್ದಾರೆ.

ಪರಂಪರೆ:

೧. ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಶಿವರುದ್ರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಚಂದ್ರಕಾಂತ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಡಾ. ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃ ಗುರುಗಳ ನಂತರ ಅಧಿಕಾರಕ್ಕೆ ಬಂದ ಮೂರು ಜನ ಗುರುಗಳ ಬಗ್ಗೆ ಹೆಚ್ಚು ಮಾಹಿತಿ ದೊರೆಯದಾಗಿದೆ. ಪರಂಪರೆಯ ನಾಲ್ಕನೆಯ ಗುರುಗಳಾದ ಶ್ರೀ ಚಂದ್ರಕಾಂತ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಅಭಿವೃದ್ಧಿಪಡಿಸಿ ೧೯೬೧ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಕೆಲವು ದಿನಗಳ ಕಾಲ ಮಠವು ಖಾಲಿ ಉಳಿಯಿತು. ಈಗ ಶ್ರೀ ಮಡಿವಾಳಯ್ಯ ಮತ್ತು ಶ್ರೀಮತಿ ಶಾರದಮ್ಮನವರ ಪುತ್ರರಾಗಿ ೧೯೬೧ ರಲ್ಲಿ ಜನಿಸಿದ ಶ್ರೀ ಸಿದ್ಧರಾಮ ದೇವರು ಈ ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡಿದ್ದಾರೆ.

ಶ್ರೀ ಸಿದ್ಧರಾಮ ದೇವರು ಹಿಪ್ಪರಗಿಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ, ಇಳಕಲ್ಲು, ಶಿವಯೋಗಮಂದಿರ, ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡಿ ಸಂಸ್ಕೃತ ಸ್ನಾತಕೋತ್ತರ ಪದವಿಯಲ್ಲಿ ಚಿನ್ನದ ಪದಕಗಳಿಸಿ ೧೯೭೬ರಲ್ಲಿ ರಾಷ್ಟ್ರಪತಿಗಳಿಂದ ಪದಕ ಪಡೆದ ಹೆಗ್ಗಳಿಕೆ ಇವರದ್ದಾಗಿದೆ. ಇವರು'ಶ್ರೀಮದ್ ಭಗವದ್ಗೀತೆ ಮತ್ತು ಸಿದ್ಧಾಂತ ಶಿಖಾಮಣಿ, ಒಂದು ತೌಲನಿಕ ಸಮೀಕ್ಷೆ'ಎಂಬ ಮಹಾಪ್ರಬಂಧಕ್ಕೆ ಪಿಎಚ್.ಡಿ. ಪಡೆದಿದ್ದಾರೆ.ಇಂತಹ ಅಪ್ರತಿಮ ಪಂಡಿತರು ಈ ಮಠದ ಗುರುಗಳಾಗಿ ದೊರೆತಿರುವುದು ಇಲ್ಲಿನ ಭಕ್ತರ ಸುಯೋಗವಾಗಿದೆ. ಗುರುಗಳು ಧಾರ್ಮಿಕ ಆಚರಣೆಗಳನ್ನು ಕಾರ್ಯರೂಪಕ್ಕೆ ತರುತ್ತಾ ಆಚಾರ್ಯರ ಹಾಗೂ ಶರಣರ ತತ್ತ್ವಗಳನ್ನು ಸಮಾನವಾಗಿ ಸ್ವೀಕರಿಸಿ ಪ್ರಚುರಪಡಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಪರಂಪರಾಗತ ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ, ಅಮಾವಾಸ್ಯೆಯಲ್ಲಿ ವಿಶೇಷ ಪೂಜೆಯನ್ನು ಮಾಡಲಾಗುತ್ತಿದೆ. ಪ್ರತಿ ಹುಣ್ಣಿಮೆಯಲ್ಲಿ'ಸದ್ವಿಚಾರ ಸಂಗಮ'ಕಾರ್ಯಕ್ರಮವನ್ನು ನೇರವೇರಿಸಿ ಅನೇಕ ವಿಚಾರಗಳ ಬಗ್ಗೆ ಬೆಳಕು ಚೆಲ್ಲುವಂತಹ ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ಭಾದ್ರಪದ ಮಾಸದಲ್ಲಿ ಹಿರಿಯ ಗುರುಗಳ ಪುಣ್ಯಾರಾಧನೆ ಕಾರ್ಯಕ್ರಮವನ್ನು ಮಾಡಲಾಗುತ್ತಿದೆ. ಶ್ರಾವಣ ಮಾಸದಲ್ಲಿ ಮೂವತ್ತು ದಿನಗಳ ಕಾಲ ಪುರಾಣ

ಪ್ರವಚನವನ್ನು ಏರ್ಪಡಿಸಲಾಗುತ್ತಿದೆ.

ಸಾಹಿತ್ಯಸೇವೆ: ಧಾರ್ಮಿಕ ಸಾಹಿತ್ಯದ ಬಗ್ಗೆ ಒಲವನ್ನು ಬೆಳೆಸಿಕೊಂಡಿರುವ ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು ವೀರಶೈವ ಧರ್ಮವನ್ನು ಕುರಿತು'ಸರ್ವಧರ್ಮ ದರ್ಶನ'ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ. ಚಂದ್ರಜ್ಞಾನ ಆಗಮ-ಒಂದು ಅಧ್ಯಯನ ಮತ್ತು ಕಾಶಿ ಜಗದ್ಗುರುಗಳು ಬರೆದ ಸಿದ್ಧಾಂತ ಶಿಖಾಮಣಿ ಸಮೀಕ್ಷೆಯ ಕೃತಿಯನ್ನು ಕನ್ನಡಕ್ಕೆ ಅನುವಾದ ಮಾಡಿ ಪ್ರಕಟಿಸಿದ್ದಾರೆ. ಚಿಕ್ಕೇನಕೊಪ್ಪದ ಚನ್ನವೀರ ಶರಣರ ನುಡಿಮುತ್ತುಗಳು ಮುಂತಾದ ಕೃತಿಗಳನ್ನು ಬರೆದು ಪ್ರಕಟಿಸಿರುವ ಗುರುಗಳು ತಮ್ಮ ಪಾಂಡಿತ್ಯದಿಂದ ಅನೇಕ ಮೌಲಿಕ ಕೃತಿಗಳನ್ನು ರಚಿಸಿದ್ದು ಪ್ರಕಟಣೆಯ ಹಂತದಲ್ಲಿವೆ. ಗುರುಗಳು ಸಾಹಿತ್ಯದ ಜೊತೆಗೆ ಶಿಕ್ಷಣದ ಅಭಿವೃದ್ಧಿಗೂ ಹೆಚ್ಚು ಗಮನಹರಿಸಿ, ಶ್ರೀ ಚಂದ್ರಕಾಂತ ಶಿವಾಚಾರ್ಯ ಸ್ವಾಮಿಗಳ ಹೆಸರಿನಲ್ಲಿ ಪ್ರೌಢಶಾಲೆ ಹಾಗೂ ನರ್ಸರಿ ಶಾಲೆಯನ್ನು ಪ್ರಾರಂಭಿಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಡಾ.ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಹಿಪ್ಪರಗಿ, ಜಮಖಂಡಿ ತಾ, ಬಾಗಲಕೋಟೆಜಿಲ್ಲೆ.

ಹಿರೇಪಡಸಲಗಿ

ಜಮಖಂಡಿ ತಾಲ್ಲೂಕಿನ ಹಿರೇಪಡಸಲಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವ ಭಾಗಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಹಿರೇಪಡಸಲಗಿ ಗ್ರಾಮದ ಮಧ್ಯಭಾಗದಲ್ಲಿ ಪುತ್ರವರ್ಗದ ಪರಂಪರೆಯ ಉಜ್ಜಯಿನಿ ಪೀಠದ ಶಾಖಾ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ. ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ಈ ಮಠದ ಸ್ಥಾಪಕರೆಂದು ಹೇಳಲಾಗುತ್ತಿದೆ. ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ತಪೋನಿಷ್ಠರಾಗಿ ಧರ್ಮವನ್ನು ಬೆಳೆಸಿ ತಮ್ಮ ಪವಾಡಗಳಿಂದ ಭಕ್ತರನ್ನು ಉದ್ಧರಿಸಿದ್ದಾರೆ.

ಪರಂಪರೆ:

೧. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳ ಕರ್ತೃತ್ವ ಶಕ್ತಿಯಿಂದ ಬೆಳೆದ ಮಠವು ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಹೆಚ್ಚು ಹೆಸರು ಮಾಡಿದೆ. ನಂತರದ ದಿನಗಳಲ್ಲಿ ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ಮಠದ ಆಡಳಿತವನ್ನು ವಹಿಸಿಕೊಂಡು ಮಠವನ್ನು ಉದ್ಧರಿಸಿದ್ದಾರೆ. ಇವರ ತರುವಾಯ ಮಠವು ಖಾಲಿ ಉಳಿದಿದೆ. ಆಗ ಬಬಲೇಶ್ವರದಿಂದ ಶ್ರೀ ಗುರುಪಾದಯ್ಯನವರು ಇಲ್ಲಿಗೆ ಆಗಮಿಸಿ ಮಠದ ಧಾರ್ಮಿಕ ಕಾರ್ಯಗಳನ್ನು ನೋಡಿಕೊಂಡು ಬರುತ್ತಿದ್ದರು. ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಖಾಲಿ ಉಳಿದಿದ್ದ ಮಠದ ಪಟ್ಟಾಧಿಕಾರವನ್ನು ೧೯೮೮ ರ ಆಗಸ್ಟ್ ಎರಡರಂದು ವಹಿಸಿಕೊಂಡಿದ್ದಾರೆ. ಶ್ರೀ ಗುರುಪಾದಯ್ಯ ಮತ್ತು ಶ್ರೀಮತಿ ಸೋನಕ್ಕನವರ ಪುತ್ರರಾಗಿ ೧೯೪೪ ರ ಆಗಸ್ಟ್ ಮೂರರಂದು ಜನಿಸಿದ ಗುರುಗಳು, ವಿಧಿವತ್ತಾದ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಾ ಮಠವನ್ನು ಅಭಿವೃದ್ಧಿಪಡಿಸತೊಡಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಮೂರೂ ಗದ್ದುಗೆಗಳಿಗೆ ಎರಡೂ ವೇಳೆ ಪೂಜೆ, ಶ್ರಾವಣಮಾಸದಲ್ಲಿ ಒಂದು ತಿಂಗಳು ಪುರಾಣ ಪ್ರವಚನ, ಕಾರು ಹುಣ್ಣಿಮೆಯಲ್ಲಿ ಪರಂಪರೆಯ ಮೂರುಜನ ಗುರುಗಳ ಪುಣ್ಯಾರಾಧನೆ ಕಾರ್ಯಕ್ರಮ ವನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಅನ್ನದಾಸೋಹ, ಉಪನ್ಯಾಸ ಮತ್ತು ಉಪದೇಶವನ್ನು ಮಾಡಿಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಹಿರೇಪಡಸಲಗಿ, ಜಮಖಂಡಿ ತಾ, ಬಾಗಲಕೋಟೆಜಿಲ್ಲೆ.

ಹುಲ್ಯಾಳ

ಬಾಗಲಕೋಟೆ ತಾಲ್ಲೂಕಿನ ಹುಲ್ಯಾಳ ಗ್ರಾಮವು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಹದಿನಾರು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಹುಲ್ಯಾಳ ಗ್ರಾಮದಲ್ಲಿ ರಂಭಾಪುರಿ ಪೀಠದ ಶಾಖಾ ಮಠವಾದ ಶ್ರೀ ಹಿರೇಮಠವು ಸ್ಥಾಪನೆಯಾಗಿ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿದೆ. ಇತ್ತೀಚಿನ ಕಾಲದ ಈ ಮಠದ ಪರಂಪರೆಯ ಗುರುಗಳಾಗಿ ಶ್ರೀ ಶಂಭುಲಿಂಗ ಶಿವಾಚಾರ್ಯ ಸ್ವಾಮಿಗಳು ಆಡಳಿತವನ್ನು ನಡೆಸಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಶ್ರೀ ವಿದ್ಯಾನಂದ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದಿದ್ದಾರೆ. ಶ್ರೀವಿದ್ಯಾನಂದ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ ಆಚಾರ್ಯರು ಹಾಗೂ ಶರಣರ ತತ್ತ್ವಗಳನ್ನು ಪ್ರಚಾರಗೊಳಿಸಿ ವೀರಶೈವ ಧರ್ಮವನ್ನು ಬೆಳೆಸಿದ್ದಾರೆ.

ಮಠದಲ್ಲಿರುವ ಗದ್ದುಗೆಗೆ ನಿತ್ಯ ಪೂಜೆ, ಅಮಾವಾಸ್ಯೆ ಮತ್ತು ಹುಣ್ಣಿಮೆಯಲ್ಲಿ ವಿಶೇಷ ಪೂಜೆಯನ್ನು ನಡೆಸಿ ಭಕ್ತರ ಧಾರ್ಮಿಕ ಕಾರ್ಯಗಳಿಗೆ ಸ್ಪಂದಿಸಿ ಆಶೀರ್ವದಿಸುತ್ತಿದ್ದಾರೆ. ಮಠದಲ್ಲಿ ವಿಶೇಷ ದಿನಗಳಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ವಿದ್ಯಾನಂದ ಶಿವಾಚಾರ್ಯಸ್ವಾಮಿಗಳು,ಶ್ರೀ ಹಿರೇಮಠ,ಹುಲ್ಯಾಳ, ಜಮಖಂಡಿ ತಾಲ್ಲೂಕು. ಬಾಗಲಕೋಟೆ ಜಿಲ್ಲೆ.

❑

ಬಾಗಲಕೋಟೆ ತಾಲ್ಲೂಕು

ಬಾಗಲಕೋಟೆ ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿ ಒಂದಾದ ಬಾಗಲಕೋಟೆಯು ಸಾಂಸ್ಕೃತಿಕ, ಸಾಹಿತ್ಯಿಕ ಹಾಗೂ ಆರ್ಥಿಕವಾಗಿ ಸಧೃಡವಾಗಿ ಬೆಳೆದಿದೆ. ಇಲ್ಲಿ ವೀರಶೈವಧರ್ಮ ಪ್ರಾಚೀನ ಕಾಲದಿಂದ ಈತನಕ ಪ್ರಬಲವಾಗಿ ಬೆಳೆದಿದೆ. ಇಲ್ಲಿ ಸುಮಾರು ಐವತ್ತೆಂಟು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಪ್ರಸ್ತುತ ಹದಿನಾರು ಮಠಗಳು ಅಸ್ತಿತ್ವದಲ್ಲಿದ್ದು, ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿವೆ.

ಕಲಾದಗಿ

ಬಾಗಲಕೋಟೆ ತಾಲ್ಲೂಕಿನ ಕಲಾದಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮ ಭಾಗಕ್ಕೆ ಇಪ್ಪತ್ತೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಗುರುಲಿಂಗೇಶ್ವರ ಪಂಚಗ್ರಹ ಹಿರೇಮಠವು ಅಸ್ತಿತ್ವದಲ್ಲಿದೆ.

ಗುರುಲಿಂಗೇಶ್ವರ ಪಂಚಗ್ರಹ ಹಿರೇಮಠ: ಕಲಾದಗಿ ಗ್ರಾಮದ ಉತ್ತರ ಭಾಗದಲ್ಲಿ ರಂಭಾಪುರಿ ಪೀಠದ ಶಾಖಾಮಠವಾದ, ಶಿಷ್ಯವರ್ಗದ ಪರಂಪರೆಯ ಶ್ರೀ ಗುರುಲಿಂಗೇಶ್ವರ ಪಂಚಗ್ರಹ ಹಿರೇಮಠವು ಸ್ಥಾಪನೆಯಾಗಿದೆ. ಶ್ರೀ ಗುರುಲಿಂಗೇಶ್ವರ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು ಈ ಮಠದ ಕರ್ತೃಗುರುಗಳೆಂದು ಹೇಳಲಾಗುತ್ತದೆ. ಪುರಾತನ ಕಾಲದಲ್ಲಿ ಪ್ರಾರಂಭಗೊಂಡ ಈ ಮಠವು ಪ್ರಭಾವಿ ಮಠವಾಗಿ ಬೆಳೆದು ವೀರಶೈವ ಧರ್ಮವನ್ನು ಬೆಳೆಸುವಲ್ಲಿ ಸಫಲವಾಗಿದೆ.

ಮಠ ಸ್ಥಾಪನೆ: ದೇಸೂರು ದಾಸೋಹ ಹಿರೇಮಠದ ಶ್ರೀ ಪಂಚಾಕ್ಷರಯ್ಯ ಸ್ವಾಮಿಗಳ ಪುತ್ರರಾಗಿ ಜನಿಸಿದ ಶ್ರೀಶಾಂತಯ್ಯನವರು ಬಾಲ್ಯದಲ್ಲಿಯೇ ನಯ ವಿನಯತೆಯನ್ನು ಮೈಗೂಡಿಸಿಕೊಂಡು ಸಜ್ಜನಿಕೆಯಿಂದ ವರ್ತಿಸುತ್ತಿದ್ದರು. ಇವರು ಪ್ರೌಢಾವಸ್ಥೆಗೆ ಬಂದ ಮೇಲೆ ಮನೆಯನ್ನು ತೊರೆದು ಕಾಶಿಗೆ ಪ್ರಯಾಣಬೆಳೆಸಿದರು. ಕಾಶಿಕ್ಷೆತ್ರದಲ್ಲಿ ಸಂಸ್ಕೃತ ಹಾಗೂ ವೇದಾಧ್ಯಯನ ಮಾಡಿ ಅನೇಕ ಪರೀಕ್ಷೆಗಳಲ್ಲಿ ಜಯಗಳಿಸಿ, ಕಾಶಿಯ ಪೀಠಾಧ್ಯಕ್ಷರ ಕೃಪಾಕಟಾಕ್ಷಕ್ಕೆ ಒಳಗಾದರು. ನಂತರ ಕಾಶಿ ಜಗದ್ಗುರುಗಳಿಂದ ಆಶೀರ್ವಾದ ಪಡೆದು, ಲೋಕಸಂಚಾರ ಕೈಗೊಂಡು ರಂಭಾಪುರಿ ಪೀಠಕ್ಕೆ ಆಗಮಿಸುತ್ತಾರೆ. ಇಲ್ಲಿ ಶ್ರೀಶಾಂತಯ್ಯನವರ ಪಾಂಡಿತ್ಯಕ್ಕೆ ಮೆಚ್ಚಿದ ಜಗದ್ಗುರುಗಳು ಕಲಾದಗಿ ನಾಡಿಗೆ ಹೋಗಿ ಅಲ್ಲಿ ಮಠವನ್ನು ಸ್ಥಾಪಿಸಿ, ವೀರಶೈವ ಧರ್ಮವನ್ನು ಬೆಳೆಸುವಂತೆ ಆಶೀರ್ವಾದ ಮಾಡುತ್ತಾರೆ. ಜಗದ್ಗುರುಗಳ ಅಪ್ಪಣೆಯ ಮೇರೆಗೆ ಘಟಪ್ರಭ ದಡದಲ್ಲಿ ಗುರುಸ್ಥಲ ಮಠವನ್ನು ಸ್ಥಾಪಿಸಿ ಬಿಲ್ವ, ಫಲಪುಷ್ಪಗಳ,ಗಿಡಮರಗಳನ್ನು ಬೆಳೆಸಿ ಮಠದ ಸೌಂದರ್ಯವನ್ನು ಹೆಚ್ಚಿಸಿದರು. ಅಲ್ಲದೆ ವೀರಶೈವ ಧರ್ಮದ ಅಷ್ಟಾವರಣ, ಪಂಚಾಚಾರ ಹಾಗೂ ಷಟ್‌ಸ್ಥಲಗಳನ್ನು ಬೋಧಿಸಿ ಜಗದಾದಿ ಪಂಚಾಚಾರ್ಯರ ತತ್ತ್ವಗಳನ್ನು ಬೋಧಿಸಿ ಮಠದ ಕೀರ್ತಿಯು ಹಬ್ಬುವಂತೆ ಮಾಡಿದರು. ಶ್ರೀ ಶಾಂತಯ್ಯನವರು ಮಠವನ್ನು ಸ್ಥಾಪಿಸಿ ಅನೇಕ ಪವಾಡಗಳನ್ನು ಮಾಡಿ, ಶ್ರೀ ಗುರುಲಿಂಗೇಶ್ವರ ಶಿವಾಚಾರ್ಯರೆಂದು ಅಭಿಧಾನ ಪಡೆದು ತಾವೇ ಸ್ಥಾಪಿಸಿದ ಮಠದ ಮೊದಲ ಮಠಾಧಿಪತಿಯಾಗಿ ಅಧಿಕಾರವನ್ನು ವಹಿಸಿಕೊಂಡರು. ಶ್ರೀ ಗುರುಲಿಂಗೇಶ್ವರ ಶಿವಯೋಗಿ ಶಿವಾಚಾರ್ಯರು ಪುನಃ ನಾಡನ್ನೆಲ್ಲ ಸುತ್ತಿ ಧರ್ಮ ಜಾಗೃತಿಯನ್ನುಂಟುಮಾಡಿ ಲಿಂಗೈಕ್ಯರಾದರು. ಇವರ ತರುವಾಯ ಅನೇಕ ಮಠಾಧೀಶರು ಈ ಮಠದ ಅಧಿಕಾರವನ್ನು ವಹಿಸಿಕೊಂಡು, ವೀರಶೈವ ಧರ್ಮದ ಪ್ರಚಾರವನ್ನು ಕೈಗೊಂಡು ಧರ್ಮವನ್ನು ಬೆಳಸಿ ಭಕ್ತರನ್ನು ಉದ್ಧರಿಸಿದ್ದಾರೆ.

ಪರಂಪರೆ:

೧. ಷ.ಬ್ರ.ಶ್ರೀ ಗುರುಲಿಂಗೇಶ್ವರ ಶಿವಯೋಗಿ ಶಿವಾಚಾರ್ಯಸ್ವಾಮಿಗಳು

೨. ಷ.ಬ್ರ.ಶ್ರೀ ಪಡದಪಯ್ಯ ಶಿವಾಚಾರ್ಯಸ್ವಾಮಿಗಳು

೩. ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯಲ್ಲಿ ಕೆಲವು ಗುರುಗಳ ಹೆಸರನ್ನು ಮಾತ್ರ ದಾಖಲಿಸಲಾಗಿದೆ. ಆಧಾರದ ಕೊರತೆಯಿಂದ ಈ ಬಗ್ಗೆ ಸ್ಪಷ್ಟವಾದ ಮಾಹಿತಿ ದೊರೆಯದಾಗಿದೆ. ಕರ್ತೃ ಗುರುಗಳ ನಂತರ ದಾಖಲಿಸಲಾದ ಶ್ರೀ ಪಡದಪಯ್ಯ ಶಿವಾಚಾರ್ಯ ಸ್ವಾಮಿಗಳು ಶ್ರೀ ಅಡವಯ್ಯ ಮತ್ತು ಶ್ರೀಮತಿ ಶಿವಲಿಂಗಮ್ಮನವರ ಪುತ್ರರಾಗಿ ಜನಿಸಿ, ಬಾಲ್ಯದಲ್ಲಿಯೇ ಈ ಮಠದ

ಅಧಿಕಾರವನ್ನು ವಹಿಸಿಕೊಂಡರು. ಇವರು ೧೯೩೩ ರ ಜೂನ್ ಹದಿನೈದರಂದು ಮಠದ ಪಟ್ಟಾಧಿಕಾರವನ್ನು ಶ್ರೀ ರಂಭಾಪುರಿ ಜಗದ್ಗುರುಗಳ ಸಾನಿಧ್ಯದಲ್ಲಿ ವಹಿಸಿಕೊಂಡು ಅನೇಕ ಪವಾಡಗಳನ್ನು ಮಾಡಿದರು. ೧೯೫೬ ರಲ್ಲಿ ಅರವತ್ತ್ಮೂರು ಮಂಟಪ ಪೂಜೆಯನ್ನು ಮಾಡಿದರು. ಇವರು ಮಠವನ್ನು ಆರ್ಥಿಕವಾಗಿ ಸದೃಢಗೊಳಿಸಿ ಸೆಪ್ಟೆಂಬರ್ ಇಪ್ಪತ್ತೆರಡರ ೧೯೬೫ ರಲ್ಲಿ ಲಿಂಗೈಕ್ಯರಾದರು. ಇವರ ತರುವಾಯ ಮೂರು ವರ್ಷಗಳ ಕಾಲ ಮಠವು ಗುರುಗಳಿಲ್ಲದೆ ಖಾಲಿ ಉಳಿಯಿತು. ಆಗ ಭಕ್ತರು ರಂಭಾಪುರಿ ಜಗದ್ಗುರುಗಳಾದ ಶ್ರೀ ವೀರ ಗಂಗಾಧರ ಭಗವತ್ಪಾದರಿಗೆ ಭಿನ್ನವಿಸಿಕೊಂಡ ಮೇಲೆ ಶ್ರೀ ಚಂದ್ರಶೇಖರ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿದರು. ಶ್ರೀ ಚಂದ್ರಶೇಖರ ದೇವರು ಹುಬ್ಬಳ್ಳಿ ತಾಲ್ಲೂಕಿನ ಪಾಲಿಕೊಪ್ಪದ ಶ್ರೀ ಅಡವಯ್ಯ ಮತ್ತು ಶ್ರೀಮತಿ ರಾಚಮ್ಮನವರ ಪುತ್ರರಾಗಿ ಜನಿಸಿದರು.

ಇವರು ಬಾಲ್ಯದಿಂದಲೂ ಜಗದ್ಗುರು ಶ್ರೀ ವೀರಗಂಗಾಧರ ಶಿವಾಚಾರ್ಯ ಭಗವತ್ಪಾದರ ಕೃಪಾಕಟಾಕ್ಷದಿಂದ ಬೆಳೆದು ಆಧ್ಯಾತ್ಮವನ್ನು ಮೈಗೂಡಿಸಿಕೊಂಡಿದ್ದರು. ಇವರು ರಂಭಾಪುರಿ ಪೀಠ, ಬೆಂಗಳೂರಿನಲ್ಲಿ ಸಂಸ್ಕೃತ,ವೇದ ಹಾಗೂ ಜ್ಯೋತಿಷ್ಯವನ್ನು ಕಲಿತು ಕಲಾದಗಿಗೆ ಆಗಮಿಸುತ್ತಾರೆ. ನಂತರ ರಂಭಾಪುರಿ ಜಗದ್ಗುರು ಶ್ರೀ ವೀರಗಂಗಾಧರ ಶಿವಾಚಾರ್ಯ ಭಗವತ್ಪಾದರ ಸಾನಿಧ್ಯದಲ್ಲಿ ೧೯೬೮ ರ ಜೂನ್ ಹತ್ತರಂದು ಕಾಲದಗಿ ಮಠಾಧ್ಯಕ್ಷರಾಗಿ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳೆಂದು ಅಭಿಧಾನ ಪಡೆದು ಪಟ್ಟಾಧಿಕಾರವನ್ನು ಪಡೆದುಕೊಂಡರು. ಗುರುಗಳು ಅಧಿಕಾರವನ್ನು ಪಡೆದುಕೊಂಡ ಮೇಲೆ ಮಠವನ್ನು ಅಭಿವೃದ್ಧಿಪಡಿಸತೊಡಗಿದರು. ಧಾರ್ಮಿಕ ಚಟುವಟಿಕೆಗಳನ್ನು ವಿಧಿವತ್ತಾಗಿ ಆಚರಣೆಗೆ ತಂದು ಅನುಷ್ಠಾನದಿಂದ ಸಾಧನೆಯನ್ನು ಪಡೆದು, ಜಗದ್ಗುರುಗಳಿಂದ ಪ್ರಶಂಸೆಗೆ ಒಳಗಾಗಿ ಶಿವಯೋಗ ಭೂಷಣ, ತಪೋರತ್ನ, ಶಿವಪೂಜಾ ಧುರಂಧರ ಎಂಬ ಅಭಿಧಾನಗಳನ್ನು ಪಡೆದರು.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗುರುಗಳ ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆಪೂಜೆ, ಅಮಾವಾಸ್ಯೆಮತ್ತು ಹುಣ್ಣಿಮೆಗಳಲ್ಲಿ ವಿಶೇಷ ಪೂಜೆ ಮಾಡಲಾಗುತ್ತಿದೆ.ಮಠದ ದ್ವಾರವನ್ನು ಸ್ಥಾಪಿಸಿ ದ್ವಾರಕ್ಕೆ ಪಂಚಕಳಸಾರೋಹಣ ಹಾಗೂ ರೇಣುಕಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ೧೦೦೮ ಶಿವಲಿಂಗ ಪ್ರತಿಷ್ಠಾಪನೆ, ಏಕೋತ್ತರ ಶಿವಾಚಾರ್ಯಮಹಾ ಮಂಟಪ ಪೂಜೆಯನ್ನು ಭವ್ಯವಾಗಿ ನೆರವೇರಿಸಿದ್ದಾರೆ. ಮಠದಲ್ಲಿ ಬಸವಜಯಂತಿಯನ್ನು ಅದ್ದೂರಿಯಾಗಿ ಆಚರಣೆ ಮಾಡಲಾಗುತ್ತಿದೆ.

ಶೈಕ್ಷಣಿಕ ಸೇವೆ: ಶ್ರೀ ಗುರುಲಿಂಗೇಶ್ವರ ವಿದ್ಯಾವರ್ಧಕ ಸಂಘವನ್ನು ೧೯೫೮ರಲ್ಲಿ ಸ್ಥಾಪಿಸಿ, ಶ್ರೀ ಗುರುಲಿಂಗೇಶ್ವರ ಪ್ರೌಢ ಶಾಲೆಯನ್ನು ಪ್ರಾರಂಭಿಸಲಾಗಿದೆ. ಈಗ ಸ್ವತಂತ್ರ ಪದವಿಪೂರ್ವ ಕಾಲೇಜು, ಪದವಿ ಕಾಲೇಜು, ಹೆಣ್ಣು ಮಕ್ಕಳಿಗೆ ಹೊಲಿಗೆ ತರಬೇತಿ ಕೇಂದ್ರ, ಉರ್ದು ಪ್ರಾಥಮಿಕ ಮತ್ತು ಪ್ರೌಢಶಾಲೆಯನ್ನು ಪ್ರಾರಂಭಿಸಲಾಗಿದೆ. ಮಠದಲ್ಲಿ ವಿದ್ಯಾರ್ಥಿಗಳಿಗೆ ಆಶ್ರಯವನ್ನು ಕಲ್ಪಿಸಲಾಗಿದೆ. ಈ ರೀತಿ ಧಾರ್ಮಿಕ ಸಾಧನೆಯ ಜೊತೆಗೆ ಶೈಕ್ಷಣಿಕ ಸಾಧನೆಯನ್ನೂ ಸಾಧಿಸಿರುವ ಗುರುಗಳು ಪಾದಯಾತ್ರೆ ಮಾಡಿ ಉಪನ್ಯಾಸ, ಉಪದೇಶಗಳನ್ನು ನೀಡುತ್ತಾ, ಭಕ್ತರನ್ನು ಸಂಸ್ಕಾರವಂತರನ್ನಾಗಿ ಮಾಡಿ ಉತ್ತಮ ಸಮಾಜವನ್ನು ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಗುರುಲಿಂಗೇಶ್ವರ ಪಂಚಗ್ರಹ ಹಿರೇಮಠ, ಕಲಾದಗಿ, ಬಾಗಲಕೋಟೆ ತಾಲ್ಲೂಕು.

ಆಧಾರ: 'ಶ್ರೀ ಗುರುಲಿಂಗೇಶ್ವರ ಮಹಾಪುರಾಣಸಾರ'- ಎಲ್.ಎಸ್.ಇನಾಂದಾರ, ಕಲಾದಗಿ.

ಕಾರಿಹಳ್ಳಿ

ಬಾಗಲಕೋಟೆ ತಾಲ್ಲೂಕಿನ ಕಾರಿಹಳ್ಳಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಐದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ದಾಸೋಹಮಠವು ಅಸ್ತಿತ್ವದಲ್ಲಿದೆ.

ದಾಸೋಹಮಠ: ಕಾರಿಹಳ್ಳಿ ಗ್ರಾಮದಲ್ಲಿ ೧೯೭೭ರಲ್ಲಿ ದಾಸೋಹಮಠವು ಸ್ಥಾಪನೆಯಾಗಿದೆ. ಶ್ರೀ ಶರಣಬಸವ ಸ್ವಾಮಿ

ಗಳಿಂದ ಸ್ಥಾಪನೆಯಾದ ಶರಣ ಸ್ಥಲದ ಈ ಮಠವು ಶರಣ ತತ್ತ್ವದ ಪ್ರಚಾರವನ್ನು ಮಾಡಿ ವೀರಶೈವಧರ್ಮವನ್ನು ಬೆಳೆಸುವ ಉದ್ದೇಶವನ್ನು ಇಟ್ಟುಕೊಂಡಿದೆ. ಶ್ರೀ ಶರಣಬಸವ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ ೧೯೮೫ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ತರುವಾಯ ಎರಡನೆಯ ಶ್ರೀ ಶರಣ ಬಸವ ಸ್ವಾಮಿಗಳು ೧೯೮೬ ರಲ್ಲಿ ಅಧಿಕಾರಕ್ಕೆ ಬಂದು, ಮಠವನ್ನು ಅಭಿವೃದ್ಧಿಪಡಿಸಿ ಶರಣ ತತ್ತ್ವಗಳನ್ನು ಪ್ರಚುರಪಡಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಶ್ರೀ ಶರಣಬಸವ ಸ್ವಾಮಿಗಳು ಭಕ್ತರಲ್ಲಿರುವ ಮೂಢ ನಂಬಿಕೆಗಳನ್ನು ಹೋಗಲಾಡಿಸಲು ಶರಣ ತತ್ತ್ವದ ಆಧಾರದ ಅನ್ವಯ ಧಾರ್ಮಿಕ ಆಚರಣೆಗಳನ್ನು ಮಾಡಿ ತೋರಿಸುತ್ತಾ'ನಾಗರ ಪಂಚಮಿಯಂದು ಹುತ್ತಕ್ಕೆ ಹಾಲನ್ನು ಎರೆಯುವ ಬದಲು, ಬಡ ರೋಗಿಗಳಿಗೆ ಹಾಲನ್ನು ಕೊಟ್ಟರೆ ಸಾರ್ಥಕ'ಎಂಬುದನ್ನು ಮನವರಿಕೆ ಮಾಡಿಸಿ ಪ್ರತಿ ವರ್ಷ ನಾಗರ ಪಂಚಮಿಯಂದು ನೂರು ಲೀಟರ್ ಹಾಲನ್ನು ಆಸ್ಪತ್ರೆಗಳಲ್ಲಿರುವ ಬಡ ರೋಗಿಗಳಿಗೆ ಹಂಚುತ್ತಿದ್ದಾರೆ. ಅದೇ ರೀತಿ ಮೂಢ ನಂಬಿಕೆಗಳನ್ನು ತೊಲಗಿಸಲು ಸಿದ್ಧರಾಮ ಜ್ಯೋತಿಯ ಅಭಿಯಾನದೊಂದಿಗೆ ಸಂಚಾರ ಕೈಗೊಂಡು ಮೂಢನಂಬಿಕೆಗಳನ್ನು ತಮ್ಮ ಜೋಳಿಗೆಗೆ ಹಾಕಿಸಿಕೊಂಡು, ವೈಜ್ಞಾನಿಕ ತಳಹದಿಯ ಮೇಲೆ ಧರ್ಮವನ್ನು ಭಕ್ತರಿಗೆ ಮುಟ್ಟಿಸುತ್ತಾ ಸಾರ್ಥಕ ಕಾರ್ಯವನ್ನು ಮಾಡಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಶರಣಬಸವ ಸ್ವಾಮಿಗಳು, ಶ್ರೀ ದಾಸೋಹ ಮಠ, ಕಾರಿಹಳ್ಳಿ, ಬಾಗಲಕೋಟೆ ತಾಲ್ಲೂಕು.

ಕಿರಸೂರು

ಬಾಗಲಕೋಟೆ ತಾಲ್ಲೂಕಿನ ಕಿರಸೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಈಶಾನ್ಯ ಭಾಗಕ್ಕೆ ಎಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಕಿರಸೂರು ಗ್ರಾಮದಲ್ಲಿ ಶ್ರೀಶೈಲ ಪೀಠದ ಶಾಖಾಮಠವಾದ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ. ಗುರುಸ್ಥಲ ಮಠವಾದ ಈ ಮಠದ ಪರಂಪರೆಯ ಬಗ್ಗೆ ಆಧಾರಗಳ ಕೊರತೆಯಿಂದ ಇತಿಹಾಸವು ಲಭ್ಯವಿಲ್ಲದಾಗಿದೆ. ಮಠದ ಕರ್ತೃ ಗುರುಗಳು ಹಿರೇಮಠವನ್ನು ಸದೃಢವಾಗಿ ಬೆಳಸಿ ಹೆಚ್ಚು ಪ್ರಬುದ್ಧಮಾನಕ್ಕೆ ತಂದಿದ್ದರು. ಕರ್ತೃ ಗುರುಗಳು (ಹೆಸರು ಗೊತ್ತಿಲ್ಲ) ಪವಾಡ ಪುರುಷರಾಗಿದ್ದು, ಪವಾಡಗಳಿಂದ ಲೋಕ ಕಲ್ಯಾಣವನ್ನು ಮಾಡಿದ್ದರಂತೆ. ಭಕ್ತರ ಕಷ್ಟಗಳನ್ನು ತಮ್ಮ ಜೋಳಿಗೆಗೆ ಹಾಕಿಕೊಂಡು, ಭಕ್ತರನ್ನು ಉದ್ಧರಿಸಿ ಜನಮನದಲ್ಲಿ ಮಠವು ಬೆಳೆಯುವಂತೆ ಮಾಡಿದ್ದರಂತೆ ಎಂದು ನಂಬಲಾಗಿದೆ.

ಪರಂಪರೆ:

೧. ಷ.ಬ್ರ.ಶ್ರೀ ಗೌರಿಶಂಕರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಚನ್ನಮಲ್ಲ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಸಿದ್ಧಮಲ್ಲ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ರೇವಣಸಿದ್ಧದೇವರು

ಈ ರೀತಿ ಮಠದ ಪರಂಪರೆಯ ಹೆಸರುಗಳನ್ನು ಗುರುತಿಸಬಹುದಾಗಿದ್ದರೂ, ಇವರು ಅಧಿಕಾರ ನಡೆಸಿದ ಕಾಲಮಾನದ ಬಗ್ಗೆ ನಿಖರವಾದ ಮಾಹಿತಿಗಳು ಲಭ್ಯವಾಗಿಲ್ಲ. ಮೇಲೆ ಗುರುತಿಸಿರುವ ಪರಂಪರೆಯ ಶ್ರೀ ಗೌರಿಶಂಕರ ಶಿವಾಚಾರ್ಯ ಸ್ವಾಮಿಗಳು ಪವಾಡಪುರುಷರಾಗಿ, ಮಹಾತಪಸ್ವಿಗಳಾಗಿ ಹಾಗೂ ಆಯುರ್ವೇದ ವೈದ್ಯರಾಗಿ ಹೆಚ್ಚು ಹೆಸರು ಮಾಡಿದ್ದರು. ಗುರುಗಳು ತಮ್ಮ ತಪೋನಿಷ್ಠೆಯಿಂದ ಆಗಾಧ ಶಕ್ತಿಯನ್ನು ಪಡೆದು, ಧರ್ಮಪ್ರಸಾರವನ್ನು ಯಶಸ್ವಿಯಾಗಿ ನಡೆಸಿದ್ದರು. ಇವರ ತಪೋಶಕ್ತಿಗೆ ಅಪಾರ ಭಕ್ತರು ಮನಸೋತಿದ್ದರು. ಪರಂಪರೆಯಲ್ಲಿ ಬರುವ ಶ್ರೀ ಚನ್ನಮಲ್ಲ ಶಿವಾಚಾರ್ಯ ಸ್ವಾಮಿಗಳು ಹಾಗೂ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಸಹ ಮಠದ ಧಾರ್ಮಿಕ ಕಾರ್ಯಗಳನ್ನು ಯಶಸ್ವಿಯಾಗಿ ನಡೆಸಿ ಮಠ ವನ್ನು ಅಭಿವೃದ್ಧಿಪಡಿಸಿದ್ದಾರೆ. ಮಠದ ಉತ್ತರಾಧಿಕಾರಿಗಳಾಗಿ ಈಗ ನೇಮಕಗೊಂಡಿರುವ ಶ್ರೀ ರೇವಣಸಿದ್ಧ ದೇವರು ಕಿರುಸೂರು ಗ್ರಾಮದ ಶ್ರೀ ಹುಚ್ಚಯ್ಯಸ್ವಾಮಿ ಮತ್ತು ಶ್ರೀಮತಿ ಪಾರ್ವತಮ್ಮನವರ ಪುತ್ರರಾಗಿ ೧೯೭೩ ರ ಜುಲೈ ಇಪ್ಪತ್ತರಂದು ಜನಿಸಿದ್ದಾರೆ. ಇವರು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಕಿರುಸೂರಿನಲ್ಲಿಯೆ ಮುಗಿಸಿ ಶಿವಯೋಗ ಮಂದಿರ, ಹೊನ್ನಾಳಿ

ಮತ್ತು ಮೈಸೂರಿನಲ್ಲಿ ಉನ್ನತ ವಿದ್ಯಾಭ್ಯಾಸಮಾಡಿದ್ದಾರೆ. ಗುರುಗಳು ಮಹಾರಾಷ್ಟ್ರದ ಅಕ್ಕಲಕೋಟೆ ತಾಲ್ಲೂಕಿನ ಗಡಬಗಾಂವ್ ಮಠದ ಉತ್ತರಾಧಿಕಾರಿಗಳಾಗಿಯೂ ನೇಮಕಗೊಂಡು, ಎರಡೂ ಮಠದ ಆಡಳಿತವನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ರೇವಣಸಿದ್ಧ ದೇವರು, ಶ್ರೀ ಹಿರೇಮಠ, ಕಿರಸೂರು, ಬಾಗಲಕೋಟೆ ತಾಲ್ಲೂಕು.

ಚೌಡಾಪುರ

ಬಾಗಲಕೋಟೆ ತಾಲ್ಲೂಕಿನ ಚೌಡಾಪುರ ಗ್ರಾಮವು ತಾಲ್ಲೂಕು ಕೇಂದ್ರದಿಂದ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ರೇವಣಸಿದ್ಧಸ್ವಾಮಿ ಮಠವು ಅಸ್ತಿತ್ವದಲ್ಲಿದೆ.

ರೇವಣಸಿದ್ಧಸ್ವಾಮಿಮಠ: ಚೌಡಾಪುರ ಗ್ರಾಮದಲ್ಲಿ ಶ್ರೀ ರೇವಣಸಿದ್ಧಸ್ವಾಮಿ ಮಠವು ಸ್ಥಾಪನೆಯಾಗಿ ಈ ಗ್ರಾಮದ ಧಾರ್ಮಿಕ ಆಚರಣೆಗಳನ್ನು ನಡೆಸುವ ಸ್ಥಳವಾಗಿ ರೂಪುಗೊಂಡಿದೆ. ಗುರುಸ್ಥಲದ ಈ ಮಠವು ಮಹಾರಾಷ್ಟ್ರದ ಅಕ್ಕಲಕೋಟೆಯ ಶ್ರೀ ರೇವಣಸಿದ್ಧಸ್ವಾಮಿ ಮಠದ ಶಾಖಾಮಠವಾಗಿ ಬೆಳೆದಿದೆ. ಗುರುಗಳು ಸಂದರ್ಭಕ್ಕನುಸಾರ ಅಕ್ಕಲಕೋಟೆಯಿಂದ ಇಲ್ಲಿಗೆ ಆಗಮಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುತ್ತಾರೆ. ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯ ಪೂಜೆ ನಡೆಯುತ್ತಿದೆ.

ವಿಳಾಸ: ಷ.ಬ್ರ.ಶ್ರೀ ರೇವಣಸಿದ್ಧಸ್ವಾಮಿ ಮಠ, ಚೌಡಾಪುರ, ಬಾಗಲಕೋಟೆ ತಾಲ್ಲೂಕು.

ಬಾಗಲಕೋಟೆ

ಬಿಜಾಪುರ ಜಿಲ್ಲೆಯಿಂದ ೧೯೯೭ ರಲ್ಲಿ ಬೇರ್ಪಟ್ಟು ಹೊಸದೀಗಿ ರೂಪುಗೊಂಡಿರುವ ಜಿಲ್ಲೆಯ ಕೇಂದ್ರ ಸ್ಥಳವಾದ ಬಾಗಲಕೋಟೆ ಒಂದು ಐತಿಹಾಸಿಕ ಸ್ಥಳ. ಹನ್ನೆರಡನೆಯ ಶತಮಾನ ಹಾಗೂ ಅದಕ್ಕೂ ಪೂರ್ವದಿಂದಲೂ ಇಲ್ಲಿ ವೀರಶೈವ ಧರ್ಮ ಪ್ರಬಲವಾಗಿ ಬೆಳೆದಿದೆ. ಈ ನಗರದಲ್ಲಿ ಶ್ರೀ ತೆಂಗಿನಮಠ-ಶ್ರೀ ಟೀಕಿನಮಠ, ಶ್ರೀ ಕಸ್ತೂರಿಮಠ, ಶ್ರೀ ಚರಂತಿಮಠ, ಶ್ರೀ ಹಿರೇಮಠ, ಶ್ರೀ ಶರಣಬಸಪ್ಪನಮಠ ಎಂಬ ಐದು ಮಠಗಳಿವೆ. ಇವುಗಳಲ್ಲಿ ಶ್ರೀ ಹಿರೇಮಠ ಮತ್ತು ಶ್ರೀ ಶರಣಬಸಪ್ಪನ ಮಠ ಮಠಾಧೀಶರಿಲ್ಲದೆ ಖಾಲಿ ಉಳಿದಿವೆ.

ತೆಂಗಿನ ಮಠ-ಟೀಕಿನ ಮಠ: ಬಾಗಲಕೋಟೆ ನಗರದಲ್ಲಿ ಶ್ರೀ ತೆಂಗಿನಮಠ ಹಾಗೂ ಟೀಕಿನಮಠ ಎಂಬ ಅವಳಿ ಮಠಗಳು ಕಳೆದ ಇನ್ನೂರೈವತ್ತು ವರ್ಷಗಳಿಂದ ಅಸ್ತಿತ್ವದಲ್ಲಿವೆ. ಈ ಎರಡೂ ಮಠಗಳು ಒಂದೇ ಆಡಳಿತಕ್ಕೆ ಒಳಪಟ್ಟು ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿವೆ. ವಿರಕ್ತ ಸಂಪ್ರದಾಯದ ಕುಮಾರ ಸಮಯದ ಈ ಎರಡು ಮಠಗಳ ಇತಿಹಾಸದ ಬಗ್ಗೆ ನಿಖರವಾದ ಮಾಹಿತಿಗಳು ಲಭ್ಯವಿಲ್ಲ. ಈ ಮಠಗಳು ವೀರಶೈವ ಧರ್ಮವನ್ನು ಬೆಳಸಿ ಧಾರ್ಮಿಕ ಸಂಸ್ಕಾರವನ್ನು ನೀಡುವ ಉದ್ದೇಶದಿಂದ ಹುಟ್ಟಿಕೊಂಡಿವೆ. ಮಣ್ಣಿನ ಗಚ್ಚು ಹಾಗೂ ಕೆತ್ತನೆಯ ಸುಂದರಕಲ್ಲುಗಳಿಂದ ಕಟ್ಟಡವು ರಚನೆಗೊಂಡಿವೆ. ಶ್ರೀ ತೆಂಗಿನ ಮಠವು ಉತ್ತರಾಭಿಮುಖವಾಗಿದ್ದರೆ, ಟೀಕಿನ ಮಠವು ಪೂರ್ವಾಭಿಮುಖವಾಗಿದೆ.

ತೆಂಗಿನಮಠ: ಉತ್ತರಾಭಿಮುಖವಾಗಿರುವ ತೆಂಗಿನ ಮಠದಲ್ಲಿ ಹಳೆಯದಾದ ಬಹು ಎತ್ತರದ ತೆಂಗಿನ ಮರ ಬೆಳೆದಿತ್ತಂತೆ. ಬಾಗಲಕೋಟೆಯ ಯಾವ ದಿಕ್ಕಿನಿಂದ ನೋಡಿದರೂ ತೆಂಗಿನ ಮರ ಕಾಣುತ್ತಿತ್ತಂತೆ. ಆದ್ದರಿಂದ ಈ ಮಠಕ್ಕೆ ರೂಢಿಗತವಾಗಿ 'ತೆಂಗಿನಮಠ'ಎಂದು ಕರೆಯಲ್ಪಟ್ಟಿತೆಂದೂ ಮಠದ ಸ್ಥಾಪಕರು ಶ್ರೀ ರಾಚೋಟಿ ಸ್ವಾಮಿಗಳೆಂದೂ ಹೇಳಲಾಗುತ್ತಿದೆ. ಗುರುಗಳು ಯಾವಾಗ, ಎಲ್ಲಿಂದ ಬಂದರು ಎಂಬ ಬಗ್ಗೆ ನಿಖರವಾದ ಮಾಹಿತಿಗಳು ಲಭ್ಯವಿಲ್ಲ. ಕರ್ತೃಗುರುಗಳ ನಂತರ ಮಠದ ಪರಂಪರೆಯು ನಾಲ್ಕನೆಯ ತಲೆಮಾರಿನ ತನಕ ಬೆಳೆದು ಬಂದು, ಟೀಕಿನ ಮಠದ ಆಡಳಿತಕ್ಕೆ ಒಳಪಟ್ಟಿದೆ.

ತೆಂಗಿನ ಮಠದ ಪರಂಪರೆ:
೧. ಶ್ರೀ ಮ.ನಿ.ಪ್ರ. ರಾಚೋಟಿಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಗುರುಬಸವಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಮಲ್ಲಿಕಾರ್ಜುನಸ್ವಾಮಿಗಳು

೪. ಶ್ರೀ ಮ.ನಿ.ಪ್ರ. ರಾಚೋಟಿಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಮಲ್ಲಿಕಾರ್ಜುನಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಪರಂಪರೆಯ ನಾಲ್ಕನೆಯ ಗುರುಗಳಾದ ಶ್ರೀ ರಾಚೋಟಿ ಸ್ವಾಮಿಗಳು ತೆಂಗಿನ ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡ ಮೇಲೆ, ಇವರ ವಿದ್ವತ್ತನ್ನು ಗುರುತಿಸಿದ ಮುಂಡರಗಿಯ ಭಕ್ತರು ಇವರನ್ನು ಶ್ರೀ ಜಗದ್ಗುರು ಅನ್ನದಾನೇಶ್ವರ ಮಠಕ್ಕೆ ಉತ್ತರಾಧಿಕಾರಿಗಳನ್ನಾಗಿ ನೇಮಿಸಿ 'ಶ್ರೀ ಮ.ನಿ.ಪ್ರ. ಅನ್ನದಾನೇಶ್ವರ ಸ್ವಾಮಿ'ಗಳೆಂದು ಅಭಿದಾನಮಾಡಿ ಮುಂಡರಗಿಗೆ ಕರೆತಂದಿದ್ದಾರೆ. ಆಗ ಗುರುಗಳಿಲ್ಲದೆ ಖಾಲಿ ಉಳಿದ ತೆಂಗಿನ ಮಠದ ಜವಾಬ್ದಾರಿಯನ್ನು ಟೀಕಿನ ಮಠದ ನಾಲ್ಕನೆಯ ಗುರುಗಳಾಗಿದ್ದ ಶ್ರೀ ರೇವಣಸಿದ್ಧ ಸ್ವಾಮಿಗಳಿಗೆ ಒಪ್ಪಿಸಿದರು. ಶ್ರೀ ರೇವಣಸಿದ್ಧ ಸ್ವಾಮಿಗಳ ಕರಕಮಲ ಸಂಜಾತರಾಗಿ ಬೆಳೆದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಬಾಗಲಕೋಟೆ ತಾಲ್ಲೂಕಿನ ಹಿರೇಮೂರಮಟ್ಟಿ ಗ್ರಾಮದ ಶ್ರೀ ಅಡವಯ್ಯ ಮತ್ತು ಶ್ರೀಮತಿ ಉಳಿಯಮ್ಮನವರ ಪುತ್ರರಾಗಿ ೧೯೪೪ ರಲ್ಲಿ ಜನಿಸಿದರು. ಗುರುಗಳು ಬಾಗಲಕೋಟೆ, ಕಮ್ಮತ್ತಿಗೆ,ಕೋಟೆಕಲ್ಲು,ಸೊನ್ನಸೋಲಾಪುರ ಮತ್ತು ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡಿ ೧೯೭೬ ರಲ್ಲಿ ತೆಂಗಿನ ಮಠದ ಪಟ್ಟಾಧಿಕಾರಿಗಳಾಗಿ ಅಧಿಕಾರವನ್ನು ವಹಿಸಿಕೊಂಡರು.

ಟೀಕಿನಮಠ: ತೆಂಗಿನ ಮಠದ ಪಕ್ಕದಲ್ಲಿಯೇ ಸ್ಥಾಪನೆಯಾಗಿದ್ದ ವಿರಕ್ತ ಪರಂಪರೆಯ ಈ ಮಠದ ಕರ್ತೃ ಗುರುಗಳು ಶ್ರೀ ಚನ್ನವೀರ ಸ್ವಾಮಿಗಳೆಂದು ಹೇಳಲಾಗುತ್ತಿದೆ. ಆಧಾರಗಳ ಕೊರತೆಯಿಂದ ಈ ಮಠದ ಸ್ಥಾಪನೆ ಹಾಗೂ ಸ್ಥಾಪಕರ ಬಗ್ಗೆಯೂ ಸ್ಪಷ್ಟವಾದ ಮಾಹಿತಿಯನ್ನು ನೀಡಲಾಗುತ್ತಿಲ್ಲ. ಈ ಮಠದ ಪರಂಪರೆಯ ಎರಡನೆಯ ಗುರುಗಳಾದ ಶ್ರೀ ರೇವಣಸಿದ್ಧ ಸ್ವಾಮಿಗಳು ಸಂಸ್ಕೃತ ಮತ್ತು ಕನ್ನಡ ಸಾಹಿತ್ಯದಲ್ಲಿ ಅಪ್ರತಿಮ ಪಂಡಿತರಾಗಿದ್ದರು. ಇವರು ಸಂಸ್ಕೃತ ಮತ್ತು ಕನ್ನಡ ಸಾಹಿತ್ಯದ ಕೃತಿಗಳ ಮೇಲೆ ಟೀಕೆ ಟಿಪ್ಪಣಿಗಳನ್ನು ಬರೆದು ಉತ್ತಮ ವಿಮರ್ಶಕರಾಗಿ ರೂಪುಗೊಂಡ ಟೀಕಾಕಾರರೆಂದು ಹೆಸರು ಪಡೆದಿದ್ದರು. ಈ ಕಾರಣಕ್ಕಾಗಿ ಈ ಮಠಕ್ಕೆ 'ಟೀಕಿನ ಮಠ' ಎಂದು ಹೆಸರು ಬಂದಿದೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ಚನ್ನವೀರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ರೇವಣಸಿದ್ಧಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಪ್ರಭುಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ರೇವಣಸಿದ್ಧಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಪರಂಪರೆಯ ನಾಲ್ಕನೆಯ ಗುರುಗಳಾಗಿದ್ದ ಶ್ರೀ ರೇವಣಸಿದ್ಧ ಸ್ವಾಮಿಗಳು ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ತೆಂಗಿನ ಮಠ ಮತ್ತು ಟೀಕಿನ ಮಠಗಳನ್ನು ಅಭಿವೃದ್ಧಿಪಡಿಸಿದರು.

ಒಂದಾದ ಮಠಗಳು: ಟೀಕಿನ ಮಠಕ್ಕೆ ಉತ್ತರಾಧಿಕಾರಿಗಳನ್ನು ನೇಮಿಸುವ ವಿಚಾರದಲ್ಲಿ ಚರ್ಚೆ ನಡೆದಾಗ ಭಾವನಾತ್ಮಕವಾಗಿ ಹಾಗೂ ಧಾರ್ಮಿಕ ವಿಚಾರಗಳಲ್ಲಿ ಏಕ ನಿಲುವಿನಿಂದ ಕಾರ್ಯಗಳನ್ನು ನಡೆಸಿಕೊಂಡು ಭಕ್ತರನ್ನು ಸನ್ಮಾರ್ಗಕ್ಕೆ ತರುತ್ತಿದ್ದ ಈ ಎರಡೂ ಮಠಗಳಲ್ಲಿ ಪ್ರತ್ಯೇಕತೆ ಇರುವುದಕ್ಕಿಂತ ತೆಂಗಿನ ಮಠದ ಪಟ್ಟಾಧಿಕಾರಿಗಳಾಗಿದ್ದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳೇ ಈ ಎರಡೂ ಮಠಗಳ ಆಡಳಿತವನ್ನು ನಡೆಸಿಕೊಂಡು ಹೋಗಬಹುದು ಎಂದು ನಿರ್ಧರಿಸಿದ ಹಿರಿಯ ಗುರುಗಳಾದ ಶ್ರೀ ರೇವಣಸಿದ್ಧ ಸ್ವಾಮಿಗಳು ಟೀಕಿನ ಮಠಕ್ಕೆ ಬೇರೆ ಉತ್ತರಾಧಿಕಾರಿಯ ಆವಶ್ಯಕತೆ ಇಲ್ಲಎಂದು ತೀರ್ಮಾನಿಸಿ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳಿಗೆ ಮಠದ ಆಡಳಿತವನ್ನು ಮುಂದುವರೆಸಿಕೊಂಡು ಹೋಗಲು ಜವಾಬ್ದಾರಿಯನ್ನು ಒಪ್ಪಿಸಿದರು. ಅಂದಿನಿಂದ ಈ ಎರಡೂ ಮಠಗಳು ಒಂದೇ ಆಡಳಿತದಲ್ಲಿ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಒಂದಾದ ಮಠದ ಪರಂಪರೆ:
೧. ಶ್ರೀ ಮ.ನಿ.ಪ್ರ. ಮಲ್ಲಿಕಾರ್ಜುನಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ರೇವಣಸಿದ್ಧಸ್ವಾಮಿಗಳು

ಹಿರಿಯ ಗುರುಗಳಾದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ತಮ್ಮ ವಿದ್ವತ್ತು ಹಾಗೂ ಪೂಜಾ ನಿಷ್ಠೆಯಿಂದ ಎರಡೂ ಮಠಗಳನ್ನು

ಒಂದಾಗಿ ಬೆಳೆಯುವಂತೆ ಮಾಡಿದರು. ಬಾಗಲಕೋಟೆ ಜಿಲ್ಲೆಯ ಪ್ರಭಾವಿ ಮಠಗಳಲ್ಲಿ ಒಂದಾಗಿ ಬೆಳೆಯುವಂತೆ ಭದ್ರ ಬುನಾದಿ ಯನ್ನು ಹಾಕಿದರು. ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ರೇವಣಸಿದ್ಧ ಸ್ವಾಮಿಗಳನ್ನು ೧೯೭೪ ರಲ್ಲಿ ನೇಮಕ ಮಾಡಿಕೊಂಡರು. ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ನೂರಆರು ವರ್ಷಗಳ ದೀರ್ಘ ಬದುಕನ್ನು ಬದುಕಿ ಮಠದಲ್ಲಿ ವಿಶ್ರಾಂತ ಜೀವನವನ್ನು ನಡೆಸುತ್ತಿದ್ದಾರೆ.

ಶ್ರೀ ರೇವಣಸಿದ್ಧ ಸ್ವಾಮಿಗಳು ಗುಳೇದಗುಡ್ಡದ ಶ್ರೀಮತಿ ಶಿವಮ್ಮ ಮತ್ತು ಶ್ರೀ ಮಹಾಂತಪ್ಪನವರ ಪುತ್ರರಾಗಿ ೧೯೫೫ ರ ನವೆಂಬರ್ ಒಂದರಂದು ಜನಿಸಿದರು. ಇವರು ಪ್ರೌಢಶಾಲೆಯಲ್ಲಿರುವಾಗಲೇ ಉತ್ತರಾಧಿಕಾರಿಯಾಗಿ ನೇಮಕಗೊಂಡು, ನಂತರ ಶಿವಯೋಗ ಮಂದಿರದಲ್ಲಿ ಧಾರ್ಮಿಕ ವಿದ್ಯಾಭ್ಯಾಸವನ್ನು ಮಾಡಿ ಮಠಕ್ಕೆ ಆಗಮಿಸಿ ೧೯೭೪ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಗುರುಗಳು ಅಧಿಕಾರಕ್ಕೆ ಬಂದ ಮೇಲೆ ಈ ಎರಡೂ ಮಠಗಳ ಹಳೆಯ ಕಟ್ಟಡಗಳನ್ನು ನವೀಕರಣಗೊಳಿಸಿದ್ದಾರೆ. ಅಲ್ಲದೆ ಮಠದ ಆಸ್ತಿಯನ್ನು ಶಿಸ್ತುಬದ್ಧಗೊಳಿಸಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಎರಡೂ ಮಠದ ಆವರಣದಲ್ಲಿರುವ ಏಳು ಗದ್ದುಗೆಗಳಿಗೆ ನಿತ್ಯಪೂಜೆ, ಪ್ರತಿ ಸೋಮವಾರ ಮತ್ತು ಹುಣ್ಣಿಮೆಯಲ್ಲಿ ಶಿವಾನುಭವ ಗೋಷ್ಠಿ, ಭಾರತ ಹುಣ್ಣಿಮೆಯಲ್ಲಿ ಶ್ರೀ ರೇವಣಸಿದ್ಧೇಶ್ವರ ಸ್ವಾಮಿಗಳ ಪುಣ್ಯಾರಾಧನೆ, ಶಾಖಾ ಮಠವಾದ ಐಹೊಳೆಯಲ್ಲಿ ಧಾರ್ಮಿಕ ಆಚರಣೆಗಳನ್ನು ನಡೆಸಲಾಗುತ್ತಿದೆ. ಮಠದಲ್ಲಿ ಹೊರಗಿನಿಂದ ಬರುವ ಭಕ್ತರಿಗೆ ಅನ್ನ ದಾಸೋಹ, ವಿಶೇಷ ಸಂದರ್ಭಗಳಲ್ಲಿ ಮಹಾ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.

ಶಿಕ್ಷಣ ಸಂಸ್ಥೆಗಳ ಸ್ಥಾಪನೆ: ಬಾಗಲಕೋಟೆ ಜಿಲ್ಲೆಯ ಪ್ರತಿಷ್ಠಿತ ಶಿಕ್ಷಣಸಂಸ್ಥೆಗಳಲ್ಲಿ ಒಂದಾದ ಶ್ರೀ ಬಸವೇಶ್ವರ ವಿದ್ಯಾ ವರ್ಧಕ ಸಂಘವನ್ನು ಸ್ಥಾಪಿಸಲು (೧೯೦೬) ಟೀಕಿನಮಠದ ನಾಲ್ಕನೆಯ ಗುರುಗಳಾದ ಶ್ರೀ ರೇವಣಸಿದ್ಧ ಸ್ವಾಮಿಗಳು ಕಾರಣಕರ್ತರಾಗಿದ್ದಾರೆ. ಗ್ರಾಮಾಂತರ ಪ್ರದೇಶದಿಂದ ಬಂದು ಕಲಿಯುವ ಮಕ್ಕಳಿಗೆ ಅನಾನುಕೂಲವಾದಾಗ, ಮಠದಲ್ಲಿ ಸಂಸ್ಕೃತ ಪಾಠಶಾಲೆ ಹಾಗೂ ಆಂಗ್ಲ ಮಾಧ್ಯಮ ಶಾಲೆಯನ್ನು ಪ್ರಾರಂಭಿಸಿದರು. ಅಂದು ಪ್ರಾರಂಭಗೊಂಡ ಶಿಕ್ಷಣ ಸಂಸ್ಥೆ ಇಂದು ಶ್ರೀ ಬಸವೇಶ್ವರ ವಿದ್ಯಾವರ್ಧಕ ಸಂಘದ ಅಡಿಯಲ್ಲಿ ಬೃಹದಾಕಾರವಾಗಿ ಬೆಳೆದಿದೆ.

ಬಡವರಿಗೆ ದುಬಾರಿಯಾಗದಂತೆ ಮನೆಗಳನ್ನು ನಿರ್ಮಿಸಿ ಬಾಡಿಗೆಗೆ ಕೊಡಲಾಗಿದೆ. ಮಠದ ಆಸ್ತಿಯಾಗಿರುವ ಹನ್ನೆರೆಡು ಎಕರೆ ಜಮೀನನ್ನು ಅಭಿವೃದ್ಧಿಪಡಿಸಿ ಉತ್ಪಾದನೆ ತೆಗೆಯಲಾಗುತ್ತಿದೆ. ಈ ಆದಾಯದ ಮೂಲಗಳನ್ನು ಬಳಸಿಕೊಂಡು ಮಠದಲ್ಲಿ ಧಾರ್ಮಿಕ ಹಾಗೂ ದಾಸೋಹ ಕಾರ್ಯಗಳನ್ನು ನಡೆಸಲಾಗುತ್ತಿದೆ. ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಈ ಮಠಗಳು ತಮ್ಮನ್ನು ತೊಡಗಿಸಿಕೊಂಡು ಸಮಾಜದ ಅಭಿವೃದ್ಧಿಗೆ ಶ್ರಮಿಸಿವೆ. ಇಂತಹ ಪುರಾತನ ಮಠಗಳು ಆಲಮಟ್ಟಿ ಅಣೆಕಟ್ಟೆಯ ಹಿನ್ನೀರಿನಲ್ಲಿ ಮುಳುಗಡೆಗೊಳ್ಳಲಿವೆ.

ವಿಳಾಸ: ಶ್ರೀ ಮ.ನಿ.ಪ್ರ. ರೇವಣಸಿದ್ಧ ಸ್ವಾಮಿಗಳು, ಶ್ರೀ ಟೀಕಿನಮಠ - ತೆಂಗಿನಮಠ, ಬಾಗಲಕೋಟೆ.

ಚರಂತಿಮಠ: ಬಾಗಲಕೋಟೆ ನಗರದ ಮಧ್ಯ ಭಾಗದ ಹುಂಡೇಕಾರ ಗಲ್ಲಿಯಲ್ಲಿ ಸ್ಥಾಪನೆಯಾಗಿರುವ ಶ್ರೀ ಚರಂತಿ ಮಠವು ಪುರಾತನ ಕಾಲದ ವಿರಕ್ತ ಸಂಪ್ರದಾಯದ ಮಠವಾಗಿದೆ. ಈ ಮಠವು ಶ್ರೀ ಪ್ರಭು ಸ್ವಾಮಿಗಳಿಂದ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದ್ದು, ಬಾಗಲಕೋಟೆಯ ಧಾರ್ಮಿಕ ಚಟುವಟಿಕೆಗಳ ಕೇಂದ್ರ ಬಿಂದುವಾಗಿದೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ಪ್ರಭುಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಶಿವಮೂರ್ತಿಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಪ್ರಭುಸ್ವಾಮಿಗಳು

ಈ ರೀತಿ ಮಠದ ಪರಂಪರೆಯ ಕೆಲವು ಗುರುಗಳ ಹೆಸರುಗಳನ್ನು ಮಾತ್ರ ದಾಖಲಿಸಲಾಗಿದೆ. ಕರ್ತೃ ಗುರುಗಳ ಹಾಗೂ ಮಠದ ಸ್ಥಾಪನೆಯ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಶ್ರೀ ಶಿವಮೂರ್ತಿ ಸ್ವಾಮಿಗಳು ಪಂಡಿತರಾಗಿ ವೀರಶೈವ

ಧರ್ಮವನ್ನು ಸಮರ್ಥವಾಗಿ ಬೆಳೆಸಿ ಹೆಚ್ಚು ಪ್ರಖ್ಯಾತಗೊಂಡರು. ಇವರ ಕಾಲದಲ್ಲಿ ಮಠವು ಅಭಿವೃದ್ಧಿಗೊಂಡಿತು. ಇವರ ನಂತರ ಉತ್ತರಾಧಿಕಾರಿಗಳಿಲ್ಲದೆ ಮಠವು ಖಾಲಿ ಉಳಿದಿತ್ತು. ನಂತರ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಕೆ.ಬಿದರೆ ಗ್ರಾಮದ ಶ್ರೀ ಪ್ರಭುಸ್ವಾಮಿಗಳು ಶಿವಯೋಗ ಮಂದಿರದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಸಂದರ್ಭದಲ್ಲಿ, ಇವರ ವಿದ್ವತ್ತನ್ನು ಗಮನಿಸಿ ಈ ಪುರಾತನ ಮಠಕ್ಕೆ ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಲಾಯಿತು. ಶ್ರೀ ಪ್ರಭುಸ್ವಾಮಿಗಳು ಪುರಾತನ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡು ಮಠದ ಆಡಳಿತವನ್ನು ನಡೆಸತೊಡಗಿದರು. ಗುರುಗಳು ಶಿಥಿಲಗೊಂಡಿದ್ದ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಮಠದ ಆಸ್ತಿಯನ್ನು ಶಿಸ್ತು ಹಾಗೂ ಕಾನೂನುಬದ್ಧಗೊಳಿಸಿ, ಭಕ್ತರ ನೆರವಿನಿಂದ ಮಠವು ಶ್ರೀಮಂತ ಮಠವಾಗಿ ಬೆಳೆಯುವಂತೆ ಮಾಡಿದರು. ಗುರುಗಳ ಕರ್ತೃತ್ವ ಶಕ್ತಿಯಿಂದ ಈ ಮಠವು ಇಂದು ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ಹೆಚ್ಚು ಹೆಸರು ಮಾಡಿದೆ. ಮಠದ ವತಿಯಿಂದ ಕಲ್ಯಾಣ ಮಂಟಪವನ್ನು ನಿರ್ಮಿಸಿ, ಮಠಕ್ಕೆ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ.

ಗುರುಗಳ ಕ್ರಿಯಾತ್ಮಕ ಚಟುವಟಿಕೆಗಳು ಹಾಗೂ ಧಾರ್ಮಿಕ ಕ್ರಿಯಾಶೀಲತೆಗಳಿಂದಾಗಿ ಗಮನಿಸಿ, ನಿಪ್ಪಾಣಿ ತಾಲ್ಲೂಕಿನ ನಿಡಸೋಸಿ ಗ್ರಾಮದ 'ಶ್ರೀ ದುರುದುಂಡೇಶ್ವರ ಮಠ'ದ ಉತ್ತರಾಧಿಕಾರಿಗಳಾಗಿಯೂ ನೇಮಕಗೊಂಡು ೧೯೮೯ ರ ಜುಲೈ ಇಪ್ಪತ್ತರಂದು ನಿಡಸೋಸಿ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಅಂದಿನಿಂದ ಎರಡು ಮಠಗಳ ಆಡಳಿತವನ್ನೂ ನೋಡಿಕೊಂಡು, ಮಠವನ್ನು ಅಭಿವೃದ್ಧಿಪಡಿಸತೊಡಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯ ಪೂಜೆ, ಶಿವಾನುಭವ ಸಮಿತಿಯ ವತಿಯಿಂದ ಪ್ರತಿ ಹುಣ್ಣಿಮೆಯಲ್ಲಿ ಶಿವಾನುಭವಗೋಷ್ಠಿಯನ್ನು ನಡೆಸಲಾಗುತ್ತಿದೆ. ಗುರುಗಳು ವೈಜ್ಞಾನಿಕ ಚಿಂತಕರಾಗಿ, ಸಮಾಜದ ಅನಿಷ್ಟ ಪದ್ಧತಿಗಳು ಮತ್ತು ಭಕ್ತರ ಮೂಢನಂಬಿಕೆಗಳನ್ನು ದೂರಮಾಡಿ ವೀರಶೈವ ಧರ್ಮದ ವೈಜ್ಞಾನಿಕ ತತ್ತ್ವಗಳನ್ನು ಪ್ರಚುರಪಡಿಸುತ್ತಿದ್ದಾರೆ. ಗುರುಗಳು ತಮ್ಮ ಪ್ರಗತಿಪರ ಚಿಂತನೆಗಳಿಂದ ಇಂದು ಹೆಸರು ಮಾಡಿದ್ದಾರೆ. ಗುರುಗಳು ಸಂದರ್ಭಕ್ಕನುಸಾರ ಮಠಕ್ಕೆ ಆಗಮಿಸಿ, ಮಠದ ಆಡಳಿತ ಹಾಗೂ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಮಠದಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ಆಶ್ರಯ ಕಲ್ಪಿಸಿ ನಿತ್ಯ ಅನ್ನದಾಸೋಹವನ್ನು ನಡೆಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಪ್ರಭು ಸ್ವಾಮಿಗಳು, ಶ್ರೀ ಚರಂತಿ ಮಠ, ಹುಂಡೇಕಾರಗಲ್ಲಿ, ಬಾಗಲಕೋಟೆ.

ಕಸ್ತೂರಿಮಠ: ಬಾಗಲಕೋಟೆಯ ಗೃಹಮಂಡಳಿ ಬಡಾವಣೆಯಲ್ಲಿರುವ ಶ್ರೀ ಕಸ್ತೂರಿ ಮಠವು ಉಜ್ಜಯಿನಿ ಪೀಠದ ಶಾಖಾ ಮಠವಾಗಿ ನಲವತ್ತೈದು ವರ್ಷಗಳ ಹಿಂದೆ ಪ್ರಾರಂಭಗೊಂಡಿದೆ. ಯಾದವಾಡದ ಓಲೆ ಮಠದ ಶ್ರೀ ದೊಡ್ಡಯ್ಯ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿದ್ದರು. ಇವರು ಶಿವಾಪೂಜಾ ನಿಷ್ಠರಾಗಿ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಮಠವನ್ನು ಮುನ್ನಡೆಸಿದರು.

ಪರಂಪರೆ: ಶ್ರೀ ದೊಡ್ಡಯ್ಯ ಸ್ವಾಮಿಗಳ ತರುವಾಯ ಶ್ರೀ ಕರಿಬಸವ ಶಿವಯೋಗಿ ಸ್ವಾಮಿಗಳು ಮಠದ ಉತ್ತರಾಧಿಕಾರಿಗಳಾಗಿ ೧೯೬೨ ರಲ್ಲಿ ನೇಮಕಗೊಂಡರು. ಗುರುಗಳು ಶ್ರೀ ಗುಂಡಯ್ಯ ಮತ್ತು ಶ್ರೀಮತಿ ನಾಗಮ್ಮನವರ ಪುತ್ರರಾಗಿ ೧೯೫೦ ರಲ್ಲಿ ಜನಿಸಿದರು. ಬಾಗಲಕೋಟೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಮುಗಿಸಿ, ಸಂಸ್ಕೃತ ಮತ್ತು ವೇದಾಧ್ಯಯನ ಮಾಡಿದರು. ವಿದ್ಯಾಭ್ಯಾಸವನ್ನು ಮುಗಿಸಿ ಕೊಂಡು ಬಂದ ಗುರುಗಳು ಗುಳೇದಗುಡ್ಡ ಮರಡಿ ಮಠದ ಶ್ರೀ ಕಾಡಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳಿಂದ ಅನುಗ್ರಹ ಪಡೆದು, ೧೯೮೨ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಗುರುಗಳು ಪಟ್ಟಾಧಿಕಾರವನ್ನು ವಹಿಸಿಕೊಂಡ ಮೇಲೆ ಮಠಕ್ಕೆ ನೂತನ ಕಟ್ಟಡವನ್ನು ಕಟ್ಟಿಸಿದರು. ಗದ್ದನಕೇರಿ, ಮುಧೋಳಿನಲ್ಲಿ ಶಾಖಾ ಮಠಗಳನ್ನು ಪ್ರಾರಂಭಿಸಿದರು. ಗುರುಗಳು ಅನುಷ್ಠಾನ ಮೂರ್ತಿಗಳಾಗಿ ಧರ್ಮವನ್ನು ಬೆಳಸಿದರು.

ಧಾರ್ಮಿಕ ಕಾರ್ಯಗಳು: ಇತ್ತೀಚಿನ ಕಾಲಮಾನದಲ್ಲಿ ಸ್ಥಾಪನೆಗೊಂಡ ಈ ಮಠವು ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಮಠದ ಪರಂಪರೆಯಂತೆ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಧರ್ಮ ಪ್ರಚಾರವನ್ನು ಕೈಗೊಂಡಿದೆ. ಮಠದಲ್ಲಿ

ಕರ್ತೃ ಗದ್ದುಗೆಗೆ ನಿತ್ಯ ರುದ್ರಾಭಿಷೇಕ, ಧನುರ್ಮಾಸದಲ್ಲಿ ಅನುಷ್ಠಾನ, ಪಂಚಾಚಾರ್ಯರ ಜಯಂತ್ಯೋತ್ಸವ, ಅಕ್ಷಯ ತೃತೀಯ ದಲ್ಲಿ ಪಿಕೋರಾಮ ಜಯಂತಿ ಉತ್ಸವ, ದಸರಾದಲ್ಲಿ ವಿಶೇಷ ಪೂಜೆ, ಶ್ರಾವಣದಲ್ಲಿ ಪುರಾಣ, ಪ್ರವಚನವನ್ನು ನಡೆಸಲಾಗುತ್ತಿದೆ. ಮಠದಲ್ಲಿ ನಿತ್ಯ ಅನ್ನದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಮಠದ ಶಾಖಾ ಮಠವಾಗಿರುವ ಗದ್ದನಕೆರೆಯಲ್ಲಿ ವೃದ್ಧಾಶ್ರಮ ಹಾಗೂ ಧ್ಯಾನಮಂದಿರವನ್ನು ನಿರ್ಮಿಸಲಾಗಿದೆ. ಗುರುಗಳು ಶಿವಪೂಜಾ ನಿಷ್ಠರಾಗಿ ಧಾರ್ಮಿಕ ವಿಚಾರಗಳನ್ನು ವಾಸ್ತವತೆಯ ನೆಲೆಗಟ್ಟಿನ ಮೇಲೆ ಪ್ರಚುರಪಡಿಸಿ, ಮಠವನ್ನು ಮುನ್ನಡೆಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಕರಿಬಸವ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕಸ್ತೂರಿ ಮಠ, ಗೃಹಮಂಡಳಿ ಬಡಾವಣೆ, ಬಾಗಲಕೋಟೆ.

ಬಿಲ್ವಕೆರೂರು

ಬಾಗಲಕೋಟೆ ತಾಲ್ಲೂಕಿನ ಬಿಲ್ವಕೆರೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಇಪ್ಪತ್ತೇಳು ಕಿ.ಮೀ ದೂರದಲ್ಲಿದೆ. ಈ ಗ್ರಾಮವು ಹಿಂದೆ ಬಿಲ್ವವೃಕ್ಷಗಳ ವನದಿಂದ ಆವೃತಗೊಂಡಿದ್ದರಿಂದ 'ಬಿಲ್ವಕೆರೂರು'ಎಂಬ ಹೆಸರು ಬಂದಿದೆ. ಇಲ್ಲಿ ಶ್ರೀ ಬಿಲ್ವಾಶ್ರಮ ಹಿರೇಮಠವು ಅಸ್ತಿತ್ವದಲ್ಲಿದೆ.

ಬಿಲ್ವಾಶ್ರಮ ಹಿರೇಮಠ: ಬಿಲ್ವಕೆರೂರು ಗ್ರಾಮದಲ್ಲಿ ಉಜ್ಜಯಿನಿ ಪೀಠದ ಶಾಖಾಮಠವಾಗಿ, ಪುತ್ರವರ್ಗದ ಪರಂಪರೆಯ ಬಿಲ್ವಾಶ್ರಮ ಹಿರೇಮಠವು ಸ್ಥಾಪನೆಯಾಗಿ ಈ ಗ್ರಾಮದ ಧಾರ್ಮಿಕ ಚಟುವಟಿಕೆಗಳ ಕೇಂದ್ರ ಬಿಂದುವಾಗಿ ಬೆಳೆದಿದೆ. ಸುಮಾರು ಆರುನೂರು ವರ್ಷಗಳ ಹಿಂದೆ ಶ್ರೀ ಕರವೀರೇಶ್ವರ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟ ಈ ಮಠ ಈತನಕವೂ ಬೆಳೆದು ಬಂದು, ತನ್ನ ಧಾರ್ಮಿಕ ಆಚರಣೆಗಳನ್ನು ಮುನ್ನಡೆಸಿಕೊಂಡು ಬರುತ್ತಿದೆ.

ಪರಂಪರೆ:
೧. ಷ.ಬ್ರ.ಶ್ರೀ ಕರವೀರೇಶ್ವರ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ಶಾಂತವೀರಲಿಂಗ ಶಿವಾಚಾರ್ಯ ಸ್ವಾಮಿಗಳು
೩. ಷ.ಬ್ರ.ಶ್ರೀ ವೀರಬಸವ ಶಿವಾಚಾರ್ಯ ಸ್ವಾಮಿಗಳು
೪. ಷ.ಬ್ರ.ಶ್ರೀ ಎರಡನೆಯ ಕರವೀರೇಶ್ವರ ಶಿವಾಚಾರ್ಯ ಸ್ವಾಮಿಗಳು
೫. ಷ.ಬ್ರ.ಶ್ರೀ ಮೂರನೆಯ ಕರವೀರೇಶ್ವರ ಶಿವಾಚಾರ್ಯ ಸ್ವಾಮಿಗಳು
೬. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು
೭. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆಯಲ್ಲಿ ಕೆಲವು ಗುರುಗಳ ಹೆಸರನ್ನು ದಾಖಲಿಸಲಾಗಿದೆ. ಮಠದ ಪರಂಪರೆಯಲ್ಲಿ ಒಂಬತ್ತು ಜನ ಗುರುಗಳು ಅಧಿಕಾರವನ್ನು ನಡೆಸಿದ್ದಾರೆಂದು ಹೇಳಲಾದರೂ,ಆಧಾರಗಳ ಕೊರತೆಯಿಂದ ಉಳಿದ ಇಬ್ಬರು ಗುರುಗಳ ಹೆಸರು ಗಳನ್ನು ದಾಖಲಿಸಲಾಗುತ್ತಿಲ್ಲ. ಗುರುಗಳೆಲ್ಲರೂ ಶಿವಪೂಜಾ ನಿಷ್ಠರಾಗಿ ಧರ್ಮವನ್ನು ಪ್ರಚಾರಗೊಳಿಸಿ ಮಠವನ್ನು ಬೆಳೆಸಿದ್ದಾರೆ.

ಇಂದಿನ ಗುರುಗಳಾದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಹನ್ನೆರಡು ವರ್ಷಗಳ ಕಾಲ ಮೌನ ತಪಸ್ಸನ್ನು ಆಚರಿಸಿ ಸಿದ್ಧಿಯನ್ನು ಸಂಪಾದಿಸಿಕೊಂಡಿದ್ದರು. ಇಂತಹ ಮಹಾಮಹಿಮರು ೧೯೮೭ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ತರುವಾಯ ಅಧಿಕಾರಕ್ಕೆ ಬಂದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ೧೯೯೯ರ ಜನವರಿ ಇಪ್ಪತ್ನಾಲ್ಕರಂದು ಪಟ್ಟಾಧಿಕಾರ ವಹಿಸಿಕೊಂಡಿದ್ದಾರೆ. ಗುರುಗಳು ಶ್ರೀ ಕರಿವೀರಯ್ಯ ಮತ್ತು ಶ್ರೀಮತಿ ಶಾಂತಮ್ಮನವರ ಪುತ್ರರಾಗಿ ೧೯೬೫ ರ ಜೂನ್ ಒಂದರಂದು ಜನಿಸಿದರು. ಇವರು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಮುಗಿಸಿ ಹೊನ್ನಾಳಿ, ಸೋಲಾಪುರ ಮತ್ತು ಕಾಶಿಯಲ್ಲಿ ವಿದ್ಯಾಭ್ಯಾಸವನ್ನು ಮಾಡಿ ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಗುರುಗಳು ಬಾಲ್ಯದಲ್ಲಿಯೇ ಆಧ್ಯಾತ್ಮವನ್ನು ಮೈಗೂಡಿಸಿಕೊಂಡಿದ್ದರು.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯಲ್ಲಿ ಬಂದಂತಹ ಗುರುಗಳ ಗದ್ದುಗೆಗಳು ಬಿಲ್ವಕೆರೂರಿನಲ್ಲಿ ಎರಡು,

ತಿಮ್ಮಾಪುರ ಶಾಖಾ ಮಠದಲ್ಲಿ ಒಂದು, ನಾಯನೇಗಲಿ ಶಾಖಾ ಮಠದಲ್ಲಿ ಮತ್ತೊಂದು, ಬೆಣ್ಣೂರು ಶಾಖಾ ಮಠದಲ್ಲಿ ಒಂದು ಈ ರೀತಿ ಒಟ್ಟು ಆರು ಗದ್ದುಗೆಗಳು ಸ್ಥಾಪನೆಯಾಗಿವೆ. ಉಳಿದ ಮೂರು ಜನ ಗುರುಗಳು ಲೋಕ ಸಂಚಾರಕ್ಕೆ ಹೋದ ಸಂದರ್ಭದಲ್ಲಿ ಲಿಂಗೈಕ್ಯರಾಗಿದ್ದು ಅವರ ಗದ್ದುಗೆಗಳು ಎಲ್ಲಿ ನಿರ್ಮಾಣಗೊಂಡಿವೆ ಎಂದು ತಿಳಿಯದಾಗಿದೆ. ಶಾಖಾ ಮಠಗಳಲ್ಲಿರುವ ಗದ್ದುಗೆಗಳಿಗೆ ನಿತ್ಯ ಪೂಜೆಯನ್ನು ಮಾಡಲಾಗುತ್ತಿದೆ. ಅಮಾವಾಸ್ಯೆ, ಹುಣ್ಣಿಮೆಗಳಲ್ಲಿ ವಿಶೇಷ ಪೂಜೆ ಮತ್ತು ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಿಸಲಾಗುತ್ತಿದೆ. ಕಾರುಹುಣ್ಣಿಮೆಯ ಹಿಂದಿನ ದಿನ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆ, ಬಸವಜಯಂತಿಯನ್ನು ಆಚರಿಸಲಾಗುತ್ತಿದೆ. ಶಾಖಾ ಮಠಗಳಲ್ಲಿ ಶ್ರಾವಣ ಮಾಸದಲ್ಲಿ ರುದ್ರೇಶ್ವರ ವಿಜಯ ಪುರಾಣವನ್ನು ವಾಚಿಸಲಾಗುತ್ತಿದೆ.

ಮಠದ ವತಿಯಿಂದ'ಶ್ರೀ ರುದ್ರೇಶ್ವರ ವಿಜಯ' ಎಂಬ ಪುರಾಣ ಪುಸ್ತಕವನ್ನು ಪ್ರಕಟಿಸಲಾಗಿದೆ. ಬೇವೂರಿನಲ್ಲಿ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳ ಹೆಸರಿನಲ್ಲಿ ವಿದ್ಯಾರ್ಥಿ ನಿಲಯವನ್ನು ನಡೆಸಲಾಗುತ್ತಿದೆ. ನಾಯನೇಗಲಿ ಗ್ರಾಮದಲ್ಲಿ ಶ್ರೀ ವೀರಬಸವೇಶ್ವರ ಉಚಿತ ಪ್ರಸಾದ ನಿಲಯವನ್ನು ಪ್ರಾರಂಭಿಸಲಾಗಿದೆ.
ಆಚಾರ್ಯರ ಮತ್ತು ಶರಣರ ತತ್ತ್ವಗಳನ್ನು ಸಮಾನವಾಗಿ ಗೌರವಿಸಿ, ಸಮಾನವಾಗಿ ಪ್ರಚಾರಪಡಿಸುತ್ತಾ ಸಮನ್ವಯತೆಯನ್ನು ಸಾಧಿಸಿಕೊಂಡು ವೀರಶೈವ ಧರ್ಮವನ್ನು ಬೆಳೆಸುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಬಿಲ್ವಾಶ್ರಮ ಹಿರೇಮಠ, ಬಿಲ್ವಕೆರೂರು, ಬಾಗಲಕೋಟೆ ತಾಲ್ಲೂಕು.

ಬೇವೂರು

ಬಾಗಲಕೋಟೆ ತಾಲ್ಲೂಕಿನ ಬೇವೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಇಪ್ಪತ್ತೂರು ಕಿ.ಮೀ ದೂರದಲ್ಲಿದೆ. ಇಲ್ಲಿ ಬೇವೂರು ಗ್ರಾಮದಲ್ಲಿ ಶ್ರೀ ಗೌರಿಶಂಕರ (ಬಿಲ್ವಾಶ್ರಮ) ಮಠ ಹಾಗೂ ಕಮ್ಮತ್ತಿಗೆ ಶಾಖಾಮಠವಾದ ಶ್ರೀ ಹುಚ್ಚೇಶ್ವರ ಮಠವು ಅಸ್ತಿತ್ವದಲ್ಲಿವೆ.

ಗೌರಿಶಂಕರ (ಬಿಲ್ವಾಶ್ರಮ) ಮಠ: ಬೇವೂರು ಗ್ರಾಮದಲ್ಲಿ ಶ್ರೀ ಗೌರಿಶಂಕರ ಬಿಲ್ವಾಶ್ರಮ ಮಠವು ಸ್ಥಾಪನೆಯಾಗಿದೆ. ಈ ಮಠದ ಸ್ಥಾಪಕರು ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು. ಗುರುಗಳು ಹಿರೇಮುಗಳಗಾವಿಯ ಶ್ರೀ ಸಂಗಮೇಶ್ವರ ಮತ್ತು ಶ್ರೀಮತಿ ರುದ್ರಮ್ಮನವರ ಪುತ್ರರಾಗಿ ೧೯೪೫ ರಲ್ಲಿ ಜನಿಸಿ, ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡಿ ಕಿರಸೂರು ಮಠದ ಶ್ರೀ ಗೌರಿಶಂಕರ ಶಿವಾಚಾರ್ಯ ಸ್ವಾಮಿಗಳಿಂದ ಆಶೀರ್ವಾದ ಪಡೆದು ಈ ಗ್ರಾಮಕ್ಕೆ ಬಂದು ನೆಲೆಸಿದ್ದಾರೆ.

ಮಠ ಸ್ಥಾಪನೆ: ಗುರುಗಳು ತಪೋನಿಷ್ಠರಾಗಿ ದೇಶದಲ್ಲೆಲ್ಲಾ ಸಂಚರಿಸಿ ಹಿಮಾಲಯದಲ್ಲಿ ಮೂರು ತಿಂಗಳು ಅನುಷ್ಠಾನ ಕೈಗೊಂಡು, ಈ ಗ್ರಾಮಕ್ಕೆ ಆಗಮಿಸಿದಾಗ ಗ್ರಾಮದ ಶ್ರೀ ವೆಂಕಣ್ಣಮಾನಪ್ಪ ದೇಸಾಯಿಯವರು ಹನ್ನೊಂದು ಗುಂಟೆ ಜಾಗವನ್ನು ದಾನವಾಗಿ ಕೊಟ್ಟು ಮಠವನ್ನು ನಿರ್ಮಿಸಲು ಅವಕಾಶ ಕಲ್ಪಿಸಿಕೊಟ್ಟರು. ಈ ಜಾಗದಲ್ಲಿ ಒಂದು ಕುಟೀರವನ್ನು ನಿರ್ಮಿಸಿಕೊಂಡಿರುವ ಗುರುಗಳು, ಪ್ರತಿನಿತ್ಯ ಸಂಜೆವೇಳೆ ಪುರಾಣ ಪ್ರವಚನವನ್ನು ನಡೆಸುತ್ತಿದ್ದಾರೆ. ಶ್ರೀ ಗೌರಿಶಂಕರ ಸ್ವಾಮಿಗಳ ಗದ್ದುಗೆಯನ್ನು ಸ್ಥಾಪಿಸಿ ನಿತ್ಯಪೂಜೆ, ಮಹಾನವಮಿಯಲ್ಲಿ ಒಂಬತ್ತು ದಿನ ನಂದಾದೀಪ ಹಾಗೂ ದೇವಿ ಪಾರಾಯಣವನ್ನು ನಡೆಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು, ಶ್ರೀ ಗೌರಿಶಂಕರ(ಬಿಲ್ವಾಶ್ರಮ)ಮಠ,ಬೇವೂರು, ಬಾಗಲಕೋಟೆತಾ.

ಹುಚ್ಚೇಶ್ವರಮಠ: ಬೇವೂರಿನ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಹುಚ್ಚೇಶ್ವರ ಸಂಸ್ಥಾನ ಮಠವು ವಿರಕ್ತ ಸಂಪ್ರದಾಯದ ಮಠವಾ ಗಿದೆ. ಕಮತಗಿಯ ಶಾಖಾಮಠವಾದ ಈ ಮಠವನ್ನು ಶ್ರೀ ಹುಚ್ಚೇಶ್ವರ ಸ್ವಾಮಿಗಳು (ಹದಿನೈದನೆಯ ಶತಮಾನ) ಸ್ಥಾಪಿಸಿದ್ದಾರೆ. ಇವರು ಲೋಕಸಂಚಾರದಲ್ಲಿದ್ದ ಸಂದರ್ಭದಲ್ಲಿ ಇಲ್ಲಿ ನೆಲೆಸಿ ಅನುಷ್ಠಾನ ಕೈಗೊಂಡು ಜಾಗೃತ ಸ್ಥಳವನ್ನಾಗಿ ಮಾಡಿದ್ದಾರೆ. ಕಮತಗಿ ಮಠದ ಶಾಖಾ ಮಠಗಳಲ್ಲಿ ಅತ್ಯಂತ ಪ್ರಬಲ ಮಠವಾಗಿ ಬೆಳೆದಿರುವ ಈ ಮಠದಲ್ಲಿ ಸುಸಜ್ಜಿತವಾದ ಕಟ್ಟಡವನ್ನು ನಿರ್ಮಿಸಿ, ಶ್ರೀ ಹುಚ್ಚೇಶ್ವರ ಸ್ವಾಮಿಗಳ ತೋರು ಗದ್ದುಗೆಯನ್ನು ಸ್ಥಾಪಿಸಲಾಗಿದೆ. ಮಠದಲ್ಲಿ

ನಿತ್ಯ ಧಾರ್ಮಿಕ ಕಾರ್ಯಗಳನ್ನೂ, ಶ್ರಾವಣಮಾಸದಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದ್ದು, ಮೂಲ ಕಮತಗಿ ಮಠದ ಗುರುಗಳು ಸಂದರ್ಭಕ್ಕನುಸಾರ ಇಲ್ಲಿಗೆ ಆಗಮಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುತ್ತಿದ್ದಾರೆ.

ವಿಳಾಸ: ಶ್ರೀ ಹುಚ್ಚೇಶ್ವರ ಸ್ವಾಮಿಗಳು, ಶ್ರೀ ಹುಚ್ಚೇಶ್ವರಮಠ, ಜೇವೂರು, ಬಾಗಲಕೋಟೆ ತಾಲ್ಲೂಕು.

ಭಗವತಿ

ಬಾಗಲಕೋಟೆ ತಾಲ್ಲೂಕಿನ ಭಗವತಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹದಿನೆಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಶಿವಶಕ್ತಿ ಮಠವು ಅಸ್ತಿತ್ವದಲ್ಲಿದೆ.

ಶಿವಶಕ್ತಿಮಠ: ಭಗವತಿ ಗ್ರಾಮದಲ್ಲಿ ಇತ್ತೀಚಿನ ಕಾಲಮಾನದಲ್ಲಿ ಸ್ಥಾಪನೆಯಾದ **ಶ್ರೀ ಶಿವಶಕ್ತಿ** ಮಠವು, ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಹೆಸರು ಪಡೆದಿದೆ. ಬಿಜಾಪುರದ ಜ್ಞಾನಯೋಗಾಶ್ರಮದಲ್ಲಿ ಅನುಷ್ಠಾನಗೊಂಡು ಶ್ರೀ ಸಿದ್ಧೇಶ್ವರ ಸ್ವಾಮಿಗಳ ಮಾರ್ಗದರ್ಶನದಲ್ಲಿ ಬೆಳೆದು, ಆಧ್ಯಾತ್ಮ ಚಿಂತನೆಯನ್ನು ಮೈಗೂಡಿಸಿಕೊಂಡಿರುವ ಶ್ರೀ ಜಗದೀಶ್ವರ ಸ್ವಾಮಿಗಳು ವೀರಶೈವ ಧರ್ಮದ ಪ್ರಚಾರಕ್ಕಾಗಿ ಭಗವತಿಯಲ್ಲಿ ಮಠವನ್ನು ಸ್ಥಾಪಿಸಿದ್ದಾರೆ.

ವಿಳಾಸ: ಶ್ರೀ ಜಗದೀಶ್ವರ ಸ್ವಾಮಿಗಳು, ಶ್ರೀ ಶಿವಶಕ್ತಿ ಮಠ, ಭಗವತಿ, ಬಾಗಲಕೋಟೆ ತಾಲ್ಲೂಕು.

ಮಲ್ಲಾಪುರ

ಬಾಗಲಕೋಟೆ ತಾಲ್ಲೂಕಿನ ಮಲ್ಲಾಪುರ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಮೂರು ಕಿ.ಮೀ ದೂರದಲ್ಲಿದೆ. ಶ್ರೀ ದುರುದುಂಡೇಶ್ವರ ಮಠವು ಅಸ್ತಿತ್ವದಲ್ಲಿದೆ.

ದುರುದುಂಡೇಶ್ವರಮಠ: ಮಲ್ಲಾಪುರ ಗ್ರಾಮದ ಪೂರ್ವದ ಹೊರಭಾಗದಲ್ಲಿ ಮುನ್ನೂರು ವರ್ಷಗಳ ಹಿಂದೆ ಶ್ರೀ ದುರು ದುಂಡೇಶ್ವರರಿಂದ ಸ್ಥಾಪನೆಗೊಂಡ ವಿರಕ್ತಮಠವು ಅಸ್ತಿತ್ವದಲ್ಲಿದೆ. ಮುರುಘಾ ಸಮಯದ ಈ ಮಠವು ಶರಣರ ತತ್ತ್ವಗಳನ್ನು ಪ್ರಚಾರಮಾಡಿ, ವೀರಶೈವ ಧರ್ಮವನ್ನು ಬೆಳೆಸುವ ನಿಟ್ಟಿನಲ್ಲಿ ನಡೆದಿದೆ.

ಮಠ ಸ್ಥಾಪನೆ: ಶ್ರೀ ದುರುದುಂಡೇಶ್ವರರು ಲೋಕಸಂಚಾರದಲ್ಲಿದ್ದಾಗ ಈ ಸ್ಥಳದಲ್ಲಿ ಅನುಷ್ಠಾನ ಕೈಗೊಂಡು ಈ ಮಠವನ್ನು ಸ್ಥಾಪಿಸಿದ್ದರು. ಮಠದಲ್ಲಿ ಧಾರ್ಮಿಕ ಆಚರಣೆಗಳು ನಡೆಯತೊಡಗಿ ಧಾರ್ಮಿಕ ಭಾವನೆಗಳು ಬೆಳೆಯುವಂತೆ ಮಾಡಿ ಸಮಾಜದಲ್ಲಿ ಶಾಂತಿ ನೆಲೆಸುವಂತಾಗಿತ್ತು. ನಂತರ ಈ ಮಠಕ್ಕೆ ಉತ್ತರಾಧಿಕಾರಿಗಳು ಯಾರೂ ಇಲ್ಲದಿದ್ದರೂ ಧಾರ್ಮಿಕ ಚಟುವಟಿಕೆಗಳು ನಿಲ್ಲದೆ ನಡೆಯುತ್ತಾ ಬಂದಿದ್ದವು. ಈ ಸ್ಥಳದ ಮಹಿಮೆಯನ್ನು ಅರಿತ ನಾಡಿನ ಅನೇಕ ಶರಣರು, ಶಿವಯೋಗಿ ಗಳು ಈ ಕ್ಷೇತ್ರಕ್ಕೆ ಬಂದು ಅನುಷ್ಠಾನ ಕೈಗೊಂಡು, ಸಾಧನೆಯ ಸಿದ್ಧಿಯನ್ನು ಪಡೆಯುತ್ತಿದ್ದರು. ಇವರಲ್ಲಿ ಶ್ರೀ ಮುರುಗೋಡು ಮಹಾಂತ ಸ್ವಾಮಿಗಳು ಇಲ್ಲಿ ಅನೇಕ ವರ್ಷಗಳ ಕಾಲ ನೆಲೆಸಿ, ಅನುಷ್ಠಾನಗೊಂಡು ಹೋಗಿದ್ದಾರೆ. ಇಂತಹ ಪವಿತ್ರ ಸ್ಥಳದಲ್ಲಿ ಶ್ರೀ ಚಂದ್ರಶೇಖರ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸತೊಡಗಿದ್ದಾರೆ.

ಶ್ರೀ ಚಂದ್ರಶೇಖರ ಸ್ವಾಮಿಗಳು ಹುನುಗುಂದ ತಾಲ್ಲೂಕಿನ ದಾಸನಾಳ ಗ್ರಾಮದ ಶ್ರೀ ನಾಗಯ್ಯ ಮತ್ತು ಶ್ರೀಮತಿ ಚನ್ನಮ್ಮನವರ ಪುತ್ರರಾಗಿ ಜನಿಸಿ ೧೯೫೮ ರಲ್ಲಿ ಮಠಕ್ಕೆ ಆಗಮಿಸಿದರು. ಗುರುಗಳು ಮಠವನ್ನು ಸುವ್ಯವಸ್ಥೆಗೆ ತಂದು ಅಭಿವೃದ್ಧಿಗೊಳಿಸಿದರು. ಶ್ರೀ ದುರುದುಂಡೇಶ್ವರರ ತೋರುಗದ್ದುಗೆಯನ್ನು ನವೀಕರಣಗೊಳಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸತೊಡಗಿ ದರು. ೧೯೭೪ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡು ಮಠದ ಪರಂಪರೆಯ ಗುರುಗಳಾಗಿ ನೇಮಕಗೊಂಡರು.

ಧಾರ್ಮಿಕ ಕಾರ್ಯಗಳು: ಮಠದಲ್ಲಿ ಶ್ರೀ ದುರುದುಂಡೇಶ್ವರರ ಗದ್ದುಗೆಗೆ ನಿತ್ಯಪೂಜೆ ಹಾಗೂ ವರ್ಷಕ್ಕೊಮ್ಮೆ ಕರ್ತೃ ಗುರುಗಳ ಆರಾಧನೆಯನ್ನು ಆಚರಿಸಲಾಗುತ್ತಿದೆ. ಪ್ರತಿ ತಿಂಗಳು ಮೂರನೆಯ ತಾರೀಖು ಶಿವಾನುಭವ ಗೋಷ್ಠಿಯನ್ನು ನಡೆಸಿ ಶರಣ ತತ್ತ್ವವನ್ನು ಪ್ರಚಾರ ಪಡಿಸಲಾಗುತ್ತಿದೆ. ಗುರುಗಳು ಮಹಾಂತ ಜೋಳಿಗೆಯನ್ನು ಹಾಕಿಕೊಂಡು ಹಳ್ಳಿ ಹಳ್ಳಿಗಳಲ್ಲಿ

ಸಂಚರಿಸಿ ದುಶ್ಚಟಗಳ ನಿರ್ಮೂಲನೆಗೆ ಶ್ರಮವಹಿಸುತ್ತಿದ್ದಾರೆ. ತಿಂಗಳಲ್ಲಿ ಹದಿನೈದು ದಿನ ಮನೆ ಮನೆಗಳಲ್ಲಿ ಮಹಾಮನೆ ಕಾರ್ಯಕ್ರಮವನ್ನು ಹಮ್ಮಿಕೊಂಡು, ಕಳೆದ ೧೯೯೯ ರಿಂದ ಸತತವಾಗಿ ನಡೆಸಿಕೊಂಡು ಬರಲಾಗುತ್ತಿದೆ.

ಶೈಕ್ಷಣಿಕ ಸೇವೆ: ಆದಿ ದುರುದುಂಡೇಶ್ವರ ಶಿಕ್ಷಣ ಸಂಸ್ಥೆಯನ್ನು (೨೦೦೦) ಪ್ರಾರಂಭಿಸಿ ಇದರಡಿ ಬಾದಾಮಿ ತಾಲ್ಲೂಕಿನ ತಿಮ್ಮಸಾಗರದಲ್ಲಿ ಪ್ರೌಢಶಾಲೆ, ಶಿಕ್ಷಕರ ತರಬೇತಿ ಕೇಂದ್ರ, ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗಿದೆ. ಶ್ರೀ ಚಂದ್ರಶೇಖರ ಸ್ವಾಮಿಗಳು ಧಾರ್ಮಿಕ,ಸಾಮಾಜಿಕವಾಗಿ ಮಠವನ್ನು ಅಭಿವೃದ್ಧಿಪಡಿಸತೊಡಗಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಚಂದ್ರಶೇಖರ ಸ್ವಾಮಿಗಳು, ಶ್ರೀ ದುರುದುಂಡೇಶ್ವರ ಮಠ, ಮಲ್ಲಾಪುರ, ಬಾಗಲಕೋಟೆ ತಾಲ್ಲೂಕು.

ಮುತ್ತತ್ತಿ

ಬಾಗಲಕೋಟೆ ತಾಲ್ಲೂಕಿನ ಮುತ್ತತ್ತಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಶಿವಯೋಗೀಶ್ವರ ಮಠವು ಅಸ್ತಿತ್ವದಲ್ಲಿದೆ.

ಶಿವಯೋಗೀಶ್ವರಮಠ: ಮುತ್ತತ್ತಿ ಗ್ರಾಮದಲ್ಲಿ ಶ್ರೀಶೈಲ ಪೀಠದ ಶಾಖಾಮಠವಾದ ಶ್ರೀ ಶಿವಯೋಗೀಶ್ವರ ಮಠವು ಸ್ಥಾಪನೆಯಾಗಿದೆ. ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿರುವ ಈ ಮಠವು ಇಲ್ಲಿನ ಧಾರ್ಮಿಕ ಚಟುವಟಿಕೆಗಳ ಕೇಂದ್ರ ಬಿಂದುವಾಗಿ ಬೆಳೆದಿದೆ. ಶ್ರೀ ಶಿವಯೋಗೀಶ್ವರ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿದ್ದರಿಂದ 'ಶ್ರೀ ಶಿವಯೋಗೀಶ್ವರಮಠ' ಎಂಬ ಹೆಸರು ಬಂದಿದೆ.

ಪರಂಪರೆ:

೧. ಷ.ಬ್ರ.ಶ್ರೀ ಶಿವಯೋಗೀಶ್ವರ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು
೩. ಷ.ಬ್ರ.ಶ್ರೀ ಬಸವಯ್ಯ ಶಿವಾಚಾರ್ಯ ಸ್ವಾಮಿಗಳು
೪. ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು
೫. ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆಯನ್ನು ಗುರುತಿಸಬಹುದಾಗಿದೆ. ಕರ್ತೃಗುರುಗಳಾದ ಶ್ರೀ ಶಿವಯೋಗೀಶ್ವರ ಸ್ವಾಮಿಗಳು ಮಠವನ್ನು ಸ್ಥಾಪಿಸಿ ಪರಂಪರೆಯನ್ನು ಬೆಳೆಸಿದರು. ಇವರ ನಂತರ ಅನೇಕ ಗುರುಗಳು ಅಧಿಕಾರ ನಡೆಸಿರುವರೆಂದು ಹೇಳಲಾದರೂ ಈ ಬಗ್ಗೆ ಸ್ಪಷ್ಟ ಆಧಾರಗಳು ಲಭ್ಯವಿಲ್ಲ. ನಂತರ ಬಂದಂತಹ ಗುರುಗಳು ಮಠವನ್ನು ಬೆಳಸಿದ್ದಾರೆ. ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ೧೯೯೨ ರಲ್ಲಿ ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು ಮಠದ ಆಡಳಿತವನ್ನು ವಹಿಸಿಕೊಂಡಿದ್ದಾರೆ. ಗುರುಗಳು ಕಾಯಕಯೋಗಿಗಳಾಗಿ ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ಇವರು ತಮ್ಮ ಕ್ರಿಯಾಶೀಲ ಗುಣಗಳಿಂದ ಆಚಾರ್ಯರ ತತ್ತ್ವಗಳನ್ನು ನಾಡಿಗೆ ಪ್ರಚುರಪಡಿಸಿ ವೀರಶೈವ ಧರ್ಮ ಬೆಳೆಯುವಂತೆ ಮಾಡಿದ್ದಾರೆ. ಮಠವು ಕೃಷ್ಣಾ ನದಿಗೆ ಅಡ್ಡಲಾಗಿ ಕಟ್ಟಲಾದ ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆಯಾಗಿದ್ದು, ಈಗ ಆಲಮಟ್ಟಿ ಸಮೀಪದ ಪುನರ್ ವಸತಿ ಸ್ಥಳದಲ್ಲಿ ಮಠವನ್ನು ಪುನರ್ ಸ್ಥಾಪಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸತೊಡಗಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಮುತ್ತತ್ತಿ, ಬಾಗಲಕೋಟೆ ತಾಲ್ಲೂಕು.

ಶಿರೂರು

ಬಾಗಲಕೋಟೆ ತಾಲ್ಲೂಕಿನ ಶಿರೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿಮೂರು ಕಿ.ಮೀ ದೂರದಲ್ಲಿದೆ. ಇಲ್ಲಿ ಸಿದ್ಧೇಶ್ವರ ಮಠ (ಶ್ರೀ ಶಿವಯೋಗಾಶ್ರಮ) ಅಸ್ತಿತ್ವದಲ್ಲಿದೆ.

ಸಿದ್ಧೇಶ್ವರ ಮಠ (ಶ್ರೀ ಶಿವಯೋಗಾಶ್ರಮ): ಶಿರೂರು ಗ್ರಾಮದ ಶ್ರೀ ಸಿದ್ಧೇಶ್ವರ ದೇವರು ಇಲ್ಲಿನ ಅಧಿದೈವ. ಈ ದೇವಸ್ಥಾನದ ಪಕ್ಕದಲ್ಲಿ ಶ್ರೀ ಸಿದ್ಧಲಿಂಗ ಸ್ವಾಮಿಗಳಿಗಾಗಿ ಗ್ರಾಮದ ಭಕ್ತರು ಮಠವನ್ನು ನಿರ್ಮಿಸಿಕೊಟ್ಟಿದ್ದಾರೆ. (೧೯೪೦)

ಅಂದು ಸ್ಥಾಪಿಸಿದ ಮಠವು ಇಂದು ಬೆಳಗಾಂ ಜಿಲ್ಲೆಯ ಇನಾಂಹೊಂಗಲದ ಶಾಖಾ ಮಠವಾಗಿ ಬೆಳೆದಿದೆ.

ಮಠ ಸ್ಥಾಪನೆ: ಈ ಮಠದ ಕರ್ತೃಗುರುಗಳಾದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಸವದತ್ತಿ ತಾಲ್ಲೂಕಿನ ಏಡಹಳ್ಳಿಯಲ್ಲಿ ೧೯೦೮ ರ ಫೆಬ್ರವರಿ ಇಪ್ಪತ್ತೊಂದರಂದು ಶ್ರೀ ಚನ್ನಬಸವಯ್ಯ ಮತ್ತು ಶ್ರೀಮತಿ ಗೌರಮ್ಮನವರ ಪುತ್ರರಾಗಿ ಜನಿಸಿದರು. ನಾಗಯ್ಯನೆಂದು ಹೆಸರು ಪಡೆದು ಇನಾಂಹೊಂಗಲದ ಮಠದ ಹಿರಿಯ ಗುರುಗಳ ಕೃಪಾಕಟಾಕ್ಷದಿಂದ ಬೆಳೆದು, ಮುಂದೆ ಶ್ರೀ ಸಿದ್ಧಲಿಂಗ ಸ್ವಾಮಿಗಳಾಗಿ ಅಭಿದಾನ ಪಡೆದರು. ಇನಾಂಹೊಂಗಲದಲ್ಲಿ ವಿದ್ಯಾಭ್ಯಾಸಮಾಡಿ ಲೋಕಸಂಚಾರ ಕೈಗೊಂಡು ಐಹೊಳೆಯಲ್ಲಿ ನೆಲೆಸಿ, ರಾಮತಾಳಿಗೆ ಬಂದು ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ತಪೋನುಷ್ಠಾನ ಕೈಗೊಂಡರು. ಈ ಸಂದರ್ಭದಲ್ಲಿ ಶಿರೂರಿನ ಮಾಚ ಮನೆತನದ ಶ್ರೀ ಸಂಗಪ್ಪನವರು ಶ್ರೀ ಸಿದ್ಧಲಿಂಗ ಸ್ವಾಮಿಗಳನ್ನು ಶಿರೂರಿಗೆ ಆಹ್ವಾನಿಸುತ್ತಾರೆ. ಶ್ರೀ ಸಂಗಪ್ಪನವರ ಆಹ್ವಾನಕ್ಕೆ ಒಪ್ಪಿದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಶಿರೂರಿಗೆ ಬಂದು ಸಿದ್ಧೇಶ್ವರ ದೇವಸ್ಥಾನದ ತಪೋಭೂಮಿಯಲ್ಲಿ ನೆಲೆಸಲು ಇಚ್ಛೆಪಟ್ಟರು. ಆಗ ಗ್ರಾಮಸ್ಥರು ಶಿರೂರು ಸಿದ್ಧೇಶ್ವರ ದೇವಸ್ಥಾನದ ಬಳಿ ಇದ್ದ ಗವಿಯನ್ನು ಒಳಗೊಂಡಂತೆ ಮಠದ ಕಟ್ಟಡವನ್ನು ನಿರ್ಮಿಸಿಕೊಡುತ್ತಾರೆ. ಶ್ರೀ ಸಿದ್ಧಲಿಂಗ ಸ್ವಾಮಿಗಳು ಈ ಗವಿಯಲ್ಲಿ ತಪೋನುಷ್ಠಾನ ಕೈಗೊಂಡು ತಮ್ಮ ಯೋಗಸಿದ್ಧಿಯನ್ನು ಹೆಚ್ಚಿಸಿಕೊಂಡಿದ್ದರು. ಗುರುಗಳು ತಮ್ಮ ತಪೋಬಲದಿಂದ ಭಕ್ತರ ಸಂಕಷ್ಟಗಳನ್ನು ಪರಿಹರಿಸಿ ಭಕ್ತರ ಅಭಿವೃದ್ಧಿಗೆ ಕಾರಣರಾದರು. ಗುರುಗಳು ಇಲ್ಲಿ ನೆಲೆಸಿದ ಮೇಲೆ ಸಿದ್ಧಿಯನ್ನು ಸಂಪಾದಿಸಿಕೊಂಡು ಮೌನವ್ರತವನ್ನು ಆಚರಿಸಲು ಪ್ರಾರಂಭಿಸಿ ದೊಡ್ಡ ಸಾಧನೆ ಯನ್ನೇ ಸಾಧಿಸಿದರು. ಗುರುಗಳು ಮೌನ ವ್ರತವನ್ನು ಮುಕ್ತಾಯಗೊಳಿಸಿದ ಸಂದರ್ಭದಲ್ಲಿ ಶಿರೂರಿನ ಭಕ್ತರು ದೊಡ್ಡ ಸಮಾರಂಭ ವನ್ನೇ ಏರ್ಪಡಿಸಿದ್ದರು. ಈ ಸಂದರ್ಭದಲ್ಲಿ ಧನ ಕನಕವನ್ನು ಗುರುಗಳಿಗೆ ಕಾಣಿಕೆಯಾಗಿ ನೀಡಿ ತಮ್ಮ ಗೌರವವನ್ನು ಅರ್ಪಿಸಿದರು.

ಶಿಕ್ಷಣದ ಕನಸು: ಶ್ರೀ ಸಿದ್ಧಲಿಂಗ ಸ್ವಾಮಿಗಳು ಈ ಹಣದಿಂದ ಹೆಣ್ಣು ಮಕ್ಕಳಿಗಾಗಿ ಕನ್ನಡ ಪಾಠಶಾಲೆಯನ್ನು ಪ್ರಥಮವಾಗಿ ಪ್ರಾರಂಭಿಸಿದರು. ನಂತರ ಶ್ರೀ ಸಿದ್ಧೇಶ್ವರ ವಿದ್ಯಾವರ್ಧಕ ಸಂಘವನ್ನು ಕಟ್ಟಿ ೧೯೬೪ ರಲ್ಲಿ ಸಿದ್ಧೇಶ್ವರ ಪ್ರೌಢಶಾಲೆಯನ್ನು ಸ್ಥಾಪಿಸಿದರು. ಶ್ರೀ ಸಿದ್ಧಲಿಂಗ ಸ್ವಾಮಿಗಳ ಪರಿಶ್ರಮದ ಫಲವಾಗಿ ಶಿರೂರು ಸಿದ್ಧೇಶ್ವರ ಮಠವು ಜ್ಞಾನ ದಾಸೋಹದ ಮಠವಾಗಿ ಬೆಳೆಯಿತು. ಗ್ರಾಮಾಂತರ ಮಕ್ಕಳ ಕಲಿಕೆಗೆ ನೆರವಾಗಲು ಉಚಿತ ಭೋಜನ ವ್ಯವಸ್ಥೆಯನ್ನು ಕಲ್ಪಿಸಿದರು.

ಬೆಳೆದ ಪರಂಪರೆ: ಶ್ರೀ ಸಿದ್ಧಲಿಂಗ ಸ್ವಾಮಿಗಳ ತರುವಾಯ ಅವರ ಕರಕಮಲ ಸಂಜಾತರಾಗಿ ಬೆಳೆದ ಶ್ರೀ ಚನ್ನವೀರಸ್ವಾಮಿಗಳು ಮಠದ ಉತ್ತರಾಧಿಕಾರಿಯಾಗಿ ನೇಮಕಗೊಂಡರು. ಗುರುಗಳು ಸವದತ್ತಿ ತಾಲ್ಲೂಕಿನ ಎಡಳ್ಳಿಯ ಶ್ರೀ ಶಿವಪುತ್ರಯ್ಯ ಮತ್ತು ಶ್ರೀಮತಿ ಶಿವಗಂಗಮ್ಮನವರ ಪುತ್ರರಾಗಿ ೧೯೩೮ ರ ಸೆಪ್ಟೆಂಬರ್ ಇಪ್ಪತ್ತೇಳರಂದು ಜನಿಸಿದರು. ಶ್ರೀ ಚನ್ನವೀರರು ಗುರು ಹಿರಿಯರ ಬಗ್ಗೆ ಗೌರವ ತೋರಿಸಿ ಸೌಜನ್ಯ ಮೂರ್ತಿಗಳಾಗಿ ಬೆಳೆದರು. ಶ್ರೀ ಸಿದ್ಧಲಿಂಗ ಸ್ವಾಮಿಗಳ ದೇಹಸ್ಥಿತಿ ಕ್ಷೀಣಿಸತೊಡಗಿ ಡಿಸೆಂಬರ್ ಹದಿನಾಲ್ಕರ ೧೯೭೦ ರಲ್ಲಿ ಶಿರೂರು ಸಿದ್ಧೇಶ್ವರ ಮಠದಲ್ಲಿ ಲಿಂಗೈಕ್ಯರಾದ ಮೇಲೆ ಇನಾಂಹೊಂಗಲ ಹಾಗೂ ಶಿರೂರು ಮಠಗಳ ಜವಾಬ್ದಾರಿಯನ್ನು ವಹಿಸಿಕೊಂಡ ಶ್ರೀ ಚನ್ನವೀರ ಸ್ವಾಮಿಗಳು ಮಠವನ್ನು ಮುನ್ನಡೆಸಿದರು. ಶಿರೂರು ಸಿದ್ಧೇಶ್ವರ ಮಠದಲ್ಲಿ ಕರ್ತೃಗುರುಗಳಾದ ಶ್ರೀ ಸಿದ್ಧಲಿಂಗ ಸ್ವಾಮಿಗಳ ಗದ್ದುಗೆಗೆ ಮಂಟಪವನ್ನು ನಿರ್ಮಿಸಿದರು. ನಿತ್ಯ ಪೂಜೆ ನಡೆಯುವಂತೆ ವ್ಯವಸ್ಥೆಮಾಡಿದರು. ಶ್ರೀ ಚನ್ನವೀರ ಸ್ವಾಮಿಗಳು ಹಿರಿಯ ಗುರುಗಳಾದ ಶ್ರೀ ಸಿದ್ಧಲಿಂಗ ಸ್ವಾಮಿಗಳು ನಿರ್ಮಿಸಿದ ಶಿಕ್ಷಣ ಸಂಸ್ಥೆಗಳಿಗೆ ಭವ್ಯವಾದ ಕಟ್ಟಡಗಳನ್ನು ನಿರ್ಮಿಸಿ ಸುವ್ಯವಸ್ಥೆಗೊಳಿಸಿದರು.

ವಿಳಾಸ: ಶ್ರೀ ಮ.ನಿ.ಪ್ರ. ಚನ್ನವೀರ ಸ್ವಾಮಿಗಳು, ಶ್ರೀ ಸಿದ್ಧೇಶ್ವರ ಮಠ, ಶಿರೂರು, ಬಾಗಲಕೋಟೆ ತಾಲ್ಲೂಕು.
ಆಧಾರ: 'ಸಿರಿಯೂರ ಸಿದ್ಧಲಿಂಗ ಚರಿತೆ' - ಎನ್.ಎಸ್.ಸಂಗೊಳ್ಳಿ.

ಮಹಾಂತತೀರ್ಥ: ಶಿರೂರಿಗೆ ಸಮೀಪವಿರುವ ಶ್ರೀ ಮಹಾಂತ ತೀರ್ಥವು ಶರಣರ ಕ್ಷೇತ್ರವಾಗಿ ಪ್ರಸಿದ್ಧಿ ಪಡೆದಿದೆ. ಶಿರೂರು ಗ್ರಾಮದಿಂದ ಪೂರ್ವಕ್ಕೆ ಎರಡು ಕಿ.ಮೀ ದೂರದಲ್ಲಿರುವ ಈ ಮಠವು ಚಿತ್ತರಗಿ ಮಠದ ಶಾಖಾಮಠವಾಗಿ ಬೆಳೆದಿದೆ. ಹಿಂದೆ ಇಳಕಲ್ಲು ಶ್ರೀ ವಿಜಯಮಹಾಂತ ಸ್ವಾಮಿಗಳು ಇಲ್ಲಿ ತಪೋನುಷ್ಠಾನ ಕೈಗೊಂಡು ಈ ಕ್ಷೇತ್ರವನ್ನು ಪವಿತ್ರ ಕ್ಷೇತ್ರವನ್ನಾಗಿ

ಮಾಡಿದ್ದಾರೆ.ಇಲ್ಲಿ ಶ್ರೀ ಮಹಾಂತ ಸ್ವಾಮಿಗಳು ಮಠವನ್ನು ಸ್ಥಾಪಿಸಿ, ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದ್ದಾರೆ. ಕಲ್ಲು ಗುಡ್ಡಗಳ ನಿರ್ಜನ ಪ್ರದೇಶದಲ್ಲಿರುವ ಈ ಮಠವು ಸುಕ್ಷೇತ್ರವಾಗಿ ಬೆಳೆದಿದೆ. ಇಲ್ಲಿ ನೀರಿನ ಬುಗ್ಗೆಯಿದ್ದು ಎಂತಹ ಬೇಸಿಗೆಯಲ್ಲಿಯೂ ಬತ್ತದೆ ಜೀವಂತವಾಗಿ ಇರುತ್ತದೆ. ಶ್ರೀ ವಿಜಯ ಮಹಾಂತರು ತಪೋನುಷ್ಠಾನ ಕೈಗೊಂಡಿದ್ದರಿಂದ ಈ ಕ್ಷೇತ್ರಕ್ಕೆ'ಶ್ರೀ ಮಹಾಂತ ತೀರ್ಥ' ಎಂದು ನಾಮಕರಣ ಮಾಡಿ ಮಠವನ್ನು ಸ್ಥಾಪಿಸಲಾಗಿದೆ. ಇದು ಬಸವತತ್ತ್ವದ ಪ್ರಚಾರ ಕೇಂದ್ರವಾಗಿ ಬೆಳೆದಿದೆ.

ಪರಂಪರೆ: ಇಳಕಲ್ಲು ಶ್ರೀ ಮಹಾಂತ ಸ್ವಾಮಿಗಳು ಸ್ಥಾಪಿಸಿದ ಈ ಮಠಕ್ಕೆ ಶ್ರೀ ಬಸವಲಿಂಗ ಸ್ವಾಮಿಗಳು ನೇಮಕಗೊಂಡಿದ್ದಾರೆ. ಶ್ರೀ ಮಹಾಂತ ಸ್ವಾಮಿಗಳಿಂದ ಪ್ರಾರಂಭಗೊಂಡು, ಶ್ರೀ ಬಸವಲಿಂಗ ಸ್ವಾಮಿಗಳಿಂದ ಮಠದ ಪರಂಪರೆ ಬೆಳೆಯುತ್ತಿದೆ. ೧೯೯೯ರಲ್ಲಿ ಇಲ್ಲಿಗೆ ಆಗಮಿಸಿದ ಶ್ರೀ ಬಸವಲಿಂಗ ಸ್ವಾಮಿಗಳು ಇಲ್ಲಿ ಗೋಶಾಲೆ, ಪ್ರಕೃತಿ ಚಿಕಿತ್ಸೆ, ವಿಭೂತಿ ತಯಾರಿಕೆ, ಶಿವಯೋಗ, ನಿಸರ್ಗದ ಬಗ್ಗೆ ತರಬೇತಿ ಈ ರೀತಿ ನಾನಾ ಯೋಜನೆಗಳನ್ನು ಹಮ್ಮಿಕೊಂಡು ಶಿವಯೋಗ ತರಬೇತಿ, ಗೋಶಾಲೆ ಹಾಗೂ ಪ್ರಕೃತಿ ಚಿಕಿತ್ಸಾ ವಿಭಾಗಗಳನ್ನು ಪ್ರಾರಂಭಿಸಿದ್ದಾರೆ.

ಚಟುವಟಿಕೆಗಳು: ಡಾ. ಶ್ರೀ ಬಸವಲಿಂಗ ಸ್ವಾಮಿಗಳು ಅನುಭವ ಮಂಟಪದಲ್ಲಿ ಶಿಕ್ಷಣ ಪಡೆದು ಶರಣರ ತತ್ತ್ವಗಳನ್ನು ಸಮಾಜಕ್ಕೆ ಪರಿಚಯಿಸುವ ಕಾಯಕದಲ್ಲಿ ಅನುಭವವನ್ನು ಪಡೆದು ಶರಣರ ವಿಚಾರ ವಾಹಿನಿ ಎಂಬ ವೇದಿಕೆಯನ್ನು ನಿರ್ಮಿಸಿ, ಬಾಗಲಕೋಟೆಯಲ್ಲಿ ಪ್ರತಿ ತಿಂಗಳು ಶರಣತತ್ತ್ವ ಚಿಂತನಗೋಷ್ಠಿಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಅಲ್ಲದೆ ಪ್ರತಿ ವರ್ಷ ಶರಣ ಸಂಸ್ಕೃತಿ ಉತ್ಸವವನ್ನು ಅನಂತ ಹುಣ್ಣಿಮೆಯಲ್ಲಿ ಆಚರಿಸಲಾಗುತ್ತಿದೆ. ಕಾರು ಹುಣ್ಣಿಮೆಯಲ್ಲಿ ಅಂಬಿಗರ ಚೌಡಯ್ಯನ ಜಯಂತೋತ್ಸವ, ಬಸವಜಯಂತಿ ಹಾಗೂ ಪ್ರತಿ ತಿಂಗಳು ಶರಣರ ಬಗ್ಗೆ ಶಿವಾನುಭವ ಗೋಷ್ಠಿಗಳನ್ನು ಏರ್ಪಡಿಸುವ ಮೂಲಕ ಧರ್ಮಪ್ರಚಾರವನ್ನು ಕೈಗೊಂಡಿದ್ದಾರೆ. ಗುರುಗಳು ಉತ್ತಮ ವಾಗ್ಮಿಗಳಾಗಿದ್ದು ಶರಣರ ತತ್ತ್ವಗಳನ್ನು ವೈಜ್ಞಾನಿಕ ತಳಹದಿಯ ಮೇಲೆ ವಿಶ್ಲೇಷಿಸಿ ಜನರಿಗೆ ತಿಳಿಯಪಡಿಸುತ್ತಿದ್ದಾರೆ. ಮಾನವೀಯ ಮೌಲ್ಯಗಳ, ಸಾಮರಸ್ಯ ಬದುಕಿನ ಸಮಾಜವನ್ನು ಶರಣ ತತ್ತ್ವದ ಅಡಿಯಲ್ಲಿ ಬೆಳೆಸಬೇಕೆಂಬುದು ಗುರುಗಳ ಮಹದಾಸೆಯಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ.ಡಾ. ಬಸವಲಿಂಗ ಸ್ವಾಮಿಗಳು, ಶ್ರೀ ಮಹಾಂತ ತೀರ್ಥ, ಶಿರೂರು ಅಂಚೆ, ಬಾಗಲಕೋಟೆ ತಾಲ್ಲೂಕು.

ಹಳ್ಳೂರು

ಬಾಗಲಕೋಟೆ ತಾಲ್ಲೂಕಿನ ಹಳ್ಳೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹುಚ್ಚೇಶ್ವರ ಮಠವು ಅಸ್ತಿತ್ವದಲ್ಲಿದೆ.

ಹುಚ್ಚೇಶ್ವರಮಠ: ಹಳ್ಳೂರು ಗ್ರಾಮದಲ್ಲಿ ಶ್ರೀ ಹುಚ್ಚೇಶ್ವರ ಮಠವು ಸ್ಥಾಪನೆಯಾಗಿದೆ. ವಿರಕ್ತ ಸಂಪ್ರದಾಯದ ಈ ಮಠವು ಕಮ್ಮತ್ತಿಗೆ ಮಠದ ಶಾಖಾ ಮಠವಾಗಿ ಬೆಳೆದಿದೆ. ಗ್ರಾಮದ ಮಧ್ಯಭಾಗದಲ್ಲಿರುವ ಶ್ರೀ ಹುಚ್ಚೇಶ್ವರ ಮಠದ ಕಟ್ಟಡವು ಹಳೆಯದಾಗಿದ್ದು, ಮಠದ ಒಳಭಾಗದಲ್ಲಿ ಒಂದು ಗದ್ದುಗೆ ಸ್ಥಾಪನೆಯಾಗಿದೆ. ಶ್ರೀ ಕುಮಾರೇಶ್ವರ ಸ್ವಾಮಿಗಳು ಕಮ್ಮತ್ತಿಗೆ ಮಠದಲ್ಲಿ ಅಧಿಕಾರವನ್ನು ವಹಿಸಿಕೊಂಡು ಈ ಮಠದ ಆಡಳಿತವನ್ನು ನೋಡಿಕೊಂಡು ಬರುತ್ತಿದ್ದಾರೆ. ಗುರುಗಳು ಸಂದರ್ಭಕ್ಕನುಸಾರ ಇಲ್ಲಿಗೆ ಬಂದು ಧಾರ್ಮಿಕ ಚಟುವಟಿಕೆಗಳಲ್ಲಿ ಪಾಲ್ಗೊಂಡು ಹೋಗುತ್ತಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಕುಮಾರೇಶ್ವರ ಸ್ವಾಮಿಗಳು, ಶ್ರೀ ಹುಚ್ಚೇಶ್ವರ ಮಠ, ಹಳ್ಳೂರು, ಬಾಗಲಕೋಟೆ ತಾಲ್ಲೂಕು.

ಬಾದಾಮಿ ತಾಲ್ಲೂಕು

ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕು ಐತಿಹಾಸಿಕ ಹಾಗೂ ಸಾಂಸ್ಕೃತಿಕವಾಗಿ ಪ್ರಸಿದ್ಧಿ ಪಡೆದಿದೆ. ಅಂತ ರಾಷ್ಟ್ರೀಯ ಮಟ್ಟದ ಖ್ಯಾತಿ ಗಳಿಸಿರುವ ಇಲ್ಲಿನ ಗುಹಾಲಯಗಳು ರಾಜ್ಯಕ್ಕೆ ಕೀರ್ತಿ ತಂದಿವೆ. ಪಟ್ಟದಕಲ್ಲಿನ ದೇವಾಲಯಗಳು ಕಲಾಕೌಶಲ್ಯಕ್ಕೆ ಮಾದರಿಯಾಗಿವೆ. ಇಂತಹ ತಾಲ್ಲೂಕಿನಲ್ಲಿ ವೀರಶೈವಧರ್ಮ ಬಹಳ ಪ್ರಾಬಲ್ಯತೆ ಪಡೆದಿದೆ. ಈ ತಾಲ್ಲೂಕಿನಲ್ಲಿ ಸುಮಾರು ನಲವತ್ತೆಂಟು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಪ್ರಸ್ತುತ ಹತ್ತು ಮಠಗಳು ಅಸ್ತಿತ್ವದಲ್ಲಿದ್ದು, ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿವೆ.

ಶಿವಯೋಗ ಮಂದಿರ: ವೀರಶೈವ ಮಠಗಳಿಗೆ ಧರ್ಮ ಗುರುಗಳಾಗುವ ಉತ್ತರಾಧಿಕಾರಿಗಳಿಗೆ ಧಾರ್ಮಿಕ ತರಬೇತಿಯನ್ನು ನೀಡುವ ಕೇಂದ್ರ, ಶಿವಯೋಗ ಮಂದಿರ ಈ ತಾಲ್ಲೂಕಿನಲ್ಲಿ ಸ್ಥಾಪನೆಯಾಗಿದೆ. ೧೯೦೯ರಲ್ಲಿ ಹಾನಗಲ್ಲು ಶ್ರೀ ಶಿವಕುಮಾರ ಸ್ವಾಮಿಗಳು ಶ್ರಮದ ಪ್ರತಿಫಲವಾಗಿ ಶಿವಯೋಗ ಮಂದಿರ ಸ್ಥಾಪನೆಯಾಯಿತು. ಇಂದು ಧಾರ್ಮಿಕ ಸಂಸ್ಕಾರದ ಜತೆಗೆ ಸಂಸ್ಕೃತ ಮತ್ತು ವೇದಾಧ್ಯಯನ ಹಾಗೂ ವಚನ ಸಾಹಿತ್ಯದಲ್ಲಿ ಶಿಕ್ಷಣ ನೀಡಲಾಗುತ್ತಿದ್ದು ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿ ಬೆಳೆದಿದೆ.

ಕೆರೂರು

ಬಾದಾಮಿ ತಾಲ್ಲೂಕಿನ ಕೆರೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತೆರೆಡು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಪುರಾತನ ಕಾಲದಿಂದ ಶ್ರೀ ವಿರಕ್ತಮಠ ಮತ್ತು ಶ್ರೀ ಚರಂತಿಮಠ ಅಸ್ತಿತ್ತ್ವದಲ್ಲಿದ್ದು, ವೀರಶೈವ ಧರ್ಮದ ಆಚರಣೆಗಳು ನಡೆಯತೊಡಗಿ ಸಂಸ್ಕಾರವಂತ ಸಮಾಜ ರೂಪುಗೊಂಡಿದೆ.

ವಿರಕ್ತಮಠ: ಕೆರೂರು ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಈ ವಿರಕ್ತಮಠವು ಹನ್ನೆರಡನೆಯ ಶತಮಾನದಿಂದಲೂ ಅಸ್ತಿತ್ತ್ವದಲ್ಲಿದೆ ಎಂದು ಹೇಳಲಾಗುತ್ತಿದೆ. ಪ್ರಭುದೇವರು ಕಲ್ಯಾಣಕ್ಕೆ ಹೋಗುವ ಮೊದಲು ಇಲ್ಲಿ ನೆಲೆಗೊಂಡಿದ್ದರು ಎಂದು ಹೇಳಲಾಗುತ್ತಿದೆ. ಈ ಮಠದಲ್ಲಿ ಪ್ರಭುದೇವರ ಗದ್ದುಗೆಯನ್ನು ಸ್ಥಾಪಿಸಲಾಗಿದೆ. ಮಠದ ಪರಂಪರೆಯ ಬಗ್ಗೆ ಅಧಿಕೃತ ಮಾಹಿತಿಗಳು ಲಭ್ಯವಾಗದ ಕಾರಣ ಪರಂಪರೆಯನ್ನು ಗುರುತಿಸಲು ತೊಡಕಾಗಿದೆ.

ಪರಂಪರೆ: ಈ ಮಠದಲ್ಲಿ ಅಧಿಕಾರ ನಡೆಸಿದ ಮೂರು ಜನ ಗುರುಗಳ ಗದ್ದುಗೆಗಳು ಸ್ಥಾಪನೆಗೊಂಡಿವೆ. ಈಗ ಈ ಮಠದಲ್ಲಿ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಪಟ್ಟಾಧಿಕಾರಿಗಳಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಗುರುಗಳು ಕೆರೂರಿನ ಶ್ರೀಮತಿ ರಾಜಮ್ಮ ಮತ್ತು ಶ್ರೀ ಶಿವಸಂಗಯ್ಯನವರ ಪುತ್ರರಾಗಿ ಜನಿಸಿ, ೧೯೮೮ರಲ್ಲಿ ವಿರಕ್ತಮಠದ ಪಟ್ಟಾಧಿಕಾರ ವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸುತ್ತಿದ್ದಾರೆ. ಇವರು ಬೆಂಗಳೂರು ಸರ್ಪಭೂಷಣಮಠ, ಗದಗ ತಾಲ್ಲೂಕಿನ ಮುಳುಗುಂದ ಗವಿಮಠ ಹಾಗೂ ಈ ಮಠದ ಮಠಾಧ್ಯಕ್ಷರಾಗಿ ಅಧಿಕಾರ ನಡೆಸುತ್ತಿದ್ದಾರೆ. ಗುರುಗಳು ಶರಣ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿಕೊಂಡು ಪುಸ್ತಕ ಪ್ರೇಮಿಗಳಾಗಿ ಸಾಹಿತ್ಯದ ಮೂಲಕ ಧರ್ಮವನ್ನು ಪ್ರಚಾರಪಡಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಮೂರು ಗದ್ದುಗೆಗಳಿಗೆ ನಿತ್ಯಪೂಜೆ, ಪ್ರತಿವರ್ಷ ನವೆಂಬರ್ ತಿಂಗಳಲ್ಲಿ ಪುರಾಣ ಪ್ರವಚನವನ್ನು ನಡೆಸಲಾಗುತ್ತಿದೆ. ಗುರುಗಳು ಉತ್ತಮ ಪ್ರವಚನಕಾರರಾಗಿದ್ದು,ನಾಡಿನ ವಿವಿಧ ಮಠಗಳಲ್ಲಿ ಪ್ರವಚನವನ್ನು ನೀಡಿ ಧರ್ಮವನ್ನು ಬೆಳೆಸಿದ್ದಾರೆ. ಗುರುಗಳು ಪುರಾತನ ಮಠದ ಕಟ್ಟಡವನ್ನು ನೂತನವಾಗಿ ನಿರ್ಮಿಸಿ ೨೦೦೦ ದ ನವೆಂಬರ್ ಹದಿನಾರರಂದು ಉದ್ಘಾಟನೆ ಮಾಡಿಸಿದ್ದಾರೆ. ಗುರುಗಳ ವಾಸ್ತವ್ಯ ಕೊಠಡಿ, ದರ್ಶನ ಮಂದಿರ ಹಾಗೂ ಅತಿಥಿಗಳ ವಿಶ್ರಾಂತಿ ಕೊಠಡಿ ಈ ರೀತಿ ಸುಸಜ್ಜಿತವಾದ ಕಟ್ಟಡವನ್ನು ನಿರ್ಮಿಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಮಲ್ಲಿಕಾರ್ಜುನ ಸ್ವಾಮಿಗಳು, ಶ್ರೀ ವಿರಕ್ತಮಠ, ಕೆರೂರು, ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.

ಚರಂತಿಮಠ: ಕೆರೂರು ಗ್ರಾಮದ ಮಧ್ಯಭಾಗದಲ್ಲಿ ಶ್ರೀ ಚರಂತಿಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದ ಪರಂಪರೆಯುಳ್ಳ ಶ್ರೀ ಚರಂತಿಮಠವು ಕಾಶಿ ಪೀಠದ ಶಾಖಾಮಠವಾಗಿ, ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿದೆ. ಕರ್ತೃಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಇಲ್ಲದೆ ಇರುವುದರಿಂದ ರೂಢಿಗತವಾಗಿ ಶ್ರೀ ಗದ್ದುಗಯ್ಯ ಸ್ವಾಮಿಗಳು ಎಂದು ಗುರುತಿಸಲಾಗುತ್ತಿದೆ.

ಪರಂಪರೆ:
೧. ಷ.ಬ್ರ.ಶ್ರೀ ಗದ್ದುಗಯ್ಯ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಶಿವಕುಮಾರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಪುರಾತನ ಪರಂಪರೆಯ ಕೆಲವು ಗುರುಗಳ ಹೆಸರನ್ನು ಮಾತ್ರ ಗುರುತಿಸಲಾಗಿದೆ. ಶ್ರೀ ಗದ್ದುಗಯ್ಯ ಸ್ವಾಮಿಗಳು ಹಾಗೂ ಅವರ ನಂತರ ಅಧಿಕಾರಕ್ಕೆ ಬಂದ ಗುರುಗಳ ಬಗ್ಗೆ ಮಾಹಿತಿಗಳನ್ನು ದಾಖಲಿಸಿಡದೆ ಹೋದ ಕಾರಣ ಮಠದ ಪರಂಪರೆಯ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಇತ್ತೀಚೆಗೆ ಅಧಿಕಾರ ನಡೆಸಿದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಮಠವನ್ನು ಹೆಚ್ಚು ಅಭಿವೃದ್ಧಿಪಡಿಸಿದ್ದರು. ಇವರು ಲಿಂಗೈಕ್ಯರಾದ ಮೇಲೆ ಮಠವು ಅನೇಕ ವರ್ಷಗಳ ಕಾಲ ಖಾಲಿ ಉಳಿಯಿತು. ಈಗ ಶ್ರೀ ಶಿವಕುಮಾರ ಶಿವಾಚಾರ್ಯಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದಾರೆ.

ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳು ಶ್ರೀ ರಾಚಯ್ಯ ಮತ್ತು ಶ್ರೀಮತಿ ಶಾಂತಮ್ಮನವರ ಪುತ್ರರಾಗಿ ೧೯೬೬ರ ಜನವರಿ ಆರರಂದು ಜನಿಸಿದರು. ಇವರು ಶಿವಯೋಗ ಮಂದಿರ,ಬೆಂಗಳೂರು ಹಾಗೂ ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡಿ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. 'ವಚನ ಮತ್ತು ಉಪನಿಷತ್ತು ಒಂದು ತೌಲನಿಕ ಅಧ್ಯಯನ' ಎಂಬ ವಿಷಯದ ಮೇಲೆ ಸಂಶೋಧನೆಯನ್ನು ನಡೆಸುತ್ತಿದ್ದಾರೆ. ಗುರುಗಳು ಮರಡಿ ಮಠದ ಅಧಿಕಾರವನ್ನು ವಹಿಸಿಕೊಂಡು, ಈ ಎರಡೂ ಮಠಗಳ ಆಡಳಿತವನ್ನು ನೋಡಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡ ಮೇಲೆ ಪುರಾತನ ಮಠದ ಹಳೆಯ ಕಟ್ಟಡವನ್ನು ತೆಗೆಸಿ, ನೂತನ ಕಟ್ಟಡವನ್ನು ನಿರ್ಮಿಸುತ್ತಿದ್ದಾರೆ. ಮಠದ ಆವರಣದಲ್ಲಿರುವ ಮೂರು ಗದ್ದುಗೆಗಳಿಗೆ ನಿತ್ಯಪೂಜೆಯನ್ನು ನಡೆಸಲಾಗುತ್ತಿದೆ. ವರ್ಷಕ್ಕೊಮ್ಮೆ ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಚರಂತಿಮಠ, ಕೆರೂರು, ಬಾದಾಮಿ ತಾ, ಬಾಗಲಕೋಟೆ ಜಿಲ್ಲೆ.

ಗುಳೇದಗುಡ್ಡ

ಬಾದಾಮಿ ತಾಲ್ಲೂಕಿನ ಗುಳೇದಗುಡ್ಡವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಇಪ್ಪತ್ತೆರಡು ಕಿ.ಮೀ ದೂರದಲ್ಲಿದೆ. ಈ ಗ್ರಾಮವು ಪ್ರಾಚೀನ ಪರಂಪರೆಯನ್ನು ಹೊಂದಿದ್ದು, ಸಂಸ್ಕಾರವಂತ ಗ್ರಾಮವಾಗಿ ರೂಪುಗೊಂಡಿದೆ. ಇಲ್ಲಿ ಸ್ಥಾಪನೆಗೊಂಡ ವೀರಶೈವ ಮಠಗಳು ಸಮಷ್ಟಿ, ಸಮಾಜಮುಖಿಯಾಗಿ ಬೆಳೆದು, ವೀರಶೈವ ಧರ್ಮವನ್ನು ಬೆಳೆಸಿವೆ. ಪುರಾತನ ಕಾಲದಲ್ಲಿ ಇಲ್ಲಿ ಒಟ್ಟು ಹದಿನೆಂಟು ಮಠಗಳು ಸ್ಥಾಪನೆಯಾಗಿವೆ ಎಂಬ ಮಾಹಿತಿ ದೊರೆಯುತ್ತಿದೆ. ಇಲ್ಲಿ ಶೋಧನೆ ನಡೆಸಿದಾಗ ಶ್ರೀ ಮುರುಘಾ ಮಠ, ಶ್ರೀ ಒಪ್ಪತ್ತೇಶ್ವರಮಠ, ಶ್ರೀ ಮರಡಿಮಠ, ಶ್ರೀ ಗುರುಸಿದ್ಧೇಶ್ವರಮಠ, ಶ್ರೀ ಹುಚ್ಚೇಶ್ವರಮಠ, ಶ್ರೀ ಅಮರೇಶ್ವರಮಠ, ಶ್ರೀ ಸಾರಂಗಮಠ, ಶ್ರೀ ನೀಲಕಂಠೇಶ್ವರಮಠ, ಶ್ರೀ ಕಿರುಸೂರುಮಠ, ಶ್ರೀ ರೇವಣಸಿದ್ಧೇಶ್ವರಮಠ ಹಾಗೂ ಶ್ರೀ ಶಿವಪ್ಪಯ್ಯನವರಮಠ ಎಂಬ ಹನ್ನೊಂದು ಮಠಗಳು ಇರುವುದು ತಿಳಿದುಬರುತ್ತದೆ. ಉಳಿದ ಮಠಗಳು ಅಸ್ತಿತ್ವವನ್ನು ಕಳೆದುಕೊಂಡು ಹೇಳಲು ಹೆಸರಿಲ್ಲದಂತಾಗಿವೆ. ಈ ಮಠಗಳಲ್ಲಿ ಶ್ರೀ ಕಿರುಸೂರುಮಠ, ಶ್ರೀ ರೇವಣಸಿದ್ಧೇಶ್ವರಮಠ ಹಾಗೂ ಶ್ರೀ ಶಿವಪ್ಪಯ್ಯನವರ ಮಠದಲ್ಲಿ ಉತ್ತರಾಧಿಕಾರಿಗಳು ಯಾರೂ ಇಲ್ಲ.

ಮುರುಘಾಮಠ: ಗುಳೇದಗುಡ್ಡದ ಮಧ್ಯಭಾಗದಲ್ಲಿ ಮುರುಘಾಮಠವು ಸ್ಥಾಪನೆಯಾಗಿದೆ. ಶ್ರೀ ಮುರುಘಾ ಸಮಯದ, ವಿರಕ್ತ ಸಂಪ್ರದಾಯದ ಈ ಮಠವು ಹನ್ನೆರಡನೆಯ ಶತಮಾನದಲ್ಲಿ ಸ್ಥಾಪಿತಗೊಂಡಿದೆ ಎಂದು ಹೇಳಲಾಗುತ್ತಿದೆ.

ಅಫ್ಘಾನಿಸ್ಥಾನದ ಸಂತರೊಬ್ಬರು ಭಾರತದಲ್ಲಿ ಸಂಚಾರ ಕೈಗೊಂಡು, ಹನ್ನೆರಡನೆಯ ಶತಮಾನದ ಅನುಭವ ಮಂಟಪದ ಶರಣರ ತತ್ತ್ವಗಳಿಂದ ಪ್ರಭಾವಿತರಾಗಿ ವೀರಶೈವ ಧರ್ಮವನ್ನು ಸ್ವೀಕರಿಸಿ, ಶರಣ ತತ್ತ್ವಗಳನ್ನು ಪ್ರಚಾರ ಮಾಡುತ್ತಾ ಗುಳೇದಗುಡ್ಡಕ್ಕೆ ಬಂದು ನೆಲೆಸಿ ಇಲ್ಲಿ ಮಠವನ್ನು ಸ್ಥಾಪಿಸಿದರೆಂದು ಹೇಳಲಾಗುತ್ತಿದೆ. ಹೆಚ್ಚು ಸಂಶೋಧನೆ ನಡೆದರೆ ಈ ಬಗ್ಗೆ ಬೆಳಕು ಚೆಲ್ಲಬಹುದು.

ಪರಂಪರೆ: ಶ್ರೀ ಮ.ನಿ.ಪ್ರ. ಮುರುಘಿ ಶಾಂತವೀರ ದೇಶಿಕೇಂದ್ರಸ್ವಾಮಿಗಳು
(ನಂತರದ ಹನ್ನೆರಡು ಜನ ಗುರುಗಳು ಒಂದೇ ಹೆಸರಿನಲ್ಲಿ ಅಧಿಕಾರಕ್ಕೆ ಬಂದಿದ್ದಾರೆ)
ಶ್ರೀ ಮ.ನಿ.ಪ್ರ. ರಾಚೋಟಿಸ್ವಾಮಿಗಳು
ಶ್ರೀ ಮ.ನಿ.ಪ್ರ. ನೀಲಕಂಠಸ್ವಾಮಿಗಳು
ಶ್ರೀ ಮ.ನಿ.ಪ್ರ. ಕಾಶಿನಾಥಸ್ವಾಮಿಗಳು

ಮಠದ ಪರಂಪರೆಯು ಶ್ರೀ ಮುರುಘಿ ಶಾಂತವೀರ ದೇಶಿಕೇಂದ್ರ ಸ್ವಾಮಿಗಳಿಂದ ಪ್ರಾರಂಭಗೊಂಡಿದೆ. ನಂತರ ಅಧಿಕಾರಕ್ಕೆ ಬಂದ ಹದಿಮೂರು ಜನ ಗುರುಗಳು ಕರ್ತೃಗುರುಗಳ ಹೆಸರನ್ನು ಅಭಿದಾನ ಪಡೆದು ಅಧಿಕಾರಕ್ಕೆ ಬಂದಿದಿದ್ದಾರೆ. ಕರ್ತೃ ಗುರುಗಳಾದ ಶ್ರೀ ಮುರುಘಿ ಶಾಂತವೀರ ದೇಶಿಕೇಂದ್ರ ಸ್ವಾಮಿಗಳು ಮಹಾ ವಿದ್ವಾಂಸರಾಗಿದ್ದು 'ಹಮ್ಮೀರ ಕಾವ್ಯ'ದ ಕರ್ತೃವಾಗಿ ಹೆಚ್ಚು ಪ್ರಖ್ಯಾತರಾಗಿದ್ದರು. ಗುರುಗಳು ಶರಣ ತತ್ತ್ವವನ್ನು ಪ್ರಚಾರಪಡಿಸಿ ಜಾತ್ಯಾತೀತ ಸಮಾಜವನ್ನು ನಿರ್ಮಿಸಲು ಶ್ರಮಿಸಿದ್ದರು. ಇವರ ನಂತರ ಅಧಿಕಾರಕ್ಕೆ ಬಂದ ಬಹುತೇಕ ಎಲ್ಲಾ ಗುರುಗಳು ವೀರಶೈವ ಧರ್ಮವನ್ನು ಬೆಳೆಸಿದರು.

ಪರಂಪರೆಯ ಹದಿನೈದನೆಯ ಗುರುಗಳಾದ ಶ್ರೀ ನೀಲಕಂಠ ಸ್ವಾಮಿಗಳು ಬೆಳಗಾವಿ ಜಿಲ್ಲೆಯ ಸಿರಸಂಗಿಯ ಶ್ರೀ ದುಂಡಯ್ಯ ಹಿರೇಮಠ ಹಾಗೂ ಶ್ರೀಮತಿ ನಾಗಮ್ಮ ನವರ ಪುತ್ರರಾಗಿ ೧೯೦೩ ರ ಡಿಸೆಂಬರ್ ಇಪ್ಪತ್ತೊಂರರಂದು ಜನಿಸಿದರು. 'ಶ್ರೀ ಮಡಿವಾಳಯ್ಯ' ಎಂಬ ನಾಮಾಂಕಿತದಲ್ಲಿ ಬೆಳೆದ ಗುರುಗಳು ಸಿರಸಂಗಿಯ ಬಿಶಾಗ್ನಿ ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡರು. ನಂತರ ಸಿರಸಂಗಿಯ ಶ್ರೀ ಲಿಂಗರಾಜ ದೇಸಾಯಿಯವರ ಮಾರ್ಗದರ್ಶನದಲ್ಲಿ ವಿದ್ಯಾಭ್ಯಾಸವನ್ನುಮುಗಿಸಿ, ಶಿವಯೋಗ ಮಂದಿರದಲ್ಲಿ ಹಾನಗಲ್ಲು ಶ್ರೀ ಕುಮಾರ ಸ್ವಾಮಿಗಳ ಕೃಪಾಶೀರ್ವಾದದಿಂದ ಬೆಳೆದರು. ಎಂಟು ವರ್ಷಗಳ ಕಾಲ ಸಂಸ್ಕೃತ ಹಾಗೂ ವೇದಾಧ್ಯಯನವನ್ನು ಮಾಡಿದರು. ನಂತರ ಬೆಂಗಳೂರಿಗೆ ಉನ್ನತ ವಿದ್ಯಾಭ್ಯಾಸಕ್ಕೆಂದು ಹೋದವರು ಗುಳೇದಗುಡ್ಡದ ಉತ್ತರಾಧಿಕಾರಿಗಳಾಗಿ ನೇಮಕಗೊಂಡರು. ಗುರುಗಳು ೧೯೩೦ರಲ್ಲಿ ಚಿತ್ರದುರ್ಗಬೃಹನ್ಮಠದ ಶ್ರೀ ಜಯದೇವ ಸ್ವಾಮಿಗಳಿಂದಚಿನ್ಮಯ ದೀಕ್ಷೆಪಡೆದು,'ಶ್ರೀ ನೀಲಕಂಠ ಸ್ವಾಮಿ'ಗಳೆಂಬ ಅಭಿದಾನ ದೊಂದಿಗೆ ಗುಳೇದ ಗುಡ್ಡದ ಮುರುಘಾ ಮಠದ ಪಟ್ಟಾಧಿಕಾರಿಗಳಾಗಿ ನೇಮಕಗೊಂಡರು. ಗುರುಗಳು ಇಲ್ಲಿ ಅಧಿಕಾರ ವಹಿಸಿಕೊಂಡ ನಂತರ ಬಿಶಾಗ್ನಿ ಮಠದ ಆಡಳಿತವನ್ನೂ ನೋಡಿಕೊಳ್ಳತೊಡಗಿದರು. ನಂತರ ೧೯೫೮ರಲ್ಲಿ ಶ್ರೀ ಗುಬ್ಬಿಮಠದ ಪಟ್ಟಾಧಿಕಾರವನ್ನು ವಹಿಸಿ ಕೊಂಡು ಈ ಮೂರು ಮಠಗಳನ್ನು ಅಭಿವೃದ್ಧಿಪಡಿಸಿದರು. ಗುರುಗಳು ನಕ್ಕು ನಗಿಸುವ ಕಲೆಯಿಂದ'ನಗೆಯಮಾರಿ ತಂದೆ' ಹಾಗೂ'ಆನಂದಮೂರ್ತಿ'ಎಂಬ ಬಿರುದನ್ನು ಪಡೆದು ಸಮಾಜದ ಎಲ್ಲರಿಗೂ ಬೇಕಾದ ಗುರುಗಳಾಗಿ ಬಾಳಿ, ಶತಾಯುಷಿಗಳಾಗಿ ಬದುಕಿ ೧೯೯೯ರ ಡಿಸೆಂಬರ್‌ನಲ್ಲಿ ಗುಬ್ಬಿ ತೊರೆಮಠದಲ್ಲಿ ಲಿಂಗೈಕ್ಯರಾದರು. ಇವರ ನಂತರ ಶ್ರೀ ಕಾಶಿನಾಥ ದೇವರು ೨೦೦೦ದ ನವೆಂಬರ್ ಒಂಬತ್ತರಂದು ಪರಂಪರಾಗತ ಮಠದ ಹದಿನಾರನೆಯ ಗುರುಗಳಾಗಿ ಅಧಿಕಾರವನ್ನು ವಹಿಸಿಕೊಂಡರು.

ಶ್ರೀ ಕಾಶಿನಾಥ ಸ್ವಾಮಿಗಳು ಗುಲ್ಬರ್ಗಜಿಲ್ಲೆಯ ಆಳಂದ ತಾಲ್ಲೂಕಿನ ಪಡುಸಾವಳಗಿ ಗ್ರಾಮದ ಶ್ರೀ ಪ್ರಭಯ್ಯ ಮತ್ತು ಶ್ರೀಮತಿ ರೇವಮ್ಮನವರ ಪುತ್ರರಾಗಿ ೧೯೭೭ರ ಜುಲೈ ಹದಿನೈದರಂದು ಜನಿಸಿದರು. ಇವರು ತಮ್ಮ ಎಳನೆಯ ವರ್ಷ ದಲ್ಲಿ ಪಾದಯಾತ್ರೆಯ ಮೂಲಕ ಎರಡು ಬಾರಿ ಶ್ರೀಶೈಲಮಲ್ಲಿಕಾರ್ಜುನನ ದರ್ಶನವನ್ನು ಪಡೆದಿದ್ದರು. ಶ್ರೀ ಕಾಶಿ ನಾಥ ಸ್ವಾಮಿಗಳು ಶ್ರೀ ನೀಲಕಂಠ ಸ್ವಾಮಿಗಳ ಕೃಪಾದೃಷ್ಟಿಗೆ ಬಿದ್ದು ಉತ್ತರಾಧಿಕಾರಿಯಾಗಿ ನೇಮಕಗೊಂಡರು. ಇವರು ಶಿವಯೋಗ ಮಂದಿರದಲ್ಲಿ ಆರು ವರ್ಷಗಳ ಕಾಲ ಅಧ್ಯಯನ ಮಾಡಿ ಹುಬ್ಬಳ್ಳಿ ಮೂರು ಸಾವಿರಮಠದಲ್ಲಿ ನೆಲೆಸಿ, ಉನ್ನತ

ವ್ಯಾಸಂಗವನ್ನು ಮಾಡಿದ ಶ್ರೀ ಕಾಶಿನಾಥ ಸ್ವಾಮಿಗಳು ಸಂಸ್ಕೃತ, ವೇದಾಧ್ಯಯನ ಮಾಡಲು ಕಾಶಿಗೆ ತೆರಳಿ, ಬನಾರಸ್ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ವೇದಾಂತಾಚಾರ್ಯರಾಗಿ ಮಠಕ್ಕೆ ಆಗಮಿಸಿದರು. ಗುರುಗಳು ತಮ್ಮ ಪಾಂಡಿತ್ಯ ಬಲದಿಂದ ಮಠವನ್ನು ವೈಜ್ಞಾನಿಕವಾಗಿ ಮುನ್ನಡೆಸುತ್ತಿದ್ದಾರೆ.

ಸಂಸ್ಕಾರ ಶಿಬಿರ: ಗುರುಗಳು ಮಠಕ್ಕೆ ಆಗಮಿಸಿ ಪಟ್ಟಾಧಿಕಾರವನ್ನು ವಹಿಸಿಕೊಂಡ ಮೇಲೆ ಎಳೆ ಮಕ್ಕಳಲ್ಲಿ ಸಂಸ್ಕಾರವನ್ನು ಬೆಳೆಸುವ ಉದ್ದೇಶದಿಂದ ಮಠದಲ್ಲಿ ಸಂಸ್ಕಾರ ಶಿಬಿರವನ್ನು ನಡೆಸುತ್ತಿದ್ದಾರೆ. ಎಳೆಮಕ್ಕಳು ಗುರು ಹಿರಿಯರಿಗೆ ಗೌರವಿಸಲು ಹಾಗೂ ಭಾರತೀಯ ಸಂಸ್ಕೃತಿಗೆ ತಕ್ಕಂತೆ ತಮ್ಮ ಬದುಕನ್ನು ರೂಪಿಸಿಕೊಳ್ಳಲು ಸರಳ ರೀತಿಯಲ್ಲಿ ತರಬೇತಿ ನೀಡುತ್ತಿದ್ದಾರೆ. ಪರಂಪರೆಯಲ್ಲಿ ಹದಿನಾರು ಜನ ಗುರುಗಳು ಅಧಿಕಾರ ವಹಿಸಿಕೊಂಡಿರುವ ಸ್ಮರಣಾರ್ಥ, ವಿವಿಧ ಜಾತಿಯ ಹದಿನಾರುಜನ ಕಡುಬಡವ ವಿದ್ಯಾರ್ಥಿಗಳನ್ನು ದತ್ತು ತೆಗೆದುಕೊಂಡು ಅವರ ವಿದ್ಯಾಭ್ಯಾಸದ ಹೊಣೆಯನ್ನು ಹೊತ್ತುಕೊಂಡಿದ್ದಾರೆ. ಪ್ರಗತಿಪರ ಚಿಂತನೆಗಳಿಂದ ಮಠವನ್ನು ಮುನ್ನಡೆಸುತ್ತಿರುವ ಶ್ರೀ ಕಾಶಿನಾಥ ಸ್ವಾಮಿಗಳು ಭಕ್ತರ ಒಲವನ್ನು ಸಂಪಾದಿಸಿ ಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಸ್ಥಾಪನೆಯಾಗಿರುವ ಪರಂಪರೆಯ ಗುರುಗಳ ಹದಿನಾಲ್ಕು ಗದ್ದುಗೆಗಳಿಗೆ ನಿತ್ಯಪೂಜೆ, ಶ್ರಾವಣ ಮಾಸದಲ್ಲಿ ಕೀರ್ತನೆ, ಶ್ರೀ ನೀಲಕಂಠೇಶ್ವರ ಸ್ವಾಮಿಗಳ ಪುಣ್ಯಾರಾಧನೆ, ದಸರಾ ಮಹೋತ್ಸವ ಹಾಗೂ ದೀಪಾವಳಿಯಲ್ಲಿ ಕಾರ್ತೀಕೋತ್ಸವವನ್ನು ನಡೆಸಲಾಗುತ್ತಿದೆ. ಮಠದಲ್ಲಿ ನಿತ್ಯ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗಿದೆ. ಗುರುಗಳು 'ವೀರಶೈವ ಪ್ರಗತಿಶೀಲ ಯುವಕಸಂಘ'ವನ್ನು ಪ್ರಾರಂಭಿಸಿ, ಮಾಸಿಕ ಶಿವಾನುಭವ ಕಾರ್ಯಕ್ರಮವನ್ನು ನಡೆಸುತ್ತಿದ್ದಾರೆ. ಬಸವಜಯಂತಿಯನ್ನು ಮಠದ ವತಿಯಿಂದ ನಡೆಸುತ್ತಿದ್ದು, ಈ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮವನ್ನು ರೂಪಿಸಿಕೊಂಡು ಬಸವತತ್ತ್ವವನ್ನು ಪ್ರಚಾರ ಪಡಿಸುವ ವೇದಿಕೆಯನ್ನಾಗಿ ಮಾಡಿಕೊಂಡಿದ್ದಾರೆ.

ಸಾಹಿತ್ಯ ಸೇವೆ: ಮಠದ ಕರ್ತೃಗುರುಗಳಾದ ಶ್ರೀ ಮುರುಘ ಶಾಂತವೀರ ದೇಶಿಕೇಂದ್ರ ಸ್ವಾಮಿಗಳು ಹಮ್ಮೀರ ಕಾವ್ಯವನ್ನು ರಚಿಸಿ, ಸಾಹಿತ್ಯ ಲೋಕಕ್ಕೆ ವಿಶಿಷ್ಟ ಕೃತಿಯನ್ನು ನೀಡಿದ್ದಾರೆ. ಈ ಮಠದಲ್ಲಿ ವಚನ ಸಾಹಿತ್ಯದ ಅನೇಕ ತಾಡೋಲೆ ಕಟ್ಟುಗಳು ದೊರೆತಿದ್ದು, ಇವುಗಳನ್ನು ಅಧ್ಯಯನಕ್ಕೆಂದು ಧಾರವಾಡ ಮತ್ತು ಹಂಪಿ ವಿಶ್ವವಿದ್ಯಾನಿಲಯಗಳಿಗೆ ಒಪ್ಪಿಸಲಾಗಿದೆ. ಗುಬ್ಬಿಯ ಶ್ರೀ ಮಲ್ಲಣಾರ್ಯರು ಬರೆದ 'ಭಾವಚಿಂತಾರತ್ನ' ಕೃತಿಯ ಹಸ್ತಪ್ರತಿಯು ಈ ಮಠದಲ್ಲಿ ದೊರೆತಿದೆ.

ಶಿಕ್ಷಣ ಸೇವೆ: ಗ್ರಾಮಸ್ಥರು ಒಪ್ಪಿಸಿದ ತುಲಾಭಾರದ ಹಣದಿಂದ ಶ್ರೀ ನೀಲಕಂಠ ಸ್ವಾಮಿಗಳು, ಶ್ರೀ ಮುರುಘ ರಾಜೇಂದ್ರ ಶಿಕ್ಷಣಸಂಸ್ಥೆಯನ್ನು ಸ್ಥಾಪಿಸಿ, ಇದರ ಅಡಿಯಲ್ಲಿ ಪ್ರಾಥಮಿಕಶಾಲೆಯನ್ನು ಪ್ರಾರಂಭಿಸಿದರು. ಶಿಕ್ಷಣಸಂಸ್ಥೆಗೆ ಕಟ್ಟಡವನ್ನು ನಿರ್ಮಿಸಿದರು. ಮಠದಲ್ಲಿ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿ, ಕಲಿಯುವ ಬಡಮಕ್ಕಳಿಗೆ ಆಶ್ರಯ ಕಲ್ಪಿಸಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಕಾಶಿನಾಥ ಸ್ವಾಮಿಗಳು, ಶ್ರೀ ಮುರುಘಾಮಠ, ಗುಳೇದಗುಡ್ಡ, ಬಾದಾಮಿ ತಾ, ಬಾಗಲಕೋಟೆ ಜಿಲ್ಲೆ.

ಮರಡಿಮಠ: ಗುಳೇದಗುಡ್ಡದ ಹೊರಪೇಟೆ ಬಡಾವಣೆಯಲ್ಲಿ ಸ್ಥಾಪನೆಯಾಗಿರುವ ಶ್ರೀ ಮರಡಿಮಠವು, ಉಜ್ಜಯಿನಿಪೀಠದ ಶಾಖಾಮಠವಾಗಿ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಹಡಗಲಿ ಗ್ರಾಮದಲ್ಲಿ ಈ ಮಠದ ಮೂಲ ಮಠ ಸ್ಥಾಪನೆಯಾಗಿದೆ. ಹಡಗಲಿ ಮಠದ ಪರಂಪರೆಯ ಹತ್ತನೆಯ ಗುರುಗಳಾದ ಶ್ರೀ ಕಾಡಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಈ ಗ್ರಾಮಕ್ಕೆ ಬಂದು ನೆಲೆಸಿ ಮಠವನ್ನು ಸ್ಥಾಪಿಸಿದ್ದರು. ಗ್ರಾಮದ ಹೊರಭಾಗದಲ್ಲಿ ಸ್ಥಾಪನೆಯಾಗಿದ್ದ ಈ ಮಠವು, ಧಾರ್ಮಿಕ ಆಚರಣೆಗಳನ್ನು ನಡೆಸುವ ಸಲುವಾಗಿ ಗ್ರಾಮದ ಮಧ್ಯ ಭಾಗಕ್ಕೆ ಸ್ಥಳಾಂತರಗೊಂಡಿದೆ.

ಪರಂಪರೆ: ಮಠದಲ್ಲಿ ಹನ್ನೊಂದು ಜನ ಗುರುಗಳು ಪಟ್ಟಾಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದಾರೆ. ಈ ಎಲ್ಲಾ ಗುರುಗಳು ಕರ್ತೃಗುರುಗಳಾದ ಶ್ರೀ ಕಾಡಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳ ಹೆಸರನ್ನು ಅಭಿದಾನ ಪಡೆಯುತ್ತಾ ಬಂದಿದ್ದಾರೆ. ಹತ್ತನೆಯ ಗುರುಗಳಾದ ಶ್ರೀ ಕಾಡಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ, ತಮ್ಮ ಜೀವಿತಾವಧಿಯಲ್ಲೇ ಉತ್ತರಾಧಿಕಾರಿಗಳನ್ನು ನೇಮಿಸಿಕೊಂಡು ೧೯೭೪ರಲ್ಲಿ ಪಟ್ಟಾಧಿಕಾರ ಮಾಡಿದ್ದಾರೆ.

ಪರಂಪರೆಯ ಹನ್ನೊಂದನೆಯ ಗುರುಗಳಾಗಿ ಅಧಿಕಾರ ವಹಿಸಿಕೊಂಡಿರುವ ಶ್ರೀ ಕಾಡಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಕೆರೂರು ಚರಂತಿ ಮಠದ ಶ್ರೀ ರಾಚಯ್ಯ ಮತ್ತು ಶ್ರೀಮತಿ ಶಾಂತಮ್ಮನವರ ಪುತ್ರರಾಗಿ ೧೯೬೬ ರ ಜನವರಿ ಆರರಂದು ಜನಿಸಿದ್ದರು. ಇವರು ಶಿವಯೋಗಮಂದಿರ ಹಾಗೂ ಬೆಂಗಳೂರಿನಲ್ಲಿ ವಿದ್ಯಾಭ್ಯಾಸಮಾಡಿ, ಕಾಶಿಯಲ್ಲಿ ಸ್ನಾತಕೋತ್ತರ ಪದವಿಯನ್ನು ಮುಗಿಸಿ'ವಚನ ಮತ್ತು ಉಪನಿಷತ್ತು -ಒಂದು ತೌಲನಿಕ ಅಧ್ಯಯನ'ಎಂಬ ವಿಷಯದಲ್ಲಿ ಪಿಎಚ್.ಡಿ. ಮಾಡುತ್ತಿದ್ದಾರೆ. ಗುರುಗಳು ಮಠದ ಅಧಿಕಾರವನ್ನು ವಹಿಸಿಕೊಂಡು ಹಿರಿಯ ಗುರುಗಳ ಮಾರ್ಗದರ್ಶನದಲ್ಲಿ ಧಾರ್ಮಿಕ ಕಾರ್ಯಗಳನ್ನು ಮಾಡುತ್ತಾ ವಿದ್ಯಾಭ್ಯಾಸವನ್ನು ಮುಂದುವರಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯಲ್ಲಿ ಬಂದಂತಹ ಗುರುಗಳ ಗದ್ದುಗೆಗಳಿಗೆ ಪೂಜೆ, ಚೈತ್ರಮಾಸದ ಕೃಷ್ಣಪಕ್ಷದ ಚತುರ್ದಶಿಯಲ್ಲಿ ಪರಂಪರೆಯ ಒಂಬತ್ತನೆಯ ಗುರುಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಸಾಮೂಹಿಕ ವಿವಾಹವನ್ನು ಏರ್ಪಡಿಸಲಾಗುತ್ತಿದೆ. ಹನ್ನೊಂದನೆಯ ಗುರುಗಳ ಪಟ್ಟಾಧಿಕಾರದ ಸಂದರ್ಭದಲ್ಲಿ ಇನ್ನೂರ ಐವತ್ತೊಂದು ವಿವಾಹಗಳನ್ನು ನಡೆಸಿ ದಾಖಲೆಯನ್ನು ನಿರ್ಮಿಸಿದ್ದಾರೆ. ಮಠದಲ್ಲಿ ನಿತ್ಯಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ಶಿಕ್ಷಣ -ಸಾಹಿತ್ಯ: ೧೯೮೭ರಲ್ಲಿ ಶ್ರೀ ಕಾಡಸಿದ್ಧೇಶ್ವರ ವಿದ್ಯಾವರ್ಧಕ ಮತ್ತು ಸಾಂಸ್ಕೃತಿಕ ಸಂಘವನ್ನು ಸ್ಥಾಪಿಸಲಾಗಿದೆ. ಈ ಸಂಸ್ಥೆಯ ವತಿಯಿಂದ ಪ್ರೌಢಶಾಲೆಯನ್ನು ಪ್ರಾರಂಭಿಸಲಾಗಿದೆ. ಗ್ರಾಮಾಂತರ ಮಕ್ಕಳ ಅನುಕೂಲಕ್ಕೆಂದು ಮಠದ ವತಿಯಿಂದ ಉಚಿತ ಪ್ರಸಾದ ನಿಲಯವನ್ನು ಪ್ರಾರಂಭಿಸಲಾಗಿದೆ. ಈಗಿನ ಗುರುಗಳು ಬರೆದ ಜೀವನದರ್ಶನ, ಶ್ರೀ ಕಾಡ ಸಿದ್ಧೇಶ್ವರರ ಭಕ್ತಿ ಗೀತೆಗಳು ಮುಂತಾದ ನಾಲ್ಕು ಕೃತಿಗಳನ್ನು ಪ್ರಕಟಿಸಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ.ಕಾಡಸಿದ್ಧೇಶ್ವರ ಸ್ವಾಮಿಗಳು, ಶ್ರೀ ಮರಡಿಮಠ,ಗುಳೇದಗುಡ್ಡ, ಬಾದಾಮಿ ತಾ, ಬಾಗಲಕೋಟೆ ಜಿಲ್ಲೆ.

ಅಮರೇಶ್ವರಮಠ: ಗುಳೇದಗಡ್ಡದ ಹೊರಭಾಗದಲ್ಲಿ ಶ್ರೀ ಅಮರೇಶ್ವರ ಮಠವು ಸ್ಥಾಪನೆಯಾಗಿದೆ. ಶ್ರೀ ಸಿದ್ಧರಾಮ ಸ್ವಾಮಿಗಳು ಲೋಕ ಸಂಚಾರ ಮಾಡುತ್ತಾ ಬಂದು,ಅಮರೇಶ್ವರ ದೇವಸ್ಥಾನದ ಸಮೀಪವಿರುವ ಹೊಂಡದ ಬಳಿ ದೀರ್ಘ ಕಾಲ ತಪಸ್ಸನ್ನು ಆಚರಿಸುತ್ತಿದ್ದರು. ಈ ಸಂದರ್ಭದಲ್ಲಿ ಭಕ್ತರು ಗುರುಗಳ ಬಳಿ ಬಂದು ಆಶೀರ್ವಾದ ಪಡೆದು, ಮಠವನ್ನು ಸ್ಥಾಪಿಸಿಕೊಟ್ಟಿದ್ದಾರೆ. ದಿನ ಕಳೆದಂತೆ ಗುರುಗಳು ಮತ್ತು ಭಕ್ತರ ಸಂಬಂಧ ಬೆಳೆದ ಮೇಲೆ ಗುರುಗಳ ಗ್ರಾಮಕ್ಕೆ ತಮ್ಮ ಬಿಡಾರವನ್ನು ಸ್ಥಳಾಂತರಿಸಿಕೊಂಡು, ಭಕ್ತರನ್ನು ಉದ್ಧರಿಸಿದರು ಎಂದು ತಿಳಿದುಬರುತ್ತಿದೆ.

ಪರಂಪರೆ: ಶ್ರೀ ಸಿದ್ಧರಾಮ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಈಗಿನ ಶ್ರೀ ಕಾಶಿ ಜಗದ್ಗುರುಗಳಾದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು, ೧೯೭೭ ರಮೇ ಹದಿನಾಲ್ಕರಂದು ಈ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದರು. ಇವರು ಸೋಲಾಪುರ ಮತ್ತು ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡಿದ ಮೇಲೆ ಇವರ ವಿದ್ವತ್ತನ್ನು ಗುರುತಿಸಿ ಕಾಶಿ ಪೀಠದ ಜಗದ್ಗುರುಗಳನ್ನಾಗಿ ೧೯೯೦ ರಲ್ಲಿ ಅಧಿಕಾರಕ್ಕೆ ತರಲಾಯಿತು.ಇವರ ನಂತರ ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದರು.

ಬಿಜಾಪುರದ ಶ್ರೀ ನಿಜಗುಣಯ್ಯ ಮತ್ತು ಶ್ರೀಮತಿ ಶಾಂತಾಬಾಯಿಯವರ ಪುತ್ರರಾಗಿ ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ೧೯೬೧ ರ ಮಾರ್ಚ್ ಇಪ್ಪತ್ತೊಂಬತ್ತರಂದು ಜನಿಸಿದರು. ಇವರು ಚಿಕ್ಕವಯಸ್ಸಿನಲ್ಲಿಯೇ ಅಪ್ರತಿಮ ಪ್ರತಿಭಾ ವಂತರಾಗಿ ಬೆಳೆದು, ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಸಂಸ್ಕೃತ ಸ್ನಾತಕೋತ್ತರ ಪದವಿಯನ್ನು ಪಡೆದರು. ನಂತರ 'ಜಾನಕಿಹರಣಂ'ಎಂಬ ಮಹಾಕಾವ್ಯದ ಮೇಲೆ ಸಂಶೋಧನೆಯನ್ನು ನಡೆಸಿ ಪಿಎಚ್.ಡಿ. ಪದವಿಯನ್ನು ಪಡೆದು, ಬೆಂಗಳೂರಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದರು. ನಂತರ ಗುರುಗಳು ವೃತ್ತಿಗೆ ವಿದಾಯ ಹೇಳಿ ಉನ್ನತ ಅಭ್ಯಾಸಕ್ಕೆಂದು ಕಾಶಿಗೆ ತೆರಳಿದರು. ವೀರಶೈವ ಧರ್ಮಸಿದ್ಧಾಂತವಾದ ವಿಶಿಷ್ಟಾದ್ವೈತ ವೇದಾಂತವನ್ನು ಅಧ್ಯಯನಮಾಡಿ ವೇದಾಂತಚಾರ್ಯ ಪರೀಕ್ಷೆಯನ್ನು ಪ್ರಥಮ ಶ್ರೇಣಿಯಲ್ಲಿ ಮುಗಿಸಿದರು. ಬನಾರಸ್ ವಿಶ್ವವಿದ್ಯಾನಿಲಯದಲ್ಲಿ ಕಾನೂನು ಪದವಿಯನ್ನು ಮುಗಿಸಿ, ಶ್ರೀಅಮರೇಶ್ವರ ಮಠದ ಅಧಿಕಾರವನ್ನು ವಹಿಸಿಕೊಂಡರು. ಗುರುಗಳು ಇಲ್ಲಿ ಕೆಲವೇ ವರ್ಷಗಳ ಕಾಲ ಧಾರ್ಮಿಕ ಆಚರಣೆಗಳನ್ನು ನಡೆಸಿ,

ತುಮಕೂರಿನ ಹಿರೇಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಈಗ ತುಮಕೂರಿನ ಶ್ರೀ ಹಿರೇಮಠ ಹಾಗೂ ಶ್ರೀ ಅಮರೇಶ್ವರ ಮಠಗಳ ಆಡಳಿತವನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಡಾ. ಶಿವಾನಂದ ಶಿವಾಚಾರ್ಯ ಸ್ವಾಮಿಗಳು, ಶ್ರೀ ಅಮರೇಶ್ವರಮಠ, ಗುಳೇದಗುಡ್ಡ, ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.

ಗುರುಸಿದ್ಧೇಶ್ವರ ಬೃಹನ್ಮಠ: ಗುಳೇದಗುಡ್ಡದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಗುರುಸಿದ್ಧೇಶ್ವರ ಬೃಹನ್ಮಠವು ಶರಣ ಸಂಪ್ರದಾಯದಲ್ಲಿ ಹನ್ನೆರಡನೆಯ ಶತಮಾನದ ಶ್ರೀ ದೇವರ ದಾಸಿಮಯ್ಯನ ಪರಂಪರೆಯಲ್ಲಿ ಬೆಳೆದು ಬಂದಿದೆ. ಈ ಮಠವು ೧೯೩೭ ರ ಡಿಸೆಂಬರ್ ಇಪ್ಪತ್ತೇಳರಂದು ಶ್ರೀ ಗುರುಸಿದ್ಧ ಪಟ್ಟದಾರ್ಯರಿಂದ ಸ್ಥಾಪಿತವಾಗಿದೆ. ಸೋಲಾಪುರ ತಾಲ್ಲೂಕಿನ ಹೊಳಸಂಗ ಗ್ರಾಮದಲ್ಲಿ ಜನಿಸಿ, ಹೋರಾಟದ ಬದುಕಿನಿಂದ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡ ಶ್ರೀ ಗುರುಸಿದ್ಧ ಪಟ್ಟದಾರ್ಯ ಸ್ವಾಮಿಗಳು ಅಕ್ಕಲಕೋಟೆಯ ಶ್ರೀ ರೇವಣಸಿದ್ಧ ಶರಣರ ಪ್ರೇರಣೆ ಹಾಗೂ ಕೃಪಾಶೀರ್ವಾದದಿಂದ ಇಲ್ಲಿಗೆ ಬಂದು ಮಠವನ್ನು ಸ್ಥಾಪಿಸಿದ್ದಾರೆ.

ಶ್ರೀ ಗುರುಸಿದ್ಧ ಪಟ್ಟದಾರ್ಯ ಸ್ವಾಮಿಗಳು ಕಾಶಿ ಪಂಡಿತರಾಗಿ'ವೇದಾಂತ ಆಧ್ಯಾತ್ಮ ಕೇಸರಿ'ಎಂಬ ಬಿರುದನ್ನು ಪಡೆದು ನಾಡಿನಾದ್ಯಂತ ಸಂಚರಿಸಿ, ಶರಣರ ತತ್ತ್ವಗಳನ್ನು ಪ್ರತಿಪಾದಿಸಿ ಕೆಳಸ್ಥರದ ಜನರ ಬದುಕಿಗೆ ಆಶಾ ಜ್ಯೋತಿಯಾದರು. ಇವರು ತಮ್ಮ ಜೀವಿತಾವಧಿಯಲ್ಲೇ ಶ್ರೀ ಬಸವರಾಜ ಪಟ್ಟದಾರ್ಯ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿ ಕೊಂಡು, ೧೯೭೫ರ ಜೂನ್ ಹತ್ತೊಂಬತ್ತರಂದು ಪಟ್ಟಾಧಿಕಾರವನ್ನು ನೀಡಿದ ಇವರು ಜನವರಿ ನಾಲ್ಕು ೧೯೭೭ ರಲ್ಲಿ ಲಿಂಗೈಕ್ಯರಾದರು. ಶ್ರೀ ಬಸವರಾಜ ಪಟ್ಟದಾರ್ಯ ಸ್ವಾಮಿಗಳು ಗುಳೇದಗುಡ್ಡದ ಶ್ರೀ ಬಸವಲಿಂಗಪ್ಪ ಮತ್ತು ಶ್ರೀಮತಿ ಶಿವಮ್ಮನವರ ಪುತ್ರರಾಗಿ ೧೯೪೫ ರ ಸೆಪ್ಟೆಂಬರ್ ಹನ್ನೆರಡರಂದು ಜನಿಸಿದ್ದರು. ಇವರು ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ತತ್ತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು, ಮಠಕ್ಕೆ ಆಗಮಿಸಿ ಅಧಿಕಾರ ವಹಿಸಿಕೊಂಡರು. ಗುರುಗಳು ಚಿಕ್ಕ ಕಟ್ಟಡದ ಹೊರ ಭಾಗದಲ್ಲಿ ಪಟ್ಟಾಧಿಕಾರವನ್ನು ಪಡೆದು ಕೊಂಡಿದ್ದರು. ಅಧಿಕಾರಕ್ಕೆ ಬಂದ ಮೇಲೆ ನೇಕಾರ ಸಮಾಜದ ಸಂಘಟನೆಯಲ್ಲಿತೊಡಗಿ, ಶರಣತತ್ತ್ವದ ಆಧಾರದ ಮೇಲೆ ಬದುಕನ್ನು ರೂಪಿಸಿಕೊಳ್ಳುವಂತೆ ಪ್ರೇರಣೆ ನೀಡಿದರು. ಅಲ್ಲದೆ ಮಠಕ್ಕೆ ನೂತನ ಕಟ್ಟಡವನ್ನು ನಿರ್ಮಿಸಿ, ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಕರ್ತೃಗುರುಗಳಾದ ಶ್ರೀ ಗುರುಸಿದ್ಧ ಪಟ್ಟದಾರ್ಯ ಸ್ವಾಮಿಗಳ ಗದ್ದುಗೆಗೆ ನಿತ್ಯ ವಚನಾಭಿಷೇಕ ಹಾಗೂ ಗುರುಗಳು ಲಿಂಗೈಕ್ಯರಾದ ದಿನದಿಂದ ನಂದಾದೀಪವನ್ನು ಬೆಳಗಿಸಲಾಗುತ್ತಿದೆ. ಶರಣರ ಜಯಂತ್ಯೋತ್ಸವಗಳನ್ನು ಅರ್ಥಬದ್ಧವಾಗಿ ಆಚರಿಸಲಾಗುತ್ತಿದೆ. ಕರ್ತೃಗುರುಗಳ ಪುಣ್ಯಾರಾಧನೆಯನ್ನು ಒಂಬತ್ತು ದಿನಗಳ ಕಾಲ ಶರಣ ಸಂಗಮವನ್ನಾಗಿ ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಬೆಳಿಗ್ಗೆ ಸಾಮೂಹಿಕ ಲಿಂಗಪೂಜೆ, ಶಿವಮಂತ್ರ, ಬೆಳಿಗ್ಗೆ ಆರುಗಂಟೆಗೆ ಪ್ರಭಾತಯಾತ್ರೆ, ಎಂಟು ಗಂಟೆಗೆ ಶರಣ ಧ್ವಜಾರೋಹಣದ ಮೂಲಕ ನಿತ್ಯ ಕಾರ್ಯಕ್ರಮಗಳು ಪ್ರಾರಂಭಗೊಂಡು ಸಂಗೀತೋತ್ಸವ, ಪ್ರಮುಖ ಮಠಾಧೀಶರಿಂದ ಉಪದೇಶ ಹಾಗೂ ವಿದ್ವಾಂಸರುಗಳಿಂದ ಉಪನ್ಯಾಸವನ್ನು ನಡೆಸಲಾಗುತ್ತಿದೆ. ಕೊನೆಯ ದಿನ ಪಲ್ಲಕ್ಕಿ ಉತ್ಸವವನ್ನು ಏರ್ಪಡಿಸಿ ಹಿರಿಯ ಗುರುಗಳ ಭಾವಚಿತ್ರ ಹಾಗೂ ವಚನದ ಕಟ್ಟುಗಳನ್ನು ಮೆರವಣಿಗೆಯಲ್ಲಿ ಕೊಂಡೊಯ್ಯಲಾಗುತ್ತಿದೆ. ಹನ್ನೆರಡು ಶರಣಸಂಗಮ ಉತ್ಸವಗಳು ಮಠದಲ್ಲೇ ನಡೆದಿದ್ದವು. ನಂತರ ಇದನ್ನು ನಾಡಿನಾದ್ಯಂತ ಕೊಂಡೊಯ್ಯುವ ಉದ್ದೇಶದಿಂದ ಹೊಳಸಂಗದಲ್ಲಿ ಮತ್ತು ಗಂಗಾವತಿಯಲ್ಲಿ ನಡೆಸಲಾಯಿತು.

ಶೈಕ್ಷಣಿಕ ಸೇವೆ: ೧೯೭೧ರಲ್ಲಿ ಶ್ರೀ ಜಗದ್ಗುರು ಗುರುಸಿದ್ಧೇಶ್ವರ ವಿದ್ಯಾವರ್ಧಕ ಸಂಘ ಹಾಗೂ ಸಾಂಸ್ಕೃತಿಕ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಈ ಸಂಸ್ಥೆಯಡಿ ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಲಾಗಿದೆ. ನಾಲ್ಕು ಶಿಶುವಿಹಾರಗಳು, ಮೂರು ಕಿರಿಯ ಪ್ರಾಥಮಿಕಶಾಲೆ, ಒಂದು ಪ್ರಾಥಮಿಕ ಶಾಲೆ, ಅಂಗನವಾಡಿ ತರಬೇತಿಕೇಂದ್ರ, ಮೂರು ಪ್ರೌಢಶಾಲೆಗಳು, ವಾಣಿಜ್ಯ ವಿದ್ಯಾಲಯ, ಉದ್ಯೋಗ ಆಧಾರಿತ ಶಿಕ್ಷಣ ತರಬೇತಿ ಕೇಂದ್ರ, ಎರಡು ಅನಾಥಾಲಯಗಳು, ಉಚಿತ ಪ್ರಸಾದನಿಲಯ

ಹಾಗೂ ಒಂದು ಗ್ರಂಥಾಲಯವನ್ನು ಸ್ಥಾಪಿಸಿರುವುದಲ್ಲದೆ, ಆಲಮಟ್ಟಿ ಯೋಜನೆಯಲ್ಲಿ ಮುಳುಗಡೆಗೊಂಡ ಸಂತ್ರಸ್ಥ ಕುಟುಂಬಗಳ ಹೆಣ್ಣು ಮಕ್ಕಳಿಗೆ ನೇಯ್ಗೆ ತರಬೇತಿ ಕೇಂದ್ರವನ್ನು ಸ್ಥಾಪಿಸಲಾಗಿದೆ. ಇತ್ತೀಚೆಗೆ'ಗುಳೇದಗುಡ್ಡ ಕಣದ'ಸಂಶೋಧನಾ ಕೇಂದ್ರವನ್ನು ಸ್ಥಾಪಿಸಿ, ನೇಯ್ಗೆಯ ಕ್ಷೇತ್ರವನ್ನು ಅಭಿವೃದ್ಧಿಗೊಳಿಸಲು ಮುಂದಾಗಿದೆ.

ಸಾಹಿತ್ಯ ಸೇವೆ: ಶ್ರೀ ಬಸವರಾಜ ಪಟ್ಟದಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ 'ಶರಣ ಸಂಗಮ ಪ್ರಕಾಶನ ಸಂಸ್ಥೆ'ಯನ್ನು ಪ್ರಾರಂಭಿಸಿ, ಶ್ರೀ ದೇವರ ದಾಸಿಮಯ್ಯನ ಚರಿತೆ ಹಾಗೂ ಅಕ್ಕಲಕೋಟೆ ಶ್ರೀ ರೇವಣಸಿದ್ಧ ಶರಣರ ಚರಿತಾಮೃತ ಪುರಾಣ ಗ್ರಂಥಗಳು, ಜೋಗುಳ ಪದಮಾಲೆ, ಬೆಡಗಿನ ಪುಸ್ತಕಗಳು ಹಾಗೂ ದೇವರ ದಾಸಿಮಯ್ಯನ ವಚನಗಳನ್ನು ಪ್ರಕಟಿಸಲಾಗಿದೆ.

ವಿಳಾಸ: ಜಗದ್ಗುರು ಶ್ರೀ ಬಸವರಾಜ ಪಟ್ಟದಾರ್ಯ ಸ್ವಾಮಿಗಳು, ಶ್ರೀ ಗುರುಸಿದ್ಧೇಶ್ವರ ಬೃಹನ್ಮಠ, ಗುಳೇದಗುಡ್ಡ,ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.

ಒಪ್ಪತ್ತೇಶ್ವರಮಠ: ಗುಳೇದಗುಡ್ಡದ ಮಧ್ಯಭಾಗದಲ್ಲಿ ಶ್ರೀ ಒಪ್ಪತ್ತೇಶ್ವರ ಮಠವು ಸ್ಥಾಪನೆಯಾಗಿದೆ. ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ನೆಲೆಸಿದ್ದ ಶರಣರಲ್ಲಿ ಒಬ್ಬರಾಗಿದ್ದ ಶ್ರೀ ಒಪ್ಪತ್ತೇಶ್ವರರು ವಿರಕ್ತ ಸಂಪ್ರದಾಯದ ಈ ಮಠವನ್ನು ಸ್ಥಾಪನೆ ಮಾಡಿರುವುದರಿಂದ 'ಶ್ರೀ ಒಪ್ಪತ್ತೇಶ್ವರ ಮಠ'ಎಂದು ಹೆಸರು ಬಂದಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಒಪ್ಪತ್ತೇಶ್ವರ ಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಬಸವಲಿಂಗ ಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಗುರುಪಾದ ಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಲಿಂಗೇಶ್ವರ ಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಚನ್ನಬಸವ ಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಗುರುಪಾದ ಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಚನ್ನಬಸವ ಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಸಿದ್ಧಲಿಂಗ ಸ್ವಾಮಿಗಳು
೯. ಶ್ರೀ ಮ.ನಿ.ಪ್ರ. ರೇವಣಸಿದ್ಧ ಸ್ವಾಮಿಗಳು
೧೦. ಶ್ರೀ ಮ.ನಿ.ಪ್ರ. ಒಪ್ಪತ್ತಿನ ಸ್ವಾಮಿಗಳು
೧೧. ಶ್ರೀ ಮ.ನಿ.ಪ್ರ. ಕಿರಿಯ ಒಪ್ಪತೇಶ್ವರ ಸ್ವಾಮಿಗಳು
೧೨. ಶ್ರೀ ಮ.ನಿ.ಪ್ರ. ಶಾಂತವೀರ ಸ್ವಾಮಿಗಳು
೧೩. ಶ್ರೀ ಮ.ನಿ.ಪ್ರ. ಬಸವಲಿಂಗ ಸ್ವಾಮಿಗಳು
೧೪. ಶ್ರೀ ಮ.ನಿ.ಪ್ರ. ಒಪ್ಪತ್ತಿನ ಸ್ವಾಮಿಗಳು
೧೫. ಶ್ರೀ ಮ.ನಿ.ಪ್ರ. ರೇವಣಸಿದ್ಧ ಸ್ವಾಮಿಗಳು
೧೬. ಶ್ರೀ ಮ.ನಿ.ಪ್ರ. ಅಭಿನವ ಒಪ್ಪತ್ತೇಶ್ವರ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಶ್ರೀ ಒಪ್ಪತ್ತೇಶ್ವರರು ಕಲ್ಯಾಣದಿಂದ ಹೊರಟು ಗುಳೇದಗುಡ್ಡದಲ್ಲಿ ಅನುಷ್ಠಾನ ಗೊಂಡು ಭಕ್ತರಲ್ಲಿ ಜಾಗೃತಿಯನ್ನುಂಟು ಮಾಡಿ ವೀರಶೈವಧರ್ಮ ಹೆಚ್ಚು ಪ್ರಚಾರಗೊಳ್ಳಲು ನೆರವಾದರು. ಕಾಯಕಯೋಗ ದಿಂದ ಬದುಕುವ ಮಾರ್ಗವನ್ನು ಭಕ್ತರಿಗೆ ತೋರಿಸಿ ಜನಜಾಗೃತಿಯನ್ನುಂಟು ಮಾಡಿದ್ದಾರೆ. ಇವರ ತರುವಾಯ ಬಂದಂತಹ ಗುರುಗಳು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಪರಂಪರೆಯ ಹದಿನಾಲ್ಕನೆಯ ಗುರುಗಳಾದ ಶ್ರೀ ಒಪ್ಪತ್ತಿನ ಸ್ವಾಮಿಗಳು ಮಠವನ್ನು ಹೆಚ್ಚು ಅಭಿವೃದ್ಧಿ ಪಡಿಸಿದರು. ಇವರ ಕಾಲದಲ್ಲಿ ಮಠದ ಆಸ್ತಿಯು ವಿಸ್ತಾರಗೊಂಡು ಮಠ ಮತ್ತು ಸಮಾಜವನ್ನು ಬೆಳೆಸಲು ಶ್ರಮಿಸಿದರು. ನಂತರ ಶಿರಗುಂಪಿಯಲ್ಲಿ ಜನಿಸಿದ ಶ್ರೀ ರೇವಣಸಿದ್ಧ ಸ್ವಾಮಿಗಳು ಮಠದ ಅಧಿಕಾರವನ್ನು

ವಹಿಸಿಕೊಂಡು, ಮಠದಲ್ಲಿ ದಾಸೋಹವನ್ನು ನಡೆಸಿ 'ತ್ರಿವಿದ ದಾಸೋಹ ಮೂರ್ತಿ'ಗಳೆಂದು ಹೆಸರು ಪಡೆದರು.

ಈಗ ಶ್ರೀ ಒಪ್ಪತ್ತೇಶ್ವರ ಮಠದ ಉತ್ತರಾಧಿಕಾರಿಗಳಾಗಿ ಹುನಗುಂದ ತಾಲ್ಲೂಕಿನ ಹೊನ್ನಾರಹಳ್ಳಿಯಲ್ಲಿ ಶ್ರೀ ಬಸವಯ್ಯ ಮತ್ತು ಶ್ರೀಮತಿ ಹೇಮದ್ರವ್ವ ಇವರ ಪುತ್ರರಾಗಿ ೧೯೭೫ ರಲ್ಲಿ ಜನಿಸಿದ, ಶ್ರೀ ಅಭಿನವ ಒಪ್ಪತ್ತೇಶ್ವರ ಸ್ವಾಮಿಗಳು ಸ್ನಾತಕೋತ್ತರ ಶಿಕ್ಷಣವನ್ನು ಪಡೆದು ೧೯೭೭ರ ಮೇ ಹನ್ನೆರಡರಂದು ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಗುರುಗಳು ತಮ್ಮ ಚಿಕ್ಕವಯಸ್ಸಿನಲ್ಲೇ ದೊಡ್ಡ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಈ ಮಠದ ಆಡಳಿತದ ಜೊತೆಗೆ ರೋಣ ತಾಲ್ಲೂಕಿನ ಕರಮುಡಿ ಗ್ರಾಮದ ಶ್ರೀ ಒಪ್ಪತ್ತೇಶ್ವರ ಮಠ ಹಾಗೂ ನಾಡಿನ ವಿವಿಧ ಭಾಗಗಳಲ್ಲಿರುವ ಹದಿನಾರು ಶಾಖಾಮಠಗಳ ಅಧಿಕಾರವನ್ನು ವಹಿಸಿಕೊಂಡು, ಈ ಮಠಗಳ ಆಡಳಿತವನ್ನು ನೋಡಿಕೊಳ್ಳುತ್ತಾ, ಧರ್ಮಜಾಗೃತಿಯನ್ನುಂಟು ಮಾಡುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಪುರಾತನ ಪರಂಪರೆಯ ಹಿನ್ನೆಲೆಯುಳ್ಳ ಈ ಮಠದಲ್ಲಿ ಶ್ರೀ ಒಪ್ಪತ್ತೇಶ್ವರರ ತೋರುಗದ್ದುಗೆಯ ಜೊತೆಗೆ ಒಟ್ಟು ಹತ್ತು ಗದ್ದುಗೆಗಳು ಮಠದ ಜಾಗದಲ್ಲಿ ಸ್ಥಾಪನೆಯಾಗಿವೆ. ಈ ಎಲ್ಲಾ ಗದ್ದುಗೆಗಳಿಗೆ ನಿತ್ಯ ಪೂಜೆ ನಡೆಯುತ್ತಿದೆ. ಈಗಿನ ಶ್ರೀ ಅಭಿನವ ಒಪ್ಪತ್ತೇಶ್ವರ ಸ್ವಾಮಿಗಳು ಲೋಕೋದ್ಧಾರಕ್ಕಾಗಿ ೧೯೯೭ ರಿಂದ ೧೯೯೯ ರವರೆಗೆ ಮೂರು ವರ್ಷಗಳ ಕಾಲ ಶ್ರಾವಣಮಾಸದಲ್ಲಿ ಅನುಷ್ಠಾನ ಕೈಗೊಂಡಿದ್ದಾರೆ. ಈ ಸಂದರ್ಭಗಳಲ್ಲಿ ಪುರಾಣಪ್ರವಚನ ಮತ್ತು ಅನ್ನದಾಸೋಹ ಸೇವೆಯನ್ನು ನಡೆಸಲಾಗಿದೆ.

ಶೈಕ್ಷಣಿಕ ಕಾರ್ಯಗಳು: ಪುರಾತನ ಪರಂಪರೆಯ ಮಠದ ಆಶ್ರಯದಲ್ಲಿ ಶ್ರೀ ಒಪ್ಪತ್ತೇಶ್ವರ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ, ಪ್ರಾಥಮಿಕಶಾಲೆ, ಪ್ರೌಢಶಾಲೆಗಳು, ಪದವಿಪೂರ್ವ ಕಾಲೇಜು ಹಾಗೂ ಕೈಗಾರಿಕಾ ತರಬೇತಿ ಕೇಂದ್ರ ಈ ರೀತಿ ಒಟ್ಟು ಹದಿನಾರು ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಲಾಗಿದೆ. ಈಗ ಗುಳೇದಗುಡ್ಡ, ಗಣಿ, ಕರಮುಡಿ ಹಾಗೂ ಇಂಜನವಾರಿಯಲ್ಲಿ ವಿದ್ಯಾರ್ಥಿ ನಿಲಯಗಳು ನಡೆಯುತ್ತಿವೆ. ಇದರಿಂದ ಗ್ರಾಮಾಂತರ ಮಕ್ಕಳ ಕಲಿಕೆಗೆ ನೆರವಾಗಿದೆ.

ವಿಳಾಸ:ಶ್ರೀ ಮ.ನಿ.ಪ್ರ.ಅಭಿನವಒಪ್ಪತ್ತೇಶ್ವರ ಸ್ವಾಮಿಗಳು,ಶ್ರೀಒಪ್ಪತ್ತೇಶ್ವರಮಠ,ಗುಳೇದಗುಡ್ಡ,ಬಾದಾಮಿ ತಾ,ಬಾಗಲಕೋಟೆಜಿಲ್ಲೆ.

ಹೊಳೆ ಹುಚ್ಚೇಶ್ವರ ಸಂಸ್ಥಾನಮಠ: ಗುಳೇದಗುಡ್ಡದ ಕೋಟೆಕಲ್ಲು ಬಡಾವಣೆಯಲ್ಲಿ ಶ್ರೀ ಹೊಳೆಹುಚ್ಚೇಶ್ವರ ಸಂಸ್ಥಾನ ಮಠವು, ಹದಿನಾರನೆಯ ಶತಮಾನದಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಶ್ರೀ ಹುಚ್ಚೇಶ್ವರ ಸ್ವಾಮಿಗಳು ಲೋಕ ಸಂಚಾರದಲ್ಲಿದ್ದಾಗ ಇಲ್ಲಿ ನೆಲೆಗೊಂಡು ಈ ಮಠವನ್ನು ಸ್ಥಾಪಿಸಿದ್ದಾರೆ. ಗುರುಗಳು ಅನೇಕ ವರ್ಷಗಳ ಕಾಲ ಇಲ್ಲಿ ನೆಲೆಸಿ, ಧರ್ಮ ಜಾಗೃತಿಯನ್ನುಂಟು ಮಾಡಿ ನಿರಂತರವಾಗಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿ ಕಮತಗಿಯಲ್ಲಿ ಲಿಂಗೈಕ್ಯರಾದರು. ಕಮತಗಿಯ ಶಾಖಾ ಮಠವಾಗಿ ಬೆಳೆದಿರುವ ಈ ವಿರಕ್ತಮಠದಲ್ಲಿ ಶ್ರೀ ಹುಚ್ಚೇಶ್ವರ ಸ್ವಾಮಿಗಳ ದೇವಸ್ಥಾನ ಹಾಗೂ ಶ್ರೀ ಹೊಳೆಹುಚ್ಚೇಶ್ವರ ಮಠದ ಪರಂಪರೆಯ ಗುರು ಗಳ ಗದ್ದುಗೆಗಳು ಸ್ಥಾಪನೆಗೊಂಡಿವೆ. ಈ ಗದ್ದುಗೆಗಳಿಗೆ ಮಂಟಪವನ್ನು ನಿರ್ಮಿಸಿ ಪೂಜಾಕಾರ್ಯವನ್ನು ನಡೆಸಲಾಗುತ್ತಿದೆ. ಮಠದ ಸಮುಚ್ಚಯದಲ್ಲಿ ಅಗತ್ಯಕ್ಕನುಗುಣವಾದ ಕಟ್ಟಡವನ್ನು ನಿರ್ಮಿಸಲಾಗಿದೆ.

ಕಮತಗಿ ಮೂಲ ಮಠದ ಮಠಾಧೀಶರು ಸಂದರ್ಭಕ್ಕನುಗುಣವಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ ಬಂದಿದ್ದಾರೆ. ಪರಂಪರೆಯ ಹನ್ನೆರಡನೆಯ ಶ್ರೀ ಹುಚ್ಚೇಶ್ವರ ಸ್ವಾಮಿಗಳ ಪಟ್ಟಾಭಿಷೇಕದ ಬೆಳ್ಳಿ ಹಬ್ಬವನ್ನು ಈ ಮಠದಲ್ಲಿ ಅದ್ದೂರಿಯಾಗಿ ನಡೆಸಿ, ಧರ್ಮಸಭೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ಭಕ್ತರಿಗೆ ಧರ್ಮೋಪದೇಶವನ್ನು ನೀಡಲಾಯಿತು. ಹದಿಮೂರನೆಯ ಪಟ್ಟಾಧಿಕಾರಿಗಳಾದ ಶ್ರೀ ಹುಚ್ಚೇಶ್ವರ ಸ್ವಾಮಿಗಳು ಲಕ್ಷದೀಪೋತ್ಸವವನ್ನು ಈ ಮಠದಲ್ಲಿ ಆಚರಿಸಿ ಮಠವನ್ನು ಪ್ರಚಾರಕ್ಕೆ ತಂದಿದ್ದಾರೆ.

ವಿಳಾಸ:ಶ್ರೀ ಮ.ನಿ.ಪ್ರ. ಹುಚ್ಚೇಶ್ವರ ಸ್ವಾಮಿಗಳು,ಶ್ರೀ ಹುಚ್ಚೇಶ್ವರಸಂಸ್ಥಾನಮಠ, ಗುಳೇದಗುಡ್ಡ,ಬಾದಾಮಿ ತಾ, ಬಾಗಲಕೋಟೆಜಿಲ್ಲೆ.

ಬಾದಾಮಿ

ಬಾಗಲಕೋಟೆ ಜಿಲ್ಲೆಯ ಬಾದಾಮಿ ಪಟ್ಟಣವು ಜಿಲ್ಲಾ ಕೇಂದ್ರದಿಂದ ಉತ್ತರಕ್ಕೆ ನಲವತ್ತೈದು ಕಿ.ಮೀ ದೂರದಲ್ಲಿದೆ. ತಾಲ್ಲೂಕಿನ ಕೇಂದ್ರ ಸ್ಥಳವಾದ ಬಾದಾಮಿಯು, ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ಸಲ್ಲಿಸಿರುವ ಕೊಡುಗೆ ಅಪಾರ. ಕ್ರಿ.ಶ. ೫೪೩ ರಲ್ಲಿ ಪುಲಕೇಶಿಯು ಕೋಟೆಯನ್ನು ಕಟ್ಟಿಸಿ ಬಾದಾಮಿಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಕ್ರಿ.ಶ. ೫೭೮ರಲ್ಲಿ ಮಂಗಲೇಶನು ಮಹಾವಿಷ್ಣು ವಿಗ್ರಹವನ್ನು ಕೆತ್ತಿಸಿ, ಭಾರತೀಯ ಕಲಾ ಶಾಸ್ತ್ರಕ್ಕೆ ಒಂದು ಅದ್ಭುತ ಕೊಡುಗೆಯನ್ನು ನೀಡಿದನು. ಇಂತಹ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಪಟ್ಟಣದಲ್ಲಿ ವೀರಶೈವ ಧರ್ಮ ಪ್ರಬಲವಾಗಿ ಬೆಳೆದಿದೆ. ಪುರಾತನ ಕಾಲದಲ್ಲಿ ಬಾದಾಮಿಯಲ್ಲಿ ಹನ್ನೆರಡು ಮಠಗಳು ಸ್ಥಾಪನೆಯಾಗಿದ್ದವು ಎಂದು ಹೇಳಲಾಗುತ್ತಿದೆ. ತಿಳಿದು ಬಂದ ಮಾಹಿತಿಯಂತೆ ಶೋಧನೆ ನಡೆಸಿದಾಗ ಬಾದಾಮಿ ಪಟ್ಟಣದಲ್ಲಿ, ಶ್ರೀ ಶಿವಪ್ಪಯ್ಯನಮಠ ಮತ್ತು ಶ್ರೀ ನವಗ್ರಹ ಹಿರೇಮಠ ಎಂಬ ಎರಡು ಮಠಗಳು ಅಸ್ತಿತ್ವದಲ್ಲಿರುವುದು ತಿಳಿಯುತ್ತದೆ. ಈ ಎರಡೂ ಮಠಗಳು ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬಂದು, ವೀರಶೈವ ಧರ್ಮಾಚರಣೆಯ ಕೇಂದ್ರಬಿಂದುಗಳಾಗಿವೆ.

ಶಿವಪ್ಪಯ್ಯನಮಠ: ಬಾದಾಮಿಯ ಬೆಟ್ಟದ ತಪ್ಪಲಿನಲ್ಲಿ ಸ್ಥಾಪನೆಯಾಗಿರುವ ಶ್ರೀ ಶಿವಪ್ಪಯ್ಯನ ಮಠವು ಪುರಾತನ ಕಾಲದಿಂದಲೂ ಅಸ್ತಿತ್ವ ದಲ್ಲಿದೆ. ಹೆಬ್ಬಳ್ಳಿಯ ಶ್ರೀ ಶಿವಪ್ಪಯ್ಯ ಸ್ವಾಮಿಗಳು ಪವಾಡಪುರುಷರಾಗಿ ಲೋಕಸಂಚಾರ ಕೈಗೊಂಡು, ನಾಡಿನಾದ್ಯಂತ ಅರವತ್ತೂ್ಮರು ಮಠಗಳನ್ನು ಸ್ಥಾಪಿಸಿದ್ದರು. ಈ ಅರವತ್ತೂ್ಮರು ಮಠಗಳಲ್ಲಿ ಈ ಮಠವು ಒಂದಾಗಿದ್ದು, ಈತನಕ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಧಾರ್ಮಿಕ ಆಚರಣೆಗಳನ್ನು ನಡೆಸುತ್ತಾ ಬಂದಿದೆ.

ಶ್ರೀ ಸಂಗಮೇಶ್ವರ ಶಿವಾಚಾರ್ಯ ಸ್ವಾಮಿಗಳು ಈ ಮಠದಲ್ಲಿ ಆಡಳಿತವನ್ನು ನಡೆಸುತ್ತಾ ಮಠವನ್ನು ಅಭಿವೃದ್ಧಿ ಪಡಿಸಿದ್ದಾರೆ. ನಂತರ ಗುರುಗಳು ಗುಳೇದಗುಡ್ಡದಲ್ಲಿ ನೆಲೆಸಿ ಅಲ್ಲಿಯೇ ಲಿಂಗೈಕ್ಯರಾದರು. ಇವರ ನಂತರ ಶ್ರೀ ಚನ್ನಬಸವಯ್ಯ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ನಡೆಸಿ ೧೯೧೨ ರಲ್ಲಿ ಲಿಂಗೈಕ್ಯರಾದರು. ಇವರ ತರುವಾಯ ಅನೇಕ ವರ್ಷಗಳ ಕಾಲ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿಯಿತು. ಈಗ ಶ್ರೀ ಡಾ. ಮಹೇಶ್ವರ ದೇವರು ಉತ್ತರಾಧಿಕಾರಿಗಳಾಗಿ ನೇಮಕ ಗೊಂಡಿದ್ದಾರೆ. ಗುರುಗಳು ಶ್ರೀ ಚನ್ನಬಸವಯ್ಯ ಮತ್ತು ಶ್ರೀಮತಿ ರೇವಮ್ಮನವರ ಪುತ್ರರಾಗಿ ಜನಿಸಿದರು. ಇವರು ಕಾಶಿಯಲ್ಲಿ ಸಂಸ್ಕೃತ, ವೇದಾಧ್ಯಯನವನ್ನು ಮಾಡಿ, ಸ್ನಾತಕೋತ್ತರ ಪದವಿ ಹಾಗೂ ಸಂಸ್ಕೃತದಲ್ಲಿ ಸಂಶೋಧನೆ ನಡೆಸಿ ಪಿಎಚ್.ಡಿ. ಪದವಿಯನ್ನು ಪಡೆದುಕೊಂಡಿದ್ದಾರೆ.

ಶ್ರೀ ಡಾ. ಮಹೇಶ್ವರ ದೇವರು ಕಾಶಿಯಲ್ಲಿರುವಾಗಲೇ ಆಧ್ಯಾತ್ಮಸಾಧಕರ ಸಂಪರ್ಕದಿಂದ ಬೆಳೆದಿದ್ದರು. ಇವರು ತಮ್ಮ ವಿದ್ಯಾಭ್ಯಾಸ ಮುಗಿದ ಮೇಲೆ ಹೊಸ ದೆಹಲಿಯಲ್ಲಿ ಆದಿ ಕಾತ್ಯಾಯಿನಿ ಮಂದಿರವನ್ನು ಸ್ಥಾಪಿಸಿ, ಆಧ್ಯಾತ್ಮಚಿಂತನೆಯ ಕೇಂದ್ರ ಸ್ಥಳವನ್ನಾಗಿ ಮಾಡಿಕೊಂಡಿದ್ದಾರೆ. ಗುರುಗಳು ಸಂದರ್ಭಕ್ಕನುಸಾರ ಬಾದಾಮಿಗೆ ಆಗಮಿಸಿ ಶ್ರೀ ಶಿವಪ್ಪಯ್ಯನ ಮಠದ ಆಡಳಿತವನ್ನು ನೋಡಿಕೊಂಡು, ಮಠದಲ್ಲಿ ಧಾರ್ಮಿಕ ಆಚರಣೆಗಳು ನಡೆಯುವಂತೆ ಮಾಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಡಾ. ಮಹೇಶ್ವರ ದೇವರು, ಶ್ರೀ ಶಿವಪ್ಪಯ್ಯನವರ ಮಠ, ಬಾದಾಮಿ, ಬಾಗಲಕೋಟೆ ಜಿಲ್ಲೆ.

ನವಗ್ರಹ ಹಿರೇಮಠ: ಬಾದಾಮಿ ನಗರದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ನವಗ್ರಹ ಹಿರೇಮಠವು, ರಂಭಾಪುರಿ ಪೀಠದ ಶಾಖಾ ಮಠವಾಗಿ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದುಬಂದಿದೆ. ಪುರಾತನ ಕಾಲದಲ್ಲಿ ಈ ಮಠವನ್ನು ಶ್ರೀಶಿವಪೂಜಾ ಶಿವಾಚಾರ್ಯ ಸ್ವಾಮಿಗಳು ಸ್ಥಾಪಿಸಿದ್ದರು. ಗುರುಗಳು ಶಿವಪೂಜಾ ನಿಷ್ಠರಾಗಿ ಹಾಗೂ ಮಹಾಜ್ಞಾನಿಗಳಾಗಿ ಧರ್ಮವನ್ನು ಬೆಳೆಸುವಲ್ಲಿ ಯಶಸ್ವಿಯಾಗಿದ್ದರು.ಇವರು ಲೋಕಸಂಚಾರದಲ್ಲಿ ಬಂದು ಇಲ್ಲಿ ಮಠವನ್ನು ಸ್ಥಾಪಿಸಿ, ಆಚಾರ್ಯರ ತತ್ವಗಳನ್ನು ಪ್ರತಿಪಾದಿಸಿ ವೀರಶೈವ ಧರ್ಮವನ್ನು ವ್ಯಾಪಕವಾಗಿ ಬೆಳೆಸಿದರು.

ಪರಂಪರೆ:
೧. ಷ.ಬ್ರ.ಶ್ರೀ ಶಿವಪೂಜಾ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಚಂದ್ರಮೌಳಿ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಶಾಂತವೀರ ಶಿವಾಚಾರ್ಯಸ್ವಾಮಿಗಳು

೪. ಷ.ಬ್ರ.ಶ್ರೀ ಶಿವಪೂಜಾ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯ ಕೆಲವು ಗುರುಗಳ ಹೆಸರನ್ನು ದಾಖಲಿಸಲಾಗಿದೆ. ಪರಂಪರೆಯಲ್ಲಿ ಈಗಿನ ಗುರುಗಳು ಸೇರಿದಂತೆ ಒಟ್ಟು ಆರು ಜನ ಗುರುಗಳು ಪಟ್ಟಾಧಿಕಾರವನ್ನು ವಹಿಸಿಕೊಂಡಿರುವುದಾಗಿ ಹೇಳಲಾಗುತ್ತಿದೆ. ಇದಕ್ಕೆ ಪೂರಕವೆಂಬಂತೆ ಮಠದ ಆವರಣದಲ್ಲಿ ಐದು ಗದ್ದುಗೆಗಳು ಸ್ಥಾಪನೆಯಾಗಿದ್ದರೂ ಎರಡು ಜನ ಗುರುಗಳ ಹೆಸರನ್ನು ಆಧಾರದ ಕೊರತೆಯಿಂದ ಗುರುತಿಸಲು ಸಾಧ್ಯವಾಗುತ್ತಿಲ್ಲ. ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಚಂದ್ರಮೌಳೇಶ್ವರ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಮುನ್ನಡೆಸಿ,ರೋಣ ತಾಲ್ಲೂಕಿನ ಹೊಳೆಹಡಗಲಿ ಗ್ರಾಮದಲ್ಲಿ ಲಿಂಗೈಕ್ಯರಾಗಿದ್ದಾರೆ. ನಂತರ ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಧಾರ್ಮಿಕ ಹಾಗೂ ಆರ್ಥಿಕವಾಗಿ ಅಭಿವೃದ್ಧಿಪಡಿಸಿ, ಜನವರಿ ಇಪ್ಪತ್ತೊಂಬತ್ತರ ೧೯೯೬ರಲ್ಲಿ ಲಿಂಗೈಕ್ಯರಾದರು. ಹಿರಿಯ ಗುರುಗಳು ತಮ್ಮ ಜೀವಿತಾವಧಿಯಲ್ಲಿಯೇ ತಮ್ಮ ಸಹೋದರ ಸಂಬಂಧಿ ಶ್ರೀ ಶಿವಪೂಜಾ ಶಿವಾಚಾರ್ಯ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡು, ೧೯೯೫ ರಲ್ಲಿ ಪಟ್ಟಾಧಿಕಾರ ಮಾಡಿದರು.

ಶ್ರೀ ಶಿವಪೂಜಾ ಶಿವಾಚಾರ್ಯ ಸ್ವಾಮಿಗಳು ಶ್ರೀ ಸಂಗಯ್ಯ ಮತ್ತು ಶ್ರೀಮತಿ ವೀರಮ್ಮನವರ ಪುತ್ರರಾಗಿ ೧೯೭೯ ರ ಜೂನ್ ಒಂದರಂದು ಜನಿಸಿದರು. ಇವರು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಬಾದಾಮಿಯಲ್ಲಿ ಮುಗಿಸಿ ಅಧಿಕಾರ ವಹಿಸಿಕೊಂಡ ಮೇಲೆ ಶಿವಯೋಗಮಂದಿರದಲ್ಲಿ ವೈದಿಕ, ಯೋಗ ಮತ್ತು ಜ್ಯೋತಿಷ್ಯವನ್ನು ಕಲಿತು ಮಠಕ್ಕೆ ಆಗಮಿಸಿ, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಐದು ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆಪೂಜೆ, ಅಮಾವಾಸ್ಯೆ, ಶ್ರಾವಣ ಮಾಸದಲ್ಲಿ ರುದ್ರಾಭಿಷೇಕ ಹಾಗೂ ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಶಿವಪೂಜಾ ಶಿವಾಚಾರ್ಯ ಸ್ವಾಮಿಗಳು, ಶ್ರೀ ನವಗ್ರಹ ಹಿರೇಮಠ, ಬಾದಾಮಿ, ಬಾಗಲಕೋಟೆ ಜಿಲ್ಲೆ. ❑

ಬೀಳಗಿ ತಾಲ್ಲೂಕು

ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕು ಭೌಗೋಳಿಕವಾಗಿ ಚಿಕ್ಕ ತಾಲ್ಲೂಕಾಗಿದೆ. ಇಲ್ಲಿ ಹನ್ನೆರಡನೆಯ ಶತಮಾನದಲ್ಲಿ ಬಸವೇಶ್ವರರು ಚಿಕ್ಕಸಂಗಮದಲ್ಲಿ ತಮ್ಮ ಬಾಲ್ಯವನ್ನು ಕಳೆದು ಈ ತಾಲ್ಲೂಕು ಇತಿಹಾಸದಲ್ಲಿ ಉಳಿಯುವಂತೆ ಮಾಡಿದ್ದಾರೆ. ಈ ತಾಲ್ಲೂಕಿನಲ್ಲಿ ವೀರಶೈವರು ಅಧಿಕ ಸಂಖ್ಯೆಯಲ್ಲಿದ್ದಾರೆ. ಹಿಂದೆ ಸುಮಾರು ಐವತ್ತಾರು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಪ್ರಸ್ತುತ ಹತ್ತು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿವೆ.

ಕುಂದರಗಿ

ಬೀಳಗಿ ತಾಲ್ಲೂಕಿನ ಕುಂದರಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಪುತ್ರವರ್ಗದ, ರಂಭಾಪುರಿ ಪೀಠದ ಶಾಖಾಮಠವಾದ ಶ್ರೀ ಹಿರೇಮಠವು ಕುಂದರಗಿ ಗ್ರಾಮದಲ್ಲಿ ಸ್ಥಾಪನೆಯಾಗಿದೆ. ಪುರಾತನ ಕಾಲದ ಈ ಮಠವು ತನ್ನ ಧಾರ್ಮಿಕ ಚಟುವಟಿಕೆಗಳಿಂದ ಹೆಸರು ಗಳಿಸಿದೆ. ಈ ಮಠದ ಸ್ಥಾಪನೆ ಮತ್ತು ಸ್ಥಾಪಕರ ಬಗ್ಗೆ ಸ್ಪಷ್ಟವಾದ ಆಧಾರಗಳು ಇಲ್ಲದೇ ಇರುವುದರಿಂದ, ಮಠದ ಸ್ಥಾಪನೆಯ ಕಾಲಮಾನವನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ. ಈ ಮಠದ ವಂಶಸ್ಥರ ಹೇಳಿಕೆಯ ಪ್ರಕಾರ ಈ ಪುರಾತನ ಮಠದಲ್ಲಿ ಎಂಟು ಜನ ಗುರುಗಳು ಅಧಿಕಾರವನ್ನು ನಡೆಸಿದ್ದಾರೆ. ೧೯೯೭ರಲ್ಲಿ ಲಿಂಗೈಕ್ಯರಾದ ಶ್ರೀ ಸಂಗಮೇಶ್ವರ ಶಿವಾಚಾರ್ಯ ಸ್ವಾಮಿಗಳು ಎಂಟನೆಯ ಗುರುಗಳೆಂದು ಹೇಳಲಾಗಿದೆ.

ಶ್ರೀ ಸಂಗಮೇಶ್ವರ ಶಿವಾಚಾರ್ಯ ಸ್ವಾಮಿಗಳು ಶಿವಪೂಜಾನಿಷ್ಠರಾಗಿ, ವೀರಶೈವ ಧರ್ಮದ ಬಗ್ಗೆ ಆಳವಾದ ಅಧ್ಯಯನ ಮಾಡಿದ್ದರು. ಇವರ ಕಾಲದಲ್ಲಿ ಮಠವು ಹೆಚ್ಚು ಪ್ರಸಿದ್ಧಿ ಪಡೆದು ಬೆಳೆದಿತ್ತು. ಶ್ರೀ ಸಂಗಮೇಶ್ವರ ಶಿವಾಚಾರ್ಯ ಸ್ವಾಮಿಗಳು ಅಷ್ಟಾವರಣ, ಪಂಚಾಚಾರಗಳ ಬಗ್ಗೆ ಭಕ್ತರಿಗೆ ತಿಳಿ ಹೇಳಿ, ಧರ್ಮದ ಆಚರಣೆಯನ್ನು ನಡೆಸುವ ಆಚಾರವಂತರನ್ನಾಗಿ ಮಾಡಿದ್ದಾರೆ. ಇವರ ಕಾಲದಲ್ಲಿ ಮಠವು ಧಾರ್ಮಿಕ ಚಟುವಟಿಕೆಗಳ ಕೇಂದ್ರ ಬಿಂದುವಾಗಿತ್ತು. ಇವರು ಲಿಂಗೈಕ್ಯರಾದ ಮೇಲೆ ಶ್ರೀ ವಿಶ್ವನಾಥ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕಮಾಡಲಾಗಿದೆ. ಅವರ ವಿದ್ಯಾಭ್ಯಾಸ ಮುಗಿದ ನಂತರ ಪಟ್ಟಾಧಿಕಾರವನ್ನು ನಡೆಸಲಾಗುತ್ತದೆ ಎಂದು ಮಠದ ವಂಶಸ್ಥರು ಅಭಿಪ್ರಾಯಿಸುತ್ತಾರೆ.

ವಿಳಾಸ: ಷ.ಬ್ರ.ಶ್ರೀ ವಿಶ್ವನಾಥ ದೇವರು, ಶ್ರೀ ಹಿರೇಮಠ, ಕುಂದರಗಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.

ಗಲಗಲಿ

ಬೀಳಗಿ ತಾಲ್ಲೂಕಿನ ಗಲಗಲಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿನೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಕಾಶಿ ಮಠವು ಅಸ್ತಿತ್ವದಲ್ಲಿದೆ.

ಕಾಶಿಮಠ: ಗಲಗಲಿ ಗ್ರಾಮದಲ್ಲಿ ಪಂಚ ಪೀಠಗಳಲ್ಲಿ ಒಂದಾದ ಕಾಶಿಪೀಠದ ಶಾಖಾಮಠವಾದ ಶ್ರೀ ಕಾಶಿ ಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದಲ್ಲಿ ಸ್ಥಾಪನೆಯಾದ ಈ ಪುತ್ರವರ್ಗದ ಮಠವು, ಈತನಕ ಬೆಳೆದು ಬಂದು ವೀರಶೈವ ಧರ್ಮವನ್ನು ಬೆಳೆಸಿದೆ. ವಿಶಾಲವಾದ ಕಟ್ಟಡವನ್ನು ಹೊಂದಿರುವ ಈ ಮಠದ ಆವರಣದಲ್ಲಿ ವೀರಭದ್ರ ಮತ್ತು ಈಶ್ವರ ದೇವಸ್ಥಾನಗಳು ಸ್ಥಾಪನೆಯಾಗಿವೆ.

ಈ ಮಠದ ಸ್ಥಾಪನೆ ಮತ್ತು ಸ್ಥಾಪಕರ ಬಗ್ಗೆ ಸ್ಪಷ್ಟ ಮಾಹಿತಿಗಳು ಲಭ್ಯವಿಲ್ಲ. ಈಗ ಈ ಮಠದ ಆಡಳಿತವನ್ನು ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ತೆಲಸಂಗದ ಶ್ರೀ ಬಸವಲಿಂಗ ಸ್ವಾಮಿಗಳು ನೋಡಿಕೊಳ್ಳುತ್ತಿದ್ದಾರೆ. ಈ ಮಠಕ್ಕೆ ಆಸ್ತಿ ಇಲ್ಲದಿದ್ದರೂ ಭಕ್ತರೇ ಮಠದ ಆಸ್ತಿಯಾಗಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಬಸವಲಿಂಗ ಸ್ವಾಮಿಗಳು, ಶ್ರೀ ಕಾಶಿಮಠ, ಗಲಗಲಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.

ಗಿರಿಸಾಗರ

ಬೀಳಗಿ ತಾಲ್ಲೂಕಿನ ಗಿರಿಸಾಗರ ಗ್ರಾಮವು ತಾಲ್ಲೂಕು ಕೇಂದ್ರದಿಂದ ನೈರುತ್ಯ ಭಾಗಕ್ಕೆ ಹತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಕಲ್ಯಾಣ ಮಠವು ಅಸ್ತಿತ್ವದಲ್ಲಿದೆ.

ಕಲ್ಯಾಣ ಹಿರೇಮಠ: ಗಿರಿಸಾಗರ ಗ್ರಾಮದಲ್ಲಿ ಪುರಾತನ ಕಾಲದ ಶ್ರೀ ಕಲ್ಯಾಣ ಮಠವು ಸ್ಥಾಪನೆಯಾಗಿದೆ. ಕಲ್ಯಾಣದಲ್ಲಿ ಕ್ರಾಂತಿಯಾದಾಗ ಶರಣರಿಗೆ ಕ್ರಿಯಾ ಮೂರ್ತಿಗಳಾಗಿದ್ದ ಈ ಮಠದ ಕರ್ತೃಗುರುಗಳಾದ ಶ್ರೀ ಸಂಗನಬಸವ ಶಿವಾಚಾರ್ಯ ಸ್ವಾಮಿಗಳು, ಶರಣರ ಜೊತೆಯಲ್ಲಿ ಕಲ್ಯಾಣದಿಂದ ಬೀಳಗಿ ಗ್ರಾಮಕ್ಕೆ ಬಂದು ನೆಲೆಸುತ್ತಾರೆ. ಈ ಸಂದರ್ಭದಲ್ಲಿ ಗಿರಿಸಾಗರದ ಶ್ರೀಕಿರಿತಿಮ್ಮಪ್ಪ ದೇಸಾಯಿಯು ಗುರುಗಳ ಪ್ರಭಾವಕ್ಕೆ ಒಳಗಾಗಿ ಅವರನ್ನು ಗಿರಿಸಾಗರಕ್ಕೆ ಕರೆ ತಂದು ಮಠವನ್ನು ಸ್ಥಾಪಿಸಿಕೊಟ್ಟಿದ್ದಾರೆ ಎಂದು ಹೇಳಲಾಗುತ್ತಿದೆ. ಕರ್ತೃಗುರುಗಳಾದ ಶ್ರೀ ಸಂಗನ ಬಸವ ಸ್ವಾಮಿಗಳು ಕಲ್ಯಾಣದಿಂದ ಆಗಮಿಸಿದ ಕಾರಣಕ್ಕಾಗಿ ಈ ಮಠಕ್ಕೆ 'ಕಲ್ಯಾಣ ಹಿರೇಮಠ' ಎಂದು ನಾಮಕರಣ ಮಾಡಲಾಗಿದೆ. ಈ ಮಠ ಉಜ್ಜಯಿನಿ ಪೀಠದ ಶಾಖಾಮಠವಾಗಿ, ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿದೆ.

ಪರಂಪರೆ:

೧. ಷ.ಬ್ರ.ಶ್ರೀ ಸಂಗನ ಬಸವ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಮುದಿ ಬಸವ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಮುಕ್ತಿನಾಥ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು

ಹನ್ನೆರಡನೆಯ ಶತಮಾದಲ್ಲಿ ಸ್ಥಾಪನೆಗೊಂಡಿದ್ದರೂ ಈ ಮಠದ ಪರಂಪರೆಯಲ್ಲಿ ಕೇವಲ ನಾಲ್ಕು ಜನ ಗುರುಗಳ ಹೆಸರು ದಾಖಲಾಗಿದೆ. ಮಠದ ಪರಂಪರೆಯನ್ನು ದಾಖಲಿಸದಿರುವ ಕಾರಣಕ್ಕಾಗಿ ಕರ್ತೃ ಗುರುಗಳ ನಂತರದ ಪರಂಪರೆಯನ್ನು ಗುರುತಿಸಲಾಗುತ್ತಿಲ್ಲ. ಶ್ರೀ ಮುಕ್ತಿನಾಥ ಶಿವಾಚಾರ್ಯ ಸ್ವಾಮಿಗಳು ಮಹಾ ತಪಸ್ವಿಗಳಾಗಿ ಹೆಚ್ಚು ಹೆಸರುಮಾಡಿದ್ದರು. ಇವರು ಸದಾ ಧ್ಯಾನದಲ್ಲಿ ಮಗ್ನರಾಗಿರುತ್ತಿದ್ದರು. ಇವರು ವೀರಶೈವ ಧರ್ಮದ ಆಚರಣೆ ಹಾಗೂ ಲಿಂಗಾಂಗ ಸಾಮರಸ್ಯದ ಬಗ್ಗೆ ಭಕ್ತರಿಗೆ ತಿಳಿವಳಿಕೆ ಹೇಳಿ ಇಷ್ಟಲಿಂಗಧಾರಣೆ, ವಿಭೂತಿ ಹಾಗೂ ರುದ್ರಾಕ್ಷಿಯ ಮಹತ್ವದ ಬಗ್ಗೆ ಅರಿವನ್ನು ಮೂಡಿಸುತ್ತಿದ್ದರು. ಇಂತಹ ಮಹಾ ಮಹಿಮರು ವೀರಶೈವ ಧರ್ಮವನ್ನು ಬೆಳಸಿ ೧೯೮೮ ರಲ್ಲಿ ಲಿಂಗೈಕ್ಯರಾದರು. ಇವರ ನಂತರ ಹತ್ತು ವರ್ಷಗಳ ಕಾಲ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿಯಿತು.

ಈ ಮಠಕ್ಕೆ ಶ್ರೀ ಮೃತ್ಯುಂಜಯ ಸ್ವಾಮಿ ಮತ್ತು ಶ್ರೀಮತಿ ಅನ್ನಪೂರ್ಣಮ್ಮನವರ ಪುತ್ರರಾಗಿ ಜನಿಸಿದ ಶ್ರೀರುದ್ರ ಮುನಿ ಶಿವಾಚಾರ್ಯ ಸ್ವಾಮಿಗಳು ೧೯೯೮ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡಿರುತ್ತಾರೆ. ಇವರು ಆಚಾರ್ಯ ಮತ್ತು ಬಸವಾದಿ ಪ್ರಮಥರ ತತ್ತ್ವಗಳನ್ನು ಸಮಾನವಾಗಿ ಸ್ವೀಕರಿಸಿ, ಪ್ರಚಾರಮಾಡುತ್ತಾ ವೀರಶೈವ ಧರ್ಮವನ್ನು ಬೆಳೆಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯ ಪೂಜೆ, ಅಮಾವಾಸ್ಯೆ,ಹುಣ್ಣಿಮೆ ಮತ್ತು ಶ್ರಾವಣ ಮಾಸದಲ್ಲಿ ವಿಶೇಷ ಪೂಜೆ, ಬಸವ ಜಯಂತಿಯ ನಂತರದ ಮೂರನೆಯ ದಿನ ಶ್ರೀ ಮುಕ್ತಿನಾಥ ಶಿವಾಚಾರ್ಯ ಸ್ವಾಮಿಗಳ ಜಾತ್ರೆಯನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಶಿವರಾತ್ರಿಯಲ್ಲಿ ಶ್ರೀ ಸಂಗನಬಸವ ಶಿವಾಚಾರ್ಯ ಸ್ವಾಮಿಗಳ ಜಾತ್ರೆಯನ್ನು ನಡೆಸಲಾಗುತ್ತಿದೆ. ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ವಿದ್ಯಾಸಂಪನ್ನರಾಗಿ, ಧಾರ್ಮಿಕ ನಿಷ್ಠಾವಂತರಾಗಿ, ಕಾಯಕ ಯೋಗದ ಬಗ್ಗೆ ನಂಬಿಕೆಯಿಟ್ಟು ದುಡಿಯುತ್ತಿದ್ದಾರೆ. ಗುರುಗಳು ಧರ್ಮೋಪದೇಶವನ್ನು ಮಾಡುತ್ತಾ ಧಾರ್ಮಿಕ ವಿಚಾರಗಳನ್ನು ಭಕ್ತರಿಗೆ ಮುಟ್ಟಿಸುತ್ತಿದ್ದಾರೆ. ಗುರುಗಳು ವೀರಶೈವ ಧರ್ಮದ ಆಚರಣೆಯನ್ನು ವೀರಶೈವ ಧರ್ಮೀಯರೆಲ್ಲರೂ ಕಡ್ಡಾಯವಾಗಿ ಪರಿಪಾಲಿಸಬೇಕೆಂದು ಭಕ್ತರಿಗೆ ತಿಳಿಯಪಡಿಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕಲ್ಯಾಣ ಹಿರೇಮಠ, ಗಿರಿಸಾಗರ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.

ಗುಳಬಾಳ

ಬೀಳಗಿ ತಾಲ್ಲೂಕಿನ ಗುಳಬಾಳ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮ ಭಾಗಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಕೇದಾರ ಮಠವು ಅಸ್ತಿತ್ವದಲ್ಲಿದೆ.

ಕೇದಾರಮಠ: ಗುಳಬಾಳ ಗ್ರಾಮದಲ್ಲಿ ಕೇದಾರ ಪೀಠದ ಶಾಖಾ ಮಠವಾದ ಕೇದಾರ ಮಠವು ಸ್ಥಾಪನೆಯಾಗಿದೆ. ಕೇದಾರ ಮಠದ ಹಿಂದಿನ ಜಗದ್ಗುರು ಗಳಾಗಿದ್ದ ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳ ಪೂರ್ವಾಶ್ರಮದ ಮಠ ಇದಾಗಿದೆ. ಈ ಮಠದಲ್ಲಿ ಶ್ರೀ ಏಕೋರಾಮಾರಾಧ್ಯರ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಮಠದ ಆವರಣದಲ್ಲಿ ಈಶ್ವರಲಿಂಗ ದೇವಾಲಯವನ್ನು ಸ್ಥಾಪಿಸಲಾಗಿದೆ. ನಿತ್ಯ ಪೂಜೆ ಹಾಗೂ ಅನ್ನ ದಾಸೋಹದ ಕಾರ್ಯವನ್ನು ನಡೆಸಲಾಗುತ್ತಿದೆ.

ವಿಳಾಸ: ಜಗದ್ಗುರು ಶ್ರೀ ಸಿದ್ಧೇಶ್ವರ ಶಿವಾಚಾರ್ಯಭಗವತ್ಪಾದರು, ಶ್ರೀ ಕೇದಾರಮಠ,ಗುಳಬಾಳ, ಬೀಳಗಿ ತಾ, ಬಾಗಲಕೋಟೆಜಿಲ್ಲೆ.

ನಾಗರಾಳು

ಬೀಳಗಿ ತಾಲ್ಲೂಕಿನ ನಾಗರಾಳು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ನಾಲ್ಕು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ದಿಗಂಬರೇಶ್ವರಮಠವು ಅಸ್ತಿತ್ವದಲ್ಲಿದೆ.

ದಿಗಂಬರೇಶ್ವರಮಠ: ನಾಗರಾಳು ಗ್ರಾಮದ ಹೊರಭಾಗದಲ್ಲಿ ಶ್ರೀ ದಿಗಂಬರೇಶ್ವರಮಠವು ಸ್ಥಾಪನೆಯಾಗಿದೆ. ಉಜ್ಜಯಿನಿ ಪೀಠದ ಶಾಖಾಮಠವಾದ ಈ ಮಠವು ಈ ಗ್ರಾಮದ ಧಾರ್ಮಿಕ ಕೇಂದ್ರಬಿಂದುವಾಗಿ ಬೆಳೆದಿದೆ. ಪುರಾತನ ಕಾಲದಲ್ಲಿ ಪ್ರಾರಂಭಗೊಂಡ ಈ ಮಠವನ್ನು ಶ್ರೀ ದಿಗಂಬರೇಶ್ವರರು ಸ್ಥಾಪಿಸಿದ್ದಾರೆ. ಗೋಕಾಕ ತಾಲ್ಲೂಕಿನ ಯೋಗಿಕೊಳ್ಳದಿಂದ ಆಗಮಿಸಿದ ಶ್ರೀ ದಿಗಂಬರೇಶ್ವರರು ಲೋಕಸಂಚಾರದಲ್ಲಿ ಅನುಷ್ಠಾನ ಕೈಗೊಂಡ ಸ್ಥಳಗಳಲ್ಲಿ ಮಠಗಳನ್ನು ಸ್ಥಾಪಿಸಿ, ವೀರಶೈವ ಧರ್ಮವನ್ನು ಹೆಚ್ಚು ಪ್ರಚಾರ ಮಾಡಿದರು. ಇಂತಹ ಮಹಾಯೋಗಿಗಳು ತಾವು ಸ್ಥಾಪಿಸಿದ ನಾಗರಾಳು ಮಠದಲ್ಲಿ ಧಾರ್ಮಿಕ ಕಾರ್ಯಗಳನ್ನು ಕೈಗೊಂಡು ಈ ಸ್ಥಳವನ್ನು ಸುಕ್ಷೇತ್ರವನ್ನಾಗಿ ಮಾಡಿ ಜೀವಂತ ಸಮಾಧಿಯಾಗಿದ್ದಾರೆ.

ಪರಂಪರೆ: ಕರ್ತೃ ಗುರುಗಳಾದ ಶ್ರೀ ದಿಗಂಬರೇಶ್ವರ ಶಿವಾಚಾರ್ಯ ಸ್ವಾಮಿಗಳು ಜೀವಂತ ಸಮಾಧಿಯಾದ ಮೇಲೆ, ಲಿಂಗೈಕ್ಯ ಗುರುಗಳ ಹೆಸರಲ್ಲಿ ಮಠವು ಬೆಳೆಯಿತು.ನಂತರ ಈ ಮಠಕ್ಕೆ ಶ್ರೀ ಶಿವಲಿಂಗ ಸ್ವಾಮಿಗಳು ಅಧಿಕಾರಕ್ಕೆ ಬಂದರು.ಇವರ ನಂತರ ಶ್ರೀ ನಿಂಗಪ್ಪಯ್ಯ ಸ್ವಾಮಿಗಳು ಮತ್ತು ಶ್ರೀ ಶೇಷಪ್ಪಯ್ಯ ಸ್ವಾಮಿಗಳು ಅಧಿಕಾರಕ್ಕೆ ಬರುತ್ತಾರೆ. ಇವರ ನಂತರದ ಪರಂಪರೆಯು ಶ್ರೀ ನಿಂಗಪ್ಪಯ್ಯ ಸ್ವಾಮಿಗಳು ಮತ್ತು ಶ್ರೀ ಶೇಷಪ್ಪಯ್ಯ ಸ್ವಾಮಿಗಳು ಎಂಬ ಎರಡೇ ಹೆಸರಿನಲ್ಲಿ ಬೆಳೆದು ಬಂದಿದೆ. ಈ ಹಿಂದೆ ಶ್ರೀ ನಿಂಗಪ್ಪಯ್ಯ ಸ್ವಾಮಿಗಳು ಅಧಿಕಾರವನ್ನು ನಡೆಸಿ ೧೯೯೦ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಎಂಟನೆಯ ಗುರುಗಳಾಗಿ ಶ್ರೀ ಶೇಷಪ್ಪಯ್ಯ ಸ್ವಾಮಿಗಳು ೧೯೯೧ರಲ್ಲಿ ಜಮಖಂಡಿಯ ಕಲ್ಯಾಣ ಮಠದ ಶ್ರೀ ಗೌರಿ ಶಂಕರ ಸ್ವಾಮಿಗಳಿಂದ ಪಟ್ಟಾಧಿಕಾರದ ಅನುಗ್ರಹವನ್ನು ಪಡೆದು ಅಧಿಕಾರಕ್ಕೆ ಬಂದಿದ್ದಾರೆ. ಇವರು ಅಧಿಕಾರಕ್ಕೆ ಬಂದ ಮೇಲೆ ಮಠವನ್ನು ಸರ್ವಾಂಗೀಣ ರೀತಿಯಲ್ಲಿ ಅಭಿವೃದ್ಧಿಪಡಿಸಿದ್ದಾರೆ. ಶ್ರೀ ಶೇಷಪ್ಪಯ್ಯ ಸ್ವಾಮಿಗಳು ವಾಕ್‌ಸಿದ್ಧಿ ಪುರುಷರಾಗಿ ಭಕ್ತರ ಇಷ್ಟಾರ್ಥಗಳಿಗೆ ಸ್ಪಂದಿಸುತ್ತಾ, ಮಠದಲ್ಲಿ ಧಾರ್ಮಿಕ ಕಾರ್ಯಗಳು ಹಾಗೂ ಅನ್ನದಾಸೋಹ ನಿರಂತರವಾಗಿ ನಡೆಯುವಂತೆ ವ್ಯವಸ್ಥೆ ಮಾಡಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಕಾಯಕ ಯೋಗಿಗಳಾದ ಗುರುಗಳು ಮಠದ ಎಂಬತ್ತು ಎಕರೆ ಜಮೀನನ್ನು ಬೇಸಾಯ ಮಾಡಿಸಿ, ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ಮಠವು ಇವರ ಕಾಲದಲ್ಲಿ ಅಭಿವೃದ್ಧಿಗೊಂಡಿತು. ಮಠದ ಕಟ್ಟಡವನ್ನು ನವೀಕರಣ ಗೊಳಿಸಿ ವಿಸ್ತಾರಗೊಳಿಸಿದ್ದಾರೆ. ದಾಸೋಹ ಮಂದಿರ, ಗದ್ದುಗೆಗಳಿಗೆ ಮಂಟಪವನ್ನು ಮಾಡಿಸಿದ್ದಾರೆ. ಮಠದ ವತಿಯಿಂದ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸದಿದ್ದರೂ, ಸಿದ್ಧಾಪುರದಲ್ಲಿ ಪ್ರೌಢಶಾಲೆಯನ್ನು ಪ್ರಾರಂಭಿಸಲು ಎರಡು ಎಕರೆ ಹಾಗೂ ನಾಗರಾಳು ಗ್ರಾಮದಲ್ಲಿ ಕನ್ನಡ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಲು ಒಂದು ಎಕರೆ ಭೂಮಿಯನ್ನು ದಾನವಾಗಿ ನೀಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗುರುಗಳ ನಾಲ್ಕು ಗದ್ದುಗೆಗಳು ಹಾಗೂ ಶ್ರೀ ದಿಗಂಬರೇಶ್ವರರ ಜೊತೆಯಲ್ಲಿ ಯೋಗಿಕೊಳ್ಳದಿಂದ ಆಗಮಿಸಿದ್ದ ಶರಣೆ ಪಡೆಯಮ್ಮನವರ ಗದ್ದುಗೆಗೆ ನಿತ್ಯ ಎರಡು ವೇಳೆ ಪೂಜೆಯನ್ನು ನಡೆಸುವುದಲ್ಲದೇ, ಕರ್ತೃಗದ್ದುಗೆಯ ಮುಂದೆ ನಂದಾದೀಪವನ್ನು ಸ್ಥಾಪಿಸಲಾಗಿದೆ. ಅಮಾವಾಸ್ಯೆಯಲ್ಲಿ ಸುತ್ತಲಿನ ಅರವತ್ತೆಂಟು ಹಳ್ಳಿಗಳ ಜನ ಆಗಮಿಸುತ್ತಾರೆ. ಈ ಸಂದರ್ಭದಲ್ಲಿ ವಿಶೇಷ ಪೂಜೆ ಹಾಗೂ ಸಾವಿರಾರು ಜನರಿಗೆ ಅನ್ನದಾಸೋಹವನ್ನು ವ್ಯವಸ್ಥೆ ಮಾಡಿಸಲಾಗುತ್ತಿದೆ. ಶ್ರಾವಣಮಾಸದಲ್ಲಿ ಪುರಾಣ, ಪ್ರವಚನ, ಹಿರಿಯ ಗುರುಗಳ ರಥೋತ್ಸವ ಮತ್ತು ದನಗಳ ಜಾತ್ರೆ, ಕಾರ್ತೀಕ ಮಾಸದಲ್ಲಿ ಶ್ರೀ ದಿಗಂಬರೇಶ್ವರರ ಜಾತ್ರೆಯನ್ನು ಐದುದಿನಗಳ ಕಾಲ ನಡೆಸಲಾಗುತ್ತಿದೆ. ಲಕ್ಷ ದೀಪೋತ್ಸವವನ್ನೂ, ಮಹಾನವಮಿಯಂದು ದೇವಿಯ ಪಾರಾಯಣವನ್ನೂ ನಡೆಸಲಾಗುತ್ತಿದೆ. ಮಠದಲ್ಲಿ ಅನ್ನದಾಸೋಹ ನಿರಂತರವಾಗಿ ನಡೆಯುತ್ತಿರುತ್ತದೆ. ಈಗಿನಗುರುಗಳಾದ ಶ್ರೀ ಶೇಷಪ್ಪಯ್ಯ ಸ್ವಾಮಿಗಳು ಭಕ್ತರ ಅನುಕೂಲಕ್ಕಾಗಿ ಮಠದಲ್ಲಿ ಸಕಲ ವ್ಯವಸ್ಥೆಯನ್ನು ಮಾಡಿಸಿದ್ದಾರೆ. ವೀರಶೈವ ಧರ್ಮವನ್ನು ಬೆಳೆಸಲು ನಾಡಿನ ವಿದ್ವಾಂಸರು, ಮಠಾಧೀಶರುಗಳನ್ನು ಕರೆಸಿ ಶಿವಾನುಭವಗೋಷ್ಠಿಗಳನ್ನು ಏರ್ಪಡಿಸುತ್ತಿದ್ದಾರೆ.

ವಿಳಾಸ: ಶ್ರೀ ಶೇಷಪ್ಪಯ್ಯ ಸ್ವಾಮಿಗಳು, ಶ್ರೀ ದಿಗಂಬರೇಶ್ವರಮಠ, ನಾಗರಾಳು, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.

ಬಕ್ಕೇಶ್ವರ

ಬೀಳಗಿ ತಾಲ್ಲೂಕಿನ ಬಕ್ಕೇಶ್ವರ ಗ್ರಾಮವು ಕೃಷ್ಣಾ ನದಿಯ ದಡದಲ್ಲಿ ಸ್ಥಾಪನೆಯಾಗಿತ್ತು. ಈಗ ಆಲಮಟ್ಟಿ ಜಲಾಶಯದಲ್ಲಿ ಮುಳುಗಡೆಗೊಂಡು ಮೂಲ ಗ್ರಾಮದ ಸಮೀಪಕ್ಕೆ ಸ್ಥಳಾಂತರಗೊಂಡಿದೆ. ಇಲ್ಲಿ ಶ್ರೀ ಬಕ್ಕೇಶ್ವರ ಮಠವು ಅಸ್ತಿತ್ವದಲ್ಲಿದೆ.

ಬಕ್ಕೇಶ್ವರಮಠ: ಕೃಷ್ಣಾನದಿಯ ಮೇಲ್ದಂಡೆ ಯೋಜನೆಯಿಂದ ಮುಳುಗಡೆಗೊಂಡ ಬಕ್ಕೇಶ್ವರ ಗ್ರಾಮದಲ್ಲಿ ಅಸ್ತಿತ್ವದಲ್ಲಿದ್ದ ಶ್ರೀ ಬಕ್ಕೇಶ್ವರ ಮಠವು ಸ್ಥಳಾಂತರಗೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ಮಠದ ಪರಂಪರೆಯಲ್ಲಿ ಅನೇಕ ಜನ ಗುರುಗಳು ಅಧಿಕಾರ ನಡೆಸಿ ಮಠವನ್ನು ಪ್ರಸಿದ್ಧಿಗೆ ತಂದಿದ್ದರು. ಈಗ ಶ್ರೀ ಬಕ್ಕೇಶ್ವರ ಸ್ವಾಮಿಗಳೆಂದು ಪ್ರಸಿದ್ಧರಾಗಿರುವ ಗುರುಗಳು ಅಭಿವೃದ್ಧಿಪಡಿಸಿದ್ದಾರೆ.

ವಿಳಾಸ: ಶ್ರೀ ಬಕ್ಕೇಶ್ವರ ಸ್ವಾಮಿಗಳು, ಶ್ರೀ ಬಕ್ಕೇಶ್ವರಮಠ, ಬಕ್ಕೇಶ್ವರ ಪುನರ್ ವಸತಿ ಕೇಂದ್ರ, ಬೀಳಗಿ ತಾ, ಬಾಗಲಕೋಟೆ ಜಿಲ್ಲೆ.

ಬಾಡಗಂಡಿ

ಬೀಳಗಿ ತಾಲ್ಲೂಕಿನ ಬಾಡಗಂಡಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಒಂದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಕರವೀರಮಠವು ಅಸ್ತಿತ್ವದಲ್ಲಿದೆ.

ಕರವೀರಮಠ: ಬಾಡಗಂಡಿ ಗ್ರಾಮದಲ್ಲಿ ಇತ್ತೀಚೆಗೆ ಶ್ರೀ ಕರವೀರಮಠವು ಸ್ಥಾಪನೆಯಾಗಿದೆ. ಉಜ್ಜಯಿನಿ ಪೀಠದ ಶಾಖಾಮಠವಾದ ಈ ಗುರುಸ್ಥಲ ಮಠವು ಬೆಣ್ಣೂರು ಗ್ರಾಮದಿಂದ ಇಲ್ಲಿಗೆ ಸ್ಥಳಾಂತರಗೊಂಡಿದೆ. ಕೃಷ್ಣಾ ನದಿಗೆ ಆಲಮಟ್ಟಿಯಲ್ಲಿ ಕಟ್ಟಲಾದ ಅಣೆಕಟ್ಟಿನಿಂದ ಬೆಣ್ಣೂರು ಗ್ರಾಮವು ಮುಳುಗಡೆಯಾಗಲಿದ್ದು, ಈ ಗ್ರಾಮವನ್ನು ಸ್ಥಳಾಂತರ ಮಾಡಲಾಗಿದೆ. ಈ ಸಂದರ್ಭದಲ್ಲಿ ಕರವೀರ ಮಠವನ್ನು ಬಾಡಗಂಡಿ ಗ್ರಾಮಕ್ಕೆ ಸ್ಥಳಾಂತರಿಸಲಾಗಿದೆ. ಮಠದ ವಂಶಸ್ಥರಾದ ಶರಣೆ ಬಸಮ್ಮ ತಾಯಿಯವರು ಈ ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶರಣೆ ಬಸಮ್ಮ ತಾಯಿ, ಶ್ರೀ ಕರವೀರ ಮಠ, ಬಾಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.

ಬೀಳಗಿ

ಬಾಗಲಕೋಟೆ ಜಿಲ್ಲೆಯ ಬೀಳಗಿ ಪಟ್ಟಣವು ಜಿಲ್ಲಾ ಕೇಂದ್ರದಿಂದ ವಾಯುವ್ಯಕ್ಕೆ ಇಪ್ಪತ್ತೈದು ಕಿ.ಮೀ ದೂರದಲ್ಲಿದೆ. ಈ ಪಟ್ಟಣವು ತಾಲ್ಲೂಕಿನ ಕೇಂದ್ರ ಸ್ಥಳವಾಗಿ ಬೆಳೆದಿದೆ. ಇಲ್ಲಿ ಪುರಾತನ ಕಾಲದಲ್ಲಿ ಒಟ್ಟು ಎಂಟು ಮಠಗಳು ಸ್ಥಾಪನೆಯಾಗಿದ್ದವು ಎಂದು ಹೇಳಲಾಗುತ್ತಿದೆ. ಈ ಮಠಗಳಲ್ಲಿ ಇಂದು ಶ್ರೀ ಸೋಮಪ್ಪಯ್ಯನಮಠ, ಶ್ರೀ ಚರಂತಿಮಠ, ಶ್ರೀ ಹಿರೇಮಠ,

ಶ್ರೀ ಹುಚ್ಚಪ್ಪಯ್ಯನಮಠ-ಈ ನಾಲ್ಕು ಮಠಗಳು ಉಳಿದಿವೆ. ಉಳಿದ ನಾಲ್ಕು ಮಠಗಳ ಹೆಸರುಗಳು ಲಭ್ಯವಿಲ್ಲ. ಇವುಗಳಲ್ಲಿ ಶ್ರೀಸೋಮಪ್ಪಯ್ಯನಮಠ ಮತ್ತು ಶ್ರೀ ಚರಂತಿಮಠ ಅಸ್ತಿತ್ವದಲ್ಲಿದ್ದು, ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿವೆ.

ಸೋಮಪ್ಪಯ್ಯನಮಠ: ಬೀಳಗಿ ಪಟ್ಟಣದ ಸೂಳೆಬಾವಿ ಬೀದಿಯಲ್ಲಿ ಶ್ರೀ ಸೋಮಪ್ಪಯ್ಯನ ಮಠ ಅಥವಾ ವಿರಕ್ತ ಮಠ ಸ್ಥಾಪನೆಯಾಗಿದೆ. ಹನ್ನೆರಡನೆಯ ಶತಮಾನಕ್ಕೂ ಹಿಂದಿನದು ಎಂದು ಹೇಳಲಾಗುವ ಈ ಮಠದ ಸ್ಥಾಪಕರು ಶ್ರೀ ಸೋಮಪ್ಪಯ್ಯಸ್ವಾಮಿಗಳು ಎಂದು ಹೇಳಲಾಗುತ್ತಿದೆ. ಆದರೆ ನಿಖರವಾದ ಆಧಾರಗಳು ದೊರಕುವುದಿಲ್ಲ. ಶ್ರೀ ಸೋಮಪ್ಪಯ್ಯಸ್ವಾಮಿಗಳು ಈ ಮಠವನ್ನು ಸ್ಥಾಪಿಸಿದ ಕಾರಣ ಈ ಮಠಕ್ಕೆ'ಸೋಮಪ್ಪಯ್ಯನಮಠ' ಎಂದು ಹೆಸರು ಬಂದಿದೆ. ಕುಮಾರ ಸಮಯದ ಈ ವಿರಕ್ತ ಮಠವು ಈ ಭಾಗದ ಪ್ರಸಿದ್ಧ ಮಠವಾಗಿ ಬೆಳೆದಿದೆ. ವಿರಕ್ತ ಮಠವಾದರೂ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿರುವ ಈ ಮಠವು ಈವರೆಗೆ ಒಟ್ಟು ಹದಿಮೂರು ಜನ ಗುರುಗಳ ಆಡಳಿತವನ್ನು ಕಂಡಿದೆ ಎಂದು ಹೇಳಲಾಗುತ್ತಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಸೋಮಪ್ಪಯ್ಯಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಮುರುಘಯ್ಯಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಸಂಗಯ್ಯಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಸಂಗನಬಸವಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಚನ್ನಬಸವಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಚನ್ನಬಸವಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಪರಂಪರೆಯ ಗುರುಗಳ ಬಗ್ಗೆ ಹೆಚ್ಚು ವಿಚಾರ ತಿಳಿಯದಾಗಿದ್ದು, ಈ ಹಿಂದೆ ಲಿಂಗೈಕ್ಯರಾದ ಶ್ರೀ ಸಿದ್ಧಲಿಂಗ ಸ್ವಾಮಿಗಳ ಬಗ್ಗೆ ಕೆಲವು ಮಾಹಿತಿಗಳನ್ನು ದಾಖಲಿಸಬಹುದಾಗಿದೆ. ಶ್ರೀ ಸಿದ್ಧಲಿಂಗ ಸ್ವಾಮಿಗಳು ಮುಗ್ಧ ಸ್ವಭಾವದವರಾಗಿ, ಆಚಾರವಂತರಾಗಿದ್ದರು. ಇವರು ಸದಾ ಶಿವಪೂಜಾನಿಷ್ಠೆಯಲ್ಲಿರುತ್ತಿದ್ದರು. ಇವರು ಲೌಕಿಕ ವಿಚಾರಗಳ ಕಡೆ ಗಮನ ಕೊಡದೆ, ಅನುಷ್ಠಾನದಲ್ಲಿಯೇ ಕಾಲಕಳೆದು ೧೯೯೬ರಲ್ಲಿ ಲಿಂಗೈಕ್ಯರಾದರು.. ಹಿರಿಯ ಗುರುಗಳು ಲಿಂಗೈಕ್ಯರಾಗುವ ಮೊದಲೇ ೧೯೯೪ ರಲ್ಲಿ ಮಠದ ಉತ್ತರಾಧಿಕಾರಿಗಳನ್ನಾಗಿ ಶ್ರೀ ಚನ್ನಬಸವ ದೇವರನ್ನು ನೇಮಕ ಮಾಡಿಕೊಂಡಿದ್ದರು. ಕಲಘಟಕಿ ತಾಲ್ಲೂಕಿನ ಮಿಸರಿಕೋಟೆಯ ಶ್ರೀ ಸಂಗನಬಸವ ಸ್ವಾಮಿಗಳು ಮತ್ತು ಶ್ರೀಮತಿ ಸುವರ್ಣಮ್ಮ ದೇವಿಯವರ ಪುತ್ರರಾಗಿ ಜನಿಸಿದ ಶ್ರೀ ಚನ್ನಬಸವದೇವರು ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿದ ಮೇಲೆ ಮಠಕ್ಕೆ ಆಗಮಿಸಿ, ಮಠದ ಆಡಳಿತ ಕಾರ್ಯವನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯಪೂಜೆ, ಸೆಪ್ಟೆಂಬರ್‌ನಲ್ಲಿ ಶ್ರೀ ಚನ್ನಬಸವ ಶಿವಾ ಚಾರ್ಯ ಸ್ವಾಮಿಗಳ ಪುಣ್ಯಾರಾಧನೆ, ಏಪ್ರಿಲ್‌ನಲ್ಲಿ ಶ್ರೀ ಸಿದ್ಧಲಿಂಗ ಸ್ವಾಮಿಗಳ ಪುಣ್ಯಾರಾಧನೆ ನಡೆಯುತ್ತಿದೆ. ಈಗಿನ ಉತ್ತರಾಧಿ ಕಾರಿಗಳಾದ ಶ್ರೀ ಚನ್ನಬಸವದೇವರು ಅನುಷ್ಠಾನ ಮೂರ್ತಿಗಳಾಗಿ ಈವರೆಗೆ ಹನ್ನೆರಡು ಅನುಷ್ಠಾನಗಳನ್ನು ಪೂರೈಸಿದ್ದಾರೆ. ಗುರುಗಳು ವೀರಶೈವ ಧರ್ಮದ ಆಚರಣೆಗಳನ್ನು ಭಕ್ತರಿಗೆ ತಿಳಿಯಪಡಿಸುತ್ತಿದ್ದಾರೆ.

ಮಠದ ಆಸ್ತಿಯಾಗಿ ನಲವತ್ತುಎಕರೆ ಜಮೀನಿದ್ದು, ಮಠದ ವತಿಯಿಂದಲೇ ಅಭಿವೃದ್ಧಿ ಪಡಿಸಲಾಗುತ್ತಿದೆ. ಮಠದ ವತಿಯಿಂದ ಜ್ಞಾನಜ್ಯೋತಿ ಶಿಕ್ಷಣಸಂಸ್ಥೆಯನ್ನು ೧೯೯೫ ರಲ್ಲಿ ಪ್ರಾರಂಭಿಸಿ, ಪ್ರಾಥಮಿಕ ಶಾಲೆಯನ್ನು ನಡೆಸಲಾಗುತ್ತಿದೆ. ಶ್ರೀ ಸಿದ್ಧಲಿಂಗ ಸ್ವಾಮಿಗಳ ಕಾಲದಲ್ಲಿ ನಿರ್ಮಿಸಲ್ಪಟ್ಟಿದ್ದ ಮಠದ ಕಟ್ಟಡವನ್ನು ಈಗ ನವೀಕರಿಸಲಾಗಿದೆ.

ವಿಳಾಸ: ಶ್ರೀ ಮ.ಸಿ.ಪ್ರ. ಚನ್ನಬಸವ ದೇವರು, ಶ್ರೀ ಸೋಮಪ್ಪಯ್ಯನ ಮಠ, ಬೀಳಗಿ, ಸೂಳೆಬಾವಿ ಬೀದಿ, ಬಾಗಲಕೋಟೆ ಜಿಲ್ಲೆ.

ಹಿರೇಮಠ: ಬೀಳಗಿ ಪಟ್ಟಣದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು, ಪುತ್ರವರ್ಗದ ಸಂಪ್ರದಾಯದಲ್ಲಿ ಶ್ರೀ ರಂಭಾಪುರಿ ಪೀಠದ ಶಾಖಾ ಮಠವಾಗಿ ಬೆಳೆದಿದೆ. ಈ ಮಠದಲ್ಲಿ ಒಟ್ಟು ಒಂಬತ್ತು ಜನ ಗುರುಗಳು ಅಧಿಕಾರವನ್ನು

ನಡೆಸಿದ್ದಾರೆ ಎಂದು ಹೇಳಲಾಗುತ್ತದೆ. ಮಠದ ಕರ್ತೃಗುರುಗಳಾದ ಶ್ರೀ ಸಿದ್ಧರಾಮ ಸ್ವಾಮಿಗಳು ಮಠವನ್ನು ಸ್ಥಾಪಿಸಿ, ಅನೇಕ ದಾನ ದತ್ತಿಗಳನ್ನು ಪಡೆದು ಮಠವನ್ನು ಆರ್ಥಿಕವಾಗಿ ಸದೃಢಗೊಳಿಸಿದ್ದರು ಎಂದು ಹೇಳಲಾಗುತ್ತಿದೆ.

ಪರಂಪರೆ:

೧. ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಆನೆಪ್ಪ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಪ್ರಭು ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ವೀರಸಂಗ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಕರವೀರ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ಗುರುಪಾದ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ಶಿವಬಸವ ಶಿವಾಚಾರ್ಯಸ್ವಾಮಿಗಳು
೧೦. ಷ.ಬ್ರ.ಶ್ರೀ ಗುರುಪಾದದೇವರು

ಈ ರೀತಿ ಹತ್ತು ಜನ ಗುರುಗಳ ಹೆಸರನ್ನು ಗುರುತಿಸಬಹುದಾಗಿದೆ.ಮಠದ ಎರಡನೆಯ ಗುರುಗಳಾದ ಶ್ರೀ ಆನೆಪ್ಪ ಶಿವಾಚಾರ್ಯ ಸ್ವಾಮಿಗಳು ಶಿವಪೂಜಾನಿಷ್ಠೆಯನ್ನು ಮೈಗೂಡಿಸಿಕೊಂಡು ಮಹಾನಿಷ್ಠಾವಂತರಾಗಿದ್ದರು. ಇವರು ಬೀಳಗಿ ಗುಡ್ಡದ ಮೇಲೆ ಯೋಗಾಶ್ರಮವನ್ನು ನಡೆಸುತ್ತಿದ್ದರಂತೆ. ಆ ಸ್ಥಳವು ಇಂದಿಗೂ'ಯೋಗ ಮಠ'ವೆಂಬ ಹೆಸರನ್ನು ಉಳಿಸಿಕೊಂಡು ಬಂದಿದೆ. ಮಠದ ಪರಂಪರೆಯ ಬಹುತೇಕ ಎಲ್ಲಾ ಗುರುಗಳು ಶಿವಪೂಜಾನಿಷ್ಠರಾಗಿ ಮಠವನ್ನು ಬೆಳಸಿದ್ದಾರೆ. ಪರಂಪರೆಯ ಎಂಟನೆಯ ಗುರುಗಳಾದ ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳು ೧೯೧೯ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದರು. ಇವರು ಕಾಶಿಯಲ್ಲಿ ಸಂಸ್ಕೃತವನ್ನು ಅಭ್ಯಾಸಮಾಡಿ ಧಾರ್ಮಿಕ ವಿಚಾರಗಳಲ್ಲಿ ಅಪಾರವಾದ ಪಾಂಡಿತ್ಯವನ್ನು ಪಡೆದ ಮಹಾ ವಿದ್ವಾಂಸರಾಗಿದ್ದರು. ಇವರ ನಂತರ ಇವರ ನಂತರ ಶ್ರೀ ಶಿವಬಸವ ಶಿವಾಚಾರ್ಯ ಸ್ವಾಮಿಗಳು ಅಧಿಕಾರ ವಹಿಸಿಕೊಂಡಿದ್ದರು. ಇವರು ಬೆಳಗಾಂವ ನಾಗನೂರು ರುದ್ರಾಕ್ಷಿ ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ಕೆಲವು ದಿನಗಳ ಕಾಲ ಮಠವು ಉತ್ತರಾಧಿಕಾರಿಗಳಿಲ್ಲದೆ ಖಾಲಿ ಉಳಿದಿತ್ತು. ಈಗ ಶ್ರೀ ಗುರುಪಾದ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಲಾಗಿದೆ.

ವಿಳಾಸ: ಷ.ಬ್ರ.ಶ್ರೀ ಗುರುಪಾದ ದೇವರು, ಶ್ರೀ ಹಿರೇಮಠ, ಬೀಳಗಿ, ಬಾಗಲಕೋಟೆ ಜಿಲ್ಲೆ.

ಆಧಾರ: 'ಗುರುವರ್ಗ ದರ್ಪಣ' ಗ್ರಂಥಕರ್ತೃ: ಶ್ರೀವಿರೂಪಾಕ್ಷ ಶಾಸ್ತ್ರಿಗಳು

ಬೂದಿಹಾಳು (ಎಸ್.ಜಿ)

ಬೀಳಗಿ ತಾಲ್ಲೂಕಿನ ಬೂದಿಹಾಳು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿನೇಳು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಫಕೀರೇಶ್ವರ ಮಠವು ಅಸ್ತಿತ್ವದಲ್ಲಿದೆ.

ಫಕೀರೇಶ್ವರಮಠ: ಸುಮಾರು ನಾನೂರು ವರ್ಷಗಳ ಹಿಂದೆ ಸ್ಥಾಪನೆಯಾದ ಈ ಮಠವು ಬೂದಿಹಾಳು ಗ್ರಾಮದ ಧಾರ್ಮಿಕ ಚಟುವಟಿಕೆಯ ಕೇಂದ್ರ ಬಿಂದುವಾಗಿ ರೂಪುಗೊಂಡಿದೆ. ವಿರಕ್ತಸಂಪ್ರದಾಯದ, ಕುಮಾರ ಸಮಯದ ಈ ಮಠವನ್ನು ಶ್ರೀಫಕೀರೇಶ್ವರ ಸ್ವಾಮಿಗಳು ಸ್ಥಾಫನೆ ಮಾಡಿರುವರೆಂದು ಹೇಳಲಾಗುತ್ತಿದೆ. ಶ್ರೀ ಫಕೀರೇಶ್ವರ ಸ್ವಾಮಿಗಳು ಬಿಜಾಪುರದಿಂದ ಲೋಕಸಂಚಾರಕ್ಕೆ ಹೊರಟು ಈ ಗ್ರಾಮದ ಕೃಷ್ಣಾ ನದಿಯ ದಡದಲ್ಲಿ ಅನುಷ್ಠಾನಗೊಂಡು, ಧರ್ಮ ಪ್ರಚಾರವನ್ನು ಕೈಗೊಂಡು ಭಕ್ತರನ್ನು ಉದ್ಧರಿಸಿದರೆಂದು ಹೇಳಲಾಗುತ್ತಿದೆ. ಕೃಷ್ಣಾ ನದಿಯು ಉತ್ತರ ವಾಹಿನಿಯಾಗಿ ಹರಿದು ಈ ಕ್ಷೇತ್ರವನ್ನು ಪಾವನ ಗೊಳಿಸಿದೆ. ಇಂತಹ ಕ್ಷೇತ್ರದಲ್ಲಿ ಶ್ರೀ ಫಕೀರೇಶ್ವರರು ನೆಲೆ ನಿಂತು ಇಲ್ಲಿ ಮಠವನ್ನು ಸ್ಥಾಪಿಸಿದ್ದಾರೆ.

ಪ್ರಕೃತಿಯ ಸೊಬಗಿನ ಮಧ್ಯೆ ಸ್ಥಾಪನೆಯಾಗಿರುವ ಈ ಮಠವು ಧಾರ್ಮಿಕವಾಗಿಯೂ ವೈಭವಯುತವಾಗಿ ಬೆಳೆದಿದೆ.

ಈಗ ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಮುಳುಗಡೆಯಾಗಲಿದೆ. ಈಗಾಗಲೇ ಸರ್ಕಾರ ನಿಗದಿ ಮಾಡಿದಂತೆ ಒಂದೂವರೆ ಕಿ.ಮೀ ದೂರದ ಎತ್ತರದ ಸ್ಥಳಕ್ಕೆ ಮಠವು ಸ್ಥಳಾಂತರಗೊಂಡು ತನ್ನ ಧಾರ್ಮಿಕ ಕಾರ್ಯಗಳನ್ನು ಮುಂದುವರೆಸಲಿದೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ಫಕೀರೇಶ್ವರ ಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಸಂಗಯ್ಯ ಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಸಿದ್ಧರಾಮ ಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಪ್ರಭು ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ನಾಲ್ಕುನೂರು ವರ್ಷಗಳ ಹಿಂದೆ ಮಠವು ಪ್ರಾರಂಭವಾದರೂ ಮಠದ ಪ್ರಾರಂಭದ ನಂತರ ಕೆಲವು ದಿನಗಳ ಕಾಲ ಮಠಾಧೀಶರಿಲ್ಲದೆ ಖಾಲಿ ಉಳಿದ ಕಾರಣಕ್ಕೆ, ಪರಂಪರೆಯಲ್ಲಿ ಕೇವಲ ನಾಲ್ಕು ಜನ ಗುರುಗಳು ಅಧಿಕಾರ ನಡೆಸಿದ್ದಾರೆ. ಶ್ರೀ ಫಕೀರೇಶ್ವರರು ಇಲ್ಲಿ ನೆಲೆ ನಿಂತು ಹೋದ ಮೇಲೆ ಮಠಕ್ಕೆ ಉತ್ತರಾಧಿಕಾರಿಗಳಾಗಿ ನೇಮಕಗೊಂಡ ಗುರುಗಳ ಬಗ್ಗೆ ಸ್ಪಷ್ಟವಾದ ಆಧಾರ ಇಲ್ಲ.ನಂತರ ಶ್ರೀ ಸಂಗಯ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದಿದ್ದಾರೆ. ಇವರ ಕಾಲದಲ್ಲಿ ಗ್ರಾಮದ ಭಕ್ತರೆಲ್ಲ ಗುರುಗಳಿಗೆ ಸಹಕಾರ ನೀಡಿ ಮಠದ ಕಟ್ಟಡವನ್ನು ನಿರ್ಮಿಸಿದ್ದಾರೆ. ಇವರು ವಾಕ್‌ಸಿದ್ಧಿಗಳಾಗಿದ್ದ ಕಾರಣ ಇವರ ಎದುರು ಯಾವ ಭಕ್ತರೂ ಸುಳಿಯುತ್ತಿರಲಿಲ್ಲವಂತೆ. ನಂತರ ಅಧಿಕಾರಕ್ಕೆ ಬಂದ ಶ್ರೀ ಸಿದ್ಧರಾಮ ಸ್ವಾಮಿಗಳು ಶಾಂತ ಸ್ವಭಾವದವರಾಗಿ, ಶಿವಪೂಜಾನಿಷ್ಠರಾಗಿ ವೀರಶೈವ ಧರ್ಮವನ್ನು ಹೆಚ್ಚು ಪ್ರಚಾರಪಡಿಸಿ ಬೆಳೆಸಿದರು. ಇವರು ಪ್ರತಿದಿನ ನಡೆಸುತ್ತಿದ್ದ ಧರ್ಮೋಪದೇಶದಿಂದ ಭಕ್ತರು ಸಂಸ್ಕಾರವಂತರಾಗಿ ಬದುಕಲು ಕಾರಣವಾಯಿತು. ಅಲ್ಲದೆ ಸಾಮರಸ್ಯದ ಬದುಕನ್ನು ಬದುಕಿ, ಕಾಯಕ ಯೋಗದಲ್ಲಿ ತಮ್ಮನ್ನು ತೊಡಗಿಸಿಕೊಂಡ ಭಕ್ತರು ಅಭಿವೃದ್ಧಿಯನ್ನು ಕಂಡರು. ಶ್ರೀ ಸಿದ್ಧರಾಮ ಸ್ವಾಮಿಗಳು ಹಿಂದೂ ಮತ್ತು ಮುಸ್ಲಿಂರಲ್ಲಿ ಭಾವೈಕ್ಯತೆಯನ್ನು ತಂದರು. ಇಂತಹ ಸಾಧಕರು ೧೯೮೦ ರ ನವೆಂಬರ್ ಹತ್ತರಂದು ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಮಠವು ಎರಡು ವರ್ಷಗಳ ಕಾಲ ಮಠಾಧೀಶರಿಲ್ಲದೆ ಖಾಲಿ ಉಳಿಯಬೇಕಾಯಿತು. ನಂತರ ೧೯೮೨ ರಲ್ಲಿ ಶ್ರೀ ಪ್ರಭು ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ.

ಶ್ರೀ ಪ್ರಭು ಸ್ವಾಮಿಗಳು ಸಿರಸಂಗಿ ಸಮೀಪದ ಕಲ್ಲಾಪುರ ಗ್ರಾಮದ ಶ್ರೀ ರಾಜಶೇಖರಯ್ಯ ಮತ್ತು ಶ್ರೀಮತಿ ಗುರ ಬಸಮ್ಮನವರ ಪುತ್ರರಾಗಿ ೧೯೬೦ರ ಜೂನ್‌ನಲ್ಲಿ ಜನಿಸಿದರು. ಇವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಸಿರಸಂಗಿಯಲ್ಲಿ ಮಾಡಿ, ಹೊನ್ನಾಳಿ, ಹುಬ್ಬಳ್ಳಿ ಮತ್ತು ಮೈಸೂರಿನಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿದರು. ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಕನ್ನಡ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು, ಹುಬ್ಬಳ್ಳಿಯ ಮೂರು ಸಾವಿರ ಮಠದಲ್ಲಿ ಮೂರು ವರ್ಷ ನೆಲೆಸಿದ್ದರು. ನಂತರ ಭಕ್ತರ ಅಪೇಕ್ಷೆಯಮೇರೆಗೆ ಈ ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡು ಅಧಿಕಾರವನ್ನು ವಹಿಸಿಕೊಂಡರು. ಕ್ರಿಯಾಶೀಲರಾಗಿ, ಪ್ರಗತಿಪರ ಧೋರಣೆಯನ್ನು ಹೊಂದಿರುವ ಇವರು, ಧರ್ಮವನ್ನು ವೈಜ್ಞಾನಿಕ ದೃಷ್ಟಿಕೋನದೊಂದಿಗೆ ಅವಲೋಕಿಸಿ, ಧರ್ಮದ ತಳಹದಿಯ ಮೇಲೆ ಸಮಾಜವನ್ನು ಬೆಳೆಸಲು ಹೊರಟಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಮೂರು ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆಪೂಜೆ, ಶ್ರಾವಣಮಾಸದಲ್ಲಿ ಪುರಾಣ, ಶ್ರೀ ಫಕೀರೇಶ್ವರ ಜಾತ್ರೆಯ ಅಂಗವಾಗಿ ಆಗಿ ಹುಣ್ಣಿಮೆಯಂದು ಒಂದು ವಾರ ಕಾಲ ದನಗಳ ಜಾತ್ರೆ ಈ ರೀತಿ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಈ ಸಂದರ್ಭಗಳಲ್ಲಿ ಅನ್ನ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಹಿಂದೆ ಶ್ರೀ ದೇಸಾಯಿಯವರು ಮಠಕ್ಕೆ ನೀಡಿದ್ದ ನಲವತ್ತೈದು ಎಕರೆ ಇನಾಂ ಭೂಮಿಯಲ್ಲಿ ಈಗ ಹದಿನೈದು ಎಕರೆ ಮಾತ್ರ ಉಳಿದಿದ್ದು, ಈ ಭೂಮಿಯು ಮುಳುಗಡೆಯಾಗಲಿದೆ. ಕಲಿಯುವ ಬಡಮಕ್ಕಳಿಗೆ ಮಠದಲ್ಲಿ ಆಶ್ರಯ ಕಲ್ಪಿಸಲಾಗಿದೆ. ಮಠ ಮತ್ತು ಮಠದ ಆಸ್ತಿಯು ಮುಳುಗಡೆಯಾಗಲಿರುವುದರಿಂದ ಸರ್ಕಾರದ ಪುನರ್ ವಸತಿ ಯೋಜನೆಯಡಿ ಮಠಕ್ಕೆ ಪರಿಹಾರವು ದೊರಕಿದ್ದು ಹೊಸ ಸ್ಥಳದಲ್ಲಿ ಮಠವನ್ನು ನಿರ್ಮಿಸಲಾಗಿದೆ.

ವಿಳಾಸ: ಶ್ರೀ ಪ್ರಭುಸ್ವಾಮಿಗಳು,ಶ್ರೀ ಫಕೀರೇಶ್ವರಮಠ, ಬೂದಿಹಾಳು (ಎಸ್.ಜಿ)ಬೀಳಗಿ ತಾಲ್ಲೂಕು,ಬಾಗಲಕೋಟೆ ಜಿಲ್ಲೆ.

❑

ಮುಧೋಳ ತಾಲ್ಲೂಕು

ಬಾಗಲಕೋಟೆ ಜಿಲ್ಲೆಯ ಮುಧೋಳು ತಾಲ್ಲೂಕು ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರಕ್ಕೆ ಅಪಾರ ಕೊಡುಗೆಯನ್ನು ನೀಡಿದೆ. ಇಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆದಿದೆ. ಇಲ್ಲಿ ನಲವತ್ತಾರು ಮಠಗಳು ಅಸ್ತಿತ್ವದಲ್ಲಿದ್ದವೆಂದು ಹೇಳಲಾಗುತ್ತದೆ. ಇಂದು ಏಳು ಮಠಗಳು ಅಸ್ತಿತ್ವದಲ್ಲಿವೆ.

ಇಂಗಳಗಿ

ಮುಧೋಳ ತಾಲ್ಲೂಕಿನ ಇಂಗಳಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಆರು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಇಂಗಳಗಿ ಗ್ರಾಮದ ಮಧ್ಯಭಾಗದಲ್ಲಿ ಪುತ್ರವರ್ಗದ, ರಂಭಾಪುರಿ ಪೀಠದ ಶಾಖಾಮಠವಾದ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ. ಮೊದಲು ಮೆಟಗಲ್ಲು ಗ್ರಾಮದಲ್ಲಿ ಮೂಲಮಠವು ಅಸ್ತಿತ್ತ್ವದಲ್ಲಿತ್ತು. ಈ ಮಠದ ಪರಂಪರೆಯ ಗುರುಗಳಾದ ಶ್ರೀ ಕಾಡಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಇಂಗಳಗಿಗೆ ಬಂದು ನೆಲಸಿ ಮಠವನ್ನು ಸ್ಥಾಪನೆಮಾಡಿದ್ದಾರೆ. ಅಂದು ಸ್ಥಾಪನೆಗೊಂಡ ಮಠವು ಈತನಕ ಬೆಳೆದು ಬಂದಿದೆ.

ಪರಂಪರೆ:
೧. ಷ.ಬ್ರ.ಶ್ರೀ ಕಾಡಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದಿದೆ. ಮೆಟಗಲ್ಲಿನಲ್ಲಿ ಸ್ಥಾಪನೆಯಾದ ಮೂಲಮಠದ ಪರಂಪರೆಯನ್ನು ಆಧಾರಗಳ ಕೊರತೆಯಿಂದ ಗುರುತಿಸಲು ಸಾಧ್ಯವಾಗುತ್ತಿಲ್ಲ. ಅಲ್ಲಿಂದ ಇಂಗಳಗಿಗೆ ಸ್ಥಳಾಂತರಗೊಂಡಾಗ ಮಠದ ಪರಂಪರೆಯ ಗುರುಗಳಾಗಿದ್ದ ಶ್ರೀ ಕಾಡುಸಿದ್ಧೇಶ್ವರರು ೧೯೬೧ ರಲ್ಲಿ ಲಿಂಗೈಕ್ಯರಾಗಿದ್ದಾರೆ. ನಂತರ ಇಪ್ಪತ್ತೆಂಟು ವರ್ಷಗಳ ಕಾಲ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿಯಿತು. ಈ ಸಂದರ್ಭದಲ್ಲಿ ಮಠದ ವಂಶಸ್ಥರೇ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದರು. ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು, ಶ್ರೀ ಮಹಾದೇವಯ್ಯ ಮತ್ತು ಶ್ರೀಮತಿ ಶಿವಲಿಂಗಮ್ಮನವರ ಪುತ್ರರಾಗಿ ೧೯೬೦ ರಲ್ಲಿ ಜನಿಸಿದರು. ಗುರುಗಳು ಮುರುಗೋಡದಲ್ಲಿ ಸಂಸ್ಕೃತ ವಿದ್ಯಾಭ್ಯಾಸವನ್ನು ಮಾಡಿ ಮಠಕ್ಕೆ ಆಗಮಿಸಿ, ೧೯೮೯ ರಲ್ಲಿ ಪಟ್ಟಾಧಿಕಾರದ ಅನುಗ್ರಹವನ್ನು ಪಡೆದರು.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಶ್ರೀ ಕಾಡಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳ ಗದ್ದುಗೆ ಸ್ಥಾಪನೆಯಾಗಿದೆ. ಈ ಗದ್ದುಗೆಗೆ ನಿತ್ಯಪೂಜೆಯನ್ನು ನಡೆಸಲಾಗುತ್ತಿದೆ. ಸೀಗೆ ಹುಣ್ಣಿಮೆಯ ದಿನ ಶ್ರೀ ಕಾಡಸಿದ್ಧೇಶ್ವರರ ಜಾತ್ರೆಯನ್ನು ಎರಡು ದಿನಗಳವರೆಗೆ ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಅನ್ನ ದಾಸೋಹವನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಇಂಗಳಗಿ, ಮುಧೋಳು ತಾ, ಬಾಗಲಕೋಟೆಜಿಲ್ಲೆ.

ಎಡಹಳ್ಳಿ

ಮುಧೋಳ ತಾಲ್ಲೂಕಿನ ಎಡಹಳ್ಳಿ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಆರು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀಅಡವಿಸಿದ್ಧೇಶ್ವರ ಮಠವು ಅಸ್ತಿತ್ವದಲ್ಲಿದೆ.

ಅಡವೀಶ್ವರಮಠ: ಎಡಹಳ್ಳಿ ಗ್ರಾಮದಲ್ಲಿ ಹನ್ನೆರಡನೆಯ ಶತಮಾನದಲ್ಲಿ ಮಠವು ಸ್ಥಾಪನೆಯಾಗಿತ್ತೆಂದು ಹೇಳಲಾಗುತ್ತಿದೆ. ಚನ್ನಬಸವಣ್ಣನವರ ಜತೆಯಲ್ಲಿದ್ದ ಶ್ರೀ ರೇಚಪ್ಪ ಸ್ವಾಮಿಗಳು ಇಲ್ಲಿ ಅನುಷ್ಠಾನಕ್ಕೆ ಕುಳಿತು ಜಾಗೃತಸ್ಥಳವನ್ನಾಗಿ ಮಾಡಿದ್ದರು. ನಂತರ ಶ್ರೀ ರೇಚಪ್ಪ ಸ್ವಾಮಿಗಳು ಅಂಕಲಗಿಯಲ್ಲಿ ನೆಲೆಸಿ,'ಶ್ರೀ ಅಡವಿಸಿದ್ಧೇಶ್ವರ'ರೆಂದು ಹೆಸರುಗಳಿಸಿ ಅನೇಕ ವರ್ಷಗಳಕಾಲ ಬದುಕಿದ್ದರೆಂದು ಹೇಳಲಾಗುತ್ತಿದೆ. ಈ ಮಠವು ರಂಭಾಪುರಿ ಪೀಠದ ಶಾಖಾಮಠವಾಗಿ, ಗುರುಸ್ಥಲದಲ್ಲಿ ಬೆಳೆದಿರುವುದು

ಒಂದು ವಿಶೇಷವಾಗಿದೆ. ಈ ಮಠದ ಮಠಾಧೀಶರು ಗೃಹಾಸ್ಥಶ್ರಮವನ್ನು ಸ್ವೀಕರಿಸಿಯೇ, ಮಠಾಧೀಶರಾಗಿ ಅಧಿಕಾರ ನಡೆಸುವುದು ಪರಂಪರೆಯಾಗಿದೆ.ಇಂತಹ ವಿಶಿಷ್ಟ ಸಂಪ್ರದಾಯದಲ್ಲಿ ಬೆಳೆದ ಮಠವು ಅಂದಿನಿಂದ ಇಂದಿನ ತನಕ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ.

ಪರಂಪರೆ:
೧. ಶ್ರೀ ವೀರಯ್ಯಸ್ವಾಮಿಗಳು
೨. ಶ್ರೀ ಶಿವಯ್ಯಸ್ವಾಮಿಗಳು
೩. ಶ್ರೀ ವೀರಯ್ಯಸ್ವಾಮಿಗಳು
೪. ಶ್ರೀ ಚಂದ್ರಶೇಖರಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಮಠದಲ್ಲಿ ಅಧಿಕಾರ ನಡೆಸಿದ ಗುರುಗಳ ಬಗ್ಗೆ ಹೆಚ್ಚು ಮಾಹಿತಿ ದೊರೆಯದಾಗಿದೆ. ಈಗಿನ ಗುರುಗಳಾದ ಶ್ರೀ ಚಂದ್ರಶೇಖರ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ಮಠದ ಆವರಣದಲ್ಲಿ ಶ್ರೀಅಡವಿ ಸಿದ್ಧೇಶ್ವರ ಸ್ವಾಮಿಗಳ ತೋರು ಗದ್ದುಗೆಯನ್ನು ಸ್ಥಾಪಿಸಿ, ಮಂಟಪವನ್ನು ನಿರ್ಮಿಸಲಾಗಿದೆ. ಮಠದ ದ್ವಾರಕ್ಕೆ ಸ್ವಾಗತ ಕಮಾನನ್ನು ನಿರ್ಮಿಸಲಾಗಿದೆ. ಅಗಿ ಹುಣ್ಣಿಮೆಯಲ್ಲಿ ಶ್ರೀ ಅಡವಿ ಸಿದ್ಧೇಶ್ವರರ ಜಾತ್ರೆಯನ್ನು ನಡೆಸಲಾಗುತ್ತಿದೆ. ನವರಾತ್ರಿಯಲ್ಲಿ ದೇವಿಪುರಾಣ, ಶ್ರಾವಣಮಾಸದಲ್ಲಿ ಪುರಾಣ, ಪ್ರವಚನ, ನಿತ್ಯ ರುದ್ರಾಭಿಷೇಕದ ಪೂಜೆ ಹಾಗೂ ಅನ್ನದಾಸೋಹವನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಚಂದ್ರಶೇಖರ ಸ್ವಾಮಿಗಳು, ಶ್ರೀ ಅಡವೀಶ್ವರಮಠ, ಎಡಹಳ್ಳಿ, ಮುಧೋಳ ತಾಲ್ಲೂಕು,ಬಾಗಲಕೋಟೆ ಜಿಲ್ಲೆ.

ಕಸಬಾಜಂಬಿಗೆ

ಮುಧೋಳ ತಾಲ್ಲೂಕಿನ ಕಸಬಾಜಂಬಿಗೆ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹದಿನೈದು ಕಿ.ಮೀ ದೂರದಲ್ಲಿದೆ. ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಕಸಬಾಜಂಬಿಗೆ ಗ್ರಾಮದ ಮಧ್ಯಭಾಗದಲ್ಲಿ ಪುತ್ರವರ್ಗದ ಪರಂಪರೆಯ, ರಂಭಾಪುರಿ ಪೀಠದ ಶಾಖಾಮಠವಾದ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದಲ್ಲಿ ಸ್ಥಾಪನೆಯಾದ ಈ ಮಠವನ್ನು ಶ್ರೀ ಗುರಪ್ಪಯ್ಯ ಶಿವಾಚಾರ್ಯ ಸ್ವಾಮಿಗಳು ಪ್ರಾರಂಭಿಸಿ ದರೆಂದು ಹೇಳಲಾಗುತ್ತಿದೆ. ಗುರುಗಳು ಮಠವನ್ನು ಸ್ಥಾಪಿಸಿ ಗ್ರಾಮದಲ್ಲಿ ಧಾರ್ಮಿಕ ಚಟುವಟಿಕೆಗಳು ನಡೆಯುವಂತೆ ವ್ಯವಸ್ಥೆ ಮಾಡಿದರು. ಅಂದು ಸ್ಥಾಪಿತಗೊಂಡ ಮಠದಲ್ಲಿ ಶಿವಾನುಭವ ಗೋಷ್ಠಿಗಳು ನಡೆಯತೊಡಗಿ ವೀರಶೈವ ಧರ್ಮದ ಆಚರಣೆಗಳನ್ನು ನಡೆಸುವ ಬಗ್ಗೆ ಗುರುಗಳು, ಭಕ್ತರಿಗೆ ಉಪದೇಶವನ್ನು ನೀಡಿ ಅಷ್ಟಾವರಣಗಳ ಮಹತ್ವವನ್ನು ತಿಳಿಸಿ ವೀರಶೈವ ಧರ್ಮವು ವ್ಯಾಪಕವಾಗಿ ಬೆಳೆಯಲು ಕಾರಣೀಭೂತರಾಗಿದ್ದಾರೆ.

ಪರಂಪರೆ:
೧. ಷ.ಬ್ರ.ಶ್ರೀ ಗುರಪ್ಪಯ್ಯ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಗುರುಪಾದ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದಿದೆ. ಮಠದ ಕರ್ತೃ ಗುರುಗಳಾದ ಶ್ರೀ ಗುರಪ್ಪಯ್ಯ ಶಿವಾಚಾರ್ಯ ಸ್ವಾಮಿಗಳ ನಂತರ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದಿದ್ದಾರೆ. ಇವರು ಮಹಾ ತಪಸ್ವಿಗಳಾಗಿ, ವಾಕ್‌ಸಿದ್ಧಿ ಪುರುಷ ರಾಗಿದ್ದರೆಂದು ಹೇಳಲಾಗುತ್ತಿದೆ. ಇವರ ಕಾಲದಲ್ಲಿ ಮಠವು ಹೆಚ್ಚು ಹೆಸರು ಪಡೆದು ಬೆಳೆದಿದೆ. ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ನೂರಮೂರು ವರ್ಷ ಬದುಕಿ ೧೯೯೩ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳು ಅಧಿಕಾರ ನಡೆಸಿದ್ದಾರೆ. ಇವರ ನಂತರ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ೧೯೯೪ ರಲ್ಲಿ ಅಧಿಕಾರಕ್ಕೆ ಬಂದಿದ್ದಾರೆ. ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಶ್ರೀ ಗುರುಲಿಂಗಯ್ಯ ಮತ್ತು ಶ್ರೀಮತಿ

ಚನ್ನಬಸಮ್ಮನವರ ಪುತ್ರರಾಗಿ ೧೯೩೦ ರಲ್ಲಿ ಜನಿಸಿದರು. ಇವರು ಕಾಶಿಯಲ್ಲಿ ಹದಿನಾಲ್ಕು ವರ್ಷಗಳ ಕಾಲ ಹಿಂದಿ ಮತ್ತು ಸಂಸ್ಕೃತದಲ್ಲಿ ಅಧ್ಯಯನ ಮಾಡಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಇವರು ಬಾಗಲಕೋಟೆಯ ಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಹಿಂದಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ೧೯೯೨ರಲ್ಲಿ ನಿವೃತ್ತಿಯಾಗಿ ಮಠದ ಆಡಳಿತವನ್ನು ನೋಡಿಕೊಳ್ಳತೊಡಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯಲ್ಲಿ ಒಟ್ಟು ಐದು ಜನ ಗುರುಗಳು ಅಧಿಕಾರವನ್ನು ನಡೆಸಿದ್ದಾರೆ ಎಂದು ಹೇಳಲಾದರೂ ಆಧಾರಗಳ ಕೊರತೆಯಿಂದ ಕೇವಲ, ನಾಲ್ಕು ಜನ ಗುರುಗಳ ಹೆಸರುಗಳನ್ನು ಮಾತ್ರ ದಾಖಲಿಸಬಹುದಾಗಿದೆ. ಮಠದ ಆವಣರದಲ್ಲಿರುವ ಗದ್ದುಗೆಗಳಿಗೆ ನಿತ್ಯ ಪೂಜೆ, ಭಾದ್ರಪದ ಶುದ್ಧ ಪ್ರತಿಪದದಲ್ಲಿ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆ ಹಾಗೂ ಶ್ರಾವಣಮಾಸದಲ್ಲಿ ಪುರಾಣ ಪ್ರವಚನವನ್ನು ನಡೆಸಲಾಗುತ್ತಿದೆ. ಗುರುಗಳು ವೀರಶೈವ ಧರ್ಮವನ್ನು ಬೆಳೆಸುವ ನಿಟ್ಟಿನಲ್ಲಿ ಪ್ರಗತಿಪರ ಕಾರ್ಯಕ್ರಮಗಳನ್ನು ಮಾಡಿ ಹೆಸರು ಗಳಿಸಿದ್ದಾರೆ. ಇವರು ವೃತ್ತಿಯಿಂದ ನಿವೃತ್ತಿಯಾದ ನಂತರ ತಮ್ಮ ಪಟ್ಟಾಧಿಕಾರದ ಸ್ಮರಣಾರ್ಥ ಹಿರಿಯ ಗುರುಗಳಾದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ ಹೆಸರಿನಲ್ಲಿ ಕಲ್ಯಾಣ ಮಂಟಪವನ್ನು ನಿರ್ಮಿಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು, ಶ್ರೀ ಹಿರೇಮಠ, ಕಸಬಾಜಂಬಗಿ, ಮುಧೋಳ ತಾ,ಬಾಗಲಕೋಟೆಜಿಲ್ಲೆ.

ನಾಗರಾಳು

ಮುಧೋಳ ತಾಲ್ಲೂಕಿನ ನಾಗರಾಳು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹದಿನೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಅಂಬಿಗರ ಚೌಡಯ್ಯನಮಠವು ಅಸ್ತಿತ್ವದಲ್ಲಿದೆ.

ಅಂಬಿಗರ ಚೌಡಯ್ಯನಮಠ: ನಾಗರಾಳು ಗ್ರಾಮದಲ್ಲಿ ಶ್ರೀ ಅಂಬಿಗರ ಚೌಡಯ್ಯನಮಠವು ಸ್ಥಾಪನೆಯಾಗಿದೆ. ಈ ಮಠವನ್ನು ಬಾಗಲಕೋಟೆ ತಾಲ್ಲೂಕಿನ ಮಹಾಂತ ತೀರ್ಥದ ಶ್ರೀ ಬಸವಲಿಂಗ ಸ್ವಾಮಿಗಳು ೧೯೮೮ ರಲ್ಲಿ ಪ್ರಾರಂಭ ಮಾಡಿದ್ದಾರೆ. ಶರಣಸ್ಥಲದ ಈ ಮಠವು ಶರಣಾದಿ ಪ್ರಮಥರ ತತ್ತ್ವಗಳನ್ನು ಪ್ರಚಾರ ಮಾಡುವ ಉದ್ದೇಶಕ್ಕಾಗಿ ಸ್ಥಾಪನೆಯಾಗಿದೆ. ಶ್ರೀ ಬಸವಲಿಂಗ ಸ್ವಾಮಿಗಳು ಗಂಗಾ ಮತಸ್ಥರು ಶರಣ ಧರ್ಮವನ್ನು ಒಪ್ಪಿಕೊಳ್ಳುವಂತೆ ಮಾಡಿ, ಇವರಿಗೆ ಲಿಂಗಧಾರಣೆಯನ್ನು ಮಾಡಿದ್ದಾರೆ. ಇವರ ಧಾರ್ಮಿಕ ಆಚರಣೆಗಳಿಗೆ ಹಾಗೂ ಧರ್ಮೋಪದೇಶಕ್ಕಾಗಿ ಇಲ್ಲಿ ಮಠವನ್ನು ಸ್ಥಾಪಿಸಿ ಶ್ರೀ ಗುರುಬಸವ ಸ್ವಾಮಿಗಳನ್ನು ನೇಮಿಸಲಾಗಿದೆ.ಇವರು ಧಾರ್ಮಿಕ ಕಾರ್ಯ ಗಳನ್ನು ನಡೆಸುತ್ತಿದ್ದಾರೆ. ಕಾರು ಹುಣ್ಣಿಮೆಯ ಹಿಂದಿನ ದಿನ ಅಂಬಿಗರ ಚೌಡಯ್ಯನ ಜಯಂತ್ಯೋತ್ಸವವನ್ನು ಆಚರಿಸಲಾಗುತ್ತಿದೆ.

ವಿಳಾಸ: ಶ್ರೀ ಗುರುಬಸವ ಸ್ವಾಮಿಗಳು, ಶ್ರೀ ಅಂಬಿಗರ ಚೌಡಯ್ಯನ ಮಠ, ನಾಗರಾಳು, ಮುಧೋಳ ತಾ, ಬಾಗಲಕೋಟೆ ಜಿಲ್ಲೆ.

ಮಹಾಲಿಂಗಪುರ

ಮುಧೋಳ ತಾಲ್ಲೂಕಿನ ಮಹಾಲಿಂಗಪುರ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತೈದು ಕಿ.ಮೀ ದೂರ ದಲ್ಲಿದೆ. ಈ ಗ್ರಾಮದ ಮೊದಲ ಹೆಸರು 'ನರಗಟ್ಟಿ'ಎಂದಾಗಿತ್ತು. ಶ್ರೀ ಮಹಾಲಿಂಗೇಶ್ವರರು ಇಲ್ಲಿಗೆ ಆಗಮಿಸಿ ಇಲ್ಲಿ ಪವಾಡ ಗೈದು ಈ ಸ್ಥಳವನ್ನು ಸುಕ್ಷೇತ್ರಗೊಳಿಸಿದ ಮೇಲೆ ನರಗಟ್ಟಿಯು 'ಮಹಾಲಿಂಗಪುರ' ಎಂದು ಹೆಸರಾಯಿತು. ಪುರಾಣಪ್ರಸಿದ್ಧವಾದ ಇಂಥ ಕ್ಷೇತ್ರದಲ್ಲಿ ವೀರಶೈವ ಧರ್ಮ ಪ್ರಬಲವಾಗಿ ಬೇರೂರಿ ಬೆಳೆದಿದೆ. ಇದಕ್ಕೆ ಸಾಕ್ಷಿಯೆಂಬಂತೆ ಈ ಗ್ರಾಮದಲ್ಲಿ ಶ್ರೀ ಮಹಾಲಿಂಗೇಶ್ವರಮಠ, ಶ್ರೀ ನೀಲಕಂಠೇಶ್ವರಮಠ ಅಸ್ತಿತ್ವದಲ್ಲಿವೆ.

ಮಹಾಲಿಂಗೇಶ್ವರಮಠ: ಶ್ರೀ ಮಹಾಲಿಂಗೇಶ್ವರರು ಮಹಾ ಪವಾಡಪುರುಷರಾಗಿ, ತಮ್ಮಯೋಗಸಿದ್ಧಿಯಿಂದ ದೈವತ್ವಕ್ಕೇರಿ ದವರು ಇವರು ಹದಿನೆಂಟನೆಯ ಶತಮಾನದಲ್ಲಿ ಅವತರಿಸಿ, ಮನುಕುಲವನ್ನು ಉದ್ಧರಿಸಿದ ಮಹಾಯೋಗಿಗಳು.ಈ ಮಹಾ ಪುರುಷರು ಲೋಕ ಸಂಚಾರ ಕೈಗೊಂಡು ಪವಿತ್ರ ಕ್ಷೇತ್ರಗಳಲ್ಲಿ ನೆಲೆಸಿ ಸಮಾಜವನ್ನು ಪರಿವರ್ತಿಸಿ ಸಂಸ್ಕಾರವಂತವಾಗಿ

ಬೆಳೆಸಿದರು. ಇವರು ಮಹಾರಾಷ್ಟ್ರದ ಜತ್ ತಾಲ್ಲೂಕಿನ ಸಮೀಪದ ಧಪಳಾಪುರಕ್ಕೆ ಆಗಮಿಸಿ ಶ್ರೀ ಗುರುಲಿಂಗ ಸ್ವಾಮಿಗಳಿಂದ ಉಪದೇಶ ಪಡೆದು ವೀರಶೈವ ಧರ್ಮದ ಪ್ರಚಾರಕ್ಕೆ ಹೊರಟರು. ಶ್ರೀ ಮಹಾಲಿಂಗೇಶ್ವರರು ಧಪಳಾಪುರದಿಂದ ನರಗಟ್ಟಿಗೆ ಆಗಮಿಸಿ,ಶಿವಾಲಯದಲ್ಲಿ ವಾಸ್ತವ್ಯ ಮಾಡಿದರು. ಇಲ್ಲಿ ನೆಲೆಸಿದ ಸಂದರ್ಭದಲ್ಲಿ ಶ್ರೀ ಮಹಾಲಿಂಗೇಶ್ವರರು ಅನೇಕ ಪವಾಡ ಗಳನ್ನು ಮಾಡಿದರು. ನರಗಟ್ಟಿಯಲ್ಲಿ ಲೌಕಿಕತೆಯಿಂದ ಆಧ್ಯಾತ್ಮ ಮರೆಯಾಗಿತ್ತು. ಈ ಸಂದರ್ಭದಲ್ಲಿ ಮಠವನ್ನು ಸ್ಥಾಪಿಸಿ ಆಧ್ಯಾತ್ಮ ವಾತಾವರಣ ಬೆಳೆಯಲು ಕಾರಣಕರ್ತರಾದರು. ಇದರಿಂದ ನರಗಟ್ಟಿಯ ಭಕ್ತರು ಸಂಸ್ಕಾರವಂತರಾಗಿ ವೀರಶೈವ ಧರ್ಮದ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲದ ಅನ್ವಯ ಲಿಂಗಧಾರಿಗಳಾಗಿ ವೀರಶೈವಧರ್ಮವನ್ನು ಬೆಳೆಸಿದರು. ಶ್ರೀ ಮಹಾಲಿಂಗೇಶ್ವರರಿಂದ ಬೆಳಕುಕಂಡ ನರಗಟ್ಟಿ ಗ್ರಾಮವು ಮಹಾಲಿಂಗಪುರವಾಗಿ ಪರಿವರ್ತನೆಯಾಯಿತು. ಗುರುಗಳು ಇಲ್ಲಿ ಮಠವನ್ನು ಸ್ಥಾಪಿಸಿ,ಲೋಕ ಸಂಚಾರ ಕೈಗೊಂಡು ಲೋಕೋದ್ಧಾರವನ್ನು ಮಾಡಿ ಪುನಃ ಮಹಾಲಿಂಗಪುರಕ್ಕೆ ಬಂದು ಜೀವಂತ ಸಮಾಧಿಯಾದರು. ಗುರುಗಳು ಜೀವಂತ ಸಮಾಧಿಯಾದ ಸ್ಥಳ ಧಾರ್ಮಿಕ ಕ್ಷೇತ್ರವಾಗಿ ಬೆಳೆಯಿತು. ಗುರುಗಳ ಶಿಷ್ಯರಾದ ಶ್ರೀ ಮರಿದೇವರು ಮಠದ ಪರಂಪರೆಯನ್ನು ಮುನ್ನಡೆಸಿಕೊಂಡು ಬಂದು, ವೀರಶೈವ ಧರ್ಮದ ಪ್ರಚಾರವನ್ನು ಕೈಗೊಂಡು ಮಠವನ್ನು ಬೆಳೆಸಿದ್ದಾರೆ.

ಪರಂಪರೆ: ೧. ಶ್ರೀ ಜಗದ್ಗುರು ಮಹಾಲಿಂಗೇಶ್ವರ ಶಿವಯೋಗಿಗಳು (ಕ್ರಿ.ಶ.ಸು. ೧೭೫೦)
೨. ಶ್ರೀ ಜಗದ್ಗುರು ಮಹಾಲಿಂಗೇಶ್ವರ ಶಿವಯೋಗಿ ಮಹಾರುದ್ರಸ್ವಾಮಿಗಳು (ಕ್ರಿ.ಶ. ೧೭೯೩)
೩. ಶ್ರೀ ಜಗದ್ಗುರು ಮಹಾಲಿಂಗೇಶ್ವರ ಶಿವಯೋಗಿ ಮಲ್ಲಿಕಾರ್ಜುನಸ್ವಾಮಿಗಳು (ಕ್ರಿ.ಶ. ೧೮೫೫)
೪. ಶ್ರೀ ಜಗದ್ಗುರು ಮಹಾಲಿಂಗೇಶ್ವರ ಶಿವಯೋಗಿ ಮಹಾಲಿಂಗಸ್ವಾಮಿಗಳು (ಕ್ರಿ.ಶ. ೧೮೬೫)
೫. ಶ್ರೀ ಜಗದ್ಗುರು ಮಹಾಲಿಂಗೇಶ್ವರ ಶಿವಯೋಗಿ ಬಸವಲಿಂಗಸ್ವಾಮಿಗಳು (೧೮೭೪ - ೧೯೩೬)
೬. ಶ್ರೀ ಜಗದ್ಗುರು ಮಹಾಲಿಂಗೇಶ್ವರ ಶಿವಯೋಗಿ ಗುರುಲಿಂಗಸ್ವಾಮಿಗಳು (೧೯೩೬ - ೧೯೬೫)
೭. ಶ್ರೀ ಜಗದ್ಗುರು ಮಹಾಲಿಂಗೇಶ್ವರ ಶಿವಯೋಗಿ ರಾಜೇಂದ್ರಸ್ವಾಮಿಗಳು (೧೯೭೧ -)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಮಠದ ಕರ್ತೃ ಗುರುಗಳಾದ ಶ್ರೀ ಮಹಾಲಿಂಗೇಶ್ವರರು ಜೀವಂತ ಸಮಾಧಿಯಾದ ಮೇಲೆ ಮಠವನ್ನು ಶ್ರೀ ಮರಿ ಮಹಾಲಿಂಗೇಶ್ವರರೆಂದು ಹೆಸರು ಪಡೆದಿದ್ದ ಶ್ರೀಮಹಾರುದ್ರ ಸ್ವಾಮಿಗಳು ಮುನ್ನಡೆಸಿಕೊಂಡು ಬಂದರು. ಮಠದ ಪರಂಪರೆಯ ಗುರುಗಳೆಲ್ಲರೂ ಮಠವನ್ನು ಮುನ್ನಡೆಸಿ ಈ ಜಾಗೃತ ಸ್ಥಳದ ಮಹತ್ವವನ್ನು ಹೆಚ್ಚಿಸಿದರು.

ಹಿಂದಿನ ಗುರುಗಳಾದ ಶ್ರೀ ಗುರುಲಿಂಗ ಸ್ವಾಮಿಗಳು ಮುಧೋಳ ತಾಲ್ಲೂಕಿನ ಕಸಬಾ ಜಂಬಿಗೆಯ ಶ್ರೀ ಬಸವಲಿಂಗಯ್ಯ ಮತ್ತು ಶ್ರೀಮತಿ ಗಿರಿಜಾಂಬೆಯವರ ಪುತ್ರರಾಗಿ ೧೯೩೪ ರಲ್ಲಿ ಜನಿಸಿದ ಶ್ರೀ ರಾಜೇಂದ್ರ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿ ಲಿಂಗೈಕ್ಯರಾದರು. ಈಗಿನ ಪಟ್ಟಾಧ್ಯಕ್ಷರಾದ ಜಗದ್ಗುರು ಶ್ರೀ ಮಹಾಲಿಂಗೇಶ್ವರ ಶಿವಯೋಗಿ ರಾಜೇಂದ್ರ ಸ್ವಾಮಿಗಳು ೧೯೭೧ ರ ಜೂನ್ ಮೂರರಂದು ಅರಬಾವಿ ಹಾಗೂ ಮುರುಗೋಡು ಮಠದ ಮಠಾಧ್ಯಕ್ಷರಾಗಿದ್ದ ಶ್ರೀ ಮಹಾಂತ ಶಿವಯೋಗಿಗಳಿಂದ ಪಟ್ಟಾಧಿಕಾರದ ಅನುಗ್ರಹವನ್ನು ಪಡೆದು ಅಧಿಕಾರಕ್ಕೆ ಬಂದಿದ್ದಾರೆ.ಗುರುಗಳು ಈ ಮಠದ ಮೂಲ ಮಠವಾದ ಧಪಳಾಪುರ ಮಠದ ಆಡಳಿತವನ್ನು ವಹಿಸಿಕೊಂಡರು. ಅಧಿಕಾರವನ್ನು ವಹಿಸಿಕೊಂಡ ಸಂದರ್ಭದಲ್ಲಿ ಗ್ರಾಮಸ್ಥರಿಗೂ ಮತ್ತು ಮಠಾಧೀಶರಿಗೂ ಉಂಟಾದ ಜಿಜ್ಞಾಸೆಯು ನ್ಯಾಯಾಲಯಕ್ಕೆ ಹೋಯಿತು. ಗುರುಗಳು ಸತತ ಇಪ್ಪತ್ನಾಲ್ಕು ವರ್ಷಗಳ ಕಾಲ ಕಾನೂನುಬದ್ಧವಾಗಿ ಹೋರಾಟ ನಡೆಸಿ, ೧೯೯೮ ರ ಡಿಸೆಂಬರ್ ಹದಿನಾಲ್ಕರಂದು ಸುಪ್ರೀಂ ಕೋರ್ಟಿನಲ್ಲಿ ನ್ಯಾಯ ದೊರಕಿಸಿಕೊಂಡರು. ನಂತರ ಗುರುಗಳು ೧೯೯೮ ರ ಡಿಸೆಂಬರ್ ಇಪ್ಪತ್ನಾಲ್ಕರಂದು ಮಠಕ್ಕೆ ಆಗಮಿಸಿ, ಸರ್ಕಾರವು ನೇಮಿಸಿದ್ದ ಆಡಳಿತಾಧಿಕಾರಿ (ರಿಸೀವರ್) ಗಳಿಂದ ಆಡಳಿತವನ್ನು ವಹಿಸಿಕೊಂಡು ಮಠದ ಪರಂಪರೆಗೆ ಅನುಗುಣವಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರಲು ಮುಂದಾಗಿದ್ದಾರೆ. ಜತ್ ಧಪಳಾಪುರ ಮತ್ತು ಮಹಾಲಿಂಗಪುರದ ಮಠಗಳಲ್ಲಿ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುವುದರ ಜೊತೆಗೆ ಅಭಿವೃದ್ಧಿಯನ್ನು ಮಾಡತೊಡಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗುರುಗಳ ಏಳು ಗದ್ದುಗೆಗಳಿಗೆ ನಿತ್ಯ ತ್ರಿಕಾಲ ಪೂಜೆ ನಡೆಯುತ್ತದೆ. ಮಹಾಲಿಂಗೇಶ್ವರರ ಜಾತ್ರೆಯನ್ನು ಭಾದ್ರಪದ ಶುದ್ಧ ಏಕಾದಶಿಯ ದಿನ ನಡೆಸಲಾಗುತ್ತಿದೆ. ಚೈತ್ರ ಶುದ್ಧ ಪ್ರತಿಪದೆಯ ಬೆಳಿಗ್ಗೆ ಒಂಬತ್ತು ಗಂಟೆಗೆ ಜಟೋತ್ಸವದ ಕಾರ್ಯಕ್ರಮ ನಡೆಯುತ್ತಿದೆ.ಶ್ರೀ ಮಹಾಲಿಂಗೇಶ್ವರರು ಈ ಗ್ರಾಮಕ್ಕೆ ಪ್ರಥಮವಾಗಿ ಆಗಮಸಿದ್ದ ಸಂದರ್ಭದಲ್ಲಿ ಭಕ್ತಳಾದ ಸಿದ್ದಾಯಿಗೆ ಐದು ಎಳೆಯ ಜಡೆಗಳನ್ನು ದಯಪಾಲಿಸಿದ್ದರಂತೆ. ಈ ಜಡೆಗಳನ್ನು ಸಿದ್ದಾಯಿಗೆ ನೀಡುವಾಗ ಈ ಜಡೆಗಳು ಬೆಳೆಯುವವರೆಗೆ ನಾನು ಇಲ್ಲಿ ಜೀವಂತವಾಗಿರುತ್ತೇನೆ ಎಂದುಹೇಳಿದ್ದರಂತೆ. ಅಂದಿನಿಂದ ಆ ಜಡೆಗಳು ಬೆಳೆದು ಇಂದು ಸಿಂಬಿಯಾಗಿವೆ. ಭಕ್ತರು ತಮ್ಮ ಇಷ್ಟಾರ್ಥಗಳ ಈಡೇರಿಕೆಗಾಗಿ ಈ ಜಡೆಗಳನ್ನು ಪೂಜಿಸಿ ಗಣಾರಾಧನೆಯನ್ನು ಮಾಡಿಸುತ್ತಾರೆ. ದಸರಾ ಸಂದರ್ಭದಲ್ಲಿ ಒಂಬತ್ತು ದಿನಗಳಕಾಲ ದೇವಸ್ಥಾನದಲ್ಲಿ ತುಪ್ಪದ ದೀವಿಗೆಯನ್ನು ಉರಿಸಲಾಗುತ್ತಿದೆ. ಅಲ್ಲದೆ ವಿಜಯದಶಮಿಯ ದಿನ ಬನ್ನಿ ಮುಡಿಯುವ ಕಾರ್ಯಕ್ರಮ ವಿಶೇಷವಾಗಿ ಜರುಗುತ್ತದೆ.

ಕಾರ್ತೀಕೋತ್ಸವದ ಸಂದರ್ಭದಲ್ಲಿ ಭಕ್ತರು ತಮ್ಮ ಶಕ್ತಿಗನುಸಾರ ಎಣ್ಣೆಯನ್ನು ಹಾಕಿ ತಮ್ಮ ಬಯಕೆಗಳನ್ನು ಈಡೇರಿಸಿಕೊಳ್ಳುತ್ತಾರೆ. ಶ್ರಾವಣಮಾಸದಲ್ಲಿ ಒಂದು ತಿಂಗಳಕಾಲ ಮಹಾರುದ್ರಪೂಜೆ ಹಾಗೂ ಪುರಾಣ ಪ್ರವಚನಗಳು ನಡೆಯುತ್ತಿವೆ. ರೈತರು ಬಿತ್ತನೆ ಪ್ರಾರಂಭ ವಾಗುವ ಮೊದಲು ಜೇಷ್ಠಶುದ್ಧದಲ್ಲಿ ಜೋಳದ ಅನ್ನ (ಕಿಚಡಿ) ವನ್ನು ಬುಟ್ಟಿಯಲ್ಲಿ ಹಾಕಿಕೊಂಡು ಬಂದು ಶ್ರೀ ಮಹಾಲಿಂಗೇಶ್ವ ರರಿಗೆ ಪ್ರಥಮವಾಗಿ ನೈವೇದ್ಯ ಮಾಡಿ ಮಹಾಲಿಂಗಪುರದ ಸುತ್ತಲಿನ ಎಂಟು ಲಿಂಗಗಳಿಗೆ ಹಾಗೂ ಗ್ರಾಮದ ದೇವರುಗಳಿಗೆ ನೈವೇದ್ಯ ಕಾರ್ಯವನ್ನು ಪೂರೈಸುವ ಪರ್ವ(ಪರೇವು) ವಿಶೇಷವಾಗಿರುತ್ತದೆ.

ವಿಳಾಸ: ಶ್ರೀ ಮ.ನಿ.ಪ್ರ. ಜಗದ್ಗುರು ಮಹಾಲಿಂಗೇಶ್ವರ ಶಿವಯೋಗಿ ರಾಜೇಂದ್ರ ಸ್ವಾಮಿಗಳು, ಶ್ರೀ ಮಹಾಲಿಂಗೇಶ್ವರ ಸಿದ್ಧ ಸಂಸ್ಥಾನ ಮಠ, ಮಹಾಲಿಂಗಪುರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.

ನೀಲಕಂಠೇಶ್ವರಮಠ: ಮಹಾಲಿಂಗಪುರದ ನೀಲಕಂಠೇಶ್ವರ ಗಲ್ಲಿಯಲ್ಲಿ ಸ್ಥಾಪನೆಯಾಗಿರುವ ಶ್ರೀ ನೀಲಕಂಠೇಶ್ವರ ಮಠವು ಹುಬ್ಬಳ್ಳಿಯ ಶ್ರೀ ನೀಲಕಂಠೇಶ್ವರ ಮಠದ ಶಾಖಾಮಠವಾಗಿದೆ. ಕುರುವಿನ ಶೆಟ್ಟಿ ಸಮಾಜದ ಧಾರ್ಮಿಕ ಕಾರ್ಯಗಳನ್ನು ನಡೆಸುವ ಉದ್ದೇಶದಿಂದ ಹುಟ್ಟಿಕೊಂಡ ಈ ಮಠವು ವೀರಶೈವ ಧರ್ಮದ ಬೆಳವಣಿಗೆಗೆ ಹೆಚ್ಚು ಶ್ರಮಿಸಿದೆ. ಹುಬ್ಬಳ್ಳಿಯ ಶ್ರೀ ನೀಲಕಂಠೇಶ್ವರ ಮಠದ ಶ್ರೀ ಶಂಕರ ಶಿವಾಚಾರ್ಯ ಸ್ವಾಮಿಗಳು ಇಲ್ಲಿಗೆ ಸಂದರ್ಭಕ್ಕನುಸಾರವಾಗಿ ಬಂದು ಮಠದ ಧಾರ್ಮಿಕ ಹಾಗೂ ಆಡಳಿತ ಕಾರ್ಯವನ್ನು ನಡೆಸಿಕೊಡುತ್ತಾರೆ.

ಈ ಮಠದಲ್ಲಿ ಶ್ರೀ ನೀಲಕಂಠೇಶ್ವರರ ತೋರುಗದ್ದುಗೆಗೆ ನಿತ್ಯಪೂಜೆ, ಶ್ರಾವಣಮಾಸದಲ್ಲಿ ರುದ್ರಾಭಿಷೇಕ, ಕಾರ್ತೀಕೋತ್ಸವದಲ್ಲಿ ಶ್ರೀ ನಿಜಗುಣರ ಜಯಂತ್ಯೋತ್ಸವನ್ನು ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಒಂದು ತಿಂಗಳು ಪುರಾಣ ಪ್ರವಚನವನ್ನು ನಡೆಸಲಾಗುತ್ತಿದೆ. ಯುಗಾದಿಯಲ್ಲಿ ಶ್ರೀ ನೀಲಕಂಠೇಶ್ವರರ ಜಾತ್ರೆ ನಡೆಯುತ್ತಿದೆ. ಗ್ರಾಮದ ಕುರುವಿನ ಶೆಟ್ಟರ ಸಮಾಜದ ಮುಖಂಡರು ಈ ಮಠದ ಧಾರ್ಮಿಕ ಕಾರ್ಯಗಳ ಜವಾಬ್ದಾರಿಯನ್ನು ನೋಡಿಕೊಂಡು ಬರುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶಂಕರ ಶಿವಾಚಾರ್ಯಸ್ವಾಮಿಗಳು, ಶ್ರೀ ನೀಲಕಂಠೇಶ್ವರಮಠ, ಮಹಾಲಿಂಗಪುರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.

ಮುಧೋಳ

ಬಾಗಲಕೋಟೆ ಜಿಲ್ಲೆಯ ಮುಧೋಳ ಪಟ್ಟಣವು ಜಿಲ್ಲಾ ಕೇಂದ್ರದಿಂದ ಪಶ್ಚಿಮಕ್ಕೆ ಅರವತ್ತು ಕಿ.ಮೀ ದೂರದಲ್ಲಿದೆ. ಮುಧೋಳ ಪಟ್ಟಣವು ತಾಲ್ಲೂಕಿನ ಕೇಂದ್ರ ಸ್ಥಳವಾಗಿದೆ. ಬಾದಾಮಿ ಚಾಲುಕ್ಯರ ಹಾಗೂ ಪಟವರ್ಧನ ದೊರೆಯ ಆಡಳಿತ ವ್ಯಾಪ್ತಿಯ ಒಂದು ಮುಖ್ಯ ಸ್ಥಳವಾಗಿ ರೂಪಗೊಂಡಿದ್ದ ಮುಧೋಳ ಕನ್ನಡಕವಿ ರನ್ನನ ನೆಲೆಬೀಡಾಗಿದೆ. ಮುದವಳ್> ಮದುವಳಲು ಎಂಬ ಪದವು ಮುಧೋಳ ಆಗಿ ರೂಪಾಂತರಗೊಂಡಿದೆ ಎಂದು ಹೇಳಲಾಗುತ್ತಿದೆ. ಜೈನರ ಪ್ರಮುಖ ಸ್ಥಳವಾಗಿದ್ದ ಈ ಪಟ್ಟಣವು ಕಾಲಾನಂತರ ವೀರಶೈವ ಧರ್ಮೀಯರ ಬೀಡಾಗಿ ಬೆಳೆದಿದೆ. ಇದಕ್ಕೆ ಸಾಕ್ಷಿ ಎಂಬಂತೆ ಇಲ್ಲಿ ಶ್ರೀ ಗವಿಮಠ, ಶ್ರೀ ವಿರಕ್ತಮಠ, ಶ್ರೀ ಹಿರೇಮಠ ಎಂಬ ಮೂರು ಮಠಗಳು ಸ್ಥಾಪನೆಯಾಗಿ ವೀರಶೈವ ಧರ್ಮ ಬೆಳೆಯಲು ಸಹಾಯಕವಾಗಿದೆ.

ಈ ಮಠಗಳಲ್ಲಿ ಶ್ರೀ ಗವಿಮಠ ಮತ್ತು ಶ್ರೀ ವಿರಕ್ತ ಮಠದ ಆಡಳಿತ ಒಂದಾಗಿದ್ದು, ಓರೇಮಠವು ತನ್ನ ಅಸ್ತಿತ್ತ್ವವನ್ನು ಕಳೆದುಕೊಂಡಿದೆ.

ವಿರಕ್ತಮಠ -ಶ್ರೀ ಗವಿಮಠ: ಮುಧೋಳ ಪಟ್ಟಣದ ಪಶ್ಚಿಮದ ಹೊರ ಭಾಗದಲ್ಲಿ ವಿರಕ್ತ ಮಠವು ಸ್ಥಾಪನೆಯಾಗಿದೆ. ಈಗ ಪಟ್ಟಣವು ಮಠದ ಸುತ್ತಬೆಳೆದಿದ್ದು ಮಠವು ಮುಧೋಳ ಪಟ್ಟಣದ ಮಧ್ಯಭಾಗಕ್ಕೆ ಸೇರಿದೆ. ಪುರಾತನ ಕಾಲದಲ್ಲಿ ಸ್ಥಾಪನೆಯಾದ ಕುಮಾರ ಸಮಯದ ಶ್ರೀ ವಿರಕ್ತಮಠವು ಯಾವ ಕಾಲದಲ್ಲಿ ಯಾರಿಂದ ಸ್ಥಾಪನೆಯಾಗಿದೆ ಎಂದು ಹೇಳಲಾಗುವ ಯಾವುದೇ ಪುರಾವೆಗಳು ಲಭ್ಯವಿಲ್ಲ. ಶ್ರೀ ಬಸವಲಿಂಗ ಸ್ವಾಮಿಗಳ ಕಾಲದಲ್ಲಿ ಮಠವು ಪ್ರಬುದ್ಧಮಾನಕ್ಕೆ ಬಂದಿದೆ. ಇವರು ವಿರಕ್ತ ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿದರು.

ನಂತರ ಶ್ರೀ ಬಸವಲಿಂಗ ಸ್ವಾಮಿಗಳು ಗವಿ ಮಠಕ್ಕೆ ಆಗಮಿಸಿ ಇಲ್ಲಿ ದೀರ್ಘ ಅನುಷ್ಠಾನವನ್ನು ಕೈಗೊಂಡರು. ನಂತರ ಮುಧೋಳ ಪುರದಿಂದ ಪಶ್ಚಿಮದ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ಗವಿಮಠದಲ್ಲಿ ಅನುಷ್ಠಾನ ಕೈಗೊಂಡರು. ನಂತರ ಈ ಎರಡೂ ಮಠಗಳ ಆಡಳಿತ ಒಂದಾಗಿ ಬೆಳೆದಿದೆ.

ನಿಗೂಢ ಸ್ಥಳ: ಮುಧೋಳ ಸಂಸ್ಥಾನದ ಭೈರವಸಿಂಗ ನಾಯಕನು ಈ ಸ್ಥಳವನ್ನು ತನ್ನ ಗೌಪ್ಯಸ್ಥಳವನ್ನಾಗಿ ಮಾಡಿಕೊಂಡಿದ್ದನಂತೆ. ಈ ಸ್ಥಳದಲ್ಲಿ ಗವಿಗಳಲ್ಲದೆ, ಸುರಂಗ ಮಾರ್ಗವೂ ಇದೆ ಎಂದು ಹೇಳಲಾಗುತ್ತಿದೆ. ಇಂತಹ ನಿಗೂಢ ಸ್ಥಳದಲ್ಲಿ ಭೈರವ ಸಿಂಗನು ತನ್ನ ಗುಪ್ತ ಚಟುವಟಿಕೆಗಳನ್ನು ನಡೆಸುತ್ತಿದ್ದ ನಾಯಕನು ಮಹಾಲಿಂಗೇಶ್ವರರ ದರ್ಶನಕ್ಕೆಂದು ಮಹಾಲಿಂಗ ಪುರಕ್ಕೆ ಹೋಗುತ್ತಿದ್ದ ಸಂದರ್ಭದಲ್ಲಿ ಈ ಗವಿಯ ಮುಂದೆ ಹೋಗಬೇಕಾಗಿದ್ದು, ಇಲ್ಲಿ ಕೆಲವು ಸಮಯ ತಂಗಿದ್ದು ಹೋಗುತ್ತಿದ್ದನೆಂದು ಹೇಳಲಾಗುತ್ತಿದೆ. ಇಂತಹ ನಿಗೂಢ ಪ್ರದೇಶವು ದಟ್ಟವಾದ ಗಿಡಮರಗಳಿಂದ ಬೆಳೆದು ಭಯಾನಕವಾಗಿತ್ತು. ಇಂತಹ ಸ್ಥಳದಲ್ಲಿ ಶ್ರೀ ಬಸವಲಿಂಗ ಸ್ವಾಮಿಗಳು ದೀರ್ಘ ತಪಸ್ಸನ್ನು ಆಚರಿಸಿ ಧಾರ್ಮಿಕ ಕೇಂದ್ರವನ್ನಾಗಿ ಪರಿವರ್ತಿಸಿದರು. ಗುರುಗಳು ಈ ಕ್ಷೇತ್ರದಲ್ಲಿಯೇ ಮಠವನ್ನು ಸ್ಥಾಪಿಸಿಕೊಂಡು ನಿಸರ್ಗದ ಮಡಿಲಲ್ಲಿ ಧ್ಯಾನಾಸಕ್ತರಾಗಿ ಕಾಲ ಕಳೆಯತೊಡಗಿದರು.

ಪರಂಪರೆ: ಶ್ರೀ ಬಸವಲಿಂಗ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟು ಪ್ರಖ್ಯಾತಗೊಂಡ ಮಠಕ್ಕೆ ನಂತರ ಬಂದ ಶ್ರೀ ಬಸವಲಿಂಗ ಸ್ವಾಮಿಗಳು ಸಹ ಪವಾಡಪುರುಷರಾಗಿ ಬೆಳೆದಿದ್ದರು. ಈ ಗುರುಗಳ ಪ್ರಭಾವಕ್ಕೆ ಒಳಗಾಗಿದ್ದ ಬಾಬುರಾವ್ ಮಾನೆ ಎಂಬುವವರು ಗುರುಗಳ ದರ್ಶನಕ್ಕೆಂದು ಗವಿ ಮಠಕ್ಕೆ ಆಗಮಿಸಿದರು. ಇಲ್ಲಿ ಗುರುಗಳು ಧ್ಯಾನಸಕ್ತರಾಗಿ ಲೌಕಿಕ ವಿಚಾರಗಳ ಕಡೆ ಗಮನಕೊಡದೆ ಯೋಗಸಾಧನೆಯಲ್ಲಿ ತೊಡಗಿದ್ದರು. ಮಠದಲ್ಲಿ ದೀಪವನ್ನು ಹಚ್ಚಲು ಸಹ ಎಣ್ಣೆಯಿಲ್ಲದೆ ಬಡತನದಿಂದ ಕೂಡಿತ್ತು. ಬಾಬುರಾವ್‌ಮಾನೆಯವರು ಇಲ್ಲಿಯ ಸ್ಥಿತಿಯನ್ನು ನೋಡಿ ತಕ್ಷಣ ಎಣ್ಣೆಯನ್ನು ತರಿಸಿ ದೀಪವನ್ನು ಹಚ್ಚಿದರು. ಆಗ ಗುರುಗಳು 'ಈ ಮಠಕ್ಕೆ ಬೆಳಕು ನೀಡಿದ್ದೀಯ ,ನಿನ್ನ ಬದುಕು ಸಹ ಬೆಳಗುತ್ತದೆ' ಎಂದು ಆಶೀರ್ವದಿಸಿದರಂತೆ. ಸಂತಾನವಿಲ್ಲದ ಬಾಬುರಾವ್ ಮಾನೆಯವರಿಗೆ ಗುರುಗಳ ಆಶೀರ್ವಾದವನ್ನು ಪಡೆದ ಮೇಲೆ ಗಂಡು ಸಂತಾನವಾಯಿತಂತೆ. ಭೈರವಸಿಂಗ ಮಹಾರಾಜನು ಈ ಮಠದ ಗುರುಗಳ ಪ್ರಭಾವಕ್ಕೆ ಒಳಗಾಗಿ ದರ್ಶನಕ್ಕೆಂದು ಬಂದಾಗ, ಇಲ್ಲಿನ ಸ್ಥಿತಿಗತಿಯನ್ನು ನೋಡಿ ಮನನೊಂದು ಭೂದಾನವನ್ನು ನೀಡಲು ಹೋದಾಗ ಗುರುಗಳು ಒಪ್ಪಲಿಲ್ಲವಂತೆ. ಇದಾದ ಕೆಲವುವರ್ಷಗಳ ಮೇಲೆ ಗುರುಗಳು ಯೋಗಸಿದ್ಧಿಗಾಗಿ ಹನ್ನೆರಡು ವರ್ಷ ಮೌನವ್ರತವನ್ನು ಆಚರಿಸತೊಡಗಿ ಯಶಸ್ವಿಯಾಗಿ ಮುಗಿಸಿ, ಮುಕ್ತಾಯದ ದಿನ ಜಂಗಮಾರ್ಚನೆ ಮಾಡಿ ಭಕ್ತರನ್ನು ಕೂಡಿಸಿ ಅನ್ನಸಂತರ್ಪಣೆ ಹಾಗೂ ಧರ್ಮೋಪದೇಶವನ್ನು ನೀಡಿ ಲಿಂಗೈಕ್ಯರಾಗಿದ್ದಾರೆ.

ಶ್ರೀ ಬಸವಲಿಂಗ ಸ್ವಾಮಿಗಳು ಲಿಂಗೈಕ್ಯರಾದ ನಂತರ ಶ್ರೀ ಮೃತ್ಯುಂಜಯ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದಾರೆ. ಪರಂಪರೆಯಲ್ಲಿ ಶ್ರೀಬಸವಲಿಂಗ ಸ್ವಾಮಿಗಳು ಹಾಗೂ ನಂತರ ಬಂದ ಶ್ರೀಮೃತ್ಯುಂಜಯ ಸ್ವಾಮಿಗಳ ಹೆಸರೇ ಪುನಾರವರ್ತನೆಯಾಗುತ್ತದೆ. ಮಠದ ಪರಂಪರೆಯಲ್ಲಿ ಒಟ್ಟು ಹತ್ತು ಜನ ಗುರುಗಳು ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡು ಆಡಳಿತವನ್ನು ನಡೆಸಿದ್ದಾರೆ ಎಂದು ಹೇಳಲಾಗುತ್ತಿದೆ.

ಕಾಲಾನಂತರ ಈ ಭೂಮಿಯು ಮುಧೋಳ ಪಟ್ಟಣದ ಭಾಗಿ ಬಂಧುಗಳಿಗೆ ಸೇರುತ್ತದೆ. ಆಗ ಭಾಗಿ ಮನೆತನದವರು

ಪುನಃ ಈ ಸ್ಥಳವನ್ನು ಗುರುಗಳಿಗೆ ಒಪ್ಪಿಸಲು ಮುಂದಾದಾಗ, ಮಠದ ಪರಂಪರೆಯ ಗುರುಗಳಾದ ಶ್ರೀ ಬಸವಲಿಂಗ ಸ್ವಾಮಿಗಳು ಈ ಜಮೀನನ್ನು ಖರೀದಿಗೆ ಕೊಂಡುಕೊಂಡರೆಂದು ಹೇಳಲಾಗುತ್ತಿದೆ.

ಇತ್ತೀಚಿನ ಶ್ರೀ ಮೃತ್ಯುಂಜಯ ಸ್ವಾಮಿಗಳು ಮಠದ ಪರಂಪರೆಯನ್ನು ಬೆಳೆಸಿದರು.ಇವರು ಗವಿಮಠ ಮತ್ತು ಮುಧೋಳ ಪಟ್ಟಣದ ಮಧ್ಯದಲ್ಲಿರುವ ವಿರಕ್ತ ಮಠವನ್ನು ಅಭಿವೃದ್ಧಿಪಡಿಸಿದರು. ಇವರು ಉತ್ತಮ ವಾಗ್ಮಿಗಳಾಗಿ, ಪ್ರವಚನಕಾರರಾಗಿ, ಪ್ರಭುಲಿಂಗ ಲೀಲೆ, ಭಗವದ್ಗೀತೆ ಹಾಗೂ ಕುರಾನ್ ಗ್ರಂಥಗಳ ಬಗ್ಗೆ ನಿರರ್ಗಳವಾಗಿ ಗಂಟೆಗಟ್ಟಲೆ ಪ್ರವಚನವನ್ನು ನೀಡುತ್ತಿದ್ದರು. ಮಹಾಮೇಧಾವಿಗಳಾದ ಇವರು ಶಿಕ್ಷಣ ಪ್ರೇಮಿಗಳೂ ಆಗಿದ್ದರು. ಬೆಳಗಾವಿಯ ನಾಗನೂರು ಮಠದ ಶಿಕ್ಷಣಸಂಸ್ಥೆಗೆ ಲಕ್ಷಾಂತರ ರೂಪಾಯಿಗಳಲ್ಲಿ ದಾನ ನೀಡಿದ್ದಾರೆ. ಬಾಗಲಕೋಟೆಯ ಬಸವೇಶ್ವರ ಸಂಘವು ಸ್ಥಗಿತಗೊಂಡಿದ್ದಾಗ, ಸಾವಿರದೊಂದು ಮಂಟಪ ಪೂಜೆಯನ್ನು ಮಾಡಿ ಬಸವೇಶ್ವರ ಸಂಘವನ್ನು ಊರ್ಜಿತಗೊಳಿಸಿದರು. ಇವರು ತಮ್ಮ ಕಾಲದಲ್ಲಿ ಅನೇಕ ಶಾಖಾ ಮಠಗಳನ್ನು ಸ್ಥಾಪಿಸಿದ್ದಾರೆ. ಇಂತಹ ಮಹಾ ಮೇಧಾವಿಗಳು ತಮ್ಮ ಸಹೋದರ ಸಂಬಂಧಿಯಾದ ಶ್ರೀ ಬಸವಲಿಂಗ ದೇವರನ್ನು ನೇಮಕ ಮಾಡಿ ಮಠದ ಪರಂಪರೆಯು ಮುಂದುವರೆಯುವಂತೆ ಮಾಡಿದರು. ನಂತರ ಮಠದಲ್ಲಿ ನಡೆದ ಘಟನೆಗಳಿಂದ ಬೇಸತ್ತ ಗುರುಗಳು, ಶ್ರೀ ಬಸವಲಿಂಗ ದೇವರ ಬದಲಿಗೆ ಶ್ರೀ ಮಹೇಶ್ವರ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡಿರುವುದಾಗಿ ಮಠದ ಸದ್ಭಕ್ತರ ಎದುರಿಗೆ ಘೋಷಿಸಿದರು. ಶ್ರೀ ಮೃತ್ಯುಂಜಯ ಸ್ವಾಮಿಗಳು ಮಠದ ಜವಾಬ್ದಾರಿಯನ್ನು ಶ್ರೀಮಹೇಶ್ವರ ದೇವರಿಗೆ ಒಪ್ಪಿಸಿ,ಸೋಲಾಪುರದ ಕಿರೀಟ ಮಠದಲ್ಲಿ ವಿಶ್ರಾಂತಿ ಪಡೆದು ೧೯೮೯ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಗುರುಗಳು ಲಿಂಗೈಕ್ಯರಾದ ಮೇಲೆ ಮಠದ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಕಾನೂನಿನ ಸಮರ ನಡೆದು, ಶ್ರೀ ಮಹೇಶ್ವರ ದೇವರು ಕಾನೂನಿನ್ವಯ ಮಠದ ಉತ್ತರಾಧಿಕಾರಿಗಳಾಗಿ ೧೯೯೫ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡರು.

ಶ್ರೀ ಮಹೇಶ್ವರ ದೇವರು ಸವಣೂರು ತಾಲ್ಲೂಕಿನ ಮಂತ್ರೋಡಿ ಗ್ರಾಮದ ಶ್ರೀ ಶಿವಲಿಂಗಯ್ಯ ಮತ್ತು ಶ್ರೀಮತಿ ಶಿವಲಿಂಗಮ್ಮನವರ ಪುತ್ರರಾಗಿ ಜನಿಸಿ, ಹುಬ್ಬಳ್ಳಿ ಮೂರುಸಾವಿರ ಮಠದಲ್ಲಿ ನೆಲೆಸಿ ಪದವಿ ಶಿಕ್ಷಣ ಹಾಗೂ ಸಂಸ್ಕೃತದಲ್ಲಿ ಉನ್ನತ ಶಿಕ್ಷಣವನ್ನು ಪಡೆದು ಉತ್ತಮ ಪ್ರವಚನಕಾರರಾಗಿ ರೂಪುಗೊಂಡಿದ್ದರು. ಶ್ರೀಮಹೇಶ್ವರ ದೇವರ ಪ್ರವಚನವನ್ನು ಕೇಳಿ ಸಂತೋಷಗೊಂಡಿದ್ದ ಶ್ರೀ ಮೃತ್ಯುಂಜಯ ಸ್ವಾಮಿಗಳು ಇವರನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ಆಯ್ಕೆಮಾಡಿ ಕೊಂಡರು. ಶ್ರೀ ಮಹೇಶ್ವರ ದೇವರು ತಮ್ಮ ವಿದ್ಯಾಗುರುಗಳು ಹಾಗೂ ಅನುಗ್ರಹ ಗುರುಗಳಾಗಿದ್ದ ಮೂರು ಸಾವಿರಮಠದ ಜಗದ್ಗುರುಗಳ ಅಪ್ಪಣೆ ಇಲ್ಲದೆ ಏನನ್ನೂ ಮಾಡುತ್ತಿರಲಿಲ್ಲ.ಗವಿಮಠದ ಉತ್ತರಾಧಿಕಾರಿಯಾಗುವಾಗ ಜಗದ್ಗುರುಗಳ ಅಪ್ಪಣೆ ಪಡೆದು ಅವರ ಅನುಮತಿಯ ಮೇರೆಗೆ ಒಪ್ಪಿದ್ದರು. ಕೊನೆಗೆ ಕಾನೂನು ಸಮರದ ನಂತರ ಜಯಗಳಿಸಿದ ಮೇಲೆ ೧೯೯೫ ರಲ್ಲಿ ಹುಬ್ಬಳ್ಳಿ ಮೂರು ಸಾವಿರ ಮಠದ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳ ಅಡ್ಡಪಲ್ಲಕ್ಕಿ ಉತ್ಸವವನ್ನು ಮುಧೋಳಿನಲ್ಲಿ ನೆರವೇರಿಸುವ ಮೂಲಕ ಧಾರ್ಮಿಕ ಸಭೆ ಸಮಾರಂಭಗಳನ್ನು ಹಮ್ಮಿಕೊಂಡು, ಶ್ರೀ ಮೃತ್ಯುಂಜಯ ಸ್ವಾಮಿಗಳೆಂದು ಅಭಿಧಾನ ಪಡೆದು ಪಟ್ಟಾಧಿಕಾರವನ್ನು ವಹಿಸಿಕೊಂಡರು.

ಧಾರ್ಮಿಕ ಕಾರ್ಯಗಳು: ತ್ರಿಕಾಲ ಪೂಜಾನಿಷ್ಠರಾದ ಗುರುಗಳು, ಮಠದ ಆವರಣದಲ್ಲಿರುವ ಪರಂಪರೆಯ ಮೂರು ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ ನಡೆಯುವಂತೆ ವ್ಯವಸ್ಥೆ ಮಾಡಿಸಿದ್ದಾರೆ. ಅಮಾವಾಸ್ಯೆಯಲ್ಲಿ ಶಿವಾನುಭವ ಗೋಷ್ಠಿಯನ್ನು ನಡೆಸಲಾಗುತ್ತಿದೆ. ಬೆಳಗಿನ ಜಾವ ಪ್ರಾರ್ಥನೆಯ ಮೂಲಕ ಪಟ್ಟಣದಲ್ಲಿ ಪಥ ಸಂಚಲನವನ್ನು ಮಾಡಲಾಗುತ್ತಿದೆ. ಶ್ರಾವಣ ಮಾಸದಲ್ಲಿ ಪುರಾಣ ಪ್ರವಚನ, ಆಶಾಡಮಾಸದಲ್ಲಿ ಕರ್ತೃಗುರುಗಳಾದ ಶ್ರೀ ಬಸವಲಿಂಗ ಸ್ವಾಮಿಗಳ ಪುಣ್ಯಾರಾಧನೆಯನ್ನು ಮಾಡಲಾಗುತ್ತಿದೆ. ಮುಧೋಳ ತಾಲ್ಲೂಕಿನ ಪ್ರತಿ ಹಳ್ಳಿಗಳಲ್ಲಿ ಪಾದಯಾತ್ರೆಯ ಮೂಲಕ ಧರ್ಮ ಜಾಗೃತಿಯನ್ನುಂಟು ಮಾಡಿದ್ದಾರೆ. ಮಠದಲ್ಲಿ ನಿತ್ಯ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಿಸಿದ್ದಾರೆ.

ಶೈಕ್ಷಣಿಕ ಸೇವೆ: ೧೯೯೩. ರಲ್ಲಿ ಜ್ಞಾನಜ್ಯೋತಿ ರಾಷ್ಟ್ರೀಯ ವಿದ್ಯಾಪೀಠವನ್ನು ಸ್ಥಾಪಿಸಿ ಈ ಮೂಲಕ ಪ್ರಾಥಮಿಕಶಾಲೆ, ಪ್ರೌಢಶಾಲೆ, ಕೈಗಾರಿಕಾ ತರಬೇತಿ ಕೇಂದ್ರ ಹಾಗೂ ಮಹಿಳಾ ಪದವಿಪೂರ್ವ ಕಾಲೇಜನ್ನು ಪ್ರಾರಂಭಿಸಲಾಗಿದೆ. ಶಾಲಾ

ಕಾಲೇಜುಗಳ ಕಟ್ಟಡ ಸಮುಚ್ಚಯವು ವಿರಕ್ತ ಮಠದ ಆವರಣದಲ್ಲಿ ಸ್ಥಾಪನೆಯಾಗಿದೆ.ಇದಕ್ಕೆ ಈವರೆಗೆ ಐವತ್ತು ಲಕ್ಷರೂಪಾಯಿಗಳ ವೆಚ್ಚದಲ್ಲಿ ಸುಸಜ್ಜಿತವಾಗಿ ವ್ಯವಸ್ಥೆಗೊಳಿಸಿದ್ದಾರೆ. ಮಠದ ವತಿಯಿಂದ ವಿದ್ಯಾರ್ಥಿನಿಲಯ, ಆಶ್ರಮ ಶಾಲೆಯನ್ನು ಪ್ರಾರಂಭಿಸಿದ್ದಾರೆ.

ಸಾಮಾಜಿಕ ಕಾರ್ಯಗಳು: ಹಿಂದೆ ಸಮಾಜದ ಅಭಿವೃದ್ಧಿಗೆ ದುಡಿದ ಮಠವು ನಂತರ ಮಠದಲ್ಲಿ ಉಂಟಾದ ಜಿಜ್ಞಾಸೆಗಳಿಂದ, ಸಾಮಾಜಿಕ ಕಾರ್ಯಗಳಿಂದ ಹಿಮ್ಮುಖಗೊಂಡಿತ್ತು. ಈಗ ಎಲ್ಲಾ ಗೊಂದಲಗಳು ನಿವಾರಣೆಗೊಂಡು ಮಠ ತನ್ನ ಪುರಾತನ ಕಾಲದ ಆಚರಣೆಗಳನ್ನು ನಡೆಸುವ ಮೂಲಕ ಸಮಾಜಮುಖಿಯಾಗಿ ನಡೆಯುತ್ತಿದೆ. ಈಗಿನ ಗುರುಗಳಾದ ಶ್ರೀ ಮೃತ್ಯುಂಜಯ ಸ್ವಾಮಿಗಳು ಸಾಮಾಜಿಕ ಕಳಕಳಿಯನ್ನು ಇಟ್ಟುಕೊಂಡು, ಮಠದ ಧಾರ್ಮಿಕ ಆಚರಣೆಗಳು ಹಾಗೂ ಶೈಕ್ಷಣಿಕ ಪ್ರಗತಿಯನ್ನು ಮಾಡಲು ಹೊರಟಿದ್ದಾರೆ. ಗುರುಗಳು ಮಠದಲ್ಲಿ ನಡೆಯುವ ವಿಶೇಷ ಸಂದರ್ಭಗಳಲ್ಲಿ ಸಾಮೂಹಿಕ ಮದುವೆಗಳು, ಆರೋಗ್ಯ ತಪಾಸಣಾ ಶಿಬಿರಗಳು, ಕೃಷಿ ಕ್ಷೇತ್ರದ ಬಗ್ಗೆ ವಿಚಾರ ಸಂಕಿರಣಗಳನ್ನು ಏರ್ಪಡಿಸಿ,ಆಧುನಿಕ ಕೃಷಿ ಉಪಕರಣಗಳು ಹಾಗೂ ಹೊಸ ತಳಿಗಳ ಪ್ರದರ್ಶನವನ್ನು ಏರ್ಪಡಿಸುತ್ತಿದ್ದಾರೆ. ಮಠದಲ್ಲಿ ವೃದ್ಧಾಶ್ರಮವನ್ನು ಪ್ರಾರಂಭಿಸಿದ್ದಾರೆ. ಸಮಾಜದ ಅಭಿವೃದ್ಧಿಗೆ ಪೂರಕವಾಗುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಮೃತ್ಯುಂಜಯ ಸ್ವಾಮಿಗಳು,ಶ್ರೀ ವಿರಕ್ತಮಠ-ಶ್ರೀ ಗವಿಮಠ, ಮುಧೋಳ, ಬಾಗಲಕೋಟೆ ಜಿಲ್ಲೆ.

ಲೋಕಾಪುರ

ಮುಧೋಳ ತಾಲ್ಲೂಕಿನ ಲೋಕಾಪುರ ಗ್ರಾಮವು ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಇಪ್ಪತ್ತೂರು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಲೋಕಾಪುರ ಗ್ರಾಮದ ಮಧ್ಯಭಾಗದಲ್ಲಿ ಪುತ್ರವರ್ಗದ ಪರಂಪರೆಯ, ರಂಭಾಪುರಿ ಪೀಠದ ಶಾಖಾಮಠವಾದ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ. ಈ ಮಠದಲ್ಲಿ ಒಟ್ಟು ಏಳು ಜನ ಗುರುಗಳು ಅಧಿಕಾರವನ್ನು ನಡೆಸಿದ್ದಾರೆ ಎಂದು ಹೇಳಲಾಗುತ್ತಿದೆ. ಇದಕ್ಕೆ ಪೂರಕವೆಂಬಂತೆ ಮಠದ ಆವರಣದಲ್ಲಿ ಐದು ಗದ್ದುಗೆಗಳು ನಿರ್ಮಾಣಗೊಂಡಿವೆ. ಪರಂಪರೆಯ ಆರನೆಯ ಗುರುಗಳು ಎಂದು ಹೇಳಲಾಗುವ ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳು ೧೯೯೭ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಶ್ರೀ ಚಂದ್ರಶೇಖರ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಲಾಗಿದೆ.

ಈ ಪುರಾತನ ಮಠವು ಲೋಕಾಪುರದಲ್ಲಿ ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ, ಇಲ್ಲಿನ ಧಾರ್ಮಿಕ ವಾತಾವರಣ ಬೆಳೆಯಲು ಸಹಕಾರಿಯಾಗಿದೆ. ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳು ಪೂಜಾನಿಷ್ಠರಾಗಿದ್ದು, ತಮ್ಮ ತಪೋಶಕ್ತಿಯಿಂದ ಅಪಾರ ಭಕ್ತರನ್ನು ಸಂಪಾದಿಸಿಕೊಂಡಿದ್ದರು. ಇವರ ಕಾಲದಲ್ಲಿ ಮಠವು ಅಭಿವೃದ್ಧಿಗೊಂಡಿದೆ. ಈಗ ಉತ್ತರಾಧಿಕಾರಿಯಾಗಿ ನೇಮಕಗೊಂಡಿರುವ ಶ್ರೀ ಚಂದ್ರಶೇಖರ ದೇವರು ವಿದ್ಯಾಭ್ಯಾಸ ಮಾಡುತ್ತಿದ್ದು, ಪದವಿ ಶಿಕ್ಷಣ, ಸಂಸ್ಕೃತ ಹಾಗೂ ವೇದಾಧ್ಯಯನ ವನ್ನು ಮುಗಿಸಿದ ನಂತರ ಮಠದ ಅಧಿಕಾರವನ್ನು ವಹಿಸಿಕೊಳ್ಳಲಿದ್ದಾರೆಂದು ಮಠದ ವಂಶಸ್ಥರು ಅಭಿಪ್ರಾಯಿಸುತ್ತಾರೆ. ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯ ಪೂಜೆ ಹಾಗೂ ಧಾರ್ಮಿಕ ಕಾರ್ಯಗಳನ್ನು ಮಠದ ವಂಶಸ್ಥರೇ ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಚಂದ್ರಶೇಖರ ದೇವರು, ಶ್ರೀ ಹಿರೇಮಠ, ಲೋಕಾಪುರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.

❑

ಹುನಗುಂದ ತಾಲ್ಲೂಕು

ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕು ವೀರಶೈವ ಧರ್ಮದ ಪವಿತ್ರ ಕ್ಷೇತ್ರಗಳಲ್ಲಿ ಒಂದಾದ ಕೂಡಲ ಸಂಗಮ ಕ್ಷೇತ್ರವನ್ನು ಒಳಗೊಂಡಿದೆ. ಬಸವೇಶ್ವರರು ತಮ್ಮ ಧಾರ್ಮಿಕ ಆಂದೋಲನಕ್ಕೆ ರೂಪವನ್ನು ಕಂಡುಕೊಂಡಿದ್ದು ಈ ತಾಲ್ಲೂಕಿನ ನೆಲದಲ್ಲಿ ಎಂಬುದು ಒಂದು ಹೆಗ್ಗಳಿಕೆಯ ವಿಚಾರ. ಇಂತಹ ತಾಲ್ಲೂಕಿನಲ್ಲಿ ಐವತ್ತೆರಡು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಪ್ರಸ್ತುತ ಹತ್ತು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಅಮೀನಗಡ

ಹುನಗುಂದ ತಾಲ್ಲೂಕಿನ ಅಮೀನಗಡ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತೆರಡು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಶ್ರೀ ಗಚ್ಚಿನಮಠ, ಶ್ರೀ ಲಾಳಸಂಗಿಮಠ ಹಾಗೂ ಶ್ರೀ ಹಿರೇಮಠ ಎಂಬ ಮೂರು ಮಠಗಳು ಸ್ಥಾಪನೆಯಾಗಿವೆ. ಈ ಮಠಗಳ ಸ್ಥಾಪನೆಯಿಂದ ವೀರಶೈವ ಧರ್ಮದ ಆಚರಣೆಗಳು ನಡೆಯತೊಡಗಿ ಧರ್ಮವು ಪ್ರಚಾರಗೊಂಡಿದೆ.

ಗಚ್ಚಿನಮಠ: ಅಮೀನಗಡದ ಮುಖ್ಯ ರಸ್ತೆಯಲ್ಲಿ ಸ್ಥಾಪನೆಯಾಗಿರುವ ಶ್ರೀ ಗಚ್ಚಿನಮಠವು ವಿರಕ್ತ ಸಂಪ್ರದಾಯದ ಮಠವಾಗಿ ಈ ಗ್ರಾಮದಲ್ಲಿ ಶರಣ ತತ್ತ್ವ ವ್ಯಾಪಕವಾಗಿ ಬೆಳೆಯುವಂತೆ ಮಾಡಿದೆ. ಹನ್ನೆರಡನೆಯ ಶತಮಾನದಲ್ಲಿ ಸ್ಥಾಪಿತಗೊಂಡ ಈ ಮಠವು ಕಾಲಾನಂತರ ಮಠಾಧೀಶರಿಲ್ಲದೆ ಜೀರ್ಣಾವಸ್ಥೆಯನ್ನು ತಲುಪಿತ್ತು. ಪರಂಪರೆಯ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಾಗದ ಕಾರಣ ಈ ಪುರಾತನ ಮಠದ ಬಗ್ಗೆ ಹೆಚ್ಚು ಮಾಹಿತಿಯನ್ನು ದಾಖಲಿಸಲಾಗುತ್ತಿಲ್ಲ. ಶ್ರೀ ಪ್ರಭುಸ್ವಾಮಿಗಳು ೧೯೩೮ ರಲ್ಲಿ ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ಮಠವು ತನ್ನ ಗತ ಕಾಲದ ವೈಭವವನ್ನು ಪ್ರದರ್ಶಿಸತೊಡಗಿತು.

ಪರಂಪರೆ: ಪುರಾತನ ಪರಂಪರೆಯ ಈ ಮಠವು ಬಸವಾದಿಪ್ರಮಥರ ತತ್ತ್ವಗಳನ್ನು ನಾಡಿಗೆ ಸಾರುವ ಉದ್ದೇಶದಿಂದ ಸ್ಥಾಪಿತಗೊಂಡಿದೆ. ಶ್ರೀಪ್ರಭುಸ್ವಾಮಿಗಳ ಕಾಲದಲ್ಲಿ ಉದ್ದೇಶಕ್ಕೆ ಬದ್ಧವಾಗಿ ಶರಣರತತ್ತ್ವಗಳನ್ನು ಪ್ರಚಾರಪಡಿಸಿ ಸಂಸ್ಕಾರವಂತ ಸಮಾಜವನ್ನು ರೂಪಿಸತೊಡಗಿದೆ. ಶ್ರೀ ಪ್ರಭುಸ್ವಾಮಿಗಳು ಪ್ರವಚನಕಾರರಾಗಿ, ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ ಪ್ರವಚನದ ಮೂಲಕ ಶರಣ ತತ್ತ್ವವನ್ನು ನಾಡಿನಾದ್ಯಂತ ಪ್ರಚಾರಪಡಿಸುತ್ತಿದ್ದಾರೆ. ಗುರುಗಳು ಕನ್ನಡ,ಸಂಸ್ಕೃತ, ಹಿಂದಿ, ಮರಾಠಿ ಹಾಗೂ ಆಂಗ್ಲ ಭಾಷೆಯಲ್ಲಿ ಪಾಂಡಿತ್ಯವನ್ನು ಹೊಂದಿದ್ದು ನಾಡು ನಾಡಿನಾಚೆ ಶರಣ ತತ್ತ್ವ ಪ್ರಚಾರಗೊಳ್ಳುವಂತೆ ಮಾಡಿದ್ದರು. ಈ ಕಾರಣಕ್ಕಾಗಿ ಭಕ್ತರು ಗುರುಗಳಿಗೆ ೧೯೪೫ ರಲ್ಲಿ 'ಪ್ರವಚನ ಪ್ರಭಾಕರ'ಎಂಬ ಬಿರುದನ್ನು ನೀಡಿ ಗೌರವಿಸಿತು. ಶ್ರೀ ಪ್ರಭು ಸ್ವಾಮಿಗಳು ತಮ್ಮ ಹಿರಿತನದ ವ್ಯಕ್ತಿತ್ವದಿಂದ ಮಠವನ್ನು ಅಭಿವೃದ್ಧಿಪಡಿಸಿ, ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀಶಂಕರ ಸ್ವಾಮಿಗಳನ್ನು ನೇಮಕಮಾಡಿಕೊಂಡಿದ್ದಾರೆ.

ಶ್ರೀ ಶಂಕರ ಸ್ವಾಮಿಗಳು ಪುರಾತನ ಪರಂಪರೆಯ ಗಚ್ಚಿನ ಮಠದ ಅಧಿಕಾರವನ್ನು ೧೯೯೮ ರಲ್ಲಿ ವಹಿಸಿಕೊಂಡು, ಮಠವನ್ನು ಅಭಿವೃದ್ಧಿಪಡಿಸತೊಡಗಿದ್ದಾರೆ.ಗುರುಗಳು ಲೌಕಿಕ ಮತ್ತು ಧಾರ್ಮಿಕ ಸಾಹಿತ್ಯದಲ್ಲಿ ಅಪಾರ ಪಾಂಡಿತ್ಯವನ್ನು ಸಂಪಾದಿಸಿಕೊಂಡು ಮಠವನ್ನು ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಶ್ರೀಮಂತಗೊಳಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಪುರಾತನ ಕಾಲದಲ್ಲಿ ನಿರ್ಮಾಣಗೊಂಡಿರುವ ಮಠದ ಕಟ್ಟಡವು ಮಣ್ಣಿನ ಗಚ್ಚಿನಿಂದ ವಿಶಾಲವಾಗಿ ರೂಪುಗೊಂಡಿದೆ. ಆವರಣದಲ್ಲಿರುವ ಕರ್ತೃ ಗದ್ದುಗೆಗೆ ನಿತ್ಯಪೂಜೆ, ಶ್ರಾವಣ ಮಾಸದಲ್ಲಿ ವಿಶೇಷ ಪೂಜೆ, ಪುರಾಣ ಪ್ರವಚನ, ಬಸವಜಯಂತಿ ಹಾಗೂ ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ.

ಶಿಕ್ಷಣ: ೧೯೪೫ ರಲ್ಲಿ ಶ್ರೀ ಸಂಗಮೇಶ್ವರ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿ ಈ ಮೂಲಕ ಪ್ರಾಥಮಿಕಶಾಲೆ, ಪ್ರೌಢಶಾಲೆ ಹಾಗೂ ಉಚಿತ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿ ಗ್ರಾಮಾಂತರ ಮಕ್ಕಳ ಕಲಿಕೆಗೆ ನೆರವು ನೀಡಲಾಗಿದೆ. ಇತ್ತೀಚೆಗೆ

ಪದವಿಪೂರ್ವ ಕಾಲೇಜು, ಚಿತ್ರಕಲಾ ವಿದ್ಯಾಲಯ ಹಾಗೂ ವೃತ್ತಿಪರ ಕೋರ್ಸುಗಳನ್ನು ಪ್ರಾರಂಭಿಸಿ, ಗ್ರಾಮಾಂತರ ಪ್ರದೇಶದಲ್ಲಿ ಗ್ರಾಮೀಣರು ಹೆಚ್ಚಿನ ಶಿಕ್ಷಣವನ್ನು ಕಲಿಯುವಂತೆ ಮಠವು ಪ್ರೇರಣೆ ನೀಡಿರುವುದು ಶ್ಲಾಘನೀಯ ವಿಚಾರವಾಗಿದೆ.

ಶೈಕ್ಷಣಿಕ ಸಾಧನೆಯ ಜೊತೆಗೆ ಮಠವು ಸಮಾಜ ಮುಖಿಯಾಗಿ ಬೆಳೆದಿದೆ. ಹಿರಿಯ ಗುರುಗಳಾದ ಶ್ರೀ ಪ್ರಭುಸ್ವಾಮಿಗಳು ಭಕ್ತರ ಅಭ್ಯುದಯಕ್ಕಾಗಿ ಪಾದಯಾತ್ರೆ ಮಾಡಿ, ಧರ್ಮೋಪದೇಶವನ್ನು ನೀಡಿ ಸಮಾಜದ ಅಭಿವೃದ್ಧಿಗೆ ಶ್ರಮಿಸಿದ್ದರು. ಇತ್ತೀಚೆಗೆ ಕಲ್ಯಾಣ ಮಂಟಪವನ್ನು ಸ್ಥಾಪಿಸಿ ಸಾರ್ವಜನಿಕರ ಅನುಕೂಲಕ್ಕೆ ನೀಡಿದ್ದಾರೆ. ಈಗಿನ ಗುರುಗಳಾದ ಶ್ರೀ ಶಂಕರ ಸ್ವಾಮಿಗಳು ಸಹ ಸಾಮಾಜಿಕ ಕಳಕಳಿ ಮತ್ತು ಕ್ರಿಯಾಶೀಲ ಚಟುವಟಿಕೆಯಿಂದ ಹಿರಿಯ ಗುರುಗಳು ಸಾಧಿಸಿರುವ ಸಾಧನೆಯನ್ನು ಉಳಿಸಿ ಬೆಳೆಸಲು ಶ್ರಮಿಸುತ್ತಿದ್ದಾರೆ.

ವಿಳಾಸ:ಶ್ರೀಮ.ನಿ.ಪ್ರ.ಶಂಕರ ಸ್ವಾಮಿಗಳು, ಶ್ರೀ ಗಚ್ಚಿನಮಠ, ಅಮೀನಗಡ,ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.
ಆಧಾರ: 'ಬಾಗಲಕೋಟೆ ಜಿಲ್ಲೆಯ ಕೆಲವು ವೀರಶೈವ ಮಠಗಳು ' (ಅಪ್ರಕಟಿತ) ಲೇಖನ: ಪ್ರೊ.ವಿಜಯಕುಮಾರ ಕಟಗಿಹಳ್ಳಿ ಮಠ

ಲಾಳಸಂಗಿ ಹಿರೇಮಠ: ಅಮೀನಗಡ ಗ್ರಾಮದ ಮಧ್ಯಭಾಗದಲ್ಲಿ 'ಶ್ರೀ ಲಾಳಸಂಗಿಹಿರೇಮಠ'ವು ಸ್ಥಾಪನೆಯಾಗಿದೆ. ಉಜ್ಜಯಿನಿ ಪೀಠದ ಪರಂಪರೆಯ ಈ ಮಠವು ಪುರಾತನ ಕಾಲದಲ್ಲಿ ಸ್ಥಾಪನೆಯಾಗಿದ್ದು, ಇಂಡಿ ತಾಲ್ಲೂಕಿನ ಲಾಳಸಂಗಿ ಹಿರೇಮಠದ ಶಾಖಾ ಮಠವಾಗಿ ಬೆಳೆದು ಬಂದಿದೆ. ಇಂಡಿ ತಾಲ್ಲೂಕಿನ ನಾದ ಹಾಗೂ ಲಾಳಸಂಗಿಯಲ್ಲಿ ಶ್ರೀ ಸಂಗಮೇಶ್ವರ ಶಿವಾಚಾರ್ಯ ಸ್ವಾಮಿಗಳು ಕೆಲವು ದಿನ ನೆಲೆ ನಿಂತು ಮಠವನ್ನು ಸ್ಥಾಪಿಸಿದ್ದಾರೆ. ಅಂದು ಸ್ಥಾಪನೆಗೊಂಡ ಮಠದಲ್ಲಿ ನಾದ-ಲಾಳಸಂಗಿ ಮಠದ ಪರಂಪರೆಯ ಗುರುಗಳೇ ಈ ಮಠದ ಅಧಿಕಾರವನ್ನೂ ನಡೆಸಿಕೊಂಡು ಬರುತ್ತಿದ್ದಾರೆ. ಮೂಲ ಮಠವು ಲಾಳಸಂಗಿಯಲ್ಲಿದ್ದರೂ, ಈ ಮಠದ ಧಾರ್ಮಿಕ ಕೇಂದ್ರ ಸ್ಥಳವು ಈಗ ನಾದದಲ್ಲಿದೆ. ಈ ಎಲ್ಲಾ ಮಠಗಳ ಆಡಳಿತವನ್ನು ಈಗಿನ ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶಿವಾನಂದ ಶಿವಾಚಾರ್ಯಸ್ವಾಮಿಗಳು, ಶ್ರೀ ಲಾಳಸಂಗಿಮಠ, ಅಮೀನಗಡ, ಹುನಗುಂದ ತಾ, ಬಾಗಲಕೋಟೆಜಿಲ್ಲೆ.

ಹಿರೇಮಠ: ಅಮೀನಗಡದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು, ಈ ಗ್ರಾಮದ ಪುರಾತನ ಮಠಗಳಲ್ಲಿ ಒಂದಾಗಿದೆ. ಉಜ್ಜಯಿನಿ ಪೀಠದ ಶಾಖಾಮಠವಾದ ಶ್ರೀ ಹಿರೇಮಠವು ಆಚಾರ್ಯರ ತತ್ತ್ವಗಳನ್ನು ಪ್ರಚಾರಪಡಿಸುವಲ್ಲಿ ಯಶಸ್ವಿಯಾಗಿತ್ತು. ಕಳೆದ ಕೆಲವು ವರ್ಷಗಳಿಂದ ಮಠದಲ್ಲಿ ಮಠಾಧೀಶರಿಲ್ಲದೆ ಮಠವು ಖಾಲಿ ಉಳಿದಿದೆ. ಮಠದ ವಂಶಸ್ಥರು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಇಲಕಲ್ಲು

ಹುನಗುಂದ ತಾಲ್ಲೂಕಿನ ಇಲಕಲ್ಲು ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಚಿತ್ತರಗಿ ವಿಜಯ ಮಹಾಂತೇಶ ಮಠವು ಅಸ್ತಿತ್ವದಲ್ಲಿದ್ದು ಧಾರ್ಮಿಕ, ಸಾಮಾಜಿಕ, ವೈಜ್ಞಾನಿಕ ಹಾಗೂ ಶೈಕ್ಷಣಿಕವಾಗಿ ಪ್ರಗತಿಯನ್ನು ಸಾಧಿಸಿದೆ.

ಚಿತ್ತರಗಿ ವಿಜಯಮಹಾಂತೇಶಮಠ: ಇಲಕಲ್ಲು ಗ್ರಾಮದಲ್ಲಿ ಶ್ರೀ ಚಿತ್ತರಗಿ ವಿಜಯ ಮಹಾಂತೇಶ ಮಠವು ಹನ್ನೆರಡನೆಯ ಶತಮಾನದಲ್ಲಿ ಶ್ರೀ ವಿಜಯಮಹಾಂತ ಸ್ವಾಮಿಗಳಿಂದ ಸ್ಥಾಪನೆಗೊಂಡಿದೆ.

ಮಠ ಸ್ಥಾಪನೆ: ಹನ್ನೆರಡನೆಯ ಶತಮಾನದಲ್ಲಿ ಅಲ್ಲಮ ಪ್ರಭುಗಳು ಕಲ್ಯಾಣಕ್ಕೆ ಹೋಗುವ ಸಂದರ್ಭದಲ್ಲಿ ಚಿತ್ತರಗಿಯಲ್ಲಿ ಕೆಲವು ದಿನ ನೆಲೆಗೊಂಡಿದ್ದರಂತೆ. ಅಲ್ಲಮ ಪ್ರಭುಗಳು ಇಲ್ಲಿ ನೆಲೆ ನಿಂತ ಸಂದರ್ಭದಲ್ಲಿ ಧರ್ಮೋಪದೇಶವನ್ನು ಮಾಡಿ, ಕಲ್ಯಾಣಕ್ಕೆ ಹೊರಡುವ ಮುನ್ನ ಶ್ರೀ ವಿಜಯ ಮಹಾಂತೇಶ ಸ್ವಾಮಿಗಳನ್ನು ಮಠಕ್ಕೆ ನೇಮಿಸಿ ಮುಂದೆ ಹೊರಡುತ್ತಾರೆಂದು ವಿಜಯ ಮಹಾಂತೇಶ ಲೀಲಾಮೃತ ಪುರಾಣದಲ್ಲಿ ಅಭಿವ್ಯಕ್ತಗೊಂಡಿದೆ. ಆದರೆ ವಿಜಯ ಮಹಾಂತೇಶಲೀಲೆಯ ನಿರಂಜನ ವಂಶಾವಳಿಯಲ್ಲಿ ತೋಂಟದ ಶ್ರೀ ಸಿದ್ಧಲಿಂಗ ಸ್ವಾಮಿಗಳು (ಹದಿನೈದನೆಯ ಶತಮಾನ) ಚಿತ್ತರಗಿಯಲ್ಲಿ ಮೊದಲು ಸ್ಥಾಪನೆ

ಗೊಂಡಿದ್ದ ಮಠವನ್ನು ಜೀರ್ಣಾಭಿವೃದ್ಧಿಗೊಳಿಸಿ, ಈ ಮಠಕ್ಕೆ ತಮ್ಮ ಶಿಷ್ಯರಲ್ಲಿ ಒಬ್ಬರಾಗಿದ್ದ ಶ್ರೀ ವಿಜಯ ಮಹಾಂತೇಶ ಎಂಬುವರಿಗೆ ನಿರಂಜನ ಪಟ್ಟಾಧಿಕಾರವನ್ನು ನೀಡಿದ್ದರೆಂದು ಉಲ್ಲೇಖಿಸಲಾಗಿದೆ. ಈ ಎರಡೂ ಅಭಿಪ್ರಾಯಗಳನ್ನು ಅವಲೋಕಿಸಿದರೆ ಚಿತ್ತರಗಿಯಲ್ಲಿ ಹನ್ನೆರಡನೆಯ ಶತಮಾನದಲ್ಲಿ ಮಠವು ಸ್ಥಾಪನೆಯಾಗಿತ್ತೆಂದು ದೃಢಪಡುತ್ತದೆ. ಇಂತಹ ಪುರಾತನ ಪ್ರಸಿದ್ಧ ಮಠವು ಚಿತ್ತರಗಿ ಮತ್ತು ಇಲಕಲ್ಲುಗಳಲ್ಲಿ ಸ್ಥಾಪನೆಯಾಗಿ ಬೆಳೆದಿದೆ. ಶ್ರೀ ವಿಜಯಮಹಾಂತೇಶ ಸ್ವಾಮಿಗಳು ಇಲಕಲ್ಲಿನಲ್ಲಿ ನೆಲೆಗೊಂಡ ಮೇಲೆ ವಚನ ಸಾಹಿತ್ಯದ ಸಾರವನ್ನು ಜನಮನಕ್ಕೆ ಮುಟ್ಟಿಸಿ ಮಠವನ್ನು ಪ್ರಸಿದ್ಧಿಗೊಳಿಸಿದರು.

ಪರಂಪರೆ:		
	೧. ಶ್ರೀ ಮ.ನಿ.ಪ್ರ. ವಿಜಯ ಮಹಾಂತಸ್ವಾಮಿಗಳು	(೧೫ನೆಯ ಶತಮಾನ)
	೨. ಶ್ರೀ ಮ.ನಿ.ಪ್ರ. ರೇವಣಸಿದ್ಧಸ್ವಾಮಿಗಳು	(೧೫ನೆಯ ಶತಮಾನ)
	೩. ಶ್ರೀ ಮ.ನಿ.ಪ್ರ. ಶಿವಲಿಂಗಸ್ವಾಮಿಗಳು	(೧೬ನೆಯ ಶತಮಾನ)
	೪. ಶ್ರೀ ಮ.ನಿ.ಪ್ರ. ಪುಟ್ಟ ಬಸವಲಿಂಗಸ್ವಾಮಿಗಳು	(೧೬ನೆಯ ಶತಮಾನ)
	೫. ಶ್ರೀ ಮ.ನಿ.ಪ್ರ. ಮುಪ್ಪಿನ ಬಸವಲಿಂಗಸ್ವಾಮಿಗಳು	(೧೬ನೆಯ ಶತಮಾನ)
	೬. ಶ್ರೀ ಮ.ನಿ.ಪ್ರ. ಚನ್ನಬಸವಲಿಂಗಸ್ವಾಮಿಗಳು	(೧೭ನೆಯ ಶತಮಾನ)
	೭. ಶ್ರೀ ಮ.ನಿ.ಪ್ರ. ಕಪ್ಪಿನ ಬಸವಲಿಂಗಸ್ವಾಮಿಗಳು	(೧೭ನೆಯ ಶತಮಾನ)
	೮. ಶ್ರೀ ಮ.ನಿ.ಪ್ರ. ದಿಗಂಬರ ಚನ್ನಬಸವಲಿಂಗಸ್ವಾಮಿಗಳು	(೧೭ನೆಯ ಶತಮಾನ)
	೯. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು	(೧೭ನೆಯ ಶತಮಾನ)
	೧೦. ಶ್ರೀ ಮ.ನಿ.ಪ್ರ. ಮಹಾಂತಸ್ವಾಮಿಗಳು	(೧೮ನೆಯ ಶತಮಾನ)
	೧೧. ಶ್ರೀ ಮ.ನಿ.ಪ್ರ. ಕೆಂಪಿನ ಬಸವಲಿಂಗಸ್ವಾಮಿಗಳು	(೧೮ನೆಯ ಶತಮಾನ)
	೧೨. ಶ್ರೀ ಮ.ನಿ.ಪ್ರ. ಹಿರಿಯ ಮಹಾಂತಸ್ವಾಮಿಗಳು	(೧೮ನೆಯ ಶತಮಾನ)
	೧೩. ಶ್ರೀ ಮ.ನಿ.ಪ್ರ. ಮರಿ ಮಹಾಂತಸ್ವಾಮಿಗಳು	(೧೯ನೆಯ ಶತಮಾನ)
	೧೪. ಶ್ರೀ ಮ.ನಿ.ಪ್ರ. ಮಹಾಂತಸ್ವಾಮಿಗಳು	(೧೯ನೆಯ ಶತಮಾನ)
	೧೫. ಶ್ರೀ ಮ.ನಿ.ಪ್ರ. ಗುರು ಮಹಾಂತಸ್ವಾಮಿಗಳು	(೧೮೩೯ - ೧೮೭೫)
	೧೬. ಶ್ರೀ ಮ.ನಿ.ಪ್ರ. ವಿಜಯ ಮಹಾಂತಸ್ವಾಮಿಗಳು	(೧೮೭೯ - ೧೯೧೧)
	೧೭. ಶ್ರೀ ಮ.ನಿ.ಪ್ರ. ಗುರು ಮಹಾಂತಸ್ವಾಮಿಗಳು	(೧೯೨೮ - ೧೯೩೯)
	೧೮. ಶ್ರೀ ಮ.ನಿ.ಪ್ರ. ಗುರು ಮಹಾಂತಸ್ವಾಮಿಗಳು	(೧೯೬೩ - ೧೯೭೦)
	೧೯. ಶ್ರೀ ಮ.ನಿ.ಪ್ರ. ವಿಜಯ ಮಹಾಂತಸ್ವಾಮಿಗಳು	(೧೯೭೦ -)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಮಠದ ಪರಂಪರೆಯಲ್ಲಿ ಅಧಿಕಾರ ನಡೆಸಿದ ಕೆಲವು ಗುರುಗಳ ಹೆಸರುಗಳನ್ನು ಆಧಾರಗಳ ಕೊರತೆಯಿಂದ ಗುರುತಿಸಲು ಸಾಧ್ಯವಾಗಿಲ್ಲ. ಕರ್ತೃಗುರುಗಳ ನಂತರ ಹದಿನಾಲ್ಕನೆಯ ಮಠಾಧೀಶರ ತನಕ ಹೆಚ್ಚು ಮಾಹಿತಿಗಳು ಲಭ್ಯವಿಲ್ಲ. ಹದಿನೈದನೆಯ ಮಠಾಧೀಶರಾದ ಶ್ರೀ ಗುರು ಮಹಾಂತ ಸ್ವಾಮಿಗಳು ೧೮೩೯ ರಲ್ಲಿ ಅಧಿಕಾರಕ್ಕೆ ಬಂದು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಇವರ ಜನಪ್ರಿಯತೆಯನ್ನು ಗುರುತಿಸಿದ ವೆಸ್ಟ್ ಇಂಡೀಸ್ ಕಂಪನಿಯ ಬಾಲ್‌ಮಿನ್ ಎಂಬ ಅಧಿಕಾರಿಯ ಹಾಗೂ ಸುರಪುರದ ಎರಡನೆಯ ವೆಂಕಟಪ್ಪ ನಾಯಕನು ನಿಜಾಂ ಸರ್ಕಾರದ ಪರವಾಗಿ ಮಠಕ್ಕೆ ದಾನ, ದತ್ತಿಗಳನ್ನು ನೀಡಿದ್ದಲ್ಲದೆ, ಧಾರ್ಮಿಕ ಕಾರ್ಯಗಳು ಸುಗಮವಾಗಿ ನಡೆಯಲು ಭೂಮಿಯನ್ನು ಇನಾಂ ನೀಡಿದ್ದರೆಂದು ಮಠದಲ್ಲಿ ರುವ ಲಿಖಿತ ದಾಖಲೆಗಳಿಂದ ತಿಳಿಯುತ್ತದೆ. ಇವರ ನಂತರ ಶ್ರೀ ವಿಜಯ ಮಹಾಂತ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠ ವನ್ನು ಹೆಚ್ಚು ಜನಪ್ರಿಯಗೊಳಿಸಿದ್ದಾರೆ. ಗುರುಗಳು ವಚನ ಸಾಹಿತ್ಯವನ್ನು ಮನೆಮನೆಗೆ ಮುಟ್ಟಿಸಿ, ವೀರಶೈವ ಧರ್ಮ ವ್ಯಾಪಕವಾಗಿ ಜನಮನದಲ್ಲಿ ಬೆಳೆಯುವಂತೆ ಮಾಡಿದ್ದಾರೆ. ಮಠದ ಪರಂಪರೆ ಹಾಗೂ ವೀರಶೈವ ಧರ್ಮದ ಇತಿಹಾಸದಲ್ಲಿ ಅಜರಾಮರವಾಗಿ ಉಳಿಯವಂತಹ ಸಾಧನೆಯನ್ನು ಮಾಡಿ ಮಠ ಮತ್ತು ಸಮಾಜವನ್ನು ಬೆಳೆಸಿದ್ದರು.

ಚಿತ್ತರಗಿಯಿಂದ ಇಲಕಲ್ಲಿಗೆ: ಶ್ರೀ ಗುರುಮಹಾಂತ ಸ್ವಾಮಿಗಳು ಬಾಲ್ಯದಲ್ಲೇ ಆಧ್ಯಾತ್ಮವನ್ನು ಮೈಗೂಡಿಸಿಕೊಂಡು,

ಗುರು ಹಿರಿಯರ ಜೊತೆ ಸೌಜನ್ಯದಿಂದ ವರ್ತಿಸುತ್ತಾ ಸಂಸ್ಕಾರವಂತ ಶಿಶುವಾಗಿ ಬೆಳೆದರು. ನಂತರ ಕಲ್ಲುಬೆಟ್ಟದಲ್ಲಿ ಉಗ್ರ ತಪಸ್ಸನ್ನು ಆಚರಿಸಿ, ಬಳ್ಳಾರಿಯ ಸಕ್ಕರೆ ಕರಡೆಪ್ಪನವರ ಪಾಠಶಾಲೆಯಲ್ಲಿ ಸಂಸ್ಕೃತ, ವೇದಾಧ್ಯಯನವನ್ನು ಕಲಿತು ವಚನ ಸಾಹಿತ್ಯದ ಸಾರದಿಂದ ಆಕರ್ಷಿತರಾಗಿ ಚಿತ್ತರಗಿ ಮಠದ ಅಧಿಪತಿಗಳಾಗಿ ನೇಮಕಗೊಂಡರು. ಚಿತ್ತರಗಿ ಮೂಲ ಮಠವಾದರೂ ಇವರ ಕಾಲದಲ್ಲಿ ಇಲಕಲ್ಲು ಧಾರ್ಮಿಕ ಚಟುವಟಿಕೆಗಳ ಕೇಂದ್ರ ಸ್ಥಳವಾಗಿ ಬೆಳೆಯಿತು. ಇವರು ಕೈಗೊಂಡ ಸಾಮಾಜಿಕ ಕಾರ್ಯಗಳಿಂದ ಶರಣರು ಕಂಡಂತಹ ಜಾತ್ಯಾತೀತ ಸಮಾಜ ನಿರ್ಮಾಣಗೊಂಡಿತು. ಇವರಿಂದ ಪ್ರೇರಣೆಗೊಂಡ ಅನೇಕ ವಿದ್ವಾಂಸರುಗಳು ಇವರ ಜೀವನ ಚರಿತ್ರೆಯ ಬಗ್ಗೆ ಇಲಕಲ್ಲು ಶ್ರೀ ವಿಜಯಮಹಾಂತೇಶ ಪೂಜ್ಯ ಚರಿತೆ (ಕವಿರತ್ನ ದ್ಯಾಂಪುರಚನ್ನ ಕವಿಗಳು) ಶ್ರೀ ವಿಜಯ ಮಹಾಂತೇಶ್ವರ ಲೀಲೆ (ಕಲ್ಯಾಣಪ್ಪ ಬ್ಯಾಳಿ) ಶ್ರೀ ವಿಜಯ ಮಹಾಂತ ಶಿವಯೋಗಿಗಳು (ಪಂಚಾಕ್ಷರಿ ಹಿರೇಮಠ) ಮುಂತಾದ ಅನೇಕ ಗ್ರಂಥಗಳನ್ನು ಗದ್ಯ ಪದ್ಯಗಳಲ್ಲಿ ಪ್ರಕಟಿಸಿ, ಇವರ ವ್ಯಕ್ತಿತ್ತ್ವವನ್ನು ಅಜರಾಮರವಾಗಿಸಿದ್ದಾರೆ.

ವೀರಶೈವ ಧರ್ಮವು ಮರೆಯದ ಮಹಾ ಚೇತವಾಗಿ ಬೆಳೆದ ಶ್ರೀ ವಿಜಯ ಮಹಾಂತ ಸ್ವಾಮಿಗಳು ೧೯೧೧ ರಂದು ಲಿಂಗೈಕ್ಯರಾದರು. ಇವರ ನಂತರ ದೋಟಿಹಾಳು ಶ್ರೀ ಗುರು ಮಹಾಂತ ಸ್ವಾಮಿಗಳು ಶಿವಯೋಗ ಮಂದಿರದಲ್ಲಿ ವೀರಶೈವ ಸಾಹಿತ್ಯದ ಬಗ್ಗೆ ಆಳವಾದ ಅಧ್ಯಯನ ಮಾಡಿ ಮಠಕ್ಕೆ ಆಗಮಿಸಿ, ೧೯೨೮ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಇವರು ಅನೇಕ ಅಭಿವೃದ್ಧಿ ಕಾರ್ಯಗಳನ್ನು ನಡೆಸಿ ಪ್ರಥಮವಾಗಿ ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಿ ಶೈಕ್ಷಣಿಕ ಪ್ರಗತಿಗೆ ನಾಂದಿಯಾಡಿದರು. ಇವರು ೧೯೩೪ ರಲ್ಲಿ ಲಿಂಗೈಕ್ಯರಾದರು. ಇವರ ನಂತರ ಇಪ್ಪತ್ತಾಲ್ಕು ವರ್ಷಗಳ ಕಾಲ ಮಠವು ಉತ್ತರಾಧಿಕಾರಿಗಳಿಲ್ಲದೆ ಖಾಲಿ ಇದ್ದ ಸಂದರ್ಭದಲ್ಲಿ ಕೊಪ್ಪದ ಶ್ರೀ ಮಹಾಂತ ಸ್ವಾಮಿಗಳು ಮಠದ ಧಾರ್ಮಿಕ ಕಾರ್ಯಗಳು ನಿಲ್ಲದಂತೆ ನೋಡಿಕೊಂಡು ಮಠವನ್ನು ಮುನ್ನಡೆಸಿದರು. ಪ್ರವಚನಕಾರರಾದ ಇವರು ಸದಾ ಸಂಚಾರದಲ್ಲಿರುತ್ತಾ ಮಠವನ್ನು ಅಭಿವೃದ್ಧಿಪಡಿಸಿದರು.

ಶ್ರೀ ಮಹಾಂತ ಸ್ವಾಮಿಗಳು ನಂತರ ಹುಬ್ಬಳ್ಳಿ ಮೂರುಸಾವಿರ ಮಠದ ಹಿರಿಯ ಜಗದ್ಗುರುಗಳಾಗಿರುದ್ದ ಶ್ರೀ ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳು ಉತ್ತರಾಧಿಕಾರಿಗಳಾಗಿ ನಿಯೋಜನೆಗೊಂಡಿದ್ದರು. ನಂತರ ಹುಬ್ಬಳ್ಳಿ ಮೂರುಸಾವಿರ ಮಠದ ಅಧಿಕಾರವನ್ನು ವಹಿಸಿಕೊಳ್ಳಬೇಕಾದಾಗ, ಶ್ರೀ ಗುರುಮಹಾಂತ ಸ್ವಾಮಿಗಳನ್ನು ೧೯೬೩ರಲ್ಲಿ ಅಧಿಕಾರಕ್ಕೆ ತಂದರು. ಗುರುಗಳು ಅಧಿಕಾರವನ್ನು ವಹಿಸಿಕೊಂಡ ಮೇಲೆ ಮಠವು ಕಂಡರಿಯದಂತೆ ಅಭಿವೃದ್ಧಿಗೊಂಡಿತು. ಅಲ್ಲದೆ ಈ ಮಠದ ಶಾಖಾ ಮಠಗಳನ್ನು ಅಭಿವೃದ್ಧಿ ಪಡಿಸಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದರು. ಇವರು ಶ್ರೀ ವಿಜಯ ಮಹಾಂತೇಶ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿ ಗ್ರಾಮಾಂತರ ಮಕ್ಕಳ ಕಲಿಕೆಗೆ ನೆರವಾದರು. ಶ್ರೀ ಗುರುಮಹಾಂತ ಸ್ವಾಮಿಗಳ ಕಾಲದಲ್ಲಿ ಮಠವು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಹಿತ್ಯಿಕವಾಗಿ ಅಭಿವೃದ್ಧಿಗೊಂಡಿತು. ಇವರ ನಂತರ ಶ್ರೀ ವಿಜಯ ಮಹಾಂತ ಸ್ವಾಮಿಗಳು ಉತ್ತರಾಧಿಕಾರಿಗಳಾಗಿ ನೇಮಕಗೊಂಡರು.

ಶ್ರೀ ವಿಜಯ ಮಹಾಂತ ಸ್ವಾಮಿಗಳು ಜಮಖಂಡಿ ತಾಲ್ಲೂಕಿನ ಹಿಪ್ಪರಗಿ ಗ್ರಾಮದ ಶ್ರೀ ವಿರೂಪಾಕ್ಷಯ್ಯ ಮತ್ತು ಶ್ರೀಮತಿ ನೀಲಮ್ಮನವರ ಪುತ್ರರಾಗಿ ೧೯೩೨ ರ ಆಗಸ್ಟ್ ಒಂದರಂದು ಜನಿಸಿದರು. ಶ್ರೀ ಮಹಾಂತಯ್ಯನವರು ಹಿಪ್ಪರಗಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿ, ವೀರಶೈವ ಧರ್ಮದ ಬಗ್ಗೆ ಒಲವನ್ನು ಬೆಳೆಸಿಕೊಂಡು ಸವದಿಯ ಶ್ರೀ ಸಂಗನ ಬಸವ ಸ್ವಾಮಿಗಳಿಂದ ಗುರುದೀಕ್ಷೆಯನ್ನು ಪಡೆದು,ಸಮಾಜ ಸೇವೆಗೆ ತಮ್ಮ ಬದುಕನ್ನು ಮೀಸಲಿಟ್ಟು ಲೌಕಿಕ ಬಂಧನದಿಂದ ಮುಕ್ತರಾದರು. ಮುಕ್ತರಾದರು. ಹತ್ತನೆಯ ವಯಸ್ಸಿನಲ್ಲಿ ಶಿವದೀಕ್ಷೆಯನ್ನು ಪಡೆದು ಮುಧೋಳ ಗವಿ ಮಠದಲ್ಲಿ ಸಂಸ್ಕೃತ, ವೇದಾಧ್ಯಯನವನ್ನು ಮಾಡಿ, ಶಿವಯೋಗ ಮಂದಿರದಲ್ಲಿ ಪ್ರವೇಶ ಪಡೆದರು. ಜಿ.ಎಂ.ಉಮಾಪತಿ ಶಾಸ್ತ್ರೀಗಳು, ಪಗಡದಿನ್ನಿ ಬಸವರಾಜ ಶಾಸ್ತ್ರೀಗಳು ಹಾಗೂ ವೀರಭದ್ರಶಾಸ್ತ್ರೀಗಳ ಪ್ರೇರಣೆಯಿಂದ ಮಹಾಂತಯ್ಯನವರು ಅಪಾರ ಪಾಂಡಿತ್ಯವನ್ನು ಸಂಪಾದಿಸಿಕೊಂಡರು. ಶಿವಯೋಗ ಮಂದಿರದಿಂದ ಕಾಶಿಗೆ ತೆರಳಿ ಹೆಚ್ಚಿನ ವ್ಯಾಸಂಗ ಮಾಡಿದರು. ಗುರುಗಳು ಕಾಶಿಯಲ್ಲಿ ಕಲಿತಿದ್ದಕ್ಕಿಂತ ಹೆಚ್ಚಾಗಿ ಬದುಕಿನಲ್ಲಿ ಅನುಭವಿಸಿದ ಅನುಭಾವದಿಂದ ಪಕ್ವಗೊಂಡು, ವೀರಶೈವ ಧರ್ಮವನ್ನು ವೈಚಾರಿಕ ದೃಷ್ಟಿಕೋನದಿಂದ ಬೆಳೆಸಬೇಕೆಂಬ ಮಹದಾಸೆ ಹೊತ್ತು ಸ್ವಗ್ರಾಮಕ್ಕೆ ಹಿಂದಿರುಗಿದರು. ಗುರುಗಳು ಪ್ರವಚನವನ್ನು ಮಾಡುವ

ಮೂಲಕ ಶರಣ ಸಂಸ್ಕೃತಿಯ ಪ್ರಚಾರಕರಾಗಿ ಬೆಳೆದರು. ಗುರುಗಳು ಶ್ರೀ ವಿಜಯಮಹಾಂತೇಶ ಮಠದ ಉತ್ತರಾಧಿಕಾರಿಗಳಾಗಿ ನಿಯೋಜನೆಗೊಂಡು, ೧೯೭೦ ರ ಮೇ ಏಳರಂದು ಪಟ್ಟಾಧಿಕಾರವನ್ನು ವಹಿಸಿಕೊಂಡರು.

ಪ್ರಗತಿಪರ ಧೋರಣೆ: ಪೂಜ್ಯರು ಶ್ರೀ ವಿಜಯಮಹಾಂತೇಶ ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ತಮ್ಮ ಪ್ರಗತಿ ಪರ ವಿಚಾರಗಳನ್ನು ಆಚರಣೆಗೆ ತರಲು ಮುಂದಾದರು. ಗುರುಗಳು ಅಜ್ಞಾನ, ಅಂಧಕಾರದ ಮೌಢ್ಯದಲ್ಲಿ ತೊಳಲುತ್ತಿದ್ದ ಸಮಾಜಕ್ಕೆ ವಾಸ್ತವ ಬದುಕಿನ ಕಲ್ಪನೆಯನ್ನು ಮೂಡಿಸಲು ಶ್ರಮಿಸಿದ್ದಾರೆ. ಇದರ ಫಲವೇ ಗೌರಿ ಹುಣ್ಣಿಮೆಯ ದಿನ ಮಣ್ಣಿನ ಮೂರ್ತಿಯನ್ನು ಕೂರಿಸಿ, ಆರತಿ ಬೆಳಗುವ ಬದಲು ತನ್ನ ಹೆತ್ತ ತಾಯಿಯನ್ನು ಮಣೆಯ ಮೇಲೆ ಕೂರಿಸಿ ಪೂಜಿಸುವ ಸಂಪ್ರದಾಯ ವನ್ನು ಆಚರಣೆಗೆ ತಂದು, ಸುಂದರ ಸಮನ್ವಯತೆಯನ್ನು ಮೂಡಿಸಿದ್ದಾರೆ. ನಾಗರ ಪಂಚಮಿಯಂದು ಕುಡಿಯವ ಹಾಲನ್ನು ನಾಗರ ಕಲ್ಲುಗಳಿಗೆ ಹಾಗೂ ಹುತ್ತಕ್ಕೆ ಎರೆಯುವುದನ್ನು ವಿರೋಧಿಸಿ ದರು. ನಾಗರ ಪಂಚಮಿಯ ದಿನ ಮೂಢನಂಬಿಕೆಗಳಿಂದ ಆಚರಿಸಲ್ಪಡುವ ಆಚರಣೆಗಳ ಬಗ್ಗೆ ಉಪನ್ಯಾಸ ಮಾಡಿ, ಸಾರ್ವಜನಿಕ ರಲ್ಲಿರುವ ಕಂದಾಚಾರ ಹಾಗೂ ಮೂಢನಂಬಿಕೆಗಳನ್ನು ದೂರ ಮಾಡಲು ವೈಚಾರಿಕ ಹಾಗೂ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಿಕೊಳ್ಳಲು ಕರೆ ನೀಡಿ, ಕಡು ಬಡವರಿಗೆ ಹಾಗೂ ಸಾರ್ವಜನಿಕ ಆಸ್ಪತ್ರೆಗಳಲ್ಲಿರುವ ರೋಗಿಗಳಿಗೆ ಸಾರ್ವಜನಿಕರಿಂದ ಸಂಗ್ರಹಿಸಿದ ಹಾಲನ್ನು ವಿತರಿಸುವ ಪರಿಪಾಠವನ್ನು ಬೆಳೆಸಿದ್ದಾರೆ.

ವಿಶ್ವ ಮಾನವತೆಯನ್ನು ಸಾರಿದ ಶರಣರತತ್ತ್ವಗಳನ್ನು ಪ್ರಚಾರಪಡಿಸುವ ಮಠಮಾನ್ಯಗಳು, ಇಂದು ಜಾತಿವಾದಿ ಗಳಾಗಿರುವುದನ್ನು ಖಂಡಿಸುವ ಇವರು ತಮ್ಮ ಮಠದಲ್ಲಿ ನಡೆಯುತ್ತಿದ್ದ ರುದ್ರಾಭಿಷೇಕ ಹಾಗೂ ಗದ್ದುಗೆ ಪೂಜೆಯನ್ನು ನಿಲ್ಲಿಸಿ, ರುದ್ರಾಭಿಷೇಕದ ಬದಲಿಗೆ ವಚನಾಭಿಷೇಕವನ್ನು ನಡೆಸುವ ಪರಿಪಾಠವನ್ನು ಬೆಳೆಸಿದ್ದಾರೆ. 'ಸಾಮಾಜಿಕ ನ್ಯಾಯಕ್ಕಾಗಿ ಬಸವಾದಿ ಶರಣರು ಹೋರಾಟ ನಡೆಸಿದರು. ಇವರ ತತ್ತ್ವವನ್ನು ಪರಿಪಾಲಿಸುವ ನಾವು ಆಚರಣೆಯಲ್ಲಿ ತರದಿದ್ದರೆ ಅಪಾರ್ಥ ವಾಗುತ್ತದೆ' ಎಂದು ಅಭಿಪ್ರಾಯಪಡುತ್ತಾ, ಹಿಂದುಳಿದ ವರ್ಗದ ಸಂಸ್ಕಾರವಂತ ವಟುವನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡು ಶ್ರೀ ಬಸವಲಿಂಗ ಸ್ವಾಮಿಗಳೆಂದು ಅಭಿದಾನ ಮಾಡಿ ಮೊಳಕಾಲ್ಮೂರು ತಾಲ್ಲೂಕಿನ ಸಿದ್ಧಯ್ಯನ ಕೋಟೆಯ ಶಾಖಾಮಠದ ಅಧಿಕಾರವನ್ನು ನೀಡಿದ್ದಾರೆ. ಈ ರೀತಿ ನುಡಿದಂತೆ ನಡೆಯುವ ಮನೋ ಗುಣವನ್ನು ಬೆಳೆಸಿಕೊಂಡಿರುವ ಶ್ರೀ ವಿಜಯ ಮಹಾಂತ ಸ್ವಾಮಿಗಳು ತಮ್ಮ ಪ್ರಗತಿಪರ ಧೋರಣೆಯಿಂದ ಶರಣ ಧರ್ಮವನ್ನು ಬೆಳೆಸುತ್ತಿದ್ದಾರೆ.

ಮಹಾಂತ ಜೋಳಿಗೆ: ಶ್ರೀ ವಿಜಯ ಮಹಾಂತ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಸಮಾಜ ಸುಧಾರಣೆಗೆಂದು ಮಹಾಂತ ಜೋಳಿಗೆಯನ್ನು ಹೆಗಲಿಗೆ ಹಾಕಿಕೊಂಡು ಹಳ್ಳಿ ಹಳ್ಳಿಗಳನ್ನೂ ಸುತ್ತಿ, ದುಶ್ಚಟಗಳಿಗೆ ಬಲಿಯಾದವರಿಗೆ ಅವರು ಬದುಕಿನ ಬಗ್ಗೆ ಅರಿವು ಮೂಡಿಸಿ, ಅವರಲ್ಲಿರುವ ದುಶ್ಚಟಗಳನ್ನು ದೂರ ಮಾಡಲು ಪ್ರಯತ್ನಿಸುತ್ತಿದ್ದಾರೆ. ಬದುಕುವ ಇಚ್ಛೆ ಇರುವವರಿಂದ ದುಶ್ಚಟಗಳನ್ನು ಬೇಡಿ ಜೋಳಿಗೆಗೆ ಹಾಕಿಸಿಕೊಂಡು ಬರುತ್ತಾರೆ. ಅಧಃಪತನಗೊಂಡ ಸಮಾಜದಲ್ಲಿ ನೈತಿಕ ಮೌಲ್ಯಗಳನ್ನು ಬೆಳೆಸುವಲ್ಲಿ ಗುರುಗಳು ಸಹಾಯಕವಾಗಿದ್ದಾರೆ.

ಕಾಯಕ ಸಂಜೀವಿನಿ: ೧೯೮೫ ರಲ್ಲಿ 'ಕಾಯಕ ಸಂಜೀವಿನಿ' ಎಂಬ ಸೇವಾಸಂಸ್ಥೆಯನ್ನು ಹುಟ್ಟು ಹಾಕಿ ದಾನಮಾಡುವ ಮನೋಭಾವ ಇರುವವರು ಒಂದುಸಾವಿರ ರೂಪಾಯಿ ಕೊಟ್ಟು ಇದರ ಸದಸ್ಯರಾಗಬಹುದು. ಹತ್ತು ವರ್ಷಗಳ ನಂತರ ಈ ಹಣವನ್ನು ಹಿಂದಿರುಗಿಸುವ ನಿಯಮ ಇದೆ. ಈವರೆಗೆ ನೂರೈವತ್ತು ಫಲಾನುಭವಿಗಳು ಈ ಸಂಸ್ಥೆಯಿಂದ ಬಡ್ಡಿ ರಹಿತ ಸಾಲವನ್ನು ಪಡೆದು ಸ್ವಾವಲಂಬನೆಯಿಂದ ಬದುಕನ್ನು ರೂಢಿಸಿಕೊಂಡಿದ್ದಾರೆ. ಈ ಸಂಸ್ಥೆ ಪ್ರಚಾರ ಬಯಸದೆ ಗ್ರಾಮಾಂತರ ಪ್ರದೇಶದಲ್ಲಿ ಮೌನಕ್ರಾಂತಿಯನ್ನು ಮಾಡಿದೆ.

ಶರಣ ಸಿದ್ಧಾಂತ ಪೀಠ: ಶರಣಸಿದ್ಧಾಂತ ಪೀಠವನ್ನು ಪ್ರಾರಂಭಿಸಿ ವರ್ಷದಲ್ಲಿ ಎರಡು ಬಾರಿ ಹತ್ತುದಿನಗಳ ಕಾಲ ಕಾರ್ಯಕ್ರಮ ರೂಪಿಸಲಾಗುತ್ತಿದೆ. ಮೊದಲನೆಯ ಶಿಬಿರದಲ್ಲಿ ವಚನ ಸಾಹಿತ್ಯ,ಲಿಂಗದೀಕ್ಷೆ ಹಾಗೂ ಇಷ್ಟಲಿಂಗದ ಮಹತ್ವದ ಬಗ್ಗೆ ಪರಿಣಿತರಿಂದ ಪ್ರವಚನವನ್ನು ಏರ್ಪಡಿಸಲಾಗುತ್ತಿದೆ. ಎರಡನೆಯ ಶಿಬಿರದಲ್ಲಿ ನೀತಿ, ಶೀಲ,ಚಾರಿತ್ರ್ಯ, ರಾಷ್ಟ್ರೀಯತೆ ಹಾಗೂ

ಸಾಮಾಜಿಕ ಮೌಲ್ಯಗಳ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಿ ಇವುಗಳನ್ನು ಬದುಕಿನಲ್ಲಿ ರೂಢಿಸಿಕೊಳ್ಳುವ ಬಗ್ಗೆ ತರಬೇತಿಯನ್ನು ಕೊಡಲಾಗುತ್ತಿದೆ. ಈ ಶಿಬಿರದಲ್ಲಿ ಪಾಲ್ಗೊಳ್ಳುವ ಶಿಬಿರಾರ್ಥಿಗಳಿಗೆ ಉಚಿತ ಪ್ರಸಾದ ಹಾಗೂ ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಶಿಬಿರವು ನಾಡಿನ ನಾನಾ ಭಾಗಗಗಳಲ್ಲಿ ನಡೆದಿರುವುದಲ್ಲದೆ, ಹೊರ ನಾಡಿನಲ್ಲಿಯೂ ನಡೆದಿದೆ. ಈ ಸಂಸ್ಥೆಯಿಂದ 'ಬಸವ ಬೆಳಗು' ಎಂಬ ನಿಯತಕಾಲಿಕೆ ಪ್ರಕಟಗೊಳ್ಳುತ್ತಿದೆ.

ಈ ರೀತಿ ಸಮಾಜದ ಅಭಿವೃದ್ಧಿಗೆ ಸಂಘ ಸಂಸ್ಥೆಗಳನ್ನು ಸ್ಥಾಪಿಸಿ, ಕ್ರಿಯಾತ್ಮಕ ಚಟುವಟಿಕೆಗಳನ್ನು ನಡೆಸುವ ಮೂಲಕ ಸಮಾಜವನ್ನು ಅಭಿವೃದ್ಧಿಪಡಿಸತೊಡಗಿದ್ದಾರೆ. ಶ್ರೀ ವಿಜಯ ಮಹಾಂತ ಸ್ವಾಮಿಗಳು ಕಾಯಕಯೋಗಿಗಳಾಗಿ, ಸರಳ ಸಂಪನ್ನತೆಯನ್ನು ಮೈಗೂಡಿಸಿಕೊಂಡು ವಿರಕ್ತ ಎಂಬ ಪದದ ಅನ್ವರ್ಥಕ ಬದುಕನ್ನು ಬದುಕುತ್ತಾ, ಸಮಾಜದ ಅಭಿವೃದ್ಧಿಯನ್ನೇ ಮಠದ ಅಭಿವೃದ್ಧಿ ಎಂದು ತಿಳಿದು ಧ್ವನಿ ಇಲ್ಲದವರಿಗೆ ಧ್ವನಿಯಾಗಿ ಅಭಿನವ ಬಸವಣ್ಣನೆನಿಸಿಕೊಂಡಿದ್ದಾರೆ.

ಸಾಹಿತ್ಯ ಸೇವೆ: ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಧರ್ಮ ಪ್ರಸಾರಕ ಸಂಸ್ಥೆಯನ್ನು ಸ್ಥಾಪಿಸಿ ಶ್ರೀ ವಿಜಯ ಮಹಾಂತೇಶ್ವರ ಪುರಾಣ, ಶ್ರೀ ವಿಜಯ ಮಹಾಂತೇಶ್ವರ ಲೀಲಾಮೃತ, ಶ್ರೀ ವಿಜಯ ಮಹಾಂತೇಶ್ವರ ಲಾವಣಿ, ಶ್ರೀಬಸವಕಾವ್ಯದರ್ಶನಂ, ಚಿತ್ತರಗಿಚಿಜ್ಜ್ಯೋತಿ, ಮಹಾಪ್ರಸಾದ, ವಚನಗಂಗಾಲಹರಿ, ವಚನಕಾರ ಉರಿಲಿಂಗದೇವ, ವಚನಪಿತಾಮಹ, ಮಹಾಂತ ಜೋಳಿಗೆ, ವೀರಶೈವ ವೈಚಾರಿಕ ವಿವೇಚನೆ, ಕನ್ನಡ ಕೈವಲ್ಯ ಸಾಹಿತ್ಯ, ವಿಭೂತಿ ನಿರ್ಮಾಣದ ವಿಧಾನ, ಕಲ್ಯಾಣ ಕ್ರಾಂತಿ ಹಿಂದು ಮುಂದು, ಇಷ್ಟಲಿಂಗ ನಿರ್ಮಾಣ ವಿಧಾನ, ಶರಣರ ಕುರಿತು ಕನ್ನಡ ಕಾದಂಬರಿಗಳು ಹಾಗೂ ವಚನ ಮುಖದಲ್ಲಿ ಶರಣಧರ್ಮ ಮುಂತಾದ ನಲವತ್ತೇಳು ಮೌಲಿಕಕೃತಿಗಳನ್ನು ಪ್ರಕಟಿಸಿ, ಕನ್ನಡಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ಪುಸ್ತಕ ಪ್ರಕಟಣಾ ಕಾರ್ಯದ ಜೊತೆಗೆ ವೀರಶೈವ ಗ್ರಂಥಗಳ ಆಯ್ಕೆಯನ್ನು ನಡೆಸಿ ಮಹಾದೇವ ಬಣಕಾರ ವಚನಗಳು (ಶ್ರೀ ಮಹಾದೇವ ಬಣಕಾರ), ಐವರು ವಚನಕಾರರು (ಸಿ.ಪಿ.ಕೃಷ್ಣಕುಮಾರ್), ಶ್ರೀ ಮಡಿವಾಳ ಶಿವಯೋಗಿ ಗರಗ (ಶ್ರೀ ಈಶ್ವರ ಸಣಕಲ್ಲು), ನೆರಳಿನಾಚೆಯ ಬೆಳಕು (ಡಾ.ಎಚ್.ತಿಪ್ಪೇರುದ್ರಸ್ವಾಮಿ), ಅಂಬಿಗರ ಚೌಡಯ್ಯನ ವಚನಗಳು (ಸಂ.ಡಾ.ಎಸ್.ವಿದ್ಯಾಶಂಕರ ಮತ್ತು ಶ್ರೀ ಬಸವರಾಜ ಸಿದ್ಧಾಶ್ರಮ), ಅಖಂಡೇಶ್ವರ ವಚನಗಳು (ಸಂ.ಡಾ.ವಿ. ಶಿವಾನಂದ), ಬಸವಣ್ಣನವರ ಟೀಕಿನ ವಚನಗಳು (ಸಂ.ಡಾ.ಎಂ.ಎಂ. ಕಲಬುರ್ಗಿ), ರಾಣಿ ಚೆನ್ನಮ್ಮ (ಎಸ್.ಎಸ್.ಒಡೆಯರ), ವಚನತೀರ್ಥ (ಶಿವಕವಿ ಶ್ರೀ ಸಂಗಮೇಶ ಹೊಸಮನಿ) ವಚನ ವ್ಯಾಸಂಗ (ಡಾ. ಪಿ.ವಿ.ನಾರಾಯಣ), ಶರಣಪಥ (ಡಾ ದೇ.ಜವರೇಗೌಡರು) ಹಾಗೂ ಭವ್ಯಮಾನವ (ಪ್ರೊ.ಸಂ.ಶಿ. ಭೂಸನೂರುಮಠ) ಈ ರೀತಿ ಅನೇಕ ಮೌಲಿಕ ಕೃತಿಗಳನ್ನು ಗುರುತಿಸಿ ಕೃತಿಕಾರರಿಗೆ ಗೌರವ ಧನ ನೀಡಿ ಗೌರವಿಸಿದ್ದಾರೆ.

ಶೈಕ್ಷಣಿಕ ಸೇವೆ:
ಶ್ರೀ ವಿಜಯ ಮಹಾಂತೇಶ್ವರ ವಿದ್ಯಾವರ್ಧಕ ಸಂಘ, ಇಲಕಲ್ಲು
ಶ್ರೀ ವಿಜಯ ಮಹಾಂತೇಶ್ವರ ಕಲಾ, ವಿಜ್ಞಾನ, ವಾಣಿಜ್ಯ ಮಹಾವಿದ್ಯಾಲಯ, ಇಲಕಲ್ಲು
ಶ್ರೀ ವಿಜಯ ಮಹಾಂತೇಶ್ವರ ಲಲಿತ ಕಲಾ ಮಹಾವಿದ್ಯಾಲಯ, ಹುಬ್ಬಳ್ಳಿ
ಶ್ರೀ ವಿಜಯ ಮಹಾಂತೇಶ್ವರ ವಿದ್ಯಾವರ್ಧಕ ಸಂಘ, ಹುನಗುಂದ
ವಿ.ಎಂ.ಎಸ್.ಆರ್ಟ್ಸ್, ಸೈನ್ಸ್ ಕಾಲೇಜು, ಹುನಗುಂದ
ಶ್ರೀ ವಿಜಯ ಮಹಾಂತೇಶ್ವರ ಮಾಧ್ಯಮಿಕ ಶಾಲೆ, ಹುನಗುಂದ
ಶ್ರೀ ವಿಜಯ ಮಹಾಂತೇಶ್ವರ ವಿದ್ಯಾರ್ಥಿ ನಿಲಯ, ಇಲಕಲ್ಲು
ಶ್ರೀ ವಿಜಯ ಮಹಾಂತೇಶ್ವರ ಪ್ರಸಾದ ನಿಲಯ, ಇಲಕಲ್ಲು
ಶ್ರೀ ವಿಜಯ ಮಹಾಂತೇಶ್ವರ ಪ್ರಸಾದ ನಿಲಯ, ಹುನಗುಂದ
ಶ್ರೀ ವಿಜಯ ಮಹಾಂತೇಶ್ವರ ಪ್ರಸಾದ ನಿಲಯ, ಚಿತ್ತರಗಿ
ಶ್ರೀ ವಿಜಯ ಮಹಾಂತೇಶ್ವರ ಸೆಂಟ್ರಲ್ ಸ್ಕೂಲ್, ಇಲಕಲ್ಲು
ಶ್ರೀ ವಿಜಯ ಮಹಾಂತೇಶ್ವರ ಹಾಸ್ಟೆಲ್, ಸೋಲಾಪುರ
ಶ್ರೀ ವಿಜಯ ಮಹಾಂತೇಶ್ವರ ವಿದ್ಯಾವರ್ಧಕ ಸಂಘದ ಪಾಲಿಟೆಕ್ನಿಕ್ ಕಾಲೇಜು, ಹುನಗುಂದ

ಶ್ರೀ ವಿಜಯ ಮಹಾಂತೇಶ್ವರ ಕೃಪಾಪೋಷಿತ ಜಗದ್ಗುರು ಮೂರು ಸಾವಿರ ಮಠ,
ಶ್ರೀ ಗಂಗಾಧರ ಕೈಗಾರಿಕಾ ತರಬೇತಿ ಸಂಸ್ಥೆ,
ಶ್ರೀ ವಿಜಯ ಮಹಾಂತೇಶ್ವರ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆ, ಇಲಕಲ್ಲ
ಶ್ರೀ ವಿಜಯ ಮಹಾಂತೇಶ್ವರ ಔಷಧ ವಿಜ್ಞಾನ ಕಾಲೇಜು, ಹುನಗುಂದ

ಈ ರೀತಿ ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ ಹಾಗೂ ಶೈಕ್ಷಣಿಕವಾಗಿ ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಮಠವು ಅಭಿವೃದ್ಧಿಯನ್ನು ಸಾಧಿಸಿದೆ. ಈಗಿನ ಶ್ರೀ ವಿಜಯ ಮಹಾಂತ ಸ್ವಾಮಿಗಳು ರಚನಾತ್ಮಕ ಕಾರ್ಯಗಳಿಂದ ವೀರಶೈವ ಮಠಗಳಿಗೆ ಒಂದು ಹೊಸ ಆಯಾಮ ನೀಡಿ ಶರಣರು ಕಂಡ ಸಮಾಜವನ್ನು ರೂಪಿಸತೊಡಗಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ವಿಜಯ ಮಹಾಂತ ಸ್ವಾಮಿಗಳು, ಶ್ರೀ ಚಿತ್ತರಗಿ ವಿಜಯ ಮಹಾಂತೇಶ್ವರ ಮಠ, ಇಲಕಲ್ಲು, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.
ಆಧಾರ: 'ಮಹಾಂತ' ಸಂಪಾದಕರು : ಬಿ.ಎಂ.ತೆಳಗಡಿ, ಪ್ರೊ. ವಿ.ವಿ.ಅಲೇಗಾವಿ, ಪ್ರೊ. ಜಿ.ಎಚ್.ಹನ್ನೆರಡು ಮಠ.
'ಕಲ್ಯಾಣದ ಹಾದಿ' ಸಂಪಾದಕರು: ಡಾ. ಸಿದ್ಧಲಿಂಗ ಪಟ್ಟಣ ಶೆಟ್ಟಿ, ಲೇಖಕರು : ಮಹೇಶ ತಿಪ್ಪಶೆಟ್ಟಿ

ಕಮತಗಿ

ಹುನಗುಂದ ತಾಲ್ಲೂಕಿನ ಕಮತಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಮೂವತ್ತೆರಡು ಕಿ.ಮೀ ದೂರದಲ್ಲಿದೆ. ಮಲಪ್ರಭಾ ನದಿಯ ದಂಡೆಯ ಮೇಲಿರುವ ಈ ಗ್ರಾಮದಲ್ಲಿ ಪುರಾತನ ಕಾಲದ ಶ್ರೀ ಹೊಳೆಹುಚ್ಚೇಶ್ವರ ಸಂಸ್ಥಾನ ಮಠ ಹಾಗೂ ಶ್ರೀ ಹಿರೇಮಠ ಸ್ಥಾಪನೆಯಾಗಿವೆ.

ಹೊಳೆಹುಚ್ಚೇಶ್ವರ ಸಂಸ್ಥಾನ ಮಠ: ಕಮತಗಿ ಗ್ರಾಮದ ಗುಡ್ಡದ ಮೇಲೆ ಶ್ರೀ ಹೊಳೆ ಹುಚ್ಚೇಶ್ವರ ಸಂಸ್ಥಾನ ಮಠವು ಹನ್ನೆರಡನೆಯ ಶತಮಾನದಲ್ಲಿ ಸ್ಥಾಪನೆಯಾಗಿ, ವಿಜಯ ನಗರದ ಪ್ರೌಢದೇವರಾಯನ ಕಾಲದಲ್ಲಿ (೧೪೨೪-೪೬) ಅಭಿವೃದ್ಧಿಗೊಂಡಿದೆ ಎಂದು ಹೇಳಲಾಗುತ್ತಿದೆ. ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದ ಶರಣರು ಇಲ್ಲಿ ಬಂದು ನೆಲೆಸಿ, ಈ ಕ್ಷೇತ್ರವನ್ನು ಸುಕ್ಷೇತ್ರಗೊಳಿಸಿದ್ದಾರೆ. ಕಲ್ಯಾಣದಲ್ಲಿ ಮಹಾಪ್ರಸಾದಿಯೆಂದು ಹೆಸರುಗಳಿಸಿದ್ದ ಶ್ರೀ ಮರುಳಶಂಕರ ಸ್ವಾಮಿಗಳು ಇಲ್ಲಿ ಬಂದು ನೆಲೆಸಿ ಮಠವನ್ನು ಸ್ಥಾಪನೆ ಮಾಡಿದ್ದರೆಂದು ಹೇಳಲಾಗುತ್ತಿದೆ. ಇವರ ನಂತರ ಮಠದ ಪರಂಪರೆ ಬೆಳೆದು ಹದಿನೈದನೆಯ ಶತಮಾನದ ವೇಳೆಗೆ ಮಠವು ಉತ್ತರಾಧಿಕಾರಿಗಳಿಲ್ಲದೆ ಖಾಲಿ ಉಳಿದಿತ್ತು. ಈ ಸಂದರ್ಭದಲ್ಲಿ ಲೋಕ ಸಂಚಾರದಲ್ಲಿದ್ದ ಶಿವಯೋಗಿಗಳು (ಶ್ರೀ ಹೊಳೆ ಹುಚ್ಚೇಶ್ವರ), ಆಧ್ಯಾತ್ಮದ ಹುಚ್ಚಿನಿಂದ ಪಾದಯಾತ್ರೆಯ ಮೂಲಕ ನಾಡಿನ ಸುಕ್ಷೇತ್ರಗಳನ್ನೆಲ್ಲಾ ಸುತ್ತಿ ಕಮತಗಿ ಗ್ರಾಮಕ್ಕೆ ಆಗಮಿಸಿದರು. ಗುರುಗಳು ಇಲ್ಲಿ ನೆಲೆಗೊಂಡು ತಮ್ಮ ಆಧ್ಯಾತ್ಮ ಶಕ್ತಿಯ ಬಲದಿಂದ ಧರ್ಮೋಪದೇಶವನ್ನು ನೀಡುತ್ತಾ, ಅನೇಕ ಪವಾಡಗಳನ್ನು ಮಾಡಿ ಜನ ಮನ್ನಣೆಗೆ ಪಾತ್ರರಾಗಿದ್ದರು.

ಮಠ ಸ್ಥಾಪನೆ: ಗ್ರಾಮದ ಹೊರಭಾಗದ ಬೆಟ್ಟದ ಮೇಲೆ ಅನುಷ್ಠಾನಗೊಂಡಿದ್ದ ಶಿವಯೋಗಿಗಳನ್ನು (ಶ್ರೀ ಹೊಳೆಹುಚ್ಚೇಶ್ವರ), ಪ್ರಥಮವಾಗಿ ನೋಡಿದ ಗ್ರಾಮಸ್ಥರು ಇವರ ವರ್ತನೆಯನ್ನು ನೋಡಿ ಉಪೇಕ್ಷಿಸಿದ್ದರು. ನಂತರ ಇವರ ಆಧ್ಯಾತ್ಮ ಶಕ್ತಿಯನ್ನು ನೋಡಿದ ಜನರು ಗುರುಗಳಿಗಾಗಿ ಮಠವನ್ನು ನಿರ್ಮಿಸಿ ಕೊಡುತ್ತಾರೆ. ಗುರುಗಳು ಆಧ್ಯಾತ್ಮದ ಹುಚ್ಚನ್ನು ಮೈಗೂಡಿಸಿಕೊಂಡಿದ್ದ ಕಾರಣಕ್ಕೆ ಭಕ್ತರು ಗುರುಗಳನ್ನು ಶ್ರೀ ಹುಚ್ಚೇಶ್ವರ ಸ್ವಾಮಿಗಳೆಂದು ಕರೆಯತೊಡಗಿದರು. ಅಲ್ಲದೆ ಇಲ್ಲಿನ ಮಠಕ್ಕೆ'ಶ್ರೀಹುಚ್ಚೇಶ್ವರ ಮಠ'ಎಂದೇ ರೂಢಿಗತವಾಗಿ ಕರೆಯತೊಡಗಿದರು ಎಂದು ಹೇಳಲಾಗುತ್ತಿದೆ. ಶ್ರೀ ಹುಚ್ಚೇಶ್ವರ ಸ್ವಾಮಿಗಳು ಅನೇಕ ಸತ್ಕಾರ್ಯ ಗಳನ್ನು ಮಾಡಿ ಸಮಾಜವನ್ನು ಉದ್ಧರಿಸಿದರು.

ಪರಂಪರೆ: ಶ್ರೀ ಮರುಳ ಶಂಕರ ಸ್ವಾಮಿಗಳಿಂದ ಸ್ಥಾಪನೆಗೊಂಡ ಈ ಮಠವು ಶ್ರೀ ಹುಚ್ಚೇಶ್ವರ ಸ್ವಾಮಿಗಳ ಕಾಲದಲ್ಲಿ ಬೆಳೆದು ನಂತರ ವಿಜಯನಗರದ ಅರಸರು ಹಾಗೂ ಹೈದರಾಬಾದ್ ನಿಜಾಮರ ಕಾಲದಲ್ಲಿ ನೆರವು ದೊರೆತು ಸಂಸ್ಥಾನ ಮಠವಾಗಿ ರೂಪುಗೊಂಡಿತು. ಇಂತಹ ಪುರಾತನ ಹಾಗೂ ಇತಿಹಾಸ ಪ್ರಸಿದ್ಧ ಮಠದ ಪರಂಪರೆಯಲ್ಲಿ ಇದುವರೆಗೆ ಅನೇಕ

ಜನ ಗುರುಗಳು ಅಧಿಕಾರ ನಡೆಸಿದ್ದಾರೆ. ಆದರೆ ಪರಂಪರೆಯ ಗುರುಗಳ ಹೆಸರುಗಳನ್ನು ದಾಖಲೆಯಲ್ಲಿ ಉಳಿಸಿಕೊಳ್ಳದೆ ಹೋದ ಕಾರಣ ಉಲ್ಲೇಖಿಸಲು ಸಾಧ್ಯವಾಗುತ್ತಿಲ್ಲ.

ಶ್ರೀ ಹುಚ್ಚೇಶ್ವರ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿ ಪಡಿಸಿದ ಮೇಲೆ ಅಧಿಕಾರಕ್ಕೆ ಬಂದ ಎಲ್ಲಾ ಗುರುಗಳು, ಶ್ರೀ ಹುಚ್ಚೇಶ್ವರ ಸ್ವಾಮಿಗಳು ಎಂದು ಅಭಿದಾನ ಪಡೆದು ಅಧಿಕಾರಕ್ಕೆ ಬರುತ್ತಿದ್ದಾರೆ. ಪರಂಪರೆಯ ಹನ್ನೆರಡನೆಯ ಗುರುಗಳಾಗಿ ಅಧಿಕಾರ ವಹಿಸಿಕೊಂಡ ಶ್ರೀ ಹುಚ್ಚೇಶ್ವರ ಸ್ವಾಮಿಗಳು ಮಠವನ್ನು ಸರ್ವಾಂಗೀಣವಾಗಿ ಅಭಿವೃದ್ಧಿ ಪಡಿಸಿ, ಸಮಾಜಮುಖಿಯಾಗಿ ಬೆಳೆಯುವಂತೆಮಾಡಿದರು. ಇವರು ತಮ್ಮ ಜೀವಿತಾವಧಿಯಲ್ಲಿಯೇ ಪರಂಪರೆಯ ಹದಿಮೂರ ನೆಯ ಗುರುಗಳಿಗೆ ೨೦೦೦ದ ಫೆಬ್ರವರಿ ಹತ್ತರಂದು ನಿರಂಜನ ಪಟ್ಟಾಧಿಕಾರವನ್ನು ನೀಡಿ ಅದೇ ವರ್ಷದಲ್ಲಿ (೨೦೦೦ ರಲ್ಲಿ) ಲಿಂಗೈಕ್ಯರಾದರು. ಈಗ ಅಧಿಕಾರ ವಹಿಸಿಕೊಂಡಿರುವ ಗುರುಗಳು ಪರಂಪರಾಗತ ಮಠವನ್ನು ಮುನ್ನಡೆಸತೊಡಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಶ್ರೀ ಹುಚ್ಚೇಶ್ವರ ಸ್ವಾಮಿಗಳ ಕಾಲದಲ್ಲಿ ನಾಡಿನಾದ್ಯಂತ ಅನೇಕ ಶಾಖಾಮಠಗಳು ಸ್ಥಾಪನೆ ಗೊಂಡವು. ಅವುಗಳಲ್ಲಿ ಹದಿನಾಲ್ಕು ಶಾಖಾ ಮಠಗಳು ಅಸ್ತಿತ್ವದಲ್ಲಿದ್ದು ಗುಳೇದಗುಡ್ಡ ಸಮೀಪದ ಕೋಟೆಕಲ್ಲು, ಬೇವೂರು ಹಾಗೂ ಹಳ್ಳೂರು ಪ್ರಮುಖ ಮಠಗಳಾಗಿ ಬೆಳೆದಿವೆ. ಈ ಹದಿನಾಲ್ಕು ಮಠಗಳಿಗೂ ಸುಸಜ್ಜಿತ ಕಟ್ಟಡಗಳನ್ನು ನಿರ್ಮಿಸಿ ಶ್ರೀ ಹುಚ್ಚೇಶ್ವರಸ್ವಾಮಿ ತೋರುಗದ್ದುಗೆಯನ್ನು ಸ್ಥಾಪಿಸಿ, ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಲಾಗಿದೆ. ಮಠಾಧಿಪತಿಗಳು ಈ ಶಾಖಾಮಠಗಳಿಗೆ ಸಂದರ್ಭಕ್ಕನುಸಾರ ಬಂದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಮೂಲಮಠವಾದ ಕಮತಗಿಯ ಬೆಟ್ಟದ ಮೇಲೆ ಶ್ರೀ ಮರುಳಶಂಕರ ಸ್ವಾಮಿಗಳ ಗದ್ದುಗೆ ಸ್ಥಾಪನೆಯಾಗಿದೆ. ಶ್ರೀ ಹುಚ್ಚೇಶ್ವರ ಸ್ವಾಮಿಗಳ ಗದ್ದುಗೆಯು ಹೊಳೆ ದಡದ ಮಠದಲ್ಲಿ ಸ್ಥಾಪನೆಯಾಗಿದೆ. ಈ ಮಠದಲ್ಲಿ ಪರಂಪರೆಯ ಗುರುಗಳ ಗದ್ದುಗೆಗಳು ಸ್ಥಾಪನೆ ಯಾಗಿದ್ದು, ಇವುಗಳಿಗೆ ನಿತ್ಯ ಎರಡು ವೇಳೆ ಪೂಜೆ, ಶ್ರಾವಣಮಾಸದಲ್ಲಿ ಪುರಾಣ ಪ್ರವಚನವನ್ನು ನಡೆಸಲಾಗುತ್ತಿದೆ. ವರ್ಷ ಕ್ಕೊಮ್ಮೆ ಭಾರತ ಹುಣ್ಣಿಮೆಯಾದ ನಂತರ ಶ್ರೀ ಹುಚ್ಚೇಶ್ವರ ಜಾತ್ರೆ ಬಹಳ ವಿಜೃಂಭಣೆಯಿಂದ ನಡೆಯುತ್ತಿದೆ. ಮಠದಲ್ಲಿ ನಿತ್ಯ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗಿದೆ. ಹನ್ನೆರಡನೆಯ ಶ್ರೀ ಹುಚ್ಚೇಶ್ವರ ಸ್ವಾಮಿಗಳು ತಮ್ಮ ಶಾಖಾಮಠವಾದ ಕೋಟೆಕಲ್ಲಿನಲ್ಲಿ ಅರವತ್ತೂರು ಪುರಾತನರ ಶಿಲಾಮಂಟಪ ಪೂಜೆ ನಡೆಸಿದ್ದಾರೆ. ಈಗಿನ ಮಠಾಧೀಶರಾದ (ಹದಿಮೂರನೆಯ) ಶ್ರೀ ಹುಚ್ಚೇಶ್ವರ ಸ್ವಾಮಿಗಳು ಕೋಟೆ ಕಲ್ಲಿನಲ್ಲಿ ಲಕ್ಷದೀಪೋತ್ಸವವನ್ನು ಆಚರಿಸಿದ್ದಾರೆ.

ಶೈಕ್ಷಣಿಕ ಸೇವೆ: ಹುಚ್ಚೇಶ್ವರ ವಿದ್ಯಾವರ್ಧಕ ಸಂಸ್ಥೆಯನ್ನು ಸ್ಥಾಪಿಸಿ ಕೋಟೆಕಲ್ಲಿನಲ್ಲಿ ಸಂಸ್ಕೃತ ಪಾಠಶಾಲೆ, ಶ್ರೀ ಪಂಚಾಕ್ಷರಿ ಗವಾಯಿಗಳವರ ಸಂಗೀತ ಪಾಠಶಾಲೆ, ಕಮತಗಿಯಲ್ಲಿ ಪದವಿಪೂರ್ವ ಕಾಲೇಜು, ಉದ್ಯೋಗ ಆಧಾರಿತ ತರಬೇತಿ ಸಂಸ್ಥೆಗಳು ಹಾಗೂ ಉಚಿತ ಪ್ರಸಾದನಿಲಯವನ್ನು ಪ್ರಾರಂಭಿಸಿದ್ದಾರೆ. ಇದರಿಂದ ಗ್ರಾಮೀಣ ಬಡಮಕ್ಕಳಿಗೆ ಕಲಿಯಲು ನೆರವಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಹುಚ್ಚೇಶ್ವರ ಸ್ವಾಮಿಗಳು, ಶ್ರೀ ಹುಚ್ಚೇಶ್ವರ ಸಂಸ್ಥಾನಮಠ, ಕಮತಗಿ, ಹುನಗುಂದ ತಾ, ಬಾಗಲಕೋಟೆಜಿಲ್ಲೆ.
ಆಧಾರ: 'ಬಾಗಲಕೋಟೆ ಜಿಲ್ಲೆಯ ಕೆಲವು ವೀರಶೈವ ಮಠಗಳು' (ಅಪ್ರಕಟಿತ) ಲೇಖನ: ಪ್ರೊ.ವಿಜಯಕುಮಾರ ಕಟಗಿಹಳ್ಳಿ ಮಠ

ಹಿರೇಮಠ: ಕಮತಗಿ ಗ್ರಾಮದ ಮಧ್ಯಭಾಗದಲ್ಲಿ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ. ಉಜ್ಜಯಿನಿ ಪೀಠದ ಶಾಖಾಮಠವಾಗಿ ಪುತ್ರ ವರ್ಗದ ಪರಂಪರೆಯಲ್ಲಿ ಬೆಳೆದಿರುವ ಶ್ರೀ ಹಿರೇಮಠವು, ಪುರಾತನ ಕಾಲದಲ್ಲಿ ಸ್ಥಾಪನೆಯಾಗಿ ವೀರಶೈವ ಧರ್ಮವನ್ನು ಬೆಳೆಸಿ ಭಕ್ತರನ್ನು ಸಂಸ್ಕಾರವಂತರನ್ನಾಗಿ ಮಾಡಿದೆ. ಈ ಮಠವನ್ನು ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ಸ್ಥಾಪಿಸಿ, ಧಾರ್ಮಿಕ ಕಾರ್ಯಗಳನ್ನು ಮಾಡುವುದರ ಮೂಲಕ ಜನರಲ್ಲಿ ಧರ್ಮಜಾಗೃತಿಯನ್ನುಂಟು ಮಾಡಿದ್ದರು. ಇವರ ನಂತರ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿದಿತ್ತು. ಅಂದಿನಿಂದ ಮಠದ ವಂಶಸ್ಥರು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಾ ಮಠದ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದ್ದಾರೆ.

ಪುರಾತನ ಮಠವನ್ನು ಊರ್ಜಿತಗೊಳಿಸಿ ಪರಂಪರೆಯನ್ನು ಬೆಳೆಸಬೇಕೆಂಬ ಮಹದಾಸೆಯಿಂದ ಮಠದ ವಂಶಸ್ಥರು ಹಾಗೂ ಮಠದ ಭಕ್ತರು ಶ್ರೀ ಪಟ್ಟದಯ್ಯ ಮತ್ತು ಶ್ರೀಮತಿ ರುದ್ರಮ್ಮನವರ ಪುತ್ರರಾಗಿ ೧೯೬೮ರಲ್ಲಿ ಜನಿಸಿದ ಶ್ರೀ ಶಿವ

ಕುಮಾರ ದೇವರನ್ನು ಉತ್ತರಾಧಿಕಾರಿಯನ್ನಾಗಿ ೨೦೦೦ ದ ಜುಲೈ ತಿಂಗಳಿನಲ್ಲಿ ನೇಮಕಮಾಡಿದ್ದಾರೆ. ಶ್ರೀ ಶಿವಕುಮಾರ ದೇವರು ನಾಗೂರು, ಹೆಬ್ಬಳ್ಳಿ, ಉಜ್ಜಯಿನಿ ಹಾಗೂ ಕಲಾದಗಿಯಲ್ಲಿ ವಿದ್ಯಾಭ್ಯಾಸವನ್ನು ಮಾಡಿ ಶ್ರೀ ರಂಭಾಪುರಿ ಪೀಠದಲ್ಲಿ ಸಂಸ್ಕೃತ ವೇದಾಧ್ಯಯನವನ್ನು ಮಾಡುತ್ತಿದ್ದಾರೆ. ಮಠದಲ್ಲಿ ಕರ್ತೃಗುರುಗಳಾದ ಶ್ರೀ ಚನ್ನಬಸವಯ್ಯ ಶಿವಾಚಾರ್ಯ ಸ್ವಾಮಿಗಳ ಗದ್ದುಗೆ ಸ್ಥಾಪನೆಯಾಗಿದ್ದು, ಈ ಗದ್ದುಗೆಗೆ ನಿತ್ಯಪೂಜೆ, ವಾರ್ಷಿಕ ಪುಣ್ಯಾರಾಧನೆ ಮತ್ತು ದಾಸೋಹವನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಶಿವಕುಮಾರ ದೇವರು, ಶ್ರೀ ಹಿರೇಮಠ, ಕಮತಗಿ, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.

ಕೂಡಲಸಂಗಮ

ಹುನಗುಂದ ತಾಲ್ಲೂಕಿನ ಕೂಡಲಸಂಗಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಇಪ್ಪತ್ತೊಮ್ಮರು ಕಿ.ಮೀ ದೂರದಲ್ಲಿದೆ. ಹನ್ನೆರಡನೆಯ ಶತಮಾನದಲ್ಲಿ ವೈದಿಕಸಂಪ್ರದಾಯದ ವಿರುದ್ಧ ಬಂಡೆದ್ದು, ಕೂಡಲಸಂಗಮದ ಶ್ರೀ ಸಾರಂಗ ಮಠದ ಶ್ರೀ ಜಾತವೇದಮುನಿ ಶಿವಾಚಾರ್ಯ ಸ್ವಾಮಿಗಳ ಸಾನಿಧ್ಯಕ್ಕೆ ಬಂದು ಸಂಸ್ಕಾರ ಪಡೆದು, ವೀರಶೈವ ಧರ್ಮಕ್ಕೆ ಒಂದು ಹೊಸತಿರುವು ಕೊಟ್ಟ ಬಸವಣ್ಣನವರ ವಿದ್ಯಾಕ್ಷೇತ್ರ ಇದಾಗಿದೆ. ಕಲ್ಯಾಣದಲ್ಲಿ ಕ್ರಾಂತಿ ಆದ ಮೇಲೆ ಬಸವಣ್ಣನವರು ಕೂಡಲಸಂಗಮಕ್ಕೆ ಬಂದು ಸಂಗಮೇಶ್ವರನ ಸಾನ್ನಿಧ್ಯದಲ್ಲಿ ಲಿಂಗೈಕ್ಯರಾಗಿರುವುದು ವಿಶ್ವದ ಭೂಪಟದಲ್ಲಿ ಕೂಡಲಸಂಗಮವನ್ನು ಒಂದು ಐತಿಹಾಸಿಕ ಸ್ಥಳವನ್ನಾಗಿ ಗುರುತಿಸುವಂತಾಗಿದೆ. ಇಂತಹ ಕ್ಷೇತ್ರದಲ್ಲಿ ಹನ್ನೆರಡನೆಯ ಶತಮಾನಕ್ಕೂ ಮೊದಲು ಸ್ಥಾಪನೆಗೊಂಡಿದ್ದ ಸಾರಂಗಮಠ ಹಾಗೂ ಇಪ್ಪತ್ತನೆಯ ಶತಮಾನದಲ್ಲಿ ಸ್ಥಾಪಿತವಾದ ಮಹಾಮನೆ ಮಠವು ಅಸ್ತಿತ್ವದಲ್ಲಿವೆ.

ಸಾರಂಗಮಠ: ಮಲಪ್ರಭ ಮತ್ತು ಕೃಷ್ಣನದಿಗಳು ಸಂಗಮಗೊಳ್ಳುವ ಸ್ಥಳದಲ್ಲಿ ಸಂಗಮೇಶ್ವರ ದೇವಸ್ಥಾನವಿದ್ದು ಇದರ ಸಮೀಪ ಉಜ್ಜಯಿನಿ ಪೀಠದ ಶಾಖಾಮಠವಾಗಿ ಶ್ರೀ ಸಾರಂಗ ಮಠವು ಬೆಳೆದಿದೆ.

ಮಠ ಸ್ಥಾಪನೆ: ಕ್ರಿ.ಶ. ೯೭೭ರಲ್ಲಿ ಈ ಮಠವು ಕಾಶಿಯಿಂದ ಸಂಗಮಕ್ಕೆ ಸ್ಥಳಾಂತರಗೊಂಡಿದೆ. ಶ್ರೀ ಸಾರಂಗಮುನಿ ಸ್ವಾಮಿಗಳು ಕಾಶಿಯಿಂದ ಹೊರಟವರು ಲೋಕಸಂಚಾರ ಮಾಡುತ್ತಾ, ಸಂಗಮ ಕ್ಷೇತ್ರಕ್ಕೆ ಬಂದು ನೆಲೆಸಿ ಮಠವನ್ನು ಸ್ಥಾಪನೆ ಮಾಡಿದ್ದರು. ಅನೇಕ ಪವಾಡಗಳನ್ನು ಮಾಡಿ ಜನರನ್ನು ಧರ್ಮನಿಷ್ಠರನ್ನಾಗಿ ಮಾಡಿ ವೀರಶೈವ ಧರ್ಮವನ್ನು ಬೆಳೆಸಿದರು. ಶ್ರೀ ಸಾರಂಗಮುನಿ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪನೆಗೊಂಡ ಈ ಮಠವು 'ಶ್ರೀ ಸಾರಂಗಮಠ' ಎಂದು ರೂಢಿಗತವಾಗಿ ಕರೆಯಲ್ಪಡುತ್ತಿದೆ.

ಪರಂಪರೆ: ಶ್ರೀ ಸಾರಂಗಮುನಿ ಶಿವಾಚಾರ್ಯ ಸ್ವಾಮಿಗಳಿಂದ ಪ್ರಾರಂಭಗೊಂಡ ಮಠದಲ್ಲಿ ನಂತರ ಅನೇಕ ಗುರುಗಳು ಮಠದ ಅಧಿಕಾರವನ್ನು ನಡೆಸಿಕೊಂಡು ಬಂದು ಸಂಗಮಕ್ಷೇತ್ರ ಮತ್ತು ಮಠವನ್ನು ಒಂದು ಧಾರ್ಮಿಕ ಸುಕ್ಷೇತ್ರವನ್ನಾಗಿ ಬೆಳೆಸಿದ್ದರು. ನಂತರ ಹನ್ನೆರಡನೆಯ ಶತಮಾನದಲ್ಲಿ ಶ್ರೀ ಜಾತವೇದಮುನಿ ಶಿವಾಚಾರ್ಯ ಸ್ವಾಮಿಗಳು (ಕ್ರಿ.ಶ.೧೧೩೦) ಅಧಿಕಾರವನ್ನು ವಹಿಸಿಕೊಂಡಿದ್ದರು. ಇವರು ತ್ರಿಕಾಲ ಜ್ಞಾನಿಗಳಾಗಿ, ಸಂಸ್ಕೃತ ಮತ್ತು ವೇದಗಳ ಬಗ್ಗೆ ಆಳವಾದ ಅಭ್ಯಾಸವನ್ನು ಮಾಡಿಕೊಂಡಿದ್ದರು. ಅಲ್ಲದೆ ವೀರಶೈವ ತತ್ತ್ವದ ಬಗ್ಗೆ ಆಳವಾದ ಅಧ್ಯಯನವನ್ನು ಹೊಂದಿದ್ದು ಇವರು ಶ್ರೀ ಈಶಾನ್ಯಗುರು ಹಾಗೂ ಶ್ರೀ ಸಂಗಮೇಶ್ವರ ಗುರುಗಳು ಎಂದೂ ಸಹ ಕರೆಯಲ್ಪಡುತ್ತಿದ್ದರು. ಇವರ ನಂತರ ಶ್ರೀ ಜಾತವೇದಮುನಿ ಶಿವಾಚಾರ್ಯ ಸ್ವಾಮಿಗಳ ಹೆಸರನ್ನೇ ಅಭಿಧಾನವಾಗಿ ಪಡೆದು ಅನೇಕ ಗುರುಗಳು ಅಧಿಕಾರವನ್ನು ನಡೆಸಿದ್ದಾರೆ. ಕೆಲವು ವರ್ಷಗಳಿಂದ ಈ ಮಠವು ಖಾಲಿ ಉಳಿದಿತ್ತು. ಈಗ ಅಭಿನವ ಶ್ರೀ ಜಾತವೇದಮುನಿ ಶಿವಾಚಾರ್ಯ ಸ್ವಾಮಿಗಳು ಮಠದ ಪಟ್ಟಾಧಿಕಾರಿಗಳಾಗಿ ಅಧಿಕಾರವನ್ನು ವಹಿಸಿಕೊಂಡಿದ್ದಾರೆ.

ಬಸವಣ್ಣನವರ ಆಗಮನ: ಮಠ ಮತ್ತು ದೇವಸ್ಥಾನಕ್ಕೆ ಧಾರ್ಮಿಕ ಸಂಬಂಧವಿದೆ. ನಿತ್ಯ ಕೂಡಲಸಂಗಮ ದೇವನ ಧಾರ್ಮಿಕ ಕಾರ್ಯಗಳಲ್ಲಿ ಮಠದ ಗುರುಗಳು ಪಾಲ್ಗೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿದ್ದರು. ಪುರಾತನ ಇತಿಹಾಸವುಳ್ಳ ಮಠದಲ್ಲಿ ಹನ್ನೆರಡನೆಯ ಶತಮಾನದಲ್ಲಿ (ಕ್ರಿ.ಶ.೧೧೩೦) ಶ್ರೀ ಜಾತವೇದ ಮುನಿಗಳು ಮಹಿಳೆ ಮತ್ತು ಪುರುಷರಲ್ಲಿ ಮೇಲು ಕೀಳೆಂಬ ಬೇಧ ಭಾವವಿಲ್ಲದೆ, ಭಕ್ತರನ್ನು ಸಮಾನ ರೀತಿಯಲ್ಲಿ ಕಂಡು ಗೌರವಿಸಿ ವೀರಶೈವ ಧರ್ಮದ ಅಷ್ಟಾವರಣ, ಪಂಚಾಚಾರ ಹಾಗೂ ಷಟ್‌ಸ್ಥಲಗಳ ಬಗ್ಗೆ ನಿತ್ಯ ಪ್ರವಚನವನ್ನು ನೀಡುತ್ತಿದ್ದರು. ಶ್ರೀ ಜಾತವೇದ ಮುನಿಗಳ ಉಪದೇಶವನ್ನು

ಕೇಳಿ, ಶ್ರೀ ಸಾರಂಗ ಮಠದ ವ್ಯವಸ್ಥೆಯನ್ನು ನೋಡಿದ್ದ ಬಸವಣ್ಣನವರು ಬಸವನಬಾಗೇವಾಡಿಯಲ್ಲಿ ನಡೆದ ಘಟನೆಯ ನಂತರ ತಮ್ಮ ಸಹೋದರಿ ಅಕ್ಕನಾಗಮ್ಮನವರ ಜೊತೆಯಲ್ಲಿ ಸಂಗಮಕ್ಕೆ ಬಂದು ನೆಲೆಸಿದರು. ಈ ಸಂದರ್ಭದಲ್ಲಿ ಶ್ರೀ ಜಾತವೇದ ಮುನಿಗಳ ಪ್ರಭಾವದಿಂದ ವೈದಿಕ ಸಂಪ್ರದಾಯದ ವಿರುದ್ಧ ಸಿಡಿದೆದ್ದು, ಧಾರ್ಮಿಕ ಕಂದಾಚಾರಗಳು ಹಾಗೂ ಸಾಮಾಜಿಕ ಅನ್ಯಾಯದ ವಿರುದ್ಧ ಚಿಂತಿಸಿ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುವ ಶಕ್ತಿಯನ್ನು ಗಳಿಸಿಕೊಂಡರು.

ಧಾರ್ಮಿಕ ಕಾರ್ಯಗಳು: ಪುರಾತನ ಪರಂಪರೆಯ ಶ್ರೀ ಸಾರಂಗ ಮಠದಲ್ಲಿ ಶ್ರೀ ಜಾತವೇದಮುನಿ ಶಿವಾಚಾರ್ಯ ಸ್ವಾಮಿಗಳ ಗದ್ದುಗೆ ಸ್ಥಾಪನೆಯಾಗಿದೆ. ಈ ಗದ್ದುಗೆಗೆ ನಿತ್ಯಪೂಜೆಯನ್ನು ನಡೆಸಲಾಗುತ್ತಿದೆ. ಶ್ರೀ ಸಂಗಮೇಶ್ವರ ದೇವಸ್ಥಾನಕ್ಕೆ ಪ್ರತಿದಿನ ರಾತ್ರಿ ನೈವೇದ್ಯಕ್ಕೆ ಈ ಮಠದಿಂದಲೇ ಪ್ರಸಾದ ಹೋಗುತ್ತಿದೆ. ಜಾತ್ರೆಯ ಸಂದರ್ಭದಲ್ಲಿ ಮಠದ ಗುರುಗಳು ಮುಂದೆ ನಿಂತು ಧಾರ್ಮಿಕ ಕಾರ್ಯ ನಡೆಸಿಕೊಡುತ್ತಾರೆ. ಈಗ ಕೂಡಲಸಂಗಮದಲ್ಲಿ ಅಭಿವೃದ್ಧಿ ಮಂಡಳಿಯನ್ನು ನೇಮಿಸಿದೆ. ಅಭಿವೃದ್ಧಿ ಮಂಡಳಿ ವತಿಯಿಂದ ಬಸವಣ್ಣನವರ ಐಕ್ಯಸ್ಥಳ, ಕೂಡಲ ಸಂಗಮನಾಥನ ದೇವಸ್ಥಾನ ಹಾಗೂ ಶ್ರೀ ಸಾರಂಗ ಮಠದ ನವೀಕರಣವನ್ನು ಕೈಗೆತ್ತಿಕೊಂಡು ಅಭಿವೃದ್ಧಿಪಡಿಸುತ್ತಿದ್ದಾರೆ. ಮಠವು ಆಚಾರ್ಯರ ಹಾಗೂ ಬಸವಾದಿ ಪ್ರಮಥರ ತತ್ತ್ವಗಳನ್ನು ನಾಡಿಗೆ ಪ್ರಚಾರಪಡಿಸುತ್ತಾ ವೀರಶೈವ ಧರ್ಮವನ್ನು ಬೆಳೆಸುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಅಭಿನವ ಜಾತವೇದಮುನಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ಸಾರಂಗಮಠ, ಕೂಡಲ ಸಂಗಮ, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.

ಆಧಾರ: 'ಶ್ರೀ ಜಾತವೇದಮುನಿ ಶಿವಾಚಾರ್ಯರು' ಲೇಖಕರು : ಕಾಶಿನಾಥಸ್ವಾಮಿ ಚನ್ನಯ್ಯಸ್ವಾಮಿ, ಸಾರಂಗಮಠ

ಗುಡೂರು

ಹುನಗುಂದ ತಾಲ್ಲೂಕಿನ ಗುಡೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಮೂವತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಗುಡೂರು ಗ್ರಾಮದಲ್ಲಿ ಕಾಶಿ ಪೀಠದ ಶಾಖಾಮಠವಾಗಿ, ಶಿಷ್ಯವರ್ಗದ ಪರಂಪರೆಯ'ಶ್ರೀ ಹಿರೇಮಠ'ವು ಸ್ಥಾಪನೆಯಾಗಿದೆ. ಧಾರವಾಡ ಜಿಲ್ಲೆಯ ನವಿಲಗುಂದ ತಾಲ್ಲೂಕಿನ ಮೊರಬ ಗ್ರಾಮದ ಶ್ರೀ ಜಡೆಮಠದ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ೧೯೭೫ರಲ್ಲಿ ಇಲ್ಲಿಗೆ ಬಂದು ನೆಲೆಸಿ ಮಠವನ್ನು ಸ್ಥಾಪಿಸಿ, ವೀರಶೈವ ಧರ್ಮದಪ್ರಚಾರ ಕಾರ್ಯವನ್ನು ಕೈಗೊಂಡಿದ್ದಾರೆ.

ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ಮೊರಬದಲ್ಲಿ ಜನಿಸಿ, ಬಾಲ್ಯದಲ್ಲಿಯೇ ಆಧ್ಯಾತ್ಮ ಮತ್ತು ಸಾಹಿತ್ಯದ ಒಲವನ್ನು ಬೆಳೆಸಿಕೊಂಡು ಸಂಸ್ಕೃತ,ಪ್ರಾಕೃತ ಮತ್ತು ಕನ್ನಡದಲ್ಲಿ ಪಾಂಡಿತ್ಯವನ್ನು ಗಳಿಸಿಕೊಂಡರು. ಗುರುಗಳು ಮೊರಬ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡು ಮಠವನ್ನು ಬೆಳೆಸಿದ್ದಲ್ಲದೆ, ಅನೇಕ ಸಾಹಿತ್ಯ ಕೃತಿಗಳನ್ನು ರಚಿಸಿ 'ಬಾಲಬೃಹಸ್ಪತಿ', 'ಕವಿವರ' ಎಂಬ ಬಿರುದಿನಿಂದ ಪ್ರಸಿದ್ಧಿ ಪಡೆದರು. ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗೇಶ್ವರ ಪುರಾಣ, ರಂಭಾಪುರಿ ಜಗದ್ಗುರು ಶ್ರೀ ಶಿವಾನಂದ ವಿಜಯ ಹಾಗೂ ಶ್ರೀ ಸಂಗಮೇಶ್ವರ ಚರಿತ್ರೆ ಮೊದಲಾದ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯ ಲೋಕಕ್ಕೆ ಮಹಾಪುರುಷರ ಚರಿತ್ರೆಗಳನ್ನು ನೀಡಿದ್ದಾರೆ. ಶ್ರೀ ವಿಜಯಮಹಾಂತ ದೇವರನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ೧೯೯೩ ರಲ್ಲಿ ನೇಮಕ ಮಾಡಿಕೊಂಡಿದ್ದಾರೆ.

ಶ್ರೀ ವಿಜಯ ಮಹಾಂತ ದೇವರು ಇಲ್ಲಾಳು ಗ್ರಾಮದ ಶ್ರೀ ಮರುಳಯ್ಯ ಮತ್ತು ಶ್ರೀಮತಿ ಸುಮಂಗಲದೇವಿಯವರ ಪುತ್ರರಾಗಿ ೧೯೭೬ರ ಜುಲೈ ಒಂದರಂದು ಜನಿಸಿದರು. ಇಲ್ಲಾಳು ಹಾಗೂ ಮುದಗಲ್ಲು ಗ್ರಾಮದಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ, ರಂಭಾಪುರಿಪೀಠದ ಶ್ರೀ ರೇಣುಕಾಚಾರ್ಯ ಗುರುಕುಲದಲ್ಲಿ ಸಂಸ್ಕೃತ ಹಾಗೂ ವೇದಾಧ್ಯಯನವನ್ನು ಮಾಡುತ್ತಿದ್ದಾರೆ.

ಮಠದಲ್ಲಿ ವಿಶ್ವಾರಾಧ್ಯರ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಮಠದಲ್ಲಿ ಹೊರಗಿನಿಂದ ಬರುವ ಭಕ್ತರಿಗೆ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಹಿರಿಯ ಗುರುಗಳಾದ ಶ್ರೀಗಂಗಾ

ಧರ ಶಿವಾಚಾರ್ಯ ಸ್ವಾಮಿಗಳು ತಪೋನಿಷ್ಠರು ಹಾಗೂ ಅನುಷ್ಠಾನ ಮೂರ್ತಿಗಳಾಗಿ, ಧಾರ್ಮಿಕ ಕಾರ್ಯಗಳನ್ನು ವ್ಯವಸ್ಥಿತವಾಗಿ ನಡೆಸುತ್ತಾ ವೀರಶೈವ ಧರ್ಮವನ್ನು ಬೆಳೆಸಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು,ಶ್ರೀ ಹಿರೇಮಠ,ಗುಡೂರು,ಹುನಗುಂದ ತಾ, ಬಾಗಲಕೋಟೆ ಜಿಲ್ಲೆ.

ನಂದವಾಡಿಗೆ

ಹುನಗುಂದ ತಾಲ್ಲೂಕಿನ ನಂದವಾಡಿಗೆ ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಮಹಾಂತೇಶ್ವರ ಹಿರೇಮಠವು ಅಸ್ತಿತ್ವದಲ್ಲಿದೆ.

ಮಹಾಂತೇಶ್ವರ ಹಿರೇಮಠ: ನಂದವಾಡಿಗೆ ಗ್ರಾಮದ ಮಧ್ಯಭಾಗದಲ್ಲಿ ಶ್ರೀ ಮಹಾಂತೇಶ್ವರ ಹಿರೇಮಠವು ಸ್ಥಾಪನೆಯಾಗಿದೆ. ಹನ್ನೆರಡನೆಯ ಶತಮಾನದಲ್ಲಿ ಉರಿಲಿಂಗ ಪೆದ್ದಿಯು ಲೋಕಸಂಚಾರ ಮಾಡುತ್ತಾ, ಈ ಮಠದಲ್ಲಿ ನೆಲೆಸಿದ್ದರೆಂದು ಹೇಳಲಾಗುತ್ತದೆ. ಈ ಮಠದ ಕಾಲಮಾನದ ಬಗ್ಗೆ ಸ್ಪಷ್ಟವಾದ ಮಾಹಿತಿ ಲಭ್ಯವಿಲ್ಲ.

ಪರಂಪರೆ: ಪ್ರಾಚೀನ ಮಠದ ಇತಿಹಾಸವನ್ನು ಅವಲೋಕಿಸಲು ಆಧಾರವಾಗಿರುವ ಮಠದ ಪರಂಪರೆಯ ಬಗ್ಗೆಯೂ ಸಹ ಆಧಾರಗಳಿಲ್ಲ. ಪ್ರಸ್ತುತ ಮಠದಲ್ಲಿ ಲಭ್ಯವಿರು ಮಾಹಿತಿಯಂತೆ ಈ ಕೆಳಗಿನ ಗುರುಗಳ ಹೆಸರುಗಳನ್ನು ದಾಖಲಿಸಬಹುದಾಗಿದೆ.

೧. ಷ.ಬ್ರ.ಶ್ರೀ ಮಹಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ಬಸವಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು
೩. ಷ.ಬ್ರ.ಶ್ರೀ ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳು
೪. ಷ.ಬ್ರ.ಶ್ರೀ ಚನ್ನಬಸವ ದೇವರು

ಈ ರೀತಿ ಮಠದ ಪರಂಪರೆಯನ್ನು ಗುರುತಿಸಬಹುದಾಗಿದೆ. ಪರಂಪರೆಯಲ್ಲಿ ಬರುವ ಕರ್ತೃ ಗುರುಗಳಾದ ಶ್ರೀ ಮಹಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು ಮಹಾ ಪವಾಡಪುರಷರಾಗಿದ್ದರು. ಈ ಪ್ರಾಂತ್ಯದಲ್ಲಿ ಬರಗಾಲ ಬಂದಾಗ ಜನರನ್ನು ಸಂಘಟಿಸಿ ಕೆರೆಯನ್ನು ಸ್ಥಾಪಿಸಿದರೆಂದು ಹೇಳುವ ಜನಪದ ಕಥೆ ಕೇಳಿ ಬರುತ್ತದೆ. ಮಠದ ಆವರಣದಲ್ಲಿ ಮೂರು ಗದ್ದುಗೆಗಳಿದ್ದು, ಇದರಲ್ಲಿ ಉರಿಲಿಂಗಪೆದ್ದಿಯ ಗದ್ದಿಗೆಯು ಒಂದು ಎಂದು ಹೇಳಲಾಗುತ್ತದೆ.

ಈಗ ಶ್ರೀ ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ಮಠದ ಆಡಳಿತವನ್ನು ನಡೆಸಿ ಅಭಿವೃದ್ಧಿಪಡಿಸಿದ್ದಾರೆ. ಈಗ ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಚನ್ನಬಸವ ದೇವರನ್ನು ನೇಮಿಸಿಕೊಂಡು, ವಿದ್ಯಾಭ್ಯಾಸಕ್ಕಾಗಿ ಮೈಸೂರಿನ ಸುತ್ತೂರು ಮಠದ ಗುರುಕುಲಕ್ಕೆ ಕಳುಹಿಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಮಹಾಂತೇಶ್ವರ ಹಿರೆಮಠ,ನಂದವಾಡಿಗೆ,ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.

ಹಡಗಲಿ

ಹುನಗುಂದ ತಾಲ್ಲೂಕಿನ ಹಡಗಲಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಇಪ್ಪತ್ತೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ರುದ್ರಸ್ವಾಮಿ ಪಟ್ಟದಮಠವು ಅಸ್ತಿತ್ವದಲ್ಲಿದೆ.

ರುದ್ರಸ್ವಾಮಿ ಪಟ್ಟದಮಠ: ಹಡಗಲಿ ಗ್ರಾಮದಲ್ಲಿ ರಂಭಾಪುರಿ ಪೀಠದ ಶಾಖಾ ಮಠವಾದ 'ಶ್ರೀ ರುದ್ರಸ್ವಾಮಿ ಪಟ್ಟದ ಮಠ'ವು ಸ್ಥಾಪನೆಯಾಗಿದೆ. ಶ್ರೀ ರೇವಣಸಿದ್ಧರು ಲೋಕ ಕಲ್ಯಾಣಾರ್ಥ ಲೋಕಸಂಚಾರದಲ್ಲಿದ್ದ ಸಂದರ್ಭದಲ್ಲಿ, ಹಡಗಲಿ ಗ್ರಾಮದ ಮಲಪ್ರಭ ನದಿಯ ಮಧ್ಯ ಭಾಗದಲ್ಲಿ (ನೀರಿನಲ್ಲಿ) ಕುಳಿತು ತಪಸ್ಸನ್ನು ಆಚರಿಸಿ ಭಕ್ತರಲ್ಲಿ ಆಶ್ಚರ್ಯವನ್ನು ಉಂಟುಮಾಡಿ ಈ ಸ್ಥಳವನ್ನು ಸುಕ್ಷೇತ್ರವನ್ನಾಗಿ ಮಾಡಿದರು. ನಂತರ ಶ್ರೀ ರುದ್ರೇಶ್ವರ ಶಿವಾಚಾರ್ಯರು ಇಲ್ಲಿ ಆವಿರ್ಭವಿಸಿ

ಮಠವನ್ನು ಸ್ಥಾಪಿಸಿ, ವೀರಶೈವ ಧರ್ಮವನ್ನು ಉದ್ಧರಿಸಿದರೆಂದು ಪುರಾಣ ಕಥೆಯು ಹೇಳುತ್ತಿದೆ.

ಶ್ರೀ ರುದ್ರೇಶ್ವರ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಸ್ಥಾಪಿಸಿದ್ದರಿಂದ ಈ ಮಠಕ್ಕೆ 'ಶ್ರೀ ರುದ್ರಸ್ವಾಮಿ ಪಟ್ಟದಮಠ' ಎಂದು ಹೆಸರು ಬಂದಿದೆ. ಶ್ರೀ ರುದ್ರೇಶ್ವರ ಶಿವಾಚಾರ್ಯ ಸ್ವಾಮಿಗಳು ಇಲ್ಲಿ ಮಠವನ್ನು ಸ್ಥಾಪಿಸಿ, ಆಚಾರ್ಯರ ತತ್ತ್ವ ಸಿದ್ಧಾಂತವನ್ನು ಬೋಧಿಸಿ ಧರ್ಮವನ್ನು ಬೆಳೆಸಿದರು. ಇವರು ಧರ್ಮವನ್ನು ವ್ಯಾಪಕವಾಗಿ ಬೆಳೆಸುವ ಉದ್ದೇಶದಿಂದ ಲೋಕ ಸಂಚಾರಕ್ಕೆ ಹೊರಟು ನಿಡಗುಂದಿಯಲ್ಲಿ ಮಠವನ್ನು ಸ್ಥಾಪಿಸಿ, ಮುಂದೆ ಹೊರಟು ಅನೇಕ ಸುಕ್ಷೇತ್ರಗಳನ್ನು ಸಂದರ್ಶಿಸಿ, ಪವಾಡಗಳಿಂದ ಭಕ್ತರನ್ನು ಉದ್ಧರಿಸಿದರು. ಪುನಃ ಹಡಗಲಿಗೆ ಬಂದು ಮಠವನ್ನು ಸದೃಢಗೊಳಿಸಿ ಪರಂಪರೆಯನ್ನು ಬೆಳೆಸುವ ಉದ್ದೇಶದಿಂದ, ಉತ್ತರಾಧಿಕಾರಿಯನ್ನು ನೇಮಿಸಿ ಜೀವಂತ ಸಮಾಧಿಯಾದರೆಂದು ಹೇಳಲಾಗುತ್ತಿದೆ.

ಪರಂಪರೆ: ಪುರಾತನ ಕಾಲದ ಈ ಮಠದಲ್ಲಿ ಈವರೆಗೆ ಹದಿನೇಳು ಜನ ಗುರುಗಳು ಕರ್ತೃಗುರುಗಳಾದ ಶ್ರೀ ರುದ್ರೇಶ್ವರ ಶಿವಾಚಾರ್ಯ ಸ್ವಾಮಿಗಳ ಹೆಸರನ್ನೇ ಅಭಿಧಾನವಾಗಿ ಪಡೆಯುತ್ತಾ, ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿ ಪಡಿಸಿದ್ದಾರೆ. ಹದಿನೇಳನೆಯ ಮಠಾಧೀಶರಾಗಿರುವ ಈಗಿನ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು, ಬಳ್ಳಾರಿ ಜಿಲ್ಲೆಯ ಶ್ರೀಧರಗಡ್ಡೆಯಲ್ಲಿ ಜನಿಸಿದರು. ಇವರು ಶಿವಯೋಗ ಮಂದಿರ, ಹುಬ್ಬಳ್ಳಿ ಹಾಗೂ ಕಾಶಿಯಲ್ಲಿ ವಿದ್ಯಾಭ್ಯಾಸಮಾಡಿ, ಹಡಗಲಿ ಮತ್ತು ನಿಡಗುಂದಿ ಮಠದ ಉತ್ತರಾಧಿಕಾರಿಗಳಾಗಿ ೧೯೭೪ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಸ್ಥಾಪನೆಯಾಗಿರುವ ಕರ್ತೃಗುರುಗಳ ಗದ್ದುಗೆಗೆ ಹಾಗೂ ಇತರೆ ಮಠಾಧೀಶರುಗಳ ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ, ಹುಣ್ಣಿಮೆಯಲ್ಲಿ ಶಿವಾನುಭವಗೋಷ್ಠಿ ಹಾಗೂ ದವನದ ಹುಣ್ಣಿಮೆಯಾದ ಐದನೆಯ ದಿನಕ್ಕೆ ಕರ್ತೃಗುರುಗಳಾದ ಶ್ರೀ ರುದ್ರೇಶ್ವರ ಶಿವಾಚಾರ್ಯ ಸ್ವಾಮಿಗಳ ಜಾತ್ರೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಏರ್ಪಡಿಸಲಾಗುತ್ತಿದೆ. ಈಗಿನ ಗುರುಗಳಾದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಅನುಷ್ಠಾನ ಮೂರ್ತಿಗಳೆಂದು ಹೆಸರು ಪಡೆದಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು,ಶ್ರೀ ರುದ್ರೇಶ್ವರ ಪಟ್ಟದಮಠ, ಹಡಗಲಿ, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.

ಹುನಗುಂದ

ಬಾಗಲಕೋಟೆ ಜಿಲ್ಲೆಯ ಹುನಗುಂದ, ಜಿಲ್ಲಾ ಕೇಂದ್ರದಿಂದ ಆಗ್ನೇಯಕ್ಕೆ ನಲವತ್ತೆಂಟು ಕಿ.ಮೀ ದೂರದಲ್ಲಿದೆ. ತಾಲ್ಲೂಕಿನ ಕೇಂದ್ರ ಸ್ಥಳವಾಗಿರುವ ಹುನಗುಂದ ಪಟ್ಟಣದಲ್ಲಿ ಐದು ವೀರಶೈವ ಮಠಗಳು ಸ್ಥಾಪನೆಯಾಗಿವೆ ಎಂದು ಹೇಳಲಾಗುತ್ತಿದೆ. ಪುರಾತನ ಕಾಲದಲ್ಲಿ ಸ್ಥಾಪನೆಗೊಂಡ ಈ ಮಠಗಳನ್ನು ಶೋಧಿಸಲು ಹೋದಾಗ ಮೂರು ಮಠಗಳು ಸಂಸಾರಿ ಮಠಗಳಾಗಿ, ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿರುವುದು ಗೋಚರವಾಗುತ್ತಿದೆ. ಉಳಿದ ಎರಡು ಮಠಗಳು ಮಠಾಧೀಶರಿಲ್ಲದೆ ಗದ್ದುಗೆ ಪೂಜೆಗಷ್ಟೇ ಸೀಮಿತಗೊಂಡಿವೆ.

❑

ಬಿಜಾಪುರ ಜಿಲ್ಲೆ

ಬಿಜಾಪುರ ಜಿಲ್ಲೆ



ಬಿಜಾಪುರ ತಾಲ್ಲೂಕು : ೧. ಬಿಜ್ಜರಗಿ, ೨. ಬೊಮ್ಮನಹಳ್ಳಿ, ೩. ಜಂಬಗಿ, ೪. ಕನ್ನೂರು, ೫. ತಿಕೋಟ, ೬. ತೊರವಿ, ೭. ಬಬಲೇಶ್ವರ, ೮. ಮಮದಾಪುರ

ಇಂಡಿ ತಾಲ್ಲೂಕು : ೧. ಚಡಚಣ, ೨. ತದ್ದೆವಾಡಿ, ೩. ಬರಡೋಲ, ೪. ಝಳಕಿ, ೫. ಹೊರ್ತಿ, ೬. ಹಿಂಚಗೇರಿ, ೭. ಬಂಥನಾಳ, ೮. ಶಿರಶ್ಯಾಡ, ೯. ಖೇಡಗಿ, ೧೦. ರೋಡಗಿ

ಸಿಂದಗಿ ತಾಲ್ಲೂಕು : ೧. ಆಲಮೇಲು, ೨. ದೇವಣಗಾಂವ್, ೩. ಮಲಗಾಣ, ೪. ಮೋರಟಗಿ, ೫. ಕನ್ನೊಳಿ, ೬. ದೇವರ ಹಿಪ್ಪರಗಿ, ೭. ದೇವೂರು, ೮. ಕೋರವಾರ, ೯. ಗೋಲಗೇರಿ, ೧೦. ಕಲಕೇರಿ, ೧೧. ಅಸ್ಕಿ

ಬಸವನ ಬಾಗೇವಾಡಿ ತಾಲ್ಲೂಕು : ೧. ಮನಗೋಳು, ೨. ಮಸುಬಿನಾಳು, ೩. ವಡವಡಗಿ, ೪. ಯರನಾಳು ೫. ಸಾಸನೂರು, ೬. ಮುತ್ತಗಿ, ೭. ಮಸೂತಿ

೮. ಇಂಗಳೇಶ್ವರ, ೯. ನಿಡಗುಂದಿ, ೧೦. ಆಲಮಟ್ಟಿ

ಮುದ್ದೆಬಿಹಾಳ ತಾಲ್ಲೂಕು : ೧. ತಮದಡ್ಡಿ, ೨. ನಾವದಗಿ, ೩. ಬಿದರಕುಂದಿ, ೪. ತಾಳಿಕೋಟೆ, ೫. ಕೇಶಾಪುರ

ಕರ್ನಾಟಕದ ಗಂಡು ಮೆಟ್ಟಿನ ಭೂಮಿಯೆಂದು ಹೆಸರು ಪಡೆದಿರುವ ಬಿಜಾಪುರ ಜಿಲ್ಲೆಯು ಉತ್ತರಕರ್ನಾಟಕದ ಪ್ರತಿಷ್ಠಿತ ಜಿಲ್ಲೆಯಾಗಿ ಬೆಳೆದಿದೆ. ೧೯೯೭ ರಲ್ಲಿ ಜಿಲ್ಲೆಗಳ ವಿಂಗಡಣೆಯ ಸಂದರ್ಭದಲ್ಲಿ ಬಾಗಲಕೋಟೆ, ಹುನಗುಂದ, ಜಮಖಂಡಿ, ಬಾದಾಮಿ ಹಾಗೂ ಬೀಳಗಿ ತಾಲ್ಲೂಕುಗಳನ್ನು ಕಳೆದುಕೊಂಡು ಬಿಜಾಪುರ, ಬಸವನ ಬಾಗೇವಾಡಿ, ಮುದ್ದೇಬಿಹಾಳು, ಇಂಡಿ ಹಾಗೂ ಸಿಂದಗಿ ತಾಲ್ಲೂಕುಗಳನ್ನು ಉಳಿಸಿಕೊಂಡು ಪುನರ್‌ರಚಿತವಾಗಿದೆ.

ಬಿಜಾಪುರ ಜಿಲ್ಲೆಯು ರಾಮಾಯಣದ ಕಾಲದಲ್ಲಿ ದಂಡಕಾರಣ್ಯದ ಒಂದು ಭಾಗವಾಗಿತ್ತೆಂದು ಹೇಳಲಾಗುತ್ತಿದೆ. ಕ್ರಿ.ಶ.ಆರನೆಯ ಶತಮಾನದಿಂದ ಒಂಬತ್ತನೆಯ ಶತಮಾನದವರೆಗೆ ಚಾಲುಕ್ಯರ ಆಡಳಿತಕ್ಕೆ ಒಳಪಟ್ಟಿತ್ತು. ಕ್ರಿ.ಶ.೧೦೨೩ ರಲ್ಲಿ ಕಲ್ಯಾಣಿ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿದ್ದು, ನಂತರ ಯಾದವರು ಆಡಳಿತ ನಡೆಸಿ ಮುಸ್ಲಿಮರಿಗೆ ಶರಣಾದರು. ಕ್ರಿ.ಶ.೧೩೧೨ ರಲ್ಲಿ ಕರೀಮುದ್ದೀನನು ಬಿಜಾಪುರಕ್ಕೆ ಕಾಲಿಟ್ಟು ದೆಹಲಿ ಆಡಳಿತಕ್ಕೆ ಈ ಜಿಲ್ಲೆಯನ್ನು ಒಳಪಡಿಸಿದನು. ಆದಿಲ್‌ಶಾಹಿಯ ವಂಶಸ್ಥರು ಕ್ರಿ.ಶ.೧೪೮೯ ರಿಂದ ೧೬೮೬ ರತನಕ ಆಡಳಿತ ನಡೆಸಿತು. ನಂತರ ಔರಂಗಜೇಬನ ವಶವಾಯಿತು. ೧೬೮೬ ರಿಂದ ಔರಂಗಜೇಬನ ಮೂರು ವರ್ಷಗಳ ಕಾಲ ಬಿಜಾಪುರದಲ್ಲಿಯೇ ನೆಲೆಸಿ ತನ್ನ ರಾಜ್ಯವನ್ನು ವಿಸ್ತರಿಸಿಕೊಂಡನು.

೧೭೨೫ ರಲ್ಲಿ ಮೊಗಲರ ವಶದಲ್ಲಿದ್ದ ಬಿಜಾಪುರ ಹೈದರಾಬಾದ್ ನಿಜಾಮನ ಆಡಳಿತಕ್ಕೆ ಸೇರಿದ್ದು ಕ್ರಿ.ಶ. ೧೭೬೦ರಲ್ಲಿ ಬಾಲಾಜಿ ಪೇಶ್ವೆಯ ವಶವಾಯಿತು. ಕ್ರಿ.ಶ.೧೮೧೮ ರಲ್ಲಿ ಪೇಶ್ವೆಯ ಅವನತಿಯ ನಂತರ ಸಾತಾರದ ಚತ್ರಪತಿ ಶಿವಾಜಿಯು ಆಡಳಿತ ನಡೆಸಿದನು. ಇವನ ನಂತರ ಕ್ರಿ.ಶ. ೧೮೪೮ ರಲ್ಲಿ ಬ್ರಿಟಿಷರ ವಶವಾಯಿತು. ಈ ಎಲ್ಲಾ ರಾಜಕೀಯ ಸ್ಥಿತ್ಯಂತರಗಳ ನಂತರ ಕಲಾದಗಿ ಜಿಲ್ಲೆಯಿಂದ ಬೇರ್ಪಟ್ಟು ಕ್ರಿ.ಶ.೧೮೮೫ ರಲ್ಲಿ ಬಿಜಾಪುರವು ಸ್ವತಂತ್ರ ಜಿಲ್ಲೆಯಾಗಿ ರೂಪುಗೊಂಡಿತು.

ಬಾಗಲಕೋಟೆ, ಗುಲ್ಬರ್ಗ ಜಿಲ್ಲೆಗಳಿಂದ ಹಾಗೂ ವಾಯುವ್ಯ ಭಾಗದಲ್ಲಿ ಮಹಾರಾಷ್ಟ್ರದ ಗಡಿಯಿಂದ ಆವೃತಗೊಂಡ ಬಿಜಾಪುರ ಜಿಲ್ಲೆಯಲ್ಲಿ ಭೀಮ, ಕೃಷ್ಣ ಹಾಗೂ ಡೋಣಿ ನದಿಗಳು ಹರಿದು ಈ ನಾಡನ್ನು ಪ್ರಾಕೃತಿಕವಾಗಿ ಶ್ರೀಮಂತಗೊಳಿಸಿವೆ. ಹನ್ನೆರಡನೆಯ ಶತಮಾನದ ಧಾರ್ಮಿಕ ಕ್ರಾಂತಿಯ ಹರಿಕಾರರಾದ ಬಸವೇಶ್ವರರು ಬಸವನ ಬಾಗೇವಾಡಿಯಲ್ಲಿ ಜನಿಸಿದ್ದು, ಈ ಜಿಲ್ಲೆಯು ಧಾರ್ಮಿಕ ಮತ್ತು ಐತಿಹಾಸಿಕವಾಗಿ ಹೆಸರು ಪಡೆಯಲು ಕಾರಣವಾಗಿದೆ. ಯೋಗ ಭೂಮಿಯೆಂದು ಹೆಸರು ಪಡೆದ ಈ ಜಿಲ್ಲೆಯಲ್ಲಿ ಅನೇಕ ಸಾಧು ಸಂತರು ಜನಿಸಿ ಧರ್ಮವನ್ನು ಬೆಳೆಸಿದ್ದಾರೆ. ಪುರಾತ ಕಾಲದಿಂದ ಈತನಕ ಬಿಜಾಪುರ ಜಿಲ್ಲೆಯಲ್ಲಿ ೪೬೬ ವೀರಶೈವ ಮಠಗಳು ಸ್ಥಾಪನೆಗೊಂಡಿವೆ ಎಂದು ಹೇಳಲಾಗುತ್ತದೆ. ಇವುಗಳಲ್ಲಿ ೧೩೯ ಮಠಗಳನ್ನು ಗುರುತಿಸಬಹುದಾಗಿದ್ದು ಇವುಗಳಲ್ಲಿ ಈಗ ನೂರನಾಲ್ಕು ಮಠಗಳು ಅಸ್ತಿತ್ವದಲ್ಲಿದ್ದು ವೀರಶೈವ ಧರ್ಮ ಬೆಳೆಯಲು ಸಹಾಯಕವಾಗಿವೆ.

ವೀರಶೈವ ಮಠಗಳು ಬಿಜಾಪುರ ಜಿಲ್ಲೆಯ ಒಳಿತಿಗಾಗಿ ದುಡಿದು ಸಾಮಾಜಿಕ, ಧಾರ್ಮಿಕ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿಯನ್ನು ಸಾಧಿಸುವಂತೆ ಮಾಡಿವೆ. ಇತ್ತೀಚಿನ ದಿನಗಳಲ್ಲಿ ಬಿಜಾಪುರ ಜಿಲ್ಲೆಯು ಬರಗಾಲದ ದವಡೆಗೆ ಸಿಕ್ಕಿ ತತ್ತರಿಸಿದೆ. ಆದರೂ ಇಲ್ಲಿನ ಜನ ಧಾರ್ಮಿಕ ಆಚರಣೆಗಳಿಂದ ಸಂಸ್ಕಾರವನ್ನು ಬಿಡದೆ ಜೀವನವನ್ನು ಸಾಗಿಸುತ್ತಿದ್ದಾರೆ. ಇದಕ್ಕೆಲ್ಲ ಇಲ್ಲಿನ ವೀರಶೈವ ಮಠಗಳೇ ಕಾರಣವಾಗಿವೆ ಎಂಬುದು ಒಂದು ದಾಖಲಾರ್ಹ ವಿಚಾರವಾಗಿದೆ.

ಇಂಡಿ ತಾಲ್ಲೂಕು

ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕು ಮಹಾರಾಷ್ಟ್ರದ ಗಡಿಯಲ್ಲಿದೆ. ಮರಾಠಿಯ ಗಡಿಯಲ್ಲಿದ್ದರೂ ಮರಾಠಿ ಪ್ರಭಾವಕ್ಕೆ ಒಳಗಾಗದ ಈ ತಾಲ್ಲೂಕು ವ್ಯಾಪಾರ ಹಾಗೂ ಕೃಷಿಯನ್ನು ಅವಲಂಬಿಸಿದೆ. ಇಲ್ಲಿ ವೀರಶೈವಧರ್ಮ ಬೆಳೆಯಲು ಹಿಂದೆ ಸುಮಾರು ಅರವತ್ತು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಇಂದು ಇಪ್ಪತ್ತೊಂದು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಅಥರ್ಗ

ಇಂಡಿ ತಾಲ್ಲೂಕಿನ ಅಥರ್ಗ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣ ಭಾಗಕ್ಕೆ ಇಪ್ಪತ್ತೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಅಥರ್ಗ ಗ್ರಾಮದಲ್ಲಿ ಮುರುಘಾ ಸಮಯದ ವಿರಕ್ತಮಠವು ಸ್ಥಾಪನೆಯಾಗಿದೆ. ಈಚೆಗೆ ಸ್ಥಾಪನೆಯಾದ ಈ ಮಠವನ್ನು ಶ್ರೀ ಮರಿದೇವ ಸ್ವಾಮಿಗಳು ಸ್ಥಾಪಿಸಿದರೆಂದು ಇಲ್ಲಿನ ಗ್ರಾಮಸ್ಥರು ಹೇಳುತ್ತಾರೆ. ಶ್ರೀ ಮರಿದೇವರು ಶ್ರೀರೇವಣಸಿದ್ದಪ್ಪ ಶರಣರ ಸೇವೆಯನ್ನು ಮಾಡಿಕೊಂಡು ಗುರುವಿನ ಕೃಪಾಶೀರ್ವಾದದಿಂದ ಸಂಸ್ಕಾರವಂತರಾಗಿ ಬೆಳೆದಿದ್ದರು. ಇವರು ಶ್ರೀ ರೇವಣಸಿದ್ಧ ಶರಣರು ಲಿಂಗೈಕ್ಯರಾದ ಮೇಲೆ ಇಲ್ಲಿ ಮಠವನ್ನು ಸ್ಥಾಪಿಸಿ ಬೆಳೆಸಿದರು. ಶ್ರೀ ಮರಿದೇವರು ಅನೇಕ ವರ್ಷಗಳ ಕಾಲ ಇಲ್ಲಿ ನೆಲೆಸಿ ಲಿಂಗೈಕ್ಯರಾದರು.

ಪರಂಪರೆ:

೧. ಶ್ರೀ ಮ.ನಿ.ಪ್ರ. ಮರಿದೇವಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಮಲ್ಲಯ್ಯಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಮುರುಘೇಂದ್ರಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಶ್ರೀ ಮರಿದೇವರು ಲಿಂಗೈಕ್ಯರಾದ ಮೇಲೆ ಶ್ರೀ ಮಲ್ಲಯ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದು ೧೯೭೭ರಲ್ಲಿ ಲಿಂಗೈಕ್ಯರಾದರು.ತರುವಾಯ ಶ್ರೀ ರುದ್ರಯ್ಯ ಮತ್ತು ಶ್ರೀಮತಿ ಶಾಂತಮ್ಮನವರ ಪುತ್ರರಾಗಿ ೧೯೬೮ರಲ್ಲಿ ಜನಿಸಿದ ಶ್ರೀ ಮುರುಘೇಂದ್ರ ಸ್ವಾಮಿಗಳು ೧೯೯೮ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಇವರು ಅಥರ್ಗ, ಸೋಲಾಪುರ,ಮುಧೋಳಿನಲ್ಲಿ ವಿದ್ಯಾಭ್ಯಾಸ ಮಾಡಿ ಬಂದು ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ವಿರಕ್ತ ಮಠವಾದರೂ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿರುವ ಈ ಮಠದಲ್ಲಿ ಗದ್ದುಗೆಗಳಿಗೆ ಎರಡೂ ವೇಳೆ ಪೂಜೆ, ಅಮಾವಾಸ್ಯೆ ಹುಣ್ಣಿಮೆಯಲ್ಲಿ ಭಜನೆ, ಶಿವರಾತ್ರಿಯಲ್ಲಿ ಶ್ರೀ ರೇವಣಸಿದ್ಧೇಶ್ವರ ಶರಣರ ಜಾತ್ರೆಯನ್ನು ಮೂರು ದಿನಗಳ ಕಾಲ ನಡೆಸಲಾಗುತ್ತಿದೆ. ಈಗಿನ ಗುರುಗಳು ಪುರಾಣ ಪ್ರವಚನ ಮಾಡುವ ಕಲೆಯನ್ನು ಬೆಳೆಸಿಕೊಂಡು ನಾಡಿನ ನಾನಾ ಭಾಗಗಳಲ್ಲಿ ಪುರಾಣ ಪ್ರವಚನವನ್ನು ಮಾಡುತ್ತಾ ಧರ್ಮವನ್ನು ಪ್ರಸಾರಗೊಳಿಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಮುರುಘೇಂದ್ರ ಸ್ವಾಮಿಗಳು, ಶ್ರೀ ವಿರಕ್ತಮಠ, ಅಥರ್ಗ, ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ಇಂಡಿ

ಬಿಜಾಪುರ ಜಿಲ್ಲೆಯ ಇಂಡಿ ಪಟ್ಟಣವು ಜಿಲ್ಲಾ ಕೇಂದ್ರದಿಂದ ಉತ್ತರ ಭಾಗಕ್ಕೆ ನಲವತ್ತೆರಡು ಕಿ.ಮೀ ದೂರದಲ್ಲಿದೆ. ತಾಲ್ಲೂಕು ಕೇಂದ್ರವಾಗಿರುವ ಇಂಡಿ ಪಟ್ಟಣದಲ್ಲಿ ವೀರಶೈವ ಧರ್ಮವು ತನ್ನ ಪ್ರಾಬಲ್ಯವನ್ನು ಸಾಧಿಸಿಕೊಂಡು ಬೆಳೆದಿದೆ. ಇದಕ್ಕೆ ಸಾಕ್ಷಿ ಎಂಬಂತೆ ಪುರಾತ ಕಾಲದಲ್ಲಿ ಈ ಗ್ರಾಮದಲ್ಲಿ ಶ್ರೀ ಹಿರೇಮಠ, ಶ್ರೀ ಅಲಸಂಗಿ ಮಠ, ಶ್ರೀ ಪರದೇಶಯ್ಯ ಮಠ (ಶ್ರೀ ವಿರಕ್ತಮಠ) ಮತ್ತು ಶ್ರೀ ಕಳ್ಳಿ ಮಠ ಎಂಬ ನಾಲ್ಕು ಮಠಗಳು ಅಸ್ತಿತ್ವದಲ್ಲಿದ್ದವು. ಹಿಂದೆ ಈ ಮಠಗಳು ವೀರಶೈವಧರ್ಮದ ಬೆಳವಣಿಗೆಗೆ ಸಹಕಾರಿಯಾಗಿದ್ದವು. ಈಗ ಈ ನಾಲ್ಕು ಮಠಗಳಲ್ಲಿ ಮಠಾಧೀಶರುಗಳು ಇಲ್ಲದೆ ಖಾಲಿ

ಉಳಿದಿವೆ. ಶ್ರೀ ಹಿರೇಮಠ ಮತ್ತು ಶ್ರೀ ಅಲಸಂಗಿ ಮಠಗಳಲ್ಲಿ ಪೂಜಾ ಕಾರ್ಯಗಳು ನಡೆಯುತ್ತಿವೆ. ಆದರೆ ಶ್ರೀ ವಿರಕ್ತ ಮಠ ಮತ್ತು ಶ್ರೀ ಕಳ್ಳಿಮಠ ಪೂರ್ಣವಾಗಿ ಅಸ್ತಿತ್ತ್ವವನ್ನು ಕಳೆದುಕೊಂಡಿವೆ.

ಹಿರೇಮಠ: ಇಂಡಿ ಪಟ್ಟಣದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ರಂಭಾಪುರಿ ಪೀಠದ ಶಾಖಾಮಠವಾಗಿ ಬೆಳೆದಿದೆ. ಪುತ್ರ ವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದ್ದ ಈ ಮಠವನ್ನು ಐದುನೂರು ವರ್ಷಗಳ ಹಿಂದೆ ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳು ಸ್ಥಾಪನೆಮಾಡಿದ್ದರೆಂದು ಹೇಳಲಾಗುತ್ತಿದೆ. ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳು ಪವಾಡ ಪುರುಷರಾಗಿ, ಲೋಕಸಂಚಾರ ಕೈಗೊಂಡು ಇಲ್ಲಿ ಬಂದು ಮಠವನ್ನು ಸ್ಥಾಪನೆ ಮಾಡಿರುತ್ತಾರೆ. ಶಿವಾನುಭವಗೋಷ್ಠಿ ಹಾಗೂ ಧರ್ಮೋಪದೇಶವನ್ನು ಮಾಡುತ್ತಾ ವೀರಶೈವ ಧರ್ಮವನ್ನು ಬೆಳೆಸಿದರು. ಇವರು ಲಿಂಗೈಕ್ಯರಾದ ಮೇಲೆ ಶ್ರೀ ಅಣ್ಣಯ್ಯ ಶಿವಾಚಾರ್ಯ ಸ್ವಾಮಿಗಳೆಂಬುವರು ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದರೆಂದು ಹೇಳಲಾಗುತ್ತಿದೆ. ಇವರ ನಂತರ ಈ ಮಠಕ್ಕೆ ಯಾರೂ ಪಟ್ಟಾಧಿಕಾರಿಗಳಾಗದ ಕಾರಣಕ್ಕಾಗಿ ಖಾಲಿ ಉಳಿದಿದೆ. ಮಠದ ಆವರಣದಲ್ಲಿ ಎರಡು ಗದ್ದುಗೆಗಳಿದ್ದು ಇವುಗಳಿಗೆ ಶ್ರೀ ಶಾಂತಯ್ಯ ಮಹಾಂತಯ್ಯ ಹಿರೇಮಠ ಎಂಬುವರು ಪೂಜಾ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿರುವುದಲ್ಲದೆ, ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಶಾಂತಯ್ಯ ಮಹಾಂತಯ್ಯ ಹಿರೇಮಠ, ಶ್ರೀ ಹಿರೇಮಠ,ಇಂಡಿ,ಬಿಜಾಪುರ ಜಿಲ್ಲೆ.

ಅಲಸಂಗಿಮಠ: ಇಂಡಿ ಪಟ್ಟಣದ ಮಧ್ಯಭಾಗದಲ್ಲಿರುವ ಶ್ರೀ ಅಲಸಂಗಿಮಠವು ಕಾಶಿ ಪೀಠದ ಶಾಖಾಮಠವಾಗಿ ಬೆಳೆದಿತ್ತು. ಪುರಾತನ ಕಾಲದಲ್ಲಿ ಈ ಮಠವನ್ನು ಶ್ರೀ ನಾಗೇಂದ್ರ ಶಿವಾಚಾರ್ಯ ಸ್ವಾಮಿಗಳು ಸ್ಥಾಪನೆ ಮಾಡಿದ್ದಾರೆ. ನಂತರ ಶ್ರೀಸದಾಶಿವ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ನಡೆಸಿದ ಬಗ್ಗೆ ಮಾಹಿತಿ ದೊರೆಯುತ್ತಿದೆ. ಈ ಮಠದಲ್ಲಿ ಈಗ ಉತ್ತರಾಧಿ ಕಾರಿಗಳಿಲ್ಲದೆ ಮಠವು ಖಾಲಿ ಉಳಿದಿದೆ. ಪುರಾತನ ಕಾಲದ ಈ ಸಂಸಾರಿ ಮಠದಲ್ಲಿ ಒಳಭಾಗದಲ್ಲಿ ಒಂದು ಗದ್ದುಗೆ, ಮಠದ ಜಮೀನಿನಲ್ಲಿ ಒಂದು ಗದ್ದುಗೆ ಸ್ಥಾಪನೆಯಾಗಿವೆ. ಈ ಗದ್ದುಗೆಗಳಿಗೆ ನಿತ್ಯ ಪೂಜಾವ್ಯವಸ್ಥೆಯನ್ನು ಮಠದ ವಂಶಸ್ಥರಾದ ಶ್ರೀ ಸದಾಶಿವಯ್ಯ ಪರುತಯ್ಯ ಹಲಸಂಗಿಮಠ ಎಂಬುವರು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಸದಾಶಿವಯ್ಯ ಪರುತಯ್ಯ ಹಲಸಂಗಿಮಠ, ಇಂಡಿ, ಬಿಜಾಪುರ ಜಿಲ್ಲೆ.

ಇಂಚಗೇರಿ

ಇಂಡಿ ತಾಲ್ಲೂಕಿನ ಇಂಚಗೇರಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ನಲವತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಕರಿಸಬಸವೇಶ್ವರ ಮಠವು ಅಸ್ತಿತ್ವದಲ್ಲಿದೆ.

ಕರಿಬಸವೇಶ್ವರ ಮಠ: ಇಂಚಗೇರಿ ಗ್ರಾಮದ ಮಧ್ಯಭಾಗದಲ್ಲಿ ರಂಭಾಪುರಿ ಪೀಠದ ಶಾಖಾ ಮಠವಾದ ಶ್ರೀ ಕರಿಸಬಸವೇಶ್ವರ ಮಠವು ಸ್ಥಾಪನೆಯಾಗಿದೆ. ಪುತ್ರ ವರ್ಗದ ಪರಂಪರೆಯ ಈ ಮಠವು ೧೦೫೦ ರಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಈ ಮಠವು ಮಹಾರಾಷ್ಟ್ರದ ಜತ್ ತಾಲ್ಲೂಕಿನ ಆಕಳವಾಡಿಯಲ್ಲಿ ಸ್ಥಾಪನೆಯಾಗಿತ್ತೆಂದು ಹೇಳಲಾಗುತ್ತಿದೆ. ಈ ಮಠದ ಕರ್ತೃಗುರುಗಳಾದ ಶ್ರೀ ಕರಿಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು ಆಕಳವಾಡಿಯಲ್ಲಿ ಕೆಲವು ದಿನ ನೆಲೆಸಿ, ಪವಾಡಗಳನ್ನು ಮಾಡಿ ಮಠವನ್ನು ಸ್ಥಾಪಿಸಿ ಇಲ್ಲಿಗೆ ಆಗಮಿಸಿದ್ದಾರೆ. ಇಂಚಗೇರಿಗೆ ಆಗಮಿಸಿದ ಗುರುಗಳು ಗ್ರಾಮದ ಪಶ್ಚಿಮದ ಹೊರಭಾಗ ದಲ್ಲಿ ನೆಲೆಸಿ, ಚಿಕ್ಕದಾದ ಒಂದು ಗುಡಿಸಲನ್ನು ಕಟ್ಟಿಕೊಂಡು ಅನುಷ್ಠಾನಕ್ಕೆಕುಳಿತರು. ಗುರುಗಳು ಇಲ್ಲಿ ಅನುಷ್ಠಾನ ಕೈಗೊಂಡು ಸಾಧನೆಯ ಸಿದ್ಧಿಯನ್ನು ಪಡೆದರು. ಇವರು ಒಮ್ಮೆ ಅನುಷ್ಠಾನವನ್ನು ಪೂರೈಸಿ ಗುಡಿಸಲಿನಿಂದ ಹೊರಗೆ ಬಂದ ಸಂದರ್ಭದಲ್ಲಿ ಮಲೆನಾಡಿನ ಶ್ರೀಮಲ್ಲಶೆಟ್ಟಿ ಎಂಬಾತ ಎತ್ತಿನ ಬಂಡಿಯಲ್ಲಿ ಸಾಂಬಾರು ಪದಾರ್ಥಗಳನ್ನು ಹೇರಿಕೊಂಡು ವ್ಯಾಪಾರಕ್ಕೆಂದು ಹೊರಟಿದ್ದನಂತೆ. ಆಗ ಗುರುಗಳು ಮಲ್ಲ ಶೆಟ್ಟಿಯನ್ನು ತಡೆದು ಗಾಡಿಯಲ್ಲಿ ಏನಿದೆ ಎಂದು ಕೇಳಿದರಂತೆ. ಆಗ ಮಲ್ಲಶೆಟ್ಟಿಯು ಯಾರೋ ಪುಂಡರಿರಬಹುದೆಂದು ತಿಳಿದು 'ಕುರಿ ಇಕ್ಕೆಯನ್ನು ತುಂಬಿಕೊಂಡು ಹೋಗುತ್ತಿರುವೆ'ಎಂದು ಸುಳ್ಳು ನುಡಿದನಂತೆ. ಆಗ ಗುರುಗಳು 'ಹಾಗೇ ಆಗಲಿ' ಎಂದು ಆಶೀರ್ವದಿಸಿ ಕಳಿಸಿಕೊಟ್ಟರಂತೆ. ಮುಂದೆ ಹೋದ ವ್ಯಾಪಾರಿ ವ್ಯಾಪಾರಕ್ಕೆಂದು

ಗಾಡಿ ಮೇಲಿದ್ದ ಸಾಂಬಾರು ಪದಾರ್ಥಗಳನ್ನು ತೆಗೆದಾಗ ಎಲ್ಲಾ ವಸ್ತುಗಳೂ ಕುರಿ ಇಕ್ಕೆಯಾಗಿದ್ದವಂತೆ. ಆಗ ಗಾಬರಿಗೊಂಡ ಮಲ್ಲಶೆಟ್ಟಿಯು ಗಾಡಿಯಲ್ಲಿ ಗುರುಗಳಿದ್ದ ಸ್ಥಳಕ್ಕೆ ಬಂದು, 'ತಾವು ಯಾರೆಂದು ಅರಿಯದೆ ಸುಳ್ಳು ನುಡಿದೆ. ನನ್ನನ್ನು ಕ್ಷಮಿಸಬೇಕು'ಎಂದು ಅಂಗಲಾಚಿಕೊಂಡನಂತೆ. ಆಗ ಗುರುಗಳು ಕ್ಷಮಿಸಿ ಕಳಿಸಿದರಂತೆ. ಅಂದಿನಿಂದ ಮಲ್ಲಶೆಟ್ಟಿಯು ಗುರುಗಳ ಶಿಷ್ಯನಾಗಿ ಬೆಳೆದು ಗುರುಗಳಿಗಾಗಿ ಮಠವನ್ನು ಕಟ್ಟಿಸಿ ಕೊಡುತ್ತಾನಂತೆ. ಅಂದಿನಿಂದ ಸುತ್ತಲಿನ ಭಕ್ತರು ಗುರುಗಳ ಆಶೀರ್ವಾದದಿಂದ ಅಭಿವೃದ್ಧಿಯನ್ನು ಕಂಡರು. ಗುರುಗಳು ಮಠವನ್ನು ಸ್ಥಾಪಿಸಿದ ಮೇಲೆ ಇಲ್ಲಿ ಧಾರ್ಮಿಕ ಕಾರ್ಯಗಳು ನಿರಂತರವಾಗಿ ನಡೆಯಬೇಕೆಂಬ ದೂರಾಲೋಚನೆಯಿಂದ ಮಠವನ್ನು ವ್ಯವಸ್ಥಿತವಾಗಿ ಕಟ್ಟಿಬೆಳೆಸಿದರು. ಅಲ್ಲದೆ ಉತ್ತರಾಧಿಕಾರಿಯನ್ನು ನೇಮಿಸಿ ಜೀವಂತ ಸಮಾಧಿಯಾದರೆಂದು ಹೇಳಲಾಗುತ್ತಿದೆ.

ಪರಂಪರೆ:

೧. ಷ.ಬ್ರ.ಶ್ರೀ ಚಂದ್ರಗುಂಡ ಕರಿಬಸವೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಇಮ್ಮಡಿ ಕರಿಬಸವೇಶ್ವರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಮುಮ್ಮಡಿ ಕರಿಬಸವೇಶ್ವರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಗುರುಬಾಳ ಕರಿಬಸವೇಶ್ವರ ಶಿವಾಚಾರ್ಯಸ್ವಾಮಿಗಳು
(ನಂತರದ ಪರಂಪರೆ ಒಂದೇ ಹೆಸರು ಬೆಳೆದಿದೆ)
೪೭. ಷ.ಬ್ರ.ಶ್ರೀ ತೋಪರತ್ನ ಕರಿಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು
೪೮. ಷ.ಬ್ರ.ಶ್ರೀ ಡಾ. ರೇಣುಕ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ಕರಿಬಸವೇಶ್ವರ ಶಿವಾಚಾರ್ಯ ಸ್ವಾಮಿಗಳ ಹೆಸರಿನಲ್ಲಿ ಮಠದ ಪರಂಪರೆ ಬೆಳೆದುಬಂದಿದೆ. ಶ್ರೀ ಗುರುಬಾಳ ಶಿವಾಚಾರ್ಯ ಸ್ವಾಮಿಗಳು ಹಾಗೂ ಈಗಿನ ಶ್ರೀ ಡಾ.ರೇಣುಕಶಿವಯೋಗಿ ಶಿವಾಚಾರ್ಯ ಸ್ವಾಮಿಗಳ ಹೆಸರನ್ನು ಹೊರತುಪಡಿಸಿದರೆ ಉಳಿದ ಎಲ್ಲಾ ಗುರುಗಳು ಒಂದೇ ಹೆಸರಿನಲ್ಲಿ ಪಟ್ಟಾಧಿಕಾವನ್ನು ವಹಿಸಿಕೊಂಡಿದ್ದಾರೆ. ಪರಂಪರೆಯಲ್ಲಿ ಒಟ್ಟು ನಲವತ್ತೇಳು ಜನ ಗುರುಗಳು ಈಗಾಗಲೇ ಅಧಿಕಾರವನ್ನು ನಡೆಸಿ, ಮಠವನ್ನು ಉದ್ಧರಿಸಿ ಲಿಂಗೈಕ್ಯರಾಗಿದ್ದಾರೆ. ಈಗಿನ ಮಠಾಧ್ಯಕ್ಷರಾದ ಶ್ರೀ ಡಾ. ರೇಣುಕ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು ನಲವತ್ತೆಂಟನೆಯ ಗುರುಗಳಾಗಿ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ತಪೋರತ್ನ ಶ್ರೀ ಕರಿಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು ಕಾಶಿಯಲ್ಲಿ ಸಂಸ್ಕೃತವನ್ನು ಅಭ್ಯಾಸಮಾಡಿ, ವೇದಾಂತಚಾರ್ಯ ಪದವಿಯನ್ನು ಪಡೆದಿದ್ದರು. ಶ್ರೀಶೈಲ ಪೀಠದ ಜಗದ್ಗುರು ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರ ಸಮಕಾಲೀನರಾದ ಇವರು ಮಹಾತಪೋ ನಿಧಿಗಳಾಗಿದ್ದರು. ಇವರು ಐವತ್ತಾರು ವರ್ಷಗಳ ದೀರ್ಘ ಅನುಷ್ಠಾನವನ್ನು ಕೈಗೊಂಡು ಮಹತ್ತರವಾದ ಸಾಧನೆಯನ್ನು ಸಾಧಿಸಿದ್ದ ಸಾಧಕರಾಗಿದ್ದರು. ಇವರು ವಾಕ್‌ಸಿದ್ಧಿ ಪುರುಷರಾಗಿ ಮಠವನ್ನು ಹೆಚ್ಚು ಪ್ರಸಿದ್ಧಿಗೆ ತಂದಿದ್ದರು. ಇವರ ತಪೋಶಕ್ತಿಯಿಂದ ಈ ನಾಡನ್ನು ಬೆಳೆಸಿ ಜುಲೈ ಹನ್ನೊಂದರ ೧೯೮೮ ರಲ್ಲಿ ಲಿಂಗೈಕ್ಯರಾದರು.

ತಪೋನಿಧಿ ಶ್ರೀ ಕರಿಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು ಜೀವಿತಾವಧಿಯಲ್ಲಿ ಶ್ರೀ ಚನ್ನಬಸವಯ್ಯ ಮತ್ತು ಶ್ರೀಮತಿ ಅನ್ನಪೂರ್ಣಮ್ಮನವರ ಪುತ್ರರಾಗಿ ೧೯೪೪ರ ಮಾರ್ಚ್ ಇಪ್ಪತ್ತೆರಡು ಜನಿಸಿದ ತಮ್ಮ ಸಹೋದರ ಸಂಬಂಧಿಗಳಾದ ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳಿಗೆ ೧೯೭೮ರ ಮಾರ್ಚ್ ಇಪ್ಪತ್ತಾರರಂದು ಪಟ್ಟಾಧಿಕಾರವನ್ನು ನೀಡಿ ಅನುಗ್ರಹಿಸಿದ್ದರು. ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು ಹಿರಿಯ ಗುರುಗಳ ಆಶೀರ್ವಾದ ಹಾಗೂ ಅವರ ಮಾರ್ಗದರ್ಶನದಲ್ಲಿ ಅಪಾರ ಜ್ಞಾನವನ್ನು ಸಂಪಾದಿಸಿಕೊಂಡರು. ಇವರು ಬೆಂಗಳೂರು ಮತ್ತು ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡಿ ಸ್ನಾತಕೋತ್ತರ ಪದವಿಯನ್ನು ಪಡೆದರು. ನಂತರ ಸಂಸ್ಕೃತದಲ್ಲಿ ಪಿಎಚ್.ಡಿ ಪದವಿಯನ್ನು ಪಡೆದು ಮಠಕ್ಕೆ ಆಗಮಿಸಿದರು. ಮಠದಲ್ಲಿ ನೆಲೆಸಿದ ಗುರುಗಳು ಹಿರಿಯ ಗುರುಗಳ ಮಾರ್ಗದರ್ಶನದಲ್ಲಿ ಧಾರ್ಮಿಕ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಮಾಡಿ ಮಠವನ್ನು ಬೆಳೆಸಿದರು. ಕ್ರಿಯಾಶೀಲ ಹಾಗೂ ಪ್ರಗತಿಪರ ಚಿಂತನೆಯ ಗುರುಗಳು ಮಠದಲ್ಲಿ ಧಾರ್ಮಿಕ ಕಾರ್ಯಗಳು ಕ್ರಿಯಾತ್ಮಕವಾಗಿ ನಡೆಯುವಂತೆ ಮಾಡಿದರು. ಗುರುಗಳು ೧೯೭೭ ರಲ್ಲಿ ಸರ್ವಧರ್ಮ ಭಾವೈಕ್ಯತಾ ಸಮ್ಮೇಳನವನ್ನು ಮಾಡಿ, ಜಗದ್ಗುರು ಪಂಚಾಪೀಠಾಧೀಶರನ್ನು ಕರೆಸಿ ಅಡ್ಡಪಲ್ಲಕ್ಕಿ ಉತ್ಸವವನ್ನು ನೆರವೇರಿಸಿದರು. ಅಲ್ಲದೆ ತಪೋನಿಧಿ ಶ್ರೀ ಕರಿಬಸವ ಶಿವಾಚಾರ್ಯ ಸ್ವಾಮಿಗಳ ಅಮೃತ

ಶಿಲಾಮೂರ್ತಿಯನ್ನು ಸ್ಥಾಪಿಸಿದ್ದಾರೆ. ಗುರುಗಳು ಮಠದಲ್ಲಿ ಕಲ್ಯಾಣಮಂಟಪ, ಕರ್ತೃಗುರುಗಳ ಗದ್ದುಗೆಗೆ ಮಂಟಪ ಹಾಗೂ ಮಠದ ನವೀಕರಣವನ್ನು ಮಾಡಿ ಮಠವನ್ನು ಅಭಿವೃದ್ಧಿಪಡಿಸಿದರು.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಕರ್ತೃಗುರುಗಳಾದ ಶ್ರೀ ಕರಿಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಗುರುಬಾಳೇಶ್ವರ ಶಿವಾಚಾರ್ಯ ಸ್ವಾಮಿಗಳು ಹಾಗೂ ತಪೋರತ್ನ ಶ್ರೀ ಕರಿಬಸವೇಶ್ವರ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಗಳು ನಿರ್ಮಾಣಗೊಂಡಿದ್ದು, ಮಠದ ತೋಟದಲ್ಲಿ ನಲವತ್ನಾಲ್ಕು ಗದ್ದುಗೆಗಳು ಸ್ಥಾಪನೆಯಾಗಿವೆ. ಈ ಗದ್ದುಗೆಗಳಿಗೆ ನಿತ್ಯ ಪೂಜೆ, ಅಮಾವಾಸ್ಯೆ ಮತ್ತು ಹುಣ್ಣಿಮೆ, ಸೋಮವಾರ, ಗುರುವಾರ ಮತ್ತು ಶುಕ್ರವಾರದ ದಿನಗಳಲ್ಲಿ ಕರ್ತೃಗದ್ದುಗೆಗೆ ರುದ್ರಾಭಿಷೇಕದ ಪೂಜೆಯನ್ನು ನೆರವೇರಿಸಲಾಗುತ್ತಿದೆ. ಪ್ರತಿ ಅಮಾವಾಸ್ಯೆಯಲ್ಲಿ ಎರಡರಿಂದ ಮೂರು ಸಾವಿರ ಜನ ಭಕ್ತರು ಆಗಮಿಸುತ್ತಾರೆ. ಈ ಸಂದರ್ಭದಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಮಹಾ ಶಿವರಾತ್ರಿಯಲ್ಲಿ ಕರ್ತೃ ಗುರುಗಳ ಜಾತ್ರೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಒಂದು ವಾರಗಳ ಕಾಲ ಪುರಾಣ, ಕೀರ್ತನೆ, ಭಜನೆಯನ್ನು ನಡೆಸಲಾಗುತ್ತಿದೆ. ಮಣ್ಣೆತ್ತಿನ ಅಮಾವಾಸ್ಯೆಯಲ್ಲಿ ಜನ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಂಡು ನೂರಾಎಂಟು ಜನರನ್ನು ಸನ್ಮಾನಿಸಲಾಗುತ್ತಿದೆ. ಹನ್ನೆರಡು ಸಾವಿರ ಜ್ಯೋತಿರ್ಲಿಂಗಗಳನ್ನು ಸ್ಥಾಪಿಸಲಾಗಿದೆ.

ಶೈಕ್ಷಣಿಕ ಸೇವೆ: ೧೯೭೭ರಲ್ಲಿ ತಪೋರತ್ನ ಶ್ರೀ ಕರಿಬಸವೇಶ್ವರ ವಿದ್ಯಾವರ್ಧಕಸಂಘವನ್ನು ಸ್ಥಾಪಿಸಿ, ವಿದ್ಯಾರ್ಥಿನಿಲಯ,ಅನಾಥಾಶ್ರಮವನ್ನು ನಡೆಸಲಾಗುತ್ತಿದೆ. ಬರಡೋಲಾದ ಶಾಖಾಮಠದಲ್ಲಿ ಒಂದು ಉಚಿತ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದ್ದಾರೆ. ಬಿಜಾಪುರದ ಶಾಖಾ ಮಠದಲ್ಲಿ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿ, ಕಲಿಯುವ ಬಡಮಕ್ಕಳಿಗೆ ಆಶ್ರಯ ಕಲ್ಪಿಸಲಾಗಿದೆ.

ಸಾಹಿತ್ಯ-ಸಾಮಾಜಿಕ ಸೇವೆ: ಶ್ರೀ ಡಾ. ರೇಣುಕ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು ಸಾಮಾಜಿಕ ಕಳಕಳಿಯನ್ನು ಹೊಂದಿದ್ದು, ಸಮಾಜವನ್ನು ಧಾರ್ಮಿಕ ನೆಲೆಗಟ್ಟಿನಲ್ಲಿ ಬೆಳೆಸಬೇಕೆಂಬ ಮಹದಾಸೆಯನ್ನು ಇಟ್ಟುಕೊಂಡು ಧಾರ್ಮಿಕ ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ. ಮಠದ ವತಿಯಿಂದ ನಡೆಯುವ ಕಾರ್ಯಕ್ರಮದಲ್ಲಿ ಸಾಮೂಹಿಕ ವಿವಾಹಗಳನ್ನು ಏರ್ಪಡಿಸಿ ಅಸಹಾಯಕರಿಗೆ ನೆರವಾಗಿದ್ದಾರೆ. ಗುರುಗಳು ಈವರೆಗೆ ಒಟ್ಟು ಐನೂರೈವತ್ತೈದು ಮದುವೆಗಳನ್ನು ನಡೆಸಿ ದಾಖಲೆಯನ್ನೇ ನಿರ್ಮಿಸಿದ್ದಾರೆ. ಗುರುಗಳು ಸ್ವತಃ ಸಾಹಿತಿಗಳಾಗಿ,'ಲೇಖನ ಕಲಾ ಚತುರ'ಎಂಬ ಬಿರುದನ್ನು ವಿದ್ಯಾರ್ಥಿಯಾಗಿದ್ದಾಗಲೇ ಪಡೆದುಕೊಂಡಿದ್ದಾರೆ. ಗುರುಗಳು ಮಾದಪ್ಪ ದತ್ತಿನಿಧಿ, ಲಿಂಗಾಯಿತ ಅಭಿವೃದ್ಧಿ ದತ್ತಿನಿಧಿಯ ಸ್ಪರ್ಧೆಯಲ್ಲಿ ಸಾಮಾಜಿಕ ಮೌಲ್ಯವನ್ನು ಬಿಂಬಿಸುವ ಲೇಖನವನ್ನು ಬರೆದು, ಎರಡು ಲೇಖನಗಳಿಗೂ ಪ್ರಥಮ ಬಹುಮಾನವನ್ನು ಗಿಟ್ಟಿಸಿಕೊಂಡಿದ್ದಾರೆ. ಬರವಣಿಗೆಯನ್ನು ಈಗಲೂ ಮುಂದುವರೆಸಿದ್ದು ಸುಮಾರು ಐನೂರಕ್ಕೂ ಹೆಚ್ಚು ಲೇಖನಗಳು ಕರ್ಮವೀರ, ಪ್ರಪಂಚ, ಕನ್ನಡ ಪ್ರಭ, ಪಂಚಾಚಾರ ಪ್ರಭ ಮುಂತಾದ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಗುರುಗಳು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಹಿತ್ಯಿಕವಾಗಿ ತೊಡಗಿಸಿ ಕೊಂಡು ಸದಾ ಕಾರ್ಯಶೀಲರಾಗಿ ವೀರಶೈವ ಧರ್ಮವನ್ನು ಬೆಳೆಸುತ್ತಿದ್ದಾರೆ.

ಶಾಖಾ ಮಠಗಳು: ಇಂಡಿ ತಾಲ್ಲೂಕಿನ ಬರಡೋಲ ಮತ್ತು ಚಡಚಣ ಗ್ರಾಮದಲ್ಲಿ ಶ್ರೀ ಕರಿಬಸವೇಶ್ವರ ಹಿರೇಮಠಗಳು ಶಾಖಾ ಮಠಗಳಾಗಿವೆ. ಶ್ರೀ ಡಾ. ರೇಣುಕ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು ಈ ಎರಡೂ ಮಠಗಳ ಅಭಿವೃದ್ಧಿಗೆ ಒತ್ತು ಕೊಟ್ಟು ದುಡಿದಿದ್ದಾರೆ. ಅಲ್ಲದೆ ೨೦೦೦ದ ಜುಲೈ ಹತ್ತೊಂಬತ್ತರಂದು ಈ ಎರಡೂ ಮಠಗಳಿಗೆ ನೂತನ ಕಟ್ಟಡವನ್ನು ಕಟ್ಟಿಸಿ, ಪಂಚಪೀಠಾಧೀಶರರನ್ನು ಕರೆಸಿ ಕಟ್ಟಡಗಳ ಉದ್ಘಾಟನೆಯನ್ನು ಮಾಡಿಸಿದ್ದಾರೆ. ಅಲ್ಲದೆ ಬರಡೋಲಾ ಮಠದಲ್ಲಿ ಗುರುಕುಲವನ್ನು ಸ್ಥಾಪಿಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಡಾ. ರೇಣುಕ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕರಿಬಸವೇಶ್ವರಮಠ, ಇಂಚಗೇರಿ, ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ಖೇಡಗಿ

ಇಂಡಿ ತಾಲ್ಲೂಕಿನ ಖೇಡಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಇಪ್ಪತ್ತೆಂಟು ಕಿ.ಮೀ ದೂರದಲ್ಲಿದೆ.

ಭೀಮಾ ನದಿಯ ದಡದಲ್ಲಿ ಶ್ರೀ ಗುಡ್ಡದಸ್ವಾಮಿ ಮಠವು ಅಸ್ತಿತ್ವದಲ್ಲಿದೆ.

ಗುಡ್ಡಸ್ವಾಮಿಮಠ: ಖೇಡಗಿ ಗ್ರಾಮದಲ್ಲಿ ಶ್ರೀ ಗುಡ್ಡದಸ್ವಾಮಿ ಮಠವು ಸ್ಥಾಪನೆಯಾಗಿದೆ. ವಿರಕ್ತ ಸಂಪ್ರದಾಯದ ಈ ಮಠವು ಶ್ರೀ ಬಸವ ರಾಜೇಂದ್ರ ಸ್ವಾಮಿಗಳಿಂದ ಇತ್ತೀಚಿನ ಶತಮಾನದಲ್ಲಿ ಸ್ಥಾಪಿಸಲ್ಪಟ್ಟಿದೆ. ಎಮ್ಮಿಗನೂರು ಗ್ರಾಮದಲ್ಲಿ ಜನಿಸಿದ ಶ್ರೀ ಬಸವರಾಜೇಂದ್ರ ಸ್ವಾಮಿಗಳು ಬಾಲ್ಯದಲ್ಲಿಯೇ ತಂದೆಯ ಸಂಸ್ಕಾರದಿಂದ ಬೆಳೆದು ಪ್ರೌಢಾವಸ್ಥೆಯಲ್ಲಿ ಬಂಥನಾಳು ಶ್ರೀ ಸಂಗನ ಬಸವ ಸ್ವಾಮಿಗಳ ಆದರ್ಶವನ್ನು ಮೈಗೂಡಿಸಿಕೊಂಡು ಯೌವ್ವನಾಸ್ಥೆಗೆ ಬಂದರು. ಈ ವೇಳೆಗಾಗಲೇ ಅನೇಕ ಪವಾಡಗಳನ್ನು ಮಾಡಿ ಹೆಸರು ಗಳಿಸಿದ್ದರು. ಲೋಕಸಂಚಾರದಲ್ಲಿ ಲೋಕಾನುಭವವನ್ನು ಪಡೆದ ಶ್ರೀ ಬಸವರಾಜೇಂದ್ರ ಸ್ವಾಮಿಗಳು ಖೇಡಗಿ ಗ್ರಾಮಕ್ಕೆ ಬಂದು ಭೀಮಾ ನದಿಯ ದಡದಲ್ಲಿ ನೆಲೆಗೊಂಡಿದ್ದಾರೆ. ಗುರುಗಳು ಇಲ್ಲಿ ನೆಲೆಗೊಂಡ ಮೇಲೆ ಅನೇಕ ಸತ್ಕಾರ್ಯಗಳನ್ನು ಮಾಡಿದ್ದಾರೆ. ಭಕ್ತರು ಗುರುಗಳ ಕಾರ್ಯವನ್ನು ನೋಡಿ ಗುರುಗಳ ಆಶೀರ್ವಾದ ಪಡೆದು ಸಂಸ್ಕಾರವಂತರಾಗಿದ್ದಾರೆ. ನಂತರ ಇಲ್ಲಿ ಮಠವನ್ನು ಸ್ಥಾಪಿಸಿದ ಶ್ರೀ ಬಸವರಾಜೇಂದ್ರ ಸ್ವಾಮಿಗಳು ವೀರಶೈವ ಧರ್ಮವನ್ನು ವಿಧಿವತ್ತಾಗಿ ಬೆಳೆಸಿ, ಭಕ್ತರಿಗೆ ಸಂಸ್ಕಾರವನ್ನು ನೀಡಿ ಉದ್ಧರಿಸಿ ಲಿಂಗೈಕ್ಯರಾಗಿದ್ದಾರೆ.

ಬೆಳೆದ ಪರಂಪರೆ: ಶ್ರೀ ಬಸವರಾಜೇಂದ್ರ ಸ್ವಾಮಿಗಳ ನಂತರ ಮಠದಲ್ಲಿ ಶ್ರೀ ಧರ್ಮಣ್ಣ ಮಹಾರಾಜರು ಮಠದ ಉಸ್ತುವಾರಿಯನ್ನು ನೋಡಿಕೊಂಡು ಮಠವನ್ನು ಬೆಳೆಸಿದರು. ಇವರು ಮಠದ ಸುತ್ತ ಅರವತ್ಮೂರು ಬಿಲ್ವ ಪತ್ರೆ ಮರಗಳನ್ನು ಬೆಳೆಸಿದರು. ಅಲ್ಲದೆ ಅರವತ್ಮೂರು ಲಿಂಗಗಳ ಪ್ರತಿಷ್ಠಾಪನೆಯನ್ನು ಸಹ ಮಾಡಿಸಿದರು. ಇವರ ಕಾಲದಲ್ಲಿ ಬಸವೇಶ್ವರ ಗುಡಿಯನ್ನು ಸ್ಥಾಪಿಸಿದರು. ನಂತರ ಗ್ರಾಮಸ್ಥರು ಮಠದ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಲು ಶ್ರೀ ಶಿವಬಸವ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿ ಪಟ್ಟಾಧಿಕಾರಿಗಳನ್ನಾಗಿ ಮಾಡಿದ್ದಾರೆ. ಕ್ರಿಯಾಶೀಲರಾದ ಶ್ರೀ ಶಿವಬಸವ ಸ್ವಾಮಿಗಳು ಮಠದಲ್ಲಿ ಕರ್ತೃಗದ್ದುಗೆಗೆ ಮಂಟಪ ಹಾಗೂ ಮಠದ ಸಮುಚ್ಛಯವನ್ನು ಅಭಿವೃದ್ಧಿಪಡಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಕರ್ತೃಗದ್ದುಗೆಗೆ ನಿತ್ಯ ಎರಡೂ ವೇಳೆ ಪೂಜೆ, ಅಮಾವಾಸ್ಯೆಯಲ್ಲಿ ರುದ್ರಾಭಿಷೇಕ, ಶ್ರಾವಣಮಾಸದಲ್ಲಿ ಒಂದು ತಿಂಗಳು ಪುರಾಣ, ಪ್ರತಿವರ್ಷ ಸೆಪ್ಟೆಂಬರ್‌ನಲ್ಲಿ ಕರ್ತೃಗುರುಗಳಾದ ಶ್ರೀ ಬಸವ ರಾಜೇಂದ್ರ ಸ್ವಾಮಿಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಈ ವಿಶೇಷ ಸಂದರ್ಭದಲ್ಲಿ ಅನ್ನದಾಸೋಹದ ವ್ಯವಸ್ಥೆ ಯನ್ನು ಮಾಡಲಾಗುತ್ತಿದೆ. ಮಠದ ವತಿಯಿಂದ ಸಂಸ್ಕೃತ ಪಾಠಶಾಲೆಯನ್ನು ನಡೆಸಲಾಗುತ್ತಿದೆ. ಮಠದ ಆಸ್ತಿಯಾಗಿ ಒಟ್ಟು ಎಂಟು ಎಕರೆ ಜಮೀನಿದ್ದು, ಇದನ್ನು ಅಭಿವೃದ್ಧಿಪಡಿಸಿ ಹೆಚ್ಚು ಆದಾಯ ಬರುವಂತೆ ಮಾಡಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಶಿವಬಸವ ಸ್ವಾಮಿಗಳು, ಶ್ರೀ ಗುಡ್ಡಸ್ವಾಮಿ ಮಠ, ಖೇಡಗಿ, ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ಚಡಚಣ

ಇಂಡಿ ತಾಲ್ಲೂಕಿನ ಚಡಚಣ ಗ್ರಾಮವು ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಮೂವತ್ನಾಲ್ಕು ಕಿ.ಮೀ ದೂರದಲ್ಲಿದೆ. ಈ ಗ್ರಾಮವು ಕರ್ನಾಟಕದ ಗಡಿಯ ಅಂಚಿನಲ್ಲಿದೆ. ಇಲ್ಲಿ ಪುರಾತನ ಕಾಲದಿಂದಲೂ ವೀರಶೈವ ಧರ್ಮ ಪ್ರಬಲವಾಗಿ ಬೆಳೆದಿದೆ. ಇದಕ್ಕೆ ಸಾಕ್ಷಿ ಎಂಬಂತೆ ಚಡಚಣದಲ್ಲಿ ಶ್ರೀಶೈಲ ಪೀಠದ ಶಾಖಾಮಠ, ಉಜ್ಜಯಿನಿ ಪೀಠದ ಶ್ರೀ ರಾಚೋಟೇಶ್ವರ ಮಠ, ರಂಭಾಪುರಿ ಪೀಠದ ಶ್ರೀ ಕರಿಬಸವೇಶ್ವರ ಮಠ ಹಾಗೂ ಶ್ರೀ ವಿರಕ್ತಮಠ ಎಂಬ ಈ ನಾಲ್ಕು ಮಠಗಳು ಸ್ಥಾಪನೆಯಾಗಿವೆ. ಶ್ರೀಶೈಲ ಪೀಠ ಮತ್ತು ಉಜ್ಜಯಿನಿ ಪೀಠದ ಶಾಖಾಮಠಗಳು ಮಠಾಧೀಶರಿಲ್ಲದೆ ಖಾಲಿ ಉಳಿದಿವೆ.

ಕರಿಬಸವೇಶ್ವರಮಠ: ಶ್ರೀ ರಂಭಾಪುರಿ ಪೀಠದ ಶ್ರೀ ಕರಿಸಿದ್ಧೇಶ್ವರ ಮಠವು ಇಂಚಗೇರಿ ಮಠದ ಶಾಖಾಮಠವಾಗಿದ್ದು, ಇಲ್ಲಿ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಲಾಗಿದೆ. ಗುರುಗಳು ಸಂದರ್ಭಕ್ಕನುಸಾರವಾಗಿ ಇಲ್ಲಿಗೆ ಆಗಮಿಸಿ ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಡಾ. ರೇಣುಕ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕರಿಬಸವೇಶ್ವರ ಮಠ, ಚಡಚಣ, ಇಂಡಿ ತಾ, ಬಿಜಾಪುರ ಜಿಲ್ಲೆ.

ವಿರಕ್ತಮಠ: ಚಡಚಣದ ಉತ್ತರದ ಹೊರಭಾಗದಲ್ಲಿ ಮುರುಘಾ ಸಮಯದ ಶ್ರೀ ವಿರಕ್ತಮಠವು ಹನ್ನೆರಡನೆಯ ಶತಮಾನದಲ್ಲಿ ಸ್ಥಾಪನೆಯಾಗಿದೆ. ಶ್ರೀ ಷಡಕ್ಷರ ಶಿವಯೋಗಿಗಳಿಂದ ಸ್ಥಾಪಿಸಲ್ಪಟ್ಟ ಈ ಮಠವು ಧಾರ್ಮಿಕ ಕಾರ್ಯಗಳನ್ನು ನಡೆಸಿ, ಶರಣ ತತ್ತ್ವವನ್ನು ಪ್ರಚಾರಪಡಿಸಿರುವ ಗುರುಗಳು ತಮ್ಮ ಪ್ರಯತ್ನದಿಂದ ಸಮಾಜವನ್ನು ಬೆಳೆಸಿದ್ದಾರೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ಷಡಕ್ಷರಿ ಶಿವಯೋಗಿಗಳು
೨. ಶ್ರೀ ಮ.ನಿ.ಪ್ರ. ಓಂಕಾರ ಶಿವಯೋಗಿಗಳು
೩. ಶ್ರೀ ಮ.ನಿ.ಪ್ರ. ರೇವಣಸಿದ್ಧ ಶಿವಯೋಗಿಗಳು
೪. ಶ್ರೀ ಮ.ನಿ.ಪ್ರ. ಗುರುಬಸವ ಶಿವಯೋಗಿಗಳು
೫. ಶ್ರೀ ಮ.ನಿ.ಪ್ರ. ಮಹಾಂತ ಶಿವಯೋಗಿಗಳು
೬. ಶ್ರೀ ಮ.ನಿ.ಪ್ರ. ಅನ್ನದಾನ ಶಿವಯೋಗಿಗಳು
೭. ಶ್ರೀ ಮ.ನಿ.ಪ್ರ. ಶಿವಾನಂದ ಶಿವಯೋಗಿಗಳು
೮. ಶ್ರೀ ಮ.ನಿ.ಪ್ರ. ಷಡಕ್ಷರಿ ಶಿವಯೋಗಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳಿಂದ ಪರಂಪರೆಯ ಆರನೆಯ ಗುರುಗಳ ತನಕ ಮಾಹಿತಿ ಲಭ್ಯವಿಲ್ಲ. ಏಳನೆಯ ಗುರುಗಳಾದ ಶ್ರೀ ಶಿವಾನಂದ ಶಿವಯೋಗಿಗಳು ಶಿವಪೂಜಾನಿಷ್ಠರಾಗಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಇವರು ಲಿಂಗೈಕ್ಯರಾದ ಮೇಲೆ ಹಿರೇರೂಗಿ ಗ್ರಾಮದ ಶ್ರೀ ದಯಾನಂದ ಮತ್ತು ಶ್ರೀಮತಿ ನೀಲಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಷಡಕ್ಷರಿ ಶಿವಯೋಗಿಗಳಿಗೆ ಪಟ್ಟಾಧಿಕಾರ ಮಾಡಲಾಗಿದೆ. ಗುರುಗಳು ತಮ್ಮ ಹದಿಮೂರನೆಯ ವರ್ಷಕ್ಕೆ ಮಠದ ಅಧಿಕಾರವನ್ನು ವಹಿಸಿಕೊಂಡು ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಪರಂಪರೆಯ ಮಠದಲ್ಲಿ ಕರ್ತೃಗುರುಗಳ ಗದ್ದುಗೆಯ ಸೇರಿದಂತೆ ಏಳು ಗದ್ದುಗೆಗಳು ಸ್ಥಾಪನೆಯಾಗಿವೆ. ಈ ಗದ್ದುಗೆಗಳಿಗೆ ನಿತ್ಯಪೂಜೆ ನಡೆಯುತ್ತಿದೆ. ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಮಠದ ಆವರಣದಲ್ಲಿ ಕನ್ನಡ ಕಾನ್ವೆಂಟ್ ಶಾಲೆಯನ್ನು ಪ್ರಾರಂಭಿಸಲಾಗಿದೆ. ಮಠಕ್ಕೆ ಆಗಮಿಸುವ ಭಕ್ತರಿಗೆ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಷಡಕ್ಷರಿ ಸ್ವಾಮಿಗಳು, ಶ್ರೀ ವಿರಕ್ತಮಠ, ಚಡಚಣ,ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ಜೇವೂರು

ಇಂಡಿ ತಾಲ್ಲೂಕಿನ ಜೇವೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಇಪ್ಪತ್ಮೂರು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ರೇವಣಸಿದ್ಧೇಶ್ವರ ಮಠವು ಅಸ್ತಿತ್ವದಲ್ಲಿದೆ.

ರೇವಣಸಿದ್ಧೇಶ್ವರಮಠ: ಜೇವೂರು ಗ್ರಾಮದ ಮುಖ್ಯ ರಸ್ತೆಯಲ್ಲಿ ಶ್ರೀ ರೇವಣಸಿದ್ಧೇಶ್ವರ ಮಠವು ಸ್ಥಾಪನೆಯಾಗಿದೆ. ಶರಣಸ್ಥಲದ ಈ ಮಠವು ಶ್ರೀ ರೇವಣ ಸಿದ್ಧೇಶ್ವರರಿಂದ ಪ್ರಾರಂಭಗೊಂಡಿದೆ. ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಶ್ರೀ ರೇವಣಸಿದ್ಧೇಶ್ವರರು ಆಧ್ಯಾತ್ಮವನ್ನು ಮೈಗೂಡಿಸಿಕೊಂಡು ಮಠವನ್ನು ಸ್ಥಾಪಿಸಿದರು. ನಂತರ ಗುರುಗಳು ಹನ್ನೆರಡು ವರ್ಷಗಳ ಕಾಲ ಮೌನ ತಪಸ್ಸನ್ನು ಮಾಡಿದರು. ಅಲ್ಲದೆ ಮುಳ್ಳಿನ ಹಲಗೆಯ ಮೇಲೆ ಕುಳಿತು ತಪಸ್ಸು ಮಾಡಿ ಭಕ್ತರನ್ನು ಬೆರಗುಗೊಳಿಸಿದ್ದಾರೆ. ಇವರ ತಪೋಶಕ್ತಿಗೆ ಹಾಗೂ ಪೂಜಾನಿಷ್ಠೆಗೆ ಒಲಿದ ಭಕ್ತರ ಸಂಖ್ಯೆ ಅಪಾರ. ಗುರುಗಳು ೧೯೮೬ರ ಏಪ್ರಿಲ್ ಎರಡರಂದು ಲಿಂಗೈಕ್ಯರಾದ ಮೇಲೆ ಇವರ ಗದ್ದುಗೆಗೆ ಮಂಟಪವನ್ನು ನಿರ್ಮಿಸಿ, ಪೂಜಾ ಕಾರ್ಯಗಳು ನಡೆಯುವಂತೆ ಮಾಡಿದ್ದಾರೆ.

ವಿಳಾಸ: ಶ್ರೀ ರೇವಣಸಿದ್ಧೇಶ್ವರ ಮಠದ ಟ್ರಸ್ಟ್, ಶ್ರೀ ರೇವಣಸಿದ್ಧೇಶ್ವರ ಮಠ, ಜೇವೂರು, ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ಝಳಕಿ

ಇಂಡಿ ತಾಲ್ಲೂಕಿನ ಝಳಕಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ವಾಯುವ್ಯ ಭಾಗಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ.

ಈ ಗ್ರಾಮವು ವೀರಶೈವ ಧರ್ಮದ ಅಭಿವೃದ್ಧಿಗೆ ಪೂರಕವಾಗಿ ಬೆಳೆದು ಧರ್ಮವನ್ನು ಬೆಳೆಸಿದೆ. ಈ ಗ್ರಾಮದಲ್ಲಿ ಪುರಾತನ ಕಾಲದ ಶ್ರೀ ಹಿರೇಮಠ ಹಾಗೂ ಇತ್ತೀಚಿನ ಶ್ರೀ ಕಾಡಸಿದ್ಧೇಶ್ವರ ಮಠವು ಸ್ಥಾಪನೆಯಾಗಿ ಇಲ್ಲಿನ ವೀರಶೈವ ಧರ್ಮೀಯರ ಧಾರ್ಮಿಕ ಚಟುವಟಿಕೆಗಳಿಗೆ ನೆರವಾಗುತ್ತಿವೆ.

ಹಿರೇಮಠ: ಝಳಕಿ ಗ್ರಾಮದ ಮಧ್ಯಭಾಗದಲ್ಲಿ ಉಜ್ಜಯಿನಿ ಪೀಠದ ಶಾಖಾಮಠವಾದ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ. ಈ ಮಠದ ಸ್ಥಾಪಕರು ಶ್ರೀ ಗವೀಶ್ವರ ಸ್ವಾಮಿಗಳು ಎಂದು ಹೇಳಲಾಗುತ್ತಿದೆ. ಕರ್ತೃಗುರುಗಳ ನಂತರ ಮಠಕ್ಕೆ ಉತ್ತರಾಧಿಕಾರಿಗಳಾದ ಬಗ್ಗೆ ಸ್ಪಷ್ಟವಾದ ಉಲ್ಲೇಖಗಳಿಲ್ಲ. ಈ ಮಠದಲ್ಲಿ ಕರ್ತೃಗದ್ದುಗೆಯನ್ನು ಹೊರತುಪಡಿಸಿದರೆ ಬೇರೆ ಇನ್ನಾವ ಗದ್ದುಗೆಗಳು ಇಲ್ಲದೆ ಇರುವುದರಿಂದ ಈ ಮಠದ ಪರಂಪರೆಯು ಅಸ್ಪಷ್ಟವಾಗಿದೆ. ಮಠದ ಆವರಣದಲ್ಲಿರುವ ಒಂದು ಗದ್ದುಗೆಗೆ ನಿತ್ಯಪೂಜೆಯನ್ನು ನಡೆಸಲಾಗುತ್ತಿದೆ. ಶ್ರೀ ರೇವಣಸಿದ್ಧಯ್ಯ ಗುರುಬಸವಯ್ಯ ಹಿರೇಮಠ ಎಂಬುವರು ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ರೇವಣಸಿದ್ಧಯ್ಯ ಗುರುಬಸವಯ್ಯ ಹಿರೇಮಠ, ಶ್ರೀ ಹಿರೇಮಠ, ಝಳಕಿ, ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ಕಾಡಸಿದ್ಧೇಶ್ವರಮಠ: ಝಳಕಿ ಗ್ರಾಮದ ಹೊರ ಭಾಗದಲ್ಲಿ ಶ್ರೀ ಕಾಡಸಿದ್ಧೇಶ್ವರ ಮಠವು ೧೯೯೬ ರಲ್ಲಿ ಸ್ಥಾಪನೆಯಾಗಿದೆ. ರಂಭಾಪುರಿ ಪೀಠದ ಶಾಖಾ ಮಠವಾಗಿರುವ ಈ ಮಠವನ್ನು ಕೊಗಟನೂರು ಶ್ರೀ ಶಾಂತಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು ಸ್ಥಾಪಿಸಿದ್ದಾರೆ. ಶ್ರೀ ಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ತಪೋನಿಷ್ಠರು ಹಾಗೂ ಸಾಹಸ ಪ್ರವೃತ್ತಿಯುಳ್ಳವರು. ಇವರು ಈ ಗ್ರಾಮಕ್ಕೆ ಬಂದು ನೆಲೆಸಿ ಧಾರ್ಮಿಕ ಅನುಷ್ಠಾನವನ್ನು ಕೈಗೊಂಡರು. ಇವರ ಪೂಜಾನುಷ್ಠಾನವನ್ನು ನೋಡಿದ ಭಕ್ತರು ಗುರುಗಳಿಗೆ ಮಠವನ್ನು ಸ್ಥಾಪಿಸಲು ನಿವೇಶನವನ್ನು ನೀಡಿದರು. ಗುರುಗಳು ಈ ಸ್ಥಳದಲ್ಲಿ ಮಠ ಸ್ಥಾಪಿಸಿ ಆಚಾರ್ಯರ ತತ್ತ್ವಗಳನ್ನು ಪ್ರಚಾರಗೊಳಿಸಿ, ವೀರಶೈವ ಧರ್ಮದ ಆಚಾರ ವಿಚಾರಗಳನ್ನು ಭಕ್ತರು ಅನುಸರಿಸುವಂತೆ ಮಾಡಿದರು. ನಂತರ ೧೯೯೬ ರಲ್ಲಿ ನೂತನ ಮಠದ ಉದ್ಘಾಟನೆಗೆ ಪಂಚಪೀಠಾಧೀಶರನ್ನು ಬರಮಾಡಿಕೊಂಡು ನೆರವೇರಿಸಿದರು. ಅಲ್ಲದೆ ಧಾರ್ಮಿಕ ಕಾರ್ಯಗಳು ವ್ಯವಸ್ಥಿತವಾಗಿ ನಡೆಯುವಂತೆ ಮಾಡಿದರು. ನಂತರ ಲೋಕೋದ್ಧಾರಕ್ಕಾಗಿ ಪಾದಯಾತ್ರೆಯನ್ನು ಕೈಗೊಂಡು ಪಂಚಪೀಠಗಳ ದರ್ಶನವನ್ನು ಮಾಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ರೇಣುಕಾಚಾರ್ಯರ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಈ ಮೂರ್ತಿಗೆ ನಿತ್ಯ ಎರಡೂ ವೇಳೆ ಪೂಜೆಯನ್ನು ನಡೆಸಲಾಗುತ್ತಿದೆ. ಪ್ರತಿವರ್ಷ ಡಿಸೆಂಬರ್ ಎಂಟರಂದು ಲಕ್ಷದೀಪೋತ್ಸವವನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಅನ್ನ ದಾಸೋಹದ ವ್ಯವಸ್ಥೆಯನ್ನು ಮಾಡಿಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಶಾಂತಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕಾಡಸಿದ್ಧೇಶ್ವರಮಠ, ಝಳಕಿ, ಇಂಡಿ ತಾ, ಬಿಜಾಪುರಜಿಲ್ಲೆ.

ತಗ್ಗಿಹಳ್ಳಿ

ಇಂಡಿ ತಾಲ್ಲೂಕಿನ ತಗ್ಗಿಹಳ್ಳಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವ ಭಾಗಕ್ಕೆ ಹದಿನೆಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ತಗ್ಗಿಹಳ್ಳಿ ಗ್ರಾಮದಲ್ಲಿ ಪುರಾತನ ಕಾಲದ ವಿರಕ್ತಮಠವು ಸ್ಥಾಪನೆಯಾಗಿ, ಇಲ್ಲಿನ ಧಾರ್ಮಿಕ ಚಟುವಟಿಕೆಯ ಕೇಂದ್ರಬಿಂದುವಾಗಿ ಬೆಳೆದಿತ್ತು. ಈ ಪುರಾತನ ಮಠದಲ್ಲಿ ಶ್ರೀ ಸಿದ್ಧಮಲ್ಲ ಸ್ವಾಮಿಗಳು ಮಠಾಧೀಶರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಇವರು ಚಿಂಚನಸೂರು ಹಿರೇಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡ ಮೇಲೆ ಮಠವು ಖಾಲಿ ಉಳಿದಿದೆ.

ವಿಳಾಸ: ಶ್ರೀ ವಿರಕ್ತಮಠ, ತಗ್ಗಿಹಳ್ಳಿ, ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ತಡವಲಗ

ಇಂಡಿ ತಾಲ್ಲೂಕಿನ ತಡವಲಗ ಗ್ರಾಮವು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಹದಿನಾಲ್ಕು ಕಿ.ಮೀ ದೂರದಲ್ಲಿದೆ.

ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ತಡವಲಗ ಗ್ರಾಮದ ಮಧ್ಯಭಾಗದಲ್ಲಿ ರಂಭಾಪುರಿ ಪೀಠದ ಶಾಖಾಮಠವಾದ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದಲ್ಲಿ ಈ ಮಠವು ಸ್ಥಾಪನೆಯಾಗಿ, ಈ ಗ್ರಾಮದ ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಾ ಧಾರ್ಮಿಕ ಸಂಸ್ಕಾರವನ್ನು ನೀಡಿತ್ತು. ಮಠದ ಪರಂಪರೆಯ ಬಗ್ಗೆ ಆಧಾರಗಳ ಕೊರತೆಯಿಂದ ಹೆಚ್ಚು ಮಾಹಿತಿಯನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ. ಈ ಹಿಂದೆ ಮಠಾಧೀಶರಾಗಿ ಆಡಳಿತ ನಡೆಸಿದ ಮಹಾ ಶಿವಪೂಜಾ ನಿಷ್ಠರಾದ ಶ್ರೀ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಮಠವು ಖಾಲಿ ಉಳಿದಿದೆ. ಪುತ್ರವರ್ಗದ ಪರಂಪರೆಯ ಈ ಮಠಕ್ಕೆ ಈಗ ಶ್ರೀ ಮಲ್ಲಿಕಾರ್ಜುನ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿ ವಿದ್ಯಾಭ್ಯಾಸಕ್ಕೆ ಕಳುಹಿಸಲಾಗಿದೆ. ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ಪೂಜೆ, ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ನಡೆಸುತ್ತಾ, ಗ್ರಾಮದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಮಲ್ಲಿಕಾರ್ಜುನ ದೇವರು, ಶ್ರೀ ಹಿರೇಮಠ, ತಡವಲಗ, ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ತದ್ದೇವಾಡಿ

ಇಂಡಿ ತಾಲ್ಲೂಕಿನ ತದ್ದೇವಾಡಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ವಾಯುವ್ಯ ಭಾಗಕ್ಕೆ ಮೂವತ್ತೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ತದ್ದೇವಾಡಿ ಗ್ರಾಮವು ಕರ್ನಾಟಕದ ಗಡಿಭಾಗದಲ್ಲಿದ್ದು ವೀರಶೈವ ಧರ್ಮದ ಬೆಳವಣಿಗೆಗೆ ಹೆಚ್ಚು ಪ್ರೋತ್ಸಾಹ ನೀಡಿದೆ. ಈ ಗ್ರಾಮದ ಮಧ್ಯಭಾಗದಲ್ಲಿ ಉಜ್ಜಯಿನಿ ಪೀಠದ ಶ್ರೀ ಹಿರೇಮಠವು ಪುರಾತನ ಕಾಲದಲ್ಲಿ ಸ್ಥಾಪನೆಯಾಗಿ, ವೀರಶೈವ ಧರ್ಮ ಪ್ರಬಲವಾಗಿ ಬೆಳೆಯಲು ಸಹಾಯಕವಾಗಿದೆ. ಸಾವಿರ ವರ್ಷಗಳ ಪುರಾತನ ಇತಿಹಾಸವಿರುವ ಈ ಮಠವನ್ನು ಶ್ರೀ ಮುಕ್ತಿಮುನಿ ಶಿವಾಚಾರ್ಯ ಸ್ವಾಮಿಗಳು ಸ್ಥಾಪಿಸಿದರೆಂದು ಹೇಳಲಾಗುತ್ತಿದೆ.

ಮಠ ಸ್ಥಾಪನೆ: ಶ್ರೀ ಮುಕ್ತಿಮುನಿ ಶಿವಾಚಾರ್ಯ ಸ್ವಾಮಿಗಳು ಮಹಾರಾಷ್ಟ್ರದ ದಕ್ಷಿಣ ಸೋಲಾಪುರದ ಮಂದ್ರೂಪದಲ್ಲಿ ಮೂಲ ಮಠವನ್ನು ಸ್ಥಾಪಿಸಿ, ಒಡಕಬಾಳ, ಹೊನ್ನಮುರುಗಿ, ಹತ್ತರಸಂಘ ಹಾಗೂ ತದ್ದೇವಾಡಿ ಎಂಬ ನಾಲ್ಕು ಗ್ರಾಮಗಳಲ್ಲಿ ಮಠಗಳನ್ನು ಸ್ಥಾಪಿಸಿ, ವೀರಶೈವ ಧರ್ಮ ಪ್ರಬಲವಾಗಿ ಬೆಳೆಯುವಂತೆ ಮಾಡಿದರು.ನಂತರ ಗುರುಗಳು ಲೋಕಸಂಚಾರ ಕೈಗೊಂಡು ಧರ್ಮ ಪ್ರಚಾರ ಮಾಡಿದರು. ಅಲ್ಲದೆ ಈ ನಾಲ್ಕು ಗ್ರಾಮಗಳಲ್ಲಿ ಅನುಷ್ಠಾನ ಕೈಗೊಂಡು ಅನೇಕ ಪವಾಡಗಳನ್ನು ಮಾಡಿ ಭಕ್ತರನ್ನು ಉದ್ಧರಿಸಿದ್ದಾರೆ. ಗುರುಗಳು ಮಂದ್ರೂಪದಲ್ಲಿ ಲಿಂಗೈಕ್ಯರಾಗಿದ್ದಾರೆ.

ಪರಂಪರೆ: ಕರ್ತೃಗುರುಗಳಾದ ಶ್ರೀ ಮುಕ್ತಿಮುನಿ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು, ನಂತರ ಶ್ರೀ ಗುರುಮೂರ್ತಿ ಶಿವಾಚಾರ್ಯ ಸ್ವಾಮಿಗಳು ಎಂಬ ಎರಡೇ ಹೆಸರುಗಳು ಮಠದ ಪರಂಪರೆಯ ಮೂವತ್ತು ಜನ ಗುರುಗಳಿಗೆ ಪುನರಾವರ್ತನೆಯಾಗಿ ಅಭಿದಾನಗೊಂಡಿವೆಯೆಂದು ಹೇಳಲಾಗುತ್ತಿದೆ. ಈಗಿನ ಶ್ರೀ ಗುರುಮೂರ್ತಿ ಶಿವಾಚಾರ್ಯ ಸ್ವಾಮಿಗಳು ಸೇರಿದಂತೆ ಮಠದ ಪರಂಪರೆಯಲ್ಲಿ ಒಟ್ಟು ಮೂವತ್ತೊಂದು ಜನ ಗುರುಗಳು ಅಧಿಕಾರ ನಡೆಸಿದ್ದಾರೆಂದು ಹೇಳಲಾಗುತ್ತಿದೆ. ಇದಕ್ಕೆ ಪೂರಕವೆಂಬಂತೆ ತದ್ದೇವಾಡಿಯಲ್ಲಿ ಎರಡು ಜನ ಗುರುಗಳ ಗದ್ದುಗೆಗಳು ಹಾಗೂ ಮೂಲ ಮಠ ಮಂದ್ರೂಪದಲ್ಲಿ ಇಪ್ಪತ್ತೆಂಟು ಗದ್ದುಗೆಗಳು ಸ್ಥಾಪನೆಯಾಗಿವೆ.

ಹಿಂದಿನ ಗುರುಗಳಾದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ೧೯೬೧ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಹಿರಿಯ ಗುರುಗಳು ಲಿಂಗೈಕ್ಯರಾಗುವ ಒಂದು ವರ್ಷಕ್ಕೆ ಮೊದಲು ಶ್ರೀ ಗುರುಮೂರ್ತಿಶಿವಾಚಾರ್ಯ ಸ್ವಾಮಿಗಳಿಗೆ (೧೯೬೦)ಪಟ್ಟಾಧಿಕಾರವನ್ನು ನೀಡಿದ್ದಾರೆ. ಈಗಿನ ಶ್ರೀ ಗುರುಮೂರ್ತಿ ಶಿವಾಚಾರ್ಯ ಸ್ವಾಮಿಗಳು ತದ್ದೇವಾಡಿಯ ಶ್ರೀ ನಾಗಲೋಟಯ್ಯ ಮತ್ತು ಶ್ರೀಮತಿ ಬಸಮ್ಮನವರ ಪುತ್ರರಾಗಿ ೧೯೫೧ರಲ್ಲಿ ಜನಿಸಿದರು. ಇವರು ತದ್ದೇವಾಡಿ, ಉಜ್ಜಯಿನಿಪೀಠ, ಬೆಂಗಳೂರು

ಹಾಗೂ ಹರಪನಹಳ್ಳಿಯಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ, ೧೯೭೪ರಲ್ಲಿ ಮಠಕ್ಕೆ ಆಗಮಿಸಿ ಆಡಳಿತವನ್ನು ವಹಿಸಿಕೊಂಡರು.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಎರಡು ಗದ್ದುಗೆಗಳಿಗೆ ಪೂಜೆ, ಮಹಾಶಿವರಾತ್ರಿಯಲ್ಲಿ ಲಿಂಗದೀಕ್ಷೆ, ಭಜನೆ, ಜಾಗರಣೆ, ಪ್ರವಚನಗಳು ನಡೆಯುತ್ತಿವೆ. ಶ್ರಾವಣ ಶುದ್ಧ ನವಮಿಯಲ್ಲಿ ಹಿರಿಯ ಗುರುಗಳಾದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆ ಕಾರ್ಯಕ್ರಮ ನಡೆಯುತ್ತಿದೆ. ಶಾಲೆಗಳ ರಜೆಯ ಸಂದರ್ಭದಲ್ಲಿ ಮಠದಲ್ಲಿ ವೈದಿಕ ಶಿಕ್ಷಣವನ್ನು ಮಾಡಲಾಗುತ್ತಿದೆ. ೧೯೮೬ ರಲ್ಲಿ ಹನ್ನೊಂದು ಹಳ್ಳಿಗಳಲ್ಲಿ ಪಾದಯಾತ್ರೆ ಮಾಡಿ, ಧರ್ಮೋಪದೇಶ ಕಾರ್ಯಕ್ರಮ ವನ್ನು ಮಾಡಲಾಗಿದೆ.

ವಿಳಾಸ: ಷ.ಬ್ರ.ಶ್ರೀ ಗುರುಮೂರ್ತಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ತದ್ದೇವಾಡಿ, ಇಂಡಿ ತಾ, ಬಿಜಾಪುರ ಜಿಲ್ಲೆ.

ನಾದ-ಲಾಳಸಂಗಿ

ಇಂಡಿ ತಾಲ್ಲೂಕಿನ ನಾದ-ಲಾಳಸಂಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವ ಭಾಗಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಈ ಎರಡು ಗ್ರಾಮಗಳಲ್ಲಿ ಒಂದೇ ಪರಂಪರೆಯ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ನಾದ-ಲಾಳಸಂಗಿ ಗ್ರಾಮಗಳಲ್ಲಿ ಹದಿನಾರನೆಯ ಶತಮಾನದ ಪೂರ್ವಾರ್ಧದಲ್ಲಿ ಶ್ರೀ ಅಜಾತ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟ ಹಿರೇಮಠವು ಈ ಗ್ರಾಮದಲ್ಲಿ ಅಸ್ತಿತ್ವದಲ್ಲಿದೆ. ಪುತ್ರವರ್ಗದ ಪರಂಪರೆಯ, ಉಜ್ಜಯಿನಿ ಪೀಠದ ಶಾಖಾ ಮಠವಾದ ಹಿರೇಮಠವು ಈ ಗ್ರಾಮದ ಧಾರ್ಮಿಕ ಚಟುವಟಿಕೆಯ ಕೇಂದ್ರವಾಗಿ ಬೆಳೆದಿದೆ. ಶ್ರೀ ಅಜಾತ ಶಿವಾಚಾರ್ಯ ಸ್ವಾಮಿಗಳು ಲೋಕಸಂಚಾರ ಮಾಡುತ್ತಾ ಅಲಮೇಲು, ಸಾಲೋಟಗಿ ಮುಂತಾದ ಕಡೆಗಳಲ್ಲಿ ನೆಲೆ ನಿಂತು, ಲಾಳಸಂಗಿಗೆ ಬಂದು ಮಠವನ್ನು ಸ್ಥಾಪಿಸಿದ್ದಾರೆ. ಇಲ್ಲಿ ಅನೇಕ ಪವಾಡಗಳನ್ನು ಮಾಡಿ ಭಕ್ತರನ್ನು ಉದ್ಧರಿಸಿದ್ದಾರೆ. ಉತ್ತರಾಧಿ ಕಾರಿಗಳನ್ನು ನೇಮಿಸಿ ಲಿಂಗೈಕ್ಯರಾಗಿದ್ದಾರೆ.

ಪರಂಪರೆ:

೧. ಷ.ಬ್ರ.ಶ್ರೀ ಅಜಾತ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಗುಡೀರಪ್ಪ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಶಿವಲಿಂಗ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಪರ್ವತೇಶ್ವರ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಸಂಗಮೇಶ್ವರ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಶಿವಾನಂದ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ಅಜಾತ ಶಿವಾಚಾರ್ಯ ಸ್ವಾಮಿಗಳು ಲಾಳಸಂಗಿಯಲ್ಲಿ ಲಿಂಗೈಕ್ಯರಾದ ಮೇಲೆ ಶ್ರೀ ಗುಡೀರಪ್ಪ ಶಿವಾಚಾರ್ಯ ಸ್ವಾಮಿಗಳು, ಶ್ರೀ ಶಿವಲಿಂಗಶಿವಾಚಾರ್ಯ ಸ್ವಾಮಿಗಳು, ಶ್ರೀಪರ್ವತೇಶ್ವರ ಶಿವಾಚಾರ್ಯ ಸ್ವಾಮಿಗಳು ಮತ್ತು ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಲಾಳಸಂಗಿಯಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸಿ ಮಠವನ್ನು ಬೆಳೆಸಿದರು. ನಂತರ ಅಧಿಕಾರಕ್ಕೆ ಬಂದ ಶ್ರೀ ಸಂಗಮೇಶ್ವರ ಶಿವಾಚಾರ್ಯ ಸ್ವಾಮಿಗಳು ಲಾಳಸಂಗಿಯಿಂದ ನಾದಕ್ಕೆ ಮಠದ ಆಡಳಿತವನ್ನು ವರ್ಗಾಯಿಸಿ, ಮಠವನ್ನು ಅಭಿವೃದ್ಧಿಪಡಿಸಿದರು. ಇವರು ಲೋಕಕಲ್ಯಾಣಕ್ಕಾಗಿ ಹಾಗೂ ಶಾಂತಿ ಸಹಬಾಳ್ವೆಗಾಗಿ ಮಠವನ್ನು ಬೆಳೆಸಿದರು. ಗುರುಗಳು ವಾಕ್‌ಸಿದ್ಧಿ ಪುರುಷರಾಗಿ, ಭಕ್ತೋದ್ಧಾರದ ಕಾರ್ಯವನ್ನು ಮಾಡಿ ೧೯೬೮ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ೧೯೬೮ರಲ್ಲಿ ಉಜ್ಜಯಿನಿ ಪೀಠದ ಜಗದ್ಗುರುಗಳ ಸಮ್ಮುಖದಲ್ಲಿ ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದಾರೆ. ಗುರುಗಳು ಶ್ರೀ ಮುಳಯ್ಯ ಮತ್ತು ಶ್ರೀಮತಿ ಪಾರ್ವತಿ ಇವರ ಪುತ್ರರಾಗಿ ಜನಿಸಿ, ಧಾರವಾಡ, ಶಿವಯೋಗ ಮಂದಿರ, ಧಾರವಾಡದಲ್ಲಿ ವಿದ್ಯಾಭ್ಯಾಸವನ್ನು ಮಾಡಿ ಸ್ನಾತಕೋತ್ತರ ಪದವಿಯನ್ನು ಪಡೆದು ಮಠದ ಆಡಳಿತವನ್ನು ವಹಿಸಿಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಪುರಾತನ ಕಾಲದ ಗವಿಯು ನಿರ್ಮಾಣಗೊಂಡಿದೆ. ಇದರಲ್ಲಿ ಈ ಮಠದ ಮಠಾಧೀಶರೆಲ್ಲಾ ಅನುಷ್ಠಾನಕೈಗೊಂಡು ಸಾಧನೆಯ ಸಿದ್ಧಿಯನ್ನು ಪಡೆದುಕೊಂಡಿದ್ದಾರೆ. ಮಠದ ಆವರಣದಲ್ಲಿ ಪುರಾತನ ಕಾಲದ ಒಂದು ಬಾವಿ ಹಾಗೂ ಶ್ರೀ ಸಂಗಮೇಶ್ವರ ಶಿವಾಚಾರ್ಯ ಸ್ವಾಮಿಗಳ ಗದ್ದುಗೆ ಇದ್ದು, ಇವು ಮಠದ ಕೇಂದ್ರಬಿಂದು ವಾಗಿವೆ. ಅಲ್ಲದೆ ಲಾಳಸಂಗಿಯಲ್ಲಿ ಐದು ಗದ್ದುಗೆಗಳು ಸ್ಥಾಪನೆಗೊಂಡಿವೆ. ಈ ಗದ್ದುಗೆಗಳಿಗೆ ನಿತ್ಯ ಪೂಜೆ ಹಾಗೂ ಶ್ರೀ ಸಂಗಮೇಶ್ವರ ಶಿವಾಚಾರ್ಯ ಸ್ವಾಮಿಗಳ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಈಗಿನ ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ೧೯೯೮ ರಲ್ಲಿ ಮಠದ ಗವಿಯಲ್ಲಿ ದೀರ್ಘಾನುಷ್ಠಾನವನ್ನು ಕೈಗೊಂಡಿದ್ದರು. ಈಗಿನ ಗುರುಗಳು ಧಾರ್ಮಿಕ ನಿಷ್ಠರಾಗಿ ಸಮಾಜವನ್ನು ಧಾರ್ಮಿಕ ತಳಹದಿಯ ಮೇಲೆ ಬೆಳೆಸುವ ಹಂಬಲವನ್ನು ಇಟ್ಟುಕೊಂಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಚಿಕ್ಕನಾದ-ಲಾಳಸಂಗಿ, ಇಂಡಿ ತಾ, ಬಿಜಾಪುರ ಜಿಲ್ಲೆ.
ಆಧಾರ: 'ಶ್ರೀ ಹಿರೇಮಠದ ಸುಚರಿತ್ರೆ,'ಲೇಖಕರು: ವಿ.ವಿ. ವಿರಕ್ತಮಠ

ಬರಡೋಲ

ಇಂಡಿ ತಾಲ್ಲೂಕಿನ ಬರಡೋಲ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಮುಪ್ಪಿನಾರ್ಯ ಹಿರೇಮಠವು ಅಸ್ತಿತ್ವದಲ್ಲಿದೆ.

ಮುಪ್ಪಿನಾರ್ಯ ಹಿರೇಮಠ: ಬರಡೋಲ ಗ್ರಾಮದಲ್ಲಿ ಉಜ್ಜಯಿನಿ ಪೀಠದ ಶಾಖಾ ಮಠವಾದ ಶ್ರೀ ಮುಪ್ಪಿನಾರ್ಯ ಹಿರೇಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದ ಈ ಮಠವು ಶ್ರೀ ಮುಪ್ಪಿನಾರ್ಯ ಸ್ವಾಮಿಗಳಿಂದ ಸ್ಥಾಪಿತವಾಗಿರುವ ಕಾರಣಕ್ಕೆ ಶ್ರೀಮುಪ್ಪಿ ನಾರ್ಯಮಠ ಎಂದು ಪಡೆದಿದೆ. ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದು ಬಂದಿರುವ ಈ ಮಠದಲ್ಲಿ ಒಟ್ಟುಹತ್ತೊಂಬತ್ತು ಜನ ಗುರುಗಳು ಅಧಿಕಾರ ನಡೆಸಿದ್ದಾರೆಂದು ಹೇಳಲಾಗುತ್ತಿದೆ. ಬರಡೋಲಾದಲ್ಲಿ ಈ ಮಠವು ಸ್ಥಾಪನೆಯಾಗುವ ಮೊದಲು ಮಹಾರಾಷ್ಟ್ರದ ಜಿಗಜೇವಣಿಯಲ್ಲಿ ಅಸ್ತಿತ್ವದಲ್ಲಿತ್ತೆಂದೂ ಶ್ರೀಮುಪ್ಪಿನಾರ್ಯರ ಕಾಲದಲ್ಲಿ ಜಿಗಜೇವಣಿಯಿಂದ ಇಲ್ಲಿಗೆ ಸ್ಥಳಾಂ ತರಗೊಂಡಿದೆ ಎಂದೂ ಹೇಳಲಾಗುತ್ತಿದೆ. ಮಠದ ಪರಂಪರೆಯಲ್ಲಿ ಬಂದಂತಹ ಗುರುಗಳ ಹೆಸರನ್ನು ದಾಖಲಿಸಲಾಗಿಲ್ಲ.ಆದರೆ ಜಿಗಜೇವಣಿ ಮಠದಲ್ಲಿ ಹನ್ನೊಂದು ಗದ್ದುಗೆಗಳು ಹಾಗೂ ಬರಡೋಲ ಮಠದಲ್ಲಿ ಏಳು ಗದ್ದುಗೆಗಳನ್ನು ನೋಡಬಹುದಾಗಿದೆ.

ಹಿರಿಯ ಗುರುಗಳಾದ ಶ್ರೀ ಮುಪ್ಪಿನೇಶ್ವರ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಶ್ರೀ ಮಲ್ಲಿಕಾರ್ಜುನ ದೇವರು ಉತ್ತರಾಧಿಕಾರಿಯಾಗಿ ನೇಮಕಗೊಂಡಿದ್ದಾರೆ. ಗುರುಗಳು ನೇಮಕಗೊಂಡ ಮೇಲೆ ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಾ ಮಠದ ಪರಂಪರೆಯ ಗದ್ದುಗೆಗಳಿಗೆ ಪೂಜೆ, ಹಿರಿಯ ಗುರುಗಳ ಪುಣ್ಯಾರಾಧನೆ ಕಾರ್ಯಕ್ರಮವನ್ನು ನಡೆಸುತ್ತಾ ಬರುತ್ತಿದ್ದಾರೆ. ಅಲ್ಲದೆ ಭಕ್ತರಿಗೆ ಧಾರ್ಮಿಕ ಉಪದೇಶವನ್ನು ನೀಡಿ ವೀರಶೈವ ಧರ್ಮವನ್ನು ಬೆಳೆಸುತ್ತಿದ್ದಾರೆ.

ವಿಳಾಸ:ಷ.ಬ್ರ.ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು, ಶ್ರೀ ಮುಪ್ಪಿನಾರ್ಯಹಿರೇಮಠ, ಬರಡೋಲ,ಇಂಡಿ ತಾ, ಬಿಜಾಪುರಜಿಲ್ಲೆ.

ಬಂಥನಾಳು

ಇಂಡಿ ತಾಲ್ಲೂಕಿನ ಬಂಥನಾಳು ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಶ್ರೀ ವೃಷಭಲಿಂಗೇಶ್ವರ ಸಂಸ್ಥಾನ ಮಠವು ಸ್ಥಾಪನೆಯಾಗಿ ಧಾರ್ಮಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಕೇಂದ್ರ ಬಿಂದುವಾಗಿ ಬೆಳೆದಿದೆ.

ವೃಷಭಲಿಂಗೇಶ್ವರ ಸಂಸ್ಥಾನಮಠ: ಬಂಥನಾಳು ಗ್ರಾಮದಲ್ಲಿ ಶ್ರೀ ವೃಷಭಲಿಂಗೇಶ್ವರ ಸಂಸ್ಥಾನ ಮಠವು ಸ್ಥಾಪನೆಯಾಗಿದೆ. ಬಸವಕಲ್ಯಾಣದ ಸಮೀಪದ ನಿಲುವಂಗಿ ಗ್ರಾಮದ ಶ್ರೀ ಶಿವಪ್ರಭು ಮತ್ತು ಶ್ರೀಮತಿ ನೀಲಾಂಬೆಯವರ ಪುತ್ರರಾಗಿಜನಿಸಿದ ಶ್ರೀ ಬಸವಲಿಂಗ ಸ್ವಾಮಿಗಳು ಸಂಸಾರದ ನಂಟನ್ನು ತೊರೆದು ಆಧ್ಯಾತ್ಮವನ್ನು ಅರಸುತ್ತಾ, ಬಂಥನಾಳು ಗ್ರಾಮಕ್ಕೆ ಬಂದು ನೆಲೆಸಿ, ೧೭೩೦ರಲ್ಲಿ ಮಠವನ್ನು ಸ್ಥಾಪನೆ ಮಾಡಿರುತ್ತಾರೆ. ಶ್ರೀ ಬಸವಲಿಂಗ ಶಿವಯೋಗಿಗಳು ಸ್ಥಾಪಿಸದ ಮಠಕ್ಕೆ ಮೊದಲ

ಗುರುಗಳಾಗಿ ಅಧಿಕಾರ ವಹಿಸಿಕೊಂಡು ಶ್ರೀ ವೃಷಭಲಿಂಗಾರ್ಯಶಿವಯೋಗಿಗಳೆಂದು ಅಭಿದಾನ ಪಡೆದು ಪ್ರಖ್ಯಾತ ಗೊಂಡರು.

ಪರಂಪರೆ:
೧. ಶ್ರೀ ವೃಷಭಲಿಂಗಾರ್ಯ ಶಿವಯೋಗಿಗಳು
೨. ಶ್ರೀ ಶಂಕರಲಿಂಗ ಶಿವಯೋಗಿಗಳು
೩. ಶ್ರೀ ಚನ್ನಬಸವ ಶಿವಯೋಗಿಗಳು
೪. ಶ್ರೀ ಮ.ನಿ.ಪ್ರ. ಸಂಗನಬಸವ ಶಿವಯೋಗಿಗಳು
೫. ಶ್ರೀ ಮ.ನಿ.ಪ್ರ. ವೃಷಭಲಿಂಗ ಶಿವಯೋಗಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ವೃಷಭಲಿಂಗಾರ್ಯ ಶಿವಯೋಗಿಗಳು ಮಠವನ್ನು ಸ್ಥಾಪಿಸಿ ಪ್ರಸಿದ್ಧಿಗೆ ತಂದರು. ನಂತರ ಶ್ರೀ ಶಂಕರಲಿಂಗ ಶಿವಯೋಗಿಗಳು ಅಧಿಕಾರ ವಹಿಸಿಕೊಂಡ ಮೇಲೆ ಭವ್ಯ ಕಟ್ಟಡ ರೂಪುಗೊಂಡಿತು. ಇವರ ಕಾಲದಲ್ಲಿ ಧಾರ್ಮಿಕ ಆಚರಣೆಗಳು ಹಾಗೂ ಅನ್ನದಾಸೋಹ ನಿರಂತರವಾಗಿ ನಡೆಯತೊಡಗಿ ಮಠವು ಸಮಾಜಮುಖಿಯಾಗಿ ಬೆಳೆಯಿತು. ಇವರ ನಂತರ ಅಧಿಕಾರಕ್ಕೆ ಬಂದ ಶ್ರೀ ಚನ್ನಬಸವ ಶಿವಯೋಗಿಗಳು ಸಹ ಮಠವನ್ನು ಸುಕ್ಷೇತ್ರವನ್ನಾಗಿ ಮಾಡಿ ಲಿಂಗೈಕ್ಯರಾದರು. ೧೯೧೬ರಲ್ಲಿ ಶ್ರೀ ಸಂಗನಬಸವ ಶಿವಯೋಗಿಗಳು ಈ ಮಠದ ಅಧಿಕಾರವನ್ನು ವಹಿಸಿಕೊಂಡರು.

ಮಹಾ ಸಾಧಕರು: ಶ್ರೀ ಸಂಗನಬಸವ ಸ್ವಾಮಿಗಳು ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ ಮಸೂತಿಯಲ್ಲಿ ಶ್ರೀ ಪರೂತಯ್ಯ ಮತ್ತು ಶ್ರೀಮತಿ ಗೌರಾಂಬೆಯವರ ಪುತ್ರರಾಗಿ ೧೯೦೦ನೆಯ ಜುಲೈ ಇಪ್ಪತ್ತೇಳರಂದು ಜನಿಸಿದರು. ಬಡತನದ ಕುಟುಂಬದಲ್ಲಿ ಜನಿಸಿದ ಶ್ರೀ ಸಂಗನಬಸವ ಸ್ವಾಮಿಗಳು ಧಾರ್ಮಿಕ ಸಂಸ್ಕಾರದಿಂದ ಬೆಳೆದು ಗುರು-ಹಿರಿಯರ ಪ್ರಶಂಸೆಗೆ ಪಾತ್ರರಾಗಿ ಯರನಾಳು ವಿರಕ್ತ ಮಠದ ಶ್ರೀ ಪಂಪಾಪತಿ ಶಿವಾಚಾರ್ಯ ಸ್ವಾಮಿಗಳ ಕೃಪಾಶೀರ್ವಾದಕ್ಕೆ ಒಳಗಾದರು. ನಂತರ ಬಬಲೇಶ್ವರದ ಶ್ರೀ ಶಾಂತವೀರ ಶಿವಯೋಗಿಗಳ ಮಾರ್ಗದರ್ಶನದಲ್ಲಿ ವಿದ್ಯಾಬುದ್ಧಿ ಕಲಿತು, ಚಿಕ್ಕ ವಯಸ್ಸಿನಲ್ಲಿಯೇ ಅಪಾರ ಜ್ಞಾನವನ್ನು ಸಂಪಾದಿಸಿಕೊಂಡರು. ಇವರ ವಿದ್ವತ್ತಿಗೆ ಮನಸೋತ ಯರನಾಳು ಶ್ರೀ ಪಂಪಾಪತಿ ಸ್ವಾಮಿಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡರು. ಆದರೆ ಬಂಥನಾಳು ಶಿವಧೂತರಾದ ಶ್ರೀ ಚನ್ನಬಸವ ಸ್ವಾಮಿಗಳ ಆಕರ್ಷಣೆಗೆ ಒಳಗಾಗಿ ಗುರುಗಳು ಲಿಂಗೈಕ್ಯರಾದ ಮೇಲೆ ಶ್ರೀ ಸಂಗನಬಸವ ಸ್ವಾಮಿಗಳು ಬಂಥನಾಳಕ್ಕೆ ಬಂದು ನೆಲೆಸಿ, ಮಠದ ಉತ್ತರಾಧಿಕಾರಿಯಾಗಿ ನೇಮಕಗೊಂಡು ಮಠವನ್ನು ಬೆಳೆಸಿದರು.

ಗುರುಗಳು ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ನಿತ್ಯ ಧರ್ಮೋಪದೇಶ, ಅನ್ನಸಂತರ್ಪಣೆ ಕಾರ್ಯ ನಿರಂತರವಾಗಿ ನಡೆಯತೊಡಗಿತು. ಗುರುಗಳ ತಪೋಶಕ್ತಿಗೆ ಹಾಗೂ ವಿದ್ವತ್ತಿಗೆ ಮಣಿದ ಭಕ್ತರು ಸಂಸ್ಕಾರವನ್ನು ಮೈಗೂಡಿಸಿ ಕೊಂಡರು. ಗುರುಗಳು ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ಅಘಾದವಾದುದ್ದನ್ನು ಸಾಧಿಸಿ ನಾಡಿನ ಹಿರಿಯ ಗುರುಗಳು ಮೆಚ್ಚುವಂತೆ ಬದುಕಿದರು. ಮಸುಬಿನಾಳು ಮಠದ ಗುರುಗಳಾದ ಶ್ರೀ ಶಿವಾನಂದ ಶಿವಯೋಗಿಗಳ ಜೊತೆಯಲ್ಲಿ ನಾಡಿನ ಧರ್ಮ ಕ್ಷೇತ್ರ ಗಳನ್ನು ಸಂಚರಿಸಿ, ಮಸುಬಿನಾಳಿನಲ್ಲಿ ದೀರ್ಘ ಅನುಷ್ಠಾನ ಕುಳಿತು ಸಾಧನೆಯ ಸಿದ್ಧಿಯನ್ನು ಪಡೆದುಕೊಂಡರು. ಮಸುಬಿ ನಾಳಿನ ಶ್ರೀ ಶಿವಾನಂದ ಶಿವಯೋಗಿಗಳ ಜೊತೆ ಮಹಾತ್ಮ ಗಾಂಧೀಜಿಯವರ ಅಹಿಂಸಾತ್ಮಕ ಚಳುವಳಿಗೆ ಸ್ಪಂದಿಸಿ ಧರ್ಮಗುರು ಗಳಾಗಿ ತಮ್ಮ ಭಕ್ತರಲ್ಲಿ ದೇಶಪ್ರೇಮ ಪುಟಿದೇಳುವಂತೆ ಮಾಡಿದರು. ಶ್ರೀ ಸಂಗನಬಸವ ಸ್ವಾಮಿಗಳು ದೇಶದ ಸ್ವಾತಂತ್ರ್ಯಕ್ಕಾಗಿ ನಡೆಸುತ್ತಿದ್ದ ಚಟುವಟಿಕೆಗ ಳನ್ನು ಗಮನಿಸಿ ಕರ್ನಾಟಕದ ಗಾಂಧಿಯೆಂದು ಹೆಸರಾಗಿದ್ದ ಹರ್ಡೇಕರ್ ಮಂಜಪ್ಪನವರು ಬಂಥನಾಳಕ್ಕೆ ಬಂದು ಗುರುಗಳ ಕೃಪಾಶೀರ್ವಾದದಿಂದ ಸ್ವಾತಂತ್ರ್ಯ ಚಳವಳಿಯಲ್ಲಿ ಯುವಕರನ್ನು ಹುರಿದುಂಬಿಸಿ ಸ್ವಾತಂತ್ರ್ಯ ಚಳವಳಿಯ ಕಹಳೆಯನ್ನು ಊದಿದರು. ಈ ರೀತಿ ಧರ್ಮಗುರುವಾಗಿದ್ದು, ಸಾಮಾಜಿಕ ಕಲ್ಯಾಣದ ಚಿಂತನೆಯನ್ನು ಮಾಡಿದರು. ಬಸವ ತತ್ತ್ವವನ್ನು ಸಮರ್ಥವಾಗಿ ನಾಡಿನಲ್ಲಿ ಪ್ರಚಾರಪಡಿಸಿ ಶರಣರು ಕಂಡ ಸಮಾಜವನ್ನು ರೂಪಿಸುವಲ್ಲಿ ಶ್ರಮಿಸಿದರು.

ಬಿಜಾಪುರ ನಗರದಲ್ಲಿ ಶ್ರೀ ಸಂಗನಬಸವ ಶಿವಯೋಗಿಗಳು ಸಿದ್ಧೇಶ್ವರ ಸಂಸ್ಥೆಯ ಆವರಣದಲ್ಲಿ ಪ್ರಥಮವಾಗಿ ಶಿವಾನುಭವ ಮಂಟಪ ಪೂಜೆಯನ್ನು ಪ್ರಾರಂಭಿಸಿ, ಪುರಾಣ ಪ್ರವಚನವನ್ನು ಪ್ರಾರಂಭಿಸಿದರು. ನಂತರ ಗುರುಗಳು ೭೭೧

ಶಿವಾನುಭವ ಮಂಟಪ ಪೂಜೆಯನ್ನು ನಾಡಿನಾದ್ಯಂತ ಆಚರಿಸಿ ಧರ್ಮ ಜಾಗೃತಗೊಳ್ಳುವಂತೆ ಮಾಡಿದರು. ಅಲ್ಲದೆ ಸಿದ್ಧೇಶ್ವರ ಸಂಸ್ಥೆಯ ಪ್ರಗತಿಗೆ ಆಶೀರ್ವದಿಸಿ ಬೆಳೆಸಿಗರು.

೧೯೫೫ ರಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರಾಗಿ ನೇಮಕಗೊಂಡು ಧರ್ಮದ ಸಂಘಟನೆಗೆ ದುಡಿದರು. ಗುರುಗಳು ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಮಠವು ಶ್ರೀಮಂತಗೊಳ್ಳಲು ಕಾರಣಕರ್ತರಾದರು. ಗುರುಗಳು ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ದುಡಿದು ಸಮಾಜವನ್ನು ಬೆಳೆಸಿದರು. ಇವರು ೧೯೬೫ ರಲ್ಲಿ ಶ್ರೀ ವೃಷಭಲಿಂಗ ಸ್ವಾಮಿಗಳನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಕಮಾಡಿಕೊಂಡು ಬಾಲಶಿವಯೋಗಿ ಶ್ರೀ ವೃಷಭಲಿಂಗ ಸ್ವಾಮಿಗಳಿಗೆ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಮತ್ತು ಆಧ್ಯಾತ್ಮ ಶಿಕ್ಷಣವನ್ನು ನೀಡಿ ಸಂಸ್ಕಾರವಂತ ವಟುವನ್ನಾಗಿ ಬೆಳೆಸಿದರು.

ಶಿವಯೋಗ ಮಂದಿರ ಮತ್ತು ಹುಬ್ಬಳ್ಳಿಯಲ್ಲಿ ಧಾರ್ಮಿಕ ಮತ್ತು ಲೌಕಿಕ ಶಿಕ್ಷಣವನ್ನು ಪಡೆದು ಮಠಕ್ಕೆ ಆಗಮಿಸಿದ ಶ್ರೀ ವೃಷಭಲಿಂಗ ಶಿವಯೋಗಿಗಳು ೧೯೭೧ ರಲ್ಲಿ ಹಿರಿಯ ಗುರುಗಳಾದ ಶ್ರೀ ಸಂಗನಬಸವ ಸ್ವಾಮಿಗಳ ಕೃಪಾಶೀರ್ವಾದದಿಂದ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಶ್ರೀ ವೃಷಭಲಿಂಗ ಶಿವಯೋಗಿಗಳು ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡು ಹಿರಿಯ ಗುರುಗಳ ಸನ್ಮಾರ್ಗದಲ್ಲಿ ಮಠವನ್ನು ಮುನ್ನಡೆಸಿದರು. ತಮ್ಮ ಉತ್ತರಾಧಿಕಾರಿ ಸಮರ್ಥವಾಗಿ ಮಠವನ್ನು ಮುನ್ನಡೆಸಿ ಕೊಂಡು ಹೋಗಬಹುದೆಂದು ಮನವರಿಕೆಯಾದ ಮೇಲೆ ತಮ್ಮ ವಿಶ್ರಾಂತ ಜೀವನವನ್ನು ನಡೆಸತೊಡಗಿ ೧೯೭೨ ರ ಮೇ ಆರರಂದು ಲಿಂಗೈಕ್ಯರಾದರು. ಈಗಿನ ಮಠಾಧ್ಯಕ್ಷರಾದ ಶ್ರೀ ವೃಷಭಲಿಂಗ ಸ್ವಾಮಿಗಳು ಮಠವನ್ನು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕವಾಗಿ ಹೆಚ್ಚು ಅಭಿವೃದ್ಧಿಪಡಿಸಿ ನಾಡಿನ ಪ್ರಮುಖ ಮಠಗಳ ಸಾಲಿಗೆ ಸೇರುವಂತೆ ಮಾಡಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ವೃಷಭಲಿಂಗ ಶಿವಯೋಗಿಗಳು, ಶ್ರೀ ವೃಷಭಲಿಂಗೇಶ್ವರಸಂಸ್ಥಾನಮಠ,ಬಂಥನಾಳು, ಇಂಡಿ ತಾ, ಬಿಜಾಪುರಜಿಲ್ಲೆ.
ಆಧಾರ: 'ಭಕ್ತಾನುರಾಗಿ ಬಂಥನಾಳ ಶಿವಯೋಗಿ ', ಸಂಪಾದಕರು : ಶ್ರೀ ಈಶ್ವರ ಚಂದ್ರ ಚಿಂತಾಮಣಿ

ರೋಡಗಿ

ಇಂಡಿ ತಾಲ್ಲೂಕಿನ ರೋಡಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಇಪ್ಪತ್ತೆಂಟು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಪುರಾತನ ಕಾಲದಿಂದಲೂ ವೀರಶೈವ ಧರ್ಮ ಪ್ರಬಲವಾಗಿ ಬೆಳೆದಿದೆ. ಇದಕ್ಕೆ ಸಾಕ್ಷಿ ಎಂಬಂತೆ ಶ್ರೀಸಾವಳಗಿ ಶಿವಲಿಂಗೇಶ್ವರ ವಿರಕ್ತಮಠ, ಶ್ರೀ ಗಚ್ಚಿನಮಠ ಮತ್ತು ಶ್ರೀ ಹಿರೇಮಠ ಎಂಬ ಮೂರು ಮಠಗಳು ಸ್ಥಾಪನೆಯಾಗಿ ಈ ಗ್ರಾಮವನ್ನು ಧರ್ಮಜಾಗೃತಿಯ ಸ್ಥಳವನ್ನಾಗಿ ರೂಪಿಸಿವೆ. ಈ ಮೂರು ಮಠಗಳಲ್ಲಿ ಈಗ ಶ್ರೀ ಗಚ್ಚಿನಮಠ ಮತ್ತು ಶ್ರೀಹಿರೇಮಠಗಳಲ್ಲಿ ಮಠಾಧೀಶರಿಲ್ಲದೆ ಮಠಗಳು ಖಾಲಿ ಉಳಿದಿವೆ.

ಸಾವಳಗಿ ಶಿವಲಿಂಗೇಶ್ವರ ವಿರಕ್ತಮಠ: ರೋಡಗಿ ಗ್ರಾಮದ ಹೊರಭಾಗದಲ್ಲಿ ಶ್ರೀ ಸಾವಳಗಿ ಶಿವಲಿಂಗೇಶ್ವರ ವಿರಕ್ತ ಮಠವು ಸ್ಥಾಪನೆಯಾಗಿದೆ.ಹದಿನೇಳನೆಯ ಶತಮಾನದಲ್ಲಿ ಹಿರೇಸಾವಳಗಿಯಿಂದ ಲೋಕ ಸಂಚಾರಕ್ಕೆ ಹೊರಟ ಶ್ರೀ ಸಾವಳಗಿ ಶಿವಲಿಂಗೇಶ್ವರರು ರೋಡಗಿಯಲ್ಲಿ ಕೆಲವು ದಿನ ನೆಲೆ ನಿಂತು, ಅನೇಕ ಪವಾಡಗಳನ್ನು ಮಾಡಿ ಈ ಸ್ಥಳವನ್ನು ಜಾಗೃತಸ್ಥಳವನ್ನಾಗಿ ಮಾಡಿದ್ದಾರೆ. ಗುರುಗಳು ನೆಲೆ ನಿಂತ ಸ್ಥಳದಲ್ಲಿ ಮಠವು ಸ್ಥಾಪನೆಯಾಗಿ ಈತನಕ ಬೆಳೆದು ಬಂದಿದೆ. ಶ್ರೀ ಸಾವಳಗಿ ಶಿವಲಿಂಗೇಶ್ವರರು ಇಲ್ಲಿ ಅನುಷ್ಠಾನಗೊಂಡು ಹೋದ ಮೇಲೆ ಮಠ ಸ್ಥಾಪನೆಯಾಯಿತಾದರೂ ನಂತರ ಮಠಾಧೀಶರು ಇಲ್ಲದೆ ಮಠವು ಖಾಲಿ ಉಳಿದಿದೆ. ಈ ಮಧ್ಯದಲ್ಲಿ ಶ್ರೀ ಶಿವಮೂರ್ತಿ ಸ್ವಾಮಿಗಳೆಂಬುವರು ಶಿರಶ್ಯಾಡದಿಂದ ಇಲ್ಲಿಗೆ ಬಂದು ನೆಲೆಸಿ ಧಾರ್ಮಿಕ ಚಟುವಟಿಕೆಗಳು ನಡೆಸಿ ಲಿಂಗೈಕ್ಯ ರಾಗಿದ್ದಾರೆ. ನಂತರ ಹಿರೇಸಾವಳಗಿಯ ಮಠದ ಮಠಾಧೀಶರೇ ಇಲ್ಲಿನ ಧಾರ್ಮಿಕ ಕಾರ್ಯ ಗಳನ್ನು ನಡೆಸಿಕೊಂಡು ಬರುತ್ತಿದ್ದರು.

ಬೆಳೆದ ಪರಂಪರೆ: ಶ್ರೀ ಸಾವಳಗಿ ಶಿವಲಿಂಗೇಶ್ವರರ ಅನೇಕ ಪವಾಡಗಳು ಹಾಗೂ ಸತ್ಕಾರ್ಯಗಳಿಂದ ಜಾಗೃತಸ್ಥಳವಾಗಿ ರೂಪುಗೊಂಡ ಈ ಮಠಕ್ಕೆ ೧೯೬೨ ರಲ್ಲಿ ಶ್ರೀ ಶಿವಮೂರ್ತಿ ಸ್ವಾಮಿಗಳು ಮಠಾಧೀಶರಾಗಿ ಅಧಿಕಾರವನ್ನು ವಹಿಸಿಕೊಂಡರು. ಶ್ರೀ ಶಿವಲಿಂಗಯ್ಯ ಮತ್ತು ಶ್ರೀಮತಿ ರೇವಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಶಿವಮೂರ್ತಿ ಸ್ವಾಮಿಗಳು ಮಠದ ಧಾರ್ಮಿಕ

ಕಾರ್ಯಗಳಿಗೆ ಚಾಲನೆ ಕೊಟ್ಟಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಶ್ರೀ ಸಾವಳಗಿ ಶಿವಲಿಂಗೇಶ್ವರರ ತೋರು ಗದ್ದುಗೆಯನ್ನು ಸ್ಥಾಪಿಸಲಾಗಿದೆ. ಅಲ್ಲದೆ ಮತ್ತೊಂದು ಗದ್ದುಗೆ ಸ್ಥಾಪನೆಯಾಗಿದ್ದು ಈ ಗುರುಗಳ ಹೆಸರು ಲಭ್ಯವಿಲ್ಲ. ಅಲ್ಲದೆ ಶಿರಶ್ಯಾಡದಿಂದ ಬಂದು ಇಲ್ಲಿ ಲಿಂಗೈಕ್ಯರಾದ ಶ್ರೀ ಶಿವಮೂರ್ತಿ ಸ್ವಾಮಿಗಳ ಗದ್ದುಗೆ ಸ್ಥಾಪನೆಯಾಗಿದ್ದು, ಈ ಗದ್ದುಗೆಗಳಿಗೆ ನಿತ್ಯ ಪೂಜೆಯನ್ನು ಮಾಡಲಾಗುತ್ತಿದೆ. ಅಕ್ಷಯ ತದಿಗೆ ಆದ ಏಳನೆಯ ದಿನಕ್ಕೆ ಶ್ರೀ ಸಾವಳಗಿ ಶಿವಲಿಂಗೇಶ್ವರರ ಜಾತ್ರೆ ನಡೆಯುತ್ತಿದೆ. ಮಠದ ಆಸ್ತಿಯಾಗಿರುವ ಇಪ್ಪತ್ತು ಎಕರೆ ಜಮೀನನ್ನು ಅಭಿವೃದ್ಧಿಪಡಿಸಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಶಿವಮೂರ್ತಿ ಸ್ವಾಮಿಗಳು, ಶ್ರೀ ಸಾವಳಗಿ ಶಿವಲಿಂಗೇಶ್ವರ ಮಠ, ರೋಡಗಿ, ಇಂಡಿ ತಾ, ಬಿಜಾಪುರ ಜಿಲ್ಲೆ.

ಶಿರಶ್ಯಾಡ

ಇಂಡಿ ತಾಲ್ಲೂಕಿನ ಶಿರಶ್ಯಾಡ ಗ್ರಾಮವು ತಾಲ್ಲೂಕು ಕೇಂದ್ರದಿಂದ ಆಗ್ನೇಯ ಭಾಗಕ್ಕೆ ಇಪ್ಪತ್ತೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಶಿರಶ್ಯಾಡ ಗ್ರಾಮದ ಮಧ್ಯಭಾಗದಲ್ಲಿ ಪುತ್ರವರ್ಗದ ಪರಂಪರೆಯ ರಂಭಾಪುರಿ ಪೀಠದ ಶಾಖಾಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದಲ್ಲಿ ಸ್ಥಾಪನೆಯಾದ ಈ ಮಠವನ್ನು ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ಸ್ಥಾಪಿಸಿದ್ದಾರೆಂದು ಹೇಳಲಾಗುತ್ತಿದೆ. ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ಮಹಾತಪಸ್ವಿಗಳಾಗಿ, ವಾಕ್‌ಸಿದ್ಧಿ ಪುರುಷರಾಗಿದ್ದರು. ಇವರು ಭಕ್ತರಿಗೆ ಆಶೀರ್ವಾದ ನೀಡಿದರೆ ಅದು ಸಿದ್ಧಿಸುತ್ತಿತ್ತು ಎಂದು ಭಕ್ತರು ಹೇಳುತ್ತಾರೆ. ಕರ್ತೃಗುರುಗಳ ಕರ್ತೃತ್ವಶಕ್ತಿಯಿಂದ ಈಗಲೂ ಈ ಮಠ ಒಂದು ಜಾಗೃತ ಸ್ಥಳವಾಗಿ, ಭಕ್ತರ ಧಾರ್ಮಿಕ ಕಾರ್ಯಗಳ ಕೇಂದ್ರಬಿಂದುವಾಗಿ ಬೆಳೆದಿದೆ. ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ಅನೇಕ ಪವಾಡಗಳನ್ನು ಮಾಡಿ ಮಠವನ್ನು ಬೆಳೆಸಿ ಜೀವಂತ ಸಮಾಧಿಯಾಗಿದ್ದಾರೆ.

ಪರಂಪರೆ:

೧. ಷ.ಬ್ರ.ಶ್ರೀ ಗಂಗಾಧರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಕಾಶಿಪತಿ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಸೋಮಯ್ಯ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಮುರುಘೇಂದ್ರ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಮುರುಘೇಂದ್ರದೇವರು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಶ್ರೀ ಕಾಶಿಪತಿ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿದರು. ನಂತರ ಬಂದ ಶ್ರೀ ಸೋಮಯ್ಯ ಶಿವಾಚಾರ್ಯ ಸ್ವಾಮಿಗಳು ಶಿವಪೂಜಾನಿಷ್ಠರಾಗಿ ಮಠದ ಅಭಿವೃದ್ಧಿಗಿಂತ, ವೀರಶೈವ ಧರ್ಮದ ಆಚರಣೆಗೆ ಒತ್ತುಕೊಟ್ಟು ಭಕ್ತರು ಧರ್ಮಮಾರ್ಗವನ್ನು ಹಿಡಿದು ಸಂಸ್ಕಾರವಂತ ಬದುಕನ್ನು ನಡೆಸುವಂತೆ ಮಾಡಿದರು. ಇವರು ಸದಾ ಶಿವಪೂಜೆ, ಶಿವಧ್ಯಾನದಲ್ಲಿ ಮಗ್ನರಾಗಿ ಮಠವನ್ನು ಪ್ರಸಿದ್ಧಿಗೆ ತಂದರು. ನಂತರ ಶ್ರೀಮುರುಘೇಂದ್ರ ಶಿವಾಚಾರ್ಯ ಸ್ವಾಮಿಗಳು ೧೯೪೮ ರಲ್ಲಿ ಪಟ್ಟಾಧಿಕಾರಕ್ಕೆ ಬಂದಿದ್ದಾರೆ. ಇವರು ಮಠದ ಆವರಣದಲ್ಲಿ ಒಣಗಿ ನಿಂತಿದ್ದ ಬಿಲ್ವಪತ್ರೆ ಮರವನ್ನು ಚಿಗುರಿಸಿ, ಪವಾಡ ಪುರುಷರೆಂದು ಹೆಸರುಗಳಿಸಿದ್ದಾರೆ. ಇವರು ೧೯೭೧ರ ತನಕ ಮಠವನ್ನು ಮುನ್ನಡೆಸಿ ಲಿಂಗೈಕ್ಯರಾಗಿದ್ದಾರೆ. ಇವರ ತರುವಾಯ ಶ್ರೀ ಮುರುಘೇಂದ್ರ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ.

ಶ್ರೀ ಮುರುಘೇಂದ್ರ ದೇವರು ಶ್ರೀ ವಿರೂಪಾಕ್ಷಯ್ಯ ಮತ್ತು ಶ್ರೀಮತಿ ಶೈಲಜ ಇವರ ಪುತ್ರರಾಗಿ ೧೯೮೫ ರಲ್ಲಿ ಜನಿಸಿದ್ದಾರೆ. ಇವರು ಶಿರಶ್ಯಾಡದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಮುಗಿಸಿ, ಬಾಳೆಹೊನ್ನೂರಿನ ರಂಭಾಪುರಿ ಪೀಠದಲ್ಲಿ ಸಂಸ್ಕೃತ, ವೇದಾಧ್ಯಯನ ಮಾಡುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಕೆತ್ತನೆಯ ಕಪ್ಪು ಕಲ್ಲಿನಿಂದ ಸ್ಥಾಪಿಸಿರುವ ಪುರಾತನ ಕಾಲದ ಮಠದ ಕಟ್ಟಡ ಭವ್ಯವಾಗಿ

ಹಾಗೂ ವಿಶಾಲವಾಗಿ ನಿರ್ಮಾಣಗೊಂಡಿದೆ. ಮಠದ ಒಳಭಾಗದಲ್ಲಿ ಒಂದು ಕಲ್ಲಿನ ಬಾವಿ, ಗುರುಗಳು ಭಕ್ತರಿಗೆ ದರ್ಶನ ಕೊಡಲು ನಿರ್ಮಿಸಿದ ಅಂಗಳ, ಗುರುಗಳ ವಾಸ್ತವ್ಯದ ಕೊಠಡಿ, ದಾಸ್ತಾನು ಕೊಠಡಿ, ಪೂಜಾ ಕೊಠಡಿ ಹಾಗೂ ಗದ್ದುಗೆಗಳ ಮಂಟಪ ಈ ರೀತಿ ಸಕಲ ವ್ಯವಸ್ಥೆಯೊಂದಿಗೆ ರೂಪುಗೊಂಡಿದ್ದ ಪುರಾತನ ಕಾಲದ ಶಿಲೆಯಕಟ್ಟಡ ಇಂದು ಶಿಥಿಲಗೊಂಡಿದೆ.

ಈ ಕಟ್ಟಡದ ಒಳಭಾಗದಲ್ಲಿ ಎರಡು ಹಾಗೂ ಹೊರಭಾಗದಲ್ಲಿ ಎರಡುಗದ್ದುಗೆಗಳು ಸ್ಥಾಪನೆಯಾಗಿವೆ. ಈ ಗದ್ದುಗೆಗಳಿಗೆ ನಿತ್ಯ ಪೂಜೆ, ಹಾಗೂ ಅಮಾವಾಸ್ಯೆ ಮತ್ತು ಹುಣ್ಣಿಮೆಯಲ್ಲಿ ವಿಶೇಷಪೂಜೆ, ಡಿಸೆಂಬರ್ ತಿಂಗಳಿನಲ್ಲಿ ಕರ್ತೃಗುರುಗಳ ಪುಣ್ಯಾರಾಧನೆಯನ್ನು ಐದು ದಿನಗಳ ಕಾಲ ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಪುರಾಣ ಪ್ರವಚನವನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಮುರುಘೇಂದ್ರ ದೇವರು, ಶ್ರೀ ಗಂಗಾಧರೇಶ್ವರ ಹಿರೇಮಠ, ಶಿರಶ್ಯಾಡ, ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ಶಿವಪುರ

ಇಂಡಿ ತಾಲ್ಲೂಕಿನ ಶಿವಪುರ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಇಪ್ಪತ್ನಾಲ್ಕು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಸಾವಳಗಿ ಶಿವಲಿಂಗೇಶ್ವರ ಮಠವು ಅಸ್ತಿತ್ವದಲ್ಲಿದೆ.

ಸಾವಳಗಿ ಶಿವಲಿಂಗೇಶ್ವರಮಠ: ಶಿವಪುರ ಗ್ರಾಮದ ಮಧ್ಯಭಾಗದಲ್ಲಿ ವಿರಕ್ತ ಸಂಪ್ರದಾಯದ ಶ್ರೀ ಸಾವಳಗಿ ಶಿವಲಿಂಗೇಶ್ವರ ಮಠವು ಸ್ಥಾಪನೆಯಾಗಿದೆ. ಹದಿನೇಳನೆಯ ಶತಮಾನದಲ್ಲಿ ಶ್ರೀ ಸಾವಳಗಿ ಶಿವಲಿಂಗೇಶ್ವರರು ಅನುಷ್ಠಾನ ಮಾಡಿದ ಈ ಜಾಗೃತ ಸ್ಥಳದಲ್ಲಿ ಮಠವು ರೂಪುಗೊಂಡು ಬೆಳೆದಿದೆ. ಶ್ರೀ ಸಾವಳಗಿ ಶಿವಲಿಂಗೇಶ್ವರರ ಮೂಲ ಸ್ಥಾನವಾದ ಹಿರೇಸಾವಳಗಿ ಮಠದ ಶಾಖಾ ಮಠವಾಗಿ ಈಮಠವು ಬೆಳೆದು ಬಂದಿದೆ. ಈ ಮಠದಲ್ಲಿ ಈವರೆಗೆ ಶ್ರೀ ಮುರುಘೇಂದ್ರ ಸ್ವಾಮಿಗಳು ಹಾಗೂ ಶ್ರೀ ಬಸವಲಿಂಗ ಸ್ವಾಮಿಗಳು ಅಧಿಕಾರವನ್ನು ನಡೆಸಿದ್ದಾರೆ. ಶ್ರೀ ಬಸವಲಿಂಗ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಉತ್ತರಾಧಿಕಾರಿಗಳು ಯಾರೂ ಇಲ್ಲದೆ ಮಠವು ಖಾಲಿ ಉಳಿದಿದೆ. ಮೂಲ ಮಠದ ಮಠಾಧೀಶರು ಸಂದರ್ಭಕ್ಕನುಸಾರವಾಗಿ ಶಿವಪುರಕ್ಕೆ ಬಂದು ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಮಠಕ್ಕೆ ಎಪ್ಪತ್ತುಎಕರೆ ಜಮೀನಿದ್ದು, ಇದನ್ನು ಮಠದ ವತಿಯಿಂದ ಅಭಿವೃದ್ಧಿಪಡಿಸಲಾಗಿದೆ.

ಮಠದಲ್ಲಿ ಶ್ರೀ ಸಾವಳಗಿ ಶಿವಲಿಂಗೇಶ್ವರರ ತೋರುಗದ್ದುಗೆ, ಶ್ರೀ ಮುರುಘೇಂದ್ರ ಸ್ವಾಮಿಗಳು ಹಾಗೂ ಶ್ರೀ ಬಸವಲಿಂಗ ಸ್ವಾಮಿಗಳ ಗದ್ದುಗೆಗಳು ಸ್ಥಾಪನೆಯಾಗಿವೆ. ಇವುಗಳಿಗೆ ನಿತ್ಯ ಪೂಜೆ ಹಾಗೂ ವಾರ್ಷಿಕ ಪುಣ್ಯಾರಾಧನೆ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ.ಮಲ್ಲಿಕಾರ್ಜುನ ಸ್ವಾಮಿಗಳು, ಶ್ರೀ ಸಾವಳಗಿ ಶಿವಲಿಂಗೇಶ್ವರಮಠ,ಶಿವಪುರ, ಇಂಡಿ ತಾ, ಬಿಜಾಪುರ ಜಿಲ್ಲೆ.

ಹತ್ತಳ್ಳಿ

ಇಂಡಿ ತಾಲ್ಲೂಕಿನ ಹತ್ತಳ್ಳಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಮೂವತ್ತೆಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಗುರುಪಾದೇಶ್ವರ ಹಿರೇಮಠವು ಅಸ್ತಿತ್ವದಲ್ಲಿದೆ.

ಗುರುಪಾದೇಶ್ವರ ಹಿರೇಮಠ: ಹತ್ತಳ್ಳಿ ಗ್ರಾಮದಲ್ಲಿ ಉಜ್ಜಯಿನಿ ಪೀಠದ ಶಾಖಾ ಮಠವಾದ ಶ್ರೀ ಗುರುಪಾದೇಶ್ವರ ಹಿರೇಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದ ಪುತ್ರವರ್ಗದ ಪರಂಪರೆಯ ಈ ಮಠವು ಸ್ಥಾಪನೆಯಾಗಿ ವೀರಶೈವ ಧರ್ಮವನ್ನು ಅಭಿವೃದ್ಧಿಪಡಿಸಿದೆ. ಪುರಾತನ ಪರಂಪರೆಯ ಈ ಮಠದ ಬಗ್ಗೆ ಮಾಹಿತಿಗಳ ಕೊರತೆಯಿಂದ ಮಠದ ಪರಂಪರೆಯ ವಿವರವನ್ನು ಉಲ್ಲೇಖಿಸಲು ಸಾಧ್ಯವಾಗುತ್ತಿಲ್ಲ. ಸದ್ಯ ಈ ಮಠದಲ್ಲಿ ಶ್ರೀ ಗುರುಪಾದೇಶ್ವರ ಶಿವಾಚಾರ್ಯ ಸ್ವಾಮಿಗಳು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ವಿಳಾಸ:ಷ.ಬ್ರ.ಶ್ರೀ ಗುರುಪಾದೇಶ್ವರ ಶಿವಾಚಾರ್ಯಸ್ವಾಮಿಗಳು, ಶ್ರೀ ಗುರುಪಾದೇಶ್ವರಹಿರೇಮಠ, ಹತ್ತಳ್ಳಿ,ಇಂಡಿ ತಾ, ಬಿಜಾಪುರಜಿಲ್ಲೆ.

ಹಾವಿನಹಾಳ

ಇಂಡಿ ತಾಲ್ಲೂಕಿನ ಹಾವಿನಹಾಳ ಗ್ರಾಮವು ತಾಲ್ಲೂಕು ಕೇಂದ್ರದಿಂದ ವಾಯುವ್ಯ ಭಾಗಕ್ಕೆ ಮೂವತ್ತೈದು ಕಿ.ಮೀ ದೂರದಲ್ಲಿದೆ. ಶ್ರೀ ಚರಂತಿಮಠವು ಅಸ್ತಿತ್ವದಲ್ಲಿದೆ.

ಚರಂತಿಮಠ: ಹಾವಿನಹಾಳ ಗ್ರಾಮದಲ್ಲಿ ಪುರಾತನ ಕಾಲದ ಶ್ರೀ ಚರಂತಿಮಠವು ಸ್ಥಾಪನಯಾಗಿದೆ. ಪಂಚಪೀಠಗಳ ಶಾಖಾನುವರ್ತಿ ಮಠವಾದ ಈ ಮಠದ ಸ್ಥಾಪನೆಯಿಂದಾಗಿ ಈ ಗ್ರಾಮದಲ್ಲಿ ಧಾರ್ಮಿಕ ವಾತಾವರಣ ಸೃಷ್ಟಿಯಾಗಿದೆ. ಪುರಾತನ ಮಠದ ಪರಂಪರೆಯ ಬಗ್ಗೆ ಸ್ಪಷ್ಟವಾದ ಆಧಾರಗಳು ನಮಗೆ ದೊರೆಯದ ಕಾರಣ ಮಠದ ಪರಂಪರೆಯನ್ನು ವಿವರಿಸಲಾಗುತ್ತಿಲ್ಲ.

ಶ್ರೀ ಚರಂತಿ ಮಠಕ್ಕೆ ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸತೊಡಗಿದ್ದಾರೆ. ಗುರುಗಳು ಪ್ರಗತಿಪರ ದೋರಣೆಯೊಂದಿಗೆ ಆಧುನಿಕ ಸಮಾಜದಲ್ಲಿ ಧಾರ್ಮಿಕ ವಾತಾವರಣವನ್ನು ನಿರ್ಮಿಸುವ ಪ್ರಯತ್ನದಲ್ಲಿ ತೊಡಗಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಮಹಾಂತಶಿವಾಚಾರ್ಯ ಸ್ವಾಮಿಗಳು, ಶ್ರೀ ಚರಂತಿಮಠ, ಹಾವಿನಾಳ, ಇಂಡಿ ತಾಲ್ಲೂಕು, ಬಿಜಾಪುರಜಿಲ್ಲೆ.

ಹೊರ್ತಿ

ಇಂಡಿ ತಾಲ್ಲೂಕಿನ ಹೊರ್ತಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಅರಳೇಂದ್ರ ಮಠವು ಅಸ್ತಿತ್ವದಲ್ಲಿದೆ.

ಅರಳೇಂದ್ರಮಠ: ಹೊರ್ತಿ ಗ್ರಾಮದಲ್ಲಿ ಪುತ್ರವರ್ಗದ ಪರಂಪರೆಯ ರಂಭಾಪುರಿ ಪೀಠದ ಶಾಖಾ ಮಠವಾದ ಅರಳೇಂದ್ರ ಮಠವು ಸ್ಥಾಪನೆಯಾಗಿದೆ. ಮುನ್ನೂರು ವರ್ಷಗಳ ಹಿಂದೆ ಶ್ರೀ ಅರಳೇಂದ್ರ ಶಿವಾಚಾರ್ಯ ಸ್ವಾಮಿಗಳಿಂದ ಈ ಮಠವು ಸ್ಥಾಪಿಸಿಲ್ಪಟ್ಟಿದೆ. ಈ ಕಾರಣಕ್ಕಾಗಿ ಈ ಮಠಕ್ಕೆ 'ಅರಳೇಂದ್ರ ಮಠ' ಎಂದು ಹೆಸರು ಬಂದಿದೆ.

ಮಠ ಸ್ಥಾಪನೆ: ಶ್ರೀ ಅರಳೇಂದ್ರ ಶಿವಾಚಾರ್ಯ ಸ್ವಾಮಿಗಳು ಲೋಕ ಸಂಚಾರ ಕೈಗೊಂಡು, ಈ ಗ್ರಾಮಕ್ಕೆ ಆಗಮಿಸಿ ಇಲ್ಲಿ ಅನುಷ್ಠಾನ ಕೈಗೊಂಡರು. ಗುರುಗಳು ಇಲ್ಲಿ ಅನುಷ್ಠಾನ ಕೈಗೊಂಡ ಮೇಲೆ ವೀರಶೈವ ಧರ್ಮದ ಅಷ್ಟಾವರಣ, ಪಂಚಾಚಾರ ಹಾಗೂ ಷಟ್‌ಸ್ಥಲಗಳ ಬಗ್ಗೆ ಉಪದೇಶ ನೀಡಿ, ಶಿವಪೂಜೆ, ಪಾದೋದಕ ಹಾಗೂ ಪ್ರಸಾದದ ಮಹತ್ವದ ಬಗ್ಗೆ ತಿಳಿ ಹೇಳಿ ಭಕ್ತರನ್ನು ಜಾಗೃತರನ್ನಾಗಿಮಾಡಿ ವೀರಶೈವ ಧರ್ಮವನ್ನು ಬೆಳೆಸಿ, ಧರ್ಮ ಜಾಗೃತಿಯನ್ನುಂಟುಮಾಡಿ ಲಿಂಗೈಕ್ಯರಾಗಿದ್ದಾರೆ.

ಪರಂಪರೆ:

೧. ಷ.ಬ್ರ.ಶ್ರೀ ಅರಳೇಂದ್ರ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು
೩. ಷ.ಬ್ರ.ಶ್ರೀ ಎರಡನೆಯ ಅರಳೇಂದ್ರ ಶಿವಾಚಾರ್ಯ ಸ್ವಾಮಿಗಳು
೪. ಷ.ಬ್ರ.ಶ್ರೀ ಎರಡನೆಯ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು
೫. ಷ.ಬ್ರ.ಶ್ರೀ ಮೂರನೆಯ ಅರಳೇಂದ್ರ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಹಾಗೂ ಎರಡನೆಯ ಶ್ರೀ ಅರಳೇಂದ್ರ ಶಿವಾಚಾರ್ಯ ಸ್ವಾಮಿಗಳ ಬಗ್ಗೆ ಹೆಚ್ಚು ಮಾಹಿತಿ ಲಭ್ಯವಿಲ್ಲ. ನಂತರ ಶ್ರೀಎರಡನೆಯ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಮಹಾ ತಪಸ್ವಿಗಳಾಗಿದ್ದು, ಶಿವಪೂಜಾ ನಿಷ್ಠೆಯಿಂದ ಹೆಸರು ಗಳಿಸಿ ದ್ದರು. ಇವರು ಮಠವನ್ನು ಹೆಚ್ಚು ಅಭಿವೃದ್ಧಿಪಡಿಸಿ ೧೯೩೬ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ತರುವಾಯ ಶ್ರೀ ಮೂರನೆಯ ಅರಳೇಂದ್ರ ಶಿವಾಚಾರ್ಯ ಸ್ವಾಮಿಗಳು ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ.

ಶ್ರೀ ಗುರಯ್ಯ ತಮ್ಮಯ್ಯ ಹಿರೇಮಠ ಮತ್ತು ಶ್ರೀಮತಿ ಚನ್ನಮ್ಮ ತಾಯಿಯವರ ಪುತ್ರರಾಗಿ ೧೯೩೪ ರಲ್ಲಿ ಜನಿಸಿದ ಇವರು ಹಿರಿಯ ಗುರುಗಳು ಲಿಂಗೈಕ್ಯರಾದ ಇಪ್ಪತ್ತು ವರ್ಷಗಳ ತರುವಾಯ ಖಾಲಿ ಉಳಿದಿದ್ದ ಮಠಕ್ಕೆ ೧೯೫೬ ರ ಮೇ ತಿಂಗಳಿನಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಸಂಸ್ಕೃತವನ್ನು ಅಭ್ಯಾಸ ಮಾಡಿರುವ ಗುರುಗಳು,ಮಠವನ್ನು ಧಾರ್ಮಿಕ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿಪಡಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ನಾಲ್ಕು ಗದ್ದುಗೆಗಳಿಗೆ ನಿತ್ಯ ಪೂಜೆ, ಅಮಾವಾಸ್ಯೆಯಲ್ಲಿ ರುದ್ರಾಭಿಷೇಕ, ಶ್ರಾವಣಮಾಸದಲ್ಲಿ ಪುರಾಣ, ಅಕ್ಷಯ ತೃತೀಯ ಅಮಾವಾಸ್ಯೆಯಂದು ಹಿರಿಯ ಗುರುಗಳಾದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆಯನ್ನು ಮಾಡಲಾಗುತ್ತಿದೆ. ಈ ಸಂದರ್ಭದಲ್ಲಿ ಅನ್ನ ದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಡೋಮನಾಳು, ಗುಣಿಕಿಯಲ್ಲಿ ಶಾಖಾ ಮಠಗಳು ಇವೆ. ಇಲ್ಲಿಯೂ ಸಹ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಹೋಗಲು ವ್ಯವಸ್ಥೆ ಮಾಡಲಾಗಿದೆ. ಈ ಮಠಕ್ಕೆ ವಿಕ್ಟೋರಿಯಾ ಮಹಾರಾಣಿಯು ಎಂಟು ಎಕರೆ ಭೂಮಿಯನ್ನು ಉಂಬಳಿಯಾಗಿ ನೀಡಿದ್ದಾ ಳೆಂಬ ಉಲ್ಲೇಖವಿದೆ. ಈ ಭೂಮಿಯನ್ನು ಮಠದ ವತಿಯಿಂದ ಕೃಷಿ ಮಾಡಿಸುತ್ತಿದ್ದು ಉತ್ಪನ್ನ ತೆಗೆಯಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಅರಳೇಂದ್ರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಅರಳೇಂದ್ರ ಮಠ, ಹೊರ್ತಿ, ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ.

❑

ಬಸವನ ಬಾಗೇವಾಡಿ ತಾಲ್ಲೂಕು

ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕು ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡಿದೆ. ಶ್ರೀ ಬಸವೇಶ್ವರರು ಇಲ್ಲಿ ಜನಿಸಿ ವೀರಶೈವ ಧರ್ಮವನ್ನು ಪುನರುದ್ಧರಿಸಿದ ಕೀರ್ತಿ ಈ ತಾಲ್ಲೂಕಿಗೆ ಸಲ್ಲುತ್ತದೆ. ಇಲ್ಲಿ ಪುರಾತನ ಕಾಲದಿಂದ ಈತನಕ ಸುಮಾರು ಎಪ್ಪತ್ತೆರಡು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಇಂದು ಕೇವಲ ಇಪ್ಪತ್ತೆರಡು ಮಠಗಳು ಅಸ್ತಿತ್ವದಲ್ಲಿ ಉಳಿದಿವೆ.

ಆಲಮಟ್ಟಿ

ಬಸವನ ಬಾಗೇವಾಡಿ ತಾಲ್ಲೂಕಿನ ಆಲಮಟ್ಟಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಮೂವತ್ತೆರಡು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಪುರಾತನ ಕಾಲದಿಂದಲೂ ಒಟ್ಟು ಮೂರು ಮಠಗಳು ಅಸ್ತಿತ್ತ್ವದಲ್ಲಿದ್ದವು ಎಂದು ಹೇಳಲಾಗುತ್ತಿದೆ. ಆದರೆ ಇಂದು ಎರಡು ಮಠಗಳು ಹೇಳಲು ಹೆಸರಿಲ್ಲದಂತಾಗಿವೆ. ಇಂದಿಗೂ ಪುರವರ್ಗದ ಹಿರೇಮಠವು ಅಸ್ತಿತ್ತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ಈ ಪುರಾತನ ಮಠದ ಜೊತೆಗೆ ಆಲಮಟ್ಟಿ ಜಲಾಶಯದಲ್ಲಿ ಮುಳುಗಡೆಯಾದ ಚಿಮ್ಮಲಗಿ ಗ್ರಾಮದ ಕಟ್ಟಿಮನಿ ಹಿರೇಮಠವೂ ಆಲಮಟ್ಟಿ ಜಲಾಶಯದ ಪುನರ್‌ವಸತಿ ಸ್ಥಳದಲ್ಲಿ ಸ್ಥಾಪನೆಯಾಗಿ ತನ್ನ ಪರಂಪರೆಯನ್ನು ಮುಂದುವರೆಸಿದೆ.

ಪುರವರ್ಗದ ಹಿರೇಮಠ: ಪುತ್ರವರ್ಗದ ಪರಂಪರೆಯ ರಂಭಾಪುರಿ ಪೀಠದ ಶಾಖಾಮಠವಾದ ಈ ಮಠವು ಪ್ರಸಿದ್ಧ ಮಠವಾಗಿ, ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ಬೆಳೆದಿದೆ. ಈ ಮಠದ ಸ್ಥಾಪನೆಯ ಬಗ್ಗೆ ಸ್ಪಷ್ಟವಾದ ಮಾಹಿತಿ ಇಲ್ಲ. ಈಗಿನ ಹೇಳಿಕೆಯ ಪ್ರಕಾರ ಶ್ರೀ ಅನ್ನದಾನೇಶ್ವರ ಶಿವಾಚಾರ್ಯ ಸ್ವಾಮಿಗಳು ಈ ಮಠದ ಕರ್ತೃಗುರುಗಳೆಂದು ಹೇಳಲಾಗುತ್ತಿದೆ. ಇವರು ಮಹಾ ತಪಸ್ವಿಗಳಾಗಿ ಮಠವನ್ನು ಹೆಚ್ಚು ಅಭಿವೃದ್ಧಿಪಡಿಸಿದರು. ಇವರ ನಂತರ ಮಠದ ಪರಂಪರೆ ಬೆಳೆದಿದೆಯಾದರೂ ಆ ಗುರುಗಳ ಬಗ್ಗೆ ಮಾಹಿತಿ ಲಭ್ಯವಿಲ್ಲ. ಈ ಕಾರಣಕ್ಕಾಗಿ ಈ ಮಠದ ಪರಂಪರೆಯ ಬಗ್ಗೆ ಅಸ್ಪಷ್ಟತೆ ಇದೆ. ಪರಂಪರೆಯ ಗುರುಗಳಾಗಿದ್ದ ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು ೧೯೯೨ ರಲ್ಲಿ ಲಿಂಗೈಕ್ಯರಾಗಿದ್ದು, ಇವರ ನಂತರ ಶ್ರೀ ರುದ್ರಮುನಿ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ.

ಶ್ರೀ ರುದ್ರಮುನಿ ದೇವರು, ಶ್ರೀ ಸಂಗನಬಸವಯ್ಯ ಮತ್ತು ಶ್ರೀಮತಿ ನಾಗರತ್ನಮ್ಮನವರ ಪುತ್ರರಾಗಿ ೧೯೮೨ ರಲ್ಲಿ ಜನಿಸಿದ್ದಾರೆ. ಇವರು ಆಲಮಟ್ಟಿ ಮತ್ತು ಹೊನ್ನಾಳಿಯಲ್ಲಿ ವಿದ್ಯಾಭ್ಯಾಸ ಮಾಡಿ ಈಗ (೨೦೦೧) ಮೈಸೂರಿನಲ್ಲಿ ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾರೆ.

ಆಲಮಟ್ಟಿಯು ಕೃಷ್ಣಾ ಅಣೆಕಟ್ಟೆಯಲ್ಲಿ ಮುಳುಗಿ ಹೋದ ಕಾರಣ ಮಠವನ್ನು ಈಗ ಅಣೆಕಟ್ಟೆ ಪ್ರದೇಶದ ಎತ್ತರದ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ. ಇಲ್ಲಿ ತೋರುಗದ್ದುಗೆಯನ್ನು ಸ್ಥಾಪಿಸಿದ್ದು ನಿತ್ಯಪೂಜೆ, ಅಮಾವಾಸ್ಯೆಯಲ್ಲಿ ರುದ್ರಾಭಿಷೇಕ, ಆಗಿ ಹುಣ್ಣಿಮೆಯಲ್ಲಿ ಅನ್ನದಾನೇಶ್ವರ ಶಿವಾಚಾರ್ಯ ಸ್ವಾಮಿಗಳ ರಥೋತ್ಸವವನ್ನು ನಡೆಸಲಾಗುತ್ತಿದೆ. ಶ್ರೀ ಹರ್ಡೇಕರ್ ಮಂಜಪ್ಪನವರು ,ಬಂಥನಾಳು ಸ್ವಾಮಿಗಳಿಂದ ಪ್ರೇರಣೆ ಪಡೆದು ಆಲಮಟ್ಟಿಗೆ ಬಂದು ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳಲ್ಲಿ ಆಶ್ರಯ ಪಡೆದು, ಗುರುಗಳ ಮಾರ್ಗದರ್ಶನದಂತೆ ಆಲಮಟ್ಟಿಯಲ್ಲಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಅಂದು ಮಠದ ಮಾರ್ಗದರ್ಶನದಲ್ಲಿ ಸ್ಥಾಪನೆಯಾದ ಶಿಕ್ಷಣ ಸಂಸ್ಥೆಯು ಇಂದು ಹೆಮ್ಮರವಾಗಿ ಬೆಳೆದಿದೆ.

ವಿಳಾಸ: ಷ.ಬ್ರ.ಶ್ರೀ ರುದ್ರಮುನಿ ದೇವರು, ಶ್ರೀ ಪುರವರ್ಗದ ಹಿರೇಮಠ, ಆಲಮಟ್ಟಿ, ಬಸವನಬಾಗೇವಾಡಿ ತಾ, ಬಿಜಾಪುರ ಜಿಲ್ಲೆ.

ಕಟ್ಟಿಮನಿ ಹಿರೇಮಠ: ಆಲಮಟ್ಟಿ ಜಲಾಶಯದ ಪುನರ್‌ವಸತಿ ಕೇಂದ್ರದಲ್ಲಿ ರೂಪುಗೊಂಡಿರುವ ಆಲಮಟ್ಟಿಯ ಹೊಸ ಚಿಮ್ಮಲಗಿ ಬಡಾವಣೆಯಲ್ಲಿ ಶ್ರೀ ಕಟ್ಟಿಮನಿ ಹಿರೇಮಠವು ಚಿಮ್ಮಲಗಿಯಿಂದ ಇಲ್ಲಿಗೆ ಸ್ಥಳಾಂತರಗೊಂಡು ತನ್ನ ಪರಂಪರೆಯನ್ನು ಮುಂದುವರೆಸಿದೆ. ರಂಭಾಪುರಿ ಪೀಠದ ಶಾಖಾಮಠವಾಗಿರುವ ಈ ಮಠವು ಪುರಾತನ ಕಾಲದಲ್ಲಿ ಸ್ಥಾಪನೆಯಾಗಿ

ತನ್ನ ಪರಂಪರೆಯನ್ನು ಬೆಳೆಸಿತ್ತು. ಕೃಷ್ಣಾನದಿಗೆ ಆಲಮಟ್ಟಿಯಲ್ಲಿ ಅಣೆಕಟ್ಟನ್ನು ಕಟ್ಟಿದಾಗ ಚಿಮ್ಮಲಗಿಯು ಮುಳುಗಡೆಗೊಂಡಿದ್ದು ೧೯೮೪ರಲ್ಲಿ ಇಲ್ಲಿಗೆ ಸ್ಥಳಾಂತರ ಗೊಂಡಿದೆ. ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಇಲ್ಲಿಗೆ ಸ್ಥಳಾಂತರಿಸಿ ಲಿಂಗೈಕ್ಯರಾಗಿದ್ದಾರೆ.ಇವರ ನಂತರ ಶ್ರೀ ಶಶಿಧರ ಶಿವಾಚಾರ್ಯ ಸ್ವಾಮಿಗಳು ೧೯೮೭ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡು ಮಠದ ಪರಂಪರೆಯನ್ನು ಮುನ್ನಡೆಸಿದ್ದಾರೆ.

ಚಿಮ್ಮಲಗಿಯಲ್ಲಿ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಸ್ಥಾಪಿಸಿದ ಮೇಲೆ ಈ ತನಕ ಹದಿಮೂರು ಜನ ಗುರುಗಳು ಚಿಮ್ಮಲಗಿ ಮಠದಲ್ಲಿ ಅಧಿಕಾರವನ್ನು ನಡೆಸಿ ಲಿಂಗೈಕ್ಯರಾಗಿದ್ದಾರೆ. ಈ ಹದಿಮೂರು ಜನ ಗುರುಗಳ ಗದ್ದುಗೆಗಳು ಚಿಮ್ಮಲಗಿ ಯಲ್ಲಿದ್ದು ಈಗ ಮುಳುಗಡೆಯಾಗಿವೆ. ಸ್ಥಳಾಂತರಗೊಂಡ ಈ ಮಠಕ್ಕೆ ಸುಸಜ್ಜಿತವಾದ ಕಟ್ಟಡವನ್ನು ನಿರ್ಮಿಸಲಾಗಿದೆ. ಅಲ್ಲದೆ ಕರ್ತೃಗುರುಗಳ ತೋರುಗದ್ದುಗೆ ಹಾಗೂ ೧೯೮೭ ರಲ್ಲಿ ಲಿಂಗೈಕ್ಯರಾದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಯನ್ನು ನಿರ್ಮಿಸಲಾಗಿದೆ.

ವಿಳಾಸ: ಷ.ಬ್ರ.ಶ್ರೀ ಶಶಿಧರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕಟ್ಟಿಮನಿ ಹಿರೇಮಠ, ಆಲಮಟ್ಟಿ ಪುನರ್‌ವಸತಿ ಕೇಂದ್ರ, ಬಸವನ ಬಾಗೇವಾಡಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ಇಂಗಳೇಶ್ವರ

ಬಸವನ ಬಾಗೇವಾಡಿ ತಾಲ್ಲೂಕಿನ ಇಂಗಳೇಶ್ವರ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹತ್ತು ಕಿ.ಮೀ ದೂರದಲ್ಲಿದೆ. ಹನ್ನೆರಡನೆಯ ಶತಮಾನದ ಬಸವಣ್ಣನವರ ತಾಯಿಯ ತವರುಮನೆಯಾಗಿದ್ದು, ಬಸವಣ್ಣನವರು ಕೆಲವುದಿನ ಇಲ್ಲಿಯೇ ತಮ್ಮ ಬಾಲ್ಯವನ್ನು ಕಳೆದರೆಂದು ಹೇಳಲಾಗುತ್ತಿದೆ. ಅಲ್ಲದೆ ಹನ್ನೆರಡನೆಯ ಶತಮಾನದ ಜ್ಞಾನದ ಜ್ಯೋತಿಯಾಗಿದ್ದ ಚನ್ನಬಸವಣ್ಣನವರ ಹುಟ್ಟೂರು ಇದಾಗಿದೆ. ಈ ಕಾರಣಕ್ಕಾಗಿ ಇಂಗಳೇಶ್ವರವು ಇತಿಹಾಸದಲ್ಲಿ ಶಾಶ್ವತ ಹೆಸರನ್ನು ಪಡೆದು ಕೊಂಡಿದೆ. ಇಂತಹ ಇತಿಹಾಸ ಪ್ರಸಿದ್ಧ ಗ್ರಾಮದಲ್ಲಿ ಪುರಾತಕಾಲದಿಂದಲೂ ವಿರಕ್ತಮಠ ಹಾಗೂ ಹಿರೇಮಠ ಎಂಬಎರಡು ವೀರಶೈವ ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಾ ವೀರಶೈವ ಧರ್ಮವನ್ನುಬೆಳೆಸಿವೆ.

ವಿರಕ್ತಮಠ: ಗ್ರಾಮದ ನೈರುತ್ಯದ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ವಿರಕ್ತಮಠವು ಮುರುಘಾಸಮಯದ ಮಠವಾಗಿ ಬೆಳೆದಿದೆ. ಹನ್ನೆರಡನೆಯ ಶತಮಾನದಲ್ಲಿ ಸ್ಥಾಪನೆಯಾಗಿದ್ದ ಈ ಮಠವು ನಂತರ ಕೆಲವು ದಿನಗಳ ಕಾಲ ಮಠಾಧೀಶರಿಲ್ಲದೆ ಖಾಲಿ ಉಳಿದಿತ್ತು. ನಂತರ ಹದಿನೈದನೆಯ ಶತಮಾನದಲ್ಲಿ ಶ್ರೀ ಪ್ರೌಢದೇವರಾಯನು (೧೪೨೪-೪೬) ವೀರಶೈವ ಮಠಗಳಿಗೆ ಹೆಚ್ಚು ಆದ್ಯತೆ ನೀಡಿದ ಸಂದರ್ಭದಲ್ಲಿ ಶ್ರೀ ಮುರುಗಿಸ್ವಾಮಿಗಳು ಈ ಮಠವನ್ನು ಪುನರುಜ್ಜೀವನಗೊಳಿಸಿ ಅಸ್ತಿತ್ವಕ್ಕೆ ತರುತ್ತಾರೆ. ಗುರುಗಳು ಮಠವನ್ನು ಪುನರ್‌ಸ್ಥಾಪಿಸಿ ಶರಣತತ್ವಗಳನ್ನು ಪ್ರಚಾರಪಡಿಸಲು ಮುಂದಾದರು. ನಿತ್ಯ ಮಠದಲ್ಲಿ ಶಿವಾನುಭವ ಗೋಷ್ಠಿ, ಅನ್ನದಾಸೋಹ ಕಾರ್ಯಗಳು ನಡೆಯತೊಡಗಿದವು. ಇದರಿಂದ ಭಕ್ತರು ಸನ್ಮಾರ್ಗಕ್ಕೆ ಬಂದು ಕಾಯಕಯೋಗದಿಂದ ಬದುಕುವ ದಾರಿಯನ್ನು ಕಂಡುಕೊಂಡರು. ಈ ರೀತಿ ಧಾರ್ಮಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಶ್ರಮಿಸಿದ ಶ್ರೀ ಮುರುಗಿ ಸ್ವಾಮಿಗಳು ಸಣ್ಣ ಬರಹದ ಶ್ರೀ ಸಿದ್ಧಲಿಂಗ ಸ್ವಾಮಿಗಳಿಗೆ ಅಧಿಕಾರವನ್ನು ನೀಡಿ ಲಿಂಗೈಕ್ಯರಾದರು.

ಪರಂಪರೆ:

೧. ಶ್ರೀ ಮ.ನಿ.ಪ್ರ. ಮುರುಗಿ ಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಸಣ್ಣ ಬರಹದ ಸಿದ್ಧಲಿಂಗ ಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಚನ್ನಬಸವ ಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಸಿದ್ಧಲಿಂಗ ಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಚನ್ನಬಸವ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ.ಕರ್ತೃಗುರುಗಳಾದ ಶ್ರೀ ಮುರುಗಿಸ್ವಾಮಿಗಳು, ಶ್ರೀ ಸಣ್ಣ ಬರಹದ ಸಿದ್ಧಲಿಂಗ ಸ್ವಾಮಿಗಳು ಹಾಗೂ ಶ್ರೀ ಚನ್ನಬಸವ ಸ್ವಾಮಿಗಳ ಬಗ್ಗೆ ಹೆಚ್ಚು ಮಾಹಿತಿ ದೊರೆಯುವುದಿಲ್ಲ. ನಂತರದ ಪರಂಪರೆಯ

ನಾಲ್ಕನೆಯ ಗುರುಗಳಾದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಗುಲ್ಬರ್ಗ ತಾಲ್ಲೂಕಿನ ಮಹಾಗಾಂವ್‌ನಲ್ಲಿ ಜನಿಸಿ, ೧೯೧೩ ರಲ್ಲಿ ಈ ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಬೆಳೆಸಿದರು. ಮಹಾ ತಪಸ್ವಿಗಳಾದ ಇವರು ಅರವತ್ತೂರು ಮಂಟಪ ಪೂಜೆಗಳನ್ನು ಮಾಡಿಸಿ ೧೯೩೪ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಅಥಣಿ ಶಿವಯೋಗಿಗಳ ಬಗ್ಗೆ ಹೆಚ್ಚು ಒಲವನ್ನು ಇಟ್ಟುಕೊಂಡಿದ್ದ ಗುರುಗಳು ಶಿವಯೋಗಿಗಳ ತತ್ತ್ವಾದರ್ಶಗಳನ್ನು ಪರಿಪಾಲಿಸುತ್ತಿದ್ದರು. ಗುರುಗಳು ಲಿಂಗೈಕ್ಯರಾದ ದಿನವೇ ಈ ಮಠದ ಉತ್ತರಾಧಿಕಾರಿಗಳಾದ ಶ್ರೀ ಚನ್ನಬಸವ ಸ್ವಾಮಿಗಳು ಬೀಳಗಿ ತಾಲ್ಲೂಕಿನ ನಾಗರಾಳು ಪೇಟೆಮಠದ ಶ್ರೀ ವೀರಯ್ಯ ಮತ್ತು ಶ್ರೀಮತಿ ಹುಚ್ಚಮ್ಮನವರ ಪುತ್ರರಾಗಿ ೧೯೩೪ರಲ್ಲಿ ಜನಿಸಿದರು. ನಾಗರಾಳು, ಬಾಗಲಕೋಟೆಯಲ್ಲಿ ವಿದ್ಯಾಭ್ಯಾಸ ಮುಗಿಸಿದರು. ಜೇವರ್ಗಿ ತಾಲ್ಲೂಕಿನ ಸೊನ್ನ ಗ್ರಾಮದ ಶ್ರೀ ಶಿವಾನಂದ ಸ್ವಾಮಿಗಳು ಹಾಗೂ ಮುದ್ದೇಬಿಹಾಳು ಸ್ವಾಮಿಗಳು ಈ ಪುರಾತನ ಮಠಕ್ಕೆ ಉತ್ತರಾಧಿಕಾರಿಗಳನ್ನು ಆಯ್ಕೆಮಾಡಿದರು.

ಶ್ರೀ ಚನ್ನಬಸವ ಸ್ವಾಮಿಗಳು ೧೯೪೮ ರಲ್ಲಿ ಮಠಕ್ಕೆ ಆಗಮಿಸಿ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಗುರುಗಳು ಮಠಕ್ಕೆ ಆಗಮಿಸಿದಾಗ ಮಠವು ಪೂರ್ಣ ಶಿಥಿಲಗೊಂಡಿತ್ತು. ಹದಿನಾಲ್ಕು ವರ್ಷದ ಬಾಲಕರಾದ ಗುರುಗಳು ಈ ಮಠದ ದೊಡ್ಡ ಜವಾಬ್ದಾರಿಯನ್ನು ವಹಿಸಿಕೊಂಡು, ಧಾರ್ಮಿಕ ಕಾರ್ಯಗಳನ್ನು ನಡೆಸತೊಡಗಿದರು. ನಂತರ ಗುರುಗಳು ೧೯೭೨ರಲ್ಲಿ ಹಿಮಾಲಯದಲ್ಲಿರುವ ಕೇದಾರ ಪೀಠಕ್ಕೆ ಪಾದಯಾತ್ರೆಯ ಮುಖಾಂತರ ಸಾಗಿ ಕ್ಷೇತ್ರದರ್ಶನವನ್ನು ಮಾಡಿದರು. ಅಲ್ಲದೆ ಉತ್ತರಭಾರತದ ಸಾರಾನಾಥ, ಬುದ್ಧಗಯಾ ಮುಂತಾದ ಧಾರ್ಮಿಕ ಕ್ಷೇತ್ರಗಳನ್ನು ನೋಡಿ, ಬುದ್ಧನು ಬೋಧಿಸಿದ ತತ್ತ್ವಗಳನ್ನು ಕಲ್ಲಿನಲ್ಲಿ ಕೆತ್ತಿಸಿ ಸ್ಮಾರಕಗಳನ್ನಾಗಿ ಮಾಡಿರುವುದನ್ನು ನೋಡಿದ ಗುರುಗಳು ಶರಣರತತ್ತ್ವಗಳನ್ನು ಈ ಬಗೆಯಲ್ಲಿಯೇ ಉಳಿಸ ಬೇಕೆಂದು ನಿರ್ಧರಿಸಿಕೊಂಡರು. ಗುರುಗಳು ಕೇದಾರದ ಪಾದಯಾತ್ರೆಯನ್ನು ಮುಗಿಸಿ ಬಂದ ಮೇಲೆ ಪುನಃ ೧೯೭೮ ರಲ್ಲಿ ರಾಮೇಶ್ವರಕ್ಕೆ ಪಾದಯಾತ್ರೆ ಹೋಗಿ ಬಂದರು. ಗುರುಗಳು ತಮ್ಮ ಸಂಚಾರದಲ್ಲಿ ಲೋಕಾನುಭವವನ್ನು ಪಡೆದು ಮಠವನ್ನು ಬೆಳೆಸಿದ್ದಾರೆ. ಗುರುಗಳು ಉತ್ತರಾಧಿಕಾರಿಗಳನ್ನಾಗಿ ಶ್ರೀ ಸಿದ್ಧಲಿಂಗ ದೇವರನ್ನು ನೇಮಕಮಾಡಿಕೊಂಡಿದ್ದಾರೆ. ಶ್ರೀ ಗುರುಸಿದ್ಧಯ್ಯ ಮತ್ತು ಶ್ರೀಮತಿ ಹುಚ್ಚಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಸಿದ್ಧಲಿಂಗ ದೇವರು ಧಾರವಾಡದಲ್ಲಿ ಸ್ನಾತಕೋತ್ತರ ಪದವಿಯನ್ನು ಮುಗಿಸಿ, ಹಂಪಿ ವಿಶ್ವವಿದ್ಯಾನಿಲಯದಲ್ಲಿ (ಪಿಎಚ್.ಡಿ) ಸಂಶೋಧನಾ ವಿದ್ಯಾರ್ಥಿಯಾಗಿ ಅಭ್ಯಾಸ ಮಾಡತೊಡಗಿದ್ದಾರೆ.

ವಚನ ಶಿಲಾಮಂಟಪ: ಬುದ್ಧಗಯಾದ ಮಾದರಿಯಲ್ಲಿ ಶರಣರ ವಚನಗಳನ್ನು ಶಾಶ್ವತವಾಗಿ ಉಳಿಸಲು ಮೂವತ್ತು ಲಕ್ಷ ರೂಪಾಯಿಗಳ ಯೋಜನೆಯಲ್ಲಿ, ಷಟ್‌ಸ್ಥಲಾಕಾರದಲ್ಲಿ ಬಸವೇಶ್ವರ ವಚನ ಶಿಲಾಮಂಟವನ್ನು ನಿರ್ಮಿಸಲು ಶ್ರೀ ಚನ್ನಬಸವ ಸ್ವಾಮಿಗಳು ಮುಂದಾದರು. ಮಠದ ಬಲಬದಿಯಲ್ಲಿ ವಚನ ಮಂಟಪವನ್ನು ನಿರ್ಮಿಸಿ, ಬಸವಣ್ಣನವರ ಒಂಬೈನೂರ ಐವತ್ತೊಂಬತ್ತು ವಚನಗಳು, ಪ್ರಭುದೇವರ ನೂರಾ ಒಂದು ವಚನಗಳು, ಚನ್ನಬಸವಣ್ಣನವರ ನೂರಾ ಒಂದು ವಚನಗಳು, ಅಕ್ಕಮಹಾದೇವಿಯ ನೂರಾ ಒಂದು ವಚನಗಳು ಈ ರೀತಿ ಮೊದಲ ಹಂತದ ಕಾರ್ಯವನ್ನು ಪೂರೈಸಿರುವ ಗುರುಗಳು ಮುಂದಿನ ಹಂತದ ಯೋಜನೆಗೆ ಸಿದ್ಧಗೊಳ್ಳುತ್ತಿದ್ದಾರೆ. ಈಗಾಗಲೇ ಯೋಜನೆಗೆ ಮುಜರಾಯಿ ಇಲಾಖೆ ಒಂದು ಲಕ್ಷ ರೂಪಾಯಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಒಂದೂವರೆ ಲಕ್ಷ ರೂಗಳನ್ನು ನೀಡಿದೆ. ಇಷ್ಟೆಲ್ಲಾ ಕಾರ್ಯಗಳು ಕೈಗೂಡಿದರೆ ಶರಣರ ವಚನಗಳು ಶಾಶ್ವತವಾಗಿ ಉಳಿಯುವಂತಾಗುತ್ತದೆ. ಗುರುಗಳು ಈ ಯೋಜನೆಯ ಜೊತೆಗೆ ಹಳೆಯ ಕಟ್ಟಡವನ್ನು ಅಭಿವೃದ್ಧಿಗೊಳಿಸಿ, ಹೊಸದಾಗಿ ಕಲ್ಲಿನ ಕಟ್ಟಡವನ್ನು ನಿರ್ಮಿಸಿದ್ದಾರೆ. ಕಲ್ಯಾಣಮಂಟಪ, ದಾಸೋಹ ಮಂದಿರ, ಪೂಜಾ ಕೊಠಡಿ ಹಾಗೂ ವಾಸ್ತವ್ಯ ಕೊಠಡಿಯನ್ನು ನೂತನವಾಗಿ ನಿರ್ಮಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯಪೂಜೆ, ಪ್ರತಿ ಅಮಾವಾಸ್ಯೆಯಲ್ಲಿ ಶಿವಾನುಭವ ಗೋಷ್ಠಿ, ಶ್ರಾವಣ ಮಾಸದಲ್ಲಿ ಶಿವಾನುಭವ ಕಾರ್ಯಕ್ರಮ, ಜೇಷ್ಠ ಶುದ್ಧ ಅಷ್ಟಮಿಯಂದು ಶ್ರೀ ಸಿದ್ಧಲಿಂಗ ಸ್ವಾಮಿಗಳ ಪುಣ್ಯಾರಾಧನೆ, ವೈಶಾಖ ಜೇಷ್ಠ ಮಾಸದಲ್ಲಿ ಪುರಾಣ ಪ್ರವಚನವನ್ನು ನಡೆಸಲಾಗುತ್ತಿದೆ. ನಿತ್ಯ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಿಸಲಾಗುತ್ತಿದೆ. ಶ್ರೀ ಚನ್ನಬಸವ ಸ್ವಾಮಿಗಳು ತಮ್ಮ ಕ್ರಿಯಾಶೀಲತೆಯಿಂದ ಶಾಶ್ವತವಾದ ಕೆಲಸವನ್ನು ಮಾಡತೊಡಗಿ

ನಾಡಿನ ಗಮನ ಸೆಳೆದಿದ್ದಾರೆ. ಇವರು ಉತ್ತಮ ವಾಗ್ಮಿಗಳಾಗಿ ಶರಣ ತತ್ತ್ವವನ್ನು ಪ್ರಚಾರಗೊಳಿಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಚನ್ನಬಸವ ಸ್ವಾಮಿಗಳು, ಶ್ರೀ ವಿರಕ್ತಮಠ, ಇಂಗಳೇಶ್ವರ, ಬಸವನಬಾಗೇವಾಡಿ ತಾ, ಬಿಜಾಪುರ ಜಿಲ್ಲೆ.

ಹಿರೇಮಠ: ಈ ಗ್ರಾಮದ ಮಧ್ಯಭಾಗದಲ್ಲಿರುವ ಹಿರೇಮಠವು ರಂಭಾಪುರಿ ಪೀಠದ ಶಾಖಾ ಮಠವಾಗಿದೆ. ಪುರಾತನ ಕಾಲದಲ್ಲಿ ಸ್ಥಾಪನೆಯಾದ ಈ ಮಠದ ಸ್ಥಾಪಕರ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಇಂಗಳೇಶ್ವರದ ಪಟ್ಟಕಂತೆ ಹಿರೇಮಠದ ಪುತ್ರವರ್ಗದ ಪರಂಪರೆಯ ಗುರುಗಳು ಈ ಮಠದ ಉತ್ತರಾಧಿಕಾರಿಗಳಾಗುತ್ತಾ ಮಠವನ್ನು ಮುನ್ನಡೆಸಿದ್ದಾರೆ.

ಪರಂಪರೆ:

೧. ಷ.ಬ್ರ.ಶ್ರೀ ಬೃಂಗೇಶ್ವರ ಶಿವಾಚಾರ್ಯಸ್ವಾಮಿಗಳು

೨. ಷ.ಬ್ರ.ಶ್ರೀ ಶಿವಬಸವ ಶಿವಾಚಾರ್ಯಸ್ವಾಮಿಗಳು

೩. ಷ.ಬ್ರ.ಶ್ರೀ ಬೃಂಗೇಶ್ವರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯಲ್ಲಿ ಮೂರು ಜನ ಗುರುಗಳ ಹೆಸರನ್ನು ಮಾತ್ರ ಗುರುತಿಸಬಹುದಾಗಿದೆ.ಮಠದಲ್ಲಿ ಮೂರು ಗದ್ದುಗೆಗಳು ಸ್ಥಾಪನೆಯಾಗಿವೆ. ಆದರೆ ಈ ಗದ್ದುಗೆಗಳು ಯಾರ ಹೆಸರಲ್ಲಿ ಸ್ಥಾಪನೆಯಾಗಿವೆ ಎಂಬುದು ತಿಳಿದುಬರುತ್ತಿಲ್ಲ. ಈಗ ದಾಖಲಿಸಿರುವ ಮೊದಲನೆಯ ಗುರುಗಳಾದ ಶ್ರೀ ಬೃಂಗೇಶ್ವರ ಶಿವಾಚಾರ್ಯ ಸ್ವಾಮಿಗಳು ನೂರು ವರ್ಷಗಳಿಗಿಂತಲೂ ಮೊದಲೇ ಲಿಂಗೈಕ್ಯರಾಗಿದ್ದು, ಇವರ ನಂತರ ಶ್ರೀ ಶಿವಬಸವ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಇವರು ದೀರ್ಘ ಕಾಲ ಮಠದ ಆಡಳಿತವನ್ನು ನಡೆಸಿ, ಶ್ರೀ ಬೃಂಗೇಶ್ವರ ಶಿವಾಚಾರ್ಯ ಸ್ವಾಮಿಗಳಿಗೆ ಅಧಿಕಾರವನ್ನು ನೀಡಿ ವಿಶ್ರಾಂತ ಜೀವನವನ್ನು ನಡೆಸುತ್ತಿದ್ದಾರೆ.

ಈಗಿನ ಗುರುಗಳಾದ ಶ್ರೀ ಬೃಂಗೇಶ್ವರ ಶಿವಾಚಾರ್ಯ ಸ್ವಾಮಿಗಳು ಮನಗೋಳಿಯ ಶ್ರೀ ಶರಣಯ್ಯ ಮತ್ತು ಶ್ರೀಮತಿ ದಾನಮ್ಮನವರ ಪುತ್ರರಾಗಿ ೧೯೭೦ರಲ್ಲಿ ಜನಿಸಿದರು. ಇವರು ಮೆಟ್ರಿಕ್‌ವರೆಗೆ ವಿದ್ಯಾಭ್ಯಾಸವನ್ನು ಮುಗಿಸಿ ೧೯೭೩ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡು, ಮಠವನ್ನು ಮುನ್ನಡೆಸಿಕೊಂಡು ಬರುತ್ತಿದ್ದಾರೆ. ಗುರುಗಳು ಈ ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ಶ್ರಾವಣಮಾಸದಲ್ಲಿ ಭಜನೆ ಹಾಗೂ ಶ್ರೀ ಬೃಂಗೇಶ್ವರ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಬೃಂಗೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಇಂಗಳೇಶ್ವರ, ಬಸವನ ಬಾಗೇವಾಡಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ಜೈನಾಪುರ

ಬಸವನ ಬಾಗೇವಾಡಿ ತಾಲ್ಲೂಕಿನ ಜೈನಾಪುರ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣ ಭಾಗಕ್ಕೆ ಆರು ಕಿ.ಮೀದೂರ ದಲ್ಲಿದೆ. ಜೈನರು ಹೆಚ್ಚು ಸಂಖ್ಯೆಯಲ್ಲಿ ವಾಸಮಾಡುತ್ತಿದ್ದ ಕಾರಣಕ್ಕೆ ಈ ಗ್ರಾಮಕ್ಕೆ ಜೈನಾಪುರ ಎಂಬ ಹೆಸರು ಬಂದಿದೆ ಎಂದು ಸ್ಥಳ ಪುರಾಣ ಹೇಳುತ್ತದೆ. ಬಸವನ ಬಾಗೇವಾಡಿಯ ಪುರಸಭೆಯ ನಾಲ್ಕನೆಯ ವಿಭಾಗವಾಗಿರುವ ಈ ಗ್ರಾಮವು ಇನ್ನೂ ನಾಗರಿಕರ ಸೌಲತ್ತುಗಳನ್ನು ಕಾಣಬೇಕಾಗಿದೆ. ಈ ಗ್ರಾಮದ ಶ್ರೀ ಪವಾಡ ಬಸವೇಶ್ವರ ಬೃಹನ್ಮಠವು ಅಸ್ತಿತ್ವದಲ್ಲಿದೆ.

ಪವಾಡ ಬಸವೇಶ್ವರ ಬೃಹನ್ಮಠ: ಜೈನಾಪುರ ಗ್ರಾಮದ ದಕ್ಷಿಣದ ಹೊರಭಾಗದಲ್ಲಿ ಶ್ರೀ ರಂಭಾಪುರಿ ಪೀಠದ ಶಾಖಾ ಮಠವಾದ ಶ್ರೀ ಪವಾಡ ಬಸವೇಶ್ವರ ಬೃಹನ್ಮಠವು ಹದಿನಾರನೆಯ ಶತಮಾನದಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಮಠ ಸ್ಥಾಪನೆ: ಶ್ರೀ ಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು ಲೋಕ ಸಂಚಾರ ಕೈಗೊಂಡು ಧರ್ಮಪ್ರಸಾರವನ್ನು ಮಾಡುತ್ತಾ ಜೈನಾಪುರ, ನಿಡಗುಂದಿ ನಡುಸೀಮೆಯಲ್ಲಿ ಬಂದು ನೆಲೆಸಿ ಅನುಷ್ಠಾನಗೊಂಡಿದ್ದಾರೆ. ಅನುಷ್ಠಾನಗೊಂಡ ಗುರುಗಳು ಭಕ್ತರ ಉದ್ಧಾರಕ್ಕೆಂದು ಇಲ್ಲಿ ಅನೇಕ ಪವಾಡಗಳನ್ನು ಮಾಡಿ 'ಶ್ರೀ ಪವಾಡ ಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು' ಎಂದು ಹೆಸರು ಪಡೆದರು. ತಮ್ಮ ಯೋಗಶಕ್ತಿಯಿಂದ ಭಕ್ತರಿಗೆ ಕಾಶಿ ಲಿಂಗವನ್ನು ತೋರಿಸಿದ ಮಹಾತ್ಮರೆಂದು ಈಗಲೂ ಈ

ಪ್ರಾಂತ್ಯದ ಜನ ಹೇಳುತ್ತಾರೆ. ಒಮ್ಮೆ ಒಂದು ಹಿಡಿಅಕ್ಕಿಯಲ್ಲಿ ಐದುನೂರು ಜನ ಭಕ್ತರಿಗೆ ಪ್ರಸಾದವನ್ನು ಮಾಡಿಸಿ ಬಡಿಸಿದ್ದರಂತೆ. ಈ ರೀತಿ ಕರ್ತೃಗುರುಗಳಾದ ಶ್ರೀ ಪವಾಡ ಬಸವೇಶ್ವರ ಶಿವಾಚಾರ್ಯ ಸ್ವಾಮಿಗಳ ಬಗ್ಗೆ ನೂರಾರು ಕಥೆಗಳು ಕೇಳಿಬರುತ್ತಿವೆ. ಗುರುಗಳು ಇಲ್ಲಿ ನೆಲೆ ನಿಂತಮೇಲೆ ಧಾರ್ಮಿಕಆಚರಣೆಗಳು ನಡೆಯತೊಡಗಿ ಧರ್ಮಸಂಸ್ಕಾರ ನೆಲೆಗೊಂಡಿತು. ಶ್ರೀ ಪವಾಡ ಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು ಅನೇಕ ವರ್ಷಗಳಕಾಲ ಇಲ್ಲಿ ನೆಲೆಸಿ(ಜೀವಂತ ಸಮಾಧಿ) ಲಿಂಗೈಕ್ಯರಾದರು.

ಪರಂಪರೆ:
೧. ಷ.ಬ್ರ.ಶ್ರೀ ಪವಾಡ ಬಸವೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಸಂಗನ ಬಸವ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ರೇಣುಕ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ಪವಾಡ ಬಸವೇಶ್ವರ ಶಿವಾಚಾರ್ಯ ಸ್ವಾಮಿಗಳ ನಂತರ ಮಠವು ಅನೇಕ ವರ್ಷಗಳ ಕಾಲ ಖಾಲಿ ಉಳಿಯಿತು. ಮಠದ ಕಟ್ಟಡವು ಪೂರ್ಣ ಶಿಥಿಲಗೊಂಡು ಹಾಳಾಗಿತ್ತು. ಈ ಸಂದರ್ಭದಲ್ಲಿ ಜೈನಾಪುರ ಗ್ರಾಮದ ಶ್ರೀ ಗುರಪ್ಪ ಮತ್ತು ಶ್ರೀಮತಿ ಸೀತಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಸಂಗನಬಸವ ಶಿವಾಚಾರ್ಯ ಸ್ವಾಮಿಗಳು ಮಠಕ್ಕೆ ಬಂದು ಹಾಳಾದ ಮಠವನ್ನು ಅಭಿವೃದ್ಧಿಗೊಳಿಸಿದರು. ನಂತರ ಇಟಗಿ ಶ್ರೀ ಪಟ್ಟದ ಗುರುಗಳಿಂದ ಅನುಗ್ರಹ ಪಡೆದು ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಕರ್ತೃಗುರುಗಳ ಕರ್ತೃತ್ವಶಕ್ತಿಯಿಂದ ಜಾಗೃತ ಸ್ಥಳವಾಗಿ ರೂಪುಗೊಂಡಿದ್ದ ಈ ಮಠದಲ್ಲಿ ಕಲ್ಯಾಣಮಂಟಪ, ದಾಸೋಹ ಮಂದಿರ, ಕರ್ತೃಗದ್ದುಗೆಗೆ ದೇವಸ್ಥಾನವನ್ನು ನಿರ್ಮಿಸಿ ಮಠದ ಸಮುಚ್ಚಯವನ್ನು ಅಭಿವೃದ್ಧಿಗೊಳಿಸಿದರು. ಶ್ರೀ ಸಂಗನಬಸವ ಶಿವಾಚಾರ್ಯ ಸ್ವಾಮಿಗಳು ಶಿವಪೂಜಾ ನಿಷ್ಠೆ ಮತ್ತು ತಪೋಶಕ್ತಿಯಿಂದ ಮಠವನ್ನು ಪ್ರಸಿದ್ಧಿಗೊಳಿಸಿ, ಅರವತ್ತೆಂಟು ವರ್ಷಗಳ ದೀರ್ಘ ಕಾಲ ಮಠದ ಆಡಳಿತವನ್ನು ನಡೆಸಿ ೧೯೯೦ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಈಗ ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು ಮಠದಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಾ, ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು ಇಂಡಿ ತಾಲ್ಲೂಕಿನ ಅರ್ಜುನಗಿ ಹಿರೇಮಠದ ಶ್ರೀ ಸೋಮಯ್ಯ ಮತ್ತು ಶ್ರೀಮತಿ ವಿಮಲಾಬಾಯಿ ಇವರ ಪುತ್ರರಾಗಿ ೧೯೭೦ರ ಆಗಸ್ಟ್ ತಿಂಗಳಿನಲ್ಲಿ ಜನಿಸಿದರು. ಇವರು ಅರ್ಜುನಗಿಯಲ್ಲಿ ಪ್ರಾಥಮಿಕಶಿಕ್ಷಣ ಮತ್ತು ಅಲಮೇಲು ಗ್ರಾಮದಲ್ಲಿ ಪ್ರೌಢಶಿಕ್ಷಣವನ್ನು ಮುಗಿಸಿ, ಶಿವಯೋಗ ಮಂದಿರದಲ್ಲಿ ಐದುವರ್ಷಗಳ ಕಾಲ ಧಾರ್ಮಿಕ ಮತ್ತು ಸಾಹಿತ್ಯಿಕ ವಿಚಾರಗಳಲ್ಲಿ ಶಿಕ್ಷಣ ಪಡೆದರು. ನಂತರ ಸೋಲಾಪುರದ ರೇವಣಸಿದ್ಧಾಶ್ರಮ ದಲ್ಲಿ ೧೯೯೩ರವರೆಗೆ ಅಭ್ಯಾಸ ಮಾಡಿ ಜೈನಾಪುರದ ಭಕ್ತರ ಅಪೇಕ್ಷೆಯ ಮೇರೆಗೆ ೧೯೯೩ರಲ್ಲಿ ಮಠಕ್ಕೆ ಆಗಮಿಸಿದರು. ಮಠದಲ್ಲಿ ೧೯೯೦ ರಿಂದ ಮಠಾಧೀಶರು ಇಲ್ಲದ ಕಾರಣ ಮಠವು ಶಿಥಿಲಗೊಂಡು ಅವ್ಯವಸ್ಥೆಯ ಆಗರವಾಗಿತ್ತು. ಗುರುಗಳು ಮಠಕ್ಕೆ ಬಂದ ಮೇಲೆ ಪಟ್ಟಾಧಿಕಾರವನ್ನು ಮುಂದೂಡಿ, ಮಠದ ಅಭಿವೃದ್ಧಿಯ ಕಡೆಗೆ ಗಮನಕೊಟ್ಟು ಅರ್ಧಕ್ಕೆ ನಿಂತಿದ್ದ ಕಲ್ಯಾಣ ಮಂಟಪದ ಕಾರ್ಯವನ್ನು ಮುಗಿಸಿ, ಮಠದ ಶಿಖರ ಹಾಗೂ ಮಂಗಲ ಭವನವನ್ನು ಸ್ಥಾಪಿಸಿದರು. ಮಠವು ವ್ಯವಸ್ಥಿತವಾಗಿ ರೂಪುಗೊಂಡ ಮೇಲೆ ೧೯೯೯ರ ಜುಲೈ ಏಳರಂದು ಪಟ್ಟಾಧಿಕಾರವನ್ನು ಪಡೆದುಕೊಂಡರು. ರಂಭಾಪುರಿ ಪೀಠದ ಜಗದ್ಗುರು ಶ್ರೀ ಪ್ರಸನ್ನ ರೇಣುಕ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರ ಸಾನಿಧ್ಯದಲ್ಲಿ ನಲವತ್ತೊಂದು ಜನ ಶಿವಾಚಾರ್ಯರ ಸಮ್ಮುಖದಲ್ಲಿ ಅಧಿಕಾರವನ್ನು ವಹಿಸಿಕೊಂಡ ಗುರುಗಳು, ಅಂದು ಎಪ್ಪತ್ತೈದು ಸಾಮೂಹಿಕ ವಿವಾಹಗಳನ್ನು ನಡೆಸಿದ್ದರು.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗುರುಗಳ ಎರಡು ಗದ್ದುಗೆಗಳಿಗೆ ನಿತ್ಯ ರುದ್ರಾಭಿಷೇಕ, ಅಮಾವಾಸ್ಯೆಯಲ್ಲಿ ಶಿವಾನುಭವ ಗೋಷ್ಠಿ, ಆಗಿ ಹುಣ್ಣಿಮೆಯಲ್ಲಿ ಮೂರು ದಿನ ಶ್ರೀ ಪವಾಡ ಬಸವೇಶ್ವರರ ರಥೋತ್ಸವ, ಮಹಾಶಿವರಾತ್ರಿಯಲ್ಲಿ ಎರಡು ದಿನ ಶ್ರೀ ಸಂಗನ ಬಸವ ಸ್ವಾಮಿಗಳ ರಥೋತ್ಸವವನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಶಿವದೀಕ್ಷೆ ಹಾಗೂ ಬಂದಂತಹ ಎಲ್ಲಾ ಭಕ್ತರಿಗೆ ಅನ್ನ ದಾಸೋಹವನ್ನು ನಡೆಸಲಾಗುತ್ತಿದೆ. ಜೈನಾಪುರದ ಮಧ್ಯಭಾಗದಲ್ಲಿ ಒಂದು ಶಾಖಾ ಮಠವಿದ್ದು, ಇಲ್ಲಿಯೂ ಧಾರ್ಮಿಕ ಕಾರ್ಯಗಳನ್ನು ನಡೆಸಲಾಗುತ್ತಿದೆ.

ಶಿಕ್ಷಣ: ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು ಮಠಕ್ಕೆ ಆಗಮಿಸಿದ ಮೇಲೆ ಗ್ರಾಮಾಂತರ ಮಕ್ಕಳ ಕಲಿಕೆಗೆ ನೆರವಾಗಲೆಂದು

ಜೈನಾಪುರದಲ್ಲಿ ಬಾಲವಾಡಿಯನ್ನು ಸ್ಥಾಪಿಸಿದ್ದಾರೆ. ಮಠದಲ್ಲಿ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಆಶ್ರಯ ಕಲ್ಪಿಸಿ ವಸತಿ ಮತ್ತು ಪ್ರಸಾದಕ್ಕೆ ವ್ಯವಸ್ಥೆಯನ್ನು ಮಾಡಿದ್ದಾರೆ. ಗುರುಗಳು ಪ್ರಗತಿಪರ ಧೋರಣೆಯೊಂದಿಗೆ ಸಮಷ್ಟಿ ಸಮಾಜದ ಒಳಿತಿಗಾಗಿ ಶ್ರಮಿಸುತ್ತಾ, ವೈಚಾರಿಕ ನೆಲೆಗಟ್ಟಿನಲ್ಲಿ ಸಮಾಜವನ್ನು ರೂಪಿಸುತ್ತಾ, ಸಂಘಟನಾತ್ಮಕ ಹಾಗೂ ರಚನಾತ್ಮಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು, ಶ್ರೀ ಪವಾಡ ಬಸವೇಶ್ವರ ಮಠ, ಜೈನಾಪುರ, ಬಸವನ ಬಾಗೇವಾಡಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ಡೋಣೂರು

ಬಸವನ ಬಾಗೇವಾಡಿ ತಾಲ್ಲೂಕಿನ ಡೋಣೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹದಿನೆಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಚಾನುಕೋಟಿಮಠವು ಅಸ್ತಿತ್ವದಲ್ಲಿದೆ.

ಚಾನುಕೋಟಿಮಠ: ಡೋಣೂರು ಗ್ರಾಮದಲ್ಲಿ ಉಜ್ಜಯಿನಿ ಪೀಠದ ಶಾಖಾ ಮಠವಾದ ಈ ಮಠವು ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳು ಈ ಮಠದ ಕರ್ತೃಗುರುಗಳು ಎಂದು ಹೇಳಲಾಗುತ್ತಿದೆ. ಇವರು ಡೋಣೂರಿನಲ್ಲಿ ಮಠವನ್ನು ಸ್ಥಾಪಿಸಿದ ನಂತರ ಲೋಕ ಸಂಚಾರ ಕೈಗೊಂಡು ಮಸಬಿನಾಳ, ಮುಳ್ಳಹಳ್ಳ, ಯಂಬತ್ನಾಳು, ಚಾಂದಕವಟೆ, ಕೊಟ್ಟೂರು ಮುಂತಾದ ಸ್ಥಳಗಳಲ್ಲಿ ಅನುಷ್ಠಾನಗೊಂಡು ಮಠವನ್ನು ಸ್ಥಾಪಿಸಿರುತ್ತಾರೆ. ಇವರು ಲೋಕಸಂಚಾರ ಕೈಗೊಂಡಿದ್ದ ಸಂದರ್ಭದಲ್ಲಿ ಧರ್ಮಬೋಧನೆಯಿಂದ ಸಮಾಜವನ್ನು ಬೆಳೆಸಿ ಡೋಣೂರು ಮಠದಲ್ಲಿ ಜೀವಂತ ಸಮಾಧಿಯಾದರು. ಇವರು ನಿರ್ವಿಕಲ್ಪ ಸಮಾಧಿಯಾದ ಮೇಲೆ ಸುಮಾರು ಇನ್ನೂರು ವರ್ಷಗಳ ಕಾಲ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿದಿತ್ತು.

ಪರಂಪರೆ:
೧. ಷ.ಬ್ರ.ಶ್ರೀ ಮರುಳಸಿದ್ಧ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃ ಗುರುಗಳಾದ ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಖಾಲಿ ಉಳಿದಿದ್ದ ಮಠಕ್ಕೆ ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ೧೯೬೩ ರಲ್ಲಿ ಅಧಿಕಾರಕ್ಕೆ ಬರುತ್ತಾರೆ. ಇವರು ಕೊಟ್ಟೂರು ಮತ್ತು ಡೋಣೂರಿನ ಮಠಗಳನ್ನು ಅಭಿವೃದ್ಧಿಪಡಿಸಿ ೧೯೭೮ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದಿದ್ದಾರೆ.

ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಡೋಣೂರಿನಲ್ಲಿ ಜನಿಸಿ,ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಮುಗಿಸಿ ಪಂಚಾಪೀಠಾಧೀಶರ ಸಮ್ಮುಖದಲ್ಲಿ೧೯೭೮ರ ಡಿಸೆಂಬರ್ ಇಪ್ಪತ್ತೆರಡರಂದು ಪಟ್ಟಾಧಿಕಾರವನ್ನು ವಹಿಸಿಕೊಂಡ ಮೇಲೆ ಚಿಮ್ಮಲಗಿ ಮಠದ ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳ ಮಾರ್ಗದರ್ಶನದಲ್ಲಿ ವಿದ್ಯಾಭ್ಯಾಸವನ್ನು ಮುಂದುವರೆಸಿ ಸ್ನಾತಕೋತ್ತರ ಪದವಿಯನ್ನು ಪಡೆದು ಮಠಕ್ಕೆ ಆಗಮಿಸಿದ್ದಾರೆ. ಡೋಣೂರು ಮತ್ತು ಕೊಟ್ಟೂರುಮಠಗಳನ್ನು ಅಭಿವೃದ್ಧಿಪಡಿಸಿ ಕೊಟ್ಟೂರಿ ನಲ್ಲಿಯೇ ನೆಲೆಸಿ, ಕೊಟ್ಟೂರು ಬಸವೇಶ್ವರ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ೧೯೮೭ ರಲ್ಲಿ ನೇಮಕಗೊಂಡಿದ್ದರು. ನಂತರ ವೃತ್ತಿಗೆ ರಾಜೀನಾಮೆ ನೀಡಿ ಮಠದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಸಂಗೀತ, ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ವೇದಿಕೆಯನ್ನು ನಿರ್ಮಿಸಿ ಉತ್ತೇಜನ ನೀಡಲು ಜೀವನ ದರ್ಶನ ಪರಿಷತ್ತನ್ನು ೧೯೯೨ ರಲ್ಲಿ ಸ್ಥಾಪಿಸಿದ್ದಾರೆ. ೧೯೯೨ ರಲ್ಲಿ ಕೊಟ್ಟೂರಿನಲ್ಲಿ ನೂತನ ಕಟ್ಟಡವನ್ನು ಸ್ಥಾಪಿಸಿ ಪಂಚಾಪೀಠಾಧೀಶರನ್ನು ಕರೆಸಿ ಉದ್ಘಾಟನೆಯನ್ನು ಮಾಡಿಸಿದ್ದಲ್ಲದೆ, ಧರ್ಮಜಾಗೃತಿ ಸಮಾವೇಶವನ್ನು ನಡೆಸಿದ್ದಾರೆ. ಈ ರೀತಿ ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ತಮ್ಮನ್ನು ತೊಡಗಿಸಿಕೊಂಡ ಗುರುಗಳು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಪರಂಪರೆಯ ಗುರುಗಳ ಐದು ಗದ್ದುಗೆಗಳು ಸ್ಥಾಪನೆಯಾಗಿದ್ದು ನಿತ್ಯ ಪೂಜೆಯನ್ನು ನಡೆಸಲಾಗುತ್ತಿದೆ. ಅಮಾವಾಸ್ಯೆಯಲ್ಲಿ ವಿಶೇಷ ಪೂಜೆ, ಭಾದ್ರಪದ ಅಮಾವಾಸ್ಯೆಯಲ್ಲಿ ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳ ಜಾತ್ರೆ, ಕೆಂಡೋತ್ಸವ ಹಾಗೂ ಅಡ್ಡಪಲ್ಲಕ್ಕಿ ಉತ್ಸವಗಳನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಚಾನುಕೋಟಿ ಮಠ, ಡೋಣೂರು, ಬಸವನ ಬಾಗೇವಾಡಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ದಿಂಡವಾರ

ಬಸವನಬಾಗೇವಾಡಿ ತಾಲ್ಲೂಕಿನ ದಿಂಡವಾರ ಗ್ರಾಮವು ತಾಲ್ಲೂಕು ಕೇಂದ್ರದಿಂದ ಈಶಾನ್ಯ ಭಾಗಕ್ಕೆ ಹದಿನಾಲ್ಕು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಗಚ್ಚಿನಮಠವು ಅಸ್ತಿತ್ವದಲ್ಲಿದೆ.

ಗಚ್ಚಿನಮಠ: ದಿಂಡವಾರ ಗ್ರಾಮದಲ್ಲಿ ಪಂಚ ಪೀಠದ ಶಾಖಾಮಠವಾದ ಶ್ರೀ ಗಚ್ಚಿನಮಠವು ಸ್ಥಾಪನೆಯಾಗಿದೆ. ಹದಿನಾರನೆಯ ಶತಮಾನದಲ್ಲಿ ಶ್ರೀ ಮುರುಘೇಂದ್ರ ಶಿವಾಚಾರ್ಯ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿದ್ದರೆಂದು ಹೇಳಲಾಗುತ್ತಿದೆ. ಪುರಾತನ ಕಾಲದಲ್ಲಿ ಹುನುಗುಂದ ತಾಲ್ಲೂಕಿನ ಹಡಗಲಿಯ ಶ್ರೀ ರುದ್ರ ಸ್ವಾಮಿಗಳು ಇಲ್ಲಿ ಅನುಷ್ಠಾನಗೊಂಡು ಈ ಸ್ಥಳವನ್ನು ಜಾಗೃತ ಸ್ಥಳವನ್ನಾಗಿ ರೂಪಿಸಿದ್ದರು. ಕರ್ತೃಗುರುಗಳ ನಂತರ ಮಠದ ಪರಂಪರೆಯ ಬಗ್ಗೆ ಸ್ಪಷ್ಟವಾದ ಆಧಾರಗಳು ಇಲ್ಲದ ಕಾರಣ ಪರಂಪರೆಯನ್ನು ಉಲ್ಲೇಖಿಸಲಾಗುತ್ತಿಲ್ಲ. ಪ್ರಸ್ತುತ ಶ್ರೀ ಲಿಂಗಾನಂದ ಶಿವಾಚಾರ್ಯ ಸ್ವಾಮಿಗಳು ಮಠದ ಆಡಳಿತವನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಲಿಂಗಾನಂದ ಶಿವಾಚಾರ್ಯಸ್ವಾಮಿಗಳು, ಶ್ರೀ ಗಚ್ಚಿನಮಠ,ದಿಂಡವಾರ, ಬಸವನಬಾಗೇವಾಡಿ ತಾ, ಬಿಜಾಪುರಜಿಲ್ಲೆ.

ನಿಡಗುಂದಿ

ಬಸವನ ಬಾಗೇವಾಡಿ ತಾಲ್ಲೂಕಿನ ನಿಡಗುಂದಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ರುದ್ರಸ್ವಾಮಿ ಪಟ್ಟದ ಮಠವು ಅಸ್ತಿತ್ವದಲ್ಲಿದೆ.

ರುದ್ರಸ್ವಾಮಿ ಪಟ್ಟದಮಠ: ನಿಡಗುಂದಿ ಗ್ರಾಮದ ಮಧ್ಯಭಾಗದಲ್ಲಿ ರಂಭಾಪುರಿ ಪೀಠದ ಶಾಖಾ ಮಠವಾದ ಶ್ರೀ ರುದ್ರಸ್ವಾಮಿ ಪಟ್ಟದಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದ ಈ ಮಠವನ್ನು ಶ್ರೀ ರುದ್ರಸ್ವಾಮಿ ಶಿವಾಚಾರ್ಯ ಸ್ವಾಮಿಗಳು ಸ್ಥಾಪನೆ ಮಾಡಿದ ಕಾರಣಕ್ಕೆ ಮಠಕ್ಕೆ ಶ್ರೀ ರುದ್ರಸ್ವಾಮಿ ಪಟ್ಟದಮಠ ಎಂಬ ಹೆಸರು ಬಂದಿದೆ. ಹುನಗುಂದ ತಾಲ್ಲೂಕಿನ ಹಡಗಲಿ ಮಠದ ಶಾಖಾ ಮಠವಾದ ಇಲ್ಲಿ ಹಡಗಲಿ ಮಠದ ಗುರು ಪರಂಪರೆಯೇ ಈ ಮಠದ ಪರಂಪರೆಯಾಗಿ ಬೆಳೆದು ಬಂದಿದೆ.

ಕರ್ತೃಗುರುಗಳಾದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಹಡಗಲಿ ಗ್ರಾಮದಲ್ಲಿ ಮಠವನ್ನು ಸ್ಥಾಪಿಸಿ, ನಂತರ ಲೋಕ ಸಂಚಾರ ಕೈಗೊಂಡು ನಿಡಗುಂದಿಯಲ್ಲಿ ಮಠವನ್ನು ಸ್ಥಾಪಿಸಿ ಧರ್ಮ ಪ್ರಚಾರವನ್ನು ಕೈಗೊಂಡರು. ಅಂದು ಗುರುಗಳು ನೆಲೆ ನಿಂತು ಸ್ಥಾಪಿಸಿದ ಮಠವು ಈತನಕವೂ ಹಡಗಲಿ ಮಠದ ಶಾಖಾಮಠವಾಗಿ ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಈ ಮಠದ ಪರಂಪರೆಯಲ್ಲಿ ಈವರೆಗೆ ಹದಿನೇಳು ಜನ ಗುರುಗಳು ಒಂದೇ ಹೆಸರಿನಲ್ಲಿ ಆಡಳಿತವನ್ನು ವಹಿಸಿಕೊಂಡು ಮಠವನ್ನು ಬೆಳೆಸಿದ್ದಾರೆ. ಇಂತಹ ಹಿರಿತನದ ಪರಂಪರೆಯಲ್ಲಿ ಬೆಳೆದು ಬಂದಿರುವ ಈ ಮಠದ ಪರಂಪರೆಯ ಗುರುಗಳ ಬಗ್ಗೆ ನಿಖರವಾದ ಮಾಹಿತಿಗಳು ದೊರೆಯದಾಗಿದೆ.

ಈಗಿನ ಮಠಾಧ್ಯಕ್ಷರಾದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ೧೯೭೪ ರಲ್ಲಿ ನಿಡಗುಂದಿಯಲ್ಲಿ ಪಟ್ಟಾಧಿಕಾರ ವನ್ನು ವಹಿಸಿಕೊಂಡಿದ್ದಾರೆ. ಗುರುಗಳು ಬಳ್ಳಾರಿ ಜಿಲ್ಲೆಯ ಶ್ರೀಧರಗಡ್ಡೆ ಗ್ರಾಮದಲ್ಲಿ ಜನಿಸಿ ಶಿವಯೋಗ ಮಂದಿರ, ಹುಬ್ಬಳ್ಳಿ ಮತ್ತು ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡಿ ಮಠಕ್ಕೆ ಆಗಮಿಸಿ, ಅಧಿಕಾರವನ್ನು ವಹಿಸಿಕೊಂಡರು. ಇಲ್ಲಿ ನೆಲೆನಿಂತ ಮೇಲೆ ಮಠವನ್ನು ಸರ್ವಾಂಗೀಣವಾಗಿ ಅಭಿವೃದ್ಧಿಪಡಿಸಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದರು.

ಧಾರ್ಮಿಕ ಕಾರ್ಯಗಳು: ನಿಡಗುಂದಿ ಮಠದಲ್ಲಿರುವ ಆರು ಗದ್ದುಗೆಗಳಿಗೆ ನಿತ್ಯ ಪೂಜೆ ಹಾಗೂ ಶಿವಭಜನೆ ಕಾರ್ಯಕ್ರಮ, ಅಮಾವಾಸ್ಯೆಯಲ್ಲಿ ಶಿವಾನುಭವಗೋಷ್ಠಿ, ದವನದಹುಣ್ಣಿಮೆ ಆದ ಐದನೆಯ ದಿನಕ್ಕೆ ಕರ್ತೃಗುರುಗಳ ಜಾತ್ರೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭಗಳಲ್ಲಿ ಅನ್ನದಾಸೋಹವನ್ನು ನಡೆಸಲಾಗುತ್ತಿದೆ. ಅನುಷ್ಠಾನಮೂರ್ತಿಗಳಾದ ಈಗಿನ ಶ್ರೀ ರುದ್ರ ಮುನಿ ಶಿವಾಚಾರ್ಯ ಸ್ವಾಮಿಗಳು ಈತನಕ ಐದು ಅನುಷ್ಠಾನಗಳನ್ನು ಪೂರೈಸಿದ್ದಾರೆ. ಮಠದ ವತಿಯಿಂದ ಶ್ರೀ ರುದ್ರೇಶ್ವರ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿ, ಪ್ರಾಥಮಿಕ ಶಾಲೆಯನ್ನು ನಡೆಸಲಾಗುತ್ತಿದೆ. ಮಠದಲ್ಲಿ ಉಚಿತ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಿ ಬಡಮಕ್ಕಳಿಗೆ ಆಶ್ರಯವನ್ನು ಕಲ್ಪಿಸಲಾಗಿದೆ.

ವಿಳಾಸ: ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ರುದ್ರಸ್ವಾಮಿ ಪಟ್ಟದಮಠ, ನಿಡಗುಂದಿ,ಬಸವನ ಬಾಗೇವಾಡಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ಬಸವನ ಬಾಗೇವಾಡಿ

ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿಯು ಜಿಲ್ಲಾ ಕೇಂದ್ರದಿಂದ ಆಗ್ನೇಯಕ್ಕೆ ನಲವತ್ತು ಕಿ.ಮೀ ದೂರದಲ್ಲಿದೆ. ತಾಲ್ಲೂಕು ಕೇಂದ್ರವಾಗಿರುವ ಬಸವನ ಬಾಗೇವಾಡಿಯು ಕರ್ನಾಟಕದ ಇತಿಹಾಸವು ಮರೆಯಲಾರದ ಪಟ್ಟಣವಾಗಿದೆ. ಹನ್ನೆರಡನೆಯ ಶತಮಾನದಲ್ಲಿ ನಡೆದ ಧಾರ್ಮಿಕ ಹಾಗೂ ಸಾಮಾಜಿಕ ಕ್ರಾಂತಿಯ ಹರಿಕಾರರಾದ ಶ್ರೀ ಬಸವಣ್ಣನವರ ಜನ್ಮಸ್ಥಳ ಇದಾಗಿದೆ. ಈ ಕಾರಣಕ್ಕಾಗಿ ಬಾಗೇವಾಡಿಯು ಬಸವನ ಬಾಗೇವಾಡಿ ಎಂದು ಹೆಸರು ಪಡೆದು ಲೋಕ ವಿಖ್ಯಾತಿಗೊಂಡಿದೆ. ಇಂತಹ ಪಟ್ಟಣ ದಲ್ಲಿ ಪುರಾತನ ಕಾಲದಿಂದಲೂ ವೀರಶೈವ ಧರ್ಮ ಪ್ರಬಲವಾಗಿ ಬೆಳೆದಿತ್ತು ಎಂಬುದಕ್ಕೆ ಇಲ್ಲಿ ಹನ್ನೆರಡು ವೀರಶೈವ ಮಠಗಳು ಸ್ಥಾಪನೆಯಾಗಿರುವುದೇ ಇದಕ್ಕೆ ಸಾಕ್ಷಿಯಾಗಿವೆ. ಈ ಹನ್ನೆರಡು ಮಠಗಳಲ್ಲಿ ಪ್ರಸ್ತುತ ಶ್ರೀ ಪಟ್ಟದ ಪದ್ಮರಾಜ ಒಡೆಯರ ಹಿರೇಮಠ, ಶ್ರೀ ವಿರಕ್ತಮಠ, ಶ್ರೀ ಕಾಳಹಸ್ತಿಮಠ, ಶ್ರೀ ಹಿರೇಮಠ, ಶ್ರೀ ತಗ್ಗಿನಮಠ, ಶ್ರೀ ಸಾರಂಗಮಠ ಎಂಬ ಆರು ಮಠಗಳ ಹೆಸರುಗಳನ್ನು ಮಾತ್ರ ದಾಖಲಿಸಬಹುದಾಗಿದೆ. ಉಳಿದ ಆರು ಮಠಗಳು ಪೂರ್ಣ ನಶಿಸಿ ಹೋಗಿದ್ದು ಇಂದು ಅವುಗಳ ಹೆಸರುಗಳು ಸಹ ತಿಳಿಯದಾಗಿದೆ. ದಾಖಲಿಸಿದ ಆರು ಮಠಗಳಲ್ಲಿ ಶ್ರೀ ಪಟ್ಟದ ಪದ್ಮರಾಜ ಒಡೆಯರ ಮಠ ಮತ್ತು ಶ್ರೀ ವಿರಕ್ತಮಠಗಳು ಮಾತ್ರ ಅಸ್ತಿತ್ವದಲ್ಲಿವೆ.

ಪಟ್ಟದ ಪದ್ಮರಾಜ ಒಡೆಯರ ಹಿರೇಮಠ: ಬಸವನ ಬಾಗೇವಾಡಿಯ ಮಧ್ಯಭಾಗದಲ್ಲಿ ಉಜ್ಜಯಿನಿ ಪೀಠದ ಶಾಖಾ ಮಠವಾದ ಶ್ರೀ ಪಟ್ಟದ ಪದ್ಮರಾಜ ಒಡೆಯರ ಹಿರೇಮಠವು ಸ್ಥಾಪನೆಯಾಗಿದೆ. ಈ ಮಠವನ್ನು ೧೧೦೦ ವರ್ಷಗಳ ಹಿಂದೆ ಶ್ರೀ ಪಟ್ಟದ ಪದ್ಮರಾಜ ಒಡೆಯರು ಸ್ಥಾಪಿಸಿದ್ದಾರೆ. ಈ ಕಾರಣದಿಂದ ಈ ಮಠಕ್ಕೆ'ಶ್ರೀ ಪಟ್ಟದ ಪದ್ಮರಾಜ ಒಡೆಯರ ಹಿರೇಮಠ 'ಎಂಬ ಹೆಸರು ಬಂದಿದೆ. ಶ್ರೀ ಪಟ್ಟದ ಪದ್ಮರಾಜ ಒಡೆಯರು ವಿದ್ವಾಂಸರಾಗಿ ಹೆಸರು ಮಾಡಿದ್ದರು. ಇವರ ವಿದ್ವತ್ತಿಗೆ ಅಂದಿನ ದೊರೆಗಳು'ಒಡೆಯರ್'ಎಂಬ ಬಿರುದನ್ನು ನೀಡಿ ಗೌರವಿಸಿದ್ದರೆಂದು ಹೇಳಲಾಗುತ್ತಿದೆ. ಗುರುಗಳು ಆಚಾರ್ಯರು ಬೋಧಿಸಿದ ವೀರಶೈವ ಧರ್ಮವನ್ನು ಹೆಚ್ಚುಪ್ರಚಾರಕ್ಕೆ ತಂದು ಬೆಳೆಸಿದ್ದರು. ಇವರ ಕಾಲದಲ್ಲಿ ಮಠವು ಹೆಚ್ಚು ಅಭಿವೃದ್ಧಿಗೊಂಡಿತು. ಅಲ್ಲದೆ ಇವರ ಪಾಂಡಿತ್ಯದಿಂದ ಅನೇಕ ವಿದ್ವಾಂಸರು ಹಾಗೂ ಅನೇಕ ಮಠಾಧೀಶರು ಇವರಿಂದ ಬೋಧನೆ ಪಡೆದುಕೊಳ್ಳುತ್ತಿದ್ದರೆಂದು ಹೇಳಲಾಗುತ್ತಿದೆ. ಶ್ರೀ ಪಟ್ಟದ ಪದ್ಮರಾಜ ಒಡೆಯರು ಮಠವನ್ನು ಬೆಳೆಸಿದ್ದಲ್ಲದೆ, ವೀರಶೈವ ಧರ್ಮವು ಪ್ರಬಲವಾಗಿ ಬೆಳೆಯುವಂತೆ ಮಾಡಿ ಲಿಂಗೈಕ್ಯರಾದರು. ಇವರ ನಂತರ ಮಠದ ಪರಂಪರೆ ಸ್ಥಗಿತಗೊಂಡಿತ್ತೆಂದು ಹೇಳಲಾಗುತ್ತಿದೆ. ಅಂದಿನಿಂದ ಯಾವ ಕಾರಣಕ್ಕಾಗಿ ಮಠಾಧೀಶರನ್ನು ನೇಮಿಸಿಲ್ಲ ಎಂಬುದನ್ನು ಗುರುತಿಸಲು ಆಧಾರಗಳ ಕೊರತೆಯಿಂದ ಸಾಧ್ಯವಾಗುತ್ತಿಲ್ಲ.

ಉತ್ತರಾಧಿಕಾರಿ ನೇಮಕ: ಶ್ರೀ ಪಟ್ಟದ ಪದ್ಮರಾಜ ಒಡೆಯರ ನಂತರ ಮಠವು ಖಾಲಿ ಉಳಿದಿದ್ದರೂ ,ಧಾರ್ಮಿಕ ಕಾರ್ಯಗಳು ನಡೆಯುತ್ತಿದ್ದವು. ಕರ್ತೃಗುರುಗಳ ಗದ್ದುಗೆಯನ್ನು ಸ್ಥಾಪಿಸಿ, ನಿತ್ಯಪೂಜೆ ಮತ್ತು ಧಾರ್ಮಿಕ ಆಚರಣೆಗಳನ್ನು ಈ ಮಠದ ವಂಶಸ್ಥರು ನಡೆಸಿಕೊಂಡು ಬರುತ್ತಿದ್ದರು. ನಂತರ ಶ್ರೀ ಸಂಗಯ್ಯ ಮತ್ತು ಶ್ರೀಮತಿ ಶಿವಲಿಂಗಮ್ಮನವರ ಪುತ್ರರಾಗಿ

ಜನಿಸಿದ ಶ್ರೀ ಉಮಾಪತಿ ಪಂಡಿತರಾಧ್ಯ ಸ್ವಾಮಿಗಳನ್ನು ಉತ್ತರಾಧಿಕಾರಿಯನ್ನಾಗಿ ನೇಮಕ ಮಾಡಲಾಯಿತು. ಇವರು ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಸಂದರ್ಭದಲ್ಲಿ ಶ್ರೀಶೈಲ ಪೀಠದ ಜಗದ್ಗುರುಗಳಾದ ಶ್ರೀ ವಾಗೀಶ ಪಂಡಿತರಾಧ್ಯ ಶಿವಾಚಾರ್ಯ ಭಗವತ್ಪಾದರು ಶ್ರೀಶೈಲಪೀಠಕ್ಕೆ ಉತ್ತರಾಧಿಕಾರಿಗಳನ್ನಾಗಿ ನೇಮಿಸಿ ಪಟ್ಟಾಧಿಕಾರವನ್ನು ಮಾಡಿದರು. ಈ ಕಾರಣಕ್ಕಾಗಿ ಶ್ರೀ ಪಟ್ಟದ ಪದ್ಮರಾಜ ಒಡೆಯರ ಹಿರೇಮಠವು ಪುನಃ ಖಾಲಿ ಉಳಿಯಬೇಕಾಯಿತು. ಈ ಮಠದ ಉತ್ತರಾಧಿ ಕಾರಿಗಳು ಪಂಚಪೀಠಗಳಲ್ಲಿ ಒಂದಾದ ಶ್ರೀಶೈಲ ಪೀಠದ ಜಗದ್ಗುರುಗಳಾಗಿ ನೇಮಕಗೊಂಡು,ಪೀಠವನ್ನು ಅಭಿವೃದ್ಧಿ ಪಡಿಸಿ ವೀರಶೈವ ಧರ್ಮವನ್ನು ಬೆಳೆಸುತ್ತಿರುವುದು ಒಂದು ಹೆಗ್ಗಳಿಕೆ.

ನಂತರ ಶ್ರೀ ರುದ್ರಯ್ಯ ಮತ್ತು ಶ್ರೀಮತಿ ಸುಮಂಗಲರವರ ಪುತ್ರರಾಗಿ ೧೯೮೧ ರಲ್ಲಿ ಜನಿಸಿದ ಶ್ರೀ ಶಿವಪ್ರಕಾಶ ಶಿವಾಚಾರ್ಯ ಸ್ವಾಮಿಗಳನ್ನು ಉತ್ತರಾಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ. ಗುರುಗಳು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಮುಗಿಸಿದ ಮೇಲೆ ೧೯೯೨ ರಲ್ಲಿ ಪಂಚಪೀಠಾಧೀಶರ ಸಮ್ಮುಖದಲ್ಲಿ ಪಟ್ಟಾಭಿಷೇಕವನ್ನು ಮಾಡಲಾಗಿದೆ. ಗುರುಗಳು ಈಗ ಹೊನ್ನಾಳಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಕರ್ತೃಗುರುಗಳಾದ ಶ್ರೀ ಪಟ್ಟದ ಪದ್ಮರಾಜ ಒಡೆಯರ ಗದ್ದುಗೆಯನ್ನು ನಿರ್ಮಿಸಲಾಗಿದೆ. ಅಲ್ಲದೆ ವೀರಭದ್ರೇಶ್ವರ ದೇವಸ್ಥಾನದಲ್ಲಿ ಕಾಶಿಯಿಂದ ತಂದ ವಿಶ್ವನಾಥ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಇಲ್ಲಿ ನಿತ್ಯ ಪೂಜೆ, ಅಮಾವಾಸ್ಯೆ, ಹುಣ್ಣಿಮೆಯಲ್ಲಿ ರುದ್ರಾಭಿಷೇಕ ಹಾಗೂ ಶ್ರಾವಣಮಾಸದಲ್ಲಿ ಕರ್ತೃಗುರುಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಮಠದ ಆಸ್ತಿಯಾಗಿ ಹನ್ನೆರಡು ಎಕರೆ ಜಮೀನಿದ್ದು, ಇದನ್ನು ಅಭಿವೃದ್ಧಿಪಡಿಸಿ ಮಠಕ್ಕೆ ಆದಾಯದ ಮೂಲವನ್ನಾಗಿ ಮಾಡಿಕೊಳ್ಳಲಾಗಿದೆ.

ವಿಳಾಸ: ಷ.ಬ್ರ.ಶ್ರೀ ಶಿವಪ್ರಕಾಶ ಶಿವಾಚಾರ್ಯ ಸ್ವಾಮಿಗಳು, ಶ್ರೀ ಪಟ್ಟದ ಪದ್ಮರಾಜ ಒಡೆಯರ ಹಿರೇಮಠ, ಬಸವನ ಬಾಗೇವಾಡಿ. ಬಿಜಾಪುರ ಜಿಲ್ಲೆ.

ವಿರಕ್ತಮಠ: ಬಸವನ ಬಾಗೇವಾಡಿ ಪಟ್ಟಣದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ವಿರಕ್ತ ಮಠವು ಮುರುಘಾ ಸಮಯದ ಮಠವಾಗಿದೆ. ಹದಿನೈದನೆಯ ಶತಮಾನದಲ್ಲಿ ಎರಡನೆಯ ಪ್ರೌಢದೇವರಾಯನ (೧೪೨೪-೪೬) ಕಾಲದಲ್ಲಿ ಶ್ರೀ ರಾಚೋಟೇಶ್ವರ ಶಿವಯೋಗಿ ಸ್ವಾಮಿಗಳಿಂದ ಪ್ರಾರಂಭವಾಗಿದೆ. ನೂರೊಂದು ವಿರಕ್ತರ ಜೊತೆಯಲ್ಲಿದ್ದ ಶ್ರೀ ರಾಚೋಟೇಶ್ವರ ಸ್ವಾಮಿಗಳು ಲೋಕ ಸಂಚಾರವನ್ನು ಕೈಗೊಂಡು ಬಸವನ ಬಾಗೇವಾಡಿಗೆ ಬಂದು ನೆಲೆಸುತ್ತಾರೆ. ಗುರುಗಳು ಇಲ್ಲಿ ನೆಲೆ ನಿಂತು ಮಠವನ್ನು ಸ್ಥಾಪಿಸಿದ ಮೇಲೆ ವಿಜಯನಗರದ ಶ್ರೀ ಪ್ರೌಢದೇವರಾಯ ಮಠದ ಧಾರ್ಮಿಕ ಆಚರಣೆಗಳು ಸುಗಮವಾಗಿ ನಡೆಯಲು ನೆರವಾದನು. ಇಲ್ಲಿ ಮಠವು ಸ್ಥಾಪನೆಗೊಂಡ ಮೇಲೆ ಶ್ರೀ ರಾಚೋಟೇಶ್ವರರು ಲೋಕಸಂಚಾರಕ್ಕೆ ಹೊರಡುತ್ತಾರೆ. ಈ ರೀತಿ ರಾಜಾಶ್ರಯದಿಂದ ಪ್ರಾರಂಭಗೊಂಡ ಈ ಮಠವು ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಈತನಕ ಬೆಳೆದು ಬಂದಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ರಾಚೋಟೇಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಸಂಗನ ಬಸವಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಶಿವಬಸವಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಮಡಿವಾಳೇಶ್ವರಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ರಾಚೋಟೇಶ್ವರಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ರುದ್ರಮುನಿಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಶಿವಲಿಂಗಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಬಸುಮರಿದೇವರು
೯. ಶ್ರೀ ಮ.ನಿ.ಪ್ರ. ಚನ್ನಬಸವಸ್ವಾಮಿಗಳು
೧೦. ಶ್ರೀ ಮ.ನಿ.ಪ್ರ. ಮುರುಘೇಂದ್ರಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದುಬಂದಿದೆ. ಕರ್ತೃಗುರುಗಳಾದ ಶ್ರೀ ರಾಚೋಟೇಶ್ವರ ಸ್ವಾಮಿಗಳ ಶಿಷ್ಯರಾಗಿದ್ದ ಶ್ರೀ ಸಂಗನಬಸವ ಸ್ವಾಮಿಗಳು ಈ ಮಠದ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿದ್ದರು ಎಂದು ಹೇಳಲಾಗುತ್ತದೆ. ನಂತರ ಮೂರು ಮತ್ತು ನಾಲ್ಕನೆಯ ಮಠಾಧಿಪತಿಗಳ ಬಗ್ಗೆ ಆಧಾರಗಳ ಕೊರತೆಯಿಂದ ಹೆಚ್ಚು ಮಾಹಿತಿಯನ್ನು ದಾಖಲಿಸಲಾಗುತ್ತಿಲ್ಲ. ನಂತರ ಐದನೆಯ ಮಠಾಧಿಪತಿಯಾಗಿ ಆಗಮಿಸಿದ ಶ್ರೀ ರಾಚೋಟೇಶ್ವರಸ್ವಾಮಿಗಳು ಪಾಂಡಿತ್ಯವುಳ್ಳ ಗುರುಗಳಾಗಿ ಧರ್ಮ ಮತ್ತು ಸಾಹಿತ್ಯವನ್ನು ಅಭಿವೃದ್ಧಿಗೊಳಿಸಿದ್ದಾರೆ. ಷಟ್‌ಸ್ಥಲ ಜ್ಞಾನಸಾರಾಮೃತ, ಬಸವಣ್ಣನವರ ಷಟ್‌ಸ್ಥಲ ವಚನಗಳು, ಚನ್ನಬಸವಣ್ಣನವರ ಷಟ್‌ಸ್ಥಲ ವಚನಗಳು ಎಂಬ ಮೂಲಕೃತಿಗಳನ್ನು ಗುರುಗಳು ಹಸ್ತಪ್ರತಿಯನ್ನು ನಕಲು ಮಾಡಿ ಪ್ರಸಾರಗೊಳಿಸಿದ್ದಾರೆ. ಇವರ ಕಾಲದಲ್ಲಿ ಮಠ ಮತ್ತು ವೀರಶೈವ ಧರ್ಮ ಅಭಿವೃದ್ಧಿಯಾಗಿದೆ. ನಂತರ ಅಧಿಕಾರಕ್ಕೆ ಬಂದ ಶ್ರೀರುದ್ರಮುನಿ ಸ್ವಾಮಿಗಳು (೧೮೦೪)ಸಹ ಮಹಾ ಜ್ಞಾನಿಗಳಾಗಿ, ಪೂಜಾನಿಷ್ಠರಾಗಿ ಮಠ ಬೆಳೆಸಿದ್ದಾರೆ. ಇವರು ಜೇವರ್ಗಿ ಷಣ್ಮುಖ ಶಿವಯೋಗಿ ವಿರಚಿತ ಅಖಂಡೇಶ್ವರ ವಚನಗಳು ಎಂಬ ಗ್ರಂಥವನ್ನು ಹಸ್ತ ಪ್ರತಿ ಮಾಡಿ ಪ್ರಚಾರಗೊಳಿಸಿದ್ದಾರೆ.

ಶ್ರೀ ರುದ್ರಮುನಿ ಸ್ವಾಮಿಗಳ ನಂತರ ೧೯೪೪ ರಲ್ಲಿ ಶ್ರೀ ಶಿವಲಿಂಗ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡರು. ಬೆಣ್ಣೂರು ಮಠದ ಶ್ರೀ ಮಹಾದೇವಯ್ಯ ಮತ್ತು ಶ್ರೀಮತಿ ಮಹದೇವಿ ಇವರ ಪುತ್ರರಾಗಿ ಜನಿಸಿದ ಶ್ರೀಶಿವಲಿಂಗ ಶಿವಯೋಗಿ ಗಳು ಬಾಲ್ಯದಲ್ಲಿಯೇ ಆಧ್ಯಾತ್ಮವನ್ನು ಮೈಗೂಡಿಸಿಕೊಂಡು, ಸದಾಚಾರ ಸಂಪನ್ನರಾಗಿ ಬೆಳೆದರು. ಗುರುಗಳು ಹಾಗೂ ಹಿರಿಯರಿಗೆ ಗೌರವ ಕೊಟ್ಟು ಲೌಕಿಕ ಜಗತ್ತಿನಲ್ಲಿದ್ದರೂ ಆಧ್ಯಾತ್ಮ ಚಿಂತನೆಯಿಂದ ಶ್ರೀ ಶಿವಲಿಂಗ ಸ್ವಾಮಿಗಳು ತಮ್ಮ ಸುತ್ತ ಅಲೌಕಿಕ ವಾತಾವರಣವನ್ನು ಸೃಷ್ಟಿಸಿಕೊಂಡು ಬೆಳೆದರು. ಗುರುಗಳು ಶಿವಧ್ಯಾನ, ಶಿವಯೋಗದಿಂದ ಸಾಧನೆಯ ಸಿದ್ಧಿಯನ್ನು ಕಂಡುಕೊಂಡರು. ಗುರುಗಳು ಪ್ರೌಢಾವಸ್ಥೆಗೆ ಬರುವ ವೇಳೆಗೆ ಶ್ರೀ ವಿರಕ್ತ ಮಠದ ಗುರುಗಳಾದ ಶ್ರೀ ರುದ್ರಮುನಿ ಸ್ವಾಮಿಗಳ ಕೃಪಾಕಟಾಕ್ಷಕ್ಕೆ ಬಿದ್ದರು. ಗುರುಗಳು ಶ್ರೀ ರುದ್ರಮುನಿ ಸ್ವಾಮಿಗಳ ನಂತರ ಮಠದ ಅಧಿಕಾರವನ್ನು ವಹಿಸಿಕೊಂಡು ಭಕ್ತರ ಭವ ರೋಗಗಳನ್ನು ದೂರ ಮಾಡಿದರು.

ಶ್ರೀ ಶಿವಲಿಂಗ ಸ್ವಾಮಿಗಳು ಧಾರ್ಮಿಕ ನೆಲೆಗಟ್ಟಿನಲ್ಲಿ ಸಮಾಜವನ್ನು ಬೆಳೆಸಿದ ಗುರುಗಳು ವಾಕ್‌ಸಿದ್ಧಿ ಪುರುಷರಾಗಿ, ತಪೋನಿಷ್ಠರಾಗಿ ಎಲ್ಲರಿಂದ ಗೌರವಿಸಲ್ಪಟ್ಟರು. ಇವರು ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಬಸವಯ್ಯ ದೇವರನ್ನು ನೇಮಕ ಮಾಡಿಕೊಂಡಿದ್ದರು. ಉತ್ತರಾಧಿಕಾರಿಗಳು ವಿಷಮಶೀತ ಜ್ವರದಿಂದ ಬಳಲಿ ಪಟ್ಟಾಧಿಕಾರಕ್ಕೆ ಮುನ್ನವೇ ಲಿಂಗೈಕ್ಯರಾದರು. ನಂತರ ತಮ್ಮ ಉತ್ತರಾಧಿಕಾರಿಯನ್ನಾಗಿ ಶ್ರೀ ಚನ್ನಬಸವ ಸ್ವಾಮಿಗಳನ್ನು ನೇಮಕ ಮಾಡಿ ಕೊಂಡರು. ಅಥಣಿಯಲ್ಲಿ ಜನಿಸಿದ ಶ್ರೀ ಚನ್ನಬಸವ ಸ್ವಾಮಿಗಳು ಪೂಜಾನಿಷ್ಠರಾಗಿ, ಮಠವನ್ನು ಬೆಳೆಸಿ ಏಪ್ರಿಲ್ ಹದಿಮೂರರ ೧೯೭೯ ರಲ್ಲಿ ಲಿಂಗೈಕ್ಯರಾದರು. ಇವರ ನಂತರ ಈಗಿನ ಮಠಾಧ್ಯಕ್ಷರಾದ ಶ್ರೀ ಮುರುಘೇಂದ್ರ ಸ್ವಾಮಿಗಳು ೧೯೭೯ ರ ಅಕ್ಟೋಬರ್ ಇಪ್ಪತ್ನಾಲ್ಕರಂದು ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಅನುಷ್ಠಾನ ಮೂರ್ತಿಗಳಾಗಿ, ವಾಕ್‌ಚತುರತೆಯಿಂದ ಶರಣ ತತ್ತ್ವವನ್ನು ಭಕ್ತರ ಮನಮುಟ್ಟುವಂತೆ ಉಪದೇಶ ನೀಡುವ ಗುರುಗಳು ಪುರಾಣ ಪ್ರವಚನವನ್ನು ರಸವತ್ತಾಗಿ ಹೇಳುವ ಕಲೆಯನ್ನು ಮೈಗೂಡಿಸಿಕೊಂಡಿದ್ದಾರೆ. ಶರಣತತ್ತ್ವದ ಬಗ್ಗೆ ಅಪಾರಜ್ಞಾನ ಸಂಪತ್ತನ್ನು ಗಳಿಸಿಕೊಂಡಿರುವ ಗುರುಗಳು ಮಠಕ್ಕೆ ಆಗಮಿಸಿದ ಕೆಲವೇ ವರ್ಷಗಳಲ್ಲಿ ಭಕ್ತರ ಮನಗೆದ್ದು, ವೀರಶೈವ ಧರ್ಮವನ್ನು ಬೆಳೆಸುವ ನಿಟ್ಟಿನಲ್ಲಿ ಯಶಸ್ಸನ್ನು ಕಂಡಿದ್ದಾರೆ. ಗುರುಗಳು ಈ ಮಠದ ಜೊತೆಗೆ ಬೀಳೂರು ಮಠದ ಅಧಿಕಾರವನ್ನೂ ವಹಿಸಿಕೊಂಡು, ಎರಡೂ ಮಠಗಳನ್ನು ಮುನ್ನಡೆಸುತ್ತಾ ತಮ್ಮ ಅಸಾಧಾರಣ ವ್ಯಕ್ತಿತ್ವದಿಂದ ಭಕ್ತರನ್ನು ಉದ್ಧರಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಶ್ರೀ ಮುರುಘೇಂದ್ರ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಉಡುತಡಿ, ಎಡೆಯೂರು, ಬಸವಕಲ್ಯಾಣ ಹಾಗೂ ಉಳುವಿ ಕ್ಷೇತ್ರಗಳಿಗೆ ಭಕ್ತರೊಡಗೂಡಿ ಪಾದಯಾತ್ರೆಯ ಮೂಲಕ ಸಂದರ್ಶನ ಮಾಡಿ ಜನ ಜಾಗೃತಿಯ ನ್ನುಂಟು ಮಾಡಿದ್ದಾರೆ. ಮಾತೆಮಹಾದೇವಿಯವರು ಬಸವಣ್ಣನವರ ವಚನಗಳಲ್ಲಿ 'ಕೂಡಲಸಂಗಮದೇವ' ಎಂಬ ಅಂಕಿತ ನಾಮವನ್ನೂ ಲಿಂಗದೇವ ಎಂದು ಬದಲಿಸಿದ ಸಂದರ್ಭದಲ್ಲಿ, ಪ್ರಥಮವಾಗಿ ಮಾತೆ ಮಹಾದೇವಿಯರ ವಿರುದ್ಧ ಧ್ವನಿಎತ್ತಿದರು. ಕಟ್ಟಾಬಸವ ತತ್ತ್ವವಾದಿಯಾದ ಗುರುಗಳು ಮಠದಲ್ಲಿ ಪರಂಪರೆಯ ಗದ್ದುಗೆಗಳಿಗೆ ಎರಡೂ ವೇಳೆ ಪೂಜೆಗೆ

ವ್ಯವಸ್ಥೆ ಮಾಡಿಸಿದ್ದಾರೆ. ಕಳೆದ ಇಪ್ಪತ್ತು ವರ್ಷಗಳಿಂದ ಪ್ರತಿ ಸೋಮವಾರ ಮತ್ತು ಶುಕ್ರವಾರ ಶಿವಾನುಭವ ಗೋಷ್ಠಿಗಳನ್ನು ನಡೆಸುತ್ತಿದ್ದಾರೆ. ಶ್ರಾವಣಮಾಸದಲ್ಲಿ ಪ್ರವಚನ ಹಾಗೂ ಶಿವರಾತ್ರಿಯಲ್ಲಿ ಎರಡು ಸಾವಿರ ಜನ ಭಕ್ತರು ಸಾಮೂಹಿಕ ಲಿಂಗಪೂಜೆಯಲ್ಲಿ ಭಾಗ ವಹಿಸುತ್ತಿದ್ದಾರೆ. ವೈಶಾಖ ಬಹುಳ ಏಕಾದಶಿಯಲ್ಲಿ ಶ್ರೀ ಶಿವಲಿಂಗ ಸ್ವಾಮಿಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ನಿತ್ಯ ಅನ್ನದಾಸೋಹ ಕಾರ್ಯ ನಡೆಯುತ್ತಿದೆ. ಪರಂಪರೆಯಿಂದ ಬಂದಂತಹ ರುದ್ರಾಕ್ಷಿ ಕಿರೀಟ, ಯೋಗದಂಡಗಳು ಮಠದಲ್ಲಿವೆ.

ಸಾಹಿತ್ಯ ಸೇವೆ: ಶ್ರೀ ಮುರುಘೇಂದ್ರ ಸ್ವಾಮಿಗಳು ಧಾರ್ಮಿಕ ಕಾರ್ಯಗಳ ಜೊತೆಗೆ ಸಾಹಿತ್ಯದ ಒಲವನ್ನು ಮೈಗೂಡಿಸಿಕೊಂಡು ಶ್ರೀ ಶಿವಲಿಂಗ ಶಿವಯೋಗೀಶ್ವರ ಚರಿತೆ, ವಚನಗಳು ಹಾಗೂ ಸಂಗಮೇಶ್ವರ ಪುರಾಣ ಮುಂತಾದ ಗ್ರಂಥಗಳನ್ನು ಪ್ರಕಟಿಸಿ, ಮಠದ ಹಾಗೂ ವೀರಶೈವ ಧರ್ಮದ ಅನೇಕ ವಿಚಾರಗಳ ಮೇಲೆ ಬೆಳಕು ಚೆಲ್ಲಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಮುರುಘೇಂದ್ರ ಸ್ವಾಮಿಗಳು, ಶ್ರೀ ವಿರಕ್ತಮಠ, ಬಸವನ ಬಾಗೇವಾಡಿ, ಬಿಜಾಪುರ ಜಿಲ್ಲೆ.
ಆಧಾರ: 'ಶಿವಲಿಂಗ ಶಿವಯೋಗೀಶ್ವರ ಚರಿತೆ', ಗ್ರಂಥಕರ್ತರು : ಲ.ರು.ಗೊಳಸಂಗಿ(ರುದ್ರತನಯ)

ಮಸುಬಿನಾಳು

ಬಸವನ ಬಾಗೇವಾಡಿ ತಾಲ್ಲೂಕಿನ ಮಸುಬಿನಾಳು ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹತ್ತು ಕಿ.ಮೀ ದೂರದಲ್ಲಿದೆ. ಗ್ರಾಮದ ವಿರಕ್ತ ಮಠವು ಅಸ್ತಿತ್ವದಲ್ಲಿದೆ.

ದಾಸೋಹ ಸಂಸ್ಥಾನವಿರಕ್ತಮಠ: ಮಸುಬಿನಾಳು ಗ್ರಾಮದ ಉತ್ತರದ ಹೊರಭಾಗದಲ್ಲಿ ಕುಮಾರಸಮಯದ ಶ್ರೀದಾಸೋಹ ಸಂಸ್ಥಾನ ವಿರಕ್ತ ಮಠವು ಸ್ಥಾಪನೆಯಾಗಿದೆ. ಶ್ರೀ ಶಿವಾನಂದ ಶಿವಯೋಗಿಗಳು, ಜೇವರ್ಗಿ ತಾಲ್ಲೂಕಿನ ಸೊನ್ನಾಗ್ರಾಮದಿಂದ ಲೋಕಸಂಚಾರ ಕೈಗೊಂಡು ಮಸುಬಿನಾಳು ಗ್ರಾಮದಲ್ಲಿ ಬಂದು ನೆಲೆಸಿದ್ದಾರೆ.

ಶ್ರೀ ಶಿವಾನಂದ ಶಿವಯೋಗಿಗಳು ಸೊನ್ನಾಗ್ರಾಮದ ಶ್ರೀ ಸಂಗಪ್ಪ ಮತ್ತು ಶ್ರೀಮತಿ ರೇವಮ್ಮನವರ ಪುತ್ರರಾಗಿ ಜನಿಸಿ, ಬಾಲ್ಯದಲ್ಲೇ ಆಧ್ಯಾತ್ಮ ಸಂಸ್ಕಾರವನ್ನು ಮೈಗೂಡಿಸಿಕೊಂಡು ಬೆಳೆದರು. ಇವರು ಲೋಕಾನುಭವ ಪಡೆಮಕೊಳ್ಳಲು ಲೋಕ ಸಂಚಾರ ಕೈಗೊಂಡು ಧಾರ್ಮಿಕ ಕ್ಷೇತ್ರಗಳನ್ನು ಸಂದರ್ಶಿಸಿದರು. ಈ ಸಂದರ್ಭದಲ್ಲಿ ವೀರಶೈವ ಧರ್ಮದ ಅಷ್ಟಾವರಣ, ಷಟ್‌ಸ್ಥಲವನ್ನು ಬೋಧಿಸಿ ವೀರಶೈವ ಧರ್ಮವನ್ನು ಹೆಚ್ಚು ಪ್ರಚಾರಗೊಳಿಸಿದರು. ಗುರುಗಳು ಇಲ್ಲಿ ನೆಲೆಗೊಳ್ಳುವ ಮೊದಲೇ ಇಲ್ಲಿ ಒಂದು ಮಠ ಅಸ್ತಿತ್ವದಲ್ಲಿತ್ತು. ಮಠಾಧೀಶರು ಯಾರೂ ಇಲ್ಲದ ಕಾರಣ ಜೀರ್ಣಗೊಂಡಿತ್ತು. ಜೀರ್ಣಗೊಂಡ ಈ ಮಠದಲ್ಲಿ ಶ್ರೀ ಶಿವಾನಂದ ಸ್ವಾಮಿಗಳು ನೆಲೆಸಿ ಮಠವನ್ನು ಅಭಿವೃದ್ಧಿಪಡಿಸಿದರು. ನಿತ್ಯ ಶಿವಾನುಭವ ಗೋಷ್ಠಿ,ಅನ್ನ ದಾಸೋಹ ವ್ಯವಸ್ಥಿತವಾಗಿ ನಡೆಯತೊಡಗಿದವು. ಮಠಕ್ಕೆ ಆಗಮಿಸಿದ ಭಕ್ತರಿಗೆ ಕಾಯಕಯೋಗದ ಬಗ್ಗೆ ತಿಳಿಸಿ ಭಕ್ತರನ್ನು ಕಾಯಕ ಯೋಗಿಗಳನ್ನಾಗಿ ಮಾಡಿದರು. ಇದರಿಂದ ಈ ಗ್ರಾಮ ಅಭಿವೃದ್ಧಿಯನ್ನು ಕಂಡಿತು. ಗುರುಗಳು ತಮ್ಮ ಕಾಲಾವಧಿಯಲ್ಲಿ ಹತ್ತು ಮಠಗಳನ್ನು ಜೀರ್ಣಾಭಿವೃದ್ಧಿಗೊಳಿಸಿ, ಬೆಳೆಸಿ ೧೧೫ ವರ್ಷಗಳ ದೀರ್ಘ ಬದುಕನ್ನು ಬದುಕಿ ಲಿಂಗೈಕ್ಯರಾದರು.

ಪರಂಪರೆ:

೧. ಶ್ರೀ ಮ.ನಿ.ಪ್ರ. ಶಿವಾನಂದಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಗುರುಸಿದ್ಧಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಸಿದ್ಧರಾಮಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ಶಿವಾನಂದ ಸ್ವಾಮಿಗಳ ನಂತರ ಮುದ್ದೇಬಿಹಾಳು ತಾಲ್ಲೂಕಿನ ಮಡಕೇಶ್ವರ ಹಿರೇಮಠದ ಶ್ರೀ ಗುರುಬಸಯ್ಯ ಮತ್ತು ಶ್ರೀಮತಿ ಗುರುಬಸಮ್ಮನವರ ಪುತ್ರರಾಗಿ ಜನಿಸಿದ ಶ್ರೀಗುರುಸಿದ್ಧ ಸ್ವಾಮಿಗಳು ಅಧಿಕಾರಕ್ಕೆ ಬಂದರು. ಹಿರಿಯ ಗುರುಗಳಾದ ಶ್ರೀ ಶಿವಾನಂದ ಸ್ವಾಮಿಗಳ ಕೃಪಾಕಟಾಕ್ಷದಿಂದ ಬೆಳೆದ ಶ್ರೀ ಗುರುಸಿದ್ಧ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿದರು. ಇವರು ಎಪ್ಪತ್ತು ವರ್ಷಗಳ ಕಾಲ ಬದುಕಿ ೧೯೬೫ರಲ್ಲಿ ಲಿಂಗೈಕ್ಯರಾಗಿದ್ದಾರೆ. ಈಗ ಶ್ರೀ ಸಿದ್ಧರಾಮ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದಾರೆ.

ಶ್ರೀ ಸಿದ್ಧರಾಮ ಸ್ವಾಮಿಗಳು ಮುದ್ದೇಬಿಹಾಳು ತಾಲ್ಲೂಕಿನ ಮಡಕೇಶ್ವರ ಗ್ರಾಮದ ಶ್ರೀ ಮಡಿವಾಳಯ್ಯ ಮತ್ತು ಶ್ರೀಮತಿ ಬಸಮ್ಮನವರ ಪುತ್ರರಾಗಿ ೧೯೬೦ರಲ್ಲಿ ಜನಿಸಿದರು. ಆರು ವರ್ಷದ ಬಾಲಕರಿರುವಾಗಲೇ ಶ್ರೀ ಶಿವಾನಂದಸ್ವಾಮಿಗಳ ಕೃಪಾಕಟಾಕ್ಷಕ್ಕೆ ಒಳಗಾಗಿದ್ದರು. ಗುರುಗಳು ಮಡಕಶಿರ ಮತ್ತು ಧಾರವಾಡದಲ್ಲಿ ತತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು, ಮಠಕ್ಕೆ ಆಗಮಿಸಿದ ಗುರುಗಳು ಶ್ರೀ ಗುರುಸಿದ್ಧ ಸ್ವಾಮಿಗಳ ಮಾರ್ಗದರ್ಶನದಲ್ಲಿ ಮಠವನ್ನು ಮುನ್ನಡೆಸತೊಡಗಿದರು. ಶ್ರೀ ಗುರುಸಿದ್ಧಸ್ವಾಮಿಗಳು ಲಿಂಗೈಕ್ಯರಾದ ಮೇಲೆ ೧೯೯೧ಮೇ ಹದಿನೇಳರಂದು ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಸಿದ್ಧರಾಮಸ್ವಾಮಿಗಳು ಮಠದಲ್ಲಿ ಬಂದು ನೆಲೆಸಿದ ಮೇಲೆ ತಮ್ಮ ಪ್ರಗತಿಪರ ಧೋರಣೆಯಿಂದ ಮಠದ ಆಸ್ತಿ ನಲವತ್ತುಎಕರೆ ಒಣಭೂಮಿಯನ್ನು ಅಭಿವೃದ್ಧಿಪಡಿಸಿ, ಕೊಳವೆ ಬಾವಿಯಿಂದ ನೀರಾವರಿ ಸೌಲಭ್ಯವನ್ನು ಒದಗಿಸಿಕೊಂಡು ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ಅಲ್ಲದೆ ಮಠದ ಹಳೆಯ ಕಟ್ಟಡವನ್ನು ನವೀಕರಣಗೊಳಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಪರಂಪರೆಯ ಗುರುಗಳ ಗದ್ದುಗೆಗಳಿಗೆ ಎರಡೂ ವೇಳೆ ಪೂಜೆ, ಅಮಾವಾಸ್ಯೆಯಲ್ಲಿ ಶಿವಾನುಭವ ಗೋಷ್ಠಿ ಮತ್ತು ಭಜನೆ, ಶ್ರಾವಣಮಾಸದಲ್ಲಿ ಒಂದು ತಿಂಗಳು ಪುರಾಣ ಪ್ರವಚನ, ಸೆಪ್ಟೆಂಬರ್ ಎಂಟರಿಂದ ಅಕ್ಟೋಬರ್ ಎಂಟರವರೆಗೆ ಶ್ರೀ ಶಿವಾನಂದ ಸ್ವಾಮಿಗಳ ಪುಣ್ಯಾರಾಧನೆಯ ನಿಮಿತ್ತ ಮಾಸಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಈ ಸಂದರ್ಭಗಳಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಿಸಲಾಗುತ್ತಿದೆ. ಶ್ರೀ ಸಿದ್ಧರಾಮ ಸ್ವಾಮಿಗಳು ಸಮಾಜದಲ್ಲಿ ಧಾರ್ಮಿಕ ಮನೋಭಾವನೆ ಬೆಳೆದು, ಸಮಾಜವು ನೈತಿಕ ಹಾಗೂ ಮೌಲ್ಯಾಧಾರಿತವಾಗಿ ರೂಪುಗೊಳ್ಳಬೇಕೆಂಬ ಕನಸನ್ನು ಇಟ್ಟುಕೊಂಡು ೧೯೭೯ ಹಾಗೂ ೧೯೮೦ ರಲ್ಲಿ ಹನ್ನೊಂದು ಹಳ್ಳಿಗಳಲ್ಲಿ ಪಾದಯಾತ್ರೆಯನ್ನು ಕೈಗೊಂಡು, ಧರ್ಮ ಬೋಧನೆ ಹಾಗೂ ಲಿಂಗಧಾರಣೆಯನ್ನು ಮಾಡಿ ಧರ್ಮಪ್ರಸಾರವನ್ನು ಮಾಡಿದ್ದಾರೆ.

ಶಿಕ್ಷಣ -ಸಮಾಜ ಸೇವೆ: ೧೯೭೨ ರಲ್ಲಿ ಶ್ರೀ ಶಿವಾನಂದ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿ, ಮಸಬಿನಾಳಿನಲ್ಲಿ ಒಂದು ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜು ಹಾಗೂ ಬಸವನ ಬಾಗೇವಾಡಿಯಲ್ಲಿ ಒಂದು ಪ್ರೌಢಶಾಲೆಯನ್ನು ಪ್ರಾರಂಭಿಸಲಾಗಿದೆ. ಮಠದಲ್ಲಿ ಕಲಿಯುವ ಬಡ ಮಕ್ಕಳಿಗೆ ಆಶ್ರಯವನ್ನು ಕಲ್ಪಿಸಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಸಿದ್ಧರಾಮ ಸ್ವಾಮಿಗಳು, ಶ್ರೀ ದಾಸೋಹ ಸಂಸ್ಥಾನ ವಿರಕ್ತಮಠ, ಮಸುಬಿನಾಳು, ಬಸವನ ಬಾಗೇವಾಡಿ, ತಾಲ್ಲೂಕು, ಬಿಜಾಪುರ ಜಿಲ್ಲೆ.

ಮಸೂತಿ

ಬಸವನ ಬಾಗೇವಾಡಿ ತಾಲ್ಲೂಕಿನ ಮಸೂತಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಈ ಗ್ರಾಮಕ್ಕೆ ಪುರಾತನ ಕಾಲದಲ್ಲಿ 'ಮಸವಳಿ' ಎಂದು ಕರೆಯುತ್ತಿದ್ದರಂತೆ. ನಂತರ ಈ ಪದವು ಮಹಾಸತಿ ಎಂದು ರೂಪಾಂತರ ಪಡೆದು ಈಗ 'ಮಸೂತಿ ' ಎಂಬ ಹೆಸರಿನಿಂದ ಕರೆಯಲ್ಪಡುತ್ತಿದೆ.ಈ ಗ್ರಾಮದ ಮಧ್ಯಭಾಗದಲ್ಲಿ ಕಾಶಿ ಪೀಠದ ಶಾಖಾ ಮಠವಾದ ಶ್ರೀ ಜಗದೀಶ್ವರ ಹಿರೇಮಠವು ಅಸ್ತಿತ್ವದಲ್ಲಿದೆ.

ಜಗದೀಶ್ವರ ಹಿರೇಮಠ: ಮಸೂತಿ ಗ್ರಾಮದಲ್ಲಿ ಶ್ರೀ ಜಗದೀಶ್ವರ ಹಿರೇಮಠವು ಸ್ಥಾಪನೆಯಾಗಿದೆ. ಎಂಟುನೂರು ವರ್ಷಗಳ ಹಿಂದೆ ಶ್ರೀ ಜಗದೀಶ್ವರ ಶಿವಾಚಾರ್ಯ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿದ್ದಾರೆ. ಹಾನಗಲ್ಲು ಹಿರೇಮಠದ ಶ್ರೀ ಸಂಗನಬಸವಾರ್ಯ ಮತ್ತು ಶ್ರೀಮತಿ ಮೃಡಾಣಿಯವರ ಪುತ್ರರಾಗಿ ಜನಿಸಿದ ಶ್ರೀ ಜಗದೀಶ್ವರ ಶಿವಾಚಾರ್ಯ ಸ್ವಾಮಿಗಳು ಬಾಲ್ಯದಲ್ಲಿಯೇ ಪವಾಡಗಳನ್ನು ಮಾಡಿ ಗುರು ಹಿರಿಯರನ್ನು ಚಕಿತಗೊಳಿಸುತ್ತಿದ್ದರಂತೆ. ಗುರುಗಳು ಪ್ರೌಢಾವಸ್ಥೆಗೆ ಬಂದ ಮೇಲೆ ಯೋಗಸಿದ್ಧಿಯನ್ನು ಸಾಧಿಸಿಕೊಂಡು,ಸಿದ್ಧಪುರುಷರಾಗಿ ಲೋಕಸಂಚಾರಕ್ಕೆ ಹೋಗುತ್ತಾರೆ. ಕಾಶಿ, ಕೇದಾರ, ಶ್ರೀಶೈಲ, ರಾಮೇಶ್ವರಗಳನ್ನು ಸಂದರ್ಶಿಸಿಕೊಂಡು ಬಂದ ಶ್ರೀ ಜಗದೀಶ್ವರ ಸ್ವಾಮಿಗಳು ಮಸೂತಿಪುರದ ಹೊರಭಾಗದ ನಿರ್ಜನ ಪ್ರದೇಶದಲ್ಲಿ ಅನುಷ್ಠಾನಗೊಂಡರು. ಗುರುಗಳು ಅನುಷ್ಠಾನಕ್ಕೆ ಕುಳಿತ ವಿಚಾರ ಗ್ರಾಮಸ್ಥರಿಗೆ ತಿಳಿದು ಗುರುಗಳ ಬಳಿಬಂದು ಗೌರವಿಸಿ ಗ್ರಾಮಕ್ಕೆ ಕರೆದೊಯ್ಯುತ್ತಾರೆ. ಗುರುಗಳು ಇಲ್ಲಿ ನೆಲೆಸಿದ ಸಂದರ್ಭದಲ್ಲಿ ಧರ್ಮೋಪದೇಶಗಳನ್ನು ಮಾಡಿ ಭಕ್ತರನ್ನು

ಸನ್ಮಾರ್ಗಕ್ಕೆ ತಂದರು. ಗುರುಗಳಿಂದ ಈ ಸ್ಥಳದಲ್ಲಿ ಶಾಂತಿ, ಸುಭಿಕ್ಷೆ ನೆಲೆಗೊಂಡಿತು. ಇದರಿಂದಾಗಿ ಭಕ್ತರು ಮಠವನ್ನು ಕಟ್ಟಿಸಿಕೊಟ್ಟು, ಇಲ್ಲಿ ನೆಲೆಸುವಂತೆ ವ್ಯವಸ್ಥೆ ಮಾಡಿದರು. ಗುರುಗಳು ಇಲ್ಲಿ ನೆಲೆಗೊಂಡ ಮೇಲೆ ಧಾರ್ಮಿಕ ಕಾರ್ಯಗಳು ಹಾಗೂ ವೀರಶೈವ ಧರ್ಮದ ತತ್ತ್ವಾಚರಣೆಗಳು ಹೆಚ್ಚಾಗಿ ನಡೆಯತೊಡಗಿದವು. ಗುರುಗಳು ಭಕ್ತರನ್ನು ಸಂಸ್ಕಾರ ವಂತರನ್ನಾಗಿ ಮಾಡಿ ಜೀವಂತ ಸಮಾಧಿಯಾದರು.

ಪರಂಪರೆ:
೧. ಷ.ಬ್ರ.ಶ್ರೀ ಜಗದೀಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಶಿವಯೋಗಿ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಪ್ರಭುಕುಮಾರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಶ್ರೀ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು ಮಠದ ಪರಂಪರೆಯನ್ನು ಬೆಳೆಸಿ, ಅನೇಕ ಪವಾಡ ಕಾರ್ಯಗಳಿಂದ ಮಠವನ್ನು ಅಭಿವೃದ್ಧಿಪಡಿಸಿ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳಿಗೆ ಪಟ್ಟಾಧಿಕಾರವನ್ನು ವಹಿಸಿಕೊಟ್ಟರು.ನಂತರ ಮುನ್ನೂರು ವರ್ಷಗಳ ಕಾಲ ಮಠವು ಖಾಲಿ ಉಳಿದು ಶಿಥಿಲಾವಸ್ಥೆಗೆ ಬಂದಿತು. ಈಗ ೧೯೯೧ರಲ್ಲಿ ಶ್ರೀ ಪ್ರಭುಕುಮಾರ ಶಿವಾಚಾರ್ಯ ಸ್ವಾಮಿಗಳು ಪರಂಪರಾಗತ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡು, ಸ್ಥಗಿತಗೊಂಡಿದ್ದ ಮಠದ ಧಾರ್ಮಿಕ ಕಾರ್ಯಗಳನ್ನು ಮುನ್ನಡೆಸಿದ್ದಾರೆ.

ಶ್ರೀ ಪ್ರಭುಕುಮಾರ ಶಿವಾಚಾರ್ಯ ಸ್ವಾಮಿಗಳು ಬಸವನ ಬಾಗೇವಾಡಿ ತಾಲ್ಲೂಕಿನ ಕೂಡಗಿ ಗ್ರಾಮದ ಶ್ರೀ ಶಿವಬಸವಯ್ಯ ಮತ್ತು ಶ್ರೀಮತಿ ಕಾಶಿಬಾಯಿಯವರ ಪುತ್ರರಾಗಿ ೧೯೬೮ ನೆಯ ಆಗಸ್ಟ್ ಮೂವತ್ತರಂದು ಜನಿಸಿದರು. ಗುರುಗಳು ಬೊಮ್ಮನಹಳ್ಳಿ ಗವಿಮಠ, ಹೊಸಪೇಟೆ ಹಾಗೂ ಶಿವಯೋಗ ಮಂದಿರದಲ್ಲಿ ವಿದ್ಯಾಭ್ಯಾಸ ಮಾಡಿ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡು, ಶಿಥಿಲಾವಸ್ಥೆಗೊಂಡಿದ್ದ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಪುರಾತನ ಮಠದಲ್ಲಿ ಪರಂಪರೆಯ ಗುರುಗಳ ಮೂರು ಗದ್ದುಗೆಗಳು ಸ್ಥಾಪನೆಯಾಗಿದ್ದು, ಈ ಗದ್ದುಗೆಗಳಿಗೆ ನಿತ್ಯ ಪೂಜೆ, ಪ್ರತಿ ಶುಕ್ರವಾರ ಅಕ್ಕನ ಬಳಗದವರಿಂದ ಭಜನೆ ಕಾರ್ಯಕ್ರಮ, ಶ್ರಾವಣಮಾಸದಲ್ಲಿ ಅನುಷ್ಠಾನ ಹಾಗೂ ಪುರಾಣ ಪ್ರವಚನ, ಪಾದಪೂಜೆ ಕಾರ್ಯಕ್ರಮ ನಡೆಯುತ್ತಿವೆ. ನೂಲು ಹುಣ್ಣಿಮೆಯ ದಿನ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಗುರುಸ್ಥಲ ಮಠವಾದರೂ ಬಸವ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಗುತ್ತಿದೆ.

ಶ್ರೀ ಪ್ರಭುಕುಮಾರ ಶಿವಾಚಾರ್ಯ ಸ್ವಾಮಿಗಳು ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡ ಮೇಲೆ ಮಠದ ಆಸ್ತಿಯಾಗಿದ್ದ ಜಮೀನನ್ನು ಅಭಿವೃದ್ಧಿಪಡಿಸಿ ನೀರಾವರಿಗೆ ಯೋಗ್ಯಗೊಳಿಸಿದ್ದಾರೆ. ಮಸೂತಿಯಲ್ಲಿ ಬಂಥನಾಳು ಸಂಸ್ಥೆಯು ನಡೆಸುತ್ತಿರುವ ಪ್ರೌಢಶಾಲೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಾ ಉತ್ತಮ ಆಡಳಿತ ನಡೆಸತೊಡಗಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಪ್ರಭುಕುಮಾರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಜಗದೀಶ್ವರ ಹಿರೇಮಠ, ಮಸೂತಿ, ಬಸವನ ಬಾಗೇವಾಡಿ ತಾಲ್ಲೂಕು, ಬಿಜಾಪುರ ಜಿಲ್ಲೆ.
ಆಧಾರ: 'ಮಸೂತಿ ಮಠದ ವೈಭವ', ಲೇಖಕರು: ಪೂಜ್ಯ ಶ್ರೀ ಕುಮಾರದೇವರು ಬೂದಿಸ್ವಾಮಿ ಮಠ

ಮನಗೋಳಿ

ಬಸವನ ಬಾಗೇವಾಡಿ ತಾಲ್ಲೂಕಿನ ಮನಗೋಳಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತೆರಡು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಪುರಾತನ ಕಾಲದಿಂದಲೂ ಅಸ್ತಿತ್ವದಲ್ಲಿರುವ ಎರಡು ಹಿರೇಮಠಗಳು ವೀರಶೈವ ಧರ್ಮದ ಆಚರಣೆಗಳನ್ನು ಪ್ರಚಾರಪಡಿಸಿ ಬೆಳೆಯುವಂತೆ ಮಾಡಿವೆ. ಪುರಾತನ ಕಾಲದಲ್ಲಿ ಸ್ಥಾಪನೆಗೊಂಡ ಈ ಎರಡು ಮಠಗಳಲ್ಲಿ ಗುರುಗಳಿದ್ದು ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಪಟ್ಟಕಂತೆ ಹಿರೇಮಠ: ಮನಗೋಳಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಈ ಮಠವು ಪುತ್ರವರ್ಗದ ಪರಂಪರೆಯ ಶ್ರೀ ರಂಭಾಪುರಿ ಪೀಠದ ಶಾಖಾ ಮಠವಾಗಿದೆ. ಪುರಾತನ ಕಾಲದಲ್ಲಿ ಸ್ಥಾಪನೆಯಾದ ಈ ಮಠವನ್ನು ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ಸ್ಥಾಪಿಸಿದ್ದಾರೆಂದು ಹೇಳಲಾಗುತ್ತಿದೆ. ಶ್ರೀ ಗುರುರೇವಣಸಿದ್ಧೇಶ್ವರ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿ ವಿಧಿವತ್ತಾದ ಧಾರ್ಮಿಕ ಆಚರಣೆಗಳನ್ನು ನಡೆಸಲು ಸಕಲ ವ್ಯವಸ್ಥೆಯನ್ನು ಮಾಡಿದರು. ಗುರುಗಳು ಪವಾಡಪುರುಷರಾಗಿ ಅನೇಕ ಸತ್ಕಾರ್ಯಗಳನ್ನು ಮಾಡಿ ಭಕ್ತರನ್ನು ಉದ್ಧರಿಸಿದರು. ಇವರ ತಪೋಶಕ್ತಿಯ ಫಲದಿಂದ ಮಠವು ಬೆಳೆಯಿತು. ಅಲ್ಲದೆ ಭಕ್ತರು ಉದ್ಧಾರಗೊಂಡರು.

ಪರಂಪರೆ:

೧. ಷ.ಬ್ರ.ಶ್ರೀ ರೇವಣಸಿದ್ಧೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಮಹಾಂತೇಶ್ವರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಸಂಗನಬಸವ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಮಹಾಂತಲಿಂಗ ಶಿವಾಚಾರ್ಯಸ್ವಾಮಿಗಳು

ಮಠದ ಪರಂಪರೆಯ ಕೆಲವು ಗುರುಗಳ ಹೆಸರುಗಳು ಈ ಮೇಲಿನಂತಿವೆ. ಪುರಾತನ ಕಾಲದಲ್ಲಿ ಪ್ರಾರಂಭಗೊಂಡ ಮಠದ ಪರಂ ಪರೆಯ ಬಗ್ಗೆ ನಿಖರವಾದ ಮಾಹಿತಿಗಳ ಲಭ್ಯವಿಲ್ಲ. ಕಳೆದ ಐವತ್ತು ವರ್ಷಗಳ ಹಿಂದೆ ಅಧಿಕಾರವನ್ನು ನಡೆಸಿದ ಶ್ರೀ ಮಹಾಂತೇಶ್ವರ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ, ಶ್ರೀ ಸಂಗನಬಸವ ಶಿವಾಚಾರ್ಯ ಸ್ವಾಮಿಗಳನ್ನು ಉತ್ತರಾಧಿಕಾರಿ ಗಳನ್ನಾಗಿ ನೇಮಿಸಿ ಲಿಂಗೈಕ್ಯರಾಗಿದ್ದಾರೆ. ದೀರ್ಘಕಾಲದ ಅಧಿಕಾರವನ್ನು ನಡೆಸಿರುವ ಶ್ರೀ ಸಂಗನ ಬಸವ ಸ್ವಾಮಿಗಳು ಈಗ ತೊಂಬತ್ತು ವರ್ಷಗಳನ್ನು ಪೂರೈಸಿ, ಮಠದಲ್ಲಿ ವಿಶ್ರಾಂತ ಜೀವನವನ್ನು ನಡೆಸುತ್ತಿದ್ದಾರೆ. ಗುರುಗಳು ತಮ್ಮ ಆಡಳಿತಾವಧಿ ಯಲ್ಲಿ ಮಠಕ್ಕೆ ಭವ್ಯವಾದ ಕಟ್ಟಡವನ್ನು ಕಟ್ಟಿಸಿ ಪುರಾತನ ಮಠಕ್ಕೆ ವೈಭವ ತಂದುಕೊಟ್ಟಿದ್ದಾರೆ. ಅಲ್ಲದೆ ಗ್ರಾಮಸ್ಥರ ನೆರವಿನಿಂದ ಕಲ್ಯಾಣ ಮಂಟಪವನ್ನು ನಿರ್ಮಿಸಿದ್ದಾರೆ.

ಪುತ್ರವರ್ಗದ ಪರಂಪರೆಯ ಈ ಮಠಕ್ಕೆ ೧೯೯೨ರ ಜುಲೈ ಆರರಂದು ಶ್ರೀ ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಇವರು ಶ್ರೀ ಬಸವಲಿಂಗಯ್ಯ ಮತ್ತು ಶ್ರೀಮತಿ ಶಾಂತಮ್ಮನವರ ಪುತ್ರರಾಗಿ ಜನಿಸಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ಈಗ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿ ಸಂಶೋಧನೆಯನ್ನು ನಡೆಸುತ್ತಿದ್ದಾರೆ. ಗುರುಗಳ ವಿದ್ವತ್ತನ್ನು ಗಮನಿಸಿದ ಬೆಂಗಳೂರು ವಿಭೂತಿಪುರ ಮಠದ ಶ್ರೀ ಸುವರ್ಣಲಿಂಗ ಶಿವಾಚಾರ್ಯ ಸ್ವಾಮಿಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡು ೧೯೯೬ ಮಾರ್ಚ್ ಮೂರರಂದು ಪಟ್ಟಾಧಿಕಾರವನ್ನು ನೀಡಿದ್ದಾರೆ. ಶ್ರೀ ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ಎರಡೂ ಕಡೆ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಾ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಮೂರು ಗದ್ದುಗೆಗಳಿದ್ದು ಈ ಗದ್ದುಗೆಗಳಿಗೆ ನಿತ್ಯ ಪೂಜೆ, ಪ್ರತಿ ಅಮಾವಾಸ್ಯೆ ಯಲ್ಲಿ ಭಜನೆ, ಶ್ರಾವಣ ಮಾಸದಲ್ಲಿ ಪಾದಪೂಜೆ, ಯುಗಾದಿಯಲ್ಲಿ ಒಂದು ತಿಂಗಳು ಕಾಲ ಪ್ರವಚನ, ಮಹಾ ನವಮಿಯಂದು ಒಂಬತ್ತು ದಿನಗಳ ಕಾಲ ದೇವಿಪಾರಾಯಣ, ಕಾರ್ತೀಕಮಾಸದಲ್ಲಿ ಒಂದು ತಿಂಗಳು ಭಜನೆ ಕಾರ್ಯಕ್ರಮ ನಡೆಯುತ್ತಿದೆ.ಮಠ ದಲ್ಲಿ ರೇಣುಕಮೂರ್ತಿ, ಶಿವಲಿಂಗ ಹಾಗೂ ಲಕ್ಷಲಿಂಗಗಳ ಸ್ಥಾಪನೆ ಹಾಗೂ ಹನ್ನೆರಡು ಜ್ಯೋತಿರ್ಲಿಂಗಗಳನ್ನು ತಂದುಪ್ರತಿಷ್ಠಾ ಪನೆ ಮಾಡಲಾಗಿದೆ.ಮಠದಲ್ಲಿ ನಡೆಯುವ ವಿಶೇಷ ಸಂದರ್ಭಗಳಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಪಟ್ಟಕಂತೆ ಹಿರೇಮಠ, ಮನಗೋಳಿ, ಬಸವನ ಬಾಗೇವಾಡಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ಹಿರೇಮಠ: ಮನಗೋಳಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಹಿರೇಮಠವು ಶ್ರೀ ರಂಭಾಪುರಿ ಪೀಠದ ಶಾಖಾ ಮಠವಾಗಿದೆ. ಶಿಷ್ಯವರ್ಗದ ಪರಂಪರೆಯಲ್ಲಿ ಬೆಳೆದಿದೆ. ನಾಲ್ಕನೆಯ ಶತಮಾನದಲ್ಲಿ ಈ ಮಠವು ಸ್ಥಾಪನೆಯಾಗಿದೆ ಎಂದು

ಈಗಿನ ಗುರುಗಳಾದ ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು ಅಭಿಪ್ರಾಯಿಸುತ್ತಾರೆ. ಆದರೆ ಈ ಬಗ್ಗೆ ಯಾವುದೇ ದಾಖಲೆಗಳು ಮಠದಲ್ಲಿ ಲಭ್ಯವಿಲ್ಲ. ಮಠದ ಕರ್ತೃಗುರುಗಳೆಂದು ಶ್ರೀ ಸಂಗನಬಸವ ಸ್ವಾಮಿಗಳ ಹೆಸರನ್ನು ಹೇಳಲಾಗುತ್ತಿದೆ.

ಪರಂಪರೆ:

೧. ಷ.ಬ್ರ.ಶ್ರೀ ಸಂಗನಬಸವ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಸಂಗನಬಸವ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ತಿಪ್ಪಶೆಟ್ಟಿ ಮಹಾಂತ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಸಂಗನಬಸವ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ತೋನ್ಸಹಾಳು ಮಹಾಂತ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ತಿಪ್ಪಶೆಟ್ಟಿ ಮಹಾಂತ ಶಿವಾಚಾರ್ಯಸ್ವಾಮಿಗಳು
೧೦. ಷ.ಬ್ರ.ಶ್ರೀ ಹಾಲಗೊಂಡ ಸಂಗನಬಸವ ಶಿವಾಚಾರ್ಯಸ್ವಾಮಿಗಳು
೧೧. ಷ.ಬ್ರ.ಶ್ರೀ ತಿಪ್ಪಶೆಟ್ಟಿ ಶಿವಾಚಾರ್ಯಸ್ವಾಮಿಗಳು
೧೨. ಷ.ಬ್ರ.ಶ್ರೀ ನಂದ್ಯಾಳ ಮಹಾಂತ ಶಿವಾಚಾರ್ಯಸ್ವಾಮಿಗಳು
೧೩. ಷ.ಬ್ರ.ಶ್ರೀ ರೋಣಿಹಾಳು ಸಂಗನಬಸವ ಶಿವಾಚಾರ್ಯಸ್ವಾಮಿಗಳು
೧೪. ಷ.ಬ್ರ.ಶ್ರೀ ಡಾ. ಮಹಾಂತ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯ ಕೆಲವು ಗುರುಗಳ ಹೆಸರನ್ನು ದಾಖಲಿಸಲಾಗಿದೆ. ಈ ಮಠದಲ್ಲಿ ಈಗ ಪರಂಪರೆಯ ಎಂಟು ಗುರುಗಳ ಗದ್ದುಗೆಗಳನ್ನು ಗುರುತಿಸಲಾಗಿದೆ. ಈ ಹಿಂದೆ ಅಧಿಕಾರದಲ್ಲಿದ್ದು ಲಿಂಗೈಕ್ಯರಾಗಿದ್ದ ಶ್ರೀ ರೋಣಿಹಾಳು ಸಂಗನಬಸವ ಶಿವಾಚಾರ್ಯ ಸ್ವಾಮಿಗಳು ನೂರಏಳು ವರ್ಷಗಳ ಕಾಲ ಬದುಕಿದ್ದು ೧೯೮೩ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರು ಮಹಾ ತಪಸ್ವಿಗಳಾಗಿದ್ದು ಇವರ ಕಾಲದಲ್ಲಿ ಲಕ್ಷದೀಪೋತ್ಸವ, ಹನ್ನೊಂದು ಮಂಟಪಪೂಜೆ, ಅರವತ್ತೂರು ಮಂಟಪ ಪೂಜೆ, ಮಹಾಯಜ್ಞ ಮೊದಲಾದ ಧಾರ್ಮಿಕ ಕಾರ್ಯಗಳು ನೆರವೇರಿವೆ. ಇಂತಹ ಹಿರಿಯ ಚೇತನ ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿ ಲಿಂಗೈಕ್ಯರಾದರು.

ಈಗಿನ ಗುರುಗಳಾದ ಶ್ರೀ ಡಾ. ಮಹಾಂತ ಶಿವಾಚಾರ್ಯ ಸ್ವಾಮಿಗಳು ಶ್ರೀ ಸಂಗನಬಸಪ್ಪ ಮತ್ತು ಶ್ರೀಮತಿ ಕಾಳಮ್ಮ ನವರ ಪುತ್ರರಾಗಿ ೧೯೩೮ ರ ಸೆಪ್ಟೆಂಬರ್ ಇಪ್ಪತ್ತೊಂಬತ್ತರಂದು ಜನಿಸಿದರು. ಇವರು ಬಿಜಾಪುರ, ಬಾಗಲಕೋಟೆ ಹಾಗೂ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾಭ್ಯಾಸ ಮಾಡಿ 'ದಿ ಕಾನ್ಸೆಪಟ್ಸ್ ಆಫ್ ಅಲ್ಟಿಮೇಟ್ ರಿಯಾಲಿಟಿ ಅಂಡ್ ಮೋಕ್ಷ ಇನ್ ವೀರಶೈವಿಸಂ ಅಂಡ್ ಅದ್ವೈತ ವೇದಾಂತ 'ಎಂಬ ವಿಷಯದಲ್ಲಿ ೧೯೭೬ ರಲ್ಲಿ ಮಹಾ ಪ್ರಬಂಧವನ್ನು ಮಂಡಿಸಿ ಪಿಎಚ್.ಡಿ ಯನ್ನು ಗಳಿಸಿಕೊಂಡರು. ಪಾಂಡಿತ್ಯವನ್ನು ಪಡೆದ ಗುರುಗಳು ಮಠಕ್ಕೆ ಆಗಮಿಸಿ ಮಠದ ಆಡಳಿತ ಮತ್ತು ಧಾರ್ಮಿಕ ಕಾರ್ಯಗಳನ್ನು ನಡೆಸತೊಡಗಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಗದ್ದುಗೆಗಳಿಗೆ ಎರಡೂ ವೇಳೆ ಪೂಜೆ, ಅಮಾವಾಸ್ಯೆ ಮತ್ತು ಸೋಮವಾರದಂದು ಶಿವಾನುಭವ ಗೋಷ್ಠಿ, ಶ್ರಾವಣ ಮಾಸದಲ್ಲಿ ಪುರಾಣ ಪಾದಪೂಜೆ, ವೈಶಾಖ ಬಹುಳ ಏಕಾದಶಿಯಲ್ಲಿ ಹಿಂದಿನ ಗುರುಗಳ ಪುಣ್ಯಾರಾಧನೆ, ಪಂಚಾಚಾರ್ಯರ ಜಯಂತ್ಯೋತ್ಸವವನ್ನು ನಡೆಸಲಾಗುತ್ತಿದೆ. ಮಠದ ಆವರಣದಲ್ಲಿ ರೇಣುಕ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಮಠದಲ್ಲಿ ನಡೆಯುವ ವಿಶೇಷ ಕಾರ್ಯಕ್ರಮಗಳಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಅನುಷ್ಠಾನ ಮೂರ್ತಿಗಳಾದ ಈಗಿನ ಗುರುಗಳು ಎಂಬತ್ತೂರು ಬಾರಿ ಅನುಷ್ಠಾನವನ್ನು ಕೈಗೊಂಡಿದ್ದಾರೆ. ಗುರುಗಳು ವಿದ್ಯಾಸಂಪನ್ನರಾಗಿ ಶಿವಪೂಜಾನಿಷ್ಠರಾಗಿ, ಕಾಯಕಯೋಗಿಗಳಾಗಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಡಾ.ಮಹಾಂತಶಿವಾಚಾರ್ಯ ಸ್ವಾಮಿಗಳು, ಶ್ರೀಹಿರೇಮಠ, ಮನಗೋಳಿ,ಬಸವನ ಬಾಗೇವಾಡಿ ತಾ.ಬಿಜಾಪುರಜಿಲ್ಲೆ.

ಮುತ್ತಗಿ

ಬಸವನ ಬಾಗೇವಾಡಿ ತಾಲ್ಲೂಕಿನ ಮುತ್ತಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಹನ್ನೊಂದು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಪುರಾತನ ಕಾಲದಿಂದಲೂ ವೀರಶೈವ ಧರ್ಮ ಪ್ರಬಲವಾಗಿ ಬೆಳೆದು ಬಂದಿದೆ. ಇದಕ್ಕೆ ಸಾಕ್ಷಿ ಎಂಬಂತೆ ಈ ಗ್ರಾಮದಲ್ಲಿ ಶ್ರೀ ರುದ್ರಸ್ವಾಮಿ ಪಟ್ಟದಮಠ, ಶ್ರೀ ಹಿರೇಮಠ, ಶ್ರೀ ಚಿಕ್ಕಮಠ, ಶ್ರೀ ಸ್ಥಾವರಿಕ ಮಠ ಎಂಬ ನಾಲ್ಕು ಮಠಗಳು ಸ್ಥಾಪನೆಯಾಗಿವೆ. ಶ್ರೀ ರುದ್ರಸ್ವಾಮಿ ಪಟ್ಟದ ಮಠದಲ್ಲಿ ಗುರುಗಳಿದ್ದು ಧಾರ್ಮಿಕ ಆಚರಣೆಗಳು ನಡೆಯುತ್ತಿವೆ. ಉಳಿದ ಮೂರುಮಠಗಳಲ್ಲಿ ತಲಾ ಒಂದೊಂದು ಗದ್ದುಗೆಗಳಿದ್ದು, ಗುರುಗಳಿಲ್ಲದೆ ಮಠಗಳು ಖಾಲಿ ಉಳಿದಿವೆ. ಮಠದ ವಂಶಸ್ಥರು ಗದ್ದುಗೆಗಳಿಗೆ ಪೂಜೆಯನ್ನು ನಡೆಸುತ್ತಿದ್ದಾರೆ.

ರುದ್ರಸ್ವಾಮಿ ಪಟ್ಟದಮಠ: ಈ ಗ್ರಾಮದ ಮಧ್ಯಭಾಗದಲ್ಲಿ ರಂಭಾಪುರಿ ಪೀಠದ ಶಾಖಾಮಠವಾದ ಶ್ರೀ ರುದ್ರಸ್ವಾಮಿ ಪಟ್ಟದಮಠವು ಸ್ಥಾಪನೆಯಾಗಿದೆ. ಕರ್ತೃಗುರುಗಳಾದ ಶ್ರೀ ರುದ್ರಸ್ವಾಮಿಗಳು ಹುನುಗುಂದ ತಾಲ್ಲೂಕಿನ ಹಡಗಲಿ ಗ್ರಾಮದಲ್ಲಿ ಮಠವನ್ನು ಸ್ಥಾಪಿಸಿ, ಲೋಕ ಸಂಚಾರಕ್ಕೆ ಹೊರಟು ಮುತ್ತಗಿಯಲ್ಲಿ ನೆಲೆಸಿ ಮಠವನ್ನು ಸ್ಥಾಪಿಸಿದ್ದಾರೆ. ಅಂದು ಸ್ಥಾಪನೆಗೊಂಡ ಮಠವು ಈತನಕ ಬೆಳೆದು ವೀರಶೈವ ಧರ್ಮವನ್ನು ಪ್ರಚಾರ ಪಡಿಸುವಲ್ಲಿ ಯಶಸ್ವಿಯಾಗಿದೆ.

ಪರಂಪರೆ:

೧. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಶಿವಮೂರ್ತಿ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ವೀರ ರುದ್ರಮುನಿ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯ ಕೆಲವು ಗುರುಗಳ ಹೆಸರನ್ನು ಮಾತ್ರ ದಾಖಲಿಸಲಾಗಿದೆ. ಮಠದ ಪರಂಪರೆಯಲ್ಲಿ ಎಷ್ಟು ಜನ ಗುರುಗಳು ಅಧಿಕಾರ ನಡೆಸಿದರು ಎಂಬ ಬಗ್ಗೆ ಆಧಾರವಿಲ್ಲ. ಮಠದ ಪರಂಪರೆಯ ಇತಿಹಾಸವನ್ನು ಉಳಿಸಿಕೊಳ್ಳಬೇಕೆಂಬ ಕಲ್ಪನೆ ಪೂರ್ವಜರಲ್ಲಿ ಇಲ್ಲದ ಕಾರಣ ಮಠದ ಪರಂಪರೆ ಅಸ್ಪಷ್ಟವಾಗಿದೆ. ಶ್ರೀ ರುದ್ರಸ್ವಾಮಿಗಳ ನಂತರ ಅಧಿಕಾರವನ್ನು ವಹಿಸಿಕೊಂಡ ಗುರುಗಳ ಬಗ್ಗೆ ಮಾಹಿತಿ ಇಲ್ಲವಾಗಿದೆ. ಮೂರು ವರ್ಷಗಳ ಹಿಂದೆ (೧೯೯೭) ನಿಡಗುಂದಿಯಲ್ಲಿ ಲಿಂಗೈಕ್ಯರಾದ ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳ ನಂತರ ಶ್ರೀ ವೀರರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಶ್ರೀ ವೀರರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಮುತ್ತಗಿ ಗ್ರಾಮದ ಶ್ರೀ ರೇವಣಸಿದ್ಧಯ್ಯ ಮತ್ತು ಶ್ರೀಮತಿ ಸುಗುಣಬಾಯಿಯವರ ಪುತ್ರರಾಗಿ ೧೯೬೮ರಲ್ಲಿ ಜನಿಸಿದರು. ಇವರು ಕಾಶಿಯಲ್ಲಿ ಸಂಸ್ಕೃತ ಎಂ.ಎ,ಮುಂಬಯಿಯಲ್ಲಿ ಕನ್ನಡ ಎಂ.ಎ ಮಾಡಿ ಮಧ್ಯಪ್ರದೇಶದ ಜಿಂದವಾಡ ಜಿಲ್ಲೆಯ ಪಾಂಡುದುನದಲ್ಲಿ 'ವೀರಶೈವ ಸಂಸ್ಥಾನಮಠ 'ದ ಪಟ್ಟಾಧಿಕಾರಿಗಳಾಗಿ ೧೯೯೫'ಲ್ಲಿ ಅಧಿಕಾರವನ್ನು ವಹಿಸಿಕೊಂಡು, ಮಠದ ಧಾರ್ಮಿಕ ಹಾಗೂ ಆಡಳಿತ ಕಾರ್ಯಗಳನ್ನು ನಡೆಸಿಕೊಂಡು ವೀರಶೈವ ಧರ್ಮವನ್ನು ಪ್ರಚಾರಗೊಳಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಮೂರು ಗದ್ದುಗೆಗಳಿದ್ದು, ಈ ಗದ್ದುಗೆಗಳಿಗೆ ನಿತ್ಯಪೂಜೆಯನ್ನು ನಡೆಸಲಾಗುತ್ತಿದೆ. ಯುಗಾದಿಯಲ್ಲಿ ಹನ್ನೊಂದು ದಿನ ಪುರಾಣ ಹಾಗೂ ಲಿಂಗದೀಕ್ಷೆ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಮಠದ ಆಸ್ತಿಯಾಗಿರುವ ಹತ್ತು ಎಕರೆ ಭೂಮಿಯನ್ನು ಅಭಿವೃದ್ಧಿಪಡಿಸಿ, ಆದಾಯದ ಮೂಲವನ್ನಾಗಿ ಮಾಡಿಕೊಳ್ಳಲಾಗಿದೆ. ಗುರುಗಳು ಸಂದರ್ಭಕ್ಕನುಸಾರ ಇಲ್ಲಿಗೆ ಆಗಮಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ವೀರ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ರುದ್ರಸ್ವಾಮಿ ಮಠ, ಮುತ್ತಗಿ, ಬಸವನ ಬಾಗೇವಾಡಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ಮುಳುವಾಡ

ಬಸವನ ಬಾಗೇವಾಡಿ ತಾಲ್ಲೂಕಿನ ಮುಳುವಾಡ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಮುಳುವಾಡ ಗ್ರಾಮದ ಮಧ್ಯಭಾಗದಲ್ಲಿ ರಂಭಾಪುರಿ ಪೀಠದ ಶಾಖಾ ಮಠವಾದ ಹಿರೇಮಠವು ಅಸ್ತಿತ್ವದಲ್ಲಿದೆ. ಪುತ್ರ ವರ್ಗದ ಪರಂಪರೆಯಲ್ಲಿ ಬೆಳೆದಿರುವ ಈ ಮಠವು ಪುರಾತನ ಕಾಲದಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಲಾದರೂ, ಇವಕ್ಕೆ ಪೂರಕವಾದ ಆಧಾರಗಳು ಲಭ್ಯವಿಲ್ಲ. ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ಕಳೆದ ಹತ್ತು ವರ್ಷಗಳ ತನಕ ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದು ಲಿಂಗೈಕ್ಯರಾಗಿದ್ದಾರೆ. ಇವರ ತರುವಾಯ ಶ್ರೀ ಸಂಗನಬಸವ ದೇವರು ಉತ್ತರಾಧಿಕಾರಿಗಳಾಗಿ ನೇಮಕಗೊಂಡಿದ್ದಾರೆ. ಈಗ ಉತ್ತರಾಧಿಕಾರಿಗಳು ವಿದ್ಯಾಭ್ಯಾಸ ಮಾಡುತ್ತಿರುವ ಕಾರಣಕ್ಕಾಗಿ ಪಟ್ಟಾಧಿಕಾರ ವನ್ನು ಮುಂದೂಡಲಾಗಿದೆ. ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ಮಠದ ವಂಶಸ್ಥರೇ ಪೂಜಾ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸಂಗನಬಸವದೇವರು,ಶ್ರೀ ಹಿರೇಮಠ, ಮುಳುವಾಡ,ಬಸವನಬಾಗೇವಾಡಿ ತಾಲ್ಲೂಕು, ಬಿಜಾಪುರಜಿಲ್ಲೆ.

ಯಂಬತ್ನಾಳ

ಬಸವನ ಬಾಗೇವಾಡಿ ತಾಲ್ಲೂಕಿನ ಯಂಬತ್ನಾಳ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಬಸವಲಿಂಗೇಶ್ವರ ಮಠವು ಅಸ್ತಿತ್ವದಲ್ಲಿದೆ.

ಬಸವಲಿಂಗೇಶ್ವರಮಠ: ಯಂಬತ್ನಾಳ ಗ್ರಾಮದಲ್ಲಿ ರಂಭಾಪುರಿ ಪೀಠದ ಶಾಖಾಮಠವಾದ ಶ್ರೀ ಬಸವಲಿಂಗೇಶ್ವರ ಮಠವು ಐವತ್ತು ವರ್ಷಗಳ ಹಿಂದೆ ಪ್ರಾರಂಭವಾಗಿದೆ. ಶ್ರೀ ಬಸವಲಿಂಗೇಶ್ವರ ಸ್ವಾಮಿಗಳು ಬದುಕಿನಲ್ಲಿ ಆಧ್ಯಾತ್ಮವನ್ನು ರೂಢಿಸಿಕೊಂಡು ಇಲ್ಲಿನ ಪರಮಾನಂದರ ಗುಡಿಯಲ್ಲಿ ನೆಲೆಗೊಂಡು, ಇಲ್ಲಿ ಧಾರ್ಮಿಕ ಚಟುವಟಿಕೆಗಳು ನಡೆಯುವಂತೆ ಮಾಡಿದರು. ಗುರುಗಳು ಆಧ್ಯಾತ್ಮ ಸಾಧನೆಯಿಂದ ವಾಕ್‌ಸಿದ್ಧಿಯನ್ನು ಪಡೆದು ಲಿಂಗೈಕ್ಯರಾದರು. ಶ್ರೀ ಬಸವಲಿಂಗ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಗ್ರಾಮದ ಭಕ್ತರು ಚಿಮ್ಮಲಗಿ ಮಠದ ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳಿಗೆ ಮಠವನ್ನು ಒಪ್ಪಿಸಿರುತ್ತಾರೆ.

ಚಿಮ್ಮಲಗಿ ಚಿಕ್ಕಮಠದ ಪಟ್ಟಾಧ್ಯಕ್ಷರಾದ ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳು ಶ್ರೀ ಬಸವಲಿಂಗೇಶ್ವರ ಮಠದ ಆಡಳಿತವನ್ನು ವಹಿಸಿಕೊಂಡು, ಹನ್ನೆರಡು ಲಕ್ಷ ರೂಪಾಯಿ ವೆಚ್ಚದಲ್ಲಿ ಮಠಕ್ಕೆ ನೂತನ ಕಟ್ಟಡವನ್ನು ನಿರ್ಮಿಸಿ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಿರುತ್ತಾರೆ. ಮಠವನ್ನು ಆರ್ಥಿಕವಾಗಿ ಸದೃಢಗೊಳಿಸಲು ಇಪ್ಪತ್ತು ಎಕರೆ ಜಮೀನನ್ನು ಖರೀದಿಸಿ ಅಭಿವೃದ್ಧಿ ಪಡಿಸಿದ್ದಾರೆ. ಗುರುಗಳು ಇಲ್ಲಿ ನೆಲೆಸಿದ ಮೇಲೆ ಧಾರ್ಮಿಕ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳು, ಶ್ರೀ ಬಸವಲಿಂಗೇಶ್ವರ ಮಠ, ಯಂಬತ್ನಾಳ, ಬಸವನ ಬಾಗೇವಾಡಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ಯರನಾಳ-ಉಕ್ಕಲಿ

ಬಸವನ ಬಾಗೇವಾಡಿ ತಾಲ್ಲೂಕಿನ ಯರನಾಳು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತ ಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಯರನಾಳು ಗ್ರಾಮದ ಮಧ್ಯ ಭಾಗದಲ್ಲಿ ವಿರಕ್ತ ಮಠವು ಸ್ಥಾಪನೆಯಾಗಿದೆ. ವಿಜಯನಗರದ ಪ್ರೌಢದೇವರಾಯನ ಕಾಲದಲ್ಲಿ (ಕ್ರಿ.ಶ.೧೪೨೪-೪೬) ಶ್ರೀ ಬಸವಲಿಂಗ ಸ್ವಾಮಿಗಳು ನೂರೊಂದು ವಿರಕ್ತರ ಜೊತೆಯಲ್ಲಿ ಲೋಕಸಂಚಾರಕ್ಕೆ ಹೊರಟು,ಕಪ್ಪತ್ತುಗುಡ್ಡದಲ್ಲಿ ತಪಸ್ಸನ್ನು ಆಚರಿಸಿ ಅನೇಕ ಪವಾಡಗಳನ್ನು ಮಾಡಿ ಹುಲಿಯನ್ನು ತಮ್ಮ ವಾಹನವನ್ನಾಗಿ ಮಾಡಿಕೊಂಡು ಯರನಾಳು ಗ್ರಾಮಕ್ಕೆ ಬರುತ್ತಾರೆ. ಗುರುಗಳು ಈ ಗ್ರಾಮಕ್ಕೆ ಬಂದು ನೆಲೆಸಿದ ಮೇಲೆ ಇಲ್ಲಿ ಅನೇಕ ಪವಾಡಗಳನ್ನು ಮಾಡಿ ಭಕ್ತರನ್ನು ಉದ್ಧರಿಸಿ ಮಠವನ್ನು ಸ್ಥಾಪಿಸಿದ್ದಾರೆ. ಶ್ರೀ ಬಸವಲಿಂಗ ಸ್ವಾಮಿಗಳಿಂದ ಸ್ಥಾಪಿತಗೊಂಡ ಮಠವು ಈತನಕ ಬೆಳೆದು ಬಂದಿದೆ.

ಮಠದ ಪರಂಪರೆ:
೧. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ನಿರಂಜನಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಪಂಪಾಪತಿಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಮುರುಘೇಂದ್ರಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಮಹಾಂತಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಸಂಗನಬಸವಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ದಯಾನಂದಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಗುರುಸಂಗನಬಸವಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಐದು ಜನ ಗುರುಗಳು ಹಂಪಿಯಲ್ಲಿಯೇ ಲಿಂಗೈಕ್ಯರಾಗಿದ್ದು, ಅವರ ಗದ್ದುಗೆಯನ್ನು ಹಂಪಿಯಲ್ಲಿ ಸ್ಥಾಪಿಸಲಾಗಿದೆ ಎಂದು ಈ ಮಠದ ವಂಶಸ್ಥರು ಅಭಿಪ್ರಾಯಿಸುತ್ತಾರೆ. ಈಗ ಲಭ್ಯವಿರುವ ಆಧಾರಗಳಿಂದ ಮಠದ ಪರಂಪರೆಯ ಗುರುಗಳಾಗಿ ಅಧಿಕಾರಕ್ಕೆ ಬಂದವರು ಶ್ರೀನಿರಂಜನ ಸ್ವಾಮಿಗಳು ಅವರ ನಂತರ ಶ್ರೀ ಪಂಪಾಪತಿ ಸ್ವಾಮಿಗಳು, ಶ್ರೀ ಮುರುಘೇಂದ್ರ ಸ್ವಾಮಿಗಳು, ಶ್ರೀ ಮಹಾಂತ ಸ್ವಾಮಿಗಳು ಹಾಗೂ ಶ್ರೀಸಂಗನಬಸವ ಸ್ವಾಮಿಗಳು ಈ ಮಠದ ಪರಂಪರೆಯ ಗುರುಗಳಾಗಿ ಅಧಿಕಾರ ನಡೆಸಿದ್ದಾರೆ. ಶ್ರೀ ಸಂಗನಬಸವ ಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ದಯಾನಂದ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಗುರುಗಳು ಶ್ರೀ ಶಿವಾನಂದ ಮತ್ತು ಶ್ರೀಮತಿ ವಿಜಯಲಕ್ಷ್ಮಿಯವರ ಪುತ್ರರಾಗಿ ೧೯೭೪ರಲ್ಲಿ ಜನಿಸಿದ ತಮ್ಮ ಸಹೋದರ ಸಂಬಂಧಿಗಳಾದ ಶ್ರೀ ಗುರುಸಂಗನಬಸವ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡು, ೧೯೯೩ರಲ್ಲಿ ಲಿಂಗೈಕ್ಯರಾಗಿದ್ದಾರೆ.

ಪರಂಪರೆಯ ಎಂಟನೆಯ ಗುರುಗಳಾಗಿ ನೇಮಕಗೊಂಡಿರುವ ಶ್ರೀ ಗುರುಸಂಗನಬಸವ ಸ್ವಾಮಿಗಳು ಸ್ನಾತಕೋತ್ತರ ಪದವೀಧರರಾಗಿದ್ದು,ಕ್ರಿಯಾಶೀಲತೆ ಹಾಗೂ ಪ್ರಗತಿಪರ ಧೋರಣೆಯನ್ನು ಇಟ್ಟುಕೊಂಡು ವೀರಶೈವ ಧರ್ಮವನ್ನು ಬೆಳೆಸುತ್ತಿದ್ದಾರೆ. ಧರ್ಮವನ್ನು ವೈಚಾರಿಕತೆಯಿಂದ ವಿಶ್ಲೇಷಿಸಿ ಸಮಾಜವನ್ನು ಧಾರ್ಮಿಕ ತಳಹದಿಯ ಮೇಲೆ ಬೆಳೆಸಲು ಮುಂದಾಗಿದ್ದಾರೆ.

ಹೋರಾಟಗಾರರು: ಈಗಿನ ಗುರುಗಳಾದ ಶ್ರೀ ಗುರುಸಂಗನಬಸವ ಸ್ವಾಮಿಗಳು ಕರ್ನಾಟಕದ ಅಭಿವೃದ್ಧಿಗೆಂದು ತಮ್ಮ ಭೂಮಿಯನ್ನು ತ್ಯಾಗ ಮಾಡಿದ ಆಲಮಟ್ಟಿ ಸಂತ್ರಸ್ತರಿಗೆ ಸರ್ಕಾರ ನೀಡಬೇಕಾದ ನ್ಯಾಯಯುತ ಸೌಲತ್ತುಗಳನ್ನು ನೀಡದೆ ಇದ್ದಾಗ,ಸಂತ್ರಸ್ತರ ಪರವಾಗಿ ಸರ್ಕಾರದ ವಿರುದ್ಧ ಧ್ವನಿ ಎತ್ತಿ ನ್ಯಾಯ ದೊರಕಿಸಿಕೊಟ್ಟರು. ಅಲ್ಲದೆ ಬಸವನಬಾಗೇವಾಡಿ ತಾಲ್ಲೂಕಿಗೆ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡಲು ಮುಳುವಾಡಿ ಏತ ನೀರಾವರಿ ಯೋಜನೆಯನ್ನು ಸ್ಥಾಪಿಸಬೇಕೆಂದು, ಸರ್ಕಾರದ ಗಮನ ಸೆಳೆಯಲು ಹೋರಾಟದ ಹಾದಿ ಹಿಡಿದರು. ಆದರೆ ಸರ್ಕಾರ ಇವರ ಹೋರಾಟಕ್ಕೆ ಮಾನ್ಯತೆ ನೀಡದಿದ್ದಾಗ ಯೋಜನೆಯ ಪ್ರದೇಶದಲ್ಲಿ ಉಪವಾಸ ಸತ್ಯಾಗ್ರಹ ಕುಳಿತ ಶ್ರೀ ಗುರುಸಂಗನ ಬಸವ ಸ್ವಾಮಿಗಳು ಸರ್ಕಾರದ ಗಮನವನ್ನು ಸೆಳೆದು ಈ ಯೋಜನೆಯ ಬಗ್ಗೆ ಚಿಂತಿಸುವಂತೆ ಮಾಡಿದರು. ಈ ರೀತಿ ಧಾರ್ಮಿಕ ಕಾರ್ಯಗಳ ಜೊತೆಗೆ ಸಾಮಾಜಿಕ ಕಳಕಳಿಯನ್ನಿಟ್ಟುಕೊಂಡು ಮಠವನ್ನು ಮುನ್ನಡೆಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಆರು ಗದ್ದುಗೆಗಳಿಗೆ ನಿತ್ಯ ಪೂಜೆ, ಯುಗಾದಿಯ ಸಂದರ್ಭದಲ್ಲಿ ಪರಂಪರೆಯ ಗುರುಗಳಾದ ಶ್ರೀ ಪಂಪಾಪತಿ ಸ್ವಾಮಿಗಳ ಆರಾಧನೆ, ಹುಣ್ಣಿಮೆ ಮತ್ತು ಅಮಾವಾಸ್ಯೆಗಳಲ್ಲಿ ಶಿವಾನುಭವ, ಶ್ರಾವಣಮಾಸ ಮತ್ತು ಕಾರ್ತೀಕೋತ್ಸವದಲ್ಲಿ ವಿಶೇಷ ಪೂಜೆ, ಗೋಕುಲಾಷ್ಟಮಿಯ ದಿನ ಶ್ರೀ ದಯಾನಂದ ಸ್ವಾಮಿಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭಗಳಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಿಸಲಾಗುತ್ತಿದೆ.

ಶಿಕ್ಷಣ-ಸಾಹಿತ್ಯ: ಪಂಪಾಪತಿ ಶಿವಯೋಗಿ ವಿದ್ಯಾವರ್ಧಕ ಸಂಘವನ್ನು ಪ್ರಾರಂಭಿಸಿ, ಪ್ರೌಢಶಾಲೆಯನ್ನು ನಡೆಸಲಾಗುತ್ತಿದೆ. ಕಲಿಯುವ ಕೆಲವು ಬಡ ಮಕ್ಕಳಿಗೆ ಮಠದಲ್ಲಿ ಆಶ್ರಯ ಕಲ್ಪಿಸಲಾಗಿದೆ. ಶ್ರೀ ಗುರುಸಂಗನ ಬಸವ ಸ್ವಾಮಿಗಳು ಸಾಹಿತ್ಯದಲ್ಲಿ ಆಸಕ್ತಿಯನ್ನು ಹೊಂದಿ ಪಂಪಾಪತಿ ಚರಿತ್ರೆ ಎಂಬ ಗ್ರಂಥವನ್ನು ಬರೆದು ಪ್ರಕಟಿಸಿದ್ದಾರೆ. ಅಲ್ಲದೆ ಹಿಂದಿನ ಗುರುಗಳಾದ

ಶ್ರೀದಯಾನಂದ ಸ್ವಾಮಿಗಳು ಬರೆದ ಬಡವರ ವೈದ್ಯ, ಸೂಳ್ನುಡಿ ಎಂಬ ಪುಸ್ತಕಗಳನ್ನು ಮಠದ ವತಿಯಿಂದ ಪ್ರಕಟಿಸಲಾಗಿದೆ.
ವಿಳಾಸ: ಶ್ರೀ ಮ.ನಿ.ಪ್ರ. ಗುರು ಸಂಗನಬಸವ ಸ್ವಾಮಿಗಳು, ಶ್ರೀ ವಿರಕ್ತ ಮಠ, ಯರನಾಳು, ಬಸವನ ಬಾಗೇವಾಡಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ವಡವಡಗಿ

ಬಸವನ ಬಾಗೇವಾಡಿ ತಾಲ್ಲೂಕಿನ ವಡವಡಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹತ್ತೊಂಬತ್ತು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ವೀರಶೈವ ಧರ್ಮವು ಪ್ರಬಲವಾಗಿ ಬೆಳೆದಿದೆ. ಇಲ್ಲಿ ಶ್ರೀನಂದಿಮಠ ಮತ್ತು ಶ್ರೀ ಶಿವಧಾಮ ಬೃಹನ್ಮಠ ಎಂಬ ಎರಡು ಮಠಗಳು ಸ್ಥಾಪನೆಯಾಗಿವೆ. ಈ ಮಠಗಳ ಸ್ಥಾಪನೆಯಿಂದ ವೀರಶೈವರ ಧಾರ್ಮಿಕ ಆಚರಣೆಗಳಿಗೆ ನೆರವಾಗಿದೆ.

ನಂದಿಮಠ: ವಡವಡಗಿ ಗ್ರಾಮದ ಆಗ್ನೇಯದ ಹೊರಭಾಗದಲ್ಲಿ ನಂದಿಮಠವು ೧೯೨೭ ರಲ್ಲಿ ಸ್ಥಾಪನೆಯಾಗಿದೆ. ಶ್ರೀ ಗುರುಪಾದಪ್ಪ ನವರು ಜೀವನದಲ್ಲಿ ವೈರಾಗ್ಯವನ್ನು ತಾಳಿ ಸಿಂದಗಿ ತಾಲ್ಲೂಕಿನ ಹಚ್ಯಾಳದ ಹಿರೇಮಠದ ಶ್ರೀ ವೀರಸಿದ್ಧೇಶ್ವರ ಸ್ವಾಮಿಗಳಿಂದ ಜಂಗಮ ದೀಕ್ಷೆಯನ್ನು ಪಡೆದು ಇಲ್ಲಿ ಮಠವನ್ನು ಸ್ಥಾಪಿಸಿದ್ದಾರೆ.

ಮಠ ಸ್ಥಾಪನೆ: ಶ್ರೀ ಗುರುಪಾದಪ್ಪ ಸ್ವಾಮಿಗಳು ವೀರಶೈವ ಧರ್ಮದ ಆಚಾರ ವಿಚಾರಗಳು ಮತ್ತು ಷಟ್‌ಸ್ಥಲ ಸಿದ್ಧಾಂತದ ಬಗ್ಗೆ ಅಪಾರ ಜ್ಞಾನವನ್ನು ಪಡೆದು ನಂದಿಮಠವನ್ನು ಸದೃಢವಾಗಿ ಬೆಳೆಸಿದರು. ಮಠದಲ್ಲಿ ನಿತ್ಯ ಶಿವಾನುಭವ ಗೋಷ್ಠಿಯನ್ನು ಏರ್ಪಡಿಸಿ, ಧರ್ಮ ಪ್ರಚಾರವನ್ನು ಕೈಗೊಂಡರು. ಧರ್ಮದ ತಳಹದಿಯ ಮೇಲೆ ಬದುಕನ್ನು ರೂಢಿಸಿಕೊಳ್ಳುವಂತೆ ಉಪದೇಶವನ್ನು ನೀಡಿ ಭಕ್ತರನ್ನು ಉದ್ಧರಿಸಿದ ಇವರು ೧೯೪೩ ರಲ್ಲಿ ಲಿಂಗೈಕ್ಯರಾಗಿದ್ದಾರೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ಗುರುಪಾದಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ವೀರಸಂಗಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ವೀರಸಂಗಪ್ಪಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ನಿರಂಜನಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಹಚ್ಯಾಳದ ಶ್ರೀ ವೀರಸಿದ್ಧೇಶ್ವರ ಸ್ವಾಮಿಗಳು ಇಲ್ಲಿಗೆ ಬಂದು ನೆಲೆಸಿ ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದರಲ್ಲದೆ, ಶ್ರೀ ವೀರಸಂಗಪ್ಪ ಸ್ವಾಮಿಗಳನ್ನು ಈ ಮಠದ ಉತ್ತರಾಧಿಕಾರಿಗಳನ್ನಾಗಿ ನೇಮಿಸಿದರು. ಇವರು ಶ್ರೀ ಗುರುಯ್ಯ ಮತ್ತು ಶ್ರೀಮತಿ ನಾಗಮ್ಮನವರ ಪುತ್ರರಾಗಿ ಜನಿಸಿ ಈ ಮಠದ ಆಡಳಿತವನ್ನು ನಡೆಸಿಕೊಂಡು ಬಂದು ೧೯೬೦ ರ ಏಪ್ರಿಲ್ ಇಪ್ಪತ್ತೊಂದರಲ್ಲಿ ಲಿಂಗೈಕ್ಯರಾದರು. ಇವರ ನಂತರ ಶ್ರೀ ಅಂಬರದಯ್ಯ ಮತ್ತು ಶ್ರೀಮತಿ ಸಿದ್ಧಮ್ಮನವರ ಪುತ್ರರಾಗಿ ೧೯೪೪ ರಲ್ಲಿ ಜನಿಸಿದ ಶ್ರೀ ನಿರಂಜನ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಲಾಯಿತು. ಶ್ರೀ ನಿರಂಜನ ಸ್ವಾಮಿಗಳು ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿ ಮಠಕ್ಕೆ ಆಗಮಿಸಿ ದರು. ಗುರುಗಳು ಇಲ್ಲಿ ನೆಲೆ ನಿಂತ ಮೇಲೆ ಜೀರ್ಣಗೊಂಡಿದ್ದ ಮಠದ ಕಟ್ಟಡವನ್ನು ನವೀಕರಿಸಿ ಶಿವಲಿಂಗವನ್ನು ಸ್ಥಾಪಿಸಿ, ಧಾರ್ಮಿಕ ಚಟುವಟಿಕೆಗಳು ನಡೆಯುವಂತೆ ವ್ಯವಸ್ಥೆಗೊಳಿಸಿ ೧೯೯೯ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಕರ್ತೃಗುರುಗಳಾದ ಶ್ರೀ ಗುರುಪಾದ ಸ್ವಾಮಿಗಳ ಅನುಗ್ರಹ ಗುರುಗಳಾಗಿದ್ದ ಶ್ರೀ ಸಿದ್ಧೇಶ್ವರ ಸ್ವಾಮಿಗಳ ಗದ್ದುಗೆ ಹಾಗೂ ಕರ್ತೃಗುರುಗಳ ಗದ್ದುಗೆ, ಶ್ರೀ ವೀರಸಂಗಪ್ಪ ಸ್ವಾಮಿಗಳ ಗದ್ದುಗೆಯು ನಿರ್ಮಾಣ ಗೊಂಡಿವೆ. ಈ ಮೂರೂ ಗದ್ದುಗೆಗಳಿಗೆ ತ್ರಿಕಾಲ ಪೂಜೆಯನ್ನು ನಡೆಸಲಾಗುತ್ತಿದೆ. ಪ್ರತಿ ಅಮಾವಾಸ್ಯೆಯಲ್ಲಿ ನಡೆಯುವ ವಿಶೇಷ ಧಾರ್ಮಿಕ ಕಾರ್ಯಕ್ರಮಕ್ಕೆ ಏಳರಿಂದ ಎಂಟು ಸಾವಿರ ಜನರು ಪಾಲ್ಗೊಳ್ಳುತ್ತಾರೆ. ಈ ಸಂದರ್ಭದಲ್ಲಿ ಅನ್ನದಾಸೋಹವು ಬೆಳಿಗ್ಗೆಯಿಂದ ಸಂಜೆಯತನಕ ನಿರಂತರವಾಗಿ ನಡೆಯುತ್ತಿರುತ್ತದೆ. ಶ್ರಾವಣಮಾಸದಲ್ಲಿ ಪಾದಪೂಜೆ, ಯುಗಾದಿ ಪಾಡ್ಯದಿಂದ ಏಳು ದಿನಗಳ ಕಾಲ ಪುರಾಣ ಪ್ರವಚನ, ಶ್ರೀ ವೀರ ಸಿದ್ಧೇಶ್ವರ ಸ್ವಾಮಿಗಳ ರಥೋತ್ಸವ ಹಾಗೂ ಶಿವಾನುಭವ ಗೋಷ್ಠಿಯನ್ನು

ಏರ್ಪಡಿಸಲಾಗುತ್ತಿದೆ. ೧೯೮೮ ರಲ್ಲಿ ಅರವತ್ತ್ಮೂರು ಮಂಟಪ ಪೂಜೆ, ಶ್ರೀ ಪುಟ್ಟರಾಜ ಗವಾಯಿಗಳಿಗೆ ತುಲಾಭಾರ ಕಾರ್ಯಕ್ರಮವನ್ನು ಮಾಡಲಾಗಿದೆ.

ಶ್ರೀ ನಿರಂಜನ ಸ್ವಾಮಿಗಳು ಸದಾ ಚಟುವಟಿಕೆಯಿಂದ ಮಠದ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳಿಗೆ ಸ್ಪಂದಿಸುತ್ತಾ ಮಠವನ್ನು ಹೆಚ್ಚು ಅಭಿವೃದ್ಧಿಪಡಿಸಿದ್ದಾರೆ. ಇವರು ಅಧಿಕಾರಕ್ಕೆ ಬಂದ ಮೇಲೆ ಮಠದ ಆಸ್ತಿಯನ್ನು ವಿಸ್ತರಿಸಿ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ಗುರುಗಳು ಶ್ರೀ ವೀರಸಿದ್ಧೇಶ್ವರ ವಿದ್ಯಾ ಸಂಸ್ಥೆಯನ್ನು ಪ್ರಾರಂಭಿಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ನಿರಂಜನ ಸ್ವಾಮಿಗಳು, ಶ್ರೀ ನಂದಿಮಠ, ವಡವಡಗಿ, ಬಸವನ ಬಾಗೇವಾಡಿ ತಾ, ಬಿಜಾಪುರ ಜಿಲ್ಲೆ.

ಶಿವಧಾಮ ಬೃಹನ್ಮಠ: ವಡವಡಗಿ ಗ್ರಾಮದ ಪಶ್ಚಿಮದ ಹೊರಭಾಗದಲ್ಲಿ ರಂಭಾಪುರಿಪೀಠದ ಪರಂಪರೆಯ ಶ್ರೀ ಶಿವಧಾಮ ಬೃಹನ್ಮಠವು ಸ್ಥಾಪನೆಯಾಗಿದೆ. ಈ ಮಠವನ್ನು ಇಪ್ಪತ್ತನೆಯ ಶತಮಾನದಲ್ಲಿ ಶಿವಾದ್ವೈತ ವಿದ್ವಾನ್ ಶ್ರೀ ಸುವರ್ಣಲಿಂಗ ಶಿವಾಚಾರ್ಯ ಸ್ವಾಮಿಗಳು ಸ್ಥಾಪಿಸಿದ್ದಾರೆ. ಬೆಂಗಳೂರು ನಗರ ಸಮೀಪದ ವಿಭೂತಿಪುರದಲ್ಲಿ ಸ್ಥಾಪಿತವಾಗಿರುವ ಶ್ರೀವಿಭೂತಿ ಪುರ ವೀರಸಿಂಹಾಸನ ಮಠದ ಮಠಾಧ್ಯಕ್ಷರಾದ ಇವರು ತಮ್ಮ ಪೂರ್ವಾಶ್ರಮದ ಗ್ರಾಮದಲ್ಲಿ ಬೃಹನ್ಮಠವನ್ನು ಸ್ಥಾಪಿಸಿದ್ದಾರೆ.

ಶ್ರೀ ರೇಣುಕಾಚಾರ್ಯರ ಮೂರ್ತಿಯನ್ನು ಪ್ರತಿಷ್ಠಾಪಿಸಿ ಭವ್ಯವಾದ ಮಂಟಪವನ್ನು ನಿರ್ಮಿಸಿದ್ದಾರೆ. ಅಲ್ಲದೆ ನೂತನ ಮಠಕ್ಕೆ ಬೃಹದಾಕಾರದ ಕಟ್ಟಡವನ್ನು ನಿರ್ಮಿಸಿ ಧಾರ್ಮಿಕ ಆಚರಣೆಗಳು ನಡೆಯುವಂತೆ ಮಾಡಿದ್ದಾರೆ. ಶ್ರೀ ಸುವರ್ಣಲಿಂಗ ಶಿವಾಚಾರ್ಯ ಸ್ವಾಮಿಗಳು ಬೆಂಗಳೂರಿನ ವಿಭೂತಿಪುರ ಮಠ ಮತ್ತು ಈ ಬೃಹನ್ಮಠದ ಧಾರ್ಮಿಕ ಹಾಗೂ ಆಡಳಿತ ಕಾರ್ಯಗಳನ್ನು ನಡೆಸಿ ೨೦೦೧ರಲ್ಲಿ ಲಿಂಗೈಕ್ಯರಾದರು. ಈಗ ಶ್ರೀ ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ಮಠದ ಆಡಳಿತವನ್ನು ನೋಡಿಕೊಳ್ಳುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಶಿವಧಾಮ ಬೃಹನ್ಮಠ, ವಡವಡಗಿ, ಬಸವನ ಬಾಗೇವಾಡಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ಸಾಸನೂರು

ಬಸವನ ಬಾಗೇವಾಡಿ ತಾಲ್ಲೂಕಿನ ಸಾಸನೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಮಡಿವಾಳೇಶ್ವರ ಹಿರೇಮಠವು ಅಸ್ತಿತ್ವದಲ್ಲಿದೆ.

ಮಡಿವಾಳೇಶ್ವರ ಹಿರೇಮಠ: ಸಾಸನೂರು ಗ್ರಾಮದ ಮಧ್ಯಭಾಗದಲ್ಲಿ ಶ್ರೀ ಮಡಿವಾಳೇಶ್ವರ ಹಿರೇಮಠವು ಸ್ಥಾಪನೆಯಾಗಿದೆ. ಉಜ್ಜಯಿನಿಪೀಠದ ಶಾಖಾಮಠವಾದ ಈ ಮಠವು ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಈ ಮಠವನ್ನು ಶ್ರೀಮಡಿವಾಳೇಶ್ವರ ಶಿವಾಚಾರ್ಯ ಸ್ವಾಮಿಗಳು ಸ್ಥಾಪಿಸಿದ್ದರಿಂದ ಮಠಕ್ಕೆ ಈ ಹೆಸರು ಬಂದಿದೆ. ಪರಂಪರೆಯ ಬಗ್ಗೆ ಸ್ಪಷ್ಟ ವಾದ ಮಾಹಿತಿ ಇಲ್ಲ. ಮಠದ ಸ್ಥಾಪನೆಯ ಕಾಲಮಾನದ ಬಗ್ಗೆಯೂ ಸಹನಿಖರವಾದ ಮಾಹಿತಿಗಳು ಲಭ್ಯವಿಲ್ಲ. ಶ್ರೀಮಡಿ ವಾಳೇಶ್ವರ ಶಿವಾಚಾರ್ಯ ಸ್ವಾಮಿಗಳ ನಂತರ ನಾಲ್ಕು ಜನ ಗುರುಗಳು ಅಧಿಕಾರವನ್ನು ನಡೆಸಿದ್ದಾರೆಂದು ಹೇಳಲಾಗುತ್ತದೆ.

ಶ್ರೀ ಮಡಿವಾಳೇಶ್ವರ ಹಿರೇಮಠದ ನಾಲ್ಕನೆಯ ಗುರುಗಳಾಗಿ ಶ್ರೀ ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ೧೯೯೦ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಇವರು ಸಾಸನೂರು ಗ್ರಾಮದ ಶ್ರೀ ಮರುಳಸಿದ್ಧಪ್ಪ ಮತ್ತು ಶ್ರೀಮತಿ ಗುರುಲಿಂಗಮ್ಮನವರ ಪುತ್ರರಾಗಿ ೧೯೫೫ರಲ್ಲಿ ಜನಿಸಿ, ೧೯೭೪ರಲ್ಲಿ ಮಠದ ಉತ್ತರಾಧಿಕಾರಿಗಳಾಗಿ ನೇಮಕ ಗೊಂಡರು. ಗುರುಗಳು ಹಾವೇರಿ, ಸಿಂದಗಿ, ಗದಗ, ಡಂಬಳದಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ, ಮಠಕ್ಕೆ ಬಂದು ಮಠವನ್ನು ಅಭಿವೃದ್ಧಿಪಡಿಸಿ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ.

ಶ್ರೀ ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠದ ಹಳೆಯ ಕಟ್ಟಡವನ್ನು ತೆಗೆಸಿ ಹೊಸ ಕಟ್ಟಡವನ್ನು ನಿರ್ಮಿಸಿದ್ದಾರೆ. ಗ್ರಾಮದ ಮಧ್ಯಭಾಗದಲ್ಲಿ ಮೂಲ ಮಠದ ಕಟ್ಟಡವಿದ್ದು, ಇತ್ತೀಚೆಗೆ ಗುರುಗಳು

ಗ್ರಾಮದ ಹೊರಭಾಗದಲ್ಲಿ ಒಂದು ಕಟ್ಟಡವನ್ನು ನಿರ್ಮಿಸಿಕೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಮಠದ ಶಾಖಾ ಮಠವಾದ ತುಂಬಿಗೆ ಮಠವನ್ನು ಅಭಿವೃದ್ಧಿಪಡಿಸಿ ಧಾರ್ಮಿಕ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಒಂದು ಕರ್ತೃಗದ್ದುಗೆಗೆ ನಿತ್ಯಪೂಜೆ, ಶ್ರಾವಣ ಮಾಸದಲ್ಲಿ ಬಸವೇಶ್ವರ ಜಾತ್ರೆ ಹಾಗೂ ಭಜನೆ ಕಾರ್ಯಕ್ರಮ, ಯುಗಾದಿಯಲ್ಲಿ ಪುರಾಣ ಪ್ರವಚನವನ್ನು ನಡೆಸಲಾಗುತ್ತಿದೆ. ಈ ಸಂದರ್ಭಗಳಲ್ಲಿ ಅನ್ನ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಪುರಾತನ ಕಾಲದ ಗ್ರಂಥಗಳು ದೊರೆತಿದ್ದು, ಇವುಗಳನ್ನು ಗುಲ್ಬರ್ಗ ವಿಶ್ವ ವಿದ್ಯಾನಿಲಯಕ್ಕೆ ಕೊಡಲಾಗಿದೆ. ಮಠದ ಆಸ್ತಿಯಾಗಿ ಐದು ಎಕರೆ ಭೂಮಿಯಿದ್ದು ಇದನ್ನು ಅಭಿವೃದ್ಧಿಪಡಿಸಲಾಗಿದೆ.

ವಿಳಾಸ: ಷ.ಬ್ರ.ಶ್ರೀ ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಮಡಿವಾಳೇಶ್ವರ ಹಿರೇಮಠ, ಸಾಸನೂರು, ಬಸವನ ಬಾಗೇವಾಡಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ಸಿಕಲವಾಡಿ

ಬಸವನ ಬಾಗೇವಾಡಿ ತಾಲ್ಲೂಕಿನ ಸಿಕಲವಾಡಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಸಿಕಲವಾಡಿ ಗ್ರಾಮವು ಕೃಷ್ಣಾಮೇಲ್ದಂಡೆಯ ಪುನರ್‌ವಸತಿ ಕೇಂದ್ರವಾಗಿದೆ. ಇಲ್ಲಿ ಶ್ರೀ ಚಿಕ್ಕಮಠವು ಅಸ್ತಿತ್ವದಲ್ಲಿದೆ.

ಚಿಕ್ಕಮಠ: ಸಿಕಲವಾಡಿ ಗ್ರಾಮದಲ್ಲಿ ಶ್ರೀ ಚಿಕ್ಕಮಠವು ಸ್ಥಾಪನೆಯಾಗಿದೆ. ಶ್ರೀ ರಂಭಾಪುರಿ ಪೀಠದ ಶಾಖಾಮಠವಾದ ಈ ಮಠವು ಶ್ರೀ ಶಾಂತವೀರ ಸ್ವಾಮಿಗಳಿಂದ ಪ್ರಾರಂಭವಾಗಿದೆ ಎಂದು ಹೇಳಲಾಗುತ್ತಿದೆ. ಪುರಾತನ ಪರಂಪರೆಯನ್ನು ಹೊಂದಿದ್ದ ಈ ಮಠವು ಮುಳುಗಡೆಗೊಳ್ಳುವ ಮೊದಲೇ ಈಗಿನ ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳು ಸಿಕಲವಾಡಿಗೆ ಸ್ಥಳಾಂತರ ಗೊಳಿಸಿ ಮಠವನ್ನು ಪುನರ್ ಸ್ಥಾಪಿಸಿದ್ದಾರೆ. ಪರಂಪರೆಯ ಗುರುಗಳ ತೋರುಗದ್ದುಗೆಗಳನ್ನು ಸ್ಥಳಾಂತರಗೊಂಡ ಮಠದಲ್ಲಿ ಸ್ಥಾಪಿಸಲಾಗಿದೆ. ಅನುಷ್ಠಾನಮೂರ್ತಿಗಳಾದ ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳು ತಮ್ಮ ಅರವತ್ತೆಂಟು ವರ್ಷದ ವಯಸ್ಸಿನಲ್ಲಿ ೧೯೯೯ರ ಅಕ್ಟೋಬರ್‌ನಿಂದ ಮೌನಾನುಷ್ಠಾನದಲ್ಲಿ ಕುಳಿತು ಒಂದು ಸಾಧನೆಯನ್ನೇ ಸಾಧಿಸಿದ್ದಾರೆ. ಶಿವಪೂಜಾ ನಿಷ್ಠರಾದ ಗುರುಗಳು ಮಠದಲ್ಲಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳು, ಶ್ರೀ ಚಿಕ್ಕಮಠ, ಸಿಕಲವಾಡಿ, ವಂದಾಲ ರೈಲ್ವೆ ನಿಲ್ದಾಣದ ಹತ್ತಿರ, ಬಸವನ ಬಾಗೇವಾಡಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ಹೂವಿನ ಹಡಗಲಿ

ಬಸವನ ಬಾಗೇವಾಡಿ ತಾಲ್ಲೂಕಿನ ಹೂವಿನ ಹಡಗಲಿಯು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹದಿನಾರು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಚಿಕ್ಕಮಠವು ಅಸ್ತಿತ್ವದಲ್ಲಿದೆ.

ಚಿಕ್ಕಮಠ: ಹೂವಿನ ಹಡಗಲಿ ಗ್ರಾಮದ ಪಶ್ಚಿಮದ ಹೊರಭಾಗದಲ್ಲಿ ಬಿಲ್ವಪತ್ರೆ ಮರಗಳಿಂದ ಆವೃತವಾದ ಚಿಕ್ಕಮಠವು ಸ್ಥಾಪನೆಯಾಗಿದೆ. ಈ ಮಠವು ಪುರಾತನ ಕಾಲದಲ್ಲಿ ವೈಭವದಿಂದ ಮೆರೆದು, ಧಾರ್ಮಿಕ ಆಚರಣೆಗಳನ್ನು ನಡೆಸುವ ಮೂಲಕ ಶ್ರೀಮಂತಗೊಂಡಿತ್ತು. ಈ ಮಠದಲ್ಲಿ ಉಂಟಾದ ಕೆಲವು ಗೊಂದಲಗಳಿಂದ ಈಗ ಮಠವು ಉತ್ತರಾಧಿಕಾರಿಗಳಿಲ್ಲದೆ ಅನಾಥವಾಗಿರುವುದು ದುಃಖಕರ ಸಂಗತಿಯಾಗಿದೆ. ಬಿಲ್ವಪತ್ರೆ ವನದ ಮಧ್ಯೆ ಸ್ಥಾಪನೆಗೊಂಡಿರುವ ಎರಡಂತಸ್ತಿನ ಮಠದಲ್ಲಿ ಧಾರ್ಮಿಕ ಆಚರಣೆಗಳು ನಿಂತು, ಇಲ್ಲಿ ಯಾರೂ ವಾಸವಾಗಿರದ ಕಾರಣ ಮಠದ ಕಟ್ಟಡವು ಶಿಥಿಲಗೊಳ್ಳುತ್ತಿದೆ. ಮಠದ ಮುಂಭಾಗದಲ್ಲಿ ಗತಕಾಲದ ವೈಭವವನ್ನು ಪ್ರತಿಬಿಂಬಿಸುವಂತೆ ನಿಂತಿರುವ ಹಳೆಯ ಕಾಲದ ತೇರಿನ ದೊಡ್ಡ ಗಾಲಿಗಳು ಹಾಗೂ ಪತ್ರೆವನದಲ್ಲಿ ಸ್ಥಾಪನೆಗೊಂಡ ಗದ್ದುಗೆಗಳು ಈ ಮಠದ ಪುರಾತನ ಪಳೆಯುಳಿಕೆಗಳಾಗಿ ನಿಂತಿವೆ.

❑

ಬಿಜಾಪುರ ತಾಲ್ಲೂಕು

ಬಿಜಾಪುರ ಜಿಲ್ಲೆಯ ಐದು ತಾಲ್ಲೂಕುಗಳಲ್ಲಿ ಒಂದಾದ ಬಿಜಾಪುರ ತಾಲ್ಲೂಕು ಪ್ರಕೃತಿಯ ವೈಪರೀತ್ಯದಿಂದ ಬಡತನವನ್ನು ಕಂಡಿದೆ. ರಾಜ್ಯದಲ್ಲಿಯೇ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಮಳೆ ಬೀಳುತ್ತಿದೆ. ಇಲ್ಲಿನ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿಗೂ ದಾರುಣ ಸ್ಥಿತಿ ತಲೆದೂರಿದೆ ಎಂದರೆ ಆಶ್ಚರ್ಯವಾಗಬಹುದು. ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆದಿದ್ದು, ಹಿಂದೆ ಸುಮಾರು ಅರವತ್ತೆಂಟು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಪ್ರಸ್ತುತ ಹದಿನೆಂಟು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಕನ್ನೂರು

ಬಿಜಾಪುರ ತಾಲ್ಲೂಕಿನ ಕನ್ನೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಮೂವತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಗುರುಮಠವು ಅಸ್ತಿತ್ವದಲ್ಲಿದೆ.

ಗುರುಮಠ: ಕನ್ನೂರು ಗ್ರಾಮದಲ್ಲಿ ಶಿಷ್ಯವರ್ಗದ ರಂಭಾಪುರಿ ಪೀಠದ ಶಾಖಾ ಮಠವು ಅಸ್ತಿತ್ತ್ವದಲ್ಲಿದೆ. ಪುರಾತನ ಕಾಲದಲ್ಲಿ ಸ್ಥಾಪನೆಯಾದ ಈ ಮಠವು ವೀರಶೈವ ಧರ್ಮವನ್ನು ಬೆಳೆಸುವಲ್ಲಿ ಹೆಚ್ಚಿನ ಪಾತ್ರವಹಿಸಿದೆ. ಈ ಮಠವು ಪುರಾತನ ಕಾಲದಿಂದಲೂ ಅಸ್ತಿತ್ತ್ವದಲ್ಲಿದ್ದು ತನ್ನ ಧಾರ್ಮಿಕ ಆಚರಣೆಗಳನ್ನು ಮಾಡುವ ಮೂಲಕ ಭಕ್ತರನ್ನು ಧಾರ್ಮಿಕ ನೆಲೆಗಟ್ಟಿನಲ್ಲಿ ಬೆಳೆಸಿದೆ. ಮಠದ ಕರ್ತೃಗುರುಗಳಾದ ಶ್ರೀ ಗದ್ದುಗೇಶ್ವರ ಶಿವಾಚಾರ್ಯ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಈ ಕ್ಷೇತ್ರದಲ್ಲಿ ಬಂದು ನೆಲೆಸಿರುತ್ತಾರೆ. ಇವರ ಪವಾಡ ಹಾಗೂ ತಪೋಶಕ್ತಿಗೆ ಒಳಗಾದ ಭಕ್ತರು ಗುರುಗಳಿಗಾಗಿ ಮಠವನ್ನು ಸ್ಥಾಪಿಸಿಕೊಟ್ಟು, ಧಾರ್ಮಿಕ ಕಾರ್ಯಗಳು ನಡೆಯು ವಂತೆ ಮಾಡಿದರು. ತಪೋನಿಷ್ಠರಾದ ಗುರುಗಳು ತಾವು ಸಂಪಾದಿಸಿ ಕೊಂಡಿದ್ದ ಜ್ಞಾನಸಿದ್ಧಿಯಿಂದ ಇಲ್ಲಿನ ಭಕ್ತರನ್ನು ಬೆಳಗಿಸಿದರು.

ಪರಂಪರೆ:
೧. ಷ.ಬ್ರ.ಶ್ರೀ ಗದ್ದುಗೇಶ್ವರ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ಚಡಚಣ ಶಿವಾಚಾರ್ಯ ಸ್ವಾಮಿಗಳು
೩. ಷ.ಬ್ರ.ಶ್ರೀ ಗುಹೇಶ್ವರ ಶಿವಾಚಾರ್ಯ ಸ್ವಾಮಿಗಳು
೪. ಷ.ಬ್ರ.ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ.ಕರ್ತೃ ಗುರುಗಳ ನಂತರ ಮಠದ ಪರಂಪರೆಯು ಬೆಳೆದು ಬಂದಿದ್ದರೂ ಗುರುಗಳ ಹೆಸರುಗಳು ಲಭ್ಯವಾಗಿಲ್ಲ. ಅಲ್ಲದೆ ಶ್ರೀ ಚಡಚಣ ಶಿವಾಚಾರ್ಯ ಸ್ವಾಮಿಗಳು ಈ ಮಠದ ಅಧಿಕಾರವನ್ನು ನಡೆಸಿ ಪ್ರಭಾವಿಗಳಾಗಿ ಬೆಳೆದಿದ್ದರೂ, ಇವರ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ದೊರೆಯುತ್ತಿಲ್ಲ.

ಶ್ರೀ ಚಡಚಣ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಶ್ರೀ ಗುಹೇಶ್ವರ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದಿದ್ದಾರೆ. ಇವರು ಪವಾಡ ಪುರುಷರಾಗಿ, ವಾಕ್ ಸಿದ್ಧಿಯನ್ನು ಸಂಪಾದಿಸಿಕೊಂಡಿದ್ದರು, ಮಹಾಜ್ಞಾನಿಗಳಾಗಿ ಧರ್ಮವನ್ನು ಬೆಳೆಸಿದ್ದರು. ಪುರಾಣ ಪ್ರವಚನವನ್ನು ನೀಡುವ ಕಲೆಯಿಂದ ಹೆಚ್ಚು ಹೆಸರುಗಳಿಸಿದ್ದ ಇವರು ವೀರಶೈವ ಧರ್ಮವನ್ನು ಬೆಳೆಸಿ ಉಳಿಸುವಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಿದ್ದರು. ಇವರು ೧೯೬೮ರ ಆಗಸ್ಟ್ ಇಪ್ಪತ್ತೆಂಟರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ತರುವಾಯ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಪಟ್ಟಾಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಚಾಂದಕವಟೆ ಗ್ರಾಮದ ಶ್ರೀ ಶಿವಪುತ್ರಯ್ಯ ಮತ್ತು ಶ್ರೀಮತಿ ಸಿದ್ಧಮ್ಮನವರ ಪುತ್ರರಾಗಿ ೧೯೭೦ ರಲ್ಲಿ ಜನಿಸಿದರು. ಇವರು ಹುಟ್ಟೂರಿನಲ್ಲಿಯೇ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಮುಗಿಸಿ, ಹುಬ್ಬಳ್ಳಿ ತಾಲ್ಲೂಕಿನ ಸುಳ್ಳಾ ಗ್ರಾಮದ ಪಂಚಗ್ರಹ ಹಿರೇಮಠದಲ್ಲಿ ಧಾರ್ಮಿಕ ವಿದ್ಯಾಭ್ಯಾಸ ಮಾಡಿದರು.ನಂತರ

ಸಿಂದಗಿ ತಾಲ್ಲೂಕಿನ ಕನ್ನೂಳ್ಳಿಯ ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳ ಕರಕಮಲ ಸಂಜಾತರಾಗಿ ಬೆಳೆದು ಗುರುಗಳ ಸೂಚನೆಯಂತೆ, ಕನ್ನೂರು ಗ್ರಾಮದ ಗುರು ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಹಿರಿಯ ಗುರುಗಳಾದ ಶ್ರೀ ಗುಹೇಶ್ವರ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾಗುವ ಹದಿನೈದು ದಿನಗಳ ಹಿಂದೆ ಈ ಮಠಕ್ಕೆ ಪ್ರಥಮವಾಗಿ ಆಗಮಿಸಿದರು. ಗುರುಗಳು ಇಲ್ಲಿನ ಅವ್ಯವಸ್ಥೆಯನ್ನು ನೋಡಿ ಬೇಸತ್ತರು. ಆದರೆ ಗುರು ತೋರಿದ ಹಾದಿಯಲ್ಲಿ ಸಾಗಬೇಕೆಂಬ ಅಚಲ ನಿರ್ಧಾರವನ್ನು ಹೊಂದಿದ್ದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಗಟ್ಟಿನಿಲುವಿ ನಿಂದ ಇಲ್ಲೇ ನೆಲೆಗೊಂಡರು. ಹಿರಿಯ ಗುರುಗಳ ಆರೈಕೆಯನ್ನು ಮಾಡಿ ಭಕ್ತರ ಒಲವನ್ನು ಗಳಿಸಿಕೊಂಡರು. ಅಲ್ಲದೆ ಹಿರಿಯ ಗುರುಗಳ ಪ್ರೀತಿಗೆ ಪಾತ್ರರಾದರು. ನಂತರ ಶ್ರೀ ಗುಹೇಶ್ವರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಕನ್ನೂಳ್ಳಿಯ ಶ್ರೀ ಮರುಳಾರಾಧ್ಯ ಶಿವಾಚಾರ್ಯ ಸ್ವಾಮಿಗಳಿಂದ ೧೯೯೭ ರ ನವೆಂಬರ್ ಏಳರಂದು ಪಟ್ಟಾಧಿಕಾರದ ಅನುಗ್ರಹವನ್ನು ಪಡೆದು ಅಧಿಕಾರಕ್ಕೆ ಬಂದರು.

ಅಭಿವೃದ್ಧಿ ಕಾರ್ಯಗಳು: ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು ಇಲ್ಲಿಗೆ ಆಗಮಿಸಿ ನೆಲೆಗೊಂಡ ಮೇಲೆ ಇಲ್ಲಿನ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಕಂಕಣತೊಟ್ಟು, ಭಕ್ತರನ್ನು ಸಂಘಟಿಸುವ ಮೂಲಕ ಗ್ರಾಮದಲ್ಲಿ ಸಂಘಟನೆಯನ್ನು ತಂದರು. ಚಿಕ್ಕವಯಸ್ಸಿನಲ್ಲೇ ಅಪಾರವಾದ ಜ್ಞಾನವನ್ನು ಸಂಪಾದಿಸಿಕೊಂಡಿದ್ದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಮಠದ ಅಭಿವೃದ್ಧಿಗೆ ಸುಸಂಘಟಿತ ಶಿಷ್ಯರನ್ನು ಬಳಸಿಕೊಳ್ಳತೊಡಗಿದರು. ಕಿರಿಯ ಗುರುಗಳು ಕೈಗೊಂಡ ಎಲ್ಲಾ ಕಾರ್ಯಗಳಿಗೆ ತನು, ಮನ, ಧನವನ್ನು ನೀಡಿ ಒಂದೇ ವರ್ಷದ ಅವಧಿಯಲ್ಲಿ ಮಠದ ಕಟ್ಟಡವನ್ನು ಆಮೂಲಾಗ್ರವಾಗಿ ಬದಲಿಸಿ ಹೊಸ ಕಟ್ಟಡವನ್ನು ನಿರ್ಮಿಸಿದರು. ಗುರುಗಳ ಈ ಸಾಧನೆಯನ್ನು ನೋಡಿದ ಭಕ್ತರು ಉದಾರ ಕಾಣಿಕೆ ನೀಡಿ ಮಠವನ್ನು ಬೆಳೆಸಿದರು. ಈಗ ಹತ್ತು ಲಕ್ಷ ರೂಪಾಯಿಗಳ ಯೋಜನೆಯಲ್ಲಿ ಸಾಂಸ್ಕೃತಿಕ ಮಂಟಪವನ್ನು ರೂಪಿಸಲು ಮುಂದಾಗಿದ್ದು, ಸರ್ಕಾರದ ನೆರವನ್ನು ಪಡೆದಿದ್ದಾರೆ. ಈ ಯೋಜನೆಗೆ ಭಕ್ತರೂ ಸಹ ಉದಾರ ನೆರವನ್ನು ನೀಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗುರುಗಳ ಎರಡು ಗದ್ದುಗೆಗಳನ್ನು ನವೀಕರಿಸಿ ನಿತ್ಯ ಎರಡೂ ವೇಳೆ ಪೂಜೆಗೆ ವ್ಯವಸ್ಥೆ ಮಾಡಲಾಗಿದೆ. ಪ್ರತಿ ಹುಣ್ಣಿಮೆ ಹಾಗೂ ಅಮಾವಾಸ್ಯೆಯಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ನೂರರಿಂದ ನೂರೈವತ್ತು ಜನರಿಗೆ ಅನ್ನ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಶ್ರಾವಣ ಮಾಸದಲ್ಲಿ ಪುರಾಣ ಪ್ರವಚನ ಹಾಗೂ ಅನುಷ್ಠಾನವನ್ನು ಕೈಗೊಳ್ಳಲಾಗುತ್ತಿದೆ. ನೂಲು ಹುಣ್ಣಿಮೆಯ ದಿನ ಹಿರಿಯ ಗುರುಗಳ ಪುಣ್ಯಾರಾಧನೆ, ನವರಾತ್ರಿಯಲ್ಲಿ ಒಂಬತ್ತು ದಿನ ದೇವಿ ಪಾರಾಯಣವನ್ನು ನಡೆಸಲಾಗುತ್ತಿದೆ. ಮಠದಲ್ಲಿ ಐದು ಜನ ವಿದ್ಯಾರ್ಥಿಗಳಿಗೆ ಆಶ್ರಯ ಕಲ್ಪಿಸಲಾಗಿದೆ. ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ವೀರಶೈವ ತತ್ತ್ವಗಳಾದ ಅಷ್ಟಾವರಣ, ಪಂಚಾಚಾರ, ಷಟ್ ಸ್ಥಲಗಳ ಅನ್ವಯ ಧರ್ಮಪ್ರಸಾರವನ್ನು ಕೈಗೊಂಡು ಆಚಾರ ಮತ್ತು ವಿಚಾರಗಳಿಗೆ ಬದ್ಧರಾಗಿ ಭಕ್ತರನ್ನು ಉದ್ಧರಿಸತೊಡಗಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು, ಶ್ರೀ ಗುರುಮಠ, ಕನ್ನೂರು, ಬಿಜಾಪುರ ತಾಲ್ಲೂಕು.

ಕಲಮಡಿ

ಬಿಜಾಪುರ ತಾಲ್ಲೂಕಿನ ಕಲಮಡಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ನಲವತ್ತೆಂಟು ಕಿ.ಮೀ ದೂರದಲ್ಲಿದೆ. ಮಹಾರಾಷ್ಟ್ರದ ಗಡಿಯ ಅಂಚಿನಲ್ಲಿರುವ ಈ ಗ್ರಾಮದಲ್ಲಿ ವೀರಶೈವ ಧರ್ಮ ಪ್ರಾಚೀನ ಕಾಲದಿಂದಲೂ ಹೆಚ್ಚು ಪ್ರಾಬಲ್ಯತೆಯನ್ನು ಪಡೆದು ಬೆಳೆದಿದೆ.

ಮರೆಯಾದ ಮಠ: ಕಲಮಡಿ ಗ್ರಾಮದಲ್ಲಿ ಈ ಹಿಂದೆ ಎರಡು ಹಿರೇಮಠಗಳು ಹಾಗೂ ಒಂದು ವಿರಕ್ತಮಠಗಳು ಅಸ್ತಿತ್ವದಲ್ಲಿದ್ದವು. ಈಗ ಈ ಮೂರೂ ಮಠಗಳಲ್ಲಿ ಗುರುಗಳು ಯಾರೂ ಇಲ್ಲದೆ ಖಾಲಿ ಉಳಿದಿವೆ. ಮಠದ ವಂಶಸ್ಥರು ಗದ್ದುಗೆಪೂಜೆಯನ್ನು ಮಾಡುವ ಮೂಲಕ ಮಠದ ಕುರುಹನ್ನು ಉಳಿಸಿಕೊಂಡಿದ್ದಾರೆ.

ಜಂಬಗಿ (ಅ)

ಬಿಜಾಪುರ ತಾಲ್ಲೂಕಿನ ಜಂಬಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಇಪ್ಪತ್ತೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಜಂಬಗಿ ಗ್ರಾಮದ ಮಧ್ಯಭಾಗದಲ್ಲಿ ಉಜ್ಜಯಿನಿ ಪೀಠದ ಶಾಖಾಮಠವಾದ ಹಿರೇಮಠವು ಸ್ಥಾಪನೆಯಾಗಿದೆ. ಪುತ್ರವರ್ಗದ ಪರಂಪರೆಯಲ್ಲಿ ಬೆಳೆದ ಈ ಮಠವನ್ನು ಶ್ರೀ ಗುರುಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು ಸ್ಥಾಪಿಸಿದ್ದಾರೆಂದು ಹೇಳಲಾಗುತ್ತಿದೆ. ಗುರುಗಳು ಲೋಕ ಸಂಚಾರ ಕೈಗೊಂಡು ಈ ಗ್ರಾಮದಲ್ಲಿ ನೆಲೆಸಿದ್ದರು. ಆಗ ಈ ಪ್ರಾಂತ್ಯದ ದೇಶಮುಖರು ಗುರುಗಳಿಗೆ ಮಠವನ್ನು ಸ್ಥಾಪಿಸಿಕೊಟ್ಟಿರುತ್ತಾರೆ.

ಪರಂಪರೆ:
೧. ಷ.ಬ್ರ.ಶ್ರೀ ಗುರುಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಪರ್ವತೇಶ್ವರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ರಾಚೋಟೇಶ್ವರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಪರ್ವತೇಶ್ವರ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ಗುರುಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಪರ್ವತೇಶ್ವರರು, ಶ್ರೀ ರಾಚೋಟೇಶ್ವರರು ಹಾಗೂ ಶ್ರೀ ಮಹಾಂತೇಶ್ವರ ಶಿವಾಚಾರ್ಯ ಸ್ವಾಮಿಗಳ ಬಗ್ಗೆ ಹೆಚ್ಚು ಮಾಹಿತಿ ದೊರೆಯದು. ನಂತರದ ಶ್ರೀ ಪರ್ವತೇಶ್ವರ ಶಿವಾಚಾರ್ಯ ಸ್ವಾಮಿಗಳು ಶ್ರೀ ಗುರುಲಿಂಗಯ್ಯ ಮತ್ತು ಶ್ರೀಮತಿ ದಾನಮ್ಮನವರ ಪುತ್ರರಾಗಿ ಜನಿಸಿ, ಮಠದ ಅಧಿಕಾರವನ್ನು ವಹಿಸಿಕೊಂಡು ಅರವತ್ತೊಮ್ಮೂರು ಮಂಟಪ ಪೂಜೆಗಳನ್ನು ಮಾಡಿ ಹೆಸರು ಪಡೆದರು. ಇವರು ಮಳೆ ಬಾರದಿದ್ದಾಗ ಅನುಷ್ಠಾನಕ್ಕೆ ಕುಳಿತು ಮಳೆಯನ್ನು ಬರಿಸಿದ್ದರೆಂದು ಹೇಳಲಾಗುತ್ತಿದೆ. ಇಂತಹ ಮಹಾ ಪವಾಡಪುರುಷರಾದ ಶ್ರೀ ಪರ್ವತೇಶ್ವರ ಶಿವಾಚಾರ್ಯ ಸ್ವಾಮಿಗಳು ಆದಿ ರೇಣುಕ ಚರಿತ್ರೆಯನ್ನು ಬರೆದು ಪ್ರಕಟಿಸಿದ್ದಾರೆ. ಅಲ್ಲದೆ ಗುರುಸ್ತೋತ್ರವನ್ನು ಬರೆದಿದ್ದು ಇದು ಅಪ್ರಕಟಿತ ಕೃತಿಯಾಗಿ ಉಳಿದಿದೆ.ಇವರು ಈ ಮಠದ ಕೀರ್ತಿಯನ್ನು ಬೆಳಗಿಸಿದರು. ಇವರ ತರುವಾಯ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ೧೯೯೩ ರ ಫೆಬ್ರುವರಿ ಹನ್ನೆರಡರಂದು ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಇವರು ಶ್ರೀ ರೇವಣಸಿದ್ಧಯ್ಯ ಮತ್ತು ಶ್ರೀಮತಿ ಭ್ರಮರಾಂಬ ಇವರ ಪುತ್ರರಾಗಿ ೧೯೬೮ ರಲ್ಲಿ ಜನಿಸಿದರು. ಇವರು ಶಿವಯೋಗ ಮಂದಿರ, ಹೊನ್ನಾಳಿ, ಬೆಂಗಳೂರು ಹಾಗೂ ಧಾರವಾಡದಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿದ್ದಾರೆ. ತತ್ತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ಮಠದ ಆಡಳಿತವನ್ನು ವಹಿಸಿಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಕರ್ತೃಗದ್ದುಗೆಯು ಸೇರಿದಂತೆ ಒಟ್ಟು ನಾಲ್ಕು ಗದ್ದುಗೆಗಳು ಮಠದಲ್ಲಿ ಸ್ಥಾಪನೆಯಾಗಿವೆ. ಇವುಗಳಿಗೆ ನಿತ್ಯ ಎರಡೂ ವೇಳೆಪೂಜೆ, ಅಮಾವಾಸ್ಯೆಯಲ್ಲಿ ರುದ್ರಾಭಿಷೇಕವನ್ನು ನಡೆಸಲಾಗುತ್ತಿದೆ. ಶ್ರಾವಣಮಾಸದಲ್ಲಿ ಪ್ರವಚನ, ಬಸವಜಯಂತಿಯಲ್ಲಿ ಹಿರಿಯ ಗುರುಗಳ ಪುಣ್ಯ ತಿಥಿ, ಶಿವರಾತ್ರಿಯಲ್ಲಿ ಶ್ರೀಗುರುಲಿಂಗೇಶ್ವರರ ಪುಣ್ಯಾರಾಧನೆ ಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಧರ್ಮಸಭೆ ಹಾಗೂ ಅನ್ನ ದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ವಿಳಾಸ: ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಜಂಬಗಿ (ಅ), ಬಿಜಾಪುರ ತಾಲ್ಲೂಕು.

ವಿರಕ್ತಮಠ: ಜಂಬಗಿ ಗ್ರಾಮದ ಮಧ್ಯಭಾಗದಲ್ಲಿ ಶ್ರೀ ವಿರಕ್ತ ಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದಲ್ಲಿ ಸ್ಥಾಪನೆಯಾದ ಈ ಮಠವು ಕಳೆದ ತಲೆಮಾರಿನ ತನಕ ಬೆಳೆದು ಬಂದಿದ್ದು, ಶ್ರೀ ಗುರುಬಸವ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಉತ್ತರಾಧಿಕಾರಿಗಳು ಯಾರೂ ಇಲ್ಲದೆ ಖಾಲಿ ಉಳಿದಿದೆ. ಇಂಡಿ ತಾಲ್ಲೂಕಿನ ತಾಂಬಾ ಮಠವು ಮೂಲ ಮಠವಾಗಿದ್ದು, ಈ

ಮಠದ ಗುರುಗಳೇ ವಿರಕ್ತಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ವಿರಕ್ತಮಠ, ಜಂಬಗಿ, ಬಿಜಾಪುರ ತಾಲ್ಲೂಕು.

ತಿಕೋಟ

ಬಿಜಾಪುರ ತಾಲ್ಲೂಕಿನ ತಿಕೋಟ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಈ ಗ್ರಾಮವು ಪುರಾತನ ಕಾಲದಿಂದಲೂ ವೀರಶೈವ ಧರ್ಮದ ಬೆಳವಣಿಗೆಗೆ ಪೂರಕವಾಗಿ ಕೆಲಸ ಮಾಡಿದೆ. ಇದಕ್ಕೆ ಸಾಕ್ಷಿ ಎಂಬಂತೆ ಈ ಗ್ರಾಮದಲ್ಲಿ ಶ್ರೀ ಹಿರೇಮಠ, ಶ್ರೀ ಸಾಲಿಮಠ, ಶ್ರೀ ಕೊಳಲುಮಠ, ಶ್ರೀ ವಿರಕ್ತಮಠ ಎಂಬ ನಾಲ್ಕು ಮಠಗಳು ಸ್ಥಾಪನೆಯಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದಿದ್ದು, ಈಗ ಹಿರೇಮಠವೊಂದನ್ನು ಹೊರತು ಪಡಿಸಿ ಉಳಿದೆಲ್ಲ ಮಠಗಳು ಜೀರ್ಣಾವಸ್ಥೆಗೆ ಬಂದಿವೆ.

ಹಿರೇಮಠ: ತಿಕೋಟ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಹಿರೇಮಠವು ಪುತ್ರವರ್ಗದ ಪರಂಪರೆಯ, ಉಜ್ಜಯಿನಿ ಪೀಠದ ಶಾಖಾ ಮಠವಾಗಿದೆ. ಪುರಾತನ ಕಾಲದಲ್ಲಿ ಶ್ರೀ ಪವಾಡಯ್ಯ ಸ್ವಾಮಿಗಳಿಂದ ಸ್ಥಾಪನೆಯಾಗಿದೆ ಎಂದು ಹೇಳಲಾಗುವ ಈ ಮಠವು ಈತನಕ ಬೆಳೆದು ತನ್ನ ಪರಂಪರೆಯನ್ನು ಉಳಿಸಿಕೊಂಡು ಬಂದಿದೆ.

ಪರಂಪರೆ:

೧. ಷ.ಬ್ರ.ಶ್ರೀ ಪವಾಡಯ್ಯ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಅದೃಶ್ಯ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ವಿರೂಪಾಕ್ಷ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಮಡಿವಾಳ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಶಿವಬಸವ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಪುರಾತನ ಮಠದ ಕಟ್ಟಡವು ಶಿಥಿಲಗೊಂಡಿದ್ದು ಜೀರ್ಣಾವಸ್ಥೆಗೆ ಬಂದಿದೆ. ಮಠದ ಆರ್ಥಿಕ ಸ್ಥಿತಿ ಸುಧಾರಣೆಯಾಗದ ಕಾರಣಕ್ಕಾಗಿ ಮಠವು ಅಭಿವೃದ್ಧಿಯನ್ನು ಕಾಣದಾಗಿದೆ. ಬಹಳ ವರ್ಷಗಳಿಂದ ಬರಗಾಲದಲ್ಲಿ ನಲುಗಿರುವ ಈ ಪ್ರದೇಶದಲ್ಲಿ ಭಕ್ತರು ಬದುಕುವುದೇ ಒಂದು ದುಸ್ಸಾಹಸದ ಕೆಲಸವಾಗಿದೆ. ಇಂತಹ ಸ್ಥಿತಿಯಲ್ಲಿ ಕೇವಲ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಭಕ್ತರನ್ನು ಮುನ್ನಡೆಸುತ್ತಾ ಬಂದಿದೆ. ಮಠದ ಈ ಪರಂಪರೆಯಲ್ಲಿ ಹತ್ತು ಜನ ಗುರುಗಳು ಅಧಿಕಾರ ನಡೆಸಿದ್ದಾರೆ ಎಂದು ಹೇಳಲಾದರೂ, ಆಧಾರಗಳ ಕೊರತೆಯಿಂದ ಕೇವಲ ಐದು ಜನ ಗುರುಗಳ ಹೆಸರನ್ನು ಮಾತ್ರ ದಾಖಲಿಸಬಹುದಾಗಿದೆ. ಇಲ್ಲಿ ದಾಖಲಿಸಿರುವ ಪರಂಪರೆಯ ನಾಲ್ಕನೆಯ ಗುರುಗಳಾದ ಶ್ರೀ ಮಡಿವಾಳೇಶ್ವರ ಶಿವಾಚಾರ್ಯ ಸ್ವಾಮಿಗಳು ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದು ೧೯೭೪ ರ ಅಕ್ಟೋಬರ್ ಇಪ್ಪತ್ತೆಂಟರಂದು ಲಿಂಗೈಕ್ಯರಾಗಿದ್ದಾರೆ. ಇವರ ತರುವಾಯ ಶ್ರೀ ಶಿವಬಸವ ಶಿವಾಚಾರ್ಯ ಸ್ವಾಮಿಗಳು ಮಠದ ಆಡಳಿತವನ್ನು ವಹಿಸಿಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಪುರಾತನ ಪರಂಪರೆಯ ಈ ಮಠದಲ್ಲಿ ನಾಲ್ಕು ಗದ್ದುಗೆಗಳು ನೋಡ ಸಿಗುತ್ತಿವೆ. ಈ ಗದ್ದುಗೆಗಳಿಗೆ ನಿತ್ಯ ಪೂಜೆ ಹಾಗೂ ದೀಪಾವಳಿಯಲ್ಲಿ ಶ್ರೀ ಮಡಿವಾಳೇಶ್ವರ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಅನ್ನ ದಾಸೋಹದ ವ್ಯವಸ್ಥೆಯನ್ನು ಮಾಡಿಸಲಾಗುತ್ತಿದೆ. ಮಠದ ಆಸ್ತಿಯಾಗಿ ಮೂವತ್ತೆರೆಡು ಎಕರೆ ಜಮೀನಿದ್ದು ಇದನ್ನು ಅಭಿವೃದ್ಧಿಪಡಿಸಲಾಗಿದೆ.

ವಿಳಾಸ: ಷ.ಬ್ರ.ಶ್ರೀ ಶಿವಬಸವ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ತಿಕೋಟ, ಬಿಜಾಪುರ ತಾಲ್ಲೂಕು.

ವಿರಕ್ತಮಠ: ತಿಕೋಟ ಗ್ರಾಮದ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ವಿರಕ್ತ ಮಠವು ಪುರಾತನ ಕಾಲದಲ್ಲಿ ಸ್ಥಾಪನೆಯಾಗಿದೆ. ಅಥಣಿ ಶಿವಯೋಗಿಗಳ ಸಮಕಾಲೀನರಾಗಿದ್ದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಈ ಮಠದ ಮಠಾಧೀಶರಾಗಿದ್ದು, ಇವರ

ಕಾಲದಲ್ಲಿ ಮಠವು ಹೆಚ್ಚು ಅಭಿವೃದ್ಧಿಗೊಂಡಿದೆ. ಇವರು ಲಿಂಗೈಕ್ಯರಾದ ಮೇಲೆ ಎರಡು ಜನ ಗುರುಗಳು ಮಠದ ಆಡಳಿತವನ್ನು ನಡೆಸಿದ ಬಗ್ಗೆ ಕೇಳಿಬರುತ್ತಿದೆ. ಆದರೆ ಸರಿಯಾದ ಆಧಾರಗಳಿಲ್ಲದೆ ಉಲ್ಲೇಖಿಸಲಾಗಿಲ್ಲ. ಈಗ ಶ್ರೀ ವಿರೂಪಾಕ್ಷ ದೇವರು ಇಲ್ಲೇ ನೆಲೆಸಿ, ಮಠದ ಆವರಣದಲ್ಲಿರುವ ಎರಡು ಗದ್ದುಗೆಗಳಿಗೆ ನಿತ್ಯ ಪೂಜೆ ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ವಿರೂಪಾಕ್ಷ ದೇವರು, ಶ್ರೀ ವಿರಕ್ತ ಮಠ, ತಿಕೋಟ, ಬಿಜಾಪುರ ತಾಲ್ಲೂಕು.

ತೊರವಿ

ಬಿಜಾಪುರ ತಾಲ್ಲೂಕಿನ ತೊರವಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ನಾಲ್ಕು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ತೊರವಿ ಗ್ರಾಮದ ಮಧ್ಯಭಾಗದಲ್ಲಿ ೧೨೦೨ ರಲ್ಲಿ ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟ ಹಿರೇಮಠವು ಕಾರ್ಯನಿರ್ವಹಿಸುತ್ತಿದೆ. ಉಜ್ಜಯಿನಿ ಪೀಠದ ಶಾಖಾಮಠವಾದ ಈ ಮಠವು ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದಿದೆ. ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿ, ಈ ಗ್ರಾಮದಲ್ಲಿ ಧಾರ್ಮಿಕ ವಾತಾವರಣವನ್ನು ಸೃಷ್ಟಿಸಿದ್ದಾರೆ. ತ್ರಿಕಾಲ ಪೂಜಾನಿಷ್ಠರಾಗಿ, ಶಿವಯೋಗ ಸಿದ್ಧಿಯನ್ನು ಸಂಪಾದಿಸಿಕೊಂಡಿದ್ದ ಶ್ರೀ ಗುರುಪಾದ ಶಿವಾಚಾರ್ಯರು ಆಚಾರ್ಯರ ತತ್ತ್ವಗಳನ್ನು ನಾಡಿಗೆ ನೀಡಿ ವೀರಶೈವ ಧರ್ಮದ ಆಚಾರ, ವಿಚಾರಗಳನ್ನು ಭಕ್ತರು ಅನುಸರಿಸುವಂತೆ ಮಾಡಿದರು.

ಪರಂಪರೆ:
೧. ಷ.ಬ್ರ.ಶ್ರೀ ಗುರುಪಾದ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಮುರುಘೇಂದ್ರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಸೋಮಶೇಖರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಮಠದ ಪರಂಪರೆಯಲ್ಲಿ ಏಳು ಜನ ಗುರುಗಳು ಅಧಿಕಾರ ನಡೆಸಿದ್ದಾರೆ ಎಂದು ಹೇಳಲಾಗುತ್ತಿದೆ. ಈ ಹೇಳಿಕೆಯನ್ನು ಸಾಕ್ಷೀಕರಿಸುವಂತೆ ಮಠದ ಆವರಣದಲ್ಲಿ ಆರು ಗದ್ದುಗೆಗಳು ಸ್ಥಾಪನೆಯಾಗಿವೆ. ಆದರೆ ಕರ್ತೃಗುರುಗಳಿಂದ ಪ್ರಾರಂಭವಾಗಿ ಈ ಹಿಂದೆ ಲಿಂಗೈಕ್ಯರಾದ ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳ ತನಕ ಅಧಿಕಾರಕ್ಕೆ ಬಂದ ಗುರುಗಳ ಹೆಸರುಗಳನ್ನು ಆಧಾರಗಳ ಕೊರತೆಯಿಂದ ದಾಖಲಿಸಲಾಗುತ್ತಿಲ್ಲ. ಶ್ರೀ ಮುರುಘೇಂದ್ರ ಶಿವಾಚಾರ್ಯ ಸ್ವಾಮಿಗಳು ತಮ್ಮ ಕರ್ತೃತ್ವ ಶಕ್ತಿಯಿಂದ ಮಠವನ್ನು ಬೆಳೆಸಿದರು. ಗುರುಗಳು ಧಾರ್ಮಿಕ ಕಾರ್ಯಗಳಿಗೆ ಹೆಚ್ಚು ಒತ್ತು ಕೊಟ್ಟು, ವೀರಶೈವ ಧರ್ಮ ಬೆಳೆಯುವಂತೆ ಮಾಡಿದರು. ಇವರ ಕಾಲದಲ್ಲಿ ಮಠವು ಹೆಚ್ಚು ಹೆಸರು ಮಾಡಿದ್ದರೂ ಆರ್ಥಿಕವಾಗಿ ಅಭಿವೃದ್ಧಿಯಾಗಲಿಲ್ಲ.

ಶ್ರೀ ಚನ್ನವೀರಯ್ಯ ಮತ್ತು ಶ್ರೀಮತಿ ಶಾಂತಬಾಯಿಯವರ ಪುತ್ರರಾಗಿ ೧೯೬೩ ರಲ್ಲಿ ಜನಿಸಿದ ತಮ್ಮ ಸಹೋದರ ಸಂಬಂಧಿಗಳಾದ ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮಿಗಳಿಗೆ ೧೯೭೭ ರಲ್ಲಿ ಪಟ್ಟಾಧಿಕಾರವನ್ನು ಮಾಡಿ ವಿಶ್ರಾಂತ ಜೀವನವನ್ನು ನಡೆಸಿ ಇವರು ೧೯೮೩ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಶ್ರೀ ಸೋಮಶೇಖರ ಶಿವಾಚಾರ್ಯಸ್ವಾಮಿಗಳು ಶಿವಯೋಗ ಮಂದಿರದಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಮಠಕ್ಕೆ ಆಗಮಿಸಿದರು. ಪೂರ್ಣ ಶಿಥಿಲಗೊಂಡಿದ್ದ ಮಠದ ಕಟ್ಟಡವನ್ನು ಅಗತ್ಯಕ್ಕನುಗುಣವಾಗಿ ಅಭಿವೃದ್ಧಿಪಡಿಸಿಕೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸತೊಡಗಿದ್ದಾರೆ. ಬರಗಾಲದಿಂದ ತತ್ತರಿಸುವ ಈ ನಾಡಿನಲ್ಲಿ ಈ ಮಠವು ಅಸ್ತಿತ್ತ್ವವನ್ನು ಉಳಿಸಿಕೊಂಡು, ಭಕ್ತರಿಗೆ ಸನ್ಮಾರ್ಗವನ್ನು ತೋರಿಸುತ್ತಾ ಬಂದಿದೆ. ಮಠದ ಆಸ್ತಿಯಾಗಿ ಇಪ್ಪತ್ನಾಲ್ಕು ಎಕರೆ ಭೂಮಿ ಇದ್ದರೂ ಮಳೆ ಇಲ್ಲದೆ ಪ್ರಯೋಜನಕ್ಕೆ ಬರದಂತಾಗಿದೆ. ಮಠದ ಧಾರ್ಮಿಕ ಕಾರ್ಯಗಳಿಗೆ ಭಕ್ತರೇ ನೆರವಾಗುತ್ತಿದ್ದಾರೆ. ಬರಗಾಲದ ದುಃಸ್ಥಿತಿಯಲ್ಲೂ ಮಠವನ್ನು ಮುನ್ನಡೆಸಿಕೊಂಡು ಬರುತ್ತಿರುವ ಗುರುಗಳು ಶಿವಪೂಜಾ ನಿಷ್ಠರಾಗಿ, ವೀರಶೈವ ಧರ್ಮವನ್ನು ಬೆಳೆಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಆರು ಗದ್ದುಗೆಗಳಿಗೆ ನಿತ್ಯ ಪೂಜಾ ವ್ಯವಸ್ಥೆಯನ್ನು ಮಾಡಲಾಗಿದೆ.

ಡಿಸೆಂಬರ್‌ನಲ್ಲಿ ಶ್ರೀ ಮುರುಘೇಂದ್ರ ಸ್ವಾಮಿಗಳ ಆರಾಧನೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಹನ್ನೊಂದು ದಿನಗಳ ಕಾಲ ಪುರಾಣ ಪ್ರವಚನ, ಅನ್ನ ದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ತೊರವಿ, ಬಿಜಾಪುರ ತಾಲ್ಲೂಕು.

ನಾಗಠಾಣ

ಬಿಜಾಪುರ ತಾಲ್ಲೂಕಿನ ನಾಗಠಾಣ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹದಿನೇಳು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಉದಯೇಶ್ವರ ಮಠವು ಅಸ್ತಿತ್ವದಲ್ಲಿದೆ.

ಉದಯೇಶ್ವರಮಠ: ನಾಗಠಾಣ ಗ್ರಾಮದ ಮಧ್ಯಭಾಗದಲ್ಲಿ ಶ್ರೀ ರಂಭಾಪುರಿ ಪೀಠದ ಶಾಖಾಮಠವಾದ ಶ್ರೀ ಉದಯೇಶ್ವರ ಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದಲ್ಲಿ ಸ್ಥಾಪನೆಯಾದ ಈ ಮಠವು ಮರದ ಕೆತ್ತನೆಯ ಬೃಹದಾಕಾರದ ಕಂಬಗಳಿಂದ ನಿರ್ಮಿಸಲ್ಪಟ್ಟಿದೆ. ಇಪ್ಪತ್ತೆಂಟು ಅಂಕಣಗಳನ್ನು ಒಳಗೊಂಡ ತೊಟ್ಟಿಯಾಕಾರದ ಈ ಮಠದ ಕಟ್ಟಡ ಭವ್ಯವಾಗಿ ಹಾಗೂ ವಿಶಾಲವಾಗಿ ನಿರ್ಮಿಸಲ್ಪಟ್ಟಿದೆ. ಈ ಮಠದ ಕರ್ತೃಗುರುಗಳು ಶ್ರೀ ಉದಯೇಶ್ವರ ಶಿವಾಚಾರ್ಯ ಸ್ವಾಮಿಗಳೆಂದು ಹೇಳಲಾಗುತ್ತಿದೆ. ಈ ಮಠದ ಪರಂಪರೆಯಲ್ಲಿ ಶ್ರೀ ಪವಾಡೇಶ್ವರರು, ಶ್ರೀ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಹಾಗೂ ಶ್ರೀ ಚನ್ನಮಲ್ಲಯ್ಯ ಶಿವಾಚಾರ್ಯ ಸ್ವಾಮಿಗಳು ಎಂಬ ನಾಲ್ಕು ಜನ ಗುರುಗಳ ಹೆಸರನ್ನು ಮಾತ್ರ ದಾಖಲಿಸಬಹುದಾಗಿದೆ. ಆಧಾರಗಳ ಕೊರತೆಯಿಂದ ಪರಂಪರೆಯನ್ನು ಗುರುತಿಸಲು ಸ್ಪಷ್ಟವಾದ ಮಾಹಿತಿಗಳು ದೊರೆತಿಲ್ಲ. ಈಗ ಶ್ರೀ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಅಧಿಕಾರದಲ್ಲಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದಲ್ಲಿ ಶ್ರೀ ರೇಣುಕಾಚಾರ್ಯರ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಮಠದ ಆವರಣದಲ್ಲಿರುವ ನಾಲ್ಕು ಗದ್ದುಗೆಗಳಿಗೆ ನಿತ್ಯ ಎರಡು ವೇಳೆ ಪೂಜೆ ಹಾಗೂ ಅಮಾವಾಸ್ಯೆ ಮತ್ತು ಭಾನುವಾರ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಶ್ರಾವಣಮಾಸದಲ್ಲಿ ಭಜನೆ, ಶಿವರಾತ್ರಿಯಲ್ಲಿ ಕರ್ತೃಗುರುಗಳ ಜಾತ್ರೆಯನ್ನು ನಡೆಸಲಾಗುತ್ತಿದೆ. ಕರ್ತೃಗುರುಗಳ ಗದ್ದುಗೆಗೆ ಮಹಾದ್ವಾರವನ್ನು ಹತ್ತು ಲಕ್ಷ ರೂ ಯೋಜನೆಯಲ್ಲಿ ನಿರ್ಮಿಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು, ಶ್ರೀ ಉದಯೇಶ್ವರಮಠ, ನಾಗಠಾಣ, ಬಿಜಾಪುರ ತಾಲ್ಲೂಕು.

ಬಬಲೇಶ್ವರ

ಬಿಜಾಪುರ ತಾಲ್ಲೂಕಿನ ಬಬಲೇಶ್ವರ ಗ್ರಾಮವು ತಾಲ್ಲೂಕು ಕೇಂದ್ರದಿಂದ ನೈರುತ್ಯ ಭಾಗಕ್ಕೆ ಇಪ್ಪತ್ತೈದು ಕಿ.ಮೀ ದೂರದಲ್ಲಿದೆ. ಬಾಗಲಕೋಟೆ ಜಿಲ್ಲೆಯ ಬಾದಾಮಿಯಲ್ಲಿ ಬನಶಂಕರಿ ನಂದಕೇಶ್ವರ ಸಂಸ್ಥಾನದ ವೀರನಗೌಡ, ಲಿಂಗನಗೌಡ ಎಂಬುವರು ಆದಿಲ್‌ಶಾಹಿಯ ಸಾಮಂತರಾಗಿ ಆಳ್ವಿಕೆ ನಡೆಸುತ್ತಿದ್ದರು. ಮನೆದೇವರಾದ ಬನಶಂಕರಿಗೆ ಸ್ವಾರ್ಥಸಾಧಕನೊಬ್ಬ ಪೂಜೆ ನಡೆಸುತ್ತಿದ್ದನಂತೆ. ಬಿಜಾಪುರದ ಆದಿಲ್‌ಶಾಹಿಯ ಆಸ್ಥಾನದಲ್ಲಿ ಪೂಜಾರಿಯ ಸಂಬಂಧಿಕನೊಬ್ಬ ದಿವಾನನಾಗಿದ್ದನಂತೆ. ಈ ಪೂಜಾರಿಯು ತನ್ನ ಸಂಬಂಧಿಕನ ಕುಮ್ಮಕ್ಕಿನಿಂದ ಈ ಸಂಸ್ಥಾನದ ಒಡೆಯನಾಗಲು ಪ್ರಯತ್ನಿಸಿದನಂತೆ. ಇದರ ಮೊದಲನೆಯ ಹಂತವಾಗಿ ದೇವಸ್ಥಾನಕ್ಕೆ ಬರುವ ಅರಮನೆಯ ಹೆಣ್ಣು ಮಕ್ಕಳನ್ನು ಸರದಿಯ ಸಾಲಿನಲ್ಲಿ ನಿಲ್ಲಿಸಿ ಮಾಲೀಕತ್ವ ಸಾಧಿಸಿಕೊಂಡನಂತೆ. ಪೂಜಾರಿಯ ಸೊಕ್ಕನ್ನು ನೋಡಿ ವೀರನಗೌಡ, ಲಿಂಗನಗೌಡರಿಗೆ ಸಿಟ್ಟು ಬಂದು ಪೂಜಾರಿಯ ಶಿರಚ್ಛೇದನವನ್ನು ಮಾಡಿಸಿದರಂತೆ. ಆಗ ಪೂಜಾರಿಯ ಸಂಬಂಧಿಕ ದಿವಾನನು ಶಿರಚ್ಛೇದನ ಮಾಡಿದ ವೀರನಗೌಡ, ನಿಂಗನ ಗೌಡನಿಗೆ ಆದಿಲ್‌ಶಾಹಿಯಿಂದ ಬಂಧನದ ಆಜ್ಞೆಯನ್ನು ಜಾರಿಗೊಳಿಸಿದನಂತೆ. ಆಗ ನಂದಕೇಶ್ವರ ಸಂಸ್ಥಾನದ ವೀರನಗೌಡ, ನಿಂಗನಗೌಡ ತಲೆಮರೆಸಿಕೊಂಡು ಈಸ್ಥಳಕ್ಕೆ ಬರುತ್ತಾರಂತೆ. ಇಲ್ಲಿಯ ಜಾಲಿ ವನದಲ್ಲಿ ಕಣ್ಮರೆಯಾಗಿ ನೆಲೆಸಿದ್ದ ಇವರಿಗೆ ಈಶ್ವರಲಿಂಗ ಗೋಚರವಾಯಿತಂತೆ. ಸಂಸ್ಕೃತದಲ್ಲಿ'ಬಬ್ಬುಲ' ಎಂದರೆ ವನ. ಈ ವನದಲ್ಲಿ ಈಶ್ವರಲಿಂಗ ಗೋಚರಿಸಿದ ಕಾರಣಕ್ಕೆ ಈ ಪ್ರದೇಶವನ್ನು'ಬಬ್ಬುಲೇಶ್ವರ'ಎಂದು ಕರೆದರಂತೆ. ಈ ಬಬ್ಬುಲೇಶ್ವರ ಎಂಬ ಪದವು ರೂಢಿಗತವಾಗಿ 'ಬಬಲೇಶ್ವರ'ವಾಗಿ ರೂಪಾಂತರ ಪಡೆದಿದೆ. ನಂತರ ಗೌಡರು ಆದಿಲ್‌ಶಾಹಿ ಕಡೆಯವರಿಗೆ ಸಿಕ್ಕಿಬಿದ್ದರು. ಆಗ ಮರಣದಂಡನೆ ಶಿಕ್ಷೆಗೆ ಒಳಗಾಗಿ

ಗಲ್ಲು ಕಂಬಕ್ಕೆ ಹೋಗುತ್ತಿರುವಾಗ, ಹೇಗೂ ಸಾಯುವುದು ನಿಶ್ಚಯ. ಆದರೆ ಹೇಡಿಗಳಂತೆ ಸಾಯುವ ಬದಲು ಧೈರ್ಯದಿಂದ ಹೋರಾಡಿ ಸಾಯುವುದು ಒಳ್ಳೆಯದೆಂದು ತಮಗೆ ಕಟ್ಟಿದ್ದ ಹಗ್ಗಗಳನ್ನು ಕಿತ್ತೊಗೆದು ಆದಿಲ್‌ಶಾಹಿಯ ಮುಂದೆ ಬಂದು ನಿಂತು, ತಮ್ಮ ಕೊನೆಯ ಮಾತನ್ನು ನಡೆಸಿಕೊಡ ಬೇಕೆಂದು ಬಿನ್ನವಿಸಿಕೊಂಡು ನಿಮ್ಮ ರಾಜ್ಯ ವಿಸ್ತಾರಕ್ಕೆ ತೊಡಕಾಗಿರುವ ಬೆಳಗಾವಿ ಪ್ರಾಂತ್ಯವನ್ನು ನಿಮ್ಮದಾಗಿಸಿ ಕೊಡುತ್ತೇವೆ. ನಮ್ಮನ್ನು ಯುದ್ಧಕ್ಕೆ ಕಳಿಸಿಕೊಡಿ, ಈ ಯುದ್ಧದಲ್ಲಿ ಮಡಿದರೆ ನಮಗೆ ವೀರಮರಣ ಪ್ರಾಪ್ತಿಯಾಗುತ್ತದೆ. ಅಲ್ಲದೆ ನಿಮ್ಮ ಆಜ್ಞೆಯೂ ನೆರವೇರುತ್ತದೆ. ನಾವು ಗೆದ್ದರೆ ನಿಮಗೆ ರಾಜ್ಯ ವಿಸ್ತಾರವಾಗುತ್ತದೆ, ಎಂದು ಹೇಳಿ ಆದಿಲ್‌ಶಾಹಿಯ ಅನುಮತಿ ಪಡೆದು ಬೆಳಗಾವಿ ಜಿಲ್ಲೆಯನ್ನು ವಶಪಡಿಸಿಕೊಂಡರಂತೆ. ಇದರಿಂದ ಸಂತೋಷಗೊಂಡ ಆದಿಲ್‌ಶಾಹಿ ಬಬಲೇಶ್ವರದ ಬಳಿ ಈ ಸಹೋದರರಿಬ್ಬರಿಗೆ ಎರಡುಸಾವಿರ ಎಕರೆ ಭೂಮಿಯನ್ನು ಉಂಬಳಿಯಾಗಿ ನೀಡಿದನು. ಇಂತಹ ಗಂಡು ಮೆಟ್ಟಿದ ಭೂಮಿಯಲ್ಲಿ ವೀರಶೈವ ಧರ್ಮವು ಪ್ರಬಲವಾಗಿ ಬೆಳೆದಿದೆ. ಈ ಗ್ರಾಮದಲ್ಲಿ ಹಿಂದೆ ಒಟ್ಟು ಹನೆರಡು ಮಠಗಳು ಸ್ಥಾಪನೆಯಾಗಿದ್ದ ವಂತೆ. ಆ ಮಠಗಳಲ್ಲಿ ಈಗ ಶ್ರೀ ವಿರಕ್ತ ಮಠ, ಶ್ರೀ ಗುರುಪಾದೇಶ್ವರ ಬೃಹನ್ಮಠ, ಶ್ರೀ ಗಚ್ಚಿನಮಠ, ಶ್ರೀ ಪುರಾಣಿಕಮಠ, ಶ್ರೀ ಸಾಲಿಮಠ, ಶ್ರೀ ತಿಗಣಿ ಬಿದರಿಮಠ, ಶ್ರೀ ಕರಿಅಯ್ಯಗಳಮಠ, ಶ್ರೀ ಶಾಂತಲಿಂಗಯ್ಯನಮಠ, ಶ್ರೀ ಬೂದಿಹಾಳುಮಠ ಎಂಬ ಒಂಬತ್ತು ಮಠಗಳ ಹೆಸರನ್ನು ಈಗ ದಾಖಲಿಸಬಹುದಾಗಿದ್ದು, ಉಳಿದ ಮೂರು ಮಠಗಳ ಹೆಸರು ಜನರ ಮನಸ್ಸಿನಿಂದ ಮರೆಯಾಗಿವೆ. ಈ ಒಂಬತ್ತು ಮಠಗಳಲ್ಲಿ ಶ್ರೀ ಗುರುಪಾದೇಶ್ವರ ಬೃಹ್ಮನಠವು ಈತನಕವೂ ತನ್ನ ಅಸ್ತಿತ್ತ್ವವನ್ನು ಉಳಿಸಿಕೊಂಡು ಬಂದಿದೆ. ಉಳಿದ ಮಠಗಳು ಗುರುಗಳಿಲ್ಲದೆ ತಮ್ಮ ಅಸ್ತಿತ್ತ್ವವನ್ನು ಕಳೆದುಕೊಳ್ಳುತ್ತಿವೆ.

ಗುರುಪಾದೇಶ್ವರ ಬೃಹನ್ಮಠ: ಬಬಲೇಶ್ವರದ ಮಧ್ಯಭಾಗದಲ್ಲಿ ರಂಭಾಪುರಿ ಪೀಠದ ಶಾಖಾಮಠವಾದ ಶ್ರೀ ಗುರುಪಾದೇಶ್ವರ ಬೃಹನ್ಮಠವು ಸ್ಥಾಪನೆಯಾಗಿದೆ. ಶಿಷ್ಯವರ್ಗದ ಪರಂಪರೆಯ ಈ ಮಠವನ್ನು ೧೬೭೦ ರಲ್ಲಿ ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳು ಸ್ಥಾಪನೆ ಮಾಡಿದ್ದಾರೆ. ಗುರುಗಳು ಲೋಕಸಂಚಾರ ಕೈಗೊಂಡು ಈ ಗ್ರಾಮದ ಹೊರಭಾಗದಲ್ಲಿ ನೆಲೆಗೊಂಡು, ಚಿಕ್ಕದಾದ ಒಂದು ಕುಟೀರವನ್ನು ಕಟ್ಟಿಕೊಂಡು ದೀರ್ಘಅನುಷ್ಠಾನವನ್ನು ಕೈಗೊಂಡು ಭಕ್ತರಿಗೆ ಧರ್ಮೋಪದೇಶವನ್ನು ನೀಡಿ, ವೀರಶೈವ ಧರ್ಮವನ್ನು ಬೆಳೆಸುತ್ತಾರೆ. ದಿನದಿಂದ ದಿನಕ್ಕೆ ಗುರುಗಳ ಪ್ರಭಾವ ಹೆಚ್ಚಾದಂತೆಲ್ಲಾ ಮಠದ ಧಾರ್ಮಿಕ ಕಾರ್ಯಗಳು ಚುರುಕಾದವು. ಆಗ ವೀರನಗೌಡ, ನಿಂಗನಗೌಡರು ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳಿಗೆ ದೊಡ್ಡದಾದ ಮಠವನ್ನು ಕಟ್ಟಿಸಿಕೊಟ್ಟು ವೀರಶೈವಧರ್ಮ ಬೆಳೆಯಲು ಕಾರಣಕರ್ತರಾದರು. ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳು ಮಠವನ್ನು ವ್ಯವಸ್ಥಿತವಾಗಿ ಬೆಳೆಸಿ, ಬಾಲಕ ಶ್ರೀ ಗುರುಪಾದಯ್ಯ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡರು. ಶ್ರೀ ಗುರುಪಾದಯ್ಯ ದೇವರು ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳ ಸೇವೆಯನ್ನು ಮಾಡಿಕೊಂಡು ಗುರುಗಳ ಪ್ರೀತಿಗೆ ಪಾತ್ರರಾದರು. ಈ ಸಂದರ್ಭದಲ್ಲಿ ಮನಗೂಳಿಯ ಶ್ರೀ ಟೊಪ್ಪಿಗೀಶ ಸ್ವಾಮಿಗಳು ಬಬಲೇಶ್ವರ ಮಠಕ್ಕೆ ಆಗಮಿಸುತ್ತಾರೆ. ಆಗ ಶ್ರೀ ಗುರುಪಾದ ದೇವರು ಶ್ರೀಟೊಪ್ಪಿಗೀಶಸ್ವಾಮಿಗಳಿಗೆ ತೋರಿಸಿದ ಗೌರವ ಹಾಗೂ ಗುರುಗಳಿಬ್ಬರಿಗೂ ಮಾಡಿದ ಸೇವೆಯನ್ನು ಸ್ಮರಿಸಿ ಆಶೀರ್ವದಿಸಿದರು. ಶ್ರೀ ಗುರುಪಾದ ದೇವರು ಹಿರಿಯ ಗುರುಗಳ ಆರೈಕೆಯಲ್ಲಿ ಸಂಸ್ಕಾರ ಪಡೆದು ಬೆಳೆದರು.

ಪರಂಪರೆ:

೧. ಷ.ಬ್ರ.ಶ್ರೀ ಶಾಂತವೀರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಗುರುಪಾದೇಶ್ವರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಮರಿ ಶಾಂತವೀರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ರಾಚೋಟೇಶ್ವರ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಎರಡನೆಯ ಗುರುಪಾದೇಶ್ವರ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ತೃತೀಯ ಶಾಂತವೀರ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಚತುರ್ಥ ಶಾಂತವೀರ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ಡಾ. ಮಹಾದೇವ ಶಿವಾಚಾರ್ಯಸ್ವಾಮಿಗಳು ಎಂ.ಎ ಪಿಎಚ್.ಡಿ

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳು (೧೭೭೪) ಅಧಿಕಾರಕ್ಕೆ ಬಂದರು. ಶ್ರೀ ಗುರುಪಾದೇಶ್ವರ ಸ್ವಾಮಿಗಳ ಕಾಲದಲ್ಲಿ ಮಠವು ವೈಭವಯುತವಾಗಿ ಬೆಳೆಯಿತು. ತೇಗದ ಕಟ್ಟಿಗೆಯಿಂದ ಭವ್ಯವಾದ ಮಠವನ್ನು ನಿರ್ಮಿಸಿದ್ದಾರೆ. ಹದಿನಾರು ಜೊತೆ ಎತ್ತುಗಳನ್ನು ಮಠದಲ್ಲಿ ಕಟ್ಟಿ ಒಕ್ಕಲುತನ ಮಾಡಿ, ಮಠವನ್ನು ಆರ್ಥಿಕವಾಗಿ ಸದೃಢಗೊಳಿಸಿದರು. ಶ್ರೀ ರಂಭಾಪುರಿ ಜಗದ್ಗುರುಗಳಿಂದ 'ಭಕ್ತರ ಭಾಗ್ಯನಿಧಿ'ಎಂಬ ಬಿರುದನ್ನು ಪಡೆದು ಗೌರವಿಸಿದ್ದರು. ಮೈಸೂರು ಅರಸರಿಂದ ಗೌರವಕ್ಕೆ ಒಳಗಾಗಿದ್ದ ಶ್ರೀ ಗುರುಪಾದ ಸ್ವಾಮಿಗಳಿಗೆ ಮೈಸೂರು ಅರಸರು ಆನೆ, ಒಂಟೆ, ಛತ್ರಿ, ಚಾಮರಗಳನ್ನು ನೀಡಿ ಗೌರವಿಸಿದ್ದರು. ಇಂತಹ ಮಹಾಚೇತನವು ತೊಂಬತ್ನಾಲ್ಕು ವರ್ಷಗಳ ಕಾಲ ಬದುಕಿ ಲಿಂಗೈಕ್ಯರಾದರು. ಇವರ ನಂತರ ಅಧಿಕಾರಕ್ಕೆ ಬಂದ ಏಳನೆಯ ಗುರುಗಳ ತನಕ ಎಲ್ಲಾ ಗುರುಗಳು ಮಠವನ್ನು ಬೆಳೆಸಿದರು.ನಂತರ ಚತುರ್ಥ ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಬೆಳೆಸಿದರು. ಇವರು ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡಿ ಪಾಂಡಿತ್ಯವನ್ನು ಗಳಿಸಿಕೊಂಡು ಬಂದು, ಮಠದಲ್ಲಿ ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಮಾಡಿದರು. ಇವರು ಲಿಂಗೈಕ್ಯರಾದ ಮೇಲೆ ಇಪ್ಪತ್ತು ವರ್ಷಗಳ ಕಾಲ ಮಠದಲ್ಲಿ ಉಂಟಾದ ಗೊಂದಲದಿಂದ ಮಠದ ಅಭಿವೃದ್ಧಿಯು ಕುಂಠಿತವಾಯಿತು. ನಂತರ ಡಾ. ಶ್ರೀ ಮಹಾದೇವ ಶಿವಾಚಾರ್ಯ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಬೆಳೆಸಿದ್ದಾರೆ.

ಡಾ. ಶ್ರೀ ಮಹಾದೇವ ಶಿವಾಚಾರ್ಯ ಸ್ವಾಮಿಗಳು ಶ್ರೀ ಮುತ್ತುರಾಜ ಮತ್ತು ಶ್ರೀಮತಿ ನೀಲಾಂಬಿಕೆಯವರ ಪುತ್ರರಾಗಿ ೧೯೪೪ ರ ಜುಲೈ ಹನ್ನೊಂದರಂದು ಗಲಗಲಿಯಲ್ಲಿ ಜನಿಸಿದರು. ಬಿಜಾಪುರದಲ್ಲಿ ವಿದ್ಯಾಭ್ಯಾಸವನ್ನು ಮಾಡಿ ನಂತರ ಕಾಶಿಯಲ್ಲಿ ಸಂಸ್ಕೃತವನ್ನು ಕಲಿತು ವೇದಾಂತ ಆಚಾರ್ಯ ಪದವಿಯನ್ನು ಪಡೆದಿದ್ದಲ್ಲದೆ, ಬನಾರಸ್ ವಿಶ್ವ ವಿದ್ಯಾನಿಲಯದಲ್ಲಿ ಸಂಸ್ಕೃತ ದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ನಂತರ 'ಶಕ್ತಿ ವಿಶಿಷ್ಟಾದ್ವೈತ ವೇದಾಂತ ಒಂದು ಸಮೀಕ್ಷಾತ್ಮಕ ಅಧ್ಯಯನ' ಎಂಬ ಮಹಾ ಪ್ರಬಂಧವನ್ನು ಮಂಡಿಸಿ ಬನಾರಸ್ ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿಯನ್ನು ಪಡೆದರು. ಗುರುಗಳು ಮಠದಲ್ಲಿ ನೆಲೆಸಿದ ಮೇಲೆ ಮಠವನ್ನು ಸರ್ವಾಂಗೀಣವಾಗಿ ಅಭಿವೃದ್ಧಿಪಡಿಸಿದ್ದಾರೆ. ಮಠದ ದ್ವಾರ, ಕರ್ತೃಗುರುಗಳ ಹಾಗೂ ಪರಂಪರೆಯ ಗುರುಗಳ ಗದ್ದುಗೆಗಳ ನವೀಕರಣವನ್ನು ಮಾಡಿದ್ದಾರೆ. ಐವತ್ತು ಲಕ್ಷ ರೂಪಾಯಿ ಯೋಜನೆಯಲ್ಲಿ ನೂತನವಾಗಿ ಅನುಭವ ಮಂಟಪವನ್ನು ನಿರ್ಮಿಸಿ ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ನಿತ್ಯ ಎರಡೂ ವೇಳೆ ಪೂಜೆ, ಹುಣ್ಣಿಮೆ, ಅಮಾವಾಸ್ಯೆಯಲ್ಲಿ ಶಿವಾನುಭವ ಗೋಷ್ಠಿ, ಸೋಮವಾರ ಮತ್ತು ಗುರುವಾರ ಆಧ್ಯಾತ್ಮ ಚಿಂತನೆ, ಶ್ರಾವಣಮಾಸದಲ್ಲಿ ಪುರಾಣ ಪ್ರವಚನ, ಕರ್ತೃಗುರುಗಳ ಆರಾಧನೆಯ ಸಂದರ್ಭದಲ್ಲಿ ಲಿಂಗದೀಕ್ಷೆ, ಮಹಾಗಣಾರಾಧನೆ ಕಾರ್ಯಕ್ರಮಗಳು ನಡೆಯುತ್ತಿವೆ. ಹಿರಿಯ ಗುರುಗಳಾದ ಶ್ರೀ ಶಾಂತವೀರ ಸ್ವಾಮಿಗಳ ಪುಣ್ಯಾರಾಧನೆಯನ್ನು ಕಾರ್ತೀಕ ಬಹುಳ ಷಷ್ಠಿಯಲ್ಲಿ ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಸಹಸ್ರ ಕುಂಬಾಭಿಷೇಕ ಕಾರ್ಯಕ್ರಮ ನಡೆಯುತ್ತಿದೆ. ಈ ಸಂದರ್ಭದಲ್ಲಿ ದಾಸೋಹವನ್ನು ನಡೆಸಲಾಗುತ್ತಿದೆ.

ಶಿಕ್ಷಣ-ಸಾಹಿತ್ಯ ಸೇವೆ: ಗುರುಗಳು ಗ್ರಾಮಾಂತರ ವಿದ್ಯಾವರ್ಧಕ ಸಂಘವನ್ನು ಸ್ಥಾಪನೆ ಮಾಡಿ ಪ್ರೌಢಶಾಲೆ, ಪದವಿಪೂರ್ವ ಕಾಲೇಜು ಹಾಗೂ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸಿದ್ದಾರೆ. ಅಲ್ಲದೆ ಉದ್ಯೋಗ ಆಧಾರಿತ ಶಿಕ್ಷಣ ತರಬೇತಿಯನ್ನು ನೀಡಲಾಗುತ್ತಿದೆ. ಶ್ರೀ ಸಿದ್ಧಮಲ್ಲ ಪುರಾಣಿಕರ ಗುರುಮಲ್ಲೇಶ್ವರರ ಹಾಗೂ ಬಬಲೇಶ್ವರ ಪುರಾಣವನ್ನು ಪ್ರಕಟಿಸಲಾಗಿದೆ. ಡಾ. ಶ್ರೀ ಮಹಾದೇವ ಶಿವಾಚಾರ್ಯ ಸ್ವಾಮಿಗಳು ಧಾರ್ಮಿಕ, ಸಾಹಿತ್ಯಿಕವಾಗಿ ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಡಾ. ಮಹಾದೇವ ಶಿವಾಚಾರ್ಯ ಸ್ವಾಮಿಗಳು, ಶ್ರೀ ಗುರುಪಾದೇಶ್ವರ ಬೃಹನ್ಮಠ, ಬಬಲೇಶ್ವರ, ಬಿಜಾಪುರತಾ.
ಆಧಾರ: 'ಶ್ರೀ ಬಬಲೇಶ್ವರ ಶಿವಯೋಗಿಗಳು,' ಲೇಖಕರು: ಶ್ರೀ ಶಾಂತವೀರ

ಬಾಬಾನಗರ

ಬಿಜಾಪುರ ತಾಲ್ಲೂಕಿನ ಬಾಬಾನಗರವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತೇಳು ಕಿ.ಮೀ ದೂರದಲ್ಲಿದೆ.

ಈ ಗ್ರಾಮದಲ್ಲಿ ಶ್ರೀ ಪುಣ್ಯದಮಠ ಮತ್ತು ಶ್ರೀ ವಿರಕ್ತಮಠ ಎಂಬ ಎರಡು ಮಠಗಳು ಸ್ಥಾಪನೆಯಾಗಿವೆ. ವಿರಕ್ತ ಮಠವು ಶ್ರೀ ವಿರಕ್ತಯ್ಯ ಸ್ವಾಮಿಗಳಿಂದ ಸ್ಥಾಪನೆಯಾಗಿ ಬೆಳೆದು ಬಂದು, ಕಾಲಾನಂತರ ತನ್ನ ಪರಂಪರೆಯನ್ನು ಸ್ಥಗಿತಗೊಳಿಸಿ ಸಂಸಾರಿ ಮಠವಾಗಿ ಪರಿವರ್ತನೆಯಾಗಿದೆ.

ಪುಣ್ಯದಮಠ: ಈ ಗ್ರಾಮದ ಇನ್ನೊಂದು ಮಠವಾದ ಪುಣ್ಯದ ಮಠವು ಕಳೆದ ಒಂದು ಶತಮಾನದ ಹಿಂದೆ ಪ್ರಾರಂಭವಾಗಿದೆ ಎಂದು ಹೇಳಲಾಗುತ್ತದೆ. ಉಜ್ಜಯಿನಿ ಪೀಠದ ಶಾಖಾಮಠವಾಗಿ ಬೆಳೆದಿದೆ. ಈ ಮಠದಲ್ಲಿ ಎರಡು ಗದ್ದುಗೆಗಳು ಸ್ಥಾಪನೆಯಾಗಿವೆ. ಈಗ ಶ್ರೀ ಷಣ್ಮುಖಯ್ಯ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಷಣ್ಮುಖಯ್ಯ ಶಿವಾಚಾರ್ಯ ಸ್ವಾಮಿಗಳು, ಶ್ರೀ ಪುಣ್ಯದ ಮಠ, ಬಾಬಾನಗರ, ಬಿಜಾಪುರ ತಾಲ್ಲೂಕು.

ಬಿಜಾಪುರ

ಕ್ರಿ.ಶ. ಆರನೆಯ ಶತಮಾನದಲ್ಲಿ ಬಿಜಾಪುರ ನಗರವು ಬಾದಾಮಿ ಚಾಲುಕ್ಯರ ಅಧೀನದಲ್ಲಿ ಬೆಳೆದು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಖ್ಯಾತಿಗೊಂಡಿದೆ. ಆರನೆಯ ವಿಕ್ರಮಾದಿತ್ಯನ (ಕ್ರಿ.ಶ.೧೦೭೬)ಎರಡನೆಯ ರಾಜಧಾನಿಯಾಗಿತ್ತೆಂದು ತಿಳಿದುಬಂದಿದೆ. ಬಾದಾಮಿ ಚಾಲುಕ್ಯರ ಮಾಂಡಲೀಕನೊಬ್ಬ ಬಿಜಾಪುರ ಪಟ್ಟಣವನ್ನು ಕಟ್ಟಿ ವಿಜಯಪುರ ಎಂದು ಹೆಸರಿಟ್ಟನಂತೆ. ಇನ್ನೊಂದು ಹೇಳಿಕೆಯ ಪ್ರಕಾರ ಅಗ್ರಹಾರದ ಬಿಜ್ಜನಹಳ್ಳಿಯ ಮಾಂಡಲೀಕನೊಬ್ಬನ ರಾಜಧಾನಿಯಾದಾಗ ಬಿಜ್ಜಪುರವಾಯಿತಂತೆ. ಅದೇ ವಿದ್ಯಾಪುರ> ವಿಜಾಪುರ> ಬಿಜಾಪುರ ಎಂದು ಹೆಸರಾಗಿದೆ. ಈ ಪಟ್ಟಣವು ಕ್ರಿ.ಶ. ೧೨೯೪ರಲ್ಲಿ ದೇವಗಿರಿಯ ಯಾದವರ ರಾಜಧಾನಿಯಾಗಿತ್ತೆಂದು ಶಾಸನಗಳಿಂದ ತಿಳಿಯುತ್ತದೆ. ಯಾದವರ ನಂತರ ಬಿಜಾಪುರ ನಗರವು ಮುಸಲ್ಮಾನರ ಆಳ್ವಿಕೆಗೆ (ಕ್ರಿ.ಶ. ೧೩೧೨) ಒಳಪಟ್ಟಿತ್ತು.

ಇಂತಹ ಇತಿಹಾಸ ಪ್ರಸಿದ್ಧ ನಗರದಲ್ಲಿ ವೀರಶೈವ ಧರ್ಮವು ಪುರಾತನ ಕಾಲದಿಂದಲೂ ತನ್ನ ಅಸ್ತಿತ್ತ್ವವನ್ನು ಬೆಳೆಸಿ, ಉಳಿಸಿಕೊಂಡು ಬಂದಿದೆ. ಹಿಂದಿನ ಕಾಲದಲ್ಲಿ ಈ ನಗರದಲ್ಲಿ ಒಟ್ಟು ಎಂಟು ವೀರಶೈವ ಮಠಗಳು ಸ್ಥಾಪನೆಯಾಗಿದ್ದವು ಎಂದು ಹೇಳಲಾಗುತ್ತಿದೆ.ಆದರೆ ಹಿಂದಿನ ಆ ಮಠಗಳಲ್ಲಿ ಯಾವ ಮಠವೂ ಅಸ್ತಿತ್ತ್ವದಲ್ಲಿ ಇಲ್ಲದಂತಾಗಿವೆ. ಪುರಾತನಕಾಲದ ಮಠವಾದ ಜೋರಾಪುರ ಪೇಟೆಯ ಶ್ರೀ ಹಿರೇಮಠ ಹಾಗೂ ಶಹಪುರ ಪೇಟೆಯಲ್ಲಿರುವ ಶ್ರೀ ಅರಳೆಲೆ ಮಠದ ಹೆಸರನ್ನು ದಾಖಲಿಸಬಹುದಾಗಿದೆ. ಇದೇ ರೀತಿ ಕಳೆದ ಶತಮಾನದಲ್ಲಿ ಮಹಾಜ್ಞಾನಿಗಳಾದಂತಹ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ನೆಲೆ ನಿಂತ ಜ್ಞಾನಯೋಗಾಶ್ರಮ ಹಾಗೂ ಬಂಥನಾಳು ಶ್ರೀ ಸಂಗನಬಸವ ಸ್ವಾಮಿಗಳ ಕಾರ್ಯಕ್ಷೇತ್ರವಾಗಿದ್ದ ಶ್ರೀ ಸಿದ್ಧೇಶ್ವರ ಮಠ ಹಾಗೂ ಇಂಚಗೇರಿಯ ಶ್ರೀ ಕರಿಸಿದ್ಧೇಶ್ವರ ಮಠ ಎಂಬ ಐದು ಮಠಗಳು ಹೆಸರನ್ನು ಇಲ್ಲಿ ದಾಖಲಿಸಬಹುದಾಗಿದೆ.

ಜ್ಞಾನಯೋಗಾಶ್ರಮ: ಬಿಜಾಪುರ ನಗರದ ಶ್ರೀ ಜ್ಞಾನಯೋಗಾಶ್ರಮವು ಹನ್ನೆರಡನೆಯ ಶತಮಾನದಲ್ಲಿ ಶರಣರು ನೀಡಿದ ಅನುಭಾವವನ್ನು, ನಾಡಿಗೆ ನೀಡಲು ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳಿಂದ ಸ್ಥಾಪಿತಗೊಂಡಿದೆ.

ಬೆಳೆದ ಕ್ಷೇತ್ರ: ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳ ಪರಮ ಶಿಷ್ಯರಾದ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಈ ಕ್ಷೇತ್ರವನ್ನು ಆಧ್ಯಾತ್ಮದ ನೆಲೆಯನ್ನಾಗಿ ಮಾಡಿಕೊಂಡು, ತಮ್ಮ ಜ್ಞಾನದ ಸುಧೆಯನ್ನು ನಾಡಿಗೆ ನೀಡುತ್ತಿದ್ದಾರೆ. ಗುರುಗಳ ಆಧ್ಯಾತ್ಮದ ಸುಧೆಯಲ್ಲಿ ಮಿಂದವರಿಗೆ ಶ್ರೀ ಸಿದ್ಧೇಶ್ವರ ಸ್ವಾಮಿಗಳ ಹೆಸರೇ ಆಧ್ಯಾತ್ಮ ಮಂತ್ರವಾಗಿದೆ. ಅಷ್ಟು ಪ್ರಭಾವಿಗಳಾಗಿ ಭಕ್ತರ ಹೃದಯಾಂತರಾಳದಲ್ಲಿ ನೆಲೆಗೊಂಡಿದ್ದಾರೆ. ಶ್ರೀ ಸಿದ್ಧೇಶ್ವರ ಸ್ವಾಮಿಗಳು ತತ್ತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು, ಅಪಾರ ಜ್ಞಾನವನ್ನು ಸಂಪಾದಿಸಿಕೊಂಡು ಜ್ಞಾನದ ಗಣಿಯಾಗಿದ್ದಾರೆ. ಗುರುಗಳು ತತ್ತ್ವಶಾಸ್ತ್ರವನ್ನು ಸರಳೀಕರಣಗೊಳಿಸಿ ಜನ ಸಾಮಾನ್ಯರಿಗೆ ಮುಟ್ಟುವಂತೆ ಮಾಡಿ ಪಂಡಿತರಿಂದ ಪಾಮರರವರೆಗೆ ಗೌರವಿಸಲ್ಪಟ್ಟಿದ್ದಾರೆ. ಜಾತಿ ಭೇದ, ಮೇಲು ಕೀಳೆಂಬ ಭೇಧ-ಭಾವ ತೋರಿಸದೆ ಎಲ್ಲರನ್ನೂ ಸಮಾನವಾಗಿ ಕಂಡು ಗೌರವಿಸುವ ಗುರುಗಳು, ಮನುಕುಲದ ಉದ್ಧಾರಕ್ಕೆ ಆಧ್ಯಾತ್ಮ ಸಾಧನವಾಗಿದೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಕನ್ನಡ, ಇಂಗ್ಲಿಷ್, ಮರಾಠಿ ಹಾಗೂ ಹಿಂದಿ ಭಾಷೆಗಳಲ್ಲಿ

ಅಪಾರ ಜ್ಞಾನವನ್ನು ಸಂಪಾದಿಸಿಕೊಂಡಿರುವ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಹೊರ ದೇಶಗಳಲ್ಲಿಯೂ ಪ್ರವಾಸ ಮಾಡಿದ್ದಾರೆ. ಗುರುಗಳು ಸರಳ ಜೀವನವನ್ನು ನಡೆಸಿ ವಿರಕ್ತ ಎಂಬ ಪದಕ್ಕೆ ಅರ್ಥವನ್ನು ತಂದುಕೊಟ್ಟಿದ್ದಾರೆ.

ಶ್ರೀ ಸಿದ್ಧೇಶ್ವರ ಸ್ವಾಮಿಗಳ ಮೆಲುಧ್ವನಿಯಿಂದ ಪ್ರಾರಂಭಗೊಳ್ಳುವ ಉಪನ್ಯಾಸಗಳು, ಸಾಮಾಜಿಕ ಸಮಸ್ಯೆಗಳು, ಮನುಕುಲದ ತೊಳಲಾಟ ಈ ರೀತಿ ಪ್ರಚಲಿತ ಸಮಸ್ಯೆಗಳ ಬಗ್ಗೆ ಉತ್ತರ ಕಂಡುಕೊಳ್ಳುವ ನಿಟ್ಟಿನಲ್ಲಿ ಪ್ರಖ್ಯಾತಗೊಂಡಿವೆ. ಇವರು ನುಡಿಯುವ ಒಂದೊಂದು ನುಡಿ ಮುತ್ತು ಮಾನವನ ಬದುಕಿನಲ್ಲಿ ನೆಮ್ಮದಿ ತರುವ ಚೇತನವಾಗಿದೆ. ಶ್ರೀ ಸಿದ್ಧೇಶ್ವರ ಸ್ವಾಮಿಗಳು ನಾಡಿನ ನಾನಾ ಭಾಗಗಳಲ್ಲಿ ಉಪನ್ಯಾಸ, ಉಪದೇಶ ಹಾಗೂ ಪ್ರವಚನಗಳನ್ನು ಮಾಡುವ ಮೂಲಕ, ಮನುಕುಲವನ್ನು ಶರಣರು ಕಂಡಂತಹ ಅನುಭಾವದ ನೆಲೆಗೆ ಮುಟ್ಟಿಸಲು ಪ್ರಯತ್ನಿಸುತ್ತಿದ್ದಾರೆ. ಶ್ರೀ ಸಿದ್ಧೇಶ್ವರ ಸ್ವಾಮಿಗಳ ಕಾಲದಲ್ಲಿ ಸ್ವಚ್ಛ ಹಾಗೂ ನಿರ್ಮಲ ಪರಿಸರದಲ್ಲಿ ರೂಪುಗೊಂಡಿರುವ ಜ್ಞಾನಯೋಗಾಶ್ರಮವು ಸುಂದರ ಕೈತೋಟದ ಮಧ್ಯೆ ಸ್ಥಾಪನೆಯಾಗಿ ಆಧ್ಯಾತ್ಮದ ಪರಿಸರವನ್ನು ರೂಪಿಸಿದೆ. ಸಾಧನೆಯ ಸಿದ್ಧಿಗಾಗಿ ಆಶ್ರಯಪಡೆದ ಆಧ್ಯಾತ್ಮ ಸಾಧಕರ ಓಡಾಟ, ಆಧ್ಯಾತ್ಮ ಚಿಂತನೆಯ ಹಾಗೂ ಪ್ರಪಂಚದ ಎಲ್ಲಾ ದಾರ್ಶನಿಕರ ಪುಸ್ತಕಗಳನ್ನು ಒಳಗೊಂಡ ಗ್ರಂಥಾಲಯ, ಭಕ್ತರಿಗಾಗಿ ನಿರ್ಮಿಸಿದ ದಾಸೋಹಮಂದಿರ, ಪ್ರಾರ್ಥನಾಮಂದಿರ, ಪುಸ್ತಕ ಮಾರಾಟ ಮಳಿಗೆ, ಜ್ಞಾನಯೋಗಾಶ್ರಮದ ಸಮುಚ್ಚಯ ದಲ್ಲಿದ್ದು ಆಧ್ಯಾತ್ಮಜ್ಞಾನದ ಹಸಿವನ್ನು ತೀರಿಸಿಕೊಳ್ಳಲು ಬೇಕಾದಂತಹ ಎಲ್ಲಾ ವ್ಯವಸ್ಥೆಗಳೂ ಇಲ್ಲಿವೆ.

ವಿಳಾಸ: ಶ್ರೀ ಸಿದ್ಧೇಶ್ವರ ಸ್ವಾಮಿಗಳು, ಶ್ರೀ ಜ್ಞಾನಯೋಗಾಶ್ರಮ, ಬಿಜಾಪುರ.

ಅರಳೆಲೆಮಠ: ಬಿಜಾಪುರ ನಗರದ ಶಹಾಪುರ ಪೇಟೆಯಲ್ಲಿರುವ ಶ್ರೀ ಅರಳೆಲೆಮಠವು ರಂಭಾಪುರಿ ಪೀಠದ ಶಾಖಾ ಮಠವಾಗಿ ಬೆಳೆದಿದೆ. ಶಿಷ್ಯ ವರ್ಗದ ಪರಂಪರೆಯಲ್ಲಿ ಬೆಳೆದ ಈ ಮಠವು ಪುರಾತನ ಕಾಲದಿಂದಲ್ಲೂ ತನ್ನ ಅಸ್ತಿತ್ತ್ವವನ್ನು ಉಳಿಸಿಕೊಂಡು ಬಂದಿದೆ. ಪುರಾತನ ಕಾಲದಿಂದ ಈವರೆಗೆ ಒಟ್ಟು ಹನ್ನೊಂದು ಜನ ಮಠಾಧೀಶರು ಅಧಿಕಾರವನ್ನು ನಡೆಸಿದ್ದಾರೆ ಎಂದು ಹೇಳಲಾಗುತ್ತಿದೆ. ಮಠದ ಕರ್ತೃಗುರುಗಳ ಬಗ್ಗೆ ಆಧಾರಗಳ ಕೊರತೆಯಿಂದ ಸ್ಪಷ್ಟವಾದ ಮಾಹಿತಿಗಳು ದೊರೆಯದಾಗಿದೆ. ಈ ಹಿಂದೆ ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳು ಈ ಮಠವನ್ನು ಮುನ್ನಡೆಸಿಕೊಂಡು ಬಂದು ಮಠವನ್ನು ಬೆಳೆಸಿದ್ದರು. ಅವರು ಅಂದು ನಡೆಸುತ್ತಿದ್ದ ಧರ್ಮೋಪದೇಶಗಳು ಈ ಭಾಗದಲ್ಲಿ ವೀರಶೈವ ಧರ್ಮ ಬೆಳೆಯಲು ನೆರವಾಗಿದ್ದವು. ಶಿವಪೂಜಾ ನಿಷ್ಠರು, ತಪೋಜ್ಞಾನಿಗಳು ಆದ ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳು ಶಿಥಲವಾಡಿ ಹಿರೇಮಠದ ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳಿಗೆ ಪಟ್ಟಾಧಿಕಾರವನ್ನು ನೀಡಿ ಲಿಂಗೈಕ್ಯರಾಗಿದ್ದಾರೆ. ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳು ಪರಂಪರಾಗತ ಮಠದ ಆಡಳಿತವನ್ನು ನಡೆಸಿಕೊಂಡು ಬಂದು ಮಠವನ್ನು ಬೆಳೆಸಿದ್ದಾರೆ. ಇಂದಿಗೂ ಈ ಮಠದಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ, ಮಠದ ಅಸ್ತಿತ್ತ್ವವನ್ನು ಉಳಿಸಿಕೊಂಡು ಬರಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳು, ಶ್ರೀ ಅರಳೆಲೆ ಹಿರೇಮಠ, ಶಹಾಪುರ ಪೇಟೆ, ಬಿಜಾಪುರ.

ಹಿರೇಮಠ: ಬಿಜಾಪುರ ನಗರದ ಜೋರಾಪುರ ಪೇಟೆಯಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು, ರಂಭಾಪುರಿ ಪೀಠದ ಶಾಖಾ ಮಠವಾಗಿ ಶಿಷ್ಯ ವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದ ಈ ಮಠದಲ್ಲಿ ಒಂಬತ್ತು ಜನ ಗುರುಗಳು ಅಧಿಕಾರವನ್ನು ನಡೆಸಿದ್ದರು ಎಂದು ಹೇಳಲಾಗುತ್ತಿದೆ. ಪರಂಪರೆಯ ಕೊನೆಯ ಕೊಂಡಿಯಾಗಿದ್ದ ಶ್ರೀ ಪಂಡಿತ ಶಂಭುಲಿಂಗ ಶಿವಾಚಾರ್ಯ ಸ್ವಾಮಿಗಳು ಕಾಶಿ ಕ್ಷೇತ್ರದ ಜಂಗಮವಾಡಿ ಮಠದಲ್ಲಿ ಆಶ್ರಯ ಪಡೆದು ಸಂಸ್ಕೃತ, ವೇದಗಳನ್ನು ಕಲಿತು ಬಂದರು. ಗುರುಗಳು ಸಂಗೀತ, ಕಲೆ, ಸಂಸ್ಕೃತ, ಕನ್ನಡ, ಮರಾಠಿ, ಹಿಂದಿ ಮುಂತಾದ ವಿಷಯಗಳಲ್ಲಿ ಪಂಡಿತರಾಗಿದ್ದರು. ಇಂತಹ ಮಹಾ ಜ್ಞಾನಿಗಳು ತಮ್ಮ ಜ್ಞಾನ ಸಂಪತ್ತಿನಿಂದ ವೀರಶೈವ ಧರ್ಮವನ್ನು ಪ್ರಜ್ವಲವಾಗಿ ಬೆಳೆಸಿದರು. ಇವರು ತಮ್ಮ ವಿದ್ವತ್ ಪ್ರತಿಭೆಯಿಂದ ನಾಡಿನಲ್ಲೆಲ್ಲ ಹೆಚ್ಚು ಪ್ರಖ್ಯಾತಗೊಂಡಿದ್ದರು. ಗುರುಗಳು ವಿದ್ವಾಂಸರಾಗಿ, 'ಪಂಚಾ ಚಾರ್ಯ ಪ್ರಭಾ' ಪತ್ರಿಕೆಯಲ್ಲಿ ವೀರಶೈವ ಧರ್ಮವನ್ನು ಕುರಿತು ಅನೇಕ ಮೌಲಿಕ ಲೇಖನಗಳನ್ನು ಬರೆದು ಪ್ರಕಟಿಸಿದ್ದಾರೆ. ಇವರು ಅಷ್ಟಾವರಣ, ವಿವೇಕ, ಆಗಮನ ಪರಿಜ್ಞಾನ, ಪ್ರಭಾತಿಲಕ, ಶಿವಶಕ್ತಿವಿಲಾಸ ಮುಂತಾದ ಗ್ರಂಥಗಳನ್ನು ರಚಿಸಿ, ವೀರಶೈವ ಧರ್ಮದ ಬೆಳವಣಿಗೆಗೆ ಕಾರಣಕರ್ತರಾಗಿದ್ದಾರೆ. ಧಾರ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯ

ಕ್ಷೇತ್ರಗಳಲ್ಲಿ ಹೆಚ್ಚು ಹೆಸರು ಮಾಡಿದ್ದ ಗುರುಗಳು, ಹಿರೇಮಠವನ್ನು ಬೆಳೆಸಿ ಪ್ರಬುದ್ಧಮಾನಕ್ಕೆ ತಂದರು. ಇವರ ನಂತರ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿದು ತನ್ನ ಅಸ್ತಿತ್ತ್ವವನ್ನು ಕಳೆದುಕೊಳ್ಳುವ ದುಸ್ಥಿತಿಗೆ ಬಂದಿರುವುದು ನೋವಿನ ವಿಚಾರ. ಈಗ ಮಠದ ವಂಶಸ್ಥರು ಗದ್ದುಗೆಗಳಿಗೆ ಪೂಜೆಯನ್ನು ನಡೆಸುತ್ತಾ ಮಠದ ಅಸ್ತಿತ್ತ್ವವನ್ನು ಉಳಿಸಿಕೊಂಡಿದ್ದಾರೆ.

ವಿಳಾಸ: ಶ್ರೀ ಹಿರೇಮಠ, ಜೋರಾಪುರ ಪೇಟೆ, ಬಿಜಾಪುರ.

ಆಧಾರ: 'ಗುರುವರ್ಗ ದರ್ಪಣ' - ಶ್ರೀ ವಿರೂಪಾಕ್ಷ ಶಾಸ್ತ್ರಿಗಳು.

ಬಿಜ್ಜರಗಿ

ಬಿಜಾಪುರ ತಾಲ್ಲೂಕಿನ ಬಿಜ್ಜರಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಮೂವತ್ತೈದು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ವಿರಕ್ತ ಮಠ ಮತ್ತು ಹಿರೇಮಠಗಳು ಸ್ಥಾಪನೆಯಾಗಿವೆ. ಪುರಾತನ ಕಾಲದಲ್ಲಿ ಸ್ಥಾಪನೆಗೊಂಡ ಈ ಎರಡು ಮಠಗಳು ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬಂದು ವೀರಶೈವ ಧರ್ಮವನ್ನು ಬೆಳೆಸಿವೆ. ಈ ಗ್ರಾಮದಲ್ಲಿ ಪುರಾತನ ಕಾಲದಲ್ಲಿ ಸ್ಥಾಪನೆಯಾದ ಉಜ್ಜಯಿನಿ ಪೀಠದ ಶಾಖಾ ಮಠವಾದ ಹಿರೇಮಠವು, ಇಂದು ಗುರುಗಳಿಲ್ಲದೆ ಧಾರ್ಮಿಕ ಕಾರ್ಯಗಳನ್ನು ಸ್ಥಗಿತಗೊಳಿಸಿದೆ. ಮಠದ ಆವರಣದಲ್ಲಿ ಒಂದು ಗದ್ದುಗೆ ಇದ್ದು ಮಠದ ವಂಶಸ್ಥರು ಪೂಜೆ ನಡೆಸುತ್ತಿದ್ದಾರೆ. ವಿರಕ್ತ ಮಠವು ಪ್ರಾರಂಭವಾದಾಗಿನಿಂದ ಈತನಕ ತನ್ನ ಅಸ್ತಿತ್ತ್ವವನ್ನು ಉಳಿಸಿಕೊಂಡು ಬಂದಿದೆ.

ವಿರಕ್ತಮಠ: ಬಿಜ್ಜರಗಿ ಗ್ರಾಮದ ಹೊರ ಭಾಗದಲ್ಲಿ ಸ್ಥಾಪನೆಯಾಗಿರುವ ವಿರಕ್ತ ಮಠವು ಮುರುಘಾ ಸಮಯದ ಮಠವಾಗಿ ಬೆಳೆದು ಬಂದಿದೆ. ಈ ಮಠವನ್ನು ಶ್ರೀ ವಿರೂಪಾಕ್ಷ ಸ್ವಾಮಿಗಳು ಸ್ಥಾಪಿಸಿದ್ದರೆಂದು ಹೇಳಲಾಗುತ್ತಿದೆ. ಗುರುಗಳು ಲೋಕ ಸಂಚಾರ ಮಾಡುತ್ತಾ ಕರ್ನಾಟಕದ ಗಡಿಭಾಗದ ಈ ಗ್ರಾಮಕ್ಕೆ ಆಗಮಿಸಿ ಅನುಷ್ಠಾನಗೊಂಡು ಮಠವನ್ನು ಸ್ಥಾಪಿಸಿದ್ದಾರೆ. ಶರಣರ ತತ್ತ್ವಗಳನ್ನು ಪ್ರಚಾರಪಡಿಸುವ ಉದ್ದೇಶವನ್ನು ಹೊಂದಿದ್ದ ಗುರುಗಳು, ಜನಜಾಗೃತಿಯನ್ನುಂಟುಮಾಡಿ ಈ ಗ್ರಾಮದಲ್ಲಿ ಧಾರ್ಮಿಕ ವಾತಾವರಣವನ್ನು ಬೆಳೆಸಿದರು.

ಪರಂಪರೆ:

೧. ಶ್ರೀ ಮ.ನಿ.ಪ್ರ. ವಿರೂಪಾಕ್ಷಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಮಹಾಲಿಂಗಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ವಿರೂಪಾಕ್ಷಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಪರಂಪರೆಯ ಗುರುಗಳ ಬಗ್ಗೆ ಹೆಚ್ಚು ಮಾಹಿತಿ ಲಭ್ಯವಿಲ್ಲ. ಈಗಿನ ಗುರುಗಳಾದ ಶ್ರೀ ವಿರೂಪಾಕ್ಷ ಸ್ವಾಮಿಗಳು ಈ ಮಠದ ಉತ್ತರಾಧಿಕಾರಿಯಾಗಿ ನೇಮಕಗೊಂಡಿದ್ದರೂ ಪಟ್ಟಾಧಿಕಾರವಾಗಿಲ್ಲ. ವಿರಕ್ತ ಸಂಪ್ರ ದಾಯದ ಮಠವಾದರೂ ಪುತ್ರ ವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಈಗಿನ ಗುರುಗಳಾದ ಶ್ರೀ ವಿರೂಪಾಕ್ಷ ಸ್ವಾಮಿಗಳು ಮಠದ ಧಾರ್ಮಿಕ ಹಾಗೂ ಆಡಳಿತವನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯ ಪೂಜೆ ಮಾಡಲಾಗುತ್ತಿದೆ. ಶ್ರಾವಣ ಮಾಸದಲ್ಲಿ ಪುರಾಣ ಪ್ರವಚನವನ್ನು ನಡೆಸಲಾಗುತ್ತಿದೆ. ಎಳ್ಳು ಅಮಾವಾಸ್ಯೆಯದಿನ ಶ್ರೀ ಮಹಾಲಿಂಗ ಸ್ವಾಮಿಗಳ ಪುಣ್ಯಾರಾಧನೆ ನಡೆಸಲಾಗುತ್ತಿದೆ. ಈ ವಿಶೇಷ ಸಂದರ್ಭಗಳಲ್ಲಿ ಅನ್ನದಾಸೋಹವನ್ನು ನಡೆಸಲಾಗುತ್ತಿದೆ. ಮಠದ ಆಸ್ತಿಯಾಗಿ ಎಂಟುಎಕರೆ ಜಮೀನಿದ್ದು ಗುರುಗಳು ತಮ್ಮ ಪರಿಶ್ರಮದಿಂದ ನೀರಾವರಿಯ ವ್ಯವಸ್ಥೆಯನ್ನು ಮಾಡಿಸಿ, ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ವಿರೂಪಾಕ್ಷ ಸ್ವಾಮಿಗಳು, ಶ್ರೀ ವಿರಕ್ತಮಠ, ಬಿಜ್ಜರಗಿ, ಬಿಜಾಪುರ ತಾಲ್ಲೂಕು.

ಬೊಮ್ಮನಹಳ್ಳಿ

ಬಿಜಾಪುರ ತಾಲ್ಲೂಕಿನ ಬೊಮ್ಮನಹಳ್ಳಿಯು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಇಪ್ಪತ್ತೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಗವಿಮಠವು ಅಸ್ತಿತ್ವದಲ್ಲಿದೆ.

ಗವಿಮಠ: ಬೊಮ್ಮನಹಳ್ಳಿ ಗ್ರಾಮದ ಹೊರಭಾಗದಲ್ಲಿ ಶಿಷ್ಯವರ್ಗದ ಪರಂಪರೆಯ, ರಂಭಾಪುರಿ ಪೀಠದ ಶಾಖಾ ಮಠವು ಸ್ಥಾಪನೆಯಾಗಿದೆ. ಹದಿನೇಳನೆಯ ಶತಮಾನದಲ್ಲಿ ಶ್ರೀ ಜಡೆಶಾಂತೇಶ್ವರ ಶಿವಯೋಗಿಗಳು ಬನವಾಸಿಯಿಂದ ಲೋಕ ಸಂಚಾರ ಕೈಗೊಂಡು, ಈ ಗ್ರಾಮದ ನಿರ್ಜನ ಪ್ರದೇಶದಲ್ಲಿ ನೆಲೆಗೊಂಡರು. ಶ್ರೀ ಶಾಂತೇಶ್ವರ ಸ್ವಾಮಿಗಳು ಉದ್ದನೆಯ ಜಡೆಯನ್ನು ಬಿಟ್ಟಿದ್ದ ಕಾರಣ ಭಕ್ತರು ಇವರಿಗೆ ಶ್ರೀ ಜಡೆಶಾಂತೇಶ್ವರ ಸ್ವಾಮಿಗಳೆಂದು ಕರೆಯತೊಡಗಿ ಅದೇ ರೂಢಿಗತವಾಯಿತು. ಗುರುಗಳು ಇಲ್ಲಿ ನೆಲೆಗೊಂಡ ಮೇಲೆ ಆದಿಲ್‌ಶಾಹಿಯು (ಕ್ರಿ.ಶ.೧೬೫೬) ಗುರುಗಳ ಪವಾಡಗಳಿಗೆ ಮನಸೋತು ಪರಮ ಭಕ್ತನಾದನು. ಅಲ್ಲದೆ ಗುರುಗಳು ನೆಲೆಗೊಂಡ ಜಾಗದಲ್ಲಿ ಮಠವನ್ನು ಸ್ಥಾಪಿಸಿ, ಧಾರ್ಮಿಕ ಚಟುವಟಿಕೆಗಳಿಗೆ ನೆರವಾಗಲೆಂದು ಭೂಮಿಯನ್ನು ಉಂಬಳಿಯಾಗಿ ನೀಡಿದನು. ಈ ರೀತಿ ಶ್ರೀ ಜಡೆಶಾಂತೇಶ್ವರರ ಪ್ರಭಾವದಿಂದ ಮಠವು ಪ್ರಬಲವಾಗಿ ಬೆಳೆಯಿತು. ಅಲ್ಲದೆ ಧಾರ್ಮಿಕ ಕಾರ್ಯಗಳಿಂದ ಹೆಚ್ಚು ಹೆಸರು ಮಾಡಿ ಅಪಾರ ಭಕ್ತರನ್ನು ಸಂಪಾದಿಸಿಕೊಂಡಿತು.

ಪರಂಪರೆ:

೧. ಷ.ಬ್ರ.ಶ್ರೀ ಜಡೆಶಾಂತೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಗುರುಶಾಂತ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಶಾಂತಲಿಂಗ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಗುರುಶಾಂತ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಮಠದ ಪರಂಪರೆಯಲ್ಲಿ ಒಂಬತ್ತು ಜನ ಗುರುಗಳು ಅಧಿಕಾರ ನಡೆಸಿದ್ದಾರೆ ಎಂದು ಹೇಳಲಾದರೂ, ಆಧಾರಗಳ ಕೊರತೆಯಿಂದ ಕೇವಲ ನಾಲ್ಕು ಜನ ಗುರುಗಳ ಹೆಸರನ್ನು ಮಾತ್ರ ಗುರುತಿಸಬಹುದಾಗಿದೆ. ಕರ್ತೃಗುರುಗಳ ನಂತರ ಐದು ಜನ ಗುರುಗಳು ಅಧಿಕಾರವನ್ನು ನಡೆಸಿದ್ದಾರೆ ಎಂದು ಹೇಳಲಾಗುತ್ತಿದೆ. ಇವರುಗಳ ಬಗ್ಗೆ ಮಾಹಿತಿ ದೊರೆಯದಾಗಿದೆ. ಶ್ರೀ ಗುರುಶಾಂತ ಶಿವಾಚಾರ್ಯ ಸ್ವಾಮಿಗಳು ಆಳಂದ ತಾಲ್ಲೂಕಿನ ಮುನವಳ್ಳಿ ಗ್ರಾಮದಲ್ಲಿ ಜನಿಸಿ, ಮಠದ ಅಧಿಕಾರವನ್ನು ವಹಿಸಿಕೊಂಡಿದ್ದರು. ಇವರು ಮಹಾ ಜ್ಞಾನಿಗಳಾಗಿ ವೀರಶೈವ ಧರ್ಮವನ್ನು ಬೆಳೆಸುವಲ್ಲಿ ಸಹಾಯಕರಾಗಿದ್ದರು. ಇವರು ತಮ್ಮ ಉತ್ತರಾಧಿಕಾರಿಯನ್ನಾಗಿ ಶ್ರೀ ಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳನ್ನು ನೇಮಿಸಿ ಕೊಂಡು ಲಿಂಗೈಕ್ಯರಾದರು. ಆಳಂದ ತಾಲ್ಲೂಕಿನ ಮಾದನ ಹಿಪ್ಪರಗಿ ಗ್ರಾಮದ ಶ್ರೀ ಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ೧೯೨೨ರಲ್ಲಿ ಮಠದ ಅಧಿಕಾರವನ್ನು ವಹಿಸಿಕೊಂಡರು. ಪೂಜಾನಿಷ್ಠರು ಹಾಗೂ ತಪೋನಿಷ್ಠರಾಗಿ ವೀರಶೈವ ಧರ್ಮವನ್ನು ವಿಧಿವತ್ತಾಗಿ ಪರಿಪಾಲಿಸುವಂತೆ ಭಕ್ತರಿಗೆ ತಿಳಿ ಹೇಳುತ್ತಿದ್ದ ಅವರು ೧೯೭೨ ರಲ್ಲಿ ಲಿಂಗೈಕ್ಯರಾದರು. ಗುರುಗಳು ಉತ್ತರಾಧಿಕಾರಿ ಗಳನ್ನು ನೇಮಿಸಿದ್ದರು. ಆದರೆ ಇವರು ಮಠದ ಅಧಿಕಾರವನ್ನು ವಹಿಸಿಕೊಳ್ಳದೆ ಗೃಹಾಸ್ಥಾಶ್ರಮವನ್ನು ಸ್ವೀಕಾರ ಮಾಡಿದರು. ನಂತರ ಹತ್ತು ವರ್ಷಗಳ ಕಾಲ ಉತ್ತರಾಧಿಕಾರಿಗಳಿಲ್ಲದೆ ಮಠವು ಖಾಲಿ ಉಳಿಯಿತು. ಈ ಸಂದರ್ಭದಲ್ಲಿ ಬೊಮ್ಮನಹಳ್ಳಿ ಗ್ರಾಮಸ್ಥರು ಮಠದ ಉಸ್ತುವಾರಿ ಸಮಿತಿಯನ್ನು ರಚಿಸಿಕೊಂಡು, ಮಠದ ಧಾರ್ಮಿಕ ಹಾಗೂ ಆಡಳಿತ ಕಾರ್ಯವನ್ನು ನಡೆಸಿಕೊಂಡು ಬರುತ್ತಿದ್ದರು. ನಂತರ ಶ್ರೀ ಗುರುಶಾಂತ ಶಿವಾಚಾರ್ಯ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕಮಾಡಿ ೧೯೮೨ ರಲ್ಲಿ ಪಟ್ಟಾಧಿಕಾರ ಮಾಡಿದ್ದಾರೆ.

ಶ್ರೀ ಗುರುಶಾಂತ ಶಿವಾಚಾರ್ಯ ಸ್ವಾಮಿಗಳು ಜೇವರ್ಗಿ ತಾಲ್ಲೂಕಿನ ಹುಲ್ಲೂರು ಗ್ರಾಮದ ಶ್ರೀ ರುದ್ರಯ್ಯ ಮತ್ತು ಶ್ರೀಮತಿ ನೀಲಮ್ಮನವರ ಪುತ್ರರಾಗಿ ಜನಿಸಿದರು. ಜೇವರ್ಗಿ ಹಾಗೂ ಶಿವಯೋಗ ಮಂದಿರದಲ್ಲಿ ವಿದ್ಯಾಭ್ಯಾಸ ಮಾಡಿ ಮಠಕ್ಕೆ ಆಗಮಿಸಿದರು. ನಂತರ ನಾಗಠಾಣ ಮಠದ ಶ್ರೀ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳಿಂದ ಪಟ್ಟಾಧಿಕಾರದ ಅನುಗ್ರಹ ವನ್ನು ಪಡೆದು ಅಧಿಕಾರಕ್ಕೆ ಬಂದರು.

ಅಭಿವೃದ್ಧಿ ಕಾರ್ಯಗಳು: ಪುರಾತನ ಕಾಲದ ಈ ಮಠದಲ್ಲಿ ಕರ್ತೃಗುರುಗಳು ಹಾಗೂ ಪರಂಪರೆಯ ಗುರುಗಳು ಅನುಷ್ಠಾನ ಕೈಗೊಳ್ಳುತ್ತಿದ್ದ ಗವಿಯನ್ನು ಅಭಿವೃದ್ಧಿಪಡಿಸಿದರು. ಅಲ್ಲದೆ ಈ ಮೂಲ ಗವಿಯಲ್ಲಿಯೇ ತಮ್ಮ ನಿತ್ಯದ ಪೂಜೆಯು ನಡೆಯುವಂತೆ ವ್ಯವಸ್ಥೆ ಮಾಡಿಕೊಂಡರು. ಮೂಲ ಗವಿಯಲ್ಲಿ ಎರಡು ಕೊಠಡಿಗಳನ್ನು ನಿರ್ಮಿಸಿದರು. ಐದು ಲಕ್ಷ ರೂಪಾಯಿ ಯೋಜನೆಯಲ್ಲಿ ಗವಿಯ ಪಕ್ಕದಲ್ಲಿ ನೂತನ ಕಟ್ಟಡವನ್ನು ನಿರ್ಮಿಸಿದರು. ಅಲ್ಲದೆ ಮಠದ ಆಸ್ತಿಯಾಗಿದ್ದ ಇಪ್ಪತ್ತು ಎಕರೆ

ಜಮೀನನ್ನು ಅಭಿವೃದ್ಧಿ ಪಡಿಸಿ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ.

ಧಾರ್ಮಿಕ ಕಾರ್ಯಗಳ: ಮಠದ ಪರಂಪರೆಯ ಕರ್ತೃಗುರುಗಳ ಹಾಗೂ ಇತರೆ ಗುರುಗಳ ಗದ್ದುಗೆಗಳನ್ನು(ಮೂರು)ಗುರುತಿಸಿ, ನವೀಕರಣಗೊಳಿಸಿ ನಿತ್ಯ ಪೂಜೆಗೆ ವ್ಯವಸ್ಥೆಗೊಳಿಸಿದರು. ಅಮಾವಾಸ್ಯೆಯಲ್ಲಿ ಶಿವಾನುಭವ ಗೋಷ್ಠಿ, ಶ್ರಾವಣ ಮಾಸದಲ್ಲಿ ಪುರಾಣ ಪ್ರವಚನ, ಬಸವ ಜಯಂತಿಯ ಸಂದರ್ಭದಲ್ಲಿ ಮೂರು ದಿನಗಳ ಕಾಲ ಶ್ರೀ ಜಡೆಶಾಂತೇಶ್ವರರ ಜಾತ್ರೆ, ಬನದ ಹುಣ್ಣಿಮೆಯಲ್ಲಿ ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ಮೂರು ದಿನಗಳ ಕಾಲ ನಡೆಸಲಾಗುತ್ತಿದೆ. ಈ ಸಂದರ್ಭಗಳಲ್ಲಿ ಅನ್ನದಾಸೋಹದ ವ್ಯವಸ್ಥೆ, ಸಾಮೂಹಿಕ ವಿವಾಹಗಳು ಹಾಗೂ ಶಿವದೀಕ್ಷೆಯನ್ನು ನಡೆಸಲಾಗುತ್ತಿದೆ. ಮಠದ ಪರಂಪರೆಯ ಗುರುಗಳು ಪೂಜೆಯ ವೇಳೆಯಲ್ಲಿ ಧರಿಸಿಕೊಳ್ಳುವ ರುದ್ರಾಕ್ಷಿ ಕಿರೀಟ, ಪರಂಪರೆಯ ಪೂಜಾ ಸಾಮಾಗ್ರಿಗಳು ಮಠದಲ್ಲಿವೆ.

ಶೈಕ್ಷಣಿಕ ಸೇವೆ: ೧೯೮೮ರಲ್ಲಿ ಶ್ರೀ ಜಡೆಶಾಂತೇಶ್ವರ ಕೃಪಾಪೋಷಿತ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಶರಣೆ ಬಸವಾಂಬೆ ವೀರಭದ್ರಯ್ಯ ರಾಜಗುರು ಪ್ರೌಢಶಾಲೆಯನ್ನು ಪ್ರಾರಂಭಿಸಲಾಗಿದೆ. ಬೊಮ್ಮನಹಳ್ಳಿಯಲ್ಲಿ ಉಚಿತ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿ, ಇಪ್ಪತ್ತೈದು ಜನ ವಿದ್ಯಾರ್ಥಿಗಳಿಗೆ ಆಶ್ರಯ ಕಲ್ಪಿಸಲಾಗಿದೆ.

ವಿಳಾಸ: ಷ.ಬ್ರ.ಶ್ರೀ ಗುರುಶಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಗವಿಮಠ, ಬೊಮ್ಮನಹಳ್ಳಿ, ಬಿಜಾಪುರ ತಾಲ್ಲೂಕು.

ಮಮದಾಪುರ

ಬಿಜಾಪುರ ತಾಲ್ಲೂಕಿನ ಮಮದಾಪುರ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಮೂವತ್ತೇಳು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಪುರಾತನ ಕಾಲದಲ್ಲಿ ವೀರಶೈವ ಧರ್ಮವು ಪ್ರಬಲವಾಗಿ ಬೆಳೆದಿದೆ. ಇದಕ್ಕೆ ಸಾಕ್ಷಿ ಎಂಬಂತೆ ಒಟ್ಟು ಹನ್ನೆರಡು ಮಠಗಳು ಸ್ಥಾಪನೆಯಾಗಿದ್ದವು ಎಂದು ಹೇಳಲಾಗುತ್ತಿದೆ. ಇವುಗಳಲ್ಲಿ ಶ್ರೀ ಹಿರೇಮಠ, ಶ್ರೀ ಚರಂತಿಮಠ, ಶ್ರೀ ವಿರಕ್ತಮಠ, ಶ್ರೀ ಹಂಚಿನಾಳುಮಠ ಎಂಬ ನಾಲ್ಕು ಮಠಗಳ ಹೆಸರುಗಳು ಈಗ ಕೇಳಿ ಬರುತ್ತಿವೆ. ಉಳಿದ ಎಂಟು ಮಠಗಳು ಹೇಳಲು ಹೆಸರಿಲ್ಲದಂತೆ ನಶಿಸಿ ಹೋಗಿವೆ. ದಾಖಲಿಸಿರುವ ನಾಲ್ಕು ಮಠಗಳಲ್ಲಿ ಶ್ರೀ ವಿರಕ್ತ ಮಠವು ಅಸ್ತಿತ್ವವನ್ನು ಉಳಿಸಿಕೊಂಡು ಧಾರ್ಮಿಕ ಕಾರ್ಯವನ್ನು ನಡೆಸುತ್ತಾ ಬಂದಿದೆ.

ವಿರಕ್ತಮಠ: ಮಮದಾಪುರ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ವಿರಕ್ತಮಠವು ಹದಿನಾರನೆಯ ಶತಮಾನ ದಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಈ ಮಠವನ್ನು ಅಥಣಿಯ ಶ್ರೀ ಮುರುಘೇಂದ್ರ ಸ್ವಾಮಿಗಳು ಸ್ಥಾಪನೆಮಾಡಿ, ಇಲ್ಲಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದರು. ನಿತ್ಯ ಶಿವಾನುಭವ ಗೋಷ್ಠಿಯನ್ನು ನಡೆಸಿ, ಧರ್ಮೋಪದೇಶವನ್ನು ಮಾಡಿ ಧರ್ಮ ಸಂಸ್ಕಾರವನ್ನು ನೀಡಲಾಗುತ್ತಿದೆ. ಸಂಜೆ ಅನ್ನದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಈ ರೀತಿ ಮಠವು ಕರ್ತೃಗುರುಗಳ ಶಕ್ತಿಯಿಂದ ಹೆಚ್ಚು ಹೆಸರುಮಾಡಿ ಬೆಳೆಯಿತು.

ಪರಂಪರೆ:

೧. ಶ್ರೀ ಮ.ನಿ.ಪ್ರ. ಮುರುಘೇಂದ್ರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಮುಪ್ಪಿನಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಗುರುಬಸವಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಮಹಾದೇವಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಮೃತ್ಯುಂಜಯಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಬಸವರಾಜಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಮುಪ್ಪಿನ ಸ್ವಾಮಿಗಳು, ಶ್ರೀಸಿದ್ಧಲಿಂಗ ಸ್ವಾಮಿಗಳು ಹಾಗೂ ಶ್ರೀ ಗುರುಬಸವ ಸ್ವಾಮಿಗಳ ಬಗ್ಗೆ ಹೆಚ್ಚಿನ ಮಾಹಿತಿ ತಿಳಿಯದಾಗಿದೆ. ಶ್ರೀ ಮಹಾದೇವ ಸ್ವಾಮಿಗಳು ೧೯೨೫ ರಲ್ಲಿ ವೇದಾಂತ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ೧೯೩೭ ರಲ್ಲಿ ಈ ಮಠದ ಪಟ್ಟಾಧಿಕಾರವನ್ನು

ವಹಿಸಿಕೊಂಡು, ನಂತರ ಬೆಂಗಳೂರಿನ ಸರ್ಪಭೂಷಣ ಮಠದ ಅಧಿಕಾರಿಗಳಾಗಿ ಬೆಂಗಳೂರಿಗೆ ಹೋದರು. ಶ್ರೀ ಮಹಾದೇವ ಸ್ವಾಮಿಗಳು ವಚನ ಸಾಹಿತ್ಯದ ಬಗ್ಗೆ ಅನೇಕ ಕೃತಿಗಳನ್ನು ರಚಿಸಿ 'ಅಭಿನವ ಅಲ್ಲಮ' ಎಂಬ ಬಿರುದನ್ನು ಪಡೆದುಕೊಂಡಿದ್ದರು. ಇವರು ೧೯೬೧ ರಲ್ಲಿ ಸರ್ಪಭೂಷಣ ಮಠದಲ್ಲಿ ಲಿಂಗೈಕ್ಯರಾದರು. ಹಿರಿಯ ಗುರುಗಳು ಲಿಂಗೈಕ್ಯರಾಗುವ ಹತ್ತು ವರ್ಷದ ಮೊದಲೇ ಮಮದಾಪುರ ಮಠಕ್ಕೆ ಶ್ರೀ ಮೃತ್ಯುಂಜಯ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕಮಾಡಿದ್ದರು.

ಶ್ರೀ ಮೃತ್ಯುಂಜಯ ಸ್ವಾಮಿಗಳು ಬೆಳಗಾಂ ಜಿಲ್ಲೆಯ ರಾಮದುರ್ಗದ ಶ್ರೀ ಗಂಗಯ್ಯ ಮತ್ತು ಶ್ರೀಮತಿ ಗುರು ಪಾದಮ್ಮನವರ ಪುತ್ರರಾಗಿ ಜನಿಸಿದರು. ಬೆಂಗಳೂರು, ತಿಪಟೂರಿನಲ್ಲಿ ಅಧ್ಯಯನ ಮಾಡಿ, ವಚನ ಸಾಹಿತ್ಯದ ಬಗ್ಗೆ ಅಪಾರವಾದ ಅಧ್ಯಯನ ಮಾಡಿದ್ದ ಇವರು ೧೯೫೧ರಲ್ಲಿ ಹಿರಿಯ ಗುರುಗಳಿಂದ ಅನುಗ್ರಹ ಪಡೆದು ಅಧಿಕಾರಕ್ಕೆ ಬಂದರು. ಇವರು ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಶಿಥಿಲಗೊಂಡಿದ್ದ ಮಠದ ಕಟ್ಟಡವನ್ನು ಹಂತ ಹಂತವಾಗಿ ಅಭಿವೃದ್ಧಿ ಗೊಳಿಸಿದರು. ೨೦೦೦ ದ ಸೆಪ್ಟೆಂಬರ್ ಹನ್ನೊಂದರಂದು ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಬಸವರಾಜ ಸ್ವಾಮಿಗಳನ್ನು ನೇಮಕಮಾಡಿ ಪುರಪ್ರವೇಶವನ್ನು ಮಾಡಿ ಕೊಳ್ಳುವ ಮೂಲಕ ಅವರನ್ನು ಮಠಕ್ಕೆ ಸ್ವಾಗತಿಸಿಕೊಂಡಿದ್ದಾರೆ.

ಶ್ರೀ ಬಸವರಾಜ ಸ್ವಾಮಿಗಳು ಮಹಾರಾಷ್ಟ್ರದ ನಳದುರ್ಗದ ಶ್ರೀ ಮಡಿವಾಳಯ್ಯ ಮತ್ತು ಶ್ರೀಮತಿ ಶಾಂತಮ್ಮನವರ ಪುತ್ರರಾಗಿ ಜನಿಸಿ, ಶಿವಯೋಗ ಮಂದಿರ, ಹುಬ್ಬಳ್ಳಿ, ಮೈಸೂರಿನಲ್ಲಿ ವಿದ್ಯಾಭ್ಯಾಸಮಾಡಿ ಕಾಶಿ ಜಂಗಮ ಮಠದಲ್ಲಿದ್ದು, ೧೯೯೯ ರಲ್ಲಿ ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗುರುಗಳ ಗದ್ದುಗೆಗಳಿಗೆ ನಿತ್ಯ ಮೂರು ವೇಳೆ ಪೂಜೆ, ಪ್ರತಿ ಸೋಮವಾರ ಹಾಗೂ ಹುಣ್ಣಿಮೆಯಲ್ಲಿ ಶಿವಾನುಭವ ಗೋಷ್ಠಿ, ಶ್ರಾವಣ ಮಾಸದಲ್ಲಿ ಪುರಾಣ ಪ್ರವಚನ, ಕರ್ತೃಗುರುಗಳ ಗದ್ದುಗೆಗಳಿಗೆ ನಿತ್ಯ ರುದ್ರಾಭಿಷೇಕ ಪೂಜೆ, ಬಸವ ಜಯಂತಿ ಆಚರಣೆ, ಕಾರ್ತೀಕ ಮಾಸದಲ್ಲಿ ಹಿರಿಯ ಗುರುಗಳ ಆರಾಧನೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭಗಳಲ್ಲಿ ಅನ್ನ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.

ಸಾಹಿತ್ಯ ಸೇವೆ: ಮಠದ ವತಿಯಿಂದ ಸರ್ಪಭೂಷಣ ಶಿವಯೋಗಿಗಳ ಕೈವಲ್ಯ ಕಲ್ಪವಲ್ಲರಿ ಗ್ರಂಥವನ್ನು ಪ್ರಕಟಿಸಲಾಗಿದೆ. ಈ ಮಠದಲ್ಲಿ ಮೂವತ್ತೇಳು ತಾಳೆ ಗರಿಗಳ ಕಟ್ಟುಗಳು ದೊರೆತಿವೆ. ಇವುಗಳು ಅಪ್ರಕಟಿತ ಗ್ರಂಥಗಳೆಂದು ತಿಳಿದು ಬಂದಿದ್ದು ಇವುಗಳನ್ನು ಹಂಪಿ ವಿಶ್ವವಿದ್ಯಾನಿಲಯದ ಹಸ್ತ ಪ್ರತಿ ಹಾಗೂ ತಾಳೆ ಗರಿಗಳ ಸಂಶೋಧನಾ ವಿಭಾಗವು ಸಂಶೋಧನೆಗೆಂದು ತೆಗೆದುಕೊಂಡು ಹೋಗಿದೆ. ಈ ರೀತಿ ಮಠವು ಧಾರ್ಮಿಕ, ಸಾಹಿತ್ಯಿಕ ಹಾಗೂ ಸಾಮಾಜಿಕವಾಗಿ ಹೆಚ್ಚು ಕೊಡುಗೆಯನ್ನು ನೀಡಿ, ವೀರಶೈವ ಧರ್ಮವನ್ನು ಬೆಳೆಸುತ್ತಾ ಬಂದಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಮೃತ್ಯುಂಜಯ ಸ್ವಾಮಿಗಳು, ಶ್ರೀ ವಿರಕ್ತ ಮಠ, ಮಮದಾಪುರ, ಬಿಜಾಪುರ ತಾಲ್ಲೂಕು.

❑

ಮುದ್ದೇಬಿಹಾಳು ತಾಲ್ಲೂಕು

ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳು ತಾಲ್ಲೂಕು ಕೃಷಿ ಅವಲಂಬಿತವಾಗಿದೆ. ಅಭಿವೃದ್ಧಿಯನ್ನು ಕಾಣದ ಈ ತಾಲ್ಲೂಕು ಧಾರ್ಮಿಕವಾಗಿ ಮುಂದುವರೆದಿದೆ. ಇಲ್ಲಿ ಸುಮಾರು ಐವತ್ತಾರು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಆದರೆ ಇಂದು ಕೇವಲ ಒಂಬತ್ತು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಕುಂಟೋಜಿ

ಮುದ್ದೇಬಿಹಾಳು ತಾಲ್ಲೂಕಿನ ಕುಂಟೋಜಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರ ಭಾಗಕ್ಕೆ ಐದು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಶ್ರೀ ಕರಿವೀರೇಶ್ವರಮಠ ಮತ್ತು ಶ್ರೀ ಹಿರೇಮಠ ಎಂಬ ಎರಡು ಮಠಗಳು ಸ್ಥಾಪನೆಯಾಗಿವೆ.

ಹಿರೇಮಠ: ಕುಂಟೋಜಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ರಂಭಾಪುರಿ ಪೀಠದ ಶಾಖಾಮಠವಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ಪುರಾತನ ಪರಂಪರೆಯುಳ್ಳ ಈ ಮಠದಲ್ಲಿ ಅನೇಕ ಗುರುಗಳು ಅಧಿಕಾರ ನಡೆಸಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಅನೇಕ ವರ್ಷಗಳಿಂದ ಖಾಲಿ ಉಳಿದಿದ್ದ ಮಠಕ್ಕೆ ಈಗ ಶ್ರೀ ಚನ್ನವೀರ ದೇವರು ಉತ್ತರಾಧಿಕಾರಿಗಳಾಗಿ ನೇಮಕಗೊಂಡು ಮಠವನ್ನು ಮುನ್ನಡೆಸುತ್ತಿದ್ದಾರೆ. ಇವರು ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡಿ ಧಾರ್ಮಿಕ ಸಂಸ್ಕಾರವನ್ನು ಪಡೆದುಕೊಂಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಚನ್ನವೀರ ದೇವರು, ಶ್ರೀ ಹಿರೇಮಠ, ಕುಂಟೋಜಿ, ಮುದ್ದೇಬಿಹಾಳು ತಾ, ಬಿಜಾಪುರ ಜಿಲ್ಲೆ.

ಕರಿವೀರೇಶ್ವರಮಠ: ಕುಂಟೋಜಿ ಗ್ರಾಮದ ಮಧ್ಯಭಾಗದಲ್ಲಿ ಉಜ್ಜಯಿನಿ ಪೀಠದ ಶಾಖಾಮಠವಾದ ಶ್ರೀ ಕರಿವೀರೇಶ್ವರ ಮಠವು ಸ್ಥಾಪನೆ ಯಾಗಿದೆ. ಪುರಾತನ ಕಾಲದಲ್ಲಿ ಸ್ಥಾಪನೆಗೊಂಡ ಈ ಮಠವನ್ನು ಶ್ರೀ ಮುದ್ದುಲಿಂಗ ಶಿವಾಚಾರ್ಯ ಸ್ವಾಮಿಗಳು ಸ್ಥಾಪಿಸಿದರೆಂದು ಹೇಳಲಾಗುತ್ತಿದೆ. ಆದರೆ ಈ ಬಗ್ಗೆ ಸ್ಪಷ್ಟ ಆಧಾರಗಳು ದೊರೆಯುವುದಿಲ್ಲ.

ಪರಂಪರೆ:

೧. ಷ.ಬ್ರ.ಶ್ರೀ ಮುದ್ದುಲಿಂಗ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಕರವೀರಲಿಂಗ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಕರಿವೀರೇಶ್ವರ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು

ಈ ಮಠದ ಸ್ಥಾಪನೆ, ಸ್ಥಾಪಕರು ಹಾಗೂ ಪರಂಪರೆಯ ಗುರುಗಳ ಬಗ್ಗೆ ಮಠದಲ್ಲಿ ಸ್ಪಷ್ಟವಾದ ಮಾಹಿತಿಗಳನ್ನು ಕಾಯ್ದಿರಿಸದೆ ಇರುವುದರಿಂದ ಅಸ್ಪಷ್ಟವಾದ ಮಾಹಿತಿಗಳಿಂದ ಮಠದ ಪರಂಪರೆಯನ್ನು ದಾಖಲಿಸಬೇಕಾಗಿದೆ. ೧೯೯೫ ರಲ್ಲಿ ಉತ್ತರಾಧಿಕಾರಿಗಳಾಗಿ ನೇಮಕಗೊಂಡಿರುವ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಶ್ರೀ ಕರಿವೀರಯ್ಯ ಮತ್ತು ಶ್ರೀಮತಿ ಸಂಗಮ್ಮನವರ ಪುತ್ರರಾಗಿ ಕುಂಟೋಜಿಯಲ್ಲಿ ೧೯೬೮ರಲ್ಲಿ ಜನಿಸಿ, ಹೊನ್ನಾಳ್ಳಿಯಲ್ಲಿ ವಿದ್ಯಾಭ್ಯಾಸವನ್ನು ಮಾಡಿ, ಮುಕುಂದ ಮಠದಲ್ಲಿ ಕೆಲವುದಿನ ನೆಲೆಸಿ, ಈಗ ಕುಂಟೋಜಿಯಲ್ಲಿ ನೆಲೆಸಿದ್ದಾರೆ. ಗುರುಗಳು ಪುರಾಣ ಪ್ರವಚನವನ್ನು ಹೇಳುವ ಕಲೆಯನ್ನು ಬೆಳೆಸಿಕೊಂಡಿದ್ದು, ನಾಡಿನ ಬೇರೆಬೇರೆ ಮಠಗಳಲ್ಲಿ ಪುರಾಣ ಪ್ರವಚನವನ್ನು ಮಾಡಿ ಧರ್ಮಪ್ರಚಾರವನ್ನು ಮಾಡುತ್ತಿದ್ದಾರೆ.ಮಠದಲ್ಲಿ ಸ್ಥಾಪನೆಯಾಗಿರುವ ಎರಡೂ ಗದ್ದುಗೆಗಳಿಗೆ ನಿತ್ಯಪೂಜೆ, ಶ್ರಾವಣಮಾಸದಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ.

ವಿಳಾಸ:ಷ.ಬ್ರ.ಶ್ರೀರುದ್ರಮುನಿ ಶಿವಾಚಾರ್ಯಸ್ವಾಮಿಗಳು,ಶ್ರೀ ಕರಿವೀರೇಶ್ವರಮಠ,ಕುಂಟೋಜಿ,ಮುದ್ದೇಬಿಹಾಳು ತಾಲ್ಲೂಕು, ಬಿಜಾಪುರ ಜಿಲ್ಲೆ.

ಕೇಶಾಪುರ

ಮುದ್ದೇಬಿಹಾಳ ತಾಲ್ಲೂಕಿನ ಕೇಶಾಪುರ ಗ್ರಾಮವು ತಾಲ್ಲೂಕು ಕೇಂದ್ರದಿಂದ ಆಗ್ನೇಯ ಭಾಗಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಸಂಗಮೇಶ್ವರ ಸಂಸ್ಥಾನ ಬೃಹನ್ಮಠವು ಅಸ್ತಿತ್ವದಲ್ಲಿದೆ.

ಸಂಗಮೇಶ್ವರ ಸಂಸ್ಥಾನ ಬೃಹನ್ಮಠ: ಕೇಶಾಪುರ ಗ್ರಾಮದ ಮಧ್ಯಭಾಗದಲ್ಲಿ ರಂಭಾಪುರಿ ಪೀಠದ ಶಾಖಾಮಠವಾದ ಶ್ರೀ ಸಂಗಮೇಶ್ವರ ಸಂಸ್ಥಾನ ಬೃಹನ್ಮಠವು ನಾಲ್ಕುನೂರು ವರ್ಷಗಳ ಹಿಂದೆ ಸ್ಥಾಪನೆಯಾಗಿ ಧಾರ್ಮಿಕ ಕೇಂದ್ರವಾಗಿ ಬೆಳೆದಿದೆ. ಪುರಾತನ ಕಾಲದ ಈ ಮಠವನ್ನು ಶ್ರೀ ಸಂಗಮೇಶ್ವರ ಶಿವಾಚಾರ್ಯ ಸ್ವಾಮಿಗಳು ಸ್ಥಾಪನೆ ಮಾಡಿರುವುದರಿಂದ, ಈ ಮಠಕ್ಕೆ 'ಶ್ರೀ ಸಂಗಮೇಶ್ವರ ಸಂಸ್ಥಾನ ಬೃಹನ್ಮಠ' ಎಂಬ ಹೆಸರು ಬಂದಿದೆ.

ಪರಂಪರೆ:
೧. ಷ.ಬ್ರ.ಶ್ರೀ ಸಂಗಮೇಶ್ವರ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ರವೀಶ್ವರ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ಸಂಗಮೇಶ್ವರ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಸ್ಥಾಪಿಸಿ ಅಭಿವೃದ್ಧಿಗೊಳಿಸಿ, ಲಿಂಗೈಕ್ಯರಾದ ಮೇಲೆ ನಂತರ ಅಧಿಕಾರ ವಹಿಸಿಕೊಂಡ ಗುರುಪರಂಪರೆಯ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ನಂತರ ನೂರು ವರ್ಷಗಳ ಹಿಂದೆ ಶ್ರೀ ಸಂಗಮೇಶ್ವರ ಶಿವಾಚಾರ್ಯ ಸ್ವಾಮಿಗಳು ಕರ್ತೃಗುರುಗಳ ಹೆಸರನ್ನೇ ಅಭಿದಾನ ಪಡೆದು, ಅಧಿಕಾರಕ್ಕೆ ಬಂದು ಮಠವನ್ನು ಧಾರ್ಮಿಕವಾಗಿ ಅಭಿವೃದ್ಧಿ ಪಡಿಸಿದರೇ ವಿನಃ ಆರ್ಥಿಕವಾಗಿ ಸದೃಢಗೊಳಿಸಲಿಲ್ಲ. ಇವರು ಸಂಚಾರಮೂರ್ತಿಗಳಾಗಿ ನಾಡಿನಾದ್ಯಂತ ಸಂಚರಿಸಿ ೧೯೨೦ ರಲ್ಲಿ ಲಿಂಗೈಕ್ಯರಾದರು. ಇವರ ತರುವಾಯ ಎಪ್ಪತ್ತು ವರ್ಷಗಳ ಕಾಲ ಮಠವು ಉತ್ತರಾಧಿಕಾರಿಗಳಿಲ್ಲದೆ ಖಾಲಿ ಉಳಿಯಿತು. ಈ ಸಂದರ್ಭದಲ್ಲಿ ಮಠದ ವಂಶಸ್ಥರು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಾ ಮಠದ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದ್ದರು. ಈಗ ಶ್ರೀ ವೀರಯ್ಯ ಮತ್ತು ಶ್ರೀಮತಿ ಮಲ್ಲಮ್ಮನವರ ಪುತ್ರರಾಗಿ ೧೯೭೪ರಲ್ಲಿ ಜನಿಸಿದ, ಶ್ರೀ ರವೀಶ್ವರ ಶಿವಾಚಾರ್ಯ ಸ್ವಾಮಿಗಳು ೧೯೯೦ ರಲ್ಲಿ ಈ ಮಠದ ಅಧಿಕಾರವನ್ನು ವಹಿಸಿಕೊಂಡರು. ಗುರುಗಳು ಅಧಿಕಾರವನ್ನು ವಹಿಸಿಕೊಂಡ ಮೇಲೆ ಹುಬ್ಬಳ್ಳಿ ಮೂರುಸಾವಿರಮಠದಲ್ಲಿ ಸಂಸ್ಕೃತ, ವೇದಾಧ್ಯಯನಗಳನ್ನು ಮುಗಿಸಿ, ಆಯುರ್ವೇದಶಾಸ್ತ್ರ ಮತ್ತು ಸಂಸ್ಕೃತ ವ್ಯಾಕರಣದ ಅಧ್ಯಯನವನ್ನು ಕೊಪ್ಪಳದ ಶ್ರೀ ಗವಿಮಠದಲ್ಲಿ ಮುಗಿಸಿದರು. ನಂತರ ಶ್ರೀ ರಂಭಾಪುರಿ ಪೀಠದಲ್ಲಿ ನೆಲೆಸಿ ಶ್ರೀ ರೇಣುಕಾಚಾರ್ಯ ಗುರುಕುಲದಲ್ಲಿ ವೇದ, ಜ್ಯೋತಿಷ್ಯವನ್ನು ಕಲಿತು ವಿದ್ವತ್ ಸಂಪನ್ನರಾಗಿ ಮಠಕ್ಕೆ ಆಗಮಿಸಿ ಮಠದ ಧಾರ್ಮಿಕ ಕಾರ್ಯಗಳನ್ನು ಮುನ್ನಡೆಸುತ್ತಿದ್ದರು. ಈ ಸಂದರ್ಭದಲ್ಲಿ ಬಾಳೆಹೊನ್ನೂರು ರಂಭಾಪುರಿ ಪೀಠದ ಜಗದ್ಗುರುಗಳಾದ ಶ್ರೀ ಪ್ರಸನ್ನರೇಣುಕ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರ ಸದಿಚ್ಛೆಯಂತೆ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಮಳಲಿ ಸಂಸ್ಥಾನ ಮಠದ ಪಟ್ಟಾಧಿಕಾರವನ್ನು ೧೯೯೮ರ ಫೆಬ್ರವರಿ ಹತ್ತರಂದು ವಹಿಸಿಕೊಂಡಿದ್ದರೂ ಕೇಶವಾಪುರದ ಶ್ರೀಸಂಗಮೇಶ್ವರ ಸಂಸ್ಥಾನ ಮಠದ ಧಾರ್ಮಿಕ ಮತ್ತು ಆಡಳಿತ ಕಾರ್ಯಗಳನ್ನೂ ನಡೆಸಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದಲ್ಲಿ ಸ್ಥಾಪನೆಯಾಗಿರುವ ಗದ್ದುಗೆಗಳಿಗೆ ನಿತ್ಯ ಪೂಜೆ ಮತ್ತು ವಾರ್ಷಿಕ ಪುಣ್ಯಾರಾಧನೆಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಶ್ರೀ ರವೀಶ್ವರ ಶಿವಾಚಾರ್ಯ ಸ್ವಾಮಿಗಳು ಅಧಿಕಾರ ವಹಿಸಿಕೊಂಡ ಮೇಲೆ ಮಠಕ್ಕೆ ನೂತನ ಕಟ್ಟಡವನ್ನು ನಿರ್ಮಿಸಿ, ಶ್ರಾವಣ ಮಾಸದಲ್ಲಿ ಪುರಾಣ ಪ್ರವಚನಗಳು ಹಾಗೂ ಯುಗಾದಿ ಸಂದರ್ಭದಲ್ಲಿ ಐದು ದಿನಗಳ ಕಾಲ ವಿಶೇಷ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಮಠವನ್ನು ಸಮಾಜಮುಖಿಯಾಗಿ ಮಾಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ರವೀಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಸಂಗಮೇಶ್ವರ ಸಂಸ್ಥಾನ ಬೃಹನ್ಮಠ, ಮಳಲಿ ಸಂಸ್ಥಾನ ಮಠ, (ಮೊಕ್ಕಾಂ) ನೊಣಬೂರು ಅಂಚೆ, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ತಮದಡ್ಡಿ

ಮುದ್ದೇಬಿಹಾಳು ತಾಲ್ಲೂಕಿನ ತಮದಡ್ಡಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಮೂವತ್ತು ಕಿ.ಮೀ

ದೂರದಲ್ಲಿದೆ. ಇಲ್ಲಿ ಶ್ರೀ ಭದ್ರೇಶ್ವರ ಮಠವು ಅಸ್ತಿತ್ವದಲ್ಲಿದೆ.

ಭದ್ರೇಶ್ವರಮಠ: ತಮದಡ್ಡಿ ಗ್ರಾಮದ ಮಧ್ಯಭಾಗದಲ್ಲಿ ಕುಮಾರ ಸಮಯದ ವಿರಕ್ತ ಮಠವು ಸ್ಥಾಪನೆಯಾಗಿದೆ. ಈ ಮಠವು ಮಹಾರಾಷ್ಟ್ರದ ಅಕ್ಕಲಕೋಟೆ ತಾಲ್ಲೂಕಿನ ಹತ್ತಿಕಣಬಸ ಗ್ರಾಮದ ವಿರಕ್ತ ಮಠದ ಶಾಖಾಮಠವಾಗಿ ಸ್ಥಾಪನೆಯಾಗಿದೆ. ಶ್ರೀ ಭದ್ರೇಶ್ವರ ಶರಣರು ಇಲ್ಲಿ ನೆಲೆ ನಿಂತು ಅನೇಕ ವರ್ಷಗಳ ಕಾಲ ತಪೋನುಷ್ಠಾನ ಕೈಗೊಂಡಿದ್ದರು. ಶರಣರು ನೆಲೆಗೊಂಡಿದ್ದ ಸ್ಥಳದಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸಿ, ವೀರಶೈವ ಧರ್ಮವನ್ನು ಪ್ರಚಾರಗೊಳಿಸಿ ಲಿಂಗೈಕ್ಯರಾಗಿದ್ದಾರೆ. ಶ್ರೀ ಭದ್ರೇಶ್ವರ ಶರಣರು ಲಿಂಗೈಕ್ಯರಾದ ಮೇಲೆ ಇಲ್ಲಿನ ಭಕ್ತರು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದರು. ಇಂತಹ ಸ್ಥಳದಲ್ಲಿ ೧೯೭೮ ರಲ್ಲಿ ಹತ್ತಿಕಣಬಸ ಗ್ರಾಮದ ವಿರಕ್ತಮಠದ ಶ್ರೀ ಶಿವಶಂಕರ ಸ್ವಾಮಿಗಳು ಮಠವನ್ನು ಸ್ಥಾಪಿಸಿದ್ದಾರೆ.

ಗ್ರಾಮಸ್ಥರು ಮಠದ ಹಳೆಯ ಕಟ್ಟಡವನ್ನು ತೆಗೆಸಿ ಹೊಸ ಕಟ್ಟಡವನ್ನು ಸ್ಥಾಪಿಸಿದ್ದಾರೆ. ಇಲ್ಲಿ ಪ್ರತಿನಿತ್ಯ ಭಜನೆ ಕಾರ್ಯಕ್ರಮ ಹಾಗೂ ದಾಸೋಹ ಕಾರ್ಯಕ್ರಮಕ್ಕೆ ವ್ಯವಸ್ಥೆಗೊಳಿಸಿ, ಮಠವು ವಿಸ್ತಾರವಾಗಿ ಬೆಳೆಯಲು ಗುರುಗಳಿಗೆ ನೆರವಾಗಿದ್ದಾರೆ. ಶ್ರೀ ಶಿವಶಂಕರ ಸ್ವಾಮಿಗಳು ಸಿಂದಗಿ ತಾಲ್ಲೂಕಿನ ದೇವಣಗಾಂವ್‌ನ ಶ್ರೀ ಸಿದ್ಧರಾಮಯ್ಯ ಮತ್ತು ಶ್ರೀಮತಿಬಸಮ್ಮನವರ ಪುತ್ರರಾಗಿ ಜನಿಸಿ, ಮಹಾರಾಷ್ಟ್ರದ ಹತ್ತಿಕಣಬಸ ಗ್ರಾಮದ ವಿರಕ್ತಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದರು. ಇವರು ಆ ಮಠವನ್ನು ಬೆಳೆಸಿ ಇಲ್ಲಿ ಶಾಖಾಮಠವನ್ನು ಅಭಿವೃದ್ಧಿಗೆ ತಂದಿದ್ದಾರೆ. ನಾಲ್ಕುಲಕ್ಷರೂ ಯೋಜನೆಯಲ್ಲಿಮಠದ ಗರ್ಭಗುಡಿ, ಶಿವಪೂಜಾ ಮನೆ ಹಾಗೂ ಉಗ್ರಾಣ ಕೊಠಡಿ ಸ್ಥಾಪಿಸಿ ಮಠವನ್ನು ಅಗತ್ಯಕ್ಕನುಗುಣವಾಗಿ ವಿಸ್ತರಿಸಿಕೊಂಡಿದ್ದಾರೆ.

ಧಾರ್ಮಿಕ,ಶಿಕ್ಷಣ ಕಾರ್ಯಗಳು: ಶ್ರೀ ಶಿವಶಂಕರ ಸ್ವಾಮಿಗಳು ಇಲ್ಲಿ ಮಠವನ್ನು ಸ್ಥಾಪಿಸಿದ ಮೇಲೆ ನಿತ್ಯ ಎರಡೂ ವೇಳೆ ಪೂಜೆ, ಅಮಾವಾಸ್ಯೆಯಲ್ಲಿ ವಿಶೇಷ ಪೂಜೆ ಹಾಗೂ ಶ್ರಾವಣ ಮಾಸದಲ್ಲಿ ಪ್ರವಚನವನ್ನು ನಡೆಸಲಾಗುತ್ತಿದೆ. ಗ್ರಾಮದ ಯುವಕರು ಒಟ್ಟಿಗೆ ಸೇರಿ ಇಲ್ಲಿ ನಡೆಯುವ ಧಾರ್ಮಿಕ ಆಚರಣೆಗಳಲ್ಲಿ ಭಾಗಿಯಾಗಿ ಯಶಸ್ವಿಗೊಳಿಸುತ್ತಿದ್ದಾರೆ.

ಶ್ರೀ ಶಿವಶಂಕರ ಸ್ವಾಮಿಗಳು ಭದ್ರೇಶ್ವರ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿ (೧೯೮೫) ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದ್ದಾರೆ. ಗುರುಗಳು ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳ ಜೊತೆಗೆ ಶಿಕ್ಷಣ ಮತ್ತು ಸಾಹಿತ್ಯ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲು ಮುಂದಾಗಿದ್ದಾರೆ. ಗುರುಗಳು ಸುಮಾರು ಆರುನೂರು ಪುಸ್ತಕಗಳನ್ನು ಸಂಗ್ರಹಿಸಿದ್ದು, ವಿದ್ಯಾರ್ಥಿಗಳ ಹಾಗೂ ಗ್ರಾಮದ ಯುವಕರ ಕಲಿಕೆಗೆ ನೆರವಾಗಿದ್ದಾರೆ. ಮಠದಲ್ಲಿ ಉಚಿತ ಪ್ರಸಾದ ನಿಲಯವನ್ನು ಪ್ರಾರಂಭಿಸಲಾಗಿದೆ. ಪ್ರತಿದಿನ ವಿದ್ಯಾರ್ಥಿ ನಿಲಯದ ಮಕ್ಕಳಿಗೆ ರಾತ್ರಿವೇಳೆ ಪಾಠವನ್ನು ಹೇಳಿ ಕೊಡಲಾಗುತ್ತಿದೆ. ಗುರುಗಳು ದೇವಣಗಾಂವ್, ಹತ್ತಿಕಣಬಸ ವಿರಕ್ತಮಠ ಹಾಗೂ ಈ ಮಠಗಳ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು, ಸಮಾಜವನ್ನು ಬೆಳೆಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಶಿವಶಂಕರ ಸ್ವಾಮಿಗಳು, ಶ್ರೀ ಭದ್ರೇಶ್ವರಮಠ, ತಮದಡ್ಡಿ, ಮುದ್ದೇಬಿಹಾಳ ತಾ, ಬಿಜಾಪುರ ಜಿಲ್ಲೆ.

ತಾಳಿಕೋಟೆ

ಮುದ್ದೇಬಿಹಾಳು ತಾಲ್ಲೂಕಿನ ತಾಳಿಕೋಟೆ ಗ್ರಾಮವು ತಾಲ್ಲೂಕು ಕೇಂದ್ರದಿಂದ ಈಶಾನ್ಯಭಾಗಕ್ಕೆ ಇಪ್ಪತ್ತೈದು ಕಿ.ಮೀ ದೂರದಲ್ಲಿದೆ. ಈ ಪುರಾತನ ಪ್ರಸಿದ್ಧ ಗ್ರಾಮದಲ್ಲಿ ವೀರಶೈವ ಧರ್ಮವು ಪ್ರಬಲವಾಗಿ ಬೆಳೆದಿದೆ. ಇಲ್ಲಿ ಶ್ರೀಖಾಸಗತೇಶ್ವರ ವಿರಕ್ತಮಠ, ಗುಳೇದಗುಡ್ಡದ ಮುರುಘಾ ಮಠದ ಶಾಖಾಮಠವಾದ ಶ್ರೀ ಮುರುಘಾಮಠ ಶ್ರೀ ಹುಳಿಯಪ್ಪಯ್ಯನ ಮಠ, ಶ್ರೀ ಚರಂತಿಮಠ, ಶ್ರೀ ಗಚ್ಚಿನಮಠ, ಶ್ರೀ ಕೈಲಾಸಪೇಟೆಮಠ, ಶ್ರೀ ಹಿರೇಮಠ, ಶ್ರೀ ಶರಣರಮಠ, ಶ್ರೀ ಬಡಶೆಟ್ಟಿ ಹಾಳಮಠ ಎಂಬ ಒಂಬತ್ತು ಮಠಗಳು ಸ್ಥಾಪನೆಯಾಗಿವೆ. ಈ ಮಠಗಳು ವೀರಶೈವ ಧರ್ಮವನ್ನು ಬೆಳೆಸಿ ಸಮಾಜವನ್ನು ಧಾರ್ಮಿಕ ತಳಹದಿಯ ಮೇಲೆ ಬೆಳೆಸಿ, ತಮ್ಮದೇ ಆದಂತಹ ಕೊಡುಗೆಯನ್ನು ನೀಡಿವೆ.ಇವುಗಳಲ್ಲಿ ಈಗ ಶ್ರೀ ಖಾಸಗತೇಶ್ವರ ವಿರಕ್ತಮಠವು ಪ್ರಬಲವಾಗಿ ಬೆಳೆದಿದೆ.

ಖಾಸಗತೇಶ್ವರ ವಿರಕ್ತಮಠ: ತಾಳಿಕೋಟೆಯ ಮಧ್ಯಭಾಗದಲ್ಲಿ ಶ್ರೀ ಖಾಸಗತೇಶ್ವರ ವಿರಕ್ತಮಠವು ಸ್ಥಾಪನೆಯಾಗಿದೆ. ಶ್ರೀ

ಖಾಸಗತೇಶ್ವರ ಸ್ವಾಮಿಗಳು ಈ ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ಮಠವನ್ನು ಹೆಚ್ಚು ಪ್ರಚಾರಗೊಳಿಸಿ ಮಠವು ಪ್ರಸಿದ್ಧಗೊಳ್ಳಲು ಕಾರಣರಾದರು. ಅಲ್ಲದೆ ಇವರು ನಡೆಸಿದ ಪವಾಡಗಳಿಂದ ಭಕ್ತ ಸಮುದಾಯ ಅಭಿವೃದ್ಧಿಗೊಂಡಿತು. ಇವರು ಜನಮನದಲ್ಲಿ ಬೇರೂರಿ ಪರಂಪರೆಯ ವಿರಕ್ತಮಠವನ್ನು ಭಕ್ತರು ಶ್ರೀಖಾಸಗತೇಶ್ವರ ಗುರುಗಳ ಮೂಲಕ ಗುರುತಿಸ ತೊಡಗಿದರು. ಈ ಕಾರಣದಿಂದ ವಿರಕ್ತಮಠಕ್ಕೆ 'ಶ್ರೀ ಖಾಸಗತೇಶ್ವರ ವಿರಕ್ತಮಠ'ವೆಂದು ರೂಢಿಗತವಾಗಿ ಕರೆಯತೊಡಗಿದರು.

ಶ್ರೀ ಖಾಸಗತೇಶ್ವರ ವಿರಕ್ತಮಠವು ಶ್ರೀ ರುದ್ರಸ್ವಾಮಿಗಳಿಂದ ಸ್ಥಾಪನೆಗೊಂಡಿದೆ. ಸ್ಥಾಪಕ ಗುರುಗಳಾದ ಶ್ರೀ ರುದ್ರಸ್ವಾಮಿಗಳು ಲೋಕಸಂಚಾರ ಮಾಡುತ್ತಾ ಮುದ್ದೇಬಿಹಾಳಿನ ಹೊರವಲಯದ ದಟ್ಟ ಕಾಡಿನಲ್ಲಿ ಅನುಷ್ಠಾನಕ್ಕೆ ಕುಳಿತುಕೊಳ್ಳುತ್ತಾರೆ. ಗುರುಗಳು ತಪಸ್ಸನ್ನು ಆಚರಿಸುತ್ತಿದ್ದ ಸಂದರ್ಭದಲ್ಲಿ ಮುದ್ದೇಬಿಹಾಳದ ನಾಡ ಗೌಡನು ಬೇಟೆಗೆಂದು ಈ ಕಾಡಿಗೆ ಬಂದಿದ್ದನಂತೆ. ಈ ಬೇಟೆಯ ಸಂದರ್ಭದಲ್ಲಿ ಬಿಸಿಲಿನ ತಾಪದಿಂದ ಬಸವಳಿದ ನಾಡ ಗೌಡನಿಗೆ ಬಾಯಾರಿಕೆಯಾಗಿ ನೀರಿಗಾಗಿ ಪರಿತಪಿಸುತ್ತಾ ಬೇಟೆಯನ್ನು ಬಿಟ್ಟು ನೀರಿನ ಹುಡುಕಾಟಕ್ಕಾಗಿ ಮುಂದಾಗುತ್ತಾನೆ. ಈ ಸಂದರ್ಭದಲ್ಲಿ ಶ್ರೀ ರುದ್ರಸ್ವಾಮಿಗಳು ತಪಸ್ಸನ್ನು ಆಚರಿಸುವ ದೃಶ್ಯ ಗೋಚರವಾಗುತ್ತದೆ. ತಕ್ಷಣ ಗುರುಗಳ ಬಳಿ ಬಂದು ನಮಸ್ಕರಿಸಿ ನೀರಿಗಾಗಿ ಗೋಗರೆಯುತ್ತಾನೆ. ಆಗ ಗುರುಗಳು ಎಚ್ಚರಗೊಂಡು ತಮ್ಮ ಬಳಿಯಲ್ಲಿದ್ದ ಬೆತ್ತವನ್ನು ಒಗೆದು ಬೆತ್ತ ಬಿದ್ದ ಸ್ಥಳದಲ್ಲಿ ಮಣ್ಣನ್ನು ಕೆದರಿ ನೀರನ್ನು ಕುಡಿಯಲು ತಿಳಿಸುತ್ತಾರೆ. ಆಗ ನಾಡ ಗೌಡನು ಗುರುಗಳ ಅಪ್ಪಣೆಯಂತೆ ಬೆತ್ತ ಬಿದ್ದ ಸ್ಥಳಕ್ಕೆ ಹೋಗಿ ಮಣ್ಣನ್ನು ಕೆದರಿದಾಗ ನೀರು ಜಲ್ಲನೆ ಚಿಮ್ಮುತ್ತದೆ. ಆಗ ನಾಡಗೌಡನು ತನ್ನ ಬಾಯಾರಿಕೆಯನ್ನು ತೀರಿಸಿಕೊಂಡು ಗುರುಗಳ ಬಳಿ ಬಂದು ಆಶೀರ್ವಾದ ಪಡೆದು ಈ ಸ್ಥಳದಲ್ಲಿ ಮಠ ಕಟ್ಟಿಸಿಕೊಟ್ಟನೆಂದು ಹೇಳಲಾಗುತ್ತಿದೆ. ಅಂದು ಮುದ್ದೇಬಿಹಾಳದಲ್ಲಿ ಸ್ಥಾಪನೆಗೊಂಡ ಮಠ ನಾಡಿನ ನಾನಾ ಭಾಗಗಳಲ್ಲಿ ತನ್ನ ಶಾಖೆಗಳನ್ನು ಪ್ರಾರಂಭಿಸಿ ವಿಸ್ತಾರವಾಗಿ ಬೆಳೆಯಿತು. ಅಂದು ಶಾಖಾ ಮಠವಾಗಿ ತಾಳಿಕೋಟೆಯಲ್ಲಿ ಪ್ರಾರಂಭಗೊಂಡಿದ್ದ ವಿರಕ್ತ ಮಠವು ಇಂದು ಈ ಮಠವನ್ನೇ ಕೇಂದ್ರವಾಗಿಟ್ಟುಕೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ರುದ್ರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಶಿವಪೂಜೆಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ತೋಟದಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಗುರುಶಾಂತಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ವಿರಕ್ತಪ್ಪಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಪಂಚಾಕ್ಷರಿಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಭಿಕ್ಷೇಶ್ವರಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಶಾಂತಪ್ಪಸ್ವಾಮಿಗಳು
೯. ಶ್ರೀ ಮ.ನಿ.ಪ್ರ. ಶಿವಲಿಂಗಸ್ವಾಮಿಗಳು
೧೦. ಶ್ರೀ ಮ.ನಿ.ಪ್ರ. ಚನ್ನಬಸವಸ್ವಾಮಿಗಳು
೧೧. ಶ್ರೀ ಮ.ನಿ.ಪ್ರ. ಮುರುಘೇಂದ್ರಸ್ವಾಮಿಗಳು
೧೨. ಶ್ರೀ ಮ.ನಿ.ಪ್ರ. ಸಿದ್ಧಬಸವಸ್ವಾಮಿಗಳು
೧೩. ಶ್ರೀ ಮ.ನಿ.ಪ್ರ. ಖಾಸಗತಸ್ವಾಮಿಗಳು
೧೪. ಶ್ರೀ ಮ.ನಿ.ಪ್ರ. ಶಿವಬಸವಸ್ವಾಮಿಗಳು
೧೫. ಶ್ರೀ ಮ.ನಿ.ಪ್ರ. ವಿರಕ್ತಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಮಠದ ಪರಂಪರೆಯ ಎಲ್ಲಾ ಗುರುಗಳು ತಪೋನಿಷ್ಠರಾಗಿ ಸಮಷ್ಟಿ ಸಮಾಜದ ಅಭ್ಯುದಯಕ್ಕೆ ಶ್ರಮಿಸಿದವರಾಗಿದ್ದಾರೆ. ಮಠದ ಪರಂಪರೆಯ ಹದಿಮೂರನೆಯ ಗುರುಗಳಾಗಿ ಅಧಿಕಾರಕ್ಕೆ ಬಂದ ಶ್ರೀ ಖಾಸ ಗತೇಶ್ವರ ಸ್ವಾಮಿಗಳು ಬಾಗಲಕೋಟೆ ತಾಲ್ಲೂಕಿನ ಶಿರೂರು ಗ್ರಾಮದಲ್ಲಿ ಶ್ರೀ ಸಂಗಯ್ಯ ಮತ್ತು ಶ್ರೀಮತಿ

ನೀಲಮ್ಮನವರ ಪುತ್ರರಾಗಿ ಜನಿಸಿದರು. ವಿರಕ್ತಯ್ಯನೆಂಬ ಹೆಸರಿನಲ್ಲಿ ಬೆಳೆದ ಗುರುಗಳು ವೀರಶೈವ ಸಂಪ್ರದಾಯಕ್ಕನುಗುಣವಾಗಿ ತಮ್ಮ ಬದುಕನ್ನು ರೂಪಿಸಿಕೊಂಡು, ಬಾಲ್ಯದಲ್ಲೇ ಧಾರ್ಮಿಕ ಸಂಸ್ಕಾರವನ್ನು ಪಡೆದು ಬೆಳೆದರು. ಇವರನ್ನು ಶಿರೂರಿನಿಂದ ತಾಳಿಕೋಟೆ ವಿರಕ್ತ ಮಠದ ಉತ್ತರಾಧಿಕಾರಿಗಳನ್ನಾಗಿ ನೇಮಿಸಲಾಯಿತು. ಗುರುಗಳು ಶಿವಪೂಜಾನಿಷ್ಠೆ, ಶಿವಯೋಗ ಹಾಗೂ ಹಠಯೋಗಗಳಲ್ಲಿ ಸಾಧನೆಯನ್ನು ಸಾಧಿಸಿದರು. ಶ್ರೀ ವಿರಕ್ತಯ್ಯನವರು ಹುಬ್ಬಳ್ಳಿಯ ಸಿದ್ಧಾರೂಢರ ಒಡನಾಟದಲ್ಲಿ ಕೆಲವು ದಿನ ಬೆಳೆದು ಸಿದ್ಧಾರೂಢ ಗುರುಗಳಿಂದ ಖಾಸಗತ (ತನ್ನಷ್ಟಕ್ಕೆ ತಾನೇ ಆತ್ಮ ಜ್ಞಾನವನ್ನು ಪಡೆದವನು) ಎಂಬ ಅಭಿದಾನ ಪಡೆದರು. ಇವರು ನಾಡಿನ ಅನೇಕ ಹರಗುರು ಚರಮೂರ್ತಿಗಳ ಸಂಪರ್ಕದಿಂದ ಆಧ್ಯಾತ್ಮದ ಅನುಭವವನ್ನು ಹೆಚ್ಚಿಸಿಕೊಂಡರು. ಗುರುಗಳು ಆಧ್ಯಾತ್ಮದ ಚಿಂತನೆಯ ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಗಮನಕೊಟ್ಟು ನಾಟಕ ಪ್ರಯೋಗಗಳನ್ನು ಮಾಡಿ ರಂಗಕಲೆಗೆ ಹೆಚ್ಚು ಪ್ರೋತ್ಸಾಹ ನೀಡಿದರು. ಶ್ರೀ ಖಾಸಗತೇಶ್ವರರು ಬಡವರು, ದೀನದಲಿತರ ಬಗ್ಗೆ ಅಪಾರ ಕಾಳಜಿಯನ್ನು ಇಟ್ಟುಕೊಂಡು ಜಾತಿ, ಬೇಧವಿಲ್ಲದೆ ಎಲ್ಲರನ್ನೂ ಸಮಾನವಾಗಿ ಸತ್ಕರಿಸಿ, ಅವರ ಅಭ್ಯುದಯಕ್ಕೆ ಕಾರಣಕರ್ತರಾದರು. ಗುರುಗಳು ನಾಡಿನ ಶರಣ ಕ್ಷೇತ್ರಗಳನ್ನು ಸಂದರ್ಶಿಸಿದ್ದಲ್ಲದೆ ಕಾಶಿಯಾತ್ರೆಯನ್ನು ಮಾಡಿ ಲೋಕ ಜ್ಞಾನವನ್ನು ಗಳಿಸಿಕೊಂಡರು. ಗುರುಗಳು ತಮ್ಮ ಅನುಭವದ ಹಿನ್ನಲೆಯಲ್ಲಿ ಸಮಾಜವನ್ನು ಗಟ್ಟಿಯಾಗಿ ಬೆಳೆಸಿದರು. ಗುರುಗಳು ಕೈಗೊಂಡ ಎಲ್ಲಾ ಕಾರ್ಯಗಳು ಸಮಾಜದ ಅಭಿವೃದ್ಧಿಗೆ ಪೂರಕವಾದವು. ಗುರುಗಳು ತಮ್ಮ ಕಾಲದಲ್ಲಿ ಅನೇಕ ಪವಾಡಗಳನ್ನು ಮಾಡಿ ಹೆಚ್ಚು ಹೆಸರು ಗಳಿಸಿ ಕ್ರಿ.ಶ.೧೯೮೬ ರಲ್ಲಿ ಲಿಂಗೈಕ್ಯರಾದರು.

ವಂಶ ಪರಂಪರೆ: ಶ್ರೀ ಖಾಸಗತೇಶ್ವರ ಸ್ವಾಮಿಗಳು ಲಿಂಗೈಕ್ಯರಾಗುವ ಮೊದಲು ಈ ಮಠದ ಪರಂಪರೆ ವಂಶಾವಳಿಯಲ್ಲಿ ಬೆಳೆಯಬೇಕು ಎಂದು ಆಶೀರ್ವದಿಸಿ, ತಮ್ಮ ಸಹೋದರ ಸಂಬಂಧಿ ಶ್ರೀ ಶಿವಬಸವ ಸ್ವಾಮಿಗಳನ್ನು ಉತ್ತರಾಧಿಕಾರಿಯನ್ನಾಗಿ ನೇಮಿಸುವಂತೆ ಅಪ್ಪಣೆ ಮಾಡಿದ್ದರು. ಗುರುಗಳ ಅಪ್ಪಣೆಯಂತೆ ಮಠದ ಪರಂಪರೆಯಲ್ಲಿ ಈಗಲೂ ಶಿರೂರು ಹಿರೇಮಠದ ವಂಶಸ್ಥರೇ ಈ ಮಠಕ್ಕೆ ಉತ್ತರಾಧಿಕಾರಿಗಳಾಗುತ್ತಾ ಮಠವನ್ನು ಮುನ್ನಡೆಸಿದ್ದಾರೆ. ಈಗಿನ ಮಠಾಧ್ಯಕ್ಷರಾದ ಶ್ರೀ ವಿರಕ್ತಸ್ವಾಮಿಗಳು ತಪೋ ನಿಷ್ಠರಾಗಿ ವೀರಶೈವ ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಿಕೊಂಡು ಧರ್ಮ, ಯೋಗ ಹಾಗೂ ಜ್ಞಾನವನ್ನು ಸಮೀಕರಿಸಿ ತಮ್ಮ ಆಧ್ಯಾತ್ಮ ಜ್ಞಾನದಿಂದ ಮಠವನ್ನು ಹಾಗೂ ಸಮಾಜವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ತಾಳಿಕೋಟೆಯ ಖಾಸಗತೇಶ್ವರ ವಿರಕ್ತಮಠವು ಈಗಿನ ಶ್ರೀ ವಿರಕ್ತ ಸ್ವಾಮಿಗಳಿಂದ ಹೆಚ್ಚು ಅಭಿವೃದ್ಧಿಗೊಂಡಿದೆ. ಇವರು ಮೂಲ ಮಠದ ಕಟ್ಟಡವನ್ನು ವಿಸ್ತಾರಗೊಳಿಸಿ ಕೆತ್ತನೆಯ ಕಲ್ಲುಗಳಿಂದ ನವೀಕರಿಸಿ, ಪುರಾತನ ಮಠಕ್ಕೆ ಭವ್ಯತೆಯನ್ನು ತಂದುಕೊಟ್ಟಿದ್ದಾರೆ. ಗುರುಗಳು ಅಧಿಕಾರಕ್ಕೆ ಬಂದ ಮೇಲೆ ಮಠದಲ್ಲಿ ಸ್ಥಾಪನೆಯಾದ ಪೂರ್ವ ಗದ್ದುಗೆಗಳನ್ನು ನವೀಕರಣಗೊಳಿಸಿ ಮಂಟಪವನ್ನು ಸ್ಥಾಪಿಸಿದ್ದಾರೆ. ದಾಸೋಹ ಮಂದಿರ ಹಾಗೂ ವಸತಿ ಗೃಹಗಳನ್ನು ನಿರ್ಮಿಸಿದ್ದಾರೆ. ಗುರುಗಳು ತಮ್ಮ ಅಧೀನದ ಶಾಖಾಮಠಗಳನ್ನು ಅಭಿವೃದ್ಧಿಪಡಿಸಿರುವುದಲ್ಲದೆ, ಮಠದಆಸ್ತಿಯನ್ನು ವಿಸ್ತರಿಸಿ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ಮಠದ ವತಿಯಿಂದ ಚಿತ್ರಮಂದಿರವನ್ನು ನಿರ್ಮಿಸಿದ್ದಾರೆ. ಶಿಕ್ಷಣ ಸಂಸ್ಥೆಗಳ ಸಮುಚ್ಛಯವನ್ನು ಅತ್ಯಾಧುನಿಕವಾಗಿ ನಿರ್ಮಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಶ್ರೀ ಖಾಸಗತೇಶ್ವರ ಸ್ವಾಮಿಗಳ ಗದ್ದುಗೆಗೆ ನಿತ್ಯ ಬೆಳಿಗ್ಗೆ ರುದ್ರಾಭಿಷೇಕದ ಪೂಜೆ ಹಾಗೂ ಮಧ್ಯಾಹ್ನ ಮತ್ತು ಸಂಜೆ ಸಾಮಾನ್ಯ ಪೂಜೆಯನ್ನು ನಡೆಸಲಾಗುತ್ತಿದೆ. ಅಮಾವಾಸ್ಯೆಯಲ್ಲಿ ಶಿವಾನುಭವಗೋಷ್ಠಿಯನ್ನು ನಡೆಸಲಾಗುತ್ತಿದೆ. ಶ್ರಾವಣ ಮಾಸದಲ್ಲಿ ಪುರಾಣ ಪ್ರವಚನ, ಕಾರ್ತೀಕ ಮಾಸದಲ್ಲಿ ಕಾರ್ತೀಕೋತ್ಸವ ಹಾಗೂ ಜುಲೈತಿಂಗಳಿನಲ್ಲಿ ಶ್ರೀ ಖಾಸಗತೇಶ್ವ ರರ ಜಾತ್ರೆಯನ್ನು ನಡೆಸಲಾಗುತ್ತಿದೆ. ಮಠದಲ್ಲಿ ನಿತ್ಯ ಅನ್ನ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.

ಶೈಕ್ಷಣಿಕ ಕಾರ್ಯಗಳು: ಶ್ರೀ ವಿರಕ್ತ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠವು ಧಾರ್ಮಿಕವಾಗಿ ಮತ್ತು ಸಾಮಾಜಿಕವಾಗಿ ಹೆಚ್ಚು ಹೆಸರು ಮಾಡಿತು. ಅಲ್ಲದೆ ಶೈಕ್ಷಣಿಕವಾಗಿಯೂ ತನ್ನನ್ನು ತೊಡಗಿಸಿಕೊಂಡ ಮಠವು ಶ್ರೀ ಖಾಸಗತೇಶ್ವರ ವಿದ್ಯಾ ಸಂಸ್ಥೆಯನ್ನು ಪ್ರಾರಂಭಿಸಿ ಶ್ರೀ ಖಾಸಗತೇಶ್ವರ ಪ್ರೌಢಶಾಲೆ, ಪದವಿ ಪೂರ್ವ ಕಾಲೇಜುಗಳು, ಪದವಿ ಕಾಲೇಜು ಹಾಗೂ ಕೈಗಾರಿಕಾ ತರಬೇತಿ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ಗ್ರಾಮದ ಹೊರ ಭಾಗದಲ್ಲಿ ಸ್ಥಾಪನೆಗೊಂಡಿರುವ ಶಿಕ್ಷಣ

ಸಮುಚ್ಛಯವು ಈ ಭಾಗದ ಜ್ಞಾನಕೇಂದ್ರವಾಗಿ ರೂಪುಗೊಂಡಿದೆ.

ವಿಳಾಸ: ಶ್ರೀ ಮ.ನಿ.ಪ್ರ.ವಿರಕ್ತ ಸ್ವಾಮಿಗಳು, ಶ್ರೀ ಖಾಸಗತೇಶ್ವರ ಮಠ, ತಾಳಿಕೋಟೆ, ಮುದ್ದೇಬಿಹಾಳು ತಾ, ಬಿಜಾಪುರ ಜಿಲ್ಲೆ.
ಆಧಾರ: 'ಶ್ರೀ ಖಾಸಗತ ಶಿವಯೋಗಿಗಳ ಜೀವನ ಚರಿತ್ರೆ,' ಲೇಖಕರು: ಶ್ರೀ ಶಿವಲಿಂಗಪ್ಪ ಮಲ್ಲಿಕಾರ್ಜುನಪ್ಪ ಯಡ್ರಾಮಿ.

ನಾವದಗಿ

ಮುದ್ದೇಬಿಹಾಳ ತಾಲ್ಲೂಕಿನ ನಾವದಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಇಪ್ಪತ್ತೆರೆಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ನಾವದಗಿ ಗ್ರಾಮದಲ್ಲಿ ಉಜ್ಜಯಿನಿ ಪೀಠದ ಶಾಖಾಮಠವಾದ, ಪುತ್ರವರ್ಗದ ಪರಂಪರೆಯ ಶ್ರೀ ಹಿರೇಮಠವು ಕ್ರಿ.ಶ.೧೧೭೦ ರ ಸುಮಾರಿನಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಶ್ರೀ ಜಾತಒಡೆಯ ಶಿವಾಚಾರ್ಯ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿದ್ದಾರೆ. ಶ್ರೀ ಜಾತಒಡೆಯ ಶಿವಾಚಾರ್ಯ ಸ್ವಾಮಿಗಳು ಲೋಕಸಂಚಾರದಲ್ಲಿದ್ದ ಸಂದರ್ಭದಲ್ಲಿ ಮುದ್ದೇಬಿಹಾಳ ತಾಲ್ಲೂಕಿನ ಗುಂಡಕನಾಳು, ಸೋಮನಾಳು, ಸುರಪುರ ತಾಲ್ಲೂಕಿನ ಸತ್ಯಂಪೇಟೆ, ಯಾದಗಿರಿ ತಾಲ್ಲೂಕಿನ ಕಾಳೆಬೆಳಗುಂದಿ, ಜೇವರಗಿ ತಾಲ್ಲೂಕಿನ ಜೈನಾಪುರ ಮುಂತಾದ ಕಡೆಗಳಲ್ಲಿ ನೆಲೆಗೊಂಡು ಮಠಗಳನ್ನು ಸ್ಥಾಪಿಸಿದ್ದಾರೆ. ಈ ಎಲ್ಲಾ ಮಠಗಳಿಗೆ ಮೂಲಮಠವಾಗಿ ನಾವದಗಿ ಮಠವು ಸ್ಥಾಪನೆಗೊಂಡಿತು. ಕರ್ತೃಗುರುಗಳು ಇಲ್ಲಿ ನೆಲೆಗೊಂಡು ಮಠವನ್ನು ಅಭಿವೃದ್ಧಿಪಡಿಸಿ, ವೀರಶೈವ ಧರ್ಮ ಹೆಚ್ಚು ಪ್ರಚಾರಗೊಳ್ಳುವಂತೆ ಮಾಡಿದರು.

ಪರಂಪರೆ:

೧. ಷ.ಬ್ರ.ಶ್ರೀ ಜಾತಒಡೆಯ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಶಿವಜಾತ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಗುರುಸಿದ್ಧ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ರೇಣುಕ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಮರುಳಸಿದ್ಧ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಗುರುಸಿದ್ಧ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಮಲೆಶಾಂತ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ಜಡೆಶಾಂತ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೧೦. ಷ.ಬ್ರ.ಶ್ರೀ ಚರಲಿಂಗ ಶಿವಾಚಾರ್ಯಸ್ವಾಮಿಗಳು
೧೧. ಷ.ಬ್ರ.ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು
೧೨. ಷ.ಬ್ರ.ಶ್ರೀ ಮಹಾಲಿಂಗ ಶಿವಾಚಾರ್ಯಸ್ವಾಮಿಗಳು
೧೩. ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯಸ್ವಾಮಿಗಳು
೧೪. ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯಸ್ವಾಮಿಗಳು
೧೫. ಷ.ಬ್ರ.ಶ್ರೀ ಚನ್ನಸಂಗ ಶಿವಾಚಾರ್ಯಸ್ವಾಮಿಗಳು
೧೬. ಷ.ಬ್ರ.ಶ್ರೀ ಮಳೆದೇವ ಶಿವಾಚಾರ್ಯಸ್ವಾಮಿಗಳು
೧೭. ಷ.ಬ್ರ.ಶ್ರೀ ಶ್ರೀಲಿಂಗ ಶಿವಾಚಾರ್ಯಸ್ವಾಮಿಗಳು
೧೮. ಷ.ಬ್ರ.ಶ್ರೀ ವೃಷಭ ಶಿವಾಚಾರ್ಯಸ್ವಾಮಿಗಳು
೧೯. ಷ.ಬ್ರ.ಶ್ರೀ ಘನಲಿಂಗ ಶಿವಾಚಾರ್ಯಸ್ವಾಮಿಗಳು
೨೦. ಷ.ಬ್ರ.ಶ್ರೀ ಸಿದ್ಧವೃಷಭ ಶಿವಾಚಾರ್ಯಸ್ವಾಮಿಗಳು
೨೧. ಷ.ಬ್ರ.ಶ್ರೀ ಬೇಳೆವೃಷಭ ಶಿವಾಚಾರ್ಯಸ್ವಾಮಿಗಳು

೨೨. ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯಸ್ವಾಮಿಗಳು
೨೩. ಷ.ಬ್ರ.ಶ್ರೀ ಸಿದ್ಧವೀರ ಶಿವಾಚಾರ್ಯಸ್ವಾಮಿಗಳು
೨೪. ಷ.ಬ್ರ.ಶ್ರೀ ವೃಷಭಲಿಂಗ ಶಿವಾಚಾರ್ಯಸ್ವಾಮಿಗಳು
೨೫. ಷ.ಬ್ರ.ಶ್ರೀ ಶಿವಯೋಗಿ ಶಿವಾಚಾರ್ಯಸ್ವಾಮಿಗಳು
೨೬. ಷ.ಬ್ರ.ಶ್ರೀ ಶಂಕರ ಶಿವಾಚಾರ್ಯಸ್ವಾಮಿಗಳು
೨೭. ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯಸ್ವಾಮಿಗಳು
೨೮. ಷ.ಬ್ರ.ಶ್ರೀ ಶಿವಯೋಗಿ ಶಿವಾಚಾರ್ಯಸ್ವಾಮಿಗಳು
೨೯. ಷ.ಬ್ರ.ಶ್ರೀ ಗುರುಸಿದ್ಧ ಶಿವಾಚಾರ್ಯಸ್ವಾಮಿಗಳು
೩೦. ಷ.ಬ್ರ.ಶ್ರೀ ವೃಷಭಲಿಂಗ ಶಿವಾಚಾರ್ಯಸ್ವಾಮಿಗಳು
೩೧. ಷ.ಬ್ರ.ಶ್ರೀ ಪರ್ವತೇಶ್ವರ ಶಿವಾಚಾರ್ಯಸ್ವಾಮಿಗಳು
೩೨. ಷ.ಬ್ರ.ಶ್ರೀ ಬಸವ ರಾಜೇಂದ್ರಒಡೆಯರು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಶಿವಜಾತ ಶಿವಾಚಾರ್ಯ ಸ್ವಾಮಿಗಳು ಮಹಾಪವಾಡ ಪುರುಷರಾಗಿ, ಪುರಾಣ ಪ್ರಸಿದ್ಧ ವ್ಯಕ್ತಿಗಳಾಗಿ ಬೆಳೆದಿದ್ದರು. ಮಹಾ ತಪೋಜ್ಞಾನಿಗಳಾದ ಇವರು ಅನೇಕ ಕ್ಷೇತ್ರಗಳಲ್ಲಿ ನೆಲೆಗೊಂಡು ದೀರ್ಘ ತಪಸ್ಸನ್ನು ಆಚರಿಸಿ ಯೋಗಸಿದ್ಧಿಯನ್ನು ಸಂಪಾದಿಸಿಕೊಂಡಿದ್ದರು. ಇವರು ಲೋಕ ಸಂಚಾರ ಮಾಡುತ್ತಾ, ನಾವದಗಿ ಗ್ರಾಮಕ್ಕೆ ಬಂದು ಶ್ರೀ ಜಾತಒಡೆಯ ಶಿವಾಚಾರ್ಯ ಸ್ವಾಮಿಗಳಿಂದ ಅನುಗ್ರಹ ಪಡೆದು ಪಟ್ಟಾಧಿಕಾರಕ್ಕೆ ಬಂದರು. ಇವರ ಕಾಲದಲ್ಲಿ ಮಠವು ವಿಸ್ತಾರವಾಗಿ ಬೆಳೆದು ಆಚಾರ್ಯರ ವೀರಶೈವ ಸಿದ್ಧಾಂತವನ್ನು ಬೆಳೆಸಿ, ಸಮಾಜವನ್ನು ಉದ್ಧರಿಸಿದರು. ಇವರ ನಂತರ ಅಧಿಕಾರಕ್ಕೆ ಬಂದ ಬಹುತೇಕ ಗುರುಗಳ ಬಗ್ಗೆ ಹೆಚ್ಚು ಮಾಹಿತಿ ಲಭ್ಯವಿಲ್ಲ. ಪರಂಪರೆಯ ಇಪ್ಪತ್ತೇಳನೆಯ ಗುರುಗಳಾದ ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು ಕ್ರಿ.ಶ.೧೬೮೫ ರ ಸುಮಾರಿನಲ್ಲಿ ಮಠದ ಆಡಳಿತವನ್ನು ನಡೆಸಿದ್ದಾರೆ. ಇವರು ವೀರಶೈವ ಧರ್ಮವನ್ನು ಪ್ರಚಾರಪಡಿಸಿ ಸಂಸ್ಕಾರವಂತ ಸಮಾಜವನ್ನು ರೂಪಿಸಿದರು. ಇವರು ಜೀವಂತ ಸಮಾಧಿಯಾದ ಮೇಲೆ ಶ್ರೀ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಮುನ್ನಡೆಸಿದರು. ನಂತರ ಮೂವತ್ತೊಂದನೆಯ ಪಟ್ಟಾಧಿಕಾರಿಗಳಾಗಿ ಅಧಿಕಾರಕ್ಕೆ ಬಂದ ಶ್ರೀ ಪರ್ವತೇಶ್ವರ ಶಿವಾಚಾರ್ಯ ಸ್ವಾಮಿಗಳು ೧೦೩ ವರ್ಷಗಳ ಕಾಲ ಬದುಕಿ ಮಠವನ್ನು ಅಭಿವೃದ್ಧಿಪಡಿಸಿ ಮೇ ನಾಲ್ಕರ ೨೦೦೦ ದಂದು ಲಿಂಗೈಕ್ಯರಾದರು.

ಗುರುಗಳು ಲಿಂಗೈಕ್ಯರಾದ ನಂತರ ಶ್ರೀ ಕರಿಬಸವಯ್ಯ ಶಿವಯೋಗಯ್ಯ ಹಿರೇಮಠ ಮತ್ತು ಶ್ರೀಮತಿ ಪಾರ್ವತಮ್ಮ ನವರ ಪುತ್ರರಾಗಿ ೧೯೮೯ ರಲ್ಲಿ ಜನಿಸಿದ ಶ್ರೀ ರಾಜೇಂದ್ರ ಒಡೆಯರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ. ಹನ್ನೊಂದು ವರ್ಷದ ಬಾಲಕರಾದ ಉತ್ತರಾಧಿಕಾರಿಯು ಬಿದಕುಂದಿ ಶಿವಯೋಗಾಶ್ರಮದಲ್ಲಿ ವಿದ್ಯಾಭ್ಯಾಸದಲ್ಲಿ ತೊಡಗಿದ್ದು, ವಿದ್ಯಾಭ್ಯಾಸ ಮುಗಿದ ಮೇಲೆ ಪಟ್ಟಾಧಿಕಾರವನ್ನು ಮಾಡಲಾಗುತ್ತದೆ ಎಂದು ಮಠದ ವಂಶಸ್ಥರಾದ ಡಾ. ಗುರುಲಿಂಗಯ್ಯ ಶಿವಯೋಗಯ್ಯ ಹಿರೇಮಠ ಇವರು ಅಭಿಪ್ರಾಯಿಸುತ್ತಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ಪೂಜೆ, ಅಕ್ಷಯ ತದಿಗೆಯಂದು ಹಿರಿಯ ಗುರುಗಳಾದ ಶ್ರೀ ಪರ್ವತ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆಯನ್ನು ಆಚರಿಸಲಾಗುತ್ತಿದೆ. ಮಠದ ವತಿಯಿಂದ ಮಹಾ ಶಿವಶರಣ ಬಿಲ್ಲಮ ರಾಜನ ಪುರಾಣವನ್ನು ಬರೆಸಿ ಪ್ರಕಟಿಸಲಾಗಿದೆ. ಅಲ್ಲದೆ ನಾವದಗಿ ಹಿರೇಮಠದ ಗುರು ಪರಂಪರೆಯನ್ನು ಪ್ರಕಟಿಸಿ ಧಾರ್ಮಿಕ ವಿಚಾರಗಳು ಬೆಳಕು ಕಾಣುವಂತೆ ಮಾಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಬಸವರಾಜೇಂದ್ರ ಒಡೆಯರ್ ದೇವರು, ಶ್ರೀ ಹಿರೇಮಠ, ನಾವದಗಿ, ಮುದ್ದೇಬಿಹಾಳು ತಾ, ಬಿಜಾಪುರ ಜಿಲ್ಲೆ.
ಆಧಾರ: 'ನಾವದಗಿ ಹಿರೇಮಠದ ಗುರುಪರಂಪರೆ ', ಲೇಖಕರು : ಗುರುಕವಿ ಷ.ಬ್ರ.ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು

ಬಳಗಾನೂರು

ಮುದ್ದೇಬಿಹಾಳ ತಾಲ್ಲೂಕಿನ ಬಳಗಾನೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಮೂವತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಶಿವಯೋಗಾಶ್ರಮವು (ವಿರಕ್ತಮಠ) ಅಸ್ತಿತ್ವದಲ್ಲಿದೆ.

ಶಿವಯೋಗಾಶ್ರಮ (ವಿರಕ್ತಮಠ): ಬಳಗಾನೂರು ಗ್ರಾಮದಲ್ಲಿ ಕುಮಾರ ಸಮಯದ ಶ್ರೀ ಶಿವಯೋಗಾಶ್ರಮವು (ವಿರಕ್ತಮಠ) ಕ್ರಿ.ಶ.೧೯೯೯ ರಲ್ಲಿ ಸ್ಥಾಪನೆಯಾಗಿದೆ. ಶ್ರೀ ಶಂಭುಲಿಂಗ ಸ್ವಾಮಿಗಳು ಗ್ರಾಮದ ಉತ್ತರದ ಹೊರಭಾಗದಲ್ಲಿ ಈ ಮಠವನ್ನು ಸ್ಥಾಪಿಸಿದ್ದಾರೆ.

ಶ್ರೀ ಶಂಭುಲಿಂಗ ಸ್ವಾಮಿಗಳು ತಾಳಿಕೋಟೆಯ ಶ್ರೀ ಮಲ್ಲಿಕಾರ್ಜುನಯ್ಯ ಮತ್ತು ಶ್ರೀಮತಿ ಶರಣಮ್ಮನವರ ಪುತ್ರರಾಗಿ ಜನಿಸಿದರು. ಇವರು ಗದಗದ ಶ್ರೀ ವೀರೇಶಾಶ್ರಮದಲ್ಲಿ ಸಂಗೀತ ಹಾಗೂ ಪುರಾಣ ಪ್ರವಚನದ ಕಲೆಯನ್ನು ಕಲಿತು, ನಾಡಿನ ನಾನಾ ಭಾಗಗಳಲ್ಲಿ ಪುರಾಣ ಪ್ರವಚನವನ್ನು ಮಾಡುವ ಮೂಲಕ ಧರ್ಮಪ್ರಸಾರವನ್ನು ಕೈಗೊಂಡಿದ್ದಾರೆ. ವೀರಶೈವ ಧರ್ಮ ಪ್ರಚಾರದ ಉದ್ದೇಶವನ್ನು ಇಟ್ಟುಕೊಂಡು ಬಳಗಾನೂರು ಗ್ರಾಮದಲ್ಲಿ ನಾಲ್ಕುಎಕರೆ ಜಮೀನನ್ನು ಖರೀದಿಸಿ, ನೂತನ ಕಟ್ಟಡವನ್ನು ನಿರ್ಮಿಸಿ ಮಠವನ್ನು ಸ್ಥಾಪನೆ ಮಾಡಿದ್ದಾರೆ.

ವಿಳಾಸ: ಶ್ರೀ ಶಂಭುಲಿಂಗಸ್ವಾಮಿಗಳು, ಶ್ರೀಶಿವಯೋಗಾಶ್ರಮ(ವಿರಕ್ತಮಠ), ಬಳಗಾನೂರು, ಮುದ್ದೇಬಿಹಾಳ ತಾ, ಬಿಜಾಪುರಜಿಲ್ಲೆ.

ಬೊಮ್ಮನಹಳ್ಳಿ

ಮುದ್ದೇಬಿಹಾಳು ತಾಲ್ಲೂಕಿನ ಬೊಮ್ಮನಹಳ್ಳಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಇಪ್ಪತ್ತೊಂಬತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಶಾಂತಲಿಂಗೇಶ್ವರ ಕಡಗಂಚಿಮಠವು ಅಸ್ತಿತ್ವದಲ್ಲಿದೆ.

ಶಾಂತಲಿಂಗೇಶ್ವರ ಕಡಗಂಚಿಮಠ: ಬೊಮ್ಮನಹಳ್ಳಿ ಗ್ರಾಮದ ಹೊರ ಭಾಗದಲ್ಲಿ ಶ್ರೀ ಶಾಂತಲಿಂಗೇಶ್ವರ ಕಡಗಂಚಿಮಠವು ಸ್ಥಾಪನೆಯಾಗಿದೆ. ಈ ಮಠವು ಕಡಗಂಚಿಯ ಶ್ರೀ ಶಾಂತಲಿಂಗೇಶ್ವರ ಮಠದ ಶಾಖಾ ಮಠವಾಗಿ ಬೆಳೆದು ಬಂದಿದೆ.

ಶ್ರೀ ಶಾಂತಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು ಲೋಕ ಸಂಚಾರ ಕೈಗೊಂಡು, ಹೊಳೆಯ ದಡದಲ್ಲಿ ಗವಿಗಳಿಂದ ಆವೃತಗೊಂಡ ಪ್ರದೇಶದಲ್ಲಿ ತಪಸ್ಸಿಗೆ ಕುಳಿತು ಈ ಸ್ಥಳವನ್ನು ಜಾಗ್ರತ ಸ್ಥಳವನ್ನಾಗಿ ಮಾಡಿದ್ದಾರೆ. ಶ್ರೀ ಶಾಂತಲಿಂಗೇಶ್ವರರು ಅನುಷ್ಠಾನಗೊಂಡು ಹೋದ ಮೇಲೆ ಇಲ್ಲಿ ಮಠವು ಸ್ಥಾಪನೆಯಾಗಿ ಬೆಳೆಯಿತು. ಈ ಮಠದ ಗುರುಗಳೊಬ್ಬರು (ಹೆಸರು ಲಭ್ಯವಿಲ್ಲ) ಇಲ್ಲಿ ನೆಲೆಸಿ ೧೯೫೯ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ಗದ್ದುಗೆಯನ್ನು ಸ್ಥಾಪಿಸಿದ್ದು ಈಗ ಪೂಜಾ ಕಾರ್ಯವನ್ನು ನಡೆಸಿಕೊಂಡು ಬರಲಾಗುತ್ತಿದೆ. ಈಗ ಶ್ರೀ ಶಾಂತಯ್ಯ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಲಾಗಿದೆ.

ವಿಳಾಸ: ಷ.ಬ್ರ.ಶ್ರೀ ಶಾಂತಯ್ಯದೇವರು, ಶ್ರೀ ಶಾಂತಲಿಂಗೇಶ್ವರಕಡಗಂಚಿಮಠ,ಬೊಮ್ಮನಹಳ್ಳಿ,ಮುದ್ದೇಬಿಹಾಳು ತಾ, ಬಿಜಾಪುರಜಿಲ್ಲೆ.

ಮಡಕೆಶಿರೂರು-ಬಿದರಕುಂದಿ

ಮುದ್ದೇಬಿಹಾಳ ತಾಲ್ಲೂಕಿನ ಬಿದರಕುಂದಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಮೂರು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಶಿವಯೋಗಾಶ್ರಮವು ಅಸ್ತಿತ್ವದಲ್ಲಿದೆ.

ಶಿವಯೋಗಾಶ್ರಮ: ಬಿದರಕುಂದಿ ಗ್ರಾಮದ ಹೊರಭಾಗದಲ್ಲಿ ಶ್ರೀ ಶಿವಯೋಗಾಶ್ರಮವು ಸ್ಥಾಪನೆಯಾಗಿ, ಧಾರ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯಿಕವಾಗಿ ಪ್ರಖ್ಯಾತಗೊಂಡಿದೆ. ೧೯೯೦ ರಲ್ಲಿ ಶ್ರೀ ಶಿವಕುಮಾರ ಸ್ವಾಮಿಗಳು ಭವ್ಯವಾದ ಕಟ್ಟಡವನ್ನು ನಿರ್ಮಿಸಿ ಆಶ್ರಮವನ್ನು ಸ್ಥಾಪಿಸಿದರು.

ಶ್ರೀ ಶಿವಕುಮಾರ ಸ್ವಾಮಿಗಳು ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಕೊತಬಾಳು ಗ್ರಾಮದ ಜಂಗಮ ಮನೆತನದ, ಶ್ರೀ ಸಿದ್ಧಯ್ಯ ಮತ್ತು ಶ್ರೀಮತಿ ದಾಕ್ಷಾಯಿಣಿ ದೇವಿಯವರ ಪುತ್ರರಾಗಿ ೧೯೬೦ ರ ಜುಲೈ ಇಪ್ಪತ್ತರಂದು ಜನಿಸಿದರು.

ಇವರು ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಣವನ್ನು ಮುಗಿಸಿ, ವಿಜ್ಞಾನ ವಿಷಯದಲ್ಲಿ ಪದವಿ ಶಿಕ್ಷಣವನ್ನು ಮುಗಿಸಿದರು. ಗುರುಗಳು ಪದವಿ ಶಿಕ್ಷಣವನ್ನು ಮುಗಿಸುವ ವೇಳೆಗಾಗಲೇ ಆಧ್ಯಾತ್ಮಿಕ ಚಿಂತನೆಯಿಂದ ಅನೇಕ ಸಾಧು ಸಂತರ ಹಾಗೂ ತತ್ತ್ವಜ್ಞಾನಿಗಳ ಸಂಪರ್ಕದಿಂದ ಆಧ್ಯಾತ್ಮ ಸಂಸ್ಕಾರವನ್ನು ಪಡೆದುಕೊಂಡರು. ಗುರುಗಳು ಪದವಿ ಶಿಕ್ಷಣವನ್ನು ಮುಗಿಸಿದ ನಂತರ ಶಿವಯೋಗ ಮಂದಿರದಲ್ಲಿ ಶ್ರೀ ಸದಾಶಿವ ಸ್ವಾಮಿಗಳ ಸಾನ್ನಿಧ್ಯದಲ್ಲಿ ಸಂಸ್ಕೃತ, ಯೋಗ ಹಾಗೂ ವೀರಶೈವಸಿದ್ಧಾಂತದ ಬಗ್ಗೆ ನಾಲ್ಕು ವರ್ಷಗಳ ಕಾಲ ಅಭ್ಯಾಸ ಮಾಡಿದರು. ನಂತರ ಕೊಳ್ಳೆಗಾಲದ ಶಂಭುಲಿಂಗ ಬೆಟ್ಟದ ನಿಜಗುಣ ಆಶ್ರಮದ ಶ್ರೀ ಕುಮಾರ ನಿಜಗುಣರ ಬಳಿ ನೆಲೆಸಿ, ಆಧ್ಯಾತ್ಮ ಜ್ಞಾನವನ್ನು ಬೆಳೆಸಿಕೊಂಡರು. ನಂತರ ಬಿಜಾಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಸ್ವಾಮಿಗಳ ಕೃಪಾಶೀರ್ವಾದದಿಂದ ಬೆಳೆದು,ಪಾಶ್ಚಾತ್ಯ ಮತ್ತು ಪೌರಾತ್ಯ ರಾಷ್ಟ್ರಗಳ ತತ್ತ್ವಶಾಸ್ತ್ರದ ಬಗ್ಗೆ ಅಧ್ಯಯನ ಮಾಡಿ ಅಪಾರ ಜ್ಞಾನವನ್ನು ಸಂಪಾದಿಸಿಕೊಂಡರು. ಆಧ್ಯಾತ್ಮದ ಗಣಿಯಾದ ಶ್ರೀ ಸಿದ್ಧೇಶ್ವರ ಸ್ವಾಮಿಗಳ ಸಂಪರ್ಕದಿಂದ ಆಧ್ಯಾತ್ಮ ಸಾಧಕರಾಗಿ, ಸಮಾಜ ಸುಧಾರಕರಾಗಿ, ಧರ್ಮಗುರುಗಳಾಗಿ ರೂಪುಗೊಂಡು, ಧಾರ್ಮಿಕ ನೆಲೆಗಟ್ಟಿನ ಮೇಲೆ ಸಮಾಜವನ್ನು ಬೆಳೆಸುವ ಕಾಯಕ ಯೋಗಕ್ಕೆ ತಮ್ಮ ಜೀವನವನ್ನು ಮುಡುಪಾಗಿಟ್ಟರು.

ಶ್ರೀ ಸಿದ್ಧೇಶ್ವರ ಸ್ವಾಮಿಗಳ ಜೊತೆಯಲ್ಲಿರುವಾಗಲೇ ಶ್ರೀ ಶಿವಕುಮಾರ ಸ್ವಾಮಿಗಳು ಕಾಲ್ನಡಿಗೆಯಲ್ಲಿ ಹಳ್ಳಿಹಳ್ಳಿಗಳನ್ನು ಸುತ್ತಿ ಜನರ ಬಳಿ ಹೋಗಿ ಅಂಧಕಾರ, ಅಜ್ಞಾನ, ಮೂಢನಂಬಿಕೆಗಳನ್ನು ತೊಲಗಿಸಿ ಸಂಸ್ಕಾರವನ್ನು ನೀಡಿ ಬರುತ್ತಿದ್ದರು. ಗುರುಗಳು ಪುರಾಣ ಪ್ರವಚನವನ್ನು ಮಾಡುತ್ತಾ, ಗ್ರಾಮವನ್ನು ಸುಧಾರಣೆಗೊಳಿಸಿ ಜ್ಞಾನದ ಜ್ಯೋತಿಯನ್ನು ಬೆಳಗಿಸುತ್ತಿದ್ದರು. ೧೯೮೪ ರಲ್ಲಿ ಮುದ್ದೇಬಿಹಾಳ ತಾಲ್ಲೂಕಿನ ಮಡಕೆಶಿರೂರು ಗ್ರಾಮಕ್ಕೆ ಭೇಟಿ ನೀಡಿ ಶ್ರಾವಣ ಮಾಸದಲ್ಲಿ ಪ್ರವಚನವನ್ನು ನೀಡಿದರು. ಈ ಸಂದರ್ಭದಲ್ಲಿ ಗುರುಗಳ ಇಚ್ಛಾ ಶಕ್ತಿಯಂತೆ ಗ್ರಾಮಸ್ಥರು ತಮ್ಮ ದುಶ್ಚಟಗಳನ್ನು ತೊರೆದು ಸಂಸ್ಕಾರವಂತರಾದರು. ಪ್ರವಚನ ಮುಗಿದ ನಂತರ ಗುರುಗಳು ಹೊರಡಲು ಸಿದ್ಧತೆಗೊಳ್ಳುತ್ತಿದ್ದಾಗ,ಇಲ್ಲಿ ಆಶ್ರಮವನ್ನು ಸ್ಥಾಪಿಸಿ ಇಲ್ಲಿಯೇ ನೆಲೆ ನಿಲ್ಲುವಂತೆ ಗ್ರಾಮಸ್ಥರು ಒತ್ತಾಯ ಮಾಡಿದರು. ಆಗ ಗ್ರಾಮಸ್ಥರ ಮಧ್ಯದಲ್ಲಿದ್ದ ವೈಷಮ್ಯವನ್ನು ಮನಗಂಡ ಶ್ರೀ ಶಿವಕುಮಾರ ಸ್ವಾಮಿಗಳು ಗ್ರಾಮವನ್ನು ಒಂದುಮಾಡಬೇಕೆಂಬ ಉದ್ದೇಶದಿಂದ ವೈಷಮ್ಯ ಮರೆತು ಎಲ್ಲರೂ ಒಂದಾದರೆ ಇಲ್ಲಿ ನೆಲೆಸುವುದಾಗಿ ಭರವಸೆಯನ್ನು ನೀಡಿ, ಪುನಃ ವೈಷಮ್ಯವನ್ನು ಬೆಳೆಸಿಕೊಂಡಿದ್ದಾದರೆ ಗ್ರಾಮವನ್ನು ತೊರೆಯುವುದಾಗಿ ಎಚ್ಚರಿಕೆ ನೀಡಿದರು. ಗುರುಗಳ ಈ ಮಾತಿಗೆ ಗ್ರಾಮಸ್ಥರು ಒಂದಾಗುವ ಭರವಸೆಯನ್ನು ನೀಡಿದರು.

ಒಂದಾದ ಗ್ರಾಮ: ಹಳೆಯ ದ್ವೇಷದಿಂದ ಗ್ರಾಮಸ್ಥರ ಒಡೆದು ಚೂರಾಗಿ ಬದುಕುತ್ತಿದ್ದರು, ಶ್ರೀ ಶಿವಕುಮಾರ ಸ್ವಾಮಿಗಳ ಮಾರ್ಗದರ್ಶನದಲ್ಲಿ ವೈರತ್ವವನ್ನು ಮರೆತು ಒಂದಾದರು. ಗ್ರಾಮಸ್ಥರು ಒಂದಾದ ದಿನವೇ ಶ್ರೀ ಶಿವಕುಮಾರ ಸ್ವಾಮಿಗಳು ೧೯೮೬ರಲ್ಲಿ ಮಠವನ್ನು ಸ್ಥಾಪಿಸಿ ಮಡಕೆಶಿರೂರು ಗ್ರಾಮದಲ್ಲಿ ನೆಲೆನಿಂತರು. ಸಾಹಿತ್ಯ ಮತ್ತು ಶಿಕ್ಷಣದಿಂದ ಸಮಾಜವನ್ನು ಸುಧಾರಣೆ ಮಾಡಬಹುದೆಂದು ಅರಿತು, ಕನ್ನಡಮಾಧ್ಯಮಿಕ ಶಾಲೆಯನ್ನು ಪ್ರಾರಂಭಿಸಿದರು. ಅಲ್ಲದೆ ಗ್ರಾಮದಲ್ಲಿ ನಡೆಯುವ ಯಾವುದೇ ಸಣ್ಣಪುಟ್ಟ ವ್ಯಾಜ್ಯಗಳನ್ನು ಪೋಲೀಸ್ ಠಾಣೆಗೆ ಕೊಂಡಯ್ಯದೆ ಗ್ರಾಮದಲ್ಲೇ ಬಗೆಹರಿಸಿಕೊಳ್ಳುವಂತೆ ಮಾಡಿದರು. ಇಲ್ಲಿ ಮಠವನ್ನು ಸ್ಥಾಪಿಸಿದ ಮೇಲೆ ಸುತ್ತಲ ಗ್ರಾಮಗಳಲ್ಲಿ ಕಾಲ್ನಡಿಗೆಯಲ್ಲಿ ಸಂಚರಿಸಿ ಧರ್ಮಪ್ರಸಾರವನ್ನು ಮಾಡುತ್ತಿದ್ದರು.

ಗ್ರಾಮ ಸುಧಾರಣೆ: ನಡಹಳ್ಳಿಯ ಮಾರುತಿ ದೇವಸ್ಥಾನದ ನಿರ್ಮಾಣದ ಕಾರ್ಯ ನೆನೆಗುದಿಗೆ ಬಿದ್ದು ಗ್ರಾಮದಲ್ಲಿ ಅಶಾಂತಿ ಉಂಟಾಗಿತ್ತು. ಈ ಸಂದರ್ಭದಲ್ಲಿ ಗುರುಗಳು ನ್ಯಾಯಸಮ್ಮತವಾದ ತೀರ್ಮಾನದಿಂದ ಗ್ರಾಮದಲ್ಲಿ ಶಾಂತಿ ನೆಲೆಸುವಂತೆ ಮಾಡಿ, ದೇವಸ್ಥಾನದ ನಿರ್ಮಾಣವನ್ನು ಪೂರೈಸಿದರು. ನಂತರ ಆಲೂರು ಗ್ರಾಮದಲ್ಲಿ ಜೋಳದ ಮರು ವಸೂಲಿಯಲ್ಲಿ ಉಂಟಾಗಿದ್ದ ಗೊಂದಲದಿಂದ ಬರಬೇಕಾಗಿದ್ದ ನಾಲ್ಕುನೂರು ಚೀಲ ಜೋಳ ಸಂಗ್ರಹಗೊಳ್ಳದಂತಾಗಿತ್ತು. ಗುರುಗಳು ಈ ಗ್ರಾಮದ ಸಮಸ್ಯೆಯನ್ನು ಕೈಗೆತ್ತಿಕೊಂಡು ಮುರಿದು ಹೋಗಿದ್ದ ಮನಸ್ಸುಗಳನ್ನು ಒಂದು ಮಾಡಿ ಜೋಳವನ್ನು ಸಂಗ್ರಹಿಸುವ ಕಾರ್ಯದಲ್ಲಿ ತೊಡಗಿ, ಯಶಸ್ಸನ್ನು ಕಂಡು ಗ್ರಾಮದ ಅಭಿವೃದ್ಧಿಗೆ ಕಾರಣಕರ್ತರಾಗಿ ಅಲ್ಲಿನ ಸಹಕಾರ ಸಂಘವನ್ನು ಬೆಳಸಿದರು. ಈ ರೀತಿ ಅನೇಕ ಗ್ರಾಮಗಳ ಸುಧಾರಣೆಗೆ ಕಾರಣೀಭೂತರಾದ ಶ್ರೀ ಶಿವಕುಮಾರ ಸ್ವಾಮಿಗಳ ಸಾಧನೆಗಳು ಸಮಾಜ ಶಾಸ್ತ್ರಜ್ಞರಿಗೆ ಅಧ್ಯಯನಕ್ಕೊಂದು ಉತ್ತಮ ವಿಷಯವಾಗಿದೆ.

ಗ್ರಾಮ ತೊರೆದ ಗುರುಗಳು: ಮಡಕೆಶಿರೂರು ಗ್ರಾಮದಲ್ಲಿ ಮಠ ಸ್ಥಾಪಿಸಿದ ಮೇಲೆ ಅನೇಕ ಸತ್ಕಾರ್ಯಗಳನ್ನು ಮಾಡಿ ಸಂಸ್ಕಾರವಂತ ಸಮಾಜವನ್ನು ರೂಪಿಸಿದ್ದರೂ, ರಾಜಕೀಯ ದುರುದ್ದೇಶದಿಂದ ಗ್ರಾಮವು ಪುನಃ ಒಡೆದು ಹೋದಾಗ ಗುರುಗಳು ಮಾನಸಿಕವಾಗಿ ಮಠವನ್ನು ತ್ಯಜಿಸಿದರು. ಶ್ರೀ ಶಿವಕುಮಾರಸ್ವಾಮಿಗಳು ಮಡಕೆಶಿರೂರಿನಿಂದ ನಿರ್ಗಮಿಸಿದ ಮೇಲೆ ಬಿದರಕುಂದಿ ಗ್ರಾಮಕ್ಕೆ ಬಂದು ನೆಲೆಸಿ, ಹೊಸದಾಗಿ ಮಠವನ್ನು ಸ್ಥಾಪಿಸಿ ಧಾರ್ಮಿಕ ಆಚರಣೆಗಳ ಜೊತೆಗೆ ಸಮಾಜ ಸುಧಾರಣೆ ಮತ್ತು ಸಾಹಿತ್ಯ ಸಂವರ್ಧನೆಗೆ ದುಡಿಯತೊಡಗಿದ್ದಾರೆ. ಗುರುಗಳು ಇಲ್ಲಿ ಭವ್ಯವಾದ ಎರಡಂತಸ್ತಿನ ಕಟ್ಟಡವನ್ನು ನಿರ್ಮಿಸಿ, ಕಟ್ಟಡದ ಸುತ್ತ ಕೈತೋಟವನ್ನು ನಿರ್ಮಿಸಿ ಸುಂದರ ವಾತಾವರಣವನ್ನು ಸೃಷ್ಟಿಸಿದ್ದಾರೆ.

ಪುಸ್ತಕ ಸಂಸ್ಕೃತಿ: ಶ್ರೀ ಶಿವಕುಮಾರ ಸ್ವಾಮಿಗಳು ಬಿದರಕುಂದಿಯಲ್ಲಿ ಮಠವನ್ನು ಸ್ಥಾಪಿಸಿದ ಮೇಲೆ ಹತ್ತು ಸಾವಿರಕ್ಕೂ ಹೆಚ್ಚು ಪುಸ್ತಕಗಳನ್ನು ಸಂಗ್ರಹಿಸಿ ಮಠದಲ್ಲಿ ಗ್ರಂಥಾಲಯವನ್ನು ಸ್ಥಾಪಿಸಿದ್ದಾರೆ. ಸಾಹಿತ್ಯದ ಮೂಲಕ ಸಮಾಜವನ್ನು ಸುಧಾರಣೆ ಮಾಡಬಹುದೆಂಬ ಹಿನ್ನೆಲೆಯಲ್ಲಿ ಮಠದ ಧಾರ್ಮಿಕ ಆಚರಣೆಗಳನ್ನು ಪುಸ್ತಕೋತ್ಸವವನ್ನಾಗಿ ಆಚರಣೆ ಮಾಡುವ ಮೂಲಕ ಹೊಸ ಸಂಪ್ರದಾಯವನ್ನು ಹುಟ್ಟುಹಾಕಿದ್ದಾರೆ. ೨೦೦೦ದ ಇಸವಿಯ ಆರಂಭದಲ್ಲಿ ಆಶ್ರಮದ ದಶಮಾನೋತ್ಸವವನ್ನು, ಹದಿಮೂರು ಮೌಲಿಕ ಕೃತಿಗಳನ್ನು ಪ್ರಕಟಿಸುವುದರ ಮೂಲಕ ಆಚರಣೆ ಮಾಡಿದರು. ಶ್ರೀ ಸಿದ್ಧೇಶ್ವರ ಸ್ವಾಮಿಗಳು ರಚಿಸಿದ ಇದು ಸತ್ಯಾನ್ವೇಷಣೆ, ಶ್ರೀ ಶಿವಕುಮಾರ ಸ್ವಾಮಿಗಳು ರಚಿಸಿದ ಭಗವಚ್ಚಿಂತನ-ದರ್ಶನ, ವಚನಚಿಂತನ, ಹರುಷಕ್ಕೆ ದಾರಿ, ಲೇಸ ಬದುಕಿಗಾಗಿ, ಬಿದರಕುಂದಿಯಿಂದ ಬೆಳ್ಳಿ ಬೆಟ್ಟದೆಡೆಗೆ, ಭಗವಚ್ಚಿಂತನ-ಸಹಚ್ಚಿಂತನ, ಪುಸ್ತಕ ಸಂಸ್ಕೃತಿ, ಸರ್ವಧರ್ಮೀಯ ಪ್ರಾರ್ಥನೆ, ಹಾಗೂ ಇತರೆ ಲೇಖಕರ ಸಂಪಾದಕತ್ವದಲ್ಲಿ ತಯಾರಾದ ಹಾಸಗಲ್ಲು ಶ್ರೀ ಸದಾಶಿವ ಶಿವಯೋಗಿಗಳು, ಬಸವಾದಿ ಶರಣರ ಶಿವಯೋಗದ ವಚನಗಳು, ಅಕ್ಕನ ಅಣ್ಣನ ವಚನಗಳು ಹಾಗೂ ಪುನಶ್ಚೇತನ ಎಂಬ ಹದಿಮೂರು ಮೌಲಿಕ ಕೃತಿಗಳು ಮಠದ ವತಿಯಿಂದ ಪ್ರಕಟಗೊಂಡು ಕನ್ನಡಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿವೆ.

ದ್ವಾದಶ ವಾರ್ಷಿಕೋತ್ಸವವನ್ನು ಆಚರಣೆ ಮಾಡಲು ಸಿದ್ಧಗೊಳ್ಳುತ್ತಿರುವ ಶ್ರೀ ಶಿವಕುಮಾರಸ್ವಾಮಿಗಳು ಹದಿನಾಲ್ಕು ಪುಸ್ತಕಗಳನ್ನು ಪ್ರಕಟಿಸಲು ಮುಂದಾಗಿದ್ದಾರೆ. ಗುರುಗಳು ಸದಾ ಸಾಹಿತ್ಯ ಚಿಂತನೆಯಲ್ಲಿ ತೊಡಗಿ ಉತ್ತಮ ಸಾಹಿತ್ಯ ಕೃತಿಗಳು ಹೊರ ಬರಲು ನೆರವಾಗಿದ್ದಾರೆ.ಸಾಹಿತ್ಯ ಕ್ಷೇತ್ರದ ಮೂಲಕ ಧಾರ್ಮಿಕ ವಿಚಾರಗಳನ್ನು ಮನೆಮನೆಗೆ ಮುಟ್ಟಿಸುತ್ತಾ ಭಕ್ತರಲ್ಲಿ ಓದುವ ಸಂಸ್ಕಾರವನ್ನು ಬೆಳೆಸಿ, ಪುಸ್ತಕ ಸಂಸ್ಕೃತಿಯನ್ನು ಬೆಳೆಸುತ್ತಿರುವುದು ಒಂದು ಆದರ್ಶನೀಯ ಕಾರ್ಯವಾಗಿದೆ.

ವಿಳಾಸ: ಶ್ರೀ ಶಿವಕುಮಾರ ಸ್ವಾಮಿಗಳು, ಶ್ರೀ ಶಿವಯೋಗಾಶ್ರಮ, ಬಿದರಕುಂದಿ, ಮುದ್ದೇಬಿಹಾಳು ತಾಲ್ಲೂಕು, ಬಿಜಾಪುರ ಜಿಲ್ಲೆ.

ಮುದ್ದೇಬಿಹಾಳ

ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ಪಟ್ಟಣವು ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಅರವತ್ತು ಕಿ.ಮೀ ದೂರದಲ್ಲಿದೆ. ತಾಲ್ಲೂಕಿನ ಕೇಂದ್ರ ಸ್ಥಳವಾದ ಮುದ್ದೇಬಿಹಾಳ ಪಟ್ಟಣದಲ್ಲಿ ಪುರಾತನ ಕಾಲದಿಂದಲೂ ವೀರಶೈವ ಧರ್ಮ ಪ್ರಜ್ವಲವಾಗಿ ಬೆಳೆದು ಸಂಸ್ಕಾರವಂತ ಸಮಾಜವನ್ನು ರೂಪಿಸಿದೆ. ಪುರಾತನ ಕಾಲದ ಈ ಪಟ್ಟಣದಲ್ಲಿ ಐದು ವೀರಶೈವ ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತಿದೆ. ಇವುಗಳಲ್ಲಿ ಈಗ ಶ್ರೀ ಖಾಸಗತೇಶ್ವರ ವಿರಕ್ತಮಠ, ಶ್ರೀ ಹಿರೇಮಠವು ಹಾಗೂ ಗುಳೇದಗುಡ್ಡ ವಿರಕ್ತಮಠದ ಶಾಖಾಮಠವಾಗಿರುವ ಶ್ರೀ ಮುರುಘಾಮಠ ಅಸ್ತಿತ್ವದಲ್ಲಿವೆ. ಹಿರೇಮಠದಲ್ಲಿ ಈಗ ಉತ್ತರಾಧಿಕಾರಿಗಳು ಯಾರೂ ಇಲ್ಲದೆ ಮಠವು ಖಾಲಿ ಉಳಿದಿದೆ. ಶ್ರೀ ಖಾಸಗತೇಶ್ವರ ವಿರಕ್ತಮಠವು ತಾಳಿಕೋಟೆಯ ಶ್ರೀ ಖಾಸಗತೇಶ್ವರ ವಿರಕ್ತಮಠದ ಮೂಲ ಮಠವಾಗಿದ್ದು ಶ್ರೀ ರುದ್ರಮುನಿ ಸ್ವಾಮಿಗಳು ಇಲ್ಲಿ ಪ್ರಥಮವಾಗಿ ಮಠವನ್ನು ಸ್ಥಾಪಿಸಿರುತ್ತಾರೆ. ಈಗ ಈ ಮಠದ ಆಡಳಿತವನ್ನು ತಾಳಿಕೋಟೆಗೆ ಸ್ಥಳಾಂತರಿಸಿರುವ ಕಾರಣ ಈ ಮಠದಲ್ಲಿ ಪರಂಪರೆಯ ಗುರುಗಳ ಗದ್ದುಗೆಗಳಿಗೆ ಪೂಜಾಕಾರ್ಯ ನಡೆಯುತ್ತಾ ಮಠವನ್ನು ಅಸ್ತಿತ್ವದಲ್ಲಿ ಉಳಿಯುವಂತೆ ಮಾಡಿದೆ.

ಹಿರೂರು

ಮುದ್ದೇಬಿಹಾಳು ತಾಲ್ಲೂಕಿನ ಹಿರೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ನಲವತ್ತೈದು ಕಿ.ಮೀ

ದೂರದಲ್ಲಿದೆ. ಇಲ್ಲಿ ಶ್ರೀ ಅನ್ನದಾನೇಶ್ವರ ಮಹಾಸಂಸ್ಥಾನ ಹಿರೇಮಠವು ಅಸ್ತಿತ್ವದಲ್ಲಿದೆ.

ಅನ್ನದಾನೇಶ್ವರ ಮಹಾಸಂಸ್ಥಾನ ಹಿರೇಮಠ: ಹಿರೂರು ಗ್ರಾಮದಲ್ಲಿ ಉಜ್ಜಯಿನಿಪೀಠದ ಶಾಖಾಮಠವಾದ ಶ್ರೀ ಅನ್ನ ದಾನೇಶ್ವರ ಮಹಾಸಂಸ್ಥಾನ ಹಿರೇಮಠವು ಸ್ಥಾಪನೆಯಾಗಿದೆ. ಶ್ರೀ ಅನ್ನದಾನೇಶ್ವರ ಶಿವಾಚಾರ್ಯ ಸ್ವಾಮಿಗಳಿಂದ ೧೮೧೨ ರಲ್ಲಿ ಈ ಮಠವು ಸ್ಥಾಪನೆಯಾಗಿದೆ. ಈ ಮಠದ ಸ್ಥಾಪಕ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಆದರೆ ವಿಕ್ಟೋರಿ ಮಹಾರಾಣಿಯ ಕಾಲದಲ್ಲಿ ಈ ಮಠದ ಸ್ಥಾಪನೆಯ ಸಂದರ್ಭದಲ್ಲಿ ತಾಮ್ರದ ಬಿಲ್ಲೆಗಳನ್ನು ನೀಡಿ, ಉಂಬಳಿ ಭೂಮಿಯನ್ನು ನೀಡಿರುವುದಾಗಿ ಮಠದಲ್ಲಿರುವ ದಾಖಲೆಗಳು ತಿಳಿಸುತ್ತವೆ. ಮೂನ್ನೂರ ಮೂವತ್ತೊಂದು ಹಳ್ಳಿಗಳ ಜಾಗೀರದಾರಿಕೆಯನ್ನು ಪಡೆದುಕೊಂಡಿದ್ದ ಈ ಮಠ ಪ್ರಾರಂಭದಲ್ಲೇ ರಾಜಾಶ್ರಯದಿಂದ ಬೆಳೆದು ಹೆಚ್ಚು ಶ್ರೀಮಂತಗೊಂಡಿತ್ತು. ಅಲ್ಲದೆ ಕರ್ತೃಗುರುಗಳಾದ ಶ್ರೀ ಅನ್ನದಾನೇಶ್ವರ ಶಿವಾಚಾರ್ಯ ಸ್ವಾಮಿಗಳ ತಪೋಶಕ್ತಿ ಹಾಗೂ ಕರ್ತೃತ್ವಶಕ್ತಿಯಿಂದ ಮಠವು ಈತನಕ ಬೆಳೆದು ಬಂದಿದೆ.

ಪರಂಪರೆ:

೧. ಷ.ಬ್ರ.ಶ್ರೀ ಅನ್ನದಾನೇಶ್ವರ ಶಿವಾಚಾರ್ಯ ಸ್ವಾಮಿಗಳು
(ನಂತರದ ಐದು ಜನ ಗುರುಗಳ ಹೆಸರು ಲಭ್ಯವಿಲ್ಲ)
೭. ಷ.ಬ್ರ.ಶ್ರೀ ಗುರುಬಸವ ಶಿವಾಚಾರ್ಯ ಸ್ವಾಮಿಗಳು
೮. ಷ.ಬ್ರ.ಶ್ರೀ ಗುರುಶಾಂತವೀರ ಶಿವಾಚಾರ್ಯ ಸ್ವಾಮಿಗಳು
೯. ಷ.ಬ್ರ.ಶ್ರೀ ಗುರುಮೂರ್ತಿ ದೇವರು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಮಠದ ಪರಂಪರೆಯ ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಐದು ಜನ ಗುರುಗಳ ಹೆಸರುಗಳನ್ನು ಆಧಾರದ ಕೊರತೆಯಿಂದ ದಾಖಲಿಸಲಾಗುತ್ತಿಲ್ಲ. ಏಳನೆಯ ಗುರುಗಳಾದ ಶ್ರೀ ಗುರುಬಸವಶಿವಾ ಚಾರ್ಯ ಸ್ವಾಮಿಗಳು ಲಿಂಗೈಕ್ಯರಾಗುವ ಮೊದಲೇ ಶ್ರೀ ಗುರುಶಾಂತ ಶಿವಾಚಾರ್ಯ ಸ್ವಾಮಿಗಳನ್ನು ಉತ್ತರಾಧಿಕಾರಿ ಗಳನ್ನಾಗಿ ನೇಮಕಮಾಡಿಕೊಂಡು, ೧೯೪೮ರ ಮೇ ಹದಿನೈದರಂದು ಪಟ್ಟಾಧಿಕಾರವನ್ನು ಮಾಡಿ ಅದೇ ವರ್ಷ ಲಿಂಗೈಕ್ಯರಾಗಿದ್ದಾರೆ. ಈಗಿನ ಗುರುಗಳಾದ ಶ್ರೀ ಗುರುಶಾಂತವೀರ ಶಿವಾಚಾರ್ಯ ಸ್ವಾಮಿಗಳು ಶ್ರೀ ಚನ್ನಮಲ್ಲಯ್ಯ ಮತ್ತು ಶ್ರೀಮತಿ ಗಂಗಮ್ಮನವರ ಪುತ್ರರಾಗಿ ೧೯೩೦ ರಲ್ಲಿ ಜನಿಸಿದರು. ಇವರು ಸಂಸ್ಕೃತ ವೇದಾಧ್ಯಯನವನ್ನು ಕಲಿತು, ಹಿರಿಯ ಗುರುಗಳಿಂದ ಸಂಸ್ಕಾರ ಪಡೆದು ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಗುರುಗಳು ಎಪ್ಪತ್ತು ವರ್ಷಗಳನ್ನು ಪೂರೈಸಿದ್ದು, ಈ ಇಳಿ ವಯಸ್ಸಿ ನಲ್ಲಿಯೂ ಚಟುವಟಿಕೆಯಿಂದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದು ಮಠವನ್ನು ಬೆಳೆಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯಲ್ಲಿ ಈಗ ಗುರುತಿಸಲಾದ ಒಂಬತ್ತು ಜನ ಗುರುಗಳಲ್ಲಿ ಎಂಟು ಜನ ಗುರುಗಳು ಲಿಂಗೈಕ್ಯರಾಗಿದ್ದಾರೆ. ಆದರೆ ಮಠದ ಆವರಣದಲ್ಲಿ ಒಟ್ಟು ಒಂಬತ್ತು ಗದ್ದುಗೆಗಳನ್ನು ಗುರುತಿಸಲಾಗಿದೆ. ಈ ಗದ್ದುಗೆಗಳಿಗೆ ನಿತ್ಯ ಎರಡು ವೇಳೆ ಪೂಜೆ, ಕಾರ್ತೀಕ ಮಾಸದಲ್ಲಿ ಶ್ರೀ ಅನ್ನದಾನೇಶ್ವರರ ಜಾತ್ರೆಯನ್ನು ಐದು ದಿನಗಳ ಕಾಲ ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಶಿವದೀಕ್ಷಾ ಕಾರ್ಯಕ್ರಮ, ಧಾರ್ಮಿಕ ಸಭೆ ಮತ್ತು ಅನ್ನ ದಾಸೋಹ ನಡೆಯುತ್ತಿದೆ. ಕಲ್ಯಾಣದಿಂದ ಲಕ್ಷ್ಮೀದೇವಿಯನ್ನು ತಂದು ಇಲ್ಲಿ ಪ್ರತಿಷ್ಠಾಪಿಸಲಾಗಿದೆ.

ಪುರಾತನ ಇತಿಹಾಸವಿರುವ ಈ ಮಠವು ಹಿಂದೆ ಮುನ್ನೂರಮೂವತ್ತೊಂದು ಶಾಖಾ ಮಠಗಳನ್ನು ಸ್ಥಾಪಿಸಿ, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಹೋಗಲು ವ್ಯವಸ್ಥೆ ಮಾಡಿತ್ತು. ಆದರೆ ಇಂದು ಈ ಮಠಗಳು ತಮ್ಮ ಅಸ್ತಿತ್ತ್ವವನ್ನು ಕಳೆದು ಕೊಂಡಿವೆ. ಅಲ್ಲದೆ ಕೆಲವು ಮಠಗಳು ಸ್ವತಂತ್ರ ಮಠಗಳಾಗಿ ಕಾರ್ಯ ನಿರ್ವಹಿಸುತ್ತಿವೆ ಎಂದು ಈಗಿನ ಮಠಾಧೀಶರು ಅಭಿಪ್ರಾಯಿ ಸುತ್ತಾರೆ. ಹಿಂದೆ ವಿಕ್ಟೋರಿಯಾ ರಾಣಿಯು ಮಠಕ್ಕೆ ನೀಡಿದ್ದ ಉಂಬಳಿ ಭೂಮಿಯಲ್ಲಿ ಈಗ ನಲವತ್ತು ಎಕರೆ ಮಾತ್ರ ಉಳಿದಿದ್ದು, ಇದನ್ನು ಅಭಿವೃದ್ಧಿಪಡಿಸಿ ಮಠದ ಆರ್ಥಿಕ ಮೂಲವನ್ನಾಗಿ ಮಾಡಿಕೊಳ್ಳಲಾಗಿದೆ.

ವಿಳಾಸ: ಶ್ರೀ ಗುರುಶಾಂತವೀರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಅನ್ನದಾನೇಶ್ವರ ಸಂಸ್ಥಾನ ಹಿರೇಮಠ, ಹಿರೂರು, ಮುದ್ದೇಬಿಹಾಳು ತಾಲ್ಲೂಕು, ಬಿಜಾಪುರ ಜಿಲ್ಲೆ.

❑

ಸಿಂದಗಿ ತಾಲ್ಲೂಕು

ಬಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕು ಧಾರ್ಮಿಕ ಹಾಗೂ ಸಾಂಸ್ಕೃತಿಕವಾಗಿ ಹೆಸರು ಪಡೆದಿದೆ. ಈ ತಾಲ್ಲೂಕು ರಾಜ್ಯದಲ್ಲಿಯೇ ಅತ್ಯಂತ ಹೆಚ್ಚು ಮಠಗಳನ್ನು ಹೊಂದಿರುವ ತಾಲ್ಲೂಕಾಗಿದೆ. ಹಿಂದೆ ಇಲ್ಲಿ ಇನ್ನೂರಹತ್ತು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಪ್ರಸ್ತುತ ಮೂವತ್ನಾಲ್ಕು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಅಸ್ಕಿ

ಸಿಂದಗಿ ತಾಲ್ಲೂಕಿನ ಅಸ್ಕಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ನಲವತ್ತೈದು ಕೀ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಪಟ್ಟದದೇವರ ಮಠವು ಅಸ್ತಿತ್ವದಲ್ಲಿದೆ.

ಪಟ್ಟದದೇವರಮಠ: ಅಸ್ಕಿ ಗ್ರಾಮದಲ್ಲಿ ಎಂಟುನೂರು ವರ್ಷಗಳ ಹಿಂದೆ ಈ ಗ್ರಾಮದ ಮಧ್ಯಭಾಗದಲ್ಲಿ ರಂಭಾಪುರಿ ಪೀಠದ ಶಾಖಾ ಮಠವಾಗಿ ಶ್ರೀ ಪಟ್ಟದದೇವರ ಮಠವು ಸ್ಥಾಪನೆಯಾಗಿದೆ. ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪನೆಯಾದ ಈ ಮಠವು ತನ್ನ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಬಂದಿದೆ. ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಶಿವಯೋಗ ಮತ್ತು ಹಠಯೋಗವನ್ನು ಕಲಿತ ಸಾಧಕರಾಗಿದ್ದರು. ಇವರು ಇಲ್ಲಿ ಧರ್ಮವನ್ನು ಅನುಷ್ಠಾನಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಗುರುಗಳು ದಿನದ ಬಹುತೇಕ ಕಾಲವನ್ನು ಶಿವಧ್ಯಾನದಲ್ಲಿ ಕಳೆದು ಮಹಾ ತಪಸ್ವಿಗಳಾಗಿದ್ದರು. ಇವರು ತಮ್ಮ ತಪೋಶಕ್ತಿಯಿಂದ ಅನೇಕ ಪವಾಡಗಳನ್ನು ಮಾಡಿ ಭಕ್ತರನ್ನು ಉದ್ಧರಿಸಿದ್ದರು. ಗುರುಗಳು ಇಲ್ಲಿ ಮಠವನ್ನು ಸ್ಥಾಪಿಸಿದ ಮೇಲೆ ಧರ್ಮೋಪದೇಶ ಹಾಗೂ ಅನ್ನದಾಸೋಹವನ್ನು ವ್ಯವಸ್ಥೆಗೊಳಿಸಿದರು. ಅಲ್ಲದೆ ಕಾಯಕ ಯೋಗದಿಂದ ಬದುಕನ್ನು ರೂಢಿಸಿಕೊಳ್ಳುವ ಕಲೆಯನ್ನು ಭಕ್ತರಿಗೆ ತಿಳಿಸಿ ಸಮಾಜವನ್ನು ಉದ್ಧರಿಸಿದರು.

ಪರಂಪರೆ:

೧. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಶರಣ ಬಸವೇಶ್ವರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಗುರುಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ನಿರ್ವಾಣೇಶ್ವರ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ವೃಷಭೇಂದ್ರ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ವಿರೂಪಾಕ್ಷೇಶ್ವರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃ ಗುರುಗಳ ನಂತರ ಅಧಿಕಾರಕ್ಕೆ ಬಂದ ಗುರುಗಳೆಲ್ಲರೂ ಮಠ ಮತ್ತು ಸಮಾಜವನ್ನು ಬೆಳೆಸುವ ನಿಟ್ಟಿನಲ್ಲಿ ಶ್ರಮ ವಹಿಸಿದ್ದಾರೆ. ಪರಂಪರೆಯ ಐದನೆಯ ಗುರುಗಳಾದ ಶ್ರೀ ವೃಷಭೇಂದ್ರ ಶಿವಾಚಾರ್ಯ ಸ್ವಾಮಿಗಳು ಈ ಪ್ರಾಂತ್ಯದ ಹಳ್ಳಿಗಳಲ್ಲಿ ಸಂಚರಿಸಿ ಪ್ರತಿ ತಿಂಗಳು ಪುರಾಣ ಪ್ರವಚನವನ್ನು ನಡೆಸಿ ಒಂದು ದಾಖಲೆಯನ್ನು ನಿರ್ಮಿಸಿದ್ದಾರೆ. ಮಠವನ್ನು ಅಭಿವೃದ್ಧಿಪಡಿಸಿ ತಮ್ಮ ಉತ್ತರಾಧಿಕಾರಿಯನ್ನಾಗಿ ಶ್ರೀ ವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳನ್ನು ನೇಮಕ ಮಾಡಿ ೧೯೯೨ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಮಠದ ಪರಂಪರೆಯ ಆರನೆಯ ಗುರುಗಳಾಗಿ ಅಧಿಕಾರ ವಹಿಸಿಕೊಂಡಿರುವ ಈಗಿನ ಗುರುಗಳಾದ ಶ್ರೀ ವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳು ಶ್ರೀ ರುದ್ರಸ್ವಾಮಿ ಮತ್ತು ಶ್ರೀಮತಿ ಗುರುಲಿಂಗಮ್ಮನವರ ಪುತ್ರರಾಗಿ ೧೯೬೦ ರಲ್ಲಿ ಜನಿಸಿದರು. ಇವರು ಸೋಲಾಪುರದಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ೧೯೮೨ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗುರುಗಳ ಆರು ಗದ್ದುಗೆಗಳು ಮಠದಲ್ಲಿ ಸ್ಥಾಪನೆಯಾಗಿವೆ. ಇವುಗಳಿಗೆ ನಿತ್ಯಪೂಜೆ, ಹಾಗೂ ಯುಗಾದಿಯಲ್ಲಿ ಶ್ರೀ ವೃಷಭೇಂದ್ರ ಸ್ವಾಮಿಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ವಿರೂಪಾಕ್ಷೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಪಟ್ಟದದೇವರಮಠ, ಅಸ್ಕಿ, ಸಿಂದಗಿ ತಾ, ಬಿಜಾಪುರಜಿಲ್ಲೆ.

ಆಲಮೇಲು

ಸಿಂದಗಿ ತಾಲ್ಲೂಕಿನ ಆಲಮೇಲು ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಪುರಾತನ ಕಾಲದಲ್ಲಿ ಹನ್ನೆರಡು ವೀರಶೈವ ಮಠಗಳು ಸ್ಥಾಪನೆಯಾಗಿ ವೀರಶೈವ ಧರ್ಮದ ಬೆಳವಣಿಗೆಗೆ ಹೆಚ್ಚು ಶ್ರಮಿಸಿವೆ.ಅಂದು ಸ್ಥಾಪನೆಗೊಂಡ ಹನ್ನೆರಡು ವೀರಶೈವ ಮಠಗಳಲ್ಲಿ ಈಗ ಶ್ರೀ ತಾರಾಪುರ ಹಿರೇಮಠ, ಶ್ರೀ ಸಂಸ್ಥಾನ ಹಿರೇಮಠ, ಶ್ರೀ ಹೊಸಮಠ, ಶ್ರೀ ವಿಶ್ವೇಶ್ವರಮಠ, ಶ್ರೀ ವಿರಕ್ತಮಠ ಎಂಬ ಐದು ಮಠಗಳು ಇಂದಿಗೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ. ಈ ಐದು ಮಠಗಳಲ್ಲಿ ಶ್ರೀ ವಿಶ್ವೇಶ್ವರ ಮಠದಲ್ಲಿ ಮಠಾಧೀಶರಿಲ್ಲದೆ ಖಾಲಿ ಉಳಿದಿದೆ. ಉಳಿದ ಮಠಗಳು ಇಂದಿಗೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ವೀರಶೈವ ಧರ್ಮದ ಅಭಿವೃದ್ಧಿಗೆ ಪೂರಕವಾಗುವಂತಹ ಕಾರ್ಯವನ್ನು ನಡೆಸಿಕೊಂಡು ಬರುತ್ತಿವೆ.

ತಾರಾಪುರ ಹಿರೇಮಠ: ಅಲಮೇಲು ಗ್ರಾಮದ ಮಧ್ಯ ಭಾಗದಲ್ಲಿ ಕಾಶಿ ಪೀಠದ ಶಾಖಾ ಮಠವಾದ ತಾರಾಪುರ ಹಿರೇಮಠವು ಸ್ಥಾಪನೆಯಾಗಿದೆ. ಮಠದ ಸ್ಥಾಪಕರಾದ ಶ್ರೀ ರೇವಣಸಿದ್ಧ ಸ್ವಾಮಿಗಳು ತಾರಾಪುರದಿಂದ ಲೋಕ ಸಂಚಾರಕ್ಕೆ ಹೊರಟು ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ, ಧರ್ಮೋಪದೇಶವನ್ನು ಮಾಡಿ ಅಲಮೇಲು ಗ್ರಾಮಕ್ಕೆ ಬಂದು ನೆಲೆಸುತ್ತಾರೆ. ತಾರಾಪುರದಿಂದ ಸ್ಥಳಾಂತರಗೊಂಡ ಈ ಮಠಕ್ಕೆ 'ಬಜಾರ್‌ಮಠ' ಎಂದು ಭಕ್ತರು ಕರೆಯ ತೊಡಗಿದರು. ಕಾಲಕ್ರಮೇಣ'ಶ್ರೀ ತಾರಾಪುರ ಮಠ'ಎಂದು ಗುರುತಿಸಲಾಗಿದೆ. ಶ್ರೀ ರೇವಣಸಿದ್ಧ ಸ್ವಾಮಿಗಳು ಇಲ್ಲಿ ಅನೇಕ ಪವಾಡಗಳನ್ನು ಮಾಡಿ ಭಕ್ತರನ್ನು ಉದ್ಧರಿಸಿದ್ದಾರೆ. ಇವರ ಕಾಲದಲ್ಲಿ ಭಕ್ತರು ವೀರಶೈವ ಧರ್ಮದ ಆಚರಣೆಗಳನ್ನು ಕಲಿತು ಸನ್ಮಾರ್ಗದಲ್ಲಿ ನಡೆಯತೊಡಗಿದರು. ಗುರುಗಳು ಈ ಗ್ರಾಮದಲ್ಲಿ ಮಠವನ್ನು ಸ್ಥಾಪನೆ ಮಾಡಿದ ಮೇಲೆ ನಿತ್ಯ ಧರ್ಮೋಪದೇಶ ಕಾರ್ಯಗಳು, ಅನ್ನದಾಸೋಹ ನಡೆಯತೊಡಗಿವೆ. ಈ ಪುರಾತನ ಮಠದಲ್ಲಿ ಸ್ಥಿರ ಮತ್ತು ಚರ ಪಟ್ಟಾಧಿಕಾರಗಳು ನಡೆಯುತ್ತಾ ಬಂದಿವೆ.

ಪರಂಪರೆ:

೧. ಷ.ಬ್ರ.ಶ್ರೀ ರೇವಣಸಿದ್ಧ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಮುರುಘೇಂದ್ರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಮಡಿವಾಳ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಮಠದ ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಮುರುಘೇಂದ್ರ ಶಿವಾಚಾರ್ಯ ಸ್ವಾಮಿಗಳು ಕಾಶಿಯಲ್ಲಿ ವಿದ್ಯೆ ಕಲಿತು,'ಕಾಶಿ ಪಂಡಿತ 'ರೆಂದು ಹೆಸರಾಗಿದ್ದರು. ಇವರು ಶಿವಪೂಜಾನಿಷ್ಠರಾಗಿ, ವೀರಶೈವ ಧರ್ಮದ ಅಷ್ಟಾವರಣ, ಪಂಚಚಾರಗಳನ್ನು ಕಟ್ಟು ನಿಟ್ಟಾಗಿ ಪಾಲಿಸಿ ಭಕ್ತರಿಗೂ ಧರ್ಮದ ಆಚಾರ ವಿಚಾರಗಳನ್ನು ತಿಳಿಸಿ ಭಕ್ತರನ್ನು ಉದ್ಧರಿಸಿದವರಾಗಿದ್ದಾರೆ. ಇಂತಹ ಆಚಾರವಂತರು ಲಿಂಗೈಕ್ಯರಾದ ಮೇಲೆ ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು ೧೮೫೫ ರ ಏಪ್ರಿಲ್ ಹತ್ತರಂದು ಪಟ್ಟಾಧಿಕಾರ ಪಡೆದುಕೊಂಡಿದ್ದಾರೆ.

ಬಳ್ಳಾರಿ ಜಿಲ್ಲೆಯ ಹಿರೇಹಡಗಲಿ ಗ್ರಾಮದಲ್ಲಿ ಪ್ರಸಿದ್ಧ ಗುರುಗಳಾಗಿದ್ದ ಶ್ರೀ ಶಾಂತಪ್ಪ ಮತ್ತು ಶ್ರೀ ಚನ್ನವೀರಪ್ಪನವರ ಗರಡಿಯಲ್ಲಿ ಬೆಳೆದು ಸಂಸ್ಕೃತ, ವೇದಾಧ್ಯಯನ ಮಾಡಿ ಮಠಕ್ಕೆ ಆಗಮಿಸಿ, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದಿದ್ದಲ್ಲದೆ ಶಿಥಿಲಗೊಂಡ ಮಠದ ಕಟ್ಟಡವನ್ನು ತೆಗೆದು ಹೊಸ ಕಟ್ಟಡವನ್ನು ನಿರ್ಮಿಸಿದ್ದಾರೆ. ಗುರುಗಳು ತಮ್ಮ ಜೀವಿತಾವಧಿಯಲ್ಲಿಯೇ ಶ್ರೀ ಮಡಿವಾಳೇಶ್ವರ ಶಿವಾಚಾರ್ಯ ಸ್ವಾಮಿಗಳಿಗೆ ೧೮೪೩ ರಲ್ಲಿ ಪಟ್ಟಾಧಿಕಾರವನ್ನು ಮಾಡಿರುತ್ತಾರೆ. ಶ್ರೀ ಮಡಿವಾಳೇಶ್ವರ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿ ಪಡಿಸಿದರು. ಇವರ ನಂತರ ಮಠವು ಕೆಲವು ದಿನಗಳ ಕಾಲ ಖಾಲಿ ಉಳಿದಿದ್ದು, ಈಗ ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯ ಪೂಜೆ, ಅಮಾವಾಸ್ಯೆ ಮತ್ತು ಹುಣ್ಣಿಮೆಗಳಲ್ಲಿ ವಿಶೇಷ ಪೂಜೆ, ಹಿರಿಯ ಗುರುಗಳ ಪುಣ್ಯಾರಾಧನೆ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಈಗಿನ ಗುರುಗಳಾದ ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ, ಧಾರ್ಮಿಕ ಕಾರ್ಯಗಳು ವ್ಯವಸ್ಥಿತವಾಗಿ ನಡೆಯುವಂತೆ ಮಾಡಿದ್ದಾರೆ. ಗುರುಗಳು ಪ್ರವಚನವನ್ನು ಹೇಳುವ ಕಲೆಯನ್ನು ಮೈಗೂಡಿಸಿಕೊಂಡಿದ್ದು ಧರ್ಮ ಪ್ರಸಾರವನ್ನು ಮಾಡುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು, ತಾರಾಪುರ ಹಿರೇಮಠ, ಆಲಮೇಲು, ಸಿಂದಗಿ ತಾ, ಬಿಜಾಪುರ ಜಿಲ್ಲೆ.

ಸಂಸ್ಥಾನ ಹಿರೇಮಠ: ಆಲಮೇಲು ಗ್ರಾಮದ ಮಧ್ಯಭಾಗದಲ್ಲಿ ಉಜ್ಜಯಿನಿ ಪೀಠದ ಶಾಖಾಮಠವಾದ ಶ್ರೀ ಸಂಸ್ಥಾನ ಹಿರೇಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದಲ್ಲಿ ಈ ಮಠವನ್ನು ಶ್ರೀ ಮಳೇಂದ್ರಶಿವಾಚಾರ್ಯ ಸ್ವಾಮಿಗಳು ಸ್ಥಾಪಿಸಿದರೆಂದು ಹೇಳಲಾಗು ತ್ತಿದೆ. ಇವರು ಉಜ್ಜಯಿನಿ ಪೀಠದಿಂದ ಆಗಮಿಸಿ ಲೋಕಸಂಚಾರ ಕೈಗೊಂಡು ಅಫಜಲಪುರದಲ್ಲಿ ನೆಲೆಸಿ ಅಲ್ಲಿ ಅನೇಕ ಪವಾಡಗಳನ್ನು ಮಾಡಿ, ನಂತರ ಇಲ್ಲಿಗೆ ಆಗಮಿಸಿ ಮಠವನ್ನು ಸ್ಥಾಪಿಸಿರುತ್ತಾರೆ. ಇವರ ನಂತರ ಒಟ್ಟು ಹದಿನೇಳು ಜನಗುರುಗಳು ಪಟ್ಟಾಧಿಕಾರವನ್ನು ಪಡೆದು, ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿ ಮಠವನ್ನು ಶ್ರೀಮಂತಗೊಳಿಸಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೆ ಈ ಮಠಾಧೀಶರ ಬಗ್ಗೆ ಆಧಾರಗಳು ಇಲ್ಲದೆ ಹೆಸರುಗಳನ್ನು ದಾಖಲಿಸಲಾಗುತ್ತಿಲ್ಲ.

ಮಠದ ಆವರಣದಲ್ಲಿ ಪರಂಪರೆಯ ಗುರುಗಳ ಹದಿನೇಳು ಗದ್ದುಗೆಗಳು ಸ್ಥಾಪನೆಯಾಗಿವೆ. ಈ ಗದ್ದುಗೆಗಳಿಗೆ ಮಠದ ವಂಶಸ್ಥರು ಪೂಜಾ ಕಾರ್ಯ ಹಾಗೂ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಪುರಾತನ ಪರಂಪರೆಯುಳ್ಳ ಈ ಮಠಕ್ಕೆ, ಮಠದ ವಂಶಸ್ಥರಾದ ಶ್ರೀ ವಿರೂಪಾಕ್ಷಯ್ಯ ಮತ್ತು ಶ್ರೀಮತಿ ಶಾರದಬಾಯಿಯವರ ಪುತ್ರರಾಗಿ ೧೯೮೭ ರ ಆಗಸ್ಟ್ ಹದಿನೈದರಂದು ಜನಿಸಿದ ಶ್ರೀ ಚಂದ್ರಶೇಖರ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಲಾಗಿದೆ.

ವಿಳಾಸ: ಷ.ಬ್ರ.ಶ್ರೀ ಚಂದ್ರಶೇಖರ ದೇವರು, ಶ್ರೀ ಸಂಸ್ಥಾನ ಹಿರೇಮಠ, ಆಲಮೇಲು, ಸಿಂದಗಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ಹೊಸಮಠ: ಆಲಮೇಲು ಗ್ರಾಮದಲ್ಲಿ ಸ್ಥಾಪನೆಯಾಗಿರುವ ಹೊಸ ಮಠವು ಉಜ್ಜಯಿನಿ ಪೀಠದ ಶಾಖಾಮಠವಾಗಿ ಬೆಳೆದಿದೆ. ಈ ಪುರಾತನ ಮಠದಲ್ಲಿ ಒಟ್ಟು ಮೂರು ಗದ್ದುಗೆಗಳು ಸ್ಥಾಪನೆಯಾಗಿವೆ. ಆದರೆ ಪರಂಪರೆಯ ಗುರುಗಳ ಹೆಸರುಗಳು ತಿಳಿದುಬಂದಿಲ್ಲ. ೧೯೮೦ ರಲ್ಲಿ ಶ್ರೀ ದಯಾನಂದ ಶಿವಾಚಾರ್ಯ ಸ್ವಾಮಿಗಳು ಈ ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದಾರೆ.

ಶ್ರೀ ದಯಾನಂದ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಈ ಮಠದಲ್ಲಿ ಧಾರ್ಮಿಕ ಕಾರ್ಯಗಳು ನಡೆಯತೊಡಗಿವೆ.ಮಠದ ಪರಂಪರೆಯ ಗುರುಗಳ ಗದ್ದುಗೆಗಳಿಗೆ ನಿತ್ಯ ಪೂಜೆ, ಅಮಾವಾಸ್ಯೆ ಮತ್ತು ಹುಣ್ಣಿಮೆಗಳಲ್ಲಿ ವಿಶೇಷ ಪೂಜೆಯನ್ನು ನಡೆಸುತ್ತಾ ಮಠದ ಅಸ್ತಿತ್ವವನ್ನು ಉಳಿಸಿಕೊಂಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ದಯಾನಂದ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹೊಸಮಠ, ಆಲಮೇಲು, ಸಿಂದಗಿ ತಾ, ಬಿಜಾಪುರ ಜಿಲ್ಲೆ.

ವಿರಕ್ತಮಠ: ಆಲಮೇಲು ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ವಿರಕ್ತ ಮಠವು, ಪುರಾತನ ಪರಂಪರೆಯ ಮಠವೆಂದು ಮಠದ ಕಟ್ಟಡದ ಆಧಾರದ ಮೇಲೆ ಹೇಳಬಹುದಾಗಿದೆ. ಕಪ್ಪು ಶಿಲೆಯಿಂದ ಸ್ಥಾಪಿಸಲಾಗಿರುವ ಕಟ್ಟಡವು ವಿಶಾಲವಾಗಿ ಹಾಗೂ ಭವ್ಯವಾಗಿ ರೂಪುಗೊಂಡಿದೆ. ಈಗ ಈ ಭವ್ಯ ಮಠದ ಕಟ್ಟಡದಲ್ಲಿ ಧಾರ್ಮಿಕ ಕಾರ್ಯಗಳಿಗೆ ಬಳಕೆಯಾಗದಿರುವುದು ವಿಷಾದನೀಯ. ಈ ಮಠದಲ್ಲಿ ನಾಲ್ಕು ಗದ್ದುಗೆಗಳು ಸ್ಥಾಪನೆಯಾಗಿವೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಕರಿಬಸಪ್ಪಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ವಿರಕ್ತಯ್ಯಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಮರುಳಸಿದ್ಧಯ್ಯಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಅರವಿಂದಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಕೂಡ್ಲಯ್ಯದೇವರು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಶ್ರೀ ಕರಿಬಸವ ಸ್ವಾಮಿಗಳು ಕರ್ತೃಗುರುಗಳೆಂದು ಹೇಳಲಾಗುತ್ತದೆ. ಆದರೆ ಈ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಕರ್ತೃಗುರುಗಳ ನಂತರ ಶ್ರೀ ವಿರಕ್ತಯ್ಯ ಸ್ವಾಮಿಗಳು, ತದನಂತರಶ್ರೀಮರುಳ ಸಿದ್ಧಯ್ಯ ಸ್ವಾಮಿಗಳು ಮಠದ ಅಧಿಕಾರವನ್ನು ನಡೆಸಿ, ೧೯೭೨ರಲ್ಲಿ ಲಿಂಗೈಕ್ಯರಾಗಿದ್ದಾರೆ. ನಂತರ ಶ್ರೀ ಅರವಿಂದ ಸ್ವಾಮಿಗಳು ಈಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡರೂ, ಇಲ್ಲಿ ನೆಲೆಸಲಿಲ್ಲ ಎಂದು ಹೇಳಲಾಗುತ್ತಿದೆ. ಈಗ ಶ್ರೀ ನಾಗಯ್ಯ ಮತ್ತು ಕಮಲಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಕೂಡ್ಲಯ್ಯದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕಮಾಡಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಕೂಡ್ಲಯ್ಯ ದೇವರು, ಶ್ರೀ ವಿರಕ್ತಮಠ, ಆಲಮೇಲು, ಸಿಂದಗಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ಕನ್ನೊಳ್ಳಿ

ಸಿಂದಗಿ ತಾಲ್ಲೂಕಿನ ಕನ್ನೊಳ್ಳಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿನೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಕನ್ನೊಳ್ಳಿ ಗ್ರಾಮದಲ್ಲಿ ಉಜ್ಜಯಿನಿ ಪೀಠದ ಶಾಖಾ ಮಠವಾದ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ.ಒಂಬತ್ತನೆಯ ಶತಮಾನದಲ್ಲಿಕನ್ನೂಳ್ಳಿ ಹಾಗೂ ಬೊಮ್ಮನಜೋಗಿಯು ಕಾಡುಜನಾಂಗದಿಂದ ಆವೃತಗೊಂಡ ಪ್ರದೇಶವಾಗಿತ್ತು. ಈ ಪ್ರದೇಶದಲ್ಲಿ ಮಠದ ಮೂಲ ಗುರುಗಳಾದ ಶ್ರೀ ಗುರುಪಾದೇಶ್ವರ ಶಿವಾಚಾರ್ಯ ಸ್ವಾಮಿಗಳು ಲೋಕಸಂಚಾರ ಮಾಡುತ್ತಾ ಈ ಪ್ರದೇಶಕ್ಕೆ ಬಂದು ಈ ಜನರ ಉದ್ಧಾರಕ್ಕೆಂದು ಈ ಸ್ಥಳದಲ್ಲಿ ನೆಲೆಸಿದರು. ಇಲ್ಲಿ ನೆಲೆಗೊಂಡ ಗುರುಗಳು ಕಾಡು ಜನರನ್ನು ಸಂಸ್ಕಾರವಂತರನ್ನಾಗಿ ಮಾಡಲು ಬಹಳ ಶ್ರಮಪಟ್ಟರು. ಗುರುಗಳು ಇವರನ್ನೆಲ್ಲಾ ಒಂದೆಡೆ ಸೇರಿಸಿ ಪ್ರತಿದಿನ ಶಿವಾನುಭವ ಗೋಷ್ಠಿಯನ್ನು ಮಾಡುವ ಮೂಲಕ, ಆಚಾರ ವಿಚಾರ ಮತ್ತು ಅಹಿಂಸಾವಾದವನ್ನು ಬೋಧಿಸಿ ಅವರ ಮನಸ್ಸನ್ನು ಪರಿವರ್ತಿಸಿದರು. ಈ ರೀತಿ ಕಾಡುಜನರನ್ನು ಹಂತ ಹಂತವಾಗಿ ತಿದ್ದಿ ಸಂಸ್ಕಾರವಂತರನ್ನಾಗಿ ಮಾಡಿದರು.

ಈ ರೀತಿ ಸಂಸ್ಕಾರವಂತರಾದ ಕಾಡು ಜನರಿಗೆ ಲಿಂಗಧಾರಣೆ ಮಾಡಿ ಲಿಂಗವಂತರನ್ನಾಗಿ ಪರಿವರ್ತಿಸಿ, ವೀರಶೈವಧರ್ಮ ಬೆಳೆಯುವಂತೆ ಮಾಡಿದರು. ಇಲ್ಲಿ ಧರ್ಮ ಬೆಳೆದು ಭಕ್ತರು ಹೆಚ್ಚಾದಂತೆಲ್ಲಾ ಮಠದ ಧಾರ್ಮಿಕ ಆಚರಣೆಗಳು ಸಹ ವಿಸ್ತಾರಗೊಂಡವು. ವಿಸ್ತಾರಗೊಂಡ ಮಠಕ್ಕೆ ಶ್ರೀ ಗುರುಪಾದೇಶ್ವರ ಶಿವಾಚಾರ್ಯ ಸ್ವಾಮಿಗಳು ಉತ್ತರಾಧಿಕಾರಿಗಳನ್ನು ನೇಮಿಸಿ ಜೀವಂತ ಸಮಾಧಿಯಾಗಿದ್ದಾರೆ.

ಬೆಳೆದ ಪರಂಪರೆ:

೧. ಷ.ಬ್ರ.ಶ್ರೀ ಗುರುಪಾದೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ನನ್ನಯ್ಯ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಗುರುಪಾದೇಶ್ವರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಮರುಳಾರಾಧ್ಯ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯ ಕೆಲವು ಗುರುಗಳ ಹೆಸರನ್ನು ದಾಖಲಿಸಲಾಗಿದೆ. ಪರಂಪರೆಯಲ್ಲಿ ಒಟ್ಟು ಹದಿಮೂರು ಜನ ಗುರುಗಳು ಅಧಿಕಾರವನ್ನು ನಡೆಸಿದ್ದಾರೆಂದು ಹೇಳಲಾಗುತ್ತದೆ. ಆದರೆ ಆರು ಜನ ಗುರುಗಳ ಹೆಸರುಗಳು ಲಭ್ಯವಿಲ್ಲ. ಅಲ್ಲದೆ ಪರಂಪರೆಯ ಕರ್ತೃಗುರುಗಳ ನಂತರ ಶ್ರೀ ರುದ್ರಮುನಿ ಸ್ವಾಮಿಗಳ ತನಕ ಅಧಿಕಾರ ನಡೆಸಿದ ಗುರುಗಳ ಬಗ್ಗೆಯೂ ಸಹ ಆಧಾರದ ಕೊರತೆಯಿಂದ ಮಾಹಿತಿ ಲಭ್ಯವಿಲ್ಲ.

ಈಗಿನ ಗುರುಗಳ ಅನುಗ್ರಹ ಗುರುಗಳಾದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಮಹಾ ಮಹಿಮಾಶಾಲಿಗಳು. ಇವರ ಪಾಂಡಿತ್ಯಕ್ಕೆ ಪಂಚಪೀಠಾಧೀಶರು ಮೆಚ್ಚುಗೆ ವ್ಯಕ್ತಪಡಿಸಿ ಕೆಲವು ಧರ್ಮದ ಜಿಜ್ಞಾಸೆಗಳನ್ನು ಇಲ್ಲಿ ಪರಿಹರಿಸುತ್ತಿದ್ದರೆಂದು

ಹೇಳಲಾಗುತ್ತಿದೆ. ಹಿಂದಿನ ಉಜ್ಜಯಿನಿ ಜಗದ್ಗುರುಗಳಾದ ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಇಲ್ಲಿ ಅನುಷ್ಠಾನಗೊಂಡಿದ್ದರೆಂದು ಹೇಳಲಾಗುತ್ತಿದೆ. ಗುರುಗಳು ವಾಕ್‌ಸಿದ್ಧಿ ಪುರುಷರಾಗಿದ್ದ ಕಾರಣ ಇಲ್ಲಿನ ಜನ ಗುರುಗಳ ಮುಂದೆ ನಿಲ್ಲಲು ಭಯ ಪಡುತ್ತಿದ್ದರು. ಈ ಅನೀತಿ ಕಾರ್ಯಗಳನ್ನು ನಡೆಸದೆ ಸಜ್ಜನರಾಗಿ ಬದುಕುತ್ತಿದ್ದರು. ಶ್ರೀ ಸಿದ್ಧಲಿಂಗ ಸ್ವಾಮಿಗಳು ಪಾಂಡಿತ್ಯದಿಂದ ಹಾಗೂ ತಮ್ಮ ತಪೋಶಕ್ತಿಯಿಂದ ಮಠವನ್ನು ಅಭಿವೃದ್ಧಿಪಡಿಸಿದರು.

ಹಿರಿಯ ಚೇತನ: ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳ ನಂತರ ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳು ೧೯೩೩ ರಲ್ಲಿ ಈ ಮಠದ ಅಧಿಕಾರವನ್ನು ವಹಿಸಿಕೊಂಡರು. ಗುರುಗಳು ಶ್ರೀ ಗುರಯ್ಯ ಮತ್ತು ಶ್ರೀಮತಿ ಲಿಂಗಮ್ಮನವರ ಪುತ್ರರಾಗಿ ೧೯೧೯ರಲ್ಲಿ ಜನಿಸಿದರು. ಬೊಮ್ಮನಜೋಗಿ, ಸೋಲಾಪುರದಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ಮಠಕ್ಕೆ ಆಗಮಿಸಿದರು. ಹಿರಿಯ ಗುರುಗಳಾದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳ ಮಾರ್ಗದರ್ಶನದಲ್ಲಿ ಯೋಗಾಸನ ಮತ್ತು ಪ್ರಾಣಯಾಮವನ್ನು ಕಲಿತು ಯೋಗಸಿದ್ಧಿಯನ್ನು ಗಳಿಸಿಕೊಂಡರು. ನಂತರ ಯಾದಗಿರಿಯ ಸಂಸ್ಕೃತ ಕಾಲೇಜಿನಲ್ಲಿ ಶ್ರೀ ಚಂದ್ರಶೇಖರ ಸ್ವಾಮಿಗಳ ಕೈಕೆಳಗೆ ವಿದ್ಯಾಭ್ಯಾಸ ಮಾಡಿ ೧೯೪೭ ರಲ್ಲಿ ಮಠಕ್ಕೆ ಆಗಮಿಸಿದರು. ಈ ವೇಳೆಗಾಗಲೇ ಹಿರಿಯ ಗುರುಗಳಾದ ಶ್ರೀ ಸಿದ್ಧಲಿಂಗ ಶಿವಾಚಾರ್ಯರು ಲಿಂಗೈಕ್ಯರಾಗಿದ್ದು, ಮಠವು ಖಾಲಿ ಉಳಿದಿದ್ದ ಕಾರಣ ಮಠವು ಪೂರ್ಣ ಶಿಥಿಲಾವಸ್ಥೆಗೆ ಬಂದಿತ್ತು.

ಶ್ರೀ ಮರುಳಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ಅವ್ಯವಸ್ಥೆಗೊಂಡಿದ್ದ ಮಠದಲ್ಲಿ ನೆಲೆಸಿ ಮಠವನ್ನು ವ್ಯವಸ್ಥಿತವಾಗಿ ರೂಪುಗೊಳಿಸಿದರು. ಮಠದ ಆಸ್ತಿಯನ್ನು ಶಿಸ್ತುಬದ್ಧಗೊಳಿಸಿ,ಕಾಯಕ ಯೋಗದಿಂದ ಹೆಚ್ಚು ಆದಾಯ ಬರುವಂತೆ ಮಾಡಿದರು. ಗುರುಗಳು ತಮ್ಮ ಪಾಂಡಿತ್ಯದ ಪ್ರಭಾವದಿಂದ ಮಠವನ್ನು ಜ್ಞಾನದ ಕೇಂದ್ರವನ್ನಾಗಿ ರೂಪಿಸಿ ಆ ಮೂಲಕ ವೀರಶೈವಧರ್ಮ ಅರ್ಥಬದ್ಧವಾಗಿ ಆಚರಣೆಗೆ ಬರುವಂತೆ ನೋಡಿಕೊಂಡರು. ಈ ಹಿರಿಯ ಚೇತನದ ಮಾರ್ಗದರ್ಶನದಲ್ಲಿ ಅನೇಕ ಕಿರಿಯ ಹರಗುರು ಚರಮೂರ್ತಿಗಳು ನಾಡಿನ ಬೇರೆಬೇರೆ ಮಠಗಳಲ್ಲಿ ಅಧಿಕಾರ ಪಡೆದು ಪ್ರತಿಭಾ ಸಂಪನ್ನರಾಗಿ ಧರ್ಮ ಬೆಳೆಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದಲ್ಲಿ ಶ್ರೀ ದಾರುಕಾಚಾರ್ಯರ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಮಠದ ಪರಂಪರೆಯ ಗುರುಗಳ ಐದು ಗದ್ದುಗೆಗಳನ್ನು ಸ್ಥಾಪಿಸಲಾಗಿದ್ದು, ಇವುಗಳಿಗೆ ನಿತ್ಯ ಪೂಜೆ ನಡೆಸಲಾಗುತ್ತಿದೆ. ಅಮಾವಾಸ್ಯೆ ಮತ್ತು ಹುಣ್ಣಿಮೆಗಳಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದ್ದು, ಈ ಸಂದರ್ಭದಲ್ಲಿ ಹೆಚ್ಚು ಜನ ಮಠಕ್ಕೆ ಆಗಮಿಸಿ ಗುರುಗಳ ಆಶೀರ್ವಾದವನ್ನು ಪಡೆದುಕೊಳ್ಳುತ್ತಾರೆ. ಗುರುಗಳು ಭಕ್ತರ ಇಷ್ಟಾರ್ಥಗಳನ್ನು ಸಿದ್ಧಿಸುವಂತೆ ಆಶೀರ್ವಾದ ಮಾಡಿ ಭಕ್ತರನ್ನು ಉದ್ಧರಿಸಿದ್ದಾರೆ. ಶ್ರಾವಣಮಾಸದಲ್ಲಿ ಹಿರಿಯ ಗುರುಗಳು ಅನುಷ್ಠಾನವನ್ನು ಕೈಗೊಳ್ಳುತ್ತಾರೆ. ಯುಗಾದಿಯಲ್ಲಿ ಪುರಾಣ ಪ್ರವಚನ ಮತ್ತು ದಾರುಕ ಜಯಂತಿಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಅಯ್ಯಾಚಾರ, ದೀಕ್ಷಾ ಸಂಸ್ಕಾರ ಹಾಗೂ ಧರ್ಮೋಪದೇಶ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಮಠದಲ್ಲಿ ಬಸವ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಿ ಧಾರ್ಮಿಕ ಸಭೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭಗಳಲ್ಲಿ ಅನ್ನ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಮರುಳಾರಾಧ್ಯ ಶಿವಾಚಾರ್ಯ ಸ್ವಾಮಿಗಳು ತಮ್ಮ ಕರ್ತೃತ್ವಶಕ್ತಿಯಿಂದ ಮಠವನ್ನು ಅಭಿವೃದ್ಧಿಪಡಿಸಿದ್ದಲ್ಲದೆ, ಶಾಖಾಮಠವಾದ ಬೊಮ್ಮನಜೋಗಿಯ ಮಠವನ್ನು ಅಭಿವೃದ್ಧಿಗೊಳಿಸಿದ್ದಾರೆ. ಮಠದ ಮೂವತ್ತೆಂಟು ಎಕರೆ ಜಮೀನನ್ನು ಅಭಿವೃದ್ಧಿಪಡಿಸಿ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ಮಠದ ವತಿಯಿಂದ ಕಲ್ಯಾಣ ಮಂಟಪ ಮತ್ತು ಮಠಕ್ಕೆ ನೂತನ ಕಟ್ಟಡವನ್ನು ನಿರ್ಮಿಸಿದ್ದಾರೆ.

ಸಾಮಾಜಿಕ ಕಾರ್ಯಗಳು: ಶ್ರೀ ಮರುಳಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಆಯುರ್ವೇದ ಪಂಡಿತರಾಗಿದ್ದು, ಗ್ರಾಮಾಂತರ ರೋಗಿಗಳಿಗೆ ಔಷಧಿ ನೀಡಿ ಆರೈಕೆ ಮಾಡುತ್ತಿದ್ದಾರೆ. ಸಮಾಜದ ಅಭಿವೃದ್ಧಿಗಾಗಿ ಉಪದೇಶ,ಉಪನ್ಯಾಸಗಳನ್ನು ಮಾಡಿ ಜನರ ಮನಸ್ಸನ್ನು ಪರಿವರ್ತಿಸಿ ಸಂಸ್ಕಾರವಂತ ಸಮಾಜವನ್ನು ರೂಪಿಸಿದ್ದಾರೆ. ತಮ್ಮ ಎಂಬತ್ತೊಂದು ವರ್ಷದ ವಯಸ್ಸಿನಲ್ಲಿಯೂ ಭಕ್ತರಿಗೆ ಧರ್ಮೋಪದೇಶವನ್ನು ನೀಡುತ್ತಾ, ಮಠವನ್ನು ಸಮಾಜ ಮುಖಿಯಾಗಿ ಬೆಳೆಸಿದ್ದಾರೆ. ಗುರುಗಳು

ಮಠದ ಪರಂಪರೆಯನ್ನು ಬೆಳೆಸಲು ತಮ್ಮ ಸಹೋದರ ಸಂಬಂಧಿಯನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಮರುಳಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಕನ್ನೊಳ್ಳಿ, ಸಿಂದಗಿ ತಾ, ಬಿಜಾಪುರ ಜಿಲ್ಲೆ.

ಕಲಕೇರಿ

ಸಿಂದಗಿ ತಾಲ್ಲೂಕಿನ ಕಲಕೇರಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಮೂವತ್ತು ಕಿ.ಮೀ ದೂರದಲ್ಲಿದೆ. ತ್ರೇತಾಯುಗದ ಅಗಸ್ತ್ಯಮುನಿಯಿಂದ ಹೊಗಳಿಕೆ ಒಳಪಟ್ಟಿದ್ದ ಕಲಿದೇವ ಪುರವೇ ಇಂದು ಕಲಕೇರಿಯಾಗಿ ರೂಪಾಂತರ ಪಡೆದಿದೆ. ಈ ಗ್ರಾಮದಲ್ಲಿ ಶ್ರೀ ಗದ್ದುಗೆಮಠ, ಶ್ರೀ ವಿರಕ್ತಮಠ, ಶ್ರೀ ಹಿರೇಮಠ, ಶ್ರೀ ಜಾಲಹಳ್ಳಿಮಠ ಎಂಬ ನಾಲ್ಕು ಮಠಗಳು ಸ್ಥಾಪನೆಯಾಗಿವೆ.ಪುರಾತನ ಕಾಲದಲ್ಲಿ ಸ್ಥಾಪನೆಗೊಂಡ ಈ ಮಠಗಳು ವೀರಶೈವ ಧರ್ಮ ಪ್ರಬಲವಾಗಿ ಬೆಳೆಯುವಂತೆ ಮಾಡಿವೆ. ಅಂದು ಸ್ಥಾಪನೆಗೊಂಡ ಮಠಗಳಲ್ಲಿ ಶ್ರೀ ಹಿರೇಮಠದಲ್ಲಿ ಮಾತ್ರ ಗುರುಗಳಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತಿದ್ದಾರೆ. ಉಳಿದ ಮಠಗಳಲ್ಲಿ ಮಠಾಧೀಶರಿಲ್ಲದೆ ಖಾಲಿ ಉಳಿದಿವೆ.

ಹಿರೇಮಠ: ಕಲಕೇರಿ ಗ್ರಾಮದ ಮಧ್ಯಭಾಗದಲ್ಲಿ ಉಜ್ಜಯಿನಿ ಪೀಠದ ಶಾಖಾ ಮಠವಾಗಿ ಪುತ್ರ ವರ್ಗದ ಪರಂಪರೆಯಲ್ಲಿ ಬೆಳೆದಿರುವ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ. 'ಶ್ರೀ ಮರುಳಾರಾಧ್ಯ ಶಿವಾಚಾರ್ಯ ಸ್ವಾಮಿ'ಗಳು ಈ ಮಠದ ಸ್ಥಾಪಕರೆಂದು ಹೇಳಲಾಗುತ್ತಿದೆ. ಗುರುಗಳು ಹಾಲಗೂರು ಗ್ರಾಮದಿಂದ ಲೋಕಸಂಚಾರ ಹೊರಟು ಧರ್ಮಪ್ರಸಾರವನ್ನು ಕೈಗೊಂಡು ಕಲ್ಕೆರೆ ಗ್ರಾಮಕ್ಕೆ ಆಗಮಿಸಿ ಇಲ್ಲಿ ನೆಲೆಗೊಂಡಿದ್ದಾರೆ. ಗುರುಗಳು ಇಲ್ಲಿ ಮಠವನ್ನು ಸ್ಥಾಪಿಸಿ ವೀರಶೈವ ಧರ್ಮದ ಆಚರಣೆಗಳನ್ನು ಅನುಷ್ಠಾನಗೊಳಿಸಿ ಭಕ್ತರನ್ನು ಉದ್ಧರಿಸಿದ್ದಾರೆ. ಧರ್ಮಸಂಸ್ಕಾರವನ್ನು ಹೊಂದಿದ ಗ್ರಾಮದ ಭಕ್ತರು ಮಠದಲ್ಲಿ ನಿತ್ಯ ಧಾರ್ಮಿಕ ಕಾರ್ಯಗಳು ನಡೆಯಲು ಸಹಕರಿಸಿದರು. ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳು ತಮ್ಮ ಪ್ರಾಬಲ್ಯದಿಂದ ವೀರಶೈವ ಧರ್ಮವನ್ನು ಪ್ರಬಲವಾಗಿ ಬೆಳೆಸಿ ಲಿಂಗೈಕ್ಯರಾದರು.

ಪರಂಪರೆ:

೧. ಷ.ಬ್ರ.ಶ್ರೀ ಮರುಳಾರಾಧ್ಯ ಶಿವಾಚಾರ್ಯಸ್ವಾಮಿಗಳು (ಹದಿಮೂರನೆಯ ಶತಮಾನ)
೨. ಷ.ಬ್ರ.ಶ್ರೀ ಮರುಳಸಿದ್ಧ ಶಿವಾಚಾರ್ಯಸ್ವಾಮಿಗಳು (ಕ್ರಿ.ಶ.೧೩೫೮-೧೪೪೧)
೩. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯಸ್ವಾಮಿಗಳು (ಕ್ರಿ.ಶ.೧೪೬೦-೧೫೫೧)
೪. ಷ.ಬ್ರ.ಶ್ರೀ ಮರಿ ಮರುಳಸಿದ್ಧ ಶಿವಾಚಾರ್ಯಸ್ವಾಮಿಗಳು (ಕ್ರಿ.ಶ.೧೬೦೦-೧೬೯೨)
೫. ಷ.ಬ್ರ.ಶ್ರೀ ಮರುಳಸಿದ್ಧ ಶಿವಾಚಾರ್ಯಸ್ವಾಮಿಗಳು (ಕ್ರಿ.ಶ.೧೭೨೮-೧೮೦೦)
೬. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯಸ್ವಾಮಿಗಳು (ಕ್ರಿ.ಶ.೧೮೦೦-೧೮೮೬)
೭. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು (ಕ್ರಿ.ಶ.೧೮೮೬-೧೯೨೬)
೮. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯಸ್ವಾಮಿಗಳು (ಕ್ರಿ.ಶ.೧೯೨೬-)
೯. ಷ.ಬ್ರ.ಶ್ರೀ ಸಿದ್ಧರಾಮದೇವರು (ಉತ್ತರಾಧಿಕಾರಿಗಳು)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಶ್ರೀ ಮರುಳಾರಾಧ್ಯ ಶಿವಾಚಾರ್ಯ ಸ್ವಾಮಿಗಳ ನಂತರದ ಎಲ್ಲಾ ಗುರುಗಳು ತಮ್ಮ ಪಾಂಡಿತ್ಯದಿಂದ ಮಠವನ್ನು ಅಭಿವೃದ್ಧಿ ಪಡಿಸಿದ್ದಾರೆ. ಮಠದ ಪರಂಪರೆಯ ಐದನೆಯ ಗುರುಗಳಾದ ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳು ಅರಳಗುಂಡಿಗೆ ಶ್ರೀ ಶರಣಬಸವೇಶ್ವರರ ಗುರುಗಳಾಗಿ, ಇವರಿಗೆ ಧಾರ್ಮಿಕ ಸಂಸ್ಕಾರ ನೀಡಿ,ಮೇರು ವ್ಯಕ್ತಿತ್ವವನ್ನು ಬೆಳೆಸಿಕೊಂಡು ವಿಖ್ಯಾತರಾಗಲು ಕಾರಣಕರ್ತರಾಗಿದ್ದಾರೆ. ಈ ಪುರಾತನ ಮಠಕ್ಕೆ ಈಗ ಎಂಟನೆಯ ಗುರುಗಳಾಗಿ ಅಧಿಕಾರವನ್ನು ವಹಿಸಿಕೊಂಡಿರುವ ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ತೊಂಬತ್ತಾರು ವರ್ಷ ವಯಸ್ಸಿನ ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ಶಿವಪೂಜಾನಿಷ್ಠರಾಗಿ, ವೀರಶೈವಧರ್ಮವನ್ನು ವಿಧಿವತ್ತಾಗಿ ಬೆಳೆಸಿದ್ದಾರೆ. ಇವರು ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಸಿದ್ಧರಾಮ ದೇವರನ್ನು ನೇಮಕ ಮಾಡಿಕೊಂಡಿದ್ದಾರೆ.

ಮಠದಲ್ಲಿ ಕರ್ತೃಗುರುಗಳ ಹಾಗೂ ಇತರೆ ಆರು ಜನ ಗುರುಗಳ ಗದ್ದುಗೆಗಳು ಸ್ಥಾಪನೆಯಾಗಿವೆ. ಮಠದಲ್ಲಿ

ಶ್ರೀಕಾಡಲಿಂಗೇಶ್ವರ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲಾಗಿದೆ. ಮಠದ ಆವರಣದಲ್ಲಿ ಪುರಾತನ ಕಲ್ಲಿನ ಬಾವಿ ಇದೆ. ಶ್ರೀ ಶರಣ ಬಸವೇಶ್ವರರ ಬೆಳ್ಳಿಯಮೂರ್ತಿ ಈ ಮಠದಲ್ಲಿವೆ. ನಿತ್ಯ ಪೂಜಾ ಕಾರ್ಯಗಳು ನಡೆಯುತ್ತಿವೆ. ಮಠದ ಆಸ್ತಿಯಾಗಿ ಎಂಟು ಎಕರೆ ಜಮೀನಿದ್ದು ಇದನ್ನು ಅಭಿವೃದ್ಧಿಪಡಿಸಲಾಗಿದೆ.

ವಿಳಾಸ: ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಕಲಕೇರಿ ಸಿಂದಗಿ ತಾಲ್ಲೂಕು, ಬಿಜಾಪುರ ಜಿಲ್ಲೆ.
ಆಧಾರ: 'ಶರಣ ಬಸವ ಪ್ರಭೆ'- ಲೇಖಕರು : ಡಾ. ಎಸ್.ಎಂ. ಹಿರೇಮಠ

ಗದ್ದುಗೆಮಠ: ಗ್ರಾಮದ ಮಧ್ಯಭಾಗದಲ್ಲಿರುವ ಶ್ರೀ ಗದ್ದುಗೆಮಠವು ಉಜ್ಜಯಿನಿ ಪೀಠದ ಶಾಖಾಮಠವಾಗಿದೆ. ಇಲ್ಲಿ ಶ್ರೀ ಘಂಟ್ಯೆ ದೇವರು ಮತ್ತು ಶ್ರೀ ಮಡಿವಾಳಯ್ಯನವರ ಹೆಸರಿನಲ್ಲಿ ಜೋಡಿ ಗದ್ದುಗೆಗಳು ಸ್ಥಾಪನೆಯಾಗಿರುವುದರಿಂದ ಈ ಮಠಕ್ಕೆ 'ಶ್ರೀ ಗದ್ದುಗೆಮಠ' ಎಂದು ಹೆಸರು ಬಂದಿದೆ.

ಹನ್ನೊಂದನೆಯ ಶತಮಾನದಲ್ಲಿ ಶ್ರೀ ಕಲ್ಲಿನಾಥ ಶಿವಾಚಾರ್ಯ ಸ್ವಾಮಿಗಳು ಅಧಿಕಾರ ನಡೆಸಿ ಮಠವನ್ನು ಹೆಚ್ಚು ಪ್ರಚಾರಕ್ಕೆ ತಂದಿದ್ದರು. ಇವರ ನಂತರ ಶ್ರೀ ಗುರುಘಂಟ್ಯೆ ದೇವರು ಮತ್ತು ಶ್ರೀ ಮಡಿವಾಳಯ್ಯ (ಮಾಚಿದೇವರು)ನವರು ಒಂದಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸಿ ಜೊತೆಯಲ್ಲಿಯೇ ಐಕ್ಯಗೊಂಡರೆಂದು ಹೇಳಲಾಗುತ್ತದೆ. ಮಠದ ಪರಂಪರೆಯ ನಾಲ್ಕನೆಯ ಗುರುಗಳೆಂದು ಹೇಳಲಾಗುವ ಶ್ರೀ ಕಲ್ಲಯ್ಯದೇವ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಜೋಡು ಪಲ್ಲಕ್ಕಿ ಉತ್ಸವ ಪ್ರಾರಂಭವಾಯಿತೆಂದು ಹೇಳಲಾಗುತ್ತದೆ. ನಂತರ ಮೂವತ್ತೊಂಭತ್ತನೆಯ ಪಟ್ಟಾಧಿಕಾರಿ ಶ್ರೀ ಅಯ್ಯಪ್ಪದೇವ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಜೋಡುತೇರಿನ ಮಹಾ ಜಾತ್ರೆ ಪ್ರಾರಂಭವಾಯಿತೆಂದು ಹೇಳಲಾಗುತ್ತದೆ.

ಜೋಡುಗದ್ದುಗೆಗಳು ಇಲ್ಲಿ ಸ್ಥಾಪನೆಯಾಗಿರುವ ಕಾರಣ ಎರಡು ತೇರು, ಎರಡು ಪಾದಗಟ್ಟೆಗುಡಿ, ಎರಡು ಕೆಂಡೋತ್ಸವ, ಎರಡು ತೆಂಗಿನಕಾಯಿ ಒಡೆಯುವುದು, ಎರಡು ಎಡೆ ಮಾಡಿಸುವುದು, ಈ ವಿಶಿಷ್ಟ ಪದ್ಧತಿಗಳು ಗದ್ದುಗೆ ಮಠದಲ್ಲಿ ಪರಂಪರಾನುಗತವಾಗಿ ನಡೆಯುತ್ತಾ ಬಂದಿವೆ.

ಪರಂಪರೆ: ಹನ್ನೊಂದನೆಯ ಶತಮಾನದಲ್ಲಿ ಪ್ರಾರಂಭವಾದ ಈ ಮಠದ ಪರಪಂರೆಯಲ್ಲಿ ಶ್ರೀ ಕಲಿದೇವ, ಶ್ರೀ ಕಲ್ಲಿನಾಥ, ಶ್ರೀ ವೀರಘಂಟ್ಯೆದೇವ, ಶ್ರೀ ಕಲ್ಲಯ್ಯದೇವ, ಶ್ರೀ ಮರುಳಸಿದ್ಧ, ಶ್ರೀ ಗುರುಸಿದ್ಧ, ಶ್ರೀ ಕಲ್ಯಾಣಾರ್ಯ, ಶ್ರೀ ಕಲಿದೇವಯ್ಯ, ಶ್ರೀ ಕಲಿಗಣನಾಥ, ಶ್ರೀ ಮಲ್ಲಿನಾಥ, ಶ್ರೀ ಕಲಿವೀರ, ಶ್ರೀ ರಾಮಲಿಂಗಪ್ರಭು, ಶ್ರೀ ಗುರುವೃಷಭ, ಶ್ರೀ ಖಾಸಪ್ಪಯ್ಯ, ಶ್ರೀ ಸಿದ್ಧರಾಮ, ಶ್ರೀ ವೀರಘಂಟೇಶ, ಶ್ರೀ ವೀರಸುಗುರು, ಶ್ರೀ ಕಲ್ಲಿಖ್ಯಾತಯ್ಯ, ಶ್ರೀ ಮಡಿವಾಳಪ್ರಭು, ಶ್ರೀ ಮಹಾಲಿಂಗ, ಶ್ರೀ ಮರುಳೇಂದ್ರ (ಹುಚ್ಚೇಶ), ಶ್ರೀ ಮಹಾಂತಮಲ್ಲೇಶ, ಶ್ರೀ ಮಡಿವಾಳ ಮಾಚಯ್ಯ, ಶ್ರೀ ವೀರಘಂಟೇಶ, ಶ್ರೀಖಾಸಯ್ಯ, ಶ್ರೀ ಮಳೆಯಪ್ಪಯ್ಯ, ಶ್ರೀ ವೀರಘಂಟಯ್ಯ, ಶ್ರೀ ಅಯ್ಯಪ್ಪಯ್ಯ, ಶ್ರೀ ಮಹಾಂತಲಿಂಗ, ಶ್ರೀ ಮರುಳಸಸಿದ್ಧ, ಶ್ರೀಖಾಸಯ್ಯ, ಶ್ರೀ ವೀರಘಂಟಯ್ಯ, ಶ್ರೀ ಮರುಳಸಿದ್ಧ, ಶ್ರೀ ಮಹಾದೇವ, ಶ್ರೀ ರುದ್ರಮುನಿ ಈ ರೀತಿ ನಲವತ್ತಾರು ಶಿವಾಚಾರ್ಯರು ಆಡಳಿತ ನಡೆಸಿದ್ದು, ನಲವತ್ತೇಳನೆಯ ಉತ್ತರಾಧಿಕಾರಿಗಳಾಗಿ ಶ್ರೀ ಮರಿದೇವರು ಆಯ್ಕೆಯಾಗಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

ವಿಶಿಷ್ಟ ಸಂಪ್ರದಾಯದಲ್ಲಿ ಬೆಳೆದು ಬಂದ ಈ ಮಠದಲ್ಲಿ ನಿತ್ಯ ಧಾರ್ಮಿಕ ಕಾರ್ಯಗಳು ಹಾಗೂ ಶ್ರಾವಣ, ಧನುರ್ಮಾಸ, ಅಮಾವಾಸ್ಯೆ ಹಾಗೂ ಹುಣ್ಣಿಮೆಯಲ್ಲಿ ವಿಶೇಷ ಪೂಜೆ ನಡೆಯುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಮರಿದೇವರು, ಶ್ರೀ ಗದ್ದುಗೆಮಠ, ಕಲಕೇರಿ, ಸಿಂದಗಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ವಿರಕ್ತಮಠ: ಕಲ್ಕೆರೆ ಗ್ರಾಮದ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ವಿರಕ್ತಮಠವು ಪುರಾತನ ಕಾಲದಿಂದ ಅಸ್ತಿತ್ವದಲ್ಲಿದೆ. ಈ ಮಠದಲ್ಲಿ ಮೂರು ಜನ ಗುರುಗಳು ಅಧಿಕಾರವನ್ನು ನಡೆಸಿ ಲಿಂಗೈಕ್ಯರಾಗಿದ್ದಾರೆ. ಇವರ ಗದ್ದುಗೆಗಳು ಮಠದ ಆವರಣದಲ್ಲಿ ಸ್ಥಾಪನೆಯಾಗಿವೆ. ಈಗ ಮಠದಲ್ಲಿ ಉತ್ತರಾಧಿಕಾರಿಗಳು ಯಾರೂ ಇಲ್ಲದ ಕಾರಣ ಮಠವು ಖಾಲಿ ಉಳಿದಿದೆ. ಅಲ್ಲದೆ ಮಠದ ಸುತ್ತ ಮುತ್ತಲಿನ ಆಸ್ತಿ ಅನ್ಯರ ಪಾಲಾಗಿ ಹೋಗಿದೆ.

ಕೆರುಟಗಿ

ಸಿಂದಗಿ ತಾಲ್ಲೂಕಿನ ಕೆರುಟಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಸಿದ್ಧರಾಮೇಶ್ವರ ಮಠವು ಅಸ್ತಿತ್ವದಲ್ಲಿದೆ.

ಸಿದ್ಧರಾಮೇಶ್ವರಮಠ: ಕೆರುಟಗಿ ಗ್ರಾಮದಲ್ಲಿ ಉಜ್ಜಯಿನಿ ಪೀಠದ ಶಾಖಾ ಮಠವಾಗಿ, ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿರುವ ಶ್ರೀ ಸಿದ್ಧರಾಮೇಶ್ವರ ಮಠವು ಸ್ಥಾಪನೆಯಾಗಿದೆ. ಮಠದ ಸ್ಥಾಪಕರಾದ ಶ್ರೀ ವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳು ಲೋಕಸಂಚಾರಕ್ಕೆ ಬಂದು ಕೊಪ್ಪಳದಲ್ಲಿ ಕೆಲವು ದಿನ ನೆಲೆಸಿ, ನಂತರ ಕೆರುಟಗಿ ಗ್ರಾಮಕ್ಕೆ ಆಗಮಿಸುತ್ತಾರೆ. ಗುರುಗಳು ಇಲ್ಲಿ ನೆಲೆಗೊಂಡು ಮಠವನ್ನು ಸ್ಥಾಪಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸಿ ಲಿಂಗೈಕ್ಯರಾಗಿದ್ದಾರೆ.

ಪರಂಪರೆ:

೧. ಷ.ಬ್ರ.ಶ್ರೀ ವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ಲಿಂಗಯ್ಯ ಶಿವಾಚಾರ್ಯ ಸ್ವಾಮಿಗಳು
೩. ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು
೪. ಷ.ಬ್ರ.ಶ್ರೀ ಶಿವಬಸವ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಲಿಂಗಯ್ಯ ಶಿವಾಚಾರ್ಯ ಸ್ವಾಮಿಗಳು ಇಲ್ಲಿ ಮಠವು ಪ್ರಬಲವಾಗಿ ಬೆಳೆಯುವಂತೆ ಮಾಡಿ, ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳಿಗೆ ಪಟ್ಟಾಧಿಕಾರ ಮಾಡಿ ಲಿಂಗೈಕ್ಯರಾಗಿದ್ದಾರೆ. ಗುರುಗಳ ಕೃಪಾಶೀರ್ವಾದಿಂದ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡ ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು ಸಂಸ್ಕೃತ, ವೇದಾಧ್ಯಯನ ಮಾಡಿ ಪಾಂಡಿತ್ಯವನ್ನು ಸಂಪಾದಿಸಿಕೊಂಡಿದ್ದರು. ಗುರುಗಳು ವೀರಶೈವ ಧರ್ಮದ ಆಚರಣೆಗಳನ್ನು ಭಕ್ತರು ಕಾರ್ಯರೂಪಕ್ಕೆ ತರುವಂತೆ ಮಾಡಿ ಧರ್ಮವನ್ನು ಬೆಳೆಸಿದ್ದರು. ಇವರು ವಾಕ್ ಸಿದ್ಧಿಗಳಾಗಿ, ತಪೋನಿಷ್ಠರಾಗಿ ಹೆಸರು ಗಳಿಸಿದ್ದರು. ಇವರು ಅನೇಕ ಪವಾಡಗಳನ್ನು ಮಾಡಿ ಪವಾಡ ಪುರುಷರೆಂದು ಹೆಸರು ಪಡೆದು ೧೯೭೦ ರಲ್ಲಿ ಲಿಂಗೈಕ್ಯರಾದರು. ಇವರ ಪ್ರಭಾವದಿಂದ ಈ ನಾಡು ಅಭಿವೃದ್ಧಿಯನ್ನು ಸಾಧಿಸಿತು. ಈ ಕಾರಣಕ್ಕಾಗಿ ಈ ಪುರಾತನ ಮಠ ವನ್ನು ಭಕ್ತರು 'ಶ್ರೀ ಸಿದ್ಧರಾಮೇಶ್ವರಮಠ 'ಎಂದು ಕರೆಯುವ ಮೂಲಕ ಗುರುಗಳ ಹೆಸರನ್ನು ಶಾಶ್ವತವಾಗಿ ನೆನಪು ಮಾಡಿ ಕೊಳ್ಳುವಂತೆ ಮಾಡಿದ್ದಾರೆ.

ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳ ನಂತರ ಶ್ರೀ ಅಯ್ಯಪ್ಪಯ್ಯ ಮತ್ತು ಶ್ರೀಮತಿ ಶಂಕರಮ್ಮನವರ ಪುತ್ರರಾಗಿ ೧೯೫೬ ರ ಫೆಬ್ರವರಿ ನಾಲ್ಕರಂದು ಜನಿಸಿದ ಶ್ರೀ ಶಿವಬಸವ ಶಿವಾಚಾರ್ಯ ಸ್ವಾಮಿಗಳು, ೧೯೭೦ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದಾರೆ. ಗುರುಗಳು ಮೆಟ್ರಿಕ್‌ವರೆಗೆ ವಿದ್ಯಾಭ್ಯಾಸ ಮಾಡಿ ಶಿವಯೋಗ ಮಂದಿರ, ಹುಬ್ಬಳ್ಳಿ ಯಲ್ಲಿ ಸಂಸ್ಕೃತ, ವೇದಾಧ್ಯಯನ ಮಾಡಿ ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಶಿವಬಸವ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠದ ಕಟ್ಟಡವನ್ನು ನೂತನವಾಗಿ ನಿರ್ಮಿಸಿ ರಾಜ ಕಳೆಯನ್ನು ತಂದುಕೊಟ್ಟಿದ್ದಾರೆ. ಶಿವಾನುಭವ ಮಂಟಪ ಮತ್ತು ಮಠದ ಪರಂಪರೆಯ ಮೂರು ಗುರುಗಳ ಗದ್ದುಗೆಗಳನ್ನು ಸ್ಥಾಪಿಸಿದ್ದಾರೆ. ಅಲ್ಲದೆ ಬಾಗಲಕೋಟೆ ತಾಲ್ಲೂಕಿನ ವಂಗಣ ಗ್ರಾಮದ ಶ್ರೀ ಗುರುಲಿಂಗೇಶ್ವರ ಮಠದ ಆಡಳಿತವನ್ನು ವಹಿಸಿಕೊಂಡು ಮಠವನ್ನೂ ಸಹ ಅಭಿವೃದ್ಧಿಪಡಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಗದ್ದುಗೆಗಳಿಗೆ ನಿತ್ಯ ಪೂಜೆ, ಅಮಾವಾಸ್ಯೆ, ಶ್ರಾವಣ ಮಾಸಗಳಲ್ಲಿ ಪುರಾಣ ಪ್ರವಚನ, ನವಮಿಯಲ್ಲಿ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭಗಳಲ್ಲಿ ನಿತ್ಯ ಅನ್ನ ದಾಸೋಹವನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಶಿವಬಸವ ಶಿವಾಚಾರ್ಯ ಸ್ವಾಮಿಗಳು, ಶ್ರೀ ಸಿದ್ಧರಾಮೇಶ್ವರಮಠ, ಕೆರುಟಗಿ, ಸಿಂದಗಿ ತಾ, ಬಿಜಾಪುರ ಜಿಲ್ಲೆ.

ಕೊಕಟನೂರು

ಸಿಂದಗಿ ತಾಲ್ಲೂಕಿನ ಕೊಕಟನೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹತ್ತೊಂಬತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಮಡಿವಾಳಪ್ಪನಮಠವು ಅಸ್ತಿತ್ವದಲ್ಲಿದೆ.

ಮಡಿವಾಳಪ್ಪನಮಠ: ಕೊಕಟನೂರು ಗ್ರಾಮದಲ್ಲಿ ಶ್ರೀ ಮಡಿವಾಳಪ್ಪನಮಠವು ಸ್ಥಾಪನೆಯಾಗಿದೆ. ಹನ್ನೆರಡನೆಯ ಶತಮಾನದ ಶ್ರೀ ಮಡಿವಾಳ ಮಾಚಿದೇವರು ಈ ಸ್ಥಳದಲ್ಲಿ ಕೆಲವು ಕಾಲ ಅನುಷ್ಠಾನಗೊಂಡು ಮಠವನ್ನು ಸ್ಥಾಪನೆ ಮಾಡಿರುತ್ತಾರೆ. ಅಂದು ಸ್ಥಾಪನೆಗೊಂಡ ಮಠದ ಪರಂಪರೆಯ ಬಗ್ಗೆ ಸ್ಪಷ್ಟವಾದ ಮಾಹಿತಿ ಲಭ್ಯವಿಲ್ಲ. ೧೯೯೪ ರ ಜನವರಿ ಇಪ್ಪತ್ತಾರರಲ್ಲಿ ಲಿಂಗೈಕ್ಯರಾದ ಶ್ರೀ ಸಿದ್ಧಲಿಂಗಸ್ವಾಮಿಗಳು ಈ ಮಠದ ಪರಂಪರೆಯ ಕೊನೆಯ ಗುರುಗಳೆಂದು ಹೇಳಲಾಗುತ್ತಿದೆ.

ಪರಂಪರೆ: ಶ್ರೀ ಮಡಿವಾಳ ಮಾಚಿದೇವರು ಅನುಷ್ಠಾನಗೊಂಡು ಮಠ ಸ್ಥಾಪನೆ ಮಾಡಿದ ನಂತರ ಸುಮಾರು ಎಂಟು ಜನ ಗುರುಗಳು ಅಧಿಕಾರ ನಡೆಸಿದ್ದಾರೆಂದು ಹೇಳಲಾಗುತ್ತಿದೆ. ಮಠದಲ್ಲಿ ಕರ್ತೃಗುರುಗಳ ತೋರುಗದ್ದುಗೆ ಹಾಗೂ ೧೯೯೪ ರಲ್ಲಿ ಲಿಂಗೈಕ್ಯರಾದ ಶ್ರೀ ಸಿದ್ಧಲಿಂಗ ಸ್ವಾಮಿಗಳ ಗದ್ದುಗೆಯೂ ಸೇರಿದಂತೆ ಮಠದ ಆವರಣದಲ್ಲಿ ಒಟ್ಟು ಐದು ಗದ್ದುಗೆಗಳು ಸ್ಥಾಪನೆಯಾಗಿವೆ. ಇದರಿಂದ ಈ ಮಠವು ಹನ್ನೆರಡನೆಯ ಶತಮಾನದಲ್ಲಿ ಪ್ರಾರಂಭಗೊಂಡು ಈತನಕವೂ ನಡೆದು ಬಂದಿದೆ ಎಂದು ತಿಳಿದು ಬರುತ್ತಿದೆ. ಶರಣರ ತತ್ತ್ವಗಳನ್ನು ಪ್ರಚಾರಪಡಿಸುತ್ತಾ, ಗುರು, ಲಿಂಗ, ಜಂಗಮದ ಬಗ್ಗೆ ಭಕ್ತರಲ್ಲಿ ಪ್ರಜ್ಞೆ ಮೂಡಿಸಿ ಈ ಮೂಲಕ ಶರಣಧರ್ಮದ ಆಚರಣೆಗಳನ್ನು ಪರಿಪಾಲಿಸುವಂತೆ ಮಾಡುತ್ತಾ ಈ ಮಠದ ಎಲ್ಲಾ ಗುರುಗಳು ಸೇವೆಸಲ್ಲಿಸುತ್ತಾ ಬಂದಿದ್ದಾರೆ. ಶ್ರೀ ಸಿದ್ಧಲಿಂಗ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಶ್ರೀ ಅಡವಯ್ಯ ಎಂಬುವರು ಅಧಿಕಾರವನ್ನು ನಡೆಸಿಕೊಂಡು ಬಂದಿದ್ದರು. ಈಗ ಮಠದ ವಂಶಸ್ಥರಾದ ಶ್ರೀ ಶಾಂತಯ್ಯ ಮತ್ತು ಶ್ರೀಮತಿ ಬಸಮ್ಮನವರ ಪುತ್ರರಾಗಿ ೧೯೮೧ ರಲ್ಲಿ ಜನಿಸಿದ ಶ್ರೀ ಮಡಿವಾಳ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಗುರುಗಳು ಈಗ ಗದಗದ ವೀರೇಶ್ವರ ಆಶ್ರಮದಲ್ಲಿ ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಕೊಕಟನೂರು ಗ್ರಾಮದ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಮಡಿವಾಳೇಶ್ವರ ಮಠದಲ್ಲಿ ಪರಂಪರೆಯ ಗುರುಗಳ ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ, ಶ್ರಾವಣ ಮಾಸದಲ್ಲಿ ಭಜನೆ,ಜನವರಿಯಲ್ಲಿ ಶ್ರೀ ಮಡಿವಾ ಳೇಶ್ವರರ ಪುಣ್ಯಾರಾಧನೆ ನಡೆಯುತ್ತಿದೆ. ಈ ಸಂದರ್ಭದಲ್ಲಿ ಒಂದು ತಿಂಗಳು ಪುರಾಣ ಪ್ರವಚನವನ್ನು ನಡೆಸಲಾಗುತ್ತಿದೆ. ಮಠದ ಆಸ್ತಿಯಾಗಿ ಹತ್ತು ಎಕರೆ ಜಮೀನಿದ್ದು ಇದನ್ನು ಅಭಿವೃದ್ಧಿಪಡಿಸಲಾಗಿದೆ.

ವಿಳಾಸ: ಶ್ರೀ ಮಡಿವಾಳ ದೇವರು, ಶ್ರೀ ಮಡಿವಾಳಪ್ಪನಮಠ, ಕೊಕಟನೂರು, ಸಿಂದಗಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ಕೋರವಾರ

ಸಿಂದಗಿ ತಾಲ್ಲೂಕಿನ ಕೋರವಾರ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣ ಭಾಗಕ್ಕೆ ಇಪ್ಪತ್ತೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಮಹಾಂತೇಶ್ವರ ಮಠವು ಅಸ್ತಿತ್ವದಲ್ಲಿದೆ.

ಮಹಾಂತೇಶ್ವರಮಠ: ಕೋರವಾರ ಗ್ರಾಮದಲ್ಲಿ ರಂಭಾಪುರಿ ಪೀಠದ ಶಾಖಾ ಮಠವು ಅಸ್ತಿತ್ತ್ವದಲ್ಲಿದೆ. ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿರುವ ಈ ಮಠವನ್ನು ಶ್ರೀ ಮಹಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು ಸ್ಥಾಪಿಸಿದರೆಂದು ಹೇಳಲಾಗುತ್ತಿದೆ. ಗುರುಗಳು ಲೋಕ ಕಲ್ಯಾಣಾರ್ಥ ಸಂಚಾರವನ್ನು ಕೈಗೊಂಡು, ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ, ಅನುಷ್ಠಾನಗೊಂಡು ಈ ಕ್ಷೇತ್ರಕ್ಕೆ ಬಂದು ನೆಲೆಸುತ್ತಾರೆ. ಇಲ್ಲಿ ನೆಲೆಗೊಂಡ ಗುರುಗಳು ವೀರಶೈವ ಧರ್ಮಾಚರಣೆಗಳನ್ನು ಭಕ್ತರಿಗೆ ತಿಳಿಸಿ ಧರ್ಮ ಬೋಧನೆಯಿಂದ ಸಂಸ್ಕಾರವಂತರನ್ನಾಗಿ ಮಾಡಿದರು. ಇವರ ನಂತರ ಸುಮಾರು ವರ್ಷಗಳ ಕಾಲ ಮಠವು ಖಾಲಿ ಉಳಿಯಿತು. ನಂತರ ಶ್ರೀ ಮರಿದೇವ ಶಿವಾಚಾರ್ಯ ಸ್ವಾಮಿಗಳು ಮಠದ ಆಡಳಿತವನ್ನು ನಡೆಸಿದ್ದಾರೆ ಎಂದು ಹೇಳಲಾಗುತ್ತಿದೆ.

ಬೆಳೆದ ಪರಂಪರೆ:
೧. ಷ.ಬ್ರ.ಶ್ರೀ ಮಹಾಂತೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಮರಿದೇವರು ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಮರುಳಸಿದ್ಧ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಶ್ರೀ ಮರಿದೇವರು ಖಾಲಿ ಉಳಿದಿದ್ದ ಮಠಕ್ಕೆ ಪಟ್ಟಾಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿದರು. ಇವರ ತರುವಾಯ ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡು ಧರ್ಮ ಬೋಧನೆಯಿಂದ ಭಕ್ತರನ್ನು ಉದ್ಧರಿಸಿದ್ದರು. ಇವರು ಲಿಂಗೈಕ್ಯರಾದ ಮೇಲೆ ಶ್ರೀ ಚನ್ನಬಸವ ಸ್ವಾಮಿಗಳು ಕಾಶಿಯಲ್ಲಿ ವಿದ್ಯಾಭ್ಯಾಸ ಮುಗಿಸಿಕೊಂಡು ಬಂದು ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಸದೃಢ ಗೊಳಿಸಿ ಬೆಳೆಸಿದರು. ಇವರು ೧೯೬೧ ರಲ್ಲಿ ಲಿಂಗೈಕ್ಯರಾದರು. ಇವರ ತರುವಾಯ ಶ್ರೀ ಬಸವಲಿಂಗ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ಗುರುಗಳು ಶ್ರೀ ಗುರುಸ್ವಾಮಿ ಮತ್ತು ಶ್ರೀಮತಿ ಶಂಕರಮ್ಮನವರ ಪುತ್ರರಾಗಿ ಜನಿಸಿ ಕೋರವಾರ, ಹೊನ್ನಾಳ್ಳಿ,ಹುಬ್ಬಳ್ಳಿಯಲ್ಲಿ ವಿದ್ಯಾಭ್ಯಾಸಮುಗಿಸಿ ಕಾಶಿಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ಮಠಕ್ಕೆ ಆಗಮಿಸಿ, ತಮ್ಮ ಪಾಂಡಿತ್ಯದಿಂದ ಧರ್ಮಪ್ರಸಾರವನ್ನು ಕೈಗೊಂಡು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಎಂಟು ಗದ್ದುಗೆಗಳಿಗೆ ನಿತ್ಯ ಪೂಜೆಯನ್ನು ನಡೆಸಲಾಗುತ್ತಿದೆ. ಶ್ರಾವಣ ಮಾಸದಲ್ಲಿ ಪುರಾಣ ಮತ್ತು ಕುಂಭಾಭಿಷೇಕವನ್ನು ನಡೆಸಲಾಗುತ್ತಿದೆ. ಚೌತಿ ಅಮಾವಾಸ್ಯೆಯಲ್ಲಿ ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆ ಹಾಗೂ ಶಿವರಾತ್ರಿಯಂದು ಶ್ರೀ ಮಹಾಂತೇಶ್ವರ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಗುರುಗಳು ಮಹಾರಾಷ್ಟ್ರದ ಲಾಥೂರ್‌ನ ಶಾಖಾ ಮಠದ ಆಡಳಿತವನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಮಹಾಂತೇಶ್ವರಮಠ, ಕೋರವಾರ, ಸಿಂದಗಿ ತಾ, ಬಿಜಾಪುರಜಿಲ್ಲೆ.

ಕೋರಹಳ್ಳಿ

ಸಿಂದಗಿ ತಾಲ್ಲೂಕಿನ ಕೋರಹಳ್ಳಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರ ಭಾಗಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಪುರಾತನ ಕಾಲದ ಶ್ರೀ ಶಬ್ದಸ್ವಾಮಿ ಚರಂತಿಮಠ, ಶ್ರೀ ಹೂವಿನಹಳ್ಳಿ ಹಿರೇಮಠ, ಶ್ರೀ ಹಿರೇಮಠ ಎಂಬ ಮೂರು ಮಠಗಳು ಸ್ಥಾಪನೆಯಾಗಿವೆ. ಈ ಮಠಗಳಲ್ಲಿ ಶ್ರೀ ಹಿರೇಮಠದಲ್ಲಿ ಗುರುಗಳಿದ್ದಾರೆ. ಶ್ರೀ ಶಬ್ದಸ್ವಾಮಿ ಚರಂತಿ ಮಠಕ್ಕೆ ಉತ್ತರಾಧಿಕಾರಿಗಳನ್ನು ನೇಮಿಸಲಾಗಿದೆ. ಶ್ರೀ ಹೂವಿನಹಳ್ಳಿ ಹಿರೇಮಠದಲ್ಲಿ ಶಿರಡೋಣಾ ಮಠದ ಮಠಾಧೀಶರು ಆಡಳಿತವನ್ನು ನಡೆಸಿಕೊಂಡು ಹೋಗುತ್ತಿದ್ದಾರೆ.

ಹಿರೇಮಠ: ಕೋರಹಳ್ಳಿ ಗ್ರಾಮದ ಮಧ್ಯಭಾಗದಲ್ಲಿ ಕಾಶಿ ಪೀಠದ ಶಾಖಾ ಮಠವಾಗಿ, ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿರುವ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದಲ್ಲಿ ಪ್ರಾರಂಭಗೊಂಡ ಈ ಮಠದಲ್ಲಿ ಒಟ್ಟು ಎಂಟು ಜನ ಗುರುಗಳು ಅಧಿಕಾರ ನಡೆಸಿದ್ದಾರೆಂದು ಹೇಳಲಾಗುತ್ತಿದೆ. ಆದರೆ ಈ ಮಠದ ಕಾಲಮಾನದ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಮಠದ ಪರಂಪರೆಯ ಕರ್ತೃಗುರುಗಳೆಂದು ಗುರುತಿಸಲಾಗಿರುವ ಶ್ರೀ ಗದ್ದುಗೆಪ್ಪನವರು ಈ ಮಠವನ್ನು ಸ್ಥಾಪಿಸಿದ್ದಾರೆಂದು ಹೇಳಲಾಗುತ್ತಿದೆ.

ಪರಂಪರೆ:
೧. ಷ.ಬ್ರ.ಶ್ರೀ ಗದ್ದುಗೆಪ್ಪ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ನಿರ್ವಾಣ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಶರಣೇಂದ್ರ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು

ಈ ರೀತಿ ಐದು ಜನ ಗುರುಗಳ ಹೆಸರನ್ನು ದಾಖಲಿಸಲಾಗಿದೆ. ಈಗಿನ ಮಠಾಧ್ಯಕ್ಷರಾದ ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ಶ್ರೀ ಶಿವಾನಂದಸ್ವಾಮಿ ಮತ್ತು ಶ್ರೀಮತಿ ಗೌರಬಾಯಿಯವರ ಪುತ್ರರಾಗಿ ಜನಿಸಿ, ಹೊಸ್ನಾಳಿಯಲ್ಲಿ ಸಂಸ್ಕೃತದಲ್ಲಿ ಪದವಿ ಶಿಕ್ಷಣವನ್ನು ಮುಗಿಸಿ ಮಠಕ್ಕೆ ಆಗಮಿಸಿದ್ದಾರೆ. ಗುರುಗಳು ಮಠದ ಆಡಳಿತವನ್ನು ವಹಿಸಿಕೊಂಡ ಮೇಲೆ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇದುವರೆಗೆ ಉತ್ತರಾಧಿಕಾರಿಗಳಿಲ್ಲದೆ ಖಾಲಿ ಉಳಿದಿದ್ದ ಕಾರಣ ಮಠವು ಶಿಥಿಲಗೊಂಡಿದೆ. ಅಲ್ಲದೆ ಮಠದಲ್ಲಿ ಯಾವುದೇ ಧಾರ್ಮಿಕ ಕಾರ್ಯಗಳು ನಡೆಯದೇ ಇದ್ದುದ್ದರಿಂದ ಜನರಮನಸ್ಸಿನಿಂದ ಮಠವು ಹಿಮ್ಮುಖಗೊಂಡಿತ್ತು. ಈಗ ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ಕ್ರಿಯಾಶೀಲರಾಗಿ ಮಠವನ್ನು ಬೆಳೆಸುತ್ತಾ, ಸಮಾಜಮುಖಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಕೋರಹಳ್ಳಿ, ಸಿಂದಗಿ ತಾ, ಬಿಜಾಪುರ ಜಿಲ್ಲೆ.

ಶಬ್ದಸ್ವಾಮಿ ಚರಂತಿಮಠ: ಕೋರಹಳ್ಳಿ ಗ್ರಾಮದ ಪುರಾತನ ಮಠಗಳಲ್ಲಿ ಒಂದಾದ ಶ್ರೀ ಶಬ್ದಸ್ವಾಮಿ ಚರಂತಿಮಠವು ಕಾಶಿ ಪೀಠದ ಶಾಖಾ ಮಠವಾಗಿ, ಪುತ್ರ ವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಪುರಾತನ ಕಾಲದಲ್ಲಿ ಶ್ರೀ ಶಬ್ದ ಸ್ವಾಮಿಗಳಿಂದ ಸ್ಥಾಪನೆಯಾದ ಈ ಮಠದಲ್ಲಿ ಕರ್ತೃಗುರುಗಳ ನಂತರ ಏಳು ಜನ ಗುರುಗಳು ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬಂದು ಮಠವನ್ನು ಬೆಳೆಸಿದ್ದರು. ಶ್ರೀ ಶಾಂತವೀರ ಸ್ವಾಮಿಗಳು ೧೯೫೦ರಲ್ಲಿ ಲಿಂಗೈಕ್ಯರಾದ ಮೇಲೆ ಉತ್ತರಾಧಿಕಾರಿಗಳಿಲ್ಲದೆ ಮಠವು ಖಾಲಿ ಉಳಿದಿದೆ. ಪುತ್ರವರ್ಗದ ಪರಂಪರೆಯ ಈ ಮಠಕ್ಕೆ ಉತ್ತರಾಧಿಕಾರಿಗಳನ್ನು ನೇಮಿಸದೆ ಇರುವ ಕಾರಣ ಮಠದ ವಂಶಸ್ಥರಾದ ಮೂರು ಕುಟುಂಬಗಳು ಒಂದು ವರ್ಷದ ಅವಧಿಯ ಸರದಿಯಂತೆ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಮಠದ ಆವರಣದಲ್ಲಿ ಏಳು ಗದ್ದುಗೆಗಳಿದ್ದು ನಿತ್ಯ ಪೂಜೆಯನ್ನು ನಡೆಸಲಾಗುತ್ತಿದೆ. ಅಲ್ಲದೆ ಪ್ರತಿದಿನ ಭಿಕ್ಷಾಟನೆ ಮಾಡಿಕೊಂಡು ಮಠದ ಧಾರ್ಮಿಕ ಮತ್ತು ದಾಸೋಹ ಕಾರ್ಯವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಶ್ರಾವಣ ಮಾಸದಲ್ಲಿ ಭಜನೆ ಹಾಗೂ ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಇತ್ತೀಚಿಗೆ ಶ್ರೀ ಶಾಂತವೀರ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಲಾಗಿದೆ.

ವಿಳಾಸ: ಷ.ಬ್ರ.ಶ್ರೀ ಶಾಂತವೀರ ದೇವರು, ಶ್ರೀಶಬ್ದಸ್ವಾಮಿ ಚರಂತಿಮಠ, ಕೋರಹಳ್ಳಿ,ಸಿಂದಗಿ ತಾಲ್ಲೂಕು,ಬಿಜಾಪುರ ಜಿಲ್ಲೆ.

ಗೋಲಗೇರಿ

ಸಿಂದಗಿ ತಾಲ್ಲೂಕಿನ ಗೋಲಗೇರಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಇಪ್ಪತ್ತೂರು ಕಿ.ಮೀ ದೂರದಲ್ಲಿದೆ. ಗೋಲ್ಲಾಳನೆಂಬುವನು ಕುರಿ ಕಾಯುತ್ತಿದ್ದನಂತೆ.ಇವನಿಂದ ಉಪಚಾರ ಪಡೆದ ಒಬ್ಬ ಯಾತ್ರಿಕ ಶ್ರೀಶೈಲದಿಂದ ಒಂದು ಲಿಂಗವನ್ನು ತರುವುದಾಗಿ ಹೇಳಿ ಹೋಗಿದ್ದನಂತೆ. ಆದರೆ ಯಾತ್ರಿಕನು ಶ್ರೀಶೈಲದಿಂದ ಹಿಂದಿರುಗಿ ಬರುವಾಗ ಲಿಂಗವನ್ನು ಮರೆತು ಬಂದು, ಗೋಲ್ಲಾಳನ ಮುಖವನ್ನು ನೋಡಿದಾಕ್ಷಣ ಲಿಂಗದ ನೆನಪು ಬಂದು ಕೊಟ್ಟ ಮಾತಿಗೆ ಕದಿಯಬೇಕಾಗುತ್ತದೆ ಎಂದು ಯೋಚಿಸಿ ತಕ್ಷಣ, ಕೆಳಗೆ ಬಿದ್ದಿದ್ದ ಕುರಿಹಿಕ್ಕಿಯನ್ನು ಎತ್ತಿಕೊಂಡು ಗೋಲ್ಲಾಳನಿಗೆ ಕೊಟ್ಟು,"ಇದು ಶ್ರೀಶೈಲದಿಂದ ತಂದಿರುವ ಲಿಂಗ ಇದನ್ನು ಭಕ್ತಿಯಿಂದ ಪೂಜಿಸು ಎಂದು ಹೇಳಿ ಮುಂದೆ ಹೋಗುತ್ತಾನಂತೆ. ಇದನ್ನು ನಿಜವೆಂದು ನಂಬಿದ ಗೋಲ್ಲಾಳ ಅದನ್ನು ಪ್ರತಿಷ್ಠಾಪಿಸಿ ಭಕ್ತಿಯಿಂದ ಪೂಜೆ ಮಾಡತೊಡಗಿ ಸಂಸ್ಕಾರವಂತನಾಗಿ'ವೀರಬೀರೇಶ್ವರ'ಎಂಬ ನಾಮಾಂಕಿತದಲ್ಲಿ ವಚನಗಳನ್ನು ರಚಿಸಿ ಶ್ರೇಷ್ಠ ಶರಣರಾಗಿದ್ದಾರೆ. ಗೋಲ್ಲಾಳನು ಸ್ಥಾಪಿಸಿದ ಲಿಂಗ'ಗೋಲ್ಲಾಳೇಶ್ವರ' ಕ್ಷೇತ್ರವಾಗಿದೆ. ಇಂತಹ ಧಾರ್ಮಿಕ ಹಿನ್ನಲೆಯುಳ್ಳ ಈ ಗ್ರಾಮದಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಗೋಲಗೇರಿ ಗ್ರಾಮದಲ್ಲಿ ವಿರಕ್ತ ಮಠವು ೧೯೧೯ ರ ಜುಲೈ ಐದರಂದು ಶ್ರೀ ಸಿದ್ಧರಾಮ ಸ್ವಾಮಿಗಳಿಂದ ಸ್ಥಾಪನೆಯಾಗಿದೆ. ಮುರುಘಾಸಮಯದ ಈ ಮಠವು ಇಲ್ಲಿ ಧಾರ್ಮಿಕ ಆಚರಣೆಗಳನ್ನು ನಡೆಸತೊಡಗಿತು. ಶ್ರೀ ಸಿದ್ಧರಾಮ ಸ್ವಾಮಿಗಳು ಮಹಾತಪಸ್ವಿಗಳಾಗಿ, ದಾಸೋಹ ಮೂರ್ತಿಗಳೆಂದು ಹೆಸರು ಪಡೆದಿದ್ದರು. ಇವರು ಲೋಕ ಸಂಚಾರದಿಂದ

ಬಂದು ಗೋಲ್ಲಾಳೇಶ್ವರ ದೇವಸ್ಥಾನದಲ್ಲಿ ನೆಲೆಗೊಂಡು ಧಾರ್ಮಿಕ ಆಚರಣೆಗಳನ್ನು ಮಾಡತೊಡಗಿದರು. ಗುರುಗಳ ತಪೋಶಕ್ತಿಯಿಂದ ಉದ್ಧಾರಗೊಂಡ ಭಕ್ತರು ಗುರುಗಳಿಗಾಗಿ ಮಠವನ್ನು ಸ್ಥಾಪಿಸಿಕೊಟ್ಟರು. ಲೌಕಿಕ ಜಗತ್ತಿನ ಬಗ್ಗೆ ಕಿಂಚಿತ್ತೂ ಗಮನ ಕೊಡದಿದ್ದ ಗುರುಗಳು ಭಕ್ತರು ಕಟ್ಟಿಸಿಕೊಟ್ಟ ಮಠದಲ್ಲಿ ಸರಳ ಜೀವನ ನಡೆಸಿ ವೀರಶೈವ ಧರ್ಮವನ್ನು ವ್ಯಾಪಕವಾಗಿ ಬೆಳೆಸಿದರು. ನಿತ್ಯ ಧರ್ಮೋಪದೇಶವನ್ನು ನೀಡಿ ಭಕ್ತರನ್ನು ಉದ್ಧರಿಸಿದರು. ಈ ಕಾರಣದಿಂದ ಶ್ರೀ ಸಿದ್ಧರಾಮ ಸ್ವಾಮಿಗಳ ಹೆಸರು ಚಿರಾಯುವಾಗಿ ಭಕ್ತರ ಅಂತರಾಳದಲ್ಲಿ ಉಳಿದಿದೆ. ಮಹಾತಪಸ್ವಿಗಳು ೧೯೫೮ ರಲ್ಲಿ ಲಿಂಗೈಕ್ಯರಾಗಿದ್ದಾರೆ.

ಪರಂಪರೆ: ಶ್ರೀ ಸಿದ್ಧರಾಮ ಸ್ವಾಮಿಗಳು ಲಿಂಗೈಕ್ಯರಾದ ನಂತರ ಶ್ರೀ ಸಿದ್ಧಲಿಂಗ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಇವರು ಶ್ರೀ ಗೋಲ್ಲಾಳಯ್ಯ ಮತ್ತು ಶ್ರೀಮತಿ ಶಿವರುದ್ರಮ್ಮನವರ ಪುತ್ರರಾಗಿ ೧೯೫೮ರ ಜೂನ್ ಒಂದರಂದು ಜನಿಸಿದರು. ಇವರು ಬೆಂಗಳೂರಿನಲ್ಲಿ ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿಯನ್ನು ಪೂರೈಸಿ ೧೯೭೭ರಲ್ಲಿ ಮಠಕ್ಕೆ ಆಗಮಿಸಿದರು. ನಂತರ ನಾಲ್ಕು ವರ್ಷಗಳ ಕಾಲ ಮಠದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು, ೧೯೮೧ರಲ್ಲಿ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡರು. ನಂತರ ಹಳೆಯ ಕಟ್ಟಡವನ್ನು ತೆಗೆಸಿ ಇಪ್ಪತ್ತು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಮಠವನ್ನು ಅಭಿವೃದ್ಧಿ ಗೊಳಿಸಿದರು. ಕರ್ತೃಗದ್ದುಗೆ ಹಾಗೂ ದ್ವಾರವನ್ನು ನಿರ್ಮಿಸಿದರು. ಗುರುಗಳು ಅಧಿಕಾರಕ್ಕೆ ಬಂದ ಮೇಲೆ ಮಠವು ಅಪೂರ್ವವಾದ ಅಭಿವೃದ್ಧಿಯನ್ನು ಕಂಡಿತು.

ಶೈಕ್ಷಣಿಕ ಸೇವೆ: ಶ್ರೀ ದೇವಿವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಗೋಲಗೇರಿಯಲ್ಲಿ ಕಾನ್ವೆಂಟ್‌ಶಾಲೆ, ನವೋದಯ ತರಬೇತಿ ಶಾಲೆ, ಯಂಕಂಚಿಯಲ್ಲಿ ಕಾನ್ವೆಂಟ್ ಶಾಲೆ, ಗುರುಮಾತೆ ಶಾಂಭವಿ ತಾಯಿ ಕೆರೂಡಿ ಯವರ ಸ್ಮರಣಾರ್ಥ ಕಾನ್ವೆಂಟ್ ಶಾಲೆಗಳನ್ನು ಪ್ರಾರಂಭಿಸಿದ್ದಾರೆ. ಮಠದಲ್ಲಿ ಕಲಿಯುವ ಬಡ ಮಕ್ಕಳಿಗೆ ಆಶ್ರಯ ಕಲ್ಪಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಇತ್ತೀಚಿನ ಶತಮಾನದಲ್ಲಿ ಪ್ರಾರಂಭಗೊಂಡ ಈ ಮಠದಲ್ಲಿ ಕರ್ತೃಗುರುಗಳಾದ ಶ್ರೀ ಸಿದ್ಧರಾಮ ಸ್ವಾಮಿಗಳ ಗದ್ದುಗೆಯನ್ನು ನಿರ್ಮಿಸಲಾಗಿದ್ದು, ಈ ಗದ್ದುಗೆಗೆ ಷಟ್‌ಸ್ಥಲಾಕಾರವಾಗಿ ಮಂಟಪವನ್ನು ನಿರ್ಮಿಸಲಾಗಿದೆ. ಈ ಗದ್ದುಗೆಗೆ ಶಿವಾಪೂಜಾ ನಿಷ್ಠರಾದ ಗುರುಗಳು ತ್ರಿಕಾಲ ಪೂಜೆಯನ್ನು ನಡೆಸುತ್ತಾರೆ. ಹುಣ್ಣಿಮೆಯಲ್ಲಿ ಶ್ರೀ ಸಿದ್ಧರಾಮ ಸ್ವಾಮಿಗಳ ಪುಣ್ಯಾರಾಧನೆ, ಮಹಾನವಮಿಯಲ್ಲಿ ದೇವಿಪಾರಾಯಣ ಹಾಗೂ ಶ್ರಾವಣ ಮಾಸದಲ್ಲಿ ಪುರಾಣಪ್ರವಚನಗಳನ್ನು ನಡೆಸಲಾಗುತ್ತಿದೆ. ಶ್ರೀ ಗೋಲ್ಲಾಳೇಶ್ವರ ಜಾತ್ರೆಯನ್ನು ಮಠದ ವತಿಯಿಂದ ಅದ್ದೂರಿಯಾಗಿ ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಹಿರೇಮಠದ ಗುರುಗಳನ್ನು ಕರೆಸಿ ಶಿವದೀಕ್ಷೆ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ.

ಜೇವರ್ಗಿ ತಾಲ್ಲೂಕಿನ ಮಳ್ಳಿಯಲ್ಲಿ ಶಾಖಾ ಮಠವಿದ್ದು, ಈ ಮಠವನ್ನು ಅಭಿವೃದ್ಧಿ ಪಡಿಸಲಾಗಿದೆ. ಅಲ್ಲದೆ ಇಲ್ಲಿ ಸ್ಥಾಪನೆಯಾಗಿರುವ ಒಂದು ಗದ್ದುಗೆಗೆ ಮಂಟಪವನ್ನು ನಿರ್ಮಿಸಲಾಗಿದೆ. ಮಠದ ಆಶ್ರಯದಲ್ಲಿರುವ ಹದಿನಾರು ಎಕರೆ ಜಮೀನನ್ನು ಮಠದ ವತಿಯಿಂದಲೇ ಅಭಿವೃದ್ಧಿಪಡಿಸಿ ಹೆಚ್ಚು ಉತ್ಪನ್ನ ಬರುವಂತೆ ಮಾಡಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಸಿದ್ಧರಾಮ ಸ್ವಾಮಿಗಳು, ಶ್ರೀ ವಿರಕ್ತಮಠ, ಗೋಲಗೇರಿ, ಸಿಂದಗಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ತಿಳುಗುಳ

ಸಿಂದಗಿ ತಾಲ್ಲೂಕಿನ ತಿಳುಗುಳ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಭಾಗಕ್ಕೆ ಇಪ್ಪತ್ತಾರು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಪುರಾತನ ಕಾಲದಲ್ಲಿ ಶ್ರೀ ಹಿರೇಮಠ, ಶ್ರೀ ಮಹಾಂತೇಶ್ವರಮಠ ಎಂಬ ಎರಡು ಮಠಗಳು ಸ್ಥಾಪನೆಗೊಂಡು, ವೀರಶೈವ ಧರ್ಮ ಪ್ರಬಲವಾಗಿ ಬೆಳೆಯುವಂತೆ ಮಾಡಿವೆ.

ಮಹಾಂತೇಶ್ವರಮಠ: ತಿಳುಗುಳ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಮಹಾಂತೇಶ್ವರಮಠವು ಈ ಗ್ರಾಮದ ಪುರಾತನ ಮಠವಾಗಿದೆ. ಶ್ರೀಶೈಲ ಪೀಠದ ಶಾಖಾ ಮಠವಾಗಿ ಪುತ್ರ ವರ್ಗದ ಪರಂಪರೆಯಲ್ಲಿ ಬೆಳೆದ ಈ ಮಠದಲ್ಲಿ ಶ್ರೀ ವಿರಕ್ತೇಶ್ವರರು, ಶ್ರೀ ಮಹಾಂತೇಶ್ವರರು, ಶ್ರೀ ಷಣ್ಮುಖ ಶಿವಾಚಾರ್ಯ ಸ್ವಾಮಿಗಳು, ಶ್ರೀ ರುದ್ರಮುನಿ ಶಿವಾಚಾರ್ಯ

ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿದ್ದರು. ಕಳೆದ ನಲವತ್ತು ವರ್ಷಗಳಿಂದ ಮಠಾಧೀಶರಿಲ್ಲದೆ ಮಠವು ಖಾಲಿ ಉಳಿದಿದೆ.

ದೇವರ ಹಿಪ್ಪರಗಿ

ಸಿಂದಗಿ ತಾಲ್ಲೂಕಿನ ದೇವರ ಹಿಪ್ಪರಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಭಾಗಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಹಿಂದೆ ಹದಿನೆಂಟು ಮಠಗಳು ಸ್ಥಾಪನೆಯಾಗಿದ್ದವು ಎಂದು ಹೇಳಲಾಗುತ್ತದೆ. ಆದರೆ ಶೋಧನೆಗೆ ಹೋದ ಸಂದರ್ಭದಲ್ಲಿ ಶ್ರೀ ಗದ್ದುಗೆಮಠ, ಶ್ರೀ ಪರದೇಶಿಮಠ, ಶ್ರೀ ಶಾಂತಮಠ, ಶ್ರೀ ನಡವಿನಮಠ, ಶ್ರೀ ಜಡೆಮಠ, ಶ್ರೀಸದಯ್ಯನಮಠ ಎಂಬ ಆರು ಮಠಗಳು ದೊರೆತಿವೆ.ಉಳಿದ ಮಠಗಳು ಅಸ್ತಿತ್ವವನ್ನು ಕಳೆದುಕೊಂಡು ಹೇಳಲು ಹೆಸರಿಲ್ಲದಂತಾಗಿವೆ ಈಗ ಅಸ್ತಿತ್ವದಲ್ಲಿರುವ ಮಠಗಳಲ್ಲಿ ಶ್ರೀ ಗದ್ದುಗೆಮಠ ಮತ್ತು ಶ್ರೀ ಜಡೆಮಠದಲ್ಲಿ ಗುರುಗಳಿದ್ದಾರೆ. ಉಳಿದ ಶ್ರೀ ಪರದೇಶಿ ಮಠ ಮತ್ತು ಶ್ರೀ ನಡವಿನ ಮಠದಲ್ಲಿ ಉತ್ತರಾಧಿಕಾರಿಗಳನ್ನು ನೇಮಿಸಲಾಗಿದೆ.ಶ್ರೀ ಶಾಂತ ಮಠದಲ್ಲಿ ಉತ್ತರಾಧಿಕಾರಿಗಳಿಲ್ಲದೆ ಮಠವು ಖಾಲಿ ಉಳಿದಿದೆ.

ಗದ್ದುಗೆಮಠ: ದೇವರ ಹಿಪ್ಪರಗಿಯ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಗದ್ದುಗೆ ಮಠವು ವಿರಕ್ತ ಸಂಪ್ರದಾಯದ ಮುರುಘಾ ಮಠವಾಗಿದೆ. ಹನ್ನೆರಡನೆಯ ಶತಮಾನದಲ್ಲಿ 'ಕಲಿದೇವರದೇವಾ' ಎಂಬ ಅಂಕಿತದೊಂದಿಗೆ ವಚನಗಳನ್ನು ರಚಿಸಿದ ಶ್ರೀ ಮಡಿವಾಳ ಮಾಚಿದೇವರು ಇದೇ ಊರಿನವರು. ಬಸವ ಕಲ್ಯಾಣದ ಅನುಭವ ಮಂಟಪದ ಪ್ರಮಥ ಗಣಗಳಲ್ಲಿ ಹಿರಿಯವರಾದ ಶ್ರೀಮಡಿವಾಳ ಮಾಚಿದೇವರು 'ಮಾಚಿತಂದೆ 'ಎಂದು ಪ್ರಸಿದ್ಧಿಯಾಗಿದ್ದರು. ಶರಣ ಸಿದ್ಧಾಂತದಲ್ಲಿ ಅಪಾರ ಜ್ಞಾನವನ್ನು ಪಡೆದಿದ್ದ ಮಾಚಿದೇವರು ಎಲ್ಲರಿಂದ ಗೌರವಿಸಲ್ಪಟ್ಟಿದ್ದರು. ಇಂತಹ ಮೇರು ವ್ಯಕ್ತಿತ್ವದ ಶ್ರೀ ಮಡಿವಾಳ ಮಾಚಿದೇವರು ಕಲ್ಯಾಣದಲ್ಲಿ ಕ್ರಾಂತಿಯಾದ ಮೇಲೆ ಇಲ್ಲಿಗೆ ಬಂದು ನೆಲೆಸಿ ಲಿಂಗೈಕ್ಯರಾಗಿದ್ದಾರೆ. ಇವರ ಗದ್ದುಗೆಯು ಈ ಮಠದಲ್ಲಿ ಸ್ಥಾಪನೆಯಾದ ಕಾರಣ 'ಶ್ರೀ ಗದ್ದುಗೆಮಠ' ಎಂದು ಹೆಸರು ಬಂದಿದೆ. ಶ್ರೀ ಮಡಿವಾಳ ಮಾಚಿದೇವರು ಲಿಂಗೈಕ್ಯರಾದ ಮೇಲೆ ಶ್ರೀ ಮಾಚಿದೇವರ ಭಕ್ತರು ಮಠವನ್ನು ಮುನ್ನಡೆಸಿ, ಶರಣರ ತತ್ತ್ವಗಳನ್ನು ಪ್ರಚಾರ ಪಡಿಸತೊಡಗಿದರು.

ಪರಂಪರೆ:

೧. ಶ್ರೀ ಮ.ನಿ.ಪ್ರ. ಮಡಿವಾಳ ಮಾಚಿದೇವಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಮೃತ್ಯುಂಜಯಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಕೊಡ್ಲೇಶ್ವರಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಕರಯ್ಯಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಮಡಿವಾಳಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಮಳೇಂದ್ರಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಮಡಿವಾಳಸ್ವಾಮಿಗಳು

ಈ ರೀತಿ ಮಠದ ಪರಂಪರೆಯ ಕೆಲವು ಹೆಸರುಗಳನ್ನು ಮಾತ್ರ ದಾಖಲಿಸಲಾಗಿದೆ. ಮಠದಲ್ಲಿ ಕರ್ತೃಗುರುಗಳ ಗದ್ದುಗೆಯು ಸೇರಿದಂತೆ ಒಟ್ಟು ಹನ್ನೆರಡು ಗದ್ದುಗೆಗಳಿವೆ. ಇವುಗಳಲ್ಲಿ ಆರು ಗದ್ದುಗೆಗಳ ಹೆಸರುಗಳನ್ನು ಗುರುತಿಸಬಹುದಾಗಿದ್ದು ಉಳಿದ ಆರು ಗದ್ದುಗೆಗಳ ಹೆಸರುಗಳನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ.ಕರ್ತೃಗುರುಗಳಾದ ಶ್ರೀ ಮಡಿವಾಳ ಮಾಚಿದೇವ ಸ್ವಾಮಿಗಳು ಪ್ರಾರಂಭಿಸಿದ ಮೂಲ ಮಠವು ಗ್ರಾಮದ ಹೊರ ಭಾಗದಲ್ಲಿದ್ದು, ಕಾಲಾನಂತರದಲ್ಲಿ ಈ ಮಠದ ಆಡಳಿತವು ಈಗಿನ ಮಠಕ್ಕೆ ಸ್ಥಳಾಂತರಗೊಂಡಿದೆ. ಮಠದ ಪರಂಪರೆಯ ಗುರುಗಳ ಬಗ್ಗೆ ಮಾಹಿತಿ ಲಭ್ಯವಿಲ್ಲ.

ಈಗಿನ ಶ್ರೀ ಮಡಿವಾಳ ಸ್ವಾಮಿಗಳು ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡು ಮಠದ ಪರಂಪರೆಯನ್ನು ಬೆಳೆಸಿದ್ದಾರೆ. ಗುರುಗಳು ಶ್ರೀ ರಾಚೋಟಯ್ಯ ಮತ್ತು ಶ್ರೀಮತಿ ಶರಣಮ್ಮನವರ ಪುತ್ರರಾಗಿ ೧೯೪೨ ರಲ್ಲಿ ಜನಿಸಿದರು.ಇವರು ಶಿವಯೋಗಮಂದಿರದಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ, ೧೯೬೨ ರಲ್ಲಿ ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡರು.

ನಂತರ ಮಠದಲ್ಲಿ ನೆಲೆಸಿದ ಗುರುಗಳು ಮಠವನ್ನು ಅಭಿವೃದ್ಧಿಪಡಿಸಿ ೧೯೭೨ ರಲ್ಲಿ ಧಾರವಾಡ ಮುರುಘಾಮಠದ ಶ್ರೀಮಹಾಂತಪ್ಪ ಸ್ವಾಮಿಗಳಿಂದ ಪಟ್ಟಾಧಿಕಾರದ ಅನುಗ್ರಹವನ್ನು ಪಡೆದು ಅಧಿಕಾರಕ್ಕೆ ಬಂದಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದಲ್ಲಿರುವ ಹನ್ನೆರಡು ಗದ್ದುಗೆಗಳಿಗೆ ನಿತ್ಯಪೂಜೆ, ಅಮಾವಾಸ್ಯೆಯಲ್ಲಿ ಶಿವಾನುಭವ ಗೋಷ್ಠಿ, ಯುಗಾದಿಯಲ್ಲಿ ಮಡಿವಾಳ ಮಾಚಿದೇವರ ಜಾತ್ರೆ ನಿಮಿತ್ತ ಇಪ್ಪತ್ತು ದಿನಗಳ ಕಾಲ ಶಿವಾನುಭವ ಗೋಷ್ಠಿ, ಕೊನೆಯ ದಿನ ರಥೋತ್ಸವವನ್ನು ನಡೆಸಲಾಗುತ್ತಿದೆ. ಮಠದಲ್ಲಿ ಕಲಿಯುವ ಬಡ ಮಕ್ಕಳಿಗೆ ಆಶ್ರಯ ಕಲ್ಪಿಸಿ ನೆರವಾಗಿದ್ದಾರೆ. ಮಠದ ಆಸ್ತಿಯಾಗಿ ಎಪ್ಪತ್ತು ಎಕರೆ ಭೂಮಿಯಿದ್ದು ಇದನ್ನು ಮಠದ ವತಿಯಿಂದ ಅಭಿವೃದ್ಧಿಪಡಿಸಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಮಡಿವಾಳ ಸ್ವಾಮಿಗಳು, ಶ್ರೀ ಗದ್ದುಗೆಮಠ, ದೇವರ ಹಿಪ್ಪರಗಿ, ಸಿಂದಗಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ಜಡೆಮಠ: ದೇವರ ಹಿಪ್ಪರಗಿಯಲ್ಲಿ ಸ್ಥಾಪನೆಯಾಗಿರುವ ಶ್ರೀ ಜಡೆಸಿದ್ಧೇಶ್ವರಮಠವು ಶ್ರೀ ರಂಭಾಪುರಿಪೀಠದ ಶಾಖಾಮಠವಾಗಿ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿದೆ. ಈ ಮಠವನ್ನು ಶ್ರೀ ಜಡೆಸಿದ್ಧೇಶ್ವರ ಸ್ವಾಮಿಗಳು ಸ್ಥಾಪನೆ ಮಾಡಿರುವುದರಿಂದ ಈ ಮಠಕ್ಕೆ 'ಶ್ರೀ ಜಡೆಸಿದ್ಧೇಶ್ವರಮಠ' ಎಂಬ ಹೆಸರು ಬಂದಿದೆ. ಹದಿನೆಂಟನೆಯ ಶತಮಾನದಲ್ಲಿ ಶ್ರೀ ಜಡೆಸಿದ್ಧೇಶ್ವರ ಸ್ವಾಮಿಗಳು ಶ್ರೀ ರಂಭಾಪುರಿಪೀಠ, ಶ್ರೀಶೈಲ, ಕಾಶಿ, ಕೇದಾರ, ಉಜ್ಜಯಿನಿ ಪಂಚಪೀಠಗಳ ದರ್ಶನಪಡೆದು ತಪೋನುಷ್ಠಾನ ಕೈಗೊಂಡು ದೇವರಹಿಪ್ಪರಗಿ ಗ್ರಾಮಕ್ಕೆ ಬಂದು ನೆಲೆಸಿದ್ದರು. ಗುರುಗಳು ಇಲ್ಲಿ ತಪೋನುಷ್ಠಾನ ಕೈಗೊಂಡು ಭಕ್ತರ ಇಷ್ಟಾರ್ಥಗಳನ್ನು ನೇರವೇರಿಸುತ್ತಾ ಧರ್ಮಬೋಧನೆಯಿಂದ ಮಠವನ್ನು ಪ್ರಸಿದ್ಧಿಗೊಳಿಸಿದರು. ಆದರೆ ಉತ್ತರಾಧಿಕಾರಿಗಳನ್ನು ನೇಮಿಸುವ ಮೊದಲೇ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಉತ್ತರಾಧಿಕಾರಿಗಳು ಯಾರೂ ಇಲ್ಲದೆ ಮಠವು ಖಾಲಿ ಉಳಿಯಿತು.

ಪರಂಪರೆ:

೧. ಷ.ಬ್ರ.ಶ್ರೀ ಜಡೆಸಿದ್ಧೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಜಡೆಸಿದ್ಧೇಶ್ವರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಖಾಲಿ ಉಳಿದಿದ್ದ ಮಠಕ್ಕೆ ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು ಮಠಾಧೀಶರಾಗಿ ಮಠವನ್ನು ಮುನ್ನಡೆಸಿದ್ದಾರೆ.ಇವರ ನಂತರ ಶ್ರೀ ಜಡೆಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ಶ್ರೀ ಜಡೆಸಿದ್ಧೇಶ್ವರ ಸ್ವಾಮಿಗಳು ಶ್ರೀ ಷಣ್ಮುಖಯ್ಯ ಮತ್ತು ಶ್ರೀಮತಿ ಮಹಾನಂದ ಇವರ ಪುತ್ರರಾಗಿ ೧೯೭೪ ರ ಏಪ್ರಿಲ್ ಇಪ್ಪತ್ನಾಲ್ಕರಂದು ಜನಿಸಿದರು. ಇವರು ಬಾಗಲಕೋಟೆ,ಶಿವಯೋಗ ಮಂದಿರ ಮತ್ತು ಮೈಸೂರಿನಲ್ಲಿ ವಿದ್ಯಾಭ್ಯಾಸವನ್ನು ಮಾಡಿ ೧೯೯೨ರಲ್ಲಿ ಮಠದ ಆಡಳಿತವನ್ನು ವಹಿಸಿಕೊಂಡಿದ್ದಾರೆ. ಇವರು ಪುರಾಣ ಪ್ರವಚನವನ್ನು ಮಾಡುವ ಕಲೆಯನ್ನು ಬೆಳೆಸಿಕೊಂಡಿದ್ದು, ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ ಪುರಾಣ ಪ್ರವಚನವನ್ನು ನೀಡುವ ಮೂಲಕ ಧರ್ಮಪ್ರಚಾರವನ್ನು ಕೈಗೊಂಡಿದ್ದಾರೆ. ಗುರುಗಳು ಅಧಿಕಾರವನ್ನು ವಹಿಸಿಕೊಂಡ ಮೇಲೆ ಮಠದ ಹಳೆಯ ಕಟ್ಟಡವನ್ನು ತೆಗೆದು ಹೊಸಕಟ್ಟಡವನ್ನು ನಿರ್ಮಿಸಿದ್ದಾರೆ.

ಧಾರ್ಮಿಕ ಆಚರಣೆಗಳು: ಗದ್ದುಗೆಗಳಿಗೆ ನಿತ್ಯ ಪೂಜೆ, ಯುಗಾದಿಯಲ್ಲಿ ಕರ್ತೃಗುರುಗಳ ಪುಣ್ಯಾರಾಧನೆ ಕಾರ್ಯಕ್ರಮ ಐದುದಿನಗಳ ಕಾಲ ನಡೆಯುತ್ತಿದೆ.ಈ ಸಂದರ್ಭದಲ್ಲಿ ಪುರಾಣ ಪ್ರವಚನ ಹಾಗೂ ಧಾರ್ಮಿಕ ಸಭೆಯನ್ನು ಏರ್ಪಡಿಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಜಡೆಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಜಡೆಮಠ, ದೇವರ ಹಿಪ್ಪರಗಿ, ಸಿಂದಗಿ ತಾ, ಬಿಜಾಪುರ ಜಿಲ್ಲೆ.

ಸದಾಶಿವಮಠ: ದೇವರಹಿಪ್ಪರಗಿ ಗ್ರಾಮದ ಶ್ರೀ ಸದಾಶಿವ ಮಠವು ರಂಭಾಪುರಿಪೀಠದ ಶಾಖಾ ಮಠವಾಗಿ ಪುತ್ರ ವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಪುರಾತನ ಪರಂಪರೆಯನ್ನು ಹೊಂದಿದೆ ಎಂದು ಹೇಳಲಾಗುವ ಶ್ರೀ ಸದಾಶಿವ ಮಠದ ಸ್ಥಾಪನೆ ಹಾಗೂ ಪರಂಪರೆಯ ಬಗ್ಗೆ ಸ್ಪಷ್ಟವಾದ ಆಧಾರಗಳು ಇಲ್ಲದೆ ಇರುವುದರಿಂದ ಏನನ್ನೂ ಹೇಳಲು ಬರುವುದಿಲ್ಲ.

ಮಠದ ಆವರಣದಲ್ಲಿ ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳ ಗದ್ದುಗೆ ಇದ್ದು, ಇದನ್ನು ಕರ್ತೃಗುರುಗಳ ಗದ್ದುಗೆ ಎಂದು ಗುರುತಿಸಲಾಗಿದೆ. ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿರುವುದಕ್ಕೆ ಈ ಮಠಕ್ಕೆ 'ಶ್ರೀ ಸದಾಶಿವಮಠ 'ಎಂದು ಹೆಸರು ಬಂದಿದೆ. ಈ ಮಠದಲ್ಲಿ ಕರ್ತೃಗದ್ದುಗೆಯೊಂದನ್ನು ಹೊರತುಪಡಿಸಿದರೆ ಮಠ ಎಂದು ಗುರುತಿಸಲಾಗುವ ಬೇರೆ ಇನ್ನಾವ ಕುರುಹುಗಳು ಲಭ್ಯವಿಲ್ಲ. ಈಗ ಶ್ರೀ ನೀಲಕಂಠಯ್ಯ ಮತ್ತು ಶ್ರೀಮತಿ ಸುಮಿತ್ರಬಾಯಿಯವರ ಪುತ್ರರಾಗಿ ೧೯೮೦ ರಲ್ಲಿ ಜನಿಸಿದ ಶ್ರೀ ಗಂಗಾಧರ ದೇವರನ್ನು ಮಠದ ಉತ್ತರಾಧಿಕಾರಿಗಳನ್ನಾಗಿ ನೇಮಿಸಲಾಗಿದೆ.

ವಿಳಾಸ: ಷ.ಬ್ರ.ಶ್ರೀ ಗಂಗಾಧರ ದೇವರು, ಶ್ರೀ ಸದಾಶಿವಮಠ, ದೇವರ ಹಿಪ್ಪರಗಿ, ಸಿಂದಗಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ಪರದೇಶಿಮಠ: ದೇವರ ಹಿಪ್ಪರಗಿಯ ಶ್ರೀ ಪರದೇಶಿ ಮಠವು ರಂಭಾಪುರಿ ಪೀಠದ ಶಾಖಾ ಮಠವಾಗಿ ಪುತ್ರ ವರ್ಗದ ಪರಂಪರೆಯಲ್ಲಿ ಬೆಳೆದಿದೆ. ಪುರಾತನ ಕಾಲದಲ್ಲಿ ಸ್ಥಾಪನೆಯಾದ ಈ ಮಠವು ಈವರೆಗೆ ಬೆಳೆದು ಬಂದಿದೆ. ಮಠದ ಕರ್ತೃಗುರುಗಳ ಹಾಗೂ ಪರಂಪರೆಯ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಈಗ ದಾಖಲಿಸಿರುವಂತೆ ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು ಈ ಪುರಾತನ ಮಠವನ್ನು ಅಭಿವೃದ್ಧಿಪಡಿಸಿ ಪರಂಪರೆಯನ್ನು ಬೆಳೆಸಿದ್ದಾರೆ. ನಂತರ ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿ ೧೯೭೪ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ತರುವಾಯ ಶ್ರೀ ರೇಣುಕದೇವರು ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡಿದ್ದಾರೆ.

ಶ್ರೀ ಬಸವಲಿಂಗಯ್ಯ ಮತ್ತು ಶ್ರೀಮತಿ ಬೋರಮ್ಮನವರ ಪುತ್ರರಾಗಿ ಜನಿಸಿದ ಶ್ರೀ ರೇಣುಕ ದೇವರು ಶಿವಯೋಗ ಮಂದಿರ, ಬಾಳೆಹೊನ್ನೂರು ಹಾಗೂ ಹುಬ್ಬಳ್ಳಿಯಲ್ಲಿ ವಿದ್ಯಾಭ್ಯಾಸ ಮಾಡಿ ಮಠಕ್ಕೆ ಆಗಮಿಸಿದ್ದಾರೆ. ಇವರು ಪುರಾಣ ಪ್ರವಚನದ ಕಲೆಯನ್ನು ಮೈಗೂಡಿಸಿಕೊಂಡಿದ್ದು, ನಾಡಿನ ಬೇರೆ ಬೇರೆ ಮಠಗಳಿಗೆ ಹೋಗಿ ಪುರಾಣ ಪ್ರವಚನವನ್ನು ಮಾಡುತ್ತಾ ಧರ್ಮ ಪ್ರಚಾರವನ್ನು ಕೈಗೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಈಗಿನ ಉತ್ತರಾಧಿಕಾರಿಗಳಾದ ಶ್ರೀ ರೇಣುಕಸ್ವಾಮಿಗಳು ೨೦೦೦ದ ಇಸವಿಯಲ್ಲಿ ಹಿಮಾಲಯದಲ್ಲಿ ಮೂರು ತಿಂಗಳು ತಪಸ್ಸನ್ನು ಆಚರಿಸಿ ಬಂದಿದ್ದು, ೨೦೦೦ ದ ಡಿಸೆಂಬರ್‌ನಿಂದ ಮೂರು ತಿಂಗಳ ಕಾಲ ಮಠದಲ್ಲಿ ದೀರ್ಘ ತಪೋನುಷ್ಠಾನ ಮಾಡಿದ್ದಾರೆ. ಈ ಪುರಾತನ ಮಠದಲ್ಲಿ ನಾಲ್ಕು ಗದ್ದುಗೆಗಳು ಸ್ಥಾಪನೆಯಾಗಿವೆ. ಈ ಗದ್ದುಗೆಗಳಿಗೆ ನಿತ್ಯಪೂಜಾ ವ್ಯವಸ್ಥೆ, ಹಿರಿಯ ಗುರುಗಳ ಪುಣ್ಯಾರಾಧನೆಯ ಸಂದರ್ಭದಲ್ಲಿ ಒಂದು ತಿಂಗಳ ಕಾಲ ಪ್ರವಚನ ಹಾಗೂ ಕುಂಭೋತ್ಸವವನ್ನು ನಡೆಸಲಾಗುತ್ತಿದೆ. ಅಲ್ಲದೆ ಅನ್ನ ದಾಸೋಹವನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು, ಶ್ರೀ ಪರದೇಶಿ ಮಠ, ದೇವರ ಹಿಪ್ಪರಗಿ, ಸಿಂದಗಿ ತಾ, ಬಿಜಾಪುರ ಜಿಲ್ಲೆ.

ಹಿರೇಮಠ: ದೇವರ ಹಿಪ್ಪರಗಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವುದರಿಂದ ಹಿರೇ ಮಠಕ್ಕೆ'ನಡವಿನಮಠ 'ಎಂದು ಸಹ ಕರೆಯಲಾಗುತ್ತಿದೆ. ಉಜ್ಜಯಿನಿ ಪೀಠದ ಶಾಖಾ ಮಠವಾಗಿ ಪುತ್ರ ವರ್ಗದ ಪರಂಪರೆಯಲ್ಲಿ ಬೆಳೆದು ಬಂದಿರುವ ಈ ಮಠವು ಈ ಗ್ರಾಮದ ಪುರಾತನ ಮಠಗಳಲ್ಲಿ ಒಂದಾಗಿದೆ. ಈ ಮಠದ ಸ್ಥಾಪನೆಯ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ.

ಪರಂಪರೆ:

೧. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಮಡಿವಾಳ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ವೀರಘಂಟಿ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಮಡಿವಾಳದೇವರು

ಈ ರೀತಿ ಮಠದ ಪರಂಪರೆಯಲ್ಲಿ ಕೆಲವು ಗುರುಗಳ ಹೆಸರನ್ನು ದಾಖಲಿಸಲಾಗಿದೆ. ಈಗ ಲಭ್ಯವಿರುವ ಆಧಾರದ ಮೇಲೆ ಹೇಳುವುದಾದರೆ ಮಠದ ಪರಂಪರೆಯಲ್ಲಿ ಒಂಬತ್ತು ಜನ ಗುರುಗಳು ಅಧಿಕಾರ ನಡೆಸಿ ಲಿಂಗೈಕ್ಯರಾಗಿದ್ದಾರೆ. ಇದಕ್ಕೆ ಸಾಕ್ಷಿ ಎಂಬಂತೆ ಮಠದ ಆವರಣದಲ್ಲಿ ಒಂಬತ್ತು ಗದ್ದುಗೆಗಳು ಸ್ಥಾಪನೆಗೊಂಡಿವೆ. ಪರಂಪರೆಯ ಒಂಬತ್ತನೆಯ ಗುರುಗಳಾದ

ಶ್ರೀವೀರಘಂಟೆ ಶಿವಾಚಾರ್ಯ ಸ್ವಾಮಿಗಳು ೧೯೪೮ ರ ಡಿಸೆಂಬರ್ ಇಪ್ಪತ್ತರಂದು ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿದಿತ್ತು. ಈಗ ಹತ್ತನೆಯ ಗುರುಗಳಾಗಿ ಶ್ರೀ ಮಡಿವಾಳ ದೇವರು ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡಿದ್ದಾರೆ.

ಶ್ರೀ ಮಡಿವಾಳ ದೇವರು ಶ್ರೀ ಪ್ರಭುಲಿಂಗಯ್ಯ ಹಿರೇಮಠ ಮತ್ತು ಶ್ರೀಮತಿ ಸುಗುಲಬಾಯಿ ಇವರ ಪುತ್ರರಾಗಿ ೧೯೭೭ ರಲ್ಲಿ ಜನಿಸಿದ್ದಾರೆ. ಇವರು ಹುಬ್ಬಳ್ಳಿ, ಶಿವಯೋಗ ಮಂದಿರ ಹಾಗೂ ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡಿ ಪಾಂಡಿತ್ಯವನ್ನು ಸಂಪಾದಿಸಿಕೊಂಡಿದ್ದಾರೆ. ಮಠದ ಹಳೆಯ ಕಟ್ಟಡವು ಪೂರ್ಣ ಜೀರ್ಣಗೊಂಡಿದ್ದು, ಇದನ್ನು ನವೀಕರಣಗೊಳಿಸಿ ಮಠದ ಆವರಣದಲ್ಲಿರುವ ಗದ್ದುಗೆಗಳನ್ನು ಗುರುತಿಸಿ ಸ್ಮಾರಕಗಳನ್ನಾಗಿ ಮಾಡಲಾಗಿದೆ.ಅಲ್ಲದೆ ನಿತ್ಯಪೂಜೆಯನ್ನು ಮಾಡುವ ಮೂಲಕ ಅವರ ಸ್ಮರಣೆಯನ್ನು ಮಾಡಿಕೊಳ್ಳಲಾಗುತ್ತಿದೆ. ಮಠದ ಆಸ್ತಿಯಾಗಿರುವ ಏಳು ಎಕರೆ ಜಮೀನನ್ನು ಅಭಿವೃದ್ಧಿಪಡಿಸಲಾಗಿದೆ.

ವಿಳಾಸ: ಷ.ಬ್ರ.ಶ್ರೀ ಮಡಿವಾಳ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ದೇವರ ಹಿಪ್ಪರಗಿ, ಸಿಂದಗಿ ತಾ, ಬಿಜಾಪುರ ಜಿಲ್ಲೆ.

ಶಾಂತನಮಠ: ದೇವರಹಿಪ್ಪರಗಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಶಾಂತನಮಠವು ಉಜ್ಜಯಿನಿ ಪೀಠದ ಶಾಖಾ ಮಠವಾಗಿದೆ. ಪುರಾತನ ಕಾಲದಲ್ಲಿ ಶ್ರೀ ಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿದ್ದರಿಂದ ಈ ಮಠಕ್ಕೆ 'ಶ್ರೀ ಶಾಂತನಮಠ' ಎಂದು ಹೆಸರು ಬಂದಿದೆ. ಈ ಮಠದಲ್ಲಿ ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಮಠಾಧೀಶರ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಇತ್ತೀಚೆಗೆ ಶ್ರೀ ಸೋಮಶೇಖರ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿತ್ತು. ಶ್ರೀ ಸೋಮಶೇಖರ ಸ್ವಾಮಿಗಳ ವಿದ್ವತ್ತನ್ನು ಗಮನಿಸಿ ಎಮ್ಮಿಗನೂರು ಹಂಪಿ ಸಾವಿರ ದೇವರು ಮಹಂತರ ಮಠದ ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡು, ಶ್ರೀ ವಾಮದೇವ ಮಹಾಂತ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳೆಂದು ಅಭಿದಾನವಿತ್ತು ೧೯೯೭ ರ ಮೇ ಹನ್ನೊಂದರಂದು ಪಟ್ಟಾಧಿಕಾರವನ್ನು ಮಾಡಲಾಗಿದೆ. ಈ ಕಾರಣದಿಂದ ಪುನಃ ಮಠವು ಖಾಲಿ ಉಳಿದಿದೆ. ಈ ಮಠದ ವಂಶಸ್ಥರು ಮಠದ ಕರ್ತೃಗದ್ದುಗೆಗೆ ಪೂಜೆ ಮಾಡಿಕೊಂಡು ಬರುತ್ತಿದ್ದಾರೆ. ಸಂದರ್ಭಕ್ಕನುಸಾರ ಶ್ರೀ ಸೋಮಶೇಖರ ಸ್ವಾಮಿಗಳು (ಶ್ರೀ ವಾಮದೇವ ಮಹಾಂತ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು) ಮಠಕ್ಕೆ ಆಗಮಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಸೋಮಶೇಖರ ಸ್ವಾಮಿಗಳು, (ಶ್ರೀ ವಾಮದೇವ ಮಹಾಂತ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು) ಶ್ರೀಶಾಂತನ ಮಠ, ದೇವರ ಹಿಪ್ಪರಗಿ, ಸಿಂದಗಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ದೇವಣಗಾಂವ್

ಸಿಂದಗಿ ತಾಲ್ಲೂಕಿನ ದೇವಣಗಾಂವ್ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಮೂವತ್ತೈದು ಕಿ.ಮೀ ದೂರದಲ್ಲಿದೆ. ಭೀಮಾನದಿಯ ದಡದ ಮೇಲೆ ದೇವಣಗಾಂವ್ ಗ್ರಾಮವು ಸ್ಥಾಪನೆಯಾಗಿದ್ದು, ಗ್ರಾಮದ ಮಧ್ಯಭಾಗದಲ್ಲಿ ವಿರಕ್ತ ಸಂಪ್ರದಾಯದ ಕುಮಾರ ಸಮಯದ ಶ್ರೀ ಬಕ್ಕೇಶ್ವರ ಮಠವು ಸ್ಥಾಪನೆಯಾಗಿದೆ.

ಬಕ್ಕೇಶ್ವರಮಠ: ದೇವಣಗಾಂವ್ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ಬಕ್ಕೇಶ್ವರ ಮಠವು , ಶ್ರೀ ಬಕ್ಕೇಶ್ವರ ಸ್ವಾಮಿಗಳಿಂದ ಸ್ಥಾಪನೆಯಾಗಿರುವುದರಿಂದ 'ಶ್ರೀಬಕ್ಕೇಶ್ವರ ಮಠ'ಎಂಬ ಹೆಸರು ಬಂದಿದೆ. ಶ್ರೀ ಬಕ್ಕೇಶ್ವರ ಸ್ವಾಮಿಗಳು ಶ್ರೀ ತೋಂಟದ ಸಿದ್ಧಲಿಂಗ ಸ್ವಾಮಿಗಳ ಜೊತೆಯಲ್ಲಿದ್ದ ಏಳುನೂರ ಒಂದು ವಿರಕ್ತರಲ್ಲಿ ಒಬ್ಬರಾಗಿದ್ದು, ಇವರು ಲೋಕ ಸಂಚಾರ ಕೈಗೊಂಡು ಭೀಮಾನದಿಯ ದಡದಲ್ಲಿ ನೆಲೆಗೊಂಡಿದ್ದಾರೆ. ಗುರುಗಳು ಇಲ್ಲಿ ನಡೆಸುತ್ತಿದ್ದ ಧರ್ಮೋಪದೇಶಕ್ಕೆ ಭಕ್ತರು ಅಪಾರ ಸಂಖ್ಯೆಯಲ್ಲಿ ಸೇರಿ ಶ್ರೀ ಬಕ್ಕೇಶ್ವರರ ಕೃಪಾಶೀರ್ವಾದಕ್ಕೆ ಪಾತ್ರರಾಗಿದ್ದರು. ದಿನದಿಂದ ದಿನಕ್ಕೆ ಭಕ್ತರ ಮತ್ತು ಗುರುಗಳ ಸಂಬಂಧ ಹೆಚ್ಚಾದಂತೆ ಧಾರ್ಮಿಕ ಆಚರಣೆಗಳು ಹೆಚ್ಚಾಗ ತೊಡಗಿದವು. ಗುರುಗಳು ಭೀಮಾನದಿಯ ದಂಡೆಯಲ್ಲಿ ಸ್ಥಾಪಿಸಿದ್ದ ಸಣ್ಣ ಕುಟೀರ ಸಾಕಾಗದೆ ಹೋಯಿತು. ಆಗ ಭಕ್ತರು ಮಠದ ಕಟ್ಟಡವನ್ನು ನಿರ್ಮಿಸಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದರು. ಭೀಮಾ ನದಿಯ ದಡದಲ್ಲಿದ್ದ ಸಣ್ಣ ಕುಟೀರದಿಂದ ಕಟ್ಟಡಕ್ಕೆ ಸ್ಥಳಾಂತರಗೊಂಡ ಮಠದಲ್ಲಿ ನಿತ್ಯ ಶಿವಾನುಭವ

ಗೋಷ್ಠಿ ಹಾಗೂ ಅನ್ನದಾಸೋಹದ ಕಾರ್ಯಗಳು ನಡೆಯತೊಡಗಿದವು.

ಪರಂಪರೆ: ೧. ಶ್ರೀ ಮ.ನಿ.ಪ್ರ. ಬಕ್ಕೇಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಶಂಕರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಬಕ್ಕೇಶ್ವರಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ವೀರಭದ್ರಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಶಿವಶಂಕರಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದ್ದು, ಕರ್ತೃಗುರುಗಳಾದ ಶ್ರೀ ಬಕ್ಕೇಶ್ವರ ಸ್ವಾಮಿಗಳು ನಿರ್ವಿಕಲ್ಪ ಸಮಾಧಿಯಾದ ಮೇಲೆ ಶ್ರೀ ಶಂಕರ ಸ್ವಾಮಿಗಳು ಅಧಿಕಾರಕ್ಕೆ ಬಂದರು. ಇವರ ಬಗ್ಗೆ ಹೆಚ್ಚು ಮಾಹಿತಿ ತಿಳಿಯದಾಗಿದೆ. ನಂತರ ಬಂದ ಶ್ರೀಬಕ್ಕೇಶ್ವರ ಸ್ವಾಮಿಗಳು ಹಾಗೂ ಶ್ರೀ ವೀರಭದ್ರ ಸ್ವಾಮಿಗಳ ಬಗ್ಗೆಯೂ ಹೆಚ್ಚು ಮಾಹಿತಿ ದೊರೆಯದಾಗಿದೆ.

ಈಗಿನ ಮಠಾಧ್ಯಕ್ಷರಾದ ಶ್ರೀ ಶಿವಶಂಕರ ಸ್ವಾಮಿಗಳು ಶ್ರೀ ಸಿದ್ಧರಾಮಯ್ಯ ಮತ್ತು ಶ್ರೀಮತಿ ಬಸಮ್ಮನವರ ಪುತ್ರರಾಗಿ ದೇವಣಗಾಂವ್‌ನಲ್ಲಿ ೧೯೫೧ ರ ಫೆಬ್ರುವರಿ ಒಂದರಂದು ಜನಿಸಿದರು. ಇವರು ದೇವಣಗಾಂವ್ ಮತ್ತು ಶಿವಯೋಗ ಮಂದಿರದಲ್ಲಿ ವಿದ್ಯಾಭ್ಯಾಸ ಮುಗಿಸಿ, ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗದ್ದುಗೆಗಳಿಗೆ ನಿತ್ಯಪೂಜೆ, ಅಮಾವಾಸ್ಯೆ ಮತ್ತು ಹುಣ್ಣಿಮೆಯಲ್ಲಿ ಭಜನೆ, ಶ್ರಾವಣ ಮಾಸದಲ್ಲಿ ಪುರಾಣ ಪ್ರವಚನವನ್ನು ನಡೆಸಲಾಗುತ್ತಿದೆ. ಯುಗಾದಿಯಾದ ಐದು ದಿನದಲ್ಲಿ ಶ್ರೀ ಬಕ್ಕೇಶ್ವರ ಜಾತ್ರೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭಗಳಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಿಸಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ.ಶಿವಶಂಕರ ಸ್ವಾಮಿಗಳು, ಶ್ರೀ ಬಕ್ಕೇಶ್ವರಮಠ, ದೇವಣಗಾಂವ್, ಸಿಂದಗಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ದೇವೂರು

ಸಿಂದಗಿ ತಾಲ್ಲೂಕಿನ ದೇವೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಇಪ್ಪತ್ತಾರು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಪಟ್ಟದದೇವರ ಮಠವು ಅಸ್ತಿತ್ವದಲ್ಲಿದೆ.

ಪಟ್ಟದದೇವರಮಠ: ದೇವೂರು ಗ್ರಾಮದಲ್ಲಿ ಉಜ್ಜಯಿನಿ ಪೀಠದ ಶಾಖಾಮಠವಾದ ಶ್ರೀ ಪಟ್ಟದದೇವರ ಮಠವು ಸ್ಥಾಪನೆಯಾಗಿದೆ. ಈ ಮಠವನ್ನು ಶ್ರೀ ಶಿವಬಸವ ಶಿವಾಚಾರ್ಯ ಸ್ವಾಮಿಗಳು ಸ್ಥಾಪಿಸಿದ್ದಾರೆಂದು ಹೇಳಲಾಗುತ್ತಿದೆ. ಆದರೆ ಸ್ಥಾಪಕ ಗುರುಗಳ ಬಗ್ಗೆ ಆಧಾರಗಳ ಕೊರತೆಯಿಂದ ಮಾಹಿತಿಗಳು ದೊರೆಯದಾಗಿದೆ.

ಮಠದ ಪರಂಪರೆ: ೧. ಷ.ಬ್ರ.ಶ್ರೀ ಶಿವಬಸವ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಮರುಳಾರಾಧ್ಯ ಶಿವಾಚಾರ್ಯಸ್ವಾಮಿಗಳು

ಈ ರೀತಿ ಕೆಲವು ಗುರುಗಳ ಹೆಸರನ್ನು ಮಾತ್ರ ದಾಖಲಿಸಬಹುದಾಗಿದೆ.ಮಠದ ಪರಂಪರೆಯಲ್ಲಿ ಐದು ಜನ ಗುರುಗಳು ಅಧಿಕಾರವನ್ನು ನಡೆಸಿ ಲಿಂಗೈಕ್ಯರಾಗಿದ್ದಾರೆಂದು ಹೇಳಲಾಗುತ್ತಿದೆ. ಇದಕ್ಕೆ ಸಾಕ್ಷಿ ಎಂಬಂತೆ ಮಠದಲ್ಲಿ ಐದು ಗದ್ದುಗೆಗಳು ಸ್ಥಾಪನೆಯಾಗಿವೆ. ಆದರೆ ಮೇಲಿನ ಮೂರು ಜನರ ಹೆಸರುಗಳನ್ನು ಮಾತ್ರ ದಾಖಲಿಸಬಹುದಾಗಿದೆ. ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಮೂವರು ಗುರುಗಳ ಹೆಸರುಗಳು ಲಭ್ಯವಿಲ್ಲ. ಶ್ರೀ ರುದ್ರಮುನಿಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಮಠವು ಅಭಿವೃದ್ಧಿ ಹೊಂದಿದೆ. ಗುರುಗಳು ಶಿವಪೂಜಾನಿಷ್ಠರಾಗಿ ಧರ್ಮವನ್ನು ಬೋಧಿಸುತ್ತಾ ವೀರಶೈವ ಧರ್ಮವನ್ನು ಬೆಳೆಸಿದರು. ಇವರು ೧೯೭೫ರ ಮೇ ಐದರಂದು ಲಿಂಗೈಕ್ಯರಾಗಿದ್ದಾರೆ. ಇವರ ತರುವಾಯ ೧೯೯೨ ರ ತನಕ ಖಾಲಿ ಉಳಿದಿದ್ದ ಮಠಕ್ಕೆ ಶ್ರೀ ಕಾಳಯ್ಯ ಮತ್ತು ಶ್ರೀಮತಿ ಅನುಸೂಯ ಬಾಯಿಯವರ ಪುತ್ರರಾಗಿ ೧೯೬೮ ರಲ್ಲಿ ಜನಿಸಿದ ಶ್ರೀ ಮರುಳಾರಾಧ್ಯ

ಶಿವಾಚಾರ್ಯ ಸ್ವಾಮಿಗಳು, ೧೯೯೨ ರಲ್ಲಿ ಅಧಿಕಾರಕ್ಕೆ ಬಂದು ಮಠವನ್ನು ಮುನ್ನಡೆಸಿದ್ದಾರೆ. ಗುರುಗಳು ಬೆಂಗಳೂರಿನಲ್ಲಿ ಸಂಸ್ಕೃತ ವಿದ್ವತ್, ವೇದ ಮತ್ತು ಆಗಮನವನ್ನು ಕಲಿತು ಮಠಕ್ಕೆ ಆಗಮಿಸಿದ್ದಾರೆ. ಗುರುಗಳು ಈ ಮಠದ ಶಾಖಾ ಮಠವಾದ ಡೋಣಬೂದಿಹಾಳು ಮಠವನ್ನು ಅಭಿವೃದ್ಧಿಪಡಿಸಿ, ಈ ಎರಡೂ ಮಠಗಳ ಆಡಳಿತವನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ಪೂಜೆ ನಡೆಸಲಾಗುತ್ತಿದೆ. ಮೇಐದರಂದು ಶ್ರೀರುದ್ರ ಮುನಿ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆ ಮತ್ತು ಶ್ರಾವಣಮಾಸದಲ್ಲಿ ಪುರಾಣ ಪ್ರವಚನವನ್ನು ಮಾಡಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಮರುಳಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ಶ್ರೀ ಪಟ್ಟದದೇವರಮಠ, ದೇವೂರು, ಸಿಂದಗಿ ತಾ, ಬಿಜಾಪುರಜಿಲ್ಲೆ.

ಬನ್ನಿಹಟ್ಟಿ (ಪಿ.ಎ)

ಸಿಂದಗಿ ತಾಲ್ಲೂಕಿನ ಬನ್ನಿಹಟ್ಟಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಸಂಗಮೇಶ್ವರ ಮಠವು ಅಸ್ತಿತ್ವದಲ್ಲಿದೆ.

ಸಂಗಮೇಶ್ವರಮಠ: ಬನ್ನಿಹಟ್ಟಿ ಗ್ರಾಮದಲ್ಲಿ ರಂಭಾಪುರಿ ಪೀಠದ ಶಾಖಾಮಠವಾದ ಶ್ರೀ ಸಂಗಮೇಶ್ವರ ಮಠವು ಸ್ಥಾಪನೆಯಾಗಿದೆ. ಮಠದ ಕರ್ತೃ ಗುರುಗಳಾದ ಶ್ರೀ ಸಂಗಮೇಶ್ವರ ಸ್ವಾಮಿಗಳು ಮೈಸೂರು ಕಡೆಯಿಂದ ಲೋಕಸಂಚಾರಕ್ಕೆ ಬಂದಾಗ ಇಲ್ಲಿ ಅನುಷ್ಠಾನ ಕೈಗೊಂಡು ಮಠವನ್ನು ಸ್ಥಾಪಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸಿ ಜೀವಂತ ಸಮಾಧಿಯಾಗಿದ್ದಾರೆ. ಇವರ ನಂತರ ಶ್ರೀ ನೀಲಕಂಠೇಶ್ವರ ಸ್ವಾಮಿಗಳು ಸಂಸಾರದಲ್ಲಿ ವೈರಾಗ್ಯವನ್ನು ತಾಳಿ ಜಂಗಮ ದೀಕ್ಷೆಯನ್ನು ಪಡೆದು ಶ್ರೀ ಸಂಗಮೇಶ್ವರ ಮಠದಲ್ಲಿ ಏಳು ವರ್ಷಗಳ ಕಾಲ ಅನುಷ್ಠಾನ ಕೈಗೊಂಡು ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಈಗ ಶ್ರೀ ಓಂಕಾರೇಶ್ವರ ಸ್ವಾಮಿಗಳು ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಾ ಮಠವನ್ನು ಮುನ್ನಡೆಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಓಂಕಾರೇಶ್ವರಶಿವಾಚಾರ್ಯಸ್ವಾಮಿಗಳು,ಶ್ರೀ ಸಂಗಮೇಶ್ವರಮಠ,ಬನಿ ಹಟ್ಟಿ (ಪಿ.ಎ),ಸಿಂದಗಿ ತಾ,ಬಿಜಾಪುರಜಿಲ್ಲೆ.

ಬೋರಗಿ

ಸಿಂದಗಿ ತಾಲ್ಲೂಕಿನ ಬೋರಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ವಿಶ್ವಾರಾಧ್ಯರ ಮಠವು ಅಸ್ತಿತ್ವದಲ್ಲಿದೆ.

ವಿಶ್ವಾರಾಧ್ಯರಮಠ: ಬೋರಗಿ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ವಿಶ್ವಾರಾಧ್ಯರ ಮಠವು ಅಬ್ಬೆ ತುಮಕೂರಿನ ಶಾಖಾಮಠವಾಗಿದೆ. ಅಬ್ಬೆ ತುಮಕೂರಿನ ಶ್ರೀ ವಿಶ್ವಾರಾಧ್ಯರು ಅನುಷ್ಠಾನಗೊಂಡಿದ್ದ ಈ ಸ್ಥಳದಲ್ಲಿ ಶ್ರೀ ಮಹಾಲಿಂಗಯ್ಯ ಸ್ವಾಮಿಗಳು ಮಠವನ್ನು ಸ್ಥಾಪಿಸಿ, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಶ್ರೀ ವಿಶ್ವಾರಾಧ್ಯರ ತೋರುಗದ್ದುಗೆಯನ್ನು ಸ್ಥಾಪಿಸಿದ್ದು, ಈ ಗದ್ದುಗೆಗೆ ನಿತ್ಯ ಪೂಜೆಯನ್ನು ನಡೆಸಲಾಗುತ್ತಿದೆ. ಮಠಕ್ಕೆ ಆಗಮಿಸುವ ನೂರಾರು ಭಕ್ತರಿಗೆ ನಿತ್ಯ ಅನ್ನ ದಾಸೋಹದ ವ್ಯವಸ್ಥೆಯನ್ನು ಮಾಡಿಸಲಾಗುತ್ತಿದೆ.

ವಿಳಾಸ:ಷ.ಬ್ರ.ಶ್ರೀ ಮಹಾಲಿಂಗಯ್ಯ ಶಿವಾಚಾರ್ಯಸ್ವಾಮಿಗಳು,ಶ್ರೀ ವಿಶ್ವಾರಾಧ್ಯರಮಠ, ಬೋರಗಿ, ಸಿಂದಗಿ ತಾ, ಬಿಜಾಪುರ ಜಿಲ್ಲೆ.

ಮಲಘಾಣ

ಸಿಂದಗಿ ತಾಲ್ಲೂಕಿನ ಮಲಘಾಣ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಭಾಗಕ್ಕೆ ಹದಿಮೂರು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಜಡೆಶಾಂತೇಶ್ವರ ಮಠವು ಅಸ್ತಿತ್ವದಲ್ಲಿದೆ.

ಜಡೆಶಾಂತೇಶ್ವರಮಠ: ಮಲಘಾಣ ಗ್ರಾಮದಲ್ಲಿ ಶ್ರೀ ರಂಭಾಪುರಿ ಪೀಠದ ಶಾಖಾಮಠವಾದ ಶ್ರೀ ಜಡೆಶಾಂತೇಶ್ವರ ಮಠವು ಸ್ಥಾಪನೆಯಾಗಿದೆ. ಕರ್ತೃ ಗುರುಗಳಾದ ಶ್ರೀ ಜಡೆಶಾಂತೇಶ್ವರ ಸ್ವಾಮಿಗಳು ಶ್ರೀಶೈಲ ಸಮೀಪದ ಸಿದ್ಧಾಪುರದಿಂದ ಹೊರಟು, ನಾಡಿನ ನಾನಾ ಭಾಗಗಳಲ್ಲಿ ಸಂಚಾರ ಕೈಗೊಂಡು ಮಲಘಾಣಕ್ಕೆ ಆಗಮಿಸುತ್ತಾರೆ. ಗುರುಗಳು ಇಲ್ಲಿ ನೆಲೆಗೊಂಡು

ದೀರ್ಘ ಕಾಲ ತಪಸ್ಸನ್ನು ಆಚರಿಸಿ ತಪೋಸಿದ್ಧಿಯನ್ನು ಪಡೆದುಕೊಂಡು ತಾವು ನೆಲೆ ನಿಂತ ಸ್ಥಳದಲ್ಲಿಯೇ ಮಠವನ್ನು ಸ್ಥಾಪಿಸಿ ಧರ್ಮಬೋಧನೆಯನ್ನು ಕೈಗೊಂಡು, ವೀರಶೈವ ಧರ್ಮ ಬೆಳೆಯಲು ಸಹಕಾರಿಯಾಗಿದ್ದಾರೆ. ಅಲ್ಲದೆ ಭಕ್ತರ ಕಣ್ಣು ತೆರೆಸಿ ಶಾಂತಿ, ಸಹಬಾಳ್ವೆಯಿಂದ ಬದುಕುವ ಮಾರ್ಗವನ್ನು ತೋರಿಸಿ ಸ್ವಾವಲಂಬಿಗಳನ್ನಾಗಿ ಮಾಡಿದರು.

ಪರಂಪರೆ:
೧. ಷ.ಬ್ರ.ಶ್ರೀ ಜಡೆಶಾಂತೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಕರಿಬಸವ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ದುಂಡಯ್ಯ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಜಡೆಶಾಂತೇಶ್ವರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಅಧಿಕಾರ ವಹಿಸಿಕೊಂಡ ಶ್ರೀ ಬಸವಲಿಂಗ ಸ್ವಾಮಿಗಳು ಮಠವನ್ನು ಬೆಳೆಸಿ ಅಭಿವೃದ್ಧಿಪಡಿಸಿದ್ದಾರೆ. ಇವರ ನಂತರದ ಶ್ರೀ ಕರಿಬಸವ ಸ್ವಾಮಿಗಳು ಶಿವಪೂಜಾ ನಿಷ್ಠರಾಗಿ ಮಠವನ್ನು ಬೆಳೆಸಿ, ಶ್ರೀ ದುಂಡಯ್ಯ ಶಿವಾಚಾರ್ಯ ಸ್ವಾಮಿಗಳಿಗೆ ಒಪ್ಪಿಸಿ ಲಿಂಗೈಕ್ಯರಾಗಿದ್ದಾರೆ. ಶ್ರೀ ದುಂಡಯ್ಯ ಸ್ವಾಮಿಗಳು ದೀರ್ಘಕಾಲ ಬದುಕಿ ೧೯೬೨ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಶ್ರೀ ಜಡೆಶಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು ಹಿರಿಯ ಗುರುಗಳ ಕರಕಮಲಸಂಜಾತರಾಗಿ ಬೆಳೆದು ೧೯೬೪ ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಗುರುಗಳು ಶ್ರೀ ಮಹಾಂತಯ್ಯ ಮತ್ತು ಶ್ರೀಮತಿ ಶಾಂತಮ್ಮನವರ ಪುತ್ರರಾಗಿ ೧೯೫೪ ರಲ್ಲಿ ಜನಿಸಿದರು.

ಪುತ್ರವರ್ಗದ ಪರಂಪರೆಯ ಈ ಮಠದಲ್ಲಿ ಒಟ್ಟು ಆರು ಜನ ಗುರುಗಳು ಅಧಿಕಾರ ನಡೆಸಿದ್ದಾರೆಂದು ಹೇಳಲಾಗುತ್ತಿದೆ. ಆದರೆ ಮಠದಲ್ಲಿ ಮೂರು ಗದ್ದುಗೆಗಳು ಸ್ಥಾಪನೆಯಾಗಿವೆ. ಈ ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ, ಶ್ರಾವಣಮಾಸದಲ್ಲಿ ರುದ್ರಾಭಿಷೇಕ ಹಾಗೂ ಭಜನೆ, ಯುಗಾದಿಯಾದ ಐದನೆಯ ದಿನದಿಂದ ಇಪ್ಪತ್ತು ದಿನಗಳ ಕಾಲ ಪುರಾಣ, ಪ್ರವಚನ ಹಾಗೂ ಕೊನೆಯ ದಿನ ಕರ್ತೃಗುರುಗಳ ಜಾತ್ರೆಯನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀಜಡೆಶಾಂತೇಶ್ವರ ಶಿವಾಚಾರ್ಯಸ್ವಾಮಿಗಳು, ಶ್ರೀ ಜಡೆಶಾಂತೇಶ್ವರಮಠ, ಮಲಘಾಣ,ಸಿಂದಗಿ ತಾ, ಬಿಜಾಪುರಜಿಲ್ಲೆ.

ಮೋರಟಗಿ

ಸಿಂದಗಿ ತಾಲ್ಲೂಕಿನ ಮೋರಟಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಇಪ್ಪತ್ತೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ನೂರೊಂದೇಶ್ವರ ವಿರಕ್ತಮಠವು ಅಸ್ತಿತ್ವದಲ್ಲಿದ್ದು ಧಾರ್ಮಿಕ, ಶೈಕ್ಷಣಿಕ, ಸಾಹಿತ್ಯಿಕ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿಯನ್ನು ಸಾಧಿಸಿದೆ.

ನೂರೊಂದೇಶ್ವರ ವಿರಕ್ತಮಠ: ಮೋರಟಗಿ ಗ್ರಾಮದಲ್ಲಿ ಚೀಲಾಳ ಸಮಯದ ಶ್ರೀ ನೂರೊಂದೇಶ್ವರ ವಿರಕ್ತಮಠವು ಸ್ಥಾಪನೆಯಾಗಿದೆ. ಹದಿನೈದನೆಯ ಶತಮಾನದಲ್ಲಿ ಶ್ರೀ ಸಿದ್ಧಲಿಂಗೇಶ್ವರರ ಜೊತೆ ಆಗಮಿಸಿದ್ದ ವಿರಕ್ತರಲ್ಲಿ ಶ್ರೀ ಸಿದ್ಧಲಿಂಗ ಸ್ವಾಮಿಗಳು ಇಲ್ಲಿ ನೆಲೆ ನಿಂತು ಮಠವನ್ನು ಸ್ಥಾಪಿಸಿರುತ್ತಾರೆ. ಇವರು ನೂರೊಂದು ಮಠಗಳನ್ನು ಸ್ಥಾಪಿಸಿ ಶರಣತತ್ತ್ವ ಪ್ರಸಾರಗೊಳ್ಳುವಂತೆ ಮಾಡಿದರು. ನೂರೊಂದು ಮಠಗಳು ಸ್ಥಾಪನೆಯಾದ ಕಾರಣ ಈ ಮಠಕ್ಕೆ 'ಶ್ರೀ ನೂರೊಂದೇಶ್ವರವಿರಕ್ತ ಮಠ'ಎಂಬ ಹೆಸರುಬಂದಿದೆ. ಕರ್ತೃಗುರುಗಳಾದ ಶ್ರೀ ಸಿದ್ಧಲಿಂಗಸ್ವಾಮಿಗಳ ತರುವಾಯ ಬೆಳೆದು ಶ್ರೀಮಂತಗೊಂಡಿದೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ನೂರೊಂದೇಶ್ವರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ನೀಲಕಂಠಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ತೋಂಟದಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು

೬. ಶ್ರೀ ಮ.ನಿ.ಪ್ರ. ಗುರುಬಸವಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಚನ್ನಬಸವಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ನೂರೊಂದುಸ್ವಾಮಿಗಳು
೯. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಸಂಚಾರದಲ್ಲಿದ್ದಾಗ ಸ್ನಾನ ಪೂಜಾಕಾರ್ಯಗಳನ್ನು ಮುಗಿಸಿ ಕಂತೆಭಿಕ್ಷವನ್ನು ಮಾಡಿ ಪ್ರಸಾದವನ್ನು ಸ್ವೀಕರಿಸುತ್ತಿದ್ದರಂತೆ. ಒಮ್ಮೆ ಕಾಡಿನಲ್ಲಿ ಸಂಚಾರ ಮಾಡುತ್ತಿದ್ದಾಗ ಕಂತೆಭಿಕ್ಷೆ ಮಾಡಲು ಸಮೀಪದಲ್ಲಿ ಹಳ್ಳಿಗಳು ಇಲ್ಲದಿದ್ದಾಗ ಹೊಳೆಯ ನೀರನ್ನೇ ಕುಡಿದು ಹಸಿವನ್ನು ಇಂಗಿಸಿಕೊಂಡ ಗುರುಗಳು ಧ್ಯಾನಾಸಕ್ತರಾಗಿ ಕುಳಿತಿರುವಾಗ ಅಂಬಾಭವಾನಿಯು ತಾಯಿ ರೂಪದಲ್ಲಿ ಆಗಮಿಸಿ ಪ್ರಸಾದವನ್ನು ಮಾಡಿ ಬಡಿಸಿದಳಂತೆ. ಇಂತಹ ಮಹಾ ಮಹಿಮರ ನಂತರ ನೂರೊಂದೇಶ್ವರ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಬೆಳೆಸಿದ್ದಾರೆ. ನಂತರ ಬಂದ ಮಠಾಧೀಶರ ಬಗ್ಗೆ ಹೆಚ್ಚು ಮಾಹಿತಿ ಲಭ್ಯವಿಲ್ಲ.

ಪರಂಪರೆಯ ಎಂಟನೆಯ ಗುರುಗಳಾದ ಶ್ರೀ ನೂರೊಂದು ಸ್ವಾಮಿಗಳು ಶ್ರೀ ಗುರುಬಸವಯ್ಯ ಮತ್ತು ಶ್ರೀಮತಿ ಬಸಮ್ಮನವರ ಪುತ್ರರಾಗಿ ಜನಿಸಿ, ಏಳನೆಯ ತರಗತಿಯವರೆಗೆ ಅಭ್ಯಾಸ ಮಾಡಿ ಸೋಲಾಪುರದ ವಾರದ ಮಲ್ಲಪ್ಪನವರ ಪಾಠಶಾಲೆಯಲ್ಲಿ ಸಂಸ್ಕೃತ, ವೇದಾಧ್ಯಯನವನ್ನು ಮಾಡಿ ಮಠಕ್ಕೆ ಆಗಮಿಸಿ ಮಠವನ್ನು ಅಭಿವೃದ್ಧಿಪಡಿಸಿದರು. ಆಯುರ್ವೇದ ಪಂಡಿತರಾಗಿದ್ದ ಇವರು ತಮ್ಮ ಮಂತ್ರಶಕ್ತಿಯಿಂದ ಎಂತಹ ರೋಗವನ್ನಾದರೂ ಗುಣಪಡಿಸುವ ಶಕ್ತಿಯನ್ನು ಹೊಂದಿದ್ದರು. ಸುತ್ತಮುತ್ತಲಿನ ಗ್ರಾಮಸ್ಥರು ಇವರ ಆರೈಕೆಯಿಂದ ಗುಣಮುಖರಾಗುತ್ತಿದ್ದರು ಎಂದು ಹೇಳಲಾಗುತ್ತಿದೆ. ಇವರು ತಮ್ಮ ಕಾಯಕ ಯೋಗದಿಂದ ಮಠವನ್ನು ಅಭಿವೃದ್ಧಿಪಡಿಸಿ ಶ್ರೀ ಸಿದ್ಧಲಿಂಗ ಸ್ವಾಮಿಗಳನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ಮಾಡಿ ಕೊಂಡು ಪಟ್ಟಾಧಿಕಾರದ ದಿನಾಂಕವನ್ನು ನಿಗದಿಗೊಳಿಸಿ ೧೯೭೫ ರಲ್ಲಿ ಲಿಂಗೈಕ್ಯರಾದರು.

೧೭೭೬ ರ ಮಾರ್ಚ್ ಇಪ್ಪತ್ತೈದರಂದು ಉತ್ತರಾಧಿಕಾರಿಗಳಾಗಿ ನೇಮಕಗೊಂಡಿದ್ದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಮೋರಟಗಿಯ ಶ್ರೀ ನಿರ್ವಾಣಯ್ಯ ಮತ್ತು ಶ್ರೀಮತಿ ಬಸಮ್ಮನವರ ಪುತ್ರರಾಗಿ ೧೯೫೭ ರ ಡಿಸೆಂಬರ್ ಇಪ್ಪತ್ತೆಂಟರಂದು ಜನಿಸಿ ಗದಗ, ಧಾರವಾಡದಲ್ಲಿ ವಿದ್ಯಾಭ್ಯಾಸ ಮಾಡಿ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು, ೧೯೮೨ ರಲ್ಲಿ ಮಠದ ಅಧಿಕಾರಕ್ಕೆ ಬಂದಿದ್ದಾರೆ. ಗುರುಗಳು ಅಧಿಕಾರಕ್ಕೆ ಬಂದ ಮೇಲೆ ಮಠದ ಹಳೆಯ ಕಟ್ಟಡವನ್ನು ನವೀಕರಣಗೊಳಿಸಿ ಆವಶ್ಯಕತೆಗನುಗುಣವಾಗಿ ವಿಸ್ತರಿಸಿದ್ದಾರೆ. ಗದಗಿನ ತೋಂಟದಾರ್ಯ ಮಠದ ಶ್ರೀ ಡಾ. ತೋಂಟದ ಸಿದ್ಧಲಿಂಗ ಸ್ವಾಮಿಗಳ ಮಾರ್ಗದರ್ಶನ ಹಾಗೂ ಕೃಪಾಶೀರ್ವಾದದಿಂದ ಮಠವನ್ನು ಮುನ್ನಡೆಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಪರಂಪರೆಯ ಗುರುಗಳ ಆರುಗದ್ದುಗೆಗಳು ಮಠದ ಆವರಣದಲ್ಲಿ ಸ್ಥಾಪನೆಯಾಗಿದ್ದು, ಈಗದ್ದುಗೆ ಗಳಿಗೆ ನಿತ್ಯ ಎರಡುವೇಳೆ ಪೂಜೆ, ಅಮಾವಾಸ್ಯೆಯಲ್ಲಿ ರುದ್ರಾಭಿಷೇಕ ಮತ್ತು ಶಿವಾನುಭವ ಗೋಷ್ಠಿಯನ್ನು ನಡೆಸಲಾಗುತ್ತಿದೆ. ಶ್ರೀ ನೂರೊಂದುಸ್ವಾಮಿಗಳ ಪುಣ್ಯಸ್ಮರಣೋತ್ಸವವನ್ನು ಜನವರಿಯಲ್ಲಿ ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಒಂದುತಿಂಗಳ ಕಾಲ ಪುರಾಣ ಪ್ರವಚನವನ್ನು ಏರ್ಪಡಿಸಲಾಗುತ್ತಿದೆ. ಕಟ್ಟಿಗೆಯ ರಥ, ಕಂಚಿನ ರಥ ಹಾಗೂ ರುದ್ರಾಕ್ಷಿಯ ಅಂಗಿ ಮಠದಲ್ಲಿವೆ.

ಅಭಿವೃದ್ಧಿ ಕಾರ್ಯಗಳು: ಕರ್ತೃಗುರುಗಳಾದ ಶ್ರೀ ಸಿದ್ಧಲಿಂಗ ಸ್ವಾಮಿಗಳ ಕಾಲದಲ್ಲಿ ನಿರ್ಮಾಣಗೊಂಡ ಮಠದ ಕಲ್ಲಿನಕಟ್ಟಡ ವನ್ನು ಈಗ ನವೀಕರಣಗೊಳಿಸಿ ವಿಸ್ತರಿಸಲಾಗಿದೆ. ಶಿಕ್ಷಣಸಂಸ್ಥೆಗಳಿಗೆ ಕಟ್ಟಡಗಳ ನಿರ್ಮಾಣ ಮಾಡಲಾಗಿದೆ. ಮಠದ ಆಸ್ತಿ ಯಾಗಿ ಇಪ್ಪತ್ತೈದು ಎಕರೆ ಜಮೀನಿದ್ದು ಇದನ್ನು ಅಭಿವೃದ್ಧಿಪಡಿಸಿ ಮಠಕ್ಕೆ ಆದಾಯದ ಮೂಲವನ್ನಾಗಿ ಮಾಡಿಕೊಳ್ಳಲಾಗಿದೆ.

ಶಿಕ್ಷಣ ಸಂಸ್ಥೆಗಳು: ಮಠದ ಆವರಣದಲ್ಲಿ ಗದಗದ ತೋಂಟದಾರ್ಯ ಸಂಸ್ಥಾನ ಮಠದ ವತಿಯಿಂದ ನಡೆಯುತ್ತಿರುವ ಕೈಗಾರಿಕಾ ತರಬೇತಿ ಕೇಂದ್ರದ ಉಸ್ತುವಾರಿಯನ್ನು ಶ್ರೀ ಸಿದ್ಧಲಿಂಗ ಸ್ವಾಮಿಗಳು ನೋಡಿಕೊಳ್ಳುತ್ತಿದ್ದಾರೆ. ಅಲ್ಲದೆ ಮಠದ ಆವರಣದಲ್ಲಿ ಶ್ರೀ ನೂರೊಂದೇಶ್ವರ ಪ್ರಾಥಮಿಕ ಶಾಲೆ, ಸಿದ್ಧಲಿಂಗೇಶ್ವರ ಶಿಶುವಿಹಾರ, ಶ್ರೀ ತೋಂಟದಾರ್ಯ ಅನಾಥಾಶ್ರಮ,

ಸಕಲಬಾಯಿ ಕೋರೆಯವರ ಪ್ರಸಾದ ನಿಲಯ, ಜೇವರ್ಗಿಯಲ್ಲಿ ಷಣ್ಮುಖ ಶಿವಯೋಗಿ ಗ್ರಾಮಾಂತರ ಪಾಲಿಟೆಕ್ನಿಕ್, ಸಂಗನಗೌಡ ಪೊಲೀಸ್ ಪಾಟೀಲ ಪ್ರಾಥಮಿಕ ಶಾಲೆ ಹಾಗೂ ಶ್ರೀ ನೂರೊಂದೇಶ್ವರ ಪ್ರೌಢಶಾಲೆಯನ್ನು ಪ್ರಾರಂಭಿಸಿ, ವ್ಯವಸ್ಥಿತವಾಗಿ ನಡೆಯುವಂತೆ ನೋಡಿಕೊಳ್ಳುತ್ತಿದ್ದಾರೆ.

ಸಾಮಾಜಿಕ ಕಾರ್ಯಗಳು: ಸಮಾಜಮುಖಿಯಾಗಿ ಬೆಳೆಯುತ್ತಿರುವ ಶ್ರೀ ನೂರೊಂದೇಶ್ವರ ಮಠದಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳ ಜೊತೆಗೆ ಉಚಿತ ನೇತ್ರಾ ಚಿಕಿತ್ಸಾ ಶಿಬಿರಗಳು, ಆನೆಕಾಲು ರೋಗ ನಿವಾರಣೆಯ ಶಿಬಿರವನ್ನು ಒಂದು ತಿಂಗಳ ಕಾಲ ಎರಡೂ ಗ್ರಾಮಗಳಲ್ಲಿ ನಡೆಸಿ ಉಚಿತ ಚಿಕಿತ್ಸೆ ಕೊಡಿಸಲಾಗಿದೆ. ಮಠದ ವತಿಯಿಂದ ಸಮಾಜದ ಅಭಿವೃದ್ಧಿಗೆ ಪೂರಕವಾಗುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಮಾಜವನ್ನು ಬೆಳೆಸಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಸಿದ್ಧಲಿಂಗ ಸ್ವಾಮಿಗಳು, ಶ್ರೀ ನೂರೊಂದೇಶ್ವರ ವಿರಕ್ತಮಠ, ಮೋರಟಗಿ, ಸಿಂದಗಿ ತಾ, ಬಿಜಾಪುರ ಜಿಲ್ಲೆ.

ಯಂಕಂಚಿ

ಸಿಂದಗಿ ತಾಲ್ಲೂಕಿನ ಯಂಕಂಚಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಕುಂಟೋಜಿಮಠವು ಅಸ್ತಿತ್ವದಲ್ಲಿದೆ.

ಕುಂಟೋಜಿಮಠ: ಯಂಕಂಚಿಯಲ್ಲಿ ಉಜ್ಜಯಿನಿ ಪೀಠದ ಶಾಖಾ ಮಠವಾದ ಶ್ರೀ ಕುಂಟೋಜಿಮಠವು ಸ್ಥಾಪನೆಯಾಗಿದೆ. ಮುದ್ದೇಬಿಹಾಳು ತಾಲ್ಲೂಕಿನ ಶ್ರೀ ಕುಂಟೋಜಿಮಠದ ಗುರುಗಳು ಲೋಕಸಂಚಾರ ಕೈಗೊಂಡು ಈ ಗ್ರಾಮಕ್ಕೆ ಬಂದು ನೆಲೆಸಿ ಮಠವನ್ನು ಸ್ಥಾಪನೆ ಮಾಡಿರುತ್ತಾರೆ. ಅಂದು ಸ್ಥಾಪನೆಗೊಂಡ ಮಠವು ಈ ಗ್ರಾಮದ ಧಾರ್ಮಿಕ ಕೇಂದ್ರಬಿಂದುವಾಗಿ ಬೆಳೆಯಿತು. ಈ ಮಠಕ್ಕೆ ಈಗ ಶ್ರೀ ಗುರುಪಾದ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಲಾಗಿದೆ.

ಶ್ರೀ ಗುರುಪಾದದೇವರು ಯಂಕಂಚಿ ಗ್ರಾಮದ ಶ್ರೀ ಗುರುಲಿಂಗಯ್ಯ ಮತ್ತು ಶ್ರೀಮತಿ ಚಿನ್ನಮ್ಮನವರ ಪುತ್ರರಾಗಿ ೧೯೮೨ರಲ್ಲಿ ಜನಿಸಿದ್ದಾರೆ. ಗ್ರಾಮಸ್ಥರು ಮಠಕ್ಕೆ ನೂತನ ಕಟ್ಟಡವನ್ನು ನಿರ್ಮಿಸಿಕೊಟ್ಟಿದ್ದಾರೆ. ತೋರುಗದ್ದುಗೆಗೆ ಪೂಜೆ, ಶ್ರಾವಣಮಾಸದಲ್ಲಿ ಭಜನೆ ಹಾಗೂ ಹಿರಿಯ ಗುರುಗಳ ಆರಾಧನೆಯನ್ನು ಗ್ರಾಮದ ಭಕ್ತರು ಮಾಡಿಕೊಡುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಗುರುಪಾದ ದೇವರು, ಶ್ರೀ ಕುಂಟೋಜಿಮಠ, ಯಂಕಂಚಿ, ಸಿಂದಗಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ಸಿಂದಗಿ

ಬಿಜಾಪುರ ಜಿಲ್ಲೆಯ ಸಿಂದಗಿಯು ಜಿಲ್ಲಾ ಕೇಂದ್ರದಿಂದ ಪೂರ್ವಕ್ಕೆ ಅರವತ್ತು ಕಿ.ಮೀ ದೂರದಲ್ಲಿದೆ. ತಾಲ್ಲೂಕಿನ ಕೇಂದ್ರ ಸ್ಥಳವಾದ ಸಿಂದಗಿಯು ಒಂದು ಐತಿಹಾಸಿಕ ಪಟ್ಟಣ. ಈ ಪಟ್ಟಣದಲ್ಲಿ ಪುರಾತನ ಕಾಲದಿಂದಲೂ ವೀರಶೈವ ಧರ್ಮ ಬೆಳೆದು ಬಂದಿದೆ. ಇಲ್ಲಿ ವೀರಶೈವ ಧರ್ಮ ಹೆಚ್ಚು ಪ್ರಸಿದ್ಧಿಗೆ ಬರಲು ಪುರಾತನ ಕಾಲದಲ್ಲಿ ಸ್ಥಾಪನೆಗೊಂಡ ಒಟ್ಟು ಹನ್ನೆರಡು ಮಠಗಳು ಕಾರಣವಾಗಿವೆ. ಈ ಮಠಗಳಲ್ಲಿ ಈಗ ಶ್ರೀ ಸಾರಂಗಮಠ, ಶ್ರೀ ಪಟ್ಟದ ಹಿರೇಮಠ, ಶ್ರೀ ವಿರಕ್ತಮಠ,ಶ್ರೀ ಗಚ್ಚಿನಮಠ, ಎಂಬ ನಾಲ್ಕು ಮಠಗಳು ಮಾತ್ರ ಅಸ್ತಿತ್ವದಲ್ಲಿದ್ದು, ಉಳಿದ ಒಂಬತ್ತು ಮಠಗಳು ಹೇಳಲು ಹೆಸರಿಲ್ಲದಂತಾಗಿವೆ.

ಸಾರಂಗಮಠ: ಸಿಂದಗಿ ಗ್ರಾಮದ ದಕ್ಷಿಣದ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಸಾರಂಗ ಮಠವು ಬಹಳ ಪುರಾತನ ಕಾಲದ ಗುರುಸ್ಥಲ ಮಠವಾಗಿದೆ. ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ ಮುಂತಾದ ಕಡೆಗಳಲ್ಲಿ ಸಾರಂಗ ಮಠಗಳ ಸ್ಥಾಪನೆಯಾಗಿದೆ. ಈ ಎಲ್ಲಾ ಮಠಗಳನ್ನು ಶ್ರೀ ಸಾರಂಗದೇವ ಎಂಬ ಹೆಸರಿನ ಶಿವಯೋಗಿಗಳು ಸ್ಥಾಪನೆ ಮಾಡಿರುವುದಕ್ಕೆ ಶ್ರೀ ಸಾರಂಗಮಠ ಎಂದು ಹೆಸರು ಬಂದಿದೆ. ಸಾರಂಗ ಮಠ ಇಂದು ರಂಗಮಠ, ಹಿರೇರಂಗಮಠ ಹಾಗೂ ಸಾರಂಗಮಠ ಹೀಗೆ ವಿವಿಧ ಹೆಸರುಗಳಿಂದ ಕರೆಯಲ್ಪಡುತ್ತಿದೆ ಎಂದು ಡಾ. ಮಲ್ಲಿಕಾರ್ಜುನ ಚಾಂದಕವಟೆಯವರು 'ಶ್ರೀ ಚನ್ನವೀರ ಮಹಾಸ್ವಾಮಿಗಳು' ಎಂಬ ಕೃತಿಯಲ್ಲಿ ವಿವರಿಸಿದ್ದಾರೆ. ಉಜ್ಜಯಿನಿ ಪೀಠದ ಶಾಖಾ ಮಠವಾದ ಈ ಮಠದ ಪರಂಪರೆಯಲ್ಲಿ

ಜಂಗಮರಲ್ಲದೆ ಭಕ್ತರು ಸಹ ಈ ಮಠದ ಮಠಾಧಿಕಾರಿಗಳಾಗಿ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದಾರೆ, ಎಂಬುದು ಒಂದು ವಿಶೇಷ ಸಂಪ್ರ ದಾಯವಾಗಿ ಕಂಡುಬರುತ್ತಿದೆ.

ಮಠ ಸ್ಥಾಪನೆ: ಮೂಲ ಶ್ರೀ ಸಾರಂಗದೇವರು ಲೋಕ ಸಂಚಾರದಲ್ಲಿದ್ದ ಸಂದರ್ಭದಲ್ಲಿ ಸಿಂದಗಿ ಪಟ್ಟಣಕ್ಕೆ ಬಂದು ಅಲ್ಲಿನ ಜೈನ ದೇವಾಲಯದಲ್ಲಿದ್ದ ಏಳು ಜಡೆಯ ರಾಕ್ಷಸನನ್ನು ಓಡಿಸಿ, ಆ ದೇವಾಲಯವನ್ನು ಮಠವನ್ನಾಗಿ ಮಾಡಿ ಇಲ್ಲಿ ಕೆಲವು ದಿನ ಪೂಜಾನುಷ್ಠಾನವನ್ನು ಕೈಗೊಂಡು ತಮ್ಮ ಶಿಷ್ಯರನ್ನು ಇಲ್ಲಿ ನೇಮಿಸಿದರಂತೆ. ಅಂದಿನಿಂದ ಈ ಮಠವು ವೀರಶೈವ ಧರ್ಮಾಚರಣೆಗಳ ಕೇಂದ್ರ ಬಿಂದುವಾಗಿ ಬೆಳೆದು, ವೀರಶೈವ ಧರ್ಮ ಪ್ರಬಲವಾಗಿ ಬೆಳೆಯಲು ಕಾರಣವಾಗಿದೆ. ಏಳುಜಡೆಯ ರಾಕ್ಷಸನನ್ನು ಓಡಿಸಿದ ಶ್ರೀ ಸಾರಂಗದೇವರು ತಮ್ಮ ಮೂರು ಜನ ಶಿಷ್ಯರನ್ನು ಇಲ್ಲಿ ನೆಲೆಗೊಳಿಸಿದರಂತೆ. ಮೂರು ಜನ ಶಿಷ್ಯರು ಶ್ರೀ ಅಧಿಕಾರಿ ಮಠ, ಶ್ರೀ ರಾಕ್ಷಸಿ ಮಠ ಮತ್ತು ಶ್ರೀ ಚೌಕಿಮಠಗಳನ್ನು ಮಾಡಿಕೊಂಡು ವೀರಶೈವ ಧರ್ಮವನ್ನು ಬೆಳೆಸಿದ್ದಾರೆ ಎಂಬ ವಿಚಾರ ವಚನಶಾಸ್ತ್ರ ಪಿತಾಮಹ ಡಾ.ಫ.ಗು. ಹಳಕಟ್ಟಿಯವರು ಸಂಪಾದಿಸಿದ 'ಸಾರಂಗ ಮಠಾಧೀಶರು' ಎಂಬ ಕೃತಿಯಲ್ಲಿ ವ್ಯಕ್ತಗೊಂಡಿದೆ. ಈ ರೀತಿ ಪುರಾತನ ಪರಂಪರೆ ಇರುವ ಸಾರಂಗ ಮಠಕ್ಕೆ ಶ್ರೀ ಸಾರಂಗ ಮುನಿಗಳು ಪ್ರಥಮವಾಗಿ ಶ್ರೀ ಸಿದ್ಧ ಶಿವಾಚಾರ್ಯ ಸ್ವಾಮಿಗಳನ್ನು ನೇಮಿಸಿದರೆಂದು ಹೇಳಲಾಗುತ್ತಿದೆ. ಶ್ರೀ ಸಿದ್ಧ ಶಿವಾಚಾರ್ಯ ಸ್ವಾಮಿಗಳಿಂದ ಪ್ರಾರಂಭಗೊಂಡ ಮಠದ ಪರಂಪರೆ ಈತನಕ ಬೆಳೆದು ಶ್ರೀಮಂತಗೊಂಡಿದೆ.

ಪರಂಪರೆ:

೧. ಷ.ಬ್ರ.ಶ್ರೀ ಸಿದ್ಧ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಶಾಂತಬಸವ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಮರುಳಾರಾಧ್ಯ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಸಿದ್ಧ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಲಿಂಗಯ್ಯ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಚಿಕ್ಕಲಿಂಗ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ಜಂಗಮಯ್ಯ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯಸ್ವಾಮಿಗಳು
೧೦. ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯಸ್ವಾಮಿಗಳು
೧೧. ಷ.ಬ್ರ.ಶ್ರೀ ಪ್ರಭುದೇವ ಶಿವಾಚಾರ್ಯಸ್ವಾಮಿಗಳು
೧೨. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯಸ್ವಾಮಿಗಳು
೧೩. ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯಸ್ವಾಮಿಗಳು
೧೪. ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯಸ್ವಾಮಿಗಳು
೧೫. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೧೬. ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯಸ್ವಾಮಿಗಳು
೧೭. ಷ.ಬ್ರ.ಶ್ರೀ ಪ್ರಭು ಸಾರಂಗದೇವ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದುಬಂದಿದೆ. ಪರಂಪರೆಯ ಎಲ್ಲಾ ಗುರುಗಳು, ಸಾಧಕರಾಗಿ ವೀರಶೈವ ಧರ್ಮವನ್ನು ಪ್ರಜ್ವಲವಾಗಿ ಬೆಳೆಸಿದ್ದಾರೆ. ಈ ಮಠದ ಪರಂಪರೆಯಲ್ಲಿ ಶ್ರೀ ಪದ್ಮರಾಜ ಒಡೆಯರ ಹೆಸರು ಕೇಳಿ ಬರುತ್ತದೆ. ಶ್ರೀ ಪದ್ಮರಾಜ ಒಡೆಯರು ಕುರುಬ ಜನಾಂಗದವರಾಗಿದ್ದು, ನಂತರ ಜೈನ ಧರ್ಮವನ್ನು ಸ್ವೀಕರಿಸಿ ವೀರಶೈವ ಧರ್ಮದ ಪ್ರಭಾವಕ್ಕೆ ಒಳಗಾಗಿ ಲಿಂಗದೀಕ್ಷೆಯನ್ನು ಪಡೆದು ವೀರಶೈವರಾದರೆಂದು ಹೇಳಲಾಗುತ್ತದೆ.ಆದರೆ ಪರಂಪರೆಯ ಇತಿಹಾಸವನ್ನು ಗುರುತಿಸುವಾಗ ಇವರ ಹೆಸರು ಎಲ್ಲಿಯೂ ಪ್ರಸ್ತಾಪವಾಗಿಲ್ಲ. ಆದರೆ ಜನಪದರ ಬಾಯಿಯಲ್ಲಿ ಉಳಿದೆಲ್ಲಾ ಮಠಾಧೀಶರುಗಳಿಗಿಂತ ಶ್ರೀ ಪದ್ಮರಾಜ ಒಡೆಯರ ಹೆಸರು ಪ್ರಮುಖವಾಗಿ ಆರಾಧಿಸಲ್ಪಡುತ್ತಿದೆ.

ಮಠದ ಪರಂಪರೆಯ ಹದಿನಾರನೆಯ ಗುರುಗಳಾಗಿ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ವಹಿಸಿ ಕೊಂಡ ಮೇಲೆ ಮಠವು ಸರ್ವಾಂಗೀಣವಾಗಿ ಅಭಿವೃದ್ಧಿಗೊಂಡಿದೆ. ರಾಮಪುರದ ಶ್ರೀ ದೊಡ್ಡಪ್ಪ ಮತ್ತು ಶ್ರೀಮತಿ ಗಂಗಾಬಾಯಿ ಯವರ ಪುತ್ರರಾಗಿ ೧೮೯೪ ರ ನವೆಂಬರ್ ಹದಿನೆಂಟರಂದು ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಜನಿಸಿದರು. ಬಾಲ್ಯ ದಲ್ಲೇ ಆಧ್ಯಾತ್ಮ ಚಿಂತನೆಯಿಂದ ಬೆಳೆದ ಶ್ರೀ ಚನ್ನವೀರ ಸ್ವಾಮಿಗಳು ಸಾರಂಗ ಮಠದ ಶ್ರೀ ಸಿದ್ಧಲಿಂಗ ಶಿವಾಚಾರ್ಯರ ಕೃಪಾ ದೃಷ್ಟಿಗೆ ಬಿದ್ದು ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡರು. ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಶ್ರೀ ಚನ್ನವೀರ ಸ್ವಾಮಿಗಳಿಗೆ ವಿದ್ಯಾಭ್ಯಾಸವನ್ನು ನೀಡಿ ಧರ್ಮಾಚರಣೆಯ ಬಗ್ಗೆ ಉಪದೇಶ ನೀಡಿ ಬಾಲಕ ಶ್ರೀ ಚನ್ನವೀರ ಸ್ವಾಮಿಗಳನ್ನು ಸಂಸ್ಕಾರವಂತ ಶಿಶುವಾಗಿ ಬೆಳೆಸಿದರು. ತಮ್ಮ ಉತ್ತರಾಧಿಕಾರಿಗಳು ಬಾಲ್ಯಾವಸ್ಥೆಯಲ್ಲಿರು ವಾಗಲೇ ಅನಿರೀಕ್ಷಿತವಾಗಿ ಬಂದ ಪ್ಲೇಗ್ ರೋಗದಿಂದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ೧೯೦೪ ರ ಅಕ್ಟೋಬರ್ ಇಪ್ಪತ್ತಾನ್ನಲ್ಕರಂದು ಲಿಂಗೈಕ್ಯ ರಾದರು. ಶ್ರೀ ಸಿದ್ಧಲಿಂಗ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಮಠದಲ್ಲಿ ಅರಾಜಕತೆ ಉಂಟಾಗಿ ಮಠವು ದಿವಾಳಿಯಾಯಿತು.

ಉತ್ತರಾಧಿಕಾರಿ ಶ್ರೀ ಚನ್ನವೀರ ಸ್ವಾಮಿಗಳು ದಿವಾಳಿಯಾದ ಮಠವನ್ನು ಬಿಡದೆ ಹಿರಿಯ ಗುರುಗಳ ಆಶೀರ್ವಾದದ ಬಲದಿಂದ ಮಠದಲ್ಲಿ ನೆಲೆಸಿ, ಮಠವನ್ನು ಅಭಿವೃದ್ಧಿ ಪಡಿಸಿ ೧೯೧೦ರಲ್ಲಿ ಪಟ್ಟಾಧಿಕಾರವನ್ನು ಪಡೆದರು. ಗುರುಗಳು ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ಶಿವಯೋಗ ಮಂದಿರದಲ್ಲಿ ಸಂಸ್ಕೃತ ಹಾಗೂ ಯೋಗವನ್ನು ಕಲಿತು, ಕಾಶಿಯಲ್ಲಿ ಉನ್ನತ ಶಿಕ್ಷಣವನ್ನು ಪಡೆದು ಪಾಂಡಿತ್ಯದೊಂದಿಗೆ ಮಠಕ್ಕೆ ಆಗಮಿಸಿದರು. ಗುರುಗಳು ಮಠಕ್ಕೆ ಆಗಮಿಸಿದ ಮೇಲೆ ಮಠದ ಆಸ್ತಿಯಾಗಿದ್ದ ಜಮೀನನ್ನು ಗುರುಗಳೇ ಉತ್ತಿ, ಬಿತ್ತಿ ಉತ್ಪನ್ನವನ್ನು ತೆಗೆದರು. ಇದರಿಂದ ಮಠದ ಆರ್ಥಿಕ ಸ್ಥಿತಿ ಸುಧಾರಣೆ ಯಾಯಿತು. ಗುರುಗಳು ಕಾಯಕಯೋಗಿಗಳಾಗಿ ನೇಗಿಲು ಹಿಡಿದು ದುಡಿಯುವುದನ್ನು ಕಂಡ ಯುವ ರೈತರು, ಗುರುಗಳ ದಾರಿಯನ್ನು ತುಳಿದು ಕಾಯಕ ಯೋಗದಲ್ಲಿ ತೊಡಗಿದರು. ಈ ರೀತಿ ಧಾರ್ಮಿಕ ಹಾಗೂ ಕಾಯಕ ಯೋಗದಲ್ಲಿ ತೊಡಗಿದ ಶ್ರೀ ಚನ್ನವೀರ ಸ್ವಾಮಿಗಳು ಮಠ ಮತ್ತು ಸಮಾಜವನ್ನು ಬೆಳೆಸಿದರು. ಮಠವು ಆರ್ಥಿಕವಾಗಿ ಸದೃಢಗೊಂಡ ಮೇಲೆ ಗ್ರಾಮಾಂತರ ಮಕ್ಕಳ ಕಲಿಕೆಗೆ ನೆರವಾಗಲೆಂದು ಪ್ರಸಾದ ನಿಲಯವನ್ನು ಪ್ರಾರಂಭಿಸುವ ಮೂಲಕ, ಶಿಕ್ಷಣ ಕ್ಷೇತ್ರಕ್ಕೆ ತಮ್ಮನ್ನು ಸಮರ್ಪಿಸಿಕೊಂಡ ಗುರುಗಳು ಅರವತ್ತೂರು ಪುರಾತನರ ಮಂಟಪ ಪೂಜೆಯನ್ನು ಮಾಡಿಸಿದರು. ನಂತರ ೧೯೬೯ರ ನವೆಂಬರ್ ಇಪ್ಪತ್ತರಂದು ಶ್ರೀ ಚನ್ನಯ್ಯಸ್ವಾಮಿ ಮತ್ತು ಶ್ರೀಮತಿ ಶಾರದರವರ ಪುತ್ರರಾಗಿ ಜನಿಸಿದ ಶ್ರೀ ಪ್ರಭುದೇವರಿಗೆ ಜಂಗಮ ದೀಕ್ಷೆಯನ್ನು ನೀಡಿ ಮಠದ ಉತ್ತರಾಧಿಕಾರಿಯನ್ನಾಗಿ ನೇಮಿಸಿಕೊಂಡರು. ನಂತರ ೧೯೮೯ರ ನವೆಂಬರ್ ಹದಿನೆಂಟರಂದು ಉಜ್ಜಯಿನಿ ಪೀಠದ ಜಗದ್ಗುರು ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳ ಸಾನಿಧ್ಯದಲ್ಲಿ ಶ್ರೀ ಪ್ರಭುದೇವರಿಗೆ ಶ್ರೀ ಪ್ರಭುಸಾರಂಗದೇವ ಶಿವಾಚಾರ್ಯ ಸ್ವಾಮಿಗಳೆಂದು ಅಭಿದಾನವಿತ್ತು ಪಟ್ಟಾಧಿಕಾರವನ್ನು ನೀಡಿದರು. ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಧಾರ್ಮಿಕ, ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿಯ ಉತ್ತುಂಗಕ್ಕೆ ಏರಿಸಿ, ೧೯೯೨ ರ ಮೇ ಇಪ್ಪತ್ತೆರಡರಂದು ಲಿಂಗೈಕ್ಯರಾದರು.

ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳ ಕರಕಮಲ ಸಂಜಾತರಾಗಿ ಬೆಳೆದು, ಹಿರಿಯ ಗುರುಗಳ ಮಹದಾಸೆಯಂತೆ ನಡೆಯುತ್ತಾ ಮಠವನ್ನು ಅಭಿವೃದ್ಧಿ ಪಡಿಸಿ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಕಾರ್ಯಗಳ ಮೂಲಕ ಸಿಂದಗಿಯ ಸಾಂಸ್ಕೃತಿಕ ಬದುಕನ್ನು ಶ್ರೀಮಂತಗೊಳಿಸಿದ್ದಾರೆ. ಇವರ ಕಾಲದಲ್ಲಿ ಮಠವು ಬಹುಮುಖವಾಗಿ ವಿಸ್ತಾರಗೊಂಡು ಬೆಳೆಯತೊಡಗಿದೆ.

ಧಾರ್ಮಿಕ ಕಾರ್ಯಗಳು: ಗುರುಸ್ಥಲದ ಶಿಷ್ಯ ವರ್ಗದ ಈ ಮಠದಲ್ಲಿ ಪರಂಪರೆಯ ಗುರುಗಳ ಒಂಬತ್ತು ಗದ್ದುಗೆಗಳು ಸ್ಥಾಪನೆಯಾಗಿದ್ದು, ಈ ಗದ್ದುಗೆಗಳಿಗೆ ನಿತ್ಯ ಪೂಜೆ ಹಾಗೂ ಪ್ರತಿ ಹುಣ್ಣಿಮೆಯಲ್ಲಿ ಸದ್ವಿಚಾರ ಗೋಷ್ಠಿಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಪ್ರತಿ ತಿಂಗಳು ಒಂದೊಂದು ಕ್ಷೇತ್ರಗಳ ಬಗ್ಗೆ ವಿಚಾರ ಸಂಕೀರಣವನ್ನು ಹಮ್ಮಿಕೊಳ್ಳಲಾಗುತ್ತಿದೆ. ಅಲ್ಲದೆ ಈ ಸಂದರ್ಭದಲ್ಲಿ ಮಂಡಿಸುವ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಹೊರ ತರಲಾಗುತ್ತಿದೆ. ಕಾರ್ತೀಕ ಮಾಸದಲ್ಲಿ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳ ಜಯಂತ್ಯೋತ್ಸವದ ಸಂದರ್ಭದಲ್ಲಿ ಪುರಾಣ ಪ್ರವಚನವನ್ನು ಹಮ್ಮಿಕೊಳ್ಳಲಾಗು

ತ್ತಿದೆ. ಮಠದಲ್ಲಿ ನಿತ್ಯ ಅನ್ನ ದಾಸೋಹದ ವ್ಯವಸ್ಥೆಯನ್ನು ಮಾಡಿಸಲಾಗುತ್ತಿದೆ.

ಶೈಕ್ಷಣಿಕ ಸೇವೆ: ೧೯೭೦ರಲ್ಲಿ ಶ್ರೀ ಪದ್ಮರಾಜ ವಿದ್ಯಾವರ್ಧಕ ಸಂಸ್ಥೆಯನ್ನು ಸ್ಥಾಪಿಸಿ, ಈ ಸಂಸ್ಥೆಯ ವತಿಯಿಂದ ಪ್ರಥಮ ದರ್ಜೆ ಕಾಲೇಜು, ಪದವಿ ಪೂರ್ವ ಕಾಲೇಜು, ಪ್ರೌಢಶಾಲೆ, ಫಾರ್ಮಸಿ ಕಾಲೇಜು, ದೈಹಿಕ ಶಿಕ್ಷಕರ ತರಬೇತಿ ಕೇಂದ್ರ, ಉದ್ಯೋಗ ಆಧಾರಿತ ಶಿಕ್ಷಣ ತರಬೇತಿ ಕೇಂದ್ರ ಹಾಗೂ ಮುಕ್ತ ವಿಶ್ವವಿದ್ಯಾನಿಲಯ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ಅಲ್ಲದೆ ಮಠದ ವತಿಯಿಂದ ಉಚಿತ ಪ್ರಸಾದ ನಿಲಯವನ್ನು ಪ್ರಾರಂಭಿಸಲಾಗಿದೆ. ಸಿಂದಗಿಯ ಹೊರ ಭಾಗದಲ್ಲಿ ಶಿಕ್ಷಣ ಸಂಸ್ಥೆಗಳ ಸಮುಚ್ಚ ಯವನ್ನು ಭವ್ಯವಾಗಿ ನಿರ್ಮಿಸಲಾಗಿದೆ.

ಸಾಹಿತ್ಯ ಸೇವೆ: ಶ್ರೀ ಪ್ರಭುಸಾರಂಗದೇವ ಶಿವಾಚಾರ್ಯ ಸ್ವಾಮಿಗಳು ಸಾಹಿತ್ಯಾಸಕ್ತಿಯನ್ನು ಬೆಳೆಸಿಕೊಂಡು ಮಠದ ವತಿಯಿಂದ ಡಾ. ಎಂ.ಎಂ. ಕಲಬುರ್ಗಿಯವರ ಸಾರಂಗ, ಶ್ರೀ ಡಾ. ಮಲ್ಲಿಕಾರ್ಜುನ ಚಾಂದಕವಟೆಯವರಿಂದ ಶ್ರೀ ಚನ್ನವೀರ ಮಹಾ ಸ್ವಾಮಿಗಳು ಹಾಗೂ ಒಂದೇ ಮಾತರಂ ಸ್ನೇಹದ ಆತ್ಮಕಥೆ ಮುಂತಾದ ಮೌಲಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಮಕ್ಕಳಸಾಹಿತ್ಯ ಮಾಲೆಯನ್ನು ಪ್ರಾರಂಭಿಸಿ ಶ್ರೀ ಅಥಣಿ ಮುರುಘೇಂದ್ರ ಶಿವಯೋಗಿಗಳು,ಶ್ರೀ ಬಂಥನಾಳ ಶಿವಯೋಗಿಗಳು, ಶ್ರೀ ಸಿಂದಗಿ ಪಟ್ಟದದೇವರು,ಬೀಳೂರು ಶ್ರೀ ಗುರುಬಸವಸ್ವಾಮಿಗಳು, ಕಾಯಕಯೋಗಿ ಶ್ರೀ ಚನ್ನಬಸವಸ್ವಾಮಿಗಳು ಮುಂತಾದ ಗುರುಗಳ ಪರಿಚಯವನ್ನು ಮಕ್ಕಳಿಗೆ ಮಾಡಿಸುವ ಉದ್ದೇಶದಿಂದ ಸರಳ ಭಾಷೆಯಲ್ಲಿ ಐವತ್ತು ಪುಟಗಳ ಒಳಗೆ ಇರುವಂತೆ ಪುಸ್ತಕಗಳನ್ನು ಪ್ರಕಟಿಸಲಾಗುತ್ತಿದೆ. ಈ ಕಾರ್ಯ, ಗುರುಗಳಿಗಿರುವ ಧಾರ್ಮಿಕ ಹಾಗೂ ಸಾಹಿತ್ಯಿಕ ಮನೋಭಾವನೆಯನ್ನು ಪ್ರತಿಬಿಂಬಿಸುತ್ತದೆ.

ವಿಳಾಸ: ಷ.ಬ್ರ.ಶ್ರೀ ಪ್ರಭು ಸಾರಂಗದೇವ ಶಿವಾಚಾರ್ಯ ಸ್ವಾಮಿಗಳು, ಶ್ರೀ ಸಾರಂಗ ಮಠ, ಸಿಂದಗಿ, ಬಿಜಾಪುರ ಜಿಲ್ಲೆ.
ಆಧಾರ: 'ಸಿಂದಗಿಯ ಸಿರಿ ಶ್ರೀ ಚನ್ನವೀರ ಮಹಾಸ್ವಾಮಿಗಳು' ಲೇಖಕರು ಶ್ರೀ ಡಾ. ಮಲ್ಲಿಕಾರ್ಜುನ ಚಾಂದಕವಟೆ.

ಶಾಂತವೀರೇಶ್ವರ ಹಿರೇಮಠ: ಸಿಂದಗಿ ಪಟ್ಟಣದ ಮಧ್ಯ ಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಶಾಂತವೀರೇಶ್ವರ ಹಿರೇಮಠವು ರಂಭಾಪುರಿ ಪೀಠದ ಶಾಖಾ ಮಠವಾಗಿ ಬೆಳೆದಿದೆ.ಪುತ್ರ ವರ್ಗದ ಪರಂಪರೆಯಲ್ಲಿ ಬೆಳೆದ ಈ ಮಠವು ಪುರಾತನ ಕಾಲದಲ್ಲಿ ಶ್ರೀಶಾಂತವೀರ ದೇವರಿಂದ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಈ ಮಠದ ಸ್ಥಾಪನೆ ಮತ್ತು ಸ್ಥಾಪಕರ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ.

ಪರಂಪರೆ:

೧. ಷ.ಬ್ರ.ಶ್ರೀ ಶಾಂತವೀರ ಪಟ್ಟದ ದೇವರು
೨. ಷ.ಬ್ರ.ಶ್ರೀ ಗುರು ಶಾಂತಮೂರ್ತಿ ಪಟ್ಟದ ದೇವರು
೩. ಷ.ಬ್ರ.ಶ್ರೀ ಸಂಗನಬಸವ ಪಟ್ಟದ ದೇವರು
೪. ಷ.ಬ್ರ.ಶ್ರೀ ಬಸವಲಿಂಗ ಪಟ್ಟದ ದೇವರು
೫. ಷ.ಬ್ರ.ಶ್ರೀ ಪುರಾಣಿಕ ಪಟ್ಟದ ದೇವರು
೬. ಷ.ಬ್ರ.ಶ್ರೀ ಮರಿದೇವ ಪಟ್ಟದ ದೇವರು
೭. ಷ.ಬ್ರ.ಶ್ರೀ ಶಾಂತಪ್ಪ ಪಟ್ಟದ ದೇವರು
೮. ಷ.ಬ್ರ.ಶ್ರೀ ಚನ್ನವೀರ ಪಟ್ಟದ ದೇವರು
೯. ಷ.ಬ್ರ.ಶ್ರೀ ಶಾಂತಪ್ಪ ಪಟ್ಟದ ದೇವರು
೧೦. ಷ.ಬ್ರ.ಶ್ರೀ ರೇವಣಸಿದ್ಧ ಪಟ್ಟದ ದೇವರು
೧೨. ಷ.ಬ್ರ.ಶ್ರೀ ಶಾಂತವೀರ ಪಟ್ಟದ ದೇವರು
೧೩. ಷ.ಬ್ರ.ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಪುರಾತನ ಪರಂಪರೆಯ ಈ ಮಠದಲ್ಲಿ ಒಟ್ಟು ಹನ್ನೆರೆಡು ಜನ ಗುರುಗಳು ಅಧಿಕಾರ ನಡೆಸಿದ್ದಾರೆಂದು ಹೇಳಲಾಗುತ್ತಿದೆ. ಕರ್ತೃ ಗುರುಗಳ ನಂತರ ಪರಂಪರೆಯ ಹನ್ನೊಂದನೆಯ ಗುರುಗಳಾದ ಶ್ರೀ ಶಾಂತವೀರ ಪಟ್ಟಾಧ್ಯಕ್ಷರ ತನಕ ಅಧಿಕಾರವನ್ನು ವಹಿಸಿಕೊಂಡ ಗುರುಗಳ ಬಗ್ಗೆ ಹೆಚ್ಚು ಮಾಹಿತಿ ದೊರೆಯುವುದಿಲ್ಲ.ಶ್ರೀ

ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ಮಾಡಬಾಳು ಗ್ರಾಮದಲ್ಲಿ ಜನಿಸಿ, ಈ ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದರು. ಯಾತನೂರಿನಲ್ಲಿ ಜನಿಸಿ ಬಡತನದ ಬೇಗೆಯಲ್ಲಿ ಬೆಂದ ಶ್ರೀ ಚನ್ನಯ್ಯನವರು ತಮ್ಮ ಮಕ್ಕಳ ಜೊತೆ ಸಿಂದಗಿಗೆ ಬಂದರು. ಸಿಂದಗಿಯ ಹಿರೇಮಠದ ಆಗಿನ ಪಟ್ಟಾಧ್ಯಕ್ಷರಾದ ಶ್ರೀ ರೇವಣಸಿದ್ಧ ಸ್ವಾಮಿಗಳು ಇವರಿಗೆ ಆಶ್ರಯ ಕೊಟ್ಟರು. ನಂತರ ಶ್ರೀ ಚನ್ನಯ್ಯನವರ ಕಿರಿಯ ಪುತ್ರರಾದ ಶ್ರೀ ಸಿದ್ಧಯ್ಯನವರು ಮಠದ ಹಿಟ್ಟಿನ ಭಿಕ್ಷೆ ಕಾಯಕವನ್ನು ಮಾಡತೊಡಗಿದರು.ಇವರ ಪುತ್ರ ಶ್ರೀ ಲಿಂಗಯ್ಯ ತಂದೆಯ ಕಾಯಕವನ್ನು ಮಾಡತೊಡಗಿ ಪ್ರತಿ ಮನೆಮನೆಗೆ ಹೋಗಿ ಕೋರಾನ್ನ ಭಿಕ್ಷೆಯನ್ನು ಮಾಡಿಕೊಂಡು ಮಠದ ಕಾಯಕವನ್ನು ಮಾಡುತ್ತಾ ಎಲ್ಲರ ಪ್ರೀತಿಗೆ ಪಾತ್ರರಾದರು. ಇವರು ಶ್ರೀರೇವಣ ಸಿದ್ಧ ಸ್ವಾಮಿಗಳ ಕೃಪಾಕಟಾಕ್ಷಕ್ಕೆ ಒಳಗಾಗಿಮಠದ ಉತ್ತರಾಧಿಕಾರಿಯಾಗಿ ನೇಮಕಗೊಂಡರು. ನಂತರ ಶ್ರೀ ರೇವಣಸಿದ್ಧ ಸ್ವಾಮಿಗಳು ಲಿಂಗಯ್ಯನವರಿಗೆ ವಿದ್ಯಾಭ್ಯಾಸವನ್ನು ಕಲಿಸಿದರು. ಶಿವಯೋಗಮಂದಿರದಲ್ಲಿ ಧಾರ್ಮಿಕ ವಿದ್ಯೆಯ ಜೊತೆಗೆ ಯೋಗವನ್ನು ಕಲಿತು, ಕಾಶಿಯಲ್ಲಿ ಸಂಸ್ಕೃತ ಹಾಗೂ ವೇದಾಧ್ಯಯವನ್ನು ಮಾಡಿ ಮಠಕ್ಕೆ ಆಗಮಿಸಿದರು.

ಈ ವೇಳೆಗೆ ಶ್ರೀ ರೇವಣಸಿದ್ಧ ಸ್ವಾಮಿಗಳು ಲಿಂಗೈಕ್ಯರಾಗಿ ಮಠವು ಜೀರ್ಣಾವಸ್ಥೆಗೆ ಬಂದಿತ್ತು. ನಂತರ ಲಿಂಗಯ್ಯನವರು ಜೀರ್ಣಗೊಂಡ ಮಠಕ್ಕೆ ೧೯೪೨ರಲ್ಲಿ ಶ್ರೀ ಶಾಂತವೀರ ಪಟ್ಟದ ದೇವರೆಂದು ಅಭಿದಾನ ಪಡೆದು ಅಧಿಕಾರಕ್ಕೆ ಬಂದರು. ಇವರು ಮಠವನ್ನು ಅಭಿವೃದ್ಧಿಪಡಿಸುವ ಸಿದ್ಧತೆಯಲ್ಲಿದ್ದಾಗ ಹಾವೇರಿಯ ಹುಕ್ಕೇರಿಮಠದ ಶ್ರೀ ಶಿವಬಸವ ಸ್ವಾಮಿಗಳು ಅಸ್ವಸ್ಥಗೊಂಡು ಹಾಸಿಗೆ ಹಿಡಿದಿದ್ದಾಗ, ಗುರುಗಳ ಸೇವೆಗೆಂದು ಸಿಂದಗಿಯಿಂದ ಹಾವೇರಿಗೆ ಆಗಮಿಸಿದರು. ನಂತರ ಹಾವೇರಿಯ ಲ್ಲಿಯೇ ನೆಲೆಸಿ ಸಿಂದಗಿ ಮಠವನ್ನು ಸ್ಥಾಪಿಸಿದರು. ಸಿಂದಗಿ ಮತ್ತು ಹಾವೇರಿಮಠಗಳ ಉತ್ತರಾಧಿಕಾರಿಗಳನ್ನಾಗಿ ಶ್ರೀ ಮಾರಯ್ಯ ಮತ್ತು ಶ್ರೀಮತಿ ಶಂಕರಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಸಿದ್ಧರಾಮದೇವರನ್ನು ನೇಮಕಮಾಡಿಕೊಂಡರು. ನಂತರ ಶ್ರೀ ಸಿದ್ಧರಾಮ ದೇವರು ಗದುಗಿನ ತೋಂಟದಾರ್ಯ ಮಠಕ್ಕೆ ಜಗದ್ಗುರುಗಳಾಗಿ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಇದರಿಂದ ಶ್ರೀ ಶಾಂತವೀರಪಟ್ಟದ ದೇವರ ಆಸೆ ಕೈಗೂಡದಿದ್ದಕ್ಕೆ ವೇದನೆ ಅನುಭವಿಸಿದರು. ಇವರು ೧೯೮೦ರ ಫೆಬ್ರುವರಿ ಹದಿನಾರರಂದು ಲಿಂಗೈಕ್ಯರಾದರು. ಇವರ ನಂತರ ಸಿಂದಗಿ ಶ್ರೀ ಶಾಂತವೀರ ಹಿರೇಮಠಕ್ಕೆ ಶ್ರೀ ಮಾರಯ್ಯ ಮತ್ತು ಶ್ರೀಮತಿ ಶಂಕರಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳಿಗೆ ೧೯೮೦ ರಲ್ಲಿ ಪಟ್ಟಾಧಿಕಾರವನ್ನು ಮಾಡಲಾಗಿದೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಕರ್ತೃ ಗದ್ದುಗೆ ಸೇರಿದಂತೆ ಒಟ್ಟು ಐದು ಗದ್ದುಗೆಗಳಿವೆ. ಈ ಗದ್ದುಗೆಗಳಿಗೆ ನಿತ್ಯ ಪೂಜೆಯನ್ನು ನಡೆಸಿಕೊಂಡು ಬರಲಾಗುತ್ತಿದೆ. ಹಿರಿಯ ಗುರುಗಳ ಪುಣ್ಯಾರಾಧನೆ ಹಾಗೂ ಅನ್ನ ದಾಸೋಹದ ಕಾರ್ಯವನ್ನು ನಡೆಸಿಕೊಂಡು ಬರಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು, ಶ್ರೀ ಶಾಂತವೀರೇಶ್ವರ ಹಿರೇಮಠ, ಸಿಂದಗಿ, ಬಿಜಾಪುರ ಜಿಲ್ಲೆ.

ವಿರಕ್ತಮಠ: ಸಿಂದಗಿಯ ಉತ್ತರಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ವಿರಕ್ತಮಠವು ಕುಮಾರ ಸಮಯದ ಮಠವಾಗಿ ಬೆಳೆದಿದೆ. ಕಬಸಾವಳಗಿಯಿಂದ ಶ್ರೀ ಪ್ರಸನ್ನೇಶ್ವರ ಸ್ವಾಮಿಗಳು ಲೋಕ ಸಂಚಾರ ಕೈಗೊಂಡು ಈ ಪಟ್ಟಣಕ್ಕೆ ಬಂದು ನೆಲೆಸುತ್ತಾರೆ. ಇವರ ಜೊತೆಯಲ್ಲಿ ಇವರ ವಂಶಸ್ಥರು ಆಗಮಿಸಿ ಗುರುಗಳ ಸೇವಾ ಕಾರ್ಯವನ್ನು ಮಾಡಿಕೊಂಡು ಇಲ್ಲೇ ನೆಲೆಗೊಳ್ಳುತ್ತಾರೆ. ಗುರುಗಳ ಆಧ್ಯಾತ್ಮ ಶಕ್ತಿ ಹಾಗೂ ಅವರ ಧಾರ್ಮಿಕ ಕಾರ್ಯಗಳನ್ನು ಗಮನಿಸಿ ಗ್ರಾಮದ ಧನಿಕ ಶ್ರೀ ಪಟ್ಟಣ ಶೆಟ್ಟಿ ಎಂಬುವರು ಗುರುಗಳಿಗಾಗಿ ಮಠವನ್ನು ಕಟ್ಟಿಸಿಕೊಟ್ಟು ಧಾರ್ಮಿಕ ಕಾರ್ಯಗಳಿಗೆ ನೆರವಾದರಂತೆ. ನಂತರ ವಿಕ್ಟೋರಿಯ ರಾಣಿ ಗುರುಗಳ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳನ್ನು ಗಮನಿಸಿ ಭೂಮಿಯನ್ನು ಉಂಬಳಿಯಾಗಿ ನೀಡಿದ್ದಾರೆಂದು ಹೇಳಲಾಗುತ್ತಿದೆ. ಕರ್ತೃ ಗುರುಗಳಾದ ಶ್ರೀ ಪ್ರಸನ್ನೇಶ್ವರ ಸ್ವಾಮಿಗಳ ಕರ್ತೃತ್ವ ಶಕ್ತಿಯಿಂದ ಮಠವು ಶ್ರೀಮಂತವಾಗಿ ಬೆಳೆದು, ಆರ್ಥಿಕ ಸದೃಢತೆಯನ್ನು ಸಾಧಿಸಿಕೊಂಡಿತು.

ಪರಂಪರೆ:

೧. ಶ್ರೀ ಮ.ನಿ.ಪ್ರ. ಪ್ರಸನ್ನೇಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಷಣ್ಮುಖಸ್ವಾಮಿಗಳು

೩. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಎರಡನೆಯ ಸಿದ್ಧಲಿಂಗಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಷಣ್ಮುಖ ಸ್ವಾಮಿಗಳು ಮಠವನ್ನು ವಿಶೇಷವಾಗಿ ಬೆಳೆಸಿದ್ದಾರೆ. ಇವರ ನಂತರ ಶ್ರೀ ಸಿದ್ಧಲಿಂಗ ಸ್ವಾಮಿಗಳು ಮಠವನ್ನು ಪ್ರಸಿದ್ಧಿಗೆ ತಂದು ೧೯೫೭ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಶ್ರೀ ಗುರುಬಸವ ಸ್ವಾಮಿಗಳು ಈ ಮಠದ ಧಾರ್ಮಿಕ ಹಾಗೂ ಆಡಳಿತ ಕಾರ್ಯಗಳನ್ನು ನಡೆಸಿಕೊಂಡು ಬಂದರು. ಆದರೆ ಗುರುಗಳಿಗೆ ಪಟ್ಟಾಧಿಕಾರ ಆಗಲಿಲ್ಲ. ನಂತರ ಶ್ರೀ ಗಡ್ಡಯ್ಯ ಮತ್ತು ಶ್ರೀಮತಿ ಗಂಗಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಹುಬ್ಬಳ್ಳಿ ಮೂರುಸಾವಿರ ಮಠ, ಗದಗ ಮತ್ತು ಶಿವಮೊಗ್ಗದಲ್ಲಿ ವಿದ್ಯಾಭ್ಯಾಸ ಮಾಡಿ ಮಠಕ್ಕೆ ಆಗಮಿಸಿದರು. ೧೯೮೮ ರ ಜುಲೈ ಹದಿನೈದರಂದು ಹುಬ್ಬಳ್ಳಿ ಮೂರುಸಾವಿರ ಮಠದ ಶ್ರೀ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳಿಂದ ಪಟ್ಟಾಧಿಕಾರದ ಅನುಗ್ರಹವನ್ನು ಪಡೆದು, ಮಠದ ಪರಂಪರೆಯ ಗುರುಗಳಾಗಿ ಅಧಿಕಾರವನ್ನು ವಹಿಸಿಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯಲ್ಲಿ ಒಟ್ಟು ಹದಿನೇಳು ಗುರುಗಳು ಅಧಿಕಾರ ನಡೆಸಿದ್ದಾರೆ ಎಂದು ಹೇಳಲಾದರೂ, ಈ ಬಗ್ಗೆ ಆಧಾರಗಳು ಲಭ್ಯವಿಲ್ಲ. ಮಠದ ಆವರಣದಲ್ಲಿ ಐದು ಗದ್ದುಗೆಗಳನ್ನು ಗುರುತಿಸಲಾಗಿದೆ. ಈ ಗದ್ದುಗೆಗಳಿಗೆ ನಿತ್ಯ ಎರಡು ವೇಳೆ ಪೂಜೆ, ಶ್ರಾವಣಮಾಸದಲ್ಲಿ ಪುರಾಣ, ಮೇ ತಿಂಗಳಿನಲ್ಲಿ ಶ್ರೀ ಸಿದ್ಧಲಿಂಗ ಸ್ವಾಮಿಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಈಗಿನ ಗುರುಗಳಾದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಗುರುವಾರ ಮತ್ತು ಭಾನುವಾರ ಮಠದಲ್ಲಿದ್ದು ಅಂದು ತಾಯತ (ಯಂತ್ರ) ಬರೆಯುವ ಕಾಯಕದಲ್ಲಿ ತೊಡಗುತ್ತಾರೆ. ಅಂದು ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಬಂದು ಸೇರ ತೊಡಗುತ್ತಾರೆ. ಈ ದಿನಗಳಲ್ಲಿ ನಿರಂತರ ದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ಮಠದ ವತಿಯಿಂದ 'ಶ್ರೀ ಸಿದ್ಧಲಿಂಗ ಸ್ವಾಮಿಗಳ ಚರಿತೆ ' ಎಂಬ ಗ್ರಂಥವನ್ನು ಬರೆಸಿ ಪ್ರಕಟಿಸಲಾಗಿದೆ. ಮಠದಲ್ಲಿ ಐದು ಮಂದಿ ವಿದ್ಯಾರ್ಥಿಗಳಿಗೆ ಆಶ್ರಯ ಕಲ್ಪಿಸಿ ವಿದ್ಯಾಭ್ಯಾಸ ಮಾಡಿಸಲಾಗುತ್ತಿದೆ. ಹದಿನಾರು ಅಂಕಣವುಳ್ಳ ಪುರಾತನ ಕಲ್ಲಿನ ಕಟ್ಟಡವು ಸುಸ್ಥಿತಿಯಲ್ಲಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಸಿದ್ಧಲಿಂಗ ಸ್ವಾಮಿಗಳು, ಶ್ರೀ ವಿರಕ್ತಮಠ, ಸಿಂದಗಿ, ಬಿಜಾಪುರ ಜಿಲ್ಲೆ.

ಸೋಮಜ್ಯಾಳ

ಸಿಂದಗಿ ತಾಲ್ಲೂಕಿನ ಸೋಮಜ್ಯಾಳ ಗ್ರಾಮವು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಹದಿನಾಲ್ಕು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಮಲ್ಲಿಕಾರ್ಜುನ ಹಿರೇಮಠವು ಅಸ್ತಿತ್ವದಲ್ಲಿದ್ದು ಧಾರ್ಮಿಕವಾಗಿ ಹೆಸರು ಮಾಡಿದೆ.

ಮಲ್ಲಿಕಾರ್ಜುನ ಹಿರೇಮಠ: ಸೋಮಜ್ಯಾಳ ಗ್ರಾಮದಲ್ಲಿ ರಂಭಾಪುರಿ ಪೀಠದ ಶಾಖಾ ಮಠವಾದ ಶ್ರೀ ಮಲ್ಲಿಕಾರ್ಜುನ ಹಿರೇಮಠವು ಸ್ಥಾಪನೆಯಾಗಿದೆ. ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಈ ಮಠದ ಸ್ಥಾಪನೆ ಮಾಡಿರುವುದರಿಂದ ಈ ಮಠಕ್ಕೆ 'ಶ್ರೀ ಮಲ್ಲಿಕಾರ್ಜುನ ಹಿರೇಮಠ ' ಎಂಬ ಹೆಸರು ಬಂದಿದೆ. ಕಳೆದ ಇನ್ನೂರು ವರ್ಷಗಳ ಹಿಂದೆ ಸ್ಥಾಪನೆಗೊಂಡ ಈ ಮಠವು ಈತನಕ ಬೆಳೆದು ಬಂದಿದೆ.

ಈ ಮಠದ ಕರ್ತೃಗುರುಗಳಾದ ಶ್ರೀಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಗುಲ್ಬರ್ಗ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಕಲ್ಲೂರು ಗ್ರಾಮದವರು. ಇವರ ತಂದೆ ತಾಯಿಗಳಾದ ಶ್ರೀ ಸಿದ್ಧಲಿಂಗಯ್ಯ ಮತ್ತು ಶ್ರೀಮತಿ ಶಾಂತಮ್ಮನವರು ತಮಗೆ ಮಕ್ಕಳಾಗಲಿಲ್ಲವೆಂದು ಶ್ರೀಶೈಲಕ್ಕೆ ಪಾದಯಾತ್ರೆಯ ಮೂಲಕ ಹೋಗಿ ಮಲ್ಲಿಕಾರ್ಜುನನ ದರ್ಶನವನ್ನು ಪಡೆದು ಬಂದಿದ್ದರಿಂದ ಇವರಿಗೆ ಪುತ್ರ ಭಾಗ್ಯ ಲಭಿಸಿತಂತೆ. ಇವರಿಗೆ ಜನಿಸಿದ ಗಂಡು ಮಗುವಿಗೆ ಮಲ್ಲಿಕಾರ್ಜುನ ಎಂದು ನಾಮಾಕರಣ ಮಾಡಿ ಬೆಳೆಸಿದರಂತೆ. ಬಾಲಕ ಮಲ್ಲಿಕಾರ್ಜುನ ಸಜ್ಜನತೆಯಿಂದ ವರ್ತಿಸುತ್ತಾ ಗುರು ಹಿರಿಯರಿಗೆ ಗೌರವ ಕೊಡುತ್ತಾ

ಆಧ್ಯಾತ್ಮದ ಒಲವನ್ನು ಹೆಚ್ಚಿಸಿಕೊಂಡು ಬೆಳೆದರು. ಇವರು ಪ್ರೌಢಾವಸ್ಥೆಯನ್ನು ಮುಗಿಸಿ, ಯೌವ್ವನಾವಸ್ಥೆಗೆ ಬಂದಾಗ ಮನೆಯನ್ನು ತೊರೆದು ಲೋಕ ಸಂಚಾರಕ್ಕೆ ಹೊರಟು ಸೋಮಜ್ಯಾಳು ಗ್ರಾಮಕ್ಕೆ ಬಂದು ನೆಲೆಸಿರುತ್ತಾರೆ. ಇಲ್ಲಿ ದೀರ್ಘಕಾಲ ಅನುಷ್ಠಾನ ಕೈಗೊಂಡು ಮಠವನ್ನು ಸ್ಥಾಪಿಸಿರುತ್ತಾರೆ. ಇವರು ಮಹಾ ತಪಸ್ವಿಗಳಾಗಿ, ಸದಾ ಶಿವಧ್ಯಾನದಲ್ಲಿ ಕಾಲ ಕಳೆಯುತ್ತಾ ಭಕ್ತರಿಗೆ ಧರ್ಮೋಪದೇಶವನ್ನು ಮಾಡುತ್ತಿದ್ದರು. ಇವರು ಕಾಯಕಯೋಗಕ್ಕೆ ಹೆಚ್ಚು ಮಹತ್ವ ಕೊಟ್ಟಿದ್ದರು. ಗುರುಗಳು ನಿತ್ಯ ಧಾರ್ಮಿಕ ಸಭೆಗಳನ್ನು ನಡೆಸುವುದು, ಗ್ರಾಮದಲ್ಲಿ ಸಂಚರಿಸಿ ಭಕ್ತರ ಇಷ್ಟಾರ್ಥಗಳಿಗೆ ತಮ್ಮ ತಪೋಶಕ್ತಿಯಿಂದ ಪರಿಹಾರ ಒದಗಿಸುವುದು ಮೊದಲಾದ ಕಾರ್ಯಗಳನ್ನು ಮಾಡಿಕೊಂಡು ಭಕ್ತರನ್ನು ಜಾಗೃತಗೊಳಿಸಿದ್ದರು. ಜೊತೆಗೆ ಮಠವನ್ನು ಅಭಿವೃದ್ಧಿಪಡಿಸಿದ್ದರು.

ಪರಂಪರೆ:
೧. ಷ.ಬ್ರ.ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು
೩. ಷ.ಬ್ರ.ಶ್ರೀ ಅಮೃತಲಿಂಗ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ೧೯೧೫ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಗುರುಗಳ ಪರಮಾಪ್ತ ಶಿಷ್ಯರಾಗಿದ್ದ ಶ್ರೀ ಭೀಮರಾಯಿ ದೇವರು ಮಠದ ಆಡಳಿತ ಕಾರ್ಯವನ್ನು ನಡೆಸಿಕೊಂಡು ಬಂದರು. ನಂತರ ಶ್ರೀ ಚನ್ನಬಸವಯ್ಯ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಮುನ್ನಡೆಸಿ ದೇಗಿನಾಳು ಗ್ರಾಮದಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಶ್ರೀ ಅಮೃತಲಿಂಗ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಮುನ್ನಡೆಸಿದ್ದಾರೆ.

ಶ್ರೀ ಅಮೃತಲಿಂಗ ಶಿವಾಚಾರ್ಯ ಸ್ವಾಮಿಗಳು ಸಿಂದಗಿ ತಾಲ್ಲೂಕಿನ ಬೊಮ್ಮನಹಳ್ಳಿ ಗ್ರಾಮದ ಶ್ರೀ ಮಲ್ಲಿಕಾರ್ಜುನ ಮತ್ತು ಶ್ರೀಮತಿ ನೀಲಮ್ಮದೇವಿಯವರ ಪುತ್ರರಾಗಿ ಜನಿಸಿ, ಪ್ರೌಢಾವಸ್ಥೆಗೆ ಬಂದ ಮೇಲೆ ಸೋಮಜ್ಯಾಳು ಗ್ರಾಮದ ಮಲ್ಲಿಕಾರ್ಜುನ ಹಿರೇಮಠಕ್ಕೆ ಆಗಮಿಸಿ ಆಧ್ಯಾತ್ಮ ಪಥದಲ್ಲಿ ನಡೆಯತೊಡಗಿದರು. ಪ್ರೌಢಾವಸ್ಥೆಯಲ್ಲಿಯೇ ಸೊನ್ನದ ಶ್ರೀ ಗುರುಸಿದ್ಧ ಸ್ವಾಮಿಗಳ ಕೃಪಾಕಟಾಕ್ಷಕ್ಕೆ ಒಳಗಾದರು. ನಂತರ ಇಂಡಿಯಲ್ಲಿ ವಿದ್ಯಾಭ್ಯಾಸ ಮುಗಿಸಿ ಸಿಂದಗಿಯಲ್ಲಿ ಪದವಿ ಶಿಕ್ಷಣವನ್ನು ಮುಗಿಸಿ, ೧೯೯೮ರ ಏಪ್ರಿಲ್ ಇಪ್ಪತ್ತರಂದು ರಂಭಾಪುರಿಪೀಠದ ಜಗದ್ಗುರು ಶ್ರೀ ಪ್ರಸನ್ನ ರೇಣುಕವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರ ಸಮ್ಮುಖದಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಅಧಿಕಾರವನ್ನು ವಹಿಸಿಕೊಂಡ ಮೇಲೆ ಮಠದ ಧಾರ್ಮಿಕ ಕಾರ್ಯಗಳು ವ್ಯವಸ್ಥಿತವಾಗಿ ನಡೆಯುವಂತೆ ಮಾಡಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ಧಾರ್ಮಿಕ ಚಟುವಟಿಕೆಗಳು: ಶ್ರೀ ಅಮೃತಲಿಂಗ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠದ ಧಾರ್ಮಿಕ ಚಟುವಟಿಕೆಗಳು ಚುರುಕುಗೊಂಡು ನಡೆಯತೊಡಗಿವೆ. ಗುರುಗಳು ಶಿಥಿಲಗೊಂಡ ಮಠದ ಕಟ್ಟಡವನ್ನು ನವೀಕರಿಸಿಕೊಂಡು, ಕರ್ತೃಗುರುಗಳ ಗದ್ದುಗೆ ಹಾಗೂ ಹೊರ ಭಾಗದಲ್ಲಿರುವ ಎರಡು ಗದ್ದುಗೆಗಳನ್ನೂ ನವೀಕರಿಸಿ ಪೂಜೆಗೆ ವ್ಯವಸ್ಥೆ ಮಾಡಿದ್ದಾರೆ. ಮಠದಲ್ಲಿ ನಿತ್ಯ ಪೂಜೆ, ಅಮಾವಾಸ್ಯೆ ಮತ್ತು ಹುಣ್ಣಿಮೆಯಲ್ಲಿ ವಿಶೇಷ ಪೂಜೆ, ಭಜನೆ ಹಾಗೂ ಧರ್ಮೋಪದೇಶ ಕಾರ್ಯಗಳನ್ನು ನಡೆಸುತ್ತಿದ್ದಾರೆ. ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆಯ ಸಂದರ್ಭದಲ್ಲಿ ಹದಿನೈದು ದಿನ ಪುರಾಣ, ಪ್ರವಚನವನ್ನು ನಡೆಸುತ್ತಿದ್ದಾರೆ.

ಮಠದ ಪರಂಪರೆಯ ಆಸ್ತಿಯಾಗಿರುವ ಹದಿನಾಲ್ಕು ಎಕರೆ ಜಮೀನನ್ನು ನೀರಾವರಿಯಿಂದ ಅಣಿಗೊಳಿಸಿ, ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ಕಲ್ಲೂರು ಮತ್ತು ದೇಗಿನವಾಳು ಗ್ರಾಮದ ಶಾಖಾ ಮಠಗಳನ್ನು ಅಭಿವೃದ್ಧಿಪಡಿಸಿ, ಅಲ್ಲಿಯೂ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಅಮೃತಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಮಲ್ಲಿಕಾರ್ಜುನ ಹಿರೇಮಠ, ಸೋಮಜ್ಯಾಳು, ಸಿಂದಗಿ ತಾಲ್ಲೂಕು, ಬಿಜಾಪುರ ಜಿಲ್ಲೆ.

ಹರ್ನಾಳು

ಸಿಂದಗಿ ತಾಲ್ಲೂಕಿನ ಹರ್ನಾಳು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿನಾರು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ರೇವಣಸಿದ್ಧೇಶ್ವರ ಮಠವು ಅಸ್ತಿತ್ವದಲ್ಲಿದೆ.

ರೇವಣಸಿದ್ಧ ಮಠ: ಹರ್ನಾಳು ಗ್ರಾಮದಲ್ಲಿ ಶ್ರೀ ರಂಭಾಪುರಿ ಪೀಠದ ಶಾಖಾ ಮಠವು ಅಸ್ತಿತ್ತ್ವದಲ್ಲಿದೆ. ಶ್ರೀ ಚಿದಾನಂದ ಶಿವಾಚಾರ್ಯ ಸ್ವಾಮಿಗಳು ತಮ್ಮ ಎಂಟನೆಯ ವರ್ಷದಲ್ಲಿ ಈ ಮಠದ ಅಧಿಕಾರವನ್ನು ವಹಿಸಿಕೊಂಡು ೧೯೩೮ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ೧೯೮೫ ರಲ್ಲಿ ಬಾಲ ಶಿವಯೋಗಿ ಅಭಿನವ ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿ ಕೊಂಡು ಅಧಿಕಾರವನ್ನು ನೀಡಿದ್ದಾರೆ. ಈ ಮಠದ ಸ್ಥಾಪನೆ ಹಾಗೂ ಪರಂಪರೆಯ ಬಗ್ಗೆ ಸ್ಪಷ್ಟವಾದ ಮಾಹಿತಿ ಲಭ್ಯವಿಲ್ಲ.

ವಿಳಾಸ: ಷ.ಬ್ರ.ಶ್ರೀ ಬಾಲ ಶಿವಯೋಗಿ ಅಭಿನವ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು, ಶ್ರೀ ರೇವಣಸಿದ್ಧ ಮಠ, ಅರ್ನಾಳು, ಸಿಂದಗಿ ತಾಲ್ಲೂಕು, ಬಿಜಾಪುರ ಜಿಲ್ಲೆ.

❑

ಬೀದರ್ ಜಿಲ್ಲೆ

ಬೀದರ್ ಜಿಲ್ಲೆ



ಬೀದರ್ ತಾಲ್ಲೂಕು : ೧. ಅಲಿಯಂಬರ

ಔರಾದ್ ತಾಲ್ಲೂಕು : ೧. ಕಮಲಾನಗರ ೨. ಮುದೋಳ

೩. ಕುಶನೂರು ಠಾಣ ೪. ಹೆಡ್ಗಾಪುರ

ಬಾಲ್ಕಿ ತಾಲ್ಲೂಕು : ೧. ಮೆಹಂಕರ್ ೨. ಬಾತಾಂಬ್ರ

ಬಸವ ಕಲ್ಯಾಣ ತಾಲ್ಲೂಕು : ೧. ಹುಲಸೂರು ೨. ರಾಜೇಶ್ವರಿ

೩. ಹಾರಕೋಡು ೪. ಹಿರೇನಾಗಾಂವ್

ಹುಮನಾಬಾದ್ ತಾಲ್ಲೂಕು : ೧. ಹುಡಗಿ ೨. ಚಿಟಗುಪ್ಪ

೩. ವಿಮಲಖೇಡ

ಕರ್ನಾಟಕದ ಶಿರದಂತಿರುವ ಬೀದರ್ ಜಿಲ್ಲೆಯು ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದ ಗಡಿಭಾಗಕ್ಕೆ ಹೊಂದಿಕೊಂಡಿದೆ. ಹೈದರಾಬಾದ್ ಕರ್ನಾಟಕದ ವ್ಯಾಪ್ತಿಗೆ ಒಳಪಡುವ ಈ ಜಿಲ್ಲೆ ಆರ್ಥಿಕವಾಗಿ ಹಿಂದೆ ಉಳಿದಿದೆ. ನಿಜಾಮರ ಆಳ್ವಿಕೆಯ ಕಾಲದಿಂದ ಉರ್ದು ಭಾಷೆಯ ಪ್ರಭಾವಕ್ಕೆ ಒಳಗಾಗಿದೆ. ಔರಾದ್, ಬಸವಕಲ್ಯಾಣ ಹಾಗೂ ಭಾಲ್ಕಿ ತಾಲ್ಲೂಕಿನ ಕೆಲವು ಭಾಗ ಮರಾಠಿ ಪ್ರಭಾವಕ್ಕೆ ಒಳಗಾಗಿವೆ. ಈ ಭಾಷಾ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿದ್ದರೂ ಕನ್ನಡ ಭಾಷೆ ತನ್ನ ಪ್ರಭಾವವನ್ನು ಉಳಿಸಿಕೊಂಡು ಬಂದಿದೆ.

ಕ್ರಿ.ಪೂ ಒಂಬತ್ತನೆಯ ಶತಮಾನದಿಂದ ಬೆಳೆದು ಬಂದ ಇಲ್ಲಿನ ಇತಿಹಾಸ, ಕಲ್ಯಾಣಿ ಚಾಲುಕ್ಯರು, ರಾಷ್ಟ್ರಕೂಟರು ಹಾಗೂ ಹೈದರಾಬಾದ್ ನಿಜಾಮರು ಹಾಗೂ ಬಿಜಾಪುರದ ಆದಿಲ್‌ಶಾಹಿಗಳ ಆಡಳಿತಕ್ಕೆ ಒಳಪಟ್ಟಿತ್ತು. ಇಲ್ಲಿ ಅನೇಕ ಪಾಳೇಗಾರ ಪಟ್ಟುಗಳು ಬೆಳೆದು ಚಾಲುಕ್ಯರ ಸಾಮಂತರಾಗಿ ಈ ನಾಡನ್ನು ಆಳಿದ ಇತಿಹಾಸವಿದೆ.

ಭಾರತಕ್ಕೆ ಸ್ವಾತಂತ್ರ್ಯ ದೊರೆತ ನಂತರ ಹೈದರಾಬಾದ್ ನಿಜಾಮರ ಆಳ್ವಿಕೆಗೆ ಒಳಪಟ್ಟಿತ್ತು. ಭಾಷಾವಾರು ಪ್ರಾಂತ್ಯಗಳ ವಿಂಗಡಣೆಯ ಸಂದರ್ಭದಲ್ಲಿಯೂ ಕರ್ನಾಟಕದ ಆಡಳಿತಕ್ಕೆ ಒಳಪಡದೆ ಹೋಯಿತು. ಕೆಲವು ದಿನಗಳ ನಂತರ ಕರ್ನಾಟಕಕ್ಕೆ ಸೇರ್ಪಡೆಗೊಂಡಿತು. ಬೀದರ್ ಜಿಲ್ಲೆಯು ಔರಾದ್, ಬಸವಕಲ್ಯಾಣ, ಭಾಲ್ಕಿ, ಬೀದರ್ ಹಾಗೂ ಹುಮಾನಬಾದ್ ಹೀಗೆ ಐದು ತಾಲ್ಲೂಕುಗಳನ್ನು ಒಳಗೊಂಡ ಸಣ್ಣ ಜಿಲ್ಲೆಯಾಗಿದೆ. ಕನ್ನಡ ಸಾಹಿತ್ಯದ ಜೀವಂತಿಕೆಯನ್ನು ಹೆಚ್ಚಿಸಿ, ಶ್ರೀಮಂತಗೊಳಿಸಿದ ಹೆಗ್ಗಳಿಕೆ ಈ ಜಿಲ್ಲೆಯದ್ದಾಗಿದೆ.

ರಾಜ್ಯದಲ್ಲಿಯೇ ಅತ್ಯಂತ ಪ್ರಾಚೀನ ಇತಿಹಾಸವುಳ್ಳ ಬೀದರ್ ಜಿಲ್ಲೆಯಲ್ಲಿ ಕನ್ನಡ ಸಾಹಿತ್ಯ ವಿಪುಲವಾಗಿ ಬೆಳೆದಿದೆ. ಹಿಂದೆ ತಿರುಳ್ಗನ್ನಡದಲ್ಲಿ ಸಾಹಿತ್ಯ ರಚನೆಯಾಗಿ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿತ್ತು ಎಂಬ ಉಲ್ಲೇಖ ಕವಿರಾಜಮಾರ್ಗದಿಂದ ವ್ಯಕ್ತವಾಗುತ್ತದೆ. ಹನ್ನೆರಡನೆಯ ಶತಮಾನದಲ್ಲಿ ಸಾಹಿತ್ಯ ಮತ್ತು ಧಾರ್ಮಿಕ ಕ್ಷೇತ್ರಕ್ಕೆ ಕಲ್ಯಾಣದಕ್ರಾಂತಿ ಅಪಾರ ಕೊಡುಗೆಯನ್ನು ನೀಡಿದೆ. ಬಸವಣ್ಣನವರ ನೇತೃತ್ವದಲ್ಲಿ ಅಲ್ಲಮಪ್ರಭು, ಚನ್ನಬಸವಣ್ಣ, ಅಕ್ಕಮಹಾದೇವಿ ಮುಂತಾದ ಶರಣ ಶರಣೆಯರ ಅನುಭವ ಮೂಸೆಯಿಂದ ಮೂಡಿಬಂದ ಶರಣ ಸಾಹಿತ್ಯ, ಕನ್ನಡಸಾಹಿತ್ಯ ಲೋಕಕ್ಕೆ ಒಂದು ಹೊಸ ತಿರುವನ್ನು ನೀಡಿತು. ಕಲ್ಯಾಣದ ಅನುಭವ ಮಂಟಪದಲ್ಲಿ ಅನುಭಾವ ಸಾಹಿತ್ಯ, ಪ್ರಗತಿಪರ ಚಿಂತನೆಗಳು ನಡೆದು ಗಟ್ಟಿ ಸಂಸ್ಕೃತಿಯನ್ನು ನೀಡಿ ನಾಡನ್ನು ಬೆಳಗಿಸಿವೆ.

ಹನ್ನೆರಡನೆಯ ಶತಮಾನದ ವೇಳೆಗೆ ಪಟ್ಟಭದ್ರ ಹಿತಾಸಕ್ತಿ ಹೆಚ್ಚಾಗಿ ಸಮಾಜದಲ್ಲಿ ಅರಾಜಕತೆ ಉಂಟಾದಾಗ ಬಿಜ್ಜಳನ ಆಸ್ಥಾನದಲ್ಲಿ ಮಹಾಮಂತ್ರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಬಸವಣ್ಣ ತಮ್ಮ ಶರಣರ ಸಮೂಹದೊಂದಿಗೆ ಹೊಸ ಸಮಾಜವನ್ನು ನಿರ್ಮಿಸಲು ಮುಂದಾಗಿ ಅಸ್ಪೃಶ್ಯತೆ, ಅಸಮಾನತೆಯನ್ನು ಹೋಗಲಾಡಿಸಲು ಸಾಮಾಜಿಕ ಹೋರಾಟವನ್ನು ರೂಪಿಸಿದರು. ಆಗ ಮನೆಮನೆಗಳೆಲ್ಲ ಮಠಗಳಾಗಿ ರೂಪಾಂತರ ಪಡೆದವು. ಬೀದರ್ ಜಿಲ್ಲೆಯಲ್ಲಿ ಒಂದುಸಾವಿರದಮೂನ್ನೂರನಲ್ವತ್ತೊಂದು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಆದರೆ ಈಗ ಜಿಲ್ಲೆಯಾದ್ಯಂತ ತೊಂಭತ್ತಾನ್ಲಲ್ಕು ಮಠಗಳನ್ನು ಮಾತ್ರ ಗುರುತಿಸಬಹುದಾಗಿದೆ. ಇವುಗಳಲ್ಲಿ ಮೂವತ್ತೊಂಬತ್ತು ಮಠಗಳು ಮಾತ್ರ ಅಸ್ತಿತ್ವದಲ್ಲಿದ್ದು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಔರಾದ ತಾಲ್ಲೂಕು

ಬೀದರ್ ಜಿಲ್ಲೆಯ ಔರಾದ ತಾಲ್ಲೂಕು ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದ ಗಡಿಗೆ ಚಾಚಿಕೊಂಡಿದೆ. ಈ ಎರಡೂ ರಾಜ್ಯಗಳ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿರುವ ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ತನ್ನ ಪ್ರಭಾವವನ್ನು ಬೆಳೆಸಿಕೊಂಡಿದೆ. ಹಿಂದೆ ಸುಮಾರು ಐವತ್ತಾರು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಪ್ರಸ್ತುತ ಕೇವಲ ಹದಿನಾಲ್ಕು ಮಠಗಳನ್ನು ಮಾತ್ರ ಗುರುತಿಸಬಹುದಾಗಿದೆ.

ಕಮಲನಗರ

ಔರಾದ ತಾಲ್ಲೂಕಿನ ಕಮಲನಗರವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಕಮಲನಗರದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಹಿರೇಮಠವು, ಭಾಲ್ಕಿ ಹಿರೇಮಠದ ಶಾಖಾಮಠವಾಗಿ ಬೆಳೆದಿದೆ. ಈ ಮಠದ ಆಡಳಿತವನ್ನು ಭಾಲ್ಕಿಮಠದ ಶ್ರೀ ಪಟ್ಟದದೇವರೆ ನೋಡಿಕೊಳ್ಳುತ್ತಿದ್ದು, ಸಂದರ್ಭಕ್ಕನುಸಾರ ಇಲ್ಲಿಗೆ ಆಗಮಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುತ್ತಿದ್ದಾರೆ. ಮಠದಲ್ಲಿ ಒಂದು ಗದ್ದುಗೆ ಇದ್ದು ನಿತ್ಯ ಪೂಜೆ ನಡೆಯುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಬಸವಲಿಂಗ ಪಟ್ಟದ ದೇವರು, ಶ್ರೀ ಹಿರೇಮಠ, ಕಮಲನಗರ, ಔರಾದ ತಾಲ್ಲೂಕು, ಬೀದರ್ ಜಿಲ್ಲೆ.

ಕುಶನೂರುಠಾಣಾ

ಔರಾದ ತಾಲ್ಲೂಕಿನ ಕುಶನೂರುಠಾಣಾ ಗ್ರಾಮವು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಹದಿನೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಕುಶನೂರುಠಾಣಾ ಗ್ರಾಮದಲ್ಲಿ ವಿರಕ್ತ ಪರಂಪರೆಯ ಚೀಲಾಳ ಸಮಯದ ವಿರಕ್ತಮಠವು ಸ್ಥಾಪನೆಯಾಗಿದೆ. ಹದಿನಾಲ್ಕನೆಯ ಶತಮಾನದಲ್ಲಿ ಶ್ರೀ ಎಡೆಯೂರು ಸಿದ್ಧಲಿಂಗೇಶ್ವರರು ಈ ಪ್ರಾಂತ್ಯದಲ್ಲಿ ಸಂಚಾರದಲ್ಲಿದ್ದಾಗ ಇಲ್ಲಿ ನೆಲೆಸಿ, ಈ ಮಠವನ್ನು ಸ್ಥಾಪಿಸಿದ್ದರೆಂದು ಹೇಳಲಾಗುತ್ತದೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ನಿರಂಜನ ಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಗುರುಪಾದ ಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಕರಿಬಸಪ್ಪ ಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಮಲ್ಲಯ್ಯ ಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಸಿದ್ಧಲಿಂಗ ಸ್ವಾಮಿಗಳು

ಮಠದ ಪರಂಪರೆಯಲ್ಲಿ ಅನೇಕ ಗುರುಗಳು ಅಧಿಕಾರವನ್ನು ನಡೆಸಿದ ಬಗ್ಗೆ ಮಾಹಿತಿ ದೊರೆಯುತ್ತದೆ. ಆದರೆ ಎಲ್ಲಾ ಗುರುಗಳ ವಿವರ ಲಭ್ಯವಿಲ್ಲ. ಈಗ ಮಠಾಧೀಶರಾಗಿರುವ ಶ್ರೀ ಸಿದ್ಧಲಿಂಗ ಸ್ವಾಮಿಗಳು, ಬೆಳಗಾವಿ ಜಿಲ್ಲೆಯ ಕೆ.ಕೆ.ಕೊಪ್ಪಳದಲ್ಲಿ ಶ್ರೀ ಬಸವಂತಯ್ಯ ಮತ್ತು ಶ್ರೀಮತಿ ವೀರಮ್ಮನವರ ಪುತ್ರರಾಗಿ ೧೯೬೪ರಲ್ಲಿ ಜನಿಸಿದರು. ಇವರು ವಿದ್ಯಾಭ್ಯಾಸವನ್ನು ಮುಗಿಸಿ ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಶ್ರೀ ಸಿದ್ಧಲಿಂಗ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠದ ಅಧೀನದಲ್ಲಿದ್ದ ಏಳುಎಕರೆ ಭೂಮಿಯನ್ನು ಅಭಿವೃದ್ಧಿಪಡಿಸಿದರು. ಪ್ರತಿ ತಿಂಗಳು ಚತುರ್ದಶಿಯಂದು ಶಿವಾನುಭವಗೋಷ್ಠಿ, ಪ್ರತಿವರ್ಷ ಏಪ್ರಿಲ್‌ನಲ್ಲಿ ಅಕ್ಕಮಹಾದೇವಿ ಮತ್ತು ಕರ್ತೃ ಗುರುಗಳಾದ ಶ್ರೀ ಎಡೆಯೂರು ಸಿದ್ಧಲಿಂಗೇಶ್ವರರ ಜಯಂತಿಯನ್ನು ಆಚರಿಸುತ್ತಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಸಿದ್ಧಲಿಂಗ ಸ್ವಾಮಿಗಳು, ಶ್ರೀ ವಿರಕ್ತಮಠ, ಕುಶನೂರು ಠಾಣಾ, ಔರಾದ ತಾಲ್ಲೂಕು, ಬೀದರ್ ಜಿಲ್ಲೆ.

ಕೌಠಾ (ಬಿ)

ಔರಾದ ತಾಲ್ಲೂಕಿನ ಕೌಠಾ ಗ್ರಾಮವು ದಕ್ಷಿಣ ಭಾಗಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠ ಮತ್ತು ಶ್ರೀ ಬೆಲ್ಲದಾಳು ಶರಣರ ಆಶ್ರಮ ಅಸ್ತಿತ್ವದಲ್ಲಿವೆ.

ಹಿರೇಮಠ: ಕೌಠಾ ಗ್ರಾಮದ ಮಧ್ಯಭಾಗದಲ್ಲಿ ಶ್ರೀ ಹಿರೇಮಠವು ಸ್ಥಾಪನೆಯಾಗಿದ್ದು, ಅನೇಕ ಧಾರ್ಮಿಕ ಕಾರ್ಯಗಳನ್ನು ನಡೆಸಿ ಜನಪ್ರಿಯಗೊಂಡಿತ್ತು. ಅನೇಕ ವರ್ಷಗಳಿಂದ ಗುರುಗಳಿಲ್ಲದೆ ಈಗ ಖಾಲಿ ಉಳಿದಿದೆ.

ಬೆಲ್ಲದಾಳು ಶರಣರ ಆಶ್ರಮ: ಕೌಠಾ ಗ್ರಾಮದಲ್ಲಿ ಇತ್ತೀಚೆಗೆ ಶರಣಸ್ಥಲದ ಶ್ರೀ ಬೆಲ್ಲದಾಳು ಶರಣರ ಆಶ್ರಮ ಸ್ಥಾಪನೆಯಾಗಿದೆ. ಭಾಲ್ಕಿ ಹಿರೇಮಠದ ಶ್ರೀ ಪಟ್ಟದ ಚನ್ನಬಸವ ಸ್ವಾಮಿಗಳು ಶೂದ್ರ ವರ್ಗಕ್ಕೆ ಸೇರಿದ ಶ್ರೀ ಸಿದ್ಧರಾಮ ಶರಣರಿಗೆ ಶಿವದೀಕ್ಷೆಯನ್ನು ನೀಡಿ, ಇಲ್ಲಿ ಮಠವನ್ನು ಸ್ಥಾಪಿಸಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದ್ದಾರೆ.

ಶ್ರೀ ಬೆಲ್ಲದಾಳು ಸಿದ್ಧರಾಮ ಶರಣರು ಶರಣ ತತ್ತ್ವವನ್ನು ಆಳವಾಗಿ ಅಧ್ಯಯನ ಮಾಡಿ ಪ್ರಚಾರಕ್ಕೆ ತರುತ್ತಿದ್ದಾರೆ. ಗುರುಗಳು ಷಟ್‌ಸ್ಥಲ ಸಿದ್ಧಾಂತದ ಮೌಲಿಕಕೃತಿ ಹಾಗೂ ಬೆಡಗಿನ ವಚನಗಳನ್ನು ರಚಿಸಿದ್ದು ಆಧುನಿಕ ವಚನಕಾರರಲ್ಲಿ ಒಬ್ಬರಾಗಿ ಬೆಳೆದಿದ್ದಾರೆ. ಅಖಿಲಭಾರತ ಶರಣ ಸಾಹಿತ್ಯ ಪರಿಷತ್ತು ಇವರ ಸಾಹಿತ್ಯ ಸೇವೆಯನ್ನು ಗುರುತಿಸಿ ೧೯೯೬ರಲ್ಲಿ ಚಿಕ್ಕಮಗಳೂರಿನಲ್ಲಿ ನಡೆದ ನಾಲ್ಕನೆಯ ಶರಣಸಾಹಿತ್ಯ ಸಮ್ಮೇಳನದಲ್ಲಿ ಅಭಿನಂದಿಸಲಾಗಿದೆ. ಗುರುಗಳು ಅಧಿಕಾರಕ್ಕೆ ಬಂದ ಕೆಲವೇ ವರ್ಷಗಳಲ್ಲಿ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜನ್ನು ಪ್ರಾರಂಭಿಸಿದ್ದಾರೆ.

ವಿಳಾಸ: ಶ್ರೀ ಬೆಲ್ಲದಾಳು ಸಿದ್ಧರಾಮ ಶರಣರು, ಶ್ರೀ ಬೆಲ್ಲದಾಳು ಶರಣರ ಆಶ್ರಮ, ಕೌಠಾ (ಬಿ), ಔರಾದ ತಾ, ಬೀದರ್ ಜಿಲ್ಲೆ.

ಚಿಕ್ಕಆಲೂರು

ಔರಾದ ತಾಲ್ಲೂಕಿನ ಚಿಕ್ಕಆಲೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹದಿನೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠ ಮತ್ತು ಶ್ರೀ ಹಿರೇಮಠ ಅಸ್ತಿತ್ವದಲ್ಲಿದ್ದವು. ಇವುಗಳು ಧಾರ್ಮಿಕ ಕಾರ್ಯಗಳ ಮೂಲಕ ಸಮಾಜವನ್ನು ಬೆಳೆಸಿದ್ದವು. ಈಗ ಈ ಎರಡೂ ಮಠಗಳು ಗುರುಗಳಿಲ್ಲದೆ ಖಾಲಿ ಉಳಿದಿವೆ.

ಜಂಬಗಿ

ಔರಾದ ತಾಲ್ಲೂಕಿನ ಜಂಬಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಇಪ್ಪತ್ತೊಂದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿತ್ತು. ಇತ್ತೀಚೆಗೆ ಉತ್ತರಾಧಿಕಾರಿಗಳಿಲ್ಲದೆ ಮಠವು ಖಾಲಿ ಉಳಿದಿದೆ.

ಜೊನ್ನಿಕೇರಿ

ಔರಾದ ತಾಲ್ಲೂಕಿನ ಜೊನ್ನಿಕೇರಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿತ್ತು. ಈಗ ಗುರುಗಳಿಲ್ಲದೆ ಸಂಸಾರಿ ಮನೆಯಾಗಿ ಪರಿವರ್ತನೆಯಾಗಿದೆ.

ಡೊಣಗಾಂವ

ಔರಾದ ತಾಲ್ಲೂಕಿನ ಡೊಣಗಾಂವ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿತ್ತು. ಈಗ ಉತ್ತರಾಧಿಕಾರಿಗಳಿಲ್ಲದೆ ಸಂಸಾರಿ ಮನೆಯಾಗಿ ಪರಿವರ್ತನೆಯಾಗಿದೆ.

ಬೆಡಕುಂದ

ಔರಾದ ತಾಲ್ಲೂಕಿನ ಬೆಡಕುಂದ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಮೂರು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿತ್ತು. ಈಗ ಗುರುಗಳಿಲ್ಲದೆ ಮಠವು ಖಾಲಿ ಉಳಿದಿದೆ.

ಮುಧೋಳ (ಬಿ)

ಔರಾದ ತಾಲ್ಲೂಕಿನ ಮುಧೋಳ (ಬಿ) ಗ್ರಾಮವು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಹದಿನೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಶಿವಲಿಂಗೇಶ್ವರ ಮಠವು ಅಸ್ತಿತ್ವದಲ್ಲಿದೆ.

ಶಿವಲಿಂಗೇಶ್ವರಮಠ: ಮುಧೋಳ(ಬಿ) ಗ್ರಾಮದಲ್ಲಿ ರಂಭಾಪುರಿ ಪೀಠದ ಪರಂಪರೆಯ ದೋಣಗಾಂವ್ ಮಠದ ಶಾಖಾ ಮಠವಾಗಿದ್ದ ಶ್ರೀ ಶಿವಲಿಂಗೇಶ್ವರ ಮಠವು ಸ್ಥಾಪನೆಯಾಗಿದೆ. ಸುಮಾರು ಆರುನೂರು ವರ್ಷಗಳ ಹಿಂದೆ ಪ್ರಾರಂಭಗೊಂಡ ಈ ಮಠವು ಈಗ ಸ್ವತಂತ್ರ ಮಠವಾಗಿ ಬೆಳೆದಿದೆ. ಶ್ರೀ ಹಾವಗಿಲಿಂಗೇಶ್ವರರು ಲೋಕೋದ್ಧಾರಕ್ಕಾಗಿ ದೇಶದ ನಾನಾ ಭಾಗಗಳಲ್ಲಿ ಸಂಚರಿಸಿ ಅನುಷ್ಠಾನಗೊಂಡು ಮಠಗಳನ್ನು ಸ್ಥಾಪಿಸಿ, ವೀರಶೈವ ಧರ್ಮ ಹೆಚ್ಚು ಪ್ರಬಲವಾಗಿ ಬೆಳೆಯುವಂತೆ ಮಾಡಿದ್ದರು.

ಮಠ ಸ್ಥಾಪನೆ: ಶ್ರೀ ಹಾವಗಿಲಿಂಗೇಶ್ವರರು ದೇಶ ಸಂಚಾರದಲ್ಲಿದ್ದ ಸಂದರ್ಭದಲ್ಲಿ ಮುಧೋಳು ಗ್ರಾಮಕ್ಕೆ ಆಗಮಿಸಿ, ಇಲ್ಲಿನ ನಿರ್ಜನ ಪ್ರದೇಶದಲ್ಲಿ ಅನುಷ್ಠಾನಗೊಂಡು ಮಠವನ್ನು ಸ್ಥಾಪಿಸಿದ್ದರು. ಅಂದು ಶ್ರೀ ಹಾವಗಿಲಿಂಗೇಶ್ವರರಿಂದ ಸ್ಥಾಪನೆಗೊಂಡ ಮಠವು ಕಾಲಾನಂತರ ಅಭಿವೃದ್ಧಿಗೊಂಡು, ವೀರಶೈವ ಧರ್ಮದ ಧಾರ್ಮಿಕ ಚಟುವಟಿಕೆಗಳ ಕೇಂದ್ರ ಬಿಂದುವಾಗಿ ಬೆಳೆಯಿತು. ಅಂದು ಸ್ಥಾಪನೆಗೊಂಡು ಬೆಳೆದ ಮಠದ ಪರಂಪರೆ ಈತನಕ ಬೆಳೆದು ಬಂದಿದೆ.

ಪರಂಪರೆ:

೧. ಷ.ಬ್ರ.ಶ್ರೀ ಹಾವಗಿಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಮಹಾದೇವ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಮಹಾಲಿಂಗ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಶಿವಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಶಿವಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಸೋಮಲಿಂಗದೇವರು

ಮಠದ ಪರಂಪರೆಯ ನಾಲ್ಕನೆಯ ಗುರುಗಳಾದ ಶ್ರೀ ಶಿವಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು ಪವಾಡ ಪುರುಷರಾಗಿ, ತಪೋನುಷ್ಠಾನಿಗಳಾಗಿ ವೀರಶೈವ ಧರ್ಮವನ್ನು ಹೆಚ್ಚು ಪ್ರಚಾರಗೊಳಿಸಿ,ಮುಧೋಳ ಮಠವನ್ನು ಪ್ರಖ್ಯಾತಗೊಳಿಸಿದರು. ಇವರು ಭಕ್ತರ ಹೃನ್ಮನಗಳಲ್ಲಿ ಸದಾ ರಾರಾಜಿಸುವ ಮೂರ್ತಿಯಾಗಿ ಬೆಳೆದರು. ಪುರಾತನ ಮಠಕ್ಕೆ "ಶ್ರೀ ಶಿವಲಿಂಗೇಶ್ವರ ಮಠ" ಎಂದು ಕರೆದು, ಗುರುಗಳ ಹೆಸರನ್ನು ಸದಾ ಸ್ಮರಿಸುವಂತೆ ಮಾಡಿದ್ದಾರೆ. ಪವಾಡ ಪುರುಷರಾದ ಶ್ರೀ ಶಿವಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳ ನಂತರ ಶ್ರೀ ಶಿವಲಿಂಗೇಶ್ವರ ಶಿವಾಚಾರ್ಯ ಚರಮೂರ್ತೇಶ್ವರ ಸ್ವಾಮಿಗಳು ಈ ಮಠಕ್ಕೆ ನೇಮಕಗೊಂಡು, ನಂತರ ಶಿಗ್ಗಾಂವ್ ತಾಲ್ಲೂಕಿನ ಗಂಜಿಕಟ್ಟೆ ಮಠಕ್ಕೆ ನೇಮಕಗೊಂಡರು. ಈಗ ಶ್ರೀ ಸೋಮಲಿಂಗ ದೇವರು ಉತ್ತರಾಧಿಕಾರಿಗಳಾಗಿ ನೇಮಕಗೊಂಡಿದ್ದಾರೆ. ಶ್ರೀ ಸೋಮಲಿಂಗ ದೇವರು ಬೆಳಗಾವಿ ಜಿಲ್ಲೆಯ ಬಯಲುಹೊಂಗಲ ತಾಲ್ಲೂಕಿನ ಪರವಿಕೊಪ್ಪದ ಶ್ರೀ ಬಸಯ್ಯ ಮತ್ತು ಶ್ರೀಮತಿ ಗಂಗಮ್ಮನವರ ಪುತ್ರರಾಗಿ, ೧೯೭೬ರ ಜನವರಿ ಒಂಬತ್ತರಂದು ಜನಿಸಿದರು. ಪರವಿಕೊಪ್ಪ, ಶಿವಯೋಗಮಂದಿರ, ಮೈಸೂರು, ಹಲಗೂರು ಮತ್ತು ಹುಬ್ಬಳ್ಳಿಯಲ್ಲಿ ವಿದ್ಯಾಭ್ಯಾಸ ಮಾಡಿ, ಮಠಕ್ಕೆ ಆಗಮಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಶ್ರೀ ಹಾವಗಿಲಿಂಗೇಶ್ವರರ ತೋರು ಗದ್ದುಗೆ ಸೇರಿದಂತೆ ಒಟ್ಟು ಮೂರು ಗದ್ದುಗೆಗಳು ಮಠದಲ್ಲಿ ಸ್ಥಾಪನೆಯಾಗಿವೆ. ಇವುಗಳಿಗೆ ನಿತ್ಯ ಪೂಜೆ, ಅಮಾವಾಸ್ಯೆಯಲ್ಲಿ ವಿಶೇಷ ಪೂಜೆ, ಆಷಾಢ ಮಾಸದಲ್ಲಿ ಶ್ರೀ ಶಿವಲಿಂಗೇಶ್ವರರ ಜಾತ್ರೆ, ಶ್ರಾವಣಮಾಸದಲ್ಲಿ ಪುರಾಣ ಪ್ರವಚನ, ವಿಜಯದಶಮಿಯಂದು ದಸರಾ ದರ್ಬಾರ್, ಯುಗಾದಿಯಲ್ಲಿ ಹೊಸ ವರುಷದ ಪಂಚಾಂಗವನ್ನು ಹೇಳುವ ಪರಿಪಾಠ ಸಂಪ್ರದಾಯದಂತೆ ನಡೆದು ಬಂದಿದೆ. ಈ ರೀತಿ ಸದಾ ಧಾರ್ಮಿಕ ಚಟುವಟಿಕೆಗಳನ್ನು ನಡೆಸುತ್ತಾ, ಸಮಾಜದಲ್ಲಿ ಧಾರ್ಮಿಕ ವಾತಾವರಣವನ್ನು ಸೃಷ್ಟಿಸಿದೆ. ಮಠದಲ್ಲಿ ನಿತ್ಯ ಅನ್ನ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಅಭಿವೃದ್ಧಿ ಕಾರ್ಯಗಳು: ಅನೇಕ ವರ್ಷಗಳಿಂದ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿದಿದ್ದರಿಂದ, ಮಠದ ಕಟ್ಟಡವು ಶಿಥಿಲಾವಸ್ಥೆಗೆ ಬಂದಿತ್ತು. ಈ ಮಠವನ್ನು ಶ್ರೀ ಸೋಮಲಿಂಗ ದೇವರು ನವೀಕರಣಗೊಳಿಸಿದ್ದಾರೆ. ಅಲ್ಲದೆ ಐದು ಲಕ್ಷ ರೂಪಾಯಿ ಯೋಜನೆಯಲ್ಲಿ ಕಲ್ಯಾಣ ಮಂಟಪವನ್ನು ನಿರ್ಮಿಸಲಾಗಿದೆ. ಮಠದ ಆಸ್ತಿಯಾಗಿ ಅರವತ್ತೈದು ಎಕರೆ ಭೂಮಿಯಿದ್ದು, ಇದನ್ನು ಅಭಿವೃದ್ಧಿಪಡಿಸಿ ಮಠದ ಆದಾಯದ ಮೂಲವನ್ನಾಗಿ ಮಾಡಿಕೊಂಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸೋಮಲಿಂಗ ದೇವರು, ಶ್ರೀ ಶಿವಲಿಂಗೇಶ್ವರಮಠ, ಮುಧೋಳ್ (ಬಿ), ಔರದ ತಾಲ್ಲೂಕು, ಬೀದರ್ ಜಿಲ್ಲೆ.

ವಡಗಾಂವ

ಔರಾದ ತಾಲ್ಲೂಕಿನ ವಡಗಾಂವ ಗ್ರಾಮವು ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಹದಿನೆಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಪುರಾತನ ಕಾಲದ ಶ್ರೀ ಹಿರೇಮಠವು ಅಸ್ತಿತ್ವದಲ್ಲಿತ್ತು. ಈಗ ಗುರುಗಳಿಲ್ಲದೆ ತನ್ನ ಅಸ್ತಿತ್ವದಿಂದ ಮರೆಯಾಗುತ್ತಿದೆ.

ಸಂತಪುರ

ಔರಾದ ತಾಲ್ಲೂಕಿನ ಸಂತಪುರ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠ ಮತ್ತು ಭಾಲ್ಕಿ ಮಠದ ಶಾಖಾಮಠವಾದ ಶ್ರೀ ಹಿರೇಮಠವು ಸ್ಥಾಪನೆಯಾಗಿದ್ದವು. ಈಗ ವಿರಕ್ತ ಮಠವು ಖಾಲಿ ಉಳಿದಿದೆ. ಶ್ರೀ ಹಿರೇಮಠದಲ್ಲಿ ಗದ್ದುಗೆ ಪೂಜೆ ಹಾಗೂ ಧಾರ್ಮಿಕ ಕಾರ್ಯಗಳು ನಡೆಯುತ್ತಿವೆ.

ಸಂಗಮ

ಔರಾದ ತಾಲ್ಲೂಕಿನ ಸಂಗಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ವಿರಕ್ತ ಪರಂಪರೆಯ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿತ್ತು. ಈಗ ಉತ್ತರಾಧಿಕಾರಿಗಳಿಲ್ಲದೆ ಖಾಲಿ ಉಳಿದಿದೆ.

ಹಾವಗಿ

ಔರಾದ ತಾಲ್ಲೂಕಿನ ಹಾವಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಹದಿನೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಗಡಿಗೌಡಗಾಂವ್ ಹಿರೇಮಠದ ಶಾಖಾಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಹಾವಗಿ ಗ್ರಾಮದಲ್ಲಿ ಗಡಿಗೌಡಗಾಂವ್ ಹಿರೇಮಠದ ಶಾಖಾಮಠವು ಸ್ಥಾಪನೆಯಾಗಿದೆ. ಆರುನೂರು ವರ್ಷಗಳ ಹಿಂದೆ ಶ್ರೀ ಹಾವಗಿಲಿಂಗೇಶ್ವರರೆಂದು ಪ್ರಸಿದ್ಧಿಯಾಗಿದ್ದ ಗುರುಗಳು ಇಲ್ಲಿಯವರೆಂದು ಹೇಳಲಾಗುತ್ತದೆ. ಗುರುಗಳು ಧರ್ಮಪ್ರಚಾರಕ್ಕೆಂದು ಲೋಕಸಂಚಾರ ಕೈಗೊಂಡು ಗಡಿಗೌಡಗಾಂವ್‌ನಲ್ಲಿ ಮಠವನ್ನು ಸ್ಥಾಪಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸಿದರು. ಕರ್ತೃ ಗುರುಗಳು ಲಿಂಗೈಕ್ಯರಾದ ಮೇಲೆ ಗುರುಗಳ ಜನ್ಮ ಸ್ಥಳದಲ್ಲಿ ಮಠವನ್ನು ಸ್ಥಾಪನೆ ಮಾಡಿ ಧಾರ್ಮಿಕ ಕಾರ್ಯಗಳನ್ನು ನಡೆಸತೊಡಗಿದರು. ಈಗ ಗಡಿಗೌಡಗಾಂವ್ ಹಿರೇಮಠದ ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳು ಈ ಮಠದ ಆಡಳಿತವನ್ನು ನೋಡಿಕೊಂಡು, ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ವಿಳಾಸ: ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಹಾವಗಿ, ಔರದ ತಾಲ್ಲೂಕು, ಬೀದರ್ ಜಿಲ್ಲೆ.

ಹೆಡಗಾಪುರ

ಔರಾದ ತಾಲ್ಲೂಕಿನ ಹೆಡಗಾಪುರ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಹೆಡಗಾಪುರ ಗ್ರಾಮದಲ್ಲಿ ಪುರಾತನ ಪರಂಪರೆಯ ಹಿರೇಮಠವು ಅಸ್ತಿತ್ವದಲ್ಲಿದೆ. ಪರಂಪರಾಗತ ಮಠಕ್ಕೆ ಈಗ ಉತ್ತರಾಧಿಕಾರಿಗಳು ನೇಮಕಗೊಂಡು ಮಠದ ಆಡಳಿತವನ್ನು ನಡೆಸುತ್ತಾ ಬಂದಿದ್ದಾರೆ.

ವಿಳಾಸ: ಶ್ರೀ ಹಿರೇಮಠ, ಹೆಡಗಾಪುರ, ಔರದ ತಾಲ್ಲೂಕು, ಬೀದರ್ ಜಿಲ್ಲೆ.

❑

ಬಸವಕಲ್ಯಾಣ ತಾಲ್ಲೂಕು

ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕು, ಬಸವಣ್ಣ, ಅಲ್ಲಮಪ್ರಭು, ಚನ್ನಬಸವಣ್ಣ ಮುಂತಾದ ಶರಣರ ಕಾರ್ಯ ಕ್ಷೇತ್ರವಾಗಿ, ವೀರಶೈವ ಧರ್ಮದ ಪವಿತ್ರ ಸ್ಥಳದಲ್ಲಿ ಒಂದಾಗಿದೆ. ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆದು, ಸುಮಾರು ಒಂದು ಸಾವಿರಕ್ಕೂ ಹೆಚ್ಚು ಮಠಗಳು ತಾಲ್ಲೂಕಿನಾದ್ಯಂತ ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಗೊರಟ, ಪ್ರತಾಪುರ, ಮುಚಳಾಂಬ, ಇತ್ತೀಚೆಗೆ ತಡೋಳದಲ್ಲಿ ಸ್ಥಾಪನೆಯಾದ ಮಠ.... ಇನ್ನು ಮುಂತಾದ ಮಠಗಳು ಸೇರಿದಂತೆ ಪ್ರಸ್ತುತ ಇಪ್ಪತ್ನಾಲ್ಕು ಮಠಗಳನ್ನು ಗುರುತಿಸಬಹುದಾಗಿದೆ.

ಖೇಳಗಿ

ಬಸವಕಲ್ಯಾಣ ತಾಲ್ಲೂಕಿನ ಖೇಳಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಮೂವತ್ತೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಖೇಳಗಿ ಗ್ರಾಮದ ಮಧ್ಯಭಾಗದಲ್ಲಿ ಶ್ರೀ ವಿರಕ್ತಮಠವು ಸ್ಥಾಪನೆಯಾಗಿದೆ. ಹನ್ನೆರಡನೆಯ ಶತಮಾನದಲ್ಲಿ ಈ ಮಠವನ್ನು ಶ್ರೀ ಶಾಂತಲಿಂಗೇಶ್ವರ ಸ್ವಾಮಿಗಳು ಸ್ಥಾಪಿಸಿದರೆಂದು ಹೇಳಲಾಗುತ್ತದೆ. ತಾಲ್ಲೂಕಿನ ಪ್ರಮುಖ ಮಠಗಳಲ್ಲಿ ಒಂದಾಗಿ ಬೆಳೆದಿದ್ದ ಈ ಮಠವು, ಅನೇಕ ಧಾರ್ಮಿಕ ಕಾರ್ಯಗಳನ್ನು ಮಾಡುವ ಮೂಲಕ ವೀರಶೈವ ಧರ್ಮವನ್ನು ಪ್ರಚಾರಕ್ಕೆ ತಂದಿದೆ. ಮಠದ ಪರಂಪರೆಯಲ್ಲಿ ಅನೇಕ ಗುರುಗಳು ಅಧಿಕಾರ ನಡೆಸಿ ಮಠವನ್ನು ಬೆಳೆಸಿದ್ದಾರೆ. ಕರ್ತೃ ಗುರುಗಳಾದ ಶ್ರೀ ಶಾಂತಲಿಂಗೇಶ್ವರರ ನಂತರ ಅಧಿಕಾರಕ್ಕೆ ಬಂದ ಗುರುಗಳ ವಿವರ ಲಭ್ಯವಿಲ್ಲ. ಈಗ ಶ್ರೀ ಜಯಶಾಂತಲಿಂಗೇಶ್ವರ ಸ್ವಾಮಿಗಳು ಅಧಿಕಾರವನ್ನು ನಡೆಸುತ್ತಿದ್ದಾರೆ.

ವಿಳಾಸ: ಶ್ರೀ ಜಯಶಾಂತಲಿಂಗೇಶ್ವರ ಸ್ವಾಮಿಗಳು, ಶ್ರೀ ವಿರಕ್ತಮಠ, ಖೇಳಗಿ, ಔರಾದ ತಾಲ್ಲೂಕು, ಬೀದರ್ ಜಿಲ್ಲೆ.

ಖೇಡ (ಬಿ)

ಹಿರೇಮಠ: ಬಸವಕಲ್ಯಾಣ ತಾಲ್ಲೂಕಿನ ಖೇಡ ಗ್ರಾಮವು ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಮೂವತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಪರಂಪರಾಗತ ಹಿರೇಮಠವು, ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ವಿಳಾಸ: ಶ್ರೀ ವಿಜಯಮಹಾಂತ ಸ್ವಾಮಿಗಳು, ಶ್ರೀ ಹಿರೇಮಠ, ಖೇಡ (ಬಿ), ಔರಾದ ತಾಲ್ಲೂಕು, ಬೀದರ್ ಜಿಲ್ಲೆ.

ಗಡಿಗೌಡಗಾಂವ್

ಬಸವಕಲ್ಯಾಣ ತಾಲ್ಲೂಕಿನ ಗಡಿಗೌಡಗಾಂವ್ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಗಡಿಗೌಡಗಾಂವ್ ಗ್ರಾಮದಲ್ಲಿ ಹಿರೇಮಠವು ಸ್ಥಾಪನೆಯಾಗಿದೆ. ಡೋಣಗಾಂವ್ ಹಿರೇಮಠದ ಮುನ್ನೂರಎಂಟು ಶಾಖಾಮಠಗಳಲ್ಲಿ ಒಂದಾದ ಹಿರೇಮಠವು, ಆರುನೂರು ವರ್ಷಗಳ ಹಿಂದೆ ಇಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಪುರಾತನ ಪರಂಪರೆಯ ಈ ಮಠವು ಶ್ರೀ ಹಾವಗಿಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪನೆಯಾಗಿದ್ದು, ಅಂದಿನಿಂದ ಇಂದಿನ ತನಕ ಧಾರ್ಮಿಕ ಚಟುವಟಿಕೆಗಳನ್ನು ನಡೆಸಿ ವೀರಶೈವ ಧರ್ಮವನ್ನು ಅಭಿವೃದ್ಧಿಪಡಿಸಿದೆ. ವೀರಶೈವ ಧರ್ಮದ ಚಟುವಟಿಕೆಗಳ ಕೇಂದ್ರವಾಗಿ ರೂಪುಗೊಂಡಿರುವ ಈ ಮಠವು, ಧಾರ್ಮಿಕ ಹಾಗೂ ಸಾಮಾಜಿಕವಾಗಿ ಹೆಚ್ಚು ಹೆಸರುಗಳಿಸಿದೆ.

ಪರಂಪರೆ:

೧. ಷ.ಬ್ರ.ಶ್ರೀ ಹಾವಗಿಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಬಸವಲಿಂಗ ದೇಶಿಕರು (ಸ್ಥಿರ)
೩. ಷ.ಬ್ರ.ಶ್ರೀ ನಾಗಮಾರಪ್ಪ ಶಿವಾಚಾರ್ಯಸ್ವಾಮಿಗಳು (ಚರ)

೪. ಷ.ಬ್ರ.ಶ್ರೀ ಶಾಂತವೀರ ಶಿವಾಚಾರ್ಯಸ್ವಾಮಿಗಳು

ಪುರಾತನ ಪರಂಪರೆಯ ಮಠದಲ್ಲಿ ಆಡಳಿತ ನಡೆಸಿದ ಗುರುಗಳ ಕೆಲವು ಹೆಸರನ್ನು ಇಲ್ಲಿ ದಾಖಲಿಸಲಾಗಿದೆ. ಇನ್ನೂ ಅನೇಕ ಮಠಾಧೀಶರುಗಳು ಧಾರ್ಮಿಕ ಕಾರ್ಯಗಳನ್ನು ನಡೆಸಿದ್ದರೂ ಅವರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಇಲ್ಲದೆ ಇರುವ ಕಾರಣಕ್ಕೆ, ಪರಂಪರೆಯ ಅನೇಕ ಗುರುಗಳ ಬಗ್ಗೆ ವಿವರಗಳನ್ನು ದಾಖಲಿಸಲಾಗುತ್ತಿಲ್ಲ. ಕರ್ತೃ ಗುರುಗಳಾದ ಶ್ರೀ ಹಾವಗಿ ಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು ಪವಾಡ ಪುರುಷರಾಗಿ, ಅನೇಕ ಪವಾಡಗಳನ್ನು ಮಾಡಿ ಭಕ್ತರನ್ನು ಉದ್ಧರಿಸಿದ್ದಾರೆ. ಒಮ್ಮೆ ಶ್ರೀ ರೇಣುಕಾಚಾರ್ಯರ ಪುರಾಣ ಮುಕ್ತಾಯದ ಸಮಯದಲ್ಲಿದ್ದಾಗ, ಹರಗುರು ಚರಮೂರ್ತಿಗಳು ಹಾಗೂ ಭಕ್ತ ಸಮೂಹ ದಾಸೋಹಕ್ಕೆ ಕುಳಿತಿರಲು ಬಾನಿನಲ್ಲಿ ಮೋಡ ಆವರಿಸಿ, ಮಳೆ ಸುರಿಯಲು ಪ್ರಾರಂಭಿಸಿತಂತೆ. ಆಗ ಗುರುಗಳು ತಮ್ಮ ಕೈಯಲ್ಲಿದ್ದ ಕೋಲನ್ನು ಆಕಾಶಕ್ಕೆ ತೋರಿಸಿ ಅನ್ನ ದಾಸೋಹ ನಡೆಯುತ್ತಿರುವ ಈ ಜಾಗದಲ್ಲಿ ಮಳೆಯನ್ನು ಸುರಿಸದಿರು ಎಂದು ಸೂಚನೆ ಕೊಟ್ಟರಂತೆ. ಆಗ ಸುತ್ತಲೂ ಮಳೆಯಾಗಿ ಅನ್ನದಾಸೋಹ ನಡೆಯುತ್ತಿದ್ದ ಜಾಗದಲ್ಲಿ ಒಂದು ಹನಿಮಳೆಯೂ ಬೀಳಲಿಲ್ಲವಂತೆ. ಅನೇಕ ಪವಾಡಗಳನ್ನು ಮಾಡಿ ಮಠವನ್ನು ಪ್ರಖ್ಯಾತಗೊಳಿಸಿದ್ದರು ಎಂದು ಹೇಳಲಾಗುತ್ತಿದೆ.

ಇವರ ನಂತರ ಅನೇಕ ಮಠಾಧೀಶರು ಧಾರ್ಮಿಕ ಕಾರ್ಯಗಳನ್ನೂ ನಡೆಸಿದ್ದರೂ ಅವರುಗಳ ಬಗ್ಗೆ ಮಾಹಿತಿ ಲಭ್ಯವಿಲ್ಲ. ಶ್ರೀ ಬಸವಲಿಂಗದೇಶಿಕರು ಸ್ಥಿರ ಪಟ್ಟಾಧಿಕಾರಿಗಳಾಗಿ, ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿದ್ದರು. ಇದೇ ಕಾಲದಲ್ಲಿ ಚರ ಪಟ್ಟಾಧ್ಯಕ್ಷರಾಗಿದ್ದ ಶ್ರೀ ನಾಗಮರಪ್ಪ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿದ್ದರು. ಈಗ ಮಠಾಧ್ಯಕ್ಷರಾಗಿರುವ ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳು, ಬಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಕನ್ನೊಳ್ಳಿ ಗ್ರಾಮದ ಶ್ರೀ ಗಿರಿಮಲ್ಲಯ್ಯ ಮತ್ತು ಶ್ರೀಮತಿ ಶಾರದಬಾಯಿಯವರ ಪುತ್ರರಾಗಿ ಜನಿಸಿದರು. ಇವರು ಕನ್ನೊಳ್ಳಿ, ಶಿವಯೋಗಮಂದಿರ ಮತ್ತು ಶಹಪುರದಲ್ಲಿ ವಿದ್ಯಾಭ್ಯಾಸ ಮಾಡಿ, ೧೯೬೭ರ ಏಪ್ರಿಲ್ ಒಂಬತ್ತರಂದು ಹಿರೇಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಗುರುಗಳು ನಾಡಿನ ನಾನಾ ಭಾಗಗಳಲ್ಲಿ ಪುರಾಣ ಪ್ರವಚನವನ್ನು ಮಾಡಿ ವೀರಶೈವ ಧರ್ಮವನ್ನು ಬೆಳೆಸಿದ್ದಾರೆ. ಮಠದ ದ್ವಾರಬಾಗಿಲಿಗೆ ದ್ವಾರಮಂಟಪವನ್ನು ನಿರ್ಮಿಸಿ, ಅದರ ಮೇಲೆ ಶ್ರೀ ರೇಣುಕಾಚಾರ್ಯರ ಹಾಗೂ ಶ್ರೀ ಹಾವಗಿ ಲಿಂಗೇಶ್ವರರ ಮೂರ್ತಿಗಳ ಮಧ್ಯೆ ಶ್ರೀ ಬಸವೇಶ್ವರ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಪುರಾತನ ಪರಂಪರೆಯ ಈ ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯ ಪೂಜೆ, ಅಮಾವಾಸ್ಯೆ ಮತ್ತು ಹುಣ್ಣಿಮೆಯಲ್ಲಿ ವಿಶೇಷ ಪೂಜೆ, ವೈಶಾಖ ಶುದ್ಧ ಪಂಚಮಿಯಲ್ಲಿ ಜಾತ್ರಾ ಮಹೋತ್ಸವ ನಡೆಯುತ್ತಿದೆ. ಈ ಸಂದರ್ಭದಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಗಡಿಗೌಡಗಾಂವ್,ಬಸವಕಲ್ಯಾಣ ತಾ, ಬೀದರ್‌ಜಿಲ್ಲೆ.

ಬಸವಕಲ್ಯಾಣ

ತಾಲ್ಲೂಕಿನ ಕೇಂದ್ರ ಸ್ಥಳವಾದ ಬಸವಕಲ್ಯಾಣ ವೀರಶೈವರ ಪವಿತ್ರ ಕ್ಷೇತ್ರವಾಗಿದೆ. ಹನ್ನೆರಡನೆಯ ಶತಮಾನದಲ್ಲಿ ಸ್ಥಾಪನೆಯಾದ ಅನುಭವ ಮಂಟಪ ನಾಡಿನ ಸಂಸ್ಕೃತಿಗೆ ಭದ್ರ ಬುನಾದಿಯನ್ನು ಹಾಕಿಕೊಟ್ಟಿದೆ. ಇಂತಹ ಇತಿಹಾಸ ಪ್ರಸಿದ್ಧ ಪಟ್ಟಣದಲ್ಲಿ ಬಸವಣ್ಣನವರ ಕಾಲದಲ್ಲಿ ಮನೆಗಳೆಲ್ಲಾ ಮಠಗಳಾಗಿದ್ದವೆಂದು ಹೇಳಲಾಗುತ್ತದೆ. ಅಂದು ಬಸವಕಲ್ಯಾಣದಲ್ಲಿ ಏಳುನೂರಎಪ್ಪತ್ತು ಮಠಗಳು ಸ್ಥಾಪನೆಯಾಗಿದ್ದವು. ಈಗ ಶ್ರೀ ಕಂಬಳಿಮಠ, ಶ್ರೀ ಕಣಗಿಲುಮಠ, ಶ್ರೀ ಕಟ್ಟಿಗಿಮಠ, ಶ್ರೀ ಕಳ್ಳಿಮಠ, ಶ್ರೀ ಹುಲಕುಂಠಿಮಠ, ಶ್ರೀ ಗದ್ದಿಗೆಮಠ, ಶ್ರೀ ದಾಸೋಹಮಠ, ಶ್ರೀ ಮಹಾಂತಮಠ, ಶ್ರೀ ಬಸವರಾಜದೇವರಮಠ, ಶ್ರೀ ಉರಿಲಿಂಗಪೆದ್ದಿಮಠ, ಶ್ರೀ ಜೇಡರ ದಾಸಿಮಯ್ಯಮಠ... ಹೀಗೆ ಹನ್ನೊಂದು ಮಠಗಳು ನೋಡಲು ಸಿಗುತ್ತವೆ. ಶರಣರ ಅನುಭವ ಮಂಟಪವಾಗಿದ್ದ ಮಹಾಮನೆಯು ಇಂದು ಪ್ರಾಧಿಕಾರದ ವತಿಯಿಂದ ಪುನರ್ ನಿರ್ಮಾಣಗೊಳ್ಳುತ್ತಿದೆ.

ಬಟಗೇರ

ಬಸವಕಲ್ಯಾಣ ತಾಲ್ಲೂಕಿನ ಬಟಗೇರ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಮೂವತ್ತೈದು ಕಿ.ಮೀ ದೂರದ

ಲ್ಲಿದೆ. ಇಲ್ಲಿ ಶ್ರೀ ಗೋಣಿರುದ್ರೇಶ್ವರ ಮಠವು ಅಸ್ತಿತ್ವದಲ್ಲಿದೆ.

ಗೋಣಿರುದ್ರೇಶ್ವರಮಠ: ಬಟಗೇರ ಗ್ರಾಮದ ದಕ್ಷಿಣದ ಹೊರಭಾಗದಲ್ಲಿ, ಶ್ರೀ ಗೋಣಿರುದ್ರೇಶ್ವರರು ಸ್ಥಾಪಿಸಿದ ಶ್ರೀ ಗೋಣಿರುದ್ರೇಶ್ವರ ಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದ ಈ ಮಠವು ವೀರಶೈವ ಧರ್ಮವನ್ನು ಪ್ರಚಾರಗೊಳಿಸುವಲ್ಲಿ ತನ್ನದೇ ಆದಂತಹ ಕಾಣಿಕೆಯನ್ನು ನೀಡಿದೆ. ಈ ಮಠದ ಕರ್ತೃಗುರುಗಳಾದ ಶ್ರೀ ರುದ್ರೇಶ್ವರ ಸ್ವಾಮಿಗಳು ಅನೇಕ ಪವಾಡಗಳನ್ನು ಮಾಡಿ, ಭಕ್ತರನ್ನು ಉದ್ಧರಿಸಿದ್ದರು ಎಂದು ಹೇಳಲಾಗುತ್ತಿದೆ. ಗುರುಗಳು ಲೋಕಸಂಚಾರ ಕೈಗೊಂಡು ಅನೇಕ ಕ್ಷೇತ್ರಗಳಲ್ಲಿ ನೆಲೆಸಿ, ಧರ್ಮೋಪದೇಶವನ್ನು ಮಾಡಿ ಬಟಗೇರ ಗ್ರಾಮಕ್ಕೆ ಬಂದು ನೆಲೆಸಿದರು. ಗುರುಗಳ ತಪೋಶಕ್ತಿಗೆ ಶರಣಾದ ಭಕ್ತರು ಗುರುಗಳಿಗೆ ಇಲ್ಲಿ ಮಠವನ್ನು ಕಟ್ಟಿಸಿದರು. ಪುರಾತನ ಕಾಲದ ಕಲ್ಲಿನಕಟ್ಟಡ ವಿಶಾಲವಾಗಿ ರೂಪುಗೊಂಡಿದೆ. ಮಠದ ಕಟ್ಟಡದ ಬಲಭಾಗದಲ್ಲಿ ಕಲ್ಲಿನ ಬಾವಿ ನಿರ್ಮಾಣಗೊಂಡಿದೆ. ಈ ಕಟ್ಟಡವು ಮಠದ ವೈಭವವನ್ನು ಬಿಂಬಿಸುತ್ತಿದೆ.

ಪರಂಪರೆ:

೧. ಶ್ರೀ ಗೋಣಿರುದ್ರೇಶ್ವರಸ್ವಾಮಿಗಳು
೨. ಶ್ರೀ ಶಾಂತಲಿಂಗೇಶ್ವರಸ್ವಾಮಿಗಳು
೩. ಶ್ರೀ ಗೋಣಿರುದ್ರದೇವರು

ಪುರಾತನ ಪರಂಪರೆ ಮಠದ ಕೆಲವು ಮಠಾಧೀಶರುಗಳ ಹೆಸರುಗಳು ದಾಖಲಾಗಿವೆ. ಇನ್ನೂ ಅನೇಕ ಗುರುಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿದ್ದರು ಎಂದು ಹೇಳಲಾದರೂ, ನಿಖರವಾದ ಆಧಾರಗಳು ಇಲ್ಲದೆ ಇರುವ ಕಾರಣ, ಮಠದ ಪರಂಪರೆಯನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ. ಶ್ರೀ ಶಾಂತಲಿಂಗೇಶ್ವರ ಸ್ವಾಮಿಗಳು ಮಠದ ಆಡಳಿತವನ್ನು ನೋಡಿಕೊಂಡು ಈ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಗುರುಗಳು ಶಿವಪೂಜಾನಿಷ್ಠರಾಗಿ, ಧರ್ಮೋಪ ದೇಶವನ್ನು ನೀಡುವ ಮೂಲಕ ವೀರಶೈವ ಧರ್ಮವನ್ನು ಬೆಳೆಸಿದ್ದಾರೆ. ಇವರು ಲಿಂಗೈಕ್ಯರಾದ ಮೇಲೆ ಉತ್ತರಾಧಿಕಾರಿಗಳಾಗಿ ಶ್ರೀ ಗೋಣಿರುದ್ರ ದೇವರು ೧೯೮೫ರಲ್ಲಿ ನೇಮಕಗೊಂಡಿದ್ದಾರೆ. ಗುರುಗಳು ಶಿರಗೂರು ಗ್ರಾಮದ ಶ್ರೀ ಪಂಡಿತಾರಾಧ್ಯ ಮತ್ತು ಶ್ರೀಮತಿ ರುಕ್ಮಿಣಿ ಬಾಯಿಯವರ ಪುತ್ರರಾಗಿ ಜನಿಸಿದರು. ಇವರು ಶಿರಗೂರು ಗ್ರಾಮದಲ್ಲಿ ವಿದ್ಯಾಭ್ಯಾಸ ಮಾಡಿ, ಶಿವಯೋಗ ಮಂದಿರದಲ್ಲಿ ಧಾರ್ಮಿಕ ವಿದ್ಯೆಯನ್ನು ಕಲಿತು, ಮಠಕ್ಕೆ ಆಗಮಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಮೂರು ಗದ್ದುಗೆಗಳು ಸ್ಥಾಪನೆಗೊಂಡಿವೆ. ಈ ಗದ್ದುಗೆಗಳಿಗೆ ನಿತ್ಯಪೂಜೆ, ಅಮಾವಾಸ್ಯೆಯಲ್ಲಿ ಭಜನೆ, ಶಿವರಾತ್ರಿಯಿಂದ ಐದು ದಿನ ಶ್ರೀ ಗೋಣಿರುದ್ರೇಶ್ವರ ಜಾತ್ರೆಯು ನಡೆಯುತ್ತಿದೆ. ಈ ಸಂದರ್ಭ ದಲ್ಲಿ ಅನ್ನ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.

ವಿಳಾಸ: ಶ್ರೀ ಗೋಣಿರುದ್ರ ದೇವರು, ಶ್ರೀ ಗೋಣಿರುದ್ರೇಶ್ವರ ಮಠ, ಬಟಗೇರ, ಬಸವಕಲ್ಯಾಣ ತಾಲ್ಲೂಕು, ಬೀದರ್ ಜಿಲ್ಲೆ.

ಬೇಲೂರು

ಬಸವಕಲ್ಯಾಣ ತಾಲ್ಲೂಕಿನ ಬೇಲೂರು ಗ್ರಾಮವು, ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಬೇಲೂರು ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು, ಪುರಾತನ ಕಾಲದಿಂದ ಅಸ್ತಿತ್ವ ದಲ್ಲಿದ್ದು ವೀರಶೈವಧರ್ಮವನ್ನು ಬೆಳೆಸಿದೆ. ಮಠವನ್ನು ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು ಸ್ಥಾಪಿಸಿ ದರೆಂದು ಹೇಳಲಾಗುತ್ತದೆ. ಇವರು ಬಹಳ ಪ್ರಭಾವಿಗಳಾಗಿ ಮಠವನ್ನು ಬೆಳೆಸಿದ್ದಾರೆ. ಇವರ ನಂತರ ಬೆಳೆದ ಪರಂಪರೆಯು ಕರ್ತೃ ಗುರುಗಳ ಹೆಸರನ್ನೇ ಅಭಿಧಾನ ಪಡೆದು ಅಧಿಕಾರಕ್ಕೆ ಬರತೊಡಗಿದೆ. ಈಗ ಅಧಿಕಾರದಲ್ಲಿರುವ ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಅಭಿವೃದ್ಧಿ ಪಡಿಸಿ, ಧಾರ್ಮಿಕ ಕಾರ್ಯಗಳ ಜತೆಗೆ ಸಾಮಾಜಿಕ ಕಾರ್ಯಗಳನ್ನು ಹಮ್ಮಿಕೊಂಡು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ,ಬೇಲೂರು, ಬಸವಕಲ್ಯಾಣ ತಾ. ಬೀದರ್ ಜಿಲ್ಲೆ.

ಮಂಠಾಳ

ಬಸವಕಲ್ಯಾಣ ತಾಲ್ಲೂಕಿನ ಮಂಠಾಳ ಗ್ರಾಮವು ತಾಲ್ಲೂಕು ಕೇಂದ್ರದಿಂದ ಮೂವತ್ತೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಗುಹೇಶ್ವರ ಮಠವು ಅಸ್ತಿತ್ವದಲ್ಲಿದೆ.

ಗುಹೇಶ್ವರಮಠ: ಮಂಠಾಳ ಗ್ರಾಮದಲ್ಲಿ ಶ್ರೀ ಗುಹೇಶ್ವರಮಠವು ಸ್ಥಾಪನೆಯಾಗಿದೆ. ಹನ್ನೆರಡನೆಯ ಶತಮಾನದಲ್ಲಿ ಸ್ಥಾಪನೆಯಾಗಿರಬಹುದೆಂದು ಹೇಳಲಾಗುವ ಈ ಮಠದಲ್ಲಿ ಅನೇಕ ಗುರುಗಳು ಅಧಿಕಾರ ನಡೆಸಿ, ಮಠವನ್ನು ಅಭಿವೃದ್ಧಿ ಪಡಿಸಿದ್ದಾರೆ. ಈಗ ಶ್ರೀ ಗುಹೇಶ್ವರ ಸ್ವಾಮಿಗಳು ಅಧಿಕಾರದಲ್ಲಿದ್ದಾರೆ.

ವಿಳಾಸ: ಶ್ರೀ ಗುಹೇಶ್ವರ ಸ್ವಾಮಿಗಳು, ಶ್ರೀ ಗುಹೇಶ್ವರಮಠ, ಮಂಠಾಳ, ಬಸವಕಲ್ಯಾಣ ತಾಲ್ಲೂಕು, ಬೀದರ್ ಜಿಲ್ಲೆ.

ರಾಜೇಶ್ವರ

ಬಸವಕಲ್ಯಾಣ ತಾಲ್ಲೂಕಿನ ರಾಜೇಶ್ವರ ಗ್ರಾಮವು ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಹದಿಮೂರು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ರಾಜೇಶ್ವರ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು, ರಂಭಾಪುರಿಪೀಠದ ಶಾಖಾಮಠವಾಗಿ ಬೆಳೆದಿದೆ. ಪುರಾತನ ಕಾಲದಲ್ಲಿ ಸ್ಥಾಪನೆಯಾಗಿದ್ದ ಈ ಮಠವು ಅನೇಕ ವರ್ಷಗಳ ಕಾಲ ಮಠಾಧೀಶರಿಲ್ಲದೆ ಖಾಲಿ ಉಳಿದಿತ್ತು. ಶ್ರೀಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ೧೯೯೯ರಲ್ಲಿ ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಪುತ್ರವರ್ಗದ ಪರಂಪರೆಯಲ್ಲಿ ಬೆಳೆದ ಈ ಮಠವು, ಧಾರ್ಮಿಕ ಕಾರ್ಯಗಳನ್ನು ಮಾಡುವ ಮೂಲಕ ಹೆಸರುಗಳಿಸಿದೆ.

ವಿಳಾಸ: ಷ.ಬ್ರ.ಶ್ರೀ ಘನಲಿಂಗರುದ್ರಮುನಿ ಶಿವಾಚಾರ್ಯಸ್ವಾಮಿಗಳು, ಶ್ರೀಹಿರೇಮಠ, ರಾಜೇಶ್ವರ,ಬಸವಕಲ್ಯಾಣ ತಾ, ಬೀದರ್‌ಜಿಲ್ಲೆ.

ಹಾರಕೂಡ

ಬಸವಕಲ್ಯಾಣ ತಾಲ್ಲೂಕಿನ ಹಾರಕೂಡ ಗ್ರಾಮವು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಹರ (ಶಿರ)ನು ಕೂಡು (ನೆಲೆಸು)ವ ಸ್ಥಳವೆಂದು, ಈ ಕಾರಣಕ್ಕೆ ಹಾರಕೂಡ ಎಂಬ ಹೆಸರು ಬಂದಿದೆ ಎಂದು ಜನಪದ ಐತಿಹ್ಯದಿಂದ ತಿಳಿಯುತ್ತಿದೆ.ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದ್ದು, ಧಾರ್ಮಿಕ ಹಾಗೂ ಶೈಕ್ಷಣಿಕ ಸಾಧನೆಯನ್ನು ಸಾಧಿಸಿದೆ.

ಹಿರೇಮಠ: ಹಾರಕೂಡ ಗ್ರಾಮದ ಮಧ್ಯೆ ಇರುವ ಹಿರೇಮಠವನ್ನು ಶ್ರೀ ಸಂಗನಬಸವ ಶಿವಾಚಾರ್ಯ ಸ್ವಾಮಿಗಳು ಸ್ಥಾಪಿಸಿದರೆಂದು ಹೇಳಲಾಗುತ್ತಿದೆ. ಆದರೆ ಈ ಹೇಳಿಕೆಗೆ ಯಾವುದೇ ಐತಿಹಾಸಿಕ ದಾಖಲೆಗಳು ಲಭ್ಯವಿಲ್ಲ. ಧಾರ್ಮಿಕ ಉಪದೇಶ ಹಾಗೂ ಅನ್ನದಾಸೋಹ ನಿರಂತರವಾಗಿ ನಡೆಯುತ್ತಾ, ದಾಸೋಹಮಠವಾಗಿ ಹೆಚ್ಚುಹೆಸರು ಪಡೆದಿದೆ. ಪ್ರಗತಿಪರ ಧೋರಣೆಗಳು ಹಾಗೂ ಜಾತ್ಯಾತೀತ ಮನೋ ಭಾವನೆಯಿಂದ ಕಾರ್ಯನಿರ್ವಹಿಸುತ್ತಿರುವ ಈ ಮಠವು ಸರ್ವಧರ್ಮ ಸಮನ್ವಯ ಕ್ಷೇತ್ರವಾಗಿ ಬೆಳೆದಿದೆ.

ಪರಂಪರೆ:

೧. ಷ.ಬ್ರ.ಶ್ರೀ ಸಂಗನಬಸವ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಎರಡನೆಯ ಸಂಗನಬಸವ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಸ್ಥಾಪಕ ಗುರುಗಳಿಂದ ಪರಂಪರೆಯ ಐದನೆಯ ಗುರುಗಳ ತನಕ ಅಧಿಕಾರ ನಡೆಸಿದ ಮಠಾಧೀಶರ ಬಗ್ಗೆ ಹೆಚ್ಚು ಮಾಹಿತಿ ಲಭ್ಯವಿಲ್ಲ. ಪರಂಪರೆಯ ಆರನೆಯ ಗುರುಗಳಾದ ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ಪವಾಡ ಪುರುಷರಾಗಿ, ಮಹಾ ತಪಸ್ವಿಗಳಾಗಿ ಹೆಚ್ಚು ಹೆಸರು ಗಳಿಸಿದ್ದರು. ಇವರು ನಡೆಸುತ್ತಿದ್ದ ಶಿವಪೂಜೆ ಹೆಚ್ಚು ಹೆಸರು ಮಾಡಿತ್ತು. ಗುರುಗಳು ಶರಣರ ನಾಡಿನಲ್ಲಿ ಆಚಾರ್ಯರ ಹಾಗೂ ಶರಣರ ತತ್ತ್ವಗಳನ್ನು ಬೋಧಿಸಿ ಲೋಕೋದ್ಧಾರವನ್ನು ಮಾಡಿದ್ದರು. ಗುರುಗಳು ಲೋಕಕಲ್ಯಾಣಾರ್ಥ ಸಂಚಾರ ಕೈಗೊಂಡು ಅನೇಕ ಪವಾಡಗಳನ್ನು ಮಾಡಿದ್ದಾರೆ. ಅಲ್ಲದೆ ಅಕ್ಷರಕುಕ್ಷಿ ಭಕ್ತರಿಗೆ ಧರ್ಮೋಪದೇಶವನ್ನು ಮಾಡಿ, ಸಂಸ್ಕಾರವಂತರನ್ನಾಗಿ ಮಾಡಿ, ಕಾಯಕ ಯೋಗದ ಬಗ್ಗೆ ಸರಿಯಾದ ಕಲ್ಪನೆಯನ್ನು ಮೂಡಿಸಿ, ಸಮಾಜದ ಅಭಿವೃದ್ಧಿಯ ಜತೆಗೆ ಭಕ್ತರು ಆತ್ಮೋನ್ನತಿಯನ್ನು ಕಂಡುಕೊಳ್ಳುವಂತೆ ಮಾಡಿದ್ದರು. ಇವರ ಕಾಲದಲ್ಲಿ ಮಠವು ಪ್ರಖ್ಯಾತಗೊಂಡಿತು.

ಭಕ್ತರ ಉದ್ಧಾರವನ್ನು ಬಯಸಿದ ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳನ್ನು ಈ ಭಾಗದ ಭಕ್ತರು ಅಪಾರವಾಗಿ ಗೌರವಿಸಿ, ಪೂಜ್ಯತೆಯಿಂದ ಕಾಣುತ್ತಿದ್ದರು.ಅಲ್ಲದೆ ಗುರುಗಳು ಬೋಧಿಸಿದ ಬೋಧನೆಯನ್ನು ಕಾಯಾ,ವಾಚಾ,ಮನಸಾ ಪರಿಪಾಲಿಸಿ ಸಂಸ್ಕಾರವಂತರಾಗಿ ಬದುಕತೊಡಗಿದರು. ಇವರ ಕಾಲದಲ್ಲಿ ಮಠವು ಸಮಾಜದ ಒಂದು ಅಂಗವಾಗಿ ಬೆಳೆದು, ಜನಮನದಲ್ಲಿ ಬೇರೂರಿತು. ನಂತರ ಶ್ರೀ ರೇವಣಸಿದ್ಧಯ್ಯ ಮತ್ತು ಶ್ರೀಮತಿ ಶಂಕರಮ್ಮನವರ ಪುತ್ರರಾಗಿ ೧೯೪೭ರಲ್ಲಿ ಜನಿಸಿದ, ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದರು.ಇವರು ಮಠವನ್ನು ಅಭಿವೃದ್ಧಿಪಡಿಸಿ, ಹಿಂದಿನ ಗುರುಗಳು ಮಾಡಿದ ಸಾಧನೆಯನ್ನು ಉಳಿಸಿ ಬೆಳೆಸುವಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸಿದ್ದಾರೆ. ಮಠದ ಉತ್ತರಾಧಿಕಾರಿಗಳನ್ನಾಗಿ ಶ್ರೀಚನ್ನವೀರ ದೇವರನ್ನು ನೇಮಕಮಾಡಿದ ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು ೧೯೭೯ರಲ್ಲಿ ಲಿಂಗೈಕ್ಯರಾದರು.

ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು, ಹಾರಕೂಡದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಮುಗಿಸಿ, ಗುಲ್ಬರ್ಗ ಮತ್ತು ಹುಬ್ಬಳ್ಳಿಯಲ್ಲಿ ಅಧ್ಯಯನಮಾಡಿ ಪದವಿಯನ್ನು ಗಳಿಸಿಕೊಂಡರು. ಹುಬ್ಬಳ್ಳಿ ಮೂರುಸಾವಿರ ಮಠದಲ್ಲಿ ನೆಲೆಸಿದ್ದ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಮೂರುಸಾವಿರ ಮಠದ ಹಿರಿಯ ಗುರುಗಳಾದ ಡಾ.ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳ ಆತ್ಮೀಯ ಶಿಷ್ಯರಾಗಿ ಬೆಳೆದರು. ಹಿರಿಯ ಗುರುಗಳ ಸಾಮೀಪ್ಯದ ಒಡನಾಟದಿಂದ ಪ್ರೌಢಚಿಂತನೆಗಳನ್ನು ಮೈಗೂಡಿಸಿಕೊಂಡು, ಪ್ರತಿಭಾವಂತರಾಗಿ ಬೆಳೆದರು. ಧಾರವಾಡದಲ್ಲಿ ಸ್ನಾತಕೋತ್ತರ ಪದವಿಯನ್ನು ಮುಗಿಸಿ, ಮಠದ ಅಧಿಕಾರವನ್ನು ವಹಿಸಿಕೊಂಡರು. ವಿದ್ಯಾ ಸಂಪನ್ನರಾದ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಸಾಮಾಜಿಕ ಕ್ಷೇತ್ರವನ್ನು ಧಾರ್ಮಿಕ ತಳಹದಿಯ ಮೇಲೆ ಅಭಿವೃದ್ಧಿಪಡಿಸಲು ಮುಂದಾಗಿದ್ದಾರೆ. ಗುರುಗಳು ಸರಳತೆ, ಸದಾಚಾರ, ಸಂಪನ್ನತೆಯನ್ನು ಮೈಗೂಡಿಸಿಕೊಂಡು ಮಠದ ಪರಂಪರೆಯ ಹಿಂದಿನ ಗುರುಗಳು ಕೈಗೊಂಡ ಕಾರ್ಯದಂತೆ ಧಾರ್ಮಿಕ ಪ್ರಸಾರವನ್ನು ಕೈಗೊಂಡು, ಆಚಾರ್ಯರ ಮತ್ತು ಶರಣರ ತತ್ತ್ವಗಳನ್ನು ಮನೆಮನೆಗೆ ತಲುಪಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಅಭಿವೃದ್ಧಿ, ಶಿವಾನುಭವಗೋಷ್ಠಿ, ಗ್ರಂಥ ಪ್ರಕಟಣೆ, ಸಂಗೀತ, ಕಲೆ ಮತ್ತು ಕ್ರೀಡೆಗಳಿಗೆ ಪ್ರೋತ್ಸಾಹ ಈ ರೀತಿ ಹತ್ತು ಹಲವು ಯೋಜನೆಗಳನ್ನು ಹಮ್ಮಿಕೊಂಡು ಅರ್ಪಣಾ ಮನೋಭಾವನೆಯಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಮಠದ ಆವರಣದಲ್ಲಿರುವ ಪರಂಪರೆಯ ಗುರುಗಳ ನಾಲ್ಕು ಗದ್ದುಗೆಗಳಿಗೆ ನಿತ್ಯ ಪೂಜೆ, ಅಮಾವಾಸ್ಯೆ ಮತ್ತು ಹುಣ್ಣಿಮೆಯಲ್ಲಿ ವಿಶೇಷ ಪೂಜೆ, ಶಿವಾನುಭವ ಗೋಷ್ಠಿಗಳನ್ನು ನಡೆಸಲಾಗುತ್ತಿದೆ. ಪ್ರತಿವರ್ಷ ವಿಜಯ ದಶಮಿಯಂದು ಹಿರಿಯ ಗುರುಗಳಾದ ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆ ಹಾಗೂ ಪುಷ್ಯ ಶುದ್ಧ ಪಂಚಮಿಯಿಂದ ಸಪ್ತಮಿಯವರೆಗೆ ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭಗಳಲ್ಲಿ ಧರ್ಮಸಭೆಯನ್ನು ನಡೆಸಿ, ವಿದ್ವಾಂಸರು ಹಾಗೂ ವಿವಿಧ ಮಠಾಧೀಶರನ್ನು ಕರೆಸಿ ಉಪನ್ಯಾಸ ಮತ್ತು ಉಪದೇಶವನ್ನು ಮಾಡಿಸಿ ಭಕ್ತರ ಅರಿವನ್ನು ಹೆಚ್ಚಿಸುತ್ತಿದ್ದಾರೆ.

ಶಾಖಾ ಮಠಗಳು: ಮಠವು ನಾಡಿನ ನಾನಾ ಭಾಗಗಳಲ್ಲಿ ತನ್ನ ಶಾಖೆಗಳನ್ನು ಹೊಂದಿದೆ. ಬಸವಕಲ್ಯಾಣ ತಾಲ್ಲೂಕಿನ

ಗದಲೆಗಾಂವ್, ಸರಜೋಳಗ, ಹುಮನಾಬಾದ್ ತಾಲ್ಲೂಕಿನ ದುಬಲಗುಂಡಿ, ಸೇಡೋಳ, ಗುಲ್ಬರ್ಗ ಜಿಲ್ಲೆಯ ಚಿಂಚೋಳ್ಳಿ, ಮಹಾರಾಷ್ಟ್ರದ ಉಸ್ಮಾನಬಾದ್ ಜಿಲ್ಲೆಯ ಉಮರ್ಗಾ ತಾಲ್ಲೂಕಿನ ತುರೂರಿ, ಆಂಧ್ರಪ್ರದೇಶದ ರಂಗಾರೆಡ್ಡಿ ಜಿಲ್ಲೆಯ ತಾಂಡೂರ ತಾಲ್ಲೂಕಿನ ಜೀವಣಗಿ ಈ ರೀತಿ ಕರ್ನಾಟಕ, ಆಂಧ್ರ ಮತ್ತು ಮಹಾರಾಷ್ಟ್ರಗಳಲ್ಲಿ ಶಾಖಾ ಮಠಗಳನ್ನು ಹೊಂದಿದೆ. ಈ ಶಾಖಾ ಮಠಗಳಲ್ಲಿ ನಿತ್ಯ ಪೂಜಾ ವ್ಯವಸ್ಥೆ ಮತ್ತು ಧಾರ್ಮಿಕ ಆಚರಣೆಗಳನ್ನು ನಡೆಸುವ ಮೂಲಕ, ರಚನಾತ್ಮಕ ಕಾರ್ಯಕ್ರಮಗಳು ನಡೆಯುವಂತೆ ವ್ಯವಸ್ಥೆ ಮಾಡಿದೆ.

ಸಾಮಾಜಿಕ ಕಾರ್ಯಗಳು: ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಧಾರ್ಮಿಕ ಕಾರ್ಯಗಳ ಜತೆಗೆ ಸಾಮಾಜಿಕ ಅಭಿವೃದ್ಧಿಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಭಕ್ತರಿಗೆ ಕಾಯಕಯೋಗದ ಕಲ್ಪನೆಯನ್ನು ಮೂಡಿಸಿ,ಬಡತನದ ನಿರ್ಮೂಲನೆಗೆ ಕಾರಣಕರ್ತರಾಗಿದ್ದಾರೆ. ಅಲ್ಲದೆ ಜಾತಿ ಭೇದವನ್ನು ತೊಲಗಿಸಿ ಜಾತ್ಯಾತೀತ ಸಮಾಜವನ್ನು ನಿರ್ಮಿಸುವ ಉದ್ದೇಶಕ್ಕಾಗಿ ಆಚಾರ್ಯರ ಹಾಗೂ ಶರಣರ ತತ್ತ್ವಗಳನ್ನು ಮನೆಮನೆಗೆ ಮುಟ್ಟಿಸುತ್ತಿದ್ದಾರೆ. ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್‌ರವರ ಮೂರ್ತಿಯನ್ನು ಪ್ರತಿಷ್ಠಾಪಿಸಲು ಮಠದಲ್ಲಿಯೇ ಸ್ಥಳಾವಕಾಶವನ್ನು ನೀಡಿ, ದಲಿತರ ವಿಶ್ವಾಸಕ್ಕೆ ಒಳಗಾಗಿದ್ದಾರೆ. ನುಡಿದಂತೆ ನಡೆಯುವ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಸಮಾಜದ ಮುಖಿಯಾಗಿ ಬೆಳೆಸಿದ್ದಾರೆ.

ಶೈಕ್ಷಣಿಕ ಸೇವೆ: ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಶ್ರೀ ಚನ್ನಬಸವೇಶ್ವರ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ, ಭಾಲ್ಕಿಯಲ್ಲಿ ಶ್ರೀ ಜಗಜ್ಯೋತಿ ಬಸವೇಶ್ವರ ಪ್ರಾಥಮಿಕ ಶಾಲೆ,ಶ್ರೀ ಬಸವೇಶ್ವರ ಪ್ರೌಢಶಾಲೆ, ಚಿಂಚೋಳಿಯಲ್ಲಿ ಶ್ರೀ ಚನ್ನಬಸವ ಶಿಶುವಿಹಾರ ಮತ್ತು ಪ್ರಾಥಮಿಕ ಶಾಲೆ, ಹಾರಕೂಡದಲ್ಲಿ ಅನುಭಾವ ಪ್ರಚಾರೋಪನ್ಯಾಸ ಸಂಸ್ಥೆಯನ್ನು ಪ್ರಾರಂಭಿಸಿ ಗ್ರಾಮಾಂತರ ಮಕ್ಕಳ ಕಲಿಕೆಗೆ ನೆರವಾಗಿದ್ದಾರೆ.

ಸಾಹಿತ್ಯ ಸೇವೆ: ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಅನುಭಾವ ಪ್ರಚಾರೋಪನ್ಯಾಸ ಮಾಲೆಯನ್ನು ಸ್ಥಾಪಿಸಿದ್ದಾರೆ. ಸೃಜನಶೀಲ ಸಾಹಿತ್ಯದ ಬಗ್ಗೆ ವಿಚಾರ ಗೋಷ್ಠಿಗಳನ್ನು ಏರ್ಪಡಿಸಿ, ಗೋಷ್ಠಿಯಲ್ಲಿ ಮಂಡನೆಯಾಗುವ ಪ್ರಬಂಧಗಳನ್ನು ಸಂಗ್ರಹಿಸಿ, ವರ್ಷದಲ್ಲಿ ಎರಡು ಪುಸ್ತಕಗಳನ್ನು ಪ್ರಕಟಿಸುತ್ತಿದ್ದಾರೆ. ಹಾರಕೂಡ ಹಿರೇ ಮಠದ ಶ್ರೀ ಸದ್ಗುರು ಚನ್ನಬಸವ ಸ್ವಾಮಿಗಳ ಅಷ್ಟೋತ್ತರ ಶತನಾಮಾವಳಿ ಗ್ರಂಥವನ್ನು ಪ್ರಥಮವಾಗಿ ಪ್ರಕಟಿಸಲಾಗಿದೆ.

ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ಮತ್ತು ಅಂತರ, ಅನುಭವ ಮಂಟಪದಲ್ಲಿ ವೀರಶೈವ ಸಂಸ್ಕೃತಿ, ವಚನಸಾಹಿತ್ಯದಲ್ಲಿ ಜೀವನ ಮೌಲ್ಯಗಳು, ಶರಣರದಾಸೋಹ ಮತ್ತು ಕಾಯಕ, ಶರಣರ ವಚನದಲ್ಲಿ ಸಮಾಜ ಕಾರ್ಯದರ್ಶನ, ಪುಣ್ಯಚಿತ್ತರು ಹಾಗೂ ಶೂನ್ಯ ಸಂಪಾದನೆಯ ಮುಖಗಳು ಎಂಬ ಮೌಲಿಕ ಗ್ರಂಥಗಳ ಜತೆಗೆ ಅಂತರ ಎಂಬ ಸಣ್ಣಕಥೆಗಳ ಸಂಕಲನ, ಅನುಭಾವಿಯ ಆತ್ಮಕಥನ ಮುಂತಾದ ಇಪ್ಪತ್ತೈದಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿ, ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ. ಗುರುಗಳು ಉದಯೋನ್ಮುಖ ಸಾಹಿತಿಗಳಿಗೆ ನೆರವಾಗಿ ಪ್ರೋತ್ಸಾಹಿಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಹಾರಕೂಡ, ಬಸವಕಲ್ಯಾಣ ತಾ, ಬೀದರ್ ಜಿಲ್ಲೆ.

ಹಿರೇನಾಗಾಂವ್

ಬಸವಕಲ್ಯಾಣ ತಾಲ್ಲೂಕಿನ ಹಿರೇನಾಗಾಂವ್ ಗ್ರಾಮವು ತಾಲ್ಲೂಕು ಕೇಂದ್ರದಿಂದ ಇಪ್ಪತ್ತೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಹಿರೇನಾಗಾಂವ್ ಗ್ರಾಮದ ಮಧ್ಯಭಾಗದಲ್ಲಿರುವ ಶ್ರೀ ವಿರಕ್ತಮಠವು, ಶ್ರೀ ಶಾಂತಲಿಂಗೇಶ್ವರ ಸ್ವಾಮಿಗಳಿಂದ ಸ್ಥಾಪಿತಗೊಂಡಿದೆ. ಹನ್ನೆರಡನೆಯ ಶತಮಾನದ ಕಲ್ಯಾಣದ ಶರಣರಿಂದ ಪ್ರೇರಿತಗೊಂಡು ಶರಣ ತತ್ತ್ವಗಳನ್ನು ಪ್ರಚಾರಪಡಿಸಿ ವೀರಶೈವ ಧರ್ಮವನ್ನು ಬೆಳೆಸುವ ಏಕೈಕ ದೃಷ್ಟಿಯಿಂದ ಹುಟ್ಟಿಕೊಂಡ ಈ ಮಠವು, ಇಂದು ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ವಿಸ್ತಾರವಾಗಿ ಬೆಳೆದು ವೀರಶೈವ ಧರ್ಮವನ್ನು ಬೆಳೆಸಿದೆ.

ಪರಂಪರೆ: ೧. ಶ್ರೀ ಮ.ನಿ.ಪ್ರ. ಶಾಂತಲಿಂಗೇಶ್ವರಸ್ವಾಮಿಗಳು

೨. ಶ್ರೀ ಮ.ನಿ.ಪ್ರ. ಜಯಶಾಂತಲಿಂಗೇಶ್ವರಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಎರಡು ಜನ ಗುರುಗಳ ಹೆಸರನ್ನು ದಾಖಲಿಸಲಾಗಿದೆ. ಪರಂಪರೆಯಲ್ಲಿ ಅನೇಕ ಗುರುಗಳು ಅಧಿಕಾರ ನಡೆಸಿದ್ದರೂ, ಆ ಗುರುಗಳ ಕಾಲಮಾನ ಹಾಗೂ ಹೆಸರುಗಳನ್ನು ದಾಖಲಿಸದಿರುವುದರಿಂದ ಇಂದು ಮಠದ ಪರಂಪರೆಯನ್ನು ನಿಖರವಾಗಿ ಗುರುತಿಸಲು ಸಾಧ್ಯವಾಗುತ್ತಿಲ್ಲ. ಶ್ರೀ ಶಾಂತಲಿಂಗೇಶ್ವರ ಸ್ವಾಮಿಗಳ ಕರ್ತೃತ್ವ ಶಕ್ತಿಯಿಂದ ಬೆಳೆದ ಈ ಮಠವು, ಶ್ರೀ ಜಯಶಾಂತಲಿಂಗೇಶ್ವರ ಸ್ವಾಮಿಗಳ ಕಾಲದಲ್ಲಿ ಸಮಾಜದ ವಿವಿಧ ಕ್ಷೇತ್ರಗಳ ಅಭಿವೃದ್ಧಿಗೆ ಕಾರಣವಾಗಿ, ಶ್ರೀ ಜಯಶಾಂತ ಲಿಂಗೇಶ್ವರಸ್ವಾಮಿಗಳು ಹಾಸನ ಜಿಲ್ಲೆಯ ಅರಸೀಕರೆ ತಾಲ್ಲೂಕಿನ ಶಶಿವಾಳ ಗ್ರಾಮದ ಶ್ರೀ ಬಸವಲಿಂಗಯ್ಯ ಮತ್ತು ಶ್ರೀಮತಿ ನೀಲಮ್ಮನವರ ಪುತ್ರರಾಗಿ ೧೯೫೩ರಲ್ಲಿ ಜನಿಸಿದರು. ಇವರು ಶಶಿವಾಳದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಹುಬ್ಬಳ್ಳಿಯಲ್ಲಿ ಪದವಿ ಶಿಕ್ಷಣವನ್ನು ಮುಗಿಸಿ, ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ನಂತರ ಶಿವಯೋಗಮಂದಿರದಲ್ಲಿ ಯೋಗ ಮತ್ತು ಸಂಸ್ಕೃತವನ್ನು ಅಭ್ಯಾಸಮಾಡಿ ತಮ್ಮ ಪಾಂಡಿತ್ಯವನ್ನು ಹೆಚ್ಚಿಸಿಕೊಂಡು, ೧೯೯೧ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಗುರುಗಳು ಪಟ್ಟಾಧಿಕಾರಕ್ಕೆ ಬಂದ ಸಂದರ್ಭದಲ್ಲಿ ಶಿಥಿಲಗೊಂಡಿದ್ದ ಮಠದ ಕಟ್ಟಡವನ್ನು ನವೀಕರಿಸಿ, ಮಠವನ್ನು ಅಭಿವೃದ್ಧಿಪಡಿಸಿದರು. ಗುರುಗಳು ಶಿವಪೂಜಾ ನಿಷ್ಠರಾಗಿ, ಶಿವಯೋಗ ಸಾಧನೆಯಿಂದ ಮಠದಲ್ಲಿ ಧಾರ್ಮಿಕ ವಾತಾವರಣ ಶ್ರೀಮಂತಗೊಳ್ಳುವಂತೆ ಮಾಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದಲ್ಲಿ ಸ್ಥಾಪನೆಗೊಂಡಿರುವ ಗದ್ದುಗೆಗಳಿಗೆ ನಿತ್ಯಪೂಜೆ, ಶ್ರಾವಣ ಮಾಸದಲ್ಲಿ ವಿಶೇಷ ಧಾರ್ಮಿಕ ಆಚರಣೆಗಳು ಹಾಗೂ ಕೊನೆಯ ಸೋಮವಾರದಂದು ಶ್ರೀ ಶಾಂತೇಶ್ವರ ಜಾತ್ರೆಯನ್ನು ನಡೆಸಲಾಗುತ್ತಿದೆ. ಇದೇ ದಿನ ಅಂಬಾಬಾಯಿ ಜಾತ್ರೆಯನ್ನು ಸಹ ಆಚರಿಸಲಾಗುತ್ತಿದೆ. ಮಠದಲ್ಲಿ ಪ್ರತಿನಿತ್ಯ ಅನ್ನದಾಸೋಹವನ್ನು ನಡೆಸಲಾಗುತ್ತಿದೆ.

ಶೈಕ್ಷಣಿಕ ಕಾರ್ಯಗಳು: ಶ್ರೀ ಜಯಶಾಂತಲಿಂಗೇಶ್ವರ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಶ್ರೀ ಶಾಂತಲಿಂಗೇಶ್ವರ ಶಿಕ್ಷಣ ಸಂಸ್ಥೆಯಡಿಯಲ್ಲಿ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿ, ಗ್ರಾಮಾಂತರ ಮಕ್ಕಳಿಗೆ ಕಲಿಯುವ ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದಾರೆ. ಅಲ್ಲದೆ ಮಠದಲ್ಲಿ ಅನಾಥಾಶ್ರಮವನ್ನು ಸ್ಥಾಪಿಸಿ, ಬೀದಿಯ ಮಕ್ಕಳಿಗೆ ತಂಗುದಾಣವನ್ನು ಮಠದ ಆವರಣದಲ್ಲಿಯೇ ಸ್ಥಾಪಿಸಿ, ಅನಾಥ ಮಕ್ಕಳ ಕಲಿಕೆಗೆ ನೆರವಾಗಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಜಯಶಾಂತಲಿಂಗೇಶ್ವರ ಸ್ವಾಮಿಗಳು,ಶ್ರೀ ವಿರಕ್ತಮಠ, ಹಿರೇನಾಗಾಂವ್, ಬಸವಕಲ್ಯಾಣ ತಾ, ಬೀದರ್‌ಜಿಲ್ಲೆ.

ಹುಲಸೂರು

ಬಸವಕಲ್ಯಾಣ ತಾಲ್ಲೂಕಿನ ಹುಲಸೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಗುರುಬಸವೇಶ್ವರ ಸಂಸ್ಥಾನಮಠವು ಅಸ್ತಿತ್ವದಲ್ಲಿದ್ದು ಅತ್ಯಂತ ಹೆಚ್ಚು ಪ್ರಸಿದ್ಧಿ ಪಡೆದಿದೆ.

ಗುರುಬಸವೇಶ್ವರ ಸಂಸ್ಥಾನಮಠ: ಹುಲಸೂರು ಗ್ರಾಮದ ಮಧ್ಯಭಾಗದಲ್ಲಿರುವ ಶ್ರೀ ಗುರುಬಸವೇಶ್ವರ ಸಂಸ್ಥಾನಮಠವು, ಹನ್ನೆರಡನೆಯ ಶತಮಾನದಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಹನ್ನೆರಡನೆಯ ಶತಮಾನದಲ್ಲಿ ಅಲ್ಲಮಪ್ರಭುಗಳು ಈ ಗ್ರಾಮಕ್ಕೆ ಬಂದು ಗ್ರಾಮದ ಹೊರಭಾಗದಲ್ಲಿ ನೆಲೆಗೊಂಡು, ಮಠವನ್ನು ಸ್ಥಾಪಿಸಿದರೆಂದು ಹೇಳಲಾಗುತ್ತದೆ. ಅಂದು ಸ್ಥಾಪನೆಗೊಂಡ ಮಠವು ಶ್ರೀ ಚೌಕಿಮಠವೆಂಬ ಹೆಸರು ಪಡೆಯಿತು.

ಮಠದ ಪರಂಪರೆಯ ಗುರುಗಳಾದ ಶ್ರೀ ಗುರುಬಸವೇಶ್ವರರು ಈ ಚೌಕಿಮಠವನ್ನು ಗ್ರಾಮದ ಮಧ್ಯಭಾಗಕ್ಕೆ ಸ್ಥಳಾಂತರ ಮಾಡಿ ಅಭಿವೃದ್ಧಿಪಡಿಸಿದರು. ನಂತರ ಶ್ರೀ ಗುರುಬಸವೇಶ್ವರ ವಿರಕ್ತಮಠವೆಂದು ಹೆಸರು ಪಡೆಯಿತು. ಶ್ರೀಅಲ್ಲಮ ಪ್ರಭುಗಳಿಂದ ಸ್ಥಾಪನೆಗೊಂಡು ಪರಂಪರೆಯ ಗುರುಗಳಿಂದ ಅಭಿವೃದ್ಧಿಗೊಂಡ ಮಠವು ಈತನಕ ಬೆಳೆದು, ಧಾರ್ಮಿಕ ಆಚರಣೆಗಳನ್ನು ರಚನಾತ್ಮಕವಾಗಿ ನಡೆಸಿ ಪ್ರಖ್ಯಾತಗೊಂಡಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಪ್ರಭುದೇವರು
೨. ಶ್ರೀ ಮ.ನಿ.ಪ್ರ. ಚನ್ನಬಸವಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ತೋಂಟದಾರ್ಯಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಪಂಚಾಕ್ಷರಿಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಕಲ್ಯಾಣ ಮರಿಮಹಾಂತಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ನೀಲಕಂಠಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಪ್ರಭುಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ರೇವಣಸಿದ್ಧಸ್ವಾಮಿಗಳು
೯. ಶ್ರೀ ಮ.ನಿ.ಪ್ರ. ಚಿಂತಾಮಣಿಸ್ವಾಮಿಗಳು
೧೦. ಶ್ರೀ ಮ.ನಿ.ಪ್ರ. ಚನ್ನಮಲ್ಲಸ್ವಾಮಿಗಳು
೧೧. ಶ್ರೀ ಮ.ನಿ.ಪ್ರ. ಗುರುಬಸವಸ್ವಾಮಿಗಳು
೧೨. ಶ್ರೀ ಮ.ನಿ.ಪ್ರ. ಗುರುಪಾದಸ್ವಾಮಿಗಳು
೧೩. ಶ್ರೀ ಮ.ನಿ.ಪ್ರ. ಪಂಚಾಕ್ಷರಿಸ್ವಾಮಿಗಳು
೧೪. ಶ್ರೀ ಮ.ನಿ.ಪ್ರ. ಗುರುಲಿಂಗಸ್ವಾಮಿಗಳು
೧೫. ಶ್ರೀ ಮ.ನಿ.ಪ್ರ. ಚಂದ್ರಶೇಖರಸ್ವಾಮಿಗಳು
೧೬. ಶ್ರೀ ಮ.ನಿ.ಪ್ರ. ದೊಡ್ಡ ಗುರುಬಸವಸ್ವಾಮಿಗಳು
೧೭. ಶ್ರೀ ಮ.ನಿ.ಪ್ರ. ಪಂಚಾಕ್ಷರಿಸ್ವಾಮಿಗಳು
೧೮. ಶ್ರೀ ಮ.ನಿ.ಪ್ರ. ಗುರುಬಸವಸ್ವಾಮಿಗಳು
೧೯. ಶ್ರೀ ಮ.ನಿ.ಪ್ರ. ಬಸವಕುಮಾರಸ್ವಾಮಿಗಳು
೨೦. ಶ್ರೀ ಮ.ನಿ.ಪ್ರ. ಶಿವಾನಂದಸ್ವಾಮಿಗಳು

ಈ ರೀತಿ ಪುರಾತನ ಮಠದ ಪರಂಪರೆಯು ಬೆಳೆದು ಬಂದಿದೆ.ಮಠದ ಪರಂಪರೆಯ ಈಗಿನ ಮಠಾಧ್ಯಕ್ಷರಾದ ಶ್ರೀ ಶಿವಾನಂದ ಸ್ವಾಮಿಗಳು ಬಿಜಾಪುರ ಜಿಲ್ಲೆಯ ಮುಧೋಳು ತಾಲ್ಲೂಕಿನ ನಿಂಗಾಪುರದ ಶ್ರೀ ಗುರುಪಾದಯ್ಯ ಮತ್ತು ಶ್ರೀಮತಿ ಕಾಶಮ್ಮನವರ ಪುತ್ರರಾಗಿ ೧೯೫೨ರ ಡಿಸೆಂಬರ್ ಎರಡರಂದು ಜನಿಸಿದರು. ಇವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ನಿಂಗಾಪುರದಲ್ಲಿಯೇ ಮುಗಿಸಿ, ಶಿವಯೋಗ ಮಂದಿರದಲ್ಲಿ ಆಧ್ಯಾತ್ಮ ಮತ್ತು ಯೋಗದ ಬಗ್ಗೆ ಅಪಾರ ಪಾಂಡಿತ್ಯವನ್ನು ಪಡೆದರು. ನಂತರ ಹುಬ್ಬಳ್ಳಿ ಮೂರುಸಾವಿರ ಮಠದಲ್ಲಿ ನೆಲೆಸಿ, ಸಂಸ್ಕೃತವನ್ನು ಅಧ್ಯಯನ ಮಾಡಿದರು. ಇವರ ಪಾಂಡಿತ್ಯವನ್ನು ಗುರುತಿಸಿದ ಹುಲಸೂರು ಮಠದ ಹಿರಿಯ ಗುರುಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಕಮಾಡಿಕೊಂಡರು. ಶ್ರೀ ಶಿವಾನಂದಸ್ವಾಮಿಗಳು ಶರಣರತತ್ವಗಳನ್ನು ಅನುಷ್ಠಾನಕ್ಕೆ ತರುತ್ತಾ, ವೀರಶೈವಧರ್ಮವನ್ನು ಬೆಳೆಸಿದ್ದಾರೆ.ಗುರುಗಳು ಶರಣ ತತ್ವದ ಪ್ರಚಾರಕ್ಕಾಗಿ ಅಮೇರಿಕ, ಕೆನಡಾ, ಇಂಗ್ಲೆಂಡ್, ಫ್ರಾನ್ಸ್, ಇಟಲಿ ಮುಂತಾದ ಐರೋಪ್ಯ ರಾಷ್ಟ್ರಗಳಲ್ಲಿ ಸಂಚರಿಸಿದ್ದಾರೆ.

ಶಾಖಾ ಮಠಗಳು: ಪುರಾತನ ಪರಂಪರೆಯ ಈ ಮಠವು ನಾಡಿನ ನಾನಾ ಭಾಗಗಳಲ್ಲಿ ತನ್ನ ಶಾಖಾ ಮಠಗಳನ್ನು ಪ್ರಾರಂಭಿಸಿ, ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದೆ. ಹಿಂದೆ ಸ್ಥಾಪನೆಗೊಂಡ ಶಾಖಾ ಮಠಗಳಲ್ಲಿ ಈಗ ಹದಿನಾರು ಶಾಖಾ ಮಠಗಳು ಅಸ್ತಿತ್ವದಲ್ಲಿವೆ. ಬಸವಕಲ್ಯಾಣ ತಾಲ್ಲೂಕಿನ ಬೇಲೂರು, ಪ್ರತಾಪಪುರ, ಖಂಡಾಳ, ಗೌಡಗಾಂವ್. ಭಾಲ್ಕಿ ತಾಲ್ಲೂಕಿನ ಬ್ಯಾಲಹಳ್ಳಿ, ಸಾಯಗಾಂವ,ಹುಣಜಿ, ಕಣಜಿ, ಜ್ಯಾಂತಿ, ಧನ್ನೂರು. ಹುಮನಾಬಾದ್ ತಾಲ್ಲೂಕಿನ ನಿರ್ಣಾ, ಕೊಡಂಬಲ. ಮಹಾರಾಷ್ಟ್ರದ ಲಾಥೂರು ಜಿಲ್ಲೆಯ ಉದಗೀರ ತಾಲ್ಲೂಕಿನ ನಾಗರಾಳ ಮತ್ತು ಉದಗೀರ. ಆಂಧ್ರಪ್ರದೇಶದ ಹೈದರಾಬಾದ್‌ನಲ್ಲಿ ತನ್ನ ಶಾಖಾ ಮಠಗಳನ್ನು ಹೊಂದಿದೆ.

ಧಾರ್ಮಿಕ ಕಾರ್ಯಗಳು: ಮಾನವೀಯ ಮೌಲ್ಯಗಳನ್ನು ಬೆಳೆಸುವ ದೃಷ್ಟಿಯಿಂದ ಶ್ರೀ ಶಿವಾನಂದ ಸ್ವಾಮಿಗಳು ಪ್ರತಿ ಭಾನುವಾರ ಸಾಮೂಹಿಕ ಪ್ರಾರ್ಥನೆ, ತಿಂಗಳಿಗೊಮ್ಮೆ ಭಕ್ತರ ಮನೆಗಳಲ್ಲಿ ಬಸವಜ್ಯೋತಿ ಕಾರ್ಯಕ್ರಮವನ್ನು ಆಚರಿಸುತ್ತಿ

ದ್ದಾರೆ. ಈ ಸಂದರ್ಭದಲ್ಲಿ ಶರಣರ ಸಂದೇಶಗಳ ಬಗ್ಗೆ ಉಪನ್ಯಾಸಗಳನ್ನು ನೀಡಲಾಗುತ್ತಿದೆ. ಶ್ರಾವಣಮಾಸದಲ್ಲಿ ಪುರಾಣ ಪ್ರವಚನ, ಪುಷ್ಯಶುದ್ಧ ದ್ವಾದಶಿಯಲ್ಲಿ ಶ್ರೀ ಬಸವಕುಮಾರ ಸ್ವಾಮಿಗಳ ಜಾತ್ರೆಯನ್ನು ಶರಣ ಸಮ್ಮೇಳನವನ್ನಾಗಿ ನಡೆಸಲಾಗುತ್ತಿದೆ. ಅಂದು ಸುಮಾರು ಇಪ್ಪತ್ತುಸಾವಿರ ಜನ ಭಕ್ತರು ಸೇರುತ್ತಾರೆ. ಇವರುಗಳಿಗೆ ಅನ್ನದಾಸೋಹ ನಿರಂತರವಾಗಿ ನಡೆಯುತ್ತಿದೆ. ಮಠದ ಆವರಣದಲ್ಲಿ ನಾಲ್ಕು ಗದ್ದುಗೆಗಳು ಹಾಗೂ ಮೂಲಮಠವಾದ ಚೌಕಿಮಠದಲ್ಲಿ ನಾಲ್ಕು ಗದ್ದುಗೆಗಳಿದ್ದು ಇವುಗಳಿಗೆ ನಿತ್ಯ ಪೂಜೆ ಮಾಡಲಾಗುತ್ತಿದೆ. ಮಠದಲ್ಲಿ 'ಬಸವ ಧರ್ಮ' ಪ್ರಸಾರ ಕೇಂದ್ರವನ್ನು ಸ್ಥಾಪಿಸಿದ್ದಾರೆ. ಅನ್ಯಧರ್ಮೀಯರಿಗೆ ವೀರಶೈವ ಧರ್ಮದ ಪ್ರಗತಿ ಪರ ತತ್ತ್ವಗಳ ಬಗ್ಗೆ ಅರಿವನ್ನು ಮೂಡಿಸಿ, ಅವರಿಗೆ ಲಿಂಗದೀಕ್ಷೆಯನ್ನು ನೀಡಿ ವೀರಶೈವಧರ್ಮ ಬೆಳೆಯುವಂತೆ ಮಾಡಿದ್ದಾರೆ. ಗುರುಗಳು ೧೯೮೭ರಲ್ಲಿ ದುಶ್ಚಟಗಳ ನಿವಾರಣೆಗಾಗಿ ಮಧ್ಯಪಾನ ನಿಷೇಧ ಆಂದೋಲನವನ್ನು ಪ್ರಾರಂಭಿಸಿ, ಆಂಧ್ರಪ್ರದೇಶ ಮತ್ತು ಕರ್ನಾಟಕದ ಹಳ್ಳಿಗಳಲ್ಲಿ ಪಾದಯಾತ್ರೆಯನ್ನು ಮಾಡಿದ್ದಾರೆ.

ಶೈಕ್ಷಣಿಕ ಕಾರ್ಯಗಳು: ಶ್ರೀ ಶಿವಾನಂದ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ 'ಶ್ರೀ ಗುರುಬಸವೇಶ್ವರ ಶಿಕ್ಷಣ ಸಂಸ್ಥೆ'ಯನ್ನು ಪ್ರಾರಂಭಿಸಿ, ಹುಲಸೂರು ಗ್ರಾಮದಲ್ಲಿ ಶ್ರೀ ಗುರುಬಸವೇಶ್ವರ ಪ್ರೌಢಶಾಲೆ, ಶ್ರೀ ಜಗದ್ಗುರು ಬಸವಕುಮಾರ ಪ್ರಾಥಮಿಕ ಶಾಲೆ, ಹುಲಕುಂಠಿಯಲ್ಲಿ ಶ್ರೀ ಶಾಂತಲಿಂಗೇಶ್ವರ ಪ್ರಾಥಮಿಕ ಶಾಲೆ, ಮುಕುರಂಬಿಯಲ್ಲಿ ಶ್ರೀ ಶಿವಾನಂದೇಶ್ವರ ಪ್ರಾಥಮಿಕ ಶಾಲೆ, ಬಸವಕಲ್ಯಾಣದಲ್ಲಿ ಶ್ರೀ ಜಗದ್ಗುರು ಬಸವಕುಮಾರೇಶ್ವರ ಪ್ರೌಢಶಾಲೆಯನ್ನು ಪ್ರಾರಂಭಿಸಿದ್ದಾರೆ. ಈ ರೀತಿ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ, ಕಲಿಯುವ ಬಡ ಮಕ್ಕಳಿಗೆ ಆಶ್ರಯ ಕಲ್ಪಿಸಿದ್ದಾರೆ.

ಸಾಮಾಜಿಕ ಕಾರ್ಯಗಳು: ಸಮಾಜದ ಅಭಿವೃದ್ಧಿಯ ಮೂಲಕ ಮಠದ ಪ್ರಗತಿಯನ್ನು ಕಂಡುಕೊಂಡ ಈ ವಿರಕ್ತಮಠವು, ಬಸವಾದಿ ಪ್ರಮಥರ ತತ್ತ್ವಗಳನ್ನು ಸಮಾಜದ ಎಲ್ಲಾ ಸ್ತರದ ಜನರಿಗೆ ಮುಟ್ಟಿಸಿ ಈ ಮೂಲಕ ಸಮಾಜದ ಪರಿವರ್ತನೆಗೆ ಪ್ರಯತ್ನಿಸಿದೆ. ಶ್ರೀ ಶಿವಾನಂದ ಸ್ವಾಮಿಗಳು ಮಠದಲ್ಲಿ ಅಂತರ್ ಜಾತಿ ವಿವಾಹಗಳನ್ನು ಮಾಡಿಸಿ, ಜಾತಿಯ ಸಂಕೋಲೆಗಳನ್ನು ಬಿಡಿಸಿ, ಜಾತ್ಯಾತೀತ ಸಮಾಜದ ನಿರ್ಮಾಣಕ್ಕೆ ಶ್ರಮಿಸುತ್ತಿದ್ದಾರೆ.

ಸಾಹಿತ್ಯ ಸೇವೆ: ಶ್ರೀ ಶಿವಾನಂದ ಸ್ವಾಮಿಗಳು ಸಾಹಿತ್ಯಾಸಕ್ತರಾಗಿದ್ದು, ಶಿವಾನಂದಪ್ರಿಯ ಗುರುಬಸವಪ್ರಭುವೇ ಎಂಬ ನಾಮಾಂಕಿತದಲ್ಲಿ ವಚನಗಳನ್ನು ಬರೆದು 'ಆಧುನಿಕ ವಚನಕಾರ'ರೆಂದು ಹೆಸರು ಪಡೆದಿದ್ದಾರೆ. ಇವರು ರಚಿಸಿದ ವಚನಗಳನ್ನು ಸಂಗ್ರಹಿಸಿ ಪ್ರಕಟವಾದ ಶ್ರೀ ಶಿವಾನಂದ ಸ್ವಾಮಿಗಳ ವಚನಗಳು, ಕನ್ನಡದ ಕೋಗಿಲೆ ಎಂಬ ವಚನಸಂಗ್ರಹ, ಕಲ್ಯಾಣಕೈಲಾಸ ತತ್ತ್ವಪದಗಳು, ಲಿಂಗಾಯಿತ ಧರ್ಮ ಸ್ಥಾಪಕ ಶ್ರೀ ಬಸವಣ್ಣ ಎಂಬ ಚಿಂತನಗ್ರಂಥ ಹಾಗೂ ಪತಿವ್ರತೆಯ ಪ್ರಭಾವ ಎಂಬ ನಾಟಕವನ್ನು ಬರೆದು ಪ್ರಕಟಿಸಿದ್ದಾರೆ. ಶ್ರೀ ಬಸವಕುಮಾರ ಸ್ವಾಮಿಗಳು ಬರೆದ ಷಟ್‌ಸ್ಥಲ ವಿಮೋಚನೆ, ಸಾಮೂಹಿಕಪ್ರಾರ್ಥನೆ, ರಮೇಶ್ ಮೂಲಗೆ ಅವರ ಬೀದರ್ ಜಿಲ್ಲೆಯ ವೀರಶೈವಮಠಗಳು ಒಂದು ಅಧ್ಯಯನ ಎಂಬ ಪುಸ್ತಕ, ಮುಂತಾದ ಧಾರ್ಮಿಕ ಗ್ರಂಥಗಳನ್ನು ಪ್ರಕಟಿಸಿ, ಸಾಹಿತ್ಯ ಲೋಕಕ್ಕೆ ನೀಡಿರುವುದಲ್ಲದೆ ಧರ್ಮವು ಸಾಹಿತ್ಯದ ಮೂಲಕ ಪ್ರಸಾರಗೊಳ್ಳುವಂತೆ ಮಾಡಿದ್ದಾರೆ. ಶ್ರೀ ಶಿವಾನಂದ ಸ್ವಾಮಿಗಳು ತಮ್ಮ ಅನುಭಾವದ ಮೂಸೆಯಲ್ಲಿ ಸಮಾಜವನ್ನು ಬೆಳೆಸುತ್ತಾ, ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಮಾಜಿಕವಾಗಿ ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ಸಮಾಜದ ಎಲ್ಲಾ ವರ್ಗದ ಜನರನ್ನು ಸಮಾನವಾಗಿ ಗೌರವಿಸಿ ಧರ್ಮ ಜಾಗೃತಿಯನ್ನುಂಟುಮಾಡಿ, ಬಸವಾದಿಪ್ರಮಥರು ಕಂಡ ಕನಸಿನ ನಾಡನ್ನು ಕಟ್ಟಲು ಶ್ರಮಿಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಶಿವಾನಂದ ಸ್ವಾಮಿಗಳು, ಶ್ರೀ ಗುರುಬಸವೇಶ್ವರಸಂಸ್ಥಾನಮಠ, ಹುಲಸೂರು, ಬಸವಕಲ್ಯಾಣ ತಾ. ಬೀದರ್‌ಜಿಲ್ಲೆ.

❑

ಭಾಲ್ಕಿ ತಾಲ್ಲೂಕು

ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕು ಪ್ರತಿಷ್ಠಿತ ತಾಲ್ಲೂಕುಗಳಲ್ಲಿ ಒಂದಾಗಿದೆ. ಧಾರ್ಮಿಕ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ಅಪಾರ ಹೆಸರು ಪಡೆದಿದೆ. ಇಲ್ಲಿ ವೀರಶೈವಧರ್ಮ ಪ್ರಮುಖ ಧರ್ಮವಾಗಿ ಬೆಳೆದಿದೆ. ಈ ತಾಲ್ಲೂಕಿನಲ್ಲಿ ಸುಮಾರು ಅರವತ್ತು ಮಠಗಳು ಅಸ್ತಿತ್ವದಲ್ಲಿದ್ದವೆಂದು ಹೇಳಲಾಗುತ್ತದೆ. ಇಂದು ವಿರಕ್ತ ಪರಂಪರೆಯ ಧನೂರು, ಹುಣಜಿ, ಗೌಡಗಾಂವ್, ಲಖನಗಾಂವ್, ಸಾಯಗಾಂವ್, ಭಾಲ್ಕಿ ಪಟ್ಟಣದ ಶ್ರೀ ಮಹಾಂತೇಶ್ವರ ವಿರಕ್ತಮಠ, ಶ್ರೀ ಉರಿಲಿಂಗಪೆದ್ದಿ ಮಠ ಹಾಗೂ ಗುರುಸ್ಥಲ ಪರಂಪರೆಯ ಜಾಂತಿ, ಕಣಜಿ, ಹುಣಜಿ, ಖಟಕಚಿಂಚೋಳಿ, ಡೋಣಗಾಪುರ... ಮಠಗಳು ಅಸ್ತಿತ್ವದಲ್ಲಿದ್ದರೂ ಉತ್ತರಾಧಿಕಾರಿಗಳಿಲ್ಲದೆ ಖಾಲಿ ಉಳಿದಿವೆ.

ಮೆಹಕರ್

ಭಾಲ್ಕಿ ತಾಲ್ಲೂಕಿನ ಮೆಹಕರ್ ಗ್ರಾಮವು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಹದಿನೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಮೆಹಕರ್ ಗ್ರಾಮದ ಮಧ್ಯಭಾಗದಲ್ಲಿ ರಂಭಾಪುರಿ ಪೀಠದ ಶಾಖಾಮಠವಾದ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದಿಂದ ಅಸ್ತಿತ್ವದಲ್ಲಿದ್ದ ಈ ಮಠವು ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಖಾಲಿ ಉಳಿದಿದೆ. ಈಗ ಉತ್ತರಾಧಿಕಾರಿಗಳ ಆಯ್ಕೆ ನಡೆದಿದೆ.

ವಿಳಾಸ: ಶ್ರೀ ಹಿರೇಮಠ, ಮೆಹಕರ್, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ.

ನಾವದಗಿ

ಭಾಲ್ಕಿ ತಾಲ್ಲೂಕಿನ ನಾವದಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ನಾವದಗಿ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ವಿರಕ್ತಮಠವು ಇತ್ತೀಚಿನ ವರ್ಷಗಳಲ್ಲಿ ಪುನರುಜ್ಜೀವನಗೊಂಡು ಬೆಳಕಿಗೆ ಬಂದಿದೆ. ಶ್ರೀ ದೇವಪ್ಪಯ್ಯ ಸ್ವಾಮಿಗಳು ಈ ಹಿಂದೆ ಅಧಿಕಾರ ನಡೆಸಿ ಮಠವನ್ನು ಅಭಿವೃದ್ಧಿಪಡಿಸಿದ್ದರು. ಗುರುಗಳು ಧಾರ್ಮಿಕ ಕಾರ್ಯಗಳಿಂದ ಹೆಸರು ಮಾಡಿದ್ದರು. ಇವರು ಲಿಂಗೈಕ್ಯರಾದ ಮೇಲೆ ಕೆಲವು ದಿನಗಳ ಕಾಲ ಮಠವು ಖಾಲಿ ಉಳಿದಿತ್ತು. ಈಗ ಶ್ರೀ ಶಾಂತವೀರ ಸ್ವಾಮಿಗಳು ಮಠದ ಆಡಳಿತವನ್ನು ನೋಡಿಕೊಳ್ಳುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಶಾಂತವೀರ ಸ್ವಾಮಿಗಳು, ಶ್ರೀ ವಿರಕ್ತಮಠ, ನಾವದಗಿ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ.

ಭಾಲ್ಕಿ

ಬೀದರ್ ಜಿಲ್ಲೆಯ ಭಾಲ್ಕಿ ಪಟ್ಟಣವು ಜಿಲ್ಲಾ ಕೇಂದ್ರದಿಂದ ಪಶ್ಚಿಮಕ್ಕೆ ನಲವತ್ತು ಕಿ.ಮೀ ದೂರದಲ್ಲಿದೆ. ತಾಲ್ಲೂಕು ಕೇಂದ್ರವಾಗಿರುವ ಇಲ್ಲಿ ಭಾಲ್ಕಿ ಹಿರೇಮಠ, ಭಾತಂಬ್ರಾದ ಶಾಖಾಮಠವಾದ ವಿರಕ್ತಮಠ, ಶ್ರೀ ಮಹಾಂತೇಶ್ವರ ಮಠ, ಶ್ರೀ ಉರಿಲಿಂಗಪೆದ್ದಿಮಠ ಸ್ಥಾಪನೆಯಾಗಿವೆ.

ಭಾಲ್ಕಿ ಹಿರೇಮಠ: ಭಾಲ್ಕಿ ಪಟ್ಟಣದಲ್ಲಿ ಪ್ರಾಚೀನ ಪರಂಪರೆಯ,ಗುರುಸ್ಥಲದ ಹಿರೇಮಠವು ಸ್ಥಾಪನೆಯಾಗಿದೆ. ಕರ್ನಾಟಕದ ವೀರಶೈವ ಮಠಗಳಲ್ಲಿ ಅತ್ಯಂತ ಪ್ರಮುಖ ಮಠಗಳಲ್ಲಿ ಒಂದಾಗಿರುವ ಭಾಲ್ಕಿ ಮಠವು ಎಂಟು ನೂರು ವರ್ಷಗಳಿಂದೀಚೆಗೆ ಶ್ರೀ ಚನ್ನಬಸವೇಶ್ವರ ಪಟ್ಟದ ದೇವರಿಂದ ಸ್ಥಾಪನೆಗೊಂಡಿದೆ. ಶ್ರೀ ಚನ್ನಬಸವೇಶ್ವರ ದೇವರು ಬಾಲ್ಯದಲ್ಲಿಯೇ ಆಧ್ಯಾತ್ಮ ಚಿಂತನೆಗಳನ್ನು ಮೈಗೂಡಿಸಿಕೊಂಡು ಲೋಕಸಂಚಾರ ಮಾಡಿ ಭಾಲ್ಕಿಯಲ್ಲಿ ಮಠವನ್ನು ಸ್ಥಾಪಿಸಿದರು. ಗುರುಗಳು ಲೋಕ ಸಂಚಾರ ಕೈಗೊಂಡಿದ್ದ ಸಂದರ್ಭದಲ್ಲಿ ನಾರಯಣಖೇಡ ತಾಲ್ಲೂಕಿನ ಮಯನಳ್ಳಿಯಲ್ಲಿ ಲಿಂಗೈಕ್ಯರಾದರು. ಇವರ ನಂತರ

ಅಧಿಕಾರಕ್ಕೆ ಬಂದ ಗುರುಗಳ ಬಗ್ಗೆ ವಿವರಗಳು ಲಭ್ಯವಿಲ್ಲ. ಮಯನಳ್ಳಿಯಲ್ಲಿ ಕರ್ತೃ ಗುರುಗಳ ಗದ್ದುಗೆ ಸ್ಥಾಪನೆಯಾಗಿದ್ದು, ಭಾಲ್ಕಿ ಹಿರೇಮಠದ ಶಾಖಾ ಮಠವಾಗಿ ಬೆಳೆದು ಬಂದಿದೆ.

ಪರಂಪರೆ:

೧. ಶ್ರೀ ಮ.ಘ.ಚ. ಚನ್ನಬಸವೇಶ್ವರ ಶಿವಾಚಾರ್ಯಸ್ವಾಮಿಗಳು
೨. ಶ್ರೀ ಮ.ಘ.ಚ. ದೇಶಮುಖ ಶಿವಾಚಾರ್ಯಸ್ವಾಮಿಗಳು
೩. ಶ್ರೀ ಮ.ಘ.ಚ. ಸಿದ್ಧಬಸವ ಶಿವಾಚಾರ್ಯಸ್ವಾಮಿಗಳು
೪. ಶ್ರೀ ಮ.ಘ.ಚ. ಷಣ್ಮುಖಯ್ಯ ಶಿವಾಚಾರ್ಯಸ್ವಾಮಿಗಳು
೫. ಶ್ರೀ ಮ.ಘ.ಚ. ನೀಲಕಂಠಯ್ಯ ಶಿವಾಚಾರ್ಯಸ್ವಾಮಿಗಳು
೬. ಶ್ರೀ ಮ.ಘ.ಚ. ಗುರುಲಿಂಗ ಶಿವಾಚಾರ್ಯಸ್ವಾಮಿಗಳು
೭. ಶ್ರೀ ಮ.ಘ.ಚ. ಡಾ. ಚನ್ನಬಸವ ಪಟ್ಟದ ದೇವರು
೮. ಶ್ರೀ ಮ.ಘ.ಚ. ಬಸವಲಿಂಗ ಪಟ್ಟದ ದೇವರು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಸ್ಥಾಪಕ ಗುರುಗಳಾದ ಶ್ರೀಮದ್ ಘನಲಿಂಗ ಚಕ್ರವರ್ತಿ ಚನ್ನಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು ಭಾಲ್ಕಿಯಲ್ಲಿ ಮಠವನ್ನು ಸ್ಥಾಪಿಸಿ, ವೀರಶೈವ ಧರ್ಮದ ತತ್ತ್ವ ಬೋಧನೆಯಿಂದ ವೀರಶೈವ ಧರ್ಮವನ್ನು ಬೆಳೆಸಿದರು. ಮಠದಲ್ಲಿ ಲಭ್ಯವಿರುವ ಆಧಾರಗಳ ಹಿನ್ನೆಲೆಯಲ್ಲಿ ಗುರುತಿಸಲಾಗಿರುವ ಶ್ರೀ ದೇಶಮುಖ ಶಿವಾಚಾರ್ಯ ಸ್ವಾಮಿಗಳಿಂದ ಹಿಡಿದು ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳ ತನಕ ಅಧಿಕಾರವನ್ನು ನಡೆಸಿದ ಗುರುಗಳು ಭಾಲ್ಕಿ ಹಿರೇಮಠದ ಮಠಾಧೀಶರಾಗಿ ಮಠವನ್ನು ಬೆಳೆಸಿದ್ದಾರೆ. ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಡಾ. ಚನ್ನಬಸವ ಪಟ್ಟದ ದೇವರು ಈ ಮಠದ ಘನತೆಯನ್ನು ದಶದಿಕ್ಕುಗಳಿಗೆ ಹಬ್ಬುವಂತೆ ಮಾಡಿದರು.

ಡಾ. ಚನ್ನಬಸವ ಪಟ್ಟದದೇವರು, ಔರಾದ ತಾಲ್ಲೂಕಿನ ಕಮಲಾನಗರ ಗ್ರಾಮದ ಬುಳ್ಳಾ ಮನೆತನದ ಶ್ರೀ ರಾಚಪ್ಪ ಮತ್ತು ಶ್ರೀಮತಿ ಸಂಗಮ್ಮನವರ ಪುತ್ರರಾಗಿ ೧೮೯೦ರ ಡಿಸೆಂಬರ್ ಇಪ್ಪತ್ತೆರಡರಂದು ಜನಿಸಿದರು.ಗುರುಗಳು ಐದು ವರ್ಷದ ಶಿಶುವಾಗಿದ್ದಾಗಲೇ ತಮ್ಮ ತಂದೆ ತಾಯಿಗಳನ್ನು ಕಳೆದುಕೊಂಡರು. ನಂತರ ಮುಧೋಳ್(ಬಿ)ಸಂಸ್ಥಾನ ಮಠದ ಪಟ್ಟಾಧ್ಯಕ್ಷ ರಾದ ಶ್ರೀ ಶಿವಲಿಂಗ ಸ್ವಾಮಿಗಳ ಕೃಪಾಶೀರ್ವಾದದಿಂದ ಬೆಳೆದು, ಅಮರೇಶ್ವರ ಗುಡಿಯಲ್ಲಿ ಶ್ರೀ ಗಳಂಗಳಪ್ಪ ಕನ್ನಡ ಶಾಲೆಯಲ್ಲಿ ಅಭ್ಯಾಸ ಮಾಡಿ, ನಂತರ ಶಿವಯೋಗ ಮಂದಿರದಲ್ಲಿ ಕಲಿತು ಎಲ್ಲರ ಅಭಿಮಾನ ಮತ್ತು ವಾತ್ಸಲ್ಯಕ್ಕೆ ಪಾತ್ರರಾಗಿ ಭಾಲ್ಕಿ ಹಿರೇಮಠದ ಮಠಾಧ್ಯಕ್ಷರಾಗಿ ೧೯೨೪ರ ಫೆಬ್ರುವರಿಯಲ್ಲಿ ಅಧಿಕಾರವನ್ನು ವಹಿಸಿಕೊಂಡರು.ಗುರುಗಳು ಅಧಿಕಾರ ವಹಿಸಿಕೊಂಡ ಮೇಲೆ ಹಿರೇಮಠವು ಸಮಾಜದ ಮುಖಿಯಾಗಿ ಬೆಳೆಯತೊಡಗಿತು. ಶ್ರೀ ಚನ್ನಬಸವ ಪಟ್ಟದದೇವರು ಸಮಾಜದ ಎಲ್ಲಾ ಮುಖಗಳನ್ನು ತಮ್ಮ ತೀಕ್ಷ್ಣಬುದ್ಧಿಯಿಂದ ಅವಲೋಕಿಸಿ, ಸಮಾಜವನ್ನು ಧಾರ್ಮಿಕ ತಳಹದಿಯ ಮೇಲೆ ಮುನ್ನಡೆಸಬೇಕು ಎಂದು ಕನಸು ಕಂಡರು. ಗುರುಸ್ಥಲ ಮಠದ ಮಠಾಧೀಶರಾದರೂ ಆಚಾರ್ಯರ ಹಾಗೂ ಬಸವಾದಿ ಪ್ರಮಥರ ಪ್ರಗತಿಪರ ಚಿಂತನೆಗಳನ್ನು ಪ್ರಚಾರ ಪಡಿಸಿ, ಈ ತತ್ತ್ವಕ್ಕನುಗುಣವಾಗಿ ನಡೆದು ಆಚಾರ ಮತ್ತು ವಿಚಾರಗಳಲ್ಲಿ ಒಂದಾಗಿ ಮಠದ ಅಭಿವೃದ್ಧಿಯ ಜತೆಗೆ ಸಮಾಜವನ್ನು ಬೆಳೆಸಿದರು.

ಹೋರಾಟಗಾರರು: ಶ್ರೀ ಚನ್ನಬಸವ ಪಟ್ಟದ ದೇವರು ಮಠಾಧಿಪತಿಗಳಾದರೂ ಸ್ವಾತಂತ್ರ ಸಂಗ್ರಾಮ, ರಜಾಕಾರ ಚಳುವಳಿ ಹಾಗೂ ಕರ್ನಾಟಕದ ಏಕೀಕರಣ ಚಳುವಳಿಯಲ್ಲಿ ಭಾಗವಹಿಸಿ, ಇಡೀ ನಾಡೇ ಇತ್ತ ಗಮನ ಹರಿಸುವಂತೆ ಮಾಡಿದರು. ಮರಾಠಿ, ತೆಲುಗು ಹಾಗೂ ಉರ್ದು ಭಾಷೆಯ ಪ್ರಭಾವಕ್ಕೆ ಒಳಗಾಗಿದ್ದ ಈ ಪ್ರಾಂತ್ಯದಲ್ಲಿ ಕನ್ನಡವನ್ನು ಬೆಳೆಸಬೇಕೆಂಬ ಮಹದಾಸೆಯಿಂದ ಹೈದರಾಬಾದ್ ನಿಜಾಮರನ್ನು ಕೆಚ್ಚೆದೆಯಿಂದ ಎದುರಿಸಿ ಪ್ರಥಮವಾಗಿ ಕನ್ನಡ ಶಾಲೆಯನ್ನು ಪ್ರಾರಂಭಿಸಿ, ಕನ್ನಡ ಭಾಷೆಯನ್ನು ಉಳಿಸಿ ಬೆಳೆಸಿದರು. ದಲಿತ ಚಳುವಳಿಗೆ ಧ್ವನಿಯಾಗಿ ಸಮಾಜದ ಅನಿಷ್ಟ ಪದ್ಧತಿಗಳನ್ನು ದೂರ ಮಾಡುವ ಹೋರಾಟಗಾರರಾದರು. ಹನ್ನೆರಡನೆಯ ಶತಮಾನದಲ್ಲಿ ನಡೆದ ಸಾಮಾಜಿಕ ಕ್ರಾಂತಿಯ ಪ್ರೇರಣೆಯಿಂದ ಮಠದಲ್ಲಿ ಧಾರ್ಮಿಕ ಹಾಗೂ ಸಾಮಾಜಿಕ ಆಂದೋಲನವನ್ನು ರೂಪಿಸಿ, ಮಠವು ಸಮಷ್ಟಿ ಸಮಾಜದ ಒಳಿತಿಗಾಗಿ ಕಾರ್ಯ

ನಿರ್ವಹಿಸಬೇಕು ಎಂಬುದನ್ನು ಹೇಳುವುದರ ಜತೆಗೆ ಮಾಡಿ ತೋರಿಸಿದರು.

ಗೌರವಗಳು: ಶ್ರೀ ಚನ್ನಬಸವ ಪಟ್ಟದದೇವರು ಮಾಡಿದ ಸಾಮಾಜಿಕ ಸುಧಾರಣೆಗಳು ಹಾಗೂ ಅವರ ಸಾಧನೆಗಳನ್ನು ಗುರುತಿಸಿ ಗುಲ್ಬರ್ಗ ವಿಶ್ವವಿದ್ಯಾನಿಲಯ ೧೯೯೨ರಲ್ಲಿ ಗೌರವ ಡಾಕ್ಟರೇಟ್ ನೀಡಿ ಸತ್ಕರಿಸಿತು. ಕರ್ನಾಟಕ ಸರ್ಕಾರ ೧೯೯೪ರಲ್ಲಿ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಗುರುಗಳು ಕನ್ನಡ ನಾಡುನುಡಿಯ ಬಗ್ಗೆ ಸಲ್ಲಿಸಿದ ಸೇವೆಯನ್ನು ಗುರುತಿಸಿದ ಕನ್ನಡ ಸಾಹಿತ್ಯ ಪರಿಷತ್ತು ೧೯೯೬ರಲ್ಲಿ ಸನ್ಮಾನಿಸಿತು. ಗುರುಗಳ ಸಮಾಜ ಸೇವೆಯನ್ನು ಗುರುತಿಸಿದ ದೆಹಲಿಯ ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆ, ೧೯೯೦ ರ ಸೆಪ್ಟೆಂಬರ್ ಇಪ್ಪತ್ತೆರಡರಂದು ಕರ್ನಾಟಕಭವನದಲ್ಲಿ ಮಾಜಿ ರಾಷ್ಟ್ರಪತಿ ಗ್ಯಾನಿ ಜೇಲ್‌ಸಿಂಗ್‌ರವರಿಂದ ಸನ್ಮಾನಿಸಿ ಗೌರವಿಸಿದೆ. ಹೀಗೆ ನಾಡು, ನಾಡಿನಾಚೆಯೂ ಗುರುಗಳನ್ನು ಗೌರವಿಸಿ ಸನ್ಮಾನಿಸಲಾಗಿದೆ.

ಡಾ. ಚನ್ನಬಸವ ಪಟ್ಟದದೇವರು ಧಾರ್ಮಿಕ,ಸಾಮಾಜಿಕ,ಶೈಕ್ಷಣಿಕ ಹಾಗೂ ಸಾಹಿತ್ಯಿಕ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸಿ, ಭಾಲ್ಕಿ ಮಠವು ನಾಡಿನ ಪ್ರಮುಖ ಮಠಗಳ ಸಾಲಿಗೆ ನಿಲ್ಲುವಂತೆ ಮಾಡಿದರು. ಗುರುಗಳು ಶರಣ ತತ್ತ್ವದ ಆಧಾರದ ಮೇಲೆ ಜಾತ್ಯಾತೀತ ಸಮಾಜವನ್ನು ನಿರ್ಮಿಸಲು ಮುಂದಾಗಿ, ಬೆಲ್ಲದಾಳಿನ ಶೂದ್ರ ವ್ಯಕ್ತಿಗೆ ಸಂಸ್ಕಾರ ನೀಡಿ ಬೆಲ್ಲದಾಳು ಸಿದ್ಧರಾಮ ಶರಣರೆಂದು ಅಭಿಧಾನ ಮಾಡಿದರು. ಬೆಲ್ಲದಾಳು ಶರಣರಿಗೆ ಕೌಠಾದಲ್ಲಿ ಮಠ ಸ್ಥಾಪಿಸಿ ಧಾರ್ಮಿಕ ಕಾರ್ಯ ನಡೆಯುವಂತೆ ಮಾಡಿದರು. ಹೀಗೆ ಅಂತ್ಯೋದಯದಿಂದ ನವೋದಯದ ಕಡೆ ಸಮಾಜವನ್ನು ಬೆಳೆಸಿದರು. ಗುರುಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಬಸವಲಿಂಗ ಪಟ್ಟದದೇವರನ್ನು ನೇಮಕಮಾಡಿಕೊಂಡರು. ಆಂಧ್ರಪ್ರದೇಶದ ನಾರಾಯಣಖೇಡ ತಾಲ್ಲೂಕಿನ ನಾಗೂರಿನ ಶ್ರೀ ರಾಚಪ್ಪ ಮತ್ತು ಶ್ರೀಮತಿ ಭಾಗೀರಥಿಯವರ ಪುತ್ರರಾಗಿ ೧೯೫೨ರಲ್ಲಿ ಜನಿಸಿದ ಶ್ರೀ ಬಸವಲಿಂಗ ಪಟ್ಟದದೇವರು ಔರಾದ, ಭಾಲ್ಕಿಯಲ್ಲಿ ವಿದ್ಯಾಭ್ಯಾಸ ಮಾಡಿ ಕೊಲ್ಲಾಪುರದ ಶಿವಾಜಿ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದು ಮಠಕ್ಕೆ ಆಗಮಿಸಿದರು. ವಿದ್ಯಾಸಂಪನ್ನತೆ, ವೈಚಾರಿಕ ಮನೋಭಾವವನ್ನು ಬೆಳೆಸಿಕೊಂಡಿದ್ದ ಶ್ರೀ ಬಸವಲಿಂಗ ಪಟ್ಟದದೇವರಿಗೆ ೧೯೮೭ರ ಜೂನ್ ಎರಡರಂದು ಪಟ್ಟಾಧಿಕಾರವನ್ನು ವಹಿಸಿಕೊಟ್ಟ ಡಾ.ಚನ್ನಬಸವ ಪಟ್ಟದದೇವರು ಶತಾಯುಷಿಗಳಾಗಿ ೧೯೯೯ರ ಏಪ್ರಿಲ್ ಇಪ್ಪತ್ತೆರಡರಂದು ಲಿಂಗೈಕ್ಯರಾದರು.

ಧಾರ್ಮಿಕ ಕಾರ್ಯಗಳು: ಮಠಗಳು ಧಾರ್ಮಿಕ ಕೇಂದ್ರಗಳಾಗಿದ್ದರೂ, ಕೇವಲ ಪೂಜೆಗಷ್ಟೇ ಸೀಮಿತವಲ್ಲ, ಎಂಬುದನ್ನು ಅರಿತ ಹಿರಿಯ ಲಿಂಗೈಕ್ಯ ಗುರುಗಳಾದ ಡಾ. ಚನ್ನಬಸವ ಪಟ್ಟದದೇವರು ಮಠದಲ್ಲಿ ನಿತ್ಯಪೂಜಾ ಕಾರ್ಯಕ್ರಮಗಳ ಜತೆಗೆ ಹುಣ್ಣಿಮೆಯಂದು ಶಿವಾನುಭವವನ್ನು ೧೯೮೭ರ ನವೆಂಬರ್ ಒಂಬತ್ತರಂದು ಪ್ರಾರಂಭಿಸಿದರು.ಅಂದು ಪ್ರಾರಂಭ ಗೊಂಡ ಶಿವಾನುಭವ ಗೋಷ್ಠಿಗಳು ನಿರಂತರವಾಗಿ ನಡೆಯುತ್ತಿವೆ. ಈ ಸಂದರ್ಭದಲ್ಲಿ ವೀರಶೈವಸಾಹಿತ್ಯ, ಧರ್ಮ ಹಾಗೂ ಜನಾಂಗದ ಕುರಿತು ಉಪನ್ಯಾಸಗಳು ಮಂಡನೆಯಾಗುತ್ತಿವೆ. ಧಾರ್ಮಿಕ ಕಾರ್ಯದ ಜತೆಗೆ ಸಾಹಿತ್ಯ ಮತ್ತು ಸಮಾಜದ ಅಭಿವೃದ್ಧಿಯ ಬಗ್ಗೆ ಚಿಂತಿಸುವಂತೆ ಮಾಡಲಾಗಿದೆ. ಅಲ್ಲದೆ ಮಠದಲ್ಲಿ ನಿತ್ಯ ದಾಸೋಹ ನಡೆಯುತ್ತಿದೆ.

ಶೈಕ್ಷಣಿಕ ಸೇವೆ: ಸಮಾಜದ ಅಭಿವೃದ್ಧಿಗೆ ಅಕ್ಷರ ಜ್ಞಾನ ಆವಶ್ಯಕ ಎಂದು ಅರಿತ ಗುರುಗಳು ಭಾಲ್ಕಿಯಲ್ಲಿ ಕನ್ನಡ ಶಾಲೆಗಳು ಇಲ್ಲದ ಸಂದರ್ಭದಲ್ಲಿ, ಕನ್ನಡವನ್ನು ಉಳಿಸಬೇಕೆಂಬ ಏಕೈಕ ಉದ್ದೇಶದಿಂದ ಕನ್ನಡ ಶಾಲೆಯನ್ನು ಪ್ರಾರಂಭಿಸಿದರು. ನಿಜಾಮರ ವಿರೋಧ ಕಂಡು ಬಂದಾಗ ಶಾಲೆಯ ಹೊರಗಡೆ ಉರ್ದು ಶಾಲೆಯ ನಾಮಫಲಕವನ್ನು ಹಾಕಿಕೊಂಡು,ಒಳಗಡೆ ಕನ್ನಡ ಕಲಿಸುವ ಕಾರ್ಯವನ್ನು ಮಾಡಿದರು. ನಂತರ ೧೯೩೬ರಲ್ಲಿ ನಾರಾಯಣಖೇಡ ಗ್ರಾಮದ ಮೋರಗಿ ಗ್ರಾಮದಲ್ಲಿ ಕನ್ನಡ ಶಾಲೆಯನ್ನು ಪ್ರಾರಂಭಿಸಿ, ಮನೆ ಮನೆಗೆ ಹೋಗಿ ತಮ್ಮ ಮಕ್ಕಳನ್ನು ಕನ್ನಡ ಶಾಲೆಗೆ ಕಳುಹಿಸಬೇಕೆಂದು ಬಿನ್ನವಿಸಿಕೊಂಡು ಕನ್ನಡ ಶಾಲೆಗಳು ನಡೆಯುವಂತೆ ಮಾಡಿದರು. ಅಲ್ಲದೆ ಬಡ ಮಕ್ಕಳಿಗೆ ಹಾಗೂ ಶಿಕ್ಷಕರಿಗೆ ಅನುಕೂಲವಾಗಲೆಂದು ಉಚಿತ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿ, ವಸತಿ ಮತ್ತು ಪ್ರಸಾದಕ್ಕೆ ವ್ಯವಸ್ಥೆಮಾಡಿದರು. ೧೯೪೦ರಲ್ಲಿ ದೇವಣಿ ಮತ್ತು ಮಾಂಜರಾ ನದಿಗಳ ಸಂಗಮ ಕ್ಷೇತ್ರದಲ್ಲಿ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ, ಮತ್ತೊಂದು ಕನ್ನಡ ಶಾಲೆಯನ್ನು ಪ್ರಾರಂಭಿಸಿದರು. ಈ ಸಂಸ್ಥೆ ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ. ಇಂದು ಭಾಲ್ಕಿ ಹಿರೇಮಠದ ಅಧೀನದಲ್ಲಿ ಬೆಳೆದಿರುವ ಶಿಕ್ಷಣ ಸಂಸ್ಥೆಗಳ ವಿವರ ಈ ಕೆಳಕಂಡಂತಿದೆ.

೧. ಶಾಂತಿವರ್ಧಕ ಪ್ರೌಢಶಾಲೆ, ಕಮಲಾನಗರ (೧೯೬೩)
೨. ಚನ್ನಬಸವೇಶ್ವರ ಮಹಾವಿದ್ಯಾಲಯ, ಭಾಲ್ಕಿ (೧೯೬೮)
೩. ಅಕ್ಕಮಹಾದೇವಿ ಸಂಯುಕ್ತ ಪದವಿಪೂರ್ವ ಕಾಲೇಜು, ಭಾಲ್ಕಿ (೧೯೬೯)
೪. ಅಕ್ಕಮಹಾದೇವಿ ಮಹಿಳಾ ಮಹಾವಿದ್ಯಾಲಯ, ಬೀದರ್ (೧೯೭೧)
೫. ಶಾಂತಿವರ್ಧಕ ಪದವಿಪೂರ್ವ ಮಹಾವಿದ್ಯಾಲಯ, ಕಮಲಾನಗರ (೧೯೭೩)
೬. ಗ್ರಾಮೀಣ ತಾಂತ್ರಿಕ ಮಹಾವಿದ್ಯಾಲಯ, ಭಾಲ್ಕಿ (೧೯೮೨)
೭. ಸಿದ್ಧರಾಮೇಶ್ವರ ಪದವಿ ಮಹಾವಿದ್ಯಾಲಯ, ಕಮಲಾನಗರ (೧೯೮೪)
೮. ಕೈಗಾರಿಕಾ ತರಬೇತಿ ಕೇಂದ್ರ, ಭಾಲ್ಕಿ (೧೯೮೪)
೯. ಅಕ್ಕಮಹಾದೇವಿ ಮಹಿಳಾ ಪ್ರೌಢಶಾಲೆ, ಬೀದರ್ (೧೯೮೫)
೧೦. ಹರಳಯ್ಯ ಪಾಲಿಟೆಕ್ನಿಕ್ ಕಾಲೇಜು, ಭಾಲ್ಕಿ (೧೯೮೭)
೧೧. ಚನ್ನಬಸವೇಶ್ವರ ಪ್ರಾಥಮಿಕ ಶಾಲೆ, ಕಮಲಾನಗರ (೧೯೯೫)
೧೨. ಅಕ್ಕಮಹಾದೇವಿ ಪ್ರಾಥಮಿಕ ಶಾಲೆ, ಭಾಲ್ಕಿ (೧೯೯೫)
೧೩. ಅಕ್ಕಮಹಾದೇವಿ ಪ್ರಾಥಮಿಕ ಶಾಲೆ, ಬೀದರ್ (೧೯೯೫)

ಈ ಶಿಕ್ಷಣ ಸಂಸ್ಥೆಗಳ ಜತೆಗೆ ಹಿರೇಮಠದ ಈಗಿನ ಶ್ರೀ ಬಸವಲಿಂಗ ಪಟ್ಟದದೇವರು ಅಧಿಕಾರಕ್ಕೆ ಬಂದ ಮೇಲೆ 'ಹಿರೇಮಠ ಸಂಸ್ಥಾನ ವಿದ್ಯಾಪೀಠ' ಭಾಲ್ಕಿ ಎಂಬ ಶಿಕ್ಷಣಸಂಸ್ಥೆಯನ್ನು ಸ್ಥಾಪಿಸಿ, ಭಾಲ್ಕಿಯಲ್ಲಿ ಸಂಗಮೇಶ್ವರ ಪೂರ್ವಪ್ರಾಥಮಿಕ ಮತ್ತು ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಶಿಶು ವಿಹಾರ, ಶ್ರೀ ಚನ್ನಬಸವೇಶ್ವರ ಗುರುಕುಲ ವಸತಿಶಾಲೆ, ನೀಲಾಂಬಿಕ ಸಂಗೀತ ಪಾಠಶಾಲೆ, ನರ್ಸರಿ ಶಿಕ್ಷಕಿಯರ ಶಿಕ್ಷಣ ತರಬೇತಿ ಶಾಲೆ, ಸಂಗಮದಲ್ಲಿ ಅಂಗವಿಕಲ ಹೆಣ್ಣುಮಕ್ಕಳ ನೀಲಾಂಬಿಕ ಸಂಗೀತ ವಸತಿಶಾಲೆ, ಕಾಸರತೂಗಾಂವನಲ್ಲಿ ಶ್ರೀ ಸಂಗಮ್ಮ ಸಂಗ್ರಾಮಪ್ಪ ಬಿರಾದಾರ ಪ್ರೌಢಶಾಲೆ, ಕಮಲಾನಗರದಲ್ಲಿ ಶ್ರೀ ಗುರುಪ್ಪ ಟೊಣ್ಣೆ ಪ್ರಾಥಮಿಕ ಶಾಲೆ, ಔರಾದದಲ್ಲಿ ಬಸವ ಗುರುಕುಲ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದ್ದಾರೆ. ಬಡಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದೆಂಬ ಉದ್ದೇಶದಿಂದ ಲಿಂಗೈಕ್ಯ ಡಾ. ಚನ್ನಬಸವ ಪಟ್ಟದದೇವರು ಭಾಲ್ಕಿಯಲ್ಲಿ ಶ್ರೀ ಹಾನಗಲ್ಲು ಕುಮಾರೇಶ್ವರ ಉಚಿತ ಪ್ರಸಾದ ನಿಲಯ, ಕಮಲಾನಗರದಲ್ಲಿ ಶ್ರೀ ಕಮಲೇಶ್ವರ ಉಚಿತ ಪ್ರಸಾದ ನಿಲಯವನ್ನು ಸ್ಥಾಪಿಸಿದ್ದಾರೆ. ಈ ರೀತಿ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ ಈ ಭಾಗದಲ್ಲಿ ಜ್ಞಾನ ಜ್ಯೋತಿಯನ್ನು ಬೆಳಗಿಸಿದ್ದಾರೆ.

ಸಾಮಾಜಿಕ ಸೇವೆ: ಡಾ. ಚನ್ನಬಸವ ಪಟ್ಟದ ದೇವರು ಅಧಿಕಾರಕ್ಕೆ ಬಂದ ಮೇಲೆ ಮಠವನ್ನು ಸಮಾಜದ ಮುಖಿಯಾಗಿ ಬೆಳೆಸಿ, ಸಾಮಾಜಿಕ ಅಸಮತೋಲತೆಯನ್ನು ತೊಡಗಿಸಲು ಪ್ರಯತ್ನಿಸಿದರು. ಬಸವತತ್ತ್ವವನ್ನು ಪ್ರಚಾರಗೊಳಿಸಲು ಮನೆ ಮನೆಗೆ ಹೋಗಿ ಉಪದೇಶವನ್ನು ನೀಡಿ, ಶರಣರು ಕಂಡ ಕನಸಿನಂತೆ ಸಮಾಜವನ್ನು ಬೆಳೆಸ ತೊಡಗಿದರು. ೧೯೬೯ರಲ್ಲಿ ಅಂತರ್ ಜಾತಿ ವಿವಾಹವನ್ನು ಮಾಡಿಸಿದ್ದಾರೆ. ಬೆಲ್ದಾಳ ಮತ್ತು ನಂದಿನಾಗೂರು ಗ್ರಾಮಗಳಲ್ಲಿ ಇನ್ನೂರು ಜನ ಹರಿಜನರಿಗೆ ಲಿಂಗ ದೀಕ್ಷೆಯನ್ನು ಕೊಟ್ಟಿದ್ದಾರೆ. ಹೈದರಾಬಾದಿನ ಬೆಲ್ದಾಳ ಸಿದ್ಧರಾಮ ಶರಣರಿಗೆ ಲಿಂಗದೀಕ್ಷೆಯನ್ನು ಕೊಟ್ಟು ಸಂಸ್ಕಾರ ನೀಡಿದ್ದರಿಂದ ಅವರು ನಾಡಿನ ಹೆಸರಾಂತ ಬರಹಗಾರರಾಗಿ ರೂಪುಗೊಂಡಿದ್ದಾರೆ. ೧೯೪೭ರಲ್ಲಿ ಭಾಲ್ಕಿಯ ಹರಿಜನರಿಗೆ ತಮ್ಮ ಹಿರೇಮಠ ಸಂಸ್ಥಾನದ ಹಿಂಭಾಗದಲ್ಲಿರುವ ನೀರಿನ ಬಾವಿಯನ್ನು ಮತ್ತು ಭಾಲ್ಕೇಶ್ವರ ದೇವಾಲಯದ ಕುಡಿಯುವ ನೀರಿನ ಬಾವಿಯನ್ನು ಉಪಯೋಗಿಸಲು ಕೊಟ್ಟು ಅಸ್ಪೃಶ್ಯತೆಯ ನಿವಾರಣೆಗೆ ನಾಂದಿ ಹಾಡಿದರು. ದುಶ್ಚಟ, ದುರ್ಗುಣ, ವ್ಯಸನ ನಿರ್ಮೂಲನೆಗಾಗಿ ಗ್ರಾಮೀಣ ಕಾರ್ಯಕ್ರಮ. ಹರಳಯ್ಯ-ಕಲ್ಯಾಣಮ್ಮ ಸರ್ವಧರ್ಮಗಳ ವಧುವರರ ಮಾಹಿತಿ ಕೇಂದ್ರ ಸ್ಥಾಪನೆ ಮಾಡಿ ಎಲ್ಲಾ ವರ್ಗದ ಜನರಿಗೆ ನೆರವಾಗಿದ್ದಾರೆ.

ಸಾಹಿತ್ಯ ಸೇವೆ: ಭಾಲ್ಕಿ ಹಿರೇಮಠವು ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿಯೂ ಗಣನೀಯ ಸೇವೆ ಸಲ್ಲಿಸಿದಂತೆಯೇ, ಸಾಹಿತ್ಯ ಕ್ಷೇತ್ರದಲ್ಲಿಯೂ ಗಣನೀಯವಾದ ಸೇವೆಯನ್ನು ಸಲ್ಲಿಸಿದೆ. ಮಠದ ವತಿಯಿಂದ 'ಶಾಂತಿ ಕಿರಣ' ಪತ್ರಿಕೆಯನ್ನು ೧೯೭೧ರ ಡಿಸೆಂಬರ್ ಒಂದರಿಂದ ಪ್ರಾರಂಭಿಸಿದ್ದಾರೆ. 'ಬಸವಧರ್ಮ ಪ್ರಸಾರ ಪ್ರಕಾಶನ ಸಂಸ್ಥೆ'ಯನ್ನು ಪ್ರಾರಂಭಿಸಿ, ವೈರಾಗ್ಯ ನಿಧಿ

ಅಕ್ಕಮಹಾದೇವಿ, ಇಷ್ಟಲಿಂಗ ಪೂಜಾ ವಿಧಾನ, ಬಸವೇಶ್ವರ ಮತ್ತು ಅಂಬೇಡ್ಕರ್,ಬಸವಣ್ಣನವರ ವಚನಗಳಲ್ಲಿ ದಲಿತ ದರ್ಶನ, ಶ್ರೀ ಚನ್ನಬಸವ ಪಟ್ಟದದೇವರು,(ಜೀವನ ಚರಿತ್ರೆ)ಕಾಯಕ ಪರಿಣಾಮಿ(ಗೌರವ ಗ್ರಂಥ), ಶಿವಶರಣ ನನ್ನಯ್ಯ (ನಾಟಕ), ವಚನ ಸಾಹಿತ್ಯ ಹಾಗೂ ಚಿಂತನ ಮತ್ತು ಸಂಶೋಧನೆ(ಹಿಂದಿ), ಮುಂತಾದ ಮೂವತ್ತೂರಕ್ಕೂ ಹೆಚ್ಚು ಮೌಲಿಕ ಕೃತಿಗಳನ್ನು ಪ್ರಕಟಿಸಿ, ಕನ್ನಡಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ.'ಬಸವೇಶ್ವರ ಮತ್ತು ಅಂಬೇಡ್ಕರ್'ಕೃತಿಗೆ ಕರ್ನಾಟಕಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಕಾಯಕ ಪರಿಣಾಮಿ ಗೌರವ ಗ್ರಂಥವು ಕನ್ನಡದ ವಿಶಿಷ್ಟ ಗೌರವ ಗ್ರಂಥಗಳಲ್ಲಿ ಒಂದು ಎಂಬ ಹೆಗ್ಗಳಿಕೆಗೆ ಒಳಗಾಗಿದೆ.

ಮಠದ ವತಿಯಿಂದ ಸಾಹಿತ್ಯಿಕ ಪ್ರೋತ್ಸಾಹಕ್ಕಾಗಿ ಪ್ರತಿವರ್ಷ ಕೆಲವು ಪ್ರಶಸ್ತಿಗಳನ್ನು ಘೋಷಿಸಿದೆ. ಮಹಾರಾಷ್ಟ್ರದಲ್ಲಿ ಶರಣ ಸಾಹಿತ್ಯಕ್ಕೆ ಸೇವೆ ಮಾಡಿದವರಿಗೆ ಹಾಗೂ ಕನ್ನಡದಲ್ಲಿ ಮಕ್ಕಳ ಸಾಹಿತ್ಯಕ್ಕೆ ಅತ್ಯುತ್ತಮ ಕೊಡುಗೆ ನೀಡಿದವರಿಗೆ 'ಶ್ರೀ ಡಾ.ಚನ್ನಬಸವ ಪಟ್ಟದ ದೇವರ' ಪ್ರಶಸ್ತಿಯನ್ನು ನೀಡಿ ಐದುಸಾವಿರ ರೂಪಾಯಿ ನಗದು ಮತ್ತು ಪ್ರಶಸ್ತಿ ಪದಕವನ್ನು ಕೊಟ್ಟು ಗೌರವಿಸಲಾಗುತ್ತಿದೆ. ಅಲ್ಲದೆ ಉದಯೋನ್ಮುಖರಿಗೆ ಹಾಗೂ ಮೌಲಿಕ ಕೃತಿಗಳನ್ನು ಪ್ರಕಟಿಸುವ ಲೇಖಕರಿಗೆ ಆರ್ಥಿಕ ಸಹಾಯವನ್ನು ನೀಡಿ ಪ್ರೋತ್ಸಾಹಿಸುತ್ತಿದೆ.

ಪುರಾತನ ಇತಿಹಾಸವುಳ್ಳ ಭಾಲ್ಕಿ ಮಠವು ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಹಿತ್ಯ ಕ್ಷೇತ್ರಗಳಲ್ಲಿ ಅಭಿವೃದ್ಧಿಯನ್ನು ಸಾಧಿಸಿ ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಈ ಮಠದ ಲಿಂಗೈಕ್ಯ ಡಾ. ಚನ್ನಬಸವ ಪಟ್ಟದದೇವರ ಕರಕಮಲ ಸಂಜಾತರಾದ ಶ್ರೀ ಬಸವಲಿಂಗಪಟ್ಟದ ದೇವರು ವಾಸ್ತವ ಬದುಕನ್ನು ಗಮನದಲ್ಲಿಟ್ಟುಕೊಂಡು, ಧರ್ಮವನ್ನು ಸಮಾಜದ ಪ್ರಗತಿಗೆ ಪೂರಕವಾಗುವಂತೆ ಬಳಸಿಕೊಂಡು, ಸಮಾಜ ಮತ್ತು ಮಠದ ಪ್ರಗತಿಯನ್ನು ಮಾಡುತ್ತಿದ್ದಾರೆ.

ವಿಳಾಸ: ಶ್ರೀ ಮ.ಘ.ಚ. ಬಸವಲಿಂಗ ಪಟ್ಟದದೇವರು, ಶ್ರೀ ಸಂಸ್ಥಾನ ಹಿರೇಮಠ, ಭಾಲ್ಕಿ, ಬೀದರ್ ಜಿಲ್ಲೆ.

ಆಧಾರ: 'ಕಲ್ಯಾಣದ ಹಾದಿ' ಲೇಖನ: ಡಾ. ಜಿ.ಬಿ. ವಿಸಾಜಿ

'ಶಾಂತಿಕಿರಣ' ದ್ವೈಮಾಸಿಕ ಪತ್ರಿಕೆ ಸಂಪುಟ ೨೧, ಸಂಚಿಕೆ ೬

ಭಾತಂಬ್ರಾ

ಭಾಲ್ಕಿ ತಾಲ್ಲೂಕಿನ ಭಾಂತಬ್ರಾ ಗ್ರಾಮವು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಏಳು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠ ಹಾಗೂ ಶ್ರೀ ಪಟ್ಟದ ಹಿರೇಮಠವು ಸ್ಥಾಪನೆಯಾಗಿದ್ದವು. ಈಗ ಶ್ರೀ ಹಿರೇಮಠವು ಗುರುಗಳಿಲ್ಲದೆ ಖಾಲಿ ಉಳಿದಿದೆ. ವಿರಕ್ತಮಠವು ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿಯಾಗಿದೆ.

ವಿರಕ್ತಮಠ: ಭಾತಂಬ್ರಾ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ವಿರಕ್ತಮಠವು, ಹನ್ನೆರಡನೆಯ ಶತಮಾನದ ಕಲ್ಯಾಣದ ಕ್ರಾಂತಿಯ ನಂತರ ಪ್ರಾರಂಭವಾಗಿದೆ. ಪುರಾತನ ಇತಿಹಾಸವಿದ್ದರೂ ದಾಖಲೆಗಳನ್ನು ಸಂರಕ್ಷಿಸಿಡದ ಕಾರಣ ಮಠದ ಪರಂಪರೆಯ ಬಗ್ಗೆ ಮಾಹಿತಿ ಮರೆಯಾಗಿದೆ. ಮಠದ ಆವರಣದಲ್ಲಿ ಐದು ಗದ್ದುಗೆಗಳು ಸ್ಥಾಪನೆಯಾಗಿದ್ದವು. ಇವುಗಳಲ್ಲಿ ಎರಡು ಗದ್ದುಗೆಗಳನ್ನು ಸಂರಕ್ಷಿಸಲಾಗಿದ್ದು ಮೂರು ಗದ್ದುಗೆಗಳು ನಶಿಸಿ ಹೋಗಿವೆ. ಈ ಆಧಾರದಿಂದ ಮಠದ ಇತಿಹಾಸವನ್ನು ಗುರುತಿಸಬಹುದಾಗಿದೆ.

ಪರಂಪರೆ: ಮಠದ ಪರಂಪರೆಯಲ್ಲಿ ಶ್ರೀ ವಿರೂಪಾಕ್ಷ ಸ್ವಾಮಿಗಳು ಹಾಗೂ ಈಗಿನ ಶ್ರೀ ಶಿವಯೋಗೀಶ್ವರ ಸ್ವಾಮಿಗಳ ಹೆಸರುಗಳನ್ನು ಗುರುತಿಸಬಹುದಾಗಿದೆ. ಕಳೆದ ಎಪ್ಪತ್ತು ವರ್ಷಗಳ ಹಿಂದೆ ಮಠದ ಆಡಳಿತವನ್ನು ನಡೆಸಿದ ಶ್ರೀ ವಿರೂಪಾಕ್ಷ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸುವ ಗೋಜಿಗೆ ಹೋಗದೆ ಧಾರ್ಮಿಕ ಕಾರ್ಯಗಳಲ್ಲಿ ನಿರತರಾಗಿದ್ದರು. ನಂತರ ಅವರು ಲಿಂಗೈಕ್ಯರಾದ ಮೇಲೆ ಮಠಾಧೀಶರಿಲ್ಲದೆ ಮಠವು ಖಾಲಿ ಉಳಿಯಿತು. ಆಗ ಮಠದಲ್ಲಿದ್ದ ಕಾಗದ ಪತ್ರಗಳು ಇತರೆ ದಾಖಲೆಗಳು ಗೆದ್ದಲು ತಿಂದು ನಶಿಸಿ ಹೋದವು ಎಂದು ಹೇಳಲಾಗುತ್ತದೆ.

ಶ್ರೀ ಶಿವಯೋಗೀಶ್ವರ ಸ್ವಾಮಿಗಳು ಆಂಧ್ರಪ್ರದೇಶದ ಮೇದಕ ಜಿಲ್ಲೆಯ ಅಚ್ಚೆಂದಿ ಗ್ರಾಮದ ಶ್ರೀ ಬಸವಯ್ಯ

ಮತ್ತು ಶ್ರೀಮತಿ ಗುಜ್ಜಮ್ಮನವರ ಪುತ್ರರಾಗಿ ಜನಿಸಿದರು. ಗುರುಗಳು ಬಾಲ್ಯದಲ್ಲಿಯೇ ಉನ್ನತ ಧ್ಯೇಯೋದ್ದೇಶದ ಕನಸನ್ನು ಕಂಡು ಜನ್ಮಸ್ಥಳದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ, ಕಮಲನಗರದ ಶಾಂತಿವರ್ಧಕ ಶಾಲೆಯಲ್ಲಿ ಪ್ರೌಢಶಿಕ್ಷಣವನ್ನು ಮುಗಿಸಿದರು. ಇವರ ಬೌದ್ಧಿಕ ಕೌಶಲ್ಯವನ್ನು ಗುರುತಿಸಿ, ಭಾಲ್ಕಿ ಮಠದ ಉತ್ತರಾಧಿಕಾರಿಗಳನ್ನಾಗಿ ೧೯೫೭ರಲ್ಲಿ ಆಯ್ಕೆ ಮಾಡಿಕೊಂಡರು. ಗುರುಗಳು ಶಿವಯೋಗ ಮಂದಿರದಲ್ಲಿ ಕಲಿತು, ಉನ್ನತ ವಿದ್ಯಾಭ್ಯಾಸಕ್ಕೆಂದು ೧೯೬೨ರಂದು ಕಾಶಿಗೆ ತೆರಳಿದರು. ಸಾಹಿತ್ಯ ಹಾಗೂ ದರ್ಶನ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ನಂತರ ಭಾಲ್ಕಿ ವಿರಕ್ತಮಠ ಮತ್ತು ಭಾತಂಬ್ರಾ ವಿರಕ್ತಮಠದ ಆಡಳಿತವನ್ನು ೧೯೭೫ರಲ್ಲಿ ಸ್ವೀಕರಿಸಿ, ಎರಡೂ ಮಠಗಳನ್ನು ಅಭಿವೃದ್ಧಿಪಡಿಸಿದರು. ಗುರುಗಳು ತಮ್ಮ ಕಾರ್ಯದಕ್ಷತೆಯಿಂದ ಶರಣ ಸಾಹಿತ್ಯವನ್ನು ಪ್ರಚಾರಪಡಿಸಿ, ಬೀದರ್ ನಗರದಲ್ಲಿಯೂ ಕ್ರಿಯಾಶೀಲ ಚಟುವಟಿಕೆಗಳನ್ನು ನಡೆಸುವ ಉದ್ದೇಶದಿಂದ ೧೯೮೩ರಲ್ಲಿ ಬಸವ ಮುಕ್ತಿಮಂದಿರವನ್ನು ಸ್ಥಾಪಿಸಿದರು. ಇಲ್ಲಿ ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಪ್ರಗತಿಯನ್ನು ಸಾಧಿಸಲು ಕಂಕಣತೊಟ್ಟರು.

ಸಮಾಜ ಸೇವೆ: ಮಠಾಧಿಪತಿಗಳು ಕೇವಲ ಧರ್ಮಪ್ರಸಾರಕ್ಕಷ್ಟೇ ಸೀಮಿತವಾಗಿರಬಾರದು ಎಂದು ಅರಿತ ಶ್ರೀ ಶಿವಯೋಗೀಶ್ವರ ಸ್ವಾಮಿಗಳು ಸಮಾಜದ ಉದ್ಧಾರಕ್ಕಾಗಿ ದೀನದಲಿತರ, ಅಸಹಾಯಕರ ಸೇವೆಯನ್ನು ಮಾಡಬೇಕೆಂದು, ಆಂಧ್ರ, ಮಹಾರಾಷ್ಟ್ರ, ಕರ್ನಾಟಕದ ಹಳ್ಳಿ ಹಳ್ಳಿಗಳನ್ನು ಸುತ್ತಿ ಬಸವತತ್ತ್ವವನ್ನು ಪ್ರಚಾರಪಡಿಸಿದರು. ೧೯೮೦ ರಿಂದ ೧೯೯೨ ರವರೆಗೆ ಸುಮಾರು ೧೧೦೧ ಹಳ್ಳಿಗಳಲ್ಲಿ ಪಾದಯಾತ್ರೆಯನ್ನು ಮುಗಿಸಿದರು. ಮಠದ ಪರಂಪರೆಯಲ್ಲಿ ಇದೊಂದು ಐತಿಹಾಸಿಕ ದಾಖಲೆಯಾಗಿ ಉಳಿದಿದೆ. ೧೯೯೩ರಲ್ಲಿ ಖಿಲಾರಿಯಲ್ಲಿ ಭೂಕಂಪವಾದಾಗ ಧನಿಕರಿಂದ ಹಣವನ್ನು ಸಂಗ್ರಹಿಸಿ ಸಂತ್ರಸ್ಥರಿಗೆ ನೀಡಿದರು. ಅಲ್ಲದೆ ಸಂತ್ರಸ್ಥ ಕುಟುಂಬದ ಎರಡು ಅನಾಥ ಎಳೆ ಮಕ್ಕಳನ್ನು ಕರೆತಂದು ಮಠದಲ್ಲಿ ಪೋಷಣೆ ಮಾಡಿ, ಅವರಿಗೆ ಜೀವನ ಮಾರ್ಗವನ್ನು ಕಲ್ಪಿಸಿದ್ದು ಇವರ ಮಾನವೀಯ ಹಾಗೂ ಸಾಮಾಜಿಕ ಸೇವೆಗೆ ಹಿಡಿದ ಕೈಗನ್ನಡಿಯಾಗಿದೆ.

ಶೈಕ್ಷಣಿಕ ಸೇವೆ: ೧೯೯೩ರಲ್ಲಿ ಶ್ರೀ ಬಸವೇಶ್ವರ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಟ್ರಸ್ಟನ್ನು ಪ್ರಾರಂಭಿಸಿ ಬಸವ ಗುರುಕುಲ ಹಿರಿಯ ಪ್ರಾಥಮಿಕ ಶಾಲೆ, ಶ್ರೀ ಸಿದ್ಧರಾಮ ಅನಾಥಾಶ್ರಮವನ್ನು ಪ್ರಾರಂಭಿಸಲಾಗಿದೆ. ಅಲ್ಲದೆ ವಿರಕ್ತಮಠ ವಿದ್ಯಾಸಂಸ್ಥೆಯಡಿ ಭಾತಂಬ್ರಾ ಹಾಗೂ ಭಾಲ್ಕಿಯಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳನ್ನು ಪ್ರಾರಂಭಿಸಲಾಗಿದೆ. ಕಲಿಯುವ ನೂರುಮಕ್ಕಳಿಗೆ ಮಠದಲ್ಲಿ ಆಶ್ರಯ ಕಲ್ಪಿಸಿ, ಅನ್ನದಾಸೋಹ ಮತ್ತು ವಸತಿ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ಧಾರ್ಮಿಕ ಕಾರ್ಯಗಳು: ಶ್ರೀ ಶಿವಯೋಗೀಶ್ವರ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಭಾತಂಭ್ರಾ, ಭಾಲ್ಕಿ ಹಾಗೂ ಬೀದರ್‌ನ ಮಠಗಳಲ್ಲಿ ಧಾರ್ಮಿಕ ಕಾರ್ಯಗಳು ಚುರುಕುಗೊಂಡವು. ಶ್ರೀ ಹಾನಗಲ್ಲು ಕುಮಾರ ಸ್ವಾಮಿಗಳ ಜನ್ಮ ದಿನೋತ್ಸವವನ್ನು ಆಚರಣೆ ಮಾಡಲಾಗುತ್ತಿದೆ. ಶ್ರಾವಣಮಾಸದಲ್ಲಿ ಈ ಮೂರು ಮಠಗಳಲ್ಲಿ ಧರ್ಮಬೋಧನೆ, ಪ್ರಗತಿಪರ ವಿಚಾರಗಳ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಿ ಜನಜಾಗೃತಿಯನ್ನುಂಟು ಮಾಡುತ್ತಿದ್ದಾರೆ.

ಸಾಹಿತ್ಯ ಸೇವೆ: ಕಲ್ಯಾಣ ಕರ್ನಾಟಕ ಪ್ರಕಾಶನ ಸಂಸ್ಥೆಯನ್ನು ಪ್ರಾರಂಭಿಸಿರುವ ಶ್ರೀ ಶಿವಯೋಗೀಶ್ವರ ಸ್ವಾಮಿಗಳು ಈವರೆಗೆ ಬಯಲುಕಾರುಣಿಕ, ವಚನಕಾರರ ಪ್ರಮುಖ ವಚನಗಳನ್ನು ಆಯ್ದು, ಸುಮಾರು ಮೂವತ್ತೈದು ಪುಸ್ತಕಗಳನ್ನು ಪ್ರಕಟಿಸಿ ಸಾಮಾನ್ಯ ಜನರಿಗೆ ವಚನ ಸಾಹಿತ್ಯವನ್ನು ಮುಟ್ಟಿಸುವ ಕಾಯಕದಲ್ಲಿ ನಿರತರಾಗಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಶಿವಯೋಗೀಶ್ವರ ಸ್ವಾಮಿಗಳು, ಶ್ರೀ ವಿರಕ್ತಮಠ, ಭಾತಂಭ್ರಾ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ.

ಆಧಾರ: 'ಬೀದರ್ ಜಿಲ್ಲೆಯ ವೀರಶೈವ ಮಠಗಳು', ಲೇಖಕರು: ರಮೇಶ ಮೂಲಗೆ
'ಬಯಲು ಕಾರುಣಿಕ', ಸಂಪಾದನೆ: ಸಂಗಮೇಶ ಸವದತ್ತಿ ಮಠ

❑

ಬೀದರ್ ತಾಲ್ಲೂಕು

ಬೀದರ್ ಜಿಲ್ಲೆಯ ಐದು ತಾಲ್ಲೂಕುಗಳಲ್ಲಿ ಒಂದಾದ ಬೀದರ್ ತಾಲ್ಲೂಕು, ಐತಿಹಾಸಿಕ ಹಾಗೂ ಧಾರ್ಮಿಕವಾಗಿ ಹೆಸರು ಪಡೆದಿದೆ. ಬೇರೆ ಧರ್ಮಗಳಿಗಿಂತ ವೀರಶೈವ ಧರ್ಮ ಪ್ರಬಲವಾಗಿ ಬೆಳೆದಿದೆ. ಈವರೆಗೆ ಎಪ್ಪತ್ತೈದಕ್ಕೂ ಹೆಚ್ಚು ಮಠಗಳು ಅಸ್ತಿತ್ವದಲ್ಲಿದ್ದವೆಂದು ಹೇಳಲಾಗುತ್ತಿದೆ.

ಇಂದು ನಾವದಗೇರಿಯ ಶ್ರೀ ವಿರಕ್ತಮಠ. ಚಿದ್ರಿಯ ಶ್ರೀ ಇರಂತಿಮಠ, ಶ್ರೀ ಮುಪ್ಪಯ್ಯನಮಠ ಮತ್ತು ಶ್ರೀಪಟ್ಟದಮಠ, ಯದಲಾಪುರದ ಶ್ರೀ ಚರಂತಿಮಠ, ಕಮಠಾಣದ ಶ್ರೀ ವಿರಕ್ತಮಠ, ಆಣದೂರು ಶ್ರೀ ಹಿರೇಮಠ. ಲಾಡಗೇರಿಯ ಶ್ರೀ ರುದ್ರಸ್ವಾಮಿಮಠ... ಹೀಗೆ ಎಂಟು ಮಠಗಳ ಜತೆಗೆ ಬೀದರ್ ನಗರದಲ್ಲಿ ಸ್ಥಾಪನೆಯಾಗಿ ಕಾರ್ಯನಿರ್ವಹಿಸುತ್ತಿರುವ ಭಾತಂಬ್ರಾ ಮಠದ ಶಾಖಾಮಠವಾದ ಬಸವ ಮುಕ್ತಿಮಂದಿರ, ಅಲಿಯಂಬರ, ಖಾರಗಿ, ಚಾಂಬೋಳ ಹಾಗೂ ನಿಡವಂಚದಲ್ಲಿ ಮಠಗಳು ಅಸ್ತಿತ್ವದಲ್ಲಿವೆ.

ಅಲಿಯಂಬರ

ಬೀದರ್ ತಾಲ್ಲೂಕಿನ ಅಲಿಯಂಬರ ಗ್ರಾಮವು ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಹದಿನಾಲ್ಕು ಕಿ.ಮೀ ದೂರದಲ್ಲಿದೆ. ಇಲ್ಲಿ ಎರಡು ಹಿರೇಮಠಗಳು ಅಸ್ತಿತ್ವದಲ್ಲಿವೆ. ಒಂದು ಮಠ ಅಸ್ತಿತ್ವ ಕಳೆದುಕೊಂಡಿದ್ದರೆ ಇನ್ನೊಂದು ಹಿರೇಮಠ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿದೆ.

ಹಿರೇಮಠ: ಅಲಿಯಂಬರ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಪುರಾತನ ಪರಂಪರೆಯಲ್ಲಿ ಬೆಳೆದ ಈ ಮಠವು ಹಿಂದೆ ವೈಭವಯುತವಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸಿದೆ ಎಂದು ಹೇಳಲಾಗುತ್ತದೆ.

ಪರಂಪರೆ:

೧. ಷ.ಬ್ರ.ಶ್ರೀ ಗವೀಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಕೊಬರಿ ಮಹಾಂತಪ್ಪ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಗಂಗಾಧರಪ್ಪ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಬಸವಲಿಂಗಪ್ಪ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ರಾಚೋಟೆಪ್ಪ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಮಹಾಂತಲಿಂಗ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ವಿಶ್ವನಾಥ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ನಾಗಭೂಷಣ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಪರಂಪರೆಯ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಈಗಿನ ಗುರುಗಳಾದ ಶ್ರೀ ನಾಗಭೂಷಣ ಶಿವಾಚಾರ್ಯ ಸ್ವಾಮಿಗಳು ಬಹುಭಾಷಾ ಪಂಡಿತರಾಗಿದ್ದು ಕನ್ನಡ, ಹಿಂದಿ, ಇಂಗ್ಲೀಷ್, ಸಂಸ್ಕೃತ, ನೇಪಾಳಿ ಭಾಷೆಯನ್ನು ಕಲಿತಿದ್ದಾರೆ. ಇವರು ಬನಾರಸ್ ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ ಮಾಡಿದ್ದಾರೆ. ಸಂಗೀತಗಾರರಾದ ಇವರಿಗೆ ಸಾಹಿತ್ಯರತ್ನ ಎಂಬ ಬಿರುದು ದೊರಕಿದೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ಪೂಜೆ, ಶ್ರಾವಣ, ಹುಣ್ಣಿಮೆ, ಅಮಾವಾಸ್ಯೆಗಳಲ್ಲಿ ವಿಶೇಷ ಪೂಜೆ ಸಂಪ್ರದಾಯದಂತೆ ನಡೆಯುತ್ತಿದೆ. ಗುರುಗಳು ಕೀರ್ತನೆ ಮತ್ತು ಭಜನೆಯ ಮೂಲಕ ಧಾರ್ಮಿಕ ತತ್ತ್ವಗಳನ್ನು ಪ್ರಚಾರಪಡಿಸಿ ವೀರಶೈವ ಧರ್ಮವನ್ನು ಬೆಳೆಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ನಾಗಭೂಷಣ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಅಲಿಯಂಬರ, ಬೀದರ್ ತಾ, ಬೀದರ್ ಜಿಲ್ಲೆ.

ಚಾಂಬೋಳ

ಬೀದರ್ ತಾಲ್ಲೂಕಿನ ಚಾಂಬೋಳ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹನ್ನೊಂದು ಕಿ.ಮೀ ದೂರದಲ್ಲಿದೆ. ಇಲ್ಲಿ ಪ್ರಾಚೀನ ಮಠವಾದ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಚಾಂಬೋಳ ಗ್ರಾಮದ ಮಧ್ಯಭಾಗದಲ್ಲಿ ರಂಭಾಪುರಿ ಪೀಠದ ಶಾಖಾಮಠವಾದ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ. ಪ್ರಾಚೀನ ಪರಂಪರೆಯನ್ನು ಹೊಂದಿರುವ ಈ ಮಠದಲ್ಲಿ ಐತಿಹಾಸಿಕ ದಾಖಲೆಗಳ ಸಂರಕ್ಷಣೆ ಮಾಡದೆ ಇರುವುದರಿಂದ ಪರಂಪರೆಯ ಮಾಹಿತಿಗಳು ಮರೆಯಾಗಿವೆ. ಶಿಷ್ಯವರ್ಗದ ಪರಂಪರೆಯಲ್ಲಿ ಬೆಳೆದಿರುವ ಈ ಮಠದ ಪರಂಪರೆಯಲ್ಲಿ ಸುಮಾರು ಇಪ್ಪತ್ತು ಜನ ಗುರುಗಳು ಅಧಿಕಾರವನ್ನು ನಡೆಸಿರಬಹುದೆಂದು ಹೇಳಲಾಗುತ್ತದೆ.

ಈ ಹಿಂದೆ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಮಠದ ಆಡಳಿತವನ್ನು ನಡೆಸಿದ್ದರೆಂದು ಹೇಳಲಾಗುತ್ತದೆ. ಈಗಿನ ಪಟ್ಟಾಧಿಕಾರಿಗಳು ಸಹ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳೆಂಬ ಅಭಿಧಾನದೊಂದಿಗೆ ಅಧಿಕಾರವನ್ನು ಪಡೆದಿದ್ದಾರೆ. ಇವರು ಬಸವನಬಾಗೇವಾಡಿ ತಾಲ್ಲೂಕಿನ ಇಂಗಳೇಶ್ವರ ಗ್ರಾಮದ ಶ್ರೀ ಸಿದ್ಧರಾಮಯ್ಯ ಮತ್ತು ಶ್ರೀಮತಿ ಸಿದ್ಧಮ್ಮ ಇವರ ಪುತ್ರರಾಗಿ ಜನಿಸಿ ಈ ಮಠಕ್ಕೆ ನೇಮಕಗೊಂಡಿದ್ದಾರೆ.

ಕಂತೆಭಿಕ್ಷ ಕಾಯಕವನ್ನು ಮಾಡಿ ಹಸಿದ ಅಸಹಾಯಕರಿಗೆ ಅನ್ನದಾಸೋಹವನ್ನು ಮಾಡುವ ಮೂಲಕ, ತಮ್ಮ ದಾಸೋಹ ಕ್ರಿಯೆಯನ್ನು ಮುಂದುವರೆಸಿದ್ದಾರೆ. ಹಸಿವಿನ ತೃಷೆಯನ್ನು ತೀರಿಸುವುದಷ್ಟೇ ಕಾಯಕವಲ್ಲ. ಜ್ಞಾನದ ತೃಷೆಯನ್ನು ತೀರಿಸಬೇಕೆಂಬ ಮಹಾದಾಸೆಯಿಂದ ಚಾಂಬೋಳದಲ್ಲಿ ನೀಲಮ್ಮ ತಾಯಿ ಕಿರಿಯ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿ, ಈಗ ಪ್ರೌಢಶಾಲೆಯವರೆಗೆ ವಿಸ್ತರಿಸಿದ್ದಾರೆ. ಗ್ರಾಮೀಣ ಮಕ್ಕಳ ಕಲಿಕೆಗೆ ನೆರವಾಗಲೆಂಬ ಮಹಾದಾಸೆಯಿಂದ ಶ್ರೀ ವೀರಭದ್ರೇಶ್ವರ ವಸತಿ ನಿಲಯವನ್ನು ತೆರೆದಿದ್ದಾರೆ. ಈ ರೀತಿ ಕಾಯಕದೊಂದಿಗೆ ಶೈಕ್ಷಣಿಕ ಮತ್ತು ಸಾಮಾಜಿಕ ಸೇವೆಯನ್ನು ಸದ್ದಿಲ್ಲದೆ ಮಾಡುತ್ತಿದ್ದಾರೆ.

ವಿಳಾಸ: ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಚಾಂಬೋಳ, ಬೀದರ್ ತಾ, ಬೀದರ್ ಜಿಲ್ಲೆ.

ನಿಡವಂಚಾ

ಬೀದರ್ ತಾಲ್ಲೂಕಿನ ನಿಡವಂಚಾ ಗ್ರಾಮವು ತಾಲ್ಲೂಕು ಕೇಂದ್ರದಿಂದ ಎಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಚೌಕಿಮಠವು ಅಸ್ತಿತ್ವದಲ್ಲಿದೆ.

ಚೌಕಿಮಠ: ನಿಡವಂಚಾ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಚೌಕಿಮಠವು ಅಪಾರ ಜನಪ್ರಿಯತೆಯನ್ನು ಗಳಿಸಿಕೊಂಡಿದೆ. ಚಿಕ್ಕಪಳ್ಳಿಯಲ್ಲಿ ಸ್ಥಾಪನೆಯಾಗಿರುವ ಈ ಮಠವು ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಸೇವೆಯಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಪುರಾತನ ಪರಂಪರೆಯನ್ನು ಹೊಂದಿರುವ ಈ ಮಠವು ಮುಸ್ಲಿಂ ಸಂತರೊಬ್ಬರನ್ನು ಮಠಾಧೀಶರನ್ನಾಗಿ ಮಾಡಿಕೊಂಡು, ಸರ್ವಧರ್ಮ ಸಮನ್ವಯತೆಯನ್ನು ನಾಡಿಗೆ ಸಾರಿದೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ಭದ್ರೇಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಭೀಮರಾಯಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಮಹಾರಾಯಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಬುದ್ದಪ್ಪಯ್ಯಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಸುಲ್ತಾನ್‌ಸಾಬ ಕೊಸಮಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಸಂಗಯ್ಯಸ್ವಾಮಿಗಳು
೭. ಶ್ರೀ ಮಾತೆ ತುಕ್ಕಮ್ಮ

೮. ಶ್ರೀ ಮ.ನಿ.ಪ್ರ. ಬಾಗಯ್ಯಸ್ವಾಮಿಗಳು
೯. ಶ್ರೀ ಮ.ನಿ.ಪ್ರ. ನಾಗಪ್ಪಸ್ವಾಮಿಗಳು
೧೦. ಶ್ರೀ ಮ.ನಿ.ಪ್ರ. ಸಿದ್ದಪ್ಪಸ್ವಾಮಿಗಳು
೧೧. ಶ್ರೀ ಮ.ನಿ.ಪ್ರ. ಗುಂಡಾರೆಡ್ಡಿಸ್ವಾಮಿಗಳು
೧೨. ಶ್ರೀ ಮ.ನಿ.ಪ್ರ. ಚನ್ನಮಲ್ಲಯ್ಯಸ್ವಾಮಿಗಳು
೧೩. ಶ್ರೀ ಮಾತೆ ಮೈತ್ರಾದೇವಿ
೧೪. ಶ್ರೀ ಮ.ನಿ.ಪ್ರ. ಮಡಿವಾಳೇಶ್ವರಸ್ವಾಮಿಗಳು

ಈ ರೀತಿ ಮಠದ ಪರಂಪರೆ ವಿಶಿಷ್ಟ ರೀತಿಯಲ್ಲಿ ಬೆಳೆದು ಬಂದಿದೆ. ಪರಂಪರೆಯಲ್ಲಿ ಮಹಿಳೆಯರು, ಮುಸ್ಲಿಮರು ಗುರುಗಳಾಗಿರುವುದನ್ನು ಗಮನಿಸಬಹುದು. ಅಲ್ಲದೆ ಎರಡು ಜನ ಗುರುಗಳು ಒಟ್ಟೊಟ್ಟಿಗೆ ಅಧಿಕಾರ ವಹಿಸಿಕೊಳ್ಳುವ ಪರಂಪರೆ ಈ ಮಠದಲ್ಲಿ ನಡೆದು ಬಂದಿದೆ. ಮಠದ ಸ್ಥಾಪಕರಾದ ಶ್ರೀ ಭದ್ರೇಶ್ವರಸ್ವಾಮಿಗಳು ಅನೇಕ ತತ್ತ್ವಪದಗಳನ್ನು ರಚಿಸಿದ್ದಾರೆ. ಜಾತಿ ಬೇಧವಿಲ್ಲದೆ ಗುರುವಿನ ಕಾಯಕವನ್ನು ಸಮರ್ಥವಾಗಿ ನಿರ್ವಹಿಸಬಲ್ಲ ಅರ್ಹ ವ್ಯಕ್ತಿ ಮಠಾಧಿಪತಿ ಯಾಗಬಹುದು ಎಂಬುದನ್ನು ತೋರಿಸಿಕೊಟ್ಟಿದೆ.

೧೯೮೪ ರಲ್ಲಿ ಶ್ರೀ ಮಾತೆ ಮೈತ್ರಾದೇವಿ ಮತ್ತು ಶ್ರೀ ಮಡಿವಾಳೇಶ್ವರರು ಒಟ್ಟಿಗೆ ಪಟ್ಟಾಧಿಕಾರವನ್ನು ಸ್ವೀಕರಿಸಿ, ಧಾರ್ಮಿಕ ಮತ್ತು ಸಾಮಾಜಿಕ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡರು. ಇವರು ಅಧಿಕಾರಕ್ಕೆ ಬಂದ ಮೇಲೆ ಮಠವು ಅಭಿವೃದ್ಧಿ ಗೊಂಡಿತು. ೨೦೦೧ ರಂದು ಶ್ರೀ ಮಡಿವಾಳೇಶ್ವರರು ಲಿಂಗೈಕ್ಯರಾಗಿದ್ದು, ಅವರ ಸಹಪಾಠಿಯಾಗಿದ್ದ ಮಾತೆ ಮೈತ್ರಾದೇವಿ ಯವರು ಅಧಿಕಾರವನ್ನು ನಡೆಸುತ್ತಿದ್ದಾರೆ.

ಶ್ರೀ ಗುರುಭದ್ರೇಶ್ವರ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ ನಿಡವಂಚಾದಲ್ಲಿ ಪ್ರಾಥಮಿಕ ಶಾಲೆ, ಪ್ರೌಢಶಾಲೆ ಹಾಗೂ ನವೋದಯ ಕೋಚಿಂಗ್ ಶಾಲೆಯನ್ನು ಪ್ರಾರಂಭಿಸಿ, ಗ್ರಾಮೀಣ ಮಕ್ಕಳ ಕಲಿಕೆಗೆ ನೆರವಾಗಿದ್ದಾರೆ.

ವಿಳಾಸ: ಶ್ರೀ ಮಾತೆ ಮೈತ್ರಾದೇವಿ, ಶ್ರೀ ಚೌಕಿಮಠ, ನಿಡವಂಚಾ, ಬೀದರ್ ತಾ, ಬೀದರ್ ಜಿಲ್ಲೆ.

❑

ಹುಮನಾಬಾದ್ ತಾಲ್ಲೂಕು

ಬೀದರ್ ಜಿಲ್ಲೆಯ ಹುಮನಾಬಾದ್ ತಾಲ್ಲೂಕು ಕೃಷಿ ಆಧಾರಿತ ಪ್ರದೇಶ. ಇಲ್ಲಿ ವೀರಶೈವ ಧರ್ಮ ಅಭಿವೃದ್ಧಿಗೊಂಡಿದೆ. ಹಿಂದೆ ಸುಮಾರು ನೂರೈವತ್ತು ಮಠಗಳು ಅಸ್ತಿತ್ವದಲ್ಲಿದ್ದವೆಂದು ಹೇಳಲಾಗುತ್ತದೆ. ಆದರೆ ಇಂದು ಕೇವಲ ಇಪ್ಪತ್ತೊಂದು ಮಠಗಳನ್ನು ಮಾತ್ರ ನೋಡಬಹುದಾಗಿದೆ.

ಇಟಗಾ

ಹುಮನಾಬಾದ್ ತಾಲ್ಲೂಕಿನ ಇಟಗಾ ಗ್ರಾಮವು ತಾಲ್ಲೂಕು ಕೇಂದ್ರದಿಂದ ಹತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ವಿರಕ್ತ ಪರಂಪರೆಯ ಶ್ರೀ ಚನ್ನಮಲ್ಲೇಶ್ವರ ತ್ಯಾಗಿಯೋಗಾಶ್ರಮವು ಅಸ್ತಿತ್ವದಲ್ಲಿದೆ.

ಚನ್ನಮಲ್ಲೇಶ್ವರ ತ್ಯಾಗಿಯೋಗಾಶ್ರಮ: ಇಟಗಾ ಗ್ರಾಮದಲ್ಲಿ ವಿರಕ್ತ ಪರಂಪರೆಯ ಶ್ರೀ ಚನ್ನಮಲ್ಲೇಶ್ವರ ತ್ಯಾಗಿಯೋಗಾಶ್ರಮವು ಸ್ಥಾಪನೆಯಾಗಿದೆ. ಐದು ತಲೆಮಾರುಗಳನ್ನು ಕಂಡಿರುವ ಈ ಮಠವು, ಸಮಾಜದ ಒಂದು ಅಂಗವಾಗಿ ಬೆಳೆದು ಧಾರ್ಮಿಕ ಪ್ರಜ್ಞೆಯನ್ನು ಮೂಡಿಸಿದೆ.

ಪರಂಪರೆ:

೧. ಶ್ರೀ ಚನ್ನಮಲ್ಲೇಶ್ವರಸ್ವಾಮಿಗಳು
೨. ಶ್ರೀ ಗುರುಬಸಯ್ಯಸ್ವಾಮಿಗಳು
೩. ಶ್ರೀ ಮಲ್ಲಯ್ಯಸ್ವಾಮಿಗಳು
೪. ಶ್ರೀ ವೀರಂತಯ್ಯಸ್ವಾಮಿಗಳು
೫. ಶ್ರೀ ಗುರುಬಸಯ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಪರಂಪರೆಯ ಗುರುಗಳು ಧಾರ್ಮಿಕ ಕಾರ್ಯಗಳಿಂದ ಹೆಸರು ಗಳಿಸಿದ್ದಾರೆ. ಈಗಿನ ಶ್ರೀ ಗುರುಬಸಯ್ಯಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ, ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸುವಂತೆ ಮಾಡಿದ್ದಾರೆ.

ವಿಳಾಸ: ಶ್ರೀ ಗುರುಬಸಯ್ಯ ಸ್ವಾಮಿಗಳು,ಶ್ರೀ ಚನ್ನಮಲ್ಲೇಶ್ವರ ತ್ಯಾಗಿಯೋಗಾಶ್ರಮ, ಇಟಗಾ, ಹುಮನಾಬಾದ್ ತಾ, ಬೀದರಜಿಲ್ಲೆ.

ಚಿಟಗುಪ್ಪ

ಹುಮನಾಬಾದ್ ತಾಲ್ಲೂಕಿನ ಚಿಟಗುಪ್ಪ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠ ಹಾಗೂ ಶ್ರೀ ಹಿರೇಮಠ ಸ್ಥಾಪನೆಯಾಗಿದ್ದು, ಶ್ರೀ ಹಿರೇಮಠ ಅಸ್ತಿತ್ವದಲ್ಲಿದ್ದು ಮುಂದುವರೆದಿದೆ.

ಹಿರೇಮಠ: ಚಿಟಗುಪ್ಪ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ಧಾರ್ಮಿಕ ಕಾರ್ಯಗಳನ್ನು ನಡೆಸುವ ಮೂಲಕ ಸಮಾಜವನ್ನು ಅಭಿವೃದ್ಧಿಪಡಿಸಿದೆ.

ಪರಂಪರೆ: ಮಠದ ಪರಂಪರೆಯ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಈ ಹಿಂದೆ ಅಧಿಕಾರ ನಡೆಸಿ ಲಿಂಗೈಕ್ಯರಾದ ಶ್ರೀ ಗುರುಲಿಯ್ಯಪ್ಪ ಶಿವಾಚಾರ್ಯ ಸ್ವಾಮಿಗಳು ಮತ್ತು ಈಗ ಅಧಿಕಾರ ನಡೆಸುತ್ತಿರುವ ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳ ಹೆಸರುಗಳನ್ನು ಮಾತ್ರ ದಾಖಲಿಸಬಹುದು. ಈಗಿನ ಗುರುಗಳು ಕಾಯಕದೊಂದಿಗೆ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ ಮಠವನ್ನು ಬೆಳೆಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಚಿಟಗುಪ್ಪ, ಹುಮನಾಬಾದ್ ತಾ, ಬೀದರ ಜಿಲ್ಲೆ.

ವಿಮಲಖೇಡ

ಹುಮನಾಬಾದ್ ತಾಲ್ಲೂಕಿನ ವಿಮಲಖೇಡ ಅಥವಾ ಬೇಮಳಖೇಡ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ

ಇಪ್ಪತ್ತೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ವಿಮಲಖೇಡ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ಪ್ರಾಚೀನ ಇತಿಹಾಸವನ್ನು ಹೊಂದಿದೆ. ಶ್ರೀ ಮಹಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿದರೆಂದು ಹೇಳಲಾಗುತ್ತದೆ.

ಪರಂಪರೆ:

೧. ಷ.ಬ್ರ.ಶ್ರೀ ಮಹಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ರುದ್ರದೇವರು
೩. ಷ.ಬ್ರ.ಶ್ರೀ ಹಿರಿ ಶಾಂತದೇವರು
೪. ಷ.ಬ್ರ.ಶ್ರೀ ರಾಟೋಟಿದೇವರು
೫. ಷ.ಬ್ರ.ಶ್ರೀ ಗುರುಲಿಂಗದೇವರು
೬. ಷ.ಬ್ರ.ಶ್ರೀ ಶಾಂತಪ್ಪದೇವರು
೭. ಷ.ಬ್ರ.ಶ್ರೀ ಸಂಗನಬಸಪ್ಪದೇವರು
೮. ಷ.ಬ್ರ.ಶ್ರೀ ರುದ್ರದೇವರು
೯. ಷ.ಬ್ರ.ಶ್ರೀ ಅಯ್ಯಪ್ಪದೇವರು
೧೦. ಷ.ಬ್ರ.ಶ್ರೀ ರಾಚೋಟಪ್ಪದೇವರು
೧೧. ಷ.ಬ್ರ.ಶ್ರೀ ಗುರುಪಾದಪ್ಪದೇವರು
೧೨. ಷ.ಬ್ರ.ಶ್ರೀ ಶಾಂತಪ್ಪದೇವರು
೧೩. ಷ.ಬ್ರ.ಶ್ರೀ ಎರಡನೆಯ ಮಹಾಂತೇಶದೇವರು
೧೪. ಷ.ಬ್ರ.ಶ್ರೀ ವೀರಭದ್ರಪ್ಪದೇವರು
೧೫. ಷ.ಬ್ರ.ಶ್ರೀ ರಾಚೋಟಪ್ಪದೇವರು
೧೬. ಷ.ಬ್ರ.ಶ್ರೀ ಗುರುಪಾದ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಪರಂಪರೆಯ ಬಹುತೇಕ ಎಲ್ಲಾ ಗುರುಗಳು ಪವಾಡ ಪುರುಷರಾಗಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಪರಂಪರೆಯ ಹದಿಮೂರನೆಯ ಮಠಾಧೀಶರಾದ ಶ್ರೀ ಎರಡನೆಯ ಮಹಾಂತೇಶ ದೇವರ ಬಗ್ಗೆ ಜನಪದ ಕಥೆಗಳು ಸೃಷ್ಟಿಯಾಗಿವೆ. ಅದೇ ರೀತಿ ಹದಿನಾಲ್ಕನೆಯ ಗುರುಗಳಾದ ಶ್ರೀ ವೀರಭದ್ರಪ್ಪ ದೇವರು ತತ್ತ್ವ ಪದಗಳ ರಚನೆಯಲ್ಲಿ ಹೆಸರು ಗಳಿಸಿದ್ದರು. ಈಗಿನ ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳು ಗೊರಟ ಗ್ರಾಮದ ಶ್ರೀ ರೇವಣ ಸಿದ್ದಯ್ಯ ಮತ್ತು ಶ್ರೀಮತಿ ತಂಗ್ಯಮ್ಮನವರ ಪುತ್ರರಾಗಿ ಜನಿಸಿದರು. ಬಾಲ್ಯದಲ್ಲಿಯೇ ಆಧ್ಯಾತ್ಮ ಚಿಂತನೆಗಳನ್ನು ಮೈಗೂಡಿಸಿ ಕೊಂಡು ತಮ್ಮ ಹನ್ನೆರಡನೆಯ ವರ್ಷದಲ್ಲಿ ಸೋಲಾಪುರ ಜಿಲ್ಲೆಯ ರಾಮಲಿಂಗೇಶ್ವರ ಕ್ಷೇತ್ರದಲ್ಲಿ ತಪಸ್ಸನ್ನು ಆಚರಿಸಿ, ೧೯೫೦ರಲ್ಲಿ ಕಾಶಿಯ ಬನಾರಸ್ ತ್ರಿವೇಣಿ ಸಂಗಮದಲ್ಲಿ ಸಂಸ್ಕೃತವನ್ನು ಕಲಿತು ಬಂದರು. ಆಧ್ಯಾತ್ಮ ಸಾಧನೆಯನ್ನು ಸಾಧಿಸಿ ಆಂಧ್ರ, ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಅನೇಕ ಅನುಷ್ಠಾನಗಳನ್ನು ಮಾಡಿ, ಅನುಷ್ಠಾನ ಮೂರ್ತಿ ಗಳೆಂದು ಹೆಸರು ಗಳಿಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಗುರುಪಾದ ಶಿವಾಚಾರ್ಯಸ್ವಾಮಿಗಳು, ಶ್ರೀ ಹಿರೇಮಠ, ವಿಮಲಖೇಡ, ಹುಮನಾಬಾದ್ ತಾ, ಬೀದರ ಜಿಲ್ಲೆ.

ಹುಮನಾಬಾದ್

ತಾಲ್ಲೂಕಿನ ಕೇಂದ್ರ ಸ್ಥಳವಾದ ಹುಮನಾಬಾದ್ ಪಟ್ಟಣವು ವ್ಯಾಪಾರ ಹಾಗೂ ಕೃಷಿಯನ್ನು ಅವಲಂಬಿಸಿದೆ. ಇಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆದಿದೆ. ಇದಕ್ಕೆ ಕುರುಹಾಗಿ ನೂರಾಒಂದು ಮಠಗಳು ಅಸ್ತಿತ್ವದಲ್ಲಿದ್ದವೆಂದು ಹೇಳಲಾಗು ತ್ತದೆ. ಅಂದು ಸ್ಥಾಪನೆಗೊಂಡ ಮಠಗಳಲ್ಲಿ ಈಗ ಶ್ರೀ ಬಸವತೀರ್ಥಮಠ, ಶ್ರೀ ಹಿರೇಮಠ, ಶ್ರೀ ಮುರುಘಾಮಠ ಅಸ್ತಿತ್ವ ದಲ್ಲಿದ್ದು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ. ಶ್ರೀ ಕೆಂಪಯ್ಯನಮಠ, ಶ್ರೀ ಕೆಂಚೇನಮಠ, ಶ್ರೀ ಕರೆನಮಠ,

ಶ್ರೀ ಕುಂಬಾರಮಠ, ಶ್ರೀ ಕರಿಬಸವೇಶ್ವರಮಠ, ಶ್ರೀ ಕಾಶಿಮಠ, ಶ್ರೀ ಸಿದ್ಧೇಶ್ವರಮಠ, ಶ್ರೀ ಟಂಕಸಾಲಿಮಠ, ಶ್ರೀ ಭಂಗಿಮಠ, ಶ್ರೀ ಹುಲಕುಂಬಿಮಠ, ಶ್ರೀ ಅನ್ನದಾನಮಠ, ಶ್ರೀ ಗುಂಡನಮಠ, ಶ್ರೀ ಫಲಹಾರಮಠ, ಶ್ರೀ ಪತ್ರಿಮಠ, ಶ್ರೀ ಗವಿಮಠ, ಶ್ರೀ ಸ್ತಂತಮಠ. ಇವುಗಳು ಗುರುಗಳಿಲ್ಲದೆ ಖಾಲಿ ಉಳಿದಿವೆ. ಕೆಲವು ಮಠಗಳು ಸಂಸಾರಿ ಮಠಗಳಾಗಿ ಪರಿವರ್ತನೆಯಾಗಿವೆ.

ಬಸವತೀರ್ಥ ವಿರಕ್ತಮಠ: ಹುಮನಾಬಾದ್ ನಗರದ ಹೊರಭಾಗದ ಪ್ರಶಾಂತ ವಾತಾವರಣದಲ್ಲಿ ಸ್ಥಾಪನೆಯಾಗಿರುವ ಬಸವತೀರ್ಥ ವಿರಕ್ತಮಠವು ವಿರಕ್ತ ಪರಂಪರೆಯ ಕೆಂಪಿನ ಸಮಯದಲ್ಲಿ ಮಠವಾಗಿ ಬೆಳೆದಿದೆ. ಪುರಾತನ ಕಾಲದ ಕಲ್ಲಿನ ಬೃಹದಾಕಾರದ ಕಟ್ಟಡವನ್ನು ಒಳಗೊಂಡಿರುವ ಈ ಮಠವು ಭವ್ಯತೆಯ ಸಂಕೇತವಾಗಿ ನಿಂತಿದೆ.

ಹನ್ನೆರಡನೆಯ ಶತಮಾನದಲ್ಲಿ ಸ್ಥಾಪನೆಯಾಗಿರಬಹುದಾದ ಈ ಮಠವನ್ನು, ಅನೇಕ ಗುರುಗಳು ಮುಂದುವರೆಸಿ ಈತನಕ ಬೆಳೆದು ಬರುವಂತೆ ಮಾಡಿದ್ದಾರೆ. ಆದರೆ ಈ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಈಗ ಶ್ರೀ ಇಂಗಳೇಶ್ವರ ವಿರಕ್ತ ಮಠದ ಶ್ರೀ ಚನ್ನಬಸವ ಸ್ವಾಮಿಗಳು ಮಠದ ಆಡಳಿತವನ್ನು ನೋಡಿಕೊಂಡು ಬರುತ್ತಿದ್ದಾರೆ. ಮಠದ ವತಿಯಿಂದ ಶ್ರೀ ಜೆ.ಸಿ.ಬಿ. ವಿದ್ಯಾಪೀಠವನ್ನು ಸ್ಥಾಪಿಸಿ ಶ್ರೀ ಬಸವತೀರ್ಥ ಗುರುಕುಲ ವಸತಿ ಶಾಲೆಯನ್ನು ಪ್ರಾರಂಭಿಸಲಾಗಿದೆ. ಸಂಕ್ರಾಂತಿ ಯಂದು ಮಠದಲ್ಲಿ ಜಾತ್ರೆಯನ್ನು ನಡೆಸುವ ಮೂಲಕ ಸಾವಿರಾರು ಜನರಿಗೆ ಅನ್ನಸಂತರ್ಪಣೆ ಕಾರ್ಯವನ್ನು ಮಾಡಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ ಚನ್ನಬಸವ ಸ್ವಾಮಿಗಳು, ಶ್ರೀ ಬಸವತೀರ್ಥವಿರಕ್ತಮಠ, ಹುಮನಾಬಾದ್, ಬೀದರ ಜಿಲ್ಲೆ.

ಮುರುಘಾಮಠ: ಹುಮನಾಬಾದ್ ನಗರದಲ್ಲಿ ಸ್ಥಾಪನೆಯಾಗಿರುವ ಶ್ರೀ ಮುರುಘಾಮಠವು ಚಿತ್ರದುರ್ಗ ಬೃಹನ್ಮಠದ ಶಾಖಾಮಠವಾಗಿ ಬೆಳೆದಿದೆ. ಹನ್ನೆರಡನೆಯ ಶತಮಾನದಲ್ಲಿ ಸ್ಥಾಪನೆಯಾಗಿರುವ ಈ ಮಠದ ಕಟ್ಟಡವು ವಿಶಾಲ ಅಂತಸ್ತಿನಲ್ಲಿ ಕಲ್ಲಿನಿಂದ ನಿರ್ಮಾಣಗೊಂಡಿದೆ. ಈ ಮಠದ ಕರ್ತೃ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ.

ಪರಂಪರೆ:

೧. ಶ್ರೀ ಮ.ನಿ.ಪ್ರ. ವಿರೂಪಾಕ್ಷೇಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಸಿದ್ಧಲಿಂಗೇಶ್ವರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಮಹಾಲಿಂಗೇಶ್ವರಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಮುರುಘಲಿಂಗೇಶ್ವರಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಗುರುಲಿಂಗೇಶ್ವರಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಕೈಲಾಸಲಿಂಗಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಶ್ರೀ ಕೈಲಾಸಲಿಂಗ ಸ್ವಾಮಿಗಳು ಕಳೆದ ಹದಿನೈದು ವರ್ಷಗಳ ಹಿಂದೆ ಪಟ್ಟಾಧಿ ಕಾರವನ್ನು ವಹಿಸಿಕೊಂಡು ಮಠವನ್ನು ಬೆಳೆಸಿದ್ದಾರೆ. ಇವರು ಮಹಾರಾಷ್ಟ್ರದ ಶ್ರೀ ಶಂಭುಲಿಂಗಸ್ವಾಮಿ ಮತ್ತು ಶ್ರೀಮತಿ ರತ್ನಾದೇವಿಯವರ ಪುತ್ರರಾಗಿ ಜನಿಸಿದರು. ವಿದ್ಯಾಭ್ಯಾಸದ ನಂತರ ಚಿಕ್ಕಮಗಳೂರು ಜಿಲ್ಲೆಯ ಆಲ್ದೂರು ಹೋಬಳಿಯ ಶ್ರೀ ಬೇರಗಂಡಿ ಮಠಕ್ಕೆ ಉತ್ತರಾಧಿಕಾರಿಗಳಾಗಿ ನೇಮಕಗೊಂಡಿದ್ದರು. ನಂತರ ಇಲ್ಲಿನ ಶ್ರೀ ಮುರುಘಾಮಠಕ್ಕೆ ಉತ್ತರಾಧಿಕಾರಿ ಗಳಾಗಿ ನೇಮಕಗೊಂಡು, ೧೯೮೫ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡರು.

ಮಠದಲ್ಲಿ ನಾಲ್ಕು ಗದ್ದುಗೆಗಳು ಸ್ಥಾಪನೆಯಾಗಿವೆ. ಇವುಗಳಿಗೆ ನಿತ್ಯ ಪೂಜೆ, ಶ್ರಾವಣಮಾಸ ಮತ್ತು ಅಮಾವಾಸ್ಯೆ ಯಲ್ಲಿ ಧಾರ್ಮಿಕ ಕಾರ್ಯಗಳ ಜತೆಗೆ ಬಸವತತ್ತ್ವದ ಬಗ್ಗೆ ಉಪನ್ಯಾಸವನ್ನು ನಡೆಸಿಕೊಡಲಾಗುತ್ತಿದೆ. ಸರ್ಕಾರದ ವತಿಯಿಂದ ನಡೆಯುವ ಅಂಗನವಾಡಿಗೆ ಮಠವು ಸ್ಥಳಾವಕಾಶವನ್ನು ಕಲ್ಪಿಸಿಕೊಟ್ಟಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಕೈಲಾಸಲಿಂಗ ಸ್ವಾಮಿಗಳು, ಶ್ರೀ ಮುರುಘಾಮಠ, ಹುಮನಾಬಾದ್ , ಬೀದರ ಜಿಲ್ಲೆ.

ಹಿರೇಮಠ: ಹುಮನಾಬಾದ್ ನಗರದ ಬಾಲಾಜಿ ಗಲ್ಲಿಯಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ರಂಭಾಪುರಿ ಪೀಠದ ಶಾಖಾಮಠವಾಗಿ ಬೆಳೆದಿದೆ. ಈ ಮಠದ ಪರಂಪರೆಯಲ್ಲಿ ಬರುವ ಗುರುಗಳು ಮಧ್ಯವಯಸ್ಕರಾಗುವ ತನಕ ಮಠಾಧಿಪತಿಗಳಾಗಿ ಕಾರ್ಯನಿರ್ವಹಿಸಿ, ತಮ್ಮ ವಂಶಸ್ಥರಿಗೆ ಅಧಿಕಾರವನ್ನು ಬಿಟ್ಟುಕೊಟ್ಟು, ಗೃಹಸ್ಥಾಶ್ರಮವನ್ನು ಸೇರುವ ಸಂಪ್ರದಾಯ ಬೆಳೆದು

ಬಂದಿದೆ. ಈ ಪ್ರಕಾರದಂತೆ ಹಿಂದೆ ಅಧಿಕಾರದಲ್ಲಿದ್ದ ಶ್ರೀ ರಾಮಯ್ಯ ಸ್ವಾಮಿಗಳು ಶ್ರೀ ಸಿದ್ಧರಾಮ ಸ್ವಾಮಿಗಳಿಗೆ ಅಧಿಕಾರವನ್ನು ನೀಡಿ ಗೃಹಸ್ಥಾಶ್ರಮವನ್ನು ಸೇರಿದ್ದಾರೆ. ಈಗಿನ ಗುರುಗಳಾದ ಶ್ರೀ ಸಿದ್ಧರಾಮಯ್ಯ ಶಿವಾಚಾರ್ಯ ಸ್ವಾಮಿಗಳು ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಾ ಮಠವನ್ನು ಮುನ್ನಡೆಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧರಾಮಯ್ಯ ಶಿವಾಚಾರ್ಯ ಸ್ವಾಮಿಗಳು, ಶ್ರೀಹಿರೇಮಠ, ಬಾಲಾಜಿಗಲ್ಲಿ, ಹುಮನಾಬಾದ್, ಬೀದರ ಜಿಲ್ಲೆ.

ಹುಡುಗಿ

ಹುಮನಾಬಾದ್ ತಾಲ್ಲೂಕಿನ ಹುಡುಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಐದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠ ಮತ್ತು ಶ್ರೀ ಹಿರೇಮಠ ಸ್ಥಾಪನೆಯಾಗಿವೆ.

ಹಿರೇಮಠ: ಹುಡುಗಿ ಗ್ರಾಮದಲ್ಲಿರುವ ಶ್ರೀ ಹಿರೇಮಠವನ್ನು ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮಿಗಳು ಲೋಕ ಸಂಚಾರ ಮಾಡುತ್ತಿದ್ದಾಗ ಈ ಗ್ರಾಮದಲ್ಲಿ ನೆಲೆಸಿ, ಮಠವನ್ನು ಸ್ಥಾಪಿಸಿದರೆಂದು ಹೇಳಲಾಗುತ್ತಿದೆ. ಅಂದಿನಿಂದ ಈತನಕ ಮಠವು ಧಾರ್ಮಿಕ ಕಾರ್ಯಗಳನ್ನು ನಡೆಸುವ ಮೂಲಕ ಅಸ್ತಿತ್ವವನ್ನು ಉಳಿಸಿಕೊಂಡಿದೆ.

ಪರಂಪರೆ:

೧. ಷ.ಬ್ರ.ಶ್ರೀ ಸೋಮಶೇಖರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಚನ್ನಮಲ್ಲಪ್ಪ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಸಂಗನಬಸಪ್ಪ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಮಹಾಲಿಂಗಪ್ಪ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಚನ್ನಮಲ್ಲಪ್ಪ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಕರಿಬಸಪ್ಪ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ವಿರೂಪಾಕ್ಷಪ್ಪ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ಗುರುಲಿಂಗಯ್ಯ ಶಿವಾಚಾರ್ಯಸ್ವಾಮಿಗಳು
೧೦. ಷ.ಬ್ರ.ಶ್ರೀ ಸೋಮಶೇಖರ ಶಿವಾಚಾರ್ಯಸ್ವಾಮಿಗಳು
೧೧. ಷ.ಬ್ರ.ಶ್ರೀ ವಿರೂಪಾಕ್ಷ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಪರಂಪರೆಯ ಏಳನೆಯ ಗುರುಗಳಾದ ಶ್ರೀ ಕರಿಬಸಪ್ಪ ಶಿವಾಚಾರ್ಯ ಸ್ವಾಮಿಗಳು ಮಹಾಪವಾಡ ಪುರುಷರಾಗಿ ಬೆಳೆದಿದ್ದರು. ಇವರು ಧರ್ಮದ ಹುಚ್ಚಿನಿಂದ ಇಹಲೋಕದ ಚಿಂತನೆಗಳನ್ನು ಮರೆತು ದೈವತ್ವಕ್ಕೆ ತಮ್ಮನ್ನು ಅರ್ಪಿಸಿಕೊಂಡಿದ್ದರು. ಇವರು ಹುಟ್ಟಬಟ್ಟೆಯನ್ನೇ ಕಿತ್ತೊಗೆದು ದಿಗಂಬರರಾಗಿ, ಗೊಟಂಗೊಟ್ಟಿಗೆ ಹೋಗಿ ಅಲ್ಲಿ ದೀರ್ಘತಪಸ್ಸನ್ನು ಆಚರಿಸಿದರು. ನಂತರ ಹಂಪಿಯಲ್ಲಿ ನೆಲೆಸಿ ನಂತರ ಒಂಟೆಯ ಮೇಲೆ ಕುಳಿತು ಗುಲ್ಬರ್ಗ ಮಾರ್ಗವಾಗಿ ಹುಡುಗಿ ಗ್ರಾಮಕ್ಕೆ ಬಂದು, ರಾಮಲಿಂಗೇಶ್ವರ ದೇವಾಲಯದಲ್ಲಿ ಅನುಷ್ಠಾನ ಕೈಗೊಂಡು ಮಠವನ್ನು ಬೆಳೆಸಿದರು. ಇವರು ೧೮೮೭ರಲ್ಲಿ ಲಿಂಗೈಕ್ಯರಾದರು.

ಶ್ರೀ ಕರಿಬಸಪ್ಪ ಶಿವಾಚಾರ್ಯ ಸ್ವಾಮಿಗಳ ಪವಾಡಗಳ ಬಗ್ಗೆ ಲಾವಣಿಗಳು, ಕವನಗಳು ರಚಿತಗೊಂಡು ಪ್ರಕಟ ಗೊಂಡಿವೆ. ಈಗ ಅಧಿಕಾರದಲ್ಲಿರುವ ಶ್ರೀ ವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳು ಖಟಕ ಚಿಂಚೋಳಿಯಲ್ಲಿ ಶ್ರೀ ತಿಪ್ಪಯ್ಯ ಸ್ವಾಮಿ ಮತ್ತು ಶ್ರೀಮತಿ ನೀಲಮ್ಮನವರ ಪುತ್ರರಾಗಿ ೧೯೩೫ರಲ್ಲಿ ಜನಿಸಿದರು. ಇವರು ಈ ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡು ೧೯೬೩ರಲ್ಲಿ ಪಟ್ಟಾಧಿಕಾರವನ್ನು ಪಡೆದರು. ಗುರುಗಳು ಕ್ರಿಯಾಶೀಲರಾಗಿ ಧಾರ್ಮಿಕ ಕಾರ್ಯಗಳನ್ನು ಮಾಡುವುದಲ್ಲದೆ ಮಠಧ ಅಭಿವೃದ್ಧಿಯ ಕಡೆಗೂ ಗಮನಹರಿಸಿದ್ದಾರೆ. ಇತ್ತೀಚೆಗೆ 'ಶ್ರೀ ಕರಿಬಸವೇಶ್ವರ ಶಿಕ್ಷಣ ಸಂಸ್ಥೆ 'ಯನ್ನು ಸ್ಥಾಪಿಸಿ ಈ ಮೂಲಕ ಪ್ರೌಢಶಾಲೆಯನ್ನು ಪ್ರಾರಂಭಿಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಹುಡುಗಿ, ಹುಮನಾಬಾದ್, ಬೀದರ ಜಿಲ್ಲೆ.

ವಿರಕ್ತಮಠ: ಹುಡುಗಿ ಗ್ರಾಮದ ಮಧ್ಯಭಾಗದಲ್ಲಿ ಶ್ರೀ ವಿರಕ್ತಮಠವು ಶ್ರೀ ಚನ್ನಮಲ್ಲೇಶ್ವರ ಸ್ವಾಮಿಗಳಿಂದ ಸ್ಥಾಪನೆಯಾಗಿದೆ. ಕುಮಾರ ಸಮಯದ ಪರಂಪರೆಯಲ್ಲಿ ಬೆಳೆದಿರುವ ಈ ಮಠಕ್ಕೆ ಸುಮಾರು ಆರುನೂರು ವರ್ಷಗಳ ಇತಿಹಾಸವಿದೆ. ಆದರೆ ಮಠದಲ್ಲಿ ಅಧಿಕಾರ ನಡೆಸಿದ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಮಠದ ಆವರಣದಲ್ಲಿ ಮೂರು ಗದ್ದುಗೆಗಳು ಸ್ಥಾಪನೆಯಾಗಿವೆ. ಈ ಹಿಂದೆ ಅಧಿಕಾರ ನಡೆಸಿ ೧೯೯೭ರಲ್ಲಿ ಲಿಂಗೈಕ್ಯರಾದ ಶ್ರೀ ಗುರುಬಸವ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿದ್ದರು. ಈಗ ಶ್ರೀ ಚನ್ನಮಲ್ಲ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ.

ವಿಳಾಸ: ಶ್ರೀ ಚನ್ನಮಲ್ಲ ದೇವರು, ಶ್ರೀ ವಿರಕ್ತಮಠ, ಹುಡುಗಿ, ಹುಮನಾಬಾದ್, ಬೀದರ ಜಿಲ್ಲೆ.

ಹುಲಕುಂಠಿ

ಹುಮನಾಬಾದ್ ತಾಲ್ಲೂಕಿನ ಹುಲಕುಂಠಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಹನ್ನೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವಗೊಂಡು ಈ ಗ್ರಾಮವನ್ನು ಅಭಿವೃದ್ಧಿಪಡಿಸಿದೆ.

ವಿರಕ್ತಮಠ: ಹುಲಕುಂಠಿ ಗ್ರಾಮದ ಶ್ರೀ ವಿರಕ್ತಮಠವು ವಿರಕ್ತ ಸಂಪ್ರದಾಯದ ಕೆಂಪಿನ ಸಮಯದ ಈ ಮಠವನ್ನು ಹದಿನೆಂಟನೆಯ ಶತಮಾನದಲ್ಲಿ ಶ್ರೀ ಹೊಸಕೋಟೆ ಮಹಾಂತ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟಿದೆ. ಗುರುಗಳು ಲೋಕಸಂಚಾರ ದಲ್ಲಿದ್ದ ಸಂದರ್ಭದಲ್ಲಿ ಬಸವತೀರ್ಥ ಮತ್ತು ಹುಲಕುಂಠಿಯಲ್ಲಿ ಮಠವನ್ನು ಸ್ಥಾಪಿಸಿ ಬೆಂಗಳೂರಿಗೆ ಹೋಗಿ ಬೇಲಿಮಠವನ್ನು ಸ್ಥಾಪಿಸಿದರೆಂದು ತಿಳಿದು ಬರುತ್ತದೆ.

ಹುಮನಾಬಾದ್ ಪಟ್ಟಣದ ಹತ್ತಿರದ ದಟ್ಟ ಕಾಡಿನಲ್ಲಿ ಸ್ಥಾಪನೆಗೊಂಡಿರುವ ಈ ಮಠವು ಅಪಾರ ಭಕ್ತರನ್ನು ಸಂಪಾದಿಸಿಕೊಂಡಿದೆ. ಈಗ ಮಠಾಧೀಶರಿಲ್ಲದೆ ಮಠವು ಖಾಲಿ ಉಳಿದಿದ್ದರೂ, ಪುರ ಪ್ರಮುಖರ ಸಂಘಟನೆಯಿಂದ ಎಂದಿನಂತೆಯೇ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ರುದ್ರಮುನಿಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಚನ್ನವೀರ ಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಜೋಳದಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ತೋಂಟದಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಸಿದ್ಧಬಸವಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಶಾಂತಲಿಂಗಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಪ್ರಭುಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಶಾಂತಲಿಂಗಸ್ವಾಮಿಗಳು
೯. ಶ್ರೀ ಮ.ನಿ.ಪ್ರ. ಕರಿಬಸವಸ್ವಾಮಿಗಳು
೧೦. ಶ್ರೀ ಮ.ನಿ.ಪ್ರ. ಶಿವಾನಂದಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಇತ್ತೀಚೆಗೆ ಶ್ರೀ ಶಿವಾನಂದ ಸ್ವಾಮಿಗಳ ನಂತರ ಮಠಾಧೀಶರಿಲ್ಲದಿದ್ದಾಗ ಇಲ್ಲಿನ ಪ್ರಮುಖರು ಜೀರ್ಣೋದ್ಧಾರ ಸಮಿತಿಯನ್ನು ರಚಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ವಿಳಾಸ: ಶ್ರೀ ವಿರಕ್ತಮಠ, ಹುಲಕುಂಠಿ, ಹುಮನಾಬಾದ್ ತಾಲ್ಲೂಕು, ಬೀದರ ಜಿಲ್ಲೆ.

ಆಧಾರ: ಬೀದರ್ ಜಿಲ್ಲೆಯ ವೀರಶೈವ ಮಠಗಳು ಒಂದು ಸಾಂಸ್ಕೃತಿಕ ಅಧ್ಯಯನ, ಲೇಖಕರು : ರಮೇಶ್ ಮೂಲಗೆ
ಬೆಂಗಳೂರು ನಗರದ ವೀರಶೈವ ಮಠಗಳು ಒಂದು ಸಾಂಸ್ಕೃತಿಕ ಅಧ್ಯಯನ, ಲೇಖಕರು : ಡಾ.ಬಿ.ಸಿ. ವೀರಪ್ಪ

❑

ಬೆಳಗಾವಿ ಜಿಲ್ಲೆ



ಬೆಳಗಾವಿ ತಾಲ್ಲೂಕು : ೧. ಭೂತ ರಾಮನ ಹಳ್ಳಿ, ೨. ಶಹಪುರ, ೩. ಮುತ್ನಾಳು **ಬೈಲಹೊಂಗಲ ತಾಲ್ಲೂಕು** : ೧. ಸತ್ತಿಗೇರೆ, ೨. ಸಂಪಗಾಂವ್, ೩. ದೊಡವಾಡ, ೪. ಕಾದರವಳ್ಳಿ, ೫. ಕಿತ್ತೂರು

ಸವದತ್ತಿ ತಾಲ್ಲೂಕು : ೧. ಮುನವಳ್ಳಿ, ೨. ಮುರಗೋಡು, ೩. ಸತ್ತಿಗೆರೆ, ೪. ಹೂಲಿ, ೫. ಇನಾಂ ಹೊಂಗಲ, ೬. ಹೊಸೂರು

ರಾಮದುರ್ಗ ತಾಲ್ಲೂಕು : ೧. ಅವರಾದಿ, ೨. ತೋರಗಲ್ಲು , ೩. ಚಂದರಗಿ, ೪. ಬಟಕುರ್ಕಿ ೫. ಕಟಕೋಳ ೬. ಸಿರಸಂಗಿ

ಖಾನಾಪುರ ತಾಲ್ಲೂಕು : ೧. ನಂದಗಡ,

ಗೋಕಾಕ್ ತಾಲ್ಲೂಕು : ೧. ಸಾವಳಗಿ, ೨. ಘಟಪ್ರಭ, ೩. ಕೊಣ್ಣೂರು ಮರಡಿ ಮಠ, ೪. ಅರಬಾವಿ, ೫. ಅಂಕಲಗಿ

ಹುಕ್ಕೇರಿ ತಾಲ್ಲೂಕು : ೧. ನಿಡಸೋಸಿ, ೨. ಸಂಕೇಶ್ವರ, ೩. ಹತ್ತರಗಿ, ೪. ಯಮಕನ ಮರಡಿ, ೫. ಬೆಲ್ಲದ ಬಾಗೇವಾಡಿ,

ಚಿಕ್ಕೋಡಿ ತಾಲ್ಲೂಕು : ೧. ಆಡಿ, ೨. ಕಟ್ಟಲಾಟ, ೩. ಗಳತಗ, ೪. ಚಿಂಚಣಿ, ೫. ನಿಪ್ಪಾಣಿ

ರಾಯಭಾಗ ತಾಲ್ಲೂಕು : ೧. ಬೆಂಟವಾಳ

ಅಥಣಿ ತಾಲ್ಲೂಕು : ೧. ತಲಸಂಗ, ೨. ಹಲಿಯಾಳ, ೩. ಸತ್ತಿ

ಸಹ್ಯಾದ್ರಿಪರ್ವತ ಸಾಲಿನ ಅಂಚಿನಲ್ಲಿರುವ ಬೆಳಗಾವಿ ಜಿಲ್ಲೆಯಲ್ಲಿ ಘಟಪ್ರಭಾ,ಮಲಪ್ರಭಾ, ಕೃಷ್ಣ ಹಾಗೂ ಡೋಣಿ ನದಿಗಳು ಹರಿದು ಈ ನಾಡಿನ ಪ್ರಾಕೃತಿಕ ಸೌಂದರ್ಯವನ್ನು ಹೆಚ್ಚಿಸಿವೆ. ಘಟಪ್ರಭ ನದಿಗೆ ಹಿಡಕಲ್ಲು ಬಳಿ ಹಾಗೂ ಮಲಪ್ರಭ ನದಿಗೆ ಮುನವಳ್ಳಿಯ ಬಳಿ ಅಡ್ಡಲಾಗಿ ಅಣೆಕಟ್ಟನ್ನು ಕಟ್ಟಲಾಗಿದ್ದು ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗಿರುವು ದರಿಂದ ಬೆಳಗಾವಿ ಜಿಲ್ಲೆಯು ಆರ್ಥಿಕವಾಗಿ ಸದೃಢವಾಗಿದೆ. ವ್ಯಾಪಾರ ವಹಿವಾಟಿನಿಂದ ರಾಜ್ಯದ ಶ್ರೀಮಂತ ಜಿಲ್ಲೆಗಳಲ್ಲಿ ಒಂದಾಗಿದೆ.

ಬೆಳಗಾವಿ ಜಿಲ್ಲೆಯು ಬಾಗಲಕೋಟೆ, ಧಾರವಾಡ ಮತ್ತು ಉತ್ತರಕನ್ನಡ ಜಿಲ್ಲೆಗಳ ಗಡಿಭಾಗಗಳಿಂದ ಆವೃತ ವಾಗಿರುವುದಲ್ಲದೆ, ಗೋವ ಮತ್ತು ಮಹಾರಾಷ್ಟ್ರ ರಾಜ್ಯಗಳ ಗಡಿಗಳಿಗೂ ಹೊಂದಿಕೊಂಡಿದೆ. ಬೆಳಗಾವಿ, ಅಥಣಿ, ರಾಯಬಾಗ್, ಚಿಕ್ಕೋಡಿ, ಹುಕ್ಕೇರಿ, ಗೋಕಾಕ್, ಸವದತ್ತಿ, ರಾಮದುರ್ಗ, ಬೈಲಹೊಂಗಲ ಹಾಗೂ ಖಾನಾಪುರ ಈ ಹತ್ತು ತಾಲ್ಲೂಕುಗಳನ್ನು ಒಳಗೊಂಡು ದೊಡ್ಡ ಜಿಲ್ಲೆಯಾಗಿ ರೂಪುಗೊಂಡಿದೆ.

ಕಿತ್ತೂರು ರಾಣಿಚೆನ್ನಮ್ಮ, ಸಂಗೊಳ್ಳಿರಾಯಣ್ಣ, ಸಿಂಧೂರ ವೀರಲಕ್ಷ್ಮಣ, ರಟ್ಟರು ಹಾಗೂ ಅನೇಕ ವೀರರು ಈ ಜಿಲ್ಲೆಯವರಾಗಿದ್ದು ರಾಷ್ಟ್ರವನ್ನು ದಾಸ್ಯದ ಸಂಕೋಲೆಯಿಂದ ಬಿಡಿಸಲು ಹೋರಾಡಿದ್ದಾರೆ. ಇವರ ತ್ಯಾಗಬಲಿ ದಾನದಿಂದ ನಾಡು ಅಮರವಾಗಿದೆ. ಇಂತಹ ಐತಿಹಾಸಿಕ ಜಿಲ್ಲೆಯಲ್ಲಿ ವೀರಶೈವಮಠಗಳು ಈ ನಾಡಿನ ಸರ್ವತೋ ಮುಖ ಅಭಿವೃದ್ಧಿಗೆ ಪ್ರೇರಕವಾಗಿ, ಮಾರ್ಗದರ್ಶಕವಾಗಿ ಅನಾದಿಕಾಲದಿಂದಲೂ ಬೆಳೆದುಬಂದಿವೆ. ಈಗಲೂ ಸಾಮಾ ಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕವಾಗಿ ತಮ್ಮನ್ನು ತೊಡಗಿಸಿಕೊಂಡಿವೆ ಎಂದು ಅಭಿಮಾನದಿಂದ ಹೇಳಬಹುದು.

ಅಥಣಿಯ ಶಿವಯೋಗಿಗಳು, ವೀರಶೈವ ಧರ್ಮಕ್ಕೆ ಕೀರ್ತಿ ತಂದುಕೊಟ್ಟು ಪೂಜ್ಯರಾಗಿ ಅಮರರಾಗಿದ್ದಾರೆ. ಅದೇ ರೀತಿ ಅರಬಾವಿ-ಮುರಗೋಡು ಶ್ರೀ ಮಹಾಂತ ಶಿವಯೋಗಿಗಳು, ನಾಗನೂರು ಮಠದ ಶ್ರೀ ಶಿವಬಸವ ಸ್ವಾಮಿಗಳು ಎಂದೂ ಮರೆಯದ ಚೇತನಗಳಾಗಿದ್ದಾರೆ. ವಿಶೇಷವಾಗಿ ಗೋಕಾಕ್ ತಾಲ್ಲೂಕಿನಲ್ಲಿರುವ ಸಾವಳಗಿಯ ಶ್ರೀ ಶಿವಲಿಂಗೇಶ್ವರ ಸಂಸ್ಥಾನಪೀಠವು, ಹಿಂದೂ-ಮುಸ್ಲಿಂ ಭಾವೈಕ್ಯತೆಯ ಸಂಕೇತವಾಗಿ ತಲೆಎತ್ತಿನಿಂತಿರುವುದು ಈ ಜಿಲ್ಲೆಯ ಹೆಗ್ಗಳಿಕೆ. ಇಲ್ಲಿನ ವೀರಶೈವ ಮಠಗಳ ಅಭಿವೃದ್ಧಿಗೆ ಲಿಂಗರಾಜದೇಸಾಯಿ, ಸಿಂಧೋಗಿದೇಸಾಯಿ, ರಟ್ಟರು, ಕಿತ್ತೂರು ಅರಸರು, ಅದಿಲ್‌ಶಾಹಿ ನೀಡಿದ ಕೊಡುಗೆ ಅಪಾರವಾಗಿದೆ. ಪುರಾತನ ಕಾಲದಿಂದ ಈತನಕ ಬೆಳಗಾವಿ ಜಿಲ್ಲೆಯಲ್ಲಿ ೭೦೮ ಮಠಗಳು ಸ್ಥಾಪನೆಯಾಗಿದ್ದವು ಎಂಬ ಮಾಹಿತಿ ದೊರೆಯುತ್ತಿದೆ. ಈ ಆಧಾರದ ಮೇಲೆ ಶೋಧನೆಗೆ ಹೋದಾಗ ನೂರೈವತ್ತಾರು ಮಠಗಳು ದೊರೆತಿವೆ. ಉಳಿದ ಐವತ್ತೆಂಟು ಮಠಗಳು ಪೂರ್ಣ ಅಸ್ತಿತ್ವವನ್ನು ಕಳೆದುಕೊಂಡಿವೆ. ತೊಂಬತ್ತೆಂಟು ಮಠಗಳಲ್ಲಿ ಮಠಾಧೀಶರಿದ್ದು ಧಾರ್ಮಿಕ ಕಾರ್ಯಗಳು ನಡೆಯು ತ್ತಿವೆ. ಉಳಿದ ಮಠಗಳು ಕೇವಲ ಗದ್ದುಗೆ ಪೂಜೆಗಷ್ಟೇ ಸೀಮಿತಗೊಂಡಿವೆ.

ಒಟ್ಟಾರೆ ಫಲಿತಾಂಶದಲ್ಲಿ ಅನೇಕ ಏರುಪೇರುಗಳ ನಡುವೆ ವೀರಶೈವ ಮಠಗಳು ಅಪಾರ ಭಕ್ತಸಂಪತ್ತನ್ನು ಪಡೆದು, ಈ ಜಿಲ್ಲೆಯ ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿಕ ಹಾಗೂ ಸಾಹಿತ್ಯಿಕ ಬೆಳವಣಿಗೆಗೆ ಪ್ರೇರಕವಾಗಿವೆ.

ಅಥಣಿ ತಾಲ್ಲೂಕು

ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕು ಸಾಂಸ್ಕೃತಿಕ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿಯನ್ನು ಕಂಡಿದೆ. ಇಲ್ಲಿ ವೀರಶೈವಧರ್ಮ ಪ್ರಬಲವಾಗಿದ್ದು ನೂರಇಪ್ಪತ್ತು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಆದರೆ ಇಂದು ಕೇವಲ ಇಪ್ಪತ್ತು ಮಠಗಳನ್ನು ಗುರುತಿಸಬಹುದಾಗಿದ್ದು ಇವುಗಳಲ್ಲಿ ಹತ್ತು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಅಥಣಿ

ಬೆಳಗಾವಿ ಜಿಲ್ಲೆಯ ಅಥಣಿಯು ಜಿಲ್ಲಾ ಕೇಂದ್ರದಿಂದ ಉತ್ತರಕ್ಕೆ ಎಪ್ಪತ್ತೈದು ಕಿ.ಮೀ ದೂರದಲ್ಲಿದೆ. ತಾಲ್ಲೂಕು ಕೇಂದ್ರ ಸ್ಥಳವಾದ ಅಥಣಿಯು ಕರ್ನಾಟಕದ ಗಡಿನಾಡಾಗಿದೆ. ಇಲ್ಲಿ ಹನ್ನೆರಡನೆಯ ಶತಮಾನಕ್ಕೂ ಮೊದಲು ಹಲವು ವೀರಶೈವ ಮಠಗಳು ಸ್ಥಾಪನೆಯಾದ ಉದಾಹರಣೆಗಳಿವೆ. ಇವುಗಳೆಂದರೆ ಶ್ರೀ ಗಚ್ಚಿನಮಠ, ಶ್ರೀ ಗೊಟಕಿಂಡಿಮಠ, ಶ್ರೀ ಮೋರಟಗಿಮಠ, ಶ್ರೀ ಹಿರೇಮಠ ಹಾಗೂ ಶ್ರೀ ಕುಮಾರಮಠ. ಇವುಗಳಲ್ಲಿ ಶ್ರೀ ಗೊಟಕಿಂಡಿಮಠ ಮತ್ತು ಶ್ರೀ ಹಿರೇ ಮಠಗಳಲ್ಲಿ ಮಠಾಧೀಶರಿಲ್ಲದೆ ಖಾಲಿಉಳಿದಿವೆ. ಉಳಿದ ಮಠಗಳು ಇಂದಿಗೂ ತಮ್ಮ ಅಸ್ತಿತ್ತ್ವವನ್ನು ಉಳಿಸಿಕೊಂಡಿದ್ದು, ಧಾರ್ಮಿಕ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಗಚ್ಚಿನಮಠ: ಅಥಣಿಯ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಗಚ್ಚಿನ ಮಠವು ನಾಡಿನ ಹೆಸರಾಂತ ವೀರಶೈವ ಮಠಗಳಲ್ಲಿ ಒಂದಾಗಿದೆ.ಅಥಣಿಯ ಶಿವಯೋಗಿಗಳಿಂದ ಪ್ರಖ್ಯಾತಗೊಂಡ ಮಠವು ಚಿತ್ರದುರ್ಗದ ಬೃಹನ್ಮಠದ ಶಾಖಾಮಠವಾಗಿ ಬೆಳೆದು, ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ಬೆಳೆಯುತ್ತಿದೆ.

ಮಠ ಸ್ಥಾಪನೆ: ಈ ಮಠವನ್ನು ಮಣ್ಣಿನ ಗಚ್ಚಿನಿಂದ ನಿರ್ಮಿಸಿರುವುದರಿಂದ ಈ ಮಠಕ್ಕೆ'ಶ್ರೀ ಗಚ್ಚಿನಮಠ'ಎಂಬ ಹೆಸರು ಬಂದಿದೆ. ಹನ್ನೆರಡನೆಯ ಶತಮಾನದಲ್ಲಿ ಶ್ರೀ ರೇವಣಸಿದ್ಧ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಇಲ್ಲಿಗೆ ಬಂದು ನೆಲೆಸಿ ಧರ್ಮೋಪದೇಶವನ್ನು ಮಾಡುವುದರ ಮೂಲಕ ಜನರಲ್ಲಿ ಧರ್ಮಜಾಗೃತಿಯನ್ನುಂಟು ಮಾಡಿದರು. ಈ ಸ್ಥಳದಲ್ಲಿ ವೀರಶೈವ ಮಠವನ್ನು ಸ್ಥಾಪನೆ ಮಾಡಿ, ಧಾರ್ಮಿಕ ಕಾರ್ಯಗಳು ಹಾಗೂ ಅನ್ನದಾಸೋಹ ನಡೆಯುವಂತೆ ವ್ಯವಸ್ಥೆಗೊಳಿಸಿ ದರು. ಅಂದು ಸ್ಥಾಪನೆಗೊಂಡ ಮಠವು ಶ್ರೀ ಮುರುಘೇಂದ್ರ ಶಿವಯೋಗಿಗಳ ಕಾಲದಲ್ಲಿ ಹೆಚ್ಚು ಹೆಸರು ಪಡೆದು ನಾಡಿನ ಪ್ರತಿಷ್ಠಿತ ಮಠಗಳಲ್ಲಿ ಒಂದಾಗಿ ಬೆಳೆದಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ರೇವಣಸಿದ್ಧಸ್ವಾಮಿಗಳು (ಕರ್ತೃ ಗುರುಗಳು)
೨. ಶ್ರೀ ಮ.ನಿ.ಪ್ರ. ಮರುಳಶಂಕರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಚನ್ನಬಸವಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಮುರುಘೇಂದ್ರಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಗುರುಶಾಂತಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಎರಡನೆಯ ಮರುಳಶಂಕರಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಎರಡನೆಯ ಗುರುಶಾಂತಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಎರಡನೆಯ ಚನ್ನಬಸವಸ್ವಾಮಿಗಳು
೯. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು
೧೦. ಶ್ರೀ ಮ.ನಿ.ಪ್ರ. ಮೂರನೆಯ ಚನ್ನಬಸವಸ್ವಾಮಿಗಳು
೧೧. ಶ್ರೀ ಮ.ನಿ.ಪ್ರ. ಶಿವಲಿಂಗಸ್ವಾಮಿಗಳು

೧೨. ಶ್ರೀ ಮ.ನಿ.ಪ್ರ. ಮಲ್ಲಿಕಾರ್ಜುನಸ್ವಾಮಿಗಳು

೧೩. ಶ್ರೀ ಮ.ನಿ.ಪ್ರ. ನಾಲ್ಕನೆಯ ಚನ್ನಬಸವಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಎಲ್ಲಾ ಗುರುಗಳು ತಪೋ ನಿಷ್ಠರಾಗಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಹನ್ನೆರಡನೆಯ ಗುರುಗಳಾದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಬೆಳೆಸಿದರು. ಇವರು ಚಿತ್ರದುರ್ಗ ಬೃಹನ್ಮಠದ ಜಗದ್ಗುರು ಶ್ರೀ ಜಯವಿಭವ ಸ್ವಾಮಿಗಳ ಕೃಪಾಶೀರ್ವಾದಕ್ಕೆ ಒಳಗಾಗಿ, ಬೃಹನ್ಮಠದ ಜಗದ್ಗುರುಗಳಾಗಿ ೧೯೬೪ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಇವರ ನಂತರ ಕೆಲವು ವರ್ಷ ಮಠ ಖಾಲಿ ಉಳಿಯಿತು. ನಂತರ ಹಾವೇರಿ ತಾಲ್ಲೂಕಿನ ಅಗಡಿಯಮಠದಲ್ಲಿ ಪಟ್ಟಾಧಿಕಾರಿಗಳಾ ಗಿದ್ದ ಶ್ರೀ ಚನ್ನಬಸವ ಸ್ವಾಮಿಗಳಿಗೆ ೧೯೮೫ರಲ್ಲಿ ಗಚ್ಚಿನ ಮಠದ ಅಧಿಕಾರವನ್ನು ನೀಡಲಾಯಿತು. ಇವರು ಅಗಡಿ ಮತ್ತು ಅಥಣಿ ಎರಡೂ ಮಠಗಳ ಆಡಳಿತವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ಶಿವಯೋಗಿಗಳ ಪಾತ: ನದಿಇಂಗಳಗಾವಿಯ ಶ್ರೀ ಶಿವಯೋಗಿಗಳು ತಮ್ಮ ಪ್ರೌಢಶಿಕ್ಷಣವನ್ನು ಪೂರೈಸಿಕೊಂಡು ಎರಡನೆಯ ಶ್ರೀ ಮರುಳಶಂಕರ ಸ್ವಾಮಿಗಳ ಕರೆಯ ಮೇರೆಗೆ ಶ್ರೀ ಅಥಣಿ ಕ್ಷೇತ್ರಕ್ಕೆ ಬಂದು ನೆಲಸಿದರು. ಎರಡನೆಯ ಶ್ರೀ ಗುರುಶಾಂತ ಸ್ವಾಮಿಗಳಿಂದ ತಮ್ಮಹದಿನಾರನೆಯ ವರ್ಷದಲ್ಲಿ ಅನುಗ್ರಹ ಪಡೆದುಕೊಂಡು ದೇಶ ಸಂಚಾರಕ್ಕೆ ಹೊರಟರು. ಸುಮಾರು ಮೂವತ್ತೊಂದು ವರ್ಷಗಳ ಕಾಲ ದೇಶಸಂಚಾರ ಮಾಡಿ ಲೋಕಾನುಭವದಿಂದ ವೀರಶೈವ ಧರ್ಮವನ್ನು ಪ್ರಚಾರ ಪಡಿಸಿ, ಅಂಕಲಗಿಯ ಮುಖಾಂತರ ಅಥಣಿಗೆ ಪ್ರವೇಶ ಮಾಡಿದರು. ಗುರುಗಳು ಇಲ್ಲಿಗೆ ಬರುವ ವೇಳೆಗಾಗಲೇ ಅನುಗ್ರಹನೀಡಿ ಕಳುಹಿಸಿದ್ದ ಎರಡನೆಯ ಶ್ರೀ ಗುರುಶಾಂತ ಸ್ವಾಮಿಗಳು ಲಿಂಗೈಕ್ಯರಾಗಿದ್ದರು.ಎರಡನೆಯ ಶ್ರೀ ಚನ್ನಬಸವ ಸ್ವಾಮಿಗಳು ಅಧಿಕಾರರೂಢರಾಗಿ, ಶ್ರೀ ಶಿವಯೋಗಿಗಳ ಆಗಮನಕ್ಕಾಗಿ ಕಾಯುತ್ತಿದ್ದರು. ಶಿವಯೋಗಿಗಳು ಬಂದ ನಂತರ ಮಠದ ಅಧಿಕಾರವನ್ನು ವಹಿಸಿಕೊಂಡು'ಮಠ ಮತ್ತು ಭಕ್ತರನ್ನು ಉದ್ಧರಿಸು'ಎಂದು ಬಿನ್ನವಿಸಿಕೊಳ್ಳುತ್ತಾರೆ, ಶಿವಯೋಗಿಗಳು ಇಷ್ಟ ಪಡದೆ ಶ್ರೀ ಸಿದ್ಧಲಿಂಗ ಸ್ವಾಮಿಗಳಿಗೆ ಪಟ್ಟ ಕಟ್ಟಿಸಿ ಕ್ಷೇತ್ರದಲ್ಲಿ ಉಳಿಯಲು ನಿರ್ಧರಿಸಿ, ನಿತ್ಯ ಧರ್ಮೋಪದೇಶವನ್ನು ನೀಡಿ ಜನರಲ್ಲಿ ಜಾಗೃತಿ ಮೂಡಿಸಿ ಇಲ್ಲೇ ಲಿಂಗೈಕ್ಯರಾದರು. ಶ್ರೀ ಶಿವಯೋಗಿಗಳು ಗಚ್ಚಿನಮಠದ ಇತಿಹಾಸದಲ್ಲಿ ನಂದದ ಅಮರಜ್ಯೋತಿಯಾಗಿ ಬೆಳಗುತ್ತಿದ್ದಾರೆ.

ಗದ್ದುಗೆಗಳು: ಇತಿಹಾಸ ಪ್ರಸಿದ್ಧ ಮಠದ ಆವರಣದಲ್ಲಿ ನಾಲ್ಕು ಗದ್ದುಗೆಗಳು ಇರುವುದಲ್ಲದೆ, ಹಳಿಗುಂದದಲ್ಲಿ ಒಂದು ಮತ್ತು ಗಡದೂರಿನಲ್ಲಿ ಎರಡು ಗದ್ದುಗೆಗಳು ನೋಡಲು ಸಿಗುತ್ತಿವೆ. ಉಳಿದ ಗುರುಗಳ ಗದ್ದುಗೆಗಳು ಎಲ್ಲೆಲ್ಲಿ ಇವೆ ಎಂದು ನಿಖರವಾಗಿ ತಿಳಿದಿಲ್ಲ.

ಧಾರ್ಮಿಕ ಕಾರ್ಯಗಳು: ಅಥಣಿಯ ಗಚ್ಚಿನ ಮಠದ ವಿಶಾಲ ಆವರಣದಲ್ಲಿರುವ ಶ್ರೀ ಶಿವಯೋಗಿಗಳ ಗದ್ದುಗೆಗೆ ಪ್ರತಿನಿತ್ಯ ರಾತ್ರಿ ರುದ್ರಾಭಿಷೇಕ ಪೂಜೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಅಪಾರ ಸಂಖ್ಯೆಯಲ್ಲಿ ಭಕ್ತರು ಸೇರಿ ಭಜನೆ ಮಾಡುತ್ತಾರೆ. ಮಠದ ಆವರಣದಲ್ಲಿ ನಾಲ್ಕು ಗದ್ದುಗೆಗಳು ಇವೆ. ಇವುಗಳಿಗೆ ನಿತ್ಯಪೂಜೆ ಹಾಗೂ ವರ್ಷಕ್ಕೊಮ್ಮೆ ಶ್ರೀ ಮುರುಘೇಂದ್ರ ಶಿವಯೋಗಿಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ವಿದ್ವಾಂಸರಿಂದ ಉಪನ್ಯಾಸ ಕಾರ್ಯಕ್ರಮಗಳು ನಡೆಯುತ್ತಿವೆ.

ವಿಳಾಸ: ಶ್ರೀ ಮ.ನಿ.ಪ್ರ. ಚನ್ನಬಸವ ಸ್ವಾಮಿಗಳು, ಶ್ರೀ ಗಚ್ಚಿನ ಮಠ, ಅಥಣಿ, ಬೆಳಗಾವಿ ಜಿಲ್ಲೆ.

ಮೋರಟಗಿಮಠ: ಅಥಣಿ ಪಟ್ಟಣದ ಮಧ್ಯಭಾಗದಲ್ಲಿ ವಿಶಾಲವಾದ ಆವರಣದಲ್ಲಿ ಸ್ಥಾಪನೆಯಾಗಿರುವ ಶ್ರೀಮೋರಟಗಿ ಮಠವು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದಿದೆ. ವಿರಕ್ತಸಂಪ್ರದಾಯದ ಮುರುಘಾ ಸಮಯದ ಈ ಮಠವು, ಇಲ್ಲಿನ ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ಬೆಳೆದಿದೆ.

ಮಠ ಸ್ಥಾಪನೆ: ಮಾಯಾಗೂರಿನ ಶ್ರೀ ಮಹಂತಪ್ಪಸ್ವಾಮಿಗಳು ಚಿಕ್ಕವಯಸ್ಸಿನಲ್ಲೇ ಲೋಕಸಂಚಾರ ಕೈಗೊಂಡು, ಇಲ್ಲಿನ

ಕೃಷ್ಣಾನದಿ ತೀರದಲ್ಲಿ ಅನುಷ್ಠಾನಕ್ಕೆ ಕುಳಿತುಕೊಂಡರು. ತಪೋಮಗ್ನರಾಗಿದ್ದ ಬಾಲತಪಸ್ವಿಗಳನ್ನು ನೋಡಿದ ಇಲ್ಲಿನ ಭಕ್ತರು ಶ್ರೀ ಮಲ್ಲಪ್ಪ ಮೋರಟಗಿಯವರ ನೇತೃತ್ವದಲ್ಲಿ ಪಟ್ಟಣಕ್ಕೆ ಕರೆತಂದರು. ಗುರುಗಳ ವಾಸ್ತವ್ಯಕ್ಕೆ ಹಾಗೂ ಧಾರ್ಮಿಕ ಕಾರ್ಯಗಳನ್ನು ನಡೆಸಲು ಅನುಕೂಲವಾಗುವಂತೆ ಶ್ರೀ ಮಲ್ಲಪ್ಪಮೋರಟಗಿಯವರು ತಮ್ಮ ಜಾಗದಲ್ಲಿ ಸಣ್ಣ ದಾಗಿ ಒಂದು ಮಠವನ್ನು ಕಟ್ಟಿಸಿ ಕೊಟ್ಟರು. ಇದರಿಂದ ಈ ಮಠಕ್ಕೆ 'ಶ್ರೀ ಮೋರಟಗಿ ಮಠ'ಎಂಬ ಹೆಸರು ಬಂದಿತು.

ಪರಂಪರೆ:
೧. ಶ್ರೀ ಮ.ನಿ.ಪ್ರ. ಮಹಂತೇಶಸ್ವಾಮಿಗಳ
೨. ಶ್ರೀ ಮ.ನಿ.ಪ್ರ. ಶಿವಪಂಚಾಕ್ಷರಿಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಜಡೆಸಿದ್ಧಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಸಂಗನಬಸವಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಮುರುಘೇಂದ್ರಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಚನ್ನಬಸವಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಗುರುಬಸವಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಚನ್ನಬಸವಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃಗುರುಗಳಾದ ಬಾಲತಪಸ್ವಿ ಶ್ರೀ ಮಹಾಂತ ಸ್ವಾಮಿಗಳು ಮಠವನ್ನು ಸ್ಥಾಪಿಸಿ, ಶಿವಾನುಭವ ಗೋಷ್ಠಿಗಳನ್ನು ನಡೆಸುವ ಮೂಲಕ ಸಂಸ್ಕಾರವನ್ನು ನೀಡಿದರು. ಇವರ ಕಾಲದಲ್ಲಿ ಅನ್ನ ದಾಸೋಹವು ಪ್ರಾರಂಭಗೊಂಡು ಹೆಚ್ಚು ಹೆಸರು ಪಡೆಯಿತು. ನಂತರ ಅಧಿಕಾರಕ್ಕೆ ಬಂದ ಗುರುಗಳ ಬಗ್ಗೆ ಹೆಚ್ಚು ಮಾಹಿತಿ ಲಭ್ಯವಿಲ್ಲ. ಈ ಹಿಂದೆ ಅಧಿಕಾರ ನಡೆಸಿ ಲಿಂಗೈಕ್ಯರಾದ ಶ್ರೀ ಗುರುಬಸವ ಸ್ವಾಮಿಗಳು ಮಠವನ್ನು ವ್ಯವಸ್ಥಿತ ವಾಗಿ ಬೆಳೆಸಿದರು. ಈ ಸಂದರ್ಭದಲ್ಲಿ ಶ್ರೀ ಚನ್ನಬಸವ ದೇವರು ಗುರುಗಳ ಸೇವಕರಾಗಿ ಮಠದ ಪರಂಪರೆಯ ಹಿರಿಯ ಚೇತನವಾಗಿ ನೆಲೆಸಿದ್ದರು. ಇವರು ಮಠದ ಅಧಿಕಾರವನ್ನು ವಹಿಸಿಕೊಳ್ಳದಿದ್ದರೂ ಪರಂಪರೆಯ ಗುರುಗಳಂತೆ ಧಾರ್ಮಿಕ ಕಾರ್ಯಗಳನ್ನು ನಡೆಸಿ ಹೆಚ್ಚು ಪ್ರಸಿದ್ಧಿ ಪಡೆದಿದ್ದರು. ಶ್ರೀ ಗುರುಬಸವ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಅನೇಕ ವರ್ಷಗಳ ಕಾಲ ಮಠವು ಖಾಲಿ ಉಳಿದಿತ್ತು.

ಜಮಖಂಡಿ ತಾಲ್ಲೂಕಿನ ಮೈಗೂರಿನಲ್ಲಿ ೧೯೭೫ರ ಜನವರಿ ಒಂದರಂದು ಜನಿಸಿದ ಶ್ರೀ ಚನ್ನಬಸವ ದೇವರನ್ನು ೧೯೮೪ರ ಡಿಸೆಂಬರ್ ಹದಿನಾರರಂದು ಮಠದ ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಳ್ಳಲಾಯಿತು. ಬಾಲ್ಯದಲ್ಲಿಯೇ ಕ್ರಿಯಾಶೀಲ ಗುಣಗಳನ್ನು ಮೈಗೂಡಿಸಿಕೊಂಡು ಬೆಳೆದರು. ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಉತ್ತಮ ವಾಗ್ಮೀಗಳಾಗಿ ಮಠದ ಆಡಳಿತವನ್ನು ರಚನಾತ್ಮಕವಾಗಿ ಮಾಡುವ ಮೂಲಕ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ಧಾರ್ಮಿಕ ಕಾರ್ಯಗಳು:ಮಠದ ಆವರಣದಲ್ಲಿ ಆರು ಗದ್ದುಗೆಗಳು ಸ್ಥಾಪನೆಯಾಗಿವೆ. ಇವುಗಳಿಗೆ ನಿತ್ಯಪೂಜೆ, ಶ್ರಾವಣ ಮಾಸದಲ್ಲಿ ಪುರಾಣ ಪ್ರವಚನ ಹಾಗೂ ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಮಠಕ್ಕೆ ಆಸ್ತಿ ಇಲ್ಲ ದಿದ್ದರೂ ಭಕ್ತರನ್ನೇ ಆಸ್ತಿಯನ್ನಾಗಿ ಮಾಡಿಕೊಂಡು,ಧಾರ್ಮಿಕ ಕಾರ್ಯಗಳು ಹಾಗೂ ಅನ್ನದಾಸೋಹವನ್ನು ನಡೆಸಲಾಗು ತ್ತಿದೆ. ಮಠದಲ್ಲಿ ಶ್ರೀ ವೀರಶೈವ ವಧು ವರರರ ಅನ್ವೇಷಣಾ ಕೇಂದ್ರವನ್ನು ಸ್ಥಾಪಿಸಿದ್ದಾರೆ.

ಸಾಹಿತ್ಯ ಸೇವೆ: ಶ್ರೀ ಚನ್ನಬಸವ ಸ್ವಾಮಿಗಳು ವಚನಕಾರರಾಗಿದ್ದು, ಈಗಾಗಲೇ ಅನೇಕ ವಚನಗಳನ್ನು ರಚಿಸಿ ಪ್ರಕಟಿಸುವ ಮೂಲಕ ವಚನ ಸಾಹಿತ್ಯಕ್ಕೆ ಕೊಡುಗೆ ನೀಡಿದ್ದಾರೆ. ಮಠದ ವತಿಯಿಂದ ಶ್ರೀ ಚನ್ನಬಸವೇಶ್ವರ ಗ್ರಂಥಮಾಲೆ ಯನ್ನು ಸ್ಥಾಪಿಸಿ ವರ್ತಮಾನ, ನುಡಿನಮನ, ವಚನಚೈತ್ರ, ವಚನತರಂಗ ಮುಂತಾದ ಕೃತಿಗಳನ್ನು ಬರೆದು ಪ್ರಕಟಿಸ ಲಾಗಿದೆ.ವಚನಚಿಂತನೆಯನ್ನು ಗ್ರಂಥವನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ವಚನ ಪಾಠಶಾಲೆಯನ್ನು ಪ್ರಾರಂಭಿಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಚನ್ನಬಸವ ಸ್ವಾಮಿಗಳು, ಶ್ರೀ ಮೋರಟಗಿಮಠ, ಅಥಣಿ. ಬೆಳಗಾವಿ ಜಿಲ್ಲೆ.

ಕುಮಾರ ಮಠ (ಶೆಟ್ಟರ ಮಠ): ಅಥಣಿಯ ಮಧ್ಯಭಾಗದಲ್ಲಿ ಶ್ರೀ ಕುಮಾರಮಠ ಅಥವಾ ಶೆಟ್ಟರ ಮಠವು ಸ್ಥಾಪನೆಯಾಗಿದೆ. ಕುಮಾರ ಸಮಯದ ಈ ವಿರಕ್ತ ಮಠವು ಪುರಾತನ ಕಾಲದಲ್ಲಿ ಸ್ಥಾಪನೆಯಾಗಿ, ಇಲ್ಲಿನ ಧಾರ್ಮಿಕ ಕಾರ್ಯಗಳ ಕೇಂದ್ರಬಿಂದುವಾಗಿ ಬೆಳೆದಿದೆ. ಕಲ್ಲುಕಟ್ಟಡದ ವಿಶಾಲವಾದ ಆವರಣದಲ್ಲಿ ಈ ಮಠವು ಅಸ್ತಿತ್ವದಲ್ಲಿದೆ.

ಮಠ ಸ್ಥಾಪನೆ: ಶ್ರೀ ಮರುಳಸಿದ್ಧ ಶಿವಯೋಗಿಗಳು ಲೋಕಸಂಚಾರ ಕೈಗೊಂಡು ಅಥಣಿಗೆ ಆಗಮಿಸಿ ಇಲ್ಲಿ ನೆಲೆ ನಿಂತು, ಧರ್ಮೋಪದೇಶವನ್ನು ಮಾಡುವ ಮೂಲಕ ಅಪಾರಭಕ್ತರನ್ನು ಸಂಪಾದಿಸಿಕೊಂಡರು. ಗುರುಗಳು ನಡೆಸುತ್ತಿದ್ದ ಧರ್ಮೋಪದೇಶ ಹಾಗೂ ಅನ್ನದಾಸೋಹ ಕಾರ್ಯಗಳಿಗೆ ಇಲ್ಲಿನ ಭಕ್ತರು ನೆರವು ನೀಡಿ ಮಠವನ್ನು ಸ್ಥಾಪಿಸಿದರು. ಅಂದಿನಿಂದ ಈತನಕ ಮಠವು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಮರುಳಸಿದ್ಧ ಶಿವಯೋಗಿಗಳು
೨. ಶ್ರೀ ಮ.ನಿ.ಪ್ರ. ಶಿವಲಿಂಗಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಶಿವಬಸವಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಗುರುಮೂರ್ತಿಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಶಂಕರಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃ ಗುರುಗಳಾದ ಶ್ರೀ ಮರುಳಸಿದ್ಧ ಶಿವಯೋಗಿಗಳು ತಮ್ಮ ಕರ್ತೃತ್ವ ಶಕ್ತಿಯಿಂದ ಮಠವನ್ನು ಬೆಳೆಸಿದರು. ಗುರುಗಳು ೧೮೭೨ರಲ್ಲಿ ಲಿಂಗೈಕ್ಯರಾದ ಮೇಲೆ ಶ್ರೀ ಶಿವಲಿಂಗ ಸ್ವಾಮಿಗಳು ಮಠದ ಆಡಳಿತ ಸೂತ್ರವನ್ನು ಹಿಡಿದುಕೊಂಡು ಕಟ್ಟಡವನ್ನು ಕಟ್ಟಿಸಿದ್ದಲ್ಲದೆ, ಭಕ್ತರ ಸಂಖ್ಯೆಯನ್ನು ಹೆಚ್ಚಿಸಿಕೊಂಡು, ಧಾರ್ಮಿಕ ಪ್ರಜ್ಞೆ ಬರುವಂತೆ ಮಾಡುವುದರ ಮೂಲಕ ಸಮಾಜವನ್ನು ನೈತಿಕ ನೆಲೆಗಟ್ಟಿನಲ್ಲಿ ರೂಪಿಸತೊಡಗಿದರು. ಮಠದ ಮೂರನೆಯ ಪೀಠಾಧಿಕಾರಿಗಳಾದ ಹಾವೇರಿಯ ಶ್ರೀ ಶಿವಬಸವ ಸ್ವಾಮಿಗಳು ಈ ಮಠದ ಅಧಿಕಾರವನ್ನು ವಹಿಸಿಕೊಂಡು ನಂತರ ಹಾವೇರಿಯ ಹುಕ್ಕೇರಿ ಮಠದ ಅಧಿಕಾರವನ್ನು ವಹಿಸಿಕೊಂಡರು. ಆಗ ಶ್ರೀ ಕುಮಾರಮಠವು ಖಾಲಿ ಉಳಿಯಬಾರದೆಂದು ಶ್ರೀ ಗುರುಮೂರ್ತಿಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿ ಅಧಿಕಾರ ನೀಡಿದರು. ಇವರ ಆಡಳಿತದ ಕಾಲದಲ್ಲಿ ಮಠವು ಹೆಚ್ಚು ಅಭಿವೃದ್ಧಿಗೊಂಡಿತು. ಪರಂಪರೆಯ ಐದನೆಯ ಗುರುಗಳಾಗಿ ಶ್ರೀ ಶಂಕರ ಸ್ವಾಮಿಗಳು ಬನವಾಸಿಯ ಶ್ರೀ ಸಿದ್ಧವೀರ ಸ್ವಾಮಿಗಳಿಂದ ಅನುಗ್ರಹ ಪಡೆದು, ೧೯೫೬ ರಲ್ಲಿ ಅಧಿಕಾರವನ್ನು ವಹಿಸಿಕೊಂಡರು.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯಪೂಜೆ, ಪ್ರತಿತಿಂಗಳು ಪುರಾಣಪ್ರವಚನ, ಭಜನೆಯನ್ನು ಏರ್ಪಡಿಸುವುದಲ್ಲದೇ, ಸಂದರ್ಭಕ್ಕೆ ತಕ್ಕಂತೆ ನಡೆಯುವ ಧಾರ್ಮಿಕ ವಿಧಿವಿಧಾನಗಳಲ್ಲಿ ಭಕ್ತರನ್ನು ತೊಡಗಿಸಿಕೊಳ್ಳಲಾಗಿದೆ. ಈ ಸಂದರ್ಭಗಳಲ್ಲಿ ಅನ್ನದಾಸೋಹವನ್ನು ನಡೆಸಲಾಗುತ್ತಿದೆ. ಮಠದ ಪರಂಪರೆಯನ್ನು ಬಿಂಬಿಸುವ ಚರಿತ್ರೆಯನ್ನು ಬರೆಸಿ ಪ್ರಕಟಿಸಲಾಗಿದೆ. ಮಠದ ಆಸ್ತಿಯಾಗಿದ್ದ ಮೂವತ್ತು ಎಕರೆ ಜಮೀನನ್ನು ಹತ್ತಿಬಟ್ಟೆ ಕಂಪನಿಗೆ ಕೊಟ್ಟಿದ್ದಲ್ಲದೆ, ಅಥಣಿಯಲ್ಲಿರುವ ನಿವೇಶನಗಳನ್ನು ಭಕ್ತ ವೃಂದಕ್ಕೆ ನೆಲ ಬಾಡಿಗೆಗೆ ಕೊಟ್ಟು, ಮಠಕ್ಕೆ ಆದಾಯ ಬರುವಂತೆ ಮಾಡಿಕೊಂ ಡಿದ್ದು ಧಾರ್ಮಿಕ ಕಾರ್ಯಗಳಿಗೆ ಬಳಕೆ ಮಾಡಿಕೊಳ್ಳಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಶಂಕರ ಸ್ವಾಮಿಗಳು, ಶ್ರೀ ಕುಮಾರ ಮಠ (ಶೆಟ್ಟರ ಮಠ), ಅಥಣಿ, ಬೆಳಗಾವಿ ಜಿಲ್ಲೆ.

ಗೊಟಕಿಂಡಿಮಠ: ಈ ಮಠವು ಅಥಣಿ ಪಟ್ಟಣದ ಮಧ್ಯೆ ಸುಸಜ್ಜಿತವಾಗಿ ರೂಪುಗೊಂಡಿದೆ. ಮಠದ ಆವರಣದಲ್ಲಿ ಶ್ರೀ ಮುರುಘೇಂದ್ರ ಶಿವಯೋಗಿಗಳ ತೋರುಗದ್ದುಗೆ ಇದೆ. ಅಥಣಿಯ ಶ್ರೀ ಮುರುಘೇಂದ್ರಶಿವಯೋಗಿಗಳ ಅಣ್ಣನ ಮಕ್ಕಳಾದ ಶ್ರೀ ಮಹಂತಪ್ಪ ಸ್ವಾಮಿಗಳು ಮಠಾಧಿಪತಿಗಳಾಗಿದ್ದಾಗ ಮಠವು ಧಾರ್ಮಿಕವಾಗಿ ಉತ್ತಮ ಕಾರ್ಯ ಮಾಡಿ ಜನ ಮನದಲ್ಲಿ ಉಳಿ ಯುವಂತಾಗಿ ಅಸ್ತಿತ್ವದಲ್ಲಿದೆ. ಈಗ ಮಠದ ಪೀಠವನ್ನು ಅಲಂಕರಿಸಲು ಉತ್ತರಾಧಿಕಾರಿಗಳನ್ನು ಆಯ್ಕೆ ಮಾಡಿ ವಿದ್ಯಾಭ್ಯಾಸಕ್ಕೆ ಕಳಿಸಿದ್ದಾರೆ. ವಿರಕ್ತಸಂಪ್ರದಾಯಕ್ಕೆ ಸೇರಿದ ಮಠಕ್ಕೆ ಹೇಳಿಕೊಳ್ಳುವಂತಹ ಆಸ್ತಿ ಏನೂ ಇಲ್ಲ.

ಹಿರೇಮಠ: ಕೇದಾರಪೀಠದ ಶಾಖಾಮಠವಾಗಿರುವ ಇಲ್ಲಿಯ ಹಿರೇಮಠಕ್ಕೆ, ಬಿಜಾಪುರದ ಆದಿಲ್‌ಷಾನ ಕಾಲದಲ್ಲಿ ಉಂಬಳಿಯಾಗಿ ಕೊಟ್ಟ ಜಮೀನು ಇಂದಿಗೂ ಮಠದ ಅಧೀನದಲ್ಲಿದೆ. ಪುತ್ರವರ್ಗದ ಈ ಮಠದಲ್ಲಿ ಇದುವರೆವಿಗೆ ಐದು ಜನ ಪಟ್ಟದ ದೇವರುಗಳು ಪಟ್ಟಾಧಿಕಾರ ಪಡೆದುಕೊಂಡಿದ್ದಾರೆ. ಕೊನೆಯ ಗುರುಗಳು ೧೯೪೭ರಲ್ಲಿ ಲಿಂಗೈಕ್ಯರಾದ ಮೇಲೆ ಯಾರೂ ಅಧಿಕಾರಕ್ಕೆ ಬರಲಿಲ್ಲ. ಮಠದಲ್ಲಿ ನಾಲ್ಕು ಗದ್ದುಗೆಗಳು ಇವೆ. ಇನ್ನೊಬ್ಬರು ಗುರುಗಳು ಸಂಚಾರದಲ್ಲಿ ಲಿಂಗೈಕ್ಯರಾದ ಕಾರಣ ಅವರ ಗದ್ದುಗೆ ಇಲ್ಲಿ ನಿರ್ಮಾಣಗೊಂಡಿಲ್ಲ.

ತೆಲಸಂಗ

ಅಥಣಿ ತಾಲ್ಲೂಕಿನ ತೆಲಸಂಗವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಇಪ್ಪತ್ತೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಪುರಾತನ ಕಾಲದಿಂದಲೂ ವೀರಶೈವಧರ್ಮ ಪ್ರಬಲವಾಗಿ ಬೆಳೆದಿದೆ. ಇದಕ್ಕೆ ಪೂರಕವೆಂಬಂತೆ ಇಲ್ಲಿ ಎಂಟು ವೀರಶೈವ ಮಠಗಳು ಸ್ಥಾಪನೆಯಾಗಿದ್ದವು ಎಂದು ಹೇಳಲಾಗುತ್ತಿದೆ. ಈ ಮಠಗಳಲ್ಲಿ ಶ್ರೀ ವಿರಕ್ತಮಠ ಮತ್ತು ಶ್ರೀ ಹಿರೇಮಠಗಳು ಅಸ್ತಿತ್ವದಲ್ಲಿದ್ದು, ಉಳಿದ ಏಳು ಮಠಗಳು ಅಸ್ತಿತ್ವವನ್ನು ಕಳೆದುಕೊಂಡಿವೆ.

ವಿರಕ್ತಮಠ: ತೆಲಸಂಗ ಗ್ರಾಮದ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ವಿರಕ್ತಮಠವು ಪುರಾತನ ಪರಂಪರೆಯನ್ನು ಹೊಂದಿದ್ದು, ಇಲ್ಲಿನ ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ಬೆಳೆದಿದ್ದು, ಮಠದ ಸ್ಥಾಪನೆ ಹಾಗೂ ಸ್ಥಾಪಕ ಗುರುಗಳ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ.

ಈ ಹಿಂದೆ ಶ್ರೀ ವಿರೂಪಾಕ್ಷ ಸ್ವಾಮಿಗಳು ಈ ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿ ಪಡಿಸಿದ್ದಾರೆ ಎಂಬ ಮಾಹಿತಿ ದೊರೆತಿದೆ. ಇವರ ನಂತರ ಅನೇಕವರ್ಷಗಳ ಕಾಲ ಮಠವು ಖಾಲಿ ಇದ್ದು ಜೀರ್ಣಾವಸ್ಥೆಗೆ ಬಂದಿತ್ತು. ಗ್ರಾಮಸ್ಥರು ಪುರಾತನ ಮಠವು ನಶಿಸಿ ಹೋಗುವುದು ಸೂಕ್ತವಲ್ಲ ಎಂದು ಅರಿತು, ಶ್ರೀ ಚನ್ನಬಸವ ಸ್ವಾಮಿ ಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿ ಪಟ್ಟಾಧಿಕಾರ ಮಾಡಿದ್ದಾರೆ. ಗುರುಗಳು ಮಠದಲ್ಲಿ ನೆಲೆಸಿ ಅಭಿವೃದ್ಧಿಪಡಿಸಿ ದ್ದಾರೆ. ಮಠದ ಆವರಣದಲ್ಲಿರುವ ಲಕ್ಷ್ಮೀಗುಡಿ, ಗದ್ದುಗೆ ಇರುವ ಕಟ್ಟಡ ಜೀರ್ಣಗೊಂಡು ದುಸ್ಥಿತಿಗೆ ಬಂದಿವೆ. ಮಂತ್ರಸಿದ್ಧಿಗಳು, ಪವಾಡಪುರುಷರಾಗಿ ಮೆರೆದ ಶ್ರೀ ವಿರೂಪಾಕ್ಷ ಸ್ವಾಮಿಗಳ ಗದ್ದುಗೆಯೊಂದನ್ನು ಬಿಟ್ಟರೆ, ಬೇರೆ ಯಾವ ಗದ್ದುಗೆಗಳೂ ಇಲ್ಲಿ ಕಾಣಿಸುವುದಿಲ್ಲ. ಮಠಕ್ಕೆ ಹೊಂದಿಕೊಂಡಿರುವ ಜಮೀನನ್ನು ಈಗ ಅಭಿವೃದ್ಧಿಪಡಿಸಲಾಗಿದೆ.

ವಿಳಾಸ: ಶ್ರೀ ಚನ್ನಬಸವ ಸ್ವಾಮಿಗಳು, ಶ್ರೀ ವಿರಕ್ತ ಮಠ, ತೆಲಸಂಗ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಹಿರೇಮಠ: ತೆಲಸಂಗ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ಉಜ್ಜಯಿನಿ ಪೀಠದ ಶಾಖಾ ಮಠವಾಗಿ ಬೆಳೆದು, ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಹೆಚ್ಚು ಪ್ರಚಾರಕ್ಕೆ ಬಂದಿದೆ. ಈ ಪುರಾತನ ಮಠದ ಪರಂಪರೆಯ ಬಗ್ಗೆ ಸ್ಪಷ್ಟ ಮಾಹಿತಿಗಳು ಲಭ್ಯವಿಲ್ಲ.

ಶ್ರೀ ಹಾನಗಲ್ಲು ಕುಮಾರ ಸ್ವಾಮಿಗಳ ಪ್ರೀತಿಯ ಶಿಷ್ಯರಲ್ಲಿ ಒಬ್ಬರಾದ ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ಆಳಂದ ತಾಲ್ಲೂಕಿನ ಮಾದನಹಿಪ್ಪರಗಿಯಲ್ಲಿ ೧೯೦೦ರ ಆಗಸ್ಟ್ ಎರಡರಂದು ಜನಿಸಿ, ಶಿವಯೋಗಮಂದಿರ ದಲ್ಲಿ ಅಧ್ಯಯನಮಾಡಿ ಉತ್ತಮ ಪ್ರವಚನಕಾರರಾಗಿ ರೂಪುಗೊಂಡರು. ಗುರುಗಳು ಸಂಸ್ಕೃತ, ವ್ಯಾಕರಣ ಪದವಿ ಪಡೆದು ವಿದ್ವಾಂಸರಾದರು. ಇವರು ೧೯೩೦ರಲ್ಲಿ ಶ್ರೀ ಹಿರೇಮಠದ ಅಧಿಕಾರವನ್ನು ವಹಿಸಿಕೊಂಡರು.

ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ಧಾರ್ಮಿಕ ವಿಚಾರಗಳನ್ನು ಭಕ್ತರ ಮನಮುಟ್ಟಿಸಲು ಅಕ್ಷರದ ಜ್ಞಾನ ಅವಶ್ಯಕ ಎಂದರಿತು ೧೯೩೮ರಲ್ಲಿ ಶ್ರೀ ಬಸವೇಶ್ವರ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜನ್ನು ಪ್ರಾರಂಭಿಸಿದ್ದಾರೆ. ಕ್ರಿಯಾಶೀಲರಾದ ಗುರುಗಳು ಗುರು, ಲಿಂಗ,ಯಂತ್ರ. ಹಾವೇರಿ ಶ್ರೀಗಳ ಚರಿತ್ರೆ ಪ್ರಭುಲಿಂಗ ಲೀಲಾ ಪ್ರವಚನ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ತುಂಬು ಜೀವನವನ್ನು ನಡೆಸಿರುವ

ಗುರುಗಳು ಈಗ ಶ್ರೀ ವಿರೇಶ ದೇವರನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀಹಿರೇಮಠ, ತೆಲಸಂಗ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಶೇಗುಣಸಿ

ಅಥಣಿ ತಾಲ್ಲೂಕಿನ ಶೇಗುಣಸಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಕೃಷ್ಣಾ ನದಿಯ ದಡದಲ್ಲಿ ಸ್ಥಾಪನೆಯಾಗಿರುವ ಈ ಗ್ರಾಮದಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಶೇಗುಣಸಿಯ ಈ ಮಠವನ್ನು ಶ್ರೀ ಮುರುಘೇಂದ್ರ ಶಿವಯೋಗಿ ಗಳು ಸ್ಥಾಪಿಸಿದ್ದಾರೆ. ಕರ್ತೃಗುರುಗಳಾದ ಶ್ರೀ ಮುರುಘೇಂದ್ರ ಸ್ವಾಮಿಗಳು ಮಹಾ ತಪಸ್ವಿಗಳಾಗಿದ್ದರು. ಇವರ ನಂತರ ಅಧಿಕಾರ ನಡೆಸಿದ ಗುರುಗಳು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

೧. ಶ್ರೀ ಮ.ನಿ.ಪ್ರ. ಮುರುಘೇಂದ್ರಸ್ವಾಮಿಗಳು (ಕರ್ತೃ ಗುರುಗಳು)
೨. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಮಹಾಂತಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಶಂಕರಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಸೋಮಲಿಂಗಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಎರಡನೆಯ ಮುರುಘೇಂದ್ರಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಬಸವಪ್ರಭುಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಮಹಾಲಿಂಗಸ್ವಾಮಿಗಳು
೯. ಶ್ರೀ ಮ.ನಿ.ಪ್ರ. ಎರಡನೆಯ ಮಹಾಲಿಂಗಸ್ವಾಮಿಗಳು
೧೦. ಶ್ರೀ ಮ.ನಿ.ಪ್ರ. ಎರಡನೆಯ ಬಸವಲಿಂಗಸ್ವಾಮಿಗಳು
೧೧. ಶ್ರೀ ಮ.ನಿ.ಪ್ರ. ಎರಡನೆಯ ಶಂಕರಸ್ವಾಮಿಗಳು
೧೨. ಶ್ರೀ ಮ.ನಿ.ಪ್ರ. ಮೂರನೆಯ ಮುರುಘೇಂದ್ರಸ್ವಾಮಿಗಳು
೧೩. ಶ್ರೀ ಮ.ನಿ.ಪ್ರ. ಮೂರನೆಯ ಶಂಕರಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದಿದೆ. ರಾಯಭಾಗ ತಾಲ್ಲೂಕಿನ ಬಿರಡಿ ಗ್ರಾಮದಲ್ಲಿ ಜನಿಸಿದ ಶ್ರೀಶಂಕರ ಸ್ವಾಮಿಗಳು ೧೯೮೮ರಲ್ಲಿ ಆಡಳಿತವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಗುರುಗಳು ಕ್ರಿಯಾಶೀಲ ಗುಣಗಳಿಂದ ಹೆಸರುಗಳಿಸಿದ್ದಾರೆ. ಶ್ರೀ ಮುರುಘೇಂದ್ರ ಶಿವಯೋಗಿ ವಿದ್ಯಾಸಂಸ್ಥೆಯನ್ನು ಸ್ಥಾಪಿಸಿ, ಈ ಮೂಲಕ ಪ್ರಾಥಮಿಕ, ಪ್ರೌಢ ಶಾಲೆ, ವಸತಿಶಾಲೆ ಹಾಗೂ ಬೆಳಗಾವಿ ನಗರದಲ್ಲಿ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಶಂಕರ ಸ್ವಾಮಿಗಳು, ಶ್ರೀ ವಿರಕ್ತಮಠ, ಶೇಗುಣಸಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಸನದಿ

ಅಥಣಿ ತಾಲ್ಲೂಕಿನ ಸನದಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಹದಿನೈದು ಕಿಲೋ ಮೀಟರ್ ದೂರದಲ್ಲಿದೆ. ಇಲ್ಲಿ ಶ್ರೀ ಸಂಗನ ಬಸವೇಶ್ವರ ವಿರಕ್ತಮಠವು ಅಸ್ತಿತ್ವದಲ್ಲಿದೆ.

ಸಂಗನ ಬಸವೇಶ್ವರ ವಿರಕ್ತಮಠ: ಸನದಿ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ಸಂಗನ ಬಸವೇಶ್ವರ ವಿರಕ್ತಮಠವು ಈ ಗ್ರಾಮದ ಧಾರ್ಮಿಕ ಕೇಂದ್ರಬಿಂದುವಾಗಿ ಬೆಳೆದಿದೆ. ಈ ಮಠದ ಪರಂಪರೆಯಲ್ಲಿ ಅನೇಕ ಗುರುಗಳು ಅಧಿಕಾರ ನಡೆಸಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೆ ಮಾಹಿತಿಗಳು ಲಭ್ಯವಿಲ್ಲ. ಈಗ ಶ್ರೀ ಮಹಾಂತ ಸ್ವಾಮಿಗಳು ಅಧಿಕಾರ

ವನ್ನು ವಹಿಸಿಕೊಂಡು ಮಠವನ್ನು ಬೆಳೆಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಮಹಾಂತ ಸ್ವಾಮಿಗಳು, ಶ್ರೀ ಸಂಗನ ಬಸವೇಶ್ವರ ವಿರಕ್ತಮಠ, ಸನದಿ, ಅಥಣಿ ತಾ, ಬೆಳಗಾವಿ ಜಿಲ್ಲೆ.

ಹಳಿಯಾಳ

ಅಥಣಿ ತಾಲ್ಲೂಕಿನ ಹಳಿಯಾಳ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಎಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಶಿವಯೋಗಿ ಗುರುಸಿದ್ಧೇಶ್ವರ ವಿರಕ್ತಮಠವು ಅಸ್ತಿತ್ವದಲ್ಲಿದೆ.

ಶಿವಯೋಗಿ ಗುರುಸಿದ್ಧೇಶ್ವರ ವಿರಕ್ತಮಠ: ಹಳಿಯಾಳ ಗ್ರಾಮದಲ್ಲಿ ಶ್ರೀ ಶಿವಯೋಗಿ ಗುರುಸಿದ್ಧೇಶ್ವರ ವಿರಕ್ತಮಠವು ಸ್ಥಾಪನೆಯಾಗಿ, ಧಾರ್ಮಿಕ ಕೇಂದ್ರವಾಗಿ ಬೆಳೆದಿದೆ. ಹತ್ತೊಂಬತ್ತನೆಯ ಶತಮಾನದಲ್ಲಿ ಶ್ರೀ ಶಿವಯೋಗಿ ಗುರುಸಿದ್ಧೇಶ್ವರ ಸ್ವಾಮಿಗಳು ಸ್ಥಾಪನೆ ಮಾಡಿರುವುದರಿಂದ ಈ ಮಠಕ್ಕೆ 'ಶ್ರೀ ಶಿವಯೋಗಿ ಗುರುಸಿದ್ಧೇಶ್ವರ ವಿರಕ್ತಮಠ' ಎಂಬ ಹೆಸರು ಬಂದಿದೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ಶಿವಯೋಗಿ ಗುರುಸಿದ್ಧೇಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಗುರುಸಂಗಮೇಶ್ವರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಸಿದ್ಧರಾಮೇಶ್ವರಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಮಠ ಸ್ಥಾಪಕರಾದ ಶ್ರೀ ಶಿವಯೋಗಿ ಗುರುಸಿದ್ಧೇಶ್ವರ ಸ್ವಾಮಿಗಳು ೧೯೦೨ರಲ್ಲಿ ಲಿಂಗೈಕ್ಯರಾದ ಮೇಲೆ, ಸಂಸಾರಿಗಳಾಗಿದ್ದ ಶ್ರೀ ಗುರುಸಂಗಮೇಶ್ವರ ಸ್ವಾಮಿಗಳು ವೈರಾಗ್ಯವನ್ನು ತಾಳಿ ಸಂಸಾರವನ್ನು ತ್ಯಜಿಸಿದರು. ಗುರುಗಳು ಆಧ್ಯಾತ್ಮದ ಒಲವಿನಿಂದ ಹಿರಿಯ ಗುರುಗಳ ಸತ್‌ಸಂಘ ಮಾಡಿ ಮಠದ ಅಧಿಕಾರವನ್ನು ವಹಿಸಿ ಕೊಂಡರು. ಹಿರಿಯ ಗುರುಗಳು ನಡೆಸುತ್ತಿದ್ದ ಧಾರ್ಮಿಕ ಆಚರಣೆಗಳನ್ನು ಮುನ್ನಡೆಸಿ ವೀರಶೈವ ತತ್ವಗಳನ್ನು ಪ್ರಚಾರಪಡಿಸಿ, ವೀರಶೈವ ಸಮಾಜವನ್ನು ಬೆಳೆಸಿದರು. ಇವರ ಕಾಲದಲ್ಲಿ ಸಾತಮ್ಮ ಕೋಂ ಮಹಾಜನ ಎಂಬುವವರು ಶ್ರೀ ಶಿವಯೋಗಿ ಗುರುಸಿದ್ಧೇಶ್ವರರ ಗದ್ದುಗೆಗೆ ಮಹಾಮಂಟಪವನ್ನು ಕಟ್ಟಿಸಿದ್ದಾರೆ. ಗುರುಗಳು ಮಠದ ಹಳೆಯ ಕಟ್ಟಡವನ್ನು ನವೀಕರಿಸಿ ವಿಸ್ತರಿಸಿದರು. ಇವರ ಕಾಲದಲ್ಲಿ ಮಠವು ಸರ್ವಾಂಗೀಣವಾಗಿ ಅಭಿವೃದ್ಧಿಯನ್ನು ಕಂಡಿತು. ಗುರುಗಳು ಮುಪ್ಪಿನ ಕಾಲದಲ್ಲಿ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳಿಗೆ ೧೯೮೮ರಲ್ಲಿ ಪಟ್ಟಾಧಿಕಾರ ನೀಡಿದರು.

ಧಾರ್ಮಿಕ-ಶೈಕ್ಷಣಿಕ ಸೇವೆ: ಮಠದಲ್ಲಿ ಹಿರಿಯ ಗುರುಗಳ ಪುಣ್ಯಾರಾಧನೆ, ವಿಶೇಷ ದಿನಗಳಲ್ಲಿ ಭಜನೆ, ಪುರಾಣ, ಪ್ರವಚನ ಹಾಗೂ ಗದ್ದುಗೆಗಳಿಗೆ ನಿತ್ಯ ಎರಡು ವೇಳೆ ಪೂಜೆ ನಡೆಸಲಾಗುತ್ತಿದೆ. ಮಠವು ಶಿಕ್ಷಣಕ್ಕೂ ಮಹತ್ವ ಕೊಟ್ಟು ಬಡವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿಗೆ ವ್ಯವಸ್ಥೆ ಮಾಡಿಕೊಟ್ಟಿದೆ. ಪ್ರಗತಿ ಪರವಾಗಿ ಚಿಂತಿಸುವ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳು ಧಾರ್ಮಿಕ ಚಿಂತನೆಯ ಜತೆಗೆ, ಶೈಕ್ಷಣಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೂ ಗಮನ ನೀಡಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಸಿದ್ಧೇಶ್ವರ ಸ್ವಾಮಿಗಳು, ಶ್ರೀ ಶಿವಯೋಗಿ ಗುರುಸಿದ್ಧೇಶ್ವರ ವಿರಕ್ತ ಮಠ, ಹಳಿಯಾಳ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ.

❑

ಖಾನಾಪುರ ತಾಲ್ಲೂಕು

ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕು ಮಹಾರಾಷ್ಟ್ರ ಗಡಿಭಾಗದಲ್ಲಿದೆ. ಮರಾಠಿಯ ಪ್ರಾಬಲ್ಯತೆಯಿಂದ ಕನ್ನಡ ಭಾಷೆ ಮತ್ತು ಸಂಸ್ಕೃತಿ ಕ್ಷೀಣಗೊಂಡಿದೆ. ಈ ತಾಲ್ಲೂಕು ಐತಿಹಾಸಿಕವಾಗಿ ಹೆಸರುಗಳಿಸಿದೆ. ಇಲ್ಲಿ ವೀರಶೈವ ಧರ್ಮ ಬೇರೆ ತಾಲ್ಲೂಕುಗಳಂತೆ ಪ್ರಬಲವಾಗಿ ಬೆಳೆದಿಲ್ಲ. ಇಲ್ಲಿ ಸುಮಾರು ಇಪ್ಪತ್ತೈದು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಆದರೆ ಇಂದು ಕೇವಲ ಎರಡು ಮಠಗಳು ಮಾತ್ರ ಅಸ್ತಿತ್ವದಲ್ಲಿವೆ.

ಉಳ್ಳಗಡ್ಡಿಖಾನಾಪುರ

ಖಾನಾಪುರ ತಾಲ್ಲೂಕಿನ ಉಳ್ಳಗಡ್ಡಿಖಾನಾಪುರವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಪುತ್ರವರ್ಗದ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಉಳ್ಳಗಡ್ಡಿಖಾನಾಪುರದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ಕಾಶಿಪೀಠದ ಶಾಖಾಮಠವಾಗಿ ಬೆಳೆದಿದೆ. ಶ್ರೀ ಮರುಳಸಿದ್ಧೇಶ್ವರ ಶಿವಾಚಾರ್ಯಸ್ವಾಮಿಗಳಿಂದ ಸ್ಥಾಪನೆಯಾಗಿರಬಹುದೆಂದು ಹೇಳಲಾಗುತ್ತದೆ. ಮಠದ ಪರಂಪರೆಯಲ್ಲಿ ಈವರೆಗೆ ಏಳುಜನ ಗುರುಗಳು ಅಧಿಕಾರ ನಡೆಸಿ ಮಠವನ್ನು ಬೆಳೆಸಿದ್ದಾರೆ. ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ೧೯೭ರಲ್ಲಿ ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಇವರು ಕನ್ನಡ ಮತ್ತು ಹಿಂದಿಭಾಷೆಗಳಲ್ಲಿ ಸ್ನಾತಕೋತ್ತರ ಪದವಿಯನ್ನು ಮುಗಿಸಿದ್ದಾರೆ. ಗುರುಗಳು ವೈಚಾರಿಕ ಚಿಂತನೆಯುಳ್ಳವರಾಗಿದ್ದು, ಜನಪರ ಕಾರ್ಯಗಳೊಂದಿಗೆ ಮಠವನ್ನು ಬೆಳೆಸಿ ಕನ್ನಡ ಭಾಷೆ ಮತ್ತು ಸಂಸ್ಕೃತಿ ಅಳಿಯದಂತೆ ನೋಡಿಕೊಳ್ಳುವ ಪ್ರಯತ್ನದಲ್ಲಿ ಮುಂದಾಗಿದ್ದಾರೆ.

ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಭವರೋಗವೈದ್ಯ ಶ್ರೀಮರುಳಸಿದ್ಧ ಎಂಬ ಗ್ರಂಥವನ್ನು ಬರೆದು ಪ್ರಕಟಿಸಿದ್ದಾರೆ. ಉಪನ್ಯಾಸ, ಪ್ರವಚನಗಳ ಮೂಲಕ ವೀರಶೈವ ಧರ್ಮವನ್ನು ಪ್ರಚಾರ ಪಡಿಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಉಳ್ಳಗಡ್ಡಿಖಾನಾಪುರ, ಖಾನಾಪುರ ತಾಲ್ಲೂಕು,, ಬೆಳಗಾವಿ ಜಿಲ್ಲೆ.

ನಂದಗಡ

ಖಾನಾಪುರ ತಾಲ್ಲೂಕಿನ ನಂದಗಡವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹತ್ತು ಕಿ.ಮೀ ದೂರದಲ್ಲಿದೆ. ನಂದಗಡವು ಐತಿಹಾಸಿಕ ಸ್ಥಳವಾಗಿದೆ. ಸಂಗೊಳ್ಳಿ ರಾಯಣ್ಣನು ನಿಶ್ಶಸ್ತ್ರನಾಗಿ ಈ ಕ್ಷೇತ್ರದಲ್ಲಿರುವ ಕೆರೆಯಲ್ಲಿ ಸ್ನಾನ ಮಾಡುತ್ತಿದ್ದಾಗ, ನಿಂಗನಗೌಡ ಮತ್ತು ಮಲ್ಲನಗೌಡರ ಸಂಚಿನಿಂದ ಬ್ರಿಟಿಷರ ಕೈಗೆ ಸಿಕ್ಕಿ ಬಂಧಿಸಲ್ಪಟ್ಟು ನೇಣುಗಂಬಕ್ಕೇರುತ್ತಾನೆ. ತನ್ನವರ ಕುತಂತ್ರದಿಂದಲೇ ಸಾವನ್ನು ಕಂಡ ಮಹಾನ್ ಯೋಧನ ಸಮಾಧಿಯ ಮೇಲೆ ಅಂದು ನೆಟ್ಟಂತಹ ಆಲದಮರ, ಇಂದು ಮುಪ್ಪಿನಲ್ಲಿದ್ದರೂ ತನ್ನ ಜೀವಂತಿಕೆಯನ್ನು ಸಾರಲು ಛಲಬಿಡದೆ, ಹೊಸಬಿಳಿಲುಗಳನ್ನು ಬಿಡುತ್ತಾ ಅರಳಿನಿಂತಿದೆ. ಇಂತಹ ಐತಿಹಾಸಿಕ ಸ್ಥಳದಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ನಂದಗಡ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಕುಮಾರ ಸಮಯದ ವಿರಕ್ತಮಠವು ಕಿತ್ತೂರು ಸಂಸ್ಥಾನದ ಆಳ್ವಿಕೆಯ ಸಂದರ್ಭದಲ್ಲಿ ಶ್ರೀಮಂತವಾಗಿ ಬೆಳೆದಿತ್ತು. ಪುರಾತನ ಕಾಲದಲ್ಲಿ ಸ್ಥಾಪನೆಗೊಂಡ ಈ ಮಠದ ಪರಂಪರೆಯ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಮಠದ ಪರಂಪರೆಯಲ್ಲಿ ಒಂಬತ್ತು ಜನ ಗುರುಗಳು ಅಧಿಕಾರ ನಡೆಸಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೆ ಈ ಬಗ್ಗೆ ಆಧಾರಗಳು ಲಭ್ಯವಿಲ್ಲ. ಈಗ ಶ್ರೀ ಫಾಲಾಕ್ಷ ಸ್ವಾಮಿಗಳು ೧೯೮೨ರಲ್ಲಿ ಮಠದ ಅಧಿಕಾರವನ್ನು ವಹಿಸಿಕೊಂಡು, ಸ್ಥಗಿತಗೊಂಡಿದ್ದ ಧಾರ್ಮಿಕ ಕಾರ್ಯಗಳನ್ನು ಮುಂದುವರೆಸಿಕೊಂಡು ಬಂದು

ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ಗುರುಗಳು ಅಧಿಕಾರಕ್ಕೆ ಬಂದ ಮೇಲೆ ಈ ಮಠದ ಶಾಖಾಮಠಗಳಾದ ಖಾನಾಪುರದ ವಿರಕ್ತಮಠ ಮತ್ತು ಇಟಗಿಯ ಮಠಗಳನ್ನು ನವೀಕರಿಸಿ ಇಲ್ಲಿನ ಆಸ್ತಿಯನ್ನು ಕ್ರಮಬದ್ಧಗೊಳಿಸಿ, ಮಠಕ್ಕೆ ಆದಾಯದ ಮೂಲವನ್ನಾಗಿ ಮಾಡಿಕೊಂಡಿದ್ದಾರೆ.

ಶೈಕ್ಷಣಿಕ ಸೇವೆ: ಮಠದ ಆವರಣದಲ್ಲಿ ಕಾನ್ವೆಂಟ್ ಶಾಲೆಯನ್ನು ಪ್ರಾರಂಭಿಸಿದ್ದಾರೆ. ಮರಾಠಿಭಾಷೆಯ ಪ್ರಭಾವ ಹೆಚ್ಚಾಗಿರುವ ಇಲ್ಲಿ ಕನ್ನಡ ಮಾಧ್ಯಮ ಶಾಲೆಯನ್ನು ಪ್ರಾರಂಭಿಸಿ ಶಿಕ್ಷಣ ಕೊಡಿಸುತ್ತಾ, ಕನ್ನಡ ನುಡಿಯನ್ನು ಬೆಳೆಸುವ ನಿಟ್ಟಿನಲ್ಲಿ ಪ್ರಯತ್ನ ನಡೆಸಿದ್ದಾರೆ. ಇಟಗಿ ಶಾಖಾಮಠದಲ್ಲಿ ಚನ್ನವೀರೇಶ್ವರ ಇಂಗ್ಲಿಷ್‌ಮಾಧ್ಯಮ ಶಾಲೆಯನ್ನು ಪ್ರಾರಂಭಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಶ್ರೀ ಫಾಲಾಕ್ಷ ಸ್ವಾಮಿಗಳು ಕ್ರಿಯಾಶೀಲರಾಗಿ ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಮಠವು ಅಭಿವೃದ್ಧಿಯನ್ನು ಸಾಧಿಸುವಂತೆ ಮಾಡಿದ್ದಾರೆ. ಕಾಯಕಯೋಗಿಗಳಾದ ಇವರು ಮಠದ ಆಸ್ತಿಯನ್ನು ಅಭಿವೃದ್ಧಿ ಪಡಿಸಿದ್ದಾರೆ. ಮಠದಲ್ಲಿ ಹೊರಗಿನಿಂದ ಬರುವ ಭಕ್ತರಿಗಾಗಿ ನಿತ್ಯ ಅನ್ನದಾಸೋಹ, ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯ ಪೂಜೆ ಹಾಗೂ ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ಮಾಡುತ್ತಾ, ಧಾರ್ಮಿಕ ವಾತಾವರಣವನ್ನು ಸೃಷ್ಟಿ ಮಾಡಿ ಮಠವನ್ನು ಬೆಳೆಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಫಾಲಾಕ್ಷ ಸ್ವಾಮಿಗಳು, ಶ್ರೀ ವಿರಕ್ತಮಠ, ನಂದಗಡ, ಖಾನಾಪುರ ತಾಲ್ಲೂಕು, ಬೆಳಗಾವಿ ಜಿಲ್ಲೆ.

❑

ಗೋಕಾಕ್ ತಾಲ್ಲೂಕು

ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲ್ಲೂಕು ತನ್ನದೇ ಆದಂತಹ ಸಾಂಸ್ಕೃತಿಕ ಹಿನ್ನಲೆಯನ್ನು ಪಡೆದಿದೆ. ಈ ತಾಲ್ಲೂಕು ಧಾರ್ಮಿಕ ಹಾಗೂ ಸಾಹಿತ್ಯಿಕವಾಗಿ ಹೆಸರು ಪಡೆದಿದೆ. ಇಲ್ಲಿ ವೀರಶೈವಧರ್ಮ ಪ್ರಮುಖವಾಗಿ ಬೆಳೆದಿದ್ದು ಹಿಂದೆ ಸುಮಾರು ನೂರಎಂಟು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಇಂದು ಇಪ್ಪತ್ತೈದು ಮಠಗಳನ್ನು ಗುರುತಿಸಬಹುದಾಗಿದ್ದು ಇವುಗಳಲ್ಲಿ ಹದಿನಾಲ್ಕು ಮಠಗಳು ಮಾತ್ರ ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಅರಭಾವಿ

ಗೋಕಾಕ್ ತಾಲ್ಲೂಕಿನ ಅರಭಾವಿಯು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹದಿನೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ದುರುದುಂಡೇಶ್ವರಮಠವು ಸ್ಥಾಪನೆಯಾಗಿ, ಉತ್ತರಕರ್ನಾಟಕದಲ್ಲಿ ಪ್ರಸಿದ್ಧಿ ಪಡೆದು ಬೆಳೆದಿದೆ.

ದುರುದುಂಡೇಶ್ವರಮಠ: ಅರಭಾವಿ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಹದಿನೆಂಟನೆಯ ಶತಮಾನದಲ್ಲಿ ಶ್ರೀ ದುರು ದುಂಡೇಶ್ವರರಿಂದ ಸ್ಥಾಪನೆಯಾಗಿರುವುದರಿಂದ ಈ ಮಠಕ್ಕೆ'ಶ್ರೀ ದುರುದುಂಡೇಶ್ವರ ಮಠ' ಎಂಬ ಹೆಸರು ಬಂದಿದೆ.

ಹದಿನೆಂಟನೆಯ ಶತಮಾನದಲ್ಲಿ ಶ್ರೀ ದುರುದುಂಡೇಶ್ವರರು ಮತ್ತು ಮಹಾಲಿಂಗಪುರದ ಶ್ರೀ ಮಹಾಲಿಂಗೇಶ್ವರರು, ಹಿಮಾಲಯದಲ್ಲಿ ತಪಸ್ಸು ಮಾಡಿ, ದಕ್ಷಿಣಾಭಿಮುಖವಾಗಿ ಬರುವಾಗ, ದಾರಿ ಮಧ್ಯೆ ಭಕ್ತರ ಆಶಯದಂತೆ ಇಲ್ಲಿ ತಂಗಿ, ಪೂಜೆ ಪುನಸ್ಕಾರಗಳ ಜತೆಗೆ ಪವಾಡ ಮಾಡುವುದರ ಮುಖಾಂತರ ಭಕ್ತರ ಕಷ್ಟಗಳನ್ನು ನಿವಾರಿಸಿದರು. ನಂತರ ಗುರುಗಳು ಪ್ರಯಾಣವನ್ನು ಮುಂದುವರೆಸಿ ಡಬಳಾಪುರಕ್ಕೆ ಬಂದು ಶ್ರೀ ಗುರುಲಿಂಗ ಸ್ವಾಮಿಗಳ ಅನುಗ್ರಹ ಪಡೆದುಕೊಂಡು, ತೆರೆದಾಳಿನಲ್ಲಿ ಅಲ್ಲಮರನ್ನು ಸಂದರ್ಶಿಸಿ ಆಶೀರ್ವಾದ ಪಡೆದು ಮುಂದೆ ಹೊರಟರು. ಇಬ್ಬರೂ ಒಟ್ಟಿಗೆ ಹೊರಟರೆ ಪ್ರಯೋಜನವಿಲ್ಲ. ಬೇರೆ ಬೇರೆ ಹೊರಟು ಅಂಧಕಾರದಲ್ಲಿರುವ ಜನಗಳನ್ನು ಎಚ್ಚರಿಸಿ ಎಂದು ಹೇಳಿದಾಗ, ಇಬ್ಬರು ಬೇರೆ ಬೇರೆಯಾಗಿ ಹೊರಟು, ಶ್ರೀ ದುರುದುಂಡೇಶ್ವರರು ದುರುದುಂಡಿಯಲ್ಲಿ ನೆಲೆನಿಂತರು ಎಂಬುದು ಮಠದ ಇತಿಹಾಸದಲ್ಲಿ ವ್ಯಕ್ತವಾಗಿದೆ.

ಮಠ ಸ್ಥಾಪನೆ: ಶ್ರೀ ದುರುದುಂಡೇಶ್ವರರು ದುರುದುಂಡಿಯ ದೇಸಾಯಿಯವರ ಮನೆಯಲ್ಲಿ ಪೂಜೆಯನ್ನು ಮುಗಿಸಿಕೊಂಡು ನಾಲ್ಕು ಕಿಲೋಮೀಟರ್ ದೂರದ ಅರಣ್ಯದಲ್ಲಿ ಅನುಷ್ಠಾನಕ್ಕಾಗಿ ಕುಳಿತರು. ದೇಸಾಯಿಯು ಗುರುಗಳು ಕುಳಿತ ಜಾಗದ ಸುತ್ತಲ ಪ್ರದೇಶವನ್ನು ಉಂಬಳಿಯಾಗಿ ನೀಡಿದನು. ಆ ಜಾಗವೇ ಇಂದು ಮಠವಾಗಿ ರೂಪಾಂತರಗೊಂಡಿದೆ ಎಂದು ಜನಪದ ಐತಿಹ್ಯದಿಂದ ಗುರುತಿಸಬಹುದಾಗಿದೆ. ಪವಾಡ ಪುರುಷರಾದ ಶ್ರೀ ದುರುದುಂಡೇಶ್ವರರಿಂದ ಪ್ರಾರಂಭಗೊಂಡ ಈ ಮಠವು ಬೆಳೆದು ವೀರಶೈವ ಧರ್ಮವನ್ನು ಅಭಿವೃದ್ಧಿಪಡಿಸಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ದುರುದುಂಡೇಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಕೊಳ್ಳರಾಧ್ಯಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಸಿದ್ಧರಾಮಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಗಟ್ಟಿವಾಳಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಅಗ್ನಾದಾರಾಧ್ಯಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಶಿವಲಿಂಗಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಎರಡನೆಯ ಸಿದ್ಧಲಿಂಗಸ್ವಾಮಿಗಳು

೯. ಶ್ರೀ ಮ.ನಿ.ಪ್ರ. ಮಹಂತಶಿವಯೋಗಿಗಳು
೧೦. ಶ್ರೀ ಮ.ನಿ.ಪ್ರ. ಶಿವಾನಂದಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಕೊಳ್ಳರಾಧ್ಯ ಸ್ವಾಮಿಗಳು ಶಿವಪೂಜಾನಿಷ್ಠರಾಗಿ, ಕಾಯಕ ಯೋಗಿಗಳಾಗಿ ಮಠವನ್ನು ಅಭಿವೃದ್ಧಿಪಡಿಸಿದರು. ಇವರ ಕಾಲದಲ್ಲಿ ಮಠದ ಕಟ್ಟಡವು ಭವ್ಯವಾಗಿ ರೂಪುಗೊಂಡಿದೆ. ಇವರ ನಂತರ ಅಧಿಕಾರಕ್ಕೆ ಬಂದ ಗುರುಗಳ ಬಗ್ಗೆ ಸ್ಪಷ್ಟವಾದ ಆಧಾರಗಳ ಕೊರತೆ ಯಿಂದ ಹೆಚ್ಚು ವಿಚಾರಗಳು ದೊರೆಯುವುದಿಲ್ಲ. ಪರಂಪರೆಯ ಒಂಬತ್ತನೆಯ ಗುರುಗಳಾದ ಶ್ರೀ ಮಹಾಂತ ಶಿವಯೋಗಿಗಳು ಮಹಾ ತಪಸ್ವಿಗಳಾಗಿ ಪ್ರಸಿದ್ಧಿ ಪಡೆದಿದ್ದರು. ಗುರುಗಳು ವಾಕ್‌ಸಿದ್ಧಿ ಪುರುಷರಾಗಿ ಸಮಾಜ ವನ್ನು ಬೆಳೆಸಿ, ದೀನದಲಿತರಿಗೆ ಸಮಾನ ಅವಕಾಶ ನೀಡಿ ಬದುಕಿನ ಮಾರ್ಗವನ್ನು ತೋರಿಸಿದರು. ಇವರು ಜನಮನದಲ್ಲಿ ಮರೆಯದ ಚೇತನವಾಗಿ ರೂಪುಗೊಂಡಿದ್ದಾರೆ. ಗುರುಗಳು ಅರಭಾವಿ ಮಠದಲ್ಲಿ ಅಧಿಕಾರ ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿದರು. ಶ್ರೀ ಶಿವಾನಂದ ಸ್ವಾಮಿಗಳನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ಮಾಡಿಕೊಂಡು ೧೯೭೮ರಲ್ಲಿ ಪಟ್ಟಾಧಿಕಾರದ ಅನುಗ್ರಹವನ್ನು ನೀಡಿ, ಮಠದ ಆಡಳಿತವನ್ನು ನೂತನ ಗುರುಗಳಿಗೆ ಒಪ್ಪಿಸಿ ಬೈಲಹೊಂಗಲ ತಾಲ್ಲೂಕಿನ ಮುರುಗೋಡಿನ ಮಠಕ್ಕೆ ಬಂದು ನೆಲೆಸಿ, ಈ ಮಠವನ್ನು ಅಭಿವೃದ್ಧಿಪಡಿಸಿದರು. ಈಗ ಶ್ರೀ ಶಿವಾನಂದ ಸ್ವಾಮಿಗಳು ಪುರಾತನ ಪರಂಪರೆಯ ಈ ಮಠವನ್ನು ಅಭಿವೃದ್ಧಿಪಡಿಸಿ ಧರ್ಮವನ್ನು ಬೆಳೆಸಿದ್ದಾರೆ.

ಭವ್ಯ ಕಟ್ಟಡ: ಅಂದು ನಿರ್ಮಿಸಲ್ಪಟ್ಟ ಕಟ್ಟಡವು ಹಳೆಯದಾದರೂ ನವನೂತನವಾಗಿ ಕಾಣುತ್ತಿದೆ. ಮಠದ ಸುತ್ತಲಿನ ಆವರಣ ಗೋಡೆಗೆ ಬಳಸಿರುವ ಬೃಹದಾಕಾರದ ಕಲ್ಲುಗಳನ್ನು ನೋಡಿದರೆ ಗುರುಮನೆಗೂ ಅರಮನೆಯ ಭವ್ಯರೂಪವನ್ನು ಕೊಟ್ಟಿರುವುದು ಕಂಡುಬರುತ್ತಿದೆ. ಮಠದ ಒಳಗೆ ಬರಬೇಕಾದರೆ ಮೂವತ್ತೊಂದು ಮೆಟ್ಟಿಲುಗಳನ್ನು ಹತ್ತಿಬರಬೇಕು.

ದೊರೆಗಳಿಗೆ ಆಶ್ರಯ: ಇತಿಹಾಸ ಪ್ರಸಿದ್ಧ ಕಿತ್ತೂರಿನ ಮಲ್ಲಸರ್ಜ ದೊರೆಯು, ಈ ಮಠದಲ್ಲಿ ಆಶ್ರಯ ಬಯಸಿ ತಮ್ಮ ಕೊನೆಯ ದಿನಗಳನ್ನು ಮಠದಲ್ಲಿಯೇ ಕಳೆದು ಕೊನೆಯುಸಿರೆಳೆದರು. ಸಿಂಧೂರ ಲಕ್ಷ್ಮಣನು ಆಂಗ್ಲರ ಕಣ್ಣುತಪ್ಪಿಸಿ ಒಂದು ವಾರದ ಕಾಲ ಈ ಮಠದಲ್ಲಿ ಆಶ್ರಯ ಪಡೆದು, ಗುರುಗಳ ಆಶೀರ್ವಾದ ಪಡೆದುಕೊಂಡು ಹೋದನು ಎಂಬುದು ಐತಿಹಾಸಿಕವಾಗಿ ಮಹತ್ವವನ್ನು ಪಡೆದಿದೆ. ಈ ರೀತಿ ಧಾರ್ಮಿಕ ಕ್ಷೇತ್ರಕ್ಕಷ್ಟೇ ಅಲ್ಲದೆ ದೇಶಸೇವಕರ ರಕ್ಷಣೆಗೂ ಮುಂದಾದ ಈ ಮಠ ಸುಪ್ರಸಿದ್ಧವಾಗಿದೆ.

ಸಾಮಾಜಿಕ ಸೇವೆ: ಶ್ರೀ ದುರುದುಂಡೇಶ್ವರರ ಕಾಲದಲ್ಲಿ ದೇಸಾಯಿ ಕೊಟ್ಟಂತಹ ದತ್ತಿಭೂಮಿಯು ಸರ್ಕಾರದ ಭೂಕಾ ಯಿದೆಯಡಿ ನಲುಗಿಹೋಗಿ, ಸ್ವಲ್ಪ ಆಸ್ತಿಮಾತ್ರ ಉಳಿದಿದೆ, ಇದನ್ನು ಅಭಿವೃದ್ಧಿಪಡಿಸಿದ ಗುರುಗಳು ಆಧುನಿಕ ಬೇಸಾಯ ಪದ್ಧತಿಯಿಂದ ವರಮಾನವನ್ನು ಹೆಚ್ಚಿಸಿಕೊಂಡಿದ್ದಾರೆ.'ಕೆರೆಯ ನೀರನ್ನು ಕೆರೆಗೆ ಚೆಲ್ಲಿ'ಎಂಬಂತೆ ಬಂದ ವರಮಾನದಲ್ಲಿ ಅನ್ನ ದಾಸೋಹ, ಜ್ಞಾನದಾಸೋಹಕ್ಕೆ ಖರ್ಚುಮಾಡುತ್ತಿರುದಿವುದು ಮಠದ ಸಾಮಾಜಿಕ ಕಾಳಜಿಗೆ ಉತ್ತಮ ಉದಾಹರಣೆ.

ಶೈಕ್ಷಣಿಕ ಸೇವೆ: ಅರಭಾವಿ,ಘಟಪ್ರಭ, ಸಿಂದಿಕುರುವೆ, ಧೂಪದಾಳು, ಕಣಬಾನ್ ಮತ್ತು ದುರುದುಂಡಿಯಲ್ಲಿರುವ ಮೂರು ಪ್ರೌಢಶಾಲೆಗಳು, ಒಂದು ಪದವಿಪೂರ್ವ ಕಾಲೇಜು, ನಾಲ್ಕು ಕಾನ್ವೆಂಟ್ ಶಾಲೆಗಳು ಮಠದ ಆಶ್ರಯದಲ್ಲಿ ನಡೆಯುತ್ತಿವೆ. ಮಠದ ಆವರಣದಲ್ಲಿ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲಾಗಿದೆ. ಉಚಿತ ಊಟ, ವಸತಿಯ ವ್ಯವಸ್ಥೆ ಯನ್ನು ಕಲ್ಪಿಸಲಾಗಿದೆ. ಅರಭಾವಿಯು ಎಸ್.ಎಸ್.ಎಲ್.ಸಿ. ಪರೀಕ್ಷೆಯ ಕೇಂದ್ರ ಸ್ಥಳವೂ ಆಗಿರುವುದರಿಂದ ಪ್ರತಿವರ್ಷ ೧೦೦೦ ವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ವಿದ್ಯೆಯಂತೆಯೇ ಕಲೆಗೂ ಪ್ರಾಶಸ್ತ್ಯ ಕೊಟ್ಟು, ಪ್ರತಿವರ್ಷ ಮಠದ ಆಶ್ರಯದಲ್ಲಿ ಡ್ರಾಯಿಂಗ್ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯ ಪೂಜೆಯು ನಡೆಯುತ್ತಿದೆ. ಮಠದ ಮುಖ್ಯ ದ್ವಾರವನ್ನು ಪ್ರವೇಶಿಸುವಾಗಲೇ ಮಂಟಪದ ಮಧ್ಯೆ ಪ್ರತಿಷ್ಠಾಪಿಸಿರುವ ಶ್ರೀ ದುರುದುಂಡೇಶ್ವರರ ಬೆಳ್ಳಿ ಪ್ರತಿಮೆಯು

ಭಕ್ತರನ್ನು ಮಂತ್ರಮುಗ್ಧವಾಗಿಸುತ್ತದೆ. ವರ್ಷದ ೩೬೫ ದಿನಗಳಲ್ಲಿಯೂ ಭಕ್ತರಿಂದ ಪೂಜೆ ಪುನಸ್ಕಾರ ನಡೆಯುತ್ತಿದೆ. ಪ್ರತಿದಿನ ಬಂದು ಹೋಗುವ ಭಕ್ತರಿಗೆ ದಾಸೋಹ, ಉಳಿಯಲು ವಸತಿವ್ಯವಸ್ಥೆ ಇರುವುದರಿಂದ ದೂರದೂರಿನಿಂದ ಬಂದ ಭಕ್ತರು ಆಶ್ರಯಕ್ಕೆ ಪರಿತಪಿಸಬೇಕಾದ ಆವಶ್ಯಕತೆಯಿಲ್ಲ. ಪ್ರತಿವರ್ಷ ಯುಗಾದಿ ಪಾಡ್ಯದ ಮರುದಿನ ದುರುದುಂಡಿಯಲ್ಲಿ ಜಾತ್ರೆ ನಡೆಯುತ್ತಿದೆ. ಇದು ಈ ಪ್ರಾಂತ್ಯದ ಜನರಿಗೆ ದೊಡ್ಡ ಹಬ್ಬವಾಗಿದ್ದು, ಬಹಳ ವೈಭವಯುತವಾಗಿ ನಡೆಯುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಶಿವಾನಂದ ಸ್ವಾಮಿಗಳು, ಶ್ರೀ ದುರುದುಂಡೇಶ್ವರ ಮಠ, ಅರಭಾವಿ, ಗೋಕಾಕ್ ತಾ, ಬೆಳಗಾವಿ ಜಿಲ್ಲೆ.

ಅಂಕಲಗಿ

ಗೋಕಾಕ್ ತಾಲ್ಲೂಕಿನ ಅಂಕಲಗಿಯು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಮೂವತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಅಡವಿಸಿದ್ಧೇಶ್ವರ ಮಠವು ಅಸ್ತಿತ್ವದಲ್ಲಿದೆ.

ಅಡವಿಸಿದ್ಧೇಶ್ವರಮಠ: ಅಂಕಲಗಿ ಗ್ರಾಮದ ಹೊರಭಾಗದಲ್ಲಿ ಶ್ರೀ ಅಡವಿಸಿದ್ಧೇಶ್ವರಮಠವು ಸ್ಥಾಪನೆಯಾಗಿದೆ. ಹಿಂದೆ ಅಡವಿಯಲ್ಲಿ ಸ್ಥಾಪನೆಯಾಗಿದ್ದರಿಂದ ಮತ್ತು ಕರ್ತೃಗುರುಗಳು ಶ್ರೀ ಸಿದ್ಧೇಶ್ವರ ಸ್ವಾಮಿಗಳಾಗಿರುವುದರಿಂದ ಮಠಕ್ಕೆ'ಶ್ರೀ ಅಡವಿಸಿದ್ಧೇಶ್ವರಮಠ'ಎಂಬ ಹೆಸರು ಬಂದಿದೆ. ಸುಮಾರು ನೂರುವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟಿರುವ ಈ ಮಠದ ಕಟ್ಟಡವು, ಸುಂದರ ಕಲಾತ್ಮಕ ವಿನ್ಯಾಸದಲ್ಲಿ ನಿರ್ಮಾಣವಾಗಿ ಭವ್ಯತೆಯನ್ನು ಸಾರುತ್ತಿದೆ.

ಮಠದ ಕಲ್ಪನೆಗೆ ಅನುಗುಣವಾಗಿ ಜೇನುನೊಣಗಳ ಝೇಂಕಾರ, ಆನೆಯ ಕೊರಳಿನ ಘಂಟೆಯ ನಿನಾದ, ಹೊಸ ಯಾತ್ರಿಕರನ್ನು ಗುರುತಿಸಿ ಎಲ್ಲಿಂದ ಬಂದದ್ದು ಎಂದು ಸೌಜನ್ಯದಿಂದ ಸ್ವಾಗತಿಸುವ ಮಠದ ಕಿಂಕರರು,ತಂಪಾದ ವಾತಾವರಣ ಯಾತ್ರಿಕರನ್ನು ಅಲೌಕಿಕ ಲೋಕಕ್ಕೆ ಕೊಂಡೊಯ್ದು ಬಿಡುತ್ತದೆ.

ಮಠ ಸ್ಥಾಪನೆ: ಶ್ರೀ ಅಡವಿ ಸ್ವಾಮಿಗಳು ತಮ್ಮ ಹಠಯೋಗ ಹಾಗೂ ಶಿವಯೋಗದ ಸಿದ್ಧಿಯಿಂದ ಏಳುನೂರು ವರ್ಷಗಳ ಕಾಲ ಬದುಕಿ, ಪವಾಡ ಮಾಡಿದರೆಂದು ಹೇಳಲಾಗುತ್ತಿದೆ. ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದಲ್ಲಿಕ್ರಾಂತಿ ನಡೆದ ಮೇಲೆ ಚನ್ನಬಸವಣ್ಣನವರ ಜೊತೆ ರೇಚಪ್ಪ ಎಂಬುವರು ಉಳುವಿಗೆ ಬಂದು ನೆಲೆಸಿದರು. ನಂತರ ಹಿಮಾಲಯ ಮುಂತಾದ ಸ್ಥಳಗಳಲ್ಲಿ ಅನುಷ್ಠಾನಕ್ಕೆಗೊಂಡು ಯೋಗಸಿದ್ಧಿಯಿಂದ ಬದುಕಿ, ಅಂಕಲಗಿಗೆ ಬಂದು ನೆಲೆಸಿದರೆಂದು ಹೇಳುವ ಜನಪದ ಕಥೆ ಜನಜನಿತವಾಗಿದೆ. ಗುರುಗಳು ಇಲ್ಲಿ ಮಠವನ್ನು ಸ್ಥಾಪಿಸಿ, ನಿತ್ಯ ಧರ್ಮೋಪದೇಶ ಹಾಗೂ ಅನ್ನದಾಸೋಹವನ್ನು ನಡೆಸುವ ಮೂಲಕ ಜನರಲ್ಲಿ ಧರ್ಮಜಾಗೃತಿಯನ್ನುಂಟು ಮಾಡಿದರು. ಇವರು ಅನೇಕ ಪವಾಡಗಳನ್ನು ಮಾಡಿ ಭಕ್ತರನ್ನು ಉದ್ಧರಿಸಿ ಪವಾಡದ ರೀತಿಯಲ್ಲೇ ಜೀವಂತ ಸಮಾಧಿಯಾದರು. ನಂತರ ತುಮಕೂರು ತಾಲ್ಲೂಕಿನ ಗುಬ್ಬಿಗೆ ಬಂದು ಇಲ್ಲಿಯೂ ಅನೇಕ ಪವಾಡಗಳನ್ನು ಮಾಡಿ ತೊರೆಮಠವನ್ನು ಸ್ಥಾಪಿಸಿ, ಚಿಕ್ಕ ತೊಟ್ಟಿಲುಕೆರೆಯಲ್ಲಿ ಲಿಂಗೈಕ್ಯರಾಗಿದ್ದಾರೆಂದು ಜನಪದ ಕಥೆಗಳು ಹೇಳುತ್ತಿವೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಅಡವಿ ಸಿದ್ಧೇಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಒಂದನೆಯ ಸಿದ್ಧರಾಮಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಎರಡನೆಯ ಗುರುಸಿದ್ಧರಾಮಸ್ವಾಮಿಗಳು

ಈ ರೀತಿ ಮೂರು ಜನ ಗುರುಗಳು ಆಡಳಿತವನ್ನು ನಡೆಸಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಕರ್ತೃ ಗುರುಗಳಾದ ಶ್ರೀ ಅಡವಿ ಸ್ವಾಮಿಗಳ ನಂತರ ಶ್ರೀ ಸಿದ್ಧರಾಮ ಸ್ವಾಮಿಗಳು ಅಧಿಕಾರಕ್ಕೆ ಬಂದರು. ಇವರು ಕರ್ತೃಗುರುಗಳ ಕರಕಮಲ ಸಂಜಾತರಾಗಿ ಬೆಳೆದು ಮಠವನ್ನು ಹೆಚ್ಚು ಅಭಿವೃದ್ಧಿಪಡಿಸಿದ್ದರು. ಈಗಿನ ಗುರುಗಳಾದ ಶ್ರೀ ಗುರುಸಿದ್ಧರಾಮ ಸ್ವಾಮಿಗಳು ೧೯೭೫ರ ಮೇ ಒಂದರಂದು ಮಠದ ಅಧಿಕಾರವನ್ನು ವಹಿಸಿಕೊಂಡರು. ಗುರುಗಳು ಶ್ರಾವಣ ಹಾಗೂ ಶಿವರಾತ್ರಿಯಲ್ಲಿ ಪುರಾಣಪ್ರವಚನಗಳನ್ನು ನಡೆಸುವ ಮೂಲಕ ವೀರಶೈವ ಧರ್ಮವನ್ನು ಪ್ರಸಾರ ಮಾಡುತ್ತಾ ಬೆಳೆಸುತ್ತಿದ್ದಾರೆ. ಅನ್ನದಾಸೋಹ ವ್ಯವಸ್ಥಿತವಾಗಿ ನಡೆಯುವಂತೆ ಮಾಡಿದ್ದಾರೆ.

ಶೈಕ್ಷಣಿಕ ಸೇವೆ: ಶ್ರೀ ಗುರುಸಿದ್ಧ ಸ್ವಾಮಿಗಳು ಶ್ರೀ ಅಡವಿ ಸಿದ್ಧೇಶ್ವರ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ, ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳನ್ನು ಪ್ರಾರಂಭಿಸಿ ಗ್ರಾಮೀಣ ಮಕ್ಕಳ ಕಲಿಕೆಗೆ ನೆರವಾಗಿದ್ದಾರೆ. ವ್ಯಾಸಂಗ ಮಾಡುವ ಮಕ್ಕಳಿಗೆ ಊಟ ಮತ್ತು ವಸತಿಗೆಂದು ಕಟ್ಟಿಸಿದ ವಿದ್ಯಾರ್ಥಿನಿಲಯಗಳು ದೀನ ದಲಿತರ ಮಕ್ಕಳಿಗೂ ಆಶ್ರಯ ತಾಣವಾಗಿವೆ. ಇಲ್ಲಿ ಅಸ್ಪೃಶ್ಯತೆಯ ಸೋಂಕಿಲ್ಲದೆ ಎಲ್ಲಾ ಜಾತಿಯ ಮಕ್ಕಳಿಗೂ ಸಮಾನಸ್ಥಾನವನ್ನು ಕೊಟ್ಟು, ವಿದ್ಯಾರ್ಥಿ ನಿಲಯವನ್ನು ನಡೆಸಲಾಗುತ್ತಿದೆ.

ಸಾಹಿತ್ಯ ಸೇವೆ: ಸಾಹಿತ್ಯಾಸಕ್ತರಾಗಿರುವ ಶ್ರೀ ಗುರುಸಿದ್ಧರಾಮ ಸ್ವಾಮಿಗಳು ಶ್ರೀ ಅಡವಿ ಸಿದ್ಧೇಶ್ವರ ಪ್ರಕಾಶನ ಸಂಸ್ಥೆ ಯನ್ನು ಸ್ಥಾಪಿಸಿ, ಮಠದ ಪರಂಪರೆಯನ್ನು ಬಿಂಬಿಸುವಂತಹ ಶ್ರೀ ಅಡವಿಸಿದ್ಧೇಶ್ವರ ಚರಿತ್ರೆ ಎಂಬ ಗ್ರಂಥವನ್ನು ಪ್ರಕಟಿಸಿ ದ್ದಾರೆ. ಮಠದಲ್ಲಿ ನಡೆಯುವ ವಿಶೇಷ ಸಂದರ್ಭಗಳಲ್ಲಿ ಉಪನ್ಯಾಸ ಮಾಲಿಕೆಯನ್ನು ಏರ್ಪಡಿಸಿ, ವೀರಶೈವ ಧರ್ಮ ಮತ್ತು ಶರಣ ಸಾಹಿತ್ಯದ ಮೇಲೆ ಬೆಳಕು ಚೆಲ್ಲುವಂತಹ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದಾರೆ.

ವಿಳಾಸ:ಶ್ರೀ ಮ.ನಿ.ಪ್ರ.ಗುರುಸಿದ್ಧರಾಮ ಸ್ವಾಮಿಗಳು, ಶ್ರೀ ಅಡವಿಸಿದ್ಧೇಶ್ವರಮಠ, ಅಂಕಲಗಿ, ಗೋಕಾಕ್ ತಾ, ಬೆಳಗಾವಿ ಜಿಲ್ಲೆ.

ಕುಂದರಗಿ

ಗೋಕಾಕ್ ತಾಲ್ಲೂಕಿನ ಕುಂದರಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಇಪ್ಪತ್ತೆಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಅಡವಿಸಿದ್ಧೇಶ್ವರಮಠವು ಅಸ್ತಿತ್ವದಲ್ಲಿದೆ.

ಅಡವಿಸಿದ್ಧೇಶ್ವರಮಠ: ಕುಂದರಗಿ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ಅಡವಿ ಸಿದ್ಧೇಶ್ವರಮಠವು ಶ್ರೀ ಅಡವಿ ಸ್ವಾಮಿಗಳಿಂದ ಸ್ಥಾಪನೆಯಾಗಿದೆ. ಶ್ರೀ ಅಡವಿ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಅಂಕಲಗಿಗೆ ಹೋಗುವ ಮುನ್ನ ಇಲ್ಲಿ ಅನುಷ್ಠಾನ ಕೈಗೊಂಡು ಮಠವನ್ನು ಸ್ಥಾಪಿಸಿದ್ದರೆಂದು ಹೇಳಲಾಗುತ್ತಿದೆ. ಅಂದು ಪ್ರಾರಂಭಗೊಂಡ ಮಠವು ಈತನಕ ಬೆಳೆದು ಬಂದಿದೆ. ಈಗ ಶ್ರೀ ಸಿದ್ಧರಾಮ ಸ್ವಾಮಿಗಳು ಮಠದ ಆಡಳಿತವನ್ನು ನೋಡಿಕೊಳ್ಳುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಸಿದ್ಧರಾಮ ಸ್ವಾಮಿಗಳು, ಶ್ರೀ ಅಡವಿಸಿದ್ಧೇಶ್ವರಮಠ, ಕುಂದರಗಿ, ಗೋಕಾಕ್ ತಾ, ಬೆಳಗಾವಿ ಜಿಲ್ಲೆ.

ಕೊಣ್ಣೂರುಮರಡಿ ಮಠ

ಗೋಕಾಕ್ ತಾಲ್ಲೂಕಿನ ಕೊಣ್ಣೂರುಮರಡಿಮಠವು ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಹದಿನೆಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಕಾಡಸಿದ್ಧೇಶ್ವರ ಮಠವು ಸ್ಥಾಪನೆಯಾಗಿದೆ. ಘಟಪ್ರಭ ನದಿಯ ಬೆಡಗಿನ ಜಲಪಾತವೊಂದು ಸಮೀಪದಲ್ಲೇ ಇದೆ. ಇಲ್ಲಿಗೆ ಭೇಟಿಕೊಡುವ ಪ್ರವಾಸಿಗಳು, ಸಾಮಾನ್ಯವಾಗಿ ಮರಡಿಮಠದ ಕಾಡಸಿದ್ಧೇಶ್ವರ ಮಠಕ್ಕೂ ಭೇಟಿ ನೀಡುತ್ತಾರೆ. ಪ್ರಕೃತಿ ಸೌಂದರ್ಯದ ತಾಣ ಮತ್ತು ಧಾರ್ಮಿಕ ಸ್ಫೂರ್ತಿಯ ನೆಲೆಯಾಗಿರುವ ಈ ಸುಕ್ಷೇತ್ರ ಪ್ರವಾಸಿಗಳ ಮತ್ತು ಭಕ್ತರ ಆಕರ್ಷಣೆಗೆ ಪಾತ್ರವಾಗಿ ಜನಮನ್ನಣೆಯನ್ನು ಪಡೆದಿದೆ.

ಕಾಡಸಿದ್ಧೇಶ್ವರಮಠ: ಕೊಣ್ಣೂರುಮರಡಿಮಠ ಗ್ರಾಮದಲ್ಲಿರುವ ಶ್ರೀ ಕಾಡಸಿದ್ಧೇಶ್ವರ ಮಠವು ಹನ್ನೆರಡನೆಯ ಶತಮಾನ ದಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಕೊಲ್ಹಾಪುರ ಜಿಲ್ಲೆಯ ಸಿದ್ಧಗಿರಿಯ ಮೂಲ ನಿವಾಸಿಗಳಾದ ಶ್ರೀಶಿವ ಯೋಗಿಗಳೊಬ್ಬರು ಲೋಕಸಂಚಾರ ಕೈಗೊಂಡು, ಕಾಡಿನಲ್ಲಿ ನೆಲೆಸಿ ಅನುಷ್ಠಾನ ಕೈಗೊಂಡಿದ್ದರಿಂದ ಗುರುಗಳಿಗೆ ಶ್ರೀಕಾಡ ಸಿದ್ಧೇಶ್ವರರು ಎಂಬ ಹೆಸರು ಬಂದಿರಬಹುದು. ಅವರು ಎಲ್ಲೆಲ್ಲಿ ಉಳಿದು ಪೂಜೆ ಮಾಡಿಕೊಂಡು ಬಂದರೋ ಅಲ್ಲೆಲ್ಲಾ ತೋರುಗದ್ದುಗೆಗಳು ಸ್ಥಾಪನೆಯಾಗಿವೆ ಎಂದು ಹೇಳಲಾಗುತ್ತಿದೆ. ಶ್ರೀ ಕಾಡಸಿದ್ಧೇಶ್ವರರು ಲಿಂಗೈಕ್ಯರಾದ ನಂತರ ಈ ಸಮಾಧಿಯ ಮೇಲೆ ಶ್ರೀ ಕೆಂಪಯ್ಯ ಸ್ವಾಮಿಗಳು ಮಠವನ್ನು ಸ್ಥಾಪಿಸಿದ್ದರಿಂದ ಕಾಡಸಿದ್ಧೇಶ್ವರ ಮಠಕ್ಕೆ, ಶ್ರೀ ಕೆಂಪ ಯ್ಯನ ಮಠವೆಂದೂ ಕರೆಯುತ್ತಾರೆ.

ಪರಂಪರೆ: ೧. ಶ್ರೀ ಮ.ನಿ.ಪ್ರ. ಕಾಡಸಿದ್ಧೇಶ್ವರಸ್ವಾಮಿಗಳು

೨. ಶ್ರೀ ಮ.ನಿ.ಪ್ರ. ಕೆಂಪಯ್ಯಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಪವಾಡೇಶ್ವರಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಗುರುಸಿದ್ಧೇಶ್ವರಸ್ವಾಮಿಗಳು

ಮಠದ ಪರಂಪರೆಯ ಬಗ್ಗೆ ಸ್ಪಷ್ಟವಾದ ಆಧಾರಗಳು ಇಲ್ಲದೆ ಇರುವುದರಿಂದ ಪರಂಪರೆಯ ಗುರುಗಳ ಕೆಲವೇ ಹೆಸರುಗಳನ್ನು ದಾಖಲಿಸಲಾಗಿದೆ. ಶ್ರೀ ಕಾಡಸಿದ್ಧೇಶ್ವರ ಮಠದ ಪರಂಪರೆಯಲ್ಲಿ ಹತ್ತು ಜನರು ಅಧಿಕಾರ ನಡೆಸಿದ್ದಾರೆ ಎಂದು ಹೇಳಲಾದರೂ ಗುರುಗಳ ಹೆಸರು ಲಭ್ಯವಿಲ್ಲ. ಪವಾಡಪುರುಷ ಶ್ರೀ ಕಾಡಸಿದ್ಧೇಶ್ವರ ಸ್ವಾಮಿಗಳಿಂದ ಮಠವು ಪ್ರಸಿದ್ಧಿ ಪಡೆದು ಬೆಳೆಯಿತು. ನಂತರ ಶ್ರೀ ಕೆಂಪಯ್ಯ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟು ಹೆಚ್ಚು ಹೆಸರು ಪಡೆಯಿತು. ನಂತರ ಅಧಿಕಾರ ವಹಿಸಿ ಕೊಂಡ ಗುರುಪರಂಪರೆಯ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಶ್ರೀ ಪವಾಡೇಶ್ವರರು ಹೆಚ್ಚು ಹೆಸರು ಪಡೆದು ಮಠ ವನ್ನು ಅಭಿವೃದ್ಧಿಪಡಿಸಿದರು. ಪರಂಪರೆಯ ಹನ್ನೊಂದನೆಯ ಗುರುಗಳಾಗಿ ಶ್ರೀ ಗುರುಸಿದ್ಧೇಶ್ವರ ಸ್ವಾಮಿಗಳು ೧೯೭೮ರಲ್ಲಿ ಅಧಿಕಾರವನ್ನು ವಹಿಸಿಕೊಂಡರು. ಸರಳ ಸಜ್ಜನಿಕೆಯ ಸ್ವಭಾವದ ಇವರು ಮಠದ ಸುತ್ತ ನಿರ್ಮಿಸಿರುವ ದೊಡ್ಡ ಆವರಣದ ಒಳಭಾಗದಲ್ಲಿ ಶ್ರೀ ಕಾಡಸಿದ್ಧೇಶ್ವರರ ಭಾವಚಿತ್ರಗಳನ್ನು ಮತ್ತು ಇವರ ವಚನಗಳನ್ನು ಬರೆಸಿರುವುದರಿಂದ, ಮಠದ ಮೂಲಪುರುಷರ ಬಗ್ಗೆ ಭಕ್ತರು ಅರಿತುಕೊಳ್ಳಲು ಅನುಕೂಲವಾಗಿದೆ.

ಶೈಕ್ಷಣಿಕ ಸೇವೆ: ಮಠದ ಆಸ್ತಿಯಾಗಿ ಕೇವಲ ಐದು ಎಕರೆ ಜಮೀನು ಮಾತ್ರ ಇದೆ. ಹಿಂದೆ ವಂಟುಮೂರಿದೇಸಾಯಿ ಕೊಟ್ಟಂಥ ಭೂಮಿ ಘಟಪ್ರಭಾ ನದಿಗೆ ಕಟ್ಟಿದ ಅಣೆಕಟ್ಟಿನಲ್ಲಿ ಮುಳುಗಡೆಯಾಗಿದೆ. ಆದರೆ ಭಕ್ತರ ಅಭಿಮಾನ ಮತ್ತು ಸಹಾಯಹಸ್ತಗಳಿಂದಾಗಿ ಮಠದ ಚಟುವಟಿಕೆಗಳು ಯಶಸ್ವಿಯಾಗಿ ಸಾಗುತ್ತಿವೆ. ಮಠದ ಆಶ್ರಯದಲ್ಲಿ ಒಂದು ಪದವಿ ಪೂರ್ವಕಾಲೇಜು, ನಾಲ್ಕು ಪ್ರೌಢಶಾಲೆ ಹಾಗೂ ಮಹಿಳೆಯರಿಗಾಗಿ ಹೊಲಿಗೆ ಹಾಗೂ ಕಸೂತಿ ತರಬೇತಿ ಕೇಂದ್ರಗಳು ನಡೆಯುತ್ತಿವೆ. ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಒಂದು ವಿದ್ಯಾರ್ಥಿನಿಲಯವನ್ನು ಸ್ಥಾಪಿಸಲಾಗಿದೆ.

ಸಾಹಿತ್ಯ ಸೇವೆ: ಹಿಂದಿನ ಗುರುಗಳಾದ ಶ್ರೀ ಪವಾಡೇಶ್ವರ ಸ್ವಾಮಿಗಳು ಶ್ರೀ ಕಾಡಸಿದ್ಧೇಶ್ವರರು ರಚಿಸಿದ ವಚನಗಳನ್ನು ಸಂಗ್ರಹಿಸುವ ಕಾರ್ಯವನ್ನು ಮುಗಿಸುವ ಮುನ್ನವೇ ಲಿಂಗೈಕ್ಯರಾದರು. ಆದರೆ ಆ ಕಾರ್ಯವನ್ನು ಅಲ್ಲಿಗೇ ನಿಲ್ಲಿಸಬಾರ ದೆಂದು ಶ್ರೀ ಪವಾಡೇಶ್ವರ ಸ್ವಾಮಿಗಳ ಉತ್ತರಾಧಿಕಾರಿಗಳಾಗಿ ಬಂದ ಶ್ರೀ ಗುರುಸಿದ್ಧೇಶ್ವರ ಸ್ವಾಮಿಗಳು ಮುಂದುವರೆಸಿ, ವಚನ ಸಂಗ್ರಹ ಕಾರ್ಯವನ್ನು ಮುಗಿಸಿ ಅದನ್ನು ಅಚ್ಚು ಹಾಕಿಸಿದ್ದಾರೆ. ಇದು ಕನ್ನಡ ವಚನಸಾಹಿತ್ಯ ಲೋಕಕ್ಕೆ ಕೊಟ್ಟ ಕೊಡುಗೆಯಾಗಿದೆ.

ಧಾರ್ಮಿಕ ಕಾರ್ಯಗಳು: ಕರ್ತೃಗದ್ದುಗೆಗೆ ಭವ್ಯವಾದ ಮಂಟಪವನ್ನು ನಿರ್ಮಿಸಲಾಗಿದೆ. ಇಲ್ಲಿ ನಿತ್ಯ ರುದ್ರಾಭಿಷೇಕಪೂಜೆ ನಡೆಯುತ್ತಿದೆ. ಪರಂಪರೆಯ ಗುರುಗಳ ಗದ್ದುಗೆಗಳಿಗೆ ನಿತ್ಯಪೂಜೆ, ಪ್ರತಿ ಅಮಾವಾಸ್ಯೆಯಲ್ಲಿ ಭಕ್ತರು ಅಪಾರ ಸಂಖ್ಯೆ ಯಲ್ಲಿ ಸೇರಿ ವಿಶೇಷ ಪೂಜೆ ನಡೆಸುತ್ತಾರೆ. ಶ್ರಾವಣಮಾಸದಲ್ಲಿ ಪ್ರತಿದಿನ ಪ್ರವಚನದ ಜತೆಗೆ ದಾಸೋಹ ಹಾಗೂ ವರ್ಷ ಕ್ಕೆರಡು ಬಾರಿ ಜಾತ್ರೆಗಳು ನಡೆಯುತ್ತಿವೆ. ಶ್ರೀ ಗುರುಸಿದ್ಧೇಶ್ವರ ಸ್ವಾಮಿಗಳು ಮಠದ ಸರ್ವತೋಮುಖ ಬೆಳವಣಿಗೆಗೆ ಪೂರಕ ವಾಗಿ ಯೋಜನೆಗಳನ್ನು ಹಮ್ಮಿಕೊಂಡು ಶ್ರಮಿಸುತ್ತಿದ್ದಾರೆ. ಮಠಕ್ಕೊಂದು ಸುಂದರ ರಥವನ್ನು ಮಾಡಿಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಗುರುಸಿದ್ಧೇಶ್ವರ ಸ್ವಾಮಿಗಳು, ಶ್ರೀ ಕಾಡುಸಿದ್ಧೇಶ್ವರ ಮಠ, ಕೊಣ್ಣೂರುಮರಡಿಮಠ, ಗೋಕಾಕ್ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಗೋಕಾಕ್

ಬೆಳಗಾವಿ ಜಿಲ್ಲೆಯ ಗೋಕಾಕ್ ಜಿಲ್ಲಾ ಕೇಂದ್ರದಿಂದ ಈಶಾನ್ಯಕ್ಕೆ ನಲವತ್ತು ಕಿ.ಮೀ ದೂರದಲ್ಲಿದೆ. ತಾಲ್ಲೂಕು ಕೇಂದ್ರಸ್ಥಳವಾದ ಇಲ್ಲಿ ಹದಿನೆಂಟು ಮಠಗಳು ಸ್ಥಾಪನೆಯಾಗಿದ್ದವು ಎಂಬ ಮಾಹಿತಿ ದೊರೆಯುತ್ತಿದೆ. ಶ್ರೀ ಚರಂತೇಶ್ವರ ಮಠ, ಶ್ರೀ ಮುಪ್ಪಯ್ಯನವರಮಠ, ಶ್ರೀ ಸಂಪಾದನೆಮಠ (ಸಂಪತ್ತಿಗೆ ಮಠ) ಶ್ರೀ ಕಲ್ಲಟ್ಟಿಮಠ, ಶ್ರೀ ಪಾರ್ನಟ್ಟಿಮಠ,

ಶ್ರೀ ಮರುಮುಂಡೇಶ್ವರಮಠ, ಶ್ರೀ ಸಾವಳಗಿಮಠ, ಶ್ರೀ ಪಟ್ಟದದೇವರ ಹಿರೇಮಠ ಹಾಗೂ ಶ್ರೀ ಕಾಡದೇವರ ಮಠ ಎಂಬ ಒಂಬತ್ತು ಮಠಗಳನ್ನು ದಾಖಲಿಸಬಹುದಾಗಿದೆ. ಉಳಿದ ಮಠಗಳು ಹೇಳಲು ಹೆಸರಿಲ್ಲದಂತಾಗಿವೆ. ದಾಖಲಿಸಿದ ಮಠಗಳಲ್ಲಿ ಮರುಮುಂಡೇಶ್ವರಮಠ ಮತ್ತು ಸಾವಳಗಿ ಮಠಗಳು ಅರಬಾವಿ ಮತ್ತು ಸಾವಳಗಿಯ ಶಾಖಾಮಠಗಳಾಗಿವೆ. ಘಟಪ್ರಭಾ ನದಿಯ ದಂಡೆಯ ಮೇಲಿರುವ ಪಾರ್ನಟ್ಟಿಮಠ ಮಠಾಧೀಶರಿಲ್ಲದೆ ಶಂಕರಲಿಂಗ ದೇವಸ್ಥಾನದ ಆಡಳಿತಕ್ಕೆ ಒಳಪಟ್ಟಿದೆ. ಕಲ್ಲಟ್ಟಿಮಠ ಮತ್ತು ಕಾಡದೇವರ ಮಠಗಳು ಜೀರ್ಣಾವಸ್ಥೆಯಲ್ಲಿದ್ದು, ಗದ್ದುಗೆ ಪೂಜೆಗಷ್ಟೇ ಸೀಮಿತ ಗೊಂಡಿವೆ. ಮುಪ್ಪಯ್ಯನವರಮಠ ಮತ್ತು ಚರಂತೇಶ್ವರಮಠ, ಪಟ್ಟದದೇವರ ಹಿರೇಮಠ ಹಾಗೂ ಸಂಪಾದನೆಮಠದಲ್ಲಿ ಮಠಾಧೀಶರಿದ್ದು, ಧಾರ್ಮಿಕ ಕಾರ್ಯಗಳು ನಡೆಯುತ್ತಿವೆ.

ಸಂಪಾದನೆಮಠ: ಗೋಕಾಕ್ ನಗರದ ಗುರುವಾರ ಪೇಟೆಯಲ್ಲಿ ಶ್ರೀ ಸಂಪಾದನೆ ಮಠವು ಸ್ಥಾಪನೆಯಾಗಿದೆ. ಈ ಮಠಕ್ಕೆ ಶ್ರೀ ಸಂಪತ್ತಿನಮಠ ಎಂದೂ ಸಹ ಕರೆಯಲಾಗುತ್ತಿದೆ. ಹನ್ನೆರಡನೆಯ ಶತಮಾನದಲ್ಲಿ ಶ್ರೀ ಅಲ್ಲಮಪ್ರಭು ದೇವರು ಇಲ್ಲಿ ನೆಲೆಸಿ, ಅನುಷ್ಠಾನ ಕೈಗೊಂಡು ಮುಂದೆ ಪ್ರಯಾಣಬೆಳೆಸಿದ್ದರು. ನಂತರ ಇಲ್ಲಿ ಮಠವು ಸ್ಥಾಪನೆಯಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸುವ ಮೂಲಕ ವೀರಶೈವ ಧರ್ಮವನ್ನು ಬೆಳೆಸಿದೆ.

ಹದಿನೈದನೆಯ ಶತಮಾನದಲ್ಲಿ ಶ್ರೀ ತೋಂಟದ ಸಿದ್ಧಲಿಂಗ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಈ ಕ್ಷೇತ್ರಕ್ಕೆ ಬಂದು ನೆಲೆಸಿ, ಧರ್ಮೋಪದೇಶವನ್ನು ನೀಡಿದ್ದರು. ಈ ರೀತಿ ಹನ್ನೆರಡು ಮತ್ತು ಹದಿನೈದನೆಯ ಶತಮಾನದ ಶರಣರು ಇಲ್ಲಿ ನೆಲೆ ನಿಂತು ಈ ಕ್ಷೇತ್ರವು ಹೆಸರು ಮಾಡಿದೆ. ಪುರಾತನ ಮಠದ ಪರಂಪರೆಯ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ದೊರೆತ ಆಧಾರದ ಮೇಲೆ ಪರಂಪರೆಯನ್ನು ಗುರುತಿಸಲಾಗಿದೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ಗುರುಸಿದ್ಧಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ರಾಚೋಟಿಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಚನ್ನಬಸವಸಾಮಿಗಳು
೪. ಶ್ರೀ ಮ.ನಿ.ಪ್ರ. ಬಸವಸ್ವಾಮಿಗಳು (ಈಗಿನವರು)

ಈ ರೀತಿ ನಾಲ್ಕು ಜನ ಗುರುಗಳ ಹೆಸರುಗಳು ಮಾತ್ರ ಲಭ್ಯವಿವೆ. ಸಂಪಾದನೆ ಮಠವು ಹದಿನೇಳನೆಯ ಶತಮಾನದಲ್ಲಿ ಶ್ರೀ ಗುರುಸಿದ್ಧ ಸ್ವಾಮಿಗಳಿಂದ ಪುನರ್‌ಸ್ಥಾಪನೆಗೊಂಡು ಬೆಳೆಯಿತು. ಇವರು ಮಹಾತಪಸ್ವಿಗಳಾಗಿ ಶರಣತತ್ತ್ವವನ್ನು ಧರ್ಮೋಪದೇಶದ ಮೂಲಕ ಭಕ್ತರಿಗೆ ಮುಟ್ಟಿಸಿ ವೀರಶೈವ ಧರ್ಮವನ್ನು ಬೆಳೆಸಿದರು. ಇವರ ನಂತರ ಬಂದ ಶ್ರೀ ರಾಚೋಟಿ ಸ್ವಾಮಿಗಳ ಕಾಲದಲ್ಲಿ ಈ ಮಠವು ಹೆಚ್ಚು ಅಭಿವೃದ್ಧಿಗೊಂಡು ಪ್ರಸಿದ್ಧಿಪಡೆಯಿತು. ಇವರ ನಂತರ ಶ್ರೀ ಚನ್ನಬಸವ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡರು. ಇವರು ಷಟ್‌ಸ್ಥಲ ಮತ್ತು ಶಿವಯೋಗ ಪ್ರವಚನದ ಮೂಲಕ ಶರಣ ಧರ್ಮವನ್ನು ವಿಶೇಷವಾಗಿ ಪ್ರಚಾರ ಮಾಡಿದ್ದಲ್ಲದೆ, ತಮ್ಮ ನಡೆ-ನುಡಿ, ಆಚಾರ-ವಿಚಾರ ಹಾಗೂ ಕಾಯಕ ನಿಷ್ಠೆಗಳಿಂದ ಭಕ್ತರಿಗೆ ಆದರ್ಶಪ್ರಾಯರಾಗಿದ್ದು, ಮಠವು ಜನಮನದಲ್ಲಿ ಉಳಿಯುವಂತೆ ಮಾಡಿದರು. ಶ್ರೀ ಚನ್ನಬಸವ ಸ್ವಾಮಿಗಳು ೧೯೫೦ರಲ್ಲಿ ಲಿಂಗೈಕ್ಯರಾದ ನಂತರ ಸಂಪಾದನೆ ಮಠಕ್ಕೆ ೧೯೫೨ರಲ್ಲಿ ಶ್ರೀ ಬಸವ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡರು. ಇವರು ಮಹಲಿಂಗಪುರದಿಂದ ಅಂಕಲಗಿಗೆ ಬಂದು ಸಂಸಾರಿಗಳಾಗಬೇಕೆಂದು ಚಿಂತಿಸು ತ್ತಿರುವಾಗಲೇ, ಮಠದ ಭಕ್ತರು ಇವರನ್ನು ಕರೆತಂದು ಪಟ್ಟಾಧಿಕಾರವನ್ನು ಮಾಡಿದರು. ಈ ಮಠಕ್ಕೆ ಶ್ರೀ ಬಸವ ಸ್ವಾಮಿ ಗಳು ಏಳನೆಯ ಮಠಾಧೀಶರಾಗಿದ್ದಾರೆಂದು ತಿಳಿದು ಬಂದಿದೆ.

ಧಾರ್ಮಿಕಕಾರ್ಯಗಳು: ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯಪೂಜೆ ಮತ್ತು ವಾರ್ಷಿಕ ಪುಣ್ಯಾರಾಧನೆ ಕಾರ್ಯ ಕ್ರಮಗಳು ನಡೆಯುತ್ತಿವೆ. ಹಿಂದೆ ಸಿಂದಿಕುರು ಬೇಟದ ದೇಸಾಯಿಯವರು ಮಠದ ಅಭಿವೃದ್ಧಿಗೆಂದು ಜಮೀನನ್ನು ಇನಾಂ ನೀಡಿ ನೆರವಾಗಿದ್ದರು. ಇದರಲ್ಲಿ ಈಗ ಹನ್ನೆರಡುಎಕರೆ ಮಾತ್ರ ಉಳಿದಿದೆ. ಮಠದ ಸುತ್ತಮುತ್ತ ಮಳಿಗೆಗಳನ್ನು ಸ್ಥಾಪಿಸ

ಲಾಗಿದೆ. ಬರುವ ಆದಾಯದಿಂದ ಮಠದ ಧಾರ್ಮಿಕ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ನಡೆಸಿಕೊಂಡು ಬರಲಾಗುತ್ತಿದೆ.

ಶೈಕ್ಷಣಿಕ,ಸಾಮಾಜಿಕ ಸೇವೆ: ಶ್ರೀ ಬಸವ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠದಲ್ಲಿದ್ದ ಅನೇಕ ಸಮಸ್ಯೆಗಳನ್ನು ಬಗೆಹರಿಸಿ ಮಠವನ್ನು ಕ್ರಮಬದ್ಧಗೊಳಿಸಿ ಸಾಹಿತ್ಯ, ಧಾರ್ಮಿಕ ಕೆಲಸಗಳ ಮೂಲಕ ಮಠವನ್ನು ಅಭಿವೃದ್ಧಿಪಡಿಸ ತೊಡಗಿದ್ದಾರೆ. ಮಠದ ಆಶ್ರಯದಲ್ಲಿ ಬಾಲವಾಡಿ ಮತ್ತು ಅಂಗನವಾಡಿ ಶಾಲೆಗಳು, ಜೊತೆಗೆ ಮಹಿಳೆಯರಿಗೆ ಹೊಲಿಗೆ ತರಗತಿ ಯನ್ನು ನಡೆಸುತ್ತಿದ್ದಾರೆ. ಕಾಯಕಯೋಗಿಗಳಾದ ಗುರುಗಳು ಆಯುರ್ವೈದ್ಯ ಪದ್ಧತಿಯಲ್ಲಿ ರೋಗಗಳಿಗೆ ಔಷಧೋಪಚಾರ ವನ್ನು ಮಾಡುತ್ತಾ, ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಬಸವ ಸ್ವಾಮಿಗಳು, ಶ್ರೀ ಸಂಪಾದನೆ ಮಠ, ಗೋಕಾಕ್, ಬೆಳಗಾವಿ ಜಿಲ್ಲೆ.

ಹಿರೇಮಠ: ಗೋಕಾಕ್ ನಗರದ ಮಧ್ಯದಲ್ಲಿರುವ ಸೋಮವಾರಪೇಟೆಯಲ್ಲಿ ಶ್ರೀ ಪಟ್ಟದದೇವರ ಹಿರೇಮಠವು ಸ್ಥಾಪನೆ ಯಾಗಿದೆ. ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿರುವ ಈ ಮಠವು ಪುರಾತನ ಕಾಲದಿಂದ ಅಸ್ತಿತ್ವದಲ್ಲಿದ್ದು, ಇಲ್ಲಿನ ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ಬೆಳೆದಿದೆ. ಶ್ರೀ ವೀರಸಂಗಯ್ಯ ಶಿವಾಚಾರ್ಯ ಸ್ವಾಮಿಗಳು ಈ ಮಠದ ಸ್ಥಾಪಕರೆಂದು ಹೇಳಲಾಗುತ್ತಿದೆ.

ಪರಂಪರೆ:

೧. ಷ.ಬ್ರ.ಶ್ರೀ ವೀರಸಂಗಯ್ಯ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಮಡಿವಾಳೇಶ್ವರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಬಸವರಾಜ ಶಿವಾಚಾರ್ಯಸ್ವಾಮಿಗಳು

ಮಾಹಿತಿಯ ಅಭಾವದಿಂದ ಮಠದ ಪರಂಪರೆಯ ಗುರುಗಳ ಕೆಲವೇ ಹೆಸರುಗಳನ್ನು ಮಾತ್ರ ಗುರುತಿಸಬಹುದಾಗಿದೆ. ಕರ್ತೃ ಗುರುಗಳಾದ ಶ್ರೀ ವೀರಸಂಗಯ್ಯ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಬೆಳೆಸಿದರು. ನಂತರ ಹದಿನೈದನೆಯ ಶತಮಾನ ದಲ್ಲಿ ಅಧಿಕಾರಕ್ಕೆ ಬಂದ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಲೋಕಸಂಚಾರದಲ್ಲಿದ್ದ ಸಂದರ್ಭದಲ್ಲಿ ಬಿಜಾಪುರದ ತಾಸ್‌ಬಾವುಡಿ ಎಂಬಲ್ಲಿ ಆಳವಾದ ನೀರಿರುವ ಬಾವಿಯ ತಳದಲ್ಲಿ ಮೂರು ದಿನ ಅನುಷ್ಠಾನಕ್ಕೆ ಕುಳಿತು ಕೊಂಡಿದ್ದರು ಎಂದು ತಿಳಿದುಬಂದಿದೆ. ಇದನ್ನು ಪ್ರತ್ಯಕ್ಷವಾಗಿ ಕಂಡ ಜನ ಆಶ್ಚರ್ಯಚಕಿತರಾಗಿ, ಅಂದಿನ ಬಿಜಾಪುರದ ದೊರೆ ಆದಿಲ್‌ಷಾಹಿಗೆ ಸುದ್ದಿಯನ್ನು ಮುಟ್ಟಿಸಲಾಗಿ ಸ್ವತಃ ಆದಿಲ್‌ಷಾಹಿಯೇ ಮರುದಿನ ಗುರುಗಳು ಕುಳಿತಿದ್ದ ಬಾವಿ ಯ ಬಳಿಬಂದು ನೋಡಿ, ಪವಾಡಕ್ಕೆ ಮಣಿದು ಗುರುಗಳ ಪೂಜಾನುಷ್ಠಾನಕ್ಕೆ ಹಾಗೂ ಧಾರ್ಮಿಕ ಕಾರ್ಯಗಳನ್ನು ನಡೆ ಸಲು ನೆರವಾಗಲೆಂದು ಐದಾರು ಕಡೆ ಜಾಗವನ್ನು ನೀಡುತ್ತಾನೆ. ಈ ಬಗ್ಗೆ ಪಾರ್ಸಿ ಭಾಷೆಯಲ್ಲಿ ದೊರೆ ಬರೆದು ಕೊಟ್ಟಿ ರುವ ದಾಖಲೆ ಪತ್ರಗಳನ್ನು ಈಗಲೂ ಹಿರೇಮಠದಲ್ಲಿ ಕಾಣಬಹುದಾಗಿದ್ದು, ಅವುಗಳು ಅಮೂಲ್ಯ ದಾಖಲೆಗಳಾಗಿವೆ.

ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಪವಾಡ ಪುರುಷರಾಗಿ, ಹೆಚ್ಚು ಪ್ರಸಿದ್ಧಿ ಪಡೆದಿದ್ದರು. ಇವರ ಕಾಲದಲ್ಲಿ ಪಟ್ಟದದೇವರ ಹಿರೇಮಠವು ಸರ್ವತೋಮುಖವಾದ ಪ್ರಗತಿಹೊಂದಿ, ತನ್ನ ಕೀರ್ತಿಯನ್ನು ಬೆಳಗಿಸಿತು. ಇವರು ಲಿಂಗೈಕ್ಯರಾದ ಮೇಲೆ ಶ್ರೀ ಮಡಿವಾಳೇಶ್ವರ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡಿದ್ದರೆಂದು ಹೇಳಲಾಗು ತ್ತಿದೆ. ಇವರು ಧರ್ಮನಿಷ್ಠರಾಗಿ, ವೀರಶೈವ ಧರ್ಮವನ್ನು ಬೆಳೆಸಲು ಶ್ರಮಿಸಿದ್ದರು. ನಂತರ ಬಂದ ಗುರುಗಳ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಅನೇಕ ವರ್ಷಗಳ ಕಾಲ ಮಠವು ಖಾಲಿ ಉಳಿದಿತ್ತು. ಈಗ ಶ್ರೀ ಬಸವರಾಜ ಶಿವಾಚಾರ್ಯ ಸ್ವಾಮಿಗಳು ಆಡಳಿತವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಪುರಾತನ ಪರಂಪರೆಯ ಮಠದ ಆವರಣದಲ್ಲಿ ಯಾವುದೇ ಗದ್ದುಗೆಗಳು ಸ್ಥಾಪನೆಯಾಗಿಲ್ಲ. ಇಲ್ಲಿನ ಬಿಲ್ವಪತ್ರೆ ವನದಲ್ಲಿ ಒಂದುಗದ್ದುಗೆ ಹಾಗೂ ಸಮೀಪದ ಅಡಿಬಟ್ಟೆ ಗ್ರಾಮದಲ್ಲಿ ಒಂದು ಗದ್ದುಗೆ ಸ್ಥಾಪನೆಯಾ ಗಿವೆ. ಇವುಗಳಿಗೆ ನಿತ್ಯಪೂಜೆ ಮಾಡಲಾಗುತ್ತಿದೆ. ಈಗಿನ ಶ್ರೀ ಬಸವರಾಜ ಶಿವಾಚಾರ್ಯ ಸ್ವಾಮಿಗಳು ಭಕ್ತರ ಧಾರ್ಮಿಕ

ಕ್ರಿಯಾದಿಗಳಲ್ಲಿ ಪಾಲ್ಗೊಂಡು ಸಂಸ್ಕಾರವನ್ನು ನೀಡುತ್ತಿದ್ದಾರೆ. ಹಿಂದೆ ಬ್ರಿಟಿಷ್ ಸರ್ಕಾರ ಮಠದ ಅಭಿ ವೃದ್ಧಿಗೆ ನೀಡಿದ್ದ ನಲವತ್ತುಎಕರೆ ಜಮೀನಿದ್ದು,ಈಗಿನ ಗುರುಗಳು ಅಭಿವೃದ್ಧಿಪಡಿಸಿ ಆದಾಯದ ಮೂಲವನ್ನಾಗಿ ಮಾಡಿಕೊಂಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಬಸವರಾಜ ಶಿವಾಚಾರ್ಯ ಸ್ವಾಮಿಗಳು,ಶ್ರೀ ಹಿರೇಮಠ, ಸೋಮವಾರಪೇಟೆ, ಗೋಕಾಕ್, ಬೆಳಗಾವಿ ಜಿಲ್ಲೆ.

ಮುಪ್ಪಯ್ಯನವರಮಠ: ಗೋಕಾಕ್‌ನಗರದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಮುಪ್ಪಯ್ಯನವರ ಮಠವು, ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ಜತ್ ತಾಲ್ಲೂಕಿನಲ್ಲಿರುವ ಮುಚ್ಚಂಡಿ ಮಠದ ಶಾಖಾಮಠವಾಗಿದೆ. ಪಂಚಪೀಠಗಳಲ್ಲಿ ಒಂದಾದ ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿರುವ ಈ ಮಠವು, ಪುತ್ರವರ್ಗದ ಪರಂಪರೆಯಲ್ಲಿ ಬೆಳೆದುಬಂದಿದೆ.

ಮಠ ಸ್ಥಾಪನೆ: ಶ್ರೀ ಮುಪ್ಪಯ್ಯನಮಠದ ಕರ್ತೃಗುರುಗಳು ಜತ್ ತಾಲ್ಲೂಕಿನ ಮುಚ್ಚಂಡಿಯಿಂದ ಇನ್ನೂರು ವರ್ಷಗಳ ಹಿಂದೆ ಇಲ್ಲಿಗೆ ಬಂದು ಮಠವನ್ನು ಸ್ಥಾಪಿಸಿ, ಧಾರ್ಮಿಕ ಕಾರ್ಯಗಳಿಂದ ಹೆಸರು ಪಡೆದು ಮಠವನ್ನು ಬೆಳೆಸಿದರು. ಗುರುಗಳ ಜೊತೆಗೆ ಆಗಮಿಸಿದ್ದ ಮಠದ ವಂಶಸ್ಥರು ತಮ್ಮ ಜೀವನೋಪಾಯಕ್ಕಾಗಿ ವ್ಯಾಪಾರವನ್ನೇ ಅವಲಂಬಿಸಿಕೊಂಡಿದ್ದರು. ಕಾಲಾಂತರದಲ್ಲಿ ಮೂಲ ಮಠವು ಆಸ್ತಿವಂತ ಮಠವಾಗಿ ಹೆಚ್ಚು ಅಭಿವೃದ್ಧಿಯನ್ನು ಸಾಧಿಸಿತು. ಆದರೆ ಇಲ್ಲಿನ ಮಠಕ್ಕೆ ಆಸ್ತಿ ಇಲ್ಲದ ಕಾರಣ ಭಕ್ತರನ್ನೇ ಅವಲಂಬಿಸಿಕೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸುವಂತಾಯಿತು.ಇದರಿಂದ ಮಠಾಧೀಶರಿಲ್ಲದೆ ಖಾಲಿ ಉಳಿಯಿತು ಎಂದು ತಿಳಿಯುತ್ತದೆ. ಈಗ ಶ್ರೀ ರಾಚಯ್ಯ ಶಿವಾಚಾರ್ಯ ಸ್ವಾಮಿಗಳು ಉತ್ತರಾಧಿಕಾರಿಗಳಾಗಿ ನೇಮಕಗೊಂಡು ಎರಡೂ ಮಠದ ಆಡಳಿತವನ್ನು ನಡೆಸಿಕೊಂಡು ಆಚಾರ್ಯರ ಮತ್ತು ಶರಣರತತ್ತ್ವವನ್ನು ಪ್ರಚಾರಪಡಿಸುತ್ತಿದ್ದಾರೆ. ಮಠದ ಆವರಣದಲ್ಲಿ ಎರಡು ಗದ್ದುಗೆಗಳಿದ್ದು ನಿತ್ಯಪೂಜೆ ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ರಾಚಯ್ಯ ಶಿವಾಚಾರ್ಯಸ್ವಾಮಿಗಳು,ಶ್ರೀ ಮುಪ್ಪಯ್ಯನಮಠ,ಸೋಮವಾರಪೇಟೆ, ಗೋಕಾಕ್,ಬೆಳಗಾವಿಜಿಲ್ಲೆ.

ಚರಂತೇಶ್ವರಮಠ: ಗೋಕಾಕ್ ನಗರದ ಸೋಮವಾರಪೇಟೆಯಲ್ಲಿ ಶ್ರೀ ಚರಂತೇಶ್ವರ ಮಠವು ಸ್ಥಾಪನೆಯಾಗಿದೆ. ಈ ಮಠದ ಮೂಲ ಹೆಸರು 'ಸಂದೋಳಿಮಠ' ಎಂಬುದಾಗಿತ್ತು. ಕಾಲಕ್ರಮೇಣ 'ಶ್ರೀ ಚರಂತೇಶ್ವರಮಠ'ವೆಂದು ಕರೆಯಲಾಗುತ್ತಿದೆ. ಪುರಾತನ ಕಾಲದಲ್ಲಿ ಸ್ಥಾಪನೆಯಾದ ಈ ಮಠವು ಈತನಕ ಬೆಳೆದು ಬಂದಿದೆ.

ಮಠದ ಕರ್ತೃಗುರುಗಳ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಶ್ರೀ ಚನ್ನವೀರ ಸ್ವಾಮಿಗಳು ಈ ಹಿಂದೆ ಅಧಿಕಾರ ನಡೆಸಿ ಮಠವನ್ನು ಅಭಿವೃದ್ಧಿಪಡಿಸಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಈಗ ಶ್ರೀಗುರುಸಿದ್ಧದೇವ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಬೆಳೆಸಿದ್ದಾರೆ. ನಿಡಗುಂದಿ ಕೊಪ್ಪದ ವಿರಕ್ತಮಠದ ಅಧಿಕಾರವನ್ನು ವಹಿಸಿಕೊಂಡು, ಎರಡೂ ಮಠಗಳ ಆಡಳಿತವನ್ನು ನಡೆಸುತ್ತಿದ್ದಾರೆ. ಗುರುಗಳು ಬಹುತೇಕ ಕಾಲ ನಿಡಗುಂದಿ ಕೊಪ್ಪದಲ್ಲಿ ನೆಲೆಸಿರುತ್ತಾರೆ. ಶ್ರೀ ಚರಂತೇಶ್ವರ ಮಠದಲ್ಲಿರುವ ಒಂದು ಗದ್ದುಗೆಗೆ ಪೂಜೆ ಮಾತ್ರ ನಡೆಯುತ್ತಿದೆ. ಹಿರಿಯ ಗುರುಗಳ ಪುಣ್ಯಾರಾಧನೆಯು ಪ್ರತಿ ಜನವರಿಯಲ್ಲಿ ನಡೆಯುತ್ತಿದೆ. ಈ ಸಂದರ್ಭದಲ್ಲಿ ಗುರುಗಳು ಮಠಕ್ಕೆ ಆಗಮಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಗುರುಸಿದ್ಧ ಸ್ವಾಮಿಗಳು, ಶ್ರೀ ಚರಂತೇಶ್ವರಮಠ, ಸೋಮವಾರಪೇಟೆ, ಗೋಕಾಕ್, ಬೆಳಗಾವಿ ಜಿಲ್ಲೆ.

ಘಟಪ್ರಭ

ಗೋಕಾಕ್ ತಾಲ್ಲೂಕಿನ ಘಟಪ್ರಭ, ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಮೂವತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆದಿದೆ. ಹುಬ್ಬಳ್ಳಿಯ ಮೂರುಸಾವಿರಮಠವು ಇಲ್ಲಿ ಸುಸಜ್ಜಿತ ಆಸ್ಪತ್ರೆಯನ್ನು ಸ್ಥಾಪಿಸಿ, ಗ್ರಾಮಾಂತರ ಪ್ರದೇಶದ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಿಕೊಟ್ಟಿದೆ. ಇಂತಹ ಕ್ಷೇತ್ರದಲ್ಲಿ ಅರವತ್ತು ವರ್ಷಗಳ ಹಿಂದೆ ಸ್ಥಾಪನೆಯಾದ ಗುಬಲಗುಡ್ಡದ ಶ್ರೀ ಕೆಂಪಯ್ಯಸ್ವಾಮಿಮಠ ಹಾಗೂ ೧೯೭೦ರಲ್ಲಿ ಸ್ಥಾಪನೆಯಾದ ಶ್ರೀ ಹೊಸ ಮಠ ಅಸ್ತಿತ್ವದಲ್ಲಿದ್ದು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಗುಬಲಗುಡ್ಡದ ಶ್ರೀ ಕೆಂಪಯ್ಯಸ್ವಾಮಿಮಠ: ಘಟಪ್ರಭ ರೈಲ್ವೆ ನಿಲ್ದಾಣದಿಂದ ಪಶ್ಚಿಮಕ್ಕೆ ಸಮೀಪದಲ್ಲಿ ಶ್ರೀ ಗುಬಲ ಗುಡ್ಡದ ಶ್ರೀ ಕೆಂಪಯ್ಯಸ್ವಾಮಿ ಮಠವು ಊರ ಹೊರಗಿನ ವಿಶಾಲ ಮೈದಾನದಲ್ಲಿ ಸ್ಥಾಪನೆಯಾಗಿದೆ. ಶ್ರೀ ಕೆಂಪಯ್ಯ ಸ್ವಾಮಿಗಳು ಗುಬಲಗುಡ್ಡದಿಂದ ಬಂದು ಇಲ್ಲಿ ನೆಲೆಸಿ ಮಠವನ್ನು ಸ್ಥಾಪನೆ ಮಾಡಿದ್ದರಿಂದ'ಗುಬಲಗುಡ್ಡ ಶ್ರೀ ಕೆಂಪಯ್ಯ ಸ್ವಾಮಿಮಠ' ಎಂಬ ಹೆಸರು ಬಂದಿದೆ.

ಶ್ರೀ ಕೆಂಪಯ್ಯಸ್ವಾಮಿಗಳು ಮರಡಿಮಠದಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿದ ನಂತರ, ಘಟಪ್ರಭದಲ್ಲಿ ಮಠವನ್ನು ಸ್ಥಾಪನೆ ಮಾಡಿ ಅಭಿವೃದ್ಧಿಪಡಿಸಿದ್ದಾರೆ. ಈ ನೂತನ ಮಠಕ್ಕೆ ನೂರುಎಕರೆ ಜಮೀನಿದ್ದು, ಇದನ್ನು ಅಭಿವೃದ್ಧಿಪಡಿಸಿ ಉತ್ತಮ ಆದಾಯ ಬರುವಂತೆ ಮಾಡಿದ್ದಾರೆ. ಮಠಕ್ಕೆ ಇನ್ನೂ ಉತ್ತರಾಧಿಕಾರಿಗಳ ನೇಮಕವನ್ನು ಮಾಡದೆ ಇರುವುದರಿಂದ ಎಲ್ಲಾ ಕಾರ್ಯಗಳನ್ನು ವೃದ್ಧಗುರುಗಳೇ ನೋಡಿಕೊಂಡು ಬರುತ್ತಿದ್ದಾರೆ. ಈ ಮಠದಲ್ಲಿರುವ ಬಸವನವಿಗ್ರಹ ಹಾಗೂ ಶ್ರೀ ಕಾಡಸಿದ್ಧೇಶ್ವರರ ವಚನಗಳನ್ನು ಗೋಡೆಯ ಮೇಲೆ ಬರೆಸಿರುವುದು ಮಠಕ್ಕೆ ಶೋಭೆಯನ್ನು ತಂದುಕೊಟ್ಟಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಕೆಂಪಯ್ಯ ಸ್ವಾಮಿಗಳು, ಶ್ರೀ ಗುಬಲಗುಡ್ಡದ ಕೆಂಪಯ್ಯಸ್ವಾಮಿ ಮಠ, ಘಟಪ್ರಭ, ಗೋಕಾಕ್ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಹೊಸಮಠ: ಘಟಪ್ರಭದ ಮಧ್ಯಭಾಗದಲ್ಲಿ ಶ್ರೀ ಹೊಸಮಠವು ಸ್ಥಾಪನೆಯಾಗಿದೆ. ಇಲ್ಲಿ ಹೊಸದಾಗಿ ಮಠವು ಪ್ರಾರಂಭ ವಾಗಿರುವುದರಿಂದ'ಶ್ರೀ ಹೊಸಮಠ' ಎಂಬ ಹೆಸರು ಬಂದಿದೆ. ಕುಮಾರ ಸಮಯಕ್ಕೆ ಸೇರುವ ಈ ವಿರಕ್ತ ಸಂಪ್ರದಾಯದ ಮಠವನ್ನು ೧೯೭೭ರಲ್ಲಿ ಶ್ರೀ ಶಿವಲಿಂಗದೇವರು ಸ್ಥಾಪನೆ ಮಾಡಿದ್ದಾರೆ. ನೂತನ ಮಠಕ್ಕೆ ಹೊಸಕಟ್ಟಡವನ್ನು ನಿರ್ಮಿಸಲಾಗಿದೆ. ಶ್ರೀ ಶಿವಲಿಂಗ ಸ್ವಾಮಿಗಳು ಧರ್ಮಪ್ರಚಾರವನ್ನು ಮೂಲ ಉದ್ದೇಶವಾಗಿಟ್ಟುಕೊಂಡು ಮಠ ಸ್ಥಾಪನೆ ಮಾಡಿದ್ದಾರೆ. ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ, ಕೆಲವೇ ವರ್ಷಗಳಲ್ಲಿ ಮಠವನ್ನು ಪ್ರಸಿದ್ಧಿಗೆ ತಂದಿದ್ದಾರೆ.

ಧಾರ್ಮಿಕ ಕಾರ್ಯಗಳು: ಶ್ರೀ ಶಿವಲಿಂಗ ಸ್ವಾಮಿಗಳು ಶಿವಯೋಗಮಂದಿರದಲ್ಲಿ ಸಂಸ್ಕೃತ, ವೇದ, ಜ್ಯೋತಿಷ್ಯ ಹಾಗೂ ಯೋಗವನ್ನು ಕಲಿತಿದ್ದಾರೆ. ಮಠದಲ್ಲಿ ಆಸ್ತಿ ಇಲ್ಲದಿದ್ದರೂ ಅಪಾರ ಸಂಖ್ಯೆಯ ಭಕ್ತರನ್ನು ಪಡೆದಿದ್ದಾರೆ. ನವರಾತ್ರಿ ಮತ್ತು ಶಿವರಾತ್ರಿಗಳಂತಹ ವಿಶೇಷ ದಿನಗಳಲ್ಲಿ ಕೀರ್ತನೆ ಮಾಡುವುದರ ಜತೆಗೆ, ವೀರಶೈವ ಧರ್ಮದ ಮೂಲ ಉದ್ದೇಶವಾದ ಬಸವಾದಿ ಪ್ರಮಥರ ವಚನ ಧರ್ಮದ ಆದರ್ಶಗಳನ್ನು ಪ್ರವಚನಮಾಡಿ ತಮ್ಮ ಕಾಯಕವನ್ನು ಮಾಡುತ್ತಿದ್ದಾರೆ. ಹಾನಗಲ್ಲು ಶ್ರೀ ಕುಮಾರ ಸ್ವಾಮಿಗಳ ಪುಣ್ಯಾರಾಧನೆಯನ್ನು ಆಚರಿಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಶಿವಲಿಂಗ ಸ್ವಾಮಿಗಳು, ಶ್ರೀ ಹೊಸಮಠ, ಘಟಪ್ರಭ, ರೈಲ್ವೆ ನಿಲ್ದಾಣದ ಸಮೀಪ, ಗೋಕಾಕ್ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಮಮದಾಪುರ

ಗೋಕಾಕ್ ತಾಲ್ಲೂಕಿನ ಮಮದಾಪುರ ಗ್ರಾಮವು ತಾಲ್ಲೂಕು ಕೇಂದ್ರದಿಂದ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಚರಮೂರ್ತೇಶ್ವರ ಮಹಾಮಠವು ಅಸ್ತಿತ್ವದಲ್ಲಿದೆ.

ಚರಮೂರ್ತೇಶ್ವರ ಮಹಾಮಠ: ಮಮದಾಪುರ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ಚರಮೂರ್ತೇಶ್ವರ ಮಹಾ ಮಠವು ಧಾರ್ಮಿಕಕೇಂದ್ರವಾಗಿ ಬೆಳೆದಿದೆ. ಪುರಾತನ ಪರಂಪರೆ ಇರುವ ಈ ಮಠದಲ್ಲಿ ಅನೇಕ ಜನ ಗುರುಗಳು ಅಧಿಕಾರ ನಡೆಸಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಈಗ ಶ್ರೀ ಚರಂತೇಶ್ವರ ಶಿವಾಚಾರ್ಯ ಸ್ವಾಮಿಗಳು ಅಧಿಕಾರದಲ್ಲಿದ್ದು, ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಚರಂತೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಚರಮೂರ್ತೇಶ್ವರ ಮಹಾಮಠ, ಮಮದಾಪುರ, ಗೋಕಾಕ್ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಯಾದವಾಡ

ಗೋಕಾಕ್ ತಾಲ್ಲೂಕಿನ ಯಾದವಾಡವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಮೂವತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಚೌಕಿಮಠವು ಅಸ್ತಿತ್ವದಲ್ಲಿದೆ.

ಚೌಕಿಮಠ: ಯಾದವಾಡ ಗ್ರಾಮದಲ್ಲಿ ಹತ್ತೊಂಬತ್ತನೆಯ ಶತಮಾನದಲ್ಲಿ ವಿರಕ್ತ ಸಂಪ್ರದಾಯದ ಚೌಕಿಮಠವು ಸ್ಥಾಪನೆಯಾಗಿದೆ ಎಂದು ಹೇಳಲಾದರೂ, ಕಾಲಮಾನದ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಹತ್ತೊಂಬತ್ತನೆಯ ಶತಮಾನದಲ್ಲಿ ಊರಹೊರಗಿನ ರುದ್ರಭೂಮಿಯಲ್ಲಿ ಶ್ರೀ ಪ್ರಭು ಸ್ವಾಮಿಗಳು ಪ್ರಾರಂಭ ಮಾಡಿರುವುದರಿಂದ ಈ ಮಠಕ್ಕೆ' ಶ್ರೀ ಚೌಕಿಮಠ'ವೆಂದು ಹೆಸರು ಬಂದಿದೆ. ಶ್ರೀ ಪ್ರಭುಸ್ವಾಮಿಗಳನ್ನು ಭಕ್ತರು 'ಶ್ರೀ ಚೌಕಿಯಪ್ಪ ಸ್ವಾಮಿ'ಗಳು ಎಂಬ ನಾಮದಿಂದ ಕರೆದು ಮಠದ ಹೆಸರನ್ನು ಸ್ಥಾಪಿತರಿಗೂ ಕೂಡ ಇಟ್ಟಿದ್ದಾರೆ.

ಈ ಮಠ ಮೂಲ ಅಸ್ತಿತ್ವವನ್ನು ಊರ ಹೊರಗೆ ಉಳಿಸಿಕೊಂಡರೂ, ಶ್ರೀ ಚೌಕಿಯಪ್ಪ (ಪ್ರಭು) ಸ್ವಾಮಿಗಳು ವಯೋವೃದ್ಧರಾದಾಗ ಮುತ್ತೂರು ಮನೆತನದವರು ತಮ್ಮ ವಾಸದ ಮನೆಯನ್ನು ಗುರುಗಳಿಗೆ ಬಿಟ್ಟುಕೊಟ್ಟ ಮೇಲೆ, ಮಠದ ಕಾರ್ಯಚಟುವಟಿಕೆಗಳು ಮನೆಗೆ ಸ್ಥಳಾಂತರ ಹೊಂದಿದವು. ಕಾಲಾನಂತರ ಮನೆ ಮಠವಾಗಿ ಪರಿವರ್ತನೆಗೊಂಡಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಚೌಕಿಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಮಹದೇವಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಪಂಚಾಕ್ಷರಿಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಪ್ರಭುಲಿಂಗಸ್ವಾಮಿಗಳು (ಹಿರಿಯ ಗುರುಗಳು)
೫. ಶ್ರೀ ಮ.ನಿ.ಪ್ರ. ಪಂಚಾಕ್ಷರಿಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃ ಗುರುಗಳ ನಂತರ ಶ್ರೀ ಮಹಾದೇವ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ ಲಿಂಗೈಕ್ಯರಾದರು. ನಂತರ ಬಂದ ಶ್ರೀ ಪಂಚಾಕ್ಷರಿ ಸ್ವಾಮಿಗಳು ಶಿವಪೂಜಾ ನಿಷ್ಠರಾಗಿ, ಮಠವನ್ನು ಹೆಚ್ಚು ಪ್ರಸಿದ್ಧಿಗೆ ತಂದರು. ಇವರ ಕಾಲದಲ್ಲಿ ಮಠವು ಜನಮನದಲ್ಲಿ ಉಳಿಯಿತು. ವಯೋವೃದ್ಧರಾದ ಶ್ರೀ ಪಂಚಾಕ್ಷರಿ ಸ್ವಾಮಿಗಳು ಮಠದ ಕಾರ್ಯಭಾರವನ್ನು ನೋಡಿಕೊಳ್ಳಲು ಶ್ರೀ ಪ್ರಭುಲಿಂಗ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕಮಾಡಿ ಕೊಂಡು, ೧೯೬೭ರ ಜೂನ್ ಎಂಟರಂದು ಪಟ್ಟಾಧಿಕಾರದ ಅನುಗ್ರಹವನ್ನು ನೀಡಿದ್ದಾರೆ. ಶ್ರೀ ಪ್ರಭುಲಿಂಗ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ, ಮಠವನ್ನು ಪ್ರಗತಿಪಡಿಸುತ್ತಾ ಬಂದಿದ್ದಾರೆ. ಮಠವು ನಾಲ್ಕು ತಲೆಮಾರುಗಳ ತನಕವು ನಿರಂತರವಾಗಿ ಅಭಿವೃದ್ಧಿಗೊಳ್ಳುತ್ತಾ ಬಂದಿದೆ. ಈ ಮಠಕ್ಕೆ ಹೇಳಿಕೊಳ್ಳುವಂತಹ ಆಸ್ತಿ ಇಲ್ಲದಿದ್ದರೂ, ಭಕ್ತರಿಗೇನೂ ಕೊರತೆ ಇಲ್ಲ. ಶ್ರೀ ಪ್ರಭುಲಿಂಗ ಸ್ವಾಮಿಗಳು ಶ್ರೀ ಪಂಚಾಕ್ಷರಿ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡು ಅಧಿಕಾರ ನೀಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಊರ ಹೊರಗಿನ ಮೂಲಮಠದಲ್ಲಿರುವ ಗದ್ದುಗೆಗೆ ಪ್ರತಿನಿತ್ಯ ಪೂಜೆ ಹಾಗೂ ದವನದ ಹುಣ್ಣಿಮೆಯ ದಿನದಿಂದ ಪ್ರಾರಂಭವಾಗುವ ದಿನಗಳ ಜಾತ್ರೆ ತಿಂಗಳುಗಟ್ಟಲೆ ನಡೆಯುತ್ತಿದೆ. ಇದೇ ಸಂದರ್ಭದಲ್ಲಿ ಬಸವೇಶ್ವರರ ಹೆಸರಿನಲ್ಲಿ ರಥೋತ್ಸವ ಹಾಗೂ ಪ್ರತಿ ತಿಂಗಳು ಶಿವಾನುಭವ ಗೋಷ್ಠಿಯನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಪ್ರಭುಲಿಂಗ ಸ್ವಾಮಿಗಳು, ಶ್ರೀ ಚೌಕಿಮಠ, ಯಾದವಾಡ, ಗೋಕಾಕ್ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಯೋಗಿಕೊಳ್ಳ

ಗೋಕಾಕ್ ತಾಲ್ಲೂಕಿನ ಯೋಗಿಕೊಳ್ಳ ಗ್ರಾಮವು ತಾಲ್ಲೂಕು ಕೇಂದ್ರದಿಂದ ಹದಿನೆಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಯೋಗಿಕೊಳ್ಳ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀವಿರಕ್ತಮಠವು ಪುರಾತನ ಪರಂಪರೆಯನ್ನು ಹೊಂದಿದೆ. ಇಲ್ಲಿ ಅನೇಕ ಗುರುಗಳು ಆಡಳಿತವನ್ನು ನಡೆಸಿ ಲಿಂಗೈಕ್ಯರಾಗಿದ್ದು, ಶ್ರೀ ನಿರುಪಾದ ಸ್ವಾಮಿಗಳು ಮಠದ ಆಡಳಿತವನ್ನು ನೋಡಿಕೊಳ್ಳುತ್ತಿದ್ದಾರೆ.

ವಿಳಾಸ:ಶ್ರೀ ಮ.ನಿ.ಪ್ರ. ನಿರುಪಾದಸ್ವಾಮಿಗಳು, ಶ್ರೀವಿರಕ್ತಮಠ,ಯೋಗಿಕೊಳ್ಳ, ಶಿವಪುರಅಂಚೆ,ಗೋಕಾಕ್ ತಾ, ಬೆಳಗಾವಿ ಜಿಲ್ಲೆ.

ಸಾವಳಗಿ

ಗೋಕಾಕ್ ತಾಲ್ಲೂಕಿನ ಸಾವಳಗಿಯು ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಇಪ್ಪತ್ತೈದು ಕಿ.ಮೀ ದೂರದಲ್ಲಿದೆ. ಈ ಗ್ರಾಮವು ನಾಲ್ಕು ಹಳ್ಳಿಗಳು, ಘಟಪ್ರಭ ಮತ್ತು ಹಿರಣ್ಯಕಶ್ಯಪ ನದಿಗಳ ಸಂಗಮ ಕ್ಷೇತ್ರವಾಗಿದೆ. ಇಂತಹ ವಿಶಿಷ್ಟ ಹಿನ್ನಲೆಯ ಭೌಗೋಳಿಕ ನೆಲೆಯಲ್ಲಿ ಶ್ರೀ ಜಗದ್ಗುರು ಶಿವಲಿಂಗೇಶ್ವರ ಕುಮಾರೇಂದ್ರ ಸಿದ್ಧಸಂಸ್ಥಾನ ಮಠವು ಸ್ಥಾಪನೆಯಾಗಿದೆ. ಹಿಂದೂ-ಮುಸ್ಲಿಂ ಭಾವೈಕ್ಯತೆಯ ಸಂಕೇತದ ಸಂಗಮವಾಗಿದೆ.

ಜಗದ್ಗುರು ಶಿವಲಿಂಗೇಶ್ವರ ಕುಮಾರೇಂದ್ರ ಸಿದ್ಧಸಂಸ್ಥಾನ ಮಠ: ಸಾವಳಗಿ ಗ್ರಾಮದಲ್ಲಿರುವ ಶ್ರೀ ಜಗದ್ಗುರು ಶಿವಲಿಂಗೇಶ್ವರ ಕುಮಾರೇಂದ್ರ ಸಿದ್ಧಸಂಸ್ಥಾನ ಮಠವು ಪ್ರಶಾಂತ ವಾತಾವರಣದಲ್ಲಿ ಸ್ಥಾಪನೆಯಾಗಿದೆ. ಶಾಂತಿಸಂದೇಶ ನೀಡುವ ವೈವಿಧ್ಯಮಯ ಪಾರಿವಾಳಗಳು, ಕೋಗಿಲೆಗಳು ಸ್ವಚ್ಛಂದವಾಗಿ ಕುಣಿದು, ಕುಪ್ಪಳಿಸಿ, ಕಣ್ಮನಗಳನ್ನು ಸೂರೆಗೊಳ್ಳುತ್ತಿವೆ. ಶ್ರೀ ಶಿವಲಿಂಗೇಶ್ವರಮಠದ ಆವರಣದಲ್ಲಿ ಸಂಜೆಯಾಗುತ್ತಲೆ ಭಕ್ತಾದಿಗಳು ಹಚ್ಚಿ ಬೆಳಗಿಸಿದ ಪಚ್ಚಕರ್ಪೂರದ ಕಂಪೊಂದು ಕಡೆ, ನಮ್ಮನ್ನು ಹೊಸತೊಂದು ಲೋಕಕ್ಕೆ ಕೊಂಡೊಯ್ದು ಬಿಡುತ್ತವೆ.

ಮಠ ಸ್ಥಾಪನೆಯ ಹಿನ್ನೆಲೆ: ಗುಲ್ಬರ್ಗ ತಾಲ್ಲೂಕಿನ ಹಿರೇಸಾವಳಗಿ ಸಮೀಪದ ಕೊಳ್ಳೂರುಗ್ರಾಮದ ಶ್ರೀ ಲಿಂಗಬಸವಯ್ಯ ಮತ್ತು ಶ್ರೀಮತಿ ಮಲ್ಲಮಾಂಬೆಯವರ ಪುತ್ರರಾಗಿ ಜನಿಸಿದ ಶ್ರೀಶಿವಲಿಂಗೇಶ್ವರರು, ಬಾಲ್ಯದಲ್ಲೇ ಆಧ್ಯಾತ್ಮ ಚಿಂತನೆಯಿಂದ ಲೌಕಿಕ ವಿಚಾರಗಳ ಕಡೆ ಗಮನಕೊಡದೆ ಹನ್ನೆರಡನೆಯ ವಯಸ್ಸಿನಲ್ಲೇ ಮನೆಯನ್ನು ತೊರೆದರು. ಜನಸಂಚಾರವಿಲ್ಲದ ದುರ್ಗಮ ಪ್ರದೇಶವಾದ ಹಿರೇಸಾವಳಗಿಯ ಬೆಟ್ಟದ ಮೇಲೆ ಬಾಲಕ ಶಿವಯೋಗಿ ಶಿವಲಿಂಗೇಶ್ವರರು ಅನುಷ್ಠಾನಕ್ಕೆ ಕುಳಿತುಕೊಂಡು ತಪೋಸಿದ್ಧಿಯನ್ನು ಸಾಧಿಸಿಕೊಂಡರು. ಗುರುಗಳಿಗೆ ಅಫಜಲಪುರ ತಾಲ್ಲೂಕಿನ ಶಿವಪುರದ ಶ್ರೀ ಗುರುಸಿದ್ಧ ದೇವರು ಧರ್ಮೋಪದೇಶವನ್ನು ನೀಡಿ, ಬಾಲ ಶಿವಯೋಗಿಯ ಸಾಧನೆಗೆ ನೆರವಾದರು. ಗುರುಗಳು ಹಿರೇಸಾವಳಗಿಯ ಬೆಟ್ಟದಲ್ಲಿ ಯೋಗಸಿದ್ಧಿಯನ್ನು ಸಂಪಾದಿಸಿಕೊಂಡರು. ಭಕ್ತರು ಬಾಲಕ ಶಿವಯೋಗಿಯ ಇರುವಿಕೆಯನ್ನು ಕಂಡು ದರ್ಶನಕ್ಕೆ ಬರತೊಡಗಿದರು. ಈ ಸಂದರ್ಭದಲ್ಲಿ ಗುರುಗಳು ತಮ್ಮ ತಪೋಶಕ್ತಿಯಿಂದ ಅನೇಕ ಪವಾಡಗಳನ್ನು ಮಾಡಿ, ಭಕ್ತರನ್ನು ಉದ್ಧರಿಸಿದರು. ದಿನ ಕಳೆದಂತೆ ಬಾಲಕ ಶಿವಯೋಗಿ ಶಿವಲಿಂಗೇಶ್ವರರ ಪ್ರಭಾವ ಹೆಚ್ಚಿ, ಹಿರೇಸಾವಳಗಿಯ ಭಕ್ತರು ಗುರುಗಳಿಗಾಗಿ ಮಠವನ್ನು ಸ್ಥಾಪಿಸಿ ಕೊಡಲು ಮುಂದಾದರು. ಗುರುಗಳ ಅಪ್ಪಣೆಯ ಮೇರೆಗೆ ಹಿರೇಸಾವಳಗಿಯಲ್ಲಿ ಮಠವನ್ನು ಸ್ಥಾಪಿಸಿದರು.

ಗುರುಗಳು ಇಲ್ಲಿ ನೆಲೆ ನಿಂತ ಹತ್ತಾರು ವರ್ಷಗಳ ನಂತರ ಬಾಲಕ ಮಹಾಂತೇಶನಿಗೆ ಜೀವದಾನ ಮಾಡಿ ಶಿಷ್ಯನನ್ನಾಗಿ ಮಾಡಿಕೊಂಡರು. ತಮ್ಮ ತಪೋಶಕ್ತಿಯಿಂದ ಬರಡು ಆಕಳಿನಿಂದ ಹಾಲನ್ನು ಕರೆದು ಮುಸ್ಲಿಮರಿಗೆ ಆಶ್ಚರ್ಯವನ್ನುಂಟು ಮಾಡಿ, ತಮ್ಮ ಭಕ್ತರನ್ನಾಗಿ ಮಾಡಿಕೊಂಡರಂತೆ. ಇವರ ಪವಾಡಗಳನ್ನು ತಿಳಿದ ಗುಲ್ಬರ್ಗದ ಮುಸ್ಲಿಂ ಸಂತರಾದ ಬಂದೇ ನವಾಜರು, ಶ್ರೀ ಶಿವಲಿಂಗೇಶ್ವರರನ್ನು ಉರುಸ್‌ಗೆ ಕರೆಸಬೇಕೆಂದು ತೀರ್ಮಾನಿಸಿ ಕರೆಯೋಲೆಯನ್ನು ಕಳುಹಿಸಿದರು. ಆದರೆ ಉರುಸ್‌ನಲ್ಲಿ ನನ್ನದೇನು ಕೆಲಸವೆಂದು ಕರೆಯೋಲೆಯ್ನು ತಿರಸ್ಕರಿಸುತ್ತಾರೆ. ಈ ವಿಚಾರವನ್ನು ತಿಳಿದ ರೋಜಾದ ನಾಯಕ ತನ್ನ ಸೇನಾಪಡೆಯನ್ನು ಕಳುಹಿಸಿ ಬಲವಂತವಾಗಿ ಕರೆತರಲು ಹೇಳುತ್ತಾರೆ. ಆದರೆ ಶ್ರೀ ಶಿವಲಿಂಗೇಶ್ವರರು ತಪೋಶಕ್ತಿಯಿಂದ ಬಂದ ಸೈನಿಕರನ್ನೆಲ್ಲಾ ಅಸಹಾಯಕರನ್ನಾಗಿ ಮಾಡಿ, ಈ ವಿಚಾರವನ್ನು ಬಂದೇನವಾಜರಿಗೆ ಹಾಗೂ ರೋಜಾದ ರಾಜನಿಗೆ ತಿಳಿಸಲು ಸೈನಿಕನೊಬ್ಬನನ್ನು ಕಳುಹಿಸಿಕೊಡುತ್ತಾರೆ. ಶ್ರೀ ಶಿವಲಿಂಗೇಶ್ವರರ ಪವಾಡವನ್ನು ಕೇಳಿ ತಿಳಿದ ಬಂದೇ ನವಾಜರು

ಹುಲಿಯ ಮೇಲೆ ಕುಳಿತು ಸರ್ಪವನ್ನೇ ಚಾಟಿಯನ್ನಾಗಿ ಮಾಡಿಕೊಂಡು, ಹಿರೇಸಾವಳಗಿಯ ಕಡೆ ಬರುತ್ತಾರೆ. ಈ ಘಟನೆಯನ್ನು ತಮ್ಮ ಅಂತರ್‌ಜ್ಞಾನದಿಂದ ಅರಿತ ಶ್ರೀ ಶಿವಲಿಂಗೇಶ್ವರರು, ತಾವು ಕುಳಿತ ಕಟ್ಟೆಯನ್ನೇ ಚಲಿಸಿಕೊಂಡು ಬಂದೇ ನವಾಜರನ್ನು ಸ್ವಾಗತಿಸಲು ಹೊರಡುತ್ತಾರೆ. ಆಗ ಬಂದೇನವಾಜರು ಹುಲಿಯ ಮೇಲಿಂದ ಕೆಳಗಿಳಿದು ಶ್ರೀ ಶಿವಲಿಂಗೇಶ್ವರರಿಗೆ ಶರಣಾದರೆಂಬ ಐತಿಹ್ಯವಿದೆ.

ಶ್ರೀ ಶಿವಲಿಂಗೇಶ್ವರ ಶಿವಯೋಗಿಗಳು ಬಂದೇನವಾಜರ ಆಹ್ವಾನದಂತೆ ಗುಲ್ಬರ್ಗಕ್ಕೆ ಬರುತ್ತಾರೆ. ಈ ಸಂದರ್ಭದಲ್ಲಿ ರೋಜಾದ ರಾಜನು ಶ್ರೀ ಶಿವಲಿಂಗೇಶ್ವರರ ಪಾದಪೂಜೆಯನ್ನು ಮಾಡಿ ಪಟ್ಟಣದಲ್ಲಿ ಮೆರವಣಿಗೆಯನ್ನು ಮಾಡಿಸುತ್ತಾನೆ. ಶ್ರೀ ಶಿವಲಿಂಗೇಶ್ವರರಿಗೆ ಬಂದೇನವಾಜರು ಮತ್ತು ರೋಜಾದ ರಾಜನು ನೀಡಿದ ಮನ್ನಣೆಯನ್ನು ನೋಡಿ ಸಹಿಸಿಕೊಳ್ಳಲಾಗದ, ಅಸೂಯೆಗೊಂಡ ಕೆಲವು ಮುಸ್ಲಿಮರು ಶ್ರೀ ಶಿವಲಿಂಗೇಶ್ವರರಿಗೆ ತಿಳಿಯದಂತೆ ಮಾಂಸದ ಅಡಿಗೆಯನ್ನು ಊಟಮಾಡಿಸ ಬೇಕೆಂದು ಸಿದ್ಧತೆ ಮಾಡಿಕೊಂಡರು. ರೋಜಾದ ಅರಮನೆಯಲ್ಲಿ ಸತ್ಕಾರ್ಯ ನಡೆದ ಮೇಲೆ ಪ್ರಸಾದ ಸ್ವೀಕರಿಸುವ ಸಂದರ್ಭದಲ್ಲಿ ಮಾಂಸದ ಅಡುಗೆಯನ್ನು ತಂದು ಬಡಿಸಲು ಮುಂದಾದರು. ಗುರುಗಳ ಸಮೀಪಕ್ಕೆ ತರುತ್ತಿದ್ದಂತೆ ಮಾಂಸದ ಅಡಿಗೆಯಲ್ಲಾ ಮಲ್ಲಿಗೆಯ ಹೂವಾಯಿತಂತೆ. ಈ ಪವಾಡದಿಂದಾಗಿ ಹಿಂದೆ ಅಸೂಯೆ ಪಟ್ಟಿದ್ದ ಜನರು ಶ್ರೀ ಶಿವಲಿಂಗೇಶ್ವರರಲ್ಲಿ ಕ್ಷಮೆ ಕೇಳಿ ಶರಣಾದರಂತೆ. ಈ ಘಟನೆಗಳು ನಡೆದ ಮೇಲೆ ಹಿಂದೂ-ಮುಸ್ಲಿಮರ ಮಧ್ಯೆ ಭಾವೈಕ್ಯತೆಯ ಭಾವನೆಯು ಬೆಳೆಯುವಂತೆ ಮಾಡಿ, ಸಾಮರಸ್ಯದ ಬದುಕಿಗೆ ನಾಂದಿ ಹಾಡಿದರು.

ಮಠ ಸ್ಥಾಪನೆ: ಶ್ರೀ ಶಿವಲಿಂಗೇಶ್ವರ ಶಿವಯೋಗಿಗಳು ಹಿರೇಸಾವಳಗಿಯಿಂದ ಲೋಕೋದ್ಧಾರಕ್ಕೆಂದು ದೇಶ ಪರ್ಯಟನೆಗೆ ಹೊರಟು, ಬಲಖೇಡದಲ್ಲಿ ದಿಲ್ಲಿಯ ಬಾದಷಹನಿಗೆ ತಮ್ಮ ಪವಾಡವನ್ನು ತೋರಿಸಿ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ತುಬಚಿ ಗ್ರಾಮದಲ್ಲಿ ಕಲವು ದಿನ ನೆಲೆಸಿದರು. ನಂತರ ಕುರುಬೆಟ್ಟ ಶ್ರೀ ಸಿದ್ಧರಾಮ ದೇಸಾಯಿಗೆ ದರ್ಶನ ಕೊಟ್ಟು, ಅವರ ಮನೆಯಲ್ಲಿ ತಂಗಿದ್ದು ಗೋಕಾಕ ತಾಲ್ಲೂಕಿನ ಘಟಪ್ರಭಾ ಮತ್ತು ಹಿರಣ್ಯಕಶಪು ನದಿಗಳ ಸಂಗಮ ಸ್ಥಳದಲ್ಲಿ ನೆಲೆ ನಿಂತರು. ಗುರುಗಳು ಇಲ್ಲಿ (ಸಾವಳಗಿ) ಮಠವನ್ನು ಸ್ಥಾಪಿಸಿ, ಯೋಗಭೂಮಿಯನ್ನಾಗಿ ಮಾಡಿ ಕೊಂಡರು. ಗುರುಗಳು ಅನೇಕ ವರ್ಷಗಳ ಕಾಲ ಇಲ್ಲಿ ಅನುಷ್ಠಾನಕ್ಕೆಗೊಂಡರು.'ತಾವು ಯೋಗ ಸಮಾಧಿಯಲ್ಲಿರುತ್ತೇವೆ, ಐದು ದಿನಗಳಾದ ನಂತರ ಗವಿಯ ಬಾಗಿಲನ್ನು ತೆಗೆದು ನೋಡಬಹುದು' ಎಂದು ತಮ್ಮ ಜತೆಯಲ್ಲಿದ್ದ ಶ್ರೀಮತಿ ಮರುಳಮ್ಮನವರಿಗೆ ಹೇಳಿ ಗವಿಯನ್ನು ಪ್ರವೇಶಿಸುತ್ತಾರೆ. ಭಕ್ತರು ಈ ವಿಚಾರವನ್ನು ತಿಳಿದು ಕುತೂಹಲಗೊಂಡು ಗುರುಗಳ ಪವಾಡವನ್ನು ನೋಡಬೇಕೆಂಬ ಕಾತುರದಿಂದ, ನಾಲ್ಕನೆಯ ದಿನಕ್ಕೆ ಗವಿಯ ಬಾಗಿಲನ್ನು ತೆರೆದು ಒಳ ಪ್ರವೇಶಿಸಿದರಂತೆ. ಆಗ ಭಕ್ತರಿಗೆ ಮೂರು ಭಸ್ಮದ ಘಟ್ಟಿಗಳು ದೊರೆತವಂತೆ. ಈ ಮೂರು ಭಸ್ಮದ ಘಟ್ಟಿಗಳಲ್ಲಿ ಒಂದು ಗುರುಗಳು ನೆಲೆ ನಿಂತ ಜಾಗದಲ್ಲಿ, ಎರಡನೆಯದು ಹಿರೇ ಸಾವಳಗಿಯಲ್ಲಿ ಮತ್ತು ಮೂರನೆಯದು ಕುರುಬೆಟ್ಟ ಶ್ರೀ ಸಿದ್ಧರಾಮ ದೇಸಾಯಿಯವರ ಮನೆಯಲ್ಲಿ ಸ್ಥಾಪಿತಗೊಂಡು ಇಂದಿಗೂ ಪೂಜೆ ಸಲ್ಲಿಸಲಾಗುತ್ತಿದೆ.

ಔರಂಗಜೇಬನ ಭೇಟಿ: ಔರಂಗಜೇಬನು ದಕ್ಷಿಣ ದೇಶಗಳ ಮೇಲೆ ದಂಡೆತ್ತಿ ಬಂದಾಗ ಶ್ರೀ ಶಿವಲಿಂಗೇಶ್ವರರ ಪ್ರಭಾವ ವನ್ನು ಕೇಳಿ ತಿಳಿದುಕೊಂಡು, ಆಶೀರ್ವಾದ ಪಡೆಯಲು ಅವರ ಸಾನ್ನಿಧ್ಯಕ್ಕೆ ಬರುತ್ತಾನೆ. ರಾಜಮರ್ಯಾದೆಯೊಂದಿಗೆ ಗೌರವ ಗಳನ್ನು ಸಲ್ಲಿಸಿ ಶ್ರೀ ಶಿವಲಿಂಗೇಶ್ವರರಿಗೆ ಮುಸ್ಲಿಂ ರಾಜರು ತೊಡುತ್ತಿದ್ದ, ಹಸಿರು ರಾಜ ಪೋಷಾಕನ್ನು ತೊಡಿಸಿ,'ರಾಜ ಜಗದ್ಗುರು' ಎಂಬ ಬಿರುದನ್ನು ಕೊಟ್ಟು, ಮುದ್ರೆಯುಂಗುರ ನೀಡಿ ಗೌರವಿಸಿದನು.

ಈ ಐತಿಹಾಸಿಕ ಘಟನೆಗೆ ಪುರಾವೆ ಒದಗಿಸಲು ಪೀಠದಲ್ಲಿ ಹಸಿರು ಪೋಷಾಕು, ಕಟಾರಿ, ಮುದ್ರೆಯುಂಗುರಗಳು ಸಿಗುವುದಲ್ಲದೆ, ಹಿಂದು-ಮುಸ್ಲಿಂ ಬಾಂಧವ್ಯವನ್ನು ಕಾಪಾಡುವ ದೃಷ್ಟಿಯಿಂದ ಮಠದ ನಿರ್ಮಾಣದಲ್ಲಿ ಮುಸ್ಲಿಂ ವಾಸ್ತು ಶಿಲ್ಪದ ರಚನೆಯನ್ನು ಕಾಣಬಹುದು. ವಿಜಯದಶಮಿಯದಿನ ಪೀಠಾಧಿಕಾರಿಗಳು ಹಸಿರು ಪೋಷಾಕು ಧರಿಸಿ, ರಾಜಸಿಂಹಾ ಸನದ ಮೇಲೆ ಹತ್ತು ದಿನಗಳ ತನಕ ಕುಳಿತುಕೊಳ್ಳುವುದು ರೂಢಿಯಲ್ಲಿದೆ. ಈ ಪರಂಪರೆ ಮತೀಯ ಗಲಭೆಯಿಂದ ಕಲುಷಿತಗೊಂಡ ಸಮಾಜಕ್ಕೆ ದಾರಿದೀಪವಾಗಿದೆ.

ದೀನ ಹರಹರಾ: ಈಗಲೂ ಮಠದ ಕಟ್ಟಡದ ನೆಲಮಾಳಿಗೆಯಲ್ಲಿ ಜಗದ್ಗುರು ಶ್ರೀ ಶಿವಲಿಂಗೇಶ್ವರರ ಗದ್ದುಗೆ, ಅದರ ಮೇಲಿನಂತಸ್ತಿನ ಮಾಳಿಗೆಯಲ್ಲಿ ಬಂದೇನವಾಜರ ತೋರುಗದ್ದುಗೆ, ಅದರ ಮೇಲಿನ ಮೂರನೆಯಅಂತಸ್ತಿನಲ್ಲಿ ಬಂದೇನ ವಾಜರು ಮತ್ತು ಶ್ರೀಶಿವಲಿಂಗೇಶ್ವರರು ಕುಳಿತು ಚರ್ಚಿಸುತ್ತಿದ್ದ ಮಂಚ ಹಾಗೂ ಕುರ್ಚಿಗಳಿವೆ. ಇಷ್ಟಲ್ಲದೆ ಮಠದಸೇವೆ ಯಲ್ಲಿ ವೀರಶೈವರಂತೆ ಮುಸ್ಲಿಮರೂ ಸಹ ಭಾಗಿಗಳಾಗುತ್ತಾರೆ.ಇವರೆಲ್ಲ ಒಟ್ಟಿಗೆ'ದೀನಹರಹರಾ'ಎಂದೇ ಪ್ರಾರ್ಥಿಸುತ್ತಾರೆ.

ಜೀವಂತ ಸಮಾಧಿ: ದೊರೆ ಆಳಿದ ಜಾಗಕ್ಕೆ, ಕವಿಹುಟ್ಟಿದ ಸ್ಥಳಕ್ಕೆ, ಗುರು ಐಕ್ಯಗೊಂಡ ಸ್ಥಳಕ್ಕೆ ವಿಶೇಷವಾದ ಐತಿ ಹಾಸಿಕ ಮಹತ್ವ ಸ್ಥಿರವಾಗಿ ನಿಲ್ಲುತ್ತದೆ. ಅದರಂತೆ ಶ್ರೀ ಶಿವಲಿಂಗೇಶ್ವರರು ಐಕ್ಯಗೊಂಡ ಈ ಸಾವಳಗಿ ಸುಕ್ಷೇತ್ರ ನಾಡಿ ನಲ್ಲೇ ಸುಪ್ರಸಿದ್ಧವಾಗಿದೆ. ಶ್ರೀ ಶಿವಲಿಂಗೇಶ್ವರರ ಕೊನೆಗಳಿಗೆಯಲ್ಲಿ ಸೇವೆಯಲ್ಲಿ ನಿರತಳಾಗಿದ್ದ ಶರಣೆ ಮುಳ್ಳಮ್ಮ ಗುರುಗಳು ಐಕ್ಯ ಗೊಂಡ ಸ್ಥಳದಲ್ಲಿ ತಾನೂ ಜೀವಂತ ಸಮಾಧಿಯಾಗಿದ್ದಾಳೆ ಎಂದು ತಿಳಿದುಬಂದಿದೆ.

ಪರಂಪರೆ:

೧. ಜಗದ್ಗುರು ಶ್ರೀ ಮ.ನಿ.ಪ್ರ. ಶಿವಲಿಂಗೇಶ್ವರ ಶಿವಯೋಗಿಗಳು
೨. ಜಗದ್ಗುರು ಶ್ರೀ ಮ.ನಿ.ಪ್ರ. ಪಂಚಾಕ್ಷರಸ್ವಾಮಿಗಳು
೩. ಜಗದ್ಗುರು ಶ್ರೀ ಮ.ನಿ.ಪ್ರ. ಚಿಂಚಕೋಟಿಸ್ವಾಮಿಗಳು
೪. ಜಗದ್ಗುರು ಶ್ರೀ ಮ.ನಿ.ಪ್ರ. ಕೋಡಳ್ಳಿಸ್ವಾಮಿಗಳು
೫. ಜಗದ್ಗುರು ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು
೬. ಜಗದ್ಗುರು ಶ್ರೀ ಮ.ನಿ.ಪ್ರ. ಪ್ರಭುಸ್ವಾಮಿಗಳು
೭. ಜಗದ್ಗುರು ಶ್ರೀ ಮ.ನಿ.ಪ್ರ. ಮಹಾಲಿಂಗಸ್ವಾಮಿಗಳು
೮. ಜಗದ್ಗುರು ಶ್ರೀ ಮ.ನಿ.ಪ್ರ. ಷಡಕ್ಷರಸ್ವಾಮಿಗಳು (೧೮೫೩)
೯. ಜಗದ್ಗುರು ಶ್ರೀ ಮ.ನಿ.ಪ್ರ. ಎರಡನೆಯ ಪ್ರಭುಸ್ವಾಮಿಗಳು (೧೯೮೫)
೧೦. ಜಗದ್ಗುರು ಶ್ರೀ ಮ.ನಿ.ಪ್ರ. ಅನ್ನದಾನಸ್ವಾಮಿಗಳು (೧೯೦೧)
೧೧. ಜಗದ್ಗುರು ಶ್ರೀ ಮ.ನಿ.ಪ್ರ. ಶಾಂತಲಿಂಗಸ್ವಾಮಿಗಳು (೧೯೧೩)
೧೨. ಜಗದ್ಗುರು ಶ್ರೀ ಮ.ನಿ.ಪ್ರ. ಶಂಕರಸ್ವಾಮಿಗಳು (೧೯೧೮)
೧೩. ಜಗದ್ಗುರು ಶ್ರೀ ಮ.ನಿ.ಪ್ರ. ಶಿವಲಿಂಗಸ್ವಾಮಿಗಳು (೧೯೫೩)
೧೪. ಜಗದ್ಗುರು ಶ್ರೀ ಸಿದ್ಧರಾಮಸ್ವಾಮಿಗಳು
೧೫. ಜಗದ್ಗುರು ಶ್ರೀ ಶಿವಲಿಂಗೇಶ್ವರ ಕುಮಾರಸ್ವಾಮಿಗಳು (೧೯೭೮)

ಈ ರೀತಿ ಮಠದ ಪರಂಪರೆ ಬೆಳೆದಿದೆ. ಈ ಹಿಂದೆ ಅಧಿಕಾರ ನಡೆಸಿ ಲಿಂಗೈಕ್ಯರಾದ ಶ್ರೀ ಸಿದ್ಧರಾಮ ಸ್ವಾಮಿಗಳು ದೀನ-ದಲಿತರ ಹಾಗೂ ಅಸಹಾಯಕರ ಬಗ್ಗೆ ಅಪಾರ ಕಾಳಜಿ ಇಟ್ಟುಕೊಂಡು ಇವರಿಗೆ ನೆರವಾಗಿ ಸಮಾಜದ ಅಭಿವೃದ್ಧಿಗೆ ಶ್ರಮಿಸಿದ್ದರು. ಗುರುಗಳು ಹಿಂದುಳಿದ ವರ್ಗಗಳ ಕಡೆ ಗಮನ ಕೊಡದೆ ಹೋಗಿದ್ದರೆ ಶ್ರೀ ಚಂದ್ರಶೇಖರ ಕಂಬಾರರಂತಹ ಮೇರು ವ್ಯಕ್ತಿತ್ವದ ಸಾಹಿತಿಗಳು, ಜನಪದ ಸಂಶೋಧಕರು ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ. ಗುರುಗಳು ಸಮಾಜದ ಅಭಿವೃದ್ಧಿಗೆ ಶ್ರಮಿಸಿ ಮಠದಲ್ಲಿ ನಿತ್ಯ ಅನ್ನದಾಸೋಹ ನಡೆಯಲು ವ್ಯವಸ್ಥೆಗೊಳಿಸಿದ್ದರು. ಇವರ ನಂತರ ಶ್ರೀ ಶಿವ ಲಿಂಗೇಶ್ವರ ಕುಮಾರ ಸ್ವಾಮಿಗಳು ಪರಂಪರೆಯ ಹದಿನೈದನೆಯ ಗುರುಗಳಾಗಿ ೧೯೭೮ರ ಮೇ ಹದಿನೆಂಟರಂದು ಅಧಿಕಾರ ವಹಿಸಿಕೊಂಡರು. ಶ್ರೀ ಶಿವಲಿಂಗೇಶ್ವರ ಕುಮಾರ ಸ್ವಾಮಿಗಳು ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೂಕಿನಲ್ಲಿ ಜನಿಸಿ, ಮೈಸೂರಿನ ಅರಮನೆ ಪಂಚಗವಿಮಠದಲ್ಲಿ ಹಾಗೂ ಅಥಣಿಯ ಗಚ್ಚಿನಮಠದಲ್ಲಿ ಕೆಲವು ದಿನ ಅಧಿಕಾರ ನಡೆಸಿ, ಶ್ರೀ ಸಿದ್ಧರಾಮ ಸ್ವಾಮಿಗಳ ಹಾಗೂ ಭಕ್ತರ ಅಪೇಕ್ಷೆಯ ಮೇರೆಗೆ ಈ ಪುರಾತನ ಮಠದ ಅಧಿಕಾರವನ್ನು ವಹಿಸಿಕೊಂಡು ಬೆಳೆಸಿದ್ದಾರೆ.

ಶೈಕ್ಷಣಿಕ ಸೇವೆ: ಲಿಂಗೈಕ್ಯ ಗುರುಗಳಾದ ಶ್ರೀ ಸಿದ್ಧರಾಮ ಸ್ವಾಮಿಗಳು ಸಮಾಜವನ್ನು ಸುಂಸ್ಕೃತವನ್ನಾಗಿ ಮಾಡಲು

ಶಿಕ್ಷಣ ಅಗತ್ಯ ಎಂದರಿತು, ಗೋಕಾಕ್‌ನಲ್ಲಿ ಮಠದ ಅರವತ್ತುಎಕರೆ ಜಮೀನಿನಲ್ಲಿ ಶ್ರೀ ಶಿವಲಿಂಗೇಶ್ವರರ ಹೆಸರಿನಲ್ಲಿ ಕಾಲೇಜನ್ನು ಸ್ಥಾಪಿಸಿದರು. ಪ್ರಸ್ತುತ ಈ ಕಾಲೇಜು ಸ್ವಾಯತ್ತತೆಯನ್ನು ಪಡೆದು ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿದೆ.

ಸಾಹಿತ್ಯ, ಸಾಮಾಜಿಕ ಸೇವೆ: ಶ್ರೀ ಶಿವಲಿಂಗೇಶ್ವರ ಕುಮಾರ ಸ್ವಾಮಿಗಳು ಸ್ವತಃ ಸಾಹಿತಿಗಳಾಗಿದ್ದು ಅನೇಕ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಗುರುಗಳು ಶ್ರೀ ಶಿವಲಿಂಗೇಶ್ವರ ಗ್ರಂಥ ಮಾಲೆಯನ್ನು ಪ್ರಾರಂಭಿಸಿ, ಶ್ರೀ ಶಿವಲಿಂಗೇಶ್ವರಚರಿತ್ರೆ ಹಾಗೂ ಅನೇಕ ಕೃತಿಗಳು ಪ್ರಕಟಗೊಳ್ಳುವಂತೆ ಮಾಡಿದ್ದಾರೆ. ಇವರು ಆಯುರ್ವೇದ್ಯ ಪದ್ಧತಿಯಲ್ಲಿ ಗಿಡಮೂಲಿಕೆಗಳಿಂದ ಅನೇಕ ರೋಗಗಳಿಗೆ ಔಷಧಿಯನ್ನು ತಯಾರಿಸಿ, ಉಪಚರಿಸುವ ಪರಿಪಾಠವನ್ನು ಬೆಳೆಸಿಕೊಂಡು ಬಂದಿದ್ದಾರೆ. ಗುರುಗಳು ಕ್ರಿಯಾಶೀಲ ಚಟುವಟಿಕೆಯಿಂದ ಧರ್ಮೋಪದೇಶವನ್ನು ಕೈಗೊಂಡು ವೀರಶೈವ ಧರ್ಮವನ್ನು ಬೆಳೆಸಿದ್ದಾರೆ. ಗೋಕಾಕ್ ನಗರದಲ್ಲಿ ನಡೆಯುತ್ತಿರುವ ವಿಜ್ಞಾನ ಮತ್ತು ಕಲಾ ಕಾಲೇಜಿಗೆ ಎಪ್ಪತ್ತೈದುಎಕರೆ ಜಮೀನನ್ನು ನೀಡಿ, ಹಿಂದಿನ ಗುರುಗಳು ಸ್ಥಾಪಿಸಿದ ಶಿಕ್ಷಣ ಸಂಸ್ಥೆ ಬೆಳೆಯಲು ನೆರವಾಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಏಳುಗದ್ದುಗೆಗಳು ಮತ್ತು ಕರ್ತೃಗದ್ದುಗೆಗೆ ತ್ರಿಕಾಲಪೂಜೆ ನಡೆಯು ತ್ತಿದೆ. ದವಣದ ಹುಣ್ಣಿಮೆಯಂದು ಒಂಬತ್ತು ದಿನಗಳ ಕಾಲ ಜಾತ್ರೆಯನ್ನು ನಡೆಸಲಾಗುತ್ತಿದೆ. ಅತ್ಯಂತ ಅದ್ದೂರಿಯಾಗಿ ನಡೆಯುವ ಜಾತ್ರೆ ಎಂದು ಹೆಸರುಗಳಿಸಿದ್ದು, ನಾಡಿನ ನಾನಾಭಾಗಗಳಿಂದ ಭಕ್ತಗು ಬಂದು ಸೇರುತ್ತಾರೆ. ಜಾತ್ರೆಯ ಪ್ರಯುಕ್ತ, ದನಗಳ ಪ್ರದರ್ಶನ ಹಾಗೂ ಮಾರಾಟ, ಪ್ರತಿದಿನ ಸಂಜೆ ಒಂಬತ್ತುದಿನಗಳ ಕಾಲ ಧಾರ್ಮಿಕ ಮತ್ತು ಸಾಹಿತ್ಯ ಗೋಷ್ಠಿಗಳು ಯಶಸ್ವಿಯಾಗಿ ನಡೆಯುತ್ತಿವೆ.

ಡಾ.ಚಂದ್ರಶೇಖರ ಕಂಬಾರರು ನಾಟಕ ಅಕಾಡೆಮಿಯ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ನಾಟಕ ಪ್ರದರ್ಶನಗಳು ಹಾಗೂ ವಿಚಾರ ಸಂಕೀರಣಗಳನ್ನು ಏರ್ಪಡಿಸಿ, ಯಶಸ್ವಿ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿರುವುದು ದಾಖಲೆಯ ವಿಚಾರವಾಗಿದೆ. ವಿಜಯದಶಮಿಯ ಸಂದರ್ಭದಲ್ಲಿ ಒಂಬತ್ತು ದಿನಗಳ ಕಾಲ ಅನುಷ್ಠಾನಕೈಗೊಂಡು ರಾಜಪೋಷಾಕನ್ನು ಧರಿಸಿಕೊಂಡು ನಡೆಸುವ ದಸರಾ ದರ್ಬಾರ್ ಹೆಚ್ಚು ಪ್ರಸಿದ್ಧಿಯಾಗಿದೆ. ವಿಜಯ ದಶಮಿಯ ದಿನ ಬನ್ನಿಮುಡಿಯುವ ಕಾರ್ಯಕ್ರಮ ಸಂಪ್ರದಾಯಬದ್ಧವಾಗಿ ಒಂದು ನಾಡಹಬ್ಬವಾಗಿ ಆಚರಣೆಯಾಗು ತ್ತಿದೆ.ಈ ವಿಶೇಷ ಸಂದರ್ಭಗಳು ಸೇರಿದಂತೆ ಮಠದಲ್ಲಿ ನಿತ್ಯ ನೂರಾರು ಜನರಿಗೆ ಅನ್ನದಾಸೋಹವನ್ನು ನಡೆಸಲಾಗುತ್ತಿದೆ.

ವಿಳಾಸ: ಜಗದ್ಗುರು ಶ್ರೀ ಶಿವಲಿಂಗೇಶ್ವರ ಕುಮಾರ ಸ್ವಾಮಿಗಳು, ಶ್ರೀ ಶಿವಲಿಂಗೇಶ್ವರ ಕುಮಾರೇಂದ್ರ ಸಿದ್ಧಸಂಸ್ಥಾನಮಠ, ಸಾವಳಗಿ, ಗೋಕಾಕ್ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಸುಣ್ಣದೋಳಿ

ಗೋಕಾಕ್ ತಾಲ್ಲೂಕಿನ ಸುಣ್ಣದೋಳಿ ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಗೋಕಾಕ್ ಮತ್ತು ಮುದೋಳದಿಂದ ಯಾದವಾಡಕ್ಕೆ ಹೋಗುವ ದಾರಿ ಮಧ್ಯ ಈ ಗ್ರಾಮವು ಸಿಗುತ್ತದೆ. ಇಲ್ಲಿ ಶ್ರೀ ಜಡೆಸಿದ್ಧೇಶ್ವರ ಮಠವು ಅಸ್ತಿತ್ವದಲ್ಲಿದೆ.

ಜಡೆಸಿದ್ಧೇಶ್ವರಮಠ: ಸುಣ್ಣದೋಳಿ ಗ್ರಾಮದಲ್ಲಿ ಶ್ರೀ ಜಡೆಸಿದ್ಧೇಶ್ವರ ಮಠವು ಸ್ಥಾಪನೆಯಾಗಿ ಹಿಂದು ಮತ್ತು ಮುಸ್ಲಿಂ ಭಾವೈಕ್ಯತೆಯ ಪ್ರತೀಕವಾಗಿ ಬೆಳೆದಿದೆ. ಮಠದ ಸ್ಥಾಪನೆ ಮತ್ತು ಸ್ಥಾಪಕ ಗುರುಗಳ ಬಗ್ಗೆ ಹೆಚ್ಚು ಮಾಹಿತಿ ಲಭ್ಯವಿಲ್ಲ. ಪುರಾತನ ಕಾಲದಲ್ಲಿ ಸ್ಥಾಪನೆಯಾಗಿರಬಹುದಾದ ಈ ಮಠವು, ಸಮಾಜದಲ್ಲಿ ವಿಶೇಷ ಸ್ಥಾನವನ್ನು ಪಡೆದಿದೆ. ಈ ಮಠದ ಸಂಪ್ರದಾಯದಲ್ಲಿ ಮುಸ್ಲಿಂ ಸಂತರನ್ನು ಸಹ ಮಠಾಧಿಪತಿಗಳನ್ನಾಗಿ ಮಾಡುವ ಪರಿಪಾಠವನ್ನು ಬೆಳೆದು ಬಂದಿದೆ.

ವಿಶಿಷ್ಟ ಸಂಪ್ರದಾಯವಿರುವ ಈ ಮಠಕ್ಕೆ ವೀರಶೈವ ಮತ್ತು ಮುಸ್ಲಿಂ ಜನಾಂಗವು ಭಕ್ತರಾಗಿದ್ದು ಮಠವನ್ನು ಬೆಳೆಸಿದ್ದಾರೆ. ಮತೀಯ ಗಲಭೆಯಲ್ಲಿ ಸಿಕ್ಕಿಕೊಂಡ ಸಮಾಜಕ್ಕೆ ಆದರ್ಶಪ್ರಾಯವಾಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಘಟಪ್ರಭ ನದಿಯ ದಂಡೆಯಲ್ಲಿರುವ ಶ್ರೀ ಜಡೆಸಿದ್ಧೇಶ್ವರ ಮಠದಲ್ಲಿ, ದವನದ ಹುಣ್ಣಿಮೆಯಾದ ನಾಲ್ಕು ದಿನಕ್ಕೆ ಪ್ರಾರಂಭವಾಗುವ ಜಾತ್ರೆಯ ಸಂದರ್ಭದಲ್ಲಿ ರಥಯಾತ್ರೆಯು ಮುಂದೆ ಚಲಿಸುವ ಮುನ್ನ, ಎಲ್ಲಿಂದಲೋ ಬರುವ ಗುಂಗೆಹುಳಗಳು ರಥದ ಸುತ್ತ ಸುತ್ತಿ ಹೋಗುತ್ತವೆ. ಇದು ವಿಚಿತ್ರ, ಆದರೂ ಸತ್ಯಘಟನೆಯಾಗಿದೆ. ಇದಾದ ನಂತರ ಆರುಜನ ಕನ್ಯೆಯರು ರಥಕ್ಕೆ ಆರತಿ ಬೆಳಗಿದಾಗ ರಥವು ಮುಂದೆ ಹೋಗುತ್ತದೆ. ಸಂಪ್ರದಾಯಕ್ಕೆ ಬೆಲೆ ಕೊಟ್ಟು, ಜಾತ್ಯಾತೀತವಾಗಿ ಯೋಚನೆ ಮಾಡುವ ಇಲ್ಲಿಯ ಜನಾಂಗ, ಮಠಕ್ಕೆ ನೇಮಕ ಮಾಡಿದ ಮಠಾಧಿಪತಿಗಳಿಗೆ, 'ಶ್ರೀ ಕಬೀರಪ್ಪಜ್ಜ'ಎಂದು ಕರೆಯುತ್ತಾರೆ. ಮಠಕ್ಕೆ ಆಸ್ತಿಇಲ್ಲದಿದ್ದರೂ, ಧಾರ್ಮಿಕ ಕೆಲಸ ಕಾರ್ಯಗಳನ್ನು ಸುಗಮವಾಗಿ ನಡೆಸಿ ಕೊಂಡು ಬರಲಾಗುತ್ತಿದೆ. ಈ ಮಠಕ್ಕೆ ಭಕ್ತರ ಸಂಖ್ಯೆ ಹೆಚ್ಚಾಗಿದ್ದು ನಿತ್ಯ ದಾಸೋಹವನ್ನು ನಡೆಸಲಾಗುತ್ತಿದೆ. ಅಲ್ಲದೆ ಬೇರೆ ವೀರಶೈವ ಮಠಗಳಂತೆ ಇಲ್ಲಿಯೂ ಧಾರ್ಮಿಕ ವ್ಯವಸ್ಥೆಯನ್ನು ಕಾಪಾಡಿಕೊಂಡು ಬರಲಾಗಿದೆ.

ವಿಳಾಸ: ಶ್ರೀ ಕಬೀರಪ್ಪಜ್ಜ ಸ್ವಾಮಿಗಳು, ಶ್ರೀ ಜಡೆಸಿದ್ಧೇಶ್ವರ ಮಠ, ಸುಣ್ಣದೋಳಿ, ಗೋಕಾಕ್ ತಾಲ್ಲೂಕು, ಬೆಳಗಾವಿ ಜಿಲ್ಲೆ.

❑

ಚಿಕ್ಕೋಡಿ ತಾಲ್ಲೂಕು

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕು ಮರಾಠಿ ಸಂಸ್ಕೃತಿಯ ಜತೆಗೆ ಬೆಳೆದಿದ್ದು ಜಿಲ್ಲೆಯ ಬೇರೆ ತಾಲ್ಲೂಕುಗಳಿಗಿಂತ ಪ್ರಾಕೃತಿಕವಾಗಿ ಭಿನ್ನತೆ ಪಡೆದಿದೆ. ಈ ವಿಶಿಷ್ಟ ತಾಲ್ಲೂಕಿನಲ್ಲಿ ವೀರಶೈವ ಧರ್ಮ ಬೆಳೆದಿದೆ. ಹಿಂದೆ ಇಲ್ಲಿ ಇಪ್ಪತ್ತೆಂಟು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಆದರೆ ಇಂದು ಹನ್ನೆರಡು ಮಠಗಳನ್ನು ಮಾತ್ರ ಗುರುತಿಸಬಹುದಾಗಿದ್ದು ಇವುಗಳಲ್ಲಿ ಏಳು ಮಠಗಳು ಮಾತ್ರ ಅಸ್ತಿತ್ವದಲ್ಲಿವೆ.

ಆಡಿ

ಚಿಕ್ಕೋಡಿ ತಾಲ್ಲೂಕಿನ ಆಡಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಮಹಾರಾಷ್ಟ್ರ ಗಡಿಯಲಂಚಿನಲ್ಲಿರುವ ಈ ಪ್ರದೇಶ ಪುರಾಣ ಪ್ರಸಿದ್ಧ ಸ್ಥಳ. ಇಲ್ಲಿ ಅಸಹಾಯಕ ಭಕ್ತರ ಅಪೇಕ್ಷೆಯಂತೆ ಶ್ರೀಶೈಲದ ಮಲ್ಲಿಕಾರ್ಜುನಸ್ವಾಮಿ ಮತ್ತು ಭ್ರಮರಾಂಬೆ ಆಡಿಯ ಗಿರಿಯಲ್ಲಿ ಬಂದು ನೆಲೆಸಿದ್ದರೆಂದು'ಕರಿವೀರ ಮಹಾತ್ಮೆ' ಪುರಾಣದಲ್ಲಿ ವ್ಯಕ್ತವಾಗಿದೆ. ಇಂತಹ ಪುರಾಣ ಪ್ರಸಿದ್ಧ ಗ್ರಾಮದಲ್ಲಿ ಶ್ರೀ ಸಿದ್ಧೇಶ್ವರಮಠ ಮತ್ತು ಶ್ರೀ ಗಿರಿ ಮಠಗಳು ಸ್ಥಾಪನೆಯಾಗಿವೆ.

ಸಿದ್ಧೇಶ್ವರಮಠ: ಆಡಿಯ ಹೊರಭಾಗದಲ್ಲಿ ವಿರಕ್ತ ಸಂಪ್ರದಾಯದ ಶ್ರೀ ಸಿದ್ಧೇಶ್ವರ ಮಠವು ಸ್ಥಾಪನೆಯಾಗಿದೆ. ಶ್ರೀ ಅಡವಿ ಸಿದ್ಧೇಶ್ವರರು ಅಂಕಲಗಿಯಲ್ಲಿ ನೆಲೆಸುವ ಮೊದಲು ೧೬೧೮ರಲ್ಲಿ ಅನುಷ್ಠಾನಕ್ಕೆಗೊಂಡು, ಈ ಸ್ಥಳವನ್ನು ಜಾಗೃತ ಕ್ಷೇತ್ರವನ್ನಾಗಿ ಮಾಡಿದರು. ಇಲ್ಲಿ ಮಠವನ್ನು ಸ್ಥಾಪಿಸಿ, ವೀರಶೈವ ಧರ್ಮದ ಆಚರಣೆಗಳು ನಡೆಯುವಂತೆ ಮಾಡಿದ್ದಾರೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ಸಿದ್ಧಲಿಂಗ ಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಬಾಳೂರು ಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಸಿದ್ಧಲಿಂಗ ಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಸಿದ್ಧೇಶ್ವರ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಗ್ರಾಮಸ್ಥರು ಸ್ಥಾಪಿಸಿದ ಮಠದ ಮೊದಲ ಗುರುಗಳಾಗಿ ಶ್ರೀ ಸಿದ್ಧಲಿಂಗ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಧರ್ಮೋಪದೇಶ ಹಾಗೂ ಅನ್ನದಾಸೋಹವನ್ನು ನಡೆಸುವುದರ ಮೂಲಕ ಮಠವನ್ನು ಹೆಚ್ಚು ಪ್ರಸಿದ್ಧಿಗೆ ತಂದರು. ಇವರ ನಂತರ ಶ್ರೀ ಬಾಳೂರು ಸ್ವಾಮಿಗಳು ಹದಿನೈದು ವರ್ಷಗಳ ಕಾಲ ಆಡಳಿತವನ್ನು ನಡೆಸಿ ಮಠವನ್ನು ಅಭಿವೃದ್ಧಿಪಡಿಸಿದರು. ಇವರು ಲಿಂಗೈಕ್ಯರಾದ ನಂತರ ಶ್ರೀ ಸಿದ್ಧಲಿಂಗ ಸ್ವಾಮಿಗಳು ೧೯೭೭ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಗುರುಗಳು ಶಿವಪೂಜಾನಿಷ್ಠರಾಗಿ, ಕಾಯಕ ಯೋಗಿಗಳಾಗಿ ಮಠವನ್ನು ಅಭಿವೃದ್ಧಿ ಪಡಿಸಿದರು. ಇವರ ಕಾಲದಲ್ಲಿ ಮಠವು ವಿಸ್ತಾರವಾಗಿ ಬೆಳೆಸಿದರು. ಇವರ ನಂತರ ರೋಣ ತಾಲ್ಲೂಕಿನ ಜಿಗಳೂರಿನಲ್ಲಿ ೧೯೭೧ರ ಜೂನ್ ಒಂದರಂದು ಜನಿಸಿದ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಈ ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡರು. ಗುರುಗಳು ವಿದ್ಯಾಭ್ಯಾಸವನ್ನು ಮುಗಿಸಿ ೧೯೯೭ರ ಏಪ್ರಿಲ್ ಇಪ್ಪತ್ತರಂದು ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಇತ್ತೀಚೆಗೆ ಹುಕ್ಕೇರಿ ತಾಲ್ಲೂಕಿನ ಬಾಡ ಗ್ರಾಮದಲ್ಲಿ ಲಿಂಗಜ್ಯೋತಿ ಕಲ್ಯಾಣಕೇಂದ್ರವನ್ನು ಸ್ಥಾಪನೆ ಮಾಡಿ ಎರಡು ಕಡೆ ಧಾರ್ಮಿಕ ಹಾಗೂ ಶೈಕ್ಷಣಿಕ ಕಾರ್ಯಗಳು ನಡೆಯುವಂತೆ ಮಾಡಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಸಿದ್ಧಲಿಂಗ ಸ್ವಾಮಿಗಳು, ಶ್ರೀ ಸಿದ್ಧೇಶ್ವರಮಠ, ಆಡಿ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಗಿರಿಮಠ: ಆಡಿ ಗ್ರಾಮದಿಂದ ಎರಡು ಕಿ.ಮೀ ದೂರವಿರುವ ಮಲ್ಲಿಕಾರ್ಜುನಸ್ವಾಮಿ ದೇವಾಲಯದ ಬೆಟ್ಟದ ಕೆಳಭಾಗದಲ್ಲಿ ಶ್ರೀ ಗಿರಿಮಠವು ಸ್ಥಾಪನೆಯಾಗಿದೆ. ಮಲ್ಲಿಕಾರ್ಜುನಸ್ವಾಮಿ ಮತ್ತು ಭ್ರಮರಾಂಬ ದೇವಾಲಯದ ದರ್ಶನಕ್ಕೆಂದು ಬರುವ ಭಕ್ತರ ಸಂಖ್ಯೆ ಹೆಚ್ಚಾದಾಗ ಇವರಿಗೆಲ್ಲಾ ದಾಸೋಹ ಹಾಗೂ ವಸತಿಗಾಗಿ ಮಠವನ್ನು ಸ್ಥಾಪಿಸಿ, ಧಾರ್ಮಿಕ

ಕಾರ್ಯಗಳನ್ನು ನಡೆಸಿಕೊಂಡು ಬರಲಾಗುತ್ತಿದೆ.

ಪರಂಪರೆ: ಇತ್ತೀಚೆಗೆ ಪ್ರಾರಂಭಗೊಂಡ ಈ ಮಠದ ಪ್ರಥಮ ಗುರುಗಳಾಗಿ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತ ಉಪನ್ಯಾಸಕರಾಗಿದ್ದ ಶ್ರೀ ಚಂದ್ರಶೇಖರ ಸ್ವಾಮಿಗಳಿಗೆ ೧೯೬೮ರಲ್ಲಿ ಪಟ್ಟಾಧಿಕಾರ ಮಾಡಲಾಯಿತು. ಇವರು ಅನೇಕ ವರ್ಷಗಳ ಕಾಲ ಧಾರ್ಮಿಕ ಕಾರ್ಯಗಳನ್ನು ನಡೆಸಿದರು. ಇವರ ನಂತರ ಮಠವು ಖಾಲಿ ಉಳಿಯಿತು. ೧೯೮೧ ರಲ್ಲಿ ಬಾಬು ಮಹಾರಾಜ ಎಂಬುವರು ಬಂದು ಮಠದ ಮತ್ತು ದೇವಸ್ಥಾನದ ಉಸ್ತುವಾರಿಯನ್ನು ನೋಡಿಕೊಳ್ಳತೊಡಗಿ, ಅಭಿವೃದ್ಧಿಪಡಿಸಿದರು. ಈಗ ಶ್ರೀ ಶಿವಾನಂದ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡು ಮಠ ಮತ್ತು ದೇವಸ್ಥಾನವನ್ನು ಅಭಿವೃದ್ಧಿಪಡಿಸತೊಡಗಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಪುರಾಣ ಪ್ರಸಿದ್ಧ ದೇವಾಲಯಕ್ಕೆ ಕೊಲ್ಲಾಪುರದ ದೊರೆ ನಲವತ್ತು ಎಕರೆ ಜಮೀನು ನೀಡಿದ್ದಾರೆ. ದೇವಾಲಯದ ಭಕ್ತರು ಕೊಟ್ಟಂತಹ ಆಸ್ತಿಯೆಲ್ಲ ಸೇರಿ ಸುಮಾರು ತೊಂಬತ್ನಾಲ್ಕು ಎಕರೆಯಷ್ಟಿದೆ. ಇಷ್ಟಲ್ಲದೆ, ಮಲ್ಲಿಕಾರ್ಜುನ ದೇವಾಲಯದ ಅಭಿವೃದ್ಧಿಗೆಂದು ಕಂಕಣಕಟ್ಟಿ ನಿಂತ ಭಾಗೀಗೌಡರು, ನೇಜಗೌಡರುಗಳ ಶ್ರಮದಿಂದ ಈ ಸುಕ್ಷೇತ್ರ ಅಭಿವೃದ್ಧಿಗೊಂಡು ಭಕ್ತರನ್ನು ಆಕರ್ಷಿಸುವಂತಾಗಿದೆ. ಈಗಲೂ ಬೆಟ್ಟದ ಕೆಳಗಿರುವ ಮಲ್ಲಿಕಾರ್ಜುನ ಮಠದಲ್ಲಿ ದಾಸೋಹಮಂಟಪ, ಹೊರಗಿನಿಂದ ಬರುವ ಭಕ್ತರಿಗೆ ವಸತಿಗಾಗಿ ಕೊಠಡಿಗಳು, ಬೆಟ್ಟದಮೇಲೆ ಹೋಗಲು ರಸ್ತೆ ವ್ಯವಸ್ಥೆ ಮತ್ತು ನೀರಿನ ವ್ಯವಸ್ಥೆಯನ್ನು ಮಾಡಿಸಲಾಗಿದೆ. ಶ್ರಾವಣಮಾಸ ಹಾಗೂ ಶಿವರಾತ್ರಿಯಲ್ಲಿ ಮಠದಲ್ಲಿ ಭಜನೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ.ಶಿವಾನಂದ ಸ್ವಾಮಿಗಳು, ಶ್ರೀ ಗಿರಿಮಠ, ಆಡಿ, ಚಿಕ್ಕೋಡಿ ತಾ, ಬೆಳಗಾವಿ ಜಿಲ್ಲೆ.

ಖಟ್ಕಲಾಟ

ಚಿಕ್ಕೋಡಿ ತಾಲ್ಲೂಕಿನ ಖಟ್ಕಲಾಟವು ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಮಹಾರಾಷ್ಟ್ರದ ಗಡಿಯಲ್ಲಿರುವ ಈ ಗ್ರಾಮದಲ್ಲಿ ಹನ್ನೆರಡನೆಯ ಶತಮಾನ ಮತ್ತು ನಂತರದಲ್ಲಿ ಆರು ವೀರಶೈವ ಮಠಗಳು ಸ್ಥಾಪನೆಯಾಗಿದ್ದವು ಎಂದು ಹೇಳಲಾಗುತ್ತಿದೆ. ಇವುಗಳಲ್ಲಿ ಶ್ರೀ ವಿರಕ್ತಮಠ ಮತ್ತು ಶ್ರೀ ಆಡಿಅಪ್ಪಣ್ಣಸ್ವಾಮಿ ಮಠಗಳು ಅಸ್ತಿತ್ವದಲ್ಲಿದ್ದವು. ಈಗ ಶ್ರೀ ವಿರಕ್ತಮಠವು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿದೆ.

ವಿರಕ್ತಮಠ: ಖಟ್ಕಲಾಟ ಗ್ರಾಮದ ಮಧ್ಯಭಾಗದಲ್ಲಿ ವಿರಕ್ತಸಂಪ್ರದಾಯದ ಶ್ರೀ ವಿರಕ್ತಮಠವು ಸ್ಥಾಪನೆಯಾಗಿದೆ. ಸೋಲಾಪುರ ದೊರೆಯ ಆಸ್ಥಾನ ಮಂತ್ರಿಯು ಹಂದಿಗೋಡು, ಚಿಕ್ಕೋಡಿ, ಚಿಂಚಣಿ ಮಾರ್ಗವಾಗಿ ಕಟ್ಕಲಾಟಕ್ಕೆ ಬಂದಾಗ ಮಂತ್ರಿಗೆ ಸಂನ್ಯಾಸಿಗಳ ತಂಡ ಎದುರಾಗುತ್ತದೆ. ಇದರಲ್ಲಿ ನಿಜವಾದ ಸಂನ್ಯಾಸಿಗಳು ಯಾರಿರಬಹುದೆಂದು ಪರೀಕ್ಷಿಸಿ ಶ್ರೀ ಗುರುಪಾದ ಸ್ವಾಮಿಗಳಿಗೆ ಮಠವನ್ನು ಸ್ಥಾಪಿಸಿ ಕೊಟ್ಟನು ಎಂದು ತಿಳಿದು ಬಂದಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಗುರುಪಾದಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಸೊಲಭಯ್ಯಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ರಾಚಯ್ಯಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಸಂಗಯ್ಯಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಜನ್ನಯ್ಯಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಎರಡನೆಯ ರಾಚಯ್ಯಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಎರಡನೆಯ ಸೊಲಬಯ್ಯಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಎರಡನೆಯ ಸಂಗಯ್ಯಸ್ವಾಮಿಗಳು
೯. ಶ್ರೀ ಮ.ನಿ.ಪ್ರ. ರೇಣುಕಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಈ ಮಠದಲ್ಲಿ ಅಧಿಕಾರ ನಡೆಸಿದ ಎಲ್ಲಾ ಗುರುಗಳ ಸ್ಪಷ್ಟವಾದ ಮಾಹಿತಿ ಲಭ್ಯವಿಲ್ಲ.ಶ್ರೀ ಸಂಗಯ್ಯಸ್ವಾಮಿಗಳ ನಂತರ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿಯಿತು.ಆಗ ಗ್ರಾಮಸ್ಥರು ಹುಬ್ಬಳ್ಳಿಯ ಮೂರುಸಾವಿರ ಮಠದಲ್ಲಿದ್ದ ಶ್ರೀ ರೇಣುಕ ದೇವರನ್ನು ಕರೆತಂದು ಉತ್ತರಾಧಿಕಾರಿಗಳನ್ನಾಗಿ ನೇಮಿಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ರೇಣುಕ ಸ್ವಾಮಿಗಳು, ಶ್ರೀ ವಿರಕ್ತಮಠ, ಬಿಟ್ಟಲಾಟ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಗಳತಗ

ಚಿಕ್ಕೋಡಿ ತಾಲ್ಲೂಕಿನ ಗಳತಗವು ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಎಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಕಾಡಸಿದ್ಧೇಶ್ವರ ಮಠವು ಅಸ್ತಿತ್ವದಲ್ಲಿದೆ.

ಕಾಡಸಿದ್ಧೇಶ್ವರಮಠ: ಗಳತಗ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ಕಾಡಸಿದ್ಧೇಶ್ವರ ಮಠವನ್ನು ಶ್ರೀ ಅಡವಿಸಿದ್ಧೇಶ್ವರರು ಅಂಕಲಗಿಯಲ್ಲಿ ನೆಲೆಗೊಳ್ಳುವ ಮೊದಲು ಈ ಸ್ಥಳದಲ್ಲಿ ಅನುಷ್ಠಾನ ಕೈಗೊಂಡು ಧರ್ಮಜಾಗೃತಿಯನ್ನು ಉಂಟು ಮಾಡಿದ್ದರು. ಗುರುಗಳು ತಮ್ಮ ಲೋಕಸಂಚಾರವನ್ನು ಮುಂದುವರೆಸಿದ ಮೇಲೆ ಭಕ್ತರು ಶ್ರೀ ಕಾಡು(ಅಡವಿ)ಸಿದ್ಧೇಶ್ವರರ ತೋರುಗದ್ದುಗೆಯನ್ನು ಸ್ಥಾಪಿಸಿ ಮಠವನ್ನು ಸ್ಥಾಪಿಸಿದರು.

ನೂರು ವರ್ಷಗಳ ಹಿಂದೆ ಸ್ಥಾಪನೆಯಾದ ಈ ಮಠವು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು,ವೀರಶೈವ ಧರ್ಮದ ಕೇಂದ್ರಬಿಂದುವಾಗಿ ಬೆಳೆದು ಬಂದಿದೆ. ಮಠದ ಆವರಣದಲ್ಲಿ ಒಂದು ಗದ್ದುಗೆಇದ್ದು, ಇದಕ್ಕೆ ನಿತ್ಯಪೂಜೆಯನ್ನು ಹಾಗೂ ವರ್ಷಕ್ಕೊಮ್ಮೆ ಶ್ರಾವಣಮಾಸದ ಸೋಮವಾರದಂದು ಸಿದ್ಧೇಶ್ವರರ ಜಾತ್ರೆಯನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಕಾಡಸಿದ್ಧೇಶ್ವರ ಮಠ, ಗಳತಗ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಚಿಕ್ಕೋಡಿ

ಬೆಳಗಾವಿ ಜಿಲ್ಲೆಯ ಚಿಕ್ಕೋಡಿಯು ಜಿಲ್ಲಾಕೇಂದ್ರದಿಂದ ಉತ್ತರಕ್ಕೆ ನಲವತ್ತೈದು ಕಿ.ಮೀ ದೂರದಲ್ಲಿದೆ. ತಾಲ್ಲೂಕು ಕೇಂದ್ರಸ್ಥಳವಾದ ಚಿಕ್ಕೋಡಿಯಲ್ಲಿ, ವೀರಶೈವ ಧರ್ಮವು ಹನ್ನೆರಡನೆಯ ಶತಮಾನದಿಂದಲೂ ತನ್ನ ಪ್ರಾಬಲ್ಯವನ್ನು ಸ್ಥಾಪಿಸಿಕೊಂಡು ಬೆಳೆದಿದೆ. ಇಲ್ಲಿ ಶ್ರೀ ಸಂಪಾದನಾ ಸಂಸ್ಥಾನ ಚರಮೂರ್ತಿ ಮಠವು ಅಸ್ತಿತ್ವದಲ್ಲಿದೆ.

ಸಂಪಾದನ ಸಂಸ್ಥಾನ ಚರಮೂರ್ತಿಮಠ: ಶ್ರೀ ಅಲ್ಲಮಪ್ರಭುಗಳು ಕಲ್ಯಾಣಕ್ಕೆ ಹೋಗುವಾಗ ಇಲ್ಲಿ ಕೆಲವು ದಿನ ಅನುಷ್ಠಾನಕೈಗೊಂಡು ಈ ಸ್ಥಳವನ್ನು ಜಾಗೃತ ಸ್ಥಳವನ್ನಾಗಿ ಮಾಡಿದರು. ಈ ಸ್ಥಳದಲ್ಲಿ ಈಗಿನ ಗುರುವಾರಪೇಟೆಯ ಬಡವಾಣೆಯಲ್ಲಿ ಶ್ರೀ ಸಂಪಾದನಾ ಸಂಸ್ಥಾನ ಚರಮೂರ್ತಿ ಮಠವು ಸ್ಥಾಪನೆಗೊಂಡು ವೀರಶೈವ ಧರ್ಮವನ್ನು ಬೆಳೆಸಿದೆ.

ಪುರಾತನಕಾಲದಲ್ಲಿ ಸ್ಥಾಪನೆಗೊಂಡ ಮಠದ ಪರಂಪರೆಯು ಶ್ರೀಮಂತವಾಗಿ ಬೆಳೆದು, ವಿಶಾಲವಾದ ಕಟ್ಟಡವನ್ನು ರೂಪಿಸಿಕೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸುವ ಮೂಲಕ ವೀರಶೈವಧರ್ಮದ ಆಚರಣೆಗಳನ್ನು ಅನುಷ್ಠಾನಕ್ಕೆ ತಂದಿದೆ. ಇಂತಹ ಪುರಾತನ ಮಠಕ್ಕೆ(೧೯೯೧-೯೨) ಗ್ರಹಣಕಾಲ ಬಂದೊದಗಿ, ಮಠದಲ್ಲಿ ಹಿಂದೆ ಅಧಿಕಾರ ನಡೆಸುತ್ತಿದ್ದ ಗುರುಗಳು ಇಲ್ಲಿನ ಅಹಿತಕರ ಘಟನೆಗಳಿಂದ ಬೇಸತ್ತು ಮಠವನ್ನು ತ್ಯಜಿಸಿದರು. ಅಂದಿನಿಂದ ಮಠವು ಕೆಲವು ವರ್ಷಗಳ ಕಾಲ ಖಾಲಿ ಉಳಿದಿತ್ತು.ಈಗ ಶ್ರೀ ನೀಲಕಂಠ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸುವ ಮೂಲಕ ಅಭಿವೃದ್ಧಿಪಡಿಸಿದ್ದಾರೆ. ನಿತ್ಯ ಗದ್ದುಗೆಗಳಿಗೆ ಪೂಜೆ, ಧಾರ್ಮಿಕ ಕಾರ್ಯಗಳು ಹಾಗೂ ಮಠದಲ್ಲಿರುವ ಬಡವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆಯನ್ನು ಕಲ್ಪಿಸಿಕೊಡಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ನೀಲಕಂಠ ಸ್ವಾಮಿಗಳು, ಶ್ರೀ ಸಂಪಾದನ ಸಂಸ್ಥಾನ ಚರಮೂರ್ತಿ ಮಠ, ಗುರುವಾರ ಪೇಟೆ, ಚಿಕ್ಕೋಡಿ, ಬೆಳಗಾವಿ ಜಿಲ್ಲೆ.

ಚಿಂಚಣಿ

ಚಿಕ್ಕೋಡಿ ತಾಲ್ಲೂಕಿನ ಚಿಂಚಣಿಯು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಆರುಕಿ.ಮೀ ದೂರದಲ್ಲಿದೆ. ಪುರಾತನ ಪರಂಪರೆಯುಳ್ಳ ಈ ಗ್ರಾಮದಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆದಿದೆ. ಇಲ್ಲಿ ಶ್ರೀ ಪ್ರಭುದೇವರ ಮಠವು ಅಸ್ತಿತ್ವದಲ್ಲಿದೆ.

ಪ್ರಭುದೇವರಮಠ: ಚಿಂಚಣಿಯಲ್ಲಿ ಹನ್ನೆರಡನೆಯ ಶತಮಾನದಲ್ಲಿ ಸ್ಥಾಪನೆಗೊಂಡ ಶ್ರೀ ಪ್ರಭುದೇವರ ಮಠವು ಹೆಚ್ಚು ಪ್ರಸಿದ್ಧಿ ಪಡೆದಿದೆ. ವಿರಕ್ತಸಂಪ್ರದಾಯದ ಸಂಪಾದನೆಯ ಸಮಯದಲ್ಲಿ ಬೆಳೆದು, ಈತನಕ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ಮಠ ಸ್ಥಾಪನೆ: ಶ್ರೀ ಅಲ್ಲಮ ಪ್ರಭುಗಳು ಲೋಕಸಂಚಾರ ಕೈಗೊಂಡು ಕಲ್ಯಾಣಕ್ಕೆ ಹೋಗುವ ಸಂದರ್ಭದಲ್ಲಿ ಬಳ್ಳಿಗಾವಿಯಿಂದ ಹುಕ್ಕೇರಿ ಮಾರ್ಗವಾಗಿ ಚಿಂಚಣಿಗೆ ಬಂದು, ಕೆಲವು ದಿನ ಇಲ್ಲಿ ನೆಲೆಸಿ ಧರ್ಮೋಪದೇಶವನ್ನು ನೀಡಿ ಮಠವನ್ನು ಸ್ಥಾಪಿಸಿದ್ದರು. ಅಂದು ಪ್ರಾರಂಭಗೊಂಡ ಮಠವು ಅನೇಕ ಏರಿಳಿತಗಳನ್ನು ಕಂಡು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ ಈತನಕ ಬೆಳೆದು ಬಂದಿದೆ.

ಪರಂಪರೆ: ಹನ್ನೆರಡನೆಯ ಶತಮಾನದಲ್ಲಿ ಸ್ಥಾಪನೆಗೊಂಡ ಈ ಮಠದ ಪರಂಪರೆಯಲ್ಲಿ ಹತ್ತು ಜನ ಗುರುಗಳು ಅಧಿಕಾರ ನಡೆಸಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೆ ಮಠದ ಪರಂಪರೆಯ ಗುರುಗಳ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಈ ಹಿಂದೆ ಅಧಿಕಾರ ನಡೆಸಿ ಅಕಾಲಿಕವಾಗಿ ಲಿಂಗೈಕ್ಯರಾದ ಶ್ರೀ ಸಿದ್ಧಪ್ರಭು ಸ್ವಾಮಿಗಳು ಹಾಗೂ ಈಗಿನ ಗುರುಗಳ ಹೆಸರನ್ನು ಮಾತ್ರ ದಾಖಲಿಸಬಹುದಾಗಿದೆ. ಶ್ರೀ ಸಿದ್ಧಪ್ರಭು ಸ್ವಾಮಿಗಳು ಇಲ್ಲಿಗೆ ಸಮೀಪದ ಬೆಂಡವಾಡದ ಶ್ರೀ ರೇವಣಸಿದ್ಧೇಶ್ವರ ಮಠಕ್ಕೆ ಉತ್ತರಾಧಿಕಾರಿಯಾಗಿ ನೇಮಕಗೊಂಡಿದ್ದರು. ಗುರುಗಳು ಆ ಮಠಕ್ಕೆ ನಿಯೋಜನೆಗೊಂಡ ನಂತರ ಶಿವಯೋಗ ಮಂದಿರದಲ್ಲಿ ಸಂಸ್ಕೃತ, ವೇದ ಹಾಗೂ ಯೋಗಾಭ್ಯಾಸವನ್ನು ಮಾಡಿ, ಬೆಂಡವಾಡದ ಶ್ರೀ ರೇವಣಸಿದ್ಧೇಶ್ವರ ಮಠದ ಅಧಿಕಾರವನ್ನು ವಹಿಸಿಕೊಂಡಿದ್ದರು. ಗುರುಗಳು ಬೆಂಡವಾಡ ಮಠದಲ್ಲಿ ಧಾರ್ಮಿಕ ಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸುವುದನ್ನು ನೋಡಿದ ಚಿಂಚಣಿಯ ಭಕ್ತರು ಗುರುಗಳನ್ನು ಈ ಮಠದ ಉತ್ತರಾಧಿಕಾರಿಗಳನ್ನಾಗಿ ನೇಮಿಸಿ, ೧೯೫೪ರ ಮಾರ್ಚ್‌ನಲ್ಲಿ ಪಟ್ಟಾಧಿಕಾರವನ್ನು ನೀಡಿದರು.

ಅಭಿವೃದ್ಧಿ ಕಾರ್ಯಗಳು: ಶ್ರೀ ಸಿದ್ಧಪ್ರಭು ಸ್ವಾಮಿಗಳು ಮಠಾಧಿಕಾರಿಗಳಾದಾಗ ಮಠದ ಕಟ್ಟಡ ಸಂಪೂರ್ಣ ಜೀರ್ಣವಾಗಿತ್ತು, ಸುಮಾರು ನೂರಾರು ಎಕರೆ ಮಠದ ಭೂಮಿ ಹಾಳು ಬಿದ್ದಿದ್ದರೆ, ಉಳಿದ ಭಾಗವನ್ನು ಬೇಕಾದವರು ಉಳುಮೆ ಮಾಡಿಕೊಂಡು ಅನುಭವಿಸುತ್ತಿದ್ದರು. ಶ್ರೀ ಸಿದ್ಧಪ್ರಭು ಸ್ವಾಮಿಗಳು ಇದನ್ನು ಅವಲೋಕಿಸಿ ತಮ್ಮ ಕಾಯಕಯೋಗದಿಂದ ಹಂತಹಂತವಾಗಿ ಮಠದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡರು. ಮಠದ ಸುತ್ತಮುತ್ತಲ ಪ್ರದೇಶವನ್ನು ಸ್ವಚ್ಛಗೊಳಿಸಿ ಧಾರ್ಮಿಕ ಕಾರ್ಯಗಳು ವ್ಯವಸ್ಥಿತವಾಗಿ ನಡೆಯುವಂತೆ ಮಾಡಿದರು. ನಂತರ ಮಠದ ಅಪಾರ ಆಸ್ತಿಯನ್ನು ಕ್ರಮಬದ್ಧಗೊಳಿಸಿದರು. ಇದಕ್ಕಾಗಿ ಅನೇಕ ಜನರಿಂದ ವಿರೋಧವನ್ನು ಕಟ್ಟಿಕೊಂಡರು. ಗುರುಗಳು ಮಠದ ಎಲ್ಲಾ ಆಸ್ತಿಯನ್ನು ಕ್ರಮ ಬದ್ಧಗೊಳಿಸಿದ ಮೇಲೆ ತಮ್ಮ ಕಾಯಕಯೋಗದಿಂದ ಅಧಿಕ ಲಾಭ ಬರುವಂತೆ ಮಾಡಿದರು. ಕೆಲವೇ ವರ್ಷಗಳಲ್ಲಿ ಮಠವು ಅಭಿವೃದ್ಧಿಯತ್ತ ಸಾಗಿತು. ಮಠದ ಕೈಹೆಂಚಿನ ಕಟ್ಟಡವನ್ನು ತೆಗೆಸಿ, ಬೃಹದಾಕಾರದ ಕಲ್ಲಿನ ಕಟ್ಟಡವನ್ನು ನಿರ್ಮಿಸಿದರು. ಅಲ್ಲದೆ ಮಠದ ಸುತ್ತಲಿನ ಆವರಣ ಕೋಟೆಯಂತೆ ನಿರ್ಮಾಣಗೊಂಡಿತು. ಮಠದ ದ್ವಾರಮಂಟಪದ ಮೇಲೆ ಕಳಸರೋಹಣವನ್ನು ಮಾಡಿ, ಮಠವು ಶ್ರೀಮಂತ ಮಠಗಳ ಸಾಲಿನಲ್ಲಿ ನಿಲ್ಲುವಂತೆ ಮಾಡಿದರು.

ಗುರುತಿಸುವ ಸಾಧನೆ: ಶ್ರೀ ಸಿದ್ಧಪ್ರಭು ಸ್ವಾಮಿಗಳು ಒಂದು ಶಕ್ತಿಯಾಗಿ ಬೆಳೆದಿದ್ದು, ಇವರ ಅರವತ್ತನೆಯ ಹುಟ್ಟು ಹಬ್ಬದ ನಿಮಿತ್ತ ವಿಶೇಷ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಗುರುಗಳು ತಮ್ಮ ಭಕ್ತರೊಡಗೂಡಿ ಎಪ್ಪತ್ತೈದು ಕಿ.ಮೀ. ದೂರ ಕ್ರಮಿಸಿ ಜನರಲ್ಲಿ ಧರ್ಮಜಾಗೃತಿಯನ್ನು ಮೂಡಿಸಿದ್ದಲ್ಲದೆ, ವೀರಶೈವ ಧರ್ಮದ ಪ್ರಚಾರ ಮಾಡುತ್ತಾ,

ರಾಷ್ಟ್ರೀಯ ಭಾವೈಕ್ಯತೆಯಿಂದ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯಬಹುದೆಂದು ಜನರಿಗೆ ತಿಳುವಳಿಕೆ ಕೊಟ್ಟು, ಇತರೆ ಮಠಾಧೀಶ್ವರರಿಗೆ ಮಾರ್ಗದರ್ಶಕರಾಗಿದ್ದಾರೆ. ಅಂದು ನಡೆಸಿದ ಧರ್ಮಜಾಗೃತಿ ಪಾದಯಾತ್ರೆಯು ಈ ಮಠದಲ್ಲಿ ಗುರುತಿಸಬಹುದಾದ ಸಾಧನೆಯಾಗಿದೆ.

ಶ್ರೀ ಸಿದ್ಧಪ್ರಭು ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ರೋಣ ತಾಲ್ಲೂಕಿನ ಗಜೇಂದ್ರಗಡದಲ್ಲಿ ೧೯೬೨ರ ಜೂನ್ ಹನ್ನೆರಡರಂದು ಜನಿಸಿದ ಶ್ರೀ ಅಲ್ಲಮಪ್ರಭು ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಲಾಯಿತು. ಗುರುಗಳು ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿ ೧೯೯೪ರ ಜುಲೈ ಒಂದರಂದು ಪಟ್ಟಾಧಿಕಾರವನ್ನು ವಹಿಸಿಕೊಂಡರು.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಶ್ರೀ ಅಲ್ಲಮಪ್ರಭುಗಳು ಅನುಷ್ಠಾನ ಕೈಗೊಂಡಿದ್ದ ಗವಿಯು ಸ್ಮಾರಕವಾಗಿ ರೂಪುಗೊಂಡಿದೆ. ಇಲ್ಲಿ ಅಲ್ಲಮಪ್ರಭುಗಳ ತೋರುಗದ್ದುಗೆಯನ್ನು ಸ್ಥಾಪಿಸಲಾಗಿದೆ. ಪರಂಪರೆಯ ಗುರುಗಳ ಗದ್ದುಗೆಗಳನ್ನು ಸ್ಥಾಪಿಸಲಾಗಿದ್ದು, ಇವುಗಳಿಗೆ ನಿತ್ಯ ಪೂಜೆಯನ್ನು ನಡೆಸಲಾಗುತ್ತಿದೆ. ಮೂರು ವರ್ಷಗಳಿಗೊಮ್ಮೆ ನಡೆಯುವ ಮಠದ ಜಾತ್ರೆ, ಈ ಭಾಗದ ಜನರಿಗೆ ಒಂದು ವಿಶೇಷ ಹಬ್ಬವಾಗಿದೆ. ರಾಜ್ಯದ ವಿವಿಧೆಡೆಯಿಂದ ವಿದ್ವಾಂಸರನ್ನು ಬರಮಾಡಿಕೊಂಡು ಪುರಾಣ, ಪ್ರವಚನವನ್ನು ಏರ್ಪಡಿಸಲಾಗುತ್ತಿದೆ. ಹಿಂದಿನ ಗುರುಗಳಾದ ಶ್ರೀ ಸಿದ್ಧಪ್ರಭು ಸ್ವಾಮಿಗಳು ಆಂಧ್ರಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ಕೇರಳಗಳಲ್ಲಿ ಸಂಚರಿಸಿ, ವೀರಶೈವ ಮಠಗಳ ಸಂಘಟನೆಗಾಗಿ ಶ್ರಮಿಸಿದರು. ಬೆಳಗಾವಿ ಜಿಲ್ಲೆಯ ಮಠಾಧೀಶ್ವರರ ಸಮ್ಮೇಳನವನ್ನು ಮಠದ ಆಶ್ರಯದಲ್ಲಿ ನಡೆಸಿ, ವೀರಶೈವಧರ್ಮದ ಅಭಿವೃದ್ಧಿಯ ಬಗ್ಗೆ ಚಿಂತನೆ ನಡೆಸಿದ್ದರು. ಗುರುಗಳು ಈ ಕೈಗೊಂಡ ಕಾರ್ಯಗಳು ದಾಖಲೆಯಾಗಿ ಉಳಿಯುವಂತಾಗಿವೆ.

ಶೈಕ್ಷಣಿಕ ಸೇವೆ: ಮಠದ ವತಿಯಿಂದ ಚಿಕ್ಕೋಡಿಯಲ್ಲಿ ಸಿದ್ಧಪ್ರಭು ಪ್ರೌಢಶಾಲೆಯನ್ನು ಪ್ರಾರಂಭಿಸಲಾಗಿದೆ. ಕಲಿಯುವ ಬಡಮಕ್ಕಳಿಗೆ ಮಠದಲ್ಲಿ ಆಶ್ರಯ ನೀಡಲಾಗಿದೆ. ಅಲ್ಲದೆ ಅವರುಗಳ ಕಲಿಕೆಗೂ ನೆರವಾಗಿದ್ದಾರೆ. ಮಠದಲ್ಲಿ ನಿತ್ಯ ಅನ್ನ ದಾಸೋಹ ನಡೆಯುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಸ್ವಾಮಿಗಳು ಶ್ರೀ ಪ್ರಭುದೇವರ ಮಠ, ಚಿಂಚಣಿ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ.

ನಿಪ್ಪಾಣಿ

ಚಿಕ್ಕೋಡಿ ತಾಲ್ಲೂಕಿನ ನಿಪ್ಪಾಣಿಯು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿನಾರು ಕಿ.ಮೀ ದೂರದಲ್ಲಿದೆ. ವ್ಯಾಪಾರದ ಕೇಂದ್ರ ಸ್ಥಳವಾದ ಈ ಪಟ್ಟಣವು ಮಹಾರಾಷ್ಟ್ರದ ಗಡಿಭಾಗಕ್ಕೆ ಹೊಂದಿಕೊಂಡಿದೆ. ಇಲ್ಲಿ ಮೂರು ವೀರಶೈವ ಮಠಗಳು ಸ್ಥಾಪನೆಯಾಗಿದ್ದವು ಎಂದು ಹೇಳಲಾಗುತ್ತಿದೆ. ಇವುಗಳಲ್ಲಿ ಶ್ರೀ ಸಮಾಧಿಮಠ, ಶ್ರೀ ನಣದಿಮಠ ಹಾಗೂ ಶ್ರೀ ದಮ್ಮಯ್ಯನ ಮಠವನ್ನು ಗುರುತಿಸಬಹುದಾಗಿದೆ. ಇವುಗಳಲ್ಲಿ ಶ್ರೀ ದಮ್ಮಯ್ಯನ ಮಠದಲ್ಲಿ ಗುರುಗಳಿದ್ದು, ಧಾರ್ಮಿಕ ಕಾರ್ಯಗಳು ನಡೆಯುತ್ತಿವೆ. ಶ್ರೀ ನಣದಿ ಮಠದಲ್ಲಿ ಈಗ ಗುರುಗಳಿಲ್ಲದೆ ಕೇವಲ ಗದ್ದುಗೆ ಪೂಜೆಗಷ್ಟೇ ಸೀಮಿತಗೊಂಡಿದೆ. ಶ್ರೀ ಸಮಾಧಿ ಮಠದಲ್ಲಿ ಗುರುಗಳು ಇಲ್ಲದಿದ್ದರೂ ಭಕ್ತರು ಮಠದ ಒಂದು ಸಮಿತಿಯನ್ನು ರಚಿಸಿಕೊಂಡು, ಮಠದ ಆಸ್ತಿಯನ್ನು ಕ್ರಮಬದ್ಧಗೊಳಿಸಿ ಧಾರ್ಮಿಕ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿಪಡಿಸಿದ್ದಾರೆ.

ದಮ್ಮಯ್ಯನಮಠ: ನಿಪ್ಪಾಣಿಯ ಹೊಳೆಯದಡದಲ್ಲಿ ವಿರಕ್ತಸಂಪ್ರದಾಯದ, ಮುರುಘಾ ಸಮಯದ ಶ್ರೀ ದಮ್ಮಯ್ಯನ ಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದಲ್ಲಿ ಈ ಮಠವು ಶ್ರೀ ದಮ್ಮಯ್ಯ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟಿರುವುದರಿಂದ ಈ ಮಠಕ್ಕೆ 'ಶ್ರೀ ದಮ್ಮಯ್ಯನ ಮಠ' ಎಂಬ ಹೆಸರು ಬಂದಿದೆ.

ಮಠ ಸ್ಥಾಪನೆ: ಶ್ರೀ ದಮ್ಮಯ್ಯ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಇಲ್ಲಿನ ಹೊಳೆದಡದ ಪ್ರಶಾಂತ ಸ್ಥಳದಲ್ಲಿ ತಪಸ್ಸಿಗೆ ಕುಳಿತಿದ್ದರು. ಆಗ ಧಾರಾಕಾರವಾಗಿ ಮಳೆ ಸುರಿದು ಹೊಳೆಯಲ್ಲಿ ಪ್ರವಾಹ ಬಂದಿತ್ತು. ಈ ಸಂದರ್ಭದಲ್ಲಿ ವಿಹಾರಕ್ಕೆಂದು ಬಂದಿದ್ದ ನಿಪ್ಪಾಣಿ ದೊರೆಯು ಹೊಳೆದಡದಲ್ಲಿದ್ದ ಕುಟೀರದಲ್ಲಿ ರಕ್ಷಣೆ ಪಡೆಯುತ್ತಾನೆ. ಪ್ರವಾಹವು

ಗುರುಗಳನ್ನು ಸ್ಪರ್ಶ ಮಾಡದೆ ಹರಿಯುತ್ತಿರುತ್ತದೆ. ಈ ದೃಶ್ಯವನ್ನು ನೋಡಿದ ದೊರೆಯು ಆಶ್ಚರ್ಯಗೊಂಡು ಗುರುಗಳ ಬಳಿಗೆ ಬಂದು, ಆಶೀರ್ವಾದ ಪಡೆದು ಈ ಜಾಗೃತ ಸ್ಥಳದಲ್ಲಿ ಮಠವನ್ನು ಸ್ಥಾಪಿಸಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದನು ಎಂದು ಹೇಳುವ ಜನಪದ ಕಥೆ ಜನಜನಿತವಾಗಿದೆ.

ಶ್ರೀ ದಮ್ಮಯ್ಯ ಸ್ವಾಮಿಗಳಿಂದ ಪ್ರಾರಂಭಗೊಂಡ ಮಠವು ಕರ್ತೃ ಗುರುಗಳ ನಂತರ ಖಾಲಿ ಉಳಿಯುತ್ತದೆ. ಆಗ ಅಥಣಿಯ ಗಚ್ಚಿನಮಠದ ಗುರುಗಳು ಈ ಮಠದ ಉಸ್ತುವಾರಿಯನ್ನು ವಹಿಸಿಕೊಂಡು ಮಠವನ್ನು ಬೆಳೆಸಿದರು. ಈಗ ಚಿತ್ರದುರ್ಗದ ಮುರುಘಾ ಮಠದಿಂದ ನೇಮಿಸಲ್ಪಟ್ಟಿರುವ ಗುರುಗಳು ಅಧಿಕಾರದಲ್ಲಿದ್ದು, ಮಠದ ಉಸ್ತುವಾರಿಯನ್ನು ನೋಡಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ದಮ್ಮಯ್ಯನ ಮಠ, ನಿಪ್ಪಾಣಿ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಯಡೂರು

ಚಿಕ್ಕೋಡಿ ತಾಲ್ಲೂಕಿನ ಯಡೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಇಪ್ಪತ್ತೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಕಾಡುಸಿದ್ಧೇಶ್ವರ ಮಠವು ಸ್ಥಾಪನೆಯಾಗಿ ಹೆಚ್ಚು ಹೆಸರು ಮಾಡಿದೆ.

ಕಾಡುಸಿದ್ಧೇಶ್ವರಮಠ: ಯಡೂರು ಗ್ರಾಮದ ಹೊರಭಾಗದಲ್ಲಿ ಪಂಚಪೀಠ ಪರಂಪರೆಯ ಶಾಖಾಮಠವಾಗಿರುವ ಶ್ರೀ ಕಾಡುಸಿದ್ಧೇಶ್ವರ ಮಠವು ಸ್ಥಾಪನೆಯಾಗಿದೆ. ಸ್ವತಂತ್ರ ಮಠವಾಗಿ ರೂಪುಗೊಂಡು ವೀರಶೈವ ಧರ್ಮವನ್ನು ಬೆಳೆಸಿ ಪೋಷಿಸುವಲ್ಲಿ ಯಶಸ್ವಿಯಾಗಿದೆ. ಶ್ರೀ ಕಾಡುಸಿದ್ಧೇಶ್ವರ ಮಠವು ಈ ಭಾಗದ ಪುರಾತನ ಹಾಗೂ ದೊಡ್ಡಮಠವೆಂದು ಹೆಸರು ಗಳಿಸಿದೆ. ಮಠದ ಪರಂಪರೆಯಲ್ಲಿ ಅನೇಕ ಗುರುಗಳು ಅಧಿಕಾರವನ್ನು ನಡೆಸಿದ್ದಾರೆ ಎಂದು ಹೇಳಲಾಗುತ್ತದೆ. ಈಗ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಮಠದ ಆಡಳಿತವನ್ನು ನೋಡಿಕೊಳ್ಳುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕಾಡುಸಿದ್ಧೇಶ್ವರಮಠ, ಯಡೂರು, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ.

❑

ಬೆಳಗಾವಿ ತಾಲ್ಲೂಕು

ಬೆಳಗಾವಿ ಜಿಲ್ಲೆಯ ಹತ್ತು ತಾಲ್ಲೂಕುಗಳಲ್ಲಿ ಒಂದಾದ ಬೆಳಗಾವಿ ತಾಲ್ಲೂಕು ಅತ್ಯಂತ ಶ್ರೀಮಂತ ತಾಲ್ಲೂಕಿನಲ್ಲಿ ಒಂದಾಗಿದೆ. ಇಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆದು ಸಮಾಜವನ್ನು ಬೆಳೆಸಿದೆ. ಇಲ್ಲಿ ಎಪ್ಪತ್ತೈದು ಮಠಗಳು ಸ್ಥಾಪನೆಗೊಂಡಿದ್ದವೆಂದು ಹೇಳಲಾಗುತ್ತದೆ. ಪ್ರಸ್ತುತ ಹನ್ನೆರಡು ಮಠಗಳನ್ನು ಗುರುತಿಸಬಹುದಾಗಿದ್ದು ಇದರಲ್ಲಿ ಎಂಟು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯ ನಡೆಸುತ್ತಿವೆ.

ಅರಳಿಕಟ್ಟೆ

ಬೆಳಗಾವಿ ತಾಲ್ಲೂಕಿನ ಅರಳಿಕಟ್ಟೆಯು ತಾಲ್ಲೂಕು ಕೇಂದ್ರದಿಂದ ಹದಿನೈದು ಕಿ.ಮೀ ದೂರದಲ್ಲಿದೆ. ಹನ್ನೆರಡನೆಯ ಶತಮಾನದಲ್ಲಿ ಸ್ಥಾಪನೆಯಾದ ವಿರಕ್ತಮಠವು, ಇಲ್ಲಿನ ಧಾರ್ಮಿಕ ಚಟುವಟಿಕೆಗಳ ಕೇಂದ್ರವಾಗಿ ಬೆಳೆದು ಹೆಚ್ಚು ಪ್ರಸಿದ್ಧಿ ಹೊಂದಿದೆ.

ವಿರಕ್ತಮಠ: ಅರಳಿಕಟ್ಟೆ ಗ್ರಾಮದಲ್ಲಿ ಕುಮಾರಸಮಯಕ್ಕೆ ಸೇರಿದ ಶ್ರೀ ವಿರಕ್ತಮಠವು ಸ್ಥಾಪನೆಯಾಗಿ ಶ್ರೀತೋಂಟಯ್ಯ ಸ್ವಾಮಿಗಳ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳಿಂದ ಮತ್ತಷ್ಟು ಹೆಸರು ಪಡೆದು ಬೆಳೆಯಿತು.

ಪರಂಪರೆ: ಮಠದ ಪರಂಪರೆಯ ಕರ್ತೃಗುರುಗಳು ಹಾಗೂ ನಂತರ ಅಧಿಕಾರಕ್ಕೆ ಬಂದ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಶ್ರೀ ತೋಂಟಯ್ಯ ಸ್ವಾಮಿಗಳು ಆಯುರ್ವೇದ ಹಾಗೂ ಹಳ್ಳಿ ವೈದ್ಯ ಪದ್ಧತಿಯನ್ನು ಕರಗತ ಮಾಡಿಕೊಂಡಿದ್ದು, ಗ್ರಾಮಾಂತರ ರೋಗಿಗಳಿಗೆ ಸಿದ್ಧ ಔಷಧಿಯನ್ನು ನೀಡಿ ಉಪಚರಿಸುತ್ತಿದ್ದರು. ಧಾರ್ಮಿಕ ಸೇವೆಯ ಜೊತೆಗೆ ಆರೋಗ್ಯ ಸೇವೆಯನ್ನು ಮಾಡುತ್ತಿದ್ದ ಶ್ರೀ ತೋಂಟಯ್ಯ ಸ್ವಾಮಿಗಳು ಮಠವನ್ನು ಜನರ ಬಳಿಗೆ ಕೊಂಡೊಯ್ದರು. ಇವರು ಲಿಂಗೈಕ್ಯರಾದ ನಂತರ ಅನೇಕ ವರ್ಷಗಳ ಕಾಲ ಮಠವು ಉತ್ತರಾಧಿಕಾರಿಗಳಿಲ್ಲದೆ ಖಾಲಿ ಉಳಿದಿತ್ತು. ನಂತರ ಈ ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡಿದ್ದ ಗುರುಗಳ ಹೆಸರು (ಲಭ್ಯವಿಲ್ಲ) ಮೈಸೂರಿನ ಜಯಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವಾಗಲೇ ಗೃಹಸ್ಥಾಶ್ರಮವನ್ನು ಸೇರಿದ್ದರಿಂದ ಪುನಃ ಮಠವು ಖಾಲಿ ಉಳಿಯಿತು.

ನಂತರ ಬೈಲಹೊಂಗಲ ತಾಲ್ಲೂಕಿನ ಲಕ್ಕುಂಡಿಯ ಹಿರೇಮಠದಲ್ಲಿ ಜನಿಸಿದ ಶ್ರೀ ವೀರಭದ್ರ ಸ್ವಾಮಿಗಳು ಉತ್ತರಾಧಿಕಾರಿಗಳಾಗಿ ನೇಮಕಗೊಂಡರು. ಗುರುಗಳು ಶಿವಯೋಗ ಮಂದಿರದಲ್ಲಿ ವಿದ್ಯಾಭ್ಯಾಸವನ್ನು ಮಾಡಿ, ಬೆಂಗಳೂರಿನಲ್ಲಿ ಸಂಸ್ಕೃತ ಅಧ್ಯಯನವನ್ನು ಮಾಡಿ ಮಠಕ್ಕೆ ಆಗಮಿಸಿದರು. ಕೆಲವು ದಿನ ಮಠದಲ್ಲಿ ನೆಲೆಸಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು, ೧೯೭೦ರಲ್ಲಿ ಮಠದ ಅಧಿಕಾರವನ್ನು ವಹಿಸಿಕೊಂಡರು. ಶ್ರೀ ವೀರಭದ್ರ ಸ್ವಾಮಿಗಳು ಕ್ರಿಯಾಶೀಲರಾಗಿ ಮಠವನ್ನು ಪ್ರಗತಿದಾಯಕವಾಗಿ ಬೆಳೆಸಿದರು. ಮಠದಲ್ಲಿ ನಿತ್ಯ ಧಾರ್ಮಿಕ ಚಟುವಟಿಕೆಗಳನ್ನು ಚುರುಕುಗೊಳಿಸಿ ಮಠಕ್ಕೆ ಹೊಸತನವನ್ನು ತಂದುಕೊಟ್ಟರು. ಮಠದ ಹಿಂದಿನ ಗುರುಪರಂಪರೆಯಂತೆ ಇವರೂ ಸಹ ಧಾರ್ಮಿಕ ಕಾರ್ಯಗಳ ಜೊತೆಗೆ ಆಯುರ್ವೇದ ಚಿಕಿತ್ಸೆಯನ್ನು ನೀಡುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಹಾರಾಷ್ಟ್ರದ ಗಡಿಭಾಗದಲ್ಲಿ ಈ ಮಠದ ಭಕ್ತರು ಹೆಚ್ಚಾಗಿದ್ದಾರೆ. ಇಲ್ಲಿನ ಚಂದ್ರಮ್ಮ ಮಾತಾಜಿ ಎಂಬ ಶಿವಶರಣೆ ಶ್ರೀ ವೀರಭದ್ರ ಸ್ವಾಮಿಗಳ ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ ೩೦೦೦ ಜನರಿಗೆ ಲಿಂಗಧಾರಣೆ ಮಾಡಿಸಿದ್ದು ಹೆಮ್ಮೆ ಪಡುವಂತಹ ಧಾರ್ಮಿಕ ಸಾಧನೆಯಾಗಿದೆ. ಗುರುಗಳು ಉತ್ತಮ ಉಪನ್ಯಾಸಕರಾಗಿ ಧರ್ಮಪ್ರಸಾರ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯಪೂಜೆ, ವಾರ್ಷಿಕ ಪುಣ್ಯಾರಾಧನೆ ಹಾಗೂ ಶಿವಾನುಭವಗೋಷ್ಠಿಗಳನ್ನು ನಡೆಸಲಾಗುತ್ತಿದೆ. ಮಠದ ಆಸ್ತಿಯಾಗಿ ಹದಿನಾರುಎಕರೆ ಜಮೀನಿದೆ. ಇದನ್ನು ಅಭಿವೃದ್ಧಿಪಡಿಸಿ ಮಠಕ್ಕೆ ಆದಾಯದ ಮೂಲವನ್ನಾಗಿ ಮಾಡಿಕೊಂಡು, ಮಠದ ಧಾರ್ಮಿಕ ಕಾರ್ಯಗಳು,

ರೋಗಿಗಳಿಗೆ ಉಚಿತಚಿಕಿತ್ಸೆ, ಮಠಕ್ಕೆ ಬರುವ ಭಕ್ತರ ಆಶ್ರಯ ಮತ್ತು ಊಟದ ವ್ಯವಸ್ಥೆಗೆ ವಿನಿಯೋಗಿಸಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ವೀರಭದ್ರ ಸ್ವಾಮಿಗಳು, ಶ್ರೀ ವಿರಕ್ತಮಠ, ಅರಳಿಕಟ್ಟೆ, ಬೆಳಗಾವಿ ತಾಲ್ಲೂಕು.

ಕಡೋಲಿ

ಬೆಳಗಾವಿ ತಾಲ್ಲೂಕಿನ ಕಡೋಲಿ ಗ್ರಾಮವು ಮಹಾರಾಷ್ಟ್ರದ ಗಡಿಯಲ್ಲಿದೆ. ಇಲ್ಲಿ ಶ್ರೀ ದುರುದುಂಡೇಶ್ವರಮಠವು ಅಸ್ತಿತ್ವದಲ್ಲಿದ್ದು ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ಬೆಳೆದಿದೆ.

ದುರುದುಂಡೇಶ್ವರಮಠ: ಕಡೋಲಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ವಿರಕ್ತಮಠವು ಶರಣರ ತತ್ತ್ವಗಳನ್ನು ಪ್ರಚಾರಪಡಿಸುವಲ್ಲಿ ಯಶಸ್ವಿಯಾಗಿದೆ. ಮಠದ ಪರಂಪರೆಯಲ್ಲಿ ಅನೇಕ ಗುರುಗಳು ಅಧಿಕಾರ ನಡೆಸಿದ್ದಾರೆ. ಮಹರಾಷ್ಟ್ರದ ಸೋಲಾಪುರ ಜಿಲ್ಲೆಯ ಜತ್ ತಾಲ್ಲೂಕಿನ ಢಪಳಾಪುರದಲ್ಲಿ ೧೯೩೪ರ ಜನವರಿ ಇಪ್ಪತ್ತೇಳರಂದು ಜನಿಸಿದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡು, ೧೯೬೮ರಲ್ಲಿ ಅಧಿಕಾರವನ್ನು ವಹಿಸಿಕೊಂಡರು. ಗುರುಗಳು ಕನ್ನಡ, ಮರಾಠಿ, ಹಿಂದಿ ಹಾಗೂ ಸಂಸ್ಕೃತ ಭಾಷೆಗಳಲ್ಲಿ ಪಾಂಡಿತ್ಯವನ್ನು ಪಡೆದು, ಸದಾ ಸಂಚಾರ ಮೂರ್ತಿಗಳಾಗಿ ವೀರಶೈವ ಧರ್ಮಾಚರಣೆಗಳನ್ನು ಪ್ರಚಾರ ಮಾಡುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಸಿದ್ಧಲಿಂಗ ಸ್ವಾಮಿಗಳು, ಶ್ರೀ ದುರುದುಂಡೇಶ್ವರಮಠ, ಕಡೋಲಿ, ಬೆಳಗಾವಿ ತಾಲ್ಲೂಕು.

ಬೆಳಗಾವಿ

ಬೆಳಗಾವಿ ನಗರ ಹಿಂದೆ ನಾಡಿನ ಸ್ವಾತಂತ್ರ್ಯಕ್ಕೆ ತನ್ನದೇ ಆದ ಕೊಡುಗೆಯನ್ನು ಕೊಟ್ಟು ಐತಿಹಾಸಿಕವಾಗಿರುವಂತೆಯೇ, ನಾಡಿನ ಧಾರ್ಮಿಕ ಮತ್ತು ಶೈಕ್ಷಣಿಕ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆ ಕೊಟ್ಟಿರುವುದನ್ನು ಯಾರೂ ಮರೆಯುಂತಿಲ್ಲ. ವೀರಶೈವಧರ್ಮದ ಅಭಿವೃದ್ಧಿಗೆ ಬೆಳಗಾವಿ ನೀಡಿದ ಕೊಡುಗೆ ಅಪಾರವಾಗಿದೆ. ಇಲ್ಲಿ ಪುರಾತನ ಕಾಲದಿಂದ ಎಂಟು ಮಠಗಳು ಸ್ಥಾಪನೆಯಾಗಿದ್ದವು ಎಂಬ ಮಾಹಿತಿ ದೊರೆತಿದೆ. ಈಗ ನಾಗನೂರಿನ ಶ್ರೀ ರುದ್ರಾಕ್ಷಿಮಠ, ರವಿವಾರ ಪೇಟೆಯಲ್ಲಿರುವ ಶ್ರೀ ಕಾರಂಜಿಮಠ, ಶ್ರೀ ಬಸವಗುರುಕುಲ ಮತ್ತು ಶ್ರೀ ಕಲ್ಮಠ(ಹಿರೇಮಠ) ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ನಾಗನೂರು ಶ್ರೀ ರುದ್ರಾಕ್ಷಿಮಠ: ಬೆಳಗಾವಿಯ ಹೃದಯಭಾಗದಲ್ಲಿರುವ ರುದ್ರಾಕ್ಷಿಮಠದ ಮೂಲಮಠ ಬೈಲಹೊಂಗಲ ತಾಲ್ಲೂಕಿನ ನಾಗನೂರಿ ನಲ್ಲಿದೆ. ಗ್ರಾಮೀಣ ವಿದ್ಯಾರ್ಥಿಗಳಿಗೆ ಆಶ್ರಯ ಕೊಡುವ ಉದ್ದೇಶದಿಂದ ಹಿರಿಯ ಚೇತನರಾದ ಶ್ರೀ ಶಿವಬಸವ ಸ್ವಾಮಿಗಳು ರುದ್ರಾಕ್ಷಿಮಠದ ಆಡಳಿತವನ್ನು ನಾಗನೂರಿನಿಂದ ಬೆಳಗಾವಿಗೆ ವರ್ಗಾಯಿಸಿದರು. ವೀರಶೈವತತ್ತ್ವದ ಅಷ್ಟಾವರಣಗಳಲ್ಲಿ ಸ್ಥಾನ ಪಡೆದ ರುದ್ರಾಕ್ಷಿ ಹೆಸರಿನಲ್ಲಿ ಮಠವು ಬೆಳೆದಿದೆ. ಮಠದಲ್ಲಿ ರುದ್ರಾಕ್ಷಿಯ ಕಿರೀಟವು ಇದ್ದು, ಶ್ರಾವಣಮಾಸದಲ್ಲಿ ನಡೆಯುವ ಪೂಜಾ ಸಮಯದಲ್ಲಿ ಗುರುಗಳು ಈ ಕಿರೀಟವನ್ನು ಧಾರಣೆ ಮಾಡಿಕೊಂಡು ಪೂಜಾಕಾರ್ಯವನ್ನು ನಡೆವ ಸಂಪ್ರದಾಯವುಳ್ಳ ಮಠಕ್ಕೆ 'ರುದ್ರಾಕ್ಷಿಮಠ' ಎಂದು ಹೆಸರು ಬಂದಿದೆ.

ಮಠ ಸ್ಥಾಪನೆ: ಬಿಜಾಪುರ ಜಿಲ್ಲೆಯ ತೊರವಿ ಗ್ರಾಮದ ಶ್ರೀ ಅಲ್ಲಮಪ್ರಭುಗಳು ಹಾಗೂ ಶ್ರೀ ಸಿದ್ಧರಾಮ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಕಿತ್ತೂರಿಗೆ ಆಗಮಿಸಿದಾಗ ದೊರೆ ಶಿವಲಿಂಗರುದ್ರಸರ್ಜನು (೧೮೮೯-೧೮೨೪) ಸ್ವಾಮಿಗಳ ಸಮೂಹಕ್ಕೆ ಅಚಲಬ್ರಹ್ಮಚರ್ಯ ಪರೀಕ್ಷೆಯನ್ನು ಏರ್ಪಡಿಸಿದ್ದನು. ಇದರಲ್ಲಿ ಶ್ರೀ ಅಲ್ಲಮಪ್ರಭು ಸ್ವಾಮಿಗಳು, ಶ್ರೀ ಸಿದ್ಧರಾಮ ಸ್ವಾಮಿಗಳು ಹಾಗೂ ಶ್ರೀ ಮಡಿವಾಳ ಸ್ವಾಮಿಗಳು ಜಯಶೀಲರಾದರು. ನಂತರ ಶ್ರೀಮಡಿವಾಳ ಸ್ವಾಮಿಗಳು ಗರಗಕ್ಕೆ ಹೋಗಿ ನೆಲೆಸಿದರೆ, ಶ್ರೀ ಅಲ್ಲಮ ಪ್ರಭುಗಳು ಹಾಗೂ ಶ್ರೀ ಸಿದ್ಧರಾಮ ಸ್ವಾಮಿಗಳು ಬೈಲಹೊಂಗಲ ತಾಲ್ಲೂಕಿನ ನಾಗನೂರಿಗೆ ಬಂದು ಭಕ್ತರ ಪ್ರಾರ್ಥನೆಯ ಮೇರೆಗೆ ಊರ ಹೊರಗಿನ ಕುಟೀರದಲ್ಲಿ ನೆಲೆಸಿ ಮಠವನ್ನು ಸ್ಥಾಪಿಸಿದರು.

ಪರಂಪರೆ: ೧. ಶ್ರೀ ಮ.ನಿ.ಪ್ರ. ಅಲ್ಲಮಪ್ರಭುಸ್ವಾಮಿಗಳು

೨. ಶ್ರೀ ಮ.ನಿ.ಪ್ರ. ಸಿದ್ಧರಾಮಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಸಿದ್ಧರಾಮಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಗುರುಸಿದ್ಧಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಗುರುಲಿಂಗಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ವೀರಭದ್ರಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಶಿವಬಸವಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಪ್ರಭುಸ್ವಾಮಿಗಳು
೯. ಶ್ರೀ ಮ.ನಿ.ಪ್ರ. ಸಿದ್ಧರಾಮಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಮಠದ ಸ್ಥಾಪನೆಗೆ ಶ್ರೀ ಅಲ್ಲಮಪ್ರಭು ಮತ್ತು ಶ್ರೀ ಸಿದ್ಧರಾಮ ಸ್ವಾಮಿಗಳು ಕಾರಣಕರ್ತರು. ಶ್ರೀ ಅಲ್ಲಮಪ್ರಭು ಸ್ವಾಮಿಗಳು ಅಧಿಕಾರ ವಹಿಸಿಕೊಂಡು ಮೊದಲನೆಯ ಪೀಠಾಧಿಪತಿ ಗಳಾಗಿ, ಧಾರ್ಮಿಕ ಕಾರ್ಯಗಳನ್ನು ಪ್ರಾರಂಭಿಸಿದರು. ಇವರ ಉತ್ತರಾಧಿಕಾರಿಗಳಾದ ಶ್ರೀ ಸಿದ್ಧರಾಮ ಸ್ವಾಮಿಗಳು ಧಾರ್ಮಿಕ ಕಾರ್ಯಗಳನ್ನು ನಡೆಸಿದರು.ಇವರು ಲಿಂಗೈಕ್ಯರಾದ ಮೇಲೆ ಇವರ ಸಮಾಧಿ ಸ್ಥಳದಲ್ಲಿ ಶ್ರೀ ಚೌಕಿಮಠವು ಸ್ಥಾಪನೆಗೊಂಡಿತು.

ಪರಂಪರೆಯ ಮೂರನೆಯ ಗುರುಗಳಾಗಿ ಶ್ರೀ ಸಿದ್ಧರಾಮಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಬೆಳೆಸಿದರು. ಇವರು ಪಾರಮಾರ್ಥಿಕದ ಬಗ್ಗೆ ಒಲವು ತೋರಿಸಿ ವೈರಾಗ್ಯಮೂರ್ತಿಗಳೆಂದು ಹೆಸರು ಪಡೆದರು. ಗುರುಗಳು ಕೌಪೀನ, ಕಿವಿ ಮುಚ್ಚಿಕೊಳ್ಳುವಂತಹ ಟೊಪ್ಪಿಗೆಯನ್ನು ಧರಿಸಿ ಹೆಗಲ ಮೇಲೆ ಶಲ್ಯ, ಕೈಲೊಂದು ಬೆತ್ತ ಹಿಡಿದು ನಿತ್ಯ ಕಂತೆ ಭಿಕ್ಷವನ್ನು ಮಾಡಿ ದಾಸೋಹ ಕ್ರಿಯೆಗಳನ್ನು ನಡೆಸುತ್ತಿದ್ದರು. ಇವರು ನಿತ್ಯ ಶಿವಾನುಭವ ಗೋಷ್ಠಿಯನ್ನು ನಡೆಸುವ ಮೂಲಕ ಸಮಾಜದಲ್ಲಿ ಸಹಬಾಳ್ವೆ ಮೂಡುವಂತೆ ಮಾಡಿದ್ದರು. ಗುರುಗಳ ಭಕ್ತಿಗೆ ಆಕರ್ಷಿತ ನಾಗಿದ್ದ ಸುಂಕದನೆಂಬ ಶ್ರೀಸಾಮಾನ್ಯನೊಬ್ಬ, ತನ್ನ ಕಾಯಕವಾದ ಕೃಷಿಯನ್ನು ಮರೆತು ಆಧ್ಯಾತ್ಮದಲ್ಲಿ ತೊಡಗಿಸಿ ಕೊಂಡನು. ಆಗ ಗುರುಗಳು ಕಾಯಕದ ಬಗ್ಗೆ ಉದಾಸೀನ ಉಚಿತವಲ್ಲ ಎಂದು ಉಪದೇಶಿಸಿ ವೃತ್ತಿಗೆ ತೊಡಗಿಸಿದರು. ಇದರಿಂದ ಸುಂಕದ ತನ್ನ ತೋಟವನ್ನು ಅಭಿವೃದ್ಧಿಪಡಿಸಿ ಹೆಚ್ಚು ಆದಾಯ ಬರುವಂತೆ ಮಾಡಿದನು. ಹೆಚ್ಚು ಹಣವು ಸಂಗ್ರಹಗೊಂಡ ಮೇಲೆ ಶ್ರೀಸಿದ್ಧರಾಮ ಸ್ವಾಮಿಗಳ ಮಾರ್ಗದರ್ಶನದಂತೆ ಸತ್ಕಾರ್ಯಗಳಿಗೆ ವಿನಿಯೋಗಿಸತೊಡಗಿದನು. ಸುಂಕದನು ಮೂಲ ಗುರುಗಳಾದ ಶ್ರೀ ಅಲ್ಲಮಪ್ರಭು ಸ್ವಾಮಿಗಳು ಮತ್ತು ಶ್ರೀ ಸಿದ್ಧರಾಮ ಸ್ವಾಮಿಗಳ ಸಮಾಧಿಸ್ಥಳದಲ್ಲಿ ಸ್ಥಾಪನೆಯಾಗಿದ್ದ ಚೌಕಿಮಠಕ್ಕೆ, ನೂತನ ಕಟ್ಟಡವನ್ನು ಕಟ್ಟಿಸಿ ಕೃತಾರ್ಥನಾದನು. ಅಂದು ಸ್ಥಾಪಿಸಿದ ಮಠ ಇಂದು 'ಚೌಕಿಮಠ 'ವೆಂದು ಹೆಸರು ಪಡೆದಿದೆ. ಸುಂಕದನು ಆಧ್ಯಾತ್ಮ ಒಲವುಳ್ಳವನಾಗಿದ್ದರಿಂದ ತನ್ನ ಸಮಾಧಿಯನ್ನು ಗುರುಗಳ ಗದ್ದುಗೆಯ ಎದುರೇ ಸ್ಥಾಪಿಸಬೇಕೆಂದು ಹಂಬಲಿಸಿದ್ದನು. ಈ ಕಾರಣಕ್ಕಾಗಿ ಅವನ ಸಮಾಧಿಯನ್ನು ಚೌಕಿಮಠದ ಒಳ ಆವರಣದಲ್ಲಿ ಗರ್ಭಗುಡಿಯ ಬಾಗಿಲಿನ ಎದುರು ನಿರ್ಮಿಸಲಾಗಿದೆ.

ಪರಂಪರೆಯ ನಾಲ್ಕು, ಐದು ಹಾಗೂ ಆರನೆಯ ಗುರುಗಳಾಗಿ ಅಧಿಕಾರಕ್ಕೆ ಬಂದ ಶ್ರೀ ಗುರುಸಿದ್ಧ ಸ್ವಾಮಿಗಳು, ಶ್ರೀ ಗುರುಲಿಂಗ ಸ್ವಾಮಿಗಳು ಹಾಗೂ ಶ್ರೀ ವೀರಭದ್ರ ಸ್ವಾಮಿಗಳು ಮಠದ ಕೀರ್ತಿಯನ್ನು ಹೆಚ್ಚಿಸಿದರು. ಇವರುಗಳ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಿಲ್ಲ. ಏಳನೆಯ ಗುರುಗಳಾಗಿ ತಮ್ಮ ಎಂಟು ವರ್ಷದ ಎಳೆಯ ವಯಸ್ಸಿನಲ್ಲೇ ಮಠದ ಅಧಿಕಾರವನ್ನು ವಹಿಸಿಕೊಂಡವರು 'ಮಹಾನ್ ಸಾಧಕರು,'ಕಾಯಕಯೋಗಿ'ಹಾಗೂ'ಮಹಾಪ್ರಸಾದಿ'ಎಂಬ ಬಿರುದುಗಳನ್ನು ಶಿಷ್ಯವರ್ಗ ದಿಂದ ಪಡೆದ ಶ್ರೀ ಶಿವಬಸವ ಸ್ವಾಮಿಗಳು. ಇವರು ನಾಗನೂರಿನ ಮಠದ•ಅಧಿಕಾರ ವಹಿಸಿಕೊಂಡ ಮೇಲೆ ಮಠವು ಪ್ರಬುದ್ಧಮಾನವಾಗಿ ಬೆಳೆಯಲು ಕಾರಣವಾಯಿತು.

ರಾಮದುರ್ಗ ತಾಲ್ಲೂಕಿನ ಹಿರೇಕೊಪ್ಪದಲ್ಲಿ ಶ್ರೀ ಅಡಿವಯ್ಯ ಮತ್ತು ಶ್ರೀಮತಿ ರುದ್ರಮ್ಮನವರ ಕಿರಿಯ ಪುತ್ರ

ರಾಗಿ ೧೮೮೯ರ ಡಿಸೆಂಬರ್ ಎಂಟರಂದು ಶ್ರೀ ಶಿವಬಸವ ಸ್ವಾಮಿಗಳು ಜನಿಸಿದರು. ಇವರು ಚಿಕ್ಕ ವಯಸ್ಸಿನಲ್ಲೇ ಅಥಣಿಯ ಶಿವಯೋಗಿಗಳಿಂದ ಆಶೀರ್ವಾದ ಪಡೆದ ಮಹಾತ್ಮರು.

ಪಟ್ಟಾಧಿಕಾರ: ಶ್ರೀ ವೀರಭದ್ರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ನಾಗನೂರಿನ ರುದ್ರಾಕ್ಷಿ ಮಠವು ಖಾಲಿ ಉಳಿದಿತ್ತು. ಈ ಮಠಕ್ಕೆ ಮಠಾಧ್ಯಕ್ಷರೊಬ್ಬರನ್ನು ನೇಮಕಮಾಡಲು ಗ್ರಾಮದ ಸಮಸ್ತ ಜನರು ತೀರ್ಮಾನಿಸಿ, ಗುರುಪಾದಯ್ಯನವರ ನೇತೃತ್ವದಲ್ಲಿ ಶ್ರೀ ಶಿವಬಸವ ಸ್ವಾಮಿಗಳನ್ನು ಕರೆತಂದರು.

ನಾಗನೂರಿಗೆ ಬಂದ ಶ್ರೀ ಶಿವಬಸವ ಸ್ವಾಮಿಗಳು ಹುಬ್ಬಳ್ಳಿಯ ರುದ್ರಾಕ್ಷಿ ಮಠದಲ್ಲಿ ವಿದ್ಯಾಭ್ಯಾಸ ಮಾಡಿ, ನಂತರ ಶಿವಯೋಗಮಂದಿರಕ್ಕೆ ವಿದ್ಯಾಭ್ಯಾಸಕ್ಕಾಗಿ ಆಗಮಿಸಿದರು. ಇಲ್ಲಿ ಹಾನಗಲ್ಲಿನ ಶ್ರೀ ಶಿವಕುಮಾರ ಸ್ವಾಮಿಗಳ ಮಾರ್ಗದರ್ಶನದಲ್ಲಿ ಹನ್ನೆರಡು ವರ್ಷಗಳ ಕಾಲ ಅಧ್ಯಯನ ನಡೆಸಿ, ಗುರುಕೃಪೆಗೆ ಪಾತ್ರರಾಗಿ ನಾಗನೂರು ಮಠಕ್ಕೆ ಆಗಮಿಸಿದರು. ಗುರುಗಳು ಆರ್ಥಿಕವಾಗಿ ಬರಿದಾಗಿದ್ದ ಮಠದ ಅಧಿಕಾರವನ್ನು ವಹಿಸಿಕೊಂಡು ಅಭಿವೃದ್ಧಿಪಡಿಸಲು ಮುಂದಾದರು. ಗುರುಗಳ ಅದಮ್ಯ ಚೇತನವನ್ನು ಗಮನಿಸಿದ ಗ್ರಾಮದ ಭಕ್ತರು ಅವರ ಎಲ್ಲಾ ಕಾರ್ಯಗಳಿಗೂ ಬೆಂಬಲ ವಾಗಿ ನಿಂತರು. ಚಿವಟ ಗುಂಡಿಯ ಗೌಡರು ಕೊಡಿಸಿದ ಐದುಎಕರೆ ಭೂಮಿಯಲ್ಲಿ ಬೇಸಾಯ ಪ್ರಾರಂಭಗೊಂಡು, ಮಠದಲ್ಲಿ ದಾಸೋಹ ಕ್ರಿಯೆಗೆ ಚಾಲನೆ ಕೊಟ್ಟರು. ಗ್ರಾಮಸ್ಥರು ಮಠದ ದಾಸೋಹಕ್ರಿಯೆಯನ್ನು ಗಮನಿಸಿ ತಾವು ಬೆಳೆದ ಬೆಳೆಯಲ್ಲಿ ಒಂದು ಪಾಲನ್ನು ಮಠಕ್ಕೆ ನೀಡಿ ನೆರವಾದರು.

ಶಿವಪೂಜಾನಿಷ್ಠರಾಗಿ, ಕಾಯಕಯೋಗಿಗಳಾಗಿದ್ದ ಶ್ರೀ ಶಿವಬಸವ ಸ್ವಾಮಿಗಳು ತಮ್ಮ ಸರಳ ಜೀವನದಿಂದ ಅಪಾರ ಭಕ್ತರನ್ನು ಒಲಿಸಿಕೊಂಡಿದ್ದರು. ಗುರುಗಳು ತಮ್ಮ ಸಾಧನೆಯ ಸಿದ್ಧಿಯಿಂದ ಮಠ ಮತ್ತು ಸಮಾಜವನ್ನು ಅಭಿ ವೃದ್ಧಿಪಡಿಸಿ ದರು.ಈ ಸಾಧನೆಯನ್ನು ಗಮನಿಸಿದ ನಾಗನೂರಿನ ಸುತ್ತಲ ಗ್ರಾಮಸ್ಥರು ಗುರುಗಳು ಕೈಗೊಳ್ಳುತ್ತಿದ್ದ ಕಾರ್ಯ ಗಳಿಗೆ ತಮ್ಮನ್ನು ಅರ್ಪಿಸಿಕೊಂಡರು. ಇದರ ಫಲವಾಗಿ ಮಠವು ಕೆಲವೇ ವರ್ಷಗಳಲ್ಲಿ ಬೃಹದಾಕಾರವಾಗಿ ಬೆಳೆಯಿತು. ಗ್ರಾಮೀಣ ಪ್ರದೇಶದ ಮಕ್ಕಳು ಕಲಿಕೆಗೆ ಅನುಕೂಲವಿಲ್ಲದೆ ವಿದ್ಯೆಯಿಂದ ವಂಚಿತರಾಗುತ್ತಿರುವುದನ್ನು ಗಮಿನಿಸಿ, ಬೆಳಗಾವಿ ಯಲ್ಲಿ ಹಾನಗಲ್ಲು ಶ್ರೀ ಕುಮಾರ ಸ್ವಾಮಿಗಳ ಸ್ಮರಣಾರ್ಥ ಪ್ರಸಾದ ನಿಲಯವನ್ನು ಪ್ರಾರಂಭಿಸಿದರು.

ಸ್ವಾತಂತ್ರ್ಯಹೋರಾಟಕ್ಕೆ ಬೆಂಬಲ: ರಾಷ್ಟ್ರೀಯ ಆಂದೋಲನದ ಜತೆಗೆ ತೊಡಗಿಸಿಕೊಂಡ ಶ್ರೀ ಶಿವಬಸವ ಸ್ವಾಮಿಗಳು ತಮ್ಮ ಮಠದಲ್ಲಿ ಹೋರಾಟಗಾರರಿಗೆ ಉಚಿತ ಆಹಾರ ಮತ್ತು ವಸತಿನೀಡಿ ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮ ಸಂಪೂರ್ಣ ಬೆಂಬಲವನ್ನು ನೀಡಿದರು. ಇಲ್ಲಿ ಹೋರಾಟ ತೀವ್ರವಾದಾಗ ಪರಿಸ್ಥಿತಿ ಕೈಮೀರುವ ಭಯದಿಂದ ಬ್ರಿಟಿಷ್ ಸರ್ಕಾರ ಪ್ರಸಾದ ನಿಲಯವನ್ನುಆಕ್ರಮಿಸಿಕೊಳ್ಳಲು ಹವಣಿಸಿ ತೀವ್ರಎಚ್ಚರಿಕೆಯನ್ನು ವಹಿಸಿತು. ಇದರಿಂದ ಗುರುಗಳು ಬೆಳಗಾವಿ ನಗರವನ್ನು ತೊರೆದು ಕೆಳದಿಯಲ್ಲಿ ಆರುತಿಂಗಳ ಕಾಲ ಅಜ್ಞಾತವಾಸವಿರಬೇಕಾಯಿತು. ಈ ಸಮಯದಲ್ಲಿ ಪ್ರಸಾದನಿಲಯ ಎಂದಿ ನಂತೆಯೇ ತನ್ನ ಕಾರ್ಯವನ್ನು ಮುಂದುವರೆಸಿತ್ತು.

ಗುರುಗಳು ತಮ್ಮ ದೀರ್ಘ ಆಯಸ್ಸನ್ನು ಸಮಾಜದ ಒಳಿತಿಗಾಗಿ ಮುಡುಪಿಟ್ಟರು. ಇದರ ಫಲವಾಗಿ ಕರ್ನಾಟಕ ವಿಶ್ವವಿದ್ಯಾನಿಲಯ ೧೯೬೯ರ ಡಿಸೆಂಬರ್ ಇಪ್ಪತ್ತೆರಡರಂದು ಗೌರವ ಡಾಕ್ಟರೇಟ್ ನೀಡಿ ಗೌರವಿಸಿತು.ಗುರುಗಳಿಗೆ ನೂರು ವರ್ಷ ತುಂಬಿದ ಸಡಗರದಲ್ಲಿ ಭಕ್ತರು ೧೯೭೦ರ ಫೆಬ್ರವರಿ ಎರಡರಿಂದ ಆರರವರೆಗೆ ಒಟ್ಟು ಐದು ದಿನಗಳ ಕಾಲ ಶತಮಾನೋತ್ಸವವನ್ನು ಆಚರಿಸಿದರು. ಈ ದಿನಗಳಲ್ಲಿ ಸಾಹಿತ್ಯಗೋಷ್ಠಿ, ಶಿವಾನುಭವಗೋಷ್ಠಿ, ಮಕ್ಕಳಗೋಷ್ಠಿ ಮಹಿಳಾ ಗೋಷ್ಠಿ ಹಾಗೂ ಜನಪದ ಗೋಷ್ಠಿಯನ್ನು ನಡೆಸಿ, ಐದು ದಿನಗಳ ಕಾಲ ಲಕ್ಷದೀಪೋತ್ಸವ, ತುಲಾಭಾರ, ಸಾಹಿತ್ಯ ಕೃತಿಗಳ ಪ್ರಕಟಣೆ ಹಾಗೂ 'ಶಿವಚೇತನ' ಎಂಬ ನೆನಪಿನ ಸಂಪುಟವನ್ನು ಬಿಡುಗಡೆ ಮಾಡುವ ಮೂಲಕ ವಿಶಿಷ್ಟವಾಗಿ ಆಚರಿಸಿ, ಗುರುವಂದನೆಯನ್ನು ಸಲ್ಲಿಸಿತು. ನಾಡಿನ ಎಲ್ಲಾ ವರ್ಗದ ಜನರಿಂದ ಗೌರವಿಸಲ್ಪಟ್ಟಿದ್ದ ಶ್ರೀ ಶಿವಬಸವ ಸ್ವಾಮಿಗಳು ೧೯೭೭ ಸೆಪ್ಟೆಂಬರ್ ಒಂಬತ್ತರಂದು ಲಿಂಗೈಕ್ಯರಾದರು.

ನೂರಹನ್ನೊಂದು ವರ್ಷಗಳಕಾಲ ಬದುಕಿ ಯುಗಪುರುಷರೆಂದು ಹೆಸರು ಪಡೆದಿದ್ದ ಶ್ರೀ ಶಿವಬಸವ ಸ್ವಾಮಿಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಪ್ರಭುಸ್ವಾಮಿಗಳನ್ನು ನೇಮಕ ಮಾಡಿಕೊಂಡು, ೧೯೭೪ರ ಮೇ ಮೂರರಂದು ಪಟ್ಟಾಧಿಕಾರದ ಅನುಗ್ರಹ ನೀಡಿದ್ದರು. ಶ್ರೀ ಪ್ರಭುಸ್ವಾಮಿಗಳು ಮಹಾರಾಷ್ಟ್ರದ ಕೋವಾಡ ಎಂಬಲ್ಲಿ ಶ್ರೀ ಬಸವಯ್ಯ ಮತ್ತು ಶ್ರೀಮತಿ ಗಿರಿಜಮ್ಮನವರ ಕಿರಿಯ ಪುತ್ರರಾಗಿ ಜನಿಸಿದರು. ಚಿಕ್ಕವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡು, ಯಮಕನಮರಡಿಯ ಹುಣಸಿಕೊಳ್ಳ ಮಠದ ಶ್ರೀ ಗುರುಸಿದ್ಧ ಸ್ವಾಮಿಗಳ ಸನ್ನಿಧಿಯಲ್ಲಿ ಶಿಕ್ಷಣ ಪಡೆದು, ಬೆಳಗಾವಿ ಹಾಗೂ ಬೆಂಗಳೂರಿನಲ್ಲಿ ವಿದ್ಯಾಭ್ಯಾಸವನ್ನು ಮಾಡಿ, ನಾಗನೂರು ರುದ್ರಾಕ್ಷಿ ಮಠದ ಅಧಿಕಾರವನ್ನು ವಹಿಸಿಕೊಂಡರು. ಗುರುಗಳು ತಮ್ಮ ಆಡಳಿತಾವಧಿಯಲ್ಲಿ ಬೆಳಗಾವಿ ನಗರದಲ್ಲಿ ವ್ಯಾಪಾರ ಸಂಕೀರ್ಣಗಳನ್ನು ನಿರ್ಮಿಸಿ ಮಠಕ್ಕೆ ಹೆಚ್ಚು ಆದಾಯ ಬರುವಂತೆ ಮಾಡಿದರು. ಗುರುಗಳು ಅಲ್ಪಾವಧಿಯಲ್ಲೇ ಅಪಾರವಾದುದ್ದನ್ನು ಸಾಧಿಸಿ, ೧೯೮೭ರ ಡಿಸೆಂಬರ್ ಒಂಬತ್ತರಂದು ಅಕಾಲದಲ್ಲಿ ಲಿಂಗೈಕ್ಯರಾದರು. ಹಿರಿಯ ಗುರುಗಳು ತಮ್ಮ ಉತ್ತರಾಧಿಕಾರಿಗಳ ಅಂತ್ಯಕ್ರಿಯೆಯನ್ನು ಮುಗಿಸಿ, ಶ್ರೀ ಸಿದ್ಧರಾಮ ಸ್ವಾಮಿ ಗಳನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿಕೊದಿಂಡರು.

ಬಾಗಲಕೋಟೆ ಜಿಲ್ಲೆಯ ಬೀಳಗಿ ಪಟ್ಟಣದ ಕಲ್ಮಠದ ಶ್ರೀ ಗುರುಪಾದ ದೇವರನ್ನು ಗದುಗಿನ ಶ್ರೀ ತೋಂಟದ ಸಿದ್ಧಲಿಂಗ ಸ್ವಾಮಿಗಳ ಅನುಮೋದನೆಯೊಂದಿಗೆ ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡರು. ಶ್ರೀ ಸಿದ್ಧರಾಮ ಸ್ವಾಮಿ ಗಳೆಂಬ ಅಭಿಧಾನದೊಂದಿಗೆ ೧೯೮೮ರ ಏಪ್ರಿಲ್ ಹನ್ನೊಂದರಂದು ರುದ್ರಾಕ್ಷಿ ಮಠದ ಒಂಬತ್ತನೆಯ ಗುರುಗಳನ್ನಾಗಿ ನೇಮಿಸಲಾಯಿತು. ಶ್ರೀ ಸಿದ್ಧರಾಮ ಸ್ವಾಮಿಗಳು ತಮ್ಮ ಹದಿಮೂರನೆಯ ವಯಸ್ಸಿನಲ್ಲಿ ಬೀಳಗಿ ಕಲ್ಮಠದ ಅಧಿಕಾರ ವನ್ನು ವಹಿಸಿಕೊಂಡು ಶಿವಯೋಗ ಮಂದಿರದಲ್ಲಿ ಆಧ್ಯಾತ್ಮ ಶಿಕ್ಷಣ ಮುಗಿಸಿ, ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ತತ್ತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದು, ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಹಿಂದಿ ಹಾಗೂ ಸಂಸ್ಕೃತ ದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರು. ಇವರು ವೀರಶೈವಧರ್ಮ ಹಾಗೂ ಸಾಹಿತ್ಯದ ಬಗ್ಗೆ ಅಪಾರ ಅಧ್ಯಯನವನ್ನು ನಡೆಸಿ ಪಾಂಡಿತ್ಯವನ್ನು ಗಳಿಸಿಕೊಂಡಿದ್ದರು. ಗುರುಗಳು ವಿದ್ಯಾಸಂಪನ್ನರಾಗಿ ನಯ,ವಿನಯತೆಯನ್ನು ಮೈಗೂಡಿಸಿಕೊಂಡು ಶ್ರೀ ಶಿವಬಸವ ಸ್ವಾಮಿಗಳ ಕರಕಮಲಸಂಜಾತರಾಗಿ ಬೆಳೆದು, ಶ್ರೇಷ್ಠ ಗುಣಗಳಿಂದ ಮಠ ಮತ್ತು ಸಮಾಜವನ್ನು ಪ್ರಗತಿ ದಾಯಕವಾಗಿ ಬೆಳೆಸುವಲ್ಲಿ ಮುಂದಾಗಿದ್ದಾರೆ. ಹಿರಿಯ ಗುರುಗಳು ಲಿಂಗೈಕ್ಯರಾದ ಮೇಲೆ ಮಠವನ್ನು ಸರ್ವಾಂಗೀಣವಾಗಿ ಅಭಿವೃದ್ಧಿಪಡಿಸಿದ್ದಾರೆ. ಶ್ರೀ ಶಿವಬಸವಸ್ವಾಮಿಗಳ ಅಪೇಕ್ಷೆಯ ಮೇರೆಗೆ ೧೯೯೧ರಲ್ಲಿ 'ವೀರಶೈವ ಅಧ್ಯಯನ ಅಕಾಡೆಮಿ' ಯನ್ನು ಸ್ಥಾಪಿಸಿ ಅನೇಕ ಮೌಲಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ೧೯೯೫ರಲ್ಲಿ 'ಲಿಂಗಾಯಿತ ಸಂಶೋಧನ ಕೇಂದ್ರ ಗ್ರಂಥಾ ಲಯ'ವನ್ನು ಸ್ಥಾಪಿಸಿ, ವೀರಶೈವಧರ್ಮ ಮತ್ತು ಸಾಹಿತ್ಯವನ್ನು ಕುರಿತು ಅಧ್ಯಯನ ಕೈಗೊಳ್ಳುವವರಿಗೆ ನೆರವಾಗಿದ್ದಾರೆ.

ಶೈಕ್ಷಣಿಕ ಸಾಧನೆ: ಸಮಾಜವು ಅಭಿವೃದ್ಧಿಯಾಗಬೇಕಾದರೆ ಜನರು ವಿದ್ಯಾವಂತರಾಗಬೇಕು ಎಂಬುದನ್ನು ಮನಗಂಡ ಶ್ರೀಶಿವಬಸವ ಸ್ವಾಮಿಗಳು, ಹಳ್ಳಿಗಾಡಿನ ಬಡಮಕ್ಕಳಿಗೆ ಉನ್ನತಮಟ್ಟದ ವಿದ್ಯಾಭ್ಯಾಸ ಸಿಗದಿದ್ದನ್ನು ಗಮನಿಸಿದರು. ಇದಕ್ಕಾಗಿ ಬೆಳಗಾವಿಯಲ್ಲಿ ವಿದ್ಯಾರ್ಥಿಗಳಿಗಾಗಿ ೧೯೪೩ರಲ್ಲಿ ಪ್ರಸಾದನಿಲಯವನ್ನು ಸ್ಥಾಪಿಸಿದರು. ಪ್ರಾರಂಭದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಸಂಚರಿಸಿ ಕಲಿಯುವ ಮಕ್ಕಳ ಮನೆಮನೆಗೆ ಭೇಟಿಕೊಟ್ಟು, ಪ್ರಸಾದನಿಲಯದಲ್ಲಿ ಆಶ್ರಯ ಪಡೆದುಕೊಳ್ಳಲು ಪ್ರೇರೆಸಿದರು. ಮೊದಲು ಐವತ್ತಾರು ವಿದ್ಯಾರ್ಥಿಗಳು ಇದ್ದು, ಈಗ ೮೦೦ಕ್ಕೂ ಹೆಚ್ಚು ವಿದ್ಯಾರ್ಥಿಗಳು ಆಶ್ರಯ ಪಡೆದಿದ್ದಾರೆ. ಈ ವಿದ್ಯಾರ್ಥಿನಿಲಯ ಬೆಳಗಾವಿ ಜಿಲ್ಲೆಯಲ್ಲೇ ಅಲ್ಲದೆ ಕರ್ನಾಟಕದಲ್ಲೂ ಹೆಸರು ಪಡೆದಿವೆ. ಏಕಕಾಲದಲ್ಲಿ ಒಂದುಸಾವಿರ ಜನರು ಪ್ರಸಾದಕ್ಕೆ ಕುಳಿತುಕೊಳ್ಳುವ ವ್ಯವಸ್ಥೆಯೊಂದಿಗೆ ಕಟ್ಟಡವು ೧೯೪೮ರಲ್ಲಿ ನಿರ್ಮಾಣ ಗೊಂಡಿತು. ೧೯೫೧ ರ ಸೆಪ್ಟೆಂಬರ್ ಹತ್ತರಂದು ಜಯಚಾಮರಾಜೇಂದ್ರ ಒಡೆಯರಿಂದ ಉದ್ಘಾಟನೆ ಮಾಡಲ್ಪಟ್ಟಿತು.

ದಿನ ಕಳೆದಂತೆ ಬೆಳಗಾವಿ ನಗರದ ಹೃದಯ ಭಾಗದಲ್ಲಿ ಸ್ಥಾಪನೆಯಾಗಿದ್ದ ವಿದ್ಯಾರ್ಥಿನಿಲಯವು ಸಾಕಾಗದೆ ಹೋದಾಗ, ನಗರದ ಹೊರಭಾಗದಲ್ಲಿ ಹದಿನಾರುಏಕರೆ ಭೂಮಿಯಲ್ಲಿ ಕಟ್ಟಡಗಳ ಸಮುಚ್ಚಯವು ನಿರ್ಮಾಣಗೊಂಡು ಒಂದು ಹೊಸ ಬಡಾವಣೆಯಾಗಿ ಬೆಳೆಯಿತು. ಮಠದ ವಿದ್ಯಾರ್ಥಿನಿಲಯದ ಸುತ್ತ ನಗರ ಬೆಳೆದಾಗ ಇಲ್ಲಿನ ನಗರಪಾಲಿಕೆ

ಶಿವಬಸವ ನಗರ ಎಂದು ನಾಮಕರಣ ಮಾಡಿ ಕೃತಾರ್ಥವಾಗಿದೆ.

ಪ್ರಸಾದ ನಿಲಯದಡಿ ಬೆಳಗಾವಿ ನಗರದಲ್ಲಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಹಲವು ವಿದ್ಯಾಸಂಸ್ಥೆಗಳನ್ನು ಶ್ರೀ ಶಿವಬಸವ ಸ್ವಾಮಿಗಳು ಪ್ರಾರಂಭಿಸಿದರು. ಇಲ್ಲಿ ಶ್ರೀ ಕುಮಾರೇಶ್ವರ ಪ್ರಸಾದನಿಲಯ, ಮಹಿಳಾ ವಸತಿಗೃಹ, ಪ್ರಾಥಮಿಕಶಾಲೆ, ಮಾಧ್ಯಮಿಕ ಶಾಲೆ, ಪ್ರಭುದೇವ ಸಭಾಮಂಟಪವನ್ನು ಸ್ಥಾಪಿಸಿ, ಶಾಲಾಕಾಲೇಜುಗಳ ವಿದ್ಯಾರ್ಥಿನಿಯರಿಗೆ ಹಾಗೂ ನೌಕರಿಯಲ್ಲಿರುವ ಮಹಿಳೆಯರಿಗೆ ಆಶ್ರಯ ಕೊಟ್ಟಿದ್ದಲ್ಲದೆ, ಲಿಂಗರಾಜಕಾಲೇಜು, ಆರ್.ಎಲ್.ಕಾನೂನು ಕಾಲೇಜು, ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತಶಾಲೆ. ಶ್ರೀ ಸಿದ್ಧರಾಮೇಶ್ವರ ವಸತಿಶಾಲೆ, ಎಸ್.ಎಸ್.ಇ.ಟ್ರಸ್ಟ್ ಕೈಗಾರಿಕಾ ತರಬೇತಿ ಸಂಸ್ಥೆ, ಆರ್.ಎಸ್.ಶೆಟ್ಟಿ ಪಾಲಿಟೆಕ್ನಿಕ್, ಅಂಗನವಾಡಿ ಕಾರ್ಯಕರ್ತೆಯರಿಗಾಗಿ ತರಬೇತಿಕೇಂದ್ರ, ಕಿವುಡ ಮತ್ತು ಮೂಕಮಕ್ಕಳಿಗೆ ವಸತಿಶಾಲೆಗಳು ಸೇರಿದಂತೆ ಗ್ರಾಮಾಂತರ ಮಟ್ಟದಲ್ಲಿ ಪ್ರೌಢಶಾಲೆಗಳನ್ನು ತೆರೆದು ಗ್ರಾಮಾಂತರ ಮಕ್ಕಳಿಗೆ ಅನುಕೂಲ ಮಾಡಿಕೊಡುವುದರ ಜತೆಗೆ, ಇತ್ತೀಚೆಗೆ ಉನ್ನತ ಶಿಕ್ಷಣಕೇಂದ್ರಗಳನ್ನು ಸ್ಥಾಪನೆ ಮಾಡಿದ್ದಾರೆ.

ಸಾಹಿತ್ಯ ಸೇವೆ: ವೀರಶೈವ ಅಧ್ಯಯನ ಅಕಾಡೆಮಿಯನ್ನು ಪ್ರಾರಂಭಿಸಿ ವೀರಶೈವ ಪ್ರಾಚೀನ ಸಾಹಿತ್ಯಮಾಲೆ, ವೀರಶೈವ ಆಧುನಿಕ ಸಾಹಿತ್ಯಮಾಲೆ, ವೀರಶೈವ ಅನುವಾದ ಸಾಹಿತ್ಯಮಾಲೆ, ಜನಪ್ರಿಯ ಸಾಹಿತ್ಯಮಾಲೆ, ಪಿಎಚ್.ಡಿ. ಪ್ರಬಂಧ ಮಾಲೆ ಈ ರೀತಿ ಐದು ಪ್ರಕಾರಗಳಲ್ಲಿ ಮೌಲಿಕಕೃತಿಗಳನ್ನು ಪ್ರಕಟಿಸುವ ಹೊಣೆಗಾರಿಕೆಯನ್ನು ವಹಿಸಿಕೊಂಡಿದೆ. ಈವರೆಗೆ ಏಕೋತ್ತರ ಶತಸ್ಥಲ (ಸಂ:ಪ್ರೊ.ಸಂ.ಶಿ.ಭೂಸನೂರಮಠ) ವೀರಶೈವಾಮೃತ ಪುರಾಣ ಭಾಗ ೧.ಮತ್ತು ೨.(ಸಂ:ಡಾ.ಆರ್. ಸಿ.ಹಿರೇಮಠ), ಕರ್ನಾಟಕದಲ್ಲಿ ಸತಿಪದ್ಧತಿ (ಲೇಖಕರು: ಡಾ.ಬಿ.ಎಸ್.ಶೇತೆ), ಆರನೆಯ ವಿಕ್ರಮಾದಿತ್ಯನ ಶಾಸನಗಳು (ಲೇಖಕರು:ಡಾ.ಜೆ.ಎಂ.ನಾಗಯ್ಯ), ದಾನದಾಸೋಹಿ ದಾನಮ್ಮ (ಲೇಖಕರು:ಶಾಂತಾದೇವಿ ಮಾಳವಾಡ), ಸಂಗಮ ಸ್ಥಳೀಚೆ ಜಳ (ಬಸವಣ್ಣನವರ ವಚನಗಳ ಮರಾಠಿ ಅನುವಾದ-ಪ್ರೊ.ಕೆ.ಬಿ.ನಿಕುಂಬ) ಮುಂತಾದ ಕೃತಿಗಳನ್ನು ಪ್ರಕಟಿಸಲಾಗಿದೆ.

ಈಗಿನ ಗುರುಗಳಾದ ಶ್ರೀ ಸಿದ್ಧರಾಮ ಸ್ವಾಮಿಗಳು ಸಾಹಿತ್ಯಾಸಕ್ತಿಯುಳ್ಳವರು. ಸಂಶೋಧನೆಯ ಮನೋಭಾವ ವನ್ನು ಬೆಳೆಸಿಕೊಂಡ ಇವರು ವೀರಶೈವ ಸಾಹಿತ್ಯ ಹಾಗೂ ಸಂಸ್ಕೃತಿಗಳನ್ನು ಉಳಿಸಿ ಬೆಳೆಸುವ ಹಂಬಲದೊಂದಿಗೆ ಲಿಂಗಾ ಯಿತ ಸಂಶೋಧನ ಕೇಂದ್ರ ಗ್ರಂಥಾಲಯವನ್ನು ಸ್ಥಾಪಿಸಿದ್ದಾರೆ. ಹಿರಿಯರಾದ ಡಾ.ಎಸ್.ಆರ್.ಗುಂಜಾಳರವರ ನೇತೃತ್ವ ದಲ್ಲಿ ಈ ಸಂಸ್ಥೆಯನ್ನು ಹೆಚ್ಚು ಅರ್ಥಪೂರ್ಣವಾಗಿ ಬೆಳೆಸತೊಡಗಿದ್ದಾರೆ. ತಾಳೆಗರಿ ಮತ್ತು ಹಸ್ತಪ್ರತಿಗಳ ಸಂಗ್ರಹ, ೧೨೦೦ ಸಂಶೋಧನಾ ಲೇಖನಗಳ ಸೂಚಿಯನ್ನು ಸಿದ್ಧಪಡಿಸಿ ಪ್ರಕಟಿಸಲಾಗಿದೆ. ಡಾ.ಗುಂಜಾಳ ಮತ್ತು ವಿ.ಡಿ. ರಾಜನಾಯಕರ ಪರಿಶ್ರಮ ದಿಂದ ಈ ಸೂಚಿಯು ಸಂಶೋಧಕರಿಗೆ ಮಾರ್ಗದರ್ಶಿಯಾಗಿ, ವಿದ್ವಾಂಸರಿಂದ ಮೆಚ್ಚುಗೆಗೆ ಪಾತ್ರವಾಗಿದೆ. ಸಂಶೋಧಕರು, ವಿದ್ವಾಂಸರು, ಹವ್ಯಾಸಿ ಓದುಗರ ಗಮನ ಸೆಳೆಯುವಲ್ಲಿ ಈ ಗ್ರಂಥಾಲಯ ಯಶಸ್ವಿ ಯಾಗಿದೆ. ಸಂದರ್ಭಕ್ಕನುಗುಣವಾಗಿ ಪುಸ್ತಕ ಪ್ರದರ್ಶನವನ್ನು ಏರ್ಪಡಿಸಿ, ಅನೇಕ ಮೌಲಿಕ ಕೃತಿಗಳು ಪ್ರಚಾರವಾಗಲು ನೆರವಾಗಿದ್ದಾರೆ. ಈ ಸಂಸ್ಥೆಯ ಸ್ಥಾಪನೆಯಿಂದ ವೀರಶೈವ ಧರ್ಮದ ಅಧ್ಯಯನ ಕೈಗೊಳ್ಳುವ ವಿದ್ವಾಂಸರಿಗೆ ನೆರವಾಗಿದೆ. ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಗ್ರಂಥಾಲಯವೆಂದು ಮಾನ್ಯತೆ ಪಡೆದಿದೆ.

ಧಾರ್ಮಿಕ ಕಾರ್ಯಗಳು: ಶ್ರೀ ಶಿವಬಸವ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಜನರನ್ನು ಭಕ್ತಿ ಮಾರ್ಗಕ್ಕೆ ತರುವ ಉದ್ದೇಶದಿಂದ, ಈ ಹಿಂದೆ ಮಠದಲ್ಲಿ ನಡೆಯುತ್ತಿದ್ದ ಜಾತ್ರೆಯನ್ನು ವೈಭವವಾಗಿ ನಡೆಸಲು ಪ್ರಾರಂಭಿಸಿದರು. ಜಾತ್ರೆ ಯನ್ನು ಕೇವಲ ಧಾರ್ಮಿಕ ಆಚರಣೆಯಾಗಿ ಮಾಡದೆ, ಗ್ರಾಮೀಣ ಪ್ರದೇಶದ ಜನಪದ ಕ್ರೀಡೆಗಳ ಸ್ಪರ್ಧೆಗಳನ್ನು ಏರ್ಪ ಡಿಸಿ, ಕೃಷಿ ವಸ್ತುಪ್ರದರ್ಶನ, ಶಿವಾನುಭವಗೋಷ್ಠಿ ಹಾಗೂ ವಿದ್ವಾಂಸರಿಂದ ಉಪನ್ಯಾಸಗಳನ್ನು ಏರ್ಪಡಿಸಿ ಜನರಿಗೆ ಧಾರ್ಮಿಕ ಕಾರ್ಯಕ್ರಮಗಳ ಜೊತೆಗೆ ಬುದ್ಧಿ ವಿಕಾಸಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದರು. ಈಗಲೂ ನಾಗನೂರಿನ ಮೂಲಮಠದಲ್ಲಿ ವರ್ಷಕ್ಕೊಮ್ಮೆ ಜಾತ್ರೆಯು ಅದ್ದೂರಿಯಾಗಿ ನಡೆಯುತ್ತಿದೆ.

ನಾಗನೂರಿನ ಮೂಲ ಮಠದಲ್ಲಿ ಕರ್ತೃಗುರುಗಳು ಹಾಗೂ ನಂತರದ ಐದುಜನ ಗುರುಗಳ ಗದ್ದುಗೆಗಳು

ನಿರ್ಮಾಣಗೊಂಡಿವೆ. ಬೆಳಗಾವಿಯ ಶಿವಬಸವ ನಗರದಲ್ಲಿ ಸ್ಥಾಪನೆಯಾಗಿರುವ ಮಠದ ಸಮುಚ್ಚಯದಲ್ಲಿ ಶ್ರೀ ಪ್ರಭು ಸ್ವಾಮಿಗಳ ಗದ್ದುಗೆ ಮತ್ತು ಕಾಯಕಯೋಗಿ, ಮಹಾದಾಸೋಹಿ ಶ್ರೀ ಶಿವಬಸವ ಸ್ವಾಮಿಗಳ ಗದ್ದುಗೆಗಳು ಇವೆ. ಇವು ಗಳಿಗೆ ನಿತ್ಯಪೂಜೆ ಹಾಗೂ ಹಿರಿಯ ಗುರುಗಳ ಸ್ಮರಣೋತ್ಸವ ಕಾರ್ಯಕ್ರಮಗಳು ಮಠದಲ್ಲಿ ನಡೆಯುತ್ತಿವೆ.

ವಿಳಾಸ: ಶ್ರೀ ಮ.ನಿ.ಪ್ರ. ಸಿದ್ಧರಾಮ ಸ್ವಾಮಿಗಳು, ಶ್ರೀ ನಾಗನೂರು ರುದ್ರಾಕ್ಷಿಮಠ, ಶಿವಬಸವನಗರ,ಬೆಳಗಾವಿ-೫೯೦೦೧೦.

ಕಾರಂಜಿಮಠ: ಬೆಳಗಾವಿ ನಗರದ ರವಿವಾರಪೇಟೆಯಲ್ಲಿ ಸ್ಥಾಪನೆಯಾಗಿರುವ ಕಾರಂಜಿ ಮಠದ ಮೂಲಸ್ಥಾನ ಬೆಳಗಾವಿ ಜಿಲ್ಲೆಯ ಶಹಾಪುರ. ಮಠದ ಕಾರ್ಯಚಟುವಟಿಕೆಗಳು ಬೆಳಗಾವಿ ನಗರದ ರವಿವಾರಪೇಟೆಯ ಮಠಕ್ಕೆ ಕಾರಣಾಂತರದಿಂದ ಸ್ಥಳಾಂತರಗೊಂಡು, ಧಾರ್ಮಿಕ ಮತ್ತು ಆಧ್ಯಾತ್ಮಿಕ ಕೇಂದ್ರವಾಗಿ ರೂಪುಗೊಂಡಿದೆ.

ಮಠ ಸ್ಥಾಪನೆ: ವಿರಕ್ತ ಸಂಪ್ರದಾಯದ ಈ ಮಠದ ಸ್ಥಾಪನೆ ಹಾಗೂ ಸ್ಥಾಪಕರ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯ ವಿಲ್ಲ. ಪುರಾತನ ಕಾಲದಲ್ಲಿ ಪ್ರಾರಂಭಗೊಂಡ ಈ ಮಠದ ಪರಂಪರೆಯಲ್ಲಿ ಅನೇಕ ಗುರುಗಳು ಅಧಿಕಾರವನ್ನು ನಡೆಸಿ ವೀರಶೈವ ಧರ್ಮವನ್ನು ಬೆಳೆಸಿದ್ದಾರೆ. ಶಹಾಪುರದಿಂದ ಇಲ್ಲಿಗೆ ವರ್ಗಾವಣೆಗೊಂಡರೂ ಮೂಲ ಮಠದಲ್ಲಿ ಧಾರ್ಮಿಕ ಕಾರ್ಯಗಳು ಎಂದಿನಂತೆ ನಡೆಯುತ್ತಿವೆ. ಗುರುಗಳು ಮೂಲಮಠಕ್ಕೆ ಸಂದರ್ಭಕ್ಕನುಸಾರವಾಗಿ ಭೇಟಿ ನೀಡಿ, ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಂಡು ಭಕ್ತರಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಮುರುಘೇಂದ್ರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಗುರುಸಿದ್ಧಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಗುರುಸಿದ್ಧಸ್ವಾಮಿಗಳು

ಆಧಾರಗಳ ಕೊರತೆಯಿಂದ ಮಠದ ಪರಂಪರೆಯ ಗುರುಗಳ ಕೆಲವು ಹೆಸರುಗಳನ್ನು ಮಾತ್ರ ದಾಖಲಿಸಲಾಗಿದೆ. ಪರಂಪರೆ ಯ ಹಿಂದಿನ ಗುರುಗಳ ಬಗ್ಗೆ ಹೆಚ್ಚು ಮಾಹಿತಿ ಲಭ್ಯವಿಲ್ಲ. ಶ್ರೀ ಮುರುಘೇಂದ್ರ ಸ್ವಾಮಿಗಳು ಮತ್ತು ಶ್ರೀ ಗುರುಸಿದ್ಧ ಸ್ವಾಮಿಗಳ ಗದ್ದುಗೆಗಳು ಶಹಾಪುರದಲ್ಲಿ ಸ್ಥಾಪನೆಯಾಗಿವೆ. ಈ ಹಿಂದೆ ಅಧಿಕಾರ ನಡೆಸಿದ ಶ್ರೀ ಬಸವಲಿಂಗ ಸ್ವಾಮಿಗಳು ಮೂಲಮಠ ಮತ್ತು ಇಲ್ಲಿನ ಮಠವನ್ನು ಅಭಿವೃದ್ಧಿಪಡಿಸಿ ಹೆಚ್ಚು ಆದಾಯ ಬರುವಂತೆ ಮಾಡಿದ್ದರು. ಗುರುಗಳು ೧೯೬೫ರ ಸುಮಾರಿನಲ್ಲಿ ಲಿಂಗೈಕ್ಯರಾದರು. ನಂತರ ಎಂಟು ವರ್ಷದ ಶ್ರೀ ಗುರುಸಿದ್ಧ ಸ್ವಾಮಿಗಳನ್ನು ಉತ್ತರಾಧಿಕಾರಿ ಗಳನ್ನಾಗಿ ನೇಮಕ ಮಾಡಲಾಯಿತು.ಉತ್ತರಾಧಿಕಾರಿಗಳು ನಂತರ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಮುಗಿಸಿ, ಕಾಶಿಯ ಬನಾರಸ್ ವಿಶ್ವವಿದ್ಯಾ ನಿಲಯದಲ್ಲಿ ಸಂಸ್ಕೃತ ಎಂ.ಎ. ಪದವಿ ಪಡೆದು ಮಠಕ್ಕೆ ಆಗಮಿಸಿದರು. ೧೯೯೧ರಂದು ಶ್ರೀ ಗುರುಸಿದ್ಧ ಸ್ವಾಮಿಗಳು ಎಂಬ ಅಭಿಧಾನದೊಂದಿಗೆ ಮಠದ ಆಡಳಿತವನ್ನು ವಹಿಸಿಕೊಂಡರು. ಕ್ರಿಯಾಶೀಲರು, ಪ್ರಗತಿಪರ ಚಿಂತಕರೂ ಆದ ಶ್ರೀಗುರುಸಿದ್ಧ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ, ವೀರಶೈವ ಧರ್ಮವನ್ನು ಬೆಳೆಸುವ ನಿಟ್ಟಿನಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಶಹಾಪುರದ ಮೂಲ ಮಠದಲ್ಲಿ ಹಿರಿಯ ಗುರುಗಳ ಗದ್ದುಗೆಗಳು ಸ್ಥಾಪನೆಯಾಗಿದ್ದು, ಅವುಗಳಿಗೆ ನಿತ್ಯ ಪೂಜೆ ನಡೆಸಲಾಗುತ್ತಿದೆ. ಬೆಳಗಾವಿ ಮಠದಲ್ಲಿ ತೋರುಗದ್ದುಗೆಯನ್ನು ಸ್ಥಾಪಿಸಿಕೊಂಡು ನಿತ್ಯ ಪೂಜೆ ಮಾಡಲಾಗುತ್ತಿದೆ. ಶಹಾಪುರದಲ್ಲಿ ಅಕ್ಕನಬಳಗ ರಚನೆಯಾಗಿದ್ದು, ಮಠದ ಅಧೀನದಲ್ಲಿ ತನ್ನ ಕಾರ್ಯ ಚಟುವಟಿಕೆ ಗಳನ್ನು ನಡೆಸುತ್ತಿರುವುದಲ್ಲದೆ, ಪುರಾಣ ಪ್ರವಚನಗಳು, ಕೀರ್ತನೆ ಮತ್ತು ಉಪನ್ಯಾಸಗಳನ್ನು ಏರ್ಪಡಿಸಿ ಧಾರ್ಮಿಕ ವಾತಾವರಣವನ್ನು ಸೃಷ್ಟಿಸಿದೆ. ಮೂಲ ಮಠದ ಆವರಣದಲ್ಲಿ ಸಾರ್ವಜನಿಕರಿಗೆ ಅನುಕೂಲವಾಗಲೆಂದು ಕಲ್ಯಾಣಮಂಟಪ ವನ್ನು ಸ್ಥಾಪಿಸಲಾಗಿದೆ.

ಕಾರಂಜಿ ಮಠಕ್ಕೆ ಶಹಾಪುರ ಹಾಗೂ ಬೆಳಗಾವಿ ನಗರದಲ್ಲಿ ಆಸ್ತಿ ಇದ್ದು, ಇದನ್ನು ಅಭಿವೃದ್ಧಿಪಡಿಸಿ ಮಠಕ್ಕೆ

ಆದಾಯದ ಮೂಲವನ್ನಾಗಿ ಮಾಡಿಕೊಳ್ಳಲಾಗಿದೆ. ಇದರಿಂದ ಬರುವ ಆದಾಯವನ್ನು ಬಳಸಿಕೊಂಡು ಧಾರ್ಮಿಕ ಕಾರ್ಯಗಳು ಹಾಗೂ ಅನ್ನದಾಸೋಹವನ್ನು ನಡೆಸುತ್ತಾ ಮಠವನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಗುರುಸಿದ್ಧ ಸ್ವಾಮಿಗಳು, ಶ್ರೀ ಕಾರಂಜಿಮಠ, ರವಿವಾರಪೇಟೆ, ಬೆಳಗಾವಿ.

ಕಲ್ಮಠ (ಹಿರೇಮಠ): ಬೆಳಗಾವಿ ನಗರದ ರವಿವಾರಪೇಟೆಯಲ್ಲಿರುವ ಶ್ರೀ ಕಲ್ಮಠವು ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದೆ. ಕೇದಾರ ಪೀಠದ ಶಾಖಾಮಠವಾಗಿರುವ ಈ ಮಠವು ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿದೆ. ಮಠದ ಕಟ್ಟಡವನ್ನು ಕಲ್ಲುಗಳಿಂದ ನಿರ್ಮಾಣ ಮಾಡಿದ್ದರಿಂದ ಈ ಮಠಕ್ಕೆ 'ಶ್ರೀ ಕಲ್ಮಠ' ಎಂಬ ಹೆಸರು ಬಂದಿದೆ.

ಅನೇಕ ವರ್ಷಗಳಿಂದ ಮಠವು ಉತ್ತರಾಧಿಕಾರಿಗಳಿಲ್ಲದೆ ಖಾಲಿ ಉಳಿದಿತ್ತು. ಈಗ ಶ್ರೀ ಶಶಿಧರ ಶಿವಾಚಾರ್ಯ ಸ್ವಾಮಿಗಳು ೧೯೯೧ರ ಮೇ ತಿಂಗಳಿನಲ್ಲಿ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದಾರೆ. ವಿಶಾಲವಾದ ಮಠದ ಆವರಣದಲ್ಲಿ ಕರ್ತೃಗುರುಗಳೆಂದು ಹೇಳಲಾಗುವ ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳ ಗದ್ದುಗೆ ಸ್ಥಾಪನೆಯಾಗಿದೆ. ಕರ್ತೃ ಗುರುಗಳು ಹಾಗೂ ಪರಂಪರೆಯ ಗುರುಗಳ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಈ ಮಠದ ಅಭಿವೃದ್ಧಿಗೆ ಔರಂಗಜೇಬನ ಕಾಲದಲ್ಲಿ ಹೆಚ್ಚು ನೆರವು ದೊರೆತಿದೆ. ಅಂದು ನೀಡಿದ ಇನಾಂ ಭೂಮಿಯ ಬಗ್ಗೆ ಮಠದಲ್ಲಿ ಆಧಾರಗಳು ದೊರೆತಿವೆ. ಈ ಮಠದ ಸುತ್ತಮುತ್ತ ಮಳಿಗೆಗಳಿದ್ದು, ಮಠದ ಆದಾಯಕ್ಕೆ ಮೂಲವಾಗಿದೆ.

ಮಠದಲ್ಲಿ ಗದ್ದುಗೆ ಪೂಜೆ ಹಾಗೂ ಹಿರಿಯ ಗುರುಗಳ ಸ್ಮರಣೆ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಭಕ್ತರ ಮನೆಯಲ್ಲಿ ನಡೆಯುವ ಧಾರ್ಮಿಕ ಕ್ರಿಯಾದಿಗಳಲ್ಲಿ ಪಾಲ್ಗೊಂಡು ಸಂಸ್ಕಾರವನ್ನು ನೀಡಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಶಶಿಧರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕಲ್ಮಠ (ಹಿರೇಮಠ), ಕಲ್ಮಠದ ರಸ್ತೆ, ಬೆಳಗಾವಿ.

ಬಸವಗುರುಕುಲಮಠ: ಬೆಳಗಾವಿ ನಗರದ ಆಂಜನೇಯ ನಗರ ಬಡಾವಣೆಯಲ್ಲಿ ಸ್ಥಾಪನೆಯಾಗಿರುವ ಶ್ರೀ ಬಸವಗುರುಕುಲಮಠವು ಇಲ್ಲಿನ ಧಾರ್ಮಿಕ ಚಟುವಟಿಕೆಗಳ ಕೇಂದ್ರವಾಗಿ ಬೆಳೆದಿದೆ. ೧೯೯೬ರಲ್ಲಿ ಸ್ಥಾಪನೆಯಾದ ಗುರುಕುಲವು ಶರಣರ ತತ್ತ್ವಗಳನ್ನು ಪ್ರಚಾರಪಡಿಸಿ ಸಂಸ್ಕಾರವಂತ ಸಮಾಜವನ್ನು ರೂಪಿಸುವ ಉದ್ದೇಶವನ್ನಿಟ್ಟುಕೊಂಡಿದೆ.

ಜಮಖಂಡಿ ತಾಲ್ಲೂಕಿನ ಶಿರಗುಪ್ಪ ಗ್ರಾಮದಲ್ಲಿ ೧೯೫೭ರಲ್ಲಿ ಜನಿಸಿದ ಶ್ರೀ ಬಸವಪ್ರಭು ಸ್ವಾಮಿಗಳು ಜಮಖಂಡಿಯಲ್ಲಿ ವಿದ್ಯಾಭ್ಯಾಸ ಮುಗಿಸಿ ಆಧ್ಯಾತ್ಮವನ್ನು ಮೈಗೂಡಿಸಿಕೊಂಡರು. ಇವರು ಪ್ರೌಢಾವಸ್ಥೆಗೆ ಬಂದ ಮೇಲೆ ಸ್ವತಂತ್ರವಾಗಿ ಮಠವನ್ನು ಸ್ಥಾಪಿಸಬೇಕೆಂಬ ಹಂಬಲ ತೊಟ್ಟು, ಶ್ರೀ ಬಸವಗುರುಕುಲವನ್ನು ಸ್ಥಾಪಿಸಿದರು.

ಶಿಕ್ಷಣ ಮತ್ತು ಸಾಹಿತ್ಯ ಸೇವೆ: ಶ್ರೀ ಬಸವಗುರುಕುಲ ವಿದ್ಯಾಪೀಠವನ್ನು ಪ್ರಾರಂಭಿಸಿ ಈ ಮೂಲಕ ನರ್ಸರಿ ಮತ್ತು ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದ್ದಾರೆ. ಮಠದ ವತಿಯಿಂದ ಬಸವವಚನದೀಪ್ತಿ ಮತ್ತು ವಚನವಾಹಿನಿ ಎಂಬ ಕೃತಿಗಳನ್ನು ಪ್ರಕಟಿಸಿದ್ದಾರೆ. ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಹಿತ್ಯ ಸೇವೆಯ ಮೂಲಕ ಶ್ರೀ ಬಸವಪ್ರಭು ಸ್ವಾಮಿಗಳು ಸಮಾಜವನ್ನು ಮುನ್ನಡೆಸುತ್ತಿದ್ದಾರೆ.

ವಿಳಾಸ: ಶ್ರೀ ಬಸವಪ್ರಭು ಸ್ವಾಮಿಗಳು, ಶ್ರೀ ಬಸವಗುರುಕುಲ, ಆಂಜನೇಯ ನಗರ, ಬೆಳಗಾವಿ.

ಬೆಂಡಿಗೇರಿ

ಬೆಳಗಾವಿ ತಾಲ್ಲೂಕಿನ ಬೆಂಡಿಗೇರಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಹದಿನೆಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ.

ಹಿರೇಮಠ: ಬೆಂಡಿಗೇರಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ಇಲ್ಲಿನ ಧಾರ್ಮಿಕ ಕೇಂದ್ರವಾಗಿ ರೂಪುಗೊಂಡಿದೆ. ಪುರಾತನ ಮಠದ ಪರಂಪರೆಯ ಈಗಿನ ಗುರುಗಳಾಗಿ ಶ್ರೀ ಸಿದ್ಧಲಿಂಗಶಿವಾಚಾರ್ಯ ಸ್ವಾಮಿಗಳು

ಅಧಿಕಾರ ವಹಿಸಿಕೊಂಡು ಮಠವನ್ನು ಮುನ್ನಡೆಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಬೆಂಡಿಗೇರಿ, ಬೆಳಗಾವಿ ತಾಲ್ಲೂಕು.

ಭೂತರಾಮನಹಟ್ಟಿ

ಬೆಳಗಾವಿ ತಾಲ್ಲೂಕಿನ ಭೂತರಾಮನಹಟ್ಟಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಇಪ್ಪತ್ತೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀಮುಕ್ತಿಮಠವು ಅಸ್ತಿತ್ವದಲ್ಲಿದೆ.

ಮುಕ್ತಿಮಠ: ಭೂತರಾಮನಹಟ್ಟಿಯಲ್ಲಿ ಸ್ಥಾಪನೆಯಾಗಿರುವ ಶ್ರೀ ಮುಕ್ತಿಮಠವು ಪಂಚಪೀಠ ಪರಂಪರೆಯ ಗುರುಸ್ಥಲ ಮಠವಾಗಿ ಬೆಳೆದಿದೆ. ಪುರಾತನ ಪರಂಪರೆಯನ್ನು ಹೊಂದಿರುವ ಈ ಮಠದಲ್ಲಿ ಪ್ರಸ್ತುತ ಶ್ರೀ ಸಿದ್ಧಸೋಮೇಶ್ವರ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ನಡೆಸುತ್ತಿದ್ದಾರೆ. ಗುರುಗಳು ತಮ್ಮ ಧಾರ್ಮಿಕ ಚಟುವಟಿಕೆಗಳಿಂದ ಹೆಚ್ಚು ಪ್ರಚಾರಕ್ಕೆ ಬಂದಿದ್ದಾರೆ. ಇವರು ವೀರಶೈವ ಧರ್ಮಾಚರಣೆಗಳ ಬಗ್ಗೆ ಉಪದೇಶ ನೀಡಿ ಸಂಸ್ಕಾರ ನೀಡುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧಸೋಮೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಮುಕ್ತಿಮಠ, ಭೂತರಾಮನಹಟ್ಟಿ, ಬೆಳಗಾವಿ ತಾ.

ಮುತ್ನಾಳು

ಬೆಳಗಾವಿ ತಾಲ್ಲೂಕಿನ ಮುತ್ನಾಳು, ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಕೇದಾರಪೀಠದ ಶಾಖಾಮಠವಾಗಿ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿರುವ ಶ್ರೀ ಬೃಹನ್ಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದಿಂದಲೂ ತನ್ನ ಹಿರಿತನವನ್ನು ಉಳಿಸಿಕೊಂಡು ಬೆಳೆದು ಬಂದಿದೆ.

ಬೃಹನ್ಮಠ: ಮುತ್ನಾಳು ಗ್ರಾಮದಲ್ಲಿ ಸ್ಥಾಪನೆಯಾಗಿರುವ ಬೃಹನ್ಮಠವು ಪುರಾತನ ಪರಂಪರೆಯುಳ್ಳ ಮಠವಾಗಿದೆ. ಸ್ಥಾಪನೆಯ ಕಾಲಮಾನದ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಶ್ರೀ ಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ಅಧಿಕಾರದಲ್ಲಿದ್ದಾಗ ಮಠವು ಪ್ರಸಿದ್ಧಿ ಪಡೆಯಿತು. ಶಿವಪೂಜಾನಿಷ್ಠರು ಹಾಗೂ ವೇದಾಂತ ಪಂಡಿತರಾಗಿದ್ದ ಇವರು ಮಠದಲ್ಲಿ ಧಾರ್ಮಿಕ ಕಾರ್ಯಗಳನ್ನು ವಿಸ್ತಾರವಾಗಿ ಬೆಳೆಸಿ ಜನಾನುರಾಗಿಗಳಾಗಿದ್ದರು. ಇವರ ಧಾರ್ಮಿಕ ಆಚರಣೆಗಳನ್ನು ಹಾಗೂ ಆಡಳಿತವನ್ನು ಗಮನಿಸಿದ ಕೇದಾರಪೀಠದ ಜಗದ್ಗುರು ಶ್ರೀ ನೀಲಕಂಠಲಿಂಗ ಶಿವಾಚಾರ್ಯ ಭಗವತ್ಪಾದರು ಇವರನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಕಮಾಡಿಕೊಂಡು ೧೯೬೭ರಲ್ಲಿ ಪೀಠದ ಅಧಿಕಾರವನ್ನು ವಹಿಸಿಕೊಟ್ಟಿದ್ದರು. ಇವರು ಹದಿನಾರು ವರ್ಷಗಳ ಕಾಲ ಪೀಠದ ಆಡಳಿತವನ್ನು ನಡೆಸಿ ವೀರಶೈವ ಧರ್ಮವನ್ನು ಅಭಿವೃದ್ಧಿಪಡಿಸಿದ್ದರು. ಗುರುಗಳು ಪೀಠದ ಅಧಿಕಾರಕ್ಕೆ ತಮ್ಮ ಉತ್ತರಾಧಿಕಾರಿಗಳನ್ನು ನೇಮಿಸಿ, ಮುತ್ನಾಳು ಬೃಹನ್ಮಠದಲ್ಲಿ ೧೯೮೦ರಲ್ಲಿ ಲಿಂಗೈಕ್ಯರಾದರು.

ಜಗದ್ಗುರು ಶ್ರೀ ಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ಕೇದಾರಪೀಠಕ್ಕೆ ಪಟ್ಟಾಧಿಕಾರಿಗಳಾದ ಮೇಲೆ ಮುತ್ನಾಳು ಬೃಹನ್ಮಠದ ಉತ್ತರಾಧಿಕಾರಿಗಳಾಗಿ ಶ್ರೀ ದೇವಲಿಂಗ ಶಿವಾಚಾರ್ಯ ಸ್ವಾಮಿಗಳು ನೇಮಕಗೊಂಡರು. ಇವರು ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ 'ಸಾಹಿತ್ಯರತ್ನ'ಪದವಿಯನ್ನು ಪಡೆದು ಮಠಕ್ಕೆ ಆಗಮಿಸಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು, ಕೇದಾರಪೀಠದ ಜಗದ್ಗುರುಗಳ ಸಮ್ಮುಖದಲ್ಲಿ ೧೯೭೮ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಶ್ರೀ ದೇವಲಿಂಗ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠದ ಅಭಿವೃದ್ಧಿ ಕಾರ್ಯಗಳು ನಡೆಯತೊಡಗಿದವು.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ, ಜಗದ್ಗುರು ಶ್ರೀ ಏಕೋರಾಮೋರಾಧ್ಯರ ಮೂರ್ತಿ, ಶಿವ ಹಾಗೂ ನಂದಿ ಮೂರ್ತಿಗಳು ಹಾಗೂ ಕೇದಾರಪೀಠದ ಜಗದ್ಗುರುಗಳಾದ ಶ್ರೀ ಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳ ಗದ್ದುಗೆ ಸ್ಥಾಪನೆಯಾಗಿವೆ. ಪ್ರತಿ ಅಮಾವಾಸ್ಯೆಯಂದು ಜಗದ್ಗುರುಗಳ ಗದ್ದುಗೆಗೆ ಪೂಜೆ ನಡೆಯುತ್ತಿದೆ. ಮಾಘಬಹುಳ ಚೌತಿ

ಯಂದು ಜಗದ್ಗುರು ಲಿಂಗೈಕ್ಯ ಶ್ರೀ ಶಾಂತಲಿಂಗ ಶಿವಾಚಾರ್ಯರ ಪುಣ್ಯತಿಥಿಯನ್ನು ಆಚರಿಸಲಾಗುವುದು. ಮಠದಲ್ಲಿ ಶ್ರಾವಣಮಾಸದಲ್ಲಿ ಮಹಾಪೂಜೆ, ಕೀರ್ತನೆ ಮತ್ತು ಭಜನೆಯನ್ನು ನಡೆಸಲಾಗುತ್ತಿದೆ. ಮಠಕ್ಕೆ ಬರುವ ಭಕ್ತಾದಿಗಳಿಗೆಲ್ಲ ಪ್ರಸಾದ ವಿನಿಯೋಗವಿರುತ್ತದೆ. ಪ್ರತಿ ಸೋಮವಾರ ಸಂಜೆ ಗುರುಗಳ ಅಧ್ಯಕ್ಷತೆಯಲ್ಲಿ ಭಜನೆ, ಕೀರ್ತನೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

ಮುತ್ನಾಳುವಿನ ಮೂಲ ಬೃಹನ್ಮಠಕ್ಕೆ ಚಿಕ್ಕಬಾಗೇವಾಡಿಯಲ್ಲಿ ಒಂದು ಶಾಖಾಮಠವಿದೆ. ಇಲ್ಲಿಯ ಗುರುಗಳೇ ಆ ಮಠದ ಉಸ್ತುವಾರಿಯನ್ನು ನೋಡಿಕೊಂಡು ಬರುತ್ತಿದ್ದಾರೆ. ಬೃಹನ್ಮಠಕ್ಕೆ ಇಪ್ಪತ್ತೈದು ಎಕರೆ ಜಮೀನಿದ್ದು, ಇದರಿಂದ ಬರುವ ಆದಾಯವನ್ನು ಮಠದ ಅಭಿವೃದ್ಧಿ ಕೆಲಸಗಳಿಗೆ ಮತ್ತು ಧಾರ್ಮಿಕ ಕಾರ್ಯಗಳಿಗೆ ವಿನಿಯೋಗಿಸಿಕೊಳ್ಳಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ದೇವಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಮುತ್ನಾಳು, ಬೆಳಗಾವಿ ತಾಲ್ಲೂಕು.

❑

ಬೈಲಹೊಂಗಲ ತಾಲ್ಲೂಕು

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ಐತಿಹಾಸಿಕವಾಗಿ ಪ್ರಸಿದ್ಧಿ ಪಡೆದಿದೆ. ಇಲ್ಲಿ ಹಿಂದಿನಿಂದಲೂ ವೀರಶೈವಧರ್ಮ ಪ್ರಬಲವಾಗಿ ಬೆಳೆದಿದೆ. ಇಲ್ಲಿ ಸುಮಾರು ನೂರಎಂಭತ್ತೆಂಟು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಇಂದು ಇಪ್ಪತ್ತೆಂಟು ಮಠಗಳನ್ನು ಗುರುತಿಸಬಹುದಾಗಿದ್ದು, ಇವುಗಳಲ್ಲಿ ಕೇವಲ ಹದಿನೇಳು ಮಠಗಳು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ ಬಂದಿವೆ.

ಅಣ್ಣಿಕೇರಿ

ಬೈಲಹೊಂಗಲ ತಾಲ್ಲೂಕಿನ ಅಣ್ಣಿಕೇರಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಹದಿನೆಂಟು ಕಿ.ಮೀ ದೂರದ ಲ್ಲಿದೆ. ಇಲ್ಲಿ ಪುರಾತನ ಪರಂಪರೆಯ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಅಣ್ಣಿಕೇರಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ಇಲ್ಲಿನ ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ಬೆಳೆದಿದೆ. ಪರಂಪರೆ ಮಠದ ಈಗಿನ ಗುರುಗಳಾಗಿ ೧೯೬೪ರ ಸೆಪ್ಟೆಂಬರ್ ಎಂಟರಂದು ಜನಿಸಿದ ಶ್ರೀ ರಾಚೋಟಿ ಶಿವಾಚಾರ್ಯ ಸ್ವಾಮಿಗಳು ೧೯೯೧ರ ಮೇ ಇಪ್ಪತ್ತೇಳರಂದು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ರಾಚೋಟಿ ಶಿವಾಚಾರ್ಯಸ್ವಾಮಿಗಳು, ಶ್ರೀ ಹಿರೇಮಠ, ಅಣ್ಣಿಕೇರಿ,ಬೈಲಹೊಂಗಲ ತಾ, ಬೆಳಗಾವಿಜಿಲ್ಲೆ.

ಕಾದರವಳ್ಳಿ

ಬೈಲಹೊಂಗಲ ತಾಲ್ಲೂಕಿನ ಕಾದರವಳ್ಳಿಯು ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಮೂವತ್ತು ಕಿ.ಮೀ ದೂರದಲ್ಲಿದೆ. ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದಿಂದ ಆಗಮಿಸಿದ ಶರಣರಿಗೂ ಇಲ್ಲಿನ ಸಂಪ್ರದಾಯವಾದಿಗಳಿಗೂ ದೊಡ್ಡ ಕಾದಾಟ ನಡೆದಿದ್ದರಿಂದ ಈ ಗ್ರಾಮಕ್ಕೆ'ಕಾದರವಳ್ಳಿ'ಎಂಬ ಹೆಸರು ಬಂದಿದೆ. ಇದು ಶ್ರೀ ರಂಭಾಪುರಿಪೀಠದ ಶಾಖಾಮಠವಾಗಿ, ಪುತ್ರವರ್ಗದ ಪರಂಪರೆಯಲ್ಲಿ ಬೆಳೆದ ಶ್ರೀ ಸೀಮೆಮಠವು ಸ್ಥಾಪನೆಯಾಗಿದೆ.

ಸೀಮೆಮಠ: ಕಾದರವಳ್ಳಿಯಲ್ಲಿ ಸ್ಥಾಪನೆಯಾಗಿರುವ ಸೀಮೆಮಠದ ಸ್ಥಾಪನೆಯ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಪುರಾತನ ಕಾಲದಿಂದಲೂ ಇಲ್ಲಿ ಮಠವು ಸ್ಥಾಪನೆಗೊಂಡು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದಿದೆ. ಶರಣಸ್ಥಲದ ಈ ಮಠದಲ್ಲಿ ಜಾತಿಭೇದವಿಲ್ಲ. ಭಕ್ತಿ ತುಂಬಿಕೊಂಡ ಮನಗಳು ಎಲ್ಲಾ ಒಂದೇ, ಪೂಜೆ ಪುನಸ್ಕಾರಗಳಿಂದ ಹಿಡಿದು ಪ್ರಸಾದ ವಿನಿಯೋಗದ ತನಕ ಎಲ್ಲರೂ ಎಲ್ಲರೊಡನೆ ಕೂಡಿ ಕೆಲಸ ಕಾರ್ಯಗಳನ್ನು ನಡೆಸುತ್ತಿದ್ದಾರೆ. ಈ ಭಿನ್ನತೆ ಇತರೆ ಮತದ ಭಕ್ತರನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ. ಆಚಾರ್ಯರ ಹಾಗೂ ಶರಣರ ತತ್ತ್ವಕ್ಕನುಗುಣವಾಗಿ ಧಾರ್ಮಿಕ ಕಾರ್ಯಗಳು ನಡೆಯುತ್ತಿವೆ. ಗುರುಗಳು ಸಂಸಾರಿಗಳಾಗಿದ್ದುಕೊಂಡೇ ಮಠದ ಆಡಳಿತವನ್ನು ನಡೆಸುತ್ತಿದ್ದಾರೆ.

'ಪರಂಪರೆ: ಮಠದ ಕರ್ತೃಗುರುಗಳ ಬಗ್ಗೆ ಮಾಹಿತಿ ಲಭ್ಯವಿಲ್ಲ. ಇತ್ತೀಚೆಗೆ ಅಧಿಕಾರ ನಡೆಸಿದ ಶ್ರೀ ಅದೃಶ್ಯ ಶಿವಯೋಗಿಗಳ ನಂತರ ಆಡಳಿತ ನಡೆಸಿದ ಶ್ರೀ ಶಿವಯೋಗಿಗಳ ಎರಡು ಗದ್ದುಗೆಗಳು ಸ್ಥಾಪನೆಯಾಗಿವೆ. ನಂತರ ಶ್ರೀಚರಂತಪ್ಪ ಶಿವಯೋಗಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಈಗ ಅಭಿನವಸೀಮೆ ಮಠಾಧೀಶ್ವರ ಶ್ರೀ ಬಾಳಯ್ಯ ಸ್ವಾಮಿಗಳು ೧೯೭೭ರಲ್ಲಿ ಅಧಿಕಾರವನ್ನು ವಹಿಸಿಕೊಂಡು, ಮಠವನ್ನು ಸರ್ವತೋಮುಖವಾಗಿ ಅಭಿವೃದ್ಧಿಪಡಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯ ಪೂಜೆ, ರಾತ್ರಿ ಭಜನೆ, ಕೀರ್ತನೆ ಹಾಗೂ ಜನವರಿ ಹದಿನಾಲ್ಕರಿಂದ ಇಪ್ಪತ್ತರ ತನಕ ಕುಂಭಮೇಳ ನಡೆಯುತ್ತಿದೆ. ಈ ಸಂದರ್ಭದಲ್ಲಿ ಅನೇಕ ವಿದ್ವಾಂಸರನ್ನು ಬರ

ಮಾಡಿಕೊಂಡು ಉಪನ್ಯಾಸ ಮಾಡಿಸಲಾಗುತ್ತಿದೆ. ಈ ಸಂದರ್ಭಗಳಲ್ಲಿ ಅನ್ನದಾಸೋಹವನ್ನು ವ್ಯವಸ್ಥೆ ಮಾಡಲಾಗುತ್ತಿದೆ.

ವಿಳಾಸ: ಶ್ರೀ ಅಭಿನವ ಸೀಮೆ ಮಠಾಧೀಶ್ವರ ಬಾಳಯ್ಯ ಸ್ವಾಮಿಗಳು, ಕಾದರವಳ್ಳಿ, ಬೈಲಹೊಂಗಲ ತಾ, ಬೆಳಗಾವಿ ಜಿಲ್ಲೆ.

ಕಿತ್ತೂರು

ಬೈಲಹೊಂಗಲ ತಾಲ್ಲೂಕಿನ ಕಿತ್ತೂರು, ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹತ್ತು ಕಿ.ಮೀ ದೂರದಲ್ಲಿದೆ. ಈ ಗ್ರಾಮವು ಇತಿಹಾಸ ಪ್ರಸಿದ್ಧ ಸ್ಥಳವಾಗಿ ಹೆಸರುಮಾಡಿದೆ. ಕಿತ್ತೂರಿನ ರಾಜಮನೆತನವು (೧೫೮೫-೧೮೨೪) ಆಳ್ವಿಕೆ ನಡೆಸಿದೆ. ರಾಣಿಚೆನ್ನಮ್ಮ ಬ್ರಿಟಿಷರ ವಿರುದ್ಧ ಹೋರಾಡಿ ತನ್ನ ಪ್ರಾಣಾರ್ಪಣೆ ಮಾಡಿದ ವೀರಮಹಿಳೆ ಎಂದು ಹೆಸರು ಪಡೆದಿದ್ದಾಳೆ. ಇಂತಹ ಇತಿಹಾಸ ಪ್ರಸಿದ್ಧ ಸ್ಥಳದಲ್ಲಿ ವೀರಶೈವಧರ್ಮ, ರಾಜಾಶ್ರಯದಿಂದ ಬೆಳೆದು ಶ್ರೀಮಂತಗೊಂಡಿದೆ. ಇಲ್ಲಿ ಹನ್ನೆರಡು ಮಠಗಳು ಸ್ಥಾಪನೆಯಾಗಿದ್ದವು ಎಂಬ ಮಾಹಿತಿ ದೊರೆಯುತ್ತವೆ. ಇವುಗಳಲ್ಲಿ ಶ್ರೀ ಹಿರೇಮಠ, ಶ್ರೀ ಸಾವಿರ ಮಠ, ಶ್ರೀ ಕಟ್ಟಿಮಠ, ಶ್ರೀ ರಣಗಟ್ಟಿಮಠ,ಶ್ರೀ ಗದ್ದುಗೆಮಠ, ಶ್ರೀ ಎರಳ್ಳಿಮಠ, ಶ್ರೀ ಚರಂತಿಮಠ ಹಾಗೂ ಶ್ರೀಕಲ್ಮಠ ಎಂಬ ಎಂಟು ಮಠಗಳು ದೊರೆತಿವೆ. ಈಗ ಯಾವ ಮಠಗಳಲ್ಲಿಯೂ ಗುರುಗಳಿಲ್ಲದೆ ಮಠಗಳು ಖಾಲಿ ಉಳಿದಿವೆ.

ಕಲ್ಮಠ (ಕಿತ್ತೂರು ಮಠ): ಇತಿಹಾಸ ಪ್ರಸಿದ್ಧ ಕಿತ್ತೂರಿನ ರಾಜಮನೆತನದ ಮಠವಾಗಿದ್ದ ಶ್ರೀ ಕಲ್ಮಠವು ವಿರಕ್ತ ಸಂಪ್ರದಾಯದಲ್ಲಿ ಬೆಳೆದು ಇಲ್ಲಿನ ಧಾರ್ಮಿಕ ಕಾರ್ಯಗಳನ್ನು ನಡೆಸುವುದರ ಮೂಲಕ ಹೆಚ್ಚು ಪ್ರಸಿದ್ಧಿ ಪಡೆದು ನಾಡಿನ ಪ್ರತಿಷ್ಠಿತ ಮಠಗಳಲ್ಲಿ ಒಂದಾಗಿ ಬೆಳೆದಿತ್ತು. ಮಠದ ಕಟ್ಟಡವನ್ನು ಕಲ್ಲಿನಿಂದ ಬೃಹದಾಕಾರವಾಗಿ ನಿರ್ಮಿಸಿದ ಕಾರಣ ಈ ಮಠಕ್ಕೆ 'ಶ್ರೀ ಕಲ್ಮಠ' ಎಂಬ ಹೆಸರು ಬಂದಿದೆ.

ಮಠ ಸ್ಥಾಪನೆ: ಕಿತ್ತೂರಿನ ಮುದಿಮಲ್ಲಪ್ಪ ದೊರೆಯು (೧೬೯೧-೧೬೯೬) ಸಂಚಾರಕ್ಕೆಂದು ಹೊರಹೋಗಿದ್ದಾಗ ಆದಿ ಶ್ರೀ ಗುರುಸಿದ್ಧ ಸ್ವಾಮಿಗಳು ಮುಸ್ಲಿಂ ಸ್ನೇಹಿತರೊಂದಿಗೆ ಪಟ್ಟಣದ ಹೊರವಲಯದಲ್ಲಿ ವಿಶ್ರಾಂತಿ ಪಡೆದುಕೊಳ್ಳುತ್ತಿರುವುದನ್ನು ನೋಡಿ ಹತ್ತಿರ ಹೋಗಿ ಅವರ ಕುಶಲವನ್ನು ವಿಚಾರಿಸಿಕೊಂಡರು. ನಂತರ ಅವರ ವಿದ್ವತ್ತನ್ನು ಪರೀಕ್ಷಿಸಿ ಈ ಪ್ರಾಂತ್ಯದಲ್ಲಿ ಗುರುಗಳು ನೆಲೆಸಬೇಕೆಂದು ಒತ್ತಾಯಿಸಿ, ಅರಮನೆಗೆ ಕರೆದುಕೊಂಡು ಬಂದು ಮಠವನ್ನು ಕಟ್ಟಿಸಿ ಕೊಟ್ಟು ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದರು.

ಪರಂಪರೆ:

೧. ಶ್ರೀ ಮ.ನಿ.ಪ್ರ. ಗುರುಸಿದ್ಧಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಶ್ರೀಪಾದಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಶಿವಲಿಂಗಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಮಡಿವಾಳಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಪ್ರಭುಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಎರಡನೆಯ ಗುರುಸಿದ್ಧಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಎರಡನೆಯ ಮಡಿವಾಳಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ರಾಚೋಟಿಸ್ವಾಮಿಗಳು
೯. ಶ್ರೀ ಮ.ನಿ.ಪ್ರ. ಮೂರನೆಯ ಗುರುಸಿದ್ಧಸ್ವಾಮಿಗಳು.
೧೦. ಶ್ರೀ ಮ.ನಿ.ಪ್ರ. ಚನ್ನಬಸವಯ್ಯಸ್ವಾಮಿಗಳು
೧೧. ಶ್ರೀ ಮ.ನಿ.ಪ್ರ. ಶಿವಬಸವಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಮಠದ ಪರಂಪರೆಯ ಎಲ್ಲಾ ಗುರುಗಳು ಮಹಾ ಪವಾಡ ಪುರುಷರಾಗಿ ಬೆಳೆದಿದ್ದಾರೆ. ಈ ಮಠದಲ್ಲಿ ಶ್ರೀ ಮಡಿವಾಳೇಶ್ವರ ಸ್ವಾಮಿಗಳು ಅನೇಕ ಪವಾಡಗಳನ್ನು ಮಾಡಿ, ಧಾರವಾಡ ತಾಲ್ಲೂಕಿನ ಗರಗದಲ್ಲಿ ನೆಲೆ ನಿಂತರು. ನಂತರ ಬಂದ ಗುರುಗಳು ಪವಾಡ ಪುರುಷರಾಗಿ ಮಠವನ್ನು ಹಾಗೂ

ಕಿತ್ತೂರಿನ ಅರಸು ಮನೆತನವನ್ನು ಸನ್ಮಾರ್ಗದಲ್ಲಿ ಬೆಳೆಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಪರಂಪರೆಯ ಗುರುಗಳ ಗದ್ದುಗೆಗಳು ಚೌಕಿಮಠದಲ್ಲಿ ಹಾಗೂ ಕಲ್ಮಠದಲ್ಲಿ ಸ್ಥಾಪನೆಗೊಂಡಿವೆ. ಇಂತಹ ಪುರಾತನ ಪರಂಪರೆಯ ಮಠವು ಇಂದು ಅವನತಿಯ ನೆಲೆಗೆ ತಲುಪಿರುವುದು ಒಂದು ನೋವಿನ ಸಂಗತಿಯಾಗಿದೆ.

ವಿಳಾಸ: ಶ್ರೀ ಕಲ್ಮಠ, ಕಿತ್ತೂರು, ಬೈಲಹೊಂಗಲ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಚಿಕ್ಕನಾಯಕನಕೊಪ್ಪ

ಬೈಲಹೊಂಗಲ ತಾಲ್ಲೂಕಿನ ಚಿಕ್ಕನಾಯಕನಕೊಪ್ಪವು ತಾಲ್ಲೂಕು ಕೇಂದ್ರದಿಂದ ಇಪ್ಪತ್ತೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ದೇವರಕೊಂಡ ಮಠವು ಅಸ್ತಿತ್ವದಲ್ಲಿದೆ.

ದೇವರಕೊಂಡಮಠ: ಚಿಕ್ಕನಾಯಕನಕೊಪ್ಪ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ದೇವರಕೊಂಡಮಠದ ಸ್ಥಾಪನೆಯ ಬಗ್ಗೆ ಸ್ಪಷ್ಟಮಾಹಿತಿ ಲಭ್ಯವಿಲ್ಲ. ಈಗ ಶ್ರೀ ಸದಾಶಿವದೇವರು ಉತ್ತರಾಧಿಕಾರಿಗಳಾಗಿ ನೇಮಕಗೊಂಡಿದ್ದಾರೆ.

ವಿಳಾಸ: ಶ್ರೀ ಸದಾಶಿವದೇವರು, ಶ್ರೀ ದೇವರಕೊಂಡಮಠ,ಚಿಕ್ಕನಾಯಕನಕೊಪ್ಪ, ಬೈಲಹೊಂಗಲ ತಾ, ಬೆಳಗಾವಿ ಜಿಲ್ಲೆ.

ದೇಶನೂರು

ಬೈಲಹೊಂಗಲ ತಾಲ್ಲೂಕಿನ ದೇಶನೂರು ತಾಲ್ಲೂಕು ಕೇಂದ್ರದಿಂದ ಇಪ್ಪತ್ತು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ದೇಶನೂರು ಗ್ರಾಮದಲ್ಲಿರುವ ಶ್ರೀ ವಿರಕ್ತಮಠವು ಹನ್ನೆರಡನೆಯ ಶತಮಾನದಲ್ಲಿ ಸ್ಥಾಪನೆಯಾಗಿದೆ. ಈ ಮಠವು ಕಿತ್ತೂರು ರಾಜಮನೆತನದ ಗೌರವಕ್ಕೆ ಪಾತ್ರವಾಗಿ ರಾಜಾಶ್ರಯದಿಂದ ಬೆಳೆದು, ಧಾರ್ಮಿಕ ಕಾರ್ಯಗಳನ್ನು ನಡೆಸುವುದರ ಮೂಲಕ ವೀರಶೈವ ಧರ್ಮವನ್ನು ಅಭಿವೃದ್ಧಿಪಡಿಸಿದೆ.

ಮಠ ಸ್ಥಾಪನೆ: ಪುರಾತನ ಕಾಲದ ಪರಂಪರೆಯ ಈ ಮಠವು ಶ್ರೀ ಬಸವಲಿಂಗ ಸ್ವಾಮಿಗಳಿಂದ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಆದರೆ ನಿಖರವಾದ ಕಾಲಮಾನದಬಗ್ಗೆ ಆಧಾರಗಳು ಲಭ್ಯವಿಲ್ಲ. ಗುರುಗಳು ಲೋಕಸಂಚಾರ ಕೈಗೊಂಡು ಈ ಸ್ಥಳದಲ್ಲಿ ನೆಲೆಸಿ, ಅನೇಕ ಪವಾಡಗಳನ್ನು ಮಾಡುವ ಮೂಲಕ ಭಕ್ತರನ್ನು ಉದ್ಧರಿಸಿದರು. ಗುರುಗಳು ಇಲ್ಲಿ ಮಠವನ್ನು ಸ್ಥಾಪಿಸಿ ಧರ್ಮೋಪದೇಶ ಹಾಗೂ ಅನ್ನದಾಸೋಹವನ್ನು ನಡೆಸುತ್ತಾ ಭಕ್ತರಲ್ಲಿ ಜಾಗೃತಿಯನ್ನುಂಟು ಮಾಡಿದರು. ಅಂದು ಸ್ಥಾಪನೆಗೊಂಡ ಮಠವು ಈತನಕ ಬೆಳೆದು ಬಂದಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಗದ್ದುಗಯ್ಯಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಶಿವಲಿಂಗೇಶ್ವರಸ್ವಾಮಿಗಳು

ಮಠದ ಪರಂಪರೆಯ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲದ ಕಾರಣ ಗುರುಗಳ ಕೆಲವೇ ಹೆಸರುಗಳನ್ನು ಮಾತ್ರ ದಾಖಲಿಸಲಾಗಿದೆ. ಕರ್ತೃಗುರುಗಳ ನಂತರ ಶ್ರೀ ಗದ್ದುಗಯ್ಯ ಸ್ವಾಮಿಗಳು ಅಧಿಕಾರ ನಡೆಸಿರಬಹುದು. ಇವರ ನಂತರ ಅಧಿಕಾರ ನಡೆಸಿದ ಗುರುಗಳ ಬಗ್ಗೆ ಮಾಹಿತಿ ಲಭ್ಯವಿಲ್ಲ. ಇತ್ತೀಚೆಗೆ ಶ್ರೀ ಸಿದ್ಧಲಿಂಗ ಸ್ವಾಮಿಗಳು ಅಧಿಕಾರವನ್ನು ನಡೆಸಿ ಮಠದ ಅಸ್ತಿತ್ವವನ್ನು ಉಳಿಸಿದ್ದರು. ಇವರು ಲಿಂಗೈಕ್ಯರಾದ ಮೇಲೆ ಶ್ರೀ ಶಿವಲಿಂಗೇಶ್ವರ ಸ್ವಾಮಿಗಳು ಉತ್ತರಾಧಿಕಾರಿಗಳಾಗಿ ನೇಮಕಗೊಂಡರು. ಇವರು ಶಿವಯೋಗಮಂದಿರದಲ್ಲಿ ಸಂಸ್ಕೃತ ವೇದಾಧ್ಯಯನವನ್ನು ಮಾಡಿ, ಉತ್ತಮ ಪ್ರವಚನಕಾರರಾಗಿ ರೂಪುಗೊಂಡಿದ್ದಾರೆ.ಇವರು ೧೯೫೫ರಲ್ಲಿ ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದಾರೆ.

ಶೈಕ್ಷಣಿಕ ಸೇವೆ: ಶ್ರೀ ಶಿವಲಿಂಗೇಶ್ವರ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿ, ಧಾರ್ಮಿಕ ಕಾರ್ಯಗಳು ಪುನಶ್ಚೇತನಗೊಳ್ಳುವಂತೆ ಮಾಡಿದರು. ನಂತರ ೧೯೭೪ರಲ್ಲಿ 'ಶ್ರೀ ಸಿದ್ಧಲಿಂಗೇಶ್ವರ ಶಿಕ್ಷಣ ಸಂಸ್ಥೆ'ಯನ್ನು ಸ್ಥಾಪಿಸಿ, ಕನ್ನಡ ಮತ್ತು ಉರ್ದು ಮಾಧ್ಯಮ ಪ್ರೌಢಶಾಲೆಗಳನ್ನು ಪ್ರಾರಂಭಿಸಿದರು. ಇಲ್ಲಿ ಕಲಿಯುವ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಸರ್ಕಾರದಿಂದ ಒಂದು ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿದ್ದಾರೆ.

ಧಾರ್ಮಿಕ, ಸಾಮಾಜಿಕ ಸೇವೆ: ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯಪೂಜೆ, ಶ್ರಾವಣ, ಕಾರ್ತೀಕ, ಶಿವರಾತ್ರಿ, ಬಸವಜಯಂತಿಯಂದು ವಿಶೇಷ ಪೂಜೆ ಹಾಗೂ ಆಷಾಢ ಮಾಸದಲ್ಲಿ ಲಿಂಗೈಕ್ಯ ಶ್ರೀ ಸಿದ್ಧಲಿಂಗ ಸ್ವಾಮಿಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಗುರುಗಳು ಹಳ್ಳಿಗಳಲ್ಲಿ ಪಾದಯಾತ್ರೆಯ ಮೂಲಕ ಧರ್ಮ ಜಾಗೃತಿಯನ್ನುಂಟು ಮಾಡಿ ಲಿಂಗಧಾರಣೆ ಮಾಡಿಸಿದ್ದಾರೆ. ಶ್ರೀ ಶಿವಲಿಂಗೇಶ್ವರ ಸ್ವಾಮಿಗಳು ಮಠಕ್ಕೆ ನೂತನ ಕಟ್ಟಡವನ್ನು ನಿರ್ಮಿಸಿ, ಧಾರ್ಮಿಕ ಕಾರ್ಯಗಳು ಹಾಗೂ ಅನ್ನದಾಸೋಹ ವ್ಯವಸ್ಥಿತವಾಗಿ ನಡೆಯುವಂತೆ ಮಾಡಿದ್ದಾರೆ. ಸರ್ಕಾರಕ್ಕೆ ಒತ್ತಾಯ ತಂದು ಈ ಗ್ರಾಮದಲ್ಲಿ ಬ್ಯಾಂಕ್ ಮತ್ತು ಸರ್ಕಾರಿ ಆಸ್ಪತ್ರೆಯನ್ನು ಸ್ಥಾಪನೆ ಮಾಡಿಸುವಲ್ಲಿ ಪ್ರೇರಕ ಶಕ್ತಿಯಾಗಿ ಕೆಲಸ ಮಾಡಿದ್ದಾರೆ. ಈ ರೀತಿ ಸಾರ್ವಜನಿಕವಾಗಿ ತಮ್ಮನ್ನು ತೊಡಗಿಸಿಕೊಂಡು ಮಠ ಮತ್ತು ಸಮಾಜವನ್ನು ಬೆಳೆಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಶಿವಲಿಂಗೇಶ್ವರ ಸ್ವಾಮಿಗಳು, ಶ್ರೀ ವಿರಕ್ತಮಠ, ದೇಶನೂರು, ಬೈಲಹೊಂಗಲ ತಾ, ಬೆಳಗಾವಿ ಜಿಲ್ಲೆ.

ದೇವರಶೀಗೆಹಳ್ಳಿ

ಬೈಲಹೊಂಗಲ ತಾಲ್ಲೂಕಿನ ದೇವರಶೀಗೆಹಳ್ಳಿಯು ತಾಲ್ಲೂಕು ಕೇಂದ್ರದಿಂದ ಹತ್ತೊಂಭತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಮಡಿವಾಳೇಶ್ವರಮಠವು ಅಸ್ತಿತ್ವದಲ್ಲಿದೆ.

ಮಡಿವಾಳೇಶ್ವರಮಠ: ದೇವರಶೀಗೆಹಳ್ಳಿಯಲ್ಲಿ ಸ್ಥಾಪನೆಯಾಗಿರುವ ಶ್ರೀ ಮಡಿವಾಳೇಶ್ವರ ಮಠವು ವಿರಕ್ತಸಂಪ್ರದಾಯದ ಮಠವಾಗಿ ಬೆಳೆದಿದೆ. ಪರಂಪರೆಯ ಈಗಿನ ಗುರುಗಳಾಗಿ ಶ್ರೀ ಸಿದ್ಧಲಿಂಗ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಸಿದ್ಧಲಿಂಗಸ್ವಾಮಿಗಳು, ಶ್ರೀಮಡಿವಾಳೇಶ್ವರಮಠ,ದೇವರಶೀಗೆಹಳ್ಳಿ, ಬೈಲಹೊಂಗಲ ತಾ, ಬೆಳಗಾವಿಜಿಲ್ಲೆ.

ದೊಡವಾಡ

ಬೈಲಹೊಂಗಲ ತಾಲ್ಲೂಕಿನ ದೊಡವಾಡವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ದೊಡವಾಡ ಗ್ರಾಮದಲ್ಲಿ ಪುರಾತನ ಪರಂಪರೆಯುಳ್ಳ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ. ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿರುವ ಈ ಮಠವನ್ನು, ಶ್ರೀ ಜಡೆಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಸ್ಥಾಪಿಸಿದ್ದರೆಂದು ಹೇಳಲಾಗುತ್ತಿದೆ. ಮಠದ ಪರಂಪರೆಯಲ್ಲಿ ಎಂಟು ಜನ ಗುರುಗಳು ಅಧಿಕಾರವನ್ನು ನಡೆಸಿದ್ದಾರೆಂದು ಹೇಳಲಾಗುತ್ತದೆ. ಆದರೆ ನಿಖರವಾದ ಮಾಹಿತಿಗಳು ಲಭ್ಯವಿಲ್ಲ. ೧೯೯೮ರಲ್ಲಿ ಶ್ರೀ ಉಮೇಶ್ವರ ಶಿವಾಚಾರ್ಯ ಸ್ವಾಮಿಗಳು ಆಡಳಿತವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಉಮೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀಹಿರೇಮಠ, ದೊಡವಾಡ,ಬೈಲಹೊಂಗಲ ತಾ, ಬೆಳಗಾವಿಜಿಲ್ಲೆ.

ನಿಚ್ಚಣಕಿ

ಬೈಲಹೊಂಗಲ ತಾಲ್ಲೂಕಿನ ನಿಚ್ಚಣಕಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಹದಿನೆಂಟು ಕಿ.ಮೀ ದೂರದ ಲ್ಲಿದೆ. ಇಲ್ಲಿ ಶ್ರೀ ಮಡಿವಾಳೇಶ್ವರಮಠವು ಅಸ್ತಿತ್ವದಲ್ಲಿದೆ.

ಮಡಿವಾಳೇಶ್ವರಮಠ: ನಿಚ್ಚಣಕಿ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ಮಡಿವಾಳೇಶ್ವರ ಮಠವು ಮಡಿವಾಳೇಶ್ವರರಿಂದ ಪ್ರಾರಂಭಗೊಂಡು ಈತನಕ ಬೆಳೆದುಬಂದಿದೆ. ಪ್ರಸ್ತುತ ಶ್ರೀ ಮಡಿವಾಳೇಶ್ವರ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಬೆಳೆಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಮಡಿವಾಳೇಶ್ವರಸ್ವಾಮಿಗಳು, ಶ್ರೀ ಮಡಿವಾಳೇಶ್ವರಮಠ, ನಿಚ್ಚಣಕಿ, ಬೈಲಹೊಂಗಲ ತಾ, ಬೆಳಗಾವಿಜಿಲ್ಲೆ.

ಬೈಲಹೊಂಗಲ

ಬೆಳಗಾವಿ ಜಿಲ್ಲೆಯ ಬೈಲಹೊಂಗಲವು ಜಿಲ್ಲಾ ಕೇಂದ್ರದಿಂದ ಪೂರ್ವಕ್ಕೆ ಮೂವತ್ತೆರಡು ಕಿ.ಮೀ ದೂರದಲ್ಲಿದೆ. ತಾಲ್ಲೂಕು ಕೇಂದ್ರಸ್ಥಳವಾಗಿರುವ ಬೈಲಹೊಂಗಲವು ಇತಿಹಾಸ ಪ್ರಸಿದ್ಧ ಕ್ಷೇತ್ರವಾಗಿದೆ. ಕಿತ್ತೂರಿನ ರಾಣಿ ಚೆನ್ನಮ್ಮಾಜಿಯನ್ನು ಬ್ರಿಟಿಷರು ಈ ಸ್ಥಳದಲ್ಲಿ ಬಂಧಿಸಿಟ್ಟಿದ್ದರು. ನಂತರ ಚೆನ್ನಮ್ಮಾಜಿಯು ಈ ಬಂದಿಖಾನೆಯಲ್ಲಿ ಮೃತಪಟ್ಟಿದ್ದರಿಂದ ಈ ಸ್ಥಳ ಕ್ಕೊಂದು ಮಹತ್ವವನ್ನು ತಂದುಕೊಟ್ಟಿದೆ. ಈಗಲೂ ಚೆನ್ನಮ್ಮಾಜಿಯ ಸಮಾಧಿಯ ಸ್ಥಳಕ್ಕೆ ಯಾತ್ರಿಕರು ಭೇಟಿಕೊಟ್ಟು, ದರ್ಶನ ಪಡೆದುಕೊಂಡು ಹೋಗುತ್ತಾರೆ.

ಇಂತಹ ಐತಿಹಾಸಿಕ ಸ್ಥಳವು ವೀರಶೈವ ಧರ್ಮದ ನೆಲೆಬೀಡಾಗಿದೆ. ಇಲ್ಲಿ ಹನ್ನೆರಡು ಮಠಗಳು ಸ್ಥಾಪನೆಯಾಗಿದ್ದವು ಎಂಬ ಮಾಹಿತಿ ದೊರೆತಿದೆ. ಶ್ರೀ ತಿಪ್ಪೇಮಠ, ಶ್ರೀ ರುದ್ರಾಕ್ಷಿಮಠ, ಶ್ರೀ ಕುಂಬಾರಗೇರಿಮಠ, ಶ್ರೀ ಪಾಲ್ಕಿಮಠ, ಶ್ರೀ ದಂಡವತಿಮಠ, ಶ್ರೀ ಗಚ್ಚಿನಮಠ, ಶ್ರೀ ಕಲ್ಲುಮಠ, ಶ್ರೀ ಹೊಂಗಲಮಠ, ಶ್ರೀ ಚಿಕ್ಕಮಠ (ಇದು ಬಂದಲವಾಡದ ಶಾಖಾಮಠ) ಶ್ರೀ ಎಕ್ಕುಂಡಿಮಠ (ಎಕ್ಕುಂಡಿಯ ಶಾಖಾಮಠ) ಈ ರೀತಿ ಹತ್ತು ಮಠಗಳನ್ನು ದಾಖಲಿಸಬಹುದಾಗಿದೆ. ಈ ಮಠಗಳಲ್ಲಿ ಶ್ರೀ ತಿಪ್ಪೇಮಠ, ಶ್ರೀ ರುದ್ರಾಕ್ಷಿಮಠ ಹಾಗೂ ಶ್ರೀ ಕುಂಬಾರಗೇರಿ ಮಠಗಳಲ್ಲಿ ಮಠಾಧೀಶರಿದ್ದು ಧಾರ್ಮಿಕ ಕಾರ್ಯಗಳು ನಡೆಯುತ್ತಿವೆ.

ತಿಪ್ಪೇಮಠ: ಬೈಲಹೊಂಗಲದ ಬಜಾರ್‌ಬೀದಿಯ ಬಿಳ್ಳೂರು ಗಲ್ಲಿಯಲ್ಲಿರುವ ಶ್ರೀ ತಿಪ್ಪೇಮಠಕ್ಕೆ ಶ್ರೀ ಮೂರುಸಾವಿರ ಮಠ ಎಂದೂ ಸಹ ಕರೆಯಲಾಗುತ್ತಿದೆ. ಹಿಂದೆ ಈ ಮಠ ಮೂರುಸಾವಿರ ಶಾಖಾಮಠವಾಗಿದ್ದು, ಈಗ ಸ್ವತಂತ್ರ ಮಠವಾಗಿ ರೂಪಾಂತರಗೊಂಡಿದೆ. ಶ್ರೀ ನೀಲಕಂಠೇಶ್ವರ ಸ್ವಾಮಿಗಳು ತಿಪ್ಪೆಗುಂಡಿಗಳು ಇದ್ದ ಸ್ಥಳದಲ್ಲಿದ್ದ ಮಠದ ಹಳೆಯ ಕಟ್ಟಡದಲ್ಲಿ ತಪಸ್ಸನ್ನು ಆಚರಿಸಿ ಮಠವನ್ನು ಪ್ರಸಿದ್ಧಿಗೆ ತಂದರು. ಅಂದಿನಿಂದ ಈ ಮಠಕ್ಕೆ ರೂಢಿಗತವಾಗಿ 'ಶ್ರೀ ತಿಪ್ಪೇ ಮಠ' ಎಂಬ ಹೆಸರು ಬಂದಿದೆ.

ಮಠ ಸ್ಥಾಪನೆ: ಹನ್ನೆರಡನೆಯ ಶತಮಾನಕ್ಕೂ ಮೊದಲು ಸ್ಥಾಪನೆಯಾಗಿತ್ತು ಎಂದು ಹೇಳಲಾಗುವ ಈ ಮಠವು ನಂತರ ಹೆಚ್ಚು ಹೆಸರು ಪಡೆಯಿತು. ಈ ಮಠದ ಕರ್ತೃಗುರುಗಳು ಶ್ರೀ ಶಾಂತಮಲ್ಲ ಸ್ವಾಮಿಗಳು ಎಂದು ಹೇಳಲಾಗುತ್ತಿದೆ. ಅಂದು ಸ್ಥಾಪನೆಗೊಂಡ ಮಠವು ವಿರಕ್ತಸಂಪ್ರದಾಯದ ಕುಮಾರ ಸಮಯದಲ್ಲಿ ಬೆಳೆದು, ಈತನಕ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದಿದೆ.

ಪರಂಪರೆ: ತಿಪ್ಪೇಮಠ ಯಾನೆ ಮೂರುಸಾವಿರಮಠವು ಕಲ್ಯಾಣದ ಕ್ರಾಂತಿಗಿಂತಲೂ ಹಿಂದೆಯೇ ಸ್ಥಾಪಿತವಾಗಿತ್ತೆಂದು ಹೇಳುತ್ತಾರೆ. ಇದಕ್ಕೆ ಸಾಕಷ್ಟು ಪುರಾವೆಗಳು ಸಿಗದೆ ಇರುವುದರಿಂದ ಮಠದ ಇತಿಹಾಸವನ್ನು ಗುರುತಿಸಲು ಕಷ್ಟವಾಗುತ್ತಿದೆ. ಪರಂಪರೆಯ ಪಟ್ಟಿಯಲ್ಲಿ ಬರುವಂತಹ ಗುರುಗಳ ಹೆಸರುಗಳ ಆಧಾರದ ಮೇಲೆ ಮಠವು ಬಹಳ ಹಿಂದಿನ ಪರಂಪರೆಯನ್ನು ಹೊಂದಿದೆ ಎಂದು ಹೇಳಬಹುದು.

೧. ಶ್ರೀ ಮ.ನಿ.ಪ್ರ. ಶಾಂತಮಲ್ಲಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಕಪಿಲಮಲ್ಲಿನಾಥಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ನಂದಿನಾಥಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ವೀರಭದ್ರಸ್ವಾಮಿಗಳು

೫. ಶ್ರೀ ಮ.ನಿ.ಪ್ರ. ಮರಿಮಹಂತಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಸಿದ್ಧರಾಮಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಚನ್ನಬಸವೇಶ್ವರಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಮುದಿ ಮಡಿವಾಳಸ್ವಾಮಿಗಳು
೯. ಶ್ರೀ ಮ.ನಿ.ಪ್ರ. ಸಂಗನಬಸವಸ್ವಾಮಿಗಳು
೧೦. ಶ್ರೀ ಮ.ನಿ.ಪ್ರ. ಶಾಂತಲಿಂಗಸ್ವಾಮಿಗಳು
೧೧. ಶ್ರೀ ಮ.ನಿ.ಪ್ರ. ಗುರು ನೀಲಕಂಠಸ್ವಾಮಿಗಳು
೧೨. ಶ್ರೀ ಮ.ನಿ.ಪ್ರ. ವಿರುಪಾಕ್ಷಸ್ವಾಮಿಗಳು
೧೩. ಶ್ರೀ ಮ.ನಿ.ಪ್ರ. ಜಯಕುಮಾರಸ್ವಾಮಿಗಳು
೧೪. ಶ್ರೀ ಮ.ನಿ.ಪ್ರ. ನೀಲಕಂಠೇಶ್ವರಸ್ವಾಮಿಗಳು
೧೫. ಶ್ರೀ ಮ.ನಿ.ಪ್ರ. ಎರಡನೆಯ ನೀಲಕಂಠೇಶ್ವರಸ್ವಾಮಿಗಳು
೧೬. ಶ್ರೀ ಮ.ನಿ.ಪ್ರ. ಗಂಗಾಧರಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಮಠದ ಪರಂಪರೆಯ ಗುರುಗಳ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲದ ಕಾರಣ ಕೇವಲ ಹೆಸರುಗಳನ್ನು ಮಾತ್ರ ದಾಖಲಿಸಲಾಗಿದೆ. ಕೆಲವುವರ್ಷಗಳ ಕಾಲ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿದಿತ್ತು ಎಂದು ತಿಳಿದು ಬರುತ್ತಿದೆ. ಈ ಸಂದರ್ಭದಲ್ಲಿ ಹುಬ್ಬಳ್ಳಿ ಮೂರುಸಾವಿರ ಮಠವು ಈ ಮಠವನ್ನು ಅಭಿವೃದ್ಧಿಪಡಿಸಿ ಮಠವ ಪರಂಪರೆ ಬೆಳೆಯಲು ನೆರವು ನೀಡಿದ್ದುದು ತಿಳಿದು ಬಂದಿದೆ. ಈ ಹಿಂದೆ ಅಧಿಕಾರ ನಡೆಸಿ ಜೀರ್ಣಗೊಂಡ ಮಠವನ್ನು ಅಭಿವೃದ್ಧಿಪಡಿಸಿದ ಶ್ರೀ ನೀಲಕಂಠೇಶ್ವರ ಸ್ವಾಮಿಗಳು, ಮಠದ ಹಳೆಯ ಕಟ್ಟಡದಲ್ಲಿ ನೆಲೆಸಿ ಧರ್ಮೋಪದೇಶವನ್ನು ನಡೆಸಿ ಭಕ್ತರ ಕಷ್ಟ ಸುಖಗಳಿಗೆ ಸ್ಪಂದಿಸುತ್ತಿದ್ದರು. ಇದರಿಂದ ಜನರ ಮತ್ತು ಮಠದ ಬಾಂಧವ್ಯ ಹತ್ತಿರವಾಯಿತು. ಶ್ರೀ ನೀಲಕಂಠ ಸ್ವಾಮಿಗಳು ಶಿವಪೂಜಾ ನಿಷ್ಠರಾಗಿ ಮಠ ಮತ್ತು ಸಮಾಜವನ್ನು ಬೆಳೆಸಿ ನಿರ್ವಿಕಲ್ಪ ಸಮಾಧಿಯನ್ನು ಹೊಂದಿದರು. ನಂತರ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿಯಿತು. ಆಗ ಭಕ್ತರು ಸಂಪಗಾವಿಯ ಶ್ರೀ ಗಂಗಾಧರ ಸ್ವಾಮಿಗಳನ್ನು ಬರಮಾಡಿ ಕೊಂಡು ಮಠದ ಉತ್ತರಾಧಿಕಾರಿಗಳನ್ನಾಗಿ ನೇಮಿಸಿರುವುದು ಗಮನಕ್ಕೆ ಬಂದಿದೆ.

ಶ್ರೀ ಗಂಗಾಧರ ಸ್ವಾಮಿಗಳು ಶಿವಯೋಗ ಮಂದಿರದಲ್ಲಿ ಅಭ್ಯಾಸ ಮಾಡಿ ಮಠಕ್ಕೆ ಆಗಮಿಸಿ ೧೯೭೭ರಲ್ಲಿ ಅಧಿಕಾರವನ್ನು ವಹಿಸಿಕೊಂಡರು. ಜೀರ್ಣಗೊಂಡಿದ್ದ ಮಠದ ಕಟ್ಟಡವನ್ನು ತೆಗೆದು ಹೊಸ ಕಟ್ಟಡವನ್ನು ನಿರ್ಮಿಸಿದರು. ಮಠದ ಆಸ್ತಿಯನ್ನು ಕ್ರಮಬದ್ಧಗೊಳಿಸಿ, ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದರು.

ಧಾರ್ಮಿಕ-ಸಾಮಾಜಿಕ ಸೇವೆ: ಶ್ರೀ ಗಂಗಾಧರ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಶ್ರೀ ನೀಲಕಂಠ ಸ್ವಾಮಿಗಳ ಗದ್ದುಗೆಗೆ ಮಂಟಪವನ್ನು ನಿರ್ಮಿಸಿದರು. ಪರಂಪರೆಯ ಗುರುಗಳ ಗದ್ದುಗೆಗಳನ್ನು ಗುರುತಿಸಿ ಸ್ಮಾರಕಗಳನ್ನಾಗಿ ಮಾಡಿ ನಿತ್ಯ ಪೂಜೆ ನಡೆಯಲು ವ್ಯವಸ್ಥೆ ಮಾಡಿದರು. ಗುರುಗಳು ಹಳ್ಳಿಗಳಲ್ಲಿ ಪಾದಯಾತ್ರೆ ಮಾಡಿ ಧರ್ಮ ಜಾಗೃತಿಯನ್ನುಂಟು ಮಾಡಿದ್ದಲ್ಲದೆ ಲಿಂಗಧಾರಣೆಯನ್ನು ಮಾಡಿಸಿದರು. ಪ್ರತಿ ತಿಂಗಳು ಶಿವಾನುಭವ ಗೋಷ್ಠಿ ಹಾಗೂ ವರ್ಷಕ್ಕೊಮ್ಮೆ ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ದೀನ-ದಲಿತರಿಗೆ ಆಶ್ರಯ ಕಲ್ಪಿಸಲು ಆನಿಗೋಳು ಮಠದ ಜಮೀನನ್ನು ನಿವೇಶನವನ್ನಾಗಿ ಪರಿವರ್ತಿಸಿ, ೧೦೧ ಜನ ದಲಿತರಿಗೆ ಉಚಿತವಾಗಿ ಹಂಚಿಕೆ ಮಾಡಿದ್ದು ಅವರ ಸಮಾಜ ಸೇವಾ ಕಾರ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ವಿಳಾಸ: ಶ್ರೀ ಗಂಗಾಧರ ಸ್ವಾಮಿಗಳು, ಶ್ರೀತಿಪ್ಪೇಮಠ (ಶ್ರೀಮೂರುಸಾವಿರ ಮಠ) ಬಜಾರ್‌ಬೀದಿ, ಬಳ್ಳೂರು ಗಲ್ಲಿ, ಬೈಲಹೊಂಗಲ, ಬೆಳಗಾವಿ ಜಿಲ್ಲೆ.

ರುದ್ರಾಕ್ಷಿಮಠ: ಬೈಲಹೊಂಗಲ ಪಟ್ಟಣದ ಬಜಾರ್ ರಸ್ತೆಯಲ್ಲಿ ವಿರಕ್ತಸಂಪ್ರದಾಯದ ಕುಮಾರ ಸಮಯದ ಶ್ರೀ ರುದ್ರಾಕ್ಷಿ ಮಠವು ಸ್ಥಾಪನೆಯಾಗಿದೆ. ಪುರಾತನ ಮಠದಲ್ಲಿ ರುದ್ರಾಕ್ಷಿಯ ಕಿರೀಟವಿದ್ದು ಇದನ್ನು ಸ್ವಾಮಿಗಳು ಪೂಜೆಯ ಸಮಯದಲ್ಲಿ ಧರಿಸಿಕೊಳ್ಳುತ್ತಿದ್ದರಿಂದ ಈ ಮಠಕ್ಕೆ 'ಶ್ರೀ ರುದ್ರಾಕ್ಷಿಮಠ'ವೆಂದು ಹೆಸರು ಬಂದಿದೆ.

ಮಠ ಸ್ಥಾಪನೆ: ಕಿತ್ತೂರಿನ ದೊರೆ ಮಲ್ಲಸರ್ಜನು (೧೭೮೨-೧೮೧೬) ತನ್ನ ದಂಡಿನ ಜತೆಯಲ್ಲಿ ಬೆಳಗಾವಿ ರಸ್ತೆಯಲ್ಲಿ ಬರುವಾಗ ಶ್ರೀ ಪ್ರಭುಸ್ವಾಮಿಗಳು ಪಾದಯಾತ್ರೆ ಮಾಡುತ್ತಾ ಬರುತ್ತಿದ್ದರಂತೆ. ಗುರುಗಳನ್ನು ನೋಡಿದ ದೊರೆಯು ಗೌರವ ಸಲ್ಲಿಸಿ, ತನ್ನ ಕುರುಡು ತಂದೆಯ ಕಣ್ಣುಗಳು ಬರುವಂತೆ ಬೇಡಿಕೊಂಡನು. ಆಗ ಶ್ರೀ ಪ್ರಭುಸ್ವಾಮಿಗಳು ಮಲ್ಲಸರ್ಜರ ತಂದೆಗೆ ದೃಷ್ಟಿ ಬರುವಂತೆ ಮಾಡಿದರು. ಗುರುಗಳ ತಪೋಶಕ್ತಿಯನ್ನು ಗಮನಿಸಿದ ಮಲ್ಲಸರ್ಜನು ಬೈಲ ಹೊಂಗಲದಲ್ಲಿ ಮಠವನ್ನು ಸ್ಥಾಪಿಸಿ, ಧಾರ್ಮಿಕ ಕಾರ್ಯಗಳನ್ನು ನಡೆಸಲು ನೆರವಾಗಲೆಂದು ತೊಂಬತ್ತಾರು ಎಕರೆ ಭೂಮಿಯನ್ನು ನೀಡಿ, ಮಠವು ಬೆಳೆಯಲು ಕಾರಣರಾದರು ಎಂದು ಹೇಳಲಾಗುತ್ತಿದೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ಪ್ರಭುಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ರುದ್ರಮುನಿಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು

ಮಠದ ಪರಂಪರೆಯನ್ನು ದಾಖಲಿಸಿ ಕಾಯ್ದಿಡದ ಕಾರಣ ಪರಂಪರೆಯ ಗುರುಗಳ ಕೆಲವು ಹೆಸರುಗಳನ್ನು ಮಾತ್ರ ದಾಖಲಿಸಲಾಗಿದೆ. ಕರ್ತೃಗುರುಗಳಾದ ಶ್ರೀ ಪ್ರಭುಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿದರು. ನಂತರ ಬಂದ ಗುರು ಗಳ ಹೆಸರುಗಳು ಲಭ್ಯವಿಲ್ಲ. ನಂತರ ಶ್ರೀ ಬಸವಲಿಂಗ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಬೆಳೆಸಿ ದರು. ನಂತರ ಶ್ರೀ ರುದ್ರಮುನಿ ಸ್ವಾಮಿಗಳು ೧೯೭೫ರಲ್ಲಿ ಅಧಿಕಾರವನ್ನು ವಹಿಸಿಕೊಂಡು ಮಠದ ಆಸ್ತಿಯನ್ನು ಕ್ರಮ ಬದ್ಧಗೊಳಿಸಿ, ಶಾಖಾಮಠಗಳಾದ ಹುಬ್ಬಳ್ಳಿಯ ರುದ್ರಾಕ್ಷಿಮಠ ಹಾಗೂ ಸಂಪಗಾವಿ ಮಠಗಳನ್ನು ಅಭಿವೃದ್ಧಿಪಡಿಸಿ ದರು. ಗುರುಗಳು ೧೯೯೨ರಲ್ಲಿ ಲಿಂಗೈಕ್ಯರಾದರು. ಇವರ ನಂತರ ಹುನಗುಂದ ತಾಲ್ಲೂಕಿನ ವೀರಾಪುರದ ಶ್ರೀ ಆದಯ್ಯ ಮತ್ತು ಶ್ರೀಮತಿ ಸಿದ್ಧಲಿಂಗಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಬಸವಲಿಂಗ ಸ್ವಾಮಿಗಳು ೧೯೯೨ರಲ್ಲಿ ಮಠದ ಅಧಿಕಾರವನ್ನು ವಹಿಸಿಕೊಂಡು, ಹುಬ್ಬಳ್ಳಿ ಮತ್ತು ಬೈಲಹೊಂಗಲ ಮಠಗಳನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯ ಪೂಜೆ, ಶ್ರಾವಣಮಾಸ, ಶಿವರಾತ್ರಿ, ಬಸವ ಜಯಂತಿಯಲ್ಲಿ ವಿಶೇಷ ಪೂಜೆ ಮತ್ತು ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಮಠದ ಆವರಣದಲ್ಲಿ ಕನ್ನಡಶಾಲೆ ಪ್ರಾರಂಭಿಸಿರು ವುದಲ್ಲದೆ, ಮಠದ ಮುಂದೆ ಕಲ್ಯಾಣಮಂಟಪವನ್ನು ನಿರ್ಮಿಸಲಾಗಿದೆ. ಗುರುಗಳು ಎರಡೂ ಕಡೆ ಧಾರ್ಮಿಕ ಕಾರ್ಯ ಗಳನ್ನು ನಡೆಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಬಸವಲಿಂಗ ಸ್ವಾಮಿಗಳು, ಶ್ರೀ ರುದ್ರಾಕ್ಷಿ ಮಠ, ಬಜಾರ್ ರಸ್ತೆ, ಬೈಲಹೊಂಗಲ, ಬೆಳಗಾವಿ ಜಿಲ್ಲೆ.

ಕುಂಬಾರಗೇರಿ ಹಿರೇಮಠ: ಬೈಲಹೊಂಗಲದ ಮಧ್ಯಭಾಗದಲ್ಲಿ ಶ್ರೀ ಕುಂಬಾರಗೇರಿ ಹಿರೇಮಠವು ಸ್ಥಾಪನೆಯಾಗಿದೆ. ಇದು ಉಜ್ಜಯಿನಿ ಪೀಠದ ಶಾಖಾಮಠವಾಗಿ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು, ಧಾರ್ಮಿಕ ಕಾರ್ಯಗಳನ್ನು ಈತನಕ ನಡೆಸಿಕೊಂಡು ಬಂದಿದೆ. ಈ ಹಿಂದೆ ಶ್ರೀ ಚರಮೂರ್ತಿ ಶಿವಾಚಾರ್ಯ ಸ್ವಾಮಿಗಳು ಹಾಗೂ ಶ್ರೀ ಗುರುಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ನಡೆಸಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಇವರುಗಳು ಲಿಂಗೈಕ್ಯರಾದ ಮೇಲೆ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿಯಿತು. ಆಗ ಹೊಸಪೇಟೆಯ ಶ್ರೀ ಕೊಟ್ಟೂರುಸ್ವಾಮಿ ಮಠದ ಶ್ರೀ ಸಂಗನಬಸವ ಸ್ವಾಮಿಗಳು ಉತ್ತರಾಧಿ ಕಾರಿಗಳನ್ನಾಗಿ ಶ್ರೀ ಶಿವಬಸವ ಶಿವಾಚಾರ್ಯ ಸ್ವಾಮಿಗಳನ್ನು ನೇಮಿಸಿದ್ದಾರೆ. ಗುರುಗಳು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶಿವಬಸವ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕುಂಬಾರಗೇರಿ ಹಿರೇಮಠ, ಬೈಲಹೊಂಗಲ, ಬೆಳಗಾವಿ ಜಿಲ್ಲೆ.

ಬೈಲೂರು

ಬೈಲಹೊಂಗಲ ತಾಲ್ಲೂಕಿನ ಬೈಲೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಹನ್ನೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಬಸವತತ್ತ್ವ ಮಂದಿರವು ಅಸ್ತಿತ್ವದಲ್ಲಿದೆ.

ಬಸವತತ್ತ್ವಮಂದಿರ: ಬೈಲೂರು ಗ್ರಾಮದಲ್ಲಿರುವ ಶ್ರೀ ಬಸವತತ್ತ್ವ ಮಂದಿರವು ಬಸವಾದಿ ಶರಣರ ತತ್ತ್ವಗಳನ್ನು ಪ್ರಚಾರಪಡಿಸುವ ಉದ್ದೇಶದಿಂದ ಕಳೆದ ದಶಕದಲ್ಲಿ ಸ್ಥಾಪನೆಯಾಗಿದೆ. ಶ್ರೀ ನಿಜಗುಣಾನಂದ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿದ್ದಾರೆ. ಇವರು ಶರಣತತ್ತ್ವಗಳ ಬಗ್ಗೆ ಅಪಾರ ಪಾಂಡಿತ್ಯವನ್ನು ಪಡೆದು ಚಿತ್ರದುರ್ಗ, ಗದಗ ಜಿಲ್ಲೆ ಮುಂತಾದ ಕಡೆ ನೆಲೆಸಿ ಶರಣತತ್ತ್ವಗಳನ್ನು ಪ್ರಚಾರಪಡಿಸಿ, ಬೈಲೂರಿನಲ್ಲಿ ಸ್ವತಂತ್ರವಾಗಿ ಮಠವನ್ನು ಸ್ಥಾಪಿಸಿದ್ದಾರೆ. ನೇರ ನುಡಿಯಿಂದ ಕರಾರುವಕ್ಕಾಗಿ ಶರಣರ ಬಗ್ಗೆ ಮಾತನಾಡುವ ಗುರುಗಳು ಉಪನ್ಯಾಸ ನೀಡುವಲ್ಲಿ ಹೆಸರು ಪಡೆದಿದ್ದಾರೆ.

ವಿಳಾಸ: ಶ್ರೀ ನಿಜಗುಣಾನಂದ ಸ್ವಾಮಿಗಳು, ಶ್ರೀ ಬಸವತತ್ತ್ವಮಂದಿರ, ಬೈಲೂರು, ಬೈಲಹೊಂಗಲ ತಾ, ಬೆಳಗಾವಿ ಜಿಲ್ಲೆ.

ಸಂಗೊಳ್ಳಿ

ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿಯು ತಾಲ್ಲೂಕು ಕೇಂದ್ರದಿಂದ ಹದಿನೈದು ಕಿ.ಮೀ ದೂರದಲ್ಲಿದೆ. ಈ ಗ್ರಾಮವು ಇತಿಹಾಸ ಪ್ರಸಿದ್ಧ ರಾಯಣ್ಣನ ಜನ್ಮಸ್ಥಳವಾಗಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಸಂಗೊಳ್ಳಿ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ಪಂಚಪೀಠದ ಪರಂಪರೆಯ ಗುರುಸ್ಥಲ ಮಠವಾಗಿದ್ದು, ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಪ್ರಸ್ತುತ ಮಠಾಧೀಶರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಸಂಗೊಳ್ಳಿ, ಬೈಲಹೊಂಗಲ ತಾ, ಬೆಳಗಾವಿಜಿಲ್ಲೆ.

ಸಂಪಗಾಂವ

ಬೈಲಹೊಂಗಲ ತಾಲ್ಲೂಕಿನ ಸಂಪಗಾಂವವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿನೈದು ಕಿ.ಮೀ ದೂರದಲ್ಲಿದೆ. ಈ ಗ್ರಾಮವು ಹಿಂದೆ ತಾಲ್ಲೂಕು ಕೇಂದ್ರಸ್ಥಳವಾಗಿತ್ತು. ಸಂಗೊಳ್ಳಿ ರಾಯಣ್ಣನು ತಾಲ್ಲೂಕು ಕಛೇರಿಯನ್ನು ಸುಟ್ಟು ಹಾಕಿದ ಮೇಲೆ, ಬ್ರಿಟಿಷರು ತಾಲ್ಲೂಕು ಕೇಂದ್ರಸ್ಥಾನವನ್ನು ಬೈಲಹೊಂಗಲಕ್ಕೆ ಬದಲಿಸಿದರು ಎಂದು ಇತಿಹಾಸದಿಂದ ತಿಳಿಯುತ್ತದೆ. ಸ್ವಾತಂತ್ರ್ಯದ ಕಿಚ್ಚಿಗೆ ಬಲಿಯಾದ ಇತಿಹಾಸ ಪ್ರಸಿದ್ಧ ಸ್ಥಳದಲ್ಲಿ, ನಾಲ್ಕು ಮಠಗಳು ಸ್ಥಾಪನೆಯಾಗಿದ್ದವು ಎಂಬ ಮಾಹಿತಿ ದೊರೆಯುತ್ತಿದೆ. ಇವುಗಳಲ್ಲಿ ಶ್ರೀ ದುರುದುಂಡೇಶ್ವರಮಠ ಮತ್ತು ಶ್ರೀ ಕಾಟಾಪುರಿಮಠ ಅಸ್ತಿತ್ವದಲ್ಲಿವೆ. ಶ್ರೀ ದುರುದುಂಡೇಶ್ವರ ಮಠವು ಅರಭಾವಿಯ ದುರುದುಂಡೇಶ್ವರ ಮಠದ ಶಾಖಾಮಠವಾಗಿ ಬೆಳೆದಿದೆ. ಇಲ್ಲಿ ಶ್ರೀ ದುರುದುಂಡೇಶ್ವರ ತೋರುಗದ್ದುಗೆಯನ್ನು ಸ್ಥಾಪಿಸಿ, ಪೂಜಾಕಾರ್ಯ ನಡೆಯುವಂತೆ ಮಾಡಲಾಗಿದೆ. ಕಾಟಾಪುರಿ ಮಠದಲ್ಲಿ ಮಠಾಧೀಶರಿದ್ದು ಧಾರ್ಮಿಕ ಕಾರ್ಯಗಳು ನಡೆಯುತ್ತಿವೆ.

ಕಾಟಾಪುರಿಮಠ: ಸಂಪಗಾಂವನ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಕಾಟಾಪುರಿ ಮಠವು ಶ್ರೀ ರಂಭಾಪುರಿಪೀಠದ ಶಾಖಾಮಠವಾಗಿ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಧಾರ್ಮಿಕಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ಶ್ರೀ ಸಿದ್ಧಲಿಂಗೇಶ್ವರರು ರಾಯಚೂರು ತಾಲ್ಲೂಕಿನ ಕಾಟಾಪುರಿಯಿಂದ ಲೋಕಸಂಚಾರ ಕೈಗೊಂಡು ಇಲ್ಲಿಗೆ ಬಂದು ನೆಲೆಸಿ, ಮಠವನ್ನು ಸ್ಥಾಪನೆ ಮಾಡಲಾಗಿರುವುದರಿಂದ ಈ ಮಠಕ್ಕೆ 'ಶ್ರೀ ಕಾಟಾಪುರಿ ಮಠ' ಎಂಬ ಹೆಸರು ಬಂದಿದೆ.

ಮಠ ಸ್ಥಾಪನೆ: ಮುಸ್ಲಿಮರ ಆಡಳಿತದ ರಾಯಚೂರು ಪ್ರಾಂತ್ಯದಲ್ಲಿ ಸಾಧು ಸಂತರಿಗೆ, ಕಿರುಕುಳ ಪ್ರಾರಂಭವಾಗಿ, ತಪೋಸಿದ್ಧಿಗೆ ಭಂಗ ಬಂದಾಗ ದೇಶ ಪರ್ಯಟನೆ ಹೊರಡುತ್ತಾರೆ. ಇಂತಹ ಕಿರುಕುಳಕ್ಕೆ ಒಳಗಾದ ಈ ಮಠದ ಕರ್ತೃ ಗುರುಗಳಾದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಮುಸ್ಲಿಮರ ಕಿರುಕುಳವನ್ನು ಮೆಟ್ಟಿನಿಂತು ತಮ್ಮ ತಪೋಶಕ್ತಿ

ಯಿಂದ ಅನೇಕ ಪವಾಡಗಳನ್ನು ಮಾಡಿ ಅವರನ್ನು ಚಕಿತಗೊಳಿಸಿ,ಇಂತಹ ಅಪಾತ್ರರ ಆಡಳಿತದಲ್ಲಿ ನೆಲೆಸುವುದು ಸೂಕ್ತ ವಲ್ಲ ಎಂದು ತಮ್ಮ ಪರಿವಾರ ಸಮೇತ ಲೋಕಸಂಚಾರ ಕೈಗೊಂಡು ಇಲ್ಲಿಗೆ ಬಂದು ನೆಲೆಸಿ, ಮಠವನ್ನು ಸ್ಥಾಪನೆ ಮಾಡಿದರು ಎಂಬುದು ಸ್ಥಳೀಯ ಐತಿಹ್ಯದಿಂದ ತಿಳಿದು ಬರುತ್ತಿದೆ.

ಪರಂಪರೆ:
೧. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಗುರುಪಾದ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಗದ್ದಿಗೇಶ್ವರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಚನ್ನವೀರಪ್ಪ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಚರಮೂರ್ತಿ ಪಟ್ಟದ ದೇವರು

ಮಠದ ಪರಂಪರೆಯ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲದ ಕಾರಣ ಗುರುಗಳ ಕೆಲವು ಹೆಸರುಗಳನ್ನು ಮಾತ್ರ ದಾಖಲಿಸಲಾಗಿದೆ. ಕರ್ತೃಗುರುಗಳ ನಂತರ ಪರಂಪರೆಯಲ್ಲಿ ಅಧಿಕಾರ ನಡೆಸಿದ ಗುರುಗಳು ಈ ಮಠವನ್ನು ಪ್ರಸಿದ್ಧಿಗೊಳಿಸಿದ್ದಾರೆ. ಈಗಿನ ಮಠಾಧ್ಯಕ್ಷರಾದ ಶ್ರೀ ಚನ್ನವೀರಪ್ಪ ಶಿವಾಚಾರ್ಯ ಸ್ವಾಮಿಗಳು ಮಠದಲ್ಲಿ ಧಾರ್ಮಿಕ ಕಾರ್ಯಗಳನ್ನು ವ್ಯವಸ್ಥಿತವಾಗಿ ನಡೆಸಿ ಮಠವನ್ನು ಬೆಳೆಸಿದ್ದರು. ಈಗ ಶ್ರೀ ಚರಮೂರ್ತಿ ಪಟ್ಟದದೇವರು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದಾರೆ.

ಸಾಮಾಜಿಕ ಕಾರ್ಯಗಳು: ಸಂಪಗಾಂವದಲ್ಲಿ ನಿವೇಶನ ನೀಡಿದರೆ ಸರ್ಕಾರಿ ಪ್ರೌಢಶಾಲೆಯನ್ನು ಮಂಜೂರು ಮಾಡುವು ದಾಗಿ ಶಿಕ್ಷಣ ಇಲಾಖೆ ಭರವಸೆ ನೀಡಿದಾಗ, ಗ್ರಾಮದ ಹಿತದೃಷ್ಟಿಯನ್ನು ಕಾಯ್ದುಕೊಳ್ಳಲು ಮಠದ ಹೆಸರಲ್ಲಿ ಇದ್ದ ಅಲ್ಪ ಜಮೀನಿನಲ್ಲೇ ಎರಡು ಎಕರೆಯನ್ನು ನೀಡಿ ಪ್ರೌಢಶಾಲೆ ಪ್ರಾರಂಭವಾಗಲು ನೆರವಾಗಿದ್ದಾರೆ. ಸಮಾಜದ ಅಭಿವೃದ್ಧಿ ಗಾಗಿ ಶ್ರಮಿಸುತ್ತಿರುವ ಗುರುಗಳು ಧಾರ್ಮಿಕ ಜಾಗೃತಿಯನ್ನು ಮೂಡಿಸಿ ಸಂಸ್ಕಾರವಂತ ಸಮಾಜವನ್ನು ರೂಪಿಸುತ್ತಿದ್ದಾರೆ. ಗುರುಗಳು ಆಯುರ್ವೈದ್ಯರಾಗಿ, ಗ್ರಾಮಾಂತರ ಪ್ರದೇಶದ ರೋಗಿಗಳಿಗೆ ಔಷಧೋಪಚಾರ ನೀಡಿ ನೆರವಾಗಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಚರಮೂರ್ತಿ ಪಟ್ಟದ ದೇವರು, ಶ್ರೀ ಕಾಟಾಪುರಿಮಠ, ಸಂಪಗಾಂವ, ಬೈಲಹೊಂಗಲ ತಾ, ಬೆಳಗಾವಿ ಜಿಲ್ಲೆ.

ಸುತಗಟ್ಟಿ

ಬೈಲಹೊಂಗಲ ತಾಲ್ಲೂಕಿನ ಸುತಗಟ್ಟಿಯು ತಾಲ್ಲೂಕು ಕೇಂದ್ರದಿಂದ ಹದಿನೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಸುತಗಟ್ಟಿ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಅನೇಕ ಗುರುಗಳು ಅಧಿಕಾರವನ್ನು ವಹಿಸಿಕೊಂಡು ಈ ಮಠವನ್ನು ಮುನ್ನಡೆಸಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೆ ಮಾಹಿತಿ ಇಲ್ಲ. ಈಗ ಶ್ರೀ ಗುರವರ್ಯ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಗುರುವರ್ಯ ಶಿವಾಚಾರ್ಯಸ್ವಾಮಿಗಳು, ಶ್ರೀ ಹಿರೇಮಠ,ಸುತಗಟ್ಟಿ, ಬೈಲಹೊಂಗಲ ತಾ, ಬೆಳಗಾವಿ ಜಿಲ್ಲೆ.

ಹಣಬರಹಟ್ಟಿ

ಬೈಲಹೊಂಗಲ ತಾಲ್ಲೂಕಿನ ಹಣಬರಹಟ್ಟಿಯು ತಾಲ್ಲೂಕು ಕೇಂದ್ರದಿಂದ ಹದಿನೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಹಣಬರಹಟ್ಟಿ ಗ್ರಾಮದಲ್ಲಿ ಶ್ರೀ ಹಿರೇಮಠವು ಸ್ಥಾಪನೆಯಾಗಿ ಧಾರ್ಮಿಕ ಸಂಸ್ಕಾರವನ್ನು ನೀಡುತ್ತಿದೆ. ಪುರಾತನ ಪರಂಪರೆಯ ಈ ಮಠದಲ್ಲಿ ಪ್ರಸ್ತುತ ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ಆಡಳಿತ ನಡೆಸುತ್ತಿದ್ದಾರೆ.

ವಿಳಾಸ:ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯಸ್ವಾಮಿಗಳು, ಶ್ರೀ ಹಿರೇಮಠ, ಹಣಬರಹಟ್ಟಿ, ಬೈಲಹೊಂಗಲ ತಾ.ಬೆಳಗಾವಿಜಿಲ್ಲೆ.

ರಾಯಭಾಗ ತಾಲ್ಲೂಕು

ಬೆಳಗಾವಿ ಜಿಲ್ಲೆಯ ರಾಯಭಾಗ ಚಿಕ್ಕ ತಾಲ್ಲೂಕಾಗಿದ್ದು, ಇಲ್ಲಿ ವ್ಯವಸಾಯವೇ ಪ್ರಧಾನವಾಗಿದೆ. ತಾಲ್ಲೂಕಿನಾದ್ಯಂತ ಕೇವಲ ಹನ್ನೆರಡು ಮಠಗಳು ಹಿಂದೆ ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತಿದೆ. ರಾಯಭಾಗ ನಗರದಲ್ಲಿದ್ದ ಶ್ರೀಹೊಸಮಠ ಇಂದು ಅಸ್ತಿತ್ವವನ್ನು ಕಳೆದುಕೊಂಡಿದೆ. ಇದೇ ರೀತಿ ತಾಲ್ಲೂಕಿನ ಇತರೆ ಮಠಗಳು ಅಸ್ತಿತ್ವವನ್ನು ಕಳೆದುಕೊಂಡು ಮರೆಯಾಗಿವೆ. ಪ್ರಸ್ತುತ ಮೂರು ಮಠಗಳು ಮಾತ್ರ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ನಂದಿಕುರಳಿ

ರಾಯಭಾಗ ತಾಲ್ಲೂಕಿನ ನಂದಿಕುರಳಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಹನ್ನೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಪುರಾತನ ಪರಂಪರೆಯ ಶ್ರೀ ಪಂಚಲಿಂಗೇಶ್ವರ ಮಠವು ಅಸ್ತಿತ್ವದಲ್ಲಿದೆ.

ಪಂಚಲಿಂಗೇಶ್ವರಮಠ: ನಂದಿಕುರಳಿ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ಪಂಚಲಿಂಗೇಶ್ವರ ಮಠವು ವಿರಕ್ತ ಸಂಪ್ರದಾಯದಲ್ಲಿ ಬೆಳೆದಿದೆ. ಈಗ ಶ್ರೀ ವೀರಭದ್ರ ಸ್ವಾಮಿಗಳು ಅಧಿಕಾರದಲ್ಲಿದ್ದು ಮಠವನ್ನು ಮುನ್ನಡೆಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಶ್ರೀ ವೀರಭದ್ರಸ್ವಾಮಿಗಳು,ಶ್ರೀಪಂಚಲಿಂಗೇಶ್ವರಮಠ, ನಂದಿಕುರಳಿ, ರಾಯಭಾಗ ತಾ, ಬೆಳಗಾವಿಜಿಲ್ಲೆ.

ಬೆಂಡವಾಡ

ರಾಯಭಾಗ ತಾಲ್ಲೂಕಿನ ಬೆಂಡವಾಡ ತಾಲ್ಲೂಕು ಕೇಂದ್ರದಿಂದ ದಕ್ಷಿಣ ಭಾಗಕ್ಕೆ ಹತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ರೇವಣಸಿದ್ಧೇಶ್ವರ ಮಠ ಮತ್ತು ಶ್ರೀ ವಿರಕ್ತಮಠ ಅಸ್ತಿತ್ವದಲ್ಲಿವೆ.

ರೇವಣಸಿದ್ದೇಶ್ವರಮಠ: ಬೆಂಡವಾಡ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ರೇವಣಸಿದ್ಧೇಶ್ವರ ಮಠವು ಹನ್ನೆರಡನೆಯ ಶತಮಾನದಲ್ಲಿ ಸ್ಥಾಪನೆಯಾಗಿದೆ. ಶ್ರೀ ರೇವಣಸಿದ್ಧೇಶ್ವರರು ಕೊಲ್ಲಿಪಾಕಿಯಿಂದ ಲೋಕಸಂಚಾರ ಕೈಗೊಂಡು, ಈ ಸ್ಥಳದಲ್ಲಿ ನೆಲೆನಿಂತು ಅನುಷ್ಠಾನ ಕೈಗೊಂಡಿದ್ದರು. ಗುರುಗಳು ತಮ್ಮ ಸಂಚಾರವನ್ನು ಮುಂದುವರೆಸಿದ ಸಂದರ್ಭದಲ್ಲಿ ಇಲ್ಲಿ ಮಠವನ್ನು ಸ್ಥಾಪಿಸಿ, ತಮ್ಮ ಶಿಷ್ಯರನ್ನು ನೆಲೆಗೊಳಿಸಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದರು. ಅಂದು ಶ್ರೀ ರೇವಣಸಿದ್ಧೇಶ್ವರರು ಮಠವನ್ನು ಸ್ಥಾಪಿಸಿದ್ದರಿಂದ 'ಶ್ರೀ ರೇವಣಸಿದ್ಧೇಶ್ವರಮಠ' ಎಂಬ ಹೆಸರು ಬಂದಿದೆ.

ಪುರಾತನ ಪರಂಪರೆಯ ಈ ಮಠದಲ್ಲಿ ಅಧಿಕಾರ ನಡೆಸಿದ ಗುರುಪರಂಪರೆಯ ಬಗ್ಗೆ ಯಾವುದೇ ಮಾಹಿತಿಗಳು ಲಭ್ಯವಿಲ್ಲ. ೧೯೨೮ರಲ್ಲಿ ಶ್ರೀ ಶಿವಲಿಂಗ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡ ಮೇಲೆ ಮಠವು ತನ್ನ ಧಾರ್ಮಿಕ ಕಾರ್ಯಗಳನ್ನು ನಡೆಸುವ ಮೂಲಕ ತನ್ನ ಅಸ್ತಿತ್ವವನ್ನು ಗುರುತಿಸಿಕೊಂಡಿತು.

ಶ್ರೀ ಶಿವಲಿಂಗ ಸ್ವಾಮಿಗಳು ಈ ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ಶಿವಯೋಗ ಮಂದಿರದಲ್ಲಿ ವಿದ್ಯಾಭ್ಯಾಸ ಮುಗಿಸಿ, ಮಠಕ್ಕೆ ಹಿಂದಿರುಗುವ ವೇಳೆಗೆ ಚಿಕ್ಕೋಡಿ ತಾಲ್ಲೂಕಿನ ಚಿಂಚಣಿಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡು, ಶ್ರೀ ಸಿದ್ಧಪ್ರಭು ಸ್ವಾಮಿಗಳೆಂಬ ಅಭಿಧಾನದೊಂ ದಿಗೆ ಆ ಮಠದ ಅಧಿಕಾರವನ್ನು ವಹಿಸಿಕೊಂಡರು. ಗುರುಗಳು ತಮ್ಮ ಸಾಮರ್ಥ್ಯದಿಂದ ಎರಡು ಮಠಗಳ ಆಡಳಿತವನ್ನು ನಡೆಸಿ ಅಭಿವೃದ್ಧಿಪಡಿಸಿದರು. ಶ್ರೀ ಶಿವಲಿಂಗ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಚಿಂಚಣಿಮಠದ ಈಗಿನ ಶ್ರೀ ಅಲ್ಲಮಪ್ರಭು ಸ್ವಾಮಿಗಳು ಈ ಮಠದ ಆಡಳಿತವನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು:ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯಪೂಜೆ, ಪ್ರತಿ ವರ್ಷ ದವಣದ ಹುಣ್ಣಿಮೆಯಲ್ಲಿ ಜಾತ್ರೆ ನಡೆಯುತ್ತಿದೆ. ಹಿಂದಿನ ಲಿಂಗೈಕ್ಯ ಗುರುಗಳಾದ ಶ್ರೀ ಶಿವಲಿಂಗ ಸ್ವಾಮಿಗಳ ಕಾಲದಲ್ಲಿ ಮಠಕ್ಕೆ ಮಹಾ

ದ್ವಾರ ಮಾಡಿರುವುದಲ್ಲದೆ. ಇಪ್ಪತ್ತೊಂದು ಲಕ್ಷ ರೂಪಾಯಿ ಯೋಜನೆಯಲ್ಲಿ ಮಠದ ಕಟ್ಟಡವನ್ನು ನವೀಕರಿಸಲಾಗಿದೆ. ಅಡವಿಯಲ್ಲಿರುವ ಈ ಮಠಕ್ಕೆ ದೂರದೂರಿನಿಂದ ಬರುವ ಭಕ್ತಾಧಿಗಳ ಅನುಕೂಲಕ್ಕಾಗಿ ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ.

ವಿಳಾಸ: ಶ್ರೀ ಅಲ್ಲಮಪ್ರಭು ಸ್ವಾಮಿಗಳು, ಶ್ರೀ ರೇವಣಸಿದ್ಧೇಶ್ವರಮಠ, ಬೆಂಡವಾಡ, ರಾಯಭಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ.

ವಿರಕ್ತಮಠ: ಬೆಂಡವಾಡ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ವಿರಕ್ತಮಠವು ಹನ್ನೆರಡನೆಯ ಶತಮಾನದ ನಂತರ ಸ್ಥಾಪನೆಗೊಂಡಿದೆ ಎಂದು ಹೇಳಲಾಗುತ್ತದೆ. ಇಂದು ಶ್ರೀ ಶಿವಲಿಂಗ ಸ್ವಾಮಿಗಳು ಮಠದ ಆಡಳಿತವನ್ನು ನೋಡಿಕೊಂಡು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಶಿವಲಿಂಗ ಸ್ವಾಮಿಗಳು, ಶ್ರೀ ವಿರಕ್ತಮಠ, ಬೆಂಡವಾಡ, ರಾಯಭಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಹಂದಿಗುಂದ

ರಾಯಭಾಗ ತಾಲ್ಲೂಕಿನ ಹಂದಿಗುಂದ ಗ್ರಾಮದಲ್ಲಿ ವಿರಕ್ತ ಸಂಪ್ರದಾಯದ ಶ್ರೀ ಗುಬ್ಬೆಪ್ಪನ ಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದಲ್ಲಿ ಸ್ಥಾಪನೆಗೊಂಡ ಈ ಮಠವು ಇಲ್ಲಿನ ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ಬೆಳೆದು ಬಂದಿದೆ.

ಸಿದ್ಧೇಶ್ವರಮಠ: ಶ್ರೀ ಶಿವಯೋಗಿಗಳೊಬ್ಬರು ಲೋಕಸಂಚಾರ ಕೈಗೊಂಡು ಹಂದಿಗುಂದ ಗ್ರಾಮದ ಪ್ರಶಾಂತ ಸ್ಥಳದಲ್ಲಿ ದೀರ್ಘ ಅನುಷ್ಠಾನಕ್ಕೆ ಕುಳಿತಿದ್ದರು. ಈ ಸಂದರ್ಭದಲ್ಲಿ ಗುರುಗಳ ಗಡ್ಡ ಮತ್ತು ಜಡೆಯಲ್ಲಿ ಗುಬ್ಬಚ್ಚಿಗಳು ಗೂಡು ಮಾಡಿಕೊಂಡು ವಾಸಮಾಡುತ್ತಿದ್ದವಂತೆ, ಭಕ್ತರು ಗುರುಗಳನ್ನು ಶ್ರೀ ಗುಬ್ಬೆಪ್ಪನವರು ಎಂದು ರೂಢಿಮಾತಿನಿಂದ ಕರೆಯ ತೊಡಗಿದರು. ಗುರುಗಳು ತಪಸ್ಸಿನಿಂದ ಎಚ್ಚರಗೊಂಡು ಈ ಸ್ಥಳದಲ್ಲಿ ಮಠವನ್ನು ಸ್ಥಾಪಿಸಿ, ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದರು. ಶ್ರೀ ಗುಬ್ಬೆಪ್ಪ ಸ್ವಾಮಿಗಳು ಇಲ್ಲಿ ಮಠವನ್ನು ಸ್ಥಾಪಿಸಿದ್ದರಿಂದ ಈ ಮಠಕ್ಕೆ 'ಶ್ರೀ ಗುಬ್ಬೆಪ್ಪನ ಮಠ' ಎಂಬ ಹೆಸರು ಬಂದಿದೆ.

ಪರಂಪರೆ: ಮಠದ ಪರಂಪರೆಯ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಅನೇಕ ವರ್ಷಗಳಿಂದ ಖಾಲಿ ಉಳಿದಿದ್ದ ಮಠದ ಅಧಿಕಾರವನ್ನು ಶ್ರೀ ಶಿವಾನಂದ ಸ್ವಾಮಿಗಳು ವಹಿಸಿಕೊಂಡು ಜೀರ್ಣಾವಸ್ಥೆಯಲ್ಲಿದ್ದ ಮಠದ ಕಟ್ಟಡವನ್ನು ಅಭಿವೃದ್ಧಿ ಗೊಳಿಸಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದ್ದಾರೆ. ಗುರುಗಳು ಹುಬ್ಬಳ್ಳಿ ಹಾಗೂ ಶಿವಯೋಗ ಮಂದಿರದಲ್ಲಿ ಸಂಸ್ಕೃತ ಹಾಗೂ ವೇದಾಧ್ಯಯನವನ್ನು ಮಾಡಿದ್ದಾರೆ. ಗುರುಗಳು ಈ ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ಮಠದಲ್ಲಿ ಗುಬ್ಬೆಪ್ಪನವರ ಜಾತ್ರೆಯನ್ನು ನಡೆಸಲು ಪ್ರಾರಂಭಿಸಿದರು. ಪ್ರತಿ ತಿಂಗಳು ಶಿವಾನುಭವಗೋಷ್ಠಿ ಹಾಗೂ ಅನ್ನ ದಾಸೋಹ ನಡೆಯಲು ವ್ಯವಸ್ಥೆಗೊಳಿಸಿ ಜನರಲ್ಲಿ ಧರ್ಮಜಾಗೃತಿಯನ್ನು ಮೂಡಿಸುತ್ತಿದ್ದಾರೆ.

ಶೈಕ್ಷಣಿಕ ಸೇವೆ: ಶ್ರೀ ಶಿವಾನಂದ ಸ್ವಾಮಿಗಳು ಧಾರ್ಮಿಕ ಕಾರ್ಯಗಳ ಜತೆಗೆ ಶೈಕ್ಷಣಿಕ ಕ್ಷೇತ್ರಕ್ಕೂ ಪ್ರಾಮುಖ್ಯತೆಯನ್ನು ಕೊಟ್ಟು, ಪ್ರೌಢಶಾಲೆಯನ್ನು ಪ್ರಾರಂಭಿಸಿ, ಗ್ರಾಮಾಂತರ ರೈತ ಮಕ್ಕಳಿಗೆ ಅನುಕೂಲ ಕಲ್ಪಿಸಿಕೊಟ್ಟಿದ್ದಾರೆ. ಮಠದ ಕಟ್ಟಡವನ್ನು ನೂತನವಾಗಿ ನಿರ್ಮಿಸಿ, ಕಲಿಯುವ ಬಡಮಕ್ಕಳಿಗೆ ಮಠದಲ್ಲಿ ಆಶ್ರಯ ಕಲ್ಪಿಸಿ ನೆರವಾಗಿದ್ದಾರೆ. ಈ ರೀತಿ ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಮಠವು ಪ್ರಗತಿ ಕಾಣಲು ನೆರವಾಗಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಶಿವಾನಂದ ಸ್ವಾಮಿಗಳು, ಶ್ರೀ ಗುಬ್ಬೆಪ್ಪನವರ ಮಠ, ಹಂದಿಗುಂದ, ರಾಯಭಾಗ ತಾ, ಬೆಳಗಾವಿ ಜಿಲ್ಲೆ.

❑

ರಾಮದುರ್ಗ ತಾಲ್ಲೂಕು

ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕು ಆರ್ಥಿಕವಾಗಿ ಹಿಂದುಳಿದ ಪ್ರದೇಶ. ಇಲ್ಲಿ ಪುರಾತನ ಕಾಲದಲ್ಲಿ ಸುಮಾರು ನೂರಮೂವತ್ತೆಂಟು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಪ್ರಸ್ತುತ ಹದಿಮೂರು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಅವರಾಧಿ

ರಾಮದುರ್ಗ ತಾಲ್ಲೂಕಿನ ಅವರಾಧಿಯು, ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಫಲಹಾರೇಶ್ವರ ಮಠವು ಅಸ್ತಿತ್ವದಲ್ಲಿದೆ.

ಫಲಹಾರೇಶ್ವರಮಠ: ಅವರಾಧಿಯ ಮಧ್ಯಭಾಗದಲ್ಲಿ ಪುರಾತನ ಪರಂಪರೆಯ ವಿರಕ್ತ ಸಂಪ್ರದಾಯದ ಶ್ರೀ ಫಲಹಾರೇಶ್ವರ ಮಠವು ಸ್ಥಾಪನೆಯಾಗಿದೆ. ಶ್ರೀ ಫಲಹಾರೇಶ್ವರರು ಈ ಮಠವನ್ನು ಸ್ಥಾಪಿಸಿದ್ದರಿಂದ 'ಶ್ರೀ ಫಲಹಾರೇಶ್ವರಮಠ' ಎಂಬ ಹೆಸರು ಬಂದಿದೆ.

ಮಠ ಸ್ಥಾಪನೆ: ಅಸೂಟಿ ಗ್ರಾಮದ ಶ್ರೀ ಶಿವಯೋಗಿ ಎಂಬ ಬಾಲಯೋಗಿಯು ತಮ್ಮ ಚಿಕ್ಕ ವಯಸ್ಸಿನಲ್ಲೇ ಸಂನ್ಯಾಸ ದೀಕ್ಷೆಯನ್ನು ಪಡೆದು ಶ್ರೀಶೈಲಕ್ಕೆ ಹೋಗಿ ಹನ್ನೆರಡು ವರ್ಷ ತಪೋನುಷ್ಠಾನಗೊಂಡು, ತರುವಾಯ ಸ್ವಗ್ರಾಮ ಅಸೂಟಿಗೆ ಆಗಮಿಸುತ್ತಾರೆ. ಧಾರ್ಮಿಕತೆಯಲ್ಲಿ ಪ್ರೌಢ ಅನುಭವ ಹಾಗೂ ತಪೋಸಿದ್ಧಿಯನ್ನು ಸಂಪಾದಿಸಿಕೊಂಡು ಬಂದಿದ್ದ ಶಿವಯೋಗಿಗಳು ಶ್ರೀಶೈಲ ಗಿರಿಯಲ್ಲಿ ಸಿಗುತ್ತಿದ್ದ ಗೆಡ್ಡೆಗೆಣಸುಗಳನ್ನು ತಿಂದು ಬದುಕಿದ ಕಾರಣ 'ಶ್ರೀ ಫಲಹಾರ ಶಿವಯೋಗಿ' ಎಂದು ಮರುನಾಮಕರಣ ಪಡೆದುಕೊಳ್ಳುತ್ತಾರೆ. ತಾವು ಚಿಕ್ಕವಯಸ್ಸಿನಲ್ಲೇ ಗಳಿಸಿದ ಆಧ್ಯಾತ್ಮ ಜ್ಞಾನವನ್ನು ಪ್ರಚಾರಗೊಳಿಸಲು ಲೋಕಸಂಚಾರಕ್ಕೆ ಹೊರಡುತ್ತಾರೆ.

ಹಂಪಿ ಚಕ್ರತೀರ್ಥದಲ್ಲಿ ಪವಾಡಗೈದು, ಜಾಲಿಹಾಳ್ ದೇಸಾಯಿಯ ಆಳ್ವಿಕೆಯಲ್ಲಿದ್ದ ಬಾದಾಮಿ ತಾಲ್ಲೂಕಿನ ಅರಳಿಕಟ್ಟೆಯಲ್ಲಿ ಕೆಲವು ದಿನ ಅನುಷ್ಠಾನಗೊಳ್ಳುತ್ತಾರೆ. ಈ ಸಂದರ್ಭದಲ್ಲಿ ನರಗುಂದದ ದೊರೆ ಬಾಬಾಸಾಹೇಬರು ರೋಗಕ್ಕೆ ತುತ್ತಾಗುತ್ತಾರೆ. ಚಿದಂಬರ ದೀಕ್ಷಿತರ ಅಪೇಕ್ಷೆಯ ಮೇರೆಗೆ ಬಾಬಾಸಾಹೇಬರ ರೋಗವನ್ನು ಗುಣಪಡಿಸಿದ ಶ್ರೀ ಫಲಹಾರೇಶ್ವರರು ತೊರೆಗಲ್ಲು ಅರಮನೆಯಲ್ಲಿದ್ದ ಬ್ರಹ್ಮ ಪಿಶಾಚಿಯನ್ನು ತೊಲಗಿಸಿದರು. ನಂತರ ಉಡುಪಡಿ ಗ್ರಾಮದಲ್ಲಿ ಮಹಾರಾಣಿಗಿದ್ದ ಮನೋರೋಗವನ್ನು ದೂರಮಾಡಿದರು. ಈ ರೀತಿ ಅನೇಕ ಪವಾಡಗಳನ್ನು ಮಾಡಿ ಮುಂದೆ ಬಂದು ಗುಡ್ಡದ ಮಲ್ಲಾಪುರದಲ್ಲಿ ನೆಲೆಸಿದರು. ಈ ಸಂದರ್ಭದಲ್ಲಿ ಈ ಪ್ರಾಂತ್ಯದ ಜನರು ಬರಗಾಲದಿಂದ ಬಳಲುತ್ತ ನೀರಿಗಾಗಿ ಹಾಹಾಕಾರ ಪಡುತ್ತಿದ್ದರು. ಭಕ್ತರ ಕಷ್ಟ ನಿವಾರಣೆಗೆ ತಪಸ್ಸನ್ನು ಆಚರಿಸಿ ಮಳೆಯನ್ನು ಬರಿಸಿದರು. ಹೊಳೆಮಣ್ಣೂರಿನಲ್ಲಿ ದತ್ತಾತ್ರೇಯ ಮೂರ್ತಿಯನ್ನು ಸ್ಥಾಪಿಸಿ, ಅವರಾಧಿಯಲ್ಲಿ ನೆಲೆಸಬೇಕೆಂದು ನಿರ್ಧರಿಸಿ ಅತ್ತ ಹೊರಟರು. ಈ ಸಂದರ್ಭದಲ್ಲಿ ರಾಮದುರ್ಗದ ಮಹಾರಾಜ ಮತ್ತು ನರಗುಂದದ ಮಹಾರಾಜನಿಗೆ ಜಗಳ ಏರ್ಪಟ್ಟು ಶ್ರೀ ಫಲಹಾರೇಶ್ವರರು ತಮ್ಮಲ್ಲಿ ನೆಲಸಬೇಕೆಂದು ಇಬ್ಬರೂ ಬೇಡಿಕೆ ಇಟ್ಟರು. ಆಗ ಗುರುಗಳು ಇಬ್ಬರನ್ನು ಸಮಾಧಾನಪಡಿಸಿ ಎರಡೂ ಪ್ರಾಂತ್ಯಗಳ ಮಧ್ಯಭಾಗದ ಅವರಾಧಿಯಲ್ಲೇ ನೆಲೆಸಬೇಕೆಂಬ ಇಚ್ಛೆ ನಮ್ಮದಾಗಿದೆ ಎಂದು ಅಪ್ಪಣೆಕೊಟ್ಟರು. ಗುರುಗಳಿಗೆ ತಲೆಬಾಗಿದ ಇಬ್ಬರು ಅರಸರೂ ಅವರಾಧಿಯಲ್ಲಿ ಗುರುಗಳಿಗಾಗಿ ಮಠವನ್ನು ಕಟ್ಟಿಸಿಕೊಟ್ಟರು ಎಂದು ತಿಳಿದು ಬಂದಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಫಲಹಾರೇಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಸಂಗಮೇಶ್ವರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಶಿವಮೂರ್ತೇಶ್ವರಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಮೃತ್ಯುಂಜಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಶ್ರೀ ಫಲಹಾರೇಶ್ವರ ಸ್ವಾಮಿಗಳಿಂದ ಪ್ರಾರಂಭವಾದ ಮಠವು ಅನೇಕ ಗುರುಗಳಿಂದ ಬೆಳೆದು ಬಂದಿದೆ. ಈಗಿನ ಗುರುಗಳಾದ ಶ್ರೀ ಮೃತ್ಯುಂಜಯ ಸ್ವಾಮಿಗಳು ಕ್ರಿಯಾತ್ಮಕ ಕೆಲಸಗಳನ್ನು ಮಾಡುವುದರ ಮೂಲಕ ಮಠವನ್ನು ಧಾರ್ಮಿಕ,ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿಪಡಿಸಿದ್ದಾರೆ. ಶ್ರೀಮೃತ್ಯುಂಜಯ ಸ್ವಾಮಿಗಳು ರೋಣ ತಾಲ್ಲೂಕಿನ ಮೆಣಸಗಿಯಲ್ಲಿ ಜನಿಸಿ, ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ನಂತರ ವೇದಾಧ್ಯಯನ ಮಾಡಿ, ೧೯೮೮ರಲ್ಲಿ ಈ ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ.

ಶೈಕ್ಷಣಿಕಸೇವೆ: 'ಶ್ರೀ ಫಲಹಾರೇಶ್ವರ ಶಿಕ್ಷಣಸಂಸ್ಥೆ'ಯನ್ನು ಸ್ಥಾಪಿಸಿ ಸೂರೇಬಾನುವಿನಲ್ಲಿ ಪ್ರೌಢಶಾಲೆ ಮತ್ತು ಕಾಲೇಜು, ಮೆಣಸಗಿಯಲ್ಲಿ ಒಂದು ಪ್ರೌಢಶಾಲೆಯನ್ನು ಸ್ಥಾಪಿಸಿ ನಡೆಸಲಾಗುತ್ತಿದೆ. ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿ, ಇಲ್ಲಿ ಬಡ ಮಕ್ಕಳಿಗೆ ಉಚಿತಪ್ರಸಾದ ಹಾಗೂ ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ರಾಮದುರ್ಗ ಪಟ್ಟಣದಲ್ಲಿ ಒಂದು ವಿದ್ಯಾರ್ಥಿ ನಿಲಯವನ್ನು ನಿರ್ಮಿಸಿ, ಗ್ರಾಮೀಣ ಪ್ರದೇಶದ ಬಡಮಕ್ಕಳು, ಉನ್ನತಶಿಕ್ಷಣ ಪಡೆಯಲು ಮಠವು ನೆರವಾಗಿದೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ಮಂಟಪವನ್ನು ನಿರ್ಮಿಸಿ ನಿತ್ಯಪೂಜೆ, ಶ್ರಾವಣ, ಶಿವರಾತ್ರಿ ಹಾಗೂ ಕಾರ್ತೀಕ ಮಾಸಗಳಲ್ಲಿ ವಿಶೇಷ ಪೂಜೆ, ವರ್ಷಕ್ಕೊಮ್ಮೆ ಫಲಹಾರೇಶ್ವರರ ಜಾತ್ರೆ ಹಾಗೂ ಈ ಸಂದರ್ಭದಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಜಾತಿಭೇದವಿಲ್ಲದೆ ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಮೃತ್ಯುಂಜಯ ಸ್ವಾಮಿಗಳು, ಶ್ರೀ ಫಲಹಾರೇಶ್ವರಮಠ, ಅವರಾಧಿ, ರಾಮದುರ್ಗ ತಾ, ಬೆಳಗಾವಿಜಿಲ್ಲೆ.

ಖಟಕೋಳ

ರಾಮದುರ್ಗ ತಾಲ್ಲೂಕಿನ ಖಟಕೋಳವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಚನ್ನಬಸವಣ್ಣ ಮತ್ತು ಶರಣರು ಉಳವಿಗೆ ಹೋಗುವಾಗ ಈ ಗ್ರಾಮದಲ್ಲಿ ನೆಲೆಸಿ, ಕಲ್ಯಾಣದ ಸೈನಿಕರೊಡನೆ ಕೊನೆಯ ಕಾಳಗ ಮಾಡಿ ಹಿಮ್ಮೆಟ್ಟಿಸಿದ ವೀರಭೂಮಿ ಇದಾಗಿದೆ. ಇಂತಹ ಇತಿಹಾಸ ಪ್ರಸಿದ್ಧ ಸ್ಥಳದಲ್ಲಿ ಕೆಲವು ಶರಣರು ನೆಲೆ ನಿಂತು ನೂರೊಂದು ಮಠಗಳನ್ನು ಸ್ಥಾಪಿಸಿದರು ಎಂದು ಹೇಳಲಾಗುತ್ತಿದೆ. ಇಂದು ಶ್ರೀ ಕುಮಾರೇಶ್ವರಮಠ, ಶ್ರೀ ಚೌಕಿ ಮಠ, ಶ್ರೀ ಹಿರೇಮಠ, ಶ್ರೀ ವಿರಕ್ತಮಠ ಮತ್ತು ಶ್ರೀ ಹಿರೇಮಠ ಎಂಬ ಐದು ಮಠಗಳು ಗೋಚರಿಸುತ್ತಿವೆ. ಇವುಗಳಲ್ಲಿ ಶ್ರೀ ವಿರಕ್ತಮಠ ಪೂರ್ಣ ಪ್ರಮಾಣದಲ್ಲಿ ಸಂಸಾರಿ ಮಠವಾಗಿ ಪರಿವರ್ತನೆಗೊಂಡಿದೆ. ಉಳಿದ ಮಠಗಳು ಅಸ್ತಿತ್ವದಲ್ಲಿದ್ದು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಕುಮಾರೇಶ್ವರಮಠ: ಖಟಕೋಳ ಗ್ರಾಮದ ಹೊರಭಾಗದಲ್ಲಿ ವಿರಕ್ತ ಸಂಪ್ರದಾಯದ ಕುಮಾರ ಸಮಯದ ಶ್ರೀ ಕುಮಾರೇಶ್ವರ ಮಠವು ಸ್ಥಾಪನೆಯಾಗಿದೆ. ಹನ್ನೆರಡನೆಯ ಶತಮಾನದಲ್ಲಿ ಸ್ಥಾಪನೆಗೊಂಡಿರಬಹುದೆಂದು ಹೇಳಲಾಗುವ ಈ ಮಠವು ಶ್ರೀ ಕುಮಾರೇಶ್ವರ ಸ್ವಾಮಿಗಳ ಕಾಲದಲ್ಲಿ ಹೆಚ್ಚು ಹೆಸರು ಮಾಡಿದ್ದರಿಂದ ಈ ಮಠಕ್ಕೆ 'ಶ್ರೀ ಕುಮಾರೇಶ್ವರ ಮಠ' ಎಂಬ ಹೆಸರು ಬಂದಿದೆ. ಅಲ್ಲದೆ ಈ ಮಠವು ಊರ ಹೊರಭಾಗದಲ್ಲಿರುವುದರಿಂದ 'ಶ್ರೀ ಹೊರಗಿನಮಠ' ಎಂದೂ ಸಹ ರೂಢಿಗತವಾಗಿ ಕರೆಯಲಾಗುತ್ತಿದೆ.

ಮಠ ಸ್ಥಾಪನೆ: ಶ್ರೀ ಶಿವಲಿಂಗ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿದ್ದಾರೆ. ಗುರುಗಳು ಲೋಕಸಂಚಾರ ಕೈಗೊಂಡು ಇಲ್ಲಿಗೆ ಬಂದು, ಹನ್ನೆರಡನೆಯ ಶತಮಾನದಲ್ಲಿ ಶರಣರು ನೆಲೆಗೊಂಡಿದ್ದ ಈ ಸ್ಥಳದಲ್ಲಿ ನೆಲೆ ನಿಂತು ಮಠವನ್ನು ಪುನರ್ ಸ್ಥಾಪಿಸಿದರು. ಅಂದಿನಿಂದ ಮಠವು ಧರ್ಮೋಪದೇಶ ಹಾಗೂ ಅನ್ನದಾಸೋಹದಿಂದ ಹೆಚ್ಚುಹೆಸರು ಮಾಡಿ ಈತನಕ ಬೆಳೆದು ಬಂದಿದೆ. ಗುರುಗಳು ಮಹಾತಪಸ್ವಿಗಳಾಗಿದ್ದು ಜಾತ್ಯಾತೀತ ಸಮಾಜವನ್ನು ರೂಪಿಸುವಲ್ಲಿ ಶ್ರಮಿಸಿದರು. ಸಮಾಜದಲ್ಲಿ ಸರ್ವರೂ ಸಮಾನತೆಯಿಂದ ಬದುಕಬೇಕೆಂಬ ಕನಸನ್ನು ಕಂಡು ಶರಣತತ್ವದ ಅಡಿಯಲ್ಲಿ ಸಮಾಜವನ್ನು ರೂಪಿಸಲು ಪ್ರಯತ್ನಿಸಿ ಸಮಾಜ ಮತ್ತು ಮಠವನ್ನು ಅಭಿವೃದ್ಧಿಪಡಿಸಿದ್ದಾರೆಂದು ತಿಳಿದು ಬಂದಿದೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ಶಿವಲಿಂಗಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಗಂಗಾಧರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಸಚ್ಚಿದಾನಂದಸ್ವಾಮಿಗಳು

ಆಧಾರಗಳ ಕೊರತೆಯಿಂದ ಮಠದ ಪರಂಪರೆಯ ಗುರುಗಳ ಕೆಲವು ಹೆಸರುಗಳನ್ನು ಮಾತ್ರ ದಾಖಲಿಸಲಾಗಿದೆ. ಶ್ರೀ ಶಿವ ಲಿಂಗ ಸ್ವಾಮಿಗಳ ನಂತರ ಅಥಣಿಯ ಶ್ರೀ ಮುರುಘೇಂದ್ರ ಶಿವಯೋಗಿಗಳ ಶಿಷ್ಯರಾಗಿ ಬೆಳೆದಿದ್ದ ಶ್ರೀ ಗಂಗಾಧರ ಸ್ವಾಮಿಗಳು, ೧೯೨೫ರ ಡಿಸೆಂಬರ್ ಹತ್ತರಂದು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಇವರ ನಂತರ ಈಗಿನ ಶ್ರೀ ಸಚ್ಚಿದಾನಂದಸ್ವಾಮಿಗಳು ೧೯೭೦ರ ಮೇ ಮೂರರಂದು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದಾರೆ. ಇವರು ಶಿವಯೋಗ ಮಂದಿರದಲ್ಲಿ ಸಂಸ್ಕೃತ, ವೇದ ಹಾಗೂ ಯೋಗವನ್ನು ಕಲಿತು ಹಾನಗಲ್ಲಿನ ಶ್ರೀಸದಾಶಿವ ಶಿವಯೋಗಿಗಳ ಸೇವೆ ಮಾಡಿ ಗುರುಗಳ ಕೃಪಾಶೀರ್ವಾದಕ್ಕೆ ಒಳಗಾದರು. ಇವರು ಉತ್ತರಾಧಿಕಾರಿಗಳಾಗಿ ಆಡಳಿತವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯ ಪೂಜೆ, ಪ್ರತಿ ತಿಂಗಳು ಶಿವಾನುಭವಗೋಷ್ಠಿ ಯನ್ನು ನಡೆಸಲಾಗುತ್ತಿದೆ. ಮಠದ ಆಸ್ತಿಯಾಗಿ ಇಪ್ಪತ್ತೆರಡು ಎಕರೆ ಜಮೀನಿದೆ. ಇದರಿಂದ ಬರುವ ಆದಾಯವನ್ನು ಅಭಿವೃದ್ಧಿ ಮತ್ತು ಧಾರ್ಮಿಕ ಕಾರ್ಯಗಳಿಗೆ ವಿನಿಯೋಗಿಸಿಕೊಳ್ಳಲಾಗುತ್ತಿದೆ. ಮಠದಲ್ಲಿ ಧಾರ್ಮಿಕ ಕಾರ್ಯಗಳ ಜತೆಗೆ ಶಿಕ್ಷಣಕ್ಕೂ ಹೆಚ್ಚು ಒತ್ತುಕೊಟ್ಟು, ಪದವಿಪೂರ್ವ ಕಾಲೇಜನ್ನು ಸ್ಥಾಪಿಸಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಸಚ್ಚಿದಾನಂದ ಸ್ವಾಮಿಗಳು, ಶ್ರೀ ಕುಮಾರೇಶ್ವರಮಠ, ಖಟಕೋಳ, ರಾಮದುರ್ಗ ತಾ, ಬೆಳಗಾವಿಜಿಲ್ಲೆ.

ಚೌಕಿಮಠ: ಖಟಕೋಳ ಗ್ರಾಮದ ಮಧ್ಯಭಾಗದಲ್ಲಿ ಶ್ರೀ ಚೌಕಿಮಠವು ಸ್ಥಾಪನೆಯಾಗಿದೆ. ಹನ್ನೆರಡನೆಯ ಶತಮಾನ ದಲ್ಲಿ ನೂರೊಂದು ಮಠಗಳು ಸ್ಥಾಪನೆಯಾದ ಸಂದರ್ಭದಲ್ಲಿ,ಈ ಮಠವು ಗ್ರಾಮದ ಹೊರಭಾಗದಲ್ಲಿ ಸ್ಥಾಪನೆಯಾಗಿ ತ್ತೆಂದೂ ಕಾಲಾನಂತರ ಗ್ರಾಮವು ಬೆಳೆದಂತೆ ಈ ಚೌಕಿಮಠವು ಒಳಭಾಗಕ್ಕೆ ಸೇರಿಕೊಂಡಿದೆ ಎಂದು ತಿಳಿದು ಬರುತ್ತದೆ. ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿರುವ ಈ ಮಠವು, ಧಾರ್ಮಿಕ ಕಾರ್ಯಗಳನ್ನು ನಡೆಸುವ ಮೂಲಕ ತನ್ನ ಅಸ್ತಿತ್ವ ವನ್ನು ಉಳಿಸಿಕೊಂಡು ಬಂದಿದೆ.

ಪರಂಪರೆ: ಪುರಾತನ ಕಾಲದಲ್ಲಿ ಪ್ರಾರಂಭವಾದ ಈ ಮಠವನ್ನು ಶ್ರೀ ನೀಲಕಂಠೇಶ್ವರ ಸ್ವಾಮಿಗಳು ಸ್ಥಾಪಿಸಿದರೆಂದು ಹೇಳಲಾಗುತ್ತಿದೆ. ಪರಂಪರೆಯಲ್ಲಿ ಈವರೆಗೆ ಐದು ಜನ ಗುರುಗಳು ಅಧಿಕಾರ ನಡೆಸಿರಬಹುದೆಂದು ಮಠದ ಆವರಣ ದಲ್ಲಿರುವ ಐದು ಗದ್ದುಗೆಗಳ ಆಧಾರದ ಮೇಲೆ ಹೇಳಬಹುದಾಗಿದೆ. ಈ ಹಿಂದೆ ಅನೇಕ ವರ್ಷಗಳ ಕಾಲ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿದಿತ್ತು. ಈಗ ಶ್ರೀ ನಾಗಭೂಷಣ ಸ್ವಾಮಿಗಳು ಮಠದ ಆಡಳಿತವನ್ನು ನಡೆಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ನಾಗಭೂಷಣ ಸ್ವಾಮಿಗಳು, ಶ್ರೀ ಚೌಕಿಮಠ,ಖಟಕೋಳ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಹಿರೇಮಠ: ಖಟಕೋಳ ಗ್ರಾಮದ ಮಧ್ಯದಲ್ಲಿ ಶ್ರೀ ರಂಭಾಪುರಿಪೀಠದ ಶಾಖಾಮಠವಾಗಿ ಪುತ್ರವರ್ಗದ ಪರಂಪರೆಯಲ್ಲಿ ಹಿರೇಮಠವು ಸ್ಥಾಪನೆಯಾಗಿದೆ. ಈ ಮಠವು ಈತನಕ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ಈ ಮಠದ ಸ್ಥಾಪನೆ ಹಾಗೂ ಸ್ಥಾಪಕ ಗುರುಗಳ ಬಗ್ಗೆ ಮಾಹಿತಿ ಲಭ್ಯವಿಲ್ಲ. ಈಗ ಶ್ರೀ ಬಸವರಾಜ ಶಿವಾ ಚಾರ್ಯ ಸ್ವಾಮಿಗಳು ಆಡಳಿತವನ್ನು ನಡೆಸುತ್ತಾ ಮಠವನ್ನು ಮುನ್ನಡೆಸಿದ್ದಾರೆ. ಮಠದ ಹಳೆಯ ಕಟ್ಟಡದಲ್ಲಿ ಪರಂಪರೆಯ ಐದು ಜನ ಗುರುಗಳ ಗದ್ದುಗೆಗಳು ಸ್ಥಾಪನೆಯಾಗಿವೆ. ಇವುಗಳಿಗೆ ನಿತ್ಯಪೂಜೆ ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಬಸವರಾಜ ಶಿವಾಚಾರ್ಯಸ್ವಾಮಿಗಳು, ಶ್ರೀ ಹಿರೇಮಠ, ಖಟಕೋಳ, ರಾಮದುರ್ಗ ತಾ, ಬೆಳಗಾವಿ ಜಿಲ್ಲೆ.

ಗಡದೇಶ್ವರ ಹಿರೇಮಠ: ಖಟಗೋಳ ಗ್ರಾಮದ ಮಧ್ಯಭಾಗದಲ್ಲಿ ಶ್ರೀ ರಂಭಾಪುರಿಪೀಠದ ಶಾಖಾಮಠವಾದ ಶ್ರೀ ಗಡ

ದೇಶ್ವರ ಹಿರೇಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದಲ್ಲಿ ಸ್ಥಾಪನೆಯಾಗಿದ್ದ ಈ ಮಠದಲ್ಲಿ ಅನೇಕ ಗುರುಗಳು ಅಧಿಕಾರ ನಡೆಸಿದ ಬಗ್ಗೆ ಮಾಹಿತಿ ದೊರೆಯುತ್ತದೆ. ಈಗ ರಾಮದುರ್ಗ ತಾಲ್ಲೂಕಿನ ಎಂ.ಚಂದರಗಿಯಲ್ಲಿ ಜನಿಸಿದ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳು ೧೯೭೯ರಲ್ಲಿ ಈ ಮಠದ ಅಧಿಕಾರವನ್ನು ವಹಿಸಿಕೊಂಡರು. ಇವರು ತಮ್ಮ ಕ್ರಿಯಾಶೀಲ ಗುಣಗಳಿಂದ ಸಾವಿರಾರು ಜನರಿಗೆ ಲಿಂಗದೀಕ್ಷೆಯನ್ನು ನೀಡಿ ಸಂಸ್ಕಾರವಂತರನ್ನಾಗಿ ಮಾಡಿದ್ದಾರೆ. ಇತ್ತೀಚೆಗೆ ಜಗದ್ಗುರು ವೀರಸೋಮೇಶ್ವರ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ ಗ್ರಾಮೀಣ ಮಕ್ಕಳಿಗೆ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ದೊರೆಯುವಂತೆ ಮಾಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಗಡದೇಶ್ವರ ಹಿರೇಮಠ, ಖಟಕೋಳ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಗೊಡಚಿ

ರಾಮದುರ್ಗ ತಾಲ್ಲೂಕಿನ ಗೊಡಚಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಗುರುಗಡದೇಶ್ವರಮಠವು ಅಸ್ತಿತ್ವದಲ್ಲಿದೆ.

ಗುರುಗಡದೇಶ್ವರಮಠ: ಗೊಡಚಿ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ಗುರುಗಡದೇಶ್ವರ ಮಠವು ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿ ಬೆಳೆದಿದೆ. ಪುರಾತನ ಪರಂಪರೆಯುಳ್ಳ ಈ ಮಠಕ್ಕೆ, ೧೯೬೯ರ ಮೇ ಹತ್ತರಂದು ಜನಿಸಿದ ಶ್ರೀ ಚಂದ್ರಶೇಖರ ದೇವರು ೧೯೭೫ರ ಅಕ್ಟೋಬರ್ ಹತ್ತರಂದು ಉತ್ತರಾಧಿಕಾರಿಗಳಾಗಿ ನೇಮಕಗೊಂಡು ಆಡಳಿತವನ್ನು ನಡೆಸುತ್ತಿದ್ದಾರೆ. ಗುರುಗಳು ಶಿವಯೋಗಮಂದಿರ, ಗುಲ್ಬರ್ಗದಲ್ಲಿ ಸಂಸ್ಕೃತ ಮತ್ತು ಸಾಹಿತ್ಯವನ್ನು ಅಭ್ಯಾಸ ಮಾಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಚಂದ್ರಶೇಖರ ದೇವರು, ಶ್ರೀ ಗುರುಗಡದೇಶ್ವರಮಠ, ಗೊಡಚಿ, ರಾಮದುರ್ಗ ತಾ, ಬೆಳಗಾವಿ ಜಿಲ್ಲೆ.

ಚಪ್ಪಲಕಟ್ಟಿ

ರಾಮದುರ್ಗ ತಾಲ್ಲೂಕಿನ ಚಪ್ಪಲಕಟ್ಟಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಹದಿನೆಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಗುರುಮಠ ಅಸ್ತಿತ್ವದಲ್ಲಿದೆ.

ಗುರುಮಠ: ಚಪ್ಪಲಕಟ್ಟಿ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ಗುರುಮಠವು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುವ ಮೂಲಕ ವೀರಶೈವ ಧರ್ಮವನ್ನು ಅಭಿವೃದ್ಧಿಪಡಿಸಿದೆ. ಶ್ರೀ ಸಿದ್ಧಲಿಂಗದೇವರು ಉತ್ತರಾಧಿಕಾರಿಗಳಾಗಿ ನೇಮಕಗೊಂಡು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧಲಿಂಗ ದೇವರು, ಶ್ರೀ ಗುರುಮಠ, ಚಪ್ಪಲಕಟ್ಟಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಎಂ. ಚದರಂಗಿ

ರಾಮದುರ್ಗ ತಾಲ್ಲೂಕಿನ ಎಂ.ಚದರಂಗಿಯು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹದಿನಾರು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಎಂ.ಚದರಂಗಿ ಗ್ರಾಮದಲ್ಲಿ ಶ್ರೀ ರಂಭಾಪುರಿಪೀಠದ ಶಿಷ್ಯವರ್ಗದ ಪರಂಪರೆಯ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ. ಈ ಮಠವು ಧಾರ್ಮಿಕ ಕಾರ್ಯಗಳನ್ನು ನಡೆಸುವ ಮೂಲಕ ಹೆಚ್ಚು ಪ್ರಸಿದ್ಧಿಗೆ ಬಂದಿದೆ.

ಪರಂಪರೆ: ಮಠದ ಸ್ಥಾಪನೆ ಹಾಗೂ ಕರ್ತೃಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಮಠವು ಸ್ಥಾಪನೆಗೊಂಡ ನಂತರ ಅನೇಕ ವರ್ಷಗಳ ಕಾಲ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದಿದೆಯಾದರೂ, ೧೯೬೯ರ ಹಿಂದೆ ನೂರ ಮೂವತ್ತೂರು ವರ್ಷಗಳ ಕಾಲ ಮಠಾಧೀಶರಿಲ್ಲದೆ ಖಾಲಿ ಉಳಿದಿತ್ತು. ಈ ಸಂದರ್ಭದಲ್ಲಿ ಮಠದ

ಪರಂಪರೆಯ ಬಗ್ಗೆ ಅಳಿದುಳಿದಿದ್ದ ಮಾಹಿತಿಗಳು ನಶಿಸಿ ಹೋಗಿರಬಹುದೆಂದು ಹೇಳಲಾಗುತ್ತಿದೆ. ಪುರಾತನ ಪರಂಪರೆಯ ಮಠವು ನಶಿಸಿ ಹೋಗಬಾರದೆಂಬ ಕಾರಣಕ್ಕೆ ಗ್ರಾಮಸ್ಥರು ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿ, ೧೯೭೮ರ ಏಪ್ರಿಲ್ ಇಪ್ಪತ್ತೊಂಬತ್ತರಂದು ಪಟ್ಟಾಧಿಕಾರವನ್ನು ಮಾಡಿದರು.

ಧಾರ್ಮಿಕ ಕಾರ್ಯಗಳು: ೧೯೭೨ರಲ್ಲಿ ಗ್ರಾಮವು ಸ್ಥಳಾಂತರಗೊಂಡಾಗ ಮಠವೂ ಸ್ಥಳಾಂತರಗೊಂಡಿತ್ತು. ಮಠದ ಆವರಣದಲ್ಲಿ ತೋರುಗದ್ದುಗೆ ಹಾಗೂ ರೇಣುಕಮೂರ್ತಿ ಸ್ಥಾಪನೆಯಾಗಿದೆ. ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡ ಮೇಲೆ ಮಠದ ಹಳೆಯ ಕಟ್ಟಡವನ್ನು ತೆಗೆಸಿ ನೂತನ ಕಟ್ಟಡವನ್ನು ನಿರ್ಮಿಸಿದ್ದಾರೆ. ಮಠದಲ್ಲಿ ನಿತ್ಯ ಎರಡುವೇಳೆ ಪೂಜೆ, ಜಂಗಮರಿಗೆ ಅಯ್ಯಾಚಾರ ಶಿವದೀಕ್ಷೆ, ರೇಣುಕ ಪುರಾಣ ಪ್ರವಚನಗಳನ್ನು ಏರ್ಪಡಿಸಲಾಗುತ್ತಿದೆ. ಗುರುಗಳು ವಿಶ್ವಶಾಂತಿಗಾಗಿ ಒಂದು ತಿಂಗಳಕಾಲ ಹುಕ್ಕೇರಿ ತಾಲ್ಲೂಕು ಸುಲ್ತಾನಪುರದ ಬಸವೇಶ್ವರ ದೇವಸ್ಥಾನದಲ್ಲಿ ಅನುಷ್ಠಾನ ಕೈಗೊಂಡಿದ್ದರು. ಈ ರೀತಿ ಇವರು ಧರ್ಮನಿಷ್ಠರಾಗಿ ಹೆಚ್ಚು ಹೆಸರು ಪಡೆದಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳು,ಶ್ರೀಹಿರೇಮಠ, ಎಂ.ಚಂದರಗಿ, ರಾಮದುರ್ಗ ತಾ, ಬೆಳಗಾವಿ ಜಿಲ್ಲೆ.

ತೋರಗಲ್ಲು

ರಾಮದುರ್ಗ ತಾಲ್ಲೂಕಿನ ತೋರಗಲ್ಲು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹತ್ತು ಕಿ.ಮೀದೂರದಲ್ಲಿದೆ. ಮಲಪ್ರಭ ನದಿಯ ದಡದ ಮೇಲಿನ ಈ ಗ್ರಾಮವು ಐತಿಹಾಸಿಕ ಸ್ಥಳವಾಗಿದೆ. ಪುರಾತನ ಕಾಲದಲ್ಲಿ ಸ್ಥಾಪನೆಯಾದ ಕಲ್ಲಿನ ಕೋಟೆಯ ಮಧ್ಯಭಾಗದಲ್ಲಿ ತೊರೆಗಲ್ಲು ಗ್ರಾಮವು ರಚನೆಯಾಗಿದೆ. ಇಲ್ಲಿ ಶ್ರೀ ಗಚ್ಚಿನ ಹಿರೇಮಠವು ಅಸ್ತಿತ್ವದಲ್ಲಿದೆ.

ಗಚ್ಚಿನ ಹಿರೇಮಠ: ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿ, ಪುತ್ರವರ್ಗದ ಪರಂಪರೆಯಲ್ಲಿ ಶ್ರೀ ಗಚ್ಚಿನ ಹಿರೇಮಠವು ಸ್ಥಾಪನೆಯಾಗಿದೆ. ಮುಸ್ಲಿಮರು ಮತ್ತು ಮರಾಠಿಗರು ಇರುವ ಈ ಗ್ರಾಮದಲ್ಲಿ ವೀರಶೈವರ ಐದು ಕುಟುಂಬಗಳು ಮಾತ್ರ ನೆಲೆಸಿವೆ. ವೀರಶೈವರು ಅಲ್ಪಸಂಖ್ಯಾತರಾಗಿದ್ದರೂ ಮೂನ್ನೂರು ವರ್ಷಗಳ ಹಿಂದೆ ಧಾರ್ಮಿಕ ಸಂಸ್ಕಾರಕ್ಕಾಗಿ ಮಠವು ಸ್ಥಾಪನೆಗೊಂಡು, ಈತನಕ ಬೆಳೆದು ಬಂದಿದೆ.

ಪರಂಪರೆ: ಮಠದ ಸ್ಥಾಪನೆ ಹಾಗೂ ಸ್ಥಾಪಕ ಗುರುಗಳ ಬಗ್ಗೆ ಮಾಹಿತಿ ಲಭ್ಯವಿಲ್ಲ. ಪುರಾತನ ಪರಂಪರೆಯುಳ್ಳ ಈ ಮಠದಲ್ಲಿ ಇಲ್ಲಿನ ಶ್ರೀ ಮಲ್ಲಹರಿ ಮಹಾಜನ ಎಂಬ ದೊರೆಯು ಹಿಂದಿನ ಶ್ರೀ ಕರಿಬಸವೇಶ್ವರ ಸ್ವಾಮಿಗಳ ಕಾಲದಲ್ಲಿ ಮಠದ ಅಭಿವೃದ್ಧಿಗಾಗಿ ಒಂದುನೂರು ಎಕರೆ ಜಮೀನನ್ನು ಉಂಬಳಿಯಾಗಿ ನೀಡಿ ಮಠವನ್ನು ಬೆಳೆಸಿದ್ದರು. ನಂತರದ ಪರಂಪರೆಯ ಬಗ್ಗೆ ಯಾವುದೇ ಮಾಹಿತಿ ಲಭ್ಯವಿಲ್ಲ. ಈಗ ಶ್ರೀ ಚನ್ನಮಲ್ಲ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಜಾತ್ಯಾತೀತ ಮನೋಭಾವನೆಯಿಂದ ಸರ್ವರನ್ನೂ ಸಮಾನವಾಗಿ ಗೌರವಿಸುವುದರಿಂದ, ಮಠವು ಗ್ರಾಮದ ಎಲ್ಲಾ ವರ್ಗದ ಜನಗಳಿಂದ ಗೌರವಿಸಲ್ಪಟ್ಟಿದೆ.

ವಿಳಾಸ: ಷ.ಬ್ರ.ಶ್ರೀ ಚನ್ನಮಲ್ಲಶಿವಾಚಾರ್ಯಸ್ವಾಮಿಗಳು, ಶ್ರೀ ಗಚ್ಚಿನಹಿರೇಮಠ,ತೋರಗಲ್ಲು,ರಾಮದುರ್ಗ ತಾ, ಬೆಳಗಾವಿಜಿಲ್ಲೆ.

ಬನ್ನೂರು

ರಾಮದುರ್ಗ ತಾಲ್ಲೂಕಿನ ಬನ್ನೂರು, ತಾಲ್ಲೂಕು ಕೇಂದ್ರದಿಂದ ಹದಿನೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ರಂಭಾಪುರಿಪೀಠದ ಶಾಖಾಮಠಗಳಾಗಿ ಶ್ರೀ ಹಿರೇಮಠ ಮತ್ತು ಶ್ರೀ ಚಿಕ್ಕಮಠ ಅಸ್ತಿತ್ವದಲ್ಲಿವೆ.

ಹಿರೇಮಠ: ಬನ್ನೂರು ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ಬೆಳೆದಿದೆ. ಹಿಂದೆ ವೈಭವಯುತವಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸಿದ ಬಗ್ಗೆ ವಿವರಗಳು ದೊರೆಯುತ್ತವೆ. ಪ್ರಸ್ತುತ ಶ್ರೀ ಶಾಂತವೀರದೇವರು ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶಾಂತವೀರ ದೇವರು, ಶ್ರೀ ಹಿರೇಮಠ, ಬನ್ನೂರು, ರಾಮದುರ್ಗ ತಾ, ಬೆಳಗಾವಿ ಜಿಲ್ಲೆ.

ಚಿಕ್ಕಮಠ: ಬನ್ನೂರು ಗ್ರಾಮದಲ್ಲಿ ಶಿಷ್ಯವರ್ಗದ ಪರಂಪರೆಯಲ್ಲಿ ಶ್ರೀ ಚಿಕ್ಕಮಠವು ಸ್ಥಾಪನೆಯಾಗಿದೆ. ರಾಮದುರ್ಗದ ಹಿರೇಮಠದ ಶಾಖಾಮಠವಾಗಿದ್ದ ಈ ಮಠವು, ಕಾಲಾನಂತರ ರಾಮದುರ್ಗ ಹಿರೇಮಠದ ಆಡಳಿತದಿಂದ ಬೇರ್ಪಟ್ಟು ಬನ್ನೂರಿನಲ್ಲಿ ಸ್ವತಂತ್ರವಾದ ಮಠವನ್ನು ಸ್ಥಾಪಿಸಿಕೊಂಡು ಶ್ರೀ ಚಿಕ್ಕಮಠ ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. ಮಠದ ಧಾರ್ಮಿಕ ಕಾರ್ಯಗಳನ್ನು ಪ್ರಾರಂಭಿಸಿ ಈತನಕ ಬೆಳೆಸಿಕೊಂಡು ಬಂದಿದೆ.

ಪರಂಪರೆ: ಬನ್ನೂರಿನ ಶ್ರೀ ಚಿಕ್ಕಮಠವನ್ನು ಕೋತ್ ಮನೆತನದವರು ನಿರ್ಮಿಸಿ, ಮಠದ ಅಭಿವೃದ್ಧಿಗೆ ನೆರವಾಗಿದ್ದಾರೆ. ರಾಮದುರ್ಗದಿಂದ ಬನ್ನೂರಿಗೆ ಮಠದ ಕಾರ್ಯಕ್ಷೇತ್ರವನ್ನು ವರ್ಗಾಯಿಸಿದ ಶ್ರೀ ಚನ್ನಮಲ್ಲ ಶಿವಾಚಾರ್ಯಸ್ವಾಮಿಗಳು, ಮಹಾವಿದ್ವಾಂಸರಾಗಿ ಸಂಸ್ಕೃತ, ವೇದಾಧ್ಯಯನದಿಂದ ಪಾಂಡಿತ್ಯವನ್ನು ಸಂಪಾದಿಸಿಕೊಂಡು ಹೆಸರುಗಳಿಸಿದ್ದರು. ಇವರ ಕಾಲದಲ್ಲಿ ಮಠವು ಪ್ರಗತಿದಾಯಕವಾಗಿ ಬೆಳೆಯಿತು. ಗುರುಗಳು ಆಯುರ್ವೈದ್ಯರಾಗಿ ಹೆಸರು ಮಾಡಿದ್ದರು. ಇವರು ನೀಡುತ್ತಿದ್ದ ಔಷಧೋಪಚಾರದಿಂದ ಗ್ರಾಮೀಣ ಪ್ರದೇಶದ ಜನರು ಅನುಕೂಲ ಪಡೆಯುತ್ತಿದ್ದರು. ಗುರುಗಳು ಗುಲ್ಬರ್ಗ ಜಿಲ್ಲೆಯ ದಂಡವತಿ ಗ್ರಾಮದ ಶ್ರೀ ಸಿದ್ಧಲಿಂಗ ಶಿವಾಚಾರ್ಯರನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡು ದೀರ್ಘ ಕಾಲ ಸಾರ್ಥಕ ಬದುಕನ್ನು ಬದುಕಿದ ಗುರುಗಳು ೧೯೯೧ ರ ಸೆಪ್ಟೆಂಬರ್ ಇಪ್ಪತ್ತೊಂದರಂದು ಲಿಂಗೈಕ್ಯರಾದರು.

ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿ ಹಾಗೂ ಶಿವಯೋಗ ಮಂದಿರದಲ್ಲಿ ಯೋಗ ಶಿಕ್ಷಣದ ಬಗ್ಗೆ ಪ್ರಾವೀಣ್ಯತೆ ಪಡೆದುಕೊಂಡಿದ್ದಾರೆ. ಇವರು ಸಂಸ್ಕೃತ, ಹಿಂದಿ, ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಪಾಂಡಿತ್ಯವನ್ನು ಪಡೆದು ಜ್ಞಾನದ ಗಣಿಯಾಗಿದ್ದಾರೆ.

ಶ್ರೀ ಚಿಕ್ಕಮಠಕ್ಕೆ ಸುಮಾರು ೪೦ ಎಕರೆ ಜಮೀನು ಇದೆ. ಗುರುಗಳು ಜ್ಞಾನಯೋಗಿಗಳಷ್ಟೇ ಅಲ್ಲ, ಕಾಯಕ ಯೋಗಿಗಳೂ ಆಗಿದ್ದಾರೆ ಎಂಬುದಕ್ಕೆ ಮಣ್ಣಿನ ಮಗನಾಗಿ ಹೊಲದಲ್ಲಿ ಅಧಿಕಉತ್ಪನ್ನ ತೆಗೆಯುತ್ತಿರುವುದೇ ಸಾಕ್ಷಿ. ವೀರಶೈವ ಧರ್ಮದ ಮೂಲಮಂತ್ರ ಕಾಯಕವೇ ಕೈಲಾಸ ಇದು ಗುರುಗಳ ನಿತ್ಯ ಬದುಕಿನ ಉಸಿರಾಗಿದ್ದು, ಮಠ ಹಾಗೂ ಸಾಮಾಜಿಕ ಬದುಕಿನ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಚಿಕ್ಕಮಠ, ಬನ್ನೂರು, ರಾಮದುರ್ಗ ತಾ, ಬೆಳಗಾವಿ ಜಿಲ್ಲೆ.

ಬಟಕುರ್ಕಿ

ರಾಮದುರ್ಗ ತಾಲ್ಲೂಕಿನ ಬಟಕುರ್ಕಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಎಂಟು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಶ್ರೀ ವಿರಕ್ತಮಠ ಹಾಗೂ ಶ್ರೀ ಚೌಕಿಮಠವು ಅಸ್ತಿತ್ವದಲ್ಲಿದ್ದು ಒಂದೇ ಆಡಳಿತದಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ವಿರಕ್ತಮಠ: ಬಟಕುರ್ಕಿಯಲ್ಲಿ ಸ್ಥಾಪನೆಯಾಗಿರುವ ವಿರಕ್ತ ಸಂಪ್ರದಾಯದ ಕುಮಾರ ಸಮಯದ ಶ್ರೀ ವಿರಕ್ತಮಠವು ಐದುನೂರು ವರ್ಷಗಳ ಹಿಂದೆ ಶ್ರೀ ಚನ್ನಬಸವ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟಿದೆ ಎಂದು ಹೇಳಲಾಗುತ್ತಿದೆ.

ಮಠ ಸ್ಥಾಪನೆ: ಶ್ರೀ ಚನ್ನಬಸವ ಸ್ವಾಮಿಗಳು ಹದಿನಾರನೆಯ ಶತಮಾನದಲ್ಲಿ ಜೀವಿಸಿದ್ದು, ಇವರು ಸಂಚಾರ ಮೂರ್ತಿಗಳೂ, ತಪೋನುಷ್ಠಾನಿಗಳೂ ಆಗಿದ್ದರು. ಗುರುಗಳು ಧರ್ಮಪ್ರಚಾರವನ್ನು ಮುಖ್ಯ ಉದ್ದೇಶವನ್ನಾಗಿಟ್ಟುಕೊಂಡು ಲೋಕ ಸಂಚಾರ ಕೈಗೊಂಡು ಬಟಕುರ್ಕಿಗೆ ಬಂದು ನೆಲೆಸಿದರು. ಗುರುಗಳು ಇಲ್ಲಿ ದೀರ್ಘ ತಪಸ್ಸನ್ನು ಆಚರಿಸಿ ಪವಾಡಗಳನ್ನು ಮಾಡಿ ಭಕ್ತರನ್ನು ಜಾಗೃತಗೊಳಿಸಿದ್ದರು. ಗುರುಗಳು ಇಲ್ಲಿ ಧರ್ಮೋಪದೇಶ ಹಾಗೂ ಅನ್ನದಾಸೋಹವನ್ನು ನಡೆಸುವುದರ ಮೂಲಕ ಮಠವನ್ನು ಸ್ಥಾಪಿಸಿ, ಧಾರ್ಮಿಕ ಆಚರಣೆಗಳು ನಡೆಯುವಂತೆ ಮಾಡಿದ್ದರು.

ಪರಂಪರೆ:

೧. ಶ್ರೀ ಮ.ನಿ.ಪ್ರ. ಚನ್ನಬಸವಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ದೊಡ್ಡಯ್ಯಸ್ವಾಮಿಗಳು

೩. ಶ್ರೀ ಮ.ನಿ.ಪ್ರ. ಗದುಗಯ್ಯಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಚೌಕಯ್ಯಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ವೀರಭದ್ರಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ಚನ್ನಬಸವ ಸ್ವಾಮಿಗಳು ಮಠವನ್ನು ಪ್ರಬುದ್ಧಮಾನಕ್ಕೆ ಬರುವಂತೆ ಮಾಡಿ ಜೀವಂತ ಸಮಾಧಿಯಾದರು. ನಂತರ ಶ್ರೀ ದೊಡ್ಡಯ್ಯ ಸ್ವಾಮಿಗಳು ಮಠದ ಆಡಳಿತವನ್ನು ವಹಿಸಿಕೊಂಡು ಮಠವನ್ನು ಬೆಳೆಸಿದರು. ನಂತರ ಅಧಿಕಾರಕ್ಕೆ ಬಂದ ಶ್ರೀ ಗದುಗಯ್ಯ ಮತ್ತು ಶ್ರೀ ಚೌಕಯ್ಯನವರ ಬಗ್ಗೆ ಹೆಚ್ಚು ಮಾಹಿತಿ ಲಭ್ಯವಿಲ್ಲ. ನಂತರ ಶ್ರೀ ಬಸವಲಿಂಗಯ್ಯ ಮತ್ತು ಶ್ರೀಮತಿ ಚನ್ನಬಸಮ್ಮನವರ ಪುತ್ರರಾಗಿ ೧೯೩೦ರಲ್ಲಿ ಜನಿಸಿದ ಶ್ರೀ ವೀರಭದ್ರ ಸ್ವಾಮಿಗಳು ಮಠದ ಆಡಳಿತವನ್ನು ದೀರ್ಘಕಾಲ ವಹಿಸಿಕೊಂಡು ಮಠವನ್ನು ಬೆಳೆಸಿದರು. ಗುರುಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಬಸವಲಿಂಗ ಸ್ವಾಮಿಗಳನ್ನು ೧೯೮೭ರಲ್ಲಿ ವಿಧ್ಯುಕ್ತವಾಗಿ ನೇಮಿಸಿಕೊಂಡಿದ್ದಾರೆ.

ಶ್ರೀ ಬಸವಲಿಂಗ ಸ್ವಾಮಿಗಳು ಶ್ರೀ ಗದುಗಯ್ಯ ಮತ್ತು ಶ್ರೀಮತಿ ಬಸಮ್ಮನವರ ಪುತ್ರರಾಗಿ ಜನಿಸಿ ಬಟಕುರ್ಕಿ, ರಾಮದುರ್ಗ ಹಾಗೂ ಧಾರವಾಡದಲ್ಲಿ ವಿದ್ಯಾಭ್ಯಾಸವನ್ನು ಮಾಡಿ, ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಕನ್ನಡದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ಮಠಕ್ಕೆ ಆಗಮಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ವಿರಕ್ತ ಮಠದ ಆಡಳಿತಕ್ಕೆ ಒಳಪಟ್ಟಿರುವ ಇಲ್ಲಿನ ಚೌಕಿಮಠದಲ್ಲಿ ಮಠದ ಪರಂಪರೆಯ ಗುರುಗಳ ನಾಲ್ಕು ಗದ್ದುಗೆಗಳು ಸ್ಥಾಪನೆಯಾಗಿವೆ. ಈ ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ, ಯುಗಾದಿಯಿಂದ ದವಣದ ಹುಣ್ಣಿಮೆಯವರೆಗೆ ಜಾತ್ರೆ ಹಾಗೂ ಡಿಸೆಂಬರ್‌ನಲ್ಲಿ ಚೌಕಿಸ್ವಾಮಿಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭಗಳಲ್ಲಿ ಭಕ್ತರಿಗೆ ಅನ್ನದಾಸೋಹವನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ವೀರಭದ್ರ ಸ್ವಾಮಿಗಳು, ಶ್ರೀ ವಿರಕ್ತಮಠ, ಬಟಕುರ್ಕಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಬಿಜಗುಪ್ಪ

ರಾಮದುರ್ಗ ತಾಲ್ಲೂಕಿನ ಬಿಜಗುಪ್ಪ ಗ್ರಾಮವು ತಾಲ್ಲೂಕು ಕೇಂದ್ರದಿಂದ ಹದಿಮೂರು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಬಿಜಗುಪ್ಪ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ಅನೇಕ ವರ್ಷಗಳಿಂದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ಇತಿಹಾಸದ ದೃಷ್ಟಿಯಿಂದ ಮಠದ ಪರಂಪರೆಯನ್ನು ದಾಖಲಿಸಿಡದ ಕಾರಣ ಪರಂಪರೆಯ ಬಗ್ಗೆ ಸ್ಪಷ್ಟತೆ ಇಲ್ಲ. ೧೯೬೭ರಲ್ಲಿ ಬಿಜಗುಪ್ಪದಲ್ಲಿ ಜನಿಸಿದ ಶ್ರೀ ಶಿವಯೋಗಿ ದೇವರು ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ ಹಾವೇರಿ ಮತ್ತು ಬೆಂಗಳೂರಿನಲ್ಲಿ ವೇದಾಧ್ಯಯನ ಮಾಡಿ ೧೯೭೦ರ ಜನವರಿ ಇಪ್ಪತ್ತರಂದು ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡು ಮಠವನ್ನು ಮುನ್ನಡೆಸುತ್ತಿದ್ದಾರೆ. ಗುರುಗಳು ಸವದತ್ತಿ ತಾಲ್ಲೂಕಿನಲ್ಲಿ ಪ್ರಾಥಮಿಕ ಶಿಕ್ಷಕರಾಗಿ ಸೇವೆ ಸಲ್ಲಿಸಿ ಕಾಯಕದೊಂದಿಗೆ ಧರ್ಮ ಪ್ರಸಾರವನ್ನು ಸಹ ಮಾಡುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶಿವಯೋಗಿ ದೇವರು, ಶ್ರೀ ಹಿರೇಮಠ, ಬಿಜಗುಪ್ಪ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಬಾಗೋಜಿಕೊಪ್ಪ

ರಾಮದುರ್ಗ ತಾಲ್ಲೂಕಿನ ಬಾಗೋಜಿಕೊಪ್ಪ ಗ್ರಾಮವು ತಾಲ್ಲೂಕು ಕೇಂದ್ರದಿಂದ ಹದಿನೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಬಾಗೋಜಿಕೊಪ್ಪದಲ್ಲಿರುವ ಶ್ರೀ ಹಿರೇಮಠವು ಧಾರ್ಮಿಕ ಚಟುವಟಿಕೆಗಳ ಕೇಂದ್ರವಾಗಿ, ಈ ಗ್ರಾಮದಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸಿ ಸಮಾಜವನ್ನು ಬೆಳೆಸಿದೆ. ಕೆಲವು ವರ್ಷಗಳ ಕಾಲ ಮಠಾಧೀಶರಿಲ್ಲದೆ ಮಠವು ಖಾಲಿ ಉಳಿದಿತ್ತು. ಈ ಸಂದರ್ಭದಲ್ಲಿ ಮಠದ ಪರಂಪರೆಯ ದಾಖಲೆಗಳು ನಶಿಸಿಹೋಗಿರಬಹುದೆಂದು ಹೇಳಲಾಗುತ್ತಿದೆ. ೧೯೬೫ರ ಏಪ್ರಿಲ್ ನಾಲ್ಕರಂದು ಜನಿಸಿದ ಶ್ರೀ ಶಿವಲಿಂಗ ದೇವರು ಉತ್ತರಾಧಿಕಾರಿಗಳಾಗಿ ಅಧಿಕಾರವನ್ನು ವಹಿಸಿಕೊಂಡು, ಮಠದ ಆಡಳಿತವನ್ನು ನಡೆಸುತ್ತಿದ್ದಾರೆ. ಸಂಸ್ಕೃತ, ವೈದಿಕ ಹಾಗೂ ಜ್ಯೋತಿಷ್ಯ ವಿಷಯಗಳಲ್ಲಿ ಅಧ್ಯಯನ ಮಾಡಿ ವಿದ್ವತ್ ಪಡೆದಿದ್ದಾರೆ. ಗುರುಗಳು ತಾವು ಅಧಿಕಾರಕ್ಕೆ ಬಂದ ಮೇಲೆ ಪ್ರತಿ ಸೋಮವಾರ ಶಿವಾನುಭವಗೋಷ್ಠಿ, ಭಜನೆಯನ್ನು ನಡೆಸುವ ಮೂಲಕ ಧರ್ಮಪ್ರಚಾರವನ್ನು ಕೈಗೊಂಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶಿವಲಿಂಗ ದೇವರು, ಶ್ರೀ ಹಿರೇಮಠ, ಬಾಗೋಜಿಕೊಪ್ಪ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಮುಳ್ಳೂರು

ರಾಮದುರ್ಗ ತಾಲ್ಲೂಕಿನ ಮುಳ್ಳೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಹದಿಮೂರು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಮುಳ್ಳೂರು ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ಇಲ್ಲಿನ ಧಾರ್ಮಿಕ ಚಟುವಟಿಕೆಗಳ ಕೇಂದ್ರವಾಗಿ ಬೆಳೆದಿದೆ. ಪುರಾತನ ಪರಂಪರೆಯ ಮಠದಲ್ಲಿ ೧೯೫೭ರ ಜನವರಿ ಒಂದರಂದು ಜನಿಸಿದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ೧೯೬೫ರ ಮೇ ಹನ್ನೆರಡರಂದು ಮಠದ ಅಧಿಕಾರವನ್ನು ಪಡೆದು ಆಡಳಿತವನ್ನು ನಡೆಸುತ್ತಿದ್ದಾರೆ. ಜನಸೇವೆ, ಲಿಂಗಪೂಜೆಯಿಂದ ಹೆಸರು ಗಳಿಸಿರುವ ಗುರುಗಳು ಶ್ರೀ ಅನ್ನದಾನೇಶ್ವರ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಪ್ರೌಢಶಾಲೆಯನ್ನು ನಡೆಸುತ್ತಿದ್ದಾರೆ.

ವಿಳಾಸ:ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು, ಶ್ರೀ ಹಿರೇಮಠ,ಮುಳ್ಳೂರು, ರಾಮದುರ್ಗತಾ, ಬೆಳಗಾವಿಜಿಲ್ಲೆ.

ರಾಮದುರ್ಗ

ಬೆಳಗಾವಿ ಜಿಲ್ಲೆಯ ರಾಮದುರ್ಗವು ಜಿಲ್ಲಾ ಕೇಂದ್ರದಿಂದ ಪೂರ್ವಕ್ಕೆ ನಲವತ್ತೈದು ಕಿ.ಮೀ ದೂರದಲ್ಲಿದೆ. ತಾಲ್ಲೂಕು ಕೇಂದ್ರ ಸ್ಥಳವಾದ ರಾಮದುರ್ಗದಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆದಿದೆ. ಹಿಂದೆ ಎಂಟು ಮಠಗಳು ಸ್ಥಾಪನೆಗೊಂಡ ಬಗ್ಗೆ ಮಾಹಿತಿ ದೊರೆತಿದೆ. ಇವುಗಳಲ್ಲಿ ಶ್ರೀ ವಿರಕ್ತಮಠ, ಶ್ರೀ ಹಿರೇಮಠ ಮತ್ತು ಶ್ರೀ ಶಿವಮೂರ್ತೇಶ್ವರ ವಿರಕ್ತಮಠ ಎಂಬ ಮೂರು ಮಠಗಳನ್ನು ದಾಖಲಿಸಬಹುದಾಗಿದ್ದು, ಉಳಿದ ಮಠಗಳು ಹೇಳಲು ಹೆಸರಿಲ್ಲದಂತಾಗಿವೆ. ಶ್ರೀ ಶಿವಮೂರ್ತೇಶ್ವರ ವಿರಕ್ತ ಮಠವು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ಶಿವಮೂರ್ತೇಶ್ವರ ವಿರಕ್ತಮಠ: ರಾಮದುರ್ಗ ಪಟ್ಟಣದ ನವೀಪೇಟೆ ಬಡಾವಣೆಯಲ್ಲಿ ಮುರುಘಾ ಸಮಯದ ಶ್ರೀ ಶಿವಮೂರ್ತೇಶ್ವರ ವಿರಕ್ತಸಂಪ್ರದಾಯದ ಈ ಮಠವು ಸ್ಥಾಪನೆಯಾಗಿದೆ. ಶ್ರೀ ಶಿವಮೂರ್ತೇಶ್ವರಸ್ವಾಮಿಗಳು ಜೀರ್ಣೋದ್ಧಾರಮಾಡಿ ಹೆಚ್ಚುಪ್ರಚಾರಕ್ಕೆ ತಂದಿದ್ದರಿಂದ ಈ ಮಠಕ್ಕೆ'ಶ್ರೀ ಶಿವಮೂರ್ತೇಶ್ವರ ವಿರಕ್ತಮಠ' ಎಂಬ ಹೆಸರು ಬಂದಿದೆ. ಮಠ ಸ್ಥಾಪನೆ: ಶ್ರೀ ಶಿವಮೂರ್ತೇಶ್ವರ ವಿರಕ್ತಮಠದ ಮೂಲಮಠವು ಹಂಪಿಹೊಳೆಯಲ್ಲಿದೆ. ಹಂಪಿಹೊಳೆಯ ಶ್ರೀ ಮಹಾಲಿಂಗ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಇಲ್ಲಿ ಬಂದು ನೆಲೆಸಿ ಮಠವನ್ನು ಸ್ಥಾಪಿಸಿದರು. ಗುರುಗಳು ತಪೋನುಷ್ಠಾನ ಮೂರ್ತಿಗಳಾಗಿದ್ದರು. ಇವರು ಸದಾ ಸಂಚಾರದಲ್ಲಿದ್ದು ವೀರಶೈವ ಧರ್ಮವನ್ನು ಪ್ರಚಾರಮಾಡಿದರು.

ಪರಂಪರೆ:
೧. ಶ್ರೀ ಮ.ನಿ.ಪ್ರ. ಮಹಾಲಿಂಗಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಶಿವಮೂರ್ತೇಶ್ವರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಪಂಚಾಕ್ಷರಸ್ವಾಮಿಗಳು

೪. ಶ್ರೀ ಮ.ನಿ.ಪ್ರ. ಒಪ್ಪತ್ತಯ್ಯಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಕರಿಬಸವಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಗಂಗಾಧರಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಶಾಂತವೀರಸ್ವಾಮಿಗಳು

ಮಠದ ಪರಂಪರೆಯ ಬಗ್ಗೆ ಅಸ್ಪಷ್ಟವಾದ ಮಾಹಿತಿಗಳು ದೊರೆತಿದ್ದು, ಈ ಆಧಾರದ ಮೇಲೆ ಪರಂಪರೆಯ ಗುರುಗಳ ಕೆಲವು ಹೆಸರುಗಳನ್ನು ದಾಖಲಿಸಲಾಗಿದೆ. ಕರ್ತೃ ಗುರುಗಳ ನಂತರ ಅಧಿಕಾರ ನಡೆಸಿದ ಗುರುಗಳು (ಹೆಸರು ಲಭ್ಯವಿಲ್ಲ) ಮಠವನ್ನು ಅಭಿವೃದ್ಧಿಪಡಿಸಿ ಲಿಂಗೈಕ್ಯರಾದರು. ನಂತರ ಶ್ರೀ ಶಿವಮೂರ್ತೇಶ್ವರ ಸ್ವಾಮಿಗಳು ಹಂಪಿಹೊಳೆ ಮಠದ ಮೂರನೆಯ ಉತ್ತರಾಧಿಕಾರಿಗಳಾಗಿ ನೇಮಕಗೊಂಡರು. ಗುರುಗಳು ತಮ್ಮ ಶಾಖಾಮಠವಾದ ರಾಮದುರ್ಗದ ಮಠದಲ್ಲಿ ನೆಲೆಸಿ, ಧಾರ್ಮಿಕ ಕಾರ್ಯಗಳನ್ನು ನಡೆಸತೊಡಗಿದರು. ಇವರ ಆಡಳಿತದ ಕಾಲದಲ್ಲಿ ಧರ್ಮೋಪದೇಶ ಹಾಗೂ ಅನ್ನದಾಸೋಹವು ನಡೆಯತೊಡಗಿ ಮಠವು ಪ್ರಬುದ್ಧಮಾನಕ್ಕೆ ಬಂದಿತು. ಗುರುಗಳು ಮಠವನ್ನು ಅಭಿವೃದ್ಧಿಪಡಿಸಿ ಸಿರಸಂಗಿಯಲ್ಲಿ ಲಿಂಗೈಕ್ಯರಾದರು.

ಶ್ರೀ ಶಿವಮೂರ್ತೇಶ್ವರ ಸ್ವಾಮಿಗಳ ನಂತರ ಅನೇಕ ಗುರುಗಳು ಅಧಿಕಾರವನ್ನು ನಡೆಸಿ ಮಠವನ್ನು ಬೆಳೆಸಿದ್ದಾರೆ. ಶ್ರೀ ಪಂಚಾಕ್ಷರ ಸ್ವಾಮಿಗಳ ಕಾಲದಲ್ಲಿ ಮಠದ ಭಕ್ತರಾದ ಶರಣೆ ಪತ್ರಮ್ಮ ಹೂಗಾರ ಇವರು ಮಠದ ಅಭಿವೃದ್ಧಿಗೆ ಅನೇಕ ದಾನ ದತ್ತಿಯನ್ನು ನೀಡಿ ಮಠವನ್ನು ಬೆಳೆಸಿರುವುದಾಗಿ ತಿಳಿದು ಬಂದಿದೆ. ಶ್ರೀ ಗಂಗಾಧರ ಸ್ವಾಮಿಗಳು ಶಿವ ಯೋಗಮಂದಿರದಲ್ಲಿ ವಿದ್ಯಾಭ್ಯಾಸ ಮಾಡಿ ಮಠದ ಆಡಳಿತವನ್ನು ವಹಿಸಿಕೊಂಡು, ಶ್ರೀ ಶಿವಮೂರ್ತೇಶ್ವರ ಮಠ ಹಾಗೂ ಇದಕ್ಕೆ ಹೊಂದಿಕೊಂಡ ಶಾಖಾಮಠಗಳನ್ನು ಅಭಿವೃದ್ಧಿಪಡಿಸಿದರು. ಇವರ ನಂತರ ಶ್ರೀ ಶಾಂತವೀರ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಮಠದ ಆಶ್ರಯದಲ್ಲಿ ಶ್ರೀ ಶಿವಮೂರ್ತೇಶ್ವರ ಬಾಲವಾಡಿಯನ್ನು ಪ್ರಾರಂಭಿಸಿ, ಶಿಕ್ಷಣ ಕ್ಷೇತ್ರಕ್ಕೂ ಪಾದಾರ್ಪಣೆ ಮಾಡಿ ನಾಂದಿ ಹಾಡಿದ್ದಾರೆ.

ವಿಳಾಸ:ಶ್ರೀ ಮ.ನಿ.ಪ್ರ.ಶಾಂತವೀರಸ್ವಾಮಿಗಳು, ಶ್ರೀ ಶಿವಮೂರ್ತೇಶ್ವರವಿರಕ್ತಮಠ, ನವೀಪೇಟೆ, ರಾಮದುರ್ಗ, ಬೆಳಗಾವಿ ಜಿಲ್ಲೆ.

❑

ಸವದತ್ತಿ ತಾಲ್ಲೂಕು

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕು ಧಾರ್ಮಿಕವಾಗಿ ವಿಶೇಷ ಸ್ಥಾನ ಪಡೆದಿದೆ. ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಬಹುಸಂಖ್ಯಾತ ಧರ್ಮೀಯರನ್ನು ಹೊಂದಿ ಪ್ರಬಲವಾಗಿ ಬೆಳೆದಿದೆ. ಇಲ್ಲಿ ಸುಮಾರು ಐವತ್ತಾರು ಮಠಗಳು ಸ್ಥಾಪನೆಗೊಂಡಿದ್ದವು ಎಂದು ಹೇಳಲಾಗುತ್ತಿದೆ. ಪ್ರಸ್ತುತ ಇಪ್ಪತ್ತೈದು ಮಠಗಳನ್ನು ಗುರುತಿಸಬಹುದಾಗಿದ್ದು ಇವುಗಳಲ್ಲಿ ಹದಿನಾಲ್ಕು ಮಠಗಳು ಅಸ್ತಿತ್ವದಲ್ಲಿವೆ.

ಇನಾಂಹೊಂಗಲ

ಸವದತ್ತಿ ತಾಲ್ಲೂಕಿನ ಇನಾಂಹೊಂಗಲವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಎಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಕುಮಾರ ಸಮಯದ ವಿರಕ್ತಮಠವು ಸ್ಥಾಪನೆಯಾಗಿ, ಇಲ್ಲಿನ ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿಯ ಕೇಂದ್ರವಾಗಿ ಬೆಳೆದಿದೆ.

ವಿರಕ್ತಮಠ: ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದ ಕ್ರಾಂತಿಯ ನಂತರ ಶರಣರು ದೇಶಾದ್ಯಂತ ಸಂಚಾರ ಕೈಗೊಂಡಾಗ ಶ್ರೀ ಚನ್ನಬಸವಣ್ಣ, ಶರಣೆ ಅಕ್ಕನಾಗಮ್ಮನವರ ತಂಡವು ಉಳವಿಗೆ ಹೋಗುವ ಸಂದರ್ಭದಲ್ಲಿ ಇನಾಂಹೊಂಗಲದಲ್ಲಿ ಕೆಲವುದಿನ ನೆಲೆ ನಿಂತು ಮಠವನ್ನು ಸ್ಥಾಪಿಸಿ, ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದರು. ಅಂದು ಸ್ಥಾಪನೆಗೊಂಡ ಮಠಕ್ಕೆ ಶ್ರೀ ಗುರುಪಾದ ಸ್ವಾಮಿಗಳು ಒಂದು ವ್ಯವಸ್ಥೆಯನ್ನು ಕಲ್ಪಿಸಿ ವಿರಕ್ತಮಠವು ಪುನರ್ ಸ್ಥಾಪನೆಗೊಳ್ಳಲು ಕಾರಣೀಭೂತರಾದರು. ಶ್ರೀ ಗುರುಪಾದ ಸ್ವಾಮಿಗಳು ತಪೋನಿಷ್ಠರಾಗಿ, ಕಾಯಕ ಯೋಗದಿಂದ ಮಠವನ್ನು ಶ್ರೀಮಂತಗೊಳಿಸಿದರು. ಗುರುಗಳು ಅಂದು ನಡೆಸುತ್ತಿದ್ದ ಧಾರ್ಮಿಕ ಕಾರ್ಯಗಳು ಹಾಗೂ ಅನ್ನದಾಸೋಹ ಕಾರ್ಯವನ್ನು ಇಂದಿಗೂ ಭಕ್ತರು ಭಕ್ತಿ ಪೂರ್ಣವಾಗಿ ನೆನಪು ಮಾಡಿಕೊಳ್ಳುತ್ತಾರೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಗುರುಪಾದಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಗಡದಯ್ಯಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಅಡವೀಶಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಚನ್ನಬಸವಯ್ಯಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಅಂದಾನಿಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ತೋಟಯ್ಯಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಚನ್ನವೀರಸ್ವಾಮಿಗಳು

ಈ ರೀತಿ ಮಠದ ಪರಂಪರೆಯ ಗುರುಗಳ ಕೆಲವು ಹೆಸರುಗಳನ್ನು ಮಾತ್ರ ದಾಖಲಿಸಲಾಗಿದೆ. ಉಳಿದ ಗುರುಗಳ ಹೆಸರುಗಳನ್ನು ಕಾಯ್ದಿಡದಿರುವ ಕಾರಣ ಮಾಹಿತಿ ಲಭ್ಯವಿಲ್ಲ. ಪರಂಪರೆಯಲ್ಲಿ ಹದಿನೇಳು ಗುರುಗಳು ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದರು ಎಂದು ಹೇಳಲಾಗುತ್ತಿದೆ. ಶ್ರೀ ಸಿದ್ಧಲಿಂಗ ಸ್ವಾಮಿಗಳು ಸವದತ್ತಿ ತಾಲ್ಲೂಕಿನ ಎಡಹಳ್ಳಿಯಲ್ಲಿ ೧೯೦೮ರ ಫೆಬ್ರವರಿ ಇಪ್ಪತ್ತೊಂದರಂದು ಶ್ರೀ ಚನ್ನಬಸವಯ್ಯ ಮತ್ತು ಶ್ರೀಮತಿ ಗೌರಮ್ಮನವರ ಪುತ್ರರಾಗಿ ಜನಿಸಿದರು. ನಾಗಯ್ಯನೆಂದು ಹೆಸರು ಪಡೆದು ಬೆಳೆದ ಇವರು ೧೯೪೩ರಲ್ಲಿ ಶ್ರೀ ಸಿದ್ಧಲಿಂಗ ಸ್ವಾಮಿಗಳೆಂಬ ಅಭಿಧಾನದೊಂದಿಗೆ ಇನಾಂಹೊಂಗಲ ವಿರಕ್ತಮಠದ ಅಧಿಕಾರವನ್ನು ಪಡೆದುಕೊಂಡರು. ಗುರುಗಳು ನಂತರ ಲೋಕ ಸಂಚಾರ ಕೈಗೊಂಡು ಐಹೊಳೆಯಲ್ಲಿ ನೆಲೆಸಿ, ರಾಮತಾಳಿಗೆ ಬಂದು ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ತಪೋನುಷ್ಠಾನ ಕೈಗೊಂಡರು. ಈ ಸಂದರ್ಭದಲ್ಲಿ ಶಿರೂರಿನ ಮಾಚ ಮನೆತನದ ಶ್ರೀ ಸಂಗಪ್ಪನವರು ಶ್ರೀ ಸಿದ್ಧಲಿಂಗ ಸ್ವಾಮಿಗಳನ್ನು ಶಿರೂರಿಗೆ ಆಹ್ವಾನಿಸಿದರು. ಗುರುಗಳು ಶಿರೂರಿಗೆ ಆಗಮಿಸಿ ಮಠವನ್ನು ಸ್ಥಾಪಿಸಿ ಬೆಳೆಸಿದರು. ಇವರು ಇನಾಂಹೊಂಗಲ

ಹಾಗೂ ಶಿರೂರು ಮಠಗಳನ್ನು ಅಭಿವೃದ್ಧಿಪಡಿಸಿ ೧೯೭೦ರಲ್ಲಿ ಲಿಂಗೈಕ್ಯರಾದರು. ಇವರ ನಂತರ ಶ್ರೀ ಸಿದ್ಧಲಿಂಗ ಸ್ವಾಮಿಗಳ ಕರಕಮಲ ಸಂಜಾತರಾಗಿ ಬೆಳೆದ ಶ್ರೀ ಚನ್ನವೀರ ಸ್ವಾಮಿಗಳು ಪರಂಪರೆಯ ಹದಿನೇಳನೆಯ ಗುರುಗಳಾಗಿ ೧೯೭೩ರಲ್ಲಿ ಅಧಿಕಾರವನ್ನು ವಹಿಸಿಕೊಂಡರು.

ಶ್ರೀ ಚನ್ನವೀರ ಸ್ವಾಮಿಗಳು ಸವದತ್ತಿ ತಾಲ್ಲೂಕಿನ ಎಡಳ್ಳಿಯ ಶ್ರೀ ಶಿವಪುತ್ರಯ್ಯ ಮತ್ತು ಶ್ರೀಮತಿ ಶಿವಗಂಗಮ್ಮನವರ ಪುತ್ರರಾಗಿ ೧೯೩೮ರ ಸೆಪ್ಟೆಂಬರ್ ಇಪ್ಪತ್ತೇಳರಂದು ಜನಿಸಿದರು. ಸಾತ್ವಿಕ ಕಳೆಯೊಂದಿಗೆ ಶ್ರೀ ಚನ್ನವೀರರು ಗುರುಹಿರಿಯರಲ್ಲಿ ಗೌರವ, ತೋರಿಸಿ, ಸೌಜನ್ಯ ಮೂರ್ತಿಗಳಾಗಿ ಬೆಳೆದರು. ಇವರು ಶಿವಯೋಗ ಮಂದಿರದಲ್ಲಿ ವೇದ, ಸಂಸ್ಕೃತ ಹಾಗೂ ಯೋಗಾಭ್ಯಾಸವನ್ನು ಮಾಡಿ ಮಠದ ಅಧಿಕಾರವನ್ನು ವಹಿಸಿಕೊಂಡರು. ಮಠದ ಶಾಖಾಮಠಗಳಾದ ಶಿರೂರು, ಮುಕ್ಕಲ್ಲ, ಹುನಗುಂದ ಹಾಗೂ ಮನಗುಂಡಿ ಮಠಗಳನ್ನು ಅಭಿವೃದ್ಧಿಪಡಿಸಿದ್ದಾರೆ.

ಶೈಕ್ಷಣಿಕ ಸೇವೆ: ಮಠದ ವತಿಯಿಂದ ಶ್ರೀ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿದ ಹಿಂದಿನ ಹಿರಿಯ ಗುರುಗಳಾದ ಲಿಂಗೈಕ್ಯ ಶ್ರೀ ಸಿದ್ಧಲಿಂಗ ಸ್ವಾಮಿಗಳು, ಈ ಮಠದ ಶಾಖಾಮಠವಾದ ಶಿರೂರಿನಲ್ಲಿ ಹೆಣ್ಣು ಮಕ್ಕಳಿಗಾಗಿ ಕನ್ನಡ ಪಾಠಶಾಲೆಯನ್ನು ಪ್ರಥಮವಾಗಿ ಪ್ರಾರಂಭಿಸಿದರು. ನಂತರ ೧೯೬೪ ರಲ್ಲಿ ಸಿದ್ಧೇಶ್ವರ ಪ್ರೌಢಶಾಲೆಯನ್ನು ಪ್ರಾರಂಭಿಸಿದರು. ಈಗಿನ ಗುರುಗಳಾದ ಶ್ರೀ ಚನ್ನವೀರ ಸ್ವಾಮಿಗಳು ಇನಾಂಹೊಂಗಲದಲ್ಲಿ ೧೯೭೪ ರಲ್ಲಿ ಪ್ರಾಥಮಿಕ ಶಾಲೆ, ೧೯೭೬ರಲ್ಲಿ ಪ್ರೌಢಶಾಲೆಗಳನ್ನು ಪ್ರಾರಂಭಿಸಿದರು. ಶಿರೂರಿನಲ್ಲಿ ಕೈಗಾರಿಕಾ ತರಬೇತಿ ಕೇಂದ್ರ ಮತ್ತು ಪದವಿಪೂರ್ವ ಕಾಲೇಜನ್ನು ಸ್ಥಾಪಿಸಿ ಗ್ರಾಮಾಂತರ ಪ್ರದೇಶ ದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದ್ದಾರೆ. ಶಿರೂರು ಮತ್ತು ಇನಾಂಹೊಂಗಲದಲ್ಲಿ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿ ಗ್ರಾಮಾಂತರ ಬಡಮಕ್ಕಳ ಕಲಿಕೆಗೆ ನೆರವಾಗಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಚನ್ನವೀರ ಸ್ವಾಮಿಗಳು, ಶ್ರೀ ವಿರಕ್ತಮಠ, ಇನಾಂಹೊಂಗಲ, ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಉಗರಗೋಳ

ಸವದತ್ತಿ ತಾಲ್ಲೂಕಿನ ಉಗರಗೋಳ ಗ್ರಾಮವು ತಾಲ್ಲೂಕು ಕೇಂದ್ರದಿಂದ ಇಪ್ಪತ್ತೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ನಿರ್ವಾಣೇಶ್ವರ ಮಠವು ಅಸ್ತಿತ್ವದಲ್ಲಿದೆ.

ನಿರ್ವಾಣೇಶ್ವರಮಠ: ಉಗರಗೋಳ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ನಿರ್ವಾಣೇಶ್ವರ ಮಠವು ವಿರಕ್ತ ಸಂಪ್ರದಾಯದಲ್ಲಿ ಬೆಳೆದು ಬಂದಿದೆ. ಈ ಮಠದ ಪರಂಪರೆಯ ಈಗಿನ ಗುರುಗಳಾಗಿ ಶ್ರೀ ಮಹಾಂತ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಮಹಾಂತ ಸ್ವಾಮಿಗಳು, ಶ್ರೀ ನಿರ್ವಾಣೇಶ್ವರಮಠ, ಉಗರಗೋಳ, ಸವದತ್ತಿ ತಾ, ಬೆಳಗಾವಿ ಜಿಲ್ಲೆ.

ಮುರಗೋಡು

ಸವದತ್ತಿ ತಾಲ್ಲೂಕಿನ ಮುರಗೋಡು, ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹದಿನೆಂಟು ಕಿ.ಮೀ ದೂರದಲ್ಲಿದೆ. ಅನಾದಿಕಾಲದಿಂದ ಇಲ್ಲಿ ವೀರಶೈವ ಧರ್ಮವು ಪ್ರಬಲವಾಗಿ ಬೆಳೆದು ಬಂದಿದೆ. ಪುರಾತನ ಕಾಲದಿಂದ ಇಲ್ಲಿ ಹನ್ನೆರಡು ಮಠಗಳು ಸ್ಥಾಪನೆಯಾಗಿದ್ದವು ಎಂಬ ಮಾಹಿತಿ ದೊರೆಯುತ್ತಿದೆ. ಶೋಧನೆಗೆ ಹೋದ ಸಂದರ್ಭದಲ್ಲಿ ಶ್ರೀ ದುರದುಂಡೇಶ್ವರಮಠ, ಶ್ರೀ ಹಿರೇಮಠ, ಶ್ರೀ ಚೌಕಿಮಠ ಹಾಗೂ ಶ್ರೀ ಎಕ್ಕುಂಡಿಮಠ ಎಂಬ ನಾಲ್ಕು ಮಠಗಳ ಹೆಸರನ್ನು ಗುರುತಿಸಲಾಗಿದೆ. ಇವುಗಳಲ್ಲಿ ಶ್ರೀ ಎಕ್ಕುಂಡಿ ಮಠವು ಎಕ್ಕುಂಡಿಯ ಶಾಖಾಮಠವಾಗಿ ಬೆಳೆದಿದೆ. ಉಳಿದ ಮಠಗಳು ಧಾರ್ಮಿಕ ಕಾರ್ಯಗಳನ್ನು ನಡೆಸುವ ಮೂಲಕ ಸಮಾಜವನ್ನು ಬೆಳೆಸುತ್ತಿವೆ.

ದುರುದುಂಡೇಶ್ವರಮಠ: ಮುರಗೋಡು ಗ್ರಾಮದ ಮಧ್ಯಭಾಗದಲ್ಲಿ ವಿರಕ್ತ ಸಂಪ್ರದಾಯದ ಶ್ರೀ ದುರುದುಂಡೇಶ್ವರ ಮಠವು ಸ್ಥಾಪನೆಯಾಗಿದೆ. ಶ್ರೀ ದುರುದುಂಡೇಶ್ವರರು ಲೋಕಸಂಚಾರದಲ್ಲಿದ್ದ ಸಂದರ್ಭದಲ್ಲಿ ಈ ನೆಲದಲ್ಲಿ ಕೆಲವು ದಿನ

ಅನುಷ್ಠಾನಗೊಂಡು ಜಾಗೃತ ಸ್ಥಳವನ್ನಾಗಿ ಮಾಡಿದ್ದರು. ಪುರಾತನ ಕಾಲದಲ್ಲಿ ಸ್ಥಾಪನೆಯಾದ ಈ ಮಠವು ಗೋಕಾಕ್ ತಾಲ್ಲೂಕಿನ ಅರಬಾವಿಯಮಠದ ಅಧೀನ ಮಠವಾಗಿ ಬೆಳೆದಿತ್ತು. ನಂತರ ಶ್ರೀ ಮಹಾಂತ ಶಿವಯೋಗಿಗಳು ೧೯೨೭ ರಲ್ಲಿ ಮುರಗೋಡು ಮಠಕ್ಕೆ ಆಗಮಿಸಿ, ಇಲ್ಲೇ ನೆಲೆಸಿ ಈ ಮಠವನ್ನು ಸ್ವತಂತ್ರ ಮಠವೆಂದು ಘೋಷಿಸಿ ಬೆಳೆಸಿದರು.

ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಸಾಲಹಳ್ಳಿಯ ಹಿರೇಮಠದ ಶ್ರೀ ವೀರಸಂಗಯ್ಯ ಮತ್ತು ಶ್ರೀಮತಿ ರಾಚಮ್ಮನವರ ಪುತ್ರರಾಗಿ ಶ್ರೀ ಮಹಾಂತಶಿವಯೋಗಿಗಳು ೧೮೬೭ರಲ್ಲಿ ಜನಿಸಿದರು. ಗುರುಗಳು ಬಾಲ್ಯದಲ್ಲೇ ಆಧ್ಯಾತ್ಮ ಸಂಸ್ಕಾರ ಪಡೆದು ಬೆಳೆದರು. ಅರಬಾವಿಯ ಶ್ರೀ ದುರುದುಂಡೇಶ್ವರ ಮಠದ ಶ್ರೀ ಶಿವಲಿಂಗೇಶ್ವರರ ಕೃಪಾಕಟಾಕ್ಷಕ್ಕೆ ಪಾತ್ರರಾದರು. ನಂತರ ದುರುದುಂಡೇಶ್ವರಮಠದ ಎಂಟನೆಯ ಗುರುಗಳಾದ ಶ್ರೀ ಸಿದ್ಧಲಿಂಗ ಸ್ವಾಮಿಗಳ ಕರಕಮಲ ಸಂಜಾತರಾಗಿ ಬೆಳೆದು, ಅರಬಾವಿ ಮಠದ ಒಂಬತ್ತನೆಯ ಗುರುಗಳಾಗಿ ಅಧಿಕಾರ ವಹಿಸಿಕೊಂಡು ಮಠವನ್ನು ಬೆಳೆಸಿದರು. ನಂತರ ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಶಿವಾನಂದ ಸ್ವಾಮಿಗಳನ್ನು ನೇಮಿಸಿ ಮುರುಗೋಡಿಗೆ ಆಗಮಿಸಿದರು.

ಶ್ರೀ ಮಹಾಂತ ಶಿವಯೋಗಿಗಳು ಇಲ್ಲಿ ಬಂದು ನೆಲೆ ನಿಂತು, ಶಿವಪೂಜಾ ನಿಷ್ಠೆಯಿಂದ ಸಿದ್ಧಿಯನ್ನು ಪಡೆದು ಭಕ್ತರನ್ನು ಉದ್ಧರಿಸಿದರು. ಗುರುಗಳು ಕರಿಹೆಂಚಿನ ಚಿಕ್ಕದಾದ ಮಠದಲ್ಲಿ ನೆಲೆಗೊಂಡು ಧಾರ್ಮಿಕ ಕಾರ್ಯಗಳಿಂದ ಭಕ್ತರನ್ನು ಉದ್ಧರಿಸಿದರು. ಭಕ್ತರು ಎರಡಂತಸ್ತಿನ ಬೃಹತ್ತಾದ ಕಟ್ಟಡವನ್ನು ನಿರ್ಮಿಸಿ, ೧೯೫೪ ರಲ್ಲಿ ಗುರುಗಳಿಗೆ ಒಪ್ಪಿಸಿದರು. ನಂತರ ೧೯೬೭ರಲ್ಲಿ ಗುರುಗಳ ಶತಮಾನೋತ್ಸವವನ್ನು'ನ ಭೋತೋ, ನ ಭವಿಷ್ಯತಿ'ಎಂಬಂತೆ ಆಚರಿಸಿದರು. ಇದರ ಸ್ಮರಣಾರ್ಥ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಬಸವ ಪೀಠವನ್ನು ಸ್ಥಾಪಿಸಿ, ಬಸವತತ್ತ್ವದ ಬಗ್ಗೆ ಅಧ್ಯಯನ ನಡೆಸಲು ದತ್ತಿನಿಧಿಯನ್ನು ಸ್ಥಾಪಿಸಲಾಯಿತು. ಈ ರೀತಿ ಶ್ರೀ ಮಹಾಂತ ಶಿವಯೋಗಿಗಳ ಮೇರು ವ್ಯಕ್ತಿತ್ವದಿಂದ ಪ್ರತಿಬಿಂಬಗೊಂಡ ಶ್ರೀ ದುರುದುಂಡೇಶ್ವರ ಮಠವು, ಕೆಲವೇ ವರ್ಷಗಳಲ್ಲಿ ಪ್ರಸಿದ್ಧಿ ಪಡೆದು ನಾಡಿನ ಹೆಸರಾದಂಥ ಮಠಗಳಲ್ಲಿ ಒಂದಾಗಿ ಬೆಳೆಯಿತು.

ಬೆಳೆದ ಪರಂಪರೆ: ಶ್ರೀ ಮಹಾಂತ ಶಿವಯೋಗಿಗಳು ಇಲ್ಲಿನ ಮಠವನ್ನು ಪ್ರಗತಿದಾಯಕವಾಗಿ ಬೆಳೆಸಿ, ಉತ್ತರಾಧಿಕಾರಿಗಳನ್ನಾಗಿ ಶ್ರೀ ನೀಲಕಂಠ ಸ್ವಾಮಿಗಳನ್ನು ನೇಮಿಸಿದರು. ಶ್ರೀ ನೀಲಕಂಠ ಸ್ವಾಮಿಗಳು ಬೈಲವಾಡ ಗ್ರಾಮದ ಹಿರೇಮಠದ ಶ್ರೀ ಗುರುಸಿದ್ಧಯ್ಯ ಮತ್ತು ಶ್ರೀಮತಿ ಸಂಗಮ್ಮನವರ ಪುತ್ರರಾಗಿ ೧೯೪೦ರಲ್ಲಿ ಜನಿಸಿದರು. ಬೈಲವಾಡದಲ್ಲಿಯೇ ಪ್ರಾಥಮಿಕ ವಿದ್ಯಾಭ್ಯಾಸ ಮಾಡಿ, ಶ್ರೀ ವರ್ತಿಮಠದ ಮರಿದೇವರಾಗಿ ನಿಯೋಜನೆಗೊಂಡರು. ಇವರು ಹಾನಗಲ್ಲು ಶ್ರೀ ಸದಾಶಿವ ಸ್ವಾಮಿಗಳ ಕೃಪಾಶೀರ್ವಾದದಿಂದ ಬೆಳೆದರು. ಗುರುಗಳು ಆರು ವರ್ಷಗಳ ಕಾಲ ಶಿವಯೋಗ ಮಂದಿರದಲ್ಲಿ ಅಧ್ಯಯನ ಮಾಡಿ, ನಂತರ ಉನ್ನತ ವಿದ್ಯಾಭ್ಯಾಸಕ್ಕೆಂದು ಕಾಶಿಗೆ ತೆರಳಿದರು. ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತದಲ್ಲಿ ಎಂ.ಎ ಪದವಿಯನ್ನು ಪಡೆದು ಬೈಲುವಾಡಕ್ಕೆ ಆಗಮಿಸುತ್ತಿದ್ದಂತೆಯೇ ಮುರಗೋಡು ಶ್ರೀ ಮಹಾಂತ ಶಿವಯೋಗಿಗಳು ಶ್ರೀ ನೀಲಕಂಠ ಸ್ವಾಮಿಗಳನ್ನು ಬರಮಾಡಿಕೊಂಡು, ಮುರಗೋಡು ದುರುದುಂಡೇಶ್ವರ ಮಠದ ಉತ್ತರಾಧಿಕಾರಿಗಳನ್ನಾಗಿ ನೇಮಿಸಿದರು. ಮುರುಗೋಡಿನ ಶ್ರೀ ಮಹಾಂತ ಶಿವಯೋಗಿಗಳು ನೂರಐದು ವರ್ಷಗಳ ದೀರ್ಘ ಬದುಕನ್ನು ಬದುಕಿ, ೧೯೭೨ರ ಫೆಬ್ರವರಿ ಇಪ್ಪತ್ತೆರಡರಂದು ಲಿಂಗೈಕ್ಯರಾದರು. ನಂತರ ಶ್ರೀ ನೀಲಕಂಠ ಸ್ವಾಮಿಗಳು ೧೯೭೨ ರ ಆಗಸ್ಟ್ ಇಪ್ಪತ್ನಾಲ್ಕರಂದು ಪಟ್ಟಾಧಿಕಾರವನ್ನು ವಹಿಸಿಕೊಂಡು ಮಠದ ಪರಂಪರೆಯನ್ನು ಬೆಳೆಸಿದರು.

ಶೈಕ್ಷಣಿಕ ಸೇವೆ: ೧೯೬೨ ರಲ್ಲಿ ಮಠದ ಆಶ್ರಯದಲ್ಲಿ ಸಂಸ್ಕೃತ, ವೇದ, ಜ್ಯೋತಿಷ್ಯ ಪಾಠಶಾಲೆಗಳನ್ನು ಶ್ರೀ ಮಹಾಂತ ಶಿವಯೋಗಿಗಳು ಪ್ರಾರಂಭಿಸಿದ್ದರು. ಅಂದಿನಿಂದ ಇಂದಿನವರೆಗೂ ನಿರಂತರವಾಗಿ ನಡೆದು ಬಂದಿವೆ. ೧೯೮೭ರಲ್ಲಿ ಬೆಳ್ಳಿ ಹಬ್ಬವನ್ನು ಆಚರಿಸಲಾಗಿದೆ.ಶ್ರೀ ನೀಲಕಂಠೇಶ್ವರ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಈ ವಿದ್ಯಾಸಂಸ್ಥೆಗಳಲ್ಲಿ ಉಚಿತ ವಸತಿ ಮತ್ತು ಊಟದ ವ್ಯವಸ್ಥೆಯನ್ನು ಮಾಡಿಸಿರುವುದರ ಜತೆಗೆ ಶ್ರೀ ಮಹಂತೇಶ್ವರ ಪ್ರೌಢಶಾಲೆ, ಪದವಿಪೂರ್ವ ಕಾಲೇಜು, ಜ್ಯೋತಿಷ್ಯ, ಸಿರಿಕಲ್ಚರ್ ಹಾಗೂ ತಾಂತ್ರಿಕ ವಿದ್ಯಾಶಾಲೆಗಳನ್ನು ಸ್ಥಾಪಿಸಿದರು. ಇದನ್ನೆಲ್ಲ ಅವಲೋಕಿಸಿದರೆ ಧಾರ್ಮಿಕ, ಶಿಕ್ಷಣ ಹಾಗೂ ಕೃಷಿ ಕ್ಷೇತ್ರಗಳಲ್ಲಿ ಗುರುಗಳ ಪ್ರಜ್ಞೆ ಎಂತಹದು ಎಂಬುದನ್ನು ತೋರಿಸುತ್ತದೆ.

ಸಾಹಿತ್ಯ ಸೇವೆ: ಶ್ರೀ ನೀಲಕಂಠೇಶ್ವರ ಸ್ವಾಮಿಗಳು ಧಾರ್ಮಿಕ ಮತ್ತು ಶೈಕ್ಷಣಿಕ ಸಾಧನೆಗಳ ಮಧ್ಯೆ ಕನ್ನಡಸಾಹಿತ್ಯ ಕ್ಷೇತ್ರವನ್ನು ಬೆಳೆಸುವ ದೃಷ್ಟಿಯಿಂದ, ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಶ್ರೀ ಮಹಾಂತ ಶಿವಯೋಗಿಗಳ ಶತಮಾನೋತ್ಸವದ ಸವಿ ನೆನಪಿಗಾಗಿ ನಾಲ್ಕು ಲಕ್ಷ ರೂಪಾಯಿಗಳ ದತ್ತಿನಿಧಿಯನ್ನು ಕೊಟ್ಟು ಬಸವೇಶ್ವರ ಅಧ್ಯಯನ ಪೀಠವನ್ನು ಸ್ಥಾಪಿಸಿ, ವೀರಶೈವ ಸಾಹಿತ್ಯದ ಬಗ್ಗೆ ಬೆಳಕು ಚೆಲ್ಲುವಂತಹ ಕೆಲಸ ಮಾಡಿದ್ದಾರೆ. ಶ್ರೀ ಮಹಾಂತ ಶಿವಯೋಗಿಗಳ ಇಪ್ಪತ್ತೈದನೆಯ ವಾರ್ಷಿಕ ಪುಣ್ಯಸ್ಮರಣೋತ್ಸವ ಹಾಗೂ ಶ್ರೀ ನೀಲಕಂಠ ಸ್ವಾಮಿಗಳ ರಜತ ಮಹೋತ್ಸವದ ಅಂಗವಾಗಿ ವೀರಶೈವ ಧರ್ಮದ ಮೇಲೆ ಬೆಳಕು ಚೆಲ್ಲುವಂತಹ ಇಪ್ಪತ್ತೈದು ಪುಸ್ತಕಗಳನ್ನು ಪ್ರಕಟಿಸಿ, ಮೌಲಿಕ ಕೃತಿಗಳನ್ನು ನೀಡಿದ್ದಾರೆ.

ಧಾರ್ಮಿಕಕಾರ್ಯಗಳು: ಮಠದ ಆವರಣದಲ್ಲಿ ಸ್ಥಾಪನೆಯಾಗಿರುವ ಶ್ರೀ ಮಹಾಂತ ಶಿವಯೋಗಿಗಳ ಗದ್ದುಗೆಗೆ ತ್ರಿಕಾಲ ಪೂಜೆ, ವಾರ್ಷಿಕ ಪುಣ್ಯಾರಾಧನೆ ಕಾರ್ಯಕ್ರಮ, ಪ್ರತಿ ತಿಂಗಳು ಶಿವಾನುಭವ ಗೋಷ್ಠಿಯನ್ನು ನಡೆಸಲಾಗುತ್ತಿದೆ. ಜನರಲ್ಲಿ ಧರ್ಮ ಜಾಗೃತಗೊಳಿಸುವ ಉದ್ದೇಶದಿಂದ ನಾಡಿನಾದ್ಯಂತ ಕಾಲುನಡಿಗೆಯಲ್ಲಿ ಸಂಚರಿಸಿ ವೀರಶೈವ ಧರ್ಮದ ಬಗ್ಗೆ ಪ್ರಚಾರ ಮಾಡಿ, ಸುಮಾರು ಹತ್ತುಸಾವಿರ ಜನರಿಗೆ ಲಿಂಗಧಾರಣೆ ಮಾಡಿರುವುದು ಮಠದ ಹಾಗೂ ಗುರುಗಳ ಅದ್ವಿತೀಯ ಕಾರ್ಯಗಳಲ್ಲಿ ಒಂದಾಗಿದೆ. ಮಠದಲ್ಲಿ ನಿತ್ಯ ದಾಸೋಹದ ವ್ಯವಸ್ಥೆಯನ್ನು ಮಾಡಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ.ನೀಲಕಂಠೇಶ್ವರಸ್ವಾಮಿಗಳು,ಶ್ರೀ ದುರುದುಂಡೇಶ್ವರಮಠ,ಮುರಗೋಡು, ಸವದತ್ತಿ ತಾ, ಬೆಳಗಾವಿ ಜಿಲ್ಲೆ.

ಹಿರೇಮಠ: ಮುರಗೋಡು ಗ್ರಾಮದ ಮಧ್ಯಭಾಗದಲ್ಲಿ ಉಜ್ಜಯಿನಿ ಪೀಠದ ಶಾಖಾಮಠವಾಗಿ, ಪುತ್ರವರ್ಗದ ಪರಂಪರೆಯಲ್ಲಿ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದಲ್ಲಿ ಸ್ಥಾಪನೆಯಾದ ಈ ಮಠವು ಧಾರ್ಮಿಕ ಕಾರ್ಯಗಳನ್ನು ನಡೆಸುವ ಮೂಲಕ ಹೆಚ್ಚು ಪ್ರಸಿದ್ಧಿಗೆ ಬಂದಿದೆ.

ಪರಂಪರೆ: ಶ್ರೀ ದೊಡ್ಡಪ್ಪಯ್ಯ ಶಿವಾಚಾರ್ಯ ಸ್ವಾಮಿಗಳು ಈ ಮಠದ ಸ್ಥಾಪಕ ಗುರುಗಳೆಂದು ಹೇಳಲಾಗುತ್ತಿದೆ. ಇವರು ಮಹಾತಪಸ್ವಿಗಳಾಗಿ ಲೋಕಸಂಚಾರ ಮಾಡಿ, ವೀರಶೈವ ಧರ್ಮದ ಆಚರಣೆಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸಿದರು. ಇವರ ನಂತರ ಪಟ್ಟಾಧಿಕಾರಕ್ಕೆ ಬಂದ ಶ್ರೀ ಮಳೆಮಲ್ಲೇಶ್ವರ ಶಿವಾಚಾರ್ಯ ಸ್ವಾಮಿಗಳು ಮಹಾತಪಸ್ವಿಗಳಾಗಿ, ಪವಾಡ ಪುರುಷರಾಗಿದ್ದರು. ೧೮೫೦ ರಲ್ಲಿ ಸವಣೂರು ನವಾಬನ ರಾಜ್ಯಾಡಳಿತದ ಕಾಲದಲ್ಲಿ ಮಳೆ ಬಾರದಿದ್ದಾಗ, ಶ್ರೀ ಮಲ್ಲೇಶ್ವರ ಶಿವಾಚಾರ್ಯ ಸ್ವಾಮಿಗಳು ತಪಸ್ಸನ್ನು ಆಚರಿಸಿ ಮಳೆ ತರಿಸಿದರಂತೆ. ಈ ಪವಾಡವನ್ನು ನೋಡಿದ ನವಾಬರು ಗುರುಗಳನ್ನು ಗೌರವಿಸಿ'ಶ್ರೀ ಮಳೆಮಲ್ಲೇಶ್ವರ'ರೆಂದು ಬಿರುದು ನೀಡಿ, ಮಠದ ಧಾರ್ಮಿಕ ಕಾರ್ಯಗಳಿಗೆ ನೆರವಾಗಲೆಂದು ೨೪೦ ಎಕರೆ ಭೂಮಿಯನ್ನು ಉಂಬಳಿಯನ್ನಾಗಿ ನೀಡಿದ್ದನೆಂದು ಹೇಳಲಾಗುತ್ತಿದೆ.

ಪವಾಡ ಪುರುಷರಾದ ಶ್ರೀ ಮಳೆಮಲ್ಲೇಶ್ವರ ಶಿವಾಚಾರ್ಯ ಸ್ವಾಮಿಗಳ ನಂತರ ಶ್ರೀ ಶಿವಲಿಂಗ ಸ್ವಾಮಿಗಳು ಮಠದ ಆಡಳಿತವನ್ನು ನಡೆಸಿ ೧೯೨೨ರಲ್ಲಿ ಲಿಂಗೈಕ್ಯರಾದರು. ನಂತರ ಶ್ರೀ ಚನ್ನಬಸವ ಸ್ವಾಮಿಗಳು ಪೀಠಾರೋಹಣ ಮಾಡಿದ ತರುವಾಯ ಗೃಹಸ್ಥಾಶ್ರಮ ಸ್ವೀಕರಿಸಿದರು. ನಂತರ ಮೂವತ್ತು ವರ್ಷಗಳ ಕಾಲ ಮಠವು ಖಾಲಿ ಉಳಿದಿತ್ತು. ತದನಂತರ ೧೯೫೭ ರಲ್ಲಿ ಶ್ರೀ ಉಮೇಶ್ವರ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠ ವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ಶ್ರೀ ಉಮೇಶ್ವರ ಶಿವಾಚಾರ್ಯ ಸ್ವಾಮಿಗಳು ೧೯೫೮ ರಿಂದ ೧೯೬೨ರ ತನಕ ಶಿವಯೋಗಮಂದಿರದಲ್ಲಿ ಸಂಸ್ಕೃತ,ವೈದಿಕ,ಹಿಂದಿ ಹಾಗೂ ಯೋಗಾಭ್ಯಾಸ ಮಾಡಿದರು. ನಂತರ ಗದುಗಿನ ತೋಂಟದಾರ್ಯರ ಮಠದಲ್ಲಿ ಜ್ಯೋತಿಷ್ಯ ಹಾಗೂ ಬೆಂಗಳೂರಿನ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ಸಂಸ್ಕೃತದ ಬಗ್ಗೆ ಅಧ್ಯಯನ ಮಾಡಿ, ಕಾಶಿಯ ಜಂಗಮವಾಡಿ ಮಠದಲ್ಲಿದ್ದುಕೊಂಡು ಹಿಂದಿ ಅಭ್ಯಾಸ ಮಾಡಿದ್ದಾರೆ. ಗುರುಗಳು ವಿದ್ವತ್‌ಪೂರ್ಣ ಪ್ರತಿಭೆಯಿಂದ ಮಠದ ಅಧಿಕಾರವನ್ನು ವಹಿಸಿಕೊಂಡು, ವೀರಶೈವ ಧರ್ಮವನ್ನು ಅಭಿವೃದ್ಧಿ ಪಥದಲ್ಲಿ ಬೆಳೆಯುವಂತೆ ಮಾಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಉಮೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಮುರಗೋಡು, ಸವದತ್ತಿ ತಾ, ಬೆಳಗಾವಿ ಜಿಲ್ಲೆ.

ಚೌಕಿಮಠ: ಮುರಗೋಡು ಗ್ರಾಮದ ಮಧ್ಯಭಾಗದಲ್ಲಿ ಶ್ರೀ ಚೌಕಿಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದಲ್ಲಿ ಸ್ಥಾಪನೆಯಾದ ಈ ಮಠವು ಇಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸುವ ಮೂಲಕ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ. ಹಿರಿಯ ಗುರುಗಳಾದ ಶ್ರೀ ಗುರುಸಿದ್ಧರಾಜ ಯೋಗಿಗಳು ಲಿಂಗೈಕ್ಯರಾದ ಮೇಲೆ ಹನ್ನೆರಡು ವರ್ಷದ ಶ್ರೀ ನೀಲಕಂಠ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಪುರಾತನ ಕಾಲದ ಈ ಮಠಕ್ಕೆ ಹತ್ತು ಎಕರೆ ಜಮೀನಿದ್ದು, ಇದನ್ನು ಅಭಿವೃದ್ಧಿಪಡಿಸಿ ಆದಾಯ ಬರುವಂತೆ ಮಾಡಲಾಗಿದೆ. ಇದರಿಂದ ಬರುವ ಆದಾಯವನ್ನು ಬಳಸಿಕೊಂಡು ಮಠದ ಧಾರ್ಮಿಕ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗುತ್ತಿದೆ.

ವಿಳಾಸ: ಶ್ರೀ ನೀಲಕಂಠ ಸ್ವಾಮಿಗಳು, ಶ್ರೀ ಚೌಕಿಮಠ, ಮುರಗೋಡು, ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಮುನವಳ್ಳಿ

ಸವದತ್ತಿ ತಾಲ್ಲೂಕಿನ ಮುನವಳ್ಳಿ ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಹತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಹನ್ನೆರಡು ಮಠಗಳು ಸ್ಥಾಪನೆಯಾಗಿದ್ದವು ಎಂಬ ಮಾಹಿತಿದೊರೆತಿದೆ. ಶೋಧನೆಗೆ ಹೋದ ಸಂದರ್ಭದಲ್ಲಿ ಶ್ರೀಆಲೂರು ಮಠ, ಶ್ರೀ ವಿರಕ್ತಮಠ, ಶ್ರೀ ಅನ್ನದಾನೇಶ್ವರಮಠ, ಶ್ರೀ ಚಂದ್ರಶೇಖರಮಠ, ಶ್ರೀ ಪಶುಪತಿಮಠ, ಶ್ರೀ ಹಿರೇಮಠ, ಶ್ರೀ ಚೌಕಿಮಠ ಹಾಗೂ ತೊರೆಗಲ್ಲಿನ ಶಾಖಾಮಠವಾಗಿರುವ ಶ್ರೀ ಕಲ್ಮಠ ಎಂಬ ಎಂಟು ಮಠಗಳು ದೊರೆತಿವೆ. ಇವು ಗಳಲ್ಲಿ ಶ್ರೀ ಹಿರೇಮಠ, ಶ್ರೀ ಚೌಕಿಮಠ ಮತ್ತು ಶ್ರೀ ಕಲ್ಮಠ ಗದ್ದುಗೆ ಪೂಜೆಗಷ್ಟೇ ಸೀಮಿತಗೊಂಡಿವೆ. ಶ್ರೀ ಪಶುಪತಿ ಮಠವು ಮಹಾರಾಷ್ಟ್ರದ ಮಿರಜ್ ಮಠದ ಶಾಖಾಮಠವಾಗಿ ಬೆಳೆದಿದೆ. ಉಳಿದ ಮಠಗಳು ಅಸ್ತಿತ್ವ ದಲ್ಲಿದ್ದು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಆಲೂರುಮಠ: ಮುನವಳ್ಳಿಯ ಪೂರ್ವಭಾಗದಲ್ಲಿ ವಿರಕ್ತ ಪರಂಪರೆಯ ಕುಮಾರ ಸಮಯದ ಶ್ರೀ ಆಲೂರು ಮಠವು ಸ್ಥಾಪನೆ ಯಾಗಿದೆ. ಮಲಪ್ರಭ ನದಿಯ ಒಂದು ದಡದಲ್ಲಿ ಮುನುವಳ್ಳಿ ಬೆಳೆದರೆ, ಇನ್ನೊಂದು ದಡದ ಮೇಲೆ ಆಲೂರು ಮಠ ಬೆಳೆದಿದೆ. ಈ ರೀತಿ ಪ್ರಕೃತಿಯ ಸೆರಗಿನಲ್ಲಿರುವ ಮಠವು ಮುನುವಳ್ಳಿ ಮತ್ತು ಸಿಂಧೋಗಿ ಹಳ್ಳಿಗಳ ವ್ಯಾಪ್ತಿಯಲ್ಲಿ ಬೆಳೆದು, ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿದೆ.

ಮಠ ಸ್ಥಾಪನೆ: ಶ್ರೀ ಬಸವಲಿಂಗ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಈ ಸ್ಥಳದಲ್ಲಿ ಅನುಷ್ಠಾನ ಕೈಗೊಂಡಿದ್ದ ಸಂದರ್ಭದಲ್ಲಿ ಗುರುಗಳ ಕೃಪಾಶೀರ್ವಾದಕ್ಕೆ ಒಳಗಾದ ಭಕ್ತರು ಗುರುಗಳನ್ನು ಇಲ್ಲಿಯೇ ನೆಲೆ ನಿಲ್ಲಿಸಿಕೊಳ್ಳಬೇಕೆಂದು ತೀರ್ಮಾನಿಸಿದರು. ಮುನವಳ್ಳಿಯ ಭಕ್ತರ ಒತ್ತಾಯಕ್ಕೆ ಮಣಿದ ಸಿಂಧೋಗಿ ದೊರೆಯು ಗುರುಗಳ ದರ್ಶನ ಪಡೆದು ಗುರುಗಳಿಗಾಗಿ ೧೮೫೨ ರಲ್ಲಿ ಮಠವನ್ನು ಸ್ಥಾಪಿಸಿಕೊಟ್ಟನು. ಸಿಂಧೋಗಿ ದೊರೆಯು ಮಠದ ಧಾರ್ಮಿಕ ಕಾರ್ಯಗಳಿಗೆ ನೆರವಾಗಲೆಂದು ಮಠದ ಸುತ್ತಲಿನ ಐವತ್ತೆರಡು ಎಕರೆ ಜಮೀನನ್ನು ಮಠಕ್ಕೆ ಉಂಬಳಿಯಾಗಿ ನೀಡಿದನು. ಮಠವು ಸ್ಥಾಪನೆಗೊಂಡ ಮೇಲೆ ಶ್ರೀ ಬಸವಲಿಂಗ ಸ್ವಾಮಿಗಳು ನಿತ್ಯ ಶಿವಾನುಭವಗೋಷ್ಠಿ ಹಾಗೂ ನಿರಂತರ ಅನ್ನದಾಸೋಹ ವನ್ನು ನಡೆಸುವುದರ ಮೂಲಕ ವೀರಶೈವ ಧರ್ಮವನ್ನು ಪ್ರಚಾರಕ್ಕೆ ತಂದರೆಂದು ಪ್ರತೀತಿ ಇದೆ.

ಪರಂಪರೆ: ರಾಜಾಶ್ರಯದಲ್ಲಿ ಪ್ರಾರಂಭವಾದ ಈ ಮಠದಲ್ಲಿ ಶ್ರೀ ಬಸವಲಿಂಗ ಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಗುರು ಗಳ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ನಂತರ ಮಠವು ಹಾನಗಲ್ಲು ವಿರಕ್ತ ಮಠದ ಶಾಖಾಮಠವಾಗಿ ಬೆಳೆದು ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಮಾಜಿಕವಾಗಿ ಹೆಚ್ಚು ಪ್ರಸಿದ್ಧಿ ಪಡೆದಿದೆ. ಹಾನಗಲ್ಲು ವಿರಕ್ತ ಮಠದ ಈಗಿನ ಮಠಾಧೀಶರಾದ ಶ್ರೀ ಕುಮಾರ ಸ್ವಾಮಿಗಳು ಸಂದರ್ಭಕ್ಕನುಸಾರವಾಗಿ ಈ ಮಠಕ್ಕೆ ಭೇಟಿ ನೀಡಿ ಪ್ರತಿ ಹುಣ್ಣಿಮೆಯಂದು ಶಿವಾನುಭವ ಗೋಷ್ಠಿಯನ್ನು ನಡೆಸಿ ಆಶೀರ್ವಚನ ನೀಡುತ್ತಾ, ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಕರ್ತೃಗುರುಗಳಾದ ಶ್ರೀ ಬಸವಲಿಂಗ ಸ್ವಾಮಿಗಳ ಗದ್ದುಗೆಗೆ ಭವ್ಯವಾದ ಮಂಟಪವನ್ನು

ನಿರ್ಮಿಸಲಾಗಿದೆ. ಮಠದ ಹಳೆಯ ಕಟ್ಟಡವನ್ನು ನವೀಕರಿಸಿ ಅಭಿವೃದ್ಧಿಪಡಿಸಲಾಗಿದೆ. ಮಠದ ಮುಂಭಾಗದಲ್ಲಿ ದ್ವಾರ ಮಂಟಪವನ್ನು ನಿರ್ಮಿಸಲಾಗಿದೆ. ಹಿಂದೆ ಸಿಂಧೋಗಿ ದೊರೆ ಕೊಟ್ಟಂತಹ ಜಮೀನಿನ ಒಂದು ಭಾಗವನ್ನು ಮಠದ ಹೆಸರಿನಲ್ಲಿ ಶ್ರೀ ಕುಮಾರ ಸ್ವಾಮಿಗಳು ಪ್ರೌಢಶಾಲೆಯನ್ನು ನಿರ್ಮಿಸಲು ಗ್ರಾಮಸ್ಥರಿಗೆ ದಾನವಾಗಿ ನೀಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗುರುಗಳ ಗದ್ದುಗೆಗಳಿಗೆ ನಿತ್ಯಪೂಜೆ, ಪ್ರತಿ ಹುಣ್ಣಿಮೆಯಲ್ಲಿ ಶಿವಾನುಭವ ಕಾರ್ಯಕ್ರಮವನ್ನು ಏರ್ಪಡಿಸಿ ವಿದ್ವಾಂಸರಿಂದ ಶರಣರ ಬಗ್ಗೆ ಉಪನ್ಯಾಸ ಮಾಡಿಸುವುದಲ್ಲದೆ ಸಣ್ಣ ಮಕ್ಕಳಿಗಾಗಿ ವಚನ ಸ್ಪರ್ಧೆಯನ್ನು ಏರ್ಪಡಿಸಿ, ಬಹುಮಾನವನ್ನು ನೀಡಿ ಪ್ರೋತ್ಸಾಹಿಸಲಾಗುತ್ತಿದೆ. ಈ ಕಾರ್ಯಕ್ರಮಕ್ಕೆ ಸುತ್ತಲ ಗ್ರಾಮಸ್ಥರು ಆಗಮಿಸಿ, ಇಲ್ಲಿ ನಡೆಯುವ ಜ್ಞಾನ ಹಾಗೂ ಅನ್ನದಾಸೋಹದಲ್ಲಿ ಪಾಲ್ಗೊಳ್ಳುತ್ತಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಕುಮಾರ ಸ್ವಾಮಿಗಳು, ಶ್ರೀ ಆಲೂರು ಮಠ, ಮುನವಳ್ಳಿ, ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಅನ್ನದಾನೇಶ್ವರಮಠ: ಮುನವಳ್ಳಿಯ ಮಧ್ಯಭಾಗದಲ್ಲಿ ಶ್ರೀ ಅನ್ನದಾನೇಶ್ವರ ಮಠವು ಸ್ಥಾಪನೆಯಾಗಿದೆ. ವಿರಕ್ತ ಸಂಪ್ರದಾಯದ ಕುಮಾರ ಸಮಯದ ಈ ಮಠವನ್ನು ಶ್ರೀ ಅನ್ನದಾನೇಶ್ವರ ಸ್ವಾಮಿಗಳು ಸ್ಥಾಪನೆ ಮಾಡಿದ್ದರಿಂದ 'ಶ್ರೀ ಅನ್ನದಾನೇಶ್ವರಮಠ' ಎಂಬ ಹೆಸರು ಬಂದಿದೆ. ಪುರಾತನ ಕಾಲದಲ್ಲಿ ಪ್ರಾರಂಭಗೊಂಡ ಈ ಮಠವು ನಾಡಿನ ಪ್ರಸಿದ್ಧ ಮಠಗಳಲ್ಲಿ ಒಂದಾಗಿ ಬೆಳೆದಿತ್ತು. ಕಾಲಾನಂತರ ಕೇವಲ ಧಾರ್ಮಿಕ ಕಾರ್ಯಗಳಿಗಷ್ಟೇ ಸೀಮಿತಗೊಂಡು, ಮಠದ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ.

ಪರಂಪರೆ: ಈ ಮಠದಲ್ಲಿ ಅನೇಕ ಗುರುಗಳು ಆಡಳಿತವನ್ನು ನಡೆಸಿದ ಬಗ್ಗೆ ಮಾಹಿತಿ ದೊರೆಯುತ್ತಿದೆ. ಆದರೆ ಪರಂಪರೆಯನ್ನು ದಾಖಲಿಸಿಡದ ಕಾರಣ ಗುರುಗಳ ಹೆಸರು ಲಭ್ಯವಿಲ್ಲ. ಪರಂಪರೆಯ ಗುರುಗಳಾಗಿ ಅಧಿಕಾರ ವಹಿಸಿಕೊಂಡಿದ್ದ ಶ್ರೀ ಬಸವಲಿಂಗ ಸ್ವಾಮಿಗಳು, ಮಠದ ಹಳೆಯ ಕಟ್ಟಡವನ್ನು ತೆಗೆಸಿ ಹೊಸ ಕಟ್ಟಡವನ್ನು ನಿರ್ಮಿಸಿದರು. ಇವರ ಕಾಲದಲ್ಲಿ ಮಠವು ಪ್ರಸಿದ್ಧಿ ಪಡೆದು ಬೆಳೆಯಿತು. ಮಠದಲ್ಲಿ ನಿತ್ಯ ಶಿವಾನುಭವಗೋಷ್ಠಿ ಹಾಗೂ ಅನ್ನದಾಸೋಹ ನಡೆಯತೊಡಗಿತು. ಮಠದಲ್ಲಿ ಸಂಸ್ಕೃತ, ವೇದಾಧ್ಯಯನ ಮಾಡುವ ವಟುಗಳಿಗೆ ಅವಕಾಶ ಕಲ್ಪಿಸಿ ಕೊಡಲಾಯಿತ್ತು. ನಂತರ ಅಧಿಕಾರಕ್ಕೆ ಬಂದ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ಲಭ್ಯವಿಲ್ಲ. ಈ ಹಿಂದೆ ಅಧಿಕಾರ ನಡೆಸಿ ಲಿಂಗೈಕ್ಯರಾದ ಶ್ರೀ ಸೋಮಶೇಖರ ಸ್ವಾಮಿಗಳು ಆಧ್ಯಾತ್ಮ ಚಿಂತನೆಯಿಂದ ಮಠವನ್ನು ಆರ್ಥಿಕವಾಗಿ ಅಭಿವೃದ್ಧಿಪಡಿಸದೆ ಹೋದರು. ಇವರ ಕಾಲದಲ್ಲಿ ಪ್ರತಿವರ್ಷ ಮೂರ್‍ನಾಲ್ಕು ವಿದ್ಯಾರ್ಥಿಗಳಿಗೆ ಮಠದಲ್ಲಿ ಆಶ್ರಯ ಕಲ್ಪಿಸಿಕೊಟ್ಟಿದ್ದರು. ಗುರುಗಳು ಲಿಂಗೈಕ್ಯರಾದ ಮೇಲೆ ಮಠವು ಮಠಾ ಧೀಶರಿಲ್ಲದೆ ಖಾಲಿ ಉಳಿದಿದೆ. ಮಠದ ಆವರಣದಲ್ಲಿರುವ ಮೂರು ಗದ್ದುಗೆಗಳಿಗೆ ನಿತ್ಯ ಪೂಜೆ ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಅನ್ನದಾನೇಶ್ವರ ಮಠ, ಮುನವಳ್ಳಿ, ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ.

ವಿರಕ್ತಮಠ: ಮುನವಳ್ಳಿಯ ಮಧ್ಯಭಾಗದಲ್ಲಿ ವಿರಕ್ತ ಸಂಪ್ರದಾಯದ ಶ್ರೀ ವಿರಕ್ತ ಮಠವು ಸ್ಥಾಪನೆಯಾಗಿದೆ. ಹನ್ನೆರಡನೆಯ ಶತಮಾನದಲ್ಲಿ ಸ್ಥಾಪನೆಯಾಗಿದೆ ಎಂದು ಹೇಳುವ ಈ ಮಠದಲ್ಲಿ, ಇದಕ್ಕೆ ಪೂರಕವಾಗುವ ಯಾವುದೇ ಆಧಾರಗಳು ಲಭ್ಯವಿಲ್ಲ. ಮಠದ ಸ್ಥಾಪಕ ಗುರುಗಳ ಬಗ್ಗೆಯೂ ಮಾಹಿತಿ ಲಭ್ಯವಿಲ್ಲ. ಪುರಾತನ ಕಾಲದಲ್ಲಿ ಸ್ಥಾಪನೆಯಾದ ಈ ಮಠವು ಅನೇಕ ವರ್ಷಗಳ ಕಾಲ ಉತ್ತರಾಧಿಕಾರಿಗಳಿಲ್ಲದೆ ಖಾಲಿ ಉಳಿದಿತ್ತು. ಈಗ ಶ್ರೀ ಶಿವಕುಮಾರ ಸ್ವಾಮಿಗಳು ಈ ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡು, ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಶಿವಕುಮಾರ ಸ್ವಾಮಿಗಳು, ಶ್ರೀ ವಿರಕ್ತಮಠ, ಮುನವಳ್ಳಿ, ಸವದತ್ತಿ ತಾಲ್ಲೂಕು, ಬೆಳಗಾಂ ಜಿಲ್ಲೆ.

ಸೋಮಶೇಖರಮಠ: ಮುನವಳ್ಳಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಸೋಮಶೇಖರ ಮಠವು ಪ್ರಾಚೀನ ಹಾಗೂ ಪ್ರಸಿದ್ಧ ಮಠವಾಗಿ ಬೆಳೆದಿತ್ತು. ಹಿಂದೆ ಶ್ರೀ ಮುರುಘೇಂದ್ರ ಸ್ವಾಮಿಗಳು ಅಧಿಕಾರವನ್ನು ನಡೆಸಿ

ಮಠವನ್ನು ಬೆಳೆಸಿದ್ದರು. ಕಳೆದ ಇಪ್ಪತ್ತು ದಶಕಗಳ ಹಿಂದೆ ಮಠವು ಜೀರ್ಣಗೊಂಡಿತು. ಈಗ ಶ್ರೀ ಚನ್ನಬಸವ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠವು ಜೀರ್ಣಾಭಿವೃದ್ಧಿಗೊಂಡಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಚನ್ನಬಸವ ಸ್ವಾಮಿಗಳು, ಶ್ರೀ ಸೋಮಶೇಖರಮಠ, ಮುನುವಳ್ಳಿ, ಸವದತ್ತಿ ತಾ, ಬೆಳಗಾಂ ಜಿಲ್ಲೆ.

ಯಕ್ಕುಂಡಿ

ಸವದತ್ತಿ ತಾಲ್ಲೂಕಿನ ಯಕ್ಕುಂಡಿ ತಾಲ್ಲೂಕು ಕೇಂದ್ರದಿಂದ ಹತ್ತು ಕಿ.ಮೀ ದೂರದಲ್ಲಿದೆ. ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದ ಶರಣರು ಉಳವಿಗೆ ಹೋಗುವಾಗ ಮಧ್ಯದಲ್ಲಿ ಯಕ್ಕುಂಡಿಯಲ್ಲಿ ನೆಲೆ ನಿಂತು ಧರ್ಮ ಪ್ರಚಾರವನ್ನು ಕೈಗೊಂಡಿದ್ದರು. ಅಂದು ಸ್ಥಾಪಿಸಲ್ಪಟ್ಟ ಮಠವು ಈತನಕ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ಕುಮಾರೇಶ್ವರ ವಿರಕ್ತಮಠ: ಯಕ್ಕುಂಡಿಯಲ್ಲಿ ಅಂದು ಸ್ಥಾಪನೆಗೊಂಡ ವಿರಕ್ತ ಮಠವು ಮಲಪ್ರಭ ಜಲಾಶಯದ ಹಿನ್ನೀರಿನಿಂದ ಮುಳುಗಡೆಗೊಂಡಿತು. ಎಕ್ಕುಂಡಿ ಗ್ರಾಮವು ಸ್ಥಳಾಂತರಗೊಂಡಾಗ ಮಠವೂ ಸ್ಥಳಾಂತರಗೊಂಡಿತು. ಹಿಂದಿನ ಎಕ್ಕುಂಡಿ ಗ್ರಾಮದ ಉತ್ತರ ಭಾಗದಲ್ಲಿ ಮಠವು ಸ್ಥಾಪನೆಗೊಂಡು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ಸ್ಥಳಾಂತರಗೊಂಡ ಮಠದ ಆವರಣದಲ್ಲಿ ತೋರುಗದ್ದುಗೆ ಸ್ಥಾಪನೆಯಾಗಿದ್ದು ಇದಕ್ಕೆ ನಿತ್ಯಪೂಜೆಯನ್ನು ನಡೆಸಲಾಗುತ್ತಿದೆ.

ಈಗ ಶ್ರೀ ವಿರೂಪಾಕ್ಷ ಸ್ವಾಮಿಗಳು ಆಡಳಿತವನ್ನು ನೋಡಿಕೊಂಡು ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ಇವರು ತಮ್ಮ ಉತ್ತರಾಧಿಕಾರಿಗಳನ್ನಾಗಿ ಗೋಕಾಕ್ ತಾಲ್ಲೂಕಿನ ಹುರುಬಿನಹಟ್ಟಿಯ ಶ್ರೀ ಪಂಚಾಕ್ಷರಿ ಸ್ವಾಮಿಗಳನ್ನು ನೇಮಕ ಮಾಡಿಕೊಂಡಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಪಂಚಾಕ್ಷರಿ ಸ್ವಾಮಿಗಳು, ಶ್ರೀ ಕುಮಾರೇಶ್ವರ ವಿರಕ್ತಮಠ, ಯಕ್ಕುಂಡಿ, ಸವದತ್ತಿ ತಾ, ಬೆಳಗಾವಿ ಜಿಲ್ಲೆ.

ಸವದತ್ತಿ

ಬೆಳಗಾವಿ ಜಿಲ್ಲೆಯ ಸವದತ್ತಿಯು ಜಿಲ್ಲಾ ಕೇಂದ್ರದಿಂದ ಪೂರ್ವಕ್ಕೆ ನಲವತ್ತು ಕಿ.ಮೀ ದೂರದಲ್ಲಿದೆ. ಇದು ಇತಿಹಾಸ ಪ್ರಸಿದ್ಧ ಸ್ಥಳವಾಗಿದೆ. ಸವದತ್ತಿಗೆ'ಸುಗಂಧವರ್ತಿ'ಎಂದು ಹೆಸರಿತ್ತು. ಈ ಪದ ಸೌಂದತ್ತಿ ಎಂಬ ಸಂಸ್ಕೃತ ಮೂಲ ಪದವಾಗಿ ಪರಿವರ್ತನೆಗೊಂಡಿದೆ. ಸುಗಂಧವರ್ತಿ>ಸೌಂದತ್ತಿ>ಈಗ'ಸವದತ್ತಿ'ಯಾಗಿದೆ. ಹಿಂದೆ ಈ ಸ್ಥಳವು ರಟ್ಟರ ರಾಜಧಾನಿ ಯಾಗಿತ್ತು. ಮುನ್ನೂರು ವರ್ಷಗಳ ಕಾಲ ಆಳ್ವಿಕೆ ನಡೆಸಿದ ರಟ್ಟರ ಕಾಲದಲ್ಲಿ ನಿರ್ಮಾಣಗೊಂಡ ಕೋಟೆ ಕೊತ್ತಲಗಳು ಇಂದು ಯಾತ್ರಿಕರಿಗೆ ಪ್ರೇಕ್ಷಣೀಯ ಸ್ಥಳಗಳಾಗಿವೆ.

ಸವದತ್ತಿಯ ರೇಣುಕ ಕ್ಷೇತ್ರ, ಪ್ರಸಿದ್ಧಿ ಪಡೆದಿದ್ದು ನಾಡಿನಾದ್ಯಂತ ಭಕ್ತರು ಈ ಸುಕ್ಷೇತ್ರಕ್ಕೆ ಬರುತ್ತಾರೆ. ಇಂತಹ ಪೌರಾಣಿಕ ಹಾಗೂ ಐತಿಹಾಸಿಕ ಕ್ಷೇತ್ರವಾಗಿರುವ ಸವದತ್ತಿ, ವೀರಶೈವಧರ್ಮದ ನೆಲೆಬೀಡಾಗಿ ಬೆಳೆದಿದೆ. ಪುರಾತನ ಕಾಲದಲ್ಲಿ ಇಲ್ಲಿ ಹನ್ನೆರಡು ಮಠಗಳು ಸ್ಥಾಪನೆಯಾಗಿದ್ದವು ಎಂದು ಮಾಹಿತಿ ದೊರೆತಿದೆ. ಈ ಆಧಾರದ ಮೇಲೆ ಶೋಧನೆ ನಡೆಸಿದಾಗ ಶ್ರೀ ಕಲ್ಮಠ, ಶ್ರೀ ಹೊಸಮಠ, ಶ್ರೀ ಕಳ್ಳಿಮಠ (ಮೂಲಿ ಮಠ), ಶ್ರೀ ಬೆಟಸೂರುಮಠ, ಶ್ರೀ ಸ್ವಾದಿಮಠ ಹಾಗೂ ಶ್ರೀ ಶಂಭಯ್ಯನಮಠ ಎಂಬ ಆರು ಮಠಗಳು ದೊರೆತಿವೆ. ಉಳಿದ ಆರು ಮಠಗಳು ನಿರ್ನಾಮಗೊಂಡಿವೆ. ಲಭ್ಯವಿರುವ ಮಠಗಳಲ್ಲಿ ಶ್ರೀ ಶಂಭಯ್ಯನ ಮಠವು ಈಗ ಸಂಸಾರಿ ಮಠವಾಗಿ ರೂಪಾಂತರಗೊಂಡಿದೆ. ಉಳಿದ ಎಲ್ಲಾ ಮಠಗಳು ಅಸ್ತಿತ್ವದಲ್ಲಿದ್ದು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಸ್ವಾದಿಮಠ: ಸವದತ್ತಿ ಪಟ್ಟಣದ ಹೊರಭಾಗದಲ್ಲಿ ಶ್ರೀ ಸ್ವಾದಿ ಮಠವು ಸ್ಥಾಪನೆಯಾಗಿದೆ. ವಿರಕ್ತ ಸಂಪ್ರದಾಯದ ಕುಮಾರ ಸಮಯದ ಈ ಮಠವನ್ನು ಸೋದೆಯ ಅರಸರು (೧೬೧೮-೧೭೬೩) ಸ್ಥಾಪನೆ ಮಾಡಿರುವುದರಿಂದ 'ಸೋದೆ ಮಠ' ಎಂಬ ಹೆಸರು ಬಂದಿದೆ. ಇದು ಕಾಲಾನಂತರ 'ಸ್ವಾದಿಮಠ'ವಾಗಿ ರೂಪಾಂತರ ಪಡೆದಿದೆ.

ಮಠ ಸ್ಥಾಪನೆ: ಶ್ರೀ ಮಹಾಂತೇಶ್ವರ ಸ್ವಾಮಿಗಳ ಕಾಲದಲ್ಲಿ ಈ ಮಠವು ಸ್ಥಾಪನೆಯಾಗಿದ್ದು, ಅವರ ಕಾಲದಲ್ಲಿ ಹೆಚ್ಚು

ಅಭಿವೃದ್ಧಿಗೊಂಡು ಬೆಳೆಯಿತು. ಗುರುಗಳು ಕ್ರಿಯಾಶೀಲರಾಗಿ, ವೀರಶೈವ ಧರ್ಮವನ್ನು ಪ್ರಚಾರಪಡಿಸಿದರು. ಸೋದೆಯರ ನೆರವನ್ನು ಪಡೆದು ಮಠವನ್ನು ಸ್ಥಾಪಿಸಿದ ಗುರುಗಳು ನಿತ್ಯ ಧರ್ಮೋಪದೇಶ ಹಾಗೂ ಅನ್ನದಾಸೋಹವನ್ನು ನಡೆಸುವ ಮೂಲಕ ಮಠವನ್ನು ಹೆಚ್ಚು ಪ್ರಸಿದ್ಧಿಗೆ ತಂದರು. ಕರ್ತೃಗುರುಗಳ ನಂತರ ಮಠದ ಪರಂಪರೆ ವೈಭವಯುತವಾಗಿ ಬೆಳೆದಿದೆ. ಆದರೂ ತನ್ನ ಪರಂಪರೆಯ ಬಗ್ಗೆ ಮಾಹಿತಿಯನ್ನು ಕಾಯ್ದಿಡದೆ ಹೋದ ಕಾರಣ, ಪರಂಪರೆಯು ಇತಿಹಾಸದಿಂದ ಮರೆಯಾಗುವಂತಾಗಿದೆ. ಹೊಳೆದಡದಲ್ಲಿದ್ದ ಮಠವು ಸಿರಸಂಗಿಯ ಲಿಂಗರಾಜರ ಕಾಲದಲ್ಲಿ ಹೊಸ ಕಟ್ಟಡಕ್ಕೆ ಸ್ಥಳಾಂತರಗೊಂಡು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿತ್ತು. ಈ ರೀತಿ ಸೋದೆಯರು ಹಾಗೂ ಸಿರಸಂಗಿಯ ಲಿಂಗರಾಜರ ಆಶ್ರಯದಲ್ಲಿ ಬೆಳೆದ ಈ ಮಠವು, ಅನೇಕ ವರ್ಷಗಳ ಕಾಲ ಮಠಾಧೀಶರಿಲ್ಲದೆ ಖಾಲಿ ಉಳಿದಿತ್ತು.

ಬೆಳೆದ ಪರಂಪರೆ: ಹಾನಗಲ್ಲು ವಿರಕ್ತ ಮಠದ ಲಿಂಗೈಕ್ಯ ಗುರುಗಳಾದ ಶ್ರೀ ಸದಾಶಿವ ಸ್ವಾಮಿಗಳು ಪುರಾತನ ಶ್ರೀಸ್ವಾದಿ ಮಠವು ಉತ್ತರಾಧಿಕಾರಿಗಳಿಲ್ಲದೆ ಖಾಲಿ ಇರುವುದನ್ನು ಗಮನಿಸಿ, ಶ್ರೀ ಶಿವಬಸವ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿ ಮಠದ ಪರಂಪರೆಯು ಬೆಳೆಯಲು ಕಾರಣಕರ್ತರಾದರು. ಗುರುಗಳು ಅಧಿಕಾರವನ್ನು ವಹಿಸಿಕೊಂಡು ಜೀರ್ಣಾ ವಸ್ಥೆಗೆ ಬಂದಿದ್ದ ಮಠದ ಕಟ್ಟಡವನ್ನು ಅಭಿವೃದ್ಧಿಪಡಿಸಿದರು. ನಿತ್ಯ ಧಾರ್ಮಿಕ ಕಾರ್ಯಗಳು ಹಾಗೂ ಅನ್ನದಾಸೋಹ ನಡೆಯಲು ವ್ಯವಸ್ಥೆ ಮಾಡಿ ಮಠದ ಆಸ್ತಿಯನ್ನು ಕ್ರಮಬದ್ಧಗೊಳಿಸಿದರೆಂದು ತಿಳಿದು ಬಂದಿದೆ.

ಸಾಹಿತ್ಯ ಸೇವೆ: ಪುನಶ್ಚೇತನಗೊಂಡ ಶ್ರೀ ಸ್ವಾದಿಮಠದಲ್ಲಿ ಗೋಡೆಗಳ ಮೇಲೆ ಶರಣರ ವಚನಗಳ ಆಯ್ದ ನುಡಿಗಳು, ಸಿರಸಂಗಿ ಲಿಂಗರಾಜರ ಜೀವನದ ಕೆಲವು ಸನ್ನಿವೇಶಗಳನ್ನು ಬಿಂಬಿಸುವಂತಹ ಚಿತ್ರ ಬರಹಗಳನ್ನು ಬರೆಸಲಾಗಿದೆ. ಈಗಿನ ಗುರುಗಳಾದ ಶ್ರೀ ಶಿವಬಸವ ಸ್ವಾಮಿಗಳು ಸಾಹಿತ್ಯಾಭಿಮಾನಿಗಳಾಗಿದ್ದು,'ಅನುಭವ' ಎಂಬ ತ್ರೈಮಾಸಿಕ ಪತ್ರಿಕೆಯನ್ನು ಪ್ರಕಟಿಸುತ್ತಿದ್ದಾರೆ. ಇದರಲ್ಲಿ ವೀರಶೈವ ಧರ್ಮದ ಆಚಾರ ವಿಚಾರಗಳು ಹಾಗೂ ಧರ್ಮದ ಅಭಿವೃದ್ಧಿಯ ಬಗ್ಗೆ ಚಿಂತಿಸುವ ಅನೇಕ ಲೇಖನಗಳನ್ನು ಪ್ರಕಟಿಸಿ, ಸಮಾಜದ ಅಭಿವೃದ್ಧಿಗೆ ನೆರವಾಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಕರ್ತೃ ಗುರುಗಳ ಗದ್ದುಗೆಯನ್ನು ಹೊರತುಪಡಿಸಿದರೆ ಬೇರೆ ಯಾರ ಗದ್ದುಗೆಗಳೂ ಸ್ಥಾಪನೆಯಾಗಿಲ್ಲ. ಇದಕ್ಕೆ ನಿತ್ಯ ಪೂಜೆಯನ್ನು ನಡೆಸಲಾಗುತ್ತಿದೆ. ಪ್ರತಿ ತಿಂಗಳಿಗೊಮ್ಮೆ ಶಿವಾನುಭವ ಗೋಷ್ಠಿಯನ್ನು ನಡೆಸುವ ಮೂಲಕ ಧರ್ಮವನ್ನು ಪ್ರಚಾರಪಡಿಸಿ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಗುರುಗಳು ಅಧಿಕಾರಕ್ಕೆ ಬಂದ ಮೇಲೆ ನಿತ್ಯ ಅನ್ನದಾಸೋಹ ನಡೆಸುವ ಮೂಲಕ ಮಠವನ್ನು ಬೆಳೆಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಶಿವಬಸವ ಸ್ವಾಮಿಗಳು, ಶ್ರೀ ಸ್ವಾದಿಮಠ, ಸವದತ್ತಿ, ಬೆಳಗಾವಿ ಜಿಲ್ಲೆ.

ಕಲ್ಮಠ: ಸವದತ್ತಿ ಪಟ್ಟಣದ ಮುಖ್ಯ ರಸ್ತೆಯಲ್ಲಿ ವಿರಕ್ತ ಸಂಪ್ರದಾಯದ ಕುಮಾರ ಸಮಯದ ಶ್ರೀ ಕಲ್ಮಠವು ಸ್ಥಾಪನೆಯಾಗಿದೆ. ಈ ಮಠವನ್ನು'ಶ್ರೀ ಓಲೆಗರಿಮಠ' ಎಂದೂ ಸಹ ಕರೆಯಲಾಗುತ್ತಿದೆ. ಕಲ್ಲಿನಿಂದ ಮಠದ ಕಟ್ಟಡವನ್ನು ನಿರ್ಮಿಸಿದ ನಂತರ ರೂಢಿಗತವಾಗಿ ಈ ಮಠಕ್ಕೆ 'ಶ್ರೀ ಕಲ್ಮಠ' ಎಂದು ಕರೆಯಲಾಗುತ್ತಿದೆ.

ಮಠ ಸ್ಥಾಪನೆ: ಜಮಖಂಡಿ ತಾಲ್ಲೂಕಿನ ಬಿದರಿಮಠದ ಅಧಿಕಾರವನ್ನು ವಹಿಸಿಕೊಂಡ ಶ್ರೀ ಕುಮಾರ ಸ್ವಾಮಿಗಳು ಲೋಕಸಂಚಾರ ಕೈಗೊಂಡು, ಕಾಡಿನಿಂದ ಆವೃತವಾದ ಈ ಪ್ರದೇಶದ ಮಲಪ್ರಭ ನದಿಯ ದಡದಲ್ಲಿ ಅನುಷ್ಠಾನಕ್ಕೆಂದು ಕುಳಿತುಕೊಂಡಿದ್ದು ಬೇಟೆಗಾರರು ಬೇಟೆಗೆ ಹೊಂಚು ಹಾಕುತ್ತಿದ್ದ ಸಂದರ್ಭದಲ್ಲಿ ಗುರುಗಳ ಬಳಿ ಹುಲಿಯು ಸೇವಕನಂತೆ ಕುಳಿತಿದ್ದು ಇದನ್ನು ನೋಡಿ ಆಶ್ಚರ್ಯಗೊಂಡ ಬೇಟೆಗಾರರು ಗುರುಗಳ ಬಳಿ ಬಂದು ಆಶೀರ್ವಾದ ಪಡೆದರೆಂದು ಪವಾಡ ಪುರುಷರು ಇಲ್ಲಿ ನೆಲೆಸಿರುವ ವಿಚಾರ ತಿಳಿದ ಭಕ್ತರು, ಗುರುಗಳಿಗಾಗಿ ಮಠವನ್ನು ಸ್ಥಾಪಿಸಿ ಇಲ್ಲೇ ನೆಲೆಸುವಂತೆ ಮಾಡಿದರೆಂಬ ನಂಬಿಕೆ ಇದೆ.

ಪರಂಪರೆ:

೧. ಶ್ರೀ ಕುಮಾರಸ್ವಾಮಿಗಳು
೨. ಶ್ರೀ ಅಪ್ಪಯ್ಯಸ್ವಾಮಿಗಳು

೩. ಶ್ರೀ ಮಹಾಲಿಂಗಸ್ವಾಮಿಗಳು
೪. ಶ್ರೀ ಅಭಿನವ ಕುಮಾರಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಶ್ರೀ ಕುಮಾರ ಸ್ವಾಮಿಗಳು ೧೯೧೧ ರಲ್ಲಿ ಶ್ರೀ ಅಪ್ಪಯ್ಯ ಸ್ವಾಮಿಗಳನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಿಸಿ, ಮಠದ ಪರಂಪರೆ ಬೆಳೆಯುವಂತೆ ಮಾಡಿದ್ದರು. ಇವರು ಹಿರಿಯ ಗುರುಗಳ ಮಾರ್ಗದರ್ಶನದಂತೆ ಮಠವನ್ನು ಬೆಳೆಸಿ ಅಭಿವೃದ್ಧಿಪಡಿಸಿದರು. ಇವರ ನಂತರ ಶ್ರೀ ಮಹಾಲಿಂಗ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿದರು. ಇವರು ಕಲ್ಮಠದಲ್ಲಿ ನಿತ್ಯ ದಾಸೋಹಕ್ಕೆ ವ್ಯವಸ್ಥೆ ಮಾಡಿ, 'ದಾಸೋಹ ಮೂರ್ತಿ'ಗಳೆಂದು ಹೆಸರು ಪಡೆದರು. ಇವರ ನಂತರ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿದ ಸಂದರ್ಭದಲ್ಲಿ, ಮಠದ ಆಡಳಿತವನ್ನು ಹಾವೇರಿಯ ಹುಕ್ಕೇರಿ ಮಠದ ಶ್ರೀ ಶಿವಬಸವ ಸ್ವಾಮಿಗಳು ನೋಡಿಕೊಂಡರು. ನಂತರ ಶ್ರೀ ಅಭಿನವ ಕುಮಾರ ಸ್ವಾಮಿಗಳು ಉತ್ತರಾಧಿಕಾರಿಗಳಾಗಿ ನೇಮಕಗೊಂಡು, ೧೯೮೬ ರಲ್ಲಿ ಪಟ್ಟಾಧಿಕಾರವನ್ನು ಪಡೆದ ಇವರು ಕಾಶಿಯಲ್ಲಿ ಸಂಸ್ಕೃತ ಸಾಹಿತ್ಯವನ್ನು ಅಧ್ಯಯನ ಮಾಡಿ ಪಿಎಚ್.ಡಿ. ಪದವಿಯನ್ನು ಪಡೆದು ಕಲ್ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ಈಗ ಜಮಖಂಡಿ ನಗರದ ಓಲೆಮಠದ ಜವಾಬ್ದಾರಿಯನ್ನು ವಹಿಸಿಕೊಂಡು, ಎರಡೂ ಮಠದ ಆಡಳಿತವನ್ನು ನಡೆಸುತ್ತಿದ್ದಾರೆ.

ಧಾರ್ಮಿಕ, ಸಾಹಿತ್ಯ ಸೇವೆ: ಮಠದಲ್ಲಿ ಶ್ರೀ ಶಿವಲಿಂಗೇಶ್ವರ ಸ್ವಾಮಿಗಳ ಗದ್ದುಗೆ ಮತ್ತು ಶ್ರೀ ಕುಮಾರೇಶ್ವರರ ತೋರುಗದ್ದುಗೆ ಇದ್ದು, ಇವುಗಳಿಗೆ ನಿತ್ಯಪೂಜೆ, ವರ್ಷಕ್ಕೊಮ್ಮೆ ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಮಠದ ಆಶ್ರಯದಲ್ಲಿ ವೀರಶೈವ ಧರ್ಮದ ಬೆಳವಣಿಗೆಗೆ ಸಹಾಯಕವಾಗುವಂತಹ ಪುಸ್ತಕಗಳನ್ನು ಹೊರತರಲಾಗಿದೆ. ಈ ಮಠದಲ್ಲಿ ಹಾನಗಲ್ ಶ್ರೀ ಕುಮಾರ ಸ್ವಾಮಿಗಳ ಸಮ್ಮುಖದಲ್ಲಿ ಹಾವೇರಿಯ ಶ್ರೀ ಶಿವಬಸವ ಸ್ವಾಮಿಗಳು, ಸಿರಸಂಗಿಯ ಲಿಂಗರಾಜರು ಸೇರಿದಂತೆ ಅನೇಕ ಮಠಾಧೀಶರು ಹಾಗೂ ಸಮಾಜದ ಮುಖಂಡರು ಸಭೆಸೇರಿ, ಅಖಿಲಭಾರತ ವೀರಶೈವ ಮಹಾಸಭೆಯ ಸ್ಥಾಪನೆಗೆ ಪ್ರಥಮ ಚರ್ಚೆ ನಡೆಸಿದ್ದು ಈ ಮಠದ ಇತಿಹಾಸದ ಘಟನೆಗಳಲ್ಲಿ ಒಂದಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಅಭಿನವ ಕುಮಾರ ಸ್ವಾಮಿಗಳು, ಶ್ರೀ ಕಲ್ಮಠ, ಮುಖ್ಯರಸ್ತೆ, ಸವದತ್ತಿ, ಬೆಳಗಾವಿ ಜಿಲ್ಲೆ.

ಹೊಸಮಠ: ಸವದತ್ತಿ ಪಟ್ಟಣದ ಹೊಸಪೇಟೆ ರಸ್ತೆಯಲ್ಲಿ ಶ್ರೀ ಹೊಸಮಠವು ಸ್ಥಾಪನೆಯಾಗಿದೆ. ವಿರಕ್ತಸಂಪ್ರದಾಯದ ಈ ಮಠವು ರಾಮದುರ್ಗದ ಶ್ರೀ ಶಿವಮೂರ್ತೇಶ್ವರ ವಿರಕ್ತಮಠದ ಶಾಖಾಮಠವಾಗಿ ಅಭಿವೃದ್ಧಿಗೊಂಡಿದೆ.

ಮಠ ಸ್ಥಾಪನೆ: ಕ್ರಿ.ಶ.೧೭೦೦ ರಲ್ಲಿ ಶ್ರೀ ಒಪ್ಪತ್ತಯ್ಯ ಸ್ವಾಮಿಗಳಿಂದ ಈ ಮಠವು ಸ್ಥಾಪಿಸಲ್ಪಟ್ಟಿದೆ. ಗುರುಗಳು ಲೋಕ ಸಂಚಾರ ಕೈಗೊಂಡು ಇಲ್ಲಿ ನೆಲೆಸಿ, ಧರ್ಮೋಪದೇಶವನ್ನು ಕೈಗೊಂಡು ಮಠವನ್ನು ಬೆಳೆಸಿದರು. ಗುರುಗಳು ಆಧ್ಯಾತ್ಮ ಚಿಂತನೆಯಿಂದ ಧಾರ್ಮಿಕ ಕಾರ್ಯಗಳನ್ನು ನಡೆಸಿ ಮಠವನ್ನು ಪ್ರಸಿದ್ಧಿಗೆ ತಂದರು. ಗುರುಗಳು ದಿನದ ಒಂದೇ ವೇಳೆ ಪ್ರಸಾದವನ್ನು ಸ್ವೀಕರಿಸುತ್ತಿದ್ದರಿಂದ 'ಶ್ರೀ ಒಪ್ಪತ್ತಯ್ಯ ಸ್ವಾಮಿ'ಗಳೆಂದು ಹೆಸರು ಬಂದಿದೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ಒಪ್ಪತ್ತಯ್ಯಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಪಂಚಾಕ್ಷರಿಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಗುರುಶಾಂತಯ್ಯಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಗಂಗಾಧರಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಶಾಂತವಿರಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಎಲ್ಲಾ ಗುರುಗಳು ಶಿವ ಪೂಜಾ ನಿಷ್ಠರು, ಮಹಾತಪಸ್ವಿಗಳಾಗಿ ಭಕ್ತರಿಗೆ ಧರ್ಮಬೋಧನೆ ಮಾಡುತ್ತಾ, ಧರ್ಮ ಬೆಳೆಯಲು ಸಹಾಯಕರಾಗಿರು

ತ್ತಾರೆ. ಶ್ರೀ ಗಂಗಾಧರ ಸ್ವಾಮಿಗಳು ಶಿವಯೋಗ ಮಂದಿರದಲ್ಲಿ ಸಂಸ್ಕೃತ ಮತ್ತು ಹಿಂದಿಯನ್ನು ಅಭ್ಯಾಸ ಮಾಡಿ ಮಠದ ಜವಾಬ್ದಾರಿಯನ್ನು ವಹಿಸಿಕೊಂಡು ಮಠವು ಬೆಳೆಯಲು ಪ್ರೇರಕರಾಗಿರುವುದಲ್ಲದೆ, ನಾಡಿನ ನಾನಾ ಭಾಗಗಳನ್ನು ಸುತ್ತಿ ಧರ್ಮಜಾಗೃತಿಉಂಟು ಮಾಡಿದ್ದಾರೆ. ಇವರ ನಂತರ ಅಧಿಕಾರ ಪಡೆದ ಶ್ರೀ ಶಾಂತವೀರ ಸ್ವಾಮಿಗಳು ಸಂಸ್ಕೃತ, ವೇದ ಕಲಿಯು ವುದರ ಜತೆಗೆ ಗದುಗಿನ ಪಂಚಾಕ್ಷರ ಗವಾಯಿಗಳ ಆಶ್ರಯದಲ್ಲಿ ಸಂಗೀತವನ್ನು ಕಲಿತು ಕಲೆ ಮತ್ತು ಧರ್ಮ ವನ್ನು ಸಮಾನವಾಗಿ ಬೆಳೆಸಿದರು. ಶ್ರೀ ಶಾಂತವೀರ ಸ್ವಾಮಿಗಳು ಕ್ರಿಯಾಶೀಲರಾಗಿ ಮೂಲ ಮಠವಾದ ರಾಮದುರ್ಗದ ಶ್ರೀ ಶಿವಮೂರ್ತೇಶ್ವರ ವಿರಕ್ತ ಮಠದ ಜತೆಗೆ ಈ ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಶಾಂತವೀರ ಸ್ವಾಮಿಗಳು, ಶ್ರೀ ಹೊಸಮಠ, ಸವದತ್ತಿ, ಬೆಳಗಾವಿ ಜಿಲ್ಲೆ.

ಕಳ್ಳಿಮಠ (ಮೂಲಿ ಮಠ): ಸವದತ್ತಿ ಪಟ್ಟಣದ ಮಧ್ಯಭಾಗದಲ್ಲಿ ಕಾಶಿಪೀಠದ ಶಾಖಾಮಠವಾಗಿ ಪುತ್ರವರ್ಗದ ಪರಂಪ ರೆಯಲ್ಲಿ ಬೆಳೆದ ಶ್ರೀ ಕಳ್ಳಿಮಠ (ಮೂಲಿಮಠ)ವು ಸ್ಥಾಪನೆಯಾಗಿದೆ. ೧೮೭೦ರಲ್ಲಿ ಶ್ರೀ ವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪನೆ ಯಾದ ಈ ಮಠವು, ಇಲ್ಲಿನ ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ಬೆಳೆದಿದೆ.

ಮಠ ಸ್ಥಾಪನೆ: ಶ್ರೀ ವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳು ಅನುಷ್ಠಾನ ಮೂರ್ತಿಗಳಾಗಿ, ಅನೇಕ ವರ್ಷಗಳ ಕಾಲ ಅನುಷ್ಠಾನಕೈಗೊಂಡು ಪವಾಡಗಳನ್ನು ಮಾಡಿದರು. ಇವರ ಶಿವಯೋಗಕ್ಕೆ ಶರಣಾದ ತೊರೆಗಲ್ಲಿನ ಪಾಟೀಲ್ ಮನೆತನದ ವರು ಮಠವನ್ನು ಸ್ಥಾಪಿಸಿ, ಧಾರ್ಮಿಕ ಕಾರ್ಯಗಳನ್ನು ನಡೆಸಲು ಅನುಕೂಲವಾಗಲೆಂದು ನಾಲ್ಕು ಎಕರೆ ಜಮೀನನ್ನು ಉಂಬಳಿಯಾಗಿ ನೀಡಿದರು ಎಂದು ಹೇಳಲಾಗುತ್ತಿದೆ. ಅಂದು ಮಠವನ್ನು ಸ್ಥಾಪಿಸಿದ ಗುರುಗಳು ಧರ್ಮೋಪದೇಶ ಮೂಲಕ ಜನರಲ್ಲಿ ಧರ್ಮಜಾಗೃತಿಯನ್ನುಂಟು ಮಾಡಿ ಭಕ್ತರನ್ನು ಬೆಳೆಸಿದರು.

ಪರಂಪರೆ:

೧. ಷ.ಬ್ರ.ಶ್ರೀ ವಿರೂಪಾಕ್ಷ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಚರಂತಿ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ರಾಚೋಟಿ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ವೀರಯ್ಯ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಶ್ರೀ ರಾಚೋಟಿ ಶಿವಾಚಾರ್ಯ ಸ್ವಾಮಿಗಳ ನಂತರ ಪುತ್ರ ವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಪರಂಪರೆಯ ಗುರುಗಳು ಶಿವಪೂಜಾ ನಿಷ್ಠರಾಗಿ, ವೀರಶೈವ ಧರ್ಮವನ್ನು ಬೆಳೆಸು ವಲ್ಲಿ ಯಶಸ್ವಿಯಾಗಿದ್ದಾರೆ. ಈಗಿನ ಮಠಾಧೀಶರಾದ ಶ್ರೀ ವೀರಯ್ಯ ಸ್ವಾಮಿಗಳು ೧೯೭೮ರಲ್ಲಿ ಮಠದ ಪಟ್ಟಾಧಿಕಾರ ವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ಗುರುಗಳು ಸಂಸ್ಕೃತ, ಹಿಂದಿ ಹಾಗೂ ಕನ್ನಡ ಭಾಷೆಯಲ್ಲಿ ಪಾಂಡಿತ್ಯ ಪಡೆದು, ವೀರಶೈವ ಧರ್ಮವನ್ನು ಪ್ರಚಾರಪಡಿಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ವೀರಯ್ಯ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕಳ್ಳಿಮಠ (ಮೂಲಿ ಮಠ), ಸವದತ್ತಿ, ಬೆಳಗಾವಿ ಜಿಲ್ಲೆ.

ಬೆಟನೂರುಮಠ: ಸವದತ್ತಿ ಪಟ್ಟಣದ ಬಂಡಿ ಬೀದಿಯಲ್ಲಿ ಉಜ್ಜಯಿನಿ ಪೀಠದ ಶಾಖಾಮಠವಾಗಿ, ಪುತ್ರವರ್ಗದ ಪರಂಪರೆಯಲ್ಲಿ ಬೆಳೆದ ಶ್ರೀ ಬೆಟನೂರು ಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದಲ್ಲಿ ಬೆಟನೂರು ಗ್ರಾಮದಿಂದ ಇಲ್ಲಿಗೆ ಸ್ಥಳಾಂತರಗೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿರುವುದರಿಂದ, ಈ ಮಠಕ್ಕೆ'ಶ್ರೀ ಬೆಟನೂರು ಮಠ' ಎಂಬ ಹೆಸರು ಬಂದಿದೆ.

ಮಠ ಸ್ಥಾಪನೆ: ಶ್ರೀ ಗುರುಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಬೆಟನೂರಿನ ಮೂಲಮಠವನ್ನು ಕಾರಣಾಂತರದಿಂದ ಸವದತ್ತಿಗೆ ಸ್ಥಳಾಂತರಿಸಿದರು. ಇವರು ಮಹಾತಪಸ್ವಿಗಳಾಗಿದ್ದು ಆಯುರ್ವೇದ್ಯ ಪದ್ಧತಿಯಲ್ಲಿ ಪರಿಣಿತಿಯನ್ನು ಪಡೆದಿದ್ದರು. ಇವರು ಸವದತ್ತಿ ಪಟ್ಟಣಕ್ಕೆ ಮಠವನ್ನು ಸ್ಥಳಾಂತರಿಸಿ, ನಿತ್ಯ ಧರ್ಮೋಪದೇಶ ಹಾಗೂ ಅನ್ನದಾಸೋಹ

ವನ್ನು ನಡೆಸಿ ಮಠವನ್ನು ಪ್ರಸಿದ್ಧಿಪಡಿಸಿದರು.

ಪರಂಪರೆ: ಶ್ರೀ ಗುರುಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳ ನಂತರ ಶ್ರೀ ರುದ್ರಮುನಿ ಸ್ವಾಮಿಗಳು ಆಡಳಿತವನ್ನು ನಡೆಸಿ, ಮಠವನ್ನು ಧಾರ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯಿಕವಾಗಿ ಹೆಚ್ಚು ಪ್ರಸಿದ್ಧಿಪಡಿಸಿದರು. ಶ್ರೀ ರುದ್ರಮುನಿ ಸ್ವಾಮಿಗಳ ಕಾಲದಲ್ಲಿ'ಓಂ ನಮಃ ಶಿವಾಯ' ಎಂಬ ಉಚ್ಚಾರಣೆಯ ಬಗ್ಗೆ ಎದ್ದ ವಿವಾದದಲ್ಲಿ ಜಯಗಳಿಸಿ, ಪಂಚ ಪೀಠಗಳ ಜಗದ್ಗುರು ಗಳ ಪ್ರಶಂಸೆಗೆ ಪಾತ್ರರಾಗಿದ್ದರು ಎಂದು ತಿಳಿದುಬರುತ್ತಿದೆ. ಇವರು ಸ್ಕಂದಪುರಾಣವನ್ನು ಕನ್ನಡಕ್ಕೆ ಭಾಷಾಂತರಿಸಿದ್ದಲ್ಲದೆ ಪುರಾಣದಲ್ಲಿ ಬರುವ ರೇಣುಕ ಮಹಾತ್ಮೆಯ ಪುರಾಣವನ್ನು ಪ್ರತ್ಯೇಕವಾಗಿ ಬರೆಸಿ ಪುಸ್ತಕ ರೂಪದಲ್ಲಿ ಪ್ರಕಟಿಸಿದರು. ಇವರು ಹಲವು ಕೃತಿಗಳನ್ನು ರಚಿಸಿದ್ದು ಎಷ್ಟೋ ಕೃತಿಗಳು ಇಂದಿಗೂ ಪ್ರಕಟವಾಗದೆ ಉಳಿದಿವೆ. ಇವರ ನಂತರ ಶ್ರೀ ಅನ್ನ ದಾನೇಶ್ವರ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿದ್ದರು. ಇವರು ಧಾರ್ಮಿಕ ಕಾರ್ಯಗಳ ಜತೆಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಜನರಿಗೆ ಪ್ರೇರಕ ಶಕ್ತಿಯಾಗಿದ್ದರು. ಇವರ ನಂತರ ಉತ್ತರಾಧಿಕಾರಿಗಳಿಲ್ಲದೆ ಮಠವು ಖಾಲಿ ಉಳಿದಿದೆ. ಮಠದ ವಂಶಸ್ಥರು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಬೆಟನೂರು ಮಠ, ಬಂಡಿಬೀದಿ, ಸವದತ್ತಿ, ಬೆಳಗಾವಿ ಜಿಲ್ಲೆ.

ಸತ್ತಿಗೇರಿ

ಸವದತ್ತಿ ತಾಲ್ಲೂಕಿನ ಸತ್ತಿಗೇರಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಇಪ್ಪತ್ತೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಸತ್ತಿಗೇರಿ ಗ್ರಾಮದಲ್ಲಿ ಶ್ರೀ ಹಿರೇಮಠವು ಸ್ಥಾಪನೆಯಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸುವ ಮೂಲಕ ಪ್ರಸಿದ್ಧಿಗೆ ಬಂದಿದೆ. ಪರಂಪರೆಯ ಈಗಿನ ಗುರುಗಳಾದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮಿಗಳು ಮುರುಗೋಡು ಗ್ರಾಮದಲ್ಲಿ ೧೯೩೩ರ ಏಪ್ರಿಲ್ ಮೂವತ್ತರಂದು ಜನಿಸಿ ಪದವಿ ಶಿಕ್ಷಣ ಪಡೆದು ೧೯೪೫ರ ಏಪ್ರಿಲ್ ಮೂವತ್ತರಂದು ಮಠದ ಆಡಳಿತವನ್ನು ವಹಿಸಿಕೊಂಡಿದ್ದಾರೆ. ಮಠದ ವತಿಯಿಂದ ಶ್ರೀ ಮಳೆಮಲ್ಲೇಶ್ವರ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಪ್ರೌಢಶಾಲೆಯನ್ನು ನಡೆಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಸತ್ತಿಗೇರಿ, ಸವದತ್ತಿ, ಬೆಳಗಾವಿ ಜಿಲ್ಲೆ.

ಹಳಕಟ್ಟಿ

ಸವದತ್ತಿ ತಾಲ್ಲೂಕಿನ ಹಳಕಟ್ಟಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಇಪ್ಪತ್ತೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಸಾಂಬಯ್ಯನಮಠವು ಅಸ್ತಿತ್ವದಲ್ಲಿದೆ.

ಸಾಂಬಯ್ಯನಮಠ: ಹಳಕಟ್ಟಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಸಾಂಬಯ್ಯನಮಠವು ಪಂಚಪೀಠಗಳ ಪರಂಪರೆಯ ಗುರುಸ್ಥಲ ಮಠವಾಗಿ ಬೆಳೆದಿದೆ. ಪುರಾತನ ಪರಂಪರೆಯನ್ನು ಹೊಂದಿದೆ ಎಂದು ಹೇಳಲಾಗುವ ಈ ಮಠದ ಈಗಿನ ಗುರುಗಳಾಗಿ, ಶ್ರೀ ಉಮೇಶ್ವರ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ನಡೆಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಉಮೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀಸಾಂಬಯ್ಯನಮಠ, ಹಳಕಟ್ಟಿ, ಸವದತ್ತಿ, ಬೆಳಗಾವಿ ಜಿಲ್ಲೆ.

ಹೂಲಿ

ಸವದತ್ತಿ ತಾಲ್ಲೂಕಿನ ಹೂಲಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಆರು ಕಿ.ಮೀ ದೂರದಲ್ಲಿದೆ. ಪುರಾತನ ಪರಂಪರೆಯುಳ್ಳ ಈ ಗ್ರಾಮಕ್ಕೆ'ಪೂವಲ್ಲಿ'ಎಂದು ಕರೆಯಲಾಗುತ್ತಿತ್ತು. ಕಾಲಾನಂತರ ಈ ಹೆಸರು 'ಹೂಲಿ'ಎಂಬು

ದಾಗಿ ರೂಪಾಂತರ ಪಡೆದಿದೆ. ಹೂಲಿಯು ಸಿದ್ಧಾಚಲವೆಂಬ ಪರ್ವತವನ್ನು ಹೊಂದಿದ್ದು ಇಲ್ಲಿ ನೂರಾರು ಶಿವಲಿಂಗಗಳಿಂದಲೂ, ಗುರುಮಠಗಳಿಂದಲೂ ಬೆಳೆದು 'ಶಿವಕ್ಷೇತ್ರ'ವೆಂದು ಹೆಸರು ಪಡೆದಿತ್ತು. ಇಲ್ಲಿ ವೀರಶೈವಧರ್ಮವು ಪ್ರಬಲವಾಗಿ ಬೆಳೆದಿದೆ. ಪುರಾತನ ಪರಂಪರೆಯುಳ್ಳ ಶ್ರೀ ಪಂಚವಣ್ಣಿಗಿ ಬೃಹನ್ಮಠದ ಚರ ಮತ್ತು ಸ್ಥಿರಮಠಗಳು ಹಾಗೂ ಶ್ರೀ ಶಂಭಯ್ಯನವರಮಠ ಎಂಬ ಮೂರು ಮಠಗಳು ಸ್ಥಾಪನೆಯಾಗಿ, ವೀರಶೈವಧರ್ಮ ಬೆಳೆಯಲು ಸಹಕಾರಿಯಾಗಿವೆ.

ಪಂಚವಣ್ಣಿಗಿ ಬೃಹನ್ಮಠ: ಹೂಲಿಯ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಪಂಚವಣ್ಣಿಗೆ ಮಠವು ಕಾಶಿ ಪೀಠದ ಶಾಖಾಮಠವಾಗಿ ಬೆಳೆದಿದೆ. ಈ ಮಠದ ಕರ್ತೃಗುರುಗಳು ಶ್ರೀ ದಕ್ಷಿಣಮೂರ್ತಿ ಶಿವಾಚಾರ್ಯ ಸ್ವಾಮಿಗಳೆಂದು ಹೇಳಲಾಗುತ್ತಿದೆ. ಗುರುಗಳು ಇಲ್ಲಿ ವೀರಶೈವ ಮಠವನ್ನು ಸ್ಥಾಪಿಸಿ, ಸ್ಥಿರ ಮತ್ತು ಚರ ಪಟ್ಟಾಧಿಕಾರದ ಪರಂಪರೆಯನ್ನು ಬೆಳೆಸಿ ಮಠ ಮತ್ತು ಸಮಾಜದ ಅಭಿವೃದ್ಧಿಗೆ ಶ್ರಮಿಸಿದರು.

ಪರಂಪರೆ: ಬಹು ಪ್ರಾಚೀನ ಕಾಲದಲ್ಲಿ ಸ್ಥಾಪನೆಗೊಂಡ ಈ ಮಠದ ಪರಂಪರೆಯಲ್ಲಿ ಐವತ್ತೂ್ಮರು ಜನ ಗುರುಗಳು ಸ್ಥಿರ ಪಟ್ಟಾಧಿಕಾರವನ್ನು ಪಡೆದು ಮಠವನ್ನು ಬೆಳೆಸಿದ್ದಾರೆ. ನಲವತ್ತೈದು ಜನ ಚರ ಪಟ್ಟಾಧಿಕಾರಿಗಳು ಮಠದ ಆಡಳಿತವನ್ನು ವಹಿಸಿಕೊಂಡು ಮಠವು ಶ್ರೀಮಂತಗೊಳ್ಳುವಂತೆ ಮಾಡಿದ್ದಾರೆ. ಪರಂಪರೆಯಲ್ಲಿ ಬಂದಂತಹ ಗುರುಗಳು ಮಹಾ ಜ್ಞಾನಿಗಳೂ, ಪಂಡಿತರು ಆಗಿದ್ದರೆಂದು ಹೇಳಲಾಗುತ್ತಿದೆ. ಮಠವು ಸ್ಥಿರ ಮತ್ತು ಚರ ಪಟ್ಟಾಧಿಕಾರವನ್ನು ಹೊಂದಿತ್ತು. ಕಾಲಕ್ರಮೇಣ ಸ್ಥಿರ ಹಾಗೂ ಚರ ಪಟ್ಟಾಧಿಕಾರವು ಪ್ರತ್ಯೇಕಗೊಂಡು ಬೆಳೆಯತೊಡಗಿದವು.

ಚರ ಪಟ್ಟಾಧಿಕಾರದಮಠ: ಪ್ರಾಚೀನ ಕಾಲದಲ್ಲಿ ಸ್ಥಾಪನೆಗೊಂಡು ಪ್ರತ್ಯೇಕಗೊಂಡ ಚರಪಟ್ಟಾಧಿಕಾರವು ಶ್ರೀಮಂತವಾಗಿ ಬೆಳೆದಿದೆ. ೧೯೮೪ ರಲ್ಲಿ ಶ್ರೀ ಶಿವಮಹಾಂತೇಶ ಶಿವಾಚಾರ್ಯ ಸ್ವಾಮಿಗಳು ಅಧಿಕಾರ ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ಸಾಹಿತ್ಯಾಸಕ್ತಿಯನ್ನು ಬೆಳೆಸಿಕೊಂಡಿರುವ ಶ್ರೀ ಶಿವ ಮಹಾಂತೇಶ ಶಿವಾಚಾರ್ಯ ಸ್ವಾಮಿಗಳು ಕನ್ನಡ ಭಾಷೆಯಲ್ಲಿ ಬಿ.ಎ. ಮುಗಿಸಿ, ಕಾಶಿ ಹಾಗೂ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತ ಕಲಿತು ಪಂಡಿತರಾಗಿ ಬೆಳಗುತ್ತಿದ್ದಾರೆ.

ಮಠದ ಆಶ್ರಯದಲ್ಲಿ ಜ್ಯೋತಿಷ್ಯ, ವೇದ ಪಾಠಶಾಲೆಗಳನ್ನು ಪ್ರಾರಂಭಿಸಲಾಗಿದೆ. ಮಠದಲ್ಲಿ ನಿತ್ಯ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಮಠದ ವತಿಯಿಂದ ಶ್ರೀ ಸಿದ್ಧರಾಮ ಚರಿತ್ರೆ, ಸತ್ಯದರ್ಶನ,ಶಿವಾದ್ವೈತದರ್ಪಣ, ಪಂಚವಣ್ಣಿಗಿ ಹಿರೇಮಠದ ಇತಿಹಾಸ ಹಾಗೂ ತೊರಕಾರಿ ಪಂಚರ ಇತಿಹಾಸ ಈ ರೀತಿ ಅನೇಕ ಕೃತಿಗಳನ್ನು ಪ್ರಕಟಿಸಲಾಗಿದೆ.
ಧಾರ್ಮಿಕ ಕಾರ್ಯಗಳು: ಮಠಕ್ಕೆ ಹೊಸ ಕಟ್ಟಡವನ್ನು ನಿರ್ಮಿಸಿ ೧೯೮೮ರಲ್ಲಿ ಕಾಶಿ ಜಗದ್ಗುರುಗಳಿಂದ ಉದ್ಘಾಟನೆ ಮಾಡಿಸಲಾಗಿದೆ. ಮಠದ ಆವರಣದಲ್ಲಿರುವ ಐದು ಗದ್ದುಗೆಗಳಿಗೆ ನಿತ್ಯ ಪೂಜೆಯನ್ನು ಮಾಡಲಾಗುತ್ತಿದೆ. ಈಗಿನ ಶ್ರೀ ಶಿವಮಹಾಂತೇಶ ಶಿವಾಚಾರ್ಯ ಸ್ವಾಮಿಗಳು ಶ್ರೀ ರಂಭಾಪುರಿ ಪೀಠದ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಮಠದ ಧಾರ್ಮಿಕ, ದಾಸೋಹ ಕಾರ್ಯಗಳ ಉಸ್ತುವಾರಿಯನ್ನು ನೋಡಿಕೊಂಡು ಜಗದ್ಗುರುಗಳಿಗೆ ನೆರವಾಗುತ್ತಾ ಪೀಠವು ಪ್ರಸಿದ್ಧಿ ಪಡೆಯಲು ಸಹಾಯಕರಾಗಿದ್ದಾರೆ.

ಮಠದ ಪರಂಪರೆ:

೧. ಷ.ಬ್ರ.ಶ್ರೀ ಸಿದ್ಧಚೈತನ್ಯ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಶಿವಾದಿತ್ಯ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ವಿಶ್ವೇಶ್ವರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ನೀಲಕಂಠ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಚಿದ್ಘನ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಶಿವಾನುಭವ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಸ್ವಪ್ರಭಾನಂದ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ಚಿದಂಬರ ಶಿವಾಚಾರ್ಯಸ್ವಾಮಿಗಳು

೯. ಷ.ಬ್ರ.ಶ್ರೀ ಚಿಚ್ಛಕ್ತಿ ಶಿವಾಚಾರ್ಯಸ್ವಾಮಿಗಳು
೧೦. ಷ.ಬ್ರ.ಶ್ರೀ ವ್ಯೋಮ ಶಿವಾಚಾರ್ಯಸ್ವಾಮಿಗಳು
೧೧. ಷ.ಬ್ರ.ಶ್ರೀ ಚಿದಾನಂದ ಶಿವಾಚಾರ್ಯಸ್ವಾಮಿಗಳು
೧೨. ಷ.ಬ್ರ.ಶ್ರೀ ಧವಳಂಗ ಶಿವಾಚಾರ್ಯಸ್ವಾಮಿಗಳು
೧೩. ಷ.ಬ್ರ.ಶ್ರೀ ಜ್ಞಾನಶಕ್ತಿ ಶಿವಾಚಾರ್ಯಸ್ವಾಮಿಗಳು
೧೪. ಷ.ಬ್ರ.ಶ್ರೀ ಶಿವಶಕ್ತಿ ಶಿವಾಚಾರ್ಯಸ್ವಾಮಿಗಳು
೧೫. ಷ.ಬ್ರ.ಶ್ರೀ ವಾಮಶಕ್ತಿ ಶಿವಾಚಾರ್ಯಸ್ವಾಮಿಗಳು
೧೬. ಷ.ಬ್ರ.ಶ್ರೀ ಲೋಕನಾಥ ಶಿವಾಚಾರ್ಯಸ್ವಾಮಿಗಳು
೧೭. ಷ.ಬ್ರ.ಶ್ರೀ ಅಘೋರ ಶಿವಾಚಾರ್ಯಸ್ವಾಮಿಗಳು
೧೮. ಷ.ಬ್ರ.ಶ್ರೀ ಸಿದ್ಧನಂದೀಶ್ವರ ಶಿವಾಚಾರ್ಯಸ್ವಾಮಿಗಳು
೧೯. ಷ.ಬ್ರ.ಶ್ರೀ ಶಿವಾನುಭವ ಶಿವಾಚಾರ್ಯಸ್ವಾಮಿಗಳು
೨೦. ಷ.ಬ್ರ.ಶ್ರೀ ಈಶಾನಯೋಗಿ ಶಿವಾಚಾರ್ಯಸ್ವಾಮಿಗಳು
೨೧. ಷ.ಬ್ರ.ಶ್ರೀ ಶಿವಶಕ್ತಿ ಶಿವಾಚಾರ್ಯಸ್ವಾಮಿಗಳು
೨೨. ಷ.ಬ್ರ.ಶ್ರೀ ರುದ್ರಶಕ್ತಿ ಶಿವಾಚಾರ್ಯಸ್ವಾಮಿಗಳು
೨೩. ಷ.ಬ್ರ.ಶ್ರೀ ಅಘಹರ ಶಿವಾಚಾರ್ಯಸ್ವಾಮಿಗಳು
೨೪. ಷ.ಬ್ರ.ಶ್ರೀ ಮುನೀಶ್ವರಾರಾಧ್ಯ ಶಿವಾಚಾರ್ಯಸ್ವಾಮಿಗಳು
೨೫. ಷ.ಬ್ರ.ಶ್ರೀ ಜ್ಞಾನಶಕ್ತಿ ಶಿವಾಚಾರ್ಯಸ್ವಾಮಿಗಳು
೨೬. ಷ.ಬ್ರ.ಶ್ರೀ ಬ್ರಹ್ಮಶಕ್ತಿ ಶಿವಾಚಾರ್ಯಸ್ವಾಮಿಗಳು
೨೭. ಷ.ಬ್ರ.ಶ್ರೀ ಧವಳಾಂಗ ಶಿವಾಚಾರ್ಯಸ್ವಾಮಿಗಳು
೨೮. ಷ.ಬ್ರ.ಶ್ರೀ ತತ್ಪುರುಷ ಶಿವಾಚಾರ್ಯಸ್ವಾಮಿಗಳು
೨೯. ಷ.ಬ್ರ.ಶ್ರೀ ಸಿದ್ಧನಂಜೇಶ್ವರ ಶಿವಾಚಾರ್ಯಸ್ವಾಮಿಗಳು
೩೦. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು
೩೧. ಷ.ಬ್ರ.ಶ್ರೀ ಅಘೋರ ಶಿವಾಚಾರ್ಯಸ್ವಾಮಿಗಳು
೩೨. ಷ.ಬ್ರ.ಶ್ರೀ ಸತ್ಯಶಿವಯೋಗಿ (ಸಿದ್ಧನಂಜೇಶ) ಶಿವಾಚಾರ್ಯಸ್ವಾಮಿಗಳು
೩೩. ಷ.ಬ್ರ.ಶ್ರೀ ಈಶಾನಯೋಗಿ ಶಿವಾಚಾರ್ಯಸ್ವಾಮಿಗಳು
೩೪. ಷ.ಬ್ರ.ಶ್ರೀ ಸಿದ್ಧನಂಜೇಶ್ವರ ಶಿವಾಚಾರ್ಯಸ್ವಾಮಿಗಳು
೩೫. ಷ.ಬ್ರ.ಶ್ರೀ ಚಿಕ್ಕನಂಜೇಶ ಶಿವಾಚಾರ್ಯಸ್ವಾಮಿಗಳು
೩೬. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೩೭. ಷ.ಬ್ರ.ಶ್ರೀ ಸಿದ್ಧನಂಜೇಶ್ವರ ಶಿವಾಚಾರ್ಯಸ್ವಾಮಿಗಳು
೩೮. ಷ.ಬ್ರ.ಶ್ರೀ ಸಿದ್ಧವೀರ ಶಿವಾಚಾರ್ಯಸ್ವಾಮಿಗಳು
೩೯. ಷ.ಬ್ರ.ಶ್ರೀ ಸಿದ್ಧೇಶ್ವರ ಶಿವಾಚಾರ್ಯಸ್ವಾಮಿಗಳು
೪೦. ಷ.ಬ್ರ.ಶ್ರೀ ಗುರುಸಿದ್ಧ ಶಿವಾಚಾರ್ಯಸ್ವಾಮಿಗಳು
೪೧. ಷ.ಬ್ರ.ಶ್ರೀ ಸಿದ್ಧಬಸವ ಶಿವಾಚಾರ್ಯಸ್ವಾಮಿಗಳು
೪೨. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೪೩. ಷ.ಬ್ರ.ಶ್ರೀ ಗುರುಸಿದ್ಧ ಶಿವಾಚಾರ್ಯಸ್ವಾಮಿಗಳು
೪೪. ಷ.ಬ್ರ.ಶ್ರೀ ನೀಲಕಂಠ ಶಿವಾಚಾರ್ಯಸ್ವಾಮಿಗಳು
೪೫. ಷ.ಬ್ರ.ಶ್ರೀ ಶಿವಮಹಾಂತೇಶ ಶಿವಾಚಾರ್ಯಸ್ವಾಮಿಗಳು

ವಿಳಾಸ: ಷ.ಬ್ರ.ಶ್ರೀ ಶಿವಮಹಾಂತೇಶ ಶಿವಾಚಾರ್ಯಸ್ವಾಮಿಗಳು, ಶ್ರೀ ಹಿರೇಮಠ(ಚರ), ಹೂಲಿ, ಸವದತ್ತಿ ತಾ. ಬೆಳಗಾವಿಜಿಲ್ಲೆ.

ಸ್ಥಿರ ಪಟ್ಟಾಧಿಕಾರಮಠ: ಪ್ರಾಚೀನ ಪರಂಪರೆಯ ಪಂಚವಣ್ಣಿಗಿ ಮಠದ ಸ್ಥಿರ ಪಟ್ಟಾಧಿಕಾರದಲ್ಲಿ ಐವತ್ತೂರು ಜನ ಗುರುಗಳು ಅಧಿಕಾರ ನಡೆಸಿ, ಪಂಚವಣ್ಣಿಗಿ ಬೃಹನ್ಮಠವನ್ನು ಬೆಳೆಸಿದ್ದಾರೆ. ಸ್ಥಿರ ಪಟ್ಟಾಧಿಕಾರದ ಪರಂಪರೆಯು ಪ್ರತ್ಯೇಕ ಗೊಂಡ ಮೇಲೆ ಮಠವು ಧಾರ್ಮಿಕ ಕಾರ್ಯಗಳನ್ನು ಪ್ರತ್ಯೇಕವಾಗಿ ನಡೆಸಿ, ವೀರಶೈವ ಧರ್ಮವನ್ನು ಪ್ರಗತಿದಾಯಕವಾಗಿ ಬೆಳೆಸಿದೆ. ಮಠದ ಆವರಣ ದಲ್ಲಿ ಐದು ಗದ್ದುಗೆಗಳು ನೋಡಲು ಸಿಗುತ್ತಿವೆ. ಈಗ ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ಮಠದ ಆಡಳಿತವನ್ನು ನಡೆಸಿಕೊಂಡು ಮಠವನ್ನು ಮುನ್ನಡೆಸುತ್ತಿದ್ದಾರೆ.

ಮಠದ ಪರಂಪರೆ:

೧. ಷ.ಬ್ರ.ಶ್ರೀ ಸಿದ್ಧಚೈತನ್ಯ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಘನಲಿಂಗ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಕಾಲಮುಖ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ನಂದಿಕೇಶ್ವರ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಚಿದ್ಘನಲಿಂಗ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಕಾಲಾನನ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಶಿತಿಕಂಠ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ಚಿದ್ಘನಲಿಂಗ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ಶಿವಶಕ್ತಿ ಶಿವಾಚಾರ್ಯಸ್ವಾಮಿಗಳು
೧೦. ಷ.ಬ್ರ.ಶ್ರೀ ನೀಲಕಂಠ ಶಿವಾಚಾರ್ಯಸ್ವಾಮಿಗಳು
೧೧. ಷ.ಬ್ರ.ಶ್ರೀ ಹರದತ್ತ ಶಿವಾಚಾರ್ಯಸ್ವಾಮಿಗಳು
೧೨. ಷ.ಬ್ರ.ಶ್ರೀ ಚಿದ್ಘನಲಿಂಗ ಶಿವಾಚಾರ್ಯಸ್ವಾಮಿಗಳು
೧೩. ಷ.ಬ್ರ.ಶ್ರೀ ಕಾಲಾನನ ಶಿವಾಚಾರ್ಯಸ್ವಾಮಿಗಳು
೧೪. ಷ.ಬ್ರ.ಶ್ರೀ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು
೧೫. ಷ.ಬ್ರ.ಶ್ರೀ ವ್ಯೋಮ ಶಿವಾಚಾರ್ಯಸ್ವಾಮಿಗಳು
೧೬. ಷ.ಬ್ರ.ಶ್ರೀ ಸಿದ್ಧೇಶ್ವರ ಶಿವಾಚಾರ್ಯಸ್ವಾಮಿಗಳು
೧೭. ಷ.ಬ್ರ.ಶ್ರೀ ವಿಶ್ವೇಶ್ವರ ಶಿವಾಚಾರ್ಯಸ್ವಾಮಿಗಳು
೧೮. ಷ.ಬ್ರ.ಶ್ರೀ ಶಿವಯೋಗಿ ಶಿವಾಚಾರ್ಯಸ್ವಾಮಿಗಳು
೧೯. ಷ.ಬ್ರ.ಶ್ರೀ ಚಿದ್ಘನ ಶಿವಾಚಾರ್ಯಸ್ವಾಮಿಗಳು
೨೦. ಷ.ಬ್ರ.ಶ್ರೀ ಮಹೇಶ್ವರ ಶಿವಾಚಾರ್ಯಸ್ವಾಮಿಗಳು
೨೧. ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು
೨೨. ಷ.ಬ್ರ.ಶ್ರೀ ಸಿದ್ದೇಶ್ವರ ಶಿವಾಚಾರ್ಯಸ್ವಾಮಿಗಳು
೨೩. ಷ.ಬ್ರ.ಶ್ರೀ ವಿಶ್ವೇಶ್ವರ ಶಿವಾಚಾರ್ಯಸ್ವಾಮಿಗಳು
೨೪. ಷ.ಬ್ರ.ಶ್ರೀ ಸಿದ್ಧನಂದೀಶ್ವರ ಶಿವಾಚಾರ್ಯಸ್ವಾಮಿಗಳು
೨೫. ಷ.ಬ್ರ.ಶ್ರೀ ಲಕುಲೀಶ ಶಿವಾಚಾರ್ಯಸ್ವಾಮಿಗಳು
೨೬. ಷ.ಬ್ರ.ಶ್ರೀ ಏಕೋದೇವ ಶಿವಾಚಾರ್ಯಸ್ವಾಮಿಗಳು
೨೭. ಷ.ಬ್ರ.ಶ್ರೀ ಈಶಾನಯೋಗಿ ಶಿವಾಚಾರ್ಯಸ್ವಾಮಿಗಳು
೨೮. ಷ.ಬ್ರ.ಶ್ರೀ ಸೋಮದೇವ ಶಿವಾಚಾರ್ಯಸ್ವಾಮಿಗಳು
೨೯. ಷ.ಬ್ರ.ಶ್ರೀ ಜ್ಞಾನಶಕ್ತಿ ಶಿವಾಚಾರ್ಯಸ್ವಾಮಿಗಳು
೩೦. ಷ.ಬ್ರ.ಶ್ರೀ ತತ್ಪುರುಷ ಶಿವಾಚಾರ್ಯಸ್ವಾಮಿಗಳು
೩೧. ಷ.ಬ್ರ.ಶ್ರೀ ಸಿದ್ಧೇಶ್ವರ ಶಿವಾಚಾರ್ಯಸ್ವಾಮಿಗಳು
೩೨. ಷ.ಬ್ರ.ಶ್ರೀ ಚಿದ್ಘನ ಶಿವಾಚಾರ್ಯಸ್ವಾಮಿಗಳು

೩೩. ಷ.ಬ್ರ.ಶ್ರೀ ಶಿವಶಕ್ತಿ ಶಿವಾಚಾರ್ಯಸ್ವಾಮಿಗಳು
೩೪. ಷ.ಬ್ರ.ಶ್ರೀ ವಾಮಶಕ್ತಿ ಶಿವಾಚಾರ್ಯಸ್ವಾಮಿಗಳು
೩೫. ಷ.ಬ್ರ.ಶ್ರೀ ರುದ್ರಶಕ್ತಿ ಶಿವಾಚಾರ್ಯಸ್ವಾಮಿಗಳು
೩೬. ಷ.ಬ್ರ.ಶ್ರೀ ಈಶಾನಯೋಗಿ ಶಿವಾಚಾರ್ಯಸ್ವಾಮಿಗಳು
೩೭. ಷ.ಬ್ರ.ಶ್ರೀ ಜ್ಞಾನಶಕ್ತಿ ಶಿವಾಚಾರ್ಯಸ್ವಾಮಿಗಳು
೩೮. ಷ.ಬ್ರ.ಶ್ರೀ ಸಾಂಬಶಕ್ತಿ ಶಿವಾಚಾರ್ಯಸ್ವಾಮಿಗಳು
೩೯. ಷ.ಬ್ರ.ಶ್ರೀ ಸಿದ್ಧೇಶ್ವರ ಶಿವಾಚಾರ್ಯಸ್ವಾಮಿಗಳು
೪೦. ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು
೪೧. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೪೨. ಷ.ಬ್ರ.ಶ್ರೀ ಸಿದ್ಧಬಸವ ಶಿವಾಚಾರ್ಯಸ್ವಾಮಿಗಳು
೪೩. ಷ.ಬ್ರ.ಶ್ರೀ ಗುರುಸಿದ್ಧ ಶಿವಾಚಾರ್ಯಸ್ವಾಮಿಗಳು
೪೪. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೪೫. ಷ.ಬ್ರ.ಶ್ರೀ ಸಿದ್ಧಬಸವ ಶಿವಾಚಾರ್ಯಸ್ವಾಮಿಗಳು
೪೬. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೪೭. ಷ.ಬ್ರ.ಶ್ರೀ ಸಿದ್ಧಬಸವ (ಗಡ್ಡದ ಪಟ್ಟದ) ಶಿವಾಚಾರ್ಯಸ್ವಾಮಿಗಳು
೪೮. ಷ.ಬ್ರ.ಶ್ರೀ ರುದ್ರ ಶಿವಾಚಾರ್ಯಸ್ವಾಮಿಗಳು
೪೯. ಷ.ಬ್ರ.ಶ್ರೀ ಗುರುಬಸವ ಶಿವಾಚಾರ್ಯಸ್ವಾಮಿಗಳು
೫೦. ಷ.ಬ್ರ.ಶ್ರೀ ಸಿದ್ಧಬಸವ ಶಿವಾಚಾರ್ಯಸ್ವಾಮಿಗಳು
೫೧. ಷ.ಬ್ರ.ಶ್ರೀ ಮಹೇಶ್ವರ (ಮಹಾಂತ) ಶಿವಾಚಾರ್ಯಸ್ವಾಮಿಗಳು
೫೨. ಷ.ಬ್ರ.ಶ್ರೀ ವಿರೂಪಾಕ್ಷ ಶಿವಾಚಾರ್ಯಸ್ವಾಮಿಗಳು
೫೩. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು

ವಿಳಾಸ: ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ (ಸ್ಥಿರ), ಹೂಲಿ, ಸವದತ್ತಿ ತಾ, ಬೆಳಗಾವಿ ಜಿಲ್ಲೆ.

ಶಾಂಭಯ್ಯನವರಮಠ: ಹೂಲಿಯ ಪಟ್ಟಣದ ಮಧ್ಯಭಾಗದಲ್ಲಿ ಕೇದಾರ ಪೀಠದ ಶಾಖಾಮಠವಾಗಿ, ಪುತ್ರವರ್ಗದ ಪರಂಪರೆಯಲ್ಲಿ ಬೆಳೆದ ಶ್ರೀ ಶಾಂಭಯ್ಯನವರ ಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದಲ್ಲಿ ಪ್ರಾರಂಭವಾದ ಈ ಮಠವು ಧಾರ್ಮಿಕ ಕಾರ್ಯಗಳನ್ನು ನಡೆಸುವ ಮೂಲಕ ವೀರಶೈವ ಧರ್ಮವನ್ನು ಅಭಿವೃದ್ಧಿಪಡಿಸಿದೆ. ಶ್ರೀ ಶಾಂಭಯ್ಯ ಶಿವಾಚಾರ್ಯ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿದ್ದರಿಂದ 'ಶ್ರೀ ಶಾಂಭಯ್ಯನವರಮಠ' ಎಂಬ ಹೆಸರು ಬಂದಿದೆ.

ಪರಂಪರೆ: ಶ್ರೀ ಶಾಂಭಯ್ಯ ಶಿವಾಚಾರ್ಯ ಸ್ವಾಮಿಗಳ ನಂತರ ಈ ಮಠದ ಪರಂಪರೆಯಲ್ಲಿ ಅಧಿಕಾರ ನಡೆಸಿದ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ಲಭ್ಯವಿಲ್ಲ. ಸುಮಾರು ಎಂಟು ಜನ ಗುರುಗಳು ಅಧಿಕಾರ ನಡೆಸಿದ ಮೇಲೆ ಶ್ರೀ ಸಂಗಮೇಶ್ವರ ಶಿವಾಚಾರ್ಯ ಸ್ವಾಮಿಗಳು ಮಠದ ಗುರುಗಳಾಗಿ ಅಧಿಕಾರಕ್ಕೆ ಬಂದರು. ಇವರು ಲೋಕಸಂಚಾರ ಕೈಗೊಂಡು ಬೆಳಗಾವಿ ಹಾಗೂ ಹುಬ್ಬಳ್ಳಿ ನಗರಗಳಲ್ಲಿ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿ, ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿ ಕೊಟ್ಟಿದ್ದರು. ಇಂತಹ ಮಹಾನ್ ಸಾಧಕರು ಕಲಘಟಗಿ ತಾಲ್ಲೂಕಿನ ಜೋಡಿಹಳ್ಳಿ ಗ್ರಾಮದಲ್ಲಿ ಮಠವನ್ನು ಸ್ಥಾಪಿಸಿ, ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದ್ದರು. ಈಗ ಶ್ರೀ ಉಮೇಶ್ವರ ಶಿವಾಚಾರ್ಯ ಸ್ವಾಮಿಗಳು ಮಠದ ಆಡಳಿತವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ಮಠದ ಹಳೆಯ ಕಟ್ಟಡದ ಪಕ್ಕ ನೂತನ ಕಟ್ಟಡವನ್ನು ನಿರ್ಮಿಸಲಾಗಿದೆ. ಕಲ್ಯಾಣ ಮಂಟಪ, ದಾಸೋಹ

ಮಂದಿರವನ್ನು ನಿರ್ಮಿಸಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಬೆಳಗಾವಿಯಲ್ಲಿ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿ, ಗ್ರಾಮಾಂತರ ಪ್ರದೇಶದ ಮಕ್ಕಳ ಕಲಿಕೆಗೆ ನೆರವಾಗಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಉಮೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಶಾಂಭಯ್ಯನವರಮಠ,ಹೂಲಿ, ಸವದತ್ತಿ ತಾ. ಬೆಳಗಾವಿಜಿಲ್ಲೆ.
ಆಧಾರ: 'ಗುರುವರ್ಗ ದರ್ಪಣ' ಗ್ರಂಥಕರ್ತರು : ಶ್ರೀ ವಿರೂಪಾಕ್ಷ ಶಾಸ್ತ್ರಿಗಳು

ಹೊಸೂರು

ಸವದತ್ತಿ ತಾಲ್ಲೂಕಿನ ಹೊಸೂರು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಪುರಾತನ ಪರಂಪರೆಯ ಶ್ರೀ ಮಡಿವಾಳಸ್ವಾಮಿ ಮಠವು ಅಸ್ತಿತ್ವದಲ್ಲಿದೆ.

ಮಡಿವಾಳಸ್ವಾಮಿಮಠ: ಹೊಸೂರು ಗ್ರಾಮದಲ್ಲಿ ಸ್ಥಾಪನೆಯಾಗಿರುವ ಮಠವನ್ನು ಶ್ರೀ ಮಡಿವಾಳ ಸ್ವಾಮಿಗಳು ಸ್ಥಾಪನೆ ಮಾಡಿದ್ದರಿಂದ ಈ ಮಠಕ್ಕೆ 'ಶ್ರೀ ಮಡಿವಾಳಸ್ವಾಮಿಮಠ ' ಎಂಬ ಹೆಸರು ಬಂದಿದೆ.

ಪುರಾತನ ಕಾಲದಲ್ಲಿ ಸ್ಥಾಪನೆಗೊಂಡ ಮಠದ ಪರಂಪರೆಯ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಈಗ ಶ್ರೀ ಗಂಗಾಧರ ಸ್ವಾಮಿಗಳು ಮಠದ ಅಧಿಕಾರವನ್ನು ನಡೆಸುತ್ತಿದ್ದಾರೆ. ಗುರುಗಳು ಸೂಡಿ ಸಮೀಪದ ಗುಳುಗುಳಿ ಗ್ರಾಮದಲ್ಲಿ ಜನಿಸಿ ೧೯೮೩ರಲ್ಲಿ ಕೊಪ್ಪಳ ತಾಲ್ಲೂಕಿನ ಎತ್ತಿನಹಟ್ಟಿ ಬಸವರಾಜೇಂದ್ರಸ್ವಾಮಿ ಮಠದ ಮಠಾಧೀಶರಾಗಿ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಗುರುಗಳು ಆ ಮಠದ ಅಧಿಕಾರದ ಜತೆಗೆ ಈ ಮಠದ ಅಧಿಕಾರವನ್ನು ವಹಿಸಿಕೊಂಡು ಎರಡೂ ಮಠಗಳನ್ನು ಮುನ್ನಡೆಸುತ್ತಿದ್ದಾರೆ. ಮಡಿವಾಳ ಮಠದಲ್ಲಿ ಒಂದು ಎಕರೆ ಪ್ರದೇಶದಲ್ಲಿ ತೇಗದ ಮರಗಳನ್ನು ಬೆಳೆಸಿ ದಾಖಲೆ ನಿರ್ಮಿಸಿದ್ದಾರೆ. ಬಯಲಿನ ಬರಡು ಭೂಮಿಯಲ್ಲಿ ಹಸಿರು ಕ್ರಾಂತಿಯನ್ನು ಮಾಡಲು ಹೊರಟಿರುವ ಗುರುಗಳು ಈ ಸಾಧನೆಯಿಂದ ಜನಮನ್ನಣೆಗೆ ಪಾತ್ರರಾಗಿದ್ದಾರೆ. ಗುರುಗಳು ಕಾಯಕಯೋಗಿಗಳಾಗಿ ಮಠವನ್ನು ಬೆಳೆಸುವ ಮೂಲಕ ಸಮಾಜವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ಶ್ರೀ ಗಂಗಾಧರ ಸ್ವಾಮಿಗಳು ಮಠದ ಆಡಳಿತವನ್ನು ವಹಿಸಿಕೊಂಡ ಮೇಲೆ ಪರಂಪರೆಯ ಗುರುಗಳ ಗದ್ದುಗೆಗೆ ನಿತ್ಯ ಪೂಜೆ, ಧರ್ಮೋಪದೇಶ ಕಾರ್ಯಕ್ರಮಗಳು, ಯುಗಾದಿ ಅಮಾವಾಸ್ಯೆಯ ನಂತರ ಶ್ರೀ ಮಡಿವಾಳೇಶ್ವರರ ಜಾತ್ರೆಯನ್ನು ನಡೆಸುವ ಮೂಲಕ ಸಮಾಜದಲ್ಲಿ ಧಾರ್ಮಿಕ ವಾತಾವರಣ ಸೃಷ್ಟಿಯಾಗಲು ಕಾರಣರಾಗಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಗಂಗಾಧರ ಸ್ವಾಮಿಗಳು, ಶ್ರೀ ವಿರಕ್ತಮಠ, ಹೊಸೂರು, ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ.

❑

ಹುಕ್ಕೇರಿ ತಾಲ್ಲೂಕು

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕು ಐತಿಹಾಸಿಕ ಹಾಗೂ ಸಾಂಸ್ಕೃತಿಕವಾಗಿ ಹೆಸರು ಗಳಿಸಿದೆ. ಇಲ್ಲಿನ ಪುರಾತನ ಕಾಲದ ಗೋರಿಗಳು ಮೊಗಲರ ಇತಿಹಾಸವನ್ನು ಶಾಶ್ವತವಾಗಿ ಉಳಿಸಿವೆ. ಇಂತಹ ಇತಿಹಾಸವುಳ್ಳ ತಾಲ್ಲೂಕಿನಲ್ಲಿ ವೀರಶೈವ ಧರ್ಮ ಬೆಳೆದಿದೆ. ಇದಕ್ಕೆ ಪೂರಕವೆಂಬಂತೆ ಇಲ್ಲಿ ಸುಮಾರು ನಲವತ್ತೆಂಟು ವೀರಶೈವ ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಈಗ ಹದಿನೆಂಟು ಮಠಗಳನ್ನು ಗುರುತಿಸಬಹುದಾಗಿದ್ದು ಇವುಗಳಲ್ಲಿ ಹತ್ತು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಘೋಡಗೇರಿ

ಹುಕ್ಕೇರಿ ತಾಲ್ಲೂಕಿನ ಘೋಡಗೇರಿಯು ತಾಲ್ಲೂಕು ಕೇಂದ್ರದಿಂದ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಪ್ರಾಚೀನ ಕಾಲದ ವಿರಕ್ತ ಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಘೋಡಗೇರಿ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ವಿರಕ್ತಮಠವು, ಕುಮಾರ ಸಮಯದ ಮಠವಾಗಿದ್ದು ಪ್ರಸಿದ್ಧಿ ಪಡೆದಿದೆ. ಈ ಮಠದ ಈಗಿನ ಗುರುಗಳು ಹುಕ್ಕೇರಿ ತಾಲ್ಲೂಕಿನ ನೇರಬಿ ಗ್ರಾಮದಲ್ಲಿ ೧೯೪೦ರ ಮೇ ಹದಿನೈದರಂದು ಶ್ರೀ ಕಾಶಿನಾಥ ಸ್ವಾಮಿಗಳು ಜನಿಸಿದರು. ಇವರು ಶಿವಯೋಗಮಂದಿರ ಮತ್ತು ವಾರಣಾಸಿಯಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ, ೧೯೬೯ರ ಮೇ ಇಪ್ಪತ್ತೆರಡರಂದು ಮಠದ ಅಧಿಕಾರವನ್ನು ವಹಿಸಿಕೊಂಡರು. ಗುರುಗಳು ತಮ್ಮ ಕ್ರಿಯಾಶೀಲ ವ್ಯಕ್ತಿತ್ವದಿಂದ ಮಠವನ್ನು ಅಭಿವೃದ್ಧಿಪಡಿಸಿದ್ದಲ್ಲದೆ, ಹಾನಗಲ್ಲು ಶ್ರೀ ಕುಮಾರಸ್ವಾಮಿಗಳು ಜನಿಸಿದ ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ಜೋಯಿಸರ ಹಳ್ಳಿಯಲ್ಲಿ ಶ್ರೀ ಕುಮಾರೇಶ್ವರ ಸ್ಮಾರಕ ಭವನವನ್ನು ನಿರ್ಮಿಸಿರುವ ಕೀರ್ತಿಗೆ ಭಾಜನರಾಗಿದ್ದಾರೆ. ಗುರುಗಳು ತಮ್ಮ ವಿದ್ವತ್ ಉಪನ್ಯಾಸದಿಂದ ಹೆಸರು ಗಳಿಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಕಾಶಿನಾಥ ಸ್ವಾಮಿಗಳು, ಶ್ರೀ ವಿರಕ್ತಮಠ, ಘೋಡಗೇರಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ.

ನಿಡಸೋಸಿ

ಹುಕ್ಕೇರಿ ತಾಲ್ಲೂಕಿನ ನಿಡಸೋಸಿಯು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಸಿದ್ಧಸಂಸ್ಥಾನ ಮಠವು ಅಸ್ತಿತ್ವದಲ್ಲಿದೆ.

ಸಿದ್ಧಸಂಸ್ಥಾನಮಠ: ನಿಡಸೋಸಿ ಗ್ರಾಮದ ಮಧ್ಯಭಾಗದಲ್ಲಿ ಕುಮಾರ ಸಮಯದ ವಿರಕ್ತ ಸಂಪ್ರದಾಯದ ಶ್ರೀ ಸಿದ್ಧ ಸಂಸ್ಥಾನ ಮಠವು ಸ್ಥಾಪನೆಯಾಗಿದೆ. ಶ್ರೀ ದುರುದುಂಡೇಶ್ವರರಿಂದ ಅನುಗ್ರಹ ಪಡೆದ ಶ್ರೀ ನಿಜಲಿಂಗೇಶ್ವರರು ಗುರುಗಳ ಹೆಸರಲ್ಲಿ ಈ ಮಠವನ್ನು ಸ್ಥಾಪನೆ ಮಾಡಿದ್ದಾರೆ. ಮಠವು ಅಂದಿನಿಂದ ಈತನಕ ಬೆಳೆದು ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ಜಾಗೃತಿಉಂಟು ಮಾಡಿ ಸಮಾಜವನ್ನು ಬೆಳೆಸಿದೆ.

ಮಠ ಸ್ಥಾಪನೆ: ೧೭೪೨ರ ಸುಮಾರಿನಲ್ಲಿ ಇದೇ ಗ್ರಾಮದ ಶ್ರೀ ಶಿವಲಿಂಗಪ್ಪ ಮತ್ತು ಶ್ರೀಮತಿ ಲಿಂಗಮ್ಮನವರು ಶಿವ ಪೂಜಾನಿಷ್ಠರಾಗಿ, ಊರ ಹೊರಗಿನ ಹಳ್ಳದ ಬದಿಯಲ್ಲಿ ಸ್ಥಾಪನೆಯಾಗಿದ್ದ ಮಲ್ಲಿಕಾರ್ಜುನ ದೇವಾಲಯದಲ್ಲಿ ಪೂಜೆ ಮಾಡಿ ಕೊಂಡು ಕಾಯಕವನ್ನು ಮುಂದುವರೆಸಿದ್ದರು. ಇವರುಗಳು ವಿವಾಹವಾಗಿ ಅನೇಕ ವರ್ಷಗಳು ಕಳೆದರೂ ಗಂಡು ಸಂತಾನ ಇಲ್ಲದೆ ಕೊರಗಿ ಆರಾಧ್ಯ ದೈವದಲ್ಲಿ ತಮ್ಮ ಬೇಡಿಕೆ ಈಡೇರಿಸಲು ಹರಕೆ ಮಾಡಿಕೊಂಡರು. ಇದರ ಫಲವೆಂಬಂತೆ ಇವರಿಗೆ ಗಂಡು ಸಂತಾನವಾಗಿ ನಿಜಲಿಂಗಪ್ಪ ಎಂದು ನಾಮಕರಣವನ್ನು ಮಾಡಿದರು. ಹರಕೆಯ ಕೂಸಾಗಿ ಜನಿಸಿದ ನಿಜಲಿಂಗರು ತನ್ನ ಬಾಲ್ಯದಲ್ಲಿ ಆಧ್ಯಾತ್ಮದ ಒಲವಿನಿಂದ ಕಾಲಕಳೆದರು. ನಂತರ ವಿವಾಹವನ್ನು ಮಾಡಿದರೂ ಸಂಸಾರದಲ್ಲಿ ಆಸಕ್ತಿ ತೋರಿಸದೆ, ಮಲ್ಲಿಕಾರ್ಜುನ ದೇವಾಲಯದಲ್ಲಿ ಸದಾ ಪೂಜಾಮಗ್ನರಾಗಿ ಇರುತ್ತಿದ್ದರು.

ಈ ಸಂದರ್ಭದಲ್ಲಿ ಶ್ರೀ ದುರುದುಂಡೇಶ್ವರರು ಬೆಳಗಾವಿ ಹಾಗೂ ವಿಜಾಪುರ ಜಿಲ್ಲೆಗಳಲ್ಲಿ ಸಂಚರಿಸಿ ಧರ್ಮೋಪದೇಶವನ್ನು ನೀಡುತ್ತಾ ಈ ಪ್ರಾಂತ್ಯಕ್ಕೆ ಆಗಮಿಸಿ, ಇಲ್ಲಿಗೆ ಸಮೀಪದ ಕಮತನೂರು ಗ್ರಾಮದಲ್ಲಿ ನೆಲೆಗೊಂಡು ಧರ್ಮೋಪದೇಶವನ್ನು ನೀಡುತ್ತಿದ್ದರು. ಈ ವಿಚಾರ ನಿಜಲಿಂಗರಿಗೆ ತಿಳಿದು ಗುರುಗಳ ಬಳಿಗೆ ಬಂದು ಧರ್ಮೋಪದೇಶ ವನ್ನು ಕೇಳಿ ಆತ್ಮೋದ್ಧಾರಕ್ಕೆ ಮಾರ್ಗವನ್ನು ಕಂಡುಕೊಂಡರು. ಶ್ರೀ ದುರುದುಂಡೇಶ್ವರರು ನಿಜಲಿಂಗರ ಆಸಕ್ತಿಯನ್ನು ನೋಡಿ ನಿಜಲಿಂಗ ಶರಣರೆಂದು ಕರೆದು ತಮ್ಮ ಆಪ್ತ ಶಿಷ್ಯನನ್ನಾಗಿ ಮಾಡಿಕೊಂಡರು. ಈ ರೀತಿ ಗುರುಶಿಷ್ಯರ ಸಂಬಂಧ ಗಾಢವಾಯಿತು. ಹನ್ನೆರಡು ವರ್ಷಗಳಕಾಲ ಶ್ರೀ ದುರುದುಂಡೇಶ್ವರರ ಕೃಪಾಶೀರ್ವಾದದಿಂದ ಬೆಳೆದ ಶ್ರೀ ನಿಜಲಿಂಗರು ಶ್ರೀ ದುರುದುಂಡೇಶ್ವ ರರು ಲಿಂಗೈಕ್ಯರಾದ ಮೇಲೆ ನಿಡಸೋಸಿಯಲ್ಲಿ ತೋರುಗದ್ದುಗೆಯನ್ನು ಸ್ಥಾಪಿಸಿ,ಹಿಂದೆ ಗುರುಗಳು ನೀಡಿದ್ದ ಉತ್ತತ್ತಿ, ಭಸ್ಮ, ಬಿಲ್ವದಳ ಹಾಗೂ ರುದ್ರಾಕ್ಷಿ ಮಾಲೆಗಳನ್ನು ಇಟ್ಟು, ಪೂಜಿಸತೊಡಗಿದರು. ಈ ರೀತಿ ಧಾರ್ಮಿಕ ಕಾರ್ಯಗಳು ಪ್ರಾರಂಭಗೊಂಡವು. ದಿನ ಕಳೆದಂತೆ ಸುತ್ತಲ ಗ್ರಾಮಸ್ಥರು ಶ್ರೀ ನಿಜಲಿಂಗರ ಆಧ್ಯಾತ್ಮಶಕ್ತಿಗೆ ಒಲಿದು, ಅಪಾರ ಸಂಖ್ಯೆಯಲ್ಲಿ ಬರತೊಡಗಿದರು. ಈ ಜನರಿಗೆ ಧರ್ಮೋಪದೇಶ ಹಾಗೂ ಅಂಬಲಿಯ ದಾಸೋಹ ನಡೆಯತೊಡಗಿ, ಈ ವಿಚಾರ ನಾಡಿನಲ್ಲೆಲ್ಲಾ ಪ್ರಚಾರಗೊಂಡಿತು. ಸಂಸಾರದಲ್ಲಿದ್ದು ಸಾಧನೆಯ ಸಿದ್ಧಿಯನ್ನು ಮುಟ್ಟಿ ಮೋಕ್ಷದ ಮಾರ್ಗವನ್ನು ಕಂಡುಕೊಂಡ ಶ್ರೀ ನಿಜಲಿಂಗರು, ಭಕ್ತರ ಉದ್ಧಾರಕ್ಕಾಗಿ ಶ್ರಮಿಸಿ ಲಿಂಗೈಕ್ಯರಾದರು.

ಶ್ರೀ ನಿಜಲಿಂಗರು ಲಿಂಗೈಕ್ಯರಾದ ಮೇಲೆ ವಿರಕ್ತಸಂಪ್ರದಾಯದ ಮಠವು ಸ್ಥಾಪನೆಗೊಂಡಿತು. ಮೊದಲ ಗುರುಗಳಾಗಿ ಶ್ರೀ ಶಿವಲಿಂಗೇಶ್ವರರು ಅಧಿಕಾರವನ್ನು ವಹಿಸಿಕೊಂಡು, ಬೃಹತ್ತಾದ ಮಠವನ್ನು ನಿರ್ಮಿಸಲು ಮುಂದಾದರು. ನಿಪ್ಪಾಣಿಯ ಸಂಸ್ಥಾನದಲ್ಲಿ ಕಾರುಭಾರಿಗಳಾಗಿದ್ದ ಲಿಂಗೋಮಲ್ಹಾರಿಪಂತರನ್ನು ಬರಮಾಡಿಕೊಂಡು, ಮಠದ ಕಟ್ಟಡದ ನೀಲಿ ನಕ್ಷೆಯನ್ನು ತಯಾರಿಸಿದರು. ನಿಪ್ಪಾಣಿಯ ಕೋಟೆಯನ್ನು ಕಟ್ಟಲು ದುಡಿದಿದ್ದ ಭೀಮಪ್ಪ ಹುಜರಿ ಎಂಬ ಕುಶಲ ಶಿಲ್ಪಿಯ ಉಸ್ತುವಾರಿಯಲ್ಲಿ, ೧೮೭೮ರಲ್ಲಿ ಮಠಕ್ಕೆ ಕಟ್ಟಡವನ್ನು ಪ್ರಾರಂಭಿಸಿದರು. ೧೮೮೯ರಲ್ಲಿ ಮಠದ ಬೃಹತ್ತಾದ ಪ್ರವೇಶದ್ವಾರ, ೧೮೩೦ರಲ್ಲಿ ಗದ್ದುಗೆಯ ಸುತ್ತ ಕಟ್ಟಡವನ್ನು ನಿರ್ಮಿಸಿದರು. ಈ [illegible] ಆರು ವರ್ಷಗಳ ಕಾಲ ನೂರಾರು ಕುಶಲಕರ್ಮಿಗಳು ಶ್ರಮಿಸಿ ಮಠಕ್ಕೆ ಬೃಹದಾಕಾರದ ಕಟ್ಟಡವನ್ನು ನಿರ್ಮಿಸಿದರು. ಭವ್ಯವಾದ ಮಠದ ಕಟ್ಟಡವನ್ನು ನಿರ್ಮಿಸಲು ಕೊಲ್ಲಾಪುರದ ಸಂಸ್ಥಾನಿಕರು ಬೃಹದಾಕಾರದ ಮರದ ದಿಮ್ಮಿಗಳನ್ನು ತರಿಸಿ ನುರಿತ ಕೆತ್ತನೆಯ ಕೆಲಸಗಾರ ರಿಂದ ಕೆತ್ತಿಸಿ ಭವ್ಯವಾದ ಮಠವು ರೂಪುಗೊಳ್ಳಲು ನೆರವಾದರು.

ಮಠದ ಪಶ್ಚಿಮ,ದಕ್ಷಿಣ ಹಾಗೂ ಉತ್ತರದಲ್ಲಿ ಪ್ರವೇಶದ್ವಾರಗಳು, ಪಶ್ಚಿಮದಲ್ಲಿ ಮಹಾದ್ವಾರ,ಇದಕ್ಕೆ ಹೊಂದಿ ಕೊಂಡಂತೆ ಉಪ್ಪರಿಗೆ, ಅದರ ಮೇಲೆ ಮೂರು ಕಿರು ಗುಮ್ಮಟಗಳು ಸ್ಥಾಪನೆಗೊಂಡಿವೆ. ಇದರ ಪಕ್ಕದಲ್ಲಿ ಎಡಪಾರ್ಶ್ವ ದಲ್ಲಿ ಸಂಗೀತ ಮಹಲು ಇದ್ದು ಇದನ್ನು ಗವಾಯಿಸದರ ಎಂದು ಕರೆಯಲಾಗುತ್ತಿದೆ. ಬಲಬದಿಯಲ್ಲಿ ಸಂಸ್ಕೃತ ಪಾಠ ಶಾಲೆ, ನಗಾರಿಖಾನೆಗಳು, ದಕ್ಷಿಣ ಗೋಡೆಗೆ ಹೊಂದಿಕೊಂಡಂತೆ ಕುದುರೆ, ಗೋಶಾಲೆ, ಉತ್ತರದ ತುದಿಯಲ್ಲಿ ಆಳವಾದ ದೊಡ್ಡಬಾವಿ ಸ್ಥಾಪನೆಯಾಗಿರುವುದಲ್ಲದೆ ಗದ್ದುಗೆ ಮಂಟಪ, ದಾಸೋಹಮನೆ ಈ ರೀತಿ ಹಂತಹಂತವಾಗಿ ಅನೇಕ ಕಟ್ಟಡ ಗಳು ರೂಪುಗೊಂಡ ಈ ಕಟ್ಟಡ ಸಮುಚ್ಚಯದ ಸುತ್ತ ಆವರಣವನ್ನು ಬೃಹದಾಕಾರದ ಕಲ್ಲುಗಳಿಂದ ನಿರ್ಮಿಸಿ, ಗುರು ಮನೆಗೆ ಅರಮನೆಯ ಭವ್ಯತೆಯನ್ನು ರೂಪವನ್ನು ನೀಡಲಾಗಿದೆ. ಆದ್ಯ ಶ್ರೀ ಶಿವಲಿಂಗೇಶ್ವರರ ಪರಿಶ್ರಮದಿಂದ ಮಠವು ಭವ್ಯವಾಗಿ ಮೈದಳೆದು ನಿಂತು, ಧಾರ್ಮಿಕ ಕಾರ್ಯಗಳನ್ನು ನಡೆಸುವ ಮೂಲಕ ನಾಡಿನಾದ್ಯಂತ ಹೆಚ್ಚುಹೆಸರು ಪಡೆಯಿತು.

ಪರಂಪರೆ:

೧. ನಿಜಲಿಂಗೇಶ್ವರ ಎಂಬ ಮೂಲ ಹೆಸರಿನ	ಆದ್ಯ ಶ್ರೀ ಮ.ನಿ.ಪ್ರ. ನಿಜಲಿಂಗೇಶ್ವರಸ್ವಾಮಿಗಳು (೧೮೭೭)
೨. ಶಿವಲಿಂಗೇಶ್ವರ ಎಂಬ ಮೂಲ ಹೆಸರಿನ	ಆದ್ಯ ಶ್ರೀ ಮ.ನಿ.ಪ್ರ. ಶಿವಲಿಂಗೇಶ್ವರಸ್ವಾಮಿಗಳು (೧೮೫೭)
೩. ಬಸವಲಿಂಗಯ್ಯ ಎಂಬ ಮೂಲ ಹೆಸರಿನ	ದ್ವಿತೀಯ ಶ್ರೀ ಮ.ನಿ.ಪ್ರ. ನಿಜಲಿಂಗೇಶ್ವರಸ್ವಾಮಿಗಳು (೧೮೬೦)
೪. ಗುರುಲಿಂಗೇಶ್ವರ ಎಂಬ ಮೂಲ ಹೆಸರಿನ	ದ್ವಿತೀಯ ಶ್ರೀ ಮ.ನಿ.ಪ್ರ. ಶಿವಲಿಂಗೇಶ್ವರಸ್ವಾಮಿಗಳು (೧೮೯೦)

೫. ಸಂಗಮೇಶ್ವರ ಎಂಬ ಮೂಲ ಹೆಸರಿನ ತೃತೀಯ ಶ್ರೀ ಮ.ನಿ.ಪ್ರ. ನಿಜಲಿಂಗೇಶ್ವರಸ್ವಾಮಿಗಳು (೧೯೦೭)
೬. ಮಹಲಿಂಗೇಶ್ವರ ಎಂಬ ಮೂಲ ಹೆಸರಿನ ತೃತೀಯ ಶ್ರೀ ಮ.ನಿ.ಪ್ರ. ಶಿವಲಿಂಗೇಶ್ವರಸ್ವಾಮಿಗಳು (೧೯೧೬)
೭. ದುರುದುಂಡೇಶ್ವರ ಎಂಬ ಮೂಲ ಹೆಸರಿನ ಚತುರ್ಥ ಶ್ರೀ ಮ.ನಿ.ಪ್ರ. ನಿಜಲಿಂಗೇಶ್ವರಸ್ವಾಮಿಗಳು (೧೯೫೦)
೮. ಗುರುಲಿಂಗೇಶ್ವರ ಎಂಬ ಮೂಲ ಹೆಸರಿನ ಚತುರ್ಥ ಶ್ರೀ ಮ.ನಿ.ಪ್ರ. ಶಿವಲಿಂಗೇಶ್ವರಸ್ವಾಮಿಗಳು (೧೯೭೧)
೯. ಮಹಲಿಂಗೇಶ್ವರ ಎಂಬ ಮೂಲ ಹೆಸರಿನ ಪಂಚಮ ಶ್ರೀ ಮ.ನಿ.ಪ್ರ. ನಿಜಲಿಂಗೇಶ್ವರಸ್ವಾಮಿಗಳು (೧೯೮೯)
೧೦. ಪ್ರಭುಸ್ವಾಮಿಗಳು ಎಂಬ ಮೂಲ ಹೆಸರಿನ ಪಂಚಮ ಶ್ರೀ ಮ.ನಿ.ಪ್ರ. ಶಿವಲಿಂಗೇಶ್ವರಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ದ್ವಿತೀಯಶ್ರೀ ನಿಜಲಿಂಗೇಶ್ವರರು ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ಮೇಣೆ,ಸಾರೋಟು ಹಾಗೂ ಕುದುರೆಗಳನ್ನು ಸಂಗ್ರಹಿಸಿದರು. ನಂತರ ಎರಡನೆಯ ಶ್ರೀ ಶಿವಲಿಂಗೇಶ್ವರರು ಧಾರ್ಮಿಕ ಕಾರ್ಯಗಳ ಜತೆಗೆ ಶಿಕ್ಷಣಕ್ಕೂ ಹೆಚ್ಚು ಒತ್ತುಕೊಟ್ಟು, ಅನೇಕ ಶಿಕ್ಷಣಸಂಸ್ಥೆಗಳು ಬೆಳೆಯಲು ನೆರವಾದರು. ನಂತರ ಬಂದ ನಾಲ್ಕನೆಯ ಶ್ರೀ ನಿಜಲಿಂಗೇಶ್ವರರು ಶಿಕ್ಷಣ ಸಂಸ್ಥೆಯನ್ನು ಹುಟ್ಟುಹಾಕಿದರು. ಪಂಚಮ ಶ್ರೀ ನಿಜ ಲಿಂಗೇಶ್ವರರು ಮಠದ ಕಟ್ಟಡವನ್ನು ನವೀಕರಣಗೊಳಿಸಿ, ಹೆಚ್ಚು ಅಭಿವೃದ್ಧಿಯಾಗಲು ಕಾರಣಕರ್ತರಾದರು. ನಂತರ ಬಂದ ಪಂಚಮ ಶ್ರೀ ಶಿವಲಿಂಗೇಶ್ವರರು ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ಕೆ.ಬಿದರೆ ಗ್ರಾಮದಲ್ಲಿ ಜನಿಸಿ, ಶಿವಯೋಗಮಂದಿರ, ಹುಬ್ಬಳ್ಳಿ ಮೂರುಸಾವಿರ ಮಠದಲ್ಲಿ ವಿದ್ಯಾಭ್ಯಾಸ ಮಾಡಿ ಬಾಗಲಕೋಟೆಯ ಚರಂತಿ ಮಠದ ಉತ್ತರಾಧಿಕಾರಿಗಳಾಗಿ ಅಧಿಕಾರವನ್ನು ವಹಿಸಿಕೊಂಡು ಆ ಮಠವನ್ನು ಅಭಿವೃದ್ಧಿಪಡಿಸಿದರು. ಗುರುಗಳ ಕ್ರಿಯಾಶೀಲತೆ, ಮತ್ತು ಪಾಂಡಿತ್ಯಪೂರ್ಣ ವ್ಯಕ್ತಿತ್ವವನ್ನು ಗಮನಿಸಿದ ಇಲ್ಲಿನ ಭಕ್ತರು ನಿಡಸೋಸಿಗೆ ಬರಮಾಡಿಕೊಂಡರು. ಗುರುಗಳು ಮಠದ ಹತ್ತನೆಯ ಗುರುಗಳಾಗಿ, ೧೯೮೯ರ ಜುಲೈ ಇಪ್ಪತ್ತರಂದು ಪಟ್ಟಾಧಿಕಾರವನ್ನು ವಹಿಸಿಕೊಂಡರು.

ಶೈಕ್ಷಣಿಕ ಸೇವೆ: ಶ್ರೀ ಚತುರ್ಥ ನಿಜಲಿಂಗೇಶ್ವರರ ಕಾಲದಲ್ಲಿ 'ಶ್ರೀ ದುರುದುಂಡೇಶ್ವರ ವಿದ್ಯಾವರ್ಧಕ ಸಂಘ'ವನ್ನು ಮಠದ ವತಿಯಿಂದ ಸ್ಥಾಪಿಸಿ,೧೯೨೯ರಲ್ಲಿ ಕೊಲ್ಲಾಪುರ ಹಾಗೂ ಸಂಕೇಶ್ವರದಲ್ಲಿ ಪ್ರೌಢಶಾಲೆಯನ್ನು ಪ್ರಾರಂಭಿಸ ಲಾಯಿತು. ನಂತರ ೧೯೪೬ರಲ್ಲಿ 'ಶ್ರೀ ದುರುದುಂಡೇಶ್ವರ ಎಜುಕೇಶನ್ ಸೊಸೈಟಿ' ಎಂದು ಮರು ನಾಮಕರಣಗೊಂಡು ಬೆಳೆಯಿತು. ಆ ಕಾಲದಲ್ಲಿ ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಬೆಳೆಸಲು ಹಣಕಾಸಿನ ತೊಂದರೆಯಾದಾಗ, ಸಂಕೇಶ್ವರದಲ್ಲಿ ಐವತ್ತುಸಾವಿರ ರೂಪಾಯಿ ಮೊತ್ತದ ಹಣವನ್ನು ಸಂಗ್ರಹಿಸಿದ ಭಕ್ತರು ಶಿಕ್ಷಣ ಸಂಸ್ಥೆಯು ಗಟ್ಟಿಯಾಗಿ ಬೆಳೆಯಲು ನೆರವಾದರು. ನಂತರ ಬಂದ ಗುರುಗಳು ಈ ಸಂಸ್ಥೆಯನ್ನು ಸದೃಢವಾಗಿ ಬೆಳೆಸಿದ್ದಾರೆ. ಸಂಸ್ಕೃತ ಶಾಲೆಗಳು, ನಾಲ್ಕು ಪ್ರಾಥಮಿಕ ಶಾಲೆಗಳು, ಆರು ಪ್ರೌಢಶಾಲೆಗಳು, ಎರಡು ಪದವಿಪೂರ್ವ ಕಾಲೇಜುಗಳು, ಎರಡು ಪದವಿ ಕಾಲೇಜು, ೧೯೮೭ರಲ್ಲಿ ಪಾಲಿಟೆಕ್ನಿಕ್ ಕಾಲೇಜು, ೧೯೯೬ರಲ್ಲಿ ಗ್ರಾಮೀಣ ಇಂಜಿನಿಯರಿಂಗ್ ಕಾಲೇಜು ಈ ರೀತಿ ಪ್ರಾಥಮಿಕ ಶಾಲೆಯಿಂದ ಹಿಡಿದು ಔದ್ಯೋಗಿಕ ರಂಗದ ವರೆಗೆ ಕಲಿಕೆಗೆ ನೆರವಾಗ ಬಲ್ಲಂತಹ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ, ಗ್ರಾಮೀಣ ಯುವಕರಿಗೆ ನೆರವಾಗಿದೆ. ಮಠದಲ್ಲಿ ಹಾಗೂ ಸಂಕೇಶ್ವರದಲ್ಲಿ ಉಚಿತ ಪ್ರಸಾದ ನಿಲಯವನ್ನು ಪ್ರಾರಂಭಿಸಿ, ಗ್ರಾಮೀಣ ಪ್ರದೇಶದ ಬಡಮಕ್ಕಳಿಗೆ ಪ್ರವೇಶಾವಕಾಶವನ್ನು ಕಲ್ಪಿಸಿ ನೆರವಾಗಿದೆ.

ಸಾಮಾಜಿಕ ಕಾರ್ಯಗಳು: ಶ್ರೀ ಪಂಚಮ ಶಿವಲಿಂಗೇಶ್ವರರು ವೈಚಾರಿಕ ಮನೋಭಾವವುಳ್ಳವರಾಗಿದ್ದು, ದೇವದಾಸಿ ಪದ್ಧತಿಯ ನಿರ್ಮೂಲನೆಗಾಗಿ ಪುನರ್ ವಸತಿಯನ್ನು ಕಲ್ಪಿಸಿ ಹೊಸ ಬದುಕನ್ನು ರೂಪಿಸಿಕೊಳ್ಳಲು ನೆರವಾಗಿದ್ದಾರೆ. ಅದೇ ರೀತಿ ಮೂಢನಂಬಿಕೆಗಳ ಹೆಸರಿನಲ್ಲಿ ಜಡೆಯನ್ನು ಬಿಟ್ಟು ಯಾತನೆ ಅನುಭವಿಸುವ ಜನರನ್ನು ಗುರುತಿಸಿ ಅವರಲ್ಲಿರುವ ಮೂಢನಂಬಿಕೆಗಳನ್ನು ಹೋಗಲಾಡಿಸಿ, 'ಜಡೆ ಬಿಡುವುದು ದೇಹದ ವಿಕಾರವೇ ಹೊರತು ಯಾವ ದೇವರೂ ಕಾರಣವಲ್ಲ' ಎಂದು ಹೇಳಿ, ಈವರೆಗೆ ನಾಲ್ಕುಸಾವಿರ ಜನರ ಗಂಟುಕಟ್ಟಿದ ಜಡೆಗಳನ್ನು ಸ್ವಚ್ಛಗೊಳಿಸಿದ್ದಾರೆ. ಈ ರೀತಿ ಜಡೆ ಬಿಡುವ ಮಹಿಳೆಯರು ಶೇಕಡ ತೊಂಬತ್ತೈದರಷ್ಟು, ದೇವದಾಸಿಯರಾಗಿದ್ದು, ಇವರುಗಳ ಮನವೊಲಿಸಿ ಶೇಕಡ ಎಂಬತ್ತೈದರಷ್ಟು ಮಹಿಳೆಯರಿಗೆ ಹೊಸ ಬದುಕನ್ನು ರೂಪಿಸಿಕೊಳ್ಳಲು ನೆರವಾಗಿರುವುದು ಗುರುಗಳ ಸಾಮಾಜಿಕ ಸುಧಾರಣೆಯ ಬಗ್ಗೆ

ಇರುವ ಕಳಕಳಿಯನ್ನು ತೋರಿಸುತ್ತಿದೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಶ್ರೀ ದುರುದುಂಡೇಶ್ವರರ ಚೈತನ್ಯ ಗದ್ದುಗೆಗೆ ನಿತ್ಯ ತ್ರಿಕಾಲ ಪೂಜೆ ಹಾಗೂ ಇತರೆ ಗದ್ದುಗೆಗಳಿಗೆ ನಿತ್ಯ ಪೂಜೆಯನ್ನು ನಡೆಸಲಾಗುತ್ತಿದೆ. ಗಣೇಶ ಚತುರ್ಥಿಯ ಐದನೆಯ ದಿನದಂದು ನಡೆ ಯುವ ಜಾತ್ರೆಗೆ ಕರ್ನಾಟಕ ಹಾಗೂ ಮಹಾರಾಷ್ಟ್ರಗಳಿಂದ ಲಕ್ಷಾಂತರ ಜನ ಬಂದು ಸೇರುತ್ತಾರೆ. ಈ ಸಂದರ್ಭದಲ್ಲಿ ಪೂಜೆ, ಪಲ್ಲಕ್ಕಿ ಮೆರವಣಿಗೆ, ಬಿರುಸು ಬಾಣ ಪ್ರದರ್ಶನ, ವಾದ್ಯಮೇಳ ಹಾಗೂ ಕುಸ್ತಿ ಪಂದ್ಯಗಳು ನಡೆಯುತ್ತಿವೆ. ಈ ಸಂದರ್ಭದಲ್ಲಿ ಹುಗ್ಗಿಯ ದಾಸೋಹವು ವಿಶೇಷವಾಗಿ ನಡೆಯುತ್ತಿದೆ. ಜಾತ್ರೆಯ ಕೊನೆಯದಿನ ಪುರಾಣಸಮಾಪ್ತಿ, ಧಾರ್ಮಿಕ ಉಪನ್ಯಾಸ ಹಾಗೂ ಪ್ರವಚನಗಳು ನಡೆಯುತ್ತಿವೆ. ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಗಣ್ಯರನ್ನು ಅಭಿನಂದಿಸಲಾಗುತ್ತಿದೆ.

ಪ್ರತಿ ಅಮಾವಾಸ್ಯೆಯಲ್ಲಿ ಗದ್ದುಗೆ ಹಾಗೂ ಗುರುಗಳ ದರ್ಶನಕ್ಕಾಗಿ ಸುತ್ತಮುತ್ತಲಿನ ಸಾವಿರಾರು ಜನ ಬಂದು ಸೇರುತ್ತಾರೆ. ಶಿವರಾತ್ರಿಯ ದಿನ ಜಾಗರಣೆಯ ನಿಮಿತ್ತ ಇಡೀ ರಾತ್ರಿ ಪ್ರವಚನ, ಸಂಗೀತ ಹಾಗೂ ಭಜನೆ ಕಾರ್ಯಕ್ರಮ ಗಳು ನಡೆಯುತ್ತಿವೆ. ಮರುದಿನ ವಿಶೇಷ ಪೂಜೆ ನಂತರ ಸಾಮೂಹಿಕ ಅನ್ನಸಂತರ್ಪಣೆ ಕಾರ್ಯಕ್ರಮ ನಡೆಯುತ್ತಿದೆ. ಕಾರ್ತೀಕ ದೀಪೋತ್ಸವ ಮತ್ತು ವಿಜಯದಶಮಿಯಂದು ಗುರುಗಳು ಮೇನೆಯಲ್ಲಿ ಕುಳಿತು ಕಮತನೂರಿಗೆ ತೆರಳಿ ಬನ್ನಿ ಮುಡಿಯುವ ಕಾರ್ಯಕ್ರಮ ವಿಶೇಷವಾಗಿ ನಡೆಯುತ್ತಿದೆ. ನಾಗರಪಂಚಮಿ, ಪಾಂಡವ ಪೂಜೆಗಳು ಹಾಗೂ ವರ್ಷದಲ್ಲಿ ನಡೆಯುವ ಎಲ್ಲಾ ಹಬ್ಬ ಹರಿದಿನಗಳನ್ನು ವಿಶೇಷವಾಗಿ ಆಚರಿಸಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಪಂಚಮ ಶಿವಲಿಂಗೇಶ್ವರ ಸ್ವಾಮಿಗಳು, ಶ್ರೀ ಸಿದ್ಧಸಂಸ್ಥಾನಮಠ, ನಿಡಸೋಸಿ-೫೯೧ ೨೩೬, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ.
ಆಧಾರ: 'ಕಲ್ಯಾಣದ ಹಾದಿ' ಸಂಪಾದಕರು : ಡಾ.ಸಿದ್ಧಲಿಂಗ ಪಟ್ಟಣಶೆಟ್ಟಿ, ಲೇಖಕರು : ಡಾ.ಗುರುಪಾದ ಮರಿಗುದ್ದಿ

ಪಾಶ್ಚಾಪುರ

ಹುಕ್ಕೇರಿ ತಾಲ್ಲೂಕಿನ ಪಾಶ್ಚಾಪುರ ಗ್ರಾಮವು ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಇಪ್ಪತ್ತು ಕಿ.ಮೀ ದೂರದ ಲ್ಲಿದೆ. ಇಲ್ಲಿ ಶ್ರೀ ಹುಚ್ಚೇಶ್ವರ ಸಂಸ್ಥಾನ ಹಿರೇಮಠವು ಅಸ್ತಿತ್ವದಲ್ಲಿದೆ.

ಹುಚ್ಚೇಶ್ವರ ಸಂಸ್ಥಾನ ಹಿರೇಮಠ: ಪಾಶ್ಚಾಪುರ ಗ್ರಾಮದ ಮಧ್ಯಬಾಗದಲ್ಲಿ ಶ್ರೀ ಹುಚ್ಚೇಶ್ವರ ಸಂಸ್ಥಾನ ಹಿರೇಮಠವು ಸ್ಥಾಪನೆಯಾಗಿದೆ. ಕಾಶಿಪೀಠದ ಪರಂಪರೆಯ ಮಠವಾಗಿ ಬೆಳೆದು ಶ್ರೀ ಹುಚ್ಚೇಶ್ವರ ಸ್ವಾಮಿಗಳಿಂದ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಕರ್ತೃಗುರುಗಳ ನಂತರ ಹನ್ನೆರಡು ಜನ ಗುರುಗಳು ಅಧಿಕಾರ ನಡೆಸಿ ಮಠವನ್ನು ಅಭಿವೃದ್ಧಿ ಪಡಿಸಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೆ ಕರ್ತೃಗುರುಗಳು ಹಾಗೂ ೧೯೭೭ರಲ್ಲಿ ಲಿಂಗೈಕ್ಯರಾದ ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳ ಹೆಸರನ್ನು ಹೊರತುಪಡಿಸಿದರೆ ಉಳಿದ ಹತ್ತು ಜನ ಗುರುಗಳ ಹೆಸರುಗಳು ಲಭ್ಯವಿಲ್ಲ.

ಪುತ್ರವರ್ಗದ ಪರಂಪರೆಯಲ್ಲಿ ಬೆಳೆದ ಈ ಮಠದ ಉತ್ತರಾಧಿಕಾರಿಗಳಾಗಿ ಶ್ರೀ ವಿಶ್ವೇಶ್ವರಾರಾಧ್ಯ ದೇವರು ನೇಮಕಗೊಂಡಿದ್ದಾರೆ. ಇವರು ಶ್ರೀ ಬಾಬಯ್ಯ ಮತ್ತು ಶ್ರೀಮತಿ ಸರೋಜದೇವಿಯವರ ಪುತ್ರರಾಗಿ ೧೯೭೮ರ ಜುಲೈ ಇಪ್ಪತ್ತರಂದು ಜನಿಸಿದ್ದಾರೆ. ಜನ್ಮಸ್ಥಳದಲ್ಲಿ ಪ್ರೌಢಶಿಕ್ಷಣದವರೆಗೆ ಕಲಿತು ಈಗ ಕಾಲೇಜುಶಿಕ್ಷಣವನ್ನು ಮುಗಿಸಿ ಮೈಸೂ ರಿನ ಸುತ್ತೂರುಮಠದ ಗುರುಕುಲದಲ್ಲಿ ನೆಲೆಸಿ ಸಂಸ್ಕೃತ ಆಗಮನಗಳನ್ನು ಕಲಿಯುತ್ತಿದ್ದಾರೆ. ಕುಂದರಗಿಯಲ್ಲಿ ಈ ಮಠದ ಮೂಲಮಠವಿದ್ದು ಅಲ್ಲಿ ನಾಲ್ಕು ಗದ್ದುಗೆಗಳು ಸ್ಥಾಪನೆಯಾಗಿವೆ. ಪಾಶ್ಚಾಪುರದಲ್ಲಿ ಒಂದು ಗದ್ದುಗೆ ಸ್ಥಾಪನೆಯಾಗಿದ್ದು ಉಳಿದ ಗದ್ದುಗೆಗಳ ಸ್ಥಾಪನೆಯ ಬಗ್ಗೆ ಮಾಹಿತಿ ಲಭ್ಯವಿಲ್ಲ. ಮಠದಲ್ಲಿ ಪ್ರತಿ ಡಿಸೆಂಬರ್‌ನಲ್ಲಿ ಕರ್ತೃಗುರುಗಳ ಪುಣ್ಯಸ್ಮರಣೆ, ಪ್ರತಿ ಸೋಮವಾರ ಅಕ್ಕನಬಳಗದವತಿಯಿಂದ ಚಿಂತನಗೋಷ್ಠಿ ಹಾಗೂ ದಾಸೋಹ ನಡೆಯುತ್ತಿದೆ.

ವಿಳಾಸ: ಷ.ಬ್ರ.ಶ್ರೀ ವಿಶ್ವೇಶ್ವರಾರಾಧ್ಯದೇವರು, ಶ್ರೀ ಹುಚ್ಚೇಶ್ವರಸಂಸ್ಥಾನಹಿರೇಮಠ,ಪಾಶ್ಚಾಪುರ, ಹುಕ್ಕೇರಿ ತಾ, ಬೆಳಗಾವಿ ಜಿಲ್ಲೆ.

ಬೆಲ್ಲದಬಾಗೇವಾಡಿ

ಹುಕ್ಕೇರಿ ತಾಲ್ಲೂಕಿನ ಬೆಲ್ಲದಬಾಗೇವಾಡಿಯು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹದಿನೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಮಹಾಂತೇಶ್ವರ ವಿರಕ್ತಮಠವು ಅಸ್ತಿತ್ವದಲ್ಲಿದೆ.

ಮಹಾಂತೇಶ್ವರ ವಿರಕ್ತಮಠ: ಬೆಲ್ಲದಬಾಗೇವಾಡಿಯಲ್ಲಿ ವಿರಕ್ತ ಸಂಪ್ರದಾಯದ ಶ್ರೀ ಮಹಾಂತೇಶ್ವರ ವಿರಕ್ತ ಮಠವು ಕ್ರಿ.ಶ.೧೩೦೮ರಲ್ಲಿ ಸ್ಥಾಪನೆಯಾಗಿದೆ. ಶ್ರೀ ಮಹಂತೇಶ್ವರ ಸ್ವಾಮಿಗಳು ಈ ಮಠವನ್ನು ಸ್ಥಾಪನೆ ಮಾಡಿದ್ದರಿಂದ 'ಶ್ರೀಮಹಾಂತೇಶ್ವರ ವಿರಕ್ತಮಠ' ಎಂಬ ಹೆಸರು ಬಂದಿದೆ. ಅಂದಿನಿಂದ ಈತನಕ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದಿದೆ.

ಮಠ ಸ್ಥಾಪನೆ: ಶ್ರೀ ಮಹಾಂತೇಶ್ವರ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಪವಾಡಗಳಿಂದ ಜನರನ್ನು ಜಾಗೃತಗೊಳಿಸಿ ಇಲ್ಲಿಗೆ ಬಂದು ನೆಲೆಸಿದರು. ಗುರುಗಳು ಇಲ್ಲಿ ನೆಲೆ ನಿಂತ ಮೇಲೆ ಅನೇಕ ಪವಾಡಗಳಿಂದ ಹೆಸರು ಪಡೆದರು. ದಿನ ಕಳೆದಂತೆ ಭಕ್ತರ ಸಂಖ್ಯೆ ಹೆಚ್ಚಾದ ಮೇಲೆ ನಿತ್ಯ ಧರ್ಮೋಪದೇಶ ಹಾಗೂ ಅನ್ನದಾಸೋಹವನ್ನು ನಡೆಸತೊಡಗಿದರು.ಈ ವ್ಯವಸ್ಥೆಗಳನ್ನು ಮಾಡಲು ಕಟ್ಟಡವು ರೂಪುಗೊಂಡು ಮಠ ಸ್ಥಾಪನೆಯಾಯಿತು.

ಪರಂಪರೆ:

೧. ಶ್ರೀ ಮ.ನಿ.ಪ್ರ. ಮಹಾಂತ ಶಿವಯೋಗಿಗಳು
೨. ಶ್ರೀ ಮ.ನಿ.ಪ್ರ. ಸಂಗನಬಸವಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಗುರುಬಸವಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಶಾಂತಯ್ಯಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಮಹಾಂತಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಶಿವಾನಂದಸ್ವಾಮಿಗಳು

ಈ ರೀತಿ ಮಠದ ಪರಂಪರೆಯ ಗುರುಗಳ ಕೆಲವು ಹೆಸರುಗಳನ್ನು ದಾಖಲಿಸಲಾಗಿದೆ. ಕರ್ತೃ ಗುರುಗಳ ನಂತರ ಅಧಿಕಾರಕ್ಕೆ ಬಂದ ಎಲ್ಲಾ ಗುರುಗಳು ಶಿವಪೂಜಾನಿಷ್ಠರಾಗಿ, ದಾಸೋಹ ಮೂರ್ತಿಗಳಾಗಿ ಹೆಸರು ಪಡೆದು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಪರಂಪರೆಯಲ್ಲಿ ಹನ್ನೆರಡುಜನ ಗುರುಗಳು ಅಧಿಕಾರ ನಡೆಸಿರುವರೆಂದು ಹೇಳಲಾಗುತ್ತಿದೆ. ಆದರೆ ಆಧಾರಗಳ ಕೊರತೆಯಿಂದ ಆ ಹೆಸರುಗಳು ಲಭ್ಯವಿಲ್ಲ. ಈಗಿನ ಗುರುಗಳಾದ ಶ್ರೀ ಶಿವಾನಂದ ಸ್ವಾಮಿಗಳು ೧೯೮೬ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಪದವೀಧರರಾದ ಗುರುಗಳು ವೀರಶೈವ ಧರ್ಮವನ್ನು ಬೆಳೆಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಸ್ಥಾಪಕ ಗುರುಗಳ ಗದ್ದುಗೆಯೂ ಸೇರಿದಂತೆ ಒಟ್ಟು ಏಳು ಗದ್ದುಗೆಗಳು ಸ್ಥಾಪನೆಯಾಗಿವೆ. ಇವುಗಳಿಗೆ ನಿತ್ಯ ಪೂಜೆ, ಶ್ರಾವಣ, ಕಾರ್ತೀಕ, ಶಿವರಾತ್ರಿ ಸಂದರ್ಭದಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಮಠದಲ್ಲಿ ಬಸವ ಜಯಂತಿಯನ್ನು ಆಚರಿಸಲಾಗುತ್ತಿದೆ. ಹಿರಿಯ ಗುರುಗಳ ಪುಣ್ಯಾರಾಧನೆ ಕಾರ್ಯಕ್ರಮದಲ್ಲಿ ಭಜನೆ, ಉಪನ್ಯಾಸ, ಶಿವಾನುಭವ ಗೋಷ್ಠಿಗಳನ್ನು ಏರ್ಪಡಿಸಿ, ಜನರಲ್ಲಿ ಧರ್ಮದ ಬಗ್ಗೆ ಜಾಗೃತಿ ಉಂಟು ಮಾಡಲು ಶ್ರಮಿಸುತ್ತಿದ್ದಾರೆ. ಅನ್ನದಾಸೋಹವನ್ನು ನಡೆಸಲಾಗುತ್ತಿದೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಶಿವಾನಂದ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠದ ಕಟ್ಟಡವು ನವೀಕರಣಗೊಂಡಿತು. ಕೊಲ್ಲಾಪುರದ ಮಹಾರಾಜರ ಕಾಲದಲ್ಲಿ ಮಠಕ್ಕೆ ನೂರುಎಕರೆ ಭೂಮಿ ದೊರೆತಿತ್ತು. ಆದರೆ ಸರ್ಕಾರಿ ಭೂಕಾಯ್ದೆಯಿಂದ ಅನ್ಯರ ಪಾಲಾಗಿದೆ. ಭಕ್ತರೇ ಆಸ್ತಿಯಾಗಿದ್ದು, ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ವಿಳಾಸ:ಶ್ರೀ ಮ.ನಿ.ಪ್ರ. ಶಿವಾನಂದಸ್ವಾಮಿಗಳು,ಶ್ರೀ ಮಹಾಂತೇಶ್ವರವಿರಕ್ತಮಠ,ಬೆಲ್ಲದಬಾಗೇವಾಡಿ,ಹುಕ್ಕೇರಿತಾ, ಬೆಳಗಾವಿ ಜಿಲ್ಲೆ.

ಯಮಕನಮರಡಿ

ಹುಕ್ಕೇರಿ ತಾಲ್ಲೂಕಿನ ಯಮಕನಮರಡಿಯು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹುಣಸೇಕೊಳ್ಳ ಮಠವು ಅಸ್ತಿತ್ವದಲ್ಲಿದೆ.

ಹುಣಸೇಕೊಳ್ಳಮಠ: ಯಮಕನಮರಡಿ ಗ್ರಾಮದ ಹೊರಭಾಗದ ಹುಣಸೇ ವನದ ಮಧ್ಯೆ ವಿರಕ್ತ ಸಂಪ್ರದಾಯದ ಮಠವು ಸ್ಥಾಪನೆಯಾಗಿರುವುದರಿಂದ 'ಶ್ರೀ ಹುಣಸೇಕೊಳ್ಳಮಠ' ಎಂಬ ಹೆಸರು ಬಂದಿರಬಹುದು.

ಮಠ ಸ್ಥಾಪನೆ : ಕಿತ್ತೂರು ಸಂಸ್ಥಾನದ ಆಡಳಿತ ಕಾಲಕ್ಕೂ(೧೫೮೫-೧೮೨೪) ಮೊದಲೇ ಮಠವು ಸ್ಥಾಪನೆಯಾಗಿತ್ತು ಎಂದು ಹೇಳಲಾದರೂ, ಕಾಲಮಾನದ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಒಂಟಮುರಿ ಸಂಪಾದನೆಯ ಮಠದ ಶಾಖಾಮಠವಾಗಿದ್ದ ಈ ಮಠವು, ಸ್ವತಂತ್ರ ಮಠವಾಗಿ ಬೆಳೆದು ತನ್ನ ಅಸ್ತಿತ್ವವನ್ನು ಪ್ರತ್ಯೇಕವಾಗಿ ಗುರುತಿಸಿಕೊಂಡಿದೆ. ಶ್ರೀ ರಾಚೋಟಿ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿ, ಕಟ್ಟಡವನ್ನು ನಿರ್ಮಿಸಿ ಅಭಿವೃದ್ಧಿಪಡಿಸಿದರು. ಇವರ ಕಾಲದಲ್ಲಿ ಧರ್ಮೋಪದೇಶ ಹಾಗೂ ಅನ್ನ ದಾಸೋಹ ಕಾರ್ಯಗಳು ನಿರಂತರವಾಗಿ ನಡೆದು ಮಠವು ಪ್ರಸಿದ್ಧಿ ಪಡೆಯಿತು. ಗುರುಗಳು ಲಿಂಗೈಕ್ಯರಾದ ಮೇಲೆ ಅನೇಕ ವರ್ಷಗಳ ಕಾಲ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿಯಿತು. ಈ ಸಂದರ್ಭದಲ್ಲಿ ಹುಕ್ಕೇರಿಯ ಹಾವೇರಿ ಮಠದ ಶ್ರೀ ಶಿವಲಿಂಗ ಸ್ವಾಮಿಗಳು ಈ ಮಠಕ್ಕೆ ಶ್ರೀ ಗುರುಸಿದ್ಧ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿ, ಮಠದ ಪರಂಪರೆಯು ಬೆಳೆಯುವಂತೆ ಮಾಡಿದರು.

ಶ್ರೀ ಗುರುಸಿದ್ಧ ಸ್ವಾಮಿಗಳು ಅಧ್ಯಾಪಕ ವೃತ್ತಿಯನ್ನು ಮಾಡುತ್ತಿದ್ದರೂ ಆಧ್ಯಾತ್ಮದ ಒಲವನ್ನು ಬೆಳೆಸಿಕೊಂಡು ಸಾಧಕ ಜೀವನವನ್ನು ನಡೆಸುತ್ತಿದ್ದರು. ಇವರು ೧೯೩೭ರಲ್ಲಿ ಶ್ರೀ ಶಿವಲಿಂಗ ಸ್ವಾಮಿಗಳಿಂದ ಅನುಗ್ರಹ ಪಡೆದು ಪಟ್ಟಾಧಿ ಕಾರವನ್ನು ವಹಿಸಿಕೊಂಡರು. ನಂತರ ಉನ್ನತ ವಿದ್ಯಾಭ್ಯಾಸಕ್ಕಾಗಿ ಕಾಶಿಗೆ ತೆರಳಿದರು. ಗುರುಗಳು ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡಿ, ಅಪಾರ ಪಾಂಡಿತ್ಯದೊಂದಿಗೆ ಮಠಕ್ಕೆ ಆಗಮಿಸಿದರು.

ಅಭಿವೃದ್ಧಿ ಕಾರ್ಯಗಳು: ಮಠದ ಅಭಿವೃದ್ಧಿಯನ್ನು ಕೈಗೊಂಡ ಶ್ರೀ ಗುರುಸಿದ್ಧಸ್ವಾಮಿಗಳು ಪ್ರಥಮವಾಗಿ ಜೀರ್ಣ ಗೊಂಡ ಕಟ್ಟಡವನ್ನು ನವೀಕರಿಸಿ, ಮಠದ ಸುತ್ತ ಇದ್ದ ಆಸ್ತಿಯನ್ನು ಅಭಿವೃದ್ಧಿಪಡಿಸಿದರು. ಹುಣಸೇಮರಗಳನ್ನು ಬೆಳೆಸಿ ಮಠಕ್ಕೆ ಹೆಚ್ಚು ಆದಾಯ ಬರುವಂತೆಮಾಡಿದರು. ಶಿಲ್ಪಕಲೆಯ ಬಗ್ಗೆ ಉತ್ಸಾಹ ತೋರಿದ ಗುರುಗಳು ಮಠದ ಕಟ್ಟಡವನ್ನು ಶಿವಲಿಂಗದ ಆಕೃತಿಯಲ್ಲಿ ಕಲ್ಲಿನಿಂದ ನಿರ್ಮಿಸಿದ್ದಾರೆ.

ಮಠದ ಆವರಣದಲ್ಲಿ ವಿಶೇಷ ರೀತಿಯ ಕಲಾಕೃತಿಗಳು ಕೆತ್ತನೆಗೊಂಡಿವೆ. ಒಂದೇ ಕಲ್ಲಿನಲ್ಲಿ ೭೭೧ ಲಿಂಗಗಳು, ಅದರ ಮೇಲೆ ಪಾರ್ವತಿ ಪರಮೇಶ್ವರರ ಜತೆಗೆ ನಂದಿ ಮತ್ತು ಗಣಪತಿಯ ಆಕೃತಿಗಳನ್ನೊಳಗೊಂಡ ಶಿಲ್ಪಾಕೃತಿ ಕಣ್ಮನವನ್ನು ಸೆಳೆಯುತ್ತಿದೆ. ಮತೀಯ ಸೌಹಾರ್ದತೆಯ ಸಂಕೇತವಾಗಿ ಮಸೀದಿ, ತಾಜ್‌ಮಹಲ್ ಶಿಲಾಕೃತಿಗಳು ವಿಶಿಷ್ಟವಾಗಿವೆ. ನಾಗರಗಳು, ದತ್ತಾತ್ರೇಯ, ಅಕ್ಕಮಹಾದೇವಿ, ಅಲ್ಲಮಪ್ರಭು, ಬನಶಂಕರಿಮೂರ್ತಿ ಈ ರೀತಿ ಒಟ್ಟು ಅರವತ್ತಮೂರು ಶಿಲಾಮೂರ್ತಿಗಳನ್ನು ಸ್ಥಾಪಿಸಲಾಗಿದೆ.

ಶ್ರೀ ಗುರುಸಿದ್ಧ ಸ್ವಾಮಿಗಳು ತುಂಬು ಜೀವನವನ್ನು ನಡೆಸಿ ಲಿಂಗೈಕ್ಯರಾದ ಮೇಲೆ ಶ್ರೀ ರಾಚೋಟಿ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಗುರುಗಳು ತಮ್ಮ ಪಾಂಡಿತ್ಯದಿಂದ ವೀರಶೈವ ಧರ್ಮವನ್ನು ವೈಜ್ಞಾನಿಕ ತಳಹದಿಯ ಮೇಲೆ ಭಕ್ತರ ಮನಗಳಿಗೆ ಮುಟ್ಟಿಸುತ್ತಾ, ಧರ್ಮವು ಬೆಳೆಯುವಂತೆ ಮಾಡಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ರಾಚೋಟಿ ಸ್ವಾಮಿಗಳು, ಶ್ರೀ ಹುಣಸೇಕೊಳ್ಳಮಠ, ಯಮಕನಮರಡಿ, ಹುಕ್ಕೇರಿ ತಾ, ಬೆಳಗಾವಿ ಜಿಲ್ಲೆ.

ಶಿರಢಾಣ

ಹುಕ್ಕೇರಿ ತಾಲ್ಲೂಕಿನ ಶಿರಢಾಣ ಗ್ರಾಮವು ತಾಲ್ಲೂಕು ಕೇಂದ್ರದಿಂದ ಇಪ್ಪತ್ತೈದು ಕಿ.ಮೀ ದೂರದಲ್ಲಿದೆ. ಇಲ್ಲಿ

ಶ್ರೀ ಮೂರುಸಾವಿರ ಮಠದ ಶಾಖಾಮಠವು ಅಸ್ತಿತ್ವದಲ್ಲಿದೆ.

ಮೂರುಸಾವಿರ ಮಠದ ಶಾಖಾಮಠ: ಶಿರಢಾಣ ಗ್ರಾಮದಲ್ಲಿ ಶ್ರೀ ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳ ಕಾಲದಲ್ಲಿ ಶಾಖಾಮಠವು ಪ್ರಾರಂಭವಾಗಿದ್ದು, ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಮಾಜಿಕವಾಗಿ ನೆರವಾಗಿದೆ. ಮಠದ ವತಿಯಿಂದ ಸುಸಜ್ಜಿತವಾದ ಆಸ್ಪತ್ರೆ ಮತ್ತು ವಸತಿಶಾಲೆ ಇದ್ದು, ನಿತ್ಯ ಅನ್ನದಾಸೋಹ ನಡೆಯುತ್ತಿದೆ. ಹುಬ್ಬಳ್ಳಿ ಮೂರು ಸಾವಿರ ಮಠದ ಜಗದ್ಗುರುಗಳು ಮಠಕ್ಕೆ ಆಗಮಿಸಿ, ಧಾರ್ಮಿಕ ಕಾರ್ಯಗಳನ್ನು ನಡೆಸಿ ಕೊಡುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಜಗದ್ಗುರು ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳು, ಶ್ರೀ ಮೂರುಸಾವಿರ ಮಠದ ಶಾಖಾಮಠ, ಶಿರಢಾಣ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಸಂಕೇಶ್ವರ

ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿನೆಂಟು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಪರದೇಶಿಮಠ, ಶ್ರೀ ದುರುದುಂಡೇಶ್ವರಮಠ ಮತ್ತು ಶ್ರೀ ವಿರಕ್ತಮಠ ಅಸ್ತಿತ್ವದಲ್ಲಿವೆ. ಇವುಗಳಲ್ಲಿ ಶ್ರೀ ದುರುದುಂಡೇಶ್ವರಮಠವು ನಿಡಸೋಸಿಯ ಸಿದ್ಧಸಂಸ್ಥಾನ ಮಠದ ಶಾಖಾಮಠವಾಗಿ ಬೆಳೆದಿದೆ. ಶ್ರೀ ಪರದೇಶಿಮಠವು ಸಹ ತನ್ನ ಧಾರ್ಮಿಕ ಕಾರ್ಯಗಳಿಂದ ಹೆಸರು ಮಾಡಿತ್ತು. ಈಗ ಗುರುಗಳಿಲ್ಲದೆ ಮಠವು ಖಾಲಿ ಉಳಿದಿದೆ. ಪ್ರಸ್ತುತ ವಿರಕ್ತ ಮಠವು ಅಸ್ತಿತ್ವದಲ್ಲಿದ್ದು ಧಾರ್ಮಿಕ ಚಟುವಟಿಕೆಗಳನ್ನು ನಡೆಸುತ್ತಾ ಬಂದಿದೆ.

ವಿರಕ್ತಮಠ: ಸಂಕೇಶ್ವರ ಗ್ರಾಮದಲ್ಲಿ ಶ್ರೀ ವಿರಕ್ತಮಠವು ಸ್ಥಾಪನೆಯಾಗಿದ್ದು ಧಾರ್ಮಿಕ ಚಟುವಟಿಕೆಗಳ ಕೇಂದ್ರವಾಗಿ ಬೆಳೆದಿದೆ. ಬೈಲಹೊಂಗಲ ತಾಲ್ಲೂಕಿನ ಬೂದಿಹಾಳ್ ಗ್ರಾಮದಲ್ಲಿ ೧೯೪೬ರ ಫೆಬ್ರವರಿ ಇಪ್ಪತ್ತಾರರಂದು ಜನಿಸಿದ ಪ್ರಸ್ತುತ ಶ್ರೀ ಚನ್ನಬಸವ ದೇವರು ೧೯೭೫ರಲ್ಲಿ ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡು ಆಡಳಿತವನ್ನು ನಡೆಸುತ್ತಿದ್ದಾರೆ. ಯಾದವಾಡದಲ್ಲಿ ಗೋಶಾಲೆಯನ್ನು ಪ್ರಾರಂಭಿಸಿ ಗೋವುಗಳ ಸಂರಕ್ಷಣೆಯಲ್ಲಿ ಮುಂದಾಗಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಚನ್ನಬಸವ ದೇವರು, ಶ್ರೀ ವಿರಕ್ತಮಠ, ಸಂಕೇಶ್ವರ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಹತ್ತರಗಿ

ಹುಕ್ಕೇರಿ ತಾಲ್ಲೂಕಿನ ಹತ್ತರಗಿಯು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕ ಹದಿನೈದು ಕಿ.ಮೀ ದೂರದಲ್ಲಿದೆ. ಮಹಾರಾಷ್ಟ್ರದ ಗಡಿಭಾಗದಲ್ಲಿರುವ ಈ ಗ್ರಾಮದ ಹೊರಭಾಗದಲ್ಲಿ ವಿರಕ್ತಸಂಪ್ರದಾಯದ ಶ್ರೀ ಸಿದ್ಧೇಶ್ವರಮಠ (ಕಾರಿಮಠ) ವು ಅಸ್ತಿತ್ವದಲ್ಲಿದೆ.

ಸಿದ್ಧೇಶ್ವರ ಮಠ (ಕಾರಿ ಮಠ): ಹತ್ತರಗಿ ಗ್ರಾಮದ ಝರಿಯ ದಡದಲ್ಲಿ ಶ್ರೀ ಸಿದ್ಧೇಶ್ವರ ಮಠವು ಸ್ಥಾಪನೆಯಾಗಿದೆ. ಶ್ರೀ ಅಡವಿಸಿದ್ಧೇಶ್ವರ ಸ್ವಾಮಿಗಳು ಅನುಷ್ಠಾನಕ್ಕೈಗೊಂಡು ಈ ಸ್ಥಳವನ್ನು ಸುಕ್ಷೇತ್ರಗೊಳಿಸಿದರು. ಶ್ರೀ ಅಡವಿಸಿದ್ಧೇಶ್ವರ ಸ್ವಾಮಿಗಳ ನಂತರ ಈ ಜಾಗೃತ ಸ್ಥಳದಲ್ಲಿ ಮಠವು ಸ್ಥಾಪನೆಯಾಗಿ, ವೀರಶೈವ ಧರ್ಮವನ್ನು ಬೆಳೆಸುತ್ತಿದೆ.

ಪರಂಪರೆ: ಶ್ರೀ ಸಿದ್ಧೇಶ್ವರ ಮಠವು ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಸ್ಥಾಪನೆಯಾಗಿದೆ. ಶ್ರೀ ಅಡವಿ ಸಿದ್ಧೇಶ್ವರ ಸ್ವಾಮಿಗಳಿಂದ ಪ್ರಾರಂಭಗೊಂಡ ಪರಂಪರೆಯು ಶ್ರೀ ಸಿದ್ಧಮೂರ್ತಿ ಸ್ವಾಮಿಗಳು, ಶ್ರೀ ಶಾಂತಕುಮಾರ ಸ್ವಾಮಿಗಳು ಹಾಗೂ ಈಗಿನ ಗುರುಗಳೂ ಸೇರಿದಂತೆ ಒಟ್ಟು ಐದುಜನ ಗುರುಗಳು ಮಠದ ಆಡಳಿತವನ್ನು ನಡೆಸಿ, ವೀರಶೈವ ಧರ್ಮವನ್ನು ಪ್ರಚಾರ ಪಡಿಸಿದ್ದಾರೆ. ಮಠದಲ್ಲಿ ಶ್ರೀ ಸಿದ್ಧಮೂರ್ತಿ ಸ್ವಾಮಿಗಳು ಹಾಗೂ ಶ್ರೀ ಶಾಂತಕುಮಾರ ಸ್ವಾಮಿಗಳ ಗದ್ದುಗೆಯೂ ಸೇರಿದಂತೆ ಒಟ್ಟು ಮೂರು ಗದ್ದುಗೆಗಳು ಸ್ಥಾಪನೆಗೊಂಡಿವೆ.

೧೯೩೩ರಲ್ಲಿ ಪಟ್ಟಾಧಿಕಾರಕ್ಕೆ ಬಂದ ಶ್ರೀ ಶಾಂತಕುಮಾರ ಸ್ವಾಮಿಗಳು ಕಾಯಕ ಯೋಗಿಗಳಾಗಿ ಮಠದ ಸುತ್ತ ಇರುವ ಆಸ್ತಿಯಲ್ಲಿ ಅಲ್ಪಸ್ವಲ್ಪ ಬೆಳೆ ಬೆಳೆದು ಭಕ್ತರ ನೆರವಿನಿಂದ ಮಠವನ್ನು ಬೆಳೆಸಿ,ತಮ್ಮ ಉತ್ತರಾಧಿಕಾರಿಗಳನ್ನು

ನೇಮಿಸಿ ಲಿಂಗೈಕ್ಯರಾದರು. ಇವರ ನಂತರ ಉಳ್ಳಗಡ್ಡಿ ಖಾನಾಪುರದ ಶ್ರೀ ಅಪ್ಪಯ್ಯ ಮತ್ತು ಶ್ರೀಮತಿ ದುಂಡವ್ವನವರ ಪುತ್ರರಾಗಿ ಜನಿಸಿದ ಶ್ರೀ ಗುರುಸಿದ್ಧ ಸ್ವಾಮಿಗಳು ೧೯೬೫ರ ಮಾರ್ಚ್ ಒಂದರಂದು ಮಠದ ಅಧಿಕಾರವನ್ನು ವಹಿಸಿ ಕೊಂಡಿದ್ದಾರೆ. ಗುರುಗಳು ಕ್ರಿಯಾಶೀಲರಾಗಿ ಆಧ್ಯಾತ್ಮದ ವಿಚಾರಗಳಲ್ಲಿ ಪಾಂಡಿತ್ಯವನ್ನು ಪಡೆದು ಮಠ ಮತ್ತು ಸಮಾಜ ವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ಶೈಕ್ಷಣಿಕ ಸೇವೆ: ಹಿರಿಯ ಗುರುಗಳಾದ ಲಿಂಗೈಕ್ಯ ಶ್ರೀ ಶಾಂತಕುಮಾರ ಸ್ವಾಮಿಗಳು ಶಿಕ್ಷಣಕ್ಕೆ ಪ್ರಾಮುಖ್ಯತೆ ಕೊಟ್ಟು ಮಠದ ಆವರಣದಲ್ಲಿ ಮಾಧ್ಯಮಿಕ ಶಾಲೆಯನ್ನು ಪ್ರಾರಂಭಿಸಿದ್ದರು. ಮಹಾರಾಷ್ಟ್ರದ ಗಡಿಭಾಗದಲ್ಲಿರುವ ಈ ಪ್ರದೇಶವು ಮರಾಠಿ ಭಾಷೆಯ ಪ್ರಭಾವಕ್ಕೆ ಒಳಗಾಗಿರುವುದರಿಂದ ಕನ್ನಡ ಭಾಷೆಯನ್ನು ಬೆಳೆಸಿ ಉಳಿಸುವ ಹಂಬಲದೊಂದಿಗೆ, ಕನ್ನಡ ಮಾಧ್ಯಮ ಶಾಲೆಯನ್ನು ಪ್ರಾರಂಭಿಸಿ ನಾಡು ನುಡಿಗೆ ಸೇವೆ ಸಲ್ಲಿಸಿದ್ದರು. ಈಗಿನ ಗುರುಗಳು ಶಿಕ್ಷಣ ಸಂಸ್ಥೆಗಳನ್ನು ಮುಂದುವರೆಸಿ ವಿಸ್ತರಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗುರುಗಳ ಗದ್ದುಗೆಗಳಿಗೆ ನಿತ್ಯ ಪೂಜೆ, ಶ್ರಾವಣ, ಕಾರ್ತೀಕಮಾಸಗಳಲ್ಲಿ ವಿಶೇಷ ಪೂಜೆ, ಶಿವರಾತ್ರಿ, ಬಸವಜಯಂತಿ ಹಾಗೂ ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭಗಳಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಮಠದ ಆವರಣದಲ್ಲಿ ಕಲ್ಯಾಣ ಮಂಟಪವನ್ನು ನಿರ್ಮಿಸಿದ್ದು, ಸಾರ್ವಜನಿಕರ ಅನುಕೂಲಕ್ಕೆ ನೀಡಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಗುರುಸಿದ್ಧ ಸ್ವಾಮಿಗಳು, ಶ್ರೀ ಸಿದ್ಧೇಶ್ವರಮಠ (ಕಾರಿ ಮಠ) ಹತ್ತರಗಿ,ಹುಕ್ಕೇರಿ ತಾ, ಬೆಳಗಾವಿ ಜಿಲ್ಲೆ.

ಹುಕ್ಕೇರಿ

ಬೆಳಗಾವಿ ಜಿಲ್ಲೆಯ ಹುಕ್ಕೇರಿಯು ಜಿಲ್ಲಾ ಕೇಂದ್ರದಿಂದ ಉತ್ತರಕ್ಕೆ ಮೂವತ್ತೆಂಟು ಕಿ.ಮೀ ದೂರದಲ್ಲಿದೆ. ತಾ ಲ್ಲೂಕು ಕೇಂದ್ರಸ್ಥಳವಾದ ಹುಕ್ಕೇರಿಯಲ್ಲಿ ಹದಿನೈದು ವೀರಶೈವ ಮಠಗಳು ಸ್ಥಾಪನೆಯಾಗಿದ್ದವು ಎಂದು ಹೇಳಲಾಗುತ್ತಿದೆ. ಶ್ರೀ ಮಲ್ಲೇಶ್ವರಮಠ, ಶ್ರೀ ನಿಲವಂಗಿಮಠ, ಶ್ರೀ ಯಾದವಾಡಮಠ, ಶ್ರೀ ನಂದಿಕೋಲಮಠ, ಶ್ರೀ ಕಲ್ಲಯ್ಯನಮಠ, ಶ್ರೀ ಸಾರಂಗಮಠ ಅಥವಾ ಇಟ್ಟಣಗಿಮಠ, ಶ್ರೀ ಗಣಾಚಾರಿಮಠ, ಶ್ರೀ ಹಾವೇರಿಮಠ, ಶ್ರೀ ಹಿರೇಮಠ, ಶ್ರೀ ಶಿವ ಲಿಂಗೇಶ್ವರ ವಿರಕ್ತಮಠ ಹಾಗೂ ಶ್ರೀ ಅಡವಿಸಿದ್ದೇಶ್ವರಮಠ ಈ ರೀತಿ ಹನ್ನೊಂದು ಮಠಗಳನ್ನು ಗುರುತಿಸಬಹುದು. ಇವುಗಳಲ್ಲಿ ಶ್ರೀ ಹಿರೇಮಠ, ಶ್ರೀ ಶಿವಲಿಂಗೇಶ್ವರ ವಿರಕ್ತಮಠ ಹಾಗೂ ಶ್ರೀ ಅಡವಿಸಿದ್ಧೇಶ್ವರಮಠ ಇವುಗಳಲ್ಲಿ ಮಠಾ ಧೀಶರಿದ್ದು ಧಾರ್ಮಿಕ ಚಟುವಟಿಕೆಗಳು ನಡೆಯುತ್ತಿವೆ. ಉಳಿದ ಮಠಗಳಲ್ಲಿ ಮಠಾಧೀಶರಿಲ್ಲದೆ ಗದ್ದುಗೆ ಪೂಜೆಗಷ್ಟೇ ಸೀಮಿತಗೊಂಡಿವೆ.

ಹಿರೇಮಠ: ಹುಕ್ಕೇರಿ ಪಟ್ಟಣದ ಪೇಟೆ ರಸ್ತೆಯಲ್ಲಿ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ. ಶ್ರೀ ರಂಭಾಪುರಿಪೀಠದ ಶಾಖಾ ಮಠವಾಗಿ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಪವಾಡ ಪುರುಷ ಶ್ರೀ ಗುರುಶಾಂತೇಶ್ವರ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪಿತವಾದ ಈ ಮಠವು ಧಾರ್ಮಿಕ ಚಟುವಟಿಕೆಯನ್ನು ನಡೆಸಿಕೊಂಡು ಬರುತ್ತಿದೆ.

ಮಠ ಸ್ಥಾಪನೆ: ಶ್ರೀ ಗುರುಶಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು ಪವಾಡ ಪುರುಷರಾಗಿ, ಶಿವಯೋಗ ಸಿದ್ಧಿಯನ್ನು ಸಾಧಿಸಿದ್ದರು. ಇವರು ವೀರಶೈವ ಧರ್ಮದ ಪ್ರಸಾರಕ್ಕಾಗಿ ಲೋಕಸಂಚಾರ ಕೈಗೊಂಡು ನಾಡಿನ ಅನೇಕ ಕ್ಷೇತ್ರಗಳಲ್ಲಿ ನೆಲೆ ನಿಂತು, ಧರ್ಮೋಪದೇಶವನ್ನು ನೀಡಿ ಇಲ್ಲಿಗೆ ಆಗಮಿಸಿ ಮಠವನ್ನು ಸ್ಥಾಪಿಸಿದ್ದರು. ಗುರುಗಳ ಪಾಂಡಿತ್ಯಕ್ಕೆ ಹಾಗೂ ಶಿವ ಪೂಜಾ ನಿಷ್ಠೆಗೆ ಶರಣಾದ ಭಕ್ತರು ಗುರುಗಳು ಇಲ್ಲಿ ನೆಲೆಸುವಂತೆ ಮಾಡಿದರು.

ಪರಂಪರೆ:

೧. ಷ.ಬ್ರ.ಶ್ರೀ ಗುರುಶಾಂತೇಶ್ವರ ಶಿವಾಚಾರ್ಯಸ್ವಾಮಿಗಳು

೨. ಷ.ಬ್ರ.ಶ್ರೀ ವಿರೂಪಾಕ್ಷೇಶ್ವರ ಶಿವಾಚಾರ್ಯಸ್ವಾಮಿಗಳು

೩. ಷ.ಬ್ರ.ಶ್ರೀ ಶಂಕರದೇವ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಶಿವಬಸವ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು

ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಗುರುಪರಂಪರೆಯ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿಡದ ಕಾರಣ, ಪರಂಪರೆಯ ಗುರುಗಳ ಕೆಲವು ಹೆಸರುಗಳನ್ನು ಮಾತ್ರ ಗುರುತಿಸಲಾಗಿದೆ. ಮಠದ ಪರಂಪರೆಯಲ್ಲಿ ಹದಿನೆಂಟು ಜನ ಗುರುಗಳು ಅಧಿಕಾರ ನಡೆಸಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೆ ಈ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಈಗ ಪರಂಪರೆಯ ಹತ್ತೊಂಬತ್ತನೆಯ ಗುರುಗಳಾಗಿ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸುತ್ತಿದ್ದಾರೆ. ಗುರುಗಳು ಕ್ರಿಯಾಶೀಲರಾಗಿ ಆಚಾರ್ಯರ ಹಾಗೂ ಬಸವಾದಿ ಪ್ರಮಥರ ತತ್ತ್ವಗಳನ್ನು ಅಧ್ಯಯನ ಮಾಡಿಕೊಂಡು, ಧರ್ಮವನ್ನು ಬೆಳೆಸುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಹದಿನೆಂಟು ಗದ್ದುಗೆಗಳು ಸ್ಥಾಪನೆಯಾಗಿವೆ. ಇವುಗಳಿಗೆ ನಿತ್ಯಪೂಜೆ ಹಾಗೂ ವರ್ಷಕ್ಕೊಮ್ಮೆ ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ಆಚರಣೆ ಮಾಡಲಾಗುತ್ತಿದೆ. ಈಗಿನ ಗುರುಗಳಾದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಅನುಷ್ಠಾನ ಮೂರ್ತಿಗಳಾಗಿ ಭಕ್ತರ ಒಲವನ್ನು ಸಂಪಾದಿಸಿಕೊಂಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಪೇಟೆರಸ್ತೆ, ಹುಕ್ಕೇರಿ, ಬೆಳಗಾವಿ ಜಿಲ್ಲೆ.

ಶಿವಲಿಂಗೇಶ್ವರ ವಿರಕ್ತಮಠ: ಹುಕ್ಕೇರಿ ಪಟ್ಟಣದ ಬಜಾರ್ ಬೀದಿಯಲ್ಲಿ ಕುಮಾರ ಸಮಯದ ವಿರಕ್ತ ಪರಂಪರೆಯ ಶ್ರೀ ಶಿವಲಿಂಗೇಶ್ವರ ವಿರಕ್ತ ಮಠವು ಸ್ಥಾಪನೆಯಾಗಿದೆ. ಈ ಮಠವು ಹನ್ನೆರಡನೆಯ ಶತಮಾನದಲ್ಲಿ ಪ್ರಾರಂಭವಾಗಿರಬಹುದೆಂದು ಹೇಳಲಾಗುತ್ತಿದೆ. ಆದರೆ ಈ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಶ್ರೀ ಶಿವಲಿಂಗೇಶ್ವರ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿದ್ದರಿಂದ 'ಶ್ರೀ ಶಿವಲಿಂಗೇಶ್ವರ ವಿರಕ್ತಮಠ' ಎಂಬ ಹೆಸರು ಬಂದಿದೆ.

ಮಠ ಸ್ಥಾಪನೆ: ಹನ್ನೆರಡನೆಯ ಶತಮಾನದಲ್ಲಿ ಶರಣರು ಉಳವಿಗೆ ಬರುವ ಮೊದಲು ಇಲ್ಲಿ ನೆಲೆಗೊಂಡು ಅನೇಕ ದಿನಗಳ ಕಾಲ ಅನುಷ್ಠಾನ ಕೈಗೊಂಡಿದ್ದರು. ಅಂದು ಸ್ಥಾಪಿತಗೊಂಡ ಮಠವು ಶ್ರೀ ಶಿವಲಿಂಗೇಶ್ವರ ಸ್ವಾಮಿಗಳಿಂದ ಬೆಳೆದು, ವೀರಶೈವ ಧರ್ಮವನ್ನು ಬೆಳೆಸುವಲ್ಲಿ ಯಶಸ್ವಿಯಾಗಿದೆ. ಶ್ರೀ ಶಿವಲಿಂಗೇಶ್ವರ ಸ್ವಾಮಿಗಳು ಮಹಾತಪಸ್ವಿಗಳಾಗಿ ಧರ್ಮೋಪದೇಶವನ್ನು ಮಾಡುವ ಮೂಲಕ ಜನಮನ್ನಣೆಗೆ ಪಾತ್ರರಾಗಿದ್ದರು. ಗುರುಗಳು ಸಂಚಾರ ಮೂರ್ತಿಗಳಾಗಿ ಅಷ್ಟಾವರಣ, ಪಂಚಾಚಾರ ಹಾಗೂ ಷಟ್‌ಸ್ಥಲಗಳ ಬಗ್ಗೆ ಭಕ್ತರಲ್ಲಿ ಅರಿವು ಮೂಡಿಸಿ, ವೀರಶೈವ ಧರ್ಮ ಆಚರಣೆಗೆ ಬರುವಂತೆ ಮಾಡಿದರು. ಗುರುಗಳು ಅಂದು ಸ್ಥಾಪಿಸಲ್ಪಟ್ಟ ಮಠವು ಅನೇಕ ಏಳು ಬೀಳುಗಳ ಮಧ್ಯೆ ನಡೆದು, ಈತನಕ ತನ್ನ ಜೀವಂತಿಕೆಯನ್ನು ಉಳಿಸಿಕೊಂಡು ಈಗ ಅಭಿವೃದ್ಧಿಯಾಗಿದೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ಶಿವಲಿಂಗೇಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ವೀರಭದ್ರೇಶ್ವರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಮುದಿಬಸವಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಕುಮಾರಸ್ವಾಮಿಗಳು

ಪುರಾತನ ಪರಂಪರೆಯ ಮಠದಲ್ಲಿ ಕರ್ತೃ ಗುರುಗಳ ನಂತರ ಅಧಿಕಾರ ನಡೆಸಿದ ಗುರುಪರಂಪರೆಯ ಬಗ್ಗೆ ಸ್ಪಷ್ಟವಾದ ಆಧಾರಗಳನ್ನು ಸಂರಕ್ಷಿಸಿಡದ ಕಾರಣ ಪರಂಪರೆಯ ಗುರುಗಳ ಕೆಲವೇ ಹೆಸರುಗಳನ್ನು ಮಾತ್ರ ದಾಖಲಿಸಲಾಗಿದೆ. ಶ್ರೀಮುದಿಬಸವ ಸ್ವಾಮಿಗಳ ಕಾಲದಲ್ಲಿ ಮಠವು ಧಾರ್ಮಿಕ ಹಾಗೂ ಶೈಕ್ಷಣಿಕವಾಗಿ ಪ್ರಗತಿಯನ್ನು ಸಾಧಿಸಿತ್ತು. ಈಗಿನ

ಮಠಾಧೀಶರಾದ ಶ್ರೀ ಕುಮಾರ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ೧೯೭೧ರ ಆಗಸ್ಟ್ ಮೂರರಂದು ನೇಮಿಸ ಲಾಯಿತು. ನಂತರ ಗುರುಗಳು ಹನ್ನೆರಡು ವರ್ಷಗಳಕಾಲ ತತ್ತ್ವಶಾಸ್ತ್ರ ಮತ್ತು ಸಂಸ್ಕೃತವನ್ನೂ ಅಧ್ಯಯನಮಾಡಿ, ಎರಡೂ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ಮಠಕ್ಕೆ ಆಗಮಿಸಿದರು. ಹಾವೇರಿ ಮಠದ ಶ್ರೀಶಿವಲಿಂಗ ಸ್ವಾಮಿಗಳ ಅನುಗ್ರಹ ಪಡೆದು ೧೯೮೭ರ ಜುಲೈ ಹನ್ನೆರಡರಂದು ಪಟ್ಟಾಧಿಕಾರವನ್ನು ವಹಿಸಿಕೊಂಡರು. ನಂತರ ಉನ್ನತ ವಿದ್ಯಾಭ್ಯಾಸಕ್ಕಾಗಿ ಕಾಶಿಗೆ ತೆರಳಿ, ಅಲ್ಲಿನ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಅಭ್ಯಾಸಮಾಡಿದರು. ಗುರುಗಳು ಸಂಸ್ಕೃತ ಭಾಷೆಯಲ್ಲಿ ಅಪಾರ ಪಾಂಡಿತ್ಯವನ್ನು ಗಳಿಸಿ ಧಾರ್ಮಿಕ ಬೆಳವಣಿಗೆಗೆ ಸಮರ್ಪಣ ಭಾವದಿಂದ ಶ್ರಮಿಸುತ್ತಿದ್ದಾರೆ.

ಶೈಕ್ಷಣಿಕ ಸೇವೆ: ಶ್ರೀ ಮುದಿಬಸವ ಸ್ವಾಮಿಗಳ ಕಾಲದಲ್ಲಿ ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಲಾಗಿತ್ತು. ಕಾರಣಾಂತ ರದಿಂದ ಈ ಶಾಲೆ ನಿಂತು ಹೋಗಿತ್ತು. ಈಗಿನ ಶ್ರೀ ಕುಮಾರ ಸ್ವಾಮಿಗಳು ಇದನ್ನು ಪುನರಾರಂಭಿಸಿದ್ದಾರೆ. ಗಡಿನಾಡಿ ನಲ್ಲಿ ಕನ್ನಡವನ್ನು ಉಳಿಸಲು ಶ್ರೀ ಶಿವಲಿಂಗೇಶ್ವರ ಕನ್ನಡ ಶಾಲೆ, ಕನ್ನಡ ಬಾಲವಾಡಿ, ಕನ್ನಡ ಶಿಶುವಿಹಾರ ಈ ರೀತಿ ಎಲ್ಲಾ ಹಂತದ ಶಾಲೆಗಳನ್ನು ಪ್ರಾರಂಭಿಸಿ ಕನ್ನಡ ಭಾಷೆಯನ್ನು ಉಳಿಸುವುದರ ಜತೆಗೆ, ಗ್ರಾಮಾಂತರಮಕ್ಕಳ ಕಲಿಕೆಗೆ ನೆರವಾಗಿದ್ದಾರೆ. ಜತೆಗೆ ಸಾಮಾಜಿಕ ಕಳಕಳಿಯನ್ನು ಹೊಂದಿರುವ ಗುರುಗಳು, ಮಹಿಳಾಮಂಡಳಿಯ ಆಶ್ರಯದಲ್ಲಿ ಹೊಲಿಗೆ ತರಗತಿಗಳನ್ನು ಪ್ರಾರಂಭಿಸಿ, ಮಹಿಳೆಯರನ್ನು ವೃತ್ತಿಪರರನ್ನಾಗಿ ಮಾಡುತ್ತಿದ್ದಾರೆ.

ಸಾಹಿತ್ಯ ಸೇವೆ: ಶ್ರೀ ಕುಮಾರ ಸ್ವಾಮಿಗಳು ಸಾಹಿತ್ಯಾಸಕ್ತರಾಗಿದ್ದು ಈಗಾಗಲೇ ಅನೇಕ ಲೇಖನಗಳನ್ನು ಬರೆದು ಪತ್ರಿಕೆ ಗಳಲ್ಲಿ ಬೆಳಕು ಕಾಣುವಂತೆ ಮಾಡಿದ್ದಾರೆ. ಗುರುಗಳು ಸಂಕ್ಷಿಪ್ತ ಶಿವಪೂಜಾವಿಧಿ ಮತ್ತು ರುದ್ರಾಭಿಷೇಕ ಎಂಬ ಪುಸ್ತಕ ಗಳನ್ನು ಬರೆದು ಪ್ರಕಟಿಸಿದ್ದಾರೆ.

ಶ್ರೀ ಕುಮಾರ ಸ್ವಾಮಿಗಳು ಕ್ರಿಯಾಶೀಲ ಪ್ರವೃತ್ತಿಯವರಾಗಿದ್ದು ಮಠದ ಧಾರ್ಮಿಕ ಕಾರ್ಯಗಳ ಜತೆಗೆ ಹಾವೇರಿ ಮಠದ ಉಸ್ತುವಾರಿಯನ್ನೂ ನೋಡಿಕೊಳ್ಳುತ್ತಿದ್ದಾರೆ. ಆ ಮಠದಲ್ಲಿ ಕನ್ನಡ ಪ್ರಾಥಮಿಕ ಶಾಲೆ, ಹೊಲಿಗೆ ತರ ಬೇತಿಕೇಂದ್ರ ಹಾಗೂ ಶ್ರೀ ಗುರುಸಿದ್ಧೇಶ್ವರ ಶಿಶುವಿಹಾರವನ್ನು ನಡೆಸುತ್ತಾ ಹಾವೇರಿಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.


ವಿಳಾಸ: ಶ್ರೀ ಮ.ನಿ.ಪ್ರ. ಕುಮಾರ ಸ್ವಾಮಿಗಳು, ಶ್ರೀ ಶಿವಲಿಂಗೇಶ್ವರ ವಿರಕ್ತಮಠ, ಬಜಾರ್ ರಸ್ತೆ, ಹುಕ್ಕೇರಿ, ಬೆಳಗಾವಿ ಜಿಲ್ಲೆ.

ಅಡವಿಮಠ: ಹುಕ್ಕೇರಿ ಗ್ರಾಮದ ಹೊರಭಾಗದ ದನಗಳಪೇಟೆಯಲ್ಲಿ ಸ್ಥಾಪನೆಯಾಗಿರುವ ಶ್ರೀ ಅಡವಿಸಿದ್ಧೇಶ್ವರಮಠವು, ಮುರುಘಾ ಸಮಯದ ಪರಂಪರೆಯಲ್ಲಿ ಬೆಳೆದಿದೆ. ವಿರಕ್ತಸಂಪ್ರದಾಯದ ಈ ಮಠವು ಶ್ರೀ ಅಡವಿ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟಿದೆ. ಶ್ರೀ ಅಡವಿಸಿದ್ಧೇಶ್ವರರು ಲೋಕಸಂಚಾರದಲ್ಲಿದ್ದ ಸಂದರ್ಭದಲ್ಲಿ ಇಲ್ಲಿ ಕೆಲವು ದಿನ ಅನುಷ್ಠಾನ ಗೊಂಡು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಮಠ ಸ್ಥಾಪನೆಗೊಂಡ ಮೇಲೆ ಕೆಲವು ದಿನಗಳ ಕಾಲ ಮಠವು ಅಸ್ತಿತ್ವ ದಲ್ಲಿತ್ತು. ನಂತರ ಧಾರ್ಮಿಕ ಕಾರ್ಯಗಳು ನಡೆಯದೆ ಮಠವು ಜನಮನದಿಂದ ಮರೆಯಾಗುತ್ತಿತ್ತು. ಇದನ್ನು ಅರಿತ ಇಲ್ಲಿನ ಭಕ್ತರು ಶ್ರೀ ಶಿವಾನಂದ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿದ್ದಾರೆ.

ಶ್ರೀ ಶಿವಾನಂದ ದೇವರು ಅಫಜಲಪುರ ತಾಲ್ಲೂಕಿನ ರೇವೂರು ಗ್ರಾಮದ ಹಿರೇಮಠದ ಶ್ರೀ ವೀರಯ್ಯ ಗುಂಡಯ್ಯ ಮತ್ತು ಶ್ರೀಮತಿ ಶಾಂತಬಾಯಿಯವರ ಪುತ್ರರಾಗಿ ೧೯೭೫ರಲ್ಲಿ ಜನಿಸಿದರು. ಗುರುಗಳು ಹುಬ್ಬಳ್ಳಿಯ ಮೂರುಸಾವಿರಮಠದಲ್ಲಿ ನೆಲೆಸಿ ವಿದ್ಯಾಭ್ಯಾಸವನ್ನು ಪಡೆದರು. ಗುರುಗಳು ತಮ್ಮ ವಿದ್ವತ್ ಪ್ರತಿಭೆಯಿಂದ ಹೆಸರು ಗಳಿಸಿದರು. ಇವರ ಪ್ರತಿಭೆಯನ್ನು ಗುರುತಿಸಿದ ಧಾರವಾಡ ಮುರುಘಾಮಠದ ಶ್ರೀ ಶಿವಯೋಗಿ ಸ್ವಾಮಿಗಳು ಶ್ರೀಅಡವಿ ಸಿದ್ಧೇಶ್ವರಮಠದ ಉತ್ತರಾಧಿಕಾರಿಗಳನ್ನಾಗಿ ನೇಮಿಸಿದರು. ಅನೇಕ ವರ್ಷಗಳಿಂದ ಗುರುಗಳಿಲ್ಲದೆ ಮಠವು ಜೀರ್ಣ ಗೊಂಡಿತ್ತು. ಉತ್ತರಾಧಿಕಾರಿಗಳಾಗಿ ನೇಮಕಗೊಂಡ ಶ್ರೀ ಶಿವಾನಂದ ದೇವರು ಮಠವನ್ನು ಜೀರ್ಣಾಭಿವೃದ್ಧಿಗೊಳಿಸಿ, ೨೦೦೧ರ ಮೇ ಹತ್ತರಂದು ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಶಿವಾನಂದ ದೇವರು, ಶ್ರೀ ಅಡವಿಮಠ, ಬಜಾರ್ ರಸ್ತೆ, ಹುಕ್ಕೇರಿ, ಬೆಳಗಾವಿ ಜಿಲ್ಲೆ. ❑

ಬೆಂಗಳೂರು ನಗರ ಜಿಲ್ಲೆ


ಬೆಂಗಳೂರು ನಗರ
ಹುಣಸ ಮಾರನಹಳ್ಳಿ
ಬೆಂಗಳೂರು ಉತ್ತರ
ಬೆಂಗಳೂರು
ಕೆಂಗೇರಿ
ಬೆಂಗಳೂರು ದಕ್ಷಿಣ
ರಾಜಾಪುರ
ಆನೇಕಲ್ಲು

ಕರ್ನಾಟಕದ ರಾಜಧಾನಿಯಾದ ಬೆಂಗಳೂರು, ಭಾರತದ ಅತ್ಯಂತ ಪ್ರಾಚೀನ ಪಟ್ಟಣಗಳಲ್ಲಿ ಒಂದಾಗಿದೆ. ಐದನೆಯ ಶತಮಾನದ ಗಂಗರ ಕಾಲದಿಂದಲೂ ಈ ಪಟ್ಟಣವು ಪ್ರಸಿದ್ಧಿ ಪಡೆದಿತ್ತು ಎಂದು ಇತಿಹಾಸಕಾರರು ಅಭಿಪ್ರಾಯಿಸುತ್ತಾರೆ. ಈ ಪಟ್ಟಣವು ಗಂಗರು, ಹೊಯ್ಸಳರು, ವಿಜಯನಗರದ ಅರಸರು, ಯಲಹಂಕದ ಗೌಡದೊರೆಗಳು, ಮೈಸೂರಿನ ಅರಸರು, ಟಿಪ್ಪುಸುಲ್ತಾನ್, ಬಿಜಾಪುರದ ಆದಿಲ್‌ಷಾಹಿ ಇವರುಗಳ ಆಳ್ವಿಕೆಗೆ ಒಳಪಟ್ಟಿದ್ದು, ಈಗ ರಾಜ್ಯದ ರಾಜಧಾನಿಯಾಗಿ ಐತಿಹಾಸಿಕ ಹಾಗೂ ಸಾಂಸ್ಕೃತಿಕವಾಗಿ ಇತಿಹಾಸ ಮರೆಯದ ನಾಡಾಗಿ ಬೆಳೆದಿದೆ.

ಒಂದನೆಯ ಕೆಂಪೇಗೌಡನು (ಕ್ರಿ.ಶ.೧೫೧೦-೧೫೭೦) ಬೆಂಗಳೂರನ್ನು ಸ್ಥಾಪಿಸಿದನು. ಅಂದು ಸ್ಥಾಪನೆಗೊಂಡ ಬೆಂಗಳೂರನ್ನು ವಿಜಯನಗರ ಸಾಮ್ರಾಜ್ಯದ ರೀತಿಯಲ್ಲಿ ಬೆಳೆಸಲು ಮುಂದಾಗಿ ಕೆರೆಕಟ್ಟೆಗಳು, ದೇವಾಲಯಗಳು ಹಾಗೂ ಮಠಗಳನ್ನು ನಿರ್ಮಿಸಿ ಸಂಸ್ಕಾರವಂತ ಸಮಾಜ ರೂಪುಗೊಳ್ಳಲು ಕಾರಣರಾದರು. ಮಾಗಡಿಯ ಕೆಂಪೇಗೌಡರೆಂದು ಹೆಸರು ಗಳಿಸಿದ್ದ ಇಮ್ಮಡಿ ಕೆಂಪೇಗೌಡನು (ಕ್ರಿ.ಶ.೧೬೭೫-೧೬೩೫) ವೀರಶೈವ ಧರ್ಮದ ಪ್ರಭಾವಕ್ಕೆ ಒಳಗಾಗಿ ಲಿಂಗದೀಕ್ಷೆಯನ್ನು ಪಡೆದು, ವೀರಶೈವ ಧರ್ಮವನ್ನು ಪ್ರಬಲವಾಗಿ ಬೆಳೆಸಲು ನೆರವಾದನೆಂದು ಸಂಶೋಧನೆಯಿಂದ ತಿಳಿದು ಬಂದಿದೆ. ಈತನು ತನ್ನ ಆಡಳಿತದ ಕಾಲದಲ್ಲಿ ನಾಡಿನಾದ್ಯಂತ ಮುನ್ನೂರ ಅರವತ್ತಕ್ಕೂ ಹೆಚ್ಚು ಮಠಗಳನ್ನು ಸ್ಥಾಪಿಸಿದನೆಂದು ಹೇಳಲಾಗುತ್ತಿದೆ.

ಆಡಳಿತಾತ್ಮಕ ಅನುಕೂಲಕ್ಕಾಗಿ ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಆನೆಕಲ್ಲು ಈ ರೀತಿ ಮೂರು ಭಾಗಗಳಾಗಿ ವಿಂಗಡಿಸಲ್ಪಟ್ಟಿರುವ ಈ ಮಹಾನಗರ, ಆಧುನಿಕ ಸೌಲತ್ತುಗಳಿಂದ ಅತಿ ವೇಗವಾಗಿ ಬೆಳೆಯುತ್ತಿದೆ. ಪ್ರಾಚೀನ ಕಾಲದಿಂದಲೂ ಒಂದು ಭಾಗವಾಗಿಯೇ ಬಂದಿರುವ ಗವಿಗಂಗಾಧರೇಶ್ವರ ದೇವಸ್ಥಾನ ಬೆಂಗಳೂರಿನ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರವನ್ನು ಶ್ರೀಮಂತಗೊಳಿಸಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ವೀರಶೈವ ಧರ್ಮ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದ್ದು ತನ್ನದೇ ಆದಂತಹ ಕೊಡುಗೆಯನ್ನು ನೀಡಿ, ಧಾರ್ಮಿಕ ಕ್ಷೇತ್ರವನ್ನು ಉಚ್ಛ್ರಾಯ ಸ್ಥಿತಿಗೆ ಕೊಂಡೊಯ್ದಿದೆ. ಪ್ರಾಚೀನ ಕಾಲದ ಶ್ರೀ ವಿಭೂತಿಪುರಮಠ, ಶ್ರೀ ಮಹಂತರಮಠ, ಶ್ರೀ ಬೇಲಿಮಠ, ಶ್ರೀರಾಜಾಪುರಮಠ ಹಾಗೂ ಶ್ರೀ ಹುಣಸೆಮಾರನಹಳ್ಳಿ ಮಠಗಳು ಸೇರಿದಂತೆ ಈ ಜಿಲ್ಲೆಯಲ್ಲಿ ಸ್ಥಾಪನೆಗೊಂಡಂತಹ ಎಪ್ಪತ್ತಾರು ಮಠಗಳು ವೀರಶೈವ ಧರ್ಮ ಬೆಳೆಯಲು ನೆರವಾಗಿವೆ. ಶ್ರೀ ಸರ್ಪಭೂಷಣ ಶಿವಯೋಗಿಗಳು ಪ್ರಸಿದ್ಧ ವಾಗ್ಗೇಯಕಾರರಾಗಿ ಕನ್ನಡ ಸಾಹಿತ್ಯ ಲೋಕಕ್ಕೆ ಅಪರೂಪದ ಮೌಲಿಕ ಕೃತಿಗಳನ್ನು ನೀಡಿದ್ದಾರೆ. ಇಂತಹ ಮಹಾಶರಣರು ಸರ್ಪಭೂಷಣ ಮಠವನ್ನು ಸ್ಥಾಪಿಸಿದ್ದಾರೆ.

ಪುರಾತನ ಕಾಲದಿಂದ ಕಳೆದ ಶತಮಾನದ ತನಕ ಸ್ಥಾಪಿತವಾಗಿದ್ದ ಎಪ್ಪತ್ತಾರು ವೀರಶೈವ ಮಠಗಳಲ್ಲಿ ಇಂದು ಕೇವಲ ಬೆರಳೆಣಿಕೆಯಷ್ಟು ಮಠಗಳಲ್ಲಿ ಕ್ರಿಯಾತ್ಮಕ ಚಟುವಟಿಕೆಗಳು ನಡೆಯುತ್ತಿರುವುದನ್ನು ಬಿಟ್ಟರೆ, ಉಳಿದ ಬಹುತೇಕ ಮಠಗಳು ಅನ್ಯರ ಆಕ್ರಮಣಕ್ಕೆ ಸಿಕ್ಕಿ ತಮ್ಮ ಅಳಿವು ಉಳಿವಿನ ಬಗ್ಗೆ ಹೋರಾಟ ನಡೆಸುತ್ತಿವೆ. ಬೆಂಗಳೂರು ನಗರದ ವೀರಶೈವ ಮಠಗಳ ಬಗ್ಗೆ ಅಧ್ಯಯನ ನಡೆಸಿದ ಸಂಶೋಧಕ ಡಾ. ಬಿ.ಸಿ.ವೀರಪ್ಪನವರು ಸಹ ಇದೇ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಒಟ್ಟಾರೆ ಬೆಂಗಳೂರಿನ ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಪ್ರಗತಿಗೆ ವೀರಶೈವ ಮಠಗಳು ತಮ್ಮದೇ ಆದಂತಹ ಕೊಡುಗೆಯನ್ನು ನೀಡಿ, ಸಂಸ್ಕಾರವಂತ ಸಮಾಜವನ್ನು ಬೆಳೆಸುವಲ್ಲಿ ಯಶಸ್ವಿಯಾಗಿವೆ.

ಆನೇಕಲ್ಲು ತಾಲ್ಲೂಕು

ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಗೆ ಒಳಪಡುವ ಆನೇಕಲ್ಲು ತಾಲ್ಲೂಕು ಐತಿಹಾಸಿಕ ಹಾಗೂ ಧಾರ್ಮಿಕವಾಗಿ ಪ್ರಸಿದ್ಧಿ ಪಡೆದಿದೆ. ಆಧುನಿಕ ಸೌಕರ್ಯಗಳೊಂದಿಗೆ ಅಭಿವೃದ್ಧಿಯನ್ನು ಕಂಡಿರುವ ಈ ತಾಲ್ಲೂಕಿನಲ್ಲಿ ಸುಮಾರು ಇಪ್ಪತ್ತು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಆದರೆ ಪ್ರಸ್ತುತ ರಾಜಾಪುರದಲ್ಲಿ ಒಂದು ಮಠ ಅಸ್ತಿತ್ವದಲ್ಲಿದೆ.

ರಾಜಾಪುರ

ಆನೇಕಲ್ಲು ತಾಲ್ಲೂಕಿನ ರಾಜಾಪುರವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಎಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಸಂಸ್ಥಾನ ಮಠವು ಸ್ಥಾಪನೆಯಾಗಿ ಧಾರ್ಮಿಕ ಕೇಂದ್ರವಾಗಿ ಬೆಳೆದಿದೆ.

ಸಂಸ್ಥಾನಮಠ: ರಾಜಾಪುರ ಗ್ರಾಮದ ಮಧ್ಯಭಾಗದಲ್ಲಿ ವೀರಸಿಂಹಾಸನ ಸಂಸ್ಥಾನ ಮಠವು ಸ್ಥಾಪನೆಯಾಗಿ, ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿ ಬೆಳೆದು ಪ್ರಸಿದ್ಧಿ ಪಡೆದಿದೆ.

ಮಠ ಸ್ಥಾಪನೆ: ಶ್ರೀ ರಂಭಾಪುರಿ ಪೀಠದ ಪೀಠಾಧೀಶರಾಗಿದ್ದ ಶ್ರೀ ರೇವಣಸಿದ್ಧರು ಈ ಸ್ಥಳದಲ್ಲಿ ಅನುಷ್ಠಾನಗೊಂಡು, ತಪಸ್ಸು ಮಾಡಿದ ಪುಣ್ಯ ಕ್ಷೇತ್ರ ಇದು. ಜಗದ್ಗುರು ಶ್ರೀ ರೇವಣಸಿದ್ಧರು ವಿಭೂತಿಪುರ ಸಂಸ್ಥಾನ ಮಠ, ರಾಜಾಪುರ ಸಂಸ್ಥಾನ ಮಠ, ಕೋಲಾರ ಜಿಲ್ಲೆಯ ನಾಗಲಾಪುರ ಸಂಸ್ಥಾನ ಮಠ, ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಡೆಂಕಣಿಕೋಟೆ ತಾಲ್ಲೂಕಿನ ಬಳ್ಳಾನಪುರ ಸಂಸ್ಥಾನ ಮಠ ಮತ್ತು ಗುಮ್ಮಾಳಾಪುರ ಸಂಸ್ಥಾನ ಮಠವನ್ನು ಸ್ಥಾಪಿಸಿರುವುದಾಗಿ ತಿಳಿದು ಬರುತ್ತಿದೆ. ಈ ಐದು ಸ್ಥಳಗಳಲ್ಲಿ ಸಂಸ್ಥಾನ ಮಠಗಳನ್ನು ಸ್ಥಾಪಿಸಿದ ಶ್ರೀ ರೇವಣಸಿದ್ಧರು ತಮ್ಮ ಶಿಷ್ಯರಾದ ಶ್ರೀ ರುದ್ರೇಶ್ವರ ಶಿವಾಚಾರ್ಯ ಸ್ವಾಮಿಗಳನ್ನು ರಾಜಾಪುರ ಸಂಸ್ಥಾನ ಮಠಕ್ಕೆ ಪಟ್ಟಾಧಿಕಾರವನು ಮಾಡಿದರೆಂದು ಹೇಳಲಾಗುತ್ತಿದೆ.

ಪರಂಪರೆ:

೧. ಷ.ಬ್ರ.ಶ್ರೀ ರುದ್ರೇಶ್ವರ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ಮಹೇಶ್ವರ ಶಿವಾಚಾರ್ಯ ಸ್ವಾಮಿಗಳು
೩. ಷ.ಬ್ರ.ಶ್ರೀ ವೀರರುದ್ರಮುನಿ ಶಿವಾಚಾರ್ಯ ಸ್ವಾಮಿಗಳು
೪. ಷ.ಬ್ರ.ಶ್ರೀ ಬಸವ ಶಿವಾಚಾರ್ಯ ಸ್ವಾಮಿಗಳು
೫. ಷ.ಬ್ರ.ಶ್ರೀ ರಾಜೇಶ್ವರ ಶಿವಾಚಾರ್ಯ ಸ್ವಾಮಿಗಳು
೬. ಷ.ಬ್ರ.ಶ್ರೀ ಜಡೆಶಂಕರ ಶಿವಾಚಾರ್ಯ ಸ್ವಾಮಿಗಳು
೭. ಷ.ಬ್ರ.ಶ್ರೀ ಕರಿಬಸವ ಶಿವಾಚಾರ್ಯ ಸ್ವಾಮಿಗಳು
೮. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು
೯. ಷ.ಬ್ರ.ಶ್ರೀ ಇಮ್ಮಡಿ ಚನ್ನಬಸವ ರಾಜಯೋಗಿ ಶಿವಾಚಾರ್ಯ ಸ್ವಾಮಿಗಳು
೧೦. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು
೧೧. ಷ.ಬ್ರ.ಶ್ರೀ ಪಟ್ಟದಸಿದ್ಧ ವೃಷಭರಾಜೇಂದ್ರ ಶಿವಾಚಾರ್ಯ ಸ್ವಾಮಿಗಳು
೧೨. ಷ.ಬ್ರ.ಶ್ರೀ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು
೧೩. ಷ.ಬ್ರ.ಶ್ರೀ ಅಭಿನವ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು
೧೪. ಷ.ಬ್ರ.ಶ್ರೀ ಗುರು ಚನ್ನಬಸವ ರಾಜದೇವರು ಶಿವಾಚಾರ್ಯ ಸ್ವಾಮಿಗಳು
೧೫. ಷ.ಬ್ರ.ಶ್ರೀ ಇಮ್ಮಡಿ ಚನ್ನಬಸವ ರಾಜೇಂದ್ರ ಶಿವಾಚಾರ್ಯ ಸ್ವಾಮಿಗಳು
೧೬. ಷ.ಬ್ರ.ಶ್ರೀ ಮುದ್ದಬಸವ ಶಿವಾಚಾರ್ಯ ಸ್ವಾಮಿಗಳು
೧೭. ಷ.ಬ್ರ.ಶ್ರೀ ವೃಷಭಲಿಂಗ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು
೧೮. ಷ.ಬ್ರ.ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಪರಂಪರೆಯ ಐದನೆಯ ಗುರುಗಳಾಗಿದ್ದ ಶ್ರೀ ರಾಜೇಶ್ವರ ಶಿವಾಚಾರ್ಯ

ಸ್ವಾಮಿಗಳು ತಪಸ್ವಿಗಳಾಗಿದ್ದು, ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ ಈ ಮಠವನ್ನು ಪ್ರಸಿದ್ಧಿಗೆ ತಂದರು. ಗುರುಗಳ ಪ್ರಭಾವಕ್ಕೆ ಒಳಗಾದ ಅನೇಕ ಅರಸರು ಮಠದ ಅಭಿವೃದ್ಧಿಗೆ ಯಥೇಚ್ಛವಾಗಿ ಸಹಾಯ ನೀಡಿದರು. ಗುರುಗಳು ಸಿಕ್ಕ ಅವಕಾಶ ಗಳನ್ನು ಬಳಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿದರು. ಶ್ರೀ ಪಟ್ಟದ ಚನ್ನಬಸವ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಧಾರ್ಮಿಕ ಚಟುವಟಿಕೆಗಳಿಂದ ಮಠವು ಮತ್ತಷ್ಟು ಹೆಸರು ಪಡೆಯಿತು. ಇವರು ಕೋಲಾರ ಜಿಲ್ಲೆಯ ಅಂದರಳ್ಳಿ ಸಮೀಪದ ಬಾವನಳ್ಳಿಯಲ್ಲಿ ೧೮೫೩ರಲ್ಲಿ ಜನಿಸಿ, ಸಂಸ್ಕೃತ ಹಾಗೂ ವೇದಾಧ್ಯಯನವನ್ನು ಕಲಿತು ರಾಜಾಪುರಮಠದ ಉತ್ತರಾಧಿ ಕಾರಿಗಳಾಗಿ ನೇಮಕಗೊಂಡರು. ಇವರು ಅಧಿಕಾರವನ್ನು ವಹಿಸಿಕೊಂಡ ಮೇಲೆ ಮಠವು ಸರ್ವಾಂಗೀಣವಾಗಿ ಅಭಿವೃದ್ಧಿ ಗೊಂಡಿತು. ಇವರು ಧಾರ್ಮಿಕ ಕಾರ್ಯಗಳು, ನಿತ್ಯ ದಾಸೋಹ ಹಾಗೂ ಜಂಗಮ ಸೇವೆಯನ್ನು ನಡೆಸಿ, ಶ್ರೀ ರಂಭಾಪುರಿ ಪೀಠದ ಅಂದಿನ ಜಗದ್ಗುರುಗಳಾಗಿದ್ದ ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳ ಕೃಪಾದೃಷ್ಟಿಗೆ ಪಾತ್ರರಾದರು.

ಇವರ ನಂತರ ಬಂದ ಶ್ರೀ ವೃಷಭೇಂದ್ರ ದೇಶಿಕೇಂದ್ರ ಸ್ವಾಮಿಗಳು ಅಂದರಹಳ್ಳಿಯ ಶ್ರೀ ಶಿವರುದ್ರಯ್ಯನವರ ಪುತ್ರರಾಗಿ ೧೯೨೦ ರಲ್ಲಿ ಜನಿಸಿದರು. ಇವರು ಬೆಂಗಳೂರು, ಚಿಕ್ಕಬಳ್ಳಾಪುರದಲ್ಲಿ ವಿದ್ಯಾಭ್ಯಾಸ ಮಾಡಿ, ರಾಜಾಪುರ ಸಂಸ್ಥಾನ ಮಠದ ಅಧಿಕಾರವನ್ನು ವಹಿಸಿಕೊಂಡಿದ್ದರು. ಅಷ್ಟಾಂಗ ಯೋಗದ ಮೂಲಕ ಶಿವಯೋಗವನ್ನು ಸಾಧಿಸಿದ ಇವರು ಆಚಾರ ವಿಚಾರಗಳಿಂದ ಅಪಾರ ಭಕ್ತರನ್ನು ಸಂಪಾದಿಸಿಕೊಂಡಿದ್ದರು. ಗುರುವಿರಕ್ತರೆಂಬ ಭೇದವನ್ನು ತೊಡೆದು ಹಾಕಲು ಎಲ್ಲರನ್ನೂ ಮಠಕ್ಕೆ ಆಹ್ವಾನಿಸಿ ಸಮಾನ ಭಾವದಿಂದ ನೋಡುತ್ತಿದ್ದರು. ಇವರ ತರುವಾಯ ಈಗಿನ ಶ್ರೀ ಪಟ್ಟದ ರೇಣುಕ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದಿದ್ದಾರೆ. ಶ್ರೀ ಬಸವರಾಜಯ್ಯ ಮತ್ತು ಶ್ರೀಮತಿ ವೀರಮ್ಮನವರ ಪುತ್ರರಾಗಿ ೧೯೩೭ರ ಮೇ ಒಂಬತ್ತರಂದು ಜನಿಸಿದ, ಶ್ರೀರೇಣುಕ ಸ್ವಾಮಿಗಳು ಬಾಲ್ಯದಲ್ಲೇ ಶ್ರೀ ಚನ್ನಬಸವರಾಜ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳ ಕೃಪಾಕಟಾಕ್ಷಕ್ಕೆ ಒಳಗಾಗಿದ್ದರು. ರಾಜಾಪುರದಲ್ಲಿ ಪ್ರಾಥಮಿಕಶಾಲೆ, ಹುಣಸಮಾರನಹಳ್ಳಿ ಮತ್ತು ಆನೇಕಲ್ಲು ಪಟ್ಟಣಗಳಲ್ಲಿ ಪ್ರೌಢಶಿಕ್ಷಣವನ್ನು ಮುಗಿಸಿ, ಬೆಂಗಳೂರಿನಲ್ಲಿ ಕಾಲೇಜು ಶಿಕ್ಷಣವನ್ನು ಪ್ರಾರಂಭಿಸಿದರು. ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ಸಂಸ್ಕೃತವನ್ನು ಕಲಿತು, ಶ್ರೀ ವೃಷಭಲಿಂಗ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳ ಅಪೇಕ್ಷೆಯಂತೆ, ೧೯೬೫ರ ನವೆಂಬರ್ ಐದರಂದು ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳೆಂದು ಅಭಿಧಾನ ಪಡೆದು ಪಟ್ಟಾಧಿಕಾರವನ್ನು ವಹಿಸಿಕೊಂಡರು. ಗುರುಗಳು ಅಧಿಕಾರ ವಹಿಸಿಕೊಂಡಾಗಿನಿಂದ ಈತನಕ ದೇಶದ ನಾನಾ ಭಾಗಗಳಲ್ಲಿ ಸಂಚರಿಸಿ, ವೀರಶೈವ ಧರ್ಮದ ತತ್ತ್ವಗಳನ್ನು ಪ್ರಚಾರಪಡಿಸಿ ಧರ್ಮವನ್ನು ಬೆಳೆಸಿದ್ದಲ್ಲದೆ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯ ಎರಡು ವೇಳೆ ಪೂಜೆ, ಶ್ರಾವಣ, ಕಾರ್ತೀಕ ಹಾಗೂ ಧನುರ್ಮಾಸಗಳಲ್ಲಿ ವಿಶೇಷಪೂಜೆ, ರೇಣುಕಾಚಾರ್ಯ ಜಯಂತಿ, ವೀರಭದ್ರಸ್ವಾಮಿ ರಥೋತ್ಸವ, ಇವುಗಳು ಮಠದಲ್ಲಿ ನಡೆಯುವ ಧಾರ್ಮಿಕ ಕಾರ್ಯಗಳು. ಈ ಸಂದರ್ಭದಲ್ಲಿ ವಿಶೇಷ ಅನ್ನದಾಸೋಹದ ವ್ಯವಸ್ಥೆಯನ್ನು ನಡೆಸಲಾಗುತ್ತಿದೆ. ಮೈಸೂರು ಅರಸರುಗಳಾದ ಮುಮ್ಮಡಿ ಕೃಷ್ಣರಾಜ ಒಡೆಯರು (ಕ್ರಿ.ಶ.೧೭೯೪-೧೮೬೮) ಹಾಗೂ ನಂತರ ಬಂದ ನಾಲ್ವಡಿ ಕೃಷ್ಣ ರಾಜೇಂದ್ರ ಒಡೆಯರು ಈ ಮಠಕ್ಕೆ ಅನೇಕ ದಾನದತ್ತಿಗಳನ್ನು ನೀಡಿ, ಧಾರ್ಮಿಕ ಕಾರ್ಯಗಳಿಗೆ ನೆರವಾಗಿದ್ದಾರೆ. ಮಠದ ದೀಪೋತ್ಸವಕ್ಕೆ ಅರಮನೆಯಿಂದ ಮುನ್ನೂರು ವರಹಗಳನ್ನು ಕಳುಹಿಸುತ್ತಿದ್ದರು. ಈಗಲೂ ಸಹ ಕರ್ನಾಟಕ ಸರ್ಕಾರದ ಮುಜರಾಯಿ ಇಲಾಖೆಯಿಂದ ದೀಪೋತ್ಸವಕ್ಕಾಗಿ ಹಣ ದೊರೆಯುತ್ತಿದೆ.

ಸಾಹಿತ್ಯ ಸೇವೆ: ಧಾರ್ಮಿಕ ಹಾಗೂ ಸಾಮಾಜಿಕವಾಗಿ ಹೆಚ್ಚು ಅಭಿವೃದ್ಧಿಯನ್ನು ಸಾಧಿಸಿದ ಮಠವು, ಸಾಹಿತ್ಯ ಕ್ಷೇತ್ರದಲ್ಲಿಯೂ ಸಹ ಸೇವೆಯನ್ನು ಸಲ್ಲಿಸಿದೆ. ರುದ್ರಭಾಷ್ಯಾ, ಆಗಮಗಳು, ಧರ್ಮಪುರಾಣ, ಸಾಹಿತ್ಯಶಾಂಭವಿ, ದೀಕ್ಷೆಬೋಧೆ, ವೀರಾಗಮ, ಅಮೃತೇಶ್ವರಭಾಷ್ಯಾ, ಚೋಳ ರೇಣುಕ ಸಂವಾದ ಈ ರೀತಿ ಅನೇಕ ಕೃತಿಗಳನ್ನು ಪ್ರಕಟಿಸಿದೆ. ರಾಜಾಪುರ ಮಠದಲ್ಲಿ ವೀರಶೈವ ಸಿದ್ಧಾಂತಗಳ ಬಗ್ಗೆ ವಿಚಾರಗೋಷ್ಠಿಗಳನ್ನು ನಡೆಸಿ, ಅನೇಕ ಹೊಸ ವಿಚಾರಗಳ ಸೃಷ್ಟಿಗೆ ಕಾರಣಕರ್ತರಾಗಿದ್ದಾರೆ. ಹಾರ ಗದ್ದೆಯ ಲಕ್ಷ್ಮಣ ಕವಿಯು ಮಠದ ಆಶ್ರಯದಲ್ಲಿದ್ದು, ಭಾರತ ರುಕ್ಮಾಂಗದ ಚರಿತೆಯನ್ನು ರಚಿಸಿದ್ದಾನೆ.

ವಿಳಾಸ: ಷ.ಬ್ರ.ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು, ಶ್ರೀ ರಾಜಾಪುರ ಸಂಸ್ಥಾನಮಠ, ಆನೇಕಲ್ಲು ತಾ, ಬೆಂಗಳೂರು ಜಿಲ್ಲೆ.

ಬೆಂಗಳೂರು ನಗರ ವಲಯ

ಬೆಂಗಳೂರು ನಗರ ಜಿಲ್ಲೆಯ, ಉತ್ತರವಲಯ ಮತ್ತು ದಕ್ಷಿಣವಲಯದ ವ್ಯಾಪ್ತಿಯಲ್ಲಿ ಈ ಕೆಳಗಿನಂತೆ ಮಠಗಳು ಸ್ಥಾಪನೆಗೊಂಡಿವೆ.

ಅರಳೆಪೇಟೆಯಲ್ಲಿ ಸ್ಥಾಪನೆಗೊಂಡ ಮಠಗಳು

೧. ಅಮೃತಮಲ್ಲೇಶ್ವರನ ಗುಡಿಮಠ
೨. ಅರಳೆಗುಡಿಮಠ
೩. ಗುರವಣ್ಣ ದೇವರ ಚೌಕಿಮಠ
೪. ಚಿಣಿಮಿಣಿ ದೇವರಮಠ
೫. ಚಿಲುಮೆ ಗದ್ದುಗೆಮಠ
೬. ತೋಟದ ದೇವರಮಠ
೭. ದಿಗಂಬರಶೆಟ್ಟರುಮಠ
೮. ದೇಶದಮಠ
೯. ದೊಡ್ಡಮಠ
೧೦. ನಂಜಯ್ಯನ ಚೌಕಿಮಠ
೧೧. ನಂಬೆಣ್ಣನಮಠ
೧೨. ನರಗುಂದ ದೇವರಮಠ
೧೩. ಬೇಲಿಮಠ
೧೪. ಮರಿಸ್ವಾಮಿಮಠ
೧೫. ಮುದ್ದಪ್ಪಸ್ವಾಮಿಮಠ
೧೬. ಹೊಸಮಠ

ದೊಡ್ಡಪೇಟೆಯಲ್ಲಿ ಸ್ಥಾಪನೆಗೊಂಡ ಮಠಗಳು

೧. ಕಂಬಿನಂಜಯ್ಯನಮಠ
೨. ಕರಿಸಿದ್ಧೇಶ್ವರಮಠ
೩. ಗದ್ದುಗೆಮಠ
೪. ದೇವಿರಮ್ಮನಮಠ
೫. ಮಾಳಿಗೆಮಠ
೬. ಲಿಂಗದಗುಡಿಮಠ

ಚಿಕ್ಕಪೇಟೆಯಲ್ಲಿ ಸ್ಥಾಪನೆಗೊಂಡ ಮಠಗಳು

೧. ಕೊಂಡ್ಲುಮಠ
೨. ಕೋಟಿಲಿಂಗದಮಠ
೩. ಚೌಕಿಮಠ
೪. ಧರ್ಮಶಾಲಾಮಠ
೫. ಫಲಹಾರಸ್ವಾಮಿಮಠ
೬. ಫಾಲಾಕ್ಷಸ್ವಾಮಿಮಠ
೭. ಮಹಾಂತರಮಠ
೮. ಮಿಂಚನಹಳ್ಳಿಮಠ

ಮಾಮೂಲು ಪೇಟೆಯಲ್ಲಿ ಸ್ಥಾಪನೆಗೊಂಡ ಮಠಗಳು

೧. ಗಂಜಾಂಮಠ
೨. ಮೂಲೆಮಠ
೩. ರುದ್ರಾರಾಧ್ಯರ ಚೌಕಿಮಠ

ಮನೆವಾರ್ತೆ ಪೇಟೆಯಲ್ಲಿ ಸ್ಥಾಪನೆಗೊಂಡ ಮಠಗಳು

೧. ನಿರ್ವಾಣಮ್ಮನಮಠ
೨. ಶಂಕರದೇವರಮಠ

ಬಳೆಪೇಟೆಯಲ್ಲಿ ಸ್ಥಾಪನೆಗೊಂಡ ಮಠಗಳು

೧. ಕಲ್ಲುಮಠ
೨. ಬಳೆಮಠ
೩. ಮುತ್ತಿನಕಂತೆಮಠ
೪. ಸರ್ಪಭೂಷಣಮಠ

ಗಾಂಧಿನಗರದಲ್ಲಿ ಸ್ಥಾಪನೆಗೊಂಡ ಮಠಗಳು

೧. ಗೋಟ್ಟೂರಯ್ಯನಮಠ
೨. ತಿಪ್ಪಶೆಟ್ಟಿಮಠ
೩. ನಿರಂಜನದೇವರಮಠ

ದಂಡುಪ್ರದೇಶದಲ್ಲಿ ಸ್ಥಾಪನೆಗೊಂಡ ಮಠಗಳು

೧. ಅಂಕಲೇಶ್ವರಮಠ
೨. ಜಂಗಮಮಠ
೩. ನಂಜುಂಡಸ್ವಾಮಿ ಗದ್ದುಗೆಮಠ
೪. ಮಹಾಲಿಂಗೇಶ್ವರಮಠ

ಅಲಸೂರಿನಲ್ಲಿ ಸ್ಥಾಪನೆಗೊಂಡ ಮಠಗಳು

೧. ಜಂಗಮಮಠ
೨. ಶಿವಾನುಭವಮಠ
೩. ಸಾಲಿಮಠ
೪. ಹಾಲಿನಬೀದಿಮಠ

ಗವಿಪುರದಲ್ಲಿ ಸ್ಥಾಪನೆಗೊಂಡ ಮಠಗಳು

೧. ಗವಿಪುರಮಠ
೨. ನಂಜುಂಡಸ್ವಾಮಿ ಗದ್ದುಗೆಮಠ
೩. ನಿಜಗುಣ ಜಂಗಮಮಠ

ಕಳಾಸಿಪಾಳ್ಯದಲ್ಲಿ ಸ್ಥಾಪನೆಗೊಂಡ ಮಠಗಳು
೧. ಗುರುಗಲುದೇವರಮಠ
೨. ಬೂದಿಸ್ವಾಮಿಮಠ
೩. ಮರಿಸ್ವಾಮಿಮಠ
೪. ಸಹಜಾನಂದಸ್ವಾಮಿಮಠ

ಕೆಂಚಾಪುರ ಅಗ್ರಹಾರದಲ್ಲಿ ಸ್ಥಾಪನೆಗೊಂಡ ಮಠಗಳು
೧. ಗಂಗಶೆಟ್ಟಿಮಠ
೨. ಗುರವಣ್ಣದೇವರಮಠ

ನಗರಪಾಲಿಕಾ ಕಛೇರಿಯ ಸಮೀಪದಲ್ಲಿ ಸ್ಥಾಪನೆಗೊಂಡ ಮಠಗಳು
೧. ಜಂಗಮಮಠ (ಗಂಗಮ್ಮನಗುಡಿ ಬೀದಿ)
೨. ಮಲ್ಲಿಕಾರ್ಜುನಸ್ವಾಮಿ ಗದ್ದುಗೆಮಠ

ನಗರದ ವಿವಿಧ ಭಾಗಗಳಲ್ಲಿ ಸ್ಥಾಪನೆಗೊಂಡ ಮಠಗಳು
೧. ಕೊಳದಮಠ (ಹೆಚ್.ಸಿದ್ದಯ್ಯರಸ್ತೆ)
೨. ಕುದುರೆ ಗದ್ದುಗೆಮಠ
೩. ಕಂತೆಭಿಕ್ಷದಮಠ
೪. ಕಂಬಳಿಸ್ವಾಮಿಮಠ
೫. ಗವಿಮಠ (ಸಿದ್ಧರಾಮನ ದಿಣ್ಣೆ)
೬. ಗದ್ದುಗೆಮಠ (ಚಕ್ಕರಾಯನಕೆರೆ)
೭. ಜಂಗಮಮಠ (ಶೇಷಾದ್ರಿಪುರ)
೮. ಚಿದಾನಂದಸ್ವಾಮಿ ಮಠ
೯. ಗದ್ದುಗೆಮಠ (ಯಶವಂತಪುರ)
೧೦. ಗದ್ದುಗೆಮಠ (ಜೇಡಹಳ್ಳಿ)
೧೧. ಜಂಗಮಮಠ (ಶಿವನಹಳ್ಳಿ)
೧೨. ವಿಭೂತಿಪುರಮಠ (ವಿಭೂತಿಪುರ)
೧೩. ಬಂಡೆಮಠ (ಕೆಂಗೇರಿ)
೧೪. ಸಂಸ್ಥಾನಮಠ (ಹುಣಸಮಾರನಹಳ್ಳಿ)

ಈ ರೀತಿ ಬೆಂಗಳೂರು ನಗರ ವಲಯದಲ್ಲಿ ಎಪ್ಪತ್ತೈದು ಮಠಗಳು ಸ್ಥಾಪನೆಗೊಂಡಿದ್ದವೆಂದು ಡಾ. ಬಿ.ಸಿ.ವೀರಪ್ಪನವರ ಸಂಶೋಧನೆಯಿಂದ ತಿಳಿದು ಬರುತ್ತದೆ. ಇವುಗಳಲ್ಲಿ ಕೇವಲ ಹದಿನಾಲ್ಕು ಮಠಗಳು ಧಾರ್ಮಿಕ ಕಾರ್ಯಗಳನ್ನು ನಡೆಸುವ ಮೂಲಕ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ.

ಕೆಂಗೇರಿ

ಬೆಂಗಳೂರು ನಗರದ ಹೊರವಲಯದ ಕೆಂಗೇರಿಯಲ್ಲಿ ಶ್ರೀ ಬಂಡೇಮಠ ಅಥವಾ ಶ್ರೀ ಏಕದಳ ಬಿಲ್ವಮಠ ಎಂದು ಕರೆಯಲ್ಪಡುವ ವೀರಶೈವ ಮಠವು ಸ್ಥಾಪನೆಯಾಗಿದೆ. ಬೆಂಗಳೂರು-ಮೈಸೂರು ರಸ್ತೆಯಲ್ಲಿ ಸಿಗುವ ಕೆಂಗೇರಿಯ ಹೊರಭಾಗದ ಪ್ರಕೃತಿಯ ತಾಣದಲ್ಲಿ ಈ ಮಠವು ಸ್ಥಾಪನೆಯಾಗಿದೆ.

ಬಂಡೇಮಠ: ಕೆಂಗೇರಿ ಬಡಾವಣೆಯಲ್ಲಿ ಅಸ್ತಿತ್ವದಲ್ಲಿರುವ ಬಂಡೇಮಠದ ಸ್ಥಾಪನೆಯ ಬಗ್ಗೆ ನಿಖರವಾದ ಕಾಲಮಾನ ತಿಳಿಯದಿದ್ದರೂ ಜನಪದ ಐತಿಹ್ಯದ ಹಿನ್ನೆಲೆಯಲ್ಲಿ, ಹನ್ನೆರಡನೆಯ ಶತಮಾನಕ್ಕೂ ಮೊದಲು ಪ್ರಾರಂಭಗೊಂಡಿತ್ತೆಂದು ಹೇಳಲಾಗುತ್ತಿದೆ. ಈ ಮಠವು ಹನ್ನೆರಡನೆಯ ಶತಮಾನದ ನಂತರ ಶರಣರ ಕ್ರಾಂತಿಯಿಂದ ಪ್ರಭಾವಿತವಾಗಿ ಶರಣ ತತ್ತ್ವದ ಪ್ರಚಾರವನ್ನೂ ಮಾಡಿದೆ. ನಂತರ ಹದಿನೈದನೆಯ ಶತಮಾನದಲ್ಲಿ ಶ್ರೀ ತೋಂಟದ ಸಿದ್ಧಲಿಂಗೇಶ್ವರರ ಕಾಲದಲ್ಲಿ ನಡೆದ ಧಾರ್ಮಿಕ ಆಂದೋಲನದಲ್ಲಿ ಸಮಾಜದ ಅನಿಷ್ಟ ಪದ್ಧತಿಗಳನ್ನು ದೂರಮಾಡಲು ಈ ಮಠವು ಸ್ಪಂದಿಸಿ, ವೀರಶೈವ ಧರ್ಮವು ಬೆಳೆಯಲು ಕಾರಣವಾಗಿದೆ. ವಿಜಯನಗರದ ಅರಸರು, ಕೆಳದಿ ಅರಸರು, ಮೈಸೂರು ಅರಸರು ಹಾಗೂ ಮಾಗಡಿ ಕೆಂಪೇಗೌಡರ ಕಾಲದಲ್ಲಿ ಮಠಕ್ಕೆ ರಾಜಾಶ್ರಯ ದೊರೆತು, ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳನ್ನು ನಡೆಸಲು ನೆರವು ದೊರೆತಿದೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ಚರಮೂರ್ತಿ ಹೊನ್ನಪ್ಪಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಗುರುಸಿದ್ಧಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಚರಮೂರ್ತಿ ಬಂಡೇಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಕಂಬಳಿಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಇಮ್ಮಡಿ ಸಿದ್ಧಲಿಂಗಸ್ವಾಮಿಗಳು

೭. ಶ್ರೀ ಮ.ನಿ.ಪ್ರ. ಇಮ್ಮಡಿ ಗುರುಸಿದ್ಧಸ್ವಾಮಿಗಳು

೮. ಶ್ರೀ ಮ.ನಿ.ಪ್ರ. ಚರಮೂರ್ತಿ ಚಿದಾನಂದಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ವಿರಕ್ತ ಸಂಪ್ರದಾಯದ ಈ ಮಠವು ಶ್ರೀ ಚರಮೂರ್ತಿ ಹೊನ್ನಪ್ಪ ಸ್ವಾಮಿಗಳಿಂದ ಪ್ರಾರಂಭವಾಗಿರಬಹುದೆಂದು ಹೇಳಲಾಗುತ್ತಿದೆ. ನಂತರ ಅಧಿಕಾರ ನಡೆಸಿದ ಶ್ರೀ ಗುರುಸಿದ್ಧ ಸ್ವಾಮಿಗಳು ಹಾಗೂ ಶ್ರೀಬಂಡೆ ಸ್ವಾಮಿಗಳ ಬಗ್ಗೆ ಹೆಚ್ಚು ಮಾಹಿತಿಗಳು ಲಭ್ಯವಿಲ್ಲ. ನಂತರ ಬಂದ ಶ್ರೀ ಕಂಬಳಿ ಸ್ವಾಮಿಗಳು ಮಹಾತಪಸ್ವಿಗಳಾಗಿದ್ದು ಅನೇಕ ಪವಾಡಗಳನ್ನು ಮಾಡಿ ಜನಮನ್ನಣೆಗೆ ಪಾತ್ರರಾಗಿದ್ದರು. ಇವರು ವಾಕ್‌ಸಿದ್ಧಿ ಪುರುಷರಾಗಿದ್ದ ಕಾರಣ ಅವರ ಹೇಳಿಕೆಗಳು ಎಂದೂ ಹುಸಿಯಾಗುತ್ತಿರಲಿಲ್ಲ. ಈ ಕಾರಣಕ್ಕೆ ಭಕ್ತರು ಭಯ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರಂತೆ. ಮೈಸೂರು ಅರಸರಾದ ಕೃಷ್ಣರಾಜ ಒಡೆಯರ ಬೆನ್ನುಪಣಿ ರೋಗಕ್ಕೆ ಚಿಕಿತ್ಸೆ ನೀಡಿ, ರಾಜಮನ್ನಣೆಗೆ ಪಾತ್ರರಾಗಿದ್ದರೆಂದು ಹೇಳಲಾಗುತ್ತಿದೆ.

ಗುರುಗಳ ಚಿಕಿತ್ಸೆಯಿಂದ ಗುಣಮುಖರಾದ ಶ್ರೀ ಕೃಷ್ಣರಾಜ ಒಡೆಯರು ಇದರ ಜ್ಞಾಪಕಾರ್ಥವಾಗಿ ಮಠದಲ್ಲಿ ಛತ್ರವನ್ನು ಕಟ್ಟಿಸಿಕೊಟ್ಟಿರುತ್ತಾರೆಂದು ಹೇಳಲಾಗುತ್ತಿದೆ. ಶ್ರೀ ಕಂಬಳಿ ಸ್ವಾಮಿಗಳು ತಾವು ಕಲಿತಿದ್ದ ಆಯುರ್ವೇದ ಚಿಕಿತ್ಸೆಯಿಂದ ಜನ ಸಾಮಾನ್ಯರಿಗೆ ಔಷಧಿಕೊಡುವ ಮೂಲಕ ನೆರವಾದರು. ಮಹಾಯೋಗಿಗಳು, ಮಹಾಸಿದ್ಧಿ ಪುರುಷರೂ ಆಗಿದ್ದ ಶ್ರೀಕಂಬಳಿ ಸ್ವಾಮಿಗಳು ಹುಲಿಯನ್ನು ತಮ್ಮ ವಾಹನವನ್ನಾಗಿ ಮಾಡಿಕೊಂಡು ಸಂಚರಿಸುತ್ತಿದ್ದರು ಎಂದು ಜನಪದರು ಹೇಳುತ್ತಾರೆ.

ನಂತರ ಬಂದ ಗುರುಗಳು ತಮ್ಮ ಪಾಲಿನ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಮಠವು ವ್ಯವಸ್ಥಿತವಾಗಿ ಬೆಳೆಯಲು ಕಾರಣಕರ್ತರಾದರು. ಈಗಿನ ಶ್ರೀ ಚರಮೂರ್ತಿ ಚಿದಾನಂದ ಸ್ವಾಮಿಗಳು ಶ್ರೀ ಇಮ್ಮಡಿ ಗುರುಸಿದ್ಧ ಸ್ವಾಮಿಗಳ ಕರಕಮಲ ಸಂಜಾತರಾಗಿ ಬೆಳೆದರು. ಬೆಂಗಳೂರಿನಲ್ಲಿ ಸಂಸ್ಕೃತ ಹಾಗೂ ವೇದಾಧ್ಯಯನ ಮಾಡಿ, ಶ್ರೀ ಬಂಡೇಮಠದ ಉತ್ತರಾಧಿಕಾರಿಗಳಾಗಿ ಅಧಿಕಾರವನ್ನು ವಹಿಸಿಕೊಂಡರು. ಪುರಾತನ ಪರಂಪರಾಗತ ಮಠದ ಕಲ್ಲಿನ ಕಟ್ಟಡವು ಎಂಬತ್ತು ಅಂಕಣ ವಿಸ್ತಾರದಲ್ಲಿ ನಿರ್ಮಿತವಾಗಿದೆ. ಇಂತಹ ಬೃಹತ್ ಕಟ್ಟಡವನ್ನು ನವೀಕರಣಗೊಳಿಸಿ, ಮಠದಲ್ಲಿ ಧಾರ್ಮಿಕ ಕಾರ್ಯಗಳು ನಿರಂತರವಾಗಿ ನಡೆಯುವಂತೆ ವ್ಯವಸ್ಥೆ ಮಾಡಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಚರಮೂರ್ತಿ ಚಿದಾನಂದ ಸ್ವಾಮಿಗಳು, ಶ್ರೀ ಬಂಡೇಮಠ, ಕೆಂಗೇರಿ, ಬೆಂಗಳೂರು.

ಕರಿಸಿದ್ಧದೇವರಮಠ

ಬೆಂಗಳೂರು ನಗರದ ದೊಡ್ಡಪೇಟೆಯಲ್ಲಿ ಶ್ರೀ ಕರಿಸಿದ್ಧೇಶ್ವರ ಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದ ಕಟ್ಟಡವು ಈ ಮಠದ ಭವ್ಯತೆಯ ಚಿಹ್ನೆಯಾಗಿ ನಿಂತಿದೆ. ಮಠದ ಒಳಭಾಗದಲ್ಲಿ ಶ್ರೀ ಕರಿಸಿದ್ಧದೇವರ ಗದ್ದುಗೆಯು ಸ್ಥಾಪನೆಯಾಗಿದೆ. ಶ್ರೀ ಕರಿಸಿದ್ಧೇಶ್ವರ ಸ್ವಾಮಿಗಳು ಮಠದ ಕರ್ತೃಗುರುಗಳೆಂದು ಹೇಳಲಾಗುತ್ತಿದೆ. ಇವರ ನಂತರ ಶ್ರೀ ಗುರುಪಾದಯ್ಯ ಸ್ವಾಮಿಗಳು (ಕ್ರಿ.ಶ.೧೮೩೦-೧೮೬೦), ಶ್ರೀ ಸಿದ್ಧಲಿಂಗ ದೇವರು (ಕ್ರಿ.ಶ.೧೮೬೦-೧೯೫೨), ಶ್ರೀ ಸಿದ್ಧವೀರ ಸ್ವಾಮಿಗಳು (ಕ್ರಿ.ಶ.೧೯೫೨-೧೯೩೩), ಶ್ರೀ ಶಾಂತವೀರ ಒಡೆಯರು (ಕ್ರಿ.ಶ.೧೯೩೩) ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಶ್ರೀ ಶಾಂತವೀರ ಒಡೆಯರು ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ಮಠವನ್ನು ತ್ಯಜಿಸಿದರು. ನಂತರ ಉತ್ತರಾಧಿಕಾರಿಗಳಿಲ್ಲದೆ ಮಠವು ಅನ್ಯರ ಆಕ್ರಮಣಕ್ಕೆ ಒಳಗಾಗಿದೆ. ಎಚ್.ಎ.ಎಲ್. ಬಳಿ ಮಠದ ಆಸ್ತಿಯಾಗಿ ಏಳು ಎಕರೆ ಜಮೀನಿದೆ ಎಂದು ಹೇಳಲಾಗುತ್ತಿದೆ.

ಕೊಳದಮಠ

ಬೆಂಗಳೂರು ನಗರದ ಪ್ರಾಚೀನ ಮಠಗಳಲ್ಲಿ ಒಂದಾಗಿ ಶ್ರೀ ಕೊಳದಮಠವು ಬೆಳೆದಿದೆ. ಮಠದ ಮುಂಭಾಗದಲ್ಲಿ ಬೃಹದಾಕಾರದ ಕೊಳವು ಇದ್ದ ಕಾರಣ ಈ ಹೆಸರು ಬಂದಿದೆ ಎಂದು ಹೇಳಲಾಗುತ್ತಿದೆ. ಈಗಿನ ಗುರುಗಳ ಅಭಿಪ್ರಾಯದಂತೆ ಮಠದ ಪರಂಪರೆಯು ಒಂದುಸಾವಿರ ವರ್ಷಗಳಷ್ಟು ಪುರಾತನವೆಂದು ಹೇಳಲಾಗುತ್ತಿದೆ.

ಮಠಸ್ಥಾಪನೆ: ಸಂಪಾದನೆ ಸಮಯದ ಮೂಲಮಠವೆಂದು ಹೇಳಲಾಗುವ ಈ ಮಠದ ಸ್ಥಾಪನೆಯ ಬಗ್ಗೆ ನಿಖರವಾದ ಮಾಹಿತಿಗಳು ಲಭ್ಯವಿಲ್ಲ. ಮೈಸೂರು ಮುಮ್ಮಡಿ ಕೃಷ್ಣರಾಜ ಒಡೆಯರ ಆಳ್ವಿಕೆ(೧೮೦೦-೧೮೩೧)ಯಲ್ಲಿ ಇನಾಂ ಭೂಮಿ

ಯನ್ನು ನೀಡಿದ ಬಗ್ಗೆ ದಾಖಲೆ ದೊರೆಯುತ್ತದೆ. ಈ ಕಾರಣದಿಂದ ೧೮೦೦ಕ್ಕೂ ಪೂರ್ವದಿಂದಲೇ ಅಸ್ತಿತ್ವದಲ್ಲಿತ್ತು ಎಂಬುದನ್ನು ಡಾ. ಬಿ.ಸಿ. ವೀರಪ್ಪನವರ ಸಂಶೋಧನೆಯಿಂದ ತಿಳಿದು ಬರುತ್ತದೆ. ಮಠದ ಸ್ಥಾಪಕ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಶ್ರೀ ಶಿವಲಿಂಗ ದೇಶಿಕೇಂದ್ರ ಸ್ವಾಮಿಗಳ ಕಾಲದಿಂದ ಮಠದ ಪರಂಪರೆಯನ್ನು ಗುರುತಿಸಬಹುದಾಗಿದೆ. ದೇವಸ್ಥಾನದ ಮಾದರಿಯಲ್ಲಿ ಸ್ಥಾಪನೆಗೊಂಡಿರುವ ಮಠದ ಕಟ್ಟಡವು ಕಲ್ಲಿನಿಂದ ನಿರ್ಮಾಣಗೊಂಡಿದೆ. ಮಠದ ಆವರಣದಲ್ಲಿ ಶ್ರೀ ಜಲಕಂಠೇಶ್ವರ ದೇವಸ್ಥಾನ ನಿರ್ಮಾಣಗೊಂಡಿದ್ದು ಇಲ್ಲಿನ ಕೇಂದ್ರಬಿಂದುವಾಗಿ ಬೆಳೆದಿದೆ.

ಪರಂಪರೆ:	೧. ಶ್ರೀ ಮ.ನಿ.ಪ್ರ. ಶಿವಲಿಂಗ ದೇಶಿಕೇಂದ್ರ ಸ್ವಾಮಿಗಳು	(ಕ್ರಿ.ಶ.ಸು.೧೮೫೦-೧೮೭೫)
	೨. ಶ್ರೀ ಮ.ನಿ.ಪ್ರ. ಸಿದ್ಧಲಿಂಗ ದೇವರು	(ಕ್ರಿ.ಶ.ಸು.೧೮೭೬-೧೮೯೦)
	೩. ಶ್ರೀ ಮ.ನಿ.ಪ್ರ. ಬಸವಲಿಂಗ ದೇವರು	(ಕ್ರಿ.ಶ.ಸು.೧೮೯೦-೧೮೯೫)
	೪. ಶ್ರೀ ಮ.ನಿ.ಪ್ರ. ಹುಚ್ಚಪ್ಪ ದೇವರು	(ಕ್ರಿ.ಶ.೧೮೯೫-೧೯೧೮)
	೫. ಶ್ರೀ ಮ.ನಿ.ಪ್ರ. ವೀರಭದ್ರ ದೇವರು	(ಕ್ರಿ.ಶ. ೧೯೧೧-೧೯೨೭)
	೬. ಶ್ರೀ ಮ.ನಿ.ಪ್ರ. ಶಾಂತವೀರ ಮರಿದೇವರು	(ಕ್ರಿ.ಶ. ೧೯೨೪-೧೯೩೪)
	೭. ಶ್ರೀ ಮ.ನಿ.ಪ್ರ. ಇಮ್ಮಡಿ ಶಾಂತವೀರಸ್ವಾಮಿಗಳು	(ಕ್ರಿ.ಶ. ೧೯೬೧-)

ಈ ರೀತಿ ಮಠದ ಪರಂಪರೆಯ ಕೆಲವು ಗುರುಗಳ ಹೆಸರುಗಳನ್ನು ದಾಖಲಿಸಲಾಗಿದೆ. ಪರಂಪರೆಯ ಎರಡನೆಯ ಗುರುಗಳಾದ ಶ್ರೀ ಸಿದ್ಧಲಿಂಗದೇವರು'ಕರಣಹಸಿಗೆ' ಎಂಬ ಗ್ರಂಥದ ಕರ್ತೃಗಳಾಗಿದ್ದು ಹೆಚ್ಚು ಹೆಸರು ಮಾಡಿದ್ದರು. ನಂತರ ಬಂದ ಗುರುಗಳು ಮಠವನ್ನು ಬೆಳೆಸಿದ್ದಾರೆ. ಈ ಹಿಂದೆ ಅಧಿಕಾರದಲ್ಲಿದ್ದ ಶ್ರೀ ಶಾಂತವೀರ ಮರಿದೇವರು ಲಿಂಗೈಕ್ಯರಾದ ನಂತರ ಇಪ್ಪತ್ತೇಳು ವರ್ಷಗಳ ಕಾಲ ಮಠಾಧೀಶರಿಲ್ಲದೆ ಮಠವು ಖಾಲಿ ಉಳಿಯಿತು. ೧೯೪೫ರ ಸಂದರ್ಭದಲ್ಲಿ ಟಿ.ಜಿ.ಗುರುಚನ್ನಬಸವಾರಾಧ್ಯ ಎಂಬುವರು ಮಠದ ಉಸ್ತುವಾರಿಯನ್ನು ನೋಡಿಕೊಂಡು, ಧಾರ್ಮಿಕ ಕಾರ್ಯಗಳನ್ನು ನಡೆಸುವ ಮೂಲಕ ಮಠವನ್ನು ಜೀವಂತವಾಗಿರಿಸಿದರು. ನಂತರ ಆರು ವರ್ಷದ ಬಾಲಕ ಟಿ.ಜಿ.ಶಾಂತವೀರರಾಧ್ಯ ಎಂಬ ಮರಿದೇವರನ್ನು ಮಠದ ಉತ್ತರಾಧಿಕಾರಿಗಳನ್ನಾಗಿ ನೇಮಿಸಿದರು. ಮರಿದೇವರಿಗೆ ಸೂಕ್ತ ವಿದ್ಯಾಭ್ಯಾಸವನ್ನು ಕೊಡಿಸಿ ೧೯೬೧ರ ಏಪ್ರಿಲ್ ಇಪ್ಪತ್ತೆಂಟರಂದು ವಿಧಿವತ್ತಾಗಿ ಶಿವಾನುಭವ ಚಕ್ರವರ್ತಿ ಶ್ರೀ ಮ.ನಿ.ಪ್ರ. ಶಾಂತವೀರಸ್ವಾಮಿಗಳೆಂದು ಅಭಿಧಾನ ಮಾಡಿ ಪಟ್ಟಾಧಿಕಾರ ಮಾಡಲಾಯಿತು. ಗುರುಗಳು ತುಮಕೂರಿನಲ್ಲಿ ಶಿವಮ್ಮ ಮತ್ತು ಗುರುಚನ್ನಬಸವರಾಧ್ಯರ ಪುತ್ರರಾಗಿ ೧೯೪೨ರ ಮಾರ್ಚಿ ೭ರಂದು ಜನಿಸಿದ್ದರು. ಇವರು ತುಮಕೂರು ಮತ್ತು ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮುಗಿಸಿ ವಾರಣಾಸಿಯಲ್ಲಿ ವೇದಾಂತ ಆಚಾರ್ಯ ಪದವಿಯನ್ನು ಪಡೆದಿರುವುದಲ್ಲದೆ ಸಂಸ್ಕೃತ ಮತ್ತು ಹಿಂದಿ ಭಾಷೆಗಳಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ.

ಶ್ರೀ ಇಮ್ಮಡಿ ಶಾಂತವೀರ ಸ್ವಾಮಿಗಳು ಬಹುಭಾಷಾ ಪಂಡಿತರಾಗಿದ್ದಾರೆ. ಗುರುಗಳು ಸಂಸ್ಕೃತ ಹಾಗೂ ಆಗಮ ಶಾಸ್ತ್ರದಲ್ಲಿ ಅಪಾರ ಆಸಕ್ತಿಯನ್ನು ಹೊಂದಿದ್ದು, ಮಠದಲ್ಲಿ ಆಗಮ ಪ್ರತಿಷ್ಠಾನವನ್ನು ಸ್ಥಾಪಿಸಿ ಆಗಮಶಾಸ್ತ್ರದ ಸಂಶೋಧನೆ ಹಾಗೂ ಅಭ್ಯಾಸಕ್ಕೆ ಅನುವು ಮಾಡಿಕೊಟ್ಟಿದ್ದಾರೆ. ಗುರುಗಳು ಸಾಮಾಜಿಕ, ಧಾರ್ಮಿಕ ಹಾಗೂ ಸಾಹಿತ್ಯಿಕ ವಿಚಾರಗಳಲ್ಲಿ ಆಸಕ್ತಿಯನ್ನು ಹೊಂದಿದ್ದಾರೆ. ಇವರ ವಿದ್ವತ್ತನ್ನು ಗುರುತಿಸಿ ಆಗಮ ಶಿಕ್ಷಣ ಪರೀಕ್ಷಾ ಸಲಹಾ ಸಮಿತಿಗೆ ಅಧ್ಯಕ್ಷರನ್ನಾಗಿ ಕರ್ನಾಟಕ ಸರ್ಕಾರ ನೇಮಕಮಾಡಿದೆ. ಕಳೆದ ೩೦ ವರ್ಷಗಳಿಂದ ಅಖಿಲ ಭಾರತ ಸಾಧುಸಮಾಜ ಅಧ್ಯಕ್ಷರಾಗಿದ್ದಾರೆ. ಅಖಿಲ ಭಾರತ ಭಾಷಾ ಸಾಹಿತ್ಯ ಸಮ್ಮೇಳನದ ರಾಷ್ಟ್ರೀಯ ಅಧ್ಯಕ್ಷರಾಗಿ ಕಳೆದ ೧೩ ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ನ್ಯೂಯಾರ್ಕ್‌ನಲ್ಲಿ ಅಂತರಾಷ್ಟ್ರೀಯ ಆತ್ಮ ಶ್ರೀ ಯೋಗ ಕೇಂದ್ರವನ್ನು ಸ್ಥಾಪಿಸಿ ಈ ಮೂಲಕ ಧರ್ಮಪ್ರಚಾರವನ್ನು ಮಾಡುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಶ್ರೀ ಜಲಕಂಠೇಶ್ವರ ದೇವಸ್ಥಾನ ಹಾಗೂ ಮಠದ ಏಳ್ಗೆಗೆ ದುಡಿದ ಹೆಚ್. ಸಿದ್ದಯ್ಯ, ಪುರಭವನದ ಕರ್ತೃಗಳಾದ ಶ್ರೀ ಪುಟ್ಟಣ್ಣಶೆಟ್ಟಿ, ಪಂಡಿತನ ಕಲ್ಲಿನಾಥ ಶಾಸ್ತ್ರಿಗಳು, ಮಹಾರುದ್ರಯ್ಯ ಮೊದಲಾದವರ ಗದ್ದುಗೆಗಳು ಇಲ್ಲಿ ಸ್ಥಾಪನೆಗೊಂಡಿವೆ. ಈ ಗದ್ದುಗೆಗಳಿಗೆ ನಿತ್ಯ ಪೂಜೆ ನಡೆಯುತ್ತಿದೆ. ಕೊಳದ ಮಠವು ಹಿಂದೆ ಅಂತ್ಯ ಸಂಸ್ಕಾರದ ಕೇಂದ್ರವಾಗಿ ಬೆಳೆದಿತ್ತು. ಇದನ್ನು ರುದ್ರಭೂಮಿಮಠವೆಂದೂ ಸಹ ಗುರುತಿಸಬಹುದಾಗಿದೆ. ಇಲ್ಲಿ

ಗಂಜಾಂಮಠದ ಶ್ರೀ ನಂಜುಂಡ ಸ್ವಾಮಿಗಳ ಹಾಗೂ ಶ್ರೀ ಚಿಪ್ಪನ ಶಿವಾಚಾರ್ಯ ಸ್ವಾಮಿಗಳ, ನರಗುಂದ ದೇವರ ಮಠದ ಶ್ರೀ ಕರಿಬಸವ ಸ್ವಾಮಿಗಳ, ಶ್ರೀ ಶಂಕರ ದೇವರಮಠದ ಶ್ರೀ ಶಂಕರ ಸ್ವಾಮಿಗಳ, ಶ್ರೀ ಸರ್ಪಭೂಷಣಮಠದ ಶ್ರೀ ಮಹಾದೇವ ಸ್ವಾಮಿಗಳ, ಶ್ರೀ ಮುತ್ತಿನಕಂತೆ ಮಠದ ಶ್ರೀ ಶಿವಕುಮಾರ ಸ್ವಾಮಿಗಳ ಹಾಗೂ ಇನ್ನಿತರ ಮಠಾಧೀಶರುಗಳ ಗದ್ದುಗೆಗಳು ಹಾಗೂ ಪುರ ಪ್ರಮುಖರ ಸಮಾಧಿಗಳು ಸ್ಥಾಪನೆಗೊಂಡಿವೆ.

ಸಾಂಸ್ಕೃತಿಕ ಕಾರ್ಯಗಳು: ಪ್ರತಿವರ್ಷ ಮಠದಲ್ಲಿ ಭಾರತೀಯ ಭಾಷಾ ಸಮ್ಮೇಳನ, ವಿಶ್ವಶಾಂತಿ ಸಮ್ಮೇಳನ, ಸರ್ವಧರ್ಮ ಸಮನ್ವಯ ಸಮ್ಮೇಳನ ಮೊದಲಾದ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ರಾಷ್ಟ್ರಮಟ್ಟದ ನಾಯಕರುಗಳನ್ನು ಕರೆಸಿ ಆಯಾ ಕ್ಷೇತ್ರಗಳಲ್ಲಿ ದುಡಿದ ಗಣ್ಯರನ್ನು ಸನ್ಮಾನಿಸಿ ಗೌರವಿಸುವುದು. ವಿದ್ವಾಂಸರುಗಳಿಂದ ವಿಶೇಷ ಉಪನ್ಯಾಸ ಮಾಡಿಸಲಾಗುತ್ತಿದೆ. ಅನ್ನದಾಸೋಹವನ್ನು ನಡೆಸುವ ಮೂಲಕ ವೀರಶೈವ ಧರ್ಮವನ್ನು ಪ್ರಚಾರಪಡಿಸಲಾಗುತ್ತಿದೆ. ಇತ್ತೀಚೆಗೆ ಗುರುಗಳು ೬೩ ಶಾಖಾಮಠಗಳನ್ನು ಗುರುತಿಸಿದ್ದು ಇವುಗಳ ಸಂರಕ್ಷಣೆ ಹಾಗೂ ಅಭಿವೃದ್ಧಿ ಕಾರ್ಯದ ಕಡೆ ಗಮನ ಹರಿಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಇಮ್ಮಡಿ ಶಾಂತವೀರ ಸ್ವಾಮಿಗಳು, ಶ್ರೀ ಕೋಳದಮಠ, ಹೆಚ್.ಸಿದ್ದಯ್ಯ ರಸ್ತೆ, ಬೆಂಗಳೂರು.

ಆಧಾರ: ಬೆಂಗಳೂರು ನಗರದ ವೀರಶೈವ ಮಠಗಳು ಒಂದು ಸಾಂಸ್ಕೃತಿಕ ಅಧ್ಯಯನ, ಲೇಖಕರು : ಡಾ. ಬಿ.ಸಿ. ವೀರಪ್ಪ

ಗಂಜಾಂಮಠ

ಗೌಡ ಅರಸರ ಆಳ್ವಿಕೆಯ ಕಾಲದಲ್ಲಿ ಕಲ್ಯಾಣ ನಗರದ ಪ್ರಮುಖ ಪೇಟೆಯಲ್ಲಿ ಒಂದಾಗಿದ್ದ ಮಾಮೂಲು ಪೇಟೆಯಲ್ಲಿ ಶ್ರೀ ಜಂಗಮಮಠ ಅಥವಾ ಶ್ರೀ ಗಂಜಾಂಮಠವು ಸ್ಥಾಪನೆಯಾಗಿ, ಮುರುಘಾ ಸಮಯದ ವಿರಕ್ತ ಪರಂಪರೆಯಲ್ಲಿ ಬೆಳೆದಿದೆ. ಈ ಬಡಾವಣೆಯಲ್ಲಿ ಪ್ರಾಚೀನ ಕಾಲದ ಬೆಳ್ಳಿಬಸವಣ್ಣನ ಗುಡಿಯು ಸ್ಥಾಪನೆಯಾಗಿದ್ದು, ಈ ಗುಡಿಯ ಸಮೀಪದಲ್ಲಿಯೇ ಈ ಮಠವು ಸ್ಥಾಪನೆಯಾಗಿದೆ. ಹಿಂದೆ ಶ್ರೀರಂಗಪಟ್ಟಣದ ಸಮೀಪವಿರುವ ಗಂಜಾಂನ ಗುರುಗಳು ಈ ಮಠದ ಉತ್ತರಾಧಿಕಾರಿಗಳಾಗಿ ಆಡಳಿತವನ್ನು ವಹಿಸಿಕೊಂಡು ಪ್ರಸಿದ್ಧಿ ಪಡೆದಿದ್ದರು. ಗಂಜಾಂ ಗುರುಗಳಿಂದ ಖ್ಯಾತಿ ಪಡೆದ ಶ್ರೀ ಜಂಗಮಮಠವು ನಂತರ ಶ್ರೀ ಗಂಜಾಂ ಮಠವಾಗಿ ಹೆಸರು ಪಡೆಯಿತು ಎಂದು ಹೇಳಲಾಗುತ್ತಿದೆ.

ಪರಂಪರೆ:	೧. ಶ್ರೀ ಮ.ನಿ.ಪ್ರ. ಚನ್ನವೀರ ಒಡೆಯರು	(ಕ್ರಿ.ಶ.ಸು.೧೮೩೬-೧೮೪೮)
	೨. ಶ್ರೀ ಮ.ನಿ.ಪ್ರ. ಇಮ್ಮಡಿ ಗುರುಸಿದ್ಧಸ್ವಾಮಿಗಳು	(ಕ್ರಿ.ಶ. ೧೮೪೯-೧೮೬೭)
	೩. ಶ್ರೀ ಮ.ನಿ.ಪ್ರ. ರಾಚೋಟಿಸ್ವಾಮಿಗಳು	(ಕ್ರಿ.ಶ. ೧೮೬೮-೧೮೮೪)
	೪. ಶ್ರೀ ಮ.ನಿ.ಪ್ರ. ನಂಜುಂಡಸ್ವಾಮಿಗಳು	(ಕ್ರಿ.ಶ. ೧೮೭೫-೧೯೪೮)
	೫. ಶ್ರೀ ಮ.ನಿ.ಪ್ರ. ಚಿದ್ಘನಸ್ವಾಮಿಗಳು	(ಕ್ರಿ.ಶ. ೧೯೪೨-೧೯೧೧)
	೬. ಶ್ರೀ ಮ.ನಿ.ಪ್ರ. ಬಸವರಾಜಸ್ವಾಮಿಗಳು	(ಕ್ರಿ.ಶ. ೧೯೧೭-೧೯೮೬)
	೭. ಶ್ರೀ ಮ.ನಿ.ಪ್ರ. ಇಮ್ಮಡಿ ಚಿದ್ಘನಸ್ವಾಮಿಗಳು	(ಕ್ರಿ.ಶ. ೧೯೫೫-)

ಮಠದ ಪರಂಪರೆಯಲ್ಲಿ ಲಭ್ಯವಿರುವ ಕೆಲವು ಗುರುಗಳ ಹೆಸರುಗಳನ್ನು ಮಾತ್ರ ದಾಖಲಿಸಲಾಗಿದೆ. ಮಠದ ಕರ್ತೃ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಶ್ರೀ ಚನ್ನವೀರ ಒಡೆಯರ ನಂತರ ಶ್ರೀ ಇಮ್ಮಡಿ ಗುರುಸಿದ್ಧ ಸ್ವಾಮಿಗಳು ಅಧಿಕಾರಕ್ಕೆ ಬಂದು ಶ್ರೀ ತಿಪ್ಪಶೆಟ್ಟಿಮಠ ಮತ್ತು ಶ್ರೀ ಗಂಜಾಂಮಠದ ಆಡಳಿತವನ್ನು ನಡೆಸಿ ಲಿಂಗೈಕ್ಯರಾದರು. ಇವರ ಗದ್ದುಗೆಯನ್ನು ಶ್ರೀ ತಿಪ್ಪಶೆಟ್ಟಿ ಮಠದಲ್ಲಿ ಸ್ಥಾಪಿಸಲಾಗಿದೆ. ಇವರ ನಂತರ ಶ್ರೀ ರಾಚೋಟಿ ಸ್ವಾಮಿಗಳು ಅಧಿಕಾರಕ್ಕೆ ಬಂದು ಚಿಕ್ಕಮಸಕಲ್ಲು ಮಠದಲ್ಲಿ ಲಿಂಗೈಕ್ಯರಾದರೆಂದು ಹೇಳಲಾಗುತ್ತಿದೆ. ನಂತರ ಗಂಜಾಂನ ಶ್ರೀ ನಂಜುಂಡ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡರು. ಗುರುಗಳು ಬಹಳ ಪ್ರತಿಭಾನ್ವಿತರಾಗಿ ಹೆಸರು ಮಾಡಿದ್ದರು. ಇವರು ಧಾರ್ಮಿಕ ಹಾಗೂ ಸಾಮಾಜಿಕ ವಿಷಯಗಳಲ್ಲಿ ಅಪಾರ ಜ್ಞಾನವನ್ನು ಹೊಂದಿದ್ದರೆಂದು ಹೇಳಲಾಗುತ್ತಿದೆ. ಇವರು ೧೯೪೮ರ ಜನವರಿ ಇಪ್ಪತ್ತೊಂಬತ್ತರಂದು ಲಿಂಗೈಕ್ಯರಾದರು. ಇವರ ಗದ್ದುಗೆಯನ್ನು ಹೆಗ್ಗುಂದದಲ್ಲಿ ನಿರ್ಮಿಸಲಾಗಿದೆ. ಇವರ ಉತ್ತರಾಧಿಕಾರಿಗಳಾಗಿದ್ದ ಶ್ರೀ ಚಿದ್ಘನ ಸ್ವಾಮಿಗಳು ಮಠದ ಆಡಳಿತವನ್ನು ವಹಿಸಿಕೊಂಡರು.

ಶ್ರೀ ಚಿದ್ಘನ ಸ್ವಾಮಿಗಳು ಹಿಂದಿನ ಗುರುಗಳು ನಡೆಸುತ್ತಿದ್ದ ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಕಾರ್ಯಗಳನ್ನು ಮುನ್ನಡೆಸಿಕೊಂಡು ಬಂದು ಜಾವೂರು ಗ್ರಾಮದ ಶ್ರೀ ಚಂದ್ರಯ್ಯನವರ ಪುತ್ರರಾದ ಶ್ರೀ ಬಸವರಾಜ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿದರು. ಈ ಸಂದರ್ಭದಲ್ಲಿ ಮಠದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದ ಶ್ರೀ ಸರ್ಪಭೂಷಣಮಠದ ಶ್ರೀ ಚನ್ನಬಸವ ಸ್ವಾಮಿಗಳು ಶ್ರೀ ಬಸವರಾಜ ಸ್ವಾಮಿಗಳಿಗೆ ವಿದ್ಯಾಭ್ಯಾಸವನ್ನು ಕಲಿಸಿ, ೧೯೨೪ರ ಸೆಪ್ಟೆಂಬರ್ ಹದಿನೈದರಂದು ಮಠದ ಪೂರ್ಣ ಅಧಿಕಾರವನ್ನು ವಹಿಸಿ ಶ್ರೀ ಚಿದ್ಘನ ಸ್ವಾಮಿಗಳು ವಹಿಸಿ ಕೊಟ್ಟಿದ್ದ ಜವಾಬ್ದಾರಿಯನ್ನು ಪೂರೈಸಿದರು. ಶ್ರೀ ಬಸವರಾಜ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಹಿಂದಿನಿಂದ ನಡೆದು ಬಂದಿದ್ದ ಸಂಸ್ಕೃತ ಪಾಠಶಾಲೆಯನ್ನು ಪುನಶ್ಚೇತನಗೊಳಿಸಿದರು. ಅಲ್ಲದೆ ಮಠವನ್ನು ಅಭಿವೃದ್ಧಿಪಡಿಸಿ ತಮ್ಮ ಪೂರ್ವಾಶ್ರಮದ ಕೂಡ್ಲಿಗೆ ನಂಜುಂಡಾರಾಧ್ಯ ಮತ್ತು ಶಾಂತಮ್ಮನವರ ಪುತ್ರರಾಗಿ ೧೯೫೦ರಲ್ಲಿ ಜನಿಸಿದ ಶ್ರೀ ಚಿದ್ಘನ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿದರು. ಶ್ರೀ ಚಿದ್ಘನ ಸ್ವಾಮಿಗಳು ಸ್ನಾತಕೋತ್ತರ ಪದವೀಧರರಾಗಿ, ೧೯೬೬ರ ಫೆಬ್ರವರಿ ೩ರಲ್ಲಿ ಅಧಿಕಾರವನ್ನು ವಹಿಸಿಕೊಂಡು, ಮಠವನ್ನು ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿಗೊಳಿಸಿದ್ದಾರೆ.

ಧಾರ್ಮಿಕ, ಶಿಕ್ಷಣ ಸೇವೆ : ಮಠದಲ್ಲಿ ನಿತ್ಯ ಗದ್ದುಗೆಗೆ ಪೂಜೆ, ವಾರ್ಷಿಕ ಸಂಸ್ಮರಣೆ ಕಾರ್ಯಕ್ರಮಗಳು ಹಾಗೂ ಅನ್ನ ದಾಸೋಹ ನಡೆಯುತ್ತಿದೆ. ೧೮೮೬ರಲ್ಲಿ ಶ್ರೀ ನಂಜುಂಡ ಸ್ವಾಮಿಗಳು 'ಶ್ರೀಪ್ರಮಥಗಣ ಮನೋರಂಜಿನಿ ಸಂಸ್ಕೃತ ಪಾಠಶಾಲೆ' ಯನ್ನು ಪ್ರಾರಂಭಿಸಿದ್ದರು. ಪ್ರಾರಂಭದಲ್ಲಿ ಹತ್ತುಜನ ವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿಯನ್ನು ಕಲ್ಪಿಸಲಾಗಿತ್ತು. ಇಲ್ಲಿ ಅನೇಕ ವಿದ್ವಾಂಸರು ರೂಪುಗೊಂಡಿದ್ದಾರೆ. ಅಲ್ಲದೆ ಅನೇಕ ಮಠಗಳ ಉತ್ತರಾಧಿಕಾರಿಗಳು ಇಲ್ಲಿ ವಿದ್ಯಾಭ್ಯಾಸ ಮಾಡಿ ವಿದ್ಯಾಸಂಪನ್ನತೆಯನ್ನು ಗಳಿಸಿಕೊಂಡಿದ್ದಾರೆ. ಈ ವಿದ್ಯಾಸಂಸ್ಥೆಗೆ ಶ್ರೀ ಚಿದ್ಘನ ಸ್ವಾಮಿಗಳ ಕಾಲದಲ್ಲಿ ಸುಭದ್ರ ಕಟ್ಟಡ ನಿರ್ಮಾಣಗೊಂಡಿತು. ನಂತರ ಅಧಿಕಾರಕ್ಕೆ ಬಂದ ಶ್ರೀ ಬಸವರಾಜ ಸ್ವಾಮಿಗಳು ಪಾಠಶಾಲೆಯನ್ನು ವಿಸ್ತರಿಸಿ, ನಲವತ್ತು ಮಂದಿ ವಿದ್ಯಾರ್ಥಿಗಳಿಗೆ ಕಲಿಯಲು ಅವಕಾಶ ಮಾಡಿಕೊಟ್ಟರು. ಈಗ ಶ್ರೀ ಇಮ್ಮಡಿ ಚಿದ್ಘನ ಸ್ವಾಮಿಗಳ ನೇತೃತ್ವದಲ್ಲಿ ಚಾಮರಾಜಪೇಟೆಯಲ್ಲಿ ಲಿಟ್ರರಿ ವಿದ್ಯಾಸಂಸ್ಥೆಯು ೧೯೮೨ರಲ್ಲಿ ಸ್ಥಾಪನೆಗೊಂಡಿದೆ. ಇದರಡಿಯಲ್ಲಿ ನರ್ಸರಿಯಿಂದ ಪ್ರೌಢಶಾಲೆ, ಪದವಿಪೂರ್ವ ಕಾಲೇಜು ಹಾಗೂ ಪ್ರಥಮದರ್ಜೆ ಕಾಲೇಜನ್ನು ನಡೆಸುತ್ತಿದೆ. ಈ ಶಿಕ್ಷಣ ಸಂಸ್ಥೆಗೆ ದಿಬ್ಬೂರು ವೀರಪ್ಪ ನಂಜಮ್ಮ ಎಂಡೋಮೆಂಟ್ ಟ್ರಸ್ಟ್, ಸ್ಥಳ ದಾನವನ್ನು ಮಾಡಿದ್ದು ಈ ಜಾಗದಲ್ಲಿ ಶಿಕ್ಷಣ ಸಂಸ್ಥೆ ವಿಸ್ತಾರಗೊಂಡು ನಡೆಯುತ್ತಿದೆ. ಈಗ ಸಾವಿರಾರು ಜನ ವಿದ್ಯಾರ್ಥಿಗಳು ಸಂಸ್ಥೆಯಡಿ ವಿದ್ಯಾರ್ಜನೆ ಕೈಗೊಂಡಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಇಮ್ಮಡಿ ಚಿದ್ಘನ ಸ್ವಾಮಿಗಳು, ಶ್ರೀ ಗಂಚಾಂಮಠ, ಮಾಮೂಲುಪೇಟೆ, ಬೆಂಗಳೂರು.

ಆಧಾರ: ಬೆಂಗಳೂರು ನಗರದ ವೀರಶೈವ ಮಠಗಳು ಒಂದು ಸಾಂಸ್ಕೃತಿಕ ಅಧ್ಯಯನ, ಲೇಖಕರು : ಡಾ. ಬಿ.ಸಿ. ವೀರಪ್ಪ

ಗುರುವಣ್ಣದೇವರಮಠ

ಬೆಂಗಳೂರು ನಗರಧ ಮಾಗಡಿ ರಸ್ತೆಯಲ್ಲಿ ಶ್ರೀ ಗುರುವಣ್ಣದೇವರ ಮಠವು ಅಸ್ತಿತ್ವದಲ್ಲಿದೆ. ವಿರಕ್ತ ಸಂಪ್ರದಾಯದ ಮುರುಘಾ ಸಮಯದ ಪರಂಪರೆಯಲ್ಲಿ ಬೆಳೆದು ಬಂದ ಮಠವು, ಮುನ್ನೂರು ವರ್ಷಗಳ ಹಿಂದೆ ಇಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಹಿಂದೆ ಈ ಮಠವು ಶ್ರೀ ಗುರುವಣ್ಣನಮಠ ಎಂದು ಪ್ರಸಿದ್ಧಿ ಪಡೆದಿತ್ತು. ಶ್ರೀ ಗುರುವಣ್ಣನವರು ಈ ಮಠದ ಕರ್ತೃಗಳೋ ಅಥವಾ ದಾನಿಗಳೋ ಎಂಬುದು ಇನ್ನು ಖಚಿತಗೊಂಡಿಲ್ಲ. ಆದರೆ ಈ ಮಠದ ಧಾರ್ಮಿಕ ಹಾಗೂ ಆಡಳಿತ ಕಾರ್ಯಗಳನ್ನು ಶ್ರೀ ಗುರುವಣ್ಣ ದೇವರು ನಡೆಸಿಕೊಂಡು ಬರುತ್ತಿದ್ದರಿಂದ ಇವರನ್ನೇ ಕರ್ತೃಗುರುಗಳೆಂದು ಗುರುತಿಸಲಾಗಿದೆ. ಇವರು ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿ ಮಠವನ್ನು ಸ್ಥಾಪಿಸಿ ಬೆಳೆಸಿದ್ದಾರೆ ಎಂದು ತಿಳಿದು ಬರುತ್ತದೆ. ದೊಡ್ಡಪೇಟೆಯಲ್ಲಿ ಸ್ಥಾಪನೆಗೊಂಡ ಮಠವು ನಂತರ ಮಾಗಡಿ ರಸ್ತೆಗೆ ಸ್ಥಳಾಂತರಗೊಂಡಿದೆ ಎಂದು ತಿಳಿದು ಬರುತ್ತದೆ.

ಪರಂಪರೆ:	೧. ಶ್ರೀ ಮ.ನಿ.ಪ್ರ. ಗುರುವಣ್ಣದೇವರು	(ಕ್ರಿ.ಶ.ಸು. -೧೮೦೦)
	೨. ಶ್ರೀ ಮ.ನಿ.ಪ್ರ. ಮುದ್ದುವೀರಸ್ವಾಮಿಗಳು	(ಕ್ರಿ.ಶ.ಸು.೧೮೦೦-೧೮೩೫)
	೩. ಶ್ರೀ ಮ.ನಿ.ಪ್ರ. ರುದ್ರದೇವರು	(ಕ್ರಿ.ಶ.ಸು.೧೮೩೫-೧೮೭೦)

೪. ಶ್ರೀ ಮ.ನಿ.ಪ್ರ. ಗುರುಮಹಾಂತಸ್ವಾಮಿಗಳು (ಕ್ರಿ.ಶ. ೧೮೭೦ - ೧೮೮೮)
೫. ಶ್ರೀ ಮ.ನಿ.ಪ್ರ. ನಂಜುಂಡಸ್ವಾಮಿಗಳು (ಕ್ರಿ.ಶ. ೧೮೮೮ - ೧೯೨೦)
೬. ಶ್ರೀ ಮ.ನಿ.ಪ್ರ. ಮಹಾಂತಸ್ವಾಮಿಗಳು (ಕ್ರಿ.ಶ. ೧೯೨೦ - ೧೯೬೭)
೭. ಶ್ರೀ ಮ.ನಿ.ಪ್ರ. ಮಲ್ಲಿಕಾರ್ಜುನಸ್ವಾಮಿಗಳು (ಕ್ರಿ.ಶ. ೧೯೬೭-)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದ್ದು, ಕರ್ತೃಗುರುಗಳ ಬಗ್ಗೆ ಹೆಚ್ಚು ವಿವರಗಳು ಲಭ್ಯವಿಲ್ಲ. ಇವರ ನಂತರ ಒಟ್ಟು ಆರು ಜನ ಗುರುಗಳು ಅಧಿಕಾರಕ್ಕೆ ಬಂದರೆಂಬ ಮಾಹಿತಿ ದೊರೆಯುತ್ತಿದೆ. ಮಠದ ಕರ್ತೃಗುರುಗಳಿಗೆ ಮೈಸೂರಿನ ದೊರೆಗಳು ಇನಾಂ ಭೂಮಿಯನ್ನು ನೀಡಿದ್ದರೆಂದು ತಿಳಿಯುತ್ತದೆ. ಪರಂಪರೆಯ ನಾಲ್ಕನೆಯ ಗುರುಗಳಾಗಿದ್ದ ಶ್ರೀ ಗುರು ಮಹಾಂತ ಸ್ವಾಮಿಗಳು ದೊಡ್ಡಪೇಟೆಯಿಂದ ಈಗಿರುವ ಸ್ಥಳಕ್ಕೆ ಮಠವನ್ನು ಸ್ಥಳಾಂತರಿಸಿ ಬೆಳೆಸಿದ್ದಾರೆ. ಪರಂಪರೆಯ ಐದನೆಯ ಗುರುಗಳಾದ ಶ್ರೀ ನಂಜುಂಡ ಸ್ವಾಮಿಗಳು ಸಂಸ್ಕೃತ ಮತ್ತು ಕೈವಲ್ಯ ಸಾಹಿತ್ಯದಲ್ಲಿ ವಿದ್ವಾಂಸರಾಗಿ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಶಿವಾನುಭವಶಾಸ್ತ್ರ, ಶಿವಪೂಜಾವಿಧಿ, ನೂತನ ಗೃಹಪ್ರವೇಶ ವಿಧಿ, ಶಿವಸ್ತುತಿಮಣಿಮಾಲ, ವೀರಮಹೇಶ್ವರ ವಿಜಯ ಮುಂತಾದ ಕೃತಿಗಳನ್ನು ರಚಿಸಿ ಪ್ರಕಟಿಸಿದ್ದಾರೆ. ಇವರ ಕಾಲದಲ್ಲಿ ಮಠವು ಹೆಚ್ಚು ಪ್ರಬುದ್ಧಮಾನಕ್ಕೆ ಬಂದು ಬೆಳೆಯಿತು. ಇವರ ನಂತರ ಶ್ರೀ ಮಹಾಂತ ದೇಶಿಕೇಂದ್ರ ಸ್ವಾಮಿಗಳು ಅಧಿಕಾರಕ್ಕೆ ಬಂದರು. ಮಹಾತಪಸ್ವಿಗಳಾದ ಇವರು ವಾಕ್‌ಸಿದ್ಧಿ ಪುರುಷರಾಗಿದ್ದರು. ಇವರ ತರುವಾಯ ಶ್ರೀ ಸದಾಶಿವಯ್ಯನವರ ಪುತ್ರರಾಗಿ ಜನಿಸಿದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಅಧಿಕಾರಕ್ಕೆ ಬಂದಿದ್ದಾರೆ. ಇವರು ಸಿದ್ಧಗಂಗೆಯಲ್ಲಿ ವಿದ್ಯಾಭ್ಯಾಸ ಮಾಡಿ, ಸಂಸ್ಕೃತ ಹಾಗೂ ವೇದಾಧ್ಯಯನವನ್ನು ಮಾಡಿ ಮಠಕ್ಕೆ ಆಗಮಿಸಿ, ೧೯೬೭ರ ಫೆಬ್ರವರಿ ಹದಿನಾರರಂದು ಪಟ್ಟಾಧಿಕಾರವನ್ನು ವಹಿಸಿಕೊಂಡರು. ಗುರುಗಳು ಮೌನದಲ್ಲಿಯೇ ಎಲ್ಲವನ್ನೂ ಸಾಧಿಸುವ ಮನೋಗುಣವನ್ನು ಹೊಂದಿದ್ದಾರೆ. ಇವರ ಅವಿರತ ಶ್ರಮದಿಂದ ಮಠವು ಕಂಡರಿಯದ ರೀತಿಯಲ್ಲಿ ಅಭಿವೃದ್ಧಿಗೊಂಡಿದೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ನಾಲ್ಕು ಗದ್ದುಗೆಗಳಿದ್ದು ಇವುಗಳನ್ನು ನವೀಕರಣಗೊಳಿಸಲಾಗಿದೆ. ಬಂಡೆ ಮಠದಲ್ಲಿ ಎರಡು ಗದ್ದುಗೆಗಳಿವೆ. ಅರಳೆಪೇಟೆಯ ವೀರಭದ್ರಸ್ವಾಮಿ ದೇವಸ್ಥಾನದ ಪಕ್ಕದಲ್ಲಿರುವ ಶ್ರೀ ಚೌಕಿಮಠವು ಈ ಮಠದ ಶಾಖಾಮಠವಾಗಿದೆ. ಇಲ್ಲಿ ಸ್ಥಾಪನೆಯಾಗಿರುವ ಗದ್ದುಗೆಗಳನ್ನು ಸ್ಮಾರಕಗಳನ್ನಾಗಿ ಉಳಿಸಲಾಗಿದೆ. ಜಾತ್ರೆಯ ಸಂದರ್ಭದಲ್ಲಿ ಮುತ್ತಿನ ಪಲ್ಲಕ್ಕಿ ಉತ್ಸವವನ್ನು ಮಠದ ವತಿಯಿಂದ ಆಚರಣೆ ಮಾಡಲಾಗುತ್ತಿದೆ. ಕರ್ತೃಗುರುಗಳ ಗದ್ದುಗೆಯನ್ನು ನವೀಕರಣಗೊಳಿಸಿ, ಅಮೃತಶಿಲೆಯಲ್ಲಿ ನಿರ್ಮಿಸಲಾಗುತ್ತಿದೆ. ಪ್ರತಿವರ್ಷ ಬಸವಜಯಂತಿಯನ್ನು ಎರಡು ದಿನಗಳ ಕಾಲ ನಡೆಸಿ, ಬಸವತತ್ತ್ವದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗುತ್ತಿದೆ. ಶಿವರಾತ್ರಿ ಮತ್ತು ಕಾರ್ತೀಕಮಾಸದ ಸಂದರ್ಭದಲ್ಲಿ ದೀಪೋತ್ಸವ ಹಾಗೂ ವಿಶೇಷ ಪೂಜೆಗಳನ್ನು ನಡೆಸಲಾಗುತ್ತಿದೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠದ ಆಸ್ತಿಯನ್ನು ವ್ಯವಸ್ಥಿತಗೊಳಿಸಿ ಒಂದು ರೂಪವನ್ನು ಕೊಟ್ಟರು. ನಂತರ ಮಠದ ಆಸ್ತಿಯನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ನೀಲಿ ನಕ್ಷೆಯನ್ನು ತಯಾರಿಸಿಕೊಂಡು, ಹಂತಹಂತವಾಗಿ ಕಾಮಗಾರಿಗಳನ್ನು ಕೈಗೊಂಡರು. ಇದರ ಫಲವೇ ಮಠದ ಕಟ್ಟಡವು ಆಧುನಿಕ ರೀತಿಯಲ್ಲಿ ನವೀಕರಣಗೊಂಡು, ಮಹಾಂತ ಪ್ರಾರ್ಥನಾ ಮಂದಿರ ನಿರ್ಮಾಣವಾಯಿತು. ತುಮಕೂರು ರಸ್ತೆಯಲ್ಲಿ ದೇವರಹೊಸಹಳ್ಳಿಯಲ್ಲಿ ವೀರಭದ್ರಸ್ವಾಮಿ ಕಲ್ಯಾಣಮಂಟಪ ಸ್ಥಾಪನೆಯಾಯಿತು. ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಶಿವಪೂಜಾನಿಷ್ಠರಾಗಿ ಇರುವಂತೆಯೇ ಕೊಡುಗೈ ದಾನಿಗಳಾಗಿದ್ದಾರೆ. ಮಠದ ಅಭಿವೃದ್ಧಿಯ ಜತೆಗೆ ಬೇರೆ ಮಠಗಳ ಅಭಿವೃದ್ಧಿಗೂ ಹೆಚ್ಚು ಒತ್ತುಕೊಟ್ಟಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಮಲ್ಲಿಕಾರ್ಜುನ ಸ್ವಾಮಿಗಳು. ಶ್ರೀ ಗುರುವಣ್ಣದೇವರ ಮಠ, ಮಾಗಡಿ ರಸ್ತೆ, ಬೆಂಗಳೂರು-೫೩.

ಗೋದೂರಯ್ಯನಮಠ

ಬೆಂಗಳೂರು ನಗರದ ಹೃದಯ ಭಾಗವಾಗಿರುವ ಗಾಂಧಿನಗರ ಮತ್ತು ಮೆಜೆಸ್ಟಿಕ್‌ವರೆಗೆ ಒಟ್ಟು ಏಳುಎಕರೆ ಹನ್ನೊಂದು ಗುಂಟೆ ವಿಸ್ತೀರ್ಣದಲ್ಲಿ ನಿರ್ಮಾಣಗೊಂಡಿದ್ದ ಶ್ರೀ ಗೋದೂರಯ್ಯನಮಠ ಅಥವಾ ಶ್ರೀ ಗೋಟ್ಟೂರಯ್ಯನಮಠ

ಹತ್ತೊಂಬತ್ತನೆಯ ಶತಮಾನದಲ್ಲಿ ಹನುಮಂತಪುರ ಗ್ರಾಮ ಠಾಣಾ ವ್ಯಾಪ್ತಿಯಲ್ಲಿ ಸ್ಥಾಪನೆಗೊಂಡಿತು. ಇದರ ಮೂಲ ಮಠವು ಬಳೆಪೇಟೆಯ ಹಿಂಭಾಗದಲ್ಲಿದ್ದ ಕಲ್ಲು ಮಠವಾಗಿತ್ತು. ಮಠದ ಕರ್ತೃಗಳಾದ ಶ್ರೀ ಗೋಟ್ಟೂರಯ್ಯ ನವರು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಧರ್ಮಾಂಬುದಿ ಕೆರೆಯ ಪೂರ್ವದಂಡೆಗೆ ಹೊಂದಿಕೊಂಡಂತೆ ಏಳುಎಕರೆ ಹನ್ನೊಂದು ಗುಂಟೆ ಜಮೀನನ್ನು ಇನಾಂ ಪಡೆದರು. ಮಠದ ಕರ್ತೃಗುರುಗಳಾದ ಶ್ರೀ ಗೋಟ್ಟೂರಯ್ಯ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಇನಾಂ ಭೂಮಿಯಲ್ಲಿ ಗದ್ದುಗೆಯನ್ನು ನಿರ್ಮಿಸಿ ಮಠವನ್ನು ಸ್ಥಾಪಿಸಲಾಯಿತು.

ಮಠದ ಪರಂಪರೆಯಲ್ಲಿ ಶ್ರೀ ಗೋಟ್ಟೂರಯ್ಯನವರು, ಶ್ರೀ ಚನ್ನವೀರ ದೇವರು, ಶ್ರೀ ಸಿದ್ಧರಾಮದೇವರು, ಶ್ರೀ ಸಿದ್ಧಲಿಂಗ ದೇವರು, ಶ್ರೀ ಅನ್ನದಾನಯ್ಯ ಸ್ವಾಮಿಗಳು ಅಧಿಕಾರವನ್ನು ನಡೆಸಿ ಲಿಂಗೈಕ್ಯರಾಗಿದ್ದಾರೆ. ಈ ಮಠವು ೧೮೮೭ರ ನಂತರ ಉತ್ತರಾಧಿಕಾರಿಗಳಿಲ್ಲದೆ ಖಾಲಿ ಉಳಿದು ಹೇಳುವವರು ಕೇಳುವವರು ಯಾರೂ ಇಲ್ಲದೆ ಅನ್ಯರ ಪಾಲಾಗಿ ಹೋಗಿದೆ.

ಆಧಾರ: ಬೆಂಗಳೂರು ನಗರದ ವೀರಶೈವ ಮಠಗಳು ಒಂದು ಸಾಂಸ್ಕೃತಿಕ ಅಧ್ಯಯನ, ಲೇಖಕರು : ಡಾ. ಬಿ.ಸಿ. ವೀರಪ್ಪ

ಜಂಗಮಮಠ

ಬೆಂಗಳೂರು ನಗರದ ಶಿವನಗರ ಬಡಾವಣೆಯಲ್ಲಿ ಸ್ಥಾಪನೆಗೊಂಡಿರುವ ಶ್ರೀ ಜಂಗಮಮಠವು ಸಿದ್ಧಗಂಗಾ ಮಠದ ಶಾಖಾಮಠವಾಗಿ ಬೆಳೆದಿದೆ. ಹಿಂದೆ ಶಿವನಹಳ್ಳಿ ಎಂದು ಹೆಸರಾಗಿದ್ದ ಗ್ರಾಮದಲ್ಲಿ ಹದಿನೆಂಟನೆಯ ಶತಮಾನದಲ್ಲಿ ಮಠವು ಸ್ಥಾಪನೆಯಾಗಿತ್ತೆಂದು ಹೇಳಲಾಗುತ್ತಿದೆ. ಈ ಮಠಕ್ಕೆ ಮೈಸೂರಿನ ಅರಸರು, ಗೌಡ ದೊರೆಗಳು ಭೂಮಿಯನ್ನು ಇನಾಂ ನೀಡಿ ಮಠವನ್ನು ಬೆಳೆಸಿದ್ದಾರೆ. ಈ ಮಠದ ಪರಂಪರೆಯಲ್ಲಿ ಶ್ರೀ ನಾಗಭೂಷಣ ಸಂಗನಬಸವಪ್ಪದೇವರು (ಕ್ರಿ.ಶ.೧೭೮೨), ಶ್ರೀ ಮಲ್ಲೇದೇವರು (ಕ್ರಿ.ಶ.೧೮೨೨), ಶ್ರೀ ಶಿವರುದ್ರ ಮರಿದೇವರು (ಕ್ರಿ.ಶ.೧೮೩೪), ಶ್ರೀ ಚನ್ನವೀರ ಸ್ವಾಮಿಗಳು (ಕ್ರಿ.ಶ.೧೯೩೮-೧೯೮೫) ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದಾರೆ. ಶ್ರೀ ಚನ್ನವೀರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಸಿದ್ಧಗಂಗಾ ಮಠದ ಶಾಖಾಮಠವಾಗಿ ಬೆಳೆದಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಡಾ. ಶಿವಕುಮಾರ ಸ್ವಾಮಿಗಳು, ಶ್ರೀ ಜಂಗಮಮಠ, ಶಿವನಗರ, ಬೆಂಗಳೂರು.

ತಿಪ್ಪಶೆಟ್ಟಿಮಠ

ಬೆಂಗಳೂರು ನಗರದ ಗಾಂಧಿನಗರ ಬಡಾವಣೆಯಲ್ಲಿ ಅಸ್ತಿತ್ವದಲ್ಲಿರುವ ಶ್ರೀ ತಿಪ್ಪಶೆಟ್ಟಿಮಠವು, ಮುರುಘಾ ಸಮಯದ ಮಠವಾಗಿ ಚಿತ್ರದುರ್ಗ ಬೃಹನ್ಮಠದ ಶಾಖಾಮಠವಾಗಿ ಬೆಳೆದಿದೆ. ಹತ್ತೊಂಬತ್ತನೆಯ ಶತಮಾನದಲ್ಲಿ ಶ್ರೀಗುರುಸಿದ್ಧ ಸ್ವಾಮಿಗಳಿಂದ ಸ್ಥಾಪನೆಯಾಗಿದೆ. ಮಠದ ಭಕ್ತರಾದ ಶ್ರೀ ತಿಪ್ಪಶೆಟ್ಟರು ಇಲ್ಲಿ ಗುರುಗಳಿಗಾಗಿ ಮಠವನ್ನು ಸ್ಥಾಪಿಸಿ, ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದರು. ಈ ಕಾರಣದಿಂದ ಶ್ರೀ ತಿಪ್ಪಶೆಟ್ಟಿಮಠ ಎಂಬ ಹೆಸರು ಬಂದಿದೆ. ಮುಮ್ಮಡಿ ಕೃಷ್ಣರಾಜ ಒಡೆಯರು ಈ ಮಠಕ್ಕೆ ಭೂದಾನವನ್ನು ನೀಡಿದ್ದಾರೆ.

ಪರಂಪರೆ:		
	೧. ಶ್ರೀ ಮ.ನಿ.ಪ್ರ. ಗುರುಸಿದ್ಧಸ್ವಾಮಿಗಳು	(ಕ್ರಿ.ಶ.ಸು.೧೮೦೦-೧೮೨೮)
	೨. ಶ್ರೀ ಮ.ನಿ.ಪ್ರ. ಇಮ್ಮಡಿ ಗುರುಸಿದ್ಧಸ್ವಾಮಿಗಳು	(ಕ್ರಿ.ಶ. ೧೮೨೮ - ೧೮೭೪)
	೩. ಶ್ರೀ ಮ.ನಿ.ಪ್ರ. ಮಹಾಂತ ದೇಶಿಕೇಂದ್ರಸ್ವಾಮಿಗಳು	(ಕ್ರಿ.ಶ. ೧೮೭೪ - ೧೯೨೦)
	೪. ಶ್ರೀ ಮ.ನಿ.ಪ್ರ. ಪುಟ್ಟನಂಜುಂಡಸ್ವಾಮಿಗಳು	(ಕ್ರಿ.ಶ. ೧೯೨೦ - ೧೯೩೧)
	೫. ಶ್ರೀ ಮ.ನಿ.ಪ್ರ. ಗುರುಸಿದ್ಧರಾಜ ದೇಶಿಕೇಂದ್ರಸ್ವಾಮಿಗಳು	(ಕ್ರಿ.ಶ. ೧೯೩೧ - ೧೯೬೦)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಮಠದ ಕರ್ತೃಗುರುಗಳ ನಂತರ ಶ್ರೀ ಇಮ್ಮಡಿ ಗುರುಸಿದ್ಧ ಸ್ವಾಮಿಗಳು ಮಠವನ್ನು ಮುನ್ನಡೆಸಿ, ತಮ್ಮ ಜೀವಿತಾವಧಿಯಲ್ಲಿಯೇ ಶ್ರೀ ಮಹಾಂತ ದೇಶಿಕೇಂದ್ರ ಸ್ವಾಮಿಗಳಿಗೆ ಅಧಿಕಾರವನ್ನು ನೀಡಿದ್ದಾರೆ. ಶ್ರೀ ಮಹಾಂತ ದೇಶಿಕೇಂದ್ರ ಸ್ವಾಮಿಗಳು ವಿದ್ವಾಂಸರಾಗಿ ವೀರಶೈವ ಕವಿ ಎಂದು ಹೆಸರು ಪಡೆದಿದ್ದಾರೆ. ರಾಜೇಶ್ವರಶತಕ, ಸಿರಿಯಾಳಚರಿತ್ರೆ, ರೇಣುಕ ಸ್ತೋತ್ರ, ಅಂಬಾಸ್ತೋತ್ರ, ಸತ್ಯಹರಿಶ್ಚಂದ್ರ ಮಹಾರಾಯನಚರಿತ್ರೆ ಇವೇ ಮುಂತಾದ ಇಪ್ಪತ್ತೇಳಕ್ಕೂ

ಹೆಚ್ಚು ಗ್ರಂಥಗಳನ್ನು ರಚಿಸಿ, ಕನ್ನಡ ಚಂಪೂ ಸಾಹಿತ್ಯ ಪ್ರಕಾರಕ್ಕೆ ಅಮೂಲ್ಯ ಕೊಡುಗೆಯನ್ನು ನೀಡಿದ್ದಾರೆ. ಇವರ ಕಾಲದಲ್ಲಿ ಶ್ರೀ ತಿಪ್ಪಶೆಟ್ಟಿಮಠವು ಪ್ರಸಿದ್ಧಿ ಪಡೆಯಿತು. ಗುರುಗಳು ೧೯೨೦ರಲ್ಲಿ ಲಿಂಗೈಕ್ಯರಾದ ಮೇಲೆ ಚಿತ್ರದುರ್ಗ ಬೃಹನ್ಮಠದ ಆದೇಶದನ್ವಯ ಶ್ರೀ ಪುಟ್ಟನಂಜುಂಡಸ್ವಾಮಿಗಳು ಅಧಿಕಾರಕ್ಕೆ ಬಂದ ಇವರು ೧೯೩೧ರಲ್ಲಿ ಲಿಂಗೈಕ್ಯರಾದರು. ನಂತರದಲ್ಲಿ ಮಠಕ್ಕೆ ಶ್ರೀ ಗುರುಸಿದ್ಧರಾಜ ದೇಶಿಕೇಂದ್ರ ಸ್ವಾಮಿಗಳು ಅಧಿಕಾರಸ್ಥರಾದರು. ಇವರು ತಮ್ಮ ಮಠದ ಪೂರ್ಣಜವಾಬ್ದಾರಿಯನ್ನು ಚಿತ್ರದುರ್ಗ ಬೃಹನ್ಮಠದ ಜಗದ್ಗುರು ಶ್ರೀ ಜಯವಿಭವ ಸ್ವಾಮಿಗಳಿಗೆ ವಹಿಸಿಕೊಟ್ಟು, ವಿಶ್ರಾಂತ ಜೀವನವನ್ನು ನಡೆಸತೊಡಗಿದರು. ಅಂದಿನಿಂದ ಶ್ರೀ ಮುರುಘಾ ಮಠದ ನೇರ ಆಡಳಿತಕ್ಕೆ ಒಳಪಟ್ಟಿತು.

ಮಠದ ಆವರಣದಲ್ಲಿರುವ ಕಲ್ಲಿನ ಮೂಲ ಕಟ್ಟಡವನ್ನು ನವೀಕರಿಸಿ ಮಠದ ಸುತ್ತ ಭವ್ಯವಾದ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಶ್ರೀ ಜಯದೇವ ಮುರುಘ ರಾಜೇಂದ್ರ ಸಮುದಾಯ ಭವನ, ಅಂತರಾಷ್ಟ್ರೀಯ ಬಸವತತ್ತ್ವ ಪ್ರಚಾರ ಕೇಂದ್ರವನ್ನು ಸ್ಥಾಪಿಸಿ ಶರಣತತ್ತ್ವವನ್ನು ಪ್ರಚಾರಗೊಳಿಸಲಾಗುತ್ತಿದೆ. ಪ್ರತಿ ತಿಂಗಳು ಎಳರಂದು ಶರಣತತ್ತ್ವ ಚಿಂತನ ಗೋಷ್ಠಿಯನ್ನು ಮುರುಘಾಮಠದ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಶರಣರ ಸಮ್ಮುಖದಲ್ಲಿ ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಶಿವಮೂರ್ತಿ ಮುರುಘ ರಾಜೇಂದ್ರ ಶರಣರು, ಶ್ರೀ ತಿಪ್ಪಶೆಟ್ಟಿಮಠ, ಗಾಂಧಿನಗರ, ಬೆಂಗಳೂರು.

ಆಧಾರ: ಬೆಂಗಳೂರು ನಗರದ ವೀರಶೈವ ಮಠಗಳು ಒಂದು ಸಾಂಸ್ಕೃತಿಕ ಅಧ್ಯಯನ, ಲೇಖಕರು : ಡಾ. ಬಿ.ಸಿ. ವೀರಪ್ಪ

ದೊಡ್ಡಮಠ

ಬೆಂಗಳೂರು ನಗರದ ಅಕ್ಕಿಪೇಟೆಯ ಮುಖ್ಯರಸ್ತೆಯಲ್ಲಿರುವ ಶ್ರೀ ದೊಡ್ಡಮಠವು ಕೆಂಪಿನ ಸಮಯದ ವಿರಕ್ತ ಪರಂಪರೆಯಲ್ಲಿ ಬೆಳೆದಿದೆ. ಹದಿನಾರನೆಯ ಶತಮಾನದಲ್ಲಿ ಕೆಳದಿಯ ಅರಸನಾಗಿದ್ದ ದೊಡ್ಡ ಸಂಕಣ್ಣ ನಾಯಕನು ಈ ಮಠವನ್ನು ಕಟ್ಟಿಸಿಕೊಟ್ಟಿದ್ದರಿಂದ 'ದೊಡ್ಡಸಂಕಣ್ಣನಮಠ' ಎಂಬ ಹೆಸರು ಬಂದಿತು. ಕಾಲಾನಂತರ ಸಂಕಣ್ಣನ ಎಂಬುದು ಬಿಟ್ಟುಹೋಗಿ'ದೊಡ್ಡಮಠ'ವೆಂದು ರೂಢಿಗತವಾಗಿ ಕರೆಯಲ್ಪಟ್ಟಿತು.

ಪರಂಪರೆ:	೧. ಶ್ರೀ ಮ.ನಿ.ಪ್ರ. ಹೊಸಕೋಟೆಯ ಮಹಾಂತಸ್ವಾಮಿಗಳು	(ಕ್ರಿ.ಶ.ಸು.೧೭೨೫-೧೭೬೧)
	೨. ಶ್ರೀ ಮ.ನಿ.ಪ್ರ. ಸಂಗನಬಸವಸ್ವಾಮಿಗಳು	(ಕ್ರಿ.ಶ.ಸು.೧೭೫೦-೧೭೬೫)
	೩. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು	(ಕ್ರಿ.ಶ.ಸು.೧೭೬೬-೧೮೨೫)
	೪. ಶ್ರೀ ಮ.ನಿ.ಪ್ರ. ತೋಟದಸ್ವಾಮಿಗಳು	(ಕ್ರಿ.ಶ.ಸು.೧೮೧೦-೧೮೪೯)
	೫. ಶ್ರೀ ಮ.ನಿ.ಪ್ರ. ಚನ್ನವೀರಸ್ವಾಮಿಗಳು	(ಕ್ರಿ.ಶ. ೧೮೪೯ - ೧೯೧೮)
	೬. ಶ್ರೀ ಮ.ನಿ.ಪ್ರ. ಇಮ್ಮಡಿ ಬಸವಲಿಂಗಸ್ವಾಮಿಗಳು	(ಕ್ರಿ.ಶ. ೧೮೭೭ - ೧೯೦೪)
	೭. ಶ್ರೀ ಮ.ನಿ.ಪ್ರ. ಇಮ್ಮಡಿ ಚನ್ನವೀರಸ್ವಾಮಿಗಳು	(ಕ್ರಿ.ಶ. ೧೯೩೮ - ೧೯೯೯)
	೮. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು	(ಕ್ರಿ.ಶ. ೧೯೯೯ -)

ಈ ರೀತಿ ಮಠದ ಪರಂಪರೆ ಬೆಳೆದಿದೆ. ಕರ್ತೃಗುರುಗಳಾದ ಹೊಸಕೋಟೆಯ ಶ್ರೀ ಮಹಾಂತ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಶ್ರೀ ಸಂಗನಬಸವ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಬೆಳೆಸಿದರು. ೧೮೨೨ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಮಠದ ಪರಂಪರೆಯ ನಾಲ್ಕನೆಯ ಗುರುಗಳಾದ ಶ್ರೀ ತೋಟದಸ್ವಾಮಿಗಳಿಗೆ ಭೂದಾನವನ್ನು ನೀಡಿ ನೆರವಾಗಿದ್ದಾರೆ. ಇವರ ನಂತರ ಅಧಿಕಾರಕ್ಕೆ ಬಂದ ಶ್ರೀ ಚನ್ನವೀರ ಸ್ವಾಮಿಗಳು ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಿದರು. ನಂತರ ಶ್ರೀ ಬಸವಲಿಂಗ ದೇವರನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡು ಶ್ರೀ ಇಮ್ಮಡಿ ಬಸವಲಿಂಗಸ್ವಾಮಿಗಳೆಂದು ಅಭಿಧಾನ ಮಾಡಿ ೧೮೭೭ರಲ್ಲಿ ಅಧಿಕಾರಕ್ಕೆ ತಂದರು. ಇವರ ನಂತರ ಶ್ರೀಇಮ್ಮಡಿ ಚನ್ನವೀರ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಬೆಳೆಸಿದರು. ಈಗ ಶ್ರೀ ಬಸವಲಿಂಗಸ್ವಾಮಿಗಳು ೧೯೯ರಲ್ಲಿ ಅಧಿಕಾರವನ್ನು ವಹಿಸಿಕೊಂಡಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಬಸವಲಿಂಗ ಸ್ವಾಮಿಗಳು, ಶ್ರೀ ದೊಡ್ಡಮಠ, ಅಕ್ಕಿಪೇಟೆ, ಮುಖ್ಯರಸ್ತೆ, ಬೆಂಗಳೂರು.

ಆಧಾರ: ಬೆಂಗಳೂರು ನಗರದ ವೀರಶೈವ ಮಠಗಳು ಒಂದು ಸಾಂಸ್ಕೃತಿಕ ಅಧ್ಯಯನ, ಲೇಖಕರು : ಡಾ. ಬಿ.ಸಿ. ವೀರಪ್ಪ

ನರಗುಂದದೇವರಮಠ

ಬೆಂಗಳೂರು ನಗರದ ಅರಳೆಪೇಟೆಯಲ್ಲಿ ಶ್ರೀ ನರಗುಂದದೇವರ ಮಠವು ಸ್ಥಾಪನೆಯಾಗಿದೆ. ನರಗುಂದದಿಂದ ಹತ್ತಿ ವ್ಯಾಪಾರಕ್ಕೆಂದು ಬರುತ್ತಿದ್ದ ವ್ಯಾಪಾರಿಗಳು ಇಲ್ಲಿ ಇರುತ್ತಿದ್ದ ಸಮಯದಲ್ಲಿ ಪಾದೋದಕ ಪಡೆಯಲು ನರಗುಂದದಿಂದ ತಮ್ಮ ಜತೆಯಲ್ಲಿ ಗುರುಗಳನ್ನು ಕರೆತಂದು, ಇಲ್ಲಿ ಮಠ ಸ್ಥಾಪನೆ ಮಾಡಿ ನೆಲೆಗೊಳ್ಳುವಂತೆ ಮಾಡಿದ್ದರು. ನರಗುಂದದಿಂದ ಬಂದು ಮಠ ಸ್ಥಾಪನೆ ಮಾಡಿದ ಕಾರಣ ಈ ಮಠಕ್ಕೆ 'ಶ್ರೀ ನರಗುಂದದೇವರಮಠ' ಎಂಬ ಹೆಸರು ಬಂದಿದೆ.

ಶ್ರೀ ತೋಟದ ದೇವರಮಠ ಮತ್ತು ಶ್ರೀ ನರಗುಂದ ದೇವರಮಠಗಳು ಒಂದೇ ಆಡಳಿತಕ್ಕೆ ಒಳಪಟ್ಟಿದ್ದವು. ವಿರಕ್ತ ಸಂಪ್ರದಾಯದ ಚೀಲಾಳಸಮಯದ ಈ ಮಠಗಳು ಶ್ರೀ ತೋಟದ ಸ್ವಾಮಿಗಳಿಂದ ಪ್ರಾರಂಭಗೊಂಡಿವೆ. ಮಠದ ಪರಂಪರೆಯಲ್ಲಿ ಹತ್ತು ಜನ ಗುರುಗಳು ಅಧಿಕಾರವನ್ನು ನಡೆಸಿದ್ದಾರೆಂದು ಹೇಳಲಾಗುತ್ತಿದೆ.

ಪರಂಪರೆ:	೧. ಶ್ರೀ ಮ.ನಿ.ಪ್ರ. ತೋಟದಸ್ವಾಮಿಗಳು	(ಕ್ರಿ.ಶ.ಸು.೧೭೫೦ -)
	೨. ಶ್ರೀ ಮ.ನಿ.ಪ್ರ. ಚನ್ನಬಸವಸ್ವಾಮಿಗಳು	(ಕ್ರಿ.ಶ.ಸು.೧೭೮೦ -)
	೩. ಶ್ರೀ ಮ.ನಿ.ಪ್ರ. ಇಮ್ಮಡಿ ತೋಟದಸ್ವಾಮಿಗಳು	(ಕ್ರಿ.ಶ.ಸು.೧೮೦೦-೧೮೩೨)
	೪. ಶ್ರೀ ಮ.ನಿ.ಪ್ರ. ಮುಮ್ಮಡಿ ತೋಟದಸ್ವಾಮಿಗಳು	(ಕ್ರಿ.ಶ. ೧೮೩೩ - ೧೮೪೫)
	೫. ಶ್ರೀ ಮ.ನಿ.ಪ್ರ. ಚನ್ನಮಲ್ಲಸ್ವಾಮಿಗಳು	(ಕ್ರಿ.ಶ. ೧೮೪೫ - ೧೮೫೫)
	೬. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು	(ಕ್ರಿ.ಶ. ೧೮೫೫ - ೧೮೮೧)
	೭. ಶ್ರೀ ಮ.ನಿ.ಪ್ರ. ಶಿವಯೋಗಿ ಬಸಪ್ಪಸ್ವಾಮಿಗಳು	(ಕ್ರಿ.ಶ. ೧೮೭೭ - ೧೯೦೮)
	೮. ಶ್ರೀ ಮ.ನಿ.ಪ್ರ. ಕರಿಬಸವಸ್ವಾಮಿಗಳು	(ಕ್ರಿ.ಶ. ೧೯೦೪ - ೧೯೨೫)
	೯. ಶ್ರೀ ಮ.ನಿ.ಪ್ರ. ಇಮ್ಮಡಿ ಬಸಪ್ಪಸ್ವಾಮಿಗಳು	(ಕ್ರಿ.ಶ. ೧೯೫೦ - ೧೯೬೩)
	೧೦. ಶ್ರೀ ಮ.ನಿ.ಪ್ರ. ಇಮ್ಮಡಿ ಕರಿಬಸವಸ್ವಾಮಿಗಳು	(ಕ್ರಿ.ಶ. ೧೯೬೯ - ೧೯೯೮)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಈ ಹಿಂದೆ ಅಧಿಕಾರ ವಹಿಸಿಕೊಂಡಿದ್ದ ಶ್ರೀ ಇಮ್ಮಡಿ ಕರಿಬಸವ ಸ್ವಾಮಿಗಳು ೧೯೯೮ರಲ್ಲಿ ಲಿಂಗೈಕ್ಯರಾದ ಮೇಲೆ ಉತ್ತರಾಧಿಕಾರಿಗಳಿಲ್ಲದೆ ಮಠವು ಜೀರ್ಣಾವಸ್ಥೆಗೆ ಬಂದಿದೆ.

ವಿಳಾಸ: ಶ್ರೀ ನರಗುಂದ ದೇವರಮಠ, ಅರಳೆಪೇಟೆ, ಬೆಂಗಳೂರು.

ನಿಜಗುಣ ಜಂಗಮಮಠ

ಬೆಂಗಳೂರು ನಗರದ ಗವಿಪುರ ಬಡಾವಣೆಯಲ್ಲಿ ಶ್ರೀ ನಿಜಗುಣ ಜಂಗಮಮಠವು ಅಸ್ತಿತ್ವದಲ್ಲಿದೆ. ಪುರಾತನ ಕಾಲದಲ್ಲಿ ಸ್ಥಾಪನೆಗೊಂಡು ಕಾಲಾನಂತರ ಜೀರ್ಣಾವಸ್ಥೆ ತಲುಪಿ ನಿಜಗುಣ ಸ್ವಾಮಿಗಳಿಂದ ಅಭಿವೃದ್ಧಿಗೆ ಬಂದಿತು. ಇದರಿಂದ ಶ್ರೀ ನಿಜಗುಣ ಜಂಗಮ ಮಠ ಎಂಬ ಹೆಸರು ಪಡೆದು, ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳನ್ನು ಮಾಡುವ ಮೂಲಕ ಹೆಚ್ಚು ಪ್ರಸಿದ್ಧಿಗೆ ಬಂದಿದೆ. ಶ್ರೀ ನಿಜಗುಣ ಸ್ವಾಮಿಗಳು ಚಿತ್ರದುರ್ಗ ಜಿಲ್ಲೆಯ ಜಗಳೂರು ತಾಲ್ಲೂಕಿನ ಮೇದನಕೆರೆಯ ರುದ್ರಯ್ಯ ಮತ್ತು ರಾಚಮ್ಮನವರ ಪುತ್ರರಾಗಿ ೧೯೧೬ರಲ್ಲಿ ಜನಿಸಿದರು. ಗುರುಗಳು ಬಾಲ್ಯಾವಸ್ಥೆಯಲ್ಲಿರುವಾಗಲೇ ಚಿತ್ರದುರ್ಗದ ಬೃಹನ್ಮಠದ ಶ್ರೀ ಜಯದೇವ ಮುರುಘರಾಜೇಂದ್ರ ಸ್ವಾಮಿಗಳು ಕೃಪಾದೃಷ್ಟಿಗೆ ಒಳಗಾದರು. ನಂತರ ಅಥಣಿಯ ಗಚ್ಚಿನಮಠದ ಶ್ರೀ ಸಿದ್ಧಲಿಂಗ ಸ್ವಾಮಿಗಳ ಮಾರ್ಗದರ್ಶನದಲ್ಲಿ ಸದಾಚಾರ ಸಂಪನ್ನತೆಯ ಮೂರ್ತಿಯಾಗಿ ಬೆಳೆದರು. ಗುರುಗಳು ಪ್ರೌಢಾವಸ್ಥೆಗೆ ಬಂದಮೇಲೆ ಚಿತ್ರದುರ್ಗ ಬೃಹನ್ಮಠದ ಆಡಳಿತದಲ್ಲಿ ಕೆಲವು ವಹಿವಾಟುಗಳನ್ನು ನಡೆಸಿ ಜಗದ್ಗುರುಗಳ ಕೃಪೆಗೆ ಪಾತ್ರರಾದರು. ನಂತರ ಶ್ರೀ ಸರ್ಪಭೂಷಣಮಠದ ಪರಂಪರೆಯ ಆರನೆಯ ಗುರುಗಳಾಗಿದ್ದ ಶ್ರೀ ಮಹಾದೇವ ಸ್ವಾಮಿಗಳ ಕರಕಮಲ ಸಂಜಾತರಾಗಿ ಬೆಳೆದವರು.

ಗವಿಪುರ ಬಡಾವಣೆಯಲ್ಲಿ ಪಾಳು ಬಿದ್ದಿದ್ದ ಜಂಗಮ ಮಠಕ್ಕೆ ಶ್ರೀ ನಿಜಗುಣಸ್ವಾಮಿಗಳು ೧೯೩೮ರಲ್ಲಿ ಆಗಮಿಸಿ

ಮಠವನ್ನು ಅಭಿವೃದ್ಧಿಪಡಿಸಲು ಮುಂದಾದರು. ಮಠದ ಮೂಲ ಕರ್ತೃ ಶ್ರೀ ಸಿದ್ಧಲಿಂಗೇಶ್ವರರ ಗದ್ದುಗೆಯನ್ನು ಜೀರ್ಣಾಭಿವೃದ್ಧಿಗೊಳಿಸಿದರು. ಮಠದ ಆಸ್ತಿಯನ್ನು ಕಾನೂನುಬದ್ಧಗೊಳಿಸಿದ್ದಲ್ಲದೆ ಆಸ್ತಿಯನ್ನು ವಿಸ್ತರಿಸಿ ಆದಾಯಕ್ಕೆ ಮೂಲಮಾಡಿಕೊಂಡು ವೀರಶೈವ ಧರ್ಮವನ್ನು ಪ್ರಚಾರಪಡಿಸಲು ಯೋಜನೆಗಳನ್ನು ಹಮ್ಮಿಕೊಂಡರು. ಇದರ ಫಲವಾಗಿ ೧೯೯೦ರಲ್ಲಿ 'ಶಿವಯೋಗ ಸಂಪದ' ಎಂಬ ವಿಶೇಷ ಸಮಾವೇಶ ನಡೆಯಿತು. ಆಗ ಶ್ರೀ ನಿಜಗುಣ ಶಿವಯೋಗಿಗಳು, ಶ್ರೀ ಸಿದ್ಧಲಿಂಗ ಯತಿಗಳು, ಶ್ರೀ ಷಣ್ಮುಖ ಶಿವಯೋಗಿಗಳು, ಶ್ರೀ ಮುರುಘೇಂದ್ರ ಶಿವಯೋಗಿಗಳು, ಶ್ರೀ ಬಾಲಲೀಲ ಮಹಾಂತ ಶಿವಯೋಗಿಗಳು, ಶ್ರೀ ಸರ್ಪಭೂಷಣ ಶಿವಯೋಗಿಗಳು ಇನ್ನೂ ಮೊದಲಾದ ಸಾಧಕರ ಜೀವನ ಹಾಗೂ ಸಾಧನೆಗಳನ್ನು ಕುರಿತು ಚಿಂತನೆ ನಡೆಸಲಾಯಿತು. ನಂತರ ೧೯೯೧ರಲ್ಲಿ 'ಅನುಭಾವ ಸಪ್ತಾಹ'ವನ್ನು ಏರ್ಪಡಿಸಲಾಗಿತ್ತು. ಆ ಸಂದರ್ಭದಲ್ಲಿ ವೀರಶೈವಧರ್ಮಗ್ರಂಥ ನಿರ್ಣಯದ ವಿಚಾರವಾಗಿ ವಿಚಾರಕಮ್ಮಟವನ್ನು ಏರ್ಪಡಿಸಲಾಗಿತ್ತು. ಈ ಕಮ್ಮಟದಲ್ಲಿ ಡಾ. ಸಿದ್ಧಯ್ಯ ಪುರಾಣಿಕ, ಡಾ.ತಿಪ್ಪೇರುದ್ರಸ್ವಾಮಿ, ಪಂಡಿತ ಚನ್ನಪ್ಪ ಎರೇಸೀಮೆ, ಗೊ.ರು.ಚನ್ನಬಸಪ್ಪ, ಸಾ.ಶಿ.ಮರುಳಯ್ಯ, ಪ್ರೊ.ಬಿ. ವಿರೂಪಾಕ್ಷಪ್ಪ, ಡಾ. ಸಾ.ಶಿ.ಮರುಳಯ್ಯ ಮೊದಲಾದವರು ಪಾಲ್ಗೊಂಡು ವಿಚಾರಮಂಥನವನ್ನು ಮಾಡಿದ್ದರು. ೧೯೯೨ರಲ್ಲಿ ಪ್ರವಚನ ಸಂಪದವನ್ನು ಏರ್ಪಡಿಸಿ ಹತ್ತುದಿನಗಳ ಕಾಲ ಪ್ರತಿದಿನ ಸಂಜೆ ಪ್ರವಚನವನ್ನು ನಡೆಸಲಾಗಿದೆ. ೧೯೯೫ರಲ್ಲಿ ಶ್ರಾವಣಮಾಸದ ಒಂದು ತಿಂಗಳ ಕಾಲ ಪುರಾಣ ಪ್ರವಚನವನ್ನು ಏರ್ಪಡಿಸಿ ವೀರಶೈವಧರ್ಮದ ಪ್ರಚಾರವನ್ನು ಕೈಗೊಂಡಿದ್ದರು. ಈ ರೀತಿ ಹಿರಿಯ ಗುರುಗಳು ಅನೇಕ ಕಾರ್ಯಕ್ರಮಗಳನ್ನು ಮಾಡುವ ಮೂಲಕ ಹೆಸರು ಗಳಿಸಿದ್ದರು. ಇವರು ಲಿಂಗೈಕ್ಯರಾದ ಮೇಲೆ ಶ್ರೀಇಮ್ಮಡಿ ನಿಜಗುಣ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಬೆಳೆಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಇಮ್ಮಡಿ ನಿಜಗುಣ ಸ್ವಾಮಿಗಳು, ಶ್ರೀ ನಿಜಗುಣ ಜಂಗಮಮಠ, ಗವಿಪುರಂ, ಬೆಂಗಳೂರು.

ಬೇಲಿಮಠ

ಬೆಂಗಳೂರು ನಗರದ ಬಿನ್ನಿಪೇಟೆಯಲ್ಲಿ ಅಸ್ತಿತ್ವದಲ್ಲಿರುವ ಶ್ರೀ ಬೇಲಿಮಠವು, ಕೆಂಪಿನ ಸಮಯದ ವಿರಕ್ತಪರಂಪರೆಯ ಮಠವಾಗಿ ಬೆಳೆದಿದೆ. ಬೆಂಗಳೂರು ನಗರದ ರಕ್ಷಣೆಗಾಗಿ ನಿರ್ಮಿಸಿದ್ದ ಕೋಟೆಯ ಪಶ್ಚಿಮಭಾಗದಲ್ಲಿ ಮಠವು ಸ್ಥಾಪನೆಯಾಗಿತ್ತು. ಕೋಟೆಯ ರಕ್ಷಣೆಗೆಂದು ನಿರ್ಮಿಸಲಾಗಿದ್ದ ಸೀಗೆಬೇಲಿಗೆ ಮಠವು ಹೊಂದಿಕೊಂಡಿತ್ತು. ಇದರಿಂದ ' ಸೀಗೆಬೇಲಿಮಠ' ಎಂದು ಪ್ರಸಿದ್ಧಿ ಪಡೆದಿತ್ತು. ಕಾಲಾನಂತರ ಸೀಗೆ ಎಂಬುದು ಬಿಟ್ಟು ಹೋಗಿ ' ಬೇಲಿಮಠ' ಎಂಬುದು ರೂಢಿಗತವಾಗಿ ಉಳಿದುಕೊಂಡಿದೆ. ಹದಿನೆಂಟನೆಯ ಶತಮಾನದಲ್ಲಿ ಸ್ಥಾಪನೆಗೊಂಡ ಈ ಮಠವು ೧೭೪೫ರವರೆಗೆ ಅಸ್ತಿತ್ವದಲ್ಲಿತ್ತು ಎಂದು ಹೇಳಲಾಗುತ್ತಿದೆ.

ಮಠ ಸ್ಥಾಪನೆ: ಕೆಂಪಿನ ಸಮಯದ ಮೂಲ ಕರ್ತೃಗಳಾದ ಶ್ರೀ ಕೆಂಪಿನಪ್ಪನವರು ಹೊಸಕೋಟೆಯ ಶ್ರೀ ಮಹಾಂತ ಸ್ವಾಮಿಗಳೇ ಆಗಿದ್ದಾರೆಂದು ವಿದ್ವಾಂಸರು ಅಭಿಪ್ರಾಯಿಸುತ್ತಾರೆ. ಹೊಸಕೋಟೆಯ ಶ್ರೀ ಮಹಾಂತ ಸ್ವಾಮಿಗಳು ಕಲ್ಯಾಣ ನಗರದ ಹುಮನಾಬಾದ್‌ನಲ್ಲಿ ಬಸವತೀರ್ಥಮಠ ಮತ್ತು ಹುಲಕುಂಠಿಮಠಗಳನ್ನು ಸ್ಥಾಪಿಸಿ, ಲೋಕಸಂಚಾರ ಕೈಗೊಂಡು ಬೆಂಗಳೂರಿಗೆ ಆಗಮಿಸಿ ಬೇಲಿಮಠವನ್ನು ಸ್ಥಾಪಿಸಿರಬಹುದೆಂದು ಹೇಳಲಾಗುತ್ತದೆ. ಇದಕ್ಕೆ ಪೂರಕವೆಂಬಂತೆ ಬಸವತೀರ್ಥ ಮತ್ತು ಹುಲಕುಂಠಿಯಲ್ಲಿ ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿವೆ. ಬೇಲಿಮಠದ ದಾಖಲೆಗಳಲ್ಲಿ ಶ್ರೀ ಬಸವತೀರ್ಥಮಠದ ಪ್ರಸ್ತಾಪವನ್ನು ವಿದ್ವಾಂಸರು ಗಮನಿಸಿದ್ದಾರೆ. ಈ ಕಾರಣದಿಂದ ಹದಿನೆಂಟನೆಯ ಶತಮಾನದಲ್ಲಿ ಕೆಂಪಿನ ಸಮಯದ ಬೇಲಿ ಮಠವು ಸ್ಥಾಪನೆಗೊಂಡಿದೆ ಎಂದು ಹೇಳಲಾಗುತ್ತದೆ. ಶ್ರೀ ಬೇಲಿಮಠಕ್ಕೂ ಮತ್ತು ಶ್ರೀ ದೊಡ್ಡಮಠಕ್ಕೂ ನೇರ ಸಂಬಂಧವಿದ್ದು, ನಂತರ ಆಡಳಿತಾತ್ಮಕ ಸಂಬಂಧ ಬೇರ್ಪಟ್ಟಿತ್ತೆಂದು ಹೇಳಲಾಗುತ್ತದೆ.

ಪರಂಪರೆ:

೧.	ಶ್ರೀ ಮ.ನಿ.ಪ್ರ. ಹೊಸಕೋಟೆ ಮಹಾಂತಸ್ವಾಮಿಗಳು	(ಕ್ರಿ.ಶ.ಸು.೧೭೨೫-೧೭೬೧)
೨.	ಶ್ರೀ ಮ.ನಿ.ಪ್ರ. ಸಂಗನಬಸವಸ್ವಾಮಿಗಳು	(ಕ್ರಿ.ಶ.ಸು.೧೭೫೦-೧೭೭೬)
೩.	ಶ್ರೀ ಮ.ನಿ.ಪ್ರ. ಬಸವಲಿಂಗ (ಮರಿಸಿದ್ಧಲಿಂಗ)ಸ್ವಾಮಿಗಳು	(ಕ್ರಿ.ಶ.ಸು.೧೭೭೬-೧೮೨೫)
೪.	ಶ್ರೀ ಮ.ನಿ.ಪ್ರ. ಚನ್ನವೀರಸ್ವಾಮಿಗಳು	(ಕ್ರಿ.ಶ.ಸು.೧೮೦೦ -)
೫.	ಶ್ರೀ ಮ.ನಿ.ಪ್ರ. ಕೆಂಪುನಂಜೇಸ್ವಾಮಿಗಳು	(ಕ್ರಿ.ಶ. ೧೮೧೮ - ೧೮೪೩)

೬. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು (ಕ್ರಿ.ಶ. ೧೮೨೫ - ೧೮೯೯)
೭. ಶ್ರೀ ಮ.ನಿ.ಪ್ರ. ರುದ್ರಸ್ವಾಮಿಗಳು (ಕ್ರಿ.ಶ. ೧೮೫೮ - ೧೮೯೯)
೮. ಶ್ರೀ ಮ.ನಿ.ಪ್ರ. ಶಿವರುದ್ರಸ್ವಾಮಿಗಳು (ಕ್ರಿ.ಶ. ೧೯೯೯ - ೧೯೪೧)
೯. ಶ್ರೀ ಮ.ನಿ.ಪ್ರ. ಇಮ್ಮಡಿ ಸಿದ್ಧಲಿಂಗಸ್ವಾಮಿಗಳು (ಕ್ರಿ.ಶ. ೧೯೨೪ - ೧೯೬೫)
೧೦. ಶ್ರೀ ಮ.ನಿ.ಪ್ರ. ಇಮ್ಮಡಿ ಶಿವರುದ್ರಸ್ವಾಮಿಗಳು (ಕ್ರಿ.ಶ. ೧೯೬೫ -)

ಈ ರೀತಿ ಮಠದ ಪರಂಪರೆ ಬೆಳೆದಿದೆ. ಮಠದ ಕರ್ತೃಗುರುಗಳಾದ ಶ್ರೀ ಹೊಸಕೋಟೆ ಮಹಾಂತ ಸ್ವಾಮಿಗಳು ಬೆಂಗಳೂರಿನಲ್ಲಿ ಮಠವನ್ನು ಸ್ಥಾಪಿಸಿ ವೀರಶೈವಧರ್ಮವು ಬೆಳೆಯುವಂತೆ ಮಾಡಿದರು. ಶ್ರೀ ಬೇಲಿಮಠದಲ್ಲಿ ದೊರೆತ ಶಾಸನಗಳು ಹಾಗೂ ಪತ್ರಗಳನ್ನು ಆಧರಿಸಿ, ಬೇಲಿಮಠವು ವಿರಕ್ತವರ್ಗದ ಐದು ಪ್ರಮುಖ ಸಮಯ ಭೇದಗಳಲ್ಲಿ ಒಂದಾದ ಕೆಂಪಿನ ಸಮಯದ ಮೂಲಮಠವೆಂದು ಹೇಳಲಾಗುತ್ತಿದೆ. ಈ ಮಠದ ಕರ್ತೃ ಗುರುಗಳಾದ ಶ್ರೀ ಹೊಸಕೋಟೆಯ ಶ್ರೀ ಮಹಾಂತ ಸ್ವಾಮಿಗಳ ಗದ್ದುಗೆಯು ದೊಡ್ಡಮಠದಲ್ಲಿಯೇ ಸ್ಥಾಪನೆಯಾಗಿದೆ.

ಚರಮೂರ್ತಿಗಳಾಗಿದ್ದ ಶ್ರೀ ಹೊಸಕೋಟೆಯ ಶ್ರೀ ಮಹಾಂತ ಸ್ವಾಮಿಗಳು ನಾಡಿನುದ್ದಕ್ಕೂ ಸಂಚರಿಸಿ ಅನೇಕ ಮಠಗಳನ್ನು ಸ್ಥಾಪನೆ ಮಾಡಿ ವೀರಶೈವಧರ್ಮ ಬೆಳೆಯುವಂತೆ ಮಾಡಿದ್ದಾರೆ. ನೆಲಮಂಗಲದ ಶ್ರೀ ಸಂಗನಬಸವ ಸ್ವಾಮಿಗಳು, ಪುಂಗನೂರಿನ ಶ್ರೀ ಪ್ರಭುಸ್ವಾಮಿಗಳು, ಹುಲಕುಂಠಿಯ ಶ್ರೀ ಶಾಂತಲಿಂಗ ಸ್ವಾಮಿಗಳು, ಬೆಂಗಳೂರಿನ ಶ್ರೀ ಮರಿಸಿದ್ಧಲಿಂಗ ಸ್ವಾಮಿಗಳು ಇನ್ನೂ ಮುಂತಾದ ಅಸಂಖ್ಯಾತ ಜಂಗಮ ಮೂರ್ತಿಗಳು ಇವರ ಅನುಯಾಯಿಗಳಾಗಿ ಶಿಷ್ಯರಾಗಿದ್ದರು. ಬೆಂಗಳೂರಿನ ಶ್ರೀ ದೊಡ್ಡಮಠ, ಪುಂಗನೂರಿನ ಶ್ರೀ ದೊಡ್ಡಮಠ, ಹೊಸಕೋಟೆಯ ಶ್ರೀ ದೊಡ್ಡಮಠ, ನೆಲಮಂಗಲದ ಶ್ರೀ ಹೊಸಮಠ ಇವೇ ಮೊದಲಾದ ಮಠಗಳು ಹೊಸಕೋಟೆಯ ಶ್ರೀ ಮಹಾಂತ ಸ್ವಾಮಿಗಳ ಕಾಲದಲ್ಲಿ (ಕ್ರಿ.ಶ.೧೭೨೦-೧೭೬೧) ಸ್ಥಾಪನೆಯಾಗಿವೆ ಎಂದು ಡಾ. ವೀರಣ್ಣನವರ ಬೆಂಗಳೂರು ನಗರದ ವೀರಶೈವ ಮಠಗಳು ಒಂದು ಸಾಂಸ್ಕೃತಿಕ ಅಧ್ಯಯನ (ಪುಟಸಂಖ್ಯೆ ೧೩೦)ದಲ್ಲಿ ಉಲ್ಲೇಖಿತವಾಗಿದೆ. ಈ ರೀತಿ ಸ್ಥಾಪನೆಗೊಂಡ ಮಠಗಳಿಗೆ ತಮ್ಮ ಶಿಷ್ಯರನ್ನು ನೇಮಿಸಿದರು. ಬೆಂಗಳೂರಿನ ದೊಡ್ಡಮಠವನ್ನು ೧೭೨೫ರ ಸುಮಾರಿನಲ್ಲಿ ಸ್ಥಾಪಿಸಿದ್ದರು. ಇವರ ನಂತರ ಮುಖ್ಯ ಅಧಿಕಾರವನ್ನು ತಮ್ಮ ಆಪ್ತ ಶಿಷ್ಯ ಶ್ರೀ ಸಂಗನಬಸವ ಸ್ವಾಮಿಗಳಿಗೆ ವಹಿಸಿಕೊಟ್ಟಿದ್ದಾರೆ.

ಶ್ರೀ ಸಂಗನಬಸವ ಸ್ವಾಮಿಗಳು ತಮ್ಮ ಪ್ರೌಢಿಮೆಯಿಂದ ಶರಣತತ್ತ್ವವನ್ನು ಪ್ರಚಾರಪಡಿಸಿ ಬೆಳೆಸಿದರು. ಗುರುಗಳು ತಮ್ಮ ವೃದ್ಧಾಪ್ಯದಲ್ಲಿ ಬೇಲಿಮಠದ ಧಾರ್ಮಿಕ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದ ವಿದ್ವಾನ್ ಪಂಡಿತರಾದ ಶ್ರೀಬಸವ ಲಿಂಗ ಅಥವಾ ಶ್ರೀ ಮರಿಸಿದ್ಧಲಿಂಗ ಸ್ವಾಮಿಗಳನ್ನು ಅಧಿಕಾರಕ್ಕೆ ತಂದರು. ಸ್ವಯಂ ವೀರಶೈವ ಕವಿಗಳಾಗಿದ್ದ ಶ್ರೀ ಮರಿಸಿದ್ಧಲಿಂಗ ಸ್ವಾಮಿಗಳು ಮಾಲಾಟೀಕೆ, ಏಕೋತ್ತರ ಶತಸ್ಥಲವ್ಯಾಖ್ಯಾನ, ಮಹಾಂತಿನತಾರಾವಳಿ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಐವತ್ತು ವರ್ಷಗಳ ಸುದೀರ್ಘ ಆಡಳಿತವನ್ನು ನಡೆಸಿ, ತಮ್ಮ ಪಾಂಡಿತ್ಯದಿಂದ ವೀರಶೈವಧರ್ಮವನ್ನು ಬೆಳೆಸಿ ಹೆಚ್ಚು ಪ್ರಚಾರಕ್ಕೆ ತಂದರು. ಇವರ ನಂತರ ಮಲ್ಲರಬಾಣವಾಡಿ ಮಠದ ಶ್ರೀ ಚನ್ನವೀರ ಸ್ವಾಮಿಗಳು ಅಧಿಕಾರಕ್ಕೆ ಬಂದರು. ಇವರ ನಂತರ ಚಿಕ್ಕಮಗಳೂರು ಜಿಲ್ಲೆಯ (ಮುಳ್ಳವಳ್ಳಿಮಠದ) ಶ್ರೀ ಶಾಂತಲಿಂಗ ಸ್ವಾಮಿಗಳ ಶಿಷ್ಯರಾಗಿದ್ದ ಶ್ರೀ ಕೆಂಪನಂಜೆ ಸ್ವಾಮಿಗಳು ಕ್ರಿ.ಶ.೧೮೧೮ರಲ್ಲಿ ಅಧಿಕಾರಕ್ಕೆ ಬಂದರು. ಇವರು ಬೇಲಿಮಠದ ಇತಿಹಾಸದಲ್ಲಿ ಪ್ರಮುಖರಾಗಿದ್ದಾರೆ. ಗುರುಗಳು ಮೈಸೂರು ಮುಮ್ಮಡಿ ಕೃಷ್ಣರಾಜ ಒಡೆಯರ ನಿಕಟ ಸಂಪರ್ಕವನ್ನು ಪಡೆದಿದ್ದರು. ಇವರ ಕಾಲದಲ್ಲಿ ಮೈಸೂರು ಅರಸರಿಂದ ಇನಾಂ ಭೂಮಿ ದೊರೆತು ಮಠವು ಶ್ರೀಮಂತಗೊಂಡಿತು. ಇವರು ಶ್ರೀ ಸಿದ್ಧಲಿಂಗ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡು ಅಧಿಕಾರ ನೀಡಿದರು.

ಶ್ರೀ ಸಿದ್ಧಲಿಂಗ ಸ್ವಾಮಿಗಳು ಸುದೀರ್ಘ ಆಡಳಿತವನ್ನು ನಡೆಸಿ ಶ್ರೀ ಕೆಂಪನಂಜೆ ಸ್ವಾಮಿಗಳು ಮಠಕ್ಕೆ ತಂದುಕೊಟ್ಟಿದ್ದ ಘನತೆ ಮತ್ತು ಗಾಂಭೀರ್ಯಗಳನ್ನು ಮುಂದುವರೆಸಿಕೊಂಡು ಬಂದರು. ಈ ವೇಳೆಗಾಗಲೇ ಮಹಾರಾಜರ ಆಳ್ವಿಕೆ ಮೊಟುಕುಗೊಂಡು ಆಂಗ್ಲರ ಆಳ್ವಿಕೆ ಪ್ರಾರಂಭಗೊಂಡಿತ್ತು. ಇವರಿಂದ ರಾಜಾಶ್ರಯ ಹಾಗೂ ಉದಾರ ಪ್ರೋತ್ಸಾಹ ದೊರೆಯದಾಯಿತು. ಆಂಗ್ಲರ ಆಳ್ವಿಕೆಯಿಂದ ಮಠಾಧಿಪತಿಗಳು ಅನೇಕ ಕಷ್ಟಗಳಿಗೆ ಗುರಿಯಾಗಿ ಮಠವನ್ನು ಉಳಿಸಿಕೊಳ್ಳುವುದೇ ಒಂದು ಸವಾಲಾಗಿ

ದ್ದಾಗ ಗುರುಗಳು ತಮ್ಮ ತೀಕ್ಷ್ಣ ಬುದ್ಧಿಯಿಂದ ಕಷ್ಟಗಳನ್ನು ನಿವಾರಿಸಿಕೊಂಡರು. ನೂತನ ಬಡಾವಣೆಗಳ ನಿರ್ಮಾಣಕ್ಕಾಗಿ ನಗರ ಪಾಲಿಕೆಯಿಂದ ಹೊಸ ಕಾಯಿದೆ ಬಂದಾಗ ಬೇಲಿಮಠದ ಅಪಾರ ಆಸ್ತಿ ಸರ್ಕಾರದ ವಶವಾಯಿತು. ಇವರು ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ರುದ್ರಸ್ವಾಮಿಗಳನ್ನು ನೇಮಿಸಿಕೊಂಡು ಅಧಿಕಾರ ನೀಡಿದರು. ಅಲ್ಲದೆ ತಮ್ಮ ಕರಕಮಲ ಸಂಜಾತರಿಗೆ ಮಾರ್ಗದರ್ಶಕರಾಗಿ ಮಠವು ಬೆಳೆಯುವಂತೆ ಮಾಡಿದರು.

ಅವಿಸ್ಮರಣೆ-ದುರ್ದೈವ: ಶ್ರೀ ರುದ್ರ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ, ೧೮೮೦ರಲ್ಲಿ ಬೇಲಿಮಠದ ಹಳೆಯ ಕಟ್ಟಡವನ್ನು ಜೀರ್ಣೋದ್ಧಾರಗೊಳಿಸಿ ನೂತನ ಕಟ್ಟಡವನ್ನು ನಿರ್ಮಿಸಿದರು. ಗುರುಶಿಷ್ಯರಿಬ್ಬರೂ ಒಟ್ಟೊಟ್ಟಿಗೆ ನಲವತ್ತು ವರ್ಷಗಳ ಕಾಲ ಸುದೀರ್ಘವಾದ ಆಡಳಿತವನ್ನು ನಡೆಸಿ ಮಠವನ್ನು ಅಭಿವೃದ್ಧಿಗೆ ತಂದಿದ್ದು, ಬೇಲಿಮಠದ ಇತಿಹಾಸದಲ್ಲಿ ಅವಿಸ್ಮರಣೀಯವಾಗಿದೆ. ಶ್ರೀ ಸಿದ್ಧಲಿಂಗ ಸ್ವಾಮಿಗಳು ೧೮೯೯ರ ಫೆಬ್ರವರಿ ಇಪ್ಪತ್ತರಂದು ಪ್ಲೇಗ್ ರೋಗದಿಂದ ಲಿಂಗೈಕ್ಯರಾದರು. ಇವರ ಗದ್ದುಗೆಯನ್ನು ನಿರ್ಮಿಸಿದ ಎಂಟು ದಿನಗಳಲ್ಲಿ ಶ್ರೀ ರುದ್ರಸ್ವಾಮಿಗಳು ಸಹ ಪ್ಲೇಗ್ ರೋಗಕ್ಕೆ ತುತ್ತಾಗಿದ್ದು ಬೇಲಿ ಮಠದ ಇತಿಹಾಸದಲ್ಲಿ ಒಂದು ದುರ್ದೈವದ ಘಟನೆಯಾಗಿದೆ. ಗುರುಶಿಷ್ಯರಿಬ್ಬರ ಗದ್ದುಗೆಗಳೂ ನೆಲಮಂಗಲ ಸಮೀಪದ ಹುಸ್ಕೂರು ಗ್ರಾಮದಲ್ಲಿ ಸ್ಥಾಪನೆಯಾಗಿವೆ.

ಬೇಲಿಮಠದಲ್ಲಿದ್ದುಕೊಂಡು ಶಿಷ್ಯವೃತ್ತಿಯನ್ನು ನಡೆಸಿಕೊಂಡು ಬರುತ್ತಿದ್ದ ಶ್ರೀ ಶಿವರುದ್ರ ಮರಿದೇವರು ೧೮೮೫ರಲ್ಲಿ ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡರು. ಗುರುಗಳು ಅಧಿಕಾರ ವಹಿಸಿಕೊಂಡ ಕೆಲವೇ ದಿನಗಳಲ್ಲಿ ಅನೇಕ ತೊಂದರೆಗಳನ್ನು ಎದುರಿಸಿದರು. ಈ ಕಾಲದಲ್ಲಿ ಮಠವನ್ನು ಕಾನೂನುಬದ್ಧಗೊಳಿಸಿ ಆದಾಯದ ಮೂಲವನ್ನು ಹೆಚ್ಚಿಸಿಕೊಂಡರು. ಇವರ ಕಾಲದಲ್ಲಿ ಮಠವು ಆರ್ಥಿಕವಾಗಿ ಸದೃಢಗೊಂಡು ಬೆಳೆಯಿತು. ಇವರು ೧೯೨೭ರಲ್ಲಿ ಶ್ರೀ ಸಿದ್ಧಲಿಂಗ ಮರಿಯನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡರು. ಶ್ರೀ ಮರಿದೇವರು ೧೯೨೫ರ ನವೆಂಬರ್‌ನಲ್ಲಿ ಅಕಾಲಿಕವಾಗಿ ಲಿಂಗೈಕ್ಯರಾದರು. ಆಗ ಶ್ರೀ ಶಿವರುದ್ರ ಸ್ವಾಮಿಗಳು ತುಮಕೂರಿನ ಬಳಿಯ ಗೂಳೂರಿನ ನಡುವಣಮಠದ ಶ್ರೀ ಚನ್ನವೀರ ದೇವರ ಪುತ್ರರಾದ ಶ್ರೀ ಚನ್ನಬಸವ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡು ಶ್ರೀ ಇಮ್ಮಡಿ ಸಿದ್ಧಲಿಂಗ ಸ್ವಾಮಿಗಳೆಂದು ಅಭಿಧಾನ ಮಾಡಿ ೧೯೨೪ರ ಮೇ ಒಂಬತ್ತರಂದು ಅಧಿಕಾರಕ್ಕೆ ತಂದು ೧೯೪೧ರ ಆಗಸ್ಟ್ ಆರರಂದು ಲಿಂಗೈಕ್ಯರಾದರು.

ಶ್ರೀ ಇಮ್ಮಡಿ ಸಿದ್ಧಲಿಂಗ ಸ್ವಾಮಿಗಳು ತಮ್ಮ ಕ್ರಿಯಾಶೀಲ ಚಟುವಟಿಕೆಗಳಿಂದ ಮಠವನ್ನು ಬೆಳೆಸಿದರು. ಹಿಂದೆ ಸ್ಥಾಪನೆಯಾಗಿದ್ದ ಶ್ರೀ ಶಿವರುದ್ರ ಸ್ವಾಮಿಗಳ ವೇದಪಾಠಶಾಲೆ ಹಾಗೂ ವಿದ್ಯಾರ್ಥಿನಿಲಯವನ್ನು ಮುಂದುವರೆಸಿ ಅಭಿವೃದ್ಧಿಪಡಿಸಿದರು. ಗುರುಗಳು ಸಂಸ್ಕೃತದಲ್ಲಿದ್ದ ಶಿವಲಿಂಗಾರ್ಚನೆ ಪ್ರಯೋಗ, ವೀರಶೈವಾನಂದ ಚಂದ್ರಿಕೆ ಹಾಗೂ ಲಿಂಗಧಾರಣಾ ಚಂದ್ರಿಕೆ ಎಂಬ ಮೂರು ಗ್ರಂಥಗಳನ್ನು ಕನ್ನಡಕ್ಕೆ ಅನುವಾದ ಮಾಡಿ ಪ್ರಕಟಿಸಿದರು. ಧಾರ್ಮಿಕ, ಸಾಹಿತ್ಯಿಕ ಹಾಗೂ ಆರ್ಥಿಕವಾಗಿ ಮಠವನ್ನು ಬೆಳೆಸಿ ೧೯೬೫ರಲ್ಲಿ ಲಿಂಗೈಕ್ಯರಾದರು.

ಶಿವಾನುಭವ ಚರಮೂರ್ತಿ: ಶ್ರೀ ಇಮ್ಮಡಿ ಸಿದ್ಧಲಿಂಗ ಸ್ವಾಮಿಗಳ ನಂತರ ಹಿರಿಯ ಗುರುಗಳ ಸಹೋದರ ಶ್ರೀ ಶಿವಣ್ಣನವರ ಪುತ್ರರಾದ ಶ್ರೀ ಇಮ್ಮಡಿ ಶಿವರುದ್ರ ಸ್ವಾಮಿಗಳು ೧೯೬೫ರಲ್ಲಿ ಮಠದ ಅಧಿಕಾರವನ್ನು ವಹಿಸಿಕೊಂಡರು. ಗುರುಗಳು ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡಿ, ಹಿರಿಯ ಗುರುಗಳ ಸಾನ್ನಿಧ್ಯದಲ್ಲಿ ಸಂಸ್ಕಾರವನ್ನು ಪಡೆದು ಸಾಕಾರ ಮೂರ್ತಿಯಾಗಿ ರೂಪುಗೊಂಡಿದ್ದರು. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು, ವಿದ್ವತ್ ಸಂಪಾದಿಸಿಕೊಂಡಿರುವ ಶ್ರೀ ಇಮ್ಮಡಿ ಶಿವರುದ್ರ ಸ್ವಾಮಿಗಳು ಮಠವನ್ನು ಆರ್ಥಿಕವಾಗಿ ಸದೃಢಗೊಳಿಸಿರುವುದಲ್ಲದೆ, ಶೈಕ್ಷಣಿಕವಾಗಿಯೂ ಅಭಿವೃದ್ಧಿಪಡಿಸಿದ್ದಾರೆ. ಗುರುಗಳು ಉತ್ತಮ ವಾಗ್ಮಿಗಳಾಗಿ ನಾಡನ್ನೆಲ್ಲಾ ಸಂಚರಿಸಿ ಧರ್ಮಪ್ರಸಾರವನ್ನು ಮಾಡುತ್ತಿದ್ದಾರೆ.

ಶೈಕ್ಷಣಿಕ ಸೇವೆ: ಪರಂಪರೆಯ ನಾಲ್ಕನೆಯ ಗುರುಗಳಾದ ಶ್ರೀ ಕೆಂಪನಂಜೆ ಸ್ವಾಮಿಗಳ ಕಾಲದಲ್ಲಿ ವೇದ ಪಾಠಶಾಲೆಯನ್ನು ಪ್ರಾರಂಭಿಸಲಾಗಿತ್ತು. ಇಲ್ಲಿ ಮಠಾಧಿಪತಿಗಳಾಗುವ ವಟುಗಳು ಶಿಕ್ಷಣವನ್ನು ಪಡೆಯುತ್ತಿದ್ದರು. ನಂತರ ಬಂದ ಶ್ರೀ ಸಿದ್ಧಲಿಂಗ ಸ್ವಾಮಿಗಳ ಕಾಲದಲ್ಲಿಯೂ ಶಿಕ್ಷಣ ಸೇವೆ ಮುಂದುವರೆಯಿತು. ಶ್ರೀ ಶಿವರುದ್ರ ಸ್ವಾಮಿಗಳ ಕಾಲದಲ್ಲಿ ಮಠದ ಶಿಕ್ಷಣ ವ್ಯವಸ್ಥೆಗೆ ಒಂದು ಹೊಸರೂಪ ದೊರೆಯಿತು. ಈ ಸಂದರ್ಭದಲ್ಲಿ ಉಚಿತ ವಿದ್ಯಾರ್ಥಿನಿಲಯ ಸಂಸ್ಕೃತ ಮತ್ತು ವೇದಾಧ್ಯಯನ

ಶಾಲೆಯನ್ನು ಹೆಚ್ಚು ವಿಸ್ತಾರಗೊಳಿಸಿದರು. ೧೯೪೦ರಲ್ಲಿ ಶ್ರೀ ಇಮ್ಮಡಿ ಸಿದ್ಧಲಿಂಗ ಸ್ವಾಮಿಗಳು ಶ್ರೀ ಶಿವರುದ್ರ ಸ್ವಾಮಿಗಳ ವೇದಪಾಠಶಾಲಾ ಮತ್ತು ಬೋರ್ಡಿಂಗ್‌ಹೋಮ್ ಎಂದು ನೂತನ ನಾಮಕರಣ ಮಾಡಿದರು. ಇಲ್ಲಿ ಗ್ರಾಮಾಂತರ ಮಕ್ಕಳಿಗೆ ಕಲಿಯಲು ಅವಕಾಶವನ್ನು ಕಲ್ಪಿಸಿದರು. ಈಗ ಶ್ರೀ ಇಮ್ಮಡಿ ಶಿವರುದ್ರ ಸ್ವಾಮಿಗಳು ನೆಲಮಂಗಲ ಸಮೀಪದ ತಮ್ಮ ಶಾಖಾಮಠದ ಆವರಣದಲ್ಲಿ ಈ ಕೆಳಗಿನ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿದ್ದಾರೆ.

೧. ತಾಂತ್ರಿಕ ಮಹಾವಿದ್ಯಾಲಯ (ಬಿ.ಇ ಕಾಲೇಜು)

೨. ಕಂಪ್ಯೂಟರ್ ಶಿಕ್ಷಣ

೩. ಫಾರ್ಮಸಿ ಕಾಲೇಜು

ಈ ರೀತಿ ಪದವಿ ಶಿಕ್ಷಣ ಸೇರಿದಂತೆ ನರ್ಸರಿಯಿಂದ ಉನ್ನತ ಶಿಕ್ಷಣದವರೆಗೂ ಶಿಕ್ಷಣ ಸಂಸ್ಥೆಯನ್ನು ವಿಸ್ತರಿಸಿ ಬೆಳೆಸಿದ್ದಾರೆ.

ಶಾಖಾಮಠಗಳು:

೧. ಅಕ್ಕಿಪೇಟೆಯ ದೊಡ್ಡಮಠ

೨. ತೋಟದ ದೇವರಗಲ್ಲಿಯ ನಂಬೆಣ್ಣನ ಚೌಕಿಮಠ

೩. ವೀರಭದ್ರಸ್ವಾಮಿ ದೇವಾಲಯದ ಇಂದಿನ ಚೌಕಿಮಠ

೪. ಮುದ್ದಪ್ಪಸ್ವಾಮಿಮಠ

೫. ಕಂಬಿನಂಜಯ್ಯನಮಠ

೬. ಶಿವನಹಳ್ಳಿಯಮಠ

೭. ನೆಲಮಂಗಲದ ಹೊಸಮಠ

೮. ನೆಲಮಂಗಲ ಸಮೀಪದ ಮಲ್ಲರಬಾಣವಾಡಿಮಠ

೯. ಮೈಲನಹಳ್ಳಿಮಠ

೧೦. ಮಾಚೆನಾಯಕನಹಳ್ಳಿಮಠ

೧೧. ಚಿಕ್ಕಬಳ್ಳಾಪುರದ ಜಡೆದೇವರಮಠ

ಈ ರೀತಿ ಇನ್ನು ಅನೇಕ ಮಠಗಳು ಈ ಮಠದ ಶಾಖಾಮಠಗಳಾಗಿದ್ದವು ಈಗ ಇವುಗಳಲ್ಲಿ ಅನೇಕ ಮಠಗಳು ಸ್ವತಂತ್ರ ಮಠಗಳಾಗಿ ಬೆಳೆದಿವೆ ಎಂದು ಹೇಳಲಾಗುತ್ತದೆ.

ವಿಳಾಸ: ಶ್ರೀ ಮ.ನಿ.ಪ್ರ. ಇಮ್ಮಡಿ ಶಿವರುದ್ರ ಸ್ವಾಮಿಗಳು, ಶ್ರೀ ಬೇಲಿಮಠ, ಬಿನ್ನಿಪೇಟೆ, ಬೇಲಿಮಠದ ರಸ್ತೆ, ಬೆಂಗಳೂರು.
ಆಧಾರ: ಬೆಂಗಳೂರು ನಗರದ ವೀರಶೈವ ಮಠಗಳು ಒಂದು ಸಾಂಸ್ಕೃತಿಕ ಅಧ್ಯಯನ, ಲೇಖಕರು : ಡಾ. ಬಿ.ಸಿ. ವೀರಪ್ಪ

ಮಹಾಂತಿನಮಠ

ಬೆಂಗಳೂರು ನಗರದ ಚಿಕ್ಕಪೇಟೆಯಲ್ಲಿ ಅಸ್ತಿತ್ವದಲ್ಲಿರುವ ಶ್ರೀ ಮಹಾಂತಿನಮಠವು, ಹನ್ನೆರಡನೆಯ ಶತಮಾನದಲ್ಲಿ ಶ್ರೀ ರೇವಣಸಿದ್ಧರಿಂದ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ರಂಭಾಪುರಿ ಪೀಠದ ಶಾಖಾನುವರ್ತಿ ಮಠವಾಗಿ ಬೆಳೆದಿದೆ. ಶ್ರೀ ರೇವಣಸಿದ್ಧರ ಕರಕಮಲ ಸಂಜಾತರಾಗಿ ಬೆಳೆದ ಶ್ರೀ ವಿರೂಪಾಕ್ಷ ದೇಶಿಕೇಂದ್ರ ಸ್ವಾಮಿಗಳು ಈ ಮಠವನ್ನು ಅಭಿವೃದ್ಧಿ ಪಡಿಸಿ, ಇಲ್ಲಿಯೇ ಜೀವಂತ ಸಮಾಧಿ ಹೊಂದಿದರೆಂದು ಹೇಳಲಾಗುತ್ತದೆ. ಈಗ ಮಠದ ಮಧ್ಯಭಾಗದಲ್ಲಿ ಶ್ರೀ ವಿರೂಪಾಕ್ಷ ದೇಶಿಕೇಂದ್ರ ಸ್ವಾಮಿಗಳ ಗದ್ದುಗೆ ಸ್ಥಾಪನೆಯಾಗಿದೆ. ಇವರ ನಂತರ ಕೆಲವು ಗುರುಗಳು ಅಧಿಕಾರವನ್ನು ನಡೆಸಿ ಮಠವನ್ನು ಮುನ್ನಡೆಸಿದ್ದಾರೆ.

ಪರಂಪರೆ:	೧. ಷ.ಬ್ರ.ಶ್ರೀ ವಿರೂಪಾಕ್ಷ ದೇಶಿಕೇಂದ್ರ ಸ್ವಾಮಿಗಳು	
	೨. ಷ.ಬ್ರ.ಶ್ರೀ ಕೆಂಪನಂಜೆ ಶಿವಾಚಾರ್ಯ ಸ್ವಾಮಿಗಳು	(ಕ್ರಿ.ಶ.ಸು.೧೮೧೦-೧೮೭೬)
	೩. ಷ.ಬ್ರ.ಶ್ರೀ ಶಿವರುದ್ರ ಶಿವಾಚಾರ್ಯ ಸ್ವಾಮಿಗಳು	(ಕ್ರಿ.ಶ. ೧೮೪೪ - ೧೮೮೬)

೪. ಷ.ಬ್ರ.ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳು (ಕ್ರಿ.ಶ. ೧೮೮೬ - ೧೮೯೮)
೫. ಷ.ಬ್ರ.ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು (ಕ್ರಿ.ಶ. ೧೯೩೪ - ೧೯೪೭)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಈ ಹಿಂದೆ ಜಗದ್ಗುರು ಶ್ರೀ ಪ್ರಸನ್ನರೇಣುಕ ವೀರಗಂಗಾಧರ ಶಿವಾಚಾರ್ಯ ಭಗವತ್ಪಾದರು ಶ್ರೀ ರಂಭಾಪುರಿ ಪೀಠದ ಜಗದ್ಗುರುಗಳಾಗಿ ನೇಮಕಗೊಳ್ಳುವ ಮೊದಲು, ಶ್ರೀ ವಿಭೂತಿಪುರ ಮಠಕ್ಕೂ ನಂತರ ಶ್ರೀ ಮಹಾಂತರಮಠದ ಮಠಾಧೀಶರಾಗಿ ೧೯೩೪ರ ಮಾರ್ಚ್ ಇಪ್ಪತ್ತೊಂಭರಂದು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಬೆಳೆಸಿದರು. ಶ್ರೀ ಮಹಾಂತರ ಮಠವು ಒಂದು ಧಾರ್ಮಿಕ ಕೇಂದ್ರವಾಗಿರುವುದರ ಜತೆಗೆ ವಿದ್ಯಾಕೇಂದ್ರವಾಗಿಯೂ ಬೆಳೆಯಿತು. ಮಠದಲ್ಲಿ ಸಂಸ್ಕೃತ ಪಾಠಶಾಲೆ, ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿ ಮಠವನ್ನು ಮುನ್ನಡೆಸಿದ್ದರು. ಈ ಸಂಸ್ಥೆಗಳು ಈಗಲೂ ಕಾರ್ಯನಿರ್ವಹಿಸುತ್ತಿವೆ.

ಶ್ರೀ ರಂಭಾಪುರಿ ಪೀಠದ ಆಗಿನ ಜಗದ್ಗುರುಗಳಾಗಿದ್ದ ಶ್ರೀ ಶಿವಾನಂದ ಶಿವಾಚಾರ್ಯ ಭಗವತ್ಪಾದರ ನಿರ್ದೇಶನದ ಅನ್ವಯ ಶ್ರೀ ಮಹಾಂತರಮಠ ಟ್ರಸ್ಟ್ ೧೯೩೫ರಲ್ಲಿ ಆರಂಭವಾಗಿತ್ತು. ಅಂದು ಪ್ರಾರಂಭಗೊಂಡ ಟ್ರಸ್ಟ್ ಈವರೆಗೆ ಕಾರ್ಯ ನಿರ್ವಹಿಸುತ್ತಾ ಬಂದಿದೆ. ಈಗ ಶ್ರೀ ಯಜಮಾನ್ ಶ್ರೀಕಂಠಪ್ಪನವರು ಟ್ರಸ್ಟಿನ ಅಧ್ಯಕ್ಷರಾಗಿ ಮಠದ ಆಡಳಿತವನ್ನು ನೋಡಿ ಕೊಳ್ಳುತ್ತಿದ್ದಾರೆ. ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ವಿದ್ಯಾರ್ಥಿನಿಲಯ ಟ್ರಸ್ಟ್ ಅಸ್ತಿತ್ವದಲ್ಲಿದೆ. ಈ ಟ್ರಸ್ಟ್ ವಿದ್ಯಾರ್ಥಿನಿಲಯದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದೆ. ಈ ಟ್ರಸ್ಟಿನ ಅಧ್ಯಕ್ಷರಾಗಿ ಶ್ರೀ ಎನ್.ಆರ್. ಪಂಡಿತಾರಾಧ್ಯರು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಎರಡು ಟ್ರಸ್ಟ್‌ಗಳು ಶ್ರೀ ರಂಭಾಪುರಿ ಪೀಠದ ಜಗದ್ಗುರುಗಳ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತಾ, ಮಠದಲ್ಲಿ ಧಾರ್ಮಿಕ, ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸುತ್ತಿವೆ.

ವಿಳಾಸ: ಶ್ರೀ ಮಹಾಂತಿನಮಠ, ಚಿಕ್ಕಪೇಟೆ, ಬೆಂಗಳೂರು.

ಮುತ್ತಿನಕಂತೆಮಠ

ಬೆಂಗಳೂರು ನಗರದ ಅಕ್ಕಿಪೇಟೆ ಬಡಾವಣೆಯ ಪಾರ್ಕ್ ರಸ್ತೆಯಲ್ಲಿ ಶ್ರೀ ಮುತ್ತಿನಕಂತೆ ಮಠವು ಅಸ್ತಿತ್ವದಲ್ಲಿದೆ. ಇದು ಶ್ರೀ ರಂಭಾಪುರಿ ಪೀಠದ ಪರಂಪರೆಯ ಮಠವಾಗಿದೆ. ಹಿಂದೆ ರಾಜಾಜಿನಗರದ ಸಿದ್ಧರಾಮನ ದಿಣ್ಣೆಯಲ್ಲಿರುವ ಗವಿಮಠವೇ ಇದಾಗಿತ್ತು. ಕಾಲಾನಂತರ ಅರಳೆಪೇಟೆ ವ್ಯಾಪ್ತಿಯಲ್ಲಿ ಬರುವ ಚೌಕಿಮಠಕ್ಕೆ ವರ್ಗಾವಣೆಯಾಗಿತ್ತು. ನಂತರ ರೈಲ್ವೇ ನಿಲ್ದಾಣಕ್ಕಾಗಿ ಸರ್ಕಾರದ ಸ್ವಾಧೀನಕ್ಕೆ ಹೋದಾಗ ಈಗಿನ ಸ್ಥಳಕ್ಕೆ ಮಠವನ್ನು ಸ್ಥಳಾಂತರಿಸಲಾಯಿ ತೆಂದು ತಿಳಿದು ಬರುತ್ತದೆ.

ಮಠ ಸ್ಥಾಪನೆ: ಮಠದ ಸ್ಥಾಪನೆಯ ಬಗ್ಗೆ ನಿಖರವಾದ ಮಾಹಿತಿ ಗಳು ಲಭ್ಯವಿಲ್ಲ. ನೂತನ ಮಠವನ್ನು ಶ್ರೀ ಈಶ್ವರ ಶಿವಾ ಚಾರ್ಯ (ನಂಜುಂಡ)ಸ್ವಾಮಿಗಳು ಸ್ಥಾಪಿಸಿದರೆಂದು ಹೇಳಲಾಗುತ್ತಿದೆ. ಶಿಷ್ಯವರ್ಗದ ಸಂಪ್ರದಾಯದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ಹಿಂದೆ ಶ್ರೀಶೈಲ ಪೀಠದ ಶಾಖಾಮಠವಾಗಿದ್ದ ಶ್ರೀ ಮುತ್ತಿನಕಂತೆ ಮಠವು, ಶ್ರೀ ಶಿವಾನಂದ ಜಗದ್ಗುರುಗಳ ಪ್ರಭಾವದಿಂದ ಶ್ರೀ ರಂಭಾಪುರಿಪೀಠದ ಶಾಖಾನುವರ್ತಿ ಮಠವಾಗಿ ಪರಿವರ್ತನೆಯಾಯಿತೆಂದು ಹೇಳಲಾಗುತ್ತದೆ.

ಪರಂಪರೆ:
೧. ಷ.ಬ್ರ.ಶ್ರೀ ಈಶ್ವರ ಶಿವಾಚಾರ್ಯ ಸ್ವಾಮಿಗಳು
೨. ಷ.ಬ್ರ.ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳು
೩. ಷ.ಬ್ರ.ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮಿಗಳು
೪. ಷ.ಬ್ರ.ಶ್ರೀ ಇಮ್ಮಡಿ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃ ಗುರುಗಳಾದ ಶ್ರೀ ಈಶ್ವರ ಶಿವಾಚಾರ್ಯ ಸ್ವಾಮಿಗಳು ತಮ್ಮ ಕರ್ತೃತ್ವ ಶಕ್ತಿಯಿಂದ ಮಠವು ಬೆಳೆಯಲು ಭದ್ರ ಬುನಾದಿಯನ್ನು ಹಾಕಿದರು. ಇವರ ತರುವಾಯ ವಿದ್ವಾನ್ ಶ್ರೀ ಶಿವಕುಮಾರ ಸ್ವಾಮಿಗಳು ಅಧಿಕಾರಕ್ಕೆ ಬಂದರು. ಇವರು ಆಸ್ಥಾನ ವಿದ್ವಾನ್ ಪಂಡಿತರತ್ನರಾಗಿ ಆಯುರ್ವೇದ ದರ್ಪಣವನ್ನು ರಚಿಸಿ ಹೆಸರು ಮಾಡಿದರು. ಇವರ ಧಾರ್ಮಿಕ ಮತ್ತು ಸಾಹಿತ್ಯ ಕೃಷಿಗೆ ಸರ್ಕಾರವು ರಾಜ್ಯ ಪ್ರಶಸ್ತಿ ನೀಡಿದೆ. ಅಲ್ಲದೆ ಆಯುರ್ವೇದ

ವಿದ್ವಾನ್ ಎಂಬ ಬಿರುದನ್ನು ನೀಡಿ ಗೌರವಿಸಿದೆ. ಕಾಶಿಯಲ್ಲಿ ವಿದ್ಯಾಭ್ಯಾಸಮಾಡಿ ಬೆಂಗಳೂರಿಗೆ ಆಗಮಿಸಿ ಮಠದ ಅಧಿಕಾರವನ್ನು ಪಡೆದುಕೊಂಡರು. ಇವರು ಮಠವನ್ನು ಹೆಚ್ಚು ಪ್ರಬುದ್ಧಮಾನವಾಗಿ ಬೆಳೆಸಿದರು. ಗುರುಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಮಡೇನಹಳ್ಳಿಯ ಶ್ರೀ ಸದಾಶಿವಯ್ಯ ಮತ್ತು ಶ್ರೀಮತಿ ತೋಂಟದಮ್ಮನವರ ಪುತ್ರರಾಗಿ ೧೯೨೧ರಲ್ಲಿ ಜನಿಸಿದ ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮಿಗಳನ್ನು ನೇಮಕಮಾಡಿಕೊಂಡರು. ಶ್ರೀಸೋಮಶೇಖರ ಶಿವಾಚಾರ್ಯ ಸ್ವಾಮಿಗಳು ಮಡೇನಹಳ್ಳಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿದರು. ಬೆಂಗಳೂರಿನಲ್ಲಿ ಶಕ್ತಿವಿಶಿಷ್ಟಾದ್ವೈತ, ವಿದ್ವಾನ್, ತರ್ಕಶಾಸ್ತ್ರ ವಿದ್ವಾನ್ ಹಾಗೂ ಹಿಂದಿ ರತ್ನ ಪದವಿಗಳನ್ನು ಪಡೆದು ಮಹಾ ವಿದ್ವಾಂಸರಾಗಿ, ಬೆಂಗಳೂರಿನ ಸರ್ಕಾರಿ ಸಂಸ್ಕೃತ ಕಾಲೇಜಿನಲ್ಲಿ ತರ್ಕಶಾಸ್ತ್ರದ ಉಪನ್ಯಾಸಕರಾಗಿ ಸೇವೆ ಸಲ್ಲಿಸತೊಡಗಿದರು. ೧೯೬೩ರ ಫೆಬ್ರವರಿ ಹನ್ನೊಂದರಂದು ಮಠದ ಅಧಿಕಾರವನ್ನು ವಹಿಸಿಕೊಂಡರು. ಕಿರಿಯ ಗುರುಗಳು ಅಧಿಕಾರ ವಹಿಸಿಕೊಂಡ ನಂತರ ಶ್ರೀ ಶಿವಕುಮಾರ ಸ್ವಾಮಿಗಳು ೧೯೭೭ರಲ್ಲಿ ಲಿಂಗೈಕ್ಯರಾದರು.

ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮಿಗಳು ತಮ್ಮ ವಿದ್ವತ್‌ನಿಂದ ನಾಡಿನ ಹರಗುರು ಚರಮೂರ್ತಿಗಳಿಂದ ಪ್ರಶಂಸೆಗೆ ಒಳಗಾದರು. ಇವರ ಪ್ರತಿಭೆಯನ್ನು ಗುರುತಿಸಿದ ಬಾಳೆಹೊನ್ನೂರಿನ ಆಗಿನ ಜಗದ್ಗುರುಗಳಾಗಿದ್ದ ಶ್ರೀ ಪ್ರಸನ್ನ ರೇಣುಕ ವೀರಗಂಗಾಧರ ಶಿವಾಚಾರ್ಯ ಭಗವತ್ಪಾದರು ಎಡೆಯೂರಿನ ಬಾಳೆಹೊನ್ನೂರು ಖಾಸಾ ಶಾಖಾಮಠದ ಅಧಿಕಾರ ನೀಡಿದರು. ಅಂದಿನಿಂದ ಎರಡೂ ಕಡೆ ಧಾರ್ಮಿಕ ಆಚರಣೆಗಳು ನಡೆಯುವಂತೆ ನೋಡಿಕೊಂಡು ಬಂದರು.

ಮಡೇನಹಳ್ಳಿಯ ಶ್ರೀ ಬಸವರಾಜಪ್ಪ ಮತ್ತು ಶ್ರೀಮತಿ ಪುಟ್ಟಮಾದಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಇಮ್ಮಡಿ ಶಿವಕುಮಾರ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡು ೧೯೯೨ ರ ಫೆಬ್ರವರಿ ಇಪ್ಪತ್ನಾಲ್ಕರಂದು ಆಡಳಿತವನ್ನು ವಹಿಸಿಕೊಟ್ಟಿದ್ದಾರೆ. ನಗರ ಪ್ರದೇಶದಲ್ಲಿ ಧಾರ್ಮಿಕ ವಿಚಾರಗಳು ಮರೆಯಾಗುತ್ತಿರುವ ಈ ಸಂದರ್ಭದಲ್ಲಿ ವೀರಶೈವರ ಮನೆಮನೆಗಳಿಗೆ ಹೋಗಿ ಧರ್ಮ ಸಂಸ್ಕಾರವನ್ನು ನೀಡುವ ಮೂಲಕ, ಧರ್ಮಜಾಗೃತಿಯನ್ನುಂಟು ಮಾಡಿ ಧರ್ಮವು ಬೆಳೆಯಲು ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮಿಗಳು ಸಹಾಯಕರಾಗಿದ್ದಾರೆ.

ವಿಳಾಸ:ಷ.ಬ್ರ.ಶ್ರೀಇಮ್ಮಡಿಶಿವಕುಮಾರಶಿವಾಚಾರ್ಯಸ್ವಾಮಿಗಳು,ಶ್ರೀಮುತ್ತಿನಕಂತೆಮಠ,ಅಕ್ಕಿಪೇಟೆ,ಪಾರ್ಕ್‌ರಸ್ತೆ,ಬೆಂಗಳೂರು ೫೩.

ವಿಭೂತಿಪುರಮಠ

ಬೆಂಗಳೂರು ನಗರದ ವಿಭೂತಿಪುರ ಬಡಾವಣೆಯಲ್ಲಿ ಶ್ರೀಮದ್ ವಿಭೂತಿಪುರ ವೀರಸಿಂಹಾಸನ ಮಠವು ಅಸ್ತಿತ್ವದಲ್ಲಿದೆ. ಹೊಯ್ಸಳರ ವೀರಬಲ್ಲಾಳನ ಆಳ್ವಿಕೆಯ (ಕ್ರಿ.ಶ.೧೧೭೭-೧೨೨೦) ಕಾಲದಲ್ಲಿ ಈ ಮಠವು ಸ್ಥಾಪನೆಯಾಗಿ ವಿಜಯನಗರ ಅರಸರ ಕಾಲದಲ್ಲಿ ರಾಜಾಶ್ರಯದಿಂದ ಹೆಚ್ಚು ಅಭಿವೃದ್ಧಿಗೊಂಡು ಬೆಳೆದಿದೆ ಎಂದು ಹೇಳಲಾಗುತ್ತಿದೆ.

ಮಠ ಸ್ಥಾಪನೆ: ಮಠವು ಸ್ಥಾಪನೆಯಾಗಿರುವ ಸ್ಥಳದಲ್ಲಿ ಹಿಂದೆ ವಿಭೂತಿಯನ್ನು ತಯಾರು ಮಾಡಲಾಗುತ್ತಿತ್ತು ಎಂದು ಹೇಳಲಾಗುತ್ತಿದೆ. ವಿಭೂತಿಯನ್ನು ತಯಾರು ಮಾಡಿ ಸಂಗ್ರಹಿಸಿದ್ದ ಸಂದರ್ಭದಲ್ಲಿ ಮಳೆ ಧಾರಾಕಾರವಾಗಿ ಸುರಿದಾಗ ವಿಭೂತಿಘಟ್ಟಿಗಳು ನೀರಲ್ಲಿ ತೊಯ್ದು ಕರಗಿ ಹೋಗಿರಬಹುದೆಂದು ಶಂಕಿಸಿ, ಬಂದು ನೋಡಿದಾಗ, ಮಳೆಯ ನೀರು ಸೋಂಕದೆ ಯಥಾಸ್ಥಿತಿಯಲ್ಲಿದ್ದವು. ಇದನ್ನು ನೋಡಿದ ಜನರು ಸಂತೋಷಗೊಂಡು, ಈ ಪವಿತ್ರ ಸ್ಥಳದಲ್ಲಿ ಮಠವನ್ನು ಸ್ಥಾಪಿಸಿ, ಈ ಸ್ಥಳಕ್ಕೆ 'ವಿಭೂತಿಪುರ' ಎಂದು ಅಭಿಧಾನ ಮಾಡಿದರೆಂದು ತಿಳಿದು ಬರುತ್ತದೆ.

ಪರಂಪರೆ:

೧.	ಷ.ಬ್ರ.ಶ್ರೀ ಗುರುಸಿದ್ಧ ಬಸವರಾಜ ಶಿವಾಚಾರ್ಯ ಸ್ವಾಮಿಗಳು	(ಕ್ರಿ.ಶ.ಸು.೧೮೬೦-೧೯೦೦)
೨.	ಷ.ಬ್ರ.ಶ್ರೀ ಸಿದ್ಧವೃಷಭರಾಜ ಶಿವಾಚಾರ್ಯ ಸ್ವಾಮಿಗಳು	(ಕ್ರಿ.ಶ. ೧೯೦೦ - ೧೯೨೭)
೩.	ಷ.ಬ್ರ.ಶ್ರೀ ಶಿವರುದ್ರ ಶಿವಾಚಾರ್ಯ ಸ್ವಾಮಿಗಳು	(ಕ್ರಿ.ಶ. ೧೯೨೭ - ೧೯೩೨)
೪.	ಷ.ಬ್ರ.ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು	(ಕ್ರಿ.ಶ. ೧೯೩೪ - ೧೯೪೭)
೫.	ಷ.ಬ್ರ.ಶ್ರೀ ಸುವರ್ಣಲಿಂಗ ಶಿವಾಚಾರ್ಯ ಸ್ವಾಮಿಗಳು	(ಕ್ರಿ.ಶ. ೧೯೫೪ - ೨೦೦೧)

೬. ಷ.ಬ್ರ.ಶ್ರೀ ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳು (ಕ್ರಿ.ಶ. ೧೯೯೬ -)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಹನ್ನೆರಡನೆಯ ಶತಮಾನದಲ್ಲಿ ಶ್ರೀ ರೇವಣಸಿದ್ಧರು ಈ ಪ್ರಾಂತ್ಯದಲ್ಲಿ ಐದು ಸಂಸ್ಥಾನ ಮಠಗಳನ್ನು ಸ್ಥಾಪಿಸಿದರು. ಇದರಲ್ಲಿ ವಿಭೂತಿಪುರ ಮಠವು ಒಂದಾಗಿದೆ. ಅಂದು ಶ್ರೀ ರೇವಣಸಿದ್ಧರಿಂದ ಸ್ಥಾಪನೆಗೊಂಡ ಮಠದ ಮುಂದಿನ ಪರಂಪರೆಯ ಬಗ್ಗೆ ಮಾಹಿತಿ ಲಭ್ಯವಿಲ್ಲ. ಇರುವ ಮಾಹಿತಿಯನ್ನು ಆಧರಿಸಿ ಸಂಶೋಧಕರು ಮೇಲಿನ ಪರಂಪರೆಯನ್ನು ಗುರುತಿಸಿದ್ದಾರೆ. ಕರ್ತೃಗುರುಗಳ ನಂತರ ಮಠದ ಪರಂಪರೆಯು ಈತನಕ ಬೆಳೆದು ಬಂದಿದೆ. ೧೮೭೪ರ ಸುಮಾರಿನಲ್ಲಿ ಅಧಿಕಾರ ನಡೆಸಿದ ಶ್ರೀ ಗುರುಸಿದ್ಧ ಬಸವರಾಜ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ, ೧೯೦೭ರ ವೇಳೆಗೆ ಶ್ರೀ ಸಿದ್ಧವೃಷಭರಾಜ ಶಿವಾಚಾರ್ಯ ಸ್ವಾಮಿಗಳಿಗೆ ಅಧಿಕಾರವನ್ನು ನೀಡಿದರು. ಇವರು ಮೂಲಪೀಠವಾದ ಬಾಳೆಹೊನ್ನೂರಿನ ಜಗದ್ಗುರುಗಳ ಅಪ್ಪಣೆ ಪಡೆದು ಶ್ರೀ ಶಿವರುದ್ರ ಶಿವಾಚಾರ್ಯ ಸ್ವಾಮಿಗಳಿಗೆ ೧೯೨೭ರ ಜೂನ್ ಇಪ್ಪತ್ತೇಳರಂದು ಅಧಿಕಾರವನ್ನು ನೀಡಿದರು. ಇವರು ಪೂರ್ಣಾವಧಿಯಲ್ಲಿ ಮಠದ ಆಡಳಿತವನ್ನು ನಡೆಸಲಾಗದೆ, ಮಠವನ್ನು ತೊರೆದು ಗೃಹಸ್ಥಾಶ್ರಮವನ್ನು ಸೇರಿದರು. ಈ ಸಂದರ್ಭದಲ್ಲಿ ಮಠದ ಪೂರ್ಣ ಆಡಳಿತವನ್ನು ಮೂಲಪೀಠದ ಜಗದ್ಗುರುಗಳಿಗೆ ಒಪ್ಪಿಸಿದರು.

ವಿಭೂತಿಪುರ ಮಠಕ್ಕೆ ಜಗದ್ಗುರು ಶ್ರೀ ಶಿವಾನಂದ ಶಿವಾಚಾರ್ಯ ಭಗವತ್ಪಾದರು ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳನ್ನು ನೇಮಿಸಿದರು. ಇವರು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಬೆಳೆಸಿದ್ದರು. ಇವರು ರಂಭಾಪುರಿ ಪೀಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ, ಬಿಜಾಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ ವಡವಡಿಗೆ ಗ್ರಾಮದ ಶ್ರೀಸುವರ್ಣಲಿಂಗ ಶಿವಾಚಾರ್ಯ ಸ್ವಾಮಿಗಳು ೧೯೫೪ರಲ್ಲಿ ವಿಭೂತಿಪುರ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಗುರುಗಳು ಮಠವನ್ನು ಅಭಿವೃದ್ಧಿಪಡಿಸಿ, ತಮ್ಮ ಉತ್ತರಾಧಿಕಾರಿಗಳನ್ನಾಗಿ ಬಸವನಬಾಗೇವಾಡಿ ತಾಲ್ಲೂಕಿನ ಮನಗೊಳಿಯ ಶ್ರೀ ಬಸವಲಿಂಗಯ್ಯ ಮತ್ತು ಶ್ರೀಮತಿ ಶಾಂತಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳನ್ನು ನೇಮಿಸಿಕೊಂಡರು. ಶ್ರೀ ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ಸಂಕನಾಳು ಗ್ರಾಮದಲ್ಲಿ ಪ್ರೌಢಶಿಕ್ಷಣವನ್ನು ಮಾಡಿ, ಬೆಂಗಳೂರಿನಲ್ಲಿ ಕಾಲೇಜು ಶಿಕ್ಷಣವನ್ನು ಮುಗಿಸಿದರು. ಸಂಸ್ಕೃತ ಎಂ.ಎ ಪದವಿಯಲ್ಲಿ ಚಿನ್ನದ ಪದಕವನ್ನು ಪಡೆದು ಮಠಕ್ಕೆ ಆಗಮಿಸಿ, ೧೯೯೬ರ ಮಾರ್ಚ್ ಮೂರರಂದು ಶ್ರೀ ವಿಭೂತಿಪುರ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡರು. ತಮ್ಮ ಉತ್ತರಾಧಿಕಾರಿಗೆ ಅಧಿಕಾರವನ್ನು ನೀಡಿ ಶ್ರೀ ಸುವರ್ಣಲಿಂಗ ಶಿವಾಚಾರ್ಯ ಸ್ವಾಮಿಗಳು ೨೦೦೧ರಲ್ಲಿ ಲಿಂಗೈಕ್ಯರಾದರು.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ವೀರಭದ್ರಸ್ವಾಮಿ ದೇವಾಲಯದಲ್ಲಿ ನಿತ್ಯ ಎರಡು ವೇಳೆ ಪೂಜೆ, ಪ್ರತಿ ಮಂಗಳವಾರ ಸಂಜೆ ಭಜನೆ ಕಾರ್ಯಕ್ರಮಗಳು ನಡೆಯುತ್ತಿವೆ. ಕಾರ್ತೀಕ, ಶ್ರಾವಣಮಾಸ, ಅಮಾವಾಸ್ಯೆ ಮತ್ತು ಹುಣ್ಣಿಮೆಯಲ್ಲಿ ರುದ್ರಾಭಿಷೇಕದ ಪೂಜೆಯನ್ನು ನಡೆಸಲಾಗುತ್ತಿದೆ. ೧೯೯೦ರಲ್ಲಿ ರೇಣುಕಮೂರ್ತಿಯನ್ನು ಸ್ಥಾಪನೆ ಮಾಡಲಾಗಿದೆ. ನಿತ್ಯ ದಾಸೋಹವು ನಡೆಯುತ್ತಿದೆ.

ಶೈಕ್ಷಣಿಕ ಸೇವೆ: 'ಶ್ರೀ ವೀರಭದ್ರಸ್ವಾಮಿ ವಿದ್ಯಾಸಂಸ್ಥೆ'ಯನ್ನು ಸ್ಥಾಪನೆ ಮಾಡಿದ್ದು, ಇದರಡಿಯಲ್ಲಿ ನರ್ಸರಿ ಶಾಲೆ, ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲೆಗಳನ್ನು ೧೯೮೨ ರಲ್ಲಿ ಪ್ರಾರಂಭಿಸಿದೆ. ಮಠದ ಆಶ್ರಯದಲ್ಲಿ ವೃದ್ಧಾಶ್ರಮವನ್ನು ಪ್ರಾರಂಭಿಸಲಾಗಿದೆ. ಮಠದಲ್ಲಿ ಕಲಿಯುವ ಬಡಮಕ್ಕಳಿಗೆ ಆಶ್ರಯ ಕಲ್ಪಿಸಿ ನೆರವಾಗಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀಮದ್ ವಿಭೂತಿಪುರ ವೀರಸಿಂಹಾಸನ ಮಠ, ವಿಭೂತಿಪುರ, ಮಾರತ್‌ಹಳ್ಳಿ ಅಂಚೆ, ಬೆಂಗಳೂರು-೩೭.

ಶಂಕರದೇವರಮಠ

ಬೆಂಗಳೂರು ನಗರದ ಮನವಾರ್ತೆ ಪೇಟೆಯಲ್ಲಿ ಶ್ರೀ ಶಂಕರದೇವರ ಮಠವು ಅಸ್ತಿತ್ವದಲ್ಲಿದೆ. ಮುನ್ನೂರೈವತ್ತು ವರ್ಷಗಳ ಹಿಂದೆ ಶ್ರೀ ಶಂಕರಣ್ಣನವರ್ ಹಾಗೂ ಶ್ರೀ ಶಿವಣ್ಣನವರ್ ಎಂಬುವರು ಉತ್ತರದ ಕಡೆಯಿಂದ ಹತ್ತಿ ವ್ಯಾಪಾರಕ್ಕೆಂದು

ಬೆಂಗಳೂರಿಗೆ ಆಗಮಿಸಿದ್ದರು. ಇವರುಗಳು ಶಿವಪೂಜಾನಿಷ್ಠರು, ಆಚಾರವಂತ ಶರಣ ಸಂಪ್ರದಾಯ ದವರಾಗಿದ್ದರು. ಗುರುಗಳ ಪಾದೋದಕವಿಲ್ಲದೆ ಪ್ರಸಾದವನ್ನು ಸ್ವೀಕರಿಸುತ್ತಿರಲಿಲ್ಲವಂತೆ. ಇಂತಹ ಧರ್ಮಾಭಿಮಾನಿಗಳು ತಮ್ಮ ಮನೆ ಗುರುಗಳಾದ ಶ್ರೀ ಶಂಕರ ಸ್ವಾಮಿಗಳನ್ನು ಜತೆಯಲ್ಲಿ ಬೆಂಗಳೂರಿಗೆ ಕರೆದುಕೊಂಡು ಬಂದು ಗುರುಗಳಿಗಾಗಿ ಮಠವನ್ನು ಸ್ಥಾಪಿಸಿ ಕೊಡುತ್ತಾರೆ. ಶ್ರೀ ಶಂಕರ ಸ್ವಾಮಿಗಳು ಮಠವನ್ನು ಸ್ಥಾಪಿಸಿದ ಕಾರಣ ಈ ಮಠಕ್ಕೆ 'ಶ್ರೀ ಶಂಕರದೇವರಮಠ' ಎಂಬ ಹೆಸರು ಬಂದಿದೆ. ವಿರಕ್ತಸಂಪ್ರದಾಯದ ಚೀಲಾಳ ಸಮಯದಲ್ಲಿ ಈ ಮಠವು ಬೆಳೆದಿದೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ಶಂಕರ ಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಬಸವಲಿಂಗ ಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಶಂಕರ ಮರಿತೋಂಟದಾರ್ಯ ಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಇಮ್ಮಡಿ ಶಂಕರ ಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಪ್ರೊ. ಶಾಂತಕುಮಾರ ಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಮುಮ್ಮಡಿ ಶಂಕರ ಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ಶಂಕರ ಸ್ವಾಮಿಗಳು ಲಿಂಗೈಕ್ಯರಾಗುವ ಮುನ್ನ ಶ್ರೀ ಬಸವಲಿಂಗ ಸ್ವಾಮಿಗಳಿಗೆ ಅಧಿಕಾರವನ್ನು ನೀಡಿ ಮಠವು ಬೆಳೆಯಲು ಆಶೀರ್ವದಿಸಿದರು. ಇವರ ತರುವಾಯ ಬಂದ ಶ್ರೀ ಶಂಕರ ಮರಿತೋಂಟದಾರ್ಯ ಸ್ವಾಮಿಗಳು ಅಧಿಕಾರ ವಹಿಸಿಕೊಂಡ ಕೆಲವೇ ದಿನಗಳಲ್ಲಿ ಅನಾರೋಗ್ಯದಿಂದ ಲಿಂಗೈಕ್ಯರಾದರು. ಇವರ ತರುವಾಯ ಶ್ರೀ ಇಮ್ಮಡಿ ಶಂಕರಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡರು. ಇವರು ಮಠವನ್ನು ಹೆಚ್ಚು ಅಭಿವೃದ್ಧಿಪಡಿಸಿ, ಪ್ರೊ. ಶ್ರೀ ಶಾಂತಕುಮಾರ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿ ಲಿಂಗೈಕ್ಯರಾದರು.

ತಲಕಾಡು ಸಮೀಪದ ಕೊಪ್ಪಾಲು ಗ್ರಾಮದ ಶ್ರೀ ಬಸಪ್ಪದೇವರು ಮತ್ತು ಶ್ರೀಮತಿ ಶಿವರುದ್ರಮ್ಮನವರ ಪುತ್ರರಾಗಿ ೧೯೨೬ರ ಜನವರಿ ಇಪ್ಪತ್ತರಂದು ಶ್ರೀ ಶಾಂತಕುಮಾರ ಸ್ವಾಮಿಗಳು ಜನಿಸಿದರು. ಮೈಸೂರು ಮತ್ತು ಬೆಂಗಳೂರಿನಲ್ಲಿ ವಿದ್ಯಾಭ್ಯಾಸಮಾಡಿ, ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ಶಕ್ತಿವಿಶಿಷ್ಟಾದ್ವೈತ ವಿಷಯದಲ್ಲಿ ಉನ್ನತ ಶಿಕ್ಷಣವನ್ನು ಪಡೆದು, ವಿದ್ವಾಂಸರಾಗಿ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ಪ್ರಾಧ್ಯಾಪಕ ವೃತ್ತಿಗೆ ಸೇರಿದರು. ವಿದ್ವತ್ ಸಂಪಾದನೆಯಿಂದ ಹೆಸರು ಗಳಿಸಿದ ಗುರುಗಳು, ೧೯೫೬ರಲ್ಲಿ ಶ್ರೀ ಶಂಕರದೇವಮಠದ ಉತ್ತರಾಧಿಕಾರಿಗಳಾಗಿ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಧರ್ಮ ಮತ್ತು ಪ್ರಾಧ್ಯಾಪಕ ವೃತ್ತಿಯನ್ನು ಏಕಕಾಲದಲ್ಲಿ ನಡೆಸಿಕೊಂಡು ಬಂದ ಗುರುಗಳು ಮೂವತ್ತೈದು ವರ್ಷಗಳ ದೀರ್ಘ ಸೇವೆಯ ನಂತರ ನಿವೃತ್ತರಾಗಿದ್ದಾರೆ. ಈಗ ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಮುಮ್ಮಡಿ ಶಂಕರ ಸ್ವಾಮಿಗಳನ್ನು ನೇಮಕ ಮಾಡಿ, ನಿವೃತ್ತ ಜೀವನವನ್ನು ಸಾಗಿಸುತ್ತಿದ್ದಾರೆ.

ತಲಕಾಡು ಸಮೀಪದ ಕೊಪ್ಪಾಲು ಗ್ರಾಮದ ಶ್ರೀ ಗುರುಮಲ್ಲಪ್ಪ ಮತ್ತು ಶ್ರೀಮತಿ ಪುಟ್ಟತಾಯಿಯವರ ಪುತ್ರರಾಗಿ ಜನಿಸಿದ ಶ್ರೀ ಮುಮ್ಮಡಿ ಶಂಕರ ಸ್ವಾಮಿಗಳು, ಹಿರಿಯ ಗುರುಗಳ ಆಶ್ರಯದಲ್ಲಿ ವಿದ್ಯಾಭ್ಯಾಸ ಮಾಡಿ ಪದವೀಧರರಾದರು. ೧೯೯೨ರಲ್ಲಿ ಶ್ರೀ ಶಂಕರದೇವರ ಮಠದ ಪರಂಪರೆಯ ಆರನೆಯ ಗುರುಗಳಾಗಿ ಅಧಿಕಾರವನ್ನು ವಹಿಸಿಕೊಂಡು, ಹಿರಿಯ ಗುರುಗಳ ಮಾರ್ಗದರ್ಶನದಿಂದ ಮಠವನ್ನು ಅಭಿವೃದ್ಧಿಪಡಿಸತೊಡಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ನಾಲ್ಕುಗದ್ದುಗೆಗಳು, ಹುಣಸೆಮಾರನಹಳ್ಳಿಯ ಮಠದಲ್ಲಿ ಒಂದು ಗದ್ದುಗೆ ಸ್ಥಾಪನೆಯಾಗಿವೆ. ಇವುಗಳಿಗೆ ಎರಡೂ ವೇಳೆ ಪೂಜೆ, ಶ್ರಾವಣಮಾಸದಲ್ಲಿ ವಿಶೇಷ ಪೂಜೆ, ಗುರುಗಳ ಪಾದಪೂಜೆ ಹಾಗೂ ಉಪನ್ಯಾಸ ಕಾರ್ಯಕ್ರಮಗಳು ನಡೆಯುತ್ತಿವೆ. ಈ ಸಂದರ್ಭದಲ್ಲಿ ಪಾಲ್ಗೊಳ್ಳುವ ಭಕ್ತರಿಗೆ ಅನ್ನದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಮಠದಲ್ಲಿ ವೀರಶೈವ ವೇದಾಂತ ಕಲಿಯುವ ಮಕ್ಕಳಿಗೆ ಆಶ್ರಯವನ್ನು ಕಲ್ಪಿಸಿಕೊಡಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಮುಮ್ಮಡಿ ಶಂಕರ ಸ್ವಾಮಿಗಳು, ಶ್ರೀ ಶಂಕರದೇವರಮಠ, ಮನೆವಾರ್ತೆಪೇಟೆ, ಬೆಂಗಳೂರು-೫೩.

ಸರ್ಪಭೂಷಣಮಠ

ಬೆಂಗಳೂರು ನಗರದ ಮೆಜೆಸ್ಟಿಕ್‌ನಲ್ಲಿ ಶ್ರೀ ಸರ್ಪಭೂಷಣಮಠವು ಅಸ್ತಿತ್ವದಲ್ಲಿದೆ. ಹಿಂದೆ ಧರ್ಮಾಂಬುಧಿ ಕೆರೆ ಅಥವಾ ದೊಡ್ಡಕೆರೆಯ ಪೂರ್ವಭಾಗದ ಏರಿಯ ಹಿಂಬದಿಯಲ್ಲಿ ವಿರಕ್ತಮಠವು ಸ್ಥಾಪನೆಯಾಗಿತ್ತು. ಶ್ರೀ ಸಪ್ಪಣ್ಣಸ್ವಾಮಿ ಮಠ ಎಂದು ಕರೆಯಲಾಗುತ್ತಿದ್ದ ಮಠವೇ ಇಂದು ಸರ್ಪಭೂಷಣ ಮಠವಾಗಿ ಬೆಳೆದು ನಿಂತಿದೆ. ಈ ಮಠವು ಹತ್ತೊಂಬತ್ತನೆಯ ಶತಮಾನದಲ್ಲಿ ಪ್ರಬುದ್ಧಮಾನಕ್ಕೆ ಬಂದಿತ್ತೆಂದು ಹೇಳಲಾಗುತ್ತದೆ.

ಶ್ರೀ ಸರ್ಪಭೂಷಣ ಶಿವಯೋಗಿಗಳು ಇಲ್ಲಿ ನೆಲೆನಿಲ್ಲುವಮುನ್ನ ಶ್ರೀ ಓಂಕಾರೇಶ್ವರಗದ್ದುಗೆಮಠ ಅಥವಾ ಕೆರೆನಂಜುಂಡಯ್ಯನಮಠ ಎಂಬ ಹೆಸರುಗಳಿಂದ ಕರೆಯಲ್ಪಡುತ್ತಿತ್ತು. ಹತ್ತೊಂಬತ್ತನೆಯ ಶತಮಾನದ ಅಂತ್ಯದ ವೇಳೆಗೆ ಶ್ರೀಸರ್ಪಭೂಷಣ ಶಿವಯೋಗಿಗಳು ಲೋಕಸಂಚಾರ ಕೈಗೊಂಡು ಇಲ್ಲಿಗೆ ಬಂದು ನೆಲೆಸಿ, ಧಾರ್ಮಿಕ ಕಾರ್ಯಗಳನ್ನು ಕೈಗೊಂಡರು. ಶ್ರೀ ಸರ್ಪಭೂಷಣ ಶಿವಯೋಗಿಗಳು ಪಂಡಿತರಾಗಿ ಹೆಸರು ಗಳಿಸಿದ್ದ ಕಾರಣ ಶ್ರೀ ಸರ್ಪಭೂಷಣಮಠ ಎಂದು ಹೆಸರು ಪಡೆಯಿತು.

ಪರಂಪರೆ:	೧. ಶ್ರೀ ಮ.ನಿ.ಪ್ರ. ಸರ್ಪಭೂಷಣ ಶಿವಯೋಗಿಗಳು	(ಕ್ರಿ.ಶ. - ೧೮೩೯)
	೨. ಶ್ರೀ ಮ.ನಿ.ಪ್ರ. ಫಾಲಲೋಚನ ಸ್ವಾಮಿಗಳು	(ಕ್ರಿ.ಶ. ೧೮೩೯ - ೧೮೬೭)
	೩. ಶ್ರೀ ಮ.ನಿ.ಪ್ರ. ಗುರುಸ್ವಾಮಿಗಳು	(ಕ್ರಿ.ಶ. ೧೮೬೮ - ೧೮೯೯)
	೪. ಶ್ರೀ ಮ.ನಿ.ಪ್ರ. ಚನ್ನಬಸವ ಸ್ವಾಮಿಗಳು	(ಕ್ರಿ.ಶ. ೧೮೮೬ - ೧೯೨೭)
	೫. ಶ್ರೀ ಮ.ನಿ.ಪ್ರ. ಬಸವಲಿಂಗ ಸ್ವಾಮಿಗಳು	(ಕ್ರಿ.ಶ. ೧೯೨೭ - ೧೯೨೮)
	೬. ಶ್ರೀ ಮ.ನಿ.ಪ್ರ. ಮಹಾದೇವ ಸ್ವಾಮಿಗಳು	(ಕ್ರಿ.ಶ. ೧೯೩೮ - ೧೯೬೧)
	೭. ಶ್ರೀ ಮ.ನಿ.ಪ್ರ. ಶಿವಕುಮಾರ ಸ್ವಾಮಿಗಳು	(ಕ್ರಿ.ಶ. ೧೯೬೩ - ೧೯೮೫)
	೮. ಶ್ರೀ ಮ.ನಿ.ಪ್ರ. ಮಲ್ಲಿಕಾರ್ಜುನ ಸ್ವಾಮಿಗಳು	(ಕ್ರಿ.ಶ. ೧೯೮೬ -)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಶ್ರೀ ಸರ್ಪಭೂಷಣ ಶಿವಯೋಗಿಗಳು ಬೆಂಗಳೂರು ಸಮೀಪದ ಚಿಕ್ಕಬಾಣಾವರದ ಶ್ರೀ ಮಲ್ಲಿಕಾರ್ಜುನಪ್ಪ ಮತ್ತು ಶ್ರೀಮತಿ ಮಹದೇವಮ್ಮನವರ ಪುತ್ರರಾಗಿ ಜನಿಸಿದರು. ಇವರ ಮೂಲ ಹೆಸರು ಸಪ್ಪಣ್ಣ. ಇವರು ತಿಪ್ಪಶೆಟ್ಟಿಮಠದ ಆಗಿನ ಗುರುಗಳಾಗಿದ್ದ ಶ್ರೀ ಗುರುಸಿದ್ಧ ಸ್ವಾಮಿಗಳಿಂದ ಶಿವದೀಕ್ಷೆಯನ್ನು ಪಡೆದು, ಶ್ರೀ ಸರ್ಪಭೂಷಣ ಶಿವಯೋಗಿಗಳೆಂದು ಅಭಿಧಾನ ಪಡೆದು, ಆಧ್ಯಾತ್ಮ ಸಾಧನೆಗೆ ಲೋಕಸಂಚಾರಕ್ಕೆ ಹೊರಟರು. ಶ್ರೀ ಸರ್ಪಭೂಷಣ ಶಿವಯೋಗಿಗಳು ದೇಶದ ಪವಿತ್ರ ಕ್ಷೇತ್ರಗಳಲ್ಲಿ ಸಂಚರಿಸಿ ೧೮೨೮ರ ವೇಳೆಗೆ ಬೆಂಗಳೂರಿಗೆ ಆಗಮಿಸಿದಾಗ ಗುರುಗಳಾದ ಶ್ರೀ ಗುರುಸಿದ್ಧ ಸ್ವಾಮಿಗಳು ಲಿಂಗೈಕ್ಯರಾಗಿದ್ದರು. ಕೊನೆ ದಿನಗಳಲ್ಲಿ ಗುರುಗಳ ಸಾನ್ನಿಧ್ಯದಲ್ಲಿದ್ದು ಸೇವೆ ಗೈದಿದ್ದ ಶ್ರೀ ಇಮ್ಮಡಿ ಗುರುಸಿದ್ಧ ಸ್ವಾಮಿಗಳಿಗೆ ತಿಪ್ಪಶೆಟ್ಟಿಮಠದ ಅಧಿಕಾರವನ್ನು ಕೊಡಿಸಿದ ಶ್ರೀ ಸರ್ಪಭೂಷಣ ಶಿವಯೋಗಿಗಳು ಅಧ್ಯಯನ ನಿರತರಾದರು. ಕೆಲವು ದಿನಗಳ ನಂತರ ಪುನಃ ಲೋಕಸಂಚಾರ ಕೈಗೊಂಡು ಶ್ರೀಶೈಲ, ಉರುವಕೊಂಡ ಮುಂತಾದ ಸ್ಥಳಗಳಲ್ಲಿ ಸಂಚರಿಸಿ ಮೂಲಸ್ಥಳವಾದ ಬೆಂಗಳೂರಿಗೆ ಆಗಮಿಸಿದರು.

ಶ್ರೀ ಓಂಕಾರೇಶ್ವರ ಗದ್ದುಗೆಮಠ ಅಥವಾ ಶ್ರೀ ಕೆರೆನಂಜುಂಡಯ್ಯನಮಠ ಎಂದು ಕರೆಯಲಾಗುತ್ತಿದ್ದ ಮಠಕ್ಕೆ ಆಗಮಿಸಿದ ಶ್ರೀ ಸರ್ಪಭೂಷಣ ಶಿವಯೋಗಿಗಳು ವಾಸ್ತವ್ಯವನ್ನು ಕೈಗೊಂಡ ಆರು ತಿಂಗಳಲ್ಲಿಯೇ ಲಿಂಗೈಕ್ಯರಾದರೆಂದು ತಿಳಿದು ಬರುತ್ತದೆ. ಶ್ರೀ ಸರ್ಪಭೂಷಣ ಶಿವಯೋಗಿಗಳು ಶಿವಜ್ಞಾನಿಗಳೆಂದೇ ಹೆಸರು ಗಳಿಸಿದ್ದರು. ಇವರು ಕೈವಲ್ಯಕಲ್ಪವಲ್ಲರಿ, ಜ್ಞಾನಶತಕಂ, ಭುಜಂಗಮಾಲಾ ಶಿವಸಂಕೀರ್ತನಂ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರ ಗದ್ದುಗೆಯನ್ನು ಶ್ರೀ ಸರ್ಪಭೂಷಣಮಠದ ಆವರಣದಲ್ಲಿ ನಿರ್ಮಿಸಲಾಗಿದೆ. ಮೂಲಮಠಕ್ಕೆ ಹೊಂದಿಕೊಂಡಂತೆ ಈ ಗದ್ದುಗೆಗೆ ಕಲ್ಲಿನ ಮಂಟಪವನ್ನು ನಿರ್ಮಿಸಲಾಗಿದೆ. ಇವರು ಲಿಂಗೈಕ್ಯರಾದ ಮೇಲೆ ಶ್ರೀ ಫಾಲಲೋಚನ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಬೆಳೆಸಿದರು. ಇವರು ಶ್ರೀ ಸರ್ಪಭೂಷಣ ಶಿವಯೋಗಿಗಳು ಸಂಚಾರದಲ್ಲಿದ್ದ ಸಂದರ್ಭದಲ್ಲಿ ಶ್ರೀಶೈಲದಲ್ಲಿ ಪರಿಚಯವಾಗಿ ಗುರುಗಳ ಜತೆಯಲ್ಲಿ ಆಗಮಿಸಿದ್ದರು. ಇವರ ನಂತರ ಶ್ರೀ ಗುರುಸ್ವಾಮಿಗಳು, ತದನಂತರ ಶ್ರೀ ಚನ್ನಬಸವ ಸ್ವಾಮಿಗಳು

ಅಧಿಕಾರಕ್ಕೆ ಬಂದರು.

ಪರಂಪರೆಯ ಆರನೆಯ ಗುರುಗಳಾದ ಶ್ರೀ ಮಹಾದೇವ ಸ್ವಾಮಿಗಳ ಕಾಲದಲ್ಲಿ ಸಂಸ್ಕೃತ ಪಾಠಶಾಲೆ ಹಾಗೂ ಉಚಿತ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲಾಯಿತು. ಇದರಿಂದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಅನುಕೂಲ ವಾಯಿತು. ಮಠದಲ್ಲಿ ಶಿವಾನುಭವ ತರಗತಿಗಳನ್ನು ಪ್ರಾರಂಭಿಸಿದರು. ಬಸವಜಯಂತಿ ಹಾಗೂ ಅಕ್ಕಮಹಾದೇವಿ ಜಯಂತಿ ಯನ್ನು ನಡೆಸಲು ಪ್ರಾರಂಭಿಸಿ, ಉಪನ್ಯಾಸ ಮತ್ತು ದಾಸೋಹದಿಂದ ಭಕ್ತರನ್ನು ಸಂಸ್ಕಾರಗೊಳಿಸಿದರು. ಗುರುಗಳು ಕನ್ನಡ ಸಾಹಿತ್ಯ ಪರಿಷತ್‌ನೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದರಿಂದ ಮಠವು ಧಾರ್ಮಿಕ ಹಾಗೂ ಶೈಕ್ಷಣಿಕ ಕ್ಷೇತ್ರದ ಜತೆಗೆ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕವಾಗಿ ಬೆಳೆಯಲು ಅನುಕೂಲವಾಯಿತು. ಈ ರೀತಿ ಮಠವನ್ನು ಬೆಳೆಸಿದ ಶ್ರೀ ಮಹಾದೇವ ಸ್ವಾಮಿಗಳು ೧೯೬೧ರ ನವೆಂಬರ್ ಹನ್ನೆರಡರಂದು ಲಿಂಗೈಕ್ಯರಾದರು. ನಂತರ ಭಕ್ತರ ಅಪೇಕ್ಷೆಯ ಮೇರೆಗೆ ಶ್ರೀ ಶಿವಕುಮಾರ ಸ್ವಾಮಿಗಳಿಗೆ ೧೯೬೨ರ ಡಿಸೆಂಬರ್ ಎರಡರಂದು ಪಟ್ಟಾಧಿಕಾರ ಮಾಡಲಾಯಿತು. ಇವರು ೧೯೮೫ರ ನವೆಂಬರ್ ಇಪ್ಪತ್ತರಂದು ಅಪಘಾತದಲ್ಲಿ ಲಿಂಗೈಕ್ಯರಾದರು. ನಂತರ ಕೆರೂರು ಕನಕೇರಿಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ೧೯೮೫ರ ಜನವರಿ ಹದಿನೈದರಂದು ಪಟ್ಟಾಧಿಕಾರವನ್ನು ವಹಿಸಿಕೊಂಡರು.

ಇವರ ಕಾಲದಲ್ಲಿ ಮಠವು ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ವಾಗಿ ಹೆಚ್ಚು ಹೆಸರು ಮಾಡಿದೆ. ಮಠದಲ್ಲಿ ಪ್ರತಿ ಶ್ರಾವಣಮಾಸದಲ್ಲಿ ನಾಡಿನ ಖ್ಯಾತ ವಿದ್ವಾಂಸರುಗಳಿಂದ ವೀರಶೈವಧರ್ಮ-ಸಾಹಿತ್ಯ-ಸಂಸ್ಕೃತಿಯನ್ನು ಕುರಿತು ವಿಶೇಷ ಉಪನ್ಯಾಸ ಮಾಲಿಕೆಯನ್ನು ಏರ್ಪಡಿಸಿದ್ದರು. ಪ್ರತಿ ಯುಗಾದಿಯಲ್ಲಿ ಅಲ್ಲಮಪ್ರಭು, ನಿಜಗುಣರು ಹಾಗೂ ಶ್ರೀ ಸರ್ಪಭೂಷಣ ಶಿವಯೋಗಿಗಳ ಜಯಂತಿಯನ್ನು ವೈಭವದಿಂದ ಆಚರಿಸುತ್ತಿದ್ದರು. ಮಠದಲ್ಲಿ ಆಡಳಿತಾತ್ಮಕ ಗೊಂದಲ ಉಂಟಾಗಿದೆ. ಆದರೂ ಮಠದಲ್ಲಿ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಚಟುವಟಿಕೆಗಳು ಎಂದಿನಂತೆ ನಡೆಯುತ್ತಿವೆ. ಅಲ್ಲದೆ ವಿದ್ಯಾರ್ಥಿನಿಲಯವು ಸಹ ಎಂದಿನಂತೆ ನಡೆಯುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಮಲ್ಲಿಕಾರ್ಜುನ ಸ್ವಾಮಿಗಳು, ಶ್ರೀ ಸರ್ಪಭೂಷಣಮಠ, ಮೆಜೆಸ್ಟಿಕ್, ಬೆಂಗಳೂರು.
ಆಧಾರ: ಬೆಂಗಳೂರು ನಗರದ ವೀರಶೈವ ಮಠಗಳು ಒಂದು ಸಾಂಸ್ಕೃತಿಕ ಅಧ್ಯಯನ, ಲೇಖಕರು : ಡಾ. ಬಿ.ಸಿ. ವೀರಪ್ಪ

ಹುಣಸಮಾರನಹಳ್ಳಿ ಸಂಸ್ಥಾನಮಠ

ಬೆಂಗಳೂರು ನಗರ ಜಿಲ್ಲೆಯ ಉತ್ತರ ವಲಯದ ಹುಣಸಮಾರನಹಳ್ಳಿಯಲ್ಲಿ ಪುರಾತನ ಕಾಲದ ಶ್ರೀಮದ್ ದೇವಣಾ ಪುರದ ದೇವಸಿಂಹಾಸನ ಹುಣಸಮಾರನಹಳ್ಳಿ ಸಂಸ್ಥಾನ ಮಠವು ಅಸ್ತಿತ್ವದಲ್ಲಿದೆ. ಶ್ರೀಶೈಲ ಪೀಠದ ಶಾಖಾಮಠವಾದ ಈ ಮಠವು ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ.

ಮಠ ಸ್ಥಾಪನೆ: ಹದಿನೈದನೆಯ ಶತಮಾನದಲ್ಲಿ ಶ್ರೀಶೈಲ ಕ್ಷೇತ್ರದಿಂದ ಬೆಂಗಳೂರು ಪ್ರಾಂತ್ಯಕ್ಕೆ ಆಗಮಿಸಿದ್ದ ಜಗದ್ಗುರು ಶ್ರೀ ಪರ್ವತರಾಜ ಶಿವಾಚಾರ್ಯ ಸ್ವಾಮಿಗಳು ನಂದಿಬೆಟ್ಟದಲ್ಲಿ ಕೆಲವು ದಿನ ತಪಸ್ಸನ್ನು ಆಚರಿಸಿ ಭಕ್ತರಿಗೆ ಧರ್ಮೋಪದೇಶವನ್ನು ಮಾಡಿದರು. ನಂತರ ದಕ್ಷಿಣಾಭಿಮುಖವಾಗಿ ಸಂಚರಿಸಿ ದೇವನಹಳ್ಳಿಗೆ ಬಂದು ನಂತರ ಹುಣಸಮಾರನಹಳ್ಳಿಗೆ ಆಗಮಿಸಿ, ಇಲ್ಲಿ ಮಠವನ್ನು ಸ್ಥಾಪಿಸಿರುತ್ತಾರೆ ಎಂದು ಹೇಳಲಾಗುತ್ತಿದೆ. ಗುರುಗಳು ಈ ನಾಡಿಗೆ ಆಗಮಿಸಿದ ಸಂದರ್ಭದಲ್ಲಿ ಸೊಣ್ಣ ಭೈರೇಗೌಡ ಎಂಬುವನು ಪಾಳೆಗಾರನಾಗಿದ್ದನು. ಈತನು ದೇವನಹಳ್ಳಿಯ ಉತ್ತರದಿಕ್ಕಿನ ಪರ್ವತದಲ್ಲಿ ಅನುಷ್ಠಾನಕ್ಕೆ ಕುಳಿತಿದ್ದ ಶ್ರೀ ಶಿವಯೋಗಿ ಪರ್ವತರಾಜ ಶಿವಾಚಾರ್ಯರನ್ನು ದೇವನಹಳ್ಳಿಗೆ ಬರಮಾಡಿಕೊಂಡು ಗೌರವಿಸುತ್ತಾನೆ. ಅಲ್ಲದೆ ಇಲ್ಲಿಯೇ ನೆಲೆಸಿ ಧರ್ಮಕಾರ್ಯಗಳನ್ನು ಕೈಗೊಂಡು ಸಮಾಜವನ್ನು ಉದ್ಧರಿಸಬೇಕೆಂದು ಬಿನ್ನವಿಸಿಕೊಳ್ಳುತ್ತಾನೆ. ಗುರುಗಳ ವಾಸ್ತವ್ಯಕ್ಕೆ ಸಕಲ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟು, ಮಠವನ್ನು ಸ್ಥಾಪಿಸಿ ಕೊಡುತ್ತಾನೆ. ಅಂದು ಸ್ಥಾಪನೆಗೊಂಡ ಮಠವು ಈತನಕವೂ ಬೆಳೆದು, ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳನ್ನು ನಡೆಸುತ್ತಾ ಬಂದಿದೆ.

ಪರಂಪರೆ: ೧. ಷ.ಬ್ರ.ಶ್ರೀ ಶಿವಯೋಗಿ ಪರ್ವತರಾಜ ಶಿವಾಚಾರ್ಯ ಸ್ವಾಮಿಗಳು (೧೫೩೦೬-೧೫೪೪೬)

೨. ಷ.ಬ್ರ.ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು (೧೫೪೬-೧೫೭೬)
೩. ಷ.ಬ್ರ.ಶ್ರೀ ಗುರುಚನ್ನಬಸವ ಶಿವಾಚಾರ್ಯ ಸ್ವಾಮಿಗಳು (೧೫೭೬-೧೬೧೬)
೪. ಷ.ಬ್ರ.ಶ್ರೀ ಎರಡನೆಯ ಪರ್ವತರಾಜ ಶಿವಾಚಾರ್ಯ ಸ್ವಾಮಿಗಳು (೧೬೧೬-೧೬೯೬)
೫. ಷ.ಬ್ರ.ಶ್ರೀ ಮುಪ್ಪಿನನಂಜೆ ಶಿವಾಚಾರ್ಯ ಸ್ವಾಮಿಗಳು (೧೬೯೬-೧೭೪೬)
೬. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು (೧೭೪೬-೧೭೮೦)
೭. ಷ.ಬ್ರ.ಶ್ರೀ ಪರ್ವತ ಶಿವಾಚಾರ್ಯ ಸ್ವಾಮಿಗಳು (೧೭೮೦-೧೮೨೫)
೮. ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು (೧೮೨೫-೧೮೩೪)
೯. ಷ.ಬ್ರ.ಶ್ರೀ ಬಸವರಾಜ ಶಿವಾಚಾರ್ಯ ಸ್ವಾಮಿಗಳು (೧೮೩೪-೧೮೭೦)
೧೦. ಷ.ಬ್ರ.ಶ್ರೀ ಮುಪ್ಪಿನ ಶಿವಾಚಾರ್ಯ ಸ್ವಾಮಿಗಳು (೧೮೭೦-೧೯೨೬)
೧೧. ಷ.ಬ್ರ.ಶ್ರೀ ಎರಡನೆಯ ಪರ್ವತ ಶಿವಾಚಾರ್ಯ ಸ್ವಾಮಿಗಳು (೧೯೨೬-)
೧೨. ಷ.ಬ್ರ.ಶ್ರೀ ಪಟ್ಟದ ನಂಜೆ ಶಿವಾಚಾರ್ಯ ಸ್ವಾಮಿಗಳು (೧೯೧೧-೧೯೪೭)
೧೩. ಷ.ಬ್ರ.ಶ್ರೀ ಪಟ್ಟದ ಪರ್ವತರಾಜ ಶಿವಾಚಾರ್ಯ ಸ್ವಾಮಿಗಳು (೧೯೫೬-)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳ ತರುವಾಯ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಅಧಿಕಾರಕ್ಕೆ ಬಂದರು. ಇವರು ಮಹಾತಪೋನಿಷ್ಠರಾಗಿ, ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ ಧರ್ಮವನ್ನು ಪ್ರಚಾರಪಡಿಸಿದ್ದರು. ಗುರುಗಳು ಲೋಕಸಂಚಾರಕ್ಕೆಂದು ಹೋದ ಸಂದರ್ಭದಲ್ಲಿ ಬೆಟ್ಟಹಲಸೂರಿನಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ತರುವಾಯ ಶ್ರೀ ಚನ್ನಬಸವ ಸ್ವಾಮಿಗಳನ್ನು ಅಧಿಕಾರಕ್ಕೆ ತರಲಾಗಿದೆ. ಇವರು ಆಯುರ್ವೇದ ಪಂಡಿತರಾಗಿ, ಶಿವಪೂಜಾನಿಷ್ಠರಾಗಿ ಭಕ್ತರ ಭವರೋಗಗಳನ್ನು ನಿವಾರಣೆ ಮಾಡಬಲ್ಲಂತಹ ಮಹಾಸಾಧಕರಾಗಿದ್ದರು. ಇವರು ಲೋಕಸಂಚಾರದಲ್ಲಿದ್ದ ಸಂದರ್ಭದಲ್ಲಿ ದೇವನಹಳ್ಳಿ ಸಮೀಪದ ವಿಜಯಪುರದಲ್ಲಿ ಲಿಂಗೈಕ್ಯರಾದರು. ಇವರ ಗದ್ದುಗೆಯನ್ನು ಅಲ್ಲೇ ಸ್ಥಾಪಿಸಲಾಗಿದೆ. ನಂತರ ಶ್ರೀಪರ್ವತರಾಜ ಶಿವಾಚಾರ್ಯ ಸ್ವಾಮಿಗಳನ್ನು ಪಟ್ಟಾಧಿಕಾರಕ್ಕೆ ತರಲಾಗಿದೆ. ತಪೋನಿಷ್ಠರಾಗಿ ಯಾವಾಗಲೂ ತಪಸ್ಸಿನಲ್ಲಿಯೇ ಕಾಲ ಕಳೆಯುತ್ತಿದ್ದ ಇವರು ಹುಲಿಯ ಮೇಲೆ ಸಂಚರಿಸುತ್ತಿದ್ದ ಕಾರಣ, ಶ್ರೀ ಹುಲಿಕಂತೆ ಸ್ವಾಮಿಗಳು ಎಂದೂ ಸಹ ಭಕ್ತರು ರೂಢಿಗತವಾಗಿ ಕರೆಯುತ್ತಿದ್ದರು. ಇವರೂ ನಂದಿಬೆಟ್ಟದಲ್ಲಿ ಅನುಷ್ಠಾನ ಕೈಗೊಂಡ ಸಂದರ್ಭದಲ್ಲಿ ಲಿಂಗೈಕ್ಯರಾಗಿದ್ದು, ಇವರ ಗದ್ದುಗೆಯನ್ನು ನಂದಿ ಕ್ಷೇತ್ರದಲ್ಲಿ ಸ್ಥಾಪಿಸಲಾಗಿದೆ. ನಂತರ ಶ್ರೀ ಮುಪ್ಪಿನ ನಂಜೇಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡರು. ಇವರು ಮಹಾ ಪ್ರಭಾವಿಗಳಾಗಿ, ವಾಕ್‌ಸಿದ್ಧಿಯನ್ನು ಪಡೆದ ಮಹಾಪುರುಷರಾಗಿದ್ದರು. ಮೈಸೂರಿನ ಅರಸರು ಮತ್ತು ಶ್ರೀರಂಗಪಟ್ಟಣದ ಹೈದರಾಲಿ ಗುರುಗಳ ಆಶೀರ್ವಾದ ಪಡೆದು ಹೋಗಿದ್ದರೆಂದು ಹೇಳಲಾಗುತ್ತಿದೆ. ಇವರು ಲೋಕ ಸಂಚಾರದಲ್ಲಿದ್ದಾಗ ಹೊಸೂರು ತಾಲ್ಲೂಕು ಗೂಂಬಾಳಾಪುರದಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಬಂದ ಶ್ರೀ ಬಸವಲಿಂಗ ಸ್ವಾಮಿಗಳು ಮಠದಲ್ಲಿ ನಡೆಯುತ್ತಿದ್ದ ಧಾರ್ಮಿಕ ಆಚರಣೆಗಳು ಮತ್ತು ಆಡಳಿತ ವಿಚಾರಗಳ ಕಡೆಗೆ ಗಮನಕೊಟ್ಟು ಮಠದ ಆಡಳಿತಕ್ಕೆ ಶಿಸ್ತನ್ನು ತಂದುಕೊಟ್ಟರು. ಇವರ ನಂತರ ಶ್ರೀ ಪರ್ವತ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠದ ಆಶ್ರಯದಲ್ಲಿದ್ದ ಚನ್ನಬಸವ ದೇವಾಲಯವನ್ನು ಜೀರ್ಣೋದ್ಧಾರ ಮಾಡಿ, ಚಂದ್ರಮೌಳೇಶ್ವರಸ್ವಾಮಿ ಮತ್ತು ಚಕ್ರರಾಜೇಶ್ವರಿ ದೇವಿಯನ್ನು ಮಠದಲ್ಲಿ ಪ್ರತಿಷ್ಠಾಪಿಸಿದರು. ಇವರ ಅಧಿಕಾರಾವಧಿಯಲ್ಲಿ ಮಠಕ್ಕೆ ಹೆಚ್ಚು ರಾಜಾಶ್ರಯ ದೊರೆಯಿತು.

ಇವರ ನಂತರ ಶ್ರೀ ಚನ್ನವೀರ ಸ್ವಾಮಿಗಳು ಅಧಿಕಾರಕ್ಕೆ ಬಂದರು. ಇವರು ನ್ಯಾಯ ಪ್ರವೀಣರಾಗಿದ್ದು, ಇಲ್ಲಿ ನಡೆಯುತ್ತಿದ್ದ ಅನೇಕ ವ್ಯಾಜ್ಯಗಳನ್ನು ಬಗೆಹರಿಸಿ ಇಲ್ಲಿನ ಆಡಳಿತಕ್ಕೆ ನೆರವಾಗಿದ್ದರು. ಇವರ ಕಾಲದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಅನೇಕ ದತ್ತಿ ನಿಧಿ ಹಾಗೂ ಜಮೀನನ್ನು ಉಂಬಳಿಯಾಗಿ ನೀಡಿ ಮಠವು ಅಭಿವೃದ್ಧಿಯಾಗಲು ಕಾರಣಕರ್ತರಾದರು. ಗುರುಗಳು ಇವರ ನೆರವು ಪಡೆದು, ಈಗಿನ ವಿಜಯಪುರದಲ್ಲಿ ಮಹಾಂತಿನ ಮಠವನ್ನು ಸ್ಥಾಪಿಸಿದರು. ಇಲ್ಲಿಗೆ ಶ್ರೀ ಗುರುಬಸವ ದೇವರನ್ನು ನೇಮಿಸಿ ಹುಣಸಮಾರನಹಳ್ಳಿಗೆ ಆಗಮಿಸಿದರು. ಈ ರೀತಿ ಧಾರ್ಮಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಶ್ರಮಿಸಿದ ಗುರುಗಳು ೧೮೩೪ರಲ್ಲಿ ಲಿಂಗೈಕ್ಯರಾದರು. ಇವರ ನಂತರ ಶ್ರೀ ಬಸವರಾಜ ಸ್ವಾಮಿಗಳು ಅಧಿಕಾರಕ್ಕೆ ಬಂದು ಧರ್ಮ ಕಾರ್ಯಗಳನ್ನು ನಡೆಸಿ, ಬೆಂಗಳೂರಿನ ನರಗುಂದ ದೇವರ ಮಠದಲ್ಲಿ ಲಿಂಗೈಕ್ಯರಾದರು. ನಂತರ ಪರಂಪರೆಯ ಹತ್ತು ಮತ್ತು

ಹನ್ನೊಂದನೆಯ ಗುರುಗಳಾಗಿ ಶ್ರೀ ಮುಪ್ಪಿನ ಸ್ವಾಮಿಗಳು ಹಾಗೂ ಶ್ರೀ ಪರ್ವತ ಸ್ವಾಮಿಗಳು ಅಧಿಕಾರಕ್ಕೆ ಬಂದರು.

ಇವರ ನಂತರ ಶ್ರೀ ಪಟ್ಟದ ನಂಜೇ ಸ್ವಾಮಿಗಳು ಅಧಿಕಾರಕ್ಕೆ ಬಂದರು. ಇವರು ಮಾಧ್ಯಮಿಕ ಶಿಕ್ಷಣದ ಜತೆಗೆ ವೇದ,ಸಂಸ್ಕೃತ ವಿದ್ಯಾಭ್ಯಾಸವನ್ನು ಪೂರೈಸಿದರು. ಇವರ ಕಾಲದಲ್ಲಿ ಮಠವು ಸರ್ವಾಂಗೀಣವಾಗಿ ಅಭಿವೃದ್ಧಿಯಾಗಿದೆ. ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಿ ಕಲಿಯುವ ಬಡಮಕ್ಕಳಿಗೆ ನೆರವಾಗಿದ್ದಾರೆ. ಇವರು ನೂರಇಪ್ಪತ್ತೆರಡು ಎಕರೆ ಜಮೀನನ್ನು ಖರೀದಿಸಿ, ಶಿಥಿಲಗೊಂಡಿದ್ದ ಮಠದ ಕಟ್ಟಡವನ್ನು ನವೀಕರಿಸಿದ್ದಾರೆ. ಮಠಕ್ಕೆ ಮಹಾದ್ವಾರ, ಭವ್ಯವಾದ ದರ್ಬಾರ ಹಾಲನ್ನು ನಿರ್ಮಿಸಿ ಮಠದ ಭವ್ಯತೆಯನ್ನು ಹೆಚ್ಚಿಸಿದ್ದಾರೆ. ಇವರು ೧೯೧೩ರ ಆಗಸ್ಟ್ ಎಂಟರಂದು ಲಿಂಗೈಕ್ಯರಾದರು. ಇವರ ನಂತರ ಪಟ್ಟದ ಶ್ರೀ ಪರ್ವತ ರಾಜೇಂದ್ರ ಶಿವಾಚಾರ್ಯ ಸ್ವಾಮಿಗಳು ಪರಂಪರೆಯ ಹದಿಮೂರನೆಯ ಗುರುಗಳಾಗಿ ೧೯೫೭ರಲ್ಲಿ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಗುರುಗಳು ವಿಶಿಷ್ಟಾದ್ವೈತ, ವೇದಾಂತ ವಿದ್ವಾನರಾಗಿದ್ದಾರೆ. ಮಠವನ್ನು ಆಧುನಿಕ ರೀತಿಗೆ ಅನುಗುಣವಾಗಿ ಅಭಿವೃದ್ಧಿಪಡಿಸಿದ್ದಾರೆ. ೧೯೭೧ರಲ್ಲಿ ಪ್ರೌಢಶಾಲೆಯನ್ನು ಪ್ರಾರಂಭಿಸಿ, ಶಿಕ್ಷಣ ಸೇವೆಗೂ ಮಠ ಮುಂದಾಗುವಂತೆ ಮಾಡಿದರು.

ಧಾರ್ಮಿಕ ಕಾರ್ಯಗಳು: ಮಠದಲ್ಲಿ ನಿತ್ಯ ಎರಡೂ ವೇಳೆ ಗದ್ದುಗೆಗಳಿಗೆ ಪೂಜೆ, ಶ್ರಾವಣ ಮತ್ತು ಕಾರ್ತೀಕ ಮಾಸದಲ್ಲಿ ವಿಶೇಷ ಪೂಜೆಯನ್ನು ಮಾಡಲಾಗುತ್ತಿದೆ. ವರ್ಷಕ್ಕೊಮ್ಮೆ ನಡೆಯುವ ಜಾತ್ರಾ ಮಹೋತ್ಸವದಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ನಡೆಸಲಾಗುತ್ತಿದೆ. ಮಠದ ವತಿಯಿಂದ ಧಾರ್ಮಿಕ ಪ್ರಚಾರ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಮಠದ ಆವರಣದಲ್ಲಿ ಜಗದ್ಗುರು ಶ್ರೀ ಪಂಡಿತಾರಾಧ್ಯರ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಚಂದ್ರಮೌಳೇಶ್ವರ ದೇವಸ್ಥಾನದ ಧಾರ್ಮಿಕ ಕಾರ್ಯಗಳನ್ನು ಮಠವೇ ನಿರ್ವಹಿಸುತ್ತಿದೆ. ಜಾತ್ರಾ ಸಂದರ್ಭದಲ್ಲಿ ಅನ್ನದಾಸೋಹವನ್ನು ನಡೆಸಲಾಗುತ್ತಿದೆ. ಶಾಖಾಮಠಗಳಲ್ಲಿ ಧಾರ್ಮಿಕ ಕಾರ್ಯಗಳು ವ್ಯವಸ್ಥಿತವಾಗಿ ನಡೆಯುವಂತೆ ಮಾಡಿದ್ದಾರೆ.

ಶೈಕ್ಷಣಿಕ ಸೇವೆ: ಮಠವು ೧೯೭೧ರಲ್ಲಿ ಶಿಕ್ಷಣ ಕ್ಷೇತ್ರಕ್ಕೂ ಪಾದಾರ್ಪಣ ಮಾಡಿದೆ. ಈಗಿನ ಗುರುಗಳ ಇಚ್ಚಾಶಕ್ತಿಯ ಫಲವಾಗಿ ೧೯೮೨ರಲ್ಲಿ ಪದವಿಪೂರ್ವ ಕಾಲೇಜು ಹಾಗೂ ೧೯೯೮ರಲ್ಲಿ ಪ್ರಥಮ ದರ್ಜೆ ಕಾಲೇಜನ್ನು ಸ್ಥಾಪಿಸಲಾಗಿದೆ. ಇದರಿಂದ ಈ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗಿದ್ದು, ಸುತ್ತಮುತ್ತಲಿನ ಐವತ್ತುಹಳ್ಳಿಗಳ ಎಂಟುನೂರು ವಿದ್ಯಾರ್ಥಿಗಳು ಇದರ ಲಾಭವನ್ನು ಪಡೆಯುತ್ತಿದ್ದಾರೆ. ೧೯೮೪ ರಲ್ಲಿಯೇ ಮಠದ ವತಿಯಿಂದ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಲಾಗಿತ್ತು. ಇಂದಿಗೂ ಇದನ್ನು ಮುಂದುವರೆಸಿಕೊಂಡು ಬಂದಿದ್ದು ಕಲಿಯುವ ಬಡಮಕ್ಕಳಿಗೆ ನೆರವಾಗಿದೆ. ಹುಣಸೆಮಾರನ ಹಳ್ಳಿಯಲ್ಲಿ ಕಾಲೇಜು ಮತ್ತು ಶಿಕ್ಷಣ ಸಂಸ್ಥೆಗಳಿಗಾಗಿ ನಿರ್ಮಿಸಲ್ಪಟ್ಟಿರುವ ಭವ್ಯವಾದ ಕಲ್ಲಿನ ಕಟ್ಟಡಗಳು ಮಠದ ಶ್ರೀಮಂತಿಕೆಯನ್ನು ಸಾರುತ್ತಿವೆ. ಆಸ್ತಿವಂತ ಮಠವಾಗಿ ಇಂದಿಗೂ ತನ್ನ ಶ್ರೀಮಂತಿಕೆಯನ್ನು ಉಳಿಸಿಕೊಂಡು ಬಂದಿದ್ದು, ಸಂಸ್ಥಾನ ಮಠ ಎಂಬ ಹೆಸರಿಗೆ ತಕ್ಕಂತೆ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದಿದೆ.

ವಿಳಾಸ: ಷ.ಬ್ರ.ಶ್ರೀ ಪಟ್ಟದ ಪರ್ವತರಾಜ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹುಣಸಮಾರನಹಳ್ಳಿ ಸಂಸ್ಥಾನ ಮಠ, ಹುಣಸಮಾರನಹಳ್ಳಿ, ಉತ್ತರ ವಲಯ, ಬೆಂಗಳೂರು ಜಿಲ್ಲೆ.

❑

ಬೆಂಗಳೂರು ಗ್ರಾಮಾಂತರ ಜಿಲ್ಲೆ



ಕನಕಪುರ ತಾಲ್ಲೂಕು : ೧. ಮರಳೆ ೨. ಕೋಡಿಹಳ್ಳಿ
೩. ಮುಳ್ಳಳ್ಳಿ ೪. ಅಜ್ಜಿ ಬಸವನಹಳ್ಳಿ ೫. ಕಬ್ಬಾಳು
೬. ದೊಡ್ಡ ಮರಳವಾಡಿ ೭. ಸಾತನೂರು

ರಾಮನಗರ ತಾಲ್ಲೂಕು : ೧. ಅವ್ವೇರಹಳ್ಳಿ
೨. ಬೈರಮಂಗಲ ೩. ಬಿಡದಿ

ಚನ್ನಪಟ್ಟಣ ತಾಲ್ಲೂಕು : ೧. ಬೇವೂರು

ಮಾಗಡಿ ತಾಲ್ಲೂಕು : ೧. ಸೋಲೂರು ೨. ಕಲ್ಯ
೩. ಹುಲಿಕಲ್ಲು ೪. ತಿಪ್ಪಸಂದ್ರ
೫. ಚಕ್ರ ಬಾವಿ

ನೆಲಮಂಗಲ ತಾಲ್ಲೂಕು : ೧. ಶಿವಗಂಗೆ,
೨. ತ್ಯಾಮಗೊಂಡಲು, ೩. ದೊಡ್ಡಬೆಲೆ

ದೊಡ್ಡಬಳ್ಳಾಪುರ ತಾಲ್ಲೂಕು : ೧. ಖಾನಿ

ದೇವನಹಳ್ಳಿ ತಾಲ್ಲೂಕು : ೧. ವಿಜಯ ಪುರ

ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಎಂಟು ತಾಲ್ಲೂಕುಗಳನ್ನು ಒಳಗೊಂಡಿದೆ. ತುಮಕೂರು ಜಿಲ್ಲೆಯ ಅಂಚಿನಿಂದ ತಮಿಳುನಾಡಿನ ಗಡಿಯವರೆಗೆ, ಮಂಡ್ಯ ಜಿಲ್ಲೆಯ ಸೆರಗಿನಿಂದ ಕೋಲಾರ ಜಿಲ್ಲೆಯ ಗಡಿಯವರೆಗೆ,ಶಿವಗಂಗೆ ಬೆಟ್ಟದಿಂದ ಕಾವೇರಿ ನದಿಯವರೆಗೆ ವಿಸ್ತರಿಸಿದ್ದು ಕರ್ನಾಟಕದ ರಾಜಧಾನಿ ಬೆಂಗಳೂರಿನ ಸುತ್ತಲೂ ಬೇಲಿಯಂತೆ ನಿಂತಿದೆ.

ನೆಲಮಂಗಲ, ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ, ಕನಕಪುರ, ಚನ್ನಪಟ್ಟಣ, ರಾಮನಗರ ಮತ್ತು ಮಾಗಡಿ ಈ ಎಂಟು ತಾಲ್ಲೂಕುಗಳು ರಚನೆಗೊಂಡಿವೆ. ನೆಲಮಂಗಲ ತಾಲ್ಲೂಕಿನ ಶಿವಗಂಗೆಯು'**ದಕ್ಷಿಣ ಕಾಶಿ**'ಎಂದೇ ಹೆಸರು ಪಡೆದಿದೆ. ವೀರಶೈವರು, ಶೈವರು ಮತ್ತು ಜೈನರ ಯಾತ್ರಾಸ್ಥಳವಾಗಿರುವ ಈ ಕ್ಷೇತ್ರದಲ್ಲಿ ಶ್ರೀ ರೇವಣಸಿದ್ಧರು, ತೋಂಟದ ಶ್ರೀ ಸಿದ್ಧಲಿಂಗೇ ಶ್ವರರು, ಶ್ರೀ ಗೋಸಲ ಚನ್ನಬಸವೇಶ್ವರರು ಹಾಗೂ ಅನೇಕ ವೀರಶೈವ ಗುರುಗಳು ಈ ಸ್ಥಳದಲ್ಲಿ ನೆಲೆನಿಂತು ತಪೋನುಷ್ಠಾನ ಗೈದಿದ್ದಾರೆ. ಶಂಕರಾಚಾರ್ಯರು ಇಲ್ಲಿ ನೆಲೆನಿಂತು ಮಠ ಸ್ಥಾಪಿಸಿದ್ದಾರೆ. ಹೊಯ್ಸಳರ ದೊರೆ ವಿಷ್ಣುವರ್ಧನನ ಪಟ್ಟದ ರಾಣಿ ಶಾಂತಲೆ ತನ್ನ ಜೀವನದ ಕೊನೆಯ ಘಳಿಗೆಯಲ್ಲಿ ಶಿವಗಂಗೆಯಲ್ಲೇ ನೆಲೆಸಿ ಸಮಾಧಿಯಾಗಿದ್ದಾಳೆ.

ಬೆಂದಕಾಳೂರನ್ನು (ಬೆಂಗಳೂರು) ಬೆಳೆಸಿದ ಯಲಹಂಕ-ಮಾಗಡಿಯ ಕೆಂಪೇಗೌಡರ ವಂಶಸ್ಥರು ವೀರಶೈವ ಧರ್ಮದ ಪ್ರಭಾವಕ್ಕೆ ಒಳಗಾಗಿ ವೀರಶೈವರಾಗಿ ಪರಿವರ್ತನೆಯಾಗುವಷ್ಟು ಮಟ್ಟಿಗೆ ವೀರಶೈವ ಧರ್ಮವು ಈ ನಾಡಿನಲ್ಲಿ ಬೆಳೆದಿತ್ತು. ಬಸವಪುರಾಣವನ್ನು ತೆಲುಗು ಭಾಷೆಗೆ ಭಾಷಾಂತರಿಸಿ ವೀರಶೈವಧರ್ಮವನ್ನು ಬೇರೆ ಭಾಷೆ ಪರಿಚಯಿಸಿದ ಪಾಲ್ಕುರಿಕೆ ಸೋಮನಾಥ ನೆಲೆನಿಂತ ಕಲ್ಯ ಈ ಜಿಲ್ಲೆಯಲ್ಲಿದೆ. ಚನ್ನಪಟ್ಟಣದ ಆಟಿಕೆಗಳು, ಕರಕುಶಲ ವಸ್ತುಗಳು ರಾಷ್ಟ್ರವ್ಯಾಪಿಯಾಗಿ ತನ್ನ ಆಕರ್ಷಣೆಯನ್ನು ಬೆಳೆಸಿ ಚನ್ನಪಟ್ಟಣವನ್ನು ಪ್ರಸಿದ್ಧಿಗೆ ತಂದಿವೆ. ರಾಮನಗರ ತಾಲ್ಲೂಕಿನ ರೇಣುಕಗಿರಿಯು ಪುರಾಣ ಪ್ರಸಿದ್ಧಿ ಪಡೆದು ಪ್ರವಾಸಿಗರಿಗೆ, ಸಾಹಸಿಗಳಿಗೆ ಮತ್ತು ಭೂಶಾಸ್ತ್ರಜ್ಞರಿಗೆ ಸವಾಲಾಗಿದೆ. ಬಿಳಿಕಲ್ಲು ಬೆಟ್ಟಗಳನ್ನು ಹೊಂದಿರುವ ಕನಕಪುರ ತಾಲ್ಲೂಕು ರಾಜ್ಯದಲ್ಲಿಯೇ ಹೆಸರು ಪಡೆದಿದೆ. ಮಾಗಡಿ, ಕನಕಪುರ, ರಾಮನಗರ, ಚನ್ನಪಟ್ಟಣದಲ್ಲಿ ಬೆಳೆಯುವ ರೇಷ್ಮೆ ಈ ಜಿಲ್ಲೆಯನ್ನು ಶ್ರೀಮಂತಗೊಳಿಸಿವೆ. ಟಿಪ್ಪುಸುಲ್ತಾನನ ಕಾಲದಲ್ಲಿ ದೇವನಹಳ್ಳಿ ಮತ್ತು ಹೊಸಕೋಟೆ ತಾಲ್ಲೂಕುಗಳು ಐತಿಹಾಸಿಕವಾಗಿ ಬೆಳೆದವು.

ವಿವಿಧತೆಯನ್ನು ಒಳಗೊಂಡ ಈ ಜಿಲ್ಲೆಯಲ್ಲಿ ವೀರಶೈವ ಧರ್ಮವು ಹನ್ನೆರಡು ಮತ್ತು ಹದಿನೈದನೆಯ ಶತಮಾನಕ್ಕಿಂತ ಪೂರ್ವದಿಂದಲೂ ನೆಲೆಗೊಂಡು ಸಂಸ್ಕಾರವಂತ ಜಿಲ್ಲೆಯನ್ನಾಗಿ ಬೆಳೆಸಲು ಸಹಕಾರಿಯಾಗಿದೆ. ಎಂಟು ತಾಲ್ಲೂಕುಗಳಲ್ಲಿ ಒಟ್ಟು ಇನ್ನೂರಲರವತ್ತಾರು ಮಠಗಳು ಸ್ಥಾಪನೆಗೊಂಡಿದ್ದ ಬಗ್ಗೆ ಮಾಹಿತಿ ದೊರೆತಿದೆ. ಈ ಮಾಹಿತಿಯ ಆಧಾರದ ಮೇಲೆ ಶೋಧನೆಗೆ ಹೋದಾಗ ಚನ್ನಪಟ್ಟಣ ತಾಲ್ಲೂಕಿನ ಚನ್ನಿಗನಹಳ್ಳಿಯ ಪಟ್ಟದಮಠ, ಕನ್ನಮಂಗಲದ ಉಜ್ಜಯಿನಿ ಶಾಖಾಮಠ, ಮೊಗಳ್ಳಿಯ ವಿರೂಪಾಕ್ಷೇಶ್ವರ ಸ್ವಾಮಿಗಳ ಪಟ್ಟದಮಠ, ಕನಕಪುರ ತಾಲ್ಲೂಕಿನ ಹಾರೋಣಹಳ್ಳಿ, ಅಚ್ಚಲಗವಿಮಠ, ಆಗರ ಗ್ರಾಮದ ಪಟ್ಟದ ಮಠಗಳು ಸೇರಿದಂತೆ ಐವತ್ತೆಂಟು ಮಠಗಳನ್ನು ಗುರುತಿಸಬಹುದಾಗಿದೆ. ಇವುಗಳಲ್ಲಿ ನಲವತ್ತೈದು ಮಠಗಳು ಕಾರ್ಯನಿರ್ವಹಿಸುತ್ತಿವೆ. ಹದಿಮೂರುಮಠಗಳು ಹಿಂದೆ ಧಾರ್ಮಿಕ ಕಾರ್ಯಗಳನ್ನು ವೈಭವಯುತವಾಗಿ ನಡೆಸಿ, ಕಾರಣಾಂತರದಿಂದ ಸ್ಥಗಿತಗೊಂಡು ತಮ್ಮ ಅಸ್ತಿತ್ವವನ್ನು ಮಾತ್ರ ಉಳಿಸಿಕೊಂಡಿವೆ. ಉಳಿದ ಇನ್ನೂರಎಂಟು ಮಠಗಳು ಹೇಳಲು ಹೆಸರಿಲ್ಲದಂತಾಗಿರುವುದು ಒಂದು ದುರ್ದೈವದ ಸಂಗತಿ.

ಕನಕಪುರ ತಾಲ್ಲೂಕು

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರಮುಖ ತಾಲ್ಲೂಕುಗಳಲ್ಲಿ ಒಂದಾದ ಕನಕಪುರವು ಐತಿಹಾಸಿಕ ಹಾಗೂ ಸಾಂಸ್ಕೃತಿಕವಾಗಿ ಹೆಸರು ಮಾಡಿದೆ. ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಬೆಳೆದಿದ್ದು ಈತನಕ ಸುಮಾರು ಮೂವತ್ತು ಮಠಗಳು ಅಸ್ತಿತ್ವದಲ್ಲಿದ್ದವೆಂದು ಹೇಳಲಾಗುತ್ತದೆ. ಪ್ರಸ್ತುತ ಹದಿನಾರು ಮಠಗಳನ್ನು ಗುರುತಿಸಬಹುದಾಗಿದೆ.

ಅಜ್ಜಬಸವನಹಳ್ಳಿ

ಕನಕಪುರ ತಾಲ್ಲೂಕಿನ ಅಜ್ಜಬಸವನಹಳ್ಳಿಯು ತಾಲ್ಲೂಕು ಕೇಂದ್ರದ ದಕ್ಷಿಣ ಭಾಗದಲ್ಲಿದೆ. ಹುಣಸನಹಳ್ಳಿಯಿಂದ ಒಂದು ಕಿ.ಮೀ. ಕ್ರಮಿಸಿದರೆ ಸಿಗುವ ಗ್ರಾಮವೇ ಅಜ್ಜಬಸವನಹಳ್ಳಿ. ಇಲ್ಲಿ ಶ್ರೀ ಗದ್ದುಗೆಮಠವು ಅಸ್ತಿತ್ವದಲ್ಲಿದೆ.

ಗದ್ದುಗೆಮಠ: ಅಜ್ಜಬಸವನಹಳ್ಳಿಯಲ್ಲಿ ಆನೇಕಲ್ಲು ತಾಲ್ಲೂಕಿನ ರಾಜಾಪುರದ ಮಠದ ಶ್ರೀ ಘನಲಿಂಗ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು ನೂರುವರ್ಷಗಳ ಹಿಂದೆ ಈ ಸ್ಥಳದಲ್ಲಿ ಅನುಷ್ಠಾನಗೊಂಡು ತಮ್ಮ ಜೀವಿತದ ಕೊನೆಯ ಘಳಿಗೆಯವರೆಗೆ ಇಲ್ಲೇ ನೆಲೆಸಿ ಲಿಂಗೈಕ್ಯರಾಗಿದ್ದಾರೆ. ಶ್ರೀ ಮಹಾಶಿವಯೋಗಿಗಳು ಲಿಂಗೈಕ್ಯರಾದ ಮೇಲೆ ಇಲ್ಲಿನ ಭಕ್ತರು ಇಲ್ಲೇ ಸಮಾಧಿಮಾಡಿ ಗದ್ದುಗೆಯನ್ನು ನಿರ್ಮಿಸಿದರು. ಇಲ್ಲಿಗೆ ಸಮೀಪದ ಬಿಜ್ಜಹಳ್ಳಿ ಗ್ರಾಮದ ಚನ್ನಬಸಮ್ಮ ವರ್ಷಕ್ಕೆ ಒಮ್ಮೆ ಬಂದು ಪೂಜೆಯನ್ನು ಮಾಡಿಕೊಂಡು ಹೋಗುತ್ತಿದ್ದರು. ಕಾಲಾನಂತರ ಗುರುಗಳ ಗದ್ದುಗೆ ಜೀರ್ಣಗೊಳ್ಳಬಾರದು ಎಂಬ ಕಾರಣಕ್ಕೆ ನಿತ್ಯಪೂಜೆ ನಡೆಯಲಿ ಎಂದು ತಿಪ್ಪೂರಿನ ಬಸವಲಿಂಗಯ್ಯ ಮನೆತನದವರು ಮತ್ತು ಪಟೇಲ ಪುಟ್ಟಸಿದ್ಧಯ್ಯನವರು ಅಗತ್ಯ ವ್ಯವಸ್ಥೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ಗದ್ದುಗೆ ಮಠದ ಸುತ್ತಮುತ್ತ ಇರುವ ಪ್ರದೇಶ ಸ್ವಚ್ಛಗೊಂಡು ಧಾರ್ಮಿಕ ವಾತಾವರಣ ಸೃಷ್ಟಿಯಾಗಿತ್ತು. ಪುಟ್ಟಸಿದ್ಧಯ್ಯನವರು ಲಿಂಗೈಕ್ಯರಾದ ಮೇಲೆ ಪುನಃ ಪೂಜೆ ಪುನಸ್ಕಾರಗಳಿಲ್ಲದೆ ಗದ್ದುಗೆ ಮಠವು ಜೀರ್ಣಗೊಳ್ಳತೊಡಗಿತು. ಪುನಃ ಮಠದ ಸುತ್ತಾ ತಿಪ್ಪೆಗುಂಡಿಗಳು, ಹುಲ್ಲುಹಿತ್ತಲುಗಳು ಸೃಷ್ಟಿಗೊಂಡು, ಮಠ ಇತ್ತು ಎಂಬ ಕಲ್ಪನೆಯೇ ಇಲ್ಲದಂತಾಗಿತ್ತು.

ನೊಂದಹಿರಿಯರು: ಈ ಮಠದ ಅಭಿವೃದ್ಧಿಗೆ ಶ್ರಮಿಸಿದ ಹಿರಿಯಜೀವಗಳಿಗೆ ತಮ್ಮ ಕಣ್ಣಮುಂದೆಯೇ ಈ ನಾಡಿಗೆ ಬೆಳಕು ನೀಡಿ ಉದ್ಧರಿಸಿದ್ದ, ಶ್ರೀ ಘನಲಿಂಗ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯಗೊಂಡ ಪವಿತ್ರ ಸ್ಥಳ ಅಪವಿತ್ರಗೊಂಡು, ತಿಪ್ಪೆಗುಂಡಿಯಲ್ಲಿ ಮುಚ್ಚಿಹೋಗುವ ಭೀತಿ ಕಾಡಿತು. ಹಿರಿಯರ ಈ ನೋವು ಕಿರಿಯರಿಗೆ ಅರ್ಥವಾಯಿತು. ತಕ್ಷಣ ಸಂತೆ ಕೋಡಿಹಳ್ಳಿಯಲ್ಲಿ ಅಂಗಡಿಯನ್ನು ಇಟ್ಟುಕೊಂಡಿದ್ದ ಶಿವಪೂಜಾನಿಷ್ಠರೂ, ನೀತಿಪರರೂ ಆಗಿದ್ದ ಶ್ರೀ ರಾಜಶೇಖರ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸುತ್ತಾರೆ ಎಂದು ನಂಬಿದ ಭಕ್ತರು ಗದ್ದುಗೆ ಮಠದ ಜವಾಬ್ದಾರಿಯನ್ನು ಅವರಿಗೆ ಒಪ್ಪಿಸಿದರು.

ಶ್ರೀ ರಾಜಶೇಖರ ಸ್ವಾಮಿಗಳು ಅಜ್ಜಬಸವನಹಳ್ಳಿಗೆ ಬಂದು ಸಣ್ಣ ಗುಡಿಸಲನ್ನು ಕಟ್ಟಿಕೊಂಡು ಮಠದ ಸುತ್ತಮುತ್ತ ಬೆಳೆದಿದ್ದ ತಿಪ್ಪೆಗುಂಡಿ, ಹುಲ್ಲುಹಿತ್ತಲುಗಳನ್ನು ತೆಗೆಸಿ ಸ್ವಚ್ಛಮಾಡಿಸಿ ಮಠದ ಪರಿಸರವನ್ನು ನಿರ್ಮಲಗೊಳಿಸಲು ವರ್ಷಗಳೇ ಕಳೆದವು. ಮಠದ ಜಾಗವನ್ನು ಒತ್ತುವರಿಮಾಡಿಕೊಂಡಿದ್ದ ಸ್ವಾರ್ಥಿಗಳು ಜಾಗವನ್ನು ಬಿಟ್ಟುಕೊಡಲು ಪ್ರತಿರೋಧವನ್ನು ವ್ಯಕ್ತಪಡಿಸಿದರು. ಆದರೂ ಎಲ್ಲರ ಮನವೊಲಿಸಿ ಧರ್ಮದಿಂದಲೇ ನಡೆದುಕೊಂಡು ಮಠದ ಎಲ್ಲಾ ಜಾಗವನ್ನೂ ಬಿಡಿಸಿ ಒಂದು ರೂಪುಕೊಟ್ಟರು. ಇದಾದ ಮೇಲೆ ಶ್ರೀ ರಾಜಶೇಖರ ಸ್ವಾಮಿಗಳಿಗೆ ಪಟ್ಟಾಧಿಕಾರವನ್ನು ಮಾಡಿ ಇಲ್ಲೇ ನೆಲೆಗೊಳಿಸುವ ತೀರ್ಮಾನಕ್ಕೆ ಗ್ರಾಮದ ಜನರು ಬಂದರು.

ನೆಲೆಗೊಂಡ ಗುರು: ರಂಭಾಪುರಿಪೀಠದ ಶಾಖಾಮಠವಾದ ರಾಜಾಪುರ ಮಠದ ಗುರುಗಳ ಗದ್ದುಗೆಮಠ ಪುನಃ ತನ್ನ ಧಾರ್ಮಿಕ ಕಾರ್ಯಗಳಿಗೆ ಸಿದ್ಧಗೊಂಡಿತು. ರಾಜಾಪುರದ ಗುರುಗಳನ್ನು ಕರೆಸಿ, ಶ್ರೀ ರಾಜಶೇಖರ ಶಿವಾಚಾರ್ಯ ಸ್ವಾಮಿಗಳಿಗೆ ೧೯೯೦ರಲ್ಲಿ ಪಟ್ಟಾಧಿಕಾರ ನೀಡಿ ಮಠಕ್ಕೆ ಗುರುವನ್ನು ನೆಲೆಗೊಳಿಸಿದರು. ಈ ಮಠದ ಜೀರ್ಣೋದ್ಧಾರಕ್ಕೆ ಮಳಲಿಮಠದ ಶ್ರೀ ಕಾಲಾಗ್ನಿ ರುದ್ರಮುನಿ ಸ್ವಾಮಿಗಳು ಪೂರ್ಣ ನೆರವುಕೊಟ್ಟರು. ಇದರ ಫಲಶೃತಿಯೇ ನಶಿಸಿಹೋಗುತ್ತಿದ್ದ ಮಠದ ಪುನರುಜ್ಜೀವನ.

ಅಭಿವೃದ್ಧಿ ಕಾರ್ಯಗಳು: ಶ್ರೀ ರಾಜಶೇಖರ ಶಿವಾಚಾರ್ಯ ಸ್ವಾಮಿಗಳು ಗದ್ದುಗೆ ಮಠದಲ್ಲಿ ನೆಲೆಗೊಂಡ ಮೇಲೆ ದಿನದ ಎರಡೂ ವೇಳೆ ಗದ್ದುಗೆಗೆ ಪೂಜೆ ಕಾರ್ಯ ನಡೆಯತೊಡಗಿತು. ಧಾರ್ಮಿಕ ವಾತಾವರಣ ಸೃಷ್ಟಿಯಾಗಿ ಭಕ್ತರು ಬರತೊಡಗಿದರು. ಗುರುಗಳ ವಾಸ್ತವ್ಯಕ್ಕೆ ಗದ್ದುಗೆ ನವೀಕರಣ ಸೇರಿದಂತೆ ಯೋಜನೆ ತಯಾರಾಗಿ ಕೆಲಸ ನಡೆದು ಮಠದ ಕಲ್ಪನೆಗೆ ಅನುಗುಣವಾಗಿ ಮಠದ ಕಟ್ಟಡಗಳು ರೂಪುಗೊಂಡವು.

ಧಾರ್ಮಿಕ ಕಾರ್ಯಗಳು: ಜೀರ್ಣೋದ್ಧಾರಗೊಂಡ ಮಠದಲ್ಲಿ ಪ್ರತಿ ಸೋಮವಾರ ಸಂಜೆ ಭಜನೆ ಕಾರ್ಯಕ್ರಮಗಳು ನಡೆಯತೊಡಗಿದವು. ಮನೆಮನೆಗೆ ಹೋಗಿ ಭಕ್ತರ ಧಾರ್ಮಿಕ ಕ್ರಿಯಾದಿಗಳಿಗೆ ನೆರವಾಗಿ ಭಕ್ತರಿಗೆ ಧಾರ್ಮಿಕ ಸಂಸ್ಕಾರ ನೀಡ ತೊಡಗಿದ್ದಾರೆ. ಮಠದ ಮುಂದೆ ನಾಗರಕಟ್ಟೆ ಸ್ಥಾಪನೆಯಾಗಿದೆ. ಇಲ್ಲಿ ನಿತ್ಯ ಪೂಜಾಕಾರ್ಯಗಳು ನಡೆಯತೊಡಗಿದವು. ವರ್ಷದಲ್ಲಿ ಒಮ್ಮೆ ಶ್ರೀ ಘನಲಿಂಗ ಶಿವಾಚಾರ್ಯ ಸ್ವಾಮಿಗಳ ಆರಾಧನೆ ಮಾಡತೊಡಗಿ ಅನ್ನ ದಾಸೋಹ ವ್ಯವಸ್ಥೆಯನ್ನು ಮಾಡಿದರು. ಈ ಎಲ್ಲಾ ಚಟುವಟಿಕೆಗಳಿಗೆ ಆದಾಯ ತರಬಲ್ಲಂತಹ ಆಸ್ತಿಗಳು ಏನೂ ಇಲ್ಲದಿದ್ದರೂ ಭಕ್ತರೇ ಮಠಕ್ಕೆ ಆಸ್ತಿಯಾಗಿ, ಮಠದ ಎಲ್ಲಾ ಧಾರ್ಮಿಕ ಕಾರ್ಯಗಳಿಗೆ ಸ್ಪಂದಿಸಿ ನೆರವಾಗತೊಡಗಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ರಾಜಶೇಖರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಗದ್ದುಗೆಮಠ, ಅಜ್ಜಬಸವನಹಳ್ಳಿ, ಕನಕಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಕನಕಪುರ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕನಕಪುರವು ತಾಲ್ಲೂಕು ಕೇಂದ್ರ ಸ್ಥಳ. ಬೆಂಗಳೂರಿನಿಂದ ದಕ್ಷಿಣಕ್ಕೆ ಐವತ್ತೈದು ಕಿ.ಮೀ.ದೂರದಲ್ಲಿದೆ. ಇಲ್ಲಿ ದೇಗುಲಮಠವು ಅಸ್ತಿತ್ವದಲ್ಲಿದ್ದು ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ಈ ಪಟ್ಟಣವನ್ನು ಅಭಿವೃದ್ಧಿಗೊಳಿಸಿದೆ.

ದೇಗುಲಮಠ: ಕನಕಪುರದ ಉತ್ತರ ಭಾಗದಲ್ಲಿ ಶ್ರೀ ದೇಗುಲ ಮಠವು ಸ್ಥಾಪನೆಯಾಗಿದೆ. ವಿರಕ್ತಸಂಪ್ರದಾಯದ ಚೀಲಾಳ ಸಮಯದ ಈ ಮಠವು ಹದಿನಾಲ್ಕನೆಯ ಶತಮಾನದಲ್ಲಿ ಪ್ರಾರಂಭವಾಗಿ, ಈ ತನಕ ಬೆಳೆದು ಧರ್ಮ ಜಾಗೃತಿಯನ್ನುಂಟು ಮಾಡಿ, ಸಮಾಜವನ್ನು ಧಾರ್ಮಿಕ ತಳಹದಿಯ ಮೇಲೆ ಬೆಳೆಸುವಲ್ಲಿ ಮಹತ್ತರ ಪಾತ್ರವನ್ನು ವಹಿಸಿದೆ.

ಮಠ ಸ್ಥಾಪನೆ: ಶೂನ್ಯ ಪೀಠದ ಮೊದಲನೆಯ ಗುರುವಾದ ಶ್ರೀ ಪ್ರಭುದೇವರ ಪರಂಪರೆಯಲ್ಲಿ ಬೆಳೆದು ಬಂದ ಶಿವಗಣ ಪ್ರಮಥರು ಹನ್ನೆರಡನೆಯ ಶತಮಾನದಿಂದ ಬಸವಾದಿಪ್ರಮಥರ ತತ್ತ್ವಗಳನ್ನು ನಾಡಿಗೆ ಬಿತ್ತರಿಸುವ ಕಾಯಕದಲ್ಲಿ ನಿರತರಾಗಿದ್ದರು. ಹದಿನಾಲ್ಕನೆಯ ಶತಮಾನದ ಶ್ರೀ ಗೋಸಲಸಿದ್ಧಲಿಂಗ ಸ್ವಾಮಿಗಳು, ಹದಿನೈದನೆಯ ಶತಮಾನದ ಸಿದ್ಧಲಿಂಗಯತಿಗಳ ಪಾತ್ರ ದಕ್ಷಿಣಕರ್ನಾಟಕದಲ್ಲಿ ಅಗಣಿತವಾಗಿ ಬೆಳೆಯಿತು. ಇಂತಹ ಪ್ರಯತ್ನದಲ್ಲಿ ಹುಟ್ಟಿಕೊಂಡ ಮಠವೇ ದೇಗುಲ ಮಠವಾಗಿದೆ.

ಹದಿನಾಲ್ಕನೆಯ ಶತಮಾನದ ಶ್ರೀ ಗೋಸಲ ಸಿದ್ಧಲಿಂಗ ಸ್ವಾಮಿಗಳ ಅನುಯಾಯಿಗಳಾದ ನೂರೊಂದು ವಿರಕ್ತರಲ್ಲಿ ಶ್ರೀ ನಿರ್ವಾಣ ಸ್ವಾಮಿಗಳು ಪ್ರಮುಖರು. ಶಿವಪೂಜಾನಿಷ್ಠರಾಗಿ ಶಿವಯೋಗದಲ್ಲಿ ಸರ್ವವನ್ನೂ ಕಂಡ ತೃಪ್ತ ಜೀವ. ಸದಾ ಧರ್ಮಪರರಾಗಿ ಚಿಂತಿಸುತ್ತಾ, ಭಕ್ತರನ್ನು ಧರ್ಮಮಾರ್ಗದಲ್ಲಿ ಮುನ್ನಡೆಸಿದ ಮಹಾಯೋಗಿ ಶ್ರೀ ನಿರ್ವಾಣಸ್ವಾಮಿಗಳು. ಶ್ರೀ ಗೋಸಲ ಸಿದ್ಧಲಿಂಗ ಸ್ವಾಮಿಗಳು ತಮ್ಮ ನೂರೊಂದು ವಿರಕ್ತರ ಜತೆ ಈ ನೆಲದಲ್ಲಿ ನೆಲೆನಿಂತು ಅನುಷ್ಠಾನಗೊಂಡು ಮುಂದೆ ಹೊರಡುವಾಗ ಶ್ರೀ ಆದ್ಯ ನಿರ್ವಾಣ ಸ್ವಾಮಿಗಳನ್ನು ಈ ನೆಲದಲ್ಲಿ ನೆಲೆಗೊಳಿಸಿ ಈ ಕ್ಷೇತ್ರವನ್ನು ಉದ್ಧರಿಸಲು ಆಶೀರ್ವಾದವನ್ನು ನೀಡಿ ಮುಂದೆ ಹೋದರು. ಶ್ರೀ ಗೋಸಲ ಸಿದ್ಧಲಿಂಗ ಸ್ವಾಮಿಗಳ ಆಶೀರ್ವಾದ ಪಡೆದು ಇಲ್ಲಿ ನೆಲೆನಿಂತ ಶ್ರೀ ಆದ್ಯ ನಿರ್ವಾಣ ಸ್ವಾಮಿಗಳು ಅನೇಕ ಪವಾಡಗಳನ್ನು ಮಾಡಿ ಜನಮನವನ್ನು ಗೆದ್ದರು. ಗುರುಗಳು ನೆಲೆನಿಂತ ಕುಟೀರವು ದೇಗುಲವಾಗಿ, ನಂತರ ದೇಗುಲ ಮಠವಾಗಿ ಬೆಳೆಯಿತು.

ಪರಂಪರೆ: ಹದಿನಾಲ್ಕನೆಯ ಶತಮಾನದಲ್ಲಿ ಶ್ರೀ ನಿರ್ವಾಣ ಸ್ವಾಮಿಗಳ ಕಾಲದಲ್ಲಿ ಸ್ಥಾಪನೆಗೊಂಡ ದೇಗುಲಮಠವು ಆದ್ಯ

ಗುರುಗಳ ದೀರ್ಘ ಆಡಳಿತದಲ್ಲಿ ಹೆಚ್ಚು ಪ್ರಚಾರವನ್ನು ಪಡೆಯಿತು. ೧೨೦ ವರ್ಷ ಬದುಕಿದ್ದ ಶ್ರೀ ನಿರ್ವಾಣ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಶ್ರೀ ದೇವಲಿಂಗ ಸ್ವಾಮಿಗಳು ಅಧಿಕಾರಕ್ಕೆ ಬಂದರು.

೧. ಶ್ರೀ ಮ.ನಿ.ಪ್ರ. ಆದ್ಯನಿರ್ವಾಣಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ದೇವಲಿಂಗಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ನಾಗಲಿಂಗಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ನಂಜಯ್ಯಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಮಹಾಲಿಂಗಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಹುಚ್ಚಪ್ಪಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಮರುಳಸಿದ್ಧಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಚನ್ನಬಸವಸ್ವಾಮಿಗಳು
೯. ಶ್ರೀ ಮ.ನಿ.ಪ್ರ ಇಮ್ಮಡಿ ಮರುಳಸಿದ್ಧಸ್ವಾಮಿಗಳು
೧೦. ಶ್ರೀ ಮ.ನಿ.ಪ್ರ. ಇಮ್ಮಡಿ ನಿರ್ವಾಣಸ್ವಾಮಿಗಳು
೧೧. ಶ್ರೀ ಮ.ನಿ.ಪ್ರ. ಇಮ್ಮಡಿ ಹುಚ್ಚಪ್ಪಸ್ವಾಮಿಗಳು
೧೨. ಶ್ರೀ ಮ.ನಿ.ಪ್ರ. ಇಮ್ಮಡಿ ಮಹಾಲಿಂಗಸ್ವಾಮಿಗಳು
೧೩. ಶ್ರೀ ಮ.ನಿ.ಪ್ರ. ಮುಮ್ಮಡಿ ನಿರ್ವಾಣಸ್ವಾಮಿಗಳು (ಹಿರಿಯ ಗುರುಗಳು)
೧೪. ಶ್ರೀ ಮ.ನಿ.ಪ್ರ. ಮುಮ್ಮಡಿ ಮಹಾಲಿಂಗಸ್ವಾಮಿಗಳು (ಈಗಿನ ಗುರುಗಳು)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಶ್ರೀ ಆದ್ಯ ನಿರ್ವಾಣ ಸ್ವಾಮಿಗಳ ಸೇವೆಯನ್ನು ಮಾಡಿಕೊಂಡು ಬಂದಿದ್ದ ಶ್ರೀ ದೇವಲಿಂಗ ಸ್ವಾಮಿಗಳು ಗುರುಗಳ ಸೇವೆಯನ್ನು ಭಕ್ತಿಯಿಂದ ಮಾಡಿ ಗುರುಕೃಪೆಗೆ ಪಾತ್ರರಾಗಿದ್ದರು. ಆದ್ಯ ಗುರುಗಳ ಅನುಗ್ರಹ ಪಡೆದು ತಮ್ಮದೇ ಆದ ಪ್ರತ್ಯೇಕ ಆಶ್ರಮವನ್ನು ಸ್ಥಾಪಿಸಿ ಶಿವಶರಣರ ತತ್ತ್ವಗಳನ್ನು ಪ್ರಚಾರಮಾಡುತ್ತಾ ಹೊರಟರು. ಶ್ರೀ ದೇವಲಿಂಗ ಗುರುಗಳು ಸ್ಥಾಪಿಸಿದ ಆಶ್ರಮವೇ ಇಂದು ಚಿಕ್ಕ ಮಠ ಅಥವಾ ಹಳೆಯ ಮಠವಾಗಿದೆ. ಶ್ರೀ ದೇವಲಿಂಗ ಸ್ವಾಮಿಗಳು ಸ್ಥಾಪಿಸಿದ ಆಶ್ರಮದ ಜಾಗದಲ್ಲಿ ಸ್ಮಶಾನ ಭೂಮಿ ಇದ್ದು, ಈ ಸ್ಮಶಾನ ಭೂಮಿಯಲ್ಲಿ ಹೆಣಗಳನ್ನು ಹೂಳುವುದು ಮತ್ತು ದಹನ ಕ್ರಿಯೆಗಳು ನಡೆಯುತ್ತಿದ್ದು ದಹನ ಸಂದರ್ಭದಲ್ಲಿ ತಲೆಬುರುಡೆ ಸಿಡಿಯುವ ಶಬ್ದ ಬರುತ್ತಿತ್ತು. ಇವರು ಶಿವಪೂಜೆಯಲ್ಲಿ ಕುಳಿತ ಸಂದರ್ಭದಲ್ಲಿ ಶಾಂತಿಭಂಗವಾಗಿದ್ದನ್ನು ಕಂಡು ಗುರುಗಳು 'ದಹನ ಕಾಲದಲ್ಲಿ ತಲೆಯು ಸಿಡಿದ ಶಬ್ದ ಬರಬಾರದು' ಎಂದು ಅಪ್ಪಣೆ ಕೊಟ್ಟರು. ಅಂದಿನಿಂದ ಈ ತನಕ ಸ್ಮಶಾನದಲ್ಲಿ ತಲೆಸಿಡಿಯುವ ಶಬ್ದ ಕೇಳಿ ಬರುವುದಿಲ್ಲ ಎಂದು ಹೇಳಲಾಗುತ್ತಿದೆ. ಶ್ರೀ ದೇವಲಿಂಗ ಸ್ವಾಮಿಗಳ ಕಾಲದಲ್ಲಿ ಪ್ರತ್ಯೇಕಗೊಂಡು ಮಠದ ಧಾರ್ಮಿಕ ಕಾರ್ಯಗಳು ಪ್ರಾರಂಭಗೊಂಡ ಮೇಲೆ ದೇಗುಲ ಮಠಕ್ಕೆ ದೊಡ್ಡಮಠದ ಶ್ರೀ ನಂಜಪ್ಪ ಸ್ವಾಮಿಗಳು ಅಧಿಕಾರಕ್ಕೆ ಬರುತ್ತಾರೆ.

ವೀರವಿರಕ್ತರಾಗಿದ್ದ ಶ್ರೀ ನಂಜಯ್ಯ ಸ್ವಾಮಿಗಳು ಸಂಸ್ಕೃತ,ವೇದ,ಆಗಮಗಳಲ್ಲಿ ಪಾಂಡಿತ್ಯ ಸಾಧಿಸಿದ್ದರು. ಶಿವಶರಣರ ತತ್ತ್ವಗಳನ್ನು ಪ್ರಚುರಪಡಿಸುವ ಮಹಾ ಮೇಧಾವಿಗಳಾಗಿದ್ದರು. ಇವರು ಅನೇಕ ಪುಣ್ಯ ಸ್ಥಳಗಳಲ್ಲಿ ಪ್ರವಾಸ ಮಾಡಿ ಅಪಾರ ಅನುಭವವನ್ನು ಸಂಪಾದಿಸಿಕೊಂಡು ಬಂದು ಮಠದ ಅಭಿವೃದ್ಧಿಗೆ ಹೆಚ್ಚು ಶ್ರಮಿಸಿದ್ದಾರೆ. ಇವರ ನಂತರ ಶ್ರೀ ಮಹಾಲಿಂಗ ಸ್ವಾಮಿಗಳು ಅಧಿಕಾರಕ್ಕೆ ಬಂದರು. ದೇಗುಲ ಮಠದಿಂದ ಪ್ರತ್ಯೇಕಗೊಂಡಿದ್ದ ಚಿಕ್ಕ ಮಠದಲ್ಲಿ ಶ್ರೀ ದೇವಲಿಂಗ ಸ್ವಾಮಿಗಳ ನಂತರ ಶ್ರೀ ನಾಗಲಿಂಗ ಸ್ವಾಮಿಗಳು ಅಧಿಕಾರಕ್ಕೆ ಬಂದಿದ್ದರು. ಇವರ ನಂತರ ದೇಗುಲ ಮಠದ ಆಡಳಿತವನ್ನು ನೋಡಿ ಕೊಳ್ಳುತ್ತಿದ್ದ ಶ್ರೀ ಮಹಲಿಂಗ ಸ್ವಾಮಿಗಳು ಚಿಕ್ಕ ಮಠದ ಅಧಿಕಾರವನ್ನು ವಹಿಸಿಕೊಂಡರು. ಇವರ ಕಾಲದಲ್ಲಿ ಪ್ರತ್ಯೇಕಗೊಂಡಿದ್ದ ಮಠದ ಚಟುವಟಿಕೆಗಳು ಒಂದಾಗುವಂತೆ ಮಾಡಿದರು. ಶ್ರೀ ಮಹಾಲಿಂಗ ಗುರುಗಳು ಒಳ್ಳೆಯ ಪ್ರವಚನಕಾರರಾಗಿದ್ದ ಕಾರಣ ಇವರ ಕಾಲದಲ್ಲಿ ಮಠದ ಧಾರ್ಮಿಕ ಕ್ರಿಯೆಗಳು ಶ್ರೀಮಂತವಾಗಿ ಬೆಳೆದಿದ್ದವು. ಮಠದ ಆವರಣದಲ್ಲಿ ಭಜನೆಗಳು, ಶಿವಾನುಭವಗೋಷ್ಠಿಗಳು ನಿರಂತರವಾಗಿ ನಡೆಯುವಂತಾದವು. ಗುರುಗಳ ಅನುಷ್ಠಾನ ಮತ್ತು ಶಿವಪೂಜಾ ವಿಧಾನಗಳು

ಭಕ್ತರನ್ನು ಆಕರ್ಷಿಸಿಕೊಂಡವು.

ನಂಬಿಕೆಗಳು: ಶ್ರೀ ಮಹಾಲಿಂಗ ಸ್ವಾಮಿಗಳ ನಂತರ ಶ್ರೀ ಹುಚ್ಚಪ್ಪ ಸ್ವಾಮಿಗಳು ಅಧಿಕಾರಕ್ಕೆ ಬಂದರು. ಗುರುಗಳು ಪವಾಡ ಪುರುಷರಾಗಿ ಮೆರೆದು ಮಠದ ಇತಿಹಾಸದಲ್ಲಿ ಅಪರೂಪದ ವ್ಯಕ್ತಿತ್ವವನ್ನು ಗಳಿಸಿಕೊಂಡಿದ್ದಾರೆ.ಒಮ್ಮೆ ಭಕ್ತನೊಬ್ಬನ ಮನೆಗೆ ಪೂಜೆಗೆಂದು ಹೋಗಬೇಕಾಗಿತ್ತು.ಅರ್ಕಾವತಿ ನದಿಯ ಆಚೆಯ ದಡದಲ್ಲಿದ್ದು ಅತಿ ಹೆಚ್ಚು ಮಳೆಯಿಂದ ನದಿಯಲ್ಲಿ ಪ್ರವಾಹ ಹರಿಯುತ್ತಿತ್ತು. ನದಿಯನ್ನು ದಾಟುವುದು ಕಷ್ಟವಾಗಿತ್ತು. ಬಾಳೆಎಲೆಯನ್ನು ತರಿಸಿಕೊಂಡು ನದಿಯ ಪ್ರವಾಹದ ನೀರಿನ ಮೇಲೆ ಇಟ್ಟು ಅದರ ಮೇಲೆ ಧ್ಯಾನಾಸಕ್ತರಾಗಿ ಕುಳಿತುಕೊಂಡರು. ಬಾಳೆಎಲೆ ತಾನೇ ತಾನಾಗಿ ಪ್ರವಾಹದ ನೀರಿನ ಮೇಲೆ ತೇಲಿ ಆಚೆಯ ದಡವನ್ನು ಸೇರಿ, ಅಂದು ಭಕ್ತರ ಮನೆಯಲ್ಲಿ ಪೂಜಾನುಷ್ಠಾನಗೊಂಡರಂತೆ.

ಮತ್ತೊಂದು ದಿನ ಗುರುಗಳು ಮಠದ ತೋಟದಲ್ಲಿ ಸಂಚಾರ ಮಾಡುತ್ತಾ ಇರುವ ಸಂದರ್ಭದಲ್ಲಿ ನಾಗರಹಾವು ಗುರುಗಳ ಪಾದವನ್ನು ಕಚ್ಚಿತು. ಗುರುಗಳು ಕಚ್ಚಿದ ಹಾವನ್ನು ದೃಷ್ಟಿಸಿ ನೋಡಿದರು. ತಕ್ಷಣ ಹಾವು ಪ್ರಾಣಬಿಟ್ಟಿತು. ಗುರುಗಳಿಗೆ ಯಾವುದೇ ಅನಾಹುತವಾಗಲಿಲ್ಲ. ಸ್ವಲ್ಪ ವೇಳೆಯ ನಂತರ ಗುರುಗಳು ಸತ್ತು ಬಿದ್ದಿದ್ದ ಹಾವನ್ನು ದೃಷ್ಟಿಸಿ ನೋಡಿ ಪ್ರಾಣವನ್ನು ಪ್ರತಿಷ್ಠಾಪಿಸಿದರು. ಹಾವು ಹರಿದು ತನ್ನ ಹುತ್ತವನ್ನು ಸೇರಿಕೊಂಡಿತು. ಮಠದ ಆವರಣದಲ್ಲಿ ಹಾವುಗಳು ಕಡಿದರೆ ವಿಷ ಏರದಿರಲಿ ಎಂದು ಹಾರೈಸಿದರಂತೆ. ಅಂದಿನಿಂದ ಇಂದಿಗೂ ಮಠದ ಸುತ್ತಲಪ್ರದೇಶದಲ್ಲಿ ಹಾವುಗಳು ಕಚ್ಚಿದರೆ ವಿಷವೇರಿ ಮರಣ ಹೊಂದಿದ ನಿದರ್ಶನಗಳೇ ಇಲ್ಲ ಎಂದು ಹೇಳಲಾಗುತ್ತಿದೆ.ಈ ರೀತಿ ಅನೇಕ ಪವಾಡಗಳನ್ನು ಮಾಡಿದ ಬಗ್ಗೆ ನಂಬಿಕೆಗಳು ಇಂದಿಗೂ ಜನಮನದಲ್ಲಿ ಉಳಿದುಕೊಂಡಿವೆ.

ಶ್ರೀ ಹುಚ್ಚಪ್ಪ ಸ್ವಾಮಿಗಳ ನಂತರ ಶ್ರೀ ಮರುಳಸಿದ್ಧ ಸ್ವಾಮಿಗಳು ದೇಗುಲ ಮಠದ ಅಧಿಕಾರ ವಹಿಸಿಕೊಂಡು ಮಠವನ್ನು ಹೆಚ್ಚು ಬೆಳಕಿಗೆ ತಂದರು. ಗುರುಗಳು ಅಧಿಕಾರ ವಹಿಸಿಕೊಂಡ ಕೆಲವು ವರ್ಷಗಳಲ್ಲಿ ಮಾಯದಂತ ಮಳೆ ಬಂದು ಅರ್ಕಾವತಿ ನದಿಯಲ್ಲಿ ಪ್ರವಾಹ ಉಂಟಾಗಿ ಚಿಕ್ಕಮಠ ಮತ್ತು ದೊಡ್ಡ ಮಠಗಳ ಶಿಲಾ ಕಟ್ಟಡಗಳು ಪ್ರವಾಹದಲ್ಲಿ ಕೊಚ್ಚಿಹೋದವು. ಈ ಸಂದರ್ಭದಲ್ಲಿ ಮಠದಲ್ಲಿದ್ದ ಅನೇಕ ತಾಳೆಗರಿ ಗ್ರಂಥಗಳು ಹಾಗೂ ಅಪರೂಪದ ವಸ್ತುಗಳು ಕೊಚ್ಚಿ ನೀರಿನ ಪಾಲಾದವು. ಶಿವಪೂಜಾ ನಿಷ್ಠರಾದ ಶ್ರೀ ಮರುಳಸಿದ್ಧ ಸ್ವಾಮಿಗಳು ಈ ಘಟನೆಯಿಂದ ಧೃತಿಗೆಡದೆ, ಸ್ಥಿತ ಪ್ರಜ್ಞರಾಗಿ ಪುನಃ ಮಠದ ಕಟ್ಟಡವನ್ನು ಕಟ್ಟುವ ಕಾರ್ಯದಲ್ಲಿ ತೊಡಗಿದರು.

ರಾಜಾಶ್ರಯ: ಮಳೆಯಿಂದ ಉಂಟಾದ ಪ್ರವಾಹದಲ್ಲಿ ದೇಗುಲಮಠವು ಕೊಚ್ಚಿ ಹೋದ ವಿಚಾರವನ್ನು ತಿಳಿದು ದಳವಾಯಿ ಕೊಮಾರಯ್ಯನ ತಾಯಿ ಮಠದ ಕಟ್ಟಡವನ್ನು ಜೀರ್ಣೋದ್ಧಾರ ಮಾಡುವ ಸಲುವಾಗಿ ಕನಕಪುರಕ್ಕೆ ಬಂದರು. (ಕ್ರಿ.ಶ.೧೬೭೨) ದಳವಾಯಿ ಕೊಮಾರಯ್ಯನ ತಾಯಿ ತಿಮ್ಮಮ್ಮಣ್ಣಿಯವರು ಶಿಲಾಮಂಟಪವನ್ನು ನಿರ್ಮಿಸಿ ವೃಷಭೇಷನ ಮೂರ್ತಿಯನ್ನು ನಿರ್ಮಿಸಿದರು. ಅಲ್ಲದೆ ಕೊಚ್ಚಿ ಹೋಗಿದ್ದ ಮಠವನ್ನು ನಿರ್ಮಿಸಿ ಮುಂದಿನ ಧಾರ್ಮಿಕ ಕಾರ್ಯಗಳ ಅನುಕೂಲಕ್ಕಾಗಿ ಭೂಮಿಯನ್ನು ಉಂಬಳಿಯಾಗಿ ನೀಡಿ ಹೋದರು. ರಾಜಾಶ್ರಯ ಮತ್ತು ಭಕ್ತರ ನೆರವು ಪಡೆದು ದೇಗುಲಮಠವನ್ನು ಪುನರ್ ಅಭಿವೃದ್ಧಿಪಡಿಸಿ ಶ್ರೀ ಮರುಳಸಿದ್ಧ ಸ್ವಾಮಿಗಳು ಲಿಂಗೈಕ್ಯರಾದರು.

ಮತ್ತೆ ಪ್ರತ್ಯೇಕಗೊಂಡ ಮಠ: ಶ್ರೀ ಮರುಳಸಿದ್ಧ ಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಚನ್ನಬಸವ ಸ್ವಾಮಿಗಳ ಆಡಳಿತದಲ್ಲಿ ಮಠವು ಅಭಿವೃದ್ಧಿಗೊಂಡಿತು. ಅಭಿವೃದ್ಧಿಗೊಂಡ ಮಠದ ಆಡಳಿತವನ್ನು ನೋಡಿಕೊಳ್ಳಲು ಚಿಕ್ಕಮಠ ಮತ್ತು ದೇಗುಲಮಠದ ಆಡಳಿತವನ್ನು ಪ್ರತ್ಯೇಕಗೊಳಿಸಿ ಅರಳಾಳು ಗ್ರಾಮದ ಶ್ರೀ ಮರುಳಸಿದ್ಧದೇವರಿಗೆ ಶ್ರೀ ಇಮ್ಮಡಿಮರುಳಸಿದ್ಧ ಸ್ವಾಮಿಗಳು ಎಂದು ಅಭಿಧಾನವಿತ್ತು ಚಿಕ್ಕಮಠದ ಅಧಿಕಾರವನ್ನು ವಹಿಸಿಕೊಟ್ಟರು. ಅಪಾರ ಜ್ಞಾನವನ್ನು ಸಂಪಾದಿಸಿಕೊಂಡಿದ್ದ ಗುರುಗಳು ಮಠ ಮತ್ತು ಸಮಾಜವನ್ನು ಬೆಳೆಸಿದರು.ದೇಗುಲಮಠದ ಶ್ರೀ ಚನ್ನಬಸವ ಸ್ವಾಮಿಗಳು ವಯೋವೃದ್ಧರಾಗಿದ್ದ ಕಾರಣ ಮಠದ ವ್ಯವಹಾರವನ್ನು ನೋಡಿಕೊಳ್ಳಲು ಉತ್ತರಾಧಿಕಾರಿಗಳನ್ನು ನೇಮಿಸಿಕೊಳ್ಳಲು ತಯಾರಾಗಿದ್ದರು. ಆಗ ಎರಡೂ ಮಠಗಳಿಗೂ ಉತ್ತರಾಧಿಕಾರಿಗಳನ್ನು ನೇಮಿಸಿ ಪಟ್ಟಾಧಿಕಾರವನ್ನು ಕೊಡಬೇಕೆಂದು ನಿರ್ಧಾರ ಕೈಗೊಳ್ಳಲಾಯಿತು. ಈ

ಉದ್ದೇಶದಿಂದ ದೇಗುಲಮಠಕ್ಕೆ (ದೊಡ್ಡ ಮಠ) ಐಜೂರಿನ ಶ್ರೀ ಸಾವಂತಪ್ಪನವರ ಮಗ ಬಸಪ್ಪದೇವರನ್ನು ಆಯ್ಕೆಮಾಡಿ ಶ್ರೀ ಇಮ್ಮಡಿ ನಿರ್ವಾಣ ಸ್ವಾಮಿಗಳೆಂದು, ಚಿಕ್ಕಮಠಕ್ಕೆ ಅರಳಾಳು ಗ್ರಾಮದ ಶ್ರೀ ಕಾಳಪ್ಪನವರನ್ನು ಆಯ್ಕೆ ಮಾಡಿ ಇಮ್ಮಡಿ ಶ್ರೀ ಹುಚ್ಚಪ್ಪ ಸ್ವಾಮಿಗಳೆಂದು ಅಭಿಧಾನವನ್ನು ಮಾಡಿ ಜತೆಯಲ್ಲಿಯೇ ಅಧಿಕಾರವನ್ನು ನೀಡಲಾಯಿತು.

ಶ್ರೀ ಇಮ್ಮಡಿ ನಿರ್ವಾಣ ಸ್ವಾಮಿಗಳು ೧೯೦೭ರಲ್ಲಿ ಲೋಕಸಂಚಾರಕ್ಕೆ ಹೋಗಿ ಅನೇಕ ಪುಣ್ಯ ಕ್ಷೇತ್ರಗಳನ್ನು ಸುತ್ತಿ ಹಿಂದಿರುಗಿ ಮಠಕ್ಕೆ ಬಂದು ದೇಗುಲಮಠದಲ್ಲಿ ನೆಲೆಗೊಂಡು ಮಠವನ್ನು ಬೆಳೆಸಿದರು. ಪುನಃ ೧೯೨೦ರಲ್ಲಿ ಎರಡನೆಯ ಪರ್ಯಟನೆ ಕಾರ್ಯಕ್ಕೆ ಹೋಗಿ ಬರುವುದರಲ್ಲಿ ಚಿಕ್ಕಮಠದ ಅಧಿಕಾರವನ್ನು ವಹಿಸಿಕೊಂಡಿದ್ದ ಶ್ರೀ ಹುಚ್ಚಪ್ಪ ಸ್ವಾಮಿಗಳು ಅವಸಾನದ ಸ್ಥಿತಿಯಲ್ಲಿದ್ದು, ದೀರ್ಘ ಜೀವನ ನಡೆಸಿ ೧೯೨೪ರಲ್ಲಿ ಲಿಂಗೈಕ್ಯರಾದರು. ಇವರ ನಂತರ ಚಿಕ್ಕಮಠದ ಆಡಳಿತವನ್ನು ನೋಡಿಕೊಳ್ಳತೊಡಗಿದ ಶ್ರೀ ಇಮ್ಮಡಿ ನಿರ್ವಾಣಸ್ವಾಮಿಗಳು ಪುನಃ ಪ್ರತ್ಯೇಕಗೊಂಡ ಮಠದ ಆಡಳಿತವನ್ನು ಒಂದು ಮಾಡಿದರು. ತುಮಕೂರು ತಾಲ್ಲೂಕಿನ ಕೆಂಬಳಲು ಗ್ರಾಮದ ಶ್ರೀ ಸಿದ್ಧಬಸಪ್ಪ ಮತ್ತು ಶ್ರೀಮತಿ ಚನ್ನಮ್ಮನವರ ಪುತ್ರರಾಗಿ ಜನಿಸಿದ ಕಾಳಪ್ಪನವರು ಬಾಲ್ಯದಲ್ಲಿಯೇ ಸಿದ್ಧಗಂಗೆಯ ಮಠದ ಶ್ರೀ ಉದ್ದಾನ ಶಿವಯೋಗಿಗಳ ಕೃಪಾಶೀರ್ವಾದದಿಂದ ಬೆಳೆದವರು. ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಮುಗಿಸಿದ ಕಾಳಪ್ಪನವರು ಮಠದಲ್ಲಿ ವಾಸ್ತವ್ಯ ಮಾಡತೊಡಗಿದರು. ಮಠದಲ್ಲಿ ನಡೆಯುವ ಎಲ್ಲಾ ಕೆಲಸಗಳಲ್ಲೂ ಮುಂದಾಳುತ್ವ ವಹಿಸಿ ಸಂಘಟನಾ ಶಕ್ತಿಗೆ ಹೆಸರಾಗಿದ್ದರು. ಲೌಕಿಕ ಜಗತ್ತಿಗಿಂತ ಆಧ್ಯಾತ್ಮಿಕ ಲೋಕದಲ್ಲಿ ಮತ್ತು ಸಮಾಜ ಸೇವೆಯಲ್ಲಿ ಕಾಳಪ್ಪನವರು ಅಪಾರ ಕಾಳಜಿಯನ್ನು ತೋರಿಸುತ್ತಿದ್ದರು.

ಇದೇ ಸಂದರ್ಭದಲ್ಲಿ ದೇಗುಲಮಠಕ್ಕೆ ಸಮರ್ಥ ಉತ್ತರಾಧಿಕಾರಿಗಳ ಅನ್ವೇಷಣೆಯಲ್ಲಿ ತೊಡಗಿದ್ದ ಕನಕಪುರದ ಭಕ್ತ ಸಮೂಹ ಮತ್ತು ಗುರುಗಳು ತುಮಕೂರಿಗೆ ಆಗಮಿಸಿ, ಉತ್ತರಾಧಿಕಾರಿಗಳನ್ನು ಆಯ್ಕೆಮಾಡಿಕೊಡಬೇಕೆಂದು ಬಿನ್ನವಿಸಿಕೊಂಡರು. ಆಗ ಶ್ರೀ ಉದ್ಧಾನ ಸ್ವಾಮಿಗಳು ಕಾಳಪ್ಪನವರ ಹೆಸರನ್ನು ಹೇಳಿ, ಮಠದಲ್ಲಿಯೇ ಇದ್ದ ಕಾಳಪ್ಪನವರನ್ನು ಕರೆಸಿ ಅವರ ಅಭಿಪ್ರಾಯವನ್ನು ಕೇಳಿದರು. ಶ್ರೀ ಉದ್ದಾನ ಸ್ವಾಮಿಗಳು ಕೇಳಿದ ಅಭಿಪ್ರಾಯಕ್ಕೆ ಸಮ್ಮತಿಕೊಟ್ಟರು. ನಂತರ ೧೯೩೯ರ ಫೆಬ್ರವರಿಯಲ್ಲಿ ಶ್ರೀ ಇಮ್ಮಡಿ ಮಹಾಲಿಂಗ ಸ್ವಾಮಿಗಳೆಂದು ಅಭಿಧಾನ ಮಾಡಿ ಪಟ್ಟಾಧಿಕಾರವನ್ನು ನೀಡಲಾಯಿತು.

ದೇಗುಲ ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ಶ್ರೀ ಇಮ್ಮಡಿ ಮಹಾಲಿಂಗ ಸ್ವಾಮಿಗಳು ಹಿರಿಯ ಗುರುಗಳಾದ ಶ್ರೀ ಇಮ್ಮಡಿ ನಿರ್ವಾಣ ಸ್ವಾಮಿಗಳ ಮಾರ್ಗದರ್ಶನದಲ್ಲಿ ಬೆಳೆಯತೊಡಗಿದರು. ದಿನದಿಂದ ದಿನಕ್ಕೆ ಗುರುಶಿಷ್ಯರ ಸಂಬಂಧ ಅನನ್ಯ ರೀತಿಯಲ್ಲಿ ರೂಪುಗೊಂಡಿತು. ಶ್ರೀ ಮಹಾಲಿಂಗ ಸ್ವಾಮಿಗಳ ಕ್ರಿಯಾಶೀಲ ಗುಣಗಳಿಂದ ಮತ್ತು ಉತ್ತಮ ವಾಗ್ಮಿಗಳಾದ ಕಾರಣ ಜನರು ಹೆಚ್ಚು ಆಕರ್ಷಿತಗೊಂಡರು. ಸಂಘಟನಾ ಚತುರರಾದ ಶ್ರೀ ಮಹಾಲಿಂಗ ಸ್ವಾಮಿಗಳು ದಕ್ಷತೆ ಮತ್ತು ಶಿಸ್ತಿನಿಂದ ಹೆಸರುಪಡೆದು, ತಮ್ಮ ಕಾಯಕಯೋಗದಿಂದ ಮಠವನ್ನು ಕಂಡರಿಯದ ರೀತಿಯಲ್ಲಿ ಬೆಳೆಸಿದರು. ಮಠದ ಆಸ್ತಿಯು ಇವರ ಕಾಲದಲ್ಲಿ ನಂದನವನವಾಗಿ ರೂಪುಗೊಂಡಿತು. ಮಠದಲ್ಲಿ ದನಕರುಗಳನ್ನು ಸಾಕಿ ಬೆಳೆಸಿದರು. ಅಧಿಕ ಭತ್ತದ ಇಳುವರಿಗಾಗಿ ಜಿಲ್ಲೆ ಮತ್ತು ರಾಜ್ಯಮಟ್ಟದ ಬಹುಮಾನವನ್ನು ಪಡೆದ ಶ್ರೀ ಇಮ್ಮಡಿ ಮಹಲಿಂಗ ಸ್ವಾಮಿಗಳು, ಮಠದಲ್ಲಿ ಶಿವಾನುಭವ ಗೋಷ್ಠಿಗಳು, ಶರಣತತ್ತ್ವ ಚಿಂತನ ಗೋಷ್ಠಿಗಳು ಮತ್ತು ಉಪನ್ಯಾಸಗಳ ಮೂಲಕ ಧರ್ಮಪ್ರಚಾರ ಕಾರ್ಯವನ್ನು ಮಾಡುತ್ತಾ, ಭಕ್ತ ಸಮುದಾಯದಲ್ಲಿ ಧಾರ್ಮಿಕ ನೆಲೆಗಟ್ಟನ್ನು ರೂಪಿಸತೊಡಗಿರುತ್ತಾರೆ.

ಉತ್ತರಾಧಿಕಾರಿಆಯ್ಕೆ: ಶ್ರೀ ಇಮ್ಮಡಿ ಮಹಾಲಿಂಗ ಸ್ವಾಮಿಗಳು ತಮ್ಮ ದೀರ್ಘಕಾಲದ ಆಡಳಿತದಲ್ಲಿ ಮಠವನ್ನು ನಾಡಿನ ಉದ್ದಗಲಕ್ಕೆ ಪ್ರಚಾರಪಡಿಸಿದ್ದಾರೆ. ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕವಾಗಿ ಮಠವನ್ನು ಬೆಳೆಸಿದ ಕೀರ್ತಿಗೆ ಕಾರಣರಾಗಿದ್ದಾರೆ. ತಾವು ಬೆಳೆಸಿದ ಮಠಕ್ಕೆ ಉತ್ತರಾಧಿಕಾರಿಗಳನ್ನು ನೇಮಿಸುವ ದೃಷ್ಟಿಯಿಂದ ಸಮರ್ಥರಿಗಾಗಿ ಅನ್ವೇಷಣೆ ಮಾಡತೊಡಗಿದರು. ಸಿದ್ಧಗಂಗೆಯ ಕ್ಷೇತ್ರಾಧ್ಯಕ್ಷರಾದ ಶ್ರೀ ಶಿವಕುಮಾರ ಸ್ವಾಮಿಗಳ ಆಪ್ಪಣೆಯಂತೆ ಶ್ರೀ ಶಿವರುದ್ರ ಸ್ವಾಮಿಗಳನ್ನು ನೇಮಿಸಿಕೊಂಡರು.

ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕಿನ ಕುರುಬೂರು ಗ್ರಾಮದ ಶ್ರೀ ವೀರಭದ್ರಪ್ಪ ಮತ್ತು ತಾಯಮ್ಮನವರ

ಮಗನಾಗಿ ೧೯೪೩ರ ಮೇ ಇಪ್ಪತ್ತರಂದು ಜನಿಸಿದ ಶ್ರೀ ಶಿವರುದ್ರಪ್ಪನವರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕುರುಬೂರಿನಲ್ಲಿಯೇ ಮುಗಿಸಿದರು. ನಂತರ ಚಾಮರಾಜ ನಗರದಲ್ಲಿ ಪ್ರೌಢಶಿಕ್ಷಣವನ್ನು ಮುಗಿಸಿ, ಮೈಸೂರಿಗೆ ಬಂದು ಶಾರದಾವಿಲಾಸ ಮತ್ತು ಮಹಾರಾಜ ಕಾಲೇಜುಗಳಲ್ಲಿ ಪದವಿಯನ್ನು (ಬಿ.ಎಸ್ಸಿ) ಸಂಪಾದಿಸಿಕೊಂಡು ೧೯೬೮ರಲ್ಲಿ ನೌಕರಿಗೆ ಸೇರಿದರು. ೧೯೭೦ರಲ್ಲಿ ಚಾಮರಾಜನಗರ ತಾಲ್ಲೂಕಿನ ಮರಿಯಾಲಮಠಕ್ಕೆ ಉತ್ತರಾಧಿಕಾರಿಗಳಾಗಿ ನೇಮಕಗೊಂಡ ಕಾರಣ, ಸರ್ಕಾರಿ ಹುದ್ದೆಗೆ ರಾಜಿನಾಮೆ ಯನ್ನು ನೀಡಿ ಮಠಕ್ಕೆ ಬಂದರು. ಆದರೆ ಮರಿಯಾಲ ಮಠದಲ್ಲಿ ಹೆಚ್ಚು ದಿನ ಇರಲಾರದೆ ಮಳವಳ್ಳಿ ತಾಲ್ಲೂಕಿನ ನೆಲ್ಲೀಗೆರೆ ಗ್ರಾಮದ ಮಠದಲ್ಲಿ ವಾಸ್ತವ್ಯಪಡೆದು ಧಾರ್ಮಿಕ ಕಾರ್ಯಗಳನ್ನು ಮಾಡತೊಡಗಿದರು. ಈ ಸಂದರ್ಭದಲ್ಲಿ ಮಾನಸಿಕವಾಗಿ ದೃಢತೆ ಮತ್ತು ಆತ್ಮಸ್ಥೈರ್ಯವನ್ನು ಬೆಳೆಸಿಕೊಂಡರು.

ಈ ವೇಳೆಯಲ್ಲಿ ಶ್ರೀ ಇಮ್ಮಡಿ ಮಹಲಿಂಗ ಸ್ವಾಮಿಗಳ ಮತ್ತು ಸಿದ್ಧಗಂಗೆಯ ಶ್ರೀ ಶಿವಕುಮಾರ ಸ್ವಾಮಿಗಳ ಕೃಪೆಗೆ ಒಳಗಾಗಿ ದೇಗುಲಮಠಕ್ಕೆ ಉತ್ತರಾಧಿಕಾರಿಗಳಾಗಿ ಆಯ್ಕೆಯಾಗಿದ್ದು ದೇಗುಲಮಠದ ಯೋಗಾಯೋಗವೇ ಸರಿ. ಅದಮ್ಯ ವ್ಯಕ್ತಿತ್ವ, ಛಲಗಾರಶಕ್ತಿ ಮತ್ತು ಅದ್ವಿತೀಯ ಸಾಧನೆಯ ಹಂಬಲವನ್ನು ಹೊಂದಿದ್ದ ಶ್ರೀ ಶಿವರುದ್ರ ಸ್ವಾಮಿಗಳು ಶ್ರೀ ಮುಮ್ಮಡಿ ಶ್ರೀ ನಿರ್ವಾಣ ಸ್ವಾಮಿಗಳಾಗಿ ಅಭಿಧಾನ ಪಡೆದು ದೇಗುಲ ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ.

ದಾಪುಗಾಲು: ಹಿರಿಯ ಗುರುಗಳ ಆಶೀರ್ವಾದದ ಮಾರ್ಗದರ್ಶನದಲ್ಲಿ ಹಿಂದಿನ ಪರಂಪರೆಯ ಎಲ್ಲಾ ಗುರುಗಳ ಮೇಲ್ಪಂಕ್ತಿಯಲ್ಲಿ ನಿಲ್ಲುವಂತಹ ಅದ್ವಿತೀಯ ಕಾರ್ಯಯೋಜನೆಗಳನ್ನು ಹಮ್ಮಿಕೊಂಡು ದುಡಿಯ ತೊಡಗಿದರು. ಖುಷ್ಕಿ ಭೂಮಿಯನ್ನು ನೀರಾವರಿಗೆ ಒಳಪಡಿಸಿ, ವಾಣಿಜ್ಯ ಬೆಳೆಗಳಾದ ಅರಿಶಿಣ, ಬಾಳೆ, ಕಬ್ಬು ಬೆಳೆದು ಸಮಾಜಕ್ಕೆ ಆದರ್ಶನೀಯವಾಗಿದ್ದಾರೆ.

ಮಠದ ಸಮುಚ್ಚಯ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳ ಕಾಲದಲ್ಲಿ ಸವಿಸ್ತಾರವಾಗಿ ಬೆಳೆಯಿತು. ಧಾರ್ಮಿಕ ಮತ್ತು ಸಾಂಸ್ಕೃತಿಕ ಸಮಾರಂಭಗಳನ್ನು ನಡೆಸುವುದಕ್ಕೆ ನೆರವಾಗಲು ಶ್ರೀ ಮಹಾಲಿಂಗೇಶ್ವರ ಕಲ್ಯಾಣಮಂಟಪ ಮತ್ತು ಸಮುದಾಯ ಭವನವನ್ನು ನಿರ್ಮಿಸಿದರು. ಮಠದ ಆಡಳಿತವನ್ನು ವಹಿಸಿಕೊಂಡು ಎರಡು ದಶಕಗಳಿಂದ ಸಮರ್ಥವಾಗಿ ಮಠವನ್ನು ನಡೆಸಿಕೊಂಡು ಬಂದಿದ್ದಾರೆ. ಮಠದ ಅಭಿವೃದ್ಧಿಗಾಗಿ ಅನೇಕ ಕಾರ್ಯ ಯೋಜನೆಗಳನ್ನು ಹಮ್ಮಿಕೊಂಡು ತಮ್ಮನ್ನೇ ಅರ್ಪಿಸಿಕೊಂಡು ನಿರಂತರವಾಗಿ ದುಡಿಯುತ್ತಾ ಬಂದು, ಮಠವನ್ನು ಉನ್ನತಿಯ ಶಿಖರಕ್ಕೆ ಕೊಂಡೊಯ್ದಿದ್ದಾರೆ.

ಗುರುಶಿಷ್ಯರು: ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳು ತಮ್ಮ ಎರಡು ದಶಕದ ಆಡಳಿತವನ್ನು ಮುಗಿಸಿ ತಮ್ಮ ಉತ್ತರಾಧಿಕಾರಿಗಳನ್ನು ನೇಮಕಮಾಡಿಕೊಳ್ಳಲು ಮುಂದಾಗಿ ಶ್ರೀ ರೇಣುಕೇಶ್‌ರವರನ್ನು ಆಯ್ಕೆ ಮಾಡಿಕೊಂಡಿದ್ದಾರೆ. ತುಮಕೂರು ಜಿಲ್ಲೆ ಕೆಂಬಳಲು ಗ್ರಾಮದಲ್ಲಿ ಶ್ರೀ ವಿಶ್ವನಾಥ್ ಮತ್ತು ಶ್ರೀಮತಿ ರೇಣುಕಮ್ಮನವರ ಪುತ್ರರಾಗಿ ೧೯೭೩ರ ಮೇ ಹದಿನೈದರಂದು ಜನಿಸಿದರು. ಕೆಂಬಳಲು ಗ್ರಾಮದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿ, ಕನಕಪುರದ ದೇಗುಲಮಠದಲ್ಲಿ ಆಶ್ರಯ ಪಡೆದು ಪ್ರೌಢ ಶಿಕ್ಷಣವನ್ನು ಮುಗಿಸಿದರು. ಕನಕಪುರದಲ್ಲಿ ಇದ್ದಾಗಲೇ ಪ್ರೌಢಶಿಕ್ಷಣದ ಜತೆಗೆ ಸಂಸ್ಕೃತ, ಕಾವ್ಯ ಮತ್ತು ವೇದ ಪರೀಕ್ಷೆಗಳಲ್ಲಿ ಉತ್ತೀರ್ಣರಾದರು. ನಂತರ ಕಾಲೇಜು ಶಿಕ್ಷಣವನ್ನು ಪಡೆಯಲು ತುಮಕೂರಿನ ಸಿದ್ಧಗಂಗೆಯ ಮಠದಲ್ಲಿ ಆಶ್ರಯವನ್ನು ಪಡೆದು ಶ್ರೀ ಶಿವಕುಮಾರ ಸ್ವಾಮಿಗಳ ಆರೈಕೆಯಲ್ಲಿ ಬೆಳೆದರು. ನಂತರ ಕನ್ನಡ ಭಾಷೆ-ಸಾಹಿತ್ಯವನ್ನು ಅಧ್ಯಯನಮಾಡಿ ಸ್ನಾತಕೋತ್ತರ ಪದವಿಯನ್ನು ಪಡೆದ ಶ್ರೀ ರೇಣುಕೇಶರವರು ಸೌಜನ್ಯತೆಯ ಸಾಕಾರಮೂರ್ತಿಗಳಾಗಿ, ನಯ, ವಿನಯತೆ, ಮತ್ತು ಗಂಭೀರತೆಯನ್ನು ಮೈಗೂಡಿಸಿಕೊಂಡು ಬೆಳೆದಿದ್ದಾರೆ.

೧೯೯೮ರ ಮಾರ್ಚ್ ಇಪ್ಪತ್ಮೂರರಂದು ಸಿದ್ಧಗಂಗೆಯ ಮಠಾಧ್ಯಕ್ಷರಾದ ಶ್ರೀ ಡಾ.ಶಿವಕುಮಾರ ಸ್ವಾಮಿಗಳ ಅಪ್ಪಣೆಯ ಮೇರೆಗೆ ಷಟ್‌ಸ್ಥಲ ಬ್ರಹ್ಮೋಪದೇಶಪೂರಕವಾಗಿ ವಿರಕ್ತಾಶ್ರಮ ದೀಕ್ಷೆಯನ್ನು ನೀಡಿ, ಶ್ರೀ ರೇಣುಕೇಶ್‌ರವರಿಗೆ ಶ್ರೀ ಮುಮ್ಮಡಿ ಮಹಾಲಿಂಗ ಸ್ವಾಮಿಗಳೆಂದು ಅಭಿಧಾನ ಮಾಡಿ ನಿರಂಜನ ಚರಪಟ್ಟಾಧಿಕಾರವನ್ನು ಮಾಡಲಾಗಿದೆ.

ಬೆಳೆದ ಶಿಕ್ಷಣ ಕ್ಷೇತ್ರ: ಶ್ರೀ ಇಮ್ಮಡಿ ಮಹಲಿಂಗ ಸ್ವಾಮಿಗಳ ಕಾಲದಲ್ಲಿ ಶ್ರೀ ನಿರ್ವಾಣಸ್ವಾಮಿ ಕೃಪ ವಿದ್ಯಾಪೀಠ ಪ್ರಾರಂಭವಾಯಿತು. ಸಣ್ಣದಾಗಿ ಪ್ರಾರಂಭಗೊಂಡ ಶಿಕ್ಷಣಸೇವೆ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳ ಕಾಲದಲ್ಲಿ ಬೆಳೆದು ಆಲದ ಮರದಂತೆ ಹರಡಿಕೊಂಡಿದೆ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಜ್ಞಾನವನ್ನು ಹೆಚ್ಚಿಸಲು ಅನೇಕ ಶಿಕ್ಷಣ ಸಂಸ್ಥೆಗಳನ್ನು

ಪ್ರಾರಂಭಿಸಲಾಗಿದೆ. ಸಾವಿರಾರು ವಿದ್ಯಾರ್ಥಿಗಳಿಗೆ ಆಶ್ರಯವನ್ನು ಕಲ್ಪಿಸಿ, ನಿತ್ಯ ಉಚಿತ ಪ್ರಸಾದದ ವ್ಯವಸ್ಥೆಯನ್ನು ಮಾಡುತ್ತಿರುವುದು ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳ ಕ್ರಿಯಾಶೀಲತೆಗೆ ಮತ್ತು ಛಲಗಾರ ಮನಸ್ಸಿಗೆ ಹಿಡಿದ ಕೈಗನ್ನಡಿಯಾಗಿದೆ. ಶ್ರೀ ಇಮ್ಮಡಿ ಮಹಾಲಿಂಗ ಸ್ವಾಮಿಗಳು ಮತ್ತು ಶ್ರೀ ಮುಮ್ಮಡಿ ನಿರ್ವಾಣಸ್ವಾಮಿಗಳ ಕಾಲದಲ್ಲಿ ಕನಕಪುರ ಮತ್ತು ಸುತ್ತಮುತ್ತ ಸ್ಥಾಪನೆಗೊಂಡ ಶಿಕ್ಷಣ ಸಂಸ್ಥೆಗಳ ವಿವರಗಳು ಈ ಕೆಳಗಿನಂತಿವೆ.

೧. ಶ್ರೀ ನಿರ್ವಾಣಸ್ವಾಮಿ ವಸತಿ ಪ್ರೌಢಶಾಲೆ (೧೯೬೪-೬೫)
ಶ್ರೀ ದೇಗುಲ ಮಠ, ಕನಕಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

೨. ಶ್ರೀ ಬಸವೇಶ್ವರ ಹಿರಿಯ ಪ್ರಾಥಮಿಕ ಪಾಠಶಾಲೆ (೧೯೬೯-೭೦)
ಶ್ರೀ ದೇಗುಲ ಮಠ, ಕನಕಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

೩. ಶ್ರೀ ನಿರ್ವಾಣ ಸ್ವಾಮಿ ಸಂಸ್ಕೃತ ಪಾಠಶಾಲೆ (೧೯೭೯-೮೦)
ಶ್ರೀ ದೇಗುಲ ಮಠ, ಕನಕಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

೪. ಶ್ರೀ ಮಹಾಲಿಂಗೇಶ್ವರ ಕೈಗಾರಿಕಾ ತರಬೇತಿ ಸಂಸ್ಥೆ (೧೯೯೨-೯೩)
ಶ್ರೀ ದೇಗುಲ ಮಠ, ಕನಕಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

೫. ಶ್ರೀ ಮಹಾಲಿಂಗೇಶ್ವರ ಗ್ರಾಮಾಂತರ ಪ್ರೌಢಶಾಲೆ (೧೯೬೫-೬೬)
ವೀರೇಗೌಡನ ದೊಡ್ಡಿ, ಮಾಗಡಿ ತಾಲ್ಲೂಕು.

೬ ಶ್ರೀ ಬಸವೇಶ್ವರ ಪ್ರೌಢಶಾಲೆ (೧೯೬೬-೬೭)
ಹಲಸಹಳ್ಳಿ, ಮಳವಳ್ಳಿ ತಾಲ್ಲೂಕು.

೭. ಶ್ರೀ ಮಹಾಲಿಂಗೇಶ್ವರ ಗ್ರಾಮಾಂತರ ಪ್ರೌಢಶಾಲೆ (೧೯೮೮-೮೯)
ಹುಣಸನಹಳ್ಳಿ, ಕನಕಪುರ ತಾಲ್ಲೂಕು

೮. ಶ್ರೀ ಮಹಾಲಿಂಗ ಸ್ವಾಮಿ ಗ್ರಾಮಾಂತರ ಪದವಿ ಪೂರ್ವ ಕಾಲೇಜು (೧೯೯೨-೯೩)
ಹುಣಸನಹಳ್ಳಿ, ಕನಕಪುರ ತಾಲ್ಲೂಕು

೯. ಶ್ರೀ ಮಹಾಲಿಂಗೇಶ್ವರ ಗ್ರಾಮಾಂತರ ಪ್ರೌಢಶಾಲೆ (೧೯೯೪-೯೫)
ಉಪ್ಪನಹಳ್ಳಿ (ಕನ್ನಹಳ್ಳಿ) ಮಳವಳ್ಳಿ ತಾಲ್ಲೂಕು

೧೦. ಶ್ರೀ ನಿರ್ವಾಣ ಸ್ವಾಮಿ ಅನಾಥಾಲಯ (೧೯೪೭-೪೮)
ಶ್ರೀ ದೇಗುಲ ಮಠ, ಕನಕಪುರ

೧೧. ಶ್ರೀ ನಿರ್ವಾಣಸ್ವಾಮಿ ಅನಾಥ ಶಿಶು ಸಂರಕ್ಷಣಾಲಯ (೧೯೭೭-೭೮)
ಶ್ರೀ ದೇಗುಲಮಠ, ಕನಕಪುರ.

೧೨. ಶ್ರೀ ಮಹಾಲಿಂಗ ಸ್ವಾಮಿ ವಿದ್ಯಾರ್ಥಿನಿಲಯ (೧೯೯೦-೯೧)
ಹುಣಸನಹಳ್ಳಿ, ಕನಕಪುರ ತಾಲ್ಲೂಕು.

೧೩. ಶ್ರೀ ಸಿದ್ಧಗಂಗಾ ಗ್ರಾಮಾಂತರ ಬಾಲಕಿಯರ ಪ್ರೌಢಶಾಲೆ (೧೯೯೦-೯೧)
ಕೆಸ್ತೂರು, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ

ಈ ರೀತಿ ಪ್ರತಿ ವರ್ಷವು ಸರಾಸರಿ ೩೩೫೦ ಮಕ್ಕಳಿಗೆ ಜ್ಞಾನ ದಾಸೋಹವನ್ನು ನೀಡಲಾಗುವುದಲ್ಲದೆ, ನಿತ್ಯ ಸರಾಸರಿ ೧೨೫೦ ವಿದ್ಯಾರ್ಥಿಗಳು ಹಾಗೂ ಮಠಕ್ಕೆ ಭೇಟಿ ನೀಡುವ ಭಕ್ತರೂ ಸೇರಿದಂತೆ ೧೫೦೦ ಜನರಿಗೆ ನಿರಂತರವಾಗಿ ಮೂರು ವೇಳೆಯೂ ಅನ್ನ ದಾಸೋಹವನ್ನು ನೀಡಿ ಮಠವು ದಾಸೋಹದ ಕೇಂದ್ರವಾಗಿದೆ. ಮೇಲಿನ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ೧೩೭ ಜನರಿಗೆ ಉದ್ಯೋಗವನ್ನು ಕಲ್ಪಿಸಿ ಅವರುಗಳ ಜೀವನಕ್ಕೆ ಆಧಾರವನ್ನು ನೀಡಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಮುಮ್ಮಡಿ ಮಹಾಲಿಂಗ ಸ್ವಾಮಿಗಳು, ಶ್ರೀ ದೇಗುಲಮಠ, ಕನಕಪುರ, ಬೆಂಗಳೂರು ಗ್ರಾಮಾಂತರಜಿಲ್ಲೆ.

ಆಧಾರ: 'ದೇಗುಲ ಸಿರಿ' ಸ್ಮರಣ ಸಂಚಿಕೆ

ಕಬ್ಬಾಳು

ಕನಕಪುರ ತಾಲ್ಲೂಕಿನ ಕಬ್ಬಾಳು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಹದಿನೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀಬಿಲ್ವಪತ್ರೆ ಗವಿಮಠವು ಅಸ್ತಿತ್ವದಲ್ಲಿದೆ.

ಬಿಲ್ವಪತ್ರೆ ಗವಿಮಠ: ಕಬ್ಬಾಳು ಗ್ರಾಮದ ಸಮೀಪ ಸ್ಥಾಪನೆಗೊಂಡಿರುವ ವಿರಕ್ತ ಮಠವು ಬಿಲ್ವವೃಕ್ಷದ ವನದ ಮಧ್ಯೆ ಇರುವ ಗವಿಯಲ್ಲಿರುವ ಕಾರಣ'ಬಿಲ್ವಪತ್ರೆ ಗವಿಮಠ' ಎಂದು ಹೆಸರು ಬಂದಿದೆ. ಈ ಮಠದ ಕರ್ತೃಗುರುಗಳು ಯಾರು ಎಂಬುದು ತಿಳಿದು ಬಂದಿಲ್ಲ. ಆದರೂ ಕರ್ತೃಗುರುಗಳ ಗದ್ದುಗೆಯನ್ನು ಗುರುತಿಸಬಹುದಾಗಿದೆ. ಬಿಲ್ವಪತ್ರೆಯ ಮರಗಳ ವನದಲ್ಲಿ ಸ್ಥಾಪನೆಯಾಗಿರುವ ಗವಿಮಠವು ವಿರಕ್ತ ಸಂಪ್ರದಾಯದ ಮಠವಾಗಿದೆ. ಈ ಮಠದ ಮೂಲಗವಿಯು ಹನ್ನೆರಡು ಅಡಿ ಅಗಲ ಹದಿನೇಳು ಅಡಿ ಉದ್ದದಲ್ಲಿ ನಿರ್ಮಿತವಾಗಿದೆ. ಈ ಗವಿಯಲ್ಲಿಯೇ ಆದಿ ಗುರುಗಳು ಅನುಷ್ಠಾನಗೊಂಡು ಸಮಾಜವನ್ನು ಬೆಳೆಸಿ ಮಠವನ್ನು ಸ್ಥಾಪಿಸಿದರು. ಮಠದ ಧಾರ್ಮಿಕ ಕಾರ್ಯಗಳು ಬೆಳೆದಂತೆ ಮಠದ ಕಟ್ಟಡವು ಗವಿಯ ಮುಂಭಾಗದಲ್ಲಿ ನಿರ್ಮಾಣಗೊಂಡಿತು. ಈ ರೀತಿ ಬೆಳೆದ ಮಠದ ಪರಂಪರೆ ಯಲ್ಲಿ ಎಷ್ಟು ಜನ ಗುರುಗಳು ಅಧಿಕಾರವನ್ನು ನಡೆಸಿದ್ದಾರೆ ಎಂಬುದರ ಬಗ್ಗೆ ನಿಖರವಾದ ಮಾಹಿತಿ ಇಲ್ಲವಾಗಿದೆ. ಮಠದ ಪರಂಪರೆಯಲ್ಲಿ ಲಭ್ಯವಿರುವ ಗುರುಗಳ ಹೆಸರುಗಳನ್ನು ಈ ಕೆಳಗಿನಂತೆ ಗುರುತಿಸಬಹುದಾಗಿದೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ಶಿವಲಿಂಗಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ನಿರಂಜನಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಸದಾಶಿವಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಇಮ್ಮಡಿ ಶಿವಲಿಂಗಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಶ್ರೀ ಸದಾಶಿವ ಸ್ವಾಮಿಗಳು ಅಧಿಕಾರಕ್ಕೆ ಬರುವ ಮೊದಲು ಅಧಿಕಾರವನ್ನು ನಡೆಸಿದ ಗುರುಗಳ ದಿನಚರಿ ಮತ್ತು ಅವರ ಕಾರ್ಯ ಚಟುವಟಿಕೆಗಳ ಬಗ್ಗೆ ಹೆಚ್ಚು ಮಾಹಿತಿ ಲಭ್ಯವಿಲ್ಲವಾಗಿದೆ. ಶ್ರೀಸದಾಶಿವ ಸ್ವಾಮಿಗಳ ಕಾಲದಲ್ಲಿ ಜಾತಿ ಭೇದ ಇಲ್ಲದೆ ಎಲ್ಲಾ ವರ್ಗಗಳ ಜನರು ಭಕ್ತರಾಗಿ ಮಠವನ್ನು ಬೆಳೆಸಿದ್ದಾರೆ. ಸಮಷ್ಟಿಸಮಾಜದ ಅಭಿವೃದ್ಧಿಗೆ ಶ್ರಮಿಸಿದ ಶ್ರೀ ಸದಾಶಿವ ಸ್ವಾಮಿಗಳನ್ನು ಬೇರೆ ಮತಸ್ಥರು ತಮ್ಮ ಮನೆಯ ಧಾರ್ಮಿಕ ಚಟುವಟಿಕೆಗಳಿಗೆ ಆಹ್ವಾನಿಸುತ್ತಿದ್ದರು. ಆ ವಾಡಿಕೆ ಈಗಲೂ ಮುಂದುವರಿದಿದೆ. ಹಾಲಿ ಮಠದಲ್ಲಿ ಪಟ್ಟಾಧ್ಯಕ್ಷರಾಗಿರುವ ಶ್ರೀ ಶಿವಲಿಂಗ ಸ್ವಾಮಿಗಳು ದೇಗುಲಮಠದ ಲಿಂಗೈಕ್ಯ ಗುರುಗಳಿಂದ ಅನುಗ್ರಹ ಪಡೆದು ಅಧಿಕಾರವನ್ನು ಪಡೆದುಕೊಂಡಿದ್ದಾರೆ.

ಗದ್ದುಗೆ-ಧರ್ಮಕಾರ್ಯ: ಮಠದಲ್ಲಿ ಶ್ರೀ ಶಿವಲಿಂಗ ಸ್ವಾಮಿಗಳ ಗದ್ದುಗೆ, ಶ್ರೀ ನಿರಂಜನ ಸ್ವಾಮಿಗಳ ಗದ್ದುಗೆ ಮತ್ತು ಶ್ರೀ ಸದಾಶಿವ ಸ್ವಾಮಿಗಳ ಗದ್ದುಗೆ ನಿರ್ಮಾಣಗೊಂಡಿವೆ. ಈ ಮೂರೂ ಗದ್ದುಗೆಗಳು ಒಂದರ ಪಕ್ಕದಲ್ಲಿ ಒಂದು ಸ್ಥಾಪನೆ ಗೊಂಡಿದ್ದು, ನಿತ್ಯ ಪೂಜೆಗೆ ವ್ಯವಸ್ಥೆಯಾಗಿದೆ. ಪ್ರತಿ ಹುಣ್ಣಿಮೆಯಲ್ಲಿ ಮಠದಲ್ಲಿ ವಿಶೇಷ ಪೂಜೆಯನ್ನು ಏರ್ಪಡಿಸಿ,ಶಿವಾನುಭವ ಗೋಷ್ಠಿಯನ್ನು ನಡೆಸಲಾಗುತ್ತಿದೆ. ಅಂದು ಭಜನೆ, ಪ್ರವಚನವನ್ನು ಏರ್ಪಡಿಸಿ, ಉಪನ್ಯಾಸ ಮಾಡಿಸಿ ಈ ಮೂಲಕ ಧರ್ಮ ಪ್ರಚಾರವನ್ನು ಮಾಡಲಾಗುತ್ತಿದೆ. ಈ ಸಂದರ್ಭದಲ್ಲಿ ಅನ್ನದಾಸೋಹವನ್ನು ನಡೆಸಲಾಗುತ್ತಿದೆ. ಇತ್ತೀಚೆಗೆ ಆರುಎಕರೆ ಜಮೀನನ್ನು ಖರೀದಿಸಿ ಮಠಕ್ಕೆ ಆಸ್ತಿಯನ್ನು ಮಾಡಲಾಗಿದೆ. ಈ ಭೂಮಿಯಲ್ಲಿ ಆದಾಯ ಬರುವಂತೆ ಮಾಡಿ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ ಬರಲಾಗುತ್ತಿದೆ.

ವಿಳಾಸ:ಶ್ರೀ ಮ.ನಿ.ಪ್ರ.ಶಿವಲಿಂಗ ಸ್ವಾಮಿಗಳು, ಶ್ರೀ ಬಿಲ್ವಪತ್ರೆಗವಿಮಠ, ಕಬ್ಬಾಳು, ಕನಕಪುರ ತಾ, ಬೆಂಗಳೂರು ಗ್ರಾಮಾಂತರಜಿಲ್ಲೆ.

ಕೋಡಿಹಳ್ಳಿ

ಕನಕಪುರ ತಾಲ್ಲೂಕಿನ ಕೋಡಿಹಳ್ಳಿಗೆ ಸಂತೆ ಕೋಡಿಹಳ್ಳಿ ಎಂದೂ ಸಹ ಕರೆಯುತ್ತಾರೆ. ತಾಲ್ಲೂಕು ಕೇಂದ್ರದ ಆಗ್ನೇಯಕ್ಕೆ ಹದಿಮೂರು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಪಟ್ಟದಮಠವು ಅಸ್ತಿತ್ವದಲ್ಲಿದೆ.

ಪಟ್ಟದಮಠ: ಕೋಡಿಹಳ್ಳಿ ಗ್ರಾಮದಲ್ಲಿ ರಂಭಾಪುರಿಪೀಠದ ಶಾಖಾಮಠವಾದ ಶ್ರೀ ಪಟ್ಟದಮಠವು ಸ್ಥಾಪನೆಯಾಗಿ ಈ ಗ್ರಾಮದ ಧಾರ್ಮಿಕ ವಿಧಿವಿಧಾನಗಳಿಗೆ ನೆರವಾಗಿ ಧರ್ಮ ಸಂಸ್ಕೃತಿಯನ್ನು ನೀಡುತ್ತಾ ಬಂದಿದೆ. ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿರುವ ಮಠ ಕಳೆದ ಶತಮಾನದಲ್ಲಿ ಸ್ಥಾಪನೆಯಾಗಿದೆ. ಇಲ್ಲಿನ ವೀರಶೈವ ಧರ್ಮೀಯರಿಗೆ ಧರ್ಮದೀಕ್ಷೆಕಾರ್ಯಗಳಿಗೆ ಗುರುಗಳ ಆವಶ್ಯಕತೆ ಇದೆ ಎಂದು ಅರಿತ ಮೇಲೆ ಊರಿನ ಪ್ರಮುಖರಾದ ರೇವಣ್ಣನವರು ಹಾಗೂ ಇತರರು ಮಠಕ್ಕೆ ಸ್ಥಿರ ಆಸ್ತಿಯನ್ನು ಮಾಡಿ ಗುರುಗಳನ್ನು ಅಧಿಕಾರಕ್ಕೆ ತಂದಿದ್ದಾರೆ.

ಕಳೆದ ಶತಮಾನದಲ್ಲಿ ಸ್ಥಾಪನೆಗೊಂಡ ಮಠದ ಗುರುಗಳಾಗಿ ಶ್ರೀ ಚನ್ನಬಸವರಾಜ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಳ್ಳುತ್ತಾರೆ. ಶ್ರೀ ಚನ್ನಬಸವರಾಜ ಸ್ವಾಮಿಗಳು ಶಿವಪೂಜಾನಿಷ್ಠರೂ, ಕಾಯಕಯೋಗಿಗಳೂ, ಉತ್ತಮ ಸಂಘಟಕರೂ ಆಗಿದ್ದರು. ಗುರುಗಳು ಅಧಿಕಾರಕ್ಕೆ ಬಂದ ಮೇಲೆ ವೀರಶೈವ ಸಿದ್ಧಾಂತದ ಬಗ್ಗೆ ಉಪದೇಶವನ್ನು ನೀಡುತ್ತಾ ವಿಭೂತಿ, ರುದ್ರಾಕ್ಷಿ, ಲಿಂಗಾಂಗ ಸಾಮರಸ್ಯದ ಬಗ್ಗೆ ಭಕ್ತರಲ್ಲಿ ತಿಳುವಳಿಕೆಯನ್ನು ನೀಡಿ ಭಕ್ತರನ್ನು ಧಾರ್ಮಿಕ ನೆಲೆಗಟ್ಟಿನಲ್ಲಿ ಬೆಳೆಸಿದರು. ಶ್ರೀ ಚನ್ನಬಸವರಾಜ ಸ್ವಾಮಿಗಳು ಕೋಡಿಹಳ್ಳಿ ಮತ್ತು ಸುತ್ತಮುತ್ತ ಇರುವ ಗ್ರಾಮಗಳನ್ನು ತಮ್ಮ ವ್ಯಾಪ್ತಿಗೆ ಒಳಪಡಿಸಿಕೊಂಡು ಧರ್ಮಪ್ರಚಾರವನ್ನು ಕೈಗೊಂಡು ಅಹಿಂಸೆ, ಅನಾಚಾರಗಳನ್ನು ದೂರ ಮಾಡಿ ಪಟ್ಟದ ಮಠವು ಬೆಳೆಯಲು ಭದ್ರ ಬುನಾದಿ ಹಾಕಿ ೧೯೭೩ರಲ್ಲಿ ಲಿಂಗೈಕ್ಯರಾದರು.

ಬೆಳೆದ ಪರಂಪರೆ: ಶ್ರೀ ಚನ್ನಬಸವರಾಜ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ೧೯೭೩ರಲ್ಲಿ ಅಧಿಕಾರಕ್ಕೆ ಬಂದರು. ಹಿರಿಯ ಗುರುಗಳು ನಿರ್ಮಿಸಿದ್ದ ಧಾರ್ಮಿಕ ವಾತಾವರಣವನ್ನು ಉಳಿಸಿ ಬೆಳೆಸುವಲ್ಲಿ ಶ್ರಮಿಸಿದ್ದಾರೆ. ಐವತ್ತುವರ್ಷ ವಯಸ್ಸಿನ ಗುರುಗಳು ಮಠವನ್ನು ಜೀವಂತವಾಗಿರಿಸಿ, ಭಕ್ತರ ಧಾರ್ಮಿಕ ಕ್ರಿಯಾದಿಗಳಲ್ಲಿ ಭಾಗವಹಿಸುತ್ತಿದ್ದಾರೆ. ವೀರಭದ್ರಸ್ವಾಮಿ ದೇವಸ್ಥಾನದ ಹಿಂಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಪಟ್ಟದಮಠದ ಕೈಹೆಂಚಿನ ಕಟ್ಟಡವು ಹಳೆಯದಾಗಿದೆ. ಮಠಕ್ಕೆ ರೇವಣ್ಣನವರು ದಾನ ಮಾಡಿದ ಮೂವತ್ತು ಎಕರೆ ಜಮೀನು ಹಾಗೂ ಇತರೆ ಆಸ್ತಿಯಾಗಿ ಒಟ್ಟು ಏಳುಎಕರೆ ಜಮೀನು ಇದೆ. ಇದನ್ನು ಅಭಿವೃದ್ಧಿಪಡಿಸಿ ಬೇಸಾಯಕ್ಕೆ ಯೋಗ್ಯಗೊಳಿಸಿ, ಮಠದ ಧಾರ್ಮಿಕ ಚಟುವಟಿಕೆಗಳಿಗೆ ಆದಾಯದ ಮೂಲವನ್ನಾಗಿ ಮಾಡಿಕೊಂಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಪಟ್ಟದಮಠ, ಕೋಡಿಹಳ್ಳಿ, ಕನಕಪುರ ತಾಲ್ಲೂಕು,.ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಗುರುವಿನಪುರ

ಕನಕಪುರ ತಾಲ್ಲೂಕಿನ ಗುರುವಿನಪುರವು ತಾಲ್ಲೂಕು ಕೇಂದ್ರದ ನೈರುತ್ಯಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಶ್ರೀ ಪಟ್ಟದಮಠವು ಅಸ್ತಿತ್ವದಲ್ಲಿದೆ.

ಪಟ್ಟದಮಠ: ಗುರುವಿನಪುರದಲ್ಲಿ ಸ್ಥಾಪನೆಗೊಂಡ ಶ್ರೀ ಪಟ್ಟದಮಠವು ಧಾರ್ಮಿಕ ನೆಲೆಗಟ್ಟಿನಲ್ಲಿ ಸಮಾಜವನ್ನು ಬೆಳೆಸಿದೆ. ಧಾರ್ಮಿಕ ಚಟುವಟಿಕೆಗಳಿಂದ ಅನಾದಿಕಾಲದಿಂದ ಈತನಕವೂ ಸಮಾಜಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡಿ ಭಕ್ತರನ್ನು ಉದ್ಧರಿಸಿದೆ. ಈ ಮಠವನ್ನು ಸ್ಥಾಪಿಸಿದವರು ಯಾರು ಎಂಬ ಬಗ್ಗೆ ನಿಖರವಾದ ಮಾಹಿತಿಗಳು ಲಭ್ಯವಿಲ್ಲ. ಆದರೆ ಗದ್ದುಗೆಗಳು ಇಂದಿಗೂ ನೋಡಸಿಗುತ್ತಿವೆ. ಈಗಿನ ಶ್ರೀ ಗುರುಸಿದ್ಧ ಶಿವಾಚಾರ್ಯ ಸ್ವಾಮಿಗಳಿಗಿಂತ ಹಿಂದೆ ಅಧಿಕಾರವನ್ನು ನಡೆಸಿದ ಹಿರಿಯ ಗುರುಗಳಾದ ಶ್ರೀ ನಿರ್ವಾಣ ಸ್ವಾಮಿಗಳ ಹೆಸರನ್ನು ಮಾತ್ರ ದಾಖಲಿಸಬಹುದಾಗಿದೆ. ಶ್ರೀ ನಿರ್ವಾಣ ಸ್ವಾಮಿಗಳು ಶಿವಪೂಜಾ ಕಾರ್ಯಗಳಲ್ಲಿ ಬಹಳ ಶಿಸ್ತುಬದ್ಧ ಆಚರಣೆಯನ್ನು ಮಾಡಿ ಹೆಸರು ಪಡೆದಿದ್ದರು. ಇವರ ನಂತರ ಅಧಿಕಾರಕ್ಕೆ ಬಂದ ಶ್ರೀ ಗುರುಸಿದ್ಧ ಶಿವಾಚಾರ್ಯ ಸ್ವಾಮಿಗಳು ಹಿರಿಯ ಗುರುಗಳ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ವಿಳಾಸ:ಷ.ಬ್ರ.ಶ್ರೀ ಗುರುಸಿದ್ಧ ಶಿವಾಚಾರ್ಯ ಸ್ವಾಮಿಗಳು, ಶ್ರೀ ಪಟ್ಟದ ಮಠ, ಗುರುವಿನಪುರ, ಕನಕಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಚಿಕ್ಕಕಲ್ಲುಬಾಳು

ಕನಕಪುರ ತಾಲ್ಲೂಕಿನ ಚಿಕ್ಕಕಲ್ಲುಬಾಳು ತಾಲ್ಲೂಕು ಕೇಂದ್ರಕ್ಕೆ ಹನ್ನೆರಡು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ಪಟ್ಟದ ಮಠವು ಅಸ್ತಿತ್ವದಲ್ಲಿದೆ.

ಪಟ್ಟದಮಠ: ಚಿಕ್ಕಕಲ್ಲುಬಾಳು ಗ್ರಾಮದಲ್ಲಿ ಪಟ್ಟದಮಠವು ಚಿಕ್ಕಕಲ್ಲುಬಾಳು ಗ್ರಾಮದ ಹೊರಭಾಗದಲ್ಲಿ, ಸುವರ್ಣಮುಖಿ ನದಿಯ ಸಮೀಪದಲ್ಲಿ ಸ್ಥಾಪನೆಗೊಂಡಿದೆ. ಧಾರ್ಮಿಕ ವಾತಾವರಣವನ್ನು ಸೃಷ್ಟಿಸಿ ಸಮಾಜದಲ್ಲಿ ಸ್ನೇಹ, ಸಹಬಾಳ್ವೆಯಿಂದ ಎಲ್ಲರೂ ಒಟ್ಟಿಗೆ ಬದುಕುವುದನ್ನು ಕಲಿಸಿಕೊಟ್ಟಿದೆ. ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಅನುಷ್ಠಾನಮೂರ್ತಿಗಳಾಗಿ ಶಿವಪೂಜಾನಿಷ್ಠರಾಗಿ ಹೆಸರು ಮಾಡಿದ್ದರು. ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ವೀರಶೈವ ಧರ್ಮದ ಗುರು,ಲಿಂಗ, ಜಂಗಮ, ಷಟ್‌ಸ್ಥಲ ಸಿದ್ಧಾಂತ ಮತ್ತು ಪಂಚಾಚಾರದ ಬಗ್ಗೆ ಉಪದೇಶವನ್ನು ನೀಡಿ ಭಕ್ತರನ್ನು ಸನ್ಮಾರ್ಗದಲ್ಲಿ ನಡೆಸಿದರು.

ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ದೀರ್ಘ ಕಾಲ ಧರ್ಮಪ್ರಚಾರವನ್ನು ನಡೆಸಿ ಭಕ್ತರನ್ನು ಸಂಘಟಿಸಿ, ಲಿಂಗೈಕ್ಯರಾದರು. ಈ ಗ್ರಾಮದ ಜ್ಯೋತಿಯಾಗಿದ್ದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳ ಸಮಾಧಿಯನ್ನುಮಾಡಿ ಗದ್ದುಗೆ ನಿರ್ಮಿಸಿ ಪೂಜೆ ಮಾಡತೊಡಗಿದ್ದಾರೆ. ಇವರ ನಂತರ ಮಠದ ಆಡಳಿತವನ್ನು ವಹಿಸಿಕೊಂಡ ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳು ಮಠದ ಪರಂಪರೆಯ ಎಲ್ಲಾ ಗುರುಗಳ ಮೇಲ್ಪಂಕ್ತಿಯಲ್ಲಿ ಮಠವನ್ನು ಬೆಳೆಸಿದರು. ತಮ್ಮ ಜವಾಬ್ದಾರಿಯಲ್ಲಿ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳಿಗೆ ಪಟ್ಟಾಧಿಕಾರವನ್ನು ಮಾಡಿ ಮಠದ ಪರಂಪರೆಯು ಮುನ್ನಡೆಯುವಂತೆ ಮಾಡಿದ್ದಾರೆ. ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಪಟ್ಟದ ಮಠ, ಚಿಕ್ಕಕಲ್ಲುಬಾಳು, ಕನಕಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ತೋಟಹಳ್ಳಿ

ಕನಕಪುರ ತಾಲ್ಲೂಕಿನ ತೋಟಹಳ್ಳಿ ತಾಲ್ಲೂಕು ಕೇಂದ್ರದ ನೈರುತ್ಯಕ್ಕೆ ಹನ್ನೆರಡು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ತೋಟಹಳ್ಳಿ ಗ್ರಾಮದ ಮಧ್ಯಭಾಗದಲ್ಲಿ ವಿರಕ್ತಮಠವು ಸ್ಥಾಪನೆಗೊಂಡು ಇಲ್ಲಿ ಧರ್ಮವು ನೆಲೆಗೊಳ್ಳುವಂತಾಗಿದೆ. ಶ್ರೀ ತೋಂಟದ ಸಿದ್ಧಲಿಂಗೇಶ್ವರರ ಕಾಲದಲ್ಲಿ ಮಠ ಸ್ಥಾಪನೆಗೊಂಡಿರಬಹುದು ಎಂದು ಹೇಳಲಾಗುತ್ತಿದೆ. ಶ್ರೀ ತೋಂಟದ ಸಿದ್ಧಲಿಂಗೇಶ್ವರರು ಲೋಕಸಂಚಾರಕ್ಕೆ ಬಂದ ಸಂದರ್ಭದಲ್ಲಿ ಈ ನೆಲದಲ್ಲಿ ಕೆಲವು ದಿನ ಅನುಷ್ಠಾನಗೊಂಡು ಈ ಸ್ಥಳವನ್ನು ಜಾಗೃತ ಕ್ಷೇತ್ರವನ್ನಾಗಿ ಬೆಳೆಸಿ ಹೋಗಿದ್ದಾರೆ. ಶ್ರೀ ತೋಂಟದ ಸಿದ್ಧಲಿಂಗೇಶ್ವರರು ಈ ತಪೋಭೂಮಿಯಲ್ಲಿ ತಮ್ಮ ಜತೆಯಲ್ಲಿದ್ದ ಒಬ್ಬ ವಿರಕ್ತರನ್ನು ಇಲ್ಲಿ ನೆಲೆಗೊಳಿಸಿ, ವೀರಶೈವ ಧರ್ಮವನ್ನು ಬೆಳೆಸುವಂತೆ ಅನುಗ್ರಹವನ್ನು ನೀಡಿ ಹೋಗಿರುತ್ತಾರೆ ಎಂದು ಹೇಳಲಾಗುತ್ತಿದೆ.

ಪರಂಪರೆ: ಇಂತಹ ಪವಿತ್ರ ಸ್ಥಳದಲ್ಲಿ ಮಠ ಸ್ಥಾಪನೆಗೊಂಡು ಧರ್ಮಸಂಸ್ಕಾರವನ್ನು ನೀಡತೊಡಗಿತು. ಕರ್ತೃಗುರುಗಳ ನಂತರ ವಿರಕ್ತ ಮಠದ ಪರಂಪರೆಯು ಬೆಳೆದಿದೆ.

೧. ಶ್ರೀ ಮ.ನಿ.ಪ್ರ. ಕರಿಯಪ್ಪಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಚನ್ನಮಲ್ಲಿಕಾರ್ಜುನಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಶಿವಲಿಂಗಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಬಸವಪ್ರಭುಸ್ವಾಮಿಗಳು (ಈಗಿನವರು)

ಮಠದ ಪರಂಪರೆಯಲ್ಲಿ ಒಟ್ಟು ಏಳು ಜನ ಗುರುಗಳು ಈವರೆಗೆ ಅಧಿಕಾರವನ್ನು ಪಡೆದಿದ್ದಾರೆ. ಪರಂಪರೆಯಲ್ಲಿ ಬರುವ

ಮೂರು ಜನ ಗುರುಗಳ ಹೆಸರು ಲಭ್ಯವಿಲ್ಲದ ಕಾರಣ ಮಠದ ಆವರಣದಲ್ಲಿ ಇರುವ ಒಟ್ಟು ಐದು ಗದ್ದುಗೆಗಳಲ್ಲಿ ಶ್ರೀಚನ್ನಮಲ್ಲಿಕಾರ್ಜುನ ಸ್ವಾಮಿಗಳು ಮತ್ತು ಶ್ರೀ ಕರಿಯಪ್ಪ ಸ್ವಾಮಿಗಳ ಗದ್ದುಗೆಗಳನ್ನು ಗುರುತಿಸಬಹುದಾಗಿದ್ದು ಉಳಿದ ಮೂರು ಗದ್ದುಗೆಗಳು ಯಾರವೆಂದು ತಿಳಿಯಲಾಗಿಲ್ಲ. ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮಿಗಳ ಕಾಲದಲ್ಲಿ ಮೈಸೂರು ಒಡೆಯರಿಂದ ದಾನದತ್ತಿ ಸಿಕ್ಕ ಬಗ್ಗೆ ಕುರುಹುಗಳಿವೆ. ಅಂದರೆ ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮಿಗಳು ಬಹಳ ಪ್ರಭಾವಿತರಾಗಿ ಮಠವನ್ನು ಮುನ್ನಡೆಸಿದ್ದರು ಎಂಬುದರಲ್ಲಿ ಸಂಶಯವಿಲ್ಲ. ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮಿಗಳು ಅಧಿಕಾರಕ್ಕೆ ಬರುವ ಮುನ್ನ ಮಠವು ಖಾಲಿಇದ್ದ ಕಾರಣ ದಾಖಲೆಗಳು ಹಾಳಾಗಿ ಲಭ್ಯವಿಲ್ಲದಂತಾಗಿವೆ. ಹಿರಿಯ ಗುರುಗಳು ೧೯೫೪ರ ಏಪ್ರಿಲ್ ಇಪ್ಪತ್ತೆಂಟರಂದು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿ, ಮಠವನ್ನು ಸುಸ್ಥಿತಿಗೆ ತರುವಲ್ಲಿ ಬಹಳವಾಗಿ ಶ್ರಮಿಸಿದ್ದಾರೆ. ತಮ್ಮ ಜೀವಿತಾವಧಿಯಲ್ಲಿಯೇ ಶ್ರೀ ಬಸವಪ್ರಭು ಸ್ವಾಮಿಗಳನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ಆಯ್ಕೆಮಾಡಿಕೊಂಡು ೧೯೯೮ರಲ್ಲಿ ಪಟ್ಟಾಧಿಕಾರವನ್ನು ನೆರವೇರಿಸಿದ ಗುರುಗಳು ವಿಶ್ರಾಂತ ಜೀವನವನ್ನು ನಡೆಸತೊಡಗಿದರು. ಶ್ರೀ ಬಸವಪ್ರಭು ಸ್ವಾಮಿಗಳು ಮಠದ ಪೂರ್ಣ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕವಾಗಿ ಬೆಳೆಸಿದರು.

ಅಭಿವೃದ್ಧಿ ಕಾರ್ಯಗಳು: ಬಸವಣ್ಣನವರ ಗುಡಿಯ ಪಕ್ಕದಲ್ಲಿ ಊರಿನ ಭಕ್ತರು ಕೊಟ್ಟ ನಲವತ್ತು ಎಕರೆ ಜಮೀನು ಹಾಗೂ ಭಕ್ತರು ಕೊಟ್ಟಂತಹ ಹತ್ತು ಎಕರೆ ಜಮೀನಿನ ಜತೆಗೆ ಮಠದ ವತಿಯಿಂದ ಮತ್ತಷ್ಟು ಜಮೀನನ್ನು ಖರೀದಿಸಿ ಶ್ರೀಮಂತ ಮಠವನ್ನಾಗಿ ಬೆಳೆಸಿದರು. ಈ ಎಲ್ಲಾ ಆಸ್ತಿಯನ್ನು ಆಧುನಿಕ ರೀತಿಯಲ್ಲಿ ಬೇಸಾಯಕ್ಕೆ ಯೋಗ್ಯಗೊಳಿಸಿ ಹೆಚ್ಚು ಆದಾಯ ಬರುವಂತೆ ಮಾಡಿದರು. ಇದರಿಂದ ಮಠವು ಆರ್ಥಿಕವಾಗಿ ಸದೃಢತೆಯನ್ನು ಸಾಧಿಸುವಂತಾಗಿದೆ.

ಧಾರ್ಮಿಕ ಕೆಲಸ: ಮಠದ ಪರಂಪರೆಯಲ್ಲಿ ಬರುವಂತಹ ಐದು ಗುರುಗಳ ಗದ್ದುಗೆಗಳು ಒಂದೇ ಮಂಟಪದಲ್ಲಿ ಸಾಲಾಗಿ ಸ್ಥಾಪನೆಗೊಂಡಿವೆ. ಗದ್ದುಗೆಗಳಿಗೆ ನಿತ್ಯ ಪೂಜೆ, ಶ್ರಾವಣ, ಕಾರ್ತೀಕ ಮಾಸಗಳಲ್ಲಿ ಹಾಗೂ ಹುಣ್ಣಿಮೆಯಲ್ಲಿ ವಿಶೇಷಪೂಜೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಬರುವ ಭಕ್ತರಿಗೆ ಅನ್ನದಾಸೋಹವನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಬಸವಪ್ರಭುಸ್ವಾಮಿಗಳು. ಶ್ರೀವಿರಕ್ತಮಠ. ತೋಟಹಳ್ಳಿ, ಕನಕಪುರ ತಾ, ಬೆಂಗಳೂರು ಗ್ರಾಮಾಂತರಜಿಲ್ಲೆ.

ದೊಡ್ಡಮರಳವಾಡಿ

ಕನಕಪುರ ತಾಲ್ಲೂಕಿನ ದೊಡ್ಡಮರಳವಾಡಿಯು ತಾಲ್ಲೂಕು ಕೇಂದ್ರದ ನೈರುತ್ಯಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಶಿವಮಠವು ಅಸ್ತಿತ್ವದಲ್ಲಿದೆ.

ಶಿವಮಠ: ದೊಡ್ಡಮರಳವಾಡಿ ಗ್ರಾಮದಲ್ಲಿ ಕನಕಪುರದ ದೇಗುಲ ಮಠದ ಶಾಖಾಮಠವಾದ ಶಿವಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದಲ್ಲಿ ಸ್ಥಾಪನೆಗೊಂಡ ಈ ಮಠವು ಕಾಲಾನಂತರ ಜೀರ್ಣಗೊಂಡು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವ ಹಂತದಲ್ಲಿದ್ದಾಗ ದೇಗುಲ ಮಠದ ಶ್ರೀ ಇಮ್ಮಡಿ ಮಹಲಿಂಗ ಸ್ವಾಮಿಗಳಿಂದ ಅನುಗ್ರಹ ಸ್ವೀಕರಿಸಿದ ಶ್ರೀ ಮೃತ್ಯುಂಜಯ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ ಜನಮನದಲ್ಲಿ ಬರುವಂತೆ ಮಾಡಿದ್ದಾರೆ.

ಸ್ಪಷ್ಟ ಇಲ್ಲದ ಚಿತ್ರಣ: ಮಠದ ಪುರಾತನ ಇತಿಹಾಸದ ಸ್ಪಷ್ಟಚಿತ್ರಣ ತಿಳಿಯದಾಗಿದೆ. ಮಠದ ಆವರಣದಲ್ಲಿ ಒಂದು ಗದ್ದುಗೆ, ದೇವಸ್ಥಾನದ ಪಕ್ಕದಲ್ಲಿ ಒಂದು ಗದ್ದುಗೆ, ಮಠದ ಜಮೀನಿನಲ್ಲಿ ಕೆಲವು ಗದ್ದುಗೆಗಳು ದೊರೆತಿವೆ. ಆದರೆ ಕೆಲವೆಡೆ ದೊರೆತಿರುವ ಗದ್ದುಗೆಗಳು ಯಾರವುಗಳೆಂದು ಗುರುತ್ತಿಸಲಾಗುತ್ತಿಲ್ಲ ಎಂದು ಗುರುಗಳು ಹೇಳುತ್ತಾರೆ. ಊರಿನ ಹೊರಭಾಗದಲ್ಲಿ ಹೊಲದಲ್ಲಿ ಒಂದು ಕ್ರಿಯಾಸಮಾಧಿ ದೊರೆತಿದೆ. ೧೮೮೮ ನೆಯ ಇಸವಿಯ ತಾಮ್ರದ ನಾಣ್ಯ ದೊರೆತಿವೆ. ಬಾವಿ, ಎರಡು ಒರಳು ಕಲ್ಲು ಸಿಕ್ಕಿವೆ. ಈ ಕಾರಣದಿಂದ ಮೂಲಮಠ ಹಿಂದೆ ಈ ಸ್ಥಳದಲ್ಲಿ ಸ್ಥಾಪನೆಯಾಗಿತ್ತು ಎಂದು ಅಂದಾಜಿಸಬಹುದಾಗಿದೆ. ಈ ಜಾಗದ ಪಕ್ಕದಲ್ಲೇ ಹರಿಯುವ ಹೊಳೆಗೆ ಮಠದ ಹೊಳೆ ಎಂದು ಈಗಲೂ ರೂಢಿಗತವಾಗಿ ಕರೆಯುತ್ತಾರೆ.

ಪರಂಪರೆ: ಇಂತಹ ಪುರಾತನ ಮಠದಲ್ಲಿ ಎಷ್ಟು ಜನ ಗುರುಗಳು ಅಧಿಕಾರ ನಡೆಸಿದ್ದಾರೆ ಎಂದು ಗುರುಪರಂಪರೆಯ

ಚಿತ್ರಣ ಸಿಗುತ್ತಿಲ್ಲ. ಆದರೆ ಈ ಹಿಂದೆ ಅಧಿಕಾರವನ್ನು ನಡೆಸಿದ ಶ್ರೀ ನಂಜಯ್ಯ ಸ್ವಾಮಿಗಳು ಈ ಮಠವನ್ನು ಸುಸ್ಥಿತಿಗೆ ತಂದಿದ್ದಾರೆ ಎಂದು ಹೇಳಲಾಗುತ್ತಿದೆ. ೧೯೭೭ರ ಫೆಬ್ರವರಿಯಲ್ಲಿ ಕನಕಪುರದ ಶ್ರೀ ಇಮ್ಮಡಿ ಮಹಲಿಂಗ ಸ್ವಾಮಿಗಳಿಂದ ಅನುಗ್ರಹವನ್ನು ಪಡೆದು ಅಧಿಕಾರಕ್ಕೆ ಬಂದ ಶ್ರೀ ಮೃತ್ಯುಂಜಯ ಸ್ವಾಮಿಗಳು ಈ ಮಠವನ್ನು ಹೆಚ್ಚು ಪ್ರಚಾರಕ್ಕೆ ತಂದು ಬೆಳೆಸಿದ್ದಾರೆ.

ಅಭಿವೃದ್ಧಿ: ಶ್ರೀ ಮೃತ್ಯುಂಜಯ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಜೀರ್ಣಗೊಂಡ ಮಠದ ಕಟ್ಟಡವನ್ನು ತೆಗೆಸಿ ಹೊಸ ಕಟ್ಟಡವನ್ನು ನಿರ್ಮಿಸಿದರು. ಮಠದ ಆಸ್ತಿಯಾಗಿರುವ ನಾಲ್ಕುಎಕರೆ ಇಪ್ಪತ್ತಾರು ಗುಂಟೆ ಜಮೀನನ್ನು ಅಭಿವೃದ್ಧಿಪಡಿಸಿ ಮಠಕ್ಕೆ ಆದಾಯದ ಮೂಲವನ್ನಾಗಿ ಮಾಡಿಕೊಂಡಿದ್ದಾರೆ. ದೇಗುಲಮಠದ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳ ಮಾರ್ಗದರ್ಶನ ಮತ್ತು ಸಹಕಾರವನ್ನು ಪಡೆದು ಅಭಿವೃದ್ಧಿ ಕಾರ್ಯವನ್ನು ಕೈಗೊಂಡು ಮಠವನ್ನು ಬೆಳೆಸಿದ್ದಾರೆ.

ಧಾರ್ಮಿಕ ಕೆಲಸ: ಬಸವ ಜಯಂತಿಯನ್ನು ಆಚರಣೆ ಮಾಡಲಾಗುತ್ತಿದೆ. ಬಸವಣ್ಣನವರ ವಚನಗಳ ಬಗ್ಗೆ ಉಪನ್ಯಾಸ, ಭಜನೆಯನ್ನು ಮಾಡುವ ಮೂಲಕ ಬಸವ ತತ್ತ್ವವನ್ನು ಪ್ರಚಾರಕ್ಕೆ ತರಲಾಗುತ್ತಿದೆ. ಮಠದ ಸಮೀಪ ಬಸವೇಶ್ವರ ದೇವಸ್ಥಾನವು ಇದೆ. ಮಠದ ಪರಂಪರೆಯ ಗದ್ದುಗೆಗಳಿಗೆ ನಿತ್ಯ ಪೂಜೆಯನ್ನು ಮಾಡಲಾಗುತ್ತಿದೆ. ಭಕ್ತರ ಆಹ್ವಾನವನ್ನು ಮನ್ನಿಸಿ ಧರ್ಮಕಾರ್ಯಗಳಲ್ಲಿ ಪಾಲ್ಗೊಳ್ಳುವ ಗುರುಗಳು ಭಕ್ತರಿಗೆ ಧರ್ಮಮಾರ್ಗದಲ್ಲಿ ನಡೆಯಲು ಪ್ರೇರೇಪಿಸಿ ಮಾರ್ಗದರ್ಶಿಗಳಾಗಿದ್ದಾರೆ.

ವಿಳಾಸ:ಶ್ರೀ ಮ.ನಿ.ಪ್ರ. ಮೃತ್ಯುಂಜಯ ಸ್ವಾಮಿಗಳು , ಶ್ರೀ ಶಿವಮಠ, ದೊಡ್ಡಮರಳವಾಡಿ, ಕನಕಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಪಡುವಣಗೆರೆ

ಕನಕಪುರ ತಾಲ್ಲೂಕಿನ ಪಡುವಣಗೆರೆಯು ತಾಲ್ಲೂಕು ಕೇಂದ್ರಕ್ಕೆ ಹತ್ತು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಮಹಂತೇಶ್ವರಮಠವು ಅಸ್ತಿತ್ವದಲ್ಲಿದೆ.

ಮಹಂತೇಶ್ವರಮಠ: ಪಡುವಣಗೆರೆ ಗ್ರಾಮದಲ್ಲಿ ಕನಕಪುರ ದೇಗುಲಮಠದ ಶಾಖಾಮಠ ಅಸ್ತಿತ್ತ್ವದಲ್ಲಿದ್ದು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದೆ. ಶ್ರೀ ಮಹಂತೇಶ್ವರ ಸ್ವಾಮಿಗಳು ಮಠವನ್ನು ಸ್ಥಾಪನೆ ಮಾಡಿರುವ ಕಾರಣ ಈ ಮಠಕ್ಕೆ 'ಮಹಂತೇಶ್ವರಮಠ' ಎಂದು ಹೆಸರು ಬಂದಿದೆ. ಶ್ರೀ ಮಹಂತೇಶ್ವರ ಸ್ವಾಮಿಗಳ ಒಂದೇ ಗದ್ದುಗೆ ಸ್ಥಾಪನೆಗೊಂಡಿದೆ. ಇದಕ್ಕೆ ನಿತ್ಯ ಎರಡೂ ವೇಳೆ ಪೂಜೆ ನಡೆಯುತ್ತಿದೆ. ಈ ಮಠಕ್ಕೆ ಇನ್ನೂ ಗುರುಗಳನ್ನು ನೇಮಿಸದೆ ಇರುವ ಕಾರಣಕ್ಕೆ ದೇಗುಲ ಮಠದ ಗುರುಗಳು ಅರ್ಚಕರನ್ನು ನೇಮಿಸಿದ್ದಾರೆ. ಭೀಮನ ಅಮಾವಾಸ್ಯೆಯಲ್ಲಿ ಶ್ರೀ ಮಹಂತೇಶ ಸ್ವಾಮಿಗಳ ಜಾತ್ರೆಯನ್ನು ಆಚರಣೆ ಮಾಡಲಾಗುತ್ತಿದೆ. ಅದ್ದೂರಿಯಾಗಿ ನಡೆಯುವ ಈ ಜಾತ್ರೆಗೆ ಕನಕಪುರ ತಾಲ್ಲೂಕು ಹಾಗೂ ಸುತ್ತಮುತ್ತ ಇರುವ ಗ್ರಾಮಗಳ ಭಕ್ತರು ಆಗಮಿಸುತ್ತಾರೆ. ಈ ದಿನ ಮಠದ ವತಿಯಿಂದ ಅನ್ನದಾಸೋಹವು ನಡೆಯುತ್ತಿದೆ. ಮಠದ ಆಸ್ತಿಯಾಗಿ ಇಪ್ಪತ್ತು ಎಕರೆ ಜಮೀನು ಇದ್ದು ದೇಗುಲಮಠದ ಗುರುಗಳು ಅಭಿವೃದ್ಧಿಪಡಿಸುತ್ತಿದ್ದಾರೆ. ಇದರಿಂದ ಬರುವ ಆದಾಯವನ್ನು ಬಳಸಿಕೊಂಡು ಕ್ಷೇತ್ರವನ್ನು ಅಭಿವೃದ್ಧಿಪಡಿಸಿದ್ದಾರೆ.

ವಿಳಾಸ:ಶ್ರೀ ಮಹಂತೇಶ್ವರ ಮಠ, ಪಡುವಣಗೆರೆ, ಕನಕಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಮರಳೆ

ಕನಕಪುರ ತಾಲ್ಲೂಕಿನ ಮರಳೆಗವಿ ಮಠವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹನ್ನೆರಡು ಕಿ.ಮೀ.ದೂರದಲ್ಲಿದ್ದು, ಪ್ರಕೃತಿಯ ಸಿರಿ ಸಂಪತ್ತಿನ ಮಧ್ಯೆ ರೂಪುಗೊಂಡಿದೆ. ಮರಳೆಗವಿ ಮಠವು ಹಕ್ಕಿಗಳ ಕಲರವ, ವಿದ್ಯಾರ್ಥಿಗಳ ಗಿಜಿಬಿಜಿ, ಮಠಕ್ಕೆ ಭೇಟಿ ನೀಡುವ ಭಕ್ತರ ಓಡಾಟಗಳ ಮೂಲಕ ಧಾರ್ಮಿಕ ವಾತಾವರಣವನ್ನು ಸೃಷ್ಟಿಸಿವೆ.

ಮರಳೆಗವಿಮಠ: ಹದಿನೈದನೆಯ ಶತಮಾನದಲ್ಲಿ ಹರದನಹಳ್ಳಿಯಿಂದ ತೋಂಟದ ಶ್ರೀ ಸಿದ್ಧಲಿಂಗೇಶ್ವರರು ಲೋಕಸಂಚಾರವನ್ನು ಮಾಡುತ್ತಾ ತಮ್ಮ ಏಳುನೂರೊಂದು ವಿರಕ್ತರ ಜತೆ ಈ ಪ್ರಶಾಂತ ಸ್ಥಳಕ್ಕೆ ಬರುತ್ತಾರೆ. ಸುತ್ತಮುತ್ತ ಕಲ್ಲುಬಂಡೆಗಳಿಂದ

ಆವೃತ್ತವಾದ ಬೆಟ್ಟಗಳ ಮಧ್ಯೆ ಬೆಳೆದ ವನಸಿರಿಯ ಸೌಂದರ್ಯಕ್ಕೆ ಮನಸೋತ ತೋಂಟದ ಶ್ರೀ ಸಿದ್ಧಲಿಂಗೇಶ್ವರರು ತಮ್ಮ ಶಿಷ್ಯರೊಡನೆ ಇಲ್ಲಿ ಕೆಲವು ದಿನ ನೆಲೆ ನಿಲ್ಲುತ್ತಾರೆ. ಇಲ್ಲಿ ನಲವತ್ತೆಂಟು ದಿನಗಳ ಕಾಲ ದೀರ್ಘ ತಪೋನುಷ್ಠಾನಗೊಂಡರು. ಮರಳೆ ವನಗಳ ದೊಡ್ಡಿಯಾಗಿತ್ತು. ಈ ದಿನಗಳಲ್ಲಿ ಮರಳೆ ಗ್ರಾಮದ ವೀರೇಗೌಡ ಎಂಬ ಭಕ್ತನು ಆಲದ ಎಲೆಗಳಲ್ಲಿ ದೊನ್ನೆಯನ್ನು ಮಾಡಿಕೊಂಡು ಭಕ್ತಿಯಿಂದ ಹಸುವಿನ ಹಾಲನ್ನು ತಂದು ಸಿದ್ಧಲಿಂಗೇಶ್ವರರಿಗೆ ಅರ್ಪಿಸುತ್ತಿದ್ದನು. ಅಲ್ಲದೆ ಅಲ್ಲಿ ಇದ್ದ ಎಲ್ಲಾ ವಿರಕ್ತರಿಗೂ ಹಾಲನ್ನು ಸರಬರಾಜು ಮಾಡುತ್ತಿದ್ದನು. ಶ್ರೀ ಸಿದ್ಧಲಿಂಗೇಶ್ವರರು ನಲವತ್ತೆಂಟು ದಿನಗಳ ಕಾಲ ತಪೋನುಷ್ಠಾನಗೊಂಡಿದ್ದ ಗವಿಯು ಇಂದಿಗೂ ತೋಂಟದ ಸಿದ್ಧಲಿಂಗೇಶ್ವರಗವಿ ಎಂದೇ ಹೆಸರಾಗಿದೆ. ಶ್ರೀ ಸಿದ್ಧಲಿಂಗೇಶ್ವರರು ತಮ್ಮ ಶಿಷ್ಯರೊಡನೆ ಕೊಳದ ಸುತ್ತ ಕುಳಿತು ಪಾರಮಾರ್ಥಿಕದ ಬಗ್ಗೆ ಚರ್ಚೆ ನಡೆಸುತ್ತಿದ್ದರು.ಅಂದು ಚರ್ಚೆ ನಡೆಸುತ್ತಿದ್ದ ಕೊಳ ಈಗಲೂ ಗವಿ ಮಠದಲ್ಲಿ ಇದ್ದು ಇದನ್ನು 'ಪಾರಮಾರ್ಥಿಕದ ಕೊಳ' ಎಂದೇ ಕರೆಯಲಾಗುತ್ತಿದೆ.

ಮಠ ಸ್ಥಾಪನೆ: ಶ್ರೀ ಸಿದ್ಧಲಿಂಗೇಶ್ವರರು ಗವಿಯಲ್ಲಿ ಅನುಷ್ಠಾನವು ಮುಗಿದ ಮೇಲೆ ಮುಂದಿನ ಪ್ರಯಾಣಕ್ಕೆ ಅನುವಾದರು. ಆಗ ಪ್ರತಿ ದಿನ ಬೆಳಿಗ್ಗೆ ಹಾಲನ್ನು ಸರಬರಾಜು ಮಾಡುತ್ತಿದ್ದ ಮಹನೀಯ ಯಾರು ಎಂದು ವಿಚಾರಿಸಲು, ಗುರುವಿನ ಆಶೀರ್ವಾದಕ್ಕೆ ಕಾಯುತ್ತಿದ್ದ ವೀರೇಗೌಡನು ಶ್ರೀ ಸಿದ್ಧಲಿಂಗ ಯತಿಗಳ ಮುಂದೆ ಬಂದು ನಮಸ್ಕರಿಸಿದನು.'ನಮಗೆ ಹಸುವಿನ ಹಾಲನ್ನು ಸರಬರಾಜು ಮಾಡಿ ನಮ್ಮನ್ನು ತೃಪ್ತಿಗೊಳಿಸಿರುವೆ. ನಿನಗೇನು ವರ ಬೇಕು ಪಡೆದುಕೋ'ಎಂದು ಕೇಳಿದಾಗ ವೀರೇಗೌಡನು 'ತನಗೇನೂ ಬೇಡ, ತಮ್ಮ ಆಶೀರ್ವಾದ ಒಂದಿದ್ದರೆ ಸಾಕು ಅಲ್ಲದೆ ಈ ನಾಡನ್ನು ಧರ್ಮದ ನೆಲೆಗಟ್ಟಿನ ಮೇಲೆ ಬೆಳೆಸಲು ಮಠ ಸ್ಥಾಪನೆ ಮಾಡಿ ನಮಗೆ ಒಬ್ಬರು ಗುರುಗಳನ್ನು ಇಲ್ಲೇ ನೆಲೆಸುವಂತೆ ಅನುಗ್ರಹವನ್ನು ತೋರಿಸಬೇಕು' ಎಂದು ಬಿನ್ನವಿಸಿಕೊಳ್ಳುತ್ತಾನೆ. ವೀರೇಗೌಡನ ಮನೋಧರ್ಮವನ್ನು ಮೆಚ್ಚಿದ ಶ್ರೀ ಸಿದ್ಧಲಿಂಗೇಶ್ವರರು ತಮ್ಮ ಶಿಷ್ಯರಲ್ಲಿ ಒಬ್ಬರಾದಂತಹ ಶ್ರೀ ಕಾಲಾಗ್ನಿ ರುದ್ರಮುನೀಶ್ವರರನ್ನು ಇಲ್ಲಿ ನೆಲೆಗೊಳ್ಳುವಂತೆ ಅನುಗ್ರಹಿಸಿ ಭಕ್ತ ವೀರೇಗೌಡನ ಅಪೇಕ್ಷೆಯನ್ನು ನೆರವೇರಿಸುವಂತೆ ಅಪ್ಪಣೆಕೊಟ್ಟು ಮುಂದೆ ಹೊರಡುತ್ತಾರೆ.

ಶ್ರೀ ಕಾಲಾಗ್ನಿ ರುದ್ರಮುನೀಶ್ವರರು ಈ ಪುಣ್ಯ ಕ್ಷೇತ್ರದಲ್ಲಿ ಮಠವನ್ನು ಸ್ಥಾಪಿಸಿ ಶಿವಶರಣರ ತತ್ತ್ವಗಳನ್ನು ನಾಡಿಗೆ ಸಾರಿ ಧರ್ಮ ನೆಲೆಗೊಳ್ಳುವಂತೆ ಮಾಡುತ್ತಾರೆ. ಸುತ್ತಮುತ್ತ ಇರುವ ಗ್ರಾಮಗಳ ಜನರು ಗುರುಗಳ ಧಾರ್ಮಿಕ ಕಾರ್ಯಗಳನ್ನು ನೋಡಲು ಗಾಡಿಯನ್ನು ಕಟ್ಟಿಕೊಂಡು ಬಂದು ನೋಡಿ ಗುರುಗಳ ಆಶೀರ್ವಾದವನ್ನು ಪಡೆದು ಹೋಗುತ್ತಿದ್ದರು. ಮಠಕ್ಕೆ ಪ್ರತಿದಿನ ಭೇಟಿ ಕೊಡುವ ಭಕ್ತರ ಸಂಖ್ಯೆ ಹೆಚ್ಚಾದಾಗ ಭಕ್ತರ ಪ್ರಸಾದಕ್ಕೆ ವ್ಯವಸ್ಥೆಗಳು ರೂಪುಗೊಳ್ಳತೊಡಗಿದವು. ಈ ರೀತಿ ದಿನದಿಂದ ದಿನಕ್ಕೆ ಮಠದ ಹೆಸರನ್ನು ಎಲ್ಲಾಕಡೆ ಹಬ್ಬುವಂತೆ ಮಾಡಿ ಮಠಕ್ಕೆ ಉತ್ತರಾಧಿಕಾರಿಗಳನ್ನು ನೇಮಿಸಿ, ಗವಿಮಠದ ಈಶಾನ್ಯ ದಿಕ್ಕಿನಲ್ಲಿದ್ದ ಗಿರಿಯ ಕೆರೆಗೆ ಯೋಗದಂಡ ಕಮಂಡಲದೊಡನೆ ಹೋಗಿ ಬೆಟ್ಟದ ಗವಿಯಲ್ಲಿ ಅನುಷ್ಠಾನಕ್ಕೆ ಕುಳಿತುಕೊಂಡಿರುತ್ತಾರೆ. ಒಂದು ದಿನ ಮೇಕೆ ಕಾಯುವವನು ತನ್ನ ಮೇಕೆಗಳು ಗವಿ ಬಳಿಗೆ ಹೋದಾಗ ಅವುಗಳನ್ನು ಹೊಡೆದುಕೊಂಡು ಬರಲು ಹೋದಾಗ ಮಹಾ ಮುನಿಗಳ ದರ್ಶನವಾಯಿತಂತೆ. ಮೇಕೆ ಕಾಯುವವನಿಗೆ ಆಶೀರ್ವಾದ ಮಾಡಿ 'ಈ ವಿಷಯವನ್ನು ಯಾರಿಗೂ ಹೇಳಬೇಡ' ಎಂದು ಅಪ್ಪಣೆ ಮಾಡಿ ಗವಿಯಿಂದ ಹೊರಗೆ ಕಳುಹಿಸಿದರಂತೆ. ಅಂದಿನಿಂದ ಅದು 'ಮುನೇಶ್ವರಬೆಟ್ಟ' ಎಂದು ಕರೆಯಲ್ಪಟ್ಟಿತು ಎಂಬ ನಂಬಿಕೆ ಈಗಲೂ ಪ್ರಚಲಿತವಿದೆ.

ಬೆಳೆದ ಪರಂಪರೆ:

೧. ಶ್ರೀ ಮ.ನಿ.ಪ್ರ. ಕಾಲಾಗ್ನಿ ರುದ್ರಮುನಿಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಅಂಕಲಿ ಹುಚ್ಚಪ್ಪಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಗಡ್ಡದ ಹುಚ್ಚಪ್ಪಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಶಿವರುದ್ರಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಹುಚ್ಚಪ್ಪಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಬಸಪ್ಪಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಸೋಮಪ್ಪಸ್ವಾಮಿಗಳು

೮. ಶ್ರೀ ಮ.ನಿ.ಪ್ರ. ಮಹಾದೇವಸ್ವಾಮಿಗಳು
೯. ಶ್ರೀ ಮ.ನಿ.ಪ್ರ. ನಾಗಲಿಂಗಸ್ವಾಮಿಗಳು
೧೦. ಶ್ರೀ ಮ.ನಿ.ಪ್ರ. ರುದ್ರಮುನಿಸ್ವಾಮಿಗಳು
೧೧. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು
೧೨. ಶ್ರೀ ಮ.ನಿ.ಪ್ರ. ಮುರುಘಸ್ವಾಮಿಗಳು
೧೩. ಶ್ರೀ ಮ.ನಿ.ಪ್ರ. ಹುಚ್ಚಪ್ಪಸ್ವಾಮಿಗಳು
೧೪. ಶ್ರೀ ಮ.ನಿ.ಪ್ರ. ಸೋಮಪ್ಪಸ್ವಾಮಿಗಳು
೧೫. ಶ್ರೀ ಮ.ನಿ.ಪ್ರ. ಶಿವರುದ್ರಸ್ವಾಮಿಗಳು
೧೬. ಶ್ರೀ ಮ.ನಿ.ಪ್ರ. ಕಾಲಾಗ್ನಿ ರುದ್ರಮುನಿಸ್ವಾಮಿಗಳು
೧೭. ಶ್ರೀ ಮ.ನಿ.ಪ್ರ. ಮುಮ್ಮಡಿ ಶಿವರುದ್ರಸ್ವಾಮಿಗಳು (ಈಗಿನ ಗುರುಗಳು)

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಪರಂಪರೆಯಲ್ಲಿ ಬಂದಂತಹ ಗುರುಗಳು ತಪೋನಿಷ್ಠರಾಗಿ ಅನೇಕ ಪವಾಡಗಳನ್ನು ಸಾಧಿಸಿ ಧರ್ಮಜಾಗೃತಿಯನ್ನು ಉಂಟುಮಾಡಿ ವೀರಶೈವ ಧರ್ಮವನ್ನು ಬೆಳೆಸಿದ್ದಾರೆ. ಅಂಕಲಿ ಶ್ರೀ ಹುಚ್ಚಪ್ಪ ಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಶಿವರುದ್ರ ಸ್ವಾಮಿಗಳು ಮಹಾತಪಸ್ವಿಗಳು. ಒಣಗಿದ ಬಿಲ್ವ ಮರವನ್ನು ತಮ್ಮ ನಲವತ್ತೆಂಟು ದಿನಗಳ ತಪಸ್ಸಿನಿಂದ ಚಿಗುರುವಂತೆ ಮಾಡಿದ್ದರು. ಇವರು ಶಿವಪೂಜೆಗೆ ಕುಳಿತಿದ್ದ ಸಂದರ್ಭದಲ್ಲಿ ಬೆಂಗಳೂರಿನ ಸರ್ಪಭೂಷಣ ಮಠದ ಗುರುಗಳು ಲಿಂಗೈಕ್ಯರಾದ ದೃಶ್ಯ ಗೋಚರವಾಯಿತಂತೆ. ಶಿವಪೂಜೆಯು ಮುಗಿದ ನಂತರ ತಮ್ಮ ಶಿಷ್ಯರನ್ನು ಕರೆದು'ಬೆಂಗಳೂರಿನ ಸರ್ಪಭೂಷಣಮಠದ ಗುರುಗಳು ಲಿಂಗೈಕ್ಯರಾಗಿದ್ದಾರೆ. ಹೊರಡಲು ಸಿದ್ಧ ಮಾಡು' ಎಂದು ಹೇಳಿ ಬೆಂಗಳೂರಿಗೆ ಹೋಗಿ ನೋಡಿದರೆ ನಿಜವಾಗಿತ್ತು. ಶಿಷ್ಯ ಈ ಘಟನೆಯನ್ನು ನೋಡಿ ಬೆರಗಾಗಿ ಹೋಗಿದ್ದನು.

ಶ್ರೀ ಶಿವರುದ್ರ ಸ್ವಾಮಿಗಳ ನಂತರ ಬಂದಂತಹ ಪರಂಪರೆಯ ಗುರುಗಳ ಜೀವನ ಚರಿತ್ರೆಗಳು ಇನ್ನೂ ಲಭ್ಯವಾಗಿಲ್ಲ. ಹಿರಿಯ ಗುರುಗಳಾದ ಶ್ರೀ ಕಾಲಾಗ್ನಿ ರುದ್ರಮುನಿ ಸ್ವಾಮಿಗಳ ಹಿರಿಯ ಗುರುಗಳಾದ ಶ್ರೀ ಶಿವರುದ್ರ ಸ್ವಾಮಿಗಳು ತಮ್ಮ ಆಡಳಿತದ ಅವಧಿಯಲ್ಲಿ ಕೆರೆಯನ್ನು ಕಟ್ಟಿಸಿ ಅನುಪಯುಕ್ತವಾದ ಭೂಮಿಯನ್ನು ಬೇಸಾಯಕ್ಕೆ ಯೋಗ್ಯಗೊಳಿಸಿದರು. ಶಿಥಿಲ ವಾಗಿದ್ದ ಪಾರಮಾರ್ಥಿಕ ಕೊಳವನ್ನು ದುರಸ್ಥಿಗೊಳಿಸಿ ಸ್ಮಾರಕವಾಗಿ ಉಳಿಸಿದರು.

ಶ್ರೀ ಶಿವರುದ್ರ ಸ್ವಾಮಿಗಳು ಆಧ್ಯಾತ್ಮಿಕ ವಿಚಾರದಲ್ಲಿ ಅನುಭವಿಗಳಾಗಿದ್ದರು. ಇವರ ಕಾಲದಲ್ಲಿ ಮಠದಲ್ಲಿ ಶಿವಾನುಭವಗೋಷ್ಠಿಗಳನ್ನು ನಡೆಸಿ ಭಕ್ತರನ್ನು ಧಾರ್ಮಿಕ ನೆಲೆಗೆ ತರಲು ಪ್ರಯತ್ನಿಸಿದರು. ಗುರುಗಳ ಧಾರ್ಮಿಕ ಕೈಂಕಾರ್ಯ ಗಳನ್ನು ನೋಡಿದ ಮದ್ದೂರು ತಾಲ್ಲೂಕು ಮಡೇನಹಳ್ಳಿ ಗ್ರಾಮದ ಕುಳಪ್ಪನವರು ಮರಳೆಗವಿ ಮಠದ ದಾಸೋಹ ಕಾರ್ಯಕ್ಕೆ ನೆರವಾಗಲೆಂದು ತರಿ ಭೂಮಿಯನ್ನು ದಾನ ಮಾಡಿದ್ದರು. ಈ ರೀತಿ ಗುರುಗಳ ಧಾರ್ಮಿಕ ಕಾರ್ಯಗಳನ್ನು ನೋಡಿ ನಾನಾಕಡೆ ಯಿಂದ ಮಠಕ್ಕೆ ದಾನ ದತ್ತಿಗಳು ಹರಿದು ಬಂದವು.

ಕಾಲಾಗ್ನಿ ರುದ್ರಮುನಿಗಳು: ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಮಡೇನಹಳ್ಳಿಯ ಶ್ರೀ ಎಡೆಯೂರಪ್ಪ ಮತ್ತು ಶ್ರೀಮತಿ ಶಿವರುದ್ರಮ್ಮನವರ ಪುತ್ರರಾಗಿ ೧೯೨೫ ರಲ್ಲಿ ಜನಿಸಿದ ಶ್ರೀ ಕಾಲಾಗ್ನಿ ರುದ್ರಮುನಿ ಸ್ವಾಮಿಗಳು, ಹದಿಮೂರನೆಯ ವಯಸ್ಸಿಗೆ ಮರಳೆ ಗವಿಮಠದ ಉತ್ತರಾಧಿಕಾರಿಗಳಾಗಿ ೧೯೩೮ರಲ್ಲಿ ನೇಮಕಗೊಂಡರು. ಹಿರಿಯ ಗುರುಗಳಾದ ಶ್ರೀ ಶಿವರುದ್ರ ಸ್ವಾಮಿಗಳ ಕೃಪಾಶೀರ್ವಾದವನ್ನು ಪಡೆದು ಬೆಂಗಳೂರಿನ ಭೇಟಿ ಮಠದಲ್ಲಿ ಶ್ರೀ ಸಿದ್ಧಲಿಂಗ ಸ್ವಾಮಿಗಳು ಮತ್ತು ಗಂಜಾಂಮಠದ ಶ್ರೀ ಬಸವರಾಜ ಸ್ವಾಮಿಗಳ ಕೃಪಾಕಟಾಕ್ಷದಿಂದ ಸಂಸ್ಕೃತ ವಿದ್ಯಾಭ್ಯಾಸಕ್ಕೆ ಸೇರಿದರು. ಚಾಮರಾಜೇಂದ್ರ ಸಂಸ್ಕೃತ ಮಹಾ ಪಾಠ ಶಾಲೆಯಲ್ಲಿ ಶಕ್ತಿವಿಶಿಷ್ಟಾದ್ವೈತ ವೇದಾಂತಶಾಸ್ತ್ರದಲ್ಲಿ ಪ್ರಾಧ್ಯಾಪಕರಾಗಿದ್ದ ಪಂಡಿತ ವೇದಮೂರ್ತಿ, ಶಿರಸಿ ಗುರುಶಾಂತ ಶಾಸ್ತ್ರಿಗಳಿಂದ ಶಕ್ತಿ ವಿಶಿಷ್ಟಾದ್ವೈತದಲ್ಲಿ ಶಿಕ್ಷಣ ಹೊಂದಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಶ್ರೀ ಕಾಲಾಗ್ನಿ ರುದ್ರಮುನಿ ಸ್ವಾಮಿಗಳು ಮರಳೆಗವಿಮಠದ ಪೂರ್ಣ ಅಧಿಕಾರವನ್ನು ವಹಿಸಿಕೊಂಡ ಮೇಲೆ ಮಠದ

ಸರ್ವಾಂಗೀಣ ಅಭಿವೃದ್ಧಿಗೆ ಯೋಜನೆಯನ್ನು ತಯಾರಿಸಿಕೊಂಡರು. ತಮ್ಮ ಕಾರ್ಯಯೋಜನೆಗಳಲ್ಲಿ ಶಿಕ್ಷಣಕ್ಕೆ ಕೊಟ್ಟಷ್ಟು ಪ್ರಾಮುಖ್ಯತೆಯನ್ನು ಬೇರೆ ಯಾವ ಕ್ಷೇತ್ರಕ್ಕೂ ಕೊಡಲಿಲ್ಲ. ಮಠದ ಸುತ್ತ ಇದ್ದ ಗ್ರಾಮಗಳಲ್ಲಿ ಧಾರ್ಮಿಕವಾಗಿ ಪ್ರಜ್ಞೆ ಬಂದಿತ್ತಾದರೂ ಶೈಕ್ಷಣಿಕ ಪ್ರಜ್ಞೆ ಇರಲಿಲ್ಲ. ಧರ್ಮದ ತತ್ತ್ವಗಳು ಅನುಷ್ಠಾನಗೊಳ್ಳುವ ಸಂದರ್ಭದಲ್ಲಿ ಶಿಕ್ಷಣ ಇಲ್ಲದಿದ್ದರೆ ವಿಫಲವಾಗುತ್ತದೆ ಎಂಬುದನ್ನು ಅರಿತು, ಪ್ರಥಮವಾಗಿ ೧೯೬೨ರಲ್ಲಿ ಶ್ರೀ ಶಿವಯೋಗಿ ಮುನೀಶ್ವರಸ್ವಾಮಿ ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಿ ಜ್ಞಾನ ಜ್ಯೋತಿಯನ್ನು ಹಚ್ಚಿದರು.

ಅಭಿವೃದ್ಧಿ ಕಾರ್ಯಗಳು: ಶ್ರೀ ಕಾಲಾಗ್ನಿ ರುದ್ರಮುನಿ ಸ್ವಾಮಿಗಳು ಆತ್ಮಶಕ್ತಿಯಿಂದ ಮಠದ ಜಮೀನಿನಲ್ಲಿ ಹಸಿರುಕ್ರಾಂತಿಯನ್ನು ಮಾಡಿದರು. ಕಾಯಕಯೋಗದಿಂದ ಮಠವು ಸರ್ವತೋಮುಖವಾಗಿ ಅಭಿವೃದ್ಧಿಯತ್ತ ದಾಪುಗಾಲು ಹಾಕಿತು. ಮಠದ ಕಟ್ಟಡದ ಪುನರ್ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಂಡು ಶಿಥಿಲಾವಸ್ಥೆಯಲ್ಲಿದ್ದ ಕಟ್ಟಡಗಳನ್ನೆಲ್ಲಾ ತೆಗೆಸಿ ಕಾಂಕ್ರೀಟ್ ಕಟ್ಟಡಗಳನ್ನು ನಿರ್ಮಿಸಿದರು. ಮಠದ ಸುತ್ತಮುತ್ತ ಕಟ್ಟಡಗಳ ಸಮುಚ್ಚಯ ರೂಪುಗೊಂಡು ವಾಸದ ಮನೆಗಳನ್ನು ನಿರ್ಮಿಸಿಕೊಡಲಾಗಿದೆ. ಸಹ ಪಂಕ್ತಿ ಭೋಜನಕ್ಕಾಗಿ ವಿಶಾಲವಾದ ಭೋಜನ ಶಾಲೆಯನ್ನು ನಿರ್ಮಿಸಿದ್ದಾರೆ. ಈ ರೀತಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಮಠವನ್ನು ಬೆಳೆಸಿದರು.

ಶೈಕ್ಷಣಿಕ ಸೇವೆ: ಧಾರ್ಮಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ದೇಗುಲಮಠ ಮತ್ತು ಮರಳೆಗವಿ ಮಠಗಳು ಕನಕಪುರ ತಾಲ್ಲೂಕಿನಲ್ಲಿ ಎರಡು ಕಣ್ಣುಗಳಿದ್ದಂತೆ. ಬಹಳ ಪ್ರಭಾವಿ ಮಠಗಳಾಗಿ ಬೆಳಗಿರುವ ಈ ಎರಡೂ ಮಠಗಳು ಕನಕಪುರ ತಾಲ್ಲೂಕಿನಲ್ಲಿ ಇಲ್ಲದಿದ್ದರೆ ತಾಲ್ಲೂಕು ಈಗ ಸಂಪಾದಿಸಿದ ಹೆಸರನ್ನು ಸಂಪಾದಿಸಲು ಸಾಧ್ಯವಾಗುತ್ತಿರಲಿಲ್ಲ ಎಂದೇ ಹೇಳಬಹುದು. ೧೯೬೨ರಲ್ಲಿ ಪ್ರಥಮವಾಗಿ ಜ್ಞಾನದ ಜ್ಯೋತಿಯನ್ನು ಹಚ್ಚಿದ ಗುರುಗಳು ರೈತ ಮಕ್ಕಳಿಗೆ ಶೈಕ್ಷಣಿಕ ಸೌಲಭ್ಯ ಕಲ್ಪಿಸಿಕೊಡಬೇಕು ಎಂಬ ಉದ್ದೇಶದಿಂದ ೧೯೬೩ ರಲ್ಲಿ ಸಿದ್ಧಗಂಗಾ ಗುರುಗಳನ್ನು ಕರೆಸಿ, ಅವರ ಅಮೃತಹಸ್ತದಿಂದ ಮಾಧ್ಯಮಿಕ ಶಾಲೆಯನ್ನು ಪ್ರಾರಂಭಿಸಿದರು. ಮಠದ ಆವರಣದಲ್ಲಿ ೧೯೬೬ರಲ್ಲಿ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದರು. ಅದೇ ವರ್ಷದಲ್ಲಿ ಶ್ರೀ ಶಿವಯೋಗಿ ಮುನೀಶ್ವರ ವಿದ್ಯಾರ್ಥಿನಿಲಯ ಪ್ರಾರಂಭಿಸಿದರು. ಅಂದು ಕೇವಲ ಇಪ್ಪತ್ತೈದು ಮಂದಿ ವಿದ್ಯಾರ್ಥಿಗಳಿಂದ ಪ್ರಾರಂಭವಾಗಿ, ಇಂದು ಒಂದು ಸಾವಿರ ವಿದ್ಯಾರ್ಥಿಗಳು ನಿತ್ಯ ಅನ್ನದಾಸೋಹ ಪಡೆಯುತ್ತಿದ್ದಾರೆ ಎಂದರೆ ಶ್ರೀ ಕಾಲಾಗ್ನಿ ರುದ್ರಮುನಿ ಸ್ವಾಮಿಗಳ ಕರ್ತೃತ್ವ ಶಕ್ತಿ ಎಂತಹದ್ದು ಎಂದು ಅರ್ಥೈಸಿಕೊಳ್ಳಬಹುದು.

೧೯೭೦ರಲ್ಲಿ ಬಾಲ ಅಪರಾಧಿಗಳ ಆಶ್ರಮ ಶಾಲೆಯನ್ನು ಪ್ರಾರಂಭಿಸಿದರು. ಬಾಲ ಅಪರಾಧಿಗಳಿಗೆ ರಕ್ಷಣೆ ನೀಡಿ ಸಂಸ್ಕಾರವನ್ನು ನೀಡಿ ಉತ್ತಮ ಪ್ರಜೆಗಳಾಗಲು ಅವಕಾಶವನ್ನು ಮಾಡಿಕೊಟ್ಟಿದ್ದನ್ನು ಸಮಾಜ ಎಲ್ಲಾ ಕಾಲದಲ್ಲಿಯೂ ನೆನೆಯಲೇ ಬೇಕು. ಇದರ ಜತೆಗೆ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯ ಹಾಗೂ ಅನಾಥಾಲಯ, ಅನಾಥ ಮಕ್ಕಳಿಗೆ ಕುಟೀರ ಸ್ಥಾಪಿಸಿ ಸಾವಿರಾರು ಬಡಮಕ್ಕಳ ಉದ್ಧಾರಕ್ಕೆ ಶ್ರಮಿಸಿದರು. ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಮಕ್ಕಳ ಕಲಿಕೆ, ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಮಠವು ಸಹಕಾರಿಯಾಗಿದೆ. ಬಡವ, ಬಲ್ಲಿದ ಹಾಗೂ ಮೇಲು,ಕೀಳು ಎಂಬ ಸೋಂಕು ಇಲ್ಲದೆ ಎಲ್ಲರೂ ಒಂದೇ ಎಂದು ಸಮಷ್ಟಿ, ಸಮಾಜದ ಹಿತ ಚಿಂತನೆಗೆ ತೊಡಗಿ ಪ್ರತಿದಿನ ಯೋಗ, ಪಥ ಸಂಚಲನ, ದೈಹಿಕ ವ್ಯಾಯಾಮ ಮತ್ತು ಸಾಮೂಹಿಕ ಪ್ರಾರ್ಥನೆಗಳ ಮೂಲಕ ಮಕ್ಕಳಲ್ಲಿ ಐಕ್ಯತಾ ಮನೋಭಾವನೆಯನ್ನು ಮೂಡಿಸಲಾಗುತ್ತಿದೆ. ಪ್ರತಿದಿನ ಬೆಳಿಗ್ಗೆ ಹನ್ನೊಂದು ಗಂಟೆಗೆ ವಿವಿಧ ಶಾಲೆಗಳ ಶೈಕ್ಷಣಿಕ ಪ್ರಗತಿಯತ್ತ ಗಮನ ಹರಿಸಿದ್ದಾರೆ. ಅಲ್ಲದೆ ಸಂಜೆ ಆರು ಗಂಟೆಗೆ ನಡೆಯುವ ಪ್ರಾರ್ಥನೆಗೆ ಗುರುಗಳು ಯಾವುದೇ ಕಾರ್ಯ ಕಲಾಪಗಳಲ್ಲಿದ್ದರೂ ಸ್ಥಗಿತಗೊಳಿಸಿ ಮಕ್ಕಳ ಜತೆ ಪ್ರಾರ್ಥನೆಯಲ್ಲಿ ಪಾಲ್ಗೊಂಡು, ವಿದ್ಯಾರ್ಥಿಗಳಿಗೆ ಹಿತವಚನವನ್ನು ನೀಡುತ್ತಾ, ಆ ಮೂಲಕ ಮಕ್ಕಳಲ್ಲಿ ನೈತಿಕ ಮೌಲ್ಯಗಳು ಬೆಳೆಯಲು ಪ್ರೇರಣೆಯನ್ನು ನೀಡುತ್ತಿದ್ದಾರೆ. ರಾತ್ರಿ ೭.೩೦ರ ಸಮಯದಲ್ಲಿ ವಿದ್ಯಾರ್ಥಿಗಳ ಕೊಠಡಿಗೆ ಭೇಟಿ ನೀಡಿ ಮಕ್ಕಳ ವೈಯಕ್ತಿಕ ಶೈಕ್ಷಣಿಕ ಪ್ರಗತಿಯ ಬಗ್ಗೆ ಆಸಕ್ತಿ ವಹಿಸುತ್ತಾರೆ. ಈ ರೀತಿ ಶೈಕ್ಷಣಿಕಕ್ಷೇತ್ರದ ಬಗ್ಗೆ ವಿಶೇಷ ಕಾಳಜಿಯನ್ನು ವಹಿಸಿ ಜ್ಞಾನ ದಾಸೋಹ, ಅನ್ನದಾಸೋಹ ಎರಡನ್ನೂ ನೀಡುತ್ತಾ ಬಂದಿದ್ದಾರೆ. ತಮ್ಮ ಇಳಿ ವಯಸ್ಸಿನಲ್ಲಿಯೂ ಪ್ರಗತಿಪರ ಚಿಂತನೆಯನ್ನು ನಡೆಸಿ ಮಠವನ್ನು ವಾಸ್ತವದ ನೆಲೆಗಟ್ಟಿನ ಮೇಲೆ ಬೆಳೆಸಿ ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಮಾಜಿಕವಾಗಿ

ಮಠವನ್ನು ಬೆಳೆಸಿದ್ದಾರೆ.

ಉತ್ತರಾಧಿಕಾರಿಗಳಿಗೆ ಅಧಿಕಾರ: ಸರ್ವಾಂಗ ರೀತಿಯಲ್ಲಿ ಮಠವನ್ನು ಬೆಳೆಸಿದ ಗುರುಗಳು ಪದವೀಧರರಾಗಿರುವ ಶ್ರೀಚನ್ನ ಬಸವ ದೇಶಿಕೇಂದ್ರ ಸ್ವಾಮಿಗಳನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡು ೧೯೯೫ ರ ಮಾರ್ಚ್ ಒಂಬತ್ತರಂದು ಪಟ್ಟಾಧಿಕಾರದ ಅನುಗ್ರಹವನ್ನು ನೀಡಿರುತ್ತಾರೆ. ವಿನಯಶೀಲರು, ಸಂಘಟನಾಶಕ್ತಿ ಇರುವಂತಹವರೂ ಆದ ಶ್ರೀ ಚನ್ನಬಸವ ಸ್ವಾಮಿಗಳು ಸಂಸ್ಕೃತ, ಸಾಹಿತ್ಯವನ್ನು ಅಭ್ಯಾಸ ಮಾಡಿಕೊಂಡಿದ್ದಾರೆ. ಮಠದ ಪೂರ್ಣ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಹಿರಿಯ ಗುರುಗಳ ಮಾರ್ಗದರ್ಶನದಲ್ಲಿ ಮಠದ ಧಾರ್ಮಿಕ, ಶೈಕ್ಷಣಿಕ ಕಾರ್ಯಗಳನ್ನು ನಿರ್ವಹಿಸುತ್ತಾ ಹಿಂದಿನ ಎಲ್ಲಾ ಗುರುಗಳ ಮೇಲ್ಪಂಕ್ತಿಯಲ್ಲಿ ಬೆಳೆಯುವ ಲಕ್ಷಣವನ್ನು ತೋರಿಸುತ್ತಿದ್ದಾರೆ.

ಮಠದಲ್ಲಿ ಮಹಾ ದಾಸೋಹ: ಪ್ರತಿದಿನ ಸರಾಸರಿ ಒಂದು ಸಾವಿರ ಜನ ವಿದ್ಯಾರ್ಥಿಗಳು ಮತ್ತು ಮಠಕ್ಕೆ ಭೇಟಿ ನೀಡುವ ಭಕ್ತರು ಕನಿಷ್ಠ ಐವತ್ತು ಜನರು ಪ್ರತಿದಿನ ತ್ರಿಕಾಲ ಪ್ರಸಾದವನ್ನು ಸ್ವೀಕರಿಸುತ್ತಾರೆ. ದಿನವೊಂದಕ್ಕೆ ಮಹಾ ಅನ್ನದಾಸೋಹಕ್ಕೆ ಎರಡುಚೀಲ ಅಕ್ಕಿ, ಮೂರು ಚೀಲ ರಾಗಿ ಬೇಕಾಗುತ್ತದೆ. ದಾಸೋಹಕ್ಕೆ ರಾಗಿ ಹಿಟ್ಟನ್ನು ಮಾಡಿಕೊಡಲು ಪ್ರತ್ಯೇಕ ಹಿಟ್ಟಿನ ಗಿರಣಿಯನ್ನು ಸ್ಥಾಪನೆ ಮಾಡಲಾಗಿದೆ.ಹಿಂದೆಯೂ ಈಗಿನಂತೆ ದಾಸೋಹಕ್ರಿಯೆ ನಡೆಯುತ್ತಿತ್ತು ಎಂಬುದಕ್ಕೆ ಸಾಕ್ಷಿಯಾಗಿ ಬೃಹತ್ ಆಕಾರದ ಒರಳಕಲ್ಲು ಮಠದಲ್ಲಿದೆ. ತ್ರಿವಿಧ ದಾಸೋಹಿಗಳಾದ ಮಠದ ಗುರುಗಳ ಅವಿರತ ಶ್ರಮವೇ ಈ ಕಾಡಿನಲ್ಲಿ ಮಠವು ಸರ್ವತೋಮುಖವಾಗಿ ಬೆಳೆಯಲು ಕಾರಣವಾಗಿದೆ.

ವಿಳಾಸ:ಶ್ರೀ ಮ.ನಿ.ಪ್ರ.ಚನ್ನಬಸವ ಸ್ವಾಮಿಗಳು,ಶ್ರೀ ಮರಳೆಗವಿಮಠ,ಮರಳೆ, ಕನಕಪುರ ತಾ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಆಧಾರ: 'ಶ್ರೀ ಮರಳೆಗವಿ ದೀಪ್ತಿ' ಸ್ಮರಣ ಸಂಚಿಕೆ

ಮಡಿವಾಳ

ಕನಕಪುರ ತಾಲ್ಲೂಕಿನ ಮಡಿವಾಳವು ತಾಲ್ಲೂಕು ಕೇಂದ್ರದಿಂದ ಮೂವತ್ತ್ಮೂರು ದಕ್ಷಿಣಕ್ಕೆ ಕಿ. ಮೀ. ದೂರದಲ್ಲಿದೆ. ಅರ್ಕಾವತಿ ಮತ್ತು ಕಾವೇರಿ ನದಿಗಳ ಸಂಗಮ ಕ್ಷೇತ್ರದ ಸಮೀಪದಲ್ಲಿ ಇರುವ ಮಡಿವಾಳ ಗ್ರಾಮದ ಸರಹದ್ದಿಗೆ ಸೇರುವ ಸ್ಥಳದಲ್ಲಿ ಶ್ರೀ ಓಂಕಾರೇಶ್ವರ ಮಠವು ಅಸ್ತಿತ್ವದಲ್ಲಿದೆ.

ಓಂಕಾರೇಶ್ವರ ಬೃಹನ್ಮಠ: ಶ್ರೀ ಓಂಕಾರ ಸ್ವಾಮಿಗಳು ಮಠದ ಕರ್ತೃಗುರುಗಳಾಗಿ ಮಠವನ್ನು ಸ್ಥಾಪನೆ ಮಾಡಿದ ಕಾರಣ ಈ ಮಠಕ್ಕೆ ಓಂಕಾರೇಶ್ವರ ಮಠ ಎಂದು ಹೆಸರು ಬರಲು ಕಾರಣವಾಗಿದೆ. ಶ್ರೀ ಓಂಕಾರ ಸ್ವಾಮಿಗಳು ಪವಾಡ ಪುರುಷರಾಗಿ ಅನೇಕ ಲೀಲೆಗಳಿಂದ ಭಕ್ತರ ಮನವನ್ನು ಗೆದ್ದಿದ್ದರು. ಇವರ ಕೃಪಾಶೀರ್ವಾದಕ್ಕೆ ಒಳಗಾಗಿದ್ದ ಅನೇಕ ಭಕ್ತರು ಜೀವನದಲ್ಲಿ ಸಾರ್ಥಕತೆಯನ್ನು ಕಂಡುಕೊಂಡು ಸಂಸ್ಕಾರವಂತ ಸಮಾಜವನ್ನು ರೂಪಿಸಲು ನೆರವಾಗಿದ್ದರು.

ಪರಂಪರೆ:

೧. ಷ.ಬ್ರ.ಶ್ರೀ ಓಂಕಾರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಚಂದ್ರಮುನಿ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಶಿವಶಂಕರ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಗುರುಪಾದ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಮಾಂದ್ರಮುನಿ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ಪ್ರಸಾದ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ಗಂಗಾಧರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಶ್ರೀಮಂತಗೊಂಡಿದೆ. ಶ್ರೀ ಓಂಕಾರ ಶಿವಾಚಾರ್ಯ ಸ್ವಾಮಿಗಳು ಮತ್ತು ಮುಳ್ಳಹಳ್ಳಿಯಲ್ಲಿ

ತಪೋನುಷ್ಠಾನಗೊಂಡಿದ್ದ ಶಿವಯೋಗಿಗಳು ಮತ್ತು ಕೋಟೆಕೊಪ್ಪದಲ್ಲಿ ನೆಲೆಸಿದ್ದ ಶಿವಯೋಗಿಗಳು ಈ ಮೂರು ಜನರು ಸಹೋದರರಾಗಿದ್ದರು. ಈ ಮೂರು ಜನರು ಲೋಕೋದ್ಧಾರಕ್ಕಾಗಿ ಶ್ರಮಿಸಿ ಮಠವನ್ನು ಸ್ಥಾಪಿಸಿರುತ್ತಾರೆ. ಮುಳ್ಳಳ್ಳಿಯ ಶ್ರೀ ಶಾಂತಲಿಂಗೇಶ್ವರಮಠ, ಶ್ರೀ ಓಂಕಾರೇಶ್ವರಮಠ ಮತ್ತು ಕೋಟೆ ಕೊಪ್ಪದ ಮಠಗಳು ಈಗಲೂ ಒಂದೇ ಆಡಳಿತಕ್ಕೆ ಒಳಪಟ್ಟಿರುವುದು ಇದಕ್ಕೆ ಸಾಕ್ಷಿಯಾಗಿದೆ.

ಒಂದೇ ಆಡಳಿತ: ಈಗ ಮುಳ್ಳಹಳ್ಳಿ ಮತ್ತು ಮಡಿವಾಳದ ಶ್ರೀ ಓಂಕಾರೇಶ್ವರಮಠದ ಆಡಳಿತವನ್ನು ಶ್ರೀ ಗಂಗಾಧರೇಶ್ವರ ಸ್ವಾಮಿಗಳೇ ನೋಡಿಕೊಂಡು ಮುನ್ನಡೆಸುತ್ತಿದ್ದಾರೆ. ಹಿಂದೆ ಪ್ರತ್ಯೇಕ ಗುರುಗಳು ನೇಮಕಗೊಂಡು ಆಡಳಿತವನ್ನು ನಡೆಸಿದ್ದರಾದರೂ ಈಗ ಈ ಎರಡೂ ಮಠಗಳು ಕೋಟೆಕೊಪ್ಪದ ಶಾಖಾಮಠಕ್ಕೆ ಹಾಗೂ ಕೊಳ್ಳೇಗಾಲ ತಾಲ್ಲೂಕಿನ ಶಾಗ್ಯ ಗ್ರಾಮದ ಶಾಖಾಮಠವೂ ಸೇರಿದಂತೆ ಎಲ್ಲಾ ಮಠಗಳಿಗೂ ಗುರುಗಳು ಇರಲಿ ಎಂಬ ಕಾರಣಕ್ಕೆ ಮುಳ್ಳಹಳ್ಳಿ ಮತ್ತು ಮಡಿವಾಳ ಎರಡೂ ಕಡೆ ವಾಸ್ತವ್ಯ ಮಾಡುತ್ತಾ ಆಡಳಿತವನ್ನು ನಡೆಸಿಕೊಂಡು ಹೋಗುತ್ತಿದ್ದಾರೆ.

ಆಸ್ತಿಯ ಅಭಿವೃದ್ಧಿ: ಮಠದ ಆಸ್ತಿಯಾಗಿ ಮುಳ್ಳಹಳ್ಳಿಯಲ್ಲಿ ಹದಿನಾರು ಎಕರೆ, ಮಡಿವಾಳದಲ್ಲಿ ಹನ್ನೆರಡುಎಕರೆ, ಕೋಟೆ ಕೊಪ್ಪದಲ್ಲಿ ಒಂದು ಎಕರೆ ಜಮೀನು ಇದೆ. ಈ ಜಮೀನನ್ನು ಅಭಿವೃದ್ಧಿಪಡಿಸಿರುವ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ತಮ್ಮ ಕಾಯಕಯೋಗದಿಂದ ಹೆಚ್ಚು ಲಾಭ ಬರುವಂತೆ ಮಾಡಿದ್ದಾರೆ. ಶಿವರಾತ್ರಿಯ ದಿನ ವಿಶೇಷ ಪೂಜೆಯನ್ನು ಏರ್ಪಡಿಸುತ್ತಾರೆ. ಪ್ರತಿನಿತ್ಯ ಮಠಕ್ಕೆ ಬರುವ ಭಕ್ತಾದಿಗಳಿಗೆ ಅನ್ನದಾಸೋಹ ವ್ಯವಸ್ಥೆಯನ್ನು ಮಾಡಿಸುತ್ತಾ ಬಂದಿರುತ್ತಾರೆ.

ವಿಳಾಸ: ಷ.ಬ್ರ.ಶ್ರೀ ಗಂಗಾಧರೇಶ್ವರ ಶಿವಾಚಾರ್ಯಸ್ವಾಮಿಗಳು , ಶ್ರೀ ಓಂಕಾರೇಶ್ವರಮಠ, ಮಡಿವಾಳ, ಕನಕಪುರತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಆಧಾರ: 'ದೇಗುಲಸಿರಿ' ಸ್ಮರಣ ಸಂಚಿಕೆ

ಮುಳ್ಳಳ್ಳಿ

ಕನಕಪುರ ತಾಲ್ಲೂಕಿನ ಮುಳ್ಳಳ್ಳಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಮೂವತ್ತೆರಡು ಕಿ.ಮೀ.ದೂರದಲ್ಲಿದೆ. ಅಭಿವೃದ್ಧಿ ದೃಷ್ಟಿಯಿಂದ ಹಿಂದೆ ಬಿದ್ದಿರುವ ಈ ಗ್ರಾಮದಲ್ಲಿ ಶ್ರೀ ಶಾಂತಲಿಂಗಸ್ವಾಮಿ ಮಠವು ಅಸ್ತಿತ್ವದಲ್ಲಿದೆ.

ಶಾಂತಲಿಂಗಸ್ವಾಮಿಮಠ: ಮುಳ್ಳಳ್ಳಿ ಗ್ರಾಮದಲ್ಲಿ ರಂಭಾಪುರಿ ಪೀಠದ ಪರಂಪರೆಯಲ್ಲಿ ಬೆಳೆದ, ಬೆಂಗಳೂರು ಸಮೀಪದ ರಾಜಾಪುರ ಮಠದ ಶಾಖಾಮಠವಾಗಿ ಶ್ರೀ ಶಾಂತಲಿಂಗಸ್ವಾಮಿ ಮಠವು ಸ್ಥಾಪನೆಯಾಗಿದೆ. ಈ ಮಠದ ಸ್ಥಾಪನೆಯಿಂದಾಗಿ ಈ ಗ್ರಾಮ ಹಿಂದೆ ಧಾರ್ಮಿಕವಾಗಿ ಸಂಸ್ಕಾರ ಪಡೆದಿತ್ತು.

ಪುರಾತನ ಕಾಲದಲ್ಲಿ ಶ್ರೀ ಶಿವಯೋಗಿಗಳೊಬ್ಬರು ಮುಳ್ಳಿನ ಪೊದೆಯಲ್ಲಿ ಅನುಷ್ಠಾನಗೊಂಡಿದ್ದರು. ಈ ಸಂದರ್ಭದಲ್ಲಿ ಕೊಲ್ಲಳ್ಳಿಯಲ್ಲಿರುವ ದೊಡ್ಡೇಗೌಡ ಎಂಬಾತ ಕಲ್ಯಾಣಿಯೊಂದನ್ನು ತೆಗೆಸಿದ್ದನು. ದುರಾದೃಷ್ಟವಶಾತ್ ಈ ಕಲ್ಯಾಣಿಯಲ್ಲಿ ನೀರು ಬಂದಿರಲಿಲ್ಲ. ಚಿಂತಾಕ್ರಾಂತನಾಗಿ ಶಿವಯೋಗಿಗಳು ಅನುಷ್ಠಾನಕ್ಕೆ ಕುಳಿತಿದ್ದ ಪೊದೆಯ ಸಮೀಪವೇ ಹೋಗುತ್ತಿದ್ದನು. ದಾರಿಯಲ್ಲಿ ಹೋಗುತ್ತಿದ್ದ ದೊಡ್ಡೇಗೌಡನಿಗೆ ಶಿವಯೋಗಿಗಳ ಮಂತ್ರ ಉಚ್ಚರಣೆ 'ಓಂ ನಮಃ ಶಿವಾಯ'ಎಂಬ ಶಬ್ದ ಕಿವಿಗೆ ಬಿದ್ದ ತಕ್ಷಣ ತನ್ನ ದೃಷ್ಟಿಯನ್ನು ಪೊದೆಯ ಕಡೆಗೆ ಹಾಯಿಸುತ್ತಾನೆ. ಆಗ ತಪೋಭಂಗಿಯಲ್ಲಿ ಕುಳಿತಿದ್ದ ಶಿವಯೋಗಿಗಳ ಅಸ್ಪಷ್ಟ ಆಕೃತಿಯನ್ನು ಪೊದೆಯ ಮಧ್ಯದಿಂದ ನೋಡುತ್ತಾನೆ. ಕಲ್ಯಾಣಿಯಲ್ಲಿ ನೀರು ಬರದೇ ಇರುವ ವಿಚಾರವನ್ನು ಈ ತಪೋಜ್ಞಾನಿಗಳಿಗೆ ತಿಳಿಸಬೇಕೆಂಬ ಮನದಾಸೆ ಉಂಟಾಗಿ ಮುಳ್ಳಿನ ಪೊದೆಯ ಮಧ್ಯದಲ್ಲಿ ದಾರಿ ಮಾಡಿಕೊಂಡು ಶಿವಯೋಗಿಗಳ ಹತ್ತಿರ ಬರುತ್ತಾನೆ. ಶಿವಯೋಗಿಗಳಿಗೆ ದೊಡ್ಡೇಗೌಡನು ಬಂದ ವಿಚಾರ ಗೋಚರವಾಗಿ ಕಣ್ತೆರೆಯುತ್ತಾರೆ. ಗುರುಗಳಿಗೆ ನಮಸ್ಕರಿಸಿದ ದೊಡ್ಡೇಗೌಡನು ತನ್ನ ಮನದಾಳದ ನೋವನ್ನು ತೋಡಿಕೊಂಡು ಇದಕ್ಕೆ ಪರಿಹಾರವನ್ನು ಸೂಚಿಸಬೇಕೆಂದು ಬಿನ್ನವಿಸಿಕೊಳ್ಳುತ್ತಾನೆ. ಆಗ ಗುರುಗಳು ಮುಂದಿನ ಹುಣ್ಣಿಮೆಯ ದಿನ ನೀರು ಬರುತ್ತದೆ ಎಂದು ಹೇಳುತ್ತಾರೆ. ಇದರಿಂದ ಸಂತೋಷಗೊಂಡ ದೊಡ್ಡೇಗೌಡನು ಹುಣ್ಣಿಮೆಯ ದಿನ ತಮ್ಮ ಕಲ್ಯಾಣಿಯ ಬಳಿ ತಮ್ಮ ಅಡಿಯಿಟ್ಟು ಆಶೀರ್ವದಿಸಬೇಕೆಂದು

ಮತ್ತೊಮ್ಮೆ ಬೇಡಿಕೊಳ್ಳುತ್ತಾನೆ. ಇದಕ್ಕೆ ಒಪ್ಪಿದ ಶಿವಯೋಗಿಗಳು ದೊಡ್ಡೇಗೌಡನನ್ನು ಆಶೀರ್ವದಿಸಿ ಕಳುಹಿಸಿಕೊಡುತ್ತಾರೆ.

ಗುರುಗಳು ಹೇಳಿದಂತೆ ಹುಣ್ಣಿಮೆಯ ದಿನ ಸಕಲ ಸಿದ್ಧತೆ ಮಾಡಿಕೊಂಡು ಕಲ್ಯಾಣಿಯ ಬಳಿ ದೊಡ್ಡೇಗೌಡನ ಪರಿವಾರವೆಲ್ಲಾ ಸೇರುತ್ತವೆ. ನಂತರ ಗುರುಗಳನ್ನು ಕರೆತರಲು ಗುರುಗಳು ತಪೋನುಷ್ಠಾನಕ್ಕೆ ಕುಳಿತಿದ್ದ ಸ್ಥಳಕ್ಕೆ ಕಳಿಸಿಕೊಡುತ್ತಾನೆ. ಕರೆಯಲು ಬಂದ ಭಕ್ತರಿಗೆ ಗುರುಗಳು ನಿಮ್ಮ ಹಿಂದೆಯೇ ಬರುತ್ತೇನೆ ಎಂದು ಹೇಳಿ ಕಳುಹಿಸಿದರು. ಭಕ್ತರು ಕಲ್ಯಾಣಿಯ ಬಳಿ ಬರುವುದರೊಳ ಗಾಗಿ ಕಲ್ಯಾಣಿಯ ಮೆಟ್ಟಿಲುಗಳ ಮೇಲೆ ಪವಡಿಸಿ ತಮ್ಮ ಪೂಜಾಕಾರ್ಯಗಳನ್ನು ಮುಗಿಸುತ್ತಿದ್ದರು. ಈ ಪವಾಡವನ್ನು ನೋಡಿದ ಭಕ್ತರು ಇವರ್‍ಯಾರೋ ಮಹಾ ತಪಸ್ವಿಗಳೇ ಇರಬೇಕೆಂದು ಭಾವಿಸುತ್ತಾರೆ. ಕಲ್ಯಾಣಿಯಲ್ಲಿ ಪವಾಡ ರೂಪದಂತೆ ನೀರು ಸೆಲೆಯೊಡೆದು ಉಕ್ಕತೊಡಗಿತು. ಈ ಪವಾಡವನ್ನು ನೋಡಿದ ಭಕ್ತರು ನೀರನ್ನು ಬರಿಸಿದ ಶರಣರು ಎಂದು ಕರೆಯತೊಡಗಿದರು.

ಪವಾಡ ಪುರುಷ ಶಿವಯೋಗಿಗಳ ಪರಮಾಪ್ತ ಭಕ್ತರಲ್ಲಿ ಒಬ್ಬರಾದ ಶ್ರೀ ಶಾಂತಲಿಂಗ ಸ್ವಾಮಿಗಳು ಶಿವಯೋಗಿಗಳು ಅನುಷ್ಠಾನಕ್ಕೆ ಕುಳಿತಿದ್ದ ಸ್ಥಳದಲ್ಲಿ ಮಠವನ್ನು ಸ್ಥಾಪಿಸಿ ಧಾರ್ಮಿಕ ಚಟುವಟಿಕೆಗಳನ್ನು ಮುಂದುವರಿಸತೊಡಗಿದರು. ಈ ಮಠದ ಭಕ್ತರಾಗಿ ಸುತ್ತಲ ಗ್ರಾಮಸ್ಥರು ನಡೆದುಕೊಳ್ಳತೊಡಗಿದರು. ಮಠದಲ್ಲಿ ಧಾರ್ಮಿಕ ಚಟುವಟಿಕೆಗಳು ವಿಸ್ತಾರಗೊಂಡಂತೆ ಆವಶ್ಯಕತೆಗೆ ಅನುಗುಣವಾಗಿ ಮಠದ ಸುತ್ತಮುತ್ತ ವಾಸ್ತವ್ಯಕ್ಕೆ ಕುಟೀರಗಳು ಸ್ಥಾಪನೆಗೊಂಡವು. ಈ ರೀತಿಯ ವ್ಯವಸ್ಥೆ ಮಠದ ಸುತ್ತ ಗ್ರಾಮ ಸ್ಥಾಪನೆಯಾಗಿ ಮುಳ್ಳಳ್ಳಿ ಎಂದು ಹೆಸರು ಬರಲು ಕಾರಣವಾಯಿತು.

ಪರಂಪರೆ:

೧. ಷ.ಬ್ರ.ಶ್ರೀ ಶಾಂತಲಿಂಗ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಸಿಡಿಲು ಕಲ್ಲಪ್ಪ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಶಿವಲಿಂಗ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಗುರುಪ್ರಸಾದ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಒಡೆಯರ್ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಅಜ್ಜೀಪುರದಯ್ಯ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ಗಂಗಾಧರ ಶಿವಾಚಾರ್ಯಸ್ವಾಮಿಗಳು (ಈಗಿನ ಸ್ವಾಮಿಗಳು)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ದಾಖಲಿಸಲು ಸಮರ್ಥ ದಾಖಲೆಗಳು ಲಭ್ಯವಿಲ್ಲದ ಕಾರಣ ಮೇಲಿನ ಪರಂಪರೆಯ ಗುರುಗಳ ಹೆಸರುಗಳು ಅಧಿಕಾರ ನಡೆಸಿದ ಅನುಕ್ರಮಣಿಕೆಯಲ್ಲಿ ಇಲ್ಲ. ಈ ಪರಂಪರೆಯಲ್ಲಿ ಬರುವ ಬಹುತೇಕ ಗುರುಗಳು ಪವಾಡ ಪುರುಷರಾಗಿ ಹೆಸರು ಪಡೆದವರಾಗಿದ್ದಾರೆ. ಮಠದ ಆವರಣದಲ್ಲಿ ಏಳು ಗದ್ದುಗೆಗಳು ಇವೆ. ಪ್ರಸ್ತುತ ಮಠಾಧೀಶ್ವರರಾಗಿ ಅಧಿಕಾರವನ್ನು ನಡೆಸುತ್ತಿರುವ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ೧೯೫೬ರಲ್ಲಿ ಪಟ್ಟಾಧಿಕಾರವನ್ನು ಪಡೆದು, ಮುಳ್ಳಳ್ಳಿ ಹಾಗೂ ಮಡಿವಾಳದಲ್ಲಿ ಸ್ಥಾಪನೆಗೊಂಡಿರುವ ಶ್ರೀ ಓಂಕಾರೇಶ್ವರ ಬೃಹನ್ಮಠದ ಆಡಳಿತವನ್ನೂ ನೋಡಿಕೊಂಡು ಬರುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಶಾಂತಲಿಂಗಸ್ವಾಮಿ ಮಠ, ಮುಳ್ಳಳ್ಳಿ, ಕನಕಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಸಾತನೂರು

ಕನಕಪುರ ತಾಲ್ಲೂಕಿನ ಸಾತನೂರು, ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಗುರುಮಲ್ಲೇಶ್ವರರ ದಾಸೋಹಮಠ ಮತ್ತು ಶ್ರೀ ಕಂತೆಭಿಕ್ಷಧಮಠ ಅಸ್ತಿತ್ವದಲ್ಲಿವೆ.

ಗುರುಮಲ್ಲೇಶ್ವರಮಠ: ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ಸ್ಥಾಪನೆಗೊಂಡಿರಬಹುದಾದ ಶ್ರೀ ಗುರುಮಲ್ಲೇಶ್ವರ

ಮಠವು ಸಾತನೂರಿನ ದೊಡ್ಡಳ್ಳಿ ರಸ್ತೆಯಲ್ಲಿದೆ. ಈ ಮಠದಲ್ಲಿ ಒಂದು ಗದ್ದುಗೆ ಸ್ಥಾಪನೆಯಾಗಿದೆ. ಎಪ್ಪತ್ತೆರಡು ವರ್ಷ ವಯಸ್ಸಿನ ಶ್ರೀ ಸಿದ್ದಲಿಂಗ ಸ್ವಾಮಿಗಳು ಆಡಳಿತವನ್ನು ನಡೆಸುತ್ತಿದ್ದಾರೆ. ಶ್ರೀ ಸಿದ್ಧಲಿಂಗ ಸ್ವಾಮಿಗಳು ಸರಳ ಸ್ವಭಾವ, ಧರ್ಮಪ್ರಜ್ಞೆಯನ್ನು ಹೊಂದಿದ್ದು ಸಮಾಜವನ್ನು ಧಾರ್ಮಿಕ ನೆಲೆಗಟ್ಟಿನಲ್ಲಿ ರೂಪಿಸಬೇಕು ಎಂದು ಶ್ರಮಿಸಿದವರು. ಈ ಮಠಕ್ಕೆ ಈಗ ಉತ್ತರಾಧಿಕಾರಿಗಳ ಆಯ್ಕೆಯಾಗಿದ್ದು ದೇಗುಲಮಠದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ೧೯೭೦ರಲ್ಲಿ ನಿರ್ಮಿಸಿರುವ ಕಲ್ಲಿನ ಕಟ್ಟಡ ಸುಸ್ಥಿತಿಯಲ್ಲಿ ಇದೆ. ಮಠದ ಆಸ್ತಿಯಾಗಿ ಎರಡೂವರೆ ಎಕರೆ ಜಮೀನು ಇದ್ದು ಇದನ್ನು ಅಭಿವೃದ್ಧಿಪಡಿಸಿ ಮಠಕ್ಕೆ ಆದಾಯದ ಮೂಲವನ್ನಾಗಿ ಮಾಡಿಕೊಂಡಿದ್ದಾರೆ. ಬಸವಜಯಂತಿ, ಕಾರ್ತೀಕಮಾಸದ ಸೋಮವಾರಗಳಲ್ಲಿ ಮಠದಲ್ಲಿ ವಿಶೇಷ ಪೂಜೆ ಹಾಗೂ ದಾಸೋಹ ಕಾರ್ಯವನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ.ಸಿದ್ಧಲಿಂಗ ಸ್ವಾಮಿಗಳು, ಶ್ರೀ ಗುರು ಮಲ್ಲೇಶ್ವರ ಮಠ, ಸಾತನೂರು. ಕನಕಪುರ ತಾಲ್ಲೂಕು. ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಕಂತೆಭಿಕ್ಷೆಮಠ: ಸಾತನೂರು ಪಟ್ಟಣದ ಬಸವನಗುಡಿ ಬೀದಿಯಲ್ಲಿರುವ ಕಂತೆಭಿಕ್ಷ ಮಠವು ದೇವನೂರು ಶಾಖೆಯ ಮಠವಾಗಿದೆ. ಹಿಂದೆ ಪ್ರಾರಂಭಗೊಂಡಾಗ ಕಂತೆಭಿಕ್ಷ ಮಾಡಿ ಅನಾಥರಿಗೆ, ಅಸಹಾಯಕರಿಗೆ ಮತ್ತು ಹಸಿದವರಿಗೆ ಬಡಿಸುತ್ತಿದ್ದ ಈ ಮಠವು ಕಾಲಾನಂತರ ತನ್ನ ಕಾರ್ಯ ಮರೆತು ಮಠದಲ್ಲಿ ಧಾರ್ಮಿಕ ಆಚರಣೆಗೆ ಸೀಮಿತಗೊಂಡು ಮಠದ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಈ ಗ್ರಾಮದ ಅಣ್ಣಯ್ಯ ಶೆಟ್ಟರ ಮಕ್ಕಳಾದ ತಮ್ಮಯ್ಯ ಶೆಟ್ಟರು ಸ್ವಾಮಿಗಳೊಬ್ಬರನ್ನು ಕರೆತಂದು ಮಠವನ್ನು ಕಟ್ಟಿಸಿ ಕೊಟ್ಟು, ಧಾರ್ಮಿಕ ಚಟುವಟಿಕೆಗಳು ನಡೆಯಲು ನೆರವಾಗಿದ್ದರು. ಸಾತನೂರಿನಲ್ಲಿ ಕಂತೆಭಿಕ್ಷಮಠ ಪ್ರಾರಂಭವಾಗಿ ಇಲ್ಲಿ ಗುರುಪರಂಪರೆ ಬೆಳೆದ ಮೇಲೆ ಶ್ರೀ ಸಿದ್ಧಲಿಂಗ ಸ್ವಾಮಿಗಳು ಮತ್ತು ಶ್ರೀ ಜಡೆ ಸ್ವಾಮಿಗಳು ಅಧಿಕಾರ ನಡೆಸಿ ಮಠವನ್ನು ಬೆಳೆಸಿದರು. ಶ್ರೀ ಸಿದ್ಧಲಿಂಗ ಸ್ವಾಮಿಗಳು ಈ ಮಠದಲ್ಲಿ ಅನೇಕ ವರ್ಷಗಳ ಕಾಲ ಧಾರ್ಮಿಕ ಚಟುವಟಿಕೆಗಳನ್ನು ನಡೆಸಿ, ನಂತರ ಕನಕಪುರದ ದೇಗುಲಮಠಕ್ಕೆ ಹೋಗಿ ನೆಲೆಸಿ ೧೯೫೨ರಲ್ಲಿ ಅಲ್ಲೇ ಲಿಂಗೈಕ್ಯರಾಗಿದ್ದಾರೆ. ನಂತರ ಬಂದ ಶ್ರೀ ಜಡೆ ಸ್ವಾಮಿಗಳು ಅನೇಕ ವರ್ಷಗಳ ಕಾಲ ಅಧಿಕಾರವನ್ನು ನಡೆಸಿ ಕಂತೆಭಿಕ್ಷದ ಮಠದಲ್ಲಿಯೇ ಲಿಂಗೈಕ್ಯರಾಗಿರುತ್ತಾರೆ. ಇವರ ಗದ್ದುಗೆಯು ಮಠದ ಆವರಣದಲ್ಲಿ ಸ್ಥಾಪನೆಯಾಗಿದೆ. ಈಗ ಮಠಾಧೀಶ್ವರರು ಯಾರೂ ಇಲ್ಲದಿದ್ದರೂ ಗದ್ದುಗೆ ಪೂಜಾ ಕಾರ್ಯ ನಡೆಯುತ್ತಿದೆ. ಮಠಕ್ಕೆ ಬರುವ ಭಕ್ತರಿಗೆ ಪ್ರಸಾದದ ವ್ಯವಸ್ಥೆ ಆಗುತ್ತಿದೆ.

ವಿಳಾಸ: ಶ್ರೀ ಕಂತೆಭಿಕ್ಷದ ಮಠ, ಸಾತನೂರು, ಕನಕಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಹುಣಸನಹಳ್ಳಿ

ಕನಕಪುರ ತಾಲ್ಲೂಕಿನ ಹುಣಸನಹಳ್ಳಿಯು ತಾಲ್ಲೂಕು ಕೇಂದ್ರದ ದಕ್ಷಿಣಕ್ಕೆ ಹದಿನೆಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಜಂಗಮಮಠವು ಅಸ್ತಿತ್ವದಲ್ಲಿದೆ.

ಜಂಗಮಮಠ: ಹುಣಸನಹಳ್ಳಿಯಲ್ಲಿ ವಿರಕ್ತ ಸಂಪ್ರದಾಯದ ಶ್ರೀ ಜಂಗಮಮಠವು ಅಭಿವೃದ್ಧಿಯಲ್ಲಿ ಇದ್ದು ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿದೆ. ಶ್ರೀ ಬಸವಲಿಂಗ ಸ್ವಾಮಿಗಳ ಗದ್ದುಗೆ ಬಿಟ್ಟರೆ ಉಳಿದಂತೆ ಬೇರೆ ಯಾವ ಗದ್ದುಗೆಗಳೂ ನೋಡಲು ಸಿಗುತ್ತಿಲ್ಲ. ಈ ಮೂರು ಗದ್ದುಗೆಗಳು ಯಾರ ಕಾಲದಲ್ಲಿ ಸ್ಥಾಪನೆಗೊಂಡಿವೆ ಎಂದು ಹೇಳಲಾಗುವ ಯಾವುದೇ ಆಧಾರಗಳು ದೊರಕುತ್ತಿಲ್ಲ. ಈಗ ಮಠದಲ್ಲಿ ಅಧಿಕಾರವನ್ನು ನಡೆಸುತ್ತಿರುವ ಶ್ರೀ ಇಮ್ಮಡಿಬಸವಲಿಂಗ ಸ್ವಾಮಿಗಳು ಬಸವಾದಿಪ್ರಮಥರ ತತ್ತ್ವಗಳನ್ನು ಭಜನೆ, ಉಪನ್ಯಾಸಗಳನ್ನು ಏರ್ಪಡಿಸಿ ಬೆಳಕಿಗೆ ತರುತ್ತಿದ್ದಾರೆ. ಸಮಷ್ಟಿ ಸಮಾಜದ ಒಳಿತಿಗಾಗಿ ಶ್ರಮಿಸುತ್ತಿದ್ದಾರೆ. ಧಾರ್ಮಿಕ, ಸಾಮಾಜಿಕ ಕಾರ್ಯಗಳಲ್ಲಿ ತೊಡಗಿರುವ ಗುರುಗಳು ಮಠವನ್ನು ಆರ್ಥಿಕವಾಗಿ ಅಭಿವೃದ್ಧಿಪಡಿಸಲು ಹಲವು ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಇಮ್ಮಡಿ ಬಸವಲಿಂಗ ಸ್ವಾಮಿಗಳು. ಶ್ರೀ ಜಂಗಮಮಠ. ಹುಣಸನಹಳ್ಳಿ. ಕನಕಪುರ ತಾಲ್ಲೂಕು. ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಹೊರಳಗಲ್ಲು

ಕನಕಪುರ ತಾಲ್ಲೂಕಿನ ಹೊರಳಗಲ್ಲು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಎಂಟು ಕಿ.ಮೀ.ದೂರದಲ್ಲಿದೆ. ಈ ಗ್ರಾಮದ ಹೊರಭಾಗದಲ್ಲಿ ಕಲ್ಲು ಗುಡ್ಡದ ಪಕ್ಕದಲ್ಲಿ ಶ್ರೀ ಮಹಂತೇಶ್ವರ ಮಠವು ಅಸ್ತಿತ್ವದಲ್ಲಿದೆ.

ಮಹಂತೇಶ್ವರಮಠ: ಇಲ್ಲಿಗೆ ಸಮೀಪದ ವಸ್ತಿಗವಿಮಠದಲ್ಲಿ ಶ್ರೀ ನಾಗಲಿಂಗ ಸ್ವಾಮಿಗಳು ಎಂಬ ಮಹಾ ತಪಸ್ವಿಗಳು ತಪೋನುಷ್ಠಾನ ಮಾಡಿಕೊಂಡು ಮಠವನ್ನು ಸ್ಥಾಪಿಸಿ ಧರ್ಮಪ್ರಚಾರವನ್ನು ಕೈಗೊಂಡಿದ್ದರು. ಇವರ ಜತೆಯಲ್ಲಿ ಬಸವ ಇತ್ತು. ಈ ಬಸವನ ಕೊರಳಿಗೆ ಗೆಜ್ಜೆ ಕಟ್ಟಿ ಬೆನ್ನಿನ ಮೇಲೆ ಜೋಳಿಗೆ ಹಾಕಿ ಭಿಕ್ಷೆಗೆ ಕಳುಹಿಸುತ್ತಿದ್ದರು. ದಿನಕ್ಕೆ ಒಂದು ಗ್ರಾಮಕ್ಕೆ ಭಿಕ್ಷೆಗೆ ಹೋಗುತ್ತಿದ್ದ ಬಸವ ದಗ್ಗಳ ಗ್ರಾಮಕ್ಕೆ ಭಿಕ್ಷೆಗೆ ಹೋಗಿತ್ತು. ಅಲ್ಲಿನ ಕೆಲವು ಪಾಪಿಷ್ಟ ಜನರು ಗುರುಗಳ ಬಗ್ಗೆ ಇಲ್ಲ ಸಲ್ಲದ ಮಾತುಗಳನ್ನು ಮಾತನಾಡಿಕೊಂಡಿದ್ದನ್ನು ಕೇಳಿಸಿಕೊಂಡ ಬಸವ, ಮನನೊಂದು ಭಿಕ್ಷೆಯನ್ನು ಎತ್ತಿಕೊಳ್ಳದೆ ವಸ್ತಿ ಗವಿ ಮಠದ ಮುಂದೆ ಬಂದು ಸಾವನ್ನಪ್ಪಿತು.

ಗುರುಗಳು ಎಂದಿನಂತೆ ಬಸವನನ್ನು ಭಿಕ್ಷಕ್ಕೆ ಕಳುಹಿಸಿ ಸ್ನಾನ ಪೂಜಾದಿಕಾರ್ಯಗಳನ್ನು ಮುಗಿಸಿಕೊಂಡು ಮಠದ ಹೊರಗೆ ಬಂದರು. ಅಲ್ಲಿ ಬಸವ ಮೃತಪಟ್ಟಿರುವ ದೃಶ್ಯವನ್ನು ಕಾಣುತ್ತಾರೆ. ಬೆನ್ನಿನ ಮೇಲಿದ್ದ ಜೋಳಿಗೆ ಖಾಲಿ ಇದ್ದುದನ್ನು ಗಮನಿಸಿ ಬಸವನ ಮನಸ್ಸಿಗೆ ನೋವುಂಟುಮಾಡಿರುವ ಕಾರಣ ಬಸವನು ನೋವನ್ನು ತಾಳಲಾರದೆ ಮೃತ ಪಟ್ಟಿದೆ ಎಂದು ಅರಿತ ಗುರುಗಳು, ದಗ್ಗಳ ಗ್ರಾಮವು ಸರ್ವನಾಶವಾಗಲಿ ಎಂದು ಶಾಪ ಕೊಟ್ಟಿದ್ದರಂತೆ. ಸುಸ್ಥಿತಿಯಲ್ಲಿದ್ದ ದಗ್ಗಳ ಗ್ರಾಮ ಗುರುಗಳ ಶಾಪದಂತೆ ಇಂದು ಹಾಳು ಬಿದ್ದು ನಾಶವಾಗಿದೆ. ಈ ಕಥೆಗೆ ಪುಷ್ಟಿಕೊಡಲು ವಸ್ತಿಗವಿಯಲ್ಲಿ ಬಸವನ ಗದ್ದುಗೆಯೂ ಇದೆ. ಬಸವ ಮೃತಪಟ್ಟ ನಂತರ ಶ್ರೀ ನಾಗಲಿಂಗ ಸ್ವಾಮಿಗಳು ಲಿಂಗೈಕ್ಯರಾಗಿರುತ್ತಾರೆ. ಇವರ ನಂತರ ಶ್ರೀ ನಾಗಲಿಂಗ ಸ್ವಾಮಿಗಳ ಶಿಷ್ಯರಾದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಮಠದ ಧಾರ್ಮಿಕ ಚಟುವಟಿಕೆಗಳನ್ನು ನಡೆಸಿ ಲಿಂಗೈಕ್ಯರಾಗಿರುತ್ತಾರೆ.

ವಸ್ತಿಗವಿಯಿಂದ ಹೊರಳಗಲ್ಲಿಗೆ: ವಸ್ತಿಗವಿಯಲ್ಲಿ ಆಡಳಿತ ನಡೆಸಿದ ಗುರುಗಳು (ಹೆಸರು ಗೊತ್ತಿಲ್ಲ) ಕಾಲಾನಂತರ ಈ ಮಠವನ್ನು ಹೊರಳುಗಲ್ಲು ಗ್ರಾಮಕ್ಕೆ ಸ್ಥಳಾಂತರಿಸಿರುತ್ತಾರೆ. ಸ್ಥಳಾಂತರಗೊಂಡು ಚೌಕಿ ಮಠ ಎಂಬ ಹೆಸರಿನಲ್ಲಿ ತನ್ನ ಪರಂಪರೆಯನ್ನು ಮುಂದುವರೆಸಿದೆ. ಈಗಲೂ ವಸ್ತಿಗವಿ ಮಠ ಅಸ್ತಿತ್ವದಲ್ಲಿದ್ದು ಮಹಂತೇಶ್ವರ ಮಠದ ಶಾಖಾಮಠವಾಗಿ ಮುಂದುವರಿದಿದೆ.

ಬೆಳೆದ ಪರಂಪರೆ:
೧. ಶ್ರೀ ಮ.ನಿ.ಪ್ರ. ನಾಗಲಿಂಗಸ್ವಾಮಿಗಳು (ವಸ್ತಿಗವಿ ಮಠ)
೨. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು (ವಸ್ತಿಗವಿ ಮಠ)
೩. ಶ್ರೀ ಮ.ನಿ.ಪ್ರ. ಮಹಂತಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಎರಡನೆಯ ಮಹಂತಸ್ವಾಮಿಗಳು
೫. ಶ್ರೀ ಮ.ನಿ.ಪ್ರ ಎರಡನೆಯ ಸಿದ್ಧಲಿಂಗಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಮೂರನೆಯ ಮಹಂತಸ್ವಾಮಿಗಳು

ಈ ರೀತಿ ಬೆಳೆದ ಮಹಂತೇಶ್ವರ ಮಠದ ಪರಂಪರೆಯು ಈ ತನಕವೂ ಬೆಳೆದು ಈ ಪ್ರಾಂತ್ಯದಲ್ಲಿ ಹೆಸರು ಮಾಡಿದೆ. ವಸ್ತಿ ಗವಿಯಿಂದ ಹೊರಳಗಲ್ಲು ಗ್ರಾಮಕ್ಕೆ ಸ್ಥಳಾಂತರಗೊಂಡಿದ್ದು ಯಾವ ಕಾಲದಲ್ಲಿ ಎಂಬುದಕ್ಕೆ ದಾಖಲೆ ಲಭ್ಯವಿಲ್ಲ. ಆದರೆ ಹೊರಳಗಲ್ಲು ಗ್ರಾಮದಲ್ಲಿ ಮೊದಲನೆಯ ಶ್ರೀ ಮಹಂತ ಸ್ವಾಮಿಗಳು ಅಧಿಕಾರಕ್ಕೆ ಬರುವ ಮುನ್ನವೇ ಚೌಕಿಮಠ ಇತ್ತು. ಶ್ರೀ ಮಹಂತ ಸ್ವಾಮಿಗಳು ಜೀರ್ಣಾವಸ್ಥೆಯಲ್ಲಿದ್ದ ಮಠದ ಕಟ್ಟಡವನ್ನು ಪೂರ್ಣತೆಗೆಸಿ ಹೊಸಕಟ್ಟಡವನ್ನು ನಿರ್ಮಿಸಿದರು. ಈ ಕಾರಣಕ್ಕೆ ಶ್ರೀ ಚೌಕಿಮಠಕ್ಕೆ ಮಹಂತೇಶ್ವರಮಠ ಎಂಬ ಹೆಸರು ಬಂದಿದೆ.

ಹೊರಳಗಲ್ಲು ಗ್ರಾಮದಲ್ಲಿ ಮಠದ ನೂತನ ಕಟ್ಟಡವನ್ನು ಕಟ್ಟಿಸಿದ ಶ್ರೀ ಮಹಂತ ಸ್ವಾಮಿಗಳು ಮಠವನ್ನು ಹೆಚ್ಚು ಪ್ರಚಾರಕ್ಕೆ ತಂದರು. ಇವರ ನಂತರ ಎರಡನೆಯ ಶ್ರೀ ಮಹಂತ ಸ್ವಾಮಿಗಳು ಅಧಿಕಾರವನ್ನು ನಡೆಸಿ ಶ್ರೀ ಸಿದ್ಧಲಿಂಗ

ಸ್ವಾಮಿಗಳಿಗೆ ಅಧಿಕಾರವನ್ನು ನೀಡಿರುತ್ತಾರೆ. ಶ್ರೀ ಸಿದ್ಧಲಿಂಗ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸದೆ, ಶಿವಪೂಜಾ ನಿಷ್ಠೆಯಿಂದ ಪಾರಮಾರ್ಥಿಕ ಲೋಕದಲ್ಲೇ ಇದ್ದು ಲಿಂಗೈಕ್ಯರಾಗಿರುತ್ತಾರೆ. ಇವರ ನಂತರ ಪ್ರಸ್ತುತ ಅಧಿಕಾರದಲ್ಲಿರುವ ಶ್ರೀ ಮಹಂತ ಸ್ವಾಮಿಗಳು ೧೯೭೪ರಲ್ಲಿ ಪಟ್ಟಾಧಿಕಾರಕ್ಕೆ ಬಂದು ಊರ ಒಳಗೆ ಇದ್ದ ಚೌಕಿಮಠದ ಕಟ್ಟಡವನ್ನು ನವೀಕರಿಸಲು ಯೋಜನೆಯನ್ನು ತಯಾರಿಸಿಕೊಂಡರು. ಆದರೆ ಕಡಿಮೆ ಜಾಗದಲ್ಲಿ ಕಟ್ಟಡವನ್ನು ವಿಸ್ತರಿಸಲು ಸಾಧ್ಯವಾಗದ ಕಾರಣ, ಊರ ಹೊರಗಿನ ಪ್ರಶಾಂತ ಸ್ಥಳವನ್ನು ಆಯ್ಕೆಮಾಡಿಕೊಂಡು ನೂತನ ಕಟ್ಟಡವನ್ನು ೧೯೯೭ರಲ್ಲಿ ನಿರ್ಮಿಸಿದ್ದಾರೆ. ಕಲ್ಲುಬಂಡೆಗಳ ಬೆಟ್ಟದ ತಪ್ಪಲಲ್ಲಿ ಕಾವಿ ಬಣ್ಣ ತೊಟ್ಟು ನಿಂತಿರುವ ಮಠದಲ್ಲಿ ಮಠದ ಕಲ್ಪನೆಗೆ ಅನುಗುಣವಾಗಿ ಪ್ರಶಾಂತತೆ, ಧಾರ್ಮಿಕ ವಾತಾವರಣ ಮೂಡಿದೆ. ನೂತನ ಕಟ್ಟಡದಲ್ಲಿ ಮಹದೇಶ್ವರ ಮತ್ತು ನವಗ್ರಹ ಮೂರ್ತಿಗಳನ್ನು ಪ್ರತಿಷ್ಠಾಪಿಸಿದ್ದಾರೆ. ಗುರುಗಳ ವಾಸ್ತವ್ಯ ಸ್ಥಳ, ಭಕ್ತರಿಗೆ ದರ್ಶನ ನೀಡುವ ಸ್ಥಳ ಈ ರೀತಿ ಪ್ರತ್ಯೇಕ ಕೊಠಡಿಗಳನ್ನು ಇದ್ದುದರಲ್ಲಿಯೇ ಅಚ್ಚುಕಟ್ಟಾಗಿ ನಿರ್ಮಿಸಿದ್ದಾರೆ.

ಜನ ಸಂಪರ್ಕ: ಮರಳೇಗವಿ ಮಠದ ಶಾಖಾಮಠವಾಗಿರುವ ಹೊರಳಗಲ್ಲು ಮಠ ಇಂದು ಸ್ವತಂತ್ರವಾಗಿ ಆಡಳಿತ ನಡೆಸಿಕೊಂಡು ಬರುತ್ತಿದೆ. ಸ್ವತಂತ್ರ ನಿರ್ವಹಣೆಯಲ್ಲಿ ಧರ್ಮಪ್ರಚಾರ ಕಾರ್ಯವನ್ನು ಕೈಗೊಂಡಿರುವ ಶ್ರೀ ಮಹಂತ ಸ್ವಾಮಿಗಳು ಮಠಕ್ಕೆ ಆದಾಯದ ಮೂಲ ಏನೂ ಇಲ್ಲದಿದ್ದರೂ ಮಠವನ್ನು ಭಕ್ತರ ನೆರವಿನಿಂದ ಮುನ್ನಡೆಸಿಕೊಂಡು ಬರುತ್ತಿದ್ದಾರೆ. ಜನ ಸಂಘಟನೆ ಮಾಡಿ ಸಮಾಜಕ್ಕೆ ಧಾರ್ಮಿಕ ಮಾರ್ಗದರ್ಶನ ನೀಡುತ್ತಾ ಭಕ್ತರು ಮತ್ತು ಮಠದ ಸಂಬಂಧವನ್ನು ಬೆಸೆಯುತ್ತಾ ಮಠವನ್ನು ವಿಸ್ತರಿಸಿ ಬೆಳೆಸುವ ಯೋಜನೆಯನ್ನು ಗುರುಗಳು ಹಮ್ಮಿಕೊಂಡಿದ್ದಾರೆ.

ಪುರಾತನ ಸಾಮಗ್ರಿಗಳು: ಮಠದ ಪರಂಪರೆಯ ಗುರುಗಳು ಬಳಸುತ್ತಿದ್ದ ಬೆತ್ತ, ಕಮಂಡಲ, ಪಾದುಕೆಗಳು, ಪ್ರಸಾದದಪಾತ್ರೆ ಮತ್ತು ಕತ್ತಿಗಳು ಮಠದಲ್ಲಿ ಇಂದಿಗೂ ನೋಡ ಸಿಗುತ್ತವೆ. ಇವುಗಳನ್ನು ಪೂಜಾಸ್ಥಳದಲ್ಲಿ ಇಟ್ಟು, ಪುರಾತನ ಸಾಮಗ್ರಿಗಳನ್ನು ಸಂರಕ್ಷಿಸುವ ಕೆಲಸ ಮಾಡಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಮಹಂತ ಸ್ವಾಮಿಗಳು, ಶ್ರೀ ಮಹಂತೇಶ ಮಠ, ಹೊರಳಗಲ್ಲು, ಕನಕಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

❑

ಚನ್ನಪಟ್ಟಣ ತಾಲ್ಲೂಕು

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕು ಗುಡಿ ಕೈಗಾರಿಕೆಯಿಂದ ಪ್ರಸಿದ್ಧಿ ಪಡೆದಿದೆ. ಇಲ್ಲಿನ ಆಟಿಕೆಗಳು ದೇಶ ವಿದೇಶಗಳಲ್ಲಿ ಬೇಡಿಕೆ ಪಡೆದಿವೆ. ಇಂತಹ ತಾಲ್ಲೂಕಿನಲ್ಲಿ ವೀರಶೈವಧರ್ಮ ಅಷ್ಟೇನೂ ಪ್ರಬಲವಾಗಿ ಬೆಳೆದಂತೆ ಕಂಡುಬರುವುದಿಲ್ಲ. ಈವರೆಗೆ ಇಲ್ಲಿ ಎಂಟು ಮಠಗಳು ಸ್ಥಾಪನೆಗೊಂಡಿದ್ದವೆಂದು ಹೇಳಲಾಗುತ್ತದೆ. ಆದರೆ ಇಂದು ಎರಡು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿವೆ.

ಚನ್ನಪಟ್ಟಣ

ಚನ್ನಪಟ್ಟಣವು ತಾಲ್ಲೂಕಿನ ಕೇಂದ್ರ ಸ್ಥಳವಾಗಿದೆ. ಈ ಪಟ್ಟಣವು ಬೆಂಗಳೂರು-ಮೈಸೂರು ರಸ್ತೆಯಲ್ಲಿದೆ. ಇಲ್ಲಿ ಶ್ರೀ ಕುಡಿನೀರುಕಟ್ಟೆ ವಿರಕ್ತ ಮಠವು ಅಸ್ತಿತ್ವದಲ್ಲಿದೆ.

ಕುಡಿನೀರುಕಟ್ಟೆ ವಿರಕ್ತಮಠ: ಚನ್ನಪಟ್ಟಣದ ಮುಖ್ಯರಸ್ತೆಯಲ್ಲಿ ಮುರುಘಾ ಮಠದ ಶಾಖಾಮಠವಾದ ಶ್ರೀ ಕುಡಿನೀರುಕಟ್ಟೆ ವಿರಕ್ತ ಮಠವು ಸ್ಥಾಪನೆಯಾಗಿದೆ. ಈ ಮಠದ ಹೆಸರೇ ಹೇಳುವಂತೆ ಕುಡಿಯುವ ನೀರಿನ ಕಟ್ಟೆ ನಿರ್ಮಿಸಿ ಜನ, ಜಾನುವಾರುಗಳಿಗೆ ನೀರನ್ನು ಈ ಮಠ ದೊರಕಿಸಿಕೊಡುತ್ತಿದ್ದ ರಿಂದ 'ಶ್ರೀ ಕುಡಿನೀರುಕಟ್ಟೆ ವಿರಕ್ತಮಠ'ಎಂದು ಹೆಸರು ಬಂದಿದೆ. ಈ ಮಠದ ಸ್ಥಾಪನೆಯ ಬಗ್ಗೆ ನಿಖರವಾದ ದಾಖಲೆಗಳು ಯಾವುದೂ ಇಲ್ಲದಿರುವ ಕಾರಣ ಈ ಮಠದ ಇತಿಹಾಸವನ್ನು ಗುರುತಿಸಲು ಕಷ್ಟವಾಗಿದೆ. ಈ ಮಠದ ಸಂಪರ್ಕವಿರುವ ಹಿರಿಯ ರೊಬ್ಬರ ಹೇಳಿಕೆಯ ಪ್ರಕಾರ ಹದಿನೈದನೆಯ ಶತಮಾನದಲ್ಲಿ ಶ್ರೀತೋಂಟದ ಸಿದ್ಧಲಿಂಗೇಶ್ವರರು ತಮ್ಮ ವಿರಕ್ತ ಸಮುದಾಯದ ಜತೆಗೆ ಲೋಕಸಂಚಾರ ಮಾಡುತ್ತಾ ಬಂದವರು ಈ ಸ್ಥಳದಲ್ಲಿ ನೆಲೆನಿಂತು ಅನುಷ್ಠಾನಗೊಂಡು ಈ ಸ್ಥಳವನ್ನು ಜಾಗೃತ ಸ್ಥಳವನ್ನಾಗಿ ಮಾಡಿ ಇಲ್ಲಿ ಮಠವನ್ನು ಸ್ಥಾಪಿಸಿ ಹೋಗಿದ್ದಾರೆ. ಅಂದು ಪ್ರಾರಂಭ ಗೊಂಡ ಮಠವು ಈ ತನಕವೂ ಬೆಳೆದು ಬಂದಿದೆ.

ಮಠ ಸ್ಥಾಪನೆ: ಈ ಪ್ರಾಂತ್ಯದ ಬಹುತೇಕ ವಿರಕ್ತ ಮಠಗಳು ಶ್ರೀ ಸಿದ್ಧಲಿಂಗೇಶ್ವರರ ಪ್ರಭಾವದಿಂದ ಬೆಳೆದವುಗಳಾಗಿವೆ. ಈ ಕಾರಣಕ್ಕೆ ಮೇಲಿನ ಹೇಳಿಕೆಯನ್ನು ಗಮನದಲ್ಲಿ ಇಟ್ಟುಕೊಂಡು ಮಠದ ಇತಿಹಾಸವನ್ನು ಹದಿನೈದನೆಯ ಶತಮಾನದಲ್ಲಿ ಸ್ಥಾಪನೆ ಗೊಂಡಿದೆ ಎಂದು ಉಲ್ಲೇಖ ಮಾಡಬಹುದು. ಮಠದ ಕಟ್ಟಡವು ಚೋಳರ ಕಾಲದಲ್ಲಿ ಕಟ್ಟಲ್ಪಟ್ಟಿದೆ ಎಂದು ಹೇಳಲಾಗುತ್ತದೆ. ಸುಮಾರು ಎಂಟುನೂರು ವರ್ಷಗಳಿಗಿಂತ ಹಳೆಯದಾದ ಕಲ್ಲಿನ ಕಟ್ಟಡ ಇದಾಗಿರುವುದರಿಂದ ಈ ಮಠದ ಇತಿಹಾಸವನ್ನು ಸಿದ್ಧಲಿಂಗೇಶ್ವರರಿಗಿಂತಲೂ ಹಿಂದಿನ ಕಾಲಮಾನಕ್ಕೆ ಕೊಂಡೊಯ್ಯಲಾಗುತ್ತದೆ. ಒಟ್ಟಾರೆ ಶರಣರ ತತ್ತ್ವಗಳನ್ನು ನಾಡಿಗೆ ಸಾರಲು ಈ ಮಠವು ಹುಟ್ಟಿಕೊಂಡಿದ್ದು ಚನ್ನಪಟ್ಟಣದ ಧಾರ್ಮಿಕ ಕೇಂದ್ರವಾಗಿ ಬೆಳೆದಿದೆ.

ಜೀವಂತ ಸಮಾಧಿ: ಶ್ರೀ ಕುಡಿನೀರುಕಟ್ಟೆ ವಿರಕ್ತಮಠದಲ್ಲಿ ಮಠಸ್ಥಾಪಕರು ಎಂದು ಗುರುತಿಸಲಾಗಿರುವ ಗುರುಗಳು ಜೀವಂತ ಸಮಾಧಿಯಾಗಿದ್ದಾರೆ. ಇವರ ಗದ್ದುಗೆಯನ್ನು ಮಠದಲ್ಲಿ ನಿರ್ಮಿಸಲಾಗಿದೆ. ಇವರ ನಂತರ ಮಠವು ಮಠಾಧೀಶ್ವರರು ಇಲ್ಲದೆ ಖಾಲಿ ಉಳಿದ ಕಾರಣ ಮಠದ ಪರಂಪರೆಯ ದಾಖಲೆಗಳನ್ನು ಗುರುತಿಸಲು ತೊಡಕಾಗಿದೆ. ಜೀವಂತ ಸಮಾಧಿಯಾದ ಗುರುಗಳ ಗದ್ದುಗೆಗೆ ಬೇರೆ ಗದ್ದುಗೆಗಳಂತೆ ವಿಶೇಷವಾಗಿ ನಿತ್ಯವೂ ಪೂಜೆಯನ್ನು ನಡೆಸಲಾಗುತ್ತಿದೆ. ಈ ಕಾರಣಕ್ಕೆ ಇಲ್ಲಿ ಜೀವಂತ ಸಮಾಧಿಗೊಂಡ ಗುರುಗಳೇ ಮಠ ಸ್ಥಾಪಕರೆಂದು ಅಂದಾಜು ಮಾಡಲಾಗಿದೆ.

ಪರಂಪರೆ: ಜೀವಂತ ಸಮಾಧಿಗೊಂಡ ಗುರುಗಳ ನಂತರ ಈ ತನಕ ಮಠದ ಪರಂಪರೆಯಲ್ಲಿ ಲಭ್ಯವಿರುವ ಗುರುಗಳ ಹೆಸರು, ಅವರ ಕಾಲಮಾನದ ಬಗ್ಗೆ ನಿಖರ ಆಧಾರವಿರದೆ ಅನುಕ್ರಮಣಿಕೆಯಲ್ಲಿ ಬರೆಯಲು ಸಾಧ್ಯವಾಗುತ್ತಿಲ್ಲ. ಈಗ ಗುರುತಿಸಲಾಗಿರುವ ಹೆಸರುಗಳನ್ನು ಗದ್ದುಗೆಗಳ ಆಧಾರದ ಮೇಲೆ ದಾಖಲಿಸಲಾಗಿದೆ.

೧. ಜೀವಂತ ಸಮಾಧಿಯಾದ ಗುರುಗಳು (ಹೆಸರು ಗೊತ್ತಿಲ್ಲ)

೨. ಶ್ರೀ ಮ.ನಿ.ಪ್ರ. ಚನ್ನಬಸಪ್ಪಸ್ವಾಮಿಗಳು

೩. ಶ್ರೀ ಮ.ನಿ.ಪ್ರ. ಮುಮ್ಮಡಿ ನಿರ್ಮಾಮಿಡಿಸ್ವಾಮಿಗಳು
(ಇವರು ಕೋಲಾರದ ಕಡೆಯಿಂದ ಬಂದು ಮಠದಲ್ಲಿ ನೆಲೆಸಿ ಇಲ್ಲೇ ಐಕ್ಯಗೊಂಡಿದ್ದಾರೆ.)
೪. ಶ್ರೀ ಮ.ನಿ.ಪ್ರ. ಶಾಂತಮಲ್ಲಿಕಾರ್ಜುನಸ್ವಾಮಿಗಳು (ಹಿಂದಿನ ಲಿಂಗೈಕ್ಯ ಗುರುಗಳು)
೫. ಶ್ರೀ ಮ.ನಿ.ಪ್ರ. ಚರಮೂರ್ತಿ ಶಿವರುದ್ರಸ್ವಾಮಿಗಳು (ಈಗಿನವರು)

ಈ ರೀತಿ ಐದು ಜನ ಗುರುಗಳ ಹೆಸರನ್ನು ದಾಖಲಿಸಬಹುದಾಗಿದೆ. ಮಠದ ಆವರಣದಲ್ಲಿ ಆರು ಗದ್ದುಗೆಗಳು ಇದ್ದು, ಈ ಮೇಲೆ ದಾಖಲಿಸಿದ ಗುರುಗಳಲ್ಲಿ ನಾಲ್ಕು ಜನ ಲಿಂಗೈಕ್ಯ ಗುರುಗಳ ಹೆಸರನ್ನು ಗುರುತಿಸಬಹುದಾದರೂ ಉಳಿದ ಎರಡು ಗದ್ದುಗೆಗಳು ಯಾರ ಹೆಸರಿನಲ್ಲಿ ನಿರ್ಮಿತವಾಗಿವೆ ಎಂದು ತಿಳಿಯುತ್ತಿಲ್ಲ.

ಪಟ್ಟಾಧಿಕಾರ: ಅಸ್ಪಷ್ಟ ಇತಿಹಾಸವಿರುವ ಈ ಮಠವು ಚನ್ನಪಟ್ಟಣದ ವೀರಶೈವರಿಗೇ ಅಲ್ಲದೆ ಅನ್ಯಮತೀಯರಿಗೂ ದಾರಿ ದೀಪವಾಗಿ ಬೆಳಗಿದೆ. ಇಂತಹ ಮಠದ ಉತ್ತರಾಧಿಕಾರಿಯಾಗಿ ಶ್ರೀ ಚರಮೂರ್ತಿ ಶಿವರುದ್ರ ಸ್ವಾಮಿಗಳು ೧೯೯೭ರ ಜುಲೈ ಇಪ್ಪತ್ತೆಂಟರಂದು ಮಠದ ಪಟ್ಟಾಧಿಕಾರಿಯಾಗಿ ಅಧಿಕಾರವನ್ನು ವಹಿಸಿಕೊಂಡು ಆಸ್ತಿವಂತ ಮತ್ತು ಪರಂಪರಾಗತ ಮಠದ ಜವಾಬ್ದಾರಿಯನ್ನು ಹೊತ್ತಿದ್ದಾರೆ. ಕಿರಿಯ ವಯಸ್ಸಿನಲ್ಲಿಯೇ ಹಿರಿಯ ಜವಾಬ್ದಾರಿಯನ್ನು ವಹಿಸಿಕೊಂಡ ಶ್ರೀ ಶಿವರುದ್ರ ಸ್ವಾಮಿಗಳು ವೇದ, ಸಂಸ್ಕೃತ ಅಧ್ಯಯನವನ್ನು ಸಿದ್ಧಗಂಗೆಯಲ್ಲಿ ಮಾಡಿ ಬಂದಿದ್ದಾರೆ. ವಿದ್ಯಾ ಸಂಪನ್ನರಾಗಿ ಮಠದ ಧಾರ್ಮಿಕ, ಸಾಮಾಜಿಕ ಕಾರ್ಯಗಳನ್ನು ಮುನ್ನಡೆಸಲು ಶಕ್ತಿ ಪಡೆದವರಾಗಿದ್ದಾರೆ. ಸಿದ್ಧಗಂಗೆ, ಮರಳೇ ಗವಿಮಠದ ಗುರುಗಳ ಮಾರ್ಗ ದರ್ಶನದಿಂದ ಮಠವನ್ನು ಮುನ್ನಡೆಸುತ್ತಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಮಠದ ಆಸ್ತಿಯಾಗಿದ್ದ ಹತ್ತುಎಕರೆ ಜಮೀನನ್ನು ನಿವೇಶನವಾಗಿ ಪರಿವರ್ತಿಸಿ ಹಂಚಿಕೆ ಮಾಡಲಾಗಿದೆ. ಇದರಿಂದ ಬಂದ ಹಣವನ್ನು ಬಳಸಿ ಲಿಂಗೈಕ್ಯ ಹಿರಿಯಗುರುಗಳಾದ ಶ್ರೀ ಶಾಂತಮಲ್ಲಿಕಾರ್ಜುನಸ್ವಾಮಿ ಹೆಸರಿನಲ್ಲಿ ಪ್ರಾರ್ಥನಾ ಮಂದಿರವನ್ನು ಮತ್ತು ಮಠದ ಸುತ್ತ ಆವರಣವನ್ನು ನಿರ್ಮಿಸಲಾಗಿದೆ. ಚನ್ನಪಟ್ಟಣದ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಮಳಿಗೆಯನ್ನು ನಿರ್ಮಿಸಿ ಮಠದ ಆದಾಯದ ಮೂಲವನ್ನು ರೂಪಿಸಿಕೊಂಡಿದೆ. ಸಾಮಾಜಿಕ ಅಭಿವೃದ್ಧಿಗೆ ತನ್ನನ್ನು ತೊಡಗಿಸಿ ಕೊಳ್ಳುತ್ತಿದೆ. ಮಠದ ಜಮೀನಿನಲ್ಲಿ ತೆಂಗಿನ ತೋಟ ಮಾಡಿದ್ದು ಇದರಿಂದಲೂ ಮಠಕ್ಕೆ ಆದಾಯ ಬರುವಂತೆ ಮಾಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗದ್ದುಗೆಗಳಿಗೆ ನಿತ್ಯ ಪೂಜೆ ಮಾಡಲಾಗುತ್ತಿದೆ. ಶ್ರಾವಣ ಮತ್ತು ಕಾರ್ತೀಕಮಾಸ ಗಳಲ್ಲಿ ವಿಶೇಷ ಪೂಜೆ ಹಾಗೂ ಶಿವರಾತ್ರಿಯಲ್ಲಿ ಭಜನೆಯನ್ನು ನಡೆಸಲಾಗುತ್ತಿದೆ. ಹಿಂದೆ ಹುಣ್ಣಿಮೆಯಲ್ಲಿ ಪ್ರತಿ ತಿಂಗಳು ಉಪನ್ಯಾಸ, ಪ್ರವಚನಗಳನ್ನು ನಡೆಸಲಾಗುತ್ತಿತ್ತು. ಈಗಲೂ ಇದನ್ನು ಮುಂದುವರೆಸುವ ಕಾರ್ಯ ನಡೆದಿದೆ. ಇತ್ತೀಚೆಗೆ ಗ್ರಾಮಾಂತರ ಮಕ್ಕಳು ಮಠದಲ್ಲಿ ಆಶ್ರಯವನ್ನು ಪಡೆದು ತಮ್ಮ ಕಲಿಕೆಯನ್ನು ಮುಂದುವರೆಸಿದ್ದಾರೆ. ವಿದ್ಯಾರ್ಥಿನಿಲಯ ಇಲ್ಲದಿದ್ದರೂ ಎಂಟರಿಂದ ಹತ್ತುಜನ ವಿದ್ಯಾರ್ಥಿಗಳು ಪ್ರತಿವರ್ಷ ಮಠದಲ್ಲಿ ಆಶ್ರಯವನ್ನು ಪಡೆಯುತ್ತಾರೆ. ಮಠದಲ್ಲಿ ತಾಳೆಗರಿಗಳ ಕಟ್ಟು ದೊರೆತಿದ್ದು ಜೋಪಾನವಾಗಿ ಸಂರಕ್ಷಿಸಿದ್ದಾರೆ. ಹಿರಿಯ ಗುರುಗಳ ಪಾದುಕೆಗಳು, ಪರಂಪರಾಗತವಾಗಿ ಬಂದಂತಹ ಪೂಜಾ ಸಾಮಾಗ್ರಿಗಳು ಮಠದಲ್ಲಿವೆ.

ವಿಳಾಸ: ಶ್ರೀ ಮ.ನಿ.ಪ್ರ. ಚರಮೂರ್ತಿ ಶಿವರುದ್ರ ಸ್ವಾಮಿಗಳು, ಶ್ರೀ ಕುಡಿನೀರುಕಟ್ಟೆ ವಿರಕ್ತಮಠ, ಚನ್ನಪಟ್ಟಣ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಬೇವೂರು

ಚನ್ನಪಟ್ಟಣ ತಾಲ್ಲೂಕಿನ ಬೇವೂರು ತಾಲ್ಲೂಕು ಕೇಂದ್ರದ ಪಶ್ಚಿಮಕ್ಕೆ ಹನ್ನೊಂದು ಕಿ.ಮೀ. ದೂರದಲ್ಲಿದೆ. ನೀರಾವರಿ ಸೌಲಭ್ಯವನ್ನು ಹೊಂದಿರುವ ಈ ಅಭಿವೃದ್ಧಿಶೀಲ ಗ್ರಾಮದಲ್ಲಿ ಶ್ರೀಶೈಲಪೀಠದ ಶಾಖಾಮಠವಾದ ಶ್ರೀ ಮಲ್ಲಿಕಾರ್ಜುನಸ್ವಾಮಿ ಮಠವು ಅನಾದಿಕಾಲದಿಂದಲೂ ಇಲ್ಲಿ ಅಸ್ತಿತ್ವವನ್ನು ಪಡೆದುಕೊಂಡಿದೆ.

ಮಲ್ಲಿಕಾರ್ಜುನಸ್ವಾಮಿಮಠ: ಬೇವೂರು ಗ್ರಾಮದ ಹೊರಭಾಗದಲ್ಲಿ ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದಿರುವ

ಶ್ರೀಮಲ್ಲಿಕಾರ್ಜುನಸ್ವಾಮಿಮಠವು ಸ್ಥಾಪನೆಯಾಗಿ ಈ ಗ್ರಾಮದ ಧಾರ್ಮಿಕ ಚಟುವಟಿಕೆಯ ಕೇಂದ್ರಬಿಂದುವಾಗಿ ಬೆಳೆದಿದೆ.

ಮಠ ಸ್ಥಾಪನೆ: ಶಿವಯೋಗಿ ಶ್ರೀ ಮಹಂತ ಮಲ್ಲಿಕಾರ್ಜುನ ಸ್ವಾಮಿಗಳು ಲೋಕಸಂಚಾರವನ್ನು ಕೈಗೊಂಡು ಬೇವೂರಿನ ಗ್ರಾಮಕ್ಕೆ ಬಂದು ನೆಲೆಸುತ್ತಾರೆ. ನಿರ್ಜನ ಪ್ರದೇಶದಲ್ಲಿ ಅನುಷ್ಠಾನಗೊಂಡಿದ್ದ ಇವರು ದಿನ ಕಳೆದಂತೆ ಜನರ ಕಣ್ಣಿಗೆ ಬಿದ್ದು ಜನರ ಅಪೇಕ್ಷೆಯ ಮೇರೆಗೆ ಬೇವೂರು ಗ್ರಾಮಕ್ಕೆ ಬಂದು ನೆಲೆಸುತ್ತಾರೆ. ಇಲ್ಲಿ ಬಂದು ನೆಲೆಸಿದ ಶ್ರೀ ಮಹಂತ ಮಲ್ಲಿಕಾರ್ಜುನ ಸ್ವಾಮಿಗಳು ಅನೇಕ ಪವಾಡಗಳನ್ನು ಸೃಷ್ಟಿಸಿ ಜನಮನಕ್ಕೆ ಹತ್ತಿರವಾಗುತ್ತಾರೆ. ಗುರುಗಳ ಮಾರ್ಗದರ್ಶನದಲ್ಲಿ ಬೇವೂರು ಅಭಿವೃದ್ಧಿಯನ್ನು ಕಾಣತೊಡಗಿ ಜನ ಸನ್ಮಾರ್ಗದಲ್ಲಿ ನಡೆಯುತ್ತಾ ನೆಮ್ಮದಿಯ ಬದುಕನ್ನು ಬಾಳತೊಡಗಿದರು. ಈ ರೀತಿ ಶಿವಯೋಗಿ ಶ್ರೀ ಮಹಂತ ಮಲ್ಲಿಕಾರ್ಜುನ ಸ್ವಾಮಿಗಳು ಬೇವೂರಿನಲ್ಲಿ ನೆಲೆನಿಂತ ಮೇಲೆ ಗುರುಗಳಿಗಾಗಿ ಮಠ ಸ್ಥಾಪನೆಯಾಗುತ್ತದೆ. ಸ್ಥಾಪನೆಗೊಂಡ ಮಠದಲ್ಲಿ ಧಾರ್ಮಿಕ ಚಟುವಟಿಕೆಗಳು ಪ್ರಾರಂಭಗೊಂಡು ಪ್ರತಿದಿನ ಗುರುಗಳಿಂದ ಉಪನ್ಯಾಸ ಕಾರ್ಯಕ್ರಮಗಳು ನಡೆಯತೊಡಗಿದವು. ಇದರಿಂದ ಸಮಷ್ಟಿ ಸಮಾಜವು ಸನ್ಮಾರ್ಗದಲ್ಲಿ ನಡೆಯುವಂತಾಯಿತು. ಶಿವಯೋಗಿ ಶ್ರೀ ಮಹಂತ ಮಲ್ಲಿಕಾರ್ಜುನ ಸ್ವಾಮಿಗಳು ಈ ಮಠದ ಉತ್ತರಾಧಿಕಾರಿಗಳನ್ನು ನೇಮಿಸಿ ಧಾರ್ಮಿಕ ಕಾರ್ಯಗಳು ಎಂದೂ ನಿಲ್ಲಬಾರದೆಂದು ಆಶೀರ್ವದಿಸಿ ಲಿಂಗೈಕ್ಯರಾಗುತ್ತಾರೆ. ಲಿಂಗೈಕ್ಯ ಗುರುಗಳ ಸಮಾಧಿಯ ಮೇಲೆ ಗದ್ದುಗೆಯನ್ನು ನಿರ್ಮಿಸಿ, ಗುರುಗಳು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಉತ್ತರಾಧಿಕಾರಿಗಳು (ಹೆಸರು ತಿಳಿದಿಲ್ಲ) ಮಠವನ್ನು ಮುನ್ನಡೆಸತೊಡಗಿದರು.

ಪರಂಪರೆ:

೧. ಷ.ಬ್ರ.ಶ್ರೀ ಶಿವಯೋಗಿ ಮಹಂತ ಮಲ್ಲಿಕಾರ್ಜುನಸ್ವಾಮಿಗಳು
೨. ಷ.ಬ್ರ.ಶ್ರೀ ಜಡೆ ಮಹಂತ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಮಲೆಜಡೆ ಮಹಂತ ಶಿವಾಚಾರ್ಯಒಡೆಯರು
೪. ಷ.ಬ್ರ.ಶ್ರೀ ಜಡೆ ಮಹಂತ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಶಾಂತಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು

ಈ ರೀತಿ ಬೆಳೆದ ಪರಂಪರೆಯಲ್ಲಿ ಒಟ್ಟು ಇಪ್ಪತ್ತಾರು ಜನ ಗುರುಗಳು ಈ ಮಠದ ಅಧಿಕಾರಿಗಳಾಗಿ ಧರ್ಮಕಾರ್ಯ ನಡೆಸಿದ ಬಗ್ಗೆ ಹೇಳಲಾಗುತ್ತದೆಯಾದರೂ ಮೇಲೆ ಗುರುತಿಸಲಾದ ಐದು ಜನ ಗುರುಗಳ ಹೆಸರುಗಳನ್ನು ಮಾತ್ರ ದಾಖಲಿಸಬಹುದಾಗಿದೆ. ಮಠದ ಪರಂಪರೆಯಲ್ಲಿ ಬಹುತೇಕ ಗುರುಗಳು ಶ್ರೀ ಜಡೆಮಹಾಂತ ಸ್ವಾಮಿಗಳೆಂಬ ಅಭಿದಾನದಿಂದ ಪಟ್ಟಾಧಿಕಾರವನ್ನು ಪಡೆದು ಅಧಿಕಾರಕ್ಕೆ ಬಂದಿರುವುದರಿಂದ ಈ ಮಠದ ಪರಂಪರೆಯಲ್ಲಿ ಹೆಸರುಗಳನ್ನು ದಾಖಲಿಸಲು ತೊಡಕಾಗಿದೆ ಎಂದು ಈಗಿನ ಗುರು ಗಳು ಅಭಿಪ್ರಾಯಿಸುತ್ತಾರೆ. ೧೯೭೪ರಲ್ಲಿ ಜಗದೇವರಾಯ ಎಂಬ ಪಾಳೆಗಾರನು ಬೇವೂರು ಗ್ರಾಮದ ಪಟ್ಟದ ಮೇಲೆ ಬೇರೊಬ್ಬ ಪಾಳೆಗಾರನಿದ್ದು ಅವನಿಗೆ ಗುರುಗಳು ಆಶ್ರಯ ನೀಡಿಯಾರು ಎಂಬ ಅನುಮಾನಗೊಂಡು ಮಠವನ್ನು ಲೂಟಿ ಮಾಡಿಸುತ್ತಾನೆ. ಈ ಸಂದರ್ಭದಲ್ಲಿ ಮಠದಲ್ಲಿದ್ದ ದಾಖಲೆ ಪತ್ರಗಳು ಹಾಗೂ ಮಠದ ಪರಂಪರೆಯ ಇತಿಹಾಸವುಳ್ಳ ದಾಖಲೆಗಳು ಹಾಳಾಗಿರ ಬಹುದೆಂದು ಈಗಿನ ಗುರುಗಳು ಅಭಿಪ್ರಾಯಿಸಿರುತ್ತಾರೆ. ಇಪ್ಪತ್ತೈದನೆಯ ಗುರುಗಳಾಗಿ ಅಧಿಕಾರವನ್ನು ವಹಿಸಿಕೊಂಡಿದ್ದ ಶ್ರೀ ಜಡೆಮಹಂತ ಸ್ವಾಮಿಗಳು ಮಠದ ಪರಂಪರೆಯನ್ನು ಹೇಳುತ್ತಿದ್ದರು. ಅದನ್ನಾದರೂ ದಾಖಲಿಸಿಕೊಂಡಿದ್ದರೆ ಇಂದು ಈ ಪುರಾತನ ಮಠದ ಪರಂಪರೆಯ ಸ್ಪಷ್ಟ ಚಿತ್ರಣ ಗೋಚರವಾಗುತ್ತಿತ್ತು. ಆದರೆ ಈ ಪ್ರಯತ್ನವು ನಡೆಯದೆ ಇರುವುದರಿಂದ ಈ ಮಠದ ಪರಂಪರೆಯನ್ನು ಲಭ್ಯವಿರುವ ದಾಖಲೆಗಳ ಮೇಲೆ ಗುರುತಿಸಬೇಕಾಗಿದೆ. ಇಪ್ಪತ್ತೈದನೆಯ ಗುರುಗಳಾದ ಶ್ರೀ ಜಡೆಮಹಂತ ಸ್ವಾಮಿಗಳು ಈ ಮಠದ ಧಾರ್ಮಿಕ ಚಟುವಟಿಕೆಗಳನ್ನು ನೆಡೆಸಿ, ತಮ್ಮ ಉತ್ತರಾಧಿಕಾರಿಗಳನ್ನು ನೇಮಿಸಿ ೧೯೫೮ರಲ್ಲಿ ಲಿಂಗೈಕ್ಯರಾದರು.

ಕಾಯಕಯೋಗಿ: ಪರಂಪರಾಗತ ಮಠದ ಇಪ್ಪತ್ತಾರನೆಯ ಗುರುಗಳಾಗಿ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮಿಗಳು ೧೯೫೪ರಲ್ಲಿ ಹಿರಿಯ ಗುರುಗಳಿಂದ ಪಟ್ಟಾಧಿಕಾರದ ಅನುಗ್ರಹವನ್ನು ಪಡೆದು ಮಠದ ಅಧಿಕಾರವನ್ನು ವಹಿಸಿಕೊಂಡಿರುತ್ತಾರೆ. ಶ್ರೀಶಾಂತ ಮಲ್ಲಿಕಾರ್ಜುನಸ್ವಾಮಿಗಳು ಬೇವೂರಿನ ಶ್ರೀ ಗುರುಸ್ವಾಮಿ ಮತ್ತು ಶ್ರೀಮತಿ ಮಲ್ಲಮ್ಮನವರ ಪುತ್ರರಾಗಿ ೧೯೩೯ರ ಜೂನ್ ಇಪ್ಪತ್ತೈದರಂದು ಜನಿಸಿದರು. ಬೇವೂರಿನಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಸಿದ್ಧಗಂಗೆಗೆ ತೆರಳುತ್ತಾರೆ.

ಗುರುಗಳು ಪ್ರೌಢಾವಸ್ಥೆಗೆ ಬಂದ ಮೇಲೆ ಮಠದ ಅಧಿಕಾರವನ್ನು ವಹಿಸಿಕೊಂಡಿದ್ದರು. ಗುರುಗಳು ಅಧಿಕಾರಕ್ಕೆ ಬಂದ ಮೇಲೆ ಮಠದ ಸರ್ವಾಂಗೀಣ ಅಭಿವೃದ್ಧಿಯ ಬಗ್ಗೆ ಚಿಂತಿಸಿ ಮಠವನ್ನು ಆರ್ಥಿಕವಾಗಿ ಸ್ವಾವಲಂಬನೆಗೊಳಿಸಲು ಮಠದ ಆಸ್ತಿಯಾಗಿದ್ದ ಐದು ಎಕರೆ ಜಮೀನನ್ನು ನೀರಾವರಿಗೆ ಯೋಗ್ಯಗೊಳಿಸಿ, ಹತ್ತು ಎಕರೆ ಜಮೀನಿನಲ್ಲಿ ತೋಟವನ್ನು ಬೆಳೆಸಿದರು. ಇವರಿಂದ ಮಠಕ್ಕೆ ಹೆಚ್ಚು ಆದಾಯ ಬರತೊಡಗಿ ಮಠವು ಸ್ವಾವಲಂಬಿಯಾಯಿತು. ಗುರುಗಳು ಮಠವನ್ನು ಬೆಳೆಸಿ ೨೦೦೧ರ ಅಕ್ಟೋಬರ್‌ನಲ್ಲಿ ಲಿಂಗೈಕ್ಯರಾದರು. ಇವರ ನಂತರ ಉತ್ತರಾಧಿಕಾರಿಗಳ ಆಯ್ಕೆ ನಡೆದಿದೆ.

ಗುರು-ವಿರಕ್ತರಲ್ಲಿ ಬೇಧಬೇಡ: ಗುರು-ವಿರಕ್ತರಲ್ಲಿ ಭೇದಭಾವ ಸಲ್ಲದು. ಎಡೆಯೂರು ಶ್ರೀ ಸಿದ್ಧಲಿಂಗೇಶ್ವರರು ಹಾಗೂ ಅದಕ್ಕೂ ಹಿಂದಿನ ಕೆಲವು ಘಟನೆಗಳನ್ನು ಅವಲೋಕಿಸಿ ಹಿಂದೆ ಇದ್ದ ಅವಿನಾಭಾವ ಸಂಬಂಧಗಳನ್ನು ಪರಿಗಣನೆಗೆ ತೆಗೆದುಕೊಂಡು ವೀರಶೈವ ಸಮಾಜದ ಬಗ್ಗೆ ಚಿಂತನೆ ನಡೆಸಬೇಕಾಗಿದೆ. ಆಚಾರ್ಯರು ಮತ್ತು ಬಸವಣ್ಣನವರತತ್ತ್ವಗಳನ್ನು ಎಲ್ಲರೂ ಪರಿಪಾಲಿಸು ವಂತಹದ್ದೇ. ಈ ಕಾರಣಕ್ಕೆ ಎಲ್ಲರೂ ಸಮಷ್ಟಿಯಾಗಿ ಯೋಚಿಸಿ, ವೀರಶೈವ ಧರ್ಮವನ್ನು ಬೆಳೆಸಬೇಕಾಗಿದೆ ಎಂಬ ಧೋರಣೆಯನ್ನು ಇಟ್ಟುಕೊಂಡಿದ್ದ ಗುರುಗಳು ಶರಣಸಾಹಿತ್ಯದ ಬಗ್ಗೆ ಆಳವಾದ ಅಧ್ಯಯನವನ್ನು ಮಾಡಿದ್ದರು.

ಶಿಕ್ಷಣ ಸೇವೆ: ಶ್ರೀ ಶಾಂತಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಧಾರ್ಮಿಕ ಕ್ಷೇತ್ರದಷ್ಟೇ ಶೈಕ್ಷಣಿಕ ಕ್ಷೇತ್ರಕ್ಕೂ ಪ್ರಾಧಾನ್ಯತೆ ನೀಡಿದ್ದಾರೆ. ಬೇವೂರಿನಲ್ಲಿ ಪ್ರೌಢಶಾಲೆ, ಪದವಿಪೂರ್ವ ಕಾಲೇಜು, ಪದವಿಕಾಲೇಜು ಹಾಗೂ ವೃತ್ತಿ ನಿರತ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಿ ಗ್ರಾಮಾಂತರ ಮಕ್ಕಳ ಕಲಿಕೆಗೆ ನೆರವಾದರು. ಸಂಘಟನೆಗೂ ಹೆಸರಾದ ಶ್ರೀ ಶಾಂತಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಚನ್ನಪಟ್ಟಣದಲ್ಲಿ ವೀರಶೈವ ಪತ್ತಿನ ಸಹಕಾರ ಸಂಘವನ್ನು ಸ್ಥಾಪಿಸಿ, ಈಗ ಅದರ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದರು.

ಧಾರ್ಮಿಕ ಕಾರ್ಯಗಳು: ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಮಾಜಿಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಗುರುಗಳು ಮಠವನ್ನೂ ಬೆಳೆಸಿ, ಧರ್ಮಸಂಸ್ಕಾರ ನೀಡುವ ಕೇಂದ್ರವನ್ನಾಗಿ ಮಾಡಿದರು. ಮಠದ ಧಾರ್ಮಿಕ ಚಟುವಟಿಕೆಯ ಜತೆಗೆ ಭಕ್ತರ ಮನೆಗಳಲ್ಲಿ ನಡೆಯುವ ಧಾರ್ಮಿಕ ಕ್ರಿಯೆಗಳಲ್ಲಿ ಭಾಗವಹಿಸಿ ನೆರವಾಗುತ್ತಿದ್ದಾರೆ. ಮಠದಲ್ಲಿರುವ ಐದು ಗದ್ದುಗೆಗಳಿಗೆ ನಿತ್ಯ ಪೂಜೆ ಹಾಗೂ ಅಮಾವಾಸ್ಯೆಯಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಶ್ರಾವಣ ಮತ್ತು ಕಾರ್ತೀಕಮಾಸಗಳಲ್ಲಿ ವಿಶೇಷ ಪೂಜೆ ಏರ್ಪಡಿಸಿ ಭಕ್ತರನ್ನು ಆಕರ್ಷಿಸಿಕೊಳ್ಳಲಾಗುತ್ತಿದೆ.

ವಿಳಾಸ: ಶ್ರೀ ಮಲ್ಲಿಕಾರ್ಜುನಸ್ವಾಮಿಮಠ, ಬೇವೂರು, ಚನ್ನಪಟ್ಟಣ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

❑

ದೊಡ್ಡಬಳ್ಳಾಪುರ ತಾಲ್ಲೂಕು

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕು ಕೃಷಿ ಹಾಗೂ ವ್ಯಾಪಾರವನ್ನು ತನ್ನ ಮುಖ್ಯ ಕಸುಬಾಗಿಸಿಕೊಂಡಿದೆ. ಇಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆದ ಲಕ್ಷಣಗಳು ಕಂಡುಬರುವುದಿಲ್ಲ. ಈ ತಾಲ್ಲೂಕಿನಲ್ಲಿ ಎಂಟು ಮಠಗಳು ಅಸ್ತಿತ್ವದಲ್ಲಿದ್ದವೆಂದು ಹೇಳಲಾಗುತ್ತದೆ. ದೊಡ್ಡಬಳ್ಳಾಪುರ ಪಟ್ಟಣದಲ್ಲಿ ಎರಡು ಮಠಗಳು ಅಸ್ತಿತ್ವದಲ್ಲಿದ್ದವು ಇಂದು ಈ ಎರಡು ಮಠಗಳು ಸಂಸಾರಿ ಮಠಗಳಾಗಿ ಪರಿವರ್ತನೆಯಾಗಿವೆ. ಪ್ರಸ್ತುತ ಖಾನಿಮಠ ಮಾತ್ರ ಅಸ್ತಿತ್ವದಲ್ಲಿದೆ.

ಖಾನಿ

ದೊಡ್ಡಬಳ್ಳಾಪುರ ತಾಲ್ಲೂಕಿನ ಖಾನಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಖಾನಿಮಠವು ಅಸ್ತಿತ್ವದಲ್ಲಿದೆ.

ಖಾನಿಮಠ: ಖಾನಿ ಗ್ರಾಮದಲ್ಲಿ ಧರ್ಮಪ್ರಭೆಯನ್ನು ಬೆಳಗಿಸಿದೆ. ಹಿಂದೆ ಗದ್ದುಗೆಮಠ ಎಂದು ಕರೆಯಲಾಗುತ್ತಿದ್ದು ನಂತರ ಜಂಗಮಮಠ ಎಂದು ಕರೆಯಲಾಗುತ್ತಿದೆ. ಊರ ಹೊರಗೆ ಸ್ಥಾಪನೆಯಾದ ಈ ಮಠವು ಗ್ರಾಮ ಬೆಳೆದಂತೆ ಖಾನಿ ಗ್ರಾಮದ ಒಳಗೆ ಸೇರಿಕೊಂಡಿತು. ನಂತರ ಖಾನಿಮಠ ಎಂಬ ರೂಢಿಗತ ಹೆಸರು ಬರಲು ಕಾರಣವಾಗಿದೆ.

ಮಠ ಸ್ಥಾಪನೆ: ಈ ಮಠದ ಕರ್ತೃಗುರುಗಳ ಬಗ್ಗೆ ನಿಖರವಾದ ಮಾಹಿತಿಗಳು ಲಭ್ಯವಾಗಿಲ್ಲ. ಪುರಾತನ ಕಾಲದಲ್ಲಿ ಶಿವಯೋಗಿಗಳೊಬ್ಬರು ಈ ಜಾಗದಲ್ಲಿ ಅನುಷ್ಠಾನಗೊಂಡು ಲಿಂಗೈಕ್ಯರಾಗಿದ್ದಾರೆ. ಇವರ ಗದ್ದುಗೆಯನ್ನು ಖಾನಿಯ ಈಗಿರುವ ಜಾಗದಲ್ಲಿ ಸ್ಥಾಪಿಸಿರುತ್ತಾರೆ. ಅಂದಿನಿಂದ ಈ ಮಠಕ್ಕೆ ಗದ್ದುಗೆ ಮಠ ಎಂದು ಕರೆಯಲಾಗುತ್ತಿತ್ತು. ನಂತರ ಶ್ರೀ ಓಂಕಾರ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠದ ಪ್ರಭಾವ ಸುತ್ತಲೂ ಹಬ್ಬುವಂತೆ ಮಾಡಿದ್ದಾರೆ. ಶ್ರೀ ಓಂಕಾರ ಸ್ವಾಮಿಗಳು ಬೆಳಗಿನ ಪೂಜಾ ಕಾರ್ಯಗಳನ್ನು ಮುಗಿಸಿ ಭಿಕ್ಷೆ ಮಾಡಲು ಹೊರಟು ದೇವಸ್ಥಾನದಲ್ಲಿ ಪವಡಿಸಿ ಶಂಖವನ್ನು ಊದಿದರೆ ನಾಲ್ಕೈದು ಮೈಲುದೂರಕ್ಕೆ ಕೇಳುತ್ತಿತ್ತೆಂದು ಹೇಳಲಾಗುತ್ತದೆ. ಭಕ್ತರು ಶಂಖದ ಶಬ್ದ ಕೇಳಿದ ತಕ್ಷಣ ತಮ್ಮ ಪಾಲಿನ ಸೇವೆಯನ್ನು ಬಂದು ಮಾಡಿಹೋಗುತ್ತಿದ್ದರು ಎಂದು ಹೇಳುವ ಜನಪದ ಕಥೆ ಕೇಳಿ ಬರುತ್ತದೆ.

ಬೆಳೆದ ಪರಂಪರೆ: ಶ್ರೀ ಓಂಕಾರ ಸ್ವಾಮಿಗಳು ದೀರ್ಘ ಕಾಲ ಮಠದಲ್ಲಿ ಆಡಳಿತವನ್ನು ನಡೆಸಿ ಧರ್ಮವು ಸಾಕಾರಗೊಳ್ಳುವಂತೆ ಮಾಡಿ ವೀರಶೈವ ಧರ್ಮವನ್ನು ಉದ್ಧರಿಸಿದ್ದಾರೆ.

೧. ಶ್ರೀ ಮ.ನಿ.ಪ್ರ. ಗದ್ದುಗೆಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಓಂಕಾರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಬಸಪ್ಪಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಷಡಕ್ಷರಿಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಬಸವರಾಜಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಗುರುಪರಂಪರೆ ಬೆಳೆದು ಬಂದಿದೆ. ಶ್ರೀ ಓಂಕಾರ ಸ್ವಾಮಿಗಳ ನಂತರ ಬಂದ ಶ್ರೀ ಬಸಪ್ಪ ಸ್ವಾಮಿಗಳು ತಮ್ಮ ಹಿರಿಯ ಗುರುಗಳ ಮಾರ್ಗದರ್ಶನದಲ್ಲಿ ಕೃಪಾಶೀರ್ವಾದ ಪಡೆದು ಮಠವನ್ನು ಮುನ್ನಡೆಸಿದ್ದರು. ಇವರ ನಂತರ ಅನೇಕ ವರ್ಷಗಳ ಕಾಲ ಮಠ ಮಠಾಧೀಶ್ವರರು ಇಲ್ಲದೆ ಖಾಲಿ ಉಳಿಯಿತು. ನಂತರ ಸಿದ್ಧಗಂಗೆಯ ಶ್ರೀ ಉದ್ದಾನ ಶಿವಯೋಗಿಗಳು ಶ್ರೀ ಶಿವಕುಮಾರ ಸ್ವಾಮಿಗಳಿಗೆ ಪಟ್ಟಾಧಿಕಾರ ನೀಡುವಾಗ, ಶ್ರೀ ಷಡಕ್ಷರಿ ಸ್ವಾಮಿಗಳಿಗೂ ಪಟ್ಟಾಧಿಕಾರ ನೀಡಿ ಖಾನಿ ಮಠಕ್ಕೆ ನೇಮಿಸಿದರು. ಶ್ರೀ ಷಡಕ್ಷರಿ ಸ್ವಾಮಿಗಳು ಖಾನಿ ಮಠದ ಅಧಿಕಾರ ವಹಿಸಿಕೊಂಡ ನಂತರ ಚಿಕ್ಕದಾಗಿದ್ದ ಮಠದ ಕಟ್ಟಡವನ್ನು ಅಗತ್ಯಕ್ಕೆ ತಕ್ಕಷ್ಟು ವಿಸ್ತರಿಸಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಕರ್ತೃಗುರುಗಳ ಮತ್ತು ಓಂಕಾರೇಶ್ವರರ ಗದ್ದುಗೆಗಳನ್ನು ನವೀಕರಿಸಿದ್ದಾರೆ. ಇವರ ಕಾಲದಲ್ಲಿ ವೀರಶೈವರೇ ಒಕ್ಕಲಿಗರೂ ಸಹ ಮಠದ ಭಕ್ತರಾಗಿ ಮಠವನ್ನು ಬೆಳೆಸಿದ್ದಾರೆ.

ಅಧಿಕಾರವನ್ನು ಪಡೆದ ಕೆಲವೇ ವರ್ಷಗಳಲ್ಲಿ ಮಠವನ್ನು ಅಭಿವೃದ್ಧಿಪಡಿಸಿ ಮಠವು ಆರ್ಥಿಕವಾಗಿ ಸದೃಢಗೊಳ್ಳುವಂತೆ ಮಾಡಿ ೧೯೯೦ರ ಫೆಬ್ರವರಿ ಎರಡರಂದು, ತಮ್ಮ ಉತ್ತರಾಧಿಕಾರಿ ಶ್ರೀ ಬಸವರಾಜ ಸ್ವಾಮಿಗಳಿಗೆ ಪಟ್ಟಾಧಿಕಾರ ಮಾಡಿ ನವೆಂಬರ್ ಐದು ೧೯೯೦ರಲ್ಲಿ ಲಿಂಗೈಕ್ಯರಾಗಿದ್ದಾರೆ.

ವಿದ್ವತ್ ಪುರುಷ: ಕಾಯಕಮೂರ್ತಿ ಶ್ರೀ ಷಡಕ್ಷರಿ ಸ್ವಾಮಿಗಳ ಕರಕಮಲ ಸಂಜಾತರಾಗಿ ಶ್ರೀ ಬಸವರಾಜ ಸ್ವಾಮಿಗಳು ಬೆಳೆದರು.ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ಸಂಸ್ಕೃತದಲ್ಲಿ ಪಾಂಡಿತ್ಯ ಪಡೆದು ಬಂದ ಗುರುಗಳು ಮಠದ ಅಧಿಕಾರಿಗಳಾಗಿ ನೇಮಕಗೊಂಡರು. ಶ್ರೀ ಬಸವರಾಜ ಸ್ವಾಮಿಗಳು ಅಧಿಕಾರ ವಹಿಸಿಕೊಂಡ ಮೇಲೆ ಗುರುಗಳನ್ನು ಕಳೆದುಕೊಂಡು ಈ ನೋವಿನಲ್ಲೇ ಮಠದ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರು. ಇವರು ಕೆಲವು ದಿನ ಗಳ ಕಾಲ ಮಠದಲ್ಲಿ ನೆಲೆಸಿ ನಂತರ ನಿರ್ಗಮಿಸಿದ್ದಾರೆ. ಇದರಿಂದ ಈಗ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿದಿದೆ.

ಅಭಿವೃದ್ಧಿ ಕಾರ್ಯಗಳು: ಖಾನಿಮಠದ ಅಭಿವೃದ್ಧಿಯ ಹರಿಕಾರರು ಶ್ರೀ ಷಡಕ್ಷರಿ ಸ್ವಾಮಿಗಳು. ಇವರ ಕಾಲದಲ್ಲಿ ಒಂದೂವರೆ ಎಕರೆ ಅಡಿಕೆ ತೋಟ, ಒಂದೂವರೆ ಎಕರೆ ಗದ್ದೆಯನ್ನು ಅಭಿವೃದ್ಧಿಪಡಿಸಿದ್ದರು. ಚನ್ನಬಸವಪಾಳ್ಯ ಮುಂತಾದ ಕಡೆ ಒಟ್ಟು ಇಪ್ಪತ್ನಾಲ್ಕು ಎಕರೆ ಆಸ್ತಿ ಇದೆ. ಈ ಎಲ್ಲಾ ಆಸ್ತಿಯನ್ನು ಶ್ರೀ ಷಡಕ್ಷರಿ ಸ್ವಾಮಿಗಳು ಅಭಿವೃದ್ಧಿಪಡಿಸಿದ್ದರು. ನಂತರ ಶ್ರೀಬಸವ ರಾಜ ಸ್ವಾಮಿಗಳು ಎಂ.ಎ.ಪದವೀಧರರಾದರೂ ಕಾಯಕಯೋಗಿಯಾಗಿ ಮಠದ ಆಸ್ತಿಯನ್ನು ನಂದನವನವಾಗಿ ಮಾಡಿ ಮಠಕ್ಕೆ ಹೆಚ್ಚು ಆದಾಯ ಬರುವಂತೆ ಮಾಡಿದ್ದರು.

ಶಿಕ್ಷಣ: ೧೯೭೦-೭೧ರಲ್ಲಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದ ಶ್ರೀ ಷಡಕ್ಷರಿ ಸ್ವಾಮಿಗಳು ಸಂಸ್ಕೃತ ಪಾಠಶಾಲೆ, ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಿದ್ದರು. ಈಗ ವಿದ್ಯಾರ್ಥಿ ನಿಲಯವನ್ನು ಸ್ಥಗಿತಗೊಳಿಸಲಾಗಿದೆ. ಇತ್ತೀಚೆಗೆ ಪ್ರೌಢಶಾಲೆಯನ್ನು ಈಗಿನ ಶ್ರೀ ಬಸವರಾಜ ಸ್ವಾಮಿಗಳು ಪ್ರಾರಂಭಿಸಿದ್ದರು. ಈಗ ವಿಶ್ವಸ್ಥ ಮಂಡಳಿಯು ಶಿಕ್ಷಣ ಸಂಸ್ಥೆಗಳ ಆಡಳಿತವನ್ನು ನೋಡಿಕೊಳ್ಳುತ್ತಿದೆ. ಮಠದ ಪಕ್ಕದಲ್ಲಿ ಶಾಲೆಗಳ ಸಮುಚ್ಚಯ ಸ್ಥಾಪನೆಯಾಗಿದೆ.

ಧಾರ್ಮಿಕ ಆಚರಣೆ: ಉತ್ತರ ದಿಕ್ಕಿಗೆ ಹೆಬ್ಬಾಗಿಲು ಇರುವ ಈ ಮಠದ ಆವರಣದಲ್ಲಿ ಮಠದ ಹೆಬ್ಬಾಗಿಲಿನಿಂದ ಎಡಗಡೆಗೆ ಕರ್ತೃಗದ್ದುಗೆ ಇದೆ. ಬಿಲ್ವಪತ್ರೆ ಮರಗಳನ್ನು ಬೆಳೆಸಲಾಗಿದೆ.ಈ ಗದ್ದುಗೆ ಎದುರಿಗೆ ಎಡಭಾಗದಲ್ಲಿ ಶ್ರೀ ಓಂಕಾರ ಸ್ವಾಮಿಗಳ ಗದ್ದುಗೆಯನ್ನು ಸ್ಥಾಪಿಸಲಾಗಿದೆ. ಶ್ರೀ ಷಡಕ್ಷರಿ ಸ್ವಾಮಿಗಳ ಗದ್ದುಗೆಯನ್ನು ಮಠದ ಆವರಣದಲ್ಲಿ ನಿರ್ಮಿಸಲಾಗಿದೆ. ಈ ಗದ್ದುಗೆಗಳಿಗೆ ಪ್ರತಿನಿತ್ಯ ಪೂಜೆಯನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಬಸವರಾಜ ಸ್ವಾಮಿಗಳು. ಶ್ರೀ ಖಾನಿಮಠ, ಖಾಸಿ, ದೊಡ್ಡಬಳ್ಳಾಪುರ ತಾ. ಬೆಂಗಳೂರು ಗ್ರಾಮಾಂತರಜಿಲ್ಲೆ.

❑

ದೇವನಹಳ್ಳಿ ತಾಲ್ಲೂಕು

ಬೆಂಗಳೂರು ಗ್ರಾಮಾಂತರ ಜಿಲ್ಲೆಯಾದ ದೇವನಹಳ್ಳಿ ತಾಲ್ಲೂಕು ಬೆಂಗಳೂರು ನಗರಕ್ಕೆ ಸಮೀಪವಿದೆ. ಗಣಿ ಕೈಗಾರಿಕೆ ಹಾಗೂ ವ್ಯಾಪಾರವು ಮುಖ್ಯ ಕಸುಬಾಗಿದೆ. ಇಲ್ಲಿಯೂ ಸಹ ವೀರಶೈವಧರ್ಮ ಪ್ರಬಲವಾಗಿ ಬೆಳೆದ ಲಕ್ಷಣಗಳು ಕಂಡು ಬರುವುದಿಲ್ಲ. ಹಿಂದೆ ಹದಿನಾರು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಆದರೆ ಇತ್ತೀಚೆಗೆ ಜೀರ್ಣಾಭಿವೃದ್ಧಿ ಗೊಂಡು ಬೆಳೆದಿರುವ ವಿಜಯಪುರದ ಮಠವೊಂದೇ ಅಸ್ತಿತ್ವದಲ್ಲಿದೆ.

ವಿಜಯಪುರ

ದೇವನಹಳ್ಳಿ ತಾಲ್ಲೂಕಿನ ವಿಜಯಪುರವು ವ್ಯಾಪಾರ ಕೇಂದ್ರ ಸ್ಥಳವಾಗಿದೆ. ಈ ಪಟ್ಟಣವು ತಾಲ್ಲೂಕು ಕೇಂದ್ರದ ಈಶಾನ್ಯಕ್ಕೆ ಹದಿನೈದು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಬಸವಕಲ್ಯಾಣ ಮಠವು ಅಸ್ತಿತ್ವದಲ್ಲಿದೆ.

ಬಸವಕಲ್ಯಾಣಮಠ: ವಿಜಯಪುರ ಪಟ್ಟಣದಲ್ಲಿ ವೀರಶೈವರ ಧಾರ್ಮಿಕ ಕೇಂದ್ರ ಸ್ಥಳವಾಗಿ ಶ್ರೀ ಬಸವಕಲ್ಯಾಣಮಠ ಬೆಳೆದಿದೆ. ಹನ್ನೆರಡು ವರ್ಷಗಳ ಹಿಂದಷ್ಟೇ ಮಠವು ಸ್ಥಾಪನೆಯಾಗಿ ಧಾರ್ಮಿಕ ಹಾಗೂ ಶೈಕ್ಷಣಿಕವಾಗಿ ಪ್ರಗತಿಯನ್ನು ಸಾಧಿಸಿ ಜನಮನದಲ್ಲಿ ಬೇರೂರಿದೆ.

ಹಿನ್ನೆಲೆ: ವಿಜಯಪುರದ ಉತ್ತರಭಾಗದಲ್ಲಿ ಅವಳಿ ಬಿಲ್ವ ಮರಗಳು ಬೆಳೆದಿದ್ದವು. ಬಿಲ್ವ ಮರಗಳು ಬೆಳೆಯುವುದೇ ಅಪರೂಪ. ಅಂತಹದರಲ್ಲಿ ಬೇರೆ ಬೇರೆಯಾಗಿ ನಂತರ ಒಂದಾಗಿ ಅವಳಿ ಬಿಲ್ವಮರಗಳು ಬೆಳೆದ ಕಾರಣಕ್ಕೆ, ಇಲ್ಲಿನ ವೀರಶೈವರ ಮುಖಂಡರು ಈ ಪವಿತ್ರ ಸ್ಥಳವನ್ನು'ಸಂಗಮೇಶ್ವರ'ಎಂದು ಹೆಸರಿಸಿ, ಸಂಗಮ ಬಸವಣ್ಣನವರ ಮೂರ್ತಿಯನ್ನು ಪ್ರತಿಷ್ಠಾಪಿಸುತ್ತಾರೆ. ವಿಜಯಪುರದ ಅಂಕತಟ್ಟಿ ನಂಜುಂಡಪ್ಪ ಎಂಬುವರು ಮಹಾದಾನಿಗಳು ಹಾಗೂ ಜಂಗಮಪ್ರಿಯರು. ಸಮಾಜದ ಬಗ್ಗೆ ಕಳಕಳಿ ಇದ್ದಂತಹ ವ್ಯಕ್ತಿ.ಇವರ ಆಶಯದಂತೆ ಈ ಸ್ಥಳದಲ್ಲಿ ಧಾರ್ಮಿಕ ಕಾರ್ಯಗಳು ನಡೆಯತೊಡಗಿದವು. ನಂತರ ದೊಡ್ಡಪ್ಪಯ್ಯನವರು ಈಶ್ವರ ಲಿಂಗವನ್ನು ಪ್ರತಿಷ್ಠಾಪನೆ ಮಾಡಿಸಿದರು. ಬಸವಯ್ಯನವರು ನವಗ್ರಹಗಳನ್ನು ಸ್ಥಾಪನೆ ಮಾಡಿ ಸಂಗಮ ಕ್ಷೇತ್ರದಲ್ಲಿ ಧಾರ್ಮಿಕ ವಾತಾವರಣವನ್ನು ಸೃಷ್ಟಿಮಾಡಿದರು. ಇದಾದ ಕೆಲವು ವರ್ಷಗಳ ತರುವಾಯ ಮಠವಾಗಿ ರೂಪುಪಡೆಯಿತು.

ಮಠಸ್ಥಾಪನೆ: ಈ ರೀತಿ ಸಂಗಮಕ್ಷೇತ್ರದಲ್ಲಿ ಧಾರ್ಮಿಕ ವಾತಾವರಣ ಸೃಷ್ಟಿಯಾದ ಮೇಲೆ ಈ ಕ್ಷೇತ್ರಕ್ಕೆ ಗುರುಗಳ ಆವಶ್ಯಕತೆ ಇದೆ ಎಂದು ಅರಿತು ಭಕ್ತರು ಸಿದ್ಧಗಂಗೆಯ ಜಂಗಮ ಜ್ಯೋತಿ ಡಾ. ಶ್ರೀ ಶಿವಕುಮಾರ ಸ್ವಾಮಿಗಳಲ್ಲಿ ವಿನಂತಿಸಿಕೊಂಡರು. ಆಗ ಸಿದ್ಧಗಂಗೆ ಗುರುಗಳು ನೂತನ ಮಠಕ್ಕೆ'ಶ್ರೀ ಬಸವಕಲ್ಯಾಣಮಠ'ಎಂದು ನಾಮಕರಣ ಮಾಡಿ, ೧೯೮೮ರಲ್ಲಿ ಶ್ರೀಮಹದೇವ ಸ್ವಾಮಿಗಳಿಗೆ ಸಿದ್ಧಗಂಗೆಯಲ್ಲಿ ಪಟ್ಟಾಧಿಕಾರ ಕೊಡಿಸಿ, ವಿಜಯಪುರದ ನೂತನ ಮಠದ ಅಧಿಕಾರಕೊಟ್ಟರು.

ಮೊದಲ ಗುರು: ಶ್ರೀ ಮಹದೇವ ಸ್ವಾಮಿಗಳು ಮಂಡ್ಯ ಜಿಲ್ಲೆಯ ಬಿಳುಗಲಿ ಗ್ರಾಮದ ಶ್ರೀ ಮಾದಯ್ಯ ಮತ್ತು ಶ್ರಿಮತಿ ಮರಿಯಮ್ಮನವರ ಮಗನಾಗಿ ೧೯೫೫ರ ಜೂನ್ ಹದಿನಾರರಂದು ಜನಿಸಿದರು. ಬಿಳುಗಲಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿ, ಪ್ರೌಢಶಾಲೆಗೆ ಸೇರಲು ಸಿದ್ಧಗಂಗೆಗೆ ಬಂದು ಆಶ್ರಯ ಪಡೆದು ಶ್ರೀ ಶಿವಕುಮಾರ ಸ್ವಾಮಿಗಳ ದೃಷ್ಟಿಗೆ ಬಿದ್ದು ಗುರುಗಳ ಕೃಪಾಕಟಾಕ್ಷದಿಂದ ಬೆಳೆದರು. ಸಿದ್ದಗಂಗೆಯಲ್ಲಿ ಬಿ.ಇಡಿ, ತರಬೇತಿಯನ್ನು ಪಡೆದರು. ನಂತರ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ವಿದ್ವಾಂಸರಾಗಿ ರೂಪುಗೊಂಡರು. ಸ್ನಾತಕೋತ್ತರ ಪದವಿಯನ್ನು ಪಡೆದು ಗುರುಗಳಲ್ಲಿಗೆ ಪುನಃ ಆಶ್ರಯ ಪಡೆದು ಬಂದ ಶ್ರೀ ಮಹದೇವ ಸ್ವಾಮಿಗಳು ಸಿದ್ಧಗಂಗೆಯ ಪ್ರೌಢಶಾಲೆಗೆ ಶಿಕ್ಷಕರಾಗಿ ನೇಮಕಗೊಂಡರು. ಶ್ರೀ ಮಹದೇವ ಸ್ವಾಮಿಗಳಿಗೆ ಧರ್ಮದ ಬಗ್ಗೆ ಇದ್ದ ಪಾಂಡಿತ್ಯ ವನ್ನು ಗಮನಿಸಿದ್ದ ಹಿರಿಯ ಚೇತನ ಶ್ರೀ ಶಿವಕುಮಾರ ಸ್ವಾಮಿಗಳು ಇವರನ್ನು ಸಮರ್ಥ ಧರ್ಮಾಧಿಕಾರಿಯನ್ನಾಗಿ ಮಾಡುವ ಹಂಬಲವನ್ನು ಹೊಂದಿದ್ದರು. ಕಾಕತಾಳಿಯವಾಗಿ ವಿಜಯಪುರಕ್ಕೆ ನೇಮಕಮಾಡುವ ಯೋಗ ಬಂದೊದಗಿತು. ಶ್ರೀ ಮಹದೇವ

ಸ್ವಾಮಿಗಳು ಶ್ರೀ ಬಸವಕಲ್ಯಾಣಮಠಕ್ಕೆ ಮೊದಲ ಗುರುಗಳಾಗಿ ಅಧಿಕಾರ ವಹಿಸಿಕೊಂಡರು.

ಕ್ರಿಯಾಶೀಲತೆ: ಶ್ರೀ ಮಹಾದೇವ ಸ್ವಾಮಿಗಳು ೧೯೮೮ರಲ್ಲಿ ವಿಜಯಪುರದ ಬಸವಕಲ್ಯಾಣ ಮಠಕ್ಕೆ ಮಠಾಧೀಶ್ವರರಾಗಿ ಬಂದು ಭಕ್ತರನ್ನು ಸಂಘಟಿಸಿ ಸಂಘಟನಾತ್ಮಕ ಸಮಾಜವನ್ನು ರೂಪಿಸಿದರು. ಸಮಷ್ಟಿಸಮಾಜದ ಏಳಿಗೆಗೆ ಮಠವು ಮುಂದಾಳುತ್ವ ವಹಿಸುವಂತೆ ಮಾಡಿದರು. ಗುರುಗಳು ಬಂದ ಮೇಲೆ ಮಠದಲ್ಲಿ ಧಾರ್ಮಿಕ ಕಾರ್ಯಗಳು ಚುರುಕುಗೊಂಡವು. ಜತೆಗೆ ಅನ್ನ ದಾಸೋಹ ವ್ಯವಸ್ಥೆಗೊಂಡಿತು. ಈ ರೀತಿ ಒಂದೊಂದೇ ಕೆಲಸಗಳು ಅನುಷ್ಠಾನಗೊಳ್ಳತೊಡಗಿ ಮಠವು ಸಮರ್ಪಕವಾಗಿ ರೂಪುಗೊಂಡಿತು. ಗುರುಗಳು ಮಠದಕಟ್ಟಡವನ್ನು ವಿಸ್ತಾರಗೊಳಿಸಿದರು. ಹಳೆಯ ಕಟ್ಟಡದ ಪಕ್ಕದಲ್ಲೇ ನೂತನವಾಗಿ ಸುಸಜ್ಜಿತ ಕಟ್ಟಡವನ್ನು ನಿರ್ಮಿಸಿದ್ದಾರೆ. ಜತೆಗೆ ಶೈಕ್ಷಣಿಕವಾಗಿ ಪ್ರಗತಿಯನ್ನು ಸಾಧಿಸುವ ಸಲುವಾಗಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಬೆಳೆಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಪ್ರತಿ ಹುಣ್ಣಿಮೆಯಲ್ಲಿ ಉಪನ್ಯಾಸವನ್ನು ನೀಡಿ ಭಕ್ತರಲ್ಲಿ ಧಾರ್ಮಿಕ ಪ್ರಜ್ಞೆ ಬೆಳೆಯುವಂತೆ ಮಾಡಿದ್ದಾರೆ. ಮಠ ಸ್ಥಾಪನೆಗೆ ಮೊದಲು ಪ್ರತಿಷ್ಠಾಪಿಸಲ್ಪಟ್ಟ ಬಸವೇಶ್ವರ ಮತ್ತು ನವಗ್ರಹ ಮೂರ್ತಿಗಳಿಗೆ ಪೂಜೆ ನಡೆಸಲಾಗುತ್ತಿದೆ. ಭಕ್ತರ ಆಹ್ವಾನದಂತೆ ಅವರ ಮನೆಗಳಿಗೆ ಹೋಗಿ ಧಾರ್ಮಿಕ ಕ್ರಿಯಾದಿಗಳನ್ನು ನೆರವೇರಿಸುತ್ತಾ ವಿಜಯಪುರದ ವೀರಶೈವರ ಮಾರ್ಗದರ್ಶಕರಾಗಿದ್ದಾರೆ. ಧಾರ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕವಾಗಿ ಹೆಸರು ಪಡೆದ ಮಹಾದೇವ ಸ್ವಾಮಿಗಳು ಬಸವಾದಿ ಶಿವಶರಣರತತ್ತ್ವಗಳ ಆಧಾರದ ಮೇಲೆ ಸಮಾಜವನ್ನು ರೂಪಿಸತೊಡಗಿದ್ದಾರೆ.

ವಿಳಾಸ: ಶ್ರೀಮ.ನಿ.ಪ್ರ. ಮಹಾದೇವ ಸ್ವಾಮಿಗಳು, ಶ್ರೀ ಬಸವಕಲ್ಯಾಣಮಠ, ವಿಜಯಪುರ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

❑

ನೆಲಮಂಗಲ ತಾಲ್ಲೂಕು

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕು ಬೆಂಗಳೂರಿಗೆ ಸಮೀಪದಲ್ಲಿದೆ. ಈ ತಾಲ್ಲೂಕು ಐತಿಹಾಸಿಕ ಹಾಗೂ ಧಾರ್ಮಿಕವಾಗಿ ಪ್ರಸಿದ್ಧಿ ಪಡೆದಿದೆ. ಇಲ್ಲಿನ ಶಿವಗಂಗೆ ಕ್ಷೇತ್ರ ದಕ್ಷಿಣದ ಕಾಶಿ ಎಂದು ಹೆಸರು ಗಳಿಸಿದೆ. ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆದಿದೆ. ಈವರೆಗೆ ಸುಮಾರು ನೂರಹತ್ತು ಮಠಗಳು ಸ್ಥಾಪನೆಯಾಗಿದ್ದ ವೆಂದು ಹೇಳಲಾಗುತ್ತದೆ. ಪ್ರಸ್ತುತ ಹತ್ತು ಮಠಗಳನ್ನು ಗುರುತಿಸಬಹುದಾಗಿದೆ.

ತ್ಯಾಮಗೊಂಡಲು

ನೆಲಮಂಗಲ ತಾಲ್ಲೂಕಿನ ತ್ಯಾಮಗೊಂಡಲು ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಮೂವತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಕಾಲುವೆಮಠವು ಅಸ್ತಿತ್ವದಲ್ಲಿದೆ.

ಕಾಲುವೆಮಠ: ತ್ಯಾಮಗೊಂಡಲು ಗ್ರಾಮದಲ್ಲಿ ಮುರುಘಾ ಸಮಯದ ವಿರಕ್ತಸಂಪ್ರದಾಯದ ಶ್ರೀ ಕಾಲುವೆಮಠವು ಸ್ಥಾಪನೆಯಾಗಿದೆ. ಈ ಮಠವು ಕನಕಪುರ ತಾಲ್ಲೂಕಿನ ಮರಳೆಗವಿಮಠದ ಶಾಖಾಮಠವಾಗಿದೆ. ಮಠದ ಮುಂಭಾಗದಲ್ಲಿ ನೀರಾವರಿಯ ಕಾಲುವೆ ಇರುವುದರಿಂದ ರೂಢಿಗತವಾಗಿ 'ಕಾಲುವೆ ಮಠ' ಎಂದು ಹೆಸರು ಬಂದಿದೆ.

ಮಠ ಸ್ಥಾಪನೆ: ಮುನ್ನೂರು ವರ್ಷಗಳ ಹಿಂದೆ ಶ್ರೀ ಶಿವರುದ್ರ ಸ್ವಾಮಿಗಳೆಂಬ ಶರಣರು ಈ ಮಠವನ್ನು ಸ್ಥಾಪನೆ ಮಾಡಿದ್ದಾರೆ ಎಂದು ಹೇಳಲಾಗುತ್ತಿದೆ. ಶ್ರೀ ಶಿವರುದ್ರ ಸ್ವಾಮಿಗಳು ದಕ್ಷಿಣದ ಕಡೆಯಿಂದ ಬಂದವರು ಎಡೆಯೂರು ಶ್ರೀ ಸಿದ್ಧಲಿಂಗ ಯತಿಗಳ ಪ್ರಭಾವಕ್ಕೆ ಒಳಗಾಗಿ, ಲೋಕಸಂಚಾರ ಮಾಡುತ್ತಾ ವೀರಶೈವ ಧರ್ಮವನ್ನು ಪ್ರಚಾರಪಡಿಸಿ ತ್ಯಾಮಗೊಂಡಲು ಗ್ರಾಮದ ಈ ಪ್ರಶಾಂತ ಸ್ಥಳದಲ್ಲಿ ನೆಲೆಸುತ್ತಾರೆ. ಧರ್ಮವನ್ನು ಪ್ರಚಾರಪಡಿಸುವ ದೃಷ್ಟಿಯಿಂದ ತಮ್ಮ ಜೀವಿತದ ಕೊನೆಯ ದಿನಗಳಲ್ಲಿ ಮಠವನ್ನು ಸ್ಥಾಪಿಸಿ ಧರ್ಮವನ್ನು ನೆಲೆಗೊಳಿಸಿದ್ದಾರೆ.

ಖಾಲಿ ಉಳಿದ ಮಠ: ಶ್ರೀ ಶಿವರುದ್ರ ಸ್ವಾಮಿಗಳು ತಮ್ಮ ಜೀವಿತಾವಧಿಯಲ್ಲಿ ತಮ್ಮ ಉತ್ತರಾಧಿಕಾರಿಗಳನ್ನು ಆಯ್ಕೆಮಾಡಿಕೊಳ್ಳದೆ ಲಿಂಗೈಕ್ಯರಾದ ಕಾರಣ ಮಠವು ಖಾಲಿ ಉಳಿಯಿತು. ಊರಿನ ಭಕ್ತರು ಲಿಂಗೈಕ್ಯ ಗುರುಗಳ ಸಮಾಧಿಯನ್ನು ಮಠದ ಆವರಣದಲ್ಲಿ ನಿರ್ಮಿಸಿ ಗದ್ದುಗೆಯನ್ನು ಮಾಡಿ ನಿತ್ಯ ಪೂಜೆಯನ್ನು ಮಾಡಿಕೊಂಡು ಬರತೊಡಗಿದ ಕಾರಣಕ್ಕೆ ಈ ಮಠದ ಅಸ್ತಿತ್ವ ಈತನಕ ಉಳಿಯಲು ಸಾಧ್ಯವಾಗಿದೆ. ಖಾಲಿ ಉಳಿದ ಮಠದಲ್ಲಿ ಗದ್ದುಗೆ ಪೂಜೆಯೊಂದನ್ನು ಬಿಟ್ಟರೆ ಧಾರ್ಮಿಕ ಕಾರ್ಯಗಳು ಸ್ಥಗಿತ ಗೊಂಡವು. ಮಠದ ಕಟ್ಟಡ ಅನೈತಿಕ ಚಟುವಟಿಕೆಗಳ ಕೇಂದ್ರವಾಗತೊಡಗಿತು. ಇದನ್ನು ಗಮನಿಸಿದ ಭಕ್ತರು ಮಠದ ಆಡಳಿತವನ್ನು ನೋಡಿಕೊಳ್ಳಲು ಇಲ್ಲಿಗೆ ಸಮೀಪದ ದೊಡ್ಡಬೆಲೆ ಗ್ರಾಮದ ದೊಡ್ಡಮಠದ ಶ್ರೀ ರುದ್ರಮುನಿ ಸ್ವಾಮಿಗಳಿಗೆ ವಹಿಸಿಕೊಡುತ್ತಾರೆ.

ದೂರ ಸರಿದ ಕತ್ತಲೆ: ಕಳೆದ ನೂರಾರು ವರ್ಷಗಳಿಂದ ಮಠಾಧೀಶ್ವರರು ಇಲ್ಲದೆ ಖಾಲಿ ಉಳಿದಿದ್ದ ಮಠದ ಜಾಗದಲ್ಲಿ ಲಂಟಾನ ಗಿಡಗಳು ಬೆಳೆದು ನಿಂತಿದ್ದವು. ಮಠದ ಕಟ್ಟಡ ಶಿಥಿಲಗೊಂಡು ವಾಸಕ್ಕೆ ಯೋಗ್ಯವಾಗಿರಲಿಲ್ಲ. ಇದನ್ನೆಲ್ಲಾ ನೋಡಿದ ಶ್ರೀ ರುದ್ರಮುನಿ ಸ್ವಾಮಿಗಳು ವೀರಶೈವ ಧರ್ಮಾಚರಣೆಗಳು ಮರೆಯಾಗುತ್ತಿರುವ ಈ ಸಂದರ್ಭದಲ್ಲಿ ಈ ಜಾಗದಲ್ಲಿ ಇರುವ ಈ ಒಂದು ಮಠದ ಅಸ್ತಿತ್ವವು ನಶಿಸಿಹೋದರೆ ಧಾರ್ಮಿಕ ಕ್ರಿಯಾದಿಗಳಿಗೆ ಮತ್ತು ಧರ್ಮ ಬೋಧನೆಗೆ ಧರ್ಮದ ಕೇಂದ್ರವೇ ಇಲ್ಲದಾಗುತ್ತದೆ ಎಂಬ ದೂರಾಲೋಚನೆಯನ್ನು ಇಟ್ಟುಕೊಂಡು ಮಠದ ಜವಾಬ್ದಾರಿಯನ್ನು ತೆಗೆದುಕೊಂಡರು. ಮಠದ ಕಟ್ಟಡದ ಸುತ್ತಾ ಇದ್ದ ಕಳೆ ಮತ್ತು ಕೊಳೆಯನ್ನು ತೆಗೆಯಲು ಮುಂದಾದರು. ಕಾಯಕಯೋಗಿಯಾದ ಶ್ರೀರುದ್ರಮುನಿ ಸ್ವಾಮಿಗಳ ಕರ್ತೃತ್ವ ಶಕ್ತಿಯಿಂದ ಮಠದಲ್ಲಿ ಕವಿದಿದ್ದ ಕತ್ತಲು ದೂರ ಸರಿಯಿತು. ಬೆಳಕು ಮೂಡಿ ಮಠವು ಹಂತಹಂತವಾಗಿ ಮೊದಲ ರೂಪುಪಡೆಯಿತು.

ಅಭಿವೃದ್ಧಿ ಕಾರ್ಯಗಳು: ಶ್ರೀ ರುದ್ರಮುನಿಸ್ವಾಮಿಗಳು ಶಿಥಿಲಗೊಂಡ ಮಠದ ಕಟ್ಟಡವನ್ನು ಪೂರ್ಣ ತೆಗೆಸಿದರು. ಕಲ್ಲುಕಟ್ಟಡ

ವನ್ನು ಕಟ್ಟಿಸಿ ಚಾವಣಿಗೂ ಕಲ್ಲು ಚಪ್ಪಡಿಗಳನ್ನೇ ಹಾಕಿ ಸುಭದ್ರವಾಗಿ ನಿರ್ಮಿಸಿದರು. ಮಠದ ಆವರಣದಲ್ಲಿದ್ದ ಕರ್ತೃಗುರುಗಳ ಗದ್ದುಗೆಯನ್ನು ನವೀಕರಿಸಿ ಮಂಟಪವನ್ನು ನಿರ್ಮಿಸಿದರು. ಮಠದ ಸುತ್ತ ಇದ್ದ ಜಾಗದಲ್ಲಿ ಸಣ್ಣಮನೆಗಳನ್ನು ನಿರ್ಮಿಸಿ ಬಾಡಿಗೆಗೆ ಕೊಟ್ಟಿದ್ದು ಆದಾಯವಿಲ್ಲದ ಮಠಕ್ಕೆ ಅಲ್ಪಸ್ವಲ್ಪ ಆದಾಯ ಬರುವಂತಾಯಿತು. ಮಠದ ಆಸ್ತಿ ಅನ್ಯರ ಪಾಲಾಗ ಬಾರದು ಎಂಬ ಕಾರಣಕ್ಕೆ ಮಠದ ಸುತ್ತ ಇರುವ ಜಾಗವನ್ನು ಒಳಗೊಂಡಂತೆ ಆವರಣ ನಿರ್ಮಿಸಿದರು. ಈ ಅಭಿವೃದ್ಧಿ ಕಾರ್ಯಕೈಗೊಂಡ ಕೆಲವೇ ವರ್ಷಗಳಲ್ಲಿ ಮಠವು ತನ್ನ ಅಸ್ತಿತ್ವದ ಮರುಹುಟ್ಟು ಪಡೆಯುವ ಮೂಲಕ ಇಂದು ಗುರುತಿಸು ವಂತಾಗಿದೆ. ಮಠಕ್ಕೆ ಇರುವ ಒಂಬತ್ತು ಎಕರೆ ಜಮೀನನ್ನು ಅಭಿವೃದ್ಧಿಪಡಿಸಬೇಕಾಗಿದೆ.

ಧಾರ್ಮಿಕ ಆಚರಣೆ: ವೀರಶೈವ ಧರ್ಮವನ್ನು ಆಚರಣೆ ಮಾಡುವ ಬಗ್ಗೆ ಭಕ್ತರಲ್ಲಿ ತಿಳುವಳಿಕೆ ನೀಡುವುದು ಮತ್ತು ಭಕ್ತರ ಧಾರ್ಮಿಕ ಕ್ರಿಯಾದಿಗಳಲ್ಲಿ ನೆರವಾಗಿ ಆಶೀರ್ವದಿಸುವುದು ಮಠದ ಒಂದು ಅಂಗವಾಗಿದೆ. ಜತೆಗೆ ಮಠದ ಕರ್ತೃ ಗದ್ದುಗೆಗೆ ಪೂಜೆ ನಡೆಸಲಾಗುತ್ತಿದೆ. ಅಮಾವಾಸ್ಯೆ ಮತ್ತು ಹುಣ್ಣಿಮೆಗಳಲ್ಲಿ ಕರ್ತೃ ಗದ್ದುಗೆಗೆ ರುದ್ರಾಭಿಷೇಕ ಪೂಜೆಯನ್ನು ಮಾಡಲಾಗು ತ್ತಿದೆ. ವರ್ಷಕ್ಕೆ ಒಮ್ಮೆ ಕರ್ತೃಗುರುಗಳ ಆರಾಧನೆಯನ್ನು ಮಾಡಲಾಗುತ್ತಿದೆ.

ಸಾಮಾಜಿಕ ಕಾರ್ಯಗಳು: ಧಾರ್ಮಿಕವಾಗಿ ಭಕ್ತರನ್ನು ಸರಿದಾರಿಗೆ ತಂದರೆ ಮಠಗಳು ಸಾಮಾಜಿಕ ಕೊಡುಗೆಯನ್ನು ಬಹುತೇಕ ನೀಡಿದಂತೆ. ಇದರ ಜತೆಗೆ ಈ ಮಠವು ಮಠದ ಆಸ್ತಿಯನ್ನು ನಿವೇಶನಮಾಡಿ ಮಾರಾಟ ಮಾಡಿದ್ದರೆ ಹೆಚ್ಚು ಲಾಭ ಬರುತ್ತಿತ್ತು. ಆದರೆ ಬಡವರನ್ನು ಗುರುತಿಸಿ ಎಂಟು ನಿವೇಶನಗಳನ್ನು ನೀಡಲಾಯಿತು. ಇಂತಹ ಸಾಮಾಜಿಕ ಕಳಕಳಿಯನ್ನು ಇಟ್ಟುಕೊಂಡು ಶ್ರೀ ರುದ್ರಮುನಿ ಸ್ವಾಮಿಗಳು ಮಠವನ್ನು ಮುನ್ನಡೆಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ರುದ್ರಮುನಿ ಸ್ವಾಮಿಗಳು, ಶ್ರೀ ಕಾಲುವೆಮಠ, ತ್ಯಾಮಗೊಂಡಲು, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ದೊಡ್ಡಬೆಲೆ

ನೆಲಮಂಗಲ ತಾಲ್ಲೂಕಿನ ದೊಡ್ಡಬೆಲೆಯು ತಾಲ್ಲೂಕು ಕೇಂದ್ರ ಸ್ಥಾನದ ವಾಯುವ್ಯಕ್ಕೆ ಇದೆ. ಇಲ್ಲಿ ವಿರಕ್ತ ಸಂಪ್ರದಾ ಯದ ಮಠವು ಗ್ರಾಮದ ಹೊರಗೆ ಪಶ್ಚಿಮದಿಕ್ಕಿನಲ್ಲಿ ಅಸ್ತಿತ್ವದಲ್ಲಿದೆ.

ದೊಡ್ಡಮಠ: ದೊಡ್ಡಬೆಲೆ ಗ್ರಾಮದಲ್ಲಿ ಸುಮಾರು ಮುನ್ನೂರು ವರ್ಷಗಳ ಶ್ರೀ ರುದ್ರಮುನಿ ಸ್ವಾಮಿಗಳು ಇಲ್ಲಿ ನೆಲೆಸಿ ದೊಡ್ಡಮಠವನ್ನು ಸ್ಥಾಪಿಸಿದ್ದಾರೆ. ಅಂದಿನಿಂದ ಇಂದಿನ ತನಕ ಮಠದಲ್ಲಿ ಧಾರ್ಮಿಕ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಾ ಬಂದಿವೆ. ಎಡೆಯೂರು ಶ್ರೀ ಸಿದ್ಧಲಿಂಗಯತಿಗಳ ಪ್ರಭಾವದಲ್ಲಿ ಬೆಳೆದ ಮಠ ಇದಾಗಿದ್ದು, ಬಸವಾದಿ ಶರಣರ ನೂರೊಂದು ಸ್ಥಲಗಳ ಬಗ್ಗೆ ಭಕ್ತರಲ್ಲಿ ಪ್ರಜ್ಞೆ ಮೂಡಿಸಿ ಲಿಂಗಪೂಜೆ, ವಿಭೂತಿ ಧಾರಣೆಯಂತಹ ಪ್ರಮುಖ ಆಚಾರಗಳನ್ನು ಅನುಸರಿಸಲು ವೀರಶೈವರನ್ನು ಎಚ್ಚರಿಸಿ ಧರ್ಮವನ್ನು ಬೆಳೆಸಿದ್ದಾರೆ.

ಒಂದೇ ಹೆಸರಿನ ಪರಂಪರೆ: ದೊಡ್ಡ ಮಠದ ಪರಂಪರಯಲ್ಲಿ ಕರ್ತೃ ಗುರುಗಳಾದ ಶ್ರೀ ರುದ್ರಮುನಿ ಸ್ವಾಮಿಗಳ ಹೆಸರನ್ನೇ ಮುಂದಿನ ಎಲ್ಲಾ ಗುರುಗಳಿಗೂ ಪಟ್ಟಾಧಿಕಾರದ ಸಂದರ್ಭದಲ್ಲಿ ಅಭಿದಾನ ಮಾಡಿ ಅಧಿಕಾರಕ್ಕೆ ತರಲಾಗಿರುವುದರಿಂದ ಮಠದಲ್ಲಿ ಗುರುಗಳ ಹೆಸರನ್ನು ಪತ್ತೆಮಾಡಲು ಕಷ್ಟವಾಗಿದೆ. ಮಠದ ಆವರಣದಲ್ಲಿ ಮೂರು ಗದ್ದುಗೆಗಳು ಇದ್ದು ತುಮಕೂರು ಜಿಲ್ಲೆಯ ತಮ್ಮಡಿಹಳ್ಳಿಯಲ್ಲಿ ಈ ಮಠದ ಪರಂಪರೆಯ ಒಬ್ಬರು ಗುರುಗಳ ಗದ್ದುಗೆ ನಿರ್ಮಾಣವಾಗಿದೆ. ಮಠದ ಪರಂಪರೆ ಯಲ್ಲಿ ಐದು ಜನ ಸ್ವಾಮಿಗಳು ಪಟ್ಟಾಧಿಕಾರ ಪಡೆದಿರುತ್ತಾರೆ ಎಂದು ಹೇಳಲಾಗುತ್ತಿದೆ. ಆದರೆ ದಾಖಲೆಗಳು ಲಭ್ಯವಿಲ್ಲ.

ಅಭಿವೃದ್ಧಿ ಕಾರ್ಯಗಳು: ಪ್ರಸ್ತುತ ಅಧಿಕಾರದಲ್ಲಿರುವ ಶ್ರೀ ರುದ್ರಮುನಿ ಸ್ವಾಮಿಗಳು ಈ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡು ಮಠದ ಮಣ್ಣಿನ ಕಟ್ಟಡವನ್ನು ತೆಗೆಸಿ ಕಲ್ಲಿನಿಂದ ಕಟ್ಟಡವನ್ನು ನಿರ್ಮಿಸಿದ್ದಾರೆ. ಮೂರು ಗ್ರಾಮಗಳಲ್ಲಿ ಮಠದ ಆಸ್ತಿ ಇತ್ತು. ಆದರೆ ಹಿಂದಿನ ಗುರುಗಳು ಸರಿಯಾಗಿ ನಿರ್ವಹಿಸದೆ ಸರ್ಕಾರದ ಭೂಕಾಯಿದೆಯ ಅನ್ವಯ ಇದ್ದ ಆಸ್ತಿಯೆಲ್ಲಾ

ಹೋಯಿತು. ಆದರೆ ದೊಡ್ಡಬೆಲೆಯಲ್ಲಿ ಎಂಟುಎಕರೆ ಹೊಲ, ಎರಡು ಎಕರೆ ಗದ್ದೆ ಇದೆ. ಇದನ್ನು ಮಠದ ವತಿಯಿಂದ ಹಸನು ಮಾಡಿಸಲಾಗುತ್ತಿದ್ದು ಮಠಕ್ಕೆ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಶ್ರೀ ರುದ್ರಮುನಿ ಸ್ವಾಮಿಗಳು ತ್ಯಾಮಗೊಂಡಲು ಗ್ರಾಮದ ಕಾಲುವೆ ಮಠದ ಜವಾಬ್ದಾರಿಯನ್ನೂ ವಹಿಸಿಕೊಂಡು ಎರಡು ಮಠಗಳನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಮಠದಲ್ಲಿ ಇರುವ ಮೂರು ಗದ್ದುಗೆಗಳಿಗೆ ದಿನನಿತ್ಯ ಪೂಜೆಗೆ ವ್ಯವಸ್ಥೆ ಮಾಡಲಾಗಿದೆ. ಪ್ರತಿ ಅಮಾವಾಸ್ಯೆಯಲ್ಲಿ ವಿಶೇಷ ಪೂಜೆಯನ್ನು ಏರ್ಪಡಿಸಲಾಗುತ್ತಿದೆ. ವರ್ಷಕ್ಕೊಮ್ಮೆ ಹಿರಿಯ ಗುರುಗಳ ಆರಾಧನೆಯನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಶ್ರೀ ರುದ್ರಮುನಿ ಸ್ವಾಮಿಗಳು, ಶ್ರೀ ದೊಡ್ಡಮಠ, ದೊಡ್ಡಬೆಲೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ನೆಲಮಂಗಲ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕು ಕೇಂದ್ರ ಸ್ಥಳವಾಗಿ ಬೆಳೆದಿದೆ. ಈ ಪಟ್ಟಣದಲ್ಲಿ ಶ್ರೀಪವಾಡ ಬಸವಣ್ಣದೇವರಮಠ, ಶ್ರೀ ಹೊಸಮಠ, ಶ್ರೀ ಚೌಕಿಮಠ, ಶ್ರೀ ಮಹಾಂತಿನಮಠಗಳು ಅಸ್ತಿತ್ವದಲ್ಲಿವೆ.

ಪವಾಡ ಬಸವಣ್ಣದೇವರಮಠ: ನೆಲಮಂಗಲ ಪಟ್ಟಣದಲ್ಲಿ ಸ್ಥಾಪನೆಯಾಗಿರುವ ಶ್ರೀ ಪವಾಡ ಬಸವಣ್ಣದೇವರಮಠವು ಈ ಭಾಗದಲ್ಲಿ ಧಾರ್ಮಿಕ ಚಟುವಟಿಕೆಗಳು ಕ್ರಿಯಾತ್ಮಕವಾಗಿ ನಡೆಯುವಂತೆ ಮಾಡಿದೆ. ನೆಲಮಂಗಲದಲ್ಲಿ ವೀರಶೈವರಿಗೆ ಧಾರ್ಮಿಕ ಕೇಂದ್ರಬಿಂದುವಾಗಿ ಬೆಳೆದಿದೆ.

ಮಠ ಸ್ಥಾಪನೆ: ಹದಿನೈದನೆಯ ಶತಮಾನದಲ್ಲಿ ವೀರಶೈವ ತತ್ತ್ವಗಳನ್ನು ಪ್ರಚಾರ ಮಾಡಲು, ಬಸವಾದಿ ಶರಣರ ವಿಚಾರ ಧಾರೆಗಳನ್ನು ಜನರಿಗೆ ಮುಟ್ಟಿಸಲು ನಡೆದ ಎಡೆಯೂರು ಶ್ರೀ ಸಿದ್ದಲಿಂಗೇಶ್ವರರ ಧಾರ್ಮಿಕ ಆಂದೋಲನದ ಸಂದರ್ಭದಲ್ಲಿ ನೆಲಮಂಗಲದಲ್ಲಿ ಈ ಮಠವು ಸ್ಥಾಪನೆಯಾಗಿದೆ. ಶ್ರೀ ಸಿದ್ಧಲಿಂಗೇಶ್ವರರ ೭೦೧ ಜನ ಶಿಷ್ಯರಲ್ಲಿ ಪವಾಡ ಬಸವಣ್ಣದೇವರು ಒಬ್ಬರು. ಇವರು ಶ್ರೀ ಸಿದ್ಧಲಿಂಗೇಶ್ವರರಿಂದ ಅನುಗ್ರಹ ಪಡೆದು ಮಠವನ್ನು ಸ್ಥಾಪನೆಮಾಡಿ, ಮೊದಲ ಗುರುಗಳಾಗಿ ನೆಲೆಗೊಳ್ಳುತ್ತಾರೆ. ಪವಾಡ ಬಸವಣ್ಣದೇವರು ಮಠವನ್ನು ಸ್ಥಾಪಿಸಿ ಮೊದಲ ಗುರುಗಳಾದ ಕಾರಣ ಈ ಮಠಕ್ಕೆ ಪವಾಡ 'ಬಸವಣ್ಣದೇವರಮಠ' ಎಂಬ ಹೆಸರೇ ಬಂದಿದೆ.

ಮಠವನ್ನು ಸ್ಥಾಪಿಸಿ ಅಧಿಕಾರವನ್ನು ವಹಿಸಿಕೊಂಡ ಮೇಲೆ ಬಸವಣ್ಣದೇವರು ಧರ್ಮಪ್ರಚಾರ ಮತ್ತು ತ್ರಿವಿಧದಾಸೋಹವನ್ನು ಪವಾಡ ಸದೃಶವಾಗಿ ಮಾಡಿ ನಾಡಿಗೆಲ್ಲಾ ಹೆಸರಾದರು. ವೀರಶೈವ ಸಿದ್ಧಾಂತಗಳಾದ ಅಷ್ಟಾವರಣ ಮತ್ತು ಪಂಚಾಚಾರಗಳನ್ನು ಆಚರಣೆ ಮಾಡುವ ವಿಧಿವಿಧಾನಗಳ ಬಗ್ಗೆ ಭಕ್ತರಿಗೆ ಹೇಳಿ ಅನೇಕರನ್ನು ವೀರಶೈವ ಧರ್ಮಕ್ಕೆ ಆಕರ್ಷಿಸಿಕೊಂಡು ಲಿಂಗದೀಕ್ಷೆ ಕೊಟ್ಟು, ವೀರಶೈವ ಧರ್ಮವು ಬೆಳೆಯುವಂತೆ ಮಾಡಿದ್ದಾರೆ. ಅಲ್ಲದೆ ಮಠದ ಪರಂಪರೆಯನ್ನೂ ಬೆಳೆಸಿದ್ದಾರೆ.

ಪರಂಪರೆ:

೧. ಶ್ರೀ ಮನಿ.ಪ್ರ. ಬಸವಣ್ಣ ದೇವರು
೨. ಶ್ರೀ ಮ.ನಿ.ಪ್ರ. ಮರುಳಸಿದ್ಧಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಗುರುಸಿದ್ಧಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಇಮ್ಮಡಿ ಮರುಳಸಿದ್ಧಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಸದಾಶಿವಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯು ಬೆಳೆಯಲು ಶ್ರೀ ಬಸವಣ್ಣದೇವರು ಪ್ರಾರಂಭದಲ್ಲಿ ಭದ್ರ ಬುನಾದಿಯನ್ನು ಹಾಕಿದ್ದಾರೆ. ಇವರ ನಂತರ ಅನೇಕ ಗುರುಗಳು ಅಧಿಕಾರವನ್ನು ನಡೆಸಿದ್ದಾರೆ. ಈ ಬಗ್ಗೆ ಮಠದಲ್ಲಿ ದಾಖಲೆಗಳು ಇಲ್ಲದ ಕಾರಣ ಮಠದ ಪೂರ್ವ ಇತಿಹಾಸವು ಲಭ್ಯವಾಗಿಲ್ಲ. ಶ್ರೀ ಬಸವಣ್ಣದೇವರ ನಂತರ ಇತ್ತೀಚೆಗೆ ಅಧಿಕಾರ ನಡೆಸಿದ್ದ ಹಾಗೂ ನಡೆಸುತ್ತಿರುವ

ಗುರುಗಳ ತನಕ ಮಾತ್ರ ದಾಖಲಿಸಬಹುದಾಗಿದೆ. ಶ್ರೀ ಮರುಳಸಿದ್ಧ ಸ್ವಾಮಿಗಳು ಸಮರ್ಥ ಧರ್ಮಾಧಿಕಾರಿಗಳಾಗಿ ಮಠದ ಧಾರ್ಮಿಕ ಚಟುವಟಿಕೆಗಳನ್ನು ನಡೆಸಿದರು. ಶಿವ ಪೂಜಾನಿಷ್ಠರಾಗಿ, ಧಾರ್ಮಿಕ ನೆಲೆಗಟ್ಟಿನ ಮೇಲೆ ಬೆಳೆದ ಗುರುಗಳು ಮಠಕ್ಕೆ ಹೆಚ್ಚು ಜನರನ್ನು ಆಕರ್ಷಿಸಿಕೊಂಡಿದ್ದಾರೆ. ಧಾರ್ಮಿಕ ವಿಚಾರಗಳ ಬಗ್ಗೆ ಆಳವಾದ ಅಧ್ಯಯನ ನಡೆಸಿ ಧರ್ಮದ ಬಗ್ಗೆ ಸಮರ್ಥವಾಗಿ ಮಾತನಾಡಬಲ್ಲಂತಹ ಮೇಧಾವಿಗಳಾಗಿದ್ದರು ಎಂದು ಹೇಳಲಾಗುವ ಇವರ ಪವಾಡಗಳಿಂದ ಹೆಚ್ಚು ಜನರು ಆಕರ್ಷಿತಗೊಂಡಿದ್ದರು.

ಒಮ್ಮೆ ಮಠದ ಮುಂದಿದ್ದ ಕಲ್ಯಾಣಿಯ ಹತ್ತಿರ ಅನೇಕ ಮಕ್ಕಳು ಆಟವಾಡುತ್ತಿದ್ದರು. ಅವರಲ್ಲಿ ಹುಡುಗನೊಬ್ಬನು ಕಲ್ಯಾಣಿಗೆ ಬಿದ್ದು ಮುಳುಗಿ ಮೃತನಾಗಿದ್ದನು. ಆಟವಾಡುತ್ತಿದ್ದ ಮಕ್ಕಳು ಇದನ್ನು ಗಮನಿಸದೆ ಹೋದರು. ಬಾಲಕನು ಎಷ್ಟು ಹೊತ್ತಾದರೂ ಮನೆಗೆ ಬಾರದಿದ್ದಾಗ ಸಹಪಾಠಿಗಳನ್ನು ವಿಚಾರಿಸಿದ ತಂದೆತಾಯಿಗಳು ಕಲ್ಯಾಣಿಯ ಹತ್ತಿರ ಇದ್ದ ವಿಚಾರವನ್ನು ತಿಳಿದುಕೊಂಡು, ಅಲ್ಲಿಗೆ ಬಂದು ನೀರಲ್ಲಿ ಮುಳುಗಿದ್ದ ಮಗನ ಮೃತಶರೀರವನ್ನು ಹೊರತೆಗೆದು ಗೋಳಾಡತೊಡಗಿದರು. ಶ್ರೀ ಮರುಳಸಿದ್ಧ ಸ್ವಾಮಿಗಳು ಅದೇ ತಾನೆ ಪೂಜೆಯಿಂದ ಮೇಲೆದ್ದು ಈ ಗೋಳಾಟ ಏನೆಂದು ನೋಡಲು ಹತ್ತಿರ ಬಂದು ನೋಡಿ ಮೃತವಾದ ಮಗುವಿನ ಶರೀರವನ್ನು ಮಠದ ಜಗುಲಿಯ ಮೇಲೆ ಹಾಕಿಸಿ ವಿಭೂತಿ ಧಾರಣೆ ಮಾಡಿದರು. ಗುರುಗಳ ಸ್ಪರ್ಶದಿಂದ ಹುಡುಗನು ಎಚ್ಚರಗೊಳ್ಳುತ್ತಾನೆ. ಈ ಪವಾಡವನ್ನು ನೋಡಿದ ಜನರು ಗುರುಗಳ ತಪೋಶಕ್ತಿಯನ್ನುಕೊಂಡಾಡಿ ದರು ಎಂಬ ಜನಪದ ಕಥೆಯು ಕೇಳಿ ಬರುತ್ತಿದೆ. ಈ ರೀತಿ ಅನೇಕ ಕಾರ್ಯಗಳಿಂದ ಜನಮನ ಗೆದ್ದ ಶ್ರೀ ಮರುಳಸಿದ್ಧ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಶ್ರೀ ಗುರುಸಿದ್ಧ ಸ್ವಾಮಿಗಳು ಅಧಿಕಾರಕ್ಕೆ ಬಂದರು. ಇವರು ಮಠವನ್ನು ಅಭಿವೃದ್ಧಿಗೆ ತಂದರು.ಇವರ ನಂತರ ಬಂದ ಶ್ರೀ ಇಮ್ಮಡಿ ಮರುಳಸಿದ್ಧ ಸ್ವಾಮಿಗಳು ಮಠದ ಅಭಿವೃದ್ಧಿಗೆ ಗಮನಕೊಡದೆ, ಶಿವಪೂಜಾ ನಿಷ್ಠರಾಗಿ ಲೌಕಿಕ ಜಗತ್ತಿನಿಂದ ದೂರ ಉಳಿದು ಶಿವಪೂಜೆಯಲ್ಲಿಯೇ ಲಿಂಗೈಕ್ಯರಾದರು.

ಖಾಲಿ ಉಳಿದ ಮಠ: ಶ್ರೀ ಇಮ್ಮಡಿ ಮರುಳಸಿದ್ಧ ಸ್ವಾಮಿಗಳ ನಂತರ ಮಠವು ಖಾಲಿ ಉಳಿಯಿತು. ಆಗ ಮಠದ ಭಕ್ತರು 'ಈ ಪಟ್ಟಣದ ಧಾರ್ಮಿಕ ಕೇಂದ್ರಬಿಂದುವಾಗಿ ಬೆಳೆದು ಮಾರ್ಗದರ್ಶನ ನೀಡಿ, ನೈತಿಕ ಬೆಂಬಲ ನೀಡುತ್ತಿದ್ದ ಮಠಕ್ಕೆ ಗುರುಗಳು ಯಾರೂ ಇಲ್ಲದಂತಾಯಿತು. ಜ್ಯೋತಿ ಆರಬಾರದೆಂದು'ಸಿದ್ಧಗಂಗೆ ಮಠದ ಜಂಗಮ ಜ್ಯೋತಿ ಶ್ರೀ ಶಿವಕುಮಾರ ಸ್ವಾಮಿಗಳಲ್ಲಿಗೆ ಬಂದು ಮಠಕ್ಕೆ ಉತ್ತರಾಧಿಕಾರಿಗಳನ್ನು ನೇಮಿಸಿಕೊಡಬೇಕೆಂದು ಬಿನ್ನವಿಸಿಕೊಳ್ಳುತ್ತಾರೆ. ಭಕ್ತರ ಕೋರಿಕೆಯನ್ನು ಈಡೇರಿಸಲು ಶ್ರೀ ಸಿದ್ಧಗಂಗೆಯ ಗುರುಗಳು ಹುಸ್ಕೂರಿನ ಗದ್ದುಗೆಯಲ್ಲಿ ಪೂಜೆಯನ್ನು ಮಾಡಿಕೊಂಡಿದ್ದು ತಮ್ಮ ಭಕ್ತಿಯನ್ನು ಪ್ರದರ್ಶಿಸಿದ್ದ ಶ್ರೀ ಸದಾಶಿವ ಸ್ವಾಮಿಗಳು ಯೋಗ್ಯರೆಂದು ಅರಿತು, ನೆಲಮಂಗಲದ ಪ್ರಾಚೀನ ಮಠಕ್ಕೆ ಉತ್ತರಾಧಿಕಾರಿಗಳನ್ನಾಗಿ ನೇಮಿಸಲು ನಿಶ್ಚಯಿಸಿ, ಶ್ರೀ ಸದಾಶಿವ ಸ್ವಾಮಿಗಳ ಒಪ್ಪಿಗೆಯನ್ನು ಪಡೆದು ನೆಲಮಂಗಲದ ಭಕ್ತರ ಕೈಗೆ ಒಪ್ಪಿಸಿದರು.

ಪಟ್ಟಾಧಿಕಾರ: ಶ್ರೀ ಸದಾಶಿವ ಸ್ವಾಮಿಗಳು ನೆಲಮಂಗಲ ತಾಲ್ಲೂಕಿನ ಹುಸ್ಕೂರು ಗ್ರಾಮದ ಶ್ರೀ ಸಿದ್ಧಪ್ಪ ಮತ್ತು ಶ್ರೀಮತಿ ಸಿದ್ಧಗಂಗಮ್ಮನವರ ಪುತ್ರರಾಗಿ ಜನಿಸಿದರು. ತಮ್ಮ ಎಳನೆಯ ವಯಸ್ಸಿನಲ್ಲಿಯೇ ತಮ್ಮ ತಂದೆ ತಾಯಿಯರನ್ನು ಕಳೆದುಕೊಂಡು ತಬ್ಬಲಿಯಾಗಿ ಶಾಂತಮ್ಮನವರ ಆಶ್ರಯದಲ್ಲಿ ಬೆಳೆದು ಗುರು, ಲಿಂಗ, ಜಂಗಮರಲ್ಲಿ ನಿಷ್ಠೆಯನ್ನು ವ್ಯಕ್ತಪಡಿಸಿ ಬೆಳೆಯತೊಡಗಿ ದ್ದರು. ಶಿವಪೂಜಾನಿಷ್ಠರಾಗಿ ಬೆಳೆಯುತ್ತಿದ್ದ ಅವರು ಬೇಲಿ ಮಠದ ಶ್ರೀ ಸಿದ್ಧಲಿಂಗ ಸ್ವಾಮಿಗಳ ಕೃಪಾಕಟಾಕ್ಷಕ್ಕೆ ಒಳಗಾಗಿ ಧರ್ಮದ ವಾತಾವರಣದಲ್ಲಿ ಬೆಳೆಯುವಂತಾಯಿತು. ಹುಸ್ಕೂರು ಮಠದ ಗದ್ದುಗೆಯ ಪೂಜಾಕಾರ್ಯಗಳಿಗೆ ನೇಮಕಗೊಂಡರು. ಶ್ರೀ ಸದಾಶಿವ ಸ್ವಾಮಿಗಳು ತ್ರಿಕಾಲ ಪೂಜೆಯಿಂದ ಹಾಗೂ ಮಾಡುತ್ತಿದ್ದ ಧಾರ್ಮಿಕ ಕಾರ್ಯಗಳಿಂದ ಗುರು ಸ್ಥಾನವನ್ನು ಪಡೆದು ಜನರಿಂದ ಗೌರವಿಸಲ್ಪಟ್ಟರು. ಕಾಯಕನಿಷ್ಠೆ ಹಾಗೂ ಶಿವಪೂಜಾ ನಿಷ್ಠೆಗಳಿಂದ ನಾಡಿನ ಹಿರಿಕಿರಿಯ ಗುರುಗಳಿಂದ ಗೌರವಿಸಲ್ಪಟ್ಟಿದ್ದರು. ಎಲ್ಲಾ ನೋವು ನಲಿವಿನಿಂದ ಬೆಳೆದ ಶ್ರೀ ಸದಾಶಿವ ಸ್ವಾಮಿಗಳು ೧೯೭೦ರ ಸೆಪ್ಟೆಂಬರ್ ಇಪ್ಪತ್ತೊಂಬತ್ತ ರಂದು ನೆಲಮಂಗಲದ ಪವಾಡ ಬಸವಣ್ಣದೇವರ ಮಠದ ಅಧಿಕಾರವನ್ನು ವಹಿಸಿಕೊಂಡರು.

ಶ್ರೀ ಸದಾಶಿವ ಸ್ವಾಮಿಗಳು ಮಠದ ಆಡಳಿತವನ್ನು ವಹಿಸಿಕೊಂಡ ಸಂದರ್ಭದಲ್ಲಿ ಮಠದ ಸಣ್ಣ ಕಟ್ಟಡ ಮತ್ತು ಮಳೆಯಾಧಾರಿತ ಭೂಮಿಯನ್ನು ಬಿಟ್ಟರೆ ಬೇರೆ ಏನೂ ಇರಲಿಲ್ಲ. ಏನೂ ತೋಚದೆ ಕುಳಿತರು. ಮುಂದೆ ಮಾರ್ಗ ಇದ್ದ

ಮೇಲೆ ನಡೆಯುವುದು ಕಷ್ಟವೆ ಎಂದು ಯೋಚಿಸಿ ಮುಂದೆ ಮಾಡಬೇಕಾದ ಕೆಲಸಗಳ ಬಗ್ಗೆ ಮಾನಸಿಕ ಸಿದ್ಧತೆಯನ್ನು ಮಾಡಿಕೊಳ್ಳತೊಡಗಿದರು. ಮೊದಲು ಮಠದ ಕಟ್ಟಡವನ್ನು ಆವಶ್ಯಕತೆಗೆ ತಕ್ಕಷ್ಟು ವಿಸ್ತರಿಸಿಕೊಂಡು, ದಾಸೋಹಕ್ರಿಯೆಯನ್ನು ಪ್ರಾರಂಭಿಸಿ ಹಂತಹಂತವಾಗಿ ಜನರ ಮನಗೆದ್ದು ಭಕ್ತರನ್ನು ಸಂಘಟಿಸತೊಡಗಿದರು. ಭಕ್ತರ ಸಂಘಟನೆಯಿಂದ ಮಠದಲ್ಲಿ ಒಂದೊಂದೇ ಕಾರ್ಯಗಳು ಬೆಳಕು ಕಾಣುತ್ತಿದ್ದಂತೆ ಶ್ರೀ ಸದಾಶಿವ ಸ್ವಾಮಿಗಳು ಸಮಾಜದಲ್ಲಿ ದೊಡ್ಡ ಶಕ್ತಿಯಾಗಿ ಬೆಳೆದು ಮಠಕ್ಕೆ ಭದ್ರತೆಯನ್ನು ತಂದುಕೊಟ್ಟರು. ಸಮಾಜ ಆರ್ಥಿಕವಾಗಿ ಸದೃಢವಾಗಬೇಕು ಎಂಬ ಹಂಬಲದಿಂದ ದುಡಿಯುವಶಕ್ತಿ ಮತ್ತು ಮನಸ್ಸು ಇರುವ ಭಕ್ತರಿಗೆ ಮಾರ್ಗದರ್ಶನ ನೀಡಿ ದುಡಿಯುವ ಮಾರ್ಗಕ್ಕೆ ಹಚ್ಚಿದರು.ಬಡವ-ಬಲ್ಲಿದ, ದೀನ-ದಲಿತ ಎಂಬ ಭೇದ ತೋರಿಸದೆ ಸಮಷ್ಟಿ ಸಮಾಜದ ಹಿತ ಚಿಂತನೆಗಾಗಿ ಹಂಬಲಿಸಿ ಸಮಾಜದ ಸಂವರ್ಧನೆಗೆ ಪ್ರೇರಕವಾದರು.

ಶಿಕ್ಷಣ ಸೇವೆ: ಶ್ರೀ ಸದಾಶಿವ ಸ್ವಾಮಿಗಳು ಮಠದ ಅಭಿವೃದ್ಧಿ ಮತ್ತು ಸಂಘಟನಾ ಕಾರ್ಯವನ್ನು ಮಾಡಿ ಶೈಕ್ಷಣಿಕ ಸೇವೆಗೆ ಮುಂದಾಗಿ ಪ್ರಥಮವಾಗಿ ಮಹಲಿಂಗೇಶ್ವರ ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಿದರು. ನಂತರ ನರ್ಸರಿ ಮತ್ತು ಪ್ರೈಮರಿ ಶಾಲೆಗಳು, ಅನಾಥ ಮಕ್ಕಳಿಗೆ ವಿದ್ಯಾರ್ಥಿನಿಲಯ, ಹುಸ್ಕೂರಿನಲ್ಲಿ ಶ್ರೀ ಬಸವೇಶ್ವರ ಪಾಠಶಾಲೆ, ಬಸವೇಶ್ವರ ಆಂಗ್ಲ ಪಾಠಶಾಲೆ, ಬಸವೇಶ್ವರ ಮಹಿಳಾ ಪದವಿಪೂರ್ವ ಕಾಲೇಜನ್ನು ಪ್ರಾರಂಭಿಸಿದರು. ಸಿದ್ಧಗಂಗಾ ಶಿಕ್ಷಣ ಸಂಸ್ಥೆ ನಡೆಸುತ್ತಿರುವ ಮಂಜುನಾಥ ಬಾಲಕಿಯರ ಪ್ರೌಢಶಾಲೆ, ಸಿದ್ಧಗಂಗಾ ಕಲಾ ಮತ್ತು ವಾಣಿಜ್ಯ ಕಾಲೇಜುಗಳಿಗೆ ಆಶ್ರಯ ನೀಡಿದ್ದಾರೆ. ಇದಲ್ಲದೆ ನೂತನ ಶಾಲಾ ಕೊಠಡಿಗಳನ್ನು ನಿರ್ಮಿಸಿ ಶಿಕ್ಷಣ ಕ್ಷೇತ್ರದಲ್ಲಿಯೂ ದಾಪುಗಾಲು ಹಾಕತೊಡಗಿದ್ದಾರೆ.

ಸಾಮಾಜಿಕ ಸೇವೆ: ಸಮಷ್ಟಿ ಸಮಾಜದ ಹಿತ ಚಿಂತನೆಗೆ ದುಡಿಯುತ್ತಿರುವ ಶ್ರೀ ಸದಾಶಿವ ಸ್ವಾಮಿಗಳು ರಾಗಿ ಬೆಳೆಯುವ ಬಗ್ಗೆ ತಾಲ್ಲೂಕು ಮಟ್ಟದ ವಿಚಾರ ಸಂಕಿರಣವನ್ನು ೧೯೯೧ರ ಅಕ್ಟೋಬರ್ ಇಪ್ಪತ್ತೆಂಟರಂದು ಮಠದಲ್ಲಿ ಏರ್ಪಡಿಸಿದ್ದರು. ೧೯೯೨ರಲ್ಲಿ ತಾಲ್ಲೂಕು ಮಟ್ಟದ ರೈತ ಮಹಿಳೆಯರ ಸಮ್ಮೇಳನವನ್ನು ಏರ್ಪಡಿಸಿ ಕೆಲವು ಗಂಭೀರ ವಿಚಾರಗಳ ಬಗ್ಗೆ ಚರ್ಚೆ ನಡೆಸಲು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದರು. ಅಖಿಲಭಾರತ ವೀರಶೈವ ಮಹಾ ಸಭೆಯು ೧೯೮೯ರಲ್ಲಿ ಮಠದಲ್ಲೇ ನಡೆಯಲು ಅವಕಾಶವನ್ನು ನೀಡಿದ್ದರು. ಆರ್.ಎಸ್.ಎಸ್.ಸಂಸ್ಥಾಪಕ ಡಾ. ಕೇಶವಬಲಿರಾಮ್ ಹೆಗಡೇವಾರ್‌ರವರ ಜನ್ಮ ಶತಾಬ್ದಿ ಉತ್ಸವವನ್ನು ಮಠದಲ್ಲಿ ೧೯೮೮ರಲ್ಲಿ ಏರ್ಪಡಿಸಿದ್ದರು. ಸಮಾಜದ ಒಳಿತಿಗಾಗಿ ಬಸವ ಕಲ್ಯಾಣ ಮಂಟಪವನ್ನು ಸ್ಥಾಪನೆ ಮಾಡಿ ಸಾರ್ವಜನಿಕರ ಬಳಕೆಗೆ ಬಿಟ್ಟುಕೊಟ್ಟಿದ್ದಾರೆ. ಈ ರೀತಿ ಅನೇಕ ಸಾಮಾಜಿಕ ಕಾರ್ಯಗಳನ್ನು ಹಮ್ಮಿಕೊಂಡು, ಸಮಾಜವನ್ನು ಮುನ್ನಡೆಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಅಕ್ಕನಬಳಗದ ಮೂಲಕ ಪ್ರತಿ ಶುಕ್ರವಾರ ಪ್ರವಚನ ಮತ್ತು ಭಜನೆಯನ್ನು ಮಠದಲ್ಲಿ ಏರ್ಪಡಿಸಲಾಗುತ್ತಿದೆ. ಪ್ರತಿ ಅಮಾವಾಸ್ಯೆಯಲ್ಲಿ ವಿಶೇಷಪೂಜೆ, ಕರ್ತೃಗುರುಗಳ ಗದ್ದುಗೆಗೆ ಪ್ರತಿ ನಿತ್ಯವೂ ರುದ್ರಾಭಿಷೇಕವನ್ನು ನಡೆಸಲಾಗುತ್ತಿದೆ. ಶಿವರಾತ್ರಿಯಲ್ಲಿ ಜಾಗರಣೆ, ಶ್ರಾವಣ ಮತ್ತು ಕಾರ್ತೀಕ ಮಾಸಗಳಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಈ ಎಲ್ಲಾ ದಿನಗಳಲ್ಲಿ ಅನ್ನದಾಸೋಹ ಕಾರ್ಯವು ನಿರಂತರವಾಗಿ ನಡೆಯುತ್ತಿರುತ್ತಿದೆ. ಪ್ರತಿದಿನ ನೂರರಿಂದ ಇನ್ನೂರು ಜನರು, ತಿಂಗಳ ವಿಶೇಷ ಸಂದರ್ಭಗಳಲ್ಲಿ ೫೦೦ ಜನರು ಹಾಗೂ ವಾರ್ಷಿಕ ಸಮಾರಂಭಗಳಲ್ಲಿ ಸಾವಿರಾರು ಜನರು ಪ್ರಸಾದವನ್ನು ಸ್ವೀಕರಿಸುತ್ತಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಸದಾಶಿವ ಸ್ವಾಮಿಗಳು, ಶ್ರೀ ಪವಾಡಬಸವಣ್ಣದೇವರಮಠ,ನೆಲಮಂಗಲ,ಬೆಂಗಳೂರು ಗ್ರಾಮಾಂತರಜಿಲ್ಲೆ.
ಆಧಾರ: 'ಬಸವ ಪ್ರಭೆ' ಸ್ಮರಣ ಸಂಚಿಕೆ

ಹೊಸಮಠ: ನೆಲಮಂಗಲ ಪಟ್ಟಣದಲ್ಲಿ ಅಸ್ತಿತ್ವದಲ್ಲಿರುವ ಹೊಸಮಠವು, ವಿರಕ್ತ ಸಂಪ್ರದಾಯದ ಕೆಂಪಿನಸಮಯಕ್ಕೆ ಸೇರಿದೆ. ಈ ಮಠವು ಎಡೆಯೂರು ಸಿದ್ಧಲಿಂಗೇಶ್ವರರ ಧಾರ್ಮಿಕ ಆಂದೋಲನದ ನಂತರ ಹುಟ್ಟಿಕೊಂಡಿರಬಹುದೆಂದು ಹೇಳಲಾಗುತ್ತಿದೆ. ಬೆಂಗಳೂರು ನಗರದ ಬೇಲಿಮಠದ ಶಾಖಾಮಠವಾಗಿ ಬೆಳೆದಿದೆ. ೧೯೯೪ರಲ್ಲಿ ಶ್ರೀ ನಂಜುಂಡ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಮಠದಲ್ಲಿ ಮಠಾಧೀಶ್ವರರು ಯಾರೂ ಇಲ್ಲ. ಬೆಂಗಳೂರಿನ ಬೇಲಿಮಠದ ಶ್ರೀ ಶಿವರುದ್ರ ಸ್ವಾಮಿಗಳೇ

ಮಠದ ಆಡಳಿತವನ್ನು ನೋಡಿಕೊಂಡು ಧಾರ್ಮಿಕ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. ಮಠದಲ್ಲಿರುವ ಗದ್ದುಗೆಗಳನ್ನು ನವೀಕರಿಸಿ ಪೂಜೆ ಮಾಡಲಾಗುತ್ತಿದೆ.

ಚೌಕಿಮಠ: ನೆಲಮಂಗಲ ಪಟ್ಟಣದ ಮಧ್ಯ ಭಾಗದಲ್ಲಿ ಸ್ಥಾಪನೆಯಾಗಿರುವ ಚೌಕಿಮಠವು ವಿರಕ್ತ ಸಂಪ್ರದಾಯದ ಮಠವಾಗಿದೆ. ಈ ಮಠವು ಹಿಂದೆ ನೆಲಮಂಗಲದ ಹೊರಗಿನ ಕೆರೆಯ ದಡದಲ್ಲಿ ಸ್ಥಾಪನೆಯಾಗಿತ್ತು. ಜನರ ಸಂಪರ್ಕದಿಂದ ದೂರವಾಗಿದ್ದ ಮಠವನ್ನು ಇತ್ತೀಚೆಗೆ ಪಟ್ಟಣದ ಒಳಗೆ ಸ್ಥಾಪಿಸಲಾಗಿದೆ. ಮಠದ ಆವರಣದಲ್ಲಿ ಶ್ರೀ ಸಿದ್ದಲಿಂಗ ಸ್ವಾಮಿಗಳ ಗದ್ದುಗೆಯು ಸ್ಥಾಪನೆಯಾಗಿದೆ. ಈ ಗದ್ದುಗೆಗೆ ನಿತ್ಯ ಪೂಜೆ ನಡೆಯುತ್ತಿದೆ.

ಮಹಂತಿನಮಠ: ನೆಲಮಂಗಲ ಪಟ್ಟಣದ ಮಹಂತಿನ ಮಠವು, ಉಜ್ಜಯಿನಿಪೀಠದ ಶಾಖಾಮಠವಾಗಿದೆ. ಉಜ್ಜಯಿನಿ ಪೀಠದ ತೊಂಬತ್ತೆರಡನೆಯ ಜಗದ್ಗುರುಗಳಾದ ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳು ಸ್ಥಾಪನೆ ಮಾಡಿದರೆಂದು ಹೇಳಲಾಗುತ್ತಿದೆ. ಆದರೆ ಈ ಸಂಬಂಧ ಯಾವುದೇ ದಾಖಲೆಗಳು ಮತ್ತು ಆಧಾರಗಳು ಲಭ್ಯವಿಲ್ಲ.

ಪರಂಪರೆ: ಇಂತಹ ಪೂರ್ವ ಇತಿಹಾಸ ಇರುವ ಮಠದಲ್ಲಿ ಈವರೆಗೆ ಎಷ್ಟು ಜನ ಗುರುಗಳು ಅಧಿಕಾರವನ್ನು ನಡೆಸಿದ್ದಾರೆ ಎಂಬ ಬಗ್ಗೆ ಸ್ಪಷ್ಟವಾದ ಮಾಹಿತಿ ಇಲ್ಲದಿದ್ದರೂ, ಈ ಮಠದ ಪರಂಪರೆಯನ್ನು ಈ ಕೆಳಗಿನಂತೆ ಗುರುತಿಸಬಹುದಾಗಿದೆ.

೧. ಷ.ಬ್ರ.ಶ್ರೀ ಚಂದ್ರಮೌಳೇಶ್ವರಸ್ವಾಮಿಗಳು
೨. ಷ.ಬ್ರ.ಶ್ರೀ ಗುರುಸಿದ್ಧಸ್ವಾಮಿಗಳು
೩. ಷ.ಬ್ರ.ಶ್ರೀ ನಂಜೇದೇವರು
೪. ಷ.ಬ್ರ.ಶ್ರೀ ಜಯದೇವರು
೫. ಷ.ಬ್ರ.ಶ್ರೀ ರೇಣುಕ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯನ್ನು ಲಭ್ಯವಿದ್ದಷ್ಟು ಆಧಾರಗಳ ಮೇಲೆ ಗುರುತಿಸಬಹುದಾಗಿದೆ. ಶಿಷ್ಯ ವರ್ಗದ ಪರಂಪರೆಯಲ್ಲಿ ಬೆಳೆದು ಬಂದಿರುವ ಈ ಮಠದಲ್ಲಿ ಈವರೆಗೆ ಅಧಿಕಾರ ವಹಿಸಿಕೊಂಡಿರುವ ಮಠಾಧೀಶ್ವರರೆಲ್ಲರೂ ಕಾಯಕಯೋಗಿಗಳಾಗಿ, ಧರ್ಮನಿಷ್ಠರಾಗಿ ಧರ್ಮವನ್ನು ಅನುಷ್ಠಾನಗೊಳಿಸಲು ಶ್ರಮಿಸಿದವರಾಗಿದ್ದಾರೆ.

ಉತ್ತರಾಧಿಕಾರಿ: ಖಾಲಿ ಇದ್ದ ಮಠಕ್ಕೆ ೧೯೮೮ ರಲ್ಲಿ ಹದಿನೇಳು ವರ್ಷದ ಶ್ರೀ ಚಂದ್ರಮೌಳೇಶ್ವರ ಶಿವಾಚಾರ್ಯ ಸ್ವಾಮಿಗಳಿಗೆ ಪಟ್ಟಾಧಿಕಾರ ಮಾಡಲಾಯಿತು. ಶ್ರೀ ಚಂದ್ರಮೌಳೇಶ್ವರ ಶಿವಾಚಾರ್ಯ ಸ್ವಾಮಿಗಳು ಸಂಸ್ಕೃತ, ವೇದ, ಆಗಮಗಳನ್ನು ಕಲಿಯಲು ತುಮಕೂರಿನ ಸಿದ್ಧಗಂಗಾ ಮಠದಲ್ಲಿ ಆಶ್ರಯ ಪಡೆದು, ಕಲಿಕೆಯನ್ನು ಪ್ರಾರಂಭಿಸಿ, ವಿದ್ವತ್ ಸಂಪನ್ನತೆಯನ್ನು ಪಡೆದು ಮಠದ ಆಡಳಿತವನ್ನು ನೋಡಿಕೊಳ್ಳುತ್ತಿದ್ದಾರೆ.

ಕಲ್ಲಿನ ಮಠ: ಕಲ್ಲಿನ ಭವ್ಯ ಕಟ್ಟಡವು ಮೂಲಮಠದ ಇತಿಹಾಸವನ್ನು ಹೇಳಿದರೆ, ಇತ್ತೀಚೆಗೆ ಕಲ್ಲಿನ ಕಟ್ಟಡವನ್ನು ಒಳಗೊಂಡಂತೆ ಆರ್‌ಸಿಸಿ ಕಟ್ಟಡವನ್ನು ನಿರ್ಮಿಸಿ, ಮಠದ ಕಟ್ಟಡವನ್ನು ವಿಸ್ತರಿಸಿಕೊಂಡಿದ್ದಾರೆ. ಇದೇ ಕಟ್ಟಡದಲ್ಲಿ ಏಳು ಲಕ್ಷ ರೂಪಾಯಿ ವೆಚ್ಚದಲ್ಲಿ ಭವ್ಯವಾದ ಕಲ್ಯಾಣ ಮಂಟಪವನ್ನು ನಿರ್ಮಿಸಿದ್ದಾರೆ. ಮೂಲ ಮಠದಲ್ಲಿ ಶ್ರೀ ಚಂದ್ರಮೌಳೇಶ್ವರ ಶಿವಾಚಾರ್ಯ ಸ್ವಾಮಿಗಳು ಜೀವಂತ ಸಮಾಧಿಯಾಗಿದ್ದು ಇಲ್ಲಿ ಗದ್ದುಗೆ ಯನ್ನು ನಿರ್ಮಿಸಲಾಗಿದೆ. ಉಳಿದ ಮಠಾಧೀಶ್ವರರ ಗದ್ದುಗೆಗಳು ಮಠದ ಆವರಣದಲ್ಲಿ ಸ್ಥಾಪನೆಯಾಗಿಲ್ಲ. ಮಠದ ಜಮೀನಿನಲ್ಲಿ ಗದ್ದುಗೆಗಳು ಇದ್ದ ಬಗ್ಗೆ ಹಿರಿಯರು ಹೇಳುತ್ತಿದ್ದರೂ ಈಗ ಅವುಗಳ ಬಗ್ಗೆ ಕಾಳಜಿ ವಹಿಸದೇ ಹೋದ ಕಾರಣಕ್ಕೆ ಗದ್ದುಗೆಗಳ ಕುರುಹು ಇರದಂತೆ ಬೇಸಾಯದಲ್ಲಿ ಕಿತ್ತು ಹಾಕಲಾಗಿದೆ ಎಂದು ಹೇಳುತ್ತಾರೆ. ಕನ್ನಳ್ಳಿಯ ಶಾಖಾಮಠದಲ್ಲಿ ಶ್ರೀ ವಿರೂಪಾಕ್ಷ ಸ್ವಾಮಿಗಳು ಲಿಂಗೈಕ್ಯರಾಗಿದ್ದು, ಅವರ ಗದ್ದುಗೆಯನ್ನು ಅಲ್ಲಿ ನಿರ್ಮಿಸಲಾಗಿದೆ.

ಧಾರ್ಮಿಕ ಕಾರ್ಯಗಳು: ಅಮಾವಾಸ್ಯೆಯಲ್ಲಿ ಶ್ರೀ ಚಂದ್ರಮೌಳೇಶ್ವರ ಶಿವಾಚಾರ್ಯಸ್ವಾಮಿಗಳ ಗದ್ದುಗೆಗೆ ರುದ್ರಾಭಿಷೇಕದ ಪೂಜೆಯನ್ನು ನಡೆಸಲಾಗುತ್ತಿದೆ. ನಿತ್ಯ ಎರಡೂವೇಳೆ ಪೂಜಾ ಕಾರ್ಯಗಳು ನಡೆಯುತ್ತಿದ್ದು, ಶ್ರಾವಣ ಮತ್ತು ಕಾರ್ತೀಕ

ಮಾಸಗಳಲ್ಲಿ ವಿಶೇಷ ಪೂಜೆಯನ್ನು ಮಾಡಲಾಗುತ್ತಿದೆ. ಶಿವರಾತ್ರಿಯ ದಿನ ರಾತ್ರಿ ಮಠದಲ್ಲಿ ವಿಶೇಷ ಪೂಜೆಯನ್ನು ಹಮ್ಮಿಕೊಳ್ಳಲಾಗುತ್ತಿದೆ. ಮಠದ ಆಸ್ತಿಯಾಗಿ ಹನ್ನೆರಡು ಎಕರೆ ಜಮೀನು ಇದ್ದು ಈಗ ಈ ವಿಚಾರದಲ್ಲಿ ವಿವಾದ ಸೃಷ್ಟಿಯಾಗಿದೆ. ಕನ್ನಹಳ್ಳಿಯಲ್ಲಿ ಇರುವ ಶಾಖಾಮಠಕ್ಕೆ ಹತ್ತುಎಕರೆ ಜಮೀನು ಇದೆ. ಇದನ್ನು ಅಭಿವೃದ್ಧಿಪಡಿಸಿ ಅಧಿಕ ಆದಾಯ ಬರುವಂತೆ ಮಾಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ರೇಣುಕಶಿವಾಚಾರ್ಯಸ್ವಾಮಿಗಳು, ಶ್ರೀಮಹಂತಿನಮಠ, ಮಠದರಸ್ತೆ, ನೆಲಮಂಗಲ,ಬೆಂಗಳೂರು ಗ್ರಾಮಾಂತರಜಿ.

ಶಿವಗಂಗೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ಪಶ್ಚಿಮಕ್ಕೆ ಮೂವತ್ತೆರಡು ಕಿ.ಮೀ ದೂರದಲ್ಲಿದೆ. ಶಿವಗಂಗೆಯು, ಕರ್ನಾಟಕದ ಪೌರಾಣಿಕ ಕ್ಷೇತ್ರಗಳಲ್ಲಿ ಒಂದಾಗಿದೆ. ಶಿವಗಂಗೆಯ ಚರಿತ್ರೆಯನ್ನು ಅಗಸ್ತ್ಯ, ಮುದ್ಗಲ ಮತ್ತು ಕಣ್ವಋಷಿಗಳ ಕಾಲದವರೆಗೆ ಕೊಂಡೊಯ್ಯಲಾಗುತ್ತದೆ. ಕ್ರಿ.ಶ.ಎಂಟನೆಯ ಶತಮಾನದಲ್ಲಿ ಶಂಕರಾಚಾರ್ಯರು ಈ ನೆಲದಲ್ಲಿ ಸಾಧನೆಗೈದಿರುವ ಬಗ್ಗೆ ಐತಿಹಾಸಿಕ ದಾಖಲೆಗಳಿವೆ. ಸುಪ್ರಸಿದ್ಧ ಶೈವ ಕ್ಷೇತ್ರವಾಗಿರುವ ಶಿವಗಂಗೆಯು ಜೈನರ ಕಾರ್ಯ ಕ್ಷೇತ್ರವಾಗಿತ್ತು ಎಂಬುದಕ್ಕೆ ಹೊಯ್ಸಳ ದೊರೆ ವಿಷ್ಣುವರ್ಧನನ ಪಟ್ಟ ಮಹಿಷಿಯಾದ ಶಾಂತಲೆಯು ಬಸದಿಗಳನ್ನು ಕಟ್ಟಿಸಿದ್ದಾಳೆಂದು, ಅಲ್ಲದೆ ೧೨೩೧ರಲ್ಲಿ ಇಲ್ಲೇ ಸಮಾಧಿ ಯಾದಳೆಂದು ಹೇಳಲಾಗಿದೆ.

ಪ್ರಕೃತಿ ಸೌಂದರ್ಯದ ಈ ಬೆಟ್ಟವು ನಾಲ್ಕು ದಿಕ್ಕಿಗೂ ನಾಲ್ಕು ರೂಪದಲ್ಲಿ ಕಾಣುತ್ತದೆ. ಅದೇ ರೀತಿ ಸಿದ್ಧಗಂಗೆಯಲ್ಲಿ ಸಾವಿರಾರು ಜನಗಳಿಗೆ ಮಾಡುವ ಅಡುಗೆಯ ಸ್ವಾಧಿಷ್ಟ ರುಚಿ ಬೇರೆ ಎಲ್ಲಿಯೂ ಸಿಗದು. ಈ ಕಾರಣದಿಂದಲೇ'ಶಿವಗಂಗೆಯ ನೋಟ ಚೆಂದ, ಸಿದ್ಧಗಂಗೆಯ ಊಟ ಚೆಂದ' ಎಂಬ ಗಾದೆ ಮಾತು ಈ ಭಾಗದಲ್ಲಿ ಸೃಷ್ಟಿಯಾಗಿರಬೇಕು. ೧೫೩೪ ರಲ್ಲಿ ಗಂಗಾ ಪುರಾಣವನ್ನು ಬರೆದು ಪೂರ್ಣಗೊಳಿಸಿದ ಕರ್ತೃ ಶ್ರೀಮಲ್ಲಿಕಾರ್ಜುನನು ತನ್ನ ಕೃತಿಯ ಮೂರನೆಯ ಭಾಗದ ಹದಿಮೂರನೆಯ ಪದ್ಯದಲ್ಲಿ ಯುಗಯುಗಗಳಲ್ಲಿ ಶಿವಗಂಗೆ ಕ್ಷೇತ್ರವು ಬೆಳೆದು ಬಂದ ರೀತಿಯನ್ನು ಈ ರೀತಿ ವರ್ಣಿಸಿದ್ದಾನೆ: 'ಕೃತಯುಗದಲ್ಲಿ ಏಕಸ್ಥಂಭಶೈಲ, ತ್ರೇತಾಯುಗದಲ್ಲಿ ವೃಷಭೇಂದ್ರ ಪರ್ವತ, ದ್ವಾಪರ ಯುಗದಲ್ಲಿ ಜಾಳಾಂದ್ರ ಪರ್ವತ, ಕಲಿಯುಗದಲ್ಲಿ ಕಕುದ್ಗಿರಿ ಎಂದು ಪ್ರಸಿದ್ಧಿ ಪಡೆದಿದೆ' ಎಂಬ ಮಾತನ್ನು ಎಸ್.ಎಂ.ಎಸ್.ಶಿವಾಚಾರ್ಯರು ತಮ್ಮ ಶಿವಗಂಗಾ ಕ್ಷೇತ್ರ ದರ್ಶನದಲ್ಲಿ ಉಲ್ಲೇಖಮಾಡಿ ಕ್ಷೇತ್ರದ ಪ್ರಾಚೀನ ಹಾಗೂ ಪುರಾಣ ಕಾಲದ ಸಂಬಂಧವನ್ನು ದೃಢಪಡಿಸಿದ್ದಾರೆ.

ಕಲಿಯುಗದಲ್ಲಿ ಪರಶಿವನು ಪಾರ್ವತಿಗೆ ಭೂಲೋಕವನ್ನು ತೋರಿಸಿಕೊಂಡು ಬರಲು ನಂದಿಗೆ ಹೇಳಿದನು.ಇಲ್ಲಿಗೆ ಬಂದ ನಂದಿಯು ಈ ಕ್ಷೇತ್ರದ ಸೌಂದರ್ಯಕ್ಕೆ ಮನಸೋತು ತನ್ನ ಕತ್ತಿನ ಮೇಲೆ ಈ ಬೆಟ್ಟವನ್ನು ಹೊತ್ತು ಅನಂತ ಕಾಲ ಉಗ್ರವಾದ ತಪಸ್ಸನ್ನು ಆಚರಿಸಿದನು. ಆದ್ದರಿಂದ ಶಿವಗಂಗೆ ಕ್ಷೇತ್ರಕ್ಕೆ 'ಕಕುದ್ಗಿರಿ'ಎಂಬ ಹೆಸರು ಬಂದಿದೆ ಎಂದು ಸ್ಥಳನಾಮ ಹೇಳುತ್ತದೆ.ಪುರಾಣ ಪ್ರಸಿದ್ಧ ಈ ಶಿವ ಕ್ಷೇತ್ರದಲ್ಲಿ ಪ್ರಾಚೀನ ವೀರಶೈವ ಪೀಠದ ಶ್ರೀ ರೇಣುಕಾದಿಪಂಚಾಚಾರ್ಯರ ಉಜ್ವಲ ಪರಂಪರೆಯವರಾದ ಶ್ರೀ ರೇವಣಸಿದ್ಧೇಶ್ವರರು ಹಾಗೂ ಶ್ರೀ ರುದ್ರಮುನಿ ಶಿವಾಚಾರ್ಯರು ತಪೋನಿರತರಾಗಿದ್ದರು. ಹನ್ನೆರಡನೆಯ ಶತಮಾನದ ಕಲ್ಯಾಣಕ್ರಾಂತಿಯ ನಂತರ ಇಲ್ಲಿ ಅನೇಕ ಶಿವಶರಣರು ನೆಲೆಸಿ ಮುಂದೆ ಸಾಗಿದ್ದಾರೆ. ನಂತರ ಹದಿನಾಲ್ಕನೆಯ ಶತಮಾನದ ಶ್ರೀ ಗೋಸಲ ಸಿದ್ಧೇಶ್ವರರು ಬಂದು ನೆಲೆಸಿ ಭಕ್ತರ ನೆರವಿನಿಂದ ಅರವತ್ತಮೂರು ಜನ ಪುರಾತನರ ಮತ್ತು ಏಕಾದಶಿ ರುದ್ರಗುಣಗಳ ಪೂಜೋತ್ಸವಗಳನ್ನು ನೆರವೇರಿಸುತ್ತಾರೆ. ನಂತರ ಬಂದ ಶ್ರೀ ಗೋಸಲ ಚನ್ನಬಸವೇಶ್ವರರು, ಶ್ರೀ ತೋಂಟದ ಸಿದ್ಧಲಿಂಗೇಶ್ವರರು ಈ ನೆಲದಲ್ಲಿ ತಪೋನುಷ್ಠಾನಗೊಂಡಿರುತ್ತಾರೆ. ಈ ಎಲ್ಲಾ ಕಾರಣಗಳಿಂದ ಈ ಕ್ಷೇತ್ರದಲ್ಲಿ ಅರವತ್ನಾಲ್ಕು ಮಠಗಳು ಸ್ಥಾಪನೆಯಾಗಿದ್ದವು ಎಂದು ಹೇಳಲಾಗುತ್ತಿದೆ.

೧.ಮೇಲಣಗವಿಮಠ, ೨.ಕೆಳಗಣಗವಿಮಠ ಅಥವಾ ಹೊನ್ನಗವಿಮಠ, ೩.ಕಂಬಾಳಮಠ ಅಥವಾ ಮರಳಸಿದ್ದೇಶ್ವರ ಮಠ, ೪.ಕಂಬಾಳು ಗ್ರಾಮದ ಮೇಲಣಗವಿಮಠ, ೫.ಕರಿಯಾನೆಮಠ, ೬.ಬೆಂಡೇಕೆರೆಮಠ, ೭.ಕಾರಂಜಿಮಠ, ೮.ಬಳೇರ ಮಠ, ೯.ದೇಶಮಠ, ೧೦.ಮಹಂತಿನಮಠ, ೧೧.ಚಿನ್ನದಕಂತೆಮಠ, ೧೨.ಭೃಂಗಿಮಠ, ೧೩.ವಟಕಲ್ಲುಮಠ, ೧೪.ಧರ್ಮ

ರಾಯನಮಠ, ೧೫.ಮಿಕರಾಜನಮಠ, ೧೬.ಮುದ್ದು ವೀರೇಶ್ವರಮಠ, ೧೭.ಕೆಳಗಿನ ಮುದ್ದು ವೀರೇಶ್ವರಮಠ, ೧೮.ಸಂಗಪ್ಪನ ಮಠ, ೧೯.ವೀರರಾಜಮ್ಮ ಮಠ, ೨೦.ಬೆಟ್ಟಿಂಗವಿಮಠ, ೨೧.ಬಯಲುಮಠ, ೨೨.ರೇವಣಸಿದ್ಧೇಶ್ವರಮಠ, ೨೩.ಚಕ್ರತೀರ್ಥಮಠ, ೨೪.ಸಾವಿರಕಂಬದ ಕಲ್ಲಿನಮಠ, ೨೫.ಗಂಗಾಧರೇಶ್ವರಮಠ, ೨೬.ಪರದೇಶಿಮಠ, ೨೭.ಎಡವಮುರಾರಿಮಠ, ೨೮.ಜೋಳ ಬಸವೇಶ್ವರಮಠ, ೨೯.ಹುಚ್ಚಬಸವೇಶ್ವರಮಠ, ೩೦.ಕಾಂಚಕಲ್ಲಪ್ಪನಮಠ, ೩೧.ಯೋಗಿಮಠ, ೩೨.ರಾಚೋಟಿಮಠ, ೩೩.ಪಟ್ಟದದೇವರಮಠ, ೩೪.ಗಂಗಾಮಠ, ೩೫.ಕೇದಾರೇಶ್ವರಮಠ, ೩೬.ಕಾಶಿಮಠ, ೩೭.ಮುತ್ತಿನಕಂತೆಮಠ, ೩೮.ತಮ್ಮಡಿ ಹಳ್ಳಿಮಠ, ೩೯.ಫಲಹಾರಮಠ, ೪೦.ಸಿದ್ಧರಮಠ, ೪೧.ಬಿಟ್ಟಜಡೆಯ ಒಡೆಯರಮಠ, ೪೨.ಖಾನಿಮಠ, ೪೩.ಮೈಲಾರಲಿಂಗನ ಮಠ, ೪೪.ಪಡುಮಠ, ೪೫.ಕಬ್ಬಿಣಕಂತೆಮಠ, ೪೬.ವೃಷಭಮುಖತೀರ್ಥಮಠ, ೪೭.ಕಂಬಾಳು ಗ್ರಾಮದ ಗುಡ್ಡದ ಮೇಲಿನಮಠ, ೪೮.ಗಂಗಪಟ್ಟಣದಮಠ, ೪೯.ಸೀಗೆಪಾಳ್ಯದಮಠ, ೫೦.ಸಿದ್ಧನಂಜಪ್ಪನವರ ಗದ್ದೆಯ ಹತ್ತಿರವಿರುವ ಶಿಥಿಲ ಗೊಂಡಮಠ, ೫೧.ಮಹಾಂತಿನ ಸಿಂಹಾಸನಮಠ, ೫೨.ಶಂಭಣ್ಣನ ಹೊಲದ ಹತ್ತಿರವಿರುವ ವೃಷಭ ವಿಗ್ರಹವಿರುವ ಸ್ಥಳದಲ್ಲಿ ಒಂದು ಮಠ ಸ್ಥಾಪನೆಯಾಗಿದ್ದ ಕುರುಹು ಇದೆ. ೫೩.ಶಿವಗಂಗೆಮಠ ಈ ರೀತಿ ಅರವತ್ತಾನ್ಲಲ್ಕು ಮಠಗಳಲ್ಲಿ ಐವತ್ಮೂರು ಮಠಗಳನ್ನು ಗುರುತಿಸಬಹುದಾಗಿದೆ. ಉಳಿದ ಮಠಗಳು ಅಸ್ತಿತ್ವದಲ್ಲಿಲ್ಲದೆ ಮರೆಯಾಗಿವೆ. ಇವುಗಳಲ್ಲಿ ಈಗ ಜಗದ್ಗುರು ರಂಭಾಪುರಿಪೀಠಕ್ಕೆ ಸೇರಿದ ಶ್ರೀ ಮೇಲಣ ಗವಿಮಠ, ಉಜ್ಜಯಿನಿ ಪೀಠದ ಶ್ರೀ ಹೊನ್ನಮ್ಮ ಗವಿಮಠ ಮತ್ತು ಶ್ರೀಶೈಲ ಪೀಠಕ್ಕೆ ಸೇರಿದ ಕಂಬಾಳುಮಠ ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಮೇಲಣಗವಿ ವೀರಸಿಂಹಾಸನ ಸಂಸ್ಥಾನಮಠ: ರಂಭಾಪುರಿ ಪೀಠದ ಜಗದ್ಗುರು ಶ್ರೀ ರೇವಣಸಿದ್ಧರಿಂದ ಸಂಸ್ಥಾಪಿಸಲ್ಪಟ್ಟು, ಶ್ರೀ ರುದ್ರಮುನೀಶ್ವರರಿಗೆ ಶಿವದೀಕ್ಷೆ ಮತ್ತು ಷಟ್‌ಸ್ಥಲ ಸಿದ್ಧಾಂತವನ್ನು ಉಪದೇಶ ಮಾಡಿದ ಸ್ಥಳವೇ'ಮೇಲಣ ಗವಿಮಠ'ವಾಗಿ ಬೆಳೆದಿದೆ. ಈ ಮಠದಲ್ಲಿ ಒಳಕಲ್ಲು ತೀರ್ಥಇದೆ. ಇಲ್ಲಿನ ವಿಶೇಷ ಎಂದರೆ'ಪುಣ್ಯವಂತರಿಗೆ ತೀರ್ಥ ಸಿಗುತ್ತದೆ. ಭಾಗ್ಯಹೀನರಿಗೆ ತೀರ್ಥಸಿಗುವುದಿಲ್ಲ'ಎಂಬ ಧಾರ್ಮಿಕ ನಂಬಿಕೆಯ ಪ್ರತೀತಿ ಇದೆ. ಬಲಗೈಯ್ಯಲ್ಲಿ ಖಡ್ಗ ಮತ್ತು ಬಾಣ ಧರಿಸಿದ್ದು, ಎಡಗೈಯ್ಯಲ್ಲಿ ಹಲಗೆ ಬಿಲ್ಲನ್ನು ಹಿಡಿದಿರುವ ವೀರಭದ್ರದೇವರ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ವೀರಭದ್ರಸ್ವಾಮಿಯ ಅಕ್ಕಪಕ್ಕ ಇರುವ ಯೋಗ ಮಂಟಪದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಮತ್ತು ಮಹಾಗಣಪತಿಯನ್ನು ಇತ್ತೀಚೆಗೆ ಸ್ಥಾಪಿಸಲಾಗಿದೆ.

ಮಠ ಸ್ಥಾಪನೆ: ಶ್ರೀ ರೇವಣಸಿದ್ಧ ಶಿವಾಚಾರ್ಯ ಭಗವತ್ಪಾದರು, ಶ್ರೀ ರುದ್ರಮುನಿ ಶಿವಾಚಾರ್ಯರು ಧರ್ಮವನ್ನು ಈ ನೆಲದಲ್ಲಿ ನೆಲೆಗೊಳಿಸಲು ಮಠವನ್ನು ಸ್ಥಾಪಿಸಿದರು. ಶ್ರೀ ರೇವಣಸಿದ್ಧರು ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳಿಗೆ ಶಿವದೀಕ್ಷೆ ನೀಡುವ ಸಮಯದಲ್ಲಿ ನೀರು ಇಲ್ಲದಿರುವಾಗ ತಮ್ಮ ಯೋಗದಂಡದಿಂದ ಬಂಡೆಯನ್ನು ಸೀಳಿ ನೀರು ತರಿಸಿ ಅದರಿಂದ ಶಿವದೀಕ್ಷೆಯನ್ನು ನೆರವೇರಿಸಿ ಅನುಗ್ರಹಿಸಿದರಂತೆ. ತಮ್ಮ ಯೋಗದಂಡದಿಂದ ನೀರು ತರಿಸಿದ ಜಾಗವೇ ಈಗ 'ಒಳಕಲ್ಲುತೀರ್ಥ' ಎಂದು ಪ್ರಸಿದ್ಧಿಯಾಗಿ ಮೇಲಣ ಗವಿಮಠದ ಪೂಜನೀಯ ಸ್ಥಳವಾಗಿದೆ. ಈ ಮಠಕ್ಕೆ ಕೊಡಗು, ಕೆಳದಿ ಮತ್ತು ಮೈಸೂರು ರಾಜರು ನೆರವು ನೀಡಿದ ಬಗ್ಗೆ ಹೇಳಲಾಗುತ್ತಿದೆ.

ಗುರುಪರಂಪರೆ: ಮಹಾಮಹಿಮ ಪುರುಷರಾಗಿ ವೀರಶೈವಧರ್ಮವನ್ನು ಜನಮನಕ್ಕೆ ಬಿತ್ತಿ ಬೆಳೆಸಿದ ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು ಪ್ರಥಮ ಗುರುಗಳಾಗುವ ಮೂಲಕ ಈ ಮಠದ ಗುರುಪರಂಪರೆ ಬೆಳೆಯುತ್ತದೆ.

೧. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಮಲಯಶಾಂತೇಶ್ವರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಶಂಭುದೇಶಿಕ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಮಲಯವೀರೇಶ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಗುರುಶಾಂತ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ನಂಜೇಶ್ವರ ಶಿವಾಚಾರ್ಯಸ್ವಾಮಿಗಳು

೮. ಷ.ಬ್ರ.ಶ್ರೀ ಚಿಕ್ಕವೀರ (ಸಣ್ಣಕ್ಕಿ) ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ವೀರಭದ್ರ ಶಿವಾಚಾರ್ಯಸ್ವಾಮಿಗಳು
೧೦. ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯಸ್ವಾಮಿಗಳು
೧೧. ಷ.ಬ್ರ.ಶ್ರೀ ಹುಚ್ಚೀರ ಶಿವಾಚಾರ್ಯಸ್ವಾಮಿಗಳು
೧೨. ಷ.ಬ್ರ.ಶ್ರೀ ರಾಚೋಟಿ ಶಿವಾಚಾರ್ಯಸ್ವಾಮಿಗಳು
೧೩. ಷ.ಬ್ರ.ಶ್ರೀ ಎರಡನೆಯ ಹುಚ್ಚೀರ ಶಿವಾಚಾರ್ಯಸ್ವಾಮಿಗಳು
೧೪. ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯಸ್ವಾಮಿಗಳು
೧೫. ಷ.ಬ್ರ.ಶ್ರೀ ವಿಶ್ವಾರಾಧ್ಯ ಶಿವಾಚಾರ್ಯಸ್ವಾಮಿಗಳು (ಹಿರಿಯ ಗುರುಗಳು)
೧೬. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು (ಈಗ ರಂಭಾಪುರಿ ಜಗದ್ಗುರುಗಳಾಗಿದ್ದಾರೆ)
೧೭. ಷ.ಬ್ರ.ಶ್ರೀ ಮಲಯಶಾಂತಮುನಿ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು (ಈಗಿನ ಗುರುಗಳು)

ಈ ರೀತಿ ಮಠದ ಪರಂಪರೆಯಲ್ಲಿ ಹದಿನೇಳು ಜನ ಗುರುಗಳ ಹೆಸರನ್ನು ದಾಖಲಿಸಲಾಗಿದ್ದರೂ, ಈ ಮಠದಲ್ಲಿ ಇನ್ನೂ ಅನೇಕ ಗುರುಗಳ ಹೆಸರು ಲಭ್ಯವಾಗಿಲ್ಲ ಎಂದು ಹೇಳಲಾಗುತ್ತಿದೆ. ಈ ಮಠ ಅನಾದಿಕಾಲದಿಂದಲೂ ಧಾರ್ಮಿಕ, ಸಾಮಾಜಿಕ ಮತ್ತು ಸಾಹಿತ್ಯಿಕವಾಗಿ ಬಹಳ ಪ್ರಭಾವ ಬೆಳೆಸಿಕೊಂಡಿತ್ತು ಎಂಬುದಕ್ಕೆ ವೀರಶೈವಾಮೃತ ಪುರಾಣ, ಗಣಭಾಷಿತ ರತ್ನಮಾಲೆ ಕರ್ತೃ ಗುಬ್ಬಿಯ ಮಲ್ಲಣಾರ್ಯರು (ಕ್ರಿ.ಶ.೧೫೧೩)ಮೇಲಣಗವಿ ಮಠದ ಶಿಷ್ಯರಾಗಿದ್ದು 'ಭೂಲೋಕ ಪಾವನ ಕಕುದ್ಗಿರಿ ಸುದಾಕ್ಷಿಣ್ಯ ಕೈಲಾಸವೆನಿಸಿದ್ದ ಮೇಲಣಗವಿ ಮಠದ ಶಿಷ್ಯನಾಗಿರುವೆ' ಎಂದು ಮಲ್ಲಣಾರ್ಯರೇ'ವೀರಶೈವಾಮೃತ ಮಹಾ ಪುರಾಣ'ದಲ್ಲಿ ಬರೆದುಕೊಂಡಿದ್ದಾರೆ.'ಶ್ರೀಗುರು ಕೊಟ್ಟೂರೇಶ್ವರ'ಪುರಾಣ ಬರೆದ ಭೀಮಕವಿಯ ವಂಶಜ ಶ್ರೀ ಬಸವಲಿಂಗ ಕವಿಗಳು ಈ ಮಠದ ಪ್ರಭಾವಕ್ಕೆ ಒಳಗಾಗಿ ಮಠದ ಶಿಷ್ಯರಾಗಿದ್ದರು ಎಂದು ಉಲ್ಲೇಖಿಗೊಂಡಿದೆ.

ವಿಶ್ವಾರಾಧ್ಯರು: ಧಾರವಾಡ ಜಿಲ್ಲೆಯ ಮುಕ್ಕಲ್ಲ ಹಿರೇಮಠದ ವೀರಮಾಹೇಶ್ವರ ವಂಶದ ಶ್ರೀ ಚನ್ನಬಸವಯ್ಯ ಮತ್ತು ಶ್ರೀಮತಿ ಮಲ್ಲಮ್ಮನವರ ಪುತ್ರರಾಗಿ ಶ್ರೀ ವಿಶ್ವಾರಾಧ್ಯರು ಜನಿಸಿದರು. ಬಾಲ್ಯ, ವಿದ್ಯಾಭ್ಯಾಸವನ್ನು ಮುಕ್ಕಲ್ಲಿನಲ್ಲಿ ಪೂರೈಸಿ ಸಂಸ್ಕೃತ ವೇದಾಧ್ಯಯನಕ್ಕಾಗಿ ಶಿರಹಟ್ಟಿಯ ಫಕೀರಸ್ವಾಮಿ ಮಠದಲ್ಲಿ ಆಶ್ರಯ ಪಡೆದು ಶ್ರೀ ಸಂಗಮನಾಥ ಶಾಸ್ತ್ರಿಗಳಲ್ಲಿ ಜ್ಯೋತಿಷ್ಯಶಾಸ್ತ್ರವನ್ನು ಕಲಿತರು. ನಂತರ ಮಹಾರಾಷ್ಟ್ರದ ಸೋಲಾಪುರದ ಹೋಟಗಿಮಠದ ವೀರಶೈವ ಗುರುಕುಲದಲ್ಲಿ ಸಂಸ್ಕೃತ ಅಧ್ಯಯನ ಮಾಡಿದರು. ನಂತರ ಜಗದೀಶ ಶಾಸ್ತ್ರಿಗಳ ಮಾರ್ಗದರ್ಶನದಲ್ಲಿ ಕಲ್ಕತ್ತಾ ಕಾವ್ಯ ಪರೀಕ್ಷೆ ಮುಗಿಸಿ ಉನ್ನತ ಜ್ಞಾನವನ್ನು ಸಂಪಾದಿಸಿದರು. ಕಾಶಿ ವಿದ್ಯಾಪೀಠದಲ್ಲಿ ಒಂದು ವರ್ಷಗಳ ಕಾಲ ವಾಸ್ತವ್ಯಮಾಡಿ, ಬೆಂಗಳೂರಿಗೆ ಆಗಮಿಸಿದ ಶ್ರೀ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಶ್ರೀ ಮಹಂತರಮಠದಲ್ಲಿ ಐದಾರು ವರ್ಷಗಳ ಕಾಲ ಸಂಸ್ಕೃತ,ಸಾಹಿತ್ಯ ಮತ್ತುಶಿವಾದ್ವೈತ ಸಿದ್ಧಾಂತವನ್ನು ಅಧ್ಯಯನ ಮಾಡಿ ರಂಭಾಪುರಿ ಜಗದ್ಗುರುಗಳ ಆಶೀರ್ವಾದದಿಂದ ಶಿವಗಂಗೆಯ ಮೇಲಣ ಗವಿ ಮಠಕ್ಕೆ ೧೯೫೧ ರಲ್ಲಿ ಉತ್ತರಾಧಿಕಾರಿಗಳಾಗಿ ಅಧಿಕಾರವನ್ನು ವಹಿಸಿಕೊಳ್ಳುತ್ತಾರೆ.

ಮೇಲಣಗವಿ ಮಠದ ಆಗಿನ ಗುರುಗಳಾಗಿದ್ದ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ವಿದ್ವತ್‌ಪುರುಷ ಶ್ರೀ ವಿಶ್ವಾ ರಾಧ್ಯ ಶಿವಾಚಾರ್ಯ ಸ್ವಾಮಿಗಳಿಗೆ ಶಿವಗಂಗೆಯ ಮಹತ್ವ ಮತ್ತು ರೇಣುಕರ ಶರಣ ಮಹಾತ್ಮೆಗಳ ಬಗ್ಗೆ ತಿಳಿಹೇಳಿ ವೀರಶೈವ ಸಿದ್ಧಾಂತದ ಆಚರಣೆ ಮತ್ತು ಪ್ರಸಾರದ ಬಗ್ಗೆ ಉಪದೇಶ ನೀಡಿ ೧೯೫೩ರಲ್ಲಿ ಲಿಂಗೈಕ್ಯರಾಗಿರುತ್ತಾರೆ. ಗುರುಗಳ ಮಾರ್ಗದರ್ಶನದಲ್ಲಿ ಎರಡು ವರ್ಷ ಬೆಳೆದ ಶ್ರೀ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮಿಗಳು ೧೯೮೪ರವರೆಗೆ ಮಠದ ಸರ್ವಾಂ ಗೀಣ ಅಭಿವೃದ್ಧಿಗೆ ಶ್ರಮಿಸಿ, ವೀರಶೈವ ಧರ್ಮವನ್ನು ಬೆಳೆಸಿ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳಿಗೆ ಪಟ್ಟಾಧಿಕಾರವನ್ನು ನೀಡಿ ವಿಶ್ರಾಂತಿ ಜೀವನ ನಡೆಸತೊಡಗಿದರು.

ಸಿದ್ಧಲಿಂಗರು: ಹುಬ್ಬಳ್ಳಿ ತಾಲ್ಲೂಕಿನ ಹಳಿಯಾಳದ ಶ್ರೀ ಚನ್ನಬಸಯ್ಯ ಮತ್ತು ಶ್ರೀಮತಿ ಚನ್ನಬಸಮ್ಮನವರ ಪುತ್ರರಾಗಿ ೧೯೫೭ರಲ್ಲಿ ಜನಿಸಿದ ಶ್ರೀ ಸಿದ್ಧಲಿಂಗರು ಪ್ರಾಥಮಿಕ ಶಿಕ್ಷಣವನ್ನು ಹಳಿಯಾಳದಲ್ಲಿಯೂ, ಮಾಧ್ಯಮಿಕ ಶಿಕ್ಷಣವನ್ನು ಗದಗದ

ಲ್ಲಿಯೂ ಮಾಡಿ ೧೯೭೭ರ ಏಪ್ರಿಲ್ ಹನ್ನೊಂದರಂದು ರಂಭಾಪುರಿ, ಉಜ್ಜಯಿನಿ, ಕೇದಾರ, ಶ್ರೀಶೈಲ, ಕಾಶಿ ಜಗದ್ಗುರುಗಳ ದಿವ್ಯ ಸಾನ್ನಿಧ್ಯದಲ್ಲಿ ಹಳಿಯಾಳ ಪುತ್ರವರ್ಗದ ಮಠದ ಅಧಿಕಾರ ವಹಿಸಿಕೊಂಡರು. ರಂಭಾಪುರಿ ಜಗದ್ಗುರು ಶ್ರೀ ವೀರಗಂಗಾಧರ ಭಗವತ್ಪಾದರ ಅಪ್ಪಣೆಯ ಮೇರೆಗೆ ಬೆಂಗಳೂರಿನ ಮಹಂತರ ಮಠದಲ್ಲಿ ಆಶ್ರಯ ಪಡೆದು ಆಂಗ್ಲಕಲಾ ಪದವಿ ಹಾಗೂ ಶಕ್ತಿ ವಿಶಿಷ್ಟಾದ್ವೈತ ಧರ್ಮ ಸಿದ್ಧಾಂತಗಳನ್ನು ಅಧ್ಯಯನ ಮಾಡಿದರು. ಈ ಕಾಲದಲ್ಲಿ ರಂಭಾಪುರಿ ಜಗದ್ಗುರು ಶ್ರೀ ರುದ್ರಮುನಿ ಭಗವತ್ಪಾದರ ಕೃಪಾಕಟಾಕ್ಷಕ್ಕೆ ಒಳಗಾಗಿದ್ದರು. ಶ್ರಾವಣಮಾಸದ ಅನುಷ್ಠಾನಾರ್ಥ ಹಳಿಯಾಳ, ಕೊಟ್ಟೂರು, ಹೂಲಿ, ಬಾಳೆ ಹೊನ್ನೂರು,ಕುಂದಗೋಳದಲ್ಲಿ ಪ್ರವಚನಮಾಡಿ ಜಗದ್ಗುರುಗಳಿಂದ'ಮಹಾಚಾರ್ಯ ತತ್ತ್ವಪ್ರಚಾರಕ'ಎಂಬ ಬಿರುದನ್ನು ಪಡೆದರು. ಈ ರೀತಿ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಚಿಕ್ಕ ವಯಸ್ಸಿನಲ್ಲಿಯೇ ಹಿರಿದಾದುದನ್ನು ಸಾಧಿಸಿ ಹಿರಿಯರಿಂದ ಪ್ರಶಂಸೆಗೆ ಒಳಗಾಗಿ ಶಿವಗಂಗೆಯ ಮೇಲಣಗವಿ ಮಠದ ಅಧಿಕಾರವನ್ನು ವಹಿಸಿಕೊಂಡು ಕೇವಲ ಒಂಬತ್ತು ವರ್ಷಗಳಲ್ಲಿ ಅಗಾಧವಾದುದನ್ನು ಸಾಧಿಸಿ ಜನಮನ್ನಣೆಗೆ, ಗುರು ಮನ್ನಣೆಗೆ ಪಾತ್ರರಾಗಿ ೧೯೯೨ರ ಫೆಬ್ರವರಿ ಆರರಂದು ರಂಭಾಪುರಿ ಪೀಠದ ಜಗದ್ಗುರುಗಳಾಗಿ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳಿಂದ ತೆರವಾದ ಸ್ಥಾನಕ್ಕೆ ಶ್ರೀ ಮಲಯಶಾಂತಮುನಿ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು ೧೯೯೪ರಲ್ಲಿ ಮೇಲಣಗವಿ ಮಠದ ಪಟ್ಟಾಧಿಕಾರಿ ಗಳಾಗಿ ನೇಮಕಗೊಂಡರು.

ಶಿಕ್ಷಣ ಸೇವೆ: ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ೧೯೮೦ರಲ್ಲಿ ಶ್ರೀ ಜಗದ್ಗುರು ರೇವಣ ಸಿದ್ಧೇಶ್ವರ ವಿದ್ಯಾಪೀಠವನ್ನು ಸ್ಥಾಪಿಸಿ ಹೊಸಕೋಟೆ, ಕುಲುವನಹಳ್ಳಿ ಮತ್ತು ಎಣ್ಣೆಗೇರಿಯಲ್ಲಿ ಪ್ರೌಢಶಾಲೆಗಳನ್ನು ಪ್ರಾರಂಭಿಸಿ ಗ್ರಾಮೀಣ ವಿದ್ಯಾರ್ಥಿಗಳಿಗೆ ನೆರವಾಗಿದ್ದಾರೆ. ಹತಾರ್ರು ವಿದ್ಯಾರ್ಥಿಗಳಿಗೆ ಮಠದಲ್ಲಿ ಕಲಿಯಲು ಆಶ್ರಯವನ್ನು ಕಲ್ಪಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಕ್ಷೇತ್ರನಾಥ ವೀರಭದ್ರಸ್ವಾಮಿಗೆ ಅಮಾವಾಸ್ಯೆಯಲ್ಲಿ ರುದ್ರಾಭಿಷೇಕ, ಇನ್ನುಳಿದ ಕೆಲವು ಸಂದರ್ಭ ಗಳಲ್ಲಿ ವಿಶೇಷ ಪೂಜೆ ಪುನಸ್ಕಾರಗಳು ನಿರಂತರವಾಗಿ ನಡೆಯುತ್ತಿವೆ. ಪ್ರಸಾದ ವಿತರಣೆ, ಧರ್ಮ ಜಾಗೃತಿ ಸಮಾರಂಭಗಳು ಕಳೆದ ಹದಿನಾರು ವರ್ಷಗಳಿಂದ ಸತತವಾಗಿ ನಡೆಯುತ್ತಾ ಬಂದಿವೆ. ವರ್ಷಕ್ಕೊಮ್ಮೆ ಹಿರಿಯ ಗುರುಗಳ ಆರಾಧನೆಯನ್ನು ನಡೆಸಲಾಗುತ್ತಿದೆ. ಮಠದ ಬಳಿ ಕುಂಭಾವತಿ ತೀರ್ಥಕ್ಷೇತ್ರ ಇದೆ. ಪ್ರತಿವರ್ಷವೂ ದೇವಿಪುರಾಣ ಮತ್ತು ರೇಣುಕ ಜಯಂತಿಯನ್ನು ಮಠದಲ್ಲಿ ನಡೆಸಲಾಗುತ್ತಿದೆ. ಈ ರೀತಿ ಧಾರ್ಮಿಕ ಆಚರಣೆಗಳನ್ನು ನಡೆಸಿ ಈ ಕ್ಷೇತ್ರವನ್ನು ಶ್ರೀಮಂತಗೊಳಿಸಲಾಗಿದೆ.

ನೂತನ ಕಟ್ಟಡ: ಮೇಲಣಗವಿ ಮಠವು ಶಿವಗಂಗೆಯ ಬೆಟ್ಟದ ಮೇಲೆ ಇದ್ದು, ಇತ್ತೀಚೆಗೆ ಬೆಟ್ಟದ ಕೆಳಗೆ ಇರುವ ಮಠದ ಜಮೀನಿನಲ್ಲಿ ನೂತನ ಕಟ್ಟಡವನ್ನು ನಿರ್ಮಿಸಲಾಗಿದೆ. ಮೇಲಿನಮಠ ಮತ್ತು ಕೆಳಗಿನ ಮಠ ಎರಡರಲ್ಲೂ ಪ್ರಸ್ತುತ ಗುರುಗಳು ವಾಸ್ತವ್ಯಕ್ಕೆ ಅನುಕೂಲವನ್ನು ಮಾಡಿಕೊಂಡಿದ್ದಾರೆ. ಧಾರ್ಮಿಕ ಆಚರಣೆಗಳನ್ನು ಪರಂಪರೆಯ ಎಲ್ಲಾ ಕಾಲಕ್ಕೂ ಮೇಲ್ಪಂಕ್ತಿಯಾಗುವಂತೆ ಮುನ್ನಡೆಸುತ್ತಾ ಬಂದಿದ್ದಾರೆ.

ವಿಳಾಸ:ಷ.ಬ್ರ.ಶ್ರೀ ಮಲಯ ಶಾಂತಮುನಿ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಮೇಲಣಗವಿ ವೀರಸಿಂಹಾಸನ ಸಂಸ್ಥಾನ ಮಠ, ಶಿವಗಂಗೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಆಧಾರ: 'ಶಿವಗಂಗಾ ದರ್ಶನ' ಎಸ್.ಎಂ.ಎಸ್ ಶಿವಾಚಾರ್ಯರ ಕೃತಿ ಮತ್ತು 'ಸಮರ್ಪಣೆ' ಸ್ಮರಣ ಸಂಚಿಕೆ

ಕಂಬಾಳು ಸಂಸ್ಥಾನಮಠ: ಶಿವಗಂಗೆಯ ಹೊರಭಾಗದಲ್ಲಿ ಈಗಿನ ಕಂಬಾಳು ಗ್ರಾಮದ ವ್ಯಾಪ್ತಿಯಲ್ಲಿ ಕಂಬಾಳು ಸಂಸ್ಥಾನ ಮಠವು ಪುರಾತನ ಕಾಲದಲ್ಲಿ ಸ್ಥಾಪನೆಯಾಗಿದೆ. ಪಂಚಪೀಠಗಳಲ್ಲಿ ಒಂದಾದ ಶ್ರೀಶೈಲ ಪೀಠದ ಶಾಖಾ ಮಠವಾಗಿರುವ ಈ ಮಠವು ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದಿದೆ. ಕಂಬಾಳು ಮಠವು ಸ್ಥಾಪನೆಯಾದ ಬಗ್ಗೆ ನಿಖರವಾದ ದಾಖಲೆಗಳು ಇಲ್ಲ. ಆದರೆ ಈ ಮಠವು ಗತ ಕಾಲದಿಂದಲೂ ವೈಭವದಿಂದ ಧರ್ಮಕಾರ್ಯಗಳನ್ನು ಮಾಡಿಕೊಂಡು ಬಂದಿದೆ ಎಂಬುದರಲ್ಲಿ ಸಂಶಯವಿಲ್ಲ.ಮಠದ ಕಟ್ಟಡದ ಸುತ್ತಲ ಕಲ್ಲಿನ ಗೋಡೆಗಳು ಹೊರನೋಟಕ್ಕೆ ಕೋಟೆಯಾಕಾರವಾಗಿ ಕಾಣುತ್ತಾ, ಈ ಮಠದ ಭವ್ಯತೆಯನ್ನು ಸಾರುತ್ತಿವೆ. ಕಂಬಾಳುಮಠಕ್ಕೆ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಅನೇಕ ದಾನ, ದತ್ತಿಗಳು ಸಿಕ್ಕಿವೆ.

ಅನೇಕ ರಾಜ ಬಿರುದಾವಳಿಗಳು ಸಿಕ್ಕಿರುವ ಬಗ್ಗೆ ಮಠದಲ್ಲಿ ಉಲ್ಲೇಖ ಇದೆ.

ಪರಂಪರೆ: ಮಠದ ಸ್ಥಾಪಕರ ಬಗ್ಗೆ ಯಾವುದೇ ಉಲ್ಲೇಖವೂ ಸಿಗದಿರುವ ಕಾರಣ ಮಠಸ್ಥಾಪಕರು ಯಾರು ಎಂದು ತಿಳಿದಿಲ್ಲ. ಆದರೆ ಮಠದ ಪರಂಪರೆಯಲ್ಲಿ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳೇ ಮೊದಲ ಗುರುಗಳು ಎಂದು ದಾಖಲಿಸಲಾಗಿದೆ.

೧. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಎರಡನೆಯ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯಲ್ಲಿ ಮೂರುಜನ ಗುರುಗಳನ್ನು ದಾಖಲಿಸಬಹುದಾಗಿದೆ. ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಪೂಜಾ ದುರಂಧರರಾಗಿ ತ್ರಿಕಾಲ ಪೂಜೆ ಮಾಡುತ್ತಾ, ಶಿವಗಂಗೆಯ ಧಾರ್ಮಿಕ ವಾತಾವರಣವನ್ನು ಶ್ರೀಮಂತಗೊಳಿಸಿ, ಅನೇಕ ಧರ್ಮಕಾರ್ಯಗಳನ್ನು ಮಾಡಿ ಮಠವನ್ನು ಬೆಳೆಸಿ ಲಿಂಗೈಕ್ಯರಾಗಿದ್ದಾರೆ. ನಂತರ ಮಠವು ಅನೇಕ ವರ್ಷಗಳ ಕಾಲ ಮಠಾಧೀಶರಿಲ್ಲದೆ ಖಾಲಿ ಉಳಿದಿದೆ.

ಪಟ್ಟಾಧಿಕಾರ: ಉತ್ತರಾಧಿಕಾರಿಗಳು ಯಾರೂ ಇಲ್ಲದ ಕಾರಣ ಮಠವು ಜೀರ್ಣಗೊಂಡಿತ್ತು. ಇದನ್ನು ನೋಡಿದ ಭಕ್ತರು ಮತ್ತು ಮಠದ ವಂಶಸ್ಥರು ಮಠದ ಪರಂಪರೆಯ ಅಸ್ತಿತ್ವವನ್ನು ಉಳಿಸಿ ಬೆಳೆಸುವ ಸಲುವಾಗಿ ಹಾಗೂ ಭಕ್ತರ ಮಾರ್ಗದರ್ಶನಕ್ಕಾಗಿ ಗುರುಗಳು ಆವಶ್ಯಕತೆ ಇದೆ ಎಂದು ಅರಿತು, ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳಿಗೆ ಪಟ್ಟಾಧಿಕಾರವನ್ನು ಮಾಡಿದರು. ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಜೀರ್ಣಗೊಂಡ ಮಠದ ಕಟ್ಟಡವನ್ನು ದುರಸ್ತಿಪಡಿಸಿ ಸುಸ್ಥಿತಿಗೆ ತಂದರು.

ಪುತ್ರವರ್ಗದ ಪರಂಪರೆಯ ಈ ಮಠಕ್ಕೆ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ತಮ್ಮ ಸಹೋದರ ಸಂಬಂಧಿ ಶ್ರೀ ಸಿದ್ಧಲಿಂಗ ಶಿವಾಚಾರ್ಯರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿ ಲಿಂಗೈಕ್ಯರಾಗುತ್ತಾರೆ. ಚಿಕ್ಕವಯಸ್ಸಿನಲ್ಲಿಯೇ ಮಠದ ಅಧಿಕಾರವನ್ನು ವಹಿಸಿಕೊಂಡ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಗುರುಗಳು ಕೊಟ್ಟ ಅಧಿಕಾರವನ್ನು ಸಮರ್ಥವಾಗಿ ಬಳಸಿಕೊಂಡು, ಮಠವನ್ನು ಅಭಿವೃದ್ಧಿಪಡಿಸಿದರು. ಕಾಯಕಯೋಗಿಯಾಗಿ ದುಡಿದು ಮಠವನ್ನು ಆರ್ಥಿಕವಾಗಿ ಸದೃಢಪಡಿಸುವಲ್ಲಿ ಯಶಸ್ವಿಯಾದರು. ಮಠದಲ್ಲಿ ದಾಸೋಹ ಕ್ರಿಯೆ ಮತ್ತು ಧಾರ್ಮಿಕ ಕ್ರಿಯೆಗಳಿಗೆ ಹೆಚ್ಚು ಒತ್ತು ಕೊಟ್ಟು ಮಠವನ್ನು ಜನಮನದಲ್ಲಿ ಬೇರೂರುವಂತೆ ಮಾಡಿದರು. ಕಲ್ಯಾಣ ಮಂಟಪವನ್ನು ನಿರ್ಮಿಸಿ ಸಾರ್ವಜನಿಕರಿಗೆ ಅನುಕೂಲವನ್ನು ಕಲ್ಪಿಸಿ ಕೊಟ್ಟರು. ಮಠದ ಆಸ್ತಿಯನ್ನು ವಿಸ್ತರಿಸಿ ಮಠಕ್ಕೆ ನಲವತ್ತೈದು ಎಕರೆ ಜಮೀನನ್ನು ರೂಢಿಸಿಕೊಟ್ಟರು. ಈ ಎಲ್ಲಾ ಅಭಿವೃದ್ಧಿಯನ್ನು ವೈಯಕ್ತಿಕ ಪರಿಶ್ರಮದಿಂದ ಗಳಿಸಿದರು. ಭಕ್ತರು ಗುರುಗಳ ಕಾಯಕನೀತಿಯನ್ನು ನೋಡಿ ಗುರುಗಳಂತೆ ಕಾಯಕ ನಿಷ್ಠೆಯಿಂದ ಬದುಕುವುದನ್ನು ಕಲಿಯತೊಡಗಿದರು. ಈ ರೀತಿ ಗುರುಗಳು ಆದರ್ಶಬದುಕನ್ನು ರೂಪಿಸಿಕೊಂಡಿದ್ದಾರೆ.

ಗದ್ದುಗೆಗಳು: ಮಠದಲ್ಲಿ ಏಳು ಗದ್ದುಗೆಗಳು ಸ್ಥಾಪನೆಯಾಗಿವೆ. ಚಾಮರಾಜನಗರ ತಾಲ್ಲೂಕಿನ ಕೊತ್ತಲವಾಡಿಯಲ್ಲಿ ಒಂದು ಗದ್ದುಗೆ, ಹೊನ್ನಾರಯ್ಯನ ಹಳ್ಳಿಯಲ್ಲಿ ಒಂದು ಗದ್ದುಗೆಯನ್ನು ಗುರುತಿಸಲಾಗಿದೆ. ಕರ್ತೃಗುರುಗಳದ್ದೆಂದು ನಂಬಲಾಗಿರುವ ಶ್ರೀ ಸಿದ್ಧಲಿಂಗ ಸ್ವಾಮಿಗಳ ಗದ್ದುಗೆಯ ಮೇಲೆ ಬಸವನಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ.ಮಠದ ಪರಂಪರೆಯಲ್ಲಿ ಬಂದ ಗುರುಗಳವೆಂದು ಒಂಬತ್ತು ಗದ್ದುಗೆಗಳನ್ನು ಸ್ಥಾಪಿಸಲಾಗಿದ್ದರೂ, ಈಗಿನ ಗುರುಗಳು ಸೇರಿದಂತೆ ಕೇವಲ ಮೂರು ಜನ ಸ್ವಾಮಿಗಳ ಹೆಸರನ್ನು ಗುರುತಿಸಲು ಸಾಧ್ಯವಾಗಿದೆ.

ಧಾರ್ಮಿಕ ಆಚರಣೆ: ಶ್ರೀ ಮರುಳಸಿದ್ಧೇಶ್ವರ ದೇವಸ್ಥಾನದ ಬಲಭಾಗಕ್ಕೂ, ಮಲ್ಲಿಕಾರ್ಜುನ ದೇವಸ್ಥಾನದ ಎಡಭಾಗಕ್ಕೂ ಶ್ರೀ ಸಿದ್ಧಲಿಂಗೇಶ್ವರರ ಗದ್ದುಗೆ ನಿರ್ಮಾಣವಾಗಿದೆ. ಮಲ್ಲಿಕಾರ್ಜುನ ಲಿಂಗವು ನೆಲದಿಂದ ಉದ್ಭವಗೊಂಡಿದ್ದು ನೆಲದ ಮಟ್ಟದಲ್ಲಿ ಇದೆ. ಈ ಲಿಂಗಕ್ಕೆ ಶಿವರಾತ್ರಿ ಮತ್ತು ಶ್ರಾವಣ ಮಾಸದಲ್ಲಿ ರುದ್ರಾಭಿಷೇಕ ಹಾಗೂ ವಿಶೇಷ ಪೂಜೆಯನ್ನು ಮಾಡಲಾಗುತ್ತಿದೆ. ಇತ್ತೀಚೆಗೆ ಲಕ್ಷ್ಮೀದೇವಿಯನ್ನು ಪ್ರತಿಷ್ಠಾಪಿಸಲಾಗಿದೆ.

ವಿಶೇಷತೆ: ಇಲ್ಲಿನ ಪೂಜಾವಿಶೇಷತೆ ಎಂದರೆ ಸ್ವಾಮಿಗಳು ತೀರ್ಥಪ್ರಸಾದವನ್ನು ಸ್ವೀಕರಿಸಿ ನಂತರ ಇಲ್ಲಿನ ಕ್ಷೇತ್ರನಾಥ ಮಲ್ಲಿಕಾರ್ಜುನಸ್ವಾಮಿ ಮತ್ತು ಇತರೆ ದೇವರುಗಳಿಗೆ ಎಡೆ ಮಾಡಲಾಗುತ್ತಿದೆ. ಈ ಪೀಠದಲ್ಲಿ ಉಜ್ಜಯಿನಿ ಮತ್ತು ಶ್ರೀಶೈಲ ಜಗದ್ಗುರುಗಳು ಎಂಟನೆಯ ಶತಮಾನದಲ್ಲಿ ಪೂಜಾನುಷ್ಠಾನಗೊಂಡಿದ್ದರ ಬಗ್ಗೆ ಹೇಳಲಾಗುತ್ತಿದೆ. ಪುರಾತನ ಕಾಲದಿಂದ ಪರಂಪರೆಯಲ್ಲಿ ಬಂದಂತಹ ಕಳಶ ಮತ್ತು ಬಸವಣ್ಣನ ವಿಗ್ರಹಗಳು ಇದ್ದು ಇವುಗಳನ್ನು ಪೂಜಾ ಮನೆಯಲ್ಲಿಟ್ಟು ಪೂಜೆ ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕಂಬಾಳು ಸಂಸ್ಥಾನಮಠ, ಕಂಬಾಳು, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಹೊನ್ನಮ್ಮ ಗವಿಸಂಸ್ಥಾನಮಠ: ಶಿವಗಂಗೆಯ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಹೊನ್ನಮ್ಮ ಗವಿ ಸಂಸ್ಥಾನ ಮಠವು ಉಜ್ಜಯಿನಿ ಪೀಠದ ಶಾಖಾಮಠವಾಗಿ, ಶಿಷ್ಯವರ್ಗ ಪರಂಪರೆಯಲ್ಲಿ ಪುರಾತನ ಕಾಲದಿಂದಲೂ ಶಿವಗಂಗೆಯಲ್ಲಿ ಬೆಳೆದು ಬಂದಿದೆ. ಅರವತ್ತನಾಲ್ಕು ಶೀಲಗಳನ್ನು ಆಚರಿಸುತ್ತಿದ್ದ ಶಿವಶರಣೆ ಹೊನ್ನಮ್ಮ ದೇವಿಯು ಶಿವಗಂಗೆಯಲ್ಲಿದ್ದ ಕಾರಣಕ್ಕೆ ಹೊನ್ನಮ್ಮನ ಗವಿಮಠವು ಅಸ್ತಿತ್ವಕ್ಕೆ ಬಂದಿತೆಂದು ಹೇಳಲಾಗುತ್ತಿದೆ. ಹೊನ್ನಮ್ಮನು ತ್ರಿವಿಧ ದಾಸೋಹ ಮೂರ್ತಿಯಾಗಿದ್ದ ಳೆಂದು ಸಂಶೋಧಕರಾಗಿರುವ ಚನ್ನಮಲ್ಲಿಕಾರ್ಜುನರ ಅಭಿಪ್ರಾಯದ ಬಗ್ಗೆ ಚನ್ನಪ್ಪ ಎರೇಸೀಮೆಯವರು ತಮ್ಮ ಉದ್ಯಾನೇಶ ಚರಿತೆಯ ಒಂದು ಭಾಗದಲ್ಲಿ ಶಿವಗಂಗಾ ಕ್ಷೇತ್ರದ ಐತಿಹಾಸಿಕ ಘಟನೆಯನ್ನು ತಿಳಿಸಿದ್ದಾರೆ.

ಪುರಾಣ ಕಥೆ: ಆದಿಶಕ್ತಿಯಾದ ಹೊನ್ನಮ್ಮದೇವಿಯು ರಕ್ತಬೀಜಾಸುರ ರಾಕ್ಷಸನನ್ನು ಸಂಹಾರ ಮಾಡಿ ಅದೇ ಉಗ್ರ ಸ್ವರೂಪ ದಿಂದ ಮುಂದುವರೆದಳು. ನಿತ್ಯದಲ್ಲಿ ತನ್ನ ದೃಷ್ಟಿಗೆ ಬಿದ್ದ ಪ್ರಾಣಿಗಳ ರಕ್ತವನ್ನು ಹೀರಿ ಬಿಡುತ್ತಿದ್ದಳು. ಇದರಿಂದ ಜನರು ಭಯಗ್ರಸ್ತರಾಗಿದ್ದರು. ಈ ವಿಷಯವನ್ನು ಕೇಳಿದ ಉಜ್ಜಯಿನಿ ಪೀಠದ ಜಗದ್ಗುರುಗಳು (ಕ್ರಿ.ಶ.೯೦೨) ಶಿವಗಂಗೆಗೆ ಆಗಮಿಸಿದರು. ಉಗ್ರ ಸ್ವರೂಪಳಾದ ಹೊನ್ನಮ್ಮದೇವಿಯ ಬಳಿಗೆ ಹೊರಡಲು ಎಲ್ಲಾ ಜನರನ್ನು ಪ್ರೋತ್ಸಾಹಿಸಿದರು. ಜನರು ಪ್ರಾಣಭೀತರಾಗಿ ಹೆದರಿ ಯಾರೊಬ್ಬರೂ ಮುಂದಾಗಲಿಲ್ಲ.

'ತಪೋಶಕ್ತಿಬಲವನ್ನು ಪಡೆದಿದ್ದ ಜಗದ್ಗುರುಗಳು, ಲೋಕ ಕಲ್ಯಾಣಾರ್ಥ ದೇವಿಯು ಉಗ್ರರೂಪ ತಾಳಿ ಇನ್ನೂ ಶಾಂತಳಾಗದೇ ಹೋಗಿದ್ದಾಳೆ, ನೀವೆಲ್ಲಾ ನಮ್ಮ ಬೆನ್ನ ಹಿಂದೆ ಬನ್ನಿ' ಎಂದು ಬಂದಷ್ಟು ಜನರನ್ನು ಕರೆದುಕೊಂಡು ಹೊನ್ನಮ್ಮ ದೇವಿಯ ಮುಂದೆ ಬಂದು ನಿಂತು, ನಿನ್ನ ಉಗ್ರ ಸ್ವರೂಪವನ್ನು ಬಿಟ್ಟು ಶಾಂತಳಾಗಿ ಭಕ್ತರನ್ನು ಉದ್ಧರಿಸು, ನಿನ್ನ ಆರ್ಭಟಕ್ಕೆ ಜನರು ನಲುಗಿಹೋಗಿದ್ದಾರೆಂದು ಬೇಡಿಕೊಂಡರು. ಆಗ ದೇವಿಯು 'ನೀವು ಎಂತಹ ಮಹಾನುಭಾವ! ನನ್ನ ಉಗ್ರ ಶಕ್ತಿಯನ್ನು ನೀಗಿಸಿ ಶಾಂತಿಯನ್ನೊದಗಿಸಿದೆ' ಎಂದು ನಮಸ್ಕರಿಸಿದಳು. ಈ ಪವಾಡವು ನಡೆದ ಮೇಲೆ ಉಜ್ಜಯಿನಿಜಗದ್ಗುರುಗಳು ತಮ್ಮ ಪೀಠದ ಶಾಖಾಮಠವನ್ನು ಸ್ಥಾಪಿಸಿ 'ಹೊನ್ನಮ್ಮ ಗವಿಮಠ'ಎಂದು ಹೆಸರಿಟ್ಟು, ಈ ಮಠದ ಮಂದಿರದಲ್ಲಿ ಹೊನ್ನಮ್ಮದೇವಿ ಯನ್ನು ನೆಲೆಗೊಳಿಸಲಾಗಿದೆ ಎಂದು ಶ್ರೀಶ್ರೀ ೧೦೮ ಜಗದ್ಗುರು ಶ್ರೀ ಸಿದ್ಧಲಿಂಗ ಶಿವಯೋಗೀಶ್ವರ ಪುರಾಣದಲ್ಲಿ ಕರ್ತೃಗಳು ಸ್ಪಷ್ಟವಾಗಿ ಉಲ್ಲೇಖಿಸಿರುವುದನ್ನು ಶಿವಗಂಗಾ ಕ್ಷೇತ್ರ ದರ್ಶನದಲ್ಲಿ ಎಸ್.ಎಂ.ಎಸ್. ಶಿವಾಚಾರ್ಯರು ದಾಖಲಿಸಿದ್ದಾರೆ.

ಅಸ್ತಿತ್ವದ ಮಠ: ಹೊನ್ನಮ್ಮಗವಿಮಠದ ಮೂಲ ಕಟ್ಟಡವು ಶಿವಗಂಗೆಯ ಬೆಟ್ಟದ ಮೇಲೆ ಇದ್ದು ಇತ್ತೀಚೆಗೆ ಬೆಟ್ಟದ ತಪ್ಪಲಿನಲ್ಲಿ ಹೊಸ ಕಟ್ಟಡವನ್ನು ನಿರ್ಮಿಸಿ ಮಠಾಧೀಶ್ವರರು ಇಲ್ಲಿಯೇ ವಾಸ್ತವ್ಯ ಮಾಡಿಕೊಂಡಿದ್ದು ವಿಶೇಷ ಸಂದರ್ಭಗಳಲ್ಲಿ, ಮೂಲ ಮಠಕ್ಕೆ ಹೋಗಿ ಬರುತ್ತಾರೆ.ಹೊನ್ನಮ್ಮನ ಗವಿ ಮಠಕ್ಕೆ ಮತ್ತು ಹೊನ್ನಮ್ಮದೇವಿ ಮಂದಿರಕ್ಕೆ ಅವಿನಾಭಾವ ಸಂಬಂಧ ಇದ್ದು ಇಂದಿಗೂ ನಿತ್ಯ ಪೂಜಾ ಕಾರ್ಯಗಳನ್ನು ನಡೆಸಿಕೊಂಡು ಬರಲಾಗುತ್ತಿದೆ.

ಉಜ್ಜಯಿನಿ ಜಗದ್ಗುರುಗಳಿಂದ ಪ್ರಾರಂಭಗೊಂಡ ಮಠದಲ್ಲಿ ಅನೇಕ ಗುರುಗಳು ಅಧಿಕಾರ ನಡೆಸಿದ ಬಗ್ಗೆ ಹೇಳಲಾಗುತ್ತಿದೆ. ಆದರೆ ಇದಕ್ಕೆ ಸಂಬಂಧಪಟ್ಟ ದಾಖಲೆಗಳು ಇಲ್ಲವಾಗಿವೆ.ಶ್ರೀ ಗಂಗಾಧರೇಶ್ವರ ಶಿವಾಚಾರ್ಯ ಸ್ವಾಮಿಗಳೆಂದು ಮಠದ ಎಲ್ಲಾ ಗುರುಗಳಿಗೆ ಪಟ್ಟಾಭಿಷೇಕದ ಕಾಲದಲ್ಲಿ ಅಭಿಧಾನ ಮಾಡಿ ಅಧಿಕಾರಕ್ಕೆ ತರಲಾಗುತ್ತಿರುವ ಕಾರಣ, ಮಠದ

ಹಿಂದಿನ ಗುರುಗಳ ಹೆಸರುಗಳನ್ನು ದಾಖಲಿಸಲು ಅಸಾಧ್ಯವಾಗಿದೆ. ಈ ಮಠದ ಪರಂಪರೆಯ ಹಿಂದಿನ ಮೂರನೆಯ ತಲೆಮಾರಿನಿಂದ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ಎಂಬ ನಾಮಾಭಿಧಾನ ಮಾಡುವುದನ್ನು ನಿಲ್ಲಿಸಲಾಗಿದ್ದು,ಬದಲಾದ ಸಂಪ್ರದಾಯದ ನಂತರ ಬೇರೆ ಬೇರೆ ಹೆಸರಲ್ಲಿ ಗುರುಗಳಿಗೆ ಪಟ್ಟಾಧಿಕಾರವನ್ನು ಮಾಡಲಾಗಿದೆ.

ಪರಂಪರೆ:

೧. ಷ.ಬ್ರ.ಶ್ರೀ ಗಂಗಾಧರೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಈತನಕ ಬೆಳೆದು, ಮಠದ ಪಾರಂಪರಿಕ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ ಬಂದಿದೆ. ೧೯೪೪ರಲ್ಲಿ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳಿಗೆ ಪಟ್ಟಾಧಿಕಾರದ ಸಂದರ್ಭದಲ್ಲಿ ಬೆಟ್ಟದ ತಪ್ಪಲಿನಲ್ಲಿ ಮಠದ ಕಟ್ಟಡವನ್ನು ಸ್ಥಾಪಿಸಿ, ನೂತನ ಕಟ್ಟಡದಲ್ಲಿ ಪಟ್ಟಾಧಿಕಾರವನ್ನು ಮಾಡಲಾಯಿತು. ಶ್ರೀ ಸಿದ್ಧಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು ತಮ್ಮ ಆಡಳಿತದ ಅವಧಿಯಲ್ಲಿ ಮಠವನ್ನು ಅಭಿವೃದ್ಧಿಪಡಿಸಿ ಮಠಕ್ಕೆ ಆರ್ಥಿಕ ಸದೃಢತೆಯನ್ನು ತಂದುಕೊಟ್ಟಿದ್ದಾರೆ. ಐವತ್ತೆರಡು ವರ್ಷಗಳ ಕಾಲ ದೀರ್ಘ ಆಡಳಿತವನ್ನು ನಡೆಸಿದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಶ್ರೀರುದ್ರಮುನಿ ಶಿವಾಚಾರ್ಯ ಸ್ವಾಮಿಗಳನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ಆಯ್ಕೆಮಾಡಿಕೊಂಡು, ೧೯೯೭ರ ನವೆಂಬರ್ ಮೂರರಂದು ಪಟ್ಟಾಧಿಕಾರವನ್ನು ನೀಡಿದ್ದಾರೆ.

ಶಿವಗಂಗೆ ಮತ್ತು ಸಿದ್ಧಗಂಗೆಯಲ್ಲಿವಿದ್ಯಾಭ್ಯಾಸ ಮಾಡಿದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ತಮ್ಮ ಹಿಂದಿನ ಗುರುಗಳ ಕಾಲದಲ್ಲಿ ಸಂಪಾದಿಸಿದ್ದ ಅರವತ್ತೇಳು ಎಕರೆ ಜಮೀನನ್ನು ಅಭಿವೃದ್ಧಿಪಡಿಸಿ ಮಠಕ್ಕೆ ಆದಾಯ ತರುವ ಮೂಲವನ್ನಾಗಿ ಮಾಡಿಕೊಂಡಿದ್ದಾರೆ. ಜತೆಗೆ ಭಕ್ತರ ಸಂಸ್ಕಾರಕ್ಕಾಗಿ ಪೂಜಾನುಷ್ಠಾನಗೊಂಡು ಮಠ ಮತ್ತು ಭಕ್ತರನ್ನು ಬೆಳೆಸುತ್ತಾ ಬಂದಿದ್ದಾರೆ.

ಧಾರ್ಮಿಕ ಆಚರಣೆ: ಹೊನ್ನಮ್ಮ ಮತ್ತು ಗಂಗಾಧರೇಶ್ವರದೇವಾಲಯದಲ್ಲಿ ಪೂಜೆ ಹಾಗೂ ಮಠದ ಪರಂಪರೆಯ ಎಂಟು ಗದ್ದುಗೆಗಳನ್ನು ನವೀಕರಿಸಿ ಪೂಜೆಗೆ ವ್ಯವಸ್ಥೆ ಮಾಡಲಾಗಿದೆ.ಮಠದ ಇತಿಹಾಸವನ್ನು ಹೇಳುವ ಈ ಕುರುಹುಗಳನ್ನು ಸಂರಕ್ಷಿಸಲಾಗಿದೆ. ಪುರಾತನ ಇತಿಹಾಸವಿರುವ ಈ ಮಠದ ಪ್ರಭಾವಕ್ಕೆ ಒಳಗಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರು ಮಠದ ಗುರುಗಳಿಗೆ ಅನೇಕ ಬಿರುದಾವಳಿಗಳನ್ನು ನೀಡಿ, ಮಠದ ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಸಮಾಜದಲ್ಲಿ ಶಾಂತಿ ನೆಲೆಸಿ, ಜನರು ಸನ್ಮಾರ್ಗದಲ್ಲಿ ಹೋಗಲು ನೆರವಾಗಲೆಂದು ಮಠಕ್ಕೆ ಜಮೀನನ್ನು ಜಹಗೀರಾಗಿ ನೀಡಿದ್ದಾರೆ. ಈ ಎಲ್ಲಾ ಮೂಲಗಳ ಸಂಪತ್ತನ್ನು ಅಭಿವೃದ್ಧಿಪಡಿಸಿ ಮಠಕ್ಕೆ ಹೆಚ್ಚು ಆದಾಯ ಬರುವಂತೆ ಮಾಡಲಾಗಿದೆ.

ಶಿಕ್ಷಣ: ಧಾರ್ಮಿಕವಾಗಿ ಮತ್ತು ಸಾಮಾಜಿಕವಾಗಿ ಹೆಚ್ಚು ಹೆಸರು ಪಡೆದಿರುವ ಮಠವು ಶೈಕ್ಷಣಿಕ ಕ್ಷೇತ್ರಕ್ಕೂ ಕೈ ಹಾಕಿ ಪ್ರೌಢಶಾಲೆ, ಪದವಿ ಪೂರ್ವ ಕಾಲೇಜು ಮತ್ತು ಸಂಸ್ಕೃತ ಪಾಠಶಾಲೆಗಳನ್ನು ಪ್ರಾರಂಭಿಸಿದೆ. ಗ್ರಾಮಾಂತರ ಮಕ್ಕಳ ಕಲಿಕೆಗೆ ನೆರವಾಗಲೆಂದು ವಿದ್ಯಾರ್ಥಿನಿಲಯವನ್ನು ಶಿವಗಂಗೆಯಲ್ಲಿ ಪ್ರಾರಂಭಿಸಲಾಗಿದೆ.

ವಿಳಾಸ: ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹೊನ್ನಮ್ಮಗವಿ ಸಂಸ್ಥಾನ ಮಠ, ಶಿವಗಂಗೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಆಧಾರ: 'ಶಿವಗಂಗಾಕ್ಷೇತ್ರ ದರ್ಶನ' ಲೇಖಕರು : ಎಸ್.ಎಂ.ಎಸ್ ಶಿವಾಚಾರ್ಯರು

❑

ಮಾಗಡಿ ತಾಲ್ಲೂಕು

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ ತಾಲ್ಲೂಕು ಐತಿಹಾಸಿಕ ಪ್ರಸಿದ್ಧ ಸ್ಥಳ. ಇಲ್ಲಿನ ಗೌಡ ದೊರೆಗಳು ಈ ತಾಲ್ಲೂಕನ್ನು ಶ್ರೀಮಂತಗೊಳಿಸಿದ್ದಾರೆ. ಇಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆದಿದೆ. ಈವರೆಗೆ ಸುಮಾರು ಇಪ್ಪತ್ತೆಂಟು ಮಠಗಳು ಅಸ್ತಿತ್ವದಲ್ಲಿದ್ದವೆಂದು ಹೇಳಲಾಗುತ್ತದೆ. ಇಂದು ಹತ್ತು ಮಠಗಳು ಮಾತ್ರ ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿವೆ.

ಕಣ್ವನೂರು

ಮಾಗಡಿ ತಾಲ್ಲೂಕಿನ ಕಣ್ವನೂರು ತಾಲ್ಲೂಕು ಕೇಂದ್ರದ ಉತ್ತರ ಭಾಗಕ್ಕಿದೆ. ಸಾರ್ವಜನಿಕ ಸೌಲಭ್ಯಗಳಾದ ರಸ್ತೆ ಸಂಪರ್ಕವೂ ಇಲ್ಲದೆ ದುಸ್ಥಿತಿಯಲ್ಲಿರುವ ಮಣ್ಣಿನ ರಸ್ತೆಯಲ್ಲಿ ಕಣ್ವನೂರು ಗ್ರಾಮದಿಂದ ಉತ್ತರಕ್ಕೆ ಒಂದು ಕಿ.ಮೀ. ದಾರಿ ಸವೆಸಿದರೆ ಸಿಗುವ ಮಠವೇ ಮಕ್ಕಳ ಶಾಂತೇಶ್ವರ ಮಠವಾಗಿದೆ.

ಮಕ್ಕಳ ದೇವರಮಠ: ಕಣ್ವನೂರು ಗ್ರಾಮದ ಹೊರಭಾಗದಲ್ಲಿ ಶ್ರೀ ಮಕ್ಕಳ ದೇವರಮಠವು ಸ್ಥಾಪನೆಯಾಗಿದೆ. ಅನಾಥ ಮಕ್ಕಳನ್ನು ಈ ಮಠಕ್ಕೆ ತಂದು ಯಾರಿಗೂ ಗೊತ್ತಿಲ್ಲದಂತೆ ಮಠದ ಜಗುಲಿಯ ಮೇಲೆ ಬಿಟ್ಟು ಹೋಗುತ್ತಿದ್ದರಂತೆ. ಇದನ್ನು ಗಮನಿಸಿದ ಗುರುಗಳು ಈ ಅನಾಥ ಮಕ್ಕಳನ್ನು ಸಾಕಿ ಸಂಸ್ಕಾರವಂತ ಶಿಶುಗಳನ್ನಾಗಿ ಬೆಳೆಸುತ್ತಿದ್ದರು. ನಾಡಿನ ಎಲ್ಲಾ ಭಾಗಗಳಿಗೆ ಈ ವಿಚಾರ ಹರಡಿ ರೂಢಿಗತವಾಗಿ ಈ ಮಠವನ್ನು 'ಶ್ರೀ ಮಕ್ಕಳದೇವರ ಮಠ' ಎಂದೂ, ಈ ಮಠದ ಗುರುಗಳಾದ ಶ್ರೀ ಶಾಂತೇಶ್ವರ ಸ್ವಾಮಿಗಳಿಗೆ'ಮಕ್ಕಳ ಶಾಂತೇಶ್ವರ ಸ್ವಾಮಿ'ಗಳೆಂದೂ ಹೆಸರು ಬಂದಿದೆ. ಈ ವಿಚಾರವನ್ನು ತಿಳಿದ ಮೈಸೂರು ಅರಸರ ವಂಶಸ್ಥರ ತಾಯಿ ಒಬ್ಬರು ಈ ಮಠಕ್ಕೆ ಬಂದು ಸೇರಿಕೊಂಡು ಗುರುಗಳ ಈ ಸಾಮಾಜಿಕ ಕಾರ್ಯಕ್ಕೆ ಸಹಕರಿಸತೊಡಗಿದರು. ಆಗಿನ ಮೈಸೂರು ಅರಸರಾದ ನಂಜರಾಜ ಒಡೆಯರು ಈ ಕಾರ್ಯವನ್ನು ನೋಡಲೆಂದು ತನ್ನ ಪರಿವಾರ ಸಮೇತ ಬಂದು ಇಲ್ಲಿನ ಸಾಮಾಜಿಕ ಕಾರ್ಯವನ್ನು ನೋಡಿ ಇಲ್ಲಿನ ಧಾರ್ಮಿಕ ಹಾಗೂ ಸಾಮಾಜಿಕ ಚಟುವಟಿಕೆಗೆ ನೆರವಾಗಲೆಂದು ಹೊನ್ನಾಪುರ, ಹುಲಿಕಲ್ಲು ಗ್ರಾಮಗಳನ್ನು ಇಲ್ಲಿನ ಪಾಳೆಗಾರರಿಂದ ಖರೀದಿಸಿ ಈ ಎರಡು ಗ್ರಾಮಗಳನ್ನು ಉಂಬಳಿಯಾಗಿ ನೀಡಿ, ಗುರುಗಳಿಂದ ನಾಲ್ಕುದಿಕ್ಕಿಗೆ ಲಿಂಗಮುದ್ರೆ ಕಲ್ಲುಗಳನ್ನು ಹಾಕಿಸಿದರೆಂದು ಹೇಳಲಾಗುತ್ತಿದೆ.

ಮಠಸ್ಥಾಪನೆ: ವಿರಕ್ತ ಸಂಪ್ರದಾಯದ ಮುರಘಾಸಮಯಕ್ಕೆ ಸೇರಿದ ಈ ಮಠದ ಪಕ್ಕದಲ್ಲಿರುವ ಗವಿಯಲ್ಲಿ ಕಣ್ವಋಷಿಗಳು ತಪಸ್ಸುಮಾಡಿದ ಬಗ್ಗೆ ಪುರಾಣ ಕಥೆ ಕೇಳಿಬರುತ್ತದೆ. ಕಣ್ವಋಷಿಗಳು ತಪಸ್ಸುಮಾಡಿದ ಕಾರಣದಿಂದಾಗಿ ಈ ಗ್ರಾಮಕ್ಕೆ 'ಕಣ್ವನೂರು' ಎಂದು ಹೆಸರು ಬಂದಿದೆ.ಇಂತಹ ಪುರಾಣ ಪ್ರಸಿದ್ಧ ಸ್ಥಳದ ಮಹತ್ವವನ್ನು ಅರಿತ ಶ್ರೀ ಶಾಂತೇಶ್ವರ ಸ್ವಾಮಿಗಳು ಲೋಕಸಂಚಾರ ಕ್ಕೆಂದು ಬಂದವರು ಈ ಸ್ಥಳದಲ್ಲಿ ಸ್ಥಾಪನೆಯಾಗಿದ್ದ ಗವಿಯಲ್ಲಿ ತಪಸ್ಸಿಗೆ ಕುಳಿತರು. ಈ ಸಂದರ್ಭದಲ್ಲಿ ಸುತ್ತಲಿನ ಗ್ರಾಮಗಳಲ್ಲಿ ಚೌಡೇಶ್ವರಿ ಎಂಬ ರಾಕ್ಷಸಿ ಕಿರುಕುಳ ನೀಡುತ್ತಿತ್ತು. ಶ್ರೀ ಶಾಂತೇಶ್ವರ ಸ್ವಾಮಿಗಳು ಅನುಷ್ಠಾನ ಕುಳಿತ ವಿಚಾರ ಸುತ್ತಲಿನ ಗ್ರಾಮಸ್ಥರಿಗೆ ತಿಳಿದು ಗುರುಗಳಲ್ಲಿಗೆ ಬಂದು ಶರಣಾಗಿ ತಮ್ಮ ಕಷ್ಟಗಳನ್ನು ನಿವೇದಿಸಿಕೊಂಡು ಪರಿಹರಿಸ ಬೇಕೆಂದುಬೇಡಿಕೊಳ್ಳುತ್ತಾರೆ. ಆಗ ಗುರುಗಳು ಭಕ್ತರಿಗೆ ಆಶೀರ್ವದಿಸಿ ಭಕ್ತರ ಮುಂದೆಯೇ ಚೌಡಿಯನ್ನು ಆಹ್ವಾನಿಸಿ ತಮ್ಮ ತಪೋದೃಷ್ಟಿಯಿಂದ ಶಾಂತಳನ್ನಾಗಿ ಮಾಡಿ ತಮ್ಮ ಭಕ್ತಳನ್ನಾಗಿಸಿಕೊಂಡರು. ತಾವು ಕುಳಿತಿದ್ದ ಗವಿಯ ಬಳಿ ಚೌಡೇಶ್ವರಿಗೆ ದೇವಾಲಯವನ್ನು ಕಟ್ಟಿಸಿ ಇಲ್ಲಿ ನೆಲೆಗೊಳ್ಳಿಸಿ ಪ್ರತಿನಿತ್ಯ ಪೂಜೆ ನಡೆಯುವಂತೆ ವ್ಯವಸ್ಥೆಯನ್ನು ಮಾಡಿದರು.

ಈ ಪವಾಡವನ್ನು ಕಣ್ಣಾರೆ ನೋಡಿದ ಭಕ್ತರು ಗುರುಗಳ ಅಸಾಮಾನ್ಯ ಶಕ್ತಿಗೆ ಶರಣಾಗಿ ಗುರುಗಳ ಭಕ್ತರಾದರು. ಶ್ರೀ ಶಾಂತೇಶ್ವರ ಸ್ವಾಮಿಗಳು ದಿನಕ್ಕೊಂದು ಪವಾಡವನ್ನು ಮಾಡಿ ಈ ಪ್ರಾಂತ್ಯದಲ್ಲಿ ಧಾರ್ಮಿಕ ಸಂಸ್ಕಾರ ನೆಲೆಗೊಳ್ಳುವಂತೆ ಮಾಡಿದರು. ಅಲ್ಲದೆ ಇದೇ ಭೂಮಿಯನ್ನು ತಮ್ಮ ಕಾರ್ಯ ಕ್ಷೇತ್ರವನ್ನಾಗಿ ಮಾಡಿಕೊಂಡು ಮಠ ಸ್ಥಾಪನೆ ಮಾಡಿದರು ಎಂದು ಹೇಳಲಾಗುತ್ತಿದೆ.

ಖಾಲಿ ಉಳಿದ ಮಠ: ಶ್ರೀ ಶಾಂತೇಶ್ವರ ಸ್ವಾಮಿಗಳು ಅನೇಕ ವರ್ಷಗಳ ಕಾಲ ಧಾರ್ಮಿಕ ಆಚರಣೆಗಳನ್ನು ನಡೆಸಿ ವೀರಶೈವ ಧರ್ಮವು ಹೆಚ್ಚು ಬೆಳೆಯುವಂತೆ ಮಾಡಿದರು. ಅಷ್ಟಾವರಣ, ಪಂಚಾಚಾರ ಹಾಗೂ ಷಟ್‌ಸ್ಥಲಗಳ ಬಗ್ಗೆ ಜನರಿಗೆ ತಿಳಿವಳಿಕೆ ನೀಡಿ ವೀರಶೈವಧರ್ಮವನ್ನು ಸೈದ್ಧಾಂತಿಕವಾಗಿ ನೆಲೆಗೊಳಿಸಿದರು. ಈ ಪ್ರಾಂತ್ಯದಲ್ಲಿ ವೀರಶೈವಧರ್ಮವನ್ನು ಬೆಳೆಸಿದ ಗುರುಗಳು ಲಿಂಗೈಕ್ಯರಾದ ಮೇಲೆ ಮಠಾಧೀಶರಿಲ್ಲದ ಕಾರಣ ಮಠವು ಬಹಳ ವರ್ಷಗಳ ಕಾಲ ಖಾಲಿ ಉಳಿಯುತ್ತದೆ. ಈ ಸಂದರ್ಭದಲ್ಲಿಕರ್ತೃಗುರುಗಳ ಗದ್ದುಗೆಗೆ ನಿತ್ಯ ಪೂಜೆ, ಧಾರ್ಮಿಕ ಚಟುವಟಿಕೆಗಳನ್ನು ಭಕ್ತರೇ ನಡೆಸಿಕೊಂಡು ಬಂದರು.

ಪರಂಪರೆ:

೧. ಶ್ರೀ ಮ.ನಿ.ಪ್ರ ಶಾಂತೇಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ ನಿರಂಜನ ಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಶಾಂತವೀರಸ್ವಾಮಿಗಳು (ಹಿರಿಯ ಗುರುಗಳು)
೪. ಶ್ರೀ ಮ.ನಿ.ಪ್ರ ಮೃತ್ಯುಂಜಯ ಸ್ವಾಮಿಗಳು (ಈಗಿನ ಗುರುಗಳು)

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಶ್ರೀ ಶಾಂತೇಶ್ವರ ಸ್ವಾಮಿಗಳ ನಂತರ ದಶಕಗಳ ಕಾಲ ಖಾಲಿ ಉಳಿದಿದ್ದ ಮಠಕ್ಕೆ ಶ್ರೀ ನೀರಂಜನ ಸ್ವಾಮಿಗಳು ಅಧಿಕಾರ ವಹಿಸಿಕೊಂಡು ೧೯೪೪ರಲ್ಲಿ ಲಿಂಗೈಕ್ಯರಾಗಿದ್ದಾರೆ. ಶ್ರೀ ನಿರಂಜನ ಸ್ವಾಮಿಗಳು ತಮ್ಮ ಜೀವಿತಾವಧಿಯಲ್ಲಿ ಉತ್ತರಾಧಿಕಾರಿಗಳನ್ನು ನೇಮಿಸಿ ೧೯೪೨ರ ಮೇ ಹತ್ತರಂದು ಪಟ್ಟಾಧಿಕಾರ ಮಾಡಿರುತ್ತಾರೆ. ಹಿರಿಯ ಗುರುಗಳ ಆಶೀರ್ವಾದದಿಂದ ಪಟ್ಟಾಧಿಕಾರಕ್ಕೆ ಬಂದ ಶ್ರೀ ಶಾಂತವೀರಸ್ವಾಮಿಗಳು ೧೯೮೭ರ ತನಕ ದೀರ್ಘ ಕಾಲದ ಆಡಳಿತದಲ್ಲಿ ಮಠವನ್ನು ಶ್ರೀಮಂತಗೊಳಿಸಿದ್ದಾರೆ. ೧೯೮೭ ರ ಮೇ ಹತ್ತರಂದು ಪಟ್ಟಾಧಿಕಾರ ವಹಿಸಿಕೊಂಡಿರುವ ಶ್ರೀ ಮೃತ್ಯುಂಜಯ ಸ್ವಾಮಿಗಳು ಮಠದ ಪರಂಪರೆಗೆ ಅನುಗುಣವಾಗಿ ಎಲ್ಲಾ ಗುರುಗಳ ಮೇಲ್ಪಂಕ್ತಿಯಲ್ಲಿ ಬೆಳೆದಿದ್ದಾರೆ.

ಗದ್ದುಗೆಗಳು: ಕರ್ತೃಗುರುಗಳ ಗದ್ದುಗೆಯು ಸೇರಿದಂತೆ ಒಟ್ಟು ಆರು ಗದ್ದುಗೆಗಳು ನಿರ್ಮಾಣಗೊಂಡಿವೆ. ಮಠದ ಪರಂಪರೆಯಲ್ಲಿ ಬಂದಂತಹ ಶ್ರೀ ನಿರಂಜನ ಸ್ವಾಮಿಗಳಿಗಿಂತ ಮೊದಲು ನಾಲ್ಕು ಜನ ಗುರುಗಳು ಅಧಿಕಾರ ನಡೆಸಿದ್ದಾರೆ ಎಂಬುದಕ್ಕೆ ಇದು ಪುಷ್ಟಿ ನೀಡುತ್ತದೆ. ಶ್ರೀ ನಿರಂಜನ ಸ್ವಾಮಿಗಳಿಗಿಂತ ಮೊದಲು ಅಧಿಕಾರ ನಡೆಸಿದ ಗುರುಗಳ ಹೆಸರುಗಳು ಲಭ್ಯವಾಗಿಲ್ಲ.

ಅಭಿವೃದ್ಧಿ ಕಾರ್ಯಗಳು: ಮಠವು ರಾಜಾಶ್ರಯದಿಂದ ಬೆಳೆದು ಶ್ರೀಮಂತಿಕೆಯನ್ನು ಉಳಿಸಿಕೊಂಡು ಬಂದಿದೆ. ಮೈಸೂರಿನ ಅರಸರು ಕೊಟ್ಟಂತಹ ಇನಾಂ ಜಮೀನಿನಲ್ಲಿ ಈಗ ಅರವತ್ತು ಎಕರೆ ಜಮೀನು ಮಾತ್ರ ಉಳಿದಿದೆ. ಈ ಭೂಮಿಯನ್ನೇ ಆಧುನಿಕ ರೀತಿಯಲ್ಲಿ ಅಭಿವೃದ್ಧಿಪಡಿಸಿ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ಈ ಆದಾಯ ಹಾಗೂ ಭಕ್ತರ ನೆರವು ಪಡೆದು ಮಠಕ್ಕೆ ಹೊಸಕಟ್ಟಡವನ್ನು ಕಟ್ಟಿಸಲಾಗಿದೆ. ಹಳೆಯ ಕಟ್ಟಡವನ್ನು ಸ್ಮಾರಕವಾಗಿ ಉಳಿಸಿಕೊಂಡಿದ್ದಾರೆ. ಜತೆಗೆ ಮಠದ ಸಮೀಪದಲ್ಲಿರುವ ಗವಿಯನ್ನು ಸಂರಕ್ಷಿಸಲಾಗಿದೆ.

ಪುರಾತನ ಐತಿಹ್ಯಗಳು: ಮೈಸೂರು ಅರಸರು ಶ್ರೀ ಶಾಂತೇಶ್ವರರ ಕಾಲದಲ್ಲಿ ಉಂಬಳಿಯಾಗಿ ನೀಡಲಾಗಿದ್ದ ಆಸ್ತಿ ವಿವರಗಳ ಬಗ್ಗೆ ತಾಮ್ರ ಶಾಸನ ಹಾಗೂ ಮಠದ ಕೆಲವು ದಾಖಲೆಗಳು ಅಧ್ಯಯನಕ್ಕಾಗಿ ಚಿತ್ರದುರ್ಗ ಬೃಹನ್ಮಠದಲ್ಲಿ ಇವೆಯೆಂದು ಹಿರಿಯ ಗುರುಗಳು ತಿಳಿಸಿದ್ದಾರೆ. ಮೈಸೂರು ಅರಸರು ಹೊನ್ನಾಪುರ, ಹುಲಿಕಲ್ಲು ಗ್ರಾಮಗಳ ಪಾಳೆಗಾರರಿಂದ ಖರೀದಿಸಿ ಮಠಕ್ಕೆ ನೀಡುವ ಸಂದರ್ಭದಲ್ಲಿ ನೀಡಲಾಗಿದ್ದ ಹದಿನಾರು ಮುದ್ರೆ ಕಲ್ಲುಗಳು ಈಗ ಮಠದಿಂದ ಪೂಜೆಗೆ ಒಳಗಾಗಿವೆ. ಅಲ್ಲದೆ ಮಠದ ಐತಿಹ್ಯಗಳಾಗಿ ಉಳಿದಿವೆ.

ವಿಳಾಸ: ಶ್ರೀ ಮ.ನಿ.ಪ್ರ ಮೃತ್ಯುಂಜಯ ಸ್ವಾಮಿಗಳು, ಶ್ರೀ ಮಕ್ಕಳ ದೇವರಮಠ, ಕಣ್ವನೂರು, ಮಾಗಡಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಕಲ್ಯ (ಕಲ್ಲೆಯ)

ಮಾಗಡಿ ತಾಲ್ಲೂಕಿನ ಕಲ್ಯ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಇದೆ. ಈ ಗ್ರಾಮವು ಶಿವಶರಣರು ಬದುಕಿದ

ಪುಣ್ಯ ಸ್ಥಳವಾಗಿದೆ. ಶ್ರೀ ಸೋಮನಾಥನು ಇಲ್ಲಿಗೆ ತನ್ನ ಕೊನೆದಿನಗಳನ್ನು ಕಳೆದು ಲಿಂಗೈಕ್ಯನಾಗಿ ಈ ಗ್ರಾಮಕ್ಕೆ ಐತಿಹಾಸಿಕ ಸ್ಥಾನವನ್ನು ಕಲ್ಪಿಸಿಕೊಟ್ಟಿದ್ದಾನೆ. ಇಲ್ಲಿ ಶ್ರೀ ಜಂಗಮಮಠವು ಅಸ್ತಿತ್ವದಲ್ಲಿದೆ.

ಜಂಗಮಮಠ: ಕಲ್ಯ ಗ್ರಾಮದ ಬೆಟ್ಟದ ಮೇಲೆ ಸರ್ವಶೀಲ ಚೆನ್ನಮ್ಮನವರು ಸ್ಥಾಪಿಸಿದ, ಶ್ರೀ ರಂಭಾಪುರಿಪೀಠದ ಶಾಖಾ ಮಠವಾದ ಜಂಗಮ ಮಠವು ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದು ಬಂದಿದೆ.

ಶಿವಶರಣೆ ಚೆನ್ನಮ್ಮ: ವೀರಶೈವರ ಅರವತ್ತನಾಲ್ಕು ಶೀಲಗಳನ್ನು ಆಚರಿಸುತ್ತಾ ಲಿಂಗಜಂಗಮ ದಾಸೋಹ ಮಾಡುತ್ತಾ ಸರ್ವಶೀಲೆ ಚೆನ್ನಮ್ಮ ಬಹಳ ಪ್ರಸಿದ್ಧಿಯಾಗಿದ್ದಳು. ಇವಳನ್ನು ನೋಡುವ ಅಪೇಕ್ಷೆಯಿಂದಲೇ ಶ್ರೀಶೈಲದಲ್ಲಿದ್ದು ಬಸವಪುರಾಣವನ್ನು ತೆಲುಗುಭಾಷೆಯಲ್ಲಿ ಬರೆದ ಪಾಲ್ಕುರಿಕೆ ಸೋಮನಾಥರು ಮಾಗಡಿ ತಾಲ್ಲೂಕಿನ ಕಲ್ಯಕ್ಕೆ ಬರುತ್ತಾರೆ. ಶಿವಶರಣೆ ಚೆನ್ನಮ್ಮನವರ ಅರವತ್ತನಾಲ್ಕು ಶೀಲಗಳ ಆಚರಣೆಯನ್ನು ಕಂಡು ಮಂತ್ರಮುಗ್ಧರಾಗಿ ನಮಸ್ಕರಿಸುತ್ತಾರೆ. ಕಲ್ಲೆಯದ ವೈಭವವನ್ನು ನೋಡಿ ಆನಂದಿಸಿ ಪಾಲ್ಕುರಿಕೆ ಸೋಮನಾಥರು ಹೊರಡಲು ಅನುವಾದರು. ಆಗ ಚೆನ್ನಮ್ಮ ಸಮ್ಮತಿಸಲಿಲ್ಲ. ಆದರೂ ಪಾಲ್ಕುರಿಕೆ ಸೋಮನಾಥರು ಹೊರಡಲು ಗಾಡಿಯ ಮೇಲೇರಿ ಕುಳಿತುಕೊಂಡರು. ಆದರೆ ಎತ್ತುಗಳು ಸುತಾರಾಂ ಮುಂದೆ ಹೋಗದೆ ಕಲ್ಲು ಬಸವನಂತೆ ನಿಂತುಕೊಂಡವು. ತಮ್ಮ ತಪ್ಪಿನ ಅರಿವಾಗಿ ಸೋಮನಾಥರು ಕೆಳಗಿಳಿದರು. ಆಗ ಚೆನ್ನಮ್ಮ 'ನೀವು ಈ ಕ್ಷೇತ್ರದಲ್ಲಿ ನೆಲೆ ನಿಂತು ಜೀವನವನ್ನು ಕಳೆಯಬೇಕು ' ಎಂದು ಒಪ್ಪಿಗೆ ಪಡೆದು ಕಲ್ಲೆಯ ಬೆಟ್ಟದ ಗವಿಯಲ್ಲಿ ಜೀವಂತ ಸಮಾಧಿಯಾಗಿದ್ದಾಳೆ.

ನೆಲೆನಿಂತ ಸೋಮನಾಥರು: ಇಂತಹ ಪವಿತ್ರ ಕ್ಷೇತ್ರದಲ್ಲಿ ನೆಲೆನಿಂತ ಪಾಲ್ಕುರಿಕೆ ಸೋಮನಾಥರು, ಚೆನ್ನಮ್ಮನವರು ಮಾಡುತ್ತಿದ್ದ ಧಾರ್ಮಿಕ ಕಾರ್ಯಗಳನ್ನು ಮುಂದುವರೆಸಿ, ಚೆನ್ನಮ್ಮನ ವಂಶಸ್ಥರಲ್ಲಿ ಒಬ್ಬರಿಗೆ ಈ ಮಠದ ಪಟ್ಟಾಧಿಕಾರವನ್ನು ನೀಡಿ ಮಠದ ಪರಂಪರೆಯನ್ನು ಬೆಳೆಸಲು ನಾಂದಿಹಾಡಿ, ಕಲ್ಯೆಯದಲ್ಲಿಯೇ ಲಿಂಗೈಕ್ಯರಾಗುತ್ತಾರೆ. ಸೋಮನಾಥರನ್ನು ಕಲ್ಲೇಶ್ವರ ದೇವಾಲಯದ ಪ್ರಾಂಗಣದಲ್ಲಿ ಸಮಾಧಿಮಾಡಿ ಗದ್ದುಗೆಯನ್ನು ನಿರ್ಮಿಸಲಾಗಿದೆ ಎಂದು ಡಾ. ಎಂ.ಚಿದಾನಂದ ಮೂರ್ತಿಯವರು ತಮ್ಮ ಸಂಶೋಧನೆಯಿಂದ ಧೃಡಪಡಿಸಿದ್ದಾರೆ.

ಬೆಳೆದ ಪರಂಪರೆ: ಚೆನ್ನಮ್ಮ ಮತ್ತು ಪಾಲ್ಕುರಿಕೆ ಸೋಮನಾಥರ ಆರೈಕೆಯಿಂದ ಬೆಳೆದ ಮಠಕ್ಕೆ ಚೆನ್ನಮ್ಮನವರ ವಂಶಸ್ಥರೇ ಅಧಿಕಾರಕ್ಕೆ ಬರುತ್ತಿದ್ದು, ಇಬ್ಬರು ಗುರುಗಳು ಈ ಮಠದಲ್ಲಿ ಆಡಳಿತವನ್ನು ನಡೆಸಿದ ಬಗ್ಗೆ ದಾಖಲೆಗಳು ಸಿಗುತ್ತಿವೆ. ಶ್ರೀ ಸಿದ್ಧ ಲಿಂಗ ದೇವರು ಕೆಲವು ದಿನ ಮಠದ ಆಡಳಿತವನ್ನು ನಡೆಸಿ ಲಿಂಗೈಕ್ಯರಾಗಿದ್ದಾರೆ. ಚೆನ್ನಮ್ಮ, ಪಾಲ್ಕುರಿಕೆ ಸೋಮನಾಥ ಮತ್ತು ಶ್ರೀ ಸಿದ್ಧಲಿಂಗದೇವರು ಸೇರಿದಂತೆ ಇನ್ನೊಬ್ಬರು ಗುರುಗಳ ಗದ್ದುಗೆ ಬೆಟ್ಟದಲ್ಲಿ ನಿರ್ಮಾಣವಾಗಿವೆ. ಇವುಗಳಿಗೆಲ್ಲಾ ಪ್ರತಿನಿತ್ಯ ಪೂಜೆಯನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಜಂಗಮ ಮಠ, ಕಲ್ಯ, ಮಾಗಡಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಆಧಾರ: 'ಉದ್ದಾನೇಶ ಚರಿತೆ ' ಲೇಖಕರು : ಎರೇಸೀಮೆ ಚನ್ನಪ್ಪ

ಕಾಳೇರಿ

ಮಾಗಡಿ ತಾಲ್ಲೂಕಿನ ಕಾಳೇರಿಯು ತಾಲ್ಲೂಕು ಕೇಂದ್ರದ ಉತ್ತರಕ್ಕೆ ಹದಿಮೂರು ಕಿ.ಮೀ ದೂರದಲ್ಲಿದೆ. ಸರಿಯಾದ ರಸ್ತೆಯೇ ಇಲ್ಲದ ದಾರಿಯಲ್ಲಿ ಸಾಗಿದರೆ ಸಿಗುವ ಶ್ರೀ ಜಂಗಮ ಮಠವು ಪ್ರಕೃತಿಯ ವನಸಿರಿಯ ಮಧ್ಯೆ ಅಸ್ತಿತ್ವದಲ್ಲಿದೆ.

ಜಂಗಮಮಠ: ಕಾಳೇರಿ ಗ್ರಾಮದ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಜಂಗಮಮಠವು ಶ್ರೀಶೈಲ ಪೀಠದ ಶಾಖಾ ಮಠವಾಗಿ ಬೆಳೆದಿದೆ. ಈ ಮಠದ ಸ್ಥಾಪನೆಯ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಆವರಣದಲ್ಲಿ ಐದು ಗದ್ದುಗೆಗಳು ಸ್ಥಾಪನೆಯಾಗಿದ್ದು, ಇವುಗಳನ್ನು ಒಳಗೊಂಡಂತೆ ಮಂಟಪವನ್ನು ಕಟ್ಟಿಸಲಾಗಿದೆ. ಇದರಲ್ಲಿ ಒಂದು ಗದ್ದುಗೆಯ ಮೇಲೆ ಹುತ್ತವೂ ಬೆಳೆದಿದೆ. ಕುಣಿಗಲ್ ತಾಲ್ಲೂಕಿನ ಎಲೆಯೂರು ಶಾಖಾಮಠದಲ್ಲಿ ಮೂರು ಗದ್ದುಗೆಗಳು ನಿರ್ಮಾಣವಾಗಿದ್ದು,

ಎಂಟುಜನ ಗುರುಗಳು ಈ ಮಠದ ಆಡಳಿತವನ್ನು ನಡೆಸಿದ್ದಾರೆ ಎಂದು ಹೇಳಲಾಗುತ್ತಿದೆ. ಮೇ ಇಪ್ಪತ್ತೈದು ೧೯೯೮ರಲ್ಲಿ ಲಿಂಗೈಕ್ಯರಾದ ಶ್ರೀ ವೀರಭದ್ರ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿದವರು. ಇವರ ಕಾಲದಲ್ಲಿ ಮಠದ ಪರಂಪರೆಯಲ್ಲಿ ಬಂದ ಗುರುಗಳ ಗದ್ದುಗೆಗಳಿಗೆ ಮಂಟಪವನ್ನು ಕಟ್ಟಿಸಿ, ಮಠದ ಇತಿಹಾಸಕ್ಕೆ ನೆರವಾಗುವ ಸ್ಮಾರಕಗಳನ್ನು ಸಂರಕ್ಷಿಸಿದ್ದಾರೆ. ಮಠದ ಆಸ್ತಿಯನ್ನು ಅಭಿವೃದ್ಧಿಪಡಿಸಿ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ.

ಧಾರ್ಮಿಕ ನೆಲೆ: ಪುರಾತನ ಕಾಲದ ಈ ಮಠದಲ್ಲಿ ಗುರು-ವಿರಕ್ತರ ಸಮ್ಮಿಲನಗೊಂಡಿದೆ. ಹದಿಮೂರನೆಯ ಶತಮಾನದಲ್ಲಿ ಶ್ರೀ ಗೋಸಲ ಸಿದ್ಧಲಿಂಗೇಶ್ವರ ಸ್ವಾಮಿಗಳು ತಮ್ಮ ನೂರೊಂದು ವಿರಕ್ತರ ಜತೆ ಈ ಸುಕ್ಷೇತ್ರದಲ್ಲಿ ನೆಲೆ ನಿಂತು ತಪೋನುಷ್ಠಾ ಗೊಂಡು ಹೋಗಿದ್ದಾರೆ ಎಂದು ಹೇಳಲಾಗುತ್ತಿದೆ. ಇದಕ್ಕೆ ಪುಷ್ಟಿಕೊಡುವಂತಹ ಯಾವುದೇ ಸಾಕ್ಷ್ಯಾಧಾರಗಳಿಲ್ಲ.

ಕ್ಷೇತ್ರನಾಥ ವೀರಭದ್ರ, ರೇಣುಕಾಚಾರ್ಯರು ಮತ್ತು ಗಣಪತಿ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ಇತ್ತೀಚೆಗೆ ಲಿಂಗೈಕ್ಯರಾದ ಶ್ರೀ ವೀರಭದ್ರ ಸ್ವಾಮಿಗಳ ಗದ್ದುಗೆಯನ್ನು ನಿರ್ಮಿಸಿ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಮಠದ ಇತಿಹಾಸವನ್ನು ಹೇಳುವ ಕೆತ್ತನೆಯ ಕಲ್ಲುಗಳು ಮಠದ ಆವರಣದಲ್ಲಿ ಸಿಗುತ್ತವೆ. ಈಗ ಮಠಕ್ಕೆ ಮಠಾಧೀಶ್ವರರು ಇಲ್ಲದೆ ಖಾಲಿ ಉಳಿದಿದೆ. ಪುತ್ರವರ್ಗದ ಸಂಪ್ರದಾಯದ ಈ ಮಠಕ್ಕೆ ಉತ್ತರಾಧಿಕಾರಿಯನ್ನು ನೇಮಿಸುವ ಬಗ್ಗೆ ಈ ವಂಶಸ್ಥರು ತಯಾರಿಯಲ್ಲಿದ್ದಾರೆ.

ವಿಳಾಸ: ಶ್ರೀ ಜಂಗಮ ಮಠ, ಕಾಳೇರಿ, ಮಾಗಡಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಗುಮ್ಮಸಂದ್ರ

ಮಾಗಡಿ ತಾಲ್ಲೂಕಿನ ಗುಮ್ಮಸಂದ್ರ ಮಾಗಡಿಯಿಂದ ಉತ್ತರಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಶ್ರೀ ರಂಭಾಪುರಿ ಪೀಠದ ಶಾಖಾ ಮಠವಾದ ರುದ್ರಮುನೇಶ್ವರಮಠವು ಅಸ್ತಿತ್ವದಲ್ಲಿದೆ.

ರುದ್ರಮುನೇಶ್ವರಮಠ: ಗುಮ್ಮಸಂದ್ರ ಗ್ರಾಮದಲ್ಲಿ ಸ್ಥಾಪನೆಯಾಗಿರುವ ರುದ್ರಮುನೇಶ್ವರಮಠವು ಶ್ರೀ ರುದ್ರಮುನೇಶ್ವರ ರಿಂದ ಸ್ಥಾಪಿಸಲ್ಪಟ್ಟ ಕಾರಣ ಈ ಹೆಸರನ್ನು ಪಡೆದಿದೆ. ಬಹಳ ವೈಭವಯುತವಾಗಿ ಧಾರ್ಮಿಕ ಕಾರ್ಯವನ್ನು ನಡೆಸಿದ ಈ ಮಠವು ಈಗ ಜೀರ್ಣಗೊಂಡಿದೆ. ಹಳೆಯ ಕಾಲದ ಕಟ್ಟಡದಲ್ಲಿ ಈಗಲೂ ಧಾರ್ಮಿಕ ಕಾರ್ಯಗಳು ನಡೆಯುತ್ತಿವೆ. ಶ್ರೀರುದ್ರ ಮುನೀಶ್ವರ ಸ್ವಾಮಿಗಳಿಂದ ಬೆಳೆದ ಮಠಕ್ಕೆ ನಂತರ ಶ್ರೀ ಚಂದ್ರಶೇಖರ ಸ್ವಾಮಿಗಳ ಹೆಸರನ್ನು ದಾಖಲಿಸಬಹುದು. ಇವರು ಎಪ್ಪತ್ತು ವರ್ಷಗಳ ಕಾಲ ಬದುಕಿ ಲಿಂಗೈಕ್ಯರಾಗಿದ್ದಾರೆ. ಕರ್ತೃ ಗದ್ದುಗೆಯೂ ಸೇರಿದಂತೆ ಶ್ರೀ ಚಂದ್ರಶೇಖರ ಸ್ವಾಮಿಗಳ ಗದ್ದುಗೆಯನ್ನು ನೋಡಬಹುದಾಗಿದೆ. ನಾಲ್ಕು ಗದ್ದುಗೆಗಳು ಇದ್ದು, ಅದರಲ್ಲಿ ಎರಡು ಗದ್ದುಗೆಗಳು ನಿರ್ವಹಣೆಯಿಲ್ಲದೆ ನಶಿಸಿಹೋಗಿ ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿವೆ ಎಂದು ನೋಡಿದವರು ಹೇಳುತ್ತಾರೆ.

ಪುರಾತನ ಮಠ: ಶ್ರೀ ಚಂದ್ರಶೇಖರ ಸ್ವಾಮಿಗಳು ಮಠದ ಆಡಳಿತವನ್ನು ನೋಡಿಕೊಂಡು ಮಠವನ್ನು ಅಭಿವೃದ್ಧಿಪಡಿಸಿ, ಧರ್ಮಾಚರಣೆ ಹಾಗೂ ಶಿವಪೂಜೆಯಲ್ಲಿ ಕಾಲ ಕಳೆದರು. ಮಠದ ಆಸ್ತಿಯಾಗಿ ಆರೂವರೆಎಕರೆ ಜಮೀನಿದ್ದು, ಇದೇ ಆದಾಯದ ಮೂಲವಾಗಿದೆ. ಕೆತ್ತನೆಯ ಕಲ್ಲುಗಳು ಮಠದ ಪುರಾತನ ಕಾಲದ ಇತಿಹಾಸವನ್ನು ಹೇಳುತ್ತವೆ.

ವಿಳಾಸ:ಶ್ರೀ ರುದ್ರಮುನೇಶ್ವರ ಮಠ, ಗುಮ್ಮಸಂದ್ರ, ಮಾಗಡಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಚಕ್ರಬಾವಿ

ಮಾಗಡಿ ತಾಲ್ಲೂಕಿನ ಚಕ್ರಬಾವಿ ಮಠವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಚಕ್ರಬಾವಿ ಮಠವು ಅಸ್ತಿತ್ವದಲ್ಲಿದೆ.

ಚಕ್ರಬಾವಿಮಠ: ಪುರಾತನ ಕಾಲದ ಶ್ರೀಶೈಲ ಪೀಠದ ಶಾಖಾಮಠವಾದ ಶ್ರೀ ಚಕ್ರಬಾವಿ ಮಠವು ಚಕ್ರಬಾವಿ ಗ್ರಾಮದ ಹೊರಭಾಗದಲ್ಲಿ ಸ್ಥಾಪನೆಯಾಗಿ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಮಠ ಸ್ಥಾಪನೆಯ ಕಾಲಮಾನದ ಬಗ್ಗೆ

ಹಾಗೂ ಸ್ಥಾಪಕ ಗುರುಗಳ ಬಗ್ಗೆ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಮಠದ ಆವರಣದಲ್ಲಿ ಮೂರು ಗದ್ದುಗೆಗಳು ದೊರೆತಿವೆ. ಇವುಗಳು ಪುರಾತನ ಗದ್ದುಗೆಗಳೆಂದು ಹೇಳಲಾದರೂ ಈ ಬಗ್ಗೆ ಸ್ಪಷ್ಟ ಮಾಹಿತಿ ದೊರೆತಿಲ್ಲ. ಪರಂಪರೆಯ ಹಿಂದಿನ ಗುರುಗಳು ವಿದ್ವಾಂಸರಾಗಿ ವೇದ, ಜ್ಯೋತಿಷ್ಯ ಪಂಡಿತರಾಗಿದ್ದು, ಈ ಮಠವು ಹೆಚ್ಚು ಪ್ರಸಿದ್ಧಿ ಪಡೆಯಲು ಕಾರಣವಾಗಿದೆ. ಈಗಿನ ಮಠಾಧೀಶರಾದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಆಡಳಿತವನ್ನು ವಹಿಸಿಕೊಂಡ ಮೇಲೆ ಮಠವು ಆರ್ಥಿಕವಾಗಿ ಸದೃಢಗೊಳ್ಳತೊಡಗಿತು. ಗುರುಗಳು ಕಾಯಕಯೋಗಿಗಳಾಗಿ ಶಿವಪೂಜಾ ನಿಷ್ಠರಾಗಿ ಮಠವನ್ನು ಬೆಳೆಸಿದರು. ಮಠದ ಜಮೀನನ್ನು ಅಭಿವೃದ್ಧಿಪಡಿಸಿ ತೆಂಗಿನ ಗಿಡಗಳನ್ನು ಬೆಳೆಸಿ, ಮಠಕ್ಕೆ ಆದಾಯದ ಮೂಲವನ್ನಾಗಿ ಮಾಡಿಕೊಂಡು ಧಾರ್ಮಿಕ ಕಾರ್ಯಗಳು ಹಾಗೂ ಅನ್ನದಾಸೋಹಕ್ಕೆ ವಿನಿಯೋಗಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯ ಪೂಜೆ, ಶ್ರಾವಣ, ಕಾರ್ತೀಕಮಾಸ, ಅಮಾವಾಸ್ಯೆ ಹಾಗೂ ಹುಣ್ಣಿಮೆಯಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಹಿರಿಯ ಗುರುಗಳ ಪುಣ್ಯಾರಾಧನೆ ಕಾರ್ಯಕ್ರಮವನ್ನು ವರ್ಷಕ್ಕೊಮ್ಮೆ ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಚಕ್ರಮಠ, ಮಾಗಡಿ ತಾ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ತಿಪ್ಪಸಂದ್ರ

ಮಾಗಡಿ ತಾಲ್ಲೂಕಿನ ತಿಪ್ಪಸಂದ್ರ ತಾಲ್ಲೂಕು ಕೇಂದ್ರದ ವಾಯುವ್ಯ ಭಾಗಕ್ಕೆ ಇಪ್ಪತ್ತೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಮೂಡಲ ಮಠವು ಅಸ್ತಿತ್ವದಲ್ಲಿದೆ.

ಮೂಡಲಮಠ: ತಿಪ್ಪಸಂದ್ರ ಗ್ರಾಮದಲ್ಲಿ ವಿರಕ್ತ ಸಂಪ್ರದಾಯದ ಮುರುಘಾ ಸಮಯದ ಶ್ರೀ ಮೂಡಲ ಮಠವು ತಿಮ್ಮಸಂದ್ರದ ಪೂರ್ವಭಾಗಕ್ಕೆ ಅರ್ಧ ಕಿ.ಮೀ. ದೂರದಲ್ಲಿ ಸ್ಥಾಪನೆಯಾಗಿರುವ ಕಾರಣ ಈ ಮಠಕ್ಕೆ 'ಮೂಡಲಮಠ'ಎಂಬ ಹೆಸರು ಬಂದಿದೆ. ಕಳೆದ ಆರುನೂರು ವರ್ಷಗಳ ಹಿಂದೆ ಸ್ಥಾಪನೆಯಾಗಿರಬಹುದಾದ ಈ ಮಠದಲ್ಲಿ ನಾಲ್ಕು ಗದ್ದುಗೆಗಳು ಮಠದ ಐತಿಹ್ಯಗಳಾಗಿ ಸಿಗುತ್ತಿವೆ. ಈ ಮಠದ ಪರಂಪರೆಯಲ್ಲಿ

ಪರಂಪರೆ:
೧. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಸಿದ್ಧವೀರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಕಂಬಳಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಪಂಚಾಕ್ಷರಿಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯಲ್ಲಿ ಮೂರು ಜನರ ಹೆಸರುಗಳನ್ನು ಗುರುತಿಸಬಹುದಾಗಿದೆ. ಉಳಿದ ಒಂದು ಗದ್ದುಗೆಯು ಯಾರ ಹೆಸರಲ್ಲಿ ನಿರ್ಮಿತವಾಗಿದೆ ಎಂದು ತಿಳಿದು ಬರುತ್ತಿಲ್ಲ. ೧೯೫೩ರಲ್ಲಿ ಪಟ್ಟಾಧಿಕಾರ ವಹಿಸಿಕೊಂಡಿರುವ ಶ್ರೀ ಪಂಚಾಕ್ಷರಿ ಸ್ವಾಮಿಗಳು ತಮ್ಮ ದೀರ್ಘ ಕಾಲದ ಅಧಿಕಾರಾವಧಿಯಲ್ಲಿ ಮಠವನ್ನು ಬೆಳೆಸಲು ಪ್ರಯತ್ನಿಸಿದ್ದಾರೆ. ಕನಕಪುರದ ಶ್ರೀ ನಿರ್ವಾಣ ಸ್ವಾಮಿಗಳ ಕೃಪಾಕಟಾಕ್ಷಕ್ಕೆ ಒಳಗಾಗಿದ್ದ ಶ್ರೀ ಪಂಚಾಕ್ಷರಿ ಸ್ವಾಮಿಗಳು ಅಲ್ಪ ಸಂಖ್ಯಾತರಾಗಿರುವ ವೀರಶೈವರನ್ನು ಸಂಘಟಿಸಿ ಅವರಿಗೆ ಧಾರ್ಮಿಕ ಸಂಸ್ಕಾರವನ್ನು ನೀಡಿದ್ದಾರೆ. ಮಠದ ಅಭಿವೃದ್ಧಿಗೆ ಅಗತ್ಯ ನೆರವು ಸಿಗದಿರುವ ಕಾರಣ ಮಠವು ಹೆಚ್ಚು ಅಭಿವೃದ್ಧಿ ಸಾಧಿಸಲು ಕಷ್ಟವಾಗಿದೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಪಂಚಾಕ್ಷರಿ ಸ್ವಾಮಿಗಳು ಮಠದ ಹದಿನೈದು ಎಕರೆ ಜಮೀನನ್ನು ಅಭಿವೃದ್ಧಿಪಡಿಸಿ ಆದಾಯ ಬರುವಂತೆ ಮಾಡಿದ್ದಾರೆ. ಶಿಥಿಲಗೊಂಡಿದ್ದ ಮಠದ ಹಳೆಯ ಕಟ್ಟಡವನ್ನು ತೆಗೆಸಿ, ಆರುಲಕ್ಷ ರೂಪಾಯಿಗಳ ವೆಚ್ಚದಲ್ಲಿ ಹೊಸ ಕಟ್ಟಡವನ್ನು ನಿರ್ಮಿಸಲಾಗಿದೆ. ಮಠವು ವೀರಶೈವರ ಧಾರ್ಮಿಕ ಕೇಂದ್ರಬಿಂದುವಾಗಿ ಬೆಳೆದಿದೆ.

ಧಾರ್ಮಿಕ ಆಚರಣೆ: ಗದ್ದುಗೆ ಪೂಜೆ ಹಾಗೂ ಶ್ರಾವಣ, ಕಾರ್ತೀಕ ಮಾಸಗಳಲ್ಲಿ ಮತ್ತು ಹುಣ್ಣಿಮೆಯಲ್ಲಿ ವಿಶೇಷ ಪೂಜೆಯನ್ನು

ನಡೆಸಲಾಗುತ್ತಿದೆ. ಈ ಸಂದರ್ಭಗಳಲ್ಲಿ ಅನ್ನ ದಾಸೋಹವನ್ನು ಮಾಡಲಾಗುತ್ತಿದೆ. ಈ ಗ್ರಾಮದಲ್ಲಿರುವ ಮಹಾಲಿಂಗೇಶ್ವರ ದೇವಸ್ಥಾನಕ್ಕೆ ಪೂಜಾ ಕಾರ್ಯವನ್ನು ಈ ಮಠದ ವತಿಯಿಂದ ವೀರಶೈವ ಪುರೋಹಿತರಿಂದ ಮಾಡಿಸಲಾಗುತ್ತದೆ. ಇತ್ತೀಚೆಗೆ ಹದಿನೇಳು ವರ್ಷಗಳಿಂದ ಪೂಜಾ ವಿಷಯದಲ್ಲಿ ಗೊಂದಲ ಸೃಷ್ಟಿಯಾಗಿ ಬೇರೆಯವರಿಗೆ ವಹಿಸಿಕೊಡಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಪಂಚಾಕ್ಷರಿಸ್ವಾಮಿಗಳು, ಶ್ರೀ ಮೂಡಲಮಠ,ತಿಪ್ಪಸಂದ್ರ, ಮಾಗಡಿ ತಾ, ಬೆಂಗಳೂರು ಗ್ರಾಮಾಂತರಜಿಲ್ಲೆ.

ಮಾಗಡಿ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ ಪಟ್ಟಣವು ತಾಲ್ಲೂಕು ಕೇಂದ್ರ ಸ್ಥಳ. ಬೆಂಗಳೂರಿನ ಪಶ್ಚಿಮ ಭಾಗದಲ್ಲಿ ಸ್ಥಾಪಿತವಾಗಿರುವ ಈ ಪಟ್ಟಣವು ಕೆಂಪೇಗೌಡರ ವಂಶಸ್ಥರ ರಾಜಧಾನಿಯಾಗಿ ಬೆಳೆದು ಐತಿಹಾಸಿಕ ಸ್ಥಾನವನ್ನು ಪಡೆದಿತ್ತು. ಇಂತಹ ಐತಿಹಾಸಿಕ ಮಾಗಡಿಯಲ್ಲಿ ವೀರಶೈವ ಧರ್ಮವು ಮಾಗಡಿ ಕೆಂಪೇಗೌಡನ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿತ್ತು ಎಂದು ಹೇಳಲಾಗುತ್ತಿದೆ. ಇಲ್ಲಿನ ಗವಿಗಂಗಾಧರೇಶ್ವರ ದೇವಾಲಯವು ವೀರಶೈವ ಧರ್ಮದ ಕೇಂದ್ರ ಬಿಂದುವಾಗಿ ಬೆಳೆದಿದೆ.

ಹದಿನಾಲ್ಕು ಮತ್ತು ಹದಿನೈದನೆಯ ಶತಮಾನದಲ್ಲಿ ಶ್ರೀ ಗೋಸಲ ಸಿದ್ಧಲಿಂಗೇಶ್ವರರು ಮತ್ತು ಶ್ರೀ ತೋಂಟದ ಸಿದ್ಧಲಿಂಗೇಶ್ವರರು, ಶಿವಗಂಗೆ ಹಾಗೂ ಸಿದ್ಧಗಂಗೆಗೆ ಬರುವ ಮುನ್ನ ಮಾಗಡಿಯಲ್ಲಿ ಪ್ರತಿಷ್ಠಾನಗೊಂಡಿದ್ದ ಪುರಾತನ ಕಾಲದ ಗವಿ ಗಂಗಾಧರೇಶ್ವರ ದೇವಾಲಯದಲ್ಲಿ ನೆಲೆನಿಂತು ವಿಶ್ರಾಂತಿ ಪಡೆದು, ಗವಿಗಂಗಾಧರೇಶ್ವರರ ಸಾನ್ನಿಧ್ಯದಲ್ಲಿ ಅನುಷ್ಠಾನ ಗೊಂಡು, ಆತ್ಮಬಲವನ್ನು ಹೆಚ್ಚಿಸಿಕೊಂಡು ಮುಂದೆ ಹೋಗುತ್ತಿದ್ದರು ಎಂದು ಹೇಳಲಾಗುತ್ತಿದೆ.ಇದಕ್ಕೆ ಉದಾಹರಣೆಯಾಗಿ ಗಂಗಾಧರೇಶ್ವರ ಗವಿಯಲ್ಲಿ ಶರಣರು ಅನುಷ್ಠಾನಗೊಂಡ ಸ್ಥಳದಲ್ಲಿ ಲಿಂಗವನ್ನು ಸ್ಥಾಪಿಸಿದ್ದು, ಆ ಕುರುಹುಗಳನ್ನು ಕಾಣಬಹುದಾಗಿದೆ. ಇಂತಹ ಐತಿಹಾಸಿಕ ಮತ್ತು ಧಾರ್ಮಿಕ ಪ್ರಬುದ್ಧತೆಯನ್ನು ಪಡೆದ ಮಾಗಡಿಯಲ್ಲಿ ಶ್ರೀ ಜಡೆದೇವರ ಮಠ ಮತ್ತು ಶ್ರೀ ಅರೇಶಂಕರ ಮಠಗಳು ಸ್ಥಾಪನೆಯಾಗಿ, ಧಾರ್ಮಿಕ ಅಭಿವೃದ್ಧಿಗೆ ಕಾರಣವಾಗಿವೆ.

ಅರೇಶಂಕರಮಠ: ಮಾಗಡಿಯ ಉತ್ತರಕ್ಕೆ ಒಂದೂವರೆ ಕಿ.ಮೀ.ದೂರದಲ್ಲಿ ಅರೇಶಂಕರಮಠವು ಸ್ಥಾಪನೆಯಾಗಿದೆ. ಪಂಚಪೀಠ ದಲ್ಲಿ ಒಂದಾದ ಜಗದ್ಗುರು ರಂಭಾಪುರಿಪೀಠದ ಶಾಖಾಮಠವಾಗಿರುವ ಈ ಮಠವು ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದಿದೆ. ಮಠ ಸ್ಥಾಪನೆ: ಶ್ರೀ ಶಂಕರೇಶ್ವರ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿರುವ ಕಾರಣ ಈ ಮಠಕ್ಕೆ ಅರೇಶಂಕರಮಠ ಎಂಬ ಹೆಸರು ಬಂದಿದೆ. ಉತ್ತರದ ಕಡೆಯಿಂದ ಲೋಕೋದ್ಧಾರಕ್ಕಾಗಿ ಸಂಚಾರ ಬಂದಿದ್ದ ಶ್ರೀ ಶಂಕರ ಸ್ವಾಮಿಗಳು ಮಾಗಡಿಯ ಕಲ್ಲು ಬಂಡೆಗಳ ಮಧ್ಯೆ ಈ ಪ್ರಶಾಂತ ಸ್ಥಳದಲ್ಲಿ ತಪೋನುಷ್ಠಾನಗೊಂಡು, ಭಕ್ತರನ್ನು ಸಂಸ್ಕಾರಗೊಳಿಸಿ ವೀರಶೈವ ಧರ್ಮವನ್ನು ಬೆಳೆಸಿದರು. ಸಮಾಜದಲ್ಲಿ ನಡೆಯುತ್ತಿದ್ದ ಅನಾಚಾರಗಳನ್ನು ತಡೆಯುವಲ್ಲಿ ಯಶಸ್ವಿಯಾಗಿದ್ದರು. ಇದರಿಂದ ಗುರುಗಳು ಇಲ್ಲಿಯೇ ನೆಲೆಗೊಳ್ಳುವಂತೆ ಮಾಗಡಿಯ ಭಕ್ತರು ಮನವಿಮಾಡಿದ್ದರಿಂದ ಇಲ್ಲಿ ಮಠವನ್ನು ಸ್ಥಾಪಿಸಿ ಲಿಂಗೈಕ್ಯರಾಗುತ್ತಾರೆ.

ಪರಂಪರೆ: ಶ್ರೀ ಶಂಕರೇಶ್ವರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಊರಿನ ಪ್ರಮುಖರು ಈ ಮಠಕ್ಕೆ ಉತ್ತರಾಧಿಕಾರಿಗಳನ್ನು ನೇಮಿಸಿ, ಮಠದಲ್ಲಿ ಧಾರ್ಮಿಕ ಚಟುವಟಿಕೆಗಳು ನಿರಂತರವಾಗಿ ನಡೆಯುವಂತೆ ವ್ಯವಸ್ಥೆಯನ್ನು ಮಾಡುತ್ತಾರೆ. ಮಠದ ಆವರಣದಲ್ಲಿ ಕರ್ತೃಗುರುಗಳ ಗದ್ದುಗೆಯು ಸ್ಥಾಪಿಸಲ್ಪಟ್ಟಿದೆ. ಉಳಿದ ಮೂರು ಗದ್ದುಗೆಗಳು ಮಠದ ಹೊರ ಆವರಣದಲ್ಲಿ ಸ್ಥಾಪನೆಯಾಗಿವೆ. ಈ ಆಧಾರದ ಮೇಲೆ ಈಗಿನ ಶ್ರೀ ಸಚ್ಚಿದಾನಂದ ಶಿವಾಚಾರ್ಯ ಸ್ವಾಮಿಗಳೂ ಸೇರಿದಂತೆ ಐದುಜನ ಗುರುಗಳು ಮಠದ ಆಡಳಿತವನ್ನು ನಡೆಸಿ ಹೋಗಿದ್ದಾರೆ ಎಂಬುದು ದೃಢಪಡುತ್ತದೆ. ಆದರೆ ಕರ್ತೃಗುರುಗಳ ಹೆಸರನ್ನು ಹೊರತುಪಡಿಸಿದರೆ ನಂತರ ಅಧಿಕಾರಕ್ಕೆ ಬಂದ ಗುರುಗಳ ಹೆಸರುಗಳು ಲಭ್ಯವಾಗಿಲ್ಲ.ಐದನೆಯ ಪಟ್ಟಾಧಿಕಾರಿಗಳಾಗಿ ತಮ್ಮ ಒಂಬತ್ತನೆಯ ವಯಸ್ಸಿನಲ್ಲಿಯೇ ಶ್ರೀ ಸಚ್ಚಿದಾನಂದ ಶಿವಾಚಾರ್ಯ ಸ್ವಾಮಿಗಳು ಜೀರ್ಣಗೊಂಡ ಮಠದ ಅಧಿಕಾರವನ್ನು ವಹಿಸಿಕೊಂಡು ಗುರುಗಳು ಪ್ರಥಮವಾಗಿ ಮಠದ ಕಟ್ಟಡವನ್ನು ದುರಸ್ತಿಮಾಡಿಕೊಂಡು, ಮಠದ ಸುತ್ತ ಇದ್ದ ಜಮೀನನ್ನು ಅಭಿವೃದ್ಧಿಪಡಿಸಿ ಆದಾಯ ಬರುವಂತೆ ಮಾಡತೊಡಗಿದರು.

ಅವಶೇಷಗಳು: ಜೀರ್ಣಗೊಂಡ ಮಠದ ಆವರಣದಲ್ಲಿರುವ ಕೆತ್ತನೆಯ ಕಲ್ಲುಗಳು ಪುರಾತನ ಇತಿಹಾಸದ ಅವಶೇಷಗಳಾಗಿ

ಗೋಚರಿಸುತ್ತವೆ. ಹಿಂದೆ ಮಠದ ಕಟ್ಟಡವು ಕಲ್ಲಿನಿಂದ ನಿರ್ಮಿತವಾಗಿದ್ದು, ಕಟ್ಟಡದ ಸುತ್ತಲು ಕಲ್ಲಿನ ಆವರಣ ನಿರ್ಮಿತವಾಗಿದ್ದ ಕುರುಹುಗಳು ಸಿಗುತ್ತಿವೆ.

ಧಾರ್ಮಿಕ ಕಾರ್ಯಗಳು : ಶ್ರಾವಣ ಮತ್ತು ಕಾರ್ತೀಕ ಮಾಸಗಳಲ್ಲಿ ಕರ್ತೃಗದ್ದುಗೆಗೆ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಶಿವರಾತ್ರಿಯಲ್ಲಿ ರುದ್ರಾಭಿಷೇಕ ಪೂಜೆಯನ್ನು ಮಾಡಲಾಗುತ್ತಿದೆ. ಗುರುಗಳು ಭಕ್ತರ ಮನೆಗಳಿಗೆ ತೆರಳಿ ಧಾರ್ಮಿಕ ವಿಧಿವಿಧಾನ ಗಳನ್ನು ಪೂರೈಸಿ ಭಕ್ತರನ್ನು ಆಶೀರ್ವದಿಸುವುದು ವಾಡಿಕೆಯ ಕೆಲಸವಾಗಿದೆ.

ವಿಳಾಸ:ಷ.ಬ್ರ.ಶ್ರೀ ಸಚ್ಚಿದಾನಂದ ಶಿವಾಚಾರ್ಯ ಸ್ವಾಮಿಗಳು. ಶ್ರೀ ಅರೇಶಂಕರಮಠ, ಮಾಗಡಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಜಡೇದೇವರಮಠ: ಮಾಗಡಿಯ ಮಧ್ಯಭಾಗದಲ್ಲಿ ಸ್ಥಾಪಿತವಾಗಿರುವ ಜಡೇದೇವರ ಮಠವು ವಿರಕ್ತ ಸಂಪ್ರದಾಯದ ಮುರುಘಾ ಸಮಯಕ್ಕೆ ಸೇರಿದ್ದಾಗಿದೆ. ಶ್ರೀ ಸಿದ್ಧಲಿಂಗೇಶ್ವರರ ಕಾಲದ ಏಳುನೂರೊಂದು ವಿರಕ್ತರಲ್ಲಿ ಒಬ್ಬರು ಈ ನೆಲದಲ್ಲಿ ನೆಲೆಗೊಂಡು ಈ ಮಠ ವನ್ನು ಸ್ಥಾಪನೆ ಮಾಡುತ್ತಾರೆ.

ಮಠ ಸ್ಥಾಪನೆ: ಶ್ರೀ ಸಿದ್ಧಲಿಂಗೇಶ್ವರರು ಈ ನೆಲದಲ್ಲಿ ಅನುಷ್ಠಾನಗೊಂಡು ಹೋಗುವಾಗ ತಮ್ಮ ಭಕ್ತರಿಬ್ಬರನ್ನು ಇಲ್ಲಿ ನೆಲೆ ಗೊಳಿಸಿ ಮಠವನ್ನು ಸ್ಥಾಪನೆ ಮಾಡುತ್ತಾರೆ. ಈ ಮಠದಲ್ಲಿ ಮೊದಲು ನೆಲೆಗೊಂಡ ಶ್ರೀ ವಿರಕ್ತ ಸ್ವಾಮಿಗಳು ಅನುಷ್ಠಾನ ಮೂರ್ತಿಗಳಾಗಿ ಶಿವಪೂಜೆಯಲ್ಲಿ ನಿರತರಾಗಿರುತ್ತಿದ್ದರು. ಇವರು ಕೇಶಮುಂಡನೆ ಮಾಡಿಸಿಕೊಳ್ಳದೆ ಉದ್ದನೆಯ ಜಡೆ ಬಿಟ್ಟಿದ್ದ ಕಾರಣ ಗುರುಗಳಿಗೆ ರೂಢಿಗತವಾಗಿ 'ಶ್ರೀ ಜಡೆ ಸ್ವಾಮಿ'ಗಳೆಂದು ಕರೆಯತೊಡಗಿದ್ದರು. ಶ್ರೀ ಜಡೆ ಸ್ವಾಮಿಗಳು ವೀರಶೈವ ಧರ್ಮವನ್ನು ಬೆಳೆಸಲು ಭಕ್ತರನ್ನು ಸಂಘಟಿಸಿ ಧರ್ಮಪ್ರಚಾರವನ್ನು ಕೈಗೊಂಡು, ಧರ್ಮವು ನೆಲೆಗೊಳ್ಳುವಂತೆ ಮಾಡಿ, ಉತ್ತರಾಧಿಕಾರಿಗಳನ್ನು ನೇಮಿಸಿ ಲಿಂಗೈಕ್ಯರಾಗಿರುತ್ತಾರೆ.

ಗುರುಪರಂಪರೆ:

೧. ಶ್ರೀ ಮ.ನಿ.ಪ್ರ. ಜಡೆಸ್ವಾಮಿಗಳು (ಕರ್ತೃಗುರುಗಳು)
೨. ಶ್ರೀ ಮ.ನಿ.ಪ್ರ. ಬಸವರಾಜಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಮುರುಗಿಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಫಲಹಾರಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಗುರುಲಿಂಗಒಡೆಯರು
೭. ಶ್ರೀ ಮ.ನಿ.ಪ್ರ. ಶಂಕರಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಬಸವರಾಜಸ್ವಾಮಿಗಳು (ಹಿರಿಯ ಗುರುಗಳು)
೯. ಶ್ರೀ ಮ.ನಿ.ಪ್ರ. ಇಮ್ಮಡಿ ಶಂಕರಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯನ್ನು ಗುರುತಿಸಬಹುದಾಗಿದೆ. ಶ್ರೀ ಜಡೆ ಸ್ವಾಮಿಗಳ ನಂತರ ಮಠದ ಅಧಿಕಾರವನ್ನು ವಹಿಸಿಕೊಂಡ ಶ್ರೀ ಬಸವರಾಜ ಸ್ವಾಮಿಗಳು ಹಿರಿಯ ಗುರುಗಳು ಹಾಕಿಕೊಟ್ಟ ಮಾರ್ಗದರ್ಶನದಂತೆ ಮಠವನ್ನು ಬೆಳೆಸಿ ಧರ್ಮವನ್ನು ಪ್ರಚಾರಗೊಳಿಸಿದರು. ಮಠದ ಪರಂಪರೆಯ ಆರನೆಯ ಗುರುಗಳಾದ ಶ್ರೀ ಗುರುಲಿಂಗ ಒಡೆಯರು ಮಾಗಡಿ ಮತ್ತು ಗುಡೆಮಾರನಹಳ್ಳಿಯ ಮಠವನ್ನು ಅಭಿವೃದ್ಧಿಪಡಿಸಿ ಹೆಚ್ಚು ಪ್ರಚಾರಕ್ಕೆ ತಂದರು. ನಂತರ ಬಂದ ಶ್ರೀ ಶಂಕರ ಸ್ವಾಮಿಗಳು ಮಠವನ್ನು ಹೆಚ್ಚು ಅಭಿವೃದ್ಧಿ ಪಡಿಸಿದರು. ಮಠಕ್ಕೆ ಹಿಂದಿನ ಗುರುಗಳ ಕಾಲದಲ್ಲಿ ಮಾಗಡಿ ರಾಜರಿಂದ ಬಂದಿದ್ದ ಭೂಮಿಯನ್ನು ತಮ್ಮ ಕಾಯಕಯೋಗದಿಂದ ಅಭಿವೃದ್ಧಿಪಡಿಸಿ, ಹೆಚ್ಚು ಆದಾಯ ಬರುವಂತೆ ಮಾಡಿರುತ್ತಾರೆ. ಪರಂಪರೆಯಲ್ಲಿ ಬಂದಂತಹ ದಾಸೋಹವನ್ನು ಮುನ್ನಡೆಸಿ. ೧೯೭೦ರಲ್ಲಿ ಲಿಂಗೈಕ್ಯರಾಗಿದ್ದಾರೆ. ಶ್ರೀ ಶಂಕರ ಸ್ವಾಮಿಗಳು ಅಧಿಕಾರದಲ್ಲಿದ್ದಾಗಲೇ ಪಟ್ಟಾಧಿಕಾರಕ್ಕೆ ಬಂದ ಶ್ರೀ ಬಸವರಾಜ ಸ್ವಾಮಿಗಳು ಮಠವನ್ನು ಎಲ್ಲಾ ಹಿರಿಯ ಗುರುಗಳಿಗಿಂತ ಮೇಲ್ಪಂಕ್ತಿಯಲ್ಲಿ ಬೆಳೆಯು ವಂತೆ ನೋಡಿಕೊಂಡರು. ತಪೋನಿಷ್ಠರೂ, ನೀತಿಪರರೂ ಆದ ಶ್ರೀ ಬಸವರಾಜ ಸ್ವಾಮಿಗಳು ಮಠಕ್ಕೆ ಆರ್ಥಿಕ ಸದೃಢತೆಯನ್ನು

ತಂದುಕೊಟ್ಟಂತಹ ಮಹಾಪುರುಷರು. ೧೯೫೮ರಲ್ಲಿ ಅಧಿಕಾರಕ್ಕೆ ಬಂದ ಶ್ರೀ ಬಸವರಾಜ ಸ್ವಾಮಿಗಳು ಉತ್ತರಾಧಿಕಾರಿಗಳನ್ನು ನೇಮಿಸಿಕೊಂಡು ಪಟ್ಟಾಧಿಕಾರವನ್ನು ನೀಡಿದ್ದಾರೆ. ೧೯೯೬ರಲ್ಲಿ ಶ್ರೀ ಬಸವರಾಜ ಸ್ವಾಮಿಗಳಿಂದ ಅಧಿಕಾರವನ್ನು ವಹಿಸಿಕೊಂಡ ಶ್ರೀ ಇಮ್ಮಡಿ ಶಂಕರ ಸ್ವಾಮಿಗಳು ಹಿರಿಯ ಗುರುಗಳ ಮಾರ್ಗದರ್ಶನದಲ್ಲಿ ಮಠವನ್ನು ಬೆಳೆಸುತ್ತಿದ್ದಾರೆ. ಸಿದ್ಧಗಂಗೆಯಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ಸಂಸ್ಕೃತ ಪಂಡಿತರಾಗಿ ರೂಪುಗೊಂಡಿದ್ದಾರೆ.

ರಾಜಾಶ್ರಯ: ಇಮ್ಮಡಿ ಕೆಂಪೇಗೌಡ ಮತ್ತು ರಾಣಿ ಕೆಂಪರಾಜಮ್ಮ ಈ ಮಠದ ಪರಮ ಭಕ್ತರಾಗಿದ್ದರು. ರಾಜಮನೆತನದ ಎಲ್ಲಾ ಧಾರ್ಮಿಕ ಚಟುವಟಿಕೆಗಳನ್ನು ನೆರವೇರಿಸಿ ರಾಜಮನೆತನಕ್ಕೆ ಕೃಪಾಶೀರ್ವಾದ ನೀಡಿದ ಈ ಮಠದ ಗುರುಗಳು, ರಾಜರಿಂದ ಬಂದ ಅನೇಕ ಕಾಣಿಕೆಗಳನ್ನು ಬಳಸಿಕೊಂಡು ಪ್ರಭಾವಿ ಮಠವನ್ನಾಗಿ ಬೆಳೆಸಿದ್ದರು. ಇಮ್ಮಡಿ ಕೆಂಪೇಗೌಡನ ಕಾಲದಲ್ಲಿ ಮಠಕ್ಕೆ ಹೆಚ್ಚು ದಾನಪತ್ತಿಗಳು ದೊರೆತಿವೆ. ಇದರಲ್ಲಿ ಐವತ್ತೇಳುಎಕರೆ ಮಾತ್ರ ಉಳಿದಿದ್ದು ಮಠಕ್ಕೆ ಆದಾಯದ ಮೂಲವಾಗಿದೆ. ಹಿಂದೆ ಕೆಂಪೇಗೌಡನು ಗುರುಗಳಿಗೆ ನೀಡಿದ್ದ ಸನ್ನದು, ಕತ್ತಿ ಮತ್ತು ಗುರಾಣಿಗಳು ಮಠದಲ್ಲಿವೆ.

ದಾಸೋಹ: ಮಾಗಡಿಯಲ್ಲಿ ಸ್ಥಾಪಿತಗೊಂಡ ಈ ಮಠವು ಜ್ಞಾನದಾಸೋಹದಂತೆಯೇ ಅನ್ನದಾಸೋಹದಲ್ಲಿಯೂ ಹೆಚ್ಚು ಪ್ರಸಿದ್ಧಿ ಪಡೆದಿತ್ತು. ಈ ಮಠವು ಹಿಂದಿನ ಕಾಲದಲ್ಲಿ ಅನ್ನದಾಸೋಹಕ್ಕೆ ರಾಗಿ ಹಿಟ್ಟನ್ನು ತಯಾರಿಸಲು ದೈತ್ಯಾಕಾರದಬೀಸುವ ಕಲ್ಲುಗಳಿಗೆ ಎತ್ತುಗಳನ್ನು ಕಟ್ಟಿ ಬೀಸುತ್ತಿದ್ದರು ಎಂದು ಹೇಳಲಾಗುತ್ತಿದೆ. ಇದಕ್ಕೆ ಸಾಕ್ಷಿಯಾಗಿ ದೈತ್ಯಾಕಾರದ ಬೀಸುವ ಕಲ್ಲು ಮಠದ ಮುಂಭಾಗದಲ್ಲಿ ಕಾಣುತ್ತದೆ. ತ್ರಿವಿಧ ದಾಸೋಹವನ್ನು ನಡೆಸಿ ಮಠವನ್ನು ದಾಸೋಹ ಮಠವಾಗಿ ಬೆಳೆಸಿದ್ದರು.

ಧಾರ್ಮಿಕ ಕಾರ್ಯಗಳು: ಮಠದಲ್ಲಿ ಪ್ರತಿ ತಿಂಗಳು ಅಮಾವಾಸ್ಯೆ,ಹುಣ್ಣಿಮೆ, ಶ್ರಾವಣ ಮತ್ತು ಕಾರ್ತೀಕಮಾಸಗಳಲ್ಲಿ ಹಾಗೂ ಶಿವರಾತ್ರಿಯಲ್ಲಿ ವಿಶೇಷ ಪೂಜೆಯನ್ನು ಏರ್ಪಡಿಸಲಾಗುತ್ತಿದೆ. ಬರುವ ಭಕ್ತರಿಗೆ ಮಠವು ನಿತ್ಯವೂ ಅನ್ನದಾಸೋಹ ನೀಡುವ ಪರಿಪಾಠವನ್ನು ಮುನ್ನಡೆಸಿಕೊಂಡು ಬಂದಿದೆ. ಕರ್ತೃ ಗದ್ದುಗೆ ಹಾಗೂ ಮಠದಲ್ಲಿರುವ ಗದ್ದುಗೆಗಳಿಗೆ ಪೂಜೆಯನ್ನು ನಡೆಸಲಾಗುತ್ತಿದೆ. ಕರ್ತೃ ಗದ್ದುಗೆಗಳನ್ನು ಒಳಗೊಂಡ ಮಠವೇ ಬೇರೆ ಇದ್ದು, ಗುರುಗಳು ವಾಸ ಮಾಡುವ ಮಠದ ಕಟ್ಟಡವು ಒಂದಕ್ಕೊಂದು ಹೊಂದಿಕೊಂಡಿದ್ದರೂ ಪ್ರತ್ಯೇಕವಾಗಿವೆ.

ವಿಳಾಸ: ಶ್ರೀ ಮ.ನಿ.ಪ್ರ. ಇಮ್ಮಡಿ ಶಂಕರ ಸ್ವಾಮಿಗಳು, ಶ್ರೀ ಜಡೆದೇವರಮಠ, ಮಾಗಡಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಸೋಲೂರು

ಮಾಗಡಿ ತಾಲ್ಲೂಕಿನ ಸೋಲೂರು ಬೆಂಗಳೂರು, ಕುಣಿಗಲ್ ರಸ್ತೆಯಲ್ಲಿ ಸಿಗುವ ಅಭಿವೃದ್ಧಿಶೀಲ ಗ್ರಾಮ. ಈ ಗ್ರಾಮವು ತಾಲ್ಲೂಕು ಕೇಂದ್ರದ ಉತ್ತರಕ್ಕೆ ಇಪ್ಪತ್ತೈದು ಕಿ.ಮೀ.ದೂರದಲ್ಲಿದೆ. ಶ್ರೀ ಗೋಸಲಸಿದ್ಧೇಶ್ವರರು ನೂರೊಂದು ವಿರಕ್ತರು ಮತ್ತು ಆಧ್ಯಾತ್ಮ ಗುರು ಶ್ರೀ ಸಿದ್ಧಲಿಂಗ ಯತಿಗಳು ಏಳು ನೂರೊಂದು ವಿರಕ್ತರ ಜತೆ ಬಂದ ಸಂದರ್ಭದಲ್ಲಿ ಈ ನೆಲದಲ್ಲಿ ನೆಲೆನಿಂತು ಪೂಜಾನುಷ್ಠಾನ ಮಾಡಿಕೊಂಡು ಈ ನೆಲವನ್ನು ಜಾಗೃತ ಸ್ಥಳವನ್ನಾಗಿ ಮಾಡಿದ್ದಾರೆ. ಇಂತಹ ಧಾರ್ಮಿಕ ಸ್ಥಳದಲ್ಲಿ ನಾಲ್ಕು ಮಠಗಳು ಅಸ್ತಿತ್ವಗೊಂಡ ಬಗ್ಗೆ ಹೇಳಲಾಗುತ್ತಿದೆ. ಚಿಲುಮೆ ಮಠ ಅಥವಾ ಹೊಸಮಠ, ಕಡಲೆಮಠ ಮತ್ತು ಗದ್ದುಗೆ ಮಠಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ. ಉಳಿದ ಒಂದು ಮಠವು ಪೂರ್ಣ ಅಸ್ತಿತ್ವವನ್ನು ಕಳೆದುಕೊಂಡಿದೆ. ಉಳಿದಿರುವ ಮಠಗಳು ಸಿದ್ಧಗಂಗೆ ಮತ್ತು ಶಿವಗಂಗೆಯಲ್ಲಿ ನಡೆದ ಧಾರ್ಮಿಕ ಆಂದೋಲನದ ಸಂದರ್ಭದಲ್ಲಿ ಇದರ ಪ್ರಭಾವಕ್ಕೆ ಒಳಗಾಗಿ ರೂಪಿತಗೊಂಡಿದ್ದವಾಗಿವೆ.

ಚಿಲುಮೆಮಠ (ಹೊಸಮಠ): ಚಿಲುಮೆ ಮಠವು ಸೋಲೂರು ಗ್ರಾಮದ ಹೊರಭಾಗದಲ್ಲಿ ಸ್ಥಾಪನೆಯಾಗಿದ್ದು, ಇತ್ತೀಚೆಗೆ ಊರೂ ಮಠದ ತನಕ ಬೆಳೆದಿದೆ. ವಿರಕ್ತಸಂಪ್ರದಾಯದ ಈ ಮಠದಲ್ಲಿ ಸಿಹಿನೀರಿನ ಚಿಲುಮೆ ಇರುವ ಕಾರಣ'ಚಿಲುಮೆಮಠ' ಎಂದು ಹೆಸರು ಬಂದಿದೆ. ಈ ಚಿಲುಮೆ ಮಠವನ್ನು ಯಾರು ಯಾವ ಕಾಲದಲ್ಲಿ ಸ್ಥಾಪನೆ ಮಾಡಿದರು ಎಂಬ ಬಗ್ಗೆ ನಿಖರವಾದ ಮಾಹಿತಿ ಇಲ್ಲ.

ಜನಪದಕಥೆ: ಶ್ರೀ ಮಹಂತೇಶ್ವರರು ಮತ್ತು ಶ್ರೀ ಸಂಗಪ್ಪನವರೆಂಬ ಇಬ್ಬರು ವಿರಕ್ತರು ಇದ್ದರು. ಇವರಲ್ಲಿ ಶ್ರೀ ಮಹಂತೇಶ್ವರರು ನಾಲ್ಕು ಕಿ.ಮೀ.ದೂರದಲ್ಲಿರುವ ಕಾಡಿನಲ್ಲಿ ಅನುಷ್ಠಾನಗೊಳ್ಳುತ್ತಿದ್ದರು. ಶ್ರೀ ಸಂಗಪ್ಪ ಸ್ವಾಮಿಗಳು ಚಿಲುಮೆ ಮಠದಲ್ಲಿ ಅನುಷ್ಠಾನಗೊಂಡಿದ್ದರು. ಶ್ರೀ ಮಹಂತೇಶ್ವರ ಸ್ವಾಮಿಗಳು ಹುಲಿಯ ಮೇಲೆ ಶ್ರೀ ಸಂಗಪ್ಪ ಸ್ವಾಮಿಗಳನ್ನು ನೋಡಲು ಬರುತ್ತಿದ್ದರಂತೆ. ಆಗ ಶ್ರೀ ಸಂಗಪ್ಪ ಸ್ವಾಮಿಗಳು ತಾವು ಕುಳಿತ ಜಗುಲಿಯನ್ನೇ ವಾಹನವನ್ನಾಗಿ ಮಾಡಿಕೊಂಡು ಶ್ರೀಮಹಂತೇಶ್ವರರನ್ನು ಎದುರುಗೊಂಡು ಸ್ವಾಗತಿಸುತ್ತಿದ್ದರಂತೆ. ಈ ಇಬ್ಬರು ಸಹೋದರವಿರಕ್ತರು ಧರ್ಮದ ಬಗ್ಗೆ ಚರ್ಚಿಸಿ, ಭಕ್ತರಿಗೆ ಉಪದೇಶವನ್ನು ನೀಡಿ ಮುನ್ನಡೆಸುತ್ತಿದ್ದರಂತೆ. ಕೆಲವೊಮ್ಮೆ ಶ್ರೀ ಸಂಗಪ್ಪ ಸ್ವಾಮಿಗಳೂ ಸಹ ತಮ್ಮ ಜಗುಲಿಯನ್ನೇ ವಾಹನ ಮಾಡಿಕೊಂಡು ಶ್ರೀ ಮಹಂತೇಶ್ವರರು ನೆಲೆಸಿದ್ದ ಸ್ಥಳಕ್ಕೆ ಹೋಗಿ(ಈಗ ಗದ್ದುಗೆಮಠ ಇರುವ ಜಾಗ) ಕೆಲವು ಸಮಯ ಇದ್ದು ಧರ್ಮಜಾಗೃತಿಯ ವಿಚಾರಗಳ ಬಗ್ಗೆ ಚರ್ಚಿಸಿ ಬರುತ್ತಿದ್ದರು ಎಂದು ಹೇಳಲಾಗುತ್ತಿದೆ.

ಮಠ ಸ್ಥಾಪನೆ: ಈ ಜನಪದ ಕಥೆಯ ಆಧಾರದ ಮೇಲೆ ಶ್ರೀ ಸಂಗಪ್ಪ ಸ್ವಾಮಿಗಳು ಈ ಮಠದ ಕರ್ತೃ ಗುರುಗಳು ಎಂದು ಹೇಳಬಹುದು. ಶ್ರೀ ಸಂಗಪ್ಪ ಸ್ವಾಮಿಗಳು ಶ್ರೀ ತೋಂಟದ ಸಿದ್ಧಲಿಂಗ ಯತಿಗಳ ಪ್ರಭಾವಕ್ಕೆ ಒಳಗಾಗಿದ್ದ ಪ್ರಮುಖರಲ್ಲಿ ಒಬ್ಬರಾಗಿದ್ದು ವೀರಶೈವ ಧರ್ಮ ಪ್ರಚಾರಕ್ಕೆ ತೋಂಟದ ಶ್ರೀ ಸಿದ್ಧಲಿಂಗೇಶ್ವರರ ಕಾಲದಲ್ಲಿ ಸಿದ್ಧಗಂಗೆ, ಶಿವಗಂಗೆ, ಎಡೆಯೂರು ಸುತ್ತಮುತ್ತ ಸ್ಥಾಪನೆಗೊಂಡ ಮಠಗಳಲ್ಲಿ ಈ ಮಠವೂ ಒಂದಾಗಿರಬಹುದು.

ಯೋಗಿ ಮಂಟಪ: ಈ ಮಠ ಸ್ಥಾಪಕರು ಶ್ರೀ ಸಂಗಪ್ಪ ಸ್ವಾಮಿಗಳು ಎಂದು ಜನಪದ ಆಧಾರದ ಮೇಲೆ ಹೇಳಿದಂತೆಯೇ ಈ ಮಠದಲ್ಲಿ ಯೋಗಿಮಂಟಪ ಎಂಬ ಜನಪದ ಐತಿಹ್ಯ ಸಿಗುವುದರಿಂದ ಈ ಮಠಕ್ಕೆ ಶ್ರೀ ಸಂಗಪ್ಪ ಸ್ವಾಮಿಗಳೇ ಸ್ಥಾಪಕರೆಂದು ನಿರ್ಧರಿಸಬಹುದು. ಚಿಲುಮೆ ಮಠದಲ್ಲಿ ಯೋಗಿಮಂಟಪ ಎಂದು ಕರೆಯುವ ಜಾಗ ಇದ್ದು ಈ ಮಂಟಪದಲ್ಲಿ ಪೂಜೆ ಮಾಡಲಾಗು ತ್ತಿದೆ. ಕಾರಣ ಶ್ರೀ ಸಂಗಪ್ಪ ಸ್ವಾಮಿಗಳು ಮತ್ತು ಶ್ರೀ ಮಹಾಂತ ಸ್ವಾಮಿಗಳು ಈ ಜಾಗದಲ್ಲಿ ಅನುಷ್ಠಾನಗೊಂಡ ಯೋಗಿಗಳಾಗಿದ್ದರು ಎಂದು ಹೇಳಲಾಗುತ್ತಿದೆ. ಗುರುಗಳು ಲಿಂಗೈಕ್ಯರಾದ ಮೇಲೆ ಯೋಗಿ ಮಂಟಪ ಎಂದು ಭಕ್ತರು ಪೂಜೆ ಮಾಡಿಕೊಂಡು ಬಂದ ಕಾರಣ ಈ ಜಾಗವನ್ನು ಈ ಮಠದ ಪವಿತ್ರ ಸ್ಥಳವೆಂದೇ ಗುರುತಿಸಲಾಗಿದೆ.

ಪರಂಪರೆ: ಶ್ರೀ ಸಂಗಪ್ಪ ಸ್ವಾಮಿಗಳ ನಂತರ ಮಠ ಬೆಳೆದ ಬಗ್ಗೆ ಜನಪದ ಕಥೆಗಳು ಪುರಾವೆ ನೀಡುತ್ತವೆ. ಆದರೆ ಯಾವ ಐತಿಹಾಸಿಕ ದಾಖಲೆಗಳೂ ಸಿಗುತ್ತಿಲ್ಲ. ಮಠದ ಆಡಳಿತವನ್ನು ನಡೆಸಿದ ಗುರುಗಳ ಹೆಸರುಗಳು ಲಭ್ಯವಾಗಿಲ್ಲ.

೧. ಶ್ರೀ ಮ.ನಿ.ಪ್ರ. ಸಂಗಪ್ಪಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಸದಾಶಿವಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯನ್ನು ಗುರುತಿಸಬಹುದಾಗಿದೆ. ಇದಕ್ಕೆ ಸಾಕ್ಷಿಯಾಗಿ ಮಠದಲ್ಲಿ ಯೋಗ ಮಂಟಪ ಮತ್ತು ನಂತರ ಎರಡು ಜನ ಗುರುಗಳ ಹೆಸರಲ್ಲಿ ಎರಡು ಗದ್ದುಗೆಗಳು ಸ್ಥಾಪನೆಗೊಂಡಿವೆ. ಮಠದ ಪರಂಪರೆಯ ಕೊಂಡಿಯಾಗಿ ಅಧಿಕಾರ ವಹಿಸಿಕೊಂಡ ಶ್ರೀ ಬಸವಲಿಂಗ ಸ್ವಾಮಿಗಳು ಹಿರಿಯ ಚೇತನರಾದ ಶ್ರೀ ಶಿವಕುಮಾರ ಸ್ವಾಮಿಗಳ ಕೃಪಾಕಟಾಕ್ಷದಿಂದ ಬೆಳೆದು ಸಿದ್ಧಗಂಗೆಯಲ್ಲಿ ವಿದ್ಯಾಭ್ಯಾಸ ಮಾಡಿ ೧೯೮೨ರ ಏಪ್ರಿಲ್ ಇಪ್ಪತ್ತಾರರಂದು ಪಟ್ಟಾಧಿಕಾರ ಪಡೆದು ಅಧಿಕಾರಕ್ಕೆ ಬಂದಿದ್ದಾರೆ. ಸಿದ್ಧಗಂಗೆಯ ಶಾಖಾನುವರ್ತಿ ಮಠವಾದ ಕಾರಣ ಶ್ರೀ ಬಸವಲಿಂಗ ಸ್ವಾಮಿಗಳಿಗೆ ಸಿದ್ಧಗಂಗೆಯಲ್ಲಿಯೇ ಪಟ್ಟಾಧಿಕಾರ ಶಾಸ್ತ್ರವನ್ನು ಮುಗಿಸಿಕೊಂಡು ಇಲ್ಲಿಗೆ ನೇಮಕಗೊಂಡು ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದಿದ್ದಾರೆ. ಶ್ರೀ ಬಸವಲಿಂಗ ಸ್ವಾಮಿಗಳು ಪಟ್ಟಾಧಿಕಾರಕ್ಕೆ ಬರುವ ಮುನ್ನ ಮಠಾಧೀಶ್ವರರು ಯಾರೂ ಇಲ್ಲದ ಕಾರಣ ಮಠವು ಜೀರ್ಣಗೊಂಡಿತ್ತು. ಈ ಸಮಯದಲ್ಲಿ ಸಂಸಾರಿಗಳೊಬ್ಬರು ಪೂಜಾಕಾರ್ಯವನ್ನು ಮಾಡಿಕೊಂಡು ಬರುತ್ತಿದ್ದರು. ಸಿದ್ಧಗಂಗೆಯ ಗುರುಗಳು ಇಂತಹ ಪ್ರಾಚೀನ ಮಠವು ನಶಿಸಿ ಹೋಗಬಾರದೆಂದು ಮಠಕ್ಕೆ ಉತ್ತರಾಧಿಕಾರಿಗಳನ್ನು ನೇಮಿಸಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಬಸವಲಿಂಗ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಸಿದ್ಧಗಂಗೆಯ ಶ್ರೀ ಶಿವಕುಮಾರ ಸ್ವಾಮಿಗಳ ಮಾರ್ಗದರ್ಶನದಲ್ಲಿ ಮಠವನ್ನು ಮುನ್ನಡೆಸುತ್ತಾ, ಗದ್ದುಗೆಗಳನ್ನು ನವೀಕರಿಸಿ ಮಂಟಪವನ್ನು ನಿರ್ಮಿಸಲಾಗಿದೆ. ಮಠವನ್ನು ಆರ್ಥಿಕವಾಗಿ ಸದೃಢಪಡಿಸಲು ಮಠದ ಆಸ್ತಿಯಾಗಿರುವ ಹದಿನೈದು ಎಕರೆ ಜಮೀನನ್ನು ಅಭಿವೃದ್ಧಿಪಡಿಸಿ ಮಠಕ್ಕೆ ಆದಾಯದ ಮೂಲವನ್ನಾಗಿ ಮಾಡಿಕೊಂಡಿದ್ದಾರೆ. ಶ್ರೀ ಬಸವಲಿಂಗ ಸ್ವಾಮಿಗಳು ಯಾರನ್ನೂ ಅವಲಂಬಿಸಿಕೊಳ್ಳದೆ ಕಾಯಕ ಯೋಗಿಯಾಗಿ ಕಾಯಕತತ್ತ್ವಕ್ಕೆ ಅನುಗುಣವಾಗಿ ಬದುಕನ್ನು ನಡೆಸಿದ್ದಾರೆ.

ಪ್ರಾಚೀನತೆ: ಚಿಲುಮೆ ಮಠದಲ್ಲಿ ಪೂರ್ವ ಕಾಲದಲ್ಲಿ ನಿರ್ಮಿಸಿದ ಕಲ್ಲಿನ ಮಂಟಪಗಳು ಇದ್ದು, ಈ ಮಂಟಪಗಳನ್ನು ಈಗ ಗೋಶಾಲೆಯಾಗಿ ಮಾಡಲಾಗಿದೆ. ಕಲ್ಲುಗುಡಿಯಲ್ಲಿ ಯೋಗ ಮಂಟಪ ಇದೆ. ಅಲ್ಲದೆ ಹಳೆಯ ಕಾಲದಲ್ಲಿ ನಿರ್ಮಿಸಿದ ಕಟ್ಟಡದಲ್ಲಿ ಕತ್ತಿ, ಗುರಾಣಿಗಳು,ಹಿಂದಿನ ಗುರುಗಳು ಸಂಚಾರದಲ್ಲಿ ಬಳಸುತ್ತಿದ್ದ ಬೆತ್ತ ಇದೆ. ಹಾಗೂ ಹಳೆಯ ಕಾಲದ ಗಜದಕಡ್ಡಿ ಮಠದಲ್ಲಿ ದೊರೆತಿದೆ. ಒರಟು ಕಲ್ಲಿನಲ್ಲಿ ಕೆತ್ತಿರುವ ಶಿಲಾಶಾಸನ ಇದ್ದು ಸಂರಕ್ಷಣೆಯಿಲ್ಲದೆ ಕೆತ್ತನೆಯ ಅಕ್ಷರಗಳು ಮಸುಕಾಗಿವೆ. ಮಠದ ಒಂದು ಅಂಗವೇ ಆಗಿರುವ ಚಿಲುಮೆಯ ಸುತ್ತ ತೊಟ್ಟಿಯಾಕಾರದಲ್ಲಿ ಕಲ್ಲಿನ ಕಟ್ಟಡವನ್ನು ನಿರ್ಮಿಸಲಾಗಿದೆ. ಹತ್ತು ಅಡಿ ಆಳ ಇರುವ ಚಿಲುಮೆಯ ಮೇಲೆ ಮಂಟಪವನ್ನು ಮಾಡಿ ಬಸವನ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ.

ವಿಳಾಸ:ಶ್ರೀ ಮ.ನಿ.,ಪ್ರ. ಬಸವಲಿಂಗಸ್ವಾಮಿಗಳು, ಶ್ರೀ ಚಿಲುಮೆಮಠ,ಸೋಲೂರು, ಮಾಗಡಿ ತಾ,ಬೆಂಗಳೂರು ಗ್ರಾಮಾಂತರಜಿಲ್ಲೆ.

ಕಡಲೆಮಠ: ಸೋಲೂರಿನ ಪೂರ್ವಭಾಗದಲ್ಲಿ ಸ್ಥಾಪನೆಯಾಗಿರುವ ಕಡಲೆ ಮಠವು ಶ್ರೀ ಸಂಗಪ್ಪ ಸ್ವಾಮಿಗಳ ಕಾಲದಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಬಹುದು. ಶ್ರೀ ಸಂಗಪ್ಪ ಸ್ವಾಮಿಗಳು ಚಿಲುಮೆ ಮಠದಲ್ಲಿ ಇರುವಾಗಲೇ ಕೆಲವು ದಿನ ಇಲ್ಲಿ ನೆಲೆಸಿ ಅನುಷ್ಠಾನ ಗೊಂಡಿದ್ದರು. ನಂತರ ಶ್ರೀ ಸಂಗಪ್ಪ ಸ್ವಾಮಿಗಳು ಇಲ್ಲಿ ಲಿಂಗೈಕ್ಯರಾಗಿದ್ದು, ಈ ಜಾಗದಲ್ಲಿ ಸಮಾಧಿ ಮಾಡಲಾಗಿದೆ ಎಂದು ಇಲ್ಲಿನ ಜನರು ಹೇಳುತ್ತಾರೆ.

ಇದಕ್ಕೆ ಪೂರಕವೆಂಬಂತೆ ಈ ಮಠದಲ್ಲಿ ಶ್ರೀ ಸಂಗಯ್ಯನವರ ಗದ್ದುಗೆ ನಿರ್ಮಾಣವಾಗಿದೆ. ಗದ್ದುಗೆ ಸಮೀಪ ಬಸವನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಶ್ರೀ ಸಂಗಪ್ಪ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಈ ಗದ್ದುಗೆಗೆ ಪೂಜಾಕಾರ್ಯ ಮಾತ್ರ ನಡೆದುಕೊಂಡು ಬರುತ್ತಿದ್ದು ಮಠಾಧೀಶ್ವರರು ಯಾರೂ ಅಧಿಕಾರಕ್ಕೆ ಬಂದಿಲ್ಲ ಎಂಬ ಕುರುಹುಗಳು ಕಾಣುತ್ತವೆ. ಈಗಲೂ ಈ ಮಠದಲ್ಲಿ ಶಿವಣ್ಣ ಎಂಬುವವರು ಗದ್ದುಗೆ ಪೂಜೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಚಿಲುಮೆ ಮಠಕ್ಕೂ, ಈ ಮಠಕ್ಕೂ ಯಾವುದೇ ಆಡಳಿತಾತ್ಮಕ ಸಂಬಂಧ ಇರುವುದಿಲ್ಲ. ಗದ್ದುಗೆಗೆ ಕಲ್ಲಿನ ವಿಶಾಲ ಮಂಟಪವನ್ನು ಮಾಡಲಾಗಿದೆ. ಮಂಟಪದ ಸುತ್ತ ಆವರಣ ನಿರ್ಮಿಸಿ ವಿವಿಧ ಜಾತಿಯ ಹೂವಿನ ಗಿಡಗಳನ್ನು ಬೆಳೆಸಲಾಗಿದೆ. ಬಿಲ್ವಪತ್ರೆ ಮರಗಳು ಬೆಳೆದಿದ್ದು ಊರ ಹೊರಗಿನ ಪ್ರಶಾಂತ ಸ್ಥಳದಲ್ಲಿ ಧರ್ಮಜಾಗೃತ ಸ್ಥಳವಾಗಿ ಪೂಜ್ಯತೆಗೆ ಒಳಗಾಗಿದೆ.

ಗದ್ದುಗೆಮಠ: ಸೋಲೂರು ಗ್ರಾಮದಿಂದ ವಾಯುವ್ಯಕ್ಕೆ ನಾಲ್ಕು ಕಿ. ಮೀ. ದೂರದಲ್ಲಿರುವ ಗದ್ದುಗೆಮಠವು ಚೀಲಾಳಸಮಯಕ್ಕೆ ಸೇರಿದ ವಿರಕ್ತಮಠವಾಗಿದೆ. ಮಹಾತಪಸ್ವಿ ಶ್ರೀ ಮಹಂತೇಶ ಸ್ವಾಮಿಗಳು ಇಲ್ಲಿ ತಪೋನುಷ್ಠಾನಗೊಂಡು ಲಿಂಗೈಕ್ಯರಾಗಿದ್ದು, ಇವರ ಗದ್ದುಗೆಯ ಮೇಲೆ ಮಠವನ್ನು ಸ್ಥಾಪಿಸಿರುವ ಕಾರಣ 'ಗದ್ದುಗೆ ಮಠ' ಎಂದು ಕರೆಯಲಾಗುತ್ತಿದೆ.

ಶ್ರೀ ಸಂಗಪ್ಪ ಸ್ವಾಮಿಗಳು ಮತ್ತು ಶ್ರೀ ಮಹಂತೇಶ್ವರ ಸ್ವಾಮಿಗಳ ಬಗ್ಗೆ ಕೇಳಿ ಬರುವ ಜನಪದ ಕಥೆಯ ಆಧಾರದಿಂದಲೇ ಇಲ್ಲಿನ ಇತಿಹಾಸವನ್ನು ಗುರುತಿಸಬಹುದಾಗಿದೆ. ಶ್ರೀ ಮಹಂತೇಶ್ವರರು ಲಿಂಗೈಕ್ಯರಾದ ಮೇಲೆ ಭಕ್ತರು ಗುರುಗಳ ಗದ್ದುಗೆಯನ್ನು ಸ್ಥಾಪಿಸಿ ಪೂಜೆ ಮಾಡತೊಡಗಿದರು. ಬಸವಾದಿ ಶರಣರ ತತ್ತ್ವಗಳನ್ನು ನಾಡಿಗೆ ಸಾರಲು ಈ ಜಾಗೃತ ಸ್ಥಳವನ್ನು ಬಳಸಿಕೊಂಡರು ಎಂದು ಹೇಳಲಾಗುತ್ತಿದೆ. ಆದರೆ ಈ ಬಗ್ಗೆ ಯಾವುದೇ ದಾಖಲೆಗಳೂ ಲಭ್ಯವಿಲ್ಲ.

ಜಂಗಮ ಜ್ಯೋತಿಯ ದೃಷ್ಟಿ: ಸಿದ್ಧಗಂಗೆಯ ಮಠಾಧೀಶ್ವರರಾದ ಜಂಗಮಜ್ಯೋತಿ ಶ್ರೀ ಶಿವಕುಮಾರ ಸ್ವಾಮಿಗಳು ಈ ಸ್ಥಳದ ಮಹಿಮೆಯನ್ನು ನೋಡಿ ಈ ಜಾಗೃತ ಸ್ಥಳದಲ್ಲಿ ಮಠಾಧೀಶ್ವರರು ಯಾರೂ ಇಲ್ಲದೆ ನಿರರ್ಥಕವಾಗಿ ಹೋಗುತ್ತಿದ್ದರಿಂದ

ಸೋಲೂರು ಮತ್ತು ಸುತ್ತಮುತ್ತಲಿನ ಪ್ರದೇಶದ ಭಕ್ತರ ನೆರವು ಪಡೆದು, ಈ ಮಠಕ್ಕೆ ಶ್ರೀ ಮಹಂತೇಶ್ವರ ಸ್ವಾಮಿಗಳನ್ನು ಅಧಿ ಕಾರಕ್ಕೆ ತರುತ್ತಾರೆ. ಶ್ರೀ ಮಹಂತ ಸ್ವಾಮಿಗಳು ಸಿದ್ಧಗಂಗೆಯಲ್ಲಿ ಹಿರಿಯ ಗುರುಗಳ ಕೃಪಾಶೀರ್ವಾದದಿಂದ ಬೆಳೆದು ಧಾರ್ಮಿಕ ಮೌಲ್ಯಗಳನ್ನು ಅಳವಡಿಸಿಕೊಂಡು ಸಮಾಜವನ್ನು ನೈತಿಕ ನೆಲೆಗಟ್ಟಿನಲ್ಲಿ ಬೆಳೆಸುವ ಸಾಮರ್ಥ್ಯವನ್ನು ಪಡೆದುಕೊಂಡಿದ್ದರು. ಈ ಕಾರಣಕ್ಕಾಗಿಯೇ ಶ್ರೀ ಶಿವಕುಮಾರ ಸ್ವಾಮಿಗಳು ಈ ಮಠಕ್ಕೆ ಪಟ್ಟಾಧಿಕಾರ ಮಾಡಿ ಮಠದಲ್ಲಿ ಗುರುವಿನ ಮುಂದಾಳತ್ವದಲ್ಲಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದರು.

ಪಟ್ಟಾಧಿಕಾರ: ಶ್ರೀ ಮಹಂತೇಶ್ವರ ಸ್ವಾಮಿಗಳು ಮಠದ ಆಡಳಿತವನ್ನು ವಹಿಸಿಕೊಂಡ ಮೇಲೆ ಮಠದಲ್ಲಿ ಪರಂಪರಾಗತವಾಗಿ ಬೆಳೆದು ಬಂದಿದ್ದ ಧಾರ್ಮಿಕ ಕಾರ್ಯಗಳನ್ನು ಶಿಸ್ತುಬದ್ಧವಾಗಿ ನಡೆಯುವಂತೆ ಅಣಿಗೊಳಿಸಿದರು. ಮಠದಲ್ಲಿ ಧಾರ್ಮಿಕ ಕಾರ್ಯಗಳು ವಿಸ್ತಾರಗೊಂಡಂತೆ ಮಠದ ಕಟ್ಟಡ ಸಾಕಾಗದೆ ಹೋಯಿತು.೧೯೮೭-೮೮ರಲ್ಲಿ ಮಠದ ಕಟ್ಟಡವನ್ನು ಆಮೂಲಾಗ್ರವಾಗಿ ಬದಲಾವಣೆ ಮಾಡಿ ಮಠದ ಪರಿಸರವನ್ನು ಭವ್ಯಗೊಳಿಸಿದರು. ಪ್ರಕೃತಿಯ ಐಸಿರಿಯ ಮಧ್ಯೆ ಪ್ರಶಾಂತ ಸ್ಥಳದಲ್ಲಿ ಸ್ಥಾಪನೆಯಾಗಿರುವ ಈ ಮಠದಲ್ಲಿ ಜನಜಂಗುಳಿ ಪ್ರಾರಂಭವಾಯಿತು. ಬರುವ ಭಕ್ತರಿಗೆ ಮಠದಲ್ಲಿ ದಾಸೋಹ ಕ್ರಿಯೆಗಳು ವ್ಯವಸ್ಥೆಗೊಂಡಿವೆ.

ಈ ಮಠದ ಗುರುತರ ಜವಾಬ್ದಾರಿಯನ್ನು ವಹಿಸಿಕೊಂಡ ಶ್ರೀ ಮಹಂತ ಸ್ವಾಮಿಗಳು ಸಿದ್ಧಗಂಗೆಯ ಜಂಗಮ ಜ್ಯೋತಿ ಶ್ರೀ ಶಿವಕುಮಾರ ಸ್ವಾಮಿಗಳ ಅಪೇಕ್ಷೆಗಿಂತ ಹೆಚ್ಚಾಗಿ ದುಡಿದು ಮಠವನ್ನು ಕಂಡರಿಯದ ರೀತಿಯಲ್ಲಿ ಬೆಳೆಸಿದರು. ಸದಾ ಚಟುವಟಿಕೆಯಿಂದ ಇರುವ ಗುರುಗಳು ಒಂದಲ್ಲ ಒಂದು ಅಭಿವೃದ್ಧಿಯ ಯೋಜನೆಗಳನ್ನು ಕೈಯ್ಯಲ್ಲಿ ಇಟ್ಟುಕೊಂಡು ಒಂದರ ಮೇಲೆ ಒಂದರಂತೆ ಕಾರ್ಯಗತಗೊಳಿಸಿ ಮಠವನ್ನು ಶ್ರೀಮಂತಗೊಳಿಸಿದ್ದಾರೆ. ಮಠದ ಐವತ್ತು ಎಕರೆ ಜಮೀನನ್ನು ಅಭಿವೃದ್ಧಿಪಡಿಸಿ ಮಠಕ್ಕೆ ಮೂಲ ಆದಾಯದ ಆಧಾರವನ್ನಾಗಿ ಮಾಡಿಕೊಂಡಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಮಹಂತೇಶ್ವರ ಸ್ವಾಮಿಗಳು, ಶ್ರೀ ಗದ್ದುಗೆಮಠ, ಸೋಲೂರು, ಮಾಗಡಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಹುಲಿಕಲ್ಲು

ಮಾಗಡಿ ತಾಲ್ಲೂಕಿನ ಹುಲಿಕಲ್ಲು ಅಭಿವೃದ್ಧಿ ಶೀಲ ಗ್ರಾಮ. ಈ ಗ್ರಾಮವು ತಾಲ್ಲೂಕು ಕೇಂದ್ರದ ಉತ್ತರ ಭಾಗದಲ್ಲಿದೆ. ಪುರಾತನ ಕಾಲದ ಧಾರ್ಮಿಕ ಇತಿಹಾಸವನ್ನು ಹೊಂದಿರುವ ಈ ಗ್ರಾಮದಲ್ಲಿ ಹದಿನಾರು ಮಠಗಳು ಸ್ಥಾಪನೆಯಾದ ಬಗ್ಗೆ ಮಾಹಿತಿ ದೊರೆತಿದೆ. ಈ ಮಠಗಳಲ್ಲಿ ಕೋಟೆಯ ಒಳ ಭಾಗದಲ್ಲಿ ಎಂಟು ಮಠಗಳು ಸ್ಥಾಪನೆಯಾಗಿದ್ದು ಅವುಗಳಲ್ಲಿ ಈಗ ಶ್ರೀ ಗೋಬಾಳಯ್ಯನ ಮಠ, ಶ್ರೀ ಗುರುಚಿತ್ರಾರಾಧ್ಯರಮಠ, ಶ್ರೀ ದೊಡ್ಡ ಮಠ ಎಂಬ ಮೂರು ಮಠಗಳು ಮಾತ್ರ ಲಭ್ಯ ಇವೆ. ಕೋಟೆಯ ಹೊರಭಾಗದಲ್ಲಿ ಎಂಟು ಮಠಗಳು ಸ್ಥಾಪನೆಯಾಗಿದ್ದು ಅವುಗಳಲ್ಲಿ ಈಗ ಶ್ರೀ ತೋಪಿನಮಠ, ಶ್ರೀ ಶುಂಠಿಮಠ (ಸಂತೆ ಮಠ), ಶ್ರೀ ಪುಷುದೇವರ ಮಠ ಹಾಗೂ ಶ್ರೀ ಬಸವಣ್ಣನವರ ಮಠ ಎಂಬ ನಾಲ್ಕು ಮಠಗಳ ಹೆಸರುಗಳನ್ನು ದಾಖಲಿಸಬಹುದಾಗಿದ್ದು ಉಳಿದ ಮಠಗಳಲ್ಲಿ ಮಠಾಧೀಶರು ಯಾರೂ ಇಲ್ಲದೆ ಮಠಕ್ಕೆ ಸಂಬಂಧಪಟ್ಟವರು ಗದ್ದುಗೆಗಳಿಗೆ ಪೂಜೆ ನಡೆಸುತ್ತಿದ್ದಾರೆ. ಹೊರಭಾಗದಲ್ಲಿ ಸ್ಥಾಪನೆಗೊಂಡಿರುವ ಶ್ರೀ ತೋಪಿನ ಮಠ ಮತ್ತು ಶ್ರೀ ಶುಂಠಿಮಠಗಳು ಮಾತ್ರ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿವೆ.

ತೋಪಿನಮಠ: ಹುಲಿಕಲ್ಲು ಗ್ರಾಮದ ಉತ್ತರ ಭಾಗದಲ್ಲಿ ವಿರಕ್ತ ಸಂಪ್ರದಾಯದ ತೋಪಿನ ಮಠವು ಸ್ಥಾಪನೆಗೊಂಡಿದೆ. ಪುರಾತನ ಕಾಲದಲ್ಲೇ ಮಠವು ಅಸ್ತಿತ್ವಗೊಂಡಿರುವ ಬಗ್ಗೆ ಯಾವ ದಾಖಲೆಗಳನ್ನು ಉಳಿಸಿಕೊಳ್ಳಲಾಗದಿರುವ ಕಾರಣ ಸ್ಪಷ್ಟವಾಗಿ ಯಾವಾಗ ಮಠದ ಸ್ಥಾಪನೆಯಾಯಿತು ಎಂದು ಹೇಳಲು ಕಷ್ಟವಾಗಿದೆ. ಶ್ರೀ ಶ್ರೀಕಂಠೇಶ್ವರ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟಿರುವುದಕ್ಕೆ ಈ ಮಠದಲ್ಲಿ ಶ್ರೀ ಶ್ರೀಕಂಠೇಶ್ವರ ಸ್ವಾಮಿಗಳ ಕರ್ತೃಗದ್ದುಗೆ ಸ್ಥಾಪಿತವಾಗಿರುವುದೇ ಸಾಕ್ಷಿ

ಉತ್ತರದ ಕಡೆಯಿಂದ ಲೋಕಸಂಚಾರಕ್ಕೆ ಬಂದ ಮಹಾ ಶಿವಯೋಗಿ ಶ್ರೀ ಶ್ರೀಕಂಠೇಶ್ವರ ಸ್ವಾಮಿಗಳು ಈ ಗ್ರಾಮದ

ಹೊರಭಾಗದ ತೋಪಿನಲ್ಲಿ ಅನುಷ್ಠಾನಕ್ಕೆ ಕುಳಿತುಕೊಂಡರು. ದೀರ್ಘ ಅನುಷ್ಠಾನದ ನಂತರ ಅನೇಕ ಪವಾಡಗಳನ್ನು ಮಾಡಿ ಜನಮನವನ್ನು ಗೆದ್ದ ಗುರುಗಳು ಭಕ್ತರನ್ನು ಉದ್ಧರಿಸಿ ವೀರಶೈವ ಧರ್ಮಬೆಳೆಯಲು ಸಹಕಾರಿಯಾದರು. ಗುರುಗಳ ಮತ್ತು ಭಕ್ತರ ಸಂಬಂಧ ಹೆಚ್ಚಾದಂತೆ ಧಾರ್ಮಿಕ ಚಟುವಟಿಕೆಗಳು ವಿಸ್ತಾರಗೊಳ್ಳುತ್ತಾ ಹೋದವು. ಆಗ ತೋಪಿನಲ್ಲಿದ್ದ ಸಣ್ಣ ಕುಟೀರ ಈ ಚಟುವಟಿಕೆಗಳಿಗೆ ಸಾಕಾಗದೆ ಹೋಯಿತು. ಈ ಕಾರಣಕ್ಕೆ ಮಠದ ಕಟ್ಟಡವು ವಿಸ್ತಾರಗೊಂಡು ಬೆಳೆಯಿತು. ನಂತರ ದಾಸೋಹ ಕ್ರಿಯೆಗಳು ಚುರುಕುಗೊಂಡವು.

ಪಟ್ಟಾಧಿಕಾರ: ಈ ರೀತಿ ಪ್ರಾರಂಭಗೊಂಡ ಪುರಾತನ ಮಠವು ಕಳೆದ ದಶಕದವರೆವಿಗೂ ಹಳೆಯ ಕಟ್ಟಡದಲ್ಲಿಯೇ ತನ್ನ ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು, ಜ್ಞಾನ ದಾಸೋಹ ಹಾಗೂ ಅನ್ನ ದಾಸೋಹಗಳನ್ನು ನಡೆಸಿಕೊಡುತ್ತಾ ಬಂದಿದೆ. ೧೯೯೦ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡ ಶ್ರೀ ಶಿವಬಸವ ಸ್ವಾಮಿಗಳು ಪ್ರಥಮವಾಗಿ ಜೀರ್ಣಗೊಂಡ ಹಳೆಯ ಮಠದ ಕಟ್ಟಡವನ್ನು ತೆಗೆಸಿ ಕರ್ತೃಗುರುಗಳಾದ ಶ್ರೀ ಶ್ರೀಕಂಠೇಶ್ವರ ಸ್ವಾಮಿಗಳ ಗದ್ದುಗೆಯನ್ನು ಕೇಂದ್ರವಾಗಿ ಇಟ್ಟುಕೊಂಡು ನೂತನ ಕಟ್ಟಡವನ್ನು ನಿರ್ಮಿಸಿದ್ದಾರೆ. ಮಠದ ಅಧೀನದಲ್ಲಿರುವ ಸುಮಾರು ಹತ್ತು ಎಕರೆ ಜಮೀನನ್ನು ತಮ್ಮ ಕಾಯಕಯೋಗದಿಂದ ಅಭಿವೃದ್ಧಿಪಡಿಸಿ, ಮಠಕ್ಕೆ ಆದಾಯದ ಮೂಲವನ್ನಾಗಿ ಮಾಡಿಕೊಂಡು ಮಠವನ್ನು ಆರ್ಥಿಕವಾಗಿ ಸದೃಢಗೊಳಿಸಿದ್ದಾರೆ.

ಗದ್ದುಗೆಗಳು: ಮಠದ ಹೊರಭಾಗದಲ್ಲಿ ಮೂರು ಗದ್ದುಗೆಗಳು ಸ್ಥಾಪನೆಗೊಂಡಿದ್ದು ಈ ಗದ್ದುಗೆಗಳು ಯಾರ ಹೆಸರಲ್ಲಿ ನಿರ್ಮಾಣಗೊಂಡಿವೆ ಎಂದು ಹೇಳಲು ಯಾವುದೇ ದಾಖಲೆಗಳು ಲಭ್ಯವಿಲ್ಲ. ಮಠದ ಪರಂಪರೆಯ ಮೊದಲ ಗುರುಗಳಾದ ಶ್ರೀ ಶ್ರೀಕಂಠ ಸ್ವಾಮಿಗಳ ನಂತರ ಅನೇಕ ಗುರುಗಳು ಅಧಿಕಾರಕ್ಕೆ ಬಂದಿರಬಹುದು ಆದರೆ ಯಾವುದೇ ಮಾಹಿತಿ ಲಭ್ಯವಿಲ್ಲ.
ಧಾರ್ಮಿಕ ಕೆಲಸಗಳು: ಮಠದ ಪರಂಪರೆಯ ಗುರುಗಳ ಗದ್ದುಗೆಗಳಿಗೆ ನಿತ್ಯ ಪೂಜೆ ನಡೆಯುತ್ತಿದೆ. ಹುಣ್ಣಿಮೆ ಮತ್ತು ಅಮಾವಾಸ್ಯೆ ಹಾಗೂ ಶ್ರಾವಣ ಮಾಸದಲ್ಲಿ ವಿಶೇಷ ಪೂಜೆ ಏರ್ಪಡಿಸಿ ಭಕ್ತರನ್ನು ಸಂತೃಪ್ತಿಗೊಳಿಸಲಾಗುತ್ತಿದೆ. ಈ ಸಂದರ್ಭಗಳಲ್ಲಿ ಅನ್ನ ದಾಸೋಹದ ವ್ಯವಸ್ಥೆ ಮಾಡಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ ಶಿವಬಸವ ಸ್ವಾಮಿಗಳು,ಶ್ರೀ ತೋಪಿನಮಠ,ಹುಲಿಕಲ್ಲು,ಮಾಗಡಿ ತಾ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಶುಂಠಿಮಠ: ಹುಲಿಕಲ್ಲು ಗ್ರಾಮದ ಹೊರಭಾಗದಲ್ಲಿ ಶ್ರೀ ಶುಂಠಿಮಠವು ಸ್ಥಾಪನೆಯಾಗಿದೆ. ಈ ಮಠವು ಸಿರಿಗೆರೆ ತರಳಬಾಳು ಬೃಹನ್ಮಠದ ಶಾಖಾಮಠವಾಗಿದೆ. ಪುರಾತನ ಕಾಲದಲ್ಲಿ ಸ್ಥಾಪನೆಯಾಗಿರಬಹುದಾದ ಈ ಮಠದಲ್ಲಿ ನಾಲ್ಕು ಗದ್ದುಗೆಗಳು ಸ್ಥಾಪಿತಗೊಂಡಿವೆ. ಮಠದ ಒಳಗಡೆ ಗದ್ದುಗೆಪ್ಪ ಎಂದು ಕರೆಯಲಾಗುವ ಒಂದು ಗದ್ದುಗೆ ಇದೆ. ಇದು ಕರ್ತೃಗುರುಗಳ ಗದ್ದುಗೆಯಾಗಿರಬಹುದೆಂದು ಅಂದಾಜು ಮಾಡಲಾಗಿದೆ. ಕರ್ತೃಗುರುಗಳ ಹೆಸರು ಗೊತ್ತಿಲ್ಲದ ಕಾರಣ ಈ ಗದ್ದುಗೆಯನ್ನು 'ಗದ್ದುಗೆಪ್ಪ' ಎಂದು ರೂಢಿಗತವಾಗಿ ಕರೆಯಲಾಗುತ್ತಿದೆ. ಮಠದ ಹೊರಗಡೆ ಸ್ಥಾಪನೆಗೊಂಡಿರುವ ಮೂರು ಗದ್ದುಗೆಗಳು ಯಾವ ಗುರುಗಳದ್ದೆಂದು ಗುರುತಿಸಲು ಮಠದಲ್ಲಿ ಸ್ಪಷ್ಟ ದಾಖಲೆಗಳು ಇಲ್ಲ. ಬಹಳ ವರ್ಷಗಳಿಂದ ಶುಂಠಿಮಠವು ಪೀಠಾಧಿಕಾರಿಗಳಿಲ್ಲದೆ ಖಾಲಿ ಉಳಿದಿದೆ. ಖಾಲಿ ಉಳಿದ ಮಠದ ಆಡಳಿತವನ್ನು ಸಿರಿಗೆರೆಯ ತರಳ ಬಾಳು ಬೃಹನ್ಮಠವು ನೋಡಿಕೊಳ್ಳುತ್ತಿದೆ. ಶಿಥಿಲಗೊಂಡ ಮಠದಲ್ಲಿ ಶ್ರೀ ರುದ್ರಯ್ಯ ಎಂಬುವರು ನಿತ್ಯ ಗದ್ದುಗೆಗಳಿಗೆ ಪೂಜೆ ಮಾಡುತ್ತಿದ್ದಾರೆ. ಈ ಮಠಕ್ಕೆ ಸುಮಾರು ಹದಿಮೂರು ಎಕರೆ ಜಮೀನಿದೆ ಎಂದು ಗ್ರಾಮಸ್ಥರು ಹೇಳುತ್ತಾರೆ.

ಸಂಪರ್ಕ ವಿಳಾಸ: ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ, ಚಿತ್ರದುರ್ಗ ಜಿಲ್ಲೆ.

❑

ರಾಮನಗರ ತಾಲ್ಲೂಕು

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಮನಗರ ತಾಲ್ಲೂಕು ಆರ್ಥಿಕವಾಗಿ ಸಧೃಡವಾಗಿದೆ. ಕೃಷಿ ಅವಲಂಬಿತ ಈ ಪ್ರದೇಶದಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆಯಿತು. ನಂತರ ತನ್ನ ಪ್ರಾಬಲ್ಯವನ್ನು ಕಳೆದುಕೊಂಡ ಲಕ್ಷಣಗಳು ಕಂಡು ಬರುತ್ತವೆ. ಹಿಂದೆ ಇಲ್ಲಿ ಇಪ್ಪತ್ತಾರು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಪ್ರಸ್ತುತ ಕೇವಲ ನಾಲ್ಕು ಮಠಗಳನ್ನು ಮಾತ್ರ ಗುರುತಿಸಬಹುದಾಗಿದೆ.

ಅವ್ವೇರಹಳ್ಳಿ

ರಾಮನಗರ ತಾಲ್ಲೂಕಿನ ಅವ್ವೇರಹಳ್ಳಿಯು ತಾಲ್ಲೂಕು ಕೇಂದ್ರದ ಆಗ್ನೇಯ ಭಾಗದಲ್ಲಿದೆ. ಈ ಕ್ಷೇತ್ರದಲ್ಲಿ ಪುರಾಣ ಪ್ರಸಿದ್ಧ ರೇಣುಕಗಿರಿ ಎಂದು ಹೆಸರು ಮಾಡಿರುವ ಕಲ್ಲಿನಶಿಖರವು ಪ್ರಕೃತಿಯ ವೈಚಿತ್ರ್ಯಗಳಲ್ಲಿ ಒಂದು. ಗುಡ್ಡದಾಕಾರದ ಕಲ್ಲುಗ ಳನ್ನು ಒಂದಾದ ಮೇಲೆ ಒಂದನ್ನು ಜೋಡಿಸಿದಂತೆ ಕಾಣುವ ಈ ಕಲ್ಲಿನಶಿಖರವನ್ನು ನೋಡುವುದೇ ಒಂದು ಕುತೂಹಲ ಮತ್ತು ಆಶ್ಚರ್ಯವಾಗಿರುತ್ತದೆ. ಶಿಖರದಡಿಯಲ್ಲಿ ನಿಂತು ಶಿಖರವನ್ನು ಕತ್ತೆತ್ತಿ ನೋಡಿದರೆ ಮನುಷ್ಯನ ಕುಬ್ಜತೆಗಳು ಮಾಯವಾಗಿ ಪ್ರಕೃತಿಯಲ್ಲಿರುವ ಅಗಾಧತೆಗಳನ್ನು ನೋಡುವ, ಪ್ರೀತಿ ಮಾಡುವ ಹಂಬಲ ಮನಸ್ಸಿನಲ್ಲಿ ಮೂಡುತ್ತದೆ. ಯುಗಯುಗಾಂತರಗಳಿಂದ ಅಚಲವಾಗಿ ನಿಂತಿರುವ ರೇಣುಕ ಗಿರಿಯ ಶಿಖರ ಧಾರ್ಮಿಕ ಮನೋಭಾವದವರಿಗೆ, ಪ್ರಕೃತಿ ಪ್ರಿಯರಿಗೆ, ಸಾಹಸಿಗಳಿಗೆ, ಭೂಶಾಸ್ತ್ರಜ್ಞರಿಗೆ, ಶಿಲಾಶಾಸ್ತ್ರ ಜ್ಞರಿಗೆ ಈತನಕವೂ ಸವಾಲಾಗಿಯೇ ನಿಂತಿದೆ.

ಆದಿ ರೇಣುಕರು ಈ ಶಿಲಾಶಿಖರವನ್ನು ಮೆಟ್ಟಿನಿಂತು ಶಿಖರದ ತುತ್ತತುದಿಯಲ್ಲಿ ೭೦೦ ವರ್ಷಗಳು ತಪಸ್ಸನ್ನು ಆಚರಿಸಿದ ಕಾರಣಕ್ಕೆ ಈ ಶಿಖರವು ರೇಣುಕಗಿರಿ ಎಂದು ಪುರಾಣದಲ್ಲಿ ಪ್ರಸಿದ್ಧಿಯನ್ನು ಪಡೆದಿದೆ. ಜಗದ್ಗುರು ಶ್ರೀ ರೇಣುಕರು ತಪೋನುಷ್ಠಾನ ಗೊಂಡ ಈ ಶಿಖರದಲ್ಲಿ ಈಗ ಪ್ರತಿವರ್ಷ ನಡೆಯುವ ಜಾತ್ರೆ, ರಥೋತ್ಸವ ಸೇವಾ ಕಾರ್ಯದಲ್ಲಿ ಪ್ರಸಾದ ಮತ್ತು ವಸತಿ ವ್ಯವಸ್ಥೆಗಾಗಿ ಹಾಗೂ ಪ್ರತಿ ದಿನ ಈ ಯಾತ್ರಾ ಸ್ಥಳಕ್ಕೆ ಬಂದು ಹೋಗುವ ಭಕ್ತಾಧಿಗಳಿಗೆ ಸೌಲಭ್ಯ ಕಲ್ಪಿಸಲು ೧೯೦೨ ರಲ್ಲಿ ರೇಣುಕ ಗಿರಿಯ ತಪ್ಪಲಲ್ಲಿ ಶ್ರೀ ರೇವಣಸಿದ್ಧೇಶ್ವರ ಬೆಟ್ಟದಮಠವು ಅಸ್ತಿತ್ವದಲ್ಲಿದೆ.

ರೇವಣಸಿದ್ಧೇಶ್ವರ ಬೆಟ್ಟದಮಠ: ಅವ್ವೇರಹಳ್ಳಿಯ ಗ್ರಾಮದ ವ್ಯಾಪ್ತಿಯಲ್ಲಿ ಬರುವ ರೇಣುಕಗಿರಿಯಲ್ಲಿ ಶ್ರೀ ರೇವಣ ಸಿದ್ಧೇಶ್ವರ ಬೆಟ್ಟದ ಮಠವು ಸ್ಥಾಪನೆಯಾಗಿದೆ. ರೇಣುಕಗಿರಿಗೆ ಬರುವ ಭಕ್ತರಿಗೆ ಆಶ್ರಯ ಕಲ್ಪಿಸಿಕೊಡುವ ಒಂದೇ ಉದ್ದೇಶಕ್ಕಾಗಿ ಆನೇಕಲ್ ತಾಲ್ಲೂಕಿನ ರಾಜಾಪುರ ಸಂಸ್ಥಾನ ಮಠವು ೧೯೦೨ ರಲ್ಲಿ ಈ ಮಠವನ್ನು ಸ್ಥಾಪನೆ ಮಾಡಿ ಶ್ರೀ ಮುದ್ದುಬಸವಲಿಂಗ ಶಿವಾಚಾರ್ಯ ಸ್ವಾಮಿಗಳನ್ನು ನೂತನ ಮಠದಲ್ಲಿ ನೆಲೆಗೊಳಿಸಿದೆ.. ರೇಣುಕಗಿರಿಯ ತಪ್ಪಲಿನಲ್ಲಿ ಸ್ಥಾಪನೆಗೊಂಡ ಈ ಮಠವು ಭಕ್ತರಿಗೆ, ಯಾತ್ರಾರ್ಥಿಗಳಿಗೆ ಸೌಲಭ್ಯವನ್ನು ಕಲ್ಪಿಸುವ ಉದ್ದೇಶದಿಂದಲೇ ಹುಟ್ಟಿಕೊಂಡಿದ್ದರಿಂದ ಪ್ರತಿ ನಿತ್ಯ ಪ್ರಸಾದದ ವ್ಯವಸ್ಥೆಗೆ ದಾಸೋಹ ಕ್ರಿಯೆಗಳು ಆರಂಭಗೊಂಡವು. ಜತೆಗೆ ಬರುವ ಭಕ್ತರಿಗೆ ಉಪದೇಶವನ್ನು ನೀಡಿ ರೇಣುಕ ಮಹಾತ್ಮೆಯ ಬಗ್ಗೆ ಪರಿಚಯಿಸಿ ವೀರಶೈವ ಧರ್ಮದ ಪ್ರಚಾರವನ್ನು ಶ್ರೀ ಮುದ್ದುಬಸವ ಲಿಂಗರಾಜ ಸ್ವಾಮಿಗಳು ಮಾಡತೊಡಗಿದರು.

ಪರಂಪರೆ:

೧. ಷ.ಬ್ರ.ಶ್ರೀ ಮುದ್ದು ಬಸವಲಿಂಗ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಚನ್ನಬಸವಲಿಂಗ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಪಟ್ಟದಬಸವಲಿಂಗ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮೂರು ಜನ ಗುರುಗಳು ಈ ಮಠದಲ್ಲಿ ಪಟ್ಟಾಧಿಕಾರ ಪಡೆದು ಈ ತಪೋಭೂಮಿಯಲ್ಲಿ ಮಠ ಸ್ಥಾಪನೆಗೊಳ್ಳಲು ಕಾರಣವಾದ ಮೂಲ ಉದ್ದೇಶಕ್ಕೆ ಧಕ್ಕೆಯಾಗದಂತೆ ತಮ್ಮ ಕಾರ್ಯವನ್ನು ಮುನ್ನಡೆಸಿಕೊಂಡು ಬಂದಿದ್ದಾರೆ. ಮೊದಲ ಗುರುಗಳು ಲಿಂಗೈಕ್ಯರಾದ ಮೇಲೆ ಮಠದ ಎರಡನೆಯ ಗುರುಗಳಾಗಿ ಅಧಿಕಾರಕ್ಕೆ ಬಂದ ಶ್ರೀ ಚನ್ನಬಸವ ಲಿಂಗರಾಜ ಶಿವಾಚಾರ್ಯ ಸ್ವಾಮಿ ಗಳು ಹಿರಿಯ ಗುರುಗಳು ನಡೆಸಿಕೊಂಡು ಬಂದಿದ್ದ ದಾಸೋಹ ಕ್ರಿಯೆಯನ್ನು ಮುನ್ನಡೆಸಿಕೊಂಡು

ಭಜನೆ,ಉಪನ್ಯಾಸಗಳ ಮೂಲಕ ವೀರಶೈವ ಧರ್ಮವನ್ನು ಪ್ರಚಾರಗೊಳಿಸಿದರು. ರೇಣುಕರ ತತ್ತ್ವಗಳು, ಸಿದ್ಧಾಂತ ಶಿಖಾಮಣಿಯ ಸಾರವನ್ನು ಭಕ್ತರ ಮನದಾಳಕ್ಕೆ ಮುಟ್ಟಿಸುವ ಪ್ರಯತ್ನ ನಡೆಸಿ, ಯಾತ್ರಾರ್ಥಿಗಳಿಗೆ ರೇಣುಕಗಿರಿಯ ಯಾತ್ರೆಯು ಯಶಸ್ವಿಯಾಗುವಂತೆ ಮಾಡುತ್ತಿದ್ದರು. ಈಗಿನ ಮಠಾಧೀಶ್ವರರಾಗಿರುವ ಶ್ರೀ ಪಟ್ಟದ ಬಸವಲಿಂಗರಾಜ ಶಿವಾಚಾರ್ಯ ಸ್ವಾಮಿಗಳು ಹಿಂದಿನ ಪರಂಪರೆಯಂತೆ ಮಠದಲ್ಲಿ ದಾಸೋಹ ಕ್ರಿಯೆಯನ್ನು ಚುರುಕುಗೊಳಿಸಿದ್ದಾರೆ. ಮಠದ ಕಟ್ಟಡವನ್ನು ಅಗತ್ಯಕ್ಕೆ ತಕ್ಕಂತೆ ವಿಸ್ತರಿಸಿದ್ದಾರೆ. ಮಠವು ಆರ್ಥಿಕವಾಗಿ ಸದೃಢವಾಗುವಂತೆ ಮಾಡಲು ಮಠದ ಆಸ್ತಿಯಾಗಿರುವ ಹದಿನೆಂಟು ಎಕರೆ ಜಮೀನನ್ನು ಕೃಷಿಗೆ ಯೋಗ್ಯಗೊಳಿಸಿ ಆದಾಯ ಬರುವಂತೆ ಮಾಡಿದ್ದಾರೆ.

ಧರ್ಮಕ್ಷೇತ್ರ: ರೇಣುಕಗಿರಿಯ ತುತ್ತತುದಿಯಲ್ಲಿ ರೇಣುಕರು ತಪಸ್ಸನ್ನು ಆಚರಿಸಿದ ಗವಿಯಲ್ಲಿ ಮಂಟಪ ಮತ್ತು ರೇಣುಕ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಇಲ್ಲಿ ನಿತ್ಯ ಪೂಜೆ ನಡೆಸಲಾಗುತ್ತಿದೆ. ಪೂಜಾಕಾರ್ಯ ಮತ್ತು ಇಲ್ಲಿನ ಆಡಳಿತವನ್ನು ಸರ್ಕಾರದ ಮುಜರಾಯಿ ಇಲಾಖೆಯು ನೋಡಿಕೊಳ್ಳುತ್ತಿದೆ.

ರೇಣುಕ ಗಿರಿಯ ಮಧ್ಯ ಭಾಗದಲ್ಲಿ ದ್ವಾಪರ ಯುಗದಲ್ಲಿ ಪಾಂಡವರು ಅಜ್ಞಾತ ವಾಸದ ಸಂದರ್ಭದಲ್ಲಿ ಈ ಗಿರಿಯಲ್ಲಿ ಆಶ್ರಯವನ್ನು ಪಡೆದಿದ್ದರು ಎಂದು ನಂಬಲಾಗಿದ್ದು, ಭೀಮನು ಸ್ಥಾಪಿಸಿದ ಭೀಮೇಶ್ವರ ಲಿಂಗವು ಪೂಜ್ಯತೆಗೆ ಒಳಗಾಗಿದೆ. ಅಲ್ಲದೆ ವೀರಭದ್ರಸ್ವಾಮಿಯ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಗಿರಿಯ ಕೆಳಗಡೆ ಗಣಪತಿ, ನಂದಿ ಮತ್ತು ರೇಣುಕಾಂಬ ದೇವಸ್ಥಾನಗಳನ್ನು ಸ್ಥಾಪಿಸಲಾಗಿದೆ. ಮಠ ಮತ್ತು ದೇವಸ್ಥಾನಗಳಿಗೆ ಯಾವುದೇ ಆಡಳಿತಾತ್ಮಕ ಸಂಬಂಧ ಇಲ್ಲದಿದ್ದರೂ ಭಾವನಾತ್ಮಕ ಸಂಬಂಧದಿಂದ ಇಲ್ಲಿನ ಯಾತ್ರಾರ್ಥಿಗಳಿಗೆ ಸೌಲಭ್ಯ ಕಲ್ಪಿಸುವ ಒಂದೇ ದೃಷ್ಟಿಯಿಂದ ಮಠವನ್ನು ಸ್ಥಾಪಿಸಲಾಗಿದೆ. ಇತ್ತೀಚೆಗೆ ಮಠದ ವತಿಯಿಂದ ವಸತಿ ಗೃಹಗಳನ್ನು ನಿರ್ಮಿಸಿ, ಭಕ್ತರ ಸೌಲಭ್ಯಕ್ಕೆ ಅರ್ಪಿಸಲಾಗಿದೆ. ಆಧುನಿಕವಾಗಿ ಒಂದೊಂದೇ ಸೌಲಭ್ಯಗಳನ್ನು ಭಕ್ತರಿಗಾಗಿ ಕಲ್ಪಿಸಿಕೊಡಲು ಮಠವು ಮುಂದಾಗಿದೆ.

ವಿಳಾಸ:ಷ.ಬ್ರ.ಶ್ರೀ ಪಟ್ಟದ ಬಸವಲಿಂಗರಾಜ ಶಿವಾಚಾರ್ಯ ಸ್ವಾಮಿಗಳು, ಶ್ರೀ ರೇವಣಸಿದ್ಧೇಶ್ವರಬೆಟ್ಟದ ಮಠ, ಅವ್ವೇರಹಳ್ಳಿ, ಕನಕಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಗೊಲ್ಲರಪಾಳ್ಯ

ರಾಮನಗರ ತಾಲ್ಲೂಕಿನ ಗೊಲ್ಲರಪಾಳ್ಯಯಲ್ಲಿ ಇತ್ತೀಚೆಗೆ ವೀರಶೈವ ಧರ್ಮದ ಪ್ರಚಾರಕ್ಕಾಗಿ ಶ್ರೀ ಬಸವಲಿಂಗ ಧರ್ಮಪೀಠವು ಸ್ಥಾಪನೆಯಾಗಿದೆ.

ಬಸವಸಿದ್ಧಲಿಂಗ ಧರ್ಮಪೀಠ: ಗೊಲ್ಲರಪಾಳ್ಯ ಸಮೀಪದಲ್ಲಿ ಶ್ರೀ ಸಿದ್ಧಲಿಂಗೇಶ್ವರ ಯೋಗವನ ಬೆಟ್ಟ ಎಂಬ ಸಂಸ್ಥೆಯನ್ನು ಪ್ರಾರಂಭಿಸಿ ಈ ಮೂಲಕ ಶರಣತತ್ತ್ವಗಳನ್ನು ಪ್ರಚಾರಪಡಿಸಲು ಹಾಗೂ ಆಯುರ್ವೇದ, ಪ್ರಕೃತಿ ಚಿಕಿತ್ಸೆಯ ನೀಡುವ ಮೂಲಕ ಜನ ಸೇವೆ ಮಾಡುವ ಉದ್ದೇಶವನ್ನು ಇಟ್ಟುಕೊಂಡು ಶ್ರೀ ಬಸವಲಿಂಗ ಧರ್ಮಪೀಠವು ೧೯೯೫ರಲ್ಲಿ ಪ್ರಾರಂಭವಾಗಿದೆ.

ಚಿತ್ರದುರ್ಗ ಬೃಹನ್ಮಠದಲ್ಲಿ ಬಸವತತ್ತ್ವದ ಬಗ್ಗೆ ಅಧ್ಯಯನ ಮಾಡಿದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಈ ಪ್ರಯತ್ನವನ್ನು ಮಾಡಿದ್ದು ತಮ್ಮ ಮಠದಲ್ಲಿ ಧ್ಯಾನದ ತಾಂತ್ರಿಕತೆ, ಅನಾಥಾಶ್ರಮ, ಪ್ರಕೃತಿ ಚಿಕಿತ್ಸೆ, ವೃದ್ಧಾಶ್ರಮ, ದಾಸೋಹ, ವನವೆಳೆಸುವುದು, ದಾಂಪತ್ಯ ಸಾಮರಸ್ಯ ತರಬೇತಿ, ನಿತ್ಯ ಉಚಿತವಿವಾಹ, ದುರ್ವ್ಯಸನ ನಿರ್ಮೂಲನೆ ಈ ರೀತಿ ಇಪ್ಪತ್ತೈದು ಸೇವಾ ಯೋಜನೆಗಳನ್ನು ಹಮ್ಮಿಕೊಂಡು ಕಾರ್ಯಪ್ರವೃತ್ತರಾಗಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಸಿದ್ಧಲಿಂಗ ಸ್ವಾಮಿಗಳು, ಶ್ರೀ ಬಸವಲಿಂಗ ಧರ್ಮಪೀಠ, ಶ್ರೀ ಸಿದ್ಧಲಿಂಗೇಶ್ವರ ಯೋಗವನ ಬೆಟ್ಟ, ಗೊಲ್ಲರಪಾಳ್ಯ, ಗುಡೇಯಲಗಾರನಹಳ್ಳಿ ಅಂಚೆ, ರಾಮನಗರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಬಿಡದಿ

ರಾಮನಗರ ತಾಲ್ಲೂಕಿನ ಬಿಡದಿಯು ತಾಲ್ಲೂಕು ಕೇಂದ್ರದ ಈಶಾನ್ಯಕ್ಕೆ ಇಪ್ಪತ್ತು ಕಿ.ಮೀ.ದೂರದಲ್ಲಿದೆ. ಇಲ್ಲಿ

ಮುರುಘಾ ಸಮಯದ ವಿರಕ್ತ ಸಂಪ್ರದಾಯದ ಶ್ರೀ ಚೌಕಿಮಠವು ಸ್ಥಾಪನೆಯಾಗಿದೆ.

ಚೌಕಿಮಠ: ಬಿಡದಿ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ಚೌಕಿಮಠವು ಕನಕಪುರ ತಾಲ್ಲೂಕಿನ ಮರಳೆ ಗವಿಮಠದ ಶಾಖಾಮಠವಾಗಿ ಬೆಳೆದಿದೆ. ಶ್ರೀ ಚೌಕಿಮಠವು ಸ್ಥಾಪನೆಯಾದ ಕಾಲಮಾನದ ಬಗ್ಗೆ ನಿಖರವಾದ ಮಾಹಿತಿಗಳು ಲಭ್ಯವಿಲ್ಲ. ಈ ಮಠದಲ್ಲಿ ಕೇವಲ ಎರಡು ಗದ್ದುಗೆಗಳಿದ್ದು ಉಳಿದ ಗದ್ದುಗೆಗಳ ಬಗ್ಗೆ ಮಾಹಿತಿ ಲಭ್ಯವಿಲ್ಲ. ಇದರಿಂದ ಮಠದ ಕಾಲಮಾನದ ಬಗ್ಗೆ ಹಾಗೂ ಗುರುಪರಂಪರೆಯ ಬಗ್ಗೆ ಹೆಚ್ಚು ತಿಳಿಯದಾಗಿದೆ. ಮಠದಲ್ಲಿ ಈಗ ಶ್ರೀ ಹುಚ್ಚಪ್ಪ ಸ್ವಾಮಿಗಳು ಅಧಿಕಾರ ನಡೆಸುತ್ತಿದ್ದು ಮಠದ ಧಾರ್ಮಿಕ ಚಟುವಟಿಕೆಗಳನ್ನು ಮುನ್ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಹುಚ್ಚಪ್ಪ ಸ್ವಾಮಿಗಳು, ಶ್ರೀ ಚೌಕಿಮಠ, ಬಿಡದಿ, ರಾಮನಗರ ತಾ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಭೈರುಮಂಗಲ-ಸಂಗನ ಬಸವನ ದೊಡ್ಡಿ

ರಾಮನಗರ ತಾಲ್ಲೂಕಿನ ಭೈರುಮಂಗಲವು ಮೈಸೂರು-ಬೆಂಗಳೂರು ರಸ್ತೆಯಿಂದ ಬಿಡದಿಯ ಸಮೀಪ ಎಡಭಾಗಕ್ಕೆ ನಾಲ್ಕು ಕಿ.ಮೀ. ದೂರದ ದಾರಿಯನ್ನು ಸವೆಸಿದರೆ ಸಿಗುವ ಗ್ರಾಮವೇ ಭೈರುಮಂಗಲ. ಇಲ್ಲಿ ಶ್ರೀ ವಿರೂಪಾಕ್ಷದೇವರ ಮಠವು ಅಸ್ತಿತ್ವದಲ್ಲಿದೆ.

ವಿರೂಪಾಕ್ಷ ದೇವರಮಠ: ಭೈರುಮಂಗಲ ಗ್ರಾಮದಲ್ಲಿ ಸ್ಥಾಪನೆಯಾಗಿರುವ ವಿರೂಪಾಕ್ಷದೇವರ ಮಠವು ವಿರಕ್ತ ಸಂಪ್ರದಾಯದ ಚೀಲಾಳ ಸಮಯದ್ದಾಗಿದೆ. ಪುರಾತನ ಕಾಲದಿಂದ ಅಸ್ತಿತ್ವ ಪಡೆದು ಕೊಂಡಿದ್ದು, ಇಲ್ಲಿನ ಧಾರ್ಮಿಕ ಕಾರ್ಯಗಳಲ್ಲಿ ನೆರವಾಗಿ ಭಕ್ತರನ್ನು ಉದ್ಧರಿಸುತ್ತಿದೆ.

ಮಠದ ಹೆಸರು: ಪುರಾತನ ಕಾಲದಲ್ಲಿ ಸ್ಥಾಪನೆಯಾದ ಈ ಮಠದಲ್ಲಿ ನಾಲ್ಕು ತಲೆಮಾರುಗಳಿಗಿಂತ ಹಿಂದೆ ಶ್ರೀ ವಿರೂಪಾಕ್ಷ ಒಡೆಯರ ಕಾಲದಲ್ಲಿ ಮಠವು ಹೆಚ್ಚು ಪ್ರಬುದ್ಧಮಾನಕ್ಕೆ ಬಂದ ಕಾರಣ ಈ ಮಠಕ್ಕೆ'ವಿರೂಪಾಕ್ಷದೇವರಮಠ'ಎಂದು ಹೆಸರು ಬರಲು ಕಾರಣವಾಗಿದೆ. ಶ್ರೀ ವಿರೂಪಾಕ್ಷ ಸ್ವಾಮಿಗಳ ಕಾಲದಲ್ಲಿ ಸಮಾಜವಲ್ಲಿ ಧರ್ಮಸಂಸ್ಕಾರವನ್ನು ಬೆಳೆಸಿದ ಮಹಾನುಭಾವರು. ಇವರು ಕೈಗೊಳ್ಳುತ್ತಿದ್ದ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳು ಬಹಳ ಜನಪ್ರಿಯವಾಗಿದ್ದವು. ಮೈಸೂರಿನ ಕೃಷ್ಣರಾಜೇಂದ್ರ ಒಡೆಯರು (೧೯೦೩) ಮಠಕ್ಕೆ ಭೇಟಿ ನೀಡಿ ಗುರುಗಳು ನಡೆಸುತ್ತಿದ್ದ ಕಾರ್ಯಗಳನ್ನು ನೋಡಿ ಆನಂದಿಸಿ, ಗುರುಗಳ ಧಾರ್ಮಿಕಕಾರ್ಯಗಳಿಗೆ ನೆರವಾಗಲು ಆಸ್ತಿಯನ್ನು ಉಂಬಳಿಯಾಗಿ ನೀಡಿ ಗುರುಗಳಿಗೆ 'ಒಡೆಯರು 'ಎಂಬ ಬಿರುದನ್ನು ನೀಡಿ ಗೌರವಿಸಿದರು. ಅಂದಿನಿಂದ ಶ್ರೀ ವಿರೂಪಾಕ್ಷ ಸ್ವಾಮಿಗಳಿಗೆ 'ವಿರೂಪಾಕ್ಷ ಒಡೆಯರು'ಎಂದು ಹೆಸರು ಬಂದಿತು.

ಪರಂಪರೆ: ತೋಂಟದ ಶ್ರೀ ಸಿದ್ಧಲಿಂಗೇಶ್ವರರು ಲೋಕಸಂಚಾರ ಮಾಡುತ್ತಾ ಎಡೆಯೂರಿನಲ್ಲಿ ನೆಲೆಗೊಳ್ಳುವ ಮೊದಲು ಭೈರುಮಂಗಲದ ಈ ಪ್ರದೇಶದಲ್ಲಿ ಕೆಲವು ದಿನ ನೆಲೆಗೊಂಡು ಈ ಸ್ಥಳವನ್ನು ಜಾಗೃತಗೊಳಿಸಿದ್ದರು. ಶ್ರೀ ಸಿದ್ಧಲಿಂಗೇಶ್ವರರು ಹಾಗೂ ಅವರ ವಿರಕ್ತ ಸಮುದಾಯ ಈ ಸ್ಥಳದಿಂದ ಹೊರಡುವ ಮುನ್ನ ಈ ಸ್ಥಳದಲ್ಲಿ ಮಠವನ್ನು ಸ್ಥಾಪಿಸಿ ತಮ್ಮ ಶಿಷ್ಯರಲ್ಲಿ ಒಬ್ಬರನ್ನು ಇಲ್ಲಿ ನೆಲೆಗೊಳಿಸಿ ಹೋಗಿದ್ದರು. ಶ್ರೀ ಸಿದ್ಧಲಿಂಗೇಶ್ವರರ ಕೃಪಾಶೀರ್ವಾದದಿಂದ ಬೆಳೆದ ಈ ಮಠವು ಸಮಾಜದ ನ್ಯೂನತೆಗಳನ್ನು ತಿದ್ದಿ ಸಮಾಜವನ್ನು ಮುನ್ನಡೆಸಿದೆ. ಈ ರೀತಿ ಪ್ರಾರಂಭಗೊಂಡ ಮಠದ ಪರಂಪರೆಯು ಶ್ರೀ ವಿರೂಪಾಕ್ಷ ಒಡೆಯರ ತನಕ ಗುರುಗಳು ಯಾರು ಅಧಿಕಾರವನ್ನು ನಡೆಸಿದ್ದಾರೆ ಎಂಬ ಬಗ್ಗೆ ನಿಖರವಾದ ಮಾಹಿತಿಗಳು ಇಲ್ಲ. ಆದರೆ ಮಠ ಅಸ್ತಿತ್ವದಲ್ಲಿ ಇತ್ತು ಎಂಬುದು ಜನಪದ ಕಥೆಗಳಿಂದ ತಿಳಿದು ಬರುತ್ತದೆ.

ಶ್ರೀ ವಿರೂಪಾಕ್ಷ ಒಡೆಯರ ನಂತರ ಶ್ರೀ ಶಿವರುದ್ರ ಸ್ವಾಮಿಗಳ ಮಠದ ಆಡಳಿತಕ್ಕೆ ಬರುತ್ತಾರೆ. ಗೋಣಿಪುರ,ಕುಂಬಳಗೋಡು, ತಿಟ್ಟಹಳ್ಳಿ ಮುಂತಾದ ಕಡೆ ಸಂಚಾರ ಕೈಗೊಂಡು ಭೈರುಮಂಗಲ ಮಠಕ್ಕೆ ಬಂದು ನೆಲೆಸುತ್ತಾರೆ. ಶ್ರೀ ವಿರೂಪಾಕ್ಷ ಒಡೆಯರ ನಂತರ ಕೆಲವು ದಿನಗಳ ಕಾಲಖಾಲಿ ಉಳಿದಿದ್ದ ಮಠದ ಉಸ್ತುವಾರಿಯನ್ನು ನೋಡಿಕೊಂಡು ನಂತರ ಮಠದ ಅಧಿಕಾರಿಗಳಾಗಿ ಮಠವನ್ನು ಬೆಳೆಸಿದರು. ಇವರ ಕಾಲದಲ್ಲಿ ಮಠದ ಧಾರ್ಮಿಕ ಕಾರ್ಯಗಳು ವಿಧಿವತ್ತಾಗಿ ನಡೆದು ಸಮಾಜವನ್ನು

ಸನ್ಮಾರ್ಗದಲ್ಲಿ ನಡೆಸುವಲ್ಲಿ ಸಹಕಾರಿಯಾಗಿದ್ದರು. ಇಂತಹ ಮಹಾಯೋಗಿಗಳು ೧೯೫೧ರಲ್ಲಿ ಲಿಂಗೈಕ್ಯರಾಗಿರುತ್ತಾರೆ. ಈ ನಂತರ ಮಠದಲ್ಲಿ ಮಠಾಧೀಶರು ಇಲ್ಲದೆ ೧೯೬೭ರ ತನಕ ಖಾಲಿ ಉಳಿದಿತ್ತು. ಈ ಕಾಲದಲ್ಲಿ ಪೂರ್ಣ ಜೀರ್ಣಗೊಂಡು ಮಠದ ದಾಖಲೆಗಳು ನಶಿಸಿಹೋಗಿವೆ. ಈ ಸಂದರ್ಭದಲ್ಲಿ ಮಠದ ಇನಾಂಭೂಮಿ ಸರ್ಕಾರದ ವಶವಾಗಿತ್ತು. ಇದನ್ನು ಗಮನಿಸಿದ ಸಿದ್ಧಗಂಗೆಯ ಶ್ರೀ ಡಾ. ಶಿವಕುಮಾರ ಸ್ವಾಮಿಗಳು ಮತ್ತು ಕನಕಪುರದ ದೇಗುಲ ಮಠದ ಇಮ್ಮಡಿ ಮಹಾಲಿಂಗ ಸ್ವಾಮಿಗಳು ಜೀರ್ಣಾವಸ್ಥೆಗೊಂಡಿದ್ದ ಮಠಕ್ಕೆ ಉತ್ತರಾಧಿಕಾರಿಗಳನ್ನು ನೇಮಿಸಿ ಮಠಕ್ಕೆ ಕಾಯಕಲ್ಪ ಮಾಡಬೇಕೆಂದು ನಿರ್ಧರಿಸಿಕೊಂಡರು.

ಸ್ಥಳಾಂತರಗೊಂಡಮಠ: ಈ ಇಬ್ಬರು ಗುರುಗಳ ಆಶಯದಂತೆ ೧೯೬೭ರಲ್ಲಿ ಶ್ರೀ ವಿರೂಪಾಕ್ಷ ಸ್ವಾಮಿಗಳಿಗೆ ಪಟ್ಟಾಧಿಕಾರವನ್ನು ಮಾಡಲಾಯಿತು. ಕಾಯಕಯೋಗಿಗಳಾದ ಶ್ರೀ ವಿರೂಪಾಕ್ಷ ಸ್ವಾಮಿಗಳು ಜೀರ್ಣಗೊಂಡಿದ್ದ ಮಠವನ್ನು ಸುಸ್ಥಿತಿಗೆ ತರುವಲ್ಲಿ ಬಹಳವಾಗಿ ಶ್ರಮಿಸಿದರು. ಸರ್ಕಾರದ ವಶವಾಗಿದ್ದ ಆಸ್ತಿಯನ್ನು ಮಠಕ್ಕೆ ಮಾಡಿಕೊಂಡರು. ನಂತರ ಮಠದ ಧಾರ್ಮಿಕ ಚಟುವಟಿಕೆ ಗಳ ಕಡೆಗೆ ಗಮನ ಕೊಟ್ಟು, ದಾಸೋಹ ಕ್ರಿಯೆಯನ್ನು ಚುರುಕುಗೊಳಿಸಿದರು. ಕಲಿಯುವ ಐವತ್ತು ವಿದ್ಯಾರ್ಥಿಗಳಿಗೆ ಮಠದಲ್ಲಿ ಆಶ್ರಯವನ್ನು ಕಲ್ಪಿಸಿದರು. ಇಷ್ಟೆಲ್ಲಾ ಪ್ರಯತ್ನಗಳು ಮಠದಲ್ಲಿ ನಡೆದರೂ ಗ್ರಾಮಸ್ಥರಿಂದ ಯಾವುದೇ ಪ್ರತಿಕ್ರಿಯೆಯಾಗಲಿ, ಸಹಕಾರವಾಗಲೀ ದೊರೆಯದಾಯಿತು. ಇಪ್ಪತ್ತು ಎಕರೆ ಜಮೀನನ್ನು ನಿವೇಶನ ಮಾಡಿ ಹಂಚಿಕೆ ಮಾಡಿ ಮಠವನ್ನು ಅಭಿವೃದ್ಧಿ ಪಡಿಸುವ ಯೋಜನೆ ರೂಪುಗೊಂಡಿತು. ಊರಿನ ಭಕ್ತರ ಸಹಕಾರ ಸಿಗದ ಕಾರಣ ಎಲ್ಲಾ ಯೋಜನೆಗಳೂ ಸ್ಥಗಿತಗೊಂಡವು. ಈಗಾಗಲೇ ಮಠದಲ್ಲಿ ನಡೆಯುತ್ತಿದ್ದ ವಿದ್ಯಾರ್ಥಿನಿಲಯವೂ ಸಹ ಸ್ಥಗಿತಗೊಂಡಿತು. ಈ ಎಲ್ಲಾ ಕಹಿ ಘಟನೆಗಳಿಂದ ಬೇಸತ್ತ ಮಠದ ಗದ್ದುಗೆಗಳಿಗೆ ಪೂಜೆಗೆ ವ್ಯವಸ್ಥೆ ಮಾಡಿ, ರಾಮನಗರ ತಾಲ್ಲೂಕಿನ ಕೇತುವಳ್ಳಿ ಗ್ರಾಮದ ಸಂಗನ ಬಸವನದೊಡ್ಡಿ ಶಾಖಾ ಮಠಕ್ಕೆ ಬಂದು ನೆಲೆಸಿದರು.

ಶ್ರೀ ವಿರೂಪಾಕ್ಷ ಸ್ವಾಮಿಗಳು ಸಂಗನ ಬಸವನ ದೊಡ್ಡಿಗೆ ಬಂದು ಮಠ ಕಟ್ಟಿಸಲು ಮುಂದಾಗಿ, ಇಲ್ಲಿ ನೆಲೆಗೊಂಡು ಸುಮಾರು ಹತ್ತು ಎಕರೆ ಜಮೀನಿನಲ್ಲಿ ತೆಂಗಿನ ತೋಟವನ್ನು ಬೆಳೆಸಿದ್ದಾರೆ. ತಮ್ಮ ವಾಸ್ತವ್ಯಕ್ಕೆ ಅಗತ್ಯವಾದಷ್ಟು ಕಟ್ಟಡವನ್ನು ನಿರ್ಮಿಸಿಕೊಂಡಿರುವ ಗುರುಗಳು ಬೃಹದಾಕಾರದ ಕಲ್ಲುಮಠವನ್ನು ನಿರ್ಮಿಸಬೇಕೆಂದು ನಿರ್ಧರಿಸಿ, ಕಾಮಗಾರಿಯನ್ನು ಪ್ರಾರಂಭಿಸಿ ದ್ದಾರೆ. ಆರ್ಥಿಕ ಸದೃಢತೆಯನ್ನು ಸಾಧಿಸದೆ ಹೋದರೆ ಮಠದ ಅಭಿವೃದ್ಧಿ ಹಾಗೂ ಧಾರ್ಮಿಕ ಕಾರ್ಯಗಳನ್ನು ಮಾಡಲು ಸಾಧ್ಯವಿಲ್ಲ ಎಂದು ನಂಬಿಕೊಂಡಿರುವ ಗುರುಗಳು ಕಾಯಕಯೋಗಿಗಳಾಗಿದ್ದು, ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ಕಾಯಕದ ಜತೆಗೆ ಧಾರ್ಮಿಕ ಚಟುವಟಿಕೆಗಳಲ್ಲಿಯೂ ಪಾಲ್ಗೊಂಡು ಮಠವನ್ನು ಮುನ್ನಡೆಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ವಿರೂಪಾಕ್ಷ ಸ್ವಾಮಿಗಳು, ಶ್ರೀ ವಿರೂಪಾಕ್ಷ ದೇವರ ಮಠ, ಭೈರುಮಂಗಲ-ಸಂಗನ ಬಸವನದೊಡ್ಡಿ, ರಾಮನಗರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

❑

ಹೊಸಕೋಟೆ ತಾಲ್ಲೂಕು

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕು ಐತಿಹಾಸಿಕ ಸ್ಥಳ. ಇಲ್ಲಿ ಶ್ರೀ ತೋಂಟದ ಸಿದ್ಧಲಿಂಗೇಶ್ವರರು ಮತ್ತು ಶ್ರೀಶೈಲದ ಪರ್ವತೇಂದ್ರ ಶಿವಾಚಾರ್ಯ ಭಗವತ್ಪಾದರ ಕಾಲದಲ್ಲಿ ಸಲವತ್ತು ಮಠಗಳು ಸ್ಥಾಪನೆಗೊಂಡಿದ್ದವು ಎಂದು ಹೇಳಲಾಗುತ್ತದೆ. ಪ್ರಸ್ತುತ ಏಳು ಮಠಗಳನ್ನು ಗುರುತಿಸಬಹುದಾಗಿದೆ. ಇವುಗಳಲ್ಲಿ ಹೊಸಕೋಟೆಯಲ್ಲಿ ಒಂದು ಮಠ ಮಾತ್ರ ಅಸ್ತಿತ್ವದಲ್ಲಿದೆ.

ಹೊಸಕೋಟೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆಯು ಬೆಂಗಳೂರು ಮಹಾನಗರದ ಈಶಾನ್ಯಕ್ಕೆ ಇಪ್ಪತ್ತು ಕಿ.ಮೀ. ದೂರದಲ್ಲಿದೆ. ಈ ಪಟ್ಟಣದಲ್ಲಿ ಪುರಾತನ ಕಾಲದಲ್ಲಿ ಹದಿನಾಲ್ಕು ವೀರಶೈವ ಮಠಗಳು ಸ್ಥಾಪನೆಯಾಗಿವೆ ಎಂದು ಹೇಳಲಾಗುತ್ತದೆ. ಇವುಗಳಲ್ಲಿ ಶರಣೆ ವೀರಮ್ಮನವರ ಮಠ, ಶರಣೆ ಕೆಂಪನಂಜಮ್ಮಣ್ಣಿಮಠ, ಶ್ರೀ ಜೀವಕೋಟಿ ಸ್ವಾಮಿಗಳಮಠ, ಶ್ರೀಚಿಲುಮೆ ಮಠ, ಶ್ರೀ ಮಹಂತಿನಮಠ, ಶ್ರೀ ಜಡೆಸ್ವಾಮಿಗಳಮಠ, ಮತ್ತು ಶ್ರೀ ಕಂಬಳಿ ಸ್ವಾಮಿಗಳಮಠ ಈ ರೀತಿ ಏಳು ಮಠಗಳ ಹೆಸರನ್ನು ಈಗ ಗುರುತಿಸಬಹುದಾಗಿದೆ. ಇವುಗಳಲ್ಲಿ ವೀರಮ್ಮನವರ ಮಠವು ಅಸ್ತಿತ್ವದಲ್ಲಿದೆ.

ಶರಣೆ ವೀರಮ್ಮನವರಮಠ: ಹೊಸಕೋಟೆ ಪಟ್ಟಣದ ಮಧ್ಯಭಾಗದಲ್ಲಿರುವ ಗಾಣಿಗರಪೇಟೆಯಲ್ಲಿ ವೀರಮ್ಮನವರ ಮಠವು ಸ್ಥಾಪಿತವಾಗಿದ್ದು ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿದೆ. ಹಿಂದೆ (ಕಾಲಗೊತ್ತಿಲ್ಲ) ಶ್ರೀ ನಂದಪ್ಪದೇವರು ಎಂಬುವರು ಸುಗುಟೂರು ತಮ್ಮೇಗೌಡರ ಜತೆಯಲ್ಲಿ ಬಂದವರು ಈ ಜಾಗದಲ್ಲಿ ಅನುಷ್ಠಾನಗೊಂಡು ಧರ್ಮಜಾಗೃತಿ ಉಂಟುಮಾಡಿ ಲಿಂಗೈಕ್ಯರಾಗಿರುತ್ತಾರೆ.

ಮಠ ಸ್ಥಾಪನೆ: ಶ್ರೀ ನಂದಪ್ಪದೇವರು ಇಲ್ಲಿ ನೆಲೆಗೊಂಡ ದಿನದಿಂದ ಲಿಂಗೈಕ್ಯರಾಗುವ ತನಕ ವೀರಶೈವ ಧರ್ಮದ ಪ್ರಚಾರವನ್ನು ಮಾಡಿ ಶಿವಪೂಜಾನಿಷ್ಠರಾಗಿ ಜನರ ಮನಗೆದ್ದು ಪೂಜ್ಯತೆಗೆ ಒಳಗಾಗಿದ್ದರು. ಪೂಜನೀಯ ವ್ಯಕ್ತಿ ಲಿಂಗೈಕ್ಯರಾದ ಮೇಲೆ ಭಕ್ತರು ಸಮಾಧಿ ಮಾಡಿ ಗದ್ದುಗೆಯನ್ನು ನಿರ್ಮಿಸಿ ಪೂಜೆ ಮಾಡತೊಡಗುತ್ತಾರೆ. ಈ ರೀತಿ ಶ್ರೀ ನಂದಪ್ಪದೇವರ ಗದ್ದುಗೆಯ ಮೇಲೆ ಹುಟ್ಟಿಕೊಂಡ ಮಠ ಎಪ್ಪತ್ತು ವರ್ಷಗಳ ನಂತರ ಶಿಥಿಲಗೊಂಡು ಜೀರ್ಣಾವಸ್ಥೆಗೆ ಬಂದಿತ್ತು. ಕಾಳಪ್ಪನಹಳ್ಳಿಯ ಶ್ರೀ ಕರಿಬಸವ ಸ್ವಾಮಿಗಳು ಹೊಸಕೋಟೆಗೆ ಆಗಮಿಸಿ ಭಕ್ತರ ಅಪೇಕ್ಷೆಯ ಮೇರೆಗೆ ಶಿಥಿಲವಾಗಿದ್ದ ಮಠವನ್ನು ಪುನರ್ ಸ್ಥಾಪನೆ ಮಾಡಿದರು. ಇವರ ಕೈಗೆ ಸೇರಿದ ಮಠದ ಅಭಿವೃದ್ಧಿಗೆ ವೀರಮ್ಮನವರು ಸಹಕಾರ ನೀಡಿದರು.

ಪುನರ್‌ಸ್ಥಾಪನೆ: ಶ್ರೀ ಕರಿಬಸವ ಸ್ವಾಮಿಗಳು ಪುನರ್ ಸ್ಥಾಪಿಸಿದರೂ ವೀರಮ್ಮನವರ ಪ್ರಭಾವ ಸಮಾಜದ ಮೇಲೆ ಹೆಚ್ಚಾಗಿ ರೂಢಿಗತವಾಗಿ ವೀರಮ್ಮನವರ ಮಠ ಎಂದೇ ಕರೆಯತೊಡಗಿದರು. ವೀರಮ್ಮನವರು ಮಠದ ಅಭಿವೃದ್ಧಿಗೆ ಶ್ರಮಿಸಿ ಜ್ಯೋತಿಷ್ಯ ಶಾಸ್ತ್ರ ಹೇಳುವುದು ಮತ್ತು ಭಿಕ್ಷಾಟನೆಯಿಂದ ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿ ಏಪ್ರಿಲ್ ನಾಲ್ಕು ೧೯೮೮ರಲ್ಲಿ ಲಿಂಗೈಕ್ಯರಾಗಿ ರುತ್ತಾರೆ. ಇವರ ಗದ್ದುಗೆಯನ್ನು ಮಠದ ಹಿಂಭಾಗದಲ್ಲಿ ಮಾಡಲಾಗಿದೆ. ವೀರಮ್ಮನವರ ನಂತರ ಎಸ್.ಆರ್. ವೀರಭದ್ರಯ್ಯನವರ ಮಗಳಾದ ಕಾತ್ಯಾಯಿನಿಯವರು ವೀರಮ್ಮನವರು ಮಾಡುತ್ತಿದ್ದ ಪ್ರತಿಯೊಂದು ಕಾರ್ಯವನ್ನೂ ನಡೆಸಿಕೊಂಡು ಬರುತ್ತಿದ್ದಾರೆ. ಮಠಕ್ಕೆ ಆಸ್ತಿಯಿಲ್ಲದಿದ್ದರೂ ಭಕ್ತರೇ ಆಸ್ತಿಯಾಗಿದ್ದಾರೆ. ಶನಿವಾರ, ಸೋಮವಾರ ಏಕಾದಶಿಯಲ್ಲಿ ಭಿಕ್ಷಾಟನೆಯನ್ನು ಮಾಡುತ್ತಾರೆ. ಅಲ್ಲದೆ ಜ್ಯೋತಿಷ್ಯಶಾಸ್ತ್ರ ಕಲಿತು ಅಪೇಕ್ಷಿತರಿಗೆ ಶಾಸ್ತ್ರವನ್ನು ಹೇಳುತ್ತಾರೆ.

ಶಿವಾನುಭವ ಶಾಸ್ತ್ರ: ಬಳ್ಳಾರಿ ಜಿಲ್ಲೆಯ ಉಜ್ಜಯಿನಿ ಸದ್ಧರ್ಮ ಪೀಠದ ಜಗದ್ಗುರು ಶ್ರೀ ಮರುಳಸಿದ್ಧ ಶಿವಾಚಾರ್ಯರಿಂದ ರಚಿತವಾದ 'ಶಿವಾನುಭವ ಶಾಸ್ತ್ರವು ಪ್ರಿಂಟಿಂಗ್ ಮೂಲದ ಅಡಕದ ಮೇಲೆ ಒಂದು ಪ್ರತಿಯನ್ನು ಕೈ ಬರವಣಿಗೆಯಿಂದ ಬರೆಯಲು ಉಪಕ್ರಮಿಸಿ ೧೯೪೧ನೆಯ ಇಸವಿಗೆ ಸರಿಯಾದ ಶ್ರೀಮದ್ ವಿಶುನಾಮ ಸಂವತ್ಸರ ಶ್ರಾವಣಶುದ್ಧ ನವಮಿ ಶುಕ್ರವಾರ ವರಮಹಾಲಕ್ಷ್ಮಿ ವ್ರತದ ದಿನಕ್ಕೆ ಬರೆದಿಟ್ಟು, ಸಂಪೂರ್ಣವಾಗಿರುತ್ತದೆ'ಎಂದು ಶ್ರೀ ಕರಿಬಸವ ಸ್ವಾಮಿಗಳು ಮೂಲ

ಕೃತಿಯಿಂದ ನಕಲು ತಯಾರಿಸಿಕೊಂಡಿದ್ದೆಂದು ಹೇಳಲಾಗುವ ಶಿವಾನುಭವಶಾಸ್ತ್ರದ ಹಸ್ತಮುದ್ರಿಕೆಯು ಈ ಮಠದಲ್ಲಿ ಇದೆ. ಈ ಶಾಸ್ತ್ರದಿಂದ ವೀರಶೈವ ಶಾಸ್ತ್ರೋಕ್ತ ಕ್ರಮದಲ್ಲಿ ಜ್ಯೋತಿಷ್ಯ ಶಾಸ್ತ್ರವನ್ನು ಹೇಳಲಾಗುತ್ತಿದೆ.

ಶಿವಾನುಭವ ಶಾಸ್ತ್ರದ ಮುದ್ರಿಕೆ

೧. ಮೊದಲು ವಿನಾಯಕ
೨. ಅನಾದಿ ಭಕ್ತೋದ್ಧರಣೆ
೩. ಗೋಮುಖೋದ್ಧರಣೆ
೪. ಪ್ರಣವೋದ್ಧರಣೆ
೫. ಮುಕುಟೋದ್ಧರಣೆ
೬. ಶೂನ್ಯ ಲಿಂಗೋದ್ಧರಣೆ
೭. ಚಿದಂಬರೋದ್ಧರಣೆ
೮. ಷಡ್‌ಬ್ರಹ್ಮೋದ್ಧರಣೆ
೯. ಪಂಚಮೂರ್ತಿ ಲಿಂಗೋದ್ಧರಣೆ
೧೦. ಶಾಂಭವಿ ಚಕ್ರೋದ್ಧರಣೆ
೧೧. ವೃಷಭೋದ್ಧರಣೆ
೧೨. ನವಚಕ್ರೋದ್ಧರಣೆ
೧೩. ತತ್ತ್ವ ಪಂಚಾಕ್ಷರಿ ಉದ್ಧರಣೆ
೧೪. ಮಂತ್ರ ಪಂಚೀಕರಣ ಉದ್ಧರಣೆ
೧೫. ಲಿಂಗ ಪಂಚೀಕರಣ ಉದ್ಧರಣೆ
೧೬. ಬಸವಮೋಕ್ಷ ಉದ್ಧರಣೆ
೧೭. ನೂರೆಂಟು ಪ್ರಣವೋದ್ಧರಣೆ
೧೮. ಅಧಕುಂಡಲಿ ನಿವೇದನ ಪಠನೆ
೧೯. ಊರ್ಧ್ವ ಕುಂಡಲಿ ಜ್ಞಾನ ವೇದಪಠನೆ
೨೦. ಜ್ಞಾನ ಚಕ್ರೋದ್ಧರಣೆ
೨೧. ನೂರೆಂಟು ತರದ ಅರ್ಪಣೋದ್ಧರಣೆ
೨೨. ಅರವತ್ತಾರು ತರದ ಯಂತ್ರೋದ್ಧರಣೆ
೨೩. ನಲವತ್ತೆಂಟು ತರದ ಅರ್ಪಣೋದ್ಧರಣೆ
೨೪. ಇನ್ನೂರಹದಿನಾರು ತರದ ಅರ್ಪಣೋದ್ಧರಣೆ
೨೫. ಮೂವತ್ತಾರು ತರದ ಅರ್ಪಣೋದ್ಧರಣೆ
೨೬. ಕಾಯ ಅರ್ಪಣೋದ್ಧರಣೆ
೨೭. ಅಂಗ ಷಡಕ್ಷರೋದ್ಧರಣೆ
೨೮. ಲಿಂಗ ಷಡಕ್ಷರೋದ್ಧರಣೆ
೨೯. ಲಯ ಯೋಗ ಸಮಾಧಿ (ಕ್ರಿಯಾ ಸಮಾಧಿಗೆ ಉಪಯೋಗಿಸುತ್ತಾರೆ)
೩೦. ಮರುಳ ಸಿದ್ಧೇಶ್ವರ ಉದ್ಧರಣೆ
೩೧. ಅಕ್ಕಮಹಾದೇವಿಗೆ ದರ್ಶನ

ಈ ರೀತಿ ಒಟ್ಟು ಮೂವತ್ತೊಂದು ವಿಷಯಗಳ ಮೇಲೆ ಸಚಿತ್ರ ರೂಪದಲ್ಲಿ ತಯಾರಾಗಿರುವ ಪುರಾತನ ಕಾಲದ ನಕಲು ಈಗಲೂ ಈ ಮಠದಲ್ಲಿ ಲಭ್ಯವಿದೆ. ಅಲ್ಲದೆ ಈ ಶಿವಾನುಭವ ಶಾಸ್ತ್ರದ ಆಧಾರದ ಮೇಲೆ ಶಾಸ್ತ್ರ ಹೇಳುವುದು ಮತ್ತು ಕವಡೆ ಹಾಕಿ ಶಾಸ್ತ್ರ ಹೇಳುವುದು ಈ ಎರಡೂ ಪ್ರಕಾರಗಳ ಶಾಸ್ತ್ರಗಳನ್ನು ಕಲಿತಿರುವ ಈಗಿನ ಮಠಾಧ್ಯಕ್ಷಿಣಿ ಕಾತ್ಯಾಯಿನಿಯವರು ಮಠದಲ್ಲಿ ಧಾರ್ಮಿಕ ಆಚರಣೆ ಮತ್ತು ದಾಸೋಹ ಕ್ರಿಯೆಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ.


ನಂಬಿಕೆ: ವೀರಮ್ಮನವರ ಕಾಲದಲ್ಲಿ ಹಳೆಯ ಮಠದಿಂದ ಬಂದಾಗ ತಮ್ಮ ಜತೆಯಲ್ಲಿ ಏನನ್ನೂ ತರಲಿಲ್ಲ. ಹಳೆಯ ಕಟ್ಟಡದಲ್ಲಿ ಇದ್ದ ಕರಿನಾಗರ ಹಾವನ್ನು ತಂದಿದ್ದರು. ಈ ಹಾವು ಇನ್ನೂ ಜೀವಂತವಾಗಿದೆ ಎಂದು ನಂಬಲಾಗುತ್ತದೆ. ಈ ಕರಿ ನಾಗರಹಾವು ಹೊರಬರಬೇಕಾದರೆ ಕೇದಿಗೆ ಹೂವಿನ ವಾಸನೆ ಬರುತ್ತದೆ ಎಂದು ನಂಬಲಾಗಿದೆ.

ಅಭಿವೃದ್ಧಿ ಕಾರ್ಯಗಳು: ಇತ್ತೀಚೆಗೆ ಮಠದ ಪಕ್ಕದ ಜಾಗವನ್ನು ಖರೀದಿಸಿ ವಾಸಕ್ಕೆ ಮತ್ತು ದಾಸೋಹಕ್ಕೆ ಪ್ರತ್ಯೇಕ ಕೊಠಡಿಗಳನ್ನು ನಿರ್ಮಿಸಿಕೊಂಡಿದ್ದಾರೆ. ಊರಿನ ಹೊರಭಾಗದಲ್ಲಿನ ಅಗಸನ ಕೆರೆಯ ಹತ್ತಿರ ಕೋಡಿ ಮಠದಲ್ಲಿ ಮಠದ ಹಿರಿಯ ಗುರುಗಳ ಎರಡು ಗದ್ದುಗೆಗಳು ಇವೆ. ಈ ಗದ್ದುಗೆಗಳನ್ನು ಸಂರಕ್ಷಿಸಲಾಗಿದೆ.

ವಿಳಾಸ: ಶರಣೆ ಕಾತ್ಯಾಯಿನಿ, ಶರಣೆ ವೀರಮ್ಮನವರ ಮಠ, ಗಾಣಗರ ಪೇಟೆ, ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

❑

ಮಂಡ್ಯ ಜಿಲ್ಲೆ


ಮಂಡ್ಯ ಜಿಲ್ಲೆ
ನಾಗಮಂಗಲ
ಕೃಷ್ಣರಾಜಪೇಟೆ
ಪಾಂಡವಪುರ
ಮಂಡ್ಯ
ಮದ್ದೂರು
ಶ್ರೀರಂಗಪಟ್ಟಣ
ಮಳವಳ್ಳಿ
ಹಾಸನ ಜಿಲ್ಲೆ
ತುಮಕೂರು ಜಿಲ್ಲೆ
ಬೆಂಗಳೂರು ಜಿಲ್ಲೆ
ಮೈಸೂರು ಜಿಲ್ಲೆ
ಚಾಮರಾಜನಗರ ಜಿಲ್ಲೆ
ಮಂಡ್ಯ ತಾಲ್ಲೂಕು : ೧. ಹೊನಗಳ್ಳಿ ೨. ಗುತ್ತಲ
ಮದ್ದೂರು ತಾಲ್ಲೂಕು : ೧. ಮದೇನಹಳ್ಳಿ
೨. ವೈದ್ಯನಾಥ ಪುರ ೩. ಮಠದ ದೊಡ್ಡಿ
೪. ಹೊನ್ನಲಗೆರೆ
ಮಲವಳ್ಳಿ ತಾಲ್ಲೂಕು : ೧. ಹಲಗೂರು ೨. ಹಲಸಳ್ಳಿ
೩. ಧನಗೂರು ೪. ಕುಂದೂರು ೫. ಬೆಳಕವಾಡಿ
೬. ಬಿ.ಜಿ.ಪುರ ೭. ಕಿರುಗಾವಲು
ಪಾಂಡವಪುರ ತಾಲ್ಲೂಕು : ೧. ಬೇಬಿ
೨. ತಾಳಶಾಸನ
ಕೆ.ಆರ್.ಪೇಟೆ ತಾಲ್ಲೂಕು : ೧. ತೆಂಡೆಕೆರೆ
೨. ಕಾಪನಹಳ್ಳಿ

ಕಬ್ಬು, ಭತ್ತಗಳ ಕಣಜವಾಗಿರುವ ಮಂಡ್ಯ ಜಿಲ್ಲೆಯು ಕನ್ನಂಬಾಡಿ ಕಟ್ಟೆಯಿಂದ ಸದಾ ಅಚ್ಚ ಹಸಿರಿನ ನಾಡಾಗಿ ಆರ್ಥಿಕವಾಗಿ ಶ್ರೀಮಂತಗೊಂಡಿದೆ. ಮಂಡ್ಯ ಜಿಲ್ಲೆಯು ಮೈಸೂರು, ಹಾಸನ, ತುಮಕೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಗಡಿ ಪ್ರದೇಶಗಳಿಂದ ಆವೃತವಾಗಿದೆ. ಮಂಡ್ಯ, ಶ್ರೀರಂಗಪಟ್ಟಣ, ಮಳವಳ್ಳಿ, ಪಾಂಡವಪುರ, ಮದ್ದೂರು, ಕೃಷ್ಣರಾಜಪೇಟೆ ಮತ್ತು ನಾಗಮಂಗಲ ಈ ಏಳು ತಾಲ್ಲೂಕುಗಳನ್ನು ಒಳಗೊಂಡಿದೆ. ಹೊಯ್ಸಳರು (ಕ್ರಿ.ಶ.೧೦೦೦-೧೩೪೨), ತಲಕಾಡಿನ ಗಂಗರು (ಕ್ರಿ.ಶ.೩೨೫-೧೪೦೪), ವಿಜಯನಗರದ ಅರಸರು (ಕ್ರಿ.ಶ.೧೩೩೬-೧೫೬೫), ಮೈಸೂರಿನ ಒಡೆಯರು (ಕ್ರಿ.ಶ.೧೩೯೯-೧೯೪೭) ಮತ್ತು ಶ್ರೀರಂಗ ಪಟ್ಟಣದ ಸುಲ್ತಾನರು (ಕ್ರಿ.ಶ.೧೭೬೧-೧೭೯೯) ಆಳ್ವಿಕೆಯನ್ನು ನಡೆಸಿ ಈ ಜಿಲ್ಲೆಯನ್ನು ಐತಿಹಾಸಿಕವಾಗಿ ಪ್ರಸಿದ್ಧಗೊಳಿಸಿದ್ದಾರೆ.

ಶ್ರೀರಂಗಪಟ್ಟಣ ತಾಲ್ಲೂಕಿನ ರಂಗನತಿಟ್ಟು ಪಕ್ಷಿಧಾಮವು ಜಗದ್ವಿಖ್ಯಾತಗೊಂಡಿದೆ. ಕೃಷ್ಣರಾಜ ಸಾಗರದ ಬೃಂದಾವನ ತನ್ನ ಸೊಬಗಿನಿಂದ ದೇಶ ವಿದೇಶಿಯರ ಗಮನವನ್ನು ಸೆಳೆದುಕೊಂಡಿದೆ. ಕಾವೇರಿ, ಲಕ್ಷ್ಮಣತೀರ್ಥ, ಹೇಮಾವತಿ, ಲೋಕಪಾವನಿ ಹಾಗೂ ಶಿಂಷಾ ನದಿಗಳು ಹರಿದು ಈ ಜಿಲ್ಲೆಯನ್ನು ಪ್ರಾಕೃತಿಕವಾಗಿ ಶ್ರೀಮಂತಗೊಳಿಸಿವೆ.

ಮಂಡ್ಯ ಜಿಲ್ಲೆಯು ಪ್ರಾಕೃತಿಕ, ಧಾರ್ಮಿಕ ಹಾಗೂ ಐತಿಹಾಸಿಕವಾಗಿ ಹೆಸರು ಪಡೆದಂತೆಯೇ, ಸ್ವಾತಂತ್ರ್ಯ ಚಳುವಳಿಯಲ್ಲಿ ಒಂದು ಮಹತ್ತರವಾದ ಸಾಧನೆಯನ್ನು ಸಾಧಿಸಿದ ಕೀರ್ತಿಗೆ ಒಳಗಾಗಿದೆ. ಸ್ವಾತಂತ್ರ್ಯ ಸಂಗ್ರಾಮದ ಅಂಗವಾಗಿ ಶಿವಪುರದಲ್ಲಿ ರಾಷ್ಟ್ರಧ್ವಜ ಆಂದೋಲನವನ್ನು ನಡೆಸಿದ್ದು ಇತಿಹಾಸದಲ್ಲಿ ದಾಖಲಾಗಿದೆ.

ಶ್ರೀರಂಗಪಟ್ಟಣದ ಶ್ರೀರಂಗ, ಮೇಲುಕೋಟೆಯ ವೆಂಕಟರಮಣ, ಆದಿಚುಂಚನಗಿರಿಯ ಕಾಲಭೈರವ ಮತ್ತು ಬೆಟ್ಟದ ಮೇಲಿನ ಗಂಗಾಧರೇಶ್ವರ ಕ್ಷೇತ್ರಗಳು ಈ ಜಿಲ್ಲೆಯ ಧಾರ್ಮಿಕ ಕ್ಷೇತ್ರವನ್ನು ಶ್ರೀಮಂತಗೊಳಿಸಿವೆ. ಇಂತಹ ಧಾರ್ಮಿಕ ಹಿನ್ನೆಲೆಯನ್ನು ಪಡೆದ ಈ ಜಿಲ್ಲೆಯ ಮದ್ದೂರು, ಮಂಡ್ಯ, ಮಳವಳ್ಳಿ, ಕೃಷ್ಣರಾಜಪೇಟೆ, ಪಾಂಡವಪುರ ತಾಲ್ಲೂಕುಗಳಲ್ಲಿ ನೂರಆರು ವೀರಶೈವ ಮಠಗಳು ಸ್ಥಾಪನೆಗೊಂಡ ಬಗ್ಗೆ ಮಾಹಿತಿ ಸಿಗುತ್ತದೆ. ಈ ಮಾಹಿತಿಯ ಆಧಾರದ ಮೇಲೆ ಶೋಧನೆಗೆ ಹೋದಾಗ ಮೂವತ್ತೆರಡು ಮಠಗಳು ಅಸ್ತಿತ್ವದಲ್ಲಿದ್ದು ಇಂದಿಗೂ ತಮ್ಮ ಧಾರ್ಮಿಕ ಚಟುವಟಿಕೆಯಿಂದ ಜಿಲ್ಲೆಯಲ್ಲಿ ಧಾರ್ಮಿಕ ವಾತಾವರಣ ಬೆಳೆಯುವಂತೆ ಮಾಡಿವೆ. ಮದ್ದೂರು ತಾಲ್ಲೂಕಿನ ಬನ್ನಹಳ್ಳಿಯ ಪಟ್ಟದ ಮಠವೂ ಸೇರಿದಂತೆ ಸುಮಾರು ಹದಿನೈದು ಮಠಗಳು ಅಸ್ತಿತ್ವವನ್ನು ಕಳೆದುಕೊಂಡಿವೆ. ಅಂದು ಸ್ಥಾಪನೆಗೊಂಡು ಈತನಕ ಅಸ್ತಿತ್ವದಲ್ಲಿ ಉಳಿದ ಮಠಗಳು ಧಾರ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯಿಕವಾಗಿ ಅಪಾರವಾದುದ್ದನ್ನು ಸಾಧಿಸಿ ಜಿಲ್ಲೆಯು ಅಭಿವೃದ್ಧಿ ಕಾಣಲು ಸಹಾಯಕವಾಗಿವೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತನ್ನದೇ ಆದ ಸ್ಥಾನವನ್ನು ಪಡೆದುಕೊಂಡಿರುವ ಶ್ರೀ ಷಡಕ್ಷರ ದೇವರು ಚಂಪೂಶೈಲಿಯಲ್ಲಿ ಕಾವ್ಯ ರಚಿಸಿ ಅನೇಕ ಮೌಲಿಕ ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ. ಇಂತಹ ಮಹಾ ಕವಿಯು ಮಳವಳ್ಳಿ ತಾಲ್ಲೂಕಿನ ಧನುಗೂರಿನ ವೀರಸಿಂಹಾಸನ ಮಠದ ಮಠಾಧ್ಯಕ್ಷರಾಗಿದ್ದುದು ಈ ಜಿಲ್ಲೆಗೆ ಹೆಗ್ಗಳಿಕೆಯ ವಿಚಾರವಾಗಿದೆ. ಸಾಹಿತ್ಯ ಮತ್ತು ಧಾರ್ಮಿಕ ಕ್ಷೇತ್ರಗಳೆರಡರಲ್ಲಿಯೂ ಅದ್ವಿತೀಯ ಸಾಧನೆಗೈದ ಶ್ರೀ ಷಡಕ್ಷರ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳಂತಹ ಮಹಾ ಚೇತನವನ್ನು ಈ ಜಿಲ್ಲೆಯು ನಾಡಿಗೆ ನೀಡಿ ಧನ್ಯವಾಗಿದೆ.

ಕೃಷ್ಣರಾಜಪೇಟೆ ತಾಲ್ಲೂಕು

ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕು ಕೃಷಿ ಆಧಾರಿತ ಪ್ರದೇಶ. ನೀರಾವರಿ ಯೋಜನೆಯಿಂದ ಶ್ರೀಮಂತಿಕೆಯನ್ನು ಕಂಡಿರುವ ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆದ ಲಕ್ಷಣಗಳು ಕಂಡುಬರುವುದಿಲ್ಲ. ಈ ತಾಲ್ಲೂಕಿನಾದ್ಯಂತ ಒಟ್ಟು ಆರು ಮಠಗಳು ಸ್ಥಾಪನೆಗೊಂಡಿದ್ದವೆಂದು ಹೇಳಲಾಗುತ್ತದೆ. ಇಂದು ಎರಡು ಮಠಗಳನ್ನು ಮಾತ್ರ ಗುರುತಿಸಬಹುದಾಗಿದೆ.

ಕಾಪನಹಳ್ಳಿ

ಕೃಷ್ಣರಾಜಪೇಟೆ ತಾಲ್ಲೂಕಿನ ಕಾಪನಹಳ್ಳಿಯುವ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಎಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಶೀಲಾಳಸಮಯದ ವಿರಕ್ತ ಪರಂಪರೆಯ ಶ್ರೀ ಗವಿಮಠವು ಅಸ್ತಿತ್ವದಲ್ಲಿದೆ.

ಗವಿಮಠ: ಕಾಪನಹಳ್ಳಿಯ ಹೊರಭಾಗದ ಬೆಟ್ಟದ ಗವಿಯೊಂದರಲ್ಲಿ ಮಠವು ಸ್ಥಾಪನೆಯಾಗಿರುವ ಕಾರಣ ಶ್ರೀ ಗವಿಮಠ ಎಂಬ ಹೆಸರು ಬಂದಿದೆ. ಹದಿನೈದನೆಯ ಶತಮಾನದ ಶ್ರೀ ತೋಂಟದ ಸಿದ್ಧಲಿಂಗೇಶ್ವರರ ಕಾಲದಲ್ಲಿ ಮಠವು ಸ್ಥಾಪನೆಗೊಂಡಿದೆ. ಶ್ರೀ ಸ್ವತಂತ್ರಸಿದ್ಧಲಿಂಗೇಶ್ವರಸ್ವಾಮಿಗಳು, ಸಿದ್ಧಲಿಂಗಯತಿಗಳ ನಂತರ ಇಲ್ಲಿ ನೆಲೆಗೊಂಡು ಈ ಮಠವನ್ನು ನಿರ್ಮಿಸಿ ಅಭಿವೃದ್ಧಿ ಪಡಿಸಿದ ಬಗ್ಗೆ ಮಾಹಿತಿ ದೊರೆಯುತ್ತದೆ. ಶ್ರೀ ಸ್ವತಂತ್ರ ಸಿದ್ಧಲಿಂಗೇಶ್ವರರ ಗದ್ದುಗೆ ಇಲ್ಲಿ ಪ್ರಧಾನವಾಗಿದೆ. ಇವರ ನಂತರ ಮಠವು ಅಭಿವೃದ್ಧಿಗೊಂಡ ಬಗ್ಗೆ ಜಾನಪದ ಐತಿಹ್ಯ ದೊರೆಯುತ್ತದೆ. ಶ್ರೀರಂಗಪಟ್ಟಣದ ಹೈದರಾಲಿ ಕಾಲದಲ್ಲಿ ಮಠವು ಅನೇಕ ನೆರವನ್ನು ಪಡೆದು ಉಚ್ಛ್ರಾಯ ಸ್ಥಿತಿಯಲ್ಲಿ ಬೆಳೆದ ಲಕ್ಷಣಗಳು ಕಂಡು ಬರುತ್ತದೆ. ನಂತರ ಎರಡನೆಯ ಸ್ವತಂತ್ರಸಿದ್ಧಲಿಂಗೇಶ್ವರರ ಕಾಲದಲ್ಲಿ ಮಠವು ಮತ್ತಷ್ಟು ಬೆಳೆಯಿತು. ಗುರುಗಳು ತಪೋನಿಷ್ಠರಾಗಿ, ಮಹಾಮೇಧಾವಿಗಳಾಗಿ ಮುಕ್ತಾಯಕಂಠಮಾಲೆ, ಜಂಗಮರಗಳೆ ಮುಂತಾದ ವಿದ್ವತ್ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯ ಲೋಕದಲ್ಲಿ ತಮ್ಮ ಹೆಜ್ಜೆ ಗುರುತನ್ನು ಉಳಿಸಿ ಹೋಗಿದ್ದಾರೆ.

ಪ್ರಾರಂಭದಲ್ಲಿ ಕಲ್ಲುಬೆಟ್ಟದ ಮೇಲೆ ಸ್ಥಾಪನೆಯಾಗಿದ್ದ ಮಠವು ಕಾಲಾನಂತರ ಬೆಟ್ಟದ ಕೆಳಭಾಗದಲ್ಲಿ ಸುಸಜ್ಜಿತ ಕಟ್ಟಡಗಳ ಮಧ್ಯೆ ಧಾರ್ಮಿಕ ಕಾರ್ಯಗಳನ್ನು ನಡೆಸುವ ಮೂಲಕ ಹೆಚ್ಚು ಪ್ರಚಾರಕ್ಕೆ ಬಂದಿತು. ಹುನುಗುಂದ ತಾಲ್ಲೂಕಿನ ದಾಸನಾಳ ಗ್ರಾಮದ ಶ್ರೀ ನಾಗಯ್ಯ ಮತ್ತು ಶ್ರೀಮತಿ ಚನ್ನಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಚಂದ್ರಶೇಖರ ಸ್ವಾಮಿಗಳು ೧೯೭೭ರಲ್ಲಿ ಗವಿಮಠದಲ್ಲಿ ಪಟ್ಟಾಧಿಕಾರ ಪಡೆದು ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ಮಠದಲ್ಲಿ ಪ್ರತೀವರ್ಷ ಮಾಘ ಬಹುಳ ಪಂಚಮಿಯಂದು ಮೂರು ದಿನಗಳ ಕಾಲ ಹಿರಿಯ ಗುರುಗಳ ಪುಣ್ಯಸ್ಮರಣೆಯನ್ನು ಮಾಡಲಾಗುತ್ತಿದೆ. ಗುರುಗಳು ಮಠದ ಆಸ್ತಿಯನ್ನು ಅಭಿವೃದ್ಧಿಪಡಿಸಿ ಹೆಚ್ಚು ಆದಾಯ ಬರುವಂತೆ ಮಾಡಿರುವುದಲ್ಲದೆ ರೇಷ್ಮೆ ಇಲಾಖೆಗೆ ೬೦ ಎಕರೆ ಭೂಪ್ರದೇಶವನ್ನು ನೀಡಿ ರೇಷ್ಮೆ ಅಭಿವೃದ್ಧಿಗೆ ನೆರವಾಗಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಚಂದ್ರಶೇಖರ ಸ್ವಾಮಿಗಳು. ಶ್ರೀ ಗವಿಮಠ, ಕಾಪನಹಳ್ಳಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ.

ತೆಂಡೆಕೆರೆ

ಕೃಷ್ಣರಾಜಪೇಟೆ ತಾಲ್ಲೂಕಿನ ತೆಂಡೆಕೆರೆಯು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ರಂಭಾಪುರಿ ಪೀಠದ ಖಾಸಾ ಶಾಖಾಮಠವು ಅಸ್ತಿತ್ವದಲ್ಲಿದೆ.

ರಂಭಾಪುರಿ ಖಾಸಾ ಶಾಖಾಮಠ: ತೆಂಡೆಕೆರೆಯ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ರಂಭಾಪುರಿ ಪೀಠದ ಖಾಸಾ ಶಾಖಾಮಠವು ಪುರಾತನ ಕಾಲದಿಂದ ಧಾರ್ಮಿಕ ಕಾರ್ಯಗಳನ್ನು ನಡೆಸುವ ಮೂಲಕ ಧರ್ಮಜಾಗೃತಿಯನ್ನುಂಟು ಮಾಡಿದ್ದಲ್ಲದೆ ಪೀಠಕ್ಕೂ ಮತ್ತು ಭಕ್ತರಿಗೂ ಸಂಪರ್ಕವನ್ನು ಕಲ್ಪಿಸುವ ಕೇಂದ್ರ ಸ್ಥಳವಾಗಿ ಬೆಳೆದಿತ್ತು. ಪೀಠದ ಜಗದ್ಗುರುಗಳು ಈ ಪ್ರಾಂತ್ಯದಲ್ಲಿ

ಸಂಚಾರದಲ್ಲಿದ್ದಾಗ ತಮ್ಮ ವಿಶ್ರಾಂತಿಗಾಗಿ ಈ ಮಠವನ್ನು ಬಳಸಿಕೊಳ್ಳುತ್ತಿದ್ದರು. ಈ ರೀತಿ ಪೀಠದ ನೇರ ಆಡಳಿತವನ್ನು ಹೊಂದಿದ್ದ ಈ ಮಠವು ಶ್ರೀಮಂತವಾಗಿ ಬೆಳೆದಿತ್ತು. ಹಿಂದೆ ಒಂಟೆಗಳು, ಆನೆಗಳು ಹಾಗು ಸಂಸ್ಥಾನದ ಕುದುರೆಗಳನ್ನು ಇಲ್ಲಿ ಸಾಕುತ್ತಿದ್ದರೆಂದು ಹೇಳಲಾಗುತ್ತದೆ. ಜಗದ್ಗುರು ಶ್ರೀ ಶಿವಾನಂದ ಶಿವಾಚಾರ್ಯ ಮಹಾಸ್ವಾಮಿಗಳು ಇಲ್ಲಿ ಅನೇಕ ದಿನಗಳ ಕಾಲ ಅನುಷ್ಠಾನ ಕೈಗೊಂಡಿದ್ದರೆಂದು ಹೇಳಲಾಗುತ್ತದೆ. ನಂತರ ಅಧಿಕಾರಕ್ಕೆ ಬಂದ ಶ್ರೀ ಪ್ರಸನ್ನರೇಣುಕಾ ವೀರ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ಮಳೆಗಾಲದಲ್ಲಿ ಇಲ್ಲಿಗೆ ಬಂದು ನೆಲೆಸಿ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿದ್ದರು. ನಂತರ ಮುಕ್ತಿ ಮಂದಿರದಲ್ಲಿ ಜಗದ್ಗುರುಗಳು ನೆಲೆಗೊಂಡ ಮೇಲೆ ಈ ಕ್ಷೇತ್ರ ಪೀಠದಿಂದ ದೂರ ಉಳಿಯಿತು. ಈ ಸಂದರ್ಭದಲ್ಲಿ ಮಠವು ಜೀರ್ಣಗೊಂಡಿತೆಂದು ಹೇಳಲಾಗುತ್ತದೆ.

ಈಗಿನ ಜಗದ್ಗುರುಗಳಾದ ಶ್ರೀ ಪ್ರಸನ್ನ ರೇಣುಕ ವೀರ ಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಅಧಿಕಾರಕ್ಕೆ ಬಂದ ಮೇಲೆ ಪೀಠದ ಅಭಿವೃದ್ಧಿಯ ಜತೆಗೆ ಖಾಸಾ ಶಾಖಾಮಠಗಳು ಹಾಗೂ ಶಾಖಾಮಠಗಳ ಅಭಿವೃದ್ಧಿಯ ಕಡೆ ಗಮನ ಕೊಟ್ಟರು. ಈ ಕಾರಣಕ್ಕಾಗಿ ತೆಂಡೆಕೆರೆಯ ಮಠವು ಅಭಿವೃದ್ಧಿಗೊಂಡಿತು.

ಪರಂಪರೆ: ಪುರಾತನ ಪರಂಪರೆಯ ಮಠಕ್ಕೆ ತೆಂಡೆಕೆರೆ, ಚೋಕನಹಳ್ಳಿ, ಅಂಚೇನಹಳ್ಳಿ, ತಗಡೂರು ಮುಂತಾದ ಹಳ್ಳಿಗಳ ಜನರು ಪರಂಪರಾಗತ ಮಠಕ್ಕೆ ಭಕ್ತರಾಗಿ ನಡೆದುಕೊಳ್ಳುವ ಸಂಪ್ರದಾಯ ಬೆಳೆದುಬಂದಿದೆ. ಚೋಕನಹಳ್ಳಿಯ ಮಹಿಳೆ ಮೈಸೂರು ಅರಮನೆಯಲ್ಲಿ ನರ್ತಕಿಯಾಗಿ ಸೇವೆ ಸಲ್ಲಿಸುತ್ತಿದ್ದ ಸಂದರ್ಭದಲ್ಲಿ ಈ ಮಠದ ಗುರುಗಳಾಗಿದ್ದ ಶ್ರೀ ಚಂದ್ರ ಶೇಖರ ಶಿವಾಚಾರ್ಯ ಸ್ವಾಮಿಗಳ ಕೃಪಾಶೀರ್ವಾದಕ್ಕೆ ಒಳಗಾದರು. ಇವರು ತಮ್ಮ ಆಸ್ತಿಯನ್ನು ಮಠಕ್ಕೆ ವಹಿಸಿಕೊಟ್ಟು ಮಠವು ಬೆಳೆಯಲು ಕಾರಣೀಭೂತರಾದರು. ಅಂದು ಚೋಕನಹಳ್ಳಿಯ ಮಹಿಳೆ ನೀಡಿದ್ದ ಏಳು ಹಳ್ಳಿಗಳ ಆಸ್ತಿ ಇಂದು ಉಳಿಯದಿದ್ದರು ಏಳು ಹಳ್ಳಿಯ ಭಕ್ತರು ಈ ಮಠದ ಆಸ್ತಿಯಾಗಿ ಉಳಿದಿದ್ದಾರೆ. ಶ್ರೀ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳ ನಂತರ ಅನೇಕ ಗುರುಗಳು ಅಧಿಕಾರ ನಡೆಸಿದ್ದರೂ ದಾಖಲೆಗಳ ಕೊರತೆಯಿಂದ ಮಾಹಿತಿ ಲಭ್ಯವಿಲ್ಲ.

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ನಾರಣಾಪುರ ಗ್ರಾಮದ ಮಠದ ನಿಂಗಯ್ಯ ಮತ್ತು ಶಿವಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳು ಈ ಮಠದ ಮಠಾಧಿಶರಾಗಿ ೧೯೮೬ರಲ್ಲಿ ಅಧಿಕಾರ ವಹಿಸಿ ಕೊಂಡಿದ್ದಾರೆ. ಗುರುಗಳು ಸಖರಾಯಪಟ್ಟಣ ಹಾಗೂ ಬಾಳೆಹೊನ್ನೂರಿನಲ್ಲಿ ವಿದ್ಯಾಭ್ಯಾಸ ಕಲಿತು, ಮಠದ ಆಡಳಿತವನ್ನು ವಹಿಸಿಕೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಗುರುಗಳು ಅಧಿಕಾರಕ್ಕೆ ಬಂದ ಮೇಲೆ ಮಠದ ಆಸ್ತಿಯನ್ನು ಕಾನೂನುಬದ್ಧಗೊಳಿಸಿ ಸ್ವತಃ ಕಾಯಕ ಮಾಡುತ್ತಾ ಜಮೀನನ್ನು ಅಭಿವೃದ್ಧಿಪಡಿಸಿರುವುದಲ್ಲದೆ ಮಠದ ಸುತ್ತ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿ ಮಠಕ್ಕೆ ಆದಾಯದ ಮೂಲವನ್ನಾಗಿ ಮಾಡಿದ್ದಾರೆ.

ವೀರಭದ್ರಸ್ವಾಮಿ ದೇವಾಲಯವನ್ನು ಜೀರ್ಣಾಭಿವೃದ್ಧಿಗೊಳಿಸಿ ನಿತ್ಯ ಪೂಜೆ, ಅಮವಾಸ್ಯೆ ಮತ್ತು ಹುಣ್ಣಿಮೆಗಳಲ್ಲಿ ವಿಶೇಷ ಪೂಜೆ ನಡೆಯುವಂತೆ ಮಾಡಿರುವುದಲ್ಲದೆ ಧಾರ್ಮಿಕ ಉಪನ್ಯಾಸಗಳನ್ನು ನೀಡುವ ಮೂಲಕ ವೀರಶೈವ ಧರ್ಮವನ್ನು ಪ್ರಚಾರಪಡಿಸುವಲ್ಲಿ ನಿರತರಾಗಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಗಂಗಾಧರ ಶಿವಾಚಾರ್ಯಸ್ವಾಮಿಗಳು, ಶ್ರೀ ರಂಭಾಪುರಿಖಾಸಾ ಶಾಖಾಮಠ, ತೆಂಡೆಕೆರೆ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ.

❑

ಪಾಂಡವಪುರ ತಾಲ್ಲೂಕು

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕು ರಾಜ್ಯದ ಶ್ರೀಮಂತ ತಾಲ್ಲೂಕುಗಳಲ್ಲಿ ಒಂದಾಗಿದೆ. ಕಾವೇರಿನದಿಯ ನೀರಿನಿಂದ ಸಮೃದ್ಧತೆಯನ್ನು ಕಂಡಿರುವ ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಅಷ್ಟೇನು ಪ್ರಬಲವಾಗಿ ಬೆಳೆದಿಲ್ಲ. ಇಲ್ಲಿ ಈವರೆಗೆ ಆರು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಇವುಗಳಲ್ಲಿ ಮೂರು ಮಠಗಳನ್ನು ಮಾತ್ರ ಗುರುತಿಸ ಬಹುದಾಗಿದೆ.

ತಾಳ ಶಾಸನ

ಪಾಂಡವಪುರ ತಾಲ್ಲೂಕಿನ ತಾಳಶಾಸನವು ತಾಲ್ಲೂಕು ಕೇಂದ್ರದ ಪೂರ್ವಕ್ಕೆ ಎಂಟು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಭಿಕ್ಷದಮಠವು ಅಸ್ತಿತ್ವದಲ್ಲಿದೆ.

ಭಿಕ್ಷದಮಠ: ತಾಳಶಾಸನ ಗ್ರಾಮದಲ್ಲಿ ದೇವನೂರು ಮಠದ ಶಾಖಾಮಠವಾದ ಭಿಕ್ಷದಮಠವು ಅನೇಕ ವರ್ಷಗಳಿಂದ ಇಲ್ಲಿ ಅಸ್ತಿತ್ವಗೊಂಡು, ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿದೆ. ಈ ಗ್ರಾಮದ ಹೊರಭಾಗದ ಪೂರ್ವಭಾಗದಲ್ಲಿ ಭಿಕ್ಷದ ಮಠವು ಸ್ಥಾಪನೆಗೊಂಡಿದೆ. ಈ ಮಠದ ಪಕ್ಕದಲ್ಲಿ ಈಶ್ವರ ದೇವಾಲಯವಿದ್ದು, ಇದು ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ರೂಪುಗೊಂಡಿದೆ. ಕಳೆದ ಹತ್ತು ವರ್ಷಗಳ ಹಿಂದೆ ಶ್ರೀ ಸಿದ್ಧಲಿಂಗ ಸ್ವಾಮಿಗಳು ಪಟ್ಟಾಧಿಕಾರವನ್ನು ವಹಿಸಿಕೊಂಡು ಈ ಮಠದಲ್ಲಿ ನೆಲೆಸಿ, ಕಂತೆ ಭಿಕ್ಷೆ ಮಾಡುತ್ತಾ ಈ ಗ್ರಾಮದ ಭಕ್ತರ ಮನೆಗಳ ಧಾರ್ಮಿಕ ಕ್ರಿಯಾದಿಗಳನ್ನು ನೆರವೇರಿಸುತ್ತಾ ಬರುತ್ತಿದ್ದಾರೆ.

ವಿಳಾಸ: ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಗಳು, ಶ್ರೀ ಭಿಕ್ಷದ ಮಠ, ತಾಳಶಾಸನ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ.

ಬೇಬಿಗ್ರಾಮ

ಪಾಂಡವಪುರ ತಾಲ್ಲೂಕಿನ ಬೇಬಿ ಗ್ರಾಮವು ತಾಲ್ಲೂಕು ಕೇಂದ್ರದ ವಾಯುವ್ಯಕ್ಕೆ ಹದಿನಾರು ಕಿ. ಮೀ ದೂರದಲ್ಲಿದೆ. ಬೇಬಿ ಬೆಟ್ಟದಲ್ಲಿ ಕಳೆದ ಐವತ್ತು ವರ್ಷಗಳ ಹಿಂದೆ ಪ್ರಾರಂಭಗೊಂಡಿರುವ ಶ್ರೀ ದುರುದುಂಡೇಶ್ವರ ಮಹಾಂತ ಶಿವಯೋಗಿಗಳ ಮಠವು ಇಲ್ಲಿನ ಧಾರ್ಮಿಕ ಚಟುವಟಿಕೆಗಳಿಂದ ಹೆಸರು ಮಾಡಿದೆ. ಈ ಮಠವು ಈಗ ಮೇಲಿನಮಠ ಮತ್ತು ಕೆಳಗಿನ ಮಠ ಎಂದು ಎರಡು ಮಠಗಳಾಗಿ ಪ್ರತ್ಯೇಕಗೊಂಡು ಬೆಳೆದಿದೆ.

ದುರುದುಂಡೇಶ್ವರ ಮಠ (ಮೇಲಿನ ಮಠ): ಬೇಬಿ ಗ್ರಾಮದ ಹೊರಭಾಗದಲ್ಲಿ ಶ್ರೀ ದುರುದುಂಡೇಶ್ವರ ಮಹಾಂತ ಶಿವಯೋಗಿಗಳ ಮಠವು ಸ್ಥಾಪನೆಯಾಗಿದೆ. ಬೆಳಗಾವಿ ಜಿಲ್ಲೆಯ ಮುರುಗೋಡು ಮಹಾಂತ ಶಿವಯೋಗಿಗಳ ಮಠದಲ್ಲಿ ಇದ್ದ ಶ್ರೀ ಮರಿದೇವರು ಸ್ವಾಮಿಗಳು ಲೋಕಸಂಚಾರಕ್ಕೆಂದು ಬಂದವರು, ಕೊಳ್ಳೆಗಾಲ ತಾಲ್ಲೂಕಿನ ಶಂಭುಲಿಂಗೇಶ್ವರ ಬೆಟ್ಟಕ್ಕೆ ಬಂದು ಹತ್ತು ವರ್ಷಗಳ ಕಾಲ ನೆಲೆನಿಂತು ಅನುಷ್ಠಾನಗೊಂಡು ಬೇಬಿ ಬೆಟ್ಟಕ್ಕೆ ಬರುತ್ತಾರೆ. ಹಿಂದೆ ಶ್ರೀ ರಾಮಯೋಗೀಶ್ವರರು ನೆಲೆಸಿ, ಅನೇಕ ದಿನಗಳ ಕಾಲ ಅನುಷ್ಠಾನಗೊಂಡಿದ್ದ ಈ ಕ್ಷೇತ್ರದಲ್ಲಿ ಮಠ ಸ್ಥಾಪನೆಗೊಂಡಿತ್ತು. ಇವರ ನಂತರ ಮಠಾಧೀಶರು ಯಾರೂ ಇಲ್ಲದೆ ಜೀರ್ಣಾವಸ್ಥೆಗೆ ಬಂದಿತ್ತು. ಶಂಭುಲಿಂಗೇಶ್ವರ ಬೆಟ್ಟದಿಂದ ನೇರವಾಗಿ ಇಲ್ಲಿಗೆ ಶ್ರೀ ಮರಿದೇವರು ಸ್ವಾಮಿಗಳು ಬಂದವರೇ ಇಲ್ಲಿನ ಗ್ರಾಮಸ್ಥರ ಕಷ್ಟ ಸುಖಗಳಿಗೆ ಸ್ಪಂದಿಸಿ ಮಠವನ್ನು ಸ್ಥಾಪನೆ ಮಾಡುತ್ತಾರೆ. ಹೀಗೆ ಸ್ಥಾಪಿತಗೊಂಡ ಮಠಕ್ಕೆ ೧೯೫೦ರಲ್ಲಿ ಪಟ್ಟಾಧಿಕಾರಗೊಂಡು ಭಕ್ತರಲ್ಲಿ ಧಾರ್ಮಿಕಜಾಗೃತಿಯನ್ನು ಮೂಡಿಸಲು ಶ್ರಮಿಸಿ, ಈ ಬೆಟ್ಟದ ಮೇಲೆ ಧಾರ್ಮಿಕ ಜ್ಯೋತಿಯನ್ನು ಬೆಳಗಿಸಿದರು.

ಬೆಳೆದ ಮಠ: ಬೆಟ್ಟದಲ್ಲಿ ಧಾರ್ಮಿಕ ಆಚರಣೆಗಳನ್ನು ಕೈಗೊಂಡ ಶ್ರೀ ಮರಿದೇವರು ಸ್ವಾಮಿಗಳು ದೀರ್ಘ ಕಾಲ ಬದುಕಿ ಈ ನೆಲದಲ್ಲಿ ಧರ್ಮ ಸಾಕಾರಗೊಳ್ಳುವಂತೆ ಮಾಡಿದ ಹಿರಿಯ ಜೀವ. ಈ ಮಠಕ್ಕೆ ಉತ್ತರಾಧಿಕಾರಿಗಳನ್ನಾಗಿ ಸಿದ್ಧಗಂಗೆಯಲ್ಲಿ

ವಿದ್ಯಾಭ್ಯಾಸವನ್ನು ಮಾಡುತ್ತಿದ್ದ ಶ್ರೀ ಸದಾಶಿವ ಸ್ವಾಮಿಗಳನ್ನು ನೇಮಕ ಮಾಡಿಕೊಂಡರು. ಉತ್ತರಾಧಿಕಾರಿಗೆ ಮಠವನ್ನು ವಹಿಸಿಕೊಟ್ಟು ದೀರ್ಘ ಅನುಷ್ಠಾನದಲ್ಲಿ ಧ್ಯಾನಾಸಕ್ತರಾದರು. ಇದಾದ ಕೆಲವೇ ವರ್ಷಗಳಲ್ಲಿ ಬೆಟ್ಟದ ಮೇಲಿನ ಮಠದಲ್ಲಿ ನೆಲೆಗೊಳ್ಳಲಾಗದೆ, ತಮ್ಮ ಉತ್ತರಾಧಿಕಾರಿಗೆ ಪೂರ್ಣ ಜವಾಬ್ದಾರಿಯನ್ನು ಒಪ್ಪಿಸಿ, ಬೇಬಿ ಗ್ರಾಮದ ಹತ್ತಿರ ನೂತನ ಮಠವನ್ನು ಸ್ಥಾಪನೆ ಮಾಡಿದರು. ಹಿರಿಯ ಗುರುಗಳಿಂದ ಅಧಿಕಾರವನ್ನು ವಹಿಸಿಕೊಂಡ ಶ್ರೀ ಸದಾಶಿವಸ್ವಾಮಿಗಳು ಮಠವನ್ನು ಅಭಿವೃದ್ಧಿ ಪಡಿಸುತ್ತಾ ಶರಣ ತತ್ವಗಳನ್ನು ಅನುಷ್ಠಾನಗೊಳಿಸುತ್ತಿದ್ದಾರೆ.

ವಿಳಾಸ: ಶ್ರೀ.ಮ.ನಿ.ಪ್ರ. ಸದಾಶಿವಸ್ವಾಮಿಗಳು, ಶ್ರೀ ದುರುದುಂಡೇಶ್ವರ ಮಠ, (ಮೇಲಿನ ಮಠ) ಬೇಬಿಗ್ರಾಮ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ.

ದುರುದುಂಡೇಶ್ವರ ಮಹಾಂತ ಶಿವಯೋಗಿಗಳಮಠ (ಕೆಳಗಿನ ಮಠ): ಬೇಬಿ ಬೆಟ್ಟದ ಮೇಲಿನ ಮಠದ ಜವಾಬ್ದಾರಿಯನ್ನು ಶ್ರೀ ಸದಾಶಿವ ಸ್ವಾಮಿಗಳಿಗೆ ಒಪ್ಪಿಸಿ ಬಂದ ಶ್ರೀ ಮರಿದೇವರು ಸ್ವಾಮಿಗಳು ಬೆಟ್ಟದ ಕೆಳಗೆ ನೂತನ ಮಠಕ್ಕಾಗಿ ವ್ಯವಸ್ಥಿತವಾದ ಮತ್ತು ಸುಸಜ್ಜಿತವಾದ ಕಟ್ಟಡವನ್ನು ನಿರ್ಮಿಸಿದರು. ಗುರುಗಳು ಸ್ವತಂತ್ರವಾಗಿ ಮಠವನ್ನು ಹುಟ್ಟು ಹಾಕಿ ವೀರಶೈವಧರ್ಮ ಪ್ರಚಾರ ಕಾರ್ಯವನ್ನು ಕೈಗೊಳ್ಳುತ್ತಾ ಬಂದ ಇವರು ಬೆಟ್ಟದ ಕೆಳಭಾಗದಲ್ಲಿ ಮತ್ತೊಂದು ಮಠವನ್ನು ಸ್ಥಾಪನೆ ಮಾಡುವ ಮೂಲಕ ಹೊಸ ಇತಿಹಾಸವನ್ನು ಸೃಷ್ಟಿಸಿದರು. ಗುರುಗಳು ನಿರ್ಮಿಸಿದ ಮಠದ ಉದ್ಘಾಟನಾ ಮಹೋತ್ಸವವನ್ನು ೧೯೯೩ರ ಏಪ್ರಿಲ್ ಹದಿನಾರರಂದು ನೆರವೇರಿಸಿದರು. ವಯೋವೃದ್ಧರಾದ ಶ್ರೀ ಮರಿದೇವರು ಸ್ವಾಮಿಗಳು ನೂತನ ಮಠಕ್ಕೆ ಉತ್ತರಾಧಿಕಾರಿಗಳನ್ನಾಗಿ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮಿಗಳನ್ನು ಆಯ್ಕೆಮಾಡಿಕೊಂಡು ೧೯೯೯ರ ಜನವರಿ ಇಪ್ಪತ್ತೆಂಟರಂದು ನೂತನ ಗುರುಗಳಿಗೆ ಪಟ್ಟಾಧಿಕಾರವನ್ನು ವಹಿಸಿಕೊಟ್ಟರು.

ಹಿರಿಯ ಜೀವ: ಉತ್ತರದ ಕಡೆಯಿಂದ ಲೋಕೋದ್ಧಾರಕ್ಕೆಂದು ಆಗಮಿಸಿದ ಶ್ರೀ ಮರಿದೇವರು ಸ್ವಾಮಿಗಳಿಗೆ ಈಗ ನೂರಾಎಂಟು ವರ್ಷ ತುಂಬಿ ಶತಾಯುಷಿಗಳಾದ ಗುರುಗಳು ಬತ್ತದ ಚಿಲುಮೆಯಂತೆ ಇದ್ದಾರೆ. ಹಿರಿಯ ಜೀವವು ತಮ್ಮ ಜೀವನಾನುಭವದ ಸಾರವನ್ನೆಲ್ಲಾ ತಮ್ಮ ಉತ್ತರಾಧಿಕಾರಿಗಳಾದ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮಿಗಳಿಗೆ ಧಾರೆ ಎರೆದು ಮಠವನ್ನು ಅಭಿವೃದ್ಧಿಗೊಳಿಸಲು ಶಕ್ತಿಯನ್ನು ನೀಡಿದ್ದಾರೆ.

ಶ್ರೀ ತ್ರಿನೇತ್ರ ಸ್ವಾಮಿಗಳು: ಕೆ.ಆರ್.ಪೇಟೆ ತಾಲ್ಲೂಕಿನ ತಂಡೇಕೆರೆ ಗ್ರಾಮದ ಶ್ರೀ ಪಂಚಾಕ್ಷರಿ ಸ್ವಾಮಿಗಳು ಮತ್ತು ಶ್ರೀಮತಿ ನಾಗರತ್ನಮ್ಮನವರ ಪುತ್ರರಾಗಿ ೧೯೭೭ರ ಆಗಸ್ಟ್ ಮೂರರಂದು ಜನಿಸಿದ ಶ್ರೀ ತ್ರಿನೇತ್ರ ಸ್ವಾಮಿಗಳು, ವಿದ್ಯಾಭ್ಯಾಸ ವನ್ನು ಎಡೆಯೂರು ಮತ್ತು ಮೈಸೂರುಗಳಲ್ಲಿ ಮುಗಿಸಿ ವಿದ್ಯಾ ಸಂಪನ್ನತೆಯನ್ನು ಮೈಗೂಡಿಸಿಕೊಂಡು, ಮಠದ ಧಾರ್ಮಿಕ ಮತ್ತು ಆಡಳಿತಾತ್ಮಕ ವಿಚಾರಗಳ ಕಡೆಗೆ ತಮ್ಮ ಗಮನ ಕೊಡುತ್ತಾ ಮಠವನ್ನು ಬೆಳೆಸುತ್ತಿದ್ದಾರೆ. ಶ್ರೀ ತ್ರಿನೇತ್ರ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡ ಕೆಲವೇದಿನಗಳಲ್ಲಿ ತಮ್ಮ ಕ್ರಿಯಾಶೀಲ ಚಟುವಟಿಕೆಗಳಿಂದ ಮಠದ ವಾತಾವರಣವನ್ನು ನಿರಂತರ ಧಾರ್ಮಿಕ ಕೇಂದ್ರ ಸ್ಥಾನವನ್ನಾಗಿ ಅಣಿಗೊಳಿಸಿದ್ದಾರೆ. ಬಸವಾದಿ ಶರಣರ ತತ್ತ್ವಗಳನ್ನು ಜನಮನಕ್ಕೆ ಮುಟ್ಟಿಸುವ ಕಾರ್ಯಚಟುವ ಟಿಕೆಗಳನ್ನು ರೂಪಿಸಿಕೊಂಡಿರುವುದಲ್ಲದೇ, ಹಿರಿಯ ಸ್ವಾಮಿಗಳ ಆಕಾಂಕ್ಷೆ ಗಳನ್ನು ಈಗ ಸಾಕಾರಗೊಳಿಸುತ್ತಾ ಮುನ್ನಡೆದಿದ್ದಾರೆ.

ಧಾರ್ಮಿಕ ಚಟುವಟಿಕೆ: ಪಟ್ಟಾಧಿಕಾರವನ್ನು ವಹಿಸಿಕೊಂಡ ಪ್ರಾರಂಭದಿಂದಲೇ ಮಠದಲ್ಲಿ ಧಾರ್ಮಿಕ ವಾತಾವರಣವನ್ನು ಇಮ್ಮಡಿಗೊಳಿಸಿದ ಶ್ರೀ ತ್ರಿನೇತ್ರ ಸ್ವಾಮಿಗಳು, ಪ್ರತಿ ಹುಣ್ಣಿಮೆಯಂದು ಶಿವಾನುಭವ ಗೋಷ್ಠಿಯನ್ನು ಏರ್ಪಡಿಸಿ, ಪ್ರತಿತಿಂಗಳು ಶರಣತತ್ತ್ವದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಿ ಚಿಂತನೆಗೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ದುಡಿದ ಗಣ್ಯರಿಗೆ ಅಭಿನಂದಿಸಿ ಗೌರವಿಸಲಾಗುತ್ತಿದೆ. ಅಂದು ಬೆಳಿಗ್ಗೆಯಿಂದಲೇ ಧಾರ್ಮಿಕ ಚಟುವಟಿಕೆಗಳು ಪ್ರಾರಂಭಗೊಳ್ಳುತ್ತವೆ. ಅಮಾವಾಸ್ಯೆಯಂದು ವಯೋವೃದ್ಧರಾದ ಹಿರಿಯ ಸ್ವಾಮಿಗಳು ಬಯಲಿನಲ್ಲಿ ಕುಳಿತು ಶಿವಪೂಜೆಯನ್ನು ನಡೆಸುತ್ತಾರೆ. ಅಂದು ಬರುವ ನೂರಾರು ಭಕ್ತರಿಗೆ ಶಿವಪೂಜೆಯನ್ನು ಮಾಡುವ ಕ್ರಮದ ಬಗ್ಗೆ ವಿವರಿಸಿ, 'ಶಿವಪೂಜಾ ಅನುಷ್ಠಾನ' ಗಳ ಬಗ್ಗೆ ತಿಳಿಯ ಹೇಳುತ್ತಾರೆ. ಈ ಎಲ್ಲಾ ವಿಶೇಷ ಸಂದರ್ಭಗಳಲ್ಲಿ ಅನ್ನದಾಸೋಹ ವ್ಯವಸ್ಥೆ ನಡೆಯುತ್ತಿದೆ.ಕಳೆದ ಜನವರಿ

ಯಲ್ಲಿ ನೂರಾ ಏಳು ವರ್ಷದ ಜನ್ಮ ದಿನೋತ್ಸವದ ಆಚರಣೆಯನ್ನು ಮಾಡಿಕೊಂಡಿರುವ ಹಿರಿಯ ಗುರುಗಳು ಈ ಮಠದ ದೈವತ್ವದ ಚೇತನವಾಗಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಕಳೆದ ದಶಕದಲ್ಲಿ ಪ್ರಾರಂಭಗೊಂಡ ಈ ಮಠವು ಕಂಡರಿಯದ ರೀತಿಯಲ್ಲಿ ಅಭಿವೃದ್ಧಿಗೊಂಡಿದೆ. ಮಠಕ್ಕೆ ಆಸ್ತಿ ಏನೂ ಇಲ್ಲದಿದ್ದರೂ ಭಕ್ತರೇ ಆಸ್ತಿಯಾಗಿದ್ದಾರೆ. ಈ ಭಕ್ತರನ್ನು ಸನ್ಮಾರ್ಗದಲ್ಲಿ ಕೊಂಡೊಯ್ಯುತ್ತಾ ಭಕ್ತರ ಸಮೂಹವನ್ನು ಹೆಚ್ಚಿಸಿಕೊಂಡಿರುವ ಈ ಮಠವು ಕಲ್ಯಾಣ ಮಂಟಪ,ಸಂಸ್ಕೃತ ಪಾಠಶಾಲೆ ಪ್ರಾರಂಭಮಾಡುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತವಾಗಿದೆ. ಮಠದಲ್ಲಿ ದಾಸೋಹ ಮಂಟಪವನ್ನು ನಿರ್ಮಿಸಿ 'ಮಹಾಂತ ದಾಸೋಹಮಂದಿರ'ಎಂದು ನಾಮಕರಣ ಮಾಡಿ ಪ್ರಾರಂಭಿಸಿದ್ದಾರೆ. ನೂರಾಏಳು ವರ್ಷ ತುಂಬಿರುವ ಗುರುಗಳು ತಮಗಾಗಿ ಸಮಾಧಿಯನ್ನು ತಮ್ಮ ಜೀವಿತದ ಅವಧಿಯಲ್ಲಿಯೇ ನಿರ್ಮಿಸಿಕೊಂಡಿದ್ದಾರೆ. ಈ ಸಮಾಧಿಗೆ ಮಂಟಪ ನಿರ್ಮಿಸಲು ಈಗಿನ ಶ್ರೀ ತ್ರಿನೇತ್ರ ಸ್ವಾಮಿಗಳು ಮುಂದಾಗಿದ್ದಾರೆ. ಧಾರ್ಮಿಕ ಮತ್ತು ಸಾಮಾಜಿಕವಾಗಿ ತೊಡಗಿಸಿಕೊಂಡಿರುವ ಶ್ರೀ ದುರುದುಂಡೇಶ್ವರ ಮಹಾಂತ ಶಿವಯೋಗಿಗಳ ಮಠವು ಈ ಜಿಲ್ಲೆಯ ಹೆಸರಾಂತ ಮಠಗಳಲ್ಲಿ ಒಂದಾಗಿ ಬೆಳೆದಿದೆ.

ವಿಳಾಸ: ಶ್ರೀ ಮ.ನಿ.ಪ್ರ. ತ್ರಿನೇತ್ರ ಸ್ವಾಮಿಗಳು, ಶ್ರೀ ದುರುದುಂಡೇಶ್ವರ ಮಹಾಂತ ಶಿವಯೋಗಿಗಳ ಮಠ (ಕೆಳಗಿನ ಮಠ), ಬೇಬಿ ಗ್ರಾಮ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ.

❑

ಮದ್ದೂರು ತಾಲ್ಲೂಕು

ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕು ಆರ್ಥಿಕವಾಗಿ ಅಭಿವೃದ್ಧಿಯನ್ನ ಕಂಡಿದೆ. ಸ್ವತಂತ್ರ ಸಂಗ್ರಾಮದಲ್ಲಿ ವಿಶಿಷ್ಟ ರೀತಿಯಲ್ಲಿ ಗುರುತಿಸಿಕೊಂಡ ಈ ತಾಲ್ಲೂಕು ರಾಜಕೀಯ ಹಾಗೂ ಸಾಮಾಜಿಕವಾಗಿ ಪ್ರಗತಿಯನ್ನು ಕಂಡಿದೆ. ಇಲ್ಲಿ ವೀರಶೈವಧರ್ಮ ಸಾಧಾರಣ ಮಟ್ಟದಲ್ಲಿ ಪ್ರಚಾರಗೊಂಡು ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಹಿಂದೆ ಇಪ್ಪತ್ತಾರು ಮಠಗಳು ಸ್ಥಾಪನೆಗೊಂಡಿದ್ದವೆಂದು ಹೇಳಲಾಗುತ್ತದೆ. ಈಗ ನಾಲ್ಕು ಮಠಗಳು ಮಾತ್ರ ಅಸ್ತಿತ್ವದಲ್ಲಿವೆ.

ಮಠದ ದೊಡ್ಡಿ

ಮದ್ದೂರು ತಾಲ್ಲೂಕಿನ ಮಠದ ದೊಡ್ಡಿಯು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹದಿಮೂರು ಕಿ. ಮೀ. ದೂರದಲ್ಲಿದೆ. ಕ್ಯಾತಘಟ್ಟ ಗ್ರಾಮ ಠಾಣೆಯ ವ್ಯಾಪ್ತಿಗೆ ಒಳಪಡುವ ಮಠದ ದೊಡ್ಡಿಯಲ್ಲಿ ಶ್ರೀ ಮಠದದೊಡ್ಡಿ ಮಠವು ಅಸ್ತಿತ್ವದಲ್ಲಿದೆ.

ಮಠದದೊಡ್ಡಿಮಠ: ಮಠದ ದೊಡ್ಡಿಯಲ್ಲಿ ಉಜ್ಜಯಿನಿ ಪೀಠದ ಶಾಖಾಮಠವಾಗಿ ಶ್ರೀ ಮಠದದೊಡ್ಡಿ ಮಠವು ಸ್ಥಾಪನೆಯಾಗಿದೆ. ನಗರಕೆರೆ ಪಾಳೆಗಾರ ಪ್ರತಾಪಚಿಕ್ಕವೀರಬಲ್ಲಾಳನ ಕಾಲದಲ್ಲಿ ಶ್ರೀ ಹರಿಹರೇಶ್ವರ ಶಿವಾಚಾರ್ಯರಿಂದ ಈ ಮಠವು ಸ್ಥಾಪನೆಗೊಂಡು ಈತನಕ ಬೆಳೆದು ಈ ನಾಡಿನ ಧಾರ್ಮಿಕ ಶ್ರೀಮಂತಿಕೆಯನ್ನು ಬೆಳೆಸಿದೆ.

ಮಠಸ್ಥಾಪನೆ: ಪಾಳೆಗಾರ ಪ್ರತಾಪ ಚಿಕ್ಕವೀರಬಲ್ಲಾಳನ ಹಸುಗಳು ಪ್ರತಿ ದಿನ ಮೇಯಲೆಂದು ಬಯಲು ಪ್ರದೇಶಕ್ಕೆ (ಈಗಿನ ಪರಿಹರೇಶ್ವರ ದೇವಸ್ಥಾನದ ಸಮೀಪ) ಬರುತ್ತಿದ್ದವು. ಇದರಲ್ಲಿ ಒಂದು ಹಸು ಪ್ರತಿ ದಿನ ಹುತ್ತದ ಮೇಲೆ ನಿಂತು ಹಾಲನ್ನು ಕರೆಯುತ್ತಿತ್ತು. ಮನೆಯಲ್ಲಿ ಹಾಲನ್ನು ಕರೆಯುವ ಬದಲು ರಕ್ತವನ್ನುಕರೆಯುತ್ತಿತ್ತು. ಇದಕ್ಕೆ ಕಾರಣವೇನೆಂದು ಗೋವುಳಿಗನನ್ನು ಪಾಳೆಗಾರನು ಕೇಳುತ್ತಾನೆ. ಇದಕ್ಕೆ ಉತ್ತರವಾಗಿ ಗೋವುಳಿಗನು 'ಪ್ರತಿ ದಿನ ಹುತ್ತದ ಮೇಲೆ ಹಸುವು ಹಾಲು ಕರೆಯುತ್ತದೆ' ಎಂಬ ವಿಚಾರವನ್ನು ತಿಳಿಸುತ್ತಾನೆ. ಈ ಮಾತಿನಲ್ಲಿ ನಂಬಿಕೆ ಬಾರದೆ ಪಾಳೆಗಾರನು ತನ್ನ ಹಿಂಬಾಲಕರನ್ನು ಪರೀಕ್ಷೆ ಮಾಡಲೆಂದು ಕಳುಹಿಸಿಕೊಡುತ್ತಾನೆ. ಹಿಂಬಾಲಕರು ಎರಡು ಮೂರು ದಿನ ಹಿಂಬಾಲಿಸಿ ಗೋವುಳಿಗನು ಹೇಳಿದ ಮಾತನ್ನು ದೃಢಪಡಿಸಿಕೊಂಡು ಪಾಳೆಗಾರ ಪ್ರತಾಪ ಚಿಕ್ಕವೀರಬಲ್ಲಾಳನಿಗೆ ವಿಚಾರವನ್ನು ಮುಟ್ಟಿಸುತ್ತಾರೆ.

ಬೆಳೆದ ಹುತ್ತ: ಶ್ರೀ ಹರಿಹರೇಶ್ವರರು ಉತ್ತರಾಭಿಮುಖವಾಗಿ ಲೋಕಸಂಚಾರಕ್ಕೆಂದು ಬಂದವರು ಇಲ್ಲಿನ ಪ್ರಶಾಂತ ಸ್ಥಳಕ್ಕೆ ಮನಸೋತು ಶಿಂಷಾ ನದಿಯ ದಡದಲ್ಲಿ ತಪೋನುಷ್ಠಾನವನ್ನು ಕೈಗೊಂಡಿರುತ್ತಾರೆ. ದೀರ್ಘತಪಸ್ಸಿಗೆ ಕುಳಿತ ಶಿವಯೋಗಿ ಶ್ರೀ ಹರಿಹರೇಶ್ವರರ ಸುತ್ತಲೂ ಹುತ್ತ ಬೆಳೆದಿರುತ್ತದೆ. ಈ ಹುತ್ತದ ಮೇಲೆ ಹಸುವು ಪ್ರತಿ ದಿನ ಹಾಲನ್ನು ಕರೆಯುತ್ತಿರಬೇಕಾದರೆ ಇಲ್ಲಿ ಯಾರೋ ಮಹಾತ್ಮರು ತಪಸ್ಸಿಗೆ ಕುಳಿತಿರಬಹುದೆಂದು ಊಹೆ ಮಾಡಿಕೊಳ್ಳುತ್ತಾರೆ. ಈ ವಿಚಾರ ಪ್ರತಾಪ ಚಿಕ್ಕವೀರ ಬಲ್ಲಾಳನಿಗೂ ತಿಳಿಯುತ್ತದೆ. ಅದೇ ದಿನ ರಾತ್ರಿ ಹರಿಹರೇಶ್ವರರು ರಾಜನ ಕನಸಿನಲ್ಲಿ ಬಂದು'ಹುತ್ತ ಇರುವ ಜಾಗದಲ್ಲಿ ಮಠವನ್ನು ಕಟ್ಟಿಸು. ಅಲ್ಲದೆ ಈ ಸ್ಥಳದಲ್ಲಿ ನಿತ್ಯ ಪೂಜೆಗೆ ವ್ಯವಸ್ಥೆಗೊಳಿಸು. ನನ್ನ ವಂಶಸ್ಥರು ಹರಿಹರದಲ್ಲಿದ್ದಾರೆ. ಅವರನ್ನು ಕರೆಸಿ ಇಲ್ಲೇ ನೆಲೆಗೊಳಿಸು. ಅವರುಗಳು ಪ್ರತಿನಿತ್ಯ ಪೂಜಾ ಕಾರ್ಯವನ್ನು ಮಾಡಿಕೊಂಡು ಇಲ್ಲಿ ಧರ್ಮ ಸಂಸ್ಕಾರವಾಗುವಂತೆ ಮಾಡಿ, ನಿನ್ನ ರಾಜ್ಯದಲ್ಲಿ ಶಾಂತಿ ಸಮೃದ್ಧಿ ನೆಲೆಗೊಳ್ಳುವಂತೆ ಮಾಡುತ್ತಾರೆ'ಎಂದು ಹೇಳುತ್ತಾರೆ. ಶ್ರೀ ಹರಿಹರೇಶ್ವರರು ಹೇಳಿದ ಕನಸಿನ ಮಾತುಗಳನ್ನು ನನಸಾಗಿಸಲು ಪ್ರತಾಪ ಚಿಕ್ಕವೀರಬಲ್ಲಾಳ ಹರಿಹರಕ್ಕೆ ಸೇನಾಧಿಪತಿಗಳನ್ನು ಕಳುಹಿಸಿ ಗುರುಗಳ ವಂಶಸ್ಥರನ್ನು ರಾಜ ಮರ್ಯಾದೆಯಿಂದ ಕರೆತರುವಂತೆ ಮಾಡುತ್ತಾನೆ.

ಶ್ರೀ ಹರಿಹರೇಶ್ವರರ ವಂಶಿಕರು ಹಾಗೂ ಗೌಡರು ಈ ಪ್ರಾಂತ್ಯಕ್ಕೆ ಆಗಮಿಸುತ್ತಾರೆ. ಅಲ್ಲದೆ ಇವರ ಜತೆಗೆ ಹಿಂದುಳಿದ ವರ್ಗದ ಒಬ್ಬ ವ್ಯಕ್ತಿಯು ಸೇವಕನಾಗಿ ಆಗಮಿಸುತ್ತಾನೆ. ಇವರಿಗೆಲ್ಲಾ ಹುತ್ತದ ಸಮೀಪ ವಾಸಕ್ಕೆ ವ್ಯವಸ್ಥೆ ಮಾಡಿಕೊಟ್ಟು, ಶಿವಯೋಗಿ ಶ್ರೀಹರಿಹರೇಶ್ವರ ತಪಸ್ಸಿಗಳ ಮೇಲೆ ಬೆಳೆದ ಹುತ್ತವನ್ನು ಕೇಂದ್ರ ಸ್ಥಳವನ್ನಾಗಿ ಮಾಡಿಕೊಂಡು ಮಠದ ಕಟ್ಟಡವನ್ನು ನಿರ್ಮಿಸುತ್ತಾನೆ. ಶ್ರೀ ಹರಿಹರೇಶ್ವರರ ವಂಶಿಕರ ಹೆಸರಿಗೆ ಭೂಮಿಯನ್ನು ಇನಾಂ ನೀಡಿ ಧಾರ್ಮಿಕ ಚಟುವಟಿಕೆಗಳನ್ನು

ನಡೆಸಿಕೊಂಡು ಹೋಗಲು ಎಲ್ಲಾ ರೀತಿಯ ಸಹಕಾರವನ್ನು ಕೊಡತೊಡಗುತ್ತಾನೆ. ಈ ರೀತಿ ಪ್ರಾರಂಭಗೊಂಡ ಮಠದಲ್ಲಿ ನಿತ್ಯ ಪೂಜೆ ಮಾಡಿ ಕೊಂಡು ವಾಸ ಮಾಡುತ್ತಿದ್ದಾಗ, ಒಂದು ದಿನ ರಾತ್ರಿ ಹರಿಹರೇಶ್ವರರು 'ಶಿಂಷಾ ನದಿಯಲ್ಲಿ ಪ್ರವಾಹ ಉಂಟಾಗಲಿದೆ, ನೀವು ಎತ್ತರದ ಪ್ರದೇಶಕ್ಕೆ ಹೋಗಿ ನೆಲೆಸಿ' ಎಂದು ತಮ್ಮ ವಂಶಿಕರಿಗೆ ಅಪ್ಪಣೆ ಕೊಟ್ಟರು. ಗುರುಗಳ ಈ ಕನಸಿನ ವಾಣಿಯನ್ನು ನಂಬಿದ ವಂಶಿಕರು, ಗೌಡರು ಮತ್ತು ಸೇವಕರು ಬಂದು ಕ್ಯಾತಘಟ್ಟ ಪ್ರದೇಶದಲ್ಲಿ ನೆಲೆಸುತ್ತಾರೆ. ಈಗ ಮಠ ಸ್ಥಾಪನೆಗೊಂಡಿರುವ ಮಠದದೊಡ್ಡಿ ಪ್ರದೇಶಕ್ಕೆ ಬಂದು ಪುನರ್ವಸತಿಯನ್ನು ಪಡೆಯುತ್ತಾರೆ. ನಿತ್ಯ ಕ್ಯಾತಘಟ್ಟದಿಂದ ಹರಿಹರೇಶ್ವರಮಠಕ್ಕೆ ಬಂದು ಪೂಜಾಕಾರ್ಯಗಳನ್ನು ಮುಗಿಸಿಕೊಂಡು ಹೋಗಲು ದೂರವಾಗುತ್ತಿದ್ದ ಕಾರಣ, ಈಗಿನ ಮಠದದೊಡ್ಡಿ ಪ್ರದೇಶದಲ್ಲಿ ಮಠವನ್ನು ಸ್ಥಾಪಿಸುತ್ತಾರೆ. ಈ ರೀತಿ ಪ್ರಾರಂಭಗೊಂಡ ಮಠದ ಪರಂಪರೆ ಈ ತನಕವೂ ಬೆಳೆದು ಬಂದಿದೆ.

ಪರಂಪರೆ: ಈ ಮಠದ ಕರ್ತೃ ಗುರುಗಳಾದ ಶ್ರೀ ಹರಿಹರೇಶ್ವರ ಶಿವಾಚಾರ್ಯ ಸ್ವಾಮಿಗಳ ನಂತರ ಈ ತನಕವೂ ಮಠ ನಿರಂತರವಾಗಿ ತನ್ನ ಆಡಳಿತವನ್ನು ನಡೆಸಿಕೊಂಡು ಬಂದಿದೆಯಾದರೂ ಎಲ್ಲಾ ಗುರುಗಳ ಹೆಸರು ಲಭ್ಯವಾಗಿಲ್ಲ. ಮಠದಲ್ಲಿ ಏಳು ಗದ್ದುಗೆಗಳು ಸ್ಥಾಪನೆಗೊಂಡಿವೆ. ಇವುಗಳಲ್ಲಿ ದೇವಸ್ಥಾನದ ಹತ್ತಿರ ನಾಲ್ಕುಗದ್ದುಗೆಗಳು, ಮಠದ ಹೊಲದಲ್ಲಿ ಒಂದು ಗದ್ದುಗೆ, ಮಠದ ಆವರಣದಲ್ಲಿ ಎರಡು ಗದ್ದುಗೆಗಳು ಸ್ಥಾಪನೆಗೊಂಡಿವೆ. ಪುರಾತನ ಮಠದ ಪರಂಪರೆಯಲ್ಲಿ ಅನೇಕ ಗುರುಗಳು ಅಧಿಕಾರ ನಡೆಸಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ಪರಂಪರೆಯ ಹಿಂದಿನ ಲಿಂಗೈಕ್ಯ ಗುರುಗಳಾದ ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳ ನಂತರ ಶ್ರೀ ಸಂಗಮನಾಥ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಶ್ರೀಸದಾಶಿವ ಶಿವಾಚಾರ್ಯರು ಕಟ್ಟಿಸಿದ ಮಠದ ಕಟ್ಟಡವು ಶಿಥಿಲಗೊಂಡ ಕಾರಣ ಹಿರಿಯ ಗುರುಗಳಾದ ಶ್ರೀ ಸಂಗಮನಾಥ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ನೂತನ ಕಟ್ಟಡವು ನಿರ್ಮಾಣಗೊಂಡಿತು. ವಯೋವೃದ್ಧರಾದ ಶ್ರೀ ಸಂಗಮನಾಥ ಶಿವಾಚಾರ್ಯ ಸ್ವಾಮಿಗಳು ತಮ್ಮ ಉತ್ತರಾಧಿಕಾರಿಗಳನ್ನು ಆಯ್ಕೆಮಾಡಿಕೊಂಡು ಪಟ್ಟಾಧಿಕಾರವನ್ನು ನಡೆಸಿದ್ದಾರೆ. ಉತ್ತರಾಧಿಕಾರಿಗಳಾಗಿ ಆಯ್ಕೆಯಾದ ಶ್ರೀತ್ರಿಲೋಚನ ಶಿವಾಚಾರ್ಯ ಸ್ವಾಮಿಗಳು ದೊಡ್ಡಸಂಗೇ ಒಡೆಯರು ಮತ್ತು ಸರೋಜಮ್ಮನವರ ಮಗನಾಗಿ ೧೯೭೭ರ ಜನವರಿ ಹದಿನಾರರಂದು ಜನಿಸಿ, ಮಠದದೊಡ್ಡಿಯಲ್ಲಿ ಪ್ರಾಥಮಿಕಶಿಕ್ಷಣವನ್ನು ಮುಗಿಸಿ, ಪ್ರೌಢಶಿಕ್ಷಣಕ್ಕಾಗಿ ಬೆಂಗಳೂರಿಗೆ ಆಗಮಿಸುತ್ತಾರೆ. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಭಾಷೆ ಹಾಗೂ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದುಕೊಂಡರು. ವಿದ್ಯಾಭ್ಯಾಸ ಮುಗಿದ ಮೇಲೆ ಮಠದ ಜವಾಬ್ದಾರಿಯನ್ನು ವಹಿಸಿಕೊಂಡ ಶ್ರೀ ತ್ರಿಲೋಚನಾ ಶಿವಾಚಾರ್ಯರು ಶ್ರೀ ಹರಿಹರೇಶ್ವರ ದೇವಸ್ಥಾನ ಮತ್ತು ಮಠದ ಧಾರ್ಮಿಕ ಚಟುವಟಿಕೆಗಳನ್ನು ಹಿರಿಯ ಗುರುಗಳ ಮಾರ್ಗದರ್ಶನದಲ್ಲಿ ಮುನ್ನಡೆಸಿಕೊಂಡು ಬರುತ್ತಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಪ್ರತಾಪಚಿಕ್ಕವೀರ ಬಲ್ಲಾಳನ ಕಾಲದಲ್ಲಿ ಉಂಬಳಿಯಾಗಿ ದೊರೆತಿದ್ದ ಜಮೀನಿನಲ್ಲಿ ಉಳಿದ ನಲವತ್ತಾಲ್ಕು ಎಕರೆ ಜಮೀನನ್ನು ಸಾಗುವಳಿಗೊಳಿಸಿ ಅಧಿಕ ಆದಾಯ ಬರುವಂತೆ ಮಾಡಿದ್ದಾರೆ. ಈ ಜಮೀನಿನಿಂದ ಬಂದ ಆದಾಯವನ್ನು ಮಠ ಮತ್ತು ದೇವಸ್ಥಾನಗಳ ಅಭಿವೃದ್ಧಿಗೆ ವಿನಿಯೋಗ ಪಡಿಸುತ್ತಾ ಅಭಿವೃದ್ಧಿಗೊಳಿಸಿದ್ದಾರೆ.

ಧಾರ್ಮಿಕ ಚಟುವಟಿಕೆಗಳು: ಉಜ್ಜಯಿನಿಪೀಠದ ಶಾಖಾಮಠವಾದ ಈ ಮಠದಲ್ಲಿ ಪೀಠದ ಸ್ಥಾಪನಾಚಾರ್ಯರಾದ ಶ್ರೀದಾರುಕಾಚಾರ್ಯರ ಜಯಂತಿ, ಶಿವರಾತ್ರಿ ಮತ್ತು ಯುಗಾದಿಯ ಸಂದರ್ಭದಲ್ಲಿ ವಿಶೇಷ ಪೂಜೆಯನ್ನು ಏರ್ಪಡಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಜಾತಿ ಭೇದ ಮರೆತು ಎಲ್ಲಾ ವರ್ಗದ ಜನರು ಸೇರುತ್ತಾರೆ. ಅನ್ನದಾಸೋಹವನ್ನು ಮಾಡಲಾಗುತ್ತಿದೆ. ಹರಿಹರೇಶ್ವರ ದೇವಸ್ಥಾನದ ಪಕ್ಕದಲ್ಲಿ ವೀರಭದ್ರ ಮತ್ತು ಮಂಟೇಸ್ವಾಮಿಯ ದೇವಸ್ಥಾನಗಳೂ ಸ್ಥಾಪನೆಗೊಂಡಿವೆ.

ಪುರಾತನ ಕಾಲದ ಸಾಮಗ್ರಿಗಳು: ಹರಿಹರೇಶ್ವರ ದೇವಸ್ಥಾನದ ಆವರಣದಲ್ಲಿ ಶಿಲಾಶಾಸನವೊಂದು ನೋಡಸಿಗುತ್ತಿದೆ. ಜತೆಗೆ ಮಠದಲ್ಲಿ ಯೋಗದಂಡ, ನಾಗರಬೆತ್ತ, ತಾಳೆಗರಿಯಲ್ಲಿ ರಚಿಸಿದ ಗ್ರಂಥಗಳು ನೋಡಸಿಗುತ್ತಿವೆ. ಶಿಂಷಾ ನದಿ ಮತ್ತು

ಹೆಬ್ಬಳ್ಳಗಳ ಸಂಗಮ ಕ್ಷೇತ್ರದಲ್ಲಿ ಸ್ಥಾಪನೆಗೊಂಡಿರುವ ಹರಿಹರೇಶ್ವರ ದೇವಸ್ಥಾನ ಮತ್ತು ಮಠವು ಎಲ್ಲಾ ವರ್ಗದ ಜನರ ಧಾರ್ಮಿಕ ಕೇಂದ್ರವಾಗಿ ಬೆಳೆದು ಬಂದಿದೆ.

ವಿಳಾಸ: ಷ.ಬ್ರ.ಶ್ರೀ ತ್ರಿಲೋಚನ ಶಿವಾಚಾರ್ಯ ಸ್ವಾಮಿಗಳು, ಶ್ರೀ ಮಠದದೊಡ್ಡಿ ಮಠ, ಮಠದದೊಡ್ಡಿ, ಕ್ಯಾತಘಟ್ಟ ಅಂಚೆ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

ಮಡೇನಹಳ್ಳಿ

ಮದ್ದೂರು ತಾಲ್ಲೂಕಿನ ಮಡೇನಹಳ್ಳಿಯು ತಾಲ್ಲೂಕು ಕೇಂದ್ರದ ಉತ್ತರಕ್ಕೆ ಹದಿನೈದು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ತೋಂಟದಾರ್ಯಮಠವು ಅಸ್ತಿತ್ವದಲ್ಲಿದೆ.

ತೋಂಟದಾರ್ಯಮಠ: ಮಡೇನಹಳ್ಳಿ ಗ್ರಾಮದಲ್ಲಿ ವಿರಕ್ತಸಂಪ್ರದಾಯದ ಮುರುಘಾಸಮಯದ ಪುತ್ರವರ್ಗದ ಶ್ರೀತೋಂಟದಾರ್ಯ ಮಠವು ಕಳೆದ ನೂರು ವರ್ಷಗಳ ಹಿಂದೆ ಸ್ಥಾಪನೆಯಾಗಿ, ಇಲ್ಲಿನ ಧಾರ್ಮಿಕ ಕೇಂದ್ರಬಿಂದುವಾಗಿ ಬೆಳೆದಿದೆ.

ಮಠ ಸ್ಥಾಪನೆ: ಟಿ.ನರಸೀಪುರ ತಾಲ್ಲೂಕಿನ ತೋಪಿನ ಮಠದ ಶ್ರೀ ಮಹಂತ ಸ್ವಾಮಿಗಳು, ಚಿದರಹಳ್ಳಿಯ ಗವಿಮಠದಲ್ಲಿ ತಪಸ್ಸನ್ನು ಆಚರಿಸಿ ತಮ್ಮ ಕಾಲದಲ್ಲಿ ಹೊಸ ಮಠವನ್ನು ಸ್ಥಾಪಿಸಿ ಧರ್ಮಪ್ರಚಾರವನ್ನು ಕೈಗೊಳ್ಳಬೇಕು ಎಂಬ ಮಹದಾಸೆಯಿಂದ ಲೋಕಸಂಚಾರವನ್ನು ಮಾಡುತ್ತಾ ವೀರಶೈವ ಧರ್ಮದ ಬೆಳವಣಿಗೆ ಎಲ್ಲಿ ಕುಂಠಿತವಾಗಿದೆ? ವೀರಶೈವ ಧರ್ಮೀಯರಿಗೆ ಧರ್ಮದ ಮಾರ್ಗದರ್ಶನಕ್ಕೆ ಗುರುಗಳ ಆವಶ್ಯಕತೆ ಎಲ್ಲಿದೆ? ಎಂದು ಅವಲೋಕಿಸುತ್ತಾ ಬಂದವರು ಮಡೇನಹಳ್ಳಿಯಕೆರೆಯ ದಡದಲ್ಲಿ ಬಂದು ಅನುಷ್ಠಾನಗೊಂಡು ಮಠವನ್ನು ಸ್ಥಾಪಿಸಿರುತ್ತಾರೆ. ಮಠವನ್ನು ಸ್ಥಾಪಿಸಿದ ಗುರುಗಳು ಪ್ರತಿ ನಿತ್ಯ ಭಜನೆ, ಉಪನ್ಯಾಸ, ಪ್ರವಚನಗಳಿಂದ ಜನರನ್ನು ಆಕರ್ಷಿಸಿಕೊಂಡರು. ಮಠ ಕೆಲವೇ ದಿನಗಳಲ್ಲಿ ಹೆಸರನ್ನು ಪಡೆಯಿತು. ಧರ್ಮಾಚರಣೆಯ ಮಾರ್ಗವನ್ನು ಬಿಡುತ್ತಿದ್ದ ವೀರಶೈವರಿಗೆ ಉಪದೇಶವನ್ನು ನೀಡಿ ಧರ್ಮವು ಪುನರ್ ಸ್ಥಾಪನೆಯಾಗಲು ನಾಂದಿಹಾಡಿದರು.

ಬೆಳೆದ ಮಠ: ಹದಿನೈದನೆಯ ಶತಮಾನದಲ್ಲಿ ಧಾರ್ಮಿಕ ಆಂದೋಲನವನ್ನು ಮಾಡಿ ವೀರಶೈವ ಧರ್ಮದ ಬಗ್ಗೆ ಹೆಚ್ಚು ಪ್ರಚಾರ ಮಾಡಿದ ಮಹಾಮಹಿಮ ಶ್ರೀ ತೋಂಟದ ಸಿದ್ಧಲಿಂಗೇಶ್ವರರ ಸ್ಮರಣೆಗಾಗಿ, ಈ ಮಠಕ್ಕೆ ತೋಂಟದಾರ್ಯ ಮಠವೆಂದು ಹೆಸರಿಟ್ಟರು. ಮಡೇನಹಳ್ಳಿಯಲ್ಲಿ ಮಠಸ್ಥಾಪನೆ ಮಾಡಿದ ಮೇಲೆ ಜಾತಿ ಭೇದ ಇಲ್ಲದೆ ಭಕ್ತರು ಮಠದ ಚಟುವಟಿಕೆಗಳಿಗೆ ಸ್ಪಂದಿಸತೊಡಗಿದರು. ಮಠದ ಸ್ಥಾಪಕರಾದ ಶ್ರೀ ಮಹಾಂತ ಸ್ವಾಮಿಗಳು ಸಮಷ್ಟಿಸಮಾಜದ ಒಳಿತನ್ನು ಬಯಸಿ, ಧಾರ್ಮಿಕ ಕಾರ್ಯಗಳನ್ನು ನಡೆಸಿ, ಭಕ್ತರನ್ನು ಸನ್ಮಾರ್ಗಕ್ಕೆ ತಂದರು. ಗುರುಹಿರಿಯರಲ್ಲಿ ಭಕ್ತಿ, ನಯ ವಿನಯತೆಯ ಮೂರ್ತಿಯಾಗಿದ್ದ ಶ್ರೀ ಸದಾಶಿವ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ಆಯ್ಕೆಮಾಡಿಕೊಂಡರು.

ಮಡೇನಹಳ್ಳಿಯ ಶ್ರೀ ಮಲ್ಲಪ್ಪ ಮತ್ತು ಶ್ರೀಮತಿ ರುದ್ರಮ್ಮನವರ ಪುತ್ರರಾಗಿ ೧೯೨೦ರಲ್ಲಿ ಜನಿಸಿದ ಶ್ರೀ ಸದಾಶಿವ ದೇವರು ಸಂಸ್ಕೃತದಲ್ಲಿ ವಿದ್ವತ್ತನ್ನು ಗಳಿಸಿದ್ದರು. ಶ್ರೀ ಮಹಾಂತ ಸ್ವಾಮಿಗಳಿಂದ ಧಾರ್ಮಿಕ ಸಂಸ್ಕಾರವನ್ನು ಪಡೆದು ಸಜ್ಜನರಾಗಿ ಬೆಳೆದಿದ್ದ ಇವರಿಗೆ ೧೯೫೫ ರಲ್ಲಿ ಶ್ರೀ ಸದಾಶಿವ ಸ್ವಾಮಿಗಳು ಎಂದು ಅಭಿಧಾನವನ್ನಿತ್ತು ಪಟ್ಟಾಧಿಕಾರವನ್ನು ಮಾಡಲಾಯಿತು. ಮಡೇನಹಳ್ಳಿಯ ತೋಂಟದಾರ್ಯ ಮಠದ ಅಧಿಕಾರವನ್ನು ವಹಿಸಿಕೊಂಡ ನೂತನ ಗುರುಗಳು ಹಿರಿಯ ಗುರುಗಳು ತೋರಿಸಿದ್ದ ದಾರಿಯಲ್ಲಿ ಬಸವತತ್ತ್ವವನ್ನು ಪ್ರಚಾರ ಮಾಡಿ ಮಠವನ್ನು ಅಭಿವೃದ್ಧಿಪಡಿಸಿದರು.

ಎಂಬತ್ತು ವರ್ಷಗಳ ವಯೋವೃದ್ಧರಾಗಿರುವ ಶ್ರೀ ಸದಾಶಿವ ಸ್ವಾಮಿಗಳು ಮಠವನ್ನು ಮುನ್ನಡೆಸಿಕೊಡಲು ಸಮರ್ಥ ಉತ್ತರಾಧಿಕಾರಿಯಾಗಿ ತಮ್ಮ ಸಹೋದರ ಸಂಬಂಧಿಯಾದ ಶ್ರೀ ಮಹಾಂತೇಶ ದೇವರನ್ನು ಆಯ್ಕೆಮಾಡಿಕೊಂಡರು. ಬಸವರಾಜಪ್ಪ ಮತ್ತು ಕಮಲಮ್ಮನವರ ಮಗನಾಗಿ ೧೯೪೯ರಲ್ಲಿ ಜನಿಸಿದ ಶ್ರೀ ಮಹಾಂತೇಶ ಸ್ವಾಮಿಗಳು ಪ್ರಾಥಮಿಕ ವಿದ್ಯಾಭ್ಯಾಸವನ್ನು ಮಡೇನಹಳ್ಳಿಯಲ್ಲಿ ಮುಗಿಸಿ, ನಂತರ ಕೆ.ಎಂ.ದೊಡ್ಡಿಯಲ್ಲಿ ಪದವಿಯನ್ನು ಪಡೆದು, ಮಠದ ಅಧಿಕಾರವನ್ನು ೧೯೯೩ರಲ್ಲಿ ವಹಿಸಿಕೊಂಡರು. ಹಿರಿಯ ಗುರುಗಳ ಮಾರ್ಗದರ್ಶನದಿಂದ ಬಸವಾದಿ ಪ್ರಮಥರ ತತ್ತ್ವಗಳನ್ನು ನಾಡಿಗೆ ಪರಿಚಯಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ.

ಧಾರ್ಮಿಕ ಆಚರಣೆ: ಮಠದಲ್ಲಿ ಕರ್ತೃಗುರುಗಳ ಗದ್ದುಗೆಯ ಪೂಜೆ, ಭಕ್ತರ ಮನೆಯಲ್ಲಿ ನಡೆಯುವ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುವುದು ಗುರುಗಳ ನಿತ್ಯ ಕೆಲಸಗಳು. ಅಮಾವಾಸ್ಯೆ, ಹುಣ್ಣಿಮೆ, ಶ್ರಾವಣ ಮತ್ತು ಕಾರ್ತೀಕ ಮಾಸಗಳಲ್ಲಿ ವಿಶೇಷ ಪೂಜೆಯನ್ನು ಏರ್ಪಡಿಸಲಾಗುತ್ತಿದೆ. ಬಸವ ಜಯಂತಿ ಮತ್ತು ಶಿವರಾತ್ರಿಯಲ್ಲಿ ಉಪನ್ಯಾಸ, ಪ್ರವಚನವನ್ನು ಏರ್ಪಡಿಸಲಾಗುತ್ತಿದೆ. ಕರ್ತೃಗುರುಗಳ ಆರಾಧನೆಯನ್ನು ವೈಭವಯುತವಾಗಿ ಆಚರಣೆ ಮಾಡಲಾಗುತ್ತಿದೆ.

ಅಭಿವೃದ್ಧಿ ಕಾರ್ಯಗಳು: ಮಠದ ಆಸ್ತಿಯಾಗಿ ನಾಲ್ಕು ಎಕರೆ ಜಮೀನು ಇದ್ದು, ಇದನ್ನೇ ಅಭಿವೃದ್ಧಿಪಡಿಸಿ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ಬರುವ ಆದಾಯವನ್ನು ಮಠದ ಧಾರ್ಮಿಕ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಿದ್ದಾರೆ. ಮಠದ ಎರಡನೆಯ ಪಟ್ಟಾಧಿಕಾರಿಗಳಾದ ಶ್ರೀ ಸದಾಶಿವ ಸ್ವಾಮಿಗಳ ಕಾಲದಲ್ಲಿ ಮಠದ ಕಟ್ಟಡ ನಿರ್ಮಾಣಗೊಂಡಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಮಹಾಂತೇಶ ಸ್ವಾಮಿಗಳು, ಶ್ರೀ ತೋಂಟದಾರ್ಯಮಠ, ಮಡೇನಹಳ್ಳಿ, ಮದ್ದೂರು ತಾ, ಮಂಡ್ಯ ಜಿಲ್ಲೆ.

ವೈದ್ಯನಾಥಪುರ

ಮದ್ದೂರು ತಾಲ್ಲೂಕಿನ ವೈದ್ಯನಾಥಪುರವು ತಾಲ್ಲೂಕು ಕೇಂದ್ರದ ದಕ್ಷಿಣಕ್ಕೆ ಮೂರು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ಕದಂಬಜಂಗಮಮಠವು ಅಸ್ತಿತ್ವದಲ್ಲಿದೆ.

ಕದಂಬ ಜಂಗಮಮಠ: ವೈದ್ಯನಾಥಪುರ ಗ್ರಾಮದಲ್ಲಿ ಸ್ಥಾಪನೆಗೊಂಡ ಕದಂಬ ಜಂಗಮಮಠವು ರಂಭಾಪುರಿ ಪೀಠದ ಶಾಖಾ ಮಠವಾಗಿದ್ದು ಶಿಷ್ಯವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಈ ಗ್ರಾಮದಲ್ಲಿ ವೈದ್ಯನಾಥೇಶ್ವರ ದೇವಸ್ಥಾನವು ಸ್ಥಾಪನೆಗೊಂಡ ಕಾರಣಕ್ಕೆ 'ವೈದ್ಯನಾಥಪುರ'ಎಂದು ಹೆಸರು ಬಂದಿದೆ. ಈ ಗ್ರಾಮದ ಹೊರಭಾಗದಲ್ಲಿ ಹರಿಯುತ್ತಿದ್ದ ಕದಂಬ ನದಿಯ ದಡದಲ್ಲಿ ಜಂಗಮ ಮಠವು ಸ್ಥಾಪನೆಗೊಂಡ ಕಾರಣಕ್ಕೆ 'ಕದಂಬ ಜಂಗಮ ಮಠ' ಎಂದು ಹೆಸರು ಬಂದಿದೆ.

ಈ ಮಠದ ಸ್ಥಾಪನೆಯ ಬಗ್ಗೆ ನಿಖರವಾದ ಕಾಲಮಾನ ತಿಳಿಯದಿದ್ದರೂ ಈ ಮಠವು ಪುರಾತನ ಕಾಲದಿಂದಲೂ ಇತ್ತು ಎಂಬುದನ್ನು ಹೇಳಬಹುದಾಗಿದೆ. ಈ ಮಠವನ್ನು ಶ್ರೀ ಶಾಂತಲಿಂಗೇಶ್ವರ ಸ್ವಾಮಿಗಳು ಸ್ಥಾಪನೆ ಮಾಡಿರಬಹುದೆಂದು ನಂಬಲಾಗುತ್ತಿದೆ. ಇವರು ಉತ್ತರದ ಕಡೆಯಿಂದ ಲೋಕಸಂಚಾರವನ್ನು ಮಾಡುತ್ತಾ ವೈದ್ಯನಾಥನ ಸನ್ನಿಧಿಗೆ ಆಗಮಿಸಿ ಕದಂಬ ನದಿಯ ದಡದಲ್ಲಿ ದೀರ್ಘ ತಪೋನುಷ್ಠಾನವನ್ನು ಕೈಗೊಂಡರು. ಇಲ್ಲಿನ ಪ್ರಶಾಂತತೆಗೆ ಮನಸೋತು ಇಲ್ಲೇ ನೆಲೆಸುವ ನಿರ್ಧಾರ ಕೈಗೊಂಡ ಗುರುಗಳು ಮಠವನ್ನು ಸ್ಥಾಪನೆ ಮಾಡಿದರು.

ಪರಂಪರೆ:

೧. ಷ.ಬ್ರ.ಶ್ರೀ ಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಚನ್ನವೀರದೇವರು
೩. ಷ.ಬ್ರ.ಶ್ರೀ ಸಿದ್ಧಲಿಂಗದೇವರು
೪. ಷ.ಬ್ರ.ಶ್ರೀ ಶಿವಾನಂದ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ರೇಣುಕ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಈ ರೀತಿ ಒಟ್ಟು ಐದು ಜನ ಗುರುಗಳ ಹೆಸರುಗಳನ್ನು ಮಠದ ಪರಂಪರೆಯಲ್ಲಿ ಗುರುತಿಸಬಹುದಾಗಿದೆ. ಮಠದ ಕರ್ತೃಗಳಾದ ಶ್ರೀ ಶಾಂತಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಯು ಮಠದ ಕೇಂದ್ರಬಿಂದುವಾಗಿದೆ. ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ, ಧಾರ್ಮಿಕ ಕಾರ್ಯಗಳನ್ನು ಚುರುಕುಗೊಳಿಸಿ ಹೆಚ್ಚು ಪ್ರಚಾರಕ್ಕೆ ತಂದರು. ವೀರಶೈವ ಸಿದ್ಧಾಂತ, ವೀರಶೈವ ಧರ್ಮದ ಆಚಾರ, ವಿಚಾರಗಳನ್ನು ಜನಮನಕ್ಕೆ ಮುಟ್ಟಿಸಿದ ಗುರುಗಳು ಮಠವನ್ನು ಧಾರ್ಮಿಕವಾಗಿ ಶ್ರೀಮಂತಗೊಳಿಸಿದರು. ಇವರು ಡಿಸೆಂಬರ್ ಇಪ್ಪತ್ತು ೧೯೯೧ರಲ್ಲಿ ಲಿಂಗೈಕ್ಯರಾದರು. ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳ ನಂತರ ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದಿರುತ್ತಾರೆ. ಗುಬ್ಬಿ ತಾಲ್ಲೂಕಿನ ಜೇನುಗೆರೆ ಗ್ರಾಮದ ಶ್ರೀ ಬಸಪ್ಪ ಮತ್ತು ಶ್ರೀಮತಿ ಪಾರ್ವತಮ್ಮನವರ ಪುತ್ರರಾದ ರೇಣುಕರು ಸಂಸ್ಕೃತ, ವೇದಾಧ್ಯಯನ ಮುಗಿಸಿ

೧೯೯೭ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡಿರುತ್ತಾರೆ. ಗುರುಗಳು ಸಂಘಟನಾತ್ಮಕ ಚಟುವಟಿಕೆಗಳಿಂದ ಮಠವನ್ನು ಅಭಿವೃದ್ಧಿಪಡಿಸಲು ಶ್ರಮಿಸುತ್ತಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಕಿರಿಯ ವಯಸ್ಸಿನ ಗುರುಗಳು ಹಿರಿದಾದ ಜವಾಬ್ದಾರಿಯನ್ನು ವಹಿಸಿಕೊಂಡು ಮಠದ ಪರಂಪರೆಯ ಹಿಂದಿನ ಎಲ್ಲಾ ಗುರುಗಳ ಮೇಲ್ಪಂಕ್ತಿಯಲ್ಲಿ ಮಠವನ್ನು ಬೆಳೆಸಲು ಯೋಜನೆಯನ್ನು ತಯಾರಿಸಿಕೊಂಡಿದ್ದಾರೆ. ಯೋಜನೆಯ ಮೊದಲನೆಯ ಹಂತವಾಗಿ ಹಿಂದಿನ ಲಿಂಗೈಕ್ಯ ಗುರುಗಳಾದ ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಗೆ ಮಂಟಪವನ್ನು ನಿರ್ಮಿಸಿದ್ದಾರೆ. ಅಲ್ಲದೆ ಗುರುಗಳ ವಾಸ್ತವ್ಯಕ್ಕೆ ಹಾಗೂ ಅತಿಥಿಗಳ ವಾಸ್ತವ್ಯಕ್ಕೆಂದು ಒಂದು ಕೊಠಡಿಯನ್ನು ನಿರ್ಮಿಸಿದ್ದಾರೆ. ಮಠದ ಆಸ್ತಿಯಾಗಿ ಕೇವಲ ಮೂರು ಎಕರೆ ಜಮೀನು ಇದ್ದು, ಇದನ್ನು ಅಭಿವೃದ್ಧಿಪಡಿಸಿ ಆದಾಯ ಬರುವಂತೆ ಮಾಡಿದ್ದಾರೆ.

ಗದ್ದುಗೆಗಳು: ಹೊಳೆಯ ದಡದಲ್ಲಿರುವ ಕಲ್ಲು ಮಂಟಪದಲ್ಲಿ ಮೂರು ಗದ್ದುಗೆಗಳು ಸ್ಥಾಪನೆಗೊಂಡಿವೆ. ಮಠದ ಹಿಂಬದಿಯಲ್ಲಿರುವ ಕಲ್ಲು ಮಂಟಪದಲ್ಲಿ ಎರಡು ಗದ್ದುಗೆಗಳು ನೆಲೆಗೊಂಡಿವೆ ಎಂದು ಹೇಳಲಾಗುತ್ತಿದೆ. ಹಿಂದಿನ ಗುರುಗಳಾದ ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಯು ಮಠದ ಪಕ್ಕದಲ್ಲಿ ಸ್ಥಾಪನೆಗೊಂಡಿದೆ. ಮಠದ ಪರಂಪರೆಗೆ ಸೇರಿದ ಒಟ್ಟು ಏಳು ಗದ್ದುಗೆಗಳನ್ನು ಗುರುತಿಸಲಾಗಿದೆ. ಆದರೆ ನಾಲ್ಕು ಜನ ಗುರುಗಳ ಹೆಸರುಗಳನ್ನು ಬಿಟ್ಟರೆ ಉಳಿದ ಮೂರು ಗದ್ದುಗೆಗಳ ಗುರುಗಳ ಹೆಸರುಗಳು ಎಲ್ಲಿಯೂ ಲಭ್ಯವಾಗಿಲ್ಲ. ಮಠದ ಪರಂಪರೆಯ ಈ ಎಲ್ಲಾ ಗದ್ದುಗೆಗಳಿಗೆ ಪೂಜಾಕಾರ್ಯವನ್ನು ನಡೆಸುತ್ತಾ ಧಾರ್ಮಿಕ ಚಟುವಟಿಕೆಗಳನ್ನು ಚುರುಕುಗೊಳಿಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು,ಶ್ರೀ ಕದಂಬ ಜಂಗಮಮಠ, ವೈದ್ಯನಾಥಪುರ,ಮದ್ದೂರು ತಾ, ಮಂಡ್ಯಜಿಲ್ಲೆ.

ಹೊನ್ನಲಗೆರೆ

ಮದ್ದೂರು ತಾಲ್ಲೂಕಿನ ಹೊನ್ನಲಗೆರೆಯು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತು ಕಿ.ಮೀ.ದೂರದಲ್ಲಿದೆ.ಇಲ್ಲಿ ಶ್ರೀ ಶಿವಕ್ಷೇತ್ರಮಠವು ಅಸ್ತಿತ್ವದಲ್ಲಿದೆ.

ಶಿವಕ್ಷೇತ್ರಮಠ: ಹೊನ್ನಲಗೆರೆ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ಶಿವಕ್ಷೇತ್ರಮಠವು ಶ್ರೀ ರಂಭಾಪುರಿಪೀಠದ ಶಾಖಾಮಠವಾಗಿ ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದಿದೆ.

ಪರಂಪರೆ:
೧. ಷ.ಬ್ರ.ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು
೨. (ಹೆಸರು ಗೊತ್ತಿಲ್ಲ)
೩. ಷ.ಬ್ರ.ಶ್ರೀ ಮಹಾಲಿಂಗ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಎರಡನೆಯ ಮಹಾಲಿಂಗ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಷಡಕ್ಷರಿ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ ಎಂದು ತಿಳಿಯುತ್ತದೆ. ಶ್ರೀ ಷಡಕ್ಷರಿ ಶಿವಾಚಾರ್ಯ ಸ್ವಾಮಿಗಳಿಗೆ ಅಧಿಕಾರ ನೀಡಿದ ಹಿರಿಯ ಗುರುಗಳಾದ ಶ್ರೀ ಮಹಾಲಿಂಗ ಶಿವಾಚಾರ್ಯ ಸ್ವಾಮಿಗಳು ಈ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಶ್ರೀ ಮಹಾಲಿಂಗ ಶಿವಾಚಾರ್ಯ ಸ್ವಾಮಿಗಳು ೧೯೬೮ರಲ್ಲಿ ಮುಡುಕುತೊರೆ ಮಠದ ಅಧಿಕಾರ ಪಡೆದುಕೊಂಡು ಹೋದ ಮೇಲೆ ಶ್ರೀ ಷಡಕ್ಷರಿ ಸ್ವಾಮಿಗಳು ಮಠದ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಇವರು ಕಾಯಕಯೋಗಿಗಳಾಗಿ ಶಿವಕ್ಷೇತ್ರ ಮಠವನ್ನು ಆರ್ಥಿಕವಾಗಿ ಸದೃಢಗೊಳಿಸಿ ಬೆಳೆಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಷಡಕ್ಷರಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ಶಿವಕ್ಷೇತ್ರಮಠ, ಎಸ್.ಐ.ಹೊನ್ನಲಗೆರೆ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

❑

ಮಳವಳ್ಳಿ ತಾಲ್ಲೂಕು

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕು ನೀರಾವರಿ ಯೋಜನೆಯಿಂದ ಆರ್ಥಿಕವಾಗಿ ಅಭಿವೃದ್ಧಿಯನ್ನು ಕಂಡಿದೆ. ಇಲ್ಲಿ ವೀರಶೈವಧರ್ಮವು ಪ್ರಬಲವಾಗಿ ಬೆಳೆದ ಲಕ್ಷಣಗಳು ಕಂಡುಬರುತ್ತದೆ. ಈವರೆಗೆ ತಾಲ್ಲೂಕಿನಾದ್ಯಂತ ಐವತ್ತಾರು ಮಠಗಳು ಸ್ಥಾಪನೆಯಾಗಿವೆಯೆಂದು ಹೇಳಲಾಗುತ್ತದೆ. ಪ್ರಸ್ತುತ ಹತ್ತೊಂಬತ್ತು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿವೆ.

ಕಿರುಗಾವಲು

ಮಳವಳ್ಳಿ ತಾಲ್ಲೂಕಿನ ಕಿರುಗಾವಲು, ಹೋಬಳಿಯ ಕೇಂದ್ರ ಸ್ಥಳ. ಈ ಚಿಕ್ಕ ಪಟ್ಟಣವು ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಹನ್ನೊಂದು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಬಸವೇಶ್ವರಮಠವು ಅಸ್ತಿತ್ವದಲ್ಲಿದೆ.

ಬಸವೇಶ್ವರಮಠ: ಕಿರುಗಾವಲು ಗ್ರಾಮದ ವೀರಶೈವ ಮುಖಂಡರು ಧಾರ್ಮಿಕ ಆಚರಣೆಗಾಗಿ ಗುರುಗಳ ಆವಶ್ಯಕತೆಯನ್ನು ಅರಿತು, ಬಸವೇಶ್ವರ ದೇವಸ್ಥಾನವನ್ನು ಮೂಲವನ್ನಾಗಿಟ್ಟುಕೊಂಡು ಮಠವನ್ನು ಸ್ಥಾಪನೆಮಾಡಿ ಗುರುಗಳನ್ನು ನೆಲೆಗೊಳಿಸ ಬೇಕೆಂಬ ತೀರ್ಮಾನವನ್ನು ಕೈಗೊಂಡರು. ಇದರ ಫಲವಾಗಿ ಕಿರುಗಾವಲು ಪಟ್ಟಣದ ಊರಿನ ಮಧ್ಯ ಭಾಗದಲ್ಲಿ ಬಸವೇಶ್ವರಮಠ ಸ್ಥಾಪನೆಯಾಗಲು ಕಾರಣವಾಯಿತು.

ನೂತನ ಮಠ ಸ್ಥಾಪನೆ: ಕಿರುಗಾವಲಿನಲ್ಲಿ ನೂತನವಾಗಿ ಪ್ರಾರಂಭಗೊಂಡ ಮಠಕ್ಕೆ ಶ್ರೀ ಜಯದೇವ ಸ್ವಾಮಿಗಳನ್ನು ನೇಮಕಮಾಡಲಾಯಿತು. ರಂಭಾಪುರಿಪೀಠದ ಪರಂಪರೆಯನ್ನು ಅನುಸರಿಸುತ್ತಾ ಇಲ್ಲಿನ ಧಾರ್ಮಿಕ ಕಾರ್ಯಗಳು ನಡೆಯ ತೊಡಗಿದವು. ಶ್ರೀ ಜಯದೇವ ಸ್ವಾಮಿಗಳು ವೀರಶೈವ ಸಿದ್ಧಾಂತಕ್ಕೆ ಅನುಗುಣವಾಗಿ ಭಕ್ತರಿಗೆ ಉಪದೇಶವನ್ನು ನೀಡುತ್ತಾ ಈ ಪ್ರಾಂತ್ಯದಲ್ಲಿ ಧರ್ಮಸಾಕಾರಗೊಳ್ಳುವಂತೆ ಮಾಡಿದ್ದರು. ಇವರು ಲಿಂಗೈಕ್ಯರಾದ ಮೇಲೆ ಮಠ ಉತ್ತರಾಧಿಕಾರಿಗಳಿಲ್ಲದೆ ಖಾಲಿ ಉಳಿಯು ವಂತಾಯಿತು. ಟಿ. ನರಸೀಪುರ ತಾಲ್ಲೂಕಿನ ತ್ರಿಯಂಬಕಮಠದ ಮಠಾಧೀಶ್ವರರಾದ ಶ್ರೀ ವೀರೇಶ ಶಿವಾ ಚಾರ್ಯ ಸ್ವಾಮಿಗಳು ಈ ಮಠದಲ್ಲಿ ಧಾರ್ಮಿಕ ಕಾರ್ಯಗಳು ಸ್ಥಗಿತಗೊಳ್ಳಬಾರದು ಎಂಬ ಕಾರಣದಿಂದ ಭಕ್ತರ ಅಪೇಕ್ಷೆಯ ಮೇರೆಗೆ ತಾತ್ಕಾಲಿಕವಾಗಿ ಆಡಳಿತವನ್ನು ನೋಡಿಕೊಳ್ಳತೊಡಗಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಮಠದಲ್ಲಿ ಗುರುಗಳು ಇಲ್ಲದ ಈ ಸಂದರ್ಭದಲ್ಲಿಯೂ ಗ್ರಾಮಸ್ಥರೆಲ್ಲಾ ಸೇರಿ ವಿಶ್ವಸ್ತ ಮಂಡಳಿ ಯನ್ನು ರಚಿಸಿಕೊಂಡು ಮಠದ ಅಭಿವೃದ್ಧಿಯನ್ನು ಮಾಡತೊಡಗಿದ್ದಾರೆ. 'ಬಸವೇಶ್ವರ ಯುವಕ ಸಂಘ' ಈ ಮಠದ ಅಭಿವೃದ್ಧಿಗೆ ಶ್ರಮಿಸುತ್ತಿದ್ದು ಕಲ್ಯಾಣಮಂಟಪವನ್ನು ನಿರ್ಮಿಸಿದ್ದಾರೆ. ಅಲ್ಲದೆ ಹಿರಿಯ ಗುರುಗಳ ಗದ್ದುಗೆಗೆ ಮಂಟಪವನ್ನು ನಿರ್ಮಿಸಲಾಗಿದೆ. ಶ್ರೀ ವೀರೇಶ ಶಿವಾಚಾರ್ಯ ಸ್ವಾಮಿಗಳ ಮಾರ್ಗದರ್ಶನದಿಂದ ಮಠವು ಧಾರ್ಮಿಕವಾಗಿ ಮುನ್ನಡೆಯತೊಡಗಿದೆ.

ವಿಳಾಸ: ಶ್ರೀ ವೀರೇಶ ಶಿವಾಚಾರ್ಯ ಸ್ವಾಮಿಗಳು, ಶ್ರೀ ಬಸವೇಶ್ವರ ಮಠ, ಕಿರುಗಾವಲು, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

ಕುಂದೂರು

ಮಳವಳ್ಳಿ ತಾಲ್ಲೂಕಿನ ಕುಂದೂರು ಗ್ರಾಮವು ಬಿ.ಜಿ.ಪುರ ಹೋಬಳಿಯ ಒಂದು ಅಭಿವೃದ್ಧಿಶೀಲ ಗ್ರಾಮ. ತಾಲ್ಲೂಕು ಕೇಂದ್ರದ ದಕ್ಷಿಣಕ್ಕೆ ಎಂಟು ಕಿ. ಮೀ. ದೂರದಲ್ಲಿರುವ ಈ ಗ್ರಾಮದಲ್ಲಿ ಸರ್ಪಭೂಷಣ ಶಿವಯೋಗಿಗಳ ಮಠ ಮತ್ತು ದೊಡ್ಡ ಮಠಗಳು ಸ್ಥಾಪನೆಗೊಂಡು, ಈ ಗ್ರಾಮದಲ್ಲಿ ಧಾರ್ಮಿಕ ಚಟುವಟಿಕೆಗಳ ಕೇಂದ್ರ ಬಿಂದುವಾಗಿ ಬೆಳೆದಿವೆ.

ಸರ್ಪಭೂಷಣ ಶಿವಯೋಗಿಗಳಮಠ: ಕುಂದೂರು ಗ್ರಾಮದ ಮಧ್ಯಭಾಗದಲ್ಲಿ ಸರ್ಪಭೂಷಣ ಶಿವಯೋಗಿಗಳಿಂದ ಸ್ಥಾಪಿಸಲ್ಪಟ್ಟಿರುವುದರಿಂದ ಈ ಮಠಕ್ಕೆ 'ಸರ್ಪಭೂಷಣ ಶಿವಯೋಗಿಗಳ ಮಠ' ಎಂದು ಕರೆಯಲಾಗುತ್ತಿದೆ. ಶ್ರೀ ಸರ್ಪಭೂಷಣ ಶಿವಯೋಗಿಗಳು ಲೋಕೋದ್ಧಾರಕ್ಕಾಗಿ ಸಂಚಾರ ಮಾಡುತ್ತಾ ಈ ಗ್ರಾಮದಲ್ಲಿ ಬಂದು ನೆಲೆಸಿ ಮಠವನ್ನು ಸ್ಥಾಪನೆ

ಮಾಡಿರುತ್ತಾರೆ. ಶಿವಯೋಗಿಗಳು ಈ ಗ್ರಾಮದಲ್ಲಿ ನೆಲೆಸಿ ಧಾರ್ಮಿಕ ಸಂಸ್ಕಾರವನ್ನು ನೀಡಿ ಭಕ್ತರನ್ನು ಉದ್ಧರಿಸಿದ್ದಾರೆ.

ಪರಂಪರೆ:
೧. ಶ್ರೀ ಸರ್ಪಭೂಷಣ ಶಿವಯೋಗಿಗಳು
೨. ಶ್ರೀ ಪಟ್ಟದ ನಂಜುಂಡ ರಾಜೇಂದ್ರಸ್ವಾಮಿಗಳು
೩. ಶ್ರೀ ಶಿವಪ್ಪಸ್ವಾಮಿಗಳು
೪. ಶ್ರೀ ಚನ್ನಬಸವಸ್ವಾಮಿಗಳು

ಈ ರೀತಿ ಮಠದ ಪರಂಪರೆಯ ಹೆಸರುಗಳನ್ನು ದಾಖಲಿಸಬಹುದಾಗಿದೆ. ಈ ಮಠದ ಪರಂಪರೆಯಲ್ಲಿ ಇನ್ನೂ ಅನೇಕ ಸ್ವಾಮಿಗಳು ಅಧಿಕಾರವನ್ನು ನಡೆಸಿ ಮಠವನ್ನು ಬೆಳೆಸಿರುವ ಬಗ್ಗೆ ಇಲ್ಲಿ ಸ್ಥಾಪನೆಗೊಂಡಿರುವ ಗದ್ದುಗೆಗಳು ಸಾಕ್ಷೀಕರಿಸುತ್ತವೆ. ಮಠದ ಆವರಣದಲ್ಲಿ ಒಟ್ಟು ಏಳು ಗದ್ದುಗೆಗಳು ಸ್ಥಾಪನೆಗೊಂಡಿವೆ. ಮಠದ ಹಿಂಬದಿಯ ಕೋಣೆಯಲ್ಲಿ ಕರ್ತೃಗುರುಗಳಾದ ಶ್ರೀ ಸರ್ಪಭೂಷಣಶಿವಯೋಗಿಗಳ ಗದ್ದುಗೆ ಎಂದು ಹೇಳಲಾಗುತ್ತಿದ್ದು, ಈ ಗದ್ದುಗೆ ಮಠದ ಕೇಂದ್ರ ಸ್ಥಳದಲ್ಲಿದೆ. ನಂತರ ಉಳಿದ ಆರು ಗದ್ದುಗೆಗಳು ಸಾಲಾಗಿ ನಿರ್ಮಿತಗೊಂಡಿವೆ.

ಶ್ರೀ ಸರ್ಪಭೂಷಣ ಶಿವಯೋಗಿಗಳ ಶಿಷ್ಯರಾಗಿದ್ದ ಶ್ರೀ ನಂಜುಂಡ ರಾಜೇಂದ್ರ ಸ್ವಾಮಿಗಳು, ಸರ್ಪಭೂಷಣ ಸ್ವಾಮಿಗಳ ನಂತರ ಈ ಮಠದ ನಿರ್ವಹಣೆಯನ್ನು ಸಮರ್ಥವಾಗಿ ನಡೆಸಿ, ಮಠದಲ್ಲಿ ವೀರಶೈವ ಧರ್ಮದ ಅನುಷ್ಠಾನ ಮತ್ತು ಆಚರಣೆಯ ಬಗ್ಗೆ ಭಕ್ತರಿಗೆ ತಿಳುವಳಿಕೆಯನ್ನು ಹೇಳಿ ಮಠವನ್ನು ಹೆಚ್ಚು ಪ್ರಚಾರಕ್ಕೆ ತಂದರು. ಇವರ ಕಾಲದಲ್ಲಿ ಶಿಥಿಲಗೊಂಡಿದ್ದ ಮಠದ ಕಟ್ಟಡವನ್ನು ನವೀಕರಿಸಿ ವಿಶಾಲವಾದ ಕಟ್ಟಡವನ್ನು ನಿರ್ಮಿಸಿದ್ದಾರೆ. ಇವರ ನಂತರ ಬಂದಿರಬಹುದಾದ ಶ್ರೀ ಶಿವಪ್ಪ ಸ್ವಾಮಿಗಳು ನಲವತ್ತು ವರ್ಷಗಳ ಕಾಲ ಈ ಮಠದಲ್ಲಿ ನೆಲೆಸಿ, ಮಠವನ್ನು ಹೆಚ್ಚು ಅಭಿವೃದ್ಧಿಪಡಿಸಿದ್ದಾರೆ. ಇವರ ಕಾಲದಲ್ಲಿ ದಾಸೋಹ ಸೇವೆ ಅವ್ಯೋಘವಾಗಿ ನಡೆಯಿತ್ತೆಂದು ಹೇಳಲಾಗುತ್ತಿದೆ. ಇವರು ನಡೆಸುತ್ತಿದ್ದ ದಾಸೋಹಕ್ಕೆ ಬೇಕಾದ ರಾಗಿ ಹಿಟ್ಟನ್ನು ಬೀಸಲು, ಬೀಸುವ ಕಲ್ಲಿಗೆ ಕೋಣಗಳನ್ನು ಕಟ್ಟುತ್ತಿದ್ದರೆಂದು ಹೇಳಲಾಗುತ್ತಿದೆ. ಇದಕ್ಕೆ ನಿದರ್ಶನವೆಂಬಂತೆ ಮಠದ ಆವರಣದಲ್ಲಿ ಬೃಹದಾಕಾರದ ಬೀಸುವ ಕಲ್ಲುಗಳು ನೋಡಸಿಗುತ್ತಿವೆ. ಈಗಿನ ಪಟ್ಟಾಧ್ಯಕ್ಷರಾದ ಶ್ರೀಚನ್ನಬಸಪ್ಪ ಸ್ವಾಮಿಗಳು ಹೊಸಹಳ್ಳಿ ಗ್ರಾಮದ ಶ್ರೀ ಮಾದಪ್ಪ ಮತ್ತು ಪಾರ್ವತಮ್ಮನವರ ಪುತ್ರನಾಗಿ ೧೯೭೬ರಲ್ಲಿ ಜನಿಸಿದರು. ಕನಕಪುರದಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ೧೯೯೭ರ ಮಾರ್ಚ್ ಇಪ್ಪತ್ತೊಂರರಂದು ಈ ಗ್ರಾಮದ ಸರ್ಪಭೂಷಣ ಶಿವಯೋಗಿಗಳ ಮಠದ ಅಧಿಕಾರವನ್ನು ವಹಿಸಿಕೊಂಡರು.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗುರುಗಳ ಗದ್ದುಗೆಗಳಿಗೆ ನಿತ್ಯ ಪೂಜಾ ವ್ಯವಸ್ಥೆ, ವರ್ಷಕ್ಕೊಮ್ಮೆ ಹಿರಿಯ ಗುರುಗಳ ಆರಾಧನಾ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಮಠದ ಮುಂಭಾಗದಲ್ಲಿ ವೀರಭದ್ರೇಶ್ವರ ದೇವಸ್ಥಾನ ಮತ್ತು ಶ್ರೀ ಗೊಗ್ಗಪ್ಪ ಸ್ವಾಮಿಗಳ ತೋರು ಗದ್ದುಗೆಯನ್ನು ಸ್ಥಾಪನೆ ಮಾಡಲಾಗಿದೆ. ಇಲ್ಲಿ ಗ್ರಾಮದ ಪರವಾಗಿ ನಿತ್ಯಪೂಜೆಯನ್ನು ನಡೆಸಲಾಗುತ್ತಿದೆ. ವಿಶೇಷ ಸಂದರ್ಭಗಳಲ್ಲಿ ಮಠದ ವತಿಯಿಂದ ವಿಶೇಷ ಪೂಜೆಯನ್ನೂ ಸಹ ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಚನ್ನಬಸಪ್ಪ ಸ್ವಾಮಿಗಳು, ಶ್ರೀ ಸರ್ಪಭೂಷಣ ಶಿವಯೋಗಿಗಳ ಮಠ, ಕುಂದೂರು, ಬಿ.ಜಿ.ಪುರ ಹೋಬಳಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

ದೊಡ್ಡಮಠ: ಕುಂದೂರು ಗ್ರಾಮದ ಮಧ್ಯ ಭಾಗದಲ್ಲಿ ಸರ್ಪಭೂಷಣ ಶಿವಯೋಗಿಮಠದ ಪಕ್ಕದಲ್ಲಿಯೇ ಸ್ಥಾಪನೆಗೊಂಡಿರುವ ದೊಡ್ಡಮಠವು, ಉಜ್ಜಯಿನಿಪೀಠದ ಶಾಖಾಮಠವಾಗಿ ಬೆಳೆದಿದೆ. ಹಿಂದೆ ಶ್ರೀ ಸರ್ಪಭೂಷಣ ಶಿವಯೋಗಿಗಳ ಮಠದ ಆಡಳಿತದ ಜತೆಯಲ್ಲಿಯೇ ನಡೆದುಕೊಂಡು ಬಂದಿದ್ದ ಮಠದ ಆಡಳಿತ ಕಾರಣಾಂತರದಿಂದ ಪ್ರತ್ಯೇಕಗೊಂಡಿತು.

ಅಸ್ತಿತ್ವಗೊಂಡ ಮಠ: ಟಿ. ನರಸೀಪುರ ತಾಲ್ಲೂಕಿನ ಸೋಸಲೆ ತೋಪಿನ ಮಠದ ಶ್ರೀ ಬಸವರಾಜೇಂದ್ರ ಶಿವಾಚಾರ್ಯ ಸ್ವಾಮಿಗಳು, ಸರ್ಪಭೂಷಣ ಶಿವಯೋಗಿಗಳ ಮಠದಿಂದ ಪ್ರತ್ಯೇಕಗೊಂಡ ಮಠದ ಹಳೆಯ ಕಟ್ಟಡವನ್ನು ತೆಗೆಸಿ ೧೯೫೦ರಲ್ಲಿ ಹೊಸ ಕಟ್ಟಡವನ್ನು ನಿರ್ಮಿಸಿದರು. ನೂತನವಾಗಿ ನಿರ್ಮಾಣಗೊಂಡ ಕಟ್ಟಡದಲ್ಲಿ ಧಾರ್ಮಿಕ ಚಟುವಟಿಕೆಗಳು ಸಾಂಗವಾಗಿ

ನೆರವೇರಲು ವ್ಯವಸ್ಥೆಯನ್ನು ಮಾಡಿದರು.

ಗುರುಗಳ ಆಗಮನ: ಪ್ರಾಥಮಿಕ ವಿದ್ಯಾಭ್ಯಾಸವನ್ನು ಮಡೇನಹಳ್ಳಿಯಲ್ಲಿಯೇ ಮುಗಿಸಿದ ಉತ್ತರಾಧಿಕಾರಿಯು ಭಾರತೀ ನಗರದಲ್ಲಿ ಪದವಿಯನ್ನು ಮುಗಿಸಿ ಸಂಸ್ಕೃತ, ವೇದ, ಆಗಮಗಳ ಕಲಿಕೆಗೆ ಮುಡುಕುತೊರೆಯ ತೋಪಿನ ಮಠವನ್ನು ಆಶ್ರಯಿಸಿದರು. ತೋಪಿನಮಠದ ಶ್ರೀ ಮಹಲಿಂಗ ಶಿವಾಚಾರ್ಯ ಸ್ವಾಮಿಗಳ ಮಾರ್ಗದರ್ಶನದಲ್ಲಿ ೧೯೯೮ ರ ವರೆಗೆ ಕಲಿತ ಶ್ರೀಬಸವ ರಾಜೇಂದ್ರ ಸ್ವಾಮಿಗಳು, ಶ್ರೀ ಇಮ್ಮಡಿ ಬಸವರಾಜೇಂದ್ರ ಶಿವಾಚಾರ್ಯ ಸ್ವಾಮಿಗಳೆಂದು ಅಭಿಧಾನ ಪಡೆದು ಕುಂದೂರು ದೊಡ್ಡ ಮಠದ ಆಡಳಿತವನ್ನು ವಹಿಸಿಕೊಂಡಿದ್ದಾರೆ.

ಚುರುಕುಗೊಂಡ ಚಟುವಟಿಕೆಗಳು: ಶ್ರೀ ಇಮ್ಮಡಿ ಬಸವರಾಜೇಂದ್ರ ಶಿವಾಚಾರ್ಯ ಸ್ವಾಮಿಗಳು ಹೊಸದಾಗಿ ಅಸ್ತಿತ್ವಗೊಂಡ ಮಠದ ಪರಂಪರೆಯ ನಾಲ್ಕನೆಯ ಗುರುಗಳಾಗಿ ಅಧಿಕಾರವನ್ನು ವಹಿಸಿಕೊಂಡು ಮಠದ ಪರಂಪರೆಯನ್ನು ಪ್ರಾರಂಭಿಸಿದರು. ಧಾರ್ಮಿಕ ಚಟುವಟಿಕೆಗಳಿಂದ ಜನರನ್ನು ಆಕರ್ಷಿಸಿಕೊಳ್ಳತೊಡಗಿದ ಗುರುಗಳು, ಮಂದಗತಿಯಲ್ಲಿ ಭಕ್ತರ ಸಂಘಟನೆಗೆ ಮುಂದಾಗಿದ್ದಾರೆ. ಮಠದ ಸರ್ವತೋಮುಖ ಬೆಳವಣಿಗೆಗೆ ಯೋಜನೆಗಳನ್ನು ರೂಪಿಸಿಕೊಂಡು ಮಠದಲ್ಲಿ ದೈನಂದಿನ ಚಟುವಟಿಕೆಗಳ ಜತೆಗೆ ಭಕ್ತರ ಮನೆಗಳಿಗೆ ಹೋಗಿ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಂಡು ನೆರವಾಗುತ್ತಿದ್ದಾರೆ. ವೀರಶೈವ ಸಿದ್ಧಾಂತದ ಬಗ್ಗೆ ಜನರಿಗೆ ತಿಳಿವಳಿಕೆ ಹೇಳಿ ಧರ್ಮಮಾರ್ಗದಲ್ಲಿ ಸಾಗುವಂತೆ ಪ್ರೇರಣೆಯನ್ನು ನೀಡುತ್ತಿದ್ದಾರೆ.

ಶೈಕ್ಷಣಿಕ ಸೇವೆ: ನೂತನವಾಗಿ ಪ್ರಾರಂಭಗೊಂಡ ಈ ಮಠದಲ್ಲಿ ಶೈಕ್ಷಣಿಕ ಸಂಸ್ಥೆಗಳನ್ನು ಪ್ರಾರಂಭಿಸದಿದ್ದರೂ, ಮಠದ ಮುಂಭಾಗದಲ್ಲಿ ನಿರ್ಮಿಸಿದ ಕಟ್ಟಡದಲ್ಲಿ ಸರ್ಕಾರಿ ಪ್ರಾಥಮಿಕಶಾಲೆ ನಡೆಯುವಂತೆ ವ್ಯವಸ್ಥೆಗೊಳಿಸಿದ್ದಾರೆ. ಕಳೆದ ನಾಲ್ಕು ವರ್ಷಗಳಿಂದ ಸರ್ಕಾರಿ ಪ್ರಾಥಮಿಕ ಶಾಲೆಯು ಮಠದ ಕಟ್ಟಡದಲ್ಲಿ ನಡೆಯುತ್ತಿದೆ. ಶ್ರೀ ಇಮ್ಮಡಿ ಬಸವರಾಜೇಂದ್ರ ಶಿವಾಚಾರ್ಯ ಸ್ವಾಮಿಗಳು ಆ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಪ್ರತಿದಿನ ಸಂಜೆ ಉಚಿತವಾಗಿ ಪಾಠವನ್ನು ಹೇಳಿಕೊಡುತ್ತಿದ್ದು, ಶೈಕ್ಷಣಿಕವಾಗಿ ತಮ್ಮನ್ನು ಪರೋಕ್ಷವಾಗಿ ತೊಡಗಿಸಿಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಈ ಮಠದ ಆಸ್ತಿಯಾಗಿ ಹತ್ತು ಎಕರೆ ಜಮೀನಿದ್ದು ಇದನ್ನು ಅಭಿವೃದ್ಧಿಪಡಿಸಿ ಮಠಕ್ಕೆ ಆದಾಯ ಬರುವಂತೆ ಮಾಡಿದ್ದಾರೆ. ಜಮೀನಿನಿಂದ ಬರುವ ಆದಾಯವನ್ನು ಮಠದ ಧಾರ್ಮಿಕ ಚಟುವಟಿಕೆಗಳಿಗೆ ವಿನಿಯೋಗ ಮಾಡಿಕೊಳ್ಳುತ್ತಿದ್ದಾರೆ. ಮಠದ ಪರಂಪರೆಯಲ್ಲಿ ಮೂರು ಜನ ಗುರುಗಳು ಅಧಿಕಾರವನ್ನು ನಡೆಸಿದ್ದಾರೆ ಎಂದು ಹೇಳಲಾಗುತ್ತದೆಯಾದರೂ ಇದಕ್ಕೆ ಸಂಬಂಧಪಟ್ಟಂತಹ ಆಧಾರಗಳು ಲಭ್ಯವಾಗಿಲ್ಲ. ೧೯೫೦ರಲ್ಲಿ ನಿರ್ಮಿಸಿದ ಮಠದ ಕಟ್ಟಡದಲ್ಲಿ ಬಸವೇಶ್ವರರ ಗದ್ದುಗೆಯನ್ನು ನಿರ್ಮಿಸಿ, ನಿತ್ಯ ಪೂಜೆಗೆ ವ್ಯವಸ್ಥೆ ಮಾಡಲಾಗಿದೆ. ಮಠಕ್ಕೆ ಆಗಮಿಸುವ ಭಕ್ತರಿಗೆ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಈ ರೀತಿ ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ತಮ್ಮನ್ನು ತೊಡಗಿಸಿಕೊಂಡ ಗುರುಗಳು ಮಠವನ್ನು ಅಭಿವೃದ್ಧಿಗೊಳಿಸತೊಡಗಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಇಮ್ಮಡಿ ಬಸವರಾಜೇಂದ್ರ ಶಿವಾಚಾರ್ಯ ಸ್ವಾಮಿಗಳು, ಶ್ರೀ ದೊಡ್ಡಮಠ, ಕುಂದೂರು, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

ಕ್ಯಾತನಹಳ್ಳಿ

ಮಳವಳ್ಳಿ ತಾಲ್ಲೂಕಿನ ಕ್ಯಾತನಹಳ್ಳಿಯು ತಾಲ್ಲೂಕು ಕೇಂದ್ರದ ದಕ್ಷಿಣಕ್ಕೆ ಒಂಬತ್ತು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಗುರುಮಲ್ಲೇಶ್ವರ ದಾಸೋಹಮಠವು ಅಸ್ತಿತ್ವದಲ್ಲಿದೆ.

ಗುರುಮಲ್ಲೇಶ್ವರ ದಾಸೋಹಮಠ: ಕ್ಯಾತನಹಳ್ಳಿಯಲ್ಲಿ ದೇವನೂರು ಮಠದ ಸಂಪ್ರದಾಯದಲ್ಲಿ ಬೆಳೆದ ಶ್ರೀ ಗುರುಮಲ್ಲೇಶ್ವರ ದಾಸೋಹಮಠವು ೧೯೮೬ರ ಜನವರಿ ಇಪ್ಪತ್ತೆರೆಡರಂದು ಪ್ರಾರಂಭಗೊಂಡಿದೆ. ಮೊದಲ ಪಟ್ಟಾಧಿಕಾರಿಗಳಾಗಿ ಅಧಿಕಾರವನ್ನು ವಹಿಸಿಕೊಂಡಿರುವ ಶ್ರೀ ಸದಾಶಿವ ಸ್ವಾಮಿಗಳು ಕಂತೆಭಿಕ್ಷ ಕಾಯಕಕ್ಕಾಗಿ ಭಿಕ್ಷದ ಶ್ರೀ ನಟರಾಜ ಸ್ವಾಮಿಗಳನ್ನು

ನೇಮಿಸಿಕೊಂಡು, ಕಂತೆ ಭಿಕ್ಷ ಕಾಯಕದಿಂದ ಅನ್ನ ದಾಸೋಹವನ್ನು ನಡೆಸುತ್ತಿದ್ದಾರೆ.

ವಿಳಾಸ: ಶ್ರೀ ಸದಾಶಿವ ಸ್ವಾಮಿಗಳು, ಶ್ರೀ ಗುರುಮಲ್ಲೇಶ್ವರ ದಾಸೋಹ ಮಠ, ಕ್ಯಾತನಹಳ್ಳಿ, ಮಳವಳ್ಳಿ ತಾ, ಮಂಡ್ಯ ಜಿಲ್ಲೆ.

ಚಿಕ್ಕಬಾಗಿಲು

ಮಳವಳ್ಳಿ ತಾಲ್ಲೂಕಿನ ಚಿಕ್ಕಬಾಗಿಲು ಗ್ರಾಮವು ತಾಲ್ಲೂಕು ಕೇಂದ್ರಸ್ಥಳದ ನೈರುತ್ಯಕ್ಕೆ ಹದಿನೈದು ಕಿ. ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಭಿಕ್ಷದಮಠ ಅಸ್ತಿತ್ವದಲ್ಲಿದೆ.

ಭಿಕ್ಷದಮಠ: ಚಿಕ್ಕಬಾಗಿಲು ಗ್ರಾಮದ ಮಧ್ಯಭಾಗದಲ್ಲಿ ಮರಿಯಾಲ ಶಾಖೆಯ ಭಿಕ್ಷದ ಮಠವು ಪ್ರಾರಂಭವಾಗಿದೆ. ಚಾಮರಾಜನಗರ ತಾಲ್ಲೂಕಿನ ಮರಿಯಾಲ ಮಠದ ಶ್ರೀ ಮಹಾಂತ ಸ್ವಾಮಿಗಳು ಕಳೆದ ನೂರು ವರ್ಷಗಳ ಹಿಂದೆ ಮಠ ಸ್ಥಾಪನೆ ಮಾಡಿ ಶ್ರೀ ಜಡೆ ಸ್ವಾಮಿಗಳನ್ನು ನೇಮಕ ಮಾಡಿರುತ್ತಾರೆ. ಜಡೆ ಸ್ವಾಮಿಗಳು ಅನೇಕ ವರ್ಷಗಳಕಾಲ ಇಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸಿ, ದಾಸೋಹ ಕ್ರಿಯೆಯನ್ನು ಶ್ರೀಮಂತಗೊಳಿಸಿ, ಹೆಗ್ಗಡದೇವನಕೋಟೆ ತಾಲ್ಲೂಕಿನ ಮಾದಹಳ್ಳಿಯಲ್ಲಿ ಲಿಂಗೈಕ್ಯರಾಗಿರುತ್ತಾರೆ. ಈಗ ಶ್ರೀ ಬಸಪ್ಪ ಸ್ವಾಮಿಗಳು ನೇಮಕಗೊಂಡಿದ್ದಾರೆ. ನಿತ್ಯ ಕಂತೆಭಿಕ್ಷ ಕಾಯಕವನ್ನು ಮಾಡಿ ಮಠದಲ್ಲಿ ದಾಸೋಹ ಕ್ರಿಯೆಯನ್ನು ನಡೆಸುತ್ತಾ, ಪ್ರತಿ ವಾರಕ್ಕೊಮ್ಮೆ ಭಜನೆಯ ಮೂಲಕ ಧಾರ್ಮಿಕ ವಿಚಾರಗಳನ್ನು ಜನಮನಕ್ಕೆ ಮುಟ್ಟಿಸುವ ಕಾರ್ಯದಲ್ಲಿ ತೊಡಗಿದ್ದಾರೆ.

ವಿಳಾಸ: ಶ್ರೀ ಬಸಪ್ಪ ಸ್ವಾಮಿಗಳು, ಶ್ರೀ ಭಿಕ್ಷದ ಮಠ, ಚಿಕ್ಕಬಾಗಿಲು, ಮಳವಳ್ಳಿ ತಾಲ್ಲೂಕು. ಮಂಡ್ಯ ಜಿಲ್ಲೆ.

ತೆಂಕನಹಳ್ಳಿ

ಮಳವಳ್ಳಿ ತಾಲ್ಲೂಕಿನ ತೆಂಕನಹಳ್ಳಿಯು ತಾಲ್ಲೂಕು ಕೇಂದ್ರದ ದಕ್ಷಿಣಕ್ಕೆ ಹತ್ತು ಕಿ.ಮೀ. ದೂರದಲ್ಲಿದೆ. ತೆಂಕನಹಳ್ಳಿಯ ಗ್ರಾಮ ಠಾಣೆಗೆ ಸೇರುವ ಈ ಮಠವು ಕುಂದೂರು ಬೆಟ್ಟ ಎಂದು ಹೆಸರಾಗಿರುವ ಬೆಟ್ಟದ ಮೇಲೆ ಉಜ್ಜಯಿನಿ ಪೀಠದ ಶಾಖಾಮಠವಾಗಿ, ಕಳೆದ ಎರಡು ಶತಮಾನಗಳಿಂದ ಬೆಳೆದು, ಧಾರ್ಮಿಕವಾಗಿ ಹೆಸರು ಮಾಡಿದೆ.

ಕುಂದೂರು ಬೆಟ್ಟದಮಠ: ಪಂಚಪೀಠಗಳಲ್ಲಿ ಒಂದಾದ ಉಜ್ಜಯಿನಿ ಪೀಠದ ಶಾಖಾಮಠವಾಗಿರುವ ಈ ಬೆಟ್ಟದ ಮಠವು ಕಂತೆ ಭಿಕ್ಷದ ಕಾಯಕವನ್ನೂ ಸಹ ಮಾಡುತ್ತಾ ತನ್ನ ಪರಂಪರೆಯನ್ನು ಬೆಳೆಸಿಕೊಂಡಿರುವುದು ಒಂದು ವಿಶೇಷವಾಗಿದೆ. ಶ್ರೀ ರುದ್ರಮುನಿ ಸ್ವಾಮಿಗಳು ಕುಂದನ ಗಿರಿಯಲ್ಲಿ (ಕುಂದೂರುಬೆಟ್ಟ) ತಪೋನಿಷ್ಠರಾಗಿ ಮಠವನ್ನು ಸ್ಥಾಪನೆ ಮಾಡುತ್ತಾರೆ. ಇದರಿಂದ ಈ ಮಠಕ್ಕೆ 'ಕುಂದೂರು ಮಠ' ಎಂದು ಹೆಸರು ಬಂದಿದೆ. ಇವರ ಕಾಲದಲ್ಲಿ ನೆಲ್ಲಿಗೆರೆ ಸ್ವಾಮಿಗಳು ಶ್ರೀ ರುದ್ರಮುನಿ ಸ್ವಾಮಿಗಳ ಜತೆಯಲ್ಲಿದ್ದು ಅವರ ಸೇವೆಯನ್ನು ಮಾಡಿಕೊಂಡು ಲಿಂಗೈಕ್ಯರಾಗಿದ್ದಾರೆ.

ಪರಂಪರೆ:

೧. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ನೆಲ್ಲಿಗೆರೆ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಚಿಕ್ಕವೀರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಮಹಂತ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಸುಬ್ಬೇದೇವರು ಶಿವಾಚಾರ್ಯಸ್ವಾಮಿಗಳು (ಹಿರಿಯ ಗುರುಗಳು)
೬. ಷ.ಬ್ರ.ಶ್ರೀ ಗುರುಸ್ವಾಮಿ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಶಿಷ್ಯವರ್ಗದ ಸಂಪ್ರದಾಯದಲ್ಲಿ ಈ ರೀತಿ ಮಠದ ಪರಂಪರೆಯು ಈತನಕ ಬೆಳೆದು ಬಂದಿದೆ. ಪರಂಪರೆಯ ಇತ್ತೀಚಿನ ಗುರುಗಳು ಕಂತೆಭಿಕ್ಷ ಕಾಯಕವನ್ನು ಮಾಡುತ್ತಾ ದಾಸೋಹಕ್ರಿಯೆಗೆ ಒತ್ತುಕೊಟ್ಟು ಮಠವನ್ನು ಬೆಳೆಸತೊಡಗಿದ್ದಾರೆ. ಕಳೆದ ಮೂವತ್ತೈದು ವರ್ಷಗಳ ಹಿಂದೆ ಪಟ್ಟಾಧಿಕಾರವನ್ನು ವಹಿಸಿಕೊಂಡಿರುವ ಶ್ರೀ ಸುಬ್ಬೇದೇವರು ವಯೋವೃದ್ಧರಾಗಿದ್ದು ತಮ್ಮ ಉತ್ತರಾಧಿಕಾರಿಯಾದ ಶ್ರೀ ಗುರುಸ್ವಾಮಿ ಶಿವಾಚಾರ್ಯ ಸ್ವಾಮಿಗಳಿಗೆ ಮಾರ್ಗದರ್ಶನವನ್ನು ನೀಡುತ್ತಾ ಮಠವನ್ನು

ಮುನ್ನಡೆಸಿಕೊಂಡು ಬರುತ್ತಿದ್ದಾರೆ.

ವಿಶೇಷತೆ: ಮಠದ ಮುಂದೆ ನಿರ್ಮಿಸಲ್ಪಟ್ಟಿರುವ ಹಾಲುಕೆರೆ ಎಂದು ಕರೆಯಲ್ಪಡುವ ಕೊಳದಲ್ಲಿ ನೀರು ಹಾಲಿನಂತೆ ಬೆಳ್ಳಗಿದ್ದು, ಇದನ್ನು ತಂಬಿಗೆಯಲ್ಲಿ ತುಂಬಿಕೊಂಡಾಕ್ಷಣ ತನ್ನಷ್ಟಕ್ಕೆ ಹಾಲಿನ ಬಣ್ಣ ಬದಲಾಗುತ್ತದೆ. ಮಳೆ ಬಂದು ಮಳೆಯ ನೀರು ಕೊಳಕ್ಕೆ ಸೇರಿಕೊಂಡು ಕೊಳ ತುಂಬಿ,ನೀರು ಹರಿಯತೊಡಗಿದಾಗಲೂ ಹಾಲಿನ ಬಣ್ಣ ಬದಲಾಗುವುದು ಒಂದು ವಿಶೇಷ. ಇದು ಈ ಮಣ್ಣಿನ ಗುಣದಿಂದಲೋ ಅಥವಾ ಇಲ್ಲಿನ ಪವಾಡವೋ ತಿಳಿಯದಾಗಿದೆ. ಈ ಕೊಳ ಭೂಶಾಸ್ತ್ರಜ್ಞರ ಅಧ್ಯಯನಕ್ಕೆ ಒಂದು ವಿಷಯವಾಗಬಹುದು.

ಧಾರ್ಮಿಕ ಆಚರಣೆ: ಮಠದ ಆವರಣದಲ್ಲಿರುವ ಪುರಾತನ ಗದ್ದುಗೆಗಳಿಗೆ ನಿತ್ಯ ಪೂಜೆಯನ್ನು ಮಾಡಲಾಗುತ್ತಿದೆ. ಬೆಟ್ಟದ ಮೇಲಿರುವ ರುದ್ರಮುನಿ ಸ್ವಾಮಿಗಳ ಗದ್ದುಗೆಗೂ ನಿತ್ಯ ಪೂಜೆಯ ವ್ಯವಸ್ಥೆಯನ್ನು ಮಾಡಲಾಗಿದೆ. ಪ್ರತಿ ತಿಂಗಳು ಹುಣ್ಣಿಮೆಯ ದಿನ ವಿಶೇಷ ಪೂಜೆಯನ್ನು ಏರ್ಪಡಿಸಿ, ದಾಸೋಹ ಹಾಗೂ ಭಜನೆ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಪಂಚಮಿಯಲ್ಲಿ ನೆಲ್ಲಿಗೆರೆ ಸ್ವಾಮಿಗಳ ಆರಾಧನೆ, ದೀಪಾವಳಿಯಲ್ಲಿ ಕರ್ತೃಗುರುಗಳಾದ ಶ್ರೀ ರುದ್ರಮುನಿ ಸ್ವಾಮಿಗಳ ಆರಾಧನೆಯನ್ನು ಮಾಡಲಾಗುತ್ತಿದೆ. ಓದುವ ವಿದ್ಯಾರ್ಥಿಗಳಿಗೆ ಮಠದಲ್ಲಿ ಆಶ್ರಯವನ್ನು ಕಲ್ಪಿಸಿ ಕೊಡಲಾಗಿದೆ.

ಗರಿಕೆ ಮಹಿಮೆ: ಕರುಹಾಕಿದ್ದರೂ, ಹಾಲು ಕರೆಯದ ಹಸುಗಳಿಗೆ ಮಠದಿಂದ ಕೊಡಲಾಗುವ ಗರಿಕೆ ಹುಲ್ಲನ್ನು ತಿನ್ನಿಸಿದರೆ ಹಸು ಹಾಲನ್ನು ಕೊಡುತ್ತದೆ ಎಂಬ ನಂಬಿಕೆ ಈ ಪ್ರಾಂತ್ಯದಲ್ಲಿ ಬಲವಾಗಿ ಬೇರೂರಿದ್ದು, ದೂರದ ಊರುಗಳಿಂದ ಇಲ್ಲಿ ಕೊಡುವ ಗರಿಕೆ ಹುಲ್ಲಿಗಾಗಿ ಬರುತ್ತಾರೆ. ಭಕ್ತರಲ್ಲಿ ಇಂತಹ ನಂಬಿಕೆಗಳು ಆಳವಾಗಿ ಬೇರೂರುವಂತೆ ಪ್ರಭಾವ ಬೀರಿರುವ ಈ ಮಠವು ಧಾರ್ಮಿಕವಾಗಿ ಹೆಸರು ಪಡೆದಿದೆ.

ವಿಳಾಸ: ಷ.ಬ್ರ.ಶ್ರೀ ಗುರುಸ್ವಾಮಿ ಶಿವಾಚಾರ್ಯರು.ಶ್ರೀ ಕುಂದೂರು ಬೆಟ್ಟದಮಠ,ತೆಂಕನಹಳ್ಳಿ, ಮಳವಳ್ಳಿ ತಾ. ಮಂಡ್ಯ ಜಿಲ್ಲೆ.

ದೊಡ್ಡಬೂವಳ್ಳಿ

ಮಳವಳ್ಳಿ ತಾಲ್ಲೂಕಿನ ದೊಡ್ಡಬೂವಳ್ಳಿಯು ತಾಲ್ಲೂಕು ಕೇಂದ್ರದ ಆಗ್ನೇಯಕ್ಕೆ ಹನ್ನೊಂದು ಕಿ. ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಗುರುಮಲ್ಲೇಶ್ವರ ದಾಸೋಹಮಠ ಅಸ್ತಿತ್ವದಲ್ಲಿದೆ.

ಗುರುಮಲ್ಲೇಶ್ವರ ದಾಸೋಹಮಠ: ದೊಡ್ಡಬೂವಳ್ಳಿಯಲ್ಲಿ ಸ್ಥಾಪನೆಯಾಗಿರುವ ದಾಸೋಹಮಠವು ೧೯೫೦ ರ ಮಾರ್ಚ್ ಇಪ್ಪತ್ತೊಂಬತ್ತರಂದು ಶ್ರೀ ಮರಿಬಸಪ್ಪ ಸ್ವಾಮಿಗಳಿಂದ ಪುನರಾರಂಭಗೊಂಡಿದೆ. ದೇವನೂರು ಮಠದ ಶಾಖಾಮಠವಾದ ಈ ಮಠದ ಮೊದಲ ಗುರುಗಳಾದ ಶ್ರೀ ಮರಿಬಸಪ್ಪ ಸ್ವಾಮಿಗಳು ಮಠವನ್ನು ಧಾರ್ಮಿಕ ಆಚರಣೆಗಳ ಮೂಲಕ ಹೆಚ್ಚು ಪ್ರಚಾರಕ್ಕೆ ತಂದಿದ್ದರು. ಇವರ ಕಾಲದಲ್ಲಿ ಮಠದ ಆವರಣದಲ್ಲಿ ಒಂದು ಬಾವಿಯನ್ನು ತೆಗೆಸಿ, ಮಠದ ದಾಸೋಹ ಹಾಗೂ ಪೂಜಾ ಕಾರ್ಯಗಳಿಗೆ ಬಳಸಿಕೊಳ್ಳುತ್ತಿದ್ದರು. ಇವರು ಲಿಂಗೈಕ್ಯಗೊಂಡ ಮೇಲೆ ಗದ್ದುಗೆಯನ್ನು ಮಠದ ಆವರಣದಲ್ಲಿ ನಿರ್ಮಿಸಲಾಗಿದೆ. ಮಠದ ಎರಡನೆಯ ಗುರುಗಳಾಗಿ ಶ್ರೀ ಶಿವಪ್ಪ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡಿದ್ದು, ಕರ್ತೃಗುರುಗಳ ಗದ್ದುಗೆಗೆ ಪೂಜೆಯನ್ನು ಮಾಡಿಕೊಂಡು, ಕಂತೆ ಭಿಕ್ಷ ಮಾಡುತ್ತಾ ಮಠದಲ್ಲಿ ದಾಸೋಹ ನಡೆಸುತ್ತಿದ್ದಾರೆ.

ವಿಳಾಸ: ಶ್ರೀ ಶಿವಪ್ಪ ಸ್ವಾಮಿಗಳು, ಶ್ರೀ ಗುರುಮಲ್ಲೇಶ್ವರ ದಾಸೋಹಮಠ, ದೊಡ್ಡಬೂವಳ್ಳಿ. ಮಳವಳ್ಳಿ ತಾ. ಮಂಡ್ಯ ಜಿಲ್ಲೆ.

ಧನುಗೂರು

ಮಳವಳ್ಳಿ ತಾಲ್ಲೂಕಿನ ಧನುಗೂರು ತಾಲ್ಲೂಕು ಕೇಂದ್ರದ ಪೂರ್ವಕ್ಕೆ ಹದಿನೈದು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ವೀರಸಿಂಹಾಸನ ಮಠವು ಅಸ್ತಿತ್ವದಲ್ಲಿದೆ.

ವೀರಸಿಂಹಾಸನಮಠ: ಧನುಗೂರು ಗ್ರಾಮದ ಪೂರ್ವಭಾಗದಲ್ಲಿ ಶ್ರೀ ರಂಭಾಪುರಿಪೀಠದ ಶಾಖಾಮಠವಾಗಿ ಶ್ರೀ ವೀರ ಸಿಂಹಾಸನ ಮಠವು ಸ್ಥಾಪನೆಗೊಂಡಿದ್ದು, ಈ ಗ್ರಾಮವನ್ನು ಧಾರ್ಮಿಕ ಮತ್ತು ಸಾಹಿತ್ಯ ಲೋಕದಲ್ಲಿ ಎಂದೂ ಮರೆಯದ

ಐತಿಹಾಸಿಕ ಸ್ಥಳವನ್ನಾಗಿ ಮಾಡಿದೆ.

ಮಠಸ್ಥಾಪನೆ: ಪುರಾತನ ಪಂಚಪೀಠದ ಸಂಪ್ರದಾಯದಲ್ಲಿ ಬೆಳೆದ ಈ ಮಠಕ್ಕೆ ಶ್ರೀ ರೇವಣಸಿದ್ಧರ ಪುತ್ರರಾದ ಶ್ರೀ ರುದ್ರಮುನಿ ಶಿವಾಚಾರ್ಯರು ಅಧಿಪತಿಗಳಾಗಿದ್ದರು. ಯೋಗ್ಯ ಶಿಷ್ಯರನ್ನು ಸಿದ್ಧಪಡಿಸಿ ಮಠವನ್ನು ಸ್ಥಾಪಿಸುವಂತೆ ಪ್ರೇರಣೆಯನ್ನು ನೀಡಿ ಮಠದ ಸ್ಥಾಪನೆಗೆ ನೇರ ಕಾರಣಕರ್ತರಾಗಿದ್ದಾರೆ. ಶ್ರೀ ರುದ್ರಮುನಿ ಶಿವಾಚಾರ್ಯರ ಕರಕಮಲ ಸಂಜಾತರಾದ ಶ್ರೀ ಉದ್ಧಾನ ಶಿವಯೋಗಿಗಳು ಧನುಗೂರಿನ ವೀರಸಿಂಹಾಸನ ಮಠವನ್ನು ಸ್ಥಾಪಿಸಿ ಮಠದ ಆದ್ಯ ಶಿವಾಚಾರ್ಯರಾಗಿ, ಅಂಧಕಾರದಲ್ಲಿದ್ದ ಸಮಾಜವನ್ನು ಕಣ್ತೆರೆಸಿ, ವೀರಶೈವಧರ್ಮ ಪ್ರಚಾರ ಕಾರ್ಯಕ್ಕೆ ನಾಂದಿಹಾಡಿದರು. ಭಕ್ತರ ಉದ್ಧಾರವೇ ಮಠದ ಗುರಿ ಎಂದು ನಂಬಿ ಸ್ಥಾಪಿತಗೊಂಡ ಮಠ ಭಕ್ತರ ಯೋಗಕ್ಷೇಮ, ಮಾನಸಿಕ ಅಂಧಕಾರವನ್ನು ತೊಡೆದು ಧರ್ಮೋಪದೇಶ ನೀಡಿ ಭಕ್ತರನ್ನು ಧರ್ಮದ ಬೆಳಕಿನೆಡೆಗೆ ಕರೆ ತಂದು ವೀರಶೈವ ಧರ್ಮದ ಆಚಾರ ವಿಚಾರ, ಆಚರಣೆಯ ಬಗ್ಗೆ ತಿಳಿಯ ಪಡಿಸಿ, ವೇದಾ ದೀಕ್ಷೆ, ಕ್ರಿಯಾದೀಕ್ಷೆ, ಮಂತ್ರದೀಕ್ಷೆ ಎಂಬ ದೀಕ್ಷಾತ್ರಯಗಳಿಂದ ಇಷ್ಟಲಿಂಗವನ್ನು ಭಕ್ತರ ಕರಸ್ಥಲಕ್ಕೆ ನೀಡಿ ಲಿಂಗಾಂಗ ಸಾಮರಸ್ಯದ ಕಲ್ಪನೆಯನ್ನು ಭಕ್ತರಲ್ಲಿ ಮೂಡಿಸಿದರು. ವೀರಶೈವ ಧರ್ಮದ ನೆರಳಲ್ಲಿ ಭಕ್ತರು ಪರಸ್ಪರ ಪ್ರೀತಿಯಿಂದ ಬದುಕುವುದನ್ನು ಕಲಿಸಿ ಆತ್ಮೋದ್ಧಾರದ ಮೂಲಕ ಸಾಕ್ಷಾತ್ಕಾರ ಕಾಣುವಂತೆ ಮಾಡಿದರು.

ಬೆಳಗಿದ ಧರ್ಮಪ್ರಭೆ: ಧನುಗೂರಿನಲ್ಲಿ ವೀರಸಿಂಹಾಸನಮಠ ಪ್ರಾರಂಭವಾದ ಮೇಲೆ ಸಾರ್ವಜನಿಕರ ಬದುಕಿನ ರೀತಿಯೇ ಬದಲಾಯಿತು. ಅನ್ಯಾಯದ ಬದಲಿಗೆ ನ್ಯಾಯ ಸ್ಥಾಪನೆಯಾಯಿತು. ಅಧರ್ಮ ಮಾಯವಾಗಿ ಧರ್ಮ ನೆಲೆಗೊಂಡಿತು. ಒಬ್ಬರ ನ್ನೊಬ್ಬರು ದ್ವೇಷಿಸುತ್ತಿದ್ದ ಜನ ಪ್ರೀತಿಯ ಬದುಕನ್ನು ಅರ್ಥೈಸಿಕೊಂಡು ಸಾಮರಸ್ಯವನ್ನು ಕಂಡುಕೊಂಡು ಕಾಯಕ ಯೋಗಿಗಳಾಗಿ ದುಡಿದು, ತಾವೂ ಉಂಡು, ಇನ್ನೊಬ್ಬರಿಗೂ ಉಣಬಡಿಸಿದರು. ಶ್ರೀ ಉದ್ಧಾನ ಶಿವಯೋಗಿಗಳು ಧಾರ್ಮಿಕ ಪ್ರಚಾರದಿಂದ ಸಮಾಜವನ್ನು ಬದಲಾವಣೆ ಮಾಡಿದರು.

ಸಮಷ್ಟಿ, ಸಮಾಜವು ವೀರಶೈವ ಧರ್ಮದ ಪ್ರಭೆಯಲ್ಲಿ ಬೆಳಗುವುದನ್ನು ನೋಡಿದ ಅಸೂಯಾ ಪರರಾದ ಕೆಲವು ಕಿಡಿಗೇಡಿಗಳು ಈ ಪ್ರಾಂತ್ಯವನ್ನು ಆಳುತ್ತಿದ್ದ ಗಂಗರಾಜರ ವಂಶಸ್ಥರಾಗಿದ್ದ ಪಾಳೆಗಾರರಲ್ಲಿ ದೂರು ನೀಡಿ, ಜಾತಿ ಭ್ರಷ್ಟ ಕೆಲಸಗಳನ್ನು ಮಾಡಿ ಧರ್ಮದ ಹೆಸರಿನಲ್ಲಿ ಜನರನ್ನು ದಾರಿ ತಪ್ಪಿಸಿ ತಮ್ಮದೇ ಆದ ಸಾಮ್ರಾಜ್ಯವನ್ನು ಸ್ಥಾಪಿಸಲು ಶ್ರೀ ಉದ್ಧಾನ ಶಿವಯೋಗಿಗಳು ಹೊರಟಿದ್ದಾರೆ ಎಂದು ಹೇಳಿದರು. ಮತಿಹೀನನಾದ ಪಾಳೆಗಾರ ಅಸೂಯಾಪರರ ಮಾತುಗಳನ್ನು ನಿಜವೆಂದು ನಂಬಿ ತನ್ನ ಸೇವಕರನ್ನು ಕರೆಸಿ, ಇಂದೇ ಶಿವಯೋಗಿಗಳ ಧರ್ಮ ಕೇಂದ್ರಕ್ಕೆ ದಾಳಿ ಮಾಡಿ ಅಲ್ಲಿರುವುದನ್ನೆಲ್ಲಾ ವಶಪಡಿಸಿಕೊಂಡು, ಅಲ್ಲಿ ನೆಲೆಸಿರುವವರನ್ನೆಲ್ಲಾ ಧರ್ಮಭ್ರಷ್ಟರೆಂದು ಗಡಿಯಿಂದ ಹೊರಗೆ ಹಾಕುವಂತೆ ಆಜ್ಞಾಪಿಸಿ ಕಳುಹಿಸಿಕೊಟ್ಟನು. ಅಂಧಕಾರದ ಮದದಿಂದ ಬಂದ ಪಾಳೆಗಾರನ ಸೇವಕರು ಮಠದ ಆವರಣಕ್ಕೆ ಬರುವುದರೊಳಗಾಗಿ ಇಲ್ಲಿನ ಧಾರ್ಮಿಕ ವಾತಾವರಣ, ಮಠದ ಸುತ್ತ ಅಧ್ಯಯನಾಸಕ್ತರಾಗಿ, ಧ್ಯಾನಾಸಕ್ತರಾಗಿ ಕುಳಿತ ಆಧ್ಯಾತ್ಮ ಚಿಂತಕರನ್ನು ನೋಡಿ ಮನಸ್ಸಿನಲ್ಲಿದ್ದ ಅಂಧಕಾರ ಕರಗಿತು. ಆದರೂ ರಾಜಾಜ್ಞೆಯನ್ನು ಮೀರಲಾಗದೆ ಶ್ರೀ ಉದ್ಧಾನ ಶಿವಯೋಗಿಗಳ ಅನುಷ್ಠಾನ ಜಾಗಕ್ಕೆ ಬಂದು ತೇಜೋಮೂರ್ತಿಯನ್ನು ನೋಡಿ, ಮಠದ ವಾತಾವರಣದ ಧಾರ್ಮಿಕ ಪ್ರಭೆಯಿಂದ ಸೈನಿಕರಲ್ಲಿ ದೈವ ಪ್ರಜ್ಞೆ ಮೂಡಿತು. ರಾಜಾಜ್ಞೆಯಂತೆ ಕೈ ಮಾಡುವ ಬದಲು ಗುರುಗಳಿಗೆ ಕೈ ಮುಗಿದು ನಿಂತರು.

ಮಠಕ್ಕೆ ಹೋದ ಸೇವಕರು ಪುನಃ ಹಿಂದಿರುಗಿ ಬಾರದೆ ಇರುವುದನ್ನು ಕೇಳಿ ಪಾಳೆಗಾರನು ತಾನೇ ಮಠಕ್ಕೆ ಬರುತ್ತಾನೆ. ದಾಳಿ ಮಾಡಿ ಗುರುಗಳನ್ನು ಗಡಿಯಾಚೆಗೆ ಕಳುಹಿಸಲು ಬಂದಿದ್ದ ಸೇವಕರು, ಗುರುಗಳ ಸೇವಕರಾಗಿ ಸೇವೆಯಲ್ಲಿ ನಿರತರಾಗಿದ್ದನ್ನು ನೋಡಿದ ಪಾಳೆಗಾರನಿಗೆ ಸಿಟ್ಟು ತಡೆಯಲಾಗದೆ ಸೇವಕರ ಮೇಲೆ ದಾಳಿಮಾಡಿದನು. ತಮ್ಮ ಮುಂದೆಯೇ ಅನೀತಿಯ ಮಾರ್ಗವನ್ನು ತುಳಿಯುತ್ತಿದ್ದ ರಾಜನಿಗೆ ಶ್ರೀ ಉದ್ಧಾನ ಶಿವಯೋಗಿಗಳು ಉಪದೇಶವನ್ನು ಮಾಡಲು ಮುಂದಾದರು. ಅವ ಮಾನದಿಂದ ಕುದಿಯುತ್ತಿದ್ದ ಪಾಳೆಗಾರನು ಗುರುಗಳ ಮಾತುಗಳನ್ನು ಕೇಳುವ ಸ್ಥಿತಿಯಲ್ಲಿ ಇರಲಿಲ್ಲ. ಶಿವಭಕ್ತರ ಮುಂದೆ ತನ್ನ ಆಟ ನಡೆಯದು ಎಂಬುದನ್ನು ಅರಿತು ಅಲ್ಲಿಂದ ಪಲಾಯನ ಮಾಡಿದನು. ಶ್ರೀ ಉದ್ಧಾನ ಶಿವಯೋಗಿಗಳ ಮಠದ ಮೇಲೆ ಫಿರಂಗಿ ದಾಳಿಯನ್ನು ನಡೆಸಲು ಸಿದ್ಧನಾದನು. ಇದನ್ನು ಅರಿತ ಶ್ರೀ ಉದ್ಧಾನ ಶಿವಯೋಗಿಗಳು ಪಾಳೆಗಾರನ ಅಂಧಕಾರ

ಶಿವಶರಣರ ಪ್ರಭೆಯಲ್ಲಿ ಕರಗುವ ಕಾಲ ದೂರ ಇಲ್ಲ, ಪಾಳೆಗಾರನಿಗೆ ನಮ್ಮ ಮೇಲೆ ಅನುಮಾನ ಬರುವಂತೆ ಧರ್ಮಬಾಹಿರರು, ನೀತಿ ಭ್ರಷ್ಟರು ಕಿವಿ ಕಚ್ಚಿದ್ದಾರೆ. ಆದ್ದರಿಂದ ನಾವು ಹೊರಡುತ್ತೇವೆ. ಇದರಿಂದ ಪಾಳೆಗಾರನ ಸಿಟ್ಟು ತಣ್ಣಗಾಗುತ್ತದೆ. ಜತೆಗೆ ಪಾಳೆಗಾರನ ಅಂಧಕಾರವು ತೊಲಗುತ್ತದೆ ಎಂದು ಭಕ್ತ ಸಮುದಾಯಕ್ಕೆ ತಿಳಿಸಿ, ಗಣಸಮುದಾಯದಲ್ಲಿ ಸಕಲ ವಿದ್ಯಾಪಾರಂಗತರಾದ ಶ್ರೀ ಅನ್ನದಾನೇಶ್ವರರನ್ನು ಮಠದ ಉತ್ತರಾಧಿಕಾರಿಗಳನ್ನಾಗಿ ನೇಮಿಸಿ ಅಧಿಕಾರವನ್ನು ನೀಡಿ ಜೀವಂತ ಸಮಾಧಿಯಾದರು.

ಶರಣಾದ ಪಾಳೆಗಾರ: ಶ್ರೀ ಉದ್ಧಾನ ಶಿವಯೋಗಿಗಳು ಹೇಳಿದಂತೆ ರಾತ್ರಿ ಪಾಳೆಗಾರನು ಮಠದ ಮೇಲೆ ಫಿರಂಗಿ ದಾಳಿಯನ್ನು ನಡೆಸಿದನು. ಮಠದ ದಾಸೋಹ ಉಗ್ರಾಣ ಹಾಗೂ ನಿಧಿ ಸಂಪೂರ್ಣ ನಾಶವಾಯಿತು. ಬೆಳಗಾದೊಡನೆಯೆ ಪಾಳೆಗಾರನು ಮಠದ ಅವಸಾನವನ್ನು ನೋಡಲು ಆಗಮಿಸುತ್ತಾನೆ. ಆದರೆ ಮಠದ ವಾತಾವರಣದಲ್ಲಿ ಶ್ರೀ ಉದ್ಧಾನ ಶಿವಯೋಗಿಗಳ ಕಾಲದಲ್ಲಿ ನಡೆಯುತ್ತಿದ್ದಂತೆಯೇ ಧಾರ್ಮಿಕ ಕಾರ್ಯಗಳು ನಡೆಯುತ್ತಿದ್ದವು. ಇದನ್ನು ನೋಡಿದ ಪಾಳೆಗಾರನ ಮನಸ್ಸು ಬದಲಾವಣೆಗೊಂಡಿತು. ನೀತಿ ಭ್ರಷ್ಟರ ಮಾತುಗಳನ್ನು ಕೇಳಿ ಶ್ರೀ ಉದ್ಧಾನ ಶಿವಯೋಗಿಗಳ ಮನಸ್ಸಿಗೆ ನೋವನ್ನು ಉಂಟು ಮಾಡಿದೆ ಎಂದು ಅರಿತು, ಶ್ರೀ ಅನ್ನದಾನೇಶ್ವರ ಶಿವಾಚಾರ್ಯ ಸ್ವಾಮಿಗಳ ಪಾದಗಳ ಮೇಲೆ ತಲೆಯಿಟ್ಟು ಗೋಳಾಡಿದನು. ತಕ್ಷಣ ಮಠದಲ್ಲಿ ಮೊದಲಿನಂತೆಯೇ ಉಗ್ರಾಣದಲ್ಲಿ ದವಸ ಧಾನ್ಯವನ್ನು ಸಂಗ್ರಹಣೆ ಮಾಡಿ ಮಠಕ್ಕೆ ಮಾನ್ಯತೆಯನ್ನು ನೀಡಿ, ತಾಮ್ರ ಶಾಸನವನ್ನು ಬರೆಸಿಕೊಟ್ಟು ಶ್ರೀ ಉದ್ಧಾನ ಶಿವಯೋಗಿಗಳಿಗೆ ದ್ರೋಹ ಮಾಡಿದ್ದಕ್ಕೆ ಸರಿಯಾದ ಪ್ರಾಯಶ್ಚಿತ್ತ ಎಂದರೆ ಪ್ರಾಣತ್ಯಾಗವನ್ನು ಮಾಡುವುದು ಒಂದೇ ಎಂದು ಅರಿತು ಮಠದ ಮುಂದೆ ಪ್ರಾಣತ್ಯಾಗ ಮಾಡಿಕೊಂಡನು. ಶ್ರೀಅನ್ನದಾನೇಶ್ವರರು ಜೀವವನ್ನೇ ತ್ಯಾಗ ಮಾಡಿದ ಪಾಳೆಗಾರನಿಗೆ'ಉಪ್ಪರಿಗೆಯ ಬಸವೇಶ್ವರ'ಎಂದು ಮರಣೋತ್ತರ ಅಭಿಧಾನವಿತ್ತು ಮಠದ ಆಗ್ನೇಯ ಭಾಗದಲ್ಲಿ ಗದ್ದುಗೆಯನ್ನು ನಿರ್ಮಿಸಿದರು. ಇದನ್ನು ಈಗಲೂ ನೋಡಬಹುದಾಗಿದೆ.

ಪರಂಪರೆ:

೧. ಷ.ಬ್ರ.ಶ್ರೀ ಉದ್ಧಾನ ಶಿವಯೋಗಿಗಳು
೨. ಷ.ಬ್ರ.ಶ್ರೀ ಅನ್ನದಾನೇಶ್ವರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ರೇವಣಸಿದ್ಧದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಚಿಕ್ಕವೀರ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಮಹಾಕವಿ ಷಡಕ್ಷರಿದೇವ ಶಿವಾಚಾರ್ಯಸ್ವಾಮಿಗಳು (ಕನ್ನಡದ ಮಹಾಕವಿ)
೬. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಮುದ್ದುಮಲ್ಲ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ಜಡೆರುದ್ರ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ಗುರುಸಿದ್ಧ ಶಿವಾಚಾರ್ಯಸ್ವಾಮಿಗಳು
೧೦. ಷ.ಬ್ರ.ಶ್ರೀ ರುದ್ರಮುನಿ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
೧೧. ಷ.ಬ್ರ.ಶ್ರೀ ಗಂಗಾಧರ ಶಿವಾಚಾರ್ಯಸ್ವಾಮಿಗಳು
೧೨. ಷ.ಬ್ರ.ಶ್ರೀ ಮುದ್ದುವೀರ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
೧೩. ಷ.ಬ್ರ.ಶ್ರೀ ರುದ್ರಮುನಿ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
೧೪. ಷ.ಬ್ರ.ಶ್ರೀ ಚಿಕ್ಕವೀರ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
೧೫. ಷ.ಬ್ರ.ಶ್ರೀ ಇಮ್ಮಡಿ ಷಡಕ್ಷರಿ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು
೧೬. ಷ.ಬ್ರ.ಶ್ರೀ ಮುಮ್ಮಡಿ ಷಡಕ್ಷರಿ ದೇಶಿಕೇಂದ್ರ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಶ್ರೀ ಉದ್ಧಾನ ಶಿವಯೋಗಿಗಳ ಕೃಪಾಶೀರ್ವಾದದಿಂದ ಅಧಿಕಾರಕ್ಕೆ ಬಂದ ಶ್ರೀ ಅನ್ನದಾನೇಶ್ವರರು ಶ್ರೀ ರೇವಣಸಿದ್ಧ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳಿಗೆ ಪಟ್ಟಾಧಿಕಾರ ನೀಡಿ ಲಿಂಗೈಕ್ಯರಾಗಿದ್ದಾರೆ. ಇವರ ಗದ್ದುಗೆಯನ್ನು ಕರ್ತೃಗುರುಗಳ ಗದ್ದುಗೆಯ ಪಕ್ಕದಲ್ಲಿ ನಿರ್ಮಿಸಲಾಗಿದೆ. ಶ್ರೀ ರೇವಣಸಿದ್ಧ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು ಶಿವಪೂಜಾಸಿಪ್ಮರಾಗಿ, ಶಿವಾನುಭವಿಗಳಾಗಿ ನಾಡನ್ನು ಬೆಳಗಿಸಿ ಶ್ರೀ ಚಿಕ್ಕವೀರ ದೇಶಿಕೇಂದ್ರ

ಶಿವಾಚಾರ್ಯ ಸ್ವಾಮಿಗಳಿಗೆ ಅಧಿಕಾರವನ್ನು ನೀಡಿ ಲಿಂಗೈಕ್ಯರಾಗಿದ್ದಾರೆ. ಇವರ ಗದ್ದುಗೆಯು ಮಠದ ಆವರಣದಲ್ಲಿಯೇ ನಿರ್ಮಾಣಗೊಂಡಿದೆ. ಶ್ರೀ ಚನ್ನವೀರ ದೇಶಿಕರು ವೀರಶೈವ ಸಿದ್ಧಾಂತದ ಅರವತ್ತನಾಲ್ಕು ಆಚಾರಗಳನ್ನು ಕರಗತ ಮಾಡಿ ಕೊಂಡಿದ್ದ ಮಹಾಮೇಧಾವಿಗಳು.ಇವರ ಕಾಲದಲ್ಲಿ ಧನುಗೂರು ಮಠವು ಬಹಳ ಪ್ರಸಿದ್ಧಿಗೆ ಬಂದಿದೆ. ಇವರು ಕನ್ನಡಸಾಹಿತ್ಯ ಲೋಕವು ಮರೆಯಲಾಗದ ಮಹಾಕವಿ ಷಡಕ್ಷರಿ ದೇವರನ್ನು ಬಾಲ್ಯಾವಸ್ಥೆಯಲ್ಲೇ ಗುರುತಿಸಿ, ತಮ್ಮ ಆರೈಕೆಯಲ್ಲಿ ಪೋಷಿಸಿ, ಪಟ್ಟಾಧಿಕಾರದ ಅನುಗ್ರಹವನ್ನು ನೀಡಿ ಲಿಂಗೈಕ್ಯರಾಗಿದ್ದಾರೆ. ಇವರ ಗದ್ದುಗೆಯು ಮಠದ ಆವರಣದಲ್ಲಿ ಸ್ಥಾಪನೆಯಾಗಿದೆ.

ಮಹಾಕವಿಗೆ ಅಧಿಕಾರ: ಶ್ರೀ ಷಡಕ್ಷರ ದೇವರು ಶ್ರೀ ಚಿಕ್ಕವೀರ ದೇಶಿಕೇಂದ್ರ ಸ್ವಾಮಿಗಳಿಂದ ಶಿವದೀಕ್ಷೆ, ಪಟ್ಟಾಧಿಕಾರವನ್ನು ಪಡೆದು ವೀರಶೈವ ಸಿದ್ಧಾಂತದ ಆಚರಣೆಯನ್ನು ಮಾಡಿ ಕಾವ್ಯಶಕ್ತಿಯನ್ನು ಬೆಳೆಸಿಕೊಂಡಿದ್ದರು. ಮಠಾಧಿಪತಿಯಾಗಿ ಸಾಹಿತ್ಯ ಲೋಕಕ್ಕೆ ರಾಜಶೇಖರ ವಿಲಾಸ, ಶಿವದೀಕ್ಷಾರತ್ನಾವಳಿ, ಭಕ್ತಾದಿತ್ಯ ರತ್ನಾವಳಿ, ಬಸವರಾಜ ವಿಜಯ, ಸಂಸ್ಕೃತ ಕವಿಕರ್ಣ ರಸಾಯನಂ ಎಂಬ ಅನೇಕ ಮೌಲಿಕ ಕೃತಿಗಳನ್ನು ಚಂಪೂ ಶೈಲಿಯಲ್ಲಿ ರಚಿಸಿದ ಮಹಾ ಮೇಧಾವಿಗಳು. ಇವರು ಯಳಂದೂರು ಮತ್ತು ಧನುಗೂರು ಎರಡೂಕಡೆ ವಾಸ್ತವ್ಯ ಮಾಡುತ್ತಾ, ಎರಡೂ ಮಠದ ಆಡಳಿತವನ್ನು ನೋಡಿಕೊಂಡು ಹೋಗುತ್ತಿದ್ದರು.

ಶ್ರೀ ಷಡಕ್ಷರ ದೇವರ ಕಾವ್ಯ ವಿದ್ವತ್ತಿಗೆ ಮೆಚ್ಚಿದವರು ಅನೇಕರಾದರೆ, ಹಲುಬಿದವರೂ ಅನೇಕರು. ಹಲುಬಿದ ವಿದ್ವಾಂಸರು ಯಳಂದೂರಿನ ಯರಕಂಬಳಿಯಲ್ಲಿ 'ಲೀಲಾವತಿ' ಎಂಬ ಗ್ರಂಥವನ್ನು ಆನೆಯ ಮೇಲೆ ಮೆರವಣಿಗೆ ಮಾಡಿ ಮಠದ ಮುಂದೆ ಸಾಗಿ ಬಂದು ಷಡಕ್ಷರ ದೇವರಿಗೆ ಕಿರಿಕಿರಿ ಉಂಟುಮಾಡಲು ಪ್ರಯತ್ನಿಸಿದರು. ಇದಾದ ನಂತರ ಕುಹಕಿಗಳ ದೂರಿನಂತೆ ದೊರೆಯು ಷಡಕ್ಷರ ದೇವರನ್ನು ಆಸ್ಥಾನಕ್ಕೆ ಕರೆಸಿ, ಲೀಲಾವತಿ ಗ್ರಂಥದ ಬಗ್ಗೆ ವಿವರಣೆಯನ್ನು ಕೇಳುತ್ತಾನೆ. ಇದಕ್ಕಿಂತಲೂ ರಸಭರಿತ ಗ್ರಂಥವಿರುವಾಗ ಇದಕ್ಕೇಕೆ ಇಷ್ಟು ಮಹತ್ವ ಎಂದು ಶ್ರೀ ಷಡಕ್ಷರ ದೇವರು ನೇರವಾಗಿ ಉತ್ತರವನ್ನು ಕೊಡುತ್ತಾರೆ.ಆಗ ಅರಸನು ಒಂದು ವರ್ಷ ಕಾಲಾವಕಾಶವನ್ನು ನೀಡಿದನು. ಆಗ ಷಡಕ್ಷರ ದೇವರು ಧನುಗೂರಿಗೆ ಬಂದು 'ಲೀಲಾವತಿ' ಗ್ರಂಥಕ್ಕಿಂತಲೂ ಮಿಗಿಲಾದ ಕಾವ್ಯವನ್ನು ಸಾಹಿತ್ಯ ಲೋಕಕ್ಕೆ ಕೊಡಲು ನಿರ್ಧರಿಸಿಕೊಂಡು, ದೊರೆಯ ಸವಾಲಿಗೆ ಉತ್ತರ ಕೊಡಲು 'ರಾಜಶೇಖರ ವಿಲಾಸಂ' ಕಾವ್ಯವನ್ನು ಸೃಷ್ಟಿಮಾಡಿದರು. ಧನುಗೂರಿನಿಂದ ಯರಕಂಬಳಿ ಮಠಕ್ಕೆ ಬಂದು, ದೊರೆಯ ಆಸ್ಥಾನದಲ್ಲಿ 'ರಾಜಶೇಖರ ವಿಲಾಸಂ' ಕಾವ್ಯವನ್ನು ಮಂಡಿಸುವ ದಿನಾಂಕವನ್ನು ನಿಗದಿ ಮಾಡಿಕೊಂಡರು. ಶ್ರೀ ಷಡಕ್ಷರ ದೇಶಿಕೇಂದ್ರ ಸ್ವಾಮಿಗಳು ದೊರೆಯ ಸವಾಲಿಗೆ ಉತ್ತರ ಕೊಡುವುದನ್ನು ನೋಡಲು ಆಸ್ಥಾನ ವಿದ್ವಾಂಸರಾದಿಯಾಗಿ ಜನರು ಸೇರತೊಡಗಿದರು. ಶ್ರೀ ಷಡಕ್ಷರ ದೇವರು ತಮ್ಮ ಕಾವ್ಯವನ್ನು ರಸವತ್ತಾಗಿ ವಾಚಿಸತೊಡಗಿದಾಗ ವಿದ್ವಾಂಸರು, ದೊರೆಗಳೆಲ್ಲರೂ ಈ ಕಾವ್ಯ ಸೃಷ್ಟಿಗೆ ಮೆಚ್ಚಿದರು.

ಈ ರೀತಿ ಸವಾಲಿನ ಬದುಕನ್ನು ಬದುಕಿ ಧರ್ಮ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ವಿಜಯಿಯಾಗಿ, ಧಾರ್ಮಿಕ ಕ್ಷೇತ್ರ ಮತ್ತು ಸಾಹಿತ್ಯ ಕ್ಷೇತ್ರದ ಮರೆಯಲಾರದಂತಹ ಚೇತನವಾಗಿ ಬೆಳಗಿ, ಯರಕಂಬಳಿ ಮಠದಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಧನುಗೂರು ಮಠದ ಗುರುಪರಂಪರೆಯು ಬೆಳೆದು ಬಂದು ಮಠವನ್ನು ಶ್ರೀಮಂತಗೊಳಿಸಿದೆ.

ಕಷ್ಟದ ಕಾಲ: ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಪಟ್ಟಾಧಿಕಾರದ ವಿಷಯವಾಗಿ ಧನುಗೂರಿನ ಕುಹಕಿಗಳು ಶ್ರೀ ಗಂಗಾಧರ ಸ್ವಾಮಿಗಳಿಗೆ ಕಿರುಕುಳವನ್ನು ನೀಡತೊಡಗಿದರು. ಈ ತೊಂದರೆಯನ್ನು ಸಹಿಸಿಕೊಂಡು ಶ್ರೀ ಮುದ್ದುವೀರ ಸ್ವಾಮಿಗಳಿಗೆ ಪಟ್ಟಾಧಿಕಾರವನ್ನು ನೀಡಿದರು. ಇದಾದ ನಂತರ ಕುಹಕಿಗಳು ನೀಡುವ ತೊಂದರೆ ಹೆಚ್ಚಾಗಿ ಮಠವು ದುಸ್ಥಿತಿಯನ್ನು ಕಾಣತೊಡಗಿತು. ನಂತರ ಕಿರುಕುಳವನ್ನು ನೀಡುತ್ತಿದ್ದ ಕುಹಕಿಗಳು ಶರಣಾದರು. ಮಠದಲ್ಲಿ ತಲೆದೋರಿದ್ದ ಗೊಂದಲವು ನಿವಾರಣೆಯಾದ ಮೇಲೆ ತಮ್ಮ ಕರಕಮಲಸಂಜಾತ ಮುದ್ದುವೀರ ದೇಶಿಕೇಂದ್ರ ಸ್ವಾಮಿಗಳಿಗೆ ಮಠವನ್ನು ಒಪ್ಪಿಸಿ ದೇಶಸಂಚಾರಕ್ಕೆ ಹೊರಟು ಕನಕಪುರ ತಾಲ್ಲೂಕಿನ ಮುಳ್ಳಳ್ಳಿ ಗ್ರಾಮದಲ್ಲಿ ಲಿಂಗೈಕ್ಯರಾಗಿದ್ದಾರೆ. ನಂತರ ಬಂದ ಶ್ರೀ ಮುದ್ದುವೀರ ಸ್ವಾಮಿಗಳು ಕೊಳ್ಳೆಗಾಲ ತಾಲ್ಲೂಕಿನ ಪಾಳ್ಯದಲ್ಲಿ ಲಿಂಗೈಕ್ಯರಾಗಿದ್ದಾರೆ. ನಂತರ ಬಂದ ಶ್ರೀ ರುದ್ರಮುನಿ ದೇಶಿಕೇಂದ್ರಸ್ವಾಮಿಗಳು ದಾಸೋಹ ಕಾರ್ಯದಿಂದ ಜನಪ್ರಿಯರಾಗಿ ಸಾಮಾಜಿಕವಾಗಿ ಮಠವನ್ನು ಬೆಳೆಸಿ, ಮಾರ್ಚ್ ಇಪ್ಪತ್ತಾರು ೧೯೪೫ರಂದು ಲಿಂಗೈಕ್ಯರಾಗಿದ್ದಾರೆ. ಇವರ ಗದ್ದುಗೆಯು ಮಠದ ಆವರಣದಲ್ಲಿ ನಿರ್ಮಿತವಾಗಿದೆ. ಕೊಳ್ಳೆಗಾಲ ತಾಲ್ಲೂಕಿನ ಪಾಳ್ಯ ಗ್ರಾಮದಲ್ಲಿ ಚನ್ನವೀರ

ದೇಶಿಕೇಂದ್ರ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಧನುಗೂರು ಮಠದಲ್ಲಿ ಲಿಂಗೈಕ್ಯರಾಗಿದ್ದಾರೆ.

ಕೊಳ್ಳೆಗಾಲ ತಾಲ್ಲೂಕಿನ ಗುಂಡೇಗಾಲ ಗ್ರಾಮದಲ್ಲಿ ೧೯೧೪ರ ಜನವರಿ ಏಳರಂದು ಜನಿಸಿದ ಶ್ರೀ ಇಮ್ಮಡಿ ಷಡಕ್ಷರಿ ದೇಶಿಕೇಂದ್ರ ಸ್ವಾಮಿಗಳು ಶ್ರೀ ಸಿದ್ಧಗಂಗಾ ಕ್ಷೇತ್ರ ಗುರುಕುಲದಲ್ಲಿ ಶ್ರೀ ಉದ್ದಾನ ಶಿವಯೋಗಿಗಳ ಪರಮ ಶಿಷ್ಯರಾಗಿ ವಿದ್ಯಾರ್ಥಿ ಜೀವನವನ್ನು ಕಳೆದರು. ನಂತರ ಶ್ರೀ ಶಿವಕುಮಾರ ಸ್ವಾಮಿಗಳ ಸೇವೆಯನ್ನು ಮಾಡಿದರು. ಈ ಸಂದರ್ಭದಲ್ಲಿ ಕನಕಪುರದ ದೇಗುಲ ಮಠದ ಶ್ರೀ ಇಮ್ಮಡಿ ಮಹಾಲಿಂಗ ಸ್ವಾಮಿಗಳು ಇವರ ಸಹಪಾಠಿಗಳಾಗಿದ್ದರು. ಶ್ರೀ ಶಿವಕುಮಾರ ಸ್ವಾಮಿಗಳ ಆಶೀರ್ವಾದದಿಂದ ಪಾಳ್ಯ ಮಠದ ಅಧಿಕಾರವನ್ನು ವಹಿಸಿಕೊಂಡರು. ನಂತರ ಧನುಗೂರು ಮಠದ ಅಧಿಕಾರವನ್ನು ವಹಿಸಿಕೊಂಡು ಮಠಕ್ಕೆ ಗತಕಾಲದ ವೈಭವವನ್ನು ತರಲು ಬಹಳವಾಗಿ ಶ್ರಮಿಸಿದರು. ಮಠದ ಇತಿಹಾಸವನ್ನು ಬರೆಸಿದರು. ದಾಸೋಹ ಕ್ರಿಯೆ ಮತ್ತು ಧಾರ್ಮಿಕ ಕ್ರಿಯೆಗಳನ್ನು ಯಥಾವಿಧಿಯಾಗಿ ಪೂರೈಸಿ ಲಿಂಗೈಕ್ಯರಾದರು.

ಶ್ರೀ ಇಮ್ಮಡಿ ಷಡಕ್ಷರ ಸ್ವಾಮಿಗಳ ನಂತರ ಶ್ರೀ ಮುಮ್ಮಡಿ ಷಡಕ್ಷರ ದೇಶಿಕೇಂದ್ರ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಶ್ರೀ ಷಡಕ್ಷರ ಸ್ವಾಮಿಗಳು ನಂಜನಗೂಡು ತಾಲ್ಲೂಕಿನ ಮಾದನಹಳ್ಳಿಯ ಶ್ರೀ ಎಸ್. ಪಿ.ರಾಜಶೇಖರಯ್ಯ ಮತ್ತು ಶ್ರೀಮತಿ ನಾಗರತ್ನಮ್ಮನವರ ಪುತ್ರರಾಗಿ ೧೯೭೮ರ ಜುಲೈ ಹತ್ತರಂದು ಜನಿಸಿದರು. ನಂಜನಗೂಡು ಮತ್ತು ಮೈಸೂರಿನಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ಮಠಕ್ಕೆ ಬಂದು ೧೯೯೮ ರ ಆಗಸ್ಟ್ ಇಪ್ಪತ್ತೆಂಟರಂದು ಅಧಿಕಾರವನ್ನು ಸ್ವೀಕರಿಸಿರುತ್ತಾರೆ. ಪಟ್ಟಾಧಿಕಾರದ ಅನುಗ್ರಹವನ್ನು ರಾಜಾಪುರದ ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು ನೀಡಿರುತ್ತಾರೆ. ಚಿಕ್ಕವಯಸ್ಸಿನಲ್ಲೇ ಗುರುತರ ಜವಾಬ್ದಾರಿಯನ್ನು ವಹಿಸಿಕೊಂಡಿರುವ ಶ್ರೀ ಮುಮ್ಮಡಿ ಷಡಕ್ಷರಿ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು ಧಾರ್ಮಿಕ ಪ್ರಜ್ಞೆ, ಸಾಹಿತ್ಯದಲ್ಲಿ ಆಸಕ್ತಿ, ಸಾಮಾಜಿಕ ಕಳಕಳಿವುಳ್ಳವರಾಗಿದ್ದು, ರಂಭಾಪುರಿ ಪೀಠದ ಪ್ರಸಕ್ತ ಜಗದ್ಗುರುಗಳ ಪ್ರಭಾವದಿಂದ ಪ್ರೇರಿತರಾಗಿ ಪುರಾತನ ಕಾಲದಲ್ಲಿ ಈ ಮಠವು ಪಡೆದಿದ್ದ ವೈಭವ, ಆಗ ನಡೆಸುತ್ತಿದ್ದ ಧಾರ್ಮಿಕ ಕಾರ್ಯಗಳನ್ನು ಅಭ್ಯಾಸ ಮಾಡಿ, ಮಹಾಕವಿ ಶ್ರೀ ಷಡಕ್ಷರಿ ಸ್ವಾಮಿಗಳ ಬಗ್ಗೆ ಬೆಳಕು ಚೆಲ್ಲುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಹೊಸ ವಿಚಾರಗಳನ್ನು ಅಧ್ಯಯನ ಮಾಡಿಸಲು ಮುಂದಾಗಿದ್ದಾರೆ.

ಸ್ಮಾರಕಗಳು: ಧನುಗೂರಿನ ಮಠಕ್ಕೆ ಹೋದವರಿಗೆ ಗತವೈಭವದ ನೆನಪು ಬರುವಂತೆ ಮಾಡುವ ಕಲ್ಲಿನ ಮಠದ ಅವಶೇಷಗಳು ಕಾಣಸಿಗುತ್ತವೆ. ಕಲ್ಲುಮಂಟಪ, ಪರಂಪರೆಯ ಗದ್ದುಗೆಗಳಿವೆ. ಹಳೆಯ ಕಾಲದ ಮಂಚ, ರುದ್ರಾಭಿಷೇಕಕ್ಕೆ ಬಳಸುತ್ತಿದ್ದ ಪೂಜಾ ಸಾಮಗ್ರಿಗಳು, ದೊಡ್ಡ ಗಂಟೆ, ಮಠದಲ್ಲಿವೆ. ತೊಟ್ಟಿಯಾಕಾರದ ಕೈ ಹೆಂಚಿನ ಕಟ್ಟಡವನ್ನು ಒಳಗೊಂಡಿರುವ ಮಠದ ಕಟ್ಟಡವು ತುಂಬಾ ಹಳೆಯದಾಗಿದೆ.

ಅಭಿವೃದ್ಧಿ ಕಾರ್ಯಗಳು: ಮಠದ ಆಸ್ತಿಯಾಗಿ ಹದಿನೆಂಟು ಎಕರೆ ಜಮೀನು ಇದ್ದು, ಇದನ್ನು ಬೇಸಾಯಕ್ಕೆ ಯೋಗ್ಯಗೊಳಿಸಿ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ಇದರಿಂದ ಬರುವ ಆದಾಯವನ್ನು ಬಳಸಿಕೊಂಡು ಮಠದಲ್ಲಿ ಧಾರ್ಮಿಕ ಕಾರ್ಯಗಳನ್ನು ಮಾಡುತ್ತಿದ್ದಾರೆ. ಶ್ರೀ ಮುಮ್ಮಡಿ ಷಡಕ್ಷರಿ ದೇಶಿಕೇಂದ್ರ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಲು ಹಲವು ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ. ಮಠದಲ್ಲಿ ಮಹಾಕವಿ ಶ್ರೀ ಷಡಕ್ಷರಿ ಸ್ವಾಮಿಗಳ ಅಧ್ಯಯನ ಕೇಂದ್ರವನ್ನು ಪ್ರಾರಂಭಿಸಲು ಯೋಜನೆಯನ್ನು ತಯಾರಿಸಿಕೊಂಡಿದ್ದಾರೆ. ಮಠದ ವೈಭವವನ್ನು ಪುನರ್‌ಸ್ಥಾಪಿಸಲು ಶ್ರಮಿಸುತ್ತಿರುವ ಕಿರಿಯ ಸ್ವಾಮಿಗಳು ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಸಾಹಿತ್ಯಿಕವಾಗಿ ಬೆಳೆಸುವ ಕನಸು ಕಂಡು ದುಡಿಯುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಮುಮ್ಮಡಿ ಷಡಕ್ಷರಿ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು, ಶ್ರೀ ವೀರಸಿಂಹಾಸನಮಠ, ಧನುಗೂರು, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.
ಆಧಾರ: ಮ.ಮಲ್ಲಪ್ಪನವರ ಕೃತಿ 'ಧನುಗೂರು ಮಠದ ಗುರುಪರಂಪರೆ'

ನಂಚೇಗೌಡನದೊಡ್ಡಿ

ಮಳವಳ್ಳಿ ತಾಲ್ಲೂಕಿನ ನಂಚೇಗೌಡನದೊಡ್ಡಿಯು ತಾಲ್ಲೂಕು ಕೇಂದ್ರದ ಪೂರ್ವಕ್ಕೆ ಹದಿಮೂರು ಕಿ. ಮೀ.

ದೂರದಲ್ಲಿದೆ. ಇಲ್ಲಿ ದಾಸೋಹ ಮಠವು ಅಸ್ತಿತ್ವದಲ್ಲಿದೆ.

ದಾಸೋಹಮಠ: ನಂಜೇಗೌಡನದೊಡ್ಡಿ ಗ್ರಾಮದಲ್ಲಿ, ಗುಂಡ್ಲುಪೇಟೆ ತಾಲ್ಲೂಕಿನ ಸೋಮಹಳ್ಳಿ ಮಠದ ಶಾಖಾಮಠವಾಗಿರುವ ಈ ದಾಸೋಹ ಮಠವು ೧೯೬೮ ರಲ್ಲಿ ಪ್ರಾರಂಭಗೊಂಡಿದೆ. ಗ್ರಾಮದಲ್ಲಿ ಧಾರ್ಮಿಕ ಚಟುವಟಿಕೆಯನ್ನು ನಡೆಸಲು ಗುರುಗಳ ಆವಶ್ಯಕತೆಯಿದೆ ಎಂಬು ಅರಿತ ಗ್ರಾಮದ ಜನ ಮಠಕ್ಕಾಗಿ ಸುಸಜ್ಜಿತವಾದ ಕಟ್ಟಡವನ್ನು ನಿರ್ಮಿಸಿ ಶ್ರೀ ದೇವಪ್ಪ ದೇವರು ಸ್ವಾಮಿಗಳನ್ನು ಕರೆತಂದು ನೇಮಕ ಮಾಡಿದರು. ನೂತನವಾಗಿ ಪ್ರಾರಂಭಗೊಂಡ ಈ ಮಠದ ಅಧಿಕಾರವನ್ನು ವಹಿಸಿಕೊಂಡ ಶ್ರೀ ದೇವಪ್ಪದೇವರು ಸ್ವಾಮಿಗಳು ಕಂತೆಭಿಕ್ಷ ಕಾಯಕವನ್ನು ಮಾಡುತ್ತಾ ಹಸಿದ ಅಸಹಾಯಕರಿಗೆ ಮಧ್ಯಾಹ್ನ ಮತ್ತು ರಾತ್ರಿ ವೇಳೆ ಪ್ರಸಾದವನ್ನು ನೀಡುತ್ತಿದ್ದಾರೆ. ಮಠದಲ್ಲಿ ಧಾರ್ಮಿಕ ವಾತಾವರಣವನ್ನು ಸೃಷ್ಟಿಸಲು ವೀರಶೈವ ಭಜನಾಸಂಘವನ್ನು ಸ್ಥಾಪಿಸಿ, ಪ್ರತಿದಿನ ರಾತ್ರಿ ಭಜನೆ ಕಾರ್ಯಕ್ರಮ ವನ್ನು ಏರ್ಪಡಿಸಿ ಧಾರ್ಮಿಕ ವಿಚಾರಗಳನ್ನು ಮನರಂಜನೆಯ ಮೂಲಕ ತಿಳಿಸುತ್ತಿದ್ದಾರೆ. ಅಲ್ಲದೆ ಗ್ರಾಮದ ಮತ್ತು ಭಕ್ತರ ಮನೆಗಳಲ್ಲಿ ನಡೆಯುವ ಧಾರ್ಮಿಕ ಆಚರಣೆಗಳಲ್ಲಿ ಪಾಲ್ಗೊಳ್ಳುವ ಗುರುಗಳು ಭಕ್ತರಿಗೆ ಮಾರ್ಗದರ್ಶಕರಾಗಿದ್ದಾರೆ.

ವಿಳಾಸ: ಶ್ರೀ ದೇವಪ್ಪ ದೇವರು ಸ್ವಾಮಿಗಳು, ಶ್ರೀ ದಾಸೋಹಮಠ, ನಂಜೇಗೌಡನದೊಡ್ಡಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

ನೆಲ್ಲಿಕೆರೆ

ಮಳವಳ್ಳಿ ತಾಲ್ಲೂಕಿನ ನೆಲ್ಲಿಕೆರೆಯು ತಾಲ್ಲೂಕು ಕೇಂದ್ರದಿಂದ ನೈರುತ್ಯ ಭಾಗಕ್ಕೆ ಹನ್ನೆರಡು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಪಟ್ಟದ ಮಹಾಂತ ಸ್ವಾಮಿಗಳ ಮಠವು ಅಸ್ತಿತ್ವದಲ್ಲಿದೆ.

ಪಟ್ಟದ ಮಹಾಂತ ಸ್ವಾಮಿಗಳಮಠ: ನೆಲ್ಲಿಕೆರೆ ಗ್ರಾಮದಲ್ಲಿ ಚಾಮರಾಜನಗರ ತಾಲ್ಲೂಕಿನ ಮರಿಯಾಲ ಮಠದ ಶಾಖಾಮಠವಾದ ಪಟ್ಟದ ಶ್ರೀ ಮಹಾಂತ ಸ್ವಾಮಿಗಳ ಮಠವು ಗ್ರಾಮದ ಮಧ್ಯ ಭಾಗದಲ್ಲಿ ಮೂವತ್ತು ವರ್ಷಗಳ ಹಿಂದೆ ಸ್ಥಾಪನೆಗೊಂಡಿದೆ. ಈ ಗ್ರಾಮದಲ್ಲಿ ಮರಿಯಾಲ ಮಠದ ಶಾಖಾ ಮಠ ಪ್ರಾರಂಭವಾಗುವ ಮೊದಲೇ ಶ್ರೀ ಚನ್ನಬಸವ ಸ್ವಾಮಿಗಳು ಅಧಿಕಾರ ನಡೆಸುತ್ತಿದ್ದ ಮಠವು ಅಸ್ತಿತ್ವದಲ್ಲಿ ಇತ್ತು. ಶ್ರೀ ಚನ್ನಬಸವ ಸ್ವಾಮಿಗಳು ಕುಂದೂರು ಬೆಟ್ಟಕ್ಕೆಹೋಗಿ ಅನುಷ್ಠಾನಗೊಂಡು ಅಲ್ಲಿಯೇ ಲಿಂಗೈಕ್ಯರಾಗಿರುತ್ತಾರೆ. ಇವರ ನಂತರ ಈ ಮಠಕ್ಕೆ ಯಾರೂ ಪಟ್ಟಾಧಿಕಾರಿಗಳಿಲ್ಲದೆ ತನ್ನ ಅಸ್ತಿತ್ವವನ್ನು ಕಳೆದು ಕೊಂಡಿತು.. ಇದಾದ ಕೆಲವು ವರ್ಷಗಳ ನಂತರ ಇದೇ ಗ್ರಾಮದ ಶ್ರೀ ಗುಂಡಪ್ಪ ಎಂಬುವವರು ಮಠವನ್ನು ಸ್ಥಾಪಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರಬೇಕು ಎಂಬ ಕಾರಣಕ್ಕೆ, ತಮ್ಮ ಸ್ವಂತ ಆಸ್ತಿಯಾಗಿದ್ದ ಏಳು ಎಕರೆ ಜಮೀನನ್ನು ಮಠದ ಹೆಸರಿಗೆ ಬರೆದು ಮಠ ಕಟ್ಟಲು ನಿವೇಶನವನ್ನು ಮರಿಯಾಲ ಮಠಕ್ಕೆ ದಾನ ಮಾಡುತ್ತಾರೆ.

ಮಠ ಸ್ಥಾಪನೆ: ಶ್ರೀ ಗುಂಡಪ್ಪನವರ ಅದಮ್ಯ ಆಸೆಯನ್ನು ನೆರವೇರಿಸಲು ಶ್ರೀ ಸದಾಶಿವ ಸ್ವಾಮಿಗಳು, ಶ್ರೀ ನಿರ್ವಾಣ ಸ್ವಾಮಿಗಳನ್ನು ಕರೆತಂದು ನೇಮಿಸುತ್ತಾರೆ. ಇಲ್ಲಿ ನೇಮಕಗೊಂಡು ಅಧಿಕಾರವನ್ನು ನಡೆಸುತ್ತಿದ್ದ ಶ್ರೀ ನಿರ್ವಾಣ ಸ್ವಾಮಿಗಳು ನಂತರ ಕನಕಪುರದ ದೇಗುಲ ಮಠದ ಉತ್ತಾರಾಧಿಕಾರಿಯಾಗಿ ಆಯ್ಕೆಗೊಳ್ಳುತ್ತಾರೆ. ಈಗ ಭಿಕ್ಷದ ಮರಿಗಳೊಬ್ಬರು ಕಂತೆ ಭಿಕ್ಷೆ ಮಾಡಿಕೊಂಡು ಧಾರ್ಮಿಕ ಕ್ರಿಯೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಭಿಕ್ಷದ ಸ್ವಾಮಿಗಳು, ಶ್ರೀ ಪಟ್ಟದ ಮಹಾಂತ ಸ್ವಾಮಿಗಳ ಮಠ, ನೆಲ್ಲಿಕೆರೆ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

ಪೂರಿಗಾಲಿ

ಮಳವಳ್ಳಿ ತಾಲ್ಲೂಕಿನ ಪೂರಿಗಾಲಿಯು ತಾಲ್ಲೂಕು ಕೇಂದ್ರದ ದಕ್ಷಿಣಕ್ಕೆ ಇಪ್ಪತ್ತು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಚನ್ನಬಸವ ಒಡೆಯರ ಮಠವು ಅಸ್ತಿತ್ವದಲ್ಲಿದೆ.

ಚನ್ನಬಸವ ಒಡೆಯರಮಠ: ಪೂರಿಗಾಲಿ ಗ್ರಾಮದಲ್ಲಿ ಕಳೆದ ಇನ್ನೂರು ವರ್ಷಗಳ ಹಿಂದೆ ಬಾಳೆಹೊನ್ನೂರು ರಂಭಾಪುರಿ ಪೀಠದ ಶಾಖಾಮಠವಾಗಿ, ಶ್ರೀ ಚನ್ನಬಸವ ಒಡೆಯರ ಮಠವು ಸ್ಥಾಪನೆಯಾಗಿದೆ.

ಮಠ ಸ್ಥಾಪನೆ: ಗುಬ್ಬಿಯಲ್ಲಿ ನೆಲೆಗೊಂಡ ಗೋಸಲ ಚನ್ನಬಸವೇಶ್ವರರ ಕ್ಷೇತ್ರದಿಂದ ಲೋಕ ಸಂಚಾರವನ್ನು ಕೈಗೊಂಡು ಪೂರಿಗಾಲಿ ಗ್ರಾಮಕ್ಕೆ ಬಂದ ಶ್ರೀ ಚನ್ನಬಸವ ಒಡೆಯರು ಇಲ್ಲಿ ನೆಲೆನಿಂತು ತಪೋನುಷ್ಠಾನವನ್ನು ಕೈಗೊಂಡಿದ್ದರು. ಇವರ ತಪೋನಿಷ್ಠೆ ಮತ್ತು ಇವರು ಮಾಡುತ್ತಿದ್ದ ಶಿವಪೂಜಾನುಷ್ಠಾನಗಳನ್ನು ನೋಡಿದ ಭಕ್ತರು, ಶ್ರೀ ಚನ್ನಬಸವ ಒಡೆಯರ ಭಕ್ತರಾಗಿ ಅವರ ಸೇವೆಗೆ ನಿಲ್ಲುತ್ತಾರೆ. ಕಾಲಕ್ರಮೇಣ ಗುರುಗಳು ಮತ್ತು ಭಕ್ತರ ಒಡನಾಟ ಹೆಚ್ಚಾಗತೊಡಗಿತು. ಧಾರ್ಮಿಕ ಆಚರಣೆಗಾಗಿ ಪೂರಿಗಾಲಿ ಗ್ರಾಮದಲ್ಲಿ ಮಠವು ತಲೆ ಎತ್ತಿತು. ಈ ರೀತಿ ಪ್ರಾರಂಭಗೊಂಡ ಮಠವು ಕಾಲಕ್ರಮೇಣ ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡು ಧರ್ಮಾಚರಣೆಗಳನ್ನು ಮಾಡತೊಡಗಿತು.

ಪರಂಪರೆ:

೧. ಷ.ಬ್ರ.ಶ್ರೀ ಚನ್ನಬಸವಒಡೆಯರು
೨. ಷ.ಬ್ರ.ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಎರಡನೆಯ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಜಯದೇವ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯಲ್ಲಿ ನಾಲ್ಕು ಜನ ಗುರುಗಳ ಹೆಸರುಗಳನ್ನು ಮಾತ್ರ ಗುರುತಿಸಬಹುದಾಗಿದೆ. ಶ್ರೀ ಚನ್ನಬಸವ ಒಡೆಯರ ನಂತರ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ನಡೆಸಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ನಂತರ ಬಂದ ಎರಡನೆಯ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಧಾರ್ಮಿಕ ಹಾಗೂ ಸಾಮಾಜಿಕ ಅಭಿವೃದ್ಧಿ ಕಾರ್ಯದಲ್ಲಿ ಮುನ್ನಡೆಸಿ ಜನ ಮನ್ನಣೆಗೆ ಪಾತ್ರವಾಗುವಂತೆ ಮಾಡಿದರು. ಗುರುಗಳು ಮಠವನ್ನು ಮುನ್ನಡೆಸಿಕೊಂಡು ಹೋಗುವಂತೆ ತಮ್ಮ ಸಹೋದರ ಸಂಬಂಧಿಯಾದ ಶ್ರೀ ಜಯದೇವ ಸ್ವಾಮಿಗಳಿಗೆ ೧೯೬೧ರ ಆಗಸ್ಟ್ ಮೂವತ್ತರಂದು ಪಟ್ಟಾಧಿಕಾರದ ಅನುಗ್ರಹವನ್ನು ನೀಡಿದ ಇವರು ಮೇ ಐದು ೧೯೬೨ ರಲ್ಲಿ ಲಿಂಗೈಕ್ಯರಾಗಿದ್ದಾರೆ.

ಪುತ್ರವರ್ಗದ ಪರಂಪರೆಯಲ್ಲಿ ಬೆಳೆದ ಶ್ರೀ ಚನ್ನಬಸವ ಒಡೆಯರ ಮಠದ ಅಧಿಕಾರವನ್ನು ವಹಿಸಿಕೊಂಡ ಶ್ರೀ ಜಯದೇವ ಶಿವಾಚಾರ್ಯ ಸ್ವಾಮಿಗಳು ಮಡೇನಹಳ್ಳಿಯ ಶ್ರೀ ತೋಟಪ್ಪ ಮತ್ತು ಶ್ರೀಮತಿ ಗೌರಮ್ಮನವರ ಪುತ್ರರಾಗಿ ೧೯೪೩ರ ಏಪ್ರಿಲ್ ಐದರಂದು ಜನಿಸಿದರು. ಮೈಸೂರಿನ ಕ್ಯಾತನಹಳ್ಳಿ ವಿದ್ಯಾರ್ಥಿನಿಲಯದಲ್ಲಿ ಆಶ್ರಯವನ್ನು ಪಡೆದು ಸಂಸ್ಕೃತ, ವೇದ, ಆಗಮಗಳನ್ನು ಕಲಿತು ಮಠದ ಅಧಿಕಾರವನ್ನು ವಹಿಸಿಕೊಳ್ಳುತ್ತಾರೆ. ಧರ್ಮನಿಷ್ಠರು, ಶಿವಪೂಜಾನಿಷ್ಠರೂ ಆದ ಶ್ರೀ ಜಯದೇವ ಶಿವಾಚಾರ್ಯ ಸ್ವಾಮಿಗಳು ಮಠದಲ್ಲಿ ಧಾರ್ಮಿಕ ಕಾರ್ಯಗಳು ವಿಜೃಂಭಣೆಯಿಂದ ನಡೆಯುವಂತೆ ಮಾಡಿ, ಸಾರ್ವಜನಿಕರು ಮಠದ ಕಾರ್ಯಗಳಿಗೆ ಹೆಚ್ಚು ಸ್ಪಂದಿಸುವಂತೆ ಉತ್ತೇಜನವನ್ನು ನೀಡಿದರು.

ಅಭಿವೃದ್ಧಿಕಾರ್ಯಗಳು: ಗುರುಗಳು ಕಾಯಕಯೋಗಿಗಳಾಗಿ ಮಠದ ಆಸ್ತಿಯಾಗಿರುವ ಸುಮಾರು ಹತ್ತು ಎಕರೆ ಜಮೀನನ್ನು ಅಭಿವೃದ್ಧಿಪಡಿಸಿ ಮಠಕ್ಕೆ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ಹಿಂದಿನ ಗುರುಗಳು ನೂತನವಾಗಿ ನಿರ್ಮಿಸಿದ್ದ ಮಠದ ಕಟ್ಟಡವನ್ನು ಈಗಿನ ಶ್ರೀ ಜಯದೇವ ಸ್ವಾಮಿಗಳು ವಿಸ್ತರಿಸಿ ನವೀಕರಣಗೊಳಿಸಿದ್ದಾರೆ. ಅಲ್ಲದೆ ಮಠದ ಆವರಣದಲ್ಲಿ ಪರಂಪರೆಯ ಮೂರು ಗದ್ದುಗೆಗಳು ನಿರ್ಮಾಣಗೊಂಡಿದ್ದು ಈ ಗದ್ದುಗೆಗಳನ್ನು ನವೀಕರಣಗೊಳಿಸಿ, ಮಠದ ಪರಂಪರೆಯ ಐತಿಹಾಸಿಕ ಸ್ಮಾರಕಗಳಾಗಿ ಉಳಿಯುವಂತೆ ಮಾಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಗದ್ದುಗೆಗಳಿಗೆ ನಿತ್ಯ ರುದ್ರಾಭಿಷೇಕಪೂಜೆ, ಹುಣ್ಣಿಮೆ ಮತ್ತು ಅಮಾವಾಸ್ಯೆಗಳಲ್ಲಿ ವಿಶೇಷ ಪೂಜೆಗಳನ್ನು ನಡೆಸಲಾಗುತ್ತದೆ. ಗೌರಿ ಹಬ್ಬದಂದು ಗ್ರಾಮದ ಪರವಾಗಿ ಗೌರಿ ಮತ್ತು ಗಣೇಶನನ್ನು ಮಠದಲ್ಲಿಯೇ ಪ್ರತಿಷ್ಠಾಪಿಸಿ, ವಿಸರ್ಜನೆಗೊಳಿಸುವ ತನಕ ವಿಶೇಷ ಪೂಜೆ ಮತ್ತು ದಾಸೋಹವನ್ನು ನಡೆಸಲಾಗುತ್ತದೆ. ಅಲ್ಲದೆ ಗುರುಗಳು ಭಕ್ತರ ಮನೆಗಳ ಧಾರ್ಮಿಕ ಆಚರಣೆಗಳಿಗೆ ಸ್ಪಂದಿಸಿ ಮಾರ್ಗದರ್ಶನವನ್ನು ನೀಡುತ್ತಾರೆ. ಶ್ರೀ ಜಯದೇವ ಶಿವಾಚಾರ್ಯ ಸ್ವಾಮಿಗಳು ಮಠದ ಸಂಪ್ರದಾಯದ ಪ್ರಕಾರವಾಗಿ ತಮ್ಮ ಉತ್ತರಾಧಿಕಾರಿಗಳನ್ನು ನೇಮಕ ಮಾಡಿಕೊಂಡಿದ್ದಾರೆ. ಮಡೇನಹಳ್ಳಿಯ ಹದಿನೈದು ವರ್ಷದ ತಮ್ಮ ಸಹೋದರ ಸಂಬಂಧಿಯನ್ನು ನೇಮಕ ಮಾಡಿಕೊಂಡು ಮುದುಕುತೊರೆಯ ತೋಪಿನ ಮಠದ ಶ್ರೀ ಮಹಾಲಿಂಗ

ಶಿವಾಚಾರ್ಯ ಸ್ವಾಮಿಗಳ ಸಾನ್ನಿಧ್ಯದಲ್ಲಿ ಸಂಸ್ಕೃತ ಮತ್ತು ವೇದಾಧ್ಯಯನ ಮಾಡಲು ಕಳುಹಿಸಿಕೊಡಲಾಗಿದೆ.

ವಿಳಾಸ: ಷ.ಬ್ರ.ಶ್ರೀ ಜಯದೇವ ಶಿವಾಚಾರ್ಯ ಸ್ವಾಮಿಗಳು, ಶ್ರೀ ಚನ್ನಬಸವ ಒಡೆಯರಮಠ, ಪೂರಿಗಾಲಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

ಬೆಳಕವಾಡಿ

ಮಳವಳ್ಳಿ ತಾಲ್ಲೂಕಿನ ಬೆಳಕವಾಡಿಯು ತಾಲ್ಲೂಕು ಕೇಂದ್ರದ ದಕ್ಷಿಣಕ್ಕೆ ಹದಿನಾರು ಕಿ.ಮೀ. ದೂರದಲ್ಲಿದೆ. ಈ ಗ್ರಾಮವು ವ್ಯಾಪಾರಿ ಕೇಂದ್ರಸ್ಥಳವಾಗಿ ಅಭಿವೃದ್ಧಿಯನ್ನು ಪಡೆದಿದೆ. ಬೆಳಕವಾಡಿಯಲ್ಲಿ ಪುರಾತನ ಕಾಲದಿಂದ ಪ್ರಾರಂಭಗೊಂಡಿರುವ ಅತ್ತಿಗಾಲಿಪುರದ ಹೊಳೆಕೆರೆ ಮಠ ಮತ್ತು ಭಿಕ್ಷದ ಮಠ ಈ ಗ್ರಾಮದಲ್ಲಿ ಧಾರ್ಮಿಕ ವಾತಾವರಣ ಸೃಷ್ಟಿಯಾಗಲು ಕಾರಣವಾಗಿವೆ.

ಹೊಳೆಕೆರೆಮಠ: ಬೆಳಕವಾಡಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಗೊಂಡಿರುವ ಅತ್ತಿಗಾಲಿಪುರದ ಹೊಳೆಕೆರೆ ಮಠವು, ೨೦೦ ವರ್ಷಗಳ ಹಿಂದೆ ಅತ್ತಿಗಾಲಿ ಪುರದಿಂದ ಇಲ್ಲಿಗೆ ಸ್ಥಳಾಂತರಗೊಂಡು ತನ್ನ ಧಾರ್ಮಿಕ ಚಟುವಟಿಕೆಗಳನ್ನು ಪ್ರಾರಂಭಿಸಿತು. ಸುತ್ತೂರು ಶಿವರಾತ್ರೀಶ್ವರ ಮಠದ ಶಾಖಾಮಠವಾಗಿ ಬೆಳೆದಿದೆ. ಇಲ್ಲಿಗೆ ಸ್ಥಳಾಂತರಗೊಂಡ ಮೇಲೆ ಈ ಮಠದಲ್ಲಿ ಮೂರು ಜನ ಗುರುಗಳು ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಈ ಮಠವು ಹಿಂದೆ ಹೆಸರುವಾಸಿಯಾಗಿದ್ದು, ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಅನೇಕ ದಾನ ದತ್ತಿಗಳು ದೊರೆತ ಬಗ್ಗೆ ಉಲ್ಲೇಖಗಳಿವೆ. ಮೈಸೂರು ಅರಸರಿಂದ ದೊರೆತಿದ್ದ ಇನಾಂ ಭೂಮಿಯು ಸರ್ಕಾರಿ ಭೂ ಕಾಯಿದೆಯ ಅಡಿಯಲ್ಲಿ ಅನ್ಯರ ಪಾಲಾಯಿತು ಎಂದು ಮಠದ ಮೂಲಗಳು ತಿಳಿಸುತ್ತವೆ. ಪರಂಪರಾಗತ ಮಠದ ಈಗಿನ ಪಟ್ಟಾಧ್ಯಕ್ಷರಾದ ಶ್ರೀ ರಾಜಶೇಖರ ಸ್ವಾಮಿಗಳು ಕಳೆದ ಮೂವತ್ತೈದು ವರ್ಷಗಳ ಹಿಂದೆ ಪಟ್ಟಾಧಿಕಾರವನ್ನು ಪಡೆದು ಮಠದ ಧಾರ್ಮಿಕ ಚಟುವಟಿಕೆಗಳನ್ನು ಮಾಡುತ್ತಾ ಬಂದಿದ್ದಾರೆ. ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿರುವ ಇವರು ವಿದ್ವತ್ ಸಂಪನ್ನರಾಗಿದ್ದಾರೆ.

ಗದ್ದುಗೆಗಳು: ಮಠದ ಪರಂಪರೆಯಲ್ಲಿ ಈವರೆಗೆ ಎಷ್ಟು ಜನ ಗುರುಗಳು ಅಧಿಕಾರವನ್ನು ನಡೆಸಿದ್ದಾರೆ ಎಂಬ ಬಗ್ಗೆ ಸ್ಪಷ್ಟ ದಾಖಲೆಗಳಿಲ್ಲ. ಮಠದ ಪರಂಪರೆಯ ಗುರುಗಳ ಗದ್ದುಗೆಗಳು ಎಲ್ಲಿ ನಿರ್ಮಾಣವಾಗಿವೆ ಎಂಬುದರ ಬಗ್ಗೆಯೂ ಸರಿಯಾದ ಮಾಹಿತಿ ಲಭ್ಯವಿಲ್ಲದಾಗಿದೆ. ಆದರೆ ಮಠದ ಆವರಣದಲ್ಲಿ ಒಂದು ಗದ್ದುಗೆ ಮತ್ತು ಮಠದ ಗದ್ದೆಯಲ್ಲಿ ಒಂದು ಗದ್ದುಗೆ ನಿರ್ಮಾಣವಾಗಿರುವುದನ್ನು ಕಾಣಬಹುದು.

ವಿಳಾಸ: ಶ್ರೀ ರಾಜಶೇಖರ ಸ್ವಾಮಿಗಳು, ಶ್ರೀ ಹೊಳೆಕೆರೆ ಮಠ, ಬೆಳಕವಾಡಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

ಭಿಕ್ಷದಮಠ: ಬೆಳಕವಾಡಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಭಿಕ್ಷದ ಮಠವು ಚಾಮರಾಜನಗರ ತಾಲ್ಲೂಕಿನ ಸೋಮಹಳ್ಳಿಯ ಶಾಖಾಮಠವಾಗಿದೆ. ಈ ಮಠವನ್ನು ಎಂಬತ್ತು ವರ್ಷಗಳ ಹಿಂದೆ ಶ್ರೀ ಬಸಪ್ಪ ಸ್ವಾಮಿಗಳು ಪ್ರಾರಂಭ ಮಾಡಿದ್ದಾರೆ. ಇವರ ಕಾಲದಲ್ಲಿ ಸುಸಜ್ಜಿತ ಕಟ್ಟಡವನ್ನು ಕಟ್ಟಿಸಿ, ಕಂತೆಭಿಕ್ಷ ಕಾಯಕವನ್ನು ಮಾಡುತ್ತಾ ದಾಸೋಹ ಕ್ರಿಯೆಯನ್ನು ಯಶಸ್ವಿಯಾಗಿ ನಡೆಸುತ್ತಿದ್ದರು. ನಂತರ ಭಕ್ತರು ಮಠದ ಮುಂಭಾಗದಲ್ಲಿ ಕಟ್ಟಡವನ್ನು ನಿರ್ಮಿಸಿ, ಮಠದ ಕಟ್ಟಡವನ್ನು ವಿಸ್ತರಿಸಿರುತ್ತಾರೆ. ಶ್ರೀ ಬಸಪ್ಪ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಇವರ ಸಮಾಧಿಯನ್ನು ಮಠದ ಆವರಣದಲ್ಲಿಯೇ ಮಾಡಿ ಗದ್ದುಗೆಯನ್ನು ನಿರ್ಮಿಸಲಾಗಿದೆ. ಈಗ ಶ್ರೀ ನಾಗರಾಜ ಸ್ವಾಮಿಗಳು ಕಂತೆಭಿಕ್ಷ ಕಾಯಕವನ್ನು ಮಾಡಿಕೊಂಡು ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ನಾಗರಾಜ ಸ್ವಾಮಿಗಳು, ಶ್ರೀ ಭಿಕ್ಷದ ಮಠ, ಬೆಳಕವಾಡಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

ಬೆಳಕೋಡಿಹೊಸಹಳ್ಳಿ

ಮಳವಳ್ಳಿ ತಾಲ್ಲೂಕಿನ ಬೆಳಕೋಡಿಹೊಸಹಳ್ಳಿಯು ತಾಲ್ಲೂಕು ಕೇಂದ್ರದ ದಕ್ಷಿಣಕ್ಕೆ ಹದಿನೈದು ಕಿ.ಮೀ. ದೂರದಲ್ಲಿದೆ.

ಇಲ್ಲಿ ಶ್ರೀ ಸಿದ್ಧಮಲ್ಲೇಶ್ವರ ಪಟ್ಟದಮಠವು ಅಸ್ತಿತ್ವದಲ್ಲಿದೆ.

ಸಿದ್ಧಮಲ್ಲೇಶ್ವರ ಪಟ್ಟದಮಠ: ಬೆಳಕೋಡಿಹೊಸಹಳ್ಳಿ ಗ್ರಾಮದಲ್ಲಿ ಚಾಮರಾಜನಗರ ತಾಲ್ಲೂಕಿನ ಸೋಮಹಳ್ಳಿಯ ಶಾಖಾಮಠವಾದ ಶ್ರೀ ಸಿದ್ಧಮಲ್ಲೇಶ್ವರ ಪಟ್ಟದಮಠವು ಶ್ರೀ ಸಿದ್ಧಮಲ್ಲಿಕಾರ್ಜುನ ಸ್ವಾಮಿಗಳಿಂದ ಸ್ಥಾಪನೆಗೊಂಡಿದೆ.ಗ್ರಾಮದ ಮಧ್ಯಭಾಗದಲ್ಲಿರುವ ಈ ಮಠವು ಕಂತೆ ಭಿಕ್ಷ ಕಾಯಕವನ್ನು ಮಾಡುತ್ತಾ ದಾಸೋಹ ಕ್ರಿಯೆಗಳನ್ನು ನಡೆಸುತ್ತಾ ಬಂದಿದೆ.

ಪರಂಪರೆ:

೧. ಶ್ರೀ ಸಿದ್ಧಮಲ್ಲಿಕಾರ್ಜುನಸ್ವಾಮಿಗಳು
೨. ಶ್ರೀ ಮಹಾಂತಸ್ವಾಮಿಗಳು
೩. ಶ್ರೀ ಸಿದ್ಧಲಿಂಗಸ್ವಾಮಿಗಳು
೪. ಶ್ರೀ ಗುರುಮಲ್ಲಸ್ವಾಮಿಗಳು
೫. ಶ್ರೀ ಪಂಚಾಕ್ಷರಿಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಪರಂಪರೆಯ ಎಲ್ಲಾ ಗುರುಗಳು ಕಂತೆಭಿಕ್ಷವನ್ನು ಮಾಡುತ್ತಾ ಧಾರ್ಮಿಕ ಚಟುವಟಿಕೆಯನ್ನು ನಡೆಸುತ್ತಾ ಮಠವನ್ನು ಮುನ್ನಡೆಸಿಕೊಂಡು ಬಂದಿದ್ದಾರೆ.ಶ್ರೀ ಮಹಾಂತ ಸ್ವಾಮಿಗಳು ಅಧಿಕಾರವನ್ನು ನಡೆಸಿ, ಕಳೆದ ಮೂವತ್ತೈದು ವರ್ಷಗಳ ಹಿಂದೆ ಲಿಂಗೈಕ್ಯರಾದರು. ನಂತರ ಬಂದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಕೆಲವು ದಿನ ಇಲ್ಲಿ ನೆಲೆಸಿ, ಬೇರೆ ಕಡೆಗೆ ಹೋದಕಾರಣ ಮಠವು ಖಾಲಿ ಉಳಿಯಬೇಕಾಯಿತು. ನಂತರ ಶ್ರೀ ಗುರುಮಲ್ಲ ಸ್ವಾಮಿಗಳು ಅಧಿಕಾರವನ್ನು ನಡೆಸಿ, ಮಠವನ್ನು ಮುನ್ನಡೆಸಿದ್ದಾರೆ. ಈಗಿನ ಪಟ್ಟಾಧ್ಯಕ್ಷರಾದ ಶ್ರೀ ಪಂಚಾಕ್ಷರಿ ಸ್ವಾಮಿಗಳು ನರಿಪುರದ ಶ್ರೀ ನಿಂಗಪ್ಪ ಮತ್ತು ಶ್ರೀಮತಿ ಮಹದೇವಮ್ಮನವರ ಪುತ್ರರಾಗಿ ೧೯೭೦ರಲ್ಲಿ ಜನಿಸಿದರು. ಶ್ರೀ ಪಂಚಾಕ್ಷರಿ ಸ್ವಾಮಿಗಳು ಸಿದ್ಧಗಂಗೆಯಲ್ಲಿ ಆಶ್ರಯ ಪಡೆದು ಪದವಿಯನ್ನು ಮುಗಿಸಿ, ಹೊಸಳ್ಳಿಯ ಈ ಮಠಕ್ಕೆ ೧೯೯೦ ಜೂನ್ ಮೂರರಂದು ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ.

ಧಾರ್ಮಿಕ ಚಟುವಟಿಕೆ: ಗುರುಗಳ ಗದ್ದುಗೆಗಳಿಗೆ ಪೂಜೆ ಹಾಗೂ ಎರಡೂ ವೇಳೆ ಕಂತೆಭಿಕ್ಷ ಮಾಡಿ ದಾಸೋಹ ಕಾರ್ಯವನ್ನು ನಡೆಸುತ್ತಿದ್ದಾರೆ. ವಾರಕ್ಕೊಮ್ಮೆ ಭಜನೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಶರಣರ ವಚನಗಳನ್ನು ಪ್ರಚಾರಪಡಿಸಲಾಗುತ್ತಿದೆ.

ವಿಳಾಸ: ಶ್ರೀ ಪಂಚಾಕ್ಷರಿ ಸ್ವಾಮಿಗಳು, ಶ್ರೀ ಸಿದ್ಧಮಲ್ಲೇಶ್ವರ ಪಟ್ಟದಮಠ, ಬೆಳಕವಾಡಿ ಹೊಸಹಳ್ಳಿ, ಮಳವಳ್ಳಿ ತಾ, ಮಂಡ್ಯಜಿಲ್ಲೆ.

ಬೊಪ್ಪೇಗೌಡನಪುರ

ಮಳವಳ್ಳಿ ತಾಲ್ಲೂಕಿನ ಬೊಪ್ಪೇಗೌಡನಪುರವು ಹೋಬಳಿಯ ಕೇಂದ್ರ ಸ್ಥಳವಾಗಿದೆ. ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹದಿನೈದು ಕಿ.ಮೀ. ದೂರದಲ್ಲಿರುವ ಈ ಗ್ರಾಮದಲ್ಲಿ ಮಂಟೇಸ್ವಾಮಿ ಮತ್ತು ರಂಭಾಪುರಿಪೀಠದ ಶಾಖಾಮಠವಾದ ಹೊರಮಠ ಹಾಗೂ ದಾಸೋಹಮಠವು ಸ್ಥಾಪನೆಗೊಂಡು ಈ ಗ್ರಾಮವನ್ನು ಧಾರ್ಮಿಕವಾಗಿ ಹೆಚ್ಚು ಅಭಿವೃದ್ಧಿ ಪಡಿಸಿವೆ. ಪ್ರಸ್ತುತ ದಾಸೋಹ ಮಠದಲ್ಲಿ ಗುರುಗಳು ಯಾರೂ ಇಲ್ಲದೆ ಧಾರ್ಮಿಕ ಚಟುವಟಿಕೆಗಳು ಸ್ಥಗಿತಗೊಂಡಿವೆ. ಮಂಟೇಸ್ವಾಮಿ ಗದ್ದುಗೆಯಲ್ಲಿ ನಿತ್ಯ ಪೂಜಾ ಕಾರ್ಯಗಳು ನಡೆಯುತ್ತಾ ಬಂದಿವೆ. ಪ್ರಸ್ತುತ ಹೊರಮಠವು ಊರಿನ ಉತ್ತರ ಭಾಗದ ಹೊರವಲಯದಲ್ಲಿ ಸ್ಥಾಪನೆಗೊಂಡು ತನ್ನ ಧಾರ್ಮಿಕ ಚಟುವಟಿಕೆಗಳನ್ನು ನಡೆಸುತ್ತಾ ಬಂದಿದೆ.

ಹೊರಮಠ: ಬೊಪ್ಪೇಗೌಡನಪುರದ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ರಂಭಾಪುರಿ ಪೀಠದ ಶಾಖಾಮಠವಾದ ಶಿಷ್ಯವರ್ಗದ ಈ ಮಠವು ಊರಿನ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ಕಾರಣಕ್ಕೆ 'ಹೊರಮಠ'ಎಂದು ಹೆಸರು ಪಡೆದಿದೆ. ಪುರಾತನ ಕಾಲದಲ್ಲಿ ಈ ಗ್ರಾಮದಲ್ಲಿ ಸ್ಥಾಪನೆಗೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದಿದೆ.

ಅಸ್ತಿತ್ವಗೊಂಡ ಮಠ: ಮಠವು ಪುರಾತನ ಕಾಲದಿಂದಲೂ ಅಸ್ತಿತ್ವದಲ್ಲಿತ್ತು ಎಂದು ಹೇಳಲಾದರೂ ಮಠದ ಸ್ಥಾಪಕರು ಯಾರು ಎಂದು ಗುರುತಿಸುವುದು ಕಷ್ಟವಾಗಿದೆ. ಕಾರಣ ಮಠವು ಅನೇಕ ಬಾರಿ ಬೇರೆ ಬೇರೆ ಕಡೆಗೆ ಸ್ಥಳಾಂತರಗೊಂಡು

ಅಂತಿಮವಾಗಿ ಈಗ ಊರಿನ ಉತ್ತರದ ಹೊರಭಾಗದಲ್ಲಿ ಸ್ಥಾಪನೆಗೊಂಡಿದೆ. ಈ ಕಾರಣಕ್ಕೆ ಸ್ಥಾಪಕರ ಮತ್ತು ಪರಂಪರೆಯ ಗುರುಗಳ ಹೆಸರುಗಳು ಪೂರ್ಣವಾಗಿ ಲಭ್ಯವಾಗಿಲ್ಲ.

ಪರಂಪರೆ: ಪ್ರಸ್ತುತ ತಿಳಿದು ಬಂದಂತೆ ಶ್ರೀ ಕರಿಬಸವ ಒಡೆಯರ ಕಾಲದಲ್ಲಿ ಊರಿನ ಪೂರ್ವಭಾಗದಲ್ಲಿ ಮಠವು ಸ್ಥಾಪನೆಗೊಂಡಿತ್ತು.ಇಲ್ಲಿ ಅನುಷ್ಠಾನಗೊಂಡಿದ್ದ ಶ್ರೀ ಕರಿಬಸವ ಒಡೆಯರು ಮಠವನ್ನು ಸ್ಥಾಪನೆಮಾಡಿ ಪರಂಪರೆಯನ್ನು ಬೆಳೆಸಿರುತ್ತಾರೆ ಎಂದು ಹೇಳಲಾಗುತ್ತದೆ. ಶ್ರೀ ಕರಿಬಸವ ಒಡೆಯರ ನಂತರ ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ ಮುನ್ನಡೆಸಿಕೊಂಡು ಬರುತ್ತಿದ್ದರು. ಇವರ ಕಾಲದಲ್ಲಿ ಪಂಜಿನಕಳ್ಳರು ಮಠವನ್ನು ಲೂಟಿ ಮಾಡುತ್ತಾರೆ. ಆಗ ಮಠವು ಭಾರಿ ನಷ್ಟವನ್ನು ಅನುಭವಿಸಬೇಕಾಯಿತು. ಇದರಿಂದ ಗುರುಗಳು ಧೃತಿಗೆಡದೆ ಮಠವನ್ನು ಮುನ್ನಡೆಸಿಕೊಂಡು ಬಂದು ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಮಠವು ಮಠಾಧೀಶ್ವರರು ಇಲ್ಲದೆ ಖಾಲಿ ಉಳಿಯುತ್ತದೆ. ನಂತರ ಮಠದ ಕಟ್ಟಡವು ಶಿಥಿಲಗೊಂಡು ಪೂರ್ಣ ಜೀರ್ಣಾವಸ್ಥೆಗೆ ಬರುತ್ತದೆ. ಖಾಲಿ ಉಳಿದ ಮಠಕ್ಕೆ ಶ್ರೀ ನಿಜಗುಣ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಊರಿನ ಸಮೀಪದಲ್ಲಿದ್ದ ಕೆರೆಯ ದಡದಲ್ಲಿ ಸ್ಥಾಪನೆ ಮಾಡುತ್ತಾರೆ. ಈ ಮಠದ ಅಧಿಕಾರಿಗಳಾಗಿ ತಮ್ಮ ಕೊನೆಗಾಲದವರೆಗೂ ಉತ್ತರಾಧಿಕಾರಿಗಳನ್ನು ಆಯ್ಕೆಮಾಡಿಕೊಳ್ಳದೆ ಲಿಂಗೈಕ್ಯರಾಗಿದ್ದಾರೆ. ಶ್ರೀ ನಿಜಗುಣ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಮಠವು ಖಾಲಿ ಉಳಿದು ಪುನಃ ಜೀರ್ಣಾವಸ್ಥೆಗೊಳ್ಳುತ್ತದೆ.

ಜೀರ್ಣಗೊಂಡಿದ್ದ ಮಠಕ್ಕೆ ಲೋಕಸಂಚಾರ ಕೈಗೊಂಡು ಈ ಗ್ರಾಮಕ್ಕೆ ಆಗಮಿಸಿದ ಸ್ವಾಮಿಗಳೊಬ್ಬರು(ಹೆಸರು ತಿಳಿದು ಬಂದಿಲ್ಲ) ಪಾಳು ಬಿದ್ದಿದ್ದ ಮಠದ ಕಟ್ಟಡವನ್ನು ದುರಸ್ಥಿಗೊಳಿಸಿ ಮಠದ ಆಡಳಿತವನ್ನು ನೋಡಿಕೊಳ್ಳತೊಡಗುತ್ತಾರೆ. ಇವರ ಕಾಲದಲ್ಲಿ ಮಠವು ಸುಸ್ಥಿತಿಗೆ ಬರುತ್ತಿದ್ದ ವೇಳೆಯಲ್ಲಿಯೇ ಮಠ ಮತ್ತೊಮ್ಮೆ ಲೂಟಿಗೊಳಗಾಗುತ್ತದೆ. ನಂತರ ಶ್ರೀ ಶಿವಬಸವ ಸ್ವಾಮಿಗಳು ಅಧಿಕಾರಕ್ಕೆ ಬಂದು ಗ್ರಾಮದ ಮಧ್ಯದಲ್ಲಿ ಮಠವನ್ನು ಸ್ಥಾಪನೆ ಮಾಡುತ್ತಾರೆ. ಇವರು ಲಿಂಗೈಕ್ಯರಾದ ನಂತರ ಮಠವು ಪುನಃ ಖಾಲಿ ಉಳಿಯುತ್ತದೆ. ಸುಮಾರು ವರ್ಷಗಳು ಖಾಲಿ ಉಳಿದ ಮಠಕ್ಕೆ ಕಪ್ಪಡಿ ಸಮೀಪದ ಲಿಂಗನಾಪುರ ಗ್ರಾಮದ ಶ್ರೀ ಕರಿಬಸವ ಶಿವಾಚಾರ್ಯ ಸ್ವಾಮಿಗಳು ಜೀರ್ಣಗೊಂಡಿದ್ದ ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿ ಪಡಿಸುತ್ತಾರೆ. ಶ್ರೀ ಕರಿಬಸವ ಶಿವಾಚಾರ್ಯ ಸ್ವಾಮಿಗಳಲ್ಲಿ ಕ್ರಿಯಾಶೀಲ ವ್ಯಕ್ತಿತ್ವ, ಕಾರ್ಯ ಸಾಧಿಸುವ ಛಲ ಇದ್ದ ಕಾರಣ ಮಠಕ್ಕೆ ಭದ್ರಬುನಾದಿಯನ್ನು ಹಾಕಿ ಬೆಳೆಸಿದರು. ಶ್ರೀ ಕರಿಬಸವ ಸ್ವಾಮಿಗಳು ಶಿವಪೂಜಾನಿಷ್ಠರಾಗಿ ಕಾಯಕ ಯೋಗಿಗಳಾಗಿ ಮಠವನ್ನು ಮುನ್ನಡೆಸಿ ಮಠಕ್ಕೆ ಒಂದು ಶಿಸ್ತು ಬದ್ಧ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟರು. ಇವರ ಕಾಲದಲ್ಲಿ ಮಠವು ಜನಮನ್ನಣೆ ಪಡೆದು ಧಾರ್ಮಿಕ ಚಟುವಟಿಕೆಗಳು ಮಠದಲ್ಲಿ ನಿರಂತರವಾಗಿ ನಡೆಯತೊಡಗಿದವು. ಧಾರ್ಮಿಕ ಚಟುವಟಿಕೆಗಳು ಹೆಚ್ಚಾದಂತೆಲ್ಲಾ ಗ್ರಾಮದ ಮಧ್ಯಭಾಗದಲ್ಲಿದ್ದ ಮಠದ ಕಟ್ಟಡ ಸಾಕಾಗದೆ ಹೋಯಿತು. ಈ ಕಾರಣಕ್ಕೆ ೧೯೬೫ ರಲ್ಲಿ ಮಠದ ಕಟ್ಟಡವನ್ನು ಗ್ರಾಮದ ಹೊರಭಾಗದ ಮೂರು ಎಕರೆ ಜಮೀನಿನ ಮಧ್ಯೆ ನಿರ್ಮಾಣ ಮಾಡಿ ಮಠದ ಆಡಳಿತವನ್ನು ಸ್ಥಳಾಂತರಿಸಲಾಯಿತು.

ಕ್ರಿಯಾಶೀಲರು: ಶ್ರೀ ಕರಿಬಸವ ಸ್ವಾಮಿಗಳು ಮಠವನ್ನು ಸುಸ್ಥಿತಿಗೆ ತಂದ ಮೇಲೆ ಮಠದ ಆಡಳಿತ ತಮ್ಮ ಕಾಲದ ನಂತರ ಸ್ಥಗಿತಗೊಳ್ಳಬಾರದು ಎಂಬ ಕಾರಣದಿಂದ ಶ್ರೀ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳನ್ನು ಉತ್ತಾರಾಧಿಕಾರಿಗಳನ್ನಾಗಿ ಆಯ್ಕೆ ಮಾಡಿಕೊಂಡರು. ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಬೊಪ್ಪೆ ಗೌಡನಪುರದ ಶ್ರೀ ಲಿಂಗದೇವರು ಮತ್ತು ಶ್ರೀಮತಿ ಚಂದ್ರಮ್ಮನವರ ಮಗನಾಗಿ ೧೯೭೦ರಲ್ಲಿ ಜನಿಸಿದರು. ಸಿದ್ಧಗಂಗೆ ಮತ್ತು ಕನಕಪುರದಲ್ಲಿ ಜ್ಯೋತಿಷ್ಯ, ಸಂಸ್ಕೃತ, ವೇದ ಆಗಮಗಳನ್ನು ಕಲಿತು ಬಂದರು. ೧೯೯೫ರಲ್ಲಿ ಪಟ್ಟಾಧಿಕಾರ ಪಡೆದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಹಿರಿಯ ಗುರುಗಳ ಮಾರ್ಗದರ್ಶನ ಮತ್ತು ಮಠದ ಭಕ್ತರ ಸಹಕಾರ ಪಡೆದು ಮಠವನ್ನು ಹೆಚ್ಚು ಅಭಿವೃದ್ಧಿಪಡಿಸತೊಡಗಿದ್ದಾರೆ. ಹಿಂದೆ ಅನೇಕ ತೊಂದರೆಗಳಿಗೆ ಸಿಕ್ಕಿದ್ದ ಮಠವು ಜೀರ್ಣಗೊಂಡಿದ್ದ ಸಂದರ್ಭದಲ್ಲಿ ಮಠದ ಆಸ್ತಿಅನ್ಯರ ಪಾಲಾಯಿತು. ಕಾಯಕಯೋಗಿಗಳಾದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಮಠದ ಧಾರ್ಮಿಕ ಚಟುವಟಿಕೆಗಳನ್ನು ನಡೆಸಲು ಸ್ಥಿರ ಆಸ್ತಿಯಾಗಿ ಜಮೀನನ್ನು ಖರೀದಿಸಿದರು. ಈ ರೀತಿ ಮಠಕ್ಕೆ ಆಸ್ತಿಯನ್ನು ಸಂಪಾದಿಸಿ

ಆದಾಯ ಬರುವಂತೆ ಮಾಡಿದರು.

ಪರಂಪರೆ:
೧. ಷ.ಬ್ರ.ಶ್ರೀ. ಕರಿಬಸವಒಡೆಯರು
೨. ಷ.ಬ್ರ.ಶ್ರೀ. ಸದಾಶಿವ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ. ನಿಜಗುಣ ಶಿವಾಚಾರ್ಯಸ್ವಾಮಿಗಳು
೪. (ಹೆಸರು ತಿಳಿದು ಬಂದಿಲ್ಲ)
೫. ಷ.ಬ್ರ.ಶ್ರೀ. ಶಿವಬಸವ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ. ಕರಿಬಸವ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ. ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಈ ರೀತಿ ಬೆಳೆದು ಬಂದ ಮಠದ ಪರಂಪರೆಯಲ್ಲಿ ಬರುವ ಗುರುಗಳ ನಾಲ್ಕು ಗದ್ದುಗೆಗಳು ದೊರೆತಿದ್ದು ಉಳಿದ ಗದ್ದುಗೆಗಳ ಶೋಧನೆಯನ್ನು ಮಾಡಬೇಕಾಗಿದೆ.

ಧಾರ್ಮಿಕ ಕಾರ್ಯಗಳು: ೧೯೬೫ರಲ್ಲಿ ಲಿಂಗೈಕ್ಯರಾದ ಶ್ರೀ ಕರಿಬಸವ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಯನ್ನು ನೂತನ ಮಠದ ಆವರಣದಲ್ಲಿ ಸ್ಥಾಪನೆ ಮಾಡಲಾಗಿದ್ದು ಈ ಗದ್ದುಗೆಗೆ ಮಂಟಪವನ್ನು ನಿರ್ಮಿಸಲಾಗಿದೆ. ಈ ಗದ್ದುಗೆಗೆ ನಿತ್ಯ ಎರಡು ವೇಳೆ ಪೂಜೆಯನ್ನು ಮಾಡಲಾಗುತ್ತಿದೆ. ಪ್ರತಿ ಹುಣ್ಣಿಮೆ, ಶ್ರಾವಣ, ಧನುರ್ಮಾಸಗಳಲ್ಲಿ ವಿಶೇಷ ಪೂಜೆ, ಕಾರ್ತೀಕದಲ್ಲಿ ದೀಪೋತ್ಸವವನ್ನು ನಡೆಸಲಾಗುತ್ತಿದೆ. ಕಾರ್ತೀಕ ಹುಣ್ಣಿಮೆಯಲ್ಲಿ ಹಿಂದಿನ ಗುರುಗಳ ಆರಾಧನೆ, ಧನುರ್ಮಾಸದ ಕೊನೆಯ ದಿನದಲ್ಲಿ ಹಿರಿಯ ಗುರುಗಳಾದ ಶ್ರೀ ಕರಿಬಸವ ಶಿವಾಚಾರ್ಯ ಸ್ವಾಮಿಗಳ ಆರಾಧನೆಯನ್ನು ನಡೆಸಲಾಗುತ್ತಿದೆ.

ಯುಗಾದಿ ಜಾತ್ರೆ ಮತ್ತು ಮಂಟೇಸ್ವಾಮಿ ಜಾತ್ರೆಗಳಲ್ಲಿ ದಾಸೋಹ ಕಾರ್ಯವನ್ನು ಮಠದ ವತಿಯಿಂದ ನಡೆಸಲಾಗುತ್ತಿದೆ. ಕಲಿಯುವ ಇಪ್ಪತ್ತು ಬಡಮಕ್ಕಳಿಗೆ ಮಠದಲ್ಲಿ ಆಶ್ರಯ ಕಲ್ಪಿಸಿಕೊಡಲಾಗಿದೆ. ಈ ಮಕ್ಕಳಿಗೆ ಹಾಗೂ ಮಠಕ್ಕೆ ಭೇಟಿ ನೀಡುವ ಭಕ್ತರಿಗೆ ಪ್ರತಿದಿನ ಪ್ರಸಾದದ ವ್ಯವಸ್ಥೆ ಮಾಡಲಾಗುತ್ತಿದೆ. ಮಠದ ವತಿಯಿಂದ'ಬಸವೇಶ್ವರ ಸಂಸ್ಕೃತ ಪಾಠಶಾಲೆ' ಯನ್ನು ನಡೆಸಲಾಗುತ್ತಿದೆ. ಪ್ರತಿ ದಿನ ಸಂಜೆ ಮಕ್ಕಳಿಂದ ಪ್ರಾರ್ಥನೆ ನಡೆಸಲಾಗುತ್ತಿದೆ.

ವಿಳಾಸ:ಷ.ಬ್ರ.ಶ್ರೀ ಚಂದ್ರಶೇಖರಶಿವಾಚಾರ್ಯಸ್ವಾಮಿಗಳು, ಶ್ರೀ ಹೊರಮಠ, ಜೊಪ್ಪೆ ಗೌಡನಪುರ, ಮಳವಳ್ಳಿ ತಾ, ಮಂಡ್ಯಜಿಲ್ಲೆ.

ಮಳವಳ್ಳಿ

ತಾಲ್ಲೂಕು ಕೇಂದ್ರವಾಗಿ ಬೆಳೆದಿರುವ ಮಳವಳ್ಳಿಯು ವ್ಯಾಪಾರ ಮತ್ತು ಕೃಷಿಯನ್ನು ಅವಲಂಬಿಸಿದೆ. ಈ ಪಟ್ಟಣದಲ್ಲಿ ವೀರಶೈವಧರ್ಮ ಬೆಳೆದ ಲಕ್ಷಣಗಳು ಕಂಡುಬರುತ್ತವೆ. ಹಿಂದೆ ಎಂಟು ಮಠಗಳು ಇಲ್ಲಿ ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಪ್ರಸ್ತುತ ಶ್ರೀ ಶಂಕರಮಠವನ್ನು ಮಾತ್ರ ಗುರುತಿಸಬಹುದಾಗಿದೆ.

ಶಂಕರಮಠ: ಮಳವಳ್ಳಿ ಪಟ್ಟಣದ ಕೋಟೆ ಬಡಾವಣೆಯ ಮಧ್ಯಭಾಗದಲ್ಲಿ, ಉಜ್ಜಯಿನಿ ಪೀಠದ ಶಾಖಾಮಠವಾದ ಶ್ರೀ ಶಂಕರಮಠವು ಪ್ರಾರಂಭಗೊಂಡಿದೆ. ಶ್ರೀ ಶಂಕರಾನಂದ ಸ್ವಾಮಿಗಳ ಕಾಲದಲ್ಲಿ ಈ ಮಠವು ಹೆಚ್ಚು ಅಭಿವೃದ್ಧಿಗೊಂಡು ಹೆಸರು ಮಾಡಿದ ಕಾರಣಕ್ಕೆ 'ಶಂಕರಮಠ'ಎಂದು ಹೆಸರು ಬಂದಿದೆ. ಶ್ರೀ ಶಂಕರಾನಂದ ಸ್ವಾಮಿಗಳಿಗೂ ಮೊದಲು ಈ ಮಠವು ಅಸ್ತಿತ್ವದಲ್ಲಿದ್ದು ಧಾರ್ಮಿಕ ಚಟುವಟಿಕೆಯಿಂದ ಹೆಸರು ಮಾಡಿತ್ತು. ಪರಂಪರಾಗತ ಈ ಮಠಕ್ಕೆ ಶ್ರೀ ಶಂಕರಾನಂದ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಶ್ರೀಮಂತಗೊಳಿಸಿ ಇಪ್ಪತ್ತು ವರ್ಷಗಳ ಹಿಂದೆ ಲಿಂಗೈಕ್ಯರಾಗಿದ್ದಾರೆ. ಅಂದಿನಿಂದ ಈ ಮಠವು ಖಾಲಿ ಉಳಿದಿದೆ. ಈಗ ಮಠಕ್ಕೆ ಹಲಗೂರು ಮಠದ ಗುರುಗಳ ಮಾರ್ಗದರ್ಶನದ ಮೇಲೆ ಶ್ರೀ ಸಿದ್ಧಲಿಂಗ ದೇವರನ್ನು ಉತ್ತರಾಧಿಕಾರಿ ಗಳನ್ನಾಗಿ ನೇಮಕಮಾಡಿ ಉನ್ನತ ವಿದ್ಯಾಭ್ಯಾಸಕ್ಕಾಗಿ ಕಳುಹಿಸಲಾಗಿದೆ.

ವಿಳಾಸ: ಶ್ರೀ ಸಿದ್ಧಲಿಂಗ ದೇವರು, ಶ್ರೀ ಶಂಕರ ಮಠ, ಮಳವಳ್ಳಿ, ಕೋಟೆ ಬಡಾವಣೆ, ಮಂಡ್ಯ ಜಿಲ್ಲೆ.

ರಾಗಿಬೊಮ್ಮನಹಳ್ಳಿ

ಮಳವಳ್ಳಿ ತಾಲ್ಲೂಕಿನ ರಾಗಿಬೊಮ್ಮನಹಳ್ಳಿಯು ತಾಲ್ಲೂಕು ಕೇಂದ್ರದ ಪಶ್ಚಿಮಕ್ಕೆ ನಾಲ್ಕು ಕಿ. ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಪಟ್ಟದಮಠವು ಅಸ್ತಿತ್ವದಲ್ಲಿದೆ.

ಪಟ್ಟದಮಠ: ರಾಗಿಬೊಮ್ಮನಹಳ್ಳಿ ಗ್ರಾಮದಲ್ಲಿ ಸುತ್ತೂರು ಮಠದ ಶಾಖಾಮಠವಾಗಿ ಇಲ್ಲಿನ ಪಟ್ಟದ ಮಠವು ಪ್ರಾರಂಭ ವಾಗಿದೆ. ಈ ಮಠದ ಸ್ಥಾಪನೆಯಿಂದ ಧಾರ್ಮಿಕ ಚಟುವಟಿಕೆಗಳು ಸಾಂಗವಾಗಿ ನಡೆಯುತ್ತಿವೆ. ರಾಗಿಬೊಮ್ಮನಹಳ್ಳಿಯ ಪೂರ್ವಭಾಗದ ಹೊರವಲಯದಲ್ಲಿ ಕೆರೆಯ ಮುಂದೆ ಪ್ರಶಾಂತ ಸ್ಥಳದಲ್ಲಿ ಸ್ಥಾಪನೆಗೊಂಡಿರುವ ಈ ಮಠವು ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಯ ಕೇಂದ್ರಬಿಂದುವಾಗಿ ಬೆಳೆದಿದೆ.

ಪಟ್ಟಾಧಿಕಾರಿಗಳ ನೇಮಕ: ಈ ಗ್ರಾಮದ ಪಟ್ಟದ ಮಠದ ಮಠಾಧೀಶ್ವರರಾಗಿ ಶ್ರೀ ಸಿದ್ಧಲಿಂಗ ಸ್ವಾಮಿಗಳು ಅರವತ್ತು ವರ್ಷಗಳ ಹಿಂದೆ ಅಧಿಕಾರವನ್ನು ಪಡೆದುಕೊಂಡಿದ್ದಾರೆ. ಶ್ರೀ ಸಿದ್ಧಲಿಂಗ ಸ್ವಾಮಿಗಳು ಅಧಿಕಾರಕ್ಕೆ ಬರುವ ಮೊದಲು ಈ ಮಠವು ಭಿಕ್ಷದ ಮಠವಾಗಿತ್ತು. ಶಂಕರಪ್ಪ ಎಂಬುವವರು ಭಿಕ್ಷಾಕಾಯಕವನ್ನು ಮಾಡುತ್ತಾ ಮಠವನ್ನು ಮುನ್ನಡೆಸಿಕೊಂಡು ಬಂದಿದ್ದರು. ಗ್ರಾಮದ ಜನರು ಈ ಮಠಕ್ಕೆ ಪಟ್ಟಾಧಿಕಾರಿಗಳನ್ನು ನೇಮಿಸಬೇಕು ಎಂಬ ಹಂಬಲದಿಂದ ಸುತ್ತೂರು ಮಠದ ಆಗಿನ ಗುರುಗಳಾದ ಶ್ರೀ ಶಿವರಾತ್ರೀಶ್ವರ ರಾಜೇಂದ್ರ ಸ್ವಾಮಿಗಳಲ್ಲಿ ವಿನಂತಿಸಿಕೊಂಡರು. ಗ್ರಾಮಸ್ಥರ ಅಪೇಕ್ಷೆಯಂತೆ ಹುಣಸೂರು ತಾಲ್ಲೂಕಿನ ರಾಮೇನಹಳ್ಳಿಯ ಗವಿಯಪ್ಪ ಮತ್ತು ಅಕ್ಕಮ್ಮನವರ ಮಗನಾಗಿ ಜನಿಸಿದ ಶ್ರೀ ಸಿದ್ಧಲಿಂಗ ಸ್ವಾಮಿಗಳನ್ನು ರಾಗಿಬೊಮ್ಮನಹಳ್ಳಿಯ ಮಠಕ್ಕೆ ಪಟ್ಟಾಧಿಕಾರಿಯನ್ನಾಗಿ ಮಾಡಿದರು.

ಪರಿವರ್ತನೆಗೊಂಡ ಮಠ: ಭಿಕ್ಷದ ಮಠವಾಗಿದ್ದ ಈ ಮಠವು ಶ್ರೀ ಸಿದ್ಧಲಿಂಗ ಸ್ವಾಮಿಗಳ ಪಟ್ಟಾಧಿಕಾರದಿಂದ ಪಟ್ಟದ ಮಠ ವಾಗಿ ಪರಿವರ್ತನೆಗೊಂಡು ಗ್ರಾಮದ ಧಾರ್ಮಿಕ ಚಟುವಟಿಕೆಗಳನ್ನು ಮಾಡತೊಡಗಿತು. ಶ್ರೀ ಸಿದ್ಧಲಿಂಗ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡ ಮೇಲೆ ಗ್ರಾಮದಲ್ಲಿ ಸಂಘಟಿತ ಪ್ರಯತ್ನದಿಂದ ಧರ್ಮವನ್ನು ಪ್ರಚಾರಗೊಳಿಸಿ ಭಕ್ತರನ್ನು ಮಠದ ಕಡೆಗೆ ಒಲಿಸಿ ಕೊಂಡರು. ಗುರುಗಳ ಧಾರ್ಮಿಕ ಚಟುವಟಿಕೆಗಳು ವಿಸ್ತಾರಗೊಂಡಂತೆ ಹಳೆಯ ಕಟ್ಟಡವು ಸಾಕಾಗದೆ ಹೋಯಿತು. ಈ ಕಾರಣಕ್ಕೆ ಮಠದ ಕಟ್ಟಡವು ವಿಸ್ತಾರಗೊಂಡಿತು.

ಧಾರ್ಮಿಕ ಕಾರ್ಯಗಳು: ಮಠದಲ್ಲಿ ದಾಸೋಹ ಕ್ರಿಯೆಗಳನ್ನು ಚುರುಕುಗೊಳಿಸಿದ ಗುರುಗಳು ಕಂತೆಭಿಕ್ಷೆ ಮಾಡದೆ ಮಠದಲ್ಲಿ ದಾಸೋಹವನ್ನು ಪ್ರಾರಂಭಿಸಿದರು. ವಾರಕ್ಕೊಮ್ಮೆ ಮಠದಲ್ಲಿ ಭಜನೆ ಕಾರ್ಯಕ್ರಮ, ಪ್ರವಚನಗಳನ್ನು ಏರ್ಪಡಿಸಿ ಶರಣ ಸಾಹಿತ್ಯವನ್ನು ಪ್ರಚಾರಪಡಿಸತೊಡಗಿದರು. ಶ್ರೀ ಸಿದ್ಧಲಿಂಗ ಸ್ವಾಮಿಗಳಿಂದ ಪಟ್ಟದ ಮಠದ ಪರಂಪರೆಯು ಪ್ರಾರಂಭಗೊಂಡಿ ರುವು ದರಿಂದ ಈ ಮಠದಲ್ಲಿ ಯಾವುದೇ ಗದ್ದುಗೆಗಳಿಲ್ಲ. ಗುರುಗಳು ಗ್ರಾಮದ ಭಕ್ತರ ಮನೆಗಳ ಧಾರ್ಮಿಕ ಚಟುವಟಿಕೆಗಳಲ್ಲಿ ಪಾಲ್ಗೊಂಡು ಈ ಗ್ರಾಮದಲ್ಲಿ ಧಾರ್ಮಿಕ ವಾತಾವರಣವನ್ನು ಬೆಳೆಸುವಲ್ಲಿ ಯಶಸ್ವಿಯಾಗಿದ್ದಾರೆ.

ವಿಳಾಸ: ಶ್ರೀ ಸಿದ್ಧಲಿಂಗ ಸ್ವಾಮಿಗಳು, ಶ್ರೀ ಪಟ್ಟದಮಠ, ರಾಗಿಬೊಮ್ಮನಹಳ್ಳಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

ಸರಗೂರು

ಮಳವಳ್ಳಿ ತಾಲ್ಲೂಕಿನ ಬಿ.ಜಿ.ಪುರ ಹೋಬಳಿಯ ಸರಗೂರು, ತಾಲ್ಲೂಕು ಕೇಂದ್ರದ ದಕ್ಷಿಣಕ್ಕೆ ಹದಿನೆಂಟು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಸರಗೂರುಮಠವು ಅಸ್ತಿತ್ವದಲ್ಲಿದೆ.

ಸರಗೂರುಮಠ: ಸರಗೂರು ಗ್ರಾಮದಲ್ಲಿ ಮಲೆಮಹದೇಶ್ವರರ ಕಾಲದಲ್ಲಿ ಮಠವು ಪ್ರಾರಂಭಗೊಂಡಿರಬಹುದೆಂದು ಹೇಳಲಾಗುತ್ತಿದೆ. ಈ ಮಠದ ಸ್ಥಾಪಕ ಗುರುಗಳಾದ ಶ್ರೀ ಬಾಳಪ್ಪ ಸ್ವಾಮಿಗಳು, ಮಹದೇಶ್ವರರ ಕಾಲದಲ್ಲಿ ಉತ್ತರದ ಕಡೆಯಿಂದ ಲೋಕಸಂಚಾರ ಮಾಡುತ್ತಾ ಈ ಗ್ರಾಮಕ್ಕೆ ಬಂದು ನೆಲೆಸಿ, ಅನುಷ್ಠಾನಗೊಂಡು ಮಠವನ್ನು ಸ್ಥಾಪಿಸಿರುತ್ತಾರೆ. ಉಜ್ಜಯಿನಿ ಪೀಠದ ಶಾಖಾ ಮಠವಾಗಿ ಪ್ರಾರಂಭಗೊಂಡಿರುವ ಈ ಮಠವು ಧಾರ್ಮಿಕ ಕೇಂದ್ರವಾಗಿ ಬೆಳೆದಿದೆ.

ಪರಂಪರೆ: ೧. ಷ.ಬ್ರ.ಶ್ರೀ ಬಾಳಪ್ಪ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಮಲ್ಲಿಕಾರ್ಜುನಒಡೆಯರು
೩. ಷ.ಬ್ರ.ಶ್ರೀ ನಂಜುಂಡ ಶಿವಾಚಾರ್ಯಸ್ವಾಮಿಗಳು (ಹಿರಿಯ ಗುರುಗಳು)
೪. ಷ.ಬ್ರ.ಶ್ರೀ ಬಸವರಾಜೇಂದ್ರ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದ್ದು ಶ್ರೀ ಬಾಳಪ್ಪ ಶಿವಾಚಾರ್ಯ ಸ್ವಾಮಿಗಳ ನಂತರ ಅನೇಕ ಗುರುಗಳು ಅಧಿಕಾರವನ್ನು ನಡೆಸಿದ್ದಾರೆ. ಆದರೆ ಅವರುಗಳ ಹೆಸರುಗಳು ಲಭ್ಯವಾಗಿಲ್ಲ. ಮಠದ ಹೊಲದಲ್ಲಿ ಅನೇಕ ಗದ್ದುಗೆಗಳು ದೊರೆತಿದ್ದು ಇವುಗಳ ಆಧಾರದ ಮೇಲೆ ಮಠದ ಪರಂಪರೆಯಲ್ಲಿ ಎಷ್ಟು ಜನ ಗುರುಗಳು ಅಧಿಕಾರ ನಡೆಸಿರಬಹುದೆಂದು ಖಚಿತಪಡಿಸಿಕೊಳ್ಳಬಹುದಾಗಿದೆ. ಮೇಲೆ ದಾಖಲಿಸಲಾಗಿರುವ ಎರಡನೆಯ ಗುರುಗಳಾದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಮಠವು ಹೆಚ್ಚು ಅಭಿವೃದ್ಧಿಯನ್ನು ಕಂಡಿದೆ ಎಂದು ಹೇಳಬಹುದು. ಮಹಾ ಪೂಜಾನಿಷ್ಠರಾದ ಶ್ರೀಮಲ್ಲಿಕಾರ್ಜುನ ಸ್ವಾಮಿಗಳು ಕಾಯಕಯೋಗಕ್ಕೆ ಹೆಚ್ಚು ಪ್ರಾಧಾನ್ಯತೆ ಕೊಟ್ಟು, ದುಡಿದವರಾಗಿದ್ದಾರೆ. ಕಾಯಕದಿಂದ ಗಳಿಸಿದ್ದನ್ನು ದಾಸೋಹಕ್ಕೆ ಬಳಸಿ, ದಾಸೋಹ ಮೂರ್ತಿಗಳಾಗಿ ಬೆಳಗಿದ್ದಾರೆ.

ದಾಸೋಹಮೂರ್ತಿ: ಕಪ್ಪಡಿಯಿಂದ ಬೊಪ್ಪೆ ಗೌಡನಪುರಕ್ಕೆ (ಬಿ.ಜಿ.ಪುರ) ಬರುವ ಭಕ್ತಾಧಿಗಳು ಸರಗೂರು ಗ್ರಾಮದ ಈ ಮಠದಲ್ಲಿ ವಿಶ್ರಾಂತಿಯನ್ನು ಪಡೆದು ದಣಿವಾರಿಸಿಕೊಂಡು, ಮಠದಲ್ಲಿ ನೀಡಲಾಗುತ್ತಿದ್ದ ಪ್ರಸಾದವನ್ನು ಸ್ವೀಕರಿಸಿ ಮುಂದೆ ಹೋಗುತ್ತಿದ್ದರು. ನಿತ್ಯ ಯಾತ್ರಾರ್ಥಿಗಳಿಗೆ ಅನ್ನ ದಾಸೋಹಕ್ರಿಯೆ ನಿರಂತರವಾಗಿ ನಡೆಯುತ್ತಿತ್ತು. ದಾಸೋಹ ಮೂರ್ತಿಗಳಾದ ಶ್ರೀ ಮಲ್ಲಿಕಾರ್ಜುನ ಒಡೆಯರು ೧೧೪ ವರ್ಷಗಳ ಕಾಲ ಬದುಕಿ ೧೯೫೨ ರಲ್ಲಿ ಲಿಂಗೈಕ್ಯರಾಗಿರುತ್ತಾರೆ. ಶ್ರೀ ಮಲ್ಲಿಕಾರ್ಜುನ ಒಡೆಯರು ಲಿಂಗೈಕ್ಯಗೊಳ್ಳುವ ಮೊದಲೇ ಶ್ರೀ ನಂಜುಂಡ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿಕೊಂಡು ೧೯೪೩ರಲ್ಲಿ ಪಟ್ಟಾಧಿಕಾರ ಮಾಡಿದ್ದರು. ಶ್ರೀ ನಂಜುಂಡ ಸ್ವಾಮಿಗಳು ಸರಗೂರಿನ ಶ್ರೀ ಲಿಂಗಪ್ಪ ಮತ್ತು ಶ್ರೀಮತಿ ಕಮಲಮ್ಮನವರ ಪುತ್ರರಾಗಿ ೧೯೩೩ರಲ್ಲಿ ಜನಿಸಿ, ಮೈಸೂರಿನಲ್ಲಿ ಸಂಸ್ಕೃತ, ವೇದ, ಆಗಮುಗಳನ್ನು ಅಭ್ಯಾಸ ಮಾಡಿ ಮಠದ ಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡರು. ಶ್ರೀ ನಂಜುಂಡ ಸ್ವಾಮಿಗಳು ಹಿರಿಯ ಗುರುಗಳಾದ ಶ್ರೀ ಮಲ್ಲಿ ಕಾರ್ಜುನ ಒಡೆಯರ ಬದುಕಿನ ಮಾರ್ಗವನ್ನೇ ಅನುಸರಿಸಿಕೊಂಡು ಕಾಯಕಯೋಗದಿಂದ ಮಠವನ್ನು ಹೆಚ್ಚು ಅಭಿವೃದ್ಧಿಪಡಿಸಿದ್ದಾರೆ. ಮಠದಲ್ಲಿ ನಿತ್ಯ ಭಕ್ತರಿಗೆ ದರ್ಶನ ನೀಡಿ ಧರ್ಮೋಪದೇಶ ನೀಡಿ ಭಕ್ತರನ್ನು ಸನ್ಮಾರ್ಗದಲ್ಲಿ ನಡೆಸಿದ್ದಾರೆ. ಶ್ರೀ ನಂಜುಂಡ ಸ್ವಾಮಿಗಳು ತಮ್ಮ ಸಹೋದರ ಸಂಬಂಧಿ ಶ್ರೀ ಬಸವರಾಜೇಂದ್ರ ಸ್ವಾಮಿಗಳನ್ನು ಉತ್ತರಾಧಿಕಾರಿ ಗಳನ್ನಾಗಿ ಆಯ್ಕೆಮಾಡಿಕೊಂಡು ಮಾರ್ಚ್ ೧೯೯೮ರಲ್ಲಿ ಪಟ್ಟಾಧಿಕಾರವನ್ನು ಮಾಡಿರುತ್ತಾರೆ.

ಧಾರ್ಮಿಕ ಕಾರ್ಯಗಳು: ಪರಂಪರಾಗತ ಮಠದಲ್ಲಿ ಇರುವ ನಾಲ್ಕು ಗದ್ದುಗೆಗಳು, ಮಠದ ಆವರಣದಲ್ಲಿ ಸ್ಥಾಪನೆಗೊಂಡಿರುವ ಬಸವೇಶ್ವರ ಮೂರ್ತಿ, ಮಠದ ಮುಂಭಾಗದಲ್ಲಿ ಸ್ಥಾಪನೆಗೊಂಡಿರುವ ವೀರಗಲ್ಲು ಹಾಗೂ ಲಿಂಗಮುದ್ರೆ ಕಲ್ಲುಗಳಿಗೆ ನಿತ್ಯ ಪೂಜೆ, ಅಮಾವಾಸ್ಯೆ, ಹುಣ್ಣಿಮೆ ಹಾಗೂ ಕಾರ್ತೀಕ ಮಾಸಗಳಲ್ಲಿ ಮಠದಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಮಠಕ್ಕೆ ಭೇಟಿ ನೀಡುವ ಭಕ್ತರಿಗೆ ಉಪದೇಶ ನೀಡುವುದಲ್ಲದೆ ಭಕ್ತರ ಮನೆಗಳಲ್ಲಿ ನಡೆಯುವ ಧಾರ್ಮಿಕ ಚಟುವಟಿಕೆಗಳಲ್ಲಿ ಪಾಲ್ಗೊಂಡು ಭಕ್ತರಿಗೆ ನೆರವಾಗುವುದು ಇವೇ ಮುಂತಾದ ಧಾರ್ಮಿಕ ಚಟುವಟಿಕೆಗಳು ಮಠದ ವತಿಯಿಂದ ನಡೆಯುತ್ತಿವೆ.

ಸ್ಮಾರಕಗಳು: ಮಠದ ಮುಂಭಾಗದಲ್ಲಿರುವ ಮಠದ ಜಮೀನಿನಲ್ಲಿ ನಾಲ್ಕೂ ದಿಕ್ಕಿನಲ್ಲಿ ನಾಲ್ಕು ಲಿಂಗಮುದ್ರೆ ಕಲ್ಲುಗಳು ಸ್ಥಾಪನೆಗೊಂಡಿವೆ. ಈ ಜಮೀನಿನಲ್ಲಿ ಕಲ್ಲು ಬಾವಿ ಇದ್ದು ಅದರ ಪಕ್ಕದಲ್ಲಿಯೇ ಮಠದ ಕಟ್ಟಡವೂ ಇತ್ತು ಎಂದು ಹೇಳಲಾಗುವ ಕಲ್ಲು ಕಂಬಗಳು ದೊರೆಯುತ್ತವೆ. ಈ ಜಮೀನಿನಲ್ಲಿ ಶಿಲಾಶಾಸನವೊಂದು ದೊರೆತಿದ್ದು ಇದನ್ನು ಸಂರಕ್ಷಿಸಲಾಗಿದ್ದರೂ ಓದಲು ಬಾರದಂತಾಗಿದೆ. ಗುರುಗಳೊಬ್ಬರು ಕುಳಿತಿದ್ದು ಅಕ್ಕಪಕ್ಕ ಚಾಮರ ಬೀಸುವ ಸೇವಕರು, ಶಿವಲಿಂಗ ಹಾಗೂ ಬಸವನ ಮೂರ್ತಿ ಇರುವಂತಹ ಮಾಸ್ತಿಗಲ್ಲು ದೊರೆತಿದೆ. ಮಠದ ಆಸ್ತಿಯಾಗಿರುವ ಇಪ್ಪತ್ತುಎಕರೆ ಜಮೀನನ್ನು ಬೇಸಾಯಕ್ಕೆ ಯೋಗ್ಯಗೊಳಿಸಿರುವ ಗುರುಗಳು ತಮ್ಮ ಕಾಯಕ ಯೋಗದಿಂದ ಹೆಚ್ಚು ಲಾಭ ಬರುವಂತೆ ಮಾಡಿದ್ದಾರೆ. ಬರುವ ಆದಾಯವನ್ನು

ಮಠದ ಧಾರ್ಮಿಕ ಚಟುವಟಿಕೆ ಮತ್ತು ದಾಸೋಹ ಕ್ರಿಯೆಗಳಿಗೆ ಬಳಸಿಕೊಳ್ಳಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಬಸವರಾಜೇಂದ್ರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಸರಗೂರು ಮಠ, ಸರಗೂರು, ಬಿ.ಜಿ.ಪುರ ಹೋಬಳಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

ಹಣಕೊಳ

ಮಳವಳ್ಳಿ ತಾಲ್ಲೂಕಿನ ಹಣಕೊಳ ಗ್ರಾಮವು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಹದಿನೆಂಟು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ಪಟ್ಟದಮಠವು ಅಸ್ತಿತ್ವದಲ್ಲಿದೆ.

ಪಟ್ಟದಮಠ: ಹಣಕೊಳ ಗ್ರಾಮದಲ್ಲಿ ಚಾಮರಾಜ ನಗರ ತಾಲ್ಲೂಕಿನ ಮರಿಯಾಲಮಠದ ಶಾಖಾ ಮಠವಾಗಿರುವ ಈ ಪಟ್ಟದ ಮಠವು ೧೯೭೭ ರಲ್ಲಿ ಪ್ರಾರಂಭಗೊಂಡಿದೆ. ಶ್ರೀ ಚಿದ್ಘನ ಶಿವಾಚಾರ್ಯ ಸ್ವಾಮಿಗಳ ತಾಯಿಯ ಚಿಕ್ಕಪ್ಪನವರು, ಈ ಗ್ರಾಮದ ಧಾರ್ಮಿಕ ಕಾರ್ಯಗಳನ್ನು ನಡೆಸುವ ಉದ್ದೇಶದಿಂದ ತಮ್ಮ ಆಸ್ತಿಯನ್ನೆಲ್ಲಾ ಮಠಕ್ಕೆ ಬರೆದು,ನೂತನ ಮಠಕ್ಕಾಗಿ ಹೊಸ ಕಟ್ಟಡವನ್ನು ನಿರ್ಮಿಸಿ ಮರಿಯಾಲ ಮಠಕ್ಕೆ ಒಪ್ಪಿಸಿರುತ್ತಾರೆ.

ಹಣಕೊಳ ಗ್ರಾಮದಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸುವ ಉದ್ದೇಶದಿಂದ ಪ್ರಾರಂಭಗೊಂಡ ಮೇಲೆ ಹದಿನೈದು ವರ್ಷ ಗುರುಗಳಿಲ್ಲದೆ ಮಠ ಖಾಲಿ ಉಳಿದಿತ್ತು. ಈ ಸಂದರ್ಭದಲ್ಲಿ ನೆಲ್ಲಿಕೆರೆಯಲ್ಲಿದ್ದ ಕನಕಪುರದ ಈಗಿನ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳು ಖಾಲಿ ಉಳಿದಿದ್ದ ಮಠಕ್ಕೆ ಶ್ರೀ ಚಿದ್ಘನ ಶಿವಾಚಾರ್ಯ ಸ್ವಾಮಿಗಳನ್ನು ನೇಮಿಸಿದರು. ಅಂದಿನಿಂದ ಹಣಕೊಳ ಗ್ರಾಮದಲ್ಲಿ ಧಾರ್ಮಿಕ ಚಟುವಟಿಕೆಗಳು ಚುರುಕುಗೊಂಡವು. ಶ್ರೀ ಚಿದ್ಘನ ಶಿವಾಚಾರ್ಯರು ಕನಕಪುರದ ದೇಗುಲ ಮಠದಲ್ಲಿ ಇದ್ದು ವಿದ್ಯಾಭ್ಯಾಸ ಮುಗಿಸಿ ೧೯೭೩ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಇಪ್ಪತ್ತೆಂಟು ವರ್ಷಗಳ ಹಿಂದೆ ಪ್ರಾರಂಭಗೊಂಡ ಈ ಮಠದಲ್ಲಿ ಗುರುಗಳು ನೆಲೆಗೊಂಡ ಮೇಲೆ ಮಠದ ಪ್ರಗತಿ ವೃದ್ಧಿಸತೊಡಗಿತು. ಗುರುಗಳು ಕಾಯಕ ಯೋಗಿಗಳಾಗಿ ಮಠದ ಆಸ್ತಿಯಾಗಿದ್ದ ಹತ್ತುಎಕರೆ ಜಮೀನನ್ನು ಅಭಿವೃದ್ಧಿಪಡಿಸಿ ಮಠಕ್ಕೆ ಹೆಚ್ಚು ಆದಾಯ ಬರುವಂತೆ ಮಾಡಿದರು. ಜಮೀನಿನಿಂದ ಬಂದ ಆದಾಯವನ್ನು ಮಠದ ಕಟ್ಟಡದ ವಿಸ್ತಾರ ಮತ್ತು ಧಾರ್ಮಿಕ ಚಟುವಟಿಕೆಗಳಿಗೆ ವಿನಿಯೋಗಿಸಿಕೊಂಡು ಮಠವನ್ನು ವ್ಯಸ್ಥಿತವಾಗಿ ನಡೆಸಿಕೊಂಡು, ಗ್ರಾಮದ ಹಾಗೂ ಭಕ್ತರ ಮನೆಗಳ ಧಾರ್ಮಿಕ ಚಟುವಟಿಕೆಗಳಲ್ಲಿ ಭಾಗವಹಿಸಿ ಮಠವನ್ನು ಮುನ್ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಚಿದ್ಘನ ಶಿವಾಚಾರ್ಯಸ್ವಾಮಿಗಳು, ಶ್ರೀ ಪಟ್ಟದಮಠ,ಹಣಕೊಳ, ಮಲ್ಲಿನಾಥಪುರ ಅಂಚೆ, ಮಳವಳ್ಳಿ ತಾ, ಮಂಡ್ಯಜಿಲ್ಲೆ.

ಹಲಗೂರು

ಮಳವಳ್ಳಿ ತಾಲ್ಲೂಕಿನ ಹಲಗೂರು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಇಪ್ಪತ್ತೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಬೃಹನ್ಮಠವು ಅಸ್ತಿತ್ವದಲ್ಲಿದೆ.

ಬೃಹನ್ಮಠ: ಹಲಗೂರು ಗ್ರಾಮದ ಮಧ್ಯಭಾಗದಲ್ಲಿ ಶ್ರೀ ರಂಭಾಪುರಿ ಪೀಠದ ಶಾಖಾಮಠವಾದ ಶ್ರೀ ಬೃಹನ್ಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದಲ್ಲಿ ಶ್ರೀ ಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ಇಲ್ಲಿನ ಸುಕ್ಷೇತ್ರ ಬಸವನಬೆಟ್ಟದಲ್ಲಿ ಅನುಷ್ಠಾನಕ್ಕೆ ಕುಳಿತು ಮಠವನ್ನು ಸ್ಥಾಪನೆ ಮಾಡಿದ್ದರು. ಮಠದಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸುವ ಮೂಲಕ ವೀರಶೈವ ಧರ್ಮವನ್ನು ಅಭಿವೃದ್ಧಿಪಡಿಸಿದ್ದರು. ಕರ್ತೃ ಗುರುಗಳ ನಂತರ ಐದು ಜನ ಗುರುಗಳು ಬಸವನಬೆಟ್ಟದಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸಿದ್ದರು.

ಸ್ಥಳಾಂತರಗೊಂಡ ಮಠ: ಪರಂಪರೆಯ ಐಳನೆಯ ಗುರುಗಳಾದ ಶ್ರೀ ರುದ್ರಮುನೀಂದ್ರ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಹಲಗೂರು ಭಕ್ತರ ಅಪೇಕ್ಷೆಯ ಮೇರೆಗೆ, ಬಸವನಬೆಟ್ಟದಲ್ಲಿದ್ದ ಮಠವನ್ನು ಹಲಗೂರು ಗ್ರಾಮಕ್ಕೆ ಸ್ಥಳಾಂತರಿಸಿರುತ್ತಾರೆ. ಶ್ರೀ ರುದ್ರಮುನೀಂದ್ರ ಶಿವಾಚಾರ್ಯ ಸ್ವಾಮಿಗಳು ಮಹಾ ತಪಸ್ವಿಗಳಾಗಿ ಜನಮನ್ನಣೆಯನ್ನು ಪಡೆದಿದ್ದರು. ಇವರು ಮಠದ

ಅಭಿವೃದ್ಧಿಯ ಜೊತೆಗೆ ಸಮಾಜದ ಅಭಿವೃದ್ಧಿಯ ಬಗ್ಗೆ ಚಿಂತಿಸುತ್ತಿದ್ದರು.

ಪರಂಪರೆ:

೧. ಷ.ಬ್ರ.ಶ್ರೀ ಶಾಂತಲಿಂಗ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಶಿವನಂದಿ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಸೋಮೇಶ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ನಿರಂಜನಸಿದ್ಧ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ವೀರಬಸವ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಶಾಂತರಸ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ರುದ್ರಮುನೀಂದ್ರ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ಚನ್ನವೀರೇಶ ಶಿವಾಚಾರ್ಯಸ್ವಾಮಿಗಳು
೧೦. ಷ.ಬ್ರ.ಶ್ರೀ ರೇವಣಸಿದ್ಧ ಶಿವಾಚಾರ್ಯಸ್ವಾಮಿಗಳು
೧೧. ಷ.ಬ್ರ.ಶ್ರೀ ಸಿದ್ಧರಸ ಶಿವಾಚಾರ್ಯಸ್ವಾಮಿಗಳು
೧೨. ಷ.ಬ್ರ.ಶ್ರೀ ಸೋಮದೇವ ಶಿವಾಚಾರ್ಯಸ್ವಾಮಿಗಳು
೧೩. ಷ.ಬ್ರ.ಶ್ರೀ ಸಿದ್ಧೇಶ್ವರ ಶಿವಾಚಾರ್ಯಸ್ವಾಮಿಗಳು
೧೪. ಷ.ಬ್ರ.ಶ್ರೀ ಚಿದಂಬರ ಶಿವಾಚಾರ್ಯಸ್ವಾಮಿಗಳು
೧೫. ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯಸ್ವಾಮಿಗಳು
೧೬. ಷ.ಬ್ರ.ಶ್ರೀ ನಂದಿಕೇಶ್ವರ ಶಿವಾಚಾರ್ಯಸ್ವಾಮಿಗಳು
೧೭. ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯಸ್ವಾಮಿಗಳು
೧೮. ಷ.ಬ್ರ.ಶ್ರೀ ಜಡೆರುದ್ರೇಶ ಶಿವಾಚಾರ್ಯಸ್ವಾಮಿಗಳು
೧೯. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೨೦. ಷ.ಬ್ರ.ಶ್ರೀ ಶಾಂತವೀರ ಶಿವಾಚಾರ್ಯಸ್ವಾಮಿಗಳು
೨೧. ಷ.ಬ್ರ.ಶ್ರೀ ಸದ್ಯೋಜಾತ ಶಿವಾಚಾರ್ಯಸ್ವಾಮಿಗಳು
೨೨. ಷ.ಬ್ರ.ಶ್ರೀ ನಿಜಲಿಂಗ ಶಿವಾಚಾರ್ಯಸ್ವಾಮಿಗಳು
೨೩. ಷ.ಬ್ರ.ಶ್ರೀ ಚಂದ್ರಮೌಳೀಶ್ವರ ಶಿವಾಚಾರ್ಯಸ್ವಾಮಿಗಳು
೨೪. ಷ.ಬ್ರ.ಶ್ರೀ ರುದ್ರ ಶಿವಾಚಾರ್ಯಸ್ವಾಮಿಗಳು
೨೫. ಷ.ಬ್ರ.ಶ್ರೀ ೨ನೆಯ ಶಾಂತಲಿಂಗ ಶಿವಾಚಾರ್ಯಸ್ವಾಮಿಗಳು
೨೬. ಷ.ಬ್ರ.ಶ್ರೀ ಸೋಮಶೇಖರ ಶಿವಾಚಾರ್ಯಸ್ವಾಮಿಗಳು
೨೭. ಷ.ಬ್ರ.ಶ್ರೀ ಭದ್ರಪಾದ ಶಿವಾಚಾರ್ಯಸ್ವಾಮಿಗಳು
೨೮. ಷ.ಬ್ರ.ಶ್ರೀ ಜಡೆರುದ್ರ ಶಿವಾಚಾರ್ಯಸ್ವಾಮಿಗಳು
೨೯. ಷ.ಬ್ರ.ಶ್ರೀ ಶಿವರುದ್ರ ಶಿವಾಚಾರ್ಯಸ್ವಾಮಿಗಳು
೩೦. ಷ.ಬ್ರ.ಶ್ರೀ ಗುರುಶಾಂತ ಶಿವಾಚಾರ್ಯಸ್ವಾಮಿಗಳು
೩೧. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯಸ್ವಾಮಿಗಳು
೩೨. ಷ.ಬ್ರ.ಶ್ರೀ ಕರಿಬಸವಲಿಂಗ ಶಿವಾಚಾರ್ಯಸ್ವಾಮಿಗಳು
೩೩. ಷ.ಬ್ರ.ಶ್ರೀ ಶಾಂತಮಲ್ಲ ಶಿವಾಚಾರ್ಯಸ್ವಾಮಿಗಳು
೩೪. ಷ.ಬ್ರ.ಶ್ರೀ ಪಂಚಾಕ್ಷರ ಶಿವಾಚಾರ್ಯಸ್ವಾಮಿಗಳು
೩೫. ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯಸ್ವಾಮಿಗಳು
೩೬. ಷ.ಬ್ರ.ಶ್ರೀ ಮಹಾದೇವ ಶಿವಾಚಾರ್ಯಸ್ವಾಮಿಗಳು
೩೭. ಷ.ಬ್ರ.ಶ್ರೀ ವೀರಭದ್ರ ಶಿವಾಚಾರ್ಯಸ್ವಾಮಿಗಳು
೩೮. ಷ.ಬ್ರ.ಶ್ರೀ ರೇಣುಕ ರಾಜೇಂದ್ರ ಶಿವಾಚಾರ್ಯಸ್ವಾಮಿಗಳು
೩೯. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಹಲಗೂರು ಗ್ರಾಮಕ್ಕೆ ಸ್ಥಳಾಂತರಗೊಂಡ ಮೇಲೆ ಮಠವು ಜನರ ಅಭ್ಯುದಯಕ್ಕಾಗಿ ಶ್ರಮಿಸಿದೆ. ಪರಂಪರೆಯಲ್ಲಿ ಬರುವ ಎಲ್ಲಾ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಮೂವತ್ತಾರನೆಯ ಗುರುಗಳಾದ ಶ್ರೀ ಮಹಾದೇವ ಶಿವಾಚಾರ್ಯ ಸ್ವಾಮಿಗಳು ತಪೋನಿಷ್ಠರಾಗಿ, ಮಹಾಪಂಡಿತರಾಗಿ ಜನಮನ್ನಣೆಗೆ ಪಾತ್ರರಾಗಿದ್ದಾರೆ. ಇವರ ಕಾಲದಲ್ಲಿ ಗುರುಕುಲವನ್ನು ಸ್ಥಾಪಿಸಿ ಅನೇಕ ಮಠಾಧೀಶರನ್ನು ಹಾಗೂ ಪಂಡಿತರನ್ನು ಬೆಳೆಸಿ, ಪಾರಮಾರ್ಥಿಕ ಹಾಗೂ ಲೌಕಿಕ ಶಿಕ್ಷಣವನ್ನು ನೀಡಿ ವೀರಶೈವ ಧರ್ಮವನ್ನು ಸಮರ್ಥವಾಗಿ ಬೆಳೆಸಿದರು. ಇವರ ನಂತರ ಗುಂಡ್ಲುಪೇಟೆ ತಾಲ್ಲೂಕಿನ ಪರಮಾಪುರದ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದರು. ಶಿವಯೋಗ ಸಾಧನೆಯಿಂದ 'ಪಾಮಾರ್ಥಧಾಮ' ಎಂಬ ಸಂಸ್ಥೆಯನ್ನು ಪ್ರಾರಂಭಿಸಿ, ಇದರಡಿಯಲ್ಲಿ ಅಭಯಕಲ್ಪ, ಶ್ವೇತಪ್ರಭ, ಶಿವೋಪಾಸನವಿವೇಕ, ಶಿವಾತ್ಮನಿರೀಕ್ಷೆ ಹಾಗೂ ಇಷ್ಟಲಿಂಗಾರ್ಚನಾ ರಹಸ್ಯ ಎಂಬ ಪಂಚಗ್ರಂಥಗಳನ್ನು ರಚಿಸಿದ್ದಾರೆ. ಇವರು ಧಾರ್ಮಿಕ ಮತ್ತು ಸಾಹಿತ್ಯಿಕ ಸಾಧನೆಯ ಜೊತೆಗೆ ವೀರಶೈವ ಧರ್ಮವನ್ನು ಸಮರ್ಥವಾಗಿ ಬೆಳೆಸಿದರು. ಇವರ ನಂತರ ಶ್ರೀ ರೇಣುಕ ರಾಜೇಂದ್ರ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡರು. ಇವರ ನಂತರ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ೧೯೯೮ರ ಆಗಸ್ಟ್ ಇಪ್ಪತ್ತೆಂಟರಂದು ಅಧಿಕಾರ ವನ್ನು ವಹಿಸಿಕೊಂಡು ಮಠವನ್ನು ಧಾರ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯಿಕವಾಗಿ ಅಭಿವೃದ್ಧಿಪಡಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯಪೂಜೆ, ಜಗದ್ಗುರು ಶ್ರೀ ರೇಣುಕಾಚಾರ್ಯರ ಶಿಲಾಮಂದಿರವನ್ನು ಸ್ಥಾಪಿಸಿದ್ದು ಇಲ್ಲಿ ನಿತ್ಯ ಪೂಜೆ ನಡೆಸಲಾಗುತ್ತಿದೆ. ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳ ಪುಣ್ಯಾ

ರಾಧನೆಯ ಜೊತೆಗೆ ಎಲ್ಲಾ ಗುರುಗಳ ಸ್ಮರಣೋತ್ಸವವನ್ನು ಹಾಗೂ ಈ ಸಂದರ್ಭದಲ್ಲಿ ದಾಸೋಹವನ್ನು ನಡೆಸಲಾಗುತ್ತಿದೆ. ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಮಠವು ಧಾರ್ಮಿಕವಾಗಿ ಹೆಸರು ಮಾಡಿತ್ತು. ಇವರು ಸಾಹಿತಿಗಳಾಗಿ ವೀರಶೈವ ಧರ್ಮಕ್ಕೆ ಸಂಬಂಧಿಸಿದ ಸುಮಾರು ನಾಲ್ಕುನೂರು ಕೃತಿಗಳನ್ನು ರಚಿಸಿದ್ದರು. ಅವರು ರಚಿಸಿದ ಹಸ್ತ ಪ್ರತಿಗಳು ಈಗ ಮಠದಲ್ಲಿ ಲಭ್ಯವಿವೆ.

ಅಭಿವೃದ್ಧಿ ಕಾರ್ಯಗಳು: ಪುರಾತನ ಕಾಲದ ಈ ಮಠವು ಪರಂಪರೆಯ ಮೂವತ್ತಾರನೆಯ ಗುರುಗಳಾದ ಶ್ರೀ ಮಹಾದೇವ ಸ್ವಾಮಿಗಳ ಕಾಲದಲ್ಲಿ ಅಭಿವೃದ್ಧಿಗೊಂಡಿದೆ. ಈಗಿನ ಗುರುಗಳಾದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಮಠದ ಕಟ್ಟಡವನ್ನು ಅಗತ್ಯಕ್ಕನುಗುಣವಾಗಿ ನವೀಕರಿಸಿಕೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸುವುದರ ಜೊತೆಗೆ ಜಗದ್ಗುರು ಶ್ರೀ ಪ್ರಸನ್ನ ರೇಣುಕ ವೀರಸೋಮೇಶ್ವರ ಗುರುಕುಲವನ್ನು ಸ್ಥಾಪಿಸಿ, ಕಲಿಯುವ ಬಡಮಕ್ಕಳಿಗೆ ಆಶ್ರಯ ಕಲ್ಪಿಸಿದ್ದಾರೆ. ಸಂಸ್ಕೃತ, ವೇದ ಹಾಗೂ ಜ್ಯೋತಿಷ್ಯ ಪಾಠಶಾಲೆಯನ್ನು ಪ್ರಾರಂಭಿಸಿ ಧಾರ್ಮಿಕ ಶಿಕ್ಷಣವನ್ನು ನೀಡತೊಡಗಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ಬೃಹನ್ಮಠ, ಹಲಗೂರು, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

ಹಲಸಹಳ್ಳಿ

ಮಳವಳ್ಳಿ ತಾಲ್ಲೂಕಿನ ಹಲಸಹಳ್ಳಿಯು ತಾಲ್ಲೂಕು ಕೇಂದ್ರದ ಪೂರ್ವಕ್ಕೆ ಹದಿನೈದು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಗವಿಮಠವು ಅಸ್ತಿತ್ವದಲ್ಲಿದೆ.

ಗವಿಮಠ: ಹಲಸಹಳ್ಳಿಯ ಗ್ರಾಮದ ಪೂರ್ವ ಭಾಗದ ಗುಡ್ಡದ ಮೇಲೆ ಸ್ಥಾಪನೆಗೊಂಡಿರುವ ಗವಿಮಠವು ಶ್ರೀ ಬಸವಲಿಂಗ ಸ್ವಾಮಿಗಳಿಂದ ಪ್ರಾರಂಭಗೊಂಡು ಮುಂದಿನ ಎರಡು ತಲೆಮಾರುಗಳಲ್ಲಿ ಬೆಳೆದು ಬಂದಿದೆ. ಸುತ್ತೂರು ಮಠದ ಶಾಖಾಮಠವಾಗಿ ಬೆಳೆದಿರುವ ಈ ಮಠವು ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ.

ಮಹತ್ವ ಪಡೆದ ಸ್ಥಳ: ಧನುಗೂರಿನ ವೀರಸಿಂಹಾಸನ ಮಠದ ಗುರುಗಳು ತಮ್ಮ ನೂರೊಂದು ವಟುಗಳ ಜತೆಗೆ ಈ ತಪೋ ಭೂಮಿಯಲ್ಲಿ ಇರುವ ಗವಿಯಲ್ಲಿ ಕುಳಿತುಕೊಂಡು ಪಾಳೆಗಾರನ ಫಿರಂಗಿ ದಾಳಿಯಿಂದ ತಪ್ಪಿಸಿಕೊಂಡಿದ್ದರು ಎಂದು ಹೇಳಲಾಗುತ್ತಿದೆ. ಗುರುಗಳು ಗವಿಯಲ್ಲಿ ಕುಳಿತು ತಮ್ಮ ಶಿಷ್ಯರನ್ನು ಉದ್ದೇಶಿಸಿ"ನಾನು ನೆಲಮಾಳಿಗೆಯಲ್ಲಿ ಹೋಗುತ್ತೇನೆ, ನೀವು ಹಸಿರು ಸೊಪ್ಪನ್ನು ಚೆಲ್ಲಿ ಗವಿಯಲ್ಲಿ ಕುಳಿತುಕೊಳ್ಳಿ" ಎಂದು ಹೇಳಿ ಹೋದವರು ಪುನಃ ಹೊರಗೆ ಬರಲಿಲ್ಲ. ಗುರುಗಳು ಎಲ್ಲಿಗೆ ಹೋದರು ಎಂಬ ಬಗ್ಗೆ ಶಿಷ್ಯರಿಗೂ ಅರಿವಾಗಲಿಲ್ಲ. ಗವಿಯ ಬಾಗಿಲಲ್ಲಿ ನೂರೊಂದು ವಟುಗಳು ಕುಳಿತ ಜಾಗದಲ್ಲಿ ನೂರೊಂದು ಲಿಂಗಗಳನ್ನು ಸ್ಥಾಪನೆ ಮಾಡಲಾಗಿದೆ. ಗವಿಮಠದ ಕರ್ತೃಗುರುಗಳಾದ ಶ್ರೀ ಬಸವಲಿಂಗ ಸ್ವಾಮಿಗಳು ಗವಿಯ ಒಳಗೆ ಹೋಗಿ ಪೂಜಾ ಕಾರ್ಯವನ್ನು ಮಾಡಿಕೊಂಡು ಬಂದಿದ್ದರೆಂದು ಹೇಳಲಾಗುತ್ತಿದೆ. ಈ ಗವಿಯಲ್ಲಿ ಒಂದು ಸರ್ಪವು ವಾಸ ಮಾಡುತ್ತಿದೆ ಎಂಬ ನಂಬಿಕೆ ಈ ಭಾಗದ ಜನರಲ್ಲಿ ಈಗಲೂ ಇದೆ.

ರಚನೆಗೊಂಡ ರಾಜಶೇಖರ ವಿಲಾಸ: ಧನುಗೂರಿನ ವೀರಸಿಂಹಾಸನ ಮಠದ ಶ್ರೀ ಷಡಕ್ಷರಿ ದೇವರು ಬಸವೇಶ್ವರ ಗವಿಯಲ್ಲಿ ಕುಳಿತು ತಮ್ಮ 'ರಾಜಶೇಖರ ವಿಲಾಸ'ವನ್ನು ರಚಿಸಿದ್ದರು ಎಂದು ಹೇಳಲಾಗುತ್ತಿದೆ. ಈ ರೀತಿ ಮಹತ್ವ ಪಡೆದ ಗವಿಮಠವು ಬಹಳ ಪ್ರಸಿದ್ಧಿಗೆ ಬಂದು ಪೂಜನೀಯ ಸ್ಥಳವಾಗಿ ಬೆಳೆದಿತ್ತು. ಇಂತಹ ಸ್ಥಳದಲ್ಲಿ ಮಠವನ್ನು ಸ್ಥಾಪಿಸಬೇಕು ಎಂಬ ಮಹದಾಸೆಯಿಂದ ಹಲಸಹಳ್ಳಿಯವರಾದ ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ಈ ಗವಿಯಲ್ಲಿ ಅನುಷ್ಠಾನಕ್ಕೆ ಕುಳಿತು ಈ ಪ್ರದೇಶವನ್ನು ಅಭಿವೃದ್ಧಿಪಡಿಸಿ ಧಾರ್ಮಿಕ ಚಟುವಟಿಕೆಗಳು ನಡೆಯುವಂತೆ ಮಾಡಿದ್ದಾರೆ.

ಮಠ ಸ್ಥಾಪನೆ: ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ಬೆಟ್ಟದ ಗವಿಯಲ್ಲಿ ಮಠ ಸ್ಥಾಪನೆ ಮಾಡಬೇಕೆಂಬ ಪ್ರಯತ್ನಕ್ಕೆ ಭಕ್ತರು ಸಹಕಾರ ನೀಡಿ ಗವಿಮಠ ಸ್ಥಾಪನೆಯಾಗಲು ಕಾರಣರಾಗುತ್ತಾರೆ. ಪ್ರಾರಂಭದಲ್ಲಿ ಶ್ರೀ ಬಸವಲಿಂಗ ಸ್ವಾಮಿಗಳು ಬಸವೇಶ್ವರರ ಗವಿಯಲ್ಲಿ ವಾಸ್ತವ್ಯ ಪಡೆದು, ಮೂಲಗವಿಯಲ್ಲಿ ಪೂಜಾ ಕಾರ್ಯ ಮತ್ತು ಅನುಷ್ಠಾನಗಳನ್ನು ಮಾಡುತ್ತಿದ್ದರು.

ದಿನಕಳೆದಂತೆ ಧಾರ್ಮಿಕ ಚಟುವಟಿಕೆಗಳು ಹೆಚ್ಚಾದ ಮೇಲೆ ಬೆಟ್ಟದ ಗವಿಯ ಸಮೀಪ ಕಟ್ಟಡಗಳು ನಿರ್ಮಾಣಗೊಂಡವು. ಜತೆಗೆ ದಾಸೋಹ ಕಾರ್ಯಗಳೂ ಹಾಗೂ ಧಾರ್ಮಿಕ ಕಾರ್ಯಗಳೂ ಬಿಡುವಿಲ್ಲದಂತೆ ನಡೆಯತೊಡಗಿದವು. ವೀರಶೈವ ಸಿದ್ಧಾಂತದ ಬಗ್ಗೆ, ಆಚಾರ, ವಿಚಾರಗಳ ಬಗ್ಗೆ ತಿಳಿವಳಿಕೆ ನೀಡಿ ವೀರಶೈವಧರ್ಮ ಬೆಳೆಯಲು ಸಹಾಯಕರಾದರು. ಶ್ರೀಬಸವ ಲಿಂಗ ಶಿವಾಚಾರ್ಯ ಸ್ವಾಮಿಗಳು ತಾವೇ ಸ್ಥಾಪಿಸಿದ ಮಠದಲ್ಲಿ ದೀರ್ಘ ಕಾಲ ಧಾರ್ಮಿಕ ಆಚರಣೆಗಳನ್ನು ನಡೆಸಿ ಮಠವನ್ನು ಪ್ರಬುದ್ಧಮಾನಕ್ಕೆ ಬರುವಂತೆ ಮಾಡಿ ೧೯೪೫ರಲ್ಲಿ ಲಿಂಗೈಕ್ಯರಾಗಿದ್ದಾರೆ.

ಪರಂಪರೆ:
೧. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯಸ್ವಾಮಿಗಳು (ಕರ್ತೃಗುರುಗಳು)
೨. ಷ.ಬ್ರ.ಶ್ರೀ ಜಡೆ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಷಡಕ್ಷರಿ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದ್ದು ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಶ್ರೀಜಡೆ ಶಿವಾಚಾರ್ಯ ಸ್ವಾಮಿಗಳು ೧೯೪೮ರಲ್ಲಿ ಗವಿಮಠದ ಅಧಿಕಾರವನ್ನು ವಹಿಸಿಕೊಳ್ಳುತ್ತಾರೆ. ಶ್ರೀ ಜಡೆ ಶಿವಾಚಾರ್ಯ ಸ್ವಾಮಿಗಳು ಮಳವಳ್ಳಿ ತಾಲ್ಲೂಕಿನ ಹೊಸಹಳ್ಳಿ ಗ್ರಾಮದ ಶ್ರೀ ಜವರಾಜಪ್ಪನವರ ಪುತ್ರರಾಗಿ ಜನಿಸಿದರು. ಚಿಕ್ಕವಯಸ್ಸಿನ ಲ್ಲಿಯೇ ಆಧ್ಯಾತ್ಮ ಚಿಂತನೆಯನ್ನು ಮೈಗೂಡಿಸಿಕೊಂಡಿದ್ದ ಇವರು ಗವಿ ಮಠಕ್ಕೆ ಬಂದು ಅಧಿಕಾರವನ್ನು ವಹಿಸಿಕೊಳ್ಳುತ್ತಾರೆ.

ಅಭಿವೃದ್ಧಿ ಕಂಡ ಕಾಲ: ಶ್ರೀ ಜಡೆ ಶಿವಾಚಾರ್ಯ ಸ್ವಾಮಿಗಳು ಶಿವಪೂಜಾ ನಿಷ್ಠರು,ಅನುಷ್ಠಾನ ಮೂರ್ತಿಗಳು, ಕಾಯಕ ಯೋಗಿಗಳೂ ಆಗಿ ಸಂಘಟನಾ ಚತುರರಾಗಿ ಮಠವನ್ನು ಬೆಳೆಸಿದರು. ಇವರ ಕಾಲದಲ್ಲಿ ಮಠದ ಧಾರ್ಮಿಕ ಚಟುವಟಿಕೆಗಳು ಚುರುಕುಗೊಂಡಂತೆ ಗವಿಯ ಸುತ್ತ ಗುರುಗಳ ವಾಸ್ತವ್ಯ ಗೃಹ, ದಾಸೋಹಮಂದಿರ ಮುಂತಾದ ಕಟ್ಟಡಗಳು ಸ್ಥಾಪನೆಗೊಂಡವು. ಗುರುಗಳು ಧರ್ಮ ಪ್ರಚಾರ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು, ಮಠವನ್ನು ಬೆಳೆಸಿ ಸೆಪ್ಟೆಂಬರ್ ಹತ್ತೊಂಬತ್ತು ೧೯೯೩ರಲ್ಲಿ ಲಿಂಗೈಕ್ಯರಾಗಿದ್ದಾರೆ.

ಶ್ರೀ ಷಡಕ್ಷರಿ ಶಿವಾಚಾರ್ಯ ಸ್ವಾಮಿಗಳು: ಶ್ರೀ ಜಡೆ ಶಿವಾಚಾರ್ಯ ಸ್ವಾಮಿಗಳ ನಂತರ ಹಲಸಹಳ್ಳಿಯ ಶ್ರೀ ರುದ್ರಪ್ಪ ಮತ್ತು ಶ್ರೀಮತಿ ಮಹಾದೇವಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಷಡಕ್ಷರಿ ಸ್ವಾಮಿಗಳು ಹಲಸಹಳ್ಳಿಯಲ್ಲಿಯೇ ವಿದ್ಯಾಭ್ಯಾಸ ವನ್ನು ಮುಗಿಸಿ ಗವಿಮಠದ ಪಟ್ಟಾಧಿಕಾರವನ್ನು ೧೯೯೨ರಲ್ಲಿ ವಹಿಸಿಕೊಳ್ಳುತ್ತಾರೆ. ಶ್ರೀ ಷಡಕ್ಷರಿ ಶಿವಾಚಾರ್ಯ ಸ್ವಾಮಿಗಳು ಪಟ್ಟಾಧಿಕಾರ ವಹಿಸಿಕೊಂಡ ನಂತರ ಹಿರಿಯ ಗುರುಗಳು ನಡೆದು ಬಂದ ದಾರಿಯಲ್ಲಿಯೇ ಮುನ್ನಡೆಯುತ್ತಾ ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ ಬಂದಿದ್ದಾರೆ. ಮಠದ ಆಸ್ತಿಯಾಗಿರುವ ಹನ್ನೆರಡು ಎಕರೆ ಖುಷ್ಕಿ ಜಮೀನು, ಎರಡು ಎಕರೆ ಗದ್ದೆಯನ್ನು ಅಭಿವೃದ್ಧಿಪಡಿಸಿ ಮಠಕ್ಕೆ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಹಿರಿಯ ಗುರುಗಳ ಎರಡು ಗದ್ದುಗೆಗಳು, ಮಠದ ಆವರಣದಲ್ಲಿ ಸ್ಥಾಪನೆ ಯಾಗಿರುವ ದೇವಸ್ಥಾನ, ಶ್ರೀ ಷಡಕ್ಷರಿ ಶಿವಾಚಾರ್ಯ ಸ್ವಾಮಿಗಳು ಅನುಷ್ಠಾನಗೊಂಡು ರಾಜಶೇಖರ ವಿಲಾಸವನ್ನು ರಚಿಸಿದ ಗವಿಯಲ್ಲಿ ಬಸವೇಶ್ವರರ ಮೂರ್ತಿ ಹಾಗೂ ಮೂಲಗವಿಯ ಬಾಗಿಲಿನಲ್ಲಿ ಸ್ಥಾಪಿಸಲ್ಪಟ್ಟಿರುವ ನೂರೊಂದು ಲಿಂಗಗಳಿಗೆ ನಿತ್ಯ ಪೂಜೆ ಮಾಡಲಾಗುತ್ತಿದೆ. ಹುಣ್ಣಿಮೆ ಮತ್ತು ಅಮಾವಾಸ್ಯೆ ದಿನಗಳಲ್ಲಿ, ಶ್ರಾವಣ ಮತ್ತು ಕಾರ್ತೀಕ ಮಾಸಗಳಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ವರ್ಷದಲ್ಲಿ ಒಮ್ಮೆ ಹಿರಿಯ ಗುರುಗಳಿಬ್ಬರ ಆರಾಧನೆ, ವಿಜಯದಶಮಿಯ ಆಯುಧಪೂಜೆಯ ದಿನ ಮಠದ ಮುಂಭಾಗದಲ್ಲಿರುವ ಕೆರೆಯಲ್ಲಿ ತೆಪ್ಪೋತ್ಸವವನ್ನು ಆಚರಣೆ ಮಾಡಲಾಗುತ್ತಿದೆ. ಈ ಸಂದರ್ಭಗಳಲ್ಲಿ ಅನ್ನ ದಾಸೋಹವನ್ನು ಮಠದಲ್ಲಿ ಏರ್ಪಡಿಸಲಾಗುತ್ತಿದೆ. ಹಲಸಹಳ್ಳಿಯ ಗವಿಮಠವು ಕಳೆದ ಒಂದು ಶತಮಾನದಲ್ಲಿ ಪ್ರಾರಂಭಗೊಂಡರೂ, ಪುರಾತನ ಮಠಗಳು ಮಾಡಲಾಗದಿದ್ದಂತಹ ಕಾರ್ಯಗಳನ್ನು ಸಾಧಿಸಿ ಧಾರ್ಮಿಕ ಮತ್ತು ಸಾಮಾಜಿಕವಾಗಿ ತನ್ನನ್ನು ತೊಡಗಿಸಿಕೊಂಡು ಜನಮನ್ನಣೆಗೆ ಪಾತ್ರವಾಗಿದೆ.

ವಿಳಾಸ: ಷ.ಬ್ರ.ಶ್ರೀ ಷಡಕ್ಷರಿ ಶಿವಾಚಾರ್ಯಸ್ವಾಮಿಗಳು. ಶ್ರೀ ಗವಿಮಠ, ಹಲಸಹಳ್ಳಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

ಮಂಡ್ಯ ತಾಲ್ಲೂಕು

ಮಂಡ್ಯ ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿ ಒಂದಾದ ಮಂಡ್ಯ ತಾಲ್ಲೂಕು ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿಯನ್ನು ಕಂಡಿದೆ. ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆದ ಲಕ್ಷಣಗಳು ಕಂಡುಬರುವುದಿಲ್ಲ. ಈವರೆಗೆ ತಾಲ್ಲೂಕಿನಾದ್ಯಂತ ಹನ್ನೆರಡು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಪ್ರಸ್ತುತ ನಾಲ್ಕುಮಠಗಳನ್ನು ಮಾತ್ರ ಗುರುತಿಸಬಹುದಾಗಿದೆ.

ಗುತ್ತಲು (ಅರಕೇಶ್ವರ ನಗರ)

ಮಂಡ್ಯ ತಾಲ್ಲೂಕಿನ ಗುತ್ತಲ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಎಂಟು ಕಿ. ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಜಂಗಮಮಠವು ಅಸ್ತಿತ್ವದಲ್ಲಿದೆ.

ಗುತ್ತಲ ಜಂಗಮಮಠ: ಗುತ್ತಲ ಗ್ರಾಮದಲ್ಲಿ ಜಂಗಮ ಮಠವು ಸ್ಥಾಪನೆಯಾಗಿ ಧಾರ್ಮಿಕ ಚಟುವಟಿಕೆಗಳ ಕೇಂದ್ರ ಬಿಂದುವಾಗಿ ಬೆಳೆದಿದೆ. ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿರುವ ಈ ಮಠವು ಪುರಾತನ ಕಾಲದಲ್ಲಿ ಅಸ್ತಿತ್ವಗೊಂಡು ಈ ತನಕವೂ ಬೆಳೆದು ಬಂದಿದೆ. ಗುತ್ತಲು ಗ್ರಾಮಕ್ಕೆ'ಅರಕೇಶ್ವರನಗರ'ಎಂದೂ ಸಹ ಕರೆಯಲಾಗುತ್ತಿದೆ. ಅರಕೇಶ್ವರ ದೇವಸ್ಥಾನವು ಪ್ರಖ್ಯಾತಗೊಂಡ ಕಾರಣದಿಂದ ಈ ಗ್ರಾಮಕ್ಕೆ ಈ ಹೆಸರು ಬಂದಿದೆ. ಶ್ರೀ ತೋಟದಯ್ಯ ಶಿವಾಚಾರ್ಯ ಸ್ವಾಮಿಗಳಿಂದ ಶ್ರೀಗುತ್ತಲ ಜಂಗಮಮಠವು ಪ್ರಾರಂಭಿಸಲ್ಪಟ್ಟಿದೆ. ಮಠದ ಕರ್ತೃಗುರುಗಳಾದ ಶ್ರೀ ತೋಟದಯ್ಯ ಶಿವಾಚಾರ್ಯರು ಇಲ್ಲಿ ಬಂದು ನೆಲೆಸಿ ತಮ್ಮ ಪರಂಪರೆಯನ್ನು ಪ್ರಾರಂಭಗೊಳಿಸಿದರು. ಭಕ್ತರ ಕಷ್ಟ ಸುಖಗಳಿಗೆ ಸ್ಪಂದಿಸಿದ ಗುರುಗಳು ಧಾರ್ಮಿಕ ನೆಲೆಗಟ್ಟಿನಲ್ಲಿ ಭಕ್ತರು ಜೀವನ ನಡೆಸುವ ಕ್ರಮವನ್ನು ತಿಳಿಸಿಕೊಟ್ಟರು. ಇದರಿಂದ ಶಾಂತಿ, ಸಮೃದ್ಧಿ ನೆಲೆಸತೊಡಗಿತು.

ಪರಂಪರೆ:

೧. ಷ.ಬ್ರ.ಶ್ರೀ ತೋಟದಯ್ಯ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ತೋಂಟದ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಈ ರೀತಿ ಗುರುಪರಂಪರೆ ಬೆಳೆದು ಬಂದಿದ್ದು, ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿ ಭಕ್ತರು ಸನ್ಮಾರ್ಗದಲ್ಲಿ ನಡೆಯುವಂತೆ ಪ್ರೇರಣೆ ನೀಡಿದ್ದಾರೆ. ಫೆಬ್ರವರಿ ಐದು ೧೯೭೭ರಲ್ಲಿ ಲಿಂಗೈಕ್ಯರಾದ ಶ್ರೀ ತೋಂಟದ ಶಿವಾಚಾರ್ಯ ಸ್ವಾಮಿಗಳು ಈ ಮಠವನ್ನು ಹೆಚ್ಚು ಅಭಿವೃದ್ಧಿಗೊಳಿಸಲು ಕಾರಣಕರ್ತರಾಗಿದ್ದರು. ಶ್ರೀ ತೋಂಟದ ಶಿವಾಚಾರ್ಯ ಸ್ವಾಮಿಗಳ ನಂತರ ೧೯೭೭ರ ವರೆಗೆ ಮಠವು ಖಾಲಿ ಉಳಿದಿತ್ತು. ಈ ಸಂದರ್ಭದಲ್ಲಿ ಮಠದ ಧಾರ್ಮಿಕ ಚಟುವಟಿಕೆಗಳು ಸ್ಥಗಿತಗೊಳ್ಳದಂತೆ ನೋಡಿಕೊಳ್ಳಲಾಯಿತು. ವಿದ್ಯಾಸಂಪನ್ನರೂ,ಧಾರ್ಮಿಕ ವಿಚಾರಗಳಲ್ಲಿ ಆಳವಾದ ಅಧ್ಯಯನವುಳ್ಳವರೂ ಆದ ಶ್ರೀ ಚಂದ್ರ ಶೇಖರ ಶಿವಾಚಾರ್ಯ ಸ್ವಾಮಿಗಳು, ೧೯೭೭ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡು ಧಾರ್ಮಿಕ ಚಟುವಟಿಕೆಗಳನ್ನು ಚುರುಕುಗೊಳಿಸಿ, ಮಠದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮವಹಿಸಿ ದುಡಿದ ಫಲಶೃತಿಯೇ ಮಠವು ಸುಸ್ಥಿತಿಗೆ ಬರಲು ಕಾರಣವಾಯಿತು.

ಗದ್ದುಗೆಗಳು: ಮಠದ ಕರ್ತೃಗಳಾದ ಶ್ರೀ ತೋಟದಯ್ಯ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಯು, ಗುತ್ತಲು ಗ್ರಾಮದ ಹೊರಭಾಗದಲ್ಲಿರುವ ಚೌಕಿಮಠದಲ್ಲಿ ನಿರ್ಮಾಣಗೊಂಡಿದೆ. ಈಗಿನ ಮಠದ ಆವರಣದಲ್ಲಿ ಒಂದು ಗದ್ದುಗೆ, ಹಿಂದಿನ ಗುರುಗಳಾದ ಶ್ರೀ ತೋಂಟದ ಶಿವಾಚಾರ್ಯಸ್ವಾಮಿಗಳ ಗದ್ದುಗೆಯು ಮಠದ ಆವರಣದಲ್ಲಿ ಹೊಸದಾಗಿ ನಿರ್ಮಾಣಗೊಂಡಿವೆ.

ವಿಳಾಸ: ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಜಂಗಮಮಠ, ಗುತ್ತಲು, ಮಂಡ್ಯ ತಾ, ಮಂಡ್ಯ ಜಿಲ್ಲೆ.

ಪುರ

ಮಂಡ್ಯ ತಾಲ್ಲೂಕಿನ ಪುರ ಗ್ರಾಮವು ತಾಲ್ಲೂಕು ಕೇಂದ್ರದ ಪೂರ್ವಕ್ಕೆ ಸುಮಾರು ಎಂಟೂವರೆ ಕಿ.ಮೀ. ದೂರದಲ್ಲಿದೆ.

ಇಲ್ಲಿ ಶ್ರೀ ಗುರುಮಲ್ಲೇಶ್ವರಮಠವು ಅಸ್ತಿತ್ವದಲ್ಲಿದೆ.

ಗುರುಮಲ್ಲೇಶ್ವರಮಠ: ಪುರ ಗ್ರಾಮದಲ್ಲಿ ಹಿಂದೆ ಪ್ರಾರಂಭಗೊಂಡಿದ್ದ ಇಲ್ಲಿ ಶ್ರೀ ಗುರುಮಲ್ಲೇಶ್ವರಮಠವು ಜೀರ್ಣ ಗೊಂಡಿತ್ತು. ಕಳೆದ ಇಪ್ಪತ್ತು ವರ್ಷಗಳ ಹಿಂದೆ ಶ್ರೀ ಶಿವಲಿಂಗ ಸ್ವಾಮಿಗಳು ಅಧಿಕಾರಕ್ಕೆ ಬಂದು ಇಲ್ಲಿನ ದಾಸೋಹ ಕ್ರಿಯೆಗೆ ಪುನಃ ಚಾಲನೆಯನ್ನು ನೀಡಿದರು. ವೀರಾಜಪುರದ ಗುರುಗಳೊಬ್ಬರು ಪುರ ಗ್ರಾಮದ ಬಸವೇಶ್ವರ ದೇವಸ್ಥಾನದಲ್ಲಿ ದೇವನೂರಿನ ಶಾಖಾಮಠವಾಗಿ ಈ ಮಠವನ್ನು ಪ್ರಾರಂಭಿಸಿದ್ದರು ಎಂದು ಹೇಳಲಾಗುತ್ತಿದೆ. ಇವರ ನಂತರ ಶ್ರೀ ಗೊಗ್ಗಪ್ಪ ಸ್ವಾಮಿಗಳು ಅಧಿಕಾರವನ್ನು ನಡೆಸಿ ಲಿಂಗೈಕ್ಯರಾಗಿದ್ದಾರೆ. ಇವರ ಗದ್ದುಗೆಯು ಮಠದ ಆವರಣದಲ್ಲಿ ನಿರ್ಮಾಣಗೊಂಡಿದೆ. ಈಗ ಶ್ರೀಶಿವ ಲಿಂಗ ಸ್ವಾಮಿಗಳು ದಾಸೋಹವನ್ನು ನಡೆಸುತ್ತಿದ್ದಾರೆ. ಗುರುಗಳು ಬಸವ ಜಯಂತಿಯನ್ನು ಆಚರಣೆ ಮಾಡಲಾಗುತ್ತಿದೆ.

ವಿಳಾಸ: ಶ್ರೀ ಶಿವಲಿಂಗ ಸ್ವಾಮಿಗಳು, ಶ್ರೀ ಗುರುಮಲ್ಲೇಶ್ವರ ಮಠ, ಪುರ, ಮಂಡ್ಯ ತಾಲ್ಲೂಕು,

ಹಾಲುಕೆರೆ

ಮಂಡ್ಯ ತಾಲ್ಲೂಕಿನ ಹಾಲುಕೆರೆಯು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹದಿಮೂರು ಕಿ. ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಗುರುಮಲ್ಲೇಶ್ವರ ದಾಸೋಹಮಠವು ಅಸ್ತಿತ್ವದಲ್ಲಿದೆ.

ಗುರುಮಲ್ಲೇಶ್ವರ ದಾಸೋಹಮಠ: ಹಾಲುಕೆರೆ ಗ್ರಾಮದಲ್ಲಿ ೧೯೯೫ರ ಮೇ ಹತ್ತೊಂಬತ್ತರಂದು ದೇವನೂರು ಶಾಖೆಯ ಮಠವು ಪ್ರಾರಂಭಗೊಂಡಿದೆ. ಭಿಕ್ಷದ ಶ್ರೀ ಮರಿಶಿವಪ್ಪ ಸ್ವಾಮಿಗಳನ್ನು ಮಳವಳ್ಳಿ ತಾಲ್ಲೂಕಿನ ರಾಗಿ ಬೊಮ್ಮನಹಳ್ಳಿ ದಾಸೋಹಮಠದ ಶ್ರೀ ನಂಜುಂಡ ಸ್ವಾಮಿಗಳು ನೇಮಕಮಾಡಿದ್ದಾರೆ. ಹಾಲುಕೆರೆಯ ಗ್ರಾಮಸ್ಥರು ಈ ನೂತನ ಮಠಕ್ಕೆ ಕಟ್ಟಡವನ್ನು ನಿರ್ಮಿಸಿಕೊಟ್ಟಿದ್ದು, ಮಠದಲ್ಲಿ ಧಾರ್ಮಿಕ ಆಚರಣೆಗಳು ನಡೆಯುವಂತೆ ಪ್ರೋತ್ಸಾಹವನ್ನು ನೀಡಿದ್ದಾರೆ. ನೂತನ ಮಠಕ್ಕೆ ನೇಮಕಗೊಂಡ ಭಿಕ್ಷದ ಮರಿಗಳಾದ ಶ್ರೀ ಶಿವಪ್ಪ ಸ್ವಾಮಿಗಳು ದಾಸೋಹ ಕಾರ್ಯವನ್ನು ನಡೆಸುತ್ತಿದ್ದಾರೆ. ಪ್ರತಿ ದಿನ ಮಠದಲ್ಲಿ ಭಜನೆ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಶಿವಪ್ಪ ಸ್ವಾಮಿಗಳು, ಶ್ರೀ ಗುರುಮಲ್ಲೇಶ್ವರ ದಾಸೋಹಮಠ, ಹಾಲುಕೆರೆ, ಮಂಡ್ಯ ತಾಲ್ಲೂಕು.

ಹೊನಗಳ್ಳಿ

ಮಂಡ್ಯ ತಾಲ್ಲೂಕಿನ ಹೊನಗಳ್ಳಿಯು ತಾಲ್ಲೂಕು ಕೇಂದ್ರದ ಪೂರ್ವಕ್ಕೆ ಹದಿನಾಲ್ಕು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಹೊನಗಳ್ಳಿಮಠವು ಅಸ್ತಿತ್ವದಲ್ಲಿದೆ.


ಹೊನಗಳ್ಳಿಮಠ: ಹೊನಗಳ್ಳಿ ಗ್ರಾಮದಲ್ಲಿ ೧೮೭೪ ರ ಅಕ್ಟೋಬರ್ ಹನ್ನೊಂದರಂದು ಪ್ರಾರಂಭಗೊಂಡ ಮಠವು ಇಲ್ಲಿನ ಧಾರ್ಮಿಕ ಚಟುವಟಿಕೆಗಳ ಕೇಂದ್ರ ಬಿಂದುವಾಗಿ ಬೆಳೆದಿತ್ತು. ಕಾಲಾನಂತರ ಈ ಮಠವು ಜೀರ್ಣಗೊಂಡಿತೆಂದು ಹೇಳಲಾಗುತ್ತಿದೆ.

ಮಠ ಸ್ಥಾಪನೆ: ವೀರಶೈವರ ಧಾರ್ಮಿಕ ಆಚರಣೆಗಳ ಮಾರ್ಗದರ್ಶನಕ್ಕೆ ಗುರುಗಳು ಯಾರೂ ಇಲ್ಲದ ಕಾರಣ, ಗುರುಗಳ ಪೂರ್ವಾಶ್ರಮದ ತಂದೆ ಪಟೇಲ್ ತಮ್ಮಯ್ಯನವರ ಶ್ರಮದಿಂದ ಈ ಮಠವು ಸ್ಥಾಪನೆಗೊಂಡು ,ಅನೇಕ ವರ್ಷಗಳ ಕಾಲ ಧಾರ್ಮಿಕ ಚಟುವಟಿಕೆಯನ್ನು ನಡೆಸಿಕೊಂಡು ಬರತೊಡಗಿತು. ಧಾರ್ಮಿಕ ಆಚರಣೆಗಳಿಗಾಗಿ ಹುಟ್ಟಿಕೊಂಡ ಈ ಮಠಕ್ಕೆ ಹೊನಗಳ್ಳಿ ಗ್ರಾಮದ ಪಟೇಲ್ ತಮ್ಮಯ್ಯ ಮತ್ತು ಪಾರ್ವತಮ್ಮನವರ ಮಗನಾಗಿ ೧೯೪೫ರಲ್ಲಿ ಜನಿಸಿದ ಶಿವಸ್ವಾಮಿಗಳು ನೇಮಕಗೊಂಡರು. ಇವರಿಗೆ ಶ್ರೀ ಶಿವಸ್ವಾಮಿ ಶಿವಾಚಾರ್ಯ ಒಡೆಯರು ಎಂಬ ಅಭಿದಾನದೊಂದಿಗೆ ೧೯೬೦ರಲ್ಲಿ ಪಟ್ಟಾಧಿ ಕಾರ ಮಾಡಲಾಯಿತು. ಈ ಮಠವು ಈ ಗ್ರಾಮದಲ್ಲಿ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿದೆ.

ವಿಳಾಸ: ಶ್ರೀ ಶಿವಸ್ವಾಮಿ ಶಿವಾಚಾರ್ಯ ಒಡೆಯರು, ಶ್ರೀ ಹೊನಗಳ್ಳಿಮಠ, ಹೊನಗಳ್ಳಿ, ಮಂಡ್ಯ ತಾಲ್ಲೂಕು.

❑

ಮೈಸೂರು ಜಿಲ್ಲೆ



ಮೈಸೂರು ತಾಲ್ಲೂಕು : ೧. ಶಟ್ಟಿ ನಾಯಕನ ಹಳ್ಳಿ, ೨. ಬರಡನ ಪುರ

ನಂಜನಗೂಡು ತಾಲ್ಲೂಕು : ೧. ಸುತ್ತೂರು, ೨. ಬಸವನಪುರ, ೩. ದೇವನೂರು ೪. ಹುಲ್ಲಹಳ್ಳಿ ೫. ಸೂರಹಳ್ಳಿ

ಟಿ.ನರಸೀಪುರ ತಾಲ್ಲೂಕು : ೧. ಸೋಸಲೆ, ೨. ಚಿದರಹಳ್ಳಿ ೩. ಪರಶಾಮಿ ಪುರ, ೪. ಮುಡುಕತೊರೆ, ೫. ತಲಕಾಡು, ೬. ವಾಟಾಳು

ಹೆಗ್ಗಡದೇವನಕೋಟೆ ತಾಲ್ಲೂಕು : ೧. ಮಾದಪುರ, ೨. ದಡದಹಳ್ಳಿ, ೩. ಬಿಡಗಲು, ೪. ನಂಜೂಪುರ

ಹುಣಸೂರು ತಾಲ್ಲೂಕು : ೧. ಮಾದಹಳ್ಳಿ, ೨. ಗಾವಡಗೆರೆ

ಪಿರಿಯಾಪಟ್ಟಣ ತಾಲ್ಲೂಕು : ೧. ಬೆಟ್ಟದಪುರ, ೨. ರಾವಂದೂರು

ಕೆ.ಆರ್.ನಗರ ತಾಲ್ಲೂಕು : ೧. ಕರ್ಪೂರವಳ್ಳಿ, ೨. ಅರಕೆರೆ, ೩. ಅಂಕನಹಳ್ಳಿ

ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎಂದೇ ಹೆಸರಾಗಿರುವ ಮೈಸೂರು, ಜಿಲ್ಲೆಯ ಕೇಂದ್ರ ಸ್ಥಳ. ಪೌರಾಣಿಕ, ಐತಿಹಾಸಿಕ, ಸಾಂಸ್ಕೃತಿಕ, ಶೈಕ್ಷಣಿಕ, ಆರ್ಥಿಕ ಹಾಗೂ ಧಾರ್ಮಿಕವಾಗಿ ವಿಶಿಷ್ಟ ಸ್ಥಾನ ಪಡೆದು ಬೇರೆ ಜಿಲ್ಲೆಗಳಿಗಿಂತ ಭಿನ್ನವಾಗಿರುವ ಈ ಜಿಲ್ಲೆ ಸಂಸ್ಕಾರದ ಶ್ರೀಮಂತಿಕೆ ಪಡೆದುಕೊಂಡಿದೆ.

೧೯೯೭ ರಲ್ಲಿ ಜಿಲ್ಲೆಗಳ ಪುನರ್‌ವಿಂಗಡಣೆಯ ಸಂದರ್ಭದಲ್ಲಿ ನಾಲ್ಕು ತಾಲ್ಲೂಕುಗಳು ಹೊಸದಾಗಿ ರೂಪುಗೊಂಡು ಚಾಮರಾಜನಗರ ಜಿಲ್ಲೆಗೆ ಸೇರಿ ಈಗ ಮೈಸೂರು, ನಂಜನಗೂಡು, ಟಿ.ನರಸೀಪುರ, ಕೃಷ್ಣರಾಜನಗರ, ಹುಣಸೂರು, ಪಿರಿಯಾಪಟ್ಟಣ ಹಾಗೂ ಹೆಗ್ಗಡದೇವನಕೋಟೆ ಈ ಏಳು ತಾಲ್ಲೂಕುಗಳನ್ನು ಒಳಗೊಂಡಿದೆ. ಹಾಸನ, ಮಂಡ್ಯ, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಗಳಿಂದ ಆವೃತಗೊಂಡಿರುವುದಲ್ಲದೆ, ಜಿಲ್ಲೆಯ ನೈರುತ್ಯ ಭಾಗದಲ್ಲಿ ಕೇರಳ ರಾಜ್ಯದ ಗಡಿ ಪ್ರದೇಶವನ್ನು ಒಳಗೊಂಡಿದೆ. ಕಾವೇರಿ, ಲಕ್ಷ್ಮಣತೀರ್ಥ ಹಾಗೂ ಕಪಿಲಾ ನದಿಗಳು ಇಲ್ಲಿ ಹರಿದು ನೈಸರ್ಗಿಕ ಶ್ರೀಮಂತಿಕೆಯನ್ನು ಹೆಚ್ಚಿಸಿವೆ. ಮೈಸೂರು ಒಂದಲ್ಲ ಒಂದು ಕಾರಣಕ್ಕೆ ವಿಶ್ವವಿಖ್ಯಾತಿ ಪಡೆದುಕೊಂಡಿದೆ. ಪಂಚಲಿಂಗೇಶ್ವರ ಲಿಂಗಗಳು ಸ್ಥಾಪನೆಗೊಂಡಿ ರುವ ತಲಕಾಡು ಹಾಗೂ ಮುಡುಕುತೊರೆ, ಇತರೆ ಧಾರ್ಮಿಕ ಕೇಂದ್ರಗಳಾದ ನಂಜನಗೂಡು,ಸುತ್ತೂರು,ಸಂಗಮ ಕ್ಷೇತ್ರ, ಚಾಮುಂಡಿ ಬೆಟ್ಟ ಈ ರೀತಿ ಧಾರ್ಮಿಕ ಕ್ಷೇತ್ರಗಳಿಂದ ಮೈದುಂಬಿ ಹೆಸರು ಗಳಿಸಿದೆ. ಅಲ್ಲದೆ ಕೃಷ್ಣರಾಜಸಾಗರ,ಮೈಸೂರುಅರಮನೆ, ಮೃಗಾಲಯ, ಜಗನ್ಮೋಹನ ಪ್ಯಾಲೇಸು, ಜಯಚಾಮ ರಾಜೇಂದ್ರ ಚಿತ್ರಕಲಾ ಶಾಲೆ, ಇವೆಲ್ಲವಕ್ಕೂ ಮಿಗಿಲಾಗಿರುವ ಇಲ್ಲಿನ ದಸರಹಬ್ಬ ಈ ನಾಡನ್ನು ವಿಶ್ವಭೂಪಟದಲ್ಲಿ ಗುರುತಿಸುವಂತೆ ಮಾಡಿವೆ.

ಯದುವಂಶದ ಯದುರಾಜನಿಂದ (೧೩೯೯) ಇತ್ತೀಚಿನ ಜಯಚಾಮರಾಜೇಂದ್ರ ಒಡೆಯರ (೧೯೪೭) ಕಾಲದ ತನಕ ಮೈಸೂರು ಅರಸರು ಈ ನಗರವನ್ನು ಒಂದು ಸಾಂಸ್ಕೃತಿಕ ನೆಲೆಬೀಡಾಗಿ ರೂಪಿಸಿದ್ದರು. ಅಲ್ಲದೆ ತಲಕಾಡಿನ ಗಂಗರು, ನಂತರದ ಚೋಳರು, ವಿಜಯನಗರದ ಅರಸರು, ಕೊಡಗಿನ ಅರಸರು ಹಾಗೂ ಶ್ರೀರಂಗಪಟ್ಟಣದ ಟಿಪ್ಪುಸುಲ್ತಾನ್ ಇವರುಗಳು ಇಲ್ಲಿ ಆಳ್ವಿಕೆ ನಡೆಸಿ ಸಾಂಸ್ಕೃತಿಕ, ಭೌಗೋಳಿಕ, ಐತಿಹಾಸಿಕ ಹಾಗೂ ಧಾರ್ಮಿಕವಾಗಿ ಈ ಜಿಲ್ಲೆಯನ್ನು ಬೆಳೆಸಿದ್ದಾರೆ. ಪುರಾತನ ಕಾಲದಿಂದ ಇಂದಿನವರೆಗೂ ಈ ಜಿಲ್ಲೆಯಲ್ಲಿ ನೂರಹದಿನೆಂಟು ವೀರಶೈವ ಮಠಗಳು ಸ್ಥಾಪನೆಯಾಗಿದ್ದುವು ಎಂಬ ಮಾಹಿತಿ ದೊರೆತಿದೆ. ಈ ಮಾಹಿತಿಯ ಆಧಾರದ ಮೇಲೆ ಶೋಧನೆ ನಡೆಸಿದಾಗ ಎಪ್ಪತ್ತಾರು ಮಠಗಳು ದೊರತಿವೆ. ಉಳಿದ ಮಠಗಳು ಅಸ್ತಿತ್ವವನ್ನು ಕಳೆದುಕೊಂಡು ಹೇಳಲು ಹೆಸರಿಲ್ಲದಂತಾಗಿವೆ.

ಸುತ್ತೂರಿನ ಶ್ರೀ ಶಿವರಾತ್ರೀಶ್ವರ ಮಠದ ಸ್ಥಾಪನೆಯಿಂದಾಗಿ ಇಡೀ ನಾಡೇ ಶೈಕ್ಷಣಿಕ ಪ್ರಗತಿಯನ್ನು ಕಂಡಿದೆ. ಶಿಕ್ಷಣ ಸಂಸ್ಥೆಗಳಿಗೆ ಹೊಂದಿಕೊಂಡಂತೆ ಉಚಿತ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿ, ಸಹಸ್ರಾರು ಬಡ ಹಾಗೂ ಮಧ್ಯಮವರ್ಗದ ವಿದ್ಯಾರ್ಥಿಗಳಿಗೆ ಜ್ಞಾನ ಹಾಗೂ ಅನ್ನದಾಸೋಹವನ್ನು ನೀಡಿದೆ.ಈ ಕಾರಣಕ್ಕೆ ನಾಡು ಋಣಿಯಾಗಿರಬೇಕು ಎಂಬುದನ್ನು ಯಾರೂ ಅಲ್ಲಗಳೆಯಲಾರರು. ದೇವನೂರು ಶ್ರೀ ಗುರುಮಲ್ಲೇಶ್ವರ ದಾಸೋಹ ಮಠವು ಹಸಿದವರ ಬಾಳಿಗೆ ಆಶಾಜ್ಯೋತಿ ಯಾಗಿದೆ. ಜಿಲ್ಲೆಯಲ್ಲಿ ಸ್ಥಾಪಿತಗೊಂಡ ಇತರ ವೀರಶೈವ ಮಠಗಳೂ ಸಣ್ಣಪುಟ್ಟ ಮಠಗಳೂ ಸಹ ತಮ್ಮ ಇತಿಮಿತಿಯೊಳಗೆ ಜ್ಞಾನ ಮತ್ತು ಅನ್ನದಾಸೋಹವನ್ನು ನೀಡಿ, ಸಾಮಾಜಿಕ ಅಭಿವೃದ್ಧಿಗೆ ಅಪಾರವಾದ ಕೊಡುಗೆಯನ್ನು ಸಲ್ಲಿಸಿವೆ.

ಕೆ.ಆರ್.ನಗರ ತಾಲ್ಲೂಕು

ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲ್ಲೂಕು ಕೃಷ್ಣರಾಜ ಸಾಗರ ಜಲಾಶಯದಿಂದ ಅಭಿವೃದ್ಧಿಯನ್ನು ಕಂಡಿದೆ. ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಪ್ರಾಚೀನದಿಂದಲೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬೆಳೆಯುತ್ತಾ ಬಂದಿದೆ. ಈ ತಾಲ್ಲೂಕಿನಲ್ಲಿ ಒಂಭತ್ತು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ಅರಕೆರೆ

ಕೆ.ಆರ್.ನಗರ ತಾಲ್ಲೂಕಿನ ಅರಕೆರೆಯು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಎಂಟು ಕಿ.ಮೀ. ದೂರದಲ್ಲಿದೆ. ಇಲ್ಲಿ ಚೋಳರ ಸಮಯದ ಶ್ರೀ ವಿರಕ್ತ ಮಠ ಸ್ಥಾಪನೆಯಾಗಿ, ಈ ಭಾಗದ ಭಕ್ತರಿಗೆ ದಾರಿ ದೀಪವಾಗಿ ಬೆಳಗುತ್ತಿದೆ.

ವಿರಕ್ತಮಠ: ಇತಿಹಾಸ ಪ್ರಸಿದ್ಧ ಈ ಗ್ರಾಮದಲ್ಲಿ ಚೋಳರ ಕಾಲದಲ್ಲಿ ನಿರ್ಮಿಸಿದ ಅರಕೇಶ್ವರ ದೇವಸ್ಥಾನವಿದ್ದು, ಇದರ ಪಕ್ಕದಲ್ಲಿ ಶ್ರೀ ವಿರಕ್ತಮಠವು ಸ್ಥಾಪನೆಯಾಗಿದೆ. ಈ ಮಠದ ಇತಿಹಾಸದಲ್ಲಿ ಶ್ರೀ ನಂಜಯ್ಯ ಸ್ವಾಮಿಗಳು ಮತ್ತು ಶ್ರೀ ಗುರು ಶಾಂತ ಸ್ವಾಮಿಗಳು ಅಧಿಕಾರ ನಡೆಸಿದ ದಾಖಲೆಗಳು ಸಿಗುತ್ತಿವೆ. ಉಳಿದಂತೆ ಹೆಚ್ಚು ಮಾಹಿತಿ ಲಭ್ಯವಿಲ್ಲ. ಈಗ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಗಳು ಅಧಿಕಾರವನ್ನು ನಡೆಸುತ್ತಿದ್ದಾರೆ.

ತಪ್ಪಿದ ವಲಸೆ: ಅರಕೆರೆಯಲ್ಲಿ ಮಲೇರಿಯ ಬಂದು ಜನರು ತಲ್ಲಣಗೊಂಡು ಬೇರೆಡೆಗೆ ವಲಸೆ ಹೋಗತೊಡಗಿದ್ದರು. ಈ ಸಂದರ್ಭದಲ್ಲಿ ಶ್ರೀ ಗುರುಶಾಂತ ಸ್ವಾಮಿಗಳು ಜನರಿಗೆ ಮಾನಸಿಕ ಸ್ಥೈರ್ಯ ನೀಡಿ, ಜನರು ವಲಸೆ ಹೋಗುವುದನ್ನು ತಪ್ಪಿಸಿದರು. ಭಕ್ತರಿಗೆ ಮಾರ್ಗದರ್ಶಕರಾಗಿದ್ದ ಶ್ರೀ ಗುರುಶಾಂತ ಸ್ವಾಮಿಗಳು ಅದೇ ವರ್ಷದಲ್ಲಿ ಲಿಂಗೈಕ್ಯರಾದರು. ಇವರ ನಂತರ ಉತ್ತರಾಧಿಕಾರಿಗಳಿಲ್ಲದೆ ಮಠವು ಖಾಲಿ ಉಳಿಯಿತು.

ಅಭಿವೃದ್ಧಿ ಕಾರ್ಯಗಳು: ಶ್ರೀ ಗುರುಶಾಂತ ಸ್ವಾಮಿಗಳು ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳ ಸಹಕಾರ ಪಡೆದು ಅರಕೆರೆ ಶ್ರೀ ವಿರಕ್ತಮಠಕ್ಕೆ ನೂತನ ಕಟ್ಟಡ ಕಟ್ಟಿಸಿದರು. ತ್ರಿಕಾಲಪೂಜೆಯಿಂದ ಜನರನ್ನು ಆಕರ್ಷಿಸಿಕೊಂಡು ಮಠದ ಅಭಿವೃದ್ಧಿಗೆ ನೆರವಾದರು. ಇವರ ನಂತರ ಮಠ ಖಾಲಿ ಇದ್ದುದ್ದನ್ನು ಗಮನಿಸಿದ ಬೆಟ್ಟದ ಪುರದಸ್ವಾಮಿಗಳು ೧೯೬೩ರಲ್ಲಿ ಶ್ರೀ ನಂಜುಂಡ ಸ್ವಾಮಿಗಳಿಗೆ ಅಧಿಕಾರ ಕೊಡಿಸಿದರು. ಇವರ ಕಾಲದಲ್ಲಿ ಮಠದ ಧಾರ್ಮಿಕ ಕಾರ್ಯಗಳು ವ್ಯವಸ್ಥಿವಾಗಿ ನಡೆಯತೊಡಗಿದವು.

ಗುರುಗಳು ಈಗ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಗಳನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಿಸಿ ಕೊಂಡು ೧೯೯೪ರಲ್ಲಿ ಪಟ್ಟಾಧಿಕಾರ ನೀಡಿದ್ದಾರೆ.ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಗಳು ಮೈಸೂರಿನಲ್ಲಿ ವಿದ್ಯಾಭ್ಯಾಸ ಮುಗಿಸಿ ಮಠವನ್ನು ಮುನ್ನಡೆಸುತ್ತಿದ್ದಾರೆ. ಹಿರಿಯ ಗುರುಗಳ ಮಾರ್ಗದರ್ಶನದಲ್ಲಿ ಈಗ ಮಠದ ಕಟ್ಟಡವನ್ನು ನವೀಕರಣಗೊಳಿಸಿದ್ದಲ್ಲದೆ, ಮಠದ ಆಸ್ತಿಯನ್ನು ಅಭಿವೃದ್ಧಿಪಡಿಸಿ ಹೆಚ್ಚು ಆದಾಯ ಬರುವಂತೆ ವ್ಯವಸ್ಥೆಗೊಳಿಸಿದ್ದಾರೆ.

ಧಾರ್ಮಿಕಕಾರ್ಯಗಳು: ಮಠದ ಆವರಣದಲ್ಲಿರುವ ಎರಡು ಗದ್ದುಗೆಗಳಿಗೆ ಪ್ರತಿನಿತ್ಯ ಪೂಜಾಕಾರ್ಯ ನಡೆಯುತ್ತಿದೆ. ಹಿರಿಯ ಗುರುಗಳ ಸಂಸ್ಮರಣಾ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಮಾದೇಶ್ವರ ದೇವಸ್ಥಾನ ಹಾಗೂ ಚೌಡಮ್ಮನವರ ದೇವಸ್ಥಾನದಲ್ಲಿ ನಿತ್ಯಪೂಜೆ ನಡೆಯುವಂತೆ ವ್ಯವಸ್ಥೆ ಮಾಡಿದ್ದಾರೆ. ಅಮಾವಾಸ್ಯೆ, ಹುಣ್ಣಿಮೆ, ಶ್ರಾವಣ ಮತ್ತು ಕಾರ್ತೀಕ ಮಾಸಗಳಲ್ಲಿ ಪೂಜೆ ಹಾಗೂ ವಿಶೇಷ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದ್ದಾರೆ. ಈ ಸಂದರ್ಭಗಳಲ್ಲಿ ನೂರಾರು ಜನರಿಗೆ ಅನ್ನದಾನ ಮಾಡಿ ನೆರವಾಗಿದ್ದಾರೆ. ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಗಳು ತಮ್ಮ ಕ್ರಿಯಾಶೀಲ ಗುಣಗಳಿಂದ ಭಕ್ತರನ್ನು ವೈಚಾರಿಕ ನೆಲೆಗಟ್ಟಿನ ಮೇಲೆ ರೂಪಿಸುತ್ತಿದ್ದಾರೆ.

ವಿಳಾಸ: ಶ್ರೀ ಷ.ಬ್ರ. ಸಿದ್ಧಲಿಂಗೇಶ್ವರ ಸ್ವಾಮಿಗಳು. ಶ್ರೀವಿರಕ್ತಮಠ. ಅರಕೆರೆ. ಕೆ.ಆರ್.ನಗರ ತಾಲ್ಲೂಕು. ಮೈಸೂರುಜಿಲ್ಲೆ.

ಎಲೆಮುದ್ದನಹಳ್ಳಿ

ಕೆ.ಆರ್.ನಗರ ತಾಲ್ಲೂಕಿನ ಎಲೆಮುದ್ದನಹಳ್ಳಿಯು ಕೆ.ಆರ್.ನಗರದ ಪಶ್ಚಿಮಕ್ಕೆ ಇಪ್ಪತ್ತೈದು ಕಿ.ಮೀ. ದೂರದಲ್ಲಿರುವ ಅಭಿವೃದ್ಧಿ ಕಾಣಬೇಕಾದ ಗ್ರಾಮ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಎಲೆಮುದ್ದನಹಳ್ಳಿ ಗ್ರಾಮದಲ್ಲಿ ಎಡೆಯೂರು ಶ್ರೀ ಸಿದ್ಧಲಿಂಗೇಶ್ವರರು ಕೆಲಕಾಲ ಅನುಷ್ಠಾನಗೊಂಡು ಪುಣ್ಯಸ್ಥಳವಾಗಿದೆ ಎಂದು ಹೇಳಲಾಗುತ್ತಿದೆ. ಇಂತಹ ಸ್ಥಳದಲ್ಲಿ ಹತ್ತೊಂಬತ್ತನೆಯ ಶತಮಾನದಲ್ಲಿ ವಿರಕ್ತಮಠವು ಸ್ಥಾಪನೆಯಾಗಿದೆ.

ಪರಂಪರೆ: ಈ ಮಠದಲ್ಲಿ ಎಡೆಯೂರು ಶ್ರೀ ಸಿದ್ಧಲಿಂಗೇಶ್ವರರ ತೋರುಗದ್ದುಗೆ ಹಾಗೂ ಇನ್ನೊಂದು ಗದ್ದುಗೆ ಸ್ಥಾಪನೆಯಾಗಿದ್ದು, ಇದನ್ನು ಆಧಾರಗಳ ಕೊರತೆಯಿಂದ ಗುರುತಿಸಲು ಸಾಧ್ಯವಾಗುತ್ತಿಲ್ಲ. ಮಠಾಧ್ಯಕ್ಷರು ಯಾರೂ ಇಲ್ಲದ ಕಾರಣ ಮಠ ಖಾಲಿಉಳಿಯಿತು. ಈ ಸಂದರ್ಭದಲ್ಲಿ ಕೊಡಗು ಜಿಲ್ಲೆಯ ತೊರೆನೂರು ಮಠಾಧ್ಯಕ್ಷರು ಈ ಮಠದ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು.

ಚುರುಕುಗೊಂಡ ಕಾರ್ಯಗಳು: ಎಲೆಮುದ್ದನಹಳ್ಳಿಯ ಗ್ರಾಮಸ್ಥರು ಧಾರ್ಮಿಕ ಕೇಂದ್ರಸ್ಥಾನವಾದ ಮಠದಲ್ಲಿ ಮಾರ್ಗದರ್ಶಕರು ಯಾರೂ ಇಲ್ಲದೆ ಮಠ ಖಾಲಿ ಇದ್ದುದನ್ನು ಗಮನಿಸಿ, ೧೯೮೭ರಲ್ಲಿ ಶ್ರೀ ಮಲ್ಲೇಸ್ವಾಮಿಗಳಿಗೆ ಪಟ್ಟಾಧಿಕಾರ ಮಾಡಿದರು. ತಟಸ್ಥಗೊಂಡಿದ್ದ ಧಾರ್ಮಿಕ ಕಾರ್ಯಗಳು ಶ್ರೀ ಮಲ್ಲೇಸ್ವಾಮಿಗಳು ಈ ಮಠಕ್ಕೆ ಅಧಿಕಾರಿಗಳಾಗಿ ಬಂದ ಮೇಲೆ ಚುರುಕುಗೊಂಡವು. ಮಠದ ಆವರಣದಲ್ಲಿರುವ ಶ್ರೀ ಸಿದ್ಧಲಿಂಗೇಶ್ವರರ ತೋರುಗದ್ದುಗೆ ಹಾಗೂ ಮಠದ ಸ್ಥಾಪಕರ ಗದ್ದುಗೆಯನ್ನು ನವೀಕರಣ ಗೊಳಿಸಿದ್ದಾರೆ. ಪ್ರತಿ ಅಮಾವಾಸ್ಯೆ ಹಾಗೂ ಹುಣ್ಣಿಮೆ, ಕಾರ್ತೀಕ ಮತ್ತು ಶ್ರಾವಣ ಮಾಸಗಳಲ್ಲಿ ವಿಶೇಷ ಪೂಜೆ ನಡೆಸಲಾಗುತ್ತಿದೆ. ಮಠಕ್ಕೆ ಬರುವ ಭಕ್ತರಿಗೆ ಪ್ರಸಾದದ ವ್ಯವಸ್ಥೆಯನ್ನು ಮಾಡಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ.ಮಲ್ಲೇ ಸ್ವಾಮಿಗಳು, ಶ್ರೀ ವಿರಕ್ತಮಠ, ಎಲೆಮುದ್ದನಹಳ್ಳಿ. ಕೆ.ಆರ್.ನಗರ ತಾ, ಮೈಸೂರು ಜಿಲ್ಲೆ.

ಅಂಕನಹಳ್ಳಿ

ಕೆ.ಆರ್.ನಗರ ತಾಲ್ಲೂಕಿನ ಅಂಕನಹಳ್ಳಿಯು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತು ಕಿ.ಮೀ.ದೂರವಿರುವ ಒಂದು ಚಿಕ್ಕ ಗ್ರಾಮ. ಇಲ್ಲಿ ಶ್ರೀ ಬಸವಕಲ್ಯಾಣ ವಿರಕ್ತಮಠವು ಅಸ್ತಿತ್ವದಲ್ಲಿದೆ.

ಬಸವಕಲ್ಯಾಣ ವಿರಕ್ತಮಠ: ಅಂಕನಹಳ್ಳಿಯ ಜನರು ಧರ್ಮ ಸಂಸ್ಕಾರಕ್ಕಾಗಿ ಗುರುಗಳ ಆವಶ್ಯಕತೆ ಇದೆ ಎಂದು ಮನಗಂಡು ೧೯೯೩ರಲ್ಲಿ ಶ್ರೀ ಬಸವಕಲ್ಯಾಣ ವಿರಕ್ತಮಠವನ್ನು ಸ್ಥಾಪಿಸಿ, ೧೯೯೫ರ ಮಾರ್ಚ್ ಹನ್ನೆರಡರಲ್ಲಿ ನೂತನ ಗುರುಗಳಿಗೆ ಪಟ್ಟಾಧಿಕಾರ ಮಾಡಿದ್ದಾರೆ. ಈ ನೂತನ ಮಠವು ಗ್ರಾಮದ ಧಾರ್ಮಿಕ ಕೇಂದ್ರವಾಗಿ ಬೆಳೆದಿದೆ.

ಮಠದ ಸ್ಥಾಪನೆಯ ಉದ್ದೇಶ: ಅಂಕನಹಳ್ಳಿಯ ವೀರಶೈವ ಸಮಾಜವು ವೀರಪ್ಪಾಜಿಯವರ ನೇತೃತ್ವದಲ್ಲಿ ಸಭೆ ಸೇರಿ ಊರಿನ ಬಸವೇಶ್ವರ ದೇವಸ್ಥಾನದ ಹೆಸರಿನಲ್ಲಿದ್ದ ಐದೂಕಾಲು ಎಕರೆ ಜಮೀನು ಅನ್ಯರ ಪಾಲಾಗುವುದು ಬೇಡ ಎಂದು, ದೇವಸ್ಥಾನ ಮತ್ತು ಇದರ ಆಸ್ತಿಯನ್ನು ಕಾಪಾಡಿಕೊಳ್ಳಲು ನಿರ್ಧರಿಸಿದರು. ಗ್ರಾಮಕ್ಕೆ ಧಾರ್ಮಿಕ ಮಾರ್ಗದರ್ಶನ ನೀಡಲು ಮಠ ಕಟ್ಟಿಸಿ, ಗುರುಗಳನ್ನು ನೇಮಿಸಿಕೊಳ್ಳಲು ತೀರ್ಮಾನಿಸಿ, ಈಗ ಶ್ರೀ ವಿಜಯಕುಮಾರ ಸ್ವಾಮಿಗಳು ಅಧಿಕಾರ ವಹಿಸಿಕೊಂಡು ಮಠವನ್ನು ಮುನ್ನಡೆಸುತ್ತಿದ್ದಾರೆ.

ಸಮರ್ಥ ಉತ್ತರಾಧಿಕಾರಿ: ಗುಂಡ್ಲುಪೇಟೆ ತಾಲ್ಲೂಕಿನ ಬೊಮ್ಮಲಾಪುರದಲ್ಲಿ ಜನಿಸಿದ ಶ್ರೀ ವಿಜಯಕುಮಾರ ಸ್ವಾಮಿಗಳು, ಬಾಲ್ಯದಲ್ಲಿ ಬೇರೊಂದು ಮಠಕ್ಕೆ ಉತ್ತರಾಧಿಕಾರಿಗಳಾಗಿ ನಿಯೋಜನೆಗೊಂಡಿದ್ದರು. ಬೊಮ್ಮಲಾಪುರದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ ಕನಕಪುರದ ದೇಗುಲ ಮಠದಲ್ಲಿ ಆಶ್ರಯ ಪಡೆದು, ಈ ಮಠದ ಗುರುಗಳ ಮಾರ್ಗದರ್ಶನದಲ್ಲಿ ಸಂಸ್ಕಾರ ಪಡೆದರು. ಪ್ರೌಢಶಾಲೆ ಮುಗಿಸಿದ ಗುರುಗಳು ಉನ್ನತ ಶಿಕ್ಷಣ ಪಡೆಯಲು ತುಮಕೂರಿನ ಸಿದ್ಧಗಂಗೆ ಮಠದಲ್ಲಿ

ನೆಲೆಸಿದರು. ಹಿರಿಯ ಚೇತನ ಶ್ರೀ ಶಿವಕುಮಾರ ಸ್ವಾಮಿಗಳ ಸೇವೆಮಾಡುತ್ತಾ ಅವರ ಮಾರ್ಗದರ್ಶನದಲ್ಲಿ ಸಂಸ್ಕೃತ ಹಾಗೂ ವೇದಾಧ್ಯಯನ ಮಾಡಿದರು. ಅಂಕನಹಳ್ಳಿಯ ನೂತನ ಮಠಕ್ಕೆ ಸಮರ್ಥ ಉತ್ತರಾಧಿಕಾರಿಗಳನ್ನು ಆಯ್ಕೆಮಾಡುವುದಕ್ಕಾಗಿ ಬೆಟ್ಟದಪುರ, ಮಾಯಿ ಗೌಡನಹಳ್ಳಿ ಹಾಗೂ ಗಾವಡಗೆರೆ ಸ್ವಾಮಿಗಳ ನೇತೃತ್ವದಲ್ಲಿ ಅಂಕನಹಳ್ಳಿಯ ಭಕ್ತ ಮುಖಂಡರು ಸಿದ್ಧಗಂಗೆಗೆ ಬಂದು, ಶ್ರೀಶಿವಕುಮಾರ ಸ್ವಾಮಿಗಳಲ್ಲಿ ಸಮರ್ಥ ಮರಿಯನ್ನು ಕಳುಹಿಸಿ ಕೊಡಲು ಬಿನ್ನವಿಸಿಕೊಂಡರು. ನೂತನ ಮಠಕ್ಕೆ ಶ್ರೀ ವಿಜಯಕುಮಾರ ಸ್ವಾಮಿಗಳೇ ಯೋಗ್ಯರೆಂದು ಅರಿತ ಸಿದ್ಧಗಂಗಾ ಗುರುಗಳು ಅಂಕನಹಳ್ಳಿಯಿಂದ ಬಂದಿದ್ದ ಭಕ್ತರಿಗೆ ಶ್ರೀ ವಿಜಯಕುಮಾರ ಸ್ವಾಮಿಗಳನ್ನು ಪರಿಚಯಿಸಿ ಒಪ್ಪಿಸಿದರು.

ಉತ್ತರಾಧಿಕಾರಿಗಳು ದೊರೆತಿದ್ದಕ್ಕೆ ಸಂತೋಷಗೊಂಡ ಅಂಕನಹಳ್ಳಿಯ ನಿಯೋಗವು, ಉತ್ತರಾಧಿಕಾರಿಗಳಿಗೆ ಮಾಗಡಿ ತಾಲ್ಲೂಕು ಕಂಚುಗಲ್ ಬಂಡೆ ಮಠದ ಶ್ರೀ ಶಿವರುದ್ರ ಸ್ವಾಮಿಗಳಿಂದ ವಿರಕ್ತಾಶ್ರಮದ ಷಟ್‌ಸ್ಥಲ ದೀಕ್ಷೆಯನ್ನು ಸಿದ್ಧಗಂಗಾ ಮಠದಲ್ಲಿ ಶ್ರೀ ಶಿವಕುಮಾರ ಸ್ವಾಮಿಗಳ ನೇತೃತ್ವದಲ್ಲಿ ಕೊಡಿಸಿದರು. ದೀಕ್ಷೆಪಡೆದ ಹನ್ನೆರಡನೆಯ ದಿನಕ್ಕೆ ನೂತನ ಗುರುಗಳನ್ನು ಪುರಪ್ರವೇಶ ಮಾಡಿಸಿಕೊಂಡು, ಸಿದ್ಧಗಂಗಾ ಹಾಗೂ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳ ಸಮ್ಮುಖದಲ್ಲಿ ಬಸವಕಲ್ಯಾಣ ವಿರಕ್ತಮಠದ ಅಧಿಕಾರವನ್ನು ವಹಿಸಿಕೊಡಲಾಯಿತು.

ಧಾರ್ಮಿಕ ಕಾರ್ಯಗಳು: ಪಟ್ಟಾಧಿಕಾರ ಪಡೆದ ಮೇಲೆ ವಿದ್ಯಾಭ್ಯಾಸ ನಿಲ್ಲಿಸದೇ ಸಿದ್ಧಗಂಗೆಯಲ್ಲಿ ನೆಲೆಸಿ, ತಿಂಗಳಿಗೊಮ್ಮೆ ಅಂಕನಹಳ್ಳಿಗೆ ಬಂದು ಮಠದ ಉಸ್ತುವಾರಿ ನೋಡಿಕೊಂಡು ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿ ಮಠಕ್ಕೆ ಆಗಮಿಸಿದರು. ಗುರುಗಳು ಬಸವಾದಿ ಶರಣರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಸಮಾಜವನ್ನು ಮುನ್ನಡೆಸಲು, ಸಂದರ್ಭಕ್ಕನುಸಾರವಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ವಿಜಯಕುಮಾರ ಸ್ವಾಮಿಗಳು, ಶ್ರೀಬಸವಕಲ್ಯಾಣವಿರಕ್ತಮಠ, ಅಂಕನಹಳ್ಳಿ, ಕೆ.ಆರ್.ನಗರ ತಾ, ಮೈಸೂರುಜಿಲ್ಲೆ.

ಕರ್ಪೂರವಳ್ಳಿ

ಕೆ.ಆರ್.ನಗರ ತಾಲ್ಲೂಕಿನ ಕರ್ಪೂರವಳ್ಳಿಯು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಇಪ್ಪತ್ತೈದು ಕಿ.ಮೀ. ದೂರವಿರುವ ಒಂದು ಪುಟ್ಟಹಳ್ಳಿ. ಇಲ್ಲಿ ಶ್ರೀ ಜಂಗಮಮಠವು ಅಸ್ತಿತ್ವದಲ್ಲಿದೆ.

ಜಂಗಮಮಠ: ಕರ್ಪೂರವಳ್ಳಿಯಲ್ಲಿ ಶ್ರೀ ಜಂಗಮಮಠ ಪುರಾತನ ಕಾಲದಿಂದಲೂ ಅಸ್ತಿತ್ವದಲ್ಲಿದೆ. ಪುತ್ರವರ್ಗದ ಈ ಮಠವು ಗ್ರಾಮದ ಪಶ್ಚಿಮದ ಹೊರಭಾಗದಲ್ಲಿ ಸ್ಥಾಪನೆಯಾಗಿದ್ದು, ಈ ಮಠದ ಸ್ಥಾಪನೆಯ ಕಾಲಮಾನದ ಬಗ್ಗೆ ನಿಖರವಾದ ಮಾಹಿತಿಗಳು ದೊರೆಯದಿದ್ದರೂ, ಇದರ ಅಸ್ತಿತ್ವ ನಾನೂರು ವರ್ಷಗಳಿಗಿಂತ ಹಿಂದಿನದು ಎಂದು ಹೇಳಲಾಗುತ್ತಿದೆ.

ಗದ್ದುಗೆಗಳು: ಶ್ರೀ ಜಂಗಮ ಮಠದ ಒಳಭಾಗದಲ್ಲಿ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಗಳ ಒಂದು ಗದ್ದುಗೆ ಮಾತ್ರ ನೋಡ ಸಿಗಲಿದ್ದು, ಈ ಮಠದ ಪರಂಪರೆಯಲ್ಲಿ ಬರುವ ಉಳಿದ ಪಟ್ಟಾಧಿಕಾರಿಗಳ ಗದ್ದುಗೆಗಳು ನೋಡ ಸಿಗುತ್ತಿಲ್ಲ. ಕೆಲವು ಗದ್ದುಗೆಗಳು ಮಠದ ಜಮೀನಿನಲ್ಲಿ ಸ್ಥಾಪನೆಯಾಗಿವೆ ಎಂದು ಊರಿನ ಹಿರಿಯರು ಹೇಳುತ್ತಾರೆ. ಆದರೆ ಈಗ ಅವುಗಳನ್ನು ಗುರುತಿಸಲು ಕುರುಹುಗಳು ಕಂಡುಬಾರದ ಕಾರಣ ಈ ಮಠದ ಪರಂಪರೆ ಸ್ಪಷ್ಟವಾಗಿ ತಿಳಿದು ಬರುವುದಿಲ್ಲ.

ಅಭಿವೃದ್ಧಿ ಕಂಡ ಮಠ: ಈಗ ಅಧಿಕಾರ ನಡೆಸುತ್ತಿರುವ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ ಕ್ರಿಯಾತ್ಮಕ ಗುಣಗಳಿಂದ ಮಠವು ಅಭಿವೃದ್ಧಿಯ ಕಡೆಗೆ ಮುಖಮಾಡುವಂತಾಗಿದೆ. ಮಠದ ಆಸ್ತಿ ಗುರುಗಳ ಶ್ರಮದ ಫಲದಿಂದ ಆದಾಯದ ಮೂಲವಾಗಿ ಪರಿವರ್ತನೆಯಾಗಿದೆ. ಈ ಕಾರಣದಿಂದ ಭಕ್ತರು ಮಠದ ಅಭಿವೃದ್ಧಿ ಕಂಡು ಸಂತೋಷಗೊಂಡಿದ್ದಾರೆ. ಯುವಕರು ಹಾಗೂ ಪ್ರಗತಿಪರ ಚಿಂತಕರೂ ಆದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಭಕ್ತರನ್ನು ವೈಜ್ಞಾನಿಕ ತಳಹದಿಯ ಮೇಲೆ ಬೆಳೆಸಲು ಸಂಕಲ್ಪ ತೊಟ್ಟಿದ್ದಾರೆ. ಶ್ರೀ ರಂಭಾಪುರಿ ಪೀಠದ ಜಗದ್ಗುರು ಶ್ರೀ ಪ್ರಸನ್ನ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರ ಅವಿರತಶ್ರಮ ಹಾಗೂ ಪ್ರಗತಿಪರ ಚಿಂತನೆಗಳಿಂದ ಆಕರ್ಷಿತರಾಗಿ, ಜಗದ್ಗುರುಗಳ ಮಾರ್ಗದರ್ಶನದಂತೆ

ಸಮಾಜವನ್ನು ರೂಪಿಸತೊಡಗಿದ್ದಾರೆ.

ವಿದ್ಯಾಭ್ಯಾಸ: ವಿದ್ಯೆ ಇಲ್ಲದ ಬದುಕು ಅಂಧಕಾರದ ಬದುಕು ಎಂದು ಅರಿತ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಪ್ರಥಮವಾಗಿ ವಿದ್ಯಾಕೇಂದ್ರವನ್ನು ಸ್ಥಾಪಿಸಿದರು. ಊರಿನಲ್ಲಿ ಪ್ರಾಥಮಿಕಶಾಲೆ ಇಲ್ಲದೆ ಮಕ್ಕಳು ದೂರದ ಹಳ್ಳಿಗಳಿಗೆ ನಡೆದೇ ಹೋಗಬೇಕಿತ್ತು. ಈ ತೊಂದರೆಯಿಂದಾಗಿ ಅನೇಕ ಗ್ರಾಮೀಣ ಮಕ್ಕಳು ವಿದ್ಯಾಭ್ಯಾಸದಿಂದ ವಂಚಿತರಾಗುತ್ತಿದ್ದರು. ಇದನ್ನು ಮನಗಂಡು ಮಠದ ಆವರಣದಲ್ಲಿ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿ, ರೈತರ ಮಕ್ಕಳ ಬಾಳಿಗೆ ಬೆಳಕಾಗಿದ್ದಾರೆ.

ಧಾರ್ಮಿಕ ನೆರಳು: ಕರ್ಪೂರವಳ್ಳಿಯ ಶ್ರೀ ಜಂಗಮ ಮಠದ ಒಳಗೆ ಸ್ಥಾಪನೆಯಾಗಿರುವ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಗಳ ಗದ್ದುಗೆಗೆ ಪ್ರತಿನಿತ್ಯ. ಪೂಜಾಕಾರ್ಯ ನಡೆಯುತ್ತಿದೆ. ಮಠದ ಹೊರ ಆವರಣದಲ್ಲಿ ಪುರಾತನ ಕಾಲದಿಂದಲೂ ಇರುವ ವೀರಭದ್ರಸ್ವಾಮಿ, ಶ್ರೀ ಚೌಡೇಶ್ವರಿ ದೇವರುಗಳಿಗೆ ನೂತನ ಕಟ್ಟಡಗಳು ನಿರ್ಮಾಣಗೊಂಡಿವೆ. ಅಲ್ಲದೆ ೧೯೯೧ ರಲ್ಲಿ ರೇಣುಕ ಮಂದಿರವನ್ನು ಸ್ಥಾಪಿಸಿದ್ದು, ಇಲ್ಲಿರುವ ದೇವಸ್ಥಾನಗಳಿಗೆ ನಿತ್ಯ ಪೂಜಾಕಾರ್ಯ ನಡೆಯುತ್ತಿದೆ. ಪ್ರತಿ ಹುಣ್ಣಿಮೆ ಮತ್ತು ಅಮಾವಾಸ್ಯೆ, ಶ್ರಾವಣ ಹಾಗೂ ಕಾರ್ತೀಕ ಮಾಸಗಳಲ್ಲಿ ಮಠದಲ್ಲಿ ವಿಶೇಷ ಪೂಜಾಕಾರ್ಯಗಳು ನಡೆಯುತ್ತಿವೆ.

ವಿಳಾಸ:ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು,ಶ್ರೀ ಜಂಗಮಮಠ,ಕರ್ಪೂರವಳ್ಳಿ, ಕೆ.ಆರ್.ನಗರ ತಾ, ಮೈಸೂರುಜಿಲ್ಲೆ.

ನರಚನಹಳ್ಳಿ

ಕೆ.ಆರ್.ನಗರ ತಾಲ್ಲೂಕಿನ ನರಚನಹಳ್ಳಿಯು ತಾಲ್ಲೂಕಿನಿಂದ ಪಶ್ಚಿಮಕ್ಕೆ ಇಪ್ಪತ್ತು ಕಿ.ಮೀ. ದೂರದಲ್ಲಿರುವ ಒಂದು ಹಳ್ಳಿ. ಇಲ್ಲಿ ಶ್ರೀ ಅಂಬಲಿ ಮಠವು ಅಸ್ತಿತ್ವದಲ್ಲಿದೆ.

ಅಂಬಲಿಮಠ: ನರಚನಹಳ್ಳಿಯಲ್ಲಿ ೧೯೭೭ರಲ್ಲಿ ಸ್ಥಾಪನೆಯಾದ ಶ್ರೀ ಅಂಬಲಿ ಮಠವು ಈ ಭಾಗದ ಧಾರ್ಮಿಕ ಕೇಂದ್ರವಾಗಿ ಬೆಳೆಯುತ್ತಿದೆ.ಈ ಮಠದಲ್ಲಿ ಮೊದಲು ಅನ್ನದಾಸೋಹದಲ್ಲಿ ಭಕ್ತರಿಗೆ ವಿಶೇಷವಾಗಿ ಹುರಳಿ ಅಂಬಲಿಯನ್ನು ನೀಡುತ್ತಿದ್ದುದ್ದ ರಿಂದ ಈ ಮಠಕ್ಕೆ 'ಶ್ರೀ ಅಂಬಲಿ ಮಠ'ಎಂಬ ಹೆಸರು ಬರಲು ಕಾರಣವಾಗಿದೆ. ಅಂದಿನ ಅಂಬಲಿಯ ಸವಿಯನ್ನು ಸವಿದವರು ಯಾರೂ ಇಲ್ಲದಿದ್ದರೂ, ಅಂಬಲಿಯ ರುಚಿಯನ್ನು ವರ್ಣಿತವಾಗಿ ಹೇಳುವ ಜನಪದಕಥೆ ಭಕ್ತರ ಬಾಯಲ್ಲಿ ಕೇಳಿಬರುತ್ತಿದೆ.

ಮುಳುಗಡೆ: ಪುರಾತನದ್ದೆಂದು ಹೇಳಲಾಗುವ ಈ ಮಠವು ಬಾಳೆಹೊನ್ನೂರಿನ ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿ, ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿದೆ. ಅಂಬಲಿ ಮಠದ ಪರಂಪರೆಯಲ್ಲಿ ಬರುವ ಸ್ವಾಮಿಗಳ ಗದ್ದುಗೆಗಳು ಹಾಗೂ ವೀರಭದ್ರಸ್ವಾಮಿ ದೇವಸ್ಥಾನ ಕೆ.ಆರ್.ಸಾಗರದಲ್ಲಿ ಮುಳುಗಡೆ ಗೊಂಡಾಗ, ಈ ಮಠದ ಅಧಿಕಾರಸ್ಥರಾಗಿದ್ದ ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ಮೂಲ ಮಠದ ಅಸ್ತಿತ್ವವನ್ನು ಉಳಿಸಲು ನರಚನ ಹಳ್ಳಿಗೆ ಸ್ಥಳಾಂತರಿಸಿದ್ದಾರೆ. ಸ್ಥಳಾಂತರಗೊಂಡ ಶ್ರೀ ಅಂಬಲಿ ಮಠದಲ್ಲಿ ಮಠ ಸ್ಥಾಪಕರಾದ ಶ್ರೀ ವೀರಭದ್ರ ಸ್ವಾಮಿಗಳ ತೋರು ಗದ್ದುಗೆ ಹಾಗೂ ಮಠದ ಮುಂಭಾಗದಲ್ಲಿ ಬಸವೇಶ್ವರ ದೇವಸ್ಥಾನವನ್ನು ನಿರ್ಮಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಗುಂಡ್ಲುಪೇಟೆ ತಾಲ್ಲೂಕಿನ ಸೋಮಹಳ್ಳಿಯ ವೀರಸಿಂಹಾಸನ ಶಿಲಾ ಮಠದ ಶ್ರೀ ಸಿದ್ಧಮಲ್ಲ ಸ್ವಾಮಿಗಳ ಅನುಗ್ರಹ ಪಡೆದ ಮೇಲೆ ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ವೀರಶೈವ ಸಮಾಜದ ಸಂಪ್ರದಾಯ ಬದ್ಧ ಧಾರ್ಮಿಕ ಕೆಲಸಗಳಾದ ನಾಮಕರಣದಿಂದ ಹಿಡಿದು ಅಂತ್ಯಕ್ರಿಯಾದಿ ಕೆಲಸಗಳನ್ನು ಮುಂದೆ ನಿಂತು ನಡೆಸಿಕೊಡುವುದ ಲ್ಲದೆ, ಮಠದಲ್ಲಿ ಪ್ರತಿವರ್ಷ ಜೂನ್ ಹದಿನೆಂಟು ಮತ್ತು ಹತ್ತೊಂಬತ್ತರಂದು ಪರಂಪರೆಯ ಗುರುಗಳ ಪುಣ್ಯಸ್ಮರಣೆ ಕಾರ್ಯವನ್ನು ಆಚರಿಸುತ್ತಿದ್ದಾರೆ. ಈ ದಿನಗಳಲ್ಲಿ ಅನೇಕ ಹರಗುರು ಚರಮೂರ್ತಿಗಳನ್ನು ಹಾಗೂ ವಿದ್ವಾಂಸರನ್ನು ಮಠಕ್ಕೆ ಕರೆಸಿ ಉಪನ್ಯಾಸ ಮತ್ತು ಉಪದೇಶವನ್ನು ಮಾಡಿಸಲಾಗುತ್ತಿದೆ. ಅಮಾವಾಸ್ಯೆ, ಹುಣ್ಣಿಮೆಯಲ್ಲಿ ಹಾಗೂ ಶ್ರಾವಣ, ಕಾರ್ತೀಕಮಾಸಗಳಲ್ಲಿ ಮಠದಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಮಠದ ಹೆಸರಿನಲ್ಲಿರುವ ಹತ್ತುಎಕರೆ ಜಮೀನಿನಲ್ಲಿ

ಹೆಚ್ಚು ಆದಾಯ ಬರುವಂತೆ ಮಾಡಿ ಅಭಿವೃದ್ಧಿಗೆ ಬಳಸಿಕೊಳ್ಳುತ್ತಿದ್ದಾರೆ. ಮಠಕ್ಕೆ ಬರುವ ಭಕ್ತರಿಗೆ ದಾಸೋಹದ ವ್ಯವಸ್ಥೆಯನ್ನು ಮಾಡಲಾಗಿದೆ.

ವಿಳಾಸ: ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು, ಶ್ರೀ ಅಂಬಲಿಮಠ, ನರಚನಹಳ್ಳಿ, ಮಿರ್ಲೆಅಂಚೆ, ಕೆ.ಆರ್.ನಗರ

ಮಾರಗೊಂಡನಹಳ್ಳಿ

ಕೆ.ಆರ್.ನಗರ ತಾಲ್ಲೂಕಿನ ಮಾರಗೊಂಡನಹಳ್ಳಿಯು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಆರು ಕಿ.ಮೀ. ದೂರದಲ್ಲಿರುವ ಒಂದು ಸುಧಾರಿತ ಗ್ರಾಮ. ಇಲ್ಲಿ ಶ್ರೀ ಮಾರಗೊಂಡನಹಳ್ಳಿ ಮಠವು ಅಸ್ತಿತ್ವದಲ್ಲಿದೆ.

ಮಾರಗೊಂಡನಹಳ್ಳಿಮಠ: ಮಾರಗೊಂಡನಹಳ್ಳಿಯಲ್ಲಿ ಶ್ರೀ ರಂಭಾಪುರಿ ಪೀಠದ ಶಾಖಾಮಠ ಅಸ್ತಿತ್ವದಲ್ಲಿದೆ. ಮಾರಗೊಂಡನಹಳ್ಳಿಯ ದಕ್ಷಿಣ ದಿಕ್ಕಿನಲ್ಲಿ ಸ್ಥಾಪನೆಯಾದ ಪುತ್ರವರ್ಗದ ಈ ಪಟ್ಟದ ಮಠವು, ಪುರಾತನ ಕಾಲದಲ್ಲಿ ಸ್ಥಾಪನೆಯಾಗಿರುವ ಕುರುಹನ್ನು ತೋರಿಸುತ್ತಿದೆ. ಮೈಸೂರು ಒಡೆಯರ ಕಾಲದಲ್ಲಿ ರಾಜಾಶ್ರಯ ಸಿಕ್ಕಿತ್ತಲ್ಲದೆ, ಕೊಡಗಿನ ಅರಸರೂ ಸಹ ಈ ಮಠಕ್ಕೆ ನೆರವು ನೀಡಿ ಮಠವನ್ನು ಬೆಳೆಸಿದ್ದರ ಬಗ್ಗೆ ಜನಪದರ ಬಾಯಲ್ಲಿ ಮಾತುಗಳು ಕೇಳಿ ಬರುತ್ತಿವೆ. ಪುರಾತನ ಕಾಲದಿಂದಲೂ ಜನಮನದಲ್ಲಿ ಉಳಿದು ಜನಮನ್ನಣೆ ಪಡೆದ ಈ ಮಠವು, ಈಗ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೋರಾಟ ಮಾಡಬೇಕಾದ ಸ್ಥಿತಿ ಬಂದಿರುವುದು ದುರ್ದೈವದ ಸಂಗತಿ.

ಒಂದೇ ಗದ್ದುಗೆ: ಈ ಪುರಾತನ ಮಠದಲ್ಲಿ ಶ್ರೀ ಪುಟ್ಟಯ್ಯ ಸ್ವಾಮಿಗಳ ಒಂದು ಗದ್ದುಗೆ ಮಾತ್ರ ನಿರ್ಮಾಣವಾಗಿದೆ. ಉಳಿದಂತೆ ಯಾರ ಗದ್ದುಗೆಗಳೂ ಇಲ್ಲಿ ಕಂಡುಬರುವುದಿಲ್ಲ. ಮಠದ ಅಧಿಕಾರ ಪಡೆದ ಮಠಾಧೀಶ್ವರರ ಹಾಗೂ ಮಠದ ಇತಿಹಾಸವನ್ನು ಗುರುತಿಸಲು ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಈಗ ಇರುವ ಮಠ ಹಳೆಯಕಾಲದ ಕಟ್ಟಡದಲ್ಲಿ ತನ್ನ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ಈಗ ಶ್ರೀ ಉಮಾಶಂಕರ ಶಿವಾಚಾರ್ಯ ಸ್ವಾಮಿಗಳಿಗೆ ಪಟ್ಟಾಧಿಕಾರ ಮಾಡಲಾಗಿದೆ. ಗುರುಗಳು ತಮ್ಮ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿ ಮಠಕ್ಕೆ ಬಂದು ಧಾರ್ಮಿಕ ಕಾರ್ಯಗಳು ಚುರುಕುಗೊಳ್ಳುವಂತೆ ಮಾಡಿದ್ದಾರೆ. ಮಠದ ಆಸ್ತಿಯಾಗಿ ಐವತ್ತು ತೆಂಗಿನ ಗಿಡಗಳನ್ನು ಒಳಗೊಂಡ ತೋಟ ಹಾಗೂ ಒಂದುಕಾಲು ಎಕರೆ ಜಮೀನಿದ್ದು, ಇದನ್ನು ಅಭಿವೃದ್ಧಿಪಡಿಸಿ ಬೆಳೆತೆಗೆಯುತ್ತಿದ್ದಾರೆ. ಇದ್ದುದರಲ್ಲಿಯೇ ತೃಪ್ತಜೀವನ ನಡೆಸಿ ಭಕ್ತರನ್ನು ಮಠದತ್ತ ಬರಮಾಡಿಕೊಳ್ಳ ತೊಡಗಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಉಮಾಶಂಕರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಪಟ್ಟದಮಠ, ಮಾರಗೊಂಡನಹಳ್ಳಿ, ಮೂಮತ್ತೂರು ಅಂಚೆ, ಕೆ.ಆರ್.ನಗರ ತಾಲ್ಲೂಕು, ಮೈಸೂರು ಜಿಲ್ಲೆ.

ಲಾಲನಹಳ್ಳಿ

ಕೆ.ಆರ್.ನಗರ ತಾಲ್ಲೂಕಿನ ಲಾಲನಹಳ್ಳಿಯು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಮೂರು ಕಿ.ಮೀ. ದೂರದಲ್ಲಿರುವ ಒಂದು ಅಭಿವೃದ್ಧಿಗೊಂಡ ಗ್ರಾಮ. ಇಲ್ಲಿ ಶ್ರೀ ಗುರುಮಲ್ಲೇಶ್ವರ ದಾಸೋಹಮಠ ಸ್ಥಾಪಿತವಾಗಿ, ಹಸಿದವರಿಗೆ ಅನ್ನದಾಸೋಹ ಮಾಡುತ್ತಾ ಬರುತ್ತಿದೆ.

ಗುರುಮಲ್ಲೇಶ್ವರ ದಾಸೋಹಮಠ: ಲಾಲನಹಳ್ಳಿಯಲ್ಲಿ ದೇವನೂರು ಮಠದ ಶಾಖಾಮಠವಾಗಿ ಏಳುವರ್ಷಗಳ ಹಿಂದೆ ಪ್ರಾರಂಭವಾದ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠವು ಧರ್ಮ ಕೇಂದ್ರವಾಗಿ ಬೆಳೆಯುತ್ತಿದೆ. ದೇವನೂರು ಮಠದಿಂದ ನೇಮಕಗೊಂಡ ಶ್ರೀ ಶಿವಕುಮಾರ ಸ್ವಾಮಿಗಳು ಮಠದ ಸಂಪ್ರದಾಯದಂತೆ ಜೋಳಿಗೆ ಹಿಡಿದು, ಊರೂರು ಸುತ್ತಿ ಕಂತೆಭಿಕ್ಷೆ ಮಾಡಿಕೊಂಡು ಬಂದು ದಾಸೋಹ ಕಾರ್ಯವನ್ನು ನಡೆಸುತ್ತಿದ್ದಾರೆ.

ವಿಳಾಸ: ಶ್ರೀ ಶಿವಕುಮಾರ ಸ್ವಾಮಿಗಳು. ಶ್ರೀಗುರುಮಲ್ಲೇಶ್ವರ ದಾಸೋಹಮಠ. ಲಾಲನಹಳ್ಳಿ. ಕೆ.ಆರ್.ನಗರ ತಾ. ಮೈಸೂರುಜಿಲ್ಲೆ.

ಸರಗೂರು

ಕೆ.ಆರ್.ನಗರ ತಾಲ್ಲೂಕಿನ ಸರಗೂರು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಮೂವತ್ತೈದು ಕಿ.ಮೀ. ದೂರದಲ್ಲಿರುವ ಒಂದು ಪುಟ್ಟಹಳ್ಳಿ. ಇಲ್ಲಿ ಶ್ರೀ ಪಟ್ಟದಮಠವು ಅಸ್ತಿತ್ವದಲ್ಲಿದೆ.

ಪಟ್ಟದಮಠ: ಸರಗೂರು ಗ್ರಾಮದಲ್ಲಿ ಶ್ರೀ ರಂಭಾಪುರಿಪೀಠದ ಶಾಖಾಮಠವಾದ ಶ್ರೀ ಪಟ್ಟದಮಠವು ಸ್ಥಾಪನೆಯಾಗಿದೆ. ಶಿಷ್ಯವರ್ಗದ ಪರಂಪರೆಯಲ್ಲಿ ಬೆಳೆದ ಮಠವು ಸರಗೂರಿನ ಧಾರ್ಮಿಕ ಆಚರಣೆಯ ಕೇಂದ್ರವಾಗಿ ಬೆಳೆದಿದೆ. ಈ ಮಠದ ಸ್ಥಾಪನೆಯ ಬಗ್ಗೆ ನಿಖರವಾದ ಆಧಾರಗಳು ದೊರೆಯುತ್ತಿಲ್ಲ.

ಅಧಿಕಾರ ಸ್ವೀಕಾರ: ಶ್ರೀ ಮೃತ್ಯುಂಜಯ ಶಿವಾಚಾರ್ಯ ಸ್ವಾಮಿಗಳು ಮಾರಗೌಡನಹಳ್ಳಿಯ ಶ್ರೀ ಉಮಾಶಂಕರ ಸ್ವಾಮಿಗಳಿಂದ ಅನುಗ್ರಹ ಪಡೆದು ಅಧಿಕಾರ ಸ್ವೀಕರಿಸಿದರು. ಇವರು ದೀರ್ಘಕಾಲದವರೆಗೆ ಖಾಲಿ ಇದ್ದ ಮಠದ ಅಧಿಕಾರವನ್ನು ಪಡೆದು, ಸ್ಥಗಿತಗೊಂಡಿದ್ದ ಧಾರ್ಮಿಕ ಆಚರಣೆಗಳನ್ನು ಪುನಃ ಪ್ರಾರಂಭಗೊಳಿಸಿದರು. ಮಠದಿಂದ ದೂರ ಸರಿದಿದ್ದ ಭಕ್ತಸಮೂಹ ಗುರುಗಳ ಆಗಮನದಿಂದ ಹತ್ತಿರವಾಗತೊಡಗಿತು. ಈ ರೀತಿ ಭಕ್ತರ ಸಂಬಂಧವನ್ನು ವೃದ್ಧಿಸಿಕೊಂಡ ಶ್ರೀ ಮೃತ್ಯುಂಜಯ ಶಿವಾಚಾರ್ಯ ಸ್ವಾಮಿಗಳು ಅಮಾವಾಸ್ಯೆ, ಹುಣ್ಣಿಮೆ, ಕಾರ್ತೀಕ ಹಾಗೂ ಶ್ರಾವಣ ಮಾಸಗಳಲ್ಲಿ ವಿಶೇಷ ಪೂಜೆಯನ್ನು ಏರ್ಪಡಿಸಿ, ಈ ಸಂದರ್ಭದಲ್ಲಿ ಸೇರುವ ಭಕ್ತರಿಗೆ ದಾಸೋಹವನ್ನು ವ್ಯವಸ್ಥೆಗೊಳಿಸುತ್ತಿದ್ದಾರೆ.

ವಿಳಾಸ:ಷ.ಬ್ರ.ಶ್ರೀ ಮೃತ್ಯುಂಜಯ ಶಿವಾಚಾರ್ಯ ಸ್ವಾಮಿಗಳು, ಶ್ರೀಪಟ್ಟದಮಠ, ಸರಗೂರು,ಕೆ.ಆರ್.ನಗರ ತಾ.,ಮೈಸೂರು ಜಿಲ್ಲೆ.

ಹಾಡ್ಯ

ಕೆ.ಆರ್.ನಗರ ತಾಲ್ಲೂಕಿನ ಹಾಡ್ಯ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹತ್ತು ಕಿ.ಮೀ. ದೂರದಲ್ಲಿದೆ.ಈ ಗ್ರಾಮದಲ್ಲಿ ಶ್ರೀ ಸುತ್ತೂರು ಮಠದ ಶಾಖಾಮಠವು ನೂರೈವತ್ತು ವರ್ಷಗಳಿಂದ ಅಸ್ತಿತ್ವದಲ್ಲಿದ್ದು, ಧಾರ್ಮಿಕ ಕ್ರಿಯಾದಿಗಳನ್ನು ನಡೆಸುತ್ತಾ ಜನಮನ್ನಣೆಗೆ ಪಾತ್ರವಾಗಿದೆ.

ಈಶಾನೇಶ್ವರಮಠ: ಹಾಡ್ಯ ಗ್ರಾಮದಲ್ಲಿ ಸಿದ್ಧ ಪುರುಷರೂ,ಶಿವಯೋಗಿಗಳು ಹಾಗೂ ಮಹಾಮಹಿಮರಾಗಿದ್ದ ಶ್ರೀ ಕೆಂಡಗಣ್ಣ ಸ್ವಾಮಿಗಳು ಶ್ರೀ ಈಶಾನೇಶ್ವರ ಮಠವನ್ನು ಸ್ಥಾಪಿಸಿ ವೀರಶೈವ ಧರ್ಮದ ಆಚರಣೆಗಳನ್ನು ಅನುಷ್ಠಾನಗೊಳಿಸಿ ಮಠವನ್ನು ಬೆಳೆಸಿದ್ದರು. ಇವರ ನಂತರ ನಾಲ್ಕು ಜನ ಗುರುಗಳು ಅಧಿಕಾರವನ್ನು ನಡೆಸಿ ಮಠವನ್ನು ಅಭಿವೃದ್ಧಿಪಡಿಸಿದರು. ಭಿಕ್ಷದ ಮಠವಾಗಿದ್ದ ಈ ಮಠವನ್ನು ೧೯೮೫ರಲ್ಲಿ ಪಟ್ಟದ ಮಠವನ್ನಾಗಿ ಪರಿವರ್ತಿಸಿ ಶ್ರೀ ಬಸವರಾಜ ಶಿವಾಚಾರ್ಯ ಸ್ವಾಮಿಗಳನ್ನು ಅಧಿಕಾರಕ್ಕೆ ತರಲಾಗಿತ್ತು. ಅಂದಿನಿಂದ ಸುತ್ತೂರು ಮಠದ ಅಧೀನದ ಮಠವಾಗಿ ಬೆಳೆದ ಈ ಮಠವು ಧಾರ್ಮಿಕ ಪ್ರಜ್ಞೆಯನ್ನು ಬೆಳೆಸುವಲ್ಲಿ ಮುಂದಾಗಿತ್ತು. ಶ್ರೀ ಬಸವರಾಜ ಶಿವಾಚಾರ್ಯ ಸ್ವಾಮಿಗಳು ನಂಜನಗೂಡು ತಾಲ್ಲೂಕಿನ ಕಾರ್ಯಮಠಕ್ಕೆ ನೇಮಕಗೊಂಡ ಮೇಲೆ ಮಠವು ಖಾಲಿ ಉಳಿಯಿತು. ಇದನ್ನು ಮನಗಂಡ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು ಈ ಮಠವನ್ನು ಗ್ರಾಮಸ್ಥರ ಸಹಯೋಗದಲ್ಲಿ ಅಭಿವೃದ್ಧಿಪಡಿಸಿ ಟಿ.ನರಸೀಪುರ ತಾಲ್ಲೂಕಿನ ಹುನಗನಹಳ್ಳಿಯ ಶರಣ ದಂಪತಿಗಳಾದ ಶ್ರೀ ವೀರಪ್ಪ ಮತ್ತು ಶ್ರೀಮತಿ ಮಹಾದೇವಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಮಹೇಂದ್ರ ಎಂಬ ವಟುವಿಗೆ ೨೦೦೧ರ ಏಪ್ರಿಲ್ ಐದರಂದು ಶ್ರೀಪ್ರಮಥನಂದ ಸ್ವಾಮಿಗಳೆಂದು ಅಭಿದಾನ ಮಾಡಿ ದೇವನೂರಿನ ಶ್ರೀ ಮಹಾಂತ ಸ್ವಾಮಿಗಳು ಬೆಟ್ಟದಪುರದ ಶ್ರೀ ಚನ್ನಬಸವ ದೇಶಿಕೇಂದ್ರ ಸ್ವಾಮಿಗಳು ಟಿ.ಮಾಯಗೊಂಡನಹಳ್ಳಿಯ ಶ್ರೀ ಚಂದ್ರಶೇಖರ ಸ್ವಾಮಿಗಳ ಸಮ್ಮುಖದಲ್ಲಿ ಅಧಿಕಾರ ನೀಡಿದ್ದಾರೆ.

ಶ್ರೀ ಪ್ರಮಥನಂದ ಸ್ವಾಮಿಗಳು ಸುತ್ತೂರು ಮಠದ ಗುರುಕುಲದಲ್ಲಿ ವಿದ್ಯಾಭ್ಯಾಸ ಕಲಿತು ಚಿಕ್ಕವಯಸ್ಸಿನಲ್ಲಿಯೇ ಮಠದ ಜವಬ್ದಾರಿಯನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸತೊಡಗಿದ್ದಾರೆ.

ವಿಳಾಸ: ಶ್ರೀ ಪ್ರಮಥನಂದ ಸ್ವಾಮಿಗಳು, ಶ್ರೀ ಈಶಾನೇಶ್ವರ ಮಠ, ಹಾಡ್ಯ, ಕೆ.ಆರ್.ನಗರ ತಾಲ್ಲೂಕು, ಮೈಸೂರು ಜಿಲ್ಲೆ. ❑

ಟಿ.ನರಸೀಪುರ ತಾಲ್ಲೂಕು

ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲ್ಲೂಕು ಐತಿಹಾಸಿಕ ಹಾಗೂ ಧಾರ್ಮಿಕವಾಗಿ ಪ್ರಸಿದ್ಧಿ ಪಡೆದಿದೆ. ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆದಿದ್ದು, ಪ್ರಸ್ತುತ ಇಪ್ಪತ್ತೂಮ್ರು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಕಳ್ಳೀಪುರ

ಟಿ.ನರಸೀಪುರ ತಾಲ್ಲೂಕಿನ ಕಳ್ಳೀಪುರವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹದಿಮೂರು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಪಟ್ಟದ ಮಠವು ಅಸ್ತತ್ವದಲ್ಲಿದೆ.

ಪಟ್ಟದಮಠ: ಪಂಚಪೀಠಗಳಲ್ಲಿ ಒಂದಾದ ಉಜ್ಜಯಿನಿಪೀಠದ ಶಾಖಾಮಠವಾದ ಶ್ರೀ ಪಟ್ಟದ ಮಠವು ಕಳ್ಳೀಪುರ ಗ್ರಾಮದ ಮಧ್ಯದಲ್ಲಿ ಸ್ಥಾಪನೆಯಾಗಿ, ಧಾರ್ಮಿಕ ಕ್ರಿಯಾದಿ ಕೆಲಸಗಳ ಕೇಂದ್ರಬಿಂದುವಾಗಿ ಬೆಳೆದಿದೆ. ಲೋಕಸಂಚಾರಕ್ಕೆಂದು ಬಂದ ಶರಣರೊಬ್ಬರು ಈ ಗ್ರಾಮದಲ್ಲಿ ನೆಲೆನಿಂತು ಮಠ ಸ್ಥಾಪನೆ ಮಾಡಿದ್ದಾರೆ. ಸ್ಥಾಪಕ ಗುರುಗಳ ನಂತರ ಮಠದ ಅಸ್ತಿತ್ವ ಮರೆಯಾಗಿ ನಂತರ ಪುನರ್ ಸ್ಥಾಪನೆಯಾದಂತೆ ಕಾಣುತ್ತದೆ.

ಪರಂಪರೆ:

೧. ಷ.ಬ್ರ.ಶ್ರೀ ಚನ್ನಬಸಪ್ಪ ಶಿವಾಚಾರ್ಯಸ್ವಾಮಿಗಳು.
೨. ಷ.ಬ್ರ.ಶ್ರೀ ಗುರುಪಾದ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಬಸವರಾಜ ಶಿವಾಚಾರ್ಯಸ್ವಾಮಿಗಳು.
೪. ಷ.ಬ್ರ.ಶ್ರೀ ಗುರುಪಾದ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯನ್ನು ಕಳೆದ ನಾಲ್ಕು ತಲೆಮಾರುಗಳಿಂದ ಗುರುತಿಸಬಹುದಾಗಿದೆ. ಹಿಂದೆ ಮಠದ ಪರಂಪರೆಯಲ್ಲಿ ಬಂದ ಮಠಾಧೀಶರು ಲಿಂಗೈಕ್ಯರಾದ ಮೇಲೆ ಗದ್ದುಗೆ ನಿರ್ಮಿಸಬೇಕೆಂಬ ಭವಿಷ್ಯದ ಕಲ್ಪನೆಇಲ್ಲದ ಕಾರಣದಿಂದ ಯಾರ ಗದ್ದುಗೆಗಳು ಈಗ ಲಭ್ಯವಿಲ್ಲ ಎಂದು ಈಗಿನ ಗುರುಗಳು ಹೇಳುತ್ತಾರೆ.ತಮ್ಮ ಮಠದ ಪ್ರಭಾವಕ್ಕೆ ಒಳಗಾಗಿದ್ದ ಇಮ್ಮಡಿ ಕೃಷ್ಣರಾಜೇಂದ್ರ ಒಡೆಯರು (೧೮೧೨-೧೮೩೧) ಮಠಕ್ಕೆ ಬಂದು ಗುರುಗಳ ಆಶೀರ್ವಾದ ಪಡೆದು, ಧಾರ್ಮಿಕ ಕಾರ್ಯಗಳಿಗಾಗಿ ಜಮೀನು ನೀಡಿ ಮಠಕ್ಕೆ ಗೌರವ ತೋರಿಸಿದ್ದಾರೆ ಎಂದು ಹೇಳುತ್ತಾರೆ.

ಪಟ್ಟಾಧಿಕಾರ: ವಂಶ ಪರಂಪರೆಯ ಪಟ್ಟದಮಠಕ್ಕೆ ಲಿಂಗೈಕ್ಯ ಶ್ರೀ ಬಸವರಾಜ ಸ್ವಾಮಿಗಳ ಸಹೋದರ ಸಂಬಂಧಿ ಶ್ರೀಕೊಟ್ಟೂರು ದೇವರು ಮತ್ತು ಶ್ರೀಮತಿ ಶಿವಮ್ಮನವರ ಪುತ್ರರಾಗಿ ೧೯೬೦ರಲ್ಲಿ ಜನಿಸಿದ ಶ್ರೀ ಗುರುಪಾದ ದೇವರಿಗೆ, ೧೯೮೦ ರಲ್ಲಿ ಸರಗೂರು ಮಠದ ಪಟ್ಟಾಧ್ಯಕ್ಷರಾದ ಶ್ರೀ ನಂಜುಂಡ ಸ್ವಾಮಿಗಳು ಪಟ್ಟಾಧಿಕಾರದ ಅನುಗ್ರಹ ನೀಡಿದರು. ಅಧ್ಯಯನಶೀಲರಾದ ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳು ಕಾಯಕಯೋಗಿಗಳಾಗಿ ಹೊಲದಲ್ಲಿ ಅವಿರತವಾಗಿ ಕೆಲಸ ಮಾಡುತ್ತ, ಆಚಾರ ವಿಚಾರಗಳು ಒಂದೇ ಎಂದು ನಂಬಿ ಭಕ್ತರಿಗೆ ಉಪದೇಶ ನೀಡುತ್ತಿದ್ದಾರೆ. ಮೈಸೂರು ಒಡೆಯರು ಕೊಟ್ಟ ಇನಾಂ ಜಮೀನಿನ ಕಾಗದ ಪತ್ರಗಳು ಮತ್ತು ತಾಮ್ರಶಾಸನಗಳು, ಪೂರ್ವಜರು ಬಳಸುತ್ತಿದ್ದ ಪೂಜಾಸಾಮಗ್ರಿಗಳು ಮಠದಲ್ಲಿ ಕಳ್ಳತನವಾದಾಗ ಕಳವಾದವೆಂದು ಈಗಿನ ಗುರುಗಳು ಹೇಳುತ್ತಾರೆ. ಇನಾಂ ಜಮೀನಿನಲ್ಲಿ ನಲವತ್ತು ಎಕರೆ ಜಮೀನು ಉಳಿದಿದ್ದು, ಇದನ್ನು ಅಭಿವೃದ್ಧಿಗೊಳಿಸಿ ಮಠಕ್ಕೆ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ.

ಧಾರ್ಮಿಕ ಕಾರ್ಯಗಳು: ೧೯೭೨ರಲ್ಲಿ ಲಿಂಗೈಕ್ಯರಾದ ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳ ಗದ್ದುಗೆ ಹಾಗೂ ೧೯೮೦ರಲ್ಲಿ ಲಿಂಗೈಕ್ಯರಾದ ಶ್ರೀ ಬಸವರಾಜ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಗಳು ಮಠದ ಹೊರ ಆವರಣದಲ್ಲಿ ನೋಡಸಿಗುತ್ತಿವೆ. ಮಠದ ಕಟ್ಟಡವನ್ನು ೧೯೫೦ರಲ್ಲಿ ಹೊಸದಾಗಿ ಕಟ್ಟಿಸಲಾಗಿದೆ. ಮಠದಲ್ಲಿ ಪ್ರತಿನಿತ್ಯ ಪೂಜಾಕಾರ್ಯಗಳ ಜೊತೆಗೆ ಶಿವರಾತ್ರಿ,ಶ್ರಾವಣ, ಕಾರ್ತಿಕಮಾಸ ಹಾಗೂ ಧನುರ್ಮಾಸಗಳಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಅಲ್ಲದೆ

ಮಠಾಧೀಶರು ಭಕ್ತರ ಮನೆಯ ಧಾರ್ಮಿಕ ಕ್ರಿಯಾದಿಗಳಲ್ಲಿ ಪಾಲ್ಗೊಂಡು ಸಂಸ್ಕಾರ ನೀಡುತ್ತಾ, ವೀರಶೈವ ಧರ್ಮದ ಆಚಾರ ವಿಚಾರಗಳನ್ನು ಭಕ್ತರಿಗೆ ಮುಟ್ಟಿಸಿ ಸಮಾಜ ಧಾರ್ಮಿಕ ತಳಹದಿಯ ಮೇಲೆ ಬೆಳೆಯಲು ಸಹಕಾರಿಯಾಗಿದ್ದಾರೆ.

ವಿಳಾಸ:ಷ.ಬ್ರ.ಶ್ರೀಗುರುಪಾದ ಶಿವಾಚಾರ್ಯಸ್ವಾಮಿಗಳು, ಶ್ರೀ ಪಟ್ಟದಮಠ,ಕಳ್ಳೀಪುರ, ಟಿ.ನರಸೀಪುರ ತಾ, ಮೈಸೂರು ಜಿಲ್ಲೆ.

ಕರೋಹಟ್ಟಿ

ಟಿ.ನರಸೀಪುರ ತಾಲ್ಲೂಕಿನ ಕರೋಹಟ್ಟಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಮೂರುವರೆ ಕಿ.ಮೀ. ದೂರದಲ್ಲಿದೆ. ಇಲ್ಲಿ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಕರೋಹಟ್ಟಿಯಲ್ಲಿ ಸೋಮಹಳ್ಳಿಯ ಶ್ರೀ ಸಿದ್ಧಮಲ್ಲಿಕಾರ್ಜುನ ಸ್ವಾಮಿಗಳು ೧೯೧೨ರಲ್ಲಿ ಪ್ರಾರಂಭ ಮಾಡಿದ ದಾಸೋಹ ಮಠವು ಶ್ರೀ ಗುರುಲಿಂಗ ದೇಶಿಕೇಂದ್ರ ಸ್ವಾಮಿಗಳ ಕಾಲದಲ್ಲಿ ವಿರಕ್ತ ಸಂಪ್ರದಾಯದ ಮಠವಾಗಿ ರೂಪಾಂತರ ಗೊಂಡಿದೆ. ಶ್ರೀ ಗುರುಲಿಂಗ ದೇಶಿಕೇಂದ್ರ ಸ್ವಾಮಿಗಳು ಅಧಿಕಾರಕ್ಕೆ ಬರುವ ಮುನ್ನ ಕೆಲವು ಭಿಕ್ಷದ ಸ್ವಾಮಿಗಳು ನೇಮಕಗೊಂಡು, ಕಂತೆಭಿಕ್ಷ ಕಾಯಕದಿಂದ ಮಠವನ್ನು ಬೆಳೆಸಿದ್ದರು ಎಂದು ತಿಳಿದು ಬರುತ್ತಿದೆ.

ಶ್ರೀ ಗುರುಲಿಂಗ ದೇಶಿಕೇಂದ್ರ ಸ್ವಾಮಿಗಳು ೧೯೬೪ರಲ್ಲಿ ಈ ಮಠದ ಗುರುಗಳಾಗಿ ಅಧಿಕಾರ ವಹಿಸಿಕೊಂಡರು. ಇವರು ಅಧಿಕಾರಕ್ಕೆ ಬಂದ ಮೇಲೆ ಅನೇಕ ಸತ್ಕಾರ್ಯಗಳನ್ನು ನಡೆಸಿ, ಭಕ್ತರಿಗೆ ಧಾರ್ಮಿಕ ಮಾರ್ಗದರ್ಶಕರಾಗಿ ಮಠವನ್ನು ಹಾಗೂ ಸಮಾಜವನ್ನು ಅಭಿವೃದ್ಧಿಪಡಿಸಿದರು. ಇವರ ಆಡಳಿತಾವಧಿಯಲ್ಲಿ ಮಠಕ್ಕೆ ನೂತನ ಕಟ್ಟಡವನ್ನು ನಿರ್ಮಿಸಿದರು. ಮಠದ ಜಮೀನಿನಲ್ಲಿ ಹೆಚ್ಚು ಆದಾಯ ಬರುವಂತೆ ಮಾಡಿ ಜನಮನ್ನಣೆಗೆ ಪಾತ್ರರಾದರು. ಇಂತಹ ಮಹಾನ್ ಸಾಧಕರಾದ ಶ್ರೀಗುರು ಲಿಂಗ ದೇಶಿಕೇಂದ್ರ ಸ್ವಾಮಿಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಶಿವಲಿಂಗ ದೇವರನ್ನು ನೇಮಿಸಿಕೊಂಡು, ೧೯೮೬ರ ಆಗಸ್ಟ್ ಇಪ್ಪತ್ತನಾಲ್ಕರಂದು ಶ್ರೀ ಶಿವಲಿಂಗ ದೇಶಿಕೇಂದ್ರ ಸ್ವಾಮಿಗಳೆಂದು ಅಭಿದಾನ ಮಾಡಿ ಪಟ್ಟಾಧಿಕಾರದ ಅನುಗ್ರಹವನ್ನು ನೀಡಿದರು. ವಿರಕ್ತಮಠದ ಎರಡನೆಯ ಗುರುಗಳಾಗಿ ಅಧಿಕಾರ ವಹಿಸಿಕೊಂಡ ಶ್ರೀ ಶಿವಲಿಂಗ ದೇಶಿಕೇಂದ್ರ ಸ್ವಾಮಿಗಳು ಜಾಲಹಳ್ಳಿಯ ಶ್ರೀ ಮಹಾಂತದೇವರು ಮತ್ತು ಶ್ರೀಮತಿ ಪುಟ್ಟಮಾದಮ್ಮನವರ ಪುತ್ರರಾಗಿ ೧೯೬೪ರಲ್ಲಿ ಜನಿಸಿದರು. ಟಿ.ನರಸೀಪುರದಲ್ಲಿ ಪ್ರೌಢಶಿಕ್ಷಣವನ್ನು ಮುಗಿಸಿ, ನಂತರ ಜ್ಯೋತಿಷ್ಯ ಹಾಗೂ ವೇದ ಕಲಿತು, ಮಠದ ಧಾರ್ಮಿಕ ಕೆಲಸಗಳನ್ನು ಸಮರ್ಥವಾಗಿ ಮುನ್ನಡೆಸುತ್ತಿದ್ದಾರೆ. ಮಠದಲ್ಲಿ ಪ್ರತಿನಿತ್ಯ ಭಜನೆ, ಕೀರ್ತನೆ ನಡೆಸುತ್ತಿದ್ದಾರೆ. ಸಾಮೂಹಿಕವಿವಾಹ ನಡೆಸುವುದು, ಶಿವದೀಕ್ಷೆ ಹಾಗೂ ಮಠದಲ್ಲಿನ ನಿತ್ಯದ ಪೂಜಾಕಾರ್ಯಗಳ ಜೊತೆಗೆ ದಾಸೋಹ ಸೇವೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಶಿವಲಿಂಗ ದೇಶಿಕೇಂದ್ರ ಸ್ವಾಮಿಗಳು,ಶ್ರೀ ವಿರಕ್ತಮಠ, ಕರೋಹಟ್ಟಿ, ಟಿ.ನರಸೀಪುರ ತಾ, ಮೈಸೂರುಜಿಲ್ಲೆ.

ಕಾವೇರಿಪುರ

ಟಿ.ನರಸೀಪುರ ತಾಲ್ಲೂಕಿನ ಕಾವೇರಿಪುರವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಇಪ್ಪತ್ತಾರು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ಗುರುಮಲ್ಲೇಶ್ವರ ದಾಸೋಹಮಠವು ಅಸ್ತಿತ್ವದಲ್ಲಿದೆ.

ಗುರುಮಲ್ಲೇಶ್ವರ ದಾಸೋಹಮಠ: ಕಾವೇರಿ ನದಿಯ ದಂಡೆಯ ಮೇಲೆ ಸ್ಥಾಪಿತವಾಗಿರುವ ಕಾವೇರಿಪುರದಲ್ಲಿ ದೇವನೂರು ಮಠದ ಶಾಖಾಮಠವಾದ ಶ್ರೀ ಗುರುಮಲ್ಲೇಶ್ವರ ದಾಸೋಹಮಠವು ೧೯೮೮ರ ಏಪ್ರಿಲ್ ಇಪ್ಪತ್ತೊಂಬತ್ತರಂದು ಸ್ಥಾಪನೆಯಾ ಗಿದೆ. ದೇವನೂರು ಮಠದ ಗುರುಗಳು ಭಿಕ್ಷದ ಮರಿಯನ್ನು ನೇಮಿಸಿ, ನಿತ್ಯ ಭಿಕ್ಷದ ಕಾಯಕ ಮಾಡುವ ಮುಖಾಂತರ ದಾಸೋಹ ನಡೆಯುವಂತೆ ಮಾಡಿದ್ದಾರೆ.

ವಿಳಾಸ:ಶ್ರೀ ಭಿಕ್ಷದ ಸ್ವಾಮಿಗಳು, ಶ್ರೀ ಗುರುಮಲ್ಲೇಶ್ವರ ದಾಸೋಹಮಠ, ಕಾವೇರಿಪುರ, ಟಿ.ನರಸೀಪುರ ತಾ, ಮೈಸೂರು ಜಿಲ್ಲೆ.

ಕುರುಬೂರು

ಟಿ.ನರಸೀಪುರ ತಾಲ್ಲೂಕಿನ ಕುರುಬೂರು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಆರು ಕಿ.ಮೀ.ದೂರದಲ್ಲಿದೆ. ಇಲ್ಲಿ

ಶ್ರೀಶೈಲ ಪೀಠದ ಶಾಖಾಮಠವಾದ ಶ್ರೀ ಕುರುಬೂರು ಮಠವು ಅಸ್ತಿತ್ವದಲ್ಲಿದೆ.

ಕುರುಬೂರುಮಠ: ನೂರೈವತ್ತು ವರ್ಷಗಳ ಹಿಂದೆಯೇ ಕುರುಬೂರು ಗ್ರಾಮದಲ್ಲಿ ಮಠ ಅಸ್ತಿತ್ವದಲ್ಲಿತ್ತು ಎಂದು ತಿಳಿಯುತ್ತದೆ. ಇದಕ್ಕೆ ಪೂರಕವೆಂಬಂತೆ ಈಗಲೂ ಊರಿನ ಉತ್ತರ ದಿಕ್ಕಿನಲ್ಲಿರುವ ಕಾಡನ್ನು ಮಠದಕಾಡು ಎಂದು ಕರೆಯುತ್ತಾರೆ. ಈ ಸ್ಥಳದಲ್ಲಿ ಕೆತ್ತನೆಯ ಕಲ್ಲುಗಳು ಹಾಗೂ ಕಟ್ಟಡದ ಅವಶೇಷಗಳು ನೋಡ ಸಿಗುತ್ತಿವೆ. ಹಿಂದೆ ಅಸ್ತಿತ್ವದಲ್ಲಿದ್ದ ಮಠ ಕಾಲಾನಂತರ ಉತ್ತರಾಧಿಕಾರಿಗಳು ಇಲ್ಲದೆ ತನ್ನ ಅಸ್ತಿತ್ವವನ್ನು ಕಳೆದುಕೊಂಡಿದೆ ಎಂದು ತಿಳಿದುಬರುತ್ತದೆ. ಹಿಂದೆ ಅಸ್ತಿತ್ವದಲ್ಲಿದ್ದ ಮಠವನ್ನು ಉಳಿಸಿಕೊಳ್ಳಲು ನೂರೈವತ್ತು ವರ್ಷಗಳ ಹಿಂದೆ ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಪುನರ್‌ಸ್ಥಾಪಿಸಿದರೆಂದು ಹೇಳಲಾಗುತ್ತಿದೆ. ಶ್ರೀ ಗುರುಮಲ್ಲೇಶ್ವರರ ಸಮಕಾಲೀನರಾದ ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳು ಉನ್ನತ ಸಂಪರ್ಕವನ್ನಿಟ್ಟುಕೊಂಡು, ತಮ್ಮ ಕ್ರಿಯಾಶೀಲತೆ ಮತ್ತು ತಪೋಶಕ್ತಿಯಿಂದ ಮಠವನ್ನು ಬೆಳೆಸಿ ೧೯೦೪ ರಲ್ಲಿ ಲಿಂಗೈಕ್ಯರಾಗಿದ್ದಾರೆ.

ಪರಂಪರೆ:
೧. ಷ.ಬ್ರ.ಶ್ರೀ ಸದಾಶಿವ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಯಜಮಾನ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಮಲ್ಲಿನಾಥ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಎರಡನೆಯ ಸದಾಶಿವ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಸ್ಥಾಪಕ ಗುರುಗಳ ನಂತರ ಬಂದ ಶ್ರೀ ಯಜಮಾನ ಶಿವಾಚಾರ್ಯ ಸ್ವಾಮಿ ಗಳು ಅಧಿಕಾರ ವಹಿಸಿಕೊಂಡು, ಮಠವನ್ನು ಅಭಿವೃದ್ಧಿಪಡಿಸಲು ಶ್ರಮಿಸಿದರು. ನಂತರ ಬಂದ ಶ್ರೀ ಮಲ್ಲಿನಾಥ ಶಿವಾಚಾರ್ಯ ಸ್ವಾಮಿಗಳು ವಿದ್ವಾಂಸರು ಹಾಗೂ ಮಹಾಕವಿಗಳಾಗಿದ್ದ ಶ್ರೀ ಗೌರಿಶಂಕರ ಶಾಸ್ತ್ರಿಗಳ ಜತೆಯಲ್ಲಿ ಕಾಶಿಯಲ್ಲಿ ವಿದ್ಯೆ ಕಲಿತು ಮಠದ ಅಧಿಕಾರವನ್ನು ವಹಿಸಿಕೊಂಡಿದ್ದರು. ಇವರು ಅನೇಕ ಜನಪರ ಕಾರ್ಯಗಳನ್ನು ಮಾಡಿದ್ದಾರೆ. ಇವರ ನಂತರ ಕೊಳ್ಳೇಗಾಲ ತಾಲ್ಲೂಕಿನ ಹೊನ್ನೂರು ಗ್ರಾಮದ ಶ್ರೀ ಪುಟ್ಟಮಾದಪ್ಪ, ಶ್ರೀಮತಿ ಪುಟ್ಟನಂಜಮ್ಮನವರ ಪುತ್ರರಾಗಿ ೧೯೩೨ ರಲ್ಲಿ ಜನಿಸಿದ ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳು, ೧೯೩೪ ರಲ್ಲಿ ವಾಟಾಳು ಶ್ರೀ ಬಸವಲಿಂಗ ಸ್ವಾಮಿಗಳಿಂದ ಪಟ್ಟಾಧಿಕಾರದ ಅನುಗ್ರಹ ಪಡೆದು ಅಧಿಕಾರಕ್ಕೆ ಬಂದರು. ಚೈತನ್ಯದಚಿಲುಮೆಯಾಗಿ ನಿರರ್ಗಳ ಪ್ರವಚನ ನೀಡುವ ಗುರುಗಳು ತಮ್ಮ ಅನುಭವದ ಜ್ಞಾನದಿಂದ ಭಕ್ತರನ್ನು ಸಂಸ್ಕಾರವಂತರನ್ನಾಗಿ ಮಾಡುವಲ್ಲಿ ನಿರತರಾಗಿದ್ದಾರೆ. ಮಠದ ಆಸ್ತಿಯಾಗಿ ಹತ್ತು ಎಕರೆ ಜಮೀನಿದ್ದು, ಇದನ್ನು ಅಭಿವೃದ್ಧಿಪಡಿಸಿ ಆದಾಯ ಬರುವಂತೆ ಮಾಡಿದ್ದಾರೆ. ಪ್ರತಿ ಶ್ರಾವಣ, ಕಾರ್ತೀಕಮಾಸ ಹಾಗೂ ಧನುರ್ಮಾಸಗಳಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಸದಾಶಿವ ಶಿವಾಚಾರ್ಯಸ್ವಾಮಿಗಳು, ಶ್ರೀಕುರುಬೂರು ಮಠ, ಕುರುಬೂರು, ಟಿ.ನರಸೀಪುರ ತಾ, ಮೈಸೂರುಜಿಲ್ಲೆ.

ಚಿದರಹಳ್ಳಿ

ಟಿ.ನರಸೀಪುರ ತಾಲ್ಲೂಕಿನ ಚಿದರಹಳ್ಳಿಯು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಹದಿನಾಲ್ಕು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ಗವಿಮಠವು ಅಸ್ತಿತ್ವದಲ್ಲಿದೆ.

ಗವಿಮಠ: ಶ್ರೀ ಗವಿಮಠವು ಚಿದರಹಳ್ಳಿಯ ವಾಯುವ್ಯದಿಕ್ಕಿಗೆ ಒಂದು ಕಿ.ಮೀ. ದೂರದಲ್ಲಿರುವ ಕಲ್ಲುಬೆಟ್ಟಗಳ ಸಿದ್ಧರಗಿರಿಯ ತಪ್ಪಲಲ್ಲಿ ಸ್ಥಾಪನೆಯಾಗಿದೆ. ಮಠದ ಹಿಂಬದಿಯಲ್ಲಿ ಕಲ್ಲುಬೆಟ್ಟಗಳ ಸಾಲುಗಳು ಹಬ್ಬಿದ್ದು, ಈ ಬೆಟ್ಟದ ಸಾಲುಗಳಿಂದ ನಿರ್ಮಾಣಗೊಂಡ ಈ ತಾಣ ರಮ್ಯರಮಣೀಯವಾಗಿದೆ. ೧೬೪೦ರಲ್ಲಿ ಅರುಣಾಚಲದಿಂದ ಆಗಮಿಸಿದ್ದ ಶಿವಯೋಗಿಗಳೊಬ್ಬರು ದೇಶಸಂಚಾರ ಮಾಡುತ್ತಾ ಈ ಪರ್ವತ ಪ್ರಾಂತ್ಯಕ್ಕೆ ಬಂದು, ಇಲ್ಲಿಯ ಏಕಾಂತ ವಾತಾವರಣಕ್ಕೆ ಮನಸೋತು ಗವಿಯಲ್ಲಿ ಅನುಷ್ಠಾನಕ್ಕೆ ಕುಳಿತರಂತೆ. ಈ ವಿಷಯ ಭಕ್ತರ ಗಮನಕ್ಕೆ ಹೋಗಿ ಗುರುಗಳ ಭೇಟಿಗೆ ಆಗಮಿಸತೊಡಗಿದರು. ಅನುಷ್ಠಾನದಿಂದ ಎಚ್ಚರಗೊಂಡ ಗುರುಗಳು ಭಕ್ತರಿಗೆ ದರ್ಶನ ನೀಡಿದರು. ಪ್ರತಿದಿನ ಇದೇ ಪರಿಪಾಠ ಬೆಳೆದು ಗುರುಶಿಷ್ಯರ ಸಂಬಂಧ ಬೆಳೆಯಿತು.

ಭಕ್ತರೆಲ್ಲಾ ಇವರನ್ನು'ಶ್ರೀ ಅರುಣಾಚಲಸ್ವಾಮಿ'ಗಳೆಂದು ಕರೆಯತೊಡಗಿದರು. ಗುರುಗಳನ್ನು ನೋಡಲು ಬರುವ ಭಕ್ತರಸಂಖ್ಯೆ ಹೆಚ್ಚಾದಂತೆ ಗವಿಯಮಠವಾಗಿ ಪರಿವರ್ತನೆಯಾಗಿತು. ಈ ರೀತಿ ಗವಿಮಠದ ಉಗಮವಾಗಿ ಈತನಕ ಬೆಳೆದು ಬಂದಿದೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ಅರುಣಾಚಲ ತಿರುವಣಂಮಲೈ ಶಿವಯೋಗಿಗಳು (೧೬೪೦) (ಸ್ಥಾಪಕರು)
೨. ಶ್ರೀ ಮ.ನಿ.ಪ್ರ. ಗುರುಶಾಂತಮೂರ್ತಿಸ್ವಾಮಿಗಳು (೧೭೦೦)
೩. ಶ್ರೀ ಮ.ನಿ.ಪ್ರ. ಷಡಕ್ಷರಿ ಶಿವಯೋಗಿಗಳು (೧೭೯೦)
೪. ಶ್ರೀ ಮ.ನಿ.ಪ್ರ. ಸದಾಶಿವ ದೇಶಿಕೇಂದ್ರಸ್ವಾಮಿಗಳು (೧೮೨೦)
೫. ಶ್ರೀ ಮ.ನಿ.ಪ್ರ. ಶಿವರುದ್ರ ದೇಶಿಕೇಂದ್ರಸ್ವಾಮಿಗಳು (೧೮೭೮)
೬. ಶ್ರೀ ಮ.ನಿ.ಪ್ರ. ಬಾಲಷಡಕ್ಷರಿಸ್ವಾಮಿಗಳು (೧೯೧೫)
೭. ಶ್ರೀ ಮ.ನಿ.ಪ್ರ. ಚನ್ನಸದಾಶಿವ ದೇಶಿಕೇಂದ್ರಸ್ವಾಮಿಗಳು (೧೯೭೦) (ಈಗಿನವರು)

ಈ ರೀತಿ ಗವಿ ಮಠದ ಪರಂಪರೆ ಹದಿನೇಳನೆಯ ಶತಮಾನದಿಂದ ಈತನಕ ಅವಿಚ್ಛಿನ್ನವಾಗಿ ಬೆಳೆದು ಬಂದಿದೆ. ಶ್ರೀ ಅರುಣಾಚಲ ತಿರುವಣಂ ಮಲೈ ಸ್ವಾಮಿಗಳ ನಂತರ ಶ್ರೀ ಗುರು ಶಾಂತಮೂರ್ತಿ ಸ್ವಾಮಿಗಳು ೧೭೦೦ರಲ್ಲಿ ಪಟ್ಟಾಧಿಕಾರ ವಹಿಸಿಕೊಂಡರು. ಇವರು ಮಠದಲ್ಲಿ ಧಾರ್ಮಿಕ ಜ್ಯೋತಿ ಬೆಳಗಿಸಿ ಲೋಕಸಂಚಾರಕ್ಕಾಗಿ ಉತ್ತರಾಚಲದಿಂದ ದಕ್ಷಿಣಾಚಲದವರೆಗೆ ಸಂಚಾರ ಮಾಡಿ, ಕುಂತೂರು ಗ್ರಾಮದಲ್ಲಿ ನಿರ್ವಿಕಲ್ಪ ಸಮಾಧಿ ಹೊಂದಿದರು ಎಂದು ಹೇಳಲಾಗುತ್ತಿದೆ.

ಶಿವಯೋಗಿಗಳು: ೧೯೭೦ರಲ್ಲಿ ಶ್ರೀಗವಿಮಠದ ಅಧಿಕಾರ ವಹಿಸಿಕೊಂಡ ಶ್ರೀ ಷಡಕ್ಷರಿ ಶಿವಯೋಗಿಗಳು ಆಕರ್ಷಕ ವ್ಯಕ್ತಿತ್ವವನ್ನು ಬೆಳೆಸಿಕೊಂಡು, ಮಠದಲ್ಲಿ ಧರ್ಮಪ್ರಚಾರ ಕಾರ್ಯವನ್ನು ಯಶಸ್ವಿಯಾಗಿ ಮಾಡತೊಡಗಿದರು. ಈ ಕಾರಣಕ್ಕೆ ಮಠವು ಜನರ ಆಕರ್ಷಣೆಯ ಕೇಂದ್ರವಾಗಿ ಬೆಳೆಯಿತು. ಇವರ ಕಾಲದಲ್ಲಿ ಮಠದ ಸುತ್ತಮುತ್ತ ಹುಲಿ ಓಡಾಡುವುದು ಗೋಚರವಾಯಿತಂತೆ. ಅಲ್ಲದೆ ಈ ಹುಲಿ ಭಕ್ತರಿಗೆ ತೊಂದರೆ ಕೊಡುತ್ತಿತ್ತು. ಒಮ್ಮೆ ಶಿವಯೋಗಿಗಳು ಕಲ್ಲುಬೆಟ್ಟದಲ್ಲಿಸಂಚಾರ ಮಾಡುತ್ತಾ ಇರುವ ಸಂದರ್ಭದಲ್ಲಿ ಹುಲಿ ಎದುರಾಯಿತು. ಮುಖಾಮುಖಿಯಾದ ಹುಲಿಯನ್ನು ಗುರುಗಳು ನೆಟ್ಟ ನೋಟದಿಂದ ನೋಡಿದಾಕ್ಷಣ ತನ್ನ ಕ್ರೌರ್ಯವನ್ನೆಲ್ಲಾ ಕಳೆದುಕೊಂಡು ಗೋವಿನ ಸ್ವಭಾವದಂತೆ ಪರಿವರ್ತನೆಯಾಗಿ, ಶ್ರೀ ಷಡಕ್ಷರಿ ಶಿವಯೋಗಿಗಳ ಪಾದಕಮಲಗಳಿಗೆ ನಮಸ್ಕರಿಸಿ ಪ್ರಾಣಬಿಟ್ಟಿತು. ಗುರುಗಳು ಈ ಜಾಗದಲ್ಲಿ ಸಮಾಧಿ ಮಾಡಿಸಿ ಗದ್ದುಗೆ ನಿರ್ಮಿಸಿ'ಹುಲಿಗದ್ದುಗೆ'ಎಂದು ಹೆಸರಿಟ್ಟರು ಎಂದು ಹೇಳುವ ಜನಪದ ಕಥೆ ಕೇಳಿ ಬರುತ್ತಿದೆ.

ಶ್ರೀ ಷಡಕ್ಷರಿ ಶಿವಯೋಗಿಗಳ ಕಾಲದಲ್ಲಿ ಭದ್ರಕಾಳಮ್ಮ ಎಂಬ ಶಿವಶರಣೆ ವಿರಕ್ತಾಶ್ರಮ ಬಯಸಿ ಬಂದು ಗುರುಗಳಿಂದ ಉಪದೇಶ ಪಡೆದು, ಕಾವಿತೊಟ್ಟು ಗವಿಮಠದಲ್ಲೇ ನೆಲೆನಿಂತು ಗುರುಗಳ ಸೇವೆ ಮಾಡಿಕೊಂಡು ಇರತೊಡಗಿದಳು. ಅಲ್ಲದೆ ತನ್ನ ಜೊತೆಯಲ್ಲಿ ಕರೆತಂದಿದ್ದ ಶಿಶುವಿಗೂ ಸಂಸ್ಕಾರಕೊಡಿಸಿ ಬೆಳೆಸುತ್ತಿದ್ದಳು. ಈ ಮಗುವಿಗೆ ಎಂಟುವರ್ಷ ಆದೊಡನೆ ಶ್ರೀಷಡಕ್ಷರಿ ಶಿವಯೋಗಿಗಳು ಮಗುವಿನ ವಿದ್ವತ್ ಮತ್ತು ಸಂಸ್ಕಾರದ ನಡೆ ನುಡಿಯನ್ನು ನೋಡಿ'ಶ್ರೀ ಸದಾಶಿವ ದೇಶಿ ಕೇಂದ್ರ'ರೆಂದು ಅಭಿದಾನವಿತ್ತು ೧೮೨೦ರಲ್ಲಿ ಪಟ್ಟಾಧಿಕಾರ ಮಾಡಿ ಲಿಂಗೈಕ್ಯರಾದರು.

ಸಂಸ್ಕಾರದಶಿಶು: ಶ್ರೀ ಷಡಕ್ಷರಿ ಶಿವಯೋಗಿಗಳ ಗುರುಕಾರುಣ್ಯ ಹಾಗು ಭದ್ರಕಾಳಮ್ಮನವರ ಆರೈಕೆಯಲ್ಲಿ ಬೆಳೆದ ಶ್ರೀಸದಾಶಿವ ದೇಶಿಕೇಂದ್ರ ಸ್ವಾಮಿಗಳಿಗೆ ಸಂಸ್ಕಾರವು ಮೈತುಂಬಿಕೊಂಡಿತ್ತು. ಪ್ರೌಢಾವಸ್ಥೆಗೆ ಬರುವ ವೇಳೆಗೆ ವೀರಶೈವ ತತ್ವಗಳ ಆಚರಣೆ ಯನ್ನು ಜನಮನಕ್ಕೆ ಬಿತ್ತುವ ಸಮರ್ಥತೆ ಪಡೆದುಕೊಂಡು ಯಶಸ್ವಿಯಾಗಿದ್ದರು. ಧರ್ಮಪ್ರಚಾರಕ್ಕೆಂದು ಲೋಕಸಂಚಾರ ಮಾಡುತ್ತಾ, ಮಹಾರಾಷ್ಟ್ರದ ಸೋಲಾಪುರದಲ್ಲಿ ನೆಲೆಸಿದ್ದಾಗಲೇ ಲಿಂಗೈಕ್ಯರಾದರೆಂದು ಹೇಳಲಾಗುತ್ತಿದೆ. ಇವರ ತರುವಾಯ ೧೮೭೮ರಲ್ಲಿ ಅಧಿಕಾರಕ್ಕೆ ಬಂದ ಶ್ರೀ ಶಿವರುದ್ರ ದೇಶಿಕೇಂದ್ರ ಸ್ವಾಮಿಗಳು ಗವಿಮಠದ ಅಭಿವೃದ್ಧಿಯನ್ನು ಮಾಡಿದ್ದಾರೆ.

ಷಟ್‌ಸ್ಥಲ ಸೂತ್ರದ ಕಟ್ಟಡ ಸ್ಥಾಪನೆ: ಶ್ರೀ ಶಿವರುದ್ರ ದೇಶಿಕೇಂದ್ರ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಗವಿಯಲ್ಲಿದ್ದ ಮೂಲ ಮಠದ ಕಟ್ಟಡವನ್ನು ತೆಗೆಸಿ, ಗವಿಗೆ ಸಮೀಪದ ಬಯಲಿನಲ್ಲಿ ಕಲ್ಲುಮಠವನ್ನು ಕಟ್ಟಿಸಿದರು. ಷಟ್‌ಸ್ಥಲ ಸೂತ್ರದ

ಆಧಾರವ ಮೇಲೆ ನಿರ್ಮಿತಗೊಂಡ ಈ ಮಠ, ಮೂವತ್ತಾರು ಅಂಕಣಗಳ ವಿಶಾಲವೇದಿಕೆಯಾಗಿ ನಿರ್ಮಾಣಗೊಂಡಿತು. ಈ ವಿಶಾಲ ಮಠದಲ್ಲಿ ಗುರುಕುಲ ಸ್ಥಾಪಿಸಿ, ಈ ಪ್ರಾಂತ್ಯದ ದಶದಿಕ್ಕುಗಳಿಂದ ಬಂದ ಬಾಲಕರಿಗೆ ಸಂಸ್ಕಾರ ನೀಡಿ ಸಂಸ್ಕೃತ ಹಾಗೂ ವೀರಶೈವ ಸಿದ್ಧಾಂತವನ್ನು ಬೋಧಿಸತೊಡಗಿದರು. ನಂತರ ಲೋಕ ಕಲ್ಯಾಣಾರ್ಥ ದೇಶಸಂಚಾರದಲ್ಲಿರುವಾಗ ಆಂಧ್ರ ಪ್ರದೇಶದ ಆದವಾನಿ ಜಿಲ್ಲೆಯ ಅಲ್ಲಮಪುರದ ಉಮಾಪತಿಸ್ವಾಮಿ ಮಠದಲ್ಲಿ ಲಿಂಗೈಕ್ಯರಾಗಿದ್ದಾರೆ ಎಂದು ಹೇಳಲಾಗುತ್ತಿದೆ.

ಬಾಲ ಷಡಕ್ಷರಿ: ಶ್ರೀ ಶಿವರುದ್ರ ದೇಶಿಕೇಂದ್ರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಮಠದ ಭಕ್ತರು ಒಂದೆಡೆ ಸೇರಿ ಗುರುಕುಲದ ವಿದ್ಯಾರ್ಥಿಯಾಗಿ ಗುರುಗಳ ಸೇವೆ ಮಾಡಿಕೊಂಡಿದ್ದ, ವಿದ್ವತ್‌ಚೇತನರಾಗಿದ್ದ ಮರಿದೇವರಿಗೆ'ಶ್ರೀ ಬಾಲಷಡಕ್ಷರಿ'ಎಂದು ಅಭಿದಾನವಿತ್ತು ೧೯೧೫ರಲ್ಲಿ ಪಟ್ಟಾಧಿಕಾರ ಮಾಡಿದರು. ಹಿರಿಯ ಗುರುಗಳ ಮಾರ್ಗದರ್ಶನದಲ್ಲಿ ಬೆಳೆದಿದ್ದ ಶ್ರೀ ಬಾಲ ಷಡಕ್ಷರಿ ಸ್ವಾಮಿಗಳು ಮಠವನ್ನು ಧಾರ್ಮಿಕ ತಳಹದಿಯ ಮೇಲೆ ಬೆಳೆಸತೊಡಗಿದರು. ಇವರು ಪೂಜೆಗೆ ಕುಳಿತರೆ ಹನ್ನೊಂದು ನಾದಗಳು ಬರುವಂತೆ ಘಂಟೆಗಳನ್ನು ಬಾರಿಸುತ್ತಾ, ಪೂಜೆ ಮಾಡಿಕೊಳ್ಳುತ್ತಿದ್ದರು ಎಂದು ಹೇಳುವ ಕಥೆ ಜನಜನಿತವಾಗಿದೆ. ಇಂತಹ ಮಹಾಮಹಿಮ ಶ್ರೀ ಬಾಲಷಡಕ್ಷರಿ ಸ್ವಾಮಿಗಳ ತರುವಾಯ ೧೯೭೦ರಲ್ಲಿ ಈಗಿನ ಶ್ರೀ ಚನ್ನಸದಾಶಿವ ದೇಶಿಕೇಂದ್ರ ಸ್ವಾಮಿಗಳನ್ನು ಅಧಿಕಾರಕ್ಕೆ ತರಲಾಯಿತು.

ಪುತ್ರವರ್ಗಕ್ಕೆ ಬದಲಾವಣೆ: ವಿರಕ್ತ ಸಂಪ್ರದಾಯದ ಮಠವನ್ನು ಪುತ್ರವರ್ಗಕ್ಕೆ ಪರಿವರ್ತಿಸಿದ ಹಿರಿಯ ಗುರುಗಳು ತಮ್ಮ ಸಹೋದರ ಸಂಬಂಧಿ ಮಹಾದೇವದೇವರಿಗೆ ಪಟ್ಟಾಧಿಕಾರ ಮಾಡಿ ಶ್ರೀ ಚನ್ನಸದಾಶಿವ ದೇಶಿಕೇಂದ್ರ ಸ್ವಾಮಿಗಳೆಂದು ಅಭಿದಾನ ವಿತ್ತು ಅಧಿಕಾರಕ್ಕೆ ತಂದರು. ಶ್ರೀ ಶಿವರುದ್ರಪ್ಪ ಮತ್ತು ಶ್ರೀಮತಿ ಗೌರಮ್ಮನವರ ಪುತ್ರರಾಗಿ ೧೯೬೦ರಲ್ಲಿ ಜನಿಸಿದ ಶ್ರೀಚನ್ನ ಸದಾಶಿವ ದೇಶಿಕೇಂದ್ರ ಸ್ವಾಮಿಗಳು, ಪ್ರೌಢಶಿಕ್ಷಣದ ನಂತರ ಕನಕಪುರದ ಮರಳೆ ಮಠದಲ್ಲಿ ಸಂಸ್ಕೃತ,ವೀರಶೈವ ತತ್ತ್ವಗಳ ಬಗ್ಗೆ ಅಧ್ಯಯನ ಮಾಡಿ ಮಠಕ್ಕೆ ಬಂದು ಪೂರ್ಣ ಅಧಿಕಾರ ವಹಿಸಿಕೊಂಡು, ಮಠದ ಅಭಿವೃದ್ಧಿಯ ಕಡೆ ಹೆಚ್ಚು ಒತ್ತುಕೊಟ್ಟು ದುಡಿಯ ತೊಡಗಿದರು. ಇವರು ಮಠದ ಆಸ್ತಿಯನ್ನು ಅಭಿವೃದ್ಧಿಪಡಿಸಿ ಆಧುನಿಕ ಬೇಸಾಯ ಪದ್ಧತಿಯನ್ನು ಅಳವಡಿಸಿರುವ ರಲ್ಲದೆ ಮಠದ ಸುತ್ತಮುತ್ತ ಇರುವ ಜಾಗದಲ್ಲಿ ಮಾವು ಹಾಗೂ ಹುಣಸೆಮರಗಳನ್ನು ಬೆಳೆಸಿ ಪ್ರಕೃತಿಯ ಸಿರಿ ಹೆಚ್ಚಿಸಿ ಮಠಕ್ಕೆ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ.

ಮೂಲಗವಿ: ಬೃಹದಾಕಾರದ ಬಂಡೆಯೊಂದರ ಬುಡದಲ್ಲಿ ವಿಶಾಲವಾದ ಗವಿ ನೈಸರ್ಗಿಕವಾಗಿ ರೂಪುಗೊಂಡಿದ್ದು ಇದರ ಪಕ್ಕದಲ್ಲಿ ಗೋಡೆಯನ್ನು ನಿರ್ಮಿಸಿ ವಾಸಿಸಲು ಯೋಗ್ಯವಾಗಿ ಮಾಡಿಕೊಂಡಿದ್ದಾರೆ. ವಿಶ್ರಾಂತಿ ಪಡೆಯಲು ಎತ್ತರವಾದಜಗುಲಿ ಇದ್ದು, ಅನುಷ್ಠಾನಕ್ಕೆ ಅನುಕೂಲವಾಗುವಂತೆ ಒಂದು ವೇದಿಕೆಯನ್ನು ನಿರ್ಮಿಸಿಕೊಳ್ಳಲಾಗಿದೆ. ಗವಿಯ ಮುಂದೆ ಶ್ರೀ ಶಿವರುದ್ರ ಸ್ವಾಮಿಗಳು ವಿಶಾಲವಾದ ಕಲ್ಲು ಕಟ್ಟಡವನ್ನು ನಿರ್ಮಿಸಿದ ಮೇಲೆ ಗವಿಯಲ್ಲಿ ಯಾರೂ ವಾಸ ಮಾಡದ ಕಾರಣ ಶಿಥಿಲಗೊಂಡಿದೆ.

ಧಾರ್ಮಿಕ ಕಾರ್ಯಗಳು: ಗವಿಯ ಒಳಭಾಗದಲ್ಲಿ ನಿರ್ಮಾಣಗೊಂಡ ಗದ್ದುಗೆಗಳ ಪೂಜಾಕಾರ್ಯ, ಧನುರ್ಮಾಸ, ಶ್ರಾವಣ, ಕಾರ್ತೀಕಮಾಸಗಳಲ್ಲಿ ಹಾಗೂ ಶಿವರಾತ್ರಿಯಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಶ್ರಾವಣ ಮಾಸದ ಎರಡನೆಯ ಸೋಮವಾರದಂದು ಶ್ರೀ ಷಡಕ್ಷರ ಶಿವಯೋಗಿಗಳ ಪುಣ್ಯಾರಾಧನೆಯನ್ನು ಮಾಡಲಾಗುತ್ತಿದೆ. ಈ ಸಂದರ್ಭದಲ್ಲಿ ನಾಡಿನ ಅನೇಕ ಭಾಗಗಳಿಂದ ಬರುವ ಭಕ್ತರಿಗೆ ಅನ್ನದಾಸೋಹ ಹಾಗೂ ವಸತಿ ಸೌಕರ್ಯವನ್ನು ಕಲ್ಪಿಸಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ.ಚನ್ನಸದಾಶಿವ ದೇಶಿಕೇಂದ್ರ ಸ್ವಾಮಿಗಳು, ಶ್ರೀ ಗವಿಮಠ, ಚಿದರಹಳ್ಳಿ, ಟಿ.ನರಸೀಪುರ ತಾ, ಮೈಸೂರುಜಿಲ್ಲೆ.

ತಲಕಾಡು

ತಿರುಮಕೂಡಲು ಟಿ.ನರಸೀಪುರ ತಾಲ್ಲೂಕಿನ ತಲಕಾಡು, ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಇಪ್ಪತ್ತೊಂಬತ್ತು ಕಿ.ಮೀ. ದೂರದಲ್ಲಿದೆ. ಈ ಗ್ರಾಮವು ಐತಿಹಾಸಿಕ, ಪೌರಾಣಿಕ ಮತ್ತು ಪ್ರವಾಸಿತಾಣವಾಗಿದೆ. ತಲ ಮತ್ತು ಕಾಡ ಎಂಬ ಬೇಡರು ಇಲ್ಲಿನ ವೈದ್ಯನಾಥೇಶ್ವರರನ್ನು ಆರಾಧಿಸುತ್ತಾ ಮೋಕ್ಷ ಹೊಂದಿದ ಫಲವಾಗಿ ಈ ಪುಣ್ಯ ಕ್ಷೇತ್ರಕ್ಕೆ 'ತಲಕಾಡು' ಎಂಬ ಹೆಸರು ಬಂದಿದೆ ಎಂದು ಜನ ಹೇಳುತ್ತಾರೆ. ಬಹಳ ಕಾಲದವರೆಗೆ ಗಂಗರ ರಾಜಧಾನಿಯಾಗಿದ್ದ ಈ ಪಟ್ಟಣ ಚೋಳರ

ಅಧೀನಕ್ಕೆ ಬಂದಾಗ'ರಾಜರಾಜಪುರ' ಎಂದು ಕರೆಯಲ್ಪಟ್ಟಿತ್ತೆಂದು ಸ್ಥಳ ಪುರಾಣಗಳು ತಿಳಿಸುತ್ತಿವೆ. ತಲಕಾಡು ಕ್ಷೇತ್ರವು ಐತಿಹಾಸಿಕ ಹಾಗೂ ಧಾರ್ಮಿಕ ಕ್ಷೇತ್ರವಾಗಿ ದಕ್ಷಿಣಕಾಶಿ ಎಂದೇ ಹೆಸರು ವಾಸಿಯಾಗಿದೆ. ಈ ಪುರಾಣ ಪ್ರಸಿದ್ಧ ಪಟ್ಟಣದಲ್ಲಿ ಶಿವನ ಪಂಚಮುಖಗಳಾದ ಸದ್ಯೋಜಾತ, ವಾಮದೇವ,ಅಘೋರ, ತತ್ಪುರುಷ ಮತ್ತು ಈಶ್ಯಾನ ಹೆಸರಿನ ಪಂಚಲಿಂಗಗಳು ಕಾವೇರಿ ನದಿಯ ದಡದಲ್ಲಿ ಸ್ಥಾಪನೆಯಾಗಿವೆ. ಈ ಕ್ಷೇತ್ರದಲ್ಲಿ ಶ್ರೀ ಹಸ್ತಿಕೇರಿಮಠ ಮತ್ತು ಶ್ರೀ ಕನಕಗಿರಿ ಮಠಗಳು ಸ್ಥಾಪನೆಯಾಗಿವೆ. ಇದರಲ್ಲಿ ಈಗ ಶ್ರೀ ಕನಕಗಿರಿ ಮಠದ ಆಡಳಿತ ನಂಜನಗೂಡಿನ ಶ್ರೀ ಕೆಂಡಗಣ್ಣಸ್ವಾಮಿ ಮಠಕ್ಕೆ ಸ್ಥಳಾಂತರಗೊಂಡಿರುವುದರಿಂದ, ಮಠದ ಕಟ್ಟಡ ಮಾತ್ರ ಸ್ಮಾರಕವಾಗಿ ಉಳಿದಿದೆ. ಶ್ರೀ ಹಸ್ತಿಕೇರಿ ಮಠ ಅಸ್ತಿತ್ವದಲ್ಲಿದ್ದು,ಧಾರ್ಮಿಕ ಕಾರ್ಯಗಳನ್ನು ನಡೆಸಿ ಕೊಂಡು ಬರುತ್ತಿದೆ.

ಹಸ್ತಿಕೇರಿಮಠ: ಕಾವೇರಿ ನದಿಯ ದಡದಲ್ಲಿ ತಲಕಾಡಿನ ದಕ್ಷಿಣ ಭಾಗದಲ್ಲಿ ಸ್ಥಾಪನೆಯಾಗಿರುವ ಹಸ್ತಿಕೇರಿ ಮಠವು ನಾಲ್ಕು ಶತಮಾನಕ್ಕೂ ಹಿಂದೆ ಅಸ್ತಿತ್ವದಲ್ಲಿತ್ತು ಎಂದು ತಿಳಿದು ಬಂದಿದೆ. ಗಂಗರ ರಾಜಧಾನಿಯಾದ ತಲಕಾಡಿನಲ್ಲಿ ರಾಜರ ಆನೆಗಳನ್ನು ಕಟ್ಟುತ್ತಿದ್ದ ಬೀದಿಯಲ್ಲಿ ಈ ಮಠ ಇದ್ದ ಕಾರಣ 'ಶ್ರೀ ಹಸ್ತಿಕೇರಿಮಠ' ಎಂಬ ಹೆಸರು ಬಂದಿದೆ. ಪಂಚಪೀಠಗಳಲ್ಲಿ ಒಂದಾದ ಉಜ್ಜಯಿನಿ ಪೀಠದ ಶಾಖಾಮಠವಾಗಿ ಈ ಮಠದ ಪರಂಪರೆ ಬೆಳೆದಿದೆ.

ಪರಂಪರೆ: ಮಠದ ಮೂಲಪುರುಷರಾದ ಶ್ರೀಕರಿಬಸವೇಶ್ವರರಗದ್ದುಗೆಯು ಕ್ರಿ.ಶ.೧೫೫೨ರಲ್ಲಿ ನಿರ್ಮಿಸಿದ್ದು ಎಂದು ಸಂಶೋಧನೆಯಿಂದ ತಿಳಿದು ಬಂದಿದೆ. ಇಂತಹ ಪರಂಪರೆಯಲ್ಲಿ ಶ್ರೀ ಕರಿಬಸವ ಶಿವಾಚಾರ್ಯ ಸ್ವಾಮಿಗಳ ನಂತರ ಮಠಾಧೀಶರಾಗಿ ಯಾರಿದ್ದರು ಎಂದು ತಿಳಿದುಬಂದಿಲ್ಲ. ೧೯೨೪ರಲ್ಲಿ ಕಾವೇರಿ ನದಿಯಲ್ಲಿ ಪ್ರವಾಹ ಬಂದಾಗ ಮಠವು ಹೇಳಲು ಹೆಸರಿಲ್ಲದಂತೆ ಕೊಚ್ಚಿ ಹೋಗಿತ್ತು. ಈ ಸಂದರ್ಭದಲ್ಲಿ ಮಠದ ಇತಿಹಾಸದ ದಾಖಲೆಗಳು ಮತ್ತು ಗದ್ದುಗೆಗಳು ಕೊಚ್ಚಿ ಹೋಗಿದ್ದರಿಂದ ಹಿಂದಿನ ದಾಖಲೆಗಳು ಲಭ್ಯವಿಲ್ಲ ಎಂದು ಈಗಿನ ಶ್ರೀ ಸಿದ್ಧಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಅಭಿಪ್ರಾಯಿಸುತ್ತಾರೆ. ಈಗ ಲಭ್ಯವಿರುವ ಆಧಾರಗಳ ಹಿನ್ನಲೆಯಲ್ಲಿ ಈ ಕೆಳಗಿನ ಗುರುಗಳ ಹೆಸರುಗಳನ್ನು ದಾಖಲಿಸಬಹುದಾಗಿದೆ.

೧. ಷ.ಬ್ರ.ಶ್ರೀ ಕರಿಬಸವೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಡಾ. ಸಿದ್ಧಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಗದ್ದುಗೆಗಳು: ಹಸ್ತಿಕೇರಿ ಮಠದಲ್ಲಿ ಏಳು ಗದ್ದುಗೆಗಳು ನೋಡಲು ಸಿಗುತ್ತಿವೆ. ಇವುಗಳಲ್ಲಿ ಮೂರು ಗದ್ದುಗೆಗಳನ್ನು ಆಧಾರಗಳ ಕೊರತೆಯಿಂದ ಗುರುತಿಸಲಾಗುತ್ತಿಲ್ಲ. ಕರ್ತೃಗುರುಗಳ ಗದ್ದುಗೆಯ ಮೇಲೆ ದೊಡ್ಡಗಾತ್ರದ ಕಲ್ಲಿನ ಬಸವನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಅಲ್ಲದೇ ಈ ಗದ್ದುಗೆಗೆ ಹೊಂದಿಕೊಂಡಂತಿರುವ ಕಟ್ಟಡದಲ್ಲಿ ಒಂದರ ಪಕ್ಕದಲ್ಲಿ ಒಂದು ಗದ್ದುಗೆಯನ್ನು ನಿರ್ಮಿಸಿದ್ದಾರೆ. ಇದರಲ್ಲಿ ಒಂದು ಗದ್ದುಗೆ ಗೋಪುರದ ತರಹ ಮೆಟ್ಟಿಲು ಮಾಡಿ, ನೂರೊಂದು ಲಿಂಗಗಳನ್ನು ಪ್ರತಿಷ್ಠಾಪಿಸ ಲಾಗಿದೆ. ಹಿರಿಯ ಗುರುಗಳಾದ ಶ್ರೀ ದಾಸೋಹ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ನೂರಮೂವತ್ತೊಂದು ವರ್ಷಗಳ ದೀರ್ಘ ಕಾಲ ಬದುಕಿ ೧೯೧೮ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ಗದ್ದುಗೆಯನ್ನು ಗದ್ದುಗೆ ಸಾಲಿನಲ್ಲಿ ನೋಡಬಹು ದಾಗಿದೆ.'ಮರಣವೇ ಮಹಾನವಮಿ' ಎಂದು ಹೇಳಿದ್ದು ಸಾರ್ಥಕವಾಗುವಂತೆ ಸಾವನ್ನು ಸ್ವಾಗತಿಸಿ ತಮ್ಮ ಗದ್ದುಗೆಯನ್ನು ತಾವೇ ನಿರ್ಮಿಸಿಕೊಂಡು ತಮ್ಮ ಅಂತ್ಯಕ್ರಿಯೆಗೆ ಸಕಲ ವ್ಯವಸ್ಥೆ ಮಾಡಿಕೊಂಡಿರುವ ಈಗಿನ ಶ್ರೀ ಡಾ. ಸಿದ್ಧಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು, ಪರಂಪರೆಯ ಸಮರ್ಥ ಗುರುಗಳಾಗಿ ಮಠದ ಸೇವೆ ಮಾಡಿ ಮಠದ ಹೆಸರನ್ನು ಹೆಚ್ಚು ಪ್ರಚಾರಕ್ಕೆ ತಂದಿದ್ದಾರೆ.

ಉಪ್ಪಿನ ಕಾಣಿಕೆ: ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ(೧೮೧೨-೧೮೩೧)ಮಠವು ಅಭಿವೃದ್ಧಿಗೊಂಡಿದೆ. ಪಂಚಲಿಂಗಗಳ ದರ್ಶನಕ್ಕೆ ಬರುತ್ತಿದ್ದ ಭಕ್ತರು,ಈ ಮಠದ ಪ್ರಭಾವ ಕೇಳಿ ಮಠಾಧಿಪತಿಗಳ ದರ್ಶನಕ್ಕೆ ಬಹಳ ಸಂಖ್ಯೆಯಲ್ಲಿ ಬಂದು ಹೋಗುತ್ತಿದ್ದರು. ಆ ಕಾಲದಲ್ಲಿ ದಾಸೋಹಕ್ಕೆ ಹಾಕಿದ್ದ ಬೆಂಕಿ ಕೆಡುತ್ತಿರಲಿಲ್ಲವಂತೆ. ಇಂತಹ ಒಂದು ಸಂದರ್ಭದಲ್ಲಿ ತಂಡೋಪ

ತಂಡವಾಗಿ ಭಕ್ತರು ಮಠಕ್ಕೆ ಬಂದಾಗ ಸೌದೆಯ ಕೊರತೆ ಕಂಡು ಬಂದಾಗ ಮಠದ ತೊಲೆಯನ್ನೇ ಕಿತ್ತು ಸೀಳಿಸಿ ಕೊಟ್ಟಿರಂತೆ. ಇದನ್ನು ಕೇಳಿ ತಿಳಿದುಕೊಂಡ ಮುಮ್ಮಡಿ ಕೃಷ್ಣರಾಜ ಒಡೆಯರು ಸತ್ಯ ಪ್ರಸಂಗವನ್ನು ಕಣ್ಣಾರೆ ನೋಡಿ ಆಶ್ಚರ್ಯಗೊಂಡು ಇಂತಹ ಪವಾಡಪುರುಷರಿಗೆ ಭೂಮಿಯನ್ನು ಗೌರವ ಕಾಣಿಕೆಯಾಗಿ ಕೊಡಬೇಕೆಂದು ಅಪೇಕ್ಷೆಪಟ್ಟು ಗುರುಗಳಲ್ಲಿ ನಿವೇದಿಸಿ ಕೊಂಡು 'ಈ ಮಠದ ನಿರಂತರ ದಾಸೋಹ ಕ್ರಿಯೆಗೆ ನಮ್ಮ ಸೇವೆಯೂ ಸಲ್ಲಬೇಕು. ಈ ಕಾರಣಕ್ಕೆ ಮಠಕ್ಕೆ ಭೂಮಿಯನ್ನು ಕಾಣಿಕೆಯಾಗಿ ನೀಡುವೆ. ತಾವು ಸ್ವೀಕರಿಸಬೇಕು' ಎಂದು ಬಿನ್ನವಿಸಿಕೊಳ್ಳುತ್ತಾರೆ. ಆಗ ಗುರುಗಳು'ಭೂಮಿ ಆಸೆ ನಮಗೇಕೆ? ನಿಮಗೆ ದಾಸೋಹಕ್ಕೆ ಕಾಣಿಕೆ ನೀಡಬೇಕು ಎಂಬ ಆಸೆ ಇದ್ದರೆ ವರ್ಷಕ್ಕೆ ಆಗುವಷ್ಟು ಉಪ್ಪನ್ನು ಕಾಣಿಕೆಯಾಗಿ ನೀಡಿ' ಎಂದು ಹೇಳುತ್ತಾರೆ. ಗುರುಗಳ ಮಾತಿಗೆ ಎದುರುತ್ತರ ಕೊಡಲು ಇಷ್ಟವಿಲ್ಲದ ಮಹಾರಾಜರು ಗುರುಗಳ ಅಪ್ಪಣೆಯಂತೆ ಉಪ್ಪಿನ ಕಾಣಿಕೆಯಾಗಿ ಪ್ರತಿವರ್ಷ ಒಂದು ರೂಪಾಯಿ ಇಪ್ಪತ್ತೈದು ಪೈಸೆಯನ್ನು ಕಾಣಿಕೆಯಾಗಿ ಕೊಡತೊಡಗಿದರು. ಈ ಕಾಣಿಕೆ ಕಳೆದ ಇಪ್ಪತ್ತು ವರ್ಷಗಳಿಂದ ಬರುತ್ತಿದ್ದು, ಈಗಿನ ಗುರುಗಳೇ ಈಗ ಪಡೆದುಕೊಳ್ಳದೆ ನಿಲ್ಲಿಸಿದ್ದಾರೆ.

ಕಿರುಬನ ಗೆದ್ದ ಸ್ವಾಮಿಗಳು: ಒಮ್ಮೆ ಗಂಗರ ಪಟ್ಟದಾನೆ ಇದ್ದಕ್ಕಿದ್ದಂತೆಯೇ ಸತ್ತು ಹೋಯಿತು. ರಾಜ ದುಃಖಿತಪ್ಪನಾಗಿ 'ಅದೃಷ್ಟದ ಪಟ್ಟದಾನೆ ಸತ್ತಿದ್ದು ಅಪಶಕುನ, ನಮಗೆ ಮುಂದೆ ಕೇಡು ಕಾದಿದೆ' ಎಂದು ಚಿಂತಕ್ರಾಂತನಾಗಿರುತ್ತಾನೆ. ಹಸ್ತಿಕೇರಿ ಮಠದ ಗುರುಗಳಿಗೆ ಈ ವಿಷಯ ತಿಳಿದು ಸತ್ತ ಆನೆಯನ್ನು ಬದುಕಿಸಿ ರಾಜನ ದುಃಖವನ್ನು ದೂರ ಮಾಡಿದರು. ಇಂತಹ ಜನಪದ ಕಥೆಯ ಜೊತೆಗೆ ನೂರಮೂವತ್ತೈದು ವರ್ಷ ಬದುಕಿದ್ದ ದಾಸೋಹ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ತಮ್ಮ ತೊಂಬತ್ತನೆಯ ವಯಸ್ಸಿನಲ್ಲಿ ಕಿರುಬನ ಕೈಯ್ಯಲ್ಲಿ ಗುದ್ದಾಡಿ ಗೆದ್ದ ಮಹಾಭೂಪರೆಂದು ಹೆಸರು ಪಡೆದಿದ್ದರು.

ಖಾಲಿ ಇದ್ದ ಮಠಕ್ಕೆ ಅಧಿಕಾರ: ೧೯೧೮ರಲ್ಲಿ ದಾಸೋಹ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಅನೇಕ ವರ್ಷ ಮಠ ಮಠಾಧಿಪತಿಗಳಿಲ್ಲದೇ ಖಾಲಿ ಉಳಿಯಿತು. ೧೯೫೫ರಲ್ಲಿ ಜೀರ್ಣಗೊಂಡಿದ್ದ ಮಠಕ್ಕೆ ನೂತನ ಕಟ್ಟಡವನ್ನು ಕಟ್ಟಿಸಿ ೧೯೬೦ರಲ್ಲಿ ಶ್ರೀ ಡಾ. ಸಿದ್ಧಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳಿಗೆ ಪಟ್ಟಾಧಿಕಾರ ಮಾಡಲಾಯಿತು. ಗುರುಗಳು ತಲಕಾಡಿನ ಸಮೀಪದ ವಿಜಾಪುರ ಗ್ರಾಮದ ಶ್ರೀ ಚನ್ನಬಸಪ್ಪ ಮತ್ತು ಶ್ರೀಮತಿ ಮಹಾದೇವಮ್ಮನವರ ಪುತ್ರರಾಗಿ ೧೯೪೦ರಲ್ಲಿ ಜನಿಸಿದರು. ಶ್ರೀ ಡಾ. ಸಿದ್ಧಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು ತಮ್ಮ ಬಾಲ್ಯ ಶಿಕ್ಷಣವನ್ನು ತಲಕಾಡಿನಲ್ಲಿ ಮುಗಿಸಿ, ನಂತರ ಆಯುರ್ವೇದ ಶಿಕ್ಷಣದಲ್ಲಿ ಅಧ್ಯಯನ ಮಾಡಿ ಪದವಿಯನ್ನು ಪಡೆದರು. ಇವರು ಆಯುರ್ವೇದ, ಹೋಮಿಯೋಪತಿ ಹಾಗೂ ಹಳ್ಳಿ ವೈದ್ಯಪದ್ಧತಿಯನ್ನು ಹೆಚ್ಚು ಪ್ರಚಾರಕ್ಕೆ ತಂದರು. ತಮ್ಮ ಮಠಕ್ಕೆ ಬಂದ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿರುವುದಲ್ಲದೆ ರಾಜ್ಯದ ನಾನಾ ಭಾಗಗಳಲ್ಲಿ ಸುತ್ತಿ ವಿಷವೈದ್ಯ, ಪ್ರಕೃತಿ ಚಿಕಿತ್ಸೆ, ಯೋಗಾಸನ ಹಾಗೂ ಆಯುರ್ವೇದ ಮೊದಲಾದ ವಿಷಯಗಳಲ್ಲಿ ಏರ್ಪಡಿಸುವ ಶಿಬಿರಗಳಲ್ಲಿ ಭಾಗವಹಿಸಿ ಉಪನ್ಯಾಸ ನೀಡುತ್ತಿದ್ದಾರೆ. ಸರ್ಪ ವಿಷವೈದ್ಯದಲ್ಲಿ ಗುರುಗಳು ಪರಿಣತಿ ಪಡೆದಿದ್ದಾರೆ. ವಿಷಪರಿಹಾರೇಶ್ವರ ಗುಡಿಯನ್ನು, ತಕ್ಷಕ ಆಯುರ್ವೇದ ಚಿಕಿತ್ಸಾಲಯವನ್ನು ಮಠದಲ್ಲಿ ಸ್ಥಾಪಿಸಿ, ಮಂತ್ರಚಿಕಿತ್ಸೆಯ ಜತೆಗೆ ಸರ್ಪ ಕಡಿದವರಿಗೆ ನಾರುಬೇರುಗಳಿಂದ ಮಾಡಿದ ಔಷಧವನ್ನು ನೀಡಿ ರಕ್ಷಿಸಿದ್ದಾರೆ.

ಪುಸ್ತಕ ಪ್ರಕಟಣೆ: ಸರ್ಪವಿಷ ಸ್ವಯಂ ಚಿಕಿತ್ಸೆ, ಹಾವಿನ ವಿಷಚಿಕಿತ್ಸೆ, ಚೇಳಿನ ವಿಷಚಿಕಿತ್ಸೆ, ಸರ್ಪಸಂಸ್ಕೃತಿ, ಯಾತ್ರಾರ್ಥಿಯ ಹೃದಯಾಂತರಾಳದಿಂದ ಎಂಬ ಹಲವು ಪುಸ್ತಕಗಳನ್ನು ಪ್ರಕಟಿಸಿ, ವೈದ್ಯ ಸಾಹಿತ್ಯಕ್ಕೆ ಒಂದು ಹೊಸ ಆಯಾಮ ತಂದುಕೊಟ್ಟಿದ್ದಾರೆ. ಶಕ್ತಿದೇವತೆ ಹಾಗೂ ವೀರಶೈವ ಸಿದ್ಧಾಂತಕ್ಕೆ ಸಂಬಂಧಿಸಿದ, ಸಿದ್ಧರಾಮ ಮತ್ತು ಬಸವಣ್ಣನವರು ರಚಿಸಿದ ಓಲೆಗರಿಗಳು ಹಾಗೂ ಜ್ಯೋತಿಷ್ಯಕ್ಕೆ ಸಂಬಂಧಿಸಿದ ಓಲೆಗರಿಗಳನ್ನು ಮಠದಲ್ಲಿ ಸಂಗ್ರಹಿಸಲಾಗಿದೆ.

ಪೂಜೆ -ದಾಸೋಹ: ೧೯೨೨ ಕ್ಕೆ ಮೊದಲು ಅರವತ್ತೂರು ಅಂಕಣದಲ್ಲಿ ಮಠ ನಿರ್ಮಿತವಾಗಿದ್ದು, ಈ ಹಳೆಯ ಮಠ ಪ್ರವಾಹದಲ್ಲಿ ಕೊಚ್ಚಿಹೋದ ಮೇಲೆ ಆವಶ್ಯಕತೆಗೆ ಅನುಗುಣವಾಗಿ ಕಟ್ಟಡವನ್ನು ಕಟ್ಟಿಸಿ ಧಾರ್ಮಿಕ ಕೆಲಸಗಳನ್ನು ಪ್ರಾರಂಭಿಸಲಾಗಿದೆ. ಮಠದಲ್ಲಿ ಗದ್ದುಗೆಗೆ ನಿತ್ಯಪೂಜೆ ಮಾಡುವುದು, ವರ್ಷದಲ್ಲಿ ಒಮ್ಮೆ ಹಿರಿಯ ಗುರುಗಳ ಆರಾಧನೆ ಕಾರ್ಯಕ್ರಮ ಹಮ್ಮಿಕೊಂಡು ಜ್ಞಾನ ಹಾಗೂ ಅನ್ನದಾಸೋಹವನ್ನು ನೀಡುತ್ತಿದ್ದಾರೆ. ಮಠದಲ್ಲಿ ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಲಾಗಿದೆ.

ಮಠದ ಆಸ್ತಿಯಾಗಿರುವ ಹನ್ನೆರಡು ಎಕರೆ ಜಮೀನನ್ನು ಅಭಿವೃದ್ಧಿಪಡಿಸಿ ಆದಾಯ ಬರುವಂತೆ ಮಾಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಡಾ. ಸಿದ್ಧಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಸ್ತಿಕೇರಿಮಠ, ತಲಕಾಡು, ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.

ಟಿ.ನರಸೀಪುರ

ಕಾವೇರಿ, ಕಪಿಲೆ, ಸ್ಫಟಿಕಾ ನದಿಗಳ ಸಂಗಮ ಕ್ಷೇತ್ರವೇ ತಿರುಮಕೂಡಲು ನರಸೀಪುರ. ತಾಲ್ಲೂಕು ಕೇಂದ್ರವಾದ ಟಿ.ನರಸೀಪು ರವು ಜಿಲ್ಲಾ ಕೇಂದ್ರ ಮೈಸೂರಿನಿಂದ ದಕ್ಷಿಣಕ್ಕೆ ಮೂವತ್ತು ಕಿ.ಮೀ. ದೂರದಲ್ಲಿದೆ. ಈ ಐತಿಹಾಸಿಕ ಸ್ಥಳವು ಹಸಿರಿನ ಸಿರಿಯ ಮಧ್ಯೆ ಮೈದಳೆದಿದೆ. ಇಲ್ಲಿ ಶ್ರೀ ತ್ರಿಯಂಬಕಮಠ ಮತ್ತು ಶ್ರೀ ಸೇತುವೆ ಮಠ ಎಂಬ ಎರಡು ಮಠಗಳು ನಿರ್ಮಾಣಗೊಂಡು, ವೀರಶೈವ ಸಂಸ್ಕೃತಿ ಬೆಳೆಯಲು ಸಹಾಯಕವಾಗಿವೆ.

ತ್ರಿಯಂಬಕಮಠ: ತಿರುಮಕೂಡಲು ನರಸೀಪುರದ ಮಧ್ಯಭಾಗದ ತೇರಿನ ಬೀದಿಯಲ್ಲಿ ಶ್ರೀ ತ್ರಿಯಂಬಕ ಮಠವು ಸ್ಥಾಪನೆಯಾಗಿದೆ. ಶ್ರೀರಂಭಾಪುರಿ ಪೀಠದ ಶಾಖಾಮಠವಾಗಿ ಬೆಳೆದಿರುವ ಈ ಮಠವು ನೂರೈವತ್ತು ವರ್ಷಗಳ ಹಿಂದೆ ಜೈನಬಸದಿಯಾಗಿದ್ದ ಕಟ್ಟಡದಲ್ಲಿ ಸ್ಥಾಪಿತವಾಗಿದೆ. ಜೈನರು ಸಂಪೂರ್ಣವಾಗಿ ಇಲ್ಲಿಂದ ಕಾಲ್ತೆಗೆಯುವ ಮುನ್ನ ಈ ಕಟ್ಟಡವನ್ನು ವೀರಶೈವರಿಗೆ ಮಾರಾಟಮಾಡಿ ಹೋಗಿದ್ದಾರೆ. ನಂತರ ಜೈನರ ಬಸದಿ ವೀರಶೈವರ ಧಾರ್ಮಿಕ ಕೇಂದ್ರವಾಗಿ ಪರಿವರ್ತನೆಗೊಂಡಿದೆ.

ಮಠವಾದ ಜೈನಬಸದಿ: ಸುಮಾರು ನೂರೈವತ್ತು ವರ್ಷಗಳ ಹಿಂದೆ ಉತ್ತರದ ಕಡೆಯಿಂದ ಬಂದ ವೀರಶೈವ ಸ್ವಾಮಿಗಳೊಬ್ಬರು ತಮ್ಮ ತಪೋನಿಷ್ಠೆಯಿಂದ ಹೆಸರಾಗಿ ಈ ಗ್ರಾಮದಲ್ಲಿ ಅನುಷ್ಠಾನಗೊಂಡರು. ಇವರ ತಪೋಸಿದ್ಧಿಗೆ ಒಲಿದ ಭಕ್ತರು ಈ ಯೋಗಿಗಳಿಗೆ ವೀರಶೈವರ ಅಧೀನದಲ್ಲಿದ್ದ ಜೈನಬಸದಿಯಲ್ಲಿ ಆಶ್ರಯ ಕಲ್ಪಿಸಿದರು. ಅಂದಿನಿಂದ ವೀರಶೈವರ ಧಾರ್ಮಿಕ ಚಟುವಟಿಕೆಗಳಿಗೆ ಚಾಲನೆ ಸಿಕ್ಕಿತು. ಇವರ ತರುವಾಯ ಶ್ರೀ ಮಹಾದೇವ ಸ್ವಾಮಿಗಳು ಅಧಿಕಾರಕ್ಕೆ ಬಂದರು. ಇವರು ಕಾರಣಾಂತರದಿಂದ ಮಠವನ್ನು ತ್ಯಜಿಸಿದರು. ನಂತರ ಗುರುಗಳು ಯಾರೂ ಇಲ್ಲದೆ ಮಠವು ಖಾಲಿ ಉಳಿಯಿತು.

ನಿರ್ವಾಹಕರು: ತ್ರಿಯಂಬಕ ಮಠದಲ್ಲಿ ಮಠಾಧೀಶರು ಯಾರೂ ಇಲ್ಲದೆ ಧಾರ್ಮಿಕ ಚಟುವಟಿಕೆಯ ಕೇಂದ್ರವಾಗಿದ್ದ ತಾಣ ಬಿಕೋ ಎನ್ನತೊಡಗಿದಾಗ, ಊರಿನ ಜನರೇ ಮಠದಲ್ಲಿ ಧಾರ್ಮಿಕ ಚಟುವಟಿಕೆಗಳನ್ನು ನಡೆಸುತ್ತಿದ್ದರು. ಬ್ರಹ್ಮಚಾರಿಯಾಗಿದ್ದ ಚನ್ನಪ್ಪನವರು ಬಸ್ ಕಂಡಕ್ಟರ್ ವೃತ್ತಿಮಾಡುತ್ತಾ ಮಠದ ಧಾರ್ಮಿಕ ಕಾರ್ಯಗಳಿಗೆ ನೆರವಾಗುತ್ತಾ ಬಂದರು. ಕಾಲಕ್ರಮೇಣ ಚನ್ನಬಸಪ್ಪನವರು ಮಠದ ಒಂದು ಅಂಗವೇ ಆಗಿ ಹೋದರು. ಇವರು ಪ್ರತಿದಿನ ಬೆಳಗಿನ ಜಾವ ಎದ್ದು ತ್ರಿವೇಣಿ ಸಂಗಮದಲ್ಲಿ ಸ್ನಾನಮಾಡಿ ಮಠದ ಪೂಜಾಕಾರ್ಯ ಮುಗಿಸಿ ಊರಿನ ಬೀದಿಗಳಲ್ಲಿ ಓಂ ನಮಃ ಶಿವಾಯ, ಶಿವಾಯ ನಮಃ ಓಂ ಎಂದು ಮಂತ್ರ ವನ್ನು ಪಠನ ಮಾಡುತ್ತಾ ಜನರಲ್ಲಿ ಧಾರ್ಮಿಕ ಜಾಗೃತಿ ಮೂಡಿಸುತ್ತಾ,ಯಾರು ಕೇಳಲಿ ಬಿಡಲಿ ತಮ್ಮ ಕಾಯಕವನ್ನು ಎಡೆಬಿಡದೆ ನಡೆಸುತ್ತಿದ್ದರು. ನಂತರ ತಮ್ಮ ಅರವತ್ತನೆಯ ವಯಸ್ಸಿನಲ್ಲಿ 'ಶ್ರೀ ಚನ್ನವೀರ ದೇಶಿಕೇಂದ್ರ ಸ್ವಾಮಿ'ಗಳೆಂದು ಅಭಿದಾನ ಪಡೆದು ಶ್ರೀ ತ್ರಿಯಂಬಕ ಮಠದ ಅಧಿಕಾರವನ್ನು ಅಧಿಕೃತವಾಗಿ ವಹಿಸಿಕೊಂಡರು.

ಸಾಮಾಜಿಕ ಒಳಿತು: ತಮ್ಮ ಇಳಿವಯಸ್ಸಿನಲ್ಲಿ ಮಠದ ಅಧಿಕಾರ ವಹಿಸಿಕೊಂಡ ಶ್ರೀ ಚನ್ನವೀರ ದೇಶಿಕೇಂದ್ರ ಸ್ವಾಮಿಗಳು ಸಮಾಜ ಸೇವೆ ನಡೆಸಿ, ಇಲ್ಲಿನ ವಿದ್ಯಾಸಂಸ್ಥೆಗೆ ತಮ್ಮ ಪೂರ್ವಾಶ್ರಮದಲ್ಲಿ ಸಂಪಾದಿಸಿದ್ದ ಲಕ್ಷಾಂತರ ರೂಪಾಯಿಗಳನ್ನು ಅರ್ಪಿಸಿ ವಿದ್ಯಾಜ್ಯೋತಿಯನ್ನು ಹಚ್ಚಿದರು.'ತಮಗಾಗಿ ಏನೂ ಇಲ್ಲ,ಎಲ್ಲಾ ಸಮಾಜಕ್ಕೆ' ಎಂದು ನಂಬಿದ್ದ ಗುರುಗಳು ಸಮಾಜದ ಒಳಿತಿಗಾಗಿ ಎಲ್ಲವನ್ನೂ ತ್ಯಾಗಮಾಡಿ ತಮ್ಮ ಎಂಬತ್ತೆಂಟನೆಯ ವಯಸ್ಸಿನಲ್ಲಿ ಲಿಂಗೈಕ್ಯರಾದರು. ತ್ಯಾಗಮೂರ್ತಿಗಳು ಲಿಂಗೈಕ್ಯರಾದ ಮೇಲೆ ಮಠ ಮತ್ತೊಮ್ಮೆ ಖಾಲಿ ಉಳಿಯಿತು ಶ್ರೀ ಚನ್ನವೀರ ದೇಶಿಕೇಂದ್ರ ಸ್ವಾಮಿಗಳ ಹೆಸರು ಉಳಿಯಬೇಕೆಂದು ಯೋಚಿಸಿ ಭಕ್ತರು ಗುರುಗಳ ತಮ್ಮ ಕೃತಜ್ಞತೆಯ ಸಂಕೇತವಾಗಿ ಟಿ.ನರಸೀಪುರದ ಹೊಸ ಬಡಾವಣೆಗೆ 'ಚನ್ನಪ್ಪಸ್ವಾಮಿ ಬಡಾವಣೆ' ಎಂದು ನಾಮಕರಣ ಮಾಡಿದ್ದಾರೆ. ಅಲ್ಲದೆ ಮಠದ ಜ್ಯೋತಿ ನಂದದಂತೆ ನೋಡಿಕೊಂಡಿದ್ದಾರೆ.

ಹಚ್ಚಿದ ಜ್ಯೋತಿ: ಶ್ರೀ ಚನ್ನವೀರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಊರ ಜನರು ಮಠದ ಹಳೆಯ ಕಟ್ಟಡವನ್ನು ತೆಗೆದು ನೂತನ ಕಟ್ಟಡ ಕಟ್ಟಿಸಿದರು. ಶ್ರೀ ಚನ್ನವೀರ ದೇಶಿಕೇಂದ್ರ ಸ್ವಾಮಿಗಳ ಗದ್ದುಗೆಗೆ ಮಂಟಪ ಕಟ್ಟಿಸಿ, ಶ್ರೀ ವೀರೇಶದೇವರನ್ನು ಆಯ್ಕೆಮಾಡಿ ತ್ರಿಯಂಬಕ ಮಠದ ಜ್ಯೋತಿಯನ್ನು ಮತ್ತೆ ಹಚ್ಚಿದರು.

ಶ್ರೀ ವೀರೇಶ ದೇವರು ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಕಿರಗಾವಲು ಗ್ರಾಮದ ಶ್ರೀ ಸೋಮಶೇಖರಪ್ಪ ಮತ್ತು ಶ್ರೀಮತಿ ಶಿವನಾಗಮ್ಮನವರ ಪುತ್ರರಾಗಿ ೧೯೫೪ರಲ್ಲಿ ಜನಿಸಿದರು. ಕಿರುಗಾವಲಿನಲ್ಲಿ ಪ್ರಾಥಮಿಕ,ಪ್ರೌಢಶಾಲೆ ಮುಗಿಸಿ ಸೋಸಲ ತೋಟಿನಮಠ ಮತ್ತು ಮುಡುಕುತೊರೆ ತೋಪಿನ ಮಠದಲ್ಲಿ ಸಂಸ್ಕೃತ ಅಭ್ಯಾಸ ಮಾಡಿದ ಶ್ರೀ ವೀರೇಶ ಶಿವಾಚಾರ್ಯ ಸ್ವಾಮಿಗಳು ೧೯೮೯ರಲ್ಲಿ ಪಟ್ಟಾಧಿಕಾರ ವಹಿಸಿಕೊಂಡರು. ಚಿಕ್ಕದಾದ ಮಠದ ಕಟ್ಟಡದಲ್ಲಿ ಶ್ರೀ ಚನ್ನವೀರ ದೇಶಿಕೇಂದ್ರ ಸ್ವಾಮಿಗಳ ಗದ್ದುಗೆ ಪಕ್ಕದಲ್ಲಿ ಜಗದ್ಗುರು ಶ್ರೀ ರೇಣುಕಾಚಾರ್ಯರ ಮೂರ್ತಿಯನ್ನು ೧೯೯೩ರಲ್ಲಿ ಪ್ರತಿಷ್ಠಾಪಿಸ ಲಾಗಿದೆ. ಶ್ರೀ ವೀರೇಶ ಶಿವಾಚಾರ್ಯ ಸ್ವಾಮಿಗಳು ಭಕ್ತರ ಬಿನ್ನಹ ತೀರಿಸಿಕೊಂಡು ಬರುವ ಕಾಣಿಕೆಯಿಂದ, ಮಠದ ಧಾರ್ಮಿಕ ಕೆಲಸಗಳನ್ನು ಮಾಡಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಭಕ್ತರನ್ನು ಸಂಘಟಿಸಿ ಅವರ ನೆರವು ಪಡೆದು ರೇಣುಕ ಜಯಂತಿ ಹಾಗೂ ಬಸವ ಜಯಂತಿಯನ್ನು ಆಚರಣೆ ಮಾಡಿ, ಧಾರ್ಮಿಕ ಸಭೆ ನಡೆಸಿ ಧರ್ಮಪ್ರಚಾರ ಮಾಡುತ್ತಿದ್ದಾರೆ. ಇಂತಹ ವಿಶೇಷ ಸಂದರ್ಭಗಳಲ್ಲಿ ಮಠದಲ್ಲಿ ಅನ್ನ ದಾಸೋಹ ಏರ್ಪಡಿಸುತ್ತಿದ್ದಾರೆ. ಪ್ರತಿದಿನ ರೇಣುಕಮೂರ್ತಿ ಹಾಗೂ ಗುರುಗಳ ಗದ್ದುಗೆಗೆ ಪೂಜೆ, ಶ್ರಾವಣ, ಕಾರ್ತೀಕಮಾಸ ಹಾಗೂ ಶಿವರಾತ್ರಿಗಳಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ವೀರೇಶ ಶಿವಾಚಾರ್ಯ ಸ್ವಾಮಿಗಳು, ಶ್ರೀ ತ್ರಿಯಂಬಕಮಠ, ತೇರಣಬೀದಿ, ಟಿ.ನರಸೀಪುರ, ಮೈಸೂರು ಜಿಲ್ಲೆ.

ಸೇತುವೆಮಠ: ಟಿ.ನರಸೀಪುರ ಪಟ್ಟಣದಲ್ಲಿ ಕಪಿಲನದಿಯ ಸೇತುವೆ ಸಮೀಪ ಈ ಮಠವು ಸ್ಥಾಪನೆಯಾಗಿರುವುದರಿಂದ 'ಶ್ರೀಸೇತುವೆಮಠ' ಎಂದು ಕರೆಯಲಾಗುತ್ತಿದೆ. ಈ ಮಠವು ದೇವನೂರು ಶಾಖಾಮಠವಾಗಿ ಬೆಳೆದಿದೆ. ಶ್ರೀ ಬಸಪ್ಪ ಸ್ವಾಮಿಗಳು ನೂರು ವರ್ಷಗಳ ಹಿಂದೆ ಈ ಮಠವನ್ನು ಸ್ಥಾಪಿಸಿದ್ದಾರೆ.

ಪರಂಪರೆ: ಚೌಕಳ್ಳಿಯ ಶ್ರೀ ಬಸಪ್ಪ ಸ್ವಾಮಿಗಳ ನಂತರ ಹೊಸವರಹುಂಡಿಯ ಶ್ರೀ ಗುರುಲಿಂಗಸ್ವಾಮಿಗಳು ಮಠದ ಅಧಿಕಾರ ವಹಿಸಿಕೊಂಡು ಮಠವನ್ನು ಮುನ್ನಡೆಸಿ, ಈಗಿನ ಶ್ರೀ ಸಹಜಾನಂದ ಸ್ವಾಮಿಗಳಿಗೆ ಅಧಿಕಾರ ನೀಡಿ ಲಿಂಗೈಕ್ಯರಾಗಿದ್ದಾರೆ.

ಬಿಟ್ಟ ಕಂತೆಭಿಕ್ಷೆ: ಕಂತೆಭಿಕ್ಷದ ಮೂಲಕ ದಾಸೋಹ ಕಾಯಕ ಮಾಡುತ್ತಿದ್ದ ಇಲ್ಲಿನ ಗುರುಗಳು ಪಟ್ಟಣ ಬೆಳೆದಂತೆ ಹಾಗೂ ಭಿಕ್ಷದ ಮಹತ್ವ ಅರಿಯದ ಭಕ್ತರು ಹೆಚ್ಚಾದಾಗ, ಈಗಿನ ಶ್ರೀ ಸಹಜಾನಂದ ಸ್ವಾಮಿಗಳು ಕಂತೆ ಭಿಕ್ಷಕ್ಕೆ ಹೋಗುವುದನ್ನು ನಿಲ್ಲಿಸಿದ್ದಾರೆ. ಸುಗ್ಗಿ ಕಾಲದಲ್ಲಿ ಜೋಳಿಗೆ ಹಿಡಿದು ಮನೆಮನೆಗೆ ಹೋಗಿ ದವಸ ಸಂಗ್ರಹಿಸಿಕೊಳ್ಳುತ್ತಾರೆ. ಈ ರೀತಿ ಸಂಗ್ರಹಿಸಿದ ಧಾನ್ಯದಲ್ಲಿ ಪ್ರತಿ ವರ್ಷ ಮಠದ ದಾಸೋಹ ಕ್ರಿಯೆಯನ್ನು ನಡೆಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠವು ಪಟ್ಟಣದ ಮಧ್ಯದಲ್ಲಿರುವ ಕಾರಣ ಸದಾ ಚಟುವಟಿಕೆಯ ಕೇಂದ್ರವಾಗಿ ಬೆಳೆದಿದೆ. ಶ್ರೀಬಸಪ್ಪ ಸ್ವಾಮಿಗಳ ಗದ್ದುಗೆಗೆ ನಿತ್ಯ ಪೂಜೆ, ಆಹ್ವಾನಿಸಿದ ಭಕ್ತರ ಮನೆಗೆ ಹೋಗಿ ಬಿನ್ನಹ ತೀರಿಸುವುದು, ಜನನ ಮರಣ ಸಂದರ್ಭಗಳಲ್ಲಿ ಧಾರ್ಮಿಕ ಕ್ರಿಯೆ ನಡೆಸಿಕೊಡುವುದು ಇವೇ ಮುಂತಾದ ಕೆಲಸಗಳ ಜತೆಗೆ ಧನುರ್ಮಾಸ, ಶಿವರಾತ್ರಿ, ಗೌರಿಹಬ್ಬ ಹಾಗೂ ಬಸವಜಯಂತಿಯನ್ನು ಆಚರಿಸಲಾಗುತ್ತಿದೆ.

ವಿಳಾಸ: ಶ್ರೀ ಸಹಜಾನಂದ ಸ್ವಾಮಿಗಳು. ಶ್ರೀ ಸೇತುವೆ ಮಠ, ಟಿ.ನರಸೀಪುರ, ಮೈಸೂರು ಜಿಲ್ಲೆ.

ನರೆಗ್ಯಾತನಹಳ್ಳಿ

ಟಿ.ನರಸೀಪುರ ತಾಲ್ಲೂಕಿನ ನರೆಗ್ಯಾತನಹಳ್ಳಿಯು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಆರು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಮೈಸೂರು ಅರಮನೆಯಲ್ಲಿ ಪಂಡಿತರಾಗಿದ್ದ ಗಂಗಾಧರಪಂಡಿತರು ತಮಗೆ ಮಕ್ಕಳಿಲ್ಲದ ಕಾರಣ ನರೆಗ್ಯಾತನಹಳ್ಳಿ ಗ್ರಾಮದಲ್ಲಿ ದೇವಸ್ಥಾನ ಕಟ್ಟಿಸಿ, ಇದರ ಪಕ್ಕದಲ್ಲಿ ವಾಸಕ್ಕೆ ಯೋಗ್ಯವಾದ ಒಂದು ಬಂಗಲೆಯನ್ನು ಕಟ್ಟಿಸಿಕೊಂಡಿದ್ದರು.ನಂತರ ಈ ಬಂಗಲೆಯು ಮಠವಾಗಿ ಪರಿವರ್ತನೆಯಾಗಿದೆ ಎಂದು ಹೇಳಲಾಗುತ್ತಿದೆ.

ಶರಣರ ಆಗಮನ: ೧೭೬೦ರ ಸುಮಾರಿನಲ್ಲಿ ಶ್ರೀ ಗಂಗಾಧರ ಪಂಡಿತರು ತಮ್ಮ ಅಕ್ಕನ ಮನೆಗೆ ಬಂದು ಇದೇ ಊರಿನಲ್ಲಿ ಚಂದ್ರಮೌಳೇಶ್ವರ ದೇವಸ್ಥಾನ ಮತ್ತು ಬಂಗಲೆಯನ್ನು ಕಟ್ಟಿಸಿದ ಸಂದರ್ಭದಲ್ಲಿಯೇ, ಕಣಿವೆ ಕೆಳಗಿನಿಂದ ಶ್ರೀ ಶಿವಲಿಂಗ ಸ್ವಾಮಿಗಳು ಮತ್ತು ಅವರ ಸಹೋದರರು ನೆರಗ್ಯಾತನಹಳ್ಳಿಗೆ ಬಂದರು. ಕೆಲವು ದಿನ ಚಂದ್ರಮೌಳೇಶ್ವರ ದೇವಸ್ಥಾನದಲ್ಲಿ ಅನುಷ್ಠಾನಗೊಂಡ ಈ ಶರಣರು ತಮ್ಮ ತಪೋಶಕ್ತಿಯಿಂದ ಭಕ್ತರನ್ನು ಉದ್ಧರಿಸಿದರು. ಗರಬಡಿದಂತಾಗಿದ್ದ ಧಾರ್ಮಿಕ ಚಟುವಟಿಕೆಗಳಿಗೆ ಇವರು ಚಾಲನೆಕೊಟ್ಟರು. ಜನರು ಸಂಸ್ಕಾರ ಪಡೆದು ಹೊಸಚೈತನ್ಯ ಪಡೆದರು. ಇದನ್ನು ನೋಡಿದ ಶ್ರೀಗಂಗಾಧರ ಪಂಡಿತರು ಮತ್ತು ಅವರ ಅಕ್ಕನ ಮನೆಯವರು ತಮ್ಮ ಬಂಗಲೆಯನ್ನು ಗುರುಗಳು ವಾಸಿಸುವುದಕ್ಕೆಂದು ಬಿಟ್ಟುಕೊಟ್ಟರಂತೆ. ಇಲ್ಲಿ ನೆಲೆ ನಿಂತ ಶರಣರು ಅನೇಕ ಸತ್ಕಾರ್ಯಗಳನ್ನು ಮಾಡಿ ಇಲ್ಲಿಯೇ ಲಿಂಗೈಕ್ಯರಾದರು.

ಮಠ ಸ್ಥಾಪನೆಗೆ ನಾಂದಿ: ಕಣಿವೆ ಕೆಳಗಿನ ಶಿವಶರಣರು ಇಲ್ಲಿ ಲಿಂಗೈಕ್ಯಗೊಂಡ ಹಿನ್ನೆಲೆಯಲ್ಲಿ, ಇದೊಂದು ಶರಣ ಕ್ಷೇತ್ರವಾಗಿ ಪ್ರಚಾರ ಪಡೆದು ಮಠ ಸ್ಥಾಪನೆಗೆ ನಾಂದಿಯಾಯಿತು. ಈ ಘಟನೆಗಳು ನಡೆದ ಹಲವಾರು ವರ್ಷಗಳ ತರುವಾಯ ಶ್ರೀ ಗುರು ಬಸವ ಸ್ವಾಮಿಗಳು ಪಟ್ಟಾಧಿಕಾರವನ್ನು ವಹಿಸಿಕೊಂಡರು. ಇದರಿಂದ ಈ ಕ್ಷೇತ್ರ ಮಠವಾಗಿ ರೂಪಾಂತರಗೊಂಡು ಧಾರ್ಮಿಕ ಚಟುವಟಿಕೆಗಳು ನಡೆಯತೊಡಗಿದವು. ಶ್ರೀ ಗುರುಬಸವ ಸ್ವಾಮಿಗಳು ವಿದ್ವಾಂಸರಾಗಿ ಅನೇಕ ಗ್ರಂಥಗಳನ್ನು ರಚಿಸಿದ್ದರು ಎಂದು ಹೇಳಲಾಗುತ್ತಿದೆ. ಆದರೆ ಇವರು ರಚಿಸಿದ ಹಸ್ತಪ್ರತಿಗಳು ಲಭ್ಯವಿಲ್ಲ ಎಂಬುದು ನೋವಿನ ಸಂಗತಿಯಾಗಿದೆ. ಶ್ರೀಗುರು ಬಸವ ಸ್ವಾಮಿಗಳು ವಿದ್ವಾಂಸರಾದ ಕಾರಣ ಅವರ ಒಡನಾಟ ಮೈಸೂರಿನ ಪಂಡಿತರ ಜತೆಗೆ ಹೆಚ್ಚಾಗಿತ್ತು. ಈ ಕಾರಣಕ್ಕಾಗಿಯೇ ಗುರುಗಳು ಮೈಸೂರಿನ ಹೊಸಮಠದಲ್ಲಿ ವಾಸ್ತವ್ಯ ಮಾಡುತ್ತಿದ್ದು, ವಿದ್ವಾಂಸರಾದ ಶ್ರೀ ಬಸವಲಿಂಗ ಸ್ವಾಮಿಗಳ ಜೊತೆಗೆ ವೇದಾಂತ ವಿಷಯಗಳನ್ನು ಚರ್ಚಿಸುತ್ತಿದ್ದರು. ಇವರು ತಮ್ಮ ಕೊನೆ ದಿನಗಳಲ್ಲಿ ಅಲ್ಲೇ ನೆಲೆಸಿ ಲಿಂಗೈಕ್ಯರಾದರು. ಗುರುಗಳ ಸಮಾಧಿಯನ್ನು ಮೈಸೂರಿನ ಹೊಸಮಠದಲ್ಲಿ ಮಾಡಿ ಗದ್ದುಗೆ ನಿರ್ಮಿಸಲಾಗಿದೆ. ಕಾಲಕ್ರಮೇಣ ಶ್ರೀ ಗುರುಬಸವ ಸ್ವಾಮಿಗಳ ನೆನಪು ಈ ಮಠದಿಂದ ದೂರವಾಗಬಾರದು ಎಂಬ ಕಾರಣಕ್ಕೆ ತೋರು ಗದ್ದುಗೆ ನಿರ್ಮಿಸಿಕೊಂಡು, ಪ್ರತಿನಿತ್ಯ ಪೂಜೆಯನ್ನು ಮಾಡಲಾಗುತ್ತಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಗುರುಬಸವಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಶಿವಕುಮಾರಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ರಾಜಶೇಖರಸ್ವಾಮಿಗಳು

ಈ ರೀತಿ ವಿರಕ್ತ ಮಠದ ಪರಂಪರೆಯು ಬೆಳೆದು ಬಂದಿದೆ. ಮಠದ ಸ್ಥಾಪನೆಗೆ ನಾಂದಿಯಾಡಿದ್ದು ಶ್ರೀ ಶಿವಲಿಂಗ ಸ್ವಾಮಿಗಳಾದರೂ, ನಂತರ ಬಂದ ಶ್ರೀ ಗುರುಬಸವ ಸ್ವಾಮಿಗಳು ಮಠವನ್ನು ಸ್ಥಾಪಿಸಿ, ಮೊದಲ ಗುರುಗಳಾಗಿ ಅಧಿಕಾರ ವಹಿಸಿಕೊಂಡರು. ನಂತರ ಬಂದ ಶ್ರೀ ಬಸವಲಿಂಗ ಸ್ವಾಮಿಗಳು ತಪೋನಿಷ್ಠರಾಗಿ ಸದಾ ಪೂಜೆಯಲ್ಲಿ ಮಗ್ನರಾಗಿ, ಲೋಕಕಲ್ಯಾಣ ಬಯಸಿದ ಮಹನೀಯರು ಇವರ ಗದ್ದುಗೆ ಮಠದಲ್ಲಿ ನಿರ್ಮಾಣಗೊಂಡಿದೆ. ನಂತರ ಬಂದ ಶ್ರೀ ಶಿವಕುಮಾರ ಸ್ವಾಮಿಗಳು ಮಠವನ್ನು ಅಭಿವೃದ್ಧಿ ಪಡಿಸಿ ಜನಜಾಗೃತಿಯನ್ನುಂಟು ಮಾಡಿದರು. ಇವರು ಸುತ್ತೂರು ಜಗದ್ಗುರು ಮಂತ್ರ ಮಹರ್ಷಿ ಶಿವಯೋಗಿ ಶ್ರೀ ಶಿವರಾತ್ರೀಶ್ವರ ಸ್ವಾಮಿಗಳ ಒಡನಾಡಿಗಳಾಗಿ, ಅವರ ಜೊತೆಯಲ್ಲಿಯೇ ಹೆಚ್ಚು ಕಾಲ ಇರುತ್ತಿದ್ದರು ಎಂದು ಹೇಳಲಾಗುತ್ತಿದೆ. ಇವರ ಕಾಲದಲ್ಲಿ ಮಠವು ಧಾರ್ಮಿಕವಾಗಿ ಹಾಗೂ ಸಾಮಾಜಿಕವಾಗಿ ಹೆಸರು ಮಾಡಿತು. ಮಠದ ಪರಂಪರೆಯಲ್ಲಿ ಅಧಿಕಾರ ನಡೆಸಿದ ಗುರುಗಳ ಕಾಲಮಾನ, ಅವರ ಹೆಸರುಗಳು ಮತ್ತು ಅವರು ಲಿಂಗೈಕ್ಯರಾದ ಸ್ಥಳಗಳನ್ನು ಪತ್ತೆ ಮಾಡಲು ಪ್ರಾಮಾಣಿಕ ಪ್ರಯತ್ನ ನಡೆಸಿ, ತಮ್ಮ ಐತಿಹಾಸಿಕ ಹಾಗೂ ಸಾಮಾಜಿಕ ಪ್ರಜ್ಞೆಯನ್ನು ಪ್ರದರ್ಶಿಸಿದ ಶ್ರೀಶಿವ

ಕುಮಾರ ಸ್ವಾಮಿಗಳು ೧೯೭೨ರಲ್ಲಿ ಲಿಂಗೈಕ್ಯರಾದರು.

ಏಳನೆಯಗುರು: ಮಠದ ಪರಂಪರೆಯ ಏಳನೆಯ ಗುರುಗಳೆಂದು ಹೆಸರು ಮಾಡಿದ ಶ್ರೀ ರಾಜಶೇಖರ ಸ್ವಾಮಿಗಳು ೧೯೭೧ರ ಜೂನ್ ಹದಿಮೂರರಂದು ಪಟ್ಟಾಧಿಕಾರಕ್ಕೆ ಬಂದಿದ್ದಾರೆ. ಇವರು ತಮ್ಮ ಕರ್ತೃತ್ವಶಕ್ತಿಯಿಂದ ಮಠದ ಹಿಂದಿನ ಪರಂಪರೆಗೆ ಅನುಗುಣವಾಗಿ ಕಾರ್ಯ ನಿರ್ವಹಿಸುತ್ತಾ, ಮಠವನ್ನು ಅಭಿವೃದ್ಧಿಪಡಿಸಿ ತಮ್ಮ ಕಾರ್ಯ ಚಟುವಟಿಕೆಯನ್ನು ವಿಸ್ತರಿಸಿ ಕೊಳ್ಳುತ್ತಾಹೋಗುತ್ತಿದ್ದಾರೆ. ಮೈಸೂರಿನಲ್ಲಿ ವಿದ್ಯಾಭ್ಯಾಸ ಪಡೆದ ಇವರು ಅಪಾರ ಜ್ಞಾನಿಗಳಾಗಿ, ಧಾರ್ಮಿಕಪ್ರಜ್ಞೆಯಿಂದ ಸಮಾಜ ಸುಧಾರಣೆ ಸಾಧ್ಯ ಎಂಬ ನಂಬಿಕೆಯಿಂದ, ಸಮಾಜವನ್ನು ಧಾರ್ಮಿಕ ತಳಹದಿಯ ಮೇಲೆ ರೂಪಿಸಹೊರಟಿದ್ದಾರೆ.

ಧಾರ್ಮಿಕ ಕಾರ್ಯಗಳು: ಹಿರಿಯ ಗುರುಗಳಾದ ಶ್ರೀ ಶಿವಕುಮಾರ ಸ್ವಾಮಿಗಳು ಹಾಗೂ ಮೊದಲು ಪಟ್ಟಾಧಿಕಾರ ಪಡೆದ ಶ್ರೀ ಗುರುಬಸವ ಸ್ವಾಮಿಗಳ ಆರಾಧನೆಯನ್ನು ಆಚರಿಸಿ, ಉಪನ್ಯಾಸ ಹಾಗೂ ಉಪದೇಶ ಏರ್ಪಡಿಸಿ ಭಕ್ತರಿಗೆ ಜ್ಞಾನದಾಸೋಹ ವನ್ನು ಉಣಬಡಿಸುತ್ತಿದ್ದಾರೆ. ಗ್ರಾಮದ ಜನರನ್ನೆಲ್ಲ ಸೇರಿಸಿ ಗೌರಿ ಹಬ್ಬವನ್ನು ಮಠದಲ್ಲಿಯೇ ಆಚರಣೆ ಮಾಡಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ.ರಾಜಶೇಖರ ಸ್ವಾಮಿಗಳು, ಶ್ರೀ ವಿರಕ್ತಮಠ, ನರೆಗ್ಯಾತನಹಳ್ಳಿ, ಟಿ.ನರಸಿಪುರ ತಾ, ಮೈಸೂರು ಜಿಲ್ಲೆ.

ಪರಿಣಾಮಿಪುರ

ಟಿ.ನರಸೀಪುರ ತಾಲ್ಲೂಕಿನ ಪರಿಣಾಮಿಪುರವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಮೂವತ್ತೆರಡು ಕಿ.ಮೀ. ದೂರದ ಲ್ಲಿದೆ. ಈ ಗ್ರಾಮವು ಕಾವೇರಿ ನದಿಯ ದಡದಲ್ಲಿ ಹಚ್ಚ ಹಸಿರಿನ ಮಧ್ಯೆ ಕಂಗೊಳಿಸುತ್ತಿದೆ. ಪರಿಣಾಮಿಪುರದ ವಾಯುವ್ಯದಿಕ್ಕಿಗೆ ಒಂದು ಕಿ.ಮೀ. ದೂರದಲ್ಲಿ ಸ್ಥಾಪಿತವಾಗಿರುವ ಶ್ರೀ ಬಿದರಚೌಕಿಮಠ ಐತಿಹಾಸಿಕ ಪ್ರಸಿದ್ಧಿ ಪಡೆದು ಧಾರ್ಮಿಕ ಕೇಂದ್ರವಾಗಿದೆ.

ಬಿದರಚೌಕಿಮಠ: ಶ್ರೀ ಸಿದ್ಧಲಿಂಗೇಶ್ವರರು ತಮ್ಮ ಏಳುನೂರೊಂದು ವಿರಕ್ತರ ಜತೆ ಲೋಕಸಂಚಾರ ಮಾಡುತ್ತಾ ಪರಿಣಾಮಿ ಪುರಕ್ಕೆ ಬಂದು ಬಿದಿರು ಮೆಳೆಗಳಿಂದ ಕೂಡಿದ ಈ ಪ್ರಶಾಂತ ವಾತಾವರಣದಲ್ಲಿ, ತಮ್ಮಲ್ಲಿದ್ದ ಚೌಕವನ್ನು ಹಾಸಿ ಮಲಗಿ ದಣಿವಾರಿಸಿಕೊಂಡರಂತೆ. ಅಂತೆ ಈ ಜಾಗಕ್ಕೆ 'ಶ್ರೀ ಬಿದರಚೌಕಿ' ಎಂದು ನಾಮಕರಣಮಾಡಿ ಮಠವನ್ನು ಸ್ಥಾಪಿಸಿ ಶ್ರೀ ವಿರಕ್ತ ಒಡೆಯರನ್ನು ಇಲ್ಲಿಗೆ ನೇಮಿಸಿ, ಧರ್ಮಪ್ರಚಾರವನ್ನು ಕೈಗೊಳ್ಳಲು ವ್ಯವಸ್ಥೆಮಾಡಿದರು ಎಂದು ಹೇಳಲಾಗುತ್ತಿದೆ.

ಪರಂಪರೆ: ಈ ರೀತಿ ಜನಪದ ಹಿನ್ನೆಲೆಯುಳ್ಳ ಚೀಲಾಳ ಸಮಯದ ಬಿದರಚೌಕಿ ವಿರಕ್ತಮಠವು ಈತನಕ ನಿರಂತರವಾಗಿ ಧರ್ಮಪ್ರಚಾರ ಕೈಗೊಂಡು, ತನ್ನ ಪರಂಪರೆಯನ್ನು ಬೆಳೆಸಿಕೊಂಡು ಬಂದಿದೆ.

೧. ಶ್ರೀ ಮ.ನಿ.ಪ್ರ. ವಿರಕ್ತ ಒಡೆಯರು
೨. ಶ್ರೀ ಮ.ನಿ.ಪ್ರ. ಸಣ್ಣಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಗೊಗ್ಗಪ್ಪಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಮೊಳ್ಳೆಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಗುರುಸಿದ್ಧಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಮಹಾಂತಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಶಿವಲಿಂಗಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಚನ್ನಬಸವಸ್ವಾಮಿಗಳು
೯. ಶ್ರೀ ಮ.ನಿ.ಪ್ರ. ಗುರುಸಿದ್ಧಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆ ಒಂಬತ್ತು ತಲೆಮಾರುಗಳನ್ನು ಕಂಡಿದ್ದು, ಅಧಿಕಾರ ವಹಿಸಿಕೊಂಡ ಗುರುಗಳು ಮಠದ ಶ್ರೇಯಸ್ಸು ಅಭಿವೃದ್ಧಿಗಾಗಿ ದುಡಿದಿದ್ದಾರೆ.

ಕೆರೆ ಕಟ್ಟಿದ ಸ್ವಾಮಿಗಳು: ಮಠದ ಸ್ವಾಮಿಗಳು ಧಾರ್ಮಿಕ ಕಾರ್ಯಗಳ ಜತೆಗೆ ಸಾಮಾಜಿಕ ಅಭಿವೃದ್ಧಿಯ ಕಡೆಗೆ ಹೆಚ್ಚು ಒತ್ತು ಕೊಟ್ಟು ಶ್ರಮಿಸುತ್ತಿದ್ದರು ಎಂಬುದಕ್ಕೆ ತಲಕಾಡಿಗೆ ಹೋಗುವ ದಾರಿಯ ಮಧ್ಯದಲ್ಲಿ ಕಟ್ಟಿಸಿರುವ ಕೆರೆಯೇ ಸಾಕ್ಷಿಯಾಗಿದೆ.

ಶ್ರೀ ಮೊಳ್ಳೆ ಸ್ವಾಮಿಗಳು ಭಕ್ತರ ನೆರವು ಪಡೆದು ಕೆರೆ ಕಟ್ಟಿ ಬೇಸಾಯಕ್ಕೆ ಹಾಗೂ ಜಾನುವಾರುಗಳಿಗೆ ಉಪಯೋಗ ಮಾಡಿಕೊಟ್ಟರು. ಇವರ ಜನಪರ ಕಾರ್ಯಗಳನ್ನು ಗಮನಿಸಿದ ಮೈಸೂರಿನ ಅರಸರು ಮತ್ತು ಶ್ರೀರಂಗಪಟ್ಟಣದ ಸುಲ್ತಾನರು ಮಠಕ್ಕೆ ಬಂದು ಗುರುಗಳ ಆಶೀರ್ವಾದ ಪಡೆದು, ಮಠದ ಅಭಿವೃದ್ಧಿಗಾಗಿ ಮಠದ ಸುತ್ತಲ ಜಮೀನನ್ನು ಉಂಬಳಿಯಾಗಿನೀಡಿ, ಧರ್ಮ ಕಾರ್ಯಗಳ ಜೊತೆಗೆ ಸಾಮಾಜಿಕ ಕಾರ್ಯಗಳು ನಡೆಯಲು ಅನುವು ಮಾಡಿಕೊಟ್ಟಿದ್ದಾರೆ ಎಂದು ಹೇಳಲಾಗುತ್ತಿದೆ.

ಗದ್ದುಗೆಗಳು: ಮೂಲಗುರುಗಳಾದ ಶ್ರೀ ವಿರಕ್ತಒಡೆಯರ ಗದ್ದುಗೆಮಠದ ಒಳಭಾಗದಲ್ಲಿ ನಿರ್ಮಾಣಗೊಂಡಿದೆ. ಈ ಗದ್ದುಗೆ ಸೇರಿದಂತೆ ಮಠದಲ್ಲಿ ಏಳು ಗದ್ದುಗೆಗಳು ಸ್ಥಾಪಿತಗೊಂಡಿವೆ. ಮೂರನೆಯ ಗುರುಗಳಾದ ಶ್ರೀ ಗೊಗ್ಗಪ್ಪ ಸ್ವಾಮಿಗಳು ಲೋಕಸಂಚಾರಕ್ಕೆ ಹೋದ ಸಂದರ್ಭದಲ್ಲಿ ಸಿದ್ಧಗಂಗೆಯಲ್ಲಿ ಲಿಂಗೈಕ್ಯರಾಗಿದ್ದು, ಅವರ ಗದ್ದುಗೆಯನ್ನು ಅಲ್ಲಿಯೇ ನಿರ್ಮಿಸಲಾಗಿದೆ. ಕರ್ತೃಗುರುಗಳ ಗದ್ದುಗೆಯನ್ನು ಹೊರತುಪಡಿಸಿ ಉಳಿದ ಆರು ಗದ್ದುಗೆಗಳು ಜೀರ್ಣಗೊಂಡಿದ್ದು, ಈಗಿನ ಶ್ರೀ ಗುರುಸಿದ್ಧ ಸ್ವಾಮಿಗಳು ಇವುಗಳ ಅಭಿವೃದ್ಧಿ ಕಾರ್ಯವನ್ನು ಕೈಗೊಂಡಿದ್ದಾರೆ.

ವಂಶ ಪರಂಪರೆ: ವಿರಕ್ತ ಸಂಪ್ರದಾಯದ ಮಠವಾಗಿದ್ದರೂ ಪಟ್ಟದಮಠದ ರೀತಿಯಲ್ಲಿ ವಂಶ ಪರಂಪರೆಯ ಗುರುಗಳು ಅಧಿಕಾರಕ್ಕೆ ಬರುತ್ತಿದ್ದಾರೆ. ಈಗಿನ ಶ್ರೀ ಗುರುಸಿದ್ಧ ಸ್ವಾಮಿಗಳು ೧೯೨೨ರಲ್ಲಿ ಶ್ರೀ ಶಿವಲಿಂಗದೇವರು ಮತ್ತು ಶ್ರೀಮತಿ ಮಹಾದೇವಮ್ಮನವರ ಪುತ್ರರಾಗಿ ಜನಿಸಿ, ಪರಣಾಮಪುರದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸುತ್ತಿರುವ ವೇಳೆಯಲ್ಲೇ ತಮ್ಮ ಎಂಟನೆಯ ವಯಸ್ಸಿನಲ್ಲಿ ಪಟ್ಟಾಧಿಕಾರ ಸ್ವೀಕರಿಸಿ ಮಠದ ಅಧಿಪತಿಗಳಾದರು. ಮಠದ ಆಸ್ತಿ ಅನ್ಯರ ಪಾಲಾಗಿತ್ತು. ಕೆಲವು ವಿವಾದದಿಂದ ಸರ್ಕಾರ ಈ ಆಸ್ತಿಯನ್ನು ತನ್ನ ಸ್ವಾದೀನಕ್ಕೆ ತೆಗೆದುಕೊಂಡಿತ್ತು. ಇದರಿಂದ ಮಠದ ಧಾರ್ಮಿಕ ಚಟುವಟಿಕೆಗಳಿಗೆ ತೊಂದರೆಯಾಗಿತ್ತು. ಶ್ರೀ ಗುರುಸಿದ್ಧ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಜಾಗೃತರಾಗಿ ಮಠದ ಹಳೆಯ ದಾಖಲೆಗಳನ್ನು ಸಂಗ್ರಹಿಸಿಕೊಂಡು ನ್ಯಾಯಾಲಯದ ಮೊರೆಹೋದರು. ಇದರ ಫಲವಾಗಿ ಕೈಬಿಟ್ಟು ಹೋಗಿದ್ದ ಆಸ್ತಿ ೧೯೮೦ರಲ್ಲಿ ಮಠಕ್ಕೆ ಸೇರಿತು. ನಂತರ ತಮ್ಮ ಕಾಯಕ ವೃತ್ತಿಯನ್ನು ಆರಂಭಿಸಿ, ಮಠದ ಸುತ್ತ ಹಾಳು ಬಿದ್ದಿದ್ದ ಜಮೀನನ್ನು ತಮ್ಮ ಪರಿಶ್ರಮದಿಂದ ನಂದನವನವನ್ನಾಗಿ ರೂಪಿಸಿದ್ದಾರೆ.

ಶೈಕ್ಷಣಿಕ ಕಾರ್ಯಗಳು: ಶ್ರೀ ಗುರುಸಿದ್ಧ ಸ್ವಾಮಿಗಳು ಹಿಂದಿನ ಗುರುಗಳಂತೆ ಕೆರೆ ಕಟ್ಟೆ ಕಟ್ಟಿಸದಿದ್ದರೂ ಶಿಕ್ಷಣಕ್ಕೆ ಮಹತ್ವ ಕೊಟ್ಟಿದ್ದಾರೆ. ಮಠದ ವತಿಯಿಂದ ಶಿಕ್ಷಣ ನಡೆಸಬಹುದಾಗಿದ್ದರೂ, ಈ ಪ್ರಯತ್ನಕ್ಕೆ ಕೈಹಾಕದೆ ಸಿದ್ಧಗಂಗೆಯ ವಿದ್ಯಾಸಂಸ್ಥೆಗೆ ನಾಲ್ಕು ಎಕರೆ ಜಾಗವನ್ನು ದಾನವಾಗಿ ನೀಡಿ, ಪ್ರೌಢಶಾಲೆ ಮತ್ತು ಕಾಲೇಜನ್ನು ಪ್ರಾರಂಭಿಸಲು ನೆರವಾಗಿದ್ದಾರೆ. ಈ ಹಿಂದೆ ಮಠದ ವತಿಯಿಂದ ನಡೆಯುತ್ತಿದ್ದ ವಿದ್ಯಾರ್ಥಿನಿಲಯ ಕಾರಣಾಂತರದಿಂದ ನಿಂತು ಹೋಗಿದ್ದನ್ನು ಪುನರ್ ಸ್ಥಾಪಿಸಿ, ಕಲಿಯುವ ಬಡ ಮಕ್ಕಳಿಗೆ ನೆರವಾಗಲು ಯೋಚಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದಲ್ಲಿರುವ ಗದ್ದುಗೆಗಳಿಗೆ ಪೂಜೆಯನ್ನು ನಡೆಸಲಾಗುತ್ತಿದೆ. ಪ್ರವಚನಕಾರರಾದ ಶ್ರೀ ಗುರುಸಿದ್ಧ ಸ್ವಾಮಿಗಳು ವಿಶೇಷ ಸಭೆ ಸಮಾರಂಭಗಳಿಗೆ ಆಹ್ವಾನಿತರಾಗಿ ಹೋಗಿ ತಮ್ಮ ಪ್ರವಚನದಿಂದ ಜನರನ್ನು ಸನ್ಮಾರ್ಗದತ್ತ ಒಯ್ಯುತ್ತಿದ್ದಾರೆ. ಈ ಮೂಲಕ ಧರ್ಮಪ್ರಚಾರ ಕೈಗೊಂಡಿರುವ ಸ್ವಾಮಿಗಳು,ಭಕ್ತರ ಮನೆಮನೆಗಳಿಗೆ ಹೋಗಿ ಧಾರ್ಮಿಕಕ್ರಿಯಾದಿಗಳಿಗೆ ನೆರವಾಗುತ್ತಾರೆ. ಶ್ರಾವಣ, ಕಾರ್ತೀಕ ಮಾಸಗಳಲ್ಲಿ ವಿಶೇಷ ಪೂಜೆ ಹಾಗೂ ಪ್ರಸಾದದ ವ್ಯವಸ್ಥೆಯನ್ನು ಮಾಡುತ್ತಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಗುರುಸಿದ್ಧ ಸ್ವಾಮಿಗಳು, ಶ್ರೀಬಿದರಚೌಕಿಮಠ, ಪರಿಣಾಮಿಪುರ, ಟಿ.ನರಸೀಪುರ ತಾ, ಮೈಸೂರು ಜಿಲ್ಲೆ.

ಬಿಲಿಗೆರೆ ಹುಂಡಿ

ಟಿ.ನರಸೀಪುರ ತಾಲ್ಲೂಕಿನ ಬಿಲಿಗೆರೆಹುಂಡಿಯು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಮೂರು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ದಾಸೋಹಮಠವು ಅಸ್ತಿತ್ವದಲ್ಲಿದೆ.

ದಾಸೋಹಮಠ: ಬಿಲಿಗೆರೆಹುಂಡಿಯಲ್ಲಿ ದೇವನೂರು ಮಠದ ಶಾಖಾಮಠವಾಗಿ ಕಳೆದ ಹದಿನೈದು ವರ್ಷಗಳಿಂದ

ಶ್ರೀದಾಸೋಹ ಮಠವು ಸ್ಥಾಪನೆಯಾಗಿದ್ದು ಇಲ್ಲಿನ ಗುರುಗಳು ಕಂತೆ ಭಿಕ್ಷಕಾಯಕ ಮಾಡುತ್ತಾ, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಮಠಕ್ಕೆ ಬರುವ ಭಕ್ತರಿಗೆ ಹಾಗೂ ಅಸಹಾ ಯಕರಿಗೆ ಪ್ರಸಾದ ನೀಡಲಾಗುತ್ತಿದೆ.

ವಿಳಾಸ: ಶ್ರೀ ಭಿಕ್ಷವ ಸ್ವಾಮಿಗಳು, ಶ್ರೀ ದಾಸೋಹಮಠ, ಬಿಲಿಗೆರೆಹುಂಡಿ, ಕಿರಗಳೂರು ಅಂಚೆ, ಟಿ.ನರಸೀಪುರ ತಾ, ಮೈಸೂರುಜಿಲ್ಲೆ.

ಬೆನಕನಹಳ್ಳಿ

ಟಿ.ನರಸೀಪುರ ತಾಲ್ಲೂಕಿನ ಬೆನಕನಹಳ್ಳಿಯು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಆರು ಕಿ. ಮೀ. ದೂರದಲ್ಲಿದೆ. ಇಲ್ಲಿ ಸುತ್ತೂರು ಶಾಖೆಯ ಶ್ರೀ ಪಟ್ಟದ ಮಠವು ನಲವತ್ತು ವರ್ಷಗಳ ಹಿಂದೆ ಸ್ಥಾಪನೆಯಾಗಿದೆ. ೧೯೩೫ ರಲ್ಲಿ ಶ್ರೀ ಗುರು ಮಲ್ಲೇಶ್ವರ ದಾಸೋಹಮಠ ಸ್ಥಾಪನೆಯಾಗಿದ್ದು ಈ ಎರಡೂ ಮಠಗಳು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಪಟ್ಟದಮಠ: ಬೆನಕನಹಳ್ಳಿಯ ಮಧ್ಯಭಾಗದಲ್ಲಿ ೧೯೫೦ರಲ್ಲಿ ಶ್ರೀ ಪಟ್ಟದ ಮಠವು ಸ್ಥಾಪನೆಯಾಗಿದೆ. ಇಲ್ಲಿನ ಧಾರ್ಮಿಕ ವಿಧಿ ವಿಧಾನಗಳ ಆಚರಣೆಗಾಗಿ ಸ್ಥಾಪಿತವಾದ ಈ ಮಠದ ಪ್ರಥಮ ಗುರುಗಳಾಗಿ ಶ್ರೀ ಬಸವಲಿಂಗ ಸ್ವಾಮಿಗಳು ಅಧಿಕಾರ ವಹಿಸಿಕೊಂಡು ಮಠದ ಪರಂಪರೆಯನ್ನು ಬೆಳೆಸಿದರು.

ಪರಂಪರೆ:
೧. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ನಂಜುಂಡ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಮಹಾದೇವ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯು ಬೆಳೆದಿದೆ. ಮೊದಲ ಗುರುಗಳಾದ ಶ್ರೀ ಬಸವಲಿಂಗ ಸ್ವಾಮಿಗಳು ಈ ಗ್ರಾಮಕ್ಕೆ ಆಗಮಿಸಿ ಬಸವೇಶ್ವರ ದೇವಸ್ಥಾನದ ಪೌಳಿಯಲ್ಲಿ ವಾಸಿಸುತ್ತಾ, ಈ ಜಾಗವನ್ನು ಮಠವನ್ನಾಗಿ ಪರಿವರ್ತಿಸಿಕೊಂಡಿದ್ದರು. ಅಲ್ಲದೆ ಇದೇ ಸ್ಥಳದಲ್ಲಿ ಧಾರ್ಮಿಕಕಾರ್ಯಗಳನ್ನು ನಡೆಸಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಶ್ರೀ ನಂಜುಂಡ ಸ್ವಾಮಿಗಳು ಅಧಿಕಾರ ವಹಿಸಿಕೊಂಡು, ಹಿರಿಯ ಗುರುಗಳಂತೆ ಧಾರ್ಮಿಕ ಕಾರ್ಯಗಳನ್ನು ರಚನಾತ್ಮಕವಾಗಿ ಮಾಡಿ, ಭಕ್ತರ ನೆರವು ಪಡೆದು ಬಸವೇಶ್ವರ ದೇವಾಲಯದ ಸುತ್ತ ಇದ್ದ ಖಾಲಿ ಜಾಗವನ್ನು ಬಳಸಿಕೊಂಡು ಮಠದ ಕಟ್ಟಡವನ್ನು ನಿರ್ಮಿಸಿದರು. ಅಲ್ಲದೆ ಶ್ರೀ ಬಸವಲಿಂಗ ಸ್ವಾಮಿಗಳ ಗದ್ದುಗೆಯನ್ನು ನಿರ್ಮಿಸಿದ ಶ್ರೀ ನಂಜುಂಡ ಸ್ವಾಮಿಗಳು ೧೯೭೩ರ ಜನವರಿ ಎರಡರಂದು ಲಿಂಗೈಕ್ಯರಾಗಿದ್ದಾರೆ.

ಶ್ರೀ ಮಲ್ಲಿಕಾರ್ಜುನ ದೇವರು ಮತ್ತು ಶ್ರೀಮತಿ ದೇವಮ್ಮನವರ ಪುತ್ರರಾಗಿ ೧೯೬೧ರ ಜೂನ್ ಒಂದರಂದು ಜನಿಸಿದ ಶ್ರೀ ಮಹಾದೇವ ಸ್ವಾಮಿಗಳು ಪ್ರೌಢಶಿಕ್ಷಣ ಮುಗಿಸಿ, ವೀರಶೈವ ಆಗಮ ಹಾಗೂ ಸಂಸ್ಕೃತವನ್ನು ಕಲಿತರು. ಇವರನ್ನು ಪಟ್ಟದ ಮಠಕ್ಕೆ ಉತ್ತರಾಧಿಕಾರಿಗಳನ್ನಾಗಿ ನೇಮಿಸಿ, ೧೯೭೩ರ ಜನವರಿ ಇಪ್ಪತ್ತೇಳರಂದು ಪರಂಪರೆಯ ಮೂರನೆಯ ಗುರುಗಳನ್ನಾಗಿ ಅಧಿಕಾರಕ್ಕೆ ತರಲಾಯಿತು. ಶ್ರೀ ಮಹಾದೇವ ಶಿವಾಚಾರ್ಯ ಸ್ವಾಮಿಗಳು ಕ್ರಿಯಾಶೀಲರಾಗಿ, ಕಾಯಕಯೋಗಿ ಗಳಾಗಿ ಹೆಸರು ಪಡೆದು, ಭಕ್ತರ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಂಡು ಮಠವನ್ನು ಸಮಾಜ ಮುಖಿಯನ್ನಾಗಿ ಮಾಡಿದ್ದಾರೆ. ಇವರು ಮಠದ ಧಾರ್ಮಿಕ ಆಚರಣೆಗಳನ್ನು ಕ್ರಮಬದ್ಧವಾಗಿ ಮುನ್ನಡೆಸಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಶ್ರೀ ಪಟ್ಟದ ಮಠದಲ್ಲಿ ಸ್ಥಾಪಿತವಾಗಿರುವ ಎರಡು ಗದ್ದುಗೆಗಳಿಗೆ ಹಾಗೂ ಬಸವೇಶ್ವರ ಮೂರ್ತಿಗೆ ಎರಡೂ ವೇಳೆ ಪೂಜೆಯನ್ನು ನಡೆಸಲಾಗುತ್ತಿದೆ. ವಾರ್ಷಿಕ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಮಠದ ಎಂಟು ಎಕರೆ ಆಸ್ತಿಯನ್ನು ಕೃಷಿಗೆ ಯೋಗ್ಯಗೊಳಿಸಲಾಗಿದೆ.

ಶ್ರೀ ದಾಸೋಹ ಮಠದ ಅಧಿಕಾರ: ಬೆನಕನಹಳ್ಳಿಯ ಪುರಪ್ರವೇಶ ಮಾಡುತ್ತಿದ್ದಂತೆಯೇ ಸಿಗುವ ಶ್ರೀ ದಾಸೋಹ ಮಠವು ೧೯೩೫ರಲ್ಲಿ ಪ್ರಾರಂಭವಾಗಿದೆ. ಕಂತೆಭಿಕ್ಷ ನಡೆಸಿ ದಾಸೋಹಕ್ರಿಯೆ ಮಾಡುತ್ತಿದ್ದ ಈ ಮಠದಲ್ಲಿ ಉತ್ತರಾಧಿಕಾರಿಗಳು ಯಾರೂ ಇಲ್ಲದಿದ್ದುದರಿಂದ ಆಡಳಿತ ಮತ್ತು ಧಾರ್ಮಿಕ ಚಟುವಟಿಕೆಗಳನ್ನು ನೋಡಿಕೊಳ್ಳಲು, ಗ್ರಾಮದ ಜನರು ಪಟ್ಟದ ಮಠದ ಶ್ರೀಮಹಾದೇವ ಸ್ವಾಮಿಗಳಿಗೆ ವಹಿಸಿಕೊಟ್ಟಿದ್ದಾರೆ. ಗುರುಗಳು ದಾಸೋಹ ಮಠದ ಅಧಿಕಾರವನ್ನು ವಹಿಸಿಕೊಂಡು ಎರಡು

ಮಠಗಳ ಆಡಳಿತವನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಮಹಾದೇವ ಶಿವಾಚಾರ್ಯ ಸ್ವಾಮಿಗಳು,ಶ್ರೀ ಪಟ್ಟದಮಠ-ದಾಸೋಹಮಠ, ಬೆನಕನಹಳ್ಳಿ, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.

ಮದ್ಗಾರಲಿಂಗಯ್ಯನಹುಂಡಿ

ಟಿ.ನರಸೀಪುರ ತಾಲ್ಲೂಕಿನ ಮದ್ಗಾರಲಿಂಗಯ್ಯನಹುಂಡಿಯು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಹತ್ತು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಉಕ್ಕಲಗೆರೆ ಬೆಟ್ಟದಮಠವು ಅಸ್ತಿತ್ವದಲ್ಲಿದೆ.

ಉಕ್ಕಲಗೆರೆ ಬೆಟ್ಟದಮಠ: ಉಕ್ಕಲಗೆರೆ ಸರಹದ್ದಿಗೆ ಒಳಪಡುವ ಮದ್ಗಾರಲಿಂಗಯ್ಯನಹುಂಡಿ ಗ್ರಾಮದ ಬೆಟ್ಟದ ಪಕ್ಕದಲ್ಲಿ ಮಠವು ಸ್ಥಾಪಿತವಾಗಿರುವುದರಿಂದ'ಶ್ರೀ ಉಕ್ಕಲಗೆರೆ ಬೆಟ್ಟದಮಠ' ಎಂಬ ಹೆಸರು ಬಂದಿದೆ. ಪ್ರಕೃತಿಯ ಸೊಬಗಿನ ಮಧ್ಯದಲ್ಲಿರುವ ಈ ಮಠವು ಹನ್ನೆರಡನೆಯ ಶತಮಾನದಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಕಲ್ಯಾಣದ ಶ್ರೀ ಜಡೆಚಿಕ್ಕಯ್ಯ ಮತ್ತು ಶ್ರೀ ನೆರೆಚಿಕ್ಕಯ್ಯ ಎಂಬ ಶರಣರು ದಕ್ಷಿಣಾಭಿಮುಖವಾಗಿ ಬಂದು ಈ ಬೆಟ್ಟದಲ್ಲಿ ಅನುಷ್ಠಾನಗೊಂಡು, ಈ ಕ್ಷೇತ್ರವನ್ನು ಜಾಗೃತ ಸ್ಥಳವಾಗಿ ಮಾಡಿ, ಇಲ್ಲೇ ನೆಲೆ ನಿಂತು ಮಠವನ್ನು ಸ್ಥಾಪನೆ ಮಾಡಿದ್ದಾರೆ ಎಂದು ನಂಬಲಾಗಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಜಡೆಚಿಕ್ಕಯ್ಯಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ನೆರೆ ಚಿಕ್ಕಯ್ಯಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಶಾಂತಒಡೆಯರು
೪. ಶ್ರೀ ಮ.ನಿ.ಪ್ರ. ಎರಡನೆಯ ಶಾಂತಒಡೆಯರು
೫. ಶ್ರೀ ಮ.ನಿ.ಪ್ರ. ವಿರುಪಾಕ್ಷಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ನಂಜುಂಡ ಶಿವಯೋಗಿಗಳು
೭. ಶ್ರೀ ಮ.ನಿ.ಪ್ರ. ವೀರಪ್ಪಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಶಿವಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆ ಎಂಟು ಜನ ಗುರುಗಳನ್ನು ಗುರುತಿಸಲಾಗಿದ್ದು ಇನ್ನೂ ಇತರ ಗುರುಗಳ ಹೆಸರುಗಳು ಆಧಾರದ ಕೊರತೆಯಿಂದ ತಿಳಿದು ಬಂದಿಲ್ಲ.

ಶಿವಯೋಗಿ: ಬೆಟ್ಟದ ಮಠದ ಪರಂಪರೆಯ ಆರನೆಯ ಗುರುಗಳಾದ ಶ್ರೀ ನಂಜುಂಡ ಶಿವಯೋಗಿಗಳು ಮಹಾಮಹಿಮ ಪುರುಷರು. ಇವರು ಯೋಗಸಿದ್ಧಿ ಪಡೆದು ಶಿವಯೋಗವನ್ನು ಮುಟ್ಟಿದವರು. ತಮ್ಮ ಇಷ್ಟಲಿಂಗ ಪೂಜೆಯ ಸಂದರ್ಭದಲ್ಲಿ ನಾಲಿಗೆಯ ಮೇಲೆ ಕರ್ಪೂರಗಳನ್ನು ಇಟ್ಟುಕೊಂಡು ಹಚ್ಚಿ ಬೆಳಗಿಸುತ್ತಿದ್ದರು.ಇವರು ಕುಂಡಲಿನಿಯೋಗ ಪ್ರವೀಣರಾಗಿದ್ದರಿಂದ ಶಿವಪೂಜೆ ಮಾಡುವಾಗ ಪದ್ಮಾಸನದಲ್ಲಿ ಕುಳಿತು ಗಾಳಿಯಲ್ಲಿ ಮೇಲೆದ್ದು ಪೂಜೆ ಮುಗಿಸುತ್ತಿದ್ದರು. ಶ್ರೀ ನಂಜುಂಡ ಶಿವಯೋಗಿಗಳು ತಮ್ಮ ಕಾಲದಲ್ಲಿ ಮಠವನ್ನು ಪ್ರಬುದ್ಧಮಾನಕ್ಕೆ ತಂದು ಈ ಪ್ರಾಂತ್ಯವನ್ನು ಧಾರ್ಮಿಕ ನೆಲೆಯಾಗಿ ಮಾಡಿದ್ದರು. ದೇವನೂರಿನ ಶ್ರೀ ಗುರುಮಲ್ಲೇಶ್ವರರ ಕಾಲದಲ್ಲಿ ಜೀವಿಸಿದ್ದ ಶ್ರೀ ನಂಜುಂಡ ಶಿವಯೋಗಿಗಳು, ಶಿವಯೋಗ ಸಿದ್ಧಿಯಿಂದ ಪವಾಡಗಳನ್ನು ಮಾಡಿ ಭಕ್ತರಿಗೆ ನೆರವಾಗಿದ್ದರೆಂದು ಹೇಳಲಾಗುತ್ತಿದೆ.

ಅಭಿವೃದ್ಧಿ ಕಾರ್ಯಗಳು: ಹಿಂದಿನ ಗುರುಗಳು ಲಿಂಗೈಕ್ಯರಾದ ಮೇಲೆ ೧೯೪೪ರಲ್ಲಿ ಪಟ್ಟಾಧಿಕಾರ ವಹಿಸಿಕೊಂಡ ಶ್ರೀ ಶಿವಸ್ವಾಮಿಗಳು, ಚದುರಿಹೋಗಿದ್ದ ಮಠದ ಆಸ್ತಿಯನ್ನು ಒಂದುಗೂಡಿಸಿ ತಮ್ಮ ಹಿಡಿತಕ್ಕೆ ತೆಗೆದುಕೊಂಡು ಅಭಿವೃದ್ಧಿ ಪಡಿಸತೊಡಗಿದ್ದಾರೆ. ಹಿಂದೆ ಇನಾಂನಿಂದ ಬಂದಿದ್ದ ನೂನಾರು ಎಕರೆ ಜಮೀನು ಬದಲಾದ ಭೂಕಾಯ್ದೆಯ ಅಡಿ ಅನ್ಯರ ಪಾಲಾಗಿದೆ. ಈಗ ಇರುವ ನಲವತ್ತು ಎಕರೆ ಜಮೀನಿನಲ್ಲಿ ಇಪ್ಪತ್ತು ಎಕರೆಯನ್ನು ನೀರಾವರಿಗೆ ಅಣಿಗೊಳಿಸಿ, ಉಳಿದ ಇಪ್ಪತ್ತು ಎಕರೆಯಲ್ಲಿ ಮಳೆಯ ಆಶ್ರಯದಲ್ಲಿ ಬೆಳೆ ಬೆಳೆಯಲು ವ್ಯವಸ್ಥೆಗೊಳಿಸಿದ್ದಾರೆ. ಶ್ರೀ ಶಿವಸ್ವಾಮಿಗಳು ಪಟ್ಟಾಧಿಕಾರ ವಹಿಸಿಕೊಂಡ

ಮೇಲೆ ಮಠದ ಪೂರ್ಣವ್ಯವಹಾರವನ್ನು ಕೈಗೆತ್ತಿಕೊಂಡು ಜೀರ್ಣಗೊಂಡಿದ್ದ ಮಠವನ್ನು ಅಭಿವೃದ್ಧಿಗೆ ತಂದಿದ್ದಾರೆ. ಮಠವು ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸಿ ಆರ್ಥಿಕ ಸ್ಥಿರತೆ ಕಾಣತೊಡಗಿದೆ.

ಧಾರ್ಮಿಕ ಕಾರ್ಯಗಳು: ಶ್ರೀ ಶಿವಸ್ವಾಮಿಗಳು ಹಳೆಯ ಎಂಟು ಗದ್ದುಗೆಗಳನ್ನು ನವೀಕರಿಸಿ ಗದ್ದುಗೆಗಳಿಗೆ ನಿತ್ಯ ಪೂಜೆ ನಡೆಯುವಂತೆ ಮಾಡಿದ್ದಾರೆ. ಬೆಟ್ಟದಲ್ಲಿರುವ ಗಿರಿ ಮಲ್ಲಿಕಾರ್ಜುನ ದೇವಸ್ಥಾನವನ್ನು ನವೀಕರಿಸಿ ಪೂಜೆಗೆ ವ್ಯವಸ್ಥೆ ಮಾಡಿ, ಧಾರ್ಮಿಕ ವಾತಾವರಣಕ್ಕೆ ಮತ್ತಷ್ಟು ಜೀವಕಳೆ ತುಂಬಿದ್ದಾರೆ. ಶ್ರೀ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಹಾಗೂ ಮಠಕ್ಕೆ ಬಂದು ಹೋಗುವ ಭಕ್ತರಿಗೆ ಪ್ರಸಾದದ ವ್ಯವಸ್ಥೆಯನ್ನು ಮಾಡಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಶಿವಸ್ವಾಮಿಗಳು, ಶ್ರೀಬೆಟ್ಟದಮಠ,ಮದ್ಗಾರಲಿಂಗಯ್ಯನಹುಂಡಿ,ಟಿ.ನರಸೀಪುರ ತಾ, ಮೈಸೂರು ಜಿಲ್ಲೆ.

ಮಾಡರಹಳ್ಳಿ

ಟಿ.ನರಸೀಪುರ ತಾಲ್ಲೂಕಿನ ಮಾಡರಹಳ್ಳಿ ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹತ್ತು ಕಿ.ಮೀ.ದೂರದಲ್ಲಿದೆ.೧೯೧೫ ರಲ್ಲಿ ಶ್ರೀ ಪಟ್ಟದಮಠವು ಸ್ಥಾಪನೆಯಾಗಿ, ಈ ಗ್ರಾಮವು ಧಾರ್ಮಿಕ ಮತ್ತು ಸಾಮಾಜಿಕ ಜಾಗೃತ ಸ್ಥಳವಾಗಿ ರೂಪುಗೊಂಡಿದೆ.

ಪಟ್ಟದಮಠ: ಮಾಡರಹಳ್ಳಿಯ ಭಕ್ತ ಮೊಡಿಯಪ್ಪ ಎಂಬುವರು ತಮಗೆ ಮಕ್ಕಳು ಆಗಲಿಲ್ಲ ಎಂಬ ಕಾರಣಕ್ಕೆ ತಮ್ಮ ಸ್ವಾಧೀನದಲ್ಲಿದ್ದ ಎಲ್ಲಾ ಆಸ್ತಿಯನ್ನು ದೇವನೂರು ಮಠಕ್ಕೆ ದಾನ ಮಾಡಿ, ಆ ಜಾಗದಲ್ಲಿ ಒಂದು ಮಠ ಸ್ಥಾಪಿಸಬೇಕು ಎಂದು ಕೇಳಿಕೊಂಡರು. ಭಕ್ತನ ಅಪೇಕ್ಷೆ ಈಡೇರಿಸಲು ದೇವನೂರು ಸ್ವಾಮಿಗಳು ೧೯೧೫ರಲ್ಲಿ ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮಿಗಳನ್ನು ಈ ನೂತನ ಮಠಕ್ಕೆ ಪಟ್ಟಾಧಿಕಾರಿಗಳನ್ನಾಗಿ ನೇಮಿಸಿ ಆಶೀರ್ವದಿಸಿದರು.

ಹಿರಿಯ ಚೇತನ: ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮಿಗಳು ಸಂಸ್ಕೃತ ಹಾಗೂ ವೇದದಲ್ಲಿ ಪಾಂಡಿತ್ಯವನ್ನು ಪಡೆದುಕೊಂಡಿದ್ದರು. ಎಲ್ಲಾ ವಿಚಾರದ ಬಗ್ಗೆ ಸಮರ್ಥ ತಿಳಿವಳಿಕೆ ಪಡೆದು ವೀರಶೈವ ಧರ್ಮದ ಆಚರಣೆಯ ವಿಷಯದಲ್ಲಿ, ಆಚಾರ ವಿಚಾರಗಳಲ್ಲಿ ಒಂದಾಗಿ ಬದುಕಿ ಅಷ್ಟಾವರಣ ಹಾಗೂ ಪಂಚಾಚಾರಗಳ ಬಗ್ಗೆ ತಿಳಿವಳಿಕೆಯುಳ್ಳವರಾಗಿ ಭಕ್ತರಿಗೆ ಈ ಎಲ್ಲಾ ವಿಚಾರಗಳನ್ನು ಮನನವಾಗುವಂತೆ ಹೇಳುತ್ತಿದ್ದರು. ಯಾರನ್ನೂ ಬೇಡದೇ, ತಾನಾಗಿಯೇ ಬಂದದ್ದನ್ನು ಸ್ವೀಕರಿಸಿ ಮಠದ ಜಮೀನಿನಲ್ಲಿ ಕಾಯಕಯೋಗಿಗಳಾಗಿ ಆಸ್ತಿಯನ್ನು ವಿಸ್ತರಿಸಿದರು. ಅಲ್ಪಕಾಲದಲ್ಲಿ ಮಠದ ಕೀರ್ತಿ ಎಲ್ಲಾ ಕಡೆಗೂ ಹಬ್ಬುವಂತೆ ಮಾಡಿದರು.

ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮಿಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ಕೆ.ಆರ್.ನಗರ ತಾಲ್ಲೂಕಿನ ನರಚನಹಳ್ಳಿ ಗ್ರಾಮದ ಶ್ರೀ ಲಿಂಗಪ್ಪ ಮತ್ತು ಶ್ರೀಮತಿ ಲಿಂಗಮ್ಮನವರ ಪುತ್ರರಾದ ಶ್ರೀ ಶಾಂತಮಲ್ಲಿಕಾರ್ಜುನ ದೇವರನ್ನು ಆಯ್ಕೆ ಮಾಡಿದರು. ಗುರುಹಿರಿಯರಲ್ಲಿ ಅಪಾರ ಭಕ್ತಿ ಇಟ್ಟುಕೊಂಡಿದ್ದ ಶ್ರೀ ಶಾಂತಮಲ್ಲಿಕಾರ್ಜುನ ದೇವರು ಸರ್ವಸಂಗ ಪರಿತ್ಯಾಗಿ ಯಾಗಿ ಸಾಮಾಜಿಕ ಅಭಿವೃದ್ಧಿಗೆ ತೊಡಗಿಸಿಕೊಳ್ಳಲು ನಿರ್ಧರಿಸಿ, ಮಠದ ಪರಂಪರೆಯ ಎರಡನೆಯ ಗುರುಗಳಾಗಿ ೧೯೭೫ ರಲ್ಲಿ ಪಟ್ಟಾಧಿಕಾರ ವಹಿಸಿಕೊಂಡರು. ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮಿಗಳು ಕ್ರಿಯಾಶೀಲರು. ಸದಾ ಚಟುವಟಿಕೆಯ ಮೂರ್ತಿಗಳಾಗಿ ಕಾಯಕದಲ್ಲಿ ತೊಡಗಿ, ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ಅಭಿವೃದ್ಧಿ: ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮಿಗಳ ಕಾಲದಲ್ಲಿ ಮಠಕ್ಕೆ ಅವಶ್ಯಕತೆಗೆ ಬೇಕಾಗುವಷ್ಟು ಕಟ್ಟಡವನ್ನು ನಿರ್ಮಿಸಿದ್ದರು. ಟಿ.ನರಸೀಪುರದಲ್ಲಿ ಆಸ್ತಿಯನ್ನು ಸಂಪಾದಿಸಿ ಮಠಕ್ಕೆ ಹೆಚ್ಚು ಆದಾಯ ಬರುವಂತೆ ಮಾಡಿದ್ದರು. ಮಾಡರಹಳ್ಳಿಯ ಭಕ್ತರು ಕೊಟ್ಟ ಜಮೀನಿನ ಜತೆಗೆ ಪುನಃ ಇಪ್ಪತ್ತೈದು ಎಕರೆ ಜಮೀನನ್ನು ಖರೀದಿಸಿದ್ದರು. ಈಗಿನ ಗುರುಗಳು ಈ ಭೂಮಿಯಲ್ಲಿ ಬೇಸಾಯ ಮಾಡಿಸಿ, ಮಠದ ಆದಾಯದ ಮೂಲವನ್ನಾಗಿ ಮಾಡಿಕೊಂಡಿದ್ದಾರೆ.

ಧಾರ್ಮಿಕ ಕೆಲಸ: ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮಿಗಳ ಗದ್ದುಗೆಗೆ ನಿತ್ಯಪೂಜೆ ಮತ್ತು ವಾರ್ಷಿಕ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ ಧಾರ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯಿಕ ವಿಚಾರಗಳ ಬಗ್ಗೆ ಚರ್ಚೆ ಏರ್ಪಡಿಸಿ, ನಾಡಿನ ಹಿರಿ ಕಿರಿಯ ಗುರುಗಳಿಂದ ಉಪದೇಶ, ವಿದ್ವಾಂಸರಿಂದ ಉಪದೇಶಗಳನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ

ಸೇರುವ ಭಕ್ತರಿಗೆ ಅನ್ನದಾಸೋಹವನ್ನು ನಡೆಸಲಾಗುತ್ತಿದೆ. ಧನುರ್ಮಾಸ, ಕಾರ್ತೀಕ, ಶ್ರಾವಣಮಾಸ ಹಾಗೂ ಶಿವರಾತ್ರಿಯಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು, ಶ್ರೀಪಟ್ಟದಮಠ, ಮಾದರಹಳ್ಳಿ,ಟಿ.ನರಸೀಪುರ ತಾ, ಮೈಸೂರು ಜಿಲ್ಲೆ.

ಮುಡುಕುತೊರೆ

ಕಾವೇರಿನದಿಯು ಪಶ್ಚಿಮದ ಕಡೆಯಿಂದ ಉತ್ತರದ ದಿಕ್ಕಿಗೆ ಹರಿದು, ಪೂರ್ವದಿಕ್ಕಿನ ಕಡೆಗೆ ಮುರಿದು ದಕ್ಷಿಣಕ್ಕೆ ಪ್ರವೇಶಿಸುವ ಸ್ಥಳದಲ್ಲಿರುವ ಕಾರಣ ಈ ಕ್ಷೇತ್ರಕ್ಕೆ ಮುಡುಕುತೊರೆ ಎಂಬ ಜಲನಾಮ ಬಂದಿದೆ. ಟಿ.ನರಸೀಪುರ ತಾಲ್ಲೂಕಿನ ಮುಡುಕುತೊರೆ ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಇಪ್ಪತ್ತಾರು ಕಿ.ಮೀ.ದೂರದಲ್ಲಿದೆ. ಇದು ಪುರಾಣ ಪ್ರಸಿದ್ಧ ಕ್ಷೇತ್ರವಾಗಿ, ತಲಕಾಡಿನ ಪಂಚಲಿಂಗಗಳ ಗುಂಪಿಗೆ ಸೇರುವ ಈ ಕ್ಷೇತ್ರ ಈಶ್ವರನ ಎರಡನೆಯ ಮುಖದಲ್ಲಿ ಒಂದಾದ ವಾಮದೇವ ಮುಖದಿಂದ ಮಲ್ಲಿಕಾರ್ಜುನದೇವರು ಉದ್ಭವಿಸಿ ಮುಡುಕುತೊರೆ ಬೆಟ್ಟದ ಮೇಲೆ ಸ್ಥಾಪಿತವಾಗಿದೆ ಎಂದು ಪುರಾಣ ತಿಳಿಸುತ್ತಿದೆ. ಇಂತಹ ಪ್ರಸಿದ್ಧ ಪುಣ್ಯಸ್ಥಳದಲ್ಲಿ ಶ್ರೀ ತೋಪಿನ ಮಠ ಮತ್ತು ಶ್ರೀ ಕಲ್ಲುಮಠ ಎಂಬ ವೀರಶೈವ ಮಠಗಳೆರಡು ಸ್ಥಾಪನೆಯಾಗಿವೆ.

ತೋಪಿನಮಠ: ಮುಡುಕುತೊರೆಯಲ್ಲಿ ಶ್ರೀ ಮಲ್ಲಿಕಾರ್ಜುನದೇವರು ಪ್ರತಿಷ್ಠಾಪನೆಗೊಂಡಿರುವ ಬೆಟ್ಟದ ತಪ್ಪಲಿನಲ್ಲಿ ಸ್ಥಾಪನೆಯಾದ ಶ್ರೀ ತೋಪಿನಮಠವು, ಶ್ರೀ ರಂಭಾಪುರಿಪೀಠದ ಶಾಖಾಮಠವಾಗಿ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಮಾವಿನಮರಗಳಿಂದ ಆವೃತವಾದ ತೋಪಿನಲ್ಲಿ ಸ್ಥಾಪನೆಯಾಗಿದ್ದ ಈ ಮಠ,ಆಧುನಿಕತೆಗೆ ಅನುಗುಣವಾಗಿ ಈಗ ಕಾಂಕ್ರೇಟ್ ಸಂಕೀರ್ಣವಾಗಿದೆ. ಶ್ರೀ ತೋಪಿನಮಠದಲ್ಲಿ ವೀರಶೈವ ಧರ್ಮದ ಆಚರಣೆಗಳು ಬಹಳ ವಿಧಿವತ್ತಾಗಿ ನೆರವೇರುತ್ತಿವೆ.

ಪರಂಪರೆ: ಪುರಾತನ ಕಾಲದ ಮಠವಾದರೂ ಆಧಾರಗಳ ಕೊರತೆಯಿಂದ ಈ ಮಠದ ಇತಿಹಾಸವನ್ನು ತಿಳಿಯಲು ತೊಡಕಾಗಿದೆ. ಮಠದ ಹೇಳಿಕೆಯ ಪ್ರಕಾರ ಐದು ಜನ ಗುರುಗಳ ಹೆಸರನ್ನು ಮಾತ್ರ ಇಲ್ಲಿ ದಾಖಲಿಸಬಹುದಾಗಿದೆ.

೧. ಷ.ಬ್ರ.ಶ್ರೀ ಶಿವಲಿಂಗ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಎರಡನೆಯ ಶಿವಲಿಂಗ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಮಹಾಲಿಂಗ ಶಿವಾಚಾರ್ಯಸ್ವಾಮಿಗಳು (ಈಗಿನ ಹಿರಿಯ ಗುರುಗಳು)
೫. ಷ.ಬ್ರ.ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಕ್ರಿಯಾಶೀಲತೆ: ಮಂಡ್ಯ ಜಿಲ್ಲೆಯ ಹೊನ್ನಲಗೆರೆಯ ಶ್ರೀ ಮಲ್ಲಪ್ಪ ಮತ್ತು ಶ್ರೀಮತಿ ಗೌರಮ್ಮನವರ ಪುತ್ರರಾಗಿ ೧೯೨೮ರ ಡಿಸೆಂಬರ್ ಇಪ್ಪತ್ತೊಂಬತ್ತರಂದು ಶ್ರೀ ಮಹಾಲಿಂಗ ಸ್ವಾಮಿಗಳು ಜನಿಸಿದರು. ಹೊನ್ನಲಗೆರೆಯ ಶಿವಕ್ಷೇತ್ರ ಮಠದ ಅಧಿಪತಿಗಳಾಗಿದ್ದ ಶ್ರೀ ಮಹಾಲಿಂಗ ಶಿವಾಚಾರ್ಯ ಸ್ವಾಮಿಗಳನ್ನು ಜೀರ್ಣಗೊಂಡಿದ್ದ ಇಲ್ಲಿನ ತೋಪಿನ ಮಠಕ್ಕೆ ೧೯೬೮ರಲ್ಲಿ ಪಟ್ಟಾಧಿಕಾರ ಮಾಡಲಾಯಿತು. ಈ ಮಠದ ಅಧಿಕಾರ ಸೂತ್ರ ಹಿಡಿದ ತಕ್ಷಣವೇ ಹರಿದು ಹಂಚಿ ಹೋಗಿದ್ದ ಜಮೀನನ್ನು ಒಂದುಗೂಡಿಸಲು ಶತ ಪ್ರಯತ್ನಪಟ್ಟು, ಸರ್ಕಾರದ ವಿರುದ್ಧ ಹೋರಾಡಿ, ಕೊನೆಗೆ ಸರ್ಕಾರದಿಂದ ಪ್ರತಿವರ್ಷ ಇಪ್ಪತ್ತೈದುಸಾವಿರ ರೂಪಾಯಿ ಸಸ್ತಿಕ್ ಹಣ ಪಡೆಯುವಲ್ಲಿ ಯಶಸ್ವಿಯಾದರು. ಮಠದ ಆಸ್ತಿ ಸಿಗದಿದ್ದರೂ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರದ ಹಣ ಲಭ್ಯವಾಗಿದ್ದು ಇವರ ಹೋರಾಟದ ಫಲ ಎಂದು ಹೇಳಬಹುದು. ಇವರ ಅವಿರತ ಶ್ರಮದಿಂದ ಹಾಗೂ ಕ್ರಿಯಾಶೀಲತೆ ಯಿಂದ ಈ ಮಠ ಅಭಿವೃದ್ಧಿ ಸಾಧಿಸಿದ್ದು ಒಂದು ಹೆಮ್ಮೆಯ ವಿಷಯ.

ಶ್ರೀ ಮಹಾಲಿಂಗ ಶಿವಾಚಾರ್ಯ ಸ್ವಾಮಿಗಳು ಭಕ್ತರನ್ನು ಸಂಘಟಿಸಿ ಅವರಿಂದ ಉದಾರ ನೆರವು ಪಡೆದು ದಾಸೋಹ ನಿಲಯ, ಕಲ್ಯಾಣಮಂಟಪ, ಪ್ರಾರ್ಥನಾ ಮಂದಿರ ಎರಡು ಅಂತಸ್ತಿನ ಭ್ರಮರಾಂಬ ನಿಕೇತನ ಇನ್ನೂ ಮುಂತಾದ ಅನೇಕ ಕಟ್ಟಡಗಳನ್ನು ನಿರ್ಮಿಸಿದ್ದಾರೆ. ಶ್ರೀ ಜಗದ್ಗುರು ರೇಣುಕಾಚಾರ್ಯ ಗುರುಕುಲಾಶ್ರಮ ಸ್ಥಾಪನೆಮಾಡಿರುವುದು ಇವರ ಸಾಧನೆಯ ಮೈಲುಗಳಲ್ಲಿ ಒಂದು. ಈ ಗುರುಕುಲದಲ್ಲಿ ಮೂವತ್ತರಿಂದ ನಲವತ್ತು ವಿದ್ಯಾರ್ಥಿಗಳು ಉಚಿತವಾಗಿ ವೀರಶೈವ ಧರ್ಮದ

ಅಧ್ಯಯನವನ್ನು ನಡೆಸಿದ್ದಾರೆ. ಅಲ್ಲದೆ ಇಲ್ಲಿ ಶಿವಪೂಜಾವಿಧಿ ಪೂರ್ವಪ್ರಯೋಗ ಮತ್ತು ಜ್ಯೋತಿಷ್ಯ ಶಾಸ್ತ್ರ ಬೋಧಿಸುತ್ತಾರೆ. ವಿದ್ಯಾರ್ಥಿಗಳಿಗೆ ಐದು ವರ್ಷಗಳ ಕಾಲ ಸಮಗ್ರ ವೀರಶೈವ ಧರ್ಮಾಚರಣೆಯ ವಿಧಿವಿಧಾನಗಳನ್ನು ಪರಿಪೂರ್ಣವಾಗಿ ಬೋಧಿಸುವ ವ್ಯವಸ್ಥೆಯನ್ನು ಗುರುಗಳು ಕಲ್ಪಿಸಿದ್ದಾರೆ. ಹಿರಿಯ ಗುರುಗಳಾದ ಶ್ರೀ ಮಹಾಲಿಂಗ ಶಿವಾಚಾರ್ಯ ಸ್ವಾಮಿಗಳು ಗುರುಕುಲದಲ್ಲಿ ಪ್ರಧಾನ ಗುರುಗಳಾಗಿ ಬೋಧನೆ ಮಾಡುತ್ತಾರೆ.ಈ ಮಠದ ಗುರುಕುಲದಲ್ಲಿ ಸಂಸ್ಕಾರಗೊಂಡ ಅನೇಕ ವಿದ್ಯಾರ್ಥಿಗಳು, ವಿವಿಧ ಮಠಗಳಲ್ಲಿ ಮಠಾಧೀಶರಾಗಿ ಅಧಿಕಾರ ವಹಿಸಿಕೊಂಡು ನಾಡಿಗೆ ಸೇವೆಸಲ್ಲಿಸುತ್ತಿದ್ದಾರೆ.

ಉತ್ತರಾಧಿಕಾರಿ ನೇಮಕ: ಶ್ರೀ ಮಹಾಲಿಂಗ ಶಿವಾಚಾರ್ಯ ಸ್ವಾಮಿಗಳ ಕರಕಮಲ ಸಂಜಾತರಾಗಿ ಬೆಳೆದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಮುಡುಕುತೊರೆಯ ಶ್ರೀ ಎಂ.ಜಯಶಂಕರ್ ಮತ್ತು ಶ್ರೀಮತಿ ಸುನಂದಮ್ಮನವರ ಪುತ್ರರಾಗಿ ೧೯೭೮ರ ಜುಲೈ ಇಪ್ಪತ್ತರಂದು ಜನಿಸಿದರು. ಗುರುಗಳು ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ೧೯೯೩ರಲ್ಲಿ ಪಟ್ಟಾಧಿಕಾರ ವನ್ನು ವಹಿಸಿಕೊಂಡಿದ್ದಾರೆ. ಹಿರಿಯ ಗುರುಗಳೇ ಮಠದ ಜವಾಬ್ದಾರಿ ನೋಡಿಕೊಳ್ಳುತ್ತಿರುವುದರಿಂದ ಇವರ ಮಾರ್ಗದರ್ಶನ ದಲ್ಲಿ ಉನ್ನತ ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾರೆ.

ಯಾತ್ರಾಸ್ಥಳ: ಮುಡುಕುತೊರೆಯ ಮಲ್ಲಿಕಾರ್ಜುನಕ್ಷೇತ್ರ ಯಾತ್ರಾಸ್ಥಳವಾಗಿರುವುದರಿಂದ ನಾಡಿನ ಅನೇಕ ಭಾಗಗಳಿಂದ ಯಾತ್ರಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿಗೆ ಬರುತ್ತಾರೆ. ಬಂದವರಲ್ಲಿ ಬಹುತೇಕರು ಮಠದಲ್ಲಿ ಆಶ್ರಯ ಕೇಳಿ ಬರುತ್ತಾರೆ. ಬಂದಂತಹ ಭಕ್ತರಿಗೆ ಆಶ್ರಯ ಹಾಗೂ ಊಟದ ವ್ಯವಸ್ಥೆ ಮಾಡಲಾಗುತ್ತಿದೆ. ಭ್ರಮರಾಂಬ ಮತ್ತು ಮಲ್ಲಿಕಾರ್ಜುನ ದೇವರ ಜಾತ್ರಾದಿನಗಳಲ್ಲಿ ಮಠದಲ್ಲಿ ಭಕ್ತರಿಗೆ ಆಶ್ರಯ ನೀಡಿ ಆತಿಥ್ಯ ನೀಡುವುದೇ ಒಂದು ಸವಾಲಾಗಿದೆ. ಆದಿಗುರು ಶ್ರೀ ರೇಣುಕಾ ಚಾರ್ಯರ ಗುಡಿಯನ್ನು ೧೯೯೦ರಲ್ಲಿ ನಿರ್ಮಿಸಿ ನಿತ್ಯ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಈ ಕ್ಷೇತ್ರವು ಪ್ರವಾಸಿ ತಾಣವಾಗಿರುವುದರಿಂದ ಬಂದು ಹೋಗುವ ಯಾತ್ರಾರ್ಥಿಗಳ ಕಣ್ಣಿಗೆ ಬೀಳಲೆಂದು ಸಿದ್ಧಾಂತ ಶಿಖಾಮಣಿಯ ಆಯ್ದ ಕೆಲವು ಶ್ಲೋಕಗಳನ್ನು ಮಠದ ಗೋಡೆಯ ಮೇಲೆ ಬರೆಯಿಸಿ, ವೀರಶೈವ ಸಿದ್ಧಾಂತದ ಪ್ರಚಾರ ಕಾರ್ಯ ನಡೆಯುವಂತೆ ಮಾಡಿದ್ದಾರೆ.

ವಿಳಾಸ:ಷ.ಬ್ರ.ಶ್ರೀ ಮಹಾಲಿಂಗ ಶಿವಾಚಾರ್ಯಸ್ವಾಮಿಗಳು, ಶ್ರೀತೋಪಿನಮಠ.ಮುಡುಕುತೊರೆ,ಟಿ.ನರಸೀಪುರ ತಾ, ಮೈಸೂರುಜಿಲ್ಲೆ.

ಕಲ್ಮಠ: ಮುಡುಕುತೊರೆಯಿಂದ ಒಂದು ಕಿ. ಮೀ.ದೂರದಲ್ಲಿ ಕಾವೇರಿ ನದಿಯ ದಡದಲ್ಲಿ ಶ್ರೀ ಕಲ್ಮಠವು ಸ್ಥಾಪನೆಯಾಗಿದೆ. ಈ ವಿರಕ್ತಮಠವು ಏಕಾಂತ ಸ್ಥಳದಲ್ಲಿ ತೋಟದ ಮಧ್ಯೆ ಶೋಭಾಯಮಾನವಾಗಿ ಕಂಗೊಳಿಸುತ್ತಾ ಮೂರು ಶತಮಾನಗಳಿಂದ ತನ್ನ ಧಾರ್ಮಿಕ ಸೇವೆ ಮಾಡಿಕೊಂಡು ಬಂದಿದೆ.

ಹಳೆಯ ಕಟ್ಟಡ: ಕಲ್ಮಠದ ಕಟ್ಟಡದ ಕಲ್ಲುಗಳು ಮತ್ತು ಕಟ್ಟಿರುವ ವಿನ್ಯಾಸ ನೋಡಿದರೆ ಚೋಳರ ಕಾಲದಲ್ಲಿ ನಿರ್ಮಿಸಿರಬಹು ದಾದ ಮಠ ಎಂದು ಗುರುತಿಸಬಹುದಾಗಿದೆ. ಈ ಮಠವು ನಲವತ್ತು ಅಂಕಣಗಳ ವಿಸ್ತಾರ ಹೊಂದಿದ್ದು ಅಂದಿನ ವೈಭವದ ಗುರುತಾಗಿ ರೂಪುಗೊಂಡಿದೆ. ಕಟ್ಟಡದಲ್ಲಿ ವಿಶಾಲ ನಡುಕೋಣೆ ನಂತರ ಪೂಜಾದಿ ಕಾರ್ಯಗಳ ಕೊಠಡಿ ಹಾಗೂ ಮಠದ ಕರ್ತೃಗುರುಗಳ ಗದ್ದುಗೆ ನಿರ್ಮಿಸಲ್ಪಟ್ಟಿವೆ. ನೋಡಲು ದೇವಸ್ಥಾನದ ರೀತಿಯಲ್ಲಿ ರಚಿತಗೊಂಡಿದೆ. ಮಠದ ಕಲ್ಪನೆ ಮತ್ತು ಧಾರ್ಮಿಕ ಕೇಂದ್ರದ ಹಿನ್ನೆಲೆ ಪಡೆದ ಈ ಕಟ್ಟಡ ಜನರನ್ನು ಆಕರ್ಷಿಸುತ್ತಿದೆ. ಇಂತಹ ಪ್ರಸಿದ್ಧ ಮಠದ ಮೂಲ ಗುರುಗಳಾಗಿ ಶ್ರೀ ಒಪ್ಪತ್ತಯ್ಯ ಸ್ವಾಮಿಗಳು ಅಧಿಕಾರ ನಡೆಸಿ ಲಿಂಗೈಕ್ಯರಾಗಿದ್ದಾರೆ.

ವಿರಕ್ತರ ಆಗಮನ: ಚರಮೂರ್ತಿಗಳೊಬ್ಬರು ಬೆಟ್ಟದ ಮಲ್ಲಿಕಾರ್ಜುನ ಮತ್ತು ಭ್ರಮರಾಂಬೆಯ ಸನ್ನಿಧಿಗೆ ಬಂದು ಕಾವೇರಿ ನದಿಯ ಈ ಪ್ರಶಾಂತ ಸ್ಥಳದಲ್ಲಿ ದೀರ್ಘ ಅನುಷ್ಠಾನಗೊಂಡರು. ಇವರು ದಿನದಲ್ಲಿ ಒಂದೇ ವೇಳೆ ಆಹಾರ ಸೇವಿಸುತ್ತಿದ್ದರಿಂದ 'ಶ್ರೀ ಒಪ್ಪತ್ತಯ್ಯ ಸ್ವಾಮಿ'ಗಳೆಂದು ಹೆಸರಾದರು. ಗುರುಗಳ ತಪೋನಿಷ್ಠೆಯನ್ನು ಗುರುತಿಸಿದ ಭಕ್ತರು ಇಲ್ಲೇ ನೆಲೆಸುವಂತೆ ಒತ್ತಾಯ ಮಾಡಿದರು. ಶ್ರೀ ಒಪ್ಪತ್ತಯ್ಯ ಸ್ವಾಮಿಗಳು ಭಕ್ತರ ಒತ್ತಾಯಕ್ಕೆ ಇಲ್ಲೇ ನೆಲೆಸಿ ಮಠವನ್ನು ಸ್ಥಾಪಿಸಿದರು.

ಶ್ರೀ ಒಪ್ಪತ್ತಯ್ಯ ಸ್ವಾಮಿಗಳ ಒಡನಾಟದಲ್ಲಿ ಭಕ್ತವೃಂದ ವೀರಶೈವಧರ್ಮ, ಶರಣ ಸಂಸ್ಕೃತಿಯ ಆಚಾರವಿಚಾರಗಳು,

ಷಟ್‌ಸ್ಥಲ, ಅಷ್ಟಾವರಣ ಹಾಗೂ ಪಂಚಾಚಾರಗಳ ಬಗ್ಗೆ ಅರಿವು ಪಡೆದು ಮಹಾ ಸಂಸ್ಕಾರವಂತರಾಗಿ ರೂಪುಗೊಂಡರು. ಕಾವೇರಿ ನದಿಯ ಪ್ರಶಾಂತತಾಣ ವೀರಶೈವ ಧರ್ಮದ ಜಾಗೃತ ಸ್ಥಳವಾಗಿ ಅಪಾರ ಭಕ್ತರನ್ನು ಆಕರ್ಷಿಸಿಕೊಳ್ಳತೊಡಗಿತು. ಶ್ರೀಒಪ್ಪತ್ತಯ್ಯ ಸ್ವಾಮಿಗಳು ಪ್ರಾರಂಭಮಾಡಿದ ಮಠದಲ್ಲಿ ಅವರು ಲಿಂಗೈಕ್ಯರಾದ ನಂತರ, ಅನೇಕ ಗುರುಗಳು ಪಟ್ಟಾಧಿಕಾರ ವಹಿಸಿಕೊಂಡು ಅಧಿಕಾರ ನಡೆಸಿದ್ದಾರೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ಒಪ್ಪತ್ತಯ್ಯಸ್ವಾಮಿಗಳು (ಸ್ಥಾಪಕರು)
೨. ಶ್ರೀ ಮ.ನಿ.ಪ್ರ. ಚಂದ್ರಶೇಖರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಸಿದ್ಧಬಸವಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಚಂದ್ರಶೇಖರಸ್ವಾಮಿಗಳು (ಈಗಿನವರು)

ಮಠದ ಪರಂಪರೆಯ ಎಲ್ಲ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ಲಭ್ಯವಿಲ್ಲ. ಪರಂಪರೆಯ ನಾಲ್ಕನೆಯ ಗುರುಗಳಾದ ಶ್ರೀಸಿದ್ಧಲಿಂಗ ಸ್ವಾಮಿಗಳು ಹಾಗೂ ಶ್ರೀ ಶಿವರಾತ್ರೀಶ್ವರ ಮಠದ'ಮಂತ್ರಮಹರ್ಷಿ'ಎಂದೇ ಹೆಸರಾಗಿದ್ದ ಪಟ್ಟದ ಶ್ರೀಶಿವರಾತ್ರಿ ಸ್ವಾಮಿಗಳು ಬಹಳ ಅನ್ಯೋನ್ಯತೆಯಿಂದ ಬೆಳೆದವರಾಗಿದ್ದರು. ಇಂತಹ ಹಿರಿಯರ ಸಂಪರ್ಕದಿಂದ ಮಠದ ಹಿರಿತನವೂ ಹೆಚ್ಚಿದೆ. ಮಠದ ಈಗಿನ ಗುರುಗಳಾದ ಶ್ರೀ ಚಂದ್ರಶೇಖರ ಸ್ವಾಮಿಗಳು, ತಮ್ಮ ಅರವತ್ತನೆಯ ವರ್ಷದ ಇಳಿವಯಸ್ಸಿನಲ್ಲಿಯೂ ಧರ್ಮವನ್ನು ಸಾರುತ್ತಾ,ಮಠದ ಕಟ್ಟಡವನ್ನು ಅನುಕೂಲತೆಗೆ ತಕ್ಕಷ್ಟು ವಿಸ್ತರಿಸಿಕೊಂಡಿದ್ದಾರೆ. ವಿರಕ್ತ ಮಠವಾದರೂ ಪುತ್ರ ವರ್ಗದ ಮಠವಾಗಿದೆ. ಮಠದ ಆಸ್ತಿಯನ್ನು ಅಭಿವೃದ್ಧಿಗೊಳಿಸಿ ತೋಟ ಮಾಡಿ ಆದಾಯ ಬರುವಂತೆ ಮಾಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಒಳಭಾಗದಲ್ಲಿ ಕರ್ತೃ ಗದ್ದುಗೆ ಸ್ಥಾಪನೆಯಾಗಿದೆ. ಮಠದ ಪಕ್ಕದ ತೋಟದಲ್ಲಿ ನಿರ್ಮಿಸಲ್ಪಟ್ಟಿರುವ ಒಂದು ಗದ್ದುಗೆಗೆ ಗುಡಿಯನ್ನು ನಿರ್ಮಿಸಲಾಗಿದೆ. ಅಲ್ಲದೆ ಗಾಲಿಯಾಕಾರದ ಈ ಮಠದ ಕಟ್ಟಡದ ಹಿಂಬದಿಯಲ್ಲಿ ಒಟ್ಟು ನಾಲ್ಕು ಗದ್ದುಗೆಗಳನ್ನು ನಿರ್ಮಿಸಲಾಗಿದ್ದು, ನಿತ್ಯ ಪೂಜೆಯನ್ನು ಹಾಗೂ ಶ್ರೀ ಸಿದ್ಧಲಿಂಗ ಸ್ವಾಮಿಗಳ ಆರಾಧನೆಯನ್ನು ಒಂದು ವಾರ ನಡೆಸಲಾಗುತ್ತಿದೆ. ಶ್ರೀ ಮಲ್ಲಿಕಾರ್ಜುನ ಮತ್ತು ಭ್ರಮರಾಂಬದೇವಿಯ ಜಾತ್ರೆಯ ಉತ್ಸವಕ್ಕೆ ಸೇರುವ ಭಕ್ತರಿಗೆ ದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ.ಚಂದ್ರಶೇಖರ ಸ್ವಾಮಿಗಳು, ಶ್ರೀ ಕಲ್ಮಠ, ಮುಡುಕುತೊರೆ, ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.

ಮೇದಿನಿ

ಟಿ.ನರಸೀಪುರ ತಾಲ್ಲೂಕಿನ ಮೇದಿನಿಯು ತಾಲ್ಲೂಕು ಕೇಂದ್ರದಿಂದ ಇಪ್ಪತ್ತೆಂಟು ಕಿ.ಮೀ. ದೂರದಲ್ಲಿರುವ ಅಭಿವೃದ್ಧಿಶೀಲ ಹಳ್ಳಿ. ಇಲ್ಲಿ ಹಿಂದೆ ಶ್ರೀ ಕಟ್ಟೆಮಠ, ಶ್ರೀ ತೋಪಿನಮಠ ಮತ್ತು ಶ್ರೀ ಮಧ್ಯದಮಠ ಎಂಬ ಮೂರು ಮಠಗಳು ಸ್ಥಾಪಿತವಾಗಿದ್ದವು. ತೋಪಿನಮಠ ಇದ್ದ ಜಾಗದಲ್ಲಿ ಅವಶೇಷಗಳಾಗಿ ಲಿಂಗಗಳು, ಲಿಂಗಮುದ್ರೆ ಕಲ್ಲುಗಳು ಸಿಕ್ಕಿವೆ. ಇಲ್ಲಿ ಮಾವು, ಆಲ,ಸುರಗಿ ಮುಂತಾದ ನೂರಾರು ಮರಗಳಿಂದ ಆವೃತಗೊಂಡ ತೋಪು ಇದೆ. ಕಟ್ಟೆಮಠದ ಕುರುಹಾಗಿ ಕಟ್ಟೆಯ ಹತ್ತಿರ ಅನ್ನದಾಸೋಹದ ಸಿದ್ಧತೆಗೆ ಬಳಸುತ್ತಿದ್ದ ಒರಳು ಕಲ್ಲು ಸಿಕ್ಕಿದೆ. ಈ ಮಠದ ಪಕ್ಕ ಹರಿಯುತ್ತಿದ್ದ ಹಳ್ಳಕ್ಕೆ ಮಠದ ಹಳ್ಳ ಎಂದು ಕರೆಯಲಾಗುತ್ತಿದೆ. ಈ ಎರಡೂ ಮಠಗಳು ಕಾಲಾನಂತರ ತಮ್ಮ ಅಸ್ತಿತ್ವ ಕಳೆದುಕೊಂಡಿವೆ. ಪಟ್ಟದಮಠವು (ಮಧ್ಯದಮಠ) ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಈ ಗ್ರಾಮದ ಕೇಂದ್ರವಾಗಿ ಬೆಳೆದಿದೆ.

ಪಟ್ಟದ ಮಠ (ಮಧ್ಯದ ಮಠ): ಪಟ್ಟದಮಠವು ಊರಿನ ಮಧ್ಯದಲ್ಲಿ ಅಸ್ತಿತ್ವದಲ್ಲಿದ್ದ ಕಾರಣ ಇದಕ್ಕೆ'ಶ್ರೀ ಮಧ್ಯದಮಠ' ಎಂದು ಕರೆಯಲಾಗುತ್ತಿದೆ. ಜೀರ್ಣಾವಸ್ಥೆಯಲ್ಲಿದ್ದ ಮಠದ ಕಟ್ಟಡವನ್ನು ವಿಸ್ತರಿಸಿದಾಗ ಊರಿನ ಪಶ್ಚಿಮದ ಹೊರ ಭಾಗದಲ್ಲಿ ಕಟ್ಟಡವನ್ನು ನಿರ್ಮಿಸಲಾಗಿದೆ. ೧೯೯೦ರ ಮೇ ಒಂಬತ್ತರಂದು ಮಠದ ಉದ್ಘಾಟನೆಯನ್ನು ನೆರವೇರಿಸಲಾಗಿದೆ.

ಪರಂಪರೆ: ಪಂಚಪೀಠಗಳಲ್ಲಿ ಒಂದಾದ ಉಜ್ಜಯಿನಿ ಸದ್ಧರ್ಮ ಪೀಠದ ಶಾಖಾಮಠವಾದ ಈ ಮಠವು, ತನ್ನ ಪರಂಪರೆಯಲ್ಲಿ

ಅನೇಕ ಮಠಾಧಿಪತಿಗಳನ್ನು ಕಂಡಿದ್ದರೂ ಈ ಬಗ್ಗೆ ಯಾವುದೇ ಕುರುಹುಗಳು ಇಲ್ಲ. ಆದರೆ ಶ್ರೀ ಶಿವಲಿಂಗ ಸ್ವಾಮಿಗಳೆಂಬ ನಾಮಾಂಕಿತವ ಮೂರು ಜನರನ್ನು ಮಾತ್ರ ಗುರುತಿಸಬಹುದಾಗಿದೆ. ೧೯೬೬ರ ಜೂನ್ ಇಪ್ಪತ್ತಾರರಂದು ಲಿಂಗೈಕ್ಯರಾದ ಶ್ರೀಶಿವಲಿಂಗ ಸ್ವಾಮಿಗಳು ಹಾಗೂ ಅವರಿಗಿಂತ ಹಿಂದಿದ್ದವರನ್ನೂ ಸಹ ಶ್ರೀ ಶಿವಲಿಂಗ ಸ್ವಾಮಿಗಳೆಂದೇ ಗುರುತಿಸಲಾಗಿದೆ. ಅಲ್ಲದೇ ೧೯೬೮ರಲ್ಲಿ ಪಟ್ಟಾಧಿಕಾರ ವಹಿಸಿಕೊಂಡಿರುವ ಈಗಿನ ಗುರುಗಳ ಹೆಸರೂ ಶ್ರೀ ಶಿವಲಿಂಗ ಸ್ವಾಮಿಗಳು ಎಂಬುದಾಗಿದೆ. ಪರಂಪರೆಯಲ್ಲಿ ಬರುವ ಎಲ್ಲಾ ಗುರುಗಳಿಗೂ ಪಟ್ಟಾಧಿಕಾರದ ನಂತರ ಶ್ರೀ ಶಿವಲಿಂಗ ಸ್ವಾಮಿಗಳೆಂದು ಅಭಿದಾನ ಮಾಡಿದ್ದಾರೆ.

ಬಾಲಕನಿಗೆಪಟ್ಟ: ೧೯೬೧ರಲ್ಲಿ ಲಿಂಗೈಕ್ಯರಾದ ಶ್ರೀ ಶಿವಲಿಂಗ ಸ್ವಾಮಿಗಳ ತರುವಾಯ ಶ್ರೀ ಶಿವಪ್ಪದೇವರು ಮತ್ತು ಶ್ರೀಮತಿ ಗುರುಮಲ್ಲಮ್ಮನವರ ಪುತ್ರರಾದ ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳಿಗೆ ೧೯೬೮ ರಲಿ ಪಟ್ಟಾಧಿಕಾರ ಮಾಡಿದರು. ಚಿಕ್ಕವಯಸ್ಸಿನಲ್ಲಿ ಪಟ್ಟಾಧಿಕಾರ ವಹಿಸಿಕೊಂಡ ನಂತರ, ವಿದ್ಯಾಭ್ಯಾಸ ಪ್ರಾರಂಭಿಸಿ ಪ್ರೌಢ ಶಿಕ್ಷಣಕ್ಕೆಂದು ಸಿದ್ಧಗಂಗೆಗೆ ಆಗಮಿಸಿದರು. ಹಿರಿಯ ಚೇತನ ಶ್ರೀ ಶಿವಕುಮಾರ ಸ್ವಾಮಿಗಳ ಸಾನಿಧ್ಯದಲ್ಲಿ ಸಂಸ್ಕಾರ ಪಡೆದು, ಸಾತ್ವಿಕ ಗುರುಗಳಾಗಿ ರೂಪುಗೊಂಡರು. ಸಂಸ್ಕೃತದಲ್ಲಿ ಅಧ್ಯಯನ ಮಾಡಿ ಸಿದ್ಧಗಂಗೆಯ ಸಂಸ್ಕೃತ ಪಾಠಶಾಲೆಯಲ್ಲಿಯೇ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತದ ಅಧ್ಯಾಪಕರಾಗಿ ನೇಮಕಗೊಂಡಿದ್ದಾರೆ. ವೃತ್ತಿಯಲ್ಲಿದ್ದರೂ ಮೇದನಿ ಮಠದ ಧಾರ್ಮಿಕ ಆಚರಣೆಗಳಿಗೆ ಧಕ್ಕೆ ಬರದಂತೆ ನೋಡಿಕೊಳ್ಳುತ್ತಾ, ಬಿಡುವಿನ ವೇಳೆಯಲ್ಲಿ ಮಠದಲ್ಲಿ ಇದ್ದು ಮುಂದೆ ಮಾಡಬಹುದಾದ ಕೆಲಸಗಳಿಗೆ ವ್ಯವಸ್ಥೆ ಮಾಡಿಹೋಗುತ್ತಾರೆ. ಮಠದ ಆಸ್ತಿಯಾಗಿ ಹತ್ತು ಎಕರೆ ಜಮೀನಿದ್ದು, ಇದನ್ನು ಅಭಿವೃದ್ಧಿಗೊಳಿಸಿ ಧಾರ್ಮಿಕ ಚಟುವಟಿಕೆಗಳಿಗೆ ಉಪಯೋಗಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಹಳೇ ಮಠದಲ್ಲಿರುವ ಎರಡು ಗದ್ದುಗೆಗಳಿಗೆ ಪೂಜಾಕಾರ್ಯ ನಡೆಯಲು ವ್ಯವಸ್ಥೆ ಮಾಡಿರುವ ಗುರುಗಳು ತೋಪಿನ ಮಠದ ಜವಾಬ್ದಾರಿಯನ್ನು ತೆಗೆದುಕೊಂಡು ಅಭಿವೃದ್ಧಿಪಡಿಸುತ್ತಿದ್ದಾರೆ. ಕಾರ್ತೀಕ, ಶ್ರಾವಣ ಮಾಸಗಳಲ್ಲಿ ಹಾಗೂ ಶಿವರಾತ್ರಿಯಲ್ಲಿ ವಿಶೇಷ ಪೂಜೆಯನ್ನು ನಡೆಸುತ್ತಾರೆ. ಅಲ್ಲದೆ ಭಜನೆ ಹಾಗೂ ಉಪನ್ಯಾಸ ಕಾರ್ಯಕ್ರಮಗಳನ್ನು ನಡೆಸುತ್ತಾ, ಧರ್ಮ ಪ್ರಸಾರ ಕಾರ್ಯಕ್ರಮವನ್ನು ಮಾಡುತ್ತಾ ಬಂದಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಪಟ್ಟದಮಠ, ಮೇದಿನಿ, ಟಿ.ನರಸೀಪುರ ತಾ. ಮೈಸೂರು ಜಿಲ್ಲೆ.

ರಾಮೇಗೌಡನಪುರ

ಟಿ.ನರಸೀಪುರ ತಾಲ್ಲೂಕಿನ ರಾಮೇಗೌಡನಪುರವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹನ್ನೆರಡು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಪಟ್ಟದಮಠವು ಅಸ್ತಿತ್ವದಲ್ಲಿದೆ.

ಪಟ್ಟದಮಠ: ರಾಮೇಗೌಡನಪುರ ಗ್ರಾಮದ ಮಧ್ಯಭಾಗದಲ್ಲಿ ಶ್ರೀಶೈಲ ಪೀಠದ ಶಾಖಾಮಠವಾದ ಪುತ್ರವರ್ಗದ ಪರಂಪರೆಯ, ಶ್ರೀ ಪಟ್ಟದಮಠವು ಸ್ಥಾಪನೆಯಾಗಿ ಧರ್ಮಜಾಗೃತಿಯನ್ನುಂಟು ಮಾಡಿದೆ.

ಮರೆಯಾದ ಪರಂಪರೆ: ಈ ಮಠದ ಪರಂಪರೆಯಲ್ಲಿ ಅನೇಕ ಮಠಾಧೀಶರು ಅಧಿಕಾರ ನಡೆಸಿದ್ದಾರೆಂದು ಹೇಳಲಾಗುತ್ತಿದ್ದರೂ ಆ ಹೆಸರುಗಳ ದಾಖಲೆ ಇಲ್ಲದ ಕಾರಣ ಹಿಂದಿನ ಪರಂಪರೆಯನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ. ಆದರೆ ಮಠದ ಆವರಣದಲ್ಲಿ ಒಟ್ಟು ನಾಲ್ಕು ಗದ್ದುಗೆಗಳಿದ್ದು, ಈ ಆಧಾರದ ಮೇಲೆ ಪರಂಪರೆಯಲ್ಲಿ ಈಗಿನ ಗುರುಗಳು ಸೇರಿದಂತೆ ಒಟ್ಟು ಐದು ಜನ ಗುರುಗಳ ಹೆಸರನ್ನು ಮಾತ್ರ ದಾಖಲಿಸಬಹುದಾಗಿದೆ.

ಪ್ರಸಿದ್ಧಿ ಪಡೆದ ಮಠ: ಶ್ರೀ ಸಿದ್ಧಬಸವ ಶಿವಾಚಾರ್ಯ ಸ್ವಾಮಿಗಳು ಈ ಮಠದ ಅಧಿಕಾರಕ್ಕೆ ಬಂದ ಮೇಲೆ ಮಠ ಹೆಚ್ಚು ಪ್ರಚಾರಕ್ಕೆ ಬಂದಿತು. ಮಠ ಇರುವುದು ಭಕ್ತರ ಒಳಿತಿಗಾಗಿ ಎಂದು ಅರಿತ ಗುರುಗಳು, ಭಕ್ತರಿಗಾಗಿ ತಮ್ಮ ಎಲ್ಲಾ ಅವಧಿಯನ್ನು ಮೀಸಲಿಟ್ಟು, ಸದಾ ಧರ್ಮಜಾಗೃತರನ್ನಾಗಿ ಮಾಡುತ್ತಿದ್ದರು. ಅಲ್ಲದೆ ವಾಟಾಳು ಮಠದ ಹಿರಿಯ ಗುರುಗಳ ನೆರವು ಹಾಗು ಮಾರ್ಗದರ್ಶನ ಪಡೆದು ಮಠವನ್ನು ಹೆಚ್ಚು ಪ್ರಚಾರಕ್ಕೆ ತಂದರು. ಅಲ್ಲದೆ ಪುತ್ರವರ್ಗದ ಮಠವಾದ ಕಾರಣ ತಮ್ಮ ಸಹೋದರ ಸಂಬಂಧಿಯಲ್ಲಿ ಯೋಗ್ಯ ವಟುವೊಬ್ಬರನ್ನು ನೇಮಿಸಿಕೊಂಡು, ಧಾರ್ಮಿಕ ಸಂಸ್ಕಾರ ನೀಡಿ ತಮ್ಮ ಉತ್ತರಾಧಿಕಾರಿಗಳಿಗೆ

ಶ್ರೀ ಮಹಾಲಿಂಗಪ್ರಭು ಶಿವಾಚಾರ್ಯ ಸ್ವಾಮಿಗಳು ಎಂದು ಅಭಿದಾನ ಮಾಡಿ ೧೯೮೪ ಮೇ ಹದಿನೈದರಂದು ಪಟ್ಟಾಧಿಕಾರ ವಹಿಸಿಕೊಟ್ಟರು. ಮಠದಲ್ಲಿ ವಿಶ್ರಾಂತ ಜೀವನ ನಡೆಸಿದ್ದ ಶ್ರೀ ಸಿದ್ಧಬಸವ ಶಿವಾಚಾರ್ಯ ಸ್ವಾಮಿಗಳು, ೧೯೯೫ರ ಮೇ ಇಪ್ಪತ್ತೇಳರಂದು ಲಿಂಗೈಕ್ಯರಾದರು.

ಅಧಿಕಾರಕ್ಕೆ ಬಂದ ಗುರು: ಶ್ರೀ ಸಿದ್ಧಬಸವ ಶಿವಾಚಾರ್ಯ ಸ್ವಾಮಿಗಳ ಮಾರ್ಗದರ್ಶನದಲ್ಲಿ ಬೆಳೆದ ಶ್ರೀ ಮಹಾಲಿಂಗಪ್ರಭು ಶಿವಾಚಾರ್ಯ ಸ್ವಾಮಿಗಳು ಸಿದ್ಧಗಂಗೆಯಲ್ಲಿ ವಿದ್ಯಾಭ್ಯಾಸ ಮುಗಿಸಿ, ತಮ್ಮ ಪರಿಶ್ರಮ ಹಾಗು ಹಿರಿಯ ಗುರುಗಳ ಆಶೀರ್ವಾದದ ಫಲದಿಂದ ಸಂಸ್ಕೃತದಲ್ಲಿ ಎಂ.ಎ.ಪದವಿ ಪಡೆದು ಮಠಕ್ಕೆ ಆಗಮಿಸಿದರು. ಮಠದ ಪೂರ್ಣ ಜವಾಬ್ದಾರಿ ತೆಗೆದುಕೊಂಡ ಇವರು ಹಳೆಯ ಕಟ್ಟಡವನ್ನು ನವೀಕರಿಸಿ ವಿಸ್ತಾರಗೊಳಿಸಿದ್ದಾರೆ. ಪುರಾತನ ಗದ್ದುಗೆಗಳಿಗೆ ಕಲ್ಲು ಕಟ್ಟಡ ಕಟ್ಟಿಸಲಾಗಿದೆ. ಅಲ್ಲದೆ ಮಠದ ಒಳಗೆ ಇರುವ ಶ್ರೀ ಸಿದ್ಧಬಸವ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಗೆ ಮಂಟಪ ನಿರ್ಮಿಸಲಾಗಿದೆ. ಮಠದ ಆಸ್ತಿಯಾಗಿರುವ ಹನ್ನೆರಡು ಎಕರೆ ಜಮೀನನ್ನು ನೀರಾವರಿಗೆ ಯೋಗ್ಯಗೊಳಿಸಿ, ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಮಹಾಲಿಂಗಪ್ರಭು ಶಿವಾಚಾರ್ಯ ಸ್ವಾಮಿಗಳು, ಶ್ರೀ ಪಟ್ಟದಮಠ, ರಾಮೇಗೌಡನಪುರ. ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.

ವಾಟಾಳು

ಟಿ.ನರಸೀಪುರ ತಾಲ್ಲೂಕಿನ ವಾಟಾಳು ಗ್ರಾಮವು ತಾಲ್ಲೂಕು ಕೇಂದ್ರ ಸ್ಥಳದಿಂದ ದಕ್ಷಿಣಕ್ಕೆ ಹತ್ತು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಸಂಸ್ಥಾನಮಠವು ಅಸ್ತಿತ್ವದಲ್ಲಿದೆ.

ಸಂಸ್ಥಾನಮಠ: ವಾಟಾಳು ಗ್ರಾಮದಲ್ಲಿ ಶ್ರೀಶೈಲ ಪೀಠದ ಪರಂಪರೆಯ ಶ್ರೀ ಸಂಸ್ಥಾನಮಠವು ಸ್ಥಾಪನೆಯಾಗಿದೆ. ಈ ಮಠವು ಸುಮಾರು ಹತ್ತನೆಯ ಶತಮಾನದಲ್ಲಿ ಪ್ರಾರಂಭವಾಗಿ ಭಕ್ತರ ಉನ್ನತಿಗಾಗಿ ಹಗಲಿರುಳು ಶ್ರಮಿಸುತ್ತಿದೆ.ಮಠದ ಸ್ಥಾಪಕರೆಂದು ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳೆಂದು ಹೇಳಲಾಗುತ್ತದೆ.

ಬಸವನ ಕಥೆ: ಈ ಮಠದಲ್ಲಿ ಹಿಂದಿನಿಂದಲೂ ಬಸವನನ್ನು ಸಾಕಿದ್ದರು. ಗುರುಗಳು ಹೇಳುತ್ತಿದ್ದ ಮಾತುಗಳೆಲ್ಲಾ ಬಸವನಿಗೆ ಅರ್ಥವಾಗುತ್ತಿತ್ತು. ನಿತ್ಯವೂ ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ಅದಕ್ಕೆ ಸ್ನಾನ, ಪೂಜೆಮಾಡಿ ಕೊರಳಿಗೆ ಜೋಳಿಗೆಯನ್ನು ನೇತುಹಾಕಿ ಕಂತೆ ಭಿಕ್ಷಕ್ಕೆ ಕಳುಹಿಸುತ್ತಿದ್ದರಂತೆ. ಸುತ್ತಲ ಗ್ರಾಮಗಳಲ್ಲಿ ದಿನಕ್ಕೊಂದು ಗ್ರಾಮದಂತೆ ಹೋಗಿ ಮನೆಮನೆಗಳ ಮುಂದೆ ಕೊರಳ ಗಂಟೆಯನ್ನು ಸದ್ದು ಮಾಡಿ ನಿಲ್ಲುತ್ತಿತ್ತು.ಆಗ ಭಕ್ತರು ಅದರ ಜೋಳಿಗೆಗೆ ಭಿಕ್ಷೆಯನ್ನು ಹಾಕುತ್ತಿದ್ದರಂತೆ. ಬಸವ ಕಾಯಕದ ನಿಗದಿತ ಮನೆಗಳನ್ನು ಮುಗಿಸಿದ ಮೇಲೆ ಭಿಕ್ಷವನ್ನು ಗುರುಗಳಿಗೆ ತಂದು ಕೊಡುತ್ತಿತ್ತು. ಗುರುಗಳು ಇದರಿಂದ ದಾಸೋಹವನ್ನು ಮಾಡುತ್ತಿದ್ದರಂತೆ.

ಒಂದು ದಿನ ಬಸವ ಭಿಕ್ಷೆ ಎತ್ತಿಕೊಂಡು ಬರುತ್ತಿರುವಾಗ ದಾರಿ ಮಧ್ಯದ ಕನಕಮ್ಮನ ಬೆಟ್ಟದ ಗವಿಯಲ್ಲಿ ವಾಸವಾಗಿದ್ದ ಕಾಡು ಜನರು ಯಾವ ಬೇಟೆಯೂ ಸಿಗದಿದ್ದ ಕಾರಣಕ್ಕೆ ದಾರಿಯಲ್ಲಿ ಬರುತ್ತಿದ್ದ ಬಸವನನ್ನು ಹತ್ಯೆಗೈದರು. ಇತ್ತ ಮಠದಲ್ಲಿ ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳಿಗೆ ಆತಂಕ ಹೆಚ್ಚಾಗಿ ಪೂಜೆಗೆ ಕುಳಿತವರು ಲಿಂಗವನ್ನು ಕೈಯಲ್ಲಿ ಹಿಡಿದು ಬೆಟ್ಟದ ಗವಿಯ ಬಳಿ ಬಂದು'ಬಾ ಬಸವ, ಬಾರೋ. ಇಂದೇಕೆ ತಡ ಮಾಡಿದೆ'ಎಂದು ಕೂಗುತ್ತಾರೆ. ಆಗ ಎಲ್ಲರೂ ಸೋಜಿಗ ಪಡುವಂತೆ ಬಸವ ಗುಟುರು ಹಾಕುವ ಶಬ್ದ ಕೇಳಿಸಿತು. ಈ ಶಬ್ದಕ್ಕೆ ಕಾಡುಜನರು ದಿಕ್ಕಾಪಾಲಾಗಿ ಓಡಿದರು. ಬಸವನ ಶಬ್ದ ಬಂತೆ ವಿನಃ ಬಸವ ಬರಲಿಲ್ಲ. ಹತ್ಯೆಗೊಂಡ ಬಸವನನ್ನು ನೋಡಿ ಮನನೊಂದು ದುಃಖತಪ್ತರಾಗಿ ಮಠಕ್ಕೆ ಬಂದ ಗುರುಗಳು ಇದೇ ಕೊರಗಿನಲ್ಲಿ ಹಾಸಿಗೆ ಹಿಡಿಯುತ್ತಾರೆ. ಬಸವನ ನೆನಪು ಸದಾ ಉಳಿಯಬೇಕೆಂದು ಕನಕಮ್ಮನ ಬೆಟ್ಟದ ಬುಡದಲ್ಲಿ ಬಸವನ ಮೂರ್ತಿಯನ್ನು ಪ್ರತಿಷ್ಠಾಪಿಸಿ ದೇವಾಲಯವನ್ನು ನಿರ್ಮಿಸಿ, ನಿತ್ಯಪೂಜೆಗೆ ವ್ಯವಸ್ಥೆ ಮಾಡಿದರು. ಇದಾದ ನಂತರ ಬಸವನ ಚಿಂತೆಯಲ್ಲಿಯೇ ಕೊರಗಿದ ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ಜೀವಂತ ಸಮಾಧಿ ಹೊಂದಿದರು ಎಂದು ಜನಪದ ಕಥೆ ಕೇಳಿಬರುತ್ತದೆ.

ಪರಂಪರೆ:

೧. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಗುರುಸಿದ್ಧ ದೇಶಿಕೇಂದ್ರಸ್ವಾಮಿಗಳು
೩. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು

ಪರಂಪರೆಯಲ್ಲಿ ಅನೇಕ ಗುರುಗಳು ಅಧಿಕಾರ ನಡೆಸಿದ್ದಾರೆ. ಆದರೆ ಆಧಾರಗಳ ಕೊರತೆಯಿಂದ ಕೇವಲ ನಾಲ್ಕು ಜನ ಗುರುಗಳ ಹೆಸರನ್ನು ದಾಖಲಿಸಲಾಗಿದೆ. ಕರ್ತೃಗುರುಗಳಾದ ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲದ ಕಾರಣ ಮಠದ ಪರಂಪರೆಯನ್ನು ದಾಖಲಿಸಲು ತೊಡಕಾಗಿದೆ. ಶ್ರೀ ಗುರುಸಿದ್ಧ ದೇಶಿಕೇಂದ್ರ ಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ದಾಸೋಹ ಮೂರ್ತಿಗಳಾಗಿದ್ದ ಕಾರಣ ಇವರನ್ನು 'ಶ್ರೀ ಅನ್ನದಾನಿ ಮಹಾಪ್ರಭು' ಎಂದು ಕರೆಯುತ್ತಿದ್ದರು. ಇವರ ಕಾಲದಲ್ಲಿ ದಾಸೋಹ ನಿರಂತರವಾಗಿ ನಡೆಯುತ್ತಿತ್ತು ಎಂದು ಹೇಳಲಾಗುತ್ತಿದೆ. ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ೧೯೭೨ರ ಮೇ ಹದಿಮೂರರಂದು ಲಿಂಗೈಕ್ಯರಾದರು. ನಂತರ ೧೯೭೨ರ ಮೇ ಇಪ್ಪತ್ನಾಲ್ಕರಂದು ಶ್ರೀ ಪರಶಿವಮೂರ್ತಿ ಎಂಬ ಮರಿದೇವರು 'ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿ'ಗಳೆಂದು ಅಭಿದಾನ ಪಡೆದು ಪಟ್ಟಾಧಿಕಾರ ವಹಿಸಿಕೊಂಡಿದ್ದಾರೆ. ಸುತ್ತೂರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ನೇತೃತ್ವದಲ್ಲಿ ಪಟ್ಟಾಧಿಕಾರದ ಸಮಾರಂಭ ಅತ್ಯಂತ ಅದ್ಧೂರಿಯಾಗಿ ನಡೆಯಿತು. ದಾಸೋಹಕ್ಕೆ ಹೆಸರಾಗಿರುವ ಈ ಮಠದಲ್ಲಿ ಕ್ರಿಯಾಶೀಲ ಗುರುಗಳಾದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಧಾರ್ಮಿಕ ಕಾರ್ಯಗಳ ಜೊತೆಗೆ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಾ, ಮಠದಲ್ಲಿ ಸಾಹಿತ್ಯ ಸಮ್ಮೇಳನಗಳು, ನಾಟಕ,ಕಲೆ ಹಾಗೂ ಕುಂಭಮೇಳಕ್ಕೆ ಸಂಪೂರ್ಣ ಸಹಕಾರ ನೀಡುತ್ತಾ, ಅನೇಕ ಚಟುವಟಿಕೆಗಳ ಪ್ರೇರಕ ಶಕ್ತಿಯಾಗಿ ಬೆಳೆದಿದ್ದಾರೆ.

ಗದ್ದುಗೆಗಳು: ಮಠದ ಒಳ ಆವರಣದಲ್ಲಿ ಕರ್ತೃಗುರುಗಳ ಗದ್ದುಗೆಯನ್ನು ನಿರ್ಮಿಸಿ, ಗದ್ದುಗೆಯ ಮೇಲೆ ಲಿಂಗ ಪ್ರತಿಷ್ಠಾಪಿಸಿ ನಾಗರಹೆಡೆಯ ಬೆಳ್ಳಿಯ ಮುಖವಾಡವನ್ನು ತೊಡಿಸಲಾಗಿದೆ. ಸ್ವಾಮಿಗಳ ಪಾದುಕೆಗಳನ್ನು ಪೂಜೆಗೆ ಇಡಲಾಗಿದೆ. ಇತರೆ ಮೂರು ಮಂಟಪಗಳಲ್ಲಿ ಒಂದು ಮಂಟಪದಲ್ಲಿ ಮೂರು ಗದ್ದುಗೆಗಳು, ಇನ್ನೆರಡು ಮಂಟಪಗಳಲ್ಲಿ ತಲಾ ಎರಡೆರಡು ಗದ್ದುಗೆಗಳನ್ನು ನಿರ್ಮಿಸಿದ್ದಾರೆ. ಈ ರೀತಿ ಮಠದ ಆವರಣದಲ್ಲಿ ಒಟ್ಟು ಎಂಟು ಗದ್ದುಗೆಗಳಿದ್ದು, ಪರಂಪರೆಯ ಇತರೆ ಸ್ವಾಮಿಗಳ ಗದ್ದುಗೆಗಳು ಬೇರೆ ಕಡೆ ಇರಬಹುದೆಂದು ಈಗಿನ ಮಠಾಧೀಶರು ಅಭಿಪ್ರಾಯಿಸುತ್ತಾರೆ.

ಧಾರ್ಮಿಕ ಕಾರ್ಯಗಳು: ಶ್ರೀ ವಾಟಾಳು ಸಂಸ್ಥಾನ ಮಠವು ಪ್ರತಿ ವರ್ಷ ಕರ್ತೃ ಗುರುಗಳ ಹಾಗೂ ಇಲ್ಲಿನ ಗದ್ದುಗೆಗಳ ಹೆಸರಿನಲ್ಲಿ ಆರಾಧನೆ ಕಾರ್ಯಕ್ರಮವನ್ನು ಹಮ್ಮಿಕೊಂಡು, ನಾಡಿನ ಹೆಸರಾಂತ ವಿದ್ವಾಂಸರು ಹಾಗೂ ವಿವಿಧ ಮಠಾಧೀಶರನ್ನು ಕರೆಸಿ.ವಿವಿಧ ಕ್ಷೇತ್ರಗಳಲ್ಲಿ ದುಡಿದ ಗಣ್ಯರಿಗೆ ಸನ್ಮಾನಿಸುವ ಬೃಹತ್ ಕಾರ್ಯಕ್ರಮವನ್ನು ಏರ್ಪಡಿಸುತ್ತಿದೆ. ಪ್ರತಿವರ್ಷ ಶ್ರಾವಣಮಾಸದಲ್ಲಿ ಪ್ರವಚನ, ಕಾರ್ತೀಕ ಮಾಸದಲ್ಲಿ ಕಾರ್ತೀಕೋತ್ಸವ, ಅಮಾವಾಸ್ಯೆ ಹಾಗೂ ಹುಣ್ಣಿಮೆಯಲ್ಲಿ ಪ್ರವಚನ ಏರ್ಪಡಿಸಲಾಗುತ್ತಿದೆ. ಈ ಸಂದರ್ಭಗಳಲ್ಲಿಯೇ ಅಲ್ಲದೆ ನಿತ್ಯ ಅನ್ನದಾಸೋಹವನ್ನು ನಡೆಸಲಾಗುತ್ತಿದೆ. ಮಹಾಶಿವರಾತ್ರಿ ಮತ್ತು ಗೌರಿಹಬ್ಬಗಳನ್ನು ಸಾಮೂಹಿಕವಾಗಿ ಗ್ರಾಮದ ಭಕ್ತರು ಮಠದಲ್ಲಿ ಗುರುಗಳ ಸಮ್ಮುಖದಲ್ಲಿ ಆಚರಣೆ ಮಾಡುತ್ತಾರೆ. ಜಾತಿಭೇದವಿಲ್ಲದೆ ಎಲ್ಲಾ ಜಾತಿಯ ಜನ ಮಠದೊಡನೆ ಭಕ್ತಿಪೂರ್ಣ ಸಂಬಂಧವನ್ನಿಟ್ಟುಕೊಂಡು, ಮಠದ ಎಲ್ಲಾ ಕಾರ್ಯಗಳಿಗೆ ಸ್ವಯಂ ಸ್ಫೂರ್ತಿಯಿಂದ ಪಾಲ್ಗೊಳ್ಳುತ್ತಿದ್ದಾರೆ.

ಮಠದ ಆಸ್ತಿಯಾಗಿ ನೂರುಎಕರೆ ನೀರಾವರಿ ಜಮೀನಿದ್ದು ಮಠಕ್ಕೆ ಹೆಚ್ಚು ಆದಾಯ ತರುತ್ತಿದೆ. ಮಠದ ಕಟ್ಟಡ ವಿಶಾಲವಾಗಿದ್ದು ಅಗತ್ಯಕ್ಕೆ ತಕ್ಕಂತೆ ವಿಸ್ತರಿಸುತ್ತಾ, ಮೂಲ ಕಟ್ಟಡಕ್ಕೆ ಧಕ್ಕೆ ಬರದಂತೆ ನವೀಕರಿಸುತ್ತಾ ಭವ್ಯತೆಯ ಮೆರುಗು ಕೊಡಲಾಗಿದೆ. ಮಠದಲ್ಲಿ ಓಲೆಗರಿಗಳ ಕಟ್ಟುಗಳು ದೊರೆತಿದ್ದು, ಇವುಗಳು ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧಕರ ಬಳಿ ಇವೆ. ಶಿಲಾಶಾಸನಗಳು ಹಾಗೂ ತಾಮ್ರ ಶಾಸನಗಳು ಮಠದಲ್ಲಿ ದೊರೆತಿವೆ.

ವಿಳಾಸ: ಷ.ಬ್ರ. ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು. ಶ್ರೀ ಸಂಸ್ಥಾನಮಠ. ವಾಟಾಳ್. ಟಿ.ನರಸೀಪುರ ತಾ. ಮೈಸೂರು ಜಿಲ್ಲೆ.

ವೀರಪ್ಪಒಡೆಯರಹುಂಡಿ

ಟಿ.ನರಸೀಪುರ ತಾಲ್ಲೂಕಿನ ವೀರಪ್ಪಒಡೆಯರ ಹುಂಡಿಯು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ನಾಲ್ಕು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಪಟ್ಟದಮಠವು ಅಸ್ತಿತ್ವದಲ್ಲಿದೆ.

ಪಟ್ಟದಮಠ: ವೀರಪ್ಪಒಡೆಯರ ಹುಂಡಿ ಗ್ರಾಮದಲ್ಲಿ ಪುರಾತನ ಕಾಲದಲ್ಲಿ ಸ್ಥಾಪನೆಯಾಗಿದ್ದ ಮಠದಲ್ಲಿ ಕಾಲಕ್ರಮೇಣ ಗುರುಗಳಿಲ್ಲದೆ ಧಾರ್ಮಿಕ ಚಟುವಟಿಕೆಗಳು ಸ್ಥಗಿತಗೊಂಡಿದ್ದವು. ೧೯೫೭ರಲ್ಲಿ ಮಠವು ಪುನಃ ಸ್ಥಾಪನೆಗೊಂಡು, ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸತೊಡಗಿದೆ. ಶ್ರೀ ತೋಂಟದಾರ್ಯ ಶಿವಾಚಾರ್ಯ ಸ್ವಾಮಿಗಳು ವೀರಪ್ಪಒಡೆಯರ ಹುಂಡಿಯ ಪುನರ್‌ಸ್ಥಾಪಿತ ಪಟ್ಟದ ಮಠದ ಮೊದಲ ಗುರುಗಳಾಗಿ ಅಧಿಕಾರವನ್ನು ವಹಿಸಿಕೊಂಡು, ವಿದ್ಯಾಭ್ಯಾಸಕ್ಕೆಂದು ಮೈಸೂರಿಗೆ ತೆರಳಿದರು. ಸುತ್ತೂರು ಮಠದ ಗುರುಕುಲದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಸಂದರ್ಭದಲ್ಲಿ ಶ್ರೀ ತೋಂಟದಾರ್ಯ ಸ್ವಾಮಿಗಳ ಪಾಂಡಿತ್ಯವನ್ನು ಗಮನಿಸಿದ ಹುಣಸೂರು ತಾಲ್ಲೂಕಿನ ಮಾದಹಳ್ಳಿಯ ಭಕ್ತರು, ಉಕ್ಕಿನ ಕಂತೆಯ ಮಠಕ್ಕೆ ನೇಮಕ ಮಾಡಿಕೊಂಡರು. ಇದರಿಂದಾಗಿ ೧೯೭೭ರಿಂದ ಈ ಮಠವು ಪುನಃ ಖಾಲಿ ಉಳಿಯುವಂತಾಯಿತು.

ಪುನರ್‌ಸ್ಥಾಪನೆಗೊಂಡ ಕೇವಲ ಇಪ್ಪತ್ಮೂರು ವರ್ಷಗಳಲ್ಲೇ ಮಠ ಖಾಲಿ ಉಳಿಯುವಂತಾಯಿತು. ಇದನ್ನು ನೋಡಿದ ಗ್ರಾಮದ ಭಕ್ತರು ಮಳವಳ್ಳಿ ತಾಲ್ಲೂಕಿನ ಹಣಕೊಳ ಗ್ರಾಮದ ಶ್ರೀ ಶಿವಬಸವ ದೇವರು ಮತ್ತು ಶ್ರೀಮತಿ ಪುಟ್ಟಸುಬ್ಬಮ್ಮನವರ ಪುತ್ರರಾಗಿ ೧೯೫೫ ರಲ್ಲಿ ಸೆಪ್ಟೆಂಬರ್ ಹದಿನೈದರಂದು ಜನಿಸಿದ ಶ್ರೀ ರೇಣುಕ ದೇವರನ್ನು, ಉತ್ತರಾಧಿಕಾರಿಗಳನ್ನಾಗಿ ಆಯ್ಕೆಮಾಡಿ ದರು. ನಂತರ ೧೯೭೭ರ ಆಗಸ್ಟ್ ಹದಿನೇಳರಂದು ಮಠದ ಎರಡನೆಯ ಗುರುಗಳನ್ನಾಗಿ ಪಟ್ಟಾಧಿಕಾರ ಮಾಡಿದರು. ವೇದ ಹಾಗೂ ಜ್ಯೋತಿಷ್ಯ ಕಲಿತ ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು, ನಾಲ್ಕುಎಕರೆ ಜಮೀನನ್ನು ಅಭಿವೃದ್ಧಿಪಡಿಸಿ ಮಠವನ್ನು ಮುನ್ನಡೆಸಿದ್ದಾರೆ. ಕಂತೆ ಭಿಕ್ಷಕಾಯಕ ಪ್ರಾರಂಭಿಸಿ ಶಾಲೆಯ ಬಡ ಮಕ್ಕಳು, ಅಸಹಾಯಕರು ಹಾಗೂ ಮಠಕ್ಕೆ ಬರುವ ಭಕ್ತರಿಗೆ ಅನ್ನದಾಸೋಹ ನಡೆಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು, ಶ್ರೀ ಪಟ್ಟದಮಠ, ವೀರಪ್ಪಒಡೆಯರ ಹುಂಡಿ, ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.

ಸೋಸಲೆ

ಟಿ. ನರಸೀಪುರ ತಾಲ್ಲೂಕಿನ ಸೋಸಲೆಯು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ನಾಲ್ಕು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ತೋಪಿನಮಠವು ಅಸ್ತಿತ್ವದಲ್ಲಿದೆ.

ತೋಪಿನಮಠ: ಸೋಸಲೆ ಗ್ರಾಮದ ಹೊರವಲಯದಲ್ಲಿ ಹಸಿರು ಗದ್ದೆಗಳ ಬಯಲಿನಲ್ಲಿ ಕಾವೇರಿ ನದಿಯ ದಂಡೆಯಲ್ಲಿ ಶ್ರೀ ತೋಪಿನಮಠವು ಸ್ಥಾಪನೆಯಾಗಿದೆ. ಹಲಸು, ಮಾವು, ನೇರಳೆ, ಆಲ, ಬೇವು ಮುಂತಾದ ವೃಕ್ಷಗಳಿಂದ ಆವೃತವಾದ ತೋಪಿನ ಮಧ್ಯದಲ್ಲಿ ಸ್ಥಾಪನೆಗೊಂಡಿದ್ದ ರಿಂದ ಈ ಮಠಕ್ಕೆ 'ಶ್ರೀ ತೋಪಿನಮಠ' ಎಂಬ ಹೆಸರು ಬಂದಿದೆ. ಆದರೆ ಕಾಡಿನಂತಿದ್ದ ಪ್ರದೇಶ ಇತ್ತೀಚೆಗೆ ಕಾವೇರಿ ನದಿಯ ನೀರಿನ ಆಸರೆಯಲ್ಲಿ ಬಯಲು ಗದ್ದೆಗಳಾಗಿ ರೂಪಾಂತರಗೊಂಡು ತೋಪು ಕಾಣದಂತಾಗಿದೆ. ಆದರೂ ಮಠದ ಹೆಸರು ತೋಪಿನ ಮಠವಾಗಿ ಮುಂದುವರೆದಿದೆ.

ಕಾಶಿಲಿಂಗ ಸ್ಥಾಪನೆ: ಮಠದ ಮೂಲಕರ್ತೃಗಳಾದ ಶ್ರೀ ವಿರೂಪಾಕ್ಷ ಸ್ವಾಮಿಗಳು ಕಾಶಿಯಿಂದ ಲಿಂಗವನ್ನು ತಂದು ತ್ರಿವೇಣಿ ಸಂಗಮ ಕ್ಷೇತ್ರದಲ್ಲಿ ಪ್ರತಿಷ್ಠಾಪಿಸಿ, ಈ ಪ್ರದೇಶವು ಪುಣ್ಯ ಸ್ಥಳವಾಗಿ ಬೆಳೆಯಲು ಅನುವು ಮಾಡಿಕೊಟ್ಟರು. ಸುಮಾರು ಇನ್ನೂರು ವರ್ಷಗಳ ಹಿಂದೆ ಕಾಶಿಯಿಂದ ಆಗಮಿಸಿದ ಮಹಾಮಹಿಮರಾದ ಶ್ರೀ ವಿರೂಪಾಕ್ಷ ಸ್ವಾಮಿಗಳು ಸೋಸಲೆಯ ತೋಪಿನ ಮಠದ ಸ್ಥಾಪಕರು. ಇವರು ಉತ್ತರದ ಕಡೆಯಿಂದ ಸಿದ್ಧಿ ಪಡೆದು, ಲೋಕೋದ್ಧಾರಕ್ಕಾಗಿ ಲೋಕಸಂಚಾರ ಮಾಡುತ್ತಾ ಅನೇಕ ಸ್ಥಳಗಳನ್ನು ಜಾಗೃತ ಕ್ಷೇತ್ರಗಳನ್ನಾಗಿ ಮಾಡಿ, ಈ ತ್ರಿವೇಣಿ ಸಂಗಮಕ್ಕೆ ಬಂದು ಶ್ರೀ ಸಂಗಮೇಶ್ವರ ಕೃಪೆಗೆ ಪಾತ್ರರಾಗಿ

ಇಲ್ಲಿ ನೆಲೆಸುತ್ತಾರೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ವಿರೂಪಾಕ್ಷಸ್ವಾಮಿಗಳು (ಸ್ಥಾಪಕರು)
೨. ಶ್ರೀ ಮ.ನಿ.ಪ್ರ. ಚನ್ನಬಸವಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಪಂಚಾಕ್ಷರಿಸ್ವಾಮಿಗಳು.
೪. ಶ್ರೀ ಮ.ನಿ.ಪ್ರ. ಷಡಕ್ಷರಿಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ವಿರೂಪಾಕ್ಷಸ್ವಾಮಿಗಳು (ಈಗಿನವರು)

ಈ ರೀತಿ ಐದು ತಲೆಮಾರುಗಳನ್ನು ಕಂಡು ತೋಪಿನಮಠದ ಪರಂಪರೆ ಬೆಳೆದು ಬಂದಿದೆ. ಎರಡನೆಯ ಗುರುಗಳಾದ ಶ್ರೀಚನ್ನ ಬಸವ ಸ್ವಾಮಿಗಳು ತಿರುವಣ್ಣಮಲೈದಿಂದ ಬಂದು ಶ್ರೀ ವಿರೂಪಾಕ್ಷ ಸ್ವಾಮಿಗಳ ಸೇವೆಮಾಡುತ್ತಾ, ಅವರಿಂದ ಸಂಸ್ಕಾರ ಪಡೆದು ಮಹಾನ್ ಯೋಗಿಗಳಾದರು. ಇವರ ನಂತರ ಬಂದ ಶ್ರೀ ಪಂಚಾಕ್ಷರಿ ಸ್ವಾಮಿಗಳು ಸದಾ ಪದ್ಮಾಸನ ಭಂಗಿಯಲ್ಲಿ ಏಕಚಿತ್ತದಿಂದ ತಪೋನಿಷ್ಠರಾಗಿ ಕುಳಿತು ಆತ್ಮೋದ್ಧಾರ ಮಾಡಿಕೊಳ್ಳುತ್ತಿದ್ದರು. ಆತ್ಮೋದ್ಧಾರದಿಂದ ಲೋಕೋದ್ಧಾರ ಎಂದು ಅರಿತು, ಸದಾಚಾರ ಸಂಪನ್ನರಾಗಿ, ವೀರಶೈವ ಧರ್ಮವನ್ನು ಬೆಳೆಸಿದರು. ಇವರು ಸೋಮನಾಥಪುರದ ಶ್ರೀ ಮಾದಪ್ಪ ಮತ್ತು ಶ್ರೀಮತಿ ಸಿದ್ಧಲಿಂಗಮ್ಮನವರ ಪುತ್ರರಾಗಿ ೧೮೭೦ರಲ್ಲಿ ಜನಿಸಿದ ಶ್ರೀ ಷಡಕ್ಷರಿ ಸ್ವಾಮಿಗಳನ್ನು ತಮ್ಮ ಉತ್ತರಾಧಿಕಾರಿ ಗಳನ್ನಾಗಿ ಮಾಡಿಕೊಂಡು ಮಠದ ಅಧಿಕಾರವನ್ನು ನೀಡಿದರು.

ವೀರ ವಿರಕ್ತ: ಶ್ರೀ ಷಡಕ್ಷರಿ ಶಿವಯೋಗಿಗಳು ಅಧಿಕಾರ ವಹಿಸಿಕೊಂಡು ತೋಪಿನ ಮಠಕ್ಕೆ ಬಂದಾಗ, ಮಠದ ಪಕ್ಕದಲ್ಲಿ ನಡೆಯುತ್ತಿದ್ದ ಸಂತೆಯಿಂದ ಮಠದ ವಾತಾವರಣ ಕಲುಷಿತಗೊಂಡಿತ್ತು. ಇವರು ಕರ್ತೃಗದ್ದುಗೆಯನ್ನು ಶುಚಿಗೊಳಿಸಿ ಮಠದ ಸುತ್ತಮುತ್ತ ಪ್ರಶಾಂತತೆ ನೆಲೆಸುವಂತೆ ಮಾಡಿದರು. ಶ್ರೀ ಷಡಕ್ಷರಿ ಶಿವಯೋಗಿಗಳು ಸ್ತ್ರೀಯರ ಮುಖ ನೋಡುವುದಿಲ್ಲ ಎಂಬ ಕಟ್ಟುನಿಟ್ಟಿನ ವ್ರತ ಪಾಲಿಸುತ್ತಿದ್ದರು. ಈ ಕಾರಣಕ್ಕಾಗಿಯೇ ಮಠದ ಸುತ್ತ ಆಳೆತ್ತರದ ತಡಿಕೆ ಕಟ್ಟಿಸಿಕೊಂಡಿದ್ದರು. ಹೀಗಿರುವಾಗ ಒಮ್ಮೆ ಹುಬ್ಬಳ್ಳಿ ಕಡೆಯಿಂದ ಶರಣಮ್ಮ ಹಾಗೂ ಅವರ ಸಹೋದರ ಶರಭಣ್ಣ ಬಂದಿದ್ದರು. ಆದರೆ ಶ್ರೀಷಡಕ್ಷರಿ ಸ್ವಾಮಿಗಳು ಅವರಿಗೆ ದರ್ಶನ ಕೊಟ್ಟಿರಲಿಲ್ಲ. ಮತ್ತೊಮ್ಮೆ ಶರಭಣ್ಣ ಗುರುಗಳ ಬಳಿಗೆ ಬಂದು 'ನಿಮ್ಮ ಶಿವಯೋಗನಿಷ್ಠೆ ಕೇಳಿ ವಿರಕ್ತಳಾದ ನನ್ನ ಸಹೋದರಿ ನಿಮ್ಮ ದರ್ಶನಕ್ಕೆ ಬಂದಿದ್ದಾಳೆ, ನೀವಾದರೋ ಹೆಣ್ಣಿಗೆ ಮುಖವನ್ನೇ ತೋರಿಸುವುದಿಲ್ಲ ಎಂದು ಹೇಳುತ್ತಿದ್ದೀರಿ ಹೋಗಲಿ, ನಿಮ್ಮ ಪಾದವನ್ನಾದರೂ ತೋರಿಸಿ'ಎಂದು ಬೇಡಿಕೊಂಡನು. ಕೊನೆಗೆ ಗುರುಗಳು ಪಾದಗಳನ್ನು ತೋರಿಸಲು ಒಪ್ಪಿದರು. ಈ ಮಾತುಗಳನ್ನು ಕೇಳಿ ಊರಿನ ಜನರೆಲ್ಲಾ ಆಶ್ಚರ್ಯಗೊಂಡು ನಿಶ್ಚಿತ ಸಮಯಕ್ಕೆ ಈ ದೃಶ್ಯ ನೋಡಲು ಬಂದರು. ನಿಶ್ಚಿತ ಸಮಯಕ್ಕೆ ಶರಭಣ್ಣನಿಗೆ ಕರೆಬರಲಿಲ್ಲ ಎಲ್ಲರೂ ತಳಮಳಗೊಂಡಿದ್ದರು. ನಂತರ ಕರೆಬಂದೊಡನೆ ಶರಭಣ್ಣನು ಗುರುಗಳ ಬಳಿಗೆ ಹೋಗಿ ನಮಸ್ಕರಿಸಿ ನಿಲ್ಲುತ್ತಾನೆ. ಗುರುಗಳು ಕರದಲ್ಲಿ ಲಿಂಗಹಿಡಿದು ಲಿಂಗದಲ್ಲಿ ನೆಟ್ಟ ನೋಟವನ್ನು ಬದಲಿಸದೆ, 'ಈಗಾಗಲೇ ಶರಣಮ್ಮ ನಮ್ಮ ಪಾದದರ್ಶನ ಮಾಡಿಹೋದಳು. ಅವಳೀಗ ಶಿವನೊಳಗೆ ಸೇರಿ ಹೋಗಿದ್ದಾಳೆ. ಮುಂದಿನ ಕೆಲಸ ಮುಗಿಸು' ಎಂದು ಹೇಳಿದರು. ಗುರುಗಳು ಹೇಳಿದ ಮಾತಿನ ಅರ್ಥಗೊತ್ತಾಗಿ ಶರಭಣ್ಣ ಶರಣಮ್ಮನ ಬಳಿಗೆ ಓಡೋಡಿ ಬಂದು ನೋಡುತ್ತಾನೆ. ಇಷ್ಟಲಿಂಗವನ್ನು ಕೈಯ್ಯಲ್ಲಿ ಹಿಡಿದು ಆಕೆ ಹಾಗೆಯೇ ಲಿಂಗೈಕ್ಯಳಾಗಿದ್ದಳು. ಲಿಂಗೈಕ್ಯಳಾದ ಶರಣಮ್ಮನ ಗದ್ದುಗೆಯನ್ನು ಮಠದ ಆವರಣದಲ್ಲಿ ನಿರ್ಮಿಸಲಾಗಿದೆ.

ಈ ರೀತಿ ವ್ರತ ಪರಿಪಾಲಕರಾಗಿ ಅನೇಕ ಸಂದರ್ಭಗಳನ್ನು ತಮ್ಮ ಯೋಗಸಿದ್ಧಿಯಿಂದ ನಿಗ್ರಹಿಸಿಕೊಂಡು, ವ್ರತಭಂಗ ಮಾಡಿಕೊಳ್ಳದೆ ಅಚಲವಾಗಿದ್ದರು. ಶ್ರೀಷಡಕ್ಷರ ಶಿವಯೋಗಿಗಳು ಸತ್ಯಶೋಧನೆಗೆ ವಿರಕ್ತರಾಗಿ,ಮಾನವ ಜನ್ಮದಲ್ಲಿ ಸಾಕ್ಷಾತ್ಕರಿಸಿಕೊಳ್ಳಬೇಕಾದ ಸತ್ಯಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡು ಮಹಾವಿರಕ್ತರಾಗಿ ಬದುಕಿದರು. ಇಂತಹ ಮಹಾಯೋಗಿ ಗಳನ್ನು ನೋಡಲು ಧಾರವಾಡದ ಶ್ರೀ ಮುರುಘಾ ಮಠದ ಶ್ರೀ ಮೃತ್ಯುಂಜಯ ಸ್ವಾಮಿಗಳು ಹಾಗೂ ಶ್ರೀ ಮಹಾಂತ ಸ್ವಾಮಿಗಳು, ಜಗದ್ಗುರು ಸುತ್ತೂರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು, ಗವಿಮಠದ ಶ್ರೀ ಗೌರಿಶಂಕರ ಸ್ವಾಮಿಗಳು ಹಾಗೂ ಅನೇಕ ಹಿರಿಯ ಮಠಾಧೀಶರು ತಪೋಮಠಕ್ಕೆ ಆಗಮಿಸಿದ್ದರು. ಕಟ್ಟುನಿಟ್ಟಿನ ವ್ರತಸ್ಥ, ವೀರವಿರಕ್ತ ಶಿವಯೋಗಿಗಳು

ತಮ್ಮ ಕೊನೆಯ ದಿನಗಳಲ್ಲಿ ಉತ್ತರಾಧಿಕಾರಿಗಳನ್ನು ಆಯ್ಕೆಮಾಡಿಕೊಳ್ಳಲು ಬಯಸಿ, ಶ್ರೀ ಕುಸಪ್ಪ ಮತ್ತು ಶ್ರೀಮತಿ ರುದ್ರಮ್ಮನವರ ಪುತ್ರರಾದ ಹತ್ತು ವರ್ಷದ ಬಾಲಕ ಬಸವರಾಜ ದೇವರನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡು ನಿರ್ವಿಕಲ್ಪ ಸಮಾಧಿಯಾದರು.

ವೀರವ್ರತ : ಶ್ರೀ ಷಡಕ್ಷರಿ ಶಿವಯೋಗಿಗಳು ಲಿಂಗೈಕ್ಯರಾದ ಮೇಲೆ ಶ್ರೀ ಬಸವರಾಜ ದೇವರು ಶ್ರೀ ವಿರೂಪಾಕ್ಷ ಸ್ವಾಮಿಗಳೆಂಬ ಅಭಿದಾನದೊಂದಿಗೆ ಮಠದ ಆಡಳಿತವನ್ನು ವಹಿಸಿಕೊಂಡರು. ಪಟ್ಟಾಧಿಕಾರ ಪಡೆದ ಮೇಲೆ ಮಠ ಬಿಟ್ಟು ಬೇರೆ ಎಲ್ಲಿಯೂ ಹೋಗುವುದಿಲ್ಲ ಎಂದು ವ್ರತ ಕೈಗೊಂಡು ಹೊರಗೆ ಹೋಗದೇ ಮಠದಲ್ಲೇ ಕುಳಿತು ಕಾಯಕ ಮಾಡತೊಡಗಿದ್ದಾರೆ. ಕಾಲಕಾಲಕ್ಕೆ ನಡೆಯಬೇಕಾಗಿರುವ ಧಾರ್ಮಿಕ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. ಮಠದ ಸುತ್ತ ಸುಂದರ ತೋಟ ನಿರ್ಮಿಸಿದ್ದಾರೆ. ಈ ತೋಟದಲ್ಲಿ ಶ್ರೀ ಚನ್ನಬಸವ ಸ್ವಾಮಿಗಳು ಮತ್ತು ಶ್ರೀ ಪಂಚಾಕ್ಷರಿ ಸ್ವಾಮಿಗಳ ಗದ್ದುಗೆಗಳು ನಿರ್ಮಾಣಗೊಂಡಿವೆ. ಕರ್ತೃ ಗದ್ದುಗೆಗೆ ಮಂಟಪವನ್ನು ಮಾಡಿಸಲಾಗಿದೆ.

ಧಾರ್ಮಿಕ ಕಾರ್ಯಗಳು: ಶ್ರಾವಣ ಬಹುಳ ತದಿಗೆಯದಿನ ಶ್ರೀ ಷಡಕ್ಷರಿ ಶಿವಯೋಗಿಗಳ ಆರಾಧನೆ ನಡೆಯುತ್ತಿದೆ. ಅಲ್ಲದೆ ಪ್ರತಿನಿತ್ಯ ತ್ರಿಕಾಲದಲ್ಲಿ ಶ್ರೀ ಷಡಕ್ಷರ ಶಿವಯೋಗಿಗಳ ಗದ್ದುಗೆಗೆ ರುದ್ರಾಭಿಷೇಕದ ಪೂಜೆ ನಡೆಸಲಾಗುತ್ತಿದೆ. ಈ ಕಾರ್ಯಕ್ಕೆ ಒಬ್ಬೊಬ್ಬ ಭಕ್ತರು ೬೩೦ ರೂ ಕಾಣಿಕೆ ನೀಡಿದ್ದಾರೆ. ಈ ಹಣವನ್ನು ಡಿಪಾಸಿಟ್ ಮಾಡಲಾಗಿದ್ದು, ಇದರ ಬಡ್ಡಿ ಹಣದಲ್ಲಿ ಒಂದು ವೇಳೆಯ ರುದ್ರಾಭಿಷೇಕದ ಪೂಜೆ ನಡೆಯುತ್ತಿದೆ. ಈ ಪೂಜೆಗೆ ಒಟ್ಟು ೧೫೦೦ ಭಕ್ತರು ಹಣ ನೀಡಿ ತಮ್ಮ ಹೆಸರು ನೋಂದಾಯಿಸಿಕೊಂಡಿದ್ದಾರೆ. ಶ್ರಾವಣ, ಕಾರ್ತೀಕ ಮಾಸ ಹಾಗೂ ಶಿವರಾತ್ರಿ ದಿನಗಳಲ್ಲಿ ಮಠದಲ್ಲಿ ವಿಶೇಷ ಪೂಜಾಕಾರ್ಯಗಳು ನಡೆಯುತ್ತಿವೆ. ಮಠಕ್ಕೆ ಬಂದಂತಹ ಭಕ್ತರಿಗೆ ನಿತ್ಯ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ವಿರೂಪಾಕ್ಷ ಸ್ವಾಮಿಗಳು, ಶ್ರೀ ತೋಪಿನಮಠ, ಸೋಸಲೆ, ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.

ಹಲವಾರು

ಟಿ.ನರಸೀಪುರ ತಾಲ್ಲೂಕಿನ ಹಲವಾರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹತ್ತು ಕಿ. ಮೀ ದೂರದಲ್ಲಿದೆ. ಇಲ್ಲಿ ಸುತ್ತೂರು ಶ್ರೀ ಶಿವರಾತ್ರೀಶ್ವರ ಮಠದ ಖಾಸಶಾಖಾಮಠ ಅಸ್ತಿತ್ವದಲ್ಲಿದ್ದು,

ಸುತ್ತೂರು ಖಾಸಶಾಖಾಮಠ: ಹಲವಾರು ಗ್ರಾಮದಲ್ಲಿ ಶ್ರೀ ಶಿವರಾತ್ರೀಶ್ವರ ಖಾಸಾ ಶಾಖಾಮಠವು ಸ್ಥಾಪನೆಯಾಗಿ ಈ ಭಾಗದ ಜನರನ್ನು ಸನ್ಮಾರ್ಗದಲ್ಲಿ ಮುನ್ನಡೆಸುತ್ತಿದೆ. ಉತ್ತರದ ಕಡೆಯಿಂದ ಬಂದ ಶ್ರೀ ಸಂಗಮೇಶ್ವರ ಸ್ವಾಮಿಗಳು ಇಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸಿ ಲಿಂಗೈಕ್ಯರಾಗಿದ್ದಾರೆ. ಇವರ ಗದ್ದುಗೆ ಗ್ರಾಮದ ಈಶಾನ್ಯ ಭಾಗದಲ್ಲಿದೆ.

ಶ್ರೀ ಸಂಗಮೇಶ್ವರ ಸ್ವಾಮಿಗಳ ಗದ್ದುಗೆ ಇರುವ ತೋಪಿನಲ್ಲಿ ಶ್ರೀ ಮುನೇಶ್ವರರೆಂಬುವರು ಇಲ್ಲಿ ತಮ್ಮ ಉಗ್ರ ನಡವಳಿಕೆಗಳಿಂದ ಜನರಲ್ಲಿ ಭಯದ ವಾತಾವರಣವನ್ನು ನಿರ್ಮಿಸಿದ್ದರು. ಆಗ ಹಲವಾರು, ಮುಡುಕುನಪುರ ಹಾಗೂ ಕೋಣಹಳ್ಳ ಮುಂತಾದ ಗ್ರಾಮಗಳ ಗ್ರಾಮಸ್ಥರು ಉಕ್ಕಲಗೆರೆ ಬೆಟ್ಟದಲ್ಲಿ ಅನುಷ್ಠಾನಗೊಂಡಿದ್ದ ಶ್ರೀ ಮಹದೇಶ್ವರರಲ್ಲಿಗೆ ಹೋಗಿ ಮೊರೆಯಿಟ್ಟರು. ಭಕ್ತರ ಕೋರಿಕೆಯನ್ನು ಮನ್ನಿಸಿದ ಶ್ರೀ ಮಹದೇಶ್ವರರು, ಹಲವಾರು ಗ್ರಾಮದ ಶ್ರೀ ಸಂಗಮೇಶ್ವರ ಗದ್ದಗೆಯ ಬಳಿ ಅನುಷ್ಠಾನಕ್ಕೆ ಕುಳಿತರು. ಶ್ರೀ ಮುನೇಶ್ವರರು ಎಂದಿನಂತೆ ಸಂಚಾರ ಕಾರ್ಯವನ್ನು ಮುಗಿಸಿ ತಮ್ಮ ಉಗ್ರ ಪವಾಡಗಳನ್ನು ಮಾಡಲು ಮುಂದಾದಾಗ, ಪ್ರಕೃತಿ ಇವರ ಜೊತೆ ಸಹಕರಿಸಲಿಲ್ಲವಂತೆ. ಆಗ ಶ್ರೀ ಮಹದೇಶ್ವರರ ದರ್ಶನ ವಾಗುತ್ತದೆ. ಶ್ರೀ ಮುನೇಶ್ವರರು ಶ್ರೀ ಮಹದೇಶ್ವ ರರಿಗೆ ಶರಣಾದರಂತೆ. ಆಗ ಗ್ರಾಮಸ್ಥರು ಶ್ರೀ ಸಂಗಮೇಶ್ವರ ಸ್ವಾಮಿಗಳಿಗೆ ಹಯವಾಹನ ಮಾಡಿ, ಶ್ರೀ ಮಹದೇಶ್ವರರ ನೆನಪಿನಾರ್ಥವಾಗಿ ಹುಲಿಯ ವಾಹನವನ್ನು ಮಾಡಿಸಿ, ಸುತ್ತಲ ಮೂವತ್ತೂರು ಹಳ್ಳಿಗಳಲ್ಲಿ ಉತ್ಸವ ಮಾಡಿಸಿದ್ದರೆಂದು ಹೇಳುವ ಜನಪದ ಕಥೆ ಕೇಳಿ ಬರುತ್ತಿದೆ.

ಇಂತಹ ಪುರಾತನ ಪರಂಪರೆಯ ಮಠದಲ್ಲಿ ಅನೇಕ ಗುರುಗಳು ಅಧಿಕಾರವನ್ನು ನಡೆಸಿದ್ದರು ಎಂದು ಹೇಳಲಾಗುತ್ತಿದೆ.

ಆದರೆ ಅವರುಗಳು ಮಠದಲ್ಲಿ ವಾಸ್ತವ್ಯ ಮಾಡದೆ, ಸದಾ ಸಂಚಾರಿಗಳಾಗಿದ್ದ ಕಾರಣ ಮಠವು ಅಭಿವೃದ್ಧಿಯಾಗಲಿಲ್ಲ ಎಂಬ ಮಾತು ಕೇಳಿ ಬರುತ್ತಿದೆ. ಈ ಮಠದಲ್ಲಿ ಮಠಾಧೀಶರು ಯಾರೂ ಇಲ್ಲದ ಸಂದರ್ಭದಲ್ಲಿ ಸುತ್ತೂರು ಮಠವೇ ಇಲ್ಲಿನ ಧಾರ್ಮಿಕ, ಆಡಳಿತವನ್ನು ನೋಡಿಕೊಳ್ಳುತ್ತಿತ್ತು. ಇಲ್ಲಿನ ಭಕ್ತರ ಒತ್ತಾಸೆಯ ಮೇರೆಗೆ ಈಗ ಶ್ರೀ ಷಡಕ್ಷರಿ ದೇಶಿಕೇಂದ್ರ ಸ್ವಾಮಿಗಳನ್ನು ನೇಮಕ ಮಾಡಿ, ಇಲ್ಲಿನ ಧಾರ್ಮಿಕ ಚಟುವಟಿಕೆಗಳು ಸಾಂಗವಾಗಿ ನಡೆಯಲು ಅನುವು ಮಾಡಿಕೊಟ್ಟಿದ್ದಾರೆ. ಶ್ರೀ ಷಡಕ್ಷರಿ ದೇಶಿಕೇಂದ್ರ ಸ್ವಾಮಿಗಳು ಕನ್ನಡ ಮತ್ತು ಜನಪದ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಇವರು ಉತ್ತಮ ವಾಗ್ಮಿಗಳಾಗಿ, ವೀರಶೈವ ಧರ್ಮದ ತತ್ತ್ವಗಳನ್ನು ಅಧ್ಯಯನ ಮಾಡಿಕೊಂಡು ಧರ್ಮವನ್ನು ಪ್ರಚಾರಪಡಿಸುತ್ತಿದ್ದಾರೆ. ಶ್ರೀ ಷಡಕ್ಷರಿ ದೇಶಿಕೇಂದ್ರ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಟಿ.ನರಸೀಪುರ ಹಾಗೂ ಶಿವನಸಮುದ್ರ ರಸ್ತೆಯಲ್ಲಿ ಸಿಗುವ ಮುಡುಕನಪುರದಲ್ಲಿ ಮಠದ ಕಟ್ಟಡವನ್ನು ನಿರ್ಮಿಸಿದ್ದಾರೆ. ಹಲವಾರು ಮತ್ತು ಮುಡುಕನಪುರ ಎರಡೂ ಕಡೆ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಾ, ಮಠವನ್ನು ಅಭಿವೃದ್ಧಿಪಡಿಸತೊಡಗಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಷಡಕ್ಷರಿ ದೇಶಿಕೇಂದ್ರ ಸ್ವಾಮಿಗಳು, ಶ್ರೀ ಸುತ್ತೂರು ಖಾಸಾಶಾಖಾಮಠ, ಹಲವಾರು-ಮುಡುಕನಪುರ, ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.

❑

ನಂಜನಗೂಡು ತಾಲ್ಲೂಕು

ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕು ಐತಿಹಾಸಿಕ ಹಾಗೂ ಧಾರ್ಮಿಕವಾಗಿ ಹೆಸರು ಪಡೆದಿದೆ. ಕೃಷಿ ಆಧಾರಿತ ಈ ತಾಲ್ಲೂಕು ನೀರಾವರಿ ಯೋಜನೆಯಿಂದ ಸಮೃದ್ಧಿಯನ್ನು ಕಂಡಿದೆ. ಇಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆದು ಪ್ರಾಚೀನದಿಂದಲೂ ತನ್ನ ಅಸ್ತಿತ್ವವನ್ನು ಉಳಿಸಿ ಬೆಳೆಸಿಕೊಂಡು ಬಂದಿದೆ. ಪ್ರಸ್ತುತ ಹದಿನೈದು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಕಸುವಿನಹಳ್ಳಿ

ನಂಜನಗೂಡು ತಾಲ್ಲೂಕಿನ ಕಸುವಿನ ಹಳ್ಳಿಯು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಹದಿನಾರು ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಮಧ್ಯಭಾಗದಲ್ಲಿ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠ ಹಾಗೂ ಸುತ್ತೂರು ಶ್ರೀ ಶಿವರಾತ್ರಿ ಮಠದ ಪರಂಪರೆಯ ಶಾಖಾಮಠ ಸ್ಥಾಪನೆಯಾಗಿವೆ.

ಪಟ್ಟದಮಠ: ಉತ್ತರದ ಕಡೆಯಿಂದ ಬಂದವರೆಂದು ಹೇಳಲಾದ ಶ್ರೀ ಗಂಗಾಧರೇಶ್ವರ ಸ್ವಾಮಿಗಳು ಮತ್ತು ಅವರ ಸಹೋದರರು, ಈ ಪ್ರಶಾಂತ ವಾತಾವರಣದಲ್ಲಿ ನೆಲಸಬೇಕೆಂಬ ಆತ್ಮಪ್ರೇರಣೆಯ ಹಿನ್ನೆಲೆಯಲ್ಲಿ ಇಲ್ಲೇ ನೆಲೆಸುತ್ತಾರೆ. ದೀರ್ಘ ತಪಸ್ಸು, ವೀರಶೈವ ಧರ್ಮದ ಅಷ್ಟಾವರಣ ಮತ್ತು ಪಂಚಾಚಾರಗಳ ಬೋಧನೆಗಳಿಂದ ಜನರನ್ನು ಜಾಗೃತರನ್ನಾಗಿ ಮಾಡುತ್ತಾರೆ.

ಪರಂಪರೆ: ಕಸುವಿನಹಳ್ಳಿ ಮತ್ತು ಸುತ್ತಮುತ್ತಲಿನ ಗ್ರಾಮಗಳಿಗೆ ಧಾರ್ಮಿಕ ಶ್ರೀಮಂತಿಕೆ ತಂದುಕೊಟ್ಟ ಶ್ರೀ ಗಂಗಾಧರೇಶ್ವರ ಸ್ವಾಮಿಗಳು ಮಠ ಸ್ಥಾಪನೆಮಾಡಿ, ತಮ್ಮ ಸಹೋದರನನ್ನು ಮಠದ ಆಡಳಿತ ನೋಡಿಕೊಳ್ಳಲು ನೇಮಿಸಿ ನಿರ್ವಿಕಲ್ಪ ಸಮಾಧಿಯಾದರು. ಶ್ರೀ ಗಂಗಾಧರೇಶ್ವರ ಸ್ವಾಮಿಗಳ ನಂತರ ಮೂರು ಜನ ಮಠಾಧೀಶರು ಆಡಳಿತ ನೋಡಿಕೊಂಡಿರುವ ಬಗ್ಗೆ ಹೇಳಲಾಗುತ್ತಿದೆಯಾದರೂ, ಅವರುಗಳ ಹೆಸರುಗಳು ಎಲ್ಲಿಯೂ ದಾಖಲಾಗಿಲ್ಲ. ಅಲ್ಲದೆ ಅವರ ಗದ್ದುಗೆಗಳು ಎಲ್ಲಿ ನಿರ್ಮಿತವಾಗಿವೆ ಎಂದೂ ತಿಳಿದಿಲ್ಲ ಎಂದು ಈಗಿನ ಶ್ರೀ ಚಂದ್ರಶೇಖರ ಸ್ವಾಮಿಗಳು ಹೇಳುತ್ತಾರೆ. ಈ ಮಠಕ್ಕೆ ಸೇರಿದ ಗುರುಗಳ ಗದ್ದುಗೆಯೊಂದು ಹೆಗ್ಗಡದೇವನ ಕೋಟೆಯ ಕಪ್ಪುಸೋಗೆಯಲ್ಲಿ ಇದೆ ಎಂದು ಹೇಳಲಾಗುತ್ತಿದೆ.

ಸುಮಾರು ವರ್ಷಗಳಿಂದ ಖಾಲಿ ಇದ್ದ ಮಠಕ್ಕೆ ೧೯೪೩ರಲ್ಲಿ ಜನಿಸಿದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳನ್ನು ಸುತ್ತೂರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಆಯ್ಕೆಮಾಡಿ ೧೯೫೩ರಲ್ಲಿ ಪಟ್ಟಾಧಿಕಾರದ ಅನುಗ್ರಹ ನೀಡಿದ್ದಾರೆ. ಅಂದಿನಿಂದ ಕಸುವಿನ ಹಳ್ಳಿಯಲ್ಲಿ ಮಂಕಾಗಿದ್ದ ಧರ್ಮಪ್ರಭೆ ಪ್ರಕಾಶಗೊಂಡಿತು. ಮಠದ ಆವರಣದಲ್ಲಿರುವ ಶ್ರೀ ಮಹಾದೇಶ್ವರ ದೇವಸ್ಥಾನ, ಬಸವೇಶ್ವರ ದೇವಸ್ಥಾನವನ್ನು ನವೀಕರಿಸಿ ಇವುಗಳ ಸುತ್ತ ಮಠದ ಕಟ್ಟಡವನ್ನು ವಿಸ್ತರಿಸಿ ನಿರ್ಮಿಸಿದ್ದಾರೆ. ಮಠ ನಿರ್ಮಾಣಗೊಂಡು ಪೂಜಾಕಾರ್ಯಗಳು ನಡೆಯತೊಡಗಿದಾಗ ಭಕ್ತರು ಮಠದ ಕಡೆ ಆಕರ್ಷಿತರಾಗಿದ್ದಾರೆ.

ಧಾರ್ಮಿಕಕಾರ್ಯಗಳು: ಸುತ್ತೂರು ಶ್ರೀ ಶಿವರಾತ್ರೀಶ್ವರ ರಾಜೇಂದ್ರ ಸ್ವಾಮಿಗಳ ಮಾರ್ಗದರ್ಶನದಲ್ಲಿ ಪ್ರಬುದ್ಧತೆ ಪಡೆದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಪ್ರತಿ ಅಮಾವಾಸ್ಯೆಯಲ್ಲಿ ಮಹಾದೇಶ್ವರ ಮತ್ತು ಬಸವೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ನಡೆಸುವುದಲ್ಲದೆ, ದಾಸೋಹ ಕಾರ್ಯ, ಧರ್ಮಪ್ರಚಾರ ಹಾಗೂ ಭಕ್ತರ ಮನೆಯಲ್ಲಿ ನಡೆಯುವ ಧಾರ್ಮಿಕ ಕ್ರಿಯೆಗಳಲ್ಲಿ ಪಾಲ್ಗೊಂಡು ಭಕ್ತರನ್ನು ಸನ್ಮಾರ್ಗದಲ್ಲಿ ಮುನ್ನಡೆಸುತ್ತಿದ್ದಾರೆ. ಮಠದ ಆಸ್ತಿಯಾದ ಐದು ಎಕರೆ ಜಮೀನನ್ನು ಅಭಿವೃದ್ಧಿಪಡಿಸಿ, ಆದಾಯ ಬರುವಂತೆ ಮಾಡಿ ಮಠದ ಅಭಿವೃದ್ಧಿಗೆ ವಿನಿಯೋಗಿಸಿಕೊಳ್ಳತೊಡಗಿದ್ದಾರೆ.

ವಿಳಾಸ:ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು, ಶ್ರೀ ಪಟ್ಟದಮಠ, ಕಸುವಿನಹಳ್ಳಿ, ನಂಜನಗೂಡು ತಾ, ಮೈಸೂರುಜಿಲ್ಲೆ.

ಗುರುಮಲ್ಲೇಶ್ವರ ದಾಸೋಹಮಠ: ಕಸುವಿನ ಹಳ್ಳಿ ಗ್ರಾಮದ ಪ್ರವೇಶ ದ್ವಾರದ ಬಲಬದಿಯಲ್ಲಿ ೧೯೩೬ರಲ್ಲಿ ಸ್ಥಾಪನೆಗೊಂಡ ಶ್ರೀ ಮಲ್ಲೇಶ್ವರ ದಾಸೋಹಮಠವು ದೇವನೂರಿನ ಶಾಖಾಮಠವಾಗಿ ಬೆಳೆದಿದೆ. ಈ ಮಠವನ್ನು ಭಿಕ್ಷದ ಶ್ರೀಶಿವಪ್ಪ

ಸ್ವಾಮಿಗಳು ಪ್ರಾರಂಭ ಮಾಡಿದ್ದಾರೆ. ಶ್ರೀ ಶಿವಪ್ಪ ಸ್ವಾಮಿಗಳು ಇಲ್ಲಿ ಮಠ ಸ್ಥಾಪನೆ ಮಾಡಿ ಭಿಕ್ಷದ ಮರಿಗಳನ್ನು ನೇಮಿಸಿ, ದೇಶಸಂಚಾರ ಮಾಡುತ್ತಾ ಕಾಯಕ ಮುಂದುವರಿಸಿ, ದೇವನೂರಿನಲ್ಲಿಯೇ ಲಿಂಗೈಕ್ಯರಾದರು.

ಪರಂಪರೆ:

೧. ಶ್ರೀ ಭಿಕ್ಷದ ಶಿವಪ್ಪ ಸ್ವಾಮಿಗಳು
೨. ಶ್ರೀ ಕಾಳಪ್ಪ ಸ್ವಾಮಿಗಳು
೩. ಶ್ರೀ ಗುರುಸ್ವಾಮಿಗಳು
೪. ಶ್ರೀ ಮಾದಪ್ಪ ಸ್ವಾಮಿಗಳು

ಈಗಿನ ಶ್ರೀ ಮಾದಪ್ಪ ಸ್ವಾಮಿಗಳು ಕಂತೆಭಿಕ್ಷೆ ಮಾಡಿ ಮಠಕ್ಕೆ ಬಂದ ಭಕ್ತರಿಗೆ ಹಾಗೂ ಪ್ರತಿದಿನ ಸುಮಾರು ಹದಿನೈದು ಶಾಲಾಮಕ್ಕಳಿಗೆ ಮಧ್ಯಾಹ್ನ ಅನ್ನದಾಸೋಹವನ್ನು ನೀಡುತ್ತಿದ್ದಾರೆ. ಕರ್ತೃಗುರುಗಳಾದ ಶ್ರೀ ಶಿವಪ್ಪ ಸ್ವಾಮಿಗಳ ಕಾಲದಲ್ಲಿ ಕಟ್ಟಡ ನಿರ್ಮಿಸಿದ್ದು, ಈಗಿನ ಶ್ರೀ ಮಾದಪ್ಪ ಸ್ವಾಮಿಗಳು ಊರ ಭಕ್ತರ ನೆರವು ಪಡೆದು ಕಟ್ಟಡವನ್ನು ನವೀಕರಿಸಿದ್ದಾರೆ.ಅಲ್ಲದೆ ಮಠಕ್ಕೆ ಬಸವನ ಬಾಗಿಲನ್ನು ಸ್ಥಾಪನೆ ಮಾಡಿದ್ದಾರೆ.

ವಿಳಾಸ: ಶ್ರೀ ಮಾದಪ್ಪ ಸ್ವಾಮಿಗಳು, ಶ್ರೀ ಗುರುಮಲ್ಲೇಶ್ವರ ದಾಸೋಹಮಠ, ಕಸುವಿನಹಳ್ಳಿ, ನಂಜನಗೂಡು ತಾ, ಮೈಸೂರುಜಿಲ್ಲೆ.

ಕಾರ್ಯ

ನಂಜನಗೂಡು ತಾಲ್ಲೂಕಿನ ಕಾರ್ಯ ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಇಪ್ಪತ್ತು ಕಿ.ಮೀ. ದೂರದಲ್ಲಿರುವ ಒಂದು ಸಣ್ಣ ಹಳ್ಳಿ. ಇಲ್ಲಿ ಶ್ರೀ ಪ್ರಭುಸ್ವಾಮಿ ಮಠವು ಅಸ್ತಿತ್ವದಲ್ಲಿದೆ.

ಪ್ರಭುಸ್ವಾಮಿಮಠ: ಕಾರ್ಯ ಗ್ರಾಮದಲ್ಲಿ ಪುರಾತನ ಪರಂಪರೆಯ ಶ್ರೀ ಪ್ರಭುಸ್ವಾಮಿಮಠವು ಸ್ಥಾಪನೆಯಾಗಿದೆ. ಶ್ರೀಪ್ರಭು ಸ್ವಾಮಿಗಳು ಸ್ಥಾಪನೆ ಮಾಡಿದ್ದರಿಂದ 'ಶ್ರೀ ಪ್ರಭುಸ್ವಾಮಿಮಠ' ಎಂಬ ಹೆಸರು ಬಂದಿದೆ.

ಮಠ ಸ್ಥಾಪನೆ: ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಕೊಪ್ಪಾ ಗ್ರಾಮದಲ್ಲಿ ೧೭೧೦ರಲ್ಲಿ ಜನಿಸಿದ ಶ್ರೀ ಪ್ರಭು ಸ್ವಾಮಿಗಳು ಲೋಕಸಂಚಾರ ಕೈಗೊಂಡು, ಬೆಂಗಳೂರಿನ ಶ್ರೀ ಸರ್ಪಭೂಷಣ ಶಿವಯೋಗಿಗಳಿಂದ ಆಶೀರ್ವಾದ ಪಡೆದು ಇಲ್ಲಿಗೆ ಆಗಮಿಸುತ್ತಾರೆ. ಗುರುಗಳು ತರ್ಕಶಾಸ್ತ್ರದಲ್ಲಿ ಪಾಂಡಿತ್ಯ ಪಡೆದು, ಸಿದ್ಧೇಶ್ವರ ಬೆಟ್ಟದಲ್ಲಿ ತಪಸ್ಸನ್ನು ಆಚರಿಸುತ್ತಿದ್ದ ಸಂದರ್ಭದಲ್ಲಿ ಗ್ರಾಮಸ್ಥರು ಇವರನ್ನು ಕರೆತಂದು ಮಠವನ್ನು ಸ್ಥಾಪಿಸಿಕೊಡುತ್ತಾರೆ. ಗುರುಗಳು ಇಲ್ಲಿ ನೆಲೆ ನಿಂತ ಕಾಲದಲ್ಲಿ ಮಠವು ಹೆಚ್ಚು ಪ್ರಬುದ್ಧಮಾನಕ್ಕೆ ಬಂದಿತು.

ಪರಂಪರೆ:

೧. ಷ.ಬ್ರ.ಶ್ರೀ ಪ್ರಭು ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಘನಲಿಂಗ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಬಸವರಾಜ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯನ್ನು ಗುರುತಿಸಬಹುದಾಗಿದೆ. ಕರ್ತೃಗುರುಗಳ ನಂತರ ವಾಟಾಳ್ ಮಠದಿಂದ ಆಗಮಿಸಿದ ಶ್ರೀಸಿದ್ಧಲಿಂಗ ಸ್ವಾಮಿಗಳು ಧಾರ್ಮಿಕ ಕಾರ್ಯಗಳನ್ನು ನಡೆಸಿ ಮಠವನ್ನು ಬೆಳೆಸಿದರು. ನಂತರ ಶ್ರೀ ಘನಲಿಂಗ ಸ್ವಾಮಿಗಳು ಅಧಿಕಾರ ನಡೆಸಿ ಲಿಂಗೈಕ್ಯರಾದರು. ಇವರ ನಂತರ ಮಠಾಧೀಶರಿಲ್ಲದೆ ಮಠವು ಖಾಲಿ ಉಳಿಯುತ್ತದೆ. ಇದನ್ನು ನೋಡಿದ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು ಕೆ.ಆರ್.ನಗರ ತಾಲ್ಲೂಕಿನ ಹಾಡ್ಯದ ಪಟ್ಟದ ಮಠದ ಶ್ರೀ ಬಸವರಾಜ ಸ್ವಾಮಿಗಳಿಗೆ ೧೯೭೮ ರ ಸೆಪ್ಟೆಂಬರ್ ಒಂಬತ್ತರಂದು ಪಟ್ಟಾಧಿಕಾರ ನೀಡಿದ್ದಾರೆ.

ಯಳಂದೂರು ತಾಲ್ಲೂಕಿನ ಕೆಸ್ತೂರು ಗ್ರಾಮದ ಶ್ರೀ ಶಿವಪ್ಪ ಮತ್ತು ಶ್ರೀಮತಿ ಶಿವಮ್ಮನವರ ಪುತ್ರರಾಗಿ ೧೯೬೦ ರಲ್ಲಿ ಜನಿಸಿದ ಶ್ರೀ ಬಸವರಾಜ ಸ್ವಾಮಿಗಳು ವಿದ್ಯಾಭ್ಯಾಸವನ್ನು ಮುಗಿಸಿ, ೧೯೭೪ ರಲ್ಲೇ ಹಾಡ್ಯ ಮಠದ ಅಧಿಕಾರವನ್ನು

ನೋಡಿಕೊಳ್ಳಲು ನೇಮಕಗೊಂಡಿದ್ದ ಶ್ರೀ ಬಸವರಾಜ ಸ್ವಾಮಿಗಳು ಈಗ ಕಾರ್ಯದ ಶ್ರೀ ಪ್ರಭುಸ್ವಾಮಿ ಮಠದ ಮಠಾಧೀಶರಾಗಿ ಸುತ್ತೂರು ಜಗದ್ಗುರುಗಳ ಮಾರ್ಗದರ್ಶನದಲ್ಲಿ ಮಠದ ಆಡಳಿತವನ್ನು ನಡೆಸಿಕೊಂಡು ಬರುತ್ತಿರುವುದಲ್ಲದೆ, ಮಠಕ್ಕೆ ನೂತನ ಕಟ್ಟಡವನ್ನು ನಿರ್ಮಿಸತೊಡಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಎರಡು ಗದ್ದುಗೆಗಳಿಗೆ ನಿತ್ಯಪೂಜೆ, ಕಾರ್ತೀಕ ಮಾಸದಲ್ಲಿ ದೀಪೋತ್ಸವ ಮತ್ತು ಶ್ರಾವಣ ಮಾಸದಲ್ಲಿ ಪ್ರವಚನವನ್ನು ನಡೆಸಲಾಗುತ್ತಿದೆ. ಯುಗಾದಿಯಲ್ಲಿ ಸಿದ್ಧೇಶ್ವರ ಜಾತ್ರೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಮಠದ ಆಸ್ತಿಯಾಗಿ ಹದಿನೈದು ಎಕರೆ ಜಮೀನಿದ್ದು, ಇದನ್ನು ಅಭಿವೃದ್ಧಿಪಡಿಸಿ ಮಠದ ಆದಾಯಮೂಲವನ್ನಾಗಿ ಮಾಡಿಕೊಳ್ಳಲಾಗಿದೆ.

ವಿಳಾಸ: ಷ.ಬ್ರ.ಶ್ರೀ ಬಸವರಾಜ ಶಿವಾಚಾರ್ಯ ಸ್ವಾಮಿಗಳು, ಶ್ರೀಪಟ್ಟದಮಠ, ಕಾರ್ಯ,ನಂಜನಗೂಡು ತಾಲ್ಲೂಕು, ಮೈಸೂರುಜಿಲ್ಲೆ.

ಚುಂಚನಹಳ್ಳಿ

ನಂಜನಗೂಡು ತಾಲ್ಲೂಕಿನ ಚುಂಚನಹಳ್ಳಿಯು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹತ್ತು ಕಿ.ಮೀ.ದೂರದಲ್ಲಿರುವ ಒಂದು ಅಭಿವೃದ್ಧಿಶೀಲ ಹಳ್ಳಿ. ಇಲ್ಲಿ ಶ್ರೀ ಕಡಕಲಕಟ್ಟೆಮಠವು ಅಸ್ತಿತ್ವದಲ್ಲಿದೆ.

ಕಡಕಲಕಟ್ಟೆಮಠ: ಶ್ರೀಶೈಲ ಪರಂಪರೆಯ ಹಾಗೂ ವಾಟಳು ಮಠದ ಶಾಖಾಮಠವಾಗಿ ಶ್ರೀ ಕಡಕಲಕಟ್ಟೆಮಠ ಸ್ಥಾಪನೆಯಾಗಿ ಈ ಹಳ್ಳಿಗೊಂದು ಧಾರ್ಮಿಕ ನೆಲೆ ತಂದುಕೊಟ್ಟಿದೆ. ಶ್ರೀ ಮಲೆಮಹಾದೇಶ್ವರರು ಈ ಗ್ರಾಮದಲ್ಲಿ ಕೆಲವು ದಿನ ಅನುಷ್ಠಾನ ಗೊಂಡಿದ್ದರಿಂದ ಇಲ್ಲಿ ಮಠ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಈ ಪುರಾತನ ಮಠದ ಪರಂಪರೆಯಲ್ಲಿ ಮೂರುಜನ ಸ್ವಾಮಿಗಳು ಅಧಿಕಾರ ನಡೆಸಿ, ಮಠವನ್ನು ಹೆಚ್ಚು ಅಭಿವೃದ್ಧಿಪಡಿಸಿ ಹೋಗಿದ್ದಾರೆ ಎಂಬ ಕುರುಹು ಇವೆ. ಈ ಮಠದ ಪರಂಪರೆಯಲ್ಲಿ ಶ್ರೀ ಚಂದ್ರಶೇಖರ ಸ್ವಾಮಿಗಳು ೧೯೯೩ರ ಡಿಸೆಂಬರ್‌ನಲ್ಲಿ ಲಿಂಗೈಕ್ಯರಾದ ಮೇಲೆ ಅದೇ ದಿನ ಶ್ರೀ ಚನ್ನ ಬಸವ ಸ್ವಾಮಿಗಳಿಗೆ ಅಧಿಕಾರ ನೀಡಲಾಗಿದೆ. ಶ್ರೀ ಲೀಲಾಮೂರ್ತಿ ಮತ್ತು ಶ್ರೀಮತಿ ಪಾರ್ವತಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಚನ್ನಬಸವ ಸ್ವಾಮಿಗಳು ಮೈಸೂರಿನ ಸುತ್ತೂರು ಮಠದ ಗುರುಕುಲದಲ್ಲಿ ವಿದ್ಯಾಭ್ಯಾಸ ಮಾಡುತ್ತಾ ಮಠದ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಚನ್ನಬಸವ ಸ್ವಾಮಿಗಳು, ಶ್ರೀ ಕಡಕಲಕಟ್ಟೆಮಠ, ಚುಂಚನಹಳ್ಳಿ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

ದೇವನೂರು

ನಂಜನಗೂಡು ತಾಲ್ಲೂಕಿನ ದೇವನೂರು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹನ್ನೆರಡು ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ಸುಮಾರು ೧೫೦ ವರ್ಷಗಳ ಹಿಂದೆ ಶ್ರೀ ಗುರುಮಲ್ಲೇಶ್ವರ ದಾಸೋಹ ಸಂಸ್ಥಾನ ಮಠವು ಸ್ಥಾಪನೆಯಾಗಿ, ದೇವನೂರಿನ ಹೆಸರನ್ನು ದಶದಿಕ್ಕಿಗೆ ಹರಡುವಂತೆ ಮಾಡಿದೆ.

ದಾಸೋಹ ಮಹಾಸಂಸ್ಥಾನಮಠ: ಹನ್ನೆರಡನೆಯ ಶತಮಾನದಲ್ಲಿ ಶರಣರಕ್ರಾಂತಿಯಿಂದ ವೀರಶೈವ ಧರ್ಮ ಜಾಗೃತಗೊಂಡಿತು. ನಂತರ ಶರಣರ ಸಂದೇಶ ಗಳ ಪ್ರಚಾರ ಸ್ಥಗಿತಗೊಳ್ಳದೆ ಹದಿನೈದನೆಯ ಶತಮಾನದಲ್ಲಿ ಎಡೆಯೂರು ಶ್ರೀ ಸಿದ್ಧಲಿಂಗೇಶ್ವರರ ಕಾಲದಲ್ಲಿ ನೂರೊಂದು ವಿರಕ್ತರು ಧರ್ಮವನ್ನು ಬೆಳಗಿಸಿದರು. ನಂತರ ಅನೇಕ ಏರಿಳಿತದಿಂದ ವೀರಶೈವ ಧರ್ಮದ ಆಚಾರ ವಿಚಾರಗಳು ಅವನತಿಯಾಗುತ್ತಿದ್ದಾಗ, ಮತ್ತೆ ಶರಣ ಧರ್ಮವನ್ನು ಪ್ರಚಾರಪಡಿಸಲು ಹತ್ತೊಂಬತ್ತನೆಯ ಶತಮಾನದಲ್ಲಿ ದೇವನೂರಿನ ಶ್ರೀ ಗುರುಮಲ್ಲೇಶ್ವರರು ಅವತರಿಸಿದರು. ಹಸಿವಿನಿಂದ ಬಳಲುವ ಎಲ್ಲಾ ವರ್ಗದ ಜನರಿಗೆ ಅನ್ನದಾನ ಮಾಡುವ ಮೂಲ ಉದ್ದೇಶ ಇಟ್ಟುಕೊಂಡು, ದೇವನೂರಿನಲ್ಲಿ ಮಠವನ್ನು ಸ್ಥಾಪನೆ ಮಾಡುತ್ತಾರೆ. ಅಂದು ಸಣ್ಣದಾಗಿ ಹುಟ್ಟಿಕೊಂಡ ಈ ದಾಸೋಹ ಮಠವು ಇಂದು ಬೆಳೆದು ಹೆಮ್ಮರವಾಗಿ, ಮೈಸೂರು ಪ್ರಾಂತ್ಯಕ್ಕೆ ನೆರಳಾಗಿ ನಿಂತಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಮೈಸೂರಿಗೆ ಶ್ರೀ ಗುರುಮಲ್ಲೇಶ್ವರರ ಆಗಮನ: ಶ್ರೀ ಗುರುಮಲ್ಲಯ್ಯನವರು ಶ್ರೀ ಶರಣಪ್ಪ ಮತ್ತು ಶ್ರೀಮತಿ ಶರಣಮ್ಮನವರ ಪುತ್ರರಾಗಿ ಶಿವಮೊಗ್ಗ ಜಿಲ್ಲೆ ಸವಳಂಗ ಗ್ರಾಮದಲ್ಲಿ ಜನಿಸಿದರು. ಇವರು ತಮ್ಮ ತಂದೆ ತಾಯಿಗಳಿಂದ ಸಂಸ್ಕಾರವಂತರಾಗಿ ಬೆಳೆದಿದ್ದರು. ಶ್ರೀ ಗುರುಮಲ್ಲಯ್ಯನವರ ತಂದೆ ತಾಯಿಗಳು ಗುರು, ಲಿಂಗ, ಜಂಗಮ ಪ್ರೇಮಿಗಳಾಗಿ ತಮ್ಮ ಮನೆಯಲ್ಲಿ ನಡೆಸುತ್ತಿದ್ದ ದಾಸೋಹ ಸತ್‌ಕಾರ್ಯಗಳಿಂದ ಹೆಸರು ಪಡೆದಿದ್ದರು. ಈ ಕಾರಣಕ್ಕೆ ಮೈಸೂರು ಅರಸರು ಮನ್ನಣೆ ನೀಡಿ ಜಮೀನನ್ನು ಇನಾಂ ನೀಡಿದ್ದರು. ಈ ಸಂಬಂಧದಿದಾಗಿ ಶ್ರೀ ಗುರುಮಲ್ಲೇಶ್ವರರ ತಂದೆ ತಾಯಿಗಳು ಮೈಸೂರಿಗೆ ಬಂದು ಹೋಗುತ್ತ ಇದ್ದರು. ಕಾಲಕ್ರಮೇಣ ಮೈಸೂರಲ್ಲಿಯೇ ಉಳಿದು ಚೌಕಿಮಠದಲ್ಲಿ ಆಶ್ರಯ ಪಡೆದು. ಈ ಮಠದ ಶ್ರೀ ಶಿವಣ್ಣ ಸ್ವಾಮಿಗಳ ಸೇವೆ ಮಾಡುತ್ತಾ ಕಾಲ ಕಳೆಯತೊಡಗಿದರು.

ಶ್ರೀ ಗುರುಮಲ್ಲೇಶ್ವರರ ತಂದೆ ತಾಯಿಗಳು ಮೈಸೂರಿಗೆ ಬಂದಾಗ ಗುರುಮಲ್ಲೇಶ್ವರರಿಗೆ ಕೇವಲ ಎರಡು ವರ್ಷ. ಆ ವಯಸ್ಸಿನಲ್ಲೇ ಚೌಕಿಮಠದ ಶ್ರೀ ಶರಣಪ್ಪ ಸ್ವಾಮಿಗಳಿಂದ ಆಕರ್ಷಿತರಾಗಿ, ಶಿಷ್ಯತ್ವ ಪಡೆದು ಅವರ ಕೃಪಾಶೀರ್ವಾದದಿಂದ ಬೆಳೆಯ ತೊಡಗಿದರು. ಗುರುಮಲ್ಲಯ್ಯನವರನ್ನು ಶಿಷ್ಯರಾಗಿ ಪಡೆದ ಸಂದರ್ಭದಲ್ಲಿ ಶ್ರೀ ಶರಣಪ್ಪ ಸ್ವಾಮಿಗಳು ಶತಾಯುಷಿಗಳಾಗಿದ್ದರು. ಮುಂದೆ ಬಾಲಕ ಮಲ್ಲಯ್ಯ ಅನಾಥನಾಗಬಾರದು ಎಂಬ ಕಾರಣಕ್ಕೆ ಶ್ರೀ ಶರಣಪ್ಪ ಸಾಮಿಗಳು ಚೌಕಿಮಠದ ಸನಿಹದಲ್ಲಿದ್ದ ಶ್ರೀ ಮಹಾಲಿಂಗಪ್ಪನ ಮಠದ ಮಹಾತಪೋನಿಷ್ಠರಾದ ಶ್ರೀ ಬೆತ್ತಲೆಕುಂಡೆ ಸ್ವಾಮಿಗಳಿಗೆ ಬಾಲಕ ಮಲ್ಲಯ್ಯನನ್ನು ಒಪ್ಪಿಸಿದರು. ಇದಾದ ಕೆಲವೇ ದಿನಗಳಲ್ಲಿ ಚೌಕಿಮಠದ ಶ್ರೀ ಶರಣಪ್ಪ ಸ್ವಾಮಿಗಳು ಲಿಂಗೈಕ್ಯರಾದರು. ನಂತರ ಗುರುಮಲ್ಲಯ್ಯನವರ ತಂದೆ ಶ್ರೀ ಶರಣಪ್ಪನವರೂ ಲಿಂಗೈಕ್ಯರಾದರು.

ಬೆಳೆಸಿದ ಗುರುಗಳು: ಬಸವೇಶ್ವರ ವಿಜಯ ಪ್ರವಚನವನ್ನು ಕೇಳಿ ವೈರಾಗ್ಯ ಉಂಟಾಗಿ ಮೈಸೂರು ಪ್ರಾಂತ್ಯದ ಜಾಜೂರಿನ ರುದ್ರಾರ್ಯರು ತಮ್ಮ ಶ್ರೀಮಂತಿಕೆಯನ್ನು ಬೇರೆಯವರಿಗೆ ದಾನಮಾಡಿ ಉಟ್ಟ ಬಟ್ಟೆಯನ್ನೂ ತೊರೆದು ಬೆತ್ತಲೆಯಾಗಿ, ಶಿವ ಕ್ಷೇತ್ರಗಳನ್ನು ಸುತ್ತಿ ಆಧ್ಯಾತ್ಮ ಚಿಂತನೆ ನಡೆಸಿ ಶಿವಯೋಗ ಸಿದ್ಧಿ ಪಡೆದರು. ನಂತರ ಮೈಸೂರಿನ ಶ್ರೀ ಮಹಾಲಿಂಗಪ್ಪನ ಮಠಕ್ಕೆ ಬಂದು ನೆಲೆಸಿ, ಶ್ರೀ ಬೆತ್ತಲೆಕುಂಡೆ ಸ್ವಾಮಿಗಳಾದರು. ಇಂತಹ ಮಹಾಜ್ಞಾನಿಗಳ ಕರಕಮಲಸಂಜಾತರಾಗಿ ಬೆಳೆದ ಶ್ರೀ ಗುರುಮಲ್ಲೇಶ್ವರರು ಕಂತೆಭಿಕ್ಷ ಕಾಯಕದಲ್ಲಿ ನಿರತರಾಗಿ, ದಾಸೋಹಕ್ರಿಯೆಯನ್ನು ಯಶಸ್ವಿಯಾಗಿ ನಡೆಸಿ ಮಹಾದಾಸೋಹಿಯಾಗಿ ಬೆಳೆದರು.

ಶ್ರೀ ಬೆತ್ತಲೆಕುಂಡೆ ಸ್ವಾಮಿಗಳ ನಂತರ ಶ್ರೀ ಗುರುಮಲ್ಲಯ್ಯನವರಿಗೆ ಶ್ರೀ ಮುಪ್ಪಿನ ಸ್ವಾಮಿಗಳು ಗುರುಗಳಾಗಿ, ಕಂತೆ ಭಿಕ್ಷದ ಕಾಯಕದಿಂದ ಮಹಾದಾಸೋಹ ಕ್ರಿಯೆಗೆ ಪ್ರೋತ್ಸಾಹ ನೀಡಿ, ಶ್ರೀ ಮಹಾಲಿಂಗಪ್ಪನ ಮಠ ಜ್ಞಾನಕೇಂದ್ರದ ಜತೆಗೆ ದಾಸೋಹ ಕೇಂದ್ರವಾಗುವಂತೆ ಮಾಡಿದರು. ಶ್ರೀ ಗುರುಮಲ್ಲಯ್ಯನವರು ಪ್ರತಿದಿನ ಸೂರ್ಯೋದಯಕ್ಕೆ ಮುನ್ನ ಚಾಮುಂಡಿ ಬೆಟ್ಟಕ್ಕೆ ಹೋಗಿ ಅಲ್ಲಿನ ಗುಹೆಯೊಂದರದಲ್ಲಿ ಅಂತರ್‌ಮುಖಿಗಳಾಗಿ ಕುಳಿತು, ನಂತರ ಯೋಗಕ್ರಿಯೆಗಳನ್ನು ಮಾಡಿ ಮಠಕ್ಕೆ ಬಂದು ಸ್ನಾನ ಪೂಜಾದಿ ಕಾರ್ಯಗಳನ್ನು ಮುಗಿಸಿ ಕಂತೆ ಭಿಕ್ಷೆಕ್ಕೆ ಹೊರಡುತ್ತಿದ್ದರು. ಅರಮನೆಯಿಂದ ಪ್ರಾರಂಭವಾಗಿ ಬಡವರ ಮನೆಗಳಿಗೆ ಹೋಗಿ ಕಂತೆ ಭಿಕ್ಷ ಮಾಡಿಕೊಂಡು ವೃದ್ಧರು, ಅನಾಥರು ಹಾಗೂ ಅಸಹಾಯಕರು ಸೇರಿದಂತೆ ಮಠಕ್ಕೆ ಬರುತ್ತಿದ್ದ ಜಂಗಮರಿಗೆ ಭೇದಭಾವವಿಲ್ಲದೆ, ಅನ್ನದಾಸೋಹವನ್ನು ನಡೆಸಿ ಹೆಚ್ಚು ಪ್ರಸಿದ್ಧಿಗೆ ಬಂದರು. ಇವರು ಕಂತೆ ಭಿಕ್ಷಕಾಯಕದಿಂದ ನಡೆಸುತ್ತಿದ್ದ ಮಹಾದಾಸೋಹಕ್ಕೆ ಹಾಗೂ ಇವರ ಪವಾಡ ಕಾರ್ಯಗಳಿಗೆ ಪ್ರಭಾವಿತರಾದ ಮುಮ್ಮಡಿ ಕೃಷ್ಣರಾಜ ಒಡೆಯರು, (೧೮೧೨-೧೮೬೧) ಗುರುಗಳನ್ನು ಅರಮನೆಗೆ ಕರೆದುಕೊಂಡು ಹೋಗಿ ಸತ್ಕರಿಸಿ, ಕಾಣಿಕೆ ನೀಡಿ ಗೌರವಿಸಿದ್ದರು.

ದೇವನೂರಿಗೆ ಅಡಿಇಟ್ಟ ಪಾದ: ಶ್ರೀ ಗುರುಮಲ್ಲೇಶ್ವರರು ತಮ್ಮ ಕಾಯಕ ಸಿದ್ಧಿ ಹಾಗೂ ಪವಾಡಗಳಿಂದ ಹೆಸರುಗಳಿಸಿದ್ದರು. ಈ ಸಂದರ್ಭದಲ್ಲಿ ದೇವನೂರಿನ ಪಟೇಲ್ ಸುಬ್ಬೇಗೌಡರ ಧರ್ಮಪತ್ನಿ ಶಂಕರಮ್ಮನಿಗೆ ಬ್ರಹ್ಮಪಿಶಾಚಿ ಹಿಡಿದು ಅಪಾರ ಕಿರುಕುಳ ನೀಡುತ್ತಿತ್ತು. ಪಟೇಲರು ತಮ್ಮ ಪ್ರಭಾವ ಬಳಸಿ ಏನೆಲ್ಲ ಮಾಟ ಮದ್ದು ಮಾಡಿಸಿದರೂ ಗುಣವಾಗಿರಲಿಲ್ಲ. ಒಂದು ದಿನ ಶ್ರೀ ಗುರುಮಲ್ಲೇಶ್ವರರ ದರ್ಶನಭಾಗ್ಯ ಸಿಕ್ಕಾಗ ಪಟೇಲರು ತಮ್ಮ ನೋವನ್ನು ಹೇಳಿಕೊಂಡ 'ಬ್ರಹ್ಮಪಿಶಾಚಿಯು

ಕೊಡುತ್ತಿರುವ ನೋವು ತಮ್ಮ ಶಿವಯೋಗ ಶಕ್ತಿಯಿಂದ ದೂರವಾಗಬೇಕು, ಆದ್ದರಿಂದ ನನ್ನ ಮನೆಗೆ ಪಾದವಿಟ್ಟು ಉದ್ಧರಿಸಬೇಕು'ಎಂದು ಬಿನ್ನವಿಸಿಕೊಳುತ್ತಾರೆ. ಮೈಸೂರಲ್ಲಿ ಸಾಧಿಸಿದ ಸಾಧನೆಯ ತೃಪ್ತಿ ಆದಾಗ ಇನ್ನೊಂದು ಕ್ಷೇತ್ರ ಉದ್ಧಾರವಾಗಬೇಕು ಎಂಬ ಆಶಯ ಇಟ್ಟುಕೊಂಡಿದ್ದ ದಾಸೋಹ ಮೂರ್ತಿಗಳಾದ ಶ್ರೀ ಗುರುಮಲ್ಲೇಶ್ವರರು ದೇವನೂರಿಗೆ ತಮ್ಮ ಪಾದ ಬೆಳೆಸುವ ಇಚ್ಛೆ ವ್ಯಕ್ತಪಡಿಸಿ ಶ್ರೀ ಮಹಾಲಿಂಗಪ್ಪನವರ ಮಠದ ಜವಾಬ್ದಾರಿಯನ್ನು ತಮ್ಮ ಶಿಷ್ಯ ಶ್ರೀ ಕಂತೆ ಸಿದ್ಧಪ್ಪನವರಿಗೆ ವಹಿಸಿಕೊಡುತ್ತಾರೆ. ತಮ್ಮ ತಾಯಿ ಶರಣಮ್ಮನವರನ್ನು ಇದೇ ಮಠದಲ್ಲಿ ಬಿಟ್ಟು, ಶ್ರೀ ಮುದ್ದನ ಸ್ವಾಮಿಗಳ ಜೊತೆಯಲ್ಲಿ ದೇವನೂರಿಗೆ ಪಾದ ಬೆಳೆಸಿದರು ಎಂದು ಹೇಳಲಾಗುತ್ತಿದೆ.

ಮಹಾ ದಾಸೋಹಿ ಶ್ರೀ ಗುರುಮಲ್ಲೇಶ್ವರರು ದೇವನೂರಿಗೆ ಬರುವ ವಿಚಾರ ತಿಳಿದು, ಸುತ್ತಲಿನ ಗ್ರಾಮಸ್ಥರು ಜಾತ್ರೆಗೆ ಸೇರುವಂತೆ ಬಂದು ಸೇರತೊಡಗಿದರು. ಶ್ರೀ ಗುರುಮಲ್ಲೇಶ್ವರರು ಪುರಪ್ರವೇಶ ಮಾಡುತ್ತಿದ್ದಂತೆಯೇ ಜನಸ್ತೋಮ ಊರಲ್ಲೆಲ್ಲಾ ಮೆರವಣಿಗೆ ನಡೆಸಿ ಗೌರವಿಸುತ್ತಾರೆ. ಮೆರವಣಿಗೆ ಮುಗಿದ ನಂತರ ಪಟೇಲರ ಪತ್ನಿಗೆ ಹಿಡಿದಿದ್ದ ಬ್ರಹ್ಮ ಪಿಶಾಚಿಯ ಕಾಟವನ್ನು ದೂರ ಮಾಡಿ ಸತಿಪತಿಗಳಿಬ್ಬರಿಗೂ ಉಪದೇಶ ನೀಡಿ ತಮ್ಮ ಶಿಷ್ಯರನ್ನಾಗಿಸಿಕೊಂಡರು. ಕೆಲವರಿಗೆ ಶಿವದೀಕ್ಷೆ ನೀಡಿ, ಪವಾಡ ಲೀಲೆಗಳಿಂದ ಮೆರೆಯತೊಡಗಿದರು.

ಗುರುಗಳ ಪವಾಡವನ್ನು ಕೇಳಿ ತಿಳಿದ ಜನರು ದರ್ಶನಕ್ಕೆಂದು ದೂರದೂರುಗಳಿಂದ ಬರತೊಡಗಿದರು. ದಿನ ಕಳೆದಂತೆ ಭಕ್ತರ ಸಂಖ್ಯೆ ಹೆಚ್ಚಾದಾಗ ಬಂದ ಜನರ ಆಶ್ರಯಕ್ಕೆ ಪಟೇಲರ ಮನೆ ಸಾಲದಾಯಿತು. ಆಗ ಸುಸಜ್ಜಿತವಾದ ಕಟ್ಟಡವನ್ನು ನಿರ್ಮಿಸಲಾಯಿತು. ನೂತನ ಮಠಕ್ಕೆ ಕಟ್ಟಡ ನಿರ್ಮಾಣವಾದ ಮೇಲೆ ಮಠದ ಚಟುವಟಿಕೆಗಳು ಹೆಚ್ಚಾಗತೊಡಗಿದವು. ಮೈಸೂರಿನ ಶ್ರೀ ಮಹಾಲಿಂಗಪ್ಪನ ಮಠದಲ್ಲಿನ ದಾಸೋಹ ಪರಿಪಾಠವನ್ನು ಇಲ್ಲಿಯೂ ಅನುಷ್ಠಾನಕ್ಕೆ ತಂದ ಶ್ರೀಗುರುಮಲ್ಲೇಶ್ವರರು, ಕಂತೆಭಿಕ್ಷದ ಕಾಯಕಕ್ಕೆ ಮೂಗೂರಿನ ಭಿಕ್ಷನ ಶ್ರೀ ರಾಚಪ್ಪ, ಅಡಿಗೆಮನೆ ಉಸ್ತುವಾರಿಗೆ ಶ್ರೀಮತಿ ಮರಿಮಾದಮ್ಮನವರು ಹಾಗೂ ಶ್ರೀ ಗುರುಪಾದಪ್ಪನವರನ್ನು ನೇಮಿಸಿ ಇವರೆಲ್ಲರ ಮೇಲು ಉಸ್ತುವಾರಿಗೆ ಶಂಕರಮ್ಮನವರು ಹಾಗೂ ಪಟೇಲ್ ಸುಬ್ಬೇಗೌಡರನ್ನು ನೇಮಿಸಿಕೊಳ್ಳುತ್ತಾರೆ. ಈ ರೀತಿ ಒಂದೊಂದು ಜವಾಬ್ದಾರಿಯನ್ನು ಸರ್ವರಿಗೂ ವಹಿಸಿದ ಮೇಲೆ, ದಾಸೋಹ ಕಾರ್ಯ ಅಗಾಧವಾಗಿ ಬೆಳೆದು ದೇವನೂರು ಒಂದು ಯಾತ್ರಾಸ್ಥಳವಾಗಿ ಬೆಳೆಯತೊಡಗಿತು.

ದಾಸೋಹ ಮಠಗಳ ಸ್ಥಾಪನೆ: ಶ್ರೀ ಗುರುಮಲ್ಲೇಶ್ವರರು ನೆಲೆನಿಂತ ದೇವನೂರು, ಮಹಾದಾಸೋಹ ಹಾಗೂ ಧರ್ಮ ಪ್ರಸಾರದ ಕೇಂದ್ರಬಿಂದುವಾಯಿತು. ಸಿಕ್ಕ ಎಲ್ಲಾ ಅವಕಾಶಗಳನ್ನು ಬಳಸಿಕೊಂಡ ಶ್ರೀ ಗುರುಮಲ್ಲೇಶ್ವರರು ದೇವನೂರು ಪ್ರಾಂತ್ಯದ ಎಲ್ಲಾ ಕಡೆ ಸಂಚರಿಸಿ, ಧರ್ಮಪ್ರಚಾರ ಕಾರ್ಯವನ್ನು ಕೈಗೊಂಡರು. ಈ ಸಂದರ್ಭದಲ್ಲಿ ಭಕ್ತರು ಗುರುಗಳಿಗೆ ಔತಣ ನೀಡಿ, ಅನುಷ್ಠಾನಕ್ಕೆ ವ್ಯವಸ್ಥೆ ಮಾಡಿಕೊಟ್ಟರು. ಶ್ರೀ ಗುರುಮಲ್ಲೇಶ್ವರರು ತಾವು ಅನುಷ್ಠಾನಗೊಂಡ ಸ್ಥಳಗಳಲ್ಲಿ ದಾಸೋಹ ಮಠಗಳನ್ನು ಸ್ಥಾಪಿಸಿ, ಧಾರ್ಮಿಕ ಸಂಸ್ಕಾರ ನೀಡುವ ಉದ್ದೇಶಕ್ಕೆ ಮಠಾಧ್ಯಕ್ಷರನ್ನು ನೇಮಿಸಿದರು. ಜಾತಿಮತಗಳು, ಬಡವ ಬಲ್ಲಿದ, ಗಂಡು ಹೆಣ್ಣು ಎಂಬ ತಾರತಮ್ಯ ಮಾಡದೆ ಎಲ್ಲರನ್ನೂ ಸಮಾನರಾಗಿ ಕಾಣತೊಡಗಿ, ಪರಿವರ್ತನೆಗೊಂಡವರಿಗೆ ಶಿವದೀಕ್ಷೆ ನೀಡಿ ಲಿಂಗಧಾರಿಗಳಾಗುವಂತೆ ಮಾಡಿ ಒಂದು ಕ್ರಾಂತಿಯನ್ನೇ ಮಾಡಿದರು. ಆಂದೋಲನದ ರೀತಿಯಲ್ಲಿ ನಡೆದ ಶ್ರೀ ಗುರುಮಲ್ಲೇಶ್ವರರ ದಾಸೋಹ ಕ್ರಾಂತಿ ಈ ಪ್ರಾಂತ್ಯದಲ್ಲಿ ಹಲವು ಬದಲಾವಣೆಗಳನ್ನು ಉಂಟುಮಾಡಿತು. ಈ ಸಂದರ್ಭದಲ್ಲಿ ನಾಡಿನಾದ್ಯಂತ ಐನೂರು ಮಠಗಳನ್ನು ಸ್ಥಾಪಿಸಿದರು ಎಂದು ಮಠದ ಪ್ರಕಟಿತ ಚರಿತ್ರೆ ತಿಳಿಸುತ್ತದೆ. ಸಾವಿರಾರು ಜನ ಶ್ರೀ ಗುರುಮಲ್ಲೇಶ್ವರರ ಶಿಷ್ಯರಾಗಿ ಬೆಳೆದರು. ಶ್ರೀ ಗುರುಮಲ್ಲೇಶ್ವರರು ಮತ್ತು ನಂತರದ ಸ್ವಾಮಿಗಳು ಸ್ಥಾಪಿಸಿದ ಶಾಖಾಮಠಗಳ ಪಟ್ಟಿ ಈ ಕೆಳಗಿನಂತಿದೆ.

ಶಾಖಾಮಠಗಳು: ಮೈಸೂರು ಜಿಲ್ಲೆಯ ಮೈಸೂರು ತಾಲ್ಲೂಕಿನಲ್ಲಿ ಹನ್ನೆರಡು, ಕೆ.ಆರ್.ನಗರ ತಾಲ್ಲೂಕಿನಲ್ಲಿ ಮೂರು, ನಂಜಗೂಡು ತಾಲ್ಲೂಕಿನಲ್ಲಿ ಮೂವತ್ತೆರಡು, ಟಿ.ನರಸೀಪುರ ತಾಲ್ಲೂಕಿನಲ್ಲಿ ಹದಿನೆಂಟು. ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಹತ್ತು, ಹುಣಸೂರು ತಾಲ್ಲೂಕಿನಲ್ಲಿ ಎಂಟು, ಚಾಮರಾಜನಗರ ಜಿಲ್ಲೆಯ ಚಾಮರಾಜನಗರ ತಾಲ್ಲೂಕಿನಲ್ಲಿ ಇಪ್ಪತ್ತೆಂಟು. ಕೊಳ್ಳೇಗಾಲ ತಾಲ್ಲೂಕಿನಲ್ಲಿ ಮೂವತ್ತು, ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಇಪ್ಪತ್ತು, ಯಳಂದೂರು ತಾಲ್ಲೂಕಿನಲ್ಲಿ ಏಳು,

ಮಂಡ್ಯ ಜಿಲ್ಲೆಯ ಮಂಡ್ಯ ತಾಲ್ಲೂಕಿನಲ್ಲಿ ಎರಡು, ಮಳವಳ್ಳಿ ತಾಲ್ಲೂಕಿನಲ್ಲಿ ಎರಡು ಹಾಗೂ ತಮಿಳು ನಾಡಿನಲ್ಲಿ ನಾಲ್ಕು ಮಠಗಳು ಸೇರಿದಂತೆ ಒಟ್ಟು ನೂರಐಂಬತ್ನಾಲ್ಕು ಶಾಖಾಮಠಗಳು ಇಂದಿಗೂ ಕಾರ್ಯ ನಿರ್ವಹಿಸುತ್ತಿವೆ.

ಗದ್ದುಗೆಗಳು: ದೇವನೂರು ಶ್ರೀ ಗುರುಮಲ್ಲೇಶ್ವರ ದಾಸೋಹ ಮಹಾಸಂಸ್ಥಾನ ಮಠದಲ್ಲಿ ಹದಿನಾಲ್ಕು ಗದ್ದುಗೆಗಳು ಸಿಗು ತ್ತಿವೆ. ಕರ್ತೃಗುರುಗಳಾದ ಶ್ರೀ ಗುರುಮಲ್ಲೇಶ್ವರ ಸ್ವಾಮಿಗಳು ೧೮೪೯ ನೆಯ ಜೇಷ್ಠಬಹುಳ ತದಿಗೆಯ ಸೋಮವಾರದಂದು ಲಿಂಗೈಕ್ಯರಾದ ಮೇಲೆ ಮಠದ ಭಕ್ತರು ದೇವನೂರಿನ ಮಠದಲ್ಲಿ ಸಮಾಧಿ ಮಾಡಿ ಗದ್ದುಗೆ ನಿರ್ಮಿಸಿದ್ದಾರೆ. ಶ್ರೀಗುರು ಮಲ್ಲೇಶ್ವರರ ಗುರುಗಳಾಗಿದ್ದ ಶ್ರೀ ಮುಪ್ಪಿನ ಸ್ವಾಮಿಗಳು, ಭಿಕ್ಷದ ಶ್ರೀ ರಾಚಪ್ಪ ಸ್ವಾಮಿಗಳು, ಶ್ರೀ ತೋಂಟದಾರ್ಯ ಸ್ವಾಮಿಗಳು,ಶ್ರೀ ಶಿವ ಬಸವ ಸ್ವಾಮಿಗಳು, ಶ್ರೀ ಬಸವಣ್ಣ ಸ್ವಾಮಿಗಳ ಗದ್ದುಗೆಗಳನ್ನು ಗುರುತಿಸಬಹುದಾಗಿದೆ. ಉಳಿದ ಎಂಟು ಗದ್ದುಗೆಗಳು ಮಠದ ಅಧಿಕಾರಸ್ಥರವು ಎಂದು ಹೇಳಲಾದರೂ ಆಧಾರಗಳ ಕೊರತೆಯಿಂದ ಇವುಗಳ ಹೆಸರುಗಳನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ.

ಸಾಹಿತ್ಯ,ಧರ್ಮ ಪ್ರಸಾರ: ಕಂತೆ ಭಿಕ್ಷದ ಮೂಲಕ ಸಂಗ್ರಹಿಸಿದ ಅನ್ನವನ್ನು ಮಠದ ದಾಸೋಹಕ್ಕೆ ಬಳಸುವಂತಹ ವಿಶಿಷ್ಟ ಸಂಪ್ರದಾಯದ ದಾಸೋಹ ಮಠಗಳು ಪ್ರಾರಂಭವಾಗಿ ಅನ್ನದಾಸೋಹದ ಜೊತೆಗೆ, ಬೇರೆ ವೀರಶೈವ ಮಠಗಳಂತೆ ಜ್ಞಾನ ದಾಸೋಹ ನೀಡುವ ದೇಗುಲಗಳಾಗಿಯೂ ಬೆಳೆಯತೊಡಗಿದವು. ದೇವನೂರಿನ ದಾಸೋಹ ಮಠವು ಭಜನೆ ಹಾಗೂ ಕೀರ್ತನೆಗಳ ಮೂಲಕ ಸಾಹಿತ್ಯ ಮತ್ತು ಧರ್ಮಪ್ರಸಾರ ಮಾಡುವ ಒಂದು ಕ್ರಮವನ್ನು ತನ್ನ ಎಲ್ಲಾ ಶಾಖಾಮಠಗಳಲ್ಲಿ ಅನುಷ್ಠಾನಕ್ಕೆ ತಂದಿದೆ. ನಾಡಿನ ಹೆಸರಾಂತ ವಿದ್ವಾಂಸರು, ಹಿರಿಯ ಗುರುಗಳನ್ನು ತಮ್ಮ ಮಠಗಳಿಗೆ ಆಹ್ವಾನಿಸಿ, ಉಪನ್ಯಾಸ ಹಾಗೂ ಉಪದೇಶ ಕೊಡಿಸಿ ಧರ್ಮಪ್ರಸಾರ ಮಾಡಿದೆ. ಹಾಗೆಯೇ ಸಾಹಿತ್ಯ ಕೃತಿಗಳ ಪ್ರಕಟಣೆಗಳ ಮೂಲಕ ಸಾಹಿತ್ಯವನ್ನು ಬೆಳೆಸಿದ ಕೀರ್ತಿಯೂ ಈ ದಾಸೋಹ ಮಠಕ್ಕೆ ಸಲ್ಲುತ್ತದೆ.

ಶೈಕ್ಷಣಿಕ ಸೇವೆ: ಗ್ರಾಮೀಣ ಅಸಹಾಯಕರಿಗೆ ಅನ್ನದಾಸೋಹ ನೀಡಿದರೆ ಸಾಲದು, ಇವರ ಬದುಕು ಉಜ್ವಲವಾಗಬೇಕಾದರೆ ಅಕ್ಷರಜ್ಞಾನದ ಅರಿವು ಆವಶ್ಯಕವೆಂದು ಅರಿತ ಈ ಮಠ, ಶೈಕ್ಷಣಿಕ ಕ್ಷೇತ್ರಕ್ಕೂ ತನ್ನ ಬಾಹುಗಳನ್ನು ಚಾಚಿತು. ಇದರ ಫಲವಾಗಿ ಒಂಬತ್ತು ಪ್ರೌಢಶಾಲೆಗಳು, ಒಂದು ಪಾಲಿಟೆಕ್ನಿಕ್ ಕಾಲೇಜು, ಪದವಿಪೂರ್ವಕಾಲೇಜು ಹಾಗೂ ಒಂದು ಸಂಸ್ಕೃತ ಪಾಠಶಾಲೆ ಯನ್ನು ಪ್ರಾರಂಭಿಸಿದೆ. ಕಲಿಯುವ ಮಕ್ಕಳ ಆಶ್ರಯಕ್ಕೆಂದು ವಿವಿಧ ಕಡೆ ಐದು ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿ, ಈ ಪ್ರಾಂತ್ಯದಲ್ಲಿ ವಿದ್ಯಾಜ್ಯೋತಿಯನ್ನು ಬೆಳಗಿಸಿದೆ. ಈಗಿನ ಮಠಾಧ್ಯಕ್ಷರಾದ ಶ್ರೀ ಮಹಾಂತ ಸ್ವಾಮಿಗಳು ಶೈಕ್ಷಣಿಕ ಕ್ಷೇತ್ರದ ವಿಸ್ತರಣೆಗೆ ಹಗಲಿರುಳು ಶ್ರಮವಹಿಸಿ ದುಡಿಯುತ್ತಿದ್ದಾರೆ.

ಸಾಮಾಜಿಕ ಸುಧಾರಣೆ: ಅಸಹಾಯಕರಿಗೆ ನೆರವು, ಎಲ್ಲರಿಗೂ ಸಹಬಾಳ್ವೆ ಎಂದು ಈ ಮಠವು ಬೋಧಿಸಿದೆ. ಶ್ರೀ ಗುರು ಮಲ್ಲೇಶ್ವರರ ಕಾಲದಲ್ಲಿ ದೇವರಹೆಸರಲ್ಲಿ ಸ್ತ್ರೀ ಸಮುದಾಯವನ್ನು ಬಲಿಕೊಡುತ್ತಿದ್ದ ದೇವದಾಸಿ ಪದ್ಧತಿಯನ್ನು ವಿರೋಧಿಸಿ, ಅವರುಗಳ ಬದುಕಿಗೆ ಒಂದು ಹೊಸ ರೂಪ ಕೊಟ್ಟು, ಶಿವಪಥದ ದಾರಿ ತೋರಿಸಿ ಎಲ್ಲರಂತೆ ಬದುಕುವುದನ್ನು ಕಲಿಸಿದರು. ವರ್ಗರಹಿತ ಸಮಾಜ ನಿರ್ಮಾಣಕ್ಕೆ ಪ್ರಾಶಸ್ತ್ಯ ನೀಡಿದ ಶ್ರೀ ಗುರುಮಲ್ಲೇಶ್ವರರು, ಎಲ್ಲಾ ಜಾತಿಯ ಭಕ್ತರನ್ನು ಸಮಾಜದಲ್ಲಿ ಮುನ್ನಡೆಸಿದ್ದರು. ಈಗಲೂ ಮಠದ ದಾಸೋಹದಲ್ಲಿ ಎಲ್ಲ ಜಾತಿಯ ಅಸಹಾಯಕರು, ಯಾತ್ರಿಕರು ಭಾಗವಹಿ ಸುತ್ತಾರೆ ಎಂಬುದು ಹೆಗ್ಗಳಿಕೆಯ ವಿಚಾರ. ಈ ಮಠದ ಮಠಾಧೀಶರು ನುಡಿಗಿಂತ ಆಚರಣೆಗೆ ಒತ್ತುಕೊಟ್ಟು, ಸಮಾಜವನ್ನು ಸರ್ವಾಂಗೀಣ ರೀತಿಯಲ್ಲಿ ಬದಲಾವಣೆ ಮಾಡಲು ಪ್ರಯತ್ನಿಸಿದ್ದಾರೆ.

ಬಂಗಾರದ ಕಳಶ: ೧೯೧೮ರಲ್ಲಿ ಭಿಕ್ಷದ ಶ್ರೀ ರಾಚಪ್ಪ ಸ್ವಾಮಿಗಳು ತಮ್ಮ ಗುರುಗಳಾದ ಶ್ರೀ ಗುರುಮಲ್ಲೇಶ್ವರರ ಗದ್ದುಗೆಗೆ ಮಂಟಪ ಕಟ್ಟಿಸಿ, ಗೋಪುರಕ್ಕೆ ಬಂಗಾರದ ಕಳಶ ಮಾಡಿಸಿದರು. ಈ ಕಾರ್ಯಕ್ಕೆ ಶ್ರೀ ಗುರುಮಲ್ಲೇಶ್ವರರ ಪರಮ ಭಕ್ತರಾದ ಹೆಣ್ಣು ಮಕ್ಕಳು ತಮ್ಮ ಮಾಂಗಲ್ಯವನ್ನು ಕಾಣಿಕೆಯಾಗಿ ನೀಡಿದ ನಿದರ್ಶನಗಳು ದಾಖಲೆಯಾಗಿವೆ. ನಾಡಿನ ಭಕ್ತ ಸಮೂಹ ಈ ಮಂಗಳ ಕಾರ್ಯಕ್ಕೆ ಆರ್ಥಿಕ ನೆರವನ್ನು ನೀಡಿತು. ಈ ನೆರವಿನಿಂದ ಭಿಕ್ಷದ ಶ್ರೀ ರಾಚಪ್ಪ ಸ್ವಾಮಿಗಳು ಇಪ್ಪತ್ತೈದು

ಅಂಕಣದ ವಿಸ್ತಾರದ ಕಟ್ಟಡವನ್ನು ನಿರ್ಮಿಸಿದರು. ಅಡಿಗೆಮನೆ, ದಾಸೋಹ ಮಂದಿರ, ಮಠಕ್ಕೆ ಭವ್ಯವಾದ ಹೆಬ್ಬಾಗಿಲು, ಮಠದ ಹಿಂಭಾಗದಲ್ಲಿ ದನಗಳ ಕೊಟ್ಟಿಗೆ ಹಾಗೂ ಮಠದ ಪಕ್ಕದಲ್ಲಿ ನೀರಿನ ಕೊಳ ನಿರ್ಮಾಣಗೊಂಡವು.

ಅಭಿನವ ಶ್ರೀ ಗುರುಮಲ್ಲೇಶ್ವರರು: ಶ್ರೀ ಬಸವಣ್ಣ ಸ್ವಾಮಿಗಳ ನಂತರ ೧೯೭೦ನೆಯ ಏಪ್ರಿಲ್‌ನಲ್ಲಿ ಶ್ರೀ ಗುರು ಮಲ್ಲೇಶ್ವರ ದಾಸೋಹ ಮಹಾಸಂಸ್ಥಾನ ಮಠದ ಮಠಾಧ್ಯಕ್ಷರಾಗಿ ಅಭಿನವ ಗುರುಮಲ್ಲೇಶ್ವರರಾದ ಶ್ರೀ ಮಹಾಂತ ಸ್ವಾಮಿಗಳು ಅಧಿಕಾರ ಪಡೆದರು. ಇವರು ಅಧಿಕಾರ ಪಡೆದ ಮೇಲೆ ಮಠದ ಮೂಲ ತತ್ವಕ್ಕೆ ಒತ್ತುಕೊಟ್ಟು ಧರ್ಮಪ್ರಸಾರಕ್ಕೆ ಕಂಕಣತೊಟ್ಟು ನಿಂತರು. ಶ್ರೀ ಗುರುಮಲ್ಲೇಶ್ವರರು ಹಾಗೂ ನಂತರದ ಗುರುಗಳು ಸ್ಥಾಪಿಸಿದ ಶಾಖಾಮಠಗಳ ಬೆಳವಣಿಗೆಗೆ ಸಹಾಯಕ ರಾಗಿರುವುದಲ್ಲದೆ, ಶ್ರೀ ಮಹಾಂತ ಸ್ವಾಮಿಗಳು ಇನ್ನೂ ಅನೇಕ ಶಾಖಾ ಮಠಗಳನ್ನು ಸ್ಥಾಪಿಸಿದರು.

ಮಠದ ಶತಮಾನೋತ್ಸವದ ನಿಮಿತ್ತವಾಗಿ ೧೯೯೯ರಲ್ಲಿ ಮಠದ ಕಟ್ಟಡದ ನವೀಕರಣದೊಂದಿಗೆ, ವಿದ್ಯಾಸಂಸ್ಥೆಗಳಿಗೆ ನೂತನ ಕಟ್ಟಡಗಳು ಸ್ಥಾಪನೆಯಾದವು. ಮಠದ ಅಭಿವೃದ್ಧಿಗೆ ಹಲವು ಯೋಜನೆಗಳನ್ನು ಹಮ್ಮಿಕೊಂಡು, ಇವುಗಳ ಅನುಷ್ಠಾನಕ್ಕೆ ದೇಶಸಂಚಾರ ಕೈಗೊಂಡು ಬಂಡವಾಳವನ್ನು ಸಂಗ್ರಹಿಸಿ ಕಾರ್ಯಗತಗೊಳಿಸಿದ್ದಾರೆ. ದಾಸೋಹ ಎಂಬ ಪದದ ಅರ್ಥಕ್ಕೆ ಸರಿಯಾಗಿ, ಇವರ ಕಾಲದಲ್ಲಿ ಸಾವಿರಾರು ಜನರಿಗೆ ನಿತ್ಯ ಅನ್ನದಾಸೋಹ ನಡೆಯುತ್ತಿದೆ.

ವಿಳಾಸ: ಶ್ರೀ ಮಹಾಂತಸ್ವಾಮಿಗಳು, ಶ್ರೀ ಗುರುಮಲ್ಲೇಶ್ವರ ದಾಸೋಹ ಮಠ, ದೇವನೂರು, ನಂಜನಗೂಡು ತಾ,ಮೈಸೂರು.ಜಿಲ್ಲೆ.

ನಂಜನಗೂಡು

ತಾಲ್ಲೂಕು ಕೇಂದ್ರ ಸ್ಥಳವಾಗಿರುವ ನಂಜನಗೂಡು ಪಟ್ಟಣದಲ್ಲಿ ಶ್ರೀ ನೀಲಕಂಠೇಶ್ವರ ದೇವಸ್ಥಾನವು ಸ್ಥಾಪನೆ ಯಾಗಿದ್ದು ಪ್ರಸಿದ್ಧಿಪಡೆದಿದೆ. ಇಲ್ಲಿ ಪುರಾತನ ಕಾಲದಲ್ಲಿ ಸ್ಥಾಪನೆಯಾದ ಹೊಂದಲಗೆರೆಮಠ ಹಾಗೂ ಕನಕಗಿರಿ ಕೆಂಡಗಣ್ಣ ಸ್ವಾಮಿ ಮಠವು ಅಸ್ತಿತ್ವದಲ್ಲಿದ್ದವು. ಈಗ ಕನಕಗಿರಿ ಕೆಂಡಗಣ್ಣಸ್ವಾಮಿಮಠ ಅಸ್ತಿತ್ವದಲ್ಲಿದ್ದು ಹೊಂದಲಗೆರೆಮಠವು ಗುರುಗಳಿಲ್ಲದೆ ಖಾಲಿ ಉಳಿದಿದೆ.

ಕನಕಗಿರಿ ಕೆಂಡಗಣ್ಣ ಸ್ವಾಮಿಮಠ: ನಂಜನಗೂಡಿನ ಪೂರ್ವಕ್ಕೆ ಎರಡು ಕಿ.ಮೀ. ಹೊರಭಾಗದಲ್ಲಿರುವ ಕನಕಗಿರಿ ಶ್ರೀಕೆಂಡಗಣ್ಣ ಸ್ವಾಮಿ ಮಠವನ್ನು, ಕನಕಗಿರಿಯ ಶ್ರೀ ಕೆಂಡಗಣ್ಣಸ್ವಾಮಿಗಳು ಪ್ರಾರಂಭಮಾಡಿದ್ದರಿಂದ ಈ ಹೆಸರು ಬಂದಿದೆ. ಊರಿನ ಹೊರಭಾಗದ ಪ್ರಶಾಂತ ವಾತಾವರಣದಲ್ಲಿ ಸ್ಥಾಪನೆಯಾಗಿರುವ ಮಠದ ಸುತ್ತ ತೋಟ ಬೆಳೆದು ಹಸಿರ ಹೊದಿಕೆಯನ್ನು ಹೊದಿಸಿದೆ. ಇಂತಹ ಹಸಿರ ಐಸಿರಿಯ ಮಧ್ಯೆ ನಿರ್ಮಾಣವಾಗಿರುವ ಮಠದ ಕಟ್ಟಡ ಹಿಂದಿನ ವೈಭವವನ್ನು ಸಂಕೇತಿಸುತ್ತಿದೆ.

ಮಠ ಸ್ಥಾಪನೆ: ಸುಮಾರು ನೂರೈವತ್ತು ವರ್ಷಗಳ ಹಿಂದೆ ಕನಕಗಿರಿಯಿಂದ ಲೋಕಸಂಚಾರ ಮಾಡುತ್ತಾ ಬಂದ ಶ್ರೀ ಕೆಂಡ ಗಣ್ಣಸ್ವಾಮಿಗಳು ಈ ಸ್ಥಳದಲ್ಲಿ ಅನುಷ್ಠಾನಗೊಂಡು ಇಲ್ಲೇ ನೆಲೆಸಿದರು. ಗುರುಗಳು ಇಲ್ಲಿ ಸೊಪ್ಪಿನ ಗುಡಿಸಲನ್ನು ನಿರ್ಮಿಸಿ ಕೊಂಡು ವಾಸಮಾಡತೊಡಗಿದರು. ದೇಹ ದಂಡನೆಗಾಗಿ ಘೋರ ತಪಸ್ಸನ್ನು ಆಚರಿಸಿ ಮನಃಸಿದ್ಧಿ ಸಾಧಿಸಿದ್ದರು. ಶ್ರೀಕೆಂಡಗಣ್ಣ ಸ್ವಾಮಿಗಳ ಬೆನ್ನಲ್ಲಿ ಶಿವಲಿಂಗ ಉದ್ಭವಿಸಿತ್ತೆಂದು ಹೇಳುವುದಲ್ಲದೆ, ಅವರ ಕಣ್ಣುಗಳು ಕೆಂಡದಂತೆ ಕೆಂಪಾಗಿದ್ದು ನೋಡಲು ಉಗ್ರರೂಪದಲ್ಲಿ ಕಾಣುತ್ತಿದ್ದರೆಂದು ಇಲ್ಲಿನ ಜನಪದ ಕಥೆ ತಿಳಿಸುತ್ತಿದೆ.

ಶ್ರೀ ಕೆಂಡಗಣ್ಣಸ್ವಾಮಿಗಳು ಉಗ್ರರೂಪದಲ್ಲಿ ಕಾಣುತ್ತಿದ್ದರಾದರೂ ಮಗುವಿನಂತಹ ಮನಸ್ಸಿದ್ದು, ಹೃದಯ ವೈಶಾಲ್ಯತೆ ಉಳ್ಳವರಾಗಿದ್ದರು. ಒಳ್ಳೆಯವರನ್ನು ರಕ್ಷಿಸುತ್ತಾ, ಕೆಟ್ಟವರನ್ನು ಶಿಕ್ಷಿಸುತ್ತಾ ಸಮಾಜವನ್ನು ಸನ್ಮಾರ್ಗದಲ್ಲಿ ಮುನ್ನಡೆಸಿದರು. ಇವರು ಅನೇಕ ಪವಾಡಗಳನ್ನು ಮಾಡಿ ಈ ಕ್ಷೇತ್ರವನ್ನು ಪಾವನಗೊಳಿಸಿದ ಮಹಾತ್ಮರಾಗಿದ್ದಾರೆ.

ಪರಂಪರೆ:

೧. ಶ್ರೀ ಕೆಂಡಗಣ್ಣಸ್ವಾಮಿಗಳು (ಕರ್ತೃಗುರುಗಳು)

೨. ಶ್ರೀ ಕರಿಬಸಪ್ಪಸ್ವಾಮಿಗಳು

೩. ಶ್ರೀ ಬಸಪ್ಪಸ್ವಾಮಿಗಳು

೪. ಶ್ರೀ ಕರಿಬಸವಲಿಂಗಸ್ವಾಮಿಗಳು
೫. ಶ್ರೀ ರುದ್ರಪ್ಪ ಸ್ವಾಮಿಗಳು
೬. ಶ್ರೀ ಮಹಾದೇವಸ್ವಾಮಿಗಳು
೭. ಶ್ರೀ ಇಮ್ಮಡಿ ಕೆಂಡಗಣ್ಣ ಸ್ವಾಮಿಗಳು (ಈಗಿನವರು)

ಈ ರೀತಿ ಗುರುಪರಂಪರೆಯು ಬೆಳೆದು ಮಠದ ಇತಿಹಾಸವನ್ನು ಬೆಳಗಿಸಿದೆ. ಇಂತಹ ಪರಂಪರೆಯ ಶ್ರೀಮಂತಿಕೆ ಪಡೆದ ಮಠ ದಲ್ಲಿ ಶ್ರೀ ಕರಿಬಸವಲಿಂಗ ಸ್ವಾಮಿಗಳು ಸಂಸ್ಕೃತ ಮತ್ತು ವೇದಾಧ್ಯಯನ ಮಾಡಿ, ಪಾಂಡಿತ್ಯ ಪಡೆದು ಕಾಶಿಯಿಂದ ಬಂದು ನೆಲೆಸಿದರು. ಇವರ ನೆಲೆಗೊಳ್ಳುವಿಕೆಯಿಂದ ಯೋಗಮಂದಿರವಾಗಿದ್ದ ಈ ಕ್ಷೇತ್ರ ಜ್ಞಾನಮಂದಿರವಾಗಿಯೂ ಬೆಳಗಿತು. ಯೋಗ, ಜ್ಞಾನ ಸಮ್ಮಿಳನಗೊಂಡ ಮಹಾಕ್ಷೇತ್ರವೆಂಬ ಹೆಗ್ಗಳಿಕೆಗೆ ಪಾತ್ರವಾಯಿತು.

ಈಗಿನ ಗುರುಗಳಾದ ಶ್ರೀ ಇಮ್ಮಡಿ ಕೆಂಗಡಗಣ್ಣ ಸ್ವಾಮಿಗಳು ಕರ್ತೃಗುರುಗಳ ಹೆಸರನ್ನು ಅಭಿದಾನ ಪಡೆದು, ೧೯೯೧ರ ಫೆಬ್ರವರಿ ಇಪ್ಪತ್ತೈದರಂದು ಅಧಿಕಾರಕ್ಕೆ ಬಂದಿದ್ದಾರೆ. ಇವರು ತಮ್ಮ ಮಠದ ಸಂಪ್ರದಾಯಗಳನ್ನು ಮೈಗೂಡಿಸಿಕೊಂಡು, ಧಾರ್ಮಿಕ ಚಟುವಟಿಕೆಗಳನ್ನು ನಡೆಸುತ್ತಾ ಮಠದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಈ ಮಠದಲ್ಲಿ ಮೂರು ಗದ್ದುಗೆಗಳು ನೋಡಸಿಗುತ್ತಿವೆ. ಉಳಿದಂತೆ ಕತ್ತೂಗ,ಹೊಸಗೆರೆ ಮತ್ತು ಪಂದಲಗೆರೆಯಲ್ಲಿ ತಲಾ ಒಂದೊಂದು ಗದ್ದುಗೆಗಳು ನಿರ್ಮಾಣಗೊಂಡಿವೆ ಎಂದು ಹೇಳಲಾಗುತ್ತಿದೆ. ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯಪೂಜೆ ಹಾಗೂ ವಾರ್ಷಿಕ ಪುಣ್ಯಾರಾಧನೆಯನ್ನು ನಡೆಸುತ್ತಾ, ಧಾರ್ಮಿಕ ಆಚರಣೆಗಳು ನಡೆಯುವಂತೆ ಮಾಡಿ ದ್ದಾರೆ. ಅಮಾವಾಸ್ಯೆ, ಹುಣ್ಣಿಮೆ, ಕಾರ್ತೀಕ ಹಾಗೂ ಶ್ರಾವಣಮಾಸಗಳಲ್ಲಿ ವಿಶೇಷ ಪೂಜೆಯನ್ನು ಏರ್ಪಡಿಸಿ, ಭಕ್ತರಿಗೆ ಅನ್ನ ದಾಸೋಹವನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಇಮ್ಮಡಿ ಕೆಂಡಗಣ್ಣಸ್ವಾಮಿಗಳು. ಶ್ರೀ ಕನಕಗಿರಿ ಕೆಂಡಗಣ್ಣಸ್ವಾಮಿ ಮಠ. ಪರಶುರಾಮ ರಸ್ತೆ, ನಂಜನಗೂಡು, ಮೈಸೂರು ಜಿಲ್ಲೆ.

ಹೊಂದಲಗೆರೆಮಠ: ನಂಜನಗೂಡು ಪಟ್ಟಣದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಹೊಂದಲಗೆರೆಮಠವು ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಹೊಂದಲಗೆರೆಯ ಗುರುಗಳಿಂದ ಸ್ಥಾಪನೆಯಾದ ಕಾರಣ ಹೊಂದಲಗೆರೆಮಠ ಎಂಬ ಹೆಸರು ಬಂದಿದೆ. ಈ ಮಠದಲ್ಲಿ ಅನೇಕ ಗುರುಗಳು ಧಾರ್ಮಿಕ ಕಾರ್ಯಗಳನ್ನು ನಡೆಸಿ ಮಠವನ್ನು ಬೆಳೆಸಿದ್ದಾರೆ. ಈ ಹಿಂದೆ ಅಧಿಕಾರದಲ್ಲಿದ್ದ ಶ್ರೀ ಮಹಾಲಿಂಗ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾದ ಕಾರಣ ಮಠವು ಖಾಲಿ ಉಳಿದಿದೆ. ಈಗ ಮುಡುಕುತೊರೆಯ ತೋಪಿನಮಠದ ಹಿರಿಯ ಗುರುಗಳಾದ ಶ್ರೀ ಮಹಾಲಿಂಗ ಶಿವಾಚಾರ್ಯ ಸ್ವಾಮಿಗಳು ಉತ್ತರಾಧಿಕಾರಿಗಳನ್ನು ನೇಮಿಸಿ, ಮಠವನ್ನು ಅಭಿವೃದ್ಧಿಪಡಿಸಲು ಮುಂದಾಗಿದ್ದಾರೆ.

ವಿಳಾಸ: ಶ್ರೀ ಹೊಂದಲಗೆರೆಮಠ. ಗೌರಿಪೇಟೆ ಬಡಾವಣೆ. ನಂಜನಗೂಡು, ಮೈಸೂರು ಜಿಲ್ಲೆ.

ನವಿಲೂರು

ನಂಜನಗೂಡು ತಾಲ್ಲೂಕಿನ ನವಿಲೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹನ್ನೆರಡು ಕಿ.ಮೀ. ದೂರದಲ್ಲಿದೆ. ಶ್ರೀ ಗುರುಮಲ್ಲೇಶ್ವರ ದಾಸೋಹಮಠವು ಅಸ್ತಿತ್ವದಲ್ಲಿದೆ.

ಗುರುಮಲ್ಲೇಶ್ವರಮಠ: ಸುಮಾರು ನಲವತ್ತೆಂಟು ವರ್ಷಗಳ ಹಿಂದೆ ಚುಂಚನಹಳ್ಳಿಯಿಂದ ನವಿಲೂರಿಗೆ ಬಂದ ಶ್ರೀಚನ್ನಬಸವೇಶ್ವರ ಸ್ವಾಮಿಗಳು, ಊರ ಮಧ್ಯದಲ್ಲಿ ಮಠವನ್ನು ಸ್ಥಾಪನೆಮಾಡಿದ್ದಾರೆ. ನಂತರ ಸ್ವಾಮಿಗಳು ತಮ್ಮ ಕಾಯಕಯೋಗದಿಂದ ಮಠದ ನಾಲ್ಕು ಎಕರೆ ಜಮೀನನ್ನು ಅಭಿವೃದ್ಧಿಪಡಿಸಿ, ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ಅಲ್ಲದೆ ನಿತ್ಯ ಕಂತೆಭಿಕ್ಷದ ಮೂಲಕ ಮಠದಲ್ಲಿ ದಾಸೋಹವನ್ನು ನಡೆಸಿ ೧೯೬೦ರ ಆಗಸ್ಟ್ ಹನ್ನೊಂದರಂದು ಲಿಂಗೈಕ್ಯರಾದರು. ಇವರ

ನಂತರ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಮಠದ ಅಧಿಕಾರವನ್ನು ಪಡೆದು ಆಡಳಿತ ನಡೆಸುತ್ತಿದ್ದಾರೆ.

ಕಲ್ಲು ಮಂಟಪ: ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಅಧಿಕಾರಕ್ಕೆ ಬಂದ ಎಂಟು ವರ್ಷಗಳಲ್ಲಿಯೇ ಮಠ ನವೀಕರಣಗೊಂಡು, ಅಭಿವೃದ್ಧಿಯತ್ತ ಮುಖಮಾಡಿದೆ. ಇವರು ಕಾಯಕಯೋಗಿಗಳಾಗಿ ಮಠದ ಜಮೀನನ್ನು ಅಭಿವೃದ್ಧಿಪಡಿಸಿದರು. ಅಲ್ಲದೆ ಸುಗ್ಗಿಯ ಕಾಲದಲ್ಲಿ ಜೋಳಿಗೆ ಹಿಡಿದು ಸಂಚರಿಸಿ ಭಿಕ್ಷೆ ಮಾಡಿ, ವರ್ಷದ ದಾಸೋಹಕ್ಕಾಗಿ ದವಸ ಧಾನ್ಯಗಳನ್ನು ಸಂಗ್ರಹಿಸುತ್ತಾರೆ. ತಮ್ಮ ಪರಿಶ್ರಮದಿಂದ ಮಠವನ್ನು ಅಭಿವೃದ್ಧಿಪಡಿಸಿ, ಹಿರಿಯ ಗುರುಗಳ ಗದ್ದುಗೆಗೆ ಕಲ್ಲಿನ ಮಂಟಪ ನಿರ್ಮಿಸಿದ್ದಾರೆ. ಅಲ್ಲದೆ ಹಿಂದಿನ ಗುರುಗಳ ಕಾಲದಲ್ಲಿ ನಿರ್ಮಿಸಿದ್ದ ಮಠದ ಕಟ್ಟಡಕ್ಕೆ ಹೊಂದಿಕೊಂಡಂತೆ ಒಂದು ಬಾವಿಯನ್ನು ನಿರ್ಮಿಸಿ ಮಠದ ಕಟ್ಟಡವನ್ನು ವಿಸ್ತರಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಕರ್ತೃ ಗುರುಗಳ ಗದ್ದುಗೆಗೆ ನಿತ್ಯ ಪೂಜೆಯನ್ನು ನಡೆಸಲಾಗುತ್ತಿದೆ. ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳ ಕ್ರಿಯಾಶೀಲ ವ್ಯಕ್ತಿತ್ವದಿಂದ ಮಠ ಅಭಿವೃದ್ಧಿಯಾದಂತೆ ಧಾರ್ಮಿಕ ಚಟುವಟಿಕೆಗಳು ಚುರುಕುಗೊಳ್ಳತೊಡಗಿದವು. ತಮ್ಮ ಹಿರಿಯ ಗುರುಗಳ ಆರಾಧನೆಯನ್ನು ಆಚರಿಸಿ, ಅಂದು ಧಾರ್ಮಿಕ ಹಾಗೂ ಸಾಹಿತ್ಯಿಕ ವಿಚಾರಗಳಲ್ಲಿ ಉಪನ್ಯಾಸ ಏರ್ಪಡಿಸುತ್ತಾರೆ. ಪ್ರತಿ ಸೋಮವಾರ ಭಜನೆ ಕಾರ್ಯಕ್ರಮವನ್ನು ಏರ್ಪಡಿಸಲಾಗುತ್ತಿದೆ.

ವಿಳಾಸ: ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು, ಶ್ರೀ ಗುರುಮಲ್ಲೇಶ್ವರಮಠ, ನವಿಲೂರು, ನಂಜನಗೂಡು ತಾಲ್ಲೂಕು, ಮೈಸೂರುಜಿಲ್ಲೆ.

ಬಸವನಪುರ

ನಂಜನಗೂಡು ತಾಲ್ಲೂಕಿನ ಬಸವನಪುರವು ಮೈಸೂರು ಮತ್ತು ನಂಜನಗೂಡಿನ ರಸ್ತೆಯಲ್ಲಿ ಸಿಗುವ ಅಭಿವೃದ್ಧಿಗೊಂಡ ಗ್ರಾಮ. ನಂಜನಗೂಡಿನಿಂದ ವಾಯುವ್ಯಕ್ಕೆ ಮೂರು ಕಿ.ಮೀ.ದೂರದಲ್ಲಿರುವ ಬಸವನಪುರದಲ್ಲಿ, ಶ್ರೀ ಮಲ್ಲನಮೂಲೆ ಮಠವು ಸ್ಥಾಪನೆಯಾಗಿ ಹೆಸರು ಪಡೆದಿದೆ.

ಮಲ್ಲನಮೂಲೆಮಠ: ಬಸವನಪುರ ಗ್ರಾಮದ ಕಪಿಲಾ ನದಿಯ ದಡದಲ್ಲಿ ಶ್ರೀ ಮಲ್ಲನಮೂಲೆಮಠವು ಸ್ಥಾಪನೆಯಾಗಿದೆ. ಸುಮಾರು ಇನ್ನೂರೈವತ್ತು ವರ್ಷಗಳ ಹಿಂದೆ ಕಾಯಕಯೋಗಿ ಶ್ರೀ ಮಲ್ಲಯ್ಯನವರು ನೆಲೆಸಿದ್ದ ತಪೋಸ್ಥಳ ಇದಾಗಿತ್ತೆಂದು ಹೇಳಲಾಗುತ್ತಿದೆ. ಈ ಕಾರಣಕ್ಕೆ ಶ್ರೀ ಮಲ್ಲನಮೂಲೆ ಮಠ ಎಂಬ ಹೆಸರು ಪಡೆದು ಪ್ರಸಿದ್ಧಿ ಪಡೆದಿದೆ. ಇವರು ಕಾಯಕಯೋಗದಿಂದ ವೀರಶೈವ ತತ್ತ್ವವನ್ನು ಪ್ರಚಾರಗೊಳಿಸಿ, ಜಪ ತಪಗಳಿಂದ ಈ ಕ್ಷೇತ್ರವನ್ನು ಸುಕ್ಷೇತ್ರಗೊಳಿಸಿದರು. ಗುರು ಶ್ರೀ ನಿರಂಜನರ ಕಾರುಣ್ಯದ ಮಗುವಾಗಿ ಬೆಳೆದ ಶ್ರೀ ಮಲ್ಲಯವನರು ತಮ್ಮ ಪರಿಶ್ರಮದಿಂದ ಕಾಯಕ ಮಲ್ಲಯ್ಯನವರಾಗಿ ದಾಸೋಹ ನಿರತರಾಗುತ್ತಾರೆ. ನಿತ್ಯ ಶ್ರೀ ನಿರಂಜನರ ಶುಶ್ರೂಷೆ ಹಾಗೂ ಪೂಜೆಗೆ ವ್ಯವಸ್ಥೆ ಮಾಡುತ್ತಾ, ತಮ್ಮ ನಿತ್ಯ ಕರ್ಮಾದಿಗಳನ್ನು ಮುಗಿಸಿ ಸತ್ಯಶುದ್ಧ ಕಾಯಕಕ್ಕೆ ಮುಂದಾಗುತ್ತಿದ್ದರು. ದಿನದ ಮೊದಲು ಯಾರು ಮಲ್ಲಯ್ಯನವರ ಕಣ್ಣಿಗೆ ಬೀಳುತ್ತಾರೋ ಅವರು ಯಾರೇ ಆಗಿರಲಿ, ಮಲ್ಲಯ್ಯನವರಿಗೆ ಕಾಲಾಣೆ ಕಾಸು ಕೊಡಬೇಕಿತ್ತು. ಈ ಕಾಸಿನಿಂದ ರಾಗಿ, ಹುರುಳಿ ಹಾಗೂ ಧೂಪ ಕರ್ಪೂರಗಳನ್ನು ತಂದು ಪ್ರಸಾದ ಸಿದ್ಧಪಡಿಸುತ್ತಿದ್ದರು. ಸಿದ್ಧಗೊಂಡ ಪ್ರಸಾದದ ಮಡಕೆಗಳಿಗೆ ಪೂಜೆಸಲ್ಲಿಸಿ, ಮಹಾ ಪ್ರಸಾದ ಸ್ವೀಕರಿಸಲು ಸಾಕಷ್ಟು ಸಂಖ್ಯೆಯಲ್ಲಿ ಭಕ್ತರು ಸೇರಿದ ಮೇಲೆ ಗುರು ಶ್ರೀ ನಿರಂಜನರಿಗೆ ಪ್ರಸಾದ ಬಡಿಸಿ ಸಾಷ್ಟಾಂಗ ನಮಸ್ಕಾರ ಮಾಡಿ, ನಂತರ ಬಂದ ಭಕ್ತರಿಗೆ ಬಡಿಸುತ್ತಿದ್ದರು. 'ಇದು ಶಿವನ ಪ್ರಸಾದ ಶಿವಶಿವ ಎನ್ನುತ್ತಲೇ ಉಣ್ಣಿರಿ. ಶಿವನು ನಿಮಗೆ ಬೇಡಿದ ರುಚಿಯನ್ನು ಕೊಡುತ್ತಾನೆ' ಎಂದು ಭಕ್ತರಿಗೆ ಮೇಲಿಂದ ಮೇಲೆ ಹೇಳಿ ಸಂತೋಷಪಡಿಸುತ್ತಿದ್ದರು ಎಂದು ಹೇಳಲಾಗುತ್ತಿದೆ.

ಪ್ರಸಾದಕ್ಕೆ ಉಂಗುರಸ್ವೀಕಾರ: ಒಮ್ಮೆ ನಿತ್ಯದಂತೆ ಮಲ್ಲಯ್ಯನವರು ತಮ್ಮ ದೈನಂದಿನ ಕಾಯಕಕ್ಕಾಗಿ ಹೊರಟಾಗ ಎದುರಿಗೆ ದಳವಾಯಿಯೊಬ್ಬ ಕುದುರೆಯನ್ನೇರಿ ಬಂದನು. ಮಲ್ಲಯ್ಯನವರು ದಳವಾಯಿಯನ್ನು ತಡೆದು ಅನ್ನ ದಾಸೋಹಕ್ಕೆ ಕಾಸು ಕೇಳಿದರು. ದಳವಾಯಿ ಕೆಳಗೆ ಇಳಿದು 'ಕಾಸು ಏತಕ್ಕಾಗಿ? ನೀವು ಯಾರು ?' ಎಂದು ಕೇಳಿದನು. ಪ್ರತಿನಿತ್ಯ ತಾವು ಕೈಗೊಂಡ ಮಹಾ ಪ್ರಸಾದದ ವಿಚಾರವನ್ನು ಮಲ್ಲಯ್ಯನವರು ದಳವಾಯಿಗೆ ತಿಳಿಸಿ ಇಂದು ಮೊದಲು ಕಂಡ ವ್ಯಕ್ತಿ

ಸೇವಾಗಿರುವುದರಿಂದ ಕಾಸು ಕೊಟ್ಟು, ಮಹಾಪ್ರಸಾದ ನಡೆಯಲು ಅನುವು ಮಾಡಿಕೊಡಬೇಕೆಂದು ಕೇಳಿದರು. ಈ ವಿಚಾರ ಕೇಳಿದ ದಳವಾಯಿ ಸಂತೋಷ ಗೊಂಡು 'ನನ್ನಲ್ಲಿ ನಿಮಗೆ ಕೊಡಲು ಈಗ ಕಾಸಿಲ್ಲ. ಆದ್ದರಿಂದ ನನ್ನ ಮುದ್ರೆಉಂಗುರವನ್ನು ತೆಗೆದುಕೊಂಡು ದಾಸೋಹ ನಡೆಸಿ' ಎಂದು ಹೇಳಿ, ನಾಳೆ ದಾಸೋಹಕ್ಕೆ ಬರುವುದಾಗಿ ಹೇಳಿ ಹೋಗುತ್ತಾನೆ.

ಲಭಿಸದ ಪ್ರಸಾದ: ದಳವಾಯಿಯು ಮಲ್ಲನಮೂಲೆಯಲ್ಲಿ ನಡೆಯುವ ದಾಸೋಹ ಪ್ರಸಾದವನ್ನು ಕೇಳಿತಿಳಿದುಕೊಂಡು ಈ ಪವಾಡವನ್ನು ಕಣ್ಣಾರೆ ಕಂಡು ಧನ್ಯನಾಗಬೇಕೆಂದು ನಿರ್ಧರಿಸಿ, ಮರುದಿನ ಬೆಳಿಗ್ಗೆ ತನ್ನ ಸಂಸಾರದ ಜೊತೆ ಮಲ್ಲಯ್ಯನವರ ಸನ್ನಿಧಿಗೆ ಆಗಮಿಸುತ್ತಾನೆ. ದಳವಾಯಿಯು ಮಠಕ್ಕೆ ಬರುವ ವೇಳೆಗೆ ಮಹಾಪ್ರಸಾದದ ವಿನಿಯೋಗ ಕಾರ್ಯ ಮುಗಿದಿತ್ತು. ದಳವಾಯಿ ಪ್ರಸಾದ ಸ್ವೀಕರಿಸುವ ಯೋಗ ಸಿಗದಿದ್ದಕ್ಕೆ ದುಃಖಿಸುತ್ತ, ಮಲ್ಲಯ್ಯನವರ ಬಳಿಗೆ ಬರುತ್ತಾನೆ. ಅದೇ ವೇಳೆಗೆ ಗುರು ಶ್ರೀ ನಿರಂಜನರು ಮಲ್ಲಯ್ಯನವರನ್ನು ಉದ್ದೇಶಿಸಿ 'ಇಂದಿಗೆ ನಮ್ಮ ಕಾಯಕ ಮುಗಿಯಿತು. ನಾವು ನಿರ್ವಹಿಸಬೇಕಾಗಿದ್ದ ಕಾಯಕ ಯಶಸ್ವಿಯಾಗಿದೆ. ನಾವು ನಿರೀಕ್ಷಿಸುತ್ತಿದ್ದ ಕಂಬಳೇಶ್ವರ ಸಹೋದರರು ಸದ್ಯದಲ್ಲೇ ಈ ಸ್ಥಳಕ್ಕೆ ಆಗಮಿಸಿ ಭಕ್ತರನ್ನು ಉದ್ಧರಿಸುವರು. ನಾವು ಇನ್ನು ಶಿವನ ಸನ್ನಿಧಿಗೆ ಹೋಗೋಣ' ಎಂದು ನುಡಿಯುತ್ತಿದ್ದಂತೆಯೇ ಗುರು ಶ್ರೀ ನಿರಂಜನರು ಹಾಗೂ ಶ್ರೀ ಮಲ್ಲಯ್ಯನವರು ಬಯಲಲ್ಲಿ ಬಯಲಾಗಿ ಹೋದರಂತೆ. ಈ ದೃಶ್ಯವನ್ನು ಕಣ್ಣಾರೆಕಂಡ ದಳವಾಯಿ ರೋಮಾಂಚನಗೊಂಡನು. ಇಂತಹ ಅದ್ಭುತ ಪವಾಡವನ್ನು ನೋಡಿ ಆಶ್ಚರ್ಯಚಕಿತನಾಗಿ ಗುರುಗಳ ಸೇವೆಗೆಂದು ತಂದಿದ್ದ ಫಲಪುಷ್ಪಗಳನ್ನು ಶಿವೈಕ್ಯರಾದ ಗುರುಗಳಿಗೆ ಅರ್ಪಿಸಿ ಹಿಂದಿರುಗುತ್ತಾನೆ.

ಬಯಲಾದ ಕ್ಷೇತ್ರದಲ್ಲಿ ಗುಡಿ: ಈ ಘಟನೆ ನೋಡಿದ ದಳವಾಯಿಯು ಮಹಾ ತಪಸ್ವಿಗಳು ನಡೆಸುತ್ತಿದ್ದ ಪ್ರಸಾದವನ್ನು ಸ್ವೀಕರಿಸುವ ಯೋಗವೂ ಲಭಿಸದಿದ್ದುದಕ್ಕಾಗಿ ಮತ್ತು ತನ್ನ ಕಣ್ಣ ಎದುರಿಗೇ ತಪಸ್ವಿಗಳಿಬ್ಬರು ಬಯಲಾದುದ್ದಕ್ಕಾಗಿ ಚಿಂತೆಯಿಂದ ಬಳಲಿ ಈ ಚಿಂತೆ ಮನಸ್ಸನ್ನು ಕಾಡಿಸುತ್ತಿದ್ದಾಗ, ಒಂದು ದಿನ ಕನಸಿನಲ್ಲಿ ಗುರುಗಳಿಬ್ಬರು ಪ್ರತ್ಯಕ್ಷರಾಗಿ' ಇದು ಭಗವಂತನ ನಿಯಮ. ನಿನ್ನ ಚಿಂತೆ ಶಮನವಾಗಬೇಕಾದರೆ ನಾವು ಬಯಲಾದ ಜಾಗದಲ್ಲಿ ಗುಡಿಕಟ್ಟಿಸಿ ಬಸವನ ಮೂರ್ತಿಯನ್ನು ಸ್ಥಾಪಿಸು ನಿನ್ನ ಬದುಕು ಸಾರ್ಥಕವಾಗುತ್ತದೆ'ಎಂದು ಅಪ್ಪಣೆ ಕೊಡಿಸಿದರು. ತಕ್ಷಣ ಎಚ್ಚರಗೊಂಡ ದಳವಾಯಿ ಲವಲವಿಕೆಯಿಂದ ಓಡಾಡತೊಡಗಿ, ದಟ್ಟ ಅರಣ್ಯದ ಮಧ್ಯೆ ಕಪಿಲಾ ನದಿಯ ದಡದ ಈ ಪುಣ್ಯ ಸ್ಥಳದಲ್ಲಿ ಗುಡಿಕಟ್ಟಿಸಿ, ಪೂಜೆಗೆ ವ್ಯವಸ್ಥೆ ಮಾಡಿಸಿ ಕೃತಾರ್ಥನಾದನೆಂದು ಹೇಳಲಾಗುತ್ತಿದೆ.

ಶ್ರೀ ಕಂಬಳೇಶ್ವರ ಸಹೋದರರಆಗಮನ: ಉತ್ತರದ ಕಡೆಯಿಂದ ಬಂದ ಶ್ರೀ ಕಂಬಳೇಶ್ವರರು ಹಾಗೂ ಅವರ ಸಹೋದರರು ಈ ತಪೋಸ್ಥಳಕ್ಕೆ ಆಗಮಿಸಿ, ಇಲ್ಲಿ ನೆಲೆಸಿ ಅನುಷ್ಠಾನಗೊಳ್ಳುತ್ತಾರೆ.ಗುರು ಶ್ರೀ ನಿರಂಜನರು ಹಾಗೂ ಕಾಯಕಯೋಗಿ ಮಹಾಪ್ರಸಾದಿ ಮಲ್ಲಯ್ಯನವರು ಬಯಲಾದ ಜಾಗದ ಎದುರು ಕುಟೀರ ಕಟ್ಟಿ, ಮಠ ಸ್ಥಾಪನೆಗೆ ನಾಂದಿ ಹಾಡುತ್ತಾರೆ. ಶ್ರೀ ಕಂಬಳೇಶ್ವರ ಸಹೋದರರು ತಮ್ಮ ಶಿವಯೋಗ ಪೂಜೆಯಿಂದ ಇಲ್ಲಿ ಅನೇಕ ಪವಾಡಗಳನ್ನು ಮಾಡಿ ಭಕ್ತರನ್ನು ಉದ್ಧರಿಸಿ ಹಿಂದಿನ ಮಹಾಪ್ರಸಾದ ಕಾಯಕವನ್ನು ಮುಂದುವರಿಸಿದ್ದಲ್ಲದೆ, ಅನ್ನದಾಸೋಹದ ಜೊತೆಗೆ ಜ್ಞಾನ ದಾಸೋಹವನ್ನು ನೀಡಿ ಜನರನ್ನು ಸುಶೀಲರನ್ನಾಗಿ ಮಾಡಿ, ಈ ಕ್ಷೇತ್ರದ ಹೆಸರನ್ನು ಪ್ರಖ್ಯಾತಗೊಳಿಸಿದರು. 'ಅಂಬಲಿ-ಕಂಬಳಿ ಆಸ್ತಿ, ಮಿಕ್ಕಿದ್ದೆಲ್ಲನಾಸ್ತಿ' ಎಂಬ ಉಪದೇಶದಿಂದ ಭಕ್ತರನ್ನು ಎಚ್ಚರಿಸಿ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ, ಸದಾಚಾರ, ಕಾಯಕ, ಮಹಾದಾಸೋಹ ಹಾಗು ಶಿವಯೋಗದ ಬಗ್ಗೆ ಜನರಲ್ಲಿ ಅರಿವು ಮೂಡಿಸಿದ್ದ ಶ್ರೀ ಕಂಬಳೇಶ್ವರರ ಧಾರ್ಮಿಕ ಶಿಷ್ಟಾಚಾರ ಮನೆಮಾತಾಗುತ್ತದೆ.

ಪರಂಪರೆ:

೧. ಶ್ರೀ ಮಲ್ಲಯ್ಯನವರು
೨. ಶ್ರೀ ಕಂಬಳೇಶ್ವರರು
೩. ಶ್ರೀ ಇಮ್ಮಡಿ ಕಂಬಳೇಶ್ವರರು
೪. ಶ್ರೀ ಸಿದ್ಧಲಿಂಗಸ್ವಾಮಿಗಳು
೫. ಶ್ರೀ ಚನ್ನಬಸವಸ್ವಾಮಿಗಳು (ಈಗಿನವರು)

ಈ ರೀತಿ ಮಲ್ಲನಮೂಲೆ ಮಠದ ಗುರುಪರಂಪರೆಯು ಬೆಳೆದು ಬಂದಿದೆ. ಆದರೂ ಇಲ್ಲಿ ಶ್ರೀ ಮಲ್ಲಯ್ಯನವರ ಜೊತೆಯಲ್ಲಿ

ಹಿರಿಯ ಚೇತನ ಶ್ರೀ ನಿರಂಜನರು ಇದ್ದರೂ ಕಾಯಕಯೋಗಿಯಾಗಿ ಶ್ರೀ ಮಲ್ಲಯ್ಯನವರ ಹೆಸರಲ್ಲಿ ಮಠ ಸ್ಥಾಪನೆಯಾಗಿದೆ. ನಂತರ ಶ್ರೀ ಕಂಬಳೇಶ್ವರರ ಜೊತೆಗೆ ಅವರ ಸಹೋದರ ಶ್ರೀ ಸಿದ್ಧವೀರಾರಾಧ್ಯರು ಇದ್ದರೂ ಅವರಿಗೆ ಪಟ್ಟಾಧಿಕಾರವಾಗದ ಕಾರಣ, ಶ್ರೀ ಇಮ್ಮಡಿ ಕಂಬಳೇಶ್ವರರ ಹೆಸರು ಪರಂಪರೆಯ ಇತಿಹಾಸದಲ್ಲಿ ಬರುತ್ತದೆ ಎಂಬುದನ್ನು ಗಮನಿಸಬೇಕು.

ಹೆಚ್ಚಾದ ಭಕ್ತರು: ಶ್ರೀ ಕಂಬಳೇಶ್ವರರು ಲಿಂಗೈಕ್ಯರಾದ ನಂತರ ಅಧಿಕಾರಕ್ಕೆ ಬಂದ ಶ್ರೀ ಇಮ್ಮಡಿ ಕಂಬಳೇಶ್ವರರು, ಹಿರಿಯ ಗುರುಗಳ ಮಾರ್ಗದರ್ಶನದಲ್ಲಿ ಬೆಳೆದು ಅವರ ಧಾರ್ಮಿಕ ತತ್ತ್ವಕ್ಕೆ ಅನುಗುಣವಾಗಿ, ತಮ್ಮ ಬದುಕನ್ನು ರೂಢಿಸಿ ಕೊಂಡಿದ್ದ ಕಾರಣ ಶ್ರೀ ಮರಿಕಂಬಳೇಶ್ವರರು ಅಥವಾ ಶ್ರೀ ಇಮ್ಮಡಿ ಕಂಬಳೇಶ್ವರರು ಎಂದು ಕರೆಯಲಾಗುತ್ತಿತ್ತು. ಆದಿ ಗುರುಗಳ ಕಾಲದಲ್ಲಿ ಪ್ರಾರಂಭವಾಗಿದ್ದ ಮಹಾಪ್ರಸಾದ ಸೇವೆ ಹಾಗು ದಾಸೋಹಕ್ಕಾಗಿ ಮಾಡುತ್ತಿದ್ದ ಭಿಕ್ಷಾಟನೆ ಕಾಯಕ ಶ್ರೀ ಇಮ್ಮಡಿ ಕಂಬಳೇಶ್ವರರ ಕಾಲದಲ್ಲಿ ಹೆಚ್ಚು ವಿಸ್ತಾರಗೊಂಡವು. ನಾಡಿನೆಲ್ಲೆಲ್ಲ ಪ್ರವಾಸ ಮಾಡಿ ಭಕ್ತರಲ್ಲಿ ಧಾರ್ಮಿಕ ಭಾವನೆಯನ್ನು ಜಾಗೃತಗೊಳಿಸಲು ಶ್ರಮಿಸಿದರು. ಶಿವಯೋಗದ ಬಗ್ಗೆ ಜನರಲ್ಲಿ ತಿಳುವಳಿಕೆ ಮೂಡಿಸಿ ಪಂಚಾಚಾರ, ಷಟ್‌ಸ್ಥಲ ಹಾಗೂ ಅಷ್ಟಾವರಣಗಳ ತಳಹದಿಯ ಮೇಲೆ ಬದುಕನ್ನು ರೂಪಿಸಿಕೊಳ್ಳಲು ಹಾಗೂ ಕಾಯಕಯೋಗದಿಂದ ಬದುಕಿನ ಸಾರ್ಥಕತೆ ಪಡೆಯಲು ಭಕ್ತರಿಗೆ ಉಪದೇಶ ನೀಡಿದ ಶ್ರೀ ಇಮ್ಮಡಿ ಕಂಬಳೇಶ್ವರರು ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ, ಗುಂಡ್ಲುಪೇಟೆ ಮತ್ತು ನಂಜನಗೂಡು ತಾಲ್ಲೂಕುಗಳಲ್ಲಿ ಅಪಾರ ಭಕ್ತರನ್ನು ಸಂಪಾದಿಸಿದರು.

ಮಠದಲ್ಲಿ ದಾಸೋಹ ನಿರಂತರವಾಗಿ ನಡೆಯಲು ತೊಂದರೆಯಾಗಬಾರದೆಂಬ ದೂರದೃಷ್ಟಿ ಇಟ್ಟುಕೊಂಡಿದ್ದ ಶ್ರೀಇಮ್ಮಡಿ ಕಂಬಳೇಶ್ವರರು, ಭಕ್ತರ ನೆರವು ಪಡೆದು ಆಸ್ತಿಯನ್ನು ಮಾಡಿದರು. ಮುಮ್ಮಡಿ ಕೃಷ್ಣರಾಜ ಒಡೆಯರು (೧೮೧೨-೧೮೩೧) ಶ್ರೀ ಇಮ್ಮಡಿ ಕಂಬಳೇಶ್ವರರ ತಪೋಶಕ್ತಿ ಹಾಗೂ ಅವರು ನಡೆಸುತ್ತಿರುವ ಮಹಾದಾಸೋಹ ಕಾರ್ಯವನ್ನು ಕೇಳಿ ತಿಳಿದು ಮಠಕ್ಕೆ ಸಹಾಯಮಾಡಲು ಬಂದಾಗ 'ಆಸೆ ಎಂಬುದು ಅರಸರಿಗಲ್ಲದೆ ಶಿವ ಭಕ್ತರಿಗುಂಟೆ'ಎಂದು ಹೇಳಿ ಅವರನ್ನು ಚಕಿತಗೊಳಿಸಿದರು. ಮಠದ ಅಭಿವೃದ್ಧಿಗಾಗಿ, ಕೀರ್ತಿಗಾಗಿ ಅವಿಶ್ರಾಂತವಾಗಿ ದುಡಿದು ೧೯೨೩ನೆಯ ಕಾರ್ತೀಕಮಾಸದ ಮೂರನೆಯ ಸೋಮವಾರದಂದು ತಮ್ಮ ಎಂಬತ್ತನೆಯ ವಯಸ್ಸಿನಲ್ಲಿ ಲಿಂಗೈಕ್ಯರಾದರು.

ಅಭಿವೃದ್ಧಿಯ ಹರಿಕಾರರು: ಮಠದ ಗುರು ಪರಂಪರೆಯ ನಾಲ್ಕನೆಯ ಗುರುಗಳಾಗಿ ಅಧಿಕಾರ ಸ್ವೀಕರಿಸಿದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಶ್ರೀ ಮಲ್ಲನಮೂಲೆ ಮಠದ ಅಭಿವೃದ್ಧಿಯ ಹರಿಕಾರರು ಎಂದರೆ ತಪ್ಪಾಗಲಾರದು. ೧೯೧೧ರಲ್ಲಿ ಜನಿಸಿದ ಶ್ರೀಸಿದ್ಧಲಿಂಗ ಸ್ವಾಮಿಗಳು ಹೆಗ್ಗವಾಡಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿದ ಮೇಲೆ ಶ್ರೀ ಇಮ್ಮಡಿ ಕಂಬಳೇಶ್ವರರು ತಮ್ಮ ಶಿಷ್ಯನನ್ನು ಮೈಸೂರಿಗೆ ವಿದ್ಯಾಭ್ಯಾಸಕ್ಕೆ ಕಳುಹಿಸಿಕೊಟ್ಟರು. ನಂತರ ಸಿದ್ಧಗಂಗೆಯಲ್ಲಿ ವಿದ್ಯಾಭ್ಯಾಸ ಮುಂದುವರಿಸಿದ ಶ್ರೀ ಸಿದ್ಧಲಿಂಗ ಸ್ವಾಮಿಗಳು, ಶ್ರೀ ಉದ್ದಾನ ಶಿವಯೋಗಿಗಳ ಸಾನ್ನಿಧ್ಯದಲ್ಲಿ ಬೆಳೆದರು. ಸಂಸ್ಕೃತವನ್ನು ಕಲಿತು ವೀರಶೈವಾಗಮ ಮತ್ತು ಶರಣ ಸಾಹಿತ್ಯವನ್ನು ಅಭ್ಯಾಸಮಾಡಿ ಮಠಕ್ಕೆ ಹಿಂದಿರುಗಿದರು. ಸರಳ ವ್ಯಕ್ತಿತ್ವದ ಶ್ರೀ ಸಿದ್ಧಲಿಂಗ ಸ್ವಾಮಿಗಳಿಗೆ ೧೯೩೨ ರ ಜೂನ್ ತಿಂಗಳ ಮೊದಲ ದಿನದಂದು ಸುತ್ತೂರು ವೀರಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ಶಿವರಾತ್ರೀಶ್ವರ ಸ್ವಾಮಿಗಳು ಶಿವದೀಕ್ಷೆಯ ಸಂಸ್ಕಾರ ನೀಡಿ, ಶ್ರೀ ಮಲ್ಲನಮೂಲೆ ಮಠಕ್ಕೆ ಪಟ್ಟಾಧಿಕಾರ ಮಾಡಿದರು.

ಶ್ರೀ ಸಿದ್ಧಲಿಂಗ ಸ್ವಾಮಿಗಳು ಮಠದ ಆಡಳಿತ ಸೂತ್ರವನ್ನು ಕೈಗೆತ್ತಿಕೊಂಡು ಬಸವನಪುರದಲ್ಲಿ ಊರಮಠ ಸ್ಥಾಪನೆ, ಲಿಂಗೈಕ್ಯ ಶ್ರೀ ಇಮ್ಮಡಿ ಕಂಬಳೇಶ್ವರರ ಗದ್ದುಗೆಗೆ ಮಂಟಪ ಹಾಗೂ ನಂಜನಗೂಡಿನಲ್ಲಿ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯ ಮುಂತಾದ ಯೋಜನೆಗಳನ್ನು ಸಿದ್ಧಗೊಳಿಸಿ, ೧೯೩೫ರ ವೇಳೆಗೆ ಒಂದೊಂದೇ ಕೆಲಸವನ್ನು ಪೂರ್ಣಗೊಳಿಸಿದರು. ಲೋಕಕಲ್ಯಾಣಾರ್ಥ ಅನುಷ್ಠಾನ ಕೈಗೊಂಡ ಶ್ರೀ ಸಿದ್ಧಲಿಂಗ ಸ್ವಾಮಿಗಳು ಗುರುವಾದರೂ ಕಾಯಕದಿಂದಲೇ ಮುಕ್ತಿ ಎಂದು ನಂಬಿ, ಮಠದ ಸರ್ವಾಂಗೀಣ ಅಭಿವೃದ್ಧಿಗೆ ದುಡಿದು ೧೯೭೫ ನೆಯ ಜನವರಿ ಹತ್ತೊಂಬತ್ತರಂದು ಲಿಂಗೈಕ್ಯರಾದರು.

ಶ್ರೀ ಚನ್ನಬಸವ ಸ್ವಾಮಿಗಳು: ೧೯೪೩ ರ ಮೇ ಎರಡರಂದು ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆಯಲ್ಲಿ ಶ್ರೀ ಸ್ವತಂತ್ರಪ್ಪ ಹಾಗೂ ಶ್ರೀಮತಿ ಗಂಗಮ್ಮನವರಿಗೆ ಶ್ರೀ ಕಂಬಳೇಶ್ವರರ ಅನುಗ್ರಹ ಆಶೀರ್ವಾದದಿಂದ ಶ್ರೀ ಚನ್ನಬಸವರು ಜನಿಸಿದರು.

ಬಾಲ್ಯದಲ್ಲೇ ಮಹಾಶಿವಯೋಗಿ ಶ್ರೀ ಅಡವಿ ಸ್ವಾಮಿಗಳಿಂದ ಆಶೀರ್ವಾದ ಪಡೆದು 'ಶ್ರೀ ಚನ್ನಬಸವಸ್ವಾಮಿ' ಎಂಬ ನಾಮಕರಣ ಗೊಂಡು ಬೆಳೆಯತೊಡಗಿದರು. ಶ್ರೀ ಸಿದ್ಧಲಿಂಗ ಸ್ವಾಮಿಗಳು ತಮ್ಮ ಪೂರ್ವಾಶ್ರಮದ ಸಹೋದರಿಯ ಮಗನಾದ ಬಾಲಕ ಶ್ರೀ ಚನ್ನಬಸವ ಸ್ವಾಮಿಯನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿಕೊಳ್ಳಬೇಕೆಂದು ನಿರ್ಧರಿಸಿ, ಬಾಲ್ಯದಿಂದಲೇ ಧಾರ್ಮಿಕ ಸಂಸ್ಕಾರ ನೀಡತೊಡಗಿದರು. ಗುರುಗಳಿಂದ ಸಂಸ್ಕಾರ ಪಡೆದು, ಧಾರ್ಮಿಕ ವಾತಾವರಣದಲ್ಲಿ ಬೆಳೆದ ಶ್ರೀ ಚನ್ನಬಸವ ಸ್ವಾಮಿಗಳನ್ನು ಮೈಸೂರಿನ ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿ ಮಠದ ಗುರುಕುಲಕ್ಕೆ ಸೇರಿಸಿದರು. ಮೈಸೂರಿನಲ್ಲಿ ವಿದ್ಯಾಭ್ಯಾಸ ಮುಗಿದ ಮೇಲೆ ಮಠದ ಭಕ್ತರ ಅಪೇಕ್ಷೆಯ ಮೇರೆಗೆ, ಶ್ರೀ ಚನ್ನಬಸವ ಸ್ವಾಮಿಗಳಿಗೆ ೧೯೫೮ ನೆಯ ಕಾರ್ತೀಕಮಾಸದ ಮೂರನೆಯ ಸೋಮವಾರದಂದು ಪಟ್ಟಾಧಿಕಾರವನ್ನು ಮಾಡಿದರು.

ಪಟ್ಟಾಧಿಕಾರ ಆದ ಮೇಲೆ ಕರ್ತವ್ಯ ಮುಕ್ತರಾದ ಶ್ರೀ ಸಿದ್ಧಲಿಂಗ ಸ್ವಾಮಿಗಳು ತಮ್ಮ ಕರಕಮಲ ಸಂಜಾತ ಶ್ರೀಚನ್ನ ಬಸವ ಸ್ವಾಮಿಗಳನ್ನು ಸಂಸ್ಕೃತ ಅಭ್ಯಾಸ ಮಾಡಲು ಪುನಃ ಮೈಸೂರಿಗೆ ಕಳುಹಿಸಿದ ಕೆಲವೇ ದಿನಗಳಲ್ಲಿ ಹಿಂದಕ್ಕೆ ಕರೆಸಿಕೊಂಡು, ಮಠದ ಸಂಪೂರ್ಣ ಹೊಣೆಯನ್ನು ನೀಡಿದರು. ಶ್ರೀ ಚನ್ನಬಸವ ಸ್ವಾಮಿಗಳು ಗುರುಗಳ ಕಣ್ಣು ಮುಂದೆಯೇ ಮಠದ ಅಭಿವೃದ್ಧಿಗೆ ಕಂಕಣತೊಟ್ಟು, ಅವಿರತ ದುಡಿಮೆಯಲ್ಲಿ ತೊಡಗಿದರು. ಧರ್ಮ, ಕಾಯಕ ಹಾಗೂ ಸಾಮಾಜಿಕ ವಿಚಾರಗಳತ್ತ ಗಮನಹರಿಸಿ ಜಾತಿಬೇಧವಿಲ್ಲದೆ ಆಚಾರವಿಚಾರಗಳನ್ನು ಒಂದೇ ಎಂದು ಭಾವಿಸಿ ಮಠವನ್ನು ಅಭಿವೃದ್ಧಿಪಡಿಸಿದರು. ಶ್ರೀ ಸಿದ್ಧಲಿಂಗ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಅವರ ಗದ್ದುಗೆಗೆ ಮಂಟಪ ಕಟ್ಟಿಸಿ, ಅವರು ಮಾಡಬೇಕೆಂದು ಕನಸು ಕಂಡಿದ್ದ ಹಲವು ಕೆಲಸಗಳನ್ನು ಪೂರೈಸಿದರು. ಶ್ರೀ ಆದಿಕಂಬಳೇಶ್ವರರು ಹಾಗು ಶ್ರೀ ಮರಿ ಕಂಬಳೇಶ್ವರರ ಗದ್ದುಗೆಗಳಿಗೆ ಭವ್ಯಮಂಟಪ ಕಟ್ಟಿಸಿದರು. ಗದ್ದುಗೆಯ ಆವರಣದಲ್ಲಿ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದ್ದಾರೆ. ಮುಗ್ಧವಾದ ಮತ್ತು ಶಾಂತ ಚಿತ್ತ ಸ್ವಭಾವಗಳನ್ನು ಮೈಗೂಡಿಸಿಕೊಂಡ ಶ್ರೀ ಚನ್ನಬಸವ ಸ್ವಾಮಿಗಳು ತಮ್ಮ ಪರಂಪರೆಯ ಗುರುಗಳ ಕಾಯಕವನ್ನು ವಿಸ್ತಾರಗೊಳಿಸಿ ಮಠದಲ್ಲಿ ಸದಾ ಅನ್ನದಾಸೋಹ ನಡೆಯುವಂತೆ ವ್ಯವಸ್ಥೆಗೊಳಿಸಿದ್ದಾರೆ. ನಿತ್ಯಪೂಜೆ ನಡೆಸುತ್ತ, ಗದ್ದುಗೆ ಆವರಣದಲ್ಲಿ ಭಕ್ತಿಯ ವಾತಾವರಣ ಸೃಷ್ಟಿಸಿ ಮಠದ ಹೆಸರು ದಶದಿಕ್ಕಿಗೆ ಹರಡುವಂತೆ ಮಾಡಿದ್ದಾರೆ.

ಶಾಖಾಮಠಗಳು: ಶ್ರೀ ಕಂಬಳೇಶ್ವರರು, ಶ್ರೀ ಮರಿ ಕಂಬಳೇಶ್ವರರು ಹಾಗೂ ಶ್ರೀ ಸಿದ್ಧಲಿಂಗ ಸ್ವಾಮಿಗಳು ಧರ್ಮಪ್ರಚಾರ ಕಾರ್ಯದಲ್ಲಿ ಅನುಕೂಲವಾಗಲೆಂದು ತಾವು ಹೋದಲ್ಲೆಲ್ಲಾ ಮಠ ಸ್ಥಾಪಿಸಿದ್ದರು. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸುಮಾರು ಇಪ್ಪತ್ತೈದು ಶಾಖಾಮಠಗಳನ್ನು ಸ್ಥಾಪಿಸಲಾಗಿದೆ. ನಂಜನಗೂಡು ತಾಲ್ಲೂಕಿನಲ್ಲಿ ಏಳು, ಯಳಂದೂರು ತಾಲ್ಲೂಕಿನಲ್ಲಿ ಎರಡು, ಚಾಮರಾಜನಗರ ತಾಲ್ಲೂಕಿನಲ್ಲಿ ಹನ್ನೊಂದು ಮಠಗಳು, ಗುಂಡ್ಲು ಪೇಟೆ ತಾಲ್ಲೂಕಿನಲ್ಲಿ ಒಂದು ಮಠ, ಕೊಳ್ಳೇಗಾಲ ತಾಲ್ಲೂಕಿನಲ್ಲಿ ಒಂದು ಮಠ, ಮೈಸೂರು ತಾಲ್ಲೂಕಿನಲ್ಲಿ ಒಂದು ಮಠ ಹಾಗೂ ಟಿ.ನರಸೀಪುರ ತಾಲ್ಲೂಕಿನಲ್ಲಿ ಎರಡು ಮಠಗಳು ಈ ರೀತಿ ಶಾಖಾಮಠಗಳು ಸ್ಥಾಪನೆಗೊಂಡಿವೆ.

ಧಾರ್ಮಿಕಕಾರ್ಯಗಳು: ಪ್ರತಿವರ್ಷ ಶಿವರಾತ್ರಿ ಮತ್ತು ಕಾರ್ತೀಕಮಾಸಗಳಲ್ಲಿ ಶಿವಗಣಾರಾಧನೆಯನ್ನು ಮಾಡಲಾಗುತ್ತಿದೆ. ಈ ಸಂದರ್ಭದಲ್ಲಿ ವೀರಶೈವಧರ್ಮದ ಸಂದೇಶವನ್ನು ಉಪನ್ಯಾಸಗಳ ಮೂಲಕ ತಿಳಿಸಲಾಗುತ್ತಿದೆ. ಅಮಾವಾಸ್ಯೆಯಲ್ಲಿ ಗದ್ದುಗೆ ಗಳಿಗೆ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಶ್ರೀ ಆದಿಕಂಬಳೇಶ್ವರರು, ಶ್ರೀ ಮರಿಕಂಬಳೇಶ್ವರರು ಮತ್ತು ಶ್ರೀ ಸಿದ್ಧಲಿಂಗ ಸ್ವಾಮಿಗಳ ಗದ್ದುಗೆಗಳಿಗೆ ಸುವರ್ಣಕಲಶಾರೋಹಣ ಕಾರ್ಯವನ್ನು ಏರ್ಪಡಿಸಿ,ನಾಡಿನ ಅನೇಕ ವಿದ್ವಾಂಸರು ಹಾಗೂ ಮಠಾಧೀಶರನ್ನು ಕರೆಸಿ ಧರ್ಮಜಾಗೃತಿ ಸಮಾರಂಭವನ್ನು ಮಾಡಿರುವುದು ಮಠದ ಇತಿಹಾಸದಲ್ಲಿ ಉಳಿಯುವಂತಾಗಿದೆ.

ವಿಳಾಸ: ಶ್ರೀ ಷ.ಬ್ರ.ಪ್ರ.ಚನ್ನಬಸವಸ್ವಾಮಿಗಳು, ಶ್ರೀ ಮಲ್ಲನಮೂಲೆಮಠ.ಬಸವನಪುರ. ನಂಜನಗೂಡು ತಾ. ಮೈಸೂರು ಜಿಲ್ಲೆ.
ಆಧಾರ: 'ಅರ್ಪಣ' ಸಂಪಾದಕರು: ಡಾ.ಎಚ್.ಪಿ.ಮಲ್ಲೇದೇವರು

ಶಿರಮಳ್ಳಿ

ನಂಜನಗೂಡು ತಾಲ್ಲೂಕಿನ ಶಿರಮಳ್ಳಿಯು ನಂಜನಗೂಡಿನಿಂದ ಉತ್ತರಕ್ಕೆ ಸುಮಾರು ಹತ್ತು ಕಿ.ಮೀ. ದೂರದಲ್ಲಿದೆ.

ಇಲ್ಲಿ ಶ್ರೀ ಮುರುಘಸ್ವಾಮಿ ವಿರಕ್ತಮಠವು ಅಸ್ತಿತ್ವದಲ್ಲಿದೆ.

ಮುರುಘಸ್ವಾಮಿ ವಿರಕ್ತಮಠ: ಶಿರಮಳ್ಳಿ ಗ್ರಾಮದಲ್ಲಿ ಇನ್ನೂರು ವರ್ಷಗಳ ಹಿಂದೆ ಶ್ರೀ ಮುರುಘಾ ಮಠ ಪ್ರಾರಂಭವಾಗಿರಬಹುದೆಂದು ಅಂದಾಜಿಸಲಾಗಿದೆ. ಶಿರಮಳ್ಳಿಯಿಂದ ಎರಡು ಕಿ.ಮೀ. ದೂರದಲ್ಲಿರುವ ಮುರುಘಾ ಸಮಯದ ಈ ವಿರಕ್ತಮಠವು, ಬಯಲಿನ ಪ್ರಶಾಂತ ಸ್ಥಳದಲ್ಲಿ ನೆಲೆಗೊಂಡು ತನ್ನ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದಿದೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ಮುರುಘಾಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಚನ್ನವೀರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಬಸವರಾಜಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಚನ್ನಬಸವರಾಜಸ್ವಾಮಿಗಳು (ಈಗಿನವರು)

ಈ ರೀತಿ ಪರಂಪರೆಯನ್ನು ಕಂಡ ಮುರುಘಾಸ್ವಾಮಿ ವಿರಕ್ತಮಠಕ್ಕೆ ಶ್ರೀ ಮುರುಘಾ ಸ್ವಾಮಿಗಳಿಂದ ಪ್ರಾರಂಭಗೊಂಡಿದ್ದರಿಂದ ಈ ಹೆಸರು ಬಂದಿದೆ. ಶ್ರೀ ಮುರುಘಾ ಸ್ವಾಮಿಗಳ ನಂತರ ಅಧಿಕಾರ ವಹಿಸಿಕೊಂಡ ಗುರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಅಲ್ಲದೆ ಇತ್ತೀಚಿನ ಶ್ರೀ ಚನ್ನವೀರ ಸ್ವಾಮಿಗಳು ಸಹ ಕೇವಲ ಕೆಲವೇ ದಿನಗಳು ಅಧಿಕಾರ ನಡೆಸಿದ ಕುರುಹುಗಳು ದೊರೆತಿವೆ. ಇಲ್ಲಿ ಅಧಿಕಾರ ನಡೆಸಿದ ಶ್ರೀ ಚನ್ನವೀರ ಸ್ವಾಮಿಗಳು ರಾಂಪುರಕ್ಕೆ ಹೋಗಿ ನೆಲೆಸಿ ಅಲ್ಲೇ ಲಿಂಗೈಕ್ಯರಾಗಿದ್ದಾರೆ. ಅವರ ಗದ್ದುಗೆಯು ರಾಂಪುರದಲ್ಲಿ ಸ್ಥಾಪನೆಯಾಗಿದೆ.

ನಂತರ ೧೯೫೪ ರಲ್ಲಿ ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡ ಶ್ರೀ ಬಸವರಾಜ ಸ್ವಾಮಿಗಳು, ೧೯೫೫ ರ ಮೇನಲ್ಲಿ ವಿರಕ್ತ ಸಂಪ್ರದಾಯದಂತೆ ಪಟ್ಟಾಧಿಕಾರ ಸ್ವೀಕರಿಸಿ ದೀರ್ಘಕಾಲ ಆಡಳಿತ ನಡೆಸಿದ್ದಾರೆ. ಶ್ರೀ ಬಸವರಾಜ ಸ್ವಾಮಿಗಳು ತಮ್ಮ ಜೀವಿತಾವಧಿಯಲ್ಲೇ ಶ್ರೀ ಚನ್ನಬಸವರಾಜ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡು, ೧೯೯೪ ರ ಜುಲೈ ಹತ್ತೊಂಬತ್ತರಂದು ಅಧಿಕಾರದ ಅನುಗ್ರಹವನ್ನು ನೀಡಿ ವಿಶ್ರಾಂತ ಜೀವನ ನಡೆಸತೊಡಗಿದ್ದಾರೆ.

ಅಭಿವೃದ್ಧಿಯ ಕಾಲ: ೧೯೫೫ರಲ್ಲಿ ಪಟ್ಟಾಧಿಕಾರ ಪಡೆದ ಶ್ರೀ ಬಸವರಾಜ ಸ್ವಾಮಿಗಳು ತಮ್ಮ ದೀರ್ಘ ಆಡಳಿತ ಕಾಲದಲ್ಲಿ ಮಠದ ಆಸ್ತಿಯನ್ನು ವಿಸ್ತರಿಸಿ, ಧಾರ್ಮಿಕ ಕಾರ್ಯಗಳನ್ನು ನಡೆಸಿದ್ದಾರೆ. ಗುರುಗಳು ಕಾಯಕಯೋಗಿಗಳಾಗಿ ಅವಿರತ ದುಡಿಮೆಯಿಂದ ಮಠವನ್ನು ಶ್ರೀಮಂತಗೊಳಿಸಿದರು. ಭಕ್ತರನ್ನು ಧಾರ್ಮಿಕವಾಗಿ ಸಂಘಟಿಸಿದ್ದಲ್ಲದೆ, ಅಸಹಾಯಕರಿಗೆ ನೆರವು ನೀಡಿ ಆತ್ಮಸ್ಥೈರ್ಯ ತುಂಬಿ ಮೇಲೆತ್ತಿ ದುಡಿಮೆಗೆ ಹಚ್ಚುತ್ತಿದ್ದರು. ಈ ರೀತಿ ಭಕ್ತರಿಗೆ ಒಂದಲ್ಲ ಒಂದು ರೀತಿಯಲ್ಲಿ ಮಾರ್ಗದರ್ಶನ ನೀಡಿ ಸಮಾಜ ಸಮೃದ್ಧಿಯಾಗಿ ಬೆಳೆಯಲು ಸಹಕರಿಸಿದ್ದಾರೆ. ಅಧಿಕಾರ ವಹಿಸಿಕೊಂಡು ಅರ್ಧ ಶತಮಾನಗಳ ಕಾಲ ಮಠದ ಆಡಳಿತ ನಡೆಸಿದ ಗುರುಗಳು, ಮಠಕ್ಕೆ ಸುಸಜ್ಜಿತವಾದ ಕಟ್ಟಡವನ್ನು ನಿರ್ಮಿಸಿದ್ದಾರೆ. ಕರ್ತೃಗುರುಗಳಾದ ಶ್ರೀ ಮುರುಘಾ ಸ್ವಾಮಿಗಳ ಗದ್ದುಗೆಗೆ ಮಂಟಪ ಕಟ್ಟಿಸಿದ್ದಾರೆ. ಅಲ್ಲದೆ ಇಪ್ಪತ್ತುಎಕರೆ ಜಮೀನನ್ನು ಬೇಸಾಯಕ್ಕೆ ಅಣಿಗೊಳಿಸಿ, ಸ್ವತಃ ದುಡಿದು ತಮ್ಮ ಪರಿಶ್ರಮದಿಂದ ಬಂದ ಆದಾಯವನ್ನು ಮಠದ ಅಭಿವೃದ್ಧಿಗೆ ತೊಡಗಿಸಿದ್ದಾರೆ.

ಸಂಘಟಕರು: ಸಂಘಟನೆಯಿಂದ ಸಮಾಜದ ಸ್ವಾಸ್ಥ್ಯ ಕಾಪಾಡಿಕೊಳ್ಳಲು ಸಾಧ್ಯ ಎಂದು ಅರಿತ ಶ್ರೀ ಬಸವರಾಜ ಸ್ವಾಮಿಗಳು 'ಶ್ರೀ ಬಸವೇಶ್ವರ ತರುಣ ಸಂಘ' ಮತ್ತು 'ಮಹಿಳಾ ಸಂಘ'ವನ್ನು ಸ್ಥಾಪಿಸಲು ನೆರವಾಗಿ, ಇವುಗಳ ಮೂಲಕ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ. ನೂತನ ಗುರುಗಳಾದ ಶ್ರೀ ಚನ್ನಬಸವರಾಜ ಸ್ವಾಮಿಗಳು ವೀರಶೈವ ತತ್ತ್ವದ ಬಗ್ಗೆ ಅಧ್ಯಯನ ಮಾಡಿ, ಬಸವಾದಿ ಶಿವಶರಣರು ನೀಡಿದ ಸಂದೇಶಗಳನ್ನು ಸಮಾಜಕ್ಕೆ ತಿಳಿಯಪಡಿಸುತ್ತಾ ಈ ಮಠದ ಹೊಸ ಚಿಗುರಾಗಿ ಕುಡಿಯೊಡೆದು ನಿಂತಿದ್ದಾರೆ.

ವಿಳಾಸ: ಶ್ರೀಮ.ನಿ.ಪ್ರ.ಚನ್ನಬಸವರಾಜಸ್ವಾಮಿಗಳು, ಶ್ರೀಮುರುಘಾಸ್ವಾಮಿವಿರಕ್ತಮಠ, ಶಿರಮಳ್ಳಿ, ನಂಜನಗೂಡುತಾ.ಮೈಸೂರುಜಿಲ್ಲೆ.

ಸಂಗಮಕ್ಷೇತ್ರ

ನಂಜನಗೂಡು ತಾಲ್ಲೂಕಿನ ಸಂಗಮವು ಕಪಿಲಾನದಿ, ಗುಪ್ತಗಾಮಿನಿ ನದಿ ಹಾಗೂ ಭೃಗು (ನುಗು) ನದಿಗಳ ಸಂಗಮ

ಕ್ಷೇತ್ರವಾಗಿದೆ. ಪ್ರಾಕೃತಿಕವಾಗಿ ಅಪೂರ್ವ ರಮ್ಯತೆಯಿಂದ ಸಾಧಕರನ್ನು ಸೆಳೆಯುವ ತಾಣವಾಗಿದೆ. ಈ ಜಾಗದಲ್ಲಿ ರಾಮಲಿಂಗೇಶ್ವರ ದೇವಸ್ಥಾನವಿದ್ದು ಜಾತ್ರೆಯು ನಡೆಯುತ್ತಿದೆ. ಈ ಸಂದರ್ಭದಲ್ಲಿ ಸಹಸ್ರಾರು ಭಕ್ತರು ಭಾಗವಹಿಸುತ್ತಾರೆ. ಈ ಸ್ಥಳದಲ್ಲಿ ಕಾಯಕಯೋಗಿ ಶ್ರೀ ಕಾರ್ಯಸ್ವಾಮಿಗಳ ಗದ್ದುಗೆ ಮತ್ತು ಸಿದ್ಧಯೋಗಿ ಶ್ರೀ ಮಹಾದೇವ ತಾತನವರು ಐಕ್ಯಗೊಂಡ ಕಾರಣ ಈ ಕ್ಷೇತ್ರ ಧಾರ್ಮಿಕ ಜಾಗೃತ ಸ್ಥಳವಾಗಿ ರೂಪುಗೊಂಡಿದೆ.

ಕಾರ್ಯಸ್ವಾಮಿ ಮಠ: ನಂಜನಗೂಡು ತಾಲ್ಲೂಕಿನ ಕಾರ್ಯ ಗ್ರಾಮದಲ್ಲಿ ಕಾಯಕಯೋಗದಿಂದ ಪ್ರಸಿದ್ಧಿ ಪಡೆದ ಶ್ರೀಕಾರ್ಯ ಸ್ವಾಮಿಗಳು ಸಂಗಮ ಕ್ಷೇತ್ರದಲ್ಲಿ ನೆಲೆಸಿ, ಅನೇಕ ಪವಾಡಗಳನ್ನು ಮಾಡಿ ಐಕ್ಯಗೊಂಡಿರುತ್ತಾರೆ. ನಿರ್ವಿಕಲ್ಪ ಸಮಾಧಿಯಾಗುವ ಮುನ್ನ ಶ್ರೀ ಕಾರ್ಯ ಸ್ವಾಮಿಗಳು ಮುಂದಿನ ದಿನಗಳಲ್ಲಿ ದೇಶಸಂಚಾರ ಮಾಡುತ್ತಾ ಇದೇ ಕ್ಷೇತ್ರಕ್ಕೆ ಪುನಃ ಆಗಮಿಸಿ ಇಲ್ಲಿ ಐಕ್ಯಗೊಳ್ಳುವೆ ಎಂದು ಹೇಳಿದ್ದ ಮಾತು ಇಂದಿಗೂ ಜನಪದ ಕಥೆಯಾಗಿ ಕೇಳಿಬರುತ್ತಿದೆ.

ಶ್ರೀ ಕಾರ್ಯ ಸ್ವಾಮಿಗಳು ಐಕ್ಯಗೊಂಡ ಸ್ಥಳದಲ್ಲಿ ಗದ್ದುಗೆಯನ್ನು ನಿರ್ಮಾಣ ಮಾಡಲಾಗಿದೆ. ಸುತ್ತೂರು ಶ್ರೀಶಿವ ರಾತ್ರೀಶ್ವರ ದೇಶಿಕೇಂದ್ರ ಸ್ವಾಮಿಗಳು ಈ ಕ್ಷೇತ್ರದ ಅಭಿವೃದ್ಧಿಗೆ ಗಮನಕೊಟ್ಟು, ಮೈಸೂರು ತಾಲ್ಲೂಕಿನ ಬಣ್ಣದಪುರ ದಾಸೋಹ ಪಟ್ಟದ ಮಠದ ಶ್ರೀ ಪರಶಿವಮೂರ್ತಿ ಸ್ವಾಮಿಗಳನ್ನು ಅಧಿಕಾರಕ್ಕೆ ತಂದಿದ್ದಾರೆ. ಸುತ್ತೂರು ಶಾಖಾ ಮಠವಾಗಿ ಬಣ್ಣದಪುರ ಗುರುಗಳ ನೇತೃತ್ವದಲ್ಲಿ ನೂತನ ಕಟ್ಟಡದ ನಿರ್ಮಾಣ ಕಾರ್ಯ ನಡೆದಿದೆ.

ವಿಳಾಸ: ಶ್ರೀ ಪರಶಿವಮೂರ್ತಿ ಸ್ವಾಮಿಗಳು, ಶ್ರೀ ಕಾರ್ಯಸ್ವಾಮಿ ಮಠ, ಸಂಗಮಕ್ಷೇತ್ರ,ನಂಜನಗೂಡು ತಾ. ಮೈಸೂರು ಜಿಲ್ಲೆ.

ಮಹಾದೇವ ತಾತನವರ ಐಕ್ಯಸ್ಥಳ: ಶ್ರೀ ಮಹಾದೇವ ತಾತನವರು ಉತ್ತರದ ಕಡೆಯಿಂದ ಲೋಕಸಂಚಾರ ಮಾಡುತ್ತಾ ೧೯೮೦ರಲ್ಲಿ ಸಂಗಮ ಕ್ಷೇತ್ರಕ್ಕೆ ಆಗಮಿಸಿದರು. ಇವರು ಇಲ್ಲಿ ನಾಲ್ಕು ಎಕರೆ ಜಮೀನನ್ನು ಖರೀದಿಸಿ, ಕಪಿಲಾನದಿ ಮತ್ತು ಗುಪ್ತಗಾಮಿನಿ ನದಿಗಳ ಸಂಗಮ ಕ್ಷೇತ್ರದಲ್ಲಿ ಮಠ ಸ್ಥಾಪನೆಮಾಡಿ, ಪ್ರಕೃತಿ ತಾಣಕ್ಕೆ ಧಾರ್ಮಿಕ ಕಳೆಯನ್ನು ತಂದುಕೊಟ್ಟಿದ್ದಾರೆ. ಶ್ರೀ ಮಹಾದೇವ ತಾತನವರು ಯಾರು, ಎಲ್ಲಿಂದ ಬಂದವರು ಎಂಬುದು ಎಲ್ಲರಿಗೂ ಚಿದಂಬರ ರಹಸ್ಯವಾಗಿದೆ. ಇವರು ಇಲ್ಲಿಗೆ ಬರುವ ಮೊದಲು ಆಂಧ್ರಪ್ರದೇಶದ ನಗರೂರು, ಆದವಾನಿ, ಧಾರವಾಡ, ಬಳ್ಳಾರಿ, ಹಂಪಸಾಗರ, ಹೂವಿನಹಡಗಲಿ ತಾಲ್ಲೂಕಿನ ಹಳ್ಳಿಮಠ, ಕತ್ತೆಬೆನ್ನೂರು, ನಂದೀಪುರಗಳಲ್ಲಿ ಮಠ ಸ್ಥಾಪನೆಮಾಡಿದರೆಂದೂ, ಅನುಷ್ಠಾನಗೊಂಡ ಸ್ಥಳಗಳಲ್ಲಿ ತೃಪ್ತಿ ಸಿಕ್ಕ ಮೇಲೆ ಬೇರೆಡೆ ಹೋಗುತ್ತಿದ್ದರೆಂದು ಭಕ್ತರು ಹೇಳುತ್ತಾರೆ. ತಲೆಗೆ ದೊಡ್ಡ ರುಮಾಲು ಸುತ್ತಿ, ಹೆಗಲ ಮೇಲೆ ಕಂಬಳಿ ನೇತು ಹಾಕಿಕೊಂಡು, ಕೈಯ್ಯಲ್ಲಿ ಬೆತ್ತದ ಕೋಲನ್ನು ಹಿಡಿದು ಸುತ್ತುತ್ತಿದ್ದ ಈ ಮಹಾಪುರುಷರು ನೆಲೆ ನಿಂತಲ್ಲಿ ಜಾಗೃತ ಸ್ಥಳ ಸೃಷ್ಟಿಮಾಡಿ, ಸಂಗಮದ ಪ್ರಶಾಂತ ಸ್ಥಳಕ್ಕೆ ಬಂದು ಮನಸೋತು ಇಲ್ಲೇ ನೆಲೆಸುತ್ತಾರೆ. ಅನೇಕ ದಿನಗಳವರೆಗೆ ಇವರು ಬಂದ ವಿಷಯ ಯಾರಿಗೂ ತಿಳಿದಿರಲಿಲ್ಲ. ಸದಾ ಕಾಲ ಧ್ಯಾನಾಸಕ್ತರಾಗಿ ಮೌನವಾಗಿರುತ್ತಿದ್ದ ಇವರ ಪಾಳು ಬಿದ್ದಿದ್ದ ನಾಲ್ಕು ಎಕರೆ ಜಾಗವನ್ನು ನಂದನವನವನ್ನಾಗಿ ಪರಿವರ್ತಿಸಿದರು.

೧೯೮೦ ರಲ್ಲಿ ಆಗಮಿಸಿದ ಇವರು ಏಳು ವರ್ಷಗಳ ಕಾಲ ಧ್ಯಾನ ಹಾಗೂ ಕಾಯಕಯೋಗದಿಂದ ಪ್ರಸಿದ್ಧಿ ಪಡೆದು ೧೯೮೭ ರಲ್ಲಿ ಲಿಂಗೈಕ್ಯರಾದರು. ಇವರು ಲಿಂಗೈಕ್ಯರಾಗುವ ಮುನ್ನ ಮಠದ ಭಕ್ತರು 'ಉತ್ತರಾಧಿಕಾರಿಗಳನ್ನು ತಮ್ಮ ಜೀವಿತಾವಧಿ ಯಲ್ಲೇ ಮಾಡಬೇಕು ' ಎಂಬ ಅಭಿಲಾಷೆ ಮುಂದಿಟ್ಟಾಗ, ಇಲ್ಲಿಗೆ ಯಾರನ್ನೂ ಪಟ್ಟಾಧಿಕಾರಿ ಮಾಡಲು ಒಪ್ಪದೆ 'ನಾನೇ ಪುನಃ ಇಲ್ಲಿಗೆ ಅವತರಿಸುತ್ತೇನೆ' ಎಂದು ಹೇಳಿದ್ದಾರೆಂದು ಇಲ್ಲಿನ ಭಕ್ತರು ಹೇಳುತ್ತಾರೆ. ಶ್ರೀ ಮಹಾದೇವ ತಾತನವರು ಅನುಷ್ಠಾನಗೊಳ್ಳುತ್ತಿದ್ದ ಕುಟೀರದ ಮುಂಭಾಗದಲ್ಲಿ ನಿರ್ವಿಕಲ್ಪಗೊಂಡ ಸಮಾಧಿಗೆ ಗದ್ದುಗೆ ನಿರ್ಮಿಸಲಾಗಿದೆ. ದಾಸೋಹ ಮಂದಿರ, ವಸತಿ ಗೃಹಗಳು, ಪ್ರಾರ್ಥನಾ ಮಂದಿರ ಹಾಗೂ ಕಲ್ಯಾಣ ಮಂಟಪ ಈ ರೀತಿ ಕಟ್ಟಡಗಳ ಸಮುಚ್ಚಯಗಳಿಂದ ಈ ಕ್ಷೇತ್ರ ಬೆಳೆದು ನಿಂತಿದೆ. ೧೯೯೭ರಲ್ಲಿ ಸಂಗಮದ ಪವಿತ್ರ ಸ್ಥಳದಲ್ಲಿ ಸ್ನಾನಘಟ್ಟವನ್ನು ನಿರ್ಮಿಸಲಾಗಿದೆ.

ಪ್ರತಿದಿನ ಶ್ರೀ ಮಹಾದೇವ ತಾತನವರ ನಿರ್ವಿಕಲ್ಪ ಸಮಾಧಿಗೆ ತ್ರಿಕಾಲಪೂಜೆ, ಪ್ರತಿ ಅಮಾವಾಸ್ಯೆಯ ದಿನ ವಿಶೇಷ

ಪೂಜೆಯನ್ನು ಏರ್ಪಡಿಸಲಾಗುತ್ತಿದೆ. ಈ ಸಂದರ್ಭಗಳಲ್ಲಿ ರಾಜ್ಯದ ನಾನಾ ಕಡೆಗಳಿಂದ ಬಂದು ಸೇರುವ ಭಕ್ತರಿಗೆಲ್ಲಾ ಪ್ರಸಾದದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಪ್ರತಿವರ್ಷ ಜನವರಿಯಲ್ಲಿ ಶ್ರೀ ಮಹಾದೇವ ತಾತನವರ ಪುಣ್ಯಾರಾಧನೆಯನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಅಂದು ಸೇರುವ ಸಹಸ್ರಾರು ಭಕ್ತರಿಗೆ ಒಂದು ವಾರದ ಕಾಲ ಮಹಾದಾಸೋಹ ಕಾರ್ಯ ಪವಾಡದಂತೆ ನಡೆಯುತ್ತಿದೆ.

ವಿಳಾಸ: ಶ್ರೀ ಮಹಾದೇವ ತಾತನವರ ಐಕ್ಯಸ್ಥಳ, ಶ್ರೀ ಸಂಗಮಕ್ಷೇತ್ರ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

ಸುತ್ತೂರು

ನಂಜನಗೂಡು ತಾಲ್ಲೂಕಿನ ಸುತ್ತೂರು, ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಚೋಳರು ಹಾಗೂ ಹೊಯ್ಸಳರ ಆಡಳಿತಕ್ಕೆ ಒಳಪಟ್ಟಿದ್ದ ಸುತ್ತೂರು, ಚೋಳರ ಕಾಲದಲ್ಲಿ 'ಶ್ರೋತ್ರಿಯೂರು'ಎಂದೂ ಹೊಯ್ಸ ಳರ ಕಾಲದಲ್ಲಿ 'ಸೊತ್ತಿಯೂರು'ಎಂದೂ ಕರೆಯಲ್ಪಟ್ಟಿದ್ದು, ಈಗ 'ಸುತ್ತೂರು'ಎಂದು ದಾಖಲಾಗಿದೆ. ಇಲ್ಲಿ ಸುಮಾರು ಒಂದು ಸಾವಿರ ವರ್ಷಗಳ ಹಿಂದೆ ವೀರಸಿಂಹಾಸನ ಮಠವು ಸ್ಥಾಪನೆಯಾಗಿ ನಾಡಿನ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಹಿತ್ಯಿಕ ಕ್ಷೇತ್ರದಲ್ಲಿ ತನ್ನದೇ ಆದ ಕೊಡುಗೆಯನ್ನು ನೀಡಿ ನಾಡನ್ನು ಶ್ರೀಮಂತಗೊಳಿಸಿದೆ.

ಶಿವರಾತ್ರೀಶ್ವರ ಸಂಸ್ಥಾನಮಠ: ಒಂದು ಸಾವಿರ ವರ್ಷಗಳ ಹಿಂದೆ ಪರಶಿವನ ಇಚ್ಛೆಯಂತೆ ಸಹಸ್ರಾರು ಮಂದಿ ಶಿವಗಣರು ಭೂಲೋಕದಲ್ಲಿ ಅವತರಿಸಿದರು. ಇದರಿಂದ ಭರತಖಂಡದಲ್ಲಿ ಭಕ್ತಿಯ ಬೀಜ ಮೊಳಕೆಯೊಡೆದು ನವಚೈತನ್ಯ ಚಿಗುರ ತೊಡಗಿತು. ಇಂತಹ ಶುಭ ಸಮಯದಲ್ಲಿ ಅಮರಗಣಂಗಳಲ್ಲೋರ್ವ ಶಿವಯೋಗಿ ಭಾರತದ ಅನೇಕ ದಿವ್ಯಕ್ಷೇತ್ರಗಳನ್ನು ಸುತ್ತಿ, ಶ್ರೀ ರೇಣುಕಾಚಾರ್ಯರು ಅವತರಿಸಿದ ದಿವ್ಯಕ್ಷೇತ್ರ ಹಾಗೂ ಸೋಮನಾಥಲಿಂಗದ ಹಿರಿಮೆ ಅರಿತು ಕೊಲ್ಲಿಪಾಕಿ ಕ್ಷೇತ್ರಕ್ಕೆ ಆಗಮಿಸುತ್ತಾರೆ. ಈ ಪುಣ್ಯಕ್ಷೇತ್ರದಲ್ಲಿ ರೇಣುಕರನ್ನು ಒಲಿಸಿಕೊಳ್ಳಲು ಧ್ಯಾನಾಸಕ್ತರಾಗಿ ಕುಳಿತುಕೊಂಡರು. ಶ್ರೀರೇಣುಕಾ ಚಾರ್ಯರು ಭೂಮಿಗೆ ಅವತರಿಸಿದ ಪುಣ್ಯದಿನದಂದು ಸಹಸ್ರಾರು ಜನ ಸೋಮನಾಥನ ಸನ್ನಿಧಿಗೆ ಬಂದು ಸೇರತೊಡಗುತ್ತಾರೆ. ಈ ಜನ ಜಂಗುಳಿಯ ಗಲಾಟೆ ಹೆಚ್ಚಾದರೂ ಶಿವಯೋಗಿಗಳು ತಮ್ಮ ಯೋಗಮಗ್ನತೆಯಿಂದ ಎಚ್ಚರಗೊಳ್ಳಲಿಲ್ಲ. ಮರುದಿನ ಪ್ರಾತಃ ಕಾಲದಲ್ಲಿ ದಿವ್ಯವಾಣಿಯೊಂದು ಯೋಗಿಗಳನ್ನು ಎಚ್ಚರಿಸಿ 'ನಿನ್ನ ಅಪಾರ ಭಕ್ತಿಗೆ ಮೆಚ್ಚಿದೆನು, ನನ್ನ ದರ್ಶನ ನಿನಗೆ ಆವಶ್ಯ ಎಂದಾದರೆ ಅರ್ಕಾವತಿ ತೀರದ ರೇಣುಕಗಿರಿಗೆ ಬಾ ಅಲ್ಲಿ ನಿನಗೆ ದರ್ಶನ ನೀಡುವೆ' ಎಂದು ಹೇಳಿತು.

ಇದರಿಂದ ಹರ್ಷಗೊಂಡ ಶಿವಯೋಗಿಗಳು ಧ್ಯಾನದಿಂದ ಮೇಲೆದ್ದು ಸೋಮನಾಥನನ್ನು ಪೂಜಿಸಿ, ಅರ್ಕಾವತಿ ನದಿ ತೀರಕ್ಕೆ ಸಮೀಪದಲ್ಲಿದ್ದ ರೇಣುಕಗಿರಿಗೆ ಬಂದರು. ಗಿರಿಯ ಮೇಲಿನ ಪ್ರಶಾಂತ ವಾತಾವರಣಕ್ಕೆ ಮನಸೋತ ಶಿವಯೋಗಿ ಗಳು ಭೀಮೇಶ್ವರ ದೇವಸ್ಥಾನದ ಸಮೀಪವಿದ್ದ ಗುಹೆಯ ಒಳಗೆ ಬಂದು ಅನುಷ್ಠಾನಕ್ಕೆ ಕುಳಿತುಕೊಂಡರು. ದೀರ್ಘತಪಸ್ಸಿನ ನಂತರ ಶಿವರಾತ್ರಿಯ ದಿನ ಶಿವಯೋಗಿಗಳಿಗೆ ರೇಣುಕರ ದಿವ್ಯ ದರ್ಶನವಾಗುತ್ತದೆ. ಆಗ ಶಿವಯೋಗಿಗಳು 'ನನ್ನನ್ನು ಇಲ್ಲಿಗೆ ಕಳುಹಿಸಿದ ಕಾರಣವೇನೆಂದು' ಕೇಳಿದರು. ಆಗ ಶ್ರೀ ರೇಣುಕರು 'ಲೋಕಕಲ್ಯಾಣಾರ್ಥ ನಿನ್ನನ್ನು ಇಲ್ಲಿಗೆ ಕಳುಹಿಸಿದ್ದು' ಎಂದು ಹೇಳಿ, 'ಶಿವರಾತ್ರಿಯ ದಿನ ನಿನಗೆ ನಾನು ದರ್ಶನ ಕೊಟ್ಟ ಕಾರಣ ನೀನು ಇನ್ನು ಮುಂದೆ 'ಶ್ರೀ ಶಿವರಾತ್ರೀಶ್ವರ ಶಿವಾಚಾರ್ಯ'ರೆಂಬ ಹೆಸರಿನಲ್ಲಿ ಅಜ್ಞಾನ, ಅನಾಚಾರ ಹೆಚ್ಚಿರುವ ಈ ನಾಡಿನಲ್ಲಿ ಭಕ್ತಿಯನ್ನು ಪ್ರಸಾರಮಾಡಿ ಲೋಕವನ್ನು ಉದ್ಧರಿಸು' ಎಂದು ಉಪದೇಶಿಸಿ, 'ಕಪಿಲಾಶ್ರಮದಲ್ಲಿ ನೀನು ನೆಲೆಸಿ ಧರ್ಮಪೀಠವನ್ನು ಸ್ಥಾಪಿಸು. ಭಕ್ತನಾದ ಚೋಳೇಂದ್ರನು ನಿನ್ನ ಆಶೀರ್ವಾದದಂತೆ ಗಂಗರನ್ನು ಸೋಲಿಸಿ ನಿನ್ನ ಸನ್ನಿಧಿಗೆ ಆಗಮಿಸಿ ನಿನ್ನ ಭಕ್ತನಾಗಿ ಧರ್ಮಪ್ರಸಾರಕ್ಕೆ ನೆರವಾಗುತ್ತಾನೆ' ಎಂದು ಅನುಗ್ರಹಿಸಿ ರೇಣುಕರು ಅದೃಶ್ಯರಾಗುತ್ತಾರೆ.

ಪ್ರಕಟಿತ ಇತಿಹಾಸ: ರೇಣುಕರು ನಡೆಸಿದ ಅನೇಕ ಪವಾಡಗಳಿಗೆ ಮನಸೋತ ಚೋಳರು, ರೇಣುಕಾಚಾರ್ಯರನ್ನು ಆರಾಧಿಸ ತೊಡಗಿ ತಮ್ಮ ಕುಲದೇವರನ್ನಾಗಿ ಮಾಡಿಕೊಂಡಿದ್ದರು. ಕಾಂಚಿನಗರದಲ್ಲಿ ಶಿಷ್ಟಾಚಾರದಂತೆ ರಾಜರಾಜಚೋಳನ ಒಡ್ಡೋಲಗ ನಡೆಯುತ್ತಿತ್ತು. ಈ ಸಂದರ್ಭದಲ್ಲಿ ಆಸ್ಥಾನಕ್ಕೆ ಸಿಂಹಳದ ಸೇನಾಧಿಪತಿ ವೀರಸಿಂಹನು ದಿವ್ಯ ಅಶ್ವವನ್ನು ಚೋಳರಾಜನಿಗೆ

ಕಾಣಿಕೆ ಯಾಗಿ ನೀಡಲು ಬಂದು, 'ಈ ದಿವ್ಯ ಅಶ್ವವನ್ನು ಸಿಂಹಳದ ರೇಣುಕಾಶ್ರಮದ ಶಿವಯೋಗಿಗಳು ಆಶೀರ್ವದಿಸಿ ನಮ್ಮ ಭೂಪತಿಗೆ ಕಾಣಿಕೆಯಾಗಿ ನೀಡಿದ್ದರು. ಇದನ್ನು ನಿಮಗೆ ಸ್ನೇಹ ಸಂಕೇತವಾಗಿ ಕಳುಹಿಸಿಕೊಟ್ಟಿದ್ದಾರೆ, ಸ್ವೀಕರಿಸಬೇಕು' ಎಂದು ವಿನಂತಿಸಿ ಕೊಳ್ಳುತ್ತಾನೆ. ಮೊದಲ ನೋಟದಲ್ಲೇ ದಿವ್ಯತೆಯ ಕಳೆ ಪ್ರಕಟಗೊಳ್ಳುತ್ತಿದ್ದ ಆ ಅಪರೂಪದ ಶ್ವೇತವರ್ಣದ ಅಶ್ವವನ್ನು ಚೋಳರಾಜನು ಸ್ವೀಕರಿಸಿದನು.

ಈ ದಿವ್ಯ ಅಶ್ವದ ಮೇಲೆ ಕಾಂಚೀನಗರ, ತಂಜಾವೂರುಗಳಲ್ಲಿ ಜನರು ಕಥೆ ಕಟ್ಟಿ, ಮಾತನಾಡಿಕೊಳ್ಳತೊಡಗಿದರು. ಇತ್ತ ಅರಮನೆಯಲ್ಲಿ ಚೋಳಭೂಪಾಲನು ನಿದ್ರಾಮಗ್ನನಾಗಿದ್ದ ಸಂದರ್ಭದಲ್ಲಿ ಕನಸಿನಲ್ಲಿ ರೇಣುಕರು ದರ್ಶನ ನೀಡಿ, 'ಯುವರಾಜ ರಾಜೇಂದ್ರಚೋಳನ ಶ್ರೇಯೋಭಿವೃದ್ಧಿಗಾಗಿಯೇ ದಿವ್ಯಅಶ್ವ ನಿನಗೆ ದೊರೆತಿದೆ. ಯುವರಾಜನು ಸೇನಾಪಡೆಯೊಂದಿಗೆ ದಿವ್ಯ ಅಶ್ವವನ್ನು ಏರಿ ರೇಣುಕಗಿರಿಗೆ ದರ್ಶನ ಕೊಡಲಿ. ಅಲ್ಲಿ ಶಿವಯೋಗಿಗಳೋರ್ವರು ಯುವರಾಜನ ಆಗಮನಕ್ಕಾಗಿ ನಿರೀಕ್ಷಿಸುತ್ತಿದ್ದಾರೆ. ಶುಭವಾಗಲಿ'ಎಂದು ಹೇಳಿದ ದಿವ್ಯವಾಣಿ ಕೇಳಿಸಿತು. ತಕ್ಷಣ ನಿದ್ದೆಯಿಂದ ಎಚ್ಚೆತ್ತು ಮುಂದಿನ ವ್ಯವಸ್ಥೆಯ ಬಗ್ಗೆ ಚಿಂತಿಸತೊಡಗಿದನು. ಬೆಳಗಾದೊಡನೆ ಚೋಳ ಭೂಪಾಲನು ನಿತ್ಯ ಕರ್ಮಾದಿಗಳನ್ನು ಮುಗಿಸಿ, ರಾತ್ರಿ ಕನಸಿನಲ್ಲಿ ಕೇಳಿದ ದಿವ್ಯವಾಣಿಯ ಸಂದೇಶವನ್ನು ಅರಮನೆಯಲ್ಲಿ ಬಿತ್ತಿದನು. ಈ ವಿಷಯ ಕೇಳಿದ ಮಡದಿ, ಮಂತ್ರಿಮಹೋದಯರು ಆ ಆದೇಶದ ಪಾಲನೆಗೆ ಸಕಲ ವ್ಯವಸ್ಥೆ ಮಾಡಿಕೊಳ್ಳತೊಡಗಿದರು.

ಸಕಲ ವ್ಯವಸ್ಥೆಯೊಂದಿಗೆ ನೂತನ ದಿವ್ಯಅಶ್ವಾರೋಹಿ ಯುವರಾಜ ರಾಜೇಂದ್ರಚೋಳನ ಜೈತ್ರಯಾತ್ರೆಯು ರೇಣುಕಗಿರಿಯತ್ತ ಹೊರಟಿತು. ಅನೇಕ ದಿನಗಳ ಪ್ರಯಾಣದೊಂದಿಗೆ ರೇಣುಕಗಿರಿಯನ್ನು ತಲುಪಿ ಅರ್ಕಾವತಿ ನದಿ ತೀರದಲ್ಲಿ ಬಿಡಾರ ಮಾಡಿತು. ಮರುದಿನ ಬೆಳಗ್ಗೆ ಯುವರಾಜ ರಾಜೇಂದ್ರಚೋಳನು ಮುನ್ನಡೆದಿದ್ದ ಅಶ್ವವನ್ನು ಹಿಂಬಾಲಿಸತೊಡಗಿದ. ದಿವ್ಯಅಶ್ವವು ಶಿವಯೋಗಿಗಳು ಧ್ಯಾನಾಸಕ್ತರಾಗಿ ಕುಳಿತಿದ್ದ ಗುಹೆಯ ಸಮೀಪ ಬಂದು ನಿಂತಿತು. ರಾಜೇಂದ್ರಚೋಳನು ಗುಹೆಯನ್ನು ಅವಲೋಕಿಸಿದಾಗ ಶಿವಯೋಗಿಗಳೋರ್ವರು ಧ್ಯಾನಮಗ್ನರಾಗಿ ಅಂತರ್ಮುಖಿಗಳಾಗಿ ಕುಳಿತಿರುವುದು ಕಾಣಿಸಿತು. ಯೋಗಿಗಳಿಗೆ ನಮಸ್ಕರಿಸಿದ ಯುವರಾಜ ಅವರಿಗೆ ಅಭಿಮುಖವಾಗಿ ಕೈಜೋಡಿಸಿ ನಿಂತುಕೊಂಡನು. ಸ್ವಲ್ಪ ಹೊತ್ತಿನ ಮೇಲೆ ಶಿವಯೋಗಿಗಳು ಯೋಗಸಮಾಧಿಯಿಂದ ಎಚ್ಚರಗೊಂಡರು. ಎದುರಿಗೆ ಕೈಜೋಡಿಸಿ ನಿಂತಿದ್ದ ಯುವರಾಜ ರಾಜೇಂದ್ರ ಚೋಳನನ್ನು ನೋಡಿದ ಮೊದಲ ನೋಟದಲ್ಲೇ ಗುರುತಿಸಿ, ನಗು ಮುಖದಿಂದ ಆಶೀರ್ವದಿಸಿ, 'ನಿನ್ನ ಜೈತ್ರಯಾತ್ರೆ ಯಶಸ್ವಿಯಾಗಲಿ, ಧರ್ಮರಕ್ಷಣೆಗೆ ಕ್ಷತ್ರಿಯರ ಬೆಂಬಲ ಆವಶ್ಯಕ. ಯಾತ್ರೆಯಲ್ಲಿ ದಿಗ್ವಿಜಯ ಪಡೆದು ಮುಂದಿನ ಶಿವರಾತ್ರಿಯ ದಿನ ಕಪಿಲಾ ತೀರದ ಕಪಿಲಾಶ್ರಮಕ್ಕೆ ಬಂದು ಸಂದರ್ಶಿಸು' ಎಂದು ಆಶೀರ್ವದಿಸಿ ಕಳುಹಿಸಿಕೊಡುತ್ತಾರೆ.

ಗಂಗರ ಮೇಲೆ ದಾಳಿ: ಗುರುಗಳ ಆಶೀರ್ವಾದದ ರಕ್ಷೆಯಲ್ಲಿ ಗಂಗರ ಮೇಲೆ ದಾಳಿಯಿಡಬೇಕೆಂಬ ಅಭಿಪ್ರಾಯವನ್ನು ದಂಡನಾಯಕರು ಯುವರಾಜನಲ್ಲಿ ಹೇಳಿಕೊಂಡರು. ಯುವರಾಜನು ಒಪ್ಪಿಗೆಕೊಟ್ಟು, ಗಂಗರ ರಾಜಧಾನಿ ತಲಕಾಡಿಗೆ ದಾಳಿ ಇಟ್ಟರು. ಗಂಗರ ರಾಜ ಮಾರಸಿಂಹನ ಮಗ ರಾಚಮಲ್ಲ ಹಾಗೂ ಯುವರಾಜ ರಾಜೇಂದ್ರಚೋಳನು ಮುಖಾಮುಖಿಯಾದರು. ದಿವ್ಯ ಅಶ್ವವನ್ನೇರಿ ಬಂದ ರಾಜೇಂದ್ರಚೋಳನನ್ನು ಕಂಡೊಡನೆಯೇ ರಾಚಮಲ್ಲನು ಶತ್ರುಭಾವನೆಯನ್ನು ಮರೆತು ಯುದ್ಧವನ್ನು ನಿಲ್ಲಿಸಿ ಗೌರವಿಸಿದನು. ಇದರಿಂದ ಗಂಗರ ಸೈನ್ಯ ಶರಣಾಯಿತು. ಯುದ್ಧ ಭೂಮಿಯಲ್ಲಿ ಸ್ನೇಹಹಸ್ತ ಚಾಚಿದ ರಾಚ ಮಲ್ಲನಿಗೆ ಸಾಮಂತ ಪಟ್ಟಾಭಿಷೇಕ ನೆರವೇರಿಸಿ, ಗೆದ್ದ ರಾಜ್ಯವನ್ನು ಗಂಗರಿಗೇ ಬಿಟ್ಟುಕೊಟ್ಟನು. ಚೋಳ ಯುವರಾಜನ ಹಿರಿತನವನ್ನು ಕೊಂಡಾಡಿದ ಪ್ರಜೆಗಳು 'ಗಂಗೈಕೊಂಡಚೋಳ' ಎಂಬ ಬಿರುದು ನೀಡಿ ಸತ್ಕರಿಸಿದರು.

ಈ ದಿಗ್ವಿಜಯದಿಂದ ಯುವರಾಜ ರಾಜೇಂದ್ರ ಚೋಳನಿಗೆ ಶಿವರಾತ್ರಿ ಶಿವಾಚಾರ್ಯರಲ್ಲಿ ಭಕ್ತಿ ಹೆಚ್ಚಾಯಿತು. ಗುರುಗಳ ಅಪ್ಪಣೆಯಂತೆ ಶಿವರಾತ್ರಿಯ ದಿನ ಗುರುಗಳನ್ನು ಸಂದರ್ಶಿಸಬೇಕು ಎಂಬ ಹಂಬಲ ಹೆಚ್ಚಾಯಿತು. ಕಪಿಲಾ ನದಿ ತೀರದ ಕಪಿಲಾ ಶ್ರಮವನ್ನು ತಲುಪಲು ಹೊರಟನು. ದಾರಿ ಮಧ್ಯೆ ಎದುರಾದ ಜಂಗಮರಿಂದ ಕಪಿಲಾಶ್ರಮದ ದಾರಿ ತಿಳಿದುಕೊಳ್ಳುತ್ತಾನೆ. ಯುವರಾಜರಲ್ಲಿ ಆಸಕ್ತಿ ತೋರಿದ ಜಂಗಮರು ಕಪಿಲಾಶ್ರಮಕ್ಕೆ ಹೋಗುವ ಉದ್ದೇಶವನ್ನು ಕೇಳಿ ತಿಳಿದುಕೊಂಡು, ಶಿವಯೋಗಿಗಳು ಅಂತರ್ಮುಖಿಗಳಾಗಿ ತಪಸ್ಸಿನಲ್ಲಿಯೇ ಇದ್ದಾರೆ ಎಂದು ಹೇಳುತ್ತಾರೆ. ಶಿವಯೋಗಿ

ಶ್ರೀ ಶಿವರಾತ್ರೀಶ್ವರರ ಮಹಿಮೆ ಕೇಳಿ, ಸಂತೋಷಗೊಂಡ ಯುವರಾಜ ಕಪಿಲಾಶ್ರಮಕ್ಕೆ ಬರುತ್ತಾನೆ. ಅಶ್ವವು ಆಶ್ರಮವನ್ನು ಪ್ರವೇಶಿಸಿ (ಹಿಂದೆ ಕಪಿಲಾ ಮಹರ್ಷಿಗಳು ತಪಸ್ಸು ಮಾಡಿದ ಜಾಗದಲ್ಲಿ ನೆನಪಿಗಾಗಿ ಮಂಟಪ ನಿರ್ಮಿಸಿದ್ದರು) ಮಂಟಪದ ಹಿಂಬದಿಯಲ್ಲಿ ದಟ್ಟವಾಗಿ ಹಬ್ಬಿದ್ದ ಪೊದೆಯ ಸುತ್ತ ಮೂರು ಸಲ ಪ್ರದಕ್ಷಿಣೆ ಮಾಡಿ ನಿಂತುಕೊಂಡಿತು. ಗುರುಗಳು ಇದೇ ಜಾಗದಲ್ಲಿ ತಪಸ್ಸಿಗೆ ಕುಳಿತಿದ್ದಾರೆ ಎಂದರಿತ ಯುವರಾಜ, ತನ್ನ ಖಡ್ಗದಿಂದ ಪೊದೆಯನ್ನು ಸವರಿಕೊಂಡು ಹುತ್ತದ ಬಳಿ ಬಂದನು. ಈ ವೇಳೆಗಾಗಲೇ ಸೂರ್ಯಾಸ್ತಮಾನದ ವೇಳೆಯಾಗಿ ಪಡುವಣ ಬಾನು ಕೆಂಪಿಟ್ಟಿತ್ತು. ಸ್ವಲ್ಪ ಹೊತ್ತಿಗೆ ಬಾನಿನಲ್ಲಿ ಮೋಡ ಕವಿದು ಮಾಯದಂತ ಮಳೆ ಬರಲು ಪ್ರಾರಂಭವಾಯಿತು.ಯುವರಾಜನಿಗೆ ದಿಕ್ಕುತೋಚದಂತಾಗಿ ಅಶ್ವವನ್ನು ಜೊತೆಯಲ್ಲಿ ಕರೆದುಕೊಂಡು ಮಂಟಪದ ಒಳಗೆ ಬಂದು ಆಶ್ರಯ ಪಡೆದನು.

ಶಿವರಾತ್ರಿಯ ದಿನ ಸಂದರ್ಶಿಸಲು ಗುರುಗಳು ಅಪ್ಪಣೆ ಕೊಟ್ಟಿದ್ದಾರೆ. ಈ ದಿನ ದರ್ಶನ ಲಭ್ಯವಾಗದಿದ್ದರೆ ಮುಂದೇನು, ಎಂಬ ಚಿಂತೆ ಕಾಡುತ್ತಿದ್ದಂತೆಯೇ ಕಪಿಲೆಯ ಭೋರ್ಗರೆತ ಕಿವಿಗೆ ಅಪ್ಪಳಿಸಿತು. ಕಪಿಲಾ ನದಿಯು ಉಕ್ಕಿ ಹರಿಯತೊಡಗಿತ್ತು. ಮಳೆಯು ನಿಂತ ಒಂದೆರಡು ಗಂಟೆಗಳ ತರುವಾಯ ಕಪಿಲೆಯ ಪ್ರವಾಹ ಕಡಿಮೆಯಾಯಿತು. ತಕ್ಷಣ ಯುವರಾಜನು ಮಂಟಪದಿಂದ ಹೊರಬಂದು ನೋಡುತ್ತಾನೆ, ಹುತ್ತವು ಕರಗಿ ನೀರಾಗಿ ಹೋಗಿತ್ತು . ಶಿವಯೋಗಿಗಳು ವ್ಯಾಘ್ರಾಜಿನದ ಮೇಲೆ ಪದ್ಮಾಸನ ಹಾಕಿ ಧ್ಯಾನಯೋಗದಲ್ಲಿ ಕುಳಿತಿದ್ದರು. ಆ ದೃಶ್ಯವನ್ನು ನೋಡಿ, ಯುವರಾಜ ಅವರ ಮುಂದೆ ಕೈಜೋಡಿಸಿ ಕುಳಿತುಕೊಳ್ಳುತ್ತಾನೆ. ಯೋಗಸ್ಥಿತಿಯಿಂದ ಎಚ್ಚರ ಗೊಂಡು ಶಿವಸ್ತೋತ್ರ ಮುಗಿಸಿದ ಶಿವಾಚಾರ್ಯರು ಕಣ್ಣುಬಿಟ್ಟು ನೋಡುತ್ತಾರೆ. ಯುವರಾಜ ರಾಜೇಂದ್ರಚೋಳನು ಕೈಮುಗಿದು ಕುಳಿತಿರುವ ದೃಶ್ಯವನ್ನು ಕಾಣುತ್ತದೆ. ಗುರುಗಳ ದಿವ್ಯದೃಷ್ಟಿ ತನ್ನ ಮೇಲೆ ಬಿದ್ದ ತಕ್ಷಣ ಯುವರಾಜನು ತಲೆಬಾಗಿ ನಮಸ್ಕರಿಸಿ 'ನಿಮ್ಮ ಆಶೀರ್ವಾದದಿಂದ ವಿಜಯ ಸಾಧಿಸಿ ಕೃಪಾಶೀರ್ವಾದಕ್ಕೆ ಬಂದಿದ್ದೇನೆ' ಎಂದು ಮತ್ತೆ ತಲೆಬಾಗಿಸುತ್ತಾನೆ. ಆಗ ಶಿವಯೋಗಿಗಳು ಎಲ್ಲವೂ ಆಚಾರ್ಯ ರೇಣುಕರ ಅನುಗ್ರಹ ಎಂದು ಅಪ್ಪಣೆ ಕೊಡುತ್ತಾರೆ.

ನೀರಿಗೆ ಹಾರಿದ ಅಶ್ವ: ದಿವ್ಯ ಅಶ್ವವು ಶಿವಯೋಗಿ ಶ್ರೀ ಶಿವರಾತ್ರೀಶ್ವರ ಶಿವಾಚಾರ್ಯರನ್ನು ಮೂರು ಸುತ್ತು ಪ್ರದಕ್ಷಿಣೆ ಮಾಡಿ ಕಪಿಲೆಗೆ ಹಾರಿ ಮಾಯವಾಗುತ್ತದೆ. ಇದನ್ನು ನೋಡಿದ ಯುವರಾಜ ಚೋಳನು ಆಶ್ಚರ್ಯಚಕಿತನಾಗಿ ಇದೇನು ಪವಾಡ ಎಂದು ಶಿವಯೋಗಿಗಳನ್ನು ಕೇಳುತ್ತಾನೆ. ಆಗ ಶಿವಯೋಗಿಗಳು, ಹಿಂದೆ ರೇಣುಕರು ವಿಭೀಷಣನ ಬೇಡಿಕೆಯಂತೆ ಲಂಕೆಗೆ ಹೋಗಿ ಕೋಟಿಲಿಂಗ ಪ್ರತಿಷ್ಠಾಪಿಸಿ ಬರುತ್ತಾರೆ. ವೀರಶೈವ ಧರ್ಮ ಬೆಳಗಲಿ ಎಂಬ ಕಾರಣಕ್ಕೆ ಲಂಕೆಯಲ್ಲಿ ಮಠ ಸ್ಥಾಪಿಸಿ ತಮ್ಮ ಶಿಷ್ಯರನ್ನು ನೆಲೆಗೊಳಿಸಿ ಬಂದಿದ್ದರು. ಆದರೆ ಗಂಧರ್ವನೊಬ್ಬ ರೇಣುಕರು ಸ್ಥಾಪಿಸಿದ ಮಠದಲ್ಲಿ ಕಿರುಕುಳ ನೀಡುತ್ತಿದ್ದುದಲ್ಲದೆ ಅನೀತಿ, ಅತ್ಯಾಚಾರ ಮಾಡಿ ಶಿವಯೋಗಿಗಳ ಶಾಪಕ್ಕೆ ಒಳಗಾಗಿ ಅಶ್ವ ವಾಗಿ ಜನ್ಮವೆತ್ತಿ ಮಠವನ್ನು ಸೇರುತ್ತಾನೆ. ಆಗ ಅಲ್ಲಿದ್ದ ಶಿವಯೋಗಿಗಳು ಶಾಪ ವಿಮೋಚನೆಗೆ ಈ ಅಶ್ವವನ್ನು ಸಿಂಹಳದ ದೊರೆಗೆ ಕೊಡುತ್ತಾರೆ. ಸಿಂಹಳದ ದೊರೆ ಸ್ನೇಹ ಕಾಣಿಕೆಯಾಗಿ ಇದೇ ಅಶ್ವವನ್ನು ನಿನಗೆ ಕೊಡುತ್ತಾನೆ. ಶಾಪಗ್ರಸ್ಥಗೊಂಡ ಗಂಧರ್ವ ಅಶ್ವವಾಗಿ ನಿನ್ನಿಂದ ಶಾಪ ವಿಮೋಚನೆ ಪಡೆದನು. ನೀನು ಈ ಬಗ್ಗೆ ಚಿಂತಿಸಬೇಡ, ಎಂದು ಹೇಳಿ,ಯುವರಾಜ ರಾಜೇಂದ್ರ ಚೋಳನಿಗೆ ಧರ್ಮ ರಹಸ್ಯಗಳನ್ನು ಉಪದೇಶಿಸಿ 'ಆಚಾರ್ಯರ ಅಪ್ಪಣೆಯಂತೆ ನಾವಿಲ್ಲಿ ಒಂದು ಧರ್ಮಪೀಠವನ್ನು ಸ್ಥಾಪಿಸಬೇಕಾಗಿದೆ. ರಾಜನಿಗೆ ಗುರುವು ಪ್ರೇರಕರಾಗಿ ಆಶೀರ್ವದಿಸಿದಂತೆ, ಧರ್ಮತತ್ತ್ವ ಪ್ರಚಾರದಲ್ಲಿ ಗುರುಗಳಿಗೆ ರಾಜ ಬೆಂಬಲಕ್ಕೆ ನಿಂತು ಸಹಕರಿಸಬೇಕು. ಈ ಕಾರಣಕ್ಕೆ ನೀನು ನಮ್ಮ ಹಿಂದೆ ನಿಂತು ಧರ್ಮಕಾರ್ಯದಲ್ಲಿ ಸಹಕರಿಸು' ಎಂದು ಹೇಳಿದರು. ಗುರುಗಳ ಅಪ್ಪಣೆಯಂತೆ ಯುವರಾಜ ರಾಜೇಂದ್ರ ಚೋಳನು ಶ್ರೋತ್ರಿಯೂರಿನಲ್ಲಿ ವೀರಸಿಂಹಾಸನ ಮಠವು ವಿರಾಜಿಸುವಂತೆ ಮಾಡುತ್ತಾನೆ. ಮಠದ ಆವರಣದಲ್ಲಿ ವೀರೇಶ್ವರನನ್ನು ಪ್ರತಿಷ್ಠಾಪಿಸಿ ಗ್ರಾಮದೇವತೆ ಮೂಲನಾಥೇಶ್ವರ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿದನು. ಶಿವರಾತ್ರಿಯ ದಿನ ಶಿವಯೋಗಿ ಶ್ರೀ ಶಿವರಾತ್ರೀಶ್ವರ ಶಿವಾಚಾರ್ಯರು ಶಿವರಾತ್ರೀಶ್ವರ ಧರ್ಮಪೀಠವನ್ನು ಅಲಂಕರಿಸುವಂತೆ ವ್ಯವಸ್ಥೆ ಮಾಡಿಸಿದನು.

ಅಶ್ವವು ಗುರುಗಳನ್ನು ಪ್ರದಕ್ಷಿಣೆ ಮಾಡಿದ ಕಾರಣಕ್ಕೆ ಶ್ರೋತ್ರೀಪುರವು 'ಪ್ರದಕ್ಷಿಣೆಪುರ' ಅಥವಾ 'ಸುತ್ತೂರು' ಎಂಬ

ಅನ್ವರ್ಥನಾಮಗಳಿಂದ ಪ್ರಸಿದ್ಧಿ ಪಡೆದು ಶಿವರಾತ್ರೀಶ್ವರರ ದಿವ್ಯ ಉಪದೇಶಗಳಿಂದ ಪವಿತ್ರ ಧರ್ಮಕ್ಷೇತ್ರವಾಯಿತು. ಆದಿ ಗುರುಗಳು ತಮ್ಮ ಕಾಲದಲ್ಲಿ ಚೋಳರ ನೆರವು ಪಡೆದು ತಲಕಾಡಿನ ಪಂಚಲಿಂಗೇಶ್ವರ ದೇವಸ್ಥಾನಗಳ ಜೀರ್ಣೋದ್ಧಾರ ಮಾಡಿಸಿದರು. ಈ ರೀತಿ ಶಿವಯೋಗಿ ಶ್ರೀ ಶಿವರಾತ್ರೀಶ್ವರರು ಅನೇಕ ಅಭಿವೃದ್ಧಿ ಕೆಲಸಗಳನ್ನು ಕೈಗೊಂಡು, ವೀರಶೈವಧರ್ಮ ಗಟ್ಟಿಯಾಗಿ ನೆಲೆಯೂರಲು ಕಾರಣಕರ್ತರಾದರು. ೧೦೩೨ರಲ್ಲಿ ಶ್ರೀ ಶಿವರಾತ್ರೀಶ್ವರರು ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಈಶಾನೇಶ್ವರ ಶಿವಾಚಾರ್ಯರನ್ನು ನೇಮಿಸಿ ಪಟ್ಟಾಭಿಷೇಕ ಮಾಡಿಸಿದರು. ಇದರ ಸವಿನೆನಪಿಗಾಗಿ ರಾಜೇಂದ್ರ ಚೋಳನು ರಾಜಗುರು ಈಶಾನೇಶ್ವರರಿಗೆ ವಿಪುಲವಾದ ಆಸ್ತಿಯನ್ನು ದಾನಮಾಡಿದನು. ದಾನದತ್ತಿಯಿಂದ ಮಠದ ಆಡಳಿತ ವಿಸ್ತಾರಗೊಂಡು ಬೆಳೆಯತೊಡಗಿತು. ಈ ಅಭಿವೃದ್ಧಿಯನ್ನು ಕಣ್ಣಾರೆ ಕಂಡು ಸಂತೋಷಗೊಂಡ ಶಿವಯೋಗಿ ಶ್ರೀ ಶಿವರಾತ್ರೀಶ್ವರ ಶಿವಾಚಾರ್ಯರು ತಮ್ಮ ಆಸೆ ನೇರವೇರಿತು ಎಂಬ ತೃಪ್ತಭಾವದಿಂದ ಕಪಿಲಾ ತೀರದ ಆಶ್ರಮ ಸೇರಿ ನಿರ್ವಿಕಲ್ಪ ಸಮಾಧಿ ಪಡೆದರು.

ದೇಶ ವಿದೇಶಿಯರ ಗಮನ: ರಾಜಗುರುಗಳಾದ ಶ್ರೀ ಈಶಾನೇಶ್ವರ ಶಿವಾಚಾರ್ಯರು ಚೋಳರ ರಾಜ್ಯ ವಿಸ್ತಾರಕ್ಕೆ ಕೃಪಾಶೀರ್ವಾದ ನೀಡಿದ್ದಲ್ಲದೆ, ಚೋಳರ ನೆರವಿನಿಂದ ರೇಣುಕಗಿರಿಯ ದೇವಾಲಯಗಳ ಜೀರ್ಣೋದ್ಧಾರ ಮಾಡಿಸಿದರು. ಮುಡುಗುತೊರೆ ಮಲ್ಲಿಕಾರ್ಜುನ ದೇವಸ್ಥಾನದ ಅಭಿವೃದ್ಧಿ ಮಾಡಿಸಿ ಪ್ರತಿವರ್ಷ ಉತ್ಸವ ನೆರವೇರಲು ವ್ಯವಸ್ಥೆ ಮಾಡಿದರು. ಸುತ್ತೂರಿನ ಮಠದಲ್ಲಿ ಜ್ಞಾನ ಹಾಗೂ ಅನ್ನದಾಸೋಹ ನಿರಂತರವಾಗಿ ನಡೆಯಲು ಅನುವು ಮಾಡಿದರು. ರಾಜಾಶ್ರಯ ದೊರೆತ ಸುತ್ತೂರು ಶ್ರೀ ಶಿವರಾತ್ರಿ ಮಠದ ಹೆಸರು ದೇಶವಿದೇಶಗಳಲ್ಲಿ ಹರಡಿತು. ಮೂಲತಃ ಇಲ್ಲಿನ ಪೀಠಾಧ್ಯಕ್ಷರಾದ ಶ್ರೀ ಈಶಾನೇಶ್ವರರು ಜ್ಞಾನಸಂಪನ್ನರು. ಅವರ ವಿಚಾರಗಳು ತರ್ಕಾನುಸಾರವಾಗಿದ್ದ ಕಾರಣ ದೇಶವಿದೇಶಗಳ ಪಂಡಿತರು ತಮ್ಮ ಜ್ಞಾನ ದಾಹ ನೀಗಿಸಿಕೊಳ್ಳಲು ಈಶಾನೇಶ್ವರರ ಬಳಿಗೆ ಬಂದು ಹೋಗುತ್ತಿದ್ದರು.

ಪಂಡಿತ ಮಹೋದಯರಾದ ಶ್ರೀ ಈಶಾನೇಶ್ವರರು ಲೋಕಸಂಚಾರ ಕೈಗೊಂಡು ಧಾರ್ಮಿಕ ಕೆಲಸಗಳನ್ನು ಕೈಗೊಂಡು ಕೀರ್ತಿಗೆ ಪಾತ್ರರಾದರು. ಶ್ರೀ ಈಶಾನೇಶ್ವರರು ಸುತ್ತೂರು ಮಠಕ್ಕೆ ಶ್ರೀ ನಿಜಲಿಂಗ ಶಿವಾಚಾರ್ಯರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿ, ೧೯೦ರಲ್ಲಿ ಪಟ್ಟಾಧಿಕಾರದ ಅನುಗ್ರಹನೀಡಿ ಶ್ರೀಶೈಲಕ್ಕೆ ತೆರಳಿ ಅಲ್ಲಿಯೇ ಲಿಂಗೈಕ್ಯರಾಗುತ್ತಾರೆ.

ಗುರು ಪರಂಪರೆ:

೧. ಜಗದ್ಗುರು ಶ್ರೀ ಶಿವಯೋಗಿ ಶಿವರಾತ್ರೀಶ್ವರ ಶಿವಾಚಾರ್ಯಸ್ವಾಮಿಗಳು	(ಕ್ರಿ.ಶ. - ೧೦೦೦)
೨. ಜಗದ್ಗುರು ಶ್ರೀ ಈಶಾನೇಶ್ವರ ಶಿವಾಚಾರ್ಯಸ್ವಾಮಿಗಳು	(ಕ್ರಿ.ಶ. - ೧೦೩೨)
೩. ಜಗದ್ಗುರು ಶ್ರೀ ನಿಜಲಿಂಗ ಶಿವಾಚಾರ್ಯಸ್ವಾಮಿಗಳು	(೧೯೦ - ೧೧೭೦)
೪. ಜಗದ್ಗುರು ಶ್ರೀ ಸಿದ್ಧನಂಜ ದೇಶಿಕೇಂದ್ರ ಸ್ವಾಮಿಗಳು	(೧೧೭೦ - ೧೨೪೦)
೫. ಜಗದ್ಗುರು ಶ್ರೀ ಕಪಿನಿ ನಂಜುಂಡ ದೇಶಿಕೇಂದ್ರಸ್ವಾಮಿಗಳು	(೧೨೪೦ - ೧೩೧೦)
೬. ಜಗದ್ಗುರು ಶ್ರೀ ಚನ್ನವೀರ ದೇಶಿಕೇಂದ್ರ ಸ್ವಾಮಿಗಳು	(೧೩೧೦ - ೧೩೮೦)
೭. ಜಗದ್ಗುರು ಶ್ರೀ ಸಿದ್ಧಮಲ್ಲ ಶಿವಾಚಾರ್ಯಸ್ವಾಮಿಗಳು	(೧೩೮೦ - ೧೪೭೦)
೮. ಜಗದ್ಗುರು ಶ್ರೀ ಪರ್ವತೇಂದ್ರ ಶಿವಾಚಾರ್ಯಸ್ವಾಮಿಗಳು	(೧೪೭೦ - ೧೪೯೦)
೯. ಜಗದ್ಗುರು ಶ್ರೀ ಭಂಡಾರಿ ಬಸಪ್ಪ ಒಡೆಯರು	(೧೪೯೦ - ೧೫೧೫)
೧೦. ಜಗದ್ಗುರು ಶ್ರೀ ಕೂಗಲೂರು ನಂಜುಂಡ ದೇಶಿಕೇಂದ್ರಸ್ವಾಮಿಗಳು	(೧೫೧೫ - ೧೫೩೦)
೧೧. ಜಗದ್ಗುರು ಶ್ರೀ ಘನಲಿಂಗದೇವರು	(೧೫೩೦ - ೧೫೫೦)
೧೨. ಜಗದ್ಗುರು ಶ್ರೀ ಇಮ್ಮಡಿ ಶಿವರಾತ್ರೀಶ್ವರ ಶಿವಾಚಾರ್ಯಸ್ವಾಮಿಗಳು	(೧೫೫೦ - ೧೫೯೦)
೧೩. ಜಗದ್ಗುರು ಶ್ರೀ ಗುರು ಚನ್ನಬಸವ ದೇಶಿಕೇಂದ್ರ ಸ್ವಾಮಿಗಳು	(೧೫೯೦ - ೧೬೦೮)
೧೪. ಜಗದ್ಗುರು ಶ್ರೀ ಗುರು ನಂಜದೇಶಿಕೇಂದ್ರ ಸ್ವಾಮಿಗಳು	(೧೬೦೮ - ೧೬೪೦)
೧೫. ಜಗದ್ಗುರು ಶ್ರೀ ಗುರು ಚನ್ನಬಸವ ಶಿವಾಚಾರ್ಯಸ್ವಾಮಿಗಳು	(೧೬೪೦ - ೧೭೧೩)
೧೬. ಜಗದ್ಗುರು ಶ್ರೀ ಗುರು ಪಂಚಾಕ್ಷರಿ ದೇಶಿಕೇಂದ್ರ ಸ್ವಾಮಿಗಳು	(೧೭೧೩ - ೧೭೩೦)

೧೭. ಜಗದ್ಗುರು ಶ್ರೀ ಚಿದ್ಘನ ಶಿವಾಚಾರ್ಯಸ್ವಾಮಿಗಳು (೧೭೩೦ - ೧೭೫೦)
೧೮. ಜಗದ್ಗುರು ಶ್ರೀ ಚನ್ನವೀರ ದೇಶಿಕೇಂದ್ರ ಸ್ವಾಮಿಗಳು (೧೭೫೧ - ೧೮೦೧)
೧೯. ಜಗದ್ಗುರು ಶ್ರೀ ಮಹಾಂತ ದೇಶಿಕೇಂದ್ರ ಸ್ವಾಮಿಗಳು (೧೮೦೧ - ೧೮೪೨)
೨೦. ಜಗದ್ಗುರು ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು (೧೮೪೨ - ೧೮೯೬)
೨೧. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು (೧೮೮೪ - ೧೯೦೨)
೨೨. ಜಗದ್ಗುರು ಶ್ರೀ ಪಟ್ಟದ ಶಿವರಾತ್ರೀಶ್ವರಸ್ವಾಮಿಗಳು (೧೯೦೨ - ೧೯೬೭)
೨೩. ಜಗದ್ಗುರು ಶ್ರೀ ಡಾ. ಶಿವರಾತ್ರಿ ರಾಜೇಂದ್ರ ಸ್ವಾಮಿಗಳು (೧೯೧೬ - ೧೯೮೬)
೨೪. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರಸ್ವಾಮಿಗಳು (೧೯೮೬-) (ಈಗಿನವರು)

ಈ ರೀತಿ ಇಪ್ಪತ್ನಾಲ್ಕು ಜನ ಗುರುಗಳು ಸುತ್ತೂರು ಶ್ರೀಶಿವರಾತ್ರೀಶ್ವರಮಠ ಸ್ಥಾಪನೆಯಾದಾಗಿನಿಂದ ನಿರಂತರವಾಗಿ ಅಧಿಕಾರ ನಡೆಸಿಕೊಂಡು ಬಂದು, ಒಬ್ಬರಿಗಿಂತ ಒಬ್ಬರ ಕಾಲದಲ್ಲಿ ಮಠವು ಅಭಿವೃದ್ಧಿ ಹೊಂದಿರುವುದು ಒಂದು ವಿಶೇಷವಾಗಿದೆ.

ಕಲ್ಯಾಣದ ಚೌಡಯ್ಯನವರ ಆಗಮನ: ಹನ್ನೆರಡನೆಯ ಶತಮಾನದಲ್ಲಿ ಸುತ್ತೂರಿನಲ್ಲಿ ಧರ್ಮಕಾರ್ಯ ನಡೆಸುತ್ತಿದ್ದ ಜಗದ್ಗುರು ಶ್ರೀ ನಿಜಲಿಂಗ ಶಿವಾಚಾರ್ಯರ ಕಾಲದಲ್ಲಿ, ಉತ್ತರ ಕರ್ನಾಟಕದ ಕಲ್ಯಾಣದಲ್ಲಿ ಧಾರ್ಮಿಕ ಕ್ರಾಂತಿಯಾಗಿ ಶರಣರು ತಮ್ಮ ರಚನೆಯ ವಚನ ಸಾಹಿತ್ಯವನ್ನು ಜೋಪಾನವಾಗಿ ಉಳಿಸಲು ಕಲ್ಯಾಣವನ್ನು ತೊರೆದರು. ಈ ಸಂದರ್ಭದಲ್ಲಿ ಕಲ್ಯಾಣವನ್ನು ತೊರೆದ ಮುಸುದಿ ಚೌಡಯ್ಯನವರು ನೇರವಾಗಿ ಸುತ್ತೂರಿಗೆ ಬಂದು ಆಶ್ರಯ ಪಡೆದರು. ಇದೇ ಸಂದರ್ಭದಲ್ಲಿ ದಕ್ಷಿಣಕರ್ನಾಟಕದ ಪ್ರಾಂತ್ಯದಲ್ಲಿ ಕ್ಷಾಮ ತಲೆದೋರಿತು. ಜನರಿಗೆ ಅನ್ನ ಬೇಕಿತ್ತೇ ವಿನಾ ಧರ್ಮದ ತತ್ತ್ವ ಬೇಕಾಗಿರಲಿಲ್ಲ. ಮುಸುದಿ ಚೌಡಯ್ಯ ಹಾಗೂ ಸುತ್ತೂರು ಮಠದ ಜಗದ್ಗುರು ಶ್ರೀ ನಿಜಲಿಂಗ ಶಿವಾಚಾರ್ಯ ಸ್ವಾಮಿಗಳು ಒಟ್ಟಿಗೆ ಸೇರಿ ಕಷ್ಟಕಾಲದಲ್ಲಿಯೂ ಜನರು ಧರ್ಮದ ದಾರಿ ತಪ್ಪಬಾರದೆಂದು ಮಾನಸಿಕ ಸ್ಥೈರ್ಯ ನೀಡಲು ಮುಂದಾದರು.

ಮಹದೇಶ್ವರರ ಪವಾಡ: ಜಗದ್ಗುರು ಶ್ರೀ ನಿಜಲಿಂಗ ಶಿವಾಚಾರ್ಯರ ನಂತರ ಬಂದ ಜಗದ್ಗುರು ಶ್ರೀ ಸಿದ್ಧನಂಜ ದೇಶಿಕೇಂದ್ರ ಸ್ವಾಮಿಗಳ ಕಾಲದಲ್ಲಿ ಸುತ್ತೂರಿನ ಸುತ್ತಮುತ್ತ ಅತಿವೃಷ್ಟಿ ಉಂಟಾಗಿ ಇಡೀ ನಾಡೇ ಜಲಾವೃತವಾಯಿತು. ಮನೆಮಠ ಕಳೆದುಕೊಂಡು ನಿರಾಶ್ರಿತರಾದವರಿಗೆ ಧೈರ್ಯ ನೀಡಿದ ಶ್ರೀ ಸಿದ್ಧನಂಜ ದೇಶಿಕೇಂದ್ರ ಸ್ವಾಮಿಗಳು ಇವರ ಉದ್ಧಾರಕ್ಕಾಗಿ ಅನೇಕ ಪರಿಹಾರ ಕಾರ್ಯಗಳನ್ನು ಕೈಗೊಂಡರೆಂದು ಮಠದ ದಾಖಲೆಗಳಲ್ಲಿ ಉಲ್ಲೇಖವಾಗಿದೆ. ದಕ್ಷಿಣ ಕರ್ನಾಟಕದಲ್ಲಿ ಧಾರ್ಮಿಕ ಕಾರ್ಯಗಳ ಜೊತೆಯಲ್ಲಿ ಜನಪರ ಕಾರ್ಯಗಳಲ್ಲಿ ಶ್ರೀ ಸಿದ್ಧನಂಜ ದೇಶಿಕರು ತಮ್ಮನ್ನು ತೊಡಗಿಸಿಕೊಂಡಿದ್ದರು. ಈ ಸಂದರ್ಭದಲ್ಲಿ ಸುತ್ತೂರು ಮಠವನ್ನು ನೋಡಲೆಂದು ಉತ್ತರದ ಕಡೆಯ ಕೆಲವು ಶರಣರು ಬಾಲಯೋಗಿ ಮಹದೇಶ್ವರರ ಜೊತೆಗೆ ಸುತ್ತೂರಿಗೆ ಬರುತ್ತಾರೆ. ಇಲ್ಲಿನ ವ್ಯವಸ್ಥೆ ಹಾಗೂ ಶ್ರೀ ಸಿದ್ಧನಂಜ ದೇಶಿಕರ ಪ್ರಭಾವ ನೋಡಿ ಬೆರಗಾದರು. ಈ ಸಂದರ್ಭದ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡ ಬಾಲಯೋಗಿ ಮಹದೇಶ್ವರರು ಶರಣರ ದಾಸೋಹಕ್ಕಾಗಿ ಭತ್ತವನ್ನು ಕುಟ್ಟುವುದು, ರಾಗಿ ಬೀಸುವುದು ಮುಂತಾದ ಕೆಲಸಗಳ ಹೊಣೆಗಾರಿಕೆಯನ್ನು ವಹಿಸಿಕೊಂಡಿದ್ದರು. ರಾತ್ರಿ ಕುಕ್ಕೆಗಳಲ್ಲಿ ತುಂಬಿಟ್ಟ ಖಂಡುಗಗಟ್ಟಲೆ ರಾಗಿ ಬೆಳಗಾಗುವುದರೊಳಗಾಗಿ ಪವಾಡದ ರೂಪದಲ್ಲಿ ಹಿಟ್ಟಾಗುತ್ತಿದ್ದದ್ದು ಎಲ್ಲರಿಗೂ ಸೋಜಿಗವನ್ನುಂಟು ಮಾಡುತ್ತಿತ್ತು. ಅಂದು ಮಹದೇಶ್ವರರು ಬೀಸುತ್ತಿದ್ದ ಬೀಸುವ ಕಲ್ಲು ಸುತ್ತೂರು ಮಠದಲ್ಲಿ ಇಂದಿಗೂ ಪೂಜ್ಯತೆಗೆ ಒಳಗಾಗಿದೆ.

ತೋಂಟದ ಶ್ರೀ ಸಿದ್ಧಲಿಂಗೇಶ್ವರರ ಆಗಮನ: ಸುತ್ತೂರು ಮಠದ ಏಳನೆಯ ಜಗದ್ಗುರುಗಳಾಗಿದ್ದ ಶ್ರೀ ಸಿದ್ಧಮಲ್ಲ ಶಿವಾಚಾರ್ಯರ ಕಾಲದಲ್ಲಿ ಸುತ್ತೂರು ಧರ್ಮಸಿದ್ಧಿಯ ನೆಲೆವೀಡಾಗಿತ್ತು. ಈ ನೆಲವನ್ನು ಕಣ್ಣಾರೆ ನೋಡಬೇಕೆಂದು ತೋಂಟದ ಶ್ರೀ ಸಿದ್ಧಲಿಂಗೇಶ್ವರರು ನೂರೊಂದು ವಿರಕ್ತರೊಂದಿಗೆ ಸುತ್ತೂರಿಗೆ ಆಗಮಿಸಿದರು. ಅನೇಕ ದಿನಗಳವರೆಗೆ ಇವರೆಲ್ಲರೂ ಈ ಕ್ಷೇತ್ರದಲ್ಲಿ ನೆಲೆಸಿ ಅನುಷ್ಠಾನಗೊಳ್ಳುತ್ತಾರೆ. ಈ ಸಂದರ್ಭದಲ್ಲಿ ಅಧಿಕಾರದಲ್ಲಿದ್ದ ಸುತ್ತೂರು ಮಠದ ಶ್ರೀ ಸಿದ್ಧಮಲ್ಲ ಶಿವಾಚಾರ್ಯರು ಮಠದ ಅಧಿಕಾರವನ್ನು ಶ್ರೀ ಪರ್ವತೇಂದ್ರ ಶಿವಾಚಾರ್ಯರಿಗೆ ಒಪ್ಪಿಸಿ ತೋಂಟದ

ಶ್ರೀಸಿದ್ಧಲಿಂಗೇಶ್ವರರ ಜತೆಗೆ ಲೋಕೋದ್ಧಾರಕ್ಕೆ ಹೊರಡುತ್ತಾರೆ.

ಯೋಗ ಮತ್ತು ಶಿಕ್ಷಣ: ಶ್ರೀ ಪರ್ವತೇಂದ್ರ ಶಿವಾಚಾರ್ಯರು ಪವಾಡ ಪುರುಷರೆಂದೇ ಹೆಸರಾಗಿದ್ದರು. ಯೋಗಶಾಸ್ತ್ರದ ಅರಿವಿರುವವರಿಗೆ ಶ್ರೀ ಪರ್ವತೇಂದ್ರ ಶಿವಾಚಾರ್ಯರ ಹೆಸರು ಪರಿಚಯವಿರುತ್ತದೆ. ಇವರು ಜನಮನಸದಲ್ಲಿ ಉಳಿಯುವಂತೆ ಯೋಗದಲ್ಲಿ ಪ್ರಭುತ್ವ ಸಾಧಿಸಿದ್ದ ಸಿದ್ಧಿಪುರುಷರು ಇವರ ತರುವಾಯ ಅಧಿಕಾರಕ್ಕೆ ಬಂದು ೧೯೮೦ ರಿಂದ ೧೯೧೫ ರವರೆಗೆ ಆಡಳಿತ ನಡೆಸಿದ ಶ್ರೀ ಭಂಡಾರಿ ಬಸಪ್ಪ ಒಡೆಯರು ಗುರುಕುಲ ಶಿಕ್ಷಣವನ್ನು ಅಂದೇ ಪ್ರಾರಂಭಿಸಿ ಮಠದ ಶೈಕ್ಷಣಿಕ ಪ್ರಗತಿಗೆ ಬೀಜಾಂಕುರ ಮಾಡಿದರು. ಅಂದು ಬಿತ್ತಿದ ಶೈಕ್ಷಣಿಕ ಬೀಜ ಇಂದು ಹೆಮ್ಮರವಾಗಿ, ನಾಡಿನ ಲಕ್ಷೋಪಲಕ್ಷ ಜನರಿಗೆ ನೆರವಾಗಿರುವುದು ಅದ್ವಿತೀಯ ಸಾಧನೆಯಾಗಿದೆ.

ಜೀರ್ಣೋದ್ಧಾರದ ಕೆಲಸ: ಸುತ್ತೂರು ಮಠದ ಹತ್ತೊಂಬತ್ತನೆಯ ಗುರುಗಳಾದ ಜಗದ್ಗುರು ಶ್ರೀ ಮಹಾಂತ ದೇಶಿಕೇಂದ್ರ ಶಿವಾಚಾರ್ಯರ ಕಾಲದಲ್ಲಿ ಅಪಾರ ಭಕ್ತಸಂಪತ್ತನ್ನು ಸಂಪಾದಿಸಿತು. ಭಕ್ತರ ನೆರವು ಪಡೆದ ಸ್ವಾಮಿಗಳು ಹಿರಿಯ ಗುರುಗಳ ಗದ್ದುಗೆಗಳನ್ನು ನೂತನವಾಗಿ ಕಟ್ಟಿಸಿದರು. ಚೋಳರ ರಾಜರಾಜೇಂದ್ರನ ಕಾಲದಲ್ಲಿ ನಿರ್ಮಿಸಲ್ಪಟ್ಟಿದ್ದ ಮಠದ ಕಟ್ಟಡವನ್ನು ಜೀರ್ಣೋದ್ಧಾರ ಮಾಡಿಸಿದರು. ಇವರ ಕಾಲದಲ್ಲಿ ಶಿವಾನುಭವ ಕಾರ್ಯಕ್ರಮಗಳು ಬಹಳ ವೈಚಾರಿಕ ಹಾಗೂ ವ್ಯವಸ್ಥಿತವಾಗಿ ನಡೆಯತೊಡಗಿದವು. ಈ ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಗಮನಿಸಿದ ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರು ಶ್ರೀ ಮಹಾಂತ ದೇಶಿಕೇಂದ್ರ ಶಿವಾಚಾರ್ಯರನ್ನು ಅರಮನೆಗೆ ಆಹ್ವಾನಿಸಿ ಗೌರವಿಸಿದ್ದಲ್ಲದೆ, ಮಠದ ಭಕ್ತರಾಗಿ ಅನೇಕ ಕೊಡುಗೆ ನೀಡಿ ಮಠದ ಅಭಿವೃದ್ಧಿಗೆ ನೆರವಾಗಿದ್ದಾರೆ. ಈ ಎಲ್ಲಾ ಅವಕಾಶಗಳನ್ನು ಬಳಸಿಕೊಂಡ ಶ್ರೀ ಮಹಾಂತ ದೇಶಿಕೇಂದ್ರ ಸ್ವಾಮಿಗಳು ಜೀರ್ಣಗೊಂಡಿದ್ದ ಶಾಖಾಮಠಗಳನ್ನು ಜೀರ್ಣೋದ್ಧಾರ ಮಾಡಿದರು.

ಏಳುಕೋಟಿ ಪಂಚಾಕ್ಷರಿ ಮಹಾಮಂತ: ಇಪ್ಪತ್ತೆರಡನೆಯ ಜಗದ್ಗುರುಗಳಾಗಿ ಪಟ್ಟಾಧಿಕಾರ ವಹಿಸಿಕೊಂಡ ಶ್ರೀ ಪಟ್ಟದ ಶಿವರಾತ್ರೀಶ್ವರ ಸ್ವಾಮಿಗಳು ಭಕ್ತರಿಗೆ ಶಿವಪಂಚಾಕ್ಷರಿ ಮಂತ್ರವನ್ನು ಬೋಧಿಸುತ್ತ, ಜನಹಿತದ ಬಗ್ಗೆ ನೀಡುತ್ತಿದ್ದ ಉಪದೇಶ ಎಲ್ಲಾ ಕಾಲಮಾನಕ್ಕೂ ಅನ್ವಯಿಸುವಂಥವು. ಶ್ರೀ ಶಿವರಾತ್ರೀಶ್ವರ ಸ್ವಾಮಿಗಳು 'ಮಂತ್ರಪುರುಷರು' ಎಂದೇ ಹೆಸರಾಗಿದ್ದರು.

ಓಂ ಶಿವಾಯ ನಮ : ಓಂ ಶಿವಾಯ ನಮಃ ಓಂ
ಶಿವಾಯ ನಮಃ ಓಂ ನಮಃ ಶಿವಾಯ
ಓಂ ಶಿವಾಯ ನಮ : ಓಂ ಶಿವಾಯ ನಮಃ ಓಂ

ಈ ರೀತಿ ಏಳು ಕೋಟಿ ಪಂಚಾಕ್ಷರಿ ಮಾಹಾಮಂತ್ರವನ್ನು ಮುದ್ರಣಕ್ಕಿಂತಲೂ ಸುಂದರವಾಗಿ ಹಸ್ತಾಕ್ಷರಗಳಲ್ಲಿ ಬರೆದಿರುವುದು ಇವರ ಶ್ರದ್ಧೆಗೆ ಹಿಡಿದ ಕೈಗನ್ನಡಿ. ಶ್ರೀ ಪಟ್ಟದ ಶಿವರಾತ್ರೀಶ್ವರ ಸ್ವಾಮಿಗಳು'ಶಿವಮಂತ್ರ ಮಹಿಮೆ'ಎಂಬ ಗ್ರಂಥವನ್ನು ಬರೆದು ಸಾಹಿತ್ಯ ಕ್ಷೇತ್ರದಲ್ಲಿಯೂ ತಮ್ಮನ್ನು ಗುರುತಿಸಿಕೊಂಡಿದ್ದರು.

ಮತ್ತೊಮ್ಮೆ ಜೀರ್ಣೋದ್ಧಾರ: ಹತ್ತೊಂಬತ್ತನೆಯ ಜಗದ್ಗುರುಗಳ ಕಾಲದಲ್ಲಿ ಅಭಿವೃದ್ಧಿ ಕಂಡ ಮಠ ನಂತರದ ಆಡಳಿತದಲ್ಲಿ ಮಂದಗತಿ ಕಂಡು ಅಭಿವೃದ್ಧಿಯಲ್ಲಿ ಕುಂಠಿತಗೊಂಡಿತ್ತು. ಇಪ್ಪತ್ತೆರಡನೆಯ ಜಗದ್ಗುರುಗಳು ಅಧಿಕಾರಕ್ಕೆ ಬರುವ ಮುನ್ನ ಆಡಳಿತ ನಡೆಸಿದ ಜಗದ್ಗುರುಗಳು ಧರ್ಮಪ್ರಚಾರ ಕಾರ್ಯದಲ್ಲಿ ಎಲ್ಲರಿಗಿಂತ ಮಿಗಿಲಾದ ಕೆಲಸ ಮಾಡಿದರಾದರೂ, ಅಭಿವೃದ್ಧಿಯ ಕಡೆಗೆ ಅಷ್ಟು ಗಮನ ಕೊಟ್ಟಿರಲಿಲ್ಲ. ಇಪ್ಪತ್ತೆರಡನೆಯ ಜಗದ್ಗುರುಗಳಾದ ಪಟ್ಟದ ಶ್ರೀ ಶಿವರಾತ್ರೀಶ್ವರ ಸ್ವಾಮಿಗಳು ತಮ್ಮ ಹದಿನಾರನೆಯ ವಯಸ್ಸಿನಲ್ಲಿ ಪೀಠಾರೋಹಣ ಮಾಡಿದರು. ಚಿಕ್ಕವಯಸ್ಸಿನಲ್ಲಿ ಧಾರ್ಮಿಕ ವಿಚಾರ ಹಾಗೂ ಆಡಳಿತ ವಿಚಾರದ ಬಗ್ಗೆ ಸಮಾನ ಸ್ಥಾನಕೊಟ್ಟು, ಧರ್ಮ ಮತ್ತು ಪೀಠದ ಉದ್ಧಾರವನ್ನು ಮುನ್ನಡೆಸಿದರು. ಮಠ ಮತ್ತು ಸುತ್ತೂರಿನ ಮೂಲ ದೇವರಾದ ಶ್ರೀ ಮೂಲಸ್ಥಾನೇಶ್ವರ ದೇವಾಲಯವು ತುಂಬ ಶಿಥಿಲವಾಗಿತ್ತು. ರಾಜೇಂದ್ರ ಚೋಳನು ಸಾವಿರ ವರ್ಷಗಳ ಹಿಂದೆ ಕಟ್ಟಿಸಿದ ಈ ದೇವಾಲಯದ ಕಲ್ಲಿನ ಕಟ್ಟಡ ದುಸ್ಥಿತಿಯನ್ನು ಕಂಡಿತ್ತು. ಇದನ್ನು ನೋಡಿದ ಶ್ರೀಪಟ್ಟದ ಶಿವರಾತ್ರೀಶ್ವರರು ಪೀಠದ ಹಿಂದಿನ ವೈಭವವನ್ನು ನೆನಪಿನಲ್ಲಿಟ್ಟುಕೊಂಡು ಪೀಠದ ಜೀರ್ಣೋದ್ಧಾರವನ್ನು ಆಮೂಲಾಗ್ರವಾಗಿ ಬದಲಾಯಿಸಿದರು. ಪಟ್ಟದ ಶ್ರೀ ಶಿವರಾತ್ರೀಶ್ವರ ಸ್ವಾಮಿಗಳ ಕ್ರಿಯಾಶೀಲ ಗುಣಗಳು, ಕಾಯಕನಿಷ್ಠೆ

ಹಾಗು ಆಡಳಿತದಲ್ಲಿದ್ದ ದಕ್ಷತೆಯಿಂದ ಎರಡು ವರ್ಷಗಳಲ್ಲಿ ಶಿಥಿಲಗೊಂಡಿದ್ದ ಸುತ್ತೂರಿನ ಮಠಕ್ಕೆ ಮತ್ತೆ ಜೀವಕಳೆ ಬಂದಿತು.

ಶ್ರೀ ಪಟ್ಟದ ಶಿವರಾತ್ರೀಶ್ವರರು, ಪೀಠಕ್ಕೆ ಸಂಬಂಧಿಸಿದ ಅನೇಕ ಶಿಲಾಶಾಸನಗಳನ್ನು ಪತ್ತೆ ಮಾಡಿ ಮಠದ ಮುಂದೆ ಸಾಲುಸಾಲಾಗಿ ಜೋಡಿಸಿದರು. ಅಲ್ಲದೆ ಇವುಗಳನ್ನು ತಜ್ಞರಿಂದ ಸಂಶೋಧಿಸಿ ನಂತರ ಪೀಠದ ಹಳೆಯ ಕಾಗದ ಪತ್ರಗಳನ್ನೆಲ್ಲ ಪರಿಶೋಧಿಸಿ, ವಿಷಯಗಳಿಗೆ ಅನುಗುಣವಾಗಿ ವಿಂಗಡಿಸಿ ಕಟ್ಟುಗಳನ್ನು ಮಾಡಿಟ್ಟಿರುವುದು ಗುರುಗಳ ಸಂಶೋಧನಾತ್ಮಕ ಗುಣ ಹಾಗೂ ದೂರ ದೃಷ್ಟಿಯನ್ನು ಅಭಿವ್ಯಕ್ತಗೊಳಿಸುತ್ತದೆ. ಸುತ್ತೂರು ಮಠದ ಪರಂಪರೆಯಲ್ಲಿ ಬಂದ ಪೀಠಾಧೀಶರ ಜೀವನ ಚರಿತ್ರೆಯನ್ನು ಬರೆಸಿದ್ದು ಇವರ ಇತಿಹಾಸ ಪ್ರಜ್ಞೆಗೆ ಉದಾಹರಣೆಯಾಗಿದೆ.

ಮಹಾದಾಸೋಹಿ ಶ್ರೀ ರಾಜೇಂದ್ರರ ಆಗಮನ: ೧೯೧೬ರ ಆಗಸ್ಟ್ ಇಪ್ಪತ್ತೊಂಬತ್ತರಂದು ಶ್ರೀಮತಿ ಮರಮ್ಮ ಮತ್ತು ಶ್ರೀ ಮಲ್ಲಿಕಾರ್ಜುನದೇವರ ಪುತ್ರರಾಗಿ ಜನಿಸಿದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು, ಹುಟ್ಟಿದಾಗಿನಿಂದ ಮಠದ ವಾತಾ ವರಣದಲ್ಲಿ ಸಂಸ್ಕಾರ ಪಡೆದು ತಮ್ಮ ಆಟಪಾಠದ ಜೊತೆಗೆ ದೈವಭಕ್ತಿಯನ್ನು ಮೈಗೂಡಿಸಿಕೊಂಡು ಬೆಳೆಯತೊಡಗಿ ದರು. ಶಿವರಾತ್ರೀಶ್ವರ ಎಂಬ ಹುಟ್ಟು ಹೆಸರಿನೊಂದಿಗೆ ಬೆಳೆಯತೊಡಗಿದ ಇವರು ಹನ್ನೆರಡನೆಯ ವರ್ಷಕ್ಕೆ ಬರುವ ವೇಳೆಗೆ ಸುತ್ತೂರು ಪೀಠಾರೋಹಣ ಮಾಡಿಸಲು ಭಕ್ತರು ಹಾಗೂ ಶಾಖಾಮಠಗಳ ಮಠಾಧಿಪತಿಗಳು ನಿರ್ಧರಿಸಿದ್ದರು. ಈ ನಿರ್ಧಾರ ೧೯೨೮ ರ ಫೆಬ್ರವರಿ ಇಪ್ಪತ್ನಾಲ್ಕರ ಶುಭಮುಹೂರ್ತದಲ್ಲಿ ಕೈಗೂಡಿ ಅತ್ಯಂತ ವಿಜೃಂಭಣೆಯಿಂದ ವೀರಸಿಂಹಾಸನದಲ್ಲಿ ಆರೋಹಣ ಮಾಡಿಸಿ, ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳೆಂದು ನೂತನ ಅಭಿದಾನವಿತ್ತರು.

ನೂತನ ಪಟ್ಟಾಧ್ಯಕ್ಷರಾದ ಶ್ರೀ ಶಿವರಾತ್ರೀಶ್ವರ ರಾಜೇಂದ್ರ ಸ್ವಾಮಿಗಳು ಸಂಸ್ಕೃತ ಪಾರಂಗತರಾಗಿರಬೇಕೆಂಬ ಹಂಬಲ ಹಿರಿಯ ಶ್ರೀಗಳಲ್ಲಿತ್ತು. ಇದಕ್ಕಾಗಿ ಮೈಸೂರಿನಲ್ಲಿ ವಸತಿ ಮತ್ತು ಪೂಜಾ ಸೌಕರ್ಯಗಳಿಗಾಗಿ ಸೂಕ್ತ ವ್ಯವಸ್ಥೆ ಮಾಡಿಸಿದರು. ಕಿರಿಯ ಗುರುಗಳು ಈ ವ್ಯ ವಸ್ಥೆಯಲ್ಲಿ ಎರಡು ವರ್ಷದ ತಮ್ಮ ಸಂಸ್ಕೃತ ವಿದ್ಯಾಭ್ಯಾಸವನ್ನು ಮುಗಿಸಿದರು. ಈ ಸಂದರ್ಭದಲ್ಲಿ ಹಿರಿಯ ಗುರುಗಳ ಶಿಷ್ಯರಾಗಿದ್ದ ಕ್ಯಾತನಹಳ್ಳಿಯ ಸಾಹುಕಾರ ಸಿದ್ದಣ್ಣನವರು ಮುಂದೆ ಬಂದು ವೀರಶೈವರಿಗೆ ಸಂಸ್ಕೃತ ಹಾಗೂ ವೇದಾಧ್ಯಯನಕ್ಕಾಗಿ ಮೈಸೂರಿನಲ್ಲಿ ಒಂದು ಪಾಠಶಾಲೆಯ ಆವಶ್ಯಕತೆ ಇದೆ ಎಂದು ಅರಿತು ಇದಕ್ಕೆ ಬೇಕಾದ ಹಣ ಮತ್ತು ಜಾಗವನ್ನು ಕೊಡಲು ನಿರ್ಧರಿಸಿದರು. ಸುತ್ತೂರು ಮಠದ ವತಿಯಿಂದ ಸಂಸ್ಕೃತ ಪಾಠಶಾಲೆ ಪ್ರಾರಂಭವಾದರೆ ಒಳ್ಳೆಯದೆಂದು, ಹಿರಿಯ ಗುರುಗಳಾದ ಶ್ರೀ ಪಟ್ಟದ ಶಿವರಾತ್ರೀಶ್ವರ ಸ್ವಾಮಿಗಳಲ್ಲಿ ಬಿನ್ನವಿಸಿಕೊಂಡರು. ಹಿರಿಯ ಗುರುಗಳು ಈ ಮಾತಿನಿಂದ ಸಂತೋಷಗೊಂಡು ಕ್ಯಾತನಹಳ್ಳಿ ಸಾಹುಕಾರ ಸಿದ್ದಣ್ಣನವರ ಹೆಸರಿನಲ್ಲಿ ೧೯೩೩ರಲ್ಲಿ ಸಂಸ್ಕೃತ ಮತ್ತು ವೇದ ಪಾಠಶಾಲೆಯನ್ನು ಪ್ರಾರಂಭಿಸಿದರು. ಶ್ರೀ ಚಿಕ್ಕಸ್ವಾಮಿಗಳಿಗೆ ಸಂಸ್ಕೃತ ಹಾಗೂ ವೇದಾಧ್ಯಯನ ಕಲಿಯುವ ಕೇಂದ್ರವಾಗಿ ನೂರಾರು ವಿದ್ಯಾರ್ಥಿಗಳಿಗೆ ಉಚಿತ ವಸತಿ ಏರ್ಪಟ್ಟಿತು. ಈ ವ್ಯವಸ್ಥೆ ದೊಡ್ಡದಾಗುತ್ತಾ ಹೋದಂತೆ ಕಿರಿಯ ಗುರುಗಳಿಗೆ ಪೂಜೆ ಪುನಸ್ಕಾರ ಹಾಗೂ ಧ್ಯಾನಗಳಿಗೆ ತೊಂದರೆಯಾಗದಿರಲಿ, ಎಂದು ಪಾಠಶಾಲೆಯ ಹತ್ತಿರವೆ ಒಂದು ಬಾಡಿಗೆ ಮನೆಯನ್ನು ನಿಗದಿಗೊಳಿಸಲಾಯಿತು.

ಕಾಶಿಯಲ್ಲಿ ಕಲಿಯಬೇಕೆಂಬ ಹಂಬಲದಿಂದ ಯಾರಿಗೂ ಹೇಳದೆ ತಮ್ಮ ಹದಿನಾರನೆಯ ವಯಸ್ಸಿನಲ್ಲಿ ಕಾಶಿಗೆ ಒಂಟಿ ಯಾಗಿ ಪ್ರಯಾಣ ಬೆಳೆಸಿದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು, ಕಾಶಿಯಲ್ಲಿದ್ದ ಮೈಸೂರಿನ ಪಂಚಗವಿಮಠದ ಶ್ರೀ ಗೌರಿ ಶಂಕರ ಸ್ವಾಮಿಗಳಲ್ಲಿ ಆಶ್ರಯ ಪಡೆದರು. ಇತ್ತ ಮೈಸೂರಿನಲ್ಲಿ ಕಿರಿಯ ಸ್ವಾಮಿಗಳು ಕಾಣೆಯಾದ ಬಗ್ಗೆ ದಿಗಿಲುಗೊಂಡ ಹಿರಿಯ ಸ್ವಾಮಿಗಳು ಎಲ್ಲಾ ಕಡೆ ಹುಡುಕಿಸುವ ಪ್ರಯತ್ನ ಮಾಡಿದರು. ಆದರೆ ಎಲ್ಲಿಯೂ ಸಿಗದಿದ್ದಾಗ ಕಾಶಿಗೆ ಹೋದ ಸುಳಿವು ಸಿಕ್ಕಿತು. ತಕ್ಷಣವೆ ಹಿರಿಯ ಶ್ರೀಗಳು ತಾವೇ ಕಾಶಿಗೆ ಪ್ರಯಾಣಿಸಿ ಶ್ರೀ ಗೌರಿಶಂಕರ ಸ್ವಾಮಿಗಳ ಸಾನ್ನಿಧ್ಯದಲ್ಲಿದ್ದುದನ್ನು ನೋಡಿ ಸಂತೋಷಗೊಂಡರು.

ವಿದ್ಯಾರ್ಥಿನಿಲಯ ಪ್ರಾರಂಭ: ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ವಿದ್ಯಾರ್ಥಿಗಳಾಗಿದ್ದಾಗಲೇ ದೊಡ್ಡ ಗುರುಗಳ ಅನುಮತಿ ಪಡೆಯದೆ ವಿದ್ಯಾರ್ಥಿನಿಲಯ ಪ್ರಾರಂಭಿಸಿದ್ದು ಒಂದು ಪವಾಡವೇ ಆಗಿತ್ತು. ಅನಧಿಕೃತವಾಗಿ ಪ್ರಾರಂಭಗೊಂಡ ವಿದ್ಯಾರ್ಥಿನಿಲಯದ ಉದ್ಘಾಟನೆಗೆ ದಿನವನ್ನು ಗೊತ್ತುಮಾಡಿ ಹಿರಿಯ ಗುರುಗಳ ಒಪ್ಪಿಗೆಗೆ ವಿದ್ಯಾರ್ಥಿ ಮುಖಂಡರನ್ನು

ಕಳಿಸಿಕೊಟ್ಟರು. ವಿದ್ಯಾರ್ಥಿ ಮುಖಂಡರು ಹಿರಿಯ ಗುರುಗಳಲ್ಲಿಗೆ ಬಂದು 'ವಿದ್ಯಾರ್ಥಿಗಳೇ ನಡೆಸುತ್ತಿರುವ ವಿದ್ಯಾರ್ಥಿನಿಲಯಕ್ಕೆ ಸುತ್ತೂರು ಮಠದ ಆದಿಗುರುಗಳ ಹೆಸರನ್ನು ಇಡಬೇಕೆಂದು ನಿರ್ಧರಿಸಿದ್ದೇವೆ, ತಾವು ಒಪ್ಪಿಗೆ ಕೊಡಬೇಕು' ಎಂದು ಬಿನ್ನವಿಸಿಕೊಂಡರು. ಆಗ ಗುರುಗಳು 'ನಮ್ಮ ಗುರುಗಳ ಹೆಸರನ್ನಿಡಲು ಬಯಸಿದ್ದೀರಿ, ಎಂದ ಮೇಲೆ ಉದ್ಘಾಟನೆಯನ್ನು ನಾವೇಕೆ ನಡೆಸಬಾರದು 'ಎಂದು ಸಮ್ಮತಿ ನೀಡಿ ಆಶೀರ್ವದಿಸಿ ಕಳಿಸಿಕೊಟ್ಟರು. ವಿದ್ಯಾರ್ಥಿನಿಲಯದ ಉದ್ಘಾಟನೆ ಮಾಡಿದ ವಿಷಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದನ್ನು ಓದಿದ ಹಿರಿಯ ಗುರುಗಳು ಉತ್ತೇಜಿತರಾಗಿ, ಅಂದಿನಿಂದ ಹದಿನೈದು ಜನ ವಿದ್ಯಾರ್ಥಿಗಳಿಗೆ ಬೇಕಾಗುವಷ್ಟು ದವಸ ಧಾನ್ಯಗಳನ್ನು ಸುತ್ತೂರಿನಿಂದ ಕಳುಹಿಸಿ ಕೊಡತೊಡಗಿದರು.

ಶ್ರೀ ಶಿವರಾತ್ರೀಶ್ವರ ವಿದ್ಯಾರ್ಥಿನಿಲಯದಲ್ಲಿ ಪ್ರತಿ ಭಾನುವಾರ ವಿದ್ಯಾರ್ಥಿಗಳು ಏರ್ಪಡಿಸುತ್ತಿದ್ದ ಸಾಂಸ್ಕೃತಿಕ ಕಾರ್ಯ ಕ್ರಮಗಳು ವಾರ್ತಾಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದುದು, ಹಿರಿಯ ಗುರುಗಳು ಇನ್ನೂ ಹೆಚ್ಚಿನ ಔದಾರ್ಯ ತೋರಿಸಲು ಕಾರಣವಾಯಿತು. ಫಲವಾಗಿ೧೯೪೩ ರ ಏಪ್ರಿಲ್ ಐದರಂದು ಮೈಸೂರಿನ ವಾಣಿವಿಲಾಸ ರಸ್ತೆಯಲ್ಲಿದ್ದ ಮೂರು ಅಂತಸ್ತಿನ ಕಟ್ಟಡವನ್ನು ಖರೀದಿಸಿ ವಿದ್ಯಾರ್ಥಿನಿಲಯಕ್ಕೆ ತಕ್ಕ ವ್ಯವಸ್ಥೆ ಮಾಡಿಸಿದರು. ಈ ಕಾರ್ಯ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಅಭಿಲಾಷೆಯೊಂದಿಗೆ ಆಲದ ಮರದಂತೆ ಬೆಳೆದು ಇದರ ಬಿಳಿಲುಗಳು ಎಂಬಂತೆ, ಪ್ರತಿ ತಾಲ್ಲೂಕಿಗೊಂದು ವಿದ್ಯಾರ್ಥಿನಿಲಯಗಳು ಪ್ರಾರಂಭಗೊಂಡು, ಅನೇಕ ಬಡಮಕ್ಕಳ ಕಲಿಕೆಗೆ ನೆರವಾಗಿವೆ. ಇಂದು ಜಾತಿಮತದ ಬೇಧಭಾವವಿಲ್ಲದೆ ನಾಡು ಹಾಗೂ ಹೊರನಾಡಿನಲ್ಲಿ ಒಟ್ಟು ಮೂವತ್ತಕ್ಕೂ ಹೆಚ್ಚು ವಿದ್ಯಾರ್ಥಿನಿಲಯಗಳು ನಡೆಯುತ್ತಿದ್ದು ಸಾವಿರಾರು ವಿದ್ಯಾರ್ಥಿಗಳಿಗೆ ಸೌಕರ್ಯ ಕಲ್ಪಿಸಿಕೊಟ್ಟಿವೆ.

ಗುರುಕುಲ ಸ್ಥಾಪನೆ: ಮಠದ ಅಧಿಕಾರ ವಹಿಸಿಕೊಳ್ಳುವ ಗುರುಗಳಿಗೆ ಜ್ಞಾನದ ಅರಿವು ಬೇಕಾಗುತ್ತದೆ ಎಂದು ಅರಿತು ಈ ಕೊರತೆ ನೀಗಿಸಲು ಶ್ರೀ ಶಿವಾರಾತ್ರಿ ರಾಜೇಂದ್ರ ಸ್ವಾಮಿಗಳು ೧೯೫೨ ರಲ್ಲಿ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರರ ಹೆಸರಿನಲ್ಲಿ ಗುರುಕುಲವನ್ನು ಪ್ರಾರಂಭಿಸಿದರು. ಮಠಗಳ ಅಧಿಪತಿಗಳಾಗಲಿರುವ ವರಿದೇವರುಗಳು ವೇದ, ಆಗಮ, ಜ್ಯೋತಿಷ್ಯ, ವಚನಶಾಸ್ತ್ರ ಹಾಗು ವೀರಶೈವ ಸಿದ್ಧಾಂತವನ್ನು ಆಧ್ಯಯನ ಮಾಡಲು ಅವಕಾಶ ಕಲ್ಪಿಸಲಾಯಿತು. ಅಲ್ಲದೆ ಈ ಸಂಸ್ಥೆ ಶಾಶ್ವತವಾಗಿ ನಡೆಯುವಂತೆ ಸ್ಥಿರದತ್ತಿಯನ್ನು ಸ್ಥಾಪಿಸಿರುವುದು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ದೂರದೃಷ್ಟಿಯ ಚಿಂತನೆಗೆ ಒಂದು ಉದಾಹರಣೆಯಾಗಿದೆ.

ವಿದ್ಯಾಪೀಠ: ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠವು ಸಣ್ಣದಾಗಿ ಪ್ರಾರಂಭವಾಗಿ ಇಂದು ತನ್ನ ವಿಸ್ತಾರವನ್ನು ಅಗಾಧ ಪ್ರಮಾಣದಲ್ಲಿ ವಿಸ್ತರಿಸಿಕೊಂಡಿದೆ. ತಾಂತ್ರಿಕ ಶಿಕ್ಷಣ ನೀಡುವ ದೃಷ್ಟಿಯಿಂದ ೧೨೦ ಎಕರೆ ಪ್ರದೇಶದಲ್ಲಿ ೧೯೬೨ರಲ್ಲಿ ಪ್ರಾರಂಭಗೊಂಡ ಶ್ರೀ ಜಯಚಾಮರಾಜೇಂದ್ರ ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಜಗದ್ಗುರು ಶ್ರೀ ಶಿವರಾತ್ರೀಶ್ವರ ವೈದ್ಯಕೀಯ ಕಾಲೇಜು, ದಂತವೈದ್ಯಕೀಯ ಕಾಲೇಜುಗಳು ನಾಡಿನಲ್ಲಿಯೇ ಹೆಸರಾಂತ ಸಂಸ್ಥೆಗಳಾಗಿ ಬೆಳೆದಿವೆ.

ಕಾಲೇಜುಗಳು

೧. ಜೆ.ಎಸ್.ಎಸ್. ಕಲಾ, ವಿಜ್ಞಾನ, ವಾಣಿಜ್ಯ ಮತ್ತು ವ್ಯವಹಾರ ಆಡಳಿತ ಕಾಲೇಜು ರಾಮಾನುಜ ರಸ್ತೆ, ಮೈಸೂರು
೨. ಜೆ.ಎಸ್.ಎಸ್. ಕಲಾ, ವಿಜ್ಞಾನ, ವಾಣಿಜ್ಯ ಕಾಲೇಜು, ಚಾಮರಾಜನಗರ
೩. ಜೆ.ಎಸ್.ಎಸ್. ಕಲಾ, ವಿಜ್ಞಾನ, ವಾಣಿಜ್ಯ ಕಾಲೇಜು, ನಂಜನಗೂಡು
೪. ಜೆ.ಎಸ್.ಎಸ್. ಮಹಿಳೆಯರ ಕಾಲೇಜು, ಸರಸ್ವತಿಪುರಂ, ಮೈಸೂರು
೫. ಜೆ.ಎಸ್.ಎಸ್. ದೈಹಿಕ ಶಿಕ್ಷಣ ಕಾಲೇಜು, ಚಾಮುಂಡಿಬೆಟ್ಟದ ಹಂತದ ದಾರಿ, ಮೈಸೂರು
೬. ಜೆ.ಎಸ್.ಎಸ್ ಕಾನೂನು ಕಾಲೇಜು, ಮೈಸೂರು

ತಾಂತ್ರಿಕ ಶಿಕ್ಷಣ ಸಂಸ್ಥೆಗಳು

೧. ಶ್ರೀ ಜಯಚಾಮರಾಜೇಂದ್ರ ತಾಂತ್ರಿಕ ಶಿಕ್ಷಣ ಕಾಲೇಜು, ಮೈಸೂರು

೨. ಶ್ರೀ ಜೆ.ಎಸ್.ಎಸ್ ತಾಂತ್ರಿಕ ಮಹಾವಿದ್ಯಾಲಯ, ಬೆಂಗಳೂರು
೩. ಜೆ.ಎಸ್.ಎಸ್ ತಾಂತ್ರಿಕ ಶಿಕ್ಷಣ ಅಕಾಡೆಮಿ (ತಾಂತ್ರಿಕ ಕಾಲೇಜು), ನೊಯಿಡಾ ಉತ್ತರಪ್ರದೇಶ
೪. ಕಂಪ್ಯೂಟರ್ ಪ್ರೋಗ್ರಾಂನಲ್ಲಿ ಸ್ನಾತಕೋತ್ತರ ಶಿಕ್ಷಣ (ಡಿಪ್ಲೊಮ) ಕಾಲೇಜು, ಮೈಸೂರು
೫. ಗಣಿತ ಮತ್ತು ಎಲಕ್ಟ್ರಾನಿಕ್ಸ್ ವಿಭಾಗದಲ್ಲಿ ಪಿಎಚ್.ಡಿ ಗಳಿಸಲು ಅನುಕೂಲವಾಗುವ ಸಂಶೋಧನಾ ಕೇಂದ್ರ, ಮೈಸೂರು
೬. ಜೆ.ಎಸ್.ಎಸ್. ಮಹಿಳೆಯರ ಪಾಲಿಟೆಕ್ನಿಕ್, ಮೈಸೂರು
೭. ಜೆ.ಎಸ್.ಎಸ್. ಕೈಗಾರಿಕಾ ತರಬೇತಿ ಸಂಸ್ಥೆ, ನಂಜನಗೂಡು
೮. ಜೆ.ಎಸ್.ಎಸ್ ಕೈಗಾರಿಕಾ ತರಬೇತಿ ಸಂಸ್ಥೆ, ಚಾಮರಾಜನಗರ

ಶಿಕ್ಷಕರ ಪ್ರಶಿಕ್ಷಣ ಸಂಸ್ಥೆಗಳು

೧. ಜೆ.ಎಸ್.ಎಸ್ ಪ್ರಶಿಕ್ಷಣ ಸಂಸ್ಥೆ ಪುರಷರ ವಿಭಾಗ, ಚಾಮುಂಡಿ ಬೆಟ್ಟದ ತಪ್ಪಲು, ಮೈಸೂರು
೨. ಜೆ.ಎಸ್.ಎಸ್ ಪ್ರಶಿಕ್ಷಣ ಸಂಸ್ಥೆ, ಮಹಿಳಾ ವಿಭಾಗ, ಸರಸ್ವತಿಪುರಂ, ಮೈಸೂರು
೩. ಜೆ.ಎಸ್.ಎಸ್ ನರ್ಸರಿ ಶಿಕ್ಷಕರ ತರಬೇತಿ ಕೇಂದ್ರ, ದೊಡ್ಡಕಾಡನೂರು, ಹಾಸನ ಜಿಲ್ಲೆ

ಶಾಲೆಗಳು

೧. ಐವತ್ತೆರಡು ಪ್ರೌಢಶಾಲೆಗಳು
೨. ಹದಿನಾರು ಪ್ರಾಥಮಿಕ ಶಾಲೆಗಳು
೩. ಎರಡು ಬುದ್ಧಿಮಾಂದ್ಯರ ಪಾಠಶಾಲೆಗಳು
೪. ಸಿ.ಬಿ.ಎಸ್.ಇ. ಪಠ್ಯಕ್ರಮ ಬೋಧಿಸುವ ಆರು ಪಬ್ಲಿಕ್ ಶಾಲೆಗಳು
೫. ಹತ್ತು ಸಂಸ್ಕೃತ ಪಾಠಶಾಲೆಗಳು
೬. ಒಂದು ಆಗಮ ಪಾಠಶಾಲೆ
೭. ಎರಡು ವೇದ ಮತ್ತು ಜ್ಯೋತಿಷ್ಯ ಪಾಠಶಾಲೆಗಳು
೮. ಎರಡು ಹಿಂದಿ ತರಗತಿಗಳು

ಆರೋಗ್ಯ ಶಿಕ್ಷಣ

೧. ಜೆ.ಎಸ್.ಎಸ್. ವೈದ್ಯಕೀಯ ಕಾಲೇಜು, ಶ್ರೀ ಶಿವರಾತ್ರೀಶ್ವರ ನಗರ, ಮೈಸೂರು
೨. ಜೆ.ಎಸ್.ಎಸ್. ದಂತ ವಿಜ್ಞಾನ ಕಾಲೇಜು, ಶ್ರೀ ಶಿವರಾತ್ರೀಶ್ವರ ನಗರ, ಮೈಸೂರು
೩. ಜೆ.ಎಸ್.ಎಸ್. ಆಯುರ್ವೇದ ಕಾಲೇಜು, ಮೈಸೂರು
೪. ಜೆ.ಎಸ್.ಎಸ್. ಪ್ರಕೃತಿ ಚಿಕಿತ್ಸಾ ಮತ್ತು ಯೋಗ ವಿಜ್ಞಾನದ ಕಾಲೇಜು, ಉದಕಮಂಡಲ
೫. ಜೆ.ಎಸ್.ಎಸ್. ಫಾರ್ಮಸಿ ಕಾಲೇಜು, ರಾಮಾನುಜ ರಸ್ತೆ, ಮೈಸೂರು
೬. ಜೆ.ಎಸ್.ಎಸ್. ಫಾರ್ಮಸಿ ಕಾಲೇಜು, ರಾಕ್‌ಲ್ಯಾಂಡ್ಸ್, ಉದಕಮಂಡಲ
೭. ಜೆ.ಎಸ್.ಎಸ್. ನರ್ಸಿಂಗ್ ಕಾಲೇಜು, ಮೈಸೂರು

ಇತರೆ ಶಿಕ್ಷಣ ಸಂಸ್ಥೆಗಳು

೧. ಜೆ.ಎಸ್.ಎಸ್. ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಸಂಸ್ಥೆ, ಬೆಂಗಳೂರು
೨. ಜಶಿರಾ ಶಿಕ್ಷಣ ಸಂಶೋಧನಾ ಮತ್ತು ತರಬೇತಿ ಕೇಂದ್ರ, ಮೈಸೂರು
೩. ಜೆ.ಎಸ್.ಎಸ್. ಪ್ರತಿಷ್ಠಾನ, ನವದೆಹಲಿ
೪. ಜೆ.ಎಸ್.ಎಸ್. ಶ್ರಮಿಕ ವಿದ್ಯಾಪೀಠ, ಮೈಸೂರು
೫. ಜೆ.ಎಸ್.ಎಸ್. ಕೃಷಿ ವಿಜ್ಞಾನ ತರಬೇತಿ ಕೇಂದ್ರ, ಸುತ್ತೂರು

೭. ಕರ್ನಾಟಕ ಮುಕ್ತ ಶಾಲೆ, ಮೈಸೂರು
೭. ಮೂರು ನಿರಾಶ್ರಿತರ ವಸತಿ ಗೃಹಗಳು, ಮೈಸೂರು
೮. ಇಪ್ಪತ್ತೊಮ್ಮರು ವಿದ್ಯಾರ್ಥಿ ನಿಲಯಗಳು, (ರಾಜ್ಯದ ವಿವಿಧೆಡೆ)
೯. ಹದಿನಾಲ್ಕು ಅನಾಥಾಲಯಗಳು, (ರಾಜ್ಯದ ವಿವಿಧೆಡೆ)
೧೦. ಆರು ಜನರಲ್ ಹಾಸ್ಟೆಲ್‌ಗಳು, (ರಾಜ್ಯದ ವಿವಿಧೆಡೆ)
೧೧. ಒಂದು ಅಂಗವಿಕಲ ವಿದ್ಯಾರ್ಥಿ ನಿಲಯ, ಮೈಸೂರು
೧೨. ಏಳು ಶಿಶುವಿಹಾರಗಳು
೧೩. ಹದಿಮೂರು ನರ್ಸರಿ ಶಾಲೆಗಳು
೧೪. ಜೆ.ಎಸ್.ಎಸ್. ಸಲಹಾ ಕೇಂದ್ರ

ಈ ರೀತಿ ನೂರಾರು ವಿವಿಧ ವಿದ್ಯಾಸಂಸ್ಥೆಗಳನ್ನು ಸುತ್ತೂರು ಮಠವು ನಡಸಿಕೊಂಡು ಬರುತ್ತಿದೆ.

ಶ್ರೀ ಜಯಚಾಮರಾಜೇಂದ್ರ ಕಾಲೇಜ್ ಆಫ್ ಇಂಜಿನಿಯರಿಂಗ್ ಸಂಸ್ಥೆಯಡಿಯಲ್ಲಿ ಸಂಶೋಧನಾತ್ಮಕ ಬರವಣಿಗೆಗಳಿಗೆ ಪಿಎಚ್.ಡಿ. ಪದವಿ ನೀಡಿ ಪ್ರೋತ್ಸಾಹಿಸಲು ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಒಂದು ಲಕ್ಷರೂಪಾಯಿಗಳ ದತ್ತಿಯನ್ನು ಸ್ಥಾಪಿಸಿದ್ದಾರೆ. ಈ ಸಂಸ್ಥೆಯು ಒಂಬತ್ತು ವಿಭಾಗಗಳಲ್ಲಿ ಸ್ನಾತಕೋತ್ತರ ತರಗತಿಗಳನ್ನು ನಡೆಸುತ್ತಿದೆ. ವಿಜ್ಞಾನ ಮತ್ತು ಕೈಗಾರಿಕೋದ್ಯಮಿಗಳ ತರಬೇತಿ ಕೇಂದ್ರವನ್ನು ಸ್ಥಾಪಿಸಿದ್ದು, ಸ್ವಾವಲಂಬಿಗಳಾಗಿ ಔದ್ಯಮಿಕ ಕ್ಷೇತ್ರದಲ್ಲಿ ಆಸಕ್ತಿಯಿರುವ ತರುಣ ಜನಾಂಗಕ್ಕೆ ತರಬೇತಿ ಮತ್ತು ಮಾರ್ಗದರ್ಶನ ನೀಡಿ ಸಹಾಯ ಸೌಲಭ್ಯಗಳನ್ನು ಕಲ್ಪಿಸುವುದು ಇದರ ಮುಖ್ಯ ಉದ್ದೇಶ ವಾಗಿದೆ. ಹೊರದೇಶಗಳಲ್ಲಿ ನಡೆಯುತ್ತಿರುವ ಇತರ ತರಬೇತಿ ಕೇಂದ್ರವನ್ನು ಮಾದರಿಯಾಗಿಟ್ಟುಕೊಂಡು ಪ್ರಾರಂಭಿಸಲಾದ ಇಂತಹ ಕೇಂದ್ರಗಳು ನಿರುದ್ಯೋಗಿಗಳಿಗೆ ಆಶಾಕಿರಣವಾಗಿವೆ.

ಜೆ.ಎಸ್.ಎಸ್ ಆಸ್ಪತೆ: ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ಜೆ.ಎಸ್.ಎಸ್ ಆಸ್ಪತ್ರೆಯು ಸಮಾಜದ ಬಡವರ್ಗದ ಜನತೆಗೆ ನೆರವಾಗಿದ್ದು ಉತ್ತಮ ವೈದ್ಯಕೀಯ ಸೇವೆಯನ್ನು ನೀಡುತ್ತಾ ಬಂದಿದೆ. ಇಲ್ಲಿ ಮೆಡಿಕಲ್ ಸರ್ವೀಸ್ ಟ್ರಸ್ಟ್‌ನ್ನು ಸ್ಥಾಪಿಸಿ ೧೨೦೦ ಹಾಸಿಗೆಗಳುಳ್ಳ ಬೃಹತ್ ಆಸ್ಪತ್ರೆಯನ್ನಾಗಿ ರೂಪಿಸಿರುವುದಲ್ಲದೆ ಜೆ.ಎಸ್.ಎಸ್ ಮೆಡಿಕಲ್ ಕಾಲೇಜಿನ ಬೋಧನಾ ಆಸ್ಪತ್ರೆಯಾಗಿ ಬಳಕೆ ಮಾಡಿಕೊಳ್ಳುತ್ತಾ ದಿನನಿತ್ಯ ಆರುನೂರು ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಈ ಆಸ್ಪತ್ರೆಯಲ್ಲಿ ಕುಷ್ಟ ರೋಗ ನಿರ್ಮೂಲನ ಕೇಂದ್ರವನ್ನು ಸ್ಥಾಪಿಸಲಾಗಿದ್ದು ಗ್ರಾಮಾಂತರ ಪ್ರದೇಶಗಳಲ್ಲಿ ಕುಷ್ಟರೋಗ ನಿರ್ಮೂಲನೆಗೆ ಶ್ರಮಿಸುತ್ತಿದೆ.

ಶರಣಸಾಹಿತ್ಯ ಪರಿಷತ್ತು: ೧೯೮೬ ರ ಜೂನ್ ತಿಂಗಳಲ್ಲಿ ಇಂಗ್ಲೆಂಡ್, ಅಮೆರಿಕಾ ಹಾಗೂ ಕೆನಡಾ ದೇಶಗಳಲ್ಲಿ ಒಂದುತಿಂಗಳ ಪ್ರವಾಸ ಕೈಗೊಂಡು, ಸ್ವದೇಶಕ್ಕೆ ಆಗಮಿಸಿದ ನಂತರ ೧೯೮೬ ಆಗಸ್ಟ್ ಇಪ್ಪತ್ತೊಂಬತ್ತರಂದು ಜಗದ್ಗುರು ಶ್ರೀ ಶಿವ ರಾತ್ರಿ ರಾಜೇಂದ್ರ ಸ್ವಾಮಿಗಳ ಅಮೃತ ಮಹೋತ್ಸವ ಹಾಗೂ ಪಟ್ಟಾಧಿಕಾರದ ಸುವರ್ಣ ಮಹೋತ್ಸವ ಕಾರ್ಯಕ್ರಮಗಳನ್ನು ಅದ್ದೂರಿಯಾಗಿ ಆಚರಿಸಲಾಯಿತು. ಈ ಶುಭಮಹೋತ್ಸವದಲ್ಲಿ 'ಅಖಿಲ ಭಾರತ ಶರಣಸಾಹಿತ್ಯ ಪರಿಷತ್ತಿ'ನ ಉದ್ಘಾಟನೆ ಹಾಗು ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯನ್ನು ಸ್ಥಾಪನೆ ಮಾಡಿ ಇದು 'ಜಗದಗಲಕ್ಕೆ ಬೆಳಗಲಿ' ಎಂದು ಜೋಡಿ ನಂದಾ ದೀಪಗಳನ್ನು ಹಚ್ಚಿಟ್ಟರು.

ಈ ರೀತಿ ಎಲ್ಲಾ ಕ್ಷೇತ್ರಗಳಲ್ಲಿ ದುಡಿದ, ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಆರಂಭದ ದಿನಗಳಲ್ಲಿ ಅನೇಕ ಕಷ್ಟಗಳನ್ನು ಎದುರಿಸಿದ್ದಾರೆ. ಒಮ್ಮೆ ತಮ್ಮ ವಿದ್ಯಾರ್ಥಿನಿಲಯದ ಮಕ್ಕಳ ದಾಸೋಹಕ್ಕೆ ದವಸ ಧಾನ್ಯ ಮುಗಿದಿದ್ದು, ರಾತ್ರಿ ಎಂಟು ಗಂಟೆಯಾದರೂ ದಾಸೋಹಕ್ಕೆ ವ್ಯವಸ್ಥೆಯಾಗದಿದ್ದುದನ್ನು ನೋಡಿ ಮಕ್ಕಳು ಹಸಿವಿನಿಂದ ಬಳಲಬಾರದು ಎಂದು ನಿರ್ಧರಿಸಿ ತಮ್ಮ ಬಂಗಾರದ ಕರಡಿಗೆಯನ್ನೇ ಮಾರಿ ದಾಸೋಹ ನಡೆಸಿದ ಮಹಾದಾಸೋಹಿ.ಈ ರೀತಿ ನಾಡಿಗೆ ಬೆಳಕಾದ ಜ್ಯೋತಿಗೆ ಮೈಸೂರು ವಿಶ್ವವಿದ್ಯಾನಿಲಯ ಡಾಕ್ಟರೇಟ್ ನೀಡಿ ಗೌರವಿಸಿತು. ಎಪ್ಪತ್ತುವರ್ಷ ತುಂಬು ಜೀವನ

ನಡೆಸಿದ ಜಗದ್ಗುರು ಶ್ರೀ ಡಾ. ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ೧೯೮೬ರ ಪ್ರಾತಃಕಾಲ ೭.೩೦ ರ ಸಮಯದಲ್ಲಿ 'ಗುರುವೇ ಶಿವರಾತ್ರೀಶ್ವರ' ಎಂದು ಸ್ಮರಿಸುತ್ತ ದಿವ್ಯಚೇತನವಾದರು.

ಬೆಳಕಾದ ಜ್ಯೋತಿ: ಹಿರಿಯ ಗುರುಗಳಾದ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಗುಣಗಳನ್ನು ನಾವು ಈಗಿನ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳಲ್ಲಿ ಕಾಣಬಹುದಾಗಿದೆ. ಮೌನದಲ್ಲೇ ಎಲ್ಲವನ್ನೂ ಸಾಧಿಸಬಲ್ಲಂತಹ ಮೇರು ವ್ಯಕ್ತಿತ್ವವನ್ನು ಹೊಂದಿದ್ದು, ಸುತ್ತೂರು ಮಠದ ಇಪ್ಪತ್ನಾಲ್ಕನೆಯ ಜಗದ್ಗುರುಗಳಾಗಿ ನಾಡಿನ ಅತ್ಯಂತ ಹಿರಿದಾದ ಸಂಸ್ಥೆಯ ಜವಾಬ್ದಾರಿಯನ್ನು ಸಮತೂಕದಲ್ಲಿ ಮುನ್ನಡೆಸಿ, ಅಭಿವೃದ್ಧಿಯ ಉತ್ತುಂಗಕ್ಕೆ ಕೊಂಡೊಯುತ್ತಿದ್ದಾರೆ.

ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಕರಕಮಲ ಸಂಜಾತರಾಗಿ ಬೆಳೆದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು ಸುತ್ತೂರಿನ ನಿವಾಸಿಗಳಾದ ಶ್ರೀ ಎಸ್.ಎಂ.ಪ್ರಭುಸ್ವಾಮಿ ಮತ್ತು ಶ್ರೀಮತಿ ಶಿವನಾಗಮ್ಮನವರ ಪುತ್ರರಾಗಿ ಜನಿಸಿದರು. ನಂತರ ಹಿರಿಯ ಶ್ರೀಗಳ ವಾತ್ಸಲ್ಯದಿಂದ ಬೆಳೆದು, ಆಚಾರ, ವಿಚಾರಗಳನ್ನು ಮೈಗೂಡಿಸಿಕೊಂಡು ವಿದ್ಯಾಸಂಪನ್ನರಾಗಿ ರೂಪುಗೊಂಡರು. ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು ಪದವಿ ಪಡೆದ ನಂತರ ಸ್ನಾತಕೋತ್ತರ ಶಿಕ್ಷಣಕ್ಕೆ ಧಾರವಾಡದ ಮುರುಘಾ ಮಠದಲ್ಲಿ ಆಶ್ರಯ ಪಡೆದರು. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಉನ್ನತ ಶ್ರೇಣಿಯಲ್ಲಿ ಕನ್ನಡ ಎಂ.ಎ ಪದವಿ ಪಡೆದ ಗುರುಗಳು, ಮಹಾವಿದ್ಯಾಪೀಠದ ಕಾರ್ಯಾಧ್ಯಕ್ಷರಾಗಿ ನೇಮಕಗೊಂಡರು. ಧಾರ್ಮಿಕ, ಆಡಳಿತ, ಸಾಹಿತ್ಯ, ಸಾಮಾಜಿಕ, ವೈಚಾರಿಕತೆ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಅನುಭವ ಸಾಧಿಸಿದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳಿಗೆ ೧೯೮೬ ಫೆಬ್ರವರಿ ಹತ್ತರಂದು ಸುತ್ತೂರು-ಮೈಸೂರಿನ ಶ್ರೀ ಶಿವರಾತ್ರಿ ಸಂಸ್ಥಾನ ಮಠಕ್ಕೆ ಪಟ್ಟಾಧಿಕಾರ ಮಾಡಲಾಯಿತು. ಅಧಿಕಾರವನ್ನು ವಹಿಸಿಕೊಂಡ ಗುರುಗಳು ಮಠದ ಕೀರ್ತಿಯು ಉತ್ತರೋತ್ತರವಾಗಿ ಬೆಳಗುವಂತೆ ಮಾಡಿದ್ದಾರೆ.

ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು ಸುತ್ತೂರು ವೀರಸಿಂಹಾಸನ ಪೀಠದ ಮೈಸೂರಿನ ಶಾಖಾಮಠವನ್ನು, ಚಾಮುಂಡಿ ತಪ್ಪಲಿನಲ್ಲಿರುವ ನಲವತ್ತೆರಡು ಎಕರೆ ಪ್ರದೇಶಕ್ಕೆ ಸ್ಥಳಾಂತರಿಸಿದ್ದಾರೆ. ಇಲ್ಲಿ ಸಂಶೋಧಕರಿಗೆ, ಸಾಹಿತ್ಯಾಭ್ಯಾಸಿಗಳಿಗೆ, ಲೇಖಕರಿಗೆ ಅನುಕೂಲವಾಗುವಂತೆ ವ್ಯವಸ್ಥಿತವಾದ ಗ್ರಂಥಾಲಯ ಹಾಗೂ ವಸತಿ ವ್ಯವಸ್ಥೆಯನ್ನು ಮಾಡಿಸಿದ್ದಾರೆ. ಈ ರೀತಿ ಹಲವು ಸಮುಚ್ಚಯಗಳನ್ನೊಳಗೊಂಡ ನೂತನ ಮಠವು ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗಿರುವುದಲ್ಲದೆ, ಒಂದು ಯಾತ್ರಾತಾಣವಾಗಿ ರೂಪಗೊಂಡು ಜನಮನವನ್ನು ಸೂರೆಗೊಂಡಿದೆ. ದೇಶ ವಿದೇಶಗಳಲ್ಲಿ ಸಂಚರಿಸಿ ವೀರಶೈವ ಧರ್ಮದ ಪ್ರಚಾರ ಕಾರ್ಯ ಕೈಗೊಂಡಿರುವ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು, ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಸಮುಚ್ಚಯದಲ್ಲಿ ಸಾಂಸ್ಕೃತಿಕ ಕೇಂದ್ರವೊಂದನ್ನು ಸ್ಥಾಪಿಸಿ, ಅನೇಕ ಸಾಂಸ್ಕೃತಿಕ ಚಟುವಟಿಕೆಗಳು ನಡೆಯಲು ಅನುವು ಮಾಡಿಕೊಟ್ಟಿದ್ದಾರೆ. ಜಗದ್ಗುರು ಶ್ರೀ ಶಿವರಾತ್ರೀಶ್ವರರ ಹೆಸರಿನಲ್ಲಿ ಭಾರತೀಯ ಆಡಳಿತ ಸೇವೆ, ಭಾರತೀಯ ಪೋಲೀಸ್ ಸೇವೆ ಹಾಗೂ ಭಾರತೀಯ ಅರಣ್ಯ ಸೇವೆಯಂತಹ ಉನ್ನತ ಹುದ್ದೆಗಳನ್ನು ಬಯಸಿ ಸ್ಪರ್ಧಾತ್ಮಕ ಪರೀಕ್ಷೆಗೆ ಕುಳಿತುಕೊಳ್ಳ ಬಯಸುವ ವಿದ್ಯಾರ್ಥಿಗಳನ್ನು, ಅರ್ಹತೆಯ ಮೇಲೆ ಆಯ್ಕೆ ಮಾಡಿ ತರಬೇತಿ ಕೊಡುತ್ತಿರುವುದು ಒಂದು ಶ್ಲಾಘನೀಯ ಕೆಲಸ. ಇದು ರಾಜ್ಯದಲ್ಲೇ ಪ್ರಥಮ ಪ್ರಯತ್ನ ಎಂದರೆ ತಪ್ಪಾಗಲಾರದು. ಇದರಿಂದ ರಾಷ್ಟ್ರದ ಉನ್ನತ ಸೇವಾ ಹುದ್ದೆಗಳಲ್ಲಿ ಕರ್ನಾಟಕದ ಕೆಲವರಿಗೆ ಅವಕಾಶ ದೊರೆತಿದ್ದು ಒಂದು ಉಲ್ಲೇಖನಾರ್ಹ ವಿಷಯವಾಗಿದೆ.

ಧಾರ್ಮಿಕ ಕಾರ್ಯಗಳು: ಶ್ರೀ ಶಿವರಾತ್ರೀಶ್ವರ ಜಾತ್ರಾ ಮಹೋತ್ಸವ ನಾಡ ಹಬ್ಬವಾಗಿ ಆಚರಣೆಯಾಗುತ್ತಿದೆ. ಪ್ರತಿವರ್ಷ ನಡೆಯುವ ಧಾರ್ಮಿಕ ವಿಧಿವಿಧಾನಗಳ ಜೊತೆಗೆ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ವಿಚಾರಗಳನ್ನು ಒಳಗೊಂಡಂತೆ,ಒಂದು ವಾರಕಾಲ ನಡೆಯುವ ಈ ಉತ್ಸವದಲ್ಲಿ ನಾಡಿನ ಅನೇಕ ವಿದ್ವಾಂಸರು, ಮಠಾಧೀಶರುಗಳನ್ನು ಕರೆಸಿ ಗೌರವಿಸುವುದಲ್ಲದೆ, ವಿವಿಧ ಕ್ಷೇತ್ರಗಳಲ್ಲಿ ದುಡಿದ ಗಣ್ಯರನ್ನು ಸತ್ಕರಿಸುವುದು ವಾಡಿಕೆಯಾಗಿ ಬೆಳೆದು ಬಂದಿದೆ. ಈ ಉತ್ಸವದಲ್ಲಿ ಪಾಲ್ಗೊಳ್ಳುವ ಲಕ್ಷೋಪಲಕ್ಷ ಜನರಿಗೆ ಅನ್ನದಾಸೋಹದ ವ್ಯವಸ್ಥೆ ಅಭೂತ ಪೂರ್ವವಾಗಿ ನೆರವೇರುತ್ತಿದೆ. ಇದರ ಅಂಗವಾಗಿ ದನಗಳ ಜಾತ್ರೆಯು ಏರ್ಪಟ್ಟಿರುತ್ತದೆ. ಮೈಸೂರಿನ ಸುತ್ತೂರು ಮಠದಲ್ಲಿ ೧೯೭೮-೭೯ರಲ್ಲಿ ವರ್ಷದ ೩೬೫ ದಿನಗಳಲ್ಲಿಯೂ,

ನಿರಂತರವಾಗಿ ದಿನಕ್ಕೊಬ್ಬರು ಶರಣರ ಚಿಂತನಗೋಷ್ಠಿಗಳನ್ನು ನಡೆಸಿದ್ದು ಒಂದು ದಾಖಲೆಯ ವಿಷಯವಾಗಿದೆ. ಮಠ ಎಂದರೆ ಕೇವಲ ಧರ್ಮಾಚರಣೆಗೆ ಸೀಮಿತವಾದುದ್ದಲ್ಲ, ಧಾರ್ಮಿಕ ಚೌಕಟ್ಟಿನಲ್ಲಿ ಸಮಾಜದ ಸಮಷ್ಟಿ ಹಿತದ ಬಗ್ಗೆ ಏನೆಲ್ಲ ಮಾಡಬಹುದು ಎಂಬುದನ್ನು ತೋರಿಸಿಕೊಟ್ಟಿರುವ ಸುತ್ತೂರು ಮಠವು ನಾಡಿನಲ್ಲೇ ಹೆಮ್ಮೆಯ ಮಠವಾಗಿದೆ.

ವಿಳಾಸ: ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು, ಶ್ರೀ ಶಿವರಾತ್ರೀಶ್ವರಮಠ, ಸುತ್ತೂರು, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

ಆಧಾರ: 'ಶ್ರೀ ಶಿವರಾತ್ರಿ ಶಿವಾಚಾರ್ಯ' ಲೇಖಕರು : ಎಂ.ಜಿ.ನಂಜುಂಡಾರಾಧ್ಯ
'ಅರ್ಚನ' ಸಂಪಾದಕರು : ಡಾ. ಹೆಚ್.ಸಿ.ಮಲ್ಲೇದೇವರು
'ಕಲ್ಯಾಣದ ಹಾದಿ' ಸಂಪಾದಕರು : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ

ಸೂರಹಳ್ಳಿ

ನಂಜನಗೂಡು ತಾಲ್ಲೂಕಿನ ಸೂರಹಳ್ಳಿಯು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹದಿನಾಲ್ಕು ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಮಧ್ಯ ಭಾಗದಲ್ಲಿ ಶ್ರೀ ಭಿಕ್ಷದ ಮಠ ಹಾಗೂ ಪೂರ್ವ ದಿಕ್ಕಿಗೆ ಶ್ರೀ ವಿರಕ್ತ ಮಠ ಸ್ಥಾಪನೆಯಾಗಿವೆ.

ವಿರಕ್ತಮಠ: ಈ ಗ್ರಾಮದ ಹೊರಭಾಗದಲ್ಲಿರುವ ಶ್ರೀ ವಿರಕ್ತಮಠವು ಮುರುಘಾ ಸಮಯದ ಮಠವಾಗಿದ್ದು, ಈ ಗ್ರಾಮದ ಧಾರ್ಮಿಕ ಜಾಗೃತ ಸ್ಥಳವಾಗಿ ರೂಪುಗೊಂಡಿದೆ. ಹಿಂದೆ ತೋಂಟದ ಶ್ರೀ ಸಿದ್ಧಲಿಂಗೇಶ್ವರರ ಜತೆ ಬಂದಿದ್ದ ನೂರೊಂದು ವಿರಕ್ತರಲ್ಲಿ ಒಬ್ಬರು ಈ ಸ್ಥಳದಲ್ಲಿ ನೆಲೆ ನಿಂತು ಅನುಷ್ಠಾನಗೊಂಡು ಇಲ್ಲೇ ಲಿಂಗೈಕ್ಯರಾದರು. ಸೂರಹಳ್ಳಿಯಲ್ಲಿ ಇವರ ಗದ್ದುಗೆ ನಿರ್ಮಾಣ ಗೊಂಡಿದ್ದು ಇಲ್ಲಿ ಮಠ ಸ್ಥಾಪನೆಯಾಗಿದೆ.

ಲಿಂಗೈಕ್ಯರಾದ ಗುರುಗಳ ಹೆಸರು ತಿಳಿಯದ ಕಾರಣ ರೂಢಿಗತವಾಗಿ 'ಶ್ರೀ ಗದ್ದುಗೆಸ್ವಾಮಿ' ಎಂದು ಕರೆಯಲಾಗುತ್ತಿದೆ. ಹಿಂದೆ ನಿರ್ಮಾಣಗೊಂಡ ಮಠದಲ್ಲಿ ಚಿಕ್ಕದಾದ ಕಲ್ಲು ಮಂಟಪದ ಗದ್ದುಗೆ ನಿರ್ಮಾಣಗೊಂಡಿದ್ದು, ಇದರ ಬಳಿ ಕರ್ತೃಗುರುಗಳು ಬಳಸುತ್ತಿದ್ದ ಬೆತ್ತದದಂಡ ಹಾಗೂ ಪಾದುಕೆಗಳನ್ನು ಇಡಲಾಗಿದೆ.

ಮಠ ಸ್ಥಾಪನೆ : ಶ್ರೀ ಗಂಗಾಧರೇಶ್ವರ ಸ್ವಾಮಿಗಳು ಇಂತಹ ಜಾಗೃತ ಸ್ಥಳದಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸತೊಡಗಿದರು. ಗುರುಗಳು ಇಲ್ಲಿ ಮಠವನ್ನು ಪುನರ್‌ಸ್ಥಾಪಿಸಿ ಈ ಮಠದ ಅಧಿಕಾರವನ್ನು ವಹಿಸಿಕೊಳ್ಳುತ್ತಾರೆ. ಇವರ ಕಾಲದಲ್ಲಿ ಸೂರಹಳ್ಳಿ ಮತ್ತು ಸುತ್ತಮುತ್ತಲ ಗ್ರಾಮಗಳಲ್ಲಿ ಧಾರ್ಮಿಕ ಪ್ರಜ್ಞೆ ಮೂಡತೊಡಗಿತು. ಮಠದ ಪರಿಸರವನ್ನು ಧಾರ್ಮಿಕ ಕ್ಷೇತ್ರಕ್ಕೆ ಅನುಗುಣವಾಗಿ ಮಾರ್ಪಡಿಸಿದ ಶ್ರೀ ಗಂಗಾಧರೇಶ್ವರ ಸ್ವಾಮಿಗಳು, ಮಠದ ಮುಂಭಾಗದಲ್ಲಿದ್ದ ಮಹದೇಶ್ವರ ದೇವಾಲಯದ ಪಕ್ಕದಲ್ಲಿ ಕಲ್ಯಾಣಿಯನ್ನು ನಿರ್ಮಿಸಿದರು. ನಂತರ ಮಠದ ಕಟ್ಟಡವನ್ನು ಶ್ರೀ ಗದ್ದುಗೆ ಸ್ವಾಮಿಗಳ ಗದ್ದುಗೆಗೆ ಹೊಂದಿಕೊಂಡಂತೆ ವಿಸ್ತರಿಸಿ, ದಾಸೋಹ ನಡೆಯಲು ವ್ಯವಸ್ಥೆಗೊಳಿಸಿದರು.

ಆಸ್ತಿ ಸಂಪಾದನೆ: ಶ್ರೀ ಗಂಗಾಧರೇಶ್ವರ ಸ್ವಾಮಿಗಳ ಕ್ರಿಯಾಶೀಲ ಗುಣಗಳು ಹಾಗೂ ತಪೋಶಕ್ತಿಯಿಂದ ಮಠದ ಆಡಳಿತ ವಿಸ್ತಾರಗೊಳ್ಳುತ್ತಾ ಹೋಯಿತು. ಭಕ್ತರು ಇವರಿಂದ ಆಕರ್ಷಿತರಾಗಿ ಮಠಕ್ಕೆ ಬರತೊಡಗಿದರು. ಭಕ್ತರ ಪ್ರಸಾದದ ವ್ಯವಸ್ಥೆಗೆ ಮಠದ ಜಮೀನನ್ನು ಬೇಸಾಯಕ್ಕೆ ಯೋಗ್ಯಗೊಳಿಸಿ, ಆದಾಯ ಬರುವಂತೆ ಮಾಡಿದರು. ಹುಲ್ಲಹಳ್ಳಿಯ ಹತ್ತಿರದ ಕಣೇನೂರು ಗ್ರಾಮದಲ್ಲಿ ಎರಡೂವರೆ ಎಕರೆ ಜಮೀನನ್ನು ಖರೀದಿಸಿ, ಮಠದ ಆಸ್ತಿಯನ್ನು ವಿಸ್ತಾರಗೊಳಿಸಿದರು.

ಶ್ರೀ ಗಂಗಾಧರೇಶ್ವರ ಸ್ವಾಮಿಗಳ ಅವಿರತ ಶ್ರಮದಿಂದ ರೂಪುಗೊಂಡ ಮಠ ಇವರ ತರುವಾಯ ಖಾಲಿ ಬೀಳಬಾರದೆಂದು, ಹೆಗ್ಗಡದೇವನ ಕೋಟೆಯ ಕೊತ್ತೇಗಾಲದ ಹತ್ತು ವರ್ಷದ ಬಾಲಕ ನಾಗಭೂಷಣ ದೇವರನ್ನು ಮಠದ ಉತ್ತರಾಧಿಕಾರಿಗಳನ್ನಾಗಿ ನೇಮಕಮಾಡಿದ್ದರು. ಶ್ರೀ ಗಂಗಾಧರೇಶ್ವರ ಸ್ವಾಮಿಗಳು ೧೯೫೦ ರಲ್ಲಿ ಲಿಂಗೈಕ್ಯರಾದ ಮರುದಿನವೇ ಶ್ರೀ ನಾಗಭೂಷಣ ಸ್ವಾಮಿಗಳು ಸೂರಹಳ್ಳಿ ವಿರಕ್ತಮಠದ ಅಧಿಕಾರವನ್ನು ವಹಿಸಿಕೊಂಡರು. ನಂತರ ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡಿ, ಮಠಕ್ಕೆ ಆಗಮಿಸಿ ಮಠದ ಕಟ್ಟಡವನ್ನು ನವೀಕರಿಸಿ ಮತ್ತಷ್ಟು ವಿಸ್ತರಿಸಿದರು. ಅಲ್ಲದೆ ಮಠದ ಒಳಗಿರುವ

ಶ್ರೀ ಗದ್ದುಗೆ ಸ್ವಾಮಿಗಳ ಗದ್ದುಗೆ, ಮಠದ ಹೊರಗಿರುವ ಶ್ರೀ ಗಂಗಾಧರೇಶ್ವರ ಸ್ವಾಮಿಗಳ ಗದ್ದುಗೆ ಹಾಗೂ ಶ್ರೀ ಮಹಾದೇಶ್ವರ ದೇವಾಲಯದಲ್ಲಿ ಪ್ರತಿನಿತ್ಯ ಎರಡು ವೇಳೆ ಪೂಜೆಯನ್ನು ನಡೆಸುತ್ತಿದ್ದಾರೆ. ದೀಪಾವಳಿ, ಕಾರ್ತೀಕೋತ್ಸವ, ಶ್ರಾವಣ ಮಾಸ ಹಾಗೂ ಶಿವರಾತ್ರಿಗಳಲ್ಲಿ ವಿಶೇಷ ಪೂಜೆ ನಡೆಯಲು ವ್ಯವಸ್ಥೆಗೊಳಿಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ನಾಗಭೂಷಣ ಸ್ವಾಮಿಗಳು, ಶ್ರೀ ವಿರಕ್ತಮಠ, ಸೂರಹಳ್ಳಿ, ನಂಜನಗೂಡು ತಾ, ಮೈಸೂರು ಜಿಲ್ಲೆ.

ಭಿಕ್ಷದಮಠ: ಈ ಮಠದಲ್ಲಿ ಶ್ರೀ ಬೆತ್ತಲೇಶ್ವರ ಸ್ವಾಮಿಗಳ ಗದ್ದುಗೆ ಹಾಗೂ ಶ್ರೀ ಗುರುಮಲ್ಲೇಶ್ವರರ ತೋರು ಗದ್ದುಗೆಗಳು ಒಂದೇ ಮಂಟಪದಡಿ ನಿರ್ಮಾಣಗೊಂಡಿವೆ. ಲೋಕಸಂಚಾರ ಮಾಡುತ್ತಾ ಬಂದ ಶ್ರೀ ಬೆತ್ತಲೇಶ್ವರರು ಈ ಜಾಗದಲ್ಲೇ ನೆಲೆ ನಿಂತು ಅನುಷ್ಠಾನಗೊಂಡರು. ಶ್ರೀ ಬೆತ್ತಲೇಶ್ವರರು ಐಕ್ಯಗೊಂಡ ಸ್ಥಳದಲ್ಲಿ ಊರಿನ ಜನ ೧೯೩೦ರಲ್ಲಿ ಮಠವನ್ನು ಕಟ್ಟಿಸಿದರು. ಈ ಮಠದ ಆಡಳಿತದ ಜವಾಬ್ದಾರಿಯನ್ನು ದೇವನೂರು ಮಠಕ್ಕೆ ಒಪ್ಪಿಸಿದರು. ಅಂದಿನಿಂದ ಈ ಮಠ ದೇವನೂರು ಶಾಖಾಮಠವಾಗಿ ರೂಪಾಂತರ ಗೊಂಡು ಧಾರ್ಮಿಕ ಚಟುವಟಿಕೆಗಳನ್ನು ನಡೆಸಿದೆ.

ಕಳೆದ ಎಪ್ಪತ್ತು ವರ್ಷಗಳಿಂದ ಮಠದ ಧಾರ್ಮಿಕ ಹಾಗೂ ಆಡಳಿತ ಚಟುವಟಿಕೆಗಳು ಕುಂಟುತ್ತಾ ತೆವಳುತ್ತಾ ಸಾಗಿಬಂದವು. ಈಗ ಸೂರಹಳ್ಳಿಯವರೇ ಆದ ಶ್ರೀ ಶಿವಕುಮಾರ ಸ್ವಾಮಿಗಳು ಮತ್ತು ಶ್ರೀ ಪ್ರಭುಕುಮಾರ ಸ್ವಾಮಿಗಳು ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ, ಕಂತೆ ಭಿಕ್ಷದ ಕಾಯಕ ಮಾಡುತ್ತಾ ಮಠದ ಅಸ್ತಿತ್ವವನ್ನು ಉಳಿಸಿಕೊಂಡು ಬರುತ್ತಿದ್ದಾರೆ. ಮಠದ ಆಸ್ತಿಯಾಗಿರುವ ಆರುಎಕರೆ ಜಮೀನನ್ನು ಅಭಿವೃದ್ಧಿಪಡಿಸಿ, ಆದಾಯ ಬರುವಂತೆ ಮಾಡಿದ್ದಾರೆ.

ವಿಳಾಸ: ಶ್ರೀ ಶಿವಕುಮಾರ ಸ್ವಾಮಿಗಳು, ಶ್ರೀ ಪ್ರಭು ಸ್ವಾಮಿಗಳು, ಶ್ರೀ ಭಿಕ್ಷದಮಠ, ಸೂರಹಳ್ಳಿ, ಕಸುವನಹಳ್ಳಿ ಅಂಚೆ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

ಹುಲ್ಲಹಳ್ಳಿ

ನಂಜನಗೂಡು ತಾಲ್ಲೂಕಿನ ಹುಲ್ಲಹಳ್ಳಿಯು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿಮೂರು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ಹುಲ್ಲಹಳ್ಳಿ ವಿರಕ್ತಮಠ: ಹುಲ್ಲಹಳ್ಳಿ ಗ್ರಾಮದ ಕಪಿಲಾನದಿ ತೀರದಲ್ಲಿ ಶ್ರೀ ಶಾಂತಮಲ್ಲಿಕಾರ್ಜುನ ಕ್ಷೇತ್ರ ಎಂಬ ಹೆಸರಿನ ವಿರಕ್ತಮಠವು ಸುಮಾರು ನಾಲ್ಕುನೂರು ವರ್ಷಗಳಿಗಿಂತ ಹಿಂದೆ ಸ್ಥಾಪನೆಯಾಗಿದೆ. ಮುರುಘಾ ಸಮಯದ ಈ ವಿರಕ್ತಮಠವು ಒಂದು ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿ ಬೆಳೆದು, ಈ ನಾಡಿನ ಪ್ರಮುಖ ಧಾರ್ಮಿಕ ಕ್ಷೇತ್ರಗಳಲ್ಲಿ ಒಂದಾಗಿತ್ತು.

ಪರಂಪರೆ:

೧. ಶ್ರೀ ಮ.ನಿ.ಪ್ರ. ವೀರಣ್ಣಾರ್ಯಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಶಾಂತವೀರ ಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಗುರುಸಿದ್ಧಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಸಪ್ಪೆಆರ್ಯಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಕಲ್ಯಾಣಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಶಿವಲಿಂಗಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಮುಮ್ಮಡಿ ಸದಾಶಿವಸ್ವಾಮಿಗಳು
೯. ಶ್ರೀ ಮ.ನಿ.ಪ್ರ. ಚನ್ನಮಲ್ಲ ದೇಶಿಕೇಂದ್ರ ಸ್ವಾಮಿಗಳು
೧೦. ಶ್ರೀ ಮ.ನಿ.ಪ್ರ. ಸದಾಶಿವಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯ ಗುರುಗಳ ಕೆಲವು ಹೆಸರುಗಳನ್ನು ಮಾತ್ರ ದಾಖಲಿಸಲಾಗಿದೆ. ಈ ಮಠದ ಆವರಣದಲ್ಲಿ

ಇಪ್ಪತ್ತು ಗದ್ದುಗೆಗಳು ಸ್ಥಾಪನೆಯಾಗಿವೆ. ಈ ಆಧಾರದ ಮೇಲೆ ಪರಂಪರೆಯಲ್ಲಿ ಇಪ್ಪತ್ತೊಂದು ಜನ ಗುರುಗಳು ಅಧಿಕಾರ ನಡೆಸಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೆ ಉಳಿದ ಹನ್ನೊಂದು ಜನ ಗುರುಗಳ ಹೆಸರುಗಳನ್ನು ಆಧಾರದ ಕೊರತೆಯಿಂದ ಗುರುತಿಸಲು ಸಾಧ್ಯವಾಗುತ್ತಿಲ್ಲ.

ಬೆಳೆದ ಪರಂಪರೆ: ಆಂಧ್ರಪ್ರದೇಶದ ಸರಹದ್ದಿನ ಮಧುಗಿರಿ ತಾಲ್ಲೂಕಿನ ಪೆನಕೊಂಡೆಯ ಶ್ರೀ ವೀರಣಾರ್ಯರೆಂಬುವರು ಲೋಕಸಂಚಾರ ಮಾಡುತ್ತ ಹುಲ್ಲಹಳ್ಳಿಗೆ ಬಂದು, ಈ ಪ್ರಶಾಂತ ವಾತಾವರಣದಲ್ಲಿ ಅನುಷ್ಠಾನಗೊಂಡು ಇಲ್ಲಿ ಮಠವನ್ನು ಸ್ಥಾಪನೆ ಮಾಡಿದರು. ಶ್ರೀ ಶಾಂತವೀರ ಸ್ವಾಮಿಗಳು, ಶ್ರೀ ವೀರಣಾರ್ಯರ ಅಲೌಕಿಕ ಪ್ರಜ್ಞೆಗೆ ಮನಸೋತು ಗುರುಗಳ ಜೊತೆಯಲ್ಲಿ ಉಳಿದು ಅವರ ಸೇವೆ ಮಾಡುತ್ತ, ಶ್ರೀ ವೀರಣಾರ್ಯರು ಸ್ಥಾಪನೆ ಮಾಡಿದ ಈ ಮಠಕ್ಕೆ ಉತ್ತರಾಧಿಕಾರಿಗಳಾಗಿ ಅಧಿಕಾರ ಪಡೆಯುತ್ತಾರೆ. ನಂತರ ಶ್ರೀ ಶಾಂತವೀರ ಸ್ವಾಮಿಗಳ ಶಿಷ್ಯರಾದ, ತಿಪಟೂರು ತಾಲ್ಲೂಕಿನ ಕುಪ್ಪೂರು ಮಠದ ಶ್ರೀ ಗುರುಸಿದ್ಧ ಸ್ವಾಮಿಗಳು ಹುಲ್ಲಹಳ್ಳಿಗೆ ಆಗಮಿಸಿ ಗುರುಗಳ ಕೊನೆಯ ದಿನದಲ್ಲಿ ಸೇವೆ ಮಾಡಿಕೊಂಡಿದ್ದು, ನಂತರ ಉತ್ತರಾಧಿಕಾರಿಗಳಾಗಿ ಅಧಿಕಾರ ಪಡೆದರು.

ಶ್ರೀ ಗುರುಸಿದ್ಧ ಸ್ವಾಮಿಗಳು ಇಲ್ಲಿ ಕೆಲವು ದಿನ ಆಡಳಿತ ನಡೆಸಿ ಚಿತ್ರದುರ್ಗದ ಮುರುಘಾ ಮಠಕ್ಕೆ ಹೋಗಿ ಶೂನ್ಯ ಪೀಠದ ಜಗದ್ಗುರುಗಳಾಗಿ ಅಧಿಕಾರ ವಹಿಸಿಕೊಂಡರು ಎಂದು ಹೇಳಲಾಗುತ್ತಿದೆ. ಇವರ ನಂತರ ಮಠದಲ್ಲಿ ಅನೇಕ ಗುರುಗಳು ಅಧಿಕಾರ ನಡೆಸಿದ್ದರೂ ಆಧಾರಗಳ ಕೊರತೆಯಿಂದ ದಾಖಲಿಸಿರುವ ಗುರುಗಳ ವಿವರಗಳು ಲಭ್ಯವಿಲ್ಲ. ಈಗ ಮಠದ ಅಧಿಕಾರವನ್ನು ನಡೆಸುತ್ತಿರುವ ಶ್ರೀ ಸದಾಶಿವ ಸ್ವಾಮಿಗಳು ಸುಮಾರು ಅರವತ್ತು ವರ್ಷಗಳ ಹಿಂದೆಯೇ ಅಧಿಕಾರ ಪಡೆದು ಕೊಂಡು, ಕಾಯಕಯೋಗಿಗಳಾಗಿ ದುಡಿದು ಮಠದ ಸರ್ವಾಂಗೀಣ ಅಭಿವೃದ್ಧಿಗೆ ಕಾರಣೀಭೂತರಾಗಿದ್ದಾರೆ. ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಆಡಳಿತ ನಡೆಸಿರುವ ಶ್ರೀ ಸದಾಶಿವ ಸ್ವಾಮಿಗಳು ಈಗ ಉತ್ತರಾಧಿಕಾರಿಗಳನ್ನು ನೇಮಿಸಿಕೊಂಡಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ೧೬೪೦ರಲ್ಲಿ ಮಠದ ಅಧಿಕಾರ ನೋಡಿಕೊಳ್ಳುತ್ತಿದ್ದ ಶ್ರೀ ಶಾಂತವೀರ ಸ್ವಾಮಿಗಳು ತಮ್ಮ ಹಿರಿಯರು ಚಿಕ್ಕದಾಗಿ ಸ್ಥಾಪಿಸಿದ ಮಠವನ್ನು ಹೆಚ್ಚು ವಿಸ್ತಾರಗೊಳಿಸಿ, ಮಠವು ಶ್ರೀಮಂತವಾಗಿ ಬೆಳೆಯಲು ಕಾರಣೀಭೂತರಾಗಿದ್ದಾರೆ. ಇವರ ಕಾಲದಲ್ಲಿ ಮೈಸೂರಿನ ಅರಸರು ಅನೇಕ ದಾನದತ್ತಿಗಳನ್ನು ನೀಡಿ ಮಠವು ಅಭಿವೃದ್ಧಿಗೊಳ್ಳಲು ನೆರವಾದರೆಂದು ಹೇಳಲಾಗುತ್ತಿದೆ. ಶ್ರೀ ಶಾಂತವೀರ ಸ್ವಾಮಿಗಳು ಅನೇಕ ಲೋಕೋದ್ಧಾರದ ಕೆಲಸಗಳನ್ನು ಮಾಡಿ ಜನಮನ್ನಣೆಗೆ ಪಾತ್ರರಾದರು. ಇದರಿಂದ ಮಠದ ಇತಿಹಾಸದಲ್ಲಿ ಇವರ ಹೆಸರು ಶಾಶ್ವತವಾಗಿ ಉಳಿಯಲು ಕಾರಣವಾಗಿದೆ.

ಮಠದ ಈಗಿನ ಶ್ರೀ ಸದಾಶಿವ ಸ್ವಾಮಿಗಳು ಮಠದ ಆಸ್ತಿಯನ್ನು ಅಭಿವೃದ್ಧಿಗೊಳಿಸಿ, ಆದಾಯ ಬರುವಂತೆ ಮಾಡಿದ್ದಾರೆ. ಪಟ್ಟಾಧಿಕಾರ ಪಡೆದು ಅರವತ್ತು ವರ್ಷಗಳ ದೀರ್ಘ ಅಧಿಕಾರ ನಡೆಸಿ ಆದಾಯದ ಮೂಲ ಗಳನ್ನು ಸದ್ಬಳಕೆ ಮಾಡಿಕೊಂಡಿರುವ ಗುರುಗಳು, ಮಠಕ್ಕೆ ಬರುವ ಭಕ್ತರಿಗೆ ಅನ್ನದಾಸೋಹ ಕಲ್ಪಿಸಿದ್ದಾರೆ. ಅಲ್ಲದೆ ಬಡವಿದ್ಯಾರ್ಥಿ ಗಳಿಗೆ ಆಶ್ರಯ ಕೊಟ್ಟು ನೆರವಾಗಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಸದಾಶಿವ ಸ್ವಾಮಿಗಳು, ಶ್ರೀ ಹುಲ್ಲಹಳ್ಳಿ ವಿರಕ್ತಮಠ, ಹುಲ್ಲಹಳ್ಳಿ, ನಂಜನಗೂಡು ತಾ, ಮೈಸೂರು ಜಿಲ್ಲೆ.

❑

ಪಿರಿಯಾಪಟ್ಟಣ ತಾಲ್ಲೂಕು

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕು ಐತಿಹಾಸಿಕವಾಗಿ ಹೆಚ್ಚು ಹೆಸರು ಮಾಡಿದೆ. ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಸಾಧಾರಣವಾಗಿ ಬೆಳೆದ ಲಕ್ಷಣಗಳು ಕಂಡುಬರುತ್ತವೆ. ಪ್ರಸ್ತುತ ಈ ತಾಲ್ಲೂಕಿನಲ್ಲಿ ಮೂರು ಮಠಗಳು ಅಸ್ತಿತ್ವದಲ್ಲಿದ್ದು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ದಿಂಡಗಾಡು

ಪಿರಿಯಾಪಟ್ಟಣ ತಾಲ್ಲೂಕಿನ ದಿಂಡಗಾಡು ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಬಸವಜ್ಯೋತಿ ಮಠವು ಅಸ್ತಿತ್ವದಲ್ಲಿದೆ.

ಬಸವಜ್ಯೋತಿಮಠ: ದಿಂಡಗಾಡು ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ಬಸವಜ್ಯೋತಿ ಮಠವು ಈ ಭಾಗದಲ್ಲಿ ಧಾರ್ಮಿಕ ಸಂಸ್ಕಾರ ನೀಡುವ ಪ್ರಯತ್ನದಲ್ಲಿ ಮುಂದುವರೆದಿದೆ. ವೀರಶೈವಧರ್ಮವನ್ನು ಪ್ರಚಾರಪಡಿಸಿ ಶರಣರು ಹಚ್ಚಿದ ಜ್ಯೋತಿಯನ್ನು ಬೆಳಗಿಸಲು ಮಠ ಸ್ಥಾಪನೆಯಾಗಿದೆ. ಈಗ ಮಠಾಧೀಶರಾಗಿರುವ ಶ್ರೀ ಅಪ್ಪಾಜಿ ಸ್ವಾಮಿಗಳು ವೀರಶೈವ ಸಾಹಿತ್ಯವನ್ನು ಅಭ್ಯಾಸ ಮಾಡಿದ್ದು, ಈ ಭಾಗದ ಭಕ್ತರಿಗೆ ಧರ್ಮಬೋಧನೆಯ ಮೂಲಕ ಸಂಸ್ಕಾರ ನೀಡುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಅಪ್ಪಾಜಿ ಸ್ವಾಮಿಗಳು, ಶ್ರೀ ಬಸವಜ್ಯೋತಿಮಠ, ದಿಂಡಗಾಡು, ಪಿರಿಯಾಪಟ್ಟಣ ತಾ, ಮೈಸೂರು ಜಿಲ್ಲೆ.

ಬೆಟ್ಟದಪುರ

ಪಿರಿಯಾಪಟ್ಟಣ ತಾಲ್ಲೂಕಿನ ಬೆಟ್ಟದಪುರವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹನ್ನೆರಡು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಬೆಟ್ಟದಪುರ ಗ್ರಾಮದ ಹೊರಭಾಗದಲ್ಲಿ ಶ್ರೀ ವಿರಕ್ತಮಠವು ಸ್ಥಾಪನೆಯಾಗಿದ್ದು, ಈಗ ಊರು ಬೆಳೆದಂತೆ ಮಧ್ಯಭಾಗಕ್ಕೆ ಸೇರಿಕೊಂಡಿದೆ. ಈ ವಿರಕ್ತಮಠಕ್ಕೆ 'ಶ್ರೀ ಚಿಕ್ಕವೀರ ದೇಶಿಕೇಂದ್ರಸ್ವಾಮಿ ಮಠ'ಎಂದೂ'ಲೀಲಾಖ್ಯವಿರಕ್ತಮಠ'ಎಂದು ರೂಢಿಗತವಾಗಿ ಕರೆಯಲ್ಪಟ್ಟಿದೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ವಿರಕ್ತಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಚಿಕ್ಕವೀರ ದೇಶಿಕೇಂದ್ರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಚನ್ನವೀರ ದೇಶಿಕೇಂದ್ರಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಚನ್ನಬಸವ ದೇಶಿಕೇಂದ್ರಸ್ವಾಮಿಗಳು (ಈಗಿನವರು)

ಪರಂಪರೆಯಲ್ಲಿ ಬರುವ ಶ್ರೀ ಚಿಕ್ಕವೀರ ದೇಶಿಕೇಂದ್ರ ಸ್ವಾಮಿಗಳು ಮಠದ ಅಭಿವೃದ್ಧಿಯನ್ನು ಕೈಗೊಂಡು ಹೆಸರು ಮಾಡಿದ್ದಾರೆ. ವಿಜಾಪುರ ಜಿಲ್ಲೆಯ ರೋಣಿಹಾಳು ಗ್ರಾಮದ ಹಿರೇಮಠದ ಶ್ರೀ ಲೀಲಾಖ್ಯವೀರ ಮಹೇಶ್ವರರ ಪುತ್ರರಾಗಿ ಜನಿಸಿದ ಶ್ರೀಚಿಕ್ಕ ವೀರ ದೇಶಿಕೇಂದ್ರ ಸ್ವಾಮಿಗಳು, ಬೆಳ್ಳುಚ್ಚಿಯ ಮಳೆ ಮಠದ ಗುರುಗಳಿಂದ ದೀಕ್ಷೆಯನ್ನು ಪಡೆದು, ದಕ್ಷಿಣಾಭಿಮುಖವಾಗಿ ಲೋಕಸಂಚಾರ ಕೈಗೊಂಡು ಬಂದು ಬೆಟ್ಟದಪುರದ ಮಠದಲ್ಲಿ ನೆಲೆಸಿದರು. ಈ ಮಠದಲ್ಲಿ ಅಧಿಕಾರ ನಡೆಸುತ್ತಿದ್ದ ವಯೋವೃದ್ಧ ಶ್ರೀ ವಿರಕ್ತ ಸ್ವಾಮಿಗಳ ಸೇವೆಗೈದ ಚಿಕ್ಕವೀರ ಸ್ವಾಮಿಗಳು, ಗುರುಗಳ ಪ್ರೀತಿಗೆ ಪಾತ್ರರಾಗಿ ಅವರ ಕರಕಮಲ ಸಂಜಾತರಾಗಿ ಬೆಳೆಯತೊಡಗಿದರು. ಶ್ರೀ ವಿರಕ್ತ ಸ್ವಾಮಿಗಳ ನಂತರ ಶ್ರೀ ಚಿಕ್ಕವೀರ ಸ್ವಾಮಿಗಳು ಉತ್ತರಾಧಿಕಾರಿಗಳಾಗಿ ನೇಮಕಗೊಂಡಾಗ, ಬೆಟ್ಟದಪುರದ ಕೆಲವು ಪಟ್ಟಭದ್ರರು ವಿರೋಧ ಮಾಡಿದರು. ಅಧಿಕಾರಕ್ಕಾಗಿ ಎಳ್ಳಷ್ಟೂ ಆಸೆಪಡದ ಶ್ರೀ ಚಿಕ್ಕವೀರ ದೇಶಿಕೇಂದ್ರ ಸ್ವಾಮಿಗಳು ವಿರೋಧದ ಮಧ್ಯೆ ಅಧಿಕಾರ ಪಡೆಯುವುದು ಸೂಕ್ತವಲ್ಲವೆಂದು, ವಿರೋಧಿಸಿದವರನ್ನು ಕ್ಷಮಿಸಿ ಮಠ ಬಿಟ್ಟು ಹೊರನಡೆದರು. ವಿರಕ್ತರಿಗೆ ಮಠ-ಕಾಡು ಒಂದೇ ಎಲ್ಲಿದ್ದರೂ ಅನುಷ್ಠಾನದಿಂದ ಭಕ್ತರನ್ನು ಉದ್ಧರಿಸುವುದೆಂದು ಪುನಃ ಉತ್ತರಾಭಿಮುಖವಾಗಿ ಸಂಚಾರ ಕೈಗೊಂಡರು. ಶ್ರೀ ಚಿಕ್ಕವೀರ ದೇಶಿಕೇಂದ್ರ ಸ್ವಾಮಿಗಳು ಭಿಕ್ಷಾಟನೆ ಮಾಡುತ್ತಾ ಹಾಸನಜಿಲ್ಲೆ

ಹೊಳೆನರಸೀಪುರ ತಾಲ್ಲೂಕಿನ ಮುಕುಂದೂರಿನ ತೋಪಿನಲ್ಲಿ ಅನುಷ್ಠಾನಕ್ಕೆ ಕುಳಿತುಕೊಂಡರು.

ವಿನಾಕಾರಣ ಕೆಲವರು ಮತ್ಸರಕ್ಕಾಗಿ ಮಾಡಿದ ವಿರೋಧಕ್ಕೆ ಮರು ಮಾತನಾಡದೆ ಮಠ ತ್ಯಜಿಸಿ ಹೊರಟುಹೋದ ಚಿಕ್ಕವೀರ ದೇಶಿಕೇಂದ್ರ ಸ್ವಾಮಿಗಳ ಮಹಿಮೆಯನ್ನು ಅರಿತ ಭಕ್ತರು,ಪರಿತಪಿಸಿ ಕೊನೆಗೆ ಎಲ್ಲಿದ್ದರೂ ಸರಿಯೇ ಹುಡುಕಿ ಕರೆತಂದು ಅಧಿಕಾರಕ್ಕೆ ತರಬೇಕೆಂದು ನಿರ್ಧರಿಸಿಕೊಂಡು, ಮುಕುಂದೂರಿನ ತಪೋಭೂಮಿಯಲ್ಲಿ ತಪೋನುಷ್ಠಾನಗೊಂಡಿದ್ದ ಸ್ವಾಮಿಗಳ ಹತ್ತಿರ ಬಂದು ಬೆಟ್ಟದಪುರಕ್ಕೆ ಆಗಮಿಸಿ ತಮ್ಮನ್ನು ಉದ್ಧರಿಸಬೇಕೆಂದು ಬೇಡಿಕೊಳ್ಳುತ್ತಾರೆ. ಭಕ್ತರ ಮನಃ ಸ್ಥಿತಿಯನ್ನು ಅರ್ಥಮಾಡಿ ಕೊಂಡ ಶ್ರೀ ಚಿಕ್ಕವೀರ ಸ್ವಾಮಿಗಳು ಬೆಟ್ಟದಪುರಕ್ಕೆ ಹಿಂದಿರುಗುತ್ತಾರೆ. ನಂತರ ವಿರಕ್ತಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿದರು. ಶ್ರೀ ಚಿಕ್ಕವೀರ ದೇಶಿಕೇಂದ್ರ ಸ್ವಾಮಿಗಳು ಮೈಸೂರು ದೊರೆ ಕೃಷ್ಣರಾಜೇಂದ್ರರ ಜನ್ನಹ ಮನ್ನಿಸಿ ಮೈಸೂರಿನಲ್ಲಿ ವಿದ್ಯಾರ್ಥಿನಿಲಯ ಸ್ಥಾಪಿಸಿದರು. ಈ ರೀತಿ ತಮ್ಮ ಜೀವಿತಾವಧಿಯಲ್ಲಿ ಅನೇಕ ಲೀಲೆಗೈದು, ಬೆಟ್ಟದಪುರ ಮಠವನ್ನು ಉಚ್ಛ್ರಾಯ ಸ್ಥಿತಿಗೆ ಕೊಂಡೊಯ್ದರು.

ವೈಭವದ ಮೆರಗು: ಶ್ರೀ ಚಿಕ್ಕವೀರ ದೇಶಿಕೇಂದ್ರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಶ್ರೀ ಚನ್ನವೀರ ದೇಶಿಕೇಂದ್ರ ಸ್ವಾಮಿಗಳು ಪಟ್ಟಕ್ಕೆ ಬಂದರು. ವೀರಶೈವ ಧರ್ಮದ ಅಷ್ಟಾವರಣ ಮತ್ತು ಷಟ್‌ಸ್ಥಲ ಆಚರಣೆಯಿಂದ ಸದಾಚಾರ ಸಂಪನ್ನರಾಗಿ, ಜಂಗಮ ಮೂರ್ತಿಗಳಾಗಿದ್ದರು. ಗುರುಗಳು ತಮ್ಮ ಹಿರಿಯ ಗುರುಗಳ ಚೈತನ್ಯ ರೂಪವಾಗಿ ಬೆಳಗಿ, ಬೆಟ್ಟದಪುರದ ವಿರಕ್ತ ಮಠವನ್ನು ಮುನ್ನಡೆಸಿದರು. ಮಠದ ಅಭಿವೃದ್ಧಿಗೆ ಕಂಕಣತೊಟ್ಟು, ಹಿರಿಯ ಗುರುಗಳಾದ ಶ್ರೀ ಚಿಕ್ಕವೀರ ದೇಶಿಕೇಂದ್ರ ಸ್ವಾಮಿಗಳ ಗದ್ದುಗೆಗೆ ಕಲ್ಲು ಕಟ್ಟಡ ಕಟ್ಟಿಸಿದ್ದಲ್ಲದೇ, ಬರುವ ಭಕ್ತರ ಆಶ್ರಯಕ್ಕೆ ವಸತಿ ಗೃಹಗಳನ್ನು ಕಟ್ಟಿಸಿ ಪುರಾತನ ಮಠವನ್ನು ಆಧುನೀಕರಣಗೊಳಿಸಿ ಮಠಕ್ಕೆ ಭವ್ಯತೆಯ ಮೆರಗು ಕೊಟ್ಟರು. ಶ್ರೀ ಚಿಕ್ಕವೀರ ದೇಶಿಕೇಂದ್ರ ಸ್ವಾಮಿಗಳು ಮೈಸೂರಿನಲ್ಲಿ ಕಟ್ಟಿಸಿದ್ದ ವಿದ್ಯಾರ್ಥಿ ನಿಲಯಕ್ಕೆ'ಶ್ರೀ ಚಿಕ್ಕವೀರಗುರು ಪ್ರಸಾದ ನಿಲಯ'ಎಂದು ನಾಮಕರಣ ಮಾಡಿ ವಿದ್ಯಾರ್ಥಿನಿಲಯವನ್ನು ವಿಸ್ತಾರಗೊಳಿಸಿ, ಹೆಚ್ಚು ವಿದ್ಯಾರ್ಥಿಗಳು ನೆಲೆಸಲು ಅನುವು ಮಾಡಿಕೊಟ್ಟರು. ಹೀಗೆ ಅನೇಕ ಜನಪರ ಕಾರ್ಯಗಳನ್ನು ಮಾಡಿದ ಶ್ರೀ ಚನ್ನವೀರ ದೇಶಿಕೇಂದ್ರ ಸ್ವಾಮಿಗಳು ಐವತ್ತೇಳು ವರ್ಷಗಳ ಕಾಲ ನಿರಂತರವಾಗಿ ಆಡಳಿತ ನಡೆಸಿದರು.

ಉತ್ತರಾಧಿಕಾರಿಗಳ ಆಯ್ಕೆ: ಶ್ರೀ ಚನ್ನವೀರ ದೇಶಿಕೇಂದ್ರ ಸ್ವಾಮಿಗಳು ತಮ್ಮ ಕ್ರಿಯಾಶೀಲ ವ್ಯಕ್ತಿತ್ವದಿಂದ ಮಠದ ಆಸ್ತಿಯನ್ನು ಹೆಚ್ಚಿಸಿ, ಈ ಮಠವನ್ನು ಸಮರ್ಥವಾಗಿ ಮುನ್ನಡೆಸಿಕೊಂಡು ಹೋಗಬಲ್ಲಂತಹ ಯೋಗ್ಯ ಉತ್ತರಾಧಿಕಾರಿಗಳನ್ನು ಆಯ್ಕೆ ಮಾಡಿ ಕೊಳ್ಳಲು ಮುಂದಾದರು. ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಧಾರವಾಡ ಜಿಲ್ಲೆಯ ನವಿಲುಗುಂದ ತಾಲ್ಲೂಕಿನ ಕಡಹಾಳು ಗ್ರಾಮದ ಹಿರೇಮಠದ ಶ್ರೀ ಫಕೀರಯ್ಯನವರ ಪುತ್ರರಾದ ಶ್ರೀ ಮೃತ್ಯುಂಜಯ ದೇವರನ್ನು ಆಯ್ಕೆಮಾಡಿಕೊಂಡರು. ನಂತರ ವಿರಕ್ತಾಶ್ರಮದ ದೀಕ್ಷಾ ವಿಧಿವಿಧಾನಗಳನ್ನು ಪೂರೈಸಿ ಲಿಂಗೈಕ್ಯರಾದರು. ಶ್ರೀ ಮೃತ್ಯುಂಜಯ ದೇವರು ಶ್ರೀ ಚನ್ನಬಸವ ದೇಶಿಕೇಂದ್ರ ಸ್ವಾಮಿಗಳೆಂದು ಅಭಿದಾನ ಪಡೆದು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸುತ್ತಿದ್ದಾರೆ. ಸಾಹಿತ್ಯ ಮತ್ತು ಧರ್ಮದ ಬಗ್ಗೆ ಅಪಾರ ಒಲವನ್ನು ಬೆಳೆಸಿಕೊಂಡು, ಧರ್ಮಪ್ರಸಾರ ಕಾರ್ಯವನ್ನು ಮಾಡುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಬೆಟ್ಟದಪುರದ ವಿರಕ್ತಮಠದ ಶ್ರೀ ಚಿಕ್ಕವೀರ ದೇಶಿಕೇಂದ್ರ ಸ್ವಾಮಿಗಳು, ಶ್ರೀ ಚನ್ನವೀರ ದೇಶಿಕೇಂದ್ರ ಸ್ವಾಮಿಗಳು ಮತ್ತು ಎಡೆಯೂರು ಶ್ರೀ ಸಿದ್ಧಲಿಂಗೇಶ್ವರರ ತೋರು ಗದ್ದುಗೆಗಳು ನಿರ್ಮಾಣವಾಗಿವೆ. ಈ ಮೂರು ಗದ್ದುಗೆಗಳಿಗೆ ಮಂಟಪ ನಿರ್ಮಿಸಿ, ಇವುಗಳಿಗೆ ತ್ರಿಕಾಲ ಪೂಜೆ ನಡೆಯುವಂತೆ ವ್ಯವಸ್ಥೆ ಮಾಡಲಾಗಿದೆ. ಜೂನ್ ತಿಂಗಳಲ್ಲಿ ಹಿರಿಯ ಗುರುಗಳ ಹೆಸರಿನಲ್ಲಿ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ನಡೆಸಿ, ನಾಡಿನ ಹಿರಿಯ ಗುರುಗಳು ಹಾಗೂ ಹೆಸರಾಂತ ಉಪನ್ಯಾಸಕರನ್ನು ಕರೆಸಿ, ಶರಣರ ಜೀವನ ಮೌಲ್ಯಗಳನ್ನು ಪ್ರಚಾರಪಡಿಸುವ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಹುಣ್ಣಿಮೆ, ಅಮಾವಾಸ್ಯೆ, ಕಾರ್ತೀಕ ಹಾಗೂ ಶ್ರಾವಣಮಾಸಗಳಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಮಠಕ್ಕೆ ಭೇಟಿ ನೀಡುವ ಭಕ್ತರಿಗೆ ಅನ್ನ ದಾಸೋಹದ ವ್ಯವಸ್ಥೆಯನ್ನು ಮಾಡಲಾಗಿದೆ.

ಶೈಕ್ಷಣಿಕ ಪ್ರಗತಿ: ಮೈಸೂರು ನಗರದಲ್ಲಿ ಹಿರಿಯ ಗುರುಗಳು ಸ್ಥಾಪಿಸಿದ ವಿದ್ಯಾರ್ಥಿನಿಲಯವು ಸುವ್ಯವಸ್ಥಿತವಾಗಿ ನಡೆಯಲು

ವ್ಯವಸ್ಥೆ ಮಾಡಿಸಿದ್ದಲ್ಲದೇ, ಬೆಟ್ಟದಪುರದ ಮಠದ ಆವರಣದಲ್ಲಿ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿ ಕಲಿಯುವ ಬಡ ಮಕ್ಕಳಿಗೆ ಆಶ್ರಯ ಕಲ್ಪಿಸಿದ್ದಾರೆ. ಅರಕಲಗೂಡು ತಾಲ್ಲೂಕಿನ ಬಸವಪಟ್ಟಣದಲ್ಲಿ ಒಂದು ಪ್ರೌಢಶಾಲೆ, ಪಿರಿಯಾಪಟ್ಟಣದಲ್ಲಿ ಒಂದು ಪ್ರೌಢಶಾಲೆ, ಬೆಟ್ಟದಪುರದ ಆವರಣದಲ್ಲಿ ಒಂದು ಪ್ರೌಢಶಾಲೆಯನ್ನು ಪ್ರಾರಂಭ ಮಾಡಿರುವ ಶ್ರೀ ಚನ್ನಬಸವ ಸ್ವಾಮಿಗಳು, ಮೈಸೂರಿನಲ್ಲಿ ನರ್ಸಿಂಗ್‌ಶಾಲೆ ಪ್ರಾರಂಭ ಮಾಡಿ, ಗ್ರಾಮೀಣ ಬಡಮಕ್ಕಳಿಗೆ ವಿದ್ಯಾದಾನ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

ವಿಳಾಸ: ಶ್ರೀ ಚನ್ನಬಸವ ದೇಶಿಕೇಂದ್ರ ಸ್ವಾಮಿಗಳು, ಶ್ರೀ ವಿರಕ್ತಮಠ, ಬೆಟ್ಟದಪುರ, ಪಿರಿಯಾಪಟ್ಟಣ ತಾ, ಮೈಸೂರು ಜಿಲ್ಲೆ.

ರಾವಂದೂರು

ಪಿರಿಯಾಪಟ್ಟಣ ತಾಲ್ಲೂಕಿನ ರಾವಂದೂರು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಹದಿನೈದು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ಮುರುಘಾಮಠವು ಅಸ್ತಿತ್ವದಲ್ಲಿದೆ.

ಮುರಘಾಮಠ: ರಾವಂದೂರು ಗ್ರಾಮದಲ್ಲಿ ಶ್ರೀ ಮುರುಘಾ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟ ಶ್ರೀ ಮುರುಘಾಮಠವು ಈ ಭಾಗದ ಧಾರ್ಮಿಕ ಕೇಂದ್ರವಾಗಿ ಬೆಳೆದಿದೆ. ಊರಿನ ಹೊರಭಾಗದಲ್ಲಿರುವ ಈ ಮಠ ೧೯೩೫ರಿಂದ ಅಭಿವೃದ್ಧಿಗೊಂಡು ಜನಮನ್ನಣೆ ಪಡೆಯತೊಡಗಿದೆ. ಹಿಂದೆ ಬೆಟ್ಟದಪುರದ ಶ್ರೀ ಚಿಕ್ಕವೀರ ದೇಶಿಕೇಂದ್ರ ಸ್ವಾಮಿಗಳು ಅನುಷ್ಠಾನಗೊಂಡ ಈ ಕ್ಷೇತ್ರದಲ್ಲಿ, ಶ್ರೀ ಮುರುಘಾ ಸ್ವಾಮಿಗಳು ಅಧಿಕಾರಕ್ಕೆ ಬಂದ ನಂತರ ಮಠದ ಧಾರ್ಮಿಕ ಚಟುವಟಿಕೆಗಳು ಚುರುಕುಗೊಂಡವು ನಂತರ ಶ್ರೀ ಮುರುಘಾ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಮೂವತ್ತೈದು ವರ್ಷಗಳ ಕಾಲ ಉತ್ತರಾಧಿಕಾರಿಗಳು ಯಾರೂ ಇಲ್ಲದೆ ಮಠವು ಖಾಲಿ ಉಳಿಯಿತು. ಈ ಸಂದರ್ಭದಲ್ಲಿ ಬೆಟ್ಟದಪುರದ ವಿರಕ್ತ ಮಠದ ಶ್ರೀ ಚನ್ನವೀರ ದೇಶಿಕೇಂದ್ರ ಸ್ವಾಮಿಗಳು ಹಾಗೂ ಶ್ರೀ ಚನ್ನಬಸವ ದೇಶಿಕೇಂದ್ರ ಸ್ವಾಮಿಗಳು ಮಠದ ಉಸ್ತುವಾರಿ ನೋಡಿಕೊಂಡು, ಮಠದ ಅಸ್ತಿತ್ವ ಉಳಿಯಲು ನೆರವಾದರು ಎಂದು ಈಗಿನ ಗುರುಗಳು ಸ್ಮರಿಸಿಕೊಳ್ಳುತ್ತಾರೆ.

ಪಟ್ಟಾಧಿಕಾರ: ಮುರುಘಾ ಸಮಯದ ಈ ಮಠದ ಆಡಳಿತವನ್ನು ಚಿತ್ರದುರ್ಗದ ಶ್ರೀ ಮುರುಘ ರಾಜೇಂದ್ರ ಬೃಹನ್ಮಠವು ವಹಿಸಿಕೊಂಡು, ೧೯೭೪ರಲ್ಲಿ ಶ್ರೀ ಮೋಕ್ಷಪತಿ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿ, ೧೯೭೫ರ ಜನವರಿ ಇಪ್ಪತ್ತೈದರಂದು ಪಟ್ಟಾಧಿಕಾರ ಮಾಡಿ ಮಠದ ಧಾರ್ಮಿಕ ಕಾರ್ಯಗಳು ಚುರುಕುಗೊಳ್ಳುವಂತೆ ಮಾಡಿದರು. ರಾವಂದೂರಿನ ಮುರುಘಾ ಮಠವು ಚಿತ್ರದುರ್ಗ ಬೃಹನ್ಮಠದ ಶಾಖಾಮಠವಾಗಿ ಬೆಳೆಯುತ್ತಿದೆ. ಶ್ರೀ ಮೋಕ್ಷಪತಿ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠದಲ್ಲಿ ಪ್ರತಿ ತಿಂಗಳು ಶರಣಸಂಗಮ ಕಾರ್ಯಕ್ರಮವನ್ನು ಹಮ್ಮಿಕೊಂಡು, ನಾಡಿನ ಅನೇಕ ವಿದ್ವಾಂಸರನ್ನು ಕರೆಸಿ ಉಪನ್ಯಾಸ ಕೊಡಿಸಿ ಗೌರವಿಸಿ ಕಳಿಸಿಕೊಡಲಾಗುತ್ತಿದೆ. ಇದರಿಂದ ಈ ಭಾಗದ ಭಕ್ತರಿಗೆ ಶರಣರ ಜೀವನ ಮೌಲ್ಯಗಳನ್ನು ತಿಳಿದುಕೊಳ್ಳಲು ನೆರವಾಗಿದೆ. ಪ್ರತಿವರ್ಷ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನರಿಗೆ ಧಾರ್ಮಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಔತಣ ನೀಡುತ್ತಿರುವುದು ಜನಮನ್ನಣೆಗೆ ಪಾತ್ರವಾಗಿದೆ.

ಅಭಿವೃದ್ಧಿಯದಿಕ್ಕಿನತ್ತ: ಶ್ರೀ ಮೋಕ್ಷಪತಿ ಸ್ವಾಮಿಗಳು ಜನಪರ ಕಾರ್ಯಕ್ರಮಗಳ ಜೊತೆಗೆ ಮಠದ ಅಭಿವೃದ್ಧಿಗೆ ಯೋಜನೆಯನ್ನು ತಯಾರಿಸಿಕೊಂಡಿದ್ದಾರೆ. ಸಾಹಿತ್ಯ, ಸಾಂಸ್ಕೃತಿಕ, ವೈಚಾರಿಕತೆ ಮತ್ತು ಪರಿಸರದ ಬಗ್ಗೆ ಹೆಚ್ಚು ಆಸಕ್ತಿಯನ್ನು ವಹಿಸಿರುವ ಗುರುಗಳು, ಮಠದ ಆವರಣವನ್ನು ಸ್ವಚ್ಛಗೊಳಿಸಿ ಹೂಗಿಡಗಳ ಮಧ್ಯೆ ಕಂಗೊಳಿಸುವಂತೆ ಮಾಡಿದ್ದಾರೆ. ವರ್ಷದಿಂದ ವರ್ಷಕ್ಕೆ ಹೆಚ್ಚು ಭಕ್ತರನ್ನು ಆಕರ್ಷಿಸಿಕೊಳ್ಳುತ್ತಿರುವ ಗುರುಗಳು, ಮಠದ ಆವರಣದಲ್ಲಿ ದಾಸೋಹ ಮಂದಿರ ಹಾಗೂ ಪ್ರಾರ್ಥನಾ ಮಂದಿರವನ್ನು ನಿರ್ಮಿಸಿಕೊಂಡಿದ್ದಾರೆ. ಕೃಷ್ಣರಾಜೇಂದ್ರ ಒಡೆಯರ ಕಾಲದಲ್ಲಿ ಬಳುವಳಿಯಾಗಿ ಬಂದಿರುವ ಒಂಬತ್ತು ಎಕರೆ ಗದ್ದೆ, ಹದಿನಾಲ್ಕು ಎಕರೆ ಜಮೀನನ್ನು ಅಭಿವೃದ್ಧಿಗೊಳಿಸಿ ತೆಂಗಿನ ತೋಟವನ್ನು ಬೆಳೆಸಿದ್ದಾರೆ. ಮಠದ ಅಭಿವೃದ್ಧಿಗೆ ಶ್ರಮಿಸುತ್ತಿರುವ ಶ್ರೀ ಮೋಕ್ಷಪತಿ ಸ್ವಾಮಿಗಳು ಚಿತ್ರದುರ್ಗ ಬೃಹನ್ಮಠದ ಶ್ರೀ ಶಿವಮೂರ್ತಿ ಮುರುಘ ರಾಜೇಂದ್ರ ಸ್ವಾಮಿಗಳ ಮಾರ್ಗದರ್ಶನದಲ್ಲಿ, ಮಠವನ್ನು ಧಾರ್ಮಿಕ ಹಾಗೂ ಜ್ಞಾನವೃದ್ಧಿಯ ತಾಣವಾಗಿ ರೂಪುಗೊಳ್ಳುವಂತೆ ಮಾಡುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಮೋಕ್ಷಪತಿ ಸ್ವಾಮಿಗಳು, ಶ್ರೀ ಮುರುಘಾಮಠ, ರಾವಂದೂರು,ಪಿರಿಯಾಪಟ್ಟಣ ತಾಲ್ಲೂಕು, ಮೈಸೂರುಜಿಲ್ಲೆ.

❑

ಮೈಸೂರು ತಾಲ್ಲೂಕು

ಮೈಸೂರು ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿ ಒಂದಾದ ಮೈಸೂರು ತಾಲ್ಲೂಕು ಐತಿಹಾಸಿಕ, ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಧಾರ್ಮಿಕವಾಗಿ ಹೆಸರು ಪಡೆದಿದೆ. ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಹೆಚ್ಚು ಪ್ರಚಾರ ಪಡೆದು ಬೆಳೆದಿರುವುದು ಕಂಡುಬರುತ್ತದೆ. ಪ್ರಸ್ತುತ ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಒಟ್ಟು ಹದಿನೈದು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿವೆ.

ದಂಡಿಕೆರೆ

ಮೈಸೂರು ತಾಲ್ಲೂಕಿನ ದಂಡಿಕೆರೆಯು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ದಂಡಿಕೆರೆಮಠವು ಅಸ್ತಿತ್ವದಲ್ಲಿದೆ.

ದಂಡಿಕೆರಮಠ: ದಂಡಿಕೆರೆಯ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ದಂಡಿಕೆರೆ ಮಠವು ಶ್ರೀಶೈಲ ಪೀಠದ ಶಾಖಾಮಠವಾಗಿ ಬೆಳೆದಿದೆ. ಪುತ್ರವರ್ಗದ ಪರಂಪರೆಯಲ್ಲಿ ಬೆಳೆದ ಈ ಮಠವನ್ನು ಶ್ರೀ ಶಿವನಂಜ ಶಿವಾಚಾರ್ಯ ಸ್ವಾಮಿಗಳು ಸ್ಥಾಪಿಸಿರಬಹುದೆಂದು ಹೇಳಲಾಗುತ್ತದೆ.

ಪರಂಪರೆ:

೧. ಷ.ಬ್ರ.ಶ್ರೀ ಶಿವನಂಜ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ವಿದ್ವಾನ್ ಮಹಾಂತ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯಸ್ವಾಮಿಗಳು

ಈ ರೀತಿ ಪರಂಪರೆಯ ಕೆಲವು ಗುರುಗಳ ಹೆಸರುಗಳನ್ನು ದಾಖಲಿಸಬಹುದಾಗಿದೆ. ಪ್ರಥಮ ಗುರುಗಳಿಬ್ಬರ ಬಗ್ಗೆ ಮಾಹಿತಿ ಲಭ್ಯವಿಲ್ಲ. ಪರಂಪರೆಯ ಮೂರನೆಯ ಗುರುಗಳಾಗಿ ಅಧಿಕಾರ ನಡೆಸಿದ ಶ್ರೀ ವಿದ್ವಾನ್ ಮಹಾಂತ ಸ್ವಾಮಿಗಳು ಮೈಸೂರು ತಾಲ್ಲೂಕಿನ ಕೀಳನಪುರ ಗ್ರಾಮದ ಶ್ರೀ ಲಿಂಗಪ್ಪ ಮತ್ತು ಶ್ರೀಮತಿ ಮರಮ್ಮನವರ ಪುತ್ರರಾಗಿ ಜನಿಸಿ, ೧೯೪೫ರಲ್ಲಿ ಅಧಿಕಾರವನ್ನು ವಹಿಸಿಕೊಂಡಿದ್ದರು. ಇವರು ಸಂಸ್ಕೃತದಲ್ಲಿ ಪದವಿ ಪಡೆದು ನಂತರ ಸಂಸ್ಕೃತ ಕಾಲೇಜಿನಲ್ಲಿ ವೀರಶೈವಆಗಮ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ೧೯೮೨ರಲ್ಲಿ ನಿವೃತ್ತಿಗೊಂಡರು. ಗುರುಗಳು ಕಾಯಕದ ಜತೆಗೆ ಧಾರ್ಮಿಕ ಕಾರ್ಯಗಳನ್ನು ನಡೆಸಿದ್ದಾರೆ. ಗುರುಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ದಂಡಿಕೆರೆಯ ಶ್ರೀನಾಗೇಶಪ್ಪ ಮತ್ತು ಶ್ರೀಮತಿ ದೇವಮ್ಮನವರ ಪುತ್ರರಾಗಿಜನಿಸಿದ, ಶ್ರೀ ಬಸವಲಿಂಗ ಸ್ವಾಮಿಗಳನ್ನು ನೇಮಿಸಿಕೊಂಡು ೧೯೯೫ರಲ್ಲಿ ಅಧಿಕಾರ ನೀಡಿದ್ದಾರೆ. ಮಠದ ಆವರಣದಲ್ಲಿ ಎರಡು ಗದ್ದುಗೆಗಳಿದ್ದು ಇವುಗಳಿಗೆ ನಿತ್ಯಪೂಜೆ ಕಾರ್ತೀಕ ಮತ್ತು ಶಿವರಾತ್ರಿಗಳಲ್ಲಿ ಹಿರಿಯ ಗುರುಗಳ ಆರಾಧನೆಯನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ದಂಡಿಕೆರೆಮಠ, ದಂಡಿಕೆರೆ, ಮೈಸೂರು ತಾಲ್ಲೂಕು.

ಬರಡನಪುರ

ಮೈಸೂರು ತಾಲ್ಲೂಕಿನ ಬರಡನಪುರಕ್ಕೆ ಬಣ್ಣದಪುರ ಎಂದೂ ಸಹ ಕರೆಯಲಾಗುತ್ತಿದೆ. ಅಭಿವೃದ್ಧಿಯನ್ನು ಕಂಡ ಈ ಗ್ರಾಮವು ಮೈಸೂರಿನಿಂದ ನೈರುತ್ಯಕ್ಕೆ ಹದಿನೆಂಟು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ಪಟ್ಟದಮಠವು ಅಸ್ತಿತ್ವದಲ್ಲಿದೆ.

ಪಟ್ಟದಮಠ: ಬರಡನಪುರ ಉತ್ತರದ ಹೊರಭಾಗದಲ್ಲಿ, ಎಪ್ಪತ್ತು ವರ್ಷಗಳ ಹಿಂದೆ ಶ್ರೀ ಮಹಾಂತೇಶ್ವರ ಸ್ವಾಮಿಗಳಿಂದ ದಾಸೋಹಮಠವು ಸ್ಥಾಪನೆಯಾಗಿದೆ. ಯಳಂದೂರು ತಾಲ್ಲೂಕಿನ ಮರಾಪಾಳ್ಯದ ಶ್ರೀ ಮಹಾಂತೇಶ್ವರ ಸ್ವಾಮಿಗಳು ಪ್ರಕೃತಿ ಸಿರಿಯ ಮಧ್ಯೆ ಧರ್ಮಬೀಜವನ್ನು ಬಿತ್ತಿ ಪೋಷಿಸಿದರು. ಸುಮಾರು ಎಪ್ಪತ್ತು ವರ್ಷಗಳ ಹಿಂದೆ ಬಿತ್ತಿದ ಬೀಜ ಈಗ ಹೆಮ್ಮರವಾಗಿ ಬೆಳೆದು, ಧರ್ಮದ ನೆರಳು ನೀಡಲು ಮುಂದಾಗಿದೆ. ಮಠದ ಸ್ಥಾಪನೆಯ ಉದ್ದೇಶ ಫಲಿಸತೊಡಗಿದಾಗ, ಶ್ರೀ ಮಹಾಂತ ಸ್ವಾಮಿಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಪರಶಿವಮೂರ್ತಿ ಸ್ವಾಮಿಗಳನ್ನು ಆಯ್ಕೆಮಾಡಿಕೊಂಡು

ಪಟ್ಟಾಧಿಕಾರ ಮಾಡಿಸಿದ್ದರು. ಮಠದ ಎಲ್ಲಾ ಜವಾಬ್ದಾರಿಯನ್ನು ತಮ್ಮ ಉತ್ತರಾಧಿಕಾರಿಗಳಿಗೆ ಒಪ್ಪಿಸಿ ವಿಶ್ರಾಂತ ಜೀವನ ನಡೆಸುತ್ತಿದ್ದ ಹಿರಿಯ ಚೇತನ ಶ್ರೀ ಮಹಾಂತ ಸ್ವಾಮಿಗಳು, ೧೯೭೯ ರಲ್ಲಿ ಲಿಂಗೈಕ್ಯರಾಗಿದ್ದಾರೆ.

ಗದ್ದುಗೆ ಸ್ಥಾಪನೆ: ನೂತನ ಮಠದ ಮೊದಲ ಗುರುಗಳು ಲಿಂಗೈಕ್ಯರಾದ ಮೇಲೆ ಇವರ ಕರಕಮಲ ಸಂಜಾತರಾದ ಶ್ರೀಪರಶಿವ ಮೂರ್ತಿ ಸ್ವಾಮಿಗಳು ಗುರುಗಳ ಸಮಾಧಿಗೆ ಗದ್ದುಗೆ ನಿರ್ಮಿಸಿ, ಭವ್ಯ ಮಂಟಪವನ್ನು ಕಟ್ಟಿಸಿ ತಮ್ಮ ಹಿರಿಯ ಗುರುಗಳು ತೋರಿಸಿಕೊಟ್ಟ ದಾರಿಯಲ್ಲಿ ಮಠವನ್ನು ಮುನ್ನಡೆಸತೊಡಗಿದ್ದಾರೆ. ಮಠದ ಆವರಣದಲ್ಲಿ ಕಲ್ಯಾಣಮಂಟಪ, ಕಚೇರಿಯ ಕಟ್ಟಡ ಹಾಗೂ ದಾಸೋಹ ಮಂದಿರವನ್ನು ನಿರ್ಮಿಸಿರುವ ಗುರುಗಳು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ಮಠದಆಸ್ತಿ: ಮಠದ ಸುತ್ತಮುತ್ತ ಇರುವ ಒಂದುಎಕರೆ ಆಸ್ತಿ ಬಿಟ್ಟರೆ ಮಠಕ್ಕೆ ಬೇರೆ ಕಡೆ ಆಸ್ತಿ ಇಲ್ಲ. ಆದರೂ ಗುರುಗಳು ಕ್ರಿಯಾಶೀಲತೆಯಿಂದ ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ ಭಕ್ತರ ಮನಗೆದ್ದಿದ್ದಾರೆ. ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು ಇವರ ಕ್ರಿಯಾಶೀಲತೆಯನ್ನು ಗಮನಿಸಿ, ಸಂಗಮ ಕ್ಷೇತ್ರದ ಶ್ರೀಕಾರ್ಯ ಸ್ವಾಮಿ ಮಠದ ಅಧಿಕಾರ ನೀಡಿ ಅಲ್ಲಿನ ಆಡಳಿತವನ್ನು ಇವರಿಗೆ ಒಪ್ಪಿಸಿದ್ದಾರೆ.

ಭಿಕ್ಷಾ ಕಾರ್ಯ : ಮೊದಲು ಭಿಕ್ಷಾಮಠವಾಗಿ ಪ್ರಾರಂಭಗೊಂಡ ಈ ಮಠ, ನಂತರ ಪಟ್ಟದ ಮಠವಾಗಿ ಪರಿವರ್ತನೆಯಾಯಿತು. ಆದರೂ ಭಿಕ್ಷದ ಮರಿಗಳಾಗಿ ಶ್ರೀ ನಾಗಪ್ಪ ಸ್ವಾಮಿಗಳನ್ನು ನೇಮಿಸಿ ಮಠದಲ್ಲಿ ದಾಸೋಹ ಕ್ರಿಯೆ ನಿಲ್ಲದಂತೆ ಮಾಡಿದ್ದಾರೆ. ಕಂತೆ ಭಿಕ್ಷದಿಂದ ಬರುವ ಪ್ರಸಾದ ಸಾಕಾಗದಿದ್ದಾಗ ಪ್ರತ್ಯೇಕ ಪ್ರಸಾದ ಮಾಡಿಸಿ ಮಠಕ್ಕೆ ಬರುವ ಭಕ್ತರಿಗೆ ನೀಡುವ ಪರಿಪಾಠ ಬೆಳೆದಿದೆ. ಕಲಿಯುವ ಬಡಮಕ್ಕಳಿಗೆ ಮಠದಲ್ಲಿ ಉಚಿತ ಊಟ ಮತ್ತು ವಸತಿಯನ್ನು ಕಲ್ಪಿಸಿಕೊಟ್ಟಿದ್ದಾರೆ. ಪ್ರತಿವರ್ಷ ಜಯಪುರಕ್ಕೆ ಎಸ್.ಎಸ್.ಎಲ್.ಸಿ ಪರೀಕ್ಷಾ ಕೇಂದ್ರಕ್ಕೆ ಬರುವ ಮಕ್ಕಳಿಗೆ ಪರೀಕ್ಷೆ ಮುಗಿಯುವವರೆಗೆ ಮಠದಲ್ಲೇ ಆಶ್ರಯ ಕೊಟ್ಟು ವಸತಿ ಮತ್ತು ಪ್ರಸಾದದ ವ್ಯವಸ್ಥೆಯನ್ನು ಮಾಡುತ್ತಾರೆ. ಪ್ರತಿವರ್ಷ ಸುಗ್ಗಿಯಕಾಲದಲ್ಲಿ ಭಿಕ್ಷಕ್ಕಾಗಿ ಭಕ್ತರ ಬಳಿಗೆ ಹೋಗಿ, ವರ್ಷಕ್ಕೆ ಬೇಕಾಗುವಷ್ಟು ಭತ್ತವನ್ನು ಸಂಗ್ರಹಿಸುತ್ತಾರೆ.

ಧಾರ್ಮಿಕ ಕಾರ್ಯಗಳು: ಪ್ರತಿ ಅಮಾವಾಸ್ಯೆಯಲ್ಲಿ ಗದ್ದುಗೆಗೆ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಅಂದು ಸೇರುವ ನೂರಾರು ಭಕ್ತರಿಗೆ ದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಪ್ರತಿವರ್ಷ ಹಿರಿಯ ಲಿಂಗೈಕ್ಯ ಗುರುಗಳ ಆರಾಧನೆಯನ್ನು ಹಮ್ಮಿಕೊಂಡು ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ವಿಚಾರಗೋಷ್ಠಿ ಏರ್ಪಡಿಸಿ ಜ್ಞಾನ ಹಾಗು ಅನ್ನ ದಾಸೋಹ ಸೇವೆ ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಪರಶಿವಮೂರ್ತಿ ಸ್ವಾಮಿಗಳು, ಶ್ರೀ ಪಟ್ಟದ ಮಠ, ಬರಡನಪುರ, ಮೈಸೂರು ತಾಲ್ಲೂಕು.

ಮೈಸೂರು

ಸಾಂಸ್ಕೃತಿಕ ರಾಜಧಾನಿಯೆಂದೇ ಹೆಸರಾಗಿರುವ ಮೈಸೂರು ಪುರಾತನ ಪರಂಪರೆಯ ಪಟ್ಟಣವಾಗಿ, ಐತಿಹಾಸಿಕ, ಸಾಂಸ್ಕೃತಿಕ, ಸಾಹಿತ್ಯಿಕ ಹಾಗೂ ಧಾರ್ಮಿಕವಾಗಿ ಅಭಿವೃದ್ಧಿಯನ್ನು ಸಾಧಿಸಿದೆ. ಇಲ್ಲಿ ವೀರಶೈವಧರ್ಮವು ಪ್ರಬಲವಾಗಿ ಬೆಳೆದು ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಹನ್ನೊಂದು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿವೆ.

ಅರಮನೆ ಪಂಚಗವಿಮಠ: ಮೈಸೂರು ನಗರದ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಅರಮನೆ ಪಂಚಗವಿ ಮಠವು ಮೈಸೂರು ಸಂಸ್ಥಾನದ ಮಠವಾಗಿ ಸ್ಥಾಪನೆಯಾಗಿದೆ. ನಲವತ್ತು ಎಕರೆ ಪ್ರದೇಶದಲ್ಲಿ ಈ ಮಠವು ರೂಪುಗೊಂಡಿದೆ. ಪೂರ್ಣವಾಗಿ ರಾಜಾಶ್ರಯದಲ್ಲಿಯೇ ಬೆಳೆದು, ತನ್ನ ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿದೆ.

ಮಠ ಸ್ಥಾಪನೆ: ಅರಮನೆ ಪಂಚಗವಿ ಮಠವು ಶ್ರೀ ಮಹಾಂತ ಸ್ವಾಮಿಗಳಿಂದ ಪ್ರಾರಂಭಗೊಂಡಿದೆ ಎಂದು ಹೇಳಲಾಗುತ್ತಿದೆ. ಇವರು ಉತ್ತರದ ಕಡೆಯಿಂದ ಲೋಕಸಂಚಾರ ಕೈಗೊಂಡು ಮೈಸೂರಿಗೆ ಆಗಮಿಸಿದರು. ಮಹಾನ್ ವಿದ್ವಾಂಸರಾದ ಗುರುಗಳು ತಪೋನುಷ್ಠಾನ, ಶಿವಪೂಜಾನಿಷ್ಠೆಯಿಂದ ಅಪಾರ ಭಕ್ತರನ್ನು ಸಂಪಾದಿಸಿಕೊಂಡಿದ್ದರು. ಇವರ ನಂತರ ಅಧಿಕಾರಕ್ಕೆ ಬಂದ

ಶ್ರೀಶಿವಬಸವ ಸ್ವಾಮಿಗಳು ಮೈಸೂರಿನ ಅರಸರಾದ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಬಂದಿದ್ದ ಬೆನ್ನುಪಣಿ ರೋಗವನ್ನು ತಮ್ಮ ತಪೋಶಕ್ತಿಯಿಂದ ಪಡೆದು ರೋಗದ ನೋವನ್ನು ಅನುಭವಿಸಿದರು. ಇಂತಹ ಮಹಿಮಾಶಾಲಿಗಳು ಮಠವನ್ನು ಅಭಿವೃದ್ಧಿ ಪಡಿಸಿ ಸಮಾಜವನ್ನು ಬೆಳಸಿದರು.

ಪರಂಪರೆ:

೧. ಶ್ರೀ ಮ.ನಿ.ಪ್ರ. ಮಹಾಲಿಂಗಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಶಿವಬಸವಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಮಹಾಂತಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಗುರುಬಸವಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಕರಿಬಸವಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಮಹಾಲಿಂಗಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಗೌರೀಶಂಕರಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಶಿವಪ್ರಸಾದಸ್ವಾಮಿಗಳು
(ನಂತರ ಇಪ್ಪತ್ತು ವರ್ಷಗಳಲ್ಲಿ ಐದು ಜನ ಗುರುಗಳು ಧಾರ್ಮಿಕ ಕಾರ್ಯ ನಡೆಸಿ ಹೋಗಿದ್ದಾರೆ)
೯. ಶ್ರೀ ಮ.ನಿ.ಪ್ರ. ವಿದ್ವಾನ್ ಮಹಾಂತ ಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಇತಿಹಾಸ ಪ್ರಸಿದ್ಧ ಈ ಮಠದಲ್ಲಿ ಶ್ರೀ ಶಿವಬಸವ ಸ್ವಾಮಿಗಳ ನಂತರ ನಾಲ್ಕು ಜನ ಗುರುಗಳು ಅಧಿಕಾರವನ್ನು ನಡೆಸಿದ್ದಾರೆ. ನಂತರ ಪರಂಪರೆಯ ಏಳನೆಯ ಗುರುಗಳಾಗಿ ಶ್ರೀ ಗೌರಿಶಂಕರ ಸ್ವಾಮಿಗಳು ಅಧಿಕಾರಕ್ಕೆ ಬಂದು ಈ ಮಠವನ್ನು ಹೆಚ್ಚು ಪ್ರಬುದ್ಧಮಾನಕ್ಕೆ ತಂದಿದ್ದಾರೆ. ಶ್ರೀ ಗೌರಿಶಂಕರ ಸ್ವಾಮಿಗಳು ಕಾಶಿಯಲ್ಲಿ ಸಂಸ್ಕೃತದಲ್ಲಿ ಪಾಂಡಿತ್ಯವನ್ನು ಪಡೆದು, ಅಲ್ಲಿಯೇ ಕೆಲವು ದಿನ ಸಂಸ್ಕೃತ ಪಂಡಿತರಾಗಿ ಜ್ಯೋತಿಷ್ಯ, ವೇದ,ಆಗಮ ಹಾಗೂ ವಿಶಿಷ್ಟಾದ್ವೈತದ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದರು. ನಂತರ ಮೈಸೂರಿನ ಅರಮನೆ ಶ್ರೀ ಪಂಚಗವಿ ಮಠದ ಆಡಳಿತವನ್ನು ವಹಿಸಿಕೊಂಡರು. ಮೈಸೂರಿನಲ್ಲಿ ನೆಲೆಸಿದ್ದ ಕೆಲವೇ ಸಂಸ್ಕೃತ ಪಂಡಿತರುಗಳಲ್ಲಿ ಶ್ರೀ ಗೌರಿಶಂಕರ ಸ್ವಾಮಿಗಳು ಕೂಡ ಒಬ್ಬರು. ಇವರ ಪಾಂಡಿತ್ಯದ ಪ್ರಭಾವಲಯದಲ್ಲಿ ಅನೇಕ ಪಂಡಿತರು ಬೆಳಕನ್ನು ಕಂಡಿದ್ದಾರೆ.ಸುತ್ತೂರು ಶ್ರೀಶಿವರಾತ್ರೀಶ್ವರಮಠದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಮತ್ತು ಸಿರಿಗೆರೆಯ ತರಳಬಾಳುಬೃಹನ್ಮಠದ ಲಿಂಗೈಕ್ಯ ಹಿರಿಯ ಗುರುಗಳಾದ ಶ್ರೀ ಶಿವಕುಮಾರ ಸ್ವಾಮಿಗಳು ಇವರ ಆಶ್ರಯದಲ್ಲಿ ಸಂಸ್ಕೃತ ಪಾಂಡಿತ್ಯವನ್ನು ಪಡೆದ ಪ್ರಮುಖ ಗುರುಗಳಾಗಿದ್ದಾರೆ.

ಶ್ರೀ ಗೌರಿಶಂಕರ ಸ್ವಾಮಿಗಳ ನಂತರ ಮಠದ ಆಡಳಿತವನ್ನು ವಹಿಸಿಕೊಂಡ ಶ್ರೀ ಶಿವಪ್ರಸಾದ ಸ್ವಾಮಿಗಳು ಧಾರ್ಮಿಕ ಚಟುವಟಿಕೆಗಳನ್ನು ನಡೆಸುತ್ತಾ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಇವರು ೧೯೮೨ರಲ್ಲಿ ಶ್ರೀ ಗೌರಿಶಂಕರ ವಿದ್ಯಾಸಂಸ್ಥೆಯನ್ನು ಪ್ರಾರಂಭಿಸಿ, ನಿರ್ಗತಿಕ ಮಕ್ಕಳಿಗೆ ಅನಾಥಾಲಯ ಹಾಗೂ ಪ್ರಾಥಮಿಕ ಪಾಠಶಾಲೆಯನ್ನು ಪ್ರಾರಂಭಿಸಿದ್ದರು. ಈಗಿನ ಮಠಾಧ್ಯಕ್ಷರಾದ ಶ್ರೀ ಮಹಾಂತ ಸ್ವಾಮಿಗಳು ಮಠದ ಆಡಳಿತ ಹಾಗೂ ವಿದ್ಯಾ ಸಂಸ್ಥೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಐದು ಗದ್ದುಗೆಗಳಿದ್ದು ಇವುಗಳಿಗೆ ನಿತ್ಯಪೂಜೆಯನ್ನು ನಡೆಸಲಾಗುತ್ತಿದೆ. ಶ್ರೀ ಗೌರೀಶಂಕರ ಸ್ವಾಮಿಗಳ ಪುಣ್ಯಾರಾಧನೆಯನ್ನು ವರ್ಷಕ್ಕೊಮ್ಮೆ ಆಚರಿಸಲಾಗುತ್ತಿದೆ. ಮಠದಲ್ಲಿ ಬಡವಿದ್ಯಾರ್ಥಿಗಳಿಗಾಗಿ ಪ್ರಸಾದ ನಿಲಯ ಪ್ರಾರಂಭಿಸಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ.ಮಹಾಂತ ಸ್ವಾಮಿಗಳು, ಶ್ರೀ ಅರಮನೆ ಪಂಚಗವಿಮಠ, ಚಾಮುಂಡಿ ಬೆಟ್ಟದತಪ್ಪಲು, ಮೈಸೂರು.

ಅನ್ನದಾನೇಶ್ವರಮಠ: ಮೈಸೂರಿನ ಸಿದ್ಧಾರ್ಥನಗರ ಬಡಾವಣೆಯಲ್ಲಿ ಶ್ರೀ ಅನ್ನದಾನೇಶ್ವರ ಮಠವು ಸ್ಥಾಪನೆಯಾಗಿದೆ. ಮಠದ ಮೂಲ ಕರ್ತೃಗಳಾದ ಶ್ರೀ ಅನ್ನದಾನೇಶ್ವರ ಸ್ವಾಮಿಗಳು ಮಂಡ್ಯ ಜಿಲ್ಲೆಯ ಅವೇರಹಳ್ಳಿಯ ಮಠದ ಮಠಾಧೀಶರಾಗಿದ್ದರು. ಇವರು ಲೋಕಸಂಚಾರ ಮಾಡಿ, ಮೈಸೂರಿನಲ್ಲಿ ಅನುಷ್ಠಾನ ಕೈಗೊಂಡು ಮಠವನ್ನು ಸ್ಥಾಪಿಸಿದರು. ಶ್ರೀ ಅನ್ನ

ದಾನೇಶ್ವರರು ಮಠದ ಸ್ಥಾಪಕರಾಗಿದ್ದರಿಂದ 'ಶ್ರೀ ಅನ್ನದಾನೇಶ್ವರಮಠ' ಎಂಬ ಹೆಸರು ಬಂದಿದೆ. ಶ್ರೀ ಅನ್ನದಾನೇಶ್ವರರು ಮಠದಲ್ಲಿ ಧಾರ್ಮಿಕ ಚಟುವಟಿಕೆಗಳು ನಡೆಯುವಂತೆ ವ್ಯವಸ್ಥೆಗೊಳಿಸಿ, ಪುನಃ ಲೋಕಸಂಚಾರವನ್ನು ಕೈಗೊಂಡು ಅವೇರಹಳ್ಳಿಯಲ್ಲಿ ಲಿಂಗೈಕ್ಯರಾದರು.

ಸ್ಥಳಾಂತರ: ಶ್ರೀ ಅನ್ನದಾನೇಶ್ವರ ಸ್ವಾಮಿಗಳು ಸ್ಥಾಪಿಸಿದ ಮಠವು ಬೆಂಕಿ ಅನಾಹುತದಿಂದ ನಶಿಸಿ ಹೋದಾಗ,ಮಠದ ಆಡಳಿ ತವು ಅರಮನೆಯ ವಶದಲ್ಲಿದ್ದ ಸ್ಥಳಕ್ಕೆ ಸ್ಥಳಾಂತರಗೊಂಡು ಪುನರ್‌ಸ್ಥಾಪನೆಯಾಗಿದೆ. ಶ್ರೀ ಮಹದೇಶ್ವರರ ತೋರುಗದ್ದುಗೆ ಇದ್ದ ಈ ಸ್ಥಳವು ಅರಮನೆಯ ವಶದಲ್ಲಿತ್ತು. ನಿತ್ಯಪೂಜಾ ವ್ಯವಸ್ಥೆಯನ್ನು ಅರಮನೆಯ ವತಿಯಿಂದ ನಡೆಸಿಕೊಂಡು ಬರಲಾಗುತ್ತಿತ್ತು. ಇಲ್ಲಿನ ಶ್ರೀ ಮಹದೇಶ್ವರರ ತೋರು ಗದ್ದುಗೆಯ ಎದರಿಗೆ ಬೃಹದಾಕಾರದ ಕಲ್ಯಾಣಿ ನಿರ್ಮಾಣಗೊಂಡಿದ್ದು, ಸುಂದರ ವಾತಾವರಣವನ್ನು ಸೃಷ್ಟಿಸಿದೆ. ಪುರಾತನ ಪರಂಪರೆಯ ಈ ಮಠವು ರಾಜಾಶ್ರಯದಿಂದ ಬೆಳೆದು ವೀರಶೈವ ಧರ್ಮವನ್ನು ಹೆಚ್ಚು ಪ್ರಚಾರಗೊಳಿಸಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಅನ್ನದಾನೇಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಶಿವಾನಂದಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಅನ್ನದಾವಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಶಿವನಂಜ ದೇಶಿಕೇಂದ್ರಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಶಿವಲಿಂಗ ಶಿವಯೋಗಿಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಮಹಾಂತಪ್ಪಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಶಿವಾನಂದಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಶ್ರೀ ಅನ್ನದಾನೇಶ್ವರ ಸ್ವಾಮಿಗಳ ನಂತರ ಶ್ರೀ ಶಿವಾನಂದ ಶಿವಯೋಗಿಗಳು ಮಠದ ಆಡಳಿತವನ್ನು ನಡೆಸಿಕೊಂಡು ಬರುತ್ತಿದ್ದರು. ಇವರ ನಂತರ ಮಠದ ಆಡಳಿತವನ್ನು ಶ್ರೀ ಅನ್ನದಾನ ಸ್ವಾಮಿಗಳು ವಹಿಸಿಕೊಂಡರು. ಇವರು ಮೂಲ ಮಠ ಅವೇರಹಳ್ಳಿಯ ಮಠದ ಬಗ್ಗೆ ಹೆಚ್ಚು ಗಮನ ಹರಿಸಲಿಲ್ಲ. ನಂತರ ಶ್ರೀ ಶಿವನಂಜ ದೇಶಿಕೇಂದ್ರ ಸ್ವಾಮಿಗಳು ಅಧಿಕಾರಕ್ಕೆ ಬಂದು, ಎರಡೂ ಮಠಗಳನ್ನು ಅಭಿವೃದ್ಧಿಪಡಿಸಿದರು. ನಂತರ ಬಂದ ಶ್ರೀ ಶಿವಲಿಂಗ ಶಿವಯೋಗಿಗಳು ಶತಾಯುಷಿಗಳಾಗಿ ಮಠವನ್ನು ಅಭಿವೃದ್ಧಿಪಡಿಸಿದರು. ಇವರ ಕಾಲದಲ್ಲಿ ಮಠವು ಸ್ಥಳಾಂತರಗೊಂಡಿದೆ. ಇವರ ನಂತರ ಶ್ರೀ ಮಹಾಂತಪ್ಪ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಅಭಿವೃದ್ಧಿಪಡಿಸಿ ೧೯೮೮ರಲ್ಲಿ ಲಿಂಗೈಕ್ಯರಾದರು.

ವಿದ್ವಾಂಸರು: ಈಗಿನ ಮಠಾಧೀಶರಾದ ಶ್ರೀ ಶಿವಾನಂದ ಸ್ವಾಮಿಗಳು ಸಂಸ್ಕೃತ ವಿದ್ವಾಂಸರಾಗಿ ಪಾಂಡಿತ್ಯವನ್ನು ಪಡೆದಿದ್ದಾರೆ. ಇವರು ಪ್ರಾರಂಭದಲ್ಲಿ ಪ್ರೌಢಶಾಲೆಯಲ್ಲಿ ಸಂಸ್ಕೃತ ಉಪಾಧ್ಯಾಯರಾಗಿದ್ದರು. ನಂತರ ಸಂಸ್ಕೃತ ಎಂ.ಎ ಮುಗಿಸಿ ಮಹಾರಾಜ ಸಂಸ್ಕೃತ ಕಾಲೇಜಿಗೆ ಬಡ್ತಿ ಪಡೆದು, ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ೧೯೯೫ರಲ್ಲಿ ನಿವೃತ್ತಿಯಾಗಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಮಠದ ಆಸ್ತಿಯಾಗಿ ಹನ್ನೆರಡು ಎಕರೆ ಜಮೀನಿದ್ದು, ಇದನ್ನು ಮೂವತ್ತು ಎಕರೆಗೆ ವಿಸ್ತರಿಸಿ ಅಭಿವೃದ್ಧಿಪಡಿಸಲಾಗಿದೆ. ಈ ಜಮೀನಿನಲ್ಲಿ ತೆಂಗನ್ನು ಬೆಳೆಯಲಾಗಿದ್ದು, ಇದರಿಂದ ಬರುವ ಆದಾಯವನ್ನು ಮಠದ ಧಾರ್ಮಿಕ ಚಟುವಟಿಕೆಗಳಿಗೆ ಬಳಸಿಕೊಳ್ಳಲಾಗುತ್ತಿದೆ. ಮಠದ ಆವರಣದಲ್ಲಿ ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಲಾಗಿದೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ಮತ್ತು ಮಹದೇಶ್ವರರ ತೋರು ಗದ್ದುಗೆಗೆ ನಿತ್ಯಪೂಜೆ ನಡೆಸಲಾಗುತ್ತಿದೆ. ಶಿವರಾತ್ರಿ, ಬಸವಜಯಂತಿ ಹಾಗೂ ಹಿರಿಯ ಗುರುಗಳ ಆರಾಧನೆಯನ್ನು ನಡೆಸಲಾಗುತ್ತಿದೆ. ಅಲ್ಲದೆ ಕಾರ್ತೀಕ ಮತ್ತು ಶ್ರಾವಣ ಮಾಸಗಳಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ವೀರಶೈವರನ್ನು ಸಂಘಟನೆ ಮಾಡಿ ವೀರಶೈವ ಧರ್ಮದ ಆಚರಣೆಯ ಬಗ್ಗೆ, ಲಿಂಗಧಾರಣೆ, ಲಿಂಗಪೂಜೆ, ವಿಭೂತಿಗಟ್ಟಿ ಮತ್ತು ರುದ್ರಾಕ್ಷಿಗಳ ಮಹತ್ವದ ಬಗ್ಗೆ ತಿಳುವಳಿಕೆಯನ್ನು ನೀಡುತ್ತಿದ್ದಾರೆ. ಒಂದುಸಾವಿರ ಲಿಂಗಗಳು, ನಾಲ್ಕುಸಾವಿರ ವಿಭೂತಿಗಳು ಹಾಗೂ ಕಾಶಿಯಿಂದ ತರಿಸಿದ

ರುದ್ರಾಕ್ಷಿಗಳನ್ನು ಭಕ್ತರಿಗೆ ವಿತರಣೆ ಮಾಡಿದ್ದಾರೆ.

ವಿದ್ವಾನ್ ಶ್ರೀ ಶಿವಾನಂದ ಸ್ವಾಮಿಗಳು ಕಳೆದ ಮೂವತ್ತೈದು ವರ್ಷಗಳಿಂದ ಸಂಗ್ರಹಿಸಿದ ಪುಸ್ತಕಗಳು ಇಂದು ಮಠದಲ್ಲಿವೆ. ಈ ಗ್ರಂಥಾಲಯದಲ್ಲಿ ಧರ್ಮದ ವಿವಿಧ ಪ್ರಕಾರದ ಪುಸ್ತಕಗಳು ಲಭ್ಯ ಇವೆ. ಗುರುಗಳು ಧರ್ಮದ ಆಚರಣೆ ಮತ್ತು ಭಕ್ತರ ಉದ್ಧಾರಕ್ಕೆ ಶ್ರಮವಹಿಸಿದ್ದಾರೆ. ಈ ರೀತಿ ಧರ್ಮದ ಮತ್ತು ಧರ್ಮೀಯರ ಬಗ್ಗೆ ವಿಶೇಷ ಆಸಕ್ತಿಯನ್ನು ಬೆಳೆಸಿಕೊಂಡು, ಮಠ ವನ್ನು ಧಾರ್ಮಿಕ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿಪಡಿಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಶಿವಾನಂದ ಸ್ವಾಮಿಗಳು, ಶ್ರೀ ಅನ್ನದಾನೇಶ್ವರ ಮಠ, ಟಿ.ನರಸೀಪುರ ರಸ್ತೆ, ಸಿದ್ಧಾರ್ಥನಗರ,ಮೈಸೂರು.

ಕುಂದೂರುಮಠ: ಮೈಸೂರು ನಗರದ ಖಿಲ್ಲೆ ಮೊಹಲ್ಲಾದಲ್ಲಿ ವಿರಕ್ತ ಸಂಪ್ರದಾಯದ ಶ್ರೀ ಕುಂದೂರು ಮಠವು ನಾಲ್ಮಡಿ ಕೃಷ್ಣರಾಜ ಒಡೆಯರ (೧೮೯೫-೧೯೪೦) ಆಳ್ವಿಕೆಯ ಕಾಲಕ್ಕೂ ಮೊದಲು ಸ್ಥಾಪನೆಯಾಗಿದೆ. ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ಕುಂದೂರು ಗ್ರಾಮದ ವ್ಯಕ್ತಿಯೊಬ್ಬರು ಮೈಸೂರು ಅರಮನೆಯಲ್ಲಿ ಭಕ್ಷಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಇವರು ಸದಾಚಾರ ಸಂಪನ್ನರಾಗಿದ್ದು, ಗುರುಗಳ ಪಾದೋದಕವಿಲ್ಲದೆ ಪ್ರಸಾದವನ್ನು ಸ್ವೀಕರಿಸುತ್ತಿರಲಿಲ್ಲ. ಇಂತಹ ಆಚಾರ ಪುರುಷರ ಕ್ರಿಯಾಮೂರ್ತಿ ಗಳಾಗಿ ಕುಂದೂರು ಮಠದ ಶ್ರೀ ಮಹಾಂತ ಶಿವಯೋಗಿಗಳು ಮೈಸೂರಿಗೆ ಬಂದು ನೆಲೆಸಿದರು. ಕುಂದೂರಿನಿಂದ ಬಂದು ಮಠವನ್ನು ಸ್ಥಾಪನೆ ಮಾಡಿದ್ದರಿಂದ ಈ ಮಠಕ್ಕೆ 'ಶ್ರೀ ಕುಂದೂರುಮಠ' ಎಂಬ ಹೆಸರು ಬಂದಿತು.

ಅಂದು ಸ್ಥಾಪನೆಗೊಂಡ ಮಠವು ಶ್ರೀ ಮಹಾಂತ ಶಿವಯೋಗಿಗಳ ಕರ್ತೃತ್ವ ಶಕ್ತಿಯಿಂದ ಹಾಗೂ ಧರ್ಮೋಪದೇಶ ಕಾರ್ಯಕ್ರಮಗಳಿಂದ ಹೆಸರು ಮಾಡಿತು. ಗುರುಗಳು ಭಕ್ಷಿಗಳ ನೆರವು ಪಡೆದು ಮಠವನ್ನು ಅಭಿವೃದ್ಧಿಪಡಿಸಿದರು. ಅರಮನೆಯ ಸಮೀಪವೇ ಸ್ಥಾಪನೆಗೊಂಡ ಮಠದಲ್ಲಿ ಧರ್ಮೋಪದೇಶ ಹಾಗೂ ಅನ್ನದಾಸೋಹಕ್ರಿಯೆ ನಡೆಯತೊಡಗಿ ಜನಮನದಲ್ಲಿ ಬೆಳೆ ಯಿತು. ಅಂದಿನಿಂದ ಈತನಕ ತನ್ನ ಧಾರ್ಮಿಕ ಕಾರ್ಯಗಳನ್ನು ನಡೆಸುವ ಮೂಲಕ ಮಠವು ಹೆಚ್ಚು ಪ್ರಸಿದ್ಧಿಗೆ ಬಂದಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಮಹಾಂತಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಶಿವಬಸವಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ನಿರ್ವಾಣಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಚಂದ್ರಶೇಖರಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ವಿದ್ವಾನ್ ಇಮ್ಮಡಿ ಡಾ.ಶಿವಬಸವಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ಮಹಾಂತ ಸ್ವಾಮಿಗಳು ಶಿವಪೂಜಾನಿಷ್ಠರಾಗಿ ಹೆಸರು ಪಡೆದಿದ್ದರು. ನಂತರ ೧೮೫೦ರಲ್ಲಿ ಅಧಿಕಾರಕ್ಕೆ ಬಂದ ಶ್ರೀ ಶಿವಬಸವ ಸ್ವಾಮಿಗಳು ಬಸವನಪುರ ಗ್ರಾಮದಲ್ಲಿ ಜನಿಸಿ, ಸಂಸ್ಕೃತ ಹಾಗೂ ವೇದಾಧ್ಯಯನದಿಂದ ಪಂಡಿತರೆಂದು ಹೆಸರು ಪಡೆದಿದ್ದರು. ಮಠವನ್ನು ಸಾಕಷ್ಟು ಅಭಿವೃದ್ಧಿಗೊಳಿಸಿದ ಇವರು ೧೯೩೯ರಲ್ಲಿ ಲಿಂಗೈಕ್ಯರಾದರು. ಇವರ ನಂತರ ಶ್ರೀ ನಿರ್ವಾಣ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು, ಮಠವನ್ನು ಆರ್ಥಿಕವಾಗಿ ಸದೃಢಗೊಳಿಸಿದರು. ಇವರ ಕಾಲದಲ್ಲಿ ಮಠವು ವಿಸ್ತಾರವಾಗಿ ಬೆಳೆಯಿತು. ಕೈಹೆಂಚಿನ ಮಠದ ಕಟ್ಟಡವನ್ನು ತೆಗೆದು ಸಿಮೆಂಟ್ ಛಾವಣಿಯ ಕಟ್ಟಡವನ್ನು ನಿರ್ಮಿಸಿ, ಧಾರ್ಮಿಕ ಕಾರ್ಯಗಳ ಜೊತೆಗೆ ಅನ್ನದಾಸೋಹವನ್ನು ನಡೆಸಿ ಮಠವನ್ನು ಹೆಚ್ಚು ಪ್ರಸಿದ್ಧಿಗೆ ತಂದರು. ಗುರುಗಳು ಸಂಸ್ಕೃತ ಪಂಡಿತರಾಗಿದ್ದು ಕ್ಯಾತನಹಳ್ಳಿ ಸಂಸ್ಕೃತ ಪಾಠಶಾಲೆಯಲ್ಲಿ ಸಂಸ್ಕೃತ ಶಿಕ್ಷಕರಾಗಿ ಅನೇಕ ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಅನೇಕ ವೀರಶೈವ ವಿದ್ಯಾರ್ಥಿಗಳಿಗೆ ಸಂಸ್ಕೃತವನ್ನು ಕಲಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇವರು ಶ್ರೀ ಚಂದ್ರಶೇಖರ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡು ೧೯೪೮ರಲ್ಲಿ ಪಟ್ಟಾಧಿಕಾರ ಮಾಡಿ ಅದೇ ವರ್ಷ ಲಿಂಗೈಕ್ಯರಾದರು.

ಶ್ರೀ ಚಂದ್ರಶೇಖರ ಸ್ವಾಮಿಗಳು ಮಠದ ಆಡಳಿತವನ್ನು ವಹಿಸಿಕೊಂಡ ಕೆಲವೇ ದಿನಗಳಲ್ಲಿ ಲಿಂಗೈಕ್ಯರಾದರು. ಆಗ

ಮಠವು ಉತ್ತರಾಧಿಕಾರಿಗಳಿಲ್ಲದೆ ಖಾಲಿ ಉಳಿಯಿತು. ಈ ಸಂದರ್ಭದಲ್ಲಿ ಶ್ರೀ ಚಂದ್ರಶೇಖರ ಸ್ವಾಮಿಗಳ ಸಹೋದರ ಸಂಬಂಧಿ ಶ್ರೀ ಸಿದ್ಧಲಿಂಗ ದೇವರು ಮತ್ತು ಶ್ರೀಮತಿ ಕೆಂಪನಂಜಮ್ಮನವರ ಪುತ್ರರಾಗಿ, ೧೯೩೮ ಆಗಸ್ಟ್ ಒಂಬತ್ತರಂದು ಜನಿಸಿದ ಶ್ರೀಶಿವಬಸವ ಸ್ವಾಮಿಗಳನ್ನು ಮಠದ ಉತ್ತರಾಧಿಕಾರಿಗಳನ್ನಾಗಿ ನೇಮಿಸಿ ೧೯೫೨ರಲ್ಲಿ ಪಟ್ಟಾಧಿಕಾರ ಮಾಡಲಾಯಿತು. ಶ್ರೀಶಿವಬಸವ ಸ್ವಾಮಿಗಳು ಚಾಮರಾಜನಗರದಲ್ಲಿ ವಿದ್ಯಾಭ್ಯಾಸವನ್ನು ಮಾಡಿ, ಮೈಸೂರಿಗೆ ಬಂದು ಸಂಸ್ಕೃತ, ವೇದಾಧ್ಯಯನ ವನ್ನು ಮಾಡಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದು ವೇದಾಂತ ವಿದ್ವತ್ ಹಾಗೂ ಅಧಿಕಾರ ವಿದ್ವತ್ತನ್ನು ಪಡೆದು, ಸರ್ಕಾರ ಕೊಡಲ್ಪಡುವ ಸರ್ವ ಪ್ರಾವೀಣ್ಯ ಪ್ರಶಸ್ತಿಯನ್ನು ಪಡೆದು ವಿಶ್ವವಿದ್ಯಾನಿಲಯದಲ್ಲಿ ೧೯೬೮ರಲ್ಲಿ ಉಪನ್ಯಾಸಕರಾಗಿ ಸೇರ್ಪಡೆಗೊಂಡರು. ಗುರುಗಳು ಅವಿರತ ಶ್ರಮದಿಂದ ಪಾಂಡಿತ್ಯವನ್ನು ಗಳಿಸಿ ವಿಶ್ವವಿದ್ಯಾ ನಿಲಯದಲ್ಲಿ ಹೆಸರು ಪಡೆದರು. ಮೈಸೂರು ವಿಶ್ವವಿದ್ಯಾನಿಲಯದಿಂದ ಬಡ್ತಿಪಡೆದು ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ಪ್ರೊಫೆಸರ್ ಹುದ್ದೆಯನ್ನು ಪಡೆದು, ಆರು ವರ್ಷಗಳ ಕಾಲ ಸೇವೆಸಲ್ಲಿಸಿ ೧೯೯೮ರಲ್ಲಿ ನಿವೃತ್ತಿಗೊಂಡರು. ಗುರುಗಳ ವಿದ್ವತ್ತನ್ನು ಗಮನಿಸಿ 'ಸಂಸ್ಕೃತ ಪ್ರತಿಷ್ಠಿತ ವಿದ್ವಾಂಸ'ರೆಂದು ಗುರುತಿಸಿದ ಸರ್ಕಾರವು 'ರಾಜ್ಯ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ.

ವಿದ್ವಾನ್ ಡಾ.ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳು ಶ್ರೀ ಚನ್ನನಂಜಪ್ಪ ಮತ್ತು ಶ್ರೀಮತಿ ವಿದ್ಯಾಂಬ ಇವರ ಪುತ್ರರಾಗಿ ೧೯೮೨ ರಲ್ಲಿ ಜನಿಸಿದ ಶ್ರೀ ಶಿವರುದ್ರ ಸ್ವಾಮಿಗಳನ್ನು, ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿಕೊಂಡು ೧೯೯೮ ರಲ್ಲಿ ಪಟ್ಟಾಧಿಕಾರದ ಅನುಗ್ರಹವನ್ನು ನೀಡಿದ್ದಾರೆ. ತಮ್ಮ ಕರಕಮಲಸಂಜಾತ ಶ್ರೀ ಶಿವರುದ್ರಸ್ವಾಮಿಗಳನ್ನು ತಮ್ಮ ಬಳಿಯ ಲ್ಲಿಯೇ ಇಟ್ಟುಕೊಂಡು ಸಂಸ್ಕೃತ ಮತ್ತು ಸಾಹಿತ್ಯದ ಸಾರವನ್ನು ಧಾರೆ ಎರೆಯುತ್ತಾ ಪಾಂಡಿತ್ಯ ಪೂರ್ಣವಾಗಿ ಬೆಳೆಸುತ್ತಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ವಿದ್ವಾನ್ ಡಾ. ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳು ಉಪನ್ಯಾಸಕರಾಗಿ, ಧರ್ಮಗುರುಗಳಾಗಿ ಎರಡೂ ಕ್ಷೇತ್ರಗಳಲ್ಲಿ ಹೆಚ್ಚು ಹೆಸರು ಪಡೆದವರು. ೧೯೭೫ ರಲ್ಲಿ ಮಠದ ಹಳೆಯ ಕಟ್ಟಡಗಳನ್ನು ತೆಗೆಸಿ ನೂತನ ಕಟ್ಟಡ ಹಾಗೂ ಮಠದ ಆವರಣದಲ್ಲಿ ವಿದ್ಯಾರ್ಥಿಗಳಿಗಾಗಿ ಕೊಠಡಿಗಳನ್ನು ನಿರ್ಮಿಸಿದ್ದಾರೆ. ಮಠದಲ್ಲಿ ಅನ್ನದಾಸೋಹ ನಡೆಯುವಂತೆ ವ್ಯವಸ್ಥೆ ಮಾಡಿದರು. ಗುರುಗಳು ವೃತ್ತಿಯಿಂದ ದುಡಿದ ಹಣವನ್ನು ಮಠದ ಅಭಿವೃದ್ಧಿಗೆ ವಿನಿಯೋಗಿಸಿ ಪ್ರಗತಿ ಕಾಣುವಂತೆ ಮಾಡಿದರು. ಗುರುಗಳು ಮಠ, ಸಮಾಜ ಹಾಗೂ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ.

ಸಾಹಿತ್ಯ ಸೇವೆ: ವಿದ್ವಾನ್ ಡಾ. ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳು ಮೂಲತಹ ಸಾಹಿತಿಗಳಾಗಿ ಹೆಚ್ಚು ಹೆಸರು ಪಡೆದಿದ್ದಾರೆ. ಇವರು 'ಸಂಸ್ಕೃತ ಸಾಹಿತ್ಯಕ್ಕೆ ಕರ್ನಾಟಕದ ಕೊಡುಗೆ 'ಎಂಬ ಮಹಾ ಪ್ರಬಂಧವನ್ನು ಮಂಡಿಸಿ ಮೈಸೂರು ವಿಶ್ವವಿದ್ಯಾನಿಲಯ ದಿಂದ ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ಈ ಮಹಾಪ್ರಂಬಧವು ಕರ್ನಾಟಕದ ಸಾಂಸ್ಕೃತಿಕ ಇತಿಹಾಸದ ಮೇಲೆ ಹೊಸಬೆಳಕನ್ನು ಚೆಲ್ಲುವ ಒಂದು ಮಹತ್ ಕೃತಿಯಾಗಿದೆ. ಗುರುಗಳು ಕನ್ನಡ ಮತ್ತು ಸಂಸ್ಕೃತ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಯನ್ನು ನೀಡಿದ್ದಾರೆ. ಇವರು ಸರ್ವದರ್ಶನ ಸಂಗ್ರಹ, ಅಲ್ಲಮಪ್ರಭುಗಳ ಟೀಕಿನ ವಚನಗಳು, ಶರಣತತ್ತ್ವ ಚಿಂತನ, ವಚನಲೋಕ, ಅಲ್ಲಮಪ್ರಭು ದೇವರು ಮುಂತಾದ ಮೌಲಿಕ ಕೃತಿಗಳನ್ನು ರಚಿಸಿ, ಸಂಸ್ಕೃತ ಮತ್ತು ಕನ್ನಡ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ. ವಚನ ಸಾಹಿತ್ಯದ ಬಗ್ಗೆ ಅಪಾರವಾದ ಅಧ್ಯಯನ ಮಾಡಿಕೊಂಡಿದ್ದು, ವಿದ್ವತ್‌ಪೂರ್ಣ ಲೇಖನಗಳನ್ನು ಪ್ರಕಟಿಸಿ ಅನೇಕ ವಿಚಾರಗಳ ಬಗ್ಗೆ ಚಿಂತನೆ ನಡೆಸುವಂತೆ ಮಾಡಿದ್ದಾರೆ.

ವಿದ್ವಾನ್ ಡಾ. ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳ ಪಾಂಡಿತ್ಯವನ್ನು ಗುರುತಿಸಿ ಅನೇಕ ಲೇಖಕರು ಇವರ ಸಲಹೆ ಯನ್ನು ಬಯಸಿ ಬರುತ್ತಾರೆ. ನೇರ ಹಾಗೂ ಚಿಕಿತ್ಸಕ ದೃಷ್ಟಿಕೋನದಿಂದ ಸಾಹಿತ್ಯ ಕೃತಿಗಳನ್ನು ಅವಲೋಕಿಸಿ ಮಾರ್ಗದರ್ಶನ ವನ್ನು ನೀಡಿ ಅನೇಕ ಮೌಲಿಕ ಕೃತಿಗಳು ಪ್ರಕಟವಾಗಲು ನೆರವಾಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಪರಂಪರೆಯ ಗುರುಗಳ ಮೂರು ಗದ್ದುಗೆಗಳು ಮಠದ ಆವರಣದಲ್ಲಿ ಸ್ಥಾಪನೆಯಾಗಿವೆ. ಇವುಗಳಿಗೆ ನಿತ್ಯಪೂಜೆ ಮತ್ತು ಹಿರಿಯ ಗುರುಗಳ ಪುಣ್ಯಾರಾಧನೆ ಕಾರ್ಯಕ್ರಮ ನಡೆಯುತ್ತಿದೆ. ಈ ಸಂದರ್ಭದಲ್ಲಿ ಉಪನ್ಯಾಸ ಹಾಗೂ ಅನ್ನದಾಸೋಹ ಕಾರ್ಯಕ್ರಮವನ್ನು ನೇರವೇರಿಸಲಾಗುತ್ತಿದೆ. ವಿದ್ವಾನ್ ಡಾ. ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳು

ಕ್ರಿ.ಶ.೨೦೦೦ ದಲ್ಲಿ ಶ್ರೀ ಪ್ರಭುದೇವ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿ, ಗ್ರಾಮಾಂತರ ಮಕ್ಕಳ ಕಲಿಕೆಗೆ ನೆರವಾಗಿದ್ದಾರೆ. ಮಠದಲ್ಲಿ ಹೊರಗಿನಿಂದ ಬರುವ ಭಕ್ತರಿಗೆ ನಿತ್ಯ ಅನ್ನದಾಸೋಹವನ್ನು ಕಲ್ಪಿಸಲಾಗಿದೆ.

ವಿಳಾಸ: ವಿದ್ವಾನ್ ಶ್ರೀ ಮ.ನಿ.ಪ್ರ. ಡಾ. ಇಮ್ಮಡಿ ಶಿವಬಸವ ಸ್ವಾಮಿಗಳು. ಶ್ರೀ ಕುಂದೂರುಮಠ, ಕಿಲ್ಲೆಮೊಹಲ್ಲಾ, ಮೈಸೂರು-೪.

ಕುದೇರುಮಠ (ದಾಸೋಹ ಮಠ): ಮೈಸೂರಿನ ರಾಜೇಂದ್ರನಗರ ಬಡಾವಣೆಯಲ್ಲಿ ಶ್ರೀ ಕುದೇರುಮಠವು ಸ್ಥಾಪನೆಗೊಂಡಿದೆ. ದೇವನೂರು ಮಠದ ಶಾಖಾ ಮಠವಾಗಿರುವ ಈ ಮಠವು ಶ್ರೀ ತೋಂಟದಾರ್ಯ ಸ್ವಾಮಿಗಳಿಂದ ಸ್ಥಾಪನೆಗೊಂಡಿದೆ. ದೇವನೂರಿನ ಶ್ರೀ ತೋಂಟ ದಾರ್ಯ ಸ್ವಾಮಿಗಳು ನಾಡಿನ ನಾನಾ ಭಾಗಗಳಲ್ಲಿ ದೇವನೂರಿನ ಶಾಖಾ ಮಠಗಳನ್ನು ಸ್ಥಾಪಿಸಿದಂತೆ, ಮೈಸೂರಿನಲ್ಲಿಯೂ ಭಿಕ್ಷದ ಮಠವಾದ ಕುದೇರು ಮಠವನ್ನು ಸ್ಥಾಪಿಸಿದ್ದಾರೆ.

ಅಭಿವೃದ್ಧಿ ಕಂಡ ಕಾಲ: ಶ್ರೀ ತೋಂಟದಾರ್ಯ ಸ್ವಾಮಿಗಳು ೧೯೫೭ರಲ್ಲಿ ಲಿಂಗೈಕ್ಯರಾದ ಮೇಲೆ ಶ್ರೀ ಗುರುಸ್ವಾಮಿಗಳು ೧೯೫೮ ರಿಂದ ೧೯೭೩ ರವರೆಗೆ ಮಠದ ಆಡಳಿತವನ್ನು ವಹಿಸಿಕೊಂಡು, ಕಂತೆಭಿಕ್ಷ ಮಾಡಿ ದಾಸೋಹ ಸೇವೆಯನ್ನು ಬಹಳ ನಿಷ್ಠೆಯಿಂದ ನಡೆಸತೊಡಗಿದರು. ಇವರ ನಂತರ ಅಧಿಕಾರಕ್ಕೆ ಬಂದ ಶ್ರೀ ಗುರುಲಿಂಗ ಸ್ವಾಮಿಗಳು ಮಠವನ್ನು ಹೆಚ್ಚು ಅಭಿವೃದ್ಧಿ ಪಡಿಸಿದ್ದಾರೆ. ಇವರ ಕಾಲದಲ್ಲಿ ಸಂಸ್ಕೃತ ಪಾಠಶಾಲೆಯನ್ನು ಸ್ಥಾಪನೆ ಮಾಡಿದ್ದಾರೆ. ಮಠಕ್ಕೆ ನೂತನ ಕಟ್ಟಡವನ್ನು ಕಟ್ಟಿಸಿ, ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಪ್ರಬುದ್ಧಮಾನಕ್ಕೆ ಬರುವಂತೆ ಮಾಡಿದ್ದಾರೆ.

೧೯೯೧ರ ಜುಲೈ ಒಂಬತ್ತರಂದು ಶ್ರೀ ಕುದೇರು ಮಠದ ಪಟ್ಟಾಧಿಕಾರಿಗಳಾಗಿ ಶ್ರೀ ಗುರುಶಾಂತ ಸ್ವಾಮಿಗಳು ಅಧಿಕಾರ ವನ್ನು ಪಡೆದುಕೊಂಡಿದ್ದಾರೆ. ಇವರು ಶಿಸ್ತುಬದ್ಧ ಆಡಳಿತ ಮತ್ತು ಕ್ರಮಬದ್ಧ ದಾಸೋಹ ಸೇವೆಯನ್ನು ನಡೆಸುತ್ತಾ, ಮಠಕ್ಕೆ ವ್ಯವಸ್ಥಿತವಾದ ರೂಪುಕೊಟ್ಟರು. ಮಠದ ಆಸ್ತಿಯಾಗಿದ್ದ ಮೂವತ್ತೊಂದು ಎಕರೆ ಜಮೀನನ್ನು ಆಧುನಿಕ ಬೇಸಾಯಕ್ಕೆ ಅಣಿಗೊಳಿಸಿ, ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಸ್ಥಾಪನೆಗೊಂಡಿರುವ ಎರಡು ಗದ್ದುಗೆಗಳಿಗೆ ಮಂಟಪವನ್ನು ನಿರ್ಮಿಸಿ, ನಿತ್ಯ ಪೂಜಾಕಾರ್ಯವನ್ನು ನಡೆಸಿಕೊಂಡು ಬರಲಾಗುತ್ತಿದೆ. ಕಾರ್ತೀಕ ಮತ್ತು ಶ್ರಾವಣಮಾಸಗಳಲ್ಲಿ ತಿಂಗಳು ಪೂರ್ತಿ ಪ್ರವಚನ, ಜೇಷ್ಠಮಾಸದಲ್ಲಿ ಗುರುಮಲ್ಲೇಶ್ವರರ ಆರಾಧನೆ, ಪ್ರತಿವರ್ಷ ಫೆಬ್ರವರಿಯಲ್ಲಿ ಶ್ರೀ ತೋಂಟದಾರ್ಯ ಸ್ವಾಮಿಗಳ ಆರಾಧನೆಯನ್ನು ಮಾಡಲಾಗುತ್ತಿದೆ. ಮಠದ ಪರಂಪರೆಯ ಕಾಯಕವಾದ ಕಂತೆಭಿಕ್ಷವನ್ನು ಬದಲಿಸಿ, ಸುಗ್ಗಿಯ ಕಾಲದಲ್ಲಿ ಭಕ್ತರಲ್ಲಿಗೆ ಹೋಗಿ ದವಸ ಧಾನ್ಯವನ್ನು ಸಂಗ್ರಹಿಸಿಕೊಂಡು ಬರಲಾಗುತ್ತಿದೆ. ಮಠದಲ್ಲಿ ಪ್ರತಿನಿತ್ಯ ಮುನ್ನೂರು ಜನ ಭಕ್ತರು, ತಿಂಗಳ ವಿಶೇಷ ಪೂಜಾ ಸಮಯದಲ್ಲಿ ಹಾಗೂ ವಾರ್ಷಿಕ ಆರಾಧನೆಯ ಸಂದರ್ಭದಲ್ಲಿ ಸಾವಿರಾರು ಜನ ಭಕ್ತರು ಪ್ರಸಾದವನ್ನು ಸ್ವೀಕರಿಸುತ್ತಾರೆ.

ವಿಳಾಸ: ಶ್ರೀ ಗುರುಶಾಂತ ಸ್ವಾಮಿಗಳು, ಶ್ರೀ ಕುದೇರು ಮಠ, ರಾಜೇಂದ್ರನಗರ, ಮೈಸೂರು-೪.

ಜಪದಕಟ್ಟೆಮಠ: ಮೈಸೂರು ನಗರದ ಶಂಕರಮಠದ ರಸ್ತೆಯಲ್ಲಿರುವ ಜಪದಕಟ್ಟೆಮಠವು ಶ್ರೀ ಉಜ್ಜಯಿನಿಪೀಠದ ಶಾಖಾ ಮಠವಾಗಿ ಬೆಳೆದಿದೆ. ವಿಜಯನಗರದ ಅರಸರ ಆಶ್ರಯದಲ್ಲಿ ಶ್ರೀರಂಗಪಟ್ಟಣದಲ್ಲಿ ಪ್ರಥಮವಾಗಿ ಸ್ಥಾಪಿಸಲ್ಪಟ್ಟ ಮಠವು, ನಂತರ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರಿಗೆ ಸ್ಥಳಾಂತರಗೊಂಡಿದೆ ಎಂದು ಹೇಳಲಾಗುತ್ತದೆ.

ಮಠ ಸ್ಥಾಪನೆ: ಶ್ರೀ ಸೋಮಶೇಖರ ಶಿವಯೋಗಿಗಳು ಶ್ರೀರಂಗಪಟ್ಟಣದ ಕಾವೇರಿ ನದಿಯ ದಡದಲ್ಲಿ ಮಠವನ್ನು ಸ್ಥಾಪಿಸಿ ಕೊಂಡು, ಆಧ್ಯಾತ್ಮ ಸಾಧನೆಯಲ್ಲಿ ತೊಡಗಿ ಪ್ರಸಿದ್ಧಿ ಪಡೆದಿದ್ದರು. ಇವರು ಸಾಮಾನ್ಯರಿಂದ ರಾಜರವರೆಗೆ ಎಲ್ಲ ರಿಂದಲೂ ಗೌರವಿಸಲ್ಪಟ್ಟಿದ್ದರು. ಇವರು ನದಿ ದಡದಲ್ಲಿ ತಪಸ್ಸಿಗೆ ಕುಳಿತ ಸಂದರ್ಭದಲ್ಲಿ ನದಿಯಲ್ಲಿ ಪ್ರವಾಹ ಬಂದು ಗುರುಗಳು ಕುಳಿತಿದ್ದ ಕಟ್ಟೆಯನ್ನು ಸುತ್ತುವರಿದು ಎರಡು ಭಾಗವಾಗಿ ಹರಿದು ಹೋಯಿತ್ತಂತೆ. ಈ ಪವಾಡವನ್ನು ಕೇಳಿದ ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರು, ಮೈಸೂರಿನ ದೊಡ್ಡಪೇಟೆಯಲ್ಲಿ ಮಠವನ್ನು ಕಟ್ಟಿಸಿ ಗುರುಗಳನ್ನು ಮೈಸೂರಿಗೆ ಆಮಂತ್ರಿಸಿ

ಕರೆಸಿಕೊಂಡರಂತೆ. ಈ ರೀತಿ ಗುರುಗಳ ಪ್ರಭಾವದಿಂದ ಬೆಳೆದ ಮಠವು ಈ ತನಕ ತನ್ನ ಪರಂಪರೆಯನ್ನು ಬೆಳೆಸಿಕೊಂಡು ಅರಮನೆ ಜಪದಕಟ್ಟೆ ಮಠವೆಂದು ಪ್ರಸಿದ್ಧಿ ಪಡೆದಿದೆ.

ಮೈಸೂರಿನಲ್ಲಿ ಮಠ ಸ್ಥಾಪಿಸಿದ ಮೇಲೆ ಗುರುಗಳು ಲಿಂಗಧಾರಣೆ, ಶಿವದೀಕ್ಷೆ, ಧಾರ್ಮಿಕ ಸಂಸ್ಕಾರ ನೀಡುತ್ತಾ ವೀರಶೈವ ಧರ್ಮವನ್ನು ಬೆಳೆಸಿದರು. ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮಿಗಳು ಲೋಕಸಂಚಾರ ಕೈಗೊಂಡ ಕಡೆ ಮಠಗಳನ್ನು ಸ್ಥಾಪಿಸಿದ್ದರು. ಅವುಗಳಲ್ಲಿ ಕೊಡಗಿನ ಅಮ್ಮತ್ತಿ, ಪಿರಿಯಾಪಟ್ಟಣ, ಅರಕಲವಾಡಿ, ಉಳ್ಳೇನಂಜನಪುರ, ಶೆಟ್ಟಿನಾಯಕನಹಳ್ಳಿ, ದನಗನಹಳ್ಳಿ, ವೀರನಗೆರೆ ಜಂಗಮಮಠ, ನೀಲಗಿರಿ, ಸೋಸಲೆ, ಕುಂದೂರು ಹಾಗೂ ಕುದೇರು ಮುಂತಾದ ಕಡೆ ಸ್ಥಾಪಿಸಿದ ಮಠಗಳು ಅರಮನೆ ಜಪದಕಟ್ಟೆ ಮಠದ ಶಾಖಾಮಠಗಳಾಗಿದ್ದವೆಂದು ಹೇಳಲಾಗುತ್ತದೆ. ಇಂದು ಇವುಗಳಲ್ಲಿ ಕೆಲವು ಮಠಗಳು ಸ್ವತಂತ್ರ ಮಠಗಳಾಗಿ ಕಾರ್ಯ ನಿರ್ವಹಿಸುತ್ತಿವೆ.

ಪರಂಪರೆ:

೧. ಷ.ಬ್ರ.ಶ್ರೀ ಸೋಮಶೇಖರ ಶಿವಯೋಗಿ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಗಂಗಾಧರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಗುರುಸಿದ್ಧ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಶಿವಲಿಂಗ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ಗುರುಪಾದ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ಸಿದ್ಧಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು
೧೦. ಷ.ಬ್ರ.ಶ್ರೀ ಇಮ್ಮಡಿ ಗಂಗಾಧರ ಶಿವಾಚಾರ್ಯಸ್ವಾಮಿಗಳು
೧೧. ಷ.ಬ್ರ.ಶ್ರೀ ಸದಾಶಿವ ಶಿವಾಚಾರ್ಯಸ್ವಾಮಿಗಳು
೧೨. ಷ.ಬ್ರ.ಶ್ರೀ ಗುರುಪಾದ ಶಿವಾಚಾರ್ಯಸ್ವಾಮಿಗಳು
೧೩. ಷ.ಬ್ರ.ಶ್ರೀ ಮುಮ್ಮಡಿ ಗಂಗಾಧರ ಶಿವಾಚಾರ್ಯಸ್ವಾಮಿಗಳು
೧೪. ಷ.ಬ್ರ.ಶ್ರೀ ಗುರುಸಿದ್ಧ ಶಿವಾಚಾರ್ಯಸ್ವಾಮಿಗಳು
೧೫. ಷ.ಬ್ರ.ಶ್ರೀ ಮರುಳಸಿದ್ಧ ಶಿವಾಚಾರ್ಯಸ್ವಾಮಿಗಳು
೧೬. ಷ.ಬ್ರ.ಶ್ರೀ ಸಿದ್ಧವೀರ ಶಿವಾಚಾರ್ಯಸ್ವಾಮಿಗಳು
೧೭. ಷ.ಬ್ರ.ಶ್ರೀ ಇಮ್ಮಡಿ ಗುರುಪಾದ ಶಿವಾಚಾರ್ಯಸ್ವಾಮಿಗಳು
೧೮. ಷ.ಬ್ರ.ಶ್ರೀ ಗಂಗಾಧರ ಶಿವಾಚಾರ್ಯಸ್ವಾಮಿಗಳು
೧೯. ಷ.ಬ್ರ.ಶ್ರೀ ಸದಾಶಿವ ಶಿವಾಚಾರ್ಯಸ್ವಾಮಿಗಳು
೨೦. ಷ.ಬ್ರ.ಶ್ರೀ ಮುಮ್ಮಡಿ ಸದಾಶಿವ ಶಿವಾಚಾರ್ಯಸ್ವಾಮಿಗಳು
೨೧. ಷ.ಬ್ರ.ಶ್ರೀ ಡಾ. ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಮಠದ ಪರಂಪರೆಯ ಹತ್ತೊಂಬತ್ತನೆಯ ಗುರುಗಳಾದ ಶ್ರೀ ಸದಾಶಿವ ಸ್ವಾಮಿಗಳ ಕಾಲದಲ್ಲಿ ಸಂಸ್ಕೃತ, ವೇದಾಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಗುರುಕುಲವನ್ನು ಸ್ಥಾಪಿಸಲಾಯಿತು. ಪರ ಸ್ಥಳದಿಂದ ಬರುತ್ತಿದ್ದ ಭಕ್ತಾದಿಗಳಿಗೆ ನಿತ್ಯ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಯಿತು. ನಂತರ ಬಂದ ಶ್ರೀ ಇಮ್ಮಡಿ ಸದಾಶಿವ ಶಿವಾಚಾರ್ಯಸ್ವಾಮಿಗಳು ೧೯೬೭ರಲ್ಲಿ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸಿದರು. ಅಲ್ಲದೆ ಅನೇಕ ವರ್ಷಗಳಿಂದ ಹಂಚಿ ಅನ್ಯರ ಪಾಲಾಗಿದ್ದ ಮಠದ ಆಸ್ತಿಯನ್ನು ಕಾನೂನುಬದ್ಧಗೊಳಿಸಿದರು. ಶ್ರೀ ಜಗದ್ಗುರು ಪಂಚಾಚಾರ್ಯ ಮಂಗಳ ಮಂದಿರವನ್ನು ಸ್ಥಾಪಿಸಿ, ಶಂಕರಮಠದ ರಸ್ತೆಗೆ ಮಠದ ಆಡಳಿತವನ್ನು ಸ್ಥಳಾಂತರಿಸಿದರು. ಇಲ್ಲಿ

ಶ್ರೀ ಶಂಕರವಿಲಾಸ ಸಂಸ್ಕೃತ ಪಾಠಶಾಲೆ ನಡೆಯುವಂತೆ ಮಾಡಿದರು. ಇವರು ೧೯೮೫ರಲ್ಲಿ ಉಜ್ಜಯಿನಿಪೀಠದ ಜಗದ್ಗುರುಗಳಾಗಿ ಅಧಿಕಾರವನ್ನು ವಹಿಸಿಕೊಂಡರು. ಗುರುಗಳು ಜಗದ್ಗುರುಗಳಾದ ನಂತರವೂ ಜಪದಕಟ್ಟೆಮಠದ ಉಸ್ತುವಾರಿಯನ್ನು ನೋಡಿಕೊಂಡು ೧೯೯೫ರಲ್ಲಿ ಲಿಂಗೈಕ್ಯರಾದರು. ಇವರ ತರುವಾಯ ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಬನ್ನಿಕೊಪ್ಪದ ಶ್ರೀ ಹಿರೇಮಠದ ಶ್ರೀ ವಿರೂಪಾಕ್ಷಯ್ಯ ಮತ್ತು ಶ್ರೀಮತಿ ಫಕೀರಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಸುಜ್ಞಾನ ದೇವರು, ಶ್ರೀ ಡಾ. ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳೆಂದು ಅಭಿಧಾನ ಪಡೆದು ೧೯೯೫ರ ಮೇ ಇಪ್ಪತ್ತೊಂದರಂದು ಪಟ್ಟಾಧಿಕಾರ ವಹಿಸಿಕೊಂಡರು. ಇವರು ಸ್ನಾತಕೋತ್ತರ ಪದವಿಯನ್ನು ಮುಗಿಸಿ ಪಿಎಚ್.ಡಿ. ಪದವಿಯನ್ನು ಪಡೆದು ವಿದ್ವಾಂಸರಾಗಿದ್ದಾರೆ. ಇವರು ಅಧಿಕಾರಕ್ಕೆ ಬಂದ ಮೇಲೆ ಮಠವನ್ನು ಮತ್ತೊಮ್ಮೆ ಕಾನೂನುಬದ್ಧಗೊಳಿಸಿದ್ದಲ್ಲದೆ, ಮಠವನ್ನು ಪುನರುಜ್ಜೀವನಗೊಳಿಸಿದ್ದಾರೆ.

ಧಾರ್ಮಿಕ-ಸಾಹಿತ್ಯಿಕ ಸೇವೆ: ಶ್ರೀ ಡಾ. ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು'ಸುಜ್ಞಾನಸದನ'ವೆಂಬ ಹೊಸಕಟ್ಟಡವನ್ನು ನಿರ್ಮಿಸಿದ್ದಾರೆ. ಇಲ್ಲಿ ಶ್ರಾವಣಮಾಸದಲ್ಲಿ ಪೂಜಾ ಸಮಾರಂಭ, ವಿದ್ವಾಂಸರಿಂದ ಉಪನ್ಯಾಸ ಗೋಷ್ಠಿಗಳು ಮಾಸಪೂರ್ಣ ನಡೆಯುತ್ತಿವೆ. ಅಮೃತಸಿಂಧು ವಚನಬಿಂದು ಹಾಗೂ ಚಾಕ್ಷುಷೋಪ ನಿಷತ್ ಎಂಬ ಕೃತಿಗಳನ್ನು ಪ್ರಕಟಿಸಿದ್ದಾರೆ. ಮಠದಲ್ಲಿ ಕಲಿಯುವ ಮಕ್ಕಳಿಗೆ ಆಶ್ರಯಕಲ್ಪಿಸಿ ನೆರವಾಗಿದ್ದಾರೆ. ಗುರುಗಳು ಬನ್ನಿಕೊಪ್ಪದ ಶ್ರೀ ದಾರುಕೇಶ್ವರಮಠದ ಆಡಳಿತವನ್ನು ಸಹ ನೋಡಿಕೊಂಡು ಎರಡೂ ಮಠಗಳನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಡಾ. ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಜಪದಕಟ್ಟೆಮಠ, ಶಂಕರಮಠದ ರಸ್ತೆ, ಮೈಸೂರು-೪.

ನಮಃ ಶಿವಾಯಮಠ: ಮೈಸೂರು ನಗರದ ರಾಮಾನುಜ ರಸ್ತೆಯಲ್ಲಿ ಶ್ರೀ ನಮಃ ಶಿವಾಯ ಮಠವು ಸ್ಥಾಪನೆಗೊಂಡಿದೆ. ಈ ಮಠದ ಸ್ಥಾಪನೆಯ ಕಾಲಮಾನ ಹಾಗೂ ಕರ್ತೃ ಗುರುಗಳ ಬಗ್ಗೆ ನಿಖರವಾಗಿ ಹೇಳಲು ಯಾವುದೇ ಆಧಾರಗಳು ಲಭ್ಯವಿಲ್ಲ. ಆದ್ದರಿಂದ ಈ ಮಠದ ಪರಂಪರೆಯನ್ನು ಶ್ರೀ ಸೋಮಶೇಖರ ಸ್ವಾಮಿಗಳ ಕಾಲದಿಂದ ದಾಖಲಿಸಲಾಗಿದೆ.

ಪರಂಪರೆ:

೧. ಶ್ರೀ ಸೋಮಶೇಖರಸ್ವಾಮಿಗಳು
೨. ಶ್ರೀ ಸೋಮಶೇಖರ ದೇಶಿಕೇಂದ್ರಸ್ವಾಮಿಗಳು
೩. ಶ್ರೀ ಮಹಾದೇವ ದೇಶಿಕೇಂದ್ರಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಶ್ರೀ ಸೋಮಶೇಖರ ಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಶ್ರೀಸೋಮಶೇಖರ ದೇಶಿಕೇಂದ್ರ ಸ್ವಾಮಿಗಳ ನಂತರ ೧೯೭೮ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡ ಶ್ರೀ ಮಹಾದೇವ ದೇಶಿಕೇಂದ್ರ ಸ್ವಾಮಿಗಳು, ಮಠದ ಪರಂಪರಾಗತ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಮಹಾದೇವ ದೇಶಿಕೇಂದ್ರ ಸ್ವಾಮಿಗಳು, ಶ್ರೀ ನಮಃ ಶಿವಾಯ ಮಠ, ರಾಮಾನುಜ ರಸ್ತೆ, ಮೈಸೂರು-೪.

ನೀಲಕಂಠ ಸ್ವಾಮಿಗಳಮಠ: ಮೈಸೂರು ನಗರದಲ್ಲಿರುವ ಶ್ರೀ ನೀಲಕಂಠ ಸ್ವಾಮಿಗಳ ಮಠವು ೧೮೬೦ರಲ್ಲಿ ಪ್ರಾರಂಭಗೊಂಡಿದೆ ಎಂದು ಹೇಳಲಾಗುತ್ತಿದೆ. ಇದು ಮೈಸೂರು ನಗರದ ಹೊರಭಾಗದಲ್ಲಿ ಪ್ರಾರಂಭಗೊಂಡಿದ್ದು, ಈಗ ನಗರ ಬೆಳೆದಂತೆ ಮಧ್ಯಭಾಗಕ್ಕೆ ಸೇರಿಕೊಂಡಿದೆ. ಮುರುಘಾ ಸಮಯದ ಈ ವಿರಕ್ತಮಠವು ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದಿದೆ.

ಮಠ ಸ್ಥಾಪನೆ: ಶ್ರೀ ನೀಲಕಂಠ ಸ್ವಾಮಿಗಳು ಲೋಕಸಂಚಾರ ಮಾಡುತ್ತಾ ಮೈಸೂರಿಗೆ ಬಂದು ನಗರದ ಹೊರಭಾಗದಲ್ಲಿ ಅನುಷ್ಠಾನಕ್ಕೆ ಕುಳಿತುಕೊಂಡರು. ಅರಮನೆಯ ಪಂಚಗವಿ ಮಠದ ಶ್ರೀ ಶಿವಬಸವ ಸ್ವಾಮಿಗಳು ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಬಂದಿದ್ದ ಬೆನ್ನುಫಣಿ ರೋಗವನ್ನು ತಮ್ಮ ತಪೋಶಕ್ತಿಯಿಂದ ತಾವೇ ಸ್ವೀಕರಿಸಿ ನೋವನ್ನು ಅನುಭವಿಸುತ್ತಿರುವ ವಿಚಾರ, ಶ್ರೀ ನೀಲಕಂಠ ಸ್ವಾಮಿಗಳಿಗೆ ತಿಳಿಯಿತು. ತಕ್ಷಣ ಶ್ರೀ ಪಂಚಗವಿ ಮಠಕ್ಕೆ ಆಗಮಿಸಿ ಶ್ರೀ ಶಿವಬಸವ ಸ್ವಾಮಿಗಳಿಗೆ 'ನೀವಿನ್ನೂ ಚಿಕ್ಕವರು. ನಿಮ್ಮಿಂದ ಧರ್ಮ ಉದ್ಧಾರವಾಗಬೇಕಾಗಿದೆ. ಆದ್ದರಿಂದ ನೀವು ಅನುಭವಿಸುತ್ತಿರುವ ರೋಗವನ್ನು

ನಾವು ಅನುಭವಿ ಸುವೆವು' ಎಂದು ವಯೋವೃದ್ಧರಾಗಿದ್ದ ಶ್ರೀ ನೀಲಕಂಠ ಸ್ವಾಮಿಗಳು ಬೆನ್ನುಪಣಿ ರೋಗವನ್ನು ತಾವು ಸ್ವೀಕರಿಸಿ, ಶ್ರೀ ಶಿವಬಸವ ಸ್ವಾಮಿಗಳನ್ನು ನೋವಿನಿಂದ ಮುಕ್ತಗೊಳಿಸಿದ್ದರಂತೆ. ಈ ವಿಚಾರ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಹಾಗೂ ಅವರ ಧರ್ಮಪತ್ನಿ ಲಿಂಗರಾಜಮ್ಮಣ್ಣಿಗೆ ತಿಳಿದು ಗುರುಗಳ ಬಳಿ ಬಂದು ಗೌರವ ಸಲ್ಲಿಸಿ ಅವರ ತ್ಯಾಗದ ಮನೋಭಾವವನ್ನು ನೋಡಿ, ಭಕ್ತಿಯಿಂದ ಅರಮನೆಯ ಪಕ್ಕದಲ್ಲಿ ಗುರುಗಳಿಗಾಗಿ ಮಠವನ್ನು ಕಟ್ಟಿಸಿಕೊಟ್ಟರು.

ಶ್ರೀ ನೀಲಕಂಠ ಸ್ವಾಮಿಗಳು ಮೈಸೂರಿಗೆ ಬಂದು ನೆಲೆಸಿದ ಸ್ಥಳವು ಮೊದಲೇ ಮಠವಾಗಿತ್ತು. ಕಾರಣಾಂತರಗಳಿಂದ ಈ ಮಠವು ಜೀರ್ಣಗೊಂಡಿತ್ತು. ಇಲ್ಲಿಯೇ ವಾಸ ಮಾಡುತ್ತಿದ್ದ ಗುರುಗಳಿಗೆ ಲಿಂಗರಾಜಮ್ಮಣ್ಣಿ ಹೊಸ ಕಟ್ಟಡವನ್ನು ನಿರ್ಮಿಸಿ ಕೊಟ್ಟು, ಧಾರ್ಮಿಕ ಕಾರ್ಯಗಳು ನಡೆಯಲು ವ್ಯವಸ್ಥೆಗೊಳಿಸಿದರು.

ಪರಂಪರೆ:

೧. ಶ್ರೀ ಮ.ನಿ.ಪ್ರ. ನೀಲಕಂಠಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ದೊಡ್ಡಸಿದ್ಧಮಲ್ಲಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಶಿವಪ್ರಭುಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಚಿಕ್ಕಸಿದ್ಧಮಲ್ಲಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಸಿದ್ಧಮಲ್ಲಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಶ್ರೀ ನೀಲಕಂಠ ಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ದೊಡ್ಡಸಿದ್ಧಮಲ್ಲ ಸ್ವಾಮಿಗಳು ಹಿರಿಯ ಗುರುಗಳಂತೆ ಮಠವನ್ನು ಮುನ್ನಡೆಸಿಕೊಂಡು ಬಂದು, ಶ್ರೀ ಶಿವಪ್ರಭು ಸ್ವಾಮಿಗಳಿಗೆ ಅಧಿಕಾರವನ್ನು ವಹಿಸಿದರು. ಇವರು ಸಹ ಶಿವಪೂಜಾ ನಿಷ್ಠರಾಗಿ, ಧರ್ಮಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ಲಿಂಗೈಕ್ಯರಾದರು. ನಂತರ ಬಂದ ಶ್ರೀ ಚಿಕ್ಕಸಿದ್ಧಮಲ್ಲ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ ಕ್ರಿ.ಶ.೧೯೩೬ರಲ್ಲಿ ಲಿಂಗೈಕ್ಯರಾದರು. ಇವರ ನಂತರ ಮಠಾಧೀಶರು ಯಾರೂ ಇಲ್ಲದೆ ಮಠವು ಖಾಲಿ ಉಳಿದದ್ದನ್ನು ಕಂಡು, ಈ ಮಠದ ಭಕ್ತರು ೧೯೬೨ರಲ್ಲಿ ಶ್ರೀಸಿದ್ಧ ಮಲ್ಲ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿದರು. ಮೈಸೂರಿನ ಶ್ರೀ ಮಲ್ಲಿಕಾರ್ಜುನಯ್ಯ ಮತ್ತು ಶ್ರೀಮತಿ ಪಾರ್ವತಮ್ಮನವರ ಪುತ್ರರಾಗಿ ೧೯೪೫ರ ಡಿಸೆಂಬರ್ ಇಪ್ಪತ್ತೊಂದರಂದು ಜನಿಸಿದ ಶ್ರೀ ಸಿದ್ಧಮಲ್ಲ ಸ್ವಾಮಿಗಳು, ಶಕ್ತಿವಿಶಿಷ್ಟಾದ್ವೈತ, ವೇದಾಂತ ವಿದ್ವತ್ ಮತ್ತು ವೀರಶೈವ ಆಗಮ ಪ್ರವೀಣ ಪದವಿಗಳನ್ನು ಪಡೆದು ೧೯೬೭ರಲ್ಲಿ ಪಟ್ಟಾಧಿಕಾರ ವನ್ನು ಪಡೆದು ಮಠವನ್ನು ಮುನ್ನಡೆಸುತ್ತಿದ್ದಾರೆ. ಗುರುಗಳು ಅಧಿಕಾರವನ್ನು ವಹಿಸಿಕೊಂಡ ಮೇಲೆ, ಶಿಥಿಲಗೊಂಡಿದ್ದ ಮಠದ ಕಟ್ಟಡವನ್ನು ದುರಸ್ಥಿಗೊಳಿಸಿದ್ದಾರೆ.

ಧಾರ್ಮಿಕ -ಸಾಹಿತ್ಯ ಕಾರ್ಯಗಳು: ಮಠದ ಆವರಣದಲ್ಲಿರುವ ಕರ್ತೃಗದ್ದುಗೆ ಮತ್ತು ಮಠದ ಪ್ರವೇಶದ್ವಾರದ ಎಡ ಬದಿಯಲ್ಲಿರುವ ಇನ್ನೊಂದು ಗದ್ದುಗೆಗೆ ನಿತ್ಯ ಎರಡು ವೇಳೆ ಪೂಜೆ ಮತ್ತು ಕಾರ್ತೀಕಮಾಸದಲ್ಲಿ ವಿಶೇಷ ಪೂಜೆಯನ್ನು ನಡೆಸ ಲಾಗುತ್ತಿದೆ. ಗುರುಗಳು ಅಧಿಕಾರಕ್ಕೆ ಬಂದ ಮೇಲೆ ಕಲ್ಯಾಣದ ಕನ್ನಡಿ, ಬಸವ ಪೂಜಾವಿಧಾನ, ಜಂಗಮ ಮಹಿಮೆ ಮತ್ತು ಶೂನ್ಯಸಿಂಹಾಸನ ಎಂಬ ಕಿರು ಹೊತ್ತಿಗೆಗಳನ್ನು ಮಠದ ವತಿಯಿಂದ ಪ್ರಕಟಿಸಿದ್ದಾರೆ. ಗುರುಗಳು ಪ್ರವಚನದ ಮೂಲಕ ಶರಣ ಸಾಹಿತ್ಯ ಹಾಗೂ ವೀರಶೈವ ಧರ್ಮವನ್ನು ಬೆಳೆಸಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಮಠದ ಪರಂಪರೆಯ ಗುರುಗಳೆಲ್ಲರೂ ಶಿವಪೂಜಾನಿಷ್ಠರಾಗಿ,ಲೌಕಿಕತೆಯ ಕಡೆಗೆ ಹೆಚ್ಚು ಒಲವು ತೋರಿಸದೆ ಇದ್ದ ಕಾರಣ ಮಠವು ಅಭಿವೃದ್ಧಿಯಾಗದೆ, ಯಥಾಸ್ಥಿತಿಯಲ್ಲಿ ಮುಂದುವರೆದುಕೊಂಡು ಬಂದಿತ್ತು. ಈಗಿನ ಗುರುಗಳಾದ ಶ್ರೀ ಸಿದ್ಧಮಲ್ಲ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠದ ಸುತ್ತ ಇದ್ದ ಹೆಂಚಿನ ಮನೆಗಳನ್ನು ತೆಗೆಸಿ, ಪ್ರಾರ್ಥನಾ ಮಂದಿರವನ್ನು ನಿರ್ಮಿಸಿದ್ದಾರೆ. ಪ್ರಾರ್ಥನಾ ಮಂದಿರದ ಮೇಲೆ ಹಾಗೂ ಮಠದ ಸುತ್ತ ಕೊಠಡಿಗಳನ್ನು ನಿರ್ಮಿಸಲಾಗಿದೆ. ಈಗಾಗಲೇ ಲಕ್ಷಾಂತರ ರೂಪಾಯಿಗಳನ್ನು ವಿನಿಯೋಗಿಸಿ ಮಠದ ಅಭಿವೃದ್ಧಿಯನ್ನು ಮಾಡಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಸಿದ್ಧಮಲ್ಲ ಸ್ವಾಮಿಗಳು, ಶ್ರೀ ನೀಲಕಂಠಸ್ವಾಮಿ ಮಠ, ಹರಿಶ್ಚಂದ್ರ ರಸ್ತೆ, ಮೈಸೂರು.

ಮಡಿವಾಳಸ್ವಾಮಿಮಠ: ನಗರದ ರಾಮಾನುಜ ರಸ್ತೆಯಲ್ಲಿ ಸ್ಥಾಪನೆಯಾಗಿರುವ ಶ್ರೀ ಮಡಿವಾಳಸ್ವಾಮಿ ಮಠವು, ಶ್ರೀಬಸವ ಲಿಂಗ ಸ್ವಾಮಿಗಳಿಂದ ಪ್ರಾರಂಭಗೊಂಡಿದೆ. ಕಿತ್ತೂರು ಮಠದಲ್ಲಿ ಅನೇಕ ಲೀಲೆಗಳನ್ನು ಮಾಡಿದ ಶ್ರೀ ಮಡಿವಾಳೇಶ್ವರರು ಲೋಕಸಂಚಾರ ಕೈಗೊಂಡು ಅನೇಕ ಸ್ಥಳಗಳನ್ನು ಜಾಗೃತ ಕ್ಷೇತ್ರಗಳನ್ನಾಗಿ ಮಾಡಿ ಇಲ್ಲಿಗೆ ಆಗಮಿಸಿ ಅನುಷ್ಠಾನ ಕೈಗೊಂಡರು. ಇವರು ಇಲ್ಲಿ ನೆಲೆಸಿ ಧರ್ಮೋಪದೇಶದ ಮೂಲಕ ಸಮಾಜವನ್ನು ಬೆಳೆಸಿ ಲಿಂಗೈಕ್ಯರಾದರು. ಶ್ರೀ ಮಡಿವಾಳ ಸ್ವಾಮಿಗಳ ಗದ್ದುಗೆಯ ಮೇಲೆ ಮಠವು ನಿರ್ಮಾಣಗೊಂಡು ಅನೇಕ ವರ್ಷಗಳ ಕಾಲ ಗುರುಗಳಿಲ್ಲದೆ ಮಠವು ಖಾಲಿ ಉಳಿದಿತ್ತು. ಈ ಸಂದರ್ಭದಲ್ಲಿ ಶ್ರೀ ಪಟ್ಟದ ಬಸವಲಿಂಗ ಸ್ವಾಮಿಗಳು ೧೯೭೦ರಲ್ಲಿ ಮಠದ ಆಡಳಿತವನ್ನು ವಹಿಸಿಕೊಂಡರು. ಇವರು ಬೊಮ್ಮನಹಳ್ಳಿಯ ಶ್ರೀ ಅಡವಿ ಸ್ವಾಮಿಗಳ ಶಿಷ್ಯರಾಗಿ ಬೆಳೆದು ದೇವನೂರು ಮಠದ ಶ್ರೀ ತೋಂಟದಾರ್ಯ ಸ್ವಾಮಿಗಳ ಶಿಷ್ಯರಾಗಿ ಸೇವೆ ಸಲ್ಲಿಸಿ ಇಲ್ಲಿಗೆ ಆಗಮಿಸಿ ಅಧಿಕಾರವನ್ನು ವಹಿಸಿಕೊಂಡರು. ಅಧಿಕಾರಕ್ಕೆ ಬಂದ ಮೇಲೆ ಮಠದ ಆಸ್ತಿಯನ್ನು ಕಾನೂನುಬದ್ಧಗೊಳಿಸಿ ಮಠವನ್ನು ಅಭಿವೃದ್ಧಿಪಡಿಸತೊಡಗಿದ್ದಾರೆ.

ಕಂತೆಭಿಕ್ಷ ಕಾಯಕದಿಂದ ದಾಸೋಹ ಕ್ರಿಯೆಯನ್ನು ನಡೆಸುತ್ತಿರುವ ಮಠವು ಒಟ್ಟು ಅರವತ್ತೆಂಟು ಶಾಖಾ ಮಠಗಳನ್ನು ಹೊಂದಿತ್ತು ಎಂದು ಹೇಳಲಾಗುತ್ತಿದೆ. ಗುರುಗಳು ದಾಸೋಹ ಕಾಯಕವನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದು ಮಠವನ್ನು ಪ್ರಬುದ್ಧಮಾನಕ್ಕೆ ತಂದಿದ್ದಾರೆ. ಕಾಲಕ್ರಮೇಣ ನಾಗರೀಕತೆ ಬೆಳೆದಂತೆ ಮೈಸೂರಿನಂತಹ ಮಹಾ ನಗರದಲ್ಲಿ ಕಂತೆಭಿಕ್ಷ ಕಾಯಕದಿಂದ ಮಠವನ್ನು ಮುನ್ನಡೆಸಲು ಸಾಧ್ಯವಾಗದೆ ಹೋದರೂ, ಈಗಿನ ಗುರುಗಳು ವರ್ಷಕ್ಕೊಮ್ಮೆ ದವಸ ಧಾನ್ಯವನ್ನು ಸಂಗ್ರಹಿಸಿ ದಾಸೋಹ ಸೇವೆಯನ್ನು ನಡೆಸುತ್ತಿದ್ದಾರೆ. ಈಗಿನ ಮಠಾಧ್ಯಕ್ಷರಾದ ಶ್ರೀ ಇಮ್ಮಡಿ ಮಡಿವಾಳ ಸ್ವಾಮಿಗಳು ೧೯೯೪ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡು ಹಿರಿಯ ಗುರುಗಳ ಸಮ್ಮುಖದಲ್ಲಿ ಮಠವನ್ನು ಮುನ್ನಡೆಸತೊಡಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಸ್ಥಾಪನೆಯಾಗಿರುವ ಶ್ರೀ ಮಡಿವಾಳ ಸ್ವಾಮಿಗಳ ಗದ್ದುಗೆಗೆ ಎರಡು ವೇಳೆ ಪೂಜೆ, ಅಮಾವಾಸ್ಯೆ ಹುಣ್ಣಿಮೆ, ಶಿವರಾತ್ರಿ, ಕಾರ್ತೀಕ ಧನುರ್ಮಾಸದಲ್ಲಿ ವಿಶೇಷ ಪೂಜೆ ಹಾಗೂ ಭಾದ್ರಪದ ಮಾಸದಲ್ಲಿ ಮಡಿವಾಳೇಶ್ವರ ಪುಣ್ಯಾರಾಧನೆಯನ್ನು ಆಚರಿಸಲಾಗುತ್ತಿದೆ. ಮಠದ ಸುತ್ತ ಒಂದು ಎಕರೆ ಜಮೀನಿದ್ದು ಇದನ್ನು ಸಂರಕ್ಷಿಸಿ ಮಠದ ಮುಂಭಾಗದಲ್ಲಿ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿ ಮಠಕ್ಕೆ ಆದಾಯದ ಮೂಲವನ್ನಾಗಿ ಮಾಡಿಕೊಂಡಿದ್ದಾರೆ. ಮಠದ ಆವರಣದಲ್ಲಿ ೧೯೭೩ ರಲ್ಲಿ ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ.ಇಮ್ಮಡಿ ಮಡಿವಾಳ ಸ್ವಾಮಿಗಳು, ಶ್ರೀ ಮಡಿವಾಳಸ್ವಾಮಿಮಠ, ರಾಮಾನುಜ ರಸ್ತೆ, ಮೈಸೂರು-೪.

ಶಿವಾಯ ನಮಃಮಠ: ಮೈಸೂರು ನಗರದ ದೇವರಾಜ ಮೊಹಲ್ಲಾದಲ್ಲಿ ಶ್ರೀ ಶಿವಾಯ ನಮಃ ಮಠವು ಸ್ಥಾಪನೆಯಾಗಿದೆ. ವಿರಕ್ತ ಸಂಪ್ರದಾಯದ ಮರುಘಾ ಸಮಯದ ಈ ಮಠದ ಸ್ಥಾಪನೆಯ ಕಾಲಮಾನದ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಪುರಾತನ ಕಾಲದಲ್ಲಿ ಶ್ರೀ ಶಿವಾಯ ನಮಃ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಇಲ್ಲಿಗೆ ಬಂದು ನೆಲೆಸಿ,ಮಠವನ್ನು ಸ್ಥಾಪನೆ ಮಾಡಿದ್ದರಿಂದ ಈ ಮಠಕ್ಕೆ 'ಶ್ರೀ ಶಿವಾಯ ನಮಃ ಮಠ' ಎಂಬ ಹೆಸರು ಬಂದಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಶಿವಾಯ ನಮಃಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಶ್ರೀಪಾದಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಜಯದೇವಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಷಡಕ್ಷರಿ ದೇಶಿಕೇಂದ್ರಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಅಧಿಕಾರ ನಡೆಸಿದ ಗುರುಗಳ ಬಗ್ಗೆ ಮಾಹಿತಿಯನ್ನು ದಾಖಲಿಸದಿದ್ದ ಕಾರಣ ಅವರುಗಳ ಬಗ್ಗೆ ಹೆಚ್ಚು ವಿವರ ಲಭ್ಯವಿಲ್ಲ. ಹಿಂದಿನ ಲಿಂಗೈಕ್ಯ ಗುರುಗಳಾದ ಶ್ರೀ ಜಯದೇವ ಸ್ವಾಮಿ ಗಳು ಅಧಿಕಾರಕ್ಕೆ ಬರುವ ಮೊದಲು ಮಠವು ಖಾಲಿ ಉಳಿದಿತ್ತು. ಶ್ರೀ ಜಯದೇವ ಸ್ವಾಮಿಗಳು ಮಠವನ್ನು ಅಭಿವೃದ್ಧಿ ಪಡಿಸಿ, ತಮ್ಮ ಉತ್ತರಾಧಿಕಾರಿಗಳಾದ ಶ್ರೀ ಷಡಕ್ಷರಿ ಸ್ವಾಮಿಗಳಿಗೆ ೧೯೪೪ರಲ್ಲಿ ಅಧಿಕಾರವನ್ನು ನೀಡಿದರು.

ಶ್ರೀ ಷಡಕ್ಷರಿ ದೇಶಿಕೇಂದ್ರ ಸ್ವಾಮಿಗಳು ಶ್ರೀ ರುದ್ರಯ್ಯಶಾಸ್ತ್ರಿ ಮತ್ತು ಶ್ರೀಮತಿ ಮಹದೇವಮ್ಮನವರ ಪುತ್ರರಾಗಿ ೧೯೩೩೪ ರ ಆಗಸ್ಟ್ ಇಪ್ಪತ್ತೈದರಂದು ಜನಿಸಿದರು. ಇವರು ಮೈಸೂರಿನ ಚಾಮರಾಜ ಸಂಸ್ಕೃತ ಕಾಲೇಜಿನಲ್ಲಿ ವೇದಾಂತ ವಿದ್ವತ್ತನ್ನು ಪಡೆದು, ಹಿರಿಯ ಗುರುಗಳ ಸಮ್ಮುಖದಲ್ಲಿ ಮಠದ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ.

ಶೈಕ್ಷಣಿಕ ಸೇವೆ: ಮಠದಲ್ಲಿ ಒಂದು ಗದ್ದುಗೆ ಸ್ಥಾಪನೆಯಾಗಿದೆ. ಇದಕ್ಕೆ ನಿತ್ಯ ಪೂಜೆ ನಡೆಸಲಾಗುತ್ತಿದೆ. ಉಳಿದಂತೆ ಯಾವುದೇ ಧಾರ್ಮಿಕ ಕಾರ್ಯಗಳನ್ನು ನಡೆಸಲು ಸ್ಥಳದ ಅಭಾವವಿದ್ದ ಕಾರಣ ಈಗಿನ ಗುರುಗಳಾದ ಶ್ರೀ ಷಡಕ್ಷರಿ ದೇಶಿಕೇಂದ್ರ ಸ್ವಾಮಿಗಳು, ರಾಜೇಂದ್ರನಗರ ಬಡಾವಣೆಯಲ್ಲಿ ನೂತನವಾಗಿ ಮಠದ ಕಟ್ಟಡವನ್ನು ನಿರ್ಮಿಸಿ,'ಶ್ರೀ ಅಮರಭಾರತಿ ಎಜುಕೇಶನ್ ಸೊಸೈಟಿ' ಯನ್ನು ೧೯೬೬ರಲ್ಲಿ ಪ್ರಾರಂಭಿಸಿ ಶಿಶುವಿಹಾರ, ಸಂಸ್ಕೃತ ಶಾಲೆ, ಹಿಂದಿಶಾಲೆ, ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲೆಗಳನ್ನು ಪ್ರಾರಂಭಿಸಲಾಗಿದೆ. ಮಠದ ಆವರಣದಲ್ಲಿ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿದ್ದು, ಕಲಿಯುವ ಬಡಮಕ್ಕಳಿಗೆ ಆಶ್ರಯ ಕಲ್ಪಿಸಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಷಡಕ್ಷರ ದೇಶಿಕೇಂದ್ರ ಸ್ವಾಮಿಗಳು, ಶ್ರೀ ಶಿವಾಯ ನಮಃ ಮಠ, ಜ್ಞಾನಗಂಗೋತ್ರಿ ಕಾನ್ವೆಂಟ್, ರಾಜೇಂದ್ರನಗರ, ಮೈಸೂರು.

ಸುತ್ತೂರು ಶಾಖಾಮಠ: ಮೈಸೂರು ನಗರದ ನಂಜನಗೂಡು ರಸ್ತೆಯ ಎಡಬದಿ, ಚಾಮುಂಡಿ ಬೆಟ್ಟದ ತಪ್ಪಲಿನ ವಿಶಾಲ ಬಯಲಿನಲ್ಲಿ ಸುತ್ತೂರು ಮಠದ ಮೈಸೂರು ಶಾಖಾಮಠವು ತಲೆ ಎತ್ತಿನಿಂತಿದೆ. ಹಿಂದೆ ಸುತ್ತೂರಿನ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಕಾಲದಲ್ಲಿ ಗುರುಕುಲವಾಗಿ ಸ್ಥಾಪನೆಯಾಗಿ ನಂತರ ಶಾಖಾಮಠವಾಗಿ ಪರಿವರ್ತನೆಯಾಗಿ ಬೆಳೆಯಿತು. ಈಗ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳ ಸಂಕಲ್ಪದಂತೆ ಸಂಶೋಧಕರಿಗೆ, ಸಾಹಿತ್ಯಾಭ್ಯಾಸಿಗಳಿಗೆ, ಲೇಖಕರಿಗೆ ಅನುಕೂಲವಾಗುವಂತೆ ವ್ಯವಸ್ಥಿತವಾದ ಗ್ರಂಥಾಲಯ ಹಾಗೂ ವಸತಿ ವ್ಯವಸ್ಥೆಯನ್ನು ಮಾಡಿಸಿದ್ದಾರೆ. ಈ ರೀತಿ ಹಲವು ಸಮುಚ್ಚಯಗಳನ್ನೊಳಗೊಂಡ ನೂತನ ಮಠವು ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗಿರುವುದಲ್ಲದೆ, ಒಂದು ಯಾತ್ರಾತಾಣವಾಗಿ ರೂಪಗೊಂಡು ಜನಮನವನ್ನು ಸೂರೆಗೊಂಡಿದೆ. ಮೈಸೂರಿನ ಸುತ್ತೂರು ಮಠದಲ್ಲಿ ೧೯೭೮-೭೯ರಲ್ಲಿ ವರ್ಷದ ೩೬೫ ದಿನಗಳಲ್ಲಿಯೂ, ನಿರಂತರವಾಗಿ ದಿನಕ್ಕೊಬ್ಬರು ಶರಣರ ಚಿಂತನಗೋಷ್ಠಿಗಳನ್ನು ನಡೆಸಿದ್ದು ಒಂದು ದಾಖಲೆಯ ವಿಷಯವಾಗಿದೆ. ಮಠ ಎಂದರೆ ಕೇವಲ ಧರ್ಮಾಚರಣೆಗೆ ಸೀಮಿತವಾದುದ್ದಲ್ಲ, ಧಾರ್ಮಿಕ ಚೌಕಟ್ಟಿನಲ್ಲಿ ಸಮಾಜದ ಸಮಷ್ಟಿ ಹಿತದ ಬಗ್ಗೆ ಏನೆಲ್ಲ ಮಾಡಬಹುದು ಎಂಬುದನ್ನು ತೋರಿಸಿಕೊಟ್ಟಿರುವ ಸುತ್ತೂರು ಮಠವು ನಾಡಿನಲ್ಲೇ ಹೆಮ್ಮೆಯ ಮಠವಾಗಿದೆ.

ವಿಳಾಸ: ಜಗದ್ಗುರು ಶ್ರೀ ಶಿವರಾತ್ರಿದೇಶಿಕೇಂದ್ರಸ್ವಾಮಿಗಳು, ಶ್ರೀ ಸುತ್ತೂರು ಶಾಖಾಮಠ, ಚಾಮುಂಡಿ ಬೆಟ್ಟದ ತಪ್ಪಲು, ಮೈಸೂರು.

ಹೊಸಮಠ: ಮೈಸೂರು ನಗರದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಹೊಸಮಠವು, ನಾಲ್ಕು ಶತಮಾನಗಳ ಹಿಂದಿನ ಇತಿಹಾಸವನ್ನು ಹೊಂದಿದೆ. ಈ ಮಠವು ಕೆರೆ ಏರಿಯ ಕೆಳಗೆ ಸ್ಥಾಪಿತವಾಗಿದ್ದ ಕಾರಣ 'ಏರಿ ಕೆಳಗಿನಮಠ' ಅಥವಾ 'ಸೀಗೆಬೇಲಿ ಮಠ' ಅಥವಾ 'ಮಲ್ಲಿಗಮ್ಮನಮಠ' ಎಂದೂ ಕರೆಯಲಾಗುತ್ತಿತ್ತು. ಶ್ರೀ ಎಡೆಯೂರು ಸಿದ್ಧಲಿಂಗೇಶ್ವರರು ತಮ್ಮ ಏಳುನೂರೊಂದು ವಿರಕ್ತರೊಂದಿಗೆ ನಡೆಸಿದ ಆಂದೋಲನದ ಸಂದರ್ಭ ದಲ್ಲಿ ಅಸ್ತಿತ್ವಕ್ಕೆ ಬಂದಿತ್ತೆನ್ನಲಾದ ಈ ವಿರಕ್ತಮಠವು, ಶಿಕ್ಷಾಶೀಲಾಖ್ಯ ಶೂನ್ಯಸಿಂಹಾಸನ ಚೇಲಾಳ ಸಮಯದಲ್ಲಿ ಬೆಳೆದುಬಂದಿದೆ.

ಮಠ ಸ್ಥಾಪನೆ: ನಾನೂರು ವರ್ಷಗಳ ಹಿಂದೆ ಹುಬ್ಬಳ್ಳಿಯ ಶ್ರೀ ಸಂಗನಬಸವ ಸ್ವಾಮಿಗಳು, ಲೋಕಸಂಚಾರ ಹೊರಟು ದೇಶದ ಜಾಗೃತ ಸ್ಥಳಗಳನ್ನೆಲ್ಲಾ ಸುತ್ತಿ ಕುಂಭಕೋಣಂನಲ್ಲಿ ನೆಲೆಸಿ,ನಂತರ ಮೈಸೂರಿಗೆ ಆಗಮಿಸುತ್ತಾರೆ. ಮೈಸೂರಿಗೆ ಆಗಮಿಸಿದ ಶ್ರೀ ಸಂಗನಬಸವ ಸ್ವಾಮಿಗಳು, ದೊಡ್ಡಕೆರೆ ದೇವರಾಜಸಾಗರ ಏರಿಯ ಕೆಳಗಿನ ಪ್ರದೇಶದಲ್ಲಿ ಕುಟೀರವನ್ನು ಕಟ್ಟಿಕೊಂಡು ತಪೋನುಷ್ಠಾನಕ್ಕೆ ಕುಳಿತುಕೊಂಡಿರುತ್ತಾರೆ. ಈ ಸಂದರ್ಭದಲ್ಲಿ ಶಿವಶರಣೆ ಮಲ್ಲಿಗಮ್ಮ ಎಂಬುವರು ಮೈಸೂರು ಆಸ್ಥಾನದಲ್ಲಿ ಉನ್ನತ ಹುದ್ದೆಯಲ್ಲಿದ್ದರು. ಇವಳು ಪ್ರತಿನಿತ್ಯ ಕೆರೆಯ ಏರಿಯ ಕೆಳಗಿದ್ದ ಬಿಲ್ವಪತ್ರೆ ಮರದ ಪೂಜೆಗೆಂದು ಬರುತ್ತಿದ್ದಳು.

ಶ್ರೀಸಂಗನಬಸವ ಸ್ವಾಮಿಗಳು ಇಲ್ಲಿ ಅನುಷ್ಠಾನಕ್ಕೆ ಕುಳಿತಿದ್ದುದನ್ನು ಗಮನಿಸಿದಳು. ಒಂದು ದಿನ ಗುರುಗಳ ಬಳಿ ಬಂದು ಅವರಿಂದ ಆಶೀರ್ವಾದವನ್ನು ಪಡೆದು, ಗುರುಗಳಿಗಾಗಿ ಮಠವನ್ನು ಕಟ್ಟಿಸಿಕೊಡುತ್ತಾಳೆ. ಶರಣೆ ಮಲ್ಲಿಗಮ್ಮ ಮಠವನ್ನು ಸ್ಥಾಪಿಸಿದ ಕಾರಣ 'ಪಿರಿಯ ಕೆಳಗಿನಮಠ' ಅಥವಾ 'ಮಲ್ಲಿಗಮ್ಮನ ಮಠ' ಎಂಬ ಹೆಸರನ್ನು ಪಡೆಯಿತು. ಈ ರೀತಿ ಪ್ರಾರಂಭಗೊಂಡ ಮಠವು ಇಂದು ಮೈಸೂರು ನಗರದಲ್ಲಿ ಧಾರ್ಮಿಕ ಹಾಗೂ ಶೈಕ್ಷಣಿಕ ಕಾರ್ಯಗಳನ್ನು ನಡೆಸುತ್ತಾ ಬಂದಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಸಂಗನಬಸವಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಶಾಂತವೀರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಕುಮಾರ ಯತಿಗಳು ಮತ್ತು ವೀರೇಶರು (ಚರ ಮತ್ತು ಸ್ಥಿರ ?)
೪. ಶ್ರೀ ಮ.ನಿ.ಪ್ರ. ಶಿವಪೂಜಾ ಶಿವಲಿಂಗ ಶಿವಯೋಗೀಂದ್ರರು
೫. ಶ್ರೀ ಮ.ನಿ.ಪ್ರ. ಬಸವಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ರಾಚೋಟಿದೇವರು
೭. ಶ್ರೀ ಮ.ನಿ.ಪ್ರ. ಚಿಕ್ಕಬಸವಲಿಂಗಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಪರ್ವತ ದೇಶಿಕರು
೯. ಶ್ರೀ ಮ.ನಿ.ಪ್ರ. ರುದ್ರಸ್ವಾಮಿಗಳು
೧೦. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು
೧೧. ಶ್ರೀ ಮ.ನಿ.ಪ್ರ. ಸಿದ್ಧಬಸವ ಶಿವಯೋಗಿಸ್ವಾಮಿಗಳು
೧೨. ಶ್ರೀ ಮ.ನಿ.ಪ್ರ. ಗುರುಶಾಂತದೇಶಿಕರು
೧೩. ಶ್ರೀ ಮ.ನಿ.ಪ್ರ. ಗುರುನಂಜಸ್ವಾಮಿಗಳು ಮತ್ತು ಶ್ರೀ ಗುರುಪಾದಸ್ವಾಮಿಗಳು (ಚರ ಮತ್ತು ಸ್ಥಿರ ?)
೧೪. ಶ್ರೀ ಮ.ನಿ.ಪ್ರ. ಶಿವಲಿಂಗಸ್ವಾಮಿಗಳು
೧೫. ಶ್ರೀ ಮ.ನಿ.ಪ್ರ. ಗುರುಮಲ್ಲಸ್ವಾಮಿಗಳು
೧೬. ಶ್ರೀ ಮ.ನಿ.ಪ್ರ. ಪರದೇಶಿಸ್ವಾಮಿಗಳು
೧೭. ಶ್ರೀ ಮ.ನಿ.ಪ್ರ. ಸಿದ್ಧಬಸವರಾಜಸ್ವಾಮಿಗಳು
೧೮. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು
೧೯. ಶ್ರೀ ಮ.ನಿ.ಪ್ರ. ಗುರುಶಾಂತಸ್ವಾಮಿಗಳು
೨೦. ಶ್ರೀ ಮ.ನಿ.ಪ್ರ. ಚಿದಾನಂದಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಪರಂಪರೆಯ ಎರಡನೆಯ ಗುರುಗಳಾದ ಶ್ರೀ ಶಾಂತವೀರ ದೇಶಿಕರು ಯೋಗವಿದ್ಯೆಯಲ್ಲಿ ಪ್ರವೀಣರಾಗಿ ಹೆಸರು ಮಾಡಿದ್ದರು. ನಂತರ ಬಂದ ನಾಲ್ಕನೆಯ ಗುರುಗಳಾದ ಶ್ರೀ ಶಿವಪೂಜಾ ಶಿವಲಿಂಗ ಶಿವಯೋಗೀಂದ್ರರು ಶೃತಿ, ತಂತ್ರ, ಉಪನಿಷತ್ತು ಹಾಗೂ ತರ್ಕದಲ್ಲಿ ಮಹಾನ್ ವಿದ್ವಾಂಸರಾಗಿದ್ದರು. ಈ ರೀತಿ ಎಲ್ಲಾ ಗುರುಗಳು ತಮ್ಮ ಶಕ್ತ್ಯಾನುಸಾರ ಧರ್ಮ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ವೀರಶೈವ ಧರ್ಮವನ್ನು ಬೆಳೆಸಿದರು.

ಇತಿಹಾಸ ಪ್ರಜ್ಞೆ: ಮಠದ ಪರಂಪರೆಯ ಹದಿನೆಂಟನೆಯ ಗುರುಗಳಾದ ಶ್ರೀ ಬಸವಲಿಂಗ ಸ್ವಾಮಿಗಳು ಇತಿಹಾಸ ಪ್ರಜ್ಞೆಯುಳ್ಳವರು. ಇವರು ಗುರುಪರಂಪರೆ ಬೆಳೆದು ಬಂದ ದಾರಿಯನ್ನು, ಅವರು ಮಾಡುತ್ತಿದ್ದ ಗುರುತರ ಕಾರ್ಯಗಳ ಹಿನ್ನಲೆಯಲ್ಲಿ ಗುರುತಿಸಿ ದಾಖಲೆಗೊಳಿಸಿದ್ದಾರೆ. ಅಲ್ಲದೆ ಹಿಂದಿನ ಗುರುಗಳು ನಡೆಸುತ್ತಿದ್ದ ಪತ್ರ ವ್ಯವಹಾರವನ್ನು ಸಾರಾಂಶದೊಂದಿಗೆ ದಾಖಲಿಸಿದ್ದಾರೆ. ಶ್ರೀ ಬಸವಲಿಂಗ ಸ್ವಾಮಿಗಳು ಸ್ವತಃ ವಿದ್ವಾಂಸರು, ಕವಿಗಳು ಹಾಗೂ ಗ್ರಂಥ ಪ್ರಕಾಶರಾಗಿದ್ದರು. ಇವರು ೧. ಶಿವ ಪಂಚಸ್ತವ ೨. ವೀರಶೈವ ಷಟ್‌ಸ್ಥಲ ಸಿದ್ಧಾಂತ ೩. ಪುರುಷ ಸೂಕ್ತ ೪. ವೇದ ಸಂಜೀವಿನಿ ೫. ಶಿವಸ್ತವ ಶಿರೋಮಣಿ ೬. ಶೃತಿಸಾರ ಭಾಷ್ಯಂ ೭. ಪರಮಾತ್ಮ ಪ್ರಕಾಶಿಕೆ ೮. ಸ್ವಸ್ವರೂಪ ಪ್ರಕಾಶಿಕೆ ೯. ಶಿವಾಧಿಕ್ಯ ರತ್ನಾವಳಿ ೧೦. ಷಟ್‌ಸ್ಥಲಕೌಮುದಿ ಈ ರೀತಿ ವೀರಶೈವ ಧರ್ಮದ ಸಾರವನ್ನು ತಿಳಿಸುವಂತಹ ಹಲವಾರು ಮೌಲಿಕ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ.

ಹೆಸರು ಪಡೆದ ಕಾಲ: ಪರಂಪರೆಯ ಹದಿನೆಂಟನೆಯ ಗುರುಗಳಾದ ಶ್ರೀ ಬಸವಲಿಂಗ ಸ್ವಾಮಿಗಳು ತಮ್ಮ ಪ್ರೌಢಿಮೆಯಿಂದ ಆಸ್ಥಾನ ವಿದ್ವಾಂಸರಾಗಿ ನೇಮಕಗೊಂಡಿದ್ದರು. ಇವರು ಮಠವನ್ನು ಅಭಿವೃದ್ಧಿಪಡಿಸಿ, ಎಂದು ನವೀಕರಣಗೊಂಡ ಮಠಕ್ಕೆ 'ಶ್ರೀ ಹೊಸಮಠ' ಎಂದು ಕರೆದರು. ಇವರ ಕಾಲದಲ್ಲಿ ಈ ಮಠವು ಹೆಸರು ಮಾಡಿತು.

ವ್ಯಾಕರಣ ತಜ್ಞರು: ಆಸ್ಥಾನ ವಿದ್ವಾನ್ ಶ್ರೀ ಬಸವಲಿಂಗ ಸ್ವಾಮಿಗಳ ನಂತರ ಹತ್ತೊಂಬತ್ತನೆಯ ಗುರುಗಳಾಗಿ ಅಧಿಕಾರಕ್ಕೆ ಬಂದ ಶ್ರೀ ಗುರುಶಾಂತ ಸ್ವಾಮಿಗಳು ಅಲಂಕಾರ ಶಾಸ್ತ್ರ, ವ್ಯಾಕರಣ ಶಾಸ್ತ್ರ, ಸಂಸ್ಕೃತ, ಶಕ್ತಿವಿಶಿಷ್ಟಾದ್ವೈತ ಮತ್ತು ವೇದಾಂತ ವಿದ್ವತ್ ಪದವಿಗಳನ್ನು ಪಡೆದು, ೧೯೫೩ರಲ್ಲಿ ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ವ್ಯಾಕರಣ ವಿಭಾಗದ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಸೇರಿದರು. ಇವರು ಹುದ್ದೆಗೆ ಸೇರುವಾಗ ಮಠ ಅಷ್ಟೇನೂ ಅನುಕೂಲ ಸ್ಥಿತಿಯಲ್ಲಿರಲಿಲ್ಲ. ಇವರು ಪ್ರಾಧ್ಯಾಪಕರಾದ ಮೇಲೆ ವೃತ್ತಿಯಿಂದ ಬಂದ ಎಲ್ಲಾ ಹಣವನ್ನು ಮಠದ ಅಭಿವೃದ್ಧಿಗೆ ಬಳಸಿಕೊಂಡು, ಮಠದಲ್ಲಿ ವಿದ್ಯಾರ್ಥಿ ಗಳಿಗಾಗಿ ಕೊಠಡಿ ಗಳನ್ನು ನಿರ್ಮಿಸಿದರು. ೧೯೬೨ರಲ್ಲಿ ಮಠಕ್ಕೆ ಹೊಸ ಕಟ್ಟಡವನ್ನು ನಿರ್ಮಿಸಿದರು.

ಶ್ರೀ ಗುರುಶಾಂತ ಸ್ವಾಮಿಗಳು ನಟರಾಜ ಪ್ರಾರ್ಥನಾ ಮಂದಿರವನ್ನು ಸ್ಥಾಪಿಸಿದರು. ಇವರು ೧೯೬೨ ರಲ್ಲಿ ಸ್ಥಾಪಿಸಿದ ವಿದ್ಯಾರ್ಥಿ ನಿಲಯಕ್ಕೆ ವ್ಯಾಕರಣದಲ್ಲಿ ಬರುವ ಸೂತ್ರವೊಂದರ ಉಗಮಕ್ಕೆ ಕಾರಣನಾದ'ನಟರಾಜ'ಎಂಬ ಹೆಸರಿಟ್ಟರು. ಮಠವನ್ನು ಅಭಿವೃದ್ಧಿಪಡಿಸಿದ ಶ್ರೀ ಗುರುಶಾಂತ ಸ್ವಾಮಿಗಳು ತಮ್ಮ ಜೀವಿತಾವಧಿಯಲ್ಲಿ ಹೊಸ ಮಠಕ್ಕೆ ಉತ್ತರಾಧಿಕಾರಿ ಗಳನ್ನಾಗಿ ಶ್ರೀ ಚಿದಾನಂದ ಸ್ವಾಮಿಗಳನ್ನು ಆಯ್ಕೆ ಮಾಡಿಕೊಂಡು, ೧೯೫೫ ರಲ್ಲಿ ಲಿಂಗೈಕ್ಯರಾದರು.

ಕ್ರಿಯಾಶೀಲ ಆಡಳಿತಗಾರರು: ಶ್ರೀ ಸಿದ್ಧಬಸವ ದೇವರು ಮತ್ತು ಶ್ರೀಮತಿ ಮರುಲಿಂಗಮ್ಮನವರ ಪುತ್ರರಾಗಿ ೧೯೫೦ರ ಫೆಬ್ರವರಿ ಒಂದರಂದು ಜನಿಸಿದ ಶ್ರೀ ಚಂದ್ರಶೇಖರಯ್ಯನವರು, ಮೈಸೂರಿನಲ್ಲಿಯೇ ಪದವಿ ಶಿಕ್ಷಣವನ್ನು ಮುಗಿಸಿದರು. ಹಿರಿಯ ಗುರುಗಳ ಆಶ್ರಯದಲ್ಲಿ ಬೆಳೆದು ಶ್ರೀ ಚಿದಾನಂದ ಸ್ವಾಮಿಗಳೆಂದು ಅಭಿದಾನ ಪಡೆದು ೧೯೭೨ರ ಆಗಸ್ಟ್ ಇಪ್ಪತ್ತ ಮೂರರಂದು ಪಟ್ಟಾಧಿಕಾರವನ್ನು ಪಡೆದುಕೊಂಡರು.

ನಟರಾಜ ಪ್ರತಿಷ್ಠಾನ: ಶ್ರೀ ಚಿದಾನಂದ ಸ್ವಾಮಿಗಳು ಶ್ರೀ ನಟರಾಜ ವಿದ್ಯಾರ್ಥಿನಿಲಯವನ್ನು ಶ್ರೀ ನಟರಾಜ ಪ್ರತಿಷ್ಠಾನ ಎಂದು ಬದಲಿಸಿ, ೧೯೮೬ರಲ್ಲಿ ನೋಂದಾಯಿಸಿ ಪ್ರತಿಷ್ಠಾನದ ನೆರಳಿನಲ್ಲಿ ಎಲ್ಲಾ ಚಟುವಟಿಕೆಗಳು ಕ್ರಿಯಾತ್ಮಕವಾಗಿ ನಡೆಯು ವಂತೆ ಕಾನೂನುಬದ್ಧಗೊಳಿಸಿದರು. ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ನಟರಾಜ ಪ್ರತಿಷ್ಠಾನ ದಿಂದ ಜನೋಪಯೋಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಯಶಸ್ವಿಯಾಗಿ ನಡೆಸುತ್ತಿದ್ದಾರೆ. ಕಳೆದ ಮೂವತ್ತೈದು ವರ್ಷಗಳಿಂದ ಮಠದ ಆಶ್ರಯದಲ್ಲಿ ನಡೆದುಕೊಂಡು ಬಂದಿದ್ದ ವಿದ್ಯಾರ್ಥಿ ನಿಲಯದ ಜೊತೆಗೆ, ೧೯೮೮ರಲ್ಲಿ ಶ್ರೀ ನಟರಾಜ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿದರು. ಈಗ ನಟರಾಜ ಪ್ರತಿಷ್ಠಾನದ ಅಂಗ ಸಂಸ್ಥೆಗಳು ಈ ಕೆಳಗಿನಂತಿವೆ.

೧. ಶ್ರೀ ನಟರಾಜ ಶಿಶು ಸಂರಕ್ಷಣಾ ಕೇಂದ್ರ, ಮೈಸೂರು
೨. ಶ್ರೀ ನಟರಾಜ ಕಾನ್ವೆಂಟ್, ಮೈಸೂರು
೩. ಶ್ರೀ ನಟರಾಜ ಕಾನ್ವೆಂಟ್ ಜೆ.ಸಿ. ನಗರ, ಮೈಸೂರು
೪. ಶ್ರೀ ನಟರಾಜ ಕಾನ್ವೆಂಟ್ ನಾಗವಾಲ, ಮೈಸೂರು ತಾಲ್ಲೂಕು
೫. ಶ್ರೀ ನಟರಾಜ ಉನ್ನತ ಪ್ರಾಥಮಿಕ ಶಾಲೆ, ಮೈಸೂರು
೬. ಶ್ರೀ ನಟರಾಜ ಪ್ರೌಢಶಾಲೆ ಆಂಗ್ಲ ಮಾಧ್ಯಮ, ಮೈಸೂರು
೭. ಶ್ರೀ ನಟರಾಜ ಪ್ರೌಢಶಾಲೆ, ಚಿದರಹಳ್ಳಿ, ಟಿ.ನರಸೀಪುರ ತಾಲ್ಲೂಕು
೮. ಶ್ರೀ ನಟರಾಜ ಮಹಿಳೆಯರ ನಿವಾಸ, ಪದವಿಪೂರ್ವ ಕಾಲೇಜು, ಮೈಸೂರು
೯. ಶ್ರೀ ನಟರಾಜ ಕೈಗಾರಿಕಾ ತರಬೇತಿ ಸಂಸ್ಥೆ, ಮೈಸೂರು
೧೦. ಶ್ರೀ ನಟರಾಜ ಪ್ರಥಮದರ್ಜೆ ನಿವಾಸ, ಮಹಿಳಾ ಕಾಲೇಜು, ಮೈಸೂರು

೧೧. ಶ್ರೀ ನಟರಾಜ ಉದ್ಯೋಗಸ್ಥ ಮಹಿಳೆಯರ ವಿದ್ಯಾರ್ಥಿನಿಲಯ, ಮೈಸೂರು
೧೨. ಶ್ರೀ ನಟರಾಜ ಕಲ್ಯಾಣ ಮಂಟಪ, ಮೈಸೂರು
೧೩. ಶ್ರೀ ನಟರಾಜ ವೃದ್ಧಾಶ್ರಮ, ಮೈಸೂರು
೧೪. ಶ್ರೀ ನಟರಾಜ ಸಾರ್ವಜನಿಕ ಶಾಲೆ, ಆಂಗ್ಲ ಮಾಧ್ಯಮ ಸಿ.ಬಿ.ಎಸ್, ಮೈಸೂರು

ಇವುಗಳಲ್ಲಿ ಪ್ರಥಮದರ್ಜೆ ಮಹಿಳಾ ಕಾಲೇಜು ಮೂವತ್ತು ಲಕ್ಷ ರೂಪಾಯಿ ಮೌಲ್ಯದ ಸ್ವಂತ ಕಟ್ಟಡವನ್ನು ಹೊಂದಿದೆ. ಶಾಲಾಪೂರ್ವ ಶಿಶುಕೇಂದ್ರಗಳು, ನವ ಸಮಾಜದ ಅಗತ್ಯದ ಯೋಗ್ಯ ಪೂರೈಕೆಯಲ್ಲಿ ಉದ್ಯೋಗಸ್ಥ ಮಹಿಳೆಯರ ವಿದ್ಯಾರ್ಥಿ ನಿಲಯ ಹಾಗೂ ವೃದ್ಧಾಶ್ರಮಗಳು ರೂಪಿತವಾಗಿವೆ. ಶ್ರೀ ನಟರಾಜ ಕಲ್ಯಾಣಮಂಟಪವು ಸಮಾಜದ ಎಲ್ಲಾ ವರ್ಗಗಳ, ಎಲ್ಲಾ ಬಗೆಯ ಸಾಮಾಜಿಕ, ಧಾರ್ಮಿಕ ಸಭೆ ಸಮಾರಂಭಗಳಿಗೆ ಹಾಗೂ ವಿವಾಹಗಳಿಗೆ ಉಪಯುಕ್ತವಾಗಿದೆ. ಮಠದ ಶೈಕ್ಷಣಿಕ ಸಂಕೀರ್ಣ ಕಟ್ಟಡದಲ್ಲಿ ಯೋಗಕೇಂದ್ರ, ಪ್ರಾರ್ಥನಾ ಸಭಾಂಗಣ ಹಾಗೂ ಸಾರ್ವಜನಿಕ ಉಪಯುಕ್ತ ಗ್ರಂಥಾಲಯಇದೆ. ಈ ರೀತಿ ನಟರಾಜ ಪ್ರತಿಷ್ಠಾನದ ಮೂಲಕ ಮಠವನ್ನು ಪ್ರಬುದ್ಧಮಾನಕ್ಕೆ ತಂದ ಕೀರ್ತಿ ಶ್ರೀ ಚಿದಾನಂದ ಸ್ವಾಮಿಗಳಿಗೆ ಸಲ್ಲುತ್ತದೆ. ನಗರದ ಹೃದಯ ಭಾಗದಲ್ಲಿರುವ ಮಠದ ಸುತ್ತ ನಟರಾಜ ಪ್ರತಿಷ್ಠಾನದ ವತಿಯಿಂದ ಪ್ರಾರಂಭಗೊಂಡಿರುವ ಶಿಕ್ಷಣ ಸಮುಚ್ಚಯಗಳು ಮತ್ತು ವಿದ್ಯಾರ್ಥಿಗಳಿಗಾಗಿಯೇ ನಿರ್ಮಾಣಗೊಂಡ ಮೇಲಂತಸ್ತಿನ ಇನ್ನೂರು ಕೊಠಡಿಗಳು ಮಠದ ಆದಾಯದ ಮೂಲವಾಗಿವೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯಲ್ಲಿ ಲಿಂಗೈಕ್ಯರಾದ ಗುರುಗಳ ಹನ್ನೆರಡು ಗದ್ದುಗೆಗಳು ಸ್ಥಾಪನೆಗೊಂಡಿವೆ. ಇವುಗಳಿಗೆ ನಿತ್ಯ ಪೂಜೆಯನ್ನು ನಡೆಸಲಾಗುತ್ತಿದೆ. ಹುಣ್ಣಿಮೆಯಂದು ವಿಶೇಷ ಪೂಜೆ ಹಾಗೂ ಪ್ರತಿವರ್ಷ ಪಾಲ್ಗುಣ ಬಹುಳ ಅಮಾವಾಸ್ಯೆಯ ದಿನ, ಹಿರಿಯ ಗುರುಗಳ ವಾರ್ಷಿಕ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ.ಚಿದಾನಂದಸ್ವಾಮಿಗಳು, ಶ್ರೀ ಹೊಸಮಠ, ನಟರಾಜಪ್ರತಿಷ್ಠಾನಸಮುಚ್ಚಯ.ಶಂಕರಮಠದರಸ್ತೆ, ಮೈಸೂರು೪.
ಆಧಾರ: ಶ್ರೀ ಗುರುಶಾಂತ, ಸಂಸ್ಮರಣೆ ಗ್ರಂಥ

ಶೆಟ್ಟಿನಾಯಕನಹಳ್ಳಿ

ಮೈಸೂರು ತಾಲ್ಲೂಕಿನ ಇಳವಾಲ ಹೋಬಳಿಯ ಶೆಟ್ಟಿನಾಯಕನಹಳ್ಳಿಯು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹನ್ನೆರಡು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಪಟ್ಟದಮಠವು ಅಸ್ತಿತ್ವದಲ್ಲಿದೆ.

ಪಟ್ಟದಮಠ: ಶೆಟ್ಟಿನಾಯಕನಹಳ್ಳಿಯಲ್ಲಿ ಸ್ಥಾಪನೆಯಾಗಿರುವ ಮಠವನ್ನು ಮೈಸೂರು ತಾಲ್ಲೂಕಿನ ದಂಡಿಕೆರೆ ಮಠದ ಗುರುಗಳಾದ ಶ್ರೀ ಮಹಾಂತಲಿಂಗ ಸ್ವಾಮಿಗಳು ದಂಡಿಕೆರೆಯಿಂದ ಇಲ್ಲಿಗೆ ಬಂದು ಸ್ಥಾಪಿಸಿದ್ದಾರೆ. ಇವರು ತಮ್ಮ ಕೊನೆಗಾಲದಲ್ಲಿ ಪುನಃ ದಂಡಿಕೆರೆಗೆ ಹೋಗಿ ನೆಲೆಸಿ ೧೯೪೭ರಲ್ಲಿ ಲಿಂಗೈಕ್ಯರಾಗಿದ್ದಾರೆ.

ಪರಂಪರೆ: ಶ್ರೀ ಮಹಾಂತಲಿಂಗ ಸ್ವಾಮಿಗಳ ನಂತರ ಶ್ರೀ ಬಸವಲಿಂಗ ಸ್ವಾಮಿಗಳು ಅಧಿಕಾರಕ್ಕೆ ಬಂದರು. ಎಪ್ಪತ್ತೈದು ವರ್ಷ ವಯಸ್ಸಿನ ಶ್ರೀ ಬಸವಲಿಂಗ ಸ್ವಾಮಿಗಳು ತಮ್ಮ ಎಂಟನೆಯ ವರ್ಷದಲ್ಲಿಯೇ ಈ ಮಠದ ಅಧಿಕಾರ ವಹಿಸಿಕೊಂಡು ದೀರ್ಘ ಕಾಲದ ಅಧಿಕಾರದ ನಂತರ ಈಗ ಶ್ರೀ ಬಸವಲಿಂಗ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನಿಯೋಜಿಸಿ ಪಟ್ಟಾಧಿಕಾರ ಮಾಡಿ ವಿದ್ಯಾಭ್ಯಾಸಕ್ಕೆ ಕಳುಹಿಸಿದ್ದಾರೆ. ಮಠದ ಆಸ್ತಿಯಾಗಿ ಎರಡು ಎಕರೆ ಜಮೀನಿದ್ದು, ಇದರಲ್ಲಿ ರೇಷ್ಮೆ ಸಾಕಾಣಿಕೆ ಮಾಡುತ್ತಿದ್ದಾರೆ. ಹಿಂದೆ ಶ್ರೀ ಮಹಾಂತಲಿಂಗ ಸ್ವಾಮಿಗಳ ಕಾಲದಲ್ಲಿ ನಿರ್ಮಿಸಲಾದ ಕಟ್ಟಡ ಸುಸಜ್ಜಿತವಾಗಿದೆ. ಮಠಕ್ಕೆ ಬಂದ ಭಕ್ತರಿಗೆ ದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಇಲ್ಲಿನ ವೀರಶೈವರ ಧಾರ್ಮಿಕ ಕ್ರಿಯಾದಿಗಳು ಹಾಗೂ ಜನನ ಮರಣದಂತಹ ಸಂದರ್ಭಗಳಲ್ಲಿ ಪಾಲ್ಗೊಂಡು ವಿಧಿವಿಧಾನಗಳನ್ನು ಪೂರೈಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಪಟ್ಟದಮಠ, ಶೆಟ್ಟಿನಾಯಕನಹಳ್ಳಿ, ಮೈಸೂರು ತಾಲ್ಲೂಕು.

❑

ಹುಣಸೂರು ತಾಲ್ಲೂಕು

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕು ನೀರಾವರಿ ಮತ್ತು ಮಳೆಯಿಂದ ಅವಲಂಬಿತಗೊಂಡಿದೆ. ಅಭಿವೃದ್ಧಿಯ ಪಥದಲ್ಲಿರುವ ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆದು ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಈ ತಾಲ್ಲೂಕಿನಲ್ಲಿ ಎರಡು ಮಠಗಳು ಅಸ್ತಿತ್ವದಲ್ಲಿವೆ.

ಗಾವಡಗೆರೆ

ಹುಣಸೂರು ತಾಲ್ಲೂಕಿನ ಗಾವಡಗೆರೆಯು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಎಂಟು ಕಿ.ಮೀ.ದೂರದಲ್ಲಿದೆ. ಇಲ್ಲಿ ಓಂ ಶ್ರೀ ಜಂಗಮದೇವರ ಮಠವು ಸ್ಥಾಪನೆಯಾಗಿ, ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿ ಬೆಳೆದಿದೆ.

ಓಂ ಶ್ರೀ ಗುರುಲಿಂಗ ಜಂಗಮದೇವರಮಠ: ಗಾವಡಗೆರೆಯಲ್ಲಿ ಸುಮಾರು ಎರಡು ಶತಮಾನಗಳ ಹಿಂದೆ ಅಸ್ತಿತ್ವದಲ್ಲಿದ್ದ ಮಠ ಕಾರಣಾಂತರದಿಂದ ಶಿಥಿಲಗೊಂಡಿತ್ತು. ಈ ಸಂದರ್ಭದಲ್ಲಿ ಮಠದ ಫಲವತ್ತಾದ ಭೂಮಿ ಗ್ರಾಮದ ಒಬ್ಬರ ಸ್ವತ್ತಾಗಿ ಹೋಗಿತ್ತು. ಮಠದ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಿದ್ದ ವಂಶಸ್ಥರಿಗೆ ಒಂದೊಂದೇ ಕಷ್ಟಗಳು ಎದುರಾಗಿ ಅನೇಕ ನೋವುಗಳನ್ನು ಅನುಭವಿಸಬೇಕಾಯಿತು. ಈ ವಂಶದ ಚಿನ್ನಾಬಾಯಿ ಎಂಬ ಮಹಿಳೆ ತನ್ನ ಗಂಡನನ್ನು ಕಳೆದುಕೊಂಡು ವಿಧವೆಯಾದಳು. ಈ ದುರ್ಘಟನೆ ನಡೆದ ನಂತರ ಮಠದ ಆಸ್ತಿಯನ್ನು ಇಟ್ಟುಕೊಳ್ಳುವುದರಿಂದ ಶ್ರೇಯಸ್ಸು ಕಾಣಲಾರದೆಂದು ಅರಿತ ಚಿನ್ನಮ್ಮ ತಪಸ್ವಿಗಳೊಬ್ಬರಿಗೆ ಆಸ್ತಿಯನ್ನು ಒಪ್ಪಿಸಬೇಕೆಂದು ನಿರ್ಧರಿಸಿಕೊಂಡಳು.

ಸಮರ್ಥರ ಆಗಮನ: ಈ ಸಂದರ್ಭದಲ್ಲಿ ಶ್ರೀ ನಂಜುಂಡ ಶಿವಯೋಗಿಗಳು ಲೋಕಸಂಚಾರ ಮಾಡುತ್ತಾ ಗಾವಡಗೆರೆಯಲ್ಲಿ ಬಂದು ಅನುಷ್ಠಾನಗೊಂಡರು. ಗುರುಗಳ ತಪೋನಿಷ್ಠೆ ಹಾಗೂ ಅವರಲ್ಲಿದ್ದ ಯೋಗಸಿದ್ಧಿಯನ್ನು ಕಂಡು ಚಿನ್ನಾಬಾಯಿ ತಪಸ್ವಿಗಳ ಹತ್ತಿರ ಬಂದು'ಹಿಂದಿನ ನಮ್ಮ ವಂಶಸ್ಥರು ದುರಾಸೆಯಿಂದ ಮಠದ ಯೋಗಭೂಮಿಯನ್ನು ಭೋಗಕ್ಕಾಗಿ ಬಳಸಿಕೊಂಡಿದ್ದರು. ಇದನ್ನು ಈಗ ತಮಗೆ ಒಪ್ಪಿಸುತ್ತೇವೆ. ತಾವು ಈ ಸ್ಥಳದಲ್ಲೇ ನೆಲೆಸಿ ನಮ್ಮನ್ನು ಉದ್ಧರಿಸಬೇಕು 'ಎಂದು ಬಿನ್ನವಿಸಿಕೊಳ್ಳುತ್ತಾಳೆ. ಆಗ ಗುರುಗಳು ಸಮ್ಮತಿಸಿ ಮಠ ಕಟ್ಟಲು ಬೇಕಾಗುವಷ್ಟು ಜಾಗವನ್ನು ಪಡೆದು ಆಶೀರ್ವದಿಸಿದರು.

ಪುನರ್ ಸ್ಥಾಪನೆ: ಗಾವಡಗೆರೆಯ ಹೊರಭಾಗದ ಪಶ್ಚಿಮ ಭಾಗದಲ್ಲಿ ಶ್ರೀ ಶಿವನಂಜುಂಡ ಶಿವಯೋಗಿಗಳು ಮಠವನ್ನು ಪುನರ್‌ಸ್ಥಾಪನೆ ಮಾಡಿದರು. ಅಂದಿನಿಂದ ಓಂ ಶ್ರೀ ಗುರುಲಿಂಗಜಂಗಮ ದೇವರ ಮಠವು ಹೆಸರಿಗೆ ಅನ್ವರ್ಥಕವಾಗುವಂತೆ ವೀರಶೈವ ಧರ್ಮದ ಸಿದ್ಧಾಂತದ ಪ್ರಮುಖ ಪರಿಭಾಷೆಗಳಾದ ಗುರು, ಲಿಂಗ, ಜಂಗಮ ಮತ್ತು ಗುರುವಿರಕ್ತರನ್ನು ಸಮೀಕರಿಸಿ, ಒಂದು ಜಂಗಮ ಶಾಖೆಯಾಗಿ ಬೆಳೆದಿದೆ.

ಮಠ ಸ್ಥಾಪನೆಗೊಂಡ ಮೇಲೆ ಮಠದ ಸುತ್ತ ಬಿಲ್ವಪತ್ರೆ ಮರಗಳನ್ನು ಬೆಳಸಿ, ಇವುಗಳಿಗೆ ದೀಕ್ಷೆಕೊಡುವ ಪೂಜಾ ಕಾರ್ಯಕ್ರಮವನ್ನು ಹಮ್ಮಿಕೊಂಡರು. ಅಂದಿನ ಪೂಜಾಕಾರ್ಯಕ್ಕೆ ನಾಡಿನ ಅನೇಕ ಹಿರಿಕಿರಿಯ ಮಠಾಧೀಶರು ಪಾಲ್ಗೊಂಡಿದ್ದರು. ಪೂಜಾಕಾರ್ಯ ಮುಗಿದು ಧಾರ್ಮಿಕ ಸಭೆ ನಡೆಯುತ್ತಿದ್ದ ಸಂದರ್ಭದಲ್ಲಿ ದಿಢೀರನೆ ಎದ್ದುನಿಂತ ಶ್ರೀಶಿವನಂಜುಂಡ ಶಿವಯೋಗಿಗಳು 'ಯಾರಾದರೂ ಈ ಸಂದರ್ಭದಲ್ಲಿ ಇದೇ ವೇದಿಕೆಯಲ್ಲಿ ಲಿಂಗೈಕ್ಯರಾದರೆ ಇಲ್ಲಿ ಸೇರಿರುವ ಯಾರನ್ನೂ ಬೀಳ್ಕೊಡದೆ ಹನ್ನೆರಡು ದಿನ ಜಂಗಮರಿಗೆ ಆರಾಧನೆ ಮಾಡಿಸುವೆ' ಎಂದು ಘೋಷಿಸಿದರು. ಆಗ ನಂಜನಗೂಡಿನ ಕಡೆಯಿಂದ ಅಗಮಿಸಿದ್ದ ಶ್ರೀ ಶಿವಪ್ಪ ಸ್ವಾಮಿಗಳು ತಕ್ಷಣ ಎದ್ದು ನಿಂತು'ನಾವು ಲಿಂಗೈಕ್ಯರಾಗುತ್ತೇವೆ' ಎಂದು ಹೇಳಿ ವೇದಿಕೆಯ ಮೇಲೆ ಪದ್ಮಾಸನದಲ್ಲಿ ಕುಳಿತು ಶಿವಮಂತ್ರ ಜಪಿಸುತ್ತಾ ದೇಹ ತ್ಯಜಿಸಿದರು. ಶರಣರ ಲೀಲೆಗಳನ್ನು ತೋರಿಸಲು ಶ್ರೀ ಶಿವನಂಜುಂಡ ಸ್ವಾಮಿಗಳು ಘೋಷಿಸಿದಂತೆ ಹನ್ನೆರಡು ದಿನ ಜಂಗಮ ಆರಾಧನೆಯನ್ನು ಮಾಡಿ, ಗಾವಡಗೆರೆಯಲ್ಲಿ ಧರ್ಮ ನೆಲೆಗೊಳ್ಳುವಂತೆ ಮಾಡಿದರು.

ಉತ್ತರಾಧಿಕಾರಿಗಳ ಆಯ್ಕೆ: ಶ್ರೀ ಶಿವನಂಜುಂಡ ಶಿವಯೋಗಿಗಳು ತಾವು ಪುನರ್ ಸ್ಥಾಪಿಸಿದ್ದ ಮಠಕ್ಕೆ ಸೂಕ್ತ ಉತ್ತರಾಧಿಕಾರಿ

ಗಳನ್ನು ಆಯ್ಕೆಮಾಡಿಕೊಳ್ಳಲು ನಿರ್ಧರಿಸಿ ಹೆಗ್ಗಡದೇವನ ಕೋಟೆ ತಾಲ್ಲೂಕಿನ ಬೀಚನಹಳ್ಳಿಪುರಕ್ಕೆ ಆಗಮಿಸಿದರು. ಗುರುಗಳು ಶ್ರೀ ಗುರುಸ್ವಾಮಿ ಎಂಬುವರ ಮನೆಯಲ್ಲಿ ಪೂಜೆಗಾಗಿ ಬಿಡಾರ ಮಾಡಿದ್ದರು. ಶ್ರೀ ಗುರುಸ್ವಾಮಿ ಮತ್ತು ಶ್ರೀಮತಿ ದೇವಮ್ಮನವರ ಮೂರನೆಯ ಪುತ್ರರಾಗಿ ೧೯೭೩ರಲ್ಲಿ ಜನಿಸಿದ ನಟರಾಜ ದೇವರನ್ನು ಗುರುತಿಸಿ, ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡು ೧೯೭೫ರ ಮೇ ಹದಿನಾರರಂದು ಪಟ್ಟಾಧಿಕಾರ ಮಾಡಿದರು. ಪಟ್ಟಾಧಿಕಾರ ಮಾಡಿದ ಎರಡೇ ತಿಂಗಳಿಗೆ ಶ್ರೀ ಶಿವನಂಜುಂಡ ಸ್ವಾಮಿಗಳು ಲಿಂಗೈಕ್ಯರಾದರು.

ಹನ್ನೆರಡು ವರ್ಷದ ಶ್ರೀ ನಟರಾಜ ಸ್ವಾಮಿಗಳು ಮಠದ ಜವಾಬ್ದಾರಿ ಹೊತ್ತು ಕನಕಪುರದ ದೇಗುಲ ಮಠದಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಇತ್ತ ಮಠದಲ್ಲಿ ದೀಪ ಹಚ್ಚಲು ಯಾರೂ ಇಲ್ಲದಿದ್ದಾಗ ಶ್ರೀ ನಟರಾಜ ಸ್ವಾಮಿಗಳ ತಂದೆ ತಾಯಿಗಳು ಮಠದಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸಿದರು. ವಿದ್ಯಾಭ್ಯಾಸ ಮುಗಿಸಿದ ಶ್ರೀ ನಟರಾಜ ಸ್ವಾಮಿಗಳು ವೈಜ್ಞಾನಿಕ ಹಾಗೂ ಸಾಮಾಜಿಕ ವಿಚಾರಗಳ ಕಡೆ ಗಮನಕೊಟ್ಟು, ಯಾವುದೇ ಮಠದ ವ್ಯವಸ್ಥೆ ಮಠಾಧಿಪತಿಯ ಬದುಕಿಗಾಗಿ ಅಲ್ಲ, ಸರ್ವಜನರ ಕಲ್ಯಾಣಕ್ಕೆ ಎಂದು ಅರಿತು ಮಠವನ್ನು ಎಲ್ಲರಿಗೂ ಬೇಕಾಗುವ ಪವಿತ್ರ ಜಾಗವನ್ನಾಗಿ ಬೆಳೆಸತೊಡಗಿದ್ದಾರೆ. ಈ ಕಾರಣದಿಂದ ಎಲ್ಲ ವರ್ಗದ ಜನರು ಮಠದ ಭಕ್ತರಾಗಿ ಮಠವನ್ನು ಬೆಳೆಸುತ್ತಿದ್ದಾರೆ. ಚಿಕ್ಕವಯಸ್ಸಿನಲ್ಲೇ ಎಲ್ಲರ ಮೆಚ್ಚುಗೆಯನ್ನು ಸಂಪಾದಿಸಿರುವ ಶ್ರೀ ನಟರಾಜ ಸ್ವಾಮಿಗಳು ಹಿರಿಯ ಗುರುಗಳು ಕಟ್ಟಿಸಿದ್ದ ಕೈಹೆಂಚಿನ ಕಟ್ಟಡವನ್ನು ತೆಗೆದು, ೧೯೯೦ರಲ್ಲಿ ನೂತನ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಠದ ಆವಶ್ಯಕತೆಗೆ ತಕ್ಕಷ್ಟು ಕಟ್ಟಡವನ್ನು ನಿರ್ಮಿಸಿ, ೧೯೯೨ರಲ್ಲಿ ಉದ್ಘಾಟನೆಗೊಳಿಸಿದ್ದಾರೆ. ಮಠದ ಪಕ್ಕದಲ್ಲಿರುವ ಎರಡು ಎಕರೆ ಜಾಗವನ್ನು ಖರೀದಿಸಿ ವಿಸ್ತೀರ್ಣವನ್ನು ಹೆಚ್ಚಿಸಿದ್ದಾರೆ.

ಶೈಕ್ಷಣಿಕ ಕೊಡುಗೆ: ಹಿರಿಯ ಗುರುಗಳಾದ ಶ್ರೀ ಶಿವನಂಜುಂಡ ಶಿವಯೋಗಿಗಳ ಹೆಸರಿನಲ್ಲಿ ಉಚಿತ ವಿದ್ಯಾರ್ಥಿನಿಲಯ ಪ್ರಾರಂಭಿಸಿ, ಕಲಿಕೆಯಲ್ಲಿ ವಂಚಿತರಾಗಿದ್ದ ಬಡಮಕ್ಕಳಿಗೆ ಆಶ್ರಯ ನೀಡಿದ್ದಾರೆ. ಮಠದ ಆವರಣದಲ್ಲಿ ಒಂದು ಪ್ರೌಢಶಾಲೆ ಹಾಗೂ ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಿ ಕಲಿಕೆಗೆ ಅವಕಾಶ ಮಾಡಿಕೊಟ್ಟು, ಮೂವತ್ತು ಲಕ್ಷರೂಪಾಯಿಗಳ ವೆಚ್ಚದಲ್ಲಿ ಕಟ್ಟಡವನ್ನು ನಿರ್ಮಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಶ್ರೀ ಶಿವನಂಜುಂಡ ಸ್ವಾಮಿಗಳ ವಾರ್ಷಿಕ ಆರಾಧನೆಯನ್ನು ಧಾರ್ಮಿಕ, ಸಾಹಿತ್ಯಿಕ ಚಟುವಟಿಕೆಯ ಮೂಲಕ ಅರ್ಥಬದ್ಧವಾಗಿ ಆಚರಣೆ ಮಾಡಲಾಗುತ್ತಿದೆ. ಮಠದ ಹೊಲದಲ್ಲಿರುವ ಪುರಾತನ ಗದ್ದುಗೆಗೆ ಹಾಗೂ ಕರ್ತೃಗುರುಗಳ ಗದ್ದುಗೆಗೆ ಪೂಜೆಯನ್ನು ಮಾಡಲಾಗುತ್ತಿದೆ. ಶ್ರಾವಣ,ಕಾರ್ತೀಕಮಾಸ ಮತ್ತು ಯುಗಾದಿಯಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಪ್ರತಿದಿನ ದಾಸೋಹವನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ನಟರಾಜ ಸ್ವಾಮಿಗಳು, ಓಂ ಶ್ರೀ ಗುರುಲಿಂಗಜಂಗಮಮಠ, ಗಾವಡಗೆರೆ. ಕೆ.ಆರ್.ನಗರ ಮಾರ್ಗ. ಹುಣಸೂರು ತಾಲ್ಲೂಕು. ಮೈಸೂರು ಜಿಲ್ಲೆ.

ಮಾದಹಳ್ಳಿ

ಹುಣಸೂರು ತಾಲ್ಲೂಕಿನ ಮಾದಹಳ್ಳಿಯು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹತ್ತು ಕಿ.ಮೀ. ದೂರದಲ್ಲಿದೆ. ಹುಣಸೂರು ಮತ್ತು ಮೈಸೂರು ಮುಖ್ಯ ರಸ್ತೆಯಿಂದ ಬಲ ಭಾಗಕ್ಕೆ ಮೂರು ಕಿ.ಮೀ. ಒಳದಾರಿಯಲ್ಲಿ ಸುತ್ತಿಬಳಸಿ ಸಾಗಿದರೆ ಸಿಗುವ ಕುಗ್ರಾಮವೇ ಮಾದಹಳ್ಳಿ.ಮೈಸೂರಿನಂತಹ ಮಹಾನಗರ ಹತ್ತಿರವಿದ್ದರೂ ಅಭಿವೃದ್ಧಿ ಕಾರ್ಯಗಳಿಂದ ದೂರವಿದೆ. ಈ ಗ್ರಾಮದ ಆಗ್ನೇಯಕ್ಕೆ ಶ್ರೀ ರಂಭಾಪುರಿ ಪೀಠದ ಶಾಖಾಮಠವಾದ ಶ್ರೀ ಉಕ್ಕಿನ ಕಂತೆ ಮಠವು ಪುರಾತನ ಕಾಲದಿಂದಲೂ ಅಸ್ತಿತ್ವದಲ್ಲಿದ್ದು, ಈತನಕ ಬೆಳೆದು ಬಂದಿದೆ.

ಉಕ್ಕಿನ ಕಂತೆಮಠ: ಮಾದಹಳ್ಳಿಯಲ್ಲಿ ಸ್ಥಾಪನೆಯಾಗಿರುವ ಶ್ರೀ ಉಕ್ಕಿನ ಕಂತೆಮಠವು ಪುರಾಣ ಪ್ರಸಿದ್ಧಿಯನ್ನು ಪಡೆದಿದೆ. 'ಕೈಲಾಸದಿಂದ ಧರೆಗಿಳಿದು'ಬಂದಿತೆಂದು ಹೇಳಲಾಗುವ ಅಗಾಧ ಗಾತ್ರದ ಉಕ್ಕಿನ ಕಂತೆಯು ಈ ಮಠದಲ್ಲಿ ಸ್ಥಾಪನೆಯಾಗಿ

ರುವುದರಿಂದ 'ಶ್ರೀ ಉಕ್ಕಿನಕಂತೆ ಮಠ'ಎಂಬ ಹೆಸರು ಬಂದಿದೆ. ಊರಿನ ಹೊರಭಾಗದ ಕೆರೆಯ ದಡದಲ್ಲಿ ಸ್ಥಾಪನೆಯಾಗಿರುವ ಉಕ್ಕಿನ ಕಂತೆ ಮಠವು ಧಾರ್ಮಿಕ ವಿಚಾರದಲ್ಲಿ ಈ ಪ್ರಾಂತ್ಯದ ಎಲ್ಲಾ ಮಠಗಳಿಗೂ ಹಿರಿಯಣ್ಣನಾಗಿ ಎಲ್ಲರ ಮನದಲ್ಲಿ ಅಚ್ಚಳಿಯದೆ ಉಳಿದಿದೆ. ಉಕ್ಕಿನಕಂತೆಯ ವಿಶೇಷತೆಯಿಂದ ಈ ಮಠ ಹೆಚ್ಚು ಪ್ರಚಾರಕ್ಕೆ ಬಂದಿದೆ. ಪುರಾತನ ಕಾಲದ ಮಠದ ಕಟ್ಟಡವು ಮರದ ಕೆತ್ತನೆಯ ಆಕೃತಿಗಳಿಂದ ನಿರ್ಮಾಣಗೊಂಡಿದೆ. ಮಠದ ಪೂಜಾ ಬಾಗಿಲಿನ ಕೆತ್ತನೆಯ ಕೈಕುಸುರಿ ಬಹಳ ಆಕರ್ಷಕವಾಗಿದೆ.ತೊಟ್ಟಿಯಾಕಾರದ ಕಟ್ಟಡವನ್ನು ಹೊಂದಿರುವ ಈ ಮಠ ಹಿಂದಿನ ತನ್ನ ವೈಭವವನ್ನು ಸಾರುತ್ತಿದೆ.

ಪರಂಪರೆ: ಪರಂಪರೆಯಲ್ಲಿ ಒಟ್ಟು ಹತ್ತು ಜನ ಸ್ವಾಮಿಗಳು ಅಧಿಕಾರ ನಡೆಸಿರಬಹುದೆಂದು ಮಠದ ಆವರಣದಲ್ಲಿರುವ ಸಾಕ್ಷಾಧಾರಗಳಿಂದ ಹೇಳಬಹುದಾಗಿದೆ. ಮಠದ ಪರಂಪರೆಯಲ್ಲಿ ಆಡಳಿತ ನಡೆಸಿದ ಎಲ್ಲಾ ಗುರುಗಳ ಬಗ್ಗೆ ವಿವರ ಲಭ್ಯವಿಲ್ಲ. ಮಠದ ಒಳಭಾಗದಲ್ಲಿ ಶ್ರೀ ಗುರುಮಲ್ಲಪ್ಪ ಶಿವಾಚಾರ್ಯ ಸ್ವಾಮಿಗಳ ಗದ್ದುಗೆ ಹಾಗೂ ಮಠದ ಎದುರಿನ ಕೆರೆಯ ದಡದಲ್ಲಿ ಒಂಬತ್ತು ಗದ್ದುಗೆಗಳು ನಿರ್ಮಾಣವಾಗಿದ್ದು, ಅಧಿಕಾರ ನಡೆಸಿದ ಹತ್ತು ಜನ ಗುರುಗಳ ಗದ್ದುಗೆಗಳನ್ನು ಗುರುತಿಸಬಹುದಾಗಿದೆ. ಶ್ರೀ ತೋಂಟದಾರ್ಯ ಶಿವಾಚಾರ್ಯ ಸ್ವಾಮಿಗಳ ದೀಕ್ಷಾ ಗುರುಗಳಾದ ಶ್ರೀ ಜಡೆ ಮಹಾಂತ ಶಿವಾಚಾರ್ಯ ಸ್ವಾಮಿಗಳು ತಮ್ಮ ಆಡಳಿತ ಕಾಲದಲ್ಲಿ ಮಠದ ಕಟ್ಟಡವನ್ನು ಅಗತ್ಯಕ್ಕೆ ತಕ್ಕಷ್ಟು ವಿಸ್ತರಿಸಿದ ಕುರುಹುಗಳು ಕಾಣುತ್ತಿವೆ. ಕಾಯಕ ಯೋಗಿಗಳಾದ ಶ್ರೀ ಜಡೆಮಹಾಂತ ಶಿವಾಚಾರ್ಯ ಸ್ವಾಮಿಗಳು ಮಠದ ನೂರಾರು ಎಕರೆ ಆಸ್ತಿಯನ್ನು ಕೃಷಿಗೆ ವ್ಯವಸ್ಥಿತಗೊಳಿಸಿ, ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ಇವರ ನಂತರ ಶ್ರೀ ತೋಂಟದಾರ್ಯ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ವಹಿಸಿ ಕೊಂಡು ಮಠವನ್ನು ಬೆಳೆಸುತ್ತಿದ್ದಾರೆ.

ತ್ಯಾಗದಿಂದ ಯೋಗ ಕಂಡ ಮಹಿಮ: ಶ್ರೀ ಜಡೆಮಹಾಂತ ಶಿವಾಚಾರ್ಯ ಸ್ವಾಮಿಗಳು ೧೯೭೫ರಲ್ಲಿ ಲಿಂಗೈಕ್ಯರಾದ ಮೇಲೆ ಅದೇ ವರ್ಷ ಅಧಿಕಾರಕ್ಕೆ ಬಂದ ಶ್ರೀ ತೋಂಟದಾರ್ಯ ಶಿವಾಚಾರ್ಯ ಸ್ವಾಮಿಗಳು, ತಮ್ಮ ಕಾಲು ಶತಮಾನದ ಅಧಿಕಾರಾವಧಿಯಲ್ಲಿ ಮಠ ಪ್ರಜ್ವಲವಾಗಿ ಬೆಳಗುವಂತೆ ಮಾಡಿದ್ದಾರೆ. ಟಿ.ನರಸೀಪುರ ತಾಲ್ಲೂಕಿನ ವೀರಪ್ಪ ಒಡೆಯರ ಹುಂಡಿ ಗ್ರಾಮದ ಶ್ರೀ ಬಸಪ್ಪ ದೇವರು, ಶ್ರೀಮತಿ ಪುಟ್ಟಮ್ಮನವರ ಪುತ್ರರಾಗಿ ಜನಿಸಿ, ಪ್ರಾಥಮಿಕ ವಿದ್ಯಾಭ್ಯಾಸವನ್ನು ಅಲ್ಲಿಯೇ ಮುಗಿಸಿದರು.ನಂತರ ಮೈಸೂರಿನ ಸುತ್ತೂರು ಶ್ರೀ ಶಿವರಾತ್ರೀಶ್ವರ ಮಠದ ಗುರುಕುಲದಲ್ಲಿ ಆಶ್ರಯ ಪಡೆದು, ಸಂಸ್ಕೃತ ಕಲಿಕೆ ಪ್ರಾರಂಭಿಸಿ ವೇದ, ಆಗಮ, ಶಕ್ತಿ ವಿಶಿಷ್ಟಾದ್ವೈತ ಹಾಗೂ ಜ್ಯೋತಿಷ್ಯ ಕಲಿತು ವೀರಶೈವ ಧರ್ಮದ ಪ್ರಚಾರವನ್ನು ಮಾಡುತ್ತಿದ್ದಾರೆ.'ಮಠದಿಂದ ಘಟ ಬೆಳಗುವುದಕ್ಕಿಂತ, ಘಟದಿಂದ ಮಠ ಬೆಳಗಬೇಕು' ಎಂಬ ವಾಣಿಯ ಸತ್ಯತೆಯನ್ನು ಪರಿಪಾಲಿಸಿರುವ ಇವರು ಯೋಗಸಿದ್ಧಿಯನ್ನು ಪಡೆದು ಮಹಾ ಚೇತನವಾಗಿದ್ದಾರೆ. ನುಡಿದಂತೆ ನಡೆದು ಸಮಾಜವನ್ನು ಧಾರ್ಮಿಕ ನೆಲೆಗಟ್ಟಿನ ಮೇಲೆ ಬೆಳೆಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಶ್ರೀ ಉಕ್ಕಿನಕಂತೆ ಮಠವು ಕೈಲಾಸದ ಸಂಬಂಧ ಪಡೆದಿದೆ, ಎಂದು ಹೇಳುವ ಪೌರಾಣಿಕ ಕಥೆಯ ಹಿನ್ನೆಲೆಯಿಂದಾಗಿ ಧಾರ್ಮಿಕ ಪ್ರಾಮುಖ್ಯತೆ ಪಡೆಯಲು ಕಾರಣವಾಯಿತು. ಇಂತಹ ಪುರಾಣ ಪ್ರಸಿದ್ಧ ಸ್ಥಳದಲ್ಲಿ ಮಠದ ಪರಂಪರೆಯ ಗುರುಗಳ ಗದ್ದುಗೆಗಳು ಹಾಗೂ ಈಶ್ವರ, ವೀರಭದ್ರ, ಬಸವೇಶ್ವರ, ಉಪ್ಪರಿಗೆಬಸಪ್ಪ ಹಾಗೂ ಬೂದಿಯಪ್ಪ ಈ ರೀತಿ ಅನೇಕ ದೇವಾಲಯ ಗಳು ಸ್ಥಾಪನೆಯಾಗಿರುವುದಲ್ಲದೇ ಈ ನೆಲದ ಒಂದೊಂದು ಕಲ್ಲು ಒಂದೊಂದು ಕಥೆ ಹೇಳುತ್ತವೆ. ಈ ಧಾರ್ಮಿಕ ಸ್ಥಳದಲ್ಲಿ ನಿತ್ಯ ಪೂಜೆ ನಡೆಯುತ್ತಿದೆ. ಶಿವರಾತ್ರಿಯ ದಿನ ಹೆಜ್ಜೆಗೊಂದು ತೆಂಗಿನಕಾಯಿ ಒಡೆಯುತ್ತಾ, ಕೆರೆದಡದಿಂದ ವೀರಭದ್ರಸ್ವಾಮಿ ದೇವರನ್ನು ಮಠಕ್ಕೆ ಕರೆತರುವ ಉತ್ಸವ ಸಂಪ್ರದಾಯವಾಗಿ ಬೆಳೆದು ಬಂದಿವೆ. ಶಿಕ್ಷಣ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡದಿದ್ದರೂ ಹುಣಸೂರಿನಲ್ಲಿ ಕಲಿಯುವ ಬಡಮಕ್ಕಳಿಗಾಗಿ ಉಕ್ಕಿನಕಂತೆ ವಿದ್ಯಾರ್ಥಿನಿಲಯ ತೆರೆದು, ಉಚಿತ ವಸತಿ ಮತ್ತು ಪ್ರಸಾದದ ವ್ಯವಸ್ಥೆಯನ್ನು ಮಾಡಲಾಗಿದೆ.

ವಿಳಾಸ: ಷ.ಬ್ರ.ಶ್ರೀ ತೋಂಟದಾರ್ಯ ಶಿವಾಚಾರ್ಯ ಸ್ವಾಮಿಗಳು, ಶ್ರೀ ಉಕ್ಕಿನಕಂತೆ ಮಠ, ಮಾದಹಳ್ಳಿ. ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.

❑

ಹೆಗ್ಗಡದೇವನಕೋಟೆ ತಾಲ್ಲೂಕು

ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೂಕು ಆರ್ಥಿಕವಾಗಿ ಹಿಂದುಳಿದಿದೆ. ತಾಲ್ಲೂಕಿನ ಅರ್ಧಭಾಗ ಬೆಟ್ಟ, ಗುಡ್ಡಗಳಿಂದ ಆವೃತವಾಗಿದ್ದು, ಉಳಿದರ್ಧ ಭಾಗ ಬೇಸಾಯಕ್ಕೆ ಯೋಗ್ಯವಾಗಿದೆ. ಇಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆದಿತ್ತಾದರೂ ನಂತರದ ದಿನಗಳಲ್ಲಿ ತನ್ನ ಬೆಳವಣಿಗೆಯಲ್ಲಿ ಕುಂಟಿತಗೊಂಡು ಕ್ಷೀಣಿಸಿದಂತೆ ಕಂಡುಬರುತ್ತದೆ. ಈ ತಾಲ್ಲೂಕಿನಲ್ಲಿ ಐದು ಮಠಗಳು ಅಸ್ತಿತ್ವದಲ್ಲಿವೆ.

ದಡದಹಳ್ಳಿ

ಹೆಗ್ಗಡದೇವನಕೋಟೆ ತಾಲ್ಲೂಕಿನ ದಡದಹಳ್ಳಿಯು ತಾಲ್ಲೂಕು ಕೇಂದ್ರ ಸ್ಥಾನಕ್ಕೆ ಇಪ್ಪತ್ತೊಂದು ಕಿ.ಮೀ. ದೂರದಲ್ಲಿದೆ. ಈ ಗ್ರಾಮಕ್ಕೆ 'ಶೈಲಪುರ 'ಎಂಬ ಹೆಸರು ಇತ್ತಂತೆ. ಬಂಡೀಪುರ ಅರಣ್ಯದ ದಡದಲ್ಲಿರುವ ಕಾರಣಕ್ಕೆ 'ದಡದಹಳ್ಳಿ' ಎಂದು ಕರೆಯಲಾಗುತ್ತಿದೆ. ಇಲ್ಲಿ ಶ್ರೀ ಗುರುಮಲ್ಲೇಶ್ವರ ಪಟ್ಟದಮಠವು ಅಸ್ತಿತ್ವದಲ್ಲಿದೆ.

ಗುರು ಮಲ್ಲೇಶ್ವರ ಪಟ್ಟದಮಠ: ದಡದಹಳ್ಳಿ ಗ್ರಾಮದಲ್ಲಿ ಶ್ರೀ ಗುರುಮಲ್ಲೇಶ್ವರ ಪಟ್ಟದ ಮಠವು ಸ್ಥಾಪನೆಯಾಗಿ, ಈ ಗ್ರಾಮದ ಧಾರ್ಮಿಕ ಚಟುವಟಿಕೆಗಳ ಕೇಂದ್ರವಾಗಿ ಬೆಳೆದಿದೆ. ಸೋಮಹಳ್ಳಿಯ ಶಾಖಾಮಠವಾದ ಈ ಪಟ್ಟದ ದಾಸೋಹಮಠವು, ಶ್ರೀ ಸಿದ್ಧಮಲ್ಲೇಶ್ವರರ ಸಮಕಾಲೀನರಾದ ಶ್ರೀ ದೇವರಾಜ ಸ್ವಾಮಿಗಳ ಕಾಲದಲ್ಲಿ (೧೯೨೦) ಪ್ರಾರಂಭಗೊಂಡಿದೆ.

ಜಗುಲಿಮೇಲೆ ಮಠ: ಇದಕ್ಕೂ ಮೊದಲು ಶ್ರೀ ಚಿಕ್ಕಣ್ಣ ಸ್ವಾಮಿಗಳು ಭಿಕ್ಷಾಗುರುಗಳಾಗಿ ಮನೆಯೊಂದರ ಜಗುಲಿಯ ಮೇಲೆ ದಾಸೋಹ ಕ್ರಿಯೆಯನ್ನು ನಡೆಸುತ್ತಿದ್ದರು. ಗುರುಗಳು ತಮ್ಮ ಒಂಬತ್ತನೆಯ ವಯಸ್ಸಿನಿಂದಲೇ ಭಿಕ್ಷಾ ಕಾಯಕದಿಂದ ದಾಸೋಹ ನಡೆಸುತ್ತಾ ಬಂದಿದ್ದಾರೆ. ಇವರು ನಡೆಸುತ್ತಿದ್ದ ದಾಸೋಹ ಜಾಗದಲ್ಲಿ ಮಠ ಕಟ್ಟಬೇಕೆಂದು ಶ್ರೀ ದೇವರಾಜ ಸ್ವಾಮಿಗಳು ನಿರ್ಧರಿಸಿ ಮಠವನ್ನು ಸ್ಥಾಪಿಸಿ, ಮೊದಲ ಗುರುಗಳಾಗಿ ದಾಸೋಹ ಕ್ರಿಯೆಯನ್ನು ಮುಂದುವರೆಸಿದರು.

ಮಠದ ದಾಸೋಹ ಕ್ರಿಯೆಯನ್ನು ನೋಡಿದ ದಡದಹಳ್ಳಿಯ ಪುಟ್ಟಣ್ಣಯ್ಯ ಎಂಬುವರು ತಮ್ಮ ಆಸ್ತಿಯನ್ನು ಮಠಕ್ಕೆ ಬರೆದುಕೊಟ್ಟರು. ಶ್ರೀ ದೇವರಾಜ ಸ್ವಾಮಿಗಳು ದಾನವಾಗಿ ಬಂದ ಈ ಭೂಮಿಯಲ್ಲಿ ಸ್ವತಃ ತಾವೇ ಬೇಸಾಯಮಾಡಿ, ಐವತ್ತು ಹಸುಗಳನ್ನು ಸಾಕಿದರು. ಮೂವತ್ತು ಎಕರೆ ಭೂಮಿಯನ್ನು ನೀರಾವರಿಗೆ ಯೋಗ್ಯಗೊಳಿಸಲು ಬಾವಿಯನ್ನು ಸ್ವತಃ ಒಬ್ಬರೇ ತೆಗೆದಿದ್ದರು. ಅಲ್ಲದೇ ಬೇಸಾಯಕ್ಕೆ ಬೇಕಾಗುವ ನೇಗಿಲು ಹಾಗೂ ಇತರೇ ಸಾಮಗ್ರಿಗಳನ್ನು ತಾವೇ ತಯಾರಿಸಿಕೊಳ್ಳುತ್ತಿದ್ದರು. ಇವರು ಮಹಾನ್ ಕಾಯಕಯೋಗಿಗಳಾಗಿ ಮಠವನ್ನು ಸರ್ವಾಂಗೀಣವಾಗಿ ಅಭಿವೃದ್ಧಿಪಡಿಸಿದರು.

ಬಯಲಾದ ಜೀವ: ಶ್ರೀ ದೇವರಾಜ ಸ್ವಾಮಿಗಳು ತಮ್ಮ ಕೊನೆ ಉಸಿರು ಇರುವ ತನಕ ಸ್ವಾವಲಂಬಿಗಳಾಗಿ ಬದುಕಿ ಕೊನೆ ದಿನಗಳ ತನಕ ಭಿಕ್ಷದಕಾಯಕ ಬಿಡದೆ, ೧೯೮೧ರ ಸೆಪ್ಟೆಂಬರ್ ಇಪ್ಪತ್ತಾರರಂದು ಬಯಲಲ್ಲಿ ಬಯಲಾಗಿದ್ದಾರೆ. ಕಾಯಕಯೋಗಿ ಶ್ರೀ ದೇವರಾಜ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಊರಿನ ಜನ ಮಠದ ಮೂವತ್ತು ಎಕರೆ ಜಮೀನನ್ನು ಗುತ್ತಿಗೆಗೆ ಕೊಟ್ಟು, ಇದರಿಂದ ಬರುವ ಹಣದ ಜತೆಗೆ ಊರಿನ ಜನರ ಸಹಕಾರ ಪಡೆದು ಮಠಕ್ಕೆ ನೂತನ ಕಟ್ಟಡವನ್ನು ಕಟ್ಟಿಸಿದ್ದಾರೆ. ಶ್ರೀ ದೇವರಾಜ ಸ್ವಾಮಿಗಳ ಗದ್ದುಗೆಗೆ ಮಂಟಪವನ್ನು ಕಟ್ಟಿಸಿದ್ದಾರೆ.

ಬೆಳೆದ ಪರಂಪರೆ: ಈ ಗ್ರಾಮದ ಭಕ್ತರು ಸೋಮನಹಳ್ಳಿ ಶಿಲಾಮಠದ ಶ್ರೀ ಸಿದ್ಧಮಲ್ಲ ಸ್ವಾಮಿಗಳ ನೇತೃತ್ವದಲ್ಲಿ ೧೯೬೩ರ ಡಿಸೆಂಬರ್ ಹದಿಮೂರರಂದು ಶ್ರೀ ಷಡಕ್ಷರಿ ಸ್ವಾಮಿಗಳಿಗೆ ಪಟ್ಟಾಧಿಕಾರ ಮಾಡಿ, ಪರಂಪರೆಯು ಬೆಳೆಯುವಂತೆ ಮಾಡಿದರು. ಶ್ರೀ ಷಡಕ್ಷರಿ ಸ್ವಾಮಿಗಳು ತಮಿಳುನಾಡು ರಾಜ್ಯದ ಸತ್ಯಮಂಗಲ ತಾಲ್ಲೂಕಿನ ಬೊತಾಳಪುರದವರು. ದಡದಹಳ್ಳಿಯ ಜನ ಇವರ ಕಾಯಕನಿಷ್ಠೆಗೆ ಮೆಚ್ಚಿ, ಅಪೇಕ್ಷೆಪಟ್ಟು, ಈ ಮಠಕ್ಕೆ ಕರೆತಂದು ಅಧಿಕಾರ ನೀಡಿದ್ದಾರೆ. ಗುರುಗಳು ಭಕ್ತರಿಗೆ ನಿರಾಶೆಯಾಗದಂತೆ ಮಠದ ಅಭಿವೃದ್ಧಿಗೆ ಕಂಕಣತೊಟ್ಟು ಅಹರ್ನಿಶಿ ದುಡಿಯುತ್ತಿದ್ದಾರೆ. ಮಠದ ಪರಂಪರೆಯು ಕಂತೆಭಿಕ್ಷದ ಕಾಯಕ

ನಿಲ್ಲಬಾರದೆಂದು ಭಿಕ್ಷದ ಶ್ರೀ ನಂದಿ ಸ್ವಾಮಿಗಳನ್ನು ನೇಮಿಸಿಕೊಂಡು, ಮಧ್ಯಾಹ್ನ ಮತ್ತು ರಾತ್ರಿ ಕಂತೆ ಭಿಕ್ಷ ಮಾಡಿಸಿ ಬಳಲಿದ ಅಸಹಾಯಕರಿಗೆ, ಬಡಮಕ್ಕಳಿಗೆ ಹಾಗೂ ನಿರ್ಗತಿಕರಿಗೆ ಅನ್ನ ದಾಸೋಹ ನೀಡುತ್ತಾ ತಮ್ಮ ಸಂಪ್ರದಾಯವನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಷಡಕ್ಷರಿ ಸ್ವಾಮಿಗಳು, ಶ್ರೀಗುರುಮಲ್ಲೇಶ್ವರಪಟ್ಟದಮಠ, ದಡದಹಳ್ಳಿ, ಹೆಗ್ಗಡದೇವನ ಕೋಟೆ ತಾ. ಮೈಸೂರುಜಿಲ್ಲೆ.

ನಂಜೂಪುರ

ಹೆಗ್ಗಡದೇವನಕೋಟೆ ತಾಲ್ಲೂಕಿನ ನಂಜೂಪುರವು ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಇಪ್ಪತ್ತು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ನಂಜೂಪುರಮಠ: ನಂಜೂಪುರ ಗ್ರಾಮದಲ್ಲಿ ವಿರಕ್ತ ಸಂಪ್ರದಾಯದ ಚೀಲಾಳ ಸಮಯದ ನಂಜೂಪುರಮಠವು, ಶ್ರೀತೋಂಟದ ಸಿದ್ಧಲಿಂಗೇಶ್ವರರ ಕಾಲದಲ್ಲಿ ಸ್ಥಾಪನೆಯಾಗಿದೆ.ಮಠ ಸ್ಥಾಪನೆಯಿಂದ ಈ ಗ್ರಾಮವು ಧಾರ್ಮಿಕ ಸಂಸ್ಕಾರ ಪಡೆದು ಬೆಳೆದಿದೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ಚೀಲಾಳೇಶ್ವರಸ್ವಾಮಿಗಳು (ಸ್ಥಾಪಕರು)
೨. ಶ್ರೀ ಮ.ನಿ.ಪ್ರ. ಕರವೀರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಮಹಾಂತಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಚೀಲಾಳೇಶ್ವರಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆ ಬೆಳೆದಿದೆ. ಶ್ರೀ ಮಹಾಂತ ಸ್ವಾಮಿಗಳು ಆಡಳಿತ ನಡೆಸುತ್ತಿದ್ದ ಕಾಲಕ್ಕಿಂತ ಹಿಂದೆ ಅನೇಕ ಮಠಾಧೀಶರು ಅಧಿಕಾರ ನಡೆಸಿದ್ದರು ಎಂದು ಹೇಳಲಾಗುತ್ತಿದೆ. ಆದರೆ ಆಧಾರಗಳ ಕೊರತೆಯಿಂದ ಅವರುಗಳೆಲ್ಲರ ಹೆಸರು ತಿಳಿಯದಾಗಿದೆ. ಈಗ ಶ್ರೀ ಚೀಲಾಳೇಶ್ವರ ಸ್ವಾಮಿಗಳು ಅಧಿಕಾರವನ್ನು ನಡೆಸುತ್ತಿದ್ದಾರೆ.

ಆಗಮಿಕರು: ಈಗಿನ ಶ್ರೀ ಚೀಲಾಳೇಶ್ವರ ಸ್ವಾಮಿಗಳು ಸಂಸ್ಕೃತ ಪಂಡಿತರಾಗಿ ಜ್ಯೋತಿಷ್ಯ, ಆಗಮ ಹಾಗೂ ವೇದಾಧ್ಯಯನ ಮಾಡಿ ಬಂದು ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಇವರು ಕೊಳ್ಳೇಗಾಲ ತಾಲ್ಲೂಕಿನ ಮಲೆಮಹಾದೇಶ್ವರ ಸ್ವಾಮಿಯ ಸನ್ನಿಧಿಯಲ್ಲಿ ಆಗಮಿಕರಾಗಿ ಕಾಯಕ ಮಾಡುತ್ತಾ, ಧರ್ಮಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ.

ವಿಳಾಸ:ಶ್ರೀ ಮ.ನಿ.ಪ್ರ.ಚೀಲಾಳೇಶ್ವರಸ್ವಾಮಿಗಳು, ಶ್ರಿ ನಂಜೂಪುರಮಠ,ನಂಜೂಪುರ, ಹೆಗ್ಗಡದೇವನಕೋಟೆ ತಾ.ಮೈಸೂರು ಜಿಲ್ಲೆ.

ಬಿಡಗಲು

ಹೆಗ್ಗಡದೇವನಕೋಟೆ ತಾಲ್ಲೂಕಿನ ಬಿಡಗಲು ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹನ್ನೆರಡು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಪಡುವಲುಮಠ ಮತ್ತು ಶ್ರೀ ಮೂಡಲುಮಠ ಎಂಬ ಎರಡು ಮಠಗಳು ಸ್ಥಾಪನೆಯಾಗಿವೆ.

ಪಡುವಲುಮಠ: ಬಿಡಗಲು ಗ್ರಾಮದ ಪಶ್ಚಿಮ ಭಾಗದಲ್ಲಿರುವ ಶ್ರೀ ಪಡುವಲಮಠವು, ನಾನೂರು ವರ್ಷಗಳ ಹಿಂದಿನ ಇತಿಹಾಸವನ್ನು ಹೊಂದಿದೆ.ವಿರಕ್ತಸಂಪ್ರದಾಯದ ಈ ಮಠವನ್ನು ಶ್ರೀ ಉದ್ದಾನ ಸ್ವಾಮಿಗಳು ಸ್ಥಾಪಿಸಿದರೆಂದು ಹೇಳಲಾಗುತ್ತಿದೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ಉದ್ದಾನಸ್ವಾಮಿಗಳು (ಸ್ಥಾಪಕರು)
೨. ಶ್ರೀ ಮ.ನಿ.ಪ್ರ. ಕಾಳಒಡೆಯರು
೩. ಶ್ರೀ ಮ.ನಿ.ಪ್ರ. ಪುಟ್ಟಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಗುರುಪಾದಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಶಿವಪ್ಪಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಶಿವನಂಜಸ್ವಾಮಿಗಳು

೭. ಶ್ರೀ ಮ.ನಿ.ಪ್ರ. ಮಹಾದೇವ ಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಮಠವು ಅನೇಕ ವರ್ಷಗಳವರೆಗೆ ಖಾಲಿ ಉಳಿದಿತ್ತು ಎಂದು ಹೇಳಲಾಗುತ್ತಿದೆ. ನಂತರ ಶ್ರೀ ಕಾಳಒಡೆಯರು ಅಧಿಕಾರಕ್ಕೆ ಬಂದು ಮಠವನ್ನು ಮುನ್ನಡೆಸಿದ್ದಾರೆ. ಶ್ರೀ ಪುಟ್ಟಸ್ವಾಮಿಗಳ ಕಾಲದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು (೧೮೧೨-೧೮೩೧) ಈ ಮಠದ ಪ್ರಭಾವಕ್ಕೆ ಒಳಗಾಗಿದ್ದರು. ನಂತರ ಬಂದ ಶ್ರೀ ಗುರುಪಾದ ಸ್ವಾಮಿಗಳ ಕಾಲದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು (೧೮೯೫-೧೯೪೦) ಗುರುಗಳನ್ನು ಅರಮನೆಗೆ ಕರೆಸಿ ಗೌರವ ನೀಡಿ ಕಳಿಸಿದ್ದರು. ಅಲ್ಲದೇ ಮಠದಲ್ಲಿ ಧಾರ್ಮಿಕ ಚಟುವಟಿಕೆಗಳು ಸಾಂಗವಾಗಿ ನೆರವೇರಲು ಭೂಮಿಯನ್ನು ಇನಾಂ ನೀಡಿದ್ದರು ಎಂದು ಹೇಳಲಾಗುತ್ತಿದೆ.

ಧಾರ್ಮಿಕಕಾರ್ಯಗಳು: ಶ್ರೀ ಕಾಳಒಡೆಯರು, ಕೊಂಗಳ್ಳಿಯ ಶ್ರೀ ಶಿವನಂಜ ಸ್ವಾಮಿಗಳು, ಶ್ರೀ ಪುಟ್ಟಸ್ವಾಮಿಗಳು ಹಾಗೂ ಶ್ರೀ ಶಿವಪ್ಪ ಸ್ವಾಮಿಗಳ ಗದ್ದುಗೆಗಳು ಇಲ್ಲಿ ನಿರ್ಮಾಣವಾಗಿವೆ. ಇವುಗಳಿಗೆ ನಿತ್ಯಪೂಜೆಯನ್ನು ನಡೆಸಲಾಗುತ್ತಿದೆ. ಶ್ರೀಗುರುಪಾದ ಸ್ವಾಮಿಗಳು ಮಹಾ ಪಂಡಿತರಾಗಿದ್ದು, ಸದಾ ಲೋಕಸಂಚಾರದಲ್ಲಿ ನಿರತರಾಗಿರುತ್ತಿದ್ದರು. ಬಸವಪುರಾಣದ ಪ್ರವಚನಕ್ಕಾಗಿ ಗದಗ ಜಿಲ್ಲೆ ನರಗುಂದಕ್ಕೆ ಹೋಗಿದ್ದ ಸಂದರ್ಭದಲ್ಲಿ ಲಿಂಗೈಕ್ಯರಾದ ಕಾರಣ ಅವರ ಗದ್ದುಗೆಯನ್ನು ಅಲ್ಲೇ ನಿರ್ಮಿಸಲಾಗಿದೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಶಿವನಂಜ ಸ್ವಾಮಿಗಳು ಮಠಕ್ಕೆ ಬಂದಾಗ ತಮ್ಮ ಸಹೋದರ ಸಂಬಂಧಿಯಾದ ಮರಿದೇವರನ್ನು ಜತೆಯಲ್ಲಿ ಕರೆದುಕೊಂಡು ಬಂದಿದ್ದರು. ಮಹಾ ತಪಸ್ವಿಗಳಾದ ಗುರುಗಳು ಹುಲ್ಲು ಗುಡಿಸಲಿನಲ್ಲಿ ವಾಸಮಾಡುತ್ತಾ ತಮ್ಮ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿದ್ದರು. ಶ್ರೀ ಮರಿದೇವರು ಮಠದ ದುಸ್ಥಿತಿ ನೋಡಲಾಗದೆ ಭಕ್ತರ ನೆರವು ಪಡೆದು ಮಠಕ್ಕೆ ಕಟ್ಟಡ ನಿರ್ಮಿಸಲು ಮುಂದಾದರು. ಮರಿದೇವರೇ ಸ್ವತಃ ಕೊಡಗಿನಿಂದ ಮರ ಮುಟ್ಟು ತಂದು ಮಠದ ಕಟ್ಟಡವನ್ನು ನಿರ್ಮಿಸಿದರು ಎಂದು ಹೇಳಲಾಗುತ್ತಿದೆ. ಮಠದ ಆಸ್ತಿಯಾಗಿರುವ ಹನ್ನೊಂದು ಎಕರೆ ಜಮೀನನ್ನು ಅಭಿವೃದ್ಧಿಪಡಿಸಿ ಮಠದ ಆದಾಯದ ಮೂಲವನ್ನಾಗಿ ಮಾಡಿಕೊಂಡು, ಧಾರ್ಮಿಕ ಹಾಗೂ ದಾಸೋಹ ಕಾರ್ಯವನ್ನು ನಡೆಸುತ್ತಿದ್ದಾರೆ.

ಹೊಸಕೊಂಡಿ: ಮಠದ ಹಿಂದಿನ ಶ್ರೀ ಶಿವನಂಜ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಆರು ವರ್ಷದ ಮಗುವಾಗಿದ್ದ ಶ್ರೀಮಹಾದೇವ ಸ್ವಾಮಿಗಳಿಗೆ, ೧೯೮೧ರ ಸೆಪ್ಟೆಂಬರ್‌ನಲ್ಲಿ ಪಟ್ಟಾಧಿಕಾರವನ್ನು ನೀಡಿ ಅಧಿಕಾರದ ಜವಾಬ್ದಾರಿಯನ್ನು ಕೊಡಲಾಯಿತು. ನಂತರ ತಮ್ಮ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿದ ಗುರುಗಳು ಮಠಕ್ಕೆ ಬಂದು ನೆಲೆಸಿ ಅಭಿವೃದ್ಧಿಪಡಿಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಮಹಾದೇವ ಸ್ವಾಮಿಗಳು, ಶ್ರೀ ಪಡುವಲಮಠ, ಬಿಡಗಲು, ಹೆಗ್ಗಡದೇವನ ಕೋಟೆ ತಾ, ಮೈಸೂರುಜಿಲ್ಲೆ.

ಮೂಡಲಮಠ: ಬಿಡಗಲು ಗ್ರಾಮದ ಪೂರ್ವಭಾಗದಲ್ಲಿ ಸ್ಥಾಪನೆಯಾಗಿರುವ ಮೂಡಲಮಠವು ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿ ಧಾರ್ಮಿಕವಾಗಿ ಹೆಸರು ಮಾಡಿದೆ. ಈ ಗ್ರಾಮದ ಪೂರ್ವಭಾಗದಲ್ಲಿ ಸ್ಥಾಪನೆಗೊಂಡ ಕಾರಣಕ್ಕೆ ಜನರು ರೂಢಿಗತವಾಗಿ 'ಶ್ರೀಮೂಡಲಮಠ'ವೆಂದು ಕರೆಯತೊಡಗಿದ್ದಾರೆ.

ಮಠಸ್ಥಾಪನೆ: ಲೋಕಸಂಚಾರದಲ್ಲಿದ್ದ ತಪಸ್ವಿಗಳೊಬ್ಬರು ಈ ಗ್ರಾಮಕ್ಕೆ ಬಂದು ನೆಲೆಸಿ ಅನುಷ್ಠಾನಗೊಂಡರು. ಈ ತಪಸ್ವಿಗಳ ಜತೆಯಲ್ಲಿದ್ದ ಒಂದು ಬಸವ ಪಕ್ಕದ ಸರಗೂರಿನಲ್ಲಿ ಸಾವನ್ನಪ್ಪಿತು. ಆಗ ತಪಸ್ವಿಗಳು ಬಸವನ ಅಂತ್ಯಕ್ರಿಯೆಯನ್ನು ಅದ್ದೂರಿಯಾಗಿಯೇ ನಡೆಸುತ್ತಾರೆ. ಈ ಸಂದರ್ಭದಲ್ಲಿ ದಾಸೋಹಕ್ಕೆ ಬಂದ ಜನಸ್ತೋಮಕ್ಕೆ ಪ್ರಸಾದ ಸಾಕಾಗದೆ ಹೋದಾಗ, ಭಕ್ತರು ಗಾಬರಿಗೊಂಡು ಗುರುಗಳಲ್ಲಿಗೆ ಬಂದು ನಿವೇದಿಸಿಕೊಳ್ಳುತ್ತಾರೆ. ಆಗ ಗುರುಗಳು ಭಕ್ತರ ಗಾಬರಿಯನ್ನು ಕಂಡು ಎರಡು ಮರಳು ರಾಶಿಗಳನ್ನು ಮಾಡಿ ನಿಮಗೆ ಬೇಕಾಗುವಷ್ಟು ಅಕ್ಕಿ, ಬೇಳೆಯನ್ನು ತುಂಬಿಸಿಕೊಳ್ಳಿ ಎಂದು ಹೇಳುತ್ತಾರಂತೆ. ಭಕ್ತರು ಗುರುಗಳ ಈ ಮಾತಿಗೆ ಆಶ್ಚರ್ಯ ವ್ಯಕ್ತಪಡಿಸಿ, ಮರಳು ರಾಶಿಗಳಿಂದ ತಮ್ಮ ದಾಸೋಹಕ್ಕೆ ಬೇಕಾಗುವಷ್ಟು ಮರಳನ್ನು ತುಂಬಿಕೊಳ್ಳುತ್ತಾರೆ. ತುಂಬುತ್ತಿದ್ದಂತೆಯೇ ಮರಳು ಅಕ್ಕಿ, ಬೇಳೆಯಾಗಿ ಪರಿವರ್ತನೆಯಾಗುತ್ತಿದ್ದುದನ್ನು ನೋಡಿದ ಭಕ್ತರು ಆಶ್ಚರ್ಯಗೊಂಡರು. ಅಂದಿನಿಂದ ಈ ತಪಸ್ವಿಗಳಿಗೆ 'ಶ್ರೀ ಅಕ್ಕಿಪೇಟೆ ಸ್ವಾಮಿ'ಗಳು ಎಂದು ಕರೆಯತೊಡಗಿದರಂತೆ. ಈ ತಪಸ್ವಿಗಳೇ ಬಿಡಗಲ ಗ್ರಾಮದಲ್ಲಿ ನೆಲೆಸಿ ಮಠ ಸ್ಥಾಪನೆ ಮಾಡಿದ್ದಾರೆ ಎಂದು ಹೇಳುವ ಜನಪದ ಕಥೆ ಜನಜನಿತವಾಗಿದೆ.

ಪರಂಪರೆ:
೧. ಷ.ಬ್ರ.ಶ್ರೀ ಅಕ್ಕಿಪೇಟೆ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಅಪ್ಪಯ್ಯ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಶಾಂತ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಚಂದ್ರಪ್ಪ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಕಂಬಳೇಶ್ವರ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಸಾಂಬಸದಾಶಿವ ಶಿವಾಚಾರ್ಯ ಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಪರಂಪರೆಯಲ್ಲಿ ಬರುವ ಎಲ್ಲಾ ಗುರುಗಳು ಪವಾಡಪುರುಷರಾಗಿ ಹೆಸರು ಮಾಡಿ ದ್ದಾರೆ. ಹಿಂದಿನ ಗುರುಗಳಾದ ಶ್ರೀ ಮಹಾಂತ ಸ್ವಾಮಿಗಳು ಇಲ್ಲಿಗೆ ಸಮೀಪದ ಸಿದ್ಧಾಪುರದ ಪಟೇಲ್ ನಂಜಪ್ಪನವರಿಗೆ ಸರ್ಪ ದೋಷ ಇರುವುದನ್ನು ಪತ್ತೆ ಮಾಡಿ, ತಮ್ಮ ತಪೋಶಕ್ತಿಯಿಂದ ಸರ್ಪವನ್ನು ತಮ್ಮ ಬಳಿಗೆ ಕರೆಸಿಕೊಂಡು ಹಾಲುಕುಡಿಸಿ ಸರ್ಪದೋಷ ಇದ್ದ ಪಟೇಲರನ್ನು ಪಾರುಮಾಡಿ, ಅವರಿಂದ ಸಾಮಾಜಿಕ ಸೇವೆ ನಡೆಯುವಂತೆ ಮಾಡಿದರೆಂದು ಹೇಳಲಾಗುತ್ತಿದೆ.

ಈಗಿನ ಮಠಾಧ್ಯಕ್ಷರಾದ ಶ್ರೀ ಸಾಂಬಸದಾಶಿವ ಸ್ವಾಮಿಗಳು ಚಿಕ್ಕವಯಸ್ಸಿನಲ್ಲೇ ಪಟ್ಟಾಧಿಕಾರವನ್ನು ಪಡೆದು ದೊಡ್ಡ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತಾರೆ. ಸಂಪ್ರದಾಯಸ್ಥ ಮಠದಲ್ಲಿ ಸುಮಾರು ನಲವತ್ತು ವರ್ಷಗಳ ದೀರ್ಘಕಾಲ ಅಧಿಕಾರ ನಡೆಸಿ, ಆರು ಜನ ಲಿಂಗೈಕ್ಯ ಗುರುಗಳ ಗದ್ದುಗೆಗಳಿಗೆ ಮಹಾಮನೆ ಕಟ್ಟಿಸಿ'ಶ್ರೀ ಗುರು ಅಕ್ಕಿಪೇಟೆಸ್ವಾಮಿ ಸನ್ನಿಧಿ'ಎಂದು ನಾಮಕರಣ ಮಾಡಿದ್ದಾರೆ.

ರಾಜಾಶ್ರಯ: ಮೈಸೂರು ಅರಸರು ಈ ಮಠದ ಕೀರ್ತಿಯನ್ನು ಕೇಳಿ ತಿಳಿದು ಮಠಕ್ಕೆ ಭೇಟಿ ಕೊಟ್ಟು ಗುರುಗಳಿಂದ ಆಶೀರ್ವಾದ ಪಡೆದು, ಮಠದ ಧಾರ್ಮಿಕ್ಕ ಆಚರಣೆಗಳಿಗಾಗಿ ಅದರಲ್ಲೂ ವಿಶೇಷವಾಗಿ ನಡೆಯುತ್ತಿದ್ದ ದೀಪಾರಾಧನೆಯ ಖರ್ಚಿಗಾಗಿ ಜಮೀನನ್ನು ಇನಾಂ ನೀಡಿ ಈ ಬಗ್ಗೆ ತಾಮ್ರಶಾಸನವನ್ನು ಬರೆಸಿಕೊಟ್ಟಿದ್ದರು. ಮಠದಲ್ಲಿ ಇಲ್ಲಿಯ ತನಕ ಇದ್ದ ಶಾಸನವು ಈಗ ಮೈಸೂರಿನ ಸಂಶೋಧನಾ ವಿಭಾಗದಲ್ಲಿದೆ. ಈ ಜಮೀನಿನಲ್ಲಿ ಈಗ ಆರು ಎಕರೆ ಖುಷ್ಕಿ ಜಮೀನು ಉಳಿದಿದ್ದು, ಇದನ್ನು ಅಭಿವೃದ್ಧಿ ಪಡಿಸಿ ಆದಾಯ ಬರುವಂತೆ ಮಾಡಿ ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ:ಷ.ಬ.ಶ್ರೀ ಸಾಂಬಸದಾಶಿವ ಸ್ವಾಮಿಗಳು, ಶ್ರೀಮೂಡಲಮಠ, ಬಿಡಗಲು,ಹೆಗ್ಗಡದೇವನಕೋಟೆ ತಾ, ಮೈಸೂರು ಜಿಲ್ಲೆ.

ಮಾದಾಪುರ

ಹೆಗ್ಗಡದೇವನಕೋಟೆ ತಾಲ್ಲೂಕಿನ ಮಾದಾಪುರವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹತ್ತು ಕಿ.ಮೀ ದೂರದಲ್ಲಿದೆ. ಶ್ರೀ ಚಂದ್ರಮೌಳೇಶ್ವರ ಮತ್ತು ಮಲ್ಲಿಕಾರ್ಜುನ ದೇವಾಲಯಗಳು ಮೆಟ್‌ಗಲ್ಲು ಗುಡ್ಡದ ಶಿಖರದಲ್ಲಿ ಸ್ಥಾಪಿತಗೊಂಡಿರುವುದರಿಂದ, ಈ ಕ್ಷೇತ್ರವು ಪೌರಾಣಿಕ ಹಿನ್ನೆಲೆ ಪಡೆದಿದೆ. ಇಂತಹ ಕ್ಷೇತ್ರದಲ್ಲಿ ಎಂ.ಎಸ್.ಪುಟ್ಟಸ್ವಾಮಪ್ಪನವರ ಪ್ರಯತ್ನದ ಫಲದಿಂದ ಶ್ರೀ ಚಂದ್ರಮೌಳೇಶ್ವರ ಮಠವು ಸ್ಥಾಪನೆಯಾಗಿ, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರಲಾಗುತ್ತಿದೆ.

ಚಂದ್ರಮೌಳೇಶ್ವರಮಠ: ಮಾದಾಪುರದ ದಕ್ಷಿಣಭಾಗದ ಮೆಟ್‌ಗಲ್ಲುಗಿರಿಯಲ್ಲಿ ಜೀರ್ಣಾವಸ್ಥೆಯಲ್ಲಿದ್ದ ಶ್ರೀ ಚಂದ್ರ ಮೌಳೇಶ್ವರ ಮತ್ತು ಶ್ರೀ ಮಲ್ಲಿಕಾರ್ಜುನ ದೇವಸ್ಥಾನವನ್ನು ೧೯೭೪ರಲ್ಲಿ ನವೀಕರಿಸಿದ ಶ್ರೀ ಪುಟ್ಟಸ್ವಾಮಪ್ಪನವರು, ಭಕ್ತರ ಹಾಗೂ ಸರ್ಕಾರದ ನೆರವು ಪಡೆದು ದೇವಸ್ಥಾನಕ್ಕೆ ಹೊಂದಿಕೊಂಡಂತೆ ನೂತನ ಮಠಕ್ಕೆ ಕಟ್ಟಡವನ್ನು ಕಟ್ಟಿಸಿದರು. ನಂತರ ಶ್ರೀ ಚಂದ್ರಮೌಳೇಶ್ವರ ಸ್ವಾಮಿಗಳನ್ನು ಕರೆತಂದು ಸುತ್ತೂರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳಿಂದ ಪಟ್ಟಾಧಿಕಾರದ ಅನುಗ್ರಹ ಕೊಡಿಸಿ, ೧೯೭೮ರ ನವೆಂಬರ್ ಇಪ್ಪತ್ತಾರರಂದು ಪಟ್ಟಾಧಿಕಾರ ಮಾಡಿದರು.

ಮೊದಲ ಗುರು: ಮೆಟ್‌ಗಲ್ಲು ಬೆಟ್ಟದ ಶ್ರೀ ಚಂದ್ರಮೌಳೇಶ್ವರ ಮಠಕ್ಕೆ ಮೊದಲ ಗುರುಗಳಾಗಿ ಅಧಿಕಾರ ವಹಿಸಿಕೊಂಡ ಶ್ರೀಚಂದ್ರಮೌಳೇಶ್ವರ ಸ್ವಾಮಿಗಳು, ಮಳವಳ್ಳಿ ತಾಲ್ಲೂಕಿನ ಪಂಡಿತ ಹಳ್ಳಿಯಲ್ಲಿ ಶ್ರೀ ಮರಿಮಾದಪ್ಪ ಮತ್ತು ಶ್ರೀಮತಿ

ಶಿವಮ್ಮ ದಂಪತಿಗಳಿಗೆ ೧೯೫೪ರ ಜೂನ್ ಒಂದರಲ್ಲಿ ಜನಿಸಿದರು. ಮಹಾದೇವಪ್ಪನವರು ಪ್ರಾಥಮಿಕ ಶಿಕ್ಷಣವನ್ನು ಪಂಡಿತ ಹಳ್ಳಿಯಲ್ಲಿಯೇ ಮುಗಿಸಿ, ಪದವಿಶಿಕ್ಷಣ ಪಡೆಯುತ್ತಿರುವಾಗಲೇ ನೂತನ ಮಠದ ಅಧಿಕಾರ ಆಹ್ವಾನಿಸಿತು. ವೀರಶೈವಆಗಮ, ಸಂಸ್ಕೃತ ಹಾಗೂ ವೇದವನ್ನು ಕಲಿತ ಶ್ರೀ ಮಹಾದೇವಪ್ಪ ದೇವರು ಶ್ರೀ ಚಂದ್ರಮೌಳೀಶ್ವರ ಸ್ವಾಮಿಗಳೆಂಬ ಅಭಿದಾನಪಡೆದು ಈ ಮಠದ ಅಧಿಕಾರವನ್ನು ವಹಿಸಿಕೊಂಡರು. ಗುರುಗಳು ನೂತನ ಮಠದಲ್ಲಿ ನೆಲೆಗೊಂಡ ನಂತರ ಮಠ ಮತ್ತು ದೇವಸ್ಥಾನದ ಧಾರ್ಮಿಕ ಕ್ರಿಯೆಗಳು ಕ್ರಮಬದ್ಧವಾಗಿ ನಡೆಯತೊಡಗಿದವು. ಮಠದ ಸ್ವತ್ತಾಗಿದ್ದ ಐದು ಎಕರೆ ನೀರಾವರಿ ಹಾಗೂ ಐದುಎಕರೆ ಖುಷ್ಕಿ ಭೂಮಿಯನ್ನು ಅಭಿವೃದ್ಧಿಪಡಿಸಿ, ಹೆಚ್ಚು ಆದಾಯ ಬರುವಂತೆ ಮಾಡಿ ಮಠವನ್ನು ಅಭಿವೃದ್ಧಿಪಡಿಸಿದರು.

ಶೈಕ್ಷಣಿಕಪ್ರಗತಿ: ಶ್ರೀ ಚಂದ್ರಮೌಳೀಶ್ವರ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಶ್ರೀ ಚಂದ್ರಮೌಳೀಶ್ವರ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ ಮಾದಾಪುರದಲ್ಲಿ ಪ್ರಾಥಮಿಕಶಾಲೆ, ಸಂಸ್ಕೃತ ಪಾಠಶಾಲೆ ಹಾಗೂ ಪ್ರೌಢಶಾಲೆ. ಹೆಗ್ಗಡದೇವನ ಕೋಟೆಯಲ್ಲಿ ಪ್ರಾಥಮಿಕಶಾಲೆ, ಪ್ರೌಢಶಾಲೆ ಹಾಗೂ ಸಂಸ್ಕೃತ ಪಾಠಶಾಲೆ. ಆಲನಹಳ್ಳಿಯಲ್ಲಿ ಪ್ರಾಥಮಿಕ ಶಾಲೆ ಹಾಗೂ ಸಂಸ್ಕೃತ ಪಾಠಶಾಲೆ. ಕಟ್ಟೆಮನಗಹಳ್ಳಿಯಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲೆಯನ್ನು ಪ್ರಾರಂಭಿಸಿ ಗ್ರಾಮಾಂತರ ಮಕ್ಕಳು ವಿದ್ಯೆ ಕಲಿಯಲು ಅವಕಾಶಮಾಡಿಕೊಟ್ಟಿದ್ದಾರೆ. ಮಠದ ಆವರಣದಲ್ಲಿ ಉಚಿತ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿ, ಬಡಮಕ್ಕಳಿಗೆ ಊಟ ಮತ್ತು ವಸತಿಗೆ ವ್ಯವಸ್ಥೆ ಕಲ್ಪಿಸಿಕೊಟ್ಟಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠವು ಅಸ್ತಿತ್ವಗೊಂಡ ಮೇಲೆ ಶ್ರೀ ಚಂದ್ರಮೌಳೀಶ್ವರ ಹಾಗೂ ಶ್ರೀ ಮಲ್ಲಿಕಾರ್ಜುನ ದೇವಾಲಯದ ಪೂಜಾಕಾರ್ಯ ಮಠದ ವತಿಯಿಂದ ನಡೆಯತೊಡಗಿದೆ. ಯುಗಾದಿ, ಕಾರ್ತೀಕ ಮತ್ತು ಶ್ರಾವಣಮಾಸಗಳಲ್ಲಿ, ಅಮಾವಾಸ್ಯೆ ಹಾಗೂ ಹುಣ್ಣಿಮೆಯಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಈ ಮಠವು ಸುತ್ತೂರು ಶ್ರೀ ಶಿವರಾತ್ರಿ ಮಠದ ಶಾಖಾ ಮಠವಾಗಿ, ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿದೆ. ಶ್ರೀ ಚಂದ್ರಮೌಳೀಶ್ವರ ಸ್ವಾಮಿಗಳ ಕ್ರಿಯಾಶೀಲತೆಯಿಂದ ೧೯೯೦ ರಲ್ಲಿ ಮಠದ ಕಟ್ಟಡ ವಿಸ್ತಾರಗೊಂಡಿತು. ಮಠದ ಬಲಬದಿಯ ಹೆಬ್ಬಾಗಿಲ ಮೇಲೆ ನಂದಿಯನ್ನು ಪ್ರತಿಷ್ಠಾಪಿಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಚಂದ್ರಮೌಳೀಶ್ವರ ಶಿವಾಚಾರ್ಯ ಸ್ವಾಮಿಗಳು. ಶ್ರೀ ಚಂದ್ರಮೌಳೀಶ್ವರ ಮಠ, ಮಾದಾಪುರ, ಹೆಗ್ಗಡದೇವನ ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ.

ಹಂಚೀಪುರ

ಹೆಗ್ಗಡದೇವನಕೋಟೆ ತಾಲ್ಲೂಕಿನ ಹಂಚೀಪುರವು ತಾಲ್ಲೂಕಿನಿಂದ ದಕ್ಷಿಣಕ್ಕೆ ಹದಿನಾರು ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ೧೯೮೦ರ ನವೆಂಬರ್ ಇಪ್ಪತ್ನಾಲ್ಕರಲ್ಲಿ ಶ್ರೀ ಪಟ್ಟದ ಮಠವು ಅಸ್ತಿತ್ವದಲ್ಲಿದೆ.

ಪಟ್ಟದಮಠ: ಹಂಚೀಪುರ ಗ್ರಾಮದಲ್ಲಿ ಸ್ಥಾಪನೆಯಾಗಿರುವ ದಾಸೋಹಮಠವು ಪ್ರಥಮವಾಗಿ ಸೋಮನಹಳ್ಳಿಯ ಶಾಖಾಮಠವಾಗಿ ಪ್ರಾರಂಭಗೊಂಡು, ಶ್ರೀ ರಾಜಶೇಖರ ಸ್ವಾಮಿಗಳ ಕಾಲದಲ್ಲಿ ಶ್ರೀ ಪಟ್ಟದ ಮಠವಾಗಿ ಪರಿವರ್ತನೆಯಾಗಿದೆ. ಈಗ ಶ್ರೀ ಪಟ್ಟದ ಚನ್ನಬಸವ ಸ್ವಾಮಿಗಳು ಅಧಿಕಾರವನ್ನು ನಡೆಸುತ್ತಿದ್ದಾರೆ. ಪಟ್ಟದ ಮಠವಾಗಿ ತನ್ನ ಪರಂಪರೆಯನ್ನು ಬದಲಿಸಿಕೊಂಡು ಬೆಳೆಯತೊಡಗಿದ ಈ ಮಠ ಕಂತೆಭಿಕ್ಷದ ಕಾಯಕವನ್ನು ಬಿಡದೇ ಭಿಕ್ಷಾಕಾಯಕ ಮಾಡುತ್ತಾ, ಗ್ರಾಮದ ಧಾರ್ಮಿಕ ಕ್ರಿಯಾದಿಗಳಲ್ಲಿ ಭಾಗವಹಿಸುವುದು, ಪಾದಪೂಜೆ ಹಾಗೂ ಭಕ್ತರ ಮನೆಯ ಬಿನ್ನಹ ತೀರಿಸುವುದು ಇವೇ ಮೊದಲಾದ ಧಾರ್ಮಿಕ ಚಟುವಟಿಕೆಯಲ್ಲಿ ಪಾಲ್ಗೊಂಡು ಭಕ್ತರಿಗೆ ನೆರವಾಗಿದ್ದಾರೆ.


ಆಚರಣೆಗಳು: ಧಾರ್ಮಿಕ ಕಾರ್ಯಗಳ ಜತೆಗೆ ಕಾರ್ತೀಕ ಮಾಸದಲ್ಲಿ ದೀಪಾರಾಧನೆ, ಮಾರ್ಚ್‌ನಲ್ಲಿ ಹಿರಿಯ ಗುರುಗಳ ಗಣಾರಾಧನೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಅನ್ನದಾಸೋಹ ಮತ್ತು ಧಾರ್ಮಿಕ ಸಭೆ ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಚನ್ನಬಸವ ಸ್ವಾಮಿಗಳು, ಶ್ರೀ ಪಟ್ಟದಮಠ, ಹಂಚೀಪುರ, ಹೆಗ್ಗಡದೇವನಕೋಟೆ ತಾ, ಮೈಸೂರು ಜಿಲ್ಲೆ.

❑

ರಾಯಚೂರು ಜಿಲ್ಲೆ

ರಾಯಚೂರು ಜಿಲ್ಲೆ



ರಾಯಚೂರು ತಾಲ್ಲೂಕು : ೧. ಚಿಕ್ಕಸುಗೂರು, ೨. ಮಟಮರಿ

ಮಾನವಿ ತಾಲ್ಲೂಕು : ೧. ನವಿಲ ಕಲ್ಲು, ೨. ಕರಮುಡಿ, ೩. ಊಟಕನೂರು, ೪. ಅಡವಿ ಅಮರೇಶ್ವರ

ದೇವದುರ್ಗ ತಾಲ್ಲೂಕು : ೧. ಜಾಲಹಳ್ಳಿ, ೨. ಗೆಜ್ಜೆ ಬಾವಿ, ೩. ಗಬ್ಬೂರು

ಲಿಂಗಸುಗೂರು ತಾಲ್ಲೂಕು : ೧. ಮಸ್ಕಿ, ೨. ಗುರುಗುಂಟ

ಸಿಂಧನೂರು ತಾಲ್ಲೂಕು : ೧. ತುರುಬಿನ ಹಾಳು, ೨. ಗೋಪುರ ಕಲ್ಲು, ೩. ಒಳಬಳ್ಳಾರಿ

ತುಂಗಭದ್ರಾ ಮತ್ತು ಕೃಷ್ಣಾನದಿಯ ಮಧ್ಯ ಭಾಗದ ಈ ದಖಿನ್ ಪ್ರಸ್ಥಭೂಮಿಯು'ಎಡದೊರೆಯ ನಾಡೆಂದು' ಪ್ರಸಿದ್ಧಿ ಪಡೆದಿದೆ. ಇಂತಹ ಭೂಪ್ರದೇಶದ ಪ್ರಮುಖ ಜಿಲ್ಲೆಯಾದ ರಾಯಚೂರು ಜಿಲ್ಲೆಯು, ಹೈದರಾಬಾದ್ ಕರ್ನಾಟಕದ ವ್ಯಾಪ್ತಿ ಯಲ್ಲಿದೆ. ಹೈದರಾಬಾದ್ ನಿಜಾಮನ ಆಳ್ವಿಕೆಯಲ್ಲಿ ತೆಲುಗು ಮತ್ತು ಉರ್ದು ಸಂಸ್ಕೃತಿಗೆ ಒಳಗಾದ ನಾಡಿದು. ರಾಜ್ಯ ಪುನರ್ ವಿಂಗಡಣೆಯಾಗಿ ೧೯೫೬ ರಲ್ಲಿ ಈ ಪ್ರದೇಶ ಹೈದರಾಬಾದ್ ಆಳ್ವಿಕೆಯಿಂದ ಕರ್ನಾಟಕಕ್ಕೆ ಸೇರಿಕೊಂಡಿತು. ೧೯೯೭ ರಲ್ಲಿ ಜಿಲ್ಲೆಗಳ ಪುನರ್ ವಿಂಗಡಣೆಯ ಸಂದರ್ಭದಲ್ಲಿ ರಾಯಚೂರು, ಮಾನವಿ, ಸಿಂಧನೂರು, ಲಿಂಗಸುಗೂರು ಹಾಗೂ ದೇವದುರ್ಗ ತಾಲ್ಲೂಕುಗಳನ್ನು ಒಳಗೊಂಡು ಪುನರ್‌ರಚಿತವಾಗಿದೆ.

ಜಿಲ್ಲೆಯ ಆಗ್ನೇಯ ಭಾಗದಲ್ಲಿ ತುಂಗಭದ್ರಾ ನದಿ ಮತ್ತು ಉತ್ತರದಲ್ಲಿ ಕೃಷ್ಣಾ ನದಿ ಹರಿದು ಈ ನಾಡನ್ನು ಶ್ರೀಮಂತ ಗೊಳಿಸಿವೆ.ಬಳ್ಳಾರಿ, ಕೊಪ್ಪಳ, ಬಾಗಲಕೋಟೆ, ಬಿಜಾಪುರ ಜಿಲ್ಲೆಗಳಿಂದ ಆವೃತಗೊಂಡ ಈ ಜಿಲ್ಲೆಯು, ಪೂರ್ವದಲ್ಲಿ ಆಂಧ್ರ ಪ್ರದೇಶದ ಗಡಿಗೆ ಹೊಂದಿಕೊಂಡಿದೆ. ಈ ಜಿಲ್ಲೆಯಲ್ಲಿ ದೇವದುರ್ಗ ತಾಲ್ಲೂಕನ್ನು ಹೊರತುಪಡಿಸಿ ಉಳಿದ ಎಲ್ಲಾ ತಾಲ್ಲೂಕು ಗಳೂ ನೀರಾವರಿ ಸೌಕರ್ಯವನ್ನು ಪಡೆದಿವೆ. ಇತ್ತೀಚೆಗೆ ಕರ್ನಾಟಕ ಸರ್ಕಾರ ವಿದ್ಯುತ್ ಸ್ಥಾವರವನ್ನು ಈ ಜಿಲ್ಲೆಯ ಚಿಕ್ಕಸಗೂರು ವ್ಯಾಪ್ತಿಯಲ್ಲಿ ಸ್ಥಾಪಿಸಿ ಈ ಜಿಲ್ಲೆಯನ್ನು ಅಭಿವೃದ್ಧಿಪಡಿಸಿದೆ.

ವಿಜಯನಗರದ ಅರಸರು, ಗುರುಗಂಟದ ಪಾಳೆಗಾರರು, ದೇವದುರ್ಗದ ನಾಯಕರುಗಳಿಂದ ಆಳಲ್ಪಟ್ಟ ನಿಜಾಂ ಪ್ರದೇಶವು ಸಾಂಸ್ಕೃತಿಕ ಹಾಗೂ ಐತಿಹಾಸಿಕವಾಗಿ ಹೆಚ್ಚು ಮಹತ್ವ ಪಡೆದಿದೆ. ಈ ಜಿಲ್ಲೆಯು ಧಾರ್ಮಿಕ ಕ್ಷೇತ್ರದಲ್ಲಿಯೂ ಹೆಚ್ಚು ಹೆಸರು ಪಡೆದಿದೆ. ಇಂತಹ ನಾಡಿನಲ್ಲಿ ವೀರಶೈವ ಧರ್ಮ ಪ್ರಬಲವಾಗಿ ಬೆಳೆದಿದ್ದು, ತನ್ನ ಛಾಪನ್ನು ಮೂಡಿಸಿದೆ. ವೀರಶೈವ ಮಠಗಳ ಪ್ರಭಾವದಿಂದ ಈ ಜಿಲ್ಲೆಯು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕವಾಗಿ ಶ್ರೀಮಂತಗೊಂಡಿದೆ.

ಈ ಜಿಲ್ಲೆಯಲ್ಲಿ ಗುರುವಿರಕ್ತ ಹಾಗೂ ಶರಣಸ್ಥಲ ಮಠಗಳು ಸ್ಥಾಪನೆಯಾಗಿವೆ. ದೇವದುರ್ಗ ತಾಲ್ಲೂಕಿನ ಜಾಲಹಳ್ಳಿಯ ಶ್ರೀ ಜಯಶಾಂತೇಶ್ವರರು, ಗಬ್ಬೂರಿನ ಶ್ರೀ ಬೂದಿಬಸವೇಶ್ವರರು, ಮಾನವಿಯ ಗುರುಗಳು ಹಾಗೂ ರಾಯಚೂರಿನ ಕಿಲ್ಲೆ ಮಠದ ಗುರುಗಳು ವೀರಶೈವ ಧರ್ಮವನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಜೊತೆಗೆ ಜಿಲ್ಲೆಯಲ್ಲಿ ಸ್ಥಾಪನೆಗೊಂಡ ನೂರ ಐವತ್ತೆಂಟು ಮಠಗಳ ಗುರುಗಳು ಆಯಾ ಭಾಗದಲ್ಲಿ ತಮ್ಮ ಶಕ್ತ್ಯಾನುಸಾರ ಧರ್ಮ ಜಾಗೃತಿಯನ್ನುಂಟು ಮಾಡಿ ಧಾರ್ಮಿಕ ಕ್ಷೇತ್ರವನ್ನು ಶ್ರೀಮಂತ ಗೊಳಿಸಿದ್ದಾರೆ.

ಜಿಲ್ಲೆಯಲ್ಲಿ ಒಟ್ಟು ನೂರು ಐವತ್ತೆಂಟು ಮಠಗಳು ಸ್ಥಾಪನೆಯಾಗಿವೆ ಎಂದು ಮಾಹಿತಿ ದೊರೆತಿದ್ದು, ಈ ಮಾಹಿತಿಯ ಆಧಾರದ ಮೇಲೆ ಶೋಧನೆಗೆ ಹೋದ ಸಂದರ್ಭದಲ್ಲಿ ಐವತ್ಮೂರು ಮಠಗಳು ಮಾತ್ರ ದೊರೆತಿವೆ. ದೊರೆತ ಈ ಎಂಭತ್ತೊಂದು ಮಠಗಳಲ್ಲೂ ಇಪ್ಪತ್ತೊಂಬತ್ತು ಮಠಗಳಲ್ಲಿ ಮಾತ್ರ ಮಠಾಧೀಶರಿದ್ದು ಧಾರ್ಮಿಕ ಚಟುವಟಿಕೆಗಳನ್ನು ನಡೆಸುವ ಮೂಲಕ ವೀರಶೈವ ಧರ್ಮ ಪ್ರಬಲವಾಗಿ ಬೆಳೆಯುವಂತೆ ಮಾಡಿದ್ದಾರೆ. ಉಳಿದ ಐವತ್ತೆರಡು ಮಠಗಳು ಕೇವಲ ಗದ್ದುಗೆಗಳ ಪೂಜೆ ಹಾಗೂ ಹೆಸರಿಗಷ್ಟೇ ಮಠಗಳಾಗಿ ಉಳಿದಿವೆ. ಜಿಲ್ಲೆಯಲ್ಲಿ ಸ್ಥಾಪನೆಗೊಂಡ ಒಟ್ಟು ಮಠಗಳಲ್ಲಿ ನೂರಕ್ಕೂ ಹೆಚ್ಚು ಮಠಗಳು ಹೇಳಲು ಹೆಸರಿಲ್ಲದಂತೆ ಮರೆಯಾಗಿರುವುದು ಒಂದು ನೋವಿನಸಂಗತಿ.

ದೇವದುರ್ಗ ತಾಲ್ಲೂಕು

ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕು ಐತಿಹಾಸಿಕವಾಗಿ ಪ್ರಸಿದ್ಧಿ ಪಡೆದಿದೆ. ಈ ತಾಲ್ಲೂಕು ಇತ್ತೀಚೆಗೆ ಕೃಷ್ಣನದಿ ನೀರಿನ ಹೊಸ ಯೋಜನೆಯಿಂದ ನೀರಾವರಿಯನ್ನು ಕಂಡು ಆರ್ಥಿಕವಾಗಿ ಸದೃಢಗೊಳ್ಳತೊಡಗಿದೆ. ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆದಿತ್ತಾದರೂ ಕಾಲಕ್ರಮೇಣ ತನ್ನ ಬೆಳವಣಿಗೆಯಲ್ಲಿ ಕುಂಠಿತಗೊಂಡ ಲಕ್ಷಣಗಳು ಕಂಡು ಬರುತ್ತವೆ. ಈ ತಾಲ್ಲೂಕಿನಲ್ಲಿ ಪ್ರಸ್ತುತ ಏಳು ಮಠಗಳು ಅಸ್ತಿತ್ವದಲ್ಲಿವೆ.

ಗಬ್ಬೂರು

ದೇವದುರ್ಗ ತಾಲ್ಲೂಕಿನ ಗಬ್ಬೂರು ಗ್ರಾಮವು ತಾಲ್ಲೂಕು ಕೇಂದ್ರ ಸ್ಥಳದಿಂದ ಪೂರ್ವಕ್ಕೆ ಎಂಟು ಕಿ.ಮೀ ದೂರದಲ್ಲಿದೆ. ಈ ಗ್ರಾಮವು ವೀರಶೈವ ಧರ್ಮದ ಪ್ರಚಾರ ಕೇಂದ್ರವಾಗಿ ರೂಪುಗೊಂಡಿದೆ. ಪುರಾತನ ಕಾಲದಲ್ಲಿ ಶ್ರೀ ಬೂದಿಬಸವೇಶ್ವರಮಠ ಹಾಗೂ ಶ್ರೀ ಸಾವಿರ ದೇವರ ಮಠಗಳು ಸ್ಥಾಪನೆಯಾಗಿವೆ. ಈ ಮಠಗಳ ಸ್ಥಾಪನೆಯಿಂದ ಈ ಗ್ರಾಮದಲ್ಲಿ ಧಾರ್ಮಿಕ ಚಟುವಟಿಕೆಗಳು ನಡೆಯುತ್ತಿದ್ದು, ಸಂಸ್ಕಾರವಂತ ಸಮಾಜ ರೂಪುಗೊಂಡಿದೆ.

ಬೂದಿಬಸವೇಶ್ವರಮಠ: ಶ್ರೀ ಬೂದಿಬಸವೇಶ್ವರ ಮಠವು ಗಬ್ಬೂರು ಗ್ರಾಮದ ಪಶ್ಚಿಮದ ಹೊರಭಾಗದಲ್ಲಿ ಚಿಕ್ಕಗುಡ್ಡದ ತಪ್ಪಲಿನಲ್ಲಿದೆ. ಈ ಮಠವು ಶ್ರೀ ಬೂದಿಬಸವೇಶ್ವರ ಸ್ವಾಮಿಗಳಿಂದ ಸ್ಥಾಪನೆಯಾಗಿದ್ದಕ್ಕೆ 'ಬೂದಿಬಸವೇಶ್ವರ ಮಠ'ಎಂದು ಹೆಸರು ಬಂದಿದೆ. ಕಾಶಿಪೀಠದ ಶಾಖಾ ಮಠವಾಗಿರುವ ಈ ಮಠವು ಪುತ್ರ ವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ.

ಮಠ ಸ್ಥಾಪನೆ: ಶ್ರೀ ಬೂದಿಬಸವೇಶ್ವರರು ಲೋಕಸಂಚಾರ ಕೈಗೊಂಡು ದೇವದುರ್ಗದಲ್ಲಿ ಕೆಲವು ದಿನಗಳ ಕಾಲ ಅನುಷ್ಠಾನ ಕೈಗೊಂಡು ಈ ಗ್ರಾಮಕ್ಕೆ ಬಂದು ಇಲ್ಲಿನ ಗುಡ್ಡದಲ್ಲಿ ತಪೋನುಷ್ಠಾನಗೊಳ್ಳುತ್ತಾರೆ. ಇವರು ಮಾಡುತ್ತಿದ್ದ ದೀರ್ಘತಪಸ್ಸನ್ನು ನೋಡಿದ ಗ್ರಾಮದ ಭಕ್ತರು ಗುರುಗಳ ಸೇವೆಗೆ ಮುಂದಾಗುತ್ತಾರೆ.ಭಕ್ತರ ಅಪೇಕ್ಷೆಯನ್ನರಿತು ಗುರುಗಳು ಮಠವನ್ನು ಸ್ಥಾಪಿಸಿ ಇಲ್ಲೇ ನೆಲೆಗೊಳ್ಳುತ್ತಾರೆ. ನಂತರ ನಿತ್ಯ ಶಿವಾನುಭವಗೋಷ್ಠಿಯನ್ನು ನಡೆಸಿ ಧರ್ಮಪ್ರಚಾರವನ್ನು ಕೈಗೊಂಡರು. ಇವರು ಗ್ರಾಮ ಗ್ರಾಮಗಳನ್ನು ಸುತ್ತಿ ಧರ್ಮಜಾಗೃತಿಯನ್ನುಂಟುಮಾಡಿ, ತಮ್ಮ ತಪೋಶಕ್ತಿಯಿಂದ ಮಠವನ್ನು ಬೆಳಸಿದರು.

ಬೆಳೆದ ಪರಂಪರೆ: ಮಹಾ ಶಿವಯೋಗಿಗಳಾದ ಶ್ರೀ ಬೂದಿಬಸವೇಶ್ವರರು ಜೀವಂತ ಸಮಾಧಿಯಾದ ಮೇಲೆ ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬರುತ್ತಾರೆ. ಈ ಗುರುಗಳು ಮಠವನ್ನು ಅಭಿವೃದ್ಧಿಪಡಿಸಿ ವೀರಶೈವಧರ್ಮ ಹೆಚ್ಚು ಪ್ರಚಾರಗೊಳ್ಳಲು ನೆರವಾದರು. ಮಠದ ಪರಂಪರೆಯಲ್ಲಿ ಈಗನ ಗುರುಗಳು ಸೇರಿದಂತೆ ಒಟ್ಟು ಎಂಟು ಜನ ಗುರುಗಳು ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಎಂದು ತಿಳಿದುಬರುತ್ತದೆ. ಈ ಮಠದ ಸಂಪ್ರದಾಯದಂತೆ ಪಟ್ಟಾಧಿಕಾರ ವಹಿಸಿಕೊಳ್ಳುವ ಗುರುಗಳಿಗೆ ಕರ್ತೃ ಗುರುಗಳಾದ ಶ್ರೀ ಬೂದಿಬಸವೇಶ್ವರ ಸ್ವಾಮಿಗಳು ಹಾಗೂ ಎರಡನೆಯ ಗುರುಗಳಾದ ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳ ಹೆಸರುಗಳನ್ನು ಅನುಕ್ರಮವಾಗಿ ಅಭಿದಾನ ಮಾಡಲಾಗುತ್ತಿರುವ ಕಾರಣಕ್ಕೆ, ಮಠದ ಪರಂಪರೆಯಲ್ಲಿ ಈ ಎರಡೂ ಹೆಸರುಗಳು ಮಾತ್ರ ಕೇಳಿಬರುತ್ತಿವೆ.

ಈ ಹಿಂದೆ ಅಧಿಕಾರ ನಡೆಸಿ ಜುಲೈ ಹನ್ನೆರಡು ೧೯೯೯ರಲ್ಲಿ ಲಿಂಗೈಕ್ಯರಾದ ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಸರ್ವತೋಮುಖವಾಗಿ ಅಭಿವೃದ್ಧಿಪಡಿಸಿದ್ದಾರೆ. ಇವರ ಕಾಲದಲ್ಲಿ ಭವ್ಯವಾದ ಮಠದ ಕಟ್ಟಡ ನಿರ್ಮಾಣಗೊಂಡಿದೆ. ಒಟ್ಟು ನೂರ ಹನ್ನೊಂದು ಕಂಬಗಳನ್ನು ನಿಲ್ಲಿಸಿ ನಿರ್ಮಿಸಲಾಗಿರುವ ಕಟ್ಟಡವು ಬಹಳ ಭವ್ಯವಾಗಿ ರೂಪುಗೊಂಡಿದೆ. ಹಿಂದಿನ ಗುರುಗಳ ಕರ್ತೃತ್ವ ಶಕ್ತಿಯಿಂದ ಈ ಕಾರ್ಯ ನಡೆಸಲು ಸಾಧ್ಯವಾಗಿದ್ದು, ಮಠದ ಸಮುಚ್ಚಯವು ಲಿಂಗೈಕ್ಯ ಹಿರಿಯ ಗುರುಗಳಾದ ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳ ಕ್ರಿಯಾಶೀಲತೆಗೆ ಹಿಡಿದ ಕೈಗನ್ನಡಿಯಾಗಿದೆ. ಗುರುಗಳು ಲಿಂಗೈಕ್ಯರಾಗುವ ಐದು ತಿಂಗಳು ಮೊದಲು ಶ್ರೀ ಬೂದಿಬಸವೇಶ್ವರ ಶಿವಾಚಾರ್ಯ ಸ್ವಾಮಿಗಳಿಗೆ ಪಟ್ಟಾಧಿಕಾರ ನೀಡಿ ಲಿಂಗೈಕ್ಯರಾಗಿದ್ದಾರೆ.

ಶ್ರೀ ಪ್ರಭಯ್ಯ ಮತ್ತು ಶ್ರೀಮತಿ ಮಹಾದೇವಮ್ಮನವರ ಪುತ್ರರಾಗಿ ಜನಿಸಿದ ಗುರುಗಳು ರಾಯಚೂರು ಹಾಗೂ

ಗುಲ್ಬರ್ಗದಲ್ಲಿ ಪದವಿ ಶಿಕ್ಷಣವನ್ನು ಮುಗಿಸಿ ೧೯೯೯ರ ಜನವರಿ ೨೫ ರಂದು ಮಠದ ಅಧಿಕಾರವನ್ನು ವಹಿಸಿಕೊಂಡಿರುತ್ತಾರೆ. ಹಿರಿಯ ಗುರುಗಳ ಹಾರೈಕೆಯಲ್ಲಿ ಬೆಳೆದ ಶ್ರೀ ಬೂದಿಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು ಮಠದಲ್ಲಿ ನಡೆಯುವ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಒತ್ತು ಕೊಟ್ಟು ಮಠವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುತ್ತಿದ್ದಾರೆ. ತಮ್ಮ ಅನುಗ್ರಹ ಗುರುಗಳಾದ ಶ್ರೀ ಶಾಂತವೀರ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಗೆ ಭವ್ಯವಾದ ಮಂಟಪವನ್ನು ನಿರ್ಮಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಶಕ್ತಿ ಆರಾಧಕರಾದ ಗುರುಗಳು ಪ್ರತಿ ಅಮಾವಾಸ್ಯೆಯಲ್ಲಿ ಶಿವಾನುಭವ ಗೋಷ್ಠಿಯನ್ನು ನಡೆಸುವುದಲ್ಲದೆ ಭಜನೆಯನ್ನು ಹಮ್ಮಿಕೊಳ್ಳುತ್ತಿದ್ದಾರೆ. ಅದೇ ರೀತಿ ಹುಣ್ಣಿಮೆಯಂದು ದೇವದುರ್ಗದ ತಮ್ಮ ಶಾಖಾಮಠದಲ್ಲಿ ಶಿವ ಕೀರ್ತನೆಯನ್ನು ನಡೆಸುತ್ತಿದ್ದಾರೆ. ಪ್ರತಿ ವರ್ಷ ನಡೆಯುವ ಜಾತ್ರೆಯಲ್ಲಿ ಸಾಮೂಹಿಕ ವಿವಾಹಗಳನ್ನು ನಡೆಸುವುದಲ್ಲದೆ ಧರ್ಮ ಸಭೆಯನ್ನು ನಡೆಸಲಾಗುತ್ತಿದೆ. ನವರಾತ್ರಿ ಉತ್ಸವ, ಬಸವಜಯಂತಿ, ಗೌರಿಹಬ್ಬ ಈ ರೀತಿ ಜಯಂತಿ ಹಾಗೂ ಹಬ್ಬ ಹರಿದಿನಗಳನ್ನು ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಮಹಾ ದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ಶ್ರೀ ಬೂದಿಬಸವೇಶ್ವರ ಸ್ವಾಮಿಗಳ ಪ್ರಭಾವಕ್ಕೆ ಒಳಗಾಗಿದ್ದ ಹೈದರಬಾದ್ ನಿಜಾಂ ಮಠಕ್ಕೆ ನಲವತ್ತು ಎಕರೆ ಭೂಮಿಯನ್ನು ಉಂಬಳಿಯಾಗಿ ನೀಡಿದ್ದು, ಈ ಆಸ್ತಿ ಇಂದಿಗೂ ಮಠದ ಆದಾಯದ ಮೂಲವಾಗಿದೆ. ಪುರಾತನ ಈ ಮಠವು ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳಿಗೆ ಹೆಚ್ಚು ಒತ್ತುಕೊಟ್ಟು ವೀರಶೈವ ಧರ್ಮ ಬೆಳೆಯಲು ನೆರವಾಗಿದೆ. ಈ ಭಾಗದ ಪ್ರಭಾವಿ ಮಠಗಳಲ್ಲಿ ಒಂದಾಗಿ ಬೆಳೆದಿದೆ.

ವಿಳಾಸ: ಷ.ಬ್ರ.ಶ್ರೀ ಬೂದಿಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಬೂದಿಬಸವೇಶ್ವರ ಮಠ, ಗಬ್ಬೂರು, ದೇವದುರ್ಗ ತಾಲ್ಲೂಕು. ರಾಯಚೂರು ಜಿಲ್ಲೆ.

ಸಾವಿರದೇವರಮಠ: ಶ್ರೀ ಸಾವಿರದೇವರಮಠವು ಗಬ್ಬೂರು ಗ್ರಾಮದ ಮುಖ್ಯ ರಸ್ತೆಯಲ್ಲಿದೆ. ಬಾಳೆಹೊನ್ನೂರು ರಂಭಾಪುರಿ ಪೀಠದ ಶಾಖಾ ಮಠವಾಗಿರುವ ಈ ಮಠವು ಹನ್ನೆರಡನೆಯ ಶತಮಾನಕ್ಕೂ ಮೊದಲು ಸ್ಥಾಪನೆಯಾಗಿತ್ತೆಂದು ಹೇಳಲಾಗುತ್ತಿದೆ. ಶಿಷ್ಯ ವರ್ಗದ ಸಂಪ್ರದಾಯದಲ್ಲಿ ಬೆಳೆದಿರುವ ಈ ಮಠವು ಈ ಗ್ರಾಮಕ್ಕೆ ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ತನ್ನದೇ ಆದಂತಹ ಕೊಡುಗೆಯನ್ನು ನೀಡಿದೆ. ಕರ್ತೃ ಗುರುಗಳಾದ ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು ಲೋಕಸಂಚಾರ ಕೈಗೊಂಡು, ಅನುಷ್ಠಾನ ಕೈಗೊಂಡಂತಹ ಸ್ಥಳಗಳಲ್ಲಿ ಮಠಗಳನ್ನು ಸ್ಥಾಪಿಸಿ ವೀರಶೈವ ಧರ್ಮ ಬೆಳೆಯಲು ನೆರವಾಗಿದ್ದಾರೆ.

ಪರಂಪರೆ:

೧. ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಗುರುಪಾದ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯಸ್ವಾಮಿಗಳು

ಹನ್ನೆರಡನೆಯ ಶತಮಾನದಲ್ಲಿ ಅಕ್ಕನಾಗಮ್ಮನವರಿಗೆ ಕ್ರಿಯಾಮೂರ್ತಿಗಳಾಗಿದ್ದ ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು ಈ ಮಠದ ಪರಂಪರೆಯ ಆದ್ಯ ಗುರುಗಳಾಗಿದ್ದರು. ಇವರು ವಿದ್ವತ್‌ಪೂರ್ಣ ವ್ಯಕ್ತಿತ್ವದಿಂದ ವೀರಶೈವ ಧರ್ಮವನ್ನು ಪ್ರಚಾರಗೊಳಿಸಿ ಹನ್ನೆರಡನೆಯ ಶತಮಾನದ ಶರಣರಿಂದ ಗೌರವಿಸಲ್ಪಟ್ಟಿದ್ದ ಮಹಾ ಮಹಿಮರೆಂದು ಹೇಳಲಾಗುತ್ತಿದೆ. ಇವರು ಸ್ಥಾಪಿಸಿದ ಸಾವಿರ ದೇವರ ಮಠದ ಪರಂಪರೆಯಲ್ಲಿ ಈ ಮೇಲಿನ ಹೆಸರುಗಳನ್ನು ದಾಖಲಿಸಲಾಗಿದೆ. ಪರಂಪರೆಯ ಗುರುಗಳಾದ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಮಹಾಮಹಿಮರಾಗಿ ಶಿವಪೂಜಾ ನಿಷ್ಠೆಯಿಂದ ಹೆಚ್ಚು ಹೆಸರು ಪಡೆದಿದ್ದರು. ಇವರು ಮಠವನ್ನು ಅಭಿವೃದ್ಧಿಪಡಿಸಿ ಮಠಕ್ಕೆ ಭದ್ರತೆಯನ್ನು ಕಲ್ಪಿಸಿದರು. ಇವರ ಕಾಲದಲ್ಲಿ ಕಟ್ಟಡಗಳ ನಿರ್ಮಾಣವಾಗಿದೆ. ಇವರು ನಡೆಸುತ್ತಿದ್ದ ಧಾರ್ಮಿಕ ಕಾರ್ಯಗಳಿಗೆ ಭಕ್ತರು ತನುಮನ ಧನ ಸಹಾಯವನ್ನು ನೀಡಿ ಸ್ಪಂದಿಸುತ್ತಿದ್ದರು. ಈ ಕಾರಣದಿಂದಲೇ ಗುರುಗಳು ಹೆಚ್ಚು ಪ್ರಸಿದ್ಧಿ ಪಡೆದು ಮಠವನ್ನು ಮುನ್ನಡೆಸಿದರು. ಇವರ ತರುವಾಯ ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳು ಹಾಗೂ ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದಿದ್ದಾರೆ.

ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಕೂಡಲ ಸಂಗಮದ ಶ್ರೀ ರಾಚೋಟಯ್ಯ ಮತ್ತು ಶ್ರೀಮತಿ ರತ್ನಮ್ಮನವರ

ಪುತ್ರರಾಗಿ ಜನಿಸಿದ ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು, ವ್ಯಾಕರಣ ತೀರ್ಥ ಪಂಡಿತರಾಗಿ ಹೊರ ಹೊಮ್ಮಿದರು. ಗುರುಗಳು ವಿದ್ವತ್ ಚೇತನವಾಗಿ ಗಬ್ಬೂರು ಸಾವಿರ ದೇವರ ಮಠದ ಅಧಿಕಾರವನ್ನು ವಹಿಸಿಕೊಂಡಿರುತ್ತಾರೆ. ಅಷ್ಟಾವರಣ, ಪಂಚಚಾರ, ಷಟ್‌ಸ್ಥಲ ಸಿದ್ಧಾಂತ ರೀತ್ಯಾ ಆಚರಣೆಯನ್ನು ಮಾಡುವ ಉದ್ದೇಶದಿಂದ ಈ ಮಠವು ಸ್ಥಾಪನೆಯಾಗಿ ವೀರಶೈವ ತತ್ತ್ವದ ಮೂಲಧಾರಗಳಾದ ಈ ತತ್ತ್ವಗಳನ್ನು ಸಾಕಾರಗೊಳಿಸಿಕೊಂಡು ಧರ್ಮವನ್ನು ಪ್ರಚಾರಗೊಳಿಸುತ್ತಿದ್ದಾರೆ. 'ಮಠದ ಹೆಸರಿನಲ್ಲಿ ವಾಮಾಚಾರವನ್ನು ಮಾಡಿಕೊಂಡು ಜನರನ್ನು ಅಜ್ಞಾನದ ಕೂಪಕ್ಕೆ ತಳ್ಳುತ್ತಿರುವ ಗುರುಗಳ ಹಾಗೂ ಅಂತಹ ಮಠಗಳ' ಬಗ್ಗೆ ಆಕ್ರೋಶ ವ್ಯಕ್ತಪಡಿಸುವ ಗುರುಗಳು ಇದು ವೀರಶೈವ ಸಿದ್ಧಾಂತದ ವಿರುದ್ಧದ ನಡವಳಿಕೆಯೆಂದು ಅಭಿಪ್ರಾಯಿಸುತ್ತಾರೆ.

ಧಾರ್ಮಿಕ ಕಾರ್ಯಗಳು: ಪುರಾತನ ಮಠವಾದ ಸಾವಿರ ದೇವರ ಮಠದಲ್ಲಿ ಪರಂಪರೆಯ ಗುರುಗಳ ಆರು ಗದ್ದುಗೆಗಳು ಸ್ಥಾಪಿತವಾಗಿವೆ. ಈ ಗದ್ದುಗೆಗಳಿಗೆ ನಿತ್ಯಪೂಜೆ ನಡೆಸಲಾಗುತ್ತಿದೆ. ಶ್ರಾವಣ ಮತ್ತು ಕಾರ್ತೀಕ ಮಾಸಗಳಲ್ಲಿ ವಿಶೇಷ ಪೂಜೆಯನ್ನು ಹಮ್ಮಿಕೊಳ್ಳಲಾಗುತ್ತಿದೆ. ವರ್ಷಕ್ಕೊಮ್ಮೆ ಹಿರಿಯ ಗುರುಗಳ ಆರಾಧನೆಯನ್ನು ಹಮ್ಮಿಕೊಂಡು ಧಾರ್ಮಿಕ ಸಭೆಯನ್ನು ನಡೆಸಿ ಅಂದು ಸೇರುವ ಭಕ್ತರಿಗೆ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಮಠದ ಮೂಲ ಉದ್ದೇಶವಾದ ಧರ್ಮ ಪ್ರಚಾರ ಹಾಗೂ ಭಕ್ತರ ಧಾರ್ಮಿಕ ಕ್ರಿಯಾದಿಗಳಿಗೆ ಸ್ಪಂದಿಸಿ ಭಕ್ತರಿಗೆ ಧಾರ್ಮಿಕ ಸಂಸ್ಕಾರವನ್ನು ನೀಡುತ್ತಾ ಬಂದಿದ್ದಾರೆ. ಲಿಂಗದೀಕ್ಷೆ, ಶಿವಪೂಜಾ ವಿಧಾನ ಹಾಗೂ ಆತ್ಮಲಿಂಗದ ಬಗ್ಗೆ ಉಪದೇಶ ನೀಡಿ ವೀರಶೈವ ಧರ್ಮವನ್ನು ಬೆಳೆಸುತ್ತಿದ್ದಾರೆ.

ಶೈಕ್ಷಣಿಕ -ಸಾಮಾಜಿಕ ಕಾರ್ಯಗಳು: ಧಾರ್ಮಿಕ ಕಾರ್ಯಗಳಿಗೆ ಹೆಚ್ಚು ಒತ್ತು ಕೊಟ್ಟು ಶ್ರಮಿಸುತ್ತಿರುವ ಈ ಮಠವು ಸಾಮಾಜಿಕ ಅಭಿರುಚಿಗೆ ಅಕ್ಷರಜ್ಞಾನ ಅವಶ್ಯಕವೆಂದು ಅರಿತು, ಗ್ರಾಮಾಂತರ ಮಕ್ಕಳ ಅಭ್ಯುದಯದ ದೃಷ್ಟಿಯಿಂದ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿದರು. ಗಬ್ಬೂರು ಹಾಗೂ ಮಟುಮರಿಯಲ್ಲಿ ಶ್ರೀ ಮಹಾಂತೇಶ್ವರ ಪ್ರೌಢಶಾಲೆಯನ್ನು ಪ್ರಾರಂಭಿಸಿ ಗ್ರಾಮಾಂತರ ಮಕ್ಕಳ ಕಲಿಕೆಗೆ ನೆರವಾಗಿದ್ದಾರೆ. ಮಟುಮರಿಯಲ್ಲಿ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಿ ಕಲಿಯುವ ಬಡಮಕ್ಕಳಿಗೆ ನೆರವಾಗಿದ್ದಾರೆ.ಗುರುಗಳು ತಮ್ಮ ಕ್ರಿಯಾಶೀಲ ಗುಣಗಳಿಂದ ಮಠವನ್ನು ಅಭಿವೃದ್ಧಿಪಡಿಸಿ ರಾಯಚೂರು ನಗರದಲ್ಲಿ ಶ್ರೀ ಮಹಾಂತೇಶ್ವರ ಕಲ್ಯಾಣ ಮಂಟಪವನ್ನು ಸ್ಥಾಪಿಸಿ, ಅಲ್ಲಿನ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳಿಗೆ ನೆರವಾಗುವಂತೆ ಮಾಡಿದ್ದಾರೆ. ಗುರುಗಳು ೧೯೭೧ ರಲ್ಲಿ ಶ್ರೀ ಕರಿಬಸವ ಕವಿಗಳಿಂದ'ಶ್ರೀ ಗುರುಮಹಾಂತೇಶ್ವರ ಪುರಾಣ'ವನ್ನು ಬರೆಸಿ, ಮಠದ ಕರ್ತೃ ಗುರುಗಳ ಹೆಸರು ಹಾಗೂ ಮಠದ ಪರಂಪರೆಯು ಶಾಶ್ವತವಾಗಿ ಉಳಿಯುವಂತೆ ಮಾಡಿದ್ದಾರೆ.

ವಿಳಾಸ:ಷ.ಬ್ರ.ಶ್ರೀ ಮಹಾಂತಶಿವಾಚಾರ್ಯ ಸ್ವಾಮಿಗಳು, ಶ್ರೀ ಸಾವಿರದೇವರಮಠ, ಗಬ್ಬೂರು, ದೇವದುರ್ಗ ತಾ, ರಾಯಚೂರುಜಿಲ್ಲೆ.

ಗೆಜ್ಜೆಬಾವಿ

ದೇವದುರ್ಗ ತಾಲ್ಲೂಕಿನ ಗೆಜ್ಜೆಬಾವಿಯು ತಾಲ್ಲೂಕು ಕೇಂದ್ರದಿಂದ ಪೂರ್ವ ಭಾಗಕ್ಕೆ ಹದಿನೆಂಟು ಕಿ.ಮೀ ದೂರದಲ್ಲಿದೆ. ಗೆಜ್ಜೆಬಾವಿ, ಮುಷ್ಟೂರು ಹಾಗೂ ಶಾಖಾಪುರ ಗ್ರಾಮಗಳ ಮಧ್ಯ ಭಾಗದಲ್ಲಿ ಸ್ಥಾಪನೆಯಾಗಿರುವ ಈ ಮಠವು ಈ ಮೂರು ಹಳ್ಳಿಗಳಿಗೆ ಸೇರಿದ ಮಠವಾಗಿದೆ.

ಚನ್ನಬಸವೇಶ್ವರಮಠ: ಗೆಜ್ಜೆಬಾವಿ ಗ್ರಾಮ ಠಾಣಾ ವ್ಯಾಪ್ತಿಯಲ್ಲಿ ಪುರಾತನ ಕಾಲದಲ್ಲಿ ಶ್ರೀ ಚನ್ನಬಸವೇಶ್ವರ ಸ್ವಾಮಿಗಳು ಶ್ರೀ ಗಂಗಪ್ಪ ಎಂಬ ಪರಮ ಭಕ್ತನಿಗೆ ಒಲಿದು ಇಲ್ಲಿಗೆ ಬಂದು ಅನುಷ್ಠಾನಗೊಳ್ಳುತ್ತಾರೆ. ಅಂದು ಗುರುಗಳು ಅನುಷ್ಠಾನಗೊಂಡ ಜಾಗವು ಜಾಗೃತಗೊಂಡು ಮಠವಾಗಿ ರೂಪುಗೊಂಡಿದೆ. ಶ್ರೀ ಚನ್ನಬಸವ ಸ್ವಾಮಿಗಳಿಂದ ಸ್ಥಾಪನೆಗೊಂಡ ಕಾರಣ ಈ ಮಠಕ್ಕೆ ಶ್ರೀ ಚನ್ನಬಸವೇಶ್ವರ ಸ್ವಾಮಿ ಮಠ ಎಂದು ಹೆಸರು ಬಂದಿದೆ.

ತಪೋನಿಷ್ಠರು ಹಾಗೂ ಮಹಾಮಹಿಮರಾಗಿದ್ದ ಶ್ರೀ ಚನ್ನಬಸವ ಸ್ವಾಮಿಗಳ ಅನುಗ್ರಹಕ್ಕೆ ಗಬ್ಬೂರು ಶ್ರೀ ಬೂದಿ ಬಸವೇಶ್ವರ ಸ್ವಾಮಿಗಳು ಒಳಗಾಗಿದ್ದರು ಎಂದು ಹೇಳಲಾಗುತ್ತದೆ. ಶ್ರೀ ಚನ್ನಬಸವ ಸ್ವಾಮಿಗಳು ಈ ಗ್ರಾಮಕ್ಕೆ ಬರುವ ಮೊದಲು ಶಿರವಾರ ಗುಡ್ಡದ ಗವಿಯಲ್ಲಿ ದೀರ್ಘಅನುಷ್ಠಾನವನ್ನು ಕೈಗೊಂಡು ಅಲ್ಲಿ ಅನೇಕ ಪವಾಡಗಳನ್ನು ಮಾಡಿ, ಭಕ್ತ

ರನ್ನು ಉದ್ಧರಿಸಿ ಶಿವಪುರಕ್ಕೆ ಆಗಮಿಸಿ ಅಲ್ಲಿನ ರೆಡ್ಡಿ ಗೌಡರ ಮನೆಯ ಬ್ರಹ್ಮ ರಾಕ್ಷಸನನ್ನು ಓಡಿಸಿದರಂತೆ. ಆಗ ಗೌಡರು ಗುರುಗಳಿಗೆ ಕಾಣಿಕೆಯನ್ನು ನೀಡಲು ಬಂದಾಗ ಅದನ್ನು ತಿರಸ್ಕರಿಸಿ ಗಂಗಪ್ಪನ ಭಕ್ತಿಗೆ ಒಲಿದು ಗೆಜ್ಜೆಬಾವಿಗೆ ಬಂದು ಮಠ ಸ್ಥಾಪಿಸುತ್ತಾರೆ. ಮುನ್ನೂರು ವರ್ಷಗಳ ದೀರ್ಘ ಆಯುಷ್ಯವನ್ನು ಬದುಕಿದ್ದರೆಂದು ಹೇಳಲಾಗುತ್ತದೆ. ಇಂತಹ ಮಹಾಮಹಿಮರು ಬದುಕುವ ಆಸೆ ಇನ್ನೇತಕ್ಕೆಂದು ಮುನ್ನೂರು ವರ್ಷಗಳ ತರುವಾಯ ಜೀವಂತ ಸಮಾಧಿಯಾದರಂತೆ. ಮಠದ ಪರಂಪರೆಯಲ್ಲಿ ಒಟ್ಟು ಇಪ್ಪತ್ತೂರು ಜನ ಗುರುಗಳು ಅಧಿಕಾರವನ್ನು ನಡೆಸಿ ಮಠವನ್ನು ಮುನ್ನಡೆಸಿದ್ದಾರೆ ಎಂದು ಹೇಳಲಾಗುತ್ತದೆ. ಮಠದ ಪರಂಪರೆಯಲ್ಲಿ ಶ್ರೀ ಚನ್ನಬಸವ ಸ್ವಾಮಿಗಳು ಹಾಗೂ ಶ್ರೀ ಕರಿಬಸವ ಸ್ವಾಮಿಗಳು ಪಟ್ಟಾಧಿಕಾರದ ಸಂದರ್ಭದಲ್ಲಿ ಪುನರಾವರ್ತನೆಯಾಗಿ ಅಭಿದಾನಗೊಳ್ಳುವ ಕಾರಣಕ್ಕೆ ಮಠದ ಪರಂಪರೆಯಲ್ಲಿ ಕೆಳಗಿನ ಹೆಸರುಗಳು ಕೇಳಿ ಬರುತ್ತಿವೆ.

ಪರಂಪರೆ:
೧. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು (ಕರ್ತೃ ಗುರುಗಳು)
೨. ಷ.ಬ್ರ.ಶ್ರೀ ಮದ್ದಾನೆ ಕರಿಬಸವ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಕರಿಬಸವ ಶಿವಾಚಾರ್ಯಸ್ವಾಮಿಗಳು (ಹಿರಿಯ ಗುರುಗಳು)
೫. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು (ಕಿರಿಯ ಗುರುಗಳು)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃ ಗುರುಗಳು ಲಿಂಗೈಕ್ಯರಾದ ಮೇಲೆ ಅನೇಕ ಗುರುಗಳು ಅಧಿಕಾರವನ್ನು ನಡೆಸಿದ್ದಾರೆ. ನಂತರ ಶ್ರೀ ಕರಿಬಸವ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಮಹಾ ತಪಸ್ವಿಗಳಾದ ಇವರು ನೂರ ಹತ್ತು ವರ್ಷಗಳ ಕಾಲ ಬದುಕಿದ್ದರೆಂದು ಹೇಳಲಾಗುತ್ತದೆ. ಈ ಗುರುಗಳು ತಮ್ಮ ದೀರ್ಘ ಕಾಲದ ಬದುಕಿನಲ್ಲಿ ವೀರಶೈವ ಧರ್ಮವನ್ನು ಪ್ರಚಾರಗೊಳಿಸಿ ಬೆಳೆಸಿದ್ದಾರೆ. ಇವರ ತರುವಾಯ ಶ್ರೀ ಚನ್ನಬಸವ ಸ್ವಾಮಿಗಳು ಅಧಿಕಾರವನ್ನು ನಡೆಸಿದ್ದಾರೆ. ನಂತರ ಬಂದ ಶ್ರೀ ಕರಿಬಸವ ಸ್ವಾಮಿಗಳು ೧೯೫೨ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಗೆ ತಂದಿದ್ದಾರೆ. ಈ ಮಠದ ಮೂಲ ಮಠವಾದ ನಿಡಸೇಸಿ ಮಠ ಮತ್ತು ಸಹ ಶಾಖಾಮಠವಾದ ಕುಷ್ಟಗಿ ಮಠಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಗೆಜ್ಜೆಬಾವಿ ಗ್ರಾಮದ ಹೊರಭಾಗದಲ್ಲಿ ಸ್ಥಾಪಿತವಾಗಿರುವ ಈ ಮಠವು ನಿರ್ಜನ ಪ್ರದೇಶದಲ್ಲಿ ರೂಪುಗೊಂಡು ಪ್ರಶಾಂತ ವಾತಾವರಣವನ್ನು ಉಳಿಸಿಕೊಂಡಿದೆ. ಇಂತಹ ಮಠದಲ್ಲಿ ತೊಂಬತ್ತು ವರ್ಷದ ಶ್ರೀ ಕರಿಬಸವ ಸ್ವಾಮಿಗಳು ಮಾಗಿದ ಜೀವನಾನುಭವ ಹಾಗೂ ಈವರೆಗೆ ಮಾಡಿದ ತಪಸ್ಸಿನ ಫಲದಿಂದ ವಾಕ್‌ಸಿದ್ಧಿಗಳಾಗಿ ಹೆಸರು ಪಡೆದು ಎಲ್ಲರಿಂದಲೂ ಗೌರವಿಸಲ್ಪಟ್ಟು ವಿಶ್ರಾಂತ ಜೀವನವನ್ನು ನಡೆಸುತ್ತಿದ್ದಾರೆ. ಈಗ ಮಠದ ಉತ್ತರಾಧಿಕಾರಿಗಳಾಗಿ ಶ್ರೀ ಚನ್ನಬಸವ ಸ್ವಾಮಿಗಳು ೨೦೦೦ರ ಫೆಬ್ರವರಿ ಇಪ್ಪತ್ತನ್ನಾಲ್ಕರಂದು ಪಟ್ಟಾಧಿಕಾರವನ್ನು ಪಡೆದುಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ನೂರು ವರ್ಷಗಳ ಹಿಂದೆ ರಚನೆಗೊಂಡಿರುವ ಈ ಮಠದ ಆವರಣದಲ್ಲಿ ಮೂರು ಗದ್ದುಗೆಗಳು ಸ್ಥಾಪನೆಗೊಂಡಿವೆ. ಈ ಗದ್ದುಗೆಗಳಿಗೆ ನಿತ್ಯಪೂಜೆ, ಶ್ರಾವಣ ಮತ್ತು ಕಾರ್ತೀಕ ಮಾಸಗಳಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಹೊರಗಿನಿಂದ ಬರುವ ಭಕ್ತರಿಗೆ ನಿತ್ಯ ದಾಸೋಹ ನಡೆಸಲಾಗುತ್ತಿದೆ.

ವಿಳಾಸ:ಷ.ಬ್ರ.ಶ್ರೀ ಕರಿಬಸವಶಿವಾಚಾರ್ಯಸ್ವಾಮಿಗಳು, ಶ್ರೀ ಚನ್ನಬಸವೇಶ್ವರಮಠ, ಗೆಜ್ಜೆಬಾವಿ,ದೇವದುರ್ಗ ತಾ, ರಾಯಚೂರುಜಿಲ್ಲೆ.

ಜಾಲಹಳ್ಳಿ

ದೇವದುರ್ಗ ತಾಲ್ಲೂಕಿನ ಜಾಲಹಳ್ಳಿಯು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹತ್ತೊಂಬತ್ತು ಕಿ.ಮೀ ದೂರದಲ್ಲಿದೆ. ಆರನೆಯ ಶತಮಾನದಲ್ಲಿ ಈ ಗ್ರಾಮವು ದೇಶವರ್ಮನೆಂಬ ರಾಜನ ಆಳ್ವಿಕೆಗೆ ಒಳಪಟ್ಟಿತ್ತು. ಈ ಗ್ರಾಮಕ್ಕೆ ಚಪ್ಪಳಕಿ, ಬಕಲಪುರ,ಹಂಪರಗುಂಡಿ,ಯರಕಮಾನದೊಡ್ಡಿ, ಸಿದ್ದಾಪುರ, ವರವಿ, ತಿಮ್ಮಾಪುರ ಮತ್ತು ಮಾದಯ್ಯನಗುಡ್ಡ ಎಂಬ ಎಂಟು ಹಳ್ಳಿಗಳಿಂದ ಸಮ್ಮಿಳಿತಗೊಂಡ ಗ್ರಾಮವೇ ಜಾಲಹಳ್ಳಿಯಾಗಿದೆ. ಇಲ್ಲಿ ಮಠವು ಸ್ಥಾಪನೆಯಾಗಿ ನಂತರ ಗ್ರಾಮವು ರಚನೆಗೊಂಡ ಸಂದರ್ಭದಲ್ಲಿ ಜಾಲಿಯ ಮರಗಳಿಂದ ಆವೃತಗೊಂಡ ಈ ಪ್ರದೇಶಕ್ಕೆ ಸಾಂಕೇತಿಕವಾಗಿ 'ಜಾಲಿಹಳ್ಳಿ'ಎಂದು ನಾಮಕರಣ

ಮಾಡಿದ್ದರು. ಜಾಲಿಹಳ್ಳಿ ಎಂಬುದು ಕಾಲಕ್ರಮೇಣ ಜಾಲಹಳ್ಳಿಯಾಗಿ ರೂಪಾಂತರ ಪಡೆದಿದೆ ಎಂದು ಸ್ಥಳನಾಮ ತಿಳಿಸುತ್ತದೆ.

ಜಯಶಾಂತಲಿಂಗೇಶ್ವರ ಸಂಸ್ಥಾನ ಬೃಹನ್ಮಠ: ಜಾಲಹಳ್ಳಿ ಗ್ರಾಮದ ಮಧ್ಯ ಭಾಗದಲ್ಲಿ ಶ್ರೀ ಜಯಶಾಂತಲಿಂಗೇಶ್ವರ ಮಹಾಸಂಸ್ಥಾನ ಬೃಹನ್ಮಠವು ಸ್ಥಾಪನೆಯಾಗಿ ಈ ಗ್ರಾಮದ ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ಬೆಳೆದಿದೆ. ಪಂಚ ಪೀಠಗಳಲ್ಲಿ ಒಂದಾದ ಕಾಶಿ ಪೀಠದ ಶಾಖಾ ಮಠವಾಗಿರುವ ಈ ಮಠವು ಪುತ್ರ ವರ್ಗದ ಪರಂಪರೆಯಲ್ಲಿ ಬಂದಿದೆ.

ಮಠ ಸ್ಥಾಪನೆ: ಆರನೆಯ ಶತಮಾದಲ್ಲಿ ಸ್ಥಾಪನೆಗೊಂಡ ಈ ಮಠವು ಶ್ರೀ ಜಗದಾರಾಧ್ಯ ವಿಶ್ವಮಾನ್ಯ ಪೂಜಾಭಿನವ ಮಲಯ ಜಯಶಾಂತಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪಿತವಾಗಿದೆ ಎಂದು ಹೇಳಲಾಗುತ್ತದೆ. ಈ ಗ್ರಾಮದ ನೈರುತ್ಯ ಭಾಗಕ್ಕಿರುವ ಬಕುಲ ಪರ್ವತದಲ್ಲಿ ಈ ಮಠದ ಸ್ಥಾಪಕರಾದ ಶ್ರೀ ಜಯಶಾಂತಲಿಂಗೇಶ್ವರ ಶಿವಯೋಗಿಗಳು ಅನುಷ್ಠಾನ ಕೈಗೊಂಡಿದ್ದರು. ಹಠಯೋಗ ಮತ್ತು ಶಿವಯೋಗವನ್ನು ಸಾಧಿಸಿಕೊಂಡ ಶಿವಯೋಗಿಗಳು ಈ ಕ್ಷೇತ್ರದ ಗವಿಯಲ್ಲಿ ಅನುಷ್ಠಾನಕ್ಕೆ ಕುಳಿತಿದ್ದು ಯಾರಿಗೂ ಗೋಚರವಾಗಿರಲಿಲ್ಲ.

ಈ ಪ್ರಾಂತ್ಯದ ಅರಸನಾದ ದೇಶವರ್ಮನ ಗೋವುಗಳು ಬಕುಲ ಪರ್ವತಕ್ಕೆ ಮೇಯಲು ಹೋಗುತ್ತಿದ್ದವು. ಇದರಲ್ಲಿ ಒಂದು ಹಸುವು ಪ್ರತಿದಿನ ಕರೆಯಬೇಕಾದ ಹಾಲನ್ನು ಕರೆಯುತ್ತಿರಲಿಲ್ಲವಂತೆ. ನಿತ್ಯ ಎಷ್ಟು ಹಾಲು ಕರೆದು ಬರುತ್ತಿತ್ತೋ, ಅಷ್ಟು ಮೌಲ್ಯದ ಹಣವನ್ನು ಹಸುವಿನ ಕೊರಳಿಗೆ ಕಟ್ಟಲಾಗಿರುತಿತ್ತಂತೆ. ಈ ವಿಚಾರ ಗೋವುಗಳ ಪರಿಚಾರಕರ ಗಮನಕ್ಕೆ ಬಂದಿತು. ಆಗ ಗೋಗಾಹಿ ಶಂಕರನಿಗೆ ತಾಕೀತು ಮಾಡಿದ ಪರಿಚಾರಕರು ಆ ಹಸುವಿನ ಚಲನ ವಲನಗಳನ್ನು ಗಮನಿಸುವಂತೆ ಹೇಳಿದರು. ಶಂಕರನು ಹಸುಗಳನ್ನು ಪರ್ವತಕ್ಕೆ ತಂದು ಬಿಟ್ಟವನು ಹಾಲು ಕರೆಯದ ಹಸುವನ್ನು ಗಮನಿಸತೊಡಗಿದ. ಹಸುವು ತನ್ನ ಹಿಂಡನ್ನು ಬಿಟ್ಟು ನೇರವಾಗಿ ಗವಿಯ ಕಡೆಗೆ ಹೊರಟಾಗ, ಶಂಕರನು ಹಸುವನ್ನು ಹಿಂಬಾಲಿಸಿಕೊಂಡು ಹೋದ. ಹಸುವು ಗವಿಯ ಮುಂದೆ ನಿಂತೊಡನೆ ಗವಿಯ ಒಳಗಿನಿಂದ ಒಂದು ಹುಲಿಯು ಬಂದು ಭಯಂಕರವಾಗಿ ಗರ್ಜಿಸಿತಂತೆ. ಈ ಗರ್ಜನೆಗೆ ಮರೆಯಲ್ಲಿದ್ದ ಶಂಕರ ಹೆದರಿ ನಿಸ್ತೇಜಗೊಂಡ. ನಂತರ ಘಟ ಸರ್ಪವೊಂದು ಬಂದು ಹಸುವಿನ ಕೆಚ್ಚಲಿನಿಂದ ಹಾಲನ್ನು ಕುಡಿಯತೊಡಗಿತಂತೆ. ಈ ದೃಶ್ಯವನ್ನು ನೋಡಿದ ಶಂಕರನು ಓಡಿ ಹೋಗಬೇಕೆಂದು ಅಂದುಕೊಂಡನಾದರೂ ನಂತರ ಹಸುವು ಇನ್ನೇನು ಮಾಡುತ್ತದೆ ಎಂದು ನೋಡುವ ಕಾತುರದಿಂದ ನೋಡುತ್ತಿದ್ದವನಿಗೆ, ಗವಿಯ ಒಳಗಿನಿಂದ ಮಹಾ ತೇಜೋಮೂರ್ತಿ ಗಳಾದ ಶಿವಯೋಗಿಗಳ ಆಗಮನ ಗೋಚರಿಸಿತು. ಮತ್ತೊಮ್ಮೆ ಪರಮಾಶ್ಚರ್ಯಗೊಂಡ ಶಂಕರನು ತದೇಕ ಚಿತ್ತನಾಗಿ ಈ ದೃಶ್ಯವನ್ನು ಗಮನಿಸತೊಡಗಿದನಂತೆ. ಶಿವಯೋಗಿಗಳು ಹಸುವಿನ ಕೆಚ್ಚಲಿನಿಂದ ಹಾಲನ್ನು ಕರೆದು ಕುಡಿದು ಹಸುವಿನ ಕೊರಳಿಗೆ ಹಾಲಿನ ವೆಚ್ಚವನ್ನು ಕಟ್ಟಿ ನಮಸ್ಕರಿಸಿ ಕಳುಹಿಸಿಕೊಟ್ಟರಂತೆ.

ಹಸುವು ನೆಮ್ಮದಿಯಿಂದ ತನ್ನ ಹಿಂಡಿನ ಕಡೆಗೆ ಹಿಂದಿರುಗಿತಂತೆ. ಶಂಕರನು ಸಹ ಹಿಂದಿರುಗುವಾಗ ಶಿವಯೋಗಿಗಳ ದೃಷ್ಟಿಗೆ ಬಿದ್ದು ಅವರ ಆಶೀರ್ವಾದ ಪಡೆದು ಹೊರಡುವಾಗ ಅವರು ಎರಡು ವಿಭೂತಿ ಘಟ್ಟಿಗಳನ್ನು ನೀಡಿ,'ಇದನ್ನು ಮನೆಗೆ ಹೋದ ಮೇಲೆ ಭಕ್ತಿಯಿಂದ ಪೂಜಿಸಿ ನಂತರ ತೆರೆದು ನೋಡು. ಅಲ್ಲಿಯ ತನಕ ನೋಡದಿರು'ಎಂದು ಎಚ್ಚರಿಕೆ ಕೊಟ್ಟುಕಳಿಸಿದರಂತೆ. ಅಲ್ಲದೆ ಶಂಕರನು ಹೊರಡುವ ಮೊದಲು 'ಈ ವಿಷಯವನ್ನು ಹೆಮ್ಮೆಗಾಗಿಯೋ, ಹಮ್ಮಿಗಾಗಿಯೋ ಯಾರ ಮುಂದಾದರೂ ಹೇಳಿದೆಯಾದರೆ ನಿನಗೆ ಕೇಡು' ಎಂದು ಮತ್ತೊಮ್ಮೆ ಎಚ್ಚರಿಕೆ ನೀಡಿ ಕಳಿಸಿಕೊಟ್ಟರಂತೆ. ಶಂಕರ ಕುತೂಹಲ ತಡೆಯಲಾರದೆ ದಾರಿ ಮಧ್ಯೆದಲ್ಲಿ ಶಿವಯೋಗಿಗಳು ಕೊಟ್ಟ ಕಟ್ಟನ್ನು ಬಿಚ್ಚಿ ನೋಡಿ ಕಣ್ಣನ್ನು ಕಳೆದುಕೊಳ್ಳುತ್ತಾನಂತೆ. ಕಾಡಿನಲ್ಲಿ ಕಣ್ಣನ್ನು ಕಳೆದುಕೊಂಡ ಶಂಕರ ಅನಾಥನಾಗಿ ಅಲೆಯುತ್ತಿರುತ್ತಾನಂತೆ.

ಇತ್ತ ಹಸುಗಳು ಬಂದರೂ ಗೋಗಾಹಿ ಶಂಕರನು ಬರದೇ ಇದ್ದುದನ್ನು ಗಮನಿಸಿದ ಗೋವುಗಳ ಪರಿಚಾರಕರು ಕಳವಳ ಪಡುತ್ತಾರೆ. ಈ ವಿಷಯ ದೊರೆಗಳ ತನಕ ಹೋಗಿ, ದೊರೆಯ ಆಜ್ಞೆಯಂತೆ ಅರಮನೆಯಿಂದ ಶಂಕರನನ್ನು ಹುಡುಕಲು ಸೇವಕರು ಬಕುಲ ಗುಡ್ಡಕ್ಕೆ ಬರುತ್ತಾರಂತೆ. ಆಗ ಕಾಡಿನಲ್ಲಿ ಕಣ್ಣುಗಳನ್ನು ಕಳೆದುಕೊಂಡು ನೋವನ್ನು ಅನುಭವಿಸುತ್ತಿದ್ದ ಶಂಕರನು ಗೋಚರವಾಗಿ ಸೇವಕರು ಅರಮನೆಗೆ ಕರೆ ತರುತ್ತಾರಂತೆ. ಶಂಕರನಿಂದ ದೇಶವರ್ಮನು ಸವಿವರವಾಗಿ ಶಿವಯೋಗಿಗಳ

ಬಗ್ಗೆ ವಿಚಾರವನ್ನು ತಿಳಿದುಕೊಂಡನಂತೆ. ಶಿವಯೋಗಿಗಳು ಈ ನಾಡಿನಲ್ಲಿ ನೆಲಸಿದ್ದರೂ ಅವರ ದರ್ಶನವನ್ನೂ ಪಡೆಯಲಾಗದಿದ್ದಕ್ಕೆ ದೇಶವರ್ಮನು ಚಿಂತಿಸಿದನಂತೆ. ಮರುದಿನ ಪರಿವಾರ ಸಮೇತ ಗುರುಗಳ ದರ್ಶನಕ್ಕೆಂದು ತನ್ನ ಮಡದಿ ಮಂದಾಕಿನಿಯ ಸಮೇತ ಗವಿಯ ಬಳಿ ಬಂದು ದಿನವಿಡೀ ಕಾದರೂ ಗುರುಗಳ ದರ್ಶನವಾಗದಿದ್ದಕ್ಕೆ ದೇಶವರ್ಮನು ಅನ್ನ ನೀರನ್ನು ಸ್ವೀಕರಿಸದೆ ಧ್ಯಾನದಲ್ಲಿ ಕುಳಿತುಕೊಳ್ಳುತ್ತಾನಂತೆ. ಆಗ ಶಿವಯೋಗಿಗಳು ದರ್ಶನವಿತ್ತು ನಾಡಿಗೆ ಬರಲು ಒಪ್ಪಿದರಂತೆ.

ಮಠಸ್ಥಾಪನೆಗೆ ನಿರ್ಣಯ: ಪ್ರಥಮವಾಗಿ ಹುಲಿ ಮತ್ತು ಘಟಸರ್ಪವನ್ನು ಕರೆದುಕೊಂಡು ಹೋಗಿ, ನಂತರ ಮಠ ಸ್ಥಾಪನೆಗೆ ಸ್ಥಳ ನಿರ್ಣಯಗೊಂಡ ಮೇಲೆ ನಾವು ಬರುವುದಾಗಿ ಶಿವಯೋಗಿಗಳು ಅಪ್ಪಣೆ ಮಾಡಿ ರಾಜಪರಿವಾರವನ್ನು ಕಳಿಸಿಕೊಟ್ಟರಂತೆ. ಶಿವಯೋಗಿಗಳ ಅಪ್ಪಣೆಯ ಪ್ರಕಾರ ಘಟಸರ್ಪ ಮತ್ತು ಹುಲಿಯನ್ನು ನಾಡಿಗೆ ಕರೆತಂದರಂತೆ. ಹುಲಿಯು ಮೊದಲ ಇಟ್ಟ ಹೆಜ್ಜೆಯು ಬಕಲು ಗುಡ್ಡದಿಂದ ನಾಡಿಗೆ ಪ್ರವೇಶಿಸುವ ದ್ವಾರವಾಗಿ, ಎರಡನೆಯ ಹೆಜ್ಜೆ ಇಟ್ಟ ಜಾಗವೇ ಮಠವಾಗಿ, ಮೂರನೆಯ ಹೆಜ್ಜೆ ಇಟ್ಟ ಜಾಗವೇ ಮಠದ ವ್ಯಾಪ್ತಿಯ ಗಡಿಯಾಗಿ ರೂಪುಗೊಂಡಿತ್ತಂತೆ. ನಂತರ ಶಿವಯೋಗಿಗಳು ಕಾರ್ತೀಕ ಶುದ್ಧ ಪಂಚಮಿಯಂದು ನಾಡಿಗೆ ಬಂದು ಮಠ ಸ್ಥಾಪನೆಯನ್ನು ವಿಧಿವತ್ತಾಗಿ ಮಾಡಿ, ಮಠದ ವ್ಯಾಪ್ತಿಯ ಗಡಿಯಲ್ಲಿ ಕಟ್ಟೆಯನ್ನು ನಿರ್ಮಿಸಿ ಇದು 'ಕಾಯಕದ ಕಟ್ಟೆಯಾಗಬೇಕೇ ವಿನಾ ಸೋಮಾರಿಗಳ ಕಟ್ಟೆಯಾಗಬಾರದು' ಎಂದು ಈ ಕಟ್ಟೆಗೆ ಕಸುಬಿನಕಟ್ಟೆ ಎಂದು ನಾಮಕರಣ ಮಾಡಿದರಂತೆ. ಆರನೆಯ ಶತಮಾನದಲ್ಲಿ ನಾಮಕರಣಗೊಂಡ'ಕಸುಬಿನಕಟ್ಟೆ'ಇಂದು ರೂಪಾಂತರ ಪಡೆದು 'ಕಸಬಾಕಟ್ಟೆ'ಎಂದು ಕರೆಯಲ್ಪಡುತ್ತಿದೆ. ಈ ರೀತಿ ಎಂಟು ಹಳ್ಳಿಗಳ ಮಧ್ಯೆ ಸ್ಥಾಪನೆಗೊಂಡ ಮಠವು ಜಾಲಹಳ್ಳಿಯು ಉದಯವಾಗಲು ಕಾರಣವಾಯಿತಂತೆ. ಶಿವಯೋಗಿಗಳು ಜಾಲಹಳ್ಳಿಯಲ್ಲಿ ಮಠವನ್ನು ಸ್ಥಾಪಿಸಿ ಮೊದಲು ದರ್ಶನಕೊಟ್ಟ ಶಂಕರನನ್ನು ತಮ್ಮ ಶಿಷ್ಯನನ್ನಾಗಿ ಪಡೆದು ನಿತ್ಯ ಶಿವಾನುಭವಗೋಷ್ಠಿಯನ್ನು ನಡೆಸಿದ ಧರ್ಮಪ್ರಸಾರ ಕೈಗೊಂಡರು. ಕೆಲವು ದಿನಗಳ ಕಾಲ ಇಲ್ಲಿ ನೆಲಸಿದ ಗುರುಗಳು ಪುನಃ ಶ್ರೀ ಶಂಕರ ಮತ್ತು ಶ್ರೀ ಚಂದ್ರಶರ್ಮನೆಂಬ ಶಿಷ್ಯರ ಜೊತೆಗೆ ಲೋಕಸಂಚಾರ ಕೈಗೊಂಡು ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ ಅನೇಕ ಪವಾಡಗಳನ್ನು ಮಾಡಿ ಲೋಕೋದ್ಧಾರವನ್ನು ಮಾಡಿ ಪುನಃ ಜಾಲಹಳ್ಳಿಯ ಮಠಕ್ಕೆ ಆಗಮಿಸಿ, ಮಠದ ಪರಂಪರೆಯು ನಿರಂತರವಾಗಿ ನಡೆಯಲು ಆಶೀರ್ವದಿಸಿ ಜೀವಂತ ಸಮಾಧಿಯಾಗುತ್ತಾರೆ. ನಂತರ ಶ್ರೀ ಶಂಕರ ಮತ್ತು ಶ್ರೀ ಚಂದ್ರಶರ್ಮರು ಗುರುಗಳ ಜೊತೆಯಲ್ಲಿಯೇ ಲಿಂಗೈಕ್ಯರಾಗುತ್ತಾರೆ.

ಪರಂಪರೆ: ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿರುವ ಜಾಲ ಹಳ್ಳಿಯ ಜಗದಾರಾಧ್ಯ ಶ್ರೀ ಜಯಶಾಂತಲಿಂಗೇಶ್ವರ ಮಹಾ ಸಂಸ್ಥಾನ ಬೃಹನ್ಮಠಕ್ಕೆ ಕಲಕೇರಿಯ ಜಾಲಹಳ್ಳಿ ಮಠದ ವಂಶಸ್ಥರನ್ನೇ ಮಠದ ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡುವ ಪರಿಪಾಠ ಬೆಳೆದು ಬಂದಿದೆ. ಜಾಲಹಳ್ಳಿ ಮಠದಲ್ಲಿ ಈವರೆಗೆ ಒಟ್ಟು ಇಪ್ಪತ್ತಾರು ಜನ ಗುರುಗಳು ಆಡಳಿತ ನಡೆಸಿ ಮಠವನ್ನು ಅಭಿವೃದ್ಧಿಗೊಳಿಸಿದ್ದಾರೆ. ಮಠದ ಪರಂಪರೆಯ ಪ್ರಕಾರ ಉತ್ತರಾಧಿಕಾರಿಗಳಾಗಿ ಆಯ್ಕೆಗೊಂಡ ನಂತರ ಪಟ್ಟಾಧಿಕಾರದ ಸಂದರ್ಭದಲ್ಲಿ ತಮ್ಮ ಪೂರ್ವಾಶ್ರಮದ ಹೆಸರನ್ನು ತ್ಯಜಿಸಿ ಪರಂಪರೆಯ ಅನುಗುಣವಾಗಿ ಅನುಕ್ರಮಣಿಕೆಯಲ್ಲಿ 'ದೇವಮಾನ್ಯ ಯೋಗಾಭಿನವ', 'ವಿದ್ಯಾಮಾನ್ಯ ಶಿವಾಭಿನವ','ವಿಶ್ವಮಾನ್ಯ ಪೂಜಾಭಿನವ'ಎಂಬ ಬಿರುದಾವಳಿಯ ಜೊತೆಗೆ ಮೂಲಗುರುಗಳಾದ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳ ಹೆಸರನ್ನು ಅಭಿದಾನ ಪಡೆದು ಪಟ್ಟಾಧಿಕಾರಕ್ಕೆ ಬರಲಾಗುತ್ತಿದೆ.

ಮಠದ ಪರಂಪರೆಯ ಇಪ್ಪತ್ತೈದನೆಯ ಗುರುಗಳಾಗಿ ಶ್ರೀ ಬಸವಲಿಂಗರು ದೇವಮಾನ್ಯ ಯೋಗಾಭಿನವ 'ಶ್ರೀಜಯ ಶಾಂತಲಿಂಗೇಶ್ವರ ಶಿವಾಚಾರ್ಯ ಸ್ವಾಮಿ'ಗಳೆಂದು ಅಭಿದಾನ ಪಡೆದು ಅಧಿಕಾರಕ್ಕೆ ಬಂದು ಮಠವನ್ನು ಬೆಳೆಸಿದ್ದಾರೆ. ಇವರು ೧೯೯೧ರ ಮಾರ್ಚ್ ಮೂವತ್ತೊಂದರಂದು ಗುರುವಾರ ಸಂಜೆ ಲಿಂಗೈಕ್ಯರಾಗಿದ್ದಾರೆ. ಇವರ ತರುವಾಯ ಶ್ರೀವಿದ್ಯಾ ನಂದರು, ವಿದ್ಯಾಮಾನ್ಯ ಶಿವಾಭಿನವ ಶ್ರೀ ಜಯಶಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು ಈಗ ಅಧಿಕಾರಕ್ಕೆ ಬಂದಿದ್ದಾರೆ. ಇವರ ಕರ್ತೃತ್ವದ ಶಕ್ತಿಯ ಫಲವಾಗಿ ಮಠವು ಸರ್ವಾಂಗೀಣವಾಗಿ ಅಭಿವೃದ್ಧಿ ಹೊಂದಿದೆ. ಈ ತಾಲ್ಲೂಕಿನಲ್ಲಿ ಪವಿತ್ರ ಸ್ಥಳವಾಗಿರುವ 'ಅಣೆಮಲ್ಲೇಶ್ವರ'ವೆಂಬ ಕ್ಷೇತ್ರವಿದ್ದು ಈ ಸ್ಥಳಕ್ಕೆ ಸಾವಿರಾರು ಭಕ್ತರು ಆಗಮಿಸುತ್ತಾರೆ. ಮಠದ ವತಿಯಿಂದ ಇಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು 'ಜಯಶಾಂತತೀರ್ಥ'ಎಂದು ನಾಮಕರಣ ಮಾಡಿದ್ದಾರೆ. ಪ್ರತಿ ವರ್ಷ ಜನವರಿಯಲ್ಲಿ ಮೂರು ದಿನಗಳ ಕಾಲ ಧರ್ಮ ಜಾಗೃತಿಯ ಕಾರ್ಯಕ್ರಮವನ್ನು ಹಮ್ಮಿಕೊಂಡು ಈ ಕ್ಷೇತ್ರವನ್ನು ಅಭಿವೃದ್ಧಿಪಡಿಸಿದ್ದಾರೆ. ಈ ರೀತಿ

ಧರ್ಮ ಮತ್ತು ಸಮಾಜವನ್ನು ಬೆಸೆಯು ವಂತಹ ಅನೇಕ ಕಾರ್ಯಕ್ರಮಗಳನ್ನು ರೂಪಿಸಿ, ಜನ ಸಾಮಾನ್ಯರಿಗೆ ತಲುಪುವಂತೆ ಗುರುಗಳು ಶ್ರಮವಹಿಸಿದ್ದಾರೆ. ಧಾರ್ಮಿಕ ಮತ್ತು ಸಾಮಾಜಿಕ ಪ್ರಗತಿಯ ಜೊತೆಗೆ ಅನಕ್ಷರತೆಯನ್ನು ಹೋಗಲಾಡಿಸಿ ಜ್ಞಾನದ ಜ್ಯೋತಿಯನ್ನು ಬೆಳಗಿಸಬೇಕು ಎಂಬ ಉದ್ದೇಶವನ್ನು ಹೊಂದಿರುವ ಗುರುಗಳು, ಶ್ರೀ ಜಯಶಾಂತಲಿಂಗೇಶ್ವರ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ ಜಗದಾರಾಧ್ಯ ಶ್ರೀ ಜಯಶಾಂತಲಿಂಗೇಶ್ವರ, ಜೀವನಗಂಗಾ ಹಿರಿಯ ಪ್ರಾಥಮಿಕ ಕನ್ನಡ ಪಾಠಶಾಲೆ ಹಾಗೂ ಪ್ರೌಢಶಾಲೆಯನ್ನು ಪ್ರಾರಂಭಿಸಿದ್ದಾರೆ. ಬಸವನ ಬಾಗೇವಾಡಿ ತಾಲ್ಲೂಕಿನ ವಡವಡಿಗೆಯಲ್ಲಿ ಜಾಲಹಳ್ಳಿ ಶ್ರೀ ಜಯಶಾಂತಲಿಂಗೇಶ್ವರ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಿದ್ದಾರೆ. ಈ ರೀತಿ ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಅವಿರತವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಗುರುಗಳು ಮಠವನ್ನು ಪರಂಪರೆಗೆ ಅನುಗುಣವಾಗಿ ಮುನ್ನಡೆಸುತ್ತಾ ಅಭಿವೃದ್ಧಿಯ ಹರಿಕಾರರಾಗಿ ಹೆಸರು ಪಡೆದಿದ್ದಾರೆ.

ಬೆಳೆದ ಮಠದ ಪರಂಪರೆ:

ಮೂಲ ಹೆಸರು	
೧. ಕರ್ತೃ ಗುರುಗಳು	ಶ್ರೀ ಜಗದಾರಾಧ್ಯ.ವಿಶ್ವಮಾನ್ಯ.ಮಲಯಶ್ರೀಜಯಶಾಂತಲಿಂಗೇಶ್ವರಶಿವಾಚಾರ್ಯಸ್ವಾಮಿಗಳು
೨. ಶ್ರೀ ರಾಜಶೇಖರರು	ಶ್ರೀ ದೇವಮಾನ್ಯ. ಯೋಗಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೩. ಶ್ರೀ ಪುರುಷೋತ್ತಮರು	ಶ್ರೀ ವಿದ್ಯಾಮಾನ್ಯ, ಶಿವಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೪. ಶ್ರೀ ಸಿದ್ಧೇಶ್ವರರು	ಶ್ರೀ ವಿಶ್ವಮಾನ್ಯ. ಪೂಜಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೫. ಶ್ರೀ ಜ್ಞಾನದೇವರು	ಶ್ರೀ ದೇವಮಾನ್ಯ, ಯೋಗಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೬. ಶ್ರೀ ಚಂದ್ರಶೇಖರರು	ಶ್ರೀ ವಿದ್ಯಾಮಾನ್ಯ, ಶಿವಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೭. ಶ್ರೀ ಪ್ರಭಾಕರರು	ಶ್ರೀ ವಿಶ್ವಮಾನ್ಯ, ಪೂಜಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೮. ಶ್ರೀ ಸಿದ್ದೇಶ್ವರರು	ಶ್ರೀ ದೇವಮಾನ್ಯ, ಯೋಗಾಭಿನವ. ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೯. ಶ್ರೀ ಶಿವಲಿಂಗೇಶ್ವರರು	ಶ್ರೀ ವಿದ್ಯಾಮಾನ್ಯ, ಶಿವಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೧೦. ಶ್ರೀ ಗುರುಪಾದರು	ಶ್ರೀ ವಿಶ್ವಮಾನ್ಯ, ಪೂಜಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೧೧. ಶ್ರೀ ಸೋಮಶೇಖರರು	ಶ್ರೀ ದೇವಮಾನ್ಯ, ಯೋಗಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೧೨. ಶ್ರೀ ಸಿದ್ಧೇಶ್ವರರು	ಶ್ರೀ ವಿದ್ಯಾಮಾನ್ಯ, ಶಿವಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೧೩. ಶ್ರೀ ಷಡಕ್ಷರರು	ಶ್ರೀ ವಿಶ್ವಮಾನ್ಯ, ಪೂಜಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೧೪. ಶ್ರೀ ಪೂರ್ಣಪ್ರಜ್ಞರು	ಶ್ರೀ ದೇವಮಾನ್ಯ, ಯೋಗಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೧೫. ಶ್ರೀ ರಾಜಶೇಖರರು	ಶ್ರೀ ವಿದ್ಯಾಮಾನ್ಯ. ಶಿವಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೧೬. ಶ್ರೀ ವೀರಭದ್ರರು	ಶ್ರೀ ವಿಶ್ವಮಾನ್ಯ. ಪೂಜಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೧೭. ಶ್ರೀ ನಾಗದೇವರು	ಶ್ರೀ ದೇವಮಾನ್ಯ, ಯೋಗಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೧೮. ಶ್ರೀ ಶಾಂತದೇವರು	ಶ್ರೀ ವಿದ್ಯಾಮಾನ್ಯ, ಶಿವಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೧೯. ಶ್ರೀ ಸಿದ್ಧೇಶ್ವರರು	ಶ್ರೀ ವಿಶ್ವಮಾನ್ಯ, ಪೂಜಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೨೦. ಶ್ರೀ ರಾಜಶೇಖರರು	ಶ್ರೀ ದೇವಮಾನ್ಯ, ಯೋಗಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೨೧. ಶ್ರೀ ವಿಜಯರು	ಶ್ರೀ ವಿದ್ಯಾಮಾನ್ಯ. ಶಿವಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೨೨. ಶ್ರೀ ಅನಂತರು	ಶ್ರೀ ವಿಶ್ವಮಾನ್ಯ, ಪೂಜಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೨೩. ಶ್ರೀ ಶಾಂತರು	ಶ್ರೀ ದೇವಮಾನ್ಯ, ಯೋಗಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೨೪. ಶ್ರೀ ಸುಜ್ಞಾನಿಗಳು	ಶ್ರೀ ವಿದ್ಯಾಮಾನ್ಯ, ಶಿವಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೨೫. ಶ್ರೀ ಗಂಗಾಧರರು	ಶ್ರೀ ವಿಶ್ವಮಾನ್ಯ, ಪೂಜಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು

೨೬.ಶ್ರೀ ಚಂದ್ರಶೇಖರರು — ಶ್ರೀ ದೇವಮಾನ್ಯ, ಯೋಗಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೨೭.ಶ್ರೀ ಹರೀಶ್ವರರು — ಶ್ರೀ ವಿದ್ಯಾಮಾನ್ಯ, ಶಿವಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೨೮.ಶ್ರೀ ವಿಶ್ವರಾಧ್ಯರು — ಶ್ರೀ ವಿಶ್ವಮಾನ್ಯ, ಪೂಜಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೨೯ ಶ್ರೀ ಸಿದ್ದೇಶ್ವರರು — ಶ್ರೀ ದೇವಮಾನ್ಯ, ಯೋಗಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು
೩೦.ಶ್ರೀ ಗುರುದೇವರು — ಶ್ರೀ ವಿದ್ಯಾಮಾನ್ಯ, ಶಿವಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೩೧.ಶ್ರೀ ಗುರುಪಾದರು — ಶ್ರೀ ವಿಶ್ವಮಾನ್ಯ, ಪೂಜಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೩೨.ಶ್ರೀ ಶಿವಪಾದರು — ಶ್ರೀ ದೇವಮಾನ್ಯ, ಯೋಗಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೩೩.ಶ್ರೀ ಪಂಚಾಕ್ಷರರು — ಶ್ರೀ ವಿದ್ಯಾಮಾನ್ಯ, ಶಿವಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೩೪.ಶ್ರೀ ಶಾಂತರು — ಶ್ರೀ ವಿಶ್ವಮಾನ್ಯ, ಪೂಜಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೩೫.ಶ್ರೀ ಬಸವಲಿಂಗರು — ಶ್ರೀ ದೇವಮಾನ್ಯ, ಯೋಗಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು
೩೬.ಶ್ರೀ ವಿದ್ಯಾನಂದರು — ಶ್ರೀ ವಿದ್ಯಾಮಾನ್ಯ, ಶಿವಾಭಿನವ ಶ್ರೀ ಜಯಶಾಂತಲಿಂಗೇಶ್ವರ ಶಿವಾಚಾರ್ಯಸ್ವಾಮಿಗಳು

ವೀರಶೈವರಾದ ಬ್ರಾಹ್ಮಣರು: ಈ ಮಠದ ಪರಂಪರೆಯು ವಿಶಿಷ್ಟತೆಯಿಂದ ಕೂಡಿದೆ. ಸಮಾಜದ ಎಲ್ಲಾ ವರ್ಗದ ಜನರಿಗೆ ಬೇಕಾದಂತಹ ಮಠವಾಗಿ ಬೆಳೆದಿದೆ. ಮಠದ ಪರಂಪರೆಯ ಇಪ್ಪತ್ತಾರು ಜನ ಗುರುಗಳಲ್ಲಿ ಐದು ಜನರು ಸ್ಮಾರ್ಥ ಬ್ರಾಹ್ಮಣರು ಮತ್ತು ವೈಷ್ಣವ ಬ್ರಾಹ್ಮಣರು ಈ ಮಠದ ಪರಂಪರೆಗೆ ಒಲಿದು ವೀರಶೈವ ಧರ್ಮವನ್ನು ಸ್ವೀಕರಿಸಿ ಪಟ್ಟಾಧಿಕಾರವನ್ನು ಪಡೆದುಕೊಂಡಿದ್ದಾರೆಂಬುದು ಬೇರೆಲ್ಲಿಯೂ ಸಿಗದ ಒಂದು ವಿಶಿಷ್ಟ ದಾಖಲೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಕರ್ತೃಗದ್ದುಗೆ ಹಾಗೂ ಉಳಿದ ಗದ್ದುಗೆಗಳಿಗೆ ನಿತ್ಯ ರುದ್ರಾಭಿಷೇಕಪೂಜೆ, ಶ್ರಾವಣಮಾಸದಲ್ಲಿ ಒಂದು ತಿಂಗಳು ಶಿವ ಪುರಾಣ, ಸರ್ವಧರ್ಮ ಚಿಂತನ ಮಂಥನ ಗೋಷ್ಠಿಗಳು, ಶರಣರ ತತ್ತ್ವೋಪದೇಶ ನಡೆಯುತ್ತದೆ. ಭಾದ್ರಪದ ಶುದ್ಧ ಪ್ರತಿಪದೆಯಂದು ಕರ್ತೃ ಗುರುಗಳ ಅಡ್ಡಪಲ್ಲಕ್ಕಿ ಉತ್ಸವ ನಡೆಯುತ್ತಿದೆ. ಈ ಸಂದರ್ಭದಲ್ಲಿ ಸಾವಿರಾರು ಜನ ಭಕ್ತರು ಪಾಲ್ಗೊಳ್ಳುತ್ತಾರೆ. ರಥೋತ್ಸವದ ನಂತರ ಗಣಾರಾಧನೆ ಮತ್ತು ಅನ್ನ ಸಂತರ್ಪಣೆ ಕಾರ್ಯವು ನಡೆಯುತ್ತದೆ. ಪ್ರತಿ ತಿಂಗಳು ಹುಣ್ಣಿಮೆ, ಶಿವರಾತ್ರಿ ಸಂದರ್ಭಗಳಲ್ಲಿ ಸಹಸ್ರ ಬಿಲ್ವಾರ್ಚನೆ, ಮಂಗಳಾರಾತಿ ಕಾರ್ಯಕ್ರಮ, ಸಾಮೂಹಿಕ ಇಷ್ಟಲಿಂಗ ಪೂಜೆಯನ್ನು ವ್ಯವಸ್ಥೆಗೊಳಿಸಲಾಗುತ್ತಿದೆ.

ಮಠದಲ್ಲಿ ನಿತ್ಯ ಅನ್ನದಾಸೋಹ ನಡೆಯುತ್ತಿದೆ. ಧರ್ಮ ಪ್ರಚಾರದ ಹಿನ್ನೆಲೆಯಲ್ಲಿ ಮಠದ ವತಿಯಿಂದ ಶ್ರೀಜಗದಾರಾಧ್ಯ ಜಯಶಾಂತಲಿಂಗೇಶ್ವರ ಪ್ರಕಾಶನ ಸಂಸ್ಥೆಯನ್ನು ಪ್ರಾರಂಭಿಸಿ ಈ ಮೂಲಕ 'ಶ್ರೀ ಜಯಶಾಂತವಿಜಯ ಪುರಾಣ'ಎಂಬ ಗ್ರಂಥವನ್ನು ಹಾಗೂ ಇತರೆ ಧಾರ್ಮಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಈ ರೀತಿ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಹಿತ್ಯಿಕ ವಿಚಾರಗಳಿಗೆ ಸ್ಪಂದಿಸಿ ಗುರುಗಳು ಮಠವನ್ನು ಮುನ್ನಡೆಸಿದ್ದಾರೆ.

ವಿಳಾಸ: ಶ್ರೀ ಜಯಶಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು ಶ್ರೀ ಜಯಶಾಂತಲಿಂಗೇಶ್ವರ ಮಹಾಸಂಸ್ಥಾನ ಬೃಹನ್ಮಠ, ಜಾಲಹಳ್ಳಿ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ.
ಆಧಾರ: 'ಶ್ರೀ ಜಯಶಾಂತ ವಿಜಯ' - ಬಿ. ಶಿವಶಂಕರ್

ದೇವದುರ್ಗ

ರಾಯಚೂರು ಜಿಲ್ಲೆಯ ದೇವದುರ್ಗ ಪಟ್ಟಣವು, ರಾಯಚೂರು ಜಿಲ್ಲಾ ಕೇಂದ್ರದಿಂದ ಪೂರ್ವಕ್ಕೆ ನಲವತ್ತು ಕಿ.ಮೀ ದೂರದಲ್ಲಿದೆ. ಈ ಪಟ್ಟಣವು ತಾಲ್ಲೂಕು ಕೇಂದ್ರ ಸ್ಥಳವಾಗಿದೆ. ಈ ಪಟ್ಟಣದಲ್ಲಿ ಪುರಾತನ ಕಾಲದಲ್ಲಿ ಒಟ್ಟು ಇಪ್ಪತ್ತೊಂದು ಮಠಗಳು ಸ್ಥಾಪನೆಯಾಗಿದ್ದವು ಎಂದು ಹೇಳಲಾಗುತ್ತದೆ. ಇವುಗಳೆಂದರೆ

ಕೋಟೆ ಒಳಗೆ ಸ್ಥಾಪನೆಯಾದ ಮಠಗಳು:

ಶ್ರೀ ಶಿಖರ ಮಠ — ಶ್ರೀ ಘೋಷಿ ಮಠ — ಶ್ರೀ ಶಿವಶಂಕರ ಮಠ

ಶ್ರೀ ಕರಡಿಗುಡ್ಡ ಮಠ ಶ್ರೀ ಕಂಬಳಿಯಪ್ಪನ ಮಠ ಶ್ರೀ ಚಿಕ್ಕಯ್ಯನ ಮಠ (ಶ್ರೀಕುಂಬಾರಗೇರಿಮಠ)

ಕೋಟೆ ಹೊರಗೆ ಸ್ಥಾಪನೆಯಾದ ಮಠಗಳು:

ಶ್ರೀ ಸಿರಿನಾಥಪ್ಪನ ಮಠ	ಶ್ರೀ ಫಲಹಾರಿ ಮಠ	ಶ್ರೀ ಶಿವಲಿಂಗಯ್ಯ ಮಠ
ಶ್ರೀ ಯಳಗಯ್ಯನ ಮಠ	ಶ್ರೀ ಭಿಕ್ಷುಕಯ್ಯನ ಮಠ	ಶ್ರೀ ಪೇಟೆ ಮಠ
ಶ್ರೀ ಪತ್ರೆ ಮಠ	ಶ್ರೀ ಮಟ್ಟಿ ಮಠ	ಶ್ರೀ ಗಣಾಚಾರಿ ಮಠ
ಶ್ರೀ ಸ್ಥಾವರ ಮಠ	ಶ್ರೀ ಮಹಾಂತಿನ ಮಠ	ಶ್ರೀ ಮಠಪತಿ ಮಠ
ಶ್ರೀ ದೊಡ್ಡಂಬಳಿ ಮಠ	ಶ್ರೀ ಜಾಗಟೆ ಮಠ	ಶ್ರೀ ಕಂಠೀ ಮಠ

ಈ ರೀತಿ ಒಟ್ಟು ಇಪ್ಪತ್ತೊಂದು ಮಠಗಳು ಸ್ಥಾಪನೆಯಾಗಿ ವೀರಶೈವ ಧರ್ಮವನ್ನು ಉಚ್ಛ್ರಾಯ ಸ್ಥಿತಿಯಲ್ಲಿ ಬೆಳಸಿವೆ. ಈ ಮಠಗಳಲ್ಲಿ ಈಗ ಶಿಖರಮಠದಲ್ಲಿ ಮಾತ್ರ ಮಠಾಧೀಶರಿದ್ದು ಧಾರ್ಮಿಕ ಕಾರ್ಯಗಳು ನಡೆಯುತ್ತಿವೆ. ಉಳಿದಂತೆ ಇಪ್ಪತ್ತು ಮಠಗಳಲ್ಲಿ ಮಠಾಧೀಶರಿಲ್ಲದೆ ಕೇವಲ ಗದ್ದುಗೆ ಪೂಜೆಗಷ್ಟೇ ಸೀಮಿತಗೊಂಡಿವೆ.

ಸಿದ್ಧರಾಮೇಶ್ವರ ಶಿಖರಮಠ: ದೇವದುರ್ಗದ ಮಧ್ಯ ಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಸಿದ್ಧರಾಮೇಶ್ವರ ಶಿಖರಮಠವು ಹನ್ನೆರಡನೆಯ ಶತಮಾನಕ್ಕೂ ಪೂರ್ವದಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಉಜ್ಜಯಿನಿ ಪೀಠದ ಶಾಖಾ ಮಠವಾದ ಈ ಮಠವು ಶಿಷ್ಯ ವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಈ ಮಠವು ಪರಂಪರೆಯ ಐದನೆಯ ಗುರುಗಳಾದ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮಿಗಳಿಂದ ಹೆಚ್ಚು ಹೆಸರು ಪಡೆಯಿತು. ಇವರು ಶ್ರೀಶೈಲದ ಶಿಖರದಲ್ಲಿ ತಪಸ್ಸನ್ನು ಆಚರಿಸಿ ಶಿವಯೋಗ ಸಿದ್ಧಿಯನ್ನು ಗಳಿಸಿಕೊಂಡು ಬಂದವರಾಗಿದ್ದರು. ಇಂತಹ ಮಹಾನ್ ಯೋಗಿಗಳು ಬಂದು ನೆಲಸಿ ಈ ಮಠದ ಅಧಿಕಾರವನ್ನು ವಹಿಸಿಕೊಂಡು ಹೆಚ್ಚು ಪ್ರಸಿದ್ಧಿಗೆ ತಂದ ಕಾರಣ ಈ ಮಠಕ್ಕೆ 'ಶ್ರೀ ಸಿದ್ಧರಾಮೇಶ್ವರ ಶಿಖರಮಠ'ವೆಂದು ಹೆಸರು ಬಂದಿದೆ. ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮಿಗಳು ಶ್ರೀಶೈಲದಿಂದ ಬಂದು ಈ ಮಠದ ಅಧಿಕಾರವನ್ನು ವಹಿಸಿಕೊಂಡು ಇಲ್ಲಿ ನೆಲೆಗೊಂಡ ಮೇಲೆ ಈ ಭಾಗದ ಧಾರ್ಮಿಕ ಕಾರ್ಯಗಳು ಹೆಚ್ಚು ಚುರುಕುಗೊಂಡವಂತೆ. ಭಕ್ತರು ಸನ್ಮಾರ್ಗದಲ್ಲಿ ನಡೆಯತೊಡಗಿದರು. ಈ ರೀತಿ ಸುಭಿಕ್ಷವನ್ನು ಕಂಡ ನಾಡು ಮಠಕ್ಕೆ ಋಣಿಯಾಯಿತು ಎಂದು ಈಗಿನ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮಿಗಳು ಅಭಿಪ್ರಾಯಿಸುತ್ತಾರೆ.

ಮಠದ ಪರಂಪರೆ:

೧. ಷ.ಬ್ರ.ಶ್ರೀ ಮೂಕಬಸವಲಿಂಗ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ರೇವಣಸಿದ್ಧ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಮಹಾಂತಲಿಂಗ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಗುರುಸಿದ್ಧರಾಮೇಶ್ವರ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ನಾಗಭೂಷಣಲಿಂಗ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ಅನ್ನದಾನಲಿಂಗ ಶಿವಾಚಾರ್ಯಸ್ವಾಮಿಗಳು
೧೦. ಷ.ಬ್ರ.ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯಸ್ವಾಮಿಗಳು
೧೧. ಷ.ಬ್ರ.ಶ್ರೀ ಕಪಿಲ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಮಠದ ಕರ್ತೃ ಗುರುಗಳಾಗಿ ಶ್ರೀ ಮೂಕಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಸ್ಥಾಪಿಸಿದ್ದಾರೆ. ಇವರು ಗುಡ್ಡದ ಮೇಲೆ ಮಠವನ್ನು ಸ್ಥಾಪಿಸಿದ್ದ ಕಾರಣಕ್ಕೆ ಈ ಮಠಕ್ಕೆ ಶಿಖರಮಠ ಎಂದು ಹೆಸರು ಬಂದಿದೆ. ಇವರು ಲಿಂಗೈಕ್ಯರಾದ ನಂತರ ಅಧಿಕಾರಕ್ಕೆ ಬಂದ ಶ್ರೀ ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ಗುಡ್ಡದ ಮೇಲಿನಿಂದ ಈಗಿರುವ ಸ್ಥಳಕ್ಕೆ ಮಠವನ್ನು ಸ್ಥಳಾಂತರಿಸಿದ್ದಾರೆ. ಇವರ ನಂತರ ಶ್ರೀ ಮಹಾಂತಲಿಂಗ ಶಿವಾಚಾರ್ಯ

ಸ್ವಾಮಿಗಳು ಗ್ರಾಮದ ಹೊರ ಭಾಗದಲ್ಲಿ ಚೌಕಿ ಮಠವನ್ನು ಸ್ಥಾಪಿಸಿ ಅಲ್ಲೇ ನೆಲಸಿ ಲಿಂಗೈಕ್ಯರಾದರು. ಇವರ ಸಮಕಾಲೀನರಾದ ಗಬ್ಬೂರಿನ ಶ್ರೀ ಬೂದಿ ಬಸವೇಶ್ವರರು ಈ ಚೌಕಿಮಠದಲ್ಲಿ ಶ್ರೀ ಮಹಾಂತಲಿಂಗ ಶಿವಾಚಾರ್ಯರ ಜೊತೆಯಲ್ಲಿದ್ದರೆಂದು ಹೇಳಲಾಗುತ್ತದೆ. ಶ್ರೀ ಗುರುಲಿಂಗ ಶಿವಾಚಾರ್ಯರ ನಂತರ ಅಧಿಕಾರಕ್ಕೆ ಬಂದ ಮಹಾ ತಪಸ್ವಿ ಶ್ರೀ ಸಿದ್ಧರಾಮೇಶ್ವರರು ಶ್ರೀಶೈಲದಿಂದ ಬಂದು ಮಠದ ಅಧಿಕಾರವನ್ನು ವಹಿಸಿಕೊಂಡು ಕೇವಲ ಅಲ್ಪಾವಧಿಯಲ್ಲಿಯೇ ಅಗಾಧವಾದುದ್ದನ್ನು ಸಾಧಿಸಿ, ತಮ್ಮ ಮೂವತ್ತಾರನೆಯ ವಯಸ್ಸಿನಲ್ಲಿ ಜೀವಂತ ಸಮಾಧಿಯಾದರು. ಈ ಕಾರಣಕ್ಕಾಗಿ ಇವರು ಮಠದ ಪರಂಪರೆಯ ಇತಿಹಾಸದಲ್ಲಿ ಅವಿಸ್ಮರಣೀಯರಾಗಿದ್ದಾರೆ. ನಂತರ ಶ್ರೀ ಗುರು ಸಿದ್ಧರಾಮೇಶ್ವರ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಮುನ್ನಡೆಸಿದ್ದಾರೆ. ಶ್ರೀ ನಾಗಭೂಷಣ ಶಿವಾಚಾರ್ಯ ಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಅನ್ನದಾನಲಿಂಗ ಶಿವಾಚಾರ್ಯ ಸ್ವಾಮಿಗಳು ಕಾಶಿಯಿಂದ ಬಂದು, ನೂರ ಮೂವತ್ತಾರು ವರ್ಷಗಳ ಕಾಲ ದೀರ್ಘ ಬದುಕನ್ನು ಬದುಕಿ ಸಮಾಜವನ್ನು ಮತ್ತು ಮಠವನ್ನು ಬೆಳೆಸಿದರು. ಇವರ ನಂತರ ಶ್ರೀ ಗುರುಸಿದ್ಧ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದು ಈಗಿನ ಗುರುಗಳಾದ ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳಿಗೆ ಅಧಿಕಾರವನ್ನು ನೀಡಿ ಲಿಂಗೈಕ್ಯರಾಗಿದ್ದಾರೆ.

ಗುಲ್ಬರ್ಗ ಜಿಲ್ಲೆಯ ಸುರಪುರ ತಾಲ್ಲೂಕಿನ ಹರಳಹಳ್ಳಿ ಗ್ರಾಮದ ಶ್ರೀ ಚನ್ನಬಸವ ಸ್ವಾಮಿಗಳು ಮತ್ತು ಶ್ರೀಮತಿ ಗಂಗಾದೇವಿಯವರ ಪುತ್ರರಾಗಿ ಜನಿಸಿದ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮಿಗಳು ತಮ್ಮ ಒಂಬತ್ತನೆಯ ವರ್ಷದಲ್ಲಿ ಈ ಮಠದ ಉತ್ತರಾಧಿಕಾರಿಯಾಗಿ ನೇಮಕಗೊಂಡರು. ನಂತರ ಕೇದಾರ ಜಗದ್ಗುರು ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳ ಅನುಗ್ರಹ ಪಡೆದು ಹಿರಿಯ ಗುರುಗಳಾದ ಶ್ರೀ ಗುರುಸಿದ್ಧ ಶಿವಾಚಾರ್ಯ ಸ್ವಾಮಿಗಳಿಂದ ಪಟ್ಟಾಧಿಕಾರವನ್ನು ಪಡೆದುಕೊಂಡ ನಂತರ ಸಂಸ್ಕೃತ, ಜ್ಯೋತಿಷ್ಯ ಅಧ್ಯಯನ ಮಾಡಿ ಮಠಕ್ಕೆ ಆಗಮಿಸಿದರು. ಚಿಕ್ಕವಯಸ್ಸಿನಲ್ಲಿಯೇ ಹಿರಿದಾದ ಜವಾಬ್ದಾರಿಯನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದರು. ಇವರ ಕಾಲದಲ್ಲಿ ಮಠದ ಕಟ್ಟಡವು ನವೀಕರಣಗೊಂಡು ವಿಸ್ತಾರ ಹೊಂದಿತು. ಮಠದಲ್ಲಿ ಧಾರ್ಮಿಕ ಚಟುವಟಿಕೆಗಳು ಕ್ರಿಯಾತ್ಮಕವಾಗಿ ನಡೆಯುವಂತೆ ಮಾಡಿ ಮಠದಲ್ಲಿ ಧಾರ್ಮಿಕ ಆಚರಣೆಗಳು ಶಿಸ್ತು ಬದ್ಧವಾಗಿ ನಡೆಯುವಂತೆ ಮಾಡಿದರು. ಈಗ ತೊಂಬತ್ತೈದು ವರ್ಷವನ್ನು ಪೂರೈಸಿರುವ ಗುರುಗಳು ಶ್ರೀ ಕಪಿಲ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳನ್ನು ಉತ್ತರಾಧಿಕಾರಿಯನ್ನಾಗಿ ಆಯ್ಕೆಮಾಡಿ ಪಟ್ಟಾಧಿಕಾರವನ್ನು ನೀಡಿದ್ದಾರೆ.

ಸುರಪುರ ತಾಲ್ಲೂಕಿನ ಹರಳಹಳ್ಳಿ ಗ್ರಾಮದ ಶ್ರೀ ವೀರಭದ್ರ ಸ್ವಾಮಿ ಮತ್ತು ಶ್ರೀಮತಿ ಮಹಾದೇವಮ್ಮನವರ ಪುತ್ರರಾಗಿ ೧೯೭೦ರ ಜನವರಿ ೧ ರಂದು ಶ್ರೀ ಕಪಿಲ ಸಿದ್ಧರಾಮ ಸ್ವಾಮಿಗಳು ಜನಿಸಿದರು. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಪದವಿಶಿಕ್ಷಣವನ್ನು ದೇವದುರ್ಗದಲ್ಲಿ ಮುಗಿಸಿ ೧೯೯೦ ರ ಮೇ ೭ ರಂದು ಪಂಚ ಪೀಠಾಧೀಶರರನ್ನು ಕರೆಸಿ ಜಗದ್ಗುರುಗಳ ಸಮ್ಮುಖದಲ್ಲಿ ಹಿರಿಯ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮಿಗಳಿಂದ ಪಟ್ಟಾಧಿಕಾರದ ಅನುಗ್ರಹವನ್ನು ಪಡೆದಿದ್ದಾರೆ. ಈ ಗುರುಗಳೂ ಸಹ ಪ್ರಗತಿಪರ ಚಿಂತಕರಾಗಿ, ಧರ್ಮವನ್ನು ವಾಸ್ತವಿಕ ನೆಲೆಗಟ್ಟಿನ ಮೇಲೆ ಬೆಳೆಸಬೇಕು ಎಂಬ ಹಂಬಲದಿಂದ ಕಾರ್ಯ ಪ್ರವೃತ್ತರಾಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯಲ್ಲಿ ಹದಿಮೂರು ಜನ ಮಠಾಧೀಶರು ಅಧಿಕಾರವನ್ನು ನಡೆಸಿದ್ದಾರೆ ಎಂದು ಹೇಳಲಾದರೂ ಹನ್ನೊಂದು ಜನ ಗುರುಗಳ ಹೆಸರನ್ನು ಮಾತ್ರ ಗುರುತಿಸಲಾಗಿದೆ. ಮಠದ ಆವರಣದಲ್ಲಿ ಪರಂಪರೆಯ ಲಿಂಗೈಕ್ಯ ಗುರುಗಳ ಒಂಬತ್ತು ಗದ್ದುಗೆಗಳು ನಿರ್ಮಾಣಗೊಂಡಿವೆ. ಎರಡು ಜನ ಗುರುಗಳ ಗದ್ದುಗೆಗಳು ಎಲ್ಲಿ ಸ್ಥಾಪನೆಯಾಗಿವೆ ಎಂಬುದು ತಿಳಿಯದಾಗಿದೆ. ಈಗ ಮಠದಲ್ಲಿ ಸ್ಥಾಪನೆಗೊಂಡ ಗದ್ದುಗೆಗಳಿಗೆ ನಿತ್ಯ ತ್ರಿಕಾಲ ಪೂಜೆ ನಡೆಯುತ್ತಿದೆ. ಕಾರ್ತೀಕ ಮಾಸದಲ್ಲಿ ಹನ್ನೊಂದು ದಿನ ಜಾತ್ರೆ ನಡೆಯಲಿದ್ದು ಈ ಸಂದರ್ಭದಲ್ಲಿ ಗಾಯನ, ಉಪನ್ಯಾಸ ಮತ್ತು ಉಪದೇಶವನ್ನು ಏರ್ಪಡಿಸಿ ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಅಮಾವಾಸ್ಯೆಯಲ್ಲಿ ರುದ್ರಾಭಿಷೇಕದ ಪೂಜೆಯನ್ನು ಮಾಡಲಾಗುತ್ತಿದೆ. ಪರಂಪರೆಯ ವಸ್ತುಗಳಾಗಿ ಹಿರಿಯ ಗುರುಗಳು ಬಳಸುತ್ತಿದ್ದ ಜೋಳಿಗೆ, ಘಂಟೆ, ಚಾಮರ, ಮೇಣೆ, ಪಲ್ಲಕ್ಕಿ, ಕಲ್ಲಿನ ರಥಗಳ ಗಾಲಿ ಹಾಗೂ ಕಟ್ಟಿಗೆಯ ಹಳೆಯ ರಥ ಇವುಗಳು ಪುರಾತನ ಸ್ಮಾರಕಗಳಾಗಿ ಪೂಜನೆಗೆ ಒಳಗಾಗಿವೆ. ಪರಂಪರೆಯ ಗುರುಗಳು ಧರ್ಮಪ್ರಚಾರಕರಾಗಿ ಈ ಭಾಗದ ನಾನಾ ಕಡೆ ಸಂಚರಿಸಿ ಅನುಷ್ಠಾನಗೊಂಡು

ಸುಮಾರು ಇಪ್ಪತ್ತೊಂದು ಶಾಖಾ ಮಠಗಳನ್ನು ಸ್ಥಾಪನೆ ಮಾಡಿದ್ದಾರೆ ಎಂದು ಈಗಿನ ಗುರುಗಳು ಅಭಿಪ್ರಾಯಿಸುತ್ತಾರೆ.

ಸಾಹಿತ್ಯ-ಅಭಿವೃದ್ಧಿ: ದೇವದುರ್ಗದ ದೊರೆ ರಾಜ ರಮಣಪ್ಪ ನಾಯಕನಿಂದ ಮಠಕ್ಕೆ ಆಶ್ರಯ ದೊರೆತಿದೆ. ಈ ಕಾಲದಲ್ಲಿ ಮಠವು ಸರ್ವಾಂಗೀಣ ಅಭಿವೃದ್ಧಿಯನ್ನು ಕಂಡಿದೆ. ರಾಜಾಶ್ರಯದಿಂದ ದೊರೆತ ಭೂಮಿಯಲ್ಲಿ ಬಹುತೇಕ ಭೂಮಿ ಈಗ ಕೈಬಿಟ್ಟು ಹೋಗಿದ್ದು ಕೇವಲ ಹನ್ನೊಂದು ಎಕರೆ ಜಮೀನು ಮಾತ್ರ ಉಳಿದಿದೆ. ಈಗ ಐದು ಎಕರೆ ಜಮೀನನ್ನು ಭಕ್ತರು ನೀಡಿದ್ದು ಇದನ್ನು ಅಭಿವೃದ್ಧಿ ಪಡಿಸಲಾಗಿದೆ. ಹಿರಿಯ ಗುರುಗಳಾದ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳ ಕಾಲದಲ್ಲಿ ಮಠವು ಅಭಿವೃದ್ಧಿಗೊಂಡಿದೆ. ಮಠದ ವತಿಯಿಂದ ಚನ್ನಬಸವ ಲೀಲೆ, ಸಿದ್ಧರಾಮೇಶ್ವರ ಪುರಾಣವನ್ನು ಪ್ರಕಟಿಸಲಾಗಿದೆ. ಪುರಾತನ ಕಾಲದ ತಾಳೆಗರಿಗಳು ಈ ಮಠದಲ್ಲಿ ನೋಡ ಸಿಗುತ್ತವೆ. ಪುರಾತನ ಪರಂಪರೆಯನ್ನು ಹೊಂದಿರುವ ಈ ಮಠವು ಧಾರ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯಿಕವಾಗಿ ತನ್ನ ಪಾಲಿನ ಕೊಡುಗೆಯನ್ನು ನೀಡಿ ವೀರಶೈವ ಧರ್ಮದ ಅಭಿವೃದ್ಧಿಗೆ ಶ್ರಮಿಸಿದೆ.

ವಿಳಾಸ: ಷ.ಬ್ರ.ಶ್ರೀ ಕಪಿಲಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು, ಶ್ರೀ ಸಿದ್ಧರಾಮೇಶ್ವರ ಶಿಖರಮಠ, ದೇವದುರ್ಗ. ರಾಯಚೂರುಜಿಲ್ಲೆ.

ನೀಲಗಲ್ಲು

ದೇವದುರ್ಗ ತಾಲ್ಲೂಕಿನ ನೀಲಗಲ್ಲು ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣ ಭಾಗಕ್ಕೆ ಮೂವತ್ತು ಕಿ.ಮೀ ದೂರದಲ್ಲಿದೆ. ನೀಲಗಲ್ಲು ಗ್ರಾಮವು ಗುಡ್ಡದ ತಪ್ಪಲಿನಲ್ಲಿ ಸ್ಥಾಪನೆಗೊಂಡಿದ್ದು ಇದುವರೆವಿಗೂ ಬರಗಾಲದ ಬವಣೆಗೆ ಸಿಕ್ಕಿ ನಲುಗಿಹೋಗಿತ್ತು. ಕಳೆದ ಒಂದು ವರ್ಷದಿಂದ ತುಂಗಭದ್ರಾ ಎಡದಂಡೆ ಕಾಲುವೆ ಯೋಜನೆಯಿಂದ ನೀರಾವರಿ ಸೌಲಭ್ಯ ಒದಗಿ ಸಮೃದ್ಧಿಯತ್ತ ಸಾಗುತ್ತಿದೆ. ಇಂತಹ ಗ್ರಾಮದಲ್ಲಿ ಶ್ರೀ ಬೃಹನ್ಮಠವು ಅಸ್ತಿತ್ವದಲ್ಲಿದೆ.

ಬೃಹನ್ಮಠ: ನೀಲಗಲ್ಲು ಗ್ರಾಮದ ಮಧ್ಯಭಾಗದಲ್ಲಿ ರಂಭಾಪುರಿ ಪೀಠದ ಶಾಖಾ ಮಠವಾದ ಬೃಹನ್ಮಠವು ಸ್ಥಾಪನೆಯಾಗಿದೆ. ಈ ಮಠದ ಸ್ಥಾಪನೆಯಿಂದ ಈ ಗ್ರಾಮದಲ್ಲಿ ಧಾರ್ಮಿಕ ಚಟುವಟಿಕೆಗಳು ಚುರುಕುಗೊಂಡು ಸಂಸ್ಕಾರ ಪಡೆದಿದೆ. ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿರುವ ಈ ಬೃಹನ್ಮಠವು ಈ ಭಾಗದ ಧಾರ್ಮಿಕ ಕೇಂದ್ರ ಬಿಂದುವಾಗಿ ಬೆಳೆದಿದೆ.

ಮಠಸ್ಥಾಪನೆ: ಸುಮಾರು ಆರುನೂರು ವರ್ಷಗಳ ಇತಿಹಾಸವಿರುವ ಈ ಮಠವು ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪಿತವಾಗಿದೆ ಎಂದು ಹೇಳಲಾಗುತ್ತಿದೆ. ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಈ ಗ್ರಾಮಕ್ಕೆ ಬಂದವರು ಧರ್ಮ ಪ್ರಸಾರವನ್ನು ಮಾಡುವ ಉದ್ದೇಶದಿಂದ ಇಲ್ಲಿ ಮಠವನ್ನು ಸ್ಥಾಪಿಸಿದರು. ಅಂದು ಸ್ಥಾಪಿತಗೊಂಡ ವೀರಶೈವ ಮಠವು ಈತನಕವೂ ಬೆಳೆದು ಬಂದಿದ್ದು, ವೀರಶೈವ ಧರ್ಮದ ತತ್ತ್ವಗಳಾದ ಅಷ್ಟಾವರಣ, ಪಂಚಾಚಾರ ಹಾಗೂ ಷಟ್‌ಸ್ಥಲಗಳ ಬಗ್ಗೆ ಭಕ್ತರಲ್ಲಿ ಅರಿವು ಮೂಡಿಸಿ ಧಾರ್ಮಿಕ ಸಂಸ್ಕಾರವನ್ನು ನೀಡಿದೆ. ಮಠದಲ್ಲಿ ಶಾಶ್ವತವಾಗಿ ಧಾರ್ಮಿಕ ಕಾರ್ಯಗಳನ್ನು ನಡೆದುಕೊಂಡು ಹೋಗಲು ವ್ಯವಸ್ಥೆಯಾಗಿದೆ.

ಪರಂಪರೆ:
೧. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಚನ್ನಮಲ್ಲ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಶಾಂತಮಲ್ಲ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಪಂಚಾಕ್ಷರಿ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃ ಗುರುಗಳ ತರುವಾಯ ಶ್ರೀ ಚನ್ನಮಲ್ಲ ಶಿವಾಚಾರ್ಯ ಸ್ವಾಮಿಗಳು, ನಂತರ ಬಂದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳ ಬಗ್ಗೆ ಹೆಚ್ಚು ವಿವರ ತಿಳಿದು ಬರುವುದಿಲ್ಲ. ನಂತರ ಅಧಿಕಾರಕ್ಕೆ ಬಂದ ಶ್ರೀ ಶಾಂತಮಲ್ಲ ಶಿವಾಚಾರ್ಯ ಸ್ವಾಮಿಗಳು ಮಹಾ ಸಿದ್ಧಿ ಪುರುಷರೆಂದು ಹೇಳಲಾಗುತ್ತದೆ. ಗುರುಗಳು ಆಯುರ್ವೇದ ಪಂಡಿತರಾಗಿದ್ದು ಈ ಭಾಗದ ಜನ ಜಾನುವಾರುಗಳಿಗೆ ಚಿಕಿತ್ಸೆ ನೀಡುತ್ತಿದ್ದರು. ಇವರು ೧೯೬೪ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಮಠದ ಪರಂಪರೆಯ ಐದನೆಯ ಗುರುಗಳಾಗಿ ಅಧಿಕಾರವನ್ನು ವಹಿಸಿಕೊಂಡ ವಿದ್ವಾನ್ ಶ್ರೀ ಪಂಚಾಕ್ಷರ ಶಿವಾಚಾರ್ಯ ಸ್ವಾಮಿಗಳು ಶ್ರೀ ಸಂಗಯ್ಯಸ್ವಾಮಿ ಮತ್ತು ಶ್ರೀಮತಿ ದೇವಕಮ್ಮನವರ ಪುತ್ರರಾಗಿ ೧೯೫೨ ರಲ್ಲಿ ಜನಿಸಿದರು.

ಪ್ರಾಥಮಿಕ ವಿದ್ಯಾಭ್ಯಾಸವನ್ನು ನೀಲಗಲ್ಲು ಗ್ರಾಮದಲ್ಲಿ ಮುಗಿಸಿದರು. ಶಿವಯೋಗಮಂದಿರದಲ್ಲಿ ಆಚಾರ ವಿಚಾರ, ಯೋಗ ಹಾಗೂ ಸಂಸ್ಕೃತವನ್ನು ಕಲಿತು ತಮ್ಮ ಹದಿನಾರನೆಯ ವಯಸ್ಸಿನಲ್ಲಿ (೧೯೬೮)ಪಟ್ಟಾಧಿಕಾರವನ್ನು ವಹಿಸಿಕೊಂಡರು. ನಂತರ ಕಲಿಯುವ ಹಂಬಲದಿಂದ ಬೆಂಗಳೂರಿನ ಮಹಂತಿನ ಮಠದಲ್ಲಿ ನೆಲೆಸಿ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ಸಂಸ್ಕೃತ ಕಲಿತು ಸ್ನಾತಕೋತ್ತರ ಪದವಿ ಮುಗಿಸಿ ವಿದ್ವತ್ ಪಾಂಡಿತ್ಯವನ್ನು ಸಂಪಾದಿಸಿಕೊಂಡು ಮಠಕ್ಕೆ ಹಿಂದಿರುಗಿದರು.

ಧಾರ್ಮಿಕ ಕಾರ್ಯಗಳು: ಹೈದರಾಬಾದ್ ನಿಜಾಂನ ಕಾಲದಲ್ಲಿ ಈ ಮಠಕ್ಕೆ ಉಂಬಳಿ ಜಮೀನು ದೊರೆತಿದ್ದು ಧಾರ್ಮಿಕ ಆಚರಣೆಗೆ ಇದರ ಆದಾಯವನ್ನು ಬಳಸಿಕೊಳ್ಳಲಾಗುತ್ತಿತ್ತು. ಈಗ ಆ ಉಂಬಳಿಯ ಆಸ್ತಿ ಕೈಬಿಟ್ಟು ಹೋಗಿದೆ. ಮಠದ ಶಾಖಾ ಮಠವಾಗಿ ಗಣೆಕಲ್ಲು ಮಠ ಇದ್ದು ಈ ಮಠದಲ್ಲಿ ಎರಡು ಗದ್ದುಗೆಗಳು, ಮೂಲ ಮಠವಾದ ನೀಲಗಲ್ಲು ಮಠದಲ್ಲಿ ಎರಡೂ ಗದ್ದುಗೆಗಳು ಸ್ಥಾಪಿತಗೊಂಡಿವೆ. ಇವುಗಳಿಗೆ ನಿತ್ಯಪೂಜೆ, ಶ್ರಾವಣ ಮಾಸದಲ್ಲಿ ವಿಶೇಷ ಪೂಜೆ, ಮಾರ್ಗಶಿರ ಶುದ್ಧ ತದಿಗೆಯಂದು ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಅಂದು ವಿವಿಧ ಮಠಾಧೀಶರು, ವಿದ್ವಾಂಸರನ್ನು ಕರೆಸಿ ಉಪನ್ಯಾಸ, ಧರ್ಮೋಪದೇಶವನ್ನು ನಡೆಸಲಾಗುತ್ತಿದೆ. ಪುರಾಣ ಪ್ರವಚನವನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ಸಂದರ್ಭದಲ್ಲಿ ಅನ್ನ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.

ವಿಳಾಸ:ಷ.ಬ್ರ.ಶ್ರೀ ವಿದ್ವಾನ್‌ಪಂಚಾಕ್ಷರಶಿವಾಚಾರ್ಯಸ್ವಾಮಿಗಳು, ಶ್ರೀಬೃಹನ್ಮಠ. ನೀಲಗಲ್ಲು.ದೇವದುರ್ಗ ತಾ, ರಾಯಚೂರುಜಿಲ್ಲೆ.

ಮಸರಕಲ್ಲು

ದೇವದುರ್ಗ ತಾಲ್ಲೂಕಿನ ಮಸರಕಲ್ಲು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಭಾಗಕ್ಕೆ ಹತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಮುರುಘೇಂದ್ರಸ್ವಾಮಿ ಮಠವು ಅಸ್ತಿತ್ವದಲ್ಲಿದೆ.

ಮುರುಘೇಂದ್ರಸ್ವಾಮಿಮಠ: ಮಸರಕಲ್ಲು ಗ್ರಾಮದಲ್ಲಿ ವಿರಕ್ತ ಸಂಪ್ರದಾಯದ ಮುರುಘಾ ಸಮಯದ ಶ್ರೀ ಮುರುಘೇಂದ್ರ ಸ್ವಾಮಿ ಮಠವು ಗ್ರಾಮದ ಉತ್ತರದ ಹೊರ ಭಾಗದಲ್ಲಿ ಸ್ಥಾಪನೆಯಾಗಿದೆ. ಶ್ರೀ ಮುರುಘೇಂದ್ರ ಸ್ವಾಮಿಗಳೆಂಬ ವಿರಕ್ತರು ಲೋಕ ಸಂಚಾರ ಕೈಗೊಂಡು ಈ ಗ್ರಾಮಕ್ಕೆ ಬಂದು ನೆಲೆಸಿದರಂತೆ. ಗುರುಗಳು ಇಲ್ಲಿ ನೆಲೆ ನಿಂತ ಸಂದರ್ಭದಲ್ಲಿ ಭಕ್ತರನ್ನು ಜಾಗೃತರನ್ನಾಗಿ ಮಾಡಿ ಶರಣ ತತ್ತ್ವಗಳನ್ನು ಪ್ರಚಾರ ಪಡಿಸಿ, ವೀರಶೈವಧರ್ಮ ಬೆಳೆಯಲು ಸಹಾಯಕರಾದರಂತೆ. ಈ ಗ್ರಾಮದ ದಾರಿದ್ರ್ಯವನ್ನು ಹೋಗಲಾಡಿಸಿ ಮಠವನ್ನು ಸ್ಥಾಪಿಸಿ, ಪರಂಪರೆಯನ್ನು ಬೆಳಸಿದರೆಂದು ಹೇಳಲಾಗುತ್ತದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಮುರುಘೇಂದ್ರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಮಹಾಲಿಂಗಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಬಸವಯ್ಯಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಮುರುಘೇಂದ್ರಸ್ವಾಮಿಗಳು

ಕರ್ತೃಗುರುಗಳಾದ ಶ್ರೀ ಮುರುಘೇಂದ್ರ ಸ್ವಾಮಿಗಳ ನಂತರ ಶ್ರೀಮಹಾಲಿಂಗ ಸ್ವಾಮಿಗಳು ಅಧಿಕಾರಕ್ಕೆ ಬಂದರು. ಮಹಾ ತಪಸ್ವಿಗಳಾದ ಇವರು ಲೌಕಿಕದ ಕಡೆಗೆ ಗಮನ ಹರಿಸದೆ ಸದಾ ಧ್ಯಾನದಲ್ಲಿದ್ದು ಅಂತರ್ಮುಖಿಗಳಾಗಿರುತ್ತಿದ್ದರು. ಇವರ ಪ್ರಭಾವದಿಂದ ಭಕ್ತರು ಬೆಳಕು ಕಂಡರು. ನಂತರ ಬಂದ ಶ್ರೀ ಬಸವಯ್ಯ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ ಗುರುಗಳ ವಾಸ್ತವ್ಯಕ್ಕೆ ಕೊಠಡಿ, ಕರ್ತೃಗುರುಗಳ ಗದ್ದುಗೆಗೆ ಮಂಟಪವನ್ನು ನಿರ್ಮಿಸಿದರು. ಇವರು ೧೯೭೦ರ ಸುಮಾರಿನಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಮಠವು ಖಾಲಿ ಉಳಿಯಿತು. ಗ್ರಾಮದ ಭಕ್ತರು ಶ್ರೀ ರಾಜಶೇಖರ ಬಳೆ ಇವರ ಮುಂದಾಳತ್ವದಲ್ಲಿ ಚಿತ್ರದುರ್ಗ ಬೃಹನ್ಮಠದ ಗುರುಗಳ ಆಶೀರ್ವಾದ ಪಡೆದು ಶ್ರೀ ಮುರಘೇಂದ್ರ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿದ್ದಾರೆ. ಗುರುಗಳು ಧಾರ್ಮಿಕ ಕಾರ್ಯಗಳನ್ನು ನಡೆಸಿ ಮಠವನ್ನು ಮುನ್ನಡೆಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ ಮುರುಘೇಂದ್ರ ಸ್ವಾಮಿಗಳು, ಶ್ರೀ ಮುರುಘೇಂದ್ರಸ್ವಾಮಿ ಮಠ, ಮಸರಕಲ್ಲು, ದೇವದುರ್ಗ ತಾಲ್ಲೂಕು,, ರಾಯಚೂರು ಜಿಲ್ಲೆ.

ಮಾನವಿ ತಾಲ್ಲೂಕು

ರಾಯಚೂರು ಜಿಲ್ಲೆಯ ಮಾನವಿ ತಾಲ್ಲೂಕು ಇಪ್ಪತ್ತನೆಯ ಶತಮಾನದ ಅಂತ್ಯದವರೆಗೆ ಆರ್ಥಿಕವಾಗಿ ಹಿಂದುಳಿದಿತ್ತು. ನೀರಾವರಿ ಯೋಜನೆಯಿಂದಾಗಿ ಈ ತಾಲ್ಲೂಕು ಈಗ ಸಮೃದ್ಧತೆಯನ್ನು ಕಂಡಿದೆ. ಇಂತಹ ಅಭಿವೃದ್ಧಿಶೀಲ ತಾಲ್ಲೂಕಿನಲ್ಲಿ ಆರು ಮಠಗಳು ಅಸ್ತಿತ್ವದಲ್ಲಿವೆ.

ಅಡವಿಅಮರೇಶ್ವರ

ಮಾನವಿ ತಾಲ್ಲೂಕಿನ ದಕ್ಷಿಣ ಭಾಗಕ್ಕೆ ಹದಿನೈದು ಕಿ.ಮೀ ದೂರದಲ್ಲಿರುವ ಅಡವಿ ಅಮರೇಶ್ವರ ಸುಕ್ಷೇತ್ರವು ಹೆಚ್ಚು ಹೆಸರು ಪಡೆದಿದೆ. ಇನ್ನೂರು ವರ್ಷಗಳ ಹಿಂದೆ ಜಲಾವೃತವಾಗುವ ಮೊದಲು ಈ ಪ್ರದೇಶದಲ್ಲಿ ಅಡವಿಯ ಮಹಾಯೋಗಿಗಳು ತಪಸ್ಸನ್ನು ಆಚರಿಸುತ್ತಿದ್ದರು ಎಂದು ಹೇಳಲಾಗಿದೆ. ಈ ಕ್ಷೇತ್ರವು, ಹಿರೇಕೊಡ್ನೆಕಲ್ಲು, ಉಂಬಳಿ ಹೊಸೂರು, ಈರಲಗಡ್ಡೆ, ಪೋತನಾಳ್ ಮಧ್ಯದಲ್ಲಿದ್ದು ಈ ನಾಡಿಗೆ ಧಾರ್ಮಿಕ ಸಂಸ್ಕಾರವನ್ನು ನೀಡುವ ಕೇಂದ್ರವಾಗಿ ರೂಪುಗೊಂಡಿದೆ.

ಅಡವಿಅಮರೇಶ್ವರಮಠ: ೧೯೫೪ರ ಆಗಸ್ಟ್ ಹದಿಮೂರರಂದು ಶ್ರೀ ಅಡವಿಅಮರೇಶ್ವರ ಕ್ಷೇತ್ರದ ಸ್ಥಾಪನೆಗೆ ಒಳಬಳ್ಳಾರಿಯ ಶ್ರೀ ಚನ್ನಬಸವ ಶಿವಯೋಗಿಗಳು ಹಾಗೂ ಭೋಗಾಪುರದ ಶ್ರೀ ವಿರೂಪಾಕ್ಷ ದೇಶಿಕೇಂದ್ರ ಸ್ವಾಮಿಗಳು ಕಾರಣೀಭೂತರಾದರು. ಅಂದು ಸ್ಥಾಪನೆಗೊಂಡ ಶ್ರೀ ಅಡವಿಅಮರೇಶ್ವರಲಿಂಗವು ಮಠ ಸ್ಥಾಪನೆಗೆ ನಾಂದಿಯಾಗಿ ಈ ನಾಡಿನ ಆರಾಧ್ಯ ದೈವವಾಗಿ ಬೆಳೆಯಿತು. ದಿನ ಕಳೆದಂತೆ ಈ ಪ್ರದೇಶ ನೀರಾವರಿ ಪ್ರದೇಶವಾಗಿ ಮಾರ್ಪಟ್ಟು ಸಮೃದ್ಧಿಯನ್ನು ಕಾಣತೊಡಗಿತು. ಭಕ್ತರು ತೃಪ್ತಿಯನ್ನು ಕಂಡ ಮೇಲೆ ಚೈತ್ರ ಬಹುಳ ಪಂಚಮಿಯಂದು ಅಡವಿ ಅಮರೇಶ್ವರ ಜಾತ್ರೆಯನ್ನು ನೆರವೇರಿಸಿ ಅಂದು ಈ ಜಾತ್ರೆಯ ನಿಮಿತ್ತ ದನಗಳ ಜಾತ್ರೆಯನ್ನು ಏರ್ಪಡಿಸಿ ರೈತರಿಗೆ ಅನುಕೂಲವನ್ನು ಮಾಡಿಕೊಟ್ಟಿದ್ದಾರೆ.

ಉತ್ತರಾಧಿಕಾರಿ ನೇಮಕ: ಶ್ರೀ ಚನ್ನಬಸವ ಸ್ವಾಮಿಗಳು ಈ ಕ್ಷೇತ್ರವನ್ನು ತಮ್ಮ ತಪೋಗುಣದಿಂದ ಒಂದು ಸುಕ್ಷೇತ್ರವನ್ನಾಗಿ ಪರಿವರ್ತಿಸಿದರು. ಈ ಮಹಾ ಕ್ಷೇತ್ರಕ್ಕೆ ಮಠಾಧೀಶರನ್ನು ನೇಮಿಸಿ ವೀರಶೈವ ತತ್ತ್ವಗಳನ್ನು ಪ್ರಚಾರಗೊಳಿಸಬೇಕು ಎಂಬ ಅಭಿಲಾಷೆಯಿಂದ ೧೯೬೪ ರಲ್ಲಿ ಶ್ರೀ ಮೃತ್ಯುಂಜಯ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿದರು. ಶ್ರೀ ಮೃತ್ಯುಂಜಯ ದೇವರು ಶಿವಯೋಗ ಮಂದಿರದಲ್ಲಿ ಧಾರ್ಮಿಕ ಸಂಸ್ಕಾರವನ್ನು ಪಡೆದು ಯೋಗವಿದ್ಯೆ ನಿಪುಣರಾಗಿ, ಸಂಸ್ಕೃತದಲ್ಲಿ ಪಾಂಡಿತ್ಯ ಪಡೆದು ವಿನಯ ಶೀಲತೆ ಹಾಗೂ ಶಿವಪೂಜಾ ನಿಷ್ಠೆಯನ್ನು ತಮ್ಮ ಉಸಿರಾಗಿಸಿಕೊಂಡಿದ್ದರು. ಇಂತಹ ಸದಾಚಾರ ಸಂಪನ್ನರು ಈ ನೂತನ ಮಠಕ್ಕೆ ಉತ್ತರಾಧಿಕಾರಿಯಾಗಿ ದೊರೆತಿದ್ದು ಒಂದು ಸುಯೋಗ ಎಂದು ಈ ಗ್ರಾಮದ ಜನ ಅಭಿಪ್ರಾಯಿಸುತ್ತಾರೆ. ೧೯೭೯ ರಲ್ಲಿ ಶ್ರೀ ಚನ್ನಬಸವ ಶಿವಯೋಗಿಗಳಿಗೆ ಎಪ್ಪತ್ತೈದು ವರ್ಷ ತುಂಬಿದ ಸವಿನೆನಪಿಗಾಗಿ ನಾಡಿನ ಭಕ್ತರು ವಜ್ರ ಮಹೋತ್ಸವವನ್ನು ಏರ್ಪಡಿಸಿ, ಆ ಸಂದರ್ಭದಲ್ಲಿ ಶ್ರೀ ಮೃತ್ಯುಂಜಯ ದೇವರಿಗೆ ಶ್ರೀ ಶಾಂತಮಲ್ಲ ಸ್ವಾಮಿಗಳೆಂದು ಅಭಿದಾನ ಮಾಡಿ ಅಮರೇಶ್ವರ ಮಠದ ಅಧಿಕಾರವನ್ನು ನೀಡುತ್ತಾರೆ.

ಗುರುಶಿಷ್ಯರ ಭಾಂದವ್ಯ : ಶ್ರೀ ಚನ್ನಬಸವ ಶಿವಯೋಗಿಗಳು ಹಾಗೂ ತಮ್ಮ ಕರಕಮಲಸಂಜಾತರಾಗಿ ಬೆಳೆದ ಶ್ರೀ ಶಾಂತಮಲ್ಲ ಸ್ವಾಮಿಗಳ ಅನ್ಯೋನ್ಯ ಸಂಬಂಧದಿಂದ ಈ ಮಠ ಹೆಚ್ಚು ಬೆಳೆಯಿತು. ಈ ಗುರುಗಳಿಬ್ಬರ ಧಾರ್ಮಿಕ ಆಚರಣೆಗಳಿಗೆ ಮನಸೋತು ಜಾತಿ ಬೇಧವಿಲ್ಲದೆ ಎಲ್ಲಾ ವರ್ಗದ ಜನರು ಮಠಕ್ಕೆ ಭೂಮಿ, ಧನ, ಧಾನ್ಯವನ್ನು ದಾನ ನೀಡಿ ಮಠವನ್ನು ಬೆಳಸಿದರು.

ಧಾರ್ಮಿಕ ಕಾರ್ಯಗಳು: ಈ ಕ್ಷೇತ್ರದ ಶ್ರೀ ಕ್ಷೇತ್ರನಾಥ ಅಡವಿ ಅಮರೇಶ್ವರ ದೇವಸ್ಥಾನದಲ್ಲಿ ನಿತ್ಯ ಪೂಜೆ, ದೂರದಿಂದ ಬರುವ ಭಕ್ತರಿಗೆ ನಿತ್ಯ ದಾಸೋಹದ ವ್ಯವಸ್ಥೆಯ ಜೊತೆಗೆ ಪುರಾಣ ಪ್ರವಚನವನ್ನು ಏರ್ಪಡಿಸಿ ಭಕ್ತರಿಗೆ ಜ್ಞಾನ ದಾಸೋಹವನ್ನು ನೀಡತೊಡಗಿದ್ದಾರೆ. ಮಠದಲ್ಲಿ ನಡೆಯುವ ವಾರ್ಷಿಕ ಜಾತ್ರೆಯಲ್ಲಿ ಶಿವದೀಕ್ಷೆ ಕಾರ್ಯಕ್ರಮ, ಸಾಮೂಹಿಕ ವಿವಾಹ, ಗಣಾರಾಧನೆ ಹಾಗೂ ಜನೋಪಯೋಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಬಸವತತ್ತ್ವ ಪ್ರಚಾರಕ್ಕೆಂದು ೧೯೭೬ ರಲ್ಲಿ ಪಾದಯಾತ್ರೆಯನ್ನು ಮಾಡಿದ್ದಾರೆ. ಮಠದಲ್ಲಿ ಸಾಹಿತ್ಯ ಸಮ್ಮೇಳನಗಳು, ಚಿಂತನ ಗೋಷ್ಠಿಗಳನ್ನು ಏರ್ಪಡಿಸಿ ಸಮಾಜದ

ಅಂಧಕಾರವನ್ನು ನಿವಾರಣೆ ಮಾಡುವಲ್ಲಿ ಗುರುಶಿಷ್ಯರಿಬ್ಬರೂ ತಮ್ಮದೇ ಆದಂತಹ ಕೊಡುಗೆಯನ್ನು ನೀಡಿದ್ದಾರೆ.

ಶ್ರೀ ಶಾಂತಮಲ್ಲ ಸ್ವಾಮಿಗಳು ಮಠವನ್ನು ಸರ್ವಾಂಗೀಣ ಅಭಿವೃದ್ಧಿಗೊಳಿಸಿ ಅಮರೇಶ್ವರ ದೇವಾಲಯಕ್ಕೆ ಗೋಪುರವನ್ನು ನಿರ್ಮಿಸಿದ್ದಾರೆ. ಬಡ ವಿದ್ಯಾರ್ಥಿಗಳಿಗಾಗಿ ಪ್ರಸಾದ ನಿಲಯವನ್ನು ನಿರ್ಮಿಸಿ ದಿನಕ್ಕೆ ಇನ್ನೂರಕ್ಕೂ ಮೇಲ್ಪಟ್ಟ ಶಾಲಾ ವಿದ್ಯಾರ್ಥಿಗಳಿಗೆ ಊಟ ವಸತಿ ಏರ್ಪಡಿಸಿರುತ್ತಾರೆ. ಸಮಾಜದ ಅಜ್ಞಾನವನ್ನು ದೂರಮಾಡಲು ಜ್ಞಾನದ ಜ್ಯೋತಿ ಆವಶ್ಯಕ ಎಂದು ಅರಿತು ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದರು. ನಂತರ ಸರ್ಕಾರಕ್ಕೆ ಪ್ರೌಢಶಾಲೆಯನ್ನು ಪ್ರಾರಂಭಿಸಲು ನಾಲ್ಕು ಎಕರೆ ನೀರಾವರಿ ಭೂಮಿಯನ್ನು ದಾನವಾಗಿ ನೀಡಿ, ಒಂದು ಲಕ್ಷ ರೂಪಾಯಿಗಳನ್ನು ದೇಣಿಗೆಯಾಗಿ ಕೊಟ್ಟು ಶ್ರೀಚನ್ನಬಸವೇಶ್ವರರ ಹೆಸರಿನಲ್ಲಿ ಸರ್ಕಾರಿ ಪ್ರೌಢಶಾಲೆ ಪ್ರಾರಂಭವಾಗಲು ನೆರವಾದರು.

ವಿಳಾಸ: ಶ್ರೀ ಶಾಂತಮಲ್ಲ ಸ್ವಾಮಿಗಳು, ಶ್ರೀ ಅಡವಿ ಅಮರೇಶ್ವರ ಮಠ, ಅಡವಿ ಅಮರೇಶ್ವರ ಸುಕ್ಷೇತ್ರ, ಮಾನವಿ ತಾಲ್ಲೂಕು, ರಾಯಚೂರು ಜಿಲ್ಲೆ.

ಊಟಕನೂರು

ಮಾನವಿ ತಾಲ್ಲೂಕಿನ ಊಟಕನೂರು, ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಮೂವತ್ತೂರು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಅಡವಿಸಿದ್ಧೇಶ್ವರ ಮಠವು ಅಸ್ತಿತ್ವದಲ್ಲಿದೆ.

ಅಡವಿಸಿದ್ಧೇಶ್ವರಮಠ: ಊಟಕನೂರು ಗ್ರಾಮದ ಶ್ರೀ ಅಡವಿಸಿದ್ಧೇಶ್ವರ ಮಠವು ಶಾಲಿವಾಹನ ಶಕೆ ೧೭೪೬ರಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತದೆ. ಶ್ರೀ ಅಡವಿಸಿದ್ಧೇಶ್ವರರ ಜತೆ ಇದ್ದು ಹನ್ನೆರಡು ವರ್ಷಗಳ ಕಾಲ ದೀರ್ಘ ಸೇವೆ ಮಾಡಿದ ಶ್ರೀ ಬಸವಲಿಂಗ ದೇಶಿಕೇಂದ್ರ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿದರೆಂದು ಹೇಳಲಾಗುತ್ತದೆ.

ಪರಂಪರೆ:
೧. ಷ.ಬ್ರ.ಶ್ರೀ ಬಸವಲಿಂಗ ದೇಶಿಕೇಂದ್ರಸ್ವಾಮಿಗಳು
೨. ಷ.ಬ್ರ.ಶ್ರೀ ಗುರುಪಾದಯ್ಯ ದೇಶಿಕೇಂದ್ರಸ್ವಾಮಿಗಳು
೩. ಷ.ಬ್ರ.ಶ್ರೀ ಮರಿಬಸವರಾಜ ದೇಶಿಕೇಂದ್ರಸ್ವಾಮಿಗಳು

ಈ ರೀತಿ ಮಠದ ಪರಂಪರೆಯ ಗುರುಗಳ ಹೆಸರುಗಳನ್ನು ದಾಖಲಿಸಬಹುದಾಗಿದೆ. ಶ್ರೀ ಬಸವಲಿಂಗ ದೇಶಿಕೇಂದ್ರ ಸ್ವಾಮಿಗಳು ಗುರುಗಳಿಂದ ಆಶೀರ್ವಾದ ಪಡೆದು ಊಟಕನೂರಿಗೆ ಬಂದು ನೆಲೆಸಿ, ಮಠವನ್ನು ಸ್ಥಾಪಿಸಿ ಬೆಳೆಸಿದ್ದಾರೆ. ಇವರ ಇಚ್ಛಾಶಕ್ತಿಯಂತೆ ಶ್ರೀ ಗುರುಪಾದಯ್ಯ ಸ್ವಾಮಿಗಳು ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡರು. ತದನಂತರ ಬಂದ ಶ್ರೀ ಮರಿಬಸವ ರಾಜ ದೇಶಿಕೇಂದ್ರ ಸ್ವಾಮಿಗಳು ಹಿರೇಮಠದ ಶ್ರೀ ಬಸವಲಿಂಗಯ್ಯ ಮತ್ತು ಶ್ರೀಮತಿ ಸಿದ್ಧಮ್ಮನವರ ಪುತ್ರರಾಗಿ ೧೯೭೧ರಲ್ಲಿ ಜನಿಸಿದರು. ಕಾಲೇಜು ಶಿಕ್ಷಣ ಪಡೆದ ಶ್ರೀ ಮರಿಬಸವರಾಜ ದೇಶಿಕೇಂದ್ರ ಸ್ವಾಮಿಗಳು ೧೯೯೦ರ ಪ್ರಮೋದೂತನಾಮ ಸಂವತ್ಸರ, ಪುಷ್ಯಮಾಸದಲ್ಲಿ ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಗುರುಗಳು ತಮ್ಮ ಕ್ರಿಯಾಶೀಲ ಚಟುವಟಿಕೆಗಳಿಂದ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ಸಾಮಾಜಿಕ-ಧಾರ್ಮಿಕ ಕಾರ್ಯಗಳು: ಊಟಕನೂರು ಗ್ರಾಮದಲ್ಲಿ ಮಠವು ಸ್ಥಾಪನೆಗೊಂಡ ಮೇಲೆ ಧಾರ್ಮಿಕ ವಾತಾವರಣ ಸೃಷ್ಟಿಯಾಯಿತು. ಅಮಾವಾಸ್ಯೆಯಲ್ಲಿ ಪುರಾಣ ಪ್ರವಚನಗಳು, ಶ್ರಾವಣಮಾಸದಲ್ಲಿ ನಿತ್ಯ ವಿಶೇಷಪೂಜೆ ನಡೆಯುವುದಲ್ಲದೆ ನಿತ್ಯ ಅನ್ನದಾಸೋಹ ನಡೆಯುತ್ತಿದೆ. ೧೯೯೬ರಲ್ಲಿ ಮಠದಲ್ಲಿ ೫೦೫ ಸಾಮೂಹಿಕ ವಿವಾಹಗಳನ್ನು ನೆರವೇರಿಸಿ ದಾಖಲೆಯನ್ನೇ ನಿರ್ಮಿಸಲಾಗಿದೆ. ಅದೇ ವರ್ಷ ಲಕ್ಷದೀಪೋತ್ಸವವನ್ನು ನೆರವೇರಿಸಲಾಗಿದೆ. ೧೯೯೮-೯೯ ನೆಯ ಸಾಲಿನಲ್ಲಿ ೩೩೦ ಸಾಮೂಹಿಕ ವಿವಾಹಗಳನ್ನು ನಡೆಸಲಾಗಿದೆ. ಈ ರೀತಿ ಧಾರ್ಮಿಕ ಹಾಗೂ ಸಾಮಾಜಿಕವಾಗಿ ಸಾಧನೆಯನ್ನು ಮಾಡಿದೆ.

ವಿಳಾಸ: ಷ.ಬ್ರ.ಶ್ರೀ ಮರಿಬಸವರಾಜ ದೇಶಿಕೇಂದ್ರ ಸ್ವಾಮಿಗಳು, ಶ್ರೀ ಅಡವಿ ಸಿದ್ಧೇಶ್ವರ ಮಠ, ಊಟಕನೂರು, ಮಾನವಿ ತಾಲ್ಲೂಕು, ರಾಯಚೂರು ಜಿಲ್ಲೆ.

ಕರೆಗುಡ್ಡ

ಮಾನವಿ ತಾಲ್ಲೂಕಿನ ಕರೆಗುಡ್ಡ ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹನ್ನೆರಡು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಕರೆಗುಡ್ಡ ಗ್ರಾಮದ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ರಂಭಾಪುರಿಪೀಠದ ಶಾಖಾಮಠವಾಗಿ ಬೆಳೆದಿದೆ. ಈ ಮಠದ ಪರಂಪರೆಯ ಗುರುಗಳೊಬ್ಬರು ದಾಸೋಹಕ್ಕಾಗಿ ಹೋಳಿಗೆ ಊಟವನ್ನು ಮಾಡಿಸುತ್ತಿದ್ದರು. ಒಮ್ಮೆ ಮಠದಲ್ಲಿ ಧಾರ್ಮಿಕ.ಕಾರ್ಯಕ್ರಮ ನಡೆಯುತ್ತಿತ್ತು. ಇನ್ನೊಂದು ಕಡೆ ದಾಸೋಹಕ್ಕೆಂದು ಹೋಳಿಗೆ ತಯಾರಿ ನಡೆಯುತ್ತಿತ್ತು. ಸಭೆಗೆಂದು ಆಗಮಿಸಿದ್ದ ಸಭಿಕರ ಮತ್ತು ಭಕ್ತರ ಮನಸ್ಸು ಹೋಳಿಗೆ ವಾಸನೆಗೆ ದಾಸೋಹದ ಕಡೆ ಹೋಗದಿರಲಿ ಎಂಬ ಕಾರಣದಿಂದ ಹೋಳಿಗೆಯ ಕಂಪು ಹರಡದಿರಲೆಂದು ಗುರುಗಳು ಹಾರೈಸಿದರಂತೆ. ಅಂದಿನಿಂದ ಈವರೆವಿಗೂ ಇಲ್ಲಿ ಹೋಳಿಗೆಯನ್ನು ಮಾಡುವ ಸಂದರ್ಭದಲ್ಲಿ ಕಂಪು ಬರುವುದಿಲ್ಲ. ಆದರೆ ಸೇವನೆ ಮಾಡುವಾಗ ಅದರ ರುಚಿ ವಿಶೇಷವಾಗಿರುತ್ತದೆ ಎಂದು ಹೇಳುವ ಜನಪದ ಕಥೆ ಜನಜನಿತವಾಗಿದೆ. ಇಂತಹ ಪ್ರಭಾವವನ್ನು ಬೆಳೆಸಿಕೊಂಡು ವೀರಶೈವ ಧರ್ಮವನ್ನು ಪ್ರಚಾರ ಪಡಿಸಿದ ಪುರಾತನ ಮಠವಾಗಿದೆ. ಪರಂಪರೆಯಲ್ಲಿ ಅನೇಕ ಗುರುಗಳು ಅಧಿಕಾರವನ್ನು ನಡೆಸಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಈಗ ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ನಡೆಸುತ್ತಿದ್ದಾರೆ. ಇವರು ಮಠದ ಆಸ್ತಿಯನ್ನು ಶಿಸ್ತುಬದ್ಧಗೊಳಿಸಿ ಮಠಕ್ಕೆ ಆದಾಯದ ಮೂಲವನ್ನಾಗಿ ಮಾಡಿಕೊಂಡು, ಧಾರ್ಮಿಕ ಹಾಗೂ ಸಾಮಾಜಿಕವಾಗಿ ಮಠವು ಹೆಸರು ಗಳಿಸುವಂತೆ ಮಾಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಕರೆಗುಡ್ಡ, ಮಾನವಿ ತಾ. ರಾಯಚೂರು ಜಿಲ್ಲೆ.

ಚಿಕ್ಕಲಪರ್ವಿ

ಮಾನವಿ ತಾಲ್ಲೂಕಿನ ಚಿಕ್ಕಲಪರ್ವಿ ತಾಲ್ಲೂಕು ಕೇಂದ್ರದಿಂದ ದಕ್ಷಿಣ ಭಾಗಕ್ಕೆ ಹನ್ನೊಂದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ರುದ್ರದೇವರಮಠವು ಅಸ್ತಿತ್ವದಲ್ಲಿದೆ.

ರುದ್ರದೇವರಮಠ: ಚಿಕ್ಕಲಪರ್ವಿ ಗ್ರಾಮದಲ್ಲಿ ೧೯೬೦ರಲ್ಲಿ ಶ್ರೀ ರುದ್ರಮುನಿ ಸ್ವಾಮಿಗಳು ಸ್ಥಾಪಿಸಿದ ಮುರುಘಾ ಸಮಯದ ವಿರಕ್ತಮಠವು ಬೆಳೆದಿದೆ. ಹಾಲವಿಯ ಮಠದ ಎರಡನೆಯ ಪೀಠಾಧಿಪತಿಗಳಾಗಿದ್ದ ಶ್ರೀ ರುದ್ರಮುನಿ ಸ್ವಾಮಿಗಳು ಮಠವನ್ನು ತ್ಯಜಿಸಿ ಈ ಗ್ರಾಮದ ಹೊರ ಭಾಗದಲ್ಲಿ ಬಂದು ನೆಲೆಸಿ ಈ ಮಠವನ್ನು ೧೯೮೬ರಲ್ಲಿ ಸ್ಥಾಪನೆ ಮಾಡಿದ್ದಾರೆ. ಶ್ರೀ ರುದ್ರಮುನಿ ಸ್ವಾಮಿಗಳು ಇಲ್ಲಿಗೆ ಆಗಮಿಸಿ ತಪೋನುಷ್ಠಾನ ಕೈಗೊಂಡು ಭಕ್ತರಿಗೆ ಮಾರ್ಗದರ್ಶಕರಾಗಿ, ಧರ್ಮೋಪದೇಶವನ್ನು ಮಾಡುತ್ತಾ ಸಮಾಜವನ್ನು ಸಂಸ್ಕಾರಗೊಳಿಸಿದರು. ಗುರುಗಳ ತಪೋಶಕ್ತಿಗೆ ಮನಸೋತ ಭಕ್ತರು ಗುರುಗಳಿಗಾಗಿ ಊರಿನ ಹೊರ ಭಾಗದ ವಿಶಾಲ ಮೈದಾನದಲ್ಲಿ ಮಠವನ್ನು ಸ್ಥಾಪಿಸಿಕೊಟ್ಟರು. ಗುರುಗಳು ಕೊನೆಯ ದಿನಗಳ ತನಕ ವೀರಶೈವ ಧರ್ಮದ ಪ್ರಚಾರ ಕಾರ್ಯವನ್ನು ಕೈಗೊಂಡು ಲಿಂಗೈಕ್ಯರಾಗಿದ್ದಾರೆ. ಚಿಕ್ಕಲಪರ್ವಿ ಗ್ರಾಮದ ಭಕ್ತರು ಕರ್ತೃ ಗುರುಗಳಾದ ಶ್ರೀ ರುದ್ರಸ್ವಾಮಿ ಗುರುಗಳ ಗದ್ದುಗೆಯನ್ನು ಸ್ಥಾಪಿಸಿದರು. ಧಾರ್ಮಿಕ ಕಾರ್ಯಗಳು ಮಠದಲ್ಲಿ ನಿರಂತರವಾಗಿ ನಡೆಯುವಂತೆ ನೋಡಿಕೊಂಡರು.

ಈಗಿನ ಶ್ರೀ ವಿರೂಪಾಕ್ಷ ಸ್ವಾಮಿಗಳು ಕುರುಕನಸೀಗೆಹಳ್ಳಿಯ ಶ್ರೀ ದೊಡ್ಡಯ್ಯ ಮತ್ತು ಶ್ರೀಮತಿ ಗಂಗಮ್ಮನವರ ಪುತ್ರರಾಗಿ ೧೯೪೩ ರ ಅಕ್ಟೋಬರ್ ಇಪ್ಪತ್ತಾರರಂದು ಜನಿಸಿದರು. ಇವರು ಕುರುಕನಸೀಗೆಹಳ್ಳಿಯಲ್ಲಿ ಪ್ರಾಥಮಿಕ ಶಾಲೆಯನ್ನು ಮುಗಿಸಿ, ನಂತರ ಧಾರವಾಡ, ಹುಬ್ಬಳ್ಳಿ, ಮತ್ತು ಬೆಂಗಳೂರುಗಳಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ಶ್ರೀ ರುದ್ರಸ್ವಾಮಿ ಮಠದ ಉತ್ತರಾಧಿಕಾರಿಯಾಗಿ ನೇಮಕಗೊಂಡು ೧೯೭೯ರ ಮೇ ಒಂಬತ್ತರಂದು ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಹಾಲವಿ ಮಠದ ಆಡಳಿತ ಮತ್ತು ಈ ಮಠದ ಆಡಳಿತದಲ್ಲಿದ್ದ ಗೊಂದಲವನ್ನು ೧೯೮೬ರಲ್ಲಿ ಪೂರ್ಣವಾಗಿ ಬಗೆಹರಿಸಿಕೊಂಡು ೧೯೮೬ರಲ್ಲಿ ಸ್ವತಂತ್ರ ಮಠವನ್ನಾಗಿ ಮಾಡಿಕೊಂಡರು. ನಂತರ ಮಠದ ಅಭಿವೃದ್ಧಿಗೆ ಯೋಜನೆಯನ್ನು ತಯಾರಿಸಿಕೊಂಡ ಗುರುಗಳು ಮಠದ ಕಟ್ಟಡವನ್ನು ನವೀಕರಣಗೊಳಿಸಿ ಗೋಪುರ, ಸ್ವಾಗತ ಕಮಾನು ಹಾಗೂ ಮಠದ ಅಧೀನದ ಜಾಗಕ್ಕೆ

ಆವರಣ ಗೋಡೆಯನ್ನು ನಿರ್ಮಿಸಿ ಧಾರ್ಮಿಕ ಪರಿಸರವನ್ನು ಸೃಷ್ಟಿಮಾಡಿದ್ದಾರೆ. ೧೯೯೩ರಲ್ಲಿ ನಾಲ್ಕುಲಕ್ಷ ರೂ ಯೋಜನೆಯಲ್ಲಿ ಕಲ್ಯಾಣಮಂಟಪವನ್ನು ನಿರ್ಮಿಸಿದ್ದಾರೆ. ಕರ್ತೃ ಗುರುಗಳ ಗದ್ದುಗೆಯನ್ನು ನವೀಕರಣಗೊಳಿಸಿ ಸುಸಜ್ಜಿತವಾದ ಭವ್ಯ ಮಂಟಪವನ್ನು ನಿರ್ಮಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಕರ್ತೃಗದ್ದುಗೆಗೆ ನಿತ್ಯ ಎರಡೂ ವೇಳೆ ಪೂಜೆ, ಶ್ರಾವಣ ಶುದ್ಧ ತದಿಗೆಯಂದು ಗುರುಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಪುರಾಣ ಪ್ರವಚನವನ್ನು ಏರ್ಪಡಿಸಲಾಗುತ್ತಿದೆ. ಮಠಕ್ಕೆ ಆಗಮಿಸುವ ಭಕ್ತರಿಗೆ ನಿತ್ಯ ಬೆಳಿಗ್ಗೆ ಆರರಿಂದ ರಾತ್ರಿ ಹನ್ನೊಂದು ಗಂಟೆಯ ತನಕ ಅನ್ನ ದಾಸೋಹ ನಡೆಯುತ್ತಿದೆ. ಮಠದಲ್ಲಿ ಬಡಮಕ್ಕಳಿಗೆ ಆಶ್ರಯ ಕೊಟ್ಟು ಅವರ ಶಿಕ್ಷಣಕ್ಕೆ ನೆರವಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ವಿರೂಪಾಕ್ಷ ಸ್ವಾಮಿಗಳು, ಶ್ರೀ ರುದ್ರದೇವರ ಮಠ,ಚಿಕ್ಕಲಪರ್ವಿ,ಮಾನವಿ ತಾ. ರಾಯಚೂರು ಜಿಲ್ಲೆ.

ನವಿಲಕಲ್ಲು

ಮಾನವಿ ತಾಲ್ಲೂಕಿನ ನವಿಲಕಲ್ಲು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ನವಿಲಕಲ್ಲು ಗ್ರಾಮದ ಉತ್ತರ ಭಾಗದಲ್ಲಿ ಹಿರೇಮಠವು ಸ್ಥಾಪನೆಯಾಗಿದೆ. ರಂಭಾಪುರಿ ಪೀಠದ ಶಾಖಾಮಠವಾದ ಈ ಮಠವು ಪುತ್ರ ವರ್ಗದ ಪರಂಪರೆಯಲ್ಲಿ ಬೆಳೆದುಕೊಂಡು ಬಂದಿದೆ. ಈ ಮಠದ ಕರ್ತೃ ಗುರುಗಳು ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮಿಗಳೆಂದು ಹೇಳಲಾಗುತ್ತದೆ. ಕರ್ತೃ ಗುರುಗಳು ಲೋಕಸಂಚಾರ ಕೈಗೊಂಡು ಸಮೀಪದ ಶಿರವಾರದ ಬೆಟ್ಟದ ಗವಿಯಲ್ಲಿ ಅನುಷ್ಠಾನಗೊಂಡು ಈ ಸ್ಥಳಕ್ಕೆ ಬಂದು ಮಠವನ್ನು ಸ್ಥಾಪಿಸಿರುತ್ತಾರೆ.

ಮಠದ ಪರಂಪರೆ : ಮಠದ ಪರಂಪರೆಯಲ್ಲಿ ಐದು ಜನ ಗುರುಗಳು ಅಧಿಕಾರವನ್ನು ನಡೆಸಿರುತ್ತಾರೆಂದು ಹೇಳಲಾಗುತ್ತಿದೆ.ಈ ಗುರುಗಳ ಪೈಕಿ ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮಿಗಳು ಹಾಗೂ ಇತ್ತೀಚೆಗೆ ಪಟ್ಟಾಧಿಕಾರವನ್ನು ವಹಿಸಿಕೊಂಡ ಶ್ರೀ ಪಂಚಾಕ್ಷರ ಶಿವಾಚಾರ್ಯ ಸ್ವಾಮಿಗಳ ಹೆಸರನ್ನು ದಾಖಲಿಸಬಹುದಾಗಿದೆ. ಪುರಾತನ ಕಾಲದಲ್ಲಿ ಪ್ರಾರಂಭವಾದ ಈ ಮಠದಲ್ಲಿ ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಸುಮಾರು ವರ್ಷಗಳ ಕಾಲ ಮಠಾಧೀಶರಿಲ್ಲದೆ ಮಠವು ಖಾಲಿ ಉಳಿದಿದ್ದ ಕಾರಣ ಮಠದ ಪರಂಪರೆಯ ಬಗ್ಗೆ ಮಾಹಿತಿ ದೊರೆಯದಾಗಿದೆ. ಪುರಾತನ ಮಠವು ನಶಿಸಿ ಹೋಗಬಾರದೆಂಬ ಮಹಾ ಉದ್ದೇಶದಿಂದ ಮಠದ ವಂಶಸ್ಥರಾದ ಶ್ರೀ ಗಂಗಾಧರಪ್ಪ ಎಂಬುವರು ತಮ್ಮ ಪುತ್ರರಾದ ಶ್ರೀ ಪಂಚಾಕ್ಷರಿದೇವರನ್ನು ಮಠದ ಉತ್ತರಾಧಿಕಾರಿಗಳನ್ನಾಗಿ ನೇಮಿಸಿದರು. ಹದಿನಾಲ್ಕು ವರ್ಷದ ಶ್ರೀ ಪಂಚಾಕ್ಷರಿ ಶಿವಾಚಾರ್ಯ ಸ್ವಾಮಿಗಳು ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡು ವಿದ್ಯಾಭ್ಯಾಸವನ್ನು ಮುಂದುವರೆಸಿದ್ದಾರೆ. ಗುರುಗಳ ಪೂರ್ವಾಶ್ರಮದ ತಂದೆಯವರು ಮಠದ ಆಡಳಿತವನ್ನು ಹಾಗೂ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಾ ಮಠವನ್ನು ಅಭಿವೃದ್ಧಿಗೆ ತಂದಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಬಹುದಿನಗಳಿಂದ ಮಠವು ಖಾಲಿ ಉಳಿದಿದ್ದರಿಂದ ಧಾರ್ಮಿಕ ಚಟುವಟಿಕೆಗಳು ಸ್ಥಗಿತಗೊಂಡು ಜನಮನದಿಂದ ಮಠವು ದೂರ ಉಳಿದಿತ್ತು. ಇತ್ತೀಚಿನ ದಿನಗಳಲ್ಲಿ ಮಠದಲ್ಲಿ ಪುನಃ ಧಾರ್ಮಿಕ ಆಚರಣೆಗಳು ಪುನರಾರಂಭಗೊಂಡ ಮೇಲೆ ಭಕ್ತರು ಮಠದ ಚಟುವಟಿಕೆಗಳಿಗೆ ಸ್ಪಂದಿಸತೊಡಗಿದ್ದಾರೆ. ಮಠದಲ್ಲಿ ಹಳೆಯ ಕಟ್ಟಡ ಸಾಕಾಗದೆ ಹೋದಾಗ, ಭಕ್ತರ ನೆರವು ಪಡೆದು ಊರಿನ ಉತ್ತರ ಭಾಗದಲ್ಲಿ ನೂತನ ಕಟ್ಟಡವನ್ನು ನಿರ್ಮಿಸಲಾಗಿದೆ. ಮಠದ ಆವರಣದಲ್ಲಿ ಕಲ್ಯಾಣ ಮಂಟಪವನ್ನು ನಿರ್ಮಿಸಲಾಗಿದೆ. ಪುರಾತನ ಕಾಲದ ಗದ್ದುಗೆಗಳನ್ನು ನವೀಕರಣಗೊಳಿಸಿ ಸ್ಮಾರಕಗಳನ್ನಾಗಿ ರೂಪಿಸಲಾಗಿದೆ.

ಧಾರ್ಮಿಕ ಕಾರ್ಯಗಳು: ಮಠದಲ್ಲಿ ಪ್ರತಿ ವರ್ಷ ನವರಾತ್ರಿಯಂದು ದೇವಿ ಪುರಾಣವನ್ನು ನಡೆಸಲಾಗುತ್ತಿದೆ. ನಿತ್ಯ ಗದ್ದುಗೆಗಳಿಗೆ ಪೂಜೆ, ಅಮಾವಾಸ್ಯೆ ಮತ್ತು ಹುಣ್ಣಿಮೆಗಳಲ್ಲಿ ವಿಶೇಷ ಪೂಜೆ, ಶಿವರಾತ್ರಿ, ಕಾರ್ತೀಕ ಹಾಗೂ ಶ್ರಾವಣ

ಮಾಸಗಳಲ್ಲಿ ವಿಶೇಷ ಪೂಜೆ ಹಾಗೂ ಅನ್ನದಾಸೋಹವನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಪಂಚಾಕ್ಷರಿ ಶಿವಾಚಾರ್ಯ ಸ್ವಾಮಿಗಳು. ಶ್ರೀ ಹಿರೇಮಠ, ನವಿಲಕಲ್ಲು, ಮಾನವಿ ತಾ, ರಾಯಚೂರುಜಿಲ್ಲೆ.

ಮಾನವಿ

ರಾಯಚೂರು ಜಿಲ್ಲೆಯ ಮಾನವಿ ಪಟ್ಟಣವು ತಾಲ್ಲೂಕಿನ ಕೇಂದ್ರ ಸ್ಥಳವಾಗಿ ಜಿಲ್ಲಾ ಕೇಂದ್ರದಿಂದ ನೈರುತ್ಯಕ್ಕೆ ಮೂವತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಮುತ್ತಿನಪೆಂಡೆಮಠವು ಅಸ್ತಿತ್ವದಲ್ಲಿದೆ.

ಕಲ್ಮಠ (ಮುತ್ತಿನಪೆಂಡೆಮಠ): ಮಾನವಿ ಪಟ್ಟಣದಲ್ಲಿ ಪುರಾತನ ಕಾಲದಿಂದಲ್ಲಿ ಸ್ಥಾಪನೆಯಾಗಿರುವ ಶ್ರೀಶೈಲ ಪೀಠದ ಶಾಖಾಮಠವಾಗಿರುವ ಮುತ್ತಿನಪೆಂಡೆಮಠ ಅಥವಾ ಕಲ್ಮಠ ಎಂದು ಕರೆಯಲಾಗುವ ಮಠವು ಅಸ್ತಿತ್ವದಲ್ಲಿದೆ. ಈ ಮಠದ ಸ್ಥಾಪನೆಯಿಂದ ಮಾನವಿ ಪಟ್ಟಣವು ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಪ್ರಗತಿಯನ್ನು ಕಂಡಿದೆ.

ಮಠ ಸ್ಥಾಪನೆ: ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು ಈ ಮಠವನ್ನು ಸ್ಥಾಪನೆ ಮಾಡಿದ್ದಾರೆ. ಗುರುಗಳು ತಪೋಧನರೂ, ಲಿಂಗಪೂಜಾ ನಿಷ್ಠರೂ ಆಗಿದ್ದರು ಎಂದು ಈ ಮಠದ ತಾಮ್ರ ಶಾಸನದ ಉಲ್ಲೇಖದಿಂದ ತಿಳಿದು ಬರುತ್ತದೆ. ಗುರುಗಳು ಯಾರಿಗೂ ದರ್ಶನ ನೀಡದೆ ಸದಾ ಲಿಂಗಪೂಜೆಯಲ್ಲಿ ಮಗ್ನರಾಗಿರುತ್ತಿದ್ದರಂತೆ. ಮೌನವ್ರತದಿಂದ ಲಿಂಗಪೂಜೆ ನಿಷ್ಠೆಯ ಮೂಲಕ ತಪಸ್ಸನ್ನು ಆಚರಿಸಿ ಸಿದ್ಧಿಯನ್ನು ಸಾಧಿಸಿಕೊಂಡಿದ್ದರಂತೆ. ಇಂತಹ ಮಹಾ ಮಹಿಮರು ತಮ್ಮ ಕೊನೆಯ ದಿನಗಳಲ್ಲಿ ಮಠವನ್ನು ಸ್ಥಾಪಿಸಿ ಉತ್ತರಾಧಿಕಾರಿಗಳನ್ನು ನೇಮಿಸಿ ಪಟ್ಟಾಧಿಕಾರವನ್ನು ಮಾಡುವ ವಿಚಾರವನ್ನು ಬರವಣಿಗೆಯ ಮೂಲಕ ಭಕ್ತರಿಗೆ ತಿಳಿಸಿ ಮಠ ಸ್ಥಾಪನೆಗೆ ನಾಂದಿಹಾಡಿ ಲಿಂಗೈಕ್ಯರಾಗಿದ್ದಾರೆ. ಗುರುಗಳ ನಿರ್ದೇಶನದಂತೆ ಸಮಾಧಿ ಸ್ಥಳದ ಮೇಲೆ ಗದ್ದುಗೆಯನ್ನು ನಿರ್ಮಿಸಿ ಮಠವನ್ನು ಸ್ಥಾಪನೆ ಮಾಡಿ, ಶ್ರೀ ವಿರೂಪಾಕ್ಷ ಸ್ವಾಮಿಗಳನ್ನು ಅಧಿಕಾರಕ್ಕೆ ತರುತ್ತಾರೆ.

ಪರಂಪರೆ:

೧. ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ವಿರೂಪಾಕ್ಷ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಕರವೀರ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಎರಡನೆಯ ವಿರೂಪಾಕ್ಷ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಎರಡನೆಯ ಕರವೀರಸ್ವಾಮಿ ಶಿವಾಚಾರ್ಯಸ್ವಾಮಿಗಳು
೮. ಷ.ಬ್ರ.ಶ್ರೀ ಎರಡನೆಯ ಮಹಾಂತ ಶಿವಾಚಾರ್ಯಸ್ವಾಮಿಗಳು
೯. ಷ.ಬ್ರ.ಶ್ರೀ ಸಂಗಮೇಶ್ವರ ಶಿವಾಚಾರ್ಯಸ್ವಾಮಿಗಳು
೧೦. ಷ.ಬ್ರ.ಶ್ರೀ ಮೂರನೆಯ ಮಹಾಂತ ಶಿವಾಚಾರ್ಯಸ್ವಾಮಿಗಳು
೧೧. ಷ.ಬ್ರ.ಶ್ರೀ ಮೂರನೆಯ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೧೨. ಷ.ಬ್ರ.ಶ್ರೀ ಮೂರನೆಯ ವಿರೂಪಾಕ್ಷ ಶಿವಾಚಾರ್ಯಸ್ವಾಮಿಗಳು
೧೩. ಷ.ಬ್ರ.ಶ್ರೀ ಶಿವಮೂರ್ತಿ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಶ್ರೀ ಎರಡನೆಯ ವಿರೂಪಾಕ್ಷ ಸ್ವಾಮಿಗಳ ಕಾಲದಲ್ಲಿ ಮಠವು ಜೀರ್ಣೋದ್ಧಾರ ವಾಯಿತೆಂದು ತಿಳಿದು ಬರುತ್ತದೆ. ನಂತರ ಬಂದ ಶ್ರೀ ಎರಡನೆಯ ಕರವೀರ ಸ್ವಾಮಿಗಳು ಮಠದಲ್ಲಿ ಬಾವಿಯೊಂದನ್ನು ತಾವೇ ತೋಡಿ ತಮ್ಮ ಕಾಯಕ ನಿಷ್ಠೆಯನ್ನು ತೋರಿಸಿದ್ದಾರೆ. ಇವರ ಕಾಲದಲ್ಲಿ ಮಠವು ಧಾರ್ಮಿಕ, ಸಾಮಾಜಿಕ ಹಾಗೂ ಆರ್ಥಿಕವಾಗಿ ಹೆಚ್ಚು ಅಭಿವೃದ್ಧಿಯಾಯಿತು. ನಂತರ ಬಂದ ಶ್ರೀ ಎರಡನೆಯ ಮಹಾಂತ ಸ್ವಾಮಿಗಳು ಬಹಳ ಪ್ರಭಾವಿಯಾಗಿ ಮೆರೆದಿದ್ದರು. ಹೈದರಾಬಾದ್ ನವಾಬನು ಗುರುಗಳ ಪ್ರಭಾವಕ್ಕೆ ಮಣಿದು ಹದಿನೈದು ಎಕರೆ ಭೂಮಿಯನ್ನು ಉಂಬಳಿಯಾಗಿ ನೀಡಿದ್ದಾನೆ. ಅಲ್ಲದೆ ಗುರುಗಳ ಕೃಪಾಶೀರ್ವಾದಕ್ಕೆ ಒಳಗಾಗಿದ್ದ ಭಕ್ತರು ಸುಮಾರು ಮೂವತ್ತು ಎಕರೆ ಜಮೀನನ್ನು ಮಠಕ್ಕೆ

ದಾನಮಾಡಿ ಮಠವು ಆರ್ಥಿಕವಾಗಿ ಸಧೃಡತೆ ಸಾಧಿಸಲು ನೆರವಾದರು. ನಂತರ ಬಂದ ಶ್ರೀ ಸಂಗಮೇಶ್ವರ ಶಿವಾಚಾರ್ಯ ಸ್ವಾಮಿಗಳು ಮಾನವಿ ಶಾಖಾ ಮಠದ ಹರ್ವಿಯಲ್ಲಿಯೇ ವಾಸ್ತವ್ಯಮಾಡಿ ಮಾಡಗಿರಿ, ಕುಪ್ಪಗಲ್ಲು, ಹೊಸಪೇಟೆ (ರಾಯಚೂರು ತಾಲ್ಲೂಕು) ಮರ್ಚೇಡು, ನೀರಮಾನವಿ ಮುಂತಾದ ಗ್ರಾಮಗಳಲ್ಲಿ ಶಾಖಾ ಮಠಗಳನ್ನು ಸ್ಥಾಪಿಸಿದ್ದು ಈ ಮಠಗಳು ಇಂದಿಗೂ ಸುಸ್ಥಿಯಲ್ಲಿವೆ. ಇವರ ನಂತರ ಬಂದ ಮಠಾಧೀಶರು ತಮ್ಮ ಶಕ್ತಿಯಾನುಸಾರ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದು ಮಠವನ್ನು ಅಭಿವೃದ್ಧಿಪಡಿಸಿದರು. ಪರಂಪರೆಯ ಹನ್ನೆರಡನೆಯ ಗುರುಗಳಾಗಿ ಶ್ರೀ ವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠ ಉಚ್ಛ್ರಾಯ ಸ್ಥಿತಿಯಲ್ಲಿ ಬೆಳೆದಿದೆ. ಶರಣರ ಕಾಯಕನಿಷ್ಠೆಯನ್ನು ಮೈಗೂಡಿಸಿಕೊಂಡು ಹಿರಿಯ ಗುರುಗಳು ಸಂಪಾದಿಸಿದ ಭೂಮಿಯನ್ನು ಅಭಿವೃದ್ಧಿಪಡಿಸಿ ಸ್ವತಃ ತಾವೇ ಉಳುಮೆ ಮಾಡಿ ಉತ್ಪಾದನೆ ತೆಗೆಯತೊಡಗಿದರು. ಕಾಯಕ ಯೋಗಿಗಳಾದ ಗುರುಗಳು ಯಾರನ್ನೂ ಬೇಡದೆ ಮಠವನ್ನು ಶ್ರೀಮಂತಗೊಳಿಸಿದರು. ಇವರು ಶ್ರೀಶೈಲದ ಜಗದ್ಗುರುಗಳನ್ನು ಕರೆಸಿ ಅಭೂತಪೂರ್ವವಾದ ಕಾರ್ಯಕ್ರಮವನ್ನು ನಡೆಸಿ ಧರ್ಮಪ್ರಚಾರವನ್ನು ಕೈಗೊಂಡರು. ಪರಂಪರೆಯ ಉತ್ತರಾಧಿಕಾರಿಗಳನ್ನಾಗಿ ಶ್ರೀ ಶಿವಮೂರ್ತಿ ಶಿವಾಚಾರ್ಯರನ್ನು ನೇಮಿಸಿ ೧೯೭೨ರಲ್ಲಿ ಲಿಂಗೈಕ್ಯರಾಗಿದ್ದಾರೆ.

ಪರಂಪರೆಯ ಹದಿಮೂರನೆಯ ಗುರುಗಳಾಗಿ ೧೯೭೫ ರಲ್ಲಿ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡು ಮಠವನ್ನು ಉತ್ತರೋತ್ತರವಾಗಿ ಬೆಳೆಯುವಂತೆ ಮಾಡಿದ್ದಾರೆ. ಗುರುಗಳು ಶಿವಯೋಗ ಮಂದಿರ, ಸೋಲಾಪುರ ಹಾಗೂ ಮಟುಮರಿಯಲ್ಲಿ ವಿದ್ಯಾಭ್ಯಾಸವನ್ನು ಮಾಡಿ ಮಠಕ್ಕೆ ಆಗಮಿಸಿದರು. ತಾವು ಕಲಿತ ಪಾಂಡಿತ್ಯದ ಜೊತೆಗೆ ಮಾನವೀಯ ಮೌಲ್ಯಗಳನ್ನು ಮೈಗೂಡಿಸಿ ಕೊಂಡಿದ್ದ ಗುರುಗಳು ತಮಗೆ ದೊರೆತ ಅವಕಾಶವನ್ನು ಭಕ್ತರ ಉದ್ಧಾರಕ್ಕಾಗಿ ಬಳಸಿಕೊಂಡರು. 'ಗುರುವಾದರೂ ಕಾಯಕದಿಂದಲೇ ಮುಕ್ತಿ ಕಾಣಬೇಕು' ಎಂಬ ಹಿರಿಯ ಗುರುಗಳ ತತ್ತ್ವದಂತೆ ಬದುಕಿ ಮಠವನ್ನು ಶ್ರೀಮಂತಗೊಳಿಸಿದರು.

ಅಭಿವೃದ್ಧಿ ಕಾರ್ಯಗಳು: ಗುರುಗಳು ಕಾಯಕಯೋಗದಿಂದ ಗಳಿಸಿದ್ದು ಅಪಾರ. ಪ್ರಗತಿಪರ ಚಿಂತಕರಾಗಿ ಈ ಪುರಾತನ ಮಠವನ್ನು ಆಧುನಿಕ ಪ್ರಪಂಚಕ್ಕೆ ತೆರೆದಿಟ್ಟು, ಸಮಾಜಮುಖಿಯಾಗಿ ಬೆಳೆಯುವಂತೆ ಮಾಡಿದರು. ಇದರ ಫಲವಾಗಿ ಮಠವು ಆಧುನಿಕ ಕಟ್ಟಡವನ್ನು ಹೊಂದಿತು. ಬೃಹತ್ ಕಲ್ಯಾಣಮಂಟಪ, ಶಿಕ್ಷಣ ಸಂಸ್ಥೆಗಳ ಸಮುಚ್ಚಯ, ತೊಂಬತ್ತು ಹಾಸಿಗೆಗಳ ಆಯುರ್ವೇದ ಆಸ್ಪತ್ರೆಯನ್ನು ಸ್ಥಾಪಿಸಿ ಸಮಾಜಕ್ಕೆ ಅರ್ಪಿಸಿದ್ದಾರೆ. ಇದು ಇವರ ಪ್ರಗತಿಪರ ದೃಷ್ಟಿಗೆ ಹಿಡಿದ ಕೈಗನ್ನಡಿಯಾಗಿದೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗದ್ದುಗೆಗಳಿಗೆ ನಿತ್ಯಪೂಜೆ, ಅಮಾವಾಸ್ಯೆ ಮತ್ತು ಹುಣ್ಣಿಮೆಗಳಲ್ಲಿ ವಿಶೇಷ ಪೂಜೆ, ಪ್ರತಿವರ್ಷ ಗಣೇಶೋತ್ಸವ, ಹಿರಿಯ ಗುರುಗಳ ಆರಾಧನೆ ಹಾಗೂ ದಸರಾ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ೨೦೦೦ ನೆಯ ಸಾಲಿನಲ್ಲಿ ನಡೆದ ದಸರಾ ಉತ್ಸವವನ್ನು ಗುರುಗಳ ಇಪ್ಪತ್ತೈದನೆಯ ವರ್ಷದ ಪಟ್ಟಾಭಿಷೇಕದ ರಜತ ಮಹೋತ್ಸವವನ್ನಾಗಿ ಭಕ್ತರು ಆಚರಿಸಿದರು. ಈ ಸಂದರ್ಭದಲ್ಲಿ ಬೆಳ್ಳಿಯ ದೇವಿ ಮೂರ್ತಿಯನ್ನು ಮಾಡಿಸಿ ಉತ್ಸವವನ್ನು ಆಚರಿಸಲಾಯಿತು. ಮಠದಲ್ಲಿ ನಿತ್ಯ ಅನ್ನದಾಸೋಹವನ್ನು ಸಹ ನಡೆಸಲಾಗುತ್ತಿದೆ.

ಶೈಕ್ಷಣಿಕ ಕಾರ್ಯಗಳು: ೧೯೭೮ರಲ್ಲಿ ಪ್ರಥಮವಾಗಿ ಬಡಮಕ್ಕಳಿಗಾಗಿ ಉಚಿತ ಪ್ರಸಾದ ನಿಲಯವನ್ನು ಪ್ರಾರಂಭಿಸಿ ಗ್ರಾಮಾಂತರ ಬಡಮಕ್ಕಳ ಕಲಿಕೆಗೆ ನೆರವಾದರು. ಇದರಲ್ಲಿ ತೃಪ್ತಿ ಕಂಡ ಗುರುಗಳು ೧೯೮೩ರಲ್ಲಿ ಪ್ರಾಥಮಿಕ ಶಾಲೆ, ೧೯೯೦ರಲ್ಲಿ ಪ್ರೌಢಶಾಲೆ, ೧೯೯೫ ರಲ್ಲಿ ಸಂಯುಕ್ತ ಪದವಿ ಪೂರ್ವ ಕಿರಿಯ ಮಹಾವಿದ್ಯಾನಿಲಯವನ್ನು ಸ್ಥಾಪಿಸಿದರು. ೨೦೦೦ ದ ವರ್ಷದಲ್ಲಿ ಆಯುರ್ವೇದ ಮೆಡಿಕಲ್ ಕಾಲೇಜನ್ನು ಪ್ರಾರಂಭಿಸಿದ್ದಾರೆ. ಇಷ್ಟಲ್ಲದೆ ಅನಾಥಾಶ್ರಮ, ಸಂಗೀತ ಶಾಲೆ, ಸಂಸ್ಕೃತ ಪಾಠಶಾಲೆಗಳನ್ನು ತೆರೆದು ಶೈಕ್ಷಣಿಕ ಪ್ರಗತಿಯನ್ನು ಸಾಧಿಸಿದ್ದಾರೆ. ಗುರುಗಳು ಕ್ರಿಯಾಶೀಲರಾಗಿ ಪ್ರಗತಿಪರ ಧೋರಣೆಯೊಂದಿಗೆ ಮಠವನ್ನು ಸರ್ವ ವಿಧದಲ್ಲಿ ಅಭಿವೃದ್ಧಿಪಡಿಸಿ ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಪ್ರಗತಿಯನ್ನು ಸಾಧಿಸಿದ್ದಾರೆ. ಗುರುಗಳು ಮಾನವೀಯ ಮೌಲ್ಯಗಳ ಹಾಗೂ ವೈಜ್ಞಾನಿಕ ದೃಷ್ಟಿಯಿಂದ ಬೆಳೆಸಿ ಮಠವನ್ನು ಸಮಾಜದ ದುರ್ಬಲರ ಹಾಗೂ ಅಸಹಾಯಕರನ್ನು ಮೇಲೆತ್ತುವ ಪ್ರಯತ್ನದಲ್ಲಿ ಸಾಗುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶಿವಮೂರ್ತಿ ಶಿವಾಚಾರ್ಯಸ್ವಾಮಿಗಳು, ಶ್ರೀಕಲ್ಮಠ (ಮುತ್ತಿನಪೆಂಡೆ ಹಿರೇಮಠ), ಮಾನವಿ, ರಾಯಚೂರುಜಿಲ್ಲೆ.

❑

ರಾಯಚೂರು ತಾಲ್ಲೂಕು

ರಾಯಚೂರು ಜಿಲ್ಲೆಯ ಐದು ತಾಲ್ಲೂಕುಗಳಲ್ಲಿ ಒಂದಾದ ರಾಯಚೂರು ತಾಲ್ಲೂಕು ಕೈಗಾರಿಕೋದ್ಯಮದಿಂದ ಹೆಸರು ಪಡೆದಿದೆ. ಆಂಧ್ರಪ್ರದೇಶದ ಗಡಿಭಾಗದಲ್ಲಿರುವ ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಬೆಳೆದ ಲಕ್ಷಣಗಳು ಕಂಡು ಬರುತ್ತವೆ. ಪ್ರಸ್ತುತ ಏಳು ಮಠಗಳು ಇಲ್ಲಿ ಅಸ್ತಿತ್ವದಲ್ಲಿವೆ.

ಚಿಕ್ಕಸುಗೂರು

ರಾಯಚೂರು ತಾಲ್ಲೂಕಿನ ಚಿಕ್ಕಸುಗೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಏಳು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಚೌಕಿಮಠವು ಅಸ್ತಿತ್ವದಲ್ಲಿದೆ.

ಚೌಕಿಮಠ: ಚಿಕ್ಕಸುಗೂರು ಗ್ರಾಮದ ದಕ್ಷಿಣದ ಹೊರಭಾಗದಲ್ಲಿ ವಿರಕ್ತ ಸಂಪ್ರದಾಯದ ಶ್ರೀ ಚೌಕಿಮಠವು ಸ್ಥಾಪನೆಯಾಗಿದೆ. ಈ ಮಠವು ಪುರಾತನ ಕಾಲದಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಕೆಂಪಿನ ಸಮಯದ ಈ ವಿರಕ್ತಮಠವು ಈ ಗ್ರಾಮದ ಧಾರ್ಮಿಕ ಕೇಂದ್ರ ಬಿಂದುವಾಗಿ ಬೆಳೆದಿದೆ.

ಮಠ ಸ್ಥಾಪನೆ: ಅರವತ್ಮೂರು ಪುರಾತನರಲ್ಲಿ ಒಬ್ಬರಾಗಿದ್ದ ಶ್ರೀ ನನ್ನಯ್ಯ ಎಂಬ ಶಿವಯೋಗಿಗಳು ಈ ನಾಡಿನಲ್ಲಿ ನೆಲೆ ನಿಂತು ಅನುಷ್ಠಾನ ಕೈಗೊಳ್ಳುತ್ತಿರುವ ಸಂದರ್ಭದಲ್ಲಿ, ಈ ಗ್ರಾಮದ ಬೇಟೆಗಾರನಾದ ಬೇಡರ ಭೀಮಯ್ಯನು ಗುರುಗಳ ಕೃಪಾಶೀರ್ವಾದಕ್ಕೆ ಒಳಗಾಗಿದ್ದನು. ಈತನು ಗುರುಗಳಿಗಾಗಿ ಮಠವನ್ನು ಸ್ಥಾಪಿಸಿ ಕೊಡುತ್ತಾನೆ. ಶ್ರೀ ನನ್ನಯ್ಯ ಗುರುಗಳು ಇಲ್ಲಿ ಭಕ್ತರ ಅಪೇಕ್ಷೆಯ ಮೇರೆಗೆ ನೆಲೆಗೊಂಡು, ಶ್ರೀ ಸಿದ್ಧಲಿಂಗ ಸ್ವಾಮಿಗಳೆಂದು ಅಭಿದಾನ ಪಡೆದು ಮಠದ ಅಧಿಕಾರವನ್ನು ವಹಿಸಿಕೊಂಡು ಮಠ ಸ್ಥಾಪನೆಯಾಗಲು ಕಾರಣರಾಗಿದ್ದಾರೆ ಎಂದು ಹೇಳಲಾಗುತ್ತದೆ.

ಮಠದ ಪರಂಪರೆ:

೧. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಗುರುಲಿಂಗಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಸಿದ್ಧರಾಮಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ವಿರೂಪಾಕ್ಷಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಸಿದ್ಧರಾಮಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಶ್ರೀ ನನ್ನಯ್ಯ ಸ್ವಾಮಿಗಳು ಅಂದು ಹೊರ ಭಾಗದಲ್ಲಿ ಸ್ಥಾಪಿಸಿದ ಮಠವು ಗ್ರಾಮ ಬೆಳೆದಂತೆ ಇಂದು ಗ್ರಾಮದ ಮಧ್ಯ ಭಾಗಕ್ಕೆ ಸೇರಿಕೊಂಡಿದೆ. ಕರ್ತೃಗುರುಗಳ ನಂತರ ಶ್ರೀ ಗುರುಲಿಂಗ ಸ್ವಾಮಿಗಳು ಈ ಮಠದ ಅಧಿಕಾರವನ್ನು ವಹಿಸಿಕೊಂಡು ಆಡಳಿತವನ್ನು ನಡೆಸಿ ಮೂಲ ಮಠದಲ್ಲಿ ಲಿಂಗೈಕ್ಯರಾಗಿದ್ದಾರೆ. ಗ್ರಾಮದ ಒಳ ಭಾಗದಲ್ಲಿರುವ ಮೂಲ ಮಠದಲ್ಲಿ ಶ್ರೀ ಸಿದ್ಧಲಿಂಗ ಸ್ವಾಮಿಗಳು ಹಾಗೂ ಗುರುಲಿಂಗ ಸ್ವಾಮಿಗಳ ಗದ್ದುಗೆಗಳು ಸ್ಥಾಪನೆಯಾಗಿವೆ. ನಂತರ ಅಧಿಕಾರಕ್ಕೆ ಬಂದ ಶ್ರೀ ಸಿದ್ಧರಾಮ ಸ್ವಾಮಿಗಳು ತಮ್ಮ ಧಾರ್ಮಿಕ ಚಟುವಟಿಕೆಗಳನ್ನು ನಡೆಸಲು ಊರಿನ ಒಳಭಾಗದ ಮೂಲಮಠದ ಕಟ್ಟಡ ಸಾಕಾಗದೆ ಹೋದಾಗ, ಹೊರಭಾಗದಲ್ಲಿ ಮಠದ ಕಟ್ಟಡವನ್ನು ನಿರ್ಮಿಸಿ ಸ್ಥಳಾಂತರಿಸುತ್ತಾರೆ. ಅಲ್ಲದೆ ಶ್ರೀ ಸಿದ್ಧರಾಮ ಸ್ವಾಮಿಗಳ ಕಾಲದಲ್ಲಿ ಮೂಲಮಠದಿಂದ ಮೂರು ಮೈಲಿ ದೂರದಲ್ಲಿರುವ ಹೊಸಪೇಟೆಯ ಶಾಖಾ ಮಠಕ್ಕೆ ನೂತನ ಕಟ್ಟಡವನ್ನು ನಿರ್ಮಿಸಿ ಅಭಿವೃದ್ಧಿಪಡಿಸಿರುತ್ತಾರೆ.

ನೂರು ವರ್ಷಗಳ ಹಿಂದೆ ಸ್ಥಳಾಂತರಗೊಂಡ ಈ ಮಠವು ಇಂದು ಭವ್ಯವಾದ ಕಟ್ಟಡದಿಂದ ರಾರಾಜಿಸುತ್ತಿದೆ. ಈ ಗ್ರಾಮದ ಹೊರಭಾಗದಲ್ಲಿ ಕಟ್ಟಡವನ್ನು ನಿರ್ಮಿಸಿ, ಪುರಾತನ ಮಠಕ್ಕೆ ಒಂದು ಭವ್ಯತೆಯನ್ನು ತಂದು ಕೊಟ್ಟ ಶ್ರೀ ಸಿದ್ಧರಾಮ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಶ್ರೀ ವಿರೂಪಾಕ್ಷ ಸ್ವಾಮಿಗಳು ಅಧಿಕಾರಕ್ಕೆ ಬಂದರು. ಇವರು ಪವಾಡ ಪುರುಷರಾಗಿ

ಹೆಸರು ಮಾಡಿದ್ದರು. ಇವರು ಸದಾ ಲೋಕಸಂಚಾರಿಗಳಾಗಿ ವೀರಶೈವ ಧರ್ಮವನ್ನು ಪ್ರಚಾರಗೊಳಿಸಿ ಜನರನ್ನು ಜಾಗೃತಗೊಳಿಸಿ,೧೯೪೬ರಲ್ಲಿ ಲಿಂಗೈಕ್ಯರಾದರು. ಕುಷ್ಟಗಿ ತಾಲ್ಲೂಕಿನ ಮುದೇನೂರು ಗ್ರಾಮದ ಶ್ರೀ ಸಿದ್ಧಲಿಂಗಯ್ಯ ಮತ್ತು ಶ್ರೀಮತಿ ಚನ್ನಮ್ಮನವರ ಪುತ್ರರಾಗಿ ೧೯೨೬ರಲ್ಲಿ ಶ್ರೀ ಸಿದ್ಧಲಿಂಗ ಸ್ವಾಮಿಗಳು ಜನಿಸಿದರು. ಇವರು ಮುದೇನೂರಿನಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ ಶಿವಯೋಗ ಮಂದಿರದಲ್ಲಿ ಧಾರ್ಮಿಕ ವಿದ್ಯಾಭ್ಯಾಸ ಮಾಡಿ, ೧೯೫೦ರಲ್ಲಿ ಚೌಕಿಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡಿರುತ್ತಾರೆ. ಪಟ್ಟಾಧಿಕಾರಕ್ಕೆ ಬಂದ ಗುರುಗಳು ಹೊಸಪೇಟೆ ಶಾಖಾಮಠದಲ್ಲಿ ನೆಲೆಸಿ ಎರಡೂ ಮಠಗಳನ್ನು ಅಭಿವೃದ್ಧಿಪಡಿಸಿ ೧೯೭೭ರಲ್ಲಿ ಲಿಂಗೈಕ್ಯರಾಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಗ್ರಾಮದ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ಮೂರು ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆಯನ್ನು ನಡೆಸಲಾಗುತ್ತಿದೆ. ಶ್ರೀ ಸಿದ್ಧರಾಮ ಸ್ವಾಮಿಗಳ ಪುಣ್ಯಾರಾಧನೆಯನ್ನು ಆಶ್ವೀಜ ಬಹುಳ ಪಂಚಮಿಯಂದು ಮೂರು ದಿನಗಳ ಕಾಲ ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಪುರಾಣ ಪ್ರವಚನ ಹಾಗೂ ಅರವತ್ತ್ಮೂರು ಪುರಾತನರ ಪೂಜೆಯನ್ನು ಹಮ್ಮಿಕೊಳ್ಳಲಾಗುತ್ತಿದೆ. ೧೯೬೫ ರಲ್ಲಿ ಅರವತ್ತ್ಮೂರು ಜನ ಗುರುಗಳನ್ನು ಕರೆಸಿ ಮಂಟಪ ಪೂಜೆಯನ್ನು ಮಾಡಿಸಲಾಗಿತ್ತು. ಪ್ರತಿ ವರ್ಷ ನಡೆಯುವ ಜಾತ್ರೆಯ ಸಂದರ್ಭದಲ್ಲಿ ಅನ್ನದಾಸೋಹವನ್ನು ನಡೆಸಲಾಗುವುದಲ್ಲದೆ, ನಿತ್ಯ ಅನ್ನ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಚಿಕ್ಕಸುಗೂರಿನಲ್ಲಿ ತೊಂಬತ್ತು ಎಕರೆ ಜಮೀನು, ಹೊಸಪೇಟೆಯಲ್ಲಿ ಅರವತ್ತು ಎಕರೆ ಜಮೀನಿದ್ದು, ಇದನ್ನು ಅಭಿವೃದ್ಧಿಗೊಳಿಸಿ ಉತ್ಪಾದನೆಯನ್ನು ತೆಗೆಯಲಾಗುತ್ತಿದೆ.

ಶಿಕ್ಷಣ -ಸಾಹಿತ್ಯ ಸೇವೆ: ಮಠದ ವತಿಯಿಂದ ೧೯೬೮ರಲ್ಲಿ ಸಿದ್ಧರಾಮೇಶ್ವರ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ ಒಂದು ಪ್ರೌಢಶಾಲೆಯನ್ನು ಪ್ರಾರಂಭಿಸಲಾಗಿದೆ. 'ಪಾದೋದಕ ಸಿದ್ಧಾಂತ ದರ್ಪಣ' ಎಂಬ ಪುಸ್ತಕವನ್ನು ಪ್ರಕಟಿಸಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಸಿದ್ಧರಾಮ ಸ್ವಾಮಿಗಳು. ಶ್ರೀ ಚೌಕಿಮಠ, ಚಿಕ್ಕಸುಗೂರು, ರಾಯಚೂರು ತಾಲ್ಲೂಕು.

ಬಿಚ್ಚಾಲಿ

ರಾಯಚೂರು ತಾಲ್ಲೂಕಿನ ಬಿಚ್ಚಾಲಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಹನ್ನೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಪುರಾತನ ಪರಂಪರೆಯ ಶ್ರೀ ಸಾವಿರದೇವರ ಸಂಸ್ಥಾನಮಠವು ಅಸ್ತಿತ್ವದಲ್ಲಿದೆ.

ಸಾವಿರದೇವರ ಸಂಸ್ಥಾನಮಠ: ಬಿಚ್ಚಾಲಿ ಗ್ರಾಮದ ಮಧ್ಯಭಾಗದಲ್ಲಿರುವ ಶ್ರೀ ಸಾವಿರದೇವರ ಸಂಸ್ಥಾನಮಠವು ಶ್ರೀರಂಭಾಪುರಿ ಪೀಠದ ಶಾಖಾಮಠವಾಗಿ ಬೆಳೆದಿದೆ. ಶಿಷ್ಯವರ್ಗದ ಪರಂಪರೆಯಲ್ಲಿ ಬೆಳೆದಿರುವ ಈ ಮಠವು ಹನ್ನೆರಡನೆಯ ಶತಮಾನಕ್ಕೂ ಪೂರ್ವದಲ್ಲಿಯೇ ಸ್ಥಾಪನೆಯಾಗಿತ್ತೆಂದು ಹೇಳಲಾಗುತ್ತದೆ. ಮಠದ ಪರಂಪರೆಯಲ್ಲಿ ಅನೇಕ ಗುರುಗಳು ಅಧಿಕಾರ ನಡೆಸಿದ್ದಾರೆ. ಈ ಮಠವು ಶ್ರೀ ಗುರುಮಹಾಂತೇಶ್ವರ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತದೆ. ಗುರುಗಳು ಲೋಕೋದ್ಧಾರಕ್ಕೆಂದು ಲೋಕಸಂಚಾರ ಕೈಗೊಂಡು ಇಲ್ಲಿಗೆ ಬಂದು ನೆಲೆಸಿ, ಇಲ್ಲಿಯೇ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಮಠದ ಪರಂಪರೆ ಮುಂದುವರಿದು ಈ ತನಕ ಬೆಳೆದು ಬಂದಿದೆ. ಮಠದ ಪರಂಪರೆಯಲ್ಲಿ ಬರುವ ಪ್ರಮುಖರೆಂದರೆ ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು ಮತ್ತು ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು. ಈಗ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದಲ್ಲಿ ನಿತ್ಯಪೂಜೆ, ಪ್ರತಿ ಶ್ರಾವಣಮಾಸದಲ್ಲಿ ವಿಶೇಷಪೂಜೆ ಹಾಗೂ ಪ್ರತಿವರ್ಷ ಏಪ್ರಿಲ್ ತಿಂಗಳಲ್ಲಿ ಶ್ರೀ ಗುರುಮಹಾಂತೇಶ್ವರ ಜಾತ್ರೆಯು ಮೂರು ದಿನಗಳ ಕಾಲ ವಿಜೃಂಭಣೆಯಿಂದ ನಡೆಯುತ್ತಿದೆ. ಅಂದು ಕರ್ತೃ ಗದ್ದುಗೆಗೆ ಅಭಿಷೇಕ, ಮಧ್ಯಾಹ್ನ ಗಣಾರಾಧನೆ ನಡೆಯುತ್ತಿದೆ. ಕೊನೆಯ ದಿನ ಶ್ರೀ ಗುರುಮಹಾಂತೇಶ್ವರರ ಪಲ್ಲಕ್ಕಿ ಉತ್ಸವ ನಡೆಯುತ್ತಿದೆ. ಅಂದು ನಾಡಿನ ವಿವಿಧ ಮಠಾಧೀಶರು ಹಾಗೂ ವಿವಿಧ ಕ್ಷೇತ್ರಗಳ ಗಣ್ಯರು ಆಗಮಿಸುತ್ತಾರೆ. ಅಂದು ಮಠದ ಆವರಣದಲ್ಲಿ ಧರ್ಮಸಭೆ ನಂತರ ದಾಸೋಹ ಕಾರ್ಯಕ್ರಮ ನಡೆಯುತ್ತಿದೆ.

ವಿಳಾಸ: ಷ.ಬ್ರ.ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಸಾವಿರದೇವರ ಸಂಸ್ಥಾನಮಠ, ಬಿಚ್ಚಾಲಿ, ರಾಯಚೂರು ತಾಲ್ಲೂಕು.

ಮಟಮರಿ

ರಾಯಚೂರು ತಾಲ್ಲೂಕಿನ ಮಟಮರಿಯು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಮಹಾಂತೇಶ್ವರವು ಮಠವು ಅಸ್ತಿತ್ವದಲ್ಲಿದೆ.

ಮಹಾಂತೇಶ್ವರಮಠ: ಮಟುಮಾರಿ ಗ್ರಾಮದ ಹೊರಭಾಗದಲ್ಲಿ ಶ್ರೀ ವೀರಭದ್ರಸ್ವಾಮಿ ದೇವಸ್ಥಾನದ ಎಡಬದಿಯಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ರಂಭಾಪುರಿ ಪೀಠದ ಶಾಖಾಮಠವಾಗಿ ಬೆಳೆದಿದೆ. ಹನ್ನೆರಡನೆಯ ಶತಮಾನದ ಪೂರ್ವದಲ್ಲಿ ಸ್ಥಾಪನೆಗೊಂಡಿದೆ ಎಂದು ಹೇಳಲಾಗುವ ಈ ಮಠವು ಬಿಚ್ಚಾಲಿಯ ಹಿರೇಮಠದ ಶಾಖಾಮಠವಾಗಿದೆ.

ಈ ಪುರಾತನ ಮಠದಲ್ಲಿ ಬಿಚ್ಚಾಲಿ ಮಠದ ಗುರುಗಳು ಆಡಳಿತವನ್ನು ನೋಡಿಕೊಂಡು ಬರುತ್ತಿದ್ದ ಕಾರಣ ಇಲ್ಲಿ ಯಾವ ಗದ್ದುಗೆಗಳೂ ಸ್ಥಾಪನೆಯಾಗಿಲ್ಲ. ಈಗಿನ ಬಿಚ್ಚಾಲಿ ಮಹಾಂತೇಶ್ವರ ಮಠದ ಅಧಿಕಾರಿಗಳಾಗಿರುವ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳು ಈ ಮಠದ ಆಡಳಿತವನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಮಟುಮರಿ, ರಾಯಚೂರು ತಾಲ್ಲೂಕು.

ರಾಯಚೂರು

ರಾಯಚೂರು ನಗರವು ಜಿಲ್ಲಾ ಕೇಂದ್ರ ಸ್ಥಳವಾಗಿದೆ. ಇಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆದಿದೆ. ಇದಕ್ಕೆ ಸಾಕ್ಷಿ ಎಂಬಂತೆ ನಗರದಲ್ಲಿ ಹನ್ನೆರಡು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಇಂದು ಶ್ರೀ ಖಿಲ್ಲೆಮಠ, ಶ್ರೀ ಸೋಮವಾರಪೇಟೆ ಹಿರೇಮಠ, ಶ್ರೀ ಮಂಗಳವಾರಪೇಟೆಮಠ, ಶ್ರೀ ಶಿಖರಮಠ ಹಾಗೂ ನಾರದಗಡ್ಡೆಮಠ ಅಸ್ತಿತ್ವದಲ್ಲಿದ್ದು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ. ಶ್ರೀ ನಾರದಗಡ್ಡೆಮಠವು ಉರವಕೊಂಡದ ಶಾಖಾ ಮಠವಾಗಿ ಬೆಳೆದಿದೆ. ಮೂಲಮಠದ ಗುರುಗಳೆ ಇಲ್ಲಿನ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುತ್ತಿದ್ದಾರೆ. ಉಳಿದ ಮಠಗಳಲ್ಲಿ ಗುರುಗಳಿದ್ದು ಧಾರ್ಮಿಕ ಬೋಧನೆ ಮತ್ತು ಆಚರಣೆಗಳ ಮೂಲಕ ಸಮಾಜವನ್ನು ಬೆಳೆಸುತ್ತಿದ್ದಾರೆ.

ಖಿಲ್ಲೆಬೃಹನ್ಮಠ: ರಾಯಚೂರು ನಗರದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಖಿಲ್ಲೆಮಠವು ಶ್ರೀ ರಂಭಾಪುರಿ ಮಠದ ಶಾಖಾಮಠವಾಗಿ ಬೆಳೆದಿದೆ. ಈ ಮಠಕ್ಕೆ ಹತ್ತುಸಾವಿರ ದೇವರ ಸಂಸ್ಥಾನ ಮಠವೆಂದೂ ಸಹ ಕರೆಯಲಾಗುತ್ತದೆ. ಹನ್ನೆರಡನೆಯ ಶತಮಾನಕ್ಕೂ ಮೊದಲೆ ಶ್ರೀ ಖಿಲ್ಲೆಬೃಹನ್ಮಠವು ಅಸ್ತಿತ್ವದಲ್ಲಿತ್ತೆಂದು ಹೇಳಲಾಗುತ್ತದೆ. ಬಸವಣ್ಣನವರ ಸಹೋದರಿ ಅಕ್ಕನಾಗಮ್ಮನವರಿಗೆ ಈ ಮಠದ ಪರಂಪರೆಯ ಗುರುಗಳೆ ದೀಕ್ಷಾ ಗುರುಗಳಾಗಿದ್ದರೆಂದು ಹೇಳಲಾಗುತ್ತದೆ. ಹಿರಿಯ ಗುರುಗಳಾದ ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳು ರಾಯಚೂರು ಗ್ರಾಮದ ಹೊರಭಾಗದ ಕೊಳಂಕಿಯಲ್ಲಿ ಅನುಷ್ಠಾನ ಕೈಗೊಂಡಿದ್ದರು. ಈ ಸಂದರ್ಭದಲ್ಲಿ ಈ ನಾಡು ಭೀಕರ ಬರಗಾಲಕ್ಕೆ ತುತ್ತಾಯಿತು. ದನ ಕರುಗಳಿಗೆ ಕುಡಿಯಲು ನೀರೂ ಇಲ್ಲದೆ ಹಾಹಾಕಾರದ ಸ್ಥಿತಿ ಉಂಟಾಯಿತು. ಆಗ ಅಂದಿನ ನವಾಬನು ಗುರುಗಳನ್ನು ಭೇಟಿಯಾಗಿ ವಿಕೋಪ ಪರಿಸ್ಥಿತಿಯನ್ನು ಪರಿಹರಿಸಲು ಭಿನ್ನವಿಸಿಕೊಂಡನಂತೆ. ಆಗ ಗುರುಗಳು ತಮ್ಮ ತಪೋಶಕ್ತಿಯಿಂದ ಮಳೆಯನ್ನು ಬರಿಸಿ ಹಾಹಾಕಾರವನ್ನು ನಿವಾರಿಸಿದರಂತೆ. ಇದರಿಂದ ಸಂತೋಷಗೊಂಡ ನವಾಬನು ಗುರುಗಳಿಗೆ ಭೂಮಿಯನ್ನು ಇನಾಂ ನೀಡಿ, ಗುರುಗಳಿಗೆಂದು ಶಿಲಾಮಂಟಪವನ್ನು ನಿರ್ಮಿಸಿ ಕೊಟ್ಟನೆಂದು ಹೇಳಲಾಗುತ್ತದೆ.

ಪರಂಪರೆ: ಪುರಾತನ ಮಠದ ಪರಂಪರೆಯನ್ನು ಗುರುತಿಸಲು ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಈ ಬಗ್ಗೆ ಸಂಶೋಧನೆ ನಡೆಯಬೇಕಾಗಿದೆ. ಪ್ರಸ್ತುತ ನಗರದ ಭಂಗಿಪೇಟೆಯಲ್ಲಿ ಎರಡು ಗದ್ದುಗೆಗಳು, ಪಲ್ಲೇದರ ಬಾವಿಯಲ್ಲಿ ಶ್ರೀ ಚನ್ನಮಲ್ಲ ಸ್ವಾಮಿಗಳ ಗದ್ದುಗೆ, ಗುಮ್ಮಟದವರ ಬಾವಿ ಹೊಲದಲ್ಲಿ ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳ ಗದ್ದುಗೆ ನೋಡಸಿಗುತ್ತವೆ. ಮಠದ ಪರಂಪರೆಯ ಸಂಪ್ರದಾಯದಂತೆ ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳು ನಂತರ ಶ್ರೀ ಚನ್ನಮಲ್ಲ ಶಿವಾಚಾರ್ಯ ಸ್ವಾಮಿಗಳು ತದನಂತರ ಶ್ರೀ ಶಾಂತಮಲ್ಲ ಶಿವಾಚಾರ್ಯ ಸ್ವಾಮಿಗಳು ಎಂಬ ಮೂರು ಹೆಸರುಗಳನ್ನು

ಉತ್ತರಾಧಿಕಾರಿಗಳು ಅನುಕ್ರಮಣಿಕೆಯಂತೆ ಅಭಿಧಾನ ಪಡೆದು ಅಧಿಕಾರಕ್ಕೆ ಬರುತ್ತಿದ್ದಾರೆ. ಈ ಕಾರಣದಿಂದ ಪರಂಪರೆಯ ಗುರುಗಳ ಪಟ್ಟಿಯನ್ನು ಗುರುತಿಸಲು ತೊಡಕಾಗಿದೆ.

ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳು ಆರುದಶಕಗಳ ಕಾಲ ಅಧಿಕಾರವನ್ನು ನಡೆಸಿ ಮಠವನ್ನು ಅಭಿವೃದ್ಧಿಪಡಿಸಿ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕವಾಗಿ ಹೆಸರು ಪಡೆಯುವಂತೆ ಮಾಡಿದ್ದಾರೆ. ಇವರ ಕಾಲದಲ್ಲಿ ಮಠಕ್ಕೆ ಭವ್ಯವಾದ ಮಂಟಪ, ಹಿರಿಯ ಗುರುಗಳ ಗದ್ದುಗೆ, ಶ್ರೀ ವೀರಭದ್ರೇಶ್ವರ ದೇವಸ್ಥಾನ, ಕಲ್ಯಾಣಮಂಟಪ, ವಾಣಿಜ್ಯ ಸಂಕೀರ್ಣಗಳು ತಲೆ ಎತ್ತಿ ನಿಂತವು. ಇವರ ಕರ್ತೃತ್ವ ಶಕ್ತಿಯಿಂದ ಮಠವು ಆರ್ಥಿಕವಾಗಿ ಸದೃಢಗೊಂಡಿತು. ಇವರು ತಮ್ಮ ಉತ್ತರಾಧಿಕಾರಿಗಳನ್ನಾಗಿ ಮಾನವಿ ತಾಲ್ಲೂಕಿನ ಆರೋಲಿ ಗ್ರಾಮದ ಶ್ರೀ ಗುರುಪಾದೇಶ್ವರ ಹಿರೇಮಠದ ಶ್ರೀ ಪ್ರಭಯ್ಯಸ್ವಾಮಿ ಮತ್ತು ಶ್ರೀಮತಿ ಸರ್ವಮಂಗಳದೇವಿಯವರ ಪುತ್ರರಾಗಿ ಜನಿಸಿದ ಶ್ರೀ ಶಾಂತಮಲ್ಲ ಮರಿದೇವರನ್ನು ಆಯ್ಕೆಮಾಡಿಕೊಂಡಿದ್ದಾರೆ. ಶ್ರೀ ಶಾಂತಮಲ್ಲ ಮರಿದೇವರು ಕೊಳಂಕಿಯಲ್ಲಿ ನೆಲೆಸಿ ಒಂದುಕೋಟಿ ಜಪ, ಒಂದುವರ್ಷ ದೇವಿಪಾರಾಯಣ ದೊಂದಿಗೆ ಪ್ರತಿನಿತ್ಯ ಹದಿನೆಂಟು ಅಧ್ಯಾಯಗಳೊಂದಿಗೆ ತ್ರಿಕಾಲ ಪೂಜೆಯಲ್ಲಿ ತೊಡಗಿ ಸಂಸ್ಕಾರವನ್ನು ಪಡೆದುಕೊಂಡು ಸಜ್ಜಲಗುಡ್ಡ ಶಿವಶರಣಮ್ಮ ಹಾಗೂ ಶ್ರೀ ಸೂಗೂರೇಶ್ವರರನ್ನು ಕುರಿತ ಸುಪ್ರಭಾತವನ್ನು ರಚಿಸಿದ್ದಾರೆ. ಗುರುಗಳು ಆಧ್ಯಾತ್ಮ, ವೈಚಾರಿಕತೆ ಹಾಗೂ ಸಾಹಿತ್ಯಾಭಿರುಚಿಯನ್ನು ಬೆಳೆಸಿಕೊಂಡಿದ್ದಾರೆ. ಇವರಿಗೆ ೧೯೯೭ರ ಮೇ ಒಂದರಂದು ಶ್ರೀ ರಂಭಾಪುರಿ ಪೀಠದ ಜಗದ್ಗುರುಗಳಾದ ಶ್ರೀ ಪ್ರಸನ್ನರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಭಗವತ್ಪಾದರ ಸಾನ್ನಿಧ್ಯದಲ್ಲಿ ಹಿರಿಯ ಗುರುಗಳಾದ ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳು ಪಟ್ಟಾಧಿಕಾರ ನೀಡಿ, ೨೦೦೦ದ ನವೆಂಬರ್ ಐದರಂದು ಲಿಂಗೈಕ್ಯರಾದರು.

ಧಾರ್ಮಿಕ ಕಾರ್ಯಗಳು: ಕಳೆದ ಮೂವತ್ತು ವರ್ಷಗಳಿಂದ ಪ್ರತಿ ಶ್ರಾವಣಮಾಸದಲ್ಲಿ ಕೀರ್ತನೆ, ಪುರಾಣ ಕಾರ್ಯಕ್ರಮ ನಡೆಯುತ್ತಿದೆ. ಪ್ರತಿವರ್ಷ ದಸರಾ ಸಂದರ್ಭದಲ್ಲಿ ರಾಯಚೂರು ನಗರದ ಎಲ್ಲಾ ಜಾತಿ, ಮತ ಪಂಥಗಳ ಭಕ್ತರು ಮಠದಲ್ಲಿ ಒಂಬತ್ತು ದಿನಗಳ ಕಾಲ ಭವಾನಿಪೂಜೆಯನ್ನು ನೇರವೇರಿಸುವುದು ಒಂದು ವಿಶೇಷತೆಯಾಗಿದೆ. ಭಕ್ತರ ಮನೆಗಳಲ್ಲಿ ನಡೆಯುವ ತೊಟ್ಟಿಲುಪೂಜೆ, ಗೃಹಪ್ರವೇಶ, ವಿವಾಹ ಹಾಗೂ ಅಂತ್ಯಕ್ರಿಯೆಗಳಲ್ಲಿ ಪಾಲ್ಗೊಂಡು ವೀರಶೈವ ವಿಧಿವಿಧಾನಗಳನ್ನು ನೇರವೇರಿಸಿಕೊಡುತ್ತಾರೆ. ಈ ರೀತಿ ಧಾರ್ಮಿಕ ಕಾರ್ಯಗಳೊಂದಿಗೆ ಸಮಾಜದ ಸೇವೆಯನ್ನು ಮಾಡುತ್ತಾ, ಮಠವು ಹೆಸರು ಪಡೆದಿದೆ. ಮಠದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸದಿದ್ದರೂ, ಕಲಿಯುವ ಬಡಮಕ್ಕಳಿಗೆ ಆಶ್ರಯ ಕಲ್ಪಿಸಿ ಕಲಿಯುವ ಬಡಮಕ್ಕಳಿಗೆ ನೆರವಾಗಿದ್ದಾರೆ.

ಶಾಖಾಮಠಗಳು: ಮಠದ ಪರಂಪರೆಯ ಗುರುಗಳು ಲೋಕಕಲ್ಯಾಣಕ್ಕೆಂದು ಲೋಕಸಂಚಾರ ಮಾಡಿ ಅನೇಕ ಕಡೆ ಹಲವು ಮಠಗಳನ್ನು ಸ್ಥಾಪಿಸಿದರೆಂದು ಹೇಳಲಾಗುತ್ತದೆ. ಬೀದರ್ ಜಿಲ್ಲೆಯ ಚಿಲ್ಲರಗಿ, ಗುಲ್ಬರ್ಗ ಜಿಲ್ಲೆಯ ಮಳಖೇಡ, ಸುಲೇಪೇಟೆ, ಹೆಬ್ಬಾಳ, ಚಂದನಕೇರಿ ಹಾಗೂ ತೆಂಕಳಿಕೆ ಈ ರೀತಿ ನೂರಾರು ಕ್ಷೇತ್ರಗಳಲ್ಲಿ ಶಾಖಾಮಠಗಳು ರೂಪುಗೊಂಡಿದ್ದವು. ಇವುಗಳು ಇಂದಿಗೂ ಸ್ವತಂತ್ರ ಮಠಗಳಾಗಿ ಕಾರ್ಯನಿರ್ವಹಿಸುತ್ತಿವೆ.

ರಾಜಾಶ್ರಯದಿಂದ ಬೆಳೆದ ಈ ಮಠವು ನಾಡಿನಾದ್ಯಂತ ನೂರಾರು ಎಕರೆ ಜಮೀನನ್ನು ಹೊಂದಿತ್ತು. ಕಾಲಾನಂತರ ಭೂಕಾಯ್ದೆಯಡಿ ಕೆಲವು ಜಮೀನು ಕೈಬಿಟ್ಟು ಹೋಗಿದೆ. ಪ್ರಸ್ತುತ ಮಾನವಿ ತಾಲ್ಲೂಕಿನ ಆರೋಲಿಯಲ್ಲಿ ಐವತ್ತುಎಕರೆ ನೀರಾವರಿ ಭೂಮಿ, ಮೂವತ್ತಾರು ಎಕರೆ ಒಣಭೂಮಿ, ಹದಿನಾಲ್ಕು ಎಕರೆ ಬೀಳು ಹಾಗೂ ರಾಯಚೂರಿನ ಸಮೀಪವಿರುವ ಕೊಳಂಕಿಯಲ್ಲಿ ಇಪ್ಪತ್ತು ಎಕರೆ ಭೂಮಿಯಿದೆ. ಇದು ಮಠದ ಆದಾಯದ ಮೂಲವಾಗಿದೆ.

ವಿಳಾಸ: ಷ.ಬ್ರ.ಶ್ರೀ ಶಾಂತಮಲ್ಲ ಶಿವಾಚಾರ್ಯ ಸ್ವಾಮಿಗಳು, ಶ್ರೀ ಖಿಲ್ಲೆಬೃಹನ್ಮಠ, ಬೆರುನ್‌ಖಿಲ್ಲೆ, ರಾಯಚೂರು.

ಶಿಖರಮಠ: ರಾಯಚೂರು ನಗರದ ಮಧ್ಯಭಾಗದಲ್ಲಿ ಗಾಜಗಾರ ಬಡಾವಣೆಯಲ್ಲಿ ಸ್ಥಾಪನೆಯಾಗಿರುವ ಶ್ರೀ ಶಿಖರಮಠವು ಉಜ್ಜಯಿನಿಪೀಠದ ಶಾಖಾಮಠವಾಗಿ ಬೆಳೆದಿದೆ. ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿರುವ ಈ ಮಠವು ನಗರದ ಪುರಾತನ ಮಠಗಳಲ್ಲಿ ಒಂದಾಗಿದೆ. ಪರಂಪರೆಯಲ್ಲಿ ಅನೇಕ ಗುರುಗಳು ಅಧಿಕಾರ ನಡೆಸಿ ಮಠವನ್ನು ಬೆಳೆಸಿದ್ದಾರೆ. ಆದರೆ ಪರಂಪರೆಯ

ಗುರುಗಳ ಬಗ್ಗೆ ಮಾಹಿತಿಗಳನ್ನು ಕಾಯ್ದಿಡದೆ ಇರುವ ಕಾರಣ ಮಾಹಿತಿ ಲಭ್ಯವಿಲ್ಲ. ಪ್ರಸ್ತುತ ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡು, ವೀರಶೈವ ಧರ್ಮವನ್ನು ಬೆಳೆಸಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀಶಿಖರಮಠ, ಗಾಜಗಾರಗಲ್ಲಿ, ರಾಯಚೂರು.

ಸೋಮವಾರಪೇಟೆಹಿರೇಮಠ: ರಾಯಚೂರು ನಗರದ ನೇತಾಜಿ ನಗರದಲ್ಲಿ ಶ್ರೀ ಸೋಮವಾರಪೇಟೆಹಿರೇಮಠವು ಸ್ಥಾಪನೆಯಾಗಿದೆ. ಶ್ರೀ ರಂಭಾಪುರಿಪೀಠದ ಶಾಖಾಮಠವಾಗಿ ಶಿಷ್ಯ ವರ್ಗದ ಪರಂಪರೆಯಲ್ಲಿ ಬೆಳೆದ ಮಠವು ಈ ತನಕ ಅನೇಕ ಗುರುಗಳನ್ನು ಪಡೆದಿದೆ. ಆದರೆ ಇವರುಗಳ ಬಗ್ಗೆ ಮಾಹಿತಿ ಲಭ್ಯವಿಲ್ಲ.

ಪ್ರಸ್ತುತ ಶ್ರೀಮತಿ ಬಸಮ್ಮ ಮತ್ತು ಶ್ರೀ ಬಸಯ್ಯನವರ ಪುತ್ರರಾಗಿ ೧೯೨೫ರಲ್ಲಿ ಜನಿಸಿದ ಶ್ರೀ ರಾಚೋಟಿ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಬೆಳೆಸಿದ್ದಾರೆ. ಪುರಾತನ ಕಾಲದ ಮಠದ ಕಟ್ಟಡವು ಮರದ ಕೆತ್ತನೆಯ ಕಲಾಕೃತಿಗಳಿಂದ ನಿರ್ಮಾಣಗೊಂಡಿದ್ದು, ಪರಂಪರೆಯ ಭವ್ಯತೆಯ ಪ್ರತೀಕವಾಗಿವೆ. ಮಠದ ಆವರಣದಲ್ಲಿ ಕರ್ತೃಗುರುಗಳಾದ ಶ್ರೀ ಚನ್ನವೀರ ಸ್ವಾಮಿಗಳ ಗದ್ದುಗೆ ಮತ್ತು ಶ್ರೀ ಗುರುಪಾದೇಶ್ವರ ಸ್ವಾಮಿಗಳ ಗದ್ದುಗೆಯನ್ನು ಗುರುತಿಸಬಹುದಾಗಿದ್ದು, ಉಳಿದ ಎರಡು ಗದ್ದುಗೆಗಳ ಹೆಸರುಗಳು ಲಭ್ಯವಿಲ್ಲ. ಮಠದ ಆವರಣದಲ್ಲಿ ಶ್ರೀ ರಾಮಲಿಂಗೇಶ್ವರ ದೇವಸ್ಥಾನವು ಸ್ಥಾಪನೆಯಾಗಿದೆ. ಮಠದಲ್ಲಿ ನಿತ್ಯಪೂಜೆ, ಪ್ರತಿ ಸೋಮವಾರ ವಿಶೇಷಪೂಜೆ ಹಾಗೂ ಉಪನ್ಯಾಸ ಕಾರ್ಯಕ್ರಮ ನಡೆಯುತ್ತಿವೆ. ಈ ಸಂದರ್ಭದಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ರಾಚೋಟಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ಸೋಮವಾರಪೇಟೆಹಿರೇಮಠ, ನೇತಾಜಿನಗರ, ರಾಯಚೂರು.

ಮಂಗಳವಾರಪೇಟೆಮಠ: ರಾಯಚೂರು ನಗರದಲ್ಲಿ ಮಂಗಳವಾರಪೇಟೆಮಠವು ಅಸ್ತಿತ್ವದಲ್ಲಿದೆ. ಶ್ರೀ ರಂಭಾಪುರಿ ಪೀಠದ ಪರಂಪರೆಯ ಪುತ್ರವರ್ಗದ ಮಠವು ಪುರಾತನ ಕಾಲದ ಮಠವಾಗಿ ಹೆಸರು ಪಡೆದಿದೆ. ಮಠದ ಪರಂಪರೆಯ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಹಿಂದೆ ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳು ಅಧಿಕಾರ ನಡೆಸಿ ಮಠವನ್ನು ಅಭಿವೃದ್ಧಿ ಪಡಿಸಿದ್ದರು. ಇವರು ೨೦೦೧ರ ಮಾರ್ಚ್ ಹನ್ನೆರಡರಂದು ಲಿಂಗೈಕ್ಯರಾದರು. ಇವರ ಉತ್ತರಾಧಿಕಾರಿಗಳಾಗಿದ್ದ ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು ಹಿರಿಯ ಗುರುಗಳು ಲಿಂಗೈಕ್ಯರಾದ ದಿನವೇ ಪಟ್ಟಾಧಿಕಾರವನ್ನು ವಹಿಸಿಕೊಂಡು, ಮಠದ ಪರಂಪರೆಯನ್ನು ಬೆಳೆಸಿದ್ದಾರೆ.

ಮಠದ ಆವರಣದಲ್ಲಿ ಎರಡು ಗದ್ದುಗೆಗಳು ಸ್ಥಾಪನೆಯಾಗಿವೆ. ಈ ಗದ್ದುಗೆಗಳಿಗೆ ನಿತ್ಯಪೂಜೆ ನಡೆಯುತ್ತಿದೆ. ಹಿರಿಯ ಗುರುಗಳ ಪುಣ್ಯಾರಾಧನೆ, ದಸರಾದಲ್ಲಿ ದೇವಿಪಾರಾಯಣ, ಶ್ರಾವಣಮಾಸದಲ್ಲಿ ಪುರಾಣ ಪ್ರವಚನ ಹಾಗೂ ಅನ್ನದಾಸೋಹ ನಡೆಯುತ್ತಿದೆ. ಹಾಳಾಪುರ, ಉಡುಂಗಲ್ಲು ಹಾಗೂ ಖಾನಾಪುರದಲ್ಲಿ ಈ ಮಠದ ಶಾಖಾಮಠಗಳಿದ್ದು ಇಲ್ಲಿಯೂ ಧಾರ್ಮಿಕ ಕಾರ್ಯಗಳು ನಡೆಯುತ್ತಿವೆ.

ವಿಳಾಸ: ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು, ಶ್ರೀ ಮಂಗಳವಾರಪೇಟೆಮಠ, ರಾಯಚೂರು.

❑

ಲಿಂಗಸುಗೂರು ತಾಲ್ಲೂಕು

ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕು, ಐತಿಹಾಸಿಕವಾಗಿ ಹೆಸರು ಪಡೆದಿದೆ. ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಅಷ್ಟೇನೂ ಪ್ರಬಲವಾಗಿ ಬೆಳೆದ ಲಕ್ಷಣಗಳು ಕಂಡುಬಂದಿಲ್ಲ. ಪ್ರಸ್ತುತ ಈ ತಾಲ್ಲೂಕಿನಲ್ಲಿ ಏಳು ಮಠಗಳನ್ನು ಗುರುತಿಸಬಹುದಾಗಿದೆ. ಇವುಗಳಲ್ಲಿ ನಾಲ್ಕುಮಠಗಳಲ್ಲಿ ಗುರುಗಳಿದ್ದು ಧಾರ್ಮಿಕ ಕಾರ್ಯಗಳು ನಡೆಯುತ್ತಾ ಬರುತ್ತಿದೆ.

ಗುರುಗುಂಟ

ಲಿಂಗಸುಗೂರು ತಾಲ್ಲೂಕಿನ ಗುರುಗುಂಟವು ತಾಲ್ಲೂಕು ಕೇಂದ್ರದಿಂದ ಈಶಾನ್ಯ ಭಾಗಕ್ಕೆ ಇಪ್ಪತ್ತಮೂರು ಕಿ.ಮೀ ದೂರದಲ್ಲಿದೆ.ಈ ಗ್ರಾಮವು ಹಿಂದೆ ತಿಪ್ಪರಾಜನಾಯಕನ ಕಾಲದಲ್ಲಿ ಒಂದು ಸಂಸ್ಥಾನವಾಗಿ ಬೆಳೆದು ಹೆಸರು ಮಾಡಿತ್ತು ಇಂತಹ ಇತಿಹಾಸ ಪ್ರಸಿದ್ಧ ಗ್ರಾಮದಲ್ಲಿ 'ಶ್ರೀ ತೋಪಿನಕಟ್ಟೆ ಸಂಸ್ಥಾನ ಮಠ' ಅಥವಾ'ಚರಮೂರ್ತೇಶ್ವರ ಮಠ' ಎಂದು ಕರೆಯಲ್ಪಡುವ ಮಠವು ಪುರಾತನ ಕಾಲದಲ್ಲಿ ಸ್ಥಾಪನೆಯಾಗಿ ಈತನಕ ತನ್ನ ಅಸ್ತಿತ್ತ್ವವನ್ನು ಉಳಿಸಿಕೊಂಡು ಬಂದಿದೆ.

ತೋಪಿನ ಕಟ್ಟೆ ಸಂಸ್ಥಾನಮಠ: ಶ್ರೀಶೈಲ ಪೀಠದ ಶಾಖಾಮಠವಾದ ಈ ಮಠವು ಶ್ರೀ ವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪನೆ ಯಾಗಿದೆ ಎಂದು ಹೇಳಲಾಗುತ್ತದೆ. ಶ್ರೀ ವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳು ಲೋಕ ಸಂಚಾರ ಕೈಗೊಂಡು ಗುರುಗುಂಟ ಗ್ರಾಮದ ಹೊರಭಾಗದಲ್ಲಿ ಕಲ್ಲಿನಿಂದ ಆವೃತಗೊಂಡ ಗುಡ್ಡದ ಪ್ರದೇಶದಲ್ಲಿ ಅನುಷ್ಠಾನಕ್ಕೆ ಕುಳಿತಿದ್ದರು. ಗುರುಗಳು ನಿರ್ಜನ ಪ್ರದೇಶದಲ್ಲಿ ಅನುಷ್ಠಾನ ಕೈಗೊಂಡಿರುವ ವಿಚಾರ ದೊರೆಯ ತನಕ ಹೋಗುತ್ತದೆ. ಆಗ ಸಕಲ ಮರ್ಯಾದೆಗಳೊಂದಿಗೆ ಸ್ವಾಗತಿಸಿ ಗುರುಗಳು ಗುರುಗುಂಟದಲ್ಲಿ ನೆಲೆಸುವಂತೆ ಬಿನ್ನವಿಸಿಕೊಂಡು ಗುರುಗಳಿಗಾಗಿ ಮಠವನ್ನು ಸ್ಥಾಪಿಸಿದನು. ಅಂದಿನಿಂದ ಈವರೆಗೆ ಮಠವು ಅನೇಕ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬಂದಿದೆ.

ಪರಂಪರೆ:

೧. ಷ.ಬ್ರ.ಶ್ರೀ ವಿರೂಪಾಕ್ಷ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಮರಿಸ್ವಾಮಿಗಳು ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ವಿರೂಪಾಕ್ಷ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಸದಾನಂದ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಮಠದ ಪರಂಪರೆಯಲ್ಲಿ ಒಟ್ಟು ಆರು ಜನ ಗುರುಗಳು ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೆ ಮಠದ ಆವರಣದಲ್ಲಿ ಕೇವಲ ನಾಲ್ಕು ಗದ್ದುಗೆಗಳು ನೋಡಸಿಗುತ್ತವೆ. ಈ ಮಠದ ಶಾಖಾ ಮಠವಾಗಿ ರಾಯಚೂರಿನಲ್ಲಿ ಗುರುಗುಂಟೆ ಮಠ ಸ್ಥಾಪನೆಯಾಗಿದ್ದು, ಈ ಶಾಖಾ ಮಠದಲ್ಲಿ ಶ್ರೀಮರಿಸ್ವಾಮಿ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬರುವ ಮುನ್ನ ಗುರುಗಳೊಬ್ಬರು ಇಲ್ಲಿ ನೆಲೆಸಿ ಲಿಂಗೈಕ್ಯರಾಗಿದ್ದಾರೆ ಎಂದು ಹೇಳಲಾಗುತ್ತಿದೆ. ಇವರ ಗದ್ದುಗೆಯು ಮಠದಲ್ಲಿ ನಿರ್ಮಾಣಗೊಂಡಿದೆ.

ಹಿಂದಿನ ಗುರುಗಳಾದ ಶ್ರೀ ವಿರೂಪಾಕ್ಷ ಶಿವಾಚಾರ್ಯ ಸ್ವಾಮಿಗಳು ಇಪ್ಪತ್ತೆಂಟು ವರ್ಷಗಳ ಹಿಂದೆ ಲಿಂಗೈಕ್ಯರಾದ ನಂತರ ಮಠವು ಇಪ್ಪತ್ತೈದು ವರ್ಷಗಳ ಕಾಲ ಖಾಲಿ ಉಳಿದಿತ್ತು. ನಂತರ ಗ್ರಾಮದ ಭಕ್ತರು, ಶ್ರೀ ಆದಯ್ಯ ಮತ್ತು ಶ್ರೀಮತಿ ಸಿದ್ದಲಿಂಗಮ್ಮನವರ ಪುತ್ರರಾಗಿ ೧೯೭೭ರ ಜೂನ್ ಒಂದರಂದು ಜನಿಸಿದ ಶ್ರೀ ಸದಾನಂದ ಸ್ವಾಮಿಗಳನ್ನು ಮಠದ ಉತ್ತರಾಧಿಕಾರಿಗಳನ್ನಾಗಿ ಆಯ್ಕೆಮಾಡಿದರು. ನಂತರ ೧೯೯೭ರ ಫೆಬ್ರುವರಿ ಇಪ್ಪತ್ತೆರಡರಂದು ಬೆದವಟ್ಟಿಯ ಶ್ರೀ ಸಂಗಮೇಶ್ವರ ಶಿವಾಚಾರ್ಯ ಸ್ವಾಮಿಗಳು, ಯಲಬುರ್ಗದ ಶ್ರೀ ಸಿದ್ಧರಾಮ ಸ್ವಾಮಿಗಳ ನೇತೃತ್ವದಲ್ಲಿ ಶ್ರೀಶೈಲ ಜಗದ್ಗುರುಗಳನ್ನು ಆಹ್ವಾನಿಸಿ ಇವರುಗಳ ಸಾನ್ನಿಧ್ಯದಲ್ಲಿ ಪಟ್ಟಾಧಿಕಾರವನ್ನು ಮಾಡಲಾಗಿದೆ. ಶ್ರೀ ಸದಾನಂದ ಸ್ವಾಮಿಗಳು ಖಾಲಿ ಉಳಿದಿದ್ದ ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿ ಪಡಿಸತೊಡಗಿದ್ದಾರೆ.

ಧಾರ್ಮಿಕಕಾರ್ಯಗಳು: ಮಠದ ಆವರಣದಲ್ಲಿರುವ ನಾಲ್ಕು ಗದ್ದುಗೆಗಳನ್ನು ನವೀಕರಿಸಿ ನಿತ್ಯ ಪೂಜೆಗೆ ವ್ಯವಸ್ಥೆ ಮಾಡಲಾಗಿದೆ. ಕಾರ್ತೀಕ ಮಾಸದಲ್ಲಿ ಪುರಾಣ ಪ್ರವಚನವನ್ನು ಹಮ್ಮಿಕೊಳ್ಳಲಾಗುತ್ತಿದೆ. ಶ್ರಾವಣಮಾಸದಲ್ಲಿ ಹಿರಿಯ ಗುರುಗಳ ಆರಾಧನೆಯನ್ನು ನಡೆಸಲಾಗುತ್ತಿದೆ. ಈ ಮಠದ ಶಾಖಾ ಮಠವಾಗಿರುವ ರಾಯಚೂರು ಶಾಖಾ ಮಠದಲ್ಲಿ ಅಮಾವಾಸ್ಯೆಯಲ್ಲಿ ಶಿವಾನುಭವ ಗೋಷ್ಠಿಯನ್ನು ನಡೆಸಲಾಗುತ್ತಿದೆ. ಮಠದಲ್ಲಿ ನಿತ್ಯ ಅನ್ನ ದಾಸೋಹದ ವ್ಯವಸ್ಥೆಯನ್ನು ಮಾಡಲಾಗಿದೆ. ಕರ್ತೃಗುರುಗಳು ತಮ್ಮ ಪ್ರಭಾವದಿಂದ ಹೆಚ್ಚು ಅಭಿವೃದ್ಧಿಪಡಿಸಿದ್ದ ಈ ಮಠಕ್ಕೆ ಗುರುಗುಂಟೆ ತಿಪ್ಪರಾಜ ನಾಯಕನ ಕಾಲದಲ್ಲಿ ಆಶ್ರಯ ದೊರೆತಿದ್ದು ಹೆಚ್ಚು ಅಭಿವೃದ್ಧಿಗೊಂಡಿದೆ. ಅಂದು ಬಂದಿದ್ದ ಇನಾಂಭೂಮಿಯಲ್ಲಿ ಈಗ ಕೇವಲ ಹನ್ನೆರಡು ಎಕರೆ ಜಮೀನು ಮಾತ್ರ ಉಳಿದಿದೆ. ಈಗಿನ ಗುರುಗಳು ಆಯುರ್ವೇದ ಪಂಡಿತರಾಗಿದ್ದು, ಗಿಡ ಮೂಲಿಕೆ ಗಳಿಂದ ಅನೇಕ ರೋಗಗಳಿಗೆ ಚಿಕಿತ್ಸೆ ನೀಡಬಲ್ಲವರಾಗಿದ್ದಾರೆ. ಈ ಗ್ರಾಮದ ಸುತ್ತಲಿನ ಗ್ರಾಮಸ್ಥರು ಈ ಸೇವೆಯ ಲಾಭವನ್ನು ಪಡೆಯುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸದಾನಂದ ಶಿವಾಚಾರ್ಯ ಸ್ವಾಮಿಗಳು, ಶ್ರೀ ತೋಪಿನ ಕಟ್ಟೆ ಸಂಸ್ಥಾನ ಮಠ, ಗುರುಗಂಟೆ, ಲಿಂಗಸುಗೂರು ತಾಲ್ಲೂಕು, ರಾಯಚೂರು ಜಿಲ್ಲೆ.

ರಾಜಗುರುಮಠ: ಗುರುಗುಂಟ ಗ್ರಾಮದ ಕಲ್ಲು ಗುಡ್ಡದ ಮೇಲೆ ಕೋಟೆಯ ಒಳಭಾಗದಲ್ಲಿ ಸ್ಥಾಪನೆಯಾಗಿರುವ ರಾಜಗುರು ಮಠವು ಗುರುಗಂಟೆ ಸಂಸ್ಥಾನದ ಮಠವಾಗಿ ಬೆಳೆದಿದೆ. ವಿರಕ್ತಸಂಪ್ರದಾಯದ ಈ ಮಠವು ಗುರುಗುಂಟೆ ಸಂಸ್ಥಾನದ ಅಭಿವೃದ್ಧಿಗೆ ನೆರವಾಗಿದೆ. ಇಂತಹ ಇತಿಹಾಸವುಳ್ಳ ಮಠವು ಇಂದು ಮಠಾಧೀಶರಿಲ್ಲದೆ ಖಾಲಿ ಉಳಿದಿದೆ. ಅಲ್ಲದೆ ಈ ಮಠದ ವಂಶಸ್ಥರಾದ ಶ್ರೀ ರುದ್ರಸ್ವಾಮಿ ಎಂಬುವರು ಮಠದ ಧಾರ್ಮಿಕ ಕಾರ್ಯಗಳನ್ನು ನೋಡಿಕೊಂಡು ಬರುತ್ತಿದ್ದಾರೆ. ಕಳೆದ ನಲವತ್ತೈದು ವರ್ಷಗಳಿಂದ ಮಠವು ಖಾಲಿ ಉಳಿದಿದ್ದು ಮಠದ ಆವರಣದಲ್ಲಿ ಆರು ಗದ್ದುಗೆಗಳಿವೆ. ಈ ಗದ್ದುಗೆಗಳಿಗೆ ನಿತ್ಯಪೂಜೆ ನಡೆಯುತ್ತಿದೆ. ಅಲ್ಲದೆ ಇನಾಂನಿಂದ ದೊರೆತಿದ್ದ ಭೂಮಿಯನ್ನು ಅಭಿವೃದ್ಧಿಪಡಿಸಲಾಗಿದೆ. ಪುರಾತನ ಕಾಲದ ಮಠದ ಕಟ್ಟಡವು ಜೀರ್ಣಾವಸ್ಥೆಯನ್ನು ತಲುಪಿದೆ.

ವಿಳಾಸ: ಶ್ರೀ ರುದ್ರಸ್ವಾಮಿ, ಶ್ರೀ ರಾಜಗುರು ಮಠ, ಗುರುಗುಂಟ. ಲಿಂಗಸುಗೂರು ತಾಲ್ಲೂಕು, ರಾಯಚೂರು ಜಿಲ್ಲೆ.

ದೇವರಭೂಪುರ

ಲಿಂಗಸುಗೂರು ತಾಲ್ಲೂಕಿನ ದೇವರಭೂಪುರ ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹದಿನೇಳು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಬೃಹನ್ಮಠವು ಅಸ್ತಿತ್ವದಲ್ಲಿದೆ.

ಬೃಹನ್ಮಠ: ದೇವರಭೂಪುರದ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ಬೃಹನ್ಮಠವು ಹೆಚ್ಚು ಪ್ರಸಿದ್ಧಿ ಪಡೆದಿದೆ. ಶ್ರೀ ಅಮರೇಶ್ವರ ದೇವಸ್ಥಾನಕ್ಕೂ ಮತ್ತು ಈ ಮಠಕ್ಕೂ ಅನನ್ಯ ಸಂಬಂಧವಿದ್ದು ಈ ಎರಡೂ ಧಾರ್ಮಿಕ ಕ್ಷೇತ್ರಗಳು ಒಂದಕ್ಕೊಂದು ಬೆಸದುಕೊಂಡು ಬಂದಿವೆ.

ಮಠ ಸ್ಥಾಪನೆ: ಪಂಚಪೀಠಗಳಲ್ಲಿ ಒಂದಾದ ಉಜ್ಜಯನಿ ಪೀಠದ ಶಾಖಾಮಠವಾದ ಶ್ರೀ ಬೃಹನ್ಮಠವು ಒಂಬತ್ತನೆಯ ಶತಮಾನದಲ್ಲಿ ಸ್ಥಾಪನೆಗೊಂಡಿದೆ ಎಂದು ಹೇಳಲಾಗುತ್ತಿದೆ. ಆದರೆ ಈ ಮಠದ ಕರ್ತೃ ಗುರುಗಳು ಯಾರೆಂಬುದರ ಬಗ್ಗೆ ನಿಖರವಾದ ಮಾಹಿತಿಗಳು ದೊರೆಯುತ್ತಿಲ್ಲ. ಹಿಂದಿನ ಪರಂಪರೆಯ ಗುರುಗಳೊಬ್ಬರ ಕಾಲದಲ್ಲಿ ಎರಡೋಣ ಗ್ರಾಮದ ಶ್ರೀ ಆದಯ್ಯ ಮತ್ತು ಶ್ರೀಮತಿ ಮಾಳಗುಂಡಮ್ಮ ಎಂಬ ಮಠದ ಭಕ್ತರಿಗೆ ಸಂತಾನ ಪ್ರಾಪ್ತಿ ಇರಲಿಲ್ಲವಂತೆ. ಈ ದಂಪತಿಗಳು ಗುರುಗಳ ಆಶೀರ್ವಾದ ಪಡೆದು ಹೋಗಲು ಮಠಕ್ಕೆ ಬಂದಿದ್ದಾಗ 'ಶಿವನೇ ನಿಮ್ಮ ಮಗನಾಗಿ ಹುಟ್ಟುತ್ತಾನೆ ಚಿಂತಿಸದಿರಿ' ಎಂದು ಗುರುಗಳು ಆಶೀರ್ವದಿಸಿ ಕಳುಹಿಸಿಕೊಟ್ಟರಂತೆ. ನವಮಾಸದ ನಂತರ ಮಾಳಗುಂಡಮ್ಮ ಗಂಡು ಮಗುವಿಗೆ ಜನ್ಮವಿತ್ತಾಗ, ದೀಕ್ಷಾ ಸಂಸ್ಕಾರವನ್ನು ಬೃಹನ್ಮಠದ ಗುರುಗಳು ಮಾಡಿಕೊಟ್ಟು'ಅಮರೇಶ್ವರ'ಎಂದು ನಾಮಕರಣ ಮಾಡಿದ್ದರಂತೆ. ಶ್ರೀ ಅಮರೇಶ್ವರರು ಗುರುಗಳ ಆಶೀರ್ವಾದದಿಂದ ಬೆಳೆದು ಐದು ವರ್ಷದಲ್ಲಿಯೆ ಅನೇಕ ಬಾಲಲೀಲೆಗಳನ್ನು ಪ್ರದರ್ಶಿಸಿ ಪವಾಡ ಪುರುಷರಾಗಿ ಮೆರೆದರು. ಶ್ರೀ ಅಮರೇಶ್ವರರು ಅನೇಕ ಧರ್ಮ ಜಾಗೃತಿಯ ಕಾರ್ಯಗಳನ್ನು ಮಾಡಿ ಈ ಕ್ಷೇತ್ರದಲ್ಲಿ

ಜೀವಂತ ಸಮಾಧಿಯಾಗಿ ಈ ನಾಡನ್ನು ಸುಕ್ಷೇತ್ರಗೊಳಿಸಿದ್ದಾರೆ.

ಪ್ರಸಿದ್ಧಗೊಂಡ ಮಠ: ಶ್ರೀ ಬೃಹನ್ಮಠದ ಗುರುಗಳು ಆಶೀರ್ವಾದದಿಂದ ಅಪಾರವಾದುದ್ದನ್ನು ಸಾಧಿಸಿದ ಶ್ರೀ ಅಮರೇಶ್ವರರು ಈ ಮಠದ ಹೆಸರನ್ನು ಚಿರಾಯುವಾಗಿ ಉಳಿಯುವಂತೆ ಮಾಡಿದ್ದಾರೆ. ಈ ಮಠದ ಪರಂಪರೆಯ ಗುರುಗಳು ಸಹ ಮಹಾ ಪುರುಷರಾಗಿ ಈ ನಾಡಿನಲ್ಲಿ ಅನೇಕ ಪವಾಡ ಪುರುಷರು ಉದಯವಾಗಲು ಕಾರಣಕರ್ತರಾಗಿದ್ದಾರೆ. ಧಾರ್ಮಿಕ ಆಚರಣೆಗಳ ಜೊತೆಗೆ ಪಾಂಡಿತ್ಯವನ್ನು ಸಹ ಸಂಪಾದಿಸಿಕೊಂಡು ಸಮಾಜವನ್ನು ಬೆಳೆಸಿದವರಾಗಿದ್ದಾರೆ. ಈ ಕಾರಣಕ್ಕಾಗಿಯೇ ಪುರಾತನ ಪರಂಪರೆಯ ಮಠ ಇಂದಿಗೂ ಜನಮನದಲ್ಲಿ ಜೀವಂತವಾಗಿ ಉಳಿದಿದೆ.

ಹುಬ್ಬಳ್ಳಿಯ ಸಿದ್ಧಾರೂಢ ಮಠದ ಸ್ಥಾಪಕರಾದ ಶ್ರೀ ಸಿದ್ಧಾರೂಢ ಗುರುಗಳು ಹನ್ನೆರಡು ವರ್ಷಗಳ ಕಾಲ ಈ ಮಠದಲ್ಲಿ ನೆಲೆಸಿ, ಶ್ರೀ ಗಜದಂಡ ಶಿವಾಚಾರ್ಯ ಸ್ವಾಮಿಗಳ ಕೃಪಾಶೀರ್ವಾದ ಮತ್ತು ಮಾರ್ಗದರ್ಶನದಲ್ಲಿ ಸಾಧನೆಯ ಸಿದ್ಧಿಯನ್ನು ಕಂಡುಕೊಂಡರು.ಅದೇ ರೀತಿ ನಲವತ್ವಾಡದ ಶರಣರು ಸಹ ಇಲ್ಲೇ ನೆಲಸಿ ಧಾರ್ಮಿಕ ಪ್ರಬುದ್ಧತೆಯನ್ನು ಗಳಿಸಿಕೊಂಡವರಾಗಿದ್ದಾರೆ ಎಂದು ಹೇಳಲಾಗುತ್ತಿದೆ.ಇಂತಹ ಪ್ರಸಿದ್ಧ ಕ್ಷೇತ್ರವು ಕಲಬುರ್ಗಿ ಶರಣ ಶ್ರೀ ಬಸವೇಶ್ವರರ ಪೂರ್ವಾಶ್ರಮದ ಮನೆ ಗುರುಗಳು ಈ ಮಠದವರಾಗಿದ್ದ ಕಾರಣ, ಶರಣ ಶ್ರೀ ಬಸವೇಶ್ವರರ ಮೊದಲ ಜವಳವನ್ನು ಇಲ್ಲೇ ತೆಗೆಸಿದ್ದೆಂದು ಮಠದ ಇತಿಹಾಸದಲ್ಲಿ ದಾಖಲಾಗಿದೆ.ಇಂತಹ ಪುರಾತನ ಪ್ರಸಿದ್ಧಿಯನ್ನು ಪಡೆದ ಈ ಮಠವು ಇಂದಿಗೂ ತನ್ನ ಧಾರ್ಮಿಕ ಆಚರಣೆಗಳಿಂದ ನಾಡಿನ ಪ್ರಸಿದ್ಧ ಮಠವಾಗಿ ಬೆಳೆದಿದೆ.

ಪರಂಪರೆ: ಉಜ್ಜಯಿನಿ ಪೀಠದ ಶಾಖಾಮಠವಾಗಿ ಪುತ್ರವರ್ಗದ ಪರಂಪರೆಯಲ್ಲಿ ಬೆಳದ ಈ ಮಠದ ಪರಂಪರೆಯಲ್ಲಿ, ಇಪ್ಪತ್ತಾರು ಜನ ಗುರುಗಳು ಅಧಿಕಾರ ನಡೆಸಿದ್ದಾರೆಂದು ಹೇಳಲಾಗುತ್ತದೆ. ದೊರೆತ ಮಾಹಿತಿಯ ಆಧಾರದ ಮೇಲೆ ಈ ಕೆಳಗಿನ ಹೆಸರುಗಳನ್ನು ದಾಖಲಿಸಲಾಗಿದೆ.

೧. ಷ.ಬ್ರ.ಶ್ರೀ ಶಾಂತ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಮಳೆ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಶಿವಮೂರ್ತಿ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಶಾಂತ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ರುದ್ರಸ್ವಾಮಿ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಹದಿನೆಂಟನೆಯ ಶತಮಾನದ ತನಕ ಬೆಳೆದು ಬಂದಿದ್ದು, ನಂತರ 'ಶ್ರೀ ಗಜದಂಡ ಶಿವಾಚಾರ್ಯ ಸ್ವಾಮಿಗಳು' ಎಂಬ ಒಂದೇ ಹೆಸರಿನಲ್ಲಿ ಮಠಕ್ಕೆ ಪಟ್ಟಾಧಿಕಾರ ವಹಿಸಿಕೊಳ್ಳುವ ಸಂದರ್ಭದಲ್ಲಿ ಗುರುಗಳು ಈ ಹೆಸರನ್ನು ಅಭಿದಾನ ಪಡೆದು ಅಧಿಕಾರಕ್ಕೆ ಬರುತ್ತಿದ್ದಾರೆ.

ಗಜದಂಡ: ಹದಿನೆಂಟನೆಯ ಶತಮಾನದಲ್ಲಿ ಗುರುಗುಂಟ ಸಂಸ್ಥಾನದ ತಿಪ್ಪರಾಜನಾಯಕನ ಆಸ್ಥಾನದ ಸೊಕ್ಕಿದ ಆನೆಯು ಕಾಡಿಗೆ ಹೋಗಿರುತ್ತದೆ. ಆಗ ಗುರುಗಳನ್ನು ಪರೀಕ್ಷೆ ಮಾಡಲೆಂದು ಸೊಕ್ಕಿದ ಆನೆಯನ್ನು ಕರೆ ತರುವಂತೆ ತಿಪ್ಪರಾಜನಾಯಕನು ಗುರುಗಳಿಗೆ ವಿಜ್ಞಾಪಿಸಿಕೊಳ್ಳುತ್ತಾನೆ. ಗುರುಗಳು ಕಾಡಿಗೆ ತೆರಳಿ ಸೊಕ್ಕಿದ ಆನೆಯ ಮದವನ್ನಡಗಿಸಿ ಆನೆಯ ಮೇಲೆ ಕುಳಿತು ನಾಡಿಗೆ ಆಗಮಿಸುತ್ತಾರಂತೆ. ಆಶ್ಚರ್ಯಗೊಂಡ ಭಕ್ತರು ಹಾಗೂ ರಾಜನು ನಿರಾಯುಧವಾಗಿ ಗುರುಗಳು ಸೊಕ್ಕಿದ ಆನೆಯನ್ನು ಪಳಗಿಸಿ ಕರೆ ತಂದಿದ್ದು ಪವಾಡವೇ ಎಂದು ಅರಿತು ಗುರುಗಳಿಗೆ ಶರಣಾದರು. ನಂತರ ಗುರುಗುಂಟ ಸಂಸ್ಥಾನಕ್ಕೆ ಗುರುಗಳನ್ನು ಆಹ್ವಾನಿಸಿ ಸಕಲ ಮರ್ಯಾದೆಗಳೊಂದಿಗೆ ಗೌರವ ನೀಡಿ ಸೊಕ್ಕಿದ ಆನೆಯನ್ನು ಮದವಡಗಿಸಿದ ಜ್ಞಾಪಕಾರ್ಥವಾಗಿ ಗುರುಗಳಿಗೆ 'ಶ್ರೀ ಗಜದಂಡ ಶಿವಾಚಾರ್ಯ'ರೆಂದು ಬಿರುದಾವಳಿಯನ್ನು ನೀಡಿ ಈ ಮಠದ ಪರಂಪರೆಯ ಗುರುಗಳೆಲ್ಲರೂ ಶ್ರೀ ಗಜದಂಡ ಶಿವಾಚಾರ್ಯ ಸ್ವಾಮಿಗಳೆಂದು ಅಧಿಕಾರಕ್ಕೆ ಬರಬೇಕೆಂದು ಬಿನ್ನವಿಸಿಕೊಂಡನಂತೆ.ಅಂದಿನಿಂದ ಈ ಮಠದ ಪರಂಪರೆಯ ಗುರುಗಳು ಪಟ್ಟಾಧಿಕಾರ ಪಡೆದುಕೊಳ್ಳುವ ಸಂದರ್ಭದಲ್ಲಿ ಈ ಹೆಸರನ್ನು ಅಭಿದಾನ ಮಾಡಿಕೊಳ್ಳುತ್ತಾರೆ.

ಇಂತಹ ಪುರಾಣ ಹಾಗೂ ಇತಿಹಾಸ ಪ್ರಸಿದ್ಧ ಮಠದಲ್ಲಿ ಈಗ ಅಧಿಕಾರ ವಹಿಸಿಕೊಂಡಿರುವ ಗುರುಗಳು ಶ್ರೀಶಾಂತ ಸ್ವಾಮಿ ಮತ್ತು ಶ್ರೀಮತಿ ಈರಮ್ಮನವರ ಪುತ್ರರಾಗಿ ಸುಮಾರು ೧೯೦೭ರಲ್ಲಿ ಜನಿಸಿ ಹಿರಿಯ ಗುರುಗಳ ಮಾರ್ಗದರ್ಶನ ದಲ್ಲಿ ವಿದ್ಯೆ ಕಲಿತು, ಧಾರ್ಮಿಕ ಸಂಸ್ಕಾರವನ್ನು ಪಡೆದು ೧೯೩೮ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡಿರುತ್ತಾರೆ. ಅಂದಿನಿಂದ ಈ ಮಠದ ಅಭಿವೃದ್ಧಿಗೆ ಶ್ರಮಿಸಿ ಮಠವನ್ನು ಬೆಳೆಸಿದ್ದಾರೆ. ಇವರು ತಮ್ಮ ಸಹೋದರ ಸಂಬಂಧಿಗಳಾದ ಶ್ರೀ ರುದ್ರಸ್ವಾಮಿ ಮತ್ತು ಶ್ರೀಮತಿ ಶಾಂತಮ್ಮನವರ ಪುತ್ರರಾಗಿ ೧೯೭೪ರಲ್ಲಿ ಜನಿಸಿದ ಮಗುವನ್ನು ಉತ್ತರಾಧಿಕಾರಿಗಳನ್ನಾಗಿ ಚಿಕ್ಕ ವಯಸ್ಸಿ ನಲ್ಲಿಯೇ ನೇಮಕಮಾಡಿಕೊಂಡು, ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ಕೊಡಿಸಿ ಶಿವಯೋಗಮಂದಿರ ಹಾಗೂ ಉಜ್ಜಯಿನಿ ಪೀಠದ ಗುರುಕುಲದಲ್ಲಿ ಧಾರ್ಮಿಕ ವಿದ್ಯಾಭ್ಯಾಸವನ್ನು ಮಾಡಲು ಅವಕಾಶ ಕಲ್ಪಿಸಿ ಕೊಟ್ಟು, ಧಾರ್ಮಿಕ ಸಂಸ್ಕಾರವನ್ನು ಕೊಡಿಸಿದ್ದಾರೆ. ಮಠದ ಪರಂಪರೆಯ ಇಪ್ಪತ್ತೆಂಟನೆಯ ಗುರುಗಳಾಗಿ ೧೯೮೫ರಲ್ಲಿ ಪಟ್ಟಾಧಿಕಾರವನ್ನು ನೀಡಿದ್ದಾರೆ.

ಕಿರಿಯ ಗುರುಗಳಾದ ಶ್ರೀ ಗಜದಂಡ ಶಿವಾಚಾರ್ಯ ಸ್ವಾಮಿಗಳು ಹಿರಿಯ ಗುರುಗಳ ಮಾರ್ಗದರ್ಶನದಲ್ಲಿ ಮಠವನ್ನು ಮುನ್ನಡೆಸಿಕೊಂಡು ಬರುತ್ತಿದ್ದಾರೆ. ಅಲ್ಲದೆ ಆಧುನಿಕ ಕಾಲದಲ್ಲಿ ಧರ್ಮವನ್ನು ವೈಚಾರಿಕಗೊಳಿಸಿ, ವಾಸ್ತವ ನೆಲೆಗಟ್ಟಿನ ಮೇಲೆ ವೀರಶೈವ ಧರ್ಮವನ್ನು ಬೆಳೆಸಲು ಮುಂದಾಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಪುರಾತನ ಪರಂಪರೆಯ ಈ ಮಠದಲ್ಲಿ ಈಗಾಗಲೇ ಇಪ್ಪತ್ತಾರು ಜನ ಗುರುಗಳು ಲಿಂಗೈಕ್ಯರಾಗಿದ್ದು, ಅಮರೇಶ್ವರ ದೇವಸ್ಥಾನದ ಸಮೀಪವಿರುವ ಮಠದಲ್ಲಿ ಎಂಟು ಗದ್ದುಗೆಗಳು, ಅರಸನಾಳ ಮಠದಲ್ಲಿ ಒಂದು ಗದ್ದುಗೆ, ಸಾಲವಾಡಿಗೆಯಲ್ಲಿ ಎಂಟು ಗದ್ದುಗೆಗಳು ಹಾಗೂ ದೇವರಭೂಪುರದಲ್ಲಿ ಎರಡು ಗದ್ದುಗೆಗಳಿವೆ. ಅಲ್ಲದೆ ಪರಂಪರೆಯ ಕೆಲವು ಗುರುಗಳು ಬೇರೆ ಬೇರೆ ಕಡೆ ಅನುಷ್ಠಾನ ಕೈಗೊಳ್ಳುತ್ತಿದ್ದ ಸಂದರ್ಭದಲ್ಲಿ ಲಿಂಗೈಕ್ಯರಾಗಿದ್ದು, ಅವರ ಗದ್ದುಗೆಗಳು ಬೇರೆ ಕಡೆ ನಿರ್ಮಾಣಗೊಂಡಿವೆಯಂತೆ. ಈಗಾಗಲೇ ಇಪ್ಪತ್ತಾರು ಗದ್ದುಗೆಗಳನ್ನು ಗುರುತಿಸಲಾಗಿದೆ. ಈ ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ, ಕಾರ್ತೀಕ ಮತ್ತು ಶ್ರಾವಣ ಮಾಸದಲ್ಲಿ ರುದ್ರಾಭಿಷೇಕ ಹಾಗೂ ಭಜನೆಯನ್ನು ನಡೆಸಲಾಗುತ್ತಿದೆ. ಕೊನೆಯ ದಿನ ನಡೆಯುವ ಮಹಾ ಮಂಗಳಾರತಿ ಕಾರ್ಯಕ್ರಮದಲ್ಲಿ ಹತ್ತು ಚೀಲ ಜೋಳದಿಂದ ತಯಾರಿಸಲ್ಪಟ್ಟ ರೊಟ್ಟಿ ಹಾಗೂ ಐದು ಕ್ವಿಂಟಾಲ್ ಸಜ್ಜಕ ದಾಸೋಹಕ್ಕೆ ಖರ್ಚಾಗುತ್ತದೆಯಂತೆ. ೧೯೯೩ರಲ್ಲಿ ಹಿರಿಯ ಗುರುಗಳ ವರ್ಧಂತಿ ಕಾರ್ಯಕ್ರಮವನ್ನು ನಡೆಸಿದ ಭಕ್ತರು ಜ್ಞಾಪಕಾರ್ಥಕವಾಗಿ ಬೆಳ್ಳಿ ಕಿರೀಟವನ್ನು ಗುರುಗಳಿಗೆ ಅರ್ಪಿಸಿದ್ದಾರೆ. ಲಕ್ಷದೀಪೋತ್ಸವ ವನ್ನು ವ್ಯವಸ್ಥೆಗೊಳಿಸಿ ಉಜ್ಜಯಿನಿ ಪೀಠದ ಗುರುಗಳನ್ನು ಕರೆಸಿ ಅಡ್ಡಪಲ್ಲಕ್ಕಿ ಉತ್ಸವವನ್ನು ನಡೆಸಲಾಗಿದೆ. ಈ ಸಂದರ್ಭದಲ್ಲಿ ಅರವತ್ತರಿಂದ ಎಪ್ಪತ್ತು ಸಾವಿರ ಜನರಿಗೆ ಅನ್ನ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು.

ಅಭಿವೃದ್ಧಿ ಕಾರ್ಯಗಳು: ಅಮರೇಶ್ವರ ದೇವಸ್ಥಾನದ ಸಮೀಪವಿರುವ ಮಠವನ್ನು ಸುಮಾರು ಒಂದೂವರೆ ಕೋಟಿ ರೂ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಅಲ್ಲದೆ ದೇವರ ಭೂಪುರದ ಗ್ರಾಮದ ಒಳಭಾಗದಲ್ಲಿರುವ ಕಟ್ಟಡವನ್ನು ನವೀಕರಣಗೊಳಿಸಿ ಅಗತ್ಯಕ್ಕೆ ಅನುಗುಣವಾಗಿ ವಿಸ್ತಾರ ಮಾಡಿಕೊಳ್ಳಲಾಗಿದೆ. ಈಗಲೂ ಅಮರೇಶ್ವರ ಕ್ಷೇತ್ರದ ಸಂಬಂಧವನ್ನು ಉಳಿಸಿಕೊಂಡಿರುವ ಮಠದ ಪರಂಪರೆಯ ಗುರುಗಳು ಅಮರೇಶ್ವರ ದೇವಸ್ಥಾನ ಸಮಿತಿಯ ಅಧ್ಯಕ್ಷರಾಗಿ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಈ ರೀತಿ ಧಾರ್ಮಿಕ, ಸಾಮಾಜಿಕ ಕಾರ್ಯಗಳಲ್ಲಿ ಗುರುಗಳು ತಮ್ಮನ್ನು ತೊಡಗಿಸಿಕೊಂಡು ಮಠವನ್ನು ಹೆಚ್ಚು ಪ್ರಸಿದ್ಧಿಗೆ ತಂದಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಗಜದಂಡ ಶಿವಾಚಾರ್ಯ ಸ್ವಾಮಿಗಳು, ಶ್ರೀ ಬೃಹನ್ಮಠ, ದೇವರ ಭೂಪುರ, ಲಿಂಗಸುಗೂರು ತಾಲ್ಲೂಕು, ರಾಯಚೂರು ಜಿಲ್ಲೆ.

ಮಸ್ಕಿ

ಲಿಂಗಸುಗೂರು ತಾಲ್ಲೂಕಿನ ಮಸ್ಕಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತಾರು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಗಚ್ಚಿನ ಹಿರೇಮಠವು ಅಸ್ತಿತ್ವದಲ್ಲಿದೆ.

ಗಚ್ಚಿನ ಹಿರೇಮಠ: ಮಸ್ಕಿ ಗ್ರಾಮದ ಮಧ್ಯಭಾಗದಲ್ಲಿ ಶ್ರೀ ಗಚ್ಚಿನ ಹಿರೇಮಠವು ಸ್ಥಾಪನೆಯಾಗಿ ಈ ಗ್ರಾಮದ ಧಾರ್ಮಿಕ ಕೇಂದ್ರಬಿಂದುವಾಗಿ ಬೆಳೆದಿದೆ. ಉಜ್ಜಯನಿ ಪೀಠದ ಶಾಖಾಮಠವಾಗಿರುವ ಈ ಮಠವು ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಈ ಮಠವು ಶ್ರೀ ರುದ್ರಸ್ವಾಮಿಗಳಿಂದ ಸ್ಥಾಪನೆಗೊಂಡಿದೆ.

ಮಠ ಸ್ಥಾಪನೆ: ಶ್ರೀ ರುದ್ರಸ್ವಾಮಿಗಳು ಲೋಕ ಸಂಚಾರ ಕೈಗೊಂಡು ಶ್ರೀಶೈಲದಲ್ಲಿ ಅನುಷ್ಠಾನಗೊಂಡಿದ್ದು, ನಂತರ ತಮ್ಮ ಆರಾಧ್ಯ ದೈವ ಮಲ್ಲಿಕಾರ್ಜುನನೊಂದಿಗೆ ಈ ಗ್ರಾಮಕ್ಕೆ ಬಂದರೆಂದು ಹೇಳಲಾಗುತ್ತದೆ. ಈ ಗ್ರಾಮದ ಹೊರಭಾಗದಲ್ಲಿ ಗುರುಗಳು ಧಾರ್ಮಿಕ ಅನುಷ್ಠಾನವನ್ನು ನಿಷ್ಠೆಯಿಂದ ನಡೆಸುತ್ತಿದ್ದನ್ನು ಗಮನಿಸಿದ ಭಕ್ತರು, ಗುರುಗಳನ್ನು ಸತ್ಕರಿಸಿ ಅವರು ನಡೆಸುವ ಧಾರ್ಮಿಕ ಕಾರ್ಯಗಳಿಗೆ ಸ್ಪಂದಿಸತೊಡಗಿದರು. ನಿತ್ಯ ಶಿವಾನುಭವ ಗೋಷ್ಠಿಯನ್ನು ನಡೆಸಿ ವೀರಶೈವ ಧರ್ಮವನ್ನು ಬೆಳಸಿದರು ಎಂದು ಹೇಳಲಾಗುತ್ತದೆ. ಶ್ರೀಶೈಲದಿಂದ ಹದಿಮೂರನೆಯ ಶತಮಾನದಲ್ಲಿ ಆಗಮಿಸಿದ ಶ್ರೀ ರುದ್ರಸ್ವಾಮಿಗಳಿಗೆ ಇಲ್ಲಿನ ಬೆಲ್ಲದ ಮರಡಿ ದೇಸಾಯಿಯವರ ಹಿರಿತನದಲ್ಲಿ ಗುರುಗಳಿಗೆ ಒಂದು ಮಠವನ್ನು ಸ್ಥಾಪಿಸಿಕೊಟ್ಟರಂತೆ. ಅದೇ 'ಗಚ್ಚಿನಮಠ' ವಾಗಿ ಗುರುಗಳ ಆಶ್ರಯ ತಾಣವಾಯಿತು. ನಂತರ ಶ್ರೀಶೈಲದ ಶ್ರೀ ಮಲ್ಲಿಕಾರ್ಜುನ ಗುಡಿಯನ್ನು ಸ್ಥಾಪಿಸಿದರು. ಅಂದು ಸ್ಥಾಪಿಸಿದ ಗುಡಿಯೇ ಇಂದು ಶ್ರೀ ಮಲ್ಲಿಕಾರ್ಜುನ ದೇವಾಲಯವಾಗಿ ಹೆಸರು ಪಡೆದಿದೆ. ಶ್ರೀ ರುದ್ರಸ್ವಾಮಿಗಳಿಂದ ಪ್ರಾರಂಭಗೊಂಡ ಈ ಮಠದಲ್ಲಿ ಒಟ್ಟು ಹನ್ನೆರಡು ಜನ ಗುರುಗಳು ಅಧಿಕಾರವನ್ನು ನಡೆಸಿರಬಹುದೆಂದು ಹೇಳಲಾಗುತ್ತದೆ.

ಪರಂಪರೆ: ಶ್ರೀಶೈಲದ ಸಂಪರ್ಕವನ್ನು ಹೊಂದಿದ್ದ ಈ ಮಠವು ಉಜ್ಜಯನಿ ಪೀಠದ ಪರಂಪರೆಯಲ್ಲಿ ಬೆಳೆದಿದೆ. ಮಠವು ಸ್ಥಾಪನೆಗೊಂಡ ಕಾಲಾನಂತರ ತನ್ನ ಪರಂಪರೆಯನ್ನು ಬದಲಿಸಿಕೊಂಡಿರಬಹುದೆಂದು ಇತಿಹಾಸಕಾರರು ಅಭಿಪ್ರಾಯಿಸುತ್ತಾರೆ. ಇಂತಹ ವಿಶಿಷ್ಟ ಹಾಗೂ ಪುರಾತನ ಪರಂಪರೆಯುಳ್ಳ ಈ ಮಠದಲ್ಲಿ ಒಟ್ಟು ನಾಲ್ಕು ಗದ್ದುಗೆಗಳು ಸ್ಥಾಪನೆಯಾಗಿವೆ. ಉಳಿದ ಎಂಟು ಜನ ಗುರುಗಳ ವಿವರಗಳು ದೊರೆಯದಾಗಿದೆ. ಪ್ರಸ್ತುತ ಮಠದ ಪರಂಪರೆಯಲ್ಲಿ ದೊರೆಯಬಹುದಾದ ಗುರುಗಳ ಹೆಸರು ಈ ಕೆಳಗಿನಂತಿದೆ.

೧. ಷ.ಬ್ರ.ಶ್ರೀ ರುದ್ರಸ್ವಾಮಿ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಗಂಗಾಧರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಮುರುಘೇಂದ್ರ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ರುದ್ರದೇವ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ.(ಕ್ರಿ.ಶ. ಹನ್ನೊಂದನೆಯ ಶತಮಾನದ ಉತ್ತರಾರ್ಧದಲ್ಲಿ ಗಂಗವಾಸಿ ಪಂಡಿತ ರೆಂಬುವರು ಈ ಪುರಾತನ ಮಠದ ಅಧಿಪತಿಗಳಾದ್ದರು. ಇವರ ನಂತರ ಶ್ರೀ ರುದ್ರಸ್ವಾಮಿಗಳು ಅಧಿಕಾರಕ್ಕೆ ಬಂದಿರ ಬಹುದೆಂದು ಇತಿಹಾಸಕಾರರು ಶಂಕೆ ವ್ಯಕ್ತಪಡಿಸುತ್ತಾರೆ. ಆದ್ದರಿಂದ ಈ ಬಗ್ಗೆ ಸಂಶೋಧನೆ ನಡೆಸಬೇಕಾಗಿದೆ) ಸದ್ಯ ತಿಳಿದಿರುವ ಪ್ರಕಾರ ಮಠದ ಕರ್ತೃ ಗುರುಗಳೆಂದು ತಿಳಿದಿರುವ ಶ್ರೀ ರುದ್ರಸ್ವಾಮಿಗಳು ಮಠವನ್ನು ಬೆಳೆಸಿದ್ದಾರೆ. ನಂತರ ಬಂದ ಶ್ರೀಗಂಗಾಧರ ಸ್ವಾಮಿಗಳು ಮಠವನ್ನು ಅಭಿವೃದ್ಧಿ ಪಡಿಸಿ, ಶ್ರೀ ಸಿದ್ಧಲಿಂಗ ಸ್ವಾಮಿಗಳಿಗೆ ಅಧಿಕಾರವನ್ನು ಬಿಟ್ಟುಕೊಟ್ಟಿರುತ್ತಾರೆ. ಶ್ರೀ ಸಿದ್ಧಲಿಂಗ ಸ್ವಾಮಿಗಳ ನಂತರ ೧೯೩೫ರಲ್ಲಿ ಗಚ್ಚಿನ ಹಿರೇಮಠದ ಅಧಿಕಾರಕ್ಕೆ ಬಂದ ಶ್ರೀ ಮುರುಘೇಂದ್ರ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಸರ್ವಾಂಗೀಣವಾಗಿ ಅಭಿವೃದ್ಧಿ ಪಡಿಸಿದ್ದಾರೆ. ಮಠಕ್ಕೆ ಕಟ್ಟಡವನ್ನು ನಿರ್ಮಿಸಿ ವಿಸ್ತಾರಗೊಳಿಸಿದ್ದಾರೆ. ಇವರ ಕಾಲದಲ್ಲಿ ಮಠವು ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಿಕೊಂಡಿತು. ಮಠದ ಅಭಿವೃದ್ಧಿ ಹಾಗೂ ಸಮಾಜದ ಅಭಿವೃದ್ಧಿಯನ್ನು ಮಾಡಿದ ಗುರುಗಳು ಮೇ ೨೦ ರ ೧೯೯೨ ರಂದು ಲಿಂಗೈಕ್ಯರಾಗಿದ್ದಾರೆ. ಲಿಂಗೈಕ್ಯರಾದ ದಿನವೇ ಪರಂಪರಾಗತ ಮಠಕ್ಕೆ ಶ್ರೀ ರುದ್ರದೇವರನ್ನು ನೇಮಕ ಮಾಡಲಾಗಿದೆ.

ಮಸ್ಕಿ ಗ್ರಾಮದ ಅಮರಯ್ಯ ಮತ್ತು ಸುಮಂಗಳ ಇವರ ಪುತ್ರರಾಗಿ ೧೯೮೪ ರಲ್ಲಿ ಜನಿಸಿದ ಶ್ರೀ ರುದ್ರದೇವ ಸ್ವಾಮಿಗಳು ಪ್ರಾಥಮಿಕ ವಿದ್ಯಾಭ್ಯಾಸವನ್ನು ಮಸ್ಕಿಯಲ್ಲಿ ಮುಗಿಸಿ, ಬಾಳೆಹೊನ್ನೂರು ರಂಭಾಪುರಿ ಪೀಠದ ಗುರುಕುಲದಲ್ಲಿ

ಆಶ್ರಯ ಪಡೆದು ಪ್ರೌಢಶಿಕ್ಷಣ ಹಾಗೂ ಸಂಸ್ಕೃತ ವೇದಾಧ್ಯಯನವನ್ನು ಮಾಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ, ಅಮಾವಾಸ್ಯೆ ಹುಣ್ಣಿಮೆಯಲ್ಲಿ ಅಭಿಷೇಕ, ಶ್ರಾವಣ ಮಾಸದಲ್ಲಿ ರುದ್ರಾಭಿಷೇಕದ ಪೂಜೆಯನ್ನು ನಡೆಸಲಾಗುತ್ತಿದೆ. ಹಿರಿಯ ಗುರುಗಳ ಆರಾಧನೆಯನ್ನು ಪ್ರತಿವರ್ಷದ ಮೇ ಇಪ್ಪತ್ತರಂದು ನಡೆಸಲಾಗುತ್ತಿದೆ. ಅಂದು ಸೇರುವ ಸಾವಿರಾರು ಭಕ್ತರಿಗೆ ಅನ್ನ ದಾಸೋಹ ಹಾಗೂ ಜ್ಞಾನ ದಾಸೋಹವನ್ನು ನೀಡಲಾಗುತ್ತಿದೆ. ಮಠದ ಪರಂಪರೆಯಲ್ಲಿ ಬಂದಂತಹ ಬೆಳ್ಳಿ ಮತ್ತು ಹಿತ್ತಾಳೆಯ ಪೂಜಾ ಪರಿಕರಗಳು ಹಾಗೂ ಹಿಂದೆ ವಿಜಯನಗರದ ಅರಸರು ನೀಡಿದಂತಹ ಜಿಲ್ಲೆಗಳು, ಕುದುರೆಯ ಜೀನು ಇನ್ನೂ ಮುಂತಾದ ಅನೇಕ ಪುರಾತನ ಸಾಮಗ್ರಿಗಳು ಮಠದಲ್ಲಿದ್ದವಂತೆ. ಮಠಕ್ಕೆ ನೂತನ ಕಟ್ಟಡ ನಿರ್ಮಾಣಗೊಂಡ ಮೇಲೆ ಅವುಗಳು ಕಾಣೆಯಾಗಿವೆ ಎಂದು ಹೇಳಲಾಗುತ್ತಿದೆ. ಮಠದ ಕರ್ತೃಗುರು ಶ್ರೀ ರುದ್ರಸ್ವಾಮಿಗಳು ಪ್ರತಿಷ್ಠಾಪಿಸಿದ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ನಡೆಯುವ ಎಲ್ಲಾ ಧಾರ್ಮಿಕ ಚಟುವಟಿಕೆಗಳನ್ನೂ ಭಕ್ತರು ಈ ಮಠದ ಗುರುಗಳ ನೇತೃತ್ವದಲ್ಲಿಯೇ ನಡೆಸುತ್ತಾ ಬಂದಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ರುದ್ರದೇವ ಶಿವಾಚಾರ್ಯ ಸ್ವಾಮಿಗಳು, ಶ್ರೀ ಗಚ್ಚಿನ ಹಿರೇಮಠ, ಮಸ್ಕಿ, ಲಿಂಗಸುಗೂರು ತಾ, ರಾಯಚೂರುಜಿಲ್ಲೆ.

ಲಿಂಗಸುಗೂರು

ರಾಯಚೂರು ಜಿಲ್ಲೆಯ ಲಿಂಗಸುಗೂರು ಪಟ್ಟಣವು ಜಿಲ್ಲಾ ಕೇಂದ್ರದಿಂದ ಪಶ್ಚಿಮಕ್ಕೆ ನಲವತ್ತೆಂಟು ಕಿ.ಮೀ ದೂರದಲ್ಲಿದೆ. ಲಿಂಗಸುಗೂರು ಪಟ್ಟಣವು ತಾಲ್ಲೂಕು ಕೇಂದ್ರಸ್ಥಳವಾಗಿದ್ದು, ಕಸಬಾ ಲಿಂಗಸುಗೂರು ಮತ್ತು ಲಿಂಗಸುಗೂರು ಎಂಬ ಎರಡು ಅವಳಿ ಪಟ್ಟಣಗಳು ಇವೆ.

ವಿಜಯ ಮಹಾಂತೇಶ್ವರಮಠ: ತಾಲ್ಲೂಕು ಕೇಂದ್ರ ಸ್ಥಳವಾದ ಲಿಂಗಸುಗೂರಿನಲ್ಲಿ ಶ್ರೀ ವಿಜಯ ಮಹಾಂತೇಶ್ವರ ಮಠವು ಅಸ್ತಿತ್ವದಲ್ಲಿದೆ. ಶ್ರೀ ವಿಜಯ ಮಹಾಂತೇಶ್ವರರು ಚಿತ್ತರಗಿಯಲ್ಲಿ ನೆಲೆಸುವ ಮುನ್ನ ಈ ಸ್ಥಳದಲ್ಲಿ ಕೆಲವು ದಿನ ಅನುಷ್ಠಾನಗೊಂಡು ಮಠವನ್ನು ಸ್ಥಾಪನೆ ಮಾಡಿದ್ದರು. ಅಂದು ಸ್ಥಾಪನೆಗೊಂಡ ಮಠವು ಇಂದು ಇಳಕಲ್ಲಿನ ಶ್ರೀ ವಿಜಯ ಮಹಾಂತೇಶ್ವರ ಮಠದ ಶಾಖಾಮಠವಾಗಿ ಬೆಳೆದು ಬಂದಿದೆ. ಇಲ್ಲಿನ ಧಾರ್ಮಿಕ ಆಚರಣೆಗಳನ್ನು ಇಳಕಲ್ಲು ಮಠವೇ ನಡೆಸಿಕೊಂಡು ಬಂದಿದೆ. ಇಲ್ಲಿ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ ಶೈಕ್ಷಣಿಕ ಅಭಿವೃದ್ಧಿಗೆ ನೆರವಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಮಹಾಂತಸ್ವಾಮಿಗಳು, ಶ್ರೀ ವಿಜಯ ಮಹಾಂತೇಶ್ವರಮಠ, ಇಳಕಲ್ಲು, ಹುನಗುಂದ ತಾ, ಬಾಗಲಕೋಟೆಜಿಲ್ಲೆ.

ತೋಂಟದಾರ್ಯಮಠ: ಕಸಬಾ ಲಿಂಗಸುಗೂರಿನಲ್ಲಿ ಶ್ರೀ ತೋಂಟದಾರ್ಯ ಮಠವು ಸ್ಥಾಪನೆಯಾಗಿದೆ. ಪುರಾತನ ಕಾಲದಲ್ಲಿ ಸ್ಥಾಪನೆಯಾದ ಈ ಮಠವು ಗದಗದ ಶ್ರೀ ತೋಂಟದಾರ್ಯ ಮಠದ ಶಾಖಾಮಠವಾಗಿ ಬೆಳೆದಿದೆ. ಈ ಮಠದ ಆಡಳಿತ ಹಾಗೂ ಧಾರ್ಮಿಕ ಕಾರ್ಯಗಳನ್ನು ಗದಗಿನ ತೋಂಟದಾರ್ಯ ಮಠವೇ ನಡೆಸಿಕೊಂಡು ಬರುತ್ತಿದ್ದು ಇಲ್ಲಿ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ, ಗ್ರಾಮಾಂತರ ಪ್ರದೇಶದ ಮಕ್ಕಳ ಕಲಿಕೆಗೆ ನೆರವಾಗಿದೆ. ಗದಗದ ಶ್ರೀ ಡಾ.ತೋಂಟದ ಸಿದ್ಧಲಿಂಗ ಸ್ವಾಮಿಗಳು ಸಂದರ್ಭಕ್ಕನುಸಾರ ಮಠಕ್ಕೆ ಆಗಮಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಡಾ.ತೋಂಟದ ಸಿದ್ಧಲಿಂಗ ಸ್ವಾಮಿಗಳು, ಶ್ರೀ ತೋಂಟದಾರ್ಯಮಠ, ಗದಗ.

ಸಂತೆಕೆಲ್ಲೂರು

ಲಿಂಗಸಗೂರು ತಾಲ್ಲೂಕಿನ ಸಂತೆಕೆಲ್ಲೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಎಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಘನಮಠದಾರ್ಯರಮಠವು ಅಸ್ತಿತ್ವದಲ್ಲಿದೆ.

ಘನಮಠದಾರ್ಯರಮಠ: ಸಂತೆಕೆಲ್ಲೂರು ಗ್ರಾಮದಲ್ಲಿರುವ ಶ್ರೀ ಘನಮಠದಾರ್ಯರಮಠವು ಶ್ರೀ ನಾಗಭೂಷಣಘನಮಠ ಶಿವಯೋಗಿಗಳಿಂದ ಸ್ಥಾಪನೆಯಾಗಿದೆ. ಇವರು ೧೮೨೮ರಲ್ಲಿ ಆಂಧ್ರಪ್ರದೇಶದ ದೋರ್ವಾಡ ಗ್ರಾಮದಲ್ಲಿ ಶ್ರೀ ..ರಪ್ಪಯ್ಯ

ಮತ್ತು ಶ್ರೀಮತಿ ವೀರಮ್ಮನವರ ಪುತ್ರರಾಗಿ ಜನಿಸಿದರು. ಶ್ರೀ ನಾಗಭೂಷಣ ಶಿವಯೋಗಿಗಳು ಸಂಗಮ್ಮ ಎಂಬ ಶರಣೆಯನ್ನು ಸತಿಯನ್ನಾಗಿ ಪಡೆದುಕೊಂಡು ಗಿರಿಜೆ ಎಂಬ ಹೆಣ್ಣು ಮಗಳನ್ನು ಪಡೆದಿದ್ದರು. ಕೃಷಿಕಾಯಕ ಮಾಡುತ್ತಿದ್ದ ಶ್ರೀನಾಗ ಭೂಷಣ ಘನಮಠ ಶಿವಯೋಗಿಗಳು ವೈರಾಗ್ಯ ತಾಳಿ, ಆಂಧ್ರದಿಂದ ಕರ್ನಾಟಕದ ಕಲ್ಯಾಣ ನಾಡಿಗೆ ಬಂದರು. ಗುರುಗಳು ಬಸವಕಲ್ಯಾಣ, ಗುಲ್ಬರ್ಗ, ಮುದ್ದೇಬಿಹಾಳು, ಹುನಗುಂದ, ಕೂಡಲಸಂಗಮ, ಕುಂಟೋಜಿ, ಚಿಂಚೋಳಿ, ಇಲಕಲ್ಲು, ಬಳ್ಳಾರಿ, ಬಸವನಬಾಗೇವಾಡಿ ಮುಂತಾದ ಕ್ಷೇತ್ರಗಳಲ್ಲಿ ಸಂಚರಿಸಿ ಲಿಂಗಸಗೂರಿನ ಸಂತೆಕೆರೂರು ಗ್ರಾಮಕ್ಕೆ ಬಂದು ನೆಲೆ ನಿಂತರು. ಬಸವಾದಿ ಶರಣರ ವಚನಗಳನ್ನು ಅಧ್ಯಯನ ಮಾಡಿದ್ದಲ್ಲದೆ, ಬಸವ ಪುರಾಣವನ್ನು ಆಳವಾಗಿ ಅಭ್ಯಾಸಮಾಡಿ ಆಧ್ಯಾತ್ಮಿಕ ಚಿಂತನೆಗಳನ್ನು ಗಟ್ಟಿಗೊಳಿಸಿಕೊಂಡರು. ತಪ್ಪು ಮಾಡಿದವರನ್ನು ತಮ್ಮ ತೀಕ್ಷ್ಣ ಬುದ್ಧಿಯಿಂದ ಟೀಕಿಸಿ ಸರಿಯಾದ ಮಾರ್ಗದಲ್ಲಿ ಮುನ್ನಡೆಯುವಂತೆ ಮಾಡುತ್ತಿದ್ದರು.

ಕೃಷಿಜ್ಞಾನ ಪ್ರದೀಪಿಕೆ: ತಮ್ಮ ಕೃಷಿ ಜ್ಞಾನವನ್ನು ತಮ್ಮ ಶಿಷ್ಯಂದಿರಾದ ಬಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಬೆಕ್ಕಿನಾಳ ಗ್ರಾಮದ ಶರಣ ಸಿದ್ಧರಾಮಪ್ಪ ಕುನ್ನಾಳ ಇವರಿಗೆ ಧಾರೆ ಎರೆದು, ಅವರಿಂದ ಕೃಷಿಜ್ಞಾನ ಪ್ರದೀಪಿಕೆ ಎಂಬ ಗ್ರಂಥ ರಚನೆಗೆ ಕಾರಣೀಭೂತರಾದರು. ಕನ್ನಡ ಸಾಹಿತ್ಯದಲ್ಲಿ ಪ್ರಥಮವಾಗಿ ಕೃಷಿ ಆಧಾರಿತ ಗ್ರಂಥ ಮೂಡಿ ಬಂದಿತು. ಇದರಲ್ಲಿ ಆಹಾರಧಾನ್ಯ, ಬೇಸಾಯ ಪದ್ಧತಿ, ಹಣ್ಣು ಹಂಪಲು, ಕಾಯಿಪಲ್ಯ, ಗೆಡ್ಡೆಗೆಣಸು, ಹೂವು, ಮುಂತಾದ ಬೆಳೆಗಳನ್ನು ಬೆಳೆಯುವ ಬಗ್ಗೆ ವಿವರಣೆ ನೀಡಲಾಗಿದೆ. ಅಲ್ಲದೆ ರೈತರಿಗೆ ಮಹತ್ವದ ಸಲಹೆಗಳನ್ನು ನೀಡಲಾಗಿದೆ. ಇದರಲ್ಲಿ ಎತ್ತುಗಳ ಆರೈಕೆ, ಒಕ್ಕಲುತನಕ್ಕೆ ಬೇಕಾಗುವ ಸಾಮಾನುಗಳ ವ್ಯವಸ್ಥೆ, ಭೂಮಿಯ ಆರೈಕೆ, ಗೊಬ್ಬರದ ಉಪಯೋಗ, ಭೂಮಿ ಹದ ಮಾಡುವುದು, ಬೀಜಗಳ ಬಿತ್ತನೆ, ಬಾವಿ ತೋಡುವ ವಿಧಾನ, ತೋಟದಲ್ಲಿ ಬೆಳೆಯಬಹುದಾದ ಬೆಳೆಗಳು ಈ ರೀತಿ ಸರ್ವವಿಧದಲ್ಲಿಯೂ ರೈತರಿಗೆ ಉಪಯೋಗವಾಗುವಂತಹ ಗ್ರಂಥ ಇವರ ಕೊಡುಗೆಯಿಂದ ಸಿದ್ಧಗೊಂಡಿದ್ದು ಒಂದು ವಿಶೇಷವಾಗಿದೆ.

ಶ್ರೀ ನಾಗಭೂಷಣ ಘನಮಠ ಶಿವಯೋಗಿಗಳು ಸಂತೆಕೆಲ್ಲೂರಲ್ಲಿ ನೆಲೆಸಿ ಧರ್ಮಪ್ರಚಾರವನ್ನು ಕೈಗೊಂಡರು. ಕೆಲವು ದಿನಗಳ ನಂತರ ತಮ್ಮ ಶಿಷ್ಯರನ್ನು ಕರೆಸಿ, ನಾವು ಲಿಂಗೈಕ್ಯರಾದ ಮೇಲೆ ನಮ್ಮ ದೇಹವನ್ನು ಸಮಾಧಿ ಮಾಡಬಾರದು. ಒಂದು ವೇಳೆ ಸಮಾಧಿ ಮಾಡಿದರೂ ಅದರ ಮೇಲೆ ಗದ್ದುಗೆ ಗುಡಿ ಕಟ್ಟಿಸಬಾರದು. ಅಲ್ಲದೆ ಪೂಜೆ, ಅಭಿಷೇಕವನ್ನು ಮಾಡಬಾರದು. ತಮ್ಮ ಮಾತಿಗೆ ವಿರುದ್ಧವಾಗಿ ಕಟ್ಟಿಸಿದ್ದೇ ಆದರೆ ಕಟ್ಟಿಸಿದವರ, ಕಟ್ಟಿದವರ ವಂಶ ನಿರ್ವಂಶವಾಗಲಿ ಎಂದು ಆಜ್ಞೆ ಮಾಡಿ ಲಿಂಗೈಕ್ಯರಾದರು. ಈ ಕಠೋರ ಶಾಪವನ್ನು ನಂಬಿಯೂ ನರಸವ್ವ ಎಂಬ ಸದ್ಭಕ್ತೆ ಲೌಕಿಕ ಪ್ರಪಂಚವನ್ನು ಲೆಕ್ಕಿಸದೆ ತ್ಯಾಗಕ್ಕೆ ಮುಂದಾಗಿ ಗದ್ದುಗೆಯನ್ನು ಕಟ್ಟಿಸಿದರು. ಲೋಕಕಲ್ಯಾಣಕ್ಕಾಗಿ ದುಡಿದ ಶಿವಯೋಗಿಗಳ ಹೆಸರು ಶಾಶ್ವತವಾಗಿರುವಂತೆ ಮಾಡಲು ನರಸವ್ವ ಮಾಡಿದ ತ್ಯಾಗದಿಂದ ಮಹಾತಾಯಿಯಾಗಿ, ನಿರ್ವಂಶದ ಹೆಸರಿನಲ್ಲಿ ಮುಕ್ತಿ ಪಡೆದರು.

ಇಂದಿಗೂ ಸಂತೆಕೆಲ್ಲೂರಿನಲ್ಲಿ ಸರ್ವಧರ್ಮೀಯರ ಧಾರ್ಮಿಕ ಕೇಂದ್ರವಾಗಿ ಘನಮಠೇಶ್ವರ ಮಠವು ಬೆಳೆದಿದೆ. ಪ್ರಸ್ತುತ ಶ್ರೀ ಸಿದ್ಧಲಿಂಗ ಸ್ವಾಮಿಗಳು ಮಠದ ಅಧಿಪತಿಗಳಾಗಿದ್ದು, ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ ಬಂದಿದ್ದರು. ಇವರು ಲಿಂಗೈಕ್ಯರಾದ ಮೇಲೆ ಶ್ರೀ ಗುರುಬಸವ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಪ್ರತಿವರ್ಷ ಶ್ರೀ ನಾಗಭೂಷಣ ಘನಮಠ ಶಿವಯೋಗಿಗಳ ಜಾತ್ರೆಯು ವಿಜೃಂಭಣೆಯಿಂದ ನಡೆಯುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಗುರುಬಸವಸ್ವಾಮಿಗಳು, ಶ್ರೀ ಘನಮಠದಾರ್ಯರಮಠ, ಸಂತೆಕೆಲ್ಲೂರು, ಲಿಂಗಸಗೂರು ತಾಲ್ಲೂಕು, ರಾಯಚೂರು ಜಿಲ್ಲೆ.

ಆಧಾರ: ಆಧ್ಯಾತ್ಮಸಿರಿ, ಸ್ಮರಣ ಸಂಚಿಕೆ, ಲೇಖಕರು : ಎನ್. ಬಸವರಾಜ ಗುರುಗಂಟ

❑

ಸಿಂಧನೂರು ತಾಲ್ಲೂಕು

ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕು ತುಂಗಾಭದ್ರ ನದಿಯ ಹರಿಯುವಿಕೆಯಿಂದ ಪ್ರಾಕೃತಿಕ ಹಾಗೂ ಆರ್ಥಿಕ ಶ್ರೀಮಂತಿಕೆಯನ್ನು ಕಂಡಿದೆ. ಈ ತಾಲ್ಲೂಕಿನಲ್ಲಿ ವೀರಶೈವಧರ್ಮವು ಪ್ರಬಲವಾಗಿ ಬೆಳೆದ ಲಕ್ಷಣಗಳು ಕಂಡು ಬರುತ್ತವೆ. ಪ್ರಸ್ತುತ ಈ ತಾಲ್ಲೂಕಿನಲ್ಲಿ ಐದು ಮಠಗಳು ಅಸ್ತಿತ್ವದಲ್ಲಿವೆ.

ಒಳಬಳ್ಳಾರಿ

ಸಿಂಧನೂರು ತಾಲ್ಲೂಕಿನ ಒಳಬಳ್ಳಾರಿಯು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಇಪ್ಪತ್ತೆಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಚನ್ನಬಸವ ತಾತನವರು ಪುನರ್ ಸ್ಥಾಪಿಸಿದ ಸುವರ್ಣಗಿರಿ ವಿರಕ್ತಮಠವು ಅಸ್ತಿತ್ವದಲ್ಲಿದೆ.

ಸುವರ್ಣಗಿರಿ ವಿರಕ್ತಮಠ: ಒಳಬಳ್ಳಾರಿಯ ತುಂಗಾಭದ್ರನದಿಯ ದಡದಲ್ಲಿ ಸ್ಥಾಪನೆಯಾಗಿರುವ ಶ್ರೀ ಸುವರ್ಣಗಿರಿ ವಿರಕ್ತಮಠವು ಚೀಲಾಳ ಸಮಯದ ಪರಂಪರೆಯಲ್ಲಿ ಬೆಳೆದಿದೆ. ಹನ್ನೆರಡನೆಯ ಶತಮಾನದಲ್ಲಿ ಸ್ಥಾಪನೆಯಾಗಿರಬಹುದಾದ ಈ ಮಠವು, ಶ್ರೀ ಚನ್ನಬಸವ ಸ್ವಾಮಿಗಳಿಂದ ಜೀರ್ಣೋದ್ಧಾರಗೊಂಡು ಪುನಶ್ಚೇತನವನ್ನು ಪಡೆಯಿತು.

ಮಾನವಿ ತಾಲ್ಲೂಕಿನ ಪಾಮನಕಲ್ಲೂರಿನ ವಿರಕ್ತಮಠದಲ್ಲಿ ಬೆಳೆದ ವಟಗಲ್ಲಯ್ಯನೆಂಬ ಶಿಶುವನ್ನು ಇಲ್ಲಿನ ಗುರುಗಳು ವಿಧಿವತ್ತಾಗಿ ಬೆಳೆಸಿದ್ದರು. ಗುರುಗಳ ಆಜ್ಞಾನುಸಾರ ಬಾಲ್ಯದಲ್ಲಿಯೇ ಸಂಸ್ಕಾರವನ್ನು ಕಲಿತು, ಗಂಭೀರತೆಯನ್ನು ಬೆಳೆಸಿಕೊಂಡಿದ್ದರು. ಇವರು ಪ್ರಾಥಮಿಕ ಶಾಲೆಯಲ್ಲಿ ಅಭ್ಯಾಸವನ್ನು ಕೈಗೊಂಡಿದ್ದ ಸಂದರ್ಭದಲ್ಲಿ ಗಂಗಾವತಿ ತಾಲ್ಲೂಕಿನ ಕನಕಗಿರಿ ಮಠದ ಶ್ರೀ ಚನ್ನಮಲ್ಲ ಶಿವಯೋಗಿಗಳ ದೃಷ್ಟಿಗೆ ಬಿದ್ದು, ಮಹಾಮಹಿಮರಾಗಿ ರೂಪುಗೊಂಡರು. ಶ್ರೀ ಚನ್ನಮಲ್ಲ ಶಿವಯೋಗಿಗಳು ತ್ರಿಭಾಷಾ ಪಾಂಡಿತ್ಯದಿಂದ ಹೆಸರು ಗಳಿಸಿದ್ದರು. ಇವರ ಸಾಮಿಪ್ಯತೆಯಿಂದ ಬೆಳೆದ ವಟಗಲ್ಲಯ್ಯನವರು ತ್ರಿಕಾಲ ಪೂಜೆಯ ಮೂಲಕ ಜೀವನವನ್ನು ಸಾರ್ಥಕಪಡಿಸಿಕೊಂಡರು. ಬಾಲ್ಯದಲ್ಲಿಯೇ ಇವರು ಮಾಡುತ್ತಿದ್ದ ಆಚಾರಗಳನ್ನು ಗಮನಿಸಿದ ಶ್ರೀ ಚನ್ನಮಲ್ಲ ಶಿವಯೋಗಿಗಳು ಷಡಕ್ಷರ ಗವಿಯ ರಾಜಶೇಖರ ವಿಲಾಸ, ನಿಜಗುಣರ ಕೈವಲ್ಯಪ್ರತೀತಿ, ಭೀಮಕವಿಯ ಬಸವಪುರಾಣ, ಹರಿಹರನ ಗಿರಿಜಾಕಲ್ಯಾಣ ಹಾಗೂ ಸರ್ಪಭೂಷಣ ಶಿವಯೋಗಿಗಳ ಕೈವಲ್ಯವಲ್ಲರಿ ಮುಂತಾದ ವೀರಶೈವ ಸಾಹಿತ್ಯವನ್ನು ಅಭ್ಯಾಸ ಮಾಡಲು ಶ್ರೀ ವಟಗಲ್ಲಯ್ಯನವರಿಗೆ ಪ್ರೇರಣೆ ನೀಡಿದರು. ಹೀಗೆ ಸಮರ್ಥ ರೀತಿಯಲ್ಲಿ ತಮ್ಮ ಕರಕಮಲ ಸಂಜಾತರನ್ನು ರೂಪಿಸಿ, ಒಳಬಳ್ಳಾರಿಯ ಸುವರ್ಣಗಿರಿ ಮಠದ ಶಾಖಾಮಠವಾದ ನದಿಚಾಗಿ ಮಠಕ್ಕೆ ಶ್ರೀಚನ್ನಬಸವ ಸ್ವಾಮಿಗಳೆಂದು ಅಭಿಧಾನ ಮಾಡಿ, ಪಟ್ಟಾಧಿಕಾರವನ್ನು ಮಾಡಿದರು.

ಸಾಧನೆಗೆನಾಂದಿ: ಒಳಬಳ್ಳಾರಿಯ ಸುವರ್ಣಗಿರಿಮಠದ ಹನ್ನೆರಡನೆಯ ಗುರುಗಳಾಗಿ ಅಧಿಕಾರ ವಹಿಸಿಕೊಂಡ ಶ್ರೀ ಚನ್ನಬಸವ ಸ್ವಾಮಿಗಳು ತಮ್ಮ ಕಾಯಕ ಪ್ರವೃತ್ತಿಯಿಂದ ನಾಡನ್ನೇ ಬೆಳಗಿಸಿದರು. ಗುರುಗಳು ಅಧಿಕಾರವನ್ನು ವಹಿಸಿಕೊಂಡ ಮೇಲೆ ಕುಗ್ರಾಮವಾಗಿದ್ದ ಒಳಬಳ್ಳಾರಿಗೆ ಬಂದು, ಸುವರ್ಣಗಿರಿ ಮಠವನ್ನು ಜೀರ್ಣಾಭಿವೃದ್ಧಿ ಮಾಡಿದರು. ಆರ್ಥಿಕವಾಗಿ ಹಿಂದುಳಿದಿದ್ದ ಈ ಪ್ರದೇಶ ಗುರುಗಳ ಕಾಯಕಯೋಗದ ತತ್ತ್ವದಿಂದಾಗಿ ಶ್ರೀಮಂತಿಕೆಯನ್ನು ಪಡೆಯಿತು. ಕೆಲವೇ ವರ್ಷಗಳಲ್ಲಿ ದಾರಿದ್ರ್ಯ ದೂರವಾಗಿ ಸಮೃದ್ಧಿ ನೆಲೆಯೂರಿತು. ಈ ರೀತಿ ಕಾಯಕದಿಂದ ಬದುಕಿನ ಮಾರ್ಗವನ್ನು ತೋರಿಸಿದ ಶ್ರೀ ಚನ್ನಬಸವ ಸ್ವಾಮಿಗಳು ತಮ್ಮ ಶಾಖಾಮಠಗಳ ಮಣ್ಣಿನ ಕಟ್ಟಡಗಳನ್ನು ತೆಗೆಸಿ, ಕಲ್ಲಿನ ಕಟ್ಟಡಗಳನ್ನು ನಿರ್ಮಿಸಿದರು. ಅಡವಿಅಮರೇಶ್ವರ ಕ್ಷೇತ್ರವನ್ನು ಕೆಲವೇ ವರ್ಷಗಳಲ್ಲಿ ಸುಕ್ಷೇತ್ರವನ್ನಾಗಿ ಮಾಡಿ, ಧಾರ್ಮಿಕ ಕೇಂದ್ರವಾಗಿ ರೂಪಿಸಿದರು.

ಅಭಿವೃದ್ಧಿ ಕಾರ್ಯಗಳು: ಶ್ರೀ ಚನ್ನಬಸವ ಸ್ವಾಮಿಗಳು ತಾವು ಪಾದವಿಟ್ಟ ನೆಲವನ್ನು ಪಾವನಗೊಳಿಸಿ, ಕುಗ್ರಾಮಗಳನ್ನು ತಮ್ಮ ಕಾಯಕತತ್ತ್ವಗಳೊಂದಿಗೆ ಸುಗ್ರಾಮಗಳನ್ನಾಗಿ ಮಾಡಿದರು. ಯಾವ ಪ್ರಚಾರವನ್ನು ಬಯಸದೆ ತಮ್ಮ ಇಡೀ ಜೀವನವನ್ನು ಜನಕೋಟಿ ಹಿತಕ್ಕಾಗಿ ಮುಡಿಪಾಗಿಟ್ಟರು. ತಮ್ಮ ಪ್ರಾಂತ್ಯದಲ್ಲಿ ಸಮೃದ್ಧಿ, ಶಾಂತಿ ನೆಲೆಸುವಂತೆ ಮಾಡಿದರು. ಗುರುಗಳು ಅನೇಕ ಸಂಘ ಸಂಸ್ಥೆಗಳ ಅಭಿವೃದ್ಧಿಗೆ ಆರ್ಥಿಕ ಸಹಾಯವನ್ನು ನೀಡಿದ್ದಾರೆ. ಶಿವಯೋಗ ಮಂದಿರದಲ್ಲಿ ಶಿವಯೋಗ

ಸಾಧಕರ ಶಿವಪೂಜಾ ಮಂದಿರದ ನಿರ್ಮಾಣ, ಇಲಕಲ್ಲಿನಲ್ಲಿ ಶ್ರೀ ಮಹಾಂತೇಶ ಪ್ರಸಾದ ನಿಲಯ, ಕೊಪ್ಪಳ ಗವಿಮಠಕ್ಕೆ ಮಂಟಪ ನಿರ್ಮಾಣ, ಗೋರೆಬಾಳದ ಶ್ರೀ ಶರಣಬಸವೇಶ್ವರ ದೇವಸ್ಥಾನ, ಎಡೆಯೂರು ಸಿದ್ಧಲಿಂಗೇಶ್ವರ ದೇವಸ್ಥಾನದ ಮಹಾದ್ವಾರ ಒಳಬಳ್ಳಾರಿಯ ಮಾರುತಿ ದೇವಾಲಯ, ಸಿಂಧನೂರಿನ ವೀರಶೈವ ಕಲ್ಯಾಣಮಂಟಪ, ರಾಯಚೂರಿನ ವೀರಶೈವ ಪ್ರಸಾದ ನಿಲಯಗಳಿಗೆ ಆರ್ಥಿಕ ನೆರವು ನೀಡಿ ಸಾರ್ವಜನಿಕ ವಲಯದ ಕಾರ್ಯಗಳಿಗೆ ನೆರವಾಗಿದ್ದರು. ಇಂತಹ ಕಾಯಕಯೋಗಿ, ಕೊಡುಗೈದೊರೆ, ಆಧ್ಯಾತ್ಮಜೀವಿ ಎಪ್ಪತ್ತೆಂಟು ವರ್ಷಗಳ ದೀರ್ಘ ಬದುಕನ್ನು ಬದುಕಿ ೧೯೬೨ರ ಅಕ್ಟೋಬರ್ ಹತ್ತರಂದು ಲಿಂಗೈಕ್ಯರಾದರು. ಗುರುಗಳು ಲಿಂಗೈಕ್ಯರಾಗುವ ಮೊದಲು ಶಿವಯೋಗ ಮಂದಿರದಲ್ಲಿ ಸಾಧನೆ ಮಾಡಿದ್ದ ಶ್ರೀ ಸಿದ್ಧಲಿಂಗ ಸ್ವಾಮಿಗಳನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡು ಅಧಿಕಾರವನ್ನು ನೀಡಿದ್ದರು. ಶ್ರೀ ಸಿದ್ಧಲಿಂಗ ಸ್ವಾಮಿಗಳು ಸಹ ಹಿರಿಯ ಗುರುಗಳ ಕಾಯಕತತ್ತ್ವ ಹಾಗೂ ಧರ್ಮನಿಷ್ಠೆಯನ್ನು ಮೈಗೂಡಿಸಿಕೊಂಡು ಗುರುಗಳು ನಡೆದ ದಾರಿಯಲ್ಲಿಯೇ ನಡೆಯುತ್ತಾ, ಮಠ ಮತ್ತು ಸಮಾಜವನ್ನು ಅಭಿವೃದ್ಧಿಪಡಿಸತೊಡಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಸ್ಥಾಪಿಸಲಾಗಿರುವ ಶ್ರೀ ಚನ್ನಬಸವ ಸ್ವಾಮಿಗಳ ಗದ್ದುಗೆಯ ದರ್ಶನಕ್ಕೆ ಆಂಧ್ರ ಮತ್ತು ಕರ್ನಾಟಕದಿಂದ ನೂರಾರು ಜನರು ಆಗಮಿಸುತ್ತಾರೆ. ಗುರುಗಳ ಪುಣ್ಯಾರಾಧನೆಯನ್ನು ವಿಶೇಷವಾಗಿ ವಿಜೃಂಭಣೆಯಿಂದ ನಡೆಸಲಾಗುತ್ತಿದೆ. ಅಂದು ಸಂಗೀತ, ಕಲೆ, ಕೃಷಿ, ಶಿವಯೋಗ,ಶಿವಜ್ಞಾನ ಹಾಗೂ ಸಾಹಿತ್ಯಿಕ ವಿಚಾರಗಳನ್ನು ಕುರಿತು ಉಪನ್ಯಾಸಗಳ ಮೂಲಕ ಅರ್ಥಬದ್ಧವಾಗಿ ಆಚರಿಸಲಾಗುತ್ತಿದೆ. ಶ್ರೀ ಚನ್ನಬಸವ ಸ್ವಾಮಿಗಳ ಗದ್ದುಗೆಯ ಮೇಲೆ ಅಮೃತ ಶಿಲೆಯ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಗದ್ದುಗೆಗೆ ಗೋಪುರವನ್ನು ನಿರ್ಮಿಸಿ ಕಳಸಾರೋಹಣವನ್ನು ಮಾಡಲಾಗಿದೆ.

ಶೈಕ್ಷಣಿಕ -ಸಾಹಿತ್ಯ ಸೇವೆ: ಈಗಿನ ಶ್ರೀ ಸಿದ್ಧಲಿಂಗ ಸ್ವಾಮಿಗಳು ಶೈಕ್ಷಣಿಕ ಕ್ಷೇತ್ರಕ್ಕೂ ಪಾದಾರ್ಪಣೆ ಮಾಡಿ ಒಳಬಳ್ಳಾರಿಯಲ್ಲಿ ಸಂಸ್ಕೃತಶಾಲೆ, ಲಿಂಗಸಗೂರಿನಲ್ಲಿ ಒಳಬಳ್ಳಾರಿ ಚನ್ನಬಸವಸ್ವಾಮಿ ಕಲೆ ಮತ್ತು ವಾಣಿಜ್ಯ ಪದವಿ ಕಾಲೇಜು, ಸಿಂಧನೂರಿನಲ್ಲಿ ಪಾಲಿಟೆಕ್ನಿಕ್ ಕಾಲೇಜನ್ನು ಪ್ರಾರಂಭಿಸಿ ಗ್ರಾಮೀಣ ಮಕ್ಕಳ ಕಲಿಕೆಗೆ ನೆರವಾಗಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಸಿದ್ಧಲಿಂಗ ಸ್ವಾಮಿಗಳು, ಶ್ರೀ ಸುವರ್ಣಗಿರಿಮಠ, ಒಳಬಳ್ಳಾರಿ, ಸಿಂಧನೂರು ತಾ, ರಾಯಚೂರು ಜಿಲ್ಲೆ.

ಗೋಪುರಕಲ್ಲು

ಸಿಂಧನೂರು ತಾಲ್ಲೂಕಿನ ಗೋಪುರಕಲ್ಲು ಗ್ರಾಮವು ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಇಪ್ಪತ್ತೊಂದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಕರಿವೀರೇಶ್ವರ ಹಿರೇಮಠವು ಅಸ್ತಿತ್ವದಲ್ಲಿದೆ.

ಕರಿವೀರೇಶ್ವರ ಹಿರೇಮಠ: ಗೋಪುರಕಲ್ಲು ಗ್ರಾಮದಲ್ಲಿ ಪುರಾತನ ಕಾಲದ ಶ್ರೀ ಕರಿವೀರೇಶ್ವರಹಿರೇಮಠವು ಸ್ಥಾಪನೆಯಾಗಿದೆ. ಈ ಮಠ ಸ್ಥಾಪನೆಯಿಂದ ಗ್ರಾಮದಲ್ಲಿ ಧಾರ್ಮಿಕ ಕಾರ್ಯಗಳು ನಡೆದು ಜನರು ಸಂಸ್ಕಾರವಂತರಾಗಲು ಕಾರಣವಾಗಿದೆ. ಉಜ್ಜಯಿನಿ ಪೀಠದ ಶಾಖಾ ಮಠವಾಗಿರುವ ಈ ಮಠವು ಶ್ರೀ ಕರಿವೀರೇಶ್ವರ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪನೆಗೊಂಡ ಕಾರಣ'ಶ್ರೀ ಕರಿವೀರೇಶ್ವರ ಹಿರೇಮಠ' ಎಂದು ಹೆಸರು ಬಂದಿದೆ ಎಂದು ಹೇಳಲಾಗುತ್ತದೆ.

ಶ್ರೀ ಕರಿವೀರೇಶ್ವರರು ಗಂಗಾವತಿ ತಾಲ್ಲೂಕಿನ ಕುಂಟೋಜಿಯಿಂದ ಇಲ್ಲಿ ಬಂದು ನೆಲಸಿ ಮಠವನ್ನು ಸ್ಥಾಪನೆ ಮಾಡಿರುತ್ತಾರೆ. ಇವರ ಪ್ರಭಾವದಿಂದ ಧಾರ್ಮಿಕ ಆಚರಣೆಗಳು ಚುರುಕುಗೊಂಡವು. ಭಕ್ತರು ಸನ್ಮಾರ್ಗದಲ್ಲಿ ಬದುಕುವುದನ್ನು ಕಂಡ ಗುರುಗಳು ಲೋಕ ಸಂಚಾರಕ್ಕೆ ಹೊರಟು ಮುಕ್ಕುಂಡಿಯಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ಗದ್ದುಗೆಯು ಮುಕ್ಕುಂಡಿಯಲ್ಲಿ ಸ್ಥಾಪನೆಯಾಗಿದೆ. ಶ್ರೀ ಕರಿವೀರೇಶ್ವರ ಸ್ವಾಮಿಗಳಿಂದ ಸ್ಥಾಪನೆಗೊಂಡ ಮಠವು ಕೆಲವು ದಿನಗಳ ಕಾಲ ಮಠಾಧೀಶರಿಲ್ಲದೆ ಖಾಲಿ ಉಳಿದಿತ್ತು ಈಗ ಶ್ರೀ ಚನ್ನಯ್ಯ ಸ್ವಾಮಿಗಳು ಮಠದ ಆಡಳಿತವನ್ನು ನಡೆಸಿಕೊಂಡು ಮಠವನ್ನು ಮುನ್ನಡೆಸಿದ್ದಾರೆ.

ಆಚರಣೆಗಳು: ಕರ್ತೃಗುರುಗಳು ಇದ್ದಾಗ ನಿರಂತರವಾಗಿ ಶಿವಾನುಭವ ಗೋಷ್ಠಿಗಳು ನಡೆಯುತ್ತಿದ್ದವು. ಗುರುಗಳು ಲೋಕ ಸಂಚಾರಕ್ಕೆ ಹೋಗಿ ಮುಕ್ಕುಂಡಿಯಲ್ಲಿ ಲಿಂಗೈಕ್ಯರಾದ ಮೇಲೆ,ಮಠಾಧೀಶರಿಲ್ಲದೆ, ಧಾರ್ಮಿಕ ಆಚರಣೆಗಳು ಸ್ಥಗಿತಗೊಂಡಿದ್ದವು.

ನಂತರ ಭಕ್ತರೇ ಮಠದಲ್ಲಿ ನಿತ್ಯಪೂಜೆ, ಭಜನೆ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದರು. ಈಗ ಶ್ರೀ ಚನ್ನಯ್ಯ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ನಿತ್ಯಪೂಜೆ, ಪ್ರತಿ ಶ್ರಾವಣದಲ್ಲಿ ವಿಶೇಷ ಪೂಜೆಗಳು ನಡೆಯುತ್ತಿವೆ. ಕರ್ತೃ ಗುರುಗಳ ಗದ್ದುಗೆಯು ಮುಕ್ಕುಂಡಿಯಲ್ಲಿ ಇರುವ ಕಾರಣಕ್ಕೆ ಪ್ರತಿ ವರ್ಷ ಮುಕ್ಕುಂಡಿಯಲ್ಲಿ ಜಾತ್ರೆಯನ್ನು ನಡೆಸಲಾಗುತ್ತಿದೆ. ಮುಕ್ಕುಂಡಿಯಲ್ಲಿ ತುಂಗಭದ್ರಾನದಿಯು ಪಶ್ಚಿಮ ವಾಹಿನಿಯಾಗಿ ಹರಿಯುತ್ತಿದ್ದು ಇದೊಂದು ಪುಣ್ಯ ಸ್ಥಳವಾಗಿದೆ. ಈ ಸ್ಥಳವಲ್ಲಿ ಭಕ್ತರು ಅಪಾರ ಸಂಖ್ಯೆಯಲ್ಲಿ ಬಂದು ಸೇರುವುದರಿಂದ ಇಲ್ಲಿನ ಭಕ್ತರಿಗೆಂದು ಅನ್ನ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಸಾಮಾಜಿಕ ಕಾರ್ಯಗಳು: ಶ್ರೀ ಚನ್ನಯ್ಯ ಸ್ವಾಮಿಗಳು ಆಯುರ್ವೇದ ಪಂಡಿತರಾಗಿದ್ದು, ಮಠದಲ್ಲಿ ಧಾರ್ಮಿಕ ಆಚರಣೆಗಳ ಜೊತೆಗೆ ಗ್ರಾಮಾಂತರ ಜನರ ಆರೋಗ್ಯ ಶುಶ್ರೂಷೆಯನ್ನೂ ನಡೆಸುತ್ತಾ ಬಂದಿದ್ದಾರೆ. ಇವರ ಕೈಗುಣದಿಂದ ಭಕ್ತರು ಚಿಕಿತ್ಸೆ ಪಡೆದುಕೊಂಡಿದ್ದಾರೆ. ಈ ರೀತಿ ಧಾರ್ಮಿಕ ಹಾಗೂ ಸಾಮಾಜಿಕ ಚಟುವಟಿಕೆಯಲ್ಲಿ ಈ ಮಠವು ತನ್ನನ್ನು ತೊಡಗಿಸಿಕೊಂಡಿದೆ.

ವಿಳಾಸ: ಶ್ರೀ ಚನ್ನಯ್ಯ ಸ್ವಾಮಿಗಳು. ಶ್ರೀ ಕರಿವೀರೇಶ್ವರ ಮಠ, ಗೋಪುರಕಲ್ಲು, ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ.

ತುರುಬಿಹಾಳು

ಸಿಂಧನೂರು ತಾಲ್ಲೂಕಿನ ತುರುಬಿಹಾಳು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹದಿನೇಳು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ತುರುಬಿಹಾಳು ಗ್ರಾಮದ ಮಧ್ಯ ಭಾಗದಲ್ಲಿ ಉಜ್ಜಯಿನಿ ಪೀಠದ ಶಾಖಾ ಮಠವಾಗಿ ಪುತ್ರ ವರ್ಗದ ಪರಂಪರೆಯ ಶ್ರೀ ಹಿರೇಮಠವು ಸ್ಥಾಪನೆಯಾಗಿದೆ. ಶ್ರೀ ವೀರಸಂಗ ಶಿವಾಚಾರ್ಯ ಸ್ವಾಮಿಗಳು ಈ ಮಠದ ಸ್ಥಾಪಕರೆಂದು ಹೇಳಲಾಗುತ್ತದೆ.

ಮಠದ ಪರಂಪರೆ: ಮಠದ ಸ್ಥಾಪನೆ ಹಾಗೂ ಸ್ಥಾಪಕರ ಬಗ್ಗೆ ಮಠದಲ್ಲಿ ನಿಖರವಾದ ಮಾಹಿತಿಗಳು ಲಭ್ಯವಿಲ್ಲ. ಮಠದ ಸ್ಥಾಪಕ ಗುರುಗಳ ನಂತರ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಹಾಗೂ ೧೯೮೪ ರಲ್ಲಿ ಲಿಂಗೈಕ್ಯರಾದ ಶ್ರೀ ವೀರಸಂಗ ಶಿವಾಚಾರ್ಯ ಸ್ವಾಮಿಗಳು ಈ ಮಠದ ಆಡಳಿತವನ್ನು ನಡೆಸಿರುವುದು ತಿಳಿದುಬರುತ್ತದೆ. ಈಗ ಮಠದ ಉತ್ತರಾಧಿಕಾರಿಯಾಗಿರುವ ಶ್ರೀ ಅಮರಗುಂಡ ದೇಶಿಕರು ಶ್ರೀ ದೇವರಾಜಸ್ವಾಮಿ ಮತ್ತು ಶ್ರೀಮತಿ ಪಾಲಾಕ್ಷಮ್ಮನವರ ಪುತ್ರರಾಗಿ ೧೯೭೫ರಲ್ಲಿ ಜನಿಸಿ ಅಡವಿ ಅಮರೇಶ್ವರ, ಹುಬ್ಬಳ್ಳಿಯಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ, ಮಠದ ಆಡಳಿತವನ್ನು ನೋಡಿಕೊಳ್ಳುತ್ತಿದ್ದಾರೆ. ಗುರುಗಳು ವೀರಶೈವ ಧರ್ಮವನ್ನು ಅಧ್ಯಯನ ಮಾಡಿ ಪಾಂಡಿತ್ಯವನ್ನು ಗಳಿಸಿಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗದ್ದುಗೆಗಳಿಗೆ ನಿತ್ಯಪೂಜೆ. ಶ್ರಾವಣದಲ್ಲಿ ಪುರಾಣ ಪ್ರವಚನ, ಆಷಾಢ ಮಾಸದಲ್ಲಿ ಹಿರಿಯ ಗುರುಗಳ ಪುಣ್ಯಾರಾಧನೆ ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಅನ್ನ ದಾಸೋಹವನ್ನು ನಡೆಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಅಮರಗುಂಡ ದೇಶಿಕರು, ಶ್ರೀ ಹಿರೇಮಠ, ತುರುಬಿಹಾಳು, ಸಿಂದನೂರು ತಾಲ್ಲೂಕು, ರಾಯಚೂರು ಜಿಲ್ಲೆ.

ಮುಳ್ಳೂರು

ಸಿಂಧನೂರು ತಾಲ್ಲೂಕಿನ ಮುಳ್ಳೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಹದಿನೆಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಶಂಭುಲಿಂಗೇಶ್ವರ ಮಠವು ಅಸ್ತಿತ್ವದಲ್ಲಿದೆ.

ಶಂಭುಲಿಂಗೇಶ್ವರಮಠ: ಮುಳ್ಳೂರು ಗ್ರಾಮದ ಹೊರಭಾಗದಲ್ಲಿ(ಮುಳ್ಳೂರು ತಿರುವು)ಶ್ರೀ ಶಂಭುಲಿಂಗೇಶ್ವರ ಮಠವು ಸ್ಥಾಪನೆಯಾಗಿದೆ. ಶ್ರೀ ಶಂಭುಲಿಂಗ ಸ್ವಾಮಿಗಳಿಂದ ಸ್ಥಾಪನೆಯಾದ ಈ ಮಠವು ಧಾರ್ಮಿಕ ಕಾರ್ಯಗಳಿಂದ ಹೆಚ್ಚು ಹೆಸರು ಪಡೆಯಿತು. ಪವಾಡ ಪುರುಷರಾಗಿ, ತಪೋನಿಷ್ಠರಾಗಿ ಹೆಸರು ಗಳಿಸಿದ್ದ ಗುರುಗಳು ನೂರೈವತ್ತು ವರ್ಷಗಳ ಕಾಲ ಬದುಕಿ ಧರ್ಮ ಜಾಗೃತಿಯನ್ನುಂಟು ಮಾಡಿದ್ದರು ಎಂದು ಹೇಳಲಾಗುತ್ತಿದೆ. ಇವರು ೧೯೮೬ ರಲ್ಲಿ ಲಿಂಗೈಕ್ಯರಾದ ಮೇಲೆ ಮುಳ್ಳೂರು ಗ್ರಾಮಸ್ಥರು ಮುಳ್ಳೂರು ತಿರುವಿನಲ್ಲಿ ಗದ್ದುಗೆಯನ್ನು ಸ್ಥಾಪಿಸಿ ಮಠವನ್ನು ನಿರ್ಮಿಸಿದ್ದಾರೆ. ಇತ್ತೀಚಿನ ಕಾಲಮಾನದಲ್ಲಿ

ಸ್ಥಾಪನೆಯಾದ ಈ ಮಠದ ಉಸ್ತುವಾರಿಯನ್ನು ಶ್ರೀ ಬಸವಲಿಂಗಯ್ಯ ಸ್ವಾಮಿಗಳು ನಡೆಸುತ್ತಿದ್ದಾರೆ. ಮಠದಲ್ಲಿ ನಿತ್ಯ ಪೂಜೆ ನಡೆಸಲಾಗುತ್ತಿದೆ. ಪ್ರತಿ ಭಾದ್ರಪದ ಶುಕ್ಲ ಪಂಚಮಿಯಂದು ಕರ್ತೃ ಗುರುಗಳ ಪುಣ್ಯ ತಿಥಿಯನ್ನು ಅದ್ದೂರಿಯಾಗಿ ಆಚರಿಸಲಾಗುವುದಲ್ಲದೆ, ಈ ಸಂದರ್ಭದಲ್ಲಿ ಧಾರ್ಮಿಕ ಕಾರ್ಯಗಳು ಹಾಗೂ ಅನ್ನದಾಸೋಹವನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಬಸವಲಿಂಗಯ್ಯ ಸ್ವಾಮಿಗಳು, ಶ್ರೀಶಂಭುಲಿಂಗೇಶ್ವರಮಠ, ಮುಳ್ಳೂರು ಕ್ರಾಸ್, ಸಿಂಧನೂರು ತಾ, ರಾಯಚೂರುಜಿಲ್ಲೆ.

ಸಿಂಧನೂರು

ರಾಯಚೂರು ಜಿಲ್ಲೆಯ ತಾಲ್ಲೂಕೊಂದರ ಕೇಂದ್ರ ಸ್ಥಳವಾದ ಸಿಂಧನೂರು ಪಟ್ಟಣವು, ಜಿಲ್ಲಾ ಕೇಂದ್ರದಿಂದ ನೈರುತ್ಯಕ್ಕೆ ನಲವತ್ತೈದು ಕಿ.ಮೀ ದೂರದಲ್ಲಿದೆ. ಈ ಪಟ್ಟಣದಲ್ಲಿ ಪುರಾತನ ಕಾಲದಲ್ಲಿ ಹನ್ನೊಂದು ವೀರಶೈವ ಮಠಗಳು ಅಸ್ತಿತ್ವದಲ್ಲಿದ್ದವು ಎಂದು ತಿಳಿದುಬರುತ್ತದೆ. ಅಂದು ಸ್ಥಾಪನೆಗೊಂಡ ಮಠಗಳು ಧಾರ್ಮಿಕ ಕಾರ್ಯಗಳನ್ನು ನಡೆಸಿ ವೀರಶೈವ ಧರ್ಮ ಪ್ರಬಲವಾಗಿ ಬೆಳೆಯಲು ಕಾರಣವಾಗಿವೆ. ತಿಳಿದು ಬಂದ ಮಾಹಿತಿಯ ಅನ್ವಯ ಸಿಂದನೂರಿನಲ್ಲಿ ಪುರಾತನ ಕಾಲದಲ್ಲಿ ಸ್ಥಾಪನೆಗೊಂಡ ವೀರಶೈವ ಮಠಗಳ ಶೋಧನೆಯನ್ನು ಮಾಡಿದ ಸಂದರ್ಭದಲ್ಲಿ ಶ್ರೀ ಕಲ್ಮಠ, ಶ್ರೀ ಕಂಡಿಮಠ, ಶ್ರೀಸಿದ್ಧಾಂತಿ ಮಠ, ಶ್ರೀ ಗುಗ್ಗಳಮಠ,ಶ್ರೀ ಹಿರೇಮಠ, ಶ್ರೀ ಸರಗಣಾಚಾರಿಮಠ, ಶ್ರೀ ಸಗರದಮಠ, ಶ್ರೀ ಬಜಾರ್‌ಮಠ ಹಾಗೂ ಶ್ರೀವಿರಕ್ತಮಠ ಎಂಬ ಒಂಬತ್ತು ಮಠಗಳು ದೊರೆತಿವೆ. ಉಳಿದ ಎರಡು ಮಠಗಳ ಹೆಸರೂ ಸಹ ದೊರೆಯದಂತಾಗಿದೆ. ಇವುಗಳಲ್ಲಿ ಶ್ರೀ ಕಲ್ಮಠ ಮಾತ್ರ ಈಗಲೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸಿ ಕೊಂಡುಬರುತ್ತಿದೆ.

ಕಲ್ಮಠ: ಸಿಂದನೂರು ಪಟ್ಟಣದ ಪಟೇಲ್‌ವಾಡಿ ಬಡಾವಣೆಯಲ್ಲಿ ಸ್ಥಾಪನೆಯಾಗಿರುವ ಶ್ರೀ ಕಲ್ಮಠವು ಉಜ್ಜಯನಿ ಪೀಠದ ಶಾಖಾಮಠವಾಗಿ,ಪುತ್ರವರ್ಗದ ಸಂಪ್ರದಾಯದಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುತ್ತಾ ಈ ಭಾಗದ ಧಾರ್ಮಿಕ ಕೇಂದ್ರಬಿಂದುವಾಗಿ ರೂಪುಗೊಂಡಿದೆ. ಇನ್ನೂರು ವರ್ಷಗಳ ಹಿಂದೆ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಸಿಂಧನೂರು ತಾಲ್ಲೂಕಿನ ಪಗಡದಿನ್ನಿ ಗ್ರಾಮದಿಂದ, ಲೋಕಕಲ್ಯಾಣಾರ್ಥ ಲೋಕಸಂಚಾರಕ್ಕೆ ಹೊರಟು ದೇಶದ ನಾನಾ ಭಾಗಗಳಲ್ಲಿ ಸಂಚರಿಸಿ, ಅನುಷ್ಠಾನಗೊಂಡು ಸಾಧನೆಯ ಸಿದ್ಧಿಯನ್ನು ಪಡೆದು ಸಿಂಧನೂರು ಗ್ರಾಮಕ್ಕೆ ಬಂದು ನೆಲೆಸುತ್ತಾರೆ. ಮಹಾ ತಪೋನಿಧಿಗಳಾದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಧಾರ್ಮಿಕ ಆಚರಣೆಗಳಿಂದ ಭಕ್ತರನ್ನು ಉದ್ಧರಿಸಿದರು. ಇವರ ಕಾಲದಲ್ಲಿ ಕಲ್ಲಿನ ಸುಸಜ್ಜಿತ ಮಠವು ನಿರ್ಮಾಣಗೊಂಡಿತೆಂದು ಹೇಳಲಾಗುತ್ತದೆ.

ಪರಂಪರೆ:
೧. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಬಸವಲಿಂಗ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃ ಗುರುಗಳಾದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಸಿಂದನೂರಿನಲ್ಲಿ ಮಠವನ್ನು ಸ್ಥಾಪಿಸಿ ಪುನಃ ಲೋಕ ಸಂಚಾರಕ್ಕೆ ಹೋದವರು, ತಮ್ಮ ಮೂಲ ಮಠವಾದ ಪಗಡದಿನ್ನಿ ಮಠದಲ್ಲಿ ಅಂತಿಮ ದಿನಗಳನ್ನು ಕಳೆದು ಅಲ್ಲೇ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಅಧಿಕಾರಕ್ಕೆ ಬಂದ ಶ್ರೀ ಬಸವಲಿಂಗ ಸ್ವಾಮಿಗಳು ಮಠದ ಆಡಳಿತವನ್ನು ವಹಿಸಿಕೊಂಡು ಗುರು ಪರಂಪರೆಯ ತತ್ತ್ವಕ್ಕನುಗುಣವಾಗಿ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬಂದರು. ಗುರುಗಳು ಅಷ್ಟಾವರಣ, ಪಂಚಚಾರ, ಸದಾಚಾರಗಳನ್ನು ತಮ್ಮ ಬದುಕಿನ ಒಂದು ಅಂಗವಾಗಿ ಮಾಡಿಕೊಂಡು, ಷಟ್‌ಸ್ಥಲ ಸಿದ್ಧಾಂತದ ಪ್ರಚಾರಕರಾಗಿ ವೀರಶೈವ ಧರ್ಮ ಬೆಳೆಯಲು ಸಹಾಯಕರಾದರು. ಇವರು ಭಕ್ತರ ಅಭಿಲಾಷೆಯನ್ನು ಈಡೇರಿಸುವ ಗುರುವಾಗಿ ಜನಮನದಲ್ಲಿ ಹೆಸರು ಪಡೆದು ೧೯೨೦ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ಗದ್ದುಗೆಯು ಸಿಂಧನೂರಿನ ಚೌಕಿಮಠ ದಲ್ಲಿ ಸ್ಥಾಪನೆಗೊಂಡಿದೆ. ಶ್ರೀ ಬಸವಲಿಂಗ ಶಿವಾಚಾರ್ಯ ಸ್ವಾಮಿಗಳು ತಮ್ಮ ಜೀವಿತಾವಧಿಯಲ್ಲಿ ಉತ್ತರಾಧಿಕಾರಿಗಳನ್ನು ನೇಮಕ ಮಾಡದೆ ಹೋದ ಕಾರಣ ೧೯೮೮ ರ ತನಕ ಮಠವು ಖಾಲಿ ಉಳಿಯಬೇಕಾಯಿತು.

ಸಿಂಧನೂರಿನ ಶ್ರೀ ಸಿದ್ದಯ್ಯ ಮತ್ತು ಶ್ರೀಮತಿ ಗಂಗಮ್ಮನವರ ಪುತ್ರರಾಗಿ ೧೯೬೩ರಲ್ಲಿ ಜನಿಸಿದ ಶ್ರೀ ಶಿವಯೋಗಿ ಮರಿದೇವರು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ಹಾವೇರಿಯ ಸಿಂಧಗಿಮಠದಲ್ಲಿ ಪೂರೈಸಿದರು. ನಂತರ ಸಂಸ್ಕೃತ ಮತ್ತು ವೇದಾಧ್ಯಯನವನ್ನು ಮಾಡಿ ೧೯೮೮ ರ ಮಾರ್ಚ್ ೨೬ ರಂದು ಉಜ್ಜಯನಿ ಪೀಠದ ಜಗದ್ಗುರು ಶ್ರೀ ಮರುಳಾರಾಧ್ಯ ಶಿವಾಚಾರ್ಯ ಭಗವತ್ಪಾದರ ಸಾನಿಧ್ಯದಲ್ಲಿ, 'ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿ'ಗಳೆಂದು ಅಭಿಧಾನ ಪಡೆದು ಅಧಿಕಾರಕ್ಕೆ ಬಂದರು. ಗುರುಗಳು ಅಧಿಕಾರಕ್ಕೆ ಬಂದ ಮೇಲೆ ಹಲವು ವರ್ಷಗಳಿಂದ ಜೀರ್ಣಗೊಂಡಿದ್ದ ಮಠದ ಕಟ್ಟಡವನ್ನು ಜೀರ್ಣಾಭಿವೃದ್ಧಿಗೊಳಿಸಿದರು. ನಂತರ ಭಕ್ತರನ್ನು ಸಂಘಟಿಸಿ ಆಧ್ಯಾತ್ಮ ಚಿಂತನೆಗೆ ತೊಡಗುವಂತೆ ಮಾಡಿದರು.

ಧಾರ್ಮಿಕ ಕಾರ್ಯಗಳು: ಸುಮಾರು ಎಂಬತ್ತು ವರ್ಷಗಳ ಕಾಲ ಮಠದಲ್ಲಿ ಗುರುಗಳು ಇಲ್ಲದ ಕಾರಣ ಸಂಪೂರ್ಣ ಜನಮನ ದಿಂದ ದೂರ ಸರಿದಿದ್ದ ಈ ಮಠ, ಹಂತಹಂತವಾಗಿ ಧಾರ್ಮಿಕ ಆಚರಣೆಗಳನ್ನು ಮಾಡುವ ಮೂಲಕ ಜನರನ್ನು ತನ್ನೆಡೆ ಸೆಳೆಯುವಂತೆ ಮಾಡಿದೆ. ನಿತ್ಯ ಮೂರು ವೇಳೆ ಪೂಜೆ, ಅಮಾವಾಸ್ಯೆ ಹುಣ್ಣಿಮೆಯಲ್ಲಿ ವಿಶೇಷ ಪೂಜೆ, ಮಾಘಮಾಸದಲ್ಲಿ ಒಂದು ತಿಂಗಳು ಪುರಾಣ ಪ್ರವಚನವನ್ನು ಹಮ್ಮಿಕೊಳ್ಳಲಾಗುತ್ತಿದೆ. ಪುರಾಣದ ಕೊನೆಯ ದಿನ ಧಾರ್ಮಿಕ ಸಭೆಯನ್ನು ಆಚರಿಸಿ ನಾಡಿನ ವಿದ್ವಾಂಸರು, ಮಠಾಧೀಶರು ಹಾಗೂ ಸಮಾಜದ ಮುಖಂಡರನ್ನು ಕರೆಸಿ ಉಪನ್ಯಾಸ, ಉಪದೇಶಾಮೃತವನ್ನು ಭಕ್ತರಿಗೆ ನೀಡಿಸುತ್ತಾರೆ. ಈ ಸಂದರ್ಭದಲ್ಲಿ ಸಮಾಜದ ಬಹುಮುಖ ಪ್ರತಿಭೆಗಳನ್ನು ಗುರುತಿಸಿ ಗೌರವಿಸುವುದು ಒಂದು ಸಹಜ ಕ್ರಮವಾಗಿದೆ. ಹಿರಿಯ ಗುರುಗಳ ಪುಣ್ಯ ಸ್ಮರಣೆ ಕಾರ್ಯಕ್ರವನ್ನು ಹಮ್ಮಿಕೊಳ್ಳಲಾಗುತ್ತಿದೆ.


ಪುರಾತನ ವಸ್ತುಗಳು: ಪುರಾತನ ಮಠವಾದ ಕಲ್ಮಠದಲ್ಲಿ ಕಲ್ಲಿನಲ್ಲಿ ಕೆತ್ತಲ್ಪಟ್ಟ ಸಿಂಹಾಸನವು ಈ ಮಠದ ಇತಿಹಾಸವನ್ನು ಹೇಳುತ್ತದೆ. ಅಷ್ಟದಿಕ್ಪಾಲಕರನ್ನು ಕೆತ್ತಿದ ಶಿಲಾಕೃತಿಗಳಿಂದ ನಿರ್ಮಿಸಲ್ಪಟ್ಟ ಮಠದ ಸಭಾ ಭವನ. ಈ ಅಂಗಳದಲ್ಲಿ ನವರಂಗ ನಿರ್ಮಾಣ ಈ ಮಠದ ವಿಶೇಷತೆಯಾಗಿದೆ. ಈ ಮಠದಲ್ಲಿ ಬೆಳ್ಳಿಯ ಪೂಜಾ ಪರಿಕರಿಗಳು, ಬಂದೂಕು, ಬೆತ್ತ ಈ ರೀತಿ ಅನೇಕ ಪುರಾತನ ಸಾಮಾಗ್ರಿಗಳು ಕಂಡುಬರುತ್ತವೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠದ ಪರಂಪರೆಯಿಂದ ಬಂದಿದ್ದ ಆಸ್ತಿಯನ್ನು ಶಿಸ್ತು ಬದ್ಧಗೊಳಿಸಿ ಮಠದ ಜೀರ್ಣಾಭಿವೃದ್ಧಿಯ ಜೊತೆಗೆ, ಆರ್ಥಿಕ ಸ್ಥಿರತೆ ತಂದುಕೊಳ್ಳಲು ಹದಿನೈದು ಎಕರೆ ಜಮೀನನ್ನು ನೀರಾವರಿಗೆ ಯೋಗ್ಯಗೊಳಿಸಿ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ಗುರುಗಳು ಸಮಾಜದ ಭಕ್ತರನ್ನು ಬಳಸಿಕೊಂಡು ಮಠದ ಸರ್ವಾಂಗೀಣ ಅಭಿವೃದ್ಧಿಯನ್ನು ಕೈಗೊಂಡು ವೀರಶೈವ ಧರ್ಮವನ್ನು ಬೆಳೆಸುತ್ತಿದ್ದಾರೆ. ಪುರಾತನ ಪರಂಪರೆಯ ಈ ಮಠದ ಮೂಲ ಮಠವಾದ ಪಗಡದಿನ್ನಿ ಮಠದ ಅಭಿವೃದ್ಧಿಯನ್ನು ಕೈಗೊಂಡು ಕರ್ತೃ ಗುರುಗಳ ಗದ್ದುಗೆಯನ್ನು ನವೀಕರಿಸಿದ್ದಾರೆ. ಮಠದ ಶಾಖಾ ಮಠಗಳಾಗಿ ಬೊಮ್ಮನಾಳು, ಚಿತ್ತನಾಳು, ಗಂಗಾವತಿ ತಾಲ್ಲೂಕಿನ ಹೊಳೆನೂರು, ಬೆನ್ನೂರು ಹಾಗೂ ಬಸಾಪುರ ಮಠಗಳು ಇದ್ದವಂತೆ. ಈ ಮಠಗಳೆಲ್ಲ ಈಗ ಸ್ವತಂತ್ರ ಮಠಗಳಾಗಿವೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕಲ್ಮಠ, ಪಟೇಲ್‌ವಾಡಿ, ಸಿಂದನೂರು. ರಾಯಚೂರು ಜಿಲ್ಲೆ.

❑

ಶಿವಮೊಗ್ಗ ಜಿಲ್ಲೆ



ಭದ್ರಾವತಿ ತಾಲ್ಲೂಕು : ೧. ಗೋಣಿಬೀಡು, ೨. ಬಿಳಕಿ

ತೀರ್ಥಹಳ್ಳಿ ತಾಲ್ಲೂಕು : ೧. ಮಳಲಿ, ೨. ಕೊಣಂದೂರು

ಸಾಗರ ತಾಲ್ಲೂಕು : ೧. ಆನಂದಪುರಂ, ೨. ವೀರಾಪುರ, ೩. ಕೆಳದಿ, ೪. ತಾಳಗುಪ್ಪ

ಸೊರಬ ತಾಲ್ಲೂಕು : ೧. ಮೂಡಿ, ೨. ಜಡೆ, ೩. ಹಿರೆಮಾಗಡಿ, ೪. ಗೊಗ್ಗೆ ಹಳ್ಳಿ

ಶಿಕಾರಿಪುರ ತಾಲ್ಲೂಕು : ೧. ತೊಗರ್ಸಿ, ೨. ಬಳ್ಳಿಗಾವೆ, ೩. ಶಿರಾಳಕೊಪ್ಪ, ೪. ಕಪನಹಳ್ಳಿ, ೫. ಸಾಲೂರು

ಮಲೆನಾಡಿನ ಸಿರಿ ಸೌಂದರ್ಯದ ಶಿವಮೊಗ್ಗ ಜಿಲ್ಲೆಯು ಹಾವೇರಿ, ದಾವಣಗೆರೆ, ಚಿಕ್ಕಮಗಳೂರು, ಉಡುಪಿ ಹಾಗೂ ಉತ್ತರಕನ್ನಡ ಜಿಲ್ಲೆಯ ಗಡಿಗಳಿಂದ ಆವೃತಗೊಂಡಿದೆ. ಶಿವಮೊಗ್ಗ, ಭದ್ರಾವತಿ, ತೀರ್ಥಹಳ್ಳಿ, ಹೊಸನಗರ, ಸಾಗರ, ಸೊರಬ ಹಾಗೂ ಶಿಕಾರಿಪುರ ಎಂಬ ಏಳು ತಾಲ್ಲೂಕುಗಳನ್ನು ಒಳಗೊಂಡಿದೆ. ತುಂಗಾ, ಭದ್ರಾ, ವರದಾ, ಕುಮದ್ವತಿ ನದಿಗಳು ಹರಿದು ಈ ಜಿಲ್ಲೆಯನ್ನು ಪಾವನಗೊಳಿಸಿವೆ. ಸಹ್ಯಾದ್ರಿ ಸಾಲಿನಲ್ಲಿ ಬರುವ ಗೋವರ್ಧನಗಿರಿ, ಕೊಡಚಾದ್ರಿ, ದೇವಕೋಡ ಬೆಟ್ಟಗಳು ಈ ಜಿಲ್ಲೆಯ ನಿಸರ್ಗ ಸೌಂದರ್ಯದ ಸಂಕೇತಗಳಾಗಿವೆ. ಜಗತ್ ವಿಖ್ಯಾತ ಜೋಗ ಜಲಪಾತದಿಂದ ಜಿಲ್ಲೆಯು ವಿಶ್ವದ ಭೂಪಟ ದಲ್ಲಿ ಮೂಡುವಂತಾಗಿದೆ. ತುಂಗಾ ಅಣೆಕಟ್ಟೆಯ ನೀರಿನ ಆಶ್ರಯದಿಂದ ಅಡಿಕೆ ಮತ್ತು ಭತ್ತವನ್ನು ಯಥೇಚ್ಛವಾಗಿ ಬೆಳೆದು ರಾಜ್ಯದ ಶ್ರೀಮಂತ ಜಿಲ್ಲೆಗಳಲ್ಲಿ ಒಂದಾಗಿದೆ. ರಾಜ್ಯದ ಪ್ರತಿಷ್ಠಿತ ಕೈಗಾರಿಕೆಗಳಾದ ಕಬ್ಬಿಣ, ಉಕ್ಕು ಕಾರ್ಖಾನೆ ಹಾಗೂ ಕಾಗದ ಕಾರ್ಖಾನೆಗಳು ಭದ್ರಾವತಿಯಲ್ಲಿ ಸ್ಥಾಪನೆಯಾಗಿ ಹೆಸರು ಮಾಡಿವೆ.

ಈ ಜಿಲ್ಲೆಯು ವಿಜಯನಗರದ ಅರಸರು, ಕೆಳದಿ ಅರಸರು, ಹೈದರಾಲಿ ಹಾಗೂ ಮೈಸೂರು ಯದುವಂಶದ ಆಳ್ವಿಕೆಗೆ ಒಳಪಟ್ಟಿದ್ದು, ಕೆಳದಿ ಅರಸರ ಕಾಲದಲ್ಲಿ (ಕ್ರಿ.ಶ.೧೪೯೯-೧೭೬೩) ಹೆಚ್ಚು ಅಭಿವೃದ್ಧಿಗೊಂಡಿದೆ. ಕೆಳದಿ ಸಂಸ್ಥಾನದ ಹತ್ತೊಂಬತ್ತು ಜನ ನಾಯಕರ ಆಳ್ವಿಕೆಯ ಕಾಲದಲ್ಲಿ ಐತಿಹಾಸಿಕ, ಸಾಂಸ್ಕೃತಿಕ, ಸಾಹಿತ್ಯಿಕ ಹಾಗೂ ಧಾರ್ಮಿಕವಾಗಿ ಉನ್ನತಿ ಹೊಂದಿತ್ತು.

ಹನ್ನೆರಡನೆಯ ಶತಮಾನದ ಧೀಮಂತ ಶಿವಶರಣೆ ಅಕ್ಕಮಹಾದೇವಿ ಮಾಡಿದ ಸಾಧನೆಯಿಂದ ಜಿಲ್ಲೆಯು ಹೆಸರುಮಾಡಿದೆ. ಶಿಕಾರಿಪುರ ತಾಲ್ಲೂಕಿನ ಉಡುತಡಿಯಲ್ಲಿ ಅಕ್ಕಮಹಾದೇವಿಯವರ ತೋರುಗದ್ದುಗೆಯನ್ನು ನಿರ್ಮಿಸಿದ್ದು, ಈ ಸ್ಥಳ ಸಾಂಸ್ಕೃತಿಕ, ಸಾಹಿತ್ಯಿಕ ಹಾಗೂ ಶೈಕ್ಷಣಿಕ ಚಟುವಟಿಕೆಯ ತಾಣವಾಗಿದೆ. ಹನ್ನೆರಡನೆಯ ಶತಮಾನದ ಕ್ರಾಂತಿಯ ನಂತರ ನುಲಿಯಚಂದಯ್ಯ ಹಾಗೂ ಅಕ್ಕನಾಗಮ್ಮನವರು ಉಳುವಿಯಿಂದ ಬಂದವರು ಭಧ್ರಾವತಿ ತಾಲ್ಲೂಕಿನ ಗೋಣಿಬೀಡಿನಲ್ಲಿ ನೆಲೆನಿಂತು ಸುಕ್ಷೇತ್ರವನ್ನಾಗಿ ಮಾಡಿದ್ದಾರೆ. ಕುವೆಂಪು, ಜಿ.ಎಸ್. ಶಿವರುದ್ರಪ್ಪ, ಲಂಕೇಶ್, ಯು.ಆರ್. ಅನಂತಮೂರ್ತಿ ಮುಂತಾದ ಖ್ಯಾತ ಸಾಹಿತಿಗಳು ಇಲ್ಲಿ ಜನಿಸಿ, ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ.

ಶಿವಮೊಗ್ಗ ಜಿಲ್ಲೆಯಲ್ಲಿ ಕೆಳದಿ ಅರಸರ ಆಡಳಿತ ಕಾಲದಲ್ಲಿ ಮತ್ತು ಅದಕ್ಕೂ ಮೊದಲು ೧೩೮ ವೀರಶೈವ ಮಠಗಳು ಸ್ಥಾಪನೆಗೊಂಡ ಬಗ್ಗೆ ಮಾಹಿತಿ ದೊರೆತಿದೆ. ಈ ಆಧಾರದ ಮೇಲೆ ಶೋಧನೆಗೆ ಹೋದಾಗ ತೊಂಬತ್ತಾಲ್ಕು ಮಠಗಳು ದೊರೆತಿವೆ. ಉಳಿದ ಮಠಗಳು ಹೇಳಲು ಹೆಸರಿಲ್ಲದಂತಾಗಿವೆ. ದೊರೆತ ಮಠಗಳಲ್ಲಿ ಇಪ್ಪತ್ತೆಂಟು ಮಠಗಳು ಅಸ್ತಿತ್ವದಲ್ಲಿದ್ದು ಉಳಿದವುಗಳು ಹೆಸರಿಗಷ್ಟೇ ಮಠಗಳಾಗಿ ಉಳಿದಿವೆ. ಕೆಳದಿ ಅರಸರ ಇನ್ನೂರ ಅರವತ್ನಾಲ್ಕು ವರ್ಷಗಳ ಆಡಳಿತ ಕಾಲಾವಧಿಯಲ್ಲಿ ಧಾರ್ಮಿಕ ತಳಹದಿಯ ಮೇಲೆ ಸಮಾಜವನ್ನು ಬೆಳೆಸಲು ಪ್ರಯತ್ನಿಸಿದರು. ಇವರು ವೀರಶೈವ ಮತಸ್ಥರಾದರೂ ತಮ್ಮ ಆಡಳಿತ ವ್ಯಾಪ್ತಿಯಲ್ಲಿ ವೀರಶೈವ ಮಠಗಳಿಗೆ ಕೊಡುತ್ತಿದ್ದ ಪ್ರಾಮುಖ್ಯತೆಯಂತೆಯೇ, ಶೈವ, ವೈಷ್ಣವ ಹಾಗೂ ಜೈನ ಧರ್ಮ ಕ್ಷೇತ್ರಗಳಿಗೂ ಕೊಟ್ಟು ಬೆಳೆಸಿದ್ದಲ್ಲದೆ, ಕ್ರೈಸ್ತ ಮತ್ತು ಮುಸ್ಲಿಂ ಧರ್ಮಕ್ಕೂ ಹೆಚ್ಚು ನೆರವು ನೀಡಿ ಧರ್ಮ ಸಹಿಷ್ಣುಗಳು ಎಂಬ ಖ್ಯಾತಿಗೆ ಒಳಗಾಗಿದ್ದರು. ಇವರ ಕಾಲದಲ್ಲಿ ನಾಡಿನ ಅಭಿವೃದ್ಧಿಗೆ ಗುರುಮನೆ ಮತ್ತು ಅರಮನೆಗಳು ಒಟ್ಟೊಟ್ಟಿಗೆ ಸೇವೆ ಸಲ್ಲಿಸಿವೆ. ಈ ಕಾರಣಕ್ಕಾಗಿಯೇ ಇಲ್ಲಿನ ಸಂಸ್ಕೃತಿ ಜೀವಂತಿಕೆ ಪಡೆದುಕೊಂಡಿದೆ.

ತೀರ್ಥಹಳ್ಳಿ ತಾಲ್ಲೂಕು

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕು ಮಲೆನಾಡಿನ ಸಹ್ಯಾದ್ರಿ ಪರ್ವತದ ಸಾಲಿನಲ್ಲಿ ಮೈದಳೆದಿದೆ. ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಬೆಳೆದು, ತನ್ನ ಪ್ರಭಾವದಿಂದ ಸಂಸ್ಕಾರವಂತ ಸಮಾಜವನ್ನು ರೂಪಿಸಿದೆ. ಪ್ರಸ್ತುತ ಮೂರು ಮಠಗಳು ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಕವಲೇದುರ್ಗ

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಕವಲೇದುರ್ಗವು ಐತಿಹಾಸಿಕ ಮತ್ತು ಧಾರ್ಮಿಕ ಕ್ಷೇತ್ರವಾಗಿ ಬೆಳೆದು ಇತಿಹಾಸದ ಪುಟದಲ್ಲಿ ಅಜರಾಮರವಾಗಿದೆ. ಸಹ್ಯಾದ್ರಿ ಸಾಲಿನ ಭುವನಗಿರಿಯ ಕವಲೇದುರ್ಗದಲ್ಲಿ ೬೦೦ ವರ್ಷಗಳ ಹಿಂದೆ ಕೆಳದಿಯ ನಾಯಕರ ಕಾಲದಲ್ಲಿ ಪ್ರಾರಂಭವಾಗಿರಬಹುದಾದ ಮಠವು ಹಿರಿಯ ವೆಂಕಟಪ್ಪನಾಯಕನ (ಕ್ರಿ.ಶ.೧೫೮೬-೧೬೩೦) ಕಾಲದಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿ ಕೆಳದಿಸಂಸ್ಥಾನದ ಪ್ರಭಾವಿ ಮಠವಾಗಿ ರೂಪುಗೊಂಡಿದೆ.

ಕೆಳದಿ ರಾಜಗುರು ಮಹಾಮಹತ್ತಿನ ಭುವನಗಿರಿ ಸಂಸ್ಥಾನಮಠ: ಕವಲೇದುರ್ಗದಿಂದ ಪಶ್ಚಿಮಕ್ಕೆ ಎರಡು ಫರ್ಲಾಂಗ್ ದೂರದಲ್ಲಿರುವ ಮಠವು ಸಹ್ಯಾದ್ರಿಯ ಸೊಬಗಿನ ಪ್ರತೀಕದಂತೆ ಕಂಗೊಳಿಸುತ್ತಿದೆ. ಮಠದ ಪ್ರಶಾಂತತೆ, ಮೆಟ್ಟಿಲು ಆಕಾರದಲ್ಲಿ ರೂಪುಕಂಡ ಅಂಗಳ, ನೀರಿನ ವ್ಯವಸ್ಥೆಗಾಗಿ ಮಾಡಿರುವ ನೈಸರ್ಗಿಕ ಕೊಳಾಯಿ ಹಾಗೂ ತೊಟ್ಟಿಗಳಲ್ಲಿ ಹರಿಯುವ ನೀರಿನ ನಿನಾದ ಭಕ್ತರನ್ನು ಮಂತ್ರಮುಗ್ಧರನ್ನಾಗಿಸುತ್ತದೆ.

ಹೆಗ್ಗುರುತು: ಸೋಮಶೇಖರ ನಾಯಕನ ಕೊಲೆಯಾದ ಮೇಲೆ ಅವನ ಮಡದಿ ರಾಣಿಚನ್ನಮ್ಮ ರಾಜ್ಯದ ಆಡಳಿತವನ್ನು ವಹಿಸಿಕೊಂಡ ಬಳಿಕ ರಾಜಗುರುಗಳು ಹಾಗೂ ಪ್ರಧಾನ ಮಂತ್ರಿಗಳ ಒತ್ತಡಕ್ಕೆ ಮಣಿದು ಕವಲೇದುರ್ಗದ ಕೋಟೆಯಲ್ಲಿ ಪಟ್ಟಾಧಿಕಾರ ಪಡೆದುಕೊಳ್ಳುವ ಸಿದ್ಧತೆಯಲ್ಲಿದ್ದಾಗ ಭದ್ರಪ್ಪನಾಯಕನ ಮೈದುನ ಬಸವಲಿಂಗ ನಾಯಕ ಹಾಗೂ ಹಿರಿಯ ವೆಂಕಟಪ್ಪ ನಾಯಕನ ಮಗಳ ಮಗನಾದ ವೆಂಕಟಯ್ಯ ತಮಗೆ ಕೆಳದಿ ಆಸ್ಥಾನದ ಪಟ್ಟಾಧಿಕಾರ ಆಗಬೇಕೆಂದು ಎರಡು ಗುಂಪುಗಳು ಪ್ರತ್ಯೇಕವಾಗಿ ಯುದ್ಧ ಸಾರಿದವು. ಪತಿಯನ್ನು ಕಳೆದುಕೊಂಡು ನೋವು ಮರೆಯಾಗುವ ಮುನ್ನವೇ ತನ್ನವರಿಂದ ಬಂದೊದಗಿದ ಆಪತ್ತಿನ ಸ್ಥಿತಿಗೆ ನೊಂದರೂ ಧೃತಿಗೆಡದೆ ಚನ್ನಮ್ಮ ಯುದ್ಧಕ್ಕೆ ಸಕಲ ಸಿದ್ಧತೆ ಮಾಡಿಕೊಳ್ಳುತ್ತಾಳೆ. ಬಸವಲಿಂಗ ನಾಯಕನನ್ನು ಸೆರೆ ಹಿಡಿದು ವೆಂಕಟಪ್ಪನನ್ನು ಎದುರಿಸಲು ಶಕ್ತಿ ಇದ್ದರೂ ತಂತ್ರ ಬಳಸಿ ಬಿದನೂರು ಕೋಟೆಯಿಂದ ಕಣ್ಮರೆಯಾಗಿ ಕವಲೇದುರ್ಗಕ್ಕೆ ಬಂದು ನೆಲೆಸುತ್ತಾಳೆ. ಕೆಳದಿ ಚನ್ನಮ್ಮನ ಸಾಹಸ ಹೋರಾಟಕ್ಕೆ ಕವಲೇದುರ್ಗದ ಈ ಮಠ ದಾರಿ ದೀಪವಾಗಿದ್ದನ್ನು ಇತಿಹಾಸ ಎಂದಿಗೂ ಮರೆಯುವಂತಿಲ್ಲ. ಕೆಳದಿ ಸಂಸ್ಥಾನದ ಇತಿಹಾಸದಲ್ಲಿ ಹೆಗ್ಗುರುತನ್ನು ಉಳಿಸಿಕೊಂಡ ಈ ಮಠ ಕೆಳದಿ ಸಂಸ್ಥಾನದ ಹೋರಾಟಕ್ಕೆ ಒಂದು ಹೊಸ ತಿರುವು ಕೊಟ್ಟಿದೆ. ರಾಣಿ ಚನ್ನಮ್ಮ ಕವಲೇದುರ್ಗದ ಕೋಟೆಯಲ್ಲಿ ಇರುವ ತನಕವೂ ರಾಣಿಯ ಯೋಗಕ್ಷೇಮವನ್ನು ಮಠವೇ ನೋಡಿಕೊಂಡಿದೆ. ರಾಣಿಯ ಪ್ರತಿನಿತ್ಯದ ಧಾರ್ಮಿಕ ವಿಧಿಗಳಾದ ಪಾದೋದಕ ಹಾಗೂ ತೀರ್ಥಪ್ರಸಾದಗಳು ಮಠದಿಂದಲೇ ಹೋಗುತ್ತಿದ್ದವು. ಅಲ್ಲದೆ ಈ ಕಷ್ಟ ಕಾಲದಲ್ಲಿ ಚನ್ನಮ್ಮನಿಗೆ ಮಾರ್ಗದರ್ಶನ ನೀಡಿ ಧೈರ್ಯ ತುಂಬಿ ಪುನಃ ಕೆಳದಿ ಸಂಸ್ಥಾನ ತಲೆ ಎತ್ತಿ ನಿಲ್ಲುವಂತೆ ಮಾಡಲು ಸಹಾಯಕವಾಯಿತು ಎಂಬ ಕೀರ್ತಿ ಈ ಮಠಕ್ಕೆ ಸಲ್ಲುತ್ತದೆ.

ಪರಂಪರೆ: ಮಠವು ಉಜ್ಜಯಿನಿಯ ಶಾಖಾಮಠವಾಗಿದ್ದು ಶಿಷ್ಯವರ್ಗದ ಪರಂಪರೆಯನ್ನು ಹೊಂದಿದೆ. ಈ ಮಠದ ಆವರಣದಲ್ಲಿ ಒಟ್ಟು ಆರು ಗದ್ದುಗೆಗಳನ್ನು ಗುರುತಿಸಬಹುದಾಗಿದ್ದರೂ ಶ್ರೀ ವೃಷಭಲಿಂಗ ಶಿವಾಚಾರ್ಯ ಸ್ವಾಮಿಗಳ ಗದ್ದುಗೆ ಒಂದನ್ನು ಹೊರತುಪಡಿಸಿ ಉಳಿದ ಗದ್ದುಗೆಗಳು ಯಾರ ಹೆಸರಲ್ಲಿ ನಿರ್ಮಿತವಾಗಿವೆ ಎಂದು ಗುರುತಿಸಲು ಸಾಧ್ಯವಾಗುತ್ತಿಲ್ಲ. ಈ ಮಠದ ಪರಂಪರೆಯಲ್ಲಿ ಬರುವ ಸ್ವಾಮಿಗಳು ದೇಶಸಂಚಾರಕ್ಕೆ ಹೋದ ಕಡೆ ಲಿಂಗೈಕ್ಯರಾಗಿದ್ದಾರೆ. ಈ ಕಾರಣಕ್ಕೆ ಮಠದ ಪರಂಪರೆಯ ಗುರುಗಳ ಹೆಸರನ್ನು ನಿಖರವಾಗಿ ಹೇಳಲು ಆಧಾರಗಳು ಲಭ್ಯವಿಲ್ಲ.

ಕನ್ನಡ ರತ್ನ, ಆಗಮ ಪ್ರವೀಣ, ವೇದಮೂಲ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ೧೯೯೭ರ ಫೆಬ್ರವರಿ ನಾಲ್ಕ ರಂದು ಉಜ್ಜಯಿನಿ ಜಗದ್ಗುರುಗಳಿಂದ ವೀರಶೈವ ಆಗಮೋಕ್ತವಾಗಿ ಪಟ್ಟಾಧಿಕಾರ ಪಡೆದಿದ್ದಾರೆ. ಪಟ್ಟಾಧಿಕಾರ ಪಡೆದಂದಿನಿಂದ ತಮ್ಮ ವಿದ್ವತ್‌ಪೂರ್ಣ ಪಾಂಡಿತ್ಯದಿಂದ ಗುರುಗಳಾದ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳ ಸಲಹೆ ಸಹಕಾರದಿಂದ ಮಠದ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಹೋಗುತ್ತಿದ್ದಾರೆ.

ಬೆಂಗಳೂರಿನ ಮಹಂತಿನ ಮಠದಲ್ಲಿ ಇದ್ದುಕೊಂಡು ಕನ್ನಡ ಎಂ.ಎ.,ಸಂಸ್ಕೃತ ಎಂ.ಎ.,ಕನ್ನಡ ರತ್ನ, ಸಂಸ್ಕೃತ ಸಾಹಿತ್ಯ ಹಾಗೂ ವೀರಶೈವ ಜೈನಾಗಮನಗಳ ಮತ್ತು ವೀರಶೈವ ಶಿವಾನುಭವ ಪರಂಪರೆಯನ್ನು ಅಧ್ಯಯನ ಮಾಡಿದ್ದಾರೆ. ಪ್ರಾಚೀನ ಮೌಲ್ಯಗಳೊಂದಿಗೆ ಎದ್ದು ನಿಂತ ಸಂಸ್ಥಾನ ಮಠದಲ್ಲಿ ಅನ್ನದಾಸೋಹ, ಛತ್ರನಿವಾಸ, ವೇದ, ಸಂಸ್ಕೃತ ಪಾಠಶಾಲೆ ಹಾಗೂ ಕಲ್ಯಾಣ ಮಂಟಪ ನಿರ್ಮಿಸುವ ಯೋಜನೆಯನ್ನು ಇಟ್ಟುಕೊಂಡಿದ್ದಾರೆ. ಮಠದ ಇತಿಹಾಸವನ್ನು ದಾಖಲೆ ಸಮೇತ ಪ್ರಕಟಿಸುವ ಹಂಬಲ ಹೊಂದಿದ್ದಾರೆ. ಕೆಳದಿ ಅರಸರ ಕಾಲದಲ್ಲಿ ಮಠಕ್ಕೆ ೨೦೦ ಎಕರೆ ಜಮೀನು ಬಳುವಳಿಯಾಗಿ ದೊರೆತಿತ್ತು. ಟೆನೆಂಟ್‌ನಲ್ಲಿ ಈ ಆಸ್ತಿಯೆಲ್ಲ ಹೋಗಿ ಕೇವಲ ಐದು ಎಕರೆ ಮಾತ್ರ ಇದೆ. ಈ ಆಸ್ತಿಯನ್ನು ಅಭಿವೃದ್ಧಿಪಡಿಸಿ ಮಠಕ್ಕೆ ಆದಾಯ ಬರುವಂತೆ ಮಾಡಿಕೊಂಡಿದ್ದಾರೆ.

ಕಲಾಕೃತಿ: ಕಲ್ಲು ಮತ್ತು ಮರಗಳ ದಿಮ್ಮಿಗಳಿಂದ ನಿರ್ಮಿಸಲ್ಪಟ್ಟಿರುವ ಮಠವು ಒಂದು ಕಲಾಕೃತಿಯಾಗಿ ರೂಪುಗೊಂಡಿದೆ. ಈ ಮಠದ ಆವರಣದಲ್ಲಿ ಶ್ರೀ ಗುರುಮರುಳಸಿದ್ಧೇಶ್ವರರ ತೋರುಗದ್ದುಗೆ, ಶಕ್ತಿಮಾತೆ ಚೌಡೇಶ್ವರಿ, ಈಶ್ವರಲಿಂಗ, ವೀರಭದ್ರ ದೇವಾಲಯಗಳು ಸ್ಥಾಪನೆಗೊಂಡಿವೆ.ಇಂತಹ ಧಾರ್ಮಿಕ ಪರಿಸರದಲ್ಲಿ ಶ್ರಾವಣಮಾಸ, ಕಾರ್ತೀಕ ಮಾಸ, ಶಿವರಾತ್ರಿಗಳನ್ನು ವಿಶೇಷವಾಗಿ ಆಚರಿಸಲಾಗುತ್ತಿದೆ. ಪ್ರತಿ ಶ್ರಾವಣಮಾಸದಲ್ಲಿ ಸ್ವಾಮಿಗಳು ಮಾಸಾಂತ್ಯಪೂರ್ಣ ಲೋಕಕಲ್ಯಾಣಾರ್ಥ ಮೌನ ವ್ರತದಲ್ಲಿ ಅನುಷ್ಠಾನಗೊಳ್ಳುವುದು ರೂಢಿಯಾಗಿದೆ. ಈ ಸಂದರ್ಭದಲ್ಲಿ ತೀರ್ಥಹಳ್ಳಿ,ಸಾಗರ, ಶಿಕಾರಿಪುರ ತಾಲ್ಲೂಕುಗಳು ಮತ್ತು ಶಿರಸಿ ತಾಲ್ಲೂಕು ಭಾಗಗಳಿಂದ ಭಕ್ತರು ಬರುತ್ತಾರೆ. ಇಂತಹ ಅಪಾರ ಭಕ್ತ ಸಂಪತ್ತನ್ನು ಹೊಂದಿರುವ ಮಠದಲ್ಲಿ ಎಪ್ಪತ್ತೆರಡು ತಾಮ್ರಶಾಸನಗಳು, ಶಿಲಾಶಾಸನಗಳು ದೊರೆತಿವೆ. ರಾಜಮಹಾರಾಜರು ನೀಡಿದ ಪೂಜಾಸಾಮಗ್ರಿಗಳು ಲೋಪವಾಗಿದ್ದರೂ ಇನ್ನೂ ಕೆಲವು ನೋಡ ಸಿಗುತ್ತಿವೆ. ಮಠದ ಆವರಣದಲ್ಲಿ ತೂಗುಹಾಕಿರುವ ದೊಡ್ಡಘಂಟೆ, ದನಗಳ ಕೊರಳಿನ ಬಿದಿರಿನ ಘಂಟೆ ಶಬ್ದ, ಹರಿಯುವ ನೀರಿನ ಜುಳುಜುಳು ಶಬ್ದ, ಮಠದ ಕಲ್ಪನೆಯನ್ನು ಜೀವಂತವಾಗಿರಿಸಿದೆ. ಮಠದ ಸುತ್ತಮುತ್ತಲಲ್ಲಿರುವ ಗಿರಿಕಂದರಗಳು ಮಠದ ಕಲ್ಪನೆಯ ಜೀವಂತಿಕೆಯನ್ನು ಇಮ್ಮಡಿಗೊಳಿಸಿದೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಎಂ.ಎ, ಶ್ರೀ ರಾಜಗುರು ಮಹಾಮಹತ್ತಿನ ಭುವನಗಿರಿ ಸಂಸ್ಥಾನ ಮಠ, ಕವಲೇದುರ್ಗ- ೫೭೭೪೧೧, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಕೋಣಂದೂರು

ತೀರ್ಥಹಳ್ಳಿ ತಾಲ್ಲೂಕು ಕೋಣಂದೂರು, ನಾಡಿನ ಸ್ವಾತಂತ್ರ್ಯ ಹೋರಾಟಕ್ಕೆ ಲಿಂಗಪ್ಪನವರಂತಹವರನ್ನು ನೀಡಿದ ಕೀರ್ತಿ ಯಿಂದ ಎಲ್ಲರ ಮನಸ್ಸಿನಲ್ಲಿ ಹಸಿರಾಗಿ ಉಳಿದಿದೆ. ತೀರ್ಥಹಳ್ಳಿಯಿಂದ ಹೊಸನಗರಕ್ಕೆ ಹೋಗುವ ದಾರಿ ಮಧ್ಯದಲ್ಲಿ ಸಿಗುವ ಸುಧಾರಿತ ಹಳ್ಳಿ. ಕೋಣಂದೂರಿನಲ್ಲಿ ಎರಡು ವೀರಶೈವ ಮಠಗಳು ಸ್ಥಾಪನೆಯಾಗಿವೆ. ಸ್ಥಾಪನೆಯಾದ ಮಠವು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವ ವೇಳೆಗೆ ನೂತನ ಮಠ ಸ್ಥಾಪನೆಯಾಗಿದೆ.

ಉದ್ಧಾಡೇವರಮಠ: ಕೋಣಂದೂರು ಗ್ರಾಮದಿಂದ ಪೂರ್ವಕ್ಕೆ ಎರಡು ಕಿ.ಮೀ. ದೂರದಲ್ಲಿರುವ ಉದ್ದಾದೇವರ ಮಠವು ಬಾಳೆಹೊನ್ನೂರು ಪೀಠಕ್ಕೆ ಸೇರಿದ ಪುತ್ರವರ್ಗದ ಮಠವಾಗಿತ್ತು. ಸುಮಾರು ನಾಲ್ಕು ತಲೆಮಾರುಗಳ ಹಿಂದೆ ಚಿತ್ರದುರ್ಗ ಜಿಲ್ಲೆಯಿಂದ ವಲಸೆಬಂದ ಮಠದ ಪೂರ್ವಜರು ಇಲ್ಲಿ ಮಠ ಕಟ್ಟಿ ಅಭಿವೃದ್ಧಿಪಡಿಸಿದ ಕುರುಹುಗಳು ಹಾಳಾದ ಮಠದ ಆವರಣದಲ್ಲಿ ಸಿಗುತ್ತವೆ. ಹೊಯ್ಸಳ ಶೈಲಿಯಲ್ಲಿ ವಿಶಾಲವಾದ ತಳ ಅಂತಸ್ಥಿನೊಂದಿಗೆ ನಿರ್ಮಾಣಗೊಂಡ ಹಿಂದಿನ ಮಠ, ಕೆತ್ತನೆಯ ಕಲ್ಲಿನಿಂದ ರೂಪಗೊಂಡಿತ್ತು ಎಂಬುದಕ್ಕೆ ಇಲ್ಲಿನ ಕಲ್ಲುಗಳೇ ಸಾಕ್ಷಿಯಾಗಿ ನಿಂತಿವೆ.

ಈ ಮಠದ ಆವರಣದಲ್ಲಿ ಶ್ರೀ ಉದ್ಭಾನ ಬಸವಲಿಂಗ ದೇವರ ಗದ್ದುಗೆ ಇದ್ದು ಇವರ ಹೆಸರಿನಲ್ಲಿ ಮಠ ಸ್ಥಾಪನೆಯಾಗಿದೆ. ಇವರ ನಂತರ ಮಠವು ಅಭಿವೃದ್ಧಿಗೊಂಡು ಉಚ್ಛ್ರಾಯ ಸ್ಥಿತಿಯಲ್ಲಿರುವಾಗಲೇ ಉತ್ತರಾಧಿಕಾರಿಗಳು ಯಾರೂ ಇಲ್ಲದೆ ಮಠ ಅವನತಿ ಕಾಣತೊಡಗಿದೆ. ಮಠದ ಆವರಣದಲ್ಲಿ ಬೇರೆ ಯಾವ ಗುರುಗಳ ಗದ್ದುಗೆಗಳು ಸಿಗದೆ ಇರುವ ಕಾರಣ ಮಠ ಸ್ಥಾಪನೆ ಮಾಡಿದ ಗುರುಗಳ ಹೆಸರನ್ನು ಮಾತ್ರ ದಾಖಲಿಸಬಹುದಷ್ಟೆ. ಈ ಮಠಕ್ಕೆ ಕೆಳದಿ ಅರಸರಿಂದ ನೆರವು ಸಿಕ್ಕಿದೆ. ಅಲ್ಲದೆ ಶ್ರೀ ಉದ್ಭಾನ ಬಸವಲಿಂಗದೇವರ ನಂತರ ಉತ್ತರಾಧಿಕಾರಿಗಳನ್ನು ಆಯ್ಕೆ ಮಾಡುವ ಅನೇಕ ಅವಕಾಶಗಳಿದ್ದರೂ, ನೇಮಕವಾಗದೆ ಮಠ ತನ್ನ ಮೂಲ ಅಸ್ತಿತ್ವವನ್ನು ಕಳೆದುಕೊಳ್ಳತೊಡಗಿದೆ. ಶ್ರೀ ಉದ್ಭಾನಬಸವಲಿಂಗ ದೇವರ ಗದ್ದುಗೆಯ ಜಾಗದಲ್ಲಿ ರೇಣುಕರು ಮತ್ತು ಪಾರ್ವತಮ್ಮನವರ ವಿಗ್ರಹಗಳನ್ನು ಸ್ಥಾಪನೆಮಾಡಿ ಪೂಜಿಸತೊಡಗಿದ್ದಾರೆ. ಈಗ ಮಠದ ಆಸ್ತಿಯನ್ನು ಮಠದ ವಂಶಸ್ಥರೇ ಅನುಭವಿಸಿಕೊಂಡು ಬರುತ್ತಿದ್ದು ಪೂಜಾ ಕಾರ್ಯಕ್ಕೆ ವ್ಯವಸ್ಥೆಗೊಳಿಸಿದ್ದಾರೆ.

ಉಡೇವು ಶಿವಲಿಂಗೇಶ್ವರ ಬೃಹನ್ಮಠ: ಕೋಣಂದೂರಿನ ಮಧ್ಯಭಾಗದಲ್ಲಿರುವ ಉಡೇವು ಶಿವಲಿಂಗೇಶ್ವರ ಬೃಹನ್ಮಠವು ಧರ್ಮಪ್ರಸಾರಕ್ಕೆ ಹುಟ್ಟಿಕೊಂಡ ಹೊಸ ಮಠ.ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನ ಉಡೇವು ಬೃಹನ್ಮಠದ ಶ್ರೀಶಿವಲಿಂಗೇಶ್ವರ ಶಿವಾಚಾರ್ಯ ಸ್ವಾಮಿಗಳು ಧರ್ಮಪ್ರಸಾರಕ್ಕೆಂದು ದೇಶಸಂಚಾರಕ್ಕೆ ಹೊರಟು ಕೋಣಂದೂರಿನಲ್ಲಿ ಭಕ್ತರ ಅಪೇಕ್ಷೆಯ ಮೇರೆಗೆ ಇಲ್ಲೇ ನೆಲೆಸಿ ಲಿಂಗೈಕ್ಯರಾದರು. ಇವರ ಹೆಸರಲ್ಲಿ ಸ್ಥಾಪನೆಯಾದ ಮಠವು ಕಳೆದ ನಲವತ್ತು ವರ್ಷಗಳ ಹಿಂದೆ ಪ್ರಾರಂಭವಾಗಿದೆ. ಈ ನೂತನ ಮಠಕ್ಕೆ ಆಸ್ತಿ ಇಲ್ಲದಿದ್ದರೂ ಲಿಂಗೈಕ್ಯ ಗುರುಗಳ ಪ್ರಭಾವಕ್ಕೆ ಒಳಗಾಗಿದ್ದ ಭಕ್ತರ ಸಂಖ್ಯೆಗೇನು ಕಡಿಮೆ ಇಲ್ಲ. ಈಗಿನ ಗುರುಗಳಾದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ಬೆಳೆದ ಪರಂಪರೆ: ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮಿಗಳು, ೧೯೭೯ರ ಮೇ ಮೂರರಂದು ರಂಭಾಪುರಿ ಜಗದ್ಗುರು ಶ್ರೀವೀರರುದ್ರಮುನಿ ಶಿವಾಚಾರ್ಯ ಭಗವತ್ಪಾದರ ಸಾನ್ನಿಧ್ಯದಲ್ಲಿ ಮಳಲಿ ಮಠದ ಶ್ರೀ ನಾಗಾರ್ಜುನ ಸ್ವಾಮಿಗಳ ನೇತೃತ್ವದಲ್ಲಿ ಪಟ್ಟಾಧಿಕಾರವನ್ನು ಪಡೆದುಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಪಂಚಪೀಠಗಳಲ್ಲಿ ಒಂದಾದ ಶ್ರೀಶೈಲ ಶಾಖಾಮಠವಾದ ಈ ಮಠವು ಶಿಷ್ಯವರ್ಗದ ಮಠವಾಗಿ ಕಳೆದ ನಲವತ್ತು ವರ್ಷಗಳಿಂದ ನಿರಂತರವಾಗಿ ಧಾರ್ಮಿಕ ಕೆಲಸಗಳನ್ನು ಮಾಡುತ್ತ ಬಂದಿದೆ. ಧನುರ್ಮಾಸದಲ್ಲಿ ವಿಶೇಷ ಪೂಜೆ ನಡೆಯುತ್ತಿದೆ. ಈ ಸಂದರ್ಭದಲ್ಲಿ ಒಂದು ತಿಂಗಳು ಕಾಲ ಗುರುಗಳು ಅನುಷ್ಠಾನಕ್ಕೆ ಕುಳಿತು ಅನುಷ್ಠಾನದ ಕೊನೆ ದಿನ ಕರ್ತೃ ಗುರುಗಳ ಪುಣ್ಯಾರಾಧನೆ ಮಾಡಿ, ನಾಡಿನ ಗಣ್ಯರನ್ನು ಕರೆಸಿ ವೈಭವಯುತವಾಗಿ ಸಮಾರಂಭವನ್ನು ನಡೆಸುತ್ತಾರೆ. ನಾಲ್ಕುಲಕ್ಷ ರೂಪಾಯಿ ವೆಚ್ಚದಲ್ಲಿ ಕರ್ತೃಗದ್ದುಗೆ ಹಾಗೂ ಕಲ್ಯಾಣ ಮಂಟಪವನ್ನು ನಿರ್ಮಿಸಿದ್ದು ಮಠವನ್ನು ಅಭಿವೃದ್ಧಿಪಡಿಸ ತೊಡಗಿದ್ದಾರೆ. ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮಿಗಳು ಕಾಯಕ ಮೂರ್ತಿಗಳಾಗಿರುವುದರಿಂದ ಆಸ್ತಿಯಿಂದ ಮಠಕ್ಕೆ ಆದಾಯ ಇಲ್ಲದಿದ್ದರೂ ಮಠ ಬೆಳಕಿಗೆ ಬರಲು ಶ್ರಮವಹಿಸಿರುವುದು ಶ್ಲಾಘನೀಯವಾಗಿದೆ. ಮಠದಲ್ಲಿ ಕಲಿಯುವ ಬಡ ಮಕ್ಕಳಿಗೆ ಪ್ರಸಾದ, ವಸತಿ ಹಾಗೂ ವಿದ್ಯಾಭ್ಯಾಸಕ್ಕೆ ನೆರವು ನೀಡುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಉಡೇವು ಶಿವಲಿಂಗೇಶ್ವರ ಬೃಹನ್ಮಠ, ಕೋಣಂದೂರು, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಮಳಲಿ

ತೀರ್ಥಹಳ್ಳಿ ತಾಲ್ಲೂಕಿನ ಮಳಲಿ ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಹದಿನೈದು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ಶ್ರೀಮನ್ ಮಹಾಸಂಸ್ಥಾನ ಮಳಲಿಮಠವು ಅಸ್ತಿತ್ವದಲ್ಲಿದೆ.

ಸಂಸ್ಥಾನ ಮಳಲಿಮಠ: ಮಳಲಿ ಗ್ರಾಮದಲ್ಲಿ ಶ್ರೀ ರಂಭಾಪುರಿ ಪೀಠದ ಖಾಸಾ ಶಾಖಾಮಠವಾಗಿ ಶ್ರೀ ಮಳಲಿ ಮಠವು ಸ್ಥಾಪನೆಯಾಗಿದೆ. ಇದು ಶಿಷ್ಯವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಹಳನೆಯ ಶತಮಾನದಲ್ಲಿ ಆದಿಗುರು

ಶ್ರೀನಾಗಾರ್ಜುನ ಸ್ವಾಮಿಗಳಿಂದ ಪ್ರಾರಂಭಗೊಂಡಿದೆ. ಆಂಧ್ರಪ್ರದೇಶದ ನಾಗಾರ್ಜುನ ಕೊಂಡದಲ್ಲಿದ್ದ ಮೂಲಗುರುಗಳ ಕಿವಿಯಲ್ಲಿ ಮಿಡಿ ನಾಗರಗಳು ಇದ್ದ ಕಾರಣ ನಾಗಾರ್ಜುನ ಸ್ವಾಮಿಗಳೆಂದು ಈ ಮಠದ ಸ್ವಾಮಿಗಳಿಗೆ ಹೆಸರು ಬಂದಿದೆ. ಅಲ್ಲದೆ ಮಳಲಿ ಮಠದ ಸುತ್ತ ನಾಗಾರಹಾವುಗಳು ಕಚ್ಚಿದರೂ ವಿಷ ತಾಕುವುದಿಲ್ಲ ಎಂಬ ಪ್ರತೀತಿ ಇದೆ. ಈ ಭಾಗದ ಜನ ನೈತಿಕವಾಗಿ ತಪ್ಪು ಮಾಡಿದರೆ ರಾತ್ರಿ ಕನಸಿನಲ್ಲಿ ನಾಗರ ಹಾವುಗಳು ಕಾಣಿಸಿಕೊಳ್ಳುತ್ತವೆ. ಬೆಳಿಗ್ಗೆ ಸ್ನಾನಮಾಡಿ ಭಕ್ತಿಯಿಂದ ಮಠಕ್ಕೆ ಬಂದು ಹೋದರೆ ದೋಷ ಪರಿಹಾರವಾಗುತ್ತದೆ ಎಂಬ ನಂಬಿಕೆ ಜನಜನಿತವಾಗಿದೆ. ಇಂತಹ ನಂಬಿಕೆಗಳಿಂದ ಬೆಳೆದ ಮಠವು ಧಾರ್ಮಿಕ ಕಾರ್ಯಗಳನ್ನು ನಡೆಸಿ ವೀರಶೈವ ಧರ್ಮವನ್ನು ಅಭಿವೃದ್ಧಿಪಡಿಸಿದೆ.

ಆಂಧ್ರಪ್ರದೇಶದ ಕೊಲ್ಲಿಪಾಕಿಯಿಂದ ರೇಣುಕರು ಬಾಳೆಹೊನ್ನೂರಿಗೆ ಬಂದು ನೆಲೆನಿಂತ ನಂತರದಲ್ಲಿ ರೇಣುಕರು ಸ್ಥಾಪಿಸಿದ ಪೀಠದ ಹತ್ತಿರದಲ್ಲಿರಲು ಅಪೇಕ್ಷಿಸಿ ಆಂಧ್ರಪ್ರದೇಶದ ಶಿವಾಚಾರ್ಯರೊಬ್ಬರು ನಾಗಾರ್ಜುನ ಕೊಂಡದಿಂದ ಬಂದು ಇಲ್ಲಿ ಮಠವನ್ನು ಸ್ಥಾಪನೆ ಮಾಡಿರುತ್ತಾರೆ. ಈ ಬಗ್ಗೆ ಮಠದಲ್ಲಿ ಸಿಗುವ ಉಲ್ಲೇಖದಿಂದ ದೃಢಪಡುತ್ತದೆ. ಅಂದು ಗುರುಗಳು ಸ್ಥಾಪಿಸಿದ ಮಠವು ವೀರಶೈವ ಧರ್ಮವನ್ನು ಮಲೆನಾಡಿನ ಈ ಪ್ರಾಂತ್ಯದಲ್ಲಿ ಬೆಳೆಸಲು ಶ್ರಮವಹಿಸಿದೆ.

ಪರಂಪರೆ: ಮಠದ ಪರಂಪರೆಯಲ್ಲಿ ಶ್ರೀ ನಾಗಾರ್ಜುನ ಶಿವಾಚಾರ್ಯ ಸ್ವಾಮಿಗಳು ಎಂಬ ಒಂದೇ ಹೆಸರನ್ನು ಪರಂಪರೆಯ ಎಲ್ಲಾ ಗುರುಗಳು ಅಭಿದಾನ ಪಡೆದು ಅಧಿಕಾರಕ್ಕೆ ಬಂದ ಕಾರಣ ಮಠದ ಪರಂಪರೆಯನ್ನು ಗುರುತಿಸಲು ತೊಡಕಾಗಿದೆ. ಮಠದ ಆವರಣದಲ್ಲಿ ಒಂಬತ್ತು ಗದ್ದುಗೆಗಳಿವೆ. ತರೀಕೆರೆತಾಲ್ಲೂಕಿನ ಹಾದಿಕೆರೆಯಲ್ಲಿ ಒಂದು ಗದ್ದುಗೆ ಹಾಗೂ ನಾಡಿನ ಇತರೆ ಭಾಗಗಳಲ್ಲಿ ಅನೇಕ ಗದ್ದುಗೆಗಳು ಸ್ಥಾಪಿತವಾಗಿವೆ.

ಈಗ ಅಧಿಕಾರ ವಹಿಸಿಕೊಂಡು ಆಡಳಿತ ನಡೆಸುತ್ತಿರುವ ಶ್ರೀ ನಾಗಭೂಷಣ ಶಿವಾಚಾರ್ಯ ಸ್ವಾಮಿಗಳು ಪರಂಪರೆಯ ಹೆಸರನ್ನು ಬದಲಿಸಿಕೊಂಡು ಶ್ರೀ ರಂಭಾಪುರಿ ಪೀಠದ ಜಗದ್ಗುರುಗಳಾದ ಶ್ರೀ ಪ್ರಸನ್ನ ರೇಣುಕ ವೀರಸೋಮೇಶ್ವರ ಭಗವತ್ಪಾದರ ಕೃಪಾಶೀರ್ವಾದದಿಂದ ೧೯೯೮ ರ ಫೆಬ್ರುವರಿ ಹತ್ತರಂದು ಅಧಿಕಾರ ಪಡೆದುಕೊಂಡಿದ್ದಾರೆ. ಇವರು ಮುದ್ದೆಬಿಹಾಳು ತಾಲ್ಲೂಕಿನ ಕೇಶವಾಪುರದ ಶ್ರೀ ಸಂಗಮೇಶ್ವರಮಠದಲ್ಲಿ ಪಟ್ಟಾಧಿಕಾರ ಆದ ಮೇಲೆ ಸಂಸ್ಕೃತ, ಸಾಹಿತ್ಯ ಅಧ್ಯಯನವನ್ನು ಹುಬ್ಬಳ್ಳಿ ಮೂರು ಸಾವಿರ ಮಠದಲ್ಲಿ ಮುಗಿಸಿ, ಆಯುರ್ವೇದ ಶಾಸ್ತ್ರ, ಸಂಸ್ಕೃತ ವ್ಯಾಕರಣ ಅಭ್ಯಾಸವನ್ನು ಕೊಪ್ಪಳದ ಗವಿಸಿದ್ದೇಶ್ವರ ಮಠದಲ್ಲಿ ಮುಗಿಸಿದ್ದಾರೆ. ನಂತರ ರಂಬಾಪುರಿ ಪೀಠದಲ್ಲಿ ನೆಲೆಸಿ ರೇಣುಕಾಚಾರ್ಯ ಗುರುಕುಲದಲ್ಲಿ ವೇದ ಹಾಗೂ ಜ್ಯೋತಿಷ್ಯ ಕಲಿತು ರಂಭಾಪುರಿ ಜಗದ್ಗುರುಗಳ ಸಾನಿಧ್ಯದಲ್ಲಿ ಆಚಾರವಿಚಾರ, ಅನುಷ್ಠಾನಾದಿಗಳ ಬಗ್ಗೆ ಕಲಿತು ವಿದ್ವತ್ತನ್ನು ಸಂಪಾದಿಸಿದ್ದಾರೆ. ಜಗದ್ಗುರು ರಂಭಾಪುರಿ 'ಬೆಳಗು' ಪತ್ರಿಕೆಯ ವಾರ್ತಾಕಾರ್ಯದರ್ಶಿಯಾಗಿ ಅನೇಕ ಲೇಖನಗಳನ್ನು ಪ್ರಕಟಿಸಿದ್ದಾರೆ. ಗುರುಗಳು ಬಿಜಾಪುರ ಜಿಲ್ಲೆಯ ಮುದ್ದೆಬಿಹಾಳು ತಾಲ್ಲೂಕಿನ ಕೇಶವ ಪುರದ ಪುತ್ರವರ್ಗದ ಶ್ರೀ ಸಂಗಮೇಶ್ವರ ಸಂಸ್ಥಾನ ಬೃಹನ್ಮಠದಲ್ಲಿ ಪಟ್ಟಾಧಿಕಾರ ಪಡೆದಿದ್ದ ಶ್ರೀ ರವೀಶ್ವರ ಸ್ವಾಮಿಗಳು, ರಂಭಾಪುರಿ ಪೀಠದ ಜಗದ್ಗುರುಗಳ ಅನುಗ್ರಹದಂತೆ ಮಳಲಿ ಮಠಕ್ಕೂ ಪಟ್ಟಾಧಿಕಾರಗೊಂಡು ಎರಡೂ ಮಠಗಳ ಆಡಳಿತವನ್ನು ನೋಡಿಕೊಂಡು ಹೋಗುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಪುರಾತನ ಕಾಲದಲ್ಲಿ ನಿರ್ಮಿಸಿರುವ ಕಲ್ಲಿನ ಕಟ್ಟಡದಲ್ಲಿ ಸೋಮೇಶ್ವರಲಿಂಗ ಇದೆ. ನಾಲ್ಕು ತಲೆ ಮಾರಿನ ಹಿಂದಿನ ಶ್ರೀ ಚಿಕ್ಕತೂರು ಗುರುನಾಗಾರ್ಜುನ ಸ್ವಾಮಿಗಳ ಕಾಲದಲ್ಲಿ ಸೋಮೇಶ್ವರಲಿಂಗ ದೇವಾಲಯವನ್ನು ಸುತ್ತುವರೆದು ಮಠವನ್ನು ವಿಸ್ತರಿಸಿದ್ದಾರೆ. ಮಠದ ಹಿರಿತನಕ್ಕೆ ತಕ್ಕಂತಹ ವಿಶಾಲವಾದ ಭವ್ಯ ಕಟ್ಟಡವು ನಿರ್ಮಾಣಗೊಂಡಿದೆ. ಮಠದ ಆವರಣದಲ್ಲಿ ರೇಣುಕ ಮಂದಿರ, ಚೌಡೇಶ್ವರಿ ಮಂದಿರ, ವೀರಭದ್ರೇಶ್ವರ ಮಂದಿರ, ನಾಗರಕಟ್ಟೆ, ಹಾಗೂ ಭೂತನ ಕಟ್ಟೆಗಳು ನಿರ್ಮಾಣವಾಗಿವೆ.

ಬೆಳಗಿನ ಐದರಿಂದ ಒಂಬತ್ತರ ವರೆಗೆ ಪ್ರತಿದಿನ ರುದ್ರಾಭಿಷೇಕ, ಮಧ್ಯಾಹ್ನ ಒಂದರಿಂದ ಮೂರರವರೆಗೆ ಪೂಜೆ, ಸಂಜೆ ಆರು ಮೂವತ್ತರಿಂದ ಎಂಟು ಗಂಟೆಯವರೆಗೆ ಪೂಜೆ, ಈ ರೀತಿ ತ್ರಿಕಾಲಪೂಜೆ ರೂಢಿಯಲ್ಲಿದೆ. ಅಮಾವಾಸ್ಯೆ ಮತ್ತು ಹುಣ್ಣಿಮೆ ಗಳಲ್ಲಿ ವಿಶೇಷ ಪೂಜೆ, ಮಹಾನವಮಿಯಲ್ಲಿ ಒಂಬತ್ತು ದಿನ ವಿಶೇಷ ಪೂಜೆ, ದೀಪಾವಳಿ, ಕಾರ್ತೀಕದಲ್ಲಿ

ದೀಪೋತ್ಸವ, ಎಳೆಯಷ್ಟಮಿ (ಗೌರಿಪೂಜೆ) ವಿಶೇಷವಾಗಿ ಜರುಗುತ್ತವೆ. ಈ ಸಂದರ್ಭದಲ್ಲಿ ಸುತ್ತಲ ಭಕ್ತರು ಸೇರಿ ವಿಜೃಂಭಣೆ ಯಿಂದ ಈ ಕಾರ್ಯಗಳನ್ನು ನಡೆಸುತ್ತಾರೆ. ಈ ಸಂದರ್ಭದಲ್ಲಿ ಅನ್ನದಾಸೋಹದ ವ್ಯವಸ್ಥೆ ಮಾಡಿಸಲಾಗುತ್ತಿದೆ.

ಪುರಾತನ ಸಾಮಗ್ರಿಗಳು: ಮಠದಲ್ಲಿ ಪುರಾತನ ಪೂಜಾಪರಿಕರಗಳಾದ ಘಂಟೆಗಳು,ನಂದಿಯ ಜಲಹರಿ, ರುದ್ರಾಕ್ಷಿ ಮಾಲೆ ಇವೆ. ಆರು ತಾಮ್ರಶಾಸನಗಳು ಸಿಕ್ಕಿವೆ. ಈ ಮಠಕ್ಕೆ ಕೆಳದಿ ಚನ್ನಮ್ಮನ ಕಾಲದಲ್ಲಿ ದತ್ತಿಯಾಗಿ ನೀಡಿದ ಭೂಮಿ ಇದೆ. ಬಿದನೂರು, ಕವಲೇದುರ್ಗ, ಆನಂದಪುರಂ ಮಠಕ್ಕೆ ಕೊಟ್ಟಂತಹ ಪ್ರಾಮುಖ್ಯತೆಯನ್ನು ಈ ಮಠಕ್ಕೂ ನೀಡಿರುವ ಕೆಳದಿ ಅರಸರು ಮಠವು ಪ್ರಗತಿಯನ್ನು ಸಾಧಿಸಲು ಸಹಕಾರಿಯಾಗಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಪುರಾತನ ಮಠದ ಹಳೆಯಕಟ್ಟಡವನ್ನು ಶ್ರೀ ನಾಗಭೂಷಣ ಶಿವಾಚಾರ್ಯ ಸ್ವಾಮಿಗಳು ನವೀಕರಿಸಿದ್ದಾರೆ. ಮಠದ ಆಸ್ತಿಯನ್ನು ಶಿಸ್ತುಬದ್ಧಗೊಳಿಸಿ ಆಧುನಿಕ ಬೇಸಾಯ ಪದ್ಧತಿಯಲ್ಲಿ ಅಧಿಕ ಲಾಭ ಬರುವಂತೆ ಮಾಡಿದ್ದಾರೆ. ಗುರುಗಳು ಗೋಶಾಲೆಯನ್ನು ಪ್ರಾರಂಭಿಸಿದ್ದಾರೆ. ಪ್ರಗತಿಪರ ಚಿಂತಕರಾದ ಇವರು ಮಠವು ಸಮಾಜ ಮುಖಿಯಾಗಿ ಬೆಳೆಯುವಂತೆ ಮಾಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ನಾಗಭೂಷಣ (ರವೀಶ್ವರ) ಶಿವಾಚಾರ್ಯ ಸ್ವಾಮಿಗಳು, ಶ್ರೀಮನ್ ಮಹಾಸಂಸ್ಥಾನ ಮಳಲಿ ಮಠ, ನೊಣಬೂರು (ಅಂಚೆ) ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

❑

ಭದ್ರಾವತಿ ತಾಲ್ಲೂಕು

ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕು ಕೈಗಾರಿಕೆ ಹಾಗೂ ನೀರಾವರಿ ಯೋಜನೆಯಿಂದ ಅಭಿವೃದ್ಧಿಗೊಂಡಿದೆ. ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆದಿತ್ತಾದರೂ, ಕಾಲಾನಂತರ ಕ್ಷೀಣಿಸಿದ ಲಕ್ಷಣಗಳು ಕಂಡುಬರುತ್ತವೆ. ಇಲ್ಲಿ ಮೂರು ಮಠಗಳು ಅಸ್ತಿತ್ವದಲ್ಲಿದ್ದು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಅರಕೇರಿ

ಭದ್ರಾವತಿ ತಾಲ್ಲೂಕಿನ ಅರಕೇರಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹನ್ನೆರಡು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಾಶ್ರಮವು ಅಸ್ತಿತ್ವದಲ್ಲಿದೆ.

ವಿರಕ್ತಾಶ್ರಮ: ಅರಕೇರಿ ಗ್ರಾಮದಲ್ಲಿ ಸ್ಥಾಪನೆಯಾಗಿರುವ ವಿರಕ್ತಾಶ್ರಮವು ಇಪ್ಪತ್ತನೆಯ ಶತಮಾನದ ಅಂತ್ಯ ಭಾಗದಲ್ಲಿ ಅಸ್ತಿತ್ವಕ್ಕೆ ಬಂದಿದೆ. ಶ್ರೀ ಸಿದ್ಧಲಿಂಗ ಸ್ವಾಮಿಗಳು ವಿರಕ್ತಾಶ್ರಮವನ್ನು ಸ್ಥಾಪಿಸಿದ್ದು ಧಾರ್ಮಿಕ ಚಟುವಟಿಕೆಗಳ ಮೂಲಕ ಶರಣರ ತತ್ವಗಳನ್ನು ಪ್ರಚಾರ ಪಡಿಸುತ್ತ ಮಠವನ್ನು ಬೆಳೆಸಿದ್ದಾರೆ. ಗುರುಗಳು ಪುರಾಣ ಪ್ರವಚನಗಳನ್ನು ಮಾಡುವ ಮೂಲಕ ವೀರಶೈವ ಧರ್ಮವನ್ನು ಪ್ರಚಾರಪಡಿಸಿ ಮಠ ಮತ್ತು ಸಮಾಜವನ್ನು ಅಭಿವೃದ್ಧಿ ಪಡಿಸಿದ್ದಾರೆ. ಗುರುಗಳು ತಮ್ಮ ಉತ್ತರಾಧಿಕಾರಿಗಳನ್ನು ನೇಮಿಸಿಕೊಂಡು ಮೈಸೂರಿನ ಸುತ್ತೂರು ಮಠದ ಗುರುಕುಲದಲ್ಲಿ ಧಾರ್ಮಿಕ ಶಿಕ್ಷಣವನ್ನು ಕಲಿಯಲು ವ್ಯವಸ್ಥೆ ಮಾಡಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಸಿದ್ಧಲಿಂಗ ಸ್ವಾಮಿಗಳು, ಶ್ರೀ ವಿರಕ್ತಾಶ್ರಮ, ಅರಕೇರಿ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಗೋಣಿಬೀಡು

ಭದ್ರಾವತಿ ತಾಲ್ಲೂಕಿನ ಗೋಣಿಬೀಡು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಶೀಲಸಂಪಾದನಾ ಮಠವು ಅಸ್ತಿತ್ವದಲ್ಲಿದೆ.

ಶೀಲಸಂಪಾದನಾಮಠ: ಗೋಣಿಬೀಡು ಗ್ರಾಮದ ಪೂರ್ವಭಾಗದಲ್ಲಿ ಹರಿಯುವ ಭದ್ರಾ ನದಿಯ ದಡದಲ್ಲಿ ಹನ್ನೆರಡನೆಯ ಶತಮಾನದಲ್ಲಿ ಸ್ಥಾಪನೆಗೊಂಡಿರುವ ಶ್ರೀ ಶೀಲಸಂಪಾದನಾಮಠವು ಸ್ಥಾಪನೆಯಾಗಿದೆ. ಕಲ್ಯಾಣ ಕ್ರಾಂತಿಯ ನಂತರ, ಶರಣರು ತಾವು ರಚಿಸಿದ ವಚನ ಸಾಹಿತ್ಯವನ್ನು ರಕ್ಷಿಸುವ ಸಲುವಾಗಿ ಕಲ್ಯಾಣದಿಂದ ಹೊರಟರು. ಅವರಲ್ಲಿ ನುಲಿಯ ಚಂದಯ್ಯ, ಅಕ್ಕನಾಗಮ್ಮ ಮೊದಲಾದವರು ವಿಶ್ರಾಂತಿಗಾಗಿ ಗೋಣಿಬೀಡಿನಲ್ಲಿ ನೆಲೆನಿಂತು ಕೆಲವು ದಿನ ನೆಲೆಸಿ ಈ ನೆಲವನ್ನು ಪಾವನಗೊಳಿಸಿದ್ದಾರೆ. ಇಂತಹ ಪವಿತ್ರ ಸ್ಥಳದಲ್ಲಿ ಗೋಣಿಬೀಡಿನ ಶೀಲಸಂಪಾದನಾಮಠ ಸ್ಥಾಪನೆಯಾಗಿದೆ.

ನುಲಿಯ ಚಂದಯ್ಯ,ಅಕ್ಕನಾಗಮ್ಮನವರು ಇಷ್ಟಾರ್ಥ ಸಿದ್ಧಿಗಾಗಿ ಈ ಸ್ಥಳವನ್ನು ತ್ಯಾಗಮಾಡಿ ಹೊರಟು ಹೋದ ಮೇಲೆ ನುಲಿಯ ಚಂದಯ್ಯನವರ ಕ್ರಿಯಾಮೂರ್ತಿಗಳಾಗಿದ್ದ ಶ್ರೀ ದೊಡ್ಡ ಸಿದ್ಧವೀರ ಸ್ವಾಮಿಗಳು ಈ ಸ್ಥಳದಲ್ಲಿ ಶಾಶ್ವತವಾಗಿ ಧರ್ಮಪ್ರಚಾರ ನಡೆಯಬೇಕೆಂಬ ಉದ್ದೇಶದಿಂದ ಮಠ ಸ್ಥಾಪನೆಗೆ ನಾಂದಿಹಾಡಿದರು.

ಪರಂಪರೆ:

೧. ಶ್ರೀ.ಮ.ನಿ.ಪ್ರ. ದೊಡ್ಡ ಸಿದ್ಧವೀರ ಸ್ವಾಮಿಗಳು (ಕರ್ತೃಗುರುಗಳು)
೨. ಶ್ರೀ.ಮ.ನಿ.ಪ್ರ. ಸಿದ್ಧವೀರಸ್ವಾಮಿಗಳು
೩. ಶ್ರೀ.ಮ.ನಿ.ಪ್ರ. ಚಂದ್ರಶೇಖರಸ್ವಾಮಿಗಳು
೪. ಶ್ರೀ.ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ದೊಡ್ಡ ಸಿದ್ಧವೀರ ಸ್ವಾಮಿಗಳು ಲಿಂಗೈಕ್ಯರಾದ ನಂತರ ಸುಮಾರು ಇಪ್ಪತ್ತೈದು ಅಥವಾ ಇಪ್ಪತ್ತಾರು ಜನ ಸ್ವಾಮಿಗಳು ಅಧಿಕಾರ ಪಡೆದು ಗೋಣಿಬೀಡು ಮಠವನ್ನು

ಧರ್ಮಜಾಗೃತ ಸ್ಥಳವನ್ನಾಗಿ ರೂಪಿಸಿದ್ದಾರೆ. ಆದರೆ ಈ ಮಠವನ್ನು ಬೆಳೆಸಿದ ಗುರುಗಳ ಹೆಸರುಗಳನ್ನು ದಾಖಲಿಸಲು ಸರಿಯಾದ ಆಧಾರವಿಲ್ಲ ಎಂಬುದು ನೋವಿನ ಸಂಗತಿಯಾಗಿದೆ.

ಬೆಳಕಾದ ಜ್ಯೋತಿ: ದೊಡ್ಡ ಸಿದ್ಧವೀರ ಸ್ವಾಮಿಗಳ ನಂತರ ಗುರುತಿಸಬಹುದಾದ ಮೊದಲ ಹೆಸರು ಶ್ರೀ ಸಿದ್ಧವೀರ ಸ್ವಾಮಿಗಳು. ಇವರು ಗೋಣಿಬೀಡಿನಲ್ಲಿ ಜನಿಸಿ ಬಾಲ್ಯಾವಸ್ಥೆಯಲ್ಲಿ ಇರುವಾಗಲೇ ತರೀಕೆರೆಯ ಎಣ್ಣೆಹೊಳೆ ಮಠದ ಸ್ವಾಮಿಗಳ ದೃಷ್ಟಿಗೆ ಬಿದ್ದು, ಆಚಾರ ಸಂಪನ್ನನಾಗಿ ಕಾಣುವ ಈ ಬಾಲಕ ಮುಂದೆ ದೊಡ್ಡ ಯೋಗಿಯಾಗಬಲ್ಲನೆಂಬುದನ್ನು ಅರಿತು ೧೯೦೪ ರಲ್ಲಿ ಸ್ಥಾಪನೆಯಾಗಿದ್ದ ಶಿವಯೋಗಮಂದಿರಕ್ಕೆ ಕಲಿಕೆಗಾಗಿ ಕಳುಹಿಸಲು ನಿರ್ಧರಿಸಿದರು. ಈ ಬಗ್ಗೆ ಬಾಲಕ ಶ್ರೀ ಸಿದ್ಧವೀರ ಸ್ವಾಮಿಗಳ ಮಾತಾಪಿತೃಗಳಲ್ಲಿ ಈ ವಿಚಾರ ಪ್ರಸ್ತಾಪಿಸಿ ಗೋಣಿಬೀಡು ಶೀಲಸಂಪಾದನಾ ಮಠಕ್ಕೆ ಉತ್ತಾರಾಧಿಕಾರಿಗಳಾಗಿ ನೇಮಿಸಿ ೧೯೦೯ರಲ್ಲಿ ಶಿವಯೋಗ ಮಂದಿರಕ್ಕೆ ಕಳುಹಿಸಿಕೊಟ್ಟಿರುತ್ತಾರೆ. ಶ್ರೀ ಸಿದ್ಧವೀರ ಸ್ವಾಮಿಗಳು ವಿದ್ಯಾಭ್ಯಾಸದಲ್ಲಿ ತೋರಿಸಿದ ಚತುರತೆ ಶಿವಯೋಗ ಮಂದಿರ ಸ್ಥಾಪಕರಾದ ಹಾನಗಲ್ಲು ಶ್ರೀ ಕುಮಾರ ಸ್ವಾಮಿಗಳಿಗೆ ಮೆಚ್ಚುಗೆಯಾಯಿತು. ಈ ಕಾರಣಕ್ಕೆ ತಮ್ಮ ಕ್ರಿಯಾ ಮೂರ್ತಿ ಗಳಾಗಿ ಶ್ರೀ ಸಿದ್ಧವೀರ ಸ್ವಾಮಿಗಳನ್ನು ನೇಮಿಸಿಕೊಂಡರು. ೧೯೩೦ರಲ್ಲಿ ಹಾನಗಲ್ಲು ಶ್ರೀ ಕುಮಾರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಗುರುಗಳ ಅಗಲಿಕೆಯಿಂದ ನೊಂದು ಆರು ವರ್ಷಗಳ ಕಾಲ ದೀರ್ಘ ಅನುಷ್ಠಾನ ಕುಳಿತು ಸಿದ್ಧಿ ಸಾಧನೆ ಪಡೆದರು. ಗೋಣಿಬೀಡು ಮಠಕ್ಕೆ ಉತ್ತರಾಧಿಕಾರಿಗಳಾಗಿ ಆಯ್ಕೆಯಾಗಿ, ಶಿವಯೋಗ ಮಂದಿರಕ್ಕೆ ಬಂದ ಶ್ರೀ ಸಿದ್ಧವೀರ ಸ್ವಾಮಿಗಳು ಕಾರಣಾಂತರದಿಂದ ಗೋಣಿಬೀಡಿಗೆ ಬರದೆ ಹಾನಗಲ್ಲಿನಲ್ಲಿ ಉಳಿದಿರುತ್ತಾರೆ.

ಈ ಸಂದರ್ಭದಲ್ಲಿ ಶಿರಸಿ ತಾಲ್ಲೂಕಿನ ಬನವಾಸಿಯ ಹೊಳೆ ಮಠಕ್ಕೆ ಉತ್ತರಾಧಿಕಾರಿಗಳ ಆಯ್ಕೆ ನಡೆದಿದ್ದು ತಪೋಸಿದ್ಧ ಶ್ರೀ ಸಿದ್ಧವೀರ ಸ್ವಾಮಿಗಳೇ ಸೂಕ್ತ ಉತ್ತರಾಧಿಕಾರಿಗಳೆಂದು ತಿಳಿದು ಅವರ ಮನ ಒಲಿಸಿ ಬನವಾಸಿಗೆ ಸಕಲ ಮರ್ಯಾದೆಗಳೊಂದಿಗೆ ಕರೆದು ತರುತ್ತಾರೆ. ಸಿದ್ಧಯೋಗಿಯಾಗಿದ್ದ ಶ್ರೀ ಸಿದ್ಧವೀರ ಸ್ವಾಮಿಗಳು ಧರ್ಮಕಾರ್ಯ ನಡೆಸಲು ಎಲ್ಲಿದ್ದರೇನಂತೆ ಎಂಬ ಭಾವನೆಯಿಂದ ಗೋಣಿಬೀಡಿನ ಬದಲಿಗೆ ಬನವಾಸಿ ಹೊಳೆ ಮಠದ ಅಧಿಕಾರ ಪಡೆದರು. ೧೧೭ ವರ್ಷ ಬಾಳಿ ಬದುಕಿ ಅನೇಕ ಸಾಧನೆ ಮಾಡಿದ ಗುರುಗಳು ತಮ್ಮ ಜೀವಿತಾವಧಿಯಲ್ಲಿ ಬನವಾಸಿಯಲ್ಲಿ ಇದ್ದುಕೊಂಡೇ, ಗೋಣಿಬೀಡಿನ ಭಕ್ತರ ಇಷ್ಟಾರ್ಥಗಳಿಗೆ ಸ್ಪಂದಿಸುತ್ತಾ ಶೀಲಸಂಪಾದನಾ ಮಠದಲ್ಲಿ ಧಾರ್ಮಿಕ ಚಟುವಟಿಕೆಗಳನ್ನು ನಡೆದು ಕೊಂಡು ಬರುವಂತೆ ಮಾರ್ಗದರ್ಶನ ನೀಡುತ್ತಾ ಬಂದಿರುತ್ತಾರೆ. ನಂತರ ಗೋಣಿಬೀಡು ಭಕ್ತರ ಅಪೇಕ್ಷೆಯಂತೆ ಶ್ರೀ ಚಂದ್ರ ಶೇಖರ ಸ್ವಾಮಿಗಳನ್ನು ಆಶೀರ್ವದಿಸಿ ಉತ್ತರಾಧಿಕಾರಿಗಳನ್ನಾಗಿ ನೇಮಿಸಿರುತ್ತಾರೆ. ಕರ್ತೃ ಗುರುಗಳಾದ ಶ್ರೀ ದೊಡ್ಡ ಸಿದ್ಧವೀರ ಸ್ವಾಮಿಗಳ ಅಪೇಕ್ಷೆಯಂತೆ ಶರಣತತ್ತ್ವ ಹೆಚ್ಚು ಪ್ರಚಾರಕ್ಕೆ ಬಂದು, ವೀರಶೈವ ಧರ್ಮ ಗಟ್ಟಿಗೊಳ್ಳಲು ಸಹಾಯಕವಾಗುವಂತೆ ಮಾಡಲು ಬನವಾಸಿ ಹೊಳೆಮಠದ ಶ್ರೀ ಸಿದ್ಧವೀರ ಸ್ವಾಮಿಗಳು ೧೯೬೭ ರಲ್ಲಿ ಬಸವಜಯಂತಿ ದಿನದಂದು ಶ್ರೀ ಚಂದ್ರಶೇಖರ ಸ್ವಾಮಿಗಳಿಗೆ ಚಿನ್ಮಯ ದೀಕ್ಷೆಕೊಟ್ಟು ಅಧಿಕಾರಕ್ಕೆ ತಂದರು.

ನಿರಂತರ ಸೇವೆ: ಶ್ರೀ ಚಂದ್ರಶೇಖರ ಸ್ವಾಮಿಗಳು ಪಟ್ಟಾಧಿಕಾರ ಪಡೆದಂದಿನಿಂದ ನಿರಂತರವಾಗಿ ಮೂವತ್ತೆರಡು ವರ್ಷಗಳ ಕಾಲ ಧಾರ್ಮಿಕ ಹಾಗೂ ಸಾಮಾಜಿಕ ವಾಗಿ ಸ್ಪಂದಿಸುತ್ತಾ ವೀರಶೈವ ಧರ್ಮವನ್ನು ಪ್ರಚಾರಕ್ಕೆ ತಂದು, ಬಸವಾದಿ ಪ್ರಮಥರ ತತ್ತ್ವಗಳನ್ನು ಅನುಷ್ಠಾನಗೊಳಿಸಿದರು. ಜೊತೆಗೆ ಮಠದ ಸರ್ವಾಂಗೀಣ ಅಭಿವೃದ್ಧಿಗೆ ಕಂಕಣಕಟ್ಟಿ ದುಡಿದರು. ಬೇಸಾಯಕ್ಕೆ ಯೋಗ್ಯವಾದ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡು ಮಠದ ಅಭಿವೃದ್ಧಿಯ ಮೆಟ್ಟಿಲನ್ನು ಕಟ್ಟತೊಡಗಿ, ಮಠದ ಶ್ರೇಯೋಭಿವೃದ್ಧಿಗೆ ಕಾರಣ ಕರ್ತರಾಗಿದ್ದಾರೆ.

ಗೋಣಿಬೀಡು ಶೀಲಸಂಪಾದನಾ ಮಠದ ಕೀರ್ತಿಯನ್ನು ನಾಡಿನ ಎಲ್ಲಾ ಭಾಗಕ್ಕೆ ಮುಟ್ಟಿಸಿದ ಶ್ರೀ ಚಂದ್ರಶೇಖರ ಸ್ವಾಮಿಗಳು ಕಡೂರು ತಾಲ್ಲೂಕಿನ ಗಿರಿಯಾಪುರದ ಜಂಗಮಮೂರ್ತಿ ಶ್ರೀ ಚಂದ್ರಶೇಖರಯ್ಯನವರ ಪುತ್ರ ಸಿದ್ಧಲಿಂಗ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ಆಯ್ಕೆಮಾಡಿಕೊಂಡು ೧೯೯೫ ರ ಫೆಬ್ರವರಿ ಹದಿನೇಳರಂದು ಕಪ್ಪನಹಳ್ಳಿ ಸ್ವಾಮಿಗಳಿಂದ ಚಿನ್ಮಯ ದೀಕ್ಷೆಕೊಡಿಸಿ ಪಟ್ಟಾಧಿಕಾರಕ್ಕೆ ತಂದರು. ಮಠದ ಸರ್ವಜವಾಬ್ದಾರಿಯನ್ನು ಕರ ಕಮಲಸಂಜಾತ ಶ್ರೀ ಸಿದ್ಧಲಿಂಗ ಸ್ವಾಮಿಗಳಿಗೆ ನೀಡಿ ಪರಂಪರೆಗೆ ಚ್ಯುತಿ ಬರದಂತೆ ಮುನ್ನಡೆಸಲು ಆಶೀರ್ವದಿಸಿ ೧೯೯೫ ರ ಮಾರ್ಚ್‌ನಲ್ಲಿ ಲಿಂಗೈಕ್ಯರಾದರು.

ಶ್ರೀ ಸಿದ್ಧಲಿಂಗ ಸ್ವಾಮಿಗಳು ಪ್ರಗತಿಪರ ಚಿಂತಕರಾಗಿದ್ದು, ಮಠದಲ್ಲಿ ಧಾರ್ಮಿಕ ಚಟುವಟಿಕೆ ಚುರುಕುಗೊಳ್ಳಲು ಕಾರ್ಯ ಯೋಜನೆಯನ್ನು ರೂಪಿಸಿಕೊಂಡಿದ್ದಾರೆ. ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕೆಂಕೆರೆ ಗ್ರಾಮದ ಗೋಸಲ ಚನ್ನಬಸವೇಶ್ವರರ ಗವಿಯಲ್ಲಿ ಇಪ್ಪತ್ತೊಂದು ದಿನಗಳಕಾಲ ಅನುಷ್ಠಾನ ಕುಳಿತು ಗವಿಪ್ರವೇಶ ಮಾಡಿದ್ದಾರೆ. ಕಳೆದ ೬೦೦ ವರ್ಷಗಳಿಂದ ಯಾರೂ ಕುಳಿತುಕೊಳ್ಳದಿದ್ದ ಬೆಳ್ಳಿ ಪಲ್ಲಕ್ಕಿಯಲ್ಲಿ ಕುಳಿತು ಉತ್ಸವ ಮಾಡಿಸಿಕೊಂಡು ಭಕ್ತರ ಮನವನ್ನು ಗೆದ್ದು ಬಂದಿದ್ದಾರೆ.

ಪಾದಯಾತ್ರೆ: ಗವಿಪ್ರವೇಶ, ಅಡ್ಡಪಲ್ಲಕ್ಕಿ ಉತ್ಸವ ನಡೆದ ಮೇಲೆ ಧರ್ಮ ಜಾಗೃತಿಗಾಗಿ ಕೆಂಕೆರೆ ಗವಿಯಿಂದ ಎಡೆಯೂರಿಗೆ ಭಕ್ತರನ್ನು ಜತೆಗೂಡಿಸಿಕೊಂಡು ಪಾದಯಾತ್ರೆ ಮಾಡಿದ್ದಾರೆ. ಈ ರೀತಿ ಶ್ರೀ ಸಿದ್ಧಲಿಂಗ ಸ್ವಾಮಿಗಳು ಭಕ್ತರ ಹತ್ತಿರ ಹೋಗಿ ವೀರಶೈವಧರ್ಮವನ್ನು ಪ್ರಚಾರಗೊಳಿಸಿ, ಧಾರ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿದ್ದಾರೆ. ಮಠವನ್ನು ಆರ್ಥಿಕವಾಗಿ ಸದೃಢಗೊಳಿಸಿದ್ದಾರೆ. ಮಠದ ಆಸ್ತಿಯಾಗಿ ಹದಿನೈದು ಎಕರೆ ನೀರಾವರಿ ಜಮೀನಿದ್ದು ಉತ್ಪನ್ನ ತೆಗೆಯಲಾಗುತ್ತಿದೆ.

ಗುರು -ವಿರಕ್ತ ಸಂಬಂಧ: ಗುರು-ವಿರಕ್ತ ಮಠಗಳಲ್ಲಿ ಸಮಾನ ಸಂಬಂಧ ಇಟ್ಟುಕೊಂಡಿರುವ ಈ ಮಠ, ವೀರಶೈವ ಧರ್ಮದ ಉದ್ಧಾರಕ್ಕೆ ವಿಂಗಡಣೆ ಸಲ್ಲದು,ಎಲ್ಲಾ ವಿಚಾರದಲ್ಲೂ ಸಮನ್ವಯ ತರಬೇಕು ಎಂಬ ಸೂತ್ರ ಇಟ್ಟುಕೊಂಡಿದೆ. ಈ ಸಮನ್ವಯ ಸಾಧನೆಯ ಗುರುತಾಗಿ ಈ ವಿರಕ್ತ ಮಠದಲ್ಲಿ ಕ್ಷೇತ್ರಪಾಲಕನಾಗಿ ವೀರಭದ್ರ ನೆಲೆಸಿದ್ದಾನೆ.ವೀರಭದ್ರನ ದೇವಾಲಯವನ್ನು ಗುರು-ವಿರಕ್ತರ ಸಮ್ಮುಖದಲ್ಲಿ ಶ್ರೀ ಸಿದ್ಧಲಿಂಗ ಸ್ವಾಮಿಗಳ ಪಟ್ಟಾಧಿಕಾರದ ಸಂದರ್ಭದಲ್ಲಿ ಉದ್ಘಾಟನೆಗೊಳಿಸಲಾಯಿತು.

ಶಾಖಾಮಠಗಳು: ಈ ಮಠಕ್ಕೆ ಸಂಬಂಧಿಸಿದಂತೆ ಗೋಣಿಬೀಡು ಊರೊಳಗೆ ಒಂದು ಮಠ ಇದೆ. ಅಲ್ಲದೆ ಇಲ್ಲಿಗೆ ಸಮೀಪದ ಶಂಕರ ಘಟ್ಟದಲ್ಲಿ ಒಂದು ಶಾಖಾಮಠ ಇತ್ತು. ಆದರೆ ಈಗ ಅದು ಪೂರ್ಣ ಅಸ್ತಿತ್ವವನ್ನು ಕಳೆದುಕೊಂಡಿದೆ. ಶಿರಸಿಯ ಬನವಾಸಿ ಹೊಳೆ ಮಠ ಮತ್ತು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ಎಣ್ಣೆಹೊಳೆ ಮಠ, ನಂದಿಯ ನುಲಿಯ ಚಂದಯ್ಯ ಮಠಕ್ಕೆ ಆಡಳಿತಾತ್ಮಕ ಸಂಬಂಧ ಇಲ್ಲದಿದ್ದರೂ ಭಾವನಾತ್ಮಕ ಸಂಬಂಧ ಇದೆ. ಅಲ್ಲದೆ ದಾವಣಗೆರೆ ಜಿಲ್ಲೆಯ ನ್ಯಾಮತಿಯಲ್ಲಿ ಭಕ್ತರು ಇದ್ದು ಭಕ್ತಿಯ ಸಂಕೇತಕ್ಕಾಗಿ ಮೂರುಎಕರೆ ಗದ್ದೆಯನ್ನು ಮಠಕ್ಕೆ ಉಂಬಳಿಯಾಗಿ ನೀಡಿದ್ದಾರೆ. ಈ ಎಲ್ಲಾ ಸಂಬಂಧಗಳನ್ನು ಬಳಸಿಕೊಂಡು ರಚನಾತ್ಮಕ ಕೆಲಸಕ್ಕೆ ಯೋಜನೆಯನ್ನು ಶ್ರೀ ಸಿದ್ಧಲಿಂಗ ಸ್ವಾಮಿಗಳು ಹಮ್ಮಿಕೊಂಡಿದ್ದಾರೆ.

ಭವ್ಯತೆಗೆ ಸಾಕ್ಷಿ: ಹಿಂದೆ ವಿಶಾಲ ವಿನ್ಯಾಸದಲ್ಲಿ ರೂಪಗೊಂಡಿದ್ದ ಮಠವು ಕಾಲನ ಚಕ್ರಕ್ಕೆ ಸಿಕ್ಕಿ ಪೂರ್ಣ ಜೀರ್ಣಗೊಂಡು, ಭವ್ಯತೆಗೆ ಸಾಕ್ಷಿಯಾಗಿ ಈಗ ಬರಿ ಕುರುಹುಗಳನ್ನು ಮಾತ್ರ ತೋರಿಸುತ್ತಿದೆ. ಮೂಲ ಮಠದ ತಳಪಾಯ ಮತ್ತು ಮಠದ ಸುತ್ತ ಅನಾಥವಾಗಿ ಬಿದ್ದಿರುವ ಕೆತ್ತನೆಯ ಕಲ್ಲು ಕಂಭಗಳು, ಶಿಲಾ ವಿಗ್ರಹಗಳು ಸಿಗುತ್ತವೆ. ಮಠದ ಸುತ್ತ ವಿಕೃತಗೊಂಡ ಅನೇಕ ವಿಗ್ರಹಗಳು, ಪಾಣಿಬಟ್ಟಲು ಹಾಗೂ ಶಿಲಾಶಾಸನ ದೊರೆತಿವೆ. ಈ ಆಧಾರದ ಮೇಲೆ ಹನ್ನೆರಡನೆಯ ಶತಮಾನದಲ್ಲಿ ಸ್ಥಾಪನೆಯಾದ ನಂತರ ಉಚ್ಛ್ರಾಯ ಸ್ಥಿತಿಯಲ್ಲಿ ಈ ಮಠವು ಬೆಳೆದಿತ್ತು ಎಂಬುದನ್ನು ನಂಬಬಹುದಾಗಿದೆ.ನೆಲ ಅಗೆಯುವಾಗ ಪ್ರಾಚೀನ ಕಾಲದ ಕಂಚಿನ ಘಂಟೆ, ವಜ್ರಾಯುಧ ಸಿಕ್ಕಿವೆ. ಮಠದಲ್ಲಿ ಏಕ ದಂಡ,ಕಮಂಡಲ,ಕೆತ್ತನೆಯ ಮರದ ಮಂಚ, ರೇಣುಕರ ವಿಗ್ರಹ,ದೇವಿ ವಿಗ್ರಹ ,ತ್ರಿಶೂಲಗಳು ಹಾಗೂ ವೀರಭದ್ರನ ವಿಗ್ರಹಗಳು ಮಠದ ಪಾಳು ಜಾಗದಲ್ಲಿ ದೊರೆತಿವೆ.

ವಿಳಾಸ:ಶ್ರೀ ಮ.ನಿ.ಪ್ರ.ಸಿದ್ಧಲಿಂಗ ಸ್ವಾಮಿಗಳು, ಶ್ರೀ ಶೀಲಸಂಪಾದನಾಮಠ, ಗೋಣಿಬೀಡು,ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಬಿಳಕಿ

ಭದ್ರಾವತಿ ತಾಲ್ಲೂಕಿನ ಬಿಳಕಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಆರು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಬಿಳಕಿ ಗ್ರಾಮದ ಮಧ್ಯಭಾಗದಲ್ಲಿ ಶ್ರೀ ರಂಭಾಪುರಿಪೀಠದ ಶಾಖಾಮಠವಾಗಿ ಪುತ್ರವರ್ಗದ ಪರಂಪರೆಯ ಶ್ರೀಹಿರೇಮಠವು ಸ್ಥಾಪನೆಯಾಗಿ, ಧಾರ್ಮಿಕ ಆಚರಣೆಯ ಕೇಂದ್ರಬಿಂದುವಾಗಿ ರೂಪುಗೊಂಡಿದೆ.ಚಿತ್ರದುರ್ಗ ತಾಲ್ಲೂಕಿನ

ಚಿಳಂಗಿ ಗ್ರಾಮದಲ್ಲಿ ಪರಂಪರೆಯ ಮಠ ಸ್ಥಾಪನೆಯಾಗಿತ್ತು. ಕಾರಣಾಂತರದಿಂದ ಮಠಾಧೀಶ್ವರರು ತಮ್ಮ ಪರಿವಾರ ಸಮೇತ ಈ ನಾಡಿಗೆ ಬಂದು ಇಲ್ಲಿ ನೆಲೆಸಿ ಧಾರ್ಮಿಕ ಆಚರಣೆಗಳನ್ನು ಕೈಗೊಂಡು ಈ ಗ್ರಾಮದಲ್ಲಿ ಮಠ ಸ್ಥಾಪನೆ ಮಾಡಿದ್ದಾರೆ.ಊರಿನ ಧಾರ್ಮಿಕ ಆಚರಣೆಗಳನ್ನು ನಡೆಸುತ್ತಾ ಭಕ್ತರಿಗೆ ಮಾರ್ಗದರ್ಶನ ನೀಡಿ ವೀರಶೈವ ಆಚಾರ ವಿಚಾರಗಳನ್ನು ಬೆಳೆಸತೊಡಗಿದರು.

ಪರಂಪರೆ:
೧. ಷ.ಬ್ರ.ಶ್ರೀ ಗುರುಬಸವ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಗುರುಸಿದ್ಧ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ರಾಚೋಟಿ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಶ್ರೀ ಗುರುಬಸವ ಶಿವಾಚಾರ್ಯ ಸ್ವಾಮಿಗಳ ಅಧಿಕಾರದ ಅವಧಿಯಲ್ಲಿ ಮಠ ಸ್ಥಾಪನೆಯಾಗಿರಬಹುದು ಎಂದು ನಂಬಲಾಗಿದ್ದು, ಇವರ ಅವಧಿಯಲ್ಲಿ ಮಠ ಹೆಚ್ಚು ಪ್ರಚಾರಕ್ಕೆ ಬಂದಿದೆ. ಅಲ್ಲದೆ ಮಠಕ್ಕೆ ಆಸ್ತಿಮಾಡಿ ಮಠ ಸ್ವಾವಲಂಬಿಯಾಗಿ ಬೆಳೆಯಲು ನೆರವಾದರು. ನಂತರ ಬಂದ ಶ್ರೀ ಗುರುಸಿದ್ಧ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿದರು. ಇವರ ಧಾರ್ಮಿಕ ಆಚರಣೆಗೆ ಹಾಗೂ ವಿದ್ವತ್ ಪಾಂಡಿತ್ಯಕ್ಕೆ ಭಕ್ತರು ಆಕರ್ಷಿತ ಗೊಂಡು, ಮಠದ ಅಭಿವೃದ್ಧಿಗೆ ನೆರವಾಗಿ ಗುರುಗಳ ಕೃಪೆಗೆ ಪಾತ್ರರಾಗಿದ್ದರು. ಇವರ ನಂತರ ಮಠವು ಇಪ್ಪತ್ತು ವರ್ಷಗಳ ಕಾಲ ಉತ್ತರಾಧಿಕಾರಿ ಗಳಿಲ್ಲದೆ ಖಾಲಿ ಉಳಿಯಬೇಕಾಯಿತು.

ಪುತ್ರವರ್ಗದ ಸಂಪ್ರದಾಯದ ಈ ಮಠಕ್ಕೆ ಹಿಂದಿನ ಗುರುಗಳ ಸಹೋದರ ಸಂಬಂಧಿ ಶ್ರೀ ರಾಚೋಟಿ ಶಿವಾಚಾರ್ಯ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಲಾಯಿತು. ಶಿಕಾರಿಪುರ ತಾಲ್ಲೂಕಿನ ಸಾಲೂರು ಮಠದಲ್ಲಿ ಸಂಸ್ಕೃತ, ವೇದ ಹಾಗೂ ಆಗಮ ಕಲಿತ ಗುರುಗಳು ತಮ್ಮ ಇಪ್ಪತ್ನಾಲ್ಕನೆಯ ವರ್ಷದಲ್ಲಿ ಮಠದ ಅಧಿಕಾರ ಪಡೆದರು. ೧೯೯೦ರಲ್ಲಿ ಸಾಲೂರು ಗುರುಗಳ ದಿವ್ಯ ಸಾನಿಧ್ಯದಲ್ಲಿ ಪಟ್ಟಾಧಿಕಾರದ ಅನುಗ್ರಹ ಪಡೆದ ಶ್ರೀ ರಾಚೋಟಿ ಸ್ವಾಮಿಗಳು ಮಠದ ಧಾರ್ಮಿಕ ಚಟುವಟಿಕೆ ಗಳನ್ನು ಚುರುಕುಗೊಳಿಸಿ ಭಕ್ತರನ್ನು ಆಕರ್ಷಿಸಿಕೊಳ್ಳತೊಡಗಿದರು. ಅಲ್ಲದೆ ವೀರಶೈವ ಸಿದ್ಧಾಂತದ ಬಗ್ಗೆ ಉಪದೇಶ ಮಾಡುತ್ತಾ ಭಕ್ತರ ಮನೆಮನೆಗೆ ಹೋಗಿ ಧಾರ್ಮಿಕ ಕ್ರಿಯಾದಿಗಳನ್ನು ಪೂರೈಸಿ ಧರ್ಮ ಅನುಷ್ಠಾನಗೊಳಿಸುತ್ತಿದ್ದಾರೆ.

ಗದ್ದುಗೆ: ಹೇಳಿಕೆಯ ಪ್ರಕಾರ ಈಗಿನ ಸ್ವಾಮಿಗಳ ಪಟ್ಟಾಧಿಕಾರ ಹದಿನಾರನೆಯದೆಂದು ಹೇಳಲಾಗುತ್ತಿದೆ. ಆದರೆ ಮಠದಲ್ಲಿ ಇದಕ್ಕೆ ಸಂಬಂಧಪಟ್ಟ ದಾಖಲೆಗಳು ಯಾವುವೂ ಇಲ್ಲ. ಅಲ್ಲದೆ ಮಠದ ಆವರಣದಲ್ಲಿ ಶ್ರೀ ಗುರುಬಸವ ಸ್ವಾಮಿಗಳು ಮತ್ತು ಶ್ರೀ ಗುರುಸಿದ್ಧ ಸ್ವಾಮಿಗಳ ಗದ್ದುಗೆ ಮಾತ್ರ ಸಿಗುತ್ತವೆ.

ವಿಳಾಸ:ಷ.ಬ್ರ. ಶ್ರೀ ರಾಚೋಟಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಬಿಳಕಿ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

❑

ಶಿವಮೊಗ್ಗ ತಾಲ್ಲೂಕು

ಶಿವಮೊಗ್ಗ ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿ ಒಂದಾದ ಶಿವಮೊಗ್ಗ ತಾಲ್ಲೂಕು ಐತಿಹಾಸಿಕವಾಗಿ ಹೆಸರು ಮಾಡಿದೆ. ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಪ್ರಬಲವಾಗಿ ಬೆಳೆದು ಈಗಲೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ. ಪ್ರಸ್ತುತ ಒಂದೇ ಮಠ ಅಸ್ತಿತ್ವದಲ್ಲಿದ್ದು ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಚಟುವಟಿಕೆಗಳಿಂದ ಹೆಸರು ಮಾಡಿದೆ.

ಶಿವಮೊಗ್ಗ

ಜಿಲ್ಲೆಯ ಕೇಂದ್ರ ಸ್ಥಳವಾಗಿರುವ ಶಿವಮೊಗ್ಗವು ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಧಾರ್ಮಿಕವಾಗಿ ಹೆಸರು ಪಡೆದಿದೆ. ಈ ನಗರದಲ್ಲಿ ಶ್ರೀ ಬೆಕ್ಕಿನಕಲ್ಮಠ ಅಸ್ತಿತ್ವದಲ್ಲಿದೆ.

ಬೆಕ್ಕಿನಕಲ್ಮಠ: ಶಿವಮೊಗ್ಗ ನಗರದ ಕೋಟೆಬೀದಿಯಲ್ಲಿರುವ ಬೆಕ್ಕಿನಕಲ್ಮಠ, ಶಿವಮೊಗ್ಗ ಜಿಲ್ಲೆಯ ಧಾರ್ಮಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಯ ಕೇಂದ್ರಬಿಂದುವಾಗಿ ಬೆಳೆದಿದೆ ಎಂದರೆ ಅತಿಶಯೋಕ್ತಿಯಾಗಲಾರದು. ತುಂಗಾನದಿಯ ದಡದಲ್ಲಿ ಸ್ಥಾಪಿತವಾಗಿರುವ ಬೆಕ್ಕಿನ ಕಲ್ಮಠ, ಮುರುಘಾ ಸಮಯಕ್ಕೆ ಸೇರಿದ ವಿರಕ್ತ ಮಠವಾಗಿದೆ. ಈ ಮಠದ ಮೂಲಮಠ ಶಿವಮೊಗ್ಗ ತಾಲ್ಲೂಕಿನ ಎಲವಟ್ಟಿಯಲ್ಲಿ ತುಂಗಾನದಿಯ ದಡದಲ್ಲಿ ಸ್ಥಾಪಿತವಾಗಿದೆ. ಹನ್ನೆರಡನೆಯ ಶತಮಾನದ ಅನುಭವ ಮಂಟಪದ ಶೂನ್ಯ ಸಿಂಹಾಸನಾಧೀಶ್ವರ ಅಲ್ಲಮ ಪ್ರಭುಗಳ ಅಪ್ಪಣೆ ಮೇರೆಗೆ ಶ್ರೀ ಗಂಗಾಧರೇಶ್ವರ ಸ್ವಾಮಿಗಳು ದಕ್ಷಿಣಾಭಿಮುಖವಾಗಿ ಬಂದು ಜಮದಗ್ನಿ ಋಷಿಗಳು ತಪಸ್ಸು ಮಾಡಿದ ಗುಹೆಯಲ್ಲಿ ಅನುಷ್ಠಾನಗೊಂಡಿರುತ್ತಾರೆ. ನಂತರ ಈ ಜಾಗದಲ್ಲಿ ಮಠವನ್ನು ಸ್ಥಾಪನೆ ಮಾಡಿರುತ್ತಾರೆ. ಬೆಕ್ಕಿನ ಕಣ್ಣಿನ ಬಣ್ಣವನ್ನು ಹೋಲುವ ಎತ್ತರದ ಬಂಡೆಗಳ ಮಧ್ಯೆರಚಿತವಾದ ಗುಹೆಯಲ್ಲಿ ಮಠ ನಿರ್ಮಿತವಾಗಿರುವುದರಿಂದ ಈ ಮಠಕ್ಕೆ 'ಶ್ರೀ ಬೆಕ್ಕಿನಕಲ್ಮಠ' ಎಂದು ಹೆಸರು ಬಂದಿರಬಹುದು.

ಅಲ್ಲಮ ಪ್ರಭುಗಳ ಖಾಸಾ ಶಿಷ್ಯರಿಂದ ಪ್ರಾರಂಭವಾದ ಈ ಮಠ ಕಾರಣಾಂತರದಿಂದ ಶಿವಮೊಗ್ಗ ನಗರಕ್ಕೆ ಸ್ಥಳಾಂತರವಾಗಿ ಸ್ಥಾಪನೆಗೊಂಡು ಮೂಲ ಹೆಸರನ್ನೇ ಉಳಿಸಿಕೊಂಡು ಬಂದಿದೆ. ಇಂತಹ ಇತಿಹಾಸ ಪ್ರಸಿದ್ಧವಾದ ಮಠ ನಂತರ ಸಾಗರ ತಾಲ್ಲೂಕಿನ ಆನಂದಪುರಂ ಮಠದ ಇತಿಹಾಸದಜತೆ ಸೇರಿ ಮಹತ್ತರವಾದ ಸ್ಥಾನ ಪಡೆಯಿತು. ಕೆಳದಿಯ ಸೋಮಶೇಖರ ನಾಯಕನ ಕಾಲದಲ್ಲಿ ಮಠವನ್ನು ಪುನಃ ಶಿವಮೊಗ್ಗದಿಂದ ಆನಂದಪುರಂಗೆ ಸ್ಥಳಾಂತರಿಸಲಾಯಿತು.

ಪರಂಪರೆ: ಶಿವಮೊಗ್ಗದ ಬೆಕ್ಕಿನಕಲ್ಮಠದ ಪರಂಪರೆಯಲ್ಲಿ ಆರು ಜನ ಗುರುಗಳ ಹೆಸರನ್ನು ದಾಖಲಿಸಬಹುದು.ನಂತರ ಈ ಪರಂಪರೆಯ ಕೊಂಡಿ ಏಳನೆಯ ತಲೆಮಾರಿನಿಂದ ಆನಂದಪುರಂನಲ್ಲಿ ಬೆಳೆಯುತ್ತದೆ. ಇಲ್ಲಿನ ಗುರುಪರಂಪರೆಯನ್ನು ಅವರ ಜೀವಿತ ಅವಧಿಯ ಕಾಲಮಾನದೊಂದಿಗೆ ಗುರುತಿಸಬಹುದಾಗಿದೆ.

೧. ಜಗದ್ಗುರು ಶ್ರೀ ಮ.ನಿ.ಪ್ರ. ಗಂಗಾಧರಸ್ವಾಮಿಗಳು - ಕ್ರಿ.ಶ. ೧೨೦೦
೨. ಜಗದ್ಗುರು ಶ್ರೀ ಮ.ನಿ.ಪ್ರ. ಮುರುಘಿ ಶಾಂತವೀರಸ್ವಾಮಿಗಳು - ಕ್ರಿ.ಶ. ೧೩೬೦
೩. ಜಗದ್ಗುರು ಶ್ರೀ ಮ.ನಿ.ಪ್ರ. ಮಹಾಂತಸ್ವಾಮಿಗಳು - ಕ್ರಿ.ಶ. ೧೪೫೦
೪. ಜಗದ್ಗುರು ಶ್ರೀ ಮ.ನಿ.ಪ್ರ. ಹಾಲಾಸ್ಯಮಹಾಸ್ವಾಮಿಗಳು - ಕ್ರಿ.ಶ. ೧೬೨೦
೫. ಜಗದ್ಗುರು ಶ್ರೀ ಮ.ನಿ.ಪ್ರ. ಮುದ್ವೀರಸ್ವಾಮಿಗಳು - ಕ್ರಿ.ಶ. ೧೬೫೦
೬. ಜಗದ್ಗುರು ಶ್ರೀ ಮ.ನಿ.ಪ್ರ. ಇಮ್ಮಡಿ ಮಹಾಂತೇಶಸ್ವಾಮಿಗಳು - ಕ್ರಿ.ಶ. ೧೬೮೦

ಈ ರೀತಿ ಮಠದ ಪರಂಪರೆಯು ಬೆಳೆದು ಆನಂದಪುರಂಗೆ ಸ್ಥಳಾಂತರಗೊಂಡಿದೆ. ಇತ್ತೀಚಿನ ದಿನಗಳಲ್ಲಿ ಶಿವಮೊಗ್ಗದ ಬೆಕ್ಕಿನ ಕಲ್ಮಠದ ಅಸ್ತಿತ್ತ್ವ ಹೋಗಬಾರದೆಂಬ ಉದ್ದೇಶದಿಂದ ಆನಂದಪುರಂನ ಮಠಾಧೀಶ್ವರರು ಎರಡು ಕಡೆಗೂ ಸಮಾನ ಪ್ರಾಮುಖ್ಯತೆ ಕೊಟ್ಟು ಆಡಳಿತವನ್ನು ನಡೆಸುತ್ತಾ ಅಭಿವೃದ್ಧಿ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಅಲ್ಲದೆ ಮಠದ ಭಕ್ತರನ್ನು ಹೆಚ್ಚಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದಾರೆ.

ಆನಂದಪುರಂನ ಜಗದ್ಗುರು ಮುರುಘರಾಜೇಂದ್ರ ಸಂಸ್ಥಾನ ಮಠದ ವತಿಯಿಂದ ಪ್ರಾರಂಭವಾದ ಶಿಕ್ಷಣ ಸಂಸ್ಥೆಯ ಮುಖ್ಯ ಕಛೇರಿ, ೧೯೮೫-೮೬ನೆಯ ಸಾಲಿನಲ್ಲಿ ಪ್ರಾರಂಭವಾದ ಮಲೆನಾಡ ವೀರಶೈವ ಅಧ್ಯಯನ ಸಂಸ್ಥೆ ಹಾಗೂ ೧೯೯೭ರಲ್ಲಿ ಸ್ಥಾಪಿಸಿದ ವೀರಶೈವ ವಧುವರರ ಅನ್ವೇಷಣೆ ಕೇಂದ್ರವನ್ನು ಇಲ್ಲಿನ ಬೆಕ್ಕಿನಕಲ್ಮಠದಲ್ಲಿ ಸ್ಥಾಪಿಸಲಾಗಿದೆ. ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆಯ ವತಿಯಿಂದ ಕೆಳದಿಅರಸರ ಹಾಗೂ ವೀರಶೈವ ಸಂಸ್ಕೃತಿ, ಸಾಹಿತ್ಯ ಮತ್ತು ಐತಿಹಾಸಿಕ ಕ್ಷೇತ್ರಗಳ ಮೇಲೆ ಬೆಳಕು ಚೆಲ್ಲುವಂತಹ ಅನೇಕ ಕಾರ್ಯಕ್ರಮಗಳು ನಡೆಯುತ್ತಿವೆ. ಬೆಕ್ಕಿನಕಲ್ಮಠ ಮತ್ತು ಆನಂದಪುರಂ ಪರಂಪರೆಯು ಒಂದೇ ಆಗಿರುವುದರಿಂದ ಆನಂದಪುರಂ ಮಠದ ಇತಿಹಾಸವೇ ಈ ಮಠದ ಇತಿಹಾಸ ಎಂದು ಹೇಳಬಹುದು.

ಅಭಿವೃದ್ಧಿ: ಬೆಕ್ಕಿನಕಲ್ಮಠದ ಆಡಳಿತ ನೋಡಿಕೊಳ್ಳುತ್ತಿರುವ ಶ್ರೀ ಜಗದ್ಗುರು ಮಲ್ಲಿಕಾರ್ಜುನ ಮುರುಘ ರಾಜೇಂದ್ರ ಸ್ವಾಮಿಗಳು ಈ ಮಠದ ಆವರಣದಲ್ಲಿ ಸಂಸ್ಕೃತ ಪಾಠಶಾಲೆ, ಸಂಸ್ಕೃತ ಕಾಲೇಜು, ಕನ್ನಡ ಹಿರಿಯ ಪ್ರಾಥಮಿಕ ಪಾಠಶಾಲೆ, ಪದವಿ ಪೂರ್ವ ಕಾಲೇಜು ನಡೆಸುತ್ತಿದ್ದು ಮಠದ ಮುಂಭಾಗದಲ್ಲಿದ್ದ ನಿವೇಶನದಲ್ಲಿ ವಾಣಿಜ್ಯ ಮಳಿಗೆಗಳು, ಕಲ್ಯಾಣ ಮಂಟಪವನ್ನು ನಿರ್ಮಿಸಿದ್ದಾರೆ.

ಗುರುಗಳು ಧಾರ್ಮಿಕ ಹಾಗೂ ಸಾಹಿತ್ಯಿಕವಾಗಿ ಜನರನ್ನು ಜಾಗೃತಗೊಳಿಸುತ್ತಿದ್ದಾರೆ. ಪ್ರತಿವರ್ಷ ಐತಿಹಾಸಿಕವಾಗಿ ಬೆಳಕು ಚಲ್ಲುವಂತಹ ಅನೇಕ ವಿಷಯಗಳ ಬಗ್ಗೆ ವಿಚಾರಗೋಷ್ಠಿಗಳನ್ನು ಹಮ್ಮಿಕೊಳ್ಳಲಾಗುತ್ತಿವೆ. ಪ್ರತಿ ಶ್ರಾವಣಮಾಸದಲ್ಲಿ ವಿಶೇಷ ಪೂಜೆಯ ಜತೆ ನಗರದ ವಿವಿಧ ಬಡಾವಣೆಗಳಲ್ಲಿ ವೀರಶೈವ ಸಾಹಿತ್ಯದ ಪ್ರಚಾರ ಆಂದೋಲನ ಹಮ್ಮಿಕೊಳ್ಳಲಾಗುತ್ತಿದೆ. ಅಲ್ಲದೆ ಪ್ರತಿ ಹುಣ್ಣಿಮೆಯ ದಿನ ಶಿವಾನುಭವ ಗೋಷ್ಠಿಯನ್ನು ಸತತವಾಗಿ ನಡೆಸುತ್ತಾ ಬಂದಿರುವುದು ಧಾರ್ಮಿಕ, ಸಾಹಿತ್ಯಿಕ ವಿಚಾರಗಳಲ್ಲಿ ಇಲ್ಲಿನ ಧರ್ಮ ಗುರುಗಳಿಗಿರುವ ಕಾಳಜಿಯನ್ನು ತೋರಿಸುತ್ತದೆ.

ವಿಳಾಸ: ಶ್ರೀ ಮ.ನಿ.ಪ್ರ. ಜಗದ್ಗುರು ಮಲ್ಲಿಕಾರ್ಜುನ ಮುರುಘ ರಾಜೇಂದ್ರ ಸ್ವಾಮಿಗಳು, ಶ್ರೀ ಬೆಕ್ಕಿನಕಲ್ಮಠ, ಕೋಟೆಬೀದಿ, ಶಿವಮೊಗ್ಗ.

❑

ಶಿಕಾರಿಪುರ ತಾಲ್ಲೂಕು

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕು ಐತಿಹಾಸಿಕವಾಗಿ ಹೆಸರು ಮಾಡಿದಷ್ಟೇ ಧಾರ್ಮಿಕವಾಗಿಯೂ ಹೆಸರು ಮಾಡಿದೆ. ಹನ್ನೆರಡನೆಯ ಶತಮಾನದಲ್ಲಿ ಅನುಭವಮಂಟಪದಲ್ಲಿ ಹೆಸರು ಮಾಡಿ ವೀರಶೈವಧರ್ಮವನ್ನು ಬೆಳೆಸಲು ಕಾರಣೀಭೂತರಾದ ಪ್ರಮುಖರಲ್ಲಿ ಅಕ್ಕಮಹಾದೇವಿ ಮತ್ತು ಅಲ್ಲಮಪ್ರಭುಗಳು ಈ ತಾಲ್ಲೂಕಿನವರೇ ಎಂಬುದು ಒಂದು ಹೆಗ್ಗಳಿಕೆ. ಇಲ್ಲಿ ವೀರಶೈವಧರ್ಮ ಪ್ರಮುಖ ಧರ್ಮವಾಗಿ ಬೆಳೆದು ಈ ತನಕವೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬೆಳೆದು ಬಂದಿದೆ. ಪ್ರಸ್ತುತ ಹನ್ನೆರಡು ಮಠಗಳು ಇಲ್ಲಿ ಅಸ್ತಿತ್ವದಲ್ಲಿವೆ.

ಕಪ್ಪನಹಳ್ಳಿ-ಕಾಳೇನಹಳ್ಳಿ

ಶಿಕಾರಿಪುರ ತಾಲ್ಲೂಕಿನ ಕಪ್ಪನಹಳ್ಳಿ-ಕಾಳೇನಹಳ್ಳಿ ಮಠವು (ಶಿವಯೋಗಾಶ್ರಮ) ತಾಲ್ಲೂಕು ಕೇಂದ್ರದಿಂದ ಹತ್ತೊಂಬತ್ತು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಶಿವಯೋಗಾಶ್ರಮ (ಮಠ)ವು ಅಸ್ತಿತ್ವದಲ್ಲಿದೆ.

ಶಿವಯೋಗಾಶ್ರಮ (ಮಠ): ಕಪ್ಪನಹಳ್ಳಿ-ಕಾಳೇನಹಳ್ಳಿಯಲ್ಲಿ ಸ್ಥಾಪನೆಯಾಗಿರುವ ಶ್ರೀ ಶಿವಯೋಗಾಶ್ರಮ (ಮಠ)ವು ಇಪ್ಪತ್ತನೆಯ ಶತಮಾನದಲ್ಲಿ ಪ್ರಾರಂಭವಾಗಿ ಉಜ್ವಲವಾಗಿ ಬೆಳೆದು ಕಂಗೊಳಿಸುತ್ತಿದೆ. ವೀರಶೈವ ಮಹಾಸಭೆಯ ಸ್ಥಾಪಕರೂ ಹಾಗೂ ಶಿವಯೋಗ ಮಂದಿರ ಸ್ಥಾಪಕರೂ ಆದ ಹಾನಗಲ್ಲು ಶ್ರೀ ಕುಮಾರ ಸ್ವಾಮಿಗಳು, ಶಿವಮೊಗ್ಗ ಜಿಲ್ಲೆಯ ಮಲೆನಾಡು ಪ್ರದೇಶದಲ್ಲಿ ಧರ್ಮಪ್ರಚಾರಕ್ಕೆಂದು ಬಂದಿದ್ದರು. ಆಗ ಭಕ್ತರ ಅಪೇಕ್ಷೆಯಂತೆ ಶಿವಯೋಗಾಶ್ರಮವನ್ನು ಪ್ರಾರಂಭಿಸಬೇಕು ಎಂದು ತೀರ್ಮಾನಿಸಿದರು. ಕುಮದ್ವತಿ, ವೃಷಭಾವತಿ ನದಿಗಳ ಸಂಗಮ ಕ್ಷೇತ್ರದ ಪ್ರಶಾಂತ ಸ್ಥಳದಲ್ಲಿ ೧೯೧೨ ರ ಮಾರ್ಚ್ ಹತ್ತರಂದು ಶಿವಯೋಗ ಮಂದಿರದ ಶಾಖಾಮಂದಿರವನ್ನು ಸ್ಥಾಪನೆ ಮಾಡಿದರು.

ಈ ರೀತಿ ಭಕ್ತರ ಅಪೇಕ್ಷೆಯ ಮೇರೆಗೆ ಪ್ರಾರಂಭಗೊಂಡ ಶಿವಯೋಗಾಶ್ರಮಕ್ಕೆ ಬಾಗಲಕೋಟೆಯ ಮಹಾದೇವದೇಶಿ ಕರು ಹಾಗೂ ಕೆಲವು ಸಾಧಕರೊಂದಿಗೆ ಬಂದು ನೆಲೆಸುತ್ತಾರೆ. ಆಶ್ರಮ ಪ್ರಾರಂಭಿಸಿದ ಹಾನಗಲ್ಲು ಶ್ರೀ ಕುಮಾರಸ್ವಾಮಿಗಳು ಆಶ್ರಮ ಬೆಳವಣಿಗೆಗಾಗಿ ಬ್ರಿಟಿಷ್ ಸರ್ಕಾರದಿಂದ ದರಖಾಸ್ತಿನಲ್ಲಿ ನಾನೂರು ಎಕರೆ ಕಾಡನ್ನು ಮಂಜೂರು ಮಾಡಿಸಿಕೊಟ್ಟರು. ಈ ಕಾಡಿನಲ್ಲಿ ಶಿವಯೋಗಾಶ್ರಮ ನಳನಳಿಸುವಂತೆ ಬೆಳೆಸುವ ಕಾರ್ಯವನ್ನು ಶ್ರೀ ರುದ್ರಮುನಿ ದೇಶಿಕರಿಗೆ ಬಿಟ್ಟುಕೊಟ್ಟರು. ಈ ರೀತಿ ಹಾನಗಲ್ಲು ಕುಮಾರಸ್ವಾಮಿಗಳ ಕನಸಿನ ಕೂಸಾದ ಈ ಆಶ್ರಮದ ಬೆಳವಣಿಗೆಗೆ ಆನಂದಪುರಂನ ಮುರುಘ ಮಠದ ಮಹಾತಪಸ್ವಿ ಶ್ರೀ ಇಮ್ಮಡಿ ಲಿಂಗ ಸ್ವಾಮಿಗಳು ನೆರವಾಗಿದ್ದಾರೆ. ಅಲ್ಲದೆ ಶ್ರೀ ರುದ್ರಮುನಿ ದೇಶಿಕರಿಗೆ ಚಿನ್ಮಯ ದೀಕ್ಷೆ ಕೊಡಿಸಿ ಆಶೀರ್ವದಿಸಿದ್ದಾರೆ.

ಸಾಧನೆಯ ಹಾದಿ: ನೂತನ ಆಶ್ರಮಕ್ಕೆ ಶ್ರೀ ರುದ್ರಮುನಿ ಸ್ವಾಮಿಗಳಿಗೆ ಪಟ್ಟಾಧಿಕಾರ ಕೊಟ್ಟು ಎಲ್ಲಾ ಮಠಾಧೀಶ್ವರರು ಮಠದಿಂದ ಹೋದ ಮೇಲೆ ಶ್ರೀ ರುದ್ರಮುನಿ ಸ್ವಾಮಿಗಳು ಕಾಡನ್ನು ಕಡಿದು ಕುಟೀರ ಕಟ್ಟಿಕೊಂಡು ಅನುಷ್ಠಾನಕ್ಕೆ ಕುಳಿತರು. ಈ ಸಂದರ್ಭದಲ್ಲಿ ಪ್ರಸಾದಕ್ಕೂ ಗತಿ ಇಲ್ಲದೆ ದನ ಕಾಯುವ ಹುಡುಗರು ತಂದು ಕೊಟ್ಟ ಬೆಲ್ಲ ಸ್ವೀಕರಿಸಿ ಕಾಯಕಯೋಗದಿಂದ ದಿನಗಳನ್ನು ದೂಡುತ್ತಿದ್ದರು. ಕಾಡನ್ನು ಕಡಿದು ಬೇಸಾಯಕ್ಕೆ ಯೋಗ್ಯಗೊಳಿಸಿದರು. ಇದೇ ಸಂದರ್ಭದಲ್ಲಿ ಧಾರ್ಮಿಕ ಆಚರಣೆ ಯಿಂದ ಭಕ್ತರನ್ನು ಆಕರ್ಷಿಸಿಕೊಂಡು ಈ ಸ್ಥಳವನ್ನು ಜಾಗೃತ ಸ್ಥಳವನ್ನಾಗಿ ರೂಪಿಸಲು ಅವರು ಪಟ್ಟ ಶ್ರಮವನ್ನು ಎಲ್ಲಾ ಕಾಲದಲ್ಲಿಯೂ ನೆನೆಯಬೇಕು.

ಶ್ರೀ ರುದ್ರಮುನಿ ಸ್ವಾಮಿಗಳಿಗೆ ಶಿವಯೋಗಾಶ್ರಮದಲ್ಲಿ ತಪಸ್ಸಿನ ಜತೆಗೆ ದನ ಕಾಯುವ ಕೆಲಸ ಬಹಳ ಅಚ್ಚುಮೆಚ್ಚಿಗೆ ಯಾಗಿತ್ತು. ಭಕ್ತರಿಂದ ಕಾಣಿಕೆಯಾಗಿ ಬಂದ ಗೋವುಗಳನ್ನು ಸ್ವೀಕರಿಸಿ ಆಶ್ರಮದಲ್ಲಿ ಗೋಶಾಲೆಯನ್ನು ಸ್ಥಾಪನೆ ಮಾಡಿ ಕ್ಷೀರ ಸಾಗರವನ್ನು ಹರಿಸಿದರು. ಗೋವುಗಳ ಸಗಣಿಯಿಂದ ವಿಭೂತಿ ತಯಾರಿಕೆ ಪ್ರಾರಂಭಿಸಿದರು. ಈ ರೀತಿ ಸಿಕ್ಕ ಹಂತಹಂತವಾಗಿ ಅವಕಾಶಗಳನ್ನು ಬಳಸಿಕೊಂಡು ಆಶ್ರಮವನ್ನು ಸದೃಢಗೊಳಿಸುತ್ತಾ ಬಂದರು. ಗೋಪಾಲನೆಯಿಂದ ವೈದ್ಯ

ಪದ್ಧತಿಗೆ ತಮ್ಮ ಕಾಯಕವನ್ನು ವಿಸ್ತರಿಸಿಕೊಂಡ ಸ್ವಾಮಿಗಳು, ಕಾಡಿನಲ್ಲಿ ಸಿಗುವ ಗಿಡಮೂಲಿಕೆ ಗಳನ್ನು ಸಂಗ್ರಹಿಸಿ ಅವುಗಳನ್ನು ಔಷಧಿಯಾಗಿ ಸಂಸ್ಕರಿಸಿ ಭಾರತೀಯ ವೈದ್ಯ ಪದ್ಧತಿಯನ್ನು ಪ್ರಯೋಗಕ್ಕೆ ತಂದರು. ಆಶ್ರಮದ ಸುತ್ತ ಆವಶ್ಯಕತೆಯಿರುವಷ್ಟು ಮರ ಗಿಡ ಬೆಳೆಸಿ ಸಾಕು ಪ್ರಾಣಿಗಳನ್ನು ಸಾಕಿ ಆಶ್ರಮದ ಕಲ್ಪನೆ ಬರುವಂತೆ ಮಾಡಿದರು. ಕಾಯಕ ಮತ್ತು ಧರ್ಮವನ್ನು ಸಮಾನವಾಗಿ ಆಚರಣೆ ಮಾಡಿ ಸಾಧಕರಾದರು.

ಮತ್ತೊಂದು ಹೆಜ್ಜೆ: ಶ್ರೀ ಹಾನಗಲ್ಲು ಕುಮಾರ ಸ್ವಾಮಿಗಳು ವಹಿಸಿಕೊಟ್ಟ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿ ಕಪ್ಪನಹಳ್ಳಿಗೆ ಸಮೀಪ ಇರುವ ಹಾಗೂ ಕುಮದ್ವತಿ ನದಿಯ ಇನ್ನೊಂದು ದಡದಲ್ಲಿದ್ದ ಕಾಳೇನಹಳ್ಳಿಯಲ್ಲಿ ೧೯೪೭ರಲ್ಲಿ ಮಠ ಸ್ಥಾಪನೆ ಮಾಡಿದರು. ಈ ಮಠ ಕಟ್ಟುವ ಸಂದರ್ಭದಲ್ಲಿ ಹೊಸನಗರ ತಾಲ್ಲೂಕಿನ ಕುಣಿಕಲವತ್ತಿ ಗ್ರಾಮದ ಮನೆಯಲ್ಲಿ ಭೂತ ವಾಸಮಾಡುತ್ತಿದೆ ಎಂಬ ನಂಬಿಕೆಯಿಂದ ವಾಸಮಾಡುವುದನ್ನು ಬಿಟ್ಟಿದ್ದರು. ಈ ಮನೆ ವ್ಯರ್ಥವಾಗಿ ಹೋಗಬಾರದೆಂದು ಕಪ್ಪನಹಳ್ಳಿ ಗುರುಗಳಿಗೆ ಅರ್ಪಿಸಲು ಊರಿನ ಜನ ನಿರ್ಧರಿಸಿದರು. ಗುರುಗಳು ಈ ಮನೆಯನ್ನು ಸ್ವೀಕರಿಸಿ ಇಲ್ಲಿನ ಮರ ಮುಟ್ಟುಗಳನ್ನು ತೆಗೆದುಕೊಂಡು ಕಾಳೇನಹಳ್ಳಿಯ ನೂತನ ಮಠಕ್ಕೆ ಬಳಸಿಕೊಂಡರು. ಅಲ್ಲದೆ ಆ ಮನೆಯ ಪೂಜೆ ಬಾಗಿಲನ್ನು ಯಥಾವತ್ತಾಗಿ ಮಠಕ್ಕೆ ಅಳವಡಿಸಿ ಆ ಮನೆತನದ ಕೊನೆಯ ಕೊಂಡಿಯಾಗಿದ್ದ ಮಾದ ಎಂಬುವನ ಹೆಸರಿನಲ್ಲಿ 'ಮಾದನಬಾಗಿಲು' ಎಂಬ ಹೆಸರಿಟ್ಟು ಆ ಮನೆತನದ ಹೆಸರು ಶಾಶ್ವತವಾಗಿ ನಿಲ್ಲುವಂತೆ ಮಾಡಿರುತ್ತಾರೆ.

ಸಾಧಕಮೂರ್ತಿಕಣ್ಮರೆ: ತಮ್ಮ ಜೀವಿತದ ಅವಧಿಯಲ್ಲಿ ಗರಿಷ್ಠ ಮಟ್ಟದ ಸಾಧನೆಗೈದ ಶ್ರೀ ರುದ್ರಮುನಿದೇಶಿಕರು ಶ್ರೀರೇವಣಸಿದ್ಧ ಸ್ವಾಮಿಗಳಿಗೆ ಚಿನ್ಮಯ ದೀಕ್ಷೆ ಕೊಟ್ಟು ಷಟ್‌ಸ್ಥಲ, ಬ್ರಹ್ಮೋಪದೇಶದೊಂದಿಗೆ ಪಟ್ಟಾಧಿಕಾರ ಅನುಗ್ರಹಿಸಿದರು. ತಮ್ಮ ಮೇಲಿದ್ದ ಪೂರ್ಣ ಜವಾಬ್ದಾರಿಯನ್ನು ಶಿಷ್ಯರಿಗೆ ವಹಿಸಿ ಶಿವಯೋಗಧ್ಯಾನದಲ್ಲಿ ಕಾಲಕಳೆಯತೊಡಗಿದರು. ೧೯೮೮ರ ಅಕ್ಟೋಬರ್ ಇಪ್ಪತ್ತೈದರಂದು ಬೆಳಿಗ್ಗೆ ೯.೩೦ಕ್ಕೆ ಎಂದಿನಂತೆ ಪೂಜಾವಿಧಿಗಳನ್ನು ಮುಗಿಸಿಬಂದ ಗುರುಗಳು ಲಿಂಗದಲ್ಲಿ ಐಕ್ಯಗೊಂಡರು. ಇಂತಹ ಸಾಧನೆಯ ಮೂರ್ತಿ ಕಪ್ಪನಹಳ್ಳಿ-ಕಾಳೇನಹಳ್ಳಿಯನ್ನು ತಪೋಭೂಮಿಯನ್ನಾಗಿ ಮಾಡಿದ ಕಾಯಕ ಯೋಗಿಯಾಗಿ ಇತಿಹಾಸವನ್ನು ಸೇರಿದರು.

ಹೊಸ ಚಿಗುರು: ಕುಮದ್ವತಿ, ವೃಷಭಾವತಿ ನದಿಗಳ ಸಂಗಮ ಕ್ಷೇತ್ರದ ಎರಡು ಕಡೆಯ ನದಿತೀರದಲ್ಲಿ ಸ್ಥಾಪನೆಗೊಂಡ ಮಠಗಳ ಅಧಿಕಾರ ವಹಿಸಿಕೊಂಡ ಶ್ರೀ ರೇವಣಸಿದ್ಧ ಸ್ವಾಮಿಗಳು ಹಿರಿಯ ಗುರುಗಳಷ್ಟೇ ಸಮರ್ಥರಾಗಿ, ಕಾಯಕಯೋಗಿಯಾಗಿ ಮಠವನ್ನು ಸಮರ್ಥವಾಗಿ ಬೆಳೆಸುತ್ತಿದ್ದಾರೆ. ಪ್ರತಿ ತಿಂಗಳು ಶಿವಾನುಭವಗೋಷ್ಠಿ ಏರ್ಪಡಿಸಿ ನಾಡಿನ ಅನೇಕ ವಿದ್ವಾಂಸರು, ತತ್ತ್ವಜ್ಞಾನಿಗಳು, ದಾರ್ಶನಿಕರು ಹಾಗೂ ಮಠಾಧೀಶ್ವರರನ್ನು ಕರೆಸಿ ಧಾರ್ಮಿಕ ಹಾಗೂ ಸಾಹಿತ್ಯ ವಿಚಾರಗಳನ್ನು ಭಕ್ತರಿಗೆ ಉಣಬಡಿಸುತ್ತಿದ್ದಾರೆ. ಸಾರ್ವಜನಿಕರ ಅನುಕೂಲಕ್ಕಾಗಿ ಆರು ಲಕ್ಷ ರೂಪಾಯಿಗಳ ಯೋಜನೆಯ ಕಲ್ಯಾಣ ಮಂಟಪವನ್ನು ಸ್ಥಾಪಿಸಿದ್ದಾರೆ. ವೀರಶೈವ ಪ್ರಕಾಶನ ಸಂಸ್ಥೆ ಸ್ಥಾಪಿಸಿ ಧಾರ್ಮಿಕ ಪುಸ್ತಕಗಳು ಮನೆ ಮನೆ ಮುಟ್ಟುವಂತೆ ಮಾಡುವ ಯೋಜನೆ ಇಟ್ಟುಕೊಂಡಿದ್ದಾರೆ. ಮಠದ ಹಿರಿಯ ಗುರುವಿನ ಚರಿತ್ರೆಯ ಧ್ವನಿಸುರುಳಿ ಮಾಡಿಸಿದ್ದಾರೆ. ಅಲ್ಲದೆ ಶಾಲಾಕಾಲೇಜು ಸ್ಥಾಪಿಸಿ ಗ್ರಾಮಾಂತರ ಬಡ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ನೀಡುವುದರ ಜತೆಗೆ ಬಡ ಮಕ್ಕಳಿಗೆ ಉಚಿತ ಪ್ರಸಾದ ನಿಲಯ ಸ್ಥಾಪನೆಯ ಯೋಜನೆಯನ್ನು ಇಟ್ಟುಕೊಂಡಿದ್ದಾರೆ.

ಸಂಗಮ ಸ್ಥಳದಲ್ಲಿ ಸಂಗಮೇಶ್ವರ ದೇವಸ್ಥಾನ ಇದ್ದು ಇದರ ಪಕ್ಕದಲ್ಲಿ ೧೯೮೮ರಲ್ಲಿ ಲಿಂಗೈಕ್ಯರಾದ ಶ್ರೀ ರುದ್ರಮುನಿ ದೇಶಿಕರ ಗದ್ದುಗೆಗೆ ಮಂಟಪ ಮಾಡಿಸಲಾಗಿದೆ. ಭಾರತೀಯ ಔಷಧಿಯ ಪದ್ಧತಿಯನ್ನು ಪ್ರಚಾರಕ್ಕೆ ತರುವ ದೃಷ್ಟಿಯಿಂದ ಮಠದಲ್ಲಿ ನಡೆಯುವ ಧಾರ್ಮಿಕ ಸಭೆ ಸಮಾರಂಭಗಳಲ್ಲಿ ವೈದ್ಯಕೀಯ ವಿಚಾರದಲ್ಲಿ ವಿಚಾರಗೋಷ್ಠಿಯನ್ನು ಪ್ರತ್ಯೇಕವಾಗಿ ಏರ್ಪಾಡು ಮಾಡಿ ಪ್ರಚಾರಕ್ಕೆ ತರುತ್ತಿದ್ದಾರೆ. ಇಂತಹ ಸಂದರ್ಭಗಳಲ್ಲಿ ಉಚಿತ ವೈದ್ಯಕೀಯ ಶಿಬಿರಗಳನ್ನು ಏರ್ಪಡಿಸಿ ವೈದ್ಯಕೀಯ ಚಿಕಿತ್ಸೆ ಕೊಡಿಸಲಾಗುತ್ತದೆ. ಅನೇಕ ಜನಪರ ಕಾರ್ಯಗಳನ್ನು ಯಾವುದೇ ಫಲಾಪೇಕ್ಷೆ ಇಲ್ಲದೆ ಮಾಡುವ ಸ್ವಾಮಿಗಳು ಬಸವ ತತ್ತ್ವವನ್ನು ಹೆಚ್ಚು ಪ್ರಚಾರಕ್ಕೆ ತರುವಲ್ಲಿ ಯಶಸ್ವಿಯಾಗುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ರೇವಣಸಿದ್ಧಸ್ವಾಮಿಗಳು, ಶ್ರೀ ಶಿವಯೋಗಾಶ್ರಮ, ಕಪ್ಪನಹಳ್ಳಿ-ಕಾಳೇನಹಳ್ಳಿ, ಶಿಕಾರಿಪುರ ತಾ, ಶಿವಮೊಗ್ಗಜಿಲ್ಲೆ.

ಕಣಸೋಗಿ

ಶಿಕಾರಿಪುರ ತಾಲ್ಲೂಕಿನ ಕಣಸೋಗಿಯು ತಾಲ್ಲೂಕು ಕೇಂದ್ರದಿಂದ ಹದಿಮೂರು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀಹೊಂಡದಮಠವು ಅಸ್ತಿತ್ವದಲ್ಲಿದೆ.

ಹೊಂಡದಮಠ: ಕಣಸೋಗಿ ಗ್ರಾಮದಲ್ಲಿ ಶ್ರೀ ರಂಭಾಪುರಿಪೀಠದ ಶಾಖೆಯ ಶ್ರೀ ಹೊಂಡದಮಠವು ಪ್ರಾಚೀನ ಕಾಲದಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತದೆ. ಹಳೆಯದಾದ ಕಟ್ಟಡದಲ್ಲಿ ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿರುವ ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ಕಣಸೋಗಿ ಮತ್ತು ಸುತ್ತಮುತ್ತಲ ಗ್ರಾಮಗಳ ಭಕ್ತರನ್ನು ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡು ಧರ್ಮದ ತಳಹದಿಯ ಮೇಲೆ ಸಮಾಜವನ್ನು ರೂಪಿಸುತ್ತಿದ್ದಾರೆ. ಪುತ್ರವರ್ಗದ ಈ ಮಠವು ತಮ್ಮ ಉತ್ತರಾಧಿಕಾರಿಗಳ ಆಯ್ಕೆಮಾಡಿಕೊಳ್ಳುವ ಪೂರ್ಣ ಸ್ವಾತಂತ್ರ್ಯವನ್ನು ಹೊಂದಿದ್ದು ತಮ್ಮ ಸಂಬಂಧಿಗಳಲ್ಲಿ ಯೋಗ್ಯವಟುವನ್ನು ಆಯ್ಕೆ ಮಾಡಿಕೊಂಡು ವೀರಶೈವ ಧರ್ಮಾನುಸಾರ ಪಂಚಪೀಠಗಳ ಜಗದ್ಗುರುಗಳ ಸಮ್ಮುಖದಲ್ಲಿ ಅಲ್ಲಿನ ಶಾಖಾವರ್ತಿ ಮಠಗಳ ಹಿರಿಯ ಗುರುಗಳ ನೇತೃತ್ವದಲ್ಲಿ ಪಟ್ಟಾಧಿಕಾರ ನೆರವೇರಿಸುತ್ತಾರೆ. ಮಠಕ್ಕೆ ಪೂರ್ವದಿಂದಲೂ ಬಂದ ಆಸ್ತಿಯನ್ನು ಅಭಿವೃದ್ಧಿಪಡಿಸಿ, ಬರುವ ಆದಾಯವನ್ನು ಮಠದ ಅಭಿವೃದ್ಧಿಗೆ ವಿನಿಯೋಗಿಸುತ್ತಾ ಧರ್ಮದ ಜ್ಯೋತಿಯನ್ನು ಬೆಳಗಿಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶಿವಾನಂದ ಶಿವಾಚಾರ್ಯಸ್ವಾಮಿಗಳು, ಶ್ರೀಹೊಂಡದಮಠ, ಕಣಸೋಗಿ, ಶಿಕಾರಿಪುರ ತಾ,ಶಿವಮೊಗ್ಗ ಜಿಲ್ಲೆ.

ತೊಗರ್ಸಿ

ಶಿಕಾರಿಪುರ ತಾಲ್ಲೂಕಿನ ತೊಗರ್ಸಿ ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಹನ್ನೊಂದು ಕಿ.ಮೀ.ದೂರದಲ್ಲಿದೆ. ಕರ್ನಾಟಕದ ಶ್ರೀಶೈಲ ಎಂದು ಖ್ಯಾತಿ ಪಡೆದ ತೊಗರ್ಸಿಯು ಧರ್ಮಜಾಗೃತ ಸ್ಥಳವಾಗಿದೆ. ಶ್ರೀಶೈಲದ ಗಿರಿಮಲ್ಲಯ್ಯ ಭಕ್ತರಿಗಾಗಿ ತೊಗರ್ಸಿ ಗಿರಿಯಲ್ಲಿ ಬಂದು ನೆಲೆಸಿದ ಪುರಾಣ ಸ್ಥಳ ಇದಾಗಿದ್ದು, ಮಲ್ಲಿಕಾರ್ಜುನ ಹಾಗೂ ಭ್ರಮರಾಂಬ ದೇವಾಲಯಗಳು ಶ್ರೀಶೈಲದಷ್ಟೇ ಖ್ಯಾತಿ ಪಡೆದಿವೆ. ಬನವಾಸಿಯ ಮಾಹೆಯು ಅಲ್ಲಮ ಪ್ರಭುವನ್ನು ಹಿಂಬಾಲಿಸುತ್ತಾ ಬಂದ ಸಂದರ್ಭದಲ್ಲಿ 'ತೊಲಗು ಅರಸಿ' ಎಂದು ಹೇಳಿದ ಸ್ಥಳವೇ ಇಂದು 'ತೊಗರ್ಸಿ'ಯಾಗಿ ಬೆಳೆದಿದೆ ಎಂದು ಹೇಳಲಾಗುತ್ತದೆ. ಇಂತಹ ಪುರಾಣ ಪ್ರಸಿದ್ಧ ಸ್ಥಳದಲ್ಲಿ ಕೆಳದಿ ಅರಸರ ಕಾಲದಲ್ಲಿ ಸ್ಥಾಪನೆಯಾದ ಶ್ರೀ ಪಂಚವಣಿಗೆಮಠ ಮತ್ತು ಶ್ರೀ ಮಳೆಮಠ ಎಂಬ ಎರಡು ಮಠಗಳು ಮಲ್ಲಿಕಾರ್ಜುನ ಮತ್ತು ಭ್ರಮರಾಂಬ ದೇವಾಲಯದ ಎಡಬಲಗಳಲ್ಲಿ ಸ್ಥಾಪನೆಯಾಗಿವೆ.

ಮಳೆಮಠ: ಮಲ್ಲಿಕಾರ್ಜುನ ಮತ್ತು ಭ್ರಮರಾಂಬ ದೇವಸ್ಥಾನದ ಬಲಬದಿಯಲ್ಲಿ ಶ್ರೀ ಮಳೆಮಠವು ಸ್ಥಾಪನೆಯಾಗಿದೆ. ಮಳೆ ಸ್ವಾಮಿಗಳು ಎಂದು ಪ್ರಸಿದ್ಧಿಯಾಗಿದ್ದ ಶಿವಯೋಗಿಯೊಬ್ಬರಿಂದ ಸ್ಥಾಪನೆಯಾದ ಕಾರಣ ಈ ಮಠಕ್ಕೆ 'ಶ್ರೀ ಮಳೆಮಠ' ಎಂದು ಹೆಸರು ಬರಲು ಕಾರಣವಾಯಿತು. ಆಂಧ್ರಪ್ರದೇಶದ ಶ್ರೀಶೈಲಕ್ಕೆ ಹೋಗಿ ಬರುವುದೇ ಒಂದು ದುಸ್ತರವಾಗಿದ್ದ ಆ ಕಾಲದಲ್ಲಿ ಮಲ್ಲಯ್ಯನ ದರ್ಶನಕ್ಕೆ ಕಾಡು ಮೇಡು ಸುತ್ತಿ, ಕಳ್ಳ ಕಾಕರ, ಕಾಡುಮೃಗಗಳ ಬಾಯಿಗೆ ತುತ್ತಾಗಿ ಅದೆಷ್ಟೋ ಭಕ್ತರು ಕಣ್ಮರೆಯಾಗುತ್ತಿದ್ದರು. ಇದನ್ನು ಅರಿತ ಮಳೆ ಮಠದ ಮೂಲಕರ್ತೃಗಳು ಶ್ರೀಶೈಲ ಗಿರಿಗೆ ಹೋಗಿ ತಪಸ್ಸು ಮಾಡಿ ಮಲ್ಲಯ್ಯನನ್ನು ಒಲಿಸಿಕೊಂಡು ಭಕ್ತರಿಗಾಗಿ ತೊಗರ್ಸಿಗಿರಿಗೆ ಬಂದು ನೆಲೆಸಬೇಕೆಂದು ಹಠಹಿಡಿದರು. ಶಿವಯೋಗಿಗಳ ಭಕ್ತಿಗೆ ಮೆಚ್ಚಿ ತೊಗರ್ಸಿಗಿರಿಗೆ ಬಂದು ಮಲ್ಲಯ್ಯ ನೆಲೆಸಿದನೆಂಬ ಜನಪದ ಕಥೆ ಈ ಭಾಗದಲ್ಲಿ ಜನಜನಿತವಾಗಿದೆ. ಅಲ್ಲದೆ ಈ ಕಥೆಗೆ ಪೂರಕವೆಂಬಂತೆ ದೇವಸ್ಥಾನದ ಶಿಲಾಶಾಸನದಲ್ಲಿಯೂ ಈ ಉಲ್ಲೇಖ ಬರುತ್ತದೆ.

ಭಕ್ತರಿಗಾಗಿ ದೇವರನ್ನೇ ಕರೆತಂದು ಈ ಪುಣ್ಯ ಸ್ಥಳದಲ್ಲಿ ನೆಲೆಸುವಂತೆ ಮಾಡಿದ ಮಹಿಮಾ ಪುರುಷ ಸ್ಥಾಪನೆ ಮಾಡಿದ ಈ ಮಳೆ ಮಠವು ಉಜ್ಜಯಿನಿ ಶಾಖಾ ಮಠವಾಗಿ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಮಲ್ಲಿಕಾರ್ಜುನ, ಭ್ರಮರಾಂಬ ದೇವಾಲಯದ ಪೂಜಾಕಾರ್ಯದ ಉಸ್ತುವಾರಿ ನೋಡಿಕೊಳ್ಳುವುದಲ್ಲದೆ ವಿಶೇಷ ಪೂಜೆ ಜೊತೆಗೆ, ಜಾತ್ರೆ ಸಂದರ್ಭದಲ್ಲಿ ಈ ಮಠವು ಬಾಗಿಯಾಗಿ ಶಾಸ್ತ್ರೋಕ್ತ ವಿಧಿವಿಧಾನಗಳನ್ನು ಮಾಡಿಕೊಡುತ್ತಾ ಬಂದಿದೆ.

ಪರಂಪರೆ: ಇಂತಹ ಪುರಾಣ ಪ್ರಸಿದ್ಧ ಮಠದಲ್ಲಿ ಹದಿನಾರು ಗದ್ದುಗೆಗಳು ಸಿಕ್ಕಿದ್ದು ನಾಡಿನ ಬೇರೆ ಕಡೆ ಕೆಲವು ಗದ್ದುಗೆಗಳು ಇರುವ ಬಗ್ಗೆ ಮಾಹಿತಿ ಇವೆ ಎಂದು ಈ ಮಠದ ಮಠಾಧಿಪತಿಗಳು ಅಭಿಪ್ರಾಯಿಸುತ್ತಾರೆ. ಅಲ್ಲದೆ ಈ ಮಠದ ಪರಂಪರೆಯಲ್ಲಿ ಬರುವ ಮಠಾಧೀಶ್ವರರ ಹೆಸರು ಒಂದೇ ಹೆಸರಿನಿಂದ ಸಂಭೋದಿಸಲ್ಪಡುವುದು ರೂಢಿಯಲ್ಲಿರುವುದರಿಂದ ಗದ್ದುಗೆಗಳ ಕಾಲಮಾನವನ್ನು ಗುರುತಿಸಲು ಕಷ್ಟವಾಗುತ್ತದೆ.

ಚುರುಕುಗೊಂಡ ಕಾರ್ಯ: ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ೧೯೫೫ರಲ್ಲಿ ಪಟ್ಟಾಧಿಕಾರ ಪಡೆದ ಶ್ರೀ ಮಹಾಂತ ದೇಶಿಕೇಂದ್ರ ಸ್ವಾಮಿಗಳು ಮಠದ ಅಧಿಕಾರಕ್ಕೆ ಬಂದ ಮೇಲೆ ಮಠವಲ್ಲಿ ಧಾರ್ಮಿಕ ಚಟುವಟಿಕೆ ಚುರುಕುಗೊಂಡವು. ಮಠವು ಆರ್ಥಿಕವಾಗಿ ಸ್ವಾವಲಂಬನೆಯಾಗತೊಡಗಿತು. ಗುರುಗಳ ಕಾಯಕ ಯೋಗದ ಫಲದಿಂದ ತೋಟ ತಲೆಎತ್ತಿ ಆದಾಯ ತರತೊಡಗಿತು. ಗುರುಗಳ ಕ್ರಿಯಾಶೀಲ ಗುಣದಿಂದ ತೊಗರ್ಸಿ ಗ್ರಾಮದಲ್ಲಿ ವಾಣಿಜ್ಯ ಸಂಕೀರ್ಣ ಸ್ಥಾಪನೆಯಾಗಿ, ವಿಜಯಾಬ್ಯಾಂಕ್ ಸ್ಥಾಪನೆಯಾಗಲು ಸಹಾಯಕವಾಯಿತು. ಈ ರೀತಿ ಅಭಿವೃದ್ಧಿ ಕಾರ್ಯ ಕ್ರಮಗಳನ್ನು ರೂಪಿಸಿಕೊಂಡ ಸ್ವಾಮಿಗಳು ಸಾಮಾಜಿಕವಾಗಿ ಉಪಯೋಗವಾಗಬಲ್ಲಂತಹ ಕೆಲಸಗಳನ್ನು ನಡೆಸತೊಡಗಿದರು.

ಧಾರ್ಮಿಕ ಕಾರ್ಯಗಳು: ಕಳೆದ ಇಪ್ಪತ್ತೈದು ವರ್ಷಗಳಿಂದ ಈ ಮಠದಲ್ಲಿ ಶಿವಾನುಭವ ಕಾರ್ಯಕ್ರಮ ನಿರಂತರವಾಗಿ ನಿರಾತಂಕವಾಗಿ ನಡೆದುಕೊಂಡು ಬರುತ್ತಿದೆ. ಶ್ರಾವಣಮಾಸದಲ್ಲಿ ಧಾರ್ಮಿಕ ಸಭೆಗಳನ್ನು ನಡೆಸಿ ಭಕ್ತರಲ್ಲಿ ಧರ್ಮಜಾಗೃತಿ ಉಂಟುಮಾಡಲಾಗುತ್ತಿದೆ. ಪುರಾಣ ಪ್ರಸಿದ್ಧ ದೇವಸ್ಥಾನಕ್ಕೆ ಭಕ್ತರ ಸಹಕಾರ ಪಡೆದು ರಥ ಮಾಡಿಸಿದ್ದು ಸ್ವಾಮಿಗಳ ಇತ್ತೀಚಿನ ಒಂದು ಸಾಧನೆಯಾಗಿದೆ. ವಾರಣಾಸಿಯಲ್ಲಿ ಸ್ನಾತಕೋತ್ತರ ಪದವಿ ಪಡೆದು ಬಂದಿರುವ ಗುರುಗಳು ಸಂಸ್ಕೃತ ವಿದ್ವಾಂಸರಾಗಿ ಸಮಾಜವನ್ನು ಧಾರ್ಮಿಕ ತಳಹದಿಯ ಮೇಲೆ ಬೆಳೆಸಬೇಕು ಎಂಬ ಹಂಬಲ ಹೊಂದಿದ್ದಾರೆ. ಮಠದ ವತಿಯಿಂದ ವೇದ, ಸಂಸ್ಕೃತ ಪಾಠಶಾಲೆ ಪ್ರಾರಂಭಿಸಲಾಗಿದೆ. ವಿದ್ಯಾರ್ಥಿನಿಲಯ ಇಲ್ಲದಿದ್ದರೂ ಕೆಲವು ವಿದ್ಯಾರ್ಥಿಗಳನ್ನು ಖಾಯಂ ಆಗಿ ಮಠದಲ್ಲಿ ಇಟ್ಟುಕೊಂಡು ವಿದ್ಯಾಭ್ಯಾಸ ಕೊಡಿಸುತ್ತಿದ್ದಾರೆ. ದೇವಸ್ಥಾನ ಮತ್ತು ಮಠಕ್ಕೆ ಬರುವ ಭಕ್ತರಿಗಾಗಿ ವಸತಿ ಸೌಲಭ್ಯ ಮಾಡಿಸಿರುವ ಸ್ವಾಮಿಗಳು ಗುರು-ವಿರಕ್ತ ಬೇಧ ಭಾವ ತೊಲಗಬೇಕು. ಆಚಾರ ವಿಚಾರಗಳು ಒಂದೇ ಆದ ಮೇಲೆ ಎಲ್ಲರೂ ಒಂದೇ ಎಂಬ ಭಾವನೆ ಬರಬೇಕಾಗಿದೆ. ಎಲ್ಲರಲ್ಲಿಯೂ ಈ ಭಾವನೆ, ಸಾಮರಸ್ಯ ಮೂಡಲು ಸಾಧ್ಯ ಎಂದು ಸ್ವಾಮಿಗಳು ಅಭಿಪ್ರಾಯಿಸುತ್ತಾರೆ.

ವಿಳಾಸ: ಷ.ಬ್ರ.ಶ್ರೀ ಮಹಾಂತ ಶಿವಾಚಾರ್ಯ ಸ್ವಾಮಿಗಳು, ಶ್ರೀ ಮಳೆಮಠ, ತೊಗರ್ಸಿ, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಪಂಚವಣಿಗೆಮಠ: ತೊಗರ್ಸಿಯ ಮಲ್ಲಿಕಾರ್ಜುನ, ಭ್ರಮರಾಂಬದೇವಾಲಯದ ಎಡಬದಿಯಲ್ಲಿ ಶ್ರೀ ಪಂಚವಣಿಗೆ ಮಠವು ಸ್ಥಾಪನೆಯಾಗಿದೆ. ಕೆಳದಿ ಶಿವಪ್ಪ ನಾಯಕನ ಕಾಲದಲ್ಲಿ (೧೬೩೦-೧೬೪೬) ತೊಗರ್ಸಿ, ಕೆಳದಿ, ಗೊಗ್ಗಿಹಳ್ಳಿ, ಕ್ಯಾಸನೂರು, ಗೌರಿಕೆರೆ ಈ ಐದು ಗ್ರಾಮಗಳಲ್ಲಿ ಏಕಕಾಲದಲ್ಲಿ ಪಂಚಮಠಗಳು ಸ್ಥಾಪನೆಯಾಗಿದ್ದರಿಂದ ಈ ಮಠಕ್ಕೆ 'ಶ್ರೀ ಪಂಚವಣಿಗೆ ಮಠ' ಎಂಬ ಹೆಸರು ಬಂದಿದೆ. ಕಾಶಿ ಪೀಠದ ಶಾಖಾ ಮಠವಾಗಿರುವ ಪಂಚವಣಿಗೆ ಮಠವು ಪುತ್ರವರ್ಗದ ಮಠವಾಗಿ ಈ ನಾಡಿನಲ್ಲಿ ಹೆಸರು ಮಾಡಿದೆ. ಧರ್ಮ ಜಾಗೃತಿ ಕಾರ್ಯದಲ್ಲಿ ತನ್ನ ಹೆಜ್ಜೆ ಗುರುತನ್ನು ಉಳಿಸಿಕೊಂಡು ಬಂದಿರುವ ಈ ಮಠವು ಆರುನೂರು ವರ್ಷಗಳ ಇತಿಹಾಸ ಪಡೆದಿದೆ. ಕೆಳದಿ ಅರಸರ ಆಶ್ರಯದಲ್ಲಿ ಬೆಳೆದು ಬಂದ ಈ ಮಠವು ನೋಡಲು ಭವ್ಯವಾಗಿದ್ದು ಮರದ ಕೆತ್ತನೆಯ ಕಲಾಕೃತಿಗಳಿಂದ ನಿರ್ಮಿಸಲ್ಪಟ್ಟಿದೆ. ಮಲೆನಾಡ ಸಂಸ್ಕೃತಿಗೆ ತಕ್ಕಂತೆ ರೂಪುಗೊಂಡಿದೆ.

ಪರಂಪರೆ: ಈ ಮಠದ ಮೂಲ ಕರ್ತೃಗಳಾದ ಶ್ರೀ ಚನ್ನವೀರ ದೇಶಿಕೇಂದ್ರ ಸ್ವಾಮಿಗಳ ಹೆಸರನ್ನೇ ಮಠದ ಪರಂಪರೆಯಲ್ಲಿ ಬರುವ ಎಲ್ಲಾ ಮಠಾಧೀಶರೂ ಅಭಿದಾನ ಪಡೆದು ಅಧಿಕಾರಕ್ಕೆ ಬಂದಿದ್ದಾರೆ. ಈ ದೃಷ್ಟಿಯಿಂದ ಮಠದ ಆವರಣದಲ್ಲಿ ಇರುವ ಗದ್ದುಗೆಗಳು ಯಾರವೆಂದು ಗುರುತಿಸಲು ಕಷ್ಟವಾಗಿದೆ. ೧೯೯೧ರಲ್ಲಿ ಪಟ್ಟಾಧಿಕಾರ ಪಡೆದ ಶ್ರೀ ಚನ್ನವೀರ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು ಮಠದ ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಕೆಲಸಗಳನ್ನು ಮುನ್ನಡೆಸುತ್ತಿದ್ದಾರೆ.

ಶಿಕ್ಷಣ ಸೇವೆ: ಶೈಕ್ಷಣಿಕವಾಗಿ ಈ ಮಠವು ತನ್ನದೇ ಆದ ಕೊಡುಗೆಯನ್ನು ನೀಡಿದೆ. ಇದುವರೆಗೆ ನಾಲ್ಕು ಪ್ರೌಢಶಾಲೆಗಳು, ಒಂದು ಪ್ರಾಥಮಿಕ ಶಾಲೆ ಸ್ಥಾಪನೆಗೊಂಡಿವೆ. ಇದರಿಂದ ಗ್ರಾಮಾಂತರ ವಿದ್ಯಾರ್ಥಿಗಳು ವಿದ್ಯಾವಂತರಾಗಿ ರೂಪಗೊಳ್ಳಲು ಸಹಾಯಕ

ವಾಗಿದೆ. ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸುವ ಯೋಜನೆಯನ್ನು ಇಟ್ಟುಕೊಂಡಿದ್ದಾರೆ. ಕಳೆದ ಎರಡು ತಲೆಮಾರಿನ ಹಿಂದಿನ ಸ್ವಾಮಿಗಳ ಕಾಲದಲ್ಲಿ ಮಠ ಅಭಿವೃದ್ಧಿಗೊಂಡ ಲಕ್ಷಣಗಳು ಕಂಡುಬರುತ್ತವೆ. ಮಠಕ್ಕೆ ಆಸ್ತಿ, ಭವ್ಯ ಕಟ್ಟಡ, ಮಠದ ಮುಂದೆ ಎರಡು ಗದ್ದುಗೆಗಳಿಗೆಮಂಟಪ ನಿರ್ಮಾಣ ಆ ಕಾಲದಲ್ಲಿಯೇ ಆಗಿರಬಹುದೆಂದು ಹೇಳಲಾಗುತ್ತದೆ. ಅಲ್ಲದೆ ಮಠಕ್ಕೆ ಆದಾಯ ತರಬಲ್ಲಂತಹ ಅಕ್ಕಿ ಗಿರಣಿ ತೊಗರ್ಸಿ ಗ್ರಾಮದಲ್ಲಿ ಸ್ಥಾಪನೆಯಾಗಿದ್ದು ಉಲ್ಲೇಖಾರ್ಹವಾಗಿದೆ.

ಧಾರ್ಮಿಕ ಕಾರ್ಯಗಳು: ಶ್ರಾವಣ ಮಾಸದಲ್ಲಿ ವಿಶೇಷ ಪೂಜೆ, ಶಿವರಾತ್ರಿ, ದಸರಾ ಉತ್ಸವಗಳನ್ನು ವೈಭವವಾಗಿ ಆಚರಿಸಲಾಗುತ್ತಿದೆ. ಮಠದ ಒಳಭಾಗದಲ್ಲಿ ಕರ್ತೃಗದ್ದುಗೆ ನಿರ್ಮಾಣವಾಗಿದೆ. ಮಠದ ಹೊರಭಾಗದಲ್ಲಿ ನಿರ್ಮಿಸಿರುವ ಮೂರು ಗದ್ದುಗೆಗಳಿಗೆ ನಿತ್ಯ ಪೂಜೆ ನಡೆಸುವುದಲ್ಲದೆ ಶ್ರಾವಣ ಮಾಸದಲ್ಲಿ ನಿತ್ಯ ರುದ್ರಾಭಿಷೇಕ ಪೂಜೆ ನಡೆಯುತ್ತದೆ. ಮಠದಲ್ಲಿ ದೊರೆತ ಪ್ರಾಚೀನ ವಸ್ತುಗಳನ್ನು ಪ್ರಾಚ್ಯವಸ್ತು ಸಂಗ್ರಾಹಕರು ದೆಹಲಿ ವಸ್ತು ಸಂಗ್ರಹಾಲಯದಲ್ಲಿ ಇಟ್ಟಿದ್ದಾರೆ. ಸದ್ಯ ಮಠದಲ್ಲಿ ಪ್ರಾಚೀನ ವಸ್ತುಗಳಾಗಿ ಪರಂಪರೆಯಲ್ಲಿ ಬರುವಂತಹ ತಾಮ್ರದ ತಟ್ಟೆಗಳು, ಪೂಜಾಸಾಮಗ್ರಿಗಳು ನೋಡಸಿಗುತ್ತವೆ.

ವಿಳಾಸ: ಷ.ಬ್ರ.ಶ್ರೀ ಚನ್ನವೀರ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಪಂಚವಣಿಗೆ ಮಠ, ತೊಗರ್ಸಿ, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ದಿಂಡದಹಳ್ಳಿ

ಶಿಕಾರಿಪುರ ತಾಲ್ಲೂಕಿನ ದಿಂಡದಹಳ್ಳಿಯು ತಾಲ್ಲೂಕು ಕೇಂದ್ರದಿಂದ ಉತ್ತರ ಭಾಗಕ್ಕೆ ಒಂಬತ್ತು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ರಂಭಾಪುರಿ ಪೀಠದ ಶಾಖೆಯ ಶ್ರೀ ಹಿರೇಮಠವು ಸ್ಥಾಪನೆಗೊಂಡು ಇಲ್ಲಿನ ಧಾರ್ಮಿಕ ಕ್ರಿಯೆಗೆ ಸಹಾಯಕವಾಗಿದೆ.

ಹಿರೇಮಠ: ದಿಂಡದಹಳ್ಳಿಯ ಪಶ್ಚಿಮದಲ್ಲಿರುವ ದಿಬ್ಬದಲ್ಲಿ ನಿರ್ಮಾಣಗೊಂಡಿರುವ ಹಿರೇಮಠವು ಪುತ್ರವರ್ಗದ ಪರಂಪರೆಯನ್ನು ಹೊಂದಿದೆ. ಈಗಿನ ಮಠಾಧ್ಯಕ್ಷರಾಗಿರುವ ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ತಮ್ಮ ಆರವತ್ತೈದನೆಯ ವರ್ಷದಲ್ಲಿಯೂ ಹೂವಿನ ಹಡಗಲಿಯ ಸಿದ್ಧಾಪುರದ ಹಿರೇಮಠ ಮತ್ತು ಇಲ್ಲಿನ ಈ ಮಠದ ಅಧಿಕಾರವನ್ನು ನೋಡಿಕೊಳ್ಳುತ್ತಾ ಧಾರ್ಮಿಕ ಕಾರ್ಯ ನಡೆಸುತ್ತಾ ಬರುತ್ತಿದ್ದಾರೆ. ಈ ಮಠದ ಆವರಣದಲ್ಲಿ ಪೂರ್ವಜರ ಗದ್ದುಗೆಗಳು ನೋಡಲು ಸಿಗದಿರುವ ಕಾರಣ ಈ ಮಠದ ಸ್ಥಾಪನೆಯ ಬಗ್ಗೆ ನಿಖರವಾಗಿ ಹೇಳಲು ಬರುವುದಿಲ್ಲ. ಈ ಮಠ ಪೂರ್ವಕಾಲದಿಂದಲೂ ಅಸ್ತಿತ್ವದಲ್ಲಿದೆ ಎಂದು ಹೇಳಬಹುದು. ಇದಕ್ಕೆ ಸಾಕ್ಷಿಯಾಗಿ ಇಲ್ಲಿನ ಕ್ಷೇತ್ರನಾಥ ವೀರಭದ್ರದೇವರ ದೇವಾಲಯ ಪ್ರಾಚೀನ ಕಾಲದ್ದಾಗಿದೆ. ಇಲ್ಲಿನ ಗಣಪತಿದೇವಸ್ಥಾನ, ಆದಿಶಕ್ತಿದೇವಾಲಯ, ವಿಶ್ವಬಂಧುಮರುಳಸಿದ್ಧೇಶ್ವರ ದೇವಾಲಯಗಳ ಕುರುಹುಗಳು ಕಾಣುತ್ತವೆ.

ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ಇತ್ತೀಚೆಗೆ ನವಗ್ರಹ ಸ್ಥಾಪನೆ ಮಾಡಿದ್ದು, ತಮ್ಮ ಜೀವಿತ ಅವಧಿಯಲ್ಲೇ ತಮ್ಮ ಗದ್ದುಗೆಯನ್ನು ನಿರ್ಮಿಸಿಕೊಂಡಿದ್ದಾರೆ. ಅಲ್ಲದೆ ಈ ಸಮಾಧಿಯ ಮೇಲೆ ಪ್ರತಿಷ್ಠಾಪಿಸುವ ಅವರ ಮೂರ್ತಿಯು ಸಿದ್ಧಗೊಂಡಿದೆ. ಇದಲ್ಲದೆ ಗದ್ದುಗೆಗೆ ಮಂಟಪವನ್ನೂ ನಿರ್ಮಿಸಲಾಗಿದೆ. ಗುರುಗಳು ಶ್ರೀ ಪಶುಪತಿ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡಿದ್ದಾರೆ. ಇವರ ವಿದ್ಯಾಭ್ಯಾಸ ಮುಗಿದ ಮೇಲೆ ಪಟ್ಟಾಧಿಕಾರ ಮಾಡಲಿದ್ದಾರೆ. ಈಗ ಮಠದಲ್ಲಿ ವರ್ಷಕ್ಕೊಮ್ಮೆ ಧರ್ಮಸಭೆ ನಡೆಸಿ ಪ್ರತಿ ಹುಣ್ಣಿಮೆ ದಿನ ವಿಶೇಷ ಪೂಜೆ, ರುದ್ರಾಭಿಷೇಕ ನಡೆಸಲಾಗುತ್ತದೆ. ದೀಕ್ಷಾ ಕಾರ್ಯಕ್ರಮಗಳು ಮಠದಲ್ಲಿ ಸಂದರ್ಭಕ್ಕೆ ಅನುಗುಣವಾಗಿ ನಡೆಯುತ್ತಿರುತ್ತವೆ. ಧಾರ್ಮಿಕ ವಿಧಿವಿಧಾನಗಳನ್ನು ನಡೆಸುತ್ತಾ ಜನಮನದಲ್ಲಿ ಬೆರೆತಿರುವ ಈ ಮಠಕ್ಕೆ ಆರು ಎಕರೆ ಜಮೀನು ಇದ್ದು ಮಠಕ್ಕೆ ಆದಾಯ ತರುತ್ತಿದೆ.

ವಿಳಾಸ:ಷ.ಬ್ರ.ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ದಿಂಡದಹಳ್ಳಿ,ಶಿಕಾರಿಪುರ ತಾ, ಶಿವಮೊಗ್ಗ ಜಿಲ್ಲೆ.

ಬಳ್ಳಿಗಾವೆ

ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವೆಯು ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಹತ್ತು ಕಿ.ಮೀ ದೂರದಲ್ಲಿದೆ. ಇದು ಭಾರತದ ಪುರಾತನ ಗ್ರಾಮಗಳಲ್ಲಿ ಒಂದು ಎಂದು ದಾಖಲಾಗಿದೆ. ದಕ್ಷಿಣಭಾರತದಲ್ಲಿ ಅದರಲ್ಲಿಯೂ ವಿಶೇಷವಾಗಿ

ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ ಎಲ್ಲಾ ರಾಜಮನೆತನಗಳೂ ಈ ಗ್ರಾಮದ ಬಗ್ಗೆ ವಿಶೇಷ ಗಮನಕೊಟ್ಟ ಕಾರಣಕ್ಕೆ, ಈಗ್ರಾಮ ಇತಿಹಾಸ ಪ್ರಸಿದ್ಧ ಹಾಗೂ ಪೌರಾಣಿಕ ಪ್ರಸಿದ್ಧ ನಾಡಾಗಿ ಕಂಗೊಳಿಸುತ್ತಿದೆ. ಈ ಗ್ರಾಮದಲ್ಲಿ ವೀರಶೈವಧರ್ಮ ಹೆಚ್ಚು ಪ್ರಚಾರಗೊಂಡು ಪಂಚಮಠಗಳು ಸ್ಥಾಪನೆಯಾಗಿದ್ದು, ಈಗ ಅವುಗಳ ಅಸ್ತಿತ್ವ ಮರೆಯಾಗಿರುವುದು ದುರ್ದೈವದ ಸಂಗತಿಯಾಗಿದೆ. ಶ್ರೀ ಕೋಡಿಮಠ, ಶ್ರೀ ಕಾಶೀಮಠ, ಶ್ರೀ ವಿರಕ್ತಮಠ, ಶ್ರೀಕಲ್ಮಠ ಮತ್ತು ಶ್ರೀ ಸಾಮಾಚಾರಿಮಠ ಎಂಬ ಪಂಚಮಠಗಳು ಸ್ಥಾಪನೆಯಾಗಿವೆ. ವಿರಕ್ತ ಮಠವನ್ನು ಹೊರತುಪಡಿಸಿದರೆ ಉಳಿದಂತೆ ಎಲ್ಲಾ ಮಠಗಳು ಅಸ್ತಿತ್ವವನ್ನು ಕಳೆದುಕೊಂಡಿವೆ.

ಹನ್ನೆರಡನೆಯ ಶತಮಾನದ ಅನುಭವ ಮಂಟಪದ ಶೂನ್ಯ ಸಿಂಹಾಸನಾಧಿಪತಿ ಅಲ್ಲಮ ಪ್ರಭು ಈ ಗ್ರಾಮದಲ್ಲಿ ಹುಟ್ಟಿ ಬನವಾಸಿಯಲ್ಲಿ ಮಾಯೆಯನ್ನು ಗೆದ್ದು ಕಲ್ಯಾಣಕ್ಕೆ ಹೋಗುತ್ತಾರೆ. ಇಂತಹ ಮಹಾ ಶರಣಾದಿ ಶರಣರಿಗೆ ಜನ್ಮನೀಡಿ ಈ ಗ್ರಾಮ ಧನ್ಯವಾಗಿದೆ. ಹಿಂದೆ ಹಿಮಾಲಯಕ್ಕೆ ಹೋಗಿ ಕೇದಾರೇಶ್ವರರ ದರ್ಶನ ಮಾಡಿಬರುವುದು ಕಷ್ಟವಾಗಿದ್ದ ಸಂದರ್ಭದಲ್ಲಿ, ದಕ್ಷಿಣ ಕೇದಾರವನ್ನಾಗಿ ಈ ಗ್ರಾಮವನ್ನು ರೂಪಿಸಿ ಕೇದಾರೇಶ್ವರರನ್ನು ಇಲ್ಲಿ ಪ್ರತಿಷ್ಠಾಪಿಸಲಾಯಿತು. ಈ ದೇವಸ್ಥಾನವನ್ನು ಹೊಯ್ಸಳರ ಶೈಲಿಯಲ್ಲಿ ಕಟ್ಟಿಸಿ ಶಿಲ್ಪಕಲೆ ಮೈದಳೆಯುವಂತೆ ಮಾಡಿದ್ದಾರೆ. ಕೇದಾರೇಶ್ವರ ದೇವಸ್ಥಾನದ ಪಕ್ಕದಲ್ಲಿ ಅಲ್ಲಮ ಪ್ರಭುವಿನ ದೇವಸ್ಥಾನವನ್ನು ಕಟ್ಟಿಸಿದ್ದಾರೆ. ಪುರಾತತ್ವ ಇಲಾಖೆ ಈ ಎರಡೂ ದೇವಸ್ಥಾನಗಳನ್ನು ಸಂರಕ್ಷಿಸಿದೆ. ಧಾರ್ಮಿಕ, ಪೌರಾಣಿಕ, ಐತಿಹಾಸಿಕವಾಗಿ ಹೆಸರು ಮಾಡಿದ ಬಳ್ಳಿಗಾವೆಯಲ್ಲಿ ವಿಶ್ವವಿದ್ಯಾನಿಲಯವನ್ನು ಹೋಲುವಂತಹ ವಿದ್ಯಾ ಕೇಂದ್ರಗಳು ಹಿಂದೆ ಸ್ಥಾಪಿತವಾಗಿದ್ದವು ಎಂದು ಹೇಳಲಾಗುತ್ತದೆ.

ವಿರಕ್ತಮಠ: ಬಳ್ಳಿಗಾವೆ ಗ್ರಾಮದ ಮಧ್ಯಭಾಗದಲ್ಲಿ ವಿರಕ್ತಮಠವು ಸ್ಥಾಪನೆಯಾಗಿದೆ. ಹನ್ನೆರಡನೆಯ ಶತಮಾನದಲ್ಲಿ ಶ್ರೀ ಪ್ರಭು ದೇವರು ಇಲ್ಲಿ ನೆಲೆಸಿ ಅನುಷ್ಠಾನ ಕೈಗೊಂಡಿದ್ದರು ಎಂದು ಹೇಳಲಾಗುತ್ತಿದೆ. ಇಂತಹ ಸ್ಥಳದಲ್ಲಿ ಮಠವು ಸ್ಥಾಪನೆಯಾಗಿ ಈವರೆಗೆ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ಪರಂಪರೆ:ಪುರಾತನ ಕಾಲದಲ್ಲಿ ಸ್ಥಾಪನೆಗೊಂಡ ಈ ಮಠದ ಪರಂಪರೆಯನ್ನು ಗುರುತಿಸಲು ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಮಠದ ಆವರಣದಲ್ಲಿ ಶ್ರೀ ಪ್ರಭು ಸ್ವಾಮಿಗಳ ಒಂದು ಗದ್ದುಗೆ ಸ್ಥಾಪನೆಯಾಗಿದೆ. ಇದನ್ನು ಹೊರತುಪಡಿಸಿದರೆ ಉಳಿದ ಯಾವುದೇ ಕುರುಹುಗಳು ಮಠದಲ್ಲಿ ಲಭ್ಯವಿಲ್ಲ. ಈಗ ಶ್ರೀ ಅಡವಿ ಸ್ವಾಮಿಗಳು ಮಠದ ಆಡಳಿತವನ್ನು ನೋಡಿಕೊಳ್ಳುತ್ತಿದ್ದಾರೆ. ಗುರುಗಳು ಹುಬ್ಬಳ್ಳಿ ತಾಲ್ಲೂಕಿನ ಮಂಟೂರು ಗ್ರಾಮದ ಶ್ರೀ ಅಡವಿಸ್ವಾಮಿ ಮಠದ ಪಟ್ಟಾಧಿಕಾರಿಗಳಾಗಿದ್ದು ಈ ಎರಡು ಮಠಗಳ ಆಡಳಿತವನ್ನು ನಡೆಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಶ್ರೀ ವಿರಕ್ತ ಮಠದಲ್ಲಿ ಸ್ಥಾಪನೆಯಾಗಿರುವ ಒಂದು ಗದ್ದುಗೆಗೆ ನಿತ್ಯ ಪೂಜೆ, ವಾರ್ಷಿಕ ಶಿವಾನುಭವ ಕಾರ್ಯಕ್ರಮಗಳು ಮಠದಲ್ಲಿ ನಡೆಯುತ್ತಿವೆ. ಈ ಸಂದರ್ಭದಲ್ಲಿ ಅನ್ನ ದಾಸೋಹವನ್ನು ನಡೆಸಲಾಗುತ್ತಿದೆ. ಗುರುಗಳು ಸಂದರ್ಭಕ್ಕನುಸಾರ ಮಠಕ್ಕೆ ಆಗಮಿಸಿ, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುತ್ತಿದ್ದಾರೆ.

ವಿಳಾಸ:ಶ್ರೀ ಮ.ನಿ.ಪ್ರ. ಅಡವಿ ಸ್ವಾಮಿಗಳು, ಶ್ರೀ ವಿರಕ್ತಮಠ, ಬಳ್ಳಿಗಾವೆ, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಶಿಕಾರಿಪುರ

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರವು ಜಿಲ್ಲಾ ಕೇಂದ್ರದಿಂದ ವಾಯುವ್ಯಕ್ಕೆ ಮೂವತ್ತೈದು ಕಿ.ಮೀ ದೂರದಲ್ಲಿದೆ. ತಾಲ್ಲೂಕು ಕೇಂದ್ರ ಸ್ಥಳವಾದ ಈ ಪಟ್ಟಣದಲ್ಲಿ ಅನಾದಿ ಕಾಲದಲ್ಲಿ ನಾಲ್ಕು ವೀರಶೈವ ಮಠಗಳು ಸ್ಥಾಪನೆಗೊಂಡಿದ್ದವು ಎಂದು ಮಾಹಿತಿ ದೊರೆತಿದೆ. ಅವುಗಳಲ್ಲಿ ಯಾವ ಮಠವೂ ಈಗ ಅಸ್ತಿತ್ವದಲ್ಲಿಲ್ಲ. ಈಗ ಶ್ರೀ ಬಸವಾಶ್ರಮವು ಸ್ಥಾಪನೆಯಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ವಿರಕ್ತಮಠ: ಪುರಾತನ ಕಾಲದಲ್ಲಿ ಸ್ಥಾಪನೆಯಾದ ವಿರಕ್ತಮಠವು ಗುರುಗಳಿಲ್ಲದಿದ್ದರೂ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ಶಿಕಾರಿಪುರದ ಆಸಕ್ತ ಬಳಗವು ಬಸವ ಸಮಿತಿ ರಚಿಸಿಕೊಂಡು ವಿರಕ್ತ ಮಠವನ್ನು ಜೀವಂತವಾಗಿರಿಸುವ

ಪ್ರಯತ್ನದಲ್ಲಿ ಮುಂದಾಗಿದ್ದಾರೆ. ಚಿತ್ರದುರ್ಗ ಮುರುಘಾ ಮಠದ ಶ್ರೀ ಶಿವವಮೂರ್ತಿ ಮುರುಘರಾಜೇಂದ್ರ ಸ್ವಾಮಿಗಳು ಬಸವ ಸಮಿತಿಯ ಕ್ರಿಯಾಶೀಲತೆಯನ್ನು ನೋಡಿ ನೆರವು ನೀಡುತ್ತಿದ್ದಾರೆ. ಚಿತ್ರದುರ್ಗಮಠದ ಶ್ರೀ ಶಿವಮೂರ್ತಿ ಮುರುಘ ರಾಜೇಂದ್ರ ಸ್ವಾಮಿಗಳು ಈ ಮಠಕ್ಕೆ ಬಂದು ಇಲ್ಲಿನ ಸ್ಥಿತಿಗತಿ ನೋಡಿ ಈ ಮಠದ ಅಭಿವೃದ್ಧಿಗೆ ಯೋಜನೆ ತಯಾರಿಸಿಕೊಟ್ಟ ಫಲವಾಗಿ ಕಲ್ಯಾಣ ಮಂಟಪ ಕಟ್ಟಿಸಲು ಸಿದ್ಧತೆ ನಡೆದಿದೆ. ಮಠದಲ್ಲಿ ಧಾರ್ಮಿಕ ಕ್ರಿಯೆಗಳು ಪುನಃ ಜೀವಕಳೆ ಪಡೆಯಬೇಕೆಂದು ಬಸವ ಸಮಿತಿ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಗಳನ್ನು ಹಮ್ಮಿಕೊಂಡು ಮಠವನ್ನು ಬೆಳೆಸುತ್ತಿದೆ.

ಬಸವಾಶ್ರಮ: ಶಿಕಾರಿಪುರದ ಬಯಲುರಂಗಮಂದಿರದ ಸಮೀಪ ೧೯೯೬ ಆಗಸ್ಟ್ ಇಪ್ಪತ್ತೊಂದರಂದು ಶರಣೆ ಶರಣಾಂಬಿಕೆಯ ಪ್ರಯತ್ನದ ಫಲದಿಂದ 'ಶ್ರೀ ಬಸವಾಶ್ರಮ ' ಪ್ರಾರಂಭವಾಗಿದೆ. ಅನಾಥ ಮಕ್ಕಳ ಸೇವೆ ಮತ್ತು ಅವರನ್ನು ಧರ್ಮಮಾರ್ಗದಲ್ಲಿ ಬೆಳೆಸುವುದು, ವಚನ ಸಾಹಿತ್ಯ ಪ್ರಚಾರ ಮತ್ತು ಅನುಷ್ಠಾನ, ಶರಣರುಗಳ ಕ್ಷೇತ್ರಸ್ಥಾನ ಗದ್ದುಗೆಗಳ ಸಂರಕ್ಷಣೆ, ಅಭಿವೃದ್ಧಿ ಗೈಯ್ಯುವುದು, ಪ್ರತಿವರ್ಷ ಬಸವಜಯಂತಿ, ಬಸವ ಪಂಚಮಿ ಮತ್ತು ಇನ್ನಿತರ ಶರಣರ ಜಯಂತಿಯನ್ನು ಆಚರಿಸುವುದು, ಆಶ್ರಮಕ್ಕೆ ಬಂದಂತಹ ಶರಣರಿಗೆ ನಿತ್ಯ ದಾಸೋಹದ ವ್ಯವಸ್ಥೆ ಮಾಡುವುದು, ಶರಣ ಕ್ಷೇತ್ರಗಳ ಸಂದರ್ಶನ, ಶೈಕ್ಷಣಿಕ ಪ್ರವಾಸ ಏರ್ಪಡಿಸುವುದು, ಧರ್ಮಪ್ರಸಾರದ ದೃಷ್ಟಿಯಿಂದ ಸಾಹಿತ್ಯ ಪ್ರಕಟಣೆ ಮತ್ತು ಸಾಹಿತ್ಯ ವಿತರಣೆ ಮಾಡುವುದು, ಧಾರ್ಮಿಕ ಮೌಲ್ಯಗಳು ಮತ್ತು ವಚನ ಸಾಹಿತ್ಯ ಸಂವಿಧಾನಕ್ಕೆ ಹೊರತಾದ ಆಚರಣೆಗಳ ವಿರುದ್ಧ ಹೋರಾಟ, ಆ ಮೂಲಕ ಸಮಾಜದ ಶುದ್ಧೀಕರಣ ಮಾಡುವ ಉದ್ದೇಶ ಇಟ್ಟುಕೊಂಡು ಸ್ಥಾಪನೆಯಾದ ಬಸವಾಶ್ರಮ ಈ ನಿಟ್ಟಿನಲ್ಲಿ ಕಾರ್ಯಮಗ್ನ ವಾಗಿದೆ. ಶರಣೆ ಶರಣಾಂಬಿಕೆ ಬಸವತತ್ತ್ವ ಪ್ರಚಾರ ಕಾರ್ಯದಲ್ಲಿ ತೊಡಗಿ ಧರ್ಮಾಸಕ್ತರನ್ನು ಆಕರ್ಷಿಸಿಕೊಳ್ಳತೊಡಗುತ್ತಿದೆ. ಬಸವ ಸೇವಾ ಟ್ರಸ್ಟ್ ಎಂಬುದನ್ನು ರಚಿಸಿಕೊಂಡು ಈ ಟ್ರಸ್ಟ್‌ನ ಮೂಲಕ ಧಾರ್ಮಿಕ ಕಾರ್ಯಗಳನ್ನು ರೂಪಿಸಿಕೊಳ್ಳುತ್ತಿದೆ.

ವಿಳಾಸ: ಶರಣೆ ಶರಣಾಂಬಿಕೆ, ಬಸವಾಶ್ರಮ, ಬಯಲು ರಂಗಮಂದಿರ ಹಿಂಭಾಗ, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ.

ಶಿರಾಳಕೊಪ್ಪ

ಶಿಕಾರಿಪುರ ತಾಲ್ಲೂಕಿನ ಶಿರಾಳಕೊಪ್ಪವು ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಕೋರಿಟೊಪ್ಪಿಗೆ ವಿರಕ್ತಮಠವು ಅಸ್ತಿತ್ವದಲ್ಲಿದೆ.

ಕೋರಿಟೊಪ್ಪಿಗೆ ವಿರಕ್ತಮಠ: ಶಿರಾಳಕೊಪ್ಪ ಗ್ರಾಮದಲ್ಲಿ ಶ್ರೀ ಕೋರಿಟೊಪ್ಪಿಗೆ ವಿರಕ್ತಮಠವು ೧೪೪೬ರಲ್ಲಿ ಸ್ಥಾಪನೆಯಾಗಿದೆ. ಕರ್ತೃಗುರುಗಳಾದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಕಿವಿ ಮುಚ್ಚುವಂತಹ ಟೊಪ್ಪಿಗೆಯನ್ನು ಯಾವಾಗಲೂ ಹಾಕಿಕೊಳ್ಳುತ್ತಿದ್ದರಿಂದ ಈ ಮಠಕ್ಕೆ 'ಶ್ರೀ ಕೋರಿಟೊಪ್ಪಿಗೆ ವಿರಕ್ತಮಠ' ಎಂಬ ಹೆಸರು ಬಂದಿದೆ. ಮುರುಘಾ ಸಮಯಕ್ಕೆ ಸೇರಿದ ಈ ವಿರಕ್ತ ಮಠವು ಹಳೆ ಶಿರಾಳ ಕೊಪ್ಪದಿಂದ ದಕ್ಷಿಣ ಭಾಗದಲ್ಲಿ ಊರಿನ ಹೊರಗೆ ಸ್ಥಾಪನೆಗೊಂಡಿತ್ತು. ಆದರೆ ಈಗ ಊರು ಬೆಳೆದ ಕಾರಣ ಮಠವು ಶಿರಾಳಕೊಪ್ಪದ ಹೃದಯ ಭಾಗದಲ್ಲಿದೆ. ಅಂದು ಸ್ಥಾಪನೆಗೊಂಡ ಮಠವು ಈತನಕ ಬೆಳೆದು ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಕೇಂದ್ರವಾಗಿ ರೂಪುಗೊಂಡಿದೆ.

ಪರಂಪರೆ: ಮಠದ ಪರಂಪರೆಯಲ್ಲಿ ಹದಿನಾಲ್ಕು ಜನ ಸ್ವಾಮಿಗಳು ಬಾಳಿ ಬದುಕಿ ಇತಿಹಾಸದಲ್ಲಿ ಮಠ ಚಿರಾಯುವಾಗಿ ನಿಲ್ಲುವಂತೆ ಮಾಡಿದ್ದಾರೆ. ಸದ್ಯದ ಸ್ಥಿತಿಯಲ್ಲಿ ಮೂರು ತೆಂಗಿನ ಮರಗಳು ಇರುವ ಜಾಗವನ್ನೇ ಮೂರು ಗದ್ದುಗೆಗಳು ಎಂದು ಗುರುತಿಸಲಾಗಿದೆ. ಅಲ್ಲದೆ ಕರ್ತೃ ಗದ್ದುಗೆಯೂ ಸೇರಿದಂತೆ ಮಠದ ಒಳಗಡೆ ಮೂರು ಗದ್ದುಗೆಗಳನ್ನು ನೋಡಬಹು ದಾಗಿದೆ. ಉಳಿದ ಎಂಟು ಜನ ಸ್ವಾಮಿಗಳ ಗದ್ದುಗೆಗಳು ಮಠದ ಆವರಣದಲ್ಲಿ ನಿರ್ಮಾಣಗೊಂಡಿವೆ ಎಂದು ಹೇಳಲಾಗುತ್ತಿ ದ್ದರೂ ಎಲ್ಲಿ ನಿರ್ಮಾಣವಾಗಿವೆ ಎಂದು ಗುರುತಿಸಲು ಕಷ್ಟವಾಗಿದೆ. ಮಠದ ಆವರಣದಲ್ಲಿ ಶಿಥಿಲಗೊಂಡು ಎಲ್ಲೆಂದರಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ವೀರ ಕಲ್ಲುಗಳು, ಶಿಲಾಶಾಸನಗಳು, ನಾಗರ ಕಲ್ಲುಗಳು, ಹಾಗೂ ಕೆತ್ತನೆ ಕಲ್ಲುಗಳು ಮಠದ ಇತಿಹಾಸವನ್ನು ಹೇಳುತ್ತವೆ. ಈ ಬಗ್ಗೆ ಹೆಚ್ಚು ಅಧ್ಯಯನ ನಡೆಸಿದರೆ ಈ ಮಠದ ಇತಿಹಾಸ ಬೆಳಕಿಗೆ ಬರುತ್ತದೆ. ಸದ್ಯದ ಸ್ಥಿತಿಯಲ್ಲಿ ಮಠದ ಪರಂಪರೆಯಲ್ಲಿನ ಸ್ವಾಮಿಗಳ ಹೆಸರುಗಳನ್ನು ಮಾತ್ರ ದಾಖಲಿಸಬಹುದಾಗಿದೆ.

೧. ಶ್ರೀ ಮ.ನಿ.ಪ್ರ. ಕೋರಿಟೊಪ್ಪಿಗೆ ಸಿದ್ಧಲಿಂಗ ಸ್ವಾಮಿಗಳು (ಕರ್ತೃಗುರುಗಳು)
೨. ಶ್ರೀ ಮ.ನಿ.ಪ್ರ. ಚನ್ನಬಸವಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಚನ್ನಮಲ್ಲಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಸಿದ್ಧವೀರಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ರುದ್ರಮುನಿಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಶಿವಕುಮಾರಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಸಿದ್ಧೇಶ್ವರಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯ ಗುರುಗಳ ಹೆಸರನ್ನು ಗುರುತಿಸಬಹುದಾಗಿದೆ. ಶ್ರೀ ರುದ್ರಮುನಿ ಸ್ವಾಮಿಗಳು ಮತ್ತು ಶ್ರೀಶಿವ ಕುಮಾರ ಸ್ವಾಮಿಗಳ ಕಾಲದಲ್ಲಿ ಹೆಚ್ಚು ಕೆಲಸ ನಡೆದು ಮಠ ಅಭಿವೃದ್ಧಿ ಪಥದಲ್ಲಿ ಬೆಳೆದ ಲಕ್ಷಣಗಳು ಕಂಡುಬರುತ್ತಿವೆ. ಮೈಸೂರು ಕೃಷ್ಣರಾಜ ಒಡೆಯರ್ ದತ್ತಿ ನೀಡಿ ಮಠದ ಅಭಿವೃದ್ಧಿಗೆ ಕಾರಣಕರ್ತರಾಗಿದ್ದಾರೆ. ಈ ಬಗ್ಗೆ ಕೃಷ್ಣರಾಜ ಒಡೆಯರು ಬರೆಸಿಕೊಟ್ಟ ಶಾಸನಗಳು ಮಠದಲ್ಲಿ ಸಿಗುತ್ತವೆ.

ಪ್ರಗತಿ ಹೆಜ್ಜೆ: ಈಗಿನ ಮಠಾಧಿಪತಿಗಳಾದ ಶ್ರೀ ಸಿದ್ಧೇಶ್ವರ ಸ್ವಾಮಿಗಳು ೧೯೮೪ ರಲ್ಲಿ ಅಧಿಕಾರಕ್ಕೆ ಬಂದು ಮಠದ ಸರ್ವಾಂಗೀಣ ಅಭಿವೃದ್ಧಿಗೆ ನೀಲಿ ನಕ್ಷೆ ತಯಾರಿಸಿಕೊಂಡು ಹಂತಹಂತವಾಗಿ ಅಭಿವೃದ್ಧಿಪಡಿಸುತ್ತಾ ಬಂದಿದ್ದಾರೆ. ಈ ರೀತಿ ಶ್ರಮದ ಬಲದಿಂದ ಬೆಳೆದ ಮಠ ಈ ಭಾಗದಲ್ಲಿ ಶೈಕ್ಷಣಿಕವಾಗಿ ಹೆಚ್ಚು ಪ್ರಗತಿ ಸಾಧಿಸಿದೆ. ಅಕ್ಷರ ಜ್ಞಾನದ ಜತೆಗೆ ಸ್ವಯಂ ಉದ್ಯೋಗ ಕಲ್ಪಿಸುವ ಸಲುವಾಗಿ ಉದ್ಯೋಗ ಆಧಾರಿತ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ಕೊಟ್ಟಿದ್ದಾರೆ. ಶಿಶುವಿಹಾರ, ಪ್ರಾಥಮಿಕ ಪಾಠಶಾಲೆ ಮತ್ತು ಪ್ರೌಢಶಾಲೆ ಪ್ರಾರಂಭಿಸಿದ್ದಲ್ಲದೆ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಿ, ಸಾಮಾಜಿಕ ಪ್ರಗತಿಗೆ ಪ್ರೇರಕ ಶಕ್ತಿಯಾಗಿ ಮಠವನ್ನು ಬೆಳೆಸಿದ್ದಾರೆ.

ಮೂಲಮಠವು ಕಪ್ಪು ಹೆಂಚಿನದಾಗಿದ್ದು ನಂತರ ಕೆಂಪು ಹೆಂಚಿನ ಕಟ್ಟಡ ರೂಪುಗೊಂಡಿದೆ. ಈಗ ಮೂಲಮಠದ ಸುತ್ತ ಶೈಕ್ಷಣಿಕ ಸಂಸ್ಥೆಗಳು ಬೆಳೆದು ಮಠದ ಸಮುಚ್ಚಯ ರೂಪುಗೊಂಡು ಪ್ರಗತಿಯ ಹೆಜ್ಜೆ ಗುರುತುಗಳನ್ನು ಮೂಡಿಸುತ್ತಾ ಸಾಗುತ್ತಿದೆ. ಧಾರ್ಮಿಕ ಕೆಲಸಗಳಿಗೆ ಸೀಮಿತಗೊಂಡ ಮಠವನ್ನು ಶಿಕ್ಷಣ ಮತ್ತು ನಿರುದ್ಯೋಗ ನಿರ್ಮೂಲನೆ ಕಡೆ ಮುಖ ತಿರುಗಿಸಿ ಈ ಮೂಲಕ ಸಮಾಜ ಬೆಳೆಸಲು ಹೊರಟಿದ್ದು ಒಂದು ಸಾಧನೆಯೇ ಸರಿ. ಅಲ್ಲದೆ ಮಠದ ಇತಿಹಾಸವನ್ನು ತಲತಲಾಂತರದ ವರೆಗೆ ಶಾಶ್ವತವಾಗಿ ನಿಲ್ಲುವಂತೆ ಮಾಡುವ ಬಗ್ಗೆ ಚಿಂತನೆಗಳನ್ನು ಸ್ವಾಮಿಗಳು ಹಮ್ಮಿಕೊಂಡಿದ್ದಾರೆ. ಜತೆಗೆ ಸಾಹಿತ್ಯದ ಮೂಲಕ ಧರ್ಮಪ್ರಚಾರ ಕೈಗೊಳ್ಳುವ ಹಂಬಲವನ್ನು ಇಟ್ಟುಕೊಂಡಿದ್ದಾರೆ. ಕರ್ತೃಗದ್ದುಗೆ ಹಾಗೂ ಶ್ರೀಶಿವ ಕುಮಾರ ಸ್ವಾಮಿಗಳವರ ಗದ್ದುಗೆಗೆ ಮಂಟಪ ನಿರ್ಮಾಣವಾಗಿದೆ. ಉಳಿದ ಗದ್ದುಗೆಗಳಿಗೂ ಮಂಟಪ ನಿರ್ಮಾಣದ ಯೋಜನೆ ರೂಪಿಸಲಾಗಿದೆ. ಈ ಎಲ್ಲಾ ಗದ್ದುಗೆಗಳಿಗೆ ನಿತ್ಯಪೂಜೆ ನಡೆಸಲಾಗುತ್ತಿದೆ. ಶಿವಾನುಭವ ಕಾರ್ಯಕ್ರಮ, ಸಾಹಿತ್ಯಿಕ ಕಾರ್ಯಕ್ರಮ ಗಳನ್ನು ಹಮ್ಮಿಕೊಂಡು ವಚನ ಸಾಹಿತ್ಯದ ಪ್ರಚಾರದ ಜತೆಗೆ ಸರ್ವಧರ್ಮ ಸಮನ್ವಯ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

ವಿಳಾಸ:ಶ್ರೀ ಮ.ನಿ.ಪ್ರ.ಸಿದ್ಧೇಶ್ವರ ಸ್ವಾಮಿಗಳು,ಶ್ರೀ ಕೋರಿಟೊಪ್ಪಿಗೆವಿರಕ್ತಮಠ, ಶಿರಾಳಕೊಪ್ಪ, ಶಿಕಾರಿಪುರ ತಾ, ಶಿವಮೊಗ್ಗ ಜಿಲ್ಲೆ.

ಶಿವನಪಾದ

ಶಿಕಾರಿಪುರ ತಾಲ್ಲೂಕಿನ ಶಿವನಪಾದ ಗ್ರಾಮವು ತಾಲ್ಲೂಕು ಕೇಂದ್ರದಿಂದ ಹದಿನೈದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ತರಳಬಾಳು ಶಾಖಾಮಠವು ಅಸ್ತಿತ್ವದಲ್ಲಿದೆ.

ತರಳಬಾಳು ಶಾಖಾಮಠ: ಶಿವನಪಾದ ಗ್ರಾಮದಲ್ಲಿ ಸ್ಥಾಪನೆಯಾದ ಶ್ರೀ ತರಳಬಾಳು ಶಾಖಾಮಠವು ಮುನ್ನೂರು ವರ್ಷಗಳ ಹಿಂದೆ ಇಕ್ಕದಮಾರಯ್ಯ ಮತ್ತು ಕೊಡದ ಮಾರವ್ವೆಯರ ಲೀಲಾ ಕ್ಷೇತ್ರವಾಗಿತ್ತು. ಇವರಿಬ್ಬರು ತಪಸ್ಸನ್ನು ಆಚರಿಸಿ ಶಿವನನ್ನು ಒಲಿಸಿಕೊಂಡರು. ಇವರ ಭಕ್ತಿಗೆ ಒಲಿದ ಶಿವನು ನಿಮಗೇನು ಬೇಕು ಬೇಡಿಕೊಳ್ಳಿ ಎಂದು ಕೇಳಿದಾಗ 'ಇಲ್ಲಿ ನಿನ್ನ ಪಾದಗಳನ್ನು

ಇಡು ಪಾದ ಪೂಜೆ ಮಾಡಿ ಕೊಂಡು ಬದುಕುತ್ತೇವೆ' ಎಂದು ಬೇಡಿಕೊಂಡರು. ಆಗ ಶಿವನು ಭಕ್ತರ ಆಸೆಯನ್ನು ಈಡೇರಿಸಲು ತನ್ನ ಪಾದಗಳನ್ನು ಇಟ್ಟು ಹೋದನು. ಅಂದಿನಿಂದ ಈ ಊರು ಶಿವನಪಾದವಾಗಿ ಹೆಸರು ಪಡೆಯಿತು. ನಂತರ ಶ್ರೀ ಶಿವಾನಂದ ಸ್ವಾಮಿಗಳು ಈ ಕ್ಷೇತ್ರದಲ್ಲಿ ಮಠವನ್ನು ಸ್ಥಾಪಿಸಿ ಶರಣ ಕ್ಷೇತ್ರವನ್ನಾಗಿ ರೂಪಿಸಿದರು. ಈಗ ಈ ಮಠವು ಸಿರಿಗೆರೆಯ ಬೃಹನ್ಮಠದ ಶಾಖಾಮಠವಾಗಿ ಅಭಿವೃದ್ಧಿಗೊಂಡಿದೆ. ಇಲ್ಲಿ ಶ್ರೀ ಶಿವಾನಂದ ಪ್ರೌಢಶಾಲೆ ನಡೆಯುತ್ತಿದೆ.

ವಿಳಾಸ:ಜಗದ್ಗುರು ಶ್ರೀ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ತರಳಬಾಳು ಬೃಹನ್ಮಠ, ಸಿರಿಗೆರೆ, ಚಿತ್ರದುರ್ಗ ತಾಲ್ಲೂಕು.

ಸಾಲೂರು

ಶಿಕಾರಿಪುರ ತಾಲ್ಲೂಕಿನ ಸಾಲೂರು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಎಂಟು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಸಾಲೂರಿನಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ಎಂಟುನೂರು ವರ್ಷಗಳ ಹಿಂದೆ ಕಾಶಿ ಪೀಠದ ಶಾಖಾಮಠವಾಗಿ ಬೆಳೆದು ಈ ಭಾಗದ ಧಾರ್ಮಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಕೇಂದ್ರವಾಗಿ ರೂಪುಗೊಂಡು ಬೆಳೆದಿದೆ. ಸಾಲೂರು ಗ್ರಾಮದ ದಕ್ಷಿಣ ಭಾಗದಲ್ಲಿ ಸ್ಥಾಪನೆಗೊಂಡಿರುವ ಹಿರೇಮಠದ ಕೀರ್ತಿಯು ಜನಮನದಲ್ಲಿ ಬೇರೂರಿರುವ ಈ ಮಠವು ಗುರುಪರಂಪರೆಯಲ್ಲಿ ಬೆಳೆದಿದೆ.

ಪರಂಪರೆ:
೧.ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೨.ಷ.ಬ್ರ.ಶ್ರೀ ಪಂಚಾಕ್ಷರಿ ಶಿವಾಚಾರ್ಯಸ್ವಾಮಿಗಳು
೩.ಷ.ಬ್ರ.ಶ್ರೀ ಚನ್ನವೀರ ಶಿವಾಚಾರ್ಯಸ್ವಾಮಿಗಳು
೪.ಷ.ಬ್ರ.ಶ್ರೀ ಪಂಚಾಕ್ಷರಿ ಶಿವಾಚಾರ್ಯಸ್ವಾಮಿಗಳು

ಈ ರೀತಿ ನಾಲ್ಕು ಹೆಸರುಗಳನ್ನು ಗುರುತಿಸಬಹುದಾಗಿದೆ. ಅಲ್ಲದೆ ಮಠದ ಆವರಣದಲ್ಲಿ ಒಟ್ಟು ಐದು ಗದ್ದುಗೆಗಳು ಇದ್ದು ನಾಲ್ಕು ಗದ್ದುಗೆಗಳನ್ನು ಗುರುತಿಸಬಹುದಾದರೂ ಉಳಿದ ಒಂದು ಗದ್ದುಗೆ ಯಾರ ಹೆಸರಿನಲ್ಲಿ ಸ್ಥಾಪಿತವಾಗಿದೆ ಎಂದು ಗುರುತಿಸಲು ಸಾಧ್ಯವಾಗಿಲ್ಲ. ಅಲ್ಲದೆ ಚಾಮರಾಜನಗರ ಜಿಲ್ಲೆಯ ಮಲೆಮಹದೇಶ್ವರ ಬೆಟ್ಟದಲ್ಲಿ ಈ ಮಠದ ಪರಂಪರೆಯ ಸ್ವಾಮಿಗಳು ಮಠದ ಮೊದಲ ಗುರುಗಳಾಗಿ ಮಠವನ್ನು ಕಟ್ಟಿ ಬೆಳೆಸಿ ಲಿಂಗೈಕ್ಯರಾಗುತ್ತಾರೆ.ಅವರ ಗದ್ದುಗೆ ಮಾದೇಶ್ವರಬೆಟ್ಟದ ಸಾಲೂರು ಮಠದಲ್ಲಿ ನಿರ್ಮಾಣವಾಗಿದೆ. ಅಲ್ಲದೆ ರಾಣೆಬೆನ್ನೂರು ತಾಲ್ಲೂಕಿನ ಅಸುಂಡಿ ಮಠದಲ್ಲಿ ಮೂರು ಗದ್ದುಗೆಗಳು ನೋಡಸಿಗುತ್ತವೆ. ಹಿಂದೆ ಮಠದಲ್ಲಿ ಆಕಸ್ಮಿಕವಾಗಿ ಬೆಂಕಿ ಬಿದ್ದು ಮಠದಲ್ಲಿ ಇದ್ದ ದಾಖಲೆ ಪತ್ರಗಳು ಸುಟ್ಟು ಹೋಗಿರುವ ಕಾರಣ ಮಠದ ಇತಿಹಾಸವನ್ನು ನಿಖರವಾಗಿ ದಾಖಲಿಸಬಹುದಾದ ಕೆಲವು ದಾಖಲೆಗಳು ಇಲ್ಲವಾಗಿವೆ.

ಪಟ್ಟಾಧಿಕಾರ: ಕೇಶಕಂಡನ, ಅರಿಶಿನಲೇಪನ, ಅಭಿಷೇಕ, ವೇದೋಕ್ತ ಶಾಸ್ತ್ರ ಹಾಗೂ ಮೂಲ ದೇವರ ದರ್ಶನದ ನಂತರ ಜಗದ್ಗುರು ಸಮ್ಮುಖದಲ್ಲಿ ಶಾಖಾ ಶಿವಾಚಾರ್ಯರಿಂದ ಮುದ್ರಾಪಾತ್ರೆ, ಪಟ್ಟಬಂಧ ನೀಡಿದ ನಂತರ ಪಟ್ಟಾಧಿಕಾರದ ಅನುಗ್ರಹ ನೀಡಲಾಗುವುದು. ಈ ಎಲ್ಲಾ ಶಾಸ್ರೋಕ್ತ ಕಾರ್ಯಕ್ರಮಗಳು ನಡೆದ ಮೇಲೆ ಸಭಾಕಾರ್ಯ ನಡೆಯುತ್ತಿದೆ. ಈ ಎಲ್ಲಾ ಸಂಪ್ರದಾಯಗಳನ್ನು ಪಾಲಿಸಿ ೧೯೯೨ರ ಜುಲೈ ಏಳರಂದು ಹನ್ನೊಂದನೆಯ ಗುರುಗಳಾಗಿ ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು ಪಟ್ಟಾಧಿಕಾರ ಪಡೆಯುತ್ತಾರೆ. ಹೊಸಪೇಟೆ ತಾಲ್ಲೂಕಿನ ಬುಕ್ಕಸಾಗರ ಮಠದ ಶ್ರೀ ಕರಿಸಿದ್ಧ ಶಿವಯೋಗಿ ಶಿವಾಚಾರ್ಯ ರಿಂದ ಪಟ್ಟಾಧಿಕಾರ ಅನುಗ್ರಹ ಪಡೆದು, ಅಧಿಕಾರಕ್ಕೆ ಬಂದ ಸ್ವಾಮಿಗಳು ಕ್ರಿಯಾಶೀಲ ಗುಣಗಳಿಂದ ಬೆಳೆದು ನಿಂತ ಮಠವನ್ನು ಹೆಚ್ಚು ವಿಸ್ತಾರಗೊಳಿಸಲು ಮುಂದಾಗಿದ್ದಾರೆ.

ಶಾಖಾಮಠಗಳು: ಮಲೆಮಾದೇಶ್ವರ ಬೆಟ್ಟದಲ್ಲಿ ಸಾಲೂರು ಮಠ ಶಾಖಾಮಠವಾಗಿದೆ. ಬೆಂಗಳೂರಿನ ವಸಂತ ನಗರದಲ್ಲಿರುವ ಸಾಲೂರು ಮಠವು ಈ ಹಿರೇಮಠದ ಶಾಖಾಮಠವಾಗಿದೆ. ಅಲ್ಲದೆ ಸಾಗರದಲ್ಲಿ ಈಗ ವೀರಭದ್ರಸ್ವಾಮಿ ದೇವಸ್ಥಾನವಾಗಿ

ರೂಪಗೊಂಡಿರುವ ಸ್ಥಳವು ಸಾಲೂರು ಹಿರೇಮಠದ ಜಾಗವಾಗಿತ್ತು. ಶಿವಮೊಗ್ಗ ನಗರದಲ್ಲಿ ಬಸವನ ಗುಡಿಯಲ್ಲಿ ಒಂದು ಶಾಖಾಮಠವಿತ್ತು.ಆದರೆ ಈ ಜಾಗದಲ್ಲಿ ಈಗ ಲಿಂಗ ಮಾತ್ರ ಇದೆ. ರಾಣೆಬೆನ್ನೂರು ತಾಲ್ಲೂಕಿನ ಅಸುಂಡಿಯ ಶಾಖಾ ಮಠದಲ್ಲಿ ರೇಣುಕಾಚಾರ್ಯ ಮಂದಿರ ಪಾರ್ವತಿ ಮಂಟಪ ಇದೆ. ಈ ಮಠ ಜೀರ್ಣಗೊಂಡ ಸಂದರ್ಭದಲ್ಲಿ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಜೀರ್ಣೋದ್ಧಾರ ಮಾಡಿದ್ದಾರೆ. ಈ ಎಲ್ಲಾ ಶಾಖಾಮಠಗಳಲ್ಲಿ ನಿತ್ಯ ಪೂಜೆ ನಡೆಯುತ್ತಿದೆ. ಅಲ್ಲದೆ ಅಸುಂಡಿ ಮಠದ ಹೆಸರಿನಲ್ಲಿ ಶಾಲೆ ಪ್ರಾರಂಭಗೊಂಡಿದೆ. ಸಾಲೂರು ಮಠವು ಈಗ ಸ್ವತಂತ್ರವಾಗಿದ್ದು ಉಳಿದ ನಾಲ್ಕು ಶಾಖಾಮಠಗಳು ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಹೆಚ್ಚು ಅಭಿವೃದ್ಧಿ ಕಂಡಿವೆ ಎಂದು ಮಠದ ದಾಖಲೆಯಲ್ಲಿ ಸಿಗುತ್ತದೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಈಶ್ವರ, ಗಣಪತಿ, ಪಾರ್ವತಿ ಮತ್ತು ಜ್ಞಾನೇಶ್ವರ ಹಾಗೂ ಮೂಲದೇವ ಶೀಲವಂತ ಸಿದ್ದೇಶ್ವರ ದೇವಾಲಯ ಸ್ಥಾಪನೆಯಾಗಿವೆ. ಅಮಾವಾಸ್ಯೆ ದಿನ ವಿಶೇಷ ಪೂಜೆ ನಡೆಸಲಾಗುತ್ತಿದೆ. ಅಲ್ಲದೆ ಪ್ರತಿ ಶ್ರಾವಣಮಾಸದಲ್ಲಿ ರುದ್ರಾಭಿಷೇಕ ಪೂಜೆ ನಡೆಯುತ್ತಿದೆ. ಸ್ವಾಮಿಗಳು ಆಹ್ವಾನ ಬಂದ ಕಡೆಗೆ ಹೋಗಿ ದೀಕ್ಷಾಕಾರ್ಯ, ಯಜ್ಞ ಯಾಗಾದಿಗಳನ್ನು ಮಾಡಿ ಬರುತ್ತಾರೆ. ಈವರೆಗೆ ಹದಿಮೂರು ರುದ್ರಯಜ್ಞ ಮಾಡಲಾಗಿದ್ದು ಭಕ್ತರು ಕರೆದಲ್ಲಿಗೆ ಹೋಗಿ ಧಾರ್ಮಿಕ ಕಾರ್ಯಮುಗಿಸಿ ಬರುತ್ತಾರೆ. ಈ ದೃಷ್ಟಿಯಿಂದ ಮಠ ಜನಮನದಲ್ಲಿ ಬೇರೂರಲು ಕಾರಣಕರ್ತರಾಗಿದ್ದಾರೆ. ಅಲ್ಲದೆ ಮಠಕ್ಕೆ ಬಂದ ಭಕ್ತರಿಗೆ ದಾಸೋಹ ವ್ಯವಸ್ಥೆ, ಉಚಿತ ಲಿಂಗ, ವಿಭೂತಿ ನೀಡಿ ಧಾರ್ಮಿಕ ಸೇವೆ ನಡೆಸುತ್ತಾರೆ.

ಅಭಿವೃದ್ಧಿ ಕಾರ್ಯಗಳು: ೧೯೮೩ರಲ್ಲಿ ಲಿಂಗೈಕ್ಯರಾದ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಪವಾಡಪುರುಷರಾಗಿದ್ದು ಇವರ ಕಾಲದಲ್ಲಿ ಮಠವು ಹೆಚ್ಚು ಅಭಿವೃದ್ಧಿಗೊಂಡ ಲಕ್ಷಣಗಳು ಕಂಡು ಬರುತ್ತಿವೆ. ಅಲ್ಲದೆ ಈ ಭಾಗದ ಜನರ ಬಾಯಲ್ಲಿ ಗುರುಗಳು ಜನಪದ ಕತೆಯಾಗಿ ರೂಪಗೊಂಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಇಂತಹ ಪವಾಡಪುರುಷರು ಬಾಳಿದ ಈ ಮಠದಲ್ಲಿ ಬೆಂಕಿ ಅನಾಹುತ ನಡೆದು ಪ್ರಾಚೀನವಾಗಿ ಬಂದ ಪಾಣಿಬಟ್ಟಲು, ಮುದ್ರೆಪಾತ್ರೆ, ಛತ್ರಿ, ಚಾಮರಗಳು ಹಿಂದಿನ ಗುರುಗಳ ಪಾದುಕೆಗಳು ಮಾತ್ರ ಸಿಗುತ್ತವೆ. ಇತ್ತೀಚೆಗೆ ಮಾಡಿಸಿದ ಬೆಳ್ಳಿ ಮತ್ತು ರುದ್ರಾಕ್ಷಿಕಿರೀಟ ಮಠದಲ್ಲಿ ಲಭ್ಯ ಇವೆ.

ಸಾಮಾಜಿಕ ಸೇವೆ: ಎಲ್ಲಾ ಕಡೆ ಶಿಕ್ಷಣಸಂಸ್ಥೆ ನಡೆಸಿ ಸರ್ಕಾರದಿಂದ ಅನುದಾನ ಪಡೆದರೆ ಈ ಮಠದಲ್ಲಿ ಪಾಠಶಾಲೆ ಸ್ಥಾಪಿಸಿ ಸುಸಜ್ಜಿತ ಕಟ್ಟಡದೊಂದಿಗೆ ಸರ್ಕಾರಕ್ಕೆ ಬಿಟ್ಟುಕೊಡಲಾಗಿದೆ. ಅದೇ ರೀತಿ ಪಶು ವೈದ್ಯಶಾಲೆ, ಜನರಲ್ ಆಸ್ಪತ್ರೆ ಕಟ್ಟಿಸಿಕೊಟ್ಟು ಸರ್ಕಾರಕ್ಕೆ ಒಪ್ಪಿಸಲಾಗಿದೆ. ಈವರೆವಿಗೆ ಸುಮಾರು ಐವತ್ತೈದು ದೇವಾಲಯಗಳಿಗೆ ಧನಸಹಾಯ ಮಾಡಲಾಗಿದೆ. ಸಾಹಿತ್ಯ ಭಂಡಾರವನ್ನು ಸ್ಥಾಪಿಸಿ ಸಾವಿರಾರು ಪುಸ್ತಕ ಸಂಗ್ರಹ ಮಾಡಲಾಗಿದೆ. ಮಠದ ವತಿಯಿಂದ ಸಾರ್ವಜನಿಕ ಉಪಯೋಗಕ್ಕಾಗಿ 'ಲಿಂಗಪೂಜಾವಿಧಾನ' ಎಂಬ ಕಿರು ಹೊತ್ತಿಗೆ ಪ್ರಕಟಿಸಲಾಗಿದೆ. ಈ ಮಠದ ಆಸ್ತಿಯಾಗಿದ್ದ ಹದಿನಾರು ಎಕರೆ ನೀರಾವರಿ ಭೂಮಿಯಲ್ಲಿ ಆದಾಯ ಪಡೆದು ಸಾಮಾಜಿಕ, ಧಾರ್ಮಿಕ ಕೆಲಸಗಳಿಗೆ ವಿನಿಯೋಗ ಮಾಡಲಾಗುತ್ತಿದೆ. ಮಠದ ಆವರಣದಲ್ಲಿ ವೇದ, ಜ್ಯೋತಿಷ್ಯಶಾಲೆ ತೆರೆಯಲಾಗಿದೆ. ಈ ಮಕ್ಕಳಿಗೆ ಉಚಿತ ಪ್ರಸಾದ, ವಸತಿ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳ ಕ್ರಿಯಾಶೀಲ ಚಟುವಟಿಕೆಯಿಂದ ಮಠ ಹೆಚ್ಚು ಅಭಿವೃದ್ಧಿಯಾಗುತ್ತಿದೆ. ಗುರುಗಳು ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ ವೀರಶೈವ ಸಿದ್ಧಾಂತವನ್ನು ಪ್ರಚಾರ ಮಾಡುತ್ತಾ, ಸಮಾಜವನ್ನು ಧಾರ್ಮಿಕ ತಳಹದಿಯ ಮೇಲೆ ನಿರ್ಮಿಸಲು ಶ್ರಮಿಸುತ್ತಿದ್ದಾರೆ. ಇವರು ನೀಡಿರುವ ದಾನ ಧರ್ಮಗಳು ಇವರ ಸಾಮಾಜಿಕ ಕಳಕಳಿಗೆ ಸಾಕ್ಷಿಗಳಾಗಿವೆ. ಇವರ ಆಡಳಿತ ಇತರರಿಗೆ ಮಾದರಿಯಾಗಿವೆ.

ವಿಳಾಸ: ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಸಾಲೂರು ಹಿರೇಮಠ, ಸಾಲೂರು, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

❑

ಸಾಗರ ತಾಲ್ಲೂಕು

ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕು ಐತಿಹಾಸಿಕವಾಗಿ ಪ್ರಸಿದ್ಧಿ ಪಡೆದಿದೆ. ಸಹ್ಯಾದ್ರಿ ಸಾಲಿನಲ್ಲಿ ಮೈದಳೆದಿರುವ ಈ ತಾಲ್ಲೂಕು ಅಡಿಕೆ ಬೆಳೆಯಿಂದ ಶ್ರೀಮಂತಿಕೆಯನ್ನು ಕಂಡಿದೆ. ಇಲ್ಲಿ ಹಿಂದೆ ವೀರಶೈವಧರ್ಮ ಪ್ರಮುಖವಾಗಿ ಬೆಳೆದಿತ್ತು. ನಂತರ ಕ್ಷೀಣಿಸಿದ ಲಕ್ಷಣಗಳು ಕಂಡುಬರುತ್ತದೆ. ಪ್ರಸ್ತುತ ಈ ತಾಲ್ಲೂಕಿನಲ್ಲಿ ನಾಲ್ಕು ಮಠಗಳು ಅಸ್ತಿತ್ವದಲ್ಲಿದ್ದು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ.

ಆನಂದಪುರಂ

ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಆನಂದಪುರಂ ಒಂದು ಚಿಕ್ಕಪಟ್ಟಣ. ಈ ಪಟ್ಟಣದ ಪೂರ್ವದಿಕ್ಕಿನಲ್ಲಿದೆ. ಹಿಂದೆ ಮಾಚರಾಜಪುರ ಎಂಬುದು ನಂತರ ಆಚಪುರವಾಯಿತು. ಕೆಳದಿಯ ಸೋಮಶೇಖರ ನಾಯಕನ ಕಾಲದಲ್ಲಿ (೧೭೦೦) ಆನಂದಪುರಂ ಆಗಿ ನಾಮಾಂತರ ಪಡೆದಿದೆ. ಜಗದ್ಗುರು ಶ್ರೀ ಮುರುಘ ರಾಜೇಂದ್ರ ಸಂಸ್ಥಾನ ಮಠವು ಪ್ರಕೃತಿ ಶ್ರೀಮಂತಿಕೆಯ ವಾತಾವರಣದಲ್ಲಿ ತಲೆಎತ್ತಿ ನಿಂತಿದೆ.

ಜಗದ್ಗುರು ಶ್ರೀ ಮುರುಘ ರಾಜೇಂದ್ರ ಸಂಸ್ಥಾನಮಠ: ಆನಂದಪುರಂ ಪಟ್ಟಣದಲ್ಲಿ ಮಠ ಸ್ಥಾಪನೆ ಮಾಡಬೇಕು ಎಂಬ ಹಂಬಲದಿಂದ ಸೋಮಶೇಖರ ನಾಯಕನು ಚಿತ್ರದುರ್ಗದ ಮುರುಘಾಮಠದ ಶ್ರೀ ಇಮ್ಮಡಿ ಗುರುಸಿದ್ಧ ಸ್ವಾಮಿಗಳನ್ನು ರಾಜಮರ್ಯಾದೆಯಿಂದ ಕರೆಸಿಕೊಂಡು ಆನಂದಪುರಂನಲ್ಲಿ ಅವರಿಗೆ ಪಟ್ಟ ಕಟ್ಟಿ ಮುರುಘಾಮಠದ ಮೂಲ ಮಠವೆಂದು ಮನ್ನಣೆ ಕೊಟ್ಟು ಎಂಬತ್ತೆರಡು ಬಿರುದುಗಳನ್ನು ನೀಡಿ ಗೌರವಿಸಿರುತ್ತಾನೆ. ಈ ಬಗ್ಗೆ ಶಾಸನವೊಂದನ್ನು ಸಹ ಬರೆಯಿಸಿಕೊಟ್ಟಿರುತ್ತಾನೆ. ಅಂದಿನಿಂದ ಆನಂದಪುರಂನ ಮಠವು ಮುರುಘಾ ಸಮಯದ ಮಠಗಳಲ್ಲಿಯೇ ಅತ್ಯಂತ ಹೆಚ್ಚುಗಾರಿಕೆಯನ್ನು ಪಡೆದುಕೊಂಡಿತು. ಇದೇ ಸಂದರ್ಭದಲ್ಲಿ ಸೋಮಶೇಖರ ನಾಯಕ ಶಿವಮೊಗ್ಗದ ಬೆಕ್ಕಿನಕಲ್ಮಠದ ಆಡಳಿತವನ್ನು ಆನಂದಪುರಂಗೆ ವರ್ಗಾಯಿಸಿ ಧಾರ್ಮಿಕ ಚಟುವಟಿಕೆಗಳಿಗೆ ತೊಂದರೆಯಾಗದಂತೆ ನಡೆದುಕೊಂಡು ಹೋಗಲು ಮೂರು ಗ್ರಾಮಗಳನ್ನು ದತ್ತಿ ಬರೆದುಕೊಟ್ಟ ಉಲ್ಲೇಖಗಳು ಸೋಮಶೇಖರ ನಾಯಕನು ಬರೆಸಿಕೊಟ್ಟ ತಾಮ್ರ ಶಾಸನದಲ್ಲಿ ದೊರೆಯುತ್ತವೆ.

ಪರಂಪರೆ: ಶಿವಮೊಗ್ಗದ ಬೆಕ್ಕಿನ ಕಲ್ಮಠದಲ್ಲಿ ಬೆಳೆದ ಪರಂಪರೆಯ ಆರು ತಲೆಮಾರುಗಳ ನಂತರ ಇಲ್ಲಿಗೆ ವರ್ಗಾವಣೆಗೊಂಡ ಮಠದ ಪರಂಪರೆಯ ಕೊಂಡಿಯಾಗಿ ಏಳನೆಯ ಗುರುಗಳಾಗಿ ಶ್ರೀ ಗುರುಸಿದ್ಧ ಸ್ವಾಮಿಗಳು ಅಧಿಕಾರ ವಹಿಸಿಕೊಂಡು ಶ್ರೀಮುರುಘರಾಜೇಂದ್ರ ಸಂಸ್ಥಾನ ಮಠದ ಗುರು ಪರಂಪರೆಯನ್ನು ಬೆಳೆಸಿದ್ದಾರೆ.

೭. ಜಗದ್ಗುರು ಶ್ರೀ ಮ.ನಿ.ಪ್ರ. ಇಮ್ಮಡಿ ಗುರುಸಿದ್ಧಸ್ವಾಮಿಗಳು	-ಕ್ರಿ.ಶ.೧೭೧೦
೮. ಜಗದ್ಗುರು ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು	-ಕ್ರಿ.ಶ.೧೭೪೦
೯. ಜಗದ್ಗುರು ಶ್ರೀ ಮ.ನಿ.ಪ್ರ. ಗುರುಲಿಂಗಸ್ವಾಮಿಗಳು	-ಕ್ರಿ.ಶ.೧೭೭೦
೧೦. ಜಗದ್ಗುರು ಶ್ರೀ ಮ.ನಿ.ಪ್ರ. ಲಿಂಗಸ್ವಾಮಿಗಳು	-ಕ್ರಿ.ಶ.೧೮೦೦
೧೧. ಜಗದ್ಗುರು ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು	-ಕ್ರಿ.ಶ.೧೮೩೦
೧೨. ಜಗದ್ಗುರು ಶ್ರೀ ಮ.ನಿ.ಪ್ರ. ಇಮ್ಮಡಿ ಮುದ್ದವೀರಸ್ವಾಮಿಗಳು	-ಕ್ರಿ.ಶ.೧೮೬೦
೧೩. ಜಗದ್ಗುರು ಶ್ರೀ ಮ.ನಿ.ಪ್ರ. ಇಮ್ಮಡಿ ಶಾಂತವೀರಸ್ವಾಮಿಗಳು	-ಕ್ರಿ.ಶ.೧೮೯೦
೧೪. ಜಗದ್ಗುರು ಶ್ರೀ ಮ.ನಿ.ಪ್ರ. ಗುರುಬಸವಸ್ವಾಮಿಗಳು	-ಕ್ರಿ.ಶ.೧೯೦೦
೧೫. ಜಗದ್ಗುರು ಶ್ರೀ ಮ.ನಿ.ಪ್ರ. ಇಮ್ಮಡಿಲಿಂಗಸ್ವಾಮಿಗಳು	-ಕ್ರಿ.ಶ.೧೯೦೫
೧೬. ಜಗದ್ಗುರು ಶ್ರೀ ಮ.ನಿ.ಪ್ರ. ಸಚ್ಚಿದಾನಂದಸ್ವಾಮಿಗಳು	-ಕ್ರಿ.ಶ.೧೯೨೬
೧೭. ಜಗದ್ಗುರು ಶ್ರೀ ಮ.ನಿ.ಪ್ರ. ಮಲ್ಲಿಕಾರ್ಜುನಸ್ವಾಮಿಗಳು	-ಕ್ರಿ.ಶ.೧೯೭೭ (ಈಗಿನವರು)

ಈ ರೀತಿ ಆನಂದಪುರಂ ಮುರುಘಾ ಮಠದ ಪರಂಪರೆಯು ಬೆಳೆದು ಬಂದಿದ್ದು ಲಿಂಗೈಕ್ಯ ಹದಿನಾರು (ಜೆಕ್ಕಿನಕಲ್ಮಠವೂ ಸೇರಿ) ಜನ ಗುರುಗಳ ಪೈಕಿ ಶ್ರೀ ಇಮ್ಮಡಿ ಗುರುಸಿದ್ಧ ಸ್ವಾಮಿಗಳು, ಶ್ರೀ ಇಮ್ಮಡಿ ಮುದ್ವೀರ ಸ್ವಾಮಿಗಳು, ಶ್ರೀ ಇಮ್ಮಡಿ ಲಿಂಗ ಸ್ವಾಮಿಗಳು ಹಾಗೂ ಶ್ರೀ ಸಚ್ಚಿದಾನಂದ ಸ್ವಾಮಿಗಳ ಗದ್ದುಗೆಗಳು ಈ ಮಠದ ಆವರಣದಲ್ಲಿ ಸ್ಥಾಪನೆಯಾಗಿವೆ. ಉಳಿದ ಹನ್ನೆರಡು ಜನ ಗುರುಗಳ ಗದ್ದುಗೆಗಳು ಲಭ್ಯವಿಲ್ಲ.

ಶಾಖಾಮಠ: ಪರಂಪರೆಯ ಮೂಲಸ್ಥಳ ಎಲವಟ್ಟಿಯ ಜೆಕ್ಕಿನಕಲ್ಮಠ ಆದರೂ, ಈಗ ಎಲವಟ್ಟಿ ಶಾಖಾಮಠವಾಗಿದೆ. ಅದೇರೀತಿ ಶಿವಮೊಗ್ಗದ ಜೆಕ್ಕಿನಕಲ್ಮಠ, ಸಾಗರ ತಾಲ್ಲೂಕಿನ ತಾರೆಕಟ್ಟೆ, ಹಾರ್ನಳ್ಳಿಯ ಚೌಕಿಮಠ, ಅತ್ತಿಗುಂದ, ಮುದ್ದಿನಕೊಪ್ಪ ಹಾಗೂ ಮಳಲಿಯಲ್ಲಿ ಶಾಖಾಮಠಗಳು ಅಸ್ತಿತ್ವದಲ್ಲಿವೆ. ಅಲ್ಲದೆ ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ತಾಲ್ಲೂಕಿನ ಮುತ್ತಿನ ಕೊಪ್ಪ, ಧಾರವಾಡ ಜಿಲ್ಲೆಯ ಅಬ್ಬಿಗೆರೆ, ಸಂಸಿ ಹಾಗೂ ಮಹಾರಾಷ್ಟ್ರದ ಸೋಲಾಪುರದ ಮಠ ಶಾಖಾಮಠಗಳಾಗಿವೆ.

ವಿಶೇಷ ಕೊಡುಗೆ: ಕೆಳದಿಯ ಅರಸರ ಕಾಲದಲ್ಲಿ ರಾಜಾಶ್ರಯದಲ್ಲಿ ಬೆಳೆದ ಈ ಮಠ ಕೆಳದಿಯ ಎಲ್ಲಾ ರಾಜರಿಂದ ದತ್ತಿ ಪಡೆದು ಧಾರ್ಮಿಕ ಕಾರ್ಯಗಳನ್ನು ಮಾಡಿಕೊಂಡು ಬಂದಿದೆ. ಈ ಕಾಲದಲ್ಲಿ ಸ್ವಾಮಿಗಳ ಪೂಜೆ ಸಂದರ್ಭದಲ್ಲಿ ಉಪಯೋಗಿಸಲು ರುದ್ರಾಕ್ಷಿಯಲ್ಲಿ ಮಾಡಿಸಿದ ದೊಡ್ಡ ಮಂಟಪ, ಕಂಚಿನ ದೀಪದ ರಥ ಬೇರೆ ಎಲ್ಲಿಯೂ ನೋಡಲು ಸಿಗದಂತಹ ಅಪರೂಪದ ಕಲಾಕೃತಿಗಳಾಗಿವೆ. ಕೆಳದಿಯ ಅರಸರು ಮಾಡಿಸಿಕೊಟ್ಟ ರುದ್ರಾಕ್ಷಿ ಮಂಟಪದಲ್ಲಿ ಸ್ವಾಮಿಗಳು ಕುಳಿತು ಪ್ರತಿನಿತ್ಯ ಪೂಜೆ ನಡೆಸುತ್ತಾರೆ. ಅಲ್ಲದೆ ಪರಂಪರೆಯಲ್ಲಿ ಬಂದಂತಹ ನಂದಿ ವಿಗ್ರಹ ಇದ್ದು ಇದನ್ನು ಅಭಿಷೇಕದ ಸಂದರ್ಭದಲ್ಲಿ ಬಳಸಿಕೊಳ್ಳಲಾಗುತ್ತದೆ. ಈ ಎಲ್ಲಾ ವಿಶೇಷ ಕೊಡುಗೆಗಳ ಜೊತೆಗೆ ರಾಜ ಉಂಗುರ, ಬಿರುದಾವಳಿಗಳು ರಾಜವಂಶಸ್ಥರಿಂದ ಕೊಡುಗೆಗಳಾಗಿ ಸಿಕ್ಕಿವೆ.

ಸಾಹಿತ್ಯಸೇವೆ: ಮಠದ ಪರಂಪರೆಯಲ್ಲಿ ಬರುವ ಬಹುತೇಕ ಗುರುಗಳು ಸಾಹಿತ್ಯಾಸಕ್ತರಾಗಿದ್ದಾರೆ ಇದು ಒಂದು ವಿಶೇಷ.ಲಿಂಗೈಕ್ಯ ಶ್ರೀ ಇಮ್ಮಡಿ ಗುರುಸಿದ್ಧ ಸ್ವಾಮಿಗಳು ಸ್ವತಃ ಕವಿಗಳಾಗಿದ್ದು ಇಪ್ಪತ್ತೊಂದು ಕೃತಿಗಳನ್ನು ರಚನೆ ಮಾಡಿದ್ದಾರೆ. ಇವುಗಳಲ್ಲಿ ವೀರಶೈವ ಅಧ್ಯಯನ ಸಂಸ್ಥೆಯು ಏಳು ಕೃತಿಗಳನ್ನು ಪ್ರಕಟಿಸಿದೆ. ಮೈಸೂರು ವಿಶ್ವವಿದ್ಯಾನಿಲಯವು ಹಾಲಾಸ್ಯ ಪುರಾಣವನ್ನು ಪ್ರಕಟಿಸಿದೆ. ಉಳಿದ ಐದು ಕೃತಿಗಳ ಜೊತೆಗೆ ಕೈವಲ್ಯನಾಮ, ಏಕೋತ್ತರ ಷಟ್‌ಸ್ಥಲ, ಶ್ರೀ ಇಮ್ಮಡಿ ಗುರುಸಿದ್ಧ ಸ್ವಾಮಿಗಳ ವಚನಗಳನ್ನು ಪ್ರಕಟಿಸಬೇಕಾಗಿದೆ.

ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮಿಗಳು ಸಾಹಿತ್ಯದ ಬಗ್ಗೆ ಆಸಕ್ತಿವಹಿಸಿ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಈ ಸಂಸ್ಥೆಯ ವತಿಯಿಂದ ಸುಮಾರು ಹದಿನಾರು ಮೌಲಿಕ ಕೃತಿಗಳು ಪ್ರಕಟಣೆಗೊಂಡಿವೆ. ಕೆಳದಿ ಸಂಸ್ಥಾನದ ಸಮಗ್ರ ಅಧ್ಯಯನ ಮಾಡಿಸಿ, ಕೆಳದಿ ಅರಸರ ಇತಿಹಾಸದ ಮೇಲೆ ಬೆಳಕು ಚೆಲ್ಲುವಂತಹ ಕೃತಿಗಳನ್ನು ಹೊರತಂದಿದ್ದಾರೆ. ನಾಗರಖಂಡ ಎಪ್ಪತ್ತು, ವಚನ ಸಂಗ್ರಹಗಳು, ನಾ ಕಂಡ ಮಲೆನಾಡು ಕೃತಿಗಳು ಪ್ರಕಟಗೊಂಡಿವೆ. ಈ ರೀತಿ ಕನ್ನಡ ಸಾಹಿತ್ಯ ಲೋಕಕ್ಕೆ ಧಾರ್ಮಿಕ ಸಂಶೋಧನಾತ್ಮಕ ಗ್ರಂಥಗಳನ್ನು ನೀಡಿದ ಕೀರ್ತಿ ಈ ಮಠಕ್ಕೆ ಸಲ್ಲುತ್ತದೆ. ಅಲ್ಲದೆ ಕೆಳದಿಅರಸರು ಮತ್ತು ವೀರಶೈವ ಧರ್ಮವನ್ನು ಕುರಿತಂತೆ ಅನೇಕ ವಿಚಾರ ಸಂಕಿರಣಗಳು, ಚರ್ಚೆಗಳು, ಇತಿಹಾಸ ಸಮ್ಮೇಳನಗಳನ್ನು ನಡೆಸಿ, ಅನೇಕ ವಿಷಯಗಳ ಮೇಲೆ ಬೆಳಕು ಚೆಲ್ಲುವಂತಹ ಕೆಲಸ ಮಾಡುತ್ತಿರುವುದು ಇತರ ವೀರಶೈವ ಮಠಗಳಿಗೆ ಆದರ್ಶವಾಗಿದೆ.

ಸಾಧನೆಯ ಶಿಲ್ಪಿ: ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮಿಗಳು ೧೯೭೭ರಲ್ಲಿ ನಿರಾಭಾರಿ ಚರ ಪಟ್ಟಾಧಿಕಾರ ಪಡೆದುಕೊಂಡಂದಿನಿಂದ ಮಠದ ಅಭಿವೃದ್ಧಿ ಕಾರ್ಯಗಳ ಬಗ್ಗೆ,ಧಾರ್ಮಿಕ ವಿಚಾರಗಳ ಬಗ್ಗೆ ಹತ್ತು ಹಲವು ಯೋಜನೆಯನ್ನು ರೂಪಿಸಿಕೊಂಡು ಒಂದು ದಶಕದ ಕಾಲ ಮಠವನ್ನು ಸರ್ವಾಂಗೀಣವಾಗಿ ಅಭಿವೃದ್ಧಿಗೆ ತಂದರು. ನಂತರ ಕೇವಲ ಧಾರ್ಮಿಕ ವಿಚಾರದಿಂದ ಸಮಾಜದ ಅಭಿವೃದ್ಧಿ ಸಾಲದು, ಶಿಕ್ಷಣದಿಂದ ಸಮಾಜದ ಮೂಲಭೂತ ಬದಲಾವಣೆ ಸಾಧ್ಯ ಎಂದು ಅರಿತು, ೧೯೮೦ ರಲ್ಲಿ ಗುರುಬಸವೇಶ್ವರ ವಿದ್ಯಾಪೀಠವನ್ನು ಸ್ಥಾಪಿಸಿ ಆನಂದಪುರಂ, ಶಿವಮೊಗ್ಗ, ಹಾರನಹಳ್ಳಿ, ನ್ಯಾಮತಿಯಲ್ಲಿ

ಸಂಸ್ಕೃತ ಪಾಠಶಾಲೆಗಳು, ಆನಂದಪುರಂ, ಎಲವಟ್ಟಿ, ಮಲವಕೊಪ್ಪದಲ್ಲಿ ನಾಲ್ಕು ಪ್ರೌಢಶಾಲೆಗಳು,ಶಿವಮೊಗ್ಗ, ಎಲವಟ್ಟಿಯಲ್ಲಿ ಎರಡು ಪ್ರಾಥಮಿಕ ಶಾಲೆಗಳು, ಶಿವಮೊಗ್ಗ ಮತ್ತು ಆನಂದಪುರಂನಲ್ಲಿ ಎರಡು ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಿದ್ದಾರೆ. ಅಲ್ಲದೆ ಆನಂದಪುರಂನಲ್ಲಿ ಅನಾಥಾಶ್ರಮ, ಉಚಿತ ವಿದ್ಯಾರ್ಥಿನಿಲಯ, ಸಂಗೀತ ಪಾಠಶಾಲೆಗಳನ್ನು ನಡೆಸುತ್ತಿದ್ದಾರೆ.

ಆನಂದಪುರಂ ಮತ್ತು ಇತರೆ ನಾಲ್ಕು ಶಾಖಾಮಠಗಳ ಜೀರ್ಣಗೊಂಡ ಕಟ್ಟಡವನ್ನು ದುರಸ್ಥಿಗೊಳಿಸಿ ನವೀಕರಿಸಿದ್ದಾರೆ. ಉಳಿದ ಶಾಖಾಮಠಗಳ ಅಭಿವೃದ್ಧಿಯ ಬಗ್ಗೆ ಯೋಜನೆ ತಯಾರಿಸಿಕೊಂಡಿದ್ದಾರೆ. ಸಾಮಾಜಿಕ ಪಿಡುಗಾದ ಮದ್ಯಪಾನವನ್ನು ದೂರಮಾಡಲು ಜಿಲ್ಲಾ ಮದ್ಯಪಾನ ನಿಷೇಧ ಆಂದೋಲನ ಸಮಿತಿಯನ್ನು ಸ್ಥಾಪಿಸಿ ಇದರ ಗೌರವಾಧ್ಯಕ್ಷರಾಗಿದ್ದಾರೆ. ಈ ಸಮಿತಿಯಿಂದ ಹೋರಾಟ ಮಾಡಿ ಅನೇಕ ಮದ್ಯವ್ಯಸನಿಗಳನ್ನು ಮದ್ಯಪಾನ ಮುಕ್ತರನ್ನಾಗಿ ಮಾಡಿದ್ದಾರೆ. ಅಲ್ಲದೆ ಕೋಮು ಸೌಹಾರ್ದಕ್ಕೆ ಅನೇಕ ಕಾರ್ಯಕ್ರಮಗಳು, ಬರಗಾಲ ಪೀಡಿತ ಪ್ರದೇಶಗಳ ಜನರಿಗೆ ನೆರವು ನೀಡುವುದು, ನಾಡಿನಾದ್ಯಂತ ಯಾತ್ರೆ ಮಾಡಿ ನೈತಿಕ ಮೌಲ್ಯ ಬೆಳೆಸುವ ಕಾರ್ಯದಲ್ಲಿ ಸ್ವಾಮಿಗಳು ತೊಡಗಿದ್ದಾರೆ.ಜಿಲ್ಲಾ ವೀರಶೈವ ಮಹಾಸಭೆಯ ಗೌರವಾಧ್ಯಕ್ಷರಾಗಿ ಸಾಮಾಜಿಕ ಸಂಘಟನೆಯಲ್ಲಿ ತೊಡಗಿದ್ದಾರೆ. ವೀರಶೈವ ಮಠಗಳ ಒಕ್ಕೂಟದ ಐದು ಜನ ಸಂಚಾಲಕರಲ್ಲಿ ಒಬ್ಬರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಕರ್ನಾಟಕ ಇತಿಹಾಸ ಅಕಾಡೆಮಿಯ ಜಿಲ್ಲಾಘಟಕದ ಗೌರವಾಧ್ಯಕ್ಷರಾಗಿ ಅನೇಕ ಐತಿಹಾಸಿಕ ವಿಚಾರಗಳು ಬೆಳಕಿಗೆ ಬರಲು ಸಹಾಯಕರಾಗಿದ್ದಾರೆ. ಈ ರೀತಿ ಅನೇಕ ಸಾಮಾಜಿಕ,ಧಾರ್ಮಿಕ ಕ್ಷೇತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ಸ್ವಾಮಿಗಳು, ಅನೇಕ ಸಾಹಿತಿಗಳು ಹಾಗೂ ಕಲಾವಿದರಿಗೆ ಆಶ್ರಯ ನೀಡಿ ಪ್ರೋತ್ಸಾಹಿಸಿದ್ದಾರೆ.

ಧಾರ್ಮಿಕ ಕೆಲಸ: ಪ್ರತಿ ಅಮಾವಾಸ್ಯೆಯ ದಿನ ಶಿವಾನುಭವ ಗೋಷ್ಠಿ ನಿರಂತರವಾಗಿ ನಡೆದುಕೊಂಡು ಬಂದಿದೆ. ಕಾರ್ತೀಕಮಾಸದಲ್ಲಿ ಲಕ್ಷ ದೀಪೋತ್ಸವ ಬಹಳ ಆಕರ್ಷಣೆಯಿಂದ ಜರುಗುತ್ತದೆ. ಈ ಸಂದರ್ಭದಲ್ಲಿ ನಾಡಿನ ವಿವಿಧ ಕ್ಷೇತ್ರಗಳಲ್ಲಿ ದುಡಿದ ಹಿರಿಯರಿಗೆ ಸನ್ಮಾನ ಮತ್ತು ವಿದ್ವಾಂಸರಿಂದ ಉಪನ್ಯಾಸ ನಡೆಯುತ್ತಿದೆ. ಹಿರಿಯ ಲಿಂಗೈಕ್ಯ ಗುರುಗಳ ಆರಾಧನಾ ಕಾರ್ಯಕ್ರಮವನ್ನು ಭಕ್ತರ ಒಟ್ಟಿಗೆ ಆಚರಿಸುತ್ತಿರುವುದು ವಿಶೇಷವಾಗಿದೆ. ಪ್ರತಿನಿತ್ಯ ತ್ರಿಕಾಲ ಪೂಜೆಯ ವ್ಯವಸ್ಥೆ, ಮಠಕ್ಕೆ ಬರುವ ಭಕ್ತರಿಗೆ ದಾಸೋಹ ಹಾಗೂ ವಸತಿ ವ್ಯವಸ್ಥೆಯನ್ನು ಮಾಡಿಸಲಾಗಿದೆ.

'ಗುರು-ವಿರಕ್ತರ ಬಗ್ಗೆ ಇರುವ ಸಂಕುಚಿತತೆ ದೂರವಾಗಿ ಒಳ್ಳೆಯ ಸಾಮರಸ್ಯದ ಸಂಬಂಧ ಮೂಡಬೇಕಾಗಿದೆ. ಇದು ಸಮಾಜದ ಸ್ವಾಸ್ತ್ಯಕ್ಕೆ ಒಳ್ಳೆಯದಾಗುತ್ತದೆ. ಗುರು-ವಿರಕ್ತರ ಮಧ್ಯೆ ಹಿಂದೆ ಇದ್ದ ಬಿರುಕು ಈಗ ಕಡಿಮೆಯಾಗುತ್ತಿದೆ. ಈ ಸಾಮರಸ್ಯ ಇನ್ನೂ ಬೇಗ ಬರಲಿ' ಎಂದು ಸ್ವಾಮಿಗಳು ಆಶಿಸುತ್ತಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಜಗದ್ಗುರು ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮಿಗಳು, ಶ್ರೀ ಮುರುಘರಾಜೇಂದ್ರ ಮಹಾ ಸಂಸ್ಥಾನ ಮಠ, ಆನಂದಪುರಂ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಕೆಳದಿ-ಬಂದಗದ್ದೆ

ಸಾಗರ ತಾಲ್ಲೂಕಿನ ಕೆಳದಿಯು ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಎಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಪುರಾತನ ಕಾಲದ ಕೆಳದಿ ರಾಜಗುರು ಸಂಸ್ಥಾನ ಹಿರೇಮಠವು ಅಸ್ತಿತ್ವದಲ್ಲಿದೆ.

ಕೆಳದಿ ರಾಜಗುರು ಸಂಸ್ಥಾನ ಹಿರೇಮಠ: ಕೆಳದಿಯಲ್ಲಿ ಸ್ಥಾಪನೆಯಾಗಿರುವ ಶ್ರೀ ಹಿರೇಮಠವು ಈ ಭಾಗದ ಪ್ರಮುಖ ಮಠವಾಗಿ ಬೆಳೆದಿದೆ. ಕೆಳದಿ ಅರಸರ ರಾಜಗುರುಗಳಾಗಿದ್ದ ಅಂದಿನ ಗುರುಗಳು ಕೆಳದಿ ಅರಸರ ಅಭ್ಯುದಯಕ್ಕೆ ಕಾರಣರಾಗಿದ್ದರು. ಮಠವು ಸದಾಶಿವ ನಾಯಕರ (ಕ್ರಿ.ಶ.೧೫೧೩-೧೫೪೫) ಕಾಲದಲ್ಲಿ ಪ್ರಾರಂಭವಾಗಿ, ನಂತರ ಚೆನ್ನಮ್ಮಾಜಿಯ (ಕ್ರಿ.ಶ.೧೬೭೨-೧೬೯೭) ಕಾಲದಲ್ಲಿ ಹೆಚ್ಚು ಅಭಿವೃದ್ಧಿಗೊಂಡಿದೆ ಎಂದು ಹೇಳಲಾಗುತ್ತಿದೆ.

ಪರಂಪರೆ: ಈ ಮಠದಲ್ಲಿ ಅನೇಕ ಗುರುಗಳು ಅಧಿಕಾರ ನಡೆಸಿದ್ದು, ಈಗ ಡಾ. ಶ್ರೀ ಗುರುಸಿದ್ಧದೇವ ಶಿವಾಚಾರ್ಯ ಸ್ವಾಮಿಗಳು ಅಧಿಕಾರ ವಹಿಸಿಕೊಂಡಿದ್ದಾರೆ. ಇವರು ಕಾಶಿಯಲ್ಲಿ ಸಂಸ್ಕೃತ ವಿದ್ವಾನ್ ಪದವಿ ಪಡೆದು ಎಂ.ಎ. ಹಾಗೂ ಪಿಎಚ್.ಡಿ.

ಪದವಿಯನ್ನು ಪಡೆದು, ದರ್ಶನಶಾಸ್ತ್ರ ಪೂರ್ಣತ್ವಕಾರ ಬಿರುದು ಪಡೆದು ಸಂಸ್ಕೃತದಲ್ಲಿ ಪಾಂಡಿತ್ಯ ಗಳಿಸಿಕೊಂಡಿದ್ದಾರೆ. ಇಂತಹ ವಿದ್ವತ್ ಪುರುಷರು ೧೯೬೮ರ ಅಕ್ಟೋಬರ್ ಇಪ್ಪತ್ತರಂದು ಪಟ್ಟಾಧಿಕಾರವನ್ನು ಪಡೆದು ಮಠವನ್ನು ಅಭಿವೃದ್ಧಿ ಪಡಿಸುತ್ತಿದ್ದಾರೆ. ಗುರುಗಳು ಬಾದಾಮಿ ತಾಲ್ಲೂಕಿನ ಶಿವಯೋಗ ಮಂದಿರದಲ್ಲಿ ಸಂಸ್ಕೃತ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ, ಈಗ ಕೃಷ್ಣಾ ನದಿಯ ದಡದಲ್ಲಿ ಪ್ರತ್ಯೇಕವಾದ ಮಠವನ್ನು (ಆಶ್ರಮ) ಸ್ಥಾಪಿಸಿಕೊಂಡು ಧಾರ್ಮಿಕ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. ಕೆಳದಿ ಮಠಕ್ಕೆ ಉತ್ತರಾಧಿಕಾರಿಗಳನ್ನು ನೇಮಿಸಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಪುರಾತನ ಮಠವು ಮಣ್ಣಿನ ಗಚ್ಚಿನಿಂದ ಹಾಗೂ ಕೆತ್ತನೆಯ ಮರದ ಬೃಹದಾಕಾರದ ಕಂಬಗಳಿಂದ ನಿರ್ಮಿಸಲ್ಪಟ್ಟಿದೆ. ಒಳ ಆವರಣದಲ್ಲಿ ಕರ್ತೃ ಗುರುಗಳ ಗದ್ದುಗೆ, ಶ್ರೀ ರೇವಣಸಿದ್ಧೇಶ್ವರ ದೇವಸ್ಥಾನ ಹಾಗೂ ಚೌಡಮ್ಮನ ದೇವಸ್ಥಾನಗಳು ಸ್ಥಾಪನೆಯಾಗಿವೆ. ಇಲ್ಲಿ ನಿತ್ಯ ಪೂಜೆ, ಹೊರಗಿನಿಂದ ಬರುವ ಭಕ್ತರಿಗೆ ದಾಸೋಹ ನಡೆಯುತ್ತಿದೆ.

ವಿಳಾಸ:ಷ.ಬ್ರ.ಶ್ರೀ ಡಾ. ಗುರುಸಿದ್ಧದೇವ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕೆಳದಿ ರಾಜಗುರು ಸಂಸ್ಥಾನ ಹಿರೇಮಠ, ಕೆಳದಿ-ಬಂದಗದ್ದೆ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ತಾಳಗುಪ್ಪ

ಸಾಗರ ತಾಲ್ಲೂಕಿನ ತಾಳಗುಪ್ಪವು ತಾಲ್ಲೂಕು ಕೇಂದ್ರಕ್ಕೆ ಸಮೀಪವಿರುವ ಒಂದು ಸುಧಾರಿತ ಗ್ರಾಮ. ಮಲೆನಾಡಿನ ಸಂಸ್ಕೃತಿಯನ್ನು ಉಳಿಸಿಕೊಂಡು ಬೆಳೆದಿದೆ. ಇಲ್ಲಿ ಶ್ರೀ ಕೂಡ್ಲಿಮಠವು ಸಂಗಮಕ್ಷೇತ್ರದಿಂದ ಸ್ಥಳಾಂತರಗೊಂಡು ಬೆಳೆದಿದೆ.

ಕೂಡ್ಲಿ ಮಠ: ಎಣ್ಣೆಹೊಳೆ ಮತ್ತು ಶರಾವತಿ ನದಿಗಳ ಸಂಗಮಕ್ಷೇತ್ರದಲ್ಲಿ ಇದ್ದ ಮಠವೇ ಕೂಡ್ಲಿಮಠ. ಇಂತಹ ಪುರಾಣ ಪ್ರಸಿದ್ಧ ಮಠ ಲಿಂಗನಮಕ್ಕಿಯಲ್ಲಿ ಅಣೆಕಟ್ಟು ನಿರ್ಮಿಸಿದ ಮೇಲೆ ಅಣೆಕಟ್ಟೆಯ ಹಿನ್ನೀರಿನಿಂದ ೧೯೬೨ರಲ್ಲಿ ಮುಳುಗಡೆಯಾಯಿತು. ನಂತರ ಮಠ ಸಾಗರ ತಾಲ್ಲೂಕಿನ ತಾಳಗುಪ್ಪಕ್ಕೆ ಸ್ಥಳಾಂತರವಾಯಿತು. ಎರಡೂ ನದಿಗಳ ಸಂಗಮ ಜಾಗದಲ್ಲಿ ಮಠವು ನಿರ್ಮಿತಗೊಂಡ (ಹಿಂದೆ) ಕಾರಣ ಈ ಮಠಕ್ಕೆ'ಕೂಡ್ಲಿ ಮಠ' ಎಂಬ ಹೆಸರು ಬಂದಿದೆ. ವಿರಕ್ತ ಸಂಪ್ರದಾಯದ ಚೀಲಾಳ ಸಮಯದ ಈ ಮಠವನ್ನು ೧೯೬೩ರಲ್ಲಿ ತಾಳಗುಪ್ಪದ ಪಶ್ಚಿಮ ಭಾಗದ ಕೆರೆದಡದಲ್ಲಿ ಹೊಸದಾಗಿ ಕಟ್ಟಲಾಗಿದೆ. ಮೂಲ ಮಠದಲ್ಲಿದ್ದ ಆಕರ್ಷಕ ಕೆತ್ತನೆಯ ಕಲ್ಲುಗಳು, ಬಸವಣ್ಣನ ವಿಗ್ರಹಗಳು, ಶ್ರೀ ಚನ್ನಬಸವ ಸ್ವಾಮಿಗಳ ಗದ್ದುಗೆ ಹಾಗೂ ಶ್ರೀ ತೋಂಟದ ಸ್ವಾಮಿಗಳ ಗದ್ದುಗೆಯಲ್ಲಿನ ವಿಗ್ರಹಗಳನ್ನು ತಂದು ತೋರು ಗದ್ದುಗೆಗಳನ್ನು ಪುನರ್ ಪ್ರತಿಷ್ಠಾಪಿಸಲಾಗಿದೆ.

ಹೊಸನಗರದಲ್ಲಿ ಕೆಳದಿ ಅರಸರ ರಾಜಗುರುವಾಗಿದ್ದ ಈ ಮಠದ ಸ್ವಾಮಿಗಳು ನಗರ ಪರಕೀಯರ ವಶವಾದ ಮೇಲೆ ನಗರವನ್ನು ತೊರೆದು ಮೊದಲೇ ಸ್ಥಾಪಿಸಲಾಗಿದ್ದ ಕೂಡ್ಲಿಮಠಕ್ಕೆ ಬಂದು ನೆಲೆಸಿರುತ್ತಾರೆ. ನಗರ ಹಾಳಾದ ಮೇಲೆ ಬರಿಗೈಯ್ಯಲ್ಲಿ ಬಂದ ರಾಜಗುರು ಶ್ರೀ ಚನ್ನಬಸವ ಸ್ವಾಮಿಗಳು ಕೂಡ್ಲಿ ಮಠದಲ್ಲಿ ಸ್ವಾಮಿಗಳು ಇಲ್ಲದ ಕೊರತೆಯನ್ನು ನೀಗಿಸಿ ಧಾರ್ಮಿಕ ಚಟುವಟಿಕೆಗಳು ಪುನಃ ಪ್ರಾರಂಭವಾಗುವಂತೆ ಮಾಡಿ ಮಠವನ್ನು ಅಭಿವೃದ್ಧಿ ಪಡಿಸಿರುತ್ತಾರೆ. ಇಂತಹ ಇತಿಹಾಸ ಪ್ರಸಿದ್ಧವಾದ ಮಠವು ಸ್ಥಳಾಂತರಗೊಂಡು ತಾಳಗುಪ್ಪದಲ್ಲಿ ಸ್ಥಾಪನೆಯಾದ ಮೇಲೆ ಹತ್ತು ಜನ ಬಡ ವಿದ್ಯಾರ್ಥಿಗಳನ್ನು ಗುರುತಿಸಿ ಊಟ,ವಸತಿ, ವಿದ್ಯಾಭ್ಯಾಸದ ಖರ್ಚನ್ನು ವಹಿಸಿಕೊಂಡಿದ್ದಾರೆ. ಮಠ ಮರು ಸ್ಥಾಪನೆಯಾದ ಮೇಲೆ ಕೇವಲ ಏಳು ವರ್ಷ ನೆಲೆನಿಂತ ಶ್ರೀ ಸಿದ್ಧಲಿಂಗ ಸ್ವಾಮಿಗಳು ಪಟ್ಟಣ ಪ್ರದೇಶದ ಜೀವನ ಶೈಲಿಗೆ ಹೊಂದಿಕೊಳ್ಳಲಾಗದೆ, ಹೊಸನಗರ ತಾಲ್ಲೂಕಿನ ಪುಣಜಿಮೂಲಗದ್ದೆಗೆ ಹೋಗಿ ನೆಲೆಸಿದ್ದಾರೆ. ಸಂದರ್ಭಕ್ಕನುಗುಣವಾಗಿ ತಾಳಗುಪ್ಪಕ್ಕೆ ಬಂದು ಧಾರ್ಮಿಕ ಚಟುವಟಿಕೆ, ಅನ್ನದಾಸೋಹ, ಕರ್ತೃಗದ್ದುಗೆಗಳ ಪೂಜಾಕಾರ್ಯ ನಿರ್ವಿಘ್ನವಾಗಿ ನಡೆಯುವಂತೆ ನೋಡಿಕೊಳ್ಳುತ್ತಿದ್ದಾರೆ.

ವಿಳಾಸ:ಶ್ರೀ ಮ.ನಿ.ಪ್ರ. ಸಿದ್ಧಲಿಂಗ ಸ್ವಾಮಿಗಳು, ಶ್ರೀ ಕೂಡ್ಲಿಮಠ, ತಾಳಗುಪ್ಪ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ವೀರಾಪುರ

ಸಾಗರ ತಾಲ್ಲೂಕಿನ ವೀರಾಪುರವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ

ಚೌಳಹಿರಿಯೂರು ಬೃಹನ್ಮಠ ಪರಂಪರಾಗತ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ವೀರಾಪುರ ಗ್ರಾಮದ ಶ್ರೀ ಹಿರೇಮಠವು ಶ್ರೀಶೈಲಪೀಠದ ಶಾಖಾಮಠವಾಗಿದೆ. ಚನ್ನಗಿರಿ ತಾಲ್ಲೂಕಿನ ತ್ಯಾವಣಗಿ ಪಟ್ಟದಮಠದ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ತಮ್ಮ ತಪೋಶಕ್ತಿಯಿಂದ ಈ ನಾಡನ್ನು ಉದ್ಧರಿಸಿದ್ದರು. ಇವರು ಲೋಕ ಕಲ್ಯಾಣಾರ್ಥ ಲೋಕಸಂಚಾರ ಕೈಗೊಂಡು ೧೯೪೬ರ ಸುಮಾರಿನಲ್ಲಿ ಇಲ್ಲಿಗೆ ಆಗಮಿಸಿ, ಹಿಂದೆಯೇ ಅಸ್ಥಿತ್ವದಲ್ಲಿದ್ದ ಪುರಾತನ ಮಠದಲ್ಲಿ ಅನುಷ್ಠಾನ ಕೈಗೊಂಡು ಈ ಸ್ಥಳವನ್ನು ಸುಕ್ಷೇತ್ರವನ್ನಾಗಿ ಮಾಡಿದರು.

ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾಗುವ ಸಂದರ್ಭದಲ್ಲಿ ಮಠದ ಆಡಳಿತ ಹಾಗೂ ಧಾರ್ಮಿಕ ಕಾರ್ಯಗಳು ನಿರಂತರವಾಗಿ ನಡೆಯಬೇಕೆಂಬ ಉದ್ದೇಶದಿಂದ, ಚೌಳಹಿರಿಯೂರು ಬೃಹನ್ಮಠಕ್ಕೆ ಮಠವನ್ನು ಒಪ್ಪಿಸಿ ಲಿಂಗೈಕ್ಯರಾದರು. ಗುರುಗಳು ಲಿಂಗೈಕ್ಯರಾದ ಮೇಲೆ ಕೆಲವು ವರ್ಷಗಳು ಇಲ್ಲಿಯೇ ನೆಲೆಸಿದ ಚೌಳಹಿರಿಯೂರು ಬೃಹನ್ಮಠದ ವಂಶಸ್ಥರು ಕಾಲಾನಂತರ ಆಡಳಿತವನ್ನು ನೋಡಿಕೊಳ್ಳುವಲ್ಲಿ ವಿಫಲರಾದರು. ಈ ಸಂದರ್ಭದಲ್ಲಿ ಮಠದ ಆಸ್ತಿ ಪರಾದೀನವಾಗಿ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಯ ಸುತ್ತ ಸ್ವಲ್ಪ ಜಾಗ ಉಳಿದಿತ್ತು. ಶರಾವತಿ ಯೋಜನೆಯ ಮುಳಗಡೆಯಿಂದ ಪುನರ್ವಸತಿ ಪಡೆದು ವೀರಾಪುರದಲ್ಲಿ ನೆಲೆಗೊಂಡ ಹೊಸಕೋಟೆ ತಮ್ಮಣ್ಣಗೌಡರು ಮತ್ತು ಅವರ ಮಕ್ಕಳಾದ ವಿಶ್ವೇಶ್ವರಪ್ಪಗೌಡರು ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಯನ್ನು ಜೀರ್ಣಾಭಿವೃದ್ಧಿಗೊಳಿಸಿದರು.

ಪುನಶ್ಚೇತನ: ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ಚೌಳಹಿರಿಯೂರು ಗ್ರಾಮದ ಬೃಹನ್ಮಠದ ಶ್ರೀ ಷಡಕ್ಷರಿಶಾಸ್ತ್ರಿಗಳು ಮತ್ತು ಶ್ರೀಮತಿ ರೇವಣಾಂಭೆಯವರ ಪುತ್ರರಾಗಿ ಜನಿಸಿದ ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳು ಇಲ್ಲಿಗೆ ಆಗಮಿಸಿ ಮಠವನ್ನು ಅಭಿವೃದ್ಧಿಪಡಿಸಿದರು. ನಂತರ ೧೯೯೯ರಲ್ಲಿ ಶ್ರೀಶೈಲ ಪೀಠದ ಜಗದ್ಗುರು ಶ್ರೀ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯಸ್ವಾಮಿಗಳ ಸಮ್ಮುಖದಲ್ಲಿ ಪಟ್ಟಾಧಿಕಾರ ವಹಿಸಿಕೊಂಡರು. ಗುರುಗಳು ತಮ್ಮ ಕ್ರಿಯಾತ್ಮಕ ಚಟುವಟಿಕೆಗಳಿಂದ ಹೆಸರು ಪಡೆದು ಸುಮಾರು ಐವತ್ತು ಲಕ್ಷರೂಪಾಯಿಗಳಿಗೂ ಅಧಿಕ ವೆಚ್ಚದಲ್ಲಿ ಮಲೆನಾಡಿನ ಸೌಂದಯಕ್ಕನುಗುಣವಾಗಿ ಭವ್ಯವಾದ ಕಟ್ಟಡವನ್ನು ನಿರ್ಮಿಸಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಪ್ರಗತಿಪರ ಚಿಂತಕರಾದ ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳು ಗದ್ದುಗೆಯ ಸುತ್ತ ಇರುವ ಭೂಮಿಯನ್ನು ಖರೀದಿಸಿ, ಅಭಿವೃದ್ಧಿಗೊಳಿಸಿ ಮಠದ ಪರಿಸರವನ್ನು ಒಪ್ಪಗೊಳಿಸಿದ್ದಾರೆ. ಮಠದಲ್ಲಿ ಗೋಶಾಲೆ ಪ್ರಾರಂಭಿಸಿ ಗೋವುಗಳನ್ನು ಸಂರಕ್ಷಿಸಿದ್ದಾರೆ. ಕಾಯಕಯೋಗಿಯಾದ ಇವರು ತಮ್ಮ ಪರಿಶ್ರಮದಿಂದ ಮಠವನ್ನು ಶ್ರೀಮಂತಗೊಳಿಸಿದ್ದಾರೆ. ಮಠದಲ್ಲಿ ಶ್ರೀ ಚನ್ನವೀರ ಚೇತನ ಶ್ರೀ ಮರುಳಸಿದ್ಧಸ್ವಾಮಿ ಶಿಕ್ಷಣ ಪ್ರತಿಷ್ಠಾನ, ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮಿ ವಿದ್ಯಾವರ್ಧಕ ಸಂಘ ಹಾಗೂ ಹಾಲಪ್ಪ ಪಟೇಲ್ ಜಂಗಮ ಸೇವಾಶ್ರಮ ಎಂಬ ಅಂಗ ಸಂಸ್ಥೆಗಳನ್ನು ಪ್ರಾರಂಭಿಸಿ, ಸಂಸ್ಕೃತ, ವೇದ ಹಾಗೂ ಜ್ಯೋತಿಷ್ಯ ಪಾಠಶಾಲೆಯನ್ನು ಪ್ರಾರಂಭಿಸಿದ್ದಾರೆ. ಕಲಿಯುವ ಬಡಮಕ್ಕಳಿಗೆ ಆಶ್ರಯ ಕಲ್ಪಿಸಿ ಅವರ ವಿದ್ಯಾಭ್ಯಾಸಕ್ಕೆ ನೆರವಾಗಿದ್ದಾರೆ. ಶಿವಪೂಜಾ ನಿಷ್ಠರಾದ ಗುರುಗಳು ವಿಭೂತಿ ತಯಾರಿಕೆ ಘಟಕವನ್ನು ಪ್ರಾರಂಭಿಸಿ ಶುದ್ಧವಿಭೂತಿ ತಯಾರಿಕೆಯನ್ನು ಮಾಡುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಯು ಸ್ಥಾಪನೆಯಾಗಿದೆ. ಈ ಗದ್ದುಗೆಗೆ ಭವ್ಯವಾದ ಕಟ್ಟಡವನ್ನು ನಿರ್ಮಿಸಿ ನಿತ್ಯ ತ್ರಿಕಾಲ ಪೂಜಾ ವ್ಯವಸ್ಥೆಯನ್ನು ನಡೆಸಲಾಗುತ್ತಿದೆ. ಅಮಾವಾಸ್ಯೆ ಮತ್ತು ಹುಣ್ಣಿಮೆಯಲ್ಲಿ ವಿಶೇಷಪೂಜೆ ಹಾಗೂ ಅನ್ನದಾಸೋಹ ನಡೆಯುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ವೀರಾಪುರ, ಸಾಗರ ತಾ, ಶಿವಮೊಗ್ಗ ಜಿಲ್ಲೆ.

❑

ಸೊರಬ ತಾಲ್ಲೂಕು

ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕು ಮಲೆನಾಡಿನ ಪ್ರಮುಖ ತಾಲ್ಲೂಕುಗಳಲ್ಲಿ ಒಂದಾಗಿ ಬೆಳೆದಿದೆ. ಐತಿಹಾಸಿಕ ಹಾಗೂ ರಾಜಕೀಯವಾಗಿ ಹೆಸರು ಮಾಡಿದ ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಅಷ್ಟೇನೂ ಪ್ರಮುಖವಾಗಿ ಬೆಳೆದ ಲಕ್ಷಣಗಳು ಕಂಡುಬರುವುದಿಲ್ಲ. ಹಾವೇರಿ ಜಿಲ್ಲೆಗೆ ಹೊಂದಿಕೊಂಡತೆ ವೀರಶೈವಧರ್ಮ ಸ್ವಲ್ಪ ಪ್ರಬಲವಾಗಿದೆ. ಇಲ್ಲಿ ತಲಗಡ್ಡೆ , ಶಕುನಹಳ್ಳಿ ಸೇರಿದಂತೆ ಕೆಳಗಿನ ನಾಲ್ಕು ಮಠಗಳು ಅಸ್ತಿತ್ವದಲ್ಲಿದ್ದು, ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿವೆ.

ಗೊಗ್ಗೆಹಳ್ಳಿ

ಸೊರಬ ತಾಲ್ಲೂಕಿನ ಗೊಗ್ಗೆಹಳ್ಳಿಯು ತಾಲ್ಲೂಕು ಕೇಂದ್ರದಿಂದ ಹದಿನೈದು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀಹಿರೇ ಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಗೊಗ್ಗೆಹಳ್ಳಿಯಲ್ಲಿ ಕೆಳದಿಅರಸರ ಕಾಲಕ್ಕಿಂತಲೂ ಮೊದಲು ಶ್ರೀ ಹಿರೇಮಠವು ಸ್ಥಾಪನೆಯಾಗಿ ಧರ್ಮಜಾಗೃತಿ ಯನ್ನುಂಟು ಮಾಡಿದೆ. ಶಿವಪ್ಪನಾಯಕನ ಕಾಲದಲ್ಲಿ ಹೆಚ್ಚು ಅಭಿವೃದ್ಧಿಗೊಂಡಿದ್ದು, ಶ್ರೀಶೈಲಪೀಠದ ಶಾಖಾಮಠವಾಗಿ ಧಾರ್ಮಿಕ ಕೆಲಸದಲ್ಲಿ ತನ್ನನ್ನು ತೊಡಗಿಸಿಕೊಂಡು ಕೆಲಸ ನಿರ್ವಹಿಸುತ್ತಿದೆ.

ಪರಂಪರೆ: ಶಿಷ್ಯವರ್ಗದ ಈ ಮಠದ ಪರಂಪರೆಯ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಈಗ ಶ್ರೀ ನಿಜಗುಣ ಶಿವಾಚಾರ್ಯ ಸ್ವಾಮಿಗಳ ಕರಕಮಲ ಸಂಜಾತರಾದ ಶ್ರೀ ಸಂಗಮೇಶ್ವರ ಶಿವಾಚಾರ್ಯ ಸ್ವಾಮಿಗಳು ಅಧಿಕಾರ ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು:ಪುರಾತನ ಕಾಲದ ಮಠದ ಕಟ್ಟಡವು ಹಿಂದಿನ ತನ್ನ ಭವ್ಯತೆಯನ್ನು ಸಾರುತ್ತಿದೆ. ವಿಶಾಲ ಆವರಣದಲ್ಲಿ ಗದ್ದುಗೆಗಳು ಸ್ಥಾಪನೆಯಾಗಿವೆ. ಈ ಗದ್ದುಗೆಗಳಿಗೆ ನಿತ್ಯ ಪೂಜೆ, ಶ್ರಾವಣ, ಕಾರ್ತೀಕ ಮಾಸಗಳಲ್ಲಿ ಹಾಗೂ ಶಿವರಾತ್ರಿಯಂದು ರುದ್ರಾಭಿಷೇಕ ಪೂಜೆ ನಡೆಸಲಾಗುತ್ತಿದೆ. ವಿಶೇಷ ಸಂದರ್ಭದಲ್ಲಿ ಭಕ್ತರಿಗೆ ದಾಸೋಹ ನಡೆಸಲಾಗುತ್ತಿದೆ. ಅಡಿಕೆ ತೋಟವು ಮಠದ ಆದಾಯದ ಮೂಲವಾಗಿದೆ. ಪರಂಪರೆಯಲ್ಲಿ ಬಂದ ಆಸ್ತಿಯನ್ನು ಅಭಿವೃದ್ಧಿಪಡಿಸಿರುವ ಗುರುಗಳು ಮಠವು ಸ್ವಾವಲಂಬನೆ ಯಿಂದ ತಲೆ ಎತ್ತಿ ನಿಲ್ಲುವಂತೆ ಮಾಡಿದ್ದಾರೆ. ಮಠದ ಧಾರ್ಮಿಕ ಆಚರಣೆಗಳು ಪರಂಪರೆಗೆ ಅನುಗುಣವಾಗಿ ನಡೆಯುತ್ತಾ ಸುತ್ತಲ ಭಕ್ತರ ಆಕರ್ಷಣೆಯ ಕೇಂದ್ರವಾಗಿ ಬೆಳೆದಿದೆ.

ವಿಳಾಸ:ಷ.ಬ್ರ.ಶ್ರೀ ಸಂಗಮೇಶ್ವರ ಶಿವಾಚಾರ್ಯ ಸ್ವಾಮಿಗಳು, ಹಿರೇಮಠ, ಗೊಗ್ಗೆಹಳ್ಳಿ, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಜಡೆ

ಸೊರಬ ತಾಲ್ಲೂಕಿನ ಜಡೆ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಇಪ್ಪತ್ತೆಂಟು ಕಿ.ಮೀ ದೂರದಲ್ಲಿದೆ. ವರದಾ ನದಿಯ ದಡದಲ್ಲಿರುವ ಈ ಗ್ರಾಮದಲ್ಲಿ ಶ್ರೀ ಹಿರೇಮಠ, ಶ್ರೀ ಸಂಸ್ಥಾನಮಠವು ಅಸ್ತಿತ್ವದಲ್ಲಿದೆ.

ಸಂಸ್ಥಾನಮಠ: ಜಡೆ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಸಂಸ್ಥಾನ ಮಠವು ವಿರಕ್ತಮಠವಾಗಿದೆ. ಎಂಟು ನೂರು ವರ್ಷಗಳಿಂದ ಈ ಮಠವು ಅಸ್ತಿತ್ವದಲ್ಲಿದೆ ಎಂದು ಹೇಳಲಾಗುತ್ತಿದೆ. ಶ್ರೀ ಸಿದ್ಧವೃಷಭೇಂದ್ರ ಸ್ವಾಮಿಗಳು ಈ ಮಠದ ಸ್ಥಾಪಕರೆಂದು ನಂಬಲಾಗಿದೆ. ಮಠದ ಪರಂಪರೆಯಲ್ಲಿ ಇಪ್ಪತ್ತೂರು ಜನ ಗುರುಗಳು ಅಧಿಕಾರ ನಡೆಸಿರಬಹುದೆಂದು ಅಂದಾಜಿಸಲಾಗಿದೆ. ಕುಮಾರಸಮಯದ ಮೂಲಮಠವಾಗಿ ಜಡೆಮಠವು ರೂಪುಗೊಂಡಿತ್ತೆಂದು ಈಗಿನ ಶ್ರೀ ಮಹಾಂತ ಸ್ವಾಮಿಗಳು ಅಭಿಪ್ರಾಯಿಸುತ್ತಾರೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಸಿದ್ಧವೃಷಭೇಂದ್ರಸ್ವಾಮಿಗಳು

೨. ಶ್ರೀ ಮ.ನಿ.ಪ್ರ. ಸಿದ್ಧಬಸವಸ್ವಾಮಿಗಳು

೩. ಶ್ರೀ ಮ.ನಿ.ಪ್ರ. ಕುಮಾರಪ್ರಭುಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಮಹಾಂತಸ್ವಾಮಿಗಳು

ಈ ರೀತಿ ಮಠದ ಪರಂಪರೆಯಲ್ಲಿ ಕೇವಲ ನಾಲ್ಕು ಜನ ಗುರುಗಳ ಹೆಸರುಗಳನ್ನು ಮಾತ್ರ ದಾಖಲಿಸಬಹುದಾಗಿದೆ. ಮಠದಲ್ಲಿ ಐದು ಗದ್ದುಗೆಗಳು ನೋಡಲು ಸಿಗುತ್ತವೆ. ಅದೇ ರೀತಿ ಸೊರಬದ ಶಾಖಾಮಠದಲ್ಲಿ ಎರಡು ಗದ್ದುಗೆಗಳು, ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಮುನುವಳ್ಳಿಯಲ್ಲಿ ಒಂದು ಗದ್ದುಗೆ ಸ್ಥಾಪನೆಯಾಗಿದೆ. ಮಠದ ಪರಂಪರೆಯಲ್ಲಿ ಇಪ್ಪತ್ಮೂರು ಜನ ಗುರುಗಳು ಅಧಿಕಾರ ನಡೆಸಿದ್ದರೂ ಅವರುಗಳ ಬಗ್ಗೆ ವಿವರವನ್ನು ದಾಖಲಿಸಿಡದ ಕಾರಣ ಪರಂಪರೆಯ ಇತಿಹಾಸವು ಮರೆಯಾಗುವಂತಾಗಿದೆ ಎಂದು ಶ್ರೀ ಮಹಾಂತ ಸ್ವಾಮಿಗಳು ಅಭಿಪ್ರಾಯಿಸುತ್ತಾರೆ. ಕರ್ತೃಗುರುಗಳಾದ ಶ್ರೀ ಸಿದ್ಧವೃಷಭೇಂದ್ರ ಸ್ವಾಮಿಗಳು ಮಹಾತಪಸ್ವಿಗಳಾಗಿದ್ದು, ಇವರು ಚಿತ್ರದುರ್ಗದಿಂದ ಬಂದು ಇಲ್ಲಿ ಮಠವನ್ನು ಸ್ಥಾಪಿಸಿ ದರೆಂದು ಹೇಳಲಾಗುತ್ತದೆ. ಇವರ ನಂತರ ಅನೇಕ ಗುರುಗಳು ಅಧಿಕಾರ ನಡೆಸಿರುವರಾದರೂ ಇವರುಗಳ ಬಗ್ಗೆ ಮಾಹಿತಿ ಲಭ್ಯವಿಲ್ಲ. ಎರಡು ತಲೆಮಾರುಗಳ ಹಿಂದೆ ಇದ್ದು ಅಧಿಕಾರ ನಡೆಸಿದ ಗುರುಗಳ ಬಗ್ಗೆ ಮಾಹಿತಿ ಲಭ್ಯವಿದೆ. ಈ ಮಾಹಿತಿ ಆಧಾರದ ಮೇಲೆ ಶ್ರೀ ಸಿದ್ಧಬಸವ ಸ್ವಾಮಿಗಳು ಈ ಮಠದ ಅಧಿಕಾರಿಗಳಾಗಿದ್ದು ಮಠವನ್ನು ಧಾರ್ಮಿಕ ಹಿನ್ನೆಲೆಯಲ್ಲಿ ಕ್ರಿಯಾತ್ಮಕವಾಗಿ ಬೆಳೆಸಿದರು. ಇವರು ಮಹಾತಪಸ್ವಿಗಳಾಗಿದ್ದು ನೂರಐದು ವರ್ಷಗಳ ಕಾಲ ಬದುಕಿದ್ದರೆಂದು ಹೇಳಲಾಗುತ್ತದೆ. ಇವರ ಗದ್ದುಗೆಯು ಸವದತ್ತಿ ತಾಲ್ಲೂಕಿನ ಮುನವಳ್ಳಿಯಲ್ಲಿ ಸ್ಥಾಪನೆಯಾಗಿದೆ.

ಶ್ರೀ ಸಿದ್ಧಬಸವ ಸ್ವಾಮಿಗಳ ನಂತರ ಶ್ರೀ ಕುಮಾರಪ್ರಭು ಸ್ವಾಮಿಗಳು ಅಧಿಕಾರಕ್ಕೆ ಬಂದರು. ಇವರು ಸವದತ್ತಿ ತಾಲ್ಲೂಕಿನ ಗುರುವಿನಕೊಳ್ಳದ ದಿಗಂಬರ ಮಠದ ಶ್ರೀ ಸಿದ್ಧಬಸವಸ್ವಾಮಿ ಮತ್ತು ಶ್ರೀಮತಿ ಗುರುಬಸಮ್ಮನವರ ಪುತ್ರರಾಗಿ ಜನಿಸಿದರು. ಇವರು ಜಡೆಮಠದ ಅಧಿಕಾರಿಗಳಾಗಿ ಮಠವನ್ನು ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿಪಡಿಸಿದರು. ಗುರುಗಳು ಸಂಸ್ಕೃತದಲ್ಲಿ ವಿದ್ವತ್ ಸಂಪಾದಿಸಿಕೊಂಡು ಮಠವನ್ನು ಬೆಳೆಸಿದರು. ಇವರು ತಮ್ಮ ಉತ್ತರಾಧಿಕಾರಿಗಳನ್ನಾಗಿ ಸವದತ್ತಿ ತಾಲ್ಲೂಕಿನ ಗುರುವಿನಕೊಳ್ಳದ ಶ್ರೀ ರುದ್ರಯ್ಯ ಮತ್ತು ಶ್ರೀಮತಿ ಬಸವಮ್ಮನವರ ಪುತ್ರರಾಗಿ ೧೯೭೦ರಲ್ಲಿ ಜನಿಸಿದ ಶ್ರೀ ಮಹಾಂತ ದೇವರನ್ನು ನೇಮಿಸಿಕೊಂಡು, ೧೯೮೮ರ ನವಂಬರ್ ಎರಡರಂದು ಲಿಂಗೈಕ್ಯರಾದರು. ಶ್ರೀ ಮಹಾಂತ ದೇವರು ಗುರುಗಳ ಸಾನ್ನಿಧ್ಯದಲ್ಲಿ ವಿದ್ಯೆ ಕಲಿತು ಧಾರ್ಮಿಕ ಶಿಕ್ಷಣದ ಕಲಿಕೆಗೆಂದು ಶಿವಯೋಗಮಂದಿರ ಮತ್ತು ಮೈಸೂರಿನ ಶಿವರಾತ್ರೀಶ್ವರ ಮಠದ ಗುರುಕುಲದಲ್ಲಿ ನೆಲೆಸಿ ಸಂಸ್ಕೃತ, ವೇದ ಮತ್ತು ಜ್ಯೋತಿಷ್ಯ ವನ್ನು ಕಲಿತರು. ಹಿರಿಯ ಗುರುಗಳಾದ ಶ್ರೀ ಕುಮಾರಪ್ರಭು ಸ್ವಾಮಿಗಳು ಲಿಂಗೈಕ್ಯರಾದ ನಂತರ ೧೯೮೯ರ ಫೆಬ್ರವರಿ ಇಪ್ಪತ್ತೆಂಟರಂದು ಪಟ್ಟಾಧಿಕಾರವನ್ನು ವಹಿಸಿಕೊಂಡರು.

ಶೈಕ್ಷಣಿಕ ಸೇವೆ: ಶ್ರೀ ಕುಮಾರಪ್ರಭು ಸ್ವಾಮಿಗಳ ಕಾಲದಲ್ಲಿ ಸ್ಥಾಪನೆಯಾಗಿದ್ದ ಶ್ರೀ ಕುಮಾರೇಶ್ವರ ವಿದ್ಯಾವರ್ಧಕ ವತಿಯಿಂದ ಕುಸನೂರು ಹಾಗೂ ಜಡೆಯಲ್ಲಿ ಪ್ರೌಢಶಾಲೆಗಳು, ಜಡೆಯಲ್ಲಿ ಪದವಿಪೂರ್ವ ಕಾಲೇಜು ಹಾಗೂ ಸಂಗೀತ ಪಾಠಶಾಲೆಗಳನ್ನು ಪ್ರಾರಂಭಿಸಿದ್ದರು. ಇಂದು ಈ ಶಾಲೆಗಳು ವಿಸ್ತಾರಗೊಂಡು ಬೆಳೆದಿವೆ. ಈಗಿನ ಗುರುಗಳಾದ ಶ್ರೀ ಮಹಾಂತ ಸ್ವಾಮಿಗಳು ಶ್ರೀ ಕುಮಾರಪ್ರಭು ವಿದ್ಯಾಪೀಠವನ್ನು ಸ್ಥಾಪಿಸಿದ್ದು ಸೊರಬದಲ್ಲಿ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದ್ದಾರೆ. ಕಲಿಯುವ ವಿದ್ಯಾರ್ಥಿಗಳಿಗೆ ಮಠದಲ್ಲಿ ಆಶ್ರಯ ಕಲ್ಪಿಸಿ ನೆರವಾಗಿದ್ದಾರೆ.

ಸಾಮಾಜಿಕ-ಸಾಹಿತ್ಯಿಕ ಸೇವೆ: ಶ್ರೀ ಮಹಾಂತ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಜಡೆ ಗ್ರಾಮದಲ್ಲಿ ಸಾರ್ವಜನಿಕ ಕುಡಿಯುವ ನೀರಿನ ಯೋಜನೆಯನ್ನು ಮಾಡಿಸಿದ್ದಾರೆ. ಅಲ್ಲದೆ ಗ್ರಾಮದಲ್ಲಿ ನಡೆಯುವ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳಿಗೆ ಸ್ಪಂದಿಸಿ ಸಮಾಜವನ್ನು ಅಭಿವೃದ್ಧಿಪಡಿಸಿದ್ದಾರೆ. ಮಠದ ವತಿಯಿಂದ ಪ್ರಭುದೀಪ್ತಿ ಹಾಗೂ ಜಡೆಸಂಗಮ ಎಂಬ ಕೃತಿಗಳನ್ನು ರಚಿಸಿ ಪ್ರಕಟಿಸಲಾಗಿದೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಐದು ಗದ್ದುಗೆಗಳಿಗೆ ನಿತ್ಯ ಪೂಜೆ, ಭಾರತ ಹುಣ್ಣಿಮೆಗಿಂತ ಮೂರು

ದಿನಗಳ ಮೊದಲು ಮಠದಲ್ಲಿ ಶ್ರೀ ಸಿದ್ಧವೃಷಭೇಂದ್ರ ಸ್ವಾಮಿಗಳ ಜಾತ್ರಾ ಮಹೋತ್ಸವ ಅದ್ಧೂರಿಯಾಗಿ ನಡೆಯುತ್ತಿದೆ. ಈ ಸಂದರ್ಭದಲ್ಲಿ ಶರಣಸಾಹಿತ್ಯ, ಮಹಿಳಾಗೋಷ್ಠಿ, ಆರೋಗ್ಯ ತಪಾಸಣಾ ಶಿಬಿರಗಳು, ಶಿವದೀಕ್ಷೆ, ಉಚಿತ ಸಾಮೂಹಿಕ ವಿವಾಹಗಳು ನಡೆಯುತ್ತಿವೆ. ಹಿಂದಿನ ಗುರುಗಳಾದ ಶ್ರೀ ಕುಮಾರಪ್ರಭು ಸ್ವಾಮಿಗಳು ಅನುಷ್ಠಾನ ಮೂರ್ತಿ ಗಳಾಗಿದ್ದು, ಹದಿನೈದು ತಿಂಗಳುಗಳ ಕಾಲ ಗವಿಯಲ್ಲಿ ಕುಳಿತು ದೀರ್ಘತಪೋನುಷ್ಠಾನ ಕೈಗೊಂಡಿದ್ದು ಮಠದ ಧಾರ್ಮಿಕ ಕಾರ್ಯಗಳಲ್ಲಿ ಪ್ರಮುಖವಾಗಿದೆ. ಸೊರಬದಲ್ಲಿನ ಶ್ರೀ ಮುರುಘಾಮಠವು ಜಡೆ ಮಠದ ಶಾಖಾಮಠವಾಗಿದ್ದು ಇಲ್ಲಿಯು ಪೂಜೆ ನಡೆಯುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಮಹಾಂತ ಸ್ವಾಮಿಗಳು, ಶ್ರೀ ಸಂಸ್ಥಾನಮಠ, ಜಡೆ, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಹಿರೇಮಠ: ಜಡೆ ಗ್ರಾಮದ ಮಧ್ಯಭಾಗದಲ್ಲಿರುವ ಹಿರೇಮಠವು ಪುರಾತನ ಕಾಲದಿಂದ ಅಸ್ತಿತ್ವದಲ್ಲಿದೆ. ಈ ಮಠದಲ್ಲಿ ಅನೇಕ ಗುರುಗಳು ಅಧಿಕಾರ ನಡೆಸಿ ವೀರಶೈವ ಧರ್ಮವನ್ನು ಪ್ರಚಾರ ಪಡಿಸಿದ್ದಾರೆ. ಈ ಮಠದ ಗುರುಗಳೊಬ್ಬರು ಮಹಾರಾಷ್ಟ್ರದ ದುದನಿ ಮಠದ ಮಠಾಧೀಶರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಪ್ರಸ್ತುತ ಜಡೆ ಹಿರೇಮಠದಲ್ಲಿ ಶ್ರೀ ಅಮರೇಶ್ವರ ದೇವರು ಉತ್ತರಾಧಿಕಾರಿಗಳಾಗಿ ನೇಮಕಗೊಂಡಿದ್ದಾರೆ.

ವಿಳಾಸ: ಶ್ರೀ ಅಮರೇಶ್ವರ ದೇವರು, ಶ್ರೀ ಹಿರೇಮಠ, ಜಡೆ, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಮೂಡಿ

ಸೊರಬ ತಾಲ್ಲೂಕಿನ ಮೂಡಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಚಾಲುಕ್ಯರ ತ್ರಿಭುವನ ಮಲ್ಲದೇವನ ನಂತರ ಹೊಯ್ಸಳರ ವೀರಬಲ್ಲಾಳ ದೇವ, ಕದಂಬರ ಮತ್ತು ಕೆಳದಿಅರಸರ ಆಡಳಿತಕ್ಕೆ ಒಳಪಟ್ಟು ಅಭಿವೃದ್ಧಿ ಕಂಡಿದೆ. ಇಲ್ಲಿ ಮುರುಘಾ ಸಮಯದ ಶ್ರೀ ಶಿವಲಿಂಗೇಶ್ವರ ವಿರಕ್ತಮಠವು ಅಸ್ತಿತ್ವದಲ್ಲಿದೆ.

ಶಿವಲಿಂಗೇಶ್ವರಮಠ: ಮೂಡಿಯ ದಕ್ಷಿಣಕ್ಕೆ ಮೂರು ಕಿ.ಮೀ.ದೂರದಲ್ಲಿ ತುರುಬೀಗುಡ್ಡ ಎಂಬ ಸ್ಥಳದಲ್ಲಿ ಶ್ರೀ ಶಿವಲಿಂಗೇಶ್ವರರು ಅನುಷ್ಠಾನಗೊಂಡಿದ್ದರು. ಇವರಿಗೆ ಶ್ರೀ ಸಾವಳಗೀಶ್ವರರು ಮತ್ತು ಶ್ರೀ ಸೊಲಭೇಶ್ವರರು ಎಂಬ ಇಬ್ಬರು ಶಿಷ್ಯರು ಇದ್ದರು. ಬಹಳ ದಿನಗಳ ಕಾಲ ಈ ಪ್ರಶಾಂತ ಸ್ಥಳದಲ್ಲಿ ಅನುಷ್ಠಾನ ಮಾಡಿಕೊಂಡಿದ್ದ ಶ್ರೀ ಶಿವಲಿಂಗೇಶ್ವರರ ಸೇವೆ ಮಾಡಿಕೊಂಡು ಗುರುಗಳ ಧಾರ್ಮಿಕ ಕ್ರಿಯೆಗಳಿಗೆ ನೆರವಾಗುತ್ತಿರುತ್ತಾರೆ. ಶ್ರೀ ಶಿವಲಿಂಗೇಶ್ವರರು ಲಿಂಗೈಕ್ಯರಾದ ಮೇಲೆ ಅವರ ಸಮಾಧಿಯನ್ನು ತುರುಬಿಗುಡ್ಡದ ಮೇಲೆ ಸ್ಥಾಪಿಸಿ ಗದ್ದುಗೆ ನಿರ್ಮಿಸಲಾಗಿದೆ. ಇದಾದ ನಂತರ ಶ್ರೀ ಸಾವಳಗೀಶ್ವರರು ಲಿಂಗೈಕ್ಯರಾಗಿದ್ದು ಹಿರಿಯ ಗುರುಗಳ ಗದ್ದುಗೆಯ ಸಮೀಪದಲ್ಲೇ ಅವರ ಸಮಾಧಿಯನ್ನೂ ಮಾಡಿ ಗದ್ದುಗೆ ನಿರ್ಮಿಸಲಾಗಿದೆ.

ಇದಾದ ನಂತರ ಮೂಡಿಯ ಭಕ್ತರು ಸೊಲಭೇಶ್ವರರ ಗುರುಸೇವೆ ಮತ್ತು ಧಾರ್ಮಿಕ ಆಚರಣೆಗಳ ಬಗ್ಗೆ ಇಟ್ಟಿದ್ದ ನಂಬಿಕೆಗಳ ಕಾರಣಕ್ಕೆ ಮೂಡಿಯಲ್ಲಿ ಮಠ ಸ್ಥಾಪನೆಯಾಗಲು ಸಾಧ್ಯವಾಗಿದೆ. ಶ್ರೀ ಶಿವಲಿಂಗೇಶ್ವರರು ಮತ್ತು ಶ್ರೀ ಸಾವಳ ಗೀಶ್ವರರು ಐಕ್ಯಗೊಂಡ ಈ ಗ್ರಾಮದಲ್ಲಿ ಧಾರ್ಮಿಕ ಕ್ರಿಯೆಗಳು ಎಂದೂ ನಿಲ್ಲದಂತೆ ನಡೆಯಲು ಹಾಗೂ ವೀರಶೈವತತ್ತ್ವಗಳ ಆಚಾರ ವಿಚಾರಗಳು ಅನುಷ್ಠಾನಗೊಳ್ಳಬೇಕು ಎಂಬ ಕಾರಣಕ್ಕೆ ಭಕ್ತರು ಮಠವನ್ನು ಸ್ಥಾಪನೆಮಾಡಲು ಅಪೇಕ್ಷೆ ಪಡುತ್ತಾರೆ. ಸ್ಥಾಪನೆಗೊಂಡ ಮಠಕ್ಕೆ ಮೊದಲ ಗುರುಗಳಾಗಿ ಶ್ರೀ ಸೊಲಭೇಶ್ವರರೇ ತಮ್ಮ ಶಿಷ್ಯನಿಗೆ ಹಿರಿಯ ಗುರುಗಳ ಹೆಸರಾದ ಶ್ರೀ ಶಿವಲಿಂಗೇಶ್ವರ ಎಂದು ಅಭಿದಾನವಿತ್ತು ಪಟ್ಟಾಧಿಕಾರ ಮಾಡಿಸಿರುತ್ತಾರೆ.

ಶ್ರೀ ಸೊಲಭೇಶ್ವರರು ಭಕ್ತರ ಅಪೇಕ್ಷೆಯ ಮೇರೆಗೆ ಮಠ ಸ್ಥಾಪಿಸಿ ತಮ್ಮ ಕರಕಮಲ ಸಂಜಾತ ಶ್ರೀ ಶಿವಲಿಂಗೇಶ್ವರರಿಗೆ ಅಧಿಕಾರ ಕೊಡಿಸಿ ಧ್ಯಾನದಲ್ಲಿ ಮಗ್ನರಾಗಿ ಮಠವನ್ನು ಬೆಳೆಸಲು ಪ್ರೇರಕರಾಗಿರುತ್ತಾರೆ. ತಮ್ಮ ಅಂತಿಮ ದಿನಗಳವರೆಗೆ ಶರಣಾದಿ ಪ್ರಮಥರ ತತ್ತ್ವಗಳನ್ನು ಬೋಧಿಸಿ, ಸಮಾಜವನ್ನು ಸನ್ಮಾರ್ಗದಲ್ಲಿ ಮುನ್ನಡೆಸಿ ಲಿಂಗೈಕ್ಯರಾಗಿದ್ದಾರೆ. ಇವರ ಸಮಾಧಿಯನ್ನು ಊರಿನಿಂದ ಪಶ್ಚಿಮಕ್ಕೆ ವರದಾ ನದಿಯ ದಡದ ಮೇಲೆ ಸ್ಥಾಪಿಸಲಾಗಿದೆ. ಈ ಜಾಗವು ಹಿಂದೆ ಮಠವಾಗಿತ್ತು ಎಂದು ಹೇಳಲಾಗುತ್ತದೆ. ಪಟ್ಟಾಧಿಕಾರ ಅನುಗ್ರಹ ನೀಡಿದ ಶ್ರೀ ಸೊಲಭೇಶ್ವರರು ಲಿಂಗೈಕ್ಯರಾದ ಮೇಲೆ ಶ್ರೀ ಶಿವಲಿಂಗೇಶ್ವರರು

ಕೆಲವು ದಿನಗಳು ಇದ್ದು ಲಿಂಗೈಕ್ಯರಾಗಿದ್ದಾರೆ. ಮೂಡಿ ಶ್ರೀ ಶಿವಲಿಂಗೇಶ್ವರ ವಿರಕ್ತ ಮಠಕ್ಕೆ ಈ ನಾಲ್ಕೂ ಜನ ಗುರುಗಳೇ ಮೂಲ ಪುರುಷರಾಗಿದ್ದು ಇವರ ಜಂಗಮತ್ವಕ್ಕೆ ಮೆಚ್ಚಿದ್ದ ಜನ ಇವರ ಪ್ರಭಾವಕ್ಕೆ ಒಳಗಾಗಿದ್ದರು. ಈಗಲೂ ಈ ನಾಲ್ಕೂ ಗುರುಗಳ ಗದ್ದುಗೆಗಳಿಗೆ ಜಾತಿ ಭೇದವಿಲ್ಲದೆ ಎಲ್ಲಾ ವರ್ಗದ ಜನರು ಪೂಜೆ ಮಾಡುತ್ತಾರೆ. ಅಲ್ಲದೆ ಮೂಡಿಯ ಸುತ್ತಮುತ್ತ ಈ ನಾಲ್ಕೂ ಜನರ ಹೆಸರು ಚಿರಾಯುವಾಗಿ ಉಳಿದಿದೆ.

ಗದ್ದುಗೆಯ ಮೇಲೆ ಮಠ: ಶ್ರೀ ಶಿವಲಿಂಗೇಶ್ವರರು ಲಿಂಗೈಕ್ಯರಾದ ಮೇಲೆ ಮೂಡಿಯಲ್ಲಿ ಅವರ ಸಮಾಧಿಯನ್ನು ಮಾಡಿ ಗದ್ದುಗೆಯನ್ನು ನಿರ್ಮಿಸಲಾಯಿತು. ಈ ನಂತರ ಮಠದಲ್ಲಿ ಗುರುಗಳು ಯಾರೂ ಇಲ್ಲದಂತಾಗಿ ಮಠ ಜೀರ್ಣಾವಸ್ಥೆಗೆ ಬರತೊಡಗಿತು. ಶ್ರೀ ಶಿವಲಿಂಗೇಶ್ವರರಿಗೆ ಆಪ್ತರಾಗಿದ್ದ ಫಕೀರ್ ಸಾಹೇಬರು ಹಾಗೂ ಗ್ರಾಮದ ಜನ ಮಠವನ್ನು ನವೀಕರಿಸಿ ಮಠದ ಕಟ್ಟಡವನ್ನು ಸುಸ್ಥಿತಿಗೆ ತರಲು ಪ್ರಯತ್ನಿಸಿದರು.ಮರ ಮುಟ್ಟುಗಳನ್ನು ಬಳಸಿ ಶ್ರೀ ಶಿವಲಿಂಗೇಶ್ವರರ ಗದ್ದುಗೆಯ ಮೇಲೆ ವಿಶಾಲವಾದ ಮಠವನ್ನು ಕಟ್ಟಿರುತ್ತಾರೆ. ಇದಕ್ಕೆ ಉಪಯೋಗಿಸಿರುವ ತೊಲೆ ಕಂಬಗಳು ಬೃಹದಾಕಾರವಾಗಿದ್ದು ಇವುಗಳನ್ನು ಸಾಗಿಸಲು ಮತ್ತು ಮೇಲಕ್ಕೆತ್ತಲೂ ಶ್ರೀ ಶಿವಲಿಂಗೇಶ್ವರರ ಆಪ್ತರಾಗಿದ್ದ ಶ್ರೀ ಫಕೀರೇಶ್ವರರು ತಮ್ಮ ಬೆತ್ತದ ಕೋಲನ್ನು ಸನ್ನೆಯಂತೆ ಮಾಡಿಕೊಂಡು ಸಹಾಯ ಮೂಡುತ್ತಿದ್ದರಂತೆ. ಗ್ರಾಮಸ್ಥರ ಮತ್ತು ಶ್ರೀ ಫಕೀರೇಶ್ವರರ ಶ್ರಮದ ಫಲವಾಗಿ ರೂಪುಗೊಂಡ ಮಠದಲ್ಲಿ ಉತ್ತರಾಧಿಕಾರಿಗಳು ಯಾರೂ ಇಲ್ಲದೆ ಮಠ ಖಾಲಿ ಉಳಿಯಬೇಕಾಯಿತು. ಆದರೂ ಮಠದಲ್ಲಿ ಗದ್ದುಗೆ ಪೂಜೆ ಹಾಗೂ ಧಾರ್ಮಿಕ ಕೆಲಸಗಳು ನಿಲ್ಲದಂತೆ ಸಾಂಗವಾಗಿ ನಡೆದುಕೊಂಡು ಬಂದಿವೆ ಎಂದು ಗ್ರಾಮದ ಜನರು ಹೇಳುತ್ತಾರೆ.

ಉತ್ತರಾಧಿಕಾರಿ ಆಗಮನ: ಕೆಲವು ದಶಕಗಳ ಕಾಲಾ ನಂತರ ಇಪ್ಪತ್ತನೆಯ ಶತಮಾನದ ಆಧಿಭಾಗದಲ್ಲಿ ಲೋಕಸಂಚಾರ ಕೈಗೊಂಡು, ಮೈಸೂರು ಸೀಮೆಯಿಂದ ಬಂದಿದ್ದ ಶ್ರೀ ಶ್ರೀಕಂಠ ಸ್ವಾಮಿಗಳು ಕೆಲವು ದಿನ ಇಲ್ಲೇ ಅನುಷ್ಠಾನಗೊಂಡಿದ್ದರು. ಶ್ರೀ ಶ್ರೀಕಂಠ ಸ್ವಾಮಿಗಳ ಅದಮ್ಯ ಆಧ್ಯಾತ್ಮಿಕ ಶಕ್ತಿಯನ್ನು ಗುರುತಿಸಿದ ಮೂಡಿಯ ಭಕ್ತರು ಗುರುಗಳಿಲ್ಲದೆ ಖಾಲಿ ಬಿದ್ದಿದ್ದ ಮಠದಲ್ಲಿ ಸೂಕ್ತ ವ್ಯಕ್ತಿ ಇವರಾಗಬಹುದು ಎಂದು ಅರಿತು ಅನುಷ್ಠಾನಗೊಂಡಿದ್ದ ಶ್ರೀ ಶ್ರೀಕಂಠ ಸ್ವಾಮಿಗಳಲ್ಲಿ ತಮ್ಮ ಬಯಕೆಯನ್ನು ಮುಂದಿಟ್ಟರು.'ಈ ಕ್ಷೇತ್ರದಲ್ಲಿ ನೆಲೆಸಬೇಕು ಎಂದು ದೈವ ಸಂಕಲ್ಪವಾಗಿದ್ದರೆ ಬೇಡ ಎನ್ನಲು ನಾವ್ಯಾರು? ನಿಮ್ಮ ಸದಿಚ್ಛೆಯಂತೆ ಆಗಲಿ' ಎಂದು ಅವರು ಒಪ್ಪಿಗೆಕೊಟ್ಟರು.

ವಿರಕ್ತ ಸಂಪ್ರದಾಯದಂತೆ ವಿಧಿವತ್ತಾಗಿ ಭಕ್ತರು ಪಟ್ಟಾಧಿಕಾರ ನೆರವೇರಿಸಿ ಗುರುಗಳಿಗೆ ವಿಶಾಲ ಮಠದ ಕಟ್ಟಡದಲ್ಲಿ ಧಾರ್ಮಿಕ ಕಾರ್ಯಗಳು ಸುಗಮವಾಗಿ ನೆರವೇರಲು ಎಲ್ಲಾ ವ್ಯವಸ್ಥೆ ಮಾಡಿಕೊಟ್ಟು, ಗುರುಗಳ ಬೆನ್ನ ಹಿಂದೆ ನಿಂತು ಸಹಕರಿಸತೊಡಗಿ ದರು. ಮೃದು ಭಾಷಿಗಳು, ಸದಾ ಅನುಷ್ಠಾನ ನಿಷ್ಠರು, ಹಳ್ಳಿ ವೈದ್ಯ ಪದ್ದತಿಯ ಬಗ್ಗೆ ಅನುಭವ ಉಳ್ಳವರು ಆಗಿದ್ದ ಶ್ರೀ ಶ್ರೀಕಂಠ ಸ್ವಾಮಿಗಳು ಜ್ಯೋತಿಷ್ಯ ಬಲ್ಲವರಾಗಿದ್ದು ಸುತ್ತಲ ಗ್ರಾಮಗಳ ಭಕ್ತರು ಚಿಕಿತ್ಸೆ, ಜ್ಯೋತಿಷ್ಯ ಹಾಗೂ ಆಶೀರ್ವಾದ ಪಡೆಯಲು ಗುರುಗಳ ಬಳಿಗೆ ಬರುವಂತಾಗಿ ಮಠವನ್ನು ಹೆಚ್ಚು ಪ್ರಚಾರಕ್ಕೆ ತಂದಿರುತ್ತಾರೆ.

ಹೀಗಿರುವಾಗ ಪ್ಲೇಗು ಜಾಡ್ಯ ಊರಿಗೆ ಮಾರಿಯಂತೆ ಅಪ್ಪಳಿಸಿತು. ಗುರುಗಳೂ ವೈದ್ಯರೂ ಆಗಿದ್ದ ಶ್ರೀ ಶ್ರೀಕಂಠ ಸ್ವಾಮಿಗಳು ಈ ಸಂದರ್ಭದಲ್ಲಿ ಪಲಾಯನ ಮಾಡದೆ ಭಕ್ತರ ಚಿಕಿತ್ಸೆಗೆ ಮುಂದಾದರು. ಸಾವು ನೋವುಗಳನ್ನು ಅನುಭವಿಸಿದ ಭಕ್ತರ ಕುಟುಂಬಗಳಿಗೆ ನೆರವಾಗಿ ನಿಂತರು. ಈ ರೀತಿ ಭಕ್ತರ ಕಷ್ಟಗಳಿಗೆ ಸ್ಪಂದಿಸಿದ ಫಲವಾಗಿಯೇ ಅಂಟುಜಾಡ್ಯ ಪ್ಲೇಗು ಗುರುಗಳನ್ನು ಬಲಿ ತೆಗೆದುಕೊಂಡಿತು ಎಂದು ಮೂಡಿಯ ಜನ ಹೇಳುತ್ತಾರೆ. ಮಠದ ಚಟುವಟಿಕೆಗಳು ಶ್ರೀ ಶ್ರೀಕಂಠ ಸ್ವಾಮಿಗಳ ಕಾಲದಲ್ಲಿ ಮತ್ತೊಮ್ಮೆ ಪ್ರಾರಂಭವಾಗಿದ್ದರಿಂದ ಜನರು ಹರ್ಷಗೊಂಡಿದ್ದರು. ಆದರೆ ಕೇವಲ ಹತ್ತು ವರ್ಷಗಳಲ್ಲಿ ಮಠದ ಜ್ಯೋತಿ ನಂದಿದ್ದು ಭಕ್ತರಲ್ಲಿ ದುಃಖ, ನೋವನ್ನು ತಂದಿತು. ಈ ಘಟನೆ ನಡೆದ ಮೇಲೆ ಮೂಡಿಯ ಧಾರ್ಮಿಕ ಚಟುವಟಿಕೆಗಳು ಮೌನಗೊಂಡವು. ಇದಾದ ಎಷ್ಟೋ ವರ್ಷಗಳು ಉತ್ತರಾಧಿಕಾರಿಗಳಿಲ್ಲದೆ ಮಠವು ಪುನಃ ಖಾಲಿ ಉಳಿಯಿತು.

ಶ್ರೀ ಚಿದಾನಂದ ಸ್ವಾಮಿಗಳು: ಶ್ರೀ ಶ್ರೀಕಂಠ ಸ್ವಾಮಿಗಳ ತರುವಾಯ ಶ್ರೀ ಶಿವಲಿಂಗೇಶ್ವರ ಮಠಕ್ಕೆ ಶ್ರೀ ಚಿದಾನಂದ ಸ್ವಾಮಿ ಗಳು ಅಧಿಕಾರ ವಹಿಸಿಕೊಂಡಿರುತ್ತಾರೆ. ಮುದ್ದೇ ಬಿಹಾಳ ತಾಲ್ಲೂಕಿನವರಾದ ಇವರು ಲೋಕಸಂಚಾರಕ್ಕೆ ಬಂದು

ಇಲ್ಲಿ ಅನುಷ್ಠಾನಗೊಂಡಿದ್ದರು. ಇವರನ್ನು ಇಲ್ಲಿನ ಭಕ್ತರು ಮಠದ ಗುರುಗಳಾಗಿ ನೇಮಿಸಿದರು. ಇವರ ಕಾಲದಲ್ಲಿ ಮಠ ಹೆಚ್ಚು ಅಭಿವೃದ್ಧಿಯನ್ನು ಕಂಡಿದೆ. ಜೀರ್ಣಾವಸ್ಥೆಯಲ್ಲಿದ್ದ ಮಠವನ್ನು ಸುಸ್ಥಿತಿಗೆ ತಂದು ಮಠದ ಆವರಣದಲ್ಲಿ ಪ್ರಶಾಂತತೆ ಸೃಷ್ಟಿಸಿದ ಇವರು ಗ್ರಾಮದಲ್ಲಿ ಧಾರ್ಮಿಕ ಆಚರಣೆಗಳನ್ನು ಮುಂದುವರೆಸಿಕೊಂಡು ಹೋಗುತ್ತಿದ್ದರು. ಒಮ್ಮೆ ಮಠದ ಆವರಣದಲ್ಲಿ ಇದ್ದ ಮರಗಳನ್ನು ಗ್ರಾಮದ ಭಕ್ತರೊಬ್ಬರು ಉರುವಲಿಗಾಗಿ ಬಳಸಿಕೊಳ್ಳುತ್ತಿದುದ್ದನ್ನು ಕಂಡು ಗುರುಗಳು ಕಟುಮಾತಿನಿಂದ ಹೇಳಿದ್ದಕ್ಕೆ ಆ ವ್ಯಕ್ತಿಯು ಗುರುಗಳ ಸ್ಥಾನಮಾನವನ್ನು ಮತ್ತು ಸ್ವಾಮಿಗಳ ತಪೋಗುಣವನ್ನು ಲೆಕ್ಕಿಸದೆ ಎದುರು ಉತ್ತರ ಕೊಟ್ಟು ನೋವುಂಟುಮಾಡಿದ್ದರು. ಇದರಿಂದ ಗುರುಗಳು ಬಹಳವಾಗಿ ನೋವನ್ನು ಅನುಭವಿಸಿ, ಮೌನವ್ರತದಲ್ಲಿ ಇದ್ದಾಗಲೇ ಲಿಂಗೈಕ್ಯರಾದರು ಎಂದು ಹೇಳಲಾಗುತ್ತದೆ. ಈ ಗುರುಗಳ ಸಮಾಧಿಯನ್ನು ಮಠದ ಹೊರಭಾಗ ದಲ್ಲಿ ಮಾಡಿ ಗದ್ದುಗೆ ನಿರ್ಮಿಸ ಲಾಯಿತು. ಇದಾದ ನಂತರ ಮೂಡಿ ಮಠಕ್ಕೆ ಮತ್ತೊಮ್ಮೆ ಗ್ರಹಣ ಹಿಡಿಯಿತು. ಉತ್ತರಾಧಿಕಾರಿ ಗಳಿಲ್ಲದೆ ಮೂವತ್ತು ವರ್ಷಗಳ ಕಾಲ ಮಠ ಖಾಲಿ ಉಳಿದಿತ್ತು.

ಜ್ಯೋತಿ ಹಚ್ಚಿದ ಭಕ್ತರು: ಮಠದಲ್ಲಿ ನೆಲೆಸಲು ಯಾರೂ ಇಲ್ಲದ ಕಾರಣ ಮಠದ ಕಟ್ಟಡ ಜೀರ್ಣಗೊಂಡು ಕಳಚಿ ಬೀಳ ತೊಡಗಿತು. ಇದನ್ನು ನೋಡಿದ ಊರಿನ ಭಕ್ತರು 'ನಾವೇ ಕಟ್ಟಿದ ಮಠ ನಮ್ಮ ಕಣ್ಣು ಮುಂದೆ ಬಿದ್ದು ಹೋಗುವುದು ಬೇಡ' ಎಂದು ಮಠದಲ್ಲಿ ಪೂಜೆ ಕಾರ್ಯಗಳನ್ನು ನೆರವೇರಿಸಿ ಮಠದ ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಂಡು ಜನ ಸಂಪರ್ಕ ಇರುವಂತೆ ವ್ಯವಸ್ಥೆ ಮಾಡಿದರು. ಬಸವಣ್ಣ, ಹಾಲಪ್ಪ ಮತ್ತು ಸಂಗಯ್ಯ ಎಂಬುವರು ಮಠದಲ್ಲಿ ಜ್ಯೋತಿ ಬೆಳಗುವಂತೆ ನೋಡಿಕೊಂಡರು.

ಗಿರಿಯಾಪುರದ ಮರಿ ದೇವರು: ಮೂಡಿಯ ಎಂ.ಎಸ್. ಪುಟ್ಟಪ್ಪನವರು ಮಠದ ಸರ್ವಾಂಗೀಣ ಅಭಿವೃದ್ಧಿಗೆ ದುಡಿದ ಜೀವ. ಮಠ ತಮ್ಮ ಕಣ್ಣು ಎದುರಿಗೆ ಉತ್ತರಾಧಿಕಾರಿಗಳಿಲ್ಲದೆ ಅನಾಥವಾಗಿರುವುದನ್ನು ನೋಡಿ ವ್ಯಥೆಪಟ್ಟು ಉತ್ತರಾಧಿಕಾರಿ ಗಳನ್ನು ಹುಡುಕತೊಡಗಿದರು. ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಗಿರಿಯಾಪುರದ ಶ್ರೀ ಗುರುಕುಮಾರಾಶ್ರಮದ ಸಂಸ್ಥಾಪಕರು ಹಾಗೂ ಸಖರಾಯಪಟ್ಟಣದ ಹಾಲುಸ್ವಾಮಿ ಮಠದ ಪಟ್ಟಾಧ್ಯಕ್ಷರೂ ಆಗಿದ್ದ ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳ ಭಕ್ತರಾದ ಪುಟ್ಟಪ್ಪನವರು ಗಿರಿಯಾಪುರಕ್ಕೆ ಬಂದಿದ್ದರು. ಈ ಸಂದರ್ಭದಲ್ಲಿ ಗುರುಗಳ ಸೇವೆ ಮಾಡಿಕೊಂಡಿದ್ದ ಶ್ರೀ ಚನ್ನವೀರ ದೇವರ ಮೇಲೆ ಪುಟ್ಟಪ್ಪನವರ ಕಣ್ಣು ಬಿತ್ತು. ಇದನ್ನು ಗುರುಗಳಿಗೆ ತೋರ್ಪಡಿಸದೆ ಮೂಡಿ ಮಠಕ್ಕೆ ಉತ್ತರಾಧಿಕಾರಿ ಬೇಕೆಂದೂ, ಯಾರಾದರೂ ಸಮರ್ಥ ಮರಿದೇವರುಗಳಿದ್ದರೆ ತೋರಿಸಿಕೊಡಬೇಕೆಂದೂ ಬೇಡಿಕೆ ಮುಂದಿಟ್ಟರು.

ಇದಾದ ಮೇಲೆ ಪುಟ್ಟಪ್ಪನವರು ಒಂದೆರೆಡು ಬಾರಿ ಗಿರಿಯಾಪುರಕ್ಕೆ ಬಂದು ಹೋಗಿದ್ದರು. ಗುರುಕುಮಾರಾಶ್ರಮದಲ್ಲಿ ವಚನಶಾಸ್ತ್ರ, ಷಟ್‌ಸ್ಥಲ ಸಿದ್ಧಾಂತ ಮತ್ತು ಶಿವಯೋಗದ ಬಗ್ಗೆ ಅಭ್ಯಾಸ ಮಾಡುತ್ತಿದ್ದ ಶ್ರೀ ಚನ್ನವೀರ ದೇವರನ್ನು ಮಠಕ್ಕೆ ನೇಮಿಸಬೇಕೆಂದು ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳಲ್ಲಿ ಅರಿಕೆ ಮಾಡಿಕೊಳ್ಳಬೇಕೆಂದು ಮತ್ತೊಮ್ಮೆ ಗಿರಿಯಾಪುರಕ್ಕೆ ಬಂದಾಗ ಶ್ರೀ ಪುಟ್ಟಪ್ಪನವರು ಗುರುಗಳಲ್ಲಿ ತಮ್ಮ ಮನಸ್ಸಿನಲ್ಲಿದ್ದ ಅಪೇಕ್ಷೆಯನ್ನು ಹೇಳಿದರು. ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮಿಗಳು ನಂತರ ಶ್ರೀ ಚನ್ನವೀರ ದೇವರಲ್ಲಿ ಪ್ರಸ್ತಾಪ ಮಾಡಿ ಒಪ್ಪಿಗೆ ಪಡೆದು ಪುಟ್ಟಪ್ಪನವರಿಗೆ ಉತ್ತರಾಧಿಕಾರಿಗಳನ್ನು ಕಳುಹಿಸಿಕೊಡಲು ಒಪ್ಪಿಗೆಕೊಟ್ಟರು.

ಮುರಿದು ಬೀಳುತ್ತಿದ್ದ ಮಠದ ಕಟ್ಟಡವನ್ನು ಬಿಟ್ಟರೆ ಬೇರಾವ ಆಸ್ತಿಯೂ ಇಲ್ಲ ಎಂದು ತಿಳಿದ ಮೇಲೆ ಮೂಡಿ ಮಠಕ್ಕೆ ಉತ್ತರಾಧಿಕಾರಿಗಳಾಗಲು ಒಪ್ಪಿಗೆ ಕೊಟ್ಟ ಶ್ರೀ ಚನ್ನವೀರ ದೇವರಲ್ಲಿ ಗೌರವ ವ್ಯಕ್ತಪಡಿಸಿ ಸೂಕ್ತ ದಿನಗಳಲ್ಲಿ ಪುರಪ್ರವೇಶ ಮಾಡಿಸಿಕೊಳ್ಳುವುದಾಗಿ ಹೇಳಿ ಮೂಡಿಗೆ ಬಂದರು. ಗ್ರಾಮದ ಜನರೊಂದಿಗೆ ಚರ್ಚಿಸಿದ ಪುಟ್ಟಪ್ಪನವರು 'ಸಮರ್ಥ ಉತ್ತರಾಧಿಕಾರಿ ಸಿಕ್ಕಿದ್ದು, ಈ ಗ್ರಾಮದ ಪುಣ್ಯ! ಅಲ್ಲದೆ, ಈ ಮಠದ ಹಿಂದಿನ ಎಲ್ಲಾ ಗುರುಗಳ ಕೃಪಾಶೀರ್ವಾದ!' ಎಂದು ಹೇಳಿ ೧೯೫೫ ರ ಮೇ ಐದರಂದು ಪುರ ಪ್ರವೇಶ ಮಾಡಿಸಿಕೊಂಡರು. ಪೂರ್ಣ ಜೀರ್ಣಾವಸ್ಥೆಯಾಗಿದ್ದ ಮಠದಲ್ಲಿ ಇದ್ದುಕೊಂಡೇ ಮುಂದಿನ ಕಾರ್ಯಯೋಜನೆ ರೂಪಿಸಿಕೊಂಡ ಶ್ರೀ ಚನ್ನವೀರ ದೇವರು ಭಕ್ತರೊಡನೆ ಸಂಪರ್ಕ ಹೆಚ್ಚಿಸಿಕೊಂಡು ಕ್ರಿಯಾತ್ಮಕವಾಗಿಯೇ ಬೆಳೆಯತೊಡಗಿದರು. ಮಠದಲ್ಲಿ ಅಲ್ಪಸ್ವಲ್ಪ ವ್ಯವಸ್ಥೆಗಳು ಆದ ಮೇಲೆ ೧೯೫೬ ನೆಯ ಮಾರ್ಚ್ ಹತ್ತರಂದು ಶ್ರೀ ಚನ್ನವೀರ ಸ್ವಾಮಿಗಳು ಪಟ್ಟಾಧಿಕಾರ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಬನವಾಸಿ ಹೋರೆಮಠದ

ಶ್ರೀಸಿದ್ಧವೀರ ಶಿವಯೋಗಿಗಳು ಚರಪಟ್ಟಾಧಿಕಾರವನ್ನು ನೀಡಿದರು. ಧಾರವಾಡ ಮುರುಘಾ ಮಠದ ಅಂದಿನ ಶ್ರೀ ಮೃತ್ಯುಂಜಯ ಸ್ವಾಮಿಗಳು ಹಾಗೂ ಶ್ರೀ ಮಹಾಂತ ಸ್ವಾಮಿಗಳು, ಬೆಂಗಳೂರಿನ ಸರ್ಪಭೂಷಣ ಮಠದ ಶ್ರೀ ಮಹಾದೇವ ಸ್ವಾಮಿಗಳು ಆಗಮಿಸಿ ಆಶೀರ್ವದಿಸಿದರು.

ರಾಯಚೂರು ಜಿಲ್ಲೆಯ ಅರಳೀಹಳ್ಳಿಯಲ್ಲಿ ಜನಿಸಿದ ಶ್ರೀ ಚನ್ನವೀರ ಸ್ವಾಮಿಗಳು ಆಧ್ಯಾತ್ಮದ ಚಿಂತನೆಯಿಂದ ಸಮರ್ಥ ಗುರುಗಳನ್ನು ಹುಡುಕಿಕೊಂಡು ಆಧ್ಯಾತ್ಮ ಚಿಂತಕರಾಗಿದ್ದು, ಶಿವಾದ್ವೈತದ ಬಗ್ಗೆ ಅಪಾರ ಜ್ಞಾನ ಸಂಪಾದಿಸಿಕೊಂಡಿದ್ದ ಶ್ರೀ ಸದಾಶಿವ ಶಿವಾಚಾರ್ಯರಲ್ಲಿ ಆಶ್ರಯಪಡೆದು, ಅವರ ಸೇವೆ ಮಾಡಿಕೊಂಡು ಅಪಾರ ಜ್ಞಾನ ಸಂಪಾದಿಸಿದ್ದಲ್ಲದೆ ಜೀವನಾನುಭವ ದಿಂದ ಪರಿಪಕ್ವಗೊಂಡರು. ಶ್ರೀ ಚನ್ನವೀರ ಸ್ವಾಮಿಗಳು ಹಿಂದೆ ಗಳಿಸಿದ ಅನುಭವವನ್ನು ಇಲ್ಲಿ ಪ್ರಯೋಗ ಮಾಡಿ ಮಠವನ್ನು ಹಿಂದೆ ಕಂಡರಿಯದಂತೆ ಅಭಿವೃದ್ಧಿಪಡಿಸಿದರು.

ಶಿವಾನುಭವ ತತ್ತ್ವ ಪ್ರಚಾರ ಸಮಿತಿ: ಉತ್ತರಾಧಿಕಾರಿಗಳಾಗಿ ಆಯ್ಕೆಗೊಂಡ ಮಠದಲ್ಲಿ ವಾಸ್ತವ್ಯ ಮಾಡಿದ್ದಾಗಲೆ ಶಿವಾನುಭವ ತತ್ತ್ವ ಪ್ರಚಾರಸಮಿತಿಯನ್ನು ರಚಿಸಿ, ಈ ಮಲೆನಾಡಿನ ಪ್ರಾಂತ್ಯದಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಆಧ್ಯಾತ್ಮ ಜೀವನಕ್ಕೆ ಬೇಕಾದ ವಿಚಾರಗಳನ್ನು ಜನರಿಗೆ ಮುಟ್ಟಿಸತೊಡಗಿದ್ದರು. ಜನರಲ್ಲಿ ವರ್ಗ ಲಿಂಗಗಳ ಭೇದ ತೋರಿಸದೆ ಎಲ್ಲರೂ ಸಮಾನರು ಎಂದು ಧರ್ಮ ಜಾಗೃತಿ ಉಂಟುಮಾಡಿದರು. ಪ್ರತಿ ಸೋಮವಾರ ಶಿವಾನುಭವತತ್ತ್ವ ಪ್ರವಚನ ಹಮ್ಮಿಕೊಂಡು ಮಠಕ್ಕೆ ನೂರಾರು ಭಕ್ತರನ್ನು ಆಕರ್ಷಿಸಿಕೊಂಡರು. ಅಂದು ಆರಂಭಗೊಂಡ ಶಿವಾನುಭವ ತತ್ತ್ವ ಪ್ರಚಾರ ಸಮಿತಿಯ ಕಾರ್ಯಕ್ರಮ ಇಂದಿಗೂ ನಿಲ್ಲದೆ ನಡೆಯುತ್ತಾ ಬಂದಿದೆ.

ಸಾಹಿತ್ಯ ಅಭ್ಯಾಸ: ಪಟ್ಟಾಧಿಕಾರಿಗಳಾಗಿ ವಚನಸಾಹಿತ್ಯ ಹಾಗೂ ಇತರ ಧರ್ಮಗ್ರಂಥಗಳನ್ನು ಸತತವಾಗಿ ಅಧ್ಯಯನ ಮಾಡಿ ಅಪಾರ ಜ್ಞಾನವನ್ನು ಸಂಪಾದಿಸಿಕೊಂಡರು. ಗುರುಗಳು ಶ್ರೀ ಗುರುಕುಮಾರಾಶ್ರಮದಲ್ಲಿ ವಚನಸಾಹಿತ್ಯದ ಅಧ್ಯಯನ ಮತ್ತು ಪಠಣ ಮಾಡಿದ್ದ ಅನುಭವದಿಂದ ಅವುಗಳ ಪ್ರಚಾರ ಕಾರ್ಯಕ್ಕೆ ತೊಡಗಿದ್ದಾರೆ. ಷಟ್‌ಸ್ಥಲ ಸಿದ್ಧಾಂತ, ಅಷ್ಟಾವರಣ ಹಾಗೂ ಪಂಚಾಚಾರಗಳ ಬಗ್ಗೆ ಅಧಿಕೃತವಾಗಿ ಮಾತನಾಡಬಲ್ಲಂತಹ ವಕ್ತಾರರಾಗಿ ರೂಪುಗೊಂಡಿದ್ದಾರೆ.

ಅಭಿವೃದ್ಧಿ ಕಾರ್ಯಗಳ: ಶ್ರೀ ಚನ್ನವೀರ ಸ್ವಾಮಿಗಳು ಪಟ್ಟಾಧಿಕಾರಕ್ಕೆ ಬಂದ ಮೇಲೆ ಶ್ರೀ ಶಿವಲಿಂಗೇಶ್ವರ ಮಠ ಸರ್ವಾಂಗೀಣ ಅಭಿವೃದ್ಧಿ ಕಾಣತೊಡಗಿತು.ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ರೂಪಗೊಂಡು ಈ ಮಠದ ಕಾರ್ಯ ಚಟುವಟಿಕೆ ವಿಸ್ತಾರಗೊಂಡಿತು. ೧೯೬೯ರಲ್ಲಿ ಮೂಲ ಮಠದ ಕಟ್ಟಡವನ್ನು ತೆಗೆಸಿ ನೂತನ ಕಟ್ಟಡ ನಿರ್ಮಿಸಬೇಕೆಂದು ಭಕ್ತರೇ ಮುಂದಾದಾಗ ಗುರುಗಳು ಪ್ರೇರಣೆ ನೀಡಿ, ೧೯೭೧ಕ್ಕೆ ಭವ್ಯ ಕಟ್ಟಡವನ್ನು ಪೂರ್ಣಗೊಳಿಸಿದರು. ಅಂದೇ ಈ ಕಟ್ಟಡಕ್ಕೆ ಮೂರು ಲಕ್ಷ ರೂಪಾಯಿ ವೆಚ್ಚವಾಗಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಕಲ್ಲಿನಿಂದಲೇ ಕಟ್ಟಲಾದ ಕಟ್ಟಡ ಭವ್ಯ ಸ್ಮಾರಕವಾಗಿ ಊರಿನ ಹೆಬ್ಬಾಗಿಲಿನಲ್ಲಿ ತಲೆಎತ್ತಿರುವುದು ಮೂಡಿಗೆ ಒಂದು ಮೆರುಗು ತಂದಿದೆ. ಮೂಡಿಗೆ ಒಂದು ಸರ್ಕಾರಿ ಆಸ್ಪತ್ರೆ ಮಂಜೂರು ಮಾಡಿಸಿದ ಗುರುಗಳು ಭಕ್ತರ, ದಾನಿಗಳ ನೆರವು ಪಡೆದು ಆಸ್ಪತ್ರೆಗೆ ಸುಸಜ್ಜಿತ ಕಟ್ಟಡವನ್ನು ಕಟ್ಟಿಸಿಕೊಟ್ಟರು. ಅಲ್ಲದೆ ಗ್ರಾಮಾಂತರ ಪ್ರದೇಶದ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಗ್ರಾಮ ಮತ್ತು ಮಠವನ್ನು ಜತೆ ಜತೆಯಲ್ಲಿಯೇ ಬೆಳೆಸತೊಡಗಿದ್ದಾರೆ.

ಮೂಡಿಯಅಪ್ಪಗಳು: ಭಕ್ತರ ಜತೆಜತೆಯಲ್ಲಿ ಸರಳ ಸಜ್ಜನಿಕೆಯಿಂದ ವರ್ತಿಸಿ ಅವರ ಕಷ್ಟಗಳಿಗೆ ಸ್ಪಂದಿಸಿ,ಸಮಗ್ರ ಸಮಾಜದ ಅಭಿವೃದ್ಧಿಗೆ ಕಂಕಣತೊಟ್ಟ ಶ್ರೀ ಚನ್ನವೀರ ಸ್ವಾಮಿಗಳನ್ನು ಈ ಭಾಗದ ಜನರು 'ಮೂಡಿ ಅಪ್ಪಗಳು' ಎಂದು ಪ್ರೀತಿಯಿಂದ ಕರೆಯಲ್ಪಟ್ಟಿರುತ್ತಾರೆ. ಸಮಾಜದಲ್ಲಿ ಲೋಪದೋಷಗಳು ಕಂಡಾಗ ಸರಿಪಡಿಸುವ ರೀತಿ, ಸಮಾಜದ ಸುಧಾರಣೆಗೆ ೧೯೭೩ ರ ಮೇ ಹದಿನೇಳರಂದು ಮಾಡಿದ ಪಾದಯಾತ್ರೆ, ಶಿವಮೊಗ್ಗ, ಧಾರವಾಡ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಧಾರ್ಮಿಕ ಚಳವಳಿ ಯನ್ನು ರೂಪಿಸಿದಂತಿತ್ತು. ಈ ಸಂದರ್ಭಗಳಲ್ಲಿ ಎಂಬತ್ತನಾಲ್ಕು ಗ್ರಾಮಗಳಿಗೆ ಭೇಟಿ ಕೊಟ್ಟು, ಪ್ರತಿ ಗ್ರಾಮದಲ್ಲಿಯೂ ಪುರಾಣ ಪ್ರವಚನ, ಭಾಷಣಗಳ ಮೂಲಕ ಧರ್ಮಪ್ರಸಾರ ಕೈಗೊಂಡರು. ವೀರಶೈವರೇ ಆಗಿದ್ದು ಇಷ್ಟಲಿಂಗ ಧರಿಸದ ೯೪೧೧

ಜನ ಪುರುಷರಿಗೆ, ೯೧೦೭ ಜನ ಸ್ತ್ರೀಯರಿಗೆ ಲಿಂಗಧಾರಣೆ ಮಾಡಿ ಲಿಂಗಾರ್ಚನೆಯ ವಿಧಿವಿಧಾನಗಳನ್ನು ತಿಳಿಸಿಕೊಟ್ಟರು. ಈ ಸಂದರ್ಭದಲ್ಲಿ ನೂರಾರು ಬ್ರಾಹ್ಮಣರ ಮನೆಗಳಿಗೆ ಹಾಗೂ ಮುಸಲ್ಮಾನರ ಮನೆಗಳಿಗೆ ಭೇಟಿಕೊಟ್ಟು ಸಹ ಬಾಳ್ವೆಯ ಮಾರ್ಗವನ್ನು ತೋರಿಸಿಕ್ಕೊಟಿದ್ದಾರೆ.

ಶಿಕ್ಷಣ: ಮೂಡಿಯಲ್ಲಿ ಮಠದ ವತಿಯಿಂದ ಒಂದು ಪ್ರೌಢಶಾಲೆ ಮತ್ತು ಉಚಿತ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಿ ಕಲಿಯುವ ಬಡ ಮಕ್ಕಳಿಗೆ ನೆರವು ಕಲ್ಪಿಸಿಕೊಟ್ಟಿದ್ದಾರೆ. ಅಲ್ಲದೆ ತಮ್ಮದಲ್ಲದ ಅನೇಕ ಶಾಲಾಕಾಲೇಜುಗಳ ಕಟ್ಟಡಗಳಿಗೆ ನೆರವು ನೀಡಿದ ಉದಾಹರಣೆಗಳು ಉಂಟು. ಈ ರೀತಿ ಸಾಮಾಜಿಕ, ಧಾರ್ಮಿಕ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವ ಶ್ರೀ ಚನ್ನವೀರ ಸ್ವಾಮಿಗಳು ಎಲ್ಲರ ಬಾಳಿನ ಬೆಳಕಾಗಿ ಕಂಗೊಳಿಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಚನ್ನವೀರ ಸ್ವಾಮಿಗಳು, ಶ್ರೀ ವಿರಕ್ತಮಠ, ಮೂಡಿ, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಹಿರೇಮಾಗಡಿ

ಸೊರಬ ತಾಲ್ಲೂಕಿನ ಹಿರೇಮಾಗಡಿಯು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಹದಿನಾಲ್ಕು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಹಿರೇಮಾಗಡಿ ಗ್ರಾಮದಲ್ಲಿ ಮುರುಘ ಸಮಯಕ್ಕೆ ಸೇರಿದ ಶ್ರೀ ವಿರಕ್ತಮಠವು ಸ್ಥಾಪನೆಯಾಗಿ ಧಾರ್ಮಿಕ ಚಟುವಟಿಕೆಯ ಕೇಂದ್ರಬಿಂದುವಾಗಿ ಬೆಳೆದಿದೆ. ಚಿತ್ರದುರ್ಗ ಬೃಹನ್ಮಠದ ಶ್ರೀ ಸ್ವಾದಿಚನ್ನಬಸವ ಸ್ವಾಮಿಗಳು (೧೭೨೯), ಮೂರುಸಾವಿರದ ಶ್ರೀ ಸಿದ್ಧಲಿಂಗ ಸ್ವಾಮಿಗಳು(೧೭೫೯) ಮತ್ತು ವ್ಯಾಕರಣ ಶ್ರೀ ಸಿದ್ಧಲಿಂಗ ಸ್ವಾಮಿಗಳು (೧೭೯೦-೧೮೦೦) ಇಲ್ಲಿ ಲಿಂಗೈಕ್ಯರಾಗಿದ್ದು, ಇವರ ಗದ್ದುಗೆಗಳನ್ನು ಸ್ಥಾಪನೆಯಾಗಿರುವುದರಿಂದ ಈ ಮಠವು ಹೆಚ್ಚು ಪ್ರಸಿದ್ಧಿ ಪಡೆಯಲು ಕಾರಣವಾಗಿದೆ.

ಈಗ ಶ್ರೀ ಶಿವಮೂರ್ತಿ ಸ್ವಾಮಿಗಳು ಈ ಮಠದ ಅಧಿಕಾರವನ್ನು ವಹಿಸಿಕೊಂಡು ಅಭಿವೃದ್ಧಿಪಡಿಸುತ್ತಿದ್ದಾರೆ. ಮಠದ ಆಸ್ತಿಯನ್ನು ಅಭಿವೃದ್ಧಿಪಡಿಸಿರುವ ಗುರುಗಳು ಆಧುನಿಕ ಬೇಸಾಯ ಪದ್ಧತಿಯಿಂದ ಮಠಕ್ಕೆ ಆದಾಯದ ಮೂಲವನ್ನು ಹೆಚ್ಚಿಸಿಕೊಂಡಿದ್ದಾರೆ. ಆದರ್ಶಪ್ರಾಯರಾಗಿ ಕೆಲಸ ನಿರ್ವಹಿಸುತ್ತಿರುವ ಸ್ವಾಮಿಗಳು ಈ ಭಾಗದ ಧಾರ್ಮಿಕ, ಸಾಂಸ್ಕೃತಿಕ ಕೇಂದ್ರವಾಗಿ ಮಠ ಬೆಳೆಯುವಂತೆ ಮಾಡಿದ್ದಾರೆ. ಗುರುಗಳು ಮಠಕ್ಕೆ ನೂತನ ಕಟ್ಟಡ, ಮಹಾದ್ವಾರ ಮಂಟಪ ಹಾಗೂ ದಾಸೋಹಮಂದಿರವನ್ನು ನಿರ್ಮಿಸಲಾಗಿದೆ. ಗದ್ದುಗೆಗಳಿಗೆ ಪೂಜೆ, ಶ್ರಾವಣಮಾಸದಲ್ಲಿ ಶಿವಾನುಭವ ಕಾರ್ಯಕ್ರಮ ಮಾಡುವ ಮೂಲಕ ವಚನಸಾಹಿತ್ಯವನ್ನು ನಾಡಿಗೆ ಬಿತ್ತರಿಸುವ ಕಾಯಕದಲ್ಲಿ ತೊಡಗಿದ್ದಾರೆ. ಪ್ರತಿ ನಿತ್ಯ ಭಕ್ತರಿಗೆ ಅನ್ನದಾಸೋಹ ನಡೆಯುತ್ತಿದೆ.

ವಿಳಾಸ: ಶ್ರೀ.ಮ.ನಿ.ಪ್ರ. ಶಿವಮೂರ್ತಿ ಸ್ವಾಮಿಗಳು, ಶ್ರೀ ವಿರಕ್ತಮಠ, ಹಿರೇಮಾಗಡಿ,ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

❑

ಹೊಸನಗರ ತಾಲ್ಲೂಕು

ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕು, ಸಹ್ಯಾದ್ರಿ ಸಾಲಿನಲ್ಲಿದೆ. ಐತಿಹಾಸಿಕವಾಗಿ ಹೆಸರು ಮಾಡಿರುವ ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಹಿಂದೆ ಪ್ರಮುಖವಾಗಿ ಬೆಳೆದಿತ್ತು. ನಂತರ ಕ್ಷೀಣಿಸಿದ್ದು ಪ್ರಸ್ತುತ ಈ ತಾಲ್ಲೂಕಿನಲ್ಲಿ ಒಂದೇ ಮಠ ಅಸ್ತಿತ್ವದಲ್ಲಿದ್ದು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ.

ಪುಣಜಿ-ಮೂಲಗದ್ದೆ

ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನ ಪುಣಜಿ ಮೂಲಗದ್ದೆಯು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಸದಾನಂದಾಶ್ರಮವು ಅಸ್ತಿತ್ವದಲ್ಲಿದೆ.

ಸದಾನಂದಾಶ್ರಮ: ಈ ಮೊದಲು ಶರಾವತಿನದಿ ಮತ್ತು ಎಣ್ಣೆ ಹೊಳೆಯ ಸಂಗಮ ಕ್ಷೇತ್ರದಲ್ಲಿದ್ದ ಮಠವು ಪುಣಜಿಮೂಲ ಗದ್ದೆಗೆ ಸ್ಥಳಾಂತರಗೊಂಡು ಶ್ರೀ ಕೂಡ್ಲಿ ಮಠವಾಗಿ ಬೆಳೆದಿದೆ. ಈ ಕ್ಷೇತ್ರವು ಲಿಂಗನಮಕ್ಕಿ ಜಲಾಶಯದಲ್ಲಿ ಮುಳುಗಡೆಯಾದ ಮೇಲೆ ತಾಳಗುಪ್ಪಕ್ಕೆ ಸ್ಥಳಾಂತರಗೊಂಡು ನಂತರ ಇಲ್ಲಿ ಒಂದು ಶಾಖೆಯನ್ನು ೧೯೭೦ರಲ್ಲಿ ಆರಂಭಿಸಿದೆ.

ಶ್ರೀ ಸಿದ್ಧಲಿಂಗ ಸ್ವಾಮಿಗಳು ಶ್ರೀ ಕೂಡ್ಲಿಮಠ ಮುಳುಗಡೆಯಾಗುವ ಮೊದಲು ೧೯೬೨ರಲ್ಲಿ ಹಳೆಯ ಮಠದಲ್ಲಿ ಪಟ್ಟಾಧಿಕಾರ ಪಡೆದು, ನಂತರ ಸ್ಥಳಾಂತರ ಮಾಡಿದರು. ತಾಳಗುಪ್ಪಕ್ಕೆ ೧೯೬೩ರಲ್ಲಿ ಬಂದು ನೆಲೆಸಿ ಮಠವನ್ನು ಸ್ಥಾಪಿಸಿ, ನಂತರ ೧೯೭೦ರಲ್ಲಿ ಮೂಲಗದ್ದೆಗೆ ಮಠದ ಆಡಳಿತವನ್ನು ವರ್ಗಾಯಿಸಿಕೊಂಡರು. ತಮಗೆ ಪಟ್ಟಾಧಿಕಾರದ ಅನುಗ್ರಹ ನೀಡಿದ ಶ್ರೀ ಸದಾನಂದ ಸ್ವಾಮಿಗಳು ೧೯೮೯ರಲ್ಲಿ ಲಿಂಗೈಕ್ಯರಾದ ಮೇಲೆ ತಾಳಗುಪ್ಪದಲ್ಲಿ ಗದ್ದುಗೆ ನಿರ್ಮಿಸಿ ಮೂಲಗದ್ದೆಯಲ್ಲಿ ತೋರುಗದ್ದುಗೆ ನಿರ್ಮಿಸಿ ಪೂಜೆ ನಡೆಸತೊಡಗಿದ್ದಾರೆ. ಈ ಸ್ಥಳದಲ್ಲಿ ಸಂಗಮೇಶ್ವರ ದೇವಸ್ಥಾನವನ್ನು ನಿರ್ಮಿಸಿದ್ದಾರೆ. ದೇವಸ್ಥಾನ ಪಕ್ಕದಲ್ಲಿ ಬಯಲುರಂಗ ಮಂದಿರ ನಿರ್ಮಿಸಲಾಗಿದೆ. ಹಿರಿಯ ಗುರುಗಳ ಪುಣ್ಯತಿಥಿ, ಮಕರ ಸಂಕ್ರಮಣದಂದು ನಡೆಯುವ ಶಿವಾನುಭವ ಕಾರ್ಯಕ್ರಮಗಳು ವರ್ಷದ ಎರಡು ದೊಡ್ಡ ಕಾರ್ಯಕ್ರಮಗಳಾಗಿವೆ.

ಈ ಸಂದರ್ಭದಲ್ಲಿ ನಾಡಿನ ಖ್ಯಾತ ವಿದ್ವಾಂಸರು ಹಾಗೂ ಗುರುಗಳನ್ನು ಆಹ್ವಾನಿಸಿ ಧರ್ಮೋಪದೇಶ ಮಾಡಿಸಲಾಗುತ್ತಿದೆ. ಮಠದ ಶಾಖಾ ಮಠಗಳಾದ ಕಲ್ಲೇರಿ ಮಠವನ್ನು ಹೊಸದಾಗಿ ಕಟ್ಟಿಸಲಾಗಿದೆ. ಇಲ್ಲಿ ನಿತ್ಯ ಪೂಜೆ ನಡೆಯುವಂತೆ ವ್ಯವಸ್ಥೆ ಮಾಡಿಸಿದ್ದಾರೆ. ಸಾಗರದಲ್ಲಿ ಜ್ಞಾನ ದಾಸೋಹ ಮಂದಿರ ಇದ್ದು ಇದರಲ್ಲಿ ಅಂಗನವಾಡಿ ಶಾಲೆ ನಡೆಸಲು ಅವಕಾಶ ಕಲ್ಪಿಸಿಕೊಡಲಾಗಿದೆ. ಮೂಲಮಠ ಮತ್ತು ಮಠದ ಆಸ್ತಿ ಮುಳುಗಡೆಯಾದ ಮೇಲೆ ತಾಳಗುಪ್ಪ ಮತ್ತು ಮೂಲಗದ್ದೆಯಲ್ಲಿ ಜಮೀನನ್ನು ಖರೀದಿ ಮಾಡಿ ತೋಟ ನಿರ್ಮಿಸಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ.ಸಿದ್ಧಲಿಂಗ ಸ್ವಾಮಿಗಳು, ಶ್ರೀ ಸದಾನಂದಾಶ್ರಮ, ಪುಣಜಿ-ಮೂಲಗದ್ದೆ, ಹೊಸನಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

❑

ಹಾಸನ ಜಿಲ್ಲೆ



ಹಾಸನ ತಾಲ್ಲೂಕು : ೧. ಯಲಗುಂದ

ಅರಸೀಕೆರೆ ತಾಲ್ಲೂಕು : ೧. ಹಾರನಹಳ್ಳಿ, ೨. ಮಾರಗೊಂಡನಹಳ್ಳಿ, ೩.ಕೋಳಗುಂದ, ೪. ಬಾಣಾವರ ೫. ಮಾಡಾಳು, ೬. ಮೇಟಿ ಕುರ್ಕೆ

ಚನ್ನರಾಯನಪಟ್ಟಣ ತಾಲ್ಲೂಕು : ೧. ನುಗ್ಗೇಹಳ್ಳಿ

ಹೊಳೆನರಸೀಪುರ ತಾಲ್ಲೂಕು : ೧. ಟಿ. ಮಾಯಗೊಂಡನಹಳ್ಳಿ, ೨. ತೇಜೂರು

ಅರಕಲಗೂಡು ತಾಲ್ಲೂಕು : ೧. ಸಂತೆಮರೂರು, ೨. ಸಿರಗನಹಳ್ಳಿ, ೩. ಬಸವ ಪಟ್ಟಣ

ಆಲೂರು ತಾಲ್ಲೂಕು : ೧. ಸಂಕಲಾಪುರ, ೨. ಅಬ್ಬನ

ಸಕಲೇಶಪುರ ತಾಲ್ಲೂಕು : ೧. ಚಂಗಡ ಹಳ್ಳಿ, ೨. ಹೆಗ್ಗಡಹಳ್ಳಿ ೩. ಯಸಳೂರು

ಬೇಲೂರು ತಾಲ್ಲೂಕು : ೧. ಯಲಹಂಕ, ೨. ಬಿಕ್ಕೋಡು, ೩. ಚಿಲ್ಕೂರು

ಮಲೆನಾಡು ಮತ್ತು ಬಯಲುಸೀಮೆಯನ್ನು ಒಳಗೊಂಡ ಹಾಸನ ಜಿಲ್ಲೆಯು ಚಿಕ್ಕಮಗಳೂರು, ದಕ್ಷಿಣಕನ್ನಡ, ಕೊಡಗು, ಮೈಸೂರು, ಮಂಡ್ಯ ಹಾಗೂ ತುಮಕೂರು ಜಿಲ್ಲೆಗಳ ಗಡಿ ಪ್ರದೇಶಗಳಿಗೆ ಹೊಂದಿಕೊಂಡಿದೆ. ಈ ಜಿಲ್ಲೆಯಲ್ಲಿ ಹೇಮಾವತಿ, ಯಗಚಿ ಹಾಗೂ ಕಾವೇರಿ ನದಿಗಳು ಹರಿದು ಈ ಜಿಲ್ಲೆಯನ್ನು ಪ್ರಾಕೃತಿಕ ಹಾಗೂ ಆರ್ಥಿಕವಾಗಿ ಶ್ರೀಮಂತಗೊಳಿಸಿವೆ. ಹಾಸನ ಜಿಲ್ಲೆಯು ಹಾಸನ, ಅರಸೀಕೆರೆ, ಬೇಲೂರು, ಸಕಲೇಶಪುರ, ಆಲೂರು, ಅರಕಲಗೋಡು, ಹೊಳೆನರಸೀಪುರ ಹಾಗೂ ಚನ್ನರಾಯಪಟ್ಟಣ ತಾಲ್ಲೂಕುಗಳನ್ನು ಒಳಗೊಂಡಿದ್ದು ಐತಿಹಾಸಿಕ ಮತ್ತು ಸಾಂಸ್ಕೃತಿಕವಾಗಿ ಪ್ರಸಿದ್ಧಿಯಾಗಿದೆ. ಹೊಯ್ಸಳರ ಕಾಲದಲ್ಲಿ ಧಾರ್ಮಿಕವಾಗಿಯೂ ಈ ಜಿಲ್ಲೆಯು ಶ್ರೀಮಂತಗೊಂಡಿತು.

ಬೇಲೂರು, ಹಳೇಬೀಡು ಮತ್ತು ಶ್ರವಣಬೆಳಗೊಳ ಧಾರ್ಮಿಕ ಮತ್ತು ಸಾಂಸ್ಕೃತಿಕ ವಿಷಯಗಳಲ್ಲಿ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವುದು ಈ ಜಿಲ್ಲೆಯ ಒಂದು ಹೆಗ್ಗಳಿಕೆ. ಬೇಲೂರು, ಹಳೇಬೀಡು ದೇವಾಲಯಗಳ ಶಿಲ್ಪಕಲೆ ಹಾಗೂ ಶ್ರವಣಬೆಳಗೊಳದ ಶ್ರೀ ಗೊಮ್ಮಟೇಶ್ವರ ಮಹಾಮೂರ್ತಿ ಜಗದ್ವಿಖ್ಯಾತಗೊಂಡಿವೆ. ಇಂತಹ ಸಾಂಸ್ಕೃತಿಕ ಶ್ರೀಮಂತ ಜಿಲ್ಲೆಯಲ್ಲಿ ಚೆಂಗಾಳ್ವರು (ಕ್ರಿ.ಶ.೯೭೨-೧೬೩೨), ಹೊಯ್ಸಳರು (ಕ್ರಿ.ಶ.೧೦೦೦-೧೩೪೨), ವಿಜಯನಗರದ ಅರಸರು (ಕ್ರಿ.ಶ.೧೩೩೬-೧೫೬೫), ಕೆಳದಿಯಅರಸರು (ಕ್ರಿ.ಶ.೧೪೯೯-೧೭೬೩),ಹಾಗಲವಾಡಿ ಅರಸು ಮನೆತನ (ಕ್ರಿ.ಶ.೧೫೬೫-೧೭೫೩) ನಂತರ ಮೈಸೂರಿನ ಅರಸರು (ಕ್ರಿ.ಶ.೧೩೯೯-೧೯೪೭) ಆಡಳಿತ ನಡೆಸಿ ಈ ಜಿಲ್ಲೆಯನ್ನು ಐತಿಹಾಸಿಕವಾಗಿ ಬೆಳೆಸಿದ್ದಾರೆ.

ಕನ್ನಡ ಸಾಹಿತ್ಯದ ಮೊದಲ ಶಿಲಾಶಾಸನವಾದ ಹಲ್ಮಿಡಿ ಶಾಸನ (ಕ್ರಿ.ಶ ೪೫೦)ವು ಈ ಜಿಲ್ಲೆಯಲ್ಲಿ ದೊರೆತಿದೆ ಎಂಬುವುದು ಮತ್ತೊಂದು ಹೆಗ್ಗಳಿಕೆಯ ವಿಚಾರವಾಗಿದೆ. ಇಲ್ಲಿ ಜೈನ ಧರ್ಮ ಪ್ರಬಲವಾಗಿ ಬೆಳೆದು ನಂತರ ಜೈನ ಧರ್ಮೀಯರಾದ ಹೊಯ್ಸಳರು, ವೀರಶೈವ ಧರ್ಮಕ್ಕೆ ಪ್ರಭಾವಿತರಾಗಿ ವೀರಶೈವ ಧರ್ಮವನ್ನು ಬೆಳೆಸಿದರು. ಧಾರ್ಮಿಕ, ಐತಿಹಾಸಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕವಾಗಿ ಹೀಗೆ ಹೆಸರು ಮಾಡಿದ ಈ ಜಿಲ್ಲೆಯಲ್ಲಿ ವೀರಶೈವ ಮಠಗಳು ಸ್ಥಾಪನೆಗೊಂಡು ಈ ಜಿಲ್ಲೆಯ ಧಾರ್ಮಿಕ ಕ್ಷೇತ್ರವನ್ನು ಮತ್ತಷ್ಟು ಶ್ರೀಮಂತಗೊಳಿಸಿವೆ. ಗುರು-ವಿರಕ್ತ ಮಠಗಳು ಸೇರಿದಂತೆ ಒಟ್ಟು ತೊಂಬತ್ತಾರು ಮಠಗಳು ಸ್ಥಾಪನೆಗೊಂಡ ಬಗ್ಗೆ ಮಾಹಿತಿ ದೊರೆತಿದೆ. ಇದರ ಆಧಾರದ ಮೇಲೆ ಶೋಧನೆಗೆ ಹೋದಾಗ ಐವತ್ತು ಮಠಗಳು ದೊರೆತಿವೆ.ಇವುಗಳಲ್ಲಿ ಮೂವತ್ನಾಲ್ಕು ಮಠಗಳು ಅಸ್ತಿತ್ವದಲ್ಲಿವೆ.

ಅರಸೀಕೆರೆ ತಾಲ್ಲೂಕಿನ ಬಾಣಾವರ ಸಮೀಪದ ಚಲುವನಹಳ್ಳಿಯ ಮೇಲಣ ಮಠ ಮತ್ತು ಕೆಳಗಣ ಮಠ, ಹೊಳೆನರಸೀಪುರ ತಾಲ್ಲೂಕಿನಲ್ಲಿ ಮಾಯಗೊಂಡನಹಳ್ಳಿ ಮತ್ತು ತೇಜೂರುಗಳನ್ನು ಹೊರತುಪಡಿಸಿ ಐದು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತಿದ್ದು, ಇವುಗಳಲ್ಲಿ ಮಡಿವಾಳಮಠ, ಕಲ್ಮಠ, ಹುಣಸೇಮಠ ಮತ್ತು ಉತ್ತರಾಧಿಕಾರಿ ಮಠಗಳು, ಆಲೂರು ತಾಲ್ಲೂಕಿನ ಕೆರೆಹಳ್ಳಿ, ಕಾರ್ಜುವಳ್ಳಿ, ನಲ್ಲೂರುಮಠ, ಬೇಲೂರು ತಾಲ್ಲೂಕಿನ ಮಲ್ಲಾಪುರಮಠ, ಹಲಸುಲಿಗೆಮಠ, ಮರಸಿನಮಠ, ಮಳಲಿಮಠ, ಹೆತ್ತೂರುಮಠ, ಕಿರಕಳ್ಳಿಮಠ ಮುಂತಾದ ಮಠಗಳು ಅಸ್ತಿತ್ವದಲ್ಲಿದ್ದವೆಂದು ತಿಳಿದುಬಂದ ಮಾಹಿತಿಯ ಆಧಾರದ ಮೇಲೆ ಮೇಲಿನ ಹದಿನೈದು ಮಠಗಳ ಹೆಸರುಗಳನ್ನು ದಾಖಲಿಸಬಹುದಾಗಿದೆ. ಈ ಮಠಗಳು ಅಸ್ತಿತ್ವದಲ್ಲಿದ್ದರೂ ಕೇವಲ ಗದ್ದುಗೆ ಪೂಜೆಗೆ ಮಾತ್ರ ಸೀಮಿತಗೊಂಡಿವೆ. ಉಳಿದ ನಲವತ್ತನಾಲ್ಕು ಮಠಗಳು ಹೇಳಲು ಹೆಸರಿಲ್ಲದಂತಾಗಿವೆ.

ಅರಸೀಕೆರೆ ತಾಲ್ಲೂಕು

ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕು, ತೆಂಗು ಬೆಳೆಯಿಂದ ಹೆಸರು ಗಳಿಸಿ ಆರ್ಥಿಕವಾಗಿ ಸಧೃಡಗೊಂಡಿದೆ. ಇಲ್ಲಿ ಪ್ರಾಚೀನ ಕಾಲದಿಂದಲೂ ವೀರಶೈವಧರ್ಮ ಗಟ್ಟಿಯಾಗಿ ಬೆಳೆದ ಲಕ್ಷಣಗಳು ಕಂಡುಬರುತ್ತವೆ. ಪ್ರಸ್ತುತ ಈ ತಾಲ್ಲೂಕಿನಲ್ಲಿ ಹನ್ನೆರಡು ಮಠಗಳು ಅಸ್ತಿತ್ವದಲ್ಲಿವೆ.

ಅರಸೀಕೆರೆ

ಅರಸೀಕೆರೆಯು ತಾಲ್ಲೂಕಿನ ಕೇಂದ್ರ ಸ್ಥಳವಾಗಿ ಬೆಳೆದಿದೆ. ವ್ಯಾಪಾರ ಮತ್ತು ಕೃಷಿಯಿಂದ ಸಮೃದ್ಧತೆ ಕಂಡಿರುವ ಈ ಪಟ್ಟಣದಲ್ಲಿ ಯಳನಾಡು-ಮೂರುಕಳಸ ಮಹಾಸಂಸ್ಥಾನಮಠವು ಅಸ್ತಿತ್ವದಲ್ಲಿದೆ.

ಯಳನಾಡು-ಮೂರುಕಳಸ ಮಹಾಸಂಸ್ಥಾನಮಠ: ಅರಸೀಕೆರೆಯಲ್ಲಿ ಶ್ರೀ ರಂಭಾಪುರಿಪೀಠದ ಶಾಖಾಮಠವು ಶ್ರೀ ಗುರುಶಾಂತ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಸ್ಥಾಪನೆಯಾಗಿತ್ತು. ಜ್ಞಾನ, ಭಕ್ತಿ, ವೈರಾಗ್ಯ ಹಾಗೂ ಬ್ರಾಹ್ಮಣ, ವೈಷ್ಣವ, ಮಹೇಶ್ವರ ಇವುಗಳ ಸಂಗಮವಾಗಿರುವ ಹಿನ್ನೆಲೆಯಲ್ಲಿ ಮಠದ ಗೋಪುರದ ಮೇಲೆ ಮೂರುಕಳಸಗಳನ್ನು ಸ್ಥಾಪಿಸಿರುವುದರಿಂದ ಮೂರುಕಳಸಮಠ ಎಂಬ ಹೆಸರು ಬಂದಿದೆ. ಕಾಲಾನಂತರ ಈ ಮಠವು ಜೀರ್ಣಗೊಂಡ ಮೇಲೆ ಈ ಮಠದ ಭಕ್ತರಾಗಿದ್ದ ಶ್ರೀ ಮಹಾನಾಡುಪ್ರಭು ಮುಮ್ಮಡಿ ಕರಿವೀರೇಗೌಡರು, ಶ್ರೀ ರಂಭಾಪುರಿ ಪೀಠದ ಅಂದಿನ ಜಗದ್ಗುರುಗಳಲ್ಲಿ ಬಿನ್ನವಿಸಿಕೊಂಡು ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹುಳಿಯಾರು ಹೋಬಳಿಯ ಯಳನಾಡುವಿನ ಸಿದ್ಧರಾಮೇಶ್ವರ ದೇವಸ್ಥಾನದ ಸಮೀಪ ಮಠವನ್ನು ಸ್ಥಾಪಿಸಿ ಶ್ರೀ ಯೋಗೀಮುನೀಶ್ವರ ದೇಶಿಕೇಂದ್ರ ಸ್ವಾಮಿಗಳನ್ನು ಅಧಿಕಾರಕ್ಕೆ ತಂದರು. ಅಂದು ಯಳನಾಡಿನಲ್ಲಿ ಸ್ಥಾಪನೆಯಾಗಿದ್ದ ಮಠವು ಕಾಲಾನಂತರ ಅರಸೀಕೆರೆಗೆ ಸ್ಥಳಾಂತರಗೊಂಡ ಕಾರಣ ಯಳನಾಡು ಮಹಾಸಂಸ್ಥಾನ ಮಠ ಎಂಬ ಹೆಸರು ಪಡೆದಿದೆ. ದೊಡ್ಡಎಣ್ಣೇಗೆರೆಯ ಮಹಾನಾಡು ಪ್ರಭು ಮುಮ್ಮಡಿ ಕರಿವೀರೇಗೌಡರು (ಕ್ರಿ.ಶ.೧೭೭೫) ಈ ಮಠದ ಭಕ್ತರಾಗಿ ಮಠವನ್ನು ಬೆಳೆಸಿದ್ದರಿಂದ ಮಹಾಸಂಸ್ಥಾನಮಠವೆಂಬ ಪದವಿ ಪದದೊಂದಿಗೆ ಬೆಳೆದಿದೆ.

ಪರಂಪರೆ:	೧. ಶ್ರೀ ಯೋಗಿಮುನೀಶ್ವರ ದೇಶಿಕೇಂದ್ರಸ್ವಾಮಿಗಳು	(ಕ್ರಿ.ಶ.೧೭೭೫)
	೨. ಶ್ರೀ ಚನ್ನಬಸವಲಿಂಗ ದೇಶಿಕೇಂದ್ರಸ್ವಾಮಿಗಳು	(ಕ್ರಿ.ಶ.೧೮೨೦)
	೩. ಶ್ರೀ ಕರಿಬಸವ ದೇಶಿಕೇಂದ್ರಸ್ವಾಮಿಗಳು	(ಕ್ರಿ.ಶ.೧೮೬೪)
	೪. ಶ್ರೀ ಎರಡನೆಯ ಜಟಾಬಸವಲಿಂಗ ದೇಶಿಕೇಂದ್ರಸ್ವಾಮಿಗಳು	(ಕ್ರಿ.ಶ.೧೮೮೦)
	೫. ಶ್ರೀ ಬಸವರಾಜ ದೇಶಿಕೇಂದ್ರಸ್ವಾಮಿಗಳು	(ಕ್ರಿ.ಶ.೧೯೨೫)
	೬. ಶ್ರೀ ಜ್ಞಾನಪ್ರಭು ಸಿದ್ಧರಾಮ ದೇಶಿಕೇಂದ್ರಸ್ವಾಮಿಗಳು	(ಕ್ರಿ.ಶ.೧೯೮೭)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಯಳನಾಡಿನಲ್ಲಿ ಸ್ಥಾಪನೆಗೊಂಡ ಮಠದ ಮೊದಲ ಗುರುಗಳಾಗಿ ನೇಮಕಗೊಂಡ ಶ್ರೀ ಯೋಗಿಮುನೀಶ್ವರ ದೇಶಿಕೇಂದ್ರ ಸ್ವಾಮಿಗಳು ತಮ್ಮ ಸಂಘಟನಾ ಚತುರತೆಯಿಂದ ಮಠವನ್ನು ಬೆಳೆಸಿದರು. ಇವರ ನಂತರ ಶ್ರೀ ಚನ್ನಬಸವಲಿಂಗ ದೇಶಿಕೇಂದ್ರ ಸ್ವಾಮಿಗಳು ಆಡಳಿತವನ್ನು ವಹಿಸಿಕೊಂಡು ಮಠವನ್ನು ಬೆಳೆಸಿದರು. ಇವರ ಮಹಾತಪಸ್ವಿಗಳಾಗಿ ವಾಕ್‌ಸಿದ್ಧಿ ಪುರುಷರಾಗಿ ಹೆಸರು ಪಡೆದಿದ್ದರು. ಇವರ ಪ್ರಭಾವವನ್ನು ಕೇಳಿ ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರು, ಅರಮನೆಗೆ ಕರೆಸಿ ಗೌರವಿಸಿದ್ದರು. ಇವರು ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಕರಿಬಸವ ದೇಶಿಕೇಂದ್ರ ಸ್ವಾಮಿಗಳನ್ನು ನೇಮಿಸಿಕೊಂಡು ಅಧಿಕಾರವನ್ನು ನೀಡಿ ಲಿಂಗೈಕ್ಯರಾದರು. ಇವರು ಸಿದ್ಧರಾಮೇಶ್ವರ ದೇವಾಲಯವನ್ನೂ ಸಹ ಅಭಿವೃದ್ಧಿಪಡಿಸಿ, ಮಠದಲ್ಲಿ ದಾಸೋಹ ನಡೆಯುವಂತೆ ಮಾಡಿದರು.

ಅರಸೀಕೆರೆಯಲ್ಲಿ ಮಠಸ್ಥಾಪನೆ: ಶ್ರೀ ಕರಿಬಸವ ದೇಶಿಕೇಂದ್ರ ಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಎರಡನೆಯ ಜಟಾಬಸವಲಿಂಗ ದೇಶಿಕೇಂದ್ರ ಸ್ವಾಮಿಗಳು ಸಂಚಾರಮೂರ್ತಿಗಳಾಗಿ, ನಾಡನ್ನೆಲ್ಲಾ ಸುತ್ತಿ ಭಕ್ತರನ್ನು ಸಂಘಟಿಸಿದರು. ಇವರು

ಅರಸೀಕೆರೆಯ ಭಕ್ತರ ಅಪೇಕ್ಷೆಯಂತೆ ಮಠವನ್ನು ಕಟ್ಟಲು ಗುರುಸಿದ್ಧರಾಮೇಶ್ವರ ದೇವಾಲಯಕ್ಕೆ ಹೊಂದಿಕೊಂಡಂತೆ ಜಮೀನನ್ನು ಖರೀದಿಸಿದರು. ಪೂರ್ವದಲ್ಲಿದ್ದ ಮಠವನ್ನು ಪುನರ್ ಸ್ಥಾಪಿಸಿ ಬೆಳೆಸಲು ಮುಂದಾದರು. ಇವರ ಕಾಲದಲ್ಲಿ ಅರಸೀಕೆರೆಯಲ್ಲಿ ಮಠದ ಕಟ್ಟಡವನ್ನು ಸ್ಥಾಪಿಸುವ ಕಾಮಗಾರಿ ಪ್ರಾರಂಭವಾದ ಮೇಲೆ ೧೯೩೫ರಲ್ಲಿ ಲಿಂಗೈಕ್ಯರಾದರು. ಶ್ರೀ ಜಠಾಬಸವಲಿಂಗ ದೇಶಿಕೇಂದ್ರ ಸ್ವಾಮಿಗಳು ಕರಕಮಲ ಸಂಜಾತರಾಗಿ ಬೆಳೆದ ಶ್ರೀ ಬಸವರಾಜ ದೇಶಿಕೇಂದ್ರ ಸ್ವಾಮಿಗಳು ಶಿಡ್ಲೆಹಳ್ಳಿಮಠದ ಶ್ರೀ ಕರಿಬಸವರಾಜ ದೇಶಿಕೇಂದ್ರ ಸ್ವಾಮಿಗಳೊಂದಿಗೆ ಸಮಾಲೋಚಿಸಿ ಅರಸೀಕೆರೆಯಲ್ಲಿ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದರು. ನಂತರ ಕಡೂರಿನಲ್ಲಿಯೂ ಒಂದು ಮಠವನ್ನು ಸ್ಥಾಪಿಸಿ, ಇಲ್ಲೇ ನೆಲೆಗೊಂಡರೆಂದು ಹೇಳಲಾಗುತ್ತದೆ. ಈ ಸಂದರ್ಭದಲ್ಲಿ ಕಡೂರು ಸಮೀಪದ ಹೇಮಗಿರಿ ಮಲ್ಲಿಕಾರ್ಜುನಸ್ವಾಮಿ ಕ್ಷೇತ್ರವನ್ನು ಅಭಿವೃದ್ಧಿಪಡಿಸಿದರು. ದೇವಸ್ಥಾನದ ಧಾರ್ಮಿಕ ಖರ್ಚಿಗಾಗಿ ಸರ್ಕಾರದಿಂದ ನಲವತ್ತು ಎಕರೆ ಜಮೀನನ್ನು ಮಂಜೂರು ಮಾಡಿಸಿದರು. ಕಡೂರಿನ ಮಠದಲ್ಲಿ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿ, ಕಲಿಯುವ ಮಕ್ಕಳಿಗೆ ನೆರವಾದರು. ಅಲ್ಲದೆ ಯಳನಾಡು ಜಗದ್ಗುರು ವಿದ್ಯಾಸಂಸ್ಥೆಯನ್ನು ಸ್ಥಾಪಿಸಿ, ಭದ್ರಾವತಿ ತಾಲ್ಲೂಕಿನ ಬೈರಂದೂರು, ತರೀಕೆರೆ ತಾಲ್ಲೂಕು ಹಾಗೂ ಅರಸೀಕೆರೆ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಪ್ರೌಢಶಾಲೆಯನ್ನು ಪ್ರಾರಂಭಿಸಿದರು. ಅರಸೀಕೆರೆಯಲ್ಲಿ ಶ್ರೀ ವಿವೇಕಾನಂದ ಶಿಕ್ಷಣಕಾಲೇಜು ಹಾಗೂ ಆಂಗ್ಲಮಾಧ್ಯಮದ ಪ್ರೈಮರಿ ಶಾಲೆಯನ್ನು ಪ್ರಾರಂಭಿಸಿದರು. ಗುರುಗಳು ಈ ರೀತಿ ಮಠವನ್ನು ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಬೆಳೆಸಿ ಉತ್ತರಾಧಿಕಾರಿಗಳನ್ನು ನೇಮಿಸದೆ ೧೯೬೯ರಲ್ಲಿ ಲಿಂಗೈಕ್ಯರಾದರು.

ಶ್ರೀ ಬಸವರಾಜ ದೇಶಿಕೇಂದ್ರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಮಠ ಖಾಲಿ ಉಳಿಯಿತು ಕೆಲವು ವರ್ಷಗಳ ನಂತರ ಶ್ರೀ ಜ್ಞಾನಪ್ರಭು ಸಿದ್ಧರಾಮ ದೇಶಿಕೇಂದ್ರ ಸ್ವಾಮಿಗಳು ಉತ್ತರಾಧಿಕಾರಿಗಳಾಗಿ ನೇಮಕಗೊಂಡರು. ಇವರು ಕಡೂರು ತಾಲ್ಲೂಕು ಸೊಲ್ಲಾಪುರದಲ್ಲಿ ಜನಿಸಿದ ಶ್ರೀ ಜ್ಞಾನಪ್ರಭು ಸಿದ್ಧರಾಮ ದೇಶಿಕೇಂದ್ರ ಸ್ವಾಮಿಗಳಿಗೆ ೧೯೮೭ರ ಜನವರಿ ಹದಿನಾಲ್ಕರಂದು ಪಟ್ಟಾಧಿಕಾರ ಮಾಡಿದರು. ಉನ್ನತ ಶಿಕ್ಷಣದೊಂದಿಗೆ ಆಧ್ಯಾತ್ಮ ಶಿಕ್ಷಣವನ್ನು ಪಡೆದಿದ್ದ ಇವರು ಯಳನಾಡು, ಅರಸೀಕೆರೆ ಮತ್ತು ಕಡೂರಿನ ಮಠಗಳ ಉಸ್ತುವಾರಿಯನ್ನು ನೋಡಿಕೊಂಡು ಶಿಕ್ಷಣ ಸಂಸ್ಥೆಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಗುರುಗಳು ಅಧಿಕಾರವಹಿಸಿಕೊಂಡ ಮೇಲೆ ವಾಣಿಜ್ಯ ಸಂಕಿರಣ ನಿರ್ಮಿಸಿದ್ದಾರೆ. ಮಠದ ಎಪ್ಪತ್ತು ಎಕರೆ ಜಮೀನನ್ನು ಅಭಿವೃದ್ಧಿಪಡಿಸಿದ್ದಾರೆ.

ವಿಳಾಸ: ಶ್ರೀ ಜ್ಞಾನಪ್ರಭು ಸಿದ್ಧರಾಮ ದೇಶಿಕೇಂದ್ರ ಸ್ವಾಮಿಗಳು, ಶ್ರೀ ಮೂರುಕಳಸ ಸಂಸ್ಥಾನಮಠ, ಅರಸೀಕೆರೆ, ಹಾಸನ ಜಿಲ್ಲೆ.

ಅರಳೀಕಟ್ಟೆ

ಅರಸೀಕೆರೆ ತಾಲ್ಲೂಕಿನ ಅರಳೀಕಟ್ಟೆಯು ತಾಲ್ಲೂಕು ಕೇಂದ್ರದಿಂದ ಹನ್ನೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀತರಳಬಾಳು ಶಾಖಾಮಠವು ಅಸ್ತಿತ್ವದಲ್ಲಿದೆ.

ತರಳಬಾಳು ಶಾಖಾಮಠ: ಅರಳೀಕಟ್ಟೆ ಪ್ರಾಂತ್ಯಕ್ಕೆ ಸಿರಿಗೆರೆಯ ತರಳಬಾಳು ಜಗದ್ಗುರುಗಳು ಆಗಾಗ್ಗೆ ಸಂಚಾರ ಬರುವುದು ಕಷ್ಟವಾದಾಗ, ಭಕ್ತರ ಸಂಪರ್ಕ ಕಡಿದು ಹೋಗಬಾರದು ಎಂಬ ಕಾರಣಕ್ಕೆ ಹರಳೀಕಟ್ಟೆಯಲ್ಲಿ ತರಳಬಾಳು ಶಾಖಾಮಠವು ಸ್ಥಾಪನೆಯಾಯಿತು. ಕಾಲಾನಂತರ ಈ ಮಠದಲ್ಲಿ ಮಠಾಧೀಶ್ವರರಿಲ್ಲದೆ ಜೀರ್ಣಗೊಳ್ಳತೊಡಗುತ್ತದೆ. ಯಲಹಂಕಮಠದ ಹನಿಕೆ ಶ್ರೀ ಶಿವನಂಜುಂಡ ಸ್ವಾಮಿಗಳ ನೇತೃತ್ವದಲ್ಲಿ ಸ್ನಾತಕೋತ್ತರ ಪದವಿಯನ್ನು ಮುಗಿಸಿದ್ದ ಶ್ರೀ ಮರುಳಸಿದ್ಧ ಸ್ವಾಮಿಗಳನ್ನು ಹರಳೀಕಟ್ಟೆ ಮಠಕ್ಕೆ ಪಟ್ಟಾಧಿಕಾರ ಮಾಡಲಾಯಿತು. ಪಟ್ಟಾಧಿಕಾರ ಆದ ನಂತರ ವಿದ್ಯಾ ಸಂಸ್ಥೆಗಳ ಆಡಳಿತವನ್ನು ಹರಳೀಕಟ್ಟೆಯ ನೂತನ ಗುರುಗಳಿಗೆ ವಹಿಸಿಕೊಡಲಾಯಿತು. ಇಷ್ಟೆಲ್ಲಾ ಜವಾಬ್ದಾರಿಗಳನ್ನು ವಹಿಸಿ ಕೊಂಡಿದ್ದ ಶ್ರೀ ಮರುಳಸಿದ್ಧ ಸ್ವಾಮಿಗಳು ಮಠವನ್ನು ತ್ಯಜಿಸಿದರು. ಇವರ ನಂತರ ಹರಳೀಕಟ್ಟೆ ಮಠವು ಖಾಲಿ ಉಳಿಯಿತು. ಈಗ ತರಳಬಾಳು ಬೃಹನ್ಮಠದ ಜಗದ್ಗುರುಗಳೇ ಇಲ್ಲಿ ಧಾರ್ಮಿಕ ಕಾರ್ಯಗಳು ನಡೆಯಲು ವ್ಯವಸ್ಥೆಯನ್ನು ಮಾಡಿದ್ದಾರೆ.

ವಿಳಾಸ: ಶ್ರೀ ತರಳಬಾಳು ಜಗದ್ಗುರು ಶಾಖಾಮಠ, ಹರಳಕಟ್ಟೆ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ.

ಕಲ್ಗುಂಡಿ

ಅರಸೀಕೆರೆ ತಾಲ್ಲೂಕಿನ ಕಲ್ಗುಂಡಿಯು ತಾಲ್ಲೂಕು ಕೇಂದ್ರ ಸ್ಥಳದ ಪಶ್ಚಿಮಕ್ಕೆ ಹದಿನೈದು ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ಹಾರನಹಳ್ಳಿ ಕೋಡಿಮಠದ ಶಾಖಾಮಠವಾದ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಕಲ್ಗುಂಡಿ ಗ್ರಾಮದಲ್ಲಿ ಪುರಾತನ ಕಾಲದಲ್ಲಿ ಸ್ಥಾಪನೆಗೊಂಡ ವಿರಕ್ತಮಠವು ಸ್ಥಾಪನೆಯಾಗಿದೆ. ಇಲ್ಲಿ ಶ್ರೀಶಿವಲಿಂಗ ಸ್ವಾಮಿಗಳ ಗದ್ದುಗೆಯು ಸ್ಥಾಪನೆಗೊಂಡಿದೆ. ಹಾರನಹಳ್ಳಿ ಕೋಡಿ ಮಠದ ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮಿಗಳು ಕಲ್ಗುಂಡಿಯಲ್ಲಿ ಶಿಥಿಲಗೊಂಡಿದ್ದ ಈ ಮಠದ ಕಟ್ಟಡವನ್ನು ದುರಸ್ತಿಗೊಳಿಸಿ, ಗದ್ದುಗೆ ಮಂಟಪವನ್ನು ನವೀಕರಿಸಿ ಪೂಜೆಗೆ ವ್ಯವಸ್ಥೆ ಮಾಡಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದ್ದಾರೆ.

ವಿಳಾಸ: ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮಿಗಳು, ಶ್ರೀ ಕೋಡಿಮಠ, ಹಾರನಹಳ್ಳಿ, ಅರಸೀಕೆರೆ ತಾ, ಹಾಸನ ಜಿಲ್ಲೆ.

ಕೋಳಗುಂದ

ಅರಸೀಕೆರೆ ತಾಲ್ಲೂಕಿನ ಕೋಳಗುಂದ ಗ್ರಾಮವು, ತಾಲ್ಲೂಕು ಕೇಂದ್ರ ಸ್ಥಳದ ಪಶ್ಚಿಮಕ್ಕೆ ಇಪ್ಪತ್ತೇಳು ಕಿ.ಮೀ. ದೂರದಲ್ಲಿದೆ. ಶ್ರೀ ಕೇದಿಗೆ ಮಠವು ಅಸ್ತಿತ್ವದಲ್ಲಿದೆ.

ಕೇದಿಗೆಮಠ: ಕೋಳಗುಂದ ಗ್ರಾಮದ ಉತ್ತರ ಭಾಗದಲ್ಲಿ ಮುರುಘಾ ಸಮಯದ ವಿರಕ್ತ ಸಂಪ್ರದಾಯದಲ್ಲಿ ಬೆಳೆದ ಶ್ರೀ ಕೇದಿಗೆ ಮಠವು, ಹದಿನೇಳನೆಯ ಶತಮಾನದ ಶ್ರೀ ಚನ್ನಬಸವಾರ್ಯರ ಕಾಲದಲ್ಲಿ ಸ್ಥಾಪನೆಗೊಂಡಿದೆ ಎಂದು ಹೇಳಲಾಗುತ್ತದೆ.

ಮಠ ಸ್ಥಾಪನೆ: ಶ್ರೀ ಚನ್ನಬಸವಾರ್ಯರು ಶ್ರೀ ತೋಂಟದ ಸಿದ್ಧಲಿಂಗೇಶ್ವರರ ನಂತರ ಬೆಳೆದ ಪರಂಪರೆಯಲ್ಲಿ ಬಂದವರಾಗಿದ್ದು ಧರ್ಮ ಪ್ರಚಾರಕ್ಕೆಂದು ಲೋಕಸಂಚಾರದಲ್ಲಿದ್ದ ಇವರು ಕೋಳಗುಂದ ಗ್ರಾಮಕ್ಕೆ ಬಂದು ನೆಲೆಸಿ, ಭಕ್ತರ ನೆರವಿನಿಂದ ಕೇದಿಗೆ ಮಠವನ್ನು ಸ್ಥಾಪನೆ ಮಾಡಿರುತ್ತಾರೆ. ಮಠವು ಸ್ಥಾಪನೆಗೊಂಡ ಮೇಲೆ ಧಾರ್ಮಿಕ ಕಾರ್ಯಗಳು ಬಿಡುವಿಲ್ಲದಂತೆ ನಡೆಯತೊಡಗಿದವು. ನಿತ್ಯ ಸಂಜೆ ಶಿವಾನುಭವಗೋಷ್ಠಿಗಳು ನಡೆಯುತ್ತಿದ್ದವು. ಈ ಗೋಷ್ಠಿಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿ ಗುರುಗಳು ನೀಡುತ್ತಿದ್ದ ಧಾರ್ಮಿಕ ವಿಚಾರಗಳಿಂದ ಸಂಸ್ಕಾರ ಪಡೆಯತೊಡಗಿದರು.

ಪರಂಪರೆ:	೧. ಶ್ರೀ ಮ.ನಿ.ಪ್ರ. ಚನ್ನಬಸವಾರ್ಯರು	(ಕ್ರಿ.ಶ.೧೬೫೦-೧೭೦೦)
	೨. ಶ್ರೀ ಮ.ನಿ.ಪ್ರ. ಗುರುಸಿದ್ಧಸ್ವಾಮಿಗಳು	
	೩. ಶ್ರೀ ಮ.ನಿ.ಪ್ರ. ಸರ್ಪಭೂಷಣಸ್ವಾಮಿಗಳು	
	೪. ಶ್ರೀ ಮ.ನಿ.ಪ್ರ. ಸಿದ್ಧಲಿಂಗ ಮರಿಸ್ವಾಮಿಗಳು	
	೫. ಶ್ರೀ ಮ.ನಿ.ಪ್ರ. ಷಣ್ಮುಖಸ್ವಾಮಿಗಳು	(ಕ್ರಿ.ಶ. ೧೭೫೦-೧೮೦೦)
	೬. ಶ್ರೀ ಮ.ನಿ.ಪ್ರ. ಕರಿಬಸವಸ್ವಾಮಿಗಳು	(ಕ್ರಿ.ಶ.೧೮೦೦-೧೮೫೦)
	೭. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು	(ಕ್ರಿ.ಶ.೧೮೫೦-೧೮೯೦)
	೮ ಶ್ರೀ ಮ.ನಿ.ಪ್ರ. ರುದ್ರಮುನಿಸ್ವಾಮಿಗಳು	(ಕ್ರಿ.ಶ.೧೯೦೦-೧೯೫೮)
	೯. ಶ್ರೀ ಮ.ನಿ.ಪ್ರ. ಶಿವಲಿಂಗಸ್ವಾಮಿಗಳು	(ಕ್ರಿ. ಶ.೧೯೬೨-೧೯೭೨)
	೧೦. ಶ್ರೀ ಮ.ನಿ.ಪ್ರ. ಜಯಚಂದ್ರಶೇಖರಸ್ವಾಮಿಗಳು	(ಕ್ರಿ. ಶ. ೧೯೭೭-)(ಈಗಿನವರು)

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಶ್ರೀ ಚನ್ನಬಸವಾರ್ಯರ ನಂತರ ಬಂದಂತಹ ಶ್ರೀ ಗುರುಸಿದ್ಧ ಸ್ವಾಮಿಗಳು, ಶ್ರೀ ಸರ್ಪಭೂಷಣರು ಮತ್ತು ಶ್ರೀ ಸಿದ್ಧಲಿಂಗ ಸ್ವಾಮಿಗಳು ಮಠದ ಮಠಾಧೀಶ್ವರರಾಗಿ ಅಧಿಕಾರವನ್ನು ನಡೆಸಿದ ಬಗ್ಗೆ ಹೇಳಲಾಗುತ್ತದೆ. ಆದರೆ ಇವರ ಆಡಳಿತಕ್ಕೆ ಸಂಬಂಧಪಟ್ಟ ಕಾಲಾವಧಿಯ ಬಗ್ಗೆ ಸರಿಯಾದ ಆಧಾರಗಳು ಲಭ್ಯವಿಲ್ಲ. ನಂತರ ಬಂದಂತಹ ಶ್ರೀ ಷಣ್ಮುಖ ಸ್ವಾಮಿಗಳು ಹಾಗೂ ಶ್ರೀ ಕರಿಬಸವ ಸ್ವಾಮಿಗಳು ಆಡಳಿತವನ್ನು ನಡೆಸಿ ಮಠವನ್ನು ಅಭಿವೃದ್ಧಿಪಡಿಸಿ

ರುತ್ತಾರೆ. ಕ್ರಿ.ಶ.೧೮೫೦-೧೮೯೦ ರವರೆಗೆ ಅಧಿಕಾರವನ್ನು ನಡೆಸಿದ ಶ್ರೀ ಬಸವಲಿಂಗ ಸ್ವಾಮಿಗಳು ಮಠದ ಹಳೆಯ ಕಟ್ಟಡವನ್ನು ತೆಗೆಸಿ, ಊರಿನ ಹೊರಭಾಗದಲ್ಲಿ ನೂತನ ಕಟ್ಟಡವನ್ನು ನಿರ್ಮಿಸಿದ್ದಾರೆ. ನಂತರ ಶ್ರೀ ರುದ್ರಮುನಿ ಸ್ವಾಮಿಗಳಿಗೆ ಅಧಿಕಾರವನ್ನು ನೀಡಿ ಲಿಂಗೈಕ್ಯರಾಗಿದ್ದಾರೆ.

ಅಭಿವೃದ್ಧಿ ಕಂಡಕಾಲ: ಶ್ರೀ ರುದ್ರಮುನಿ ಸ್ವಾಮಿಗಳ ಕಾಲದಲ್ಲಿ ಮಠವು ಅಭಿವೃದ್ಧಿಗೊಂಡು ಹೆಚ್ಚು ಪ್ರಸಿದ್ಧಿಯನ್ನು ಪಡೆಯಿತು. ಶ್ರೀ ರುದ್ರಮುನಿ ಸ್ವಾಮಿಗಳು ಶಿವಪೂಜಾನಿಷ್ಠರಾಗಿ ಯೋಗ ವಿದ್ಯೆಗಳನ್ನು ಬಲ್ಲವರಾಗಿದ್ದು ಇವರು ಹಠಯೋಗವಿದ್ಯೆಯಲ್ಲಿ ಹೆಚ್ಚು ಹೆಸರು ಮಾಡಿದ್ದರೆಂದು ಹೇಳಲಾಗುತ್ತದೆ. ಇವರು ಪ್ರತಿ ದಿನ ಒಣ ಮೆಣಸಿನಕಾಯಿ ಪುಡಿಯಿಂದ ತಯಾರಿಸಿದ ಮುದ್ದೆಯನ್ನು ಸೇವಿಸುತ್ತಿದ್ದರೆಂದು ಹೇಳಲಾಗುತ್ತಿದೆ. ಇವರು ಪವಾಡ ಪುರುಷರಾಗಿ ಅನೇಕ ಪವಾಡಗಳನ್ನು ಮಾಡಿ ಜನರ ಮನಸ್ಸನ್ನು ಗೆದ್ದಿದ್ದರು. ಇವರ ಕಾಲದಲ್ಲಿ ಭಕ್ತರು ಮಠದ ಕಾರ್ಯಗಳಿಗೆ ಸ್ಪಂದಿಸಿ, ಹೆಚ್ಚಿನ ನೆರವನ್ನು ನೀಡಿ ಮಠವನ್ನು ಅಭಿವೃದ್ಧಿಪಡಿಸಿರುತ್ತಾರೆ. ಗುರುಗಳು ಧರ್ಮನಿಷ್ಠರಾಗಿ, ಪವಾಡ ಪುರುಷರಾಗಿ ಹೆಚ್ಚು ಹೆಸರು ಗಳಿಸಿರುವಂತೆಯೇ ಕಾಯಕ ಯೋಗಿಗಳಾಗಿಯೂ ಹೆಸರು ಮಾಡಿದ್ದರು. ಇವರ ಕಾಲದಲ್ಲಿ ಮಠವು ಹೆಚ್ಚು ವಿಸ್ತಾರಗೊಂಡು ಬೆಳೆಯಿತು. ಮಠವನ್ನು ಬೆಳೆಸಿದ ಶ್ರೀ ರುದ್ರಮುನಿ ಸ್ವಾಮಿಗಳು ೧೯೫೮ರಲ್ಲಿ ಲಿಂಗೈಕ್ಯರಾಗಿದ್ದಾರೆ.

ಶ್ರೀ ರುದ್ರಮುನಿ ಸ್ವಾಮಿಗಳ ನಂತರ ಶ್ರೀ ಶಿವಲಿಂಗ ಸ್ವಾಮಿಗಳು ೧೯೬೨ ರಲ್ಲಿ ಪಟ್ಟಾಧಿಕಾರಕ್ಕೆ ಬಂದು ಮಠವನ್ನು ಉನ್ನತ ಸ್ಥಿತಿಯಲ್ಲಿ ಬೆಳೆಯುವಂತೆ ಮಾಡಿದ್ದಾರೆ. ಮಠದ ಆಸ್ತಿಯಾಗಿದ್ದ ಜಮೀನನ್ನು ಅಭಿವೃದ್ಧಿಪಡಿಸಿ ತೆಂಗಿನ ತೋಟವನ್ನು ಬೆಳೆಸಿ ಹೆಚ್ಚು ಆದಾಯ ಬರುವಂತೆ ಮಾಡಿ, ಮಠಕ್ಕೆ ಸದೃಢತೆಯನ್ನು ತಂದುಕೊಟ್ಟು ೧೯೭೨ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಮಠ ಐದು ವರ್ಷಗಳ ಕಾಲ ಮಠಾಧ್ಯಕ್ಷರುಗಳಿಲ್ಲದೆ ಖಾಲಿ ಉಳಿಯುತ್ತದೆ. ನಂತರ ಶ್ರೀ ಜಯಚಂದ್ರಶೇಖರ ಸ್ವಾಮಿಗಳು ೧೯೭೭ರ ಮೇ ಒಂದರಂದು ಆಡಳಿತವನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಗೊಳಿಸತೊಡಗಿದ್ದಾರೆ.

ಕ್ರಿಯಾಶೀಲರು: ಶ್ರೀ ಜಯಚಂದ್ರಶೇಖರ ಸ್ವಾಮಿಗಳು ಕೋಳಗುಂದದ ಶ್ರೀ ರಾಮೇಗೌಡ ಮತ್ತು ಶ್ರೀಮತಿ ಚನ್ನಮ್ಮನವರ ಪುತ್ರರಾಗಿ ೧೯೬೦ ರ ಏಪ್ರಿಲ್ ಹದಿನಾರರಂದು ಜನಿಸಿದರು. ಶ್ರೀ ಜಯಚಂದ್ರಶೇಖರ ಸ್ವಾಮಿಗಳು ಅರಕೆರೆಯಲ್ಲಿ ಪ್ರಾಥಮಿಕ ಶಿಕ್ಷಣ, ಕೋಳಗುಂದದಲ್ಲಿ ಪ್ರೌಢಶಿಕ್ಷಣ, ಸಿದ್ಧಗಂಗೆಯಲ್ಲಿ ಕಾಲೇಜು ಶಿಕ್ಷಣವನ್ನು ಮುಗಿಸಿದರು. ಸಿದ್ಧಗಂಗೆಯ ಶ್ರೀಶಿವ ಕುಮಾರ ಸ್ವಾಮಿಗಳ ಮಾರ್ಗದರ್ಶನದಲ್ಲಿ ಧಾರ್ಮಿಕ ಸಂಸ್ಕಾರಗಳನ್ನು ಪಡೆದುಕೊಂಡ ಶ್ರೀ ಜಯಚಂದ್ರಶೇಖರ ಸ್ವಾಮಿಗಳು ವಿದ್ಯಾಭ್ಯಾಸ ಮುಗಿದ ಮೇಲೆ ಕೇದಿಗೆ ಮಠದ ಆಡಳಿತವನ್ನು ವಹಿಸಿಕೊಂಡು, ಶಿಥಿಲಗೊಂಡಿದ್ದ ಮಠವನ್ನು ಜೀರ್ಣೋದ್ಧಾರ ಮಾಡಿದರು. ಹಿಂದಿನ ಗುರುಗಳು ಸಂಪಾದಿಸಿದ್ದ ಆಸ್ತಿ ನಂತರದ ದಿನಗಳಲ್ಲಿ ಅನ್ಯರ ಪಾಲಾಗಿ ಹೋಗಿತ್ತು. ಶ್ರೀ ಜಯಚಂದ್ರ ಶೇಖರ ಸ್ವಾಮಿಗಳು ಅಧಿಕಾರಕ್ಕೆ ಬಂದ ತಕ್ಷಣ ಮಠದಿಂದ ಕೈಬಿಟ್ಟು ಹೋಗಿದ್ದ ಆಸ್ತಿಯನ್ನೆಲ್ಲಾ ಪುನಃ ತಮ್ಮ ವಶಕ್ಕೆ ತೆಗೆದುಕೊಂಡು ಅಭಿವೃದ್ಧಿಪಡಿಸಿ ಮಠವನ್ನು ಮುನ್ನಡೆಸಿಕೊಂಡು ಬರುತ್ತಿದ್ದಾರೆ. ಮಠದ ಆಡಳಿತಕ್ಕೆ ಶಿಸ್ತುಬದ್ಧ ರೂಪುಕೊಟ್ಟು ಮಠದಲ್ಲಿ ಪರಂಪರಾಗತವಾದ ಧಾರ್ಮಿಕ ಕ್ರಿಯೆಗಳು ನಡೆಯುವಂತೆ ವ್ಯವಸ್ಥೆ ಮಾಡಿದರು.

ಅಭಿವೃದ್ಧಿ ಕಾರ್ಯಗಳು: ಶಿಥಿಲಗೊಂಡಿದ್ದ ಮಠದ ಕಟ್ಟಡವನ್ನು ನವೀಕರಿಸಿದರು. ಅಲ್ಲದೆ ಮಠದ ಪರಂಪರೆಯ ಗುರುಗಳ ಗದ್ದುಗೆಗಳಿಗೆ ಮಂಟಪವನ್ನು ನಿರ್ಮಿಸಿ ನಿತ್ಯಪೂಜೆಗೆ ವ್ಯವಸ್ಥೆ ಮಾಡಿದರು. ಮಠದ ಆಸ್ತಿಯನ್ನು ಆಧುನಿಕ ಬೇಸಾಯಕ್ಕೆ ಅಣಿಗೊಳಿಸಿ ಆರ್ಥಿಕ ಬೆಳೆಗಳಾದ ತೆಂಗು, ಬಾಳೆಗಳನ್ನು ಬೆಳೆದು ಮಠಕ್ಕೆ ಹೆಚ್ಚು ಆದಾಯ ಬರುವಂತೆ ಮಾಡತೊಡಗಿದ್ದಾರೆ. ಈ ಮೂಲಗಳಿಂದ ಬರುವ ಆದಾಯಗಳನ್ನು ಬಳಸಿಕೊಂಡು ಮಠವನ್ನು ಸರ್ವತೋಮುಖವಾಗಿ ಅಭಿವೃದ್ಧಿಪಡಿಸಿದ್ದಾರೆ.

ಸಾಮಾಜಿಕಕಾರ್ಯಗಳು: ಶ್ರೀ ಜಯಚಂದ್ರಶೇಖರ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠದ ಬೆಳವಣಿಗೆಗೆ ಪ್ರಾಮುಖ್ಯತೆ ಕೊಟ್ಟಂತೆಯೇ ಗ್ರಾಮದ ಅಭಿವೃದ್ಧಿಗೂ ಹೆಚ್ಚು ಒತ್ತುಕೊಟ್ಟು ಅನೇಕ ಜನಪರ ಕಾರ್ಯಗಳನ್ನು ಮಾಡಿದ್ದಾರೆ. ಕೋಳಗುಂದ ದಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಿಗೆ ಕಟ್ಟಡಗಳನ್ನು ನಿರ್ಮಿಸಲು ಬೇಕಾಗುವಷ್ಟು ಜಾಗವನ್ನು ಮಠದ ವತಿಯಿಂದ ದಾನವಾಗಿ ನೀಡಿದರು. ಇಲ್ಲಿ ಪ್ರೌಢಶಾಲೆ ಇಲ್ಲದ ಕಾರಣ ಕಲಿಯುವ ಮಕ್ಕಳು ದೂರದ ಊರುಗಳಿಗೆ ಹೋಗಬೇಕಾಗಿತ್ತು. ಇದನ್ನು ನೋಡಿದ ಗುರುಗಳು ಸರ್ಕಾರದ ಮಟ್ಟದಲ್ಲಿ ಶ್ರಮಿಸಿ ಸರ್ಕಾರಿ ಪ್ರೌಢಶಾಲೆಯನ್ನು ಪ್ರಾರಂಭಿಸುವಲ್ಲಿ ನೆರವಾದರು.

ಅಲ್ಲದೆ ಪ್ರೌಢಶಾಲೆಗೆ ಬೇಕಾದ ನಾಲ್ಕು ಎಕರೆ ನಿವೇಶನವನ್ನು ದಾನವಾಗಿ ನೀಡಿದರು. ಗ್ರಾಮಕ್ಕೆ ಸರ್ಕಾರದಿಂದ ಮಂಜೂರಾದ ಅಂಚೆ ಕಛೇರಿಗೆ ಸೂಕ್ತಸ್ಥಳ ದೊರೆಯದಿದ್ದಾಗ ತಮ್ಮ ಮಠದ ಕಟ್ಟಡದಲ್ಲಿ ಅಂಚೆ ಕಛೇರಿ ಕಾರ್ಯನಿರ್ವಹಿಸುವಂತೆ ಸ್ಥಳಾವಕಾಶ ವನ್ನು ಒದಗಿಸಿಕೊಟ್ಟಿದ್ದಾರೆ. ಕೋಳಗುಂದ ಗ್ರಾಮಕ್ಕೆ ಮಂಜೂರಾದ ಆರೋಗ್ಯ ಘಟಕವು ಪ್ರಾರಂಭಗೊಳ್ಳಲು ಒಂದು ಎಕರೆ ಜಾಗವನ್ನು ದಾನ ಮಾಡಿರುತ್ತಾರೆ. ಪಶುಚಿಕಿತ್ಸಾ ಘಟಕಕ್ಕೂ ಸಹ ನಿವೇಶನವನ್ನು ನೀಡಿ ಅದು ಕಾರ್ಯಾರಂಭಗೊಳ್ಳಲು ನೆರವಾಗಿದ್ದಾರೆ. ಕೋಳಗುಂದದಲ್ಲಿ ನಡೆಯುತ್ತಿರುವ ರಾಷ್ಟ್ರೀಕೃತ ಬ್ಯಾಂಕಿಗೆ ತಾತ್ಕಾಲಿಕವಾಗಿ ಕಟ್ಟಡವನ್ನು ನೀಡಿದ್ದಲ್ಲದೆ, ಬ್ಯಾಂಕು ಸ್ವಂತ ಕಟ್ಟಡವನ್ನು ನಿರ್ಮಿಸಿಕೊಳ್ಳಲು ನಿವೇಶನವನ್ನು ನೀಡಿದ್ದಾರೆ. ಈ ರೀತಿ ಅನೇಕ ಜನಪರ ಕಾರ್ಯಗಳನ್ನು ಮಾಡಿ ಈ ಗ್ರಾಮವನ್ನು ಉದ್ಧರಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ತೋಟದಲ್ಲಿ ಸ್ಥಾಪನೆಗೊಂಡಿರುವ ಮಠದ ಪರಂಪರೆಯ ಗುರುಗಳ ಗದ್ದುಗೆಗಳಿಗೆ ನಿತ್ಯ ಪೂಜಾ ವ್ಯವಸ್ಥೆ, ಬಸವ ಜಯಂತಿ ಮತ್ತು ಮಹೇಶ್ವರ ಜಾತ್ರೆಯನ್ನು ಬಹಳ ವೈಭವಯುತವಾಗಿ ಆಚರಣೆ ಮಾಡಲಾಗುತ್ತಿದೆ. ಈ ಸಂದರ್ಭದಲ್ಲಿ ಧಾರ್ಮಿಕ ಗೋಷ್ಠಿಗಳನ್ನು ಹಮ್ಮಿಕೊಂಡು ಬಸವತತ್ತ್ವದ ಪ್ರಚಾರವನ್ನು ಕೈಗೊಳ್ಳಲಾಗುತ್ತಿದೆ. ಅಲ್ಲದೆ ಈ ಸಂದರ್ಭದಲ್ಲಿ ಸೇರುವ ಸಾವಿರಾರು ಭಕ್ತರಿಗೆ ಅನ್ನದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.

ಶ್ರೀ ಜಯಚಂದ್ರಶೇಖರ ಸ್ವಾಮಿಗಳು ತಮ್ಮ ಕ್ರಿಯಾಶೀಲ ಗುಣಗಳಿಂದ ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ಮಠವನ್ನು ಮುನ್ನಡೆಸಿ ಬೆಳೆಸಿದ್ದಾರೆ. ಕಾಯಕಯೋಗಿಗಳಾದ ಇವರು ಶರಣ ತತ್ತ್ವಕ್ಕನುಗುಣವಾಗಿ ಸಮಗ್ರ ಸಮಾಜದ ಏಳಿಗೆಗೆ ಅವಿರತವಾಗಿ ಶ್ರಮಿಸುತ್ತಾ ಹೆಚ್ಚು ಜನಪ್ರಿಯರಾಗಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಜಯಚಂದ್ರಶೇಖರ ಸ್ವಾಮಿಗಳು, ಶ್ರೀ ಕೇದಿಗೆಮಠ, ಕೋಳಗುಂದ, ಅರಸೀಕೆರೆ ತಾ, ಹಾಸನ ಜಿಲ್ಲೆ.

ದೊಡ್ಡಮೇಟಿಕುರ್ಕೆ

ಅರಸೀಕೆರೆ ತಾಲ್ಲೂಕಿನ ದೊಡ್ಡಮೇಟಿಕುರ್ಕೆಯು, ತಾಲ್ಲೂಕು ಕೇಂದ್ರ ಸ್ಥಳದಿಂದ ಉತ್ತರಕ್ಕೆ ಇಪ್ಪತ್ತಮೂರು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಬೂದಿಹಾಳುಮಠವು ಅಸ್ತಿತ್ವದಲ್ಲಿದೆ.

ಬೂದಿಹಾಳುಮಠ: ದೊಡ್ಡಮೇಟಿಕುರ್ಕೆ ಗ್ರಾಮದಲ್ಲಿ ಕಳೆದ ಶತಮಾನದ ಮಧ್ಯಭಾಗದಲ್ಲಿ ಮುರುಘಾ ಸಮಯದ ವಿರಕ್ತ ಮಠವು ಸ್ಥಾಪನೆಯಾಗಿದೆ. ಮೊದಲು ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಬೂದಿಹಾಳು ಗ್ರಾಮದಲ್ಲಿ ಸ್ಥಾಪನೆಗೊಂಡಿದ್ದ ಮಠವು ಶ್ರೀ ಸಿದ್ಧಬಸವ ಸ್ವಾಮಿಗಳ ಕಾಲದಲ್ಲಿ ಈ ಸ್ಥಳಕ್ಕೆ ಸ್ಥಳಾಂತರಗೊಂಡಿದೆ. ಈ ಕಾರಣದಿಂದಾಗಿ ಈ ಮಠವನ್ನು ಬೂದಿಹಾಳು ಮಠ ಎಂದು ಕರೆಯಲಾಗುತ್ತಿದೆ.

ಮಠ ಸ್ಥಾಪನೆ: ದೊಡ್ಡಮೇಟಿಕುರ್ಕೆ ಗ್ರಾಮದಲ್ಲಿ ಪ್ಲೇಗುಮಾರಿ ಊರಿಗೆ ಅಪ್ಪಳಿಸಿದಾಗ ಜನರು ತತ್ತರಿಸಿದರು. ಶ್ರೀ ಸಿದ್ಧಬಸವ ಸ್ವಾಮಿಗಳ ಆಶ್ರಯ ಪಡೆದ ಭಕ್ತರು ಬೂದಿಹಾಳು ಗ್ರಾಮದಿಂದ ದೊಡ್ಡಮೇಟಿಕುರ್ಕೆಗೆ ಗುರುಗಳನ್ನು ಕರೆತರುತ್ತಾರೆ. ಗುರುಗಳು ರೇವಣಸಿದ್ಧೇಶ್ವರ ದೇವಸ್ಥಾನದಲ್ಲಿ ನಲವತ್ತೆಂಟು ದಿನಗಳ ಕಾಲ ದೀರ್ಘ ಅನುಷ್ಠಾನ ಕೈಗೊಂಡು ಪ್ಲೇಗು ರೋಗದ ನಿವಾರಣೆಗೆ ಪ್ರಾರ್ಥಿಸುತ್ತಾರೆ. ಗ್ರಾಮದಲ್ಲಿ ಹರಡಿದ್ದ ಪ್ಲೇಗುರೋಗ ನಿವಾರಣೆಯಾಗುತ್ತದೆ. ಇದರಿಂದ ಗುರುಗಳ ಮೇಲಿನ ಭಕ್ತಿ ಇಮ್ಮಡಿಗೊಂಡು ಅವರನ್ನು ಇಲ್ಲಿಯೇ ನೆಲೆಸುವಂತೆ ಭಕ್ತರು ಮನವಿ ಮಾಡಿಕೊಳ್ಳುತ್ತಾರೆ. ಭಕ್ತರ ಅಪೇಕ್ಷೆಗೆ ಒಪ್ಪಿದ ಗುರುಗಳು ಈ ಗ್ರಾಮದಲ್ಲಿಯೇ ನೆಲೆಸಲು ನಿರ್ಧರಿಸಿ ಮಠವನ್ನು ಸ್ಥಾಪನೆ ಮಾಡುತ್ತಾರೆ. ಸಮಾಜದ ಒಳಿತಿಗಾಗಿ ಧರ್ಮಕಾರ್ಯಗಳನ್ನು ಕೈಗೊಂಡ ಗುರುಗಳು ಸಂಸ್ಕಾರ ನೀಡಿ ಸಮಾಜದಲ್ಲಿ ಶಾಂತಿ ನೆಮ್ಮದಿಗಳು ನೆಲೆಸುವಂತೆ ಮಾಡುತ್ತಾರೆ. ಈ ಕಾರಣಕ್ಕಾಗಿ ಸರ್ಕಾರ ಮಠದ ಧಾರ್ಮಿಕ ಕಾರ್ಯಗಳಿಗೆ ನೆರವಾಗಲೆಂದು ಮಠಕ್ಕೆ ಭೂಮಿಯನ್ನು ಮಂಜೂರು ಮಾಡಿದೆ. ಗುರುಗಳು ಸಿಕ್ಕ ಅವಕಾಶ ಗಳನ್ನೆಲ್ಲಾ ಬಳಸಿಕೊಂಡು ಮಠದ ಅಭಿವೃದ್ಧಿಗೆ ಶ್ರಮಿಸಿ ೧೯೬೪ ರಲ್ಲಿ ಶ್ರೀ ಶಾಂತವೀರ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿ, ಅಕ್ಟೋಬರ್ ಇಪ್ಪತ್ತೆರಡು ೧೯೭೯ರಲ್ಲಿ ಲಿಂಗೈಕ್ಯರಾಗಿರುತ್ತಾರೆ.

ಪರಂಪರೆ: ೧. ಶ್ರೀ ಮ.ನಿ.ಪ್ರ. ಸಿದ್ಧಬಸವಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಶಾಂತವೀರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ರಾಜಶೇಖರಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಶ್ರೀ ಸಿದ್ಧಬಸವ ಸ್ವಾಮಿಗಳು ಎಂಬತ್ತು ವರ್ಷಗಳ ಕಾಲ ಬದುಕಿ ಮಠವನ್ನು ಉದ್ಧರಿಸಿ ಜನಪ್ರಿಯರಾಗಿದ್ದರು. ಇವರ ನಂತರ ಅಧಿಕಾರಕ್ಕೆ ಬಂದಂತಹ ಶ್ರೀ ಶಾಂತವೀರ ಸ್ವಾಮಿಗಳು ಮುದ್ದೇನಹಳ್ಳಿಯ ಶ್ರೀ ಕಲ್ಯಾಣಯ್ಯ ಮತ್ತು ಶ್ರೀಮತಿ ಕಲ್ಯಾಣಮ್ಮನವರ ಪುತ್ರರಾಗಿ ೧೯೨೪ರ ಆಗಸ್ಟ್ ಎಂಟರಂದು ಜನಿಸಿ, ಪ್ರಾಥಮಿಕ ವಿದ್ಯಾ ಭ್ಯಾಸವನ್ನು ಮುದ್ದೇನಹಳ್ಳಿಯಲ್ಲಿ ಮುಗಿಸಿ, ಸಂಸ್ಕೃತ ಮತ್ತು ವೇದಾಧ್ಯಯನಕ್ಕಾಗಿ ಬಾದಾಮಿ ತಾಲ್ಲೂಕಿನ ಶಿವಯೋಗಮಂದಿರಕ್ಕೆ ತೆರಳುತ್ತಾರೆ. ಅಲ್ಲಿ ಹುಬ್ಬಳ್ಳಿ ಮೂರುಸಾವಿರ ಮಠದ ಜಗದ್ಗುರುಗಳಾದ ಶ್ರೀ ಗಂಗಾಧರ ರಾಜೇಂದ್ರ ಶಿವಯೋಗಿಗಳ ಸಹಪಾಠಿಗಳಾಗಿ ವಿದ್ಯೆಯನ್ನು ಕಲಿತು ಬಂದರು.

ಶ್ರೀ ಶಾಂತವೀರ ಸ್ವಾಮಿಗಳು ೧೯೫೪ರ ಮೇ ಹದಿನಾಲ್ಕರಂದು ಹಿರಿಯ ಗುರುಗಳ ಸಮ್ಮುಖದಲ್ಲಿ ಮಠದ ಅಧಿಕಾರ ವನ್ನು ವಹಿಸಿಕೊಂಡು ಮುನ್ನಡೆಸತೊಡಗಿದರು. ಪುತ್ರವರ್ಗದ ಸಂಪ್ರದಾಯದ ಈ ಮಠಕ್ಕೆ ತಮ್ಮ ಸಹೋದರ ಸಂಬಂಧಿಯಾದ ಶ್ರೀ ರಾಜಶೇಖರ ಸ್ವಾಮಿಗಳನ್ನು ಅಧಿಕಾರಕ್ಕೆ ತಂದರು. ಮುದ್ದೇನಹಳ್ಳಿಯ ಶ್ರೀ ಮರುಳಯ್ಯ ಮತ್ತು ಶ್ರೀಮತಿ ಗಂಗಮ್ಮನವರ ಪುತ್ರರಾಗಿ ೧೯೬೯ ರ ಮಾರ್ಚ್ ಆರರಂದು ಜನಿಸಿದ ಶ್ರೀ ರಾಜಶೇಖರ ಸ್ವಾಮಿಗಳು ಮೇಟಿಕುರ್ಕೆಯಲ್ಲಿ ಪ್ರೌಢಶಿಕ್ಷಣವನ್ನು ಮುಗಿಸಿ, ೧೯೮೫ರ ಮೇ ಹನ್ನೊಂದರಂದು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದಾರೆ. ಶ್ರೀ ಶಾಂತವೀರ ಸ್ವಾಮಿಗಳ ಆಶೀರ್ವಾದದಿಂದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುತ್ತಾ ಮಠವನ್ನು ಬೆಳೆಸತೊಡಗಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಮಠದ ಆಸ್ತಿಯಾಗಿರುವ ಇಪ್ಪತ್ತು ಎಕರೆ ಜಮೀನನ್ನು ಅಭಿವೃದ್ಧಿಗೊಳಿಸಿ ನೀರಾವರಿ ಸೌಲಭ್ಯವನ್ನು ಕಲ್ಪಿಸಿಕೊಂಡು ತೆಂಗಿನ ತೋಟವನ್ನು ಬೆಳೆಸಿದ್ದಾರೆ. ಆದಾಯದ ಮೂಲವನ್ನು ಹೆಚ್ಚಿಸಿಕೊಂಡು ಮಠವನ್ನು ಮುನ್ನಡೆಸತೊಡಗಿ ದ್ದಾರೆ. ಗುರುಗಳ ಗದ್ದುಗೆಗಳಿಗೆ ಮಂಟಪವನ್ನು ನಿರ್ಮಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ನಿರ್ಮಾಣಗೊಂಡ ಎರಡು ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ ನಡೆಸಲಾಗುತ್ತಿದೆ. ಶ್ರಾವಣ ಕಾರ್ತೀಕ, ಧನುರ್ಮಾಸಗಳಲ್ಲಿ ಪ್ರತಿದಿನವೂ ರುದ್ರಾಭಿಷೇಕದ ಪೂಜೆಯನ್ನು ಮಾಡಲಾಗುತ್ತಿದೆ. ಕಾರ್ತೀಕ ಮಾಸದಲ್ಲಿ ದೀಪೋತ್ಸವವನ್ನು ಆಚರಿಸಲಾಗುತ್ತಿದೆ. ವರ್ಷಕ್ಕೊಮ್ಮೆ ಹಿರಿಯಗುರುಗಳ ಆರಾಧನೆಯ ಅಂಗವಾಗಿ, ಧಾರ್ಮಿಕ ಸಭೆಯನ್ನು ಏರ್ಪಡಿಸಿ ಧರ್ಮಪ್ರಚಾರವನ್ನು ಕೈಗೊಳ್ಳಲಾಗುತ್ತಿದೆ. ಈ ಸಂದರ್ಭಗಳಲ್ಲಿ ಅನ್ನದಾಸೋಹ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ನಿತ್ಯ ಮಠಕ್ಕೆ ಬರುವ ಭಕ್ತರಿಗೆ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.ಮಠದ ವತಿಯಿಂದ ಬಸವಕೇಂದ್ರವನ್ನು ಸ್ಥಾಪಿಸಿ, ಧಾರ್ಮಿಕ ವಿಚಾರಗಳನ್ನು ಜನರಿಗೆ ಮುಟ್ಟಿಸುವ ಕಾಯಕವನ್ನು ಮಾಡಲಾಗುತ್ತಿದೆ.

ಶೈಕ್ಷಣಿಕ ಕಾರ್ಯಗಳು: ಮಠದ ವತಿಯಿಂದ ಈ ಹಿಂದೆ ಶಿಕ್ಷಣಸಂಸ್ಥೆಯನ್ನು ಪ್ರಾರಂಭಿಸದಿದ್ದರೂ, ಗ್ರಾಮಸ್ಥರು ಪ್ರಾರಂಭಿಸಿದ ಶ್ರೀ ಶಾಂತವೀರ ಶಿಕ್ಷಣ ಸಂಸ್ಥೆಗೆ ನಿವೇಶನ ನೀಡಿ ಪ್ರೋತ್ಸಾಹ ನೀಡಲಾಗಿತ್ತು. ಕಳೆದ ವರ್ಷ ಗ್ರಾಮಸ್ಥರು ಶಿಕ್ಷಣ ಸಂಸ್ಥೆಯನ್ನು ಮಠಕ್ಕೆ ವಹಿಸಿಕೊಟ್ಟಿದ್ದಾರೆ. ಮೇಟಿಕುರ್ಕೆಯಲ್ಲಿ ಅರವಿಂದ ಪ್ರಾಥಮಿಕ ಶಾಲೆಯು ಮಠದ ನೇತೃತ್ವದಲ್ಲಿ ನಡೆಯುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ರಾಜಶೇಖರ ಸ್ವಾಮಿಗಳು, ಶ್ರೀ ಬೂದಿಹಾಳು ಮಠ, ದೊಡ್ಡಮೇಟಿಕುರ್ಕೆ, ಅರಸೀಕೆರೆ ತಾ, ಹಾಸನ ಜಿಲ್ಲೆ.

ನಾಗೇನಹಳ್ಳಿ

ಅರಸೀಕೆರೆ ತಾಲ್ಲೂಕಿನ ನಾಗೇನಹಳ್ಳಿಯು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹನ್ನೆರಡು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ನಾಗೇನಹಳ್ಳಿ ಮಠವು ಅಸ್ತಿತ್ವದಲ್ಲಿದೆ.

ನಾಗೇನಹಳ್ಳಿಮಠ: ನಾಗೇನಹಳ್ಳಿ ಗ್ರಾಮದಲ್ಲಿ ನಾಗೇನಹಳ್ಳಿ ಮಠವು ಪುರಾತನ ಕಾಲದಲ್ಲಿಯೇ ಸ್ಥಾಪನೆಯಾಗಿದೆ. ಈ

ಮಠದಲ್ಲಿ ಎರಡು ಗದ್ದುಗೆಗಳು ಸ್ಥಾಪನೆಯಾಗಿವೆ. ಶ್ರೀ ಶಾಂತಮಲ್ಲ ದೇಶಿಕೇಂದ್ರ ಸ್ವಾಮಿಗಳ ಗದ್ದುಗೆಯನ್ನು ಗುರುತಿಸ ಬಹುದಾಗಿದ್ದು, ಉಳಿದ ಇನ್ನೊಂದು ಗದ್ದುಗೆಯನ್ನು ಗುರುತಿಸಲು ಆಧಾರಗಳು ಲಭ್ಯವಿಲ್ಲದಾಗಿವೆ. ಬಹಳ ದಿನಗಳವರೆಗೆ ಮಠಾಧೀಶ್ವರರು ಯಾರೂ ಇಲ್ಲದೆ ಹೋದ ಕಾರಣ ಮಠದ ಕಟ್ಟಡ ಶಿಥಿಲಾವಸ್ಥೆಗೆ ಬಂದಿದೆ. ಹಿಂದೆ ಹರಳೀಕಟ್ಟೆಮಠ ಮತ್ತು ನಾಗೇನಹಳ್ಳಿ ಮಠಗಳನ್ನು ಒಬ್ಬರೇ ಗುರುಗಳು ನೋಡಿಕೊಂಡು ಧಾರ್ಮಿಕ ಕೆಲಸಗಳನ್ನು ನಡೆಸುತ್ತಿದ್ದರೆಂದು ಹೇಳಲಾಗುತ್ತಿದೆ. ಪ್ರಸ್ತುತ ಸಿರಿಗೆರೆಯ ತರಳಬಾಳು ಬೃಹನ್ಮಠವು ನಾಗೇನಹಳ್ಳಿಯ ಮಠದ ಆಡಳಿತವನ್ನು ನೋಡಿಕೊಳ್ಳುತ್ತಿದ್ದು, ಗದ್ದುಗೆಗಳ ಪೂಜೆಗೆ ವ್ಯವಸ್ಥೆ ಮಾಡಿ ಮಠದಲ್ಲಿ ಧಾರ್ಮಿಕ ಚಟುವಟಿಕೆಗಳು ನಡೆಯುವಂತೆ ಮಾಡಿದೆ.

ವಿಳಾಸ: ಶ್ರೀ ತರಳಬಾಳು ಜಗದ್ಗುರು ಶಾಖಾಮಠ, ನಾಗೇನಹಳ್ಳಿ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ.

ಬಾಣಾವರ

ಅರಸೀಕೆರೆ ತಾಲ್ಲೂಕಿನ ಬಾಣಾವರವು ತಾಲ್ಲೂಕು ಕೇಂದ್ರ ಸ್ಥಳದಿಂದ ವಾಯುವ್ಯಕ್ಕೆ ಇಪ್ಪತ್ತು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಕೋಡಿಮಠವು ಅಸ್ತಿತ್ವದಲ್ಲಿದೆ.

ಕೋಡಿಮಠ: ಬಾಣಾವರ ಗ್ರಾಮದ ಪೂರ್ವ ಭಾಗದಲ್ಲಿ ವಿರಕ್ತ ಮಠವು ಸ್ಥಾಪನೆಯಾಗಿದೆ. ಹಾರನಹಳ್ಳಿ ಕೋಡಿ ಮಠದ ಶಾಖಾಮಠವಾಗಿರುವ ಈ ಮಠವು ಕೋಡಿಮಠದ ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮಿಗಳ ಕ್ರಿಯಾಶೀಲ ಗುಣಗಳಿಂದ ಜೀರ್ಣಾಭಿವೃದ್ಧಿಗೊಂಡು, ಧಾರ್ಮಿಕ ಕಾರ್ಯಗಳನ್ನು ನಡೆಸುವಂತಾಗಿದೆ.

ಬೆಂಗಳೂರು-ಹೊನ್ನಾವರ ರಸ್ತೆಯ ಬಲಭಾಗದ ಕೆರೆಯ ಕೋಡಿಯಲ್ಲಿ ಸ್ಥಾಪನೆಯಾಗಿರುವ ಈ ಮಠಕ್ಕೆ ಶ್ರೀಕೋಡಿಮಠ ಎಂದು ಹೆಸರು ಬಂದಿದೆ. ಕೋಡಿಮಠದ ಸ್ಥಾಪನೆಯ ಕಾಲಮಾನದ ಬಗ್ಗೆ ಇದುವರೆಗೆ ಯಾವುದೇ ಆಧಾರಗಳು ಲಭ್ಯವಿಲ್ಲವಾಗಿವೆ. ಜೀರ್ಣಗೊಂಡಿದ್ದ ಮಠದಲ್ಲಿ ಒಟ್ಟು ನಾಲ್ಕು ಗದ್ದುಗೆಗಳು ಸ್ಥಾಪನೆಯಾಗಿವೆ. ಹಾರನಹಳ್ಳಿ ಕೋಡಿಮಠಕ್ಕೆ ಶ್ರೀ ಶಿವಾನಂದ ಶಿವಯೋಗಿರಾಜೇಂದ್ರ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮೂಲಮಠವನ್ನು ಅಭಿವೃದ್ಧಿಪಡಿಸಿದ್ದಲ್ಲದೆ ತಮ್ಮ ಶಾಖಾಮಠಗಳ ಅಭಿವೃದ್ಧಿಗೆ ಕಾರ್ಯಸೂಚಿಯನ್ನು ತಯಾರಿಸಿಕೊಂಡು ಬಾಣಾವರದ ಶ್ರೀ ಕೋಡಿಮಠವನ್ನು ಜೀರ್ಣಾಭಿವೃದ್ಧಿಗೊಳಿಸಿದರು.

ಕರ್ತೃಗುರುಗಳ ಗದ್ದುಗೆಯನ್ನು ಕೇಂದ್ರವನ್ನಾಗಿ ಇಟ್ಟುಕೊಂಡು ನಿರ್ಮಿಸಲ್ಪಟ್ಟ ಮಠದ ಕಟ್ಟಡವನ್ನು ನವೀಕರಿಸಲಾಗಿದೆ. ಮಠದ ಹೊರ ಆವರಣದಲ್ಲಿ ದೊರೆತ ಮೂರು ಗದ್ದುಗೆಗಳನ್ನು ನವೀಕರಿಸಲಾಗಿದೆ. ಮಠದ ಸುತ್ತಮುತ್ತ ಇದ್ದ ಒಂದೂವರೆ ಎಕರೆ ಜಮೀನನ್ನು ಸಜ್ಜುಗೊಳಿಸಿ, ಪೂಜಾಕಾರ್ಯಗಳು ನಡೆಯುವಂತೆ ಮಾಡಿದ್ದಾರೆ. ಹಾರನಹಳ್ಳಿ ಕೋಡಿಮಠದ ಶಿಕ್ಷಣಸಂಸ್ಥೆ ಯ ವತಿಯಿಂದ ಈ ಮಠದಲ್ಲಿ ಪ್ರೌಢಶಾಲೆಯನ್ನು ಪ್ರಾರಂಭಿಸಿ,ಗ್ರಾಮಾಂತರ ಮಕ್ಕಳ ಕಲಿಕೆಗೆ ನೆರವಾದರು. ಮಠದ ವಾತಾವರಣ ಕ್ರಿಯಾತ್ಮಕವಾಗಿ ಇರುವಂತೆ ವ್ಯವಸ್ಥೆಗೊಳಿಸಿದರು. ಶ್ರೀ ಶಿವಾನಂದಶಿವಯೋಗಿ ರಾಜೇಂದ್ರ ಸ್ವಾಮಿಗಳು ಆಗಾಗ್ಗೆ ಈ ಮಠಕ್ಕೆ ಬಂದು ಧಾರ್ಮಿಕ,ಶೈಕ್ಷಣಿಕ ಕಾರ್ಯಗಳು ಕ್ರಿಯಾತ್ಮಕವಾಗಿ ನಡೆಯುವಂತೆ ನೋಡಿಕೊಳ್ಳುತ್ತಿದ್ದಾರೆ.

ವಿಳಾಸ: ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮಿಗಳು, ಶ್ರೀ ಕೋಡಿಮಠ, ಹಾರನಹಳ್ಳಿ, ಅರಸೀಕೆರೆ ತಾ, ಹಾಸನ ಜಿಲ್ಲೆ.

ಮಾಡಾಳು

ಅರಸೀಕೆರೆ ತಾಲ್ಲೂಕಿನ ಮಾಡಾಳು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಇಪ್ಪತ್ತೆಂಟು ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ಪುರಾತನ ಕಾಲದಲ್ಲಿ ವಿರಕ್ತಮಠ ಅಥವಾ ನಿರಂಜನಮಠವು ಸ್ಥಾಪನೆಗೊಂಡಿದೆ. ೧೯೮೪ ರ ಮಾರ್ಚ್ ಹನ್ನೊಂದರಂದು ಶ್ರೀ ಗುರುಶಿವಬಸವ ಕುಮಾರಾಶ್ರಮವು ಪ್ರಾರಂಭವಾಗಿದೆ.ಎರಡೂ ಮಠಗಳು ಗ್ರಾಮದ ಧಾರ್ಮಿಕ ಚಟುವಟಿಕೆಗಳ ಕೇಂದ್ರಗಳಾಗಿ ಬೆಳೆದಿವೆ.

ಗುರುಶಿವಬಸವ ಕುಮಾರಾಶ್ರಮ: ಹಾರನಹಳ್ಳಿ ಕೋಡಿಮಠದ ಶ್ರೀ ನೀಲಲೋಚನ ಸ್ವಾಮಿಗಳು ಕೋಡಿಮಠಕ್ಕೆ ಶ್ರೀಶಿವಾ

ನಂದ ಶಿವಯೋಗಿ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿ ಮಾಡಾಳಿಗೆ ಬಂದು, ಈ ಪ್ರಶಾಂತ ಸ್ಥಳದಲ್ಲಿ ತಪೋನುಷ್ಠಾನ ಕೈಗೊಂಡು ಇಲ್ಲಿ ಮಠವನ್ನು ಸ್ಥಾಪನೆ ಮಾಡಿರುತ್ತಾರೆ. ಹಾರನಹಳ್ಳಿಯಿಂದ ಆಗಮಿಸಿದ ಶ್ರೀ ನೀಲಲೋಚನ ಸ್ವಾಮಿಗಳು ಊರ ಮಧ್ಯದ ಗೌರಮ್ಮನ ಬಾವಿಯ ಹತ್ತಿರವಿರುವ ಮಠದ ಮನೆಯಲ್ಲಿ ವಾಸ್ತವ್ಯವನ್ನು ಪಡೆದು, ಮಾಡಾಳು ಗ್ರಾಮದ ಹೊರವಲಯದ ಪೂರ್ವ ಭಾಗದಲ್ಲಿ ಮೂವತ್ತಾರು ಗುಂಟೆ ಜಮೀನನ್ನು ಖರೀದಿಸಿ, ಈ ಸ್ಥಳದಲ್ಲಿ ಮಠವನ್ನು ಸ್ಥಾಪಿಸಲು ನಿರ್ಧಾರ ಕೈಗೊಂಡರು.

ಮಠ ಸ್ಥಾಪನೆ: ಶ್ರೀ ನೀಲಲೋಚನ ಸ್ವಾಮಿಗಳ ನಿರ್ಧಾರಕ್ಕೆ ಕತ್ತಲಗೆರೆ ಸಿದ್ಧಲಿಂಗಶೆಟ್ಟರು, ಶ್ರೀ ನೀಲಕಂಠ ಶಾಸ್ತ್ರಿಗಳು, ಎಂ. ಪರಮೇಶ್ವರಯ್ಯ, ರಾಚಗೊಂಡನಹಳ್ಳಿಯ ಶಿವಲಿಂಗಪ್ಪ ಮತ್ತು ಪಟೇಲ್ ಚನ್ನವೀರೇಗೌಡರೂ ಸೇರಿದಂತೆ ಎಲ್ಲಾ ಭಕ್ತ ಸಮೂಹವು ಗುರುಗಳ ಮಾರ್ಗದರ್ಶನದಲ್ಲಿ ಮಠವನ್ನು ಸ್ಥಾಪಿಸುವಲ್ಲಿ ನೆರವಾದರು. ಗುರುಗಳು ತಮ್ಮ ಕೊನೆಯ ದಿನಗಳನ್ನು ಏಕಾಂತವಾಗಿ ಕಳೆಯಲು ಆಯ್ಕೆ ಮಾಡಿಕೊಂಡ ಈ ಪ್ರಶಾಂತ ಸ್ಥಳದಲ್ಲಿ, ಮಠದ ಕಟ್ಟಡವನ್ನು ಕಟ್ಟಲು ಪ್ರಾರಂಭಿಸಿದ ಮೇಲೆ ಕೋಡಿ ಮಠದ ಅನೇಕ ಭಕ್ತರು ಗುರುಗಳಿಗೆ ನೆರವಾದರು.

ನೂತನವಾಗಿ ಪ್ರಾರಂಭಗೊಂಡ ಮಠದಲ್ಲಿ ಗುರುಗಳು ಏಕಾಂತವಾಗಿ ಕಾಲ ಕಳೆಯುತ್ತಾ ಲೋಕೋದ್ಧಾರಕ್ಕಾಗಿ ಅನುಷ್ಠಾನವನ್ನು ಕೈಗೊಂಡರು. ಗುರುಗಳ ಪೂಜಾನುಷ್ಠಾನ ಕಾರ್ಯಗಳಿಗೆ ನೆರವಾಗಲೆಂದು, ಆಂಧ್ರಪ್ರದೇಶದ ಆದವಾನಿ ತಾಲ್ಲೂಕಿನ ನರಿಜಾಂಗಿ ಮಠದ ಮಠಾಧೀಶರಾದ ಶ್ರೀ ತೋಂಟದಾರ್ಯ ಸ್ವಾಮಿಗಳು ಆಗಮಿಸಿ ನೆಲೆ ನಿಂತರು. ೧೯೭೯ ರಿಂದಲೇ ಕೋಡಿಮಠದ ಸಂಪರ್ಕವನ್ನು ಇಟ್ಟುಕೊಂಡಿದ್ದ ಶ್ರೀ ತೋಂಟದಾರ್ಯ ಸ್ವಾಮಿಗಳು, ಶ್ರೀ ನೀಲಲೋಚನ ಸ್ವಾಮಿಗಳು ಮಾಡಾಳಿನಲ್ಲಿ ಅನುಷ್ಠಾನಕ್ಕೆ ಕುಳಿತ ಮೇಲೆ ಗುರುಗಳ ಸೇವೆ ಮಾಡಲು ಇಲ್ಲಿಗೆ ಬಂದು ನೆಲೆಸಿದರು. ಗುರುಗಳು ಇಲ್ಲಿಗೆ ಬಂದು ನೆಲೆಸಿದ ಮೇಲೆ ಮಠದ ಧಾರ್ಮಿಕ ಕಾರ್ಯಗಳು ಚುರುಕುಗೊಂಡವು. ಶ್ರೀ ನೀಲಲೋಚನ ಸ್ವಾಮಿ ಗಳ ದರ್ಶನಕ್ಕೆ ರಾಜ್ಯ ಹಾಗೂ ಹೊರ ರಾಜ್ಯಗಳಿಂದ ಭಕ್ತರು ಬರಲು ಪ್ರಾರಂಭಿಸಿದರು. ಜನರ ಸಂಪರ್ಕದಿಂದ ಮಾಡಾಳು ಮಠವು ಬಹು ಬೇಗನೆ ಪ್ರಸಿದ್ಧಿಗೆ ಬಂದಿತು.

ಪಟ್ಟಾಧಿಕಾರ: ಶ್ರೀ ನೀಲಲೋಚನ ಸ್ವಾಮಿಗಳು ಸ್ಥಾಪಿಸಿದ ಈ ನೂತನ ಮಠಕ್ಕೆ ಉತ್ತರಾಧಿಕಾರಿಗಳನ್ನು ನೇಮಿಸಬೇಕೆಂದು ಗ್ರಾಮಸ್ಥರು ಹಾಗೂ ನೀಲಲೋಚನ ಸ್ವಾಮಿಗಳು ನಿರ್ಧಾರ ಕೈಗೊಂಡರು. ಈ ನಿರ್ಧಾರವನ್ನು ಅನುಷ್ಠಾನಗೊಳಿಸಲು ಮುಂದಾದ ಭಕ್ತರು ಆಂಧ್ರ ಪ್ರದೇಶದಿಂದ ಬಂದು ಶ್ರೀ ನೀಲಲೋಚನ ಸ್ವಾಮಿಗಳ ಸೇವೆಯನ್ನು ಮಾಡಿಕೊಂಡಿದ್ದ ಶ್ರೀತೋಂಟದಾರ್ಯ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಲು ನಿರ್ಧರಿಸಿ ಶ್ರೀ ತೋಂಟದಾರ್ಯ ಸ್ವಾಮಿಗಳಿಗೆ ತಿಳಿಸಿದರು. ಆಗ ಶ್ರೀ ತೋಂಟದಾರ್ಯ ಸ್ವಾಮಿಗಳು ಶ್ರೀ ನೀಲಲೋಚನ ಸ್ವಾಮಿಗಳ ಸಮ್ಮುಖದಲ್ಲಿ ಆಮೂಲಾಗ್ರವಾಗಿ ಚರ್ಚಿಸಿ ಮಠದ ಸಮಸ್ತ ಜವಾಬ್ದಾರಿಯನ್ನು ನಿರ್ವಹಿಸಲು ಒಪ್ಪಿಕೊಂಡರು.

ಶ್ರೀ ಗುರುಶಿವಬಸವ ಕುಮಾರಾಶ್ರಮ (ಮಠ)ದ ಸ್ಥಾಪಕ ಸಮಿತಿಯು ತಮ್ಮ ಹೆಸರಿನಲ್ಲಿದ್ದ ಆಸ್ತಿಯನ್ನು ಶ್ರೀತೋಂಟದಾರ್ಯ ಸ್ವಾಮಿಗಳಿಗೆ ವಹಿಸಿಕೊಟ್ಟು, ೧೯೮೮ರಲ್ಲಿ ವೀರಶೈವ ಧರ್ಮದ ಪದ್ಧತಿಯ ಪ್ರಕಾರ ನೂತನ ಮಠದ ಪಟ್ಟಾಧಿಕಾರವನ್ನು ನಡೆಸಿಕೊಡುತ್ತಾರೆ. ಬಾದಾಮಿ ತಾಲ್ಲೂಕಿನ ಬೇಲೂರು ಗ್ರಾಮದ ಶ್ರೀ ಸಿದ್ಧಯ್ಯ ಮತ್ತು ಶ್ರೀಮತಿ ಸಂಗನಬಸಮ್ಮನವರ ಪುತ್ರರಾಗಿ ೧೯೪೭ರಲ್ಲಿ ಜನಿಸಿದ ಶ್ರೀ ತೋಂಟದಾರ್ಯ ಸ್ವಾಮಿಗಳು ೧೯೫೫ ರಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪ್ರಾರಂಭಿಸಿ, ಶಿವಯೋಗಮಂದಿರದಲ್ಲಿ ಹೆಚ್ಚಿನ ವಿದ್ಯಾಭ್ಯಾಸವನ್ನು ಮುಗಿಸಿ, ಜಮಖಂಡಿಯ ಓಲೆಮಠಕ್ಕೆ ನೇಮಕಗೊಂಡರು. ಆದರೆ ಅಲ್ಲಿ ಅಧಿಕಾರವನ್ನು ವಹಿಸಿಕೊಳ್ಳುವ ಮೊದಲೇ ೧೯೭೭ರಲ್ಲಿ ಆದವಾನಿ ತಾಲ್ಲೂಕಿನ ನರಿಜಾಂಗಿಯ ವಿರಕ್ತ ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸತೊಡಗಿದ್ದರು. ಈ ಸಂದರ್ಭದಲ್ಲಿ ಕೋಡಿ ಮಠದ ಶ್ರೀ ನೀಲಲೋಚನ ಸ್ವಾಮಿಗಳ ಶಿಷ್ಯರಾಗಿ ಬೆಳೆದಿದ್ದರು. ಈ ಗುರುಶಿಷ್ಯರ ಸಂಬಂಧದ ಹಿನ್ನೆಲೆಯಲ್ಲಿ ಗುರುಗಳ ಸೇವೆಯಯನ್ನು ಮಾಡಲು ಇಲ್ಲಿಗೆ ಆಗಮಿಸಿ ನೂತನ ಮಠದ ಆಡಳಿತದ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಯಿತು.

ಗದ್ದುಗೆ ಸ್ಥಾಪನೆ: ಶ್ರೀ ಗುರುಶಿವಬಸವ ಕುಮಾರಾಶ್ರಮ (ಮಠ) ವನ್ನು ಸ್ಥಾಪಿಸಿದ ಮೇಲೆ ಶ್ರೀ ಶಿವಲಿಂಗೇಶ್ವರ ಸ್ವಾಮಿಗಳ ತೋರು ಗದ್ದುಗೆಯನ್ನು ನೂತನ ಮಠದಲ್ಲಿ ಸ್ಥಾಪಿಸಿ, ಗದ್ದುಗೆಯ ಮೇಲೆ ಶ್ರೀ ಶಿವಲಿಂಗೇಶ್ವರ ಸ್ವಾಮಿಗಳ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಈ ತೋರು ಗದ್ದುಗೆಗೆ ಮಂಟಪವನ್ನು ನಿರ್ಮಿಸಿ ನೂತನ ಮಠದ ಧಾರ್ಮಿಕ ಆಚರಣೆಯ ಕೇಂದ್ರ ಬಿಂದುವನ್ನಾಗಿ ಮಾಡಿಕೊಳ್ಳಲಾಯಿತು.

ಕೋಡಿಮಠದಿಂದ ಇಲ್ಲಿಗೆ ಆಗಮಿಸಿ ಅನುಷ್ಠಾನವನ್ನು ಕೈಗೊಂಡಿದ್ದ ಶ್ರೀ ನೀಲಲೋಚನ ಸ್ವಾಮಿಗಳು, ವೀರಶೈವ ಧರ್ಮಾಚರಣೆಯ ಕಾರ್ಯಗಳು ಸಮರ್ಥವಾಗಿ ನಡೆಯುವಂತೆ ಶ್ರೀ ತೋಂಟದಾರ್ಯ ಸ್ವಾಮಿಗಳಿಗೆ ಮಾರ್ಗದರ್ಶನವನ್ನು ನೀಡಿ, ಸಮಾಜವ ಒಳಿತಿಗಾಗಿ ಚಿಂತಿಸಿ ಕಾರ್ಯೋನ್ಮುಖರಾಗಿದ್ದು ಡಿಸೆಂಬರ್ ೧೯೯೨ ರಲ್ಲಿ ಲಿಂಗೈಕ್ಯರಾದರು. ಲಿಂಗೈಕ್ಯ ಗುರು ಗಳ ಸಮಾಧಿಯನ್ನು ಮಾಡಾಳು ಗ್ರಾಮದ ಮಠದಲ್ಲಿ ಮಾಡಲಾಯಿತು. ಶ್ರೀ ನೀಲಲೋಚನ ಸ್ವಾಮಿಗಳ ಗದ್ದುಗೆಗೆ ಭವ್ಯ ಮಂಟಪವನ್ನು ನಿರ್ಮಿಸಲು ೧೯೯೩ರಲ್ಲಿ ಯೋಜನೆಯನ್ನು ತಯಾರಿಸಿ ಕಾರ್ಯಾರಂಭ ಮಾಡಲಾಯಿತು. ಸುಮಾರು ಹತ್ತುಲಕ್ಷ ರೂಪಾಯಿಗಳ ಯೋಜನೆಯಲ್ಲಿ ಪ್ರಾರಂಭಗೊಂಡ ಗದ್ದುಗೆ ನಿರ್ಮಾಣವು ಹಂತಹಂತವಾಗಿ ನಡೆದು ಕಳಸಾರೋಹಣದ ಅಂತಿಮ ಕಾರ್ಯಕ್ರಮವನ್ನು ೧೯೯೯ರ ಮೇ ನಾಲ್ಕರಂದು ಅದ್ದೂರಿಯಾಗಿ ನೆರವೇರಿಸಲಾಯಿತು.

ಧಾರ್ಮಿಕ ಆಚರಣೆಗಳು: ಶ್ರೀ ನೀಲಲೋಚನ ಸ್ವಾಮಿಗಳ ಗದ್ದುಗೆ ಹಾಗೂ ಶ್ರೀ ಶಿವಲಿಂಗೇಶ್ವರ ಸ್ವಾಮಿಗಳ ತೋರು ಗದ್ದುಗೆಗೆ ನಿತ್ಯ ರುದ್ರಾಭಿಷೇಕದ ಪೂಜೆಯನ್ನು ನಡೆಸಲಾಗುತ್ತಿದೆ. ಭಕ್ತರ ಆಹ್ವಾನಗಳಿಗೆ ಸ್ಪಂದಿಸಿ ಭಕ್ತರ ಮನೆಗಳಲ್ಲಿ ನಡೆಯುವ ಧಾರ್ಮಿಕ ಆಚರಣೆಗಳಲ್ಲಿ ಪಾಲ್ಗೊಂಡು ಆಶೀರ್ವದಿಸುವುದು, ವಿವಿಧ ಸಭೆ ಸಮಾರಂಭಗಳಲ್ಲಿ ಭಾಗವಹಿಸಿ ಧಾರ್ಮಿಕ ವಿಚಾರಗಳ ಬಗ್ಗೆ ಉಪದೇಶವನ್ನು ನೀಡುವುದು ಗುರುಗಳ ಧಾರ್ಮಿಕ ಕಾರ್ಯಗಳಾಗಿವೆ. ಇತ್ತೀಚೆಗೆ ಹುಣ್ಣಿಮೆಯ ನಂತರದ ಎರಡನೆಯ ದಿನದಲ್ಲಿ ಮಹಾಮಂಗಳಾರತಿಯ ಕಾರ್ಯಕ್ರಮವನ್ನು ಹಮ್ಮಿಕೊಂಡು ಪ್ರತಿ ತಿಂಗಳಿಗೊಮ್ಮೆ ನಾಡಿನ ವಿವಿಧ ಭಾಗದ ವಿದ್ವಾಂಸರನ್ನು ಬರಮಾಡಿಕೊಂಡು ಉಪನ್ಯಾಸವನ್ನು ಮಾಡಿಸಿ, ಗುರುಗಳು ಆಶೀರ್ವಚನವನ್ನು ನೀಡುತ್ತಾರೆ. ಈ ಕಾರ್ಯಕ್ರಮಗಳು ಮುಗಿದ ಮೇಲೆ ಮಹಾ ಮಂಗಳಾರತಿ ನಡೆಯುತ್ತದೆ. ಈ ಸಮಾರಂಭಕ್ಕೆ ಗ್ರಾಮದ ನೂರಾರು ಜನ ಭಕ್ತರು ಆಗಮಿಸುತ್ತಾರೆ. ಮಠದಲ್ಲಿ ನಿತ್ಯ ದಾಸೋಹವು ವ್ಯವಸ್ಥೆಗೊಂಡಿದೆ. ಮಠಕ್ಕೆ ಬರುವ ಭಕ್ತರ ಹಾಗೂ ಮಠದಲ್ಲಿ ಆಶ್ರಯವನ್ನು ಪಡೆದು ವಿದ್ಯಾಭ್ಯಾಸವನ್ನು ಮಾಡುತ್ತಿರುವ ಹದಿನೈದರಿಂದ ಇಪ್ಪತ್ತು ವಿದ್ಯಾರ್ಥಿಗಳಿಗೆ ದಾಸೋಹ ಹಾಗೂ ವಸತಿವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ.

ಹೊತ್ತಿಗೆ ಶಾಸ್ತ್ರ: ಶ್ರೀ ಕೋಡಿಮಠದ ಶ್ರೀ ಶಿವಲಿಂಗೇಶ್ವರ ಸ್ವಾಮಿಗಳು ತಮ್ಮ ತಪೋಶಕ್ತಿಯಿಂದ ರಚಿಸಲ್ಪಟ್ಟಿದ್ದ ಹೊತ್ತಿಗೆಯ ಪತ್ರಿಯು (ಭವಿಷ್ಯವಾಣಿ) ಈ ಮಠದಲ್ಲಿದೆ. ಹಿಂದೆ ಈ ಹೊತ್ತಿಗೆಯನ್ನು ಶ್ರೀ ನೀಲಲೋಚನ ಸ್ವಾಮಿಗಳು ಬಳಸುತ್ತಿದ್ದರು. ಈಗಲೂ ಅಪೇಕ್ಷಿತರಿಗೆ ಈ ಹೊತ್ತಿಗೆಯಿಂದ ಭವಿಷ್ಯವನ್ನು ಹೇಳಲಾಗುತ್ತಿದೆ. ಮಠದ ಪತಿಯಿಂದ ಇದುವರೆಗೆ ಶ್ರೀ ನೀಲಕಂಠ ಶಾಸ್ತ್ರಿಗಳು ಹೇಳುತ್ತಿದ್ದರು. ಇತ್ತೀಚೆಗೆ ಶ್ರೀ ತೋಂಟದಾರ್ಯ ಸ್ವಾಮಿಗಳೇ ಹೊತ್ತಿಗೆಯನ್ನು ಹೇಳತೊಡಗಿದ್ದಾರೆ.

ಶೈಕ್ಷಣಿಕ ಸೇವೆ: ಶ್ರೀ ತೋಂಟದಾರ್ಯ ಸ್ವಾಮಿಗಳು ಮಾಡಾಳು ಮತ್ತು ಆಂಧ್ರಪ್ರದೇಶದ ವಿರಕ್ತಮಠದ ಅಧಿಕಾರವನ್ನು ನೋಡಿಕೊಳ್ಳುತ್ತಾ, ಧಾರ್ಮಿಕ ಮತ್ತು ಸಾಮಾಜಿಕವಾಗಿ ಹೆಚ್ಚು ಹೆಸರು ಪಡೆದಿದ್ದಾರೆ. ಆಂಧ್ರಪ್ರದೇಶದ ವಿರಕ್ತಮಠದಲ್ಲಿ ಎರಡು ಪ್ರೌಢಶಾಲೆಗಳು ನಡೆಯುತ್ತಿವೆ. ೧೯೯೮ರಲ್ಲಿ ಮಾಡಾಳು ಸಮೀಪದ ದೊಡ್ಡ ಮೇಟಿಕುರ್ಕೆಯಲ್ಲಿ ಕಾನ್ವೆಂಟನ್ನು ಪ್ರಾರಂಭಿಸಿದ್ದು, ಪ್ರಸ್ತುತ ಶೈಕ್ಷಣಿಕ ವರ್ಷದಿಂದ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಲಾಗಿದೆ. ಈ ರೀತಿ ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಮಾಡಾಳು ಮಠವು ಅಭಿವೃದ್ಧಿಯನ್ನು ಸಾಧಿಸಿದೆ.

ವಿಳಾಸ: ಶ್ರೀ ಮ.ನಿ.ಪ್ರ. ತೋಂಟದಾರ್ಯ ಸ್ವಾಮಿಗಳು, ಶ್ರೀ ಗುರುಶಿವಬಸವ ಕುಮಾರಾಶ್ರಮ, ಮಾಡಾಳು, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ.

ವಿರಕ್ತಮಠ: ಮಾಡಾಳು ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಗೊಂಡಿರುವ ಮುರುಘಾ ಸಮಯದ ವಿರಕ್ತ ಮಠವು ಹದಿನಾಲ್ಕ

ನೆಯ ಶತಮಾನದಲ್ಲಿ ಸ್ಥಾಪನೆಯಾಗಿರಬಹುದೆಂದು ಹೇಳಲಾಗುತ್ತದೆ. ಆದರೆ ಇದಕ್ಕೆ ಸಂಬಂಧಪಟ್ಟ ದಾಖಲೆಗಳು ಲಭ್ಯವಿಲ್ಲ. ವಿರಕ್ತ ಸಂಪ್ರದಾಯದ ಈ ಮಠಕ್ಕೆ ಶ್ರೀ ನಿರಂಜನ ಪೀಠವೆಂದೂ ಸಹ ಕರೆಯಲಾಗುತ್ತದೆ. ಈ ಮಠದ ಸ್ಥಾಪಕರು ಶ್ರೀನಂಜುಂಡ ಸ್ವಾಮಿಗಳೆಂದು ಗುರುತಿಸಲಾಗಿದೆ. ಇವರ ಗದ್ದುಗೆಯು ಮಠದ ಕೇಂದ್ರ ಸ್ಥಳದಲ್ಲಿ ಸ್ಥಾಪಿತಗೊಂಡಿದೆ.

ಮಠ ಸ್ಥಾಪನೆ: ಶ್ರೀ ನಂಜುಂಡ ಸ್ವಾಮಿಗಳು ವೀರಶೈವಧರ್ಮ ಪ್ರಚಾರಕ್ಕಾಗಿ ಲೋಕಸಂಚಾರ ಮಾಡುತ್ತಾ ಮಾಡಾಳು ಗ್ರಾಮಕ್ಕೆ ಆಗಮಿಸುತ್ತಾರೆ. ಇಲ್ಲಿಗೆ ಆಗಮಿಸಿದ ಗುರುಗಳು ಇಲ್ಲಿನ ಪ್ರಶಾಂತವಾದ ವಾತಾವರಣಕ್ಕೆ ಮನಸೋತು ಇಲ್ಲಿಯೇ ನೆಲೆಗೊಳ್ಳುತ್ತಾರೆ. ಗುರುಗಳು ಈ ಸ್ಥಳದಲ್ಲಿ ಪರ್ಣ ಕುಟೀರವನ್ನು ಕಟ್ಟಿಕೊಂಡು ತಪೋನಿಷ್ಠರಾಗಿ ಈ ಪ್ರಾಂತ್ಯದಲ್ಲಿ ಧರ್ಮ ಜಾಗೃತಿಯನ್ನು ಉಂಟುಮಾಡಿದರು. ಗ್ರಾಮದ ಭಕ್ತರು ಗುರುಗಳ ಧಾರ್ಮಿಕ ಕಾರ್ಯಗಳಿಗೆ ನೆರವಾಗಿ ಗುರುಗಳ ಕೃಪಾಶೀರ್ವಾದಕ್ಕೆ ಒಳಗಾಗುತ್ತಾರೆ. ಗುರುಗಳು ನಿತ್ಯ ಪೂಜಾ ಕಾರ್ಯಗಳ ಜತೆಗೆ ಶಿವಾನುಭವಗೋಷ್ಠಿಗಳನ್ನು ನಡೆಸಿ ಧರ್ಮ ಸಾಕಾರಗೊಳ್ಳುವಂತೆ ಮಾಡಿದರು. ಶ್ರೀ ನಂಜುಂಡ ಸ್ವಾಮಿಗಳ ನಂತರ ಮಠ ಬೆಳೆಯಿತಾದರೂ, ಮಠದ ಪರಂಪರೆಯಲ್ಲಿ ಅಧಿಕಾರಕ್ಕೆ ಬಂದ ಎಲ್ಲಾ ಗುರುಗಳ ಹೆಸರುಗಳು ಲಭ್ಯವಾಗದೆ ಹೋಗಿವೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ನಂಜುಂಡಸ್ವಾಮಿಗಳು (ಕರ್ತೃಗುರುಗಳು)
೨. ಶ್ರೀ ಮ.ನಿ.ಪ್ರ. ಚನ್ನಬಸವಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಶಾಂತಮಲ್ಲದೇಶಿಕೇಂದ್ರಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ರುದ್ರಮುನೀಶ್ವರಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಚಂದ್ರಶೇಖರಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಎರಡನೆಯ ರುದ್ರಮುನೀಶ್ವರಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಗುರುಪರಂಪರೆಯು ಬೆಳೆದು ಬಂದಿದೆ. ಶ್ರೀ ನಂಜುಂಡ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಅನೇಕ ಗುರುಗಳು ವಿರಕ್ತ ಮಠದ ಅಧಿಕಾರವನ್ನು ನಡೆಸಿದ ಬಗ್ಗೆ ಮಠದ ಆವರಣದಲ್ಲಿರುವ ಹನ್ನೊಂದು ಗದ್ದುಗೆಗಳ ಆಧಾರದ ಮೇಲೆ ಹೇಳಲಾಗುತ್ತದೆ. ಆದರೆ ಹೆಸರುಗಳು ಲಭ್ಯವಿಲ್ಲದ ಕಾರಣ ಶ್ರೀ ಚನ್ನಬಸವ ಸ್ವಾಮಿಗಳ ಕಾಲದಿಂದ ಗುರುಗಳ ಪರಂಪರೆಯ ಹೆಸರುಗಳನ್ನು ದಾಖಲಿಸಬಹುದಾಗಿದೆ. ಶ್ರೀ ಚನ್ನಬಸವ ಸ್ವಾಮಿಗಳು ಅಧಿಕಾರಕ್ಕೆ ಬರುವ ಮುನ್ನಮಠದ ಕಟ್ಟಡವು ಪೂರ್ಣ ಶಿಥಿಲಗೊಂಡು ಹೇಳಲು ಹೆಸರಿಲ್ಲದಂತಾಗಿತ್ತೆಂದು ಹೇಳಲಾಗುತ್ತದೆ. ಗುರುಗಳು ಮಠದ ಮುಂದೆ ಇದ್ದ ಬಾವಿಯಲ್ಲಿ ಸ್ನಾನ ಮುಗಿಸಿ ವಾಸಕ್ಕೆಂದು ನಿರ್ಮಿಸಿಕೊಂಡಿದ್ದ ಪರ್ಣಕುಟೀರದಲ್ಲಿ ತಪೋನುಷ್ಠಾನ ಕೈಗೊಳ್ಳುತ್ತಿದ್ದರು. ಧರ್ಮಪ್ರಚಾರವನ್ನೇ ತಮ್ಮ ಮೂಲ ಗುರಿಯನ್ನಾಗಿಟ್ಟುಕೊಂಡಿದ್ದ ಗುರುಗಳು ನಿತ್ಯ ಶಿವಾನುಭವಗೋಷ್ಠಿಗಳನ್ನು ನಡೆಸಿ, ಧರ್ಮಪ್ರಚಾರವನ್ನು ಮಾಡಿರುತ್ತಾರೆ. ಇವರ ನಂತರ ಶ್ರೀ ಶಾಂತಮಲ್ಲ ದೇಶಿಕೇಂದ್ರ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಹಿರಿಯ ಗುರುಗಳ ಮಾರ್ಗದರ್ಶನದಂತೆ ಮಠವನ್ನು ಮುನ್ನಡೆಸಿರುತ್ತಾರೆ. ಇವರ ನಂತರ ಅಧಿಕಾರಕ್ಕೆ ಬಂದ ಶ್ರೀರುದ್ರ ಮುನೀಶ್ವರ ಸ್ವಾಮಿಗಳು ಚಿಕ್ಕಮಗಳೂರು ತಾಲ್ಲೂಕಿನ ಮರ್ಲೆ ಗ್ರಾಮದವರಾಗಿದ್ದಾರೆ.

ಶ್ರೀ ರುದ್ರಮುನೀಶ್ವರ ಸ್ವಾಮಿಗಳು ಈ ಮಠದ ಆಡಳಿತವನ್ನು ವಹಿಸಿಕೊಂಡ ಸಂದರ್ಭದಲ್ಲಿ ಮಠದ ಕಟ್ಟಡವು ದುಸ್ಥಿತಿಯಲ್ಲಿತ್ತು. ಗುರುಗಳು ಶಿಥಿಲಗೊಂಡಿದ್ದ ಈ ಕಟ್ಟಡವನ್ನು ಜೀರ್ಣಾಭಿವೃದ್ಧಿಪಡಿಸದೆ, ಮಠದ ಆವರಣದಲ್ಲಿಯೇ ಚಿಕ್ಕದಾದ ಗುಡಿಸಲನ್ನು ಕಟ್ಟಿಕೊಂಡು ನೆಲೆಸತೊಡಗಿದರು ಎಂದು ಹೇಳಲಾಗುತ್ತಿದೆ. ಮಠದ ಮುಂದೆ ಇದ್ದ ಬಾವಿಯಲ್ಲಿ ಸ್ನಾನಮುಗಿಸಿ, ಪೂಜಾಕಾರ್ಯಗಳನ್ನು ಮುಗಿಸಿಕೊಂಡು ಕಂತೆಭಿಕ್ಷಕ್ಕೆಂದು ಬಸವನ ಮೇಲೆ ದಿನಕ್ಕೊಂದು ಹಳ್ಳಿಗಳಲ್ಲಿ ಸಂಚರಿಸಿ ಭಿಕ್ಷಾಟನೆಯ ಜತೆಗೆ ಧರ್ಮಬೋಧನೆಯನ್ನು ಮಾಡುತ್ತಾ ಭಕ್ತರ ಬಿನ್ನಹವನ್ನು ತೀರಿಸಿ,ವೀರಶೈವರಿಗೆ ಆಚಾರ ವಿಚಾರಗಳನ್ನು ಕಲಿಸುತ್ತಿದ್ದರು. ಈ ರೀತಿ ಧರ್ಮಪ್ರಚಾರವನ್ನು ಕೈಗೊಂಡು ಮಠವನ್ನು ಬೆಳೆಸಿ ೧೯೨೩ರಲ್ಲಿ ಲಿಂಗೈಕ್ಯರಾಗಿರುತ್ತಾರೆ.

ಶ್ರೀ ರುದ್ರಮುನೀಶ್ವರ ಶಿವಾಚಾರ್ಯ ಸ್ವಾಮಿಗಳ ನಂತರ ಮಠದ ಉತ್ತರಾಧಿಕಾರಿಗಳಾಗಿ ಶ್ರೀ ಚಂದ್ರಶೇಖರ ಸ್ವಾಮಿಗಳು ೧೯೨೦ರಲ್ಲಿ ನೇಮಕಗೊಳ್ಳುತ್ತಾರೆ. ಶ್ರೀ ಚಂದ್ರಶೇಖರ ಸ್ವಾಮಿಗಳು ಬೇಲೂರು ತಾಲ್ಲೂಕಿನ ಬೆಣ್ಣೂರು ಗ್ರಾಮದ

ಶ್ರೀ ಮರುಳಸಿದ್ದಯ್ಯ ಮತ್ತು ಶ್ರೀಮತಿ ನೀಲಮ್ಮನವರ ಪುತ್ರರಾಗಿ ೧೯೧೦ರ ಏಪ್ರಿಲ್ ಇಪ್ಪತ್ತಮೂರರಂದು ಜನಿಸಿದರು. ಚಿಕ್ಕವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡು, ತಾಯಿಯ ತವರೂರಾದ ಅರಸೀಕೆರೆ ತಾಲ್ಲೂಕಿನ ಅಗ್ಗುಂದ ಗ್ರಾಮದಲ್ಲಿ ಅಜ್ಜಿಯ ಆರೈಕೆಯಲ್ಲಿ ಬೆಳೆದು ಇಲ್ಲಿಯೇ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿ, ಬೆಂಗಳೂರಿನಲ್ಲಿ ಪ್ರೌಢಶಿಕ್ಷಣವನ್ನು ಪಡೆದರು. ನಂತರ ಬನಾರಸ್ ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿಯನ್ನು ೧೯೪೦ರಲ್ಲಿ ಪಡೆದು ಕೊಂಡರು. ಗುರುಗಳು ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಮಠಕ್ಕೆ ಆಗಮಿಸಿ ಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡರು.

ಅಭಿವೃದ್ಧಿ ಕಾರ್ಯಗಳು: ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಮಠಕ್ಕೆ ಬಂದ ಸಂದರ್ಭದಲ್ಲಿ ಮಠದ ಕಟ್ಟಡವು ಪೂರ್ಣ ಶಿಥಿಲಗೊಂಡು ಜೀರ್ಣಾವಸ್ಥೆಯಲ್ಲಿತ್ತು. ಮಠದ ಪರಂಪರೆಗೆ ಸಂಬಂಧಿಸಿದ ದಾಖಲೆ ಪತ್ರಗಳಿಗೆ ಗೆದ್ದಲು ಹಿಡಿದು ಹಾಳಾಗಿದ್ದವು. ಇಂತಹ ಸ್ಥಿತಿಯಲ್ಲಿ ಮಠದ ಅಧಿಕಾರವನ್ನು ವಹಿಸಿಕೊಂಡ ಗುರುಗಳು ತಮ್ಮ ಅವಿರತ ಶ್ರಮದಿಂದ ಮಠವನ್ನು ಬೆಳೆಸತೊಡಗಿ ಭಕ್ತರ ಸಂಘಟನೆಯನ್ನು ಮಾಡತೊಡಗಿದರು. ಸಂಘಟನೆಗೊಂಡ ಸಮಾಜದ ನೆರವನ್ನು ಪಡೆದು ಹತ್ತುಗುಂಟೆ ಜಾಗದಲ್ಲಿ, ನಲವತ್ತೆಂಟು ಅಂಕಣದ ಮಠದ ಕಟ್ಟಡವನ್ನು ನಿರ್ಮಿಸಿದರು. ನಂತರ ಮಠದ ಪರಂಪರೆಯ ಗುರುಗಳ ಗದ್ದುಗೆಗಳನ್ನು ಪತ್ತೆ ಮಾಡಿ ನವೀಕರಿಸಿದರು. ಕರ್ತೃಗುರುಗಳಾದ ಶ್ರೀ ನಂಜುಂಡ ಸ್ವಾಮಿಗಳ ಗದ್ದುಗೆಯನ್ನು ನವೀಕರಿಸಿ ಮಂಟಪವನ್ನು ನಿರ್ಮಿಸಿದರು. ಗುರುಗಳ ವಾಸ್ತವ್ಯಕ್ಕೊಂದು ನಿವಾಸವನ್ನು ಈ ಸಂದರ್ಭದಲ್ಲಿ ನಿರ್ಮಿಸಲಾಗಿದೆ.

ಗುರುಗಳು ಮಠದ ಕಟ್ಟಡವನ್ನು ಅಭಿವೃದ್ಧಿಪಡಿಸಿದ್ದಲ್ಲದೆ ಆಸ್ತಿಯಿಲ್ಲದ ಈ ಮಠಕ್ಕೆ ಸುಮಾರು ಹನ್ನೆರಡು ಎಕರೆ ಜಮೀನನ್ನು ರೂಢಿಸಿ, ಐದುಎಕರೆಯಲ್ಲಿ ತೆಂಗನ್ನು ಬೆಳೆಸಿದರು. ನಾಲ್ಕು ಎಕರೆ ಖುಷ್ಕಿ ಭೂಮಿಯನ್ನು ಅಭಿವೃದ್ಧಿಪಡಿಸಿ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ.ಮಠವನ್ನು ಆರ್ಥಿಕವಾಗಿ ಸದೃಢಗೊಳಿಸಿದ ಶ್ರೀ ಚಂದ್ರಶೇಖರ ಸ್ವಾಮಿಗಳು, ಧರ್ಮ ಪ್ರಚಾರವನ್ನು ಕೈಗೊಂಡು ಈ ಪ್ರಾಂತ್ಯದಲ್ಲಿ ವೀರಶೈವ ಧರ್ಮ ಹೆಚ್ಚಾಗಿ ಬೆಳೆಯಲು ನೆರವಾದರು.

ಉತ್ತರಾಧಿಕಾರಿ ಆಯ್ಕೆ: ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಸರ್ವತೋಮುಖವಾಗಿ ಅಭಿವೃದ್ಧಿಪಡಿಸಿ, ತಮ್ಮ ಎಂಬತ್ತೆರಡನೆಯ ವಯಸ್ಸಿನಲ್ಲಿ ಶ್ರೀ ರುದ್ರಮುನೀಶ್ವರ ಸ್ವಾಮಿಗಳನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ಆಯ್ಕೆಮಾಡಿ ಕೊಂಡರು. ಶ್ರೀ ರುದ್ರಮುನೀಶ್ವರ ಸ್ವಾಮಿಗಳು ಅರಸೀಕೆರೆ ತಾಲ್ಲೂಕಿನ ಸಿದ್ಧರಹಳ್ಳಿಯ ಶ್ರೀ ಮಹೇಶ್ವರಯ್ಯ ಮತ್ತು ಶ್ರೀಮತಿ ಗೌರಮ್ಮನವರ ಪುತ್ರರಾಗಿ ೧೯೭೭ರಲ್ಲಿ ಜನಿಸಿದರು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಸಿದ್ಧರಹಳ್ಳಿಯಲ್ಲಿ ಮುಗಿಸಿ ಸಿದ್ಧಗಂಗೆಯಲ್ಲಿ ಪದವಿಶಿಕ್ಷಣವನ್ನು ಪಡೆದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಮಠಕ್ಕೆ ಆಗಮಿಸಿದ ಗುರುಗಳು, ಹಿರಿಯ ಗುರುಗಳ ಮಾರ್ಗದರ್ಶನದಲ್ಲಿ ಮಠದ ಧಾರ್ಮಿಕ ಚಟುವಟಿಕೆಗಳನ್ನು ಮುನ್ನಡೆಸಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕೆಲಸಗಳು: ಪರಂಪರಾಗತ ಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಗದ್ದುಗೆಗಳಿಗೆ ನಿತ್ಯ ಪೂಜೆ ಮಾಡುವುದು ದೈನಂದಿನ ಧಾರ್ಮಿಕ ಕಾರ್ಯವಾಗಿದೆ. ಅಲ್ಲದೆ ಭಕ್ತರ ಮನೆಗಳಲ್ಲಿ ನಡೆಯುವ ಧಾರ್ಮಿಕ ಚಟುವಟಿಕೆಗಳಲ್ಲಿ ಪಾಲ್ಗೊಂಡು ಬಿನ್ನಹ ತೀರಿಸುವುದು ಒಂದು ಸಂಪ್ರದಾಯದ ಧಾರ್ಮಿಕ ಕಾರ್ಯವಾಗಿದೆ. ವರ್ಷಕ್ಕೆ ಎರಡು ಬಾರಿ ವಿಶೇಷ ಸಮಾರಂಭಗಳನ್ನು ಏರ್ಪಡಿಸಿ ಶರಣತತ್ತ್ವ ಬೋಧನೆ, ವಿವಿಧ ವಿದ್ವಾಂಸರಿಂದ ಉಪನ್ಯಾಸ ಕಾರ್ಯಕ್ರಮಗಳು ಹಾಗೂ ವೀರಶೈವರಿಗೆ ಶಿವದೀಕ್ಷೆ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಭಕ್ತರ ಮನೆಗಳಲ್ಲಿ ನಡೆಯುವ ಆರಾಧನಾ ಕಾರ್ಯಕ್ರಮಗಳಿಗೆ ಗುರುಗಳನ್ನು ಆಹ್ವಾನಿಸಿದರೆ ಭಕ್ತರು ಸಂಪ್ರದಾಯದ ಪ್ರಕಾರ ಒಂದು ಜೊತೆ ಪಾದುಕೆ, ವಿಭೂತಿಗಟ್ಟಿ, ಪೇಟ ರುಮಾಲು ಸೇರಿದಂತೆ ಒಂದು ಜೊತೆ ವಸ್ತ್ರ ಹಾಗೂ ಒಂದು ಛತ್ರಿಯನ್ನು ನೀಡುತ್ತಾರೆ. ನಿತ್ಯ ಮಠಕ್ಕೆ ಬರುವ ಭಕ್ತರಿಗೆ ಅನ್ನದಾಸೋಹವನ್ನು ನಡೆಸಲಾಗುತ್ತಿದೆ. ಮಠದಲ್ಲಿ ಶೈಕ್ಷಣಿಕ ಸಂಸ್ಥೆಗಳನ್ನು ಪ್ರಾರಂಭಿಸದಿದ್ದರೂ ಬಡ ಮಕ್ಕಳನ್ನು ಗುರುತಿಸಿ ಮೈಸೂರಿನ ಸುತ್ತೂರು ಮಠ, ಚಿತ್ರದುರ್ಗದ ಬೃಹನ್ಮಠ ಮತ್ತು ಸಿದ್ಧಗಂಗಾ ಮಠಗಳಿಗೆ ವಿದ್ಯಾರ್ಥಿಗಳನ್ನು ಕಳುಹಿಸಿಕೊಡಲಾಗುತ್ತದೆ. ಅಲ್ಲದೆ ಬಡ ವಿದ್ಯಾರ್ಥಿಗಳ ಕಲಿಕೆಗೆ ಪೂರ್ಣ ನೆರವನ್ನು ನೀಡಿ ಪ್ರೋತ್ಸಾಹ ನೀಡುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಚಂದ್ರಶೇಖರ ಸ್ವಾಮಿಗಳು, ಶ್ರೀ ವಿರಕ್ತಮಠ, ಮಾಡಾಳು, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ.

ಮಾರಗೊಂಡನಹಳ್ಳಿ

ಅರಸೀಕೆರೆ ತಾಲ್ಲೂಕಿನ ಮಾರಗೊಂಡನಹಳ್ಳಿಯು ತಾಲ್ಲೂಕು ಕೇಂದ್ರದಿಂದ ಪಶ್ಚಿಮ ಭಾಗಕ್ಕೆ ಇಪ್ಪತ್ತೆರಡು ಕಿ.ಮೀ. ದೂರದಲ್ಲಿದೆ. ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಮಾರಗೊಂಡನಹಳ್ಳಿ ಗ್ರಾಮದ ಪೂರ್ವಭಾಗದಲ್ಲಿ ಸ್ಥಾಪನೆಯಾಗಿರುವ ವಿರಕ್ತಮಠವು ಇಪ್ಪತ್ತನೆಯ ಶತಮಾನದ ಮಧ್ಯ ಭಾಗದಲ್ಲಿ ಸ್ಥಾಪನೆಗೊಂಡು, ವೀರಶೈವ ಧರ್ಮವನ್ನು ಬೆಳೆಸಿ ಬಸವಾದಿ ಪ್ರಮಥರ ತತ್ತ್ವಗಳನ್ನು ಪ್ರಚಾರಪಡಿಸುತ್ತಿದೆ.

ಮಠ ಸ್ಥಾಪನೆ: ಈ ಗ್ರಾಮದಲ್ಲಿ ವೀರಶೈವ ಧರ್ಮದ ಆಚರಣೆಗಳಿಗೆ ಗುರುಗಳ ಆವಶ್ಯಕತೆಯನ್ನು ಅರಿತು ಇಲ್ಲಿನ ಗ್ರಾಮಸ್ಥರು, ಹಾಸನ ಸಮೀಪದ ಮುಕುಂದೂರು ಬೆಟ್ಟದಲ್ಲಿ ಅನುಷ್ಠಾನಗೊಂಡಿದ್ದ ಶ್ರೀ ಬಸವಲಿಂಗ ಶಿವಯೋಗಿಗಳನ್ನು ಮಾರಗೊಂಡನ ಹಳ್ಳಿಗೆ ಕರೆತರುತ್ತಾರೆ. ಗುರುಗಳನ್ನು ಕರೆತಂದ ಗ್ರಾಮಸ್ಥರು ಮಠವನ್ನು ಸ್ಥಾಪನೆ ಮಾಡಿ ಗುರುಗಳನ್ನು ನೆಲೆಗೊಳಿಸಿದ್ದಾರೆ.

ಶ್ರೀ ಬಸವಲಿಂಗ ಶಿವಯೋಗಿಗಳು ಸಿದ್ಧರಾಮ ದೇವರ ಪಾಳ್ಯದಲ್ಲಿ ಜನಿಸಿ, ಚಿಕ್ಕ ವಯಸ್ಸಿನಲ್ಲಿಯೇ ತಮ್ಮ ತಂದೆ ತಾಯಿಗಳನ್ನು ಕಳೆದುಕೊಂಡು ಬದುಕಿಗಾಗಿ ಹೋರಾಟವನ್ನು ನಡೆಸಿ, ಬೇರೆಯವರ ಮನೆಯಲ್ಲಿ ಜೀತವನ್ನು ಮಾಡಿಕೊಂಡು ಬದುಕನ್ನು ಸಾಗಿಸಿ, ನಂತರ ಗೃಹಸ್ಥಾಶ್ರಮವನ್ನು ಸೇರಿದರು. ಅನೇಕ ವರ್ಷಗಳ ಕಾಲ ಸಂಸಾರಿಗಳಾಗಿ ಆಧ್ಯಾತ್ಮ ಚಿಂತನೆಯಲ್ಲಿ ಮುಳುಗಿ ನಂತರ ಸಂಸಾರವನ್ನು ತ್ಯಜಿಸಿ ಸಂನ್ಯಾಸವನ್ನು ಸ್ವೀಕರಿಸಿದರು. ಹಾಸನ ಸಮೀಪದ ಮುಕುಂದೂರು ಬೆಟ್ಟದಲ್ಲಿ ದೀರ್ಘ ಅನುಷ್ಠಾನವನ್ನು ಕೈಗೊಂಡ ಶ್ರೀ ಬಸವಲಿಂಗ ಶಿವಯೋಗಿಗಳು ಕೆಲವೇ ವರ್ಷಗಳಲ್ಲಿ ತಮ್ಮ ಧಾರ್ಮಿಕ ಆಚರಣೆ ಗಳಿಂದ ಹೆಚ್ಚು ಜನಪ್ರಿಯಗೊಂಡರು. ತಾವು ನೆಲೆ ನಿಂತ ಮುಕುಂದೂರು ಬೆಟ್ಟದಲ್ಲಿ ನೂತನ ಮಠವನ್ನು ಪ್ರಾರಂಭಿಸಿ, ಧಾರ್ಮಿಕ ಚಟುವಟಿಕೆಗಳನ್ನು ಯಶಸ್ವಿಯಾಗಿ ನಡೆಸುತ್ತಿದ್ದರು. ಈ ಸಂದರ್ಭದಲ್ಲಿಯೇ ಭಕ್ತರ ಅಪೇಕ್ಷೆಯಂತೆ ಮಾರಗೊಂಡನಹಳ್ಳಿಗೆ ಬಂದು ಸ್ಥಾಪನೆಗೊಂಡ ಮಠದಲ್ಲಿ ನೆಲೆನಿಂತ ಮೇಲೆ ಈ ಗ್ರಾಮದ ಭಕ್ತರನ್ನು ಮಠಕ್ಕೆ ಕರೆಸಿಕೊಂಡು, ಗ್ರಾಮದಲ್ಲಿ ಧಾರ್ಮಿಕ ಚಟುವಟಿಕೆಗಳನ್ನು ನಡೆಸಲು ಕಾರ್ಯ ಯೋಜನೆಯನ್ನು ಕೈಗೊಂಡರು.

ಚಟುವಟಿಕೆಗಳು: ಶ್ರೀ ಬಸವಲಿಂಗ ಶಿವಯೋಗಿಗಳು ಭಕ್ತರನ್ನು ಸಂಘಟಿಸಿದ ಮೇಲೆ ಮಠದಲ್ಲಿ ನಿತ್ಯ ಧಾರ್ಮಿಕ ಚಟುವಟಿಕೆಗಳು ನಡೆಯುವಂತೆ ಮಾಡಿದರು. ಪ್ರತಿದಿನ ಸಂಜೆ ಧಾರ್ಮಿಕ ಬೋಧನೆಯನ್ನು ನಡೆಸಿ ಗ್ರಾಮಸ್ಥರ ಬದುಕಿನಲ್ಲಿ ಧಾರ್ಮಿಕ ಭಾವನೆಗಳು ಮೂಡುವಂತೆ ಮಾಡಿ ಧರ್ಮಸಂಸ್ಕಾರವನ್ನು ನೀಡಿದರು. ಗುರುವಾದರೂ ಕಾಯಕದಿಂದಲೇ ಬದುಕಬೇಕು ಎಂಬುದನ್ನು ಮನಗಂಡು, 'ಕಾಯಕವೇ ಕೈಲಾಸ' ಎಂಬ ತತ್ತ್ವಕ್ಕನುಗುಣವಾಗಿ ತಮ್ಮ ಬದುಕನ್ನು ರೂಢಿಸಿಕೊಂಡಿದ್ದರು. ಗುರುಗಳು ಈ ಪ್ರಾಂತ್ಯದಲ್ಲಿ ಸಂಚರಿಸಿ ಭಕ್ತರ ಮನೆಗಳಲ್ಲಿ ನಡೆಯುವ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಂಡು ಆಶೀರ್ವದಿಸುತ್ತಿದ್ದರು. ಅಲ್ಲದೆ ವಿಭೂತಿ, ರುದ್ರಾಕ್ಷಿ ಮತ್ತು ಶಿವಪೂಜಾ ವಿಧಾನಗಳನ್ನು ತಿಳಿಸಿ ಭಕ್ತರಲ್ಲಿ ಧರ್ಮಜಾಗೃತಿಯನ್ನು ಉಂಟು ಮಾಡಿ, ಕೇವಲ ಕೆಲವೇ ವರ್ಷಗಳಲ್ಲಿ ಮಠವನ್ನು ಅಭಿವೃದ್ಧಿಪಡಿಸಿ ೧೯೬೭ ರಲ್ಲಿ ಲಿಂಗೈಕ್ಯರಾಗಿರುತ್ತಾರೆ.

ಶ್ರೀ ಬಸವಲಿಂಗ ಶಿವಯೋಗಿಗಳು ಲಿಂಗೈಕ್ಯರಾದ ಮೇಲೆ ಮಠದಲ್ಲಿ ಮಠಾಧೀಶ್ವರರು ಯಾರೂ ಇಲ್ಲದೆ ಖಾಲಿ ಉಳಿಯುತ್ತದೆ. ಗ್ರಾಮದ ಧಾರ್ಮಿಕ ಚಟುವಟಿಕೆಗಳ ಅನುಷ್ಠಾನಕ್ಕಾಗಿ ಪ್ರಾರಂಭಗೊಂಡ ಮಠವು ಇಪ್ಪತ್ತೆರಡು ವರ್ಷಗಳ ಕಾಲ ಹಾಗೆ ಖಾಲಿ ಉಳಿದಿರುತ್ತದೆ. ಈ ಸಂದರ್ಭದಲ್ಲಿ ಕರ್ತೃಗುರುಗಳ ಗದ್ದುಗೆಗೆ ನಿತ್ಯಪೂಜೆ ನಡೆಯುತ್ತಿದ್ದುದನ್ನು ಬಿಟ್ಟರೆ, ಬೇರೆ ಯಾವ ಧಾರ್ಮಿಕ ಚಟುವಟಿಕೆಗಳೂ ನಡೆಯದೆ ಮಠದ ಕಟ್ಟಡ ಶಿಥಿಲಾವಸ್ಥೆಯನ್ನು ತಲುಪಿತು. ತಮ್ಮ ಕಣ್ಣ ಮುಂದೆಯೇ ಮಠದ ಕಟ್ಟಡವು ಶಿಥಿಲಗೊಳ್ಳುತ್ತಿರುವುದನ್ನು ನೋಡಿದ ಗ್ರಾಮಸ್ಥರು ಗುರುಗಳನ್ನು ನೇಮಿಸುವ ಬಗ್ಗೆ ತೀರ್ಮಾನವನ್ನು ಕೈಗೊಂಡು, ೧೯೮೮ರಲ್ಲಿ ಶ್ರೀ ಬಸವಲಿಂಗ ಸ್ವಾಮಿಗಳಿಗೆ ಪಟ್ಟಾಧಿಕಾರವನ್ನು ಮಾಡುತ್ತಾರೆ.

ಪರಂಪರೆ: ಶ್ರೀ ಬಸವಲಿಂಗ ಶಿವಯೋಗಿಗಳ ನಂತರ ಎರಡನೆಯ ಗುರುಗಳಾಗಿ ಅಧಿಕಾರವನ್ನು ವಹಿಸಿಕೊಂಡ ಶ್ರೀ ಬಸವಲಿಂಗ

ಸ್ವಾಮಿಗಳು ಮಾರಗೊಂಡನಹಳ್ಳಿಯ ಶ್ರೀ ಗಂಗಾಧರಪ್ಪ ಮತ್ತು ಶ್ರೀಮತಿ ಮಾದಮ್ಮನವರ ಪುತ್ರರಾಗಿ ೧೯೬೦ರಲ್ಲಿ ಜನಿಸಿದರು. ಕೇವಲ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮಾಡಿ ವ್ಯವಸಾಯ ವೃತ್ತಿಯನ್ನು ಪ್ರಾರಂಭಿಸಿದರು. ವೃತ್ತಿಯ ಜತೆಯಲ್ಲಿಯೇ ಆಧ್ಯಾತ್ಮ ಚಿಂತನೆಯನ್ನು ಮೈಗೂಡಿಸಿಕೊಂಡಿದ್ದ ಶ್ರೀ ಬಸವಲಿಂಗ ಸ್ವಾಮಿಗಳನ್ನು ವಿರಕ್ತಮಠಕ್ಕೆ ಉತ್ತರಾಧಿಕಾರಿಯನ್ನಾಗಿ ಆಯ್ಕೆಮಾಡಿ ಮಠದ ಅಧಿಕಾರವನ್ನು ನೀಡಿದರು.

ಅಭಿವೃದ್ಧಿ ಕಾರ್ಯಗಳು: ಶ್ರೀ ಬಸವಲಿಂಗ ಶಿವಯೋಗಿಗಳು ಅಧಿಕಾರವನ್ನು ವಹಿಸಿಕೊಂಡ ಸಂದರ್ಭದಲ್ಲಿ ಮಠದ ಕಟ್ಟಡವನ್ನು ಬಿಟ್ಟರೆ ಬೇರೆಯಾವುದೇ ಆಸ್ತಿಯೂ ಮಠಕ್ಕಿರಲಿಲ್ಲ. ಭಿಕ್ಷಾಟನೆ ಮಾಡಿ ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿದ್ದ ಗುರುಗಳು ಭಕ್ತರ ನೆರವನ್ನು ಪಡೆದು ಮಠಕ್ಕೆ ವಿಶಾಲವಾದ ಕಟ್ಟಡವನ್ನು ನಿರ್ಮಿಸಿದ್ದರು. ನಂತರ ಬಂದ ಶ್ರೀ ಬಸವಲಿಂಗ ಸ್ವಾಮಿಗಳೂ ಸಹ ಭಿಕ್ಷಾಟನೆಯಿಂದ ಮಠದ ಧಾರ್ಮಿಕ ಚಟುವಟಿಕೆಗಳನ್ನು ಮುನ್ನಡೆಸಿಕೊಂಡು ಬರುತ್ತಾ, ಮಠದ ಮುಂಭಾಗದಲ್ಲಿದ್ದ ಮೂರುವರೆ ಎಕರೆ ಭೂಮಿಯನ್ನು ಖರೀದಿಸಿ ಮಠದ ಆಸ್ತಿಯನ್ನಾಗಿ ಮಾಡಿದರು. ಸಂಪಾದಿಸಿದ ಜಮೀನಿನಲ್ಲಿ ತೆಂಗಿನ ಗಿಡಗಳನ್ನು ನೆಟ್ಟು ತೋಟವನ್ನು ಬೆಳೆಸಿದರು. ಅಲ್ಲದೆ ಕರ್ತೃಗುರುಗಳ ಗದ್ದುಗೆಗೆ ಮಂಟಪವನ್ನು ನಿರ್ಮಿಸಿ ಮಠದ ಕಟ್ಟಡವನ್ನು ನವೀಕರಿಸಿದರು.

ಧಾರ್ಮಿಕ ಕಾರ್ಯಗಳು: ಮಠದ ಕರ್ತೃಗದ್ದುಗೆಗೆ ನಿತ್ಯ ಪೂಜೆ, ಪ್ರತಿ ಹುಣ್ಣಿಮೆಯಲ್ಲಿ ಧಾರ್ಮಿಕ ಸಭೆಯನ್ನು ನಡೆಸಿ ಬಸವತತ್ತ್ವದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಿ ಧಾರ್ಮಿಕ ಪ್ರಚಾರವನ್ನು ಮಾಡಲಾಗುತ್ತಿದೆ. ಗುರುಗಳು ಭಕ್ತರ ಮನೆಗಳಲ್ಲಿ ನಡೆಯುವ ಧಾರ್ಮಿಕ ಚಟುವಟಿಕೆಗಳಲ್ಲಿ ಪಾಲ್ಗೊಂಡು ಬಿನ್ನಹ ತೀರಿಸುತ್ತಾ ಭಕ್ತರಿಗೆ ಮಾರ್ಗದರ್ಶನವನ್ನು ನೀಡುತ್ತಿದ್ದಾರೆ. ಚೈತ್ರಮಾಸದ ಪ್ರಾರಂಭದಲ್ಲಿ ಹಿರಿಯ ಗುರುಗಳ ಆರಾಧನೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಮಠಕ್ಕೆ ಬಂದಂತಹ ಭಕ್ತರಿಗೆಲ್ಲಾ ದಾಸೋಹ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತದೆ. ಅಲ್ಲದೆ ಪ್ರತಿ ದಿನ ಮಠಕ್ಕೆ ಭೇಟಿ ನೀಡುವ ಭಕ್ತರಿಗೆ ನಿತ್ಯ ಅನ್ನ ದಾಸೋಹವನ್ನು ಕಲ್ಪಿಸಲಾಗುತ್ತಿದೆ. ಹಿರಿಯ ಗುರುಗಳು ಉಪಯೋಗಿಸುತ್ತಿದ್ದ ಜೋಳಿಗೆ ಹಾಗೂ ಹುಲಿ ಚರ್ಮವನ್ನು ಕರ್ತೃಗುರುಗಳ ಗದ್ದುಗೆಯ ಸಮೀಪದಲ್ಲಿ ಇಟ್ಟು ಪೂಜೆ ಮಾಡಲಾಗುತ್ತಿದೆ.

ವಿಳಾಸ:ಶ್ರೀ ಮ.ನಿ.ಪ್ರ.ಬಸವಲಿಂಗಸ್ವಾಮಿಗಳು, ಶ್ರೀವಿರಕ್ತಮಠ, ಮಾರಗೊಂಡನಹಳ್ಳಿ,ಅರಕೆರೆಅಂಚೆ, ಅರಸೀಕೆರೆ ತಾ, ಹಾಸನಜಿಲ್ಲೆ.

ಹಾರನಹಳ್ಳಿ

ಅರಸೀಕೆರೆ ತಾಲ್ಲೂಕಿನ ಹಾರನಹಳ್ಳಿಯು ಒಂದು ಐತಿಹಾಸಿಕ ಸ್ಥಳ. ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹತ್ತು ಕಿ.ಮೀ. ದೂರದಲ್ಲಿದೆ.ಇಲ್ಲಿ ಪುರಾತನ ಕಾಲದ ಕೋಡಿಮಠವು ಅಸ್ತಿತ್ವದಲ್ಲಿದೆ.

ಕೋಡಿಮಠ: ಹಾರನಹಳ್ಳಿ ಗ್ರಾಮದ ದಕ್ಷಿಣ ಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಕೋಡಿಮಠವು ಪುರಾತನ ಇತಿಹಾಸವನ್ನು ಹೊಂದಿದೆ. ಕೆರೆಯ ಕೋಡಿಯಲ್ಲಿ ಸ್ಥಾಪನೆಯಾಗಿರುವ ಕಾರಣ ಈ ಮಠಕ್ಕೆ ಕೋಡಿಮಠ ಎಂಬ ಹೆಸರು ಬಂದಿದೆ.

ಮಠ ಸ್ಥಾಪನೆ: ಒಂದು ಸಾವಿರ ವರ್ಷಗಳ ಹಿಂದೆ ಈ ಮಠವು ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತದೆ. ಉತ್ತರದ ಕಡೆಯಿಂದ ಶ್ರೀ ನೀಲಕಂಠ ಸ್ವಾಮಿಗಳು ಎಂಬುವರು ಲೋಕ ಸಂಚಾರ ಕೈಗೊಂಡು ಇಲ್ಲಿಗೆ ಸಮೀಪದ ಮಹದೇಶ್ವರ ಬೆಟ್ಟದಲ್ಲಿ ಅನುಷ್ಠಾನ ಕೈಗೊಂಡಿದ್ದರು. ದಟ್ಟ ಅಡವಿಯಿಂದ ಆವೃತ್ತವಾಗಿದ್ದ ಈ ಪ್ರದೇಶದಲ್ಲಿ ದನ ಕಾಯುವ ಹುಡುಗರನ್ನು ಬಿಟ್ಟರೆ ಉಳಿದ ಯಾರೂ ಈ ಕಡೆ ಬರುತ್ತಿರಲಿಲ್ಲ. ಒಮ್ಮೆ ದನ ಕಾಯುವ ಹುಡುಗರಿಗೆ ಗುರುಗಳ ದರ್ಶನವಾಗಿ ಇಲ್ಲಿನ ಪಾಳೆಗಾರರಿಗೆ ಈ ವಿಷಯ ಮುಟ್ಟುತ್ತದೆ. ಪಾಳೆಗಾರನು ತನ್ನ ಪರಿವಾರ ಸಮೇತ ಗುರುಗಳಲ್ಲಿಗೆ ಬಂದು ಗುರುಗಳಿಗೆ ಪಾದಪೂಜೆ ಮಾಡಿ, ಗೌರವ ಸಲ್ಲಿಸಿ ತನ್ನ ಸಂತಾನ ಪ್ರಾಪ್ತಿಗೆ ಹರಕೆ ಮಾಡಿಕೊಳ್ಳುತ್ತಾನೆ. ಆಗ ಗುರುಗಳು ನಿನಗೆ ಪುತ್ರ ಸಂತಾನದ ಭಾಗ್ಯವಿಲ್ಲ ಆದರೆ ಹೆಣ್ಣು ಮಗು ಜನಿಸುತ್ತದೆ ಎಂದು ದಂಪತಿಗಳಿಗೆ ಆಶೀರ್ವದಿಸಿ ಕಳುಹಿಸಿಕೊಟ್ಟರು.

ಗುರುಗಳ ಹರಕೆಯಂತೆ ಪಾಳೆಗಾರ ದಂಪತಿಗಳಿಗೆ ಹೆಣ್ಣು ಮಗುವಿನ ಜನನವಾಗುತ್ತದೆ. ಆಗ ಸಂತೋಷಗೊಂಡು ಶ್ರೀ ನೀಲಕಂಠ ಸ್ವಾಮಿಗಳ ಆಶೀರ್ವಾದದಿಂದ ಜನಿಸಿದ ಕಾರಣ ಮಗುವಿಗೆ ನೀಲಮ್ಮ ಎಂದು ಹೆಸರಿಟ್ಟು, ಗುರುಗಳಿಗೆ ಈ

ಸಂತೋಷದ ವಿಚಾರವನ್ನು ಮುಟ್ಟಿಸಿ ಗುರುಗಳನ್ನು ಪಾದಪೂಜೆ ನಂತರ ಉತ್ಸವದೊಂದಿಗೆ ಅರಮನೆಗೆ ಆಹ್ವಾನಿಸಿಕೊಂಡು ಸತ್ಕರಿಸುತ್ತಾನೆ. ಈ ಸಂದರ್ಭದಲ್ಲಿ ಗುರುಗಳಿಗಾಗಿ ವೀರಶೈವಮಠವನ್ನು ಸ್ಥಾಪಿಸಲು ಜಾಗವನ್ನು ನೀಡುತ್ತಾನೆ. ಈ ಜಾಗದಲ್ಲಿ ಗುರುಗಳು ಧಾರ್ಮಿಕ ಬೋಧನೆಯನ್ನು ಕೈಗೊಂಡರು. ಹನ್ನೆರಡು ವರ್ಷಗಳ ನಂತರ ನೆಲಮಾಳಿಗೆಯನ್ನು ಸ್ಥಾಪಿಸಿಕೊಂಡ ಗುರುಗಳು ಇಂದು ನಮ್ಮ ಅಂತ್ಯಕಾಲ. ನಾವು ಈ ನೆಲಮಾಳಿಗೆಯಲ್ಲಿ ಸಮಾಧಿ ಹೊಂದುತ್ತೇವೆ ಎಂದು ಹೇಳಿ ನೆಲಮಾಳಿಗೆಯನ್ನು ಪ್ರವೇಶಿಸಿದರು. ಆಗ ಹನ್ನೆರಡು ವರ್ಷದ ಬಾಲಕಿಯಾಗಿದ್ದ ನೀಲಮ್ಮ ನೀವಿಲ್ಲದ ಮೇಲೆ ನನ್ನ ಬದುಕಿಗೆ ಅರ್ಥವಿಲ್ಲ. ನಿಮ್ಮ ಜತೆಯಲ್ಲಿ ನಾನೂ ಬರುವೆನೆಂದು ಹಠ ಹಿಡಿಯುತ್ತಾಳೆ. ಆಗ ಗುರುಗಳು ನೀಲಮ್ಮಳನ್ನು ನೆಲಮಾಳಿಗೆಗೆ ಕಳುಹಿಸಿ ನೀರಿನಲ್ಲಿ ದೀಪ ಹಚ್ಚಿ ತೆಂಗಿನಕಾಯಿ ಮತ್ತು ನಿಂಬೆಹಣ್ಣನ್ನು ಹೋಳು ಮಾಡಿ ನೆಲಮಾಳಿಗೆಯ ಬಾಗಿಲಲ್ಲಿ ಇಟ್ಟು ಭಕ್ತರನ್ನು ಕರೆಸಿ, ದೀಪ ನಂದಿದಾಗ ಹಾಗೂ ಹೋಳು ಮಾಡಿಟ್ಟ ನಿಂಬೆಹಣ್ಣು ತೆಂಗಿನಕಾಯಿ ಎಂದು ಕೂಡುತ್ತವೆಯೋ ಆ ದಿನ ನೆಲಮಾಳಿಗೆಯ ಬಾಗಿಲನ್ನು ತೆಗೆಯಬೇಕೆಂದು ಹೇಳಿ ಲೋಕ ಸಂಚಾರಕ್ಕೆ ಹೋಗುತ್ತಾರೆ. ಗುರುಗಳ ಅಪ್ಪಣೆಯಂತೆ ನಲವತ್ತೊಂದನೆಯ ದಿನಕ್ಕೆ ದೀಪ ನಂದಿತು. ನಿಂಬೆಹಣ್ಣು ಮತ್ತು ತೆಂಗಿನಕಾಯಿ ಹೋಳುಗಳು ಒಂದುಗೂಡಿದವು. ಆಗ ಭಕ್ತರು ನೆಲಮಾಳಿಗೆಯ ಬಾಗಿಲನ್ನು ತೆಗೆದು ನೋಡಿದಾಗ ಹೂವಿನ ರಾಶಿ ಗೋಚರವಾಯಿತಂತೆ. ಈ ಘಟನೆ ನಡೆದ ಮೂರು ವರ್ಷಗಳ ತರುವಾಯ ಲೋಕಸಂಚಾರಕ್ಕೆ ಹೋಗಿದ್ದ ಗುರುಗಳು ಆಗಮಿಸಿದರು. ಈ ಘಟನೆಗಳನ್ನು ಕೇಳಿ ನೀಲಮ್ಮಳ ಪವಾಡದ ಬಗ್ಗೆ ಭಕ್ತರಿಗೆ ತಿಳಿಯ ಹೇಳಿ ಇದೇ ನೆಲಮಾಳಿಗೆಯಲ್ಲಿ ಹುಣ್ಣಿಮೆಯಾದ ಮೂರು ದಿನಕ್ಕೆ ಶುಕ್ರವಾರದಂದು ಸಮಾಧಿ ಹೊಂದುತ್ತಾರೆ. ಈ ಹಿನ್ನೆಲೆಯಲ್ಲಿ ಸ್ಥಾಪನೆಗೊಂಡ ಮಠವು ಇಂದು ದೇಶವ್ಯಾಪ್ತಿ ಪ್ರಚಾರ ಪಡೆದು ವೀರಶೈವ ಧರ್ಮವನ್ನು ಪ್ರಚಾರಪಡಿಸುವಲ್ಲಿ ಯಶಸ್ವಿಯಾಗಿದೆ.

ಪರಂಪರೆ: ಶ್ರೀ ಮ.ನಿ.ಪ್ರ. ನೀಲಮ್ಮಜ್ಜಯ್ಯ
ಶ್ರೀ ಮ.ನಿ.ಪ್ರ. ದೊಡ್ಡ ನೀಲಲೋಚನಸ್ವಾಮಿಗಳು
ಶ್ರೀ ಮ.ನಿ.ಪ್ರ. ಮರಿದೇವಸ್ವಾ ಮಿಗಳು
ಶ್ರೀ ಮ.ನಿ.ಪ್ರ. ಶಿವಲಿಂಗಸ್ವಾಮಿಗಳು
ಶ್ರೀ ಮ.ನಿ.ಪ್ರ. ಗುರುಲಿಂಗಸ್ವಾಮಿಗಳು
ಶ್ರೀ ಮ.ನಿ.ಪ್ರ. ನೀಲಲೋಚನಸ್ವಾಮಿಗಳು
ಶ್ರೀ ಮ.ನಿ.ಪ್ರ. ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮಿಗಳು

ಈ ರೀತಿ ಮಠದ ಪರಂಪರೆಯ ಕೆಲವು ಗುರುಗಳ ಹೆಸರನ್ನು ಇಲ್ಲಿ ದಾಖಲಿಸಬಹುದಾಗಿದೆ. ಮಠದ ಕರ್ತೃ ಗುರುಗಳಾದ ಶ್ರೀ ನಿಲಮ್ಮಜ್ಜಯ್ಯನವರು ಇಲ್ಲಿ ಮಠವನ್ನು ಸ್ಥಾಪಿಸಿದ ಮೇಲೆ ಅನೇಕ ಗುರುಗಳು ಮಠದ ಪರಂಪರೆಯನ್ನು ಬೆಳೆಸಿದರಾದರು, ಅವರುಗಳ ಬಗ್ಗೆ ಮಾಹಿತಿಯನ್ನು ದಾಖಲಿಸಿಡದ ಕಾರಣ ಪರಂಪರೆಯ ಇತಿಹಾಸ ಮರೆಯಾಗಿದೆ. ಹದಿನೇಳನೆಯ ಶತಮಾನದಲ್ಲಿ ಪೀಠವನ್ನು ಅಲಂಕರಿಸಿದ ಶ್ರೀ ದೊಡ್ಡ ನೀಲಲೋಚನ ಸ್ವಾಮಿಗಳು ಮಹಾ ತಪಸ್ವಿಗಳಾಗಿ ಹೆಸರು ಪಡೆದಿದ್ದರು. ಇವರ ತಪೋಶಕ್ತಿಗೆ ಮೈಸೂರಿನ ದೊರೆ ಹೈದರಾಲಿಯು ಮನಸೋತು ಗುರುಗಳ ಸನ್ನಿಧಿಗೆ ಆಗಮಿಸಿ 'ಜಂಗಮಜಿತ್ ಫಕೀರ್' ಎಂಬ ಬಿರುದನ್ನು ನೀಡಿ, ಕಾಣಿಕೆಗಳನ್ನು ಅರ್ಪಿಸಿ ಗೌರವಿಸುತ್ತಾನೆ. ಅಂದು ಹೈದರಾಲಿಯು ನೀಡಿದ ಕಾಣಿಕೆಗಳು ಇಂದಿಗೂ ಮಠದಲ್ಲಿ ಸ್ಮಾರಕಗಳಾಗಿ ಇವೆ. ಶ್ರೀ ದೊಡ್ಡ ನೀಲಲೋಚನ ಸ್ವಾಮಿಗಳು ತಮ್ಮ ಉದಾತ್ತ ಧ್ಯೇಯ ಧೋರಣೆಗಳಿಂದ ಸಮಸ್ತ ಸಮಾಜ ಜಾತಿ, ಮತ, ಪಂಥವೆನ್ನದೆ ಸಮಾನತೆಯ ನೆರಳಿನಲ್ಲಿ ಬದುಕುವಂತೆ ಮಾಡಿದ್ದರು. ಇವರ ನಂತರ ಅನೇಕ ಗುರುಗಳು ಅಧಿಕಾರ ನಡೆಸಿದ ಬಗ್ಗೆ ವಿವರ ದೊರೆತರು ಸ್ಪಷ್ಟ ಆಧಾರಗಳು ಲಭ್ಯವಿಲ್ಲ. ಲಭ್ಯವಿರುವ ಆಧಾರದನ್ವಯ ಶ್ರೀ ಮರಿದೇವ ಸ್ವಾಮಿಗಳು ಅಧಿಕಾರ ನಡೆಸಿದ್ದಾರೆ. ಇವರ ಗದ್ದುಗೆಯು ತರೀಕೆರೆ ತಾಲ್ಲೂಕಿನ ಹುಣಸಘಟ್ಟದಲ್ಲಿ ನಿರ್ಮಾಣವಾಗಿದೆ. ಶ್ರೀ ಮರಿದೇವ ಸ್ವಾಮಿಗಳ ನಂತರ ಇವರ ಶಿಷ್ಯರಾಗಿ ಹತ್ತೊಂಬತ್ತನೆಯ ಶತಮಾನದಲ್ಲಿ ಶ್ರೀ ಶಿವಲಿಂಗ ಸ್ವಾಮಿಗಳು ಅಧಿಕಾರಕ್ಕೆ ಬಂದರು. ಇವರು ತಪೋನಿಷ್ಠರಾಗಿ, ಮಹಾ ಮೇಧಾವಿಗಳಾಗಿ ಮಠದ ಇತಿಹಾಸದಲ್ಲಿ ಕಂಗೊಳಿಸಿದ್ದಾರೆ. ಇವರು ಗದಗ ಜಿಲ್ಲೆಯ ಮುಳಗುಂದ ಗ್ರಾಮದ ಶ್ರೀ ಲಿಂಗಾರ್ಯ ಮತ್ತು

ಶ್ರೀಮತಿ ಸಿದ್ದಮ್ಮಾಂಬೆಯವರ ಪುತ್ರರಾಗಿ ಜನಿಸಿ, ನಿರಾಭಾರಿ ಜಂಗಮ ದೀಕ್ಷೆಯನ್ನು ಶ್ರೀ ಮರಿದೇವ ಸ್ವಾಮಿಗಳಿಂದ ಪಡೆದು, ಶ್ರೀ ಕೋಡಿಮಠದ ಪೀಠಾಧಿಪತಿಗಳಾಗಿ ಅಧಿಕಾರ ವಹಿಸಿಕೊಂಡರು. ಇವರ ಕಾಲದಲ್ಲಿ ಕೋಡಿಮಠವು ಪ್ರಬುದ್ಧಮಾನಕ್ಕೆ ಬಂದಿದ್ದಲ್ಲದೆ ಶಾಖಾಮಠಗಳು ಸಹ ಅಭಿವೃದ್ಧಿಗೊಂಡವು. ಇವರು ತಮ್ಮ ತಪೋಶಕ್ತಿಯಿಂದ ಶಿವರಾತ್ರಿಯ ದಿನ ಬೀರೂರಿನ ಹನ್ನೆರಡು ಜನ ಶ್ರೇಷ್ಠ ಭಕ್ತರ ಮನೆಯಲ್ಲೂ, ಬೀರೂರಿನ ಶಾಖಾಮಠದಲ್ಲೂ ಹಾಗೂ ಕೋಡಿಮಠದಲ್ಲಿ ಸಮಸ್ತ ಭಕ್ತಾಧಿಗಳ ಎದುರಿನಲ್ಲಿ ಏಕಕಾಲದಲ್ಲಿ ಲಿಂಗಪೂಜೆ ಮಾಡಿಕೊಂಡ ಪವಾಡ ಈ ಮಠದ ಇತಿಹಾಸದಲ್ಲಿ ಜಾನಪದ ಐತಿಹ್ಯವಾಗಿ ಉಳಿದಿದೆ. ತ್ರಿಕಾಲಜ್ಞಾನಿಗಳಾದ ಶ್ರೀ ಶಿವಲಿಂಗ ಸ್ವಾಮಿಗಳು ತಮ್ಮ ತಪೋಶಕ್ತಿಯಿಂದ ಹೊತ್ತಿಗೆಯನ್ನು (ಭವಿಷ್ಯವಾಣಿ) ರಚಿಸಿದ್ದು, ಈ ಹೊತ್ತಿಗೆ ಆಧಾರದ ಮೇಲೆ ಭವಿಷ್ಯವಾಣಿಯನ್ನು ಹೇಳಲಾಗುತ್ತಿದೆ. ವೈಶಾಖ ಬಹುಳ ಚೌತಿಯಂದು ಗುರುಗಳು ಲಿಂಗೈಕ್ಯರಾದರು. ಇವರ ಗದ್ದುಗೆಯನ್ನು ಮಠದಲ್ಲಿ ನಿರ್ಮಿಸಲಾಗಿದ್ದು, ಇಂದಿಗೂ ಭಕ್ತರಿಗೆ ಜಾಗೃತ ಸ್ಥಳವಾಗಿ ಪೂಜ್ಯತೆಗೆ ಒಳಗಾಗಿದೆ.

ಶ್ರೀ ಶಿವಲಿಂಗ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ನಲವತ್ತು ವರ್ಷಗಳ ಕಾಲ ಮಠಾಧೀಶರಿಲ್ಲದೆ ಮಠವು ಖಾಲಿ ಉಳಿದಿದೆ. ನಂತರ ಶ್ರೀ ಗುರುಲಿಂಗ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಕೇವಲ ಎರಡೂವರೆ ವರ್ಷಗಳ ಕಾಲ ಅಧಿಕಾರ ನಡೆಸಿದ್ದಾರೆ. ಇವರ ನಂತರ ಶ್ರೀ ನೀಲಲೋಚನ ಸ್ವಾಮಿಗಳು ಅಧಿಕಾರಕ್ಕೆ ಬಂದು ಐವತ್ತು ವರ್ಷಗಳ ಕಾಲ ದೀರ್ಘ ಆಡಳಿತವನ್ನು ನಡೆಸಿ ಮಠವನ್ನು ಸರ್ವತೋಮುಖವಾಗಿ ಅಭಿವೃದ್ಧಿಪಡಿಸಿದ್ದಲ್ಲದೆ, ಅಪಾರ ಭೂ ಸಂಪತ್ತನ್ನು ಗಳಿಸಿ ಮಠವು ಶ್ರೀಮಂತ ಮಠವಾಗಿ ಬೆಳೆಯಲು ಕಾರಣೀಭೂತರಾದರು.

ಹಸ್ತದ ಚಿಹ್ನೆ ನೀಡಿದ ಮಹಿಮರು: ಗುರುಗಳು ಮಹಾ ಮಹಿಮಾ ಪುರುಷರಾಗಿದ್ದರು. ಇವರ ತಪೋಶಕ್ತಿಯಿಂದ ನಾಡಿನ ಅನೇಕ ಜನರು ಇವರ ಭಕ್ತರಾಗಿ ಬೆಳೆದಿದ್ದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಿಂದ ವಂಚಿತವಾಗಿದ್ದಲ್ಲದೆ ಪಕ್ಷವು ವಿಭಾಗಗೊಂಡು ಅತಂತ್ರ ಸ್ಥಿತಿಯಲ್ಲಿದ್ದಾಗ ಆಗಿನ ಕಾಂಗ್ರೆಸ್ ಅಧ್ಯಕ್ಷೆ ಶ್ರೀಮತಿ ಇಂದಿರಾಗಾಂಧಿ ಮಠಕ್ಕೆ ಭೇಟಿ ನೀಡಿ ಗುರುಗಳ ಆಶೀರ್ವಾದ ಪಡೆದು, ಕಾಂಗ್ರೆಸ್ ಚಿಹ್ನೆಯಾದ ಅಭಯಹಸ್ತವನ್ನು ಗುರುಗಳಿಂದ ಪಡೆದಿದ್ದು ಒಂದು ದಾಖಲಾರ್ಹ ವಿಚಾರವಾಗಿದೆ. ಗುರುಗಳ ಆಶೀರ್ವಾದ ಪಡೆದ ನಂತರ ಇಂದಿರಾಗಾಂಧಿ ನೇತೃತ್ವದ ಕಾಂಗ್ರೆಸ್ ಪಕ್ಷ ಭಾರೀ ಪ್ರಭಾವದೊಂದಿಗೆ ಬೆಳೆದು ಪುನಃ ಅಧಿಕಾರ ಪಡೆದದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ತಪೋನಿಷ್ಠರಾದ ಶ್ರೀ ನೀಲಲೋಚನ ಸ್ವಾಮಿಗಳು ಮಾಡಾಳು ಮಠದಲ್ಲಿ ಲಿಂಗೈಕ್ಯರಾದರು. ಅವರ ಗದ್ದುಗೆಯನ್ನು ಅಲ್ಲಿಯೇ ನಿರ್ಮಿಸಲಾಗಿದೆ.

ಕ್ರಿಯಾಶೀಲರ ಆಗಮನ: ಶ್ರೀ ನೀಲಲೋಚನ ಸ್ವಾಮಿಗಳ ಕರಕಮಲ ಸಂಜಾತರಾಗಿ ಬೆಳೆದ ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮಿಗಳು ಸಾವಿರದ ಒಂಭೈನೂರ ಎಂಬತ್ತೊಂಬತ್ತರಲ್ಲಿ ಅಧಿಕಾರಕ್ಕೆ ಬಂದರು. ಗುರುಗಳು ತಮ್ಮ ಕ್ರಿಯಾಶೀಲ ಮನೋಗುಣಗಳಿಂದ ಮಠವನ್ನು ಶಿಸ್ತುಬದ್ಧಗೊಳಿಸಿದರು. ಅಲ್ಲದೆ ಮಠದ ಆಸ್ತಿ ಹಾಗೂ ಶಾಖಾಮಠಗಳ ಆಸ್ತಿಯನ್ನು ಕಾನೂನುಬದ್ಧಗೊಳಿಸಿ, ಮಠವು ಶ್ರೀಮಂತವಾಗಿ ರೂಪುಗೊಳ್ಳಲು ನೆರವಾದರು. ಗುರುಗಳು ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ಕಂಚಕಲ್ಲುಬಿದರೆ ಗ್ರಾಮದ ಶ್ರೀ ಮರುಳಾರಾಧ್ಯ ಮತ್ತು ಶ್ರೀಮತಿ ಪಾರ್ವತಮ್ಮನವರ ಪುತ್ರರಾಗಿ ಜನಿಸಿ ಹಾರನಹಳ್ಳಿ, ಅರಸೀಕೆರೆ, ಬೆಂಗಳೂರು ಹಾಗು ಧಾರವಾಡದಲ್ಲಿ ವಿದ್ಯಾಭ್ಯಾಸ ಮಾಡಿದರು. ಬನಾರಸ್ ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತ, ಜ್ಯೋತಿಷ್ಯ ವಿಷಯದಲ್ಲಿ ಉನ್ನತ ಶಿಕ್ಷಣವನ್ನು ಪಡೆದವರಾಗಿದ್ದಾರೆ. ಗುರುಗಳು ಬಹುಭಾಷಾ ಪಂಡಿತರಾಗಿ ಹೆಸರುಗಳಿಸಿದ್ದು ದೇಶವ್ಯಾಪ್ತಿ ಪ್ರಚಾರ ಪಡೆದು ಅಪಾರ ಶಿಷ್ಯ ಸಂಪತ್ತನ್ನು ಗಳಿಸಿಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಧಾರ್ಮಿಕ ವಿಚಾರದಲ್ಲಿ ಅಪಾರನಂಬಿಕೆಯನ್ನು ಉಳಿಸಿಕೊಂಡು ಬಂದಿರುವ ಈ ಮಠವು ವಿಶಿಷ್ಟ ರೀತಿಯಲ್ಲಿ ಹಾಗೂ ವೈಭವಯುತವಾಗಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ಬಾಲಕಿ ನೀಲಮ್ಮಳು ನೆಲಮಾಳಿಗೆಗೆ ಹೋಗುವ ಮೊದಲು ಕರ್ತೃ ಗುರುಗಳಾದ ಶ್ರೀ ನೀಲಮ್ಮಜ್ಜಯ್ಯನವರಲ್ಲಿ ನನಗೆ ಗುರು ಯಾರೆಂದು ಖಾತರಿಪಡಿಸಬೇಕೆಂದು ಹಠ ಹಿಡಿದು ಕೇಳಿದಾಗ ನಿನಗೆ ನಾನೇ ಗುರುವಾಗಿರುತ್ತೇನೆ. ನಿನ್ನ ಹೆಸರು ಈ ಮಠದ ಪರಂಪರೆಯಲ್ಲಿ ಅಜರಾಮರವಾಗಿ ಉಳಿಯುವಂತಾಗುತ್ತದೆ. ಈ ಮಠದ ಪರಂಪರೆಗೆ ಗುರುವಾಗಬೇಕಾದ ವಟುವನ್ನು ನೀನು ಗುರುವಾಗಿ

ಪರೀಕ್ಷಿಸಿ, ನಂತರ ಅವರ ಶಿಷ್ಯಳಾಗಿ ಇಲ್ಲಿ ನೆಲೆಸು ಎಂದು ಆಶೀರ್ವದಿಸಿದ್ದರು. ಇದರ ಪ್ರತೀಕವೆಂಬಂತೆ ಇಲ್ಲಿ ಉತ್ತರಾಧಿಕಾರಿಯಾಗಿ ನೇಮಕಗೊಂಡ ವಟುವು ಪಟ್ಟಾಧಿಕಾರಕ್ಕೆ ಮೊದಲು ನೆಲಮಾಳಿಗೆಯಲ್ಲಿ ಮೂರು ದಿನಗಳ ಕಾಲ ಏಕಾಂತವಲ್ಲಿ ನೆಲೆಸುವ ಸಂಪ್ರದಾಯ ಬೆಳೆದು ಬಂದಿದೆ. ಅಲ್ಲದೆ ಮಠದ ಸಂಪ್ರದಾಯದಲ್ಲಿ ಮುತ್ತೈದೆ ಸೇವೆ ವಿಶೇಷವಾಗಿ ನಡೆಯುತ್ತಿದೆ. ಶ್ರೀ ನೀಲಮ್ಮಜ್ಜಯ್ಯನವರು ಹಾರನಹಳ್ಳಿಯನ್ನು ಪ್ರವೇಶ ಮಾಡಿದಾಗ ಮೊದಲು ಪಾದಪೂಜೆ ನಂತರ ಉತ್ಸವ ನಡೆದಿತ್ತು. ಆ ಸಂಪ್ರದಾಯವೇ ಇಂದಿಗೂ ನಡೆಯುತ್ತಿದ್ದು, ಜಾತ್ರೆಯ ಸಂದರ್ಭದಲ್ಲಿ ಕೋಡಿಮಠದ ಗುರುಗಳು ಹಾರನಹಳ್ಳಿಯ ಪುರಪ್ರವೇಶವನ್ನು ಪಾದಪೂಜೆಯೊಂದಿಗೆ ಪ್ರಾರಂಭಿಸಿ ಉತ್ಸವದೊಂದಿಗೆ ಮುಕ್ತಾಯಗೊಳಿಸುತ್ತಾರೆ. ಅಂದು ಗುರುಗಳು ಮಹದೇಶ್ವರಬೆಟ್ಟದಲ್ಲಿ ವಿಶೇಷ ಪೂಜೆಯನ್ನು ನಡೆಸುತ್ತಾರೆ. ಇದಲ್ಲದೆ ಕರ್ತೃ ಗುರುಗಳು ಸಮಾಧಿಗೆ ಹೋದ ದಿನದ ಸ್ಮರಣೋತ್ಸವವನ್ನು ಇಂದಿಗೂ ಆಚರಣೆ ಮಾಡುತ್ತಾ ಬಂದಿದ್ದು, ಹುಣ್ಣಿಮೆಯಾದ ಮೂರನೆಯ ದಿನಕ್ಕೆ ಮಹಾ ಮಂಗಳಾರತಿ ಕಾರ್ಯಕ್ರಮವು ಪ್ರತೀ ತಿಂಗಳು ನಡೆಯುತ್ತಾ ಬಂದಿದೆ. ಶ್ರೀ ಶಿವಲಿಂಗ ಸ್ವಾಮಿಗಳ ಸ್ಮರಣೋತ್ಸವವನ್ನು ಪ್ರತೀ ವರ್ಷ ಬೆಳ್ಳಿ ಪಲ್ಲಕ್ಕಿ ಉತ್ಸವದೊಂದಿಗೆ ಆಚರಣೆ ಮಾಡಲಾಗುತ್ತಿದೆ. ಅಂದು ಧಾರ್ಮಿಕ ಸಭೆ, ಅನ್ನ ದಾಸೋಹ ಹಾಗೂ ಸಮಾಜದ ಗಣ್ಯರನ್ನು ಗೌರವಿಸುವ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯುತ್ತಿದೆ.

ಶಾಖಾಮಠಗಳು: ಮಠದ ಶಾಖಾಮಠಗಳಾಗಿ ಬೇಲೂರು ತಾಲ್ಲೂಕಿನ ಬೀಲೂರು, ಹಳೇಬೀಡು ಹಾಗು ಬಿಕ್ಕೋಡು ಮಠಗಳು, ಹಾಸನ ನಗರದ ಜವನಹಳ್ಳಿಮಠ, ಚನ್ನಗಿರಿಯ ಶಿವಾನಂದ ಮಠ, ಚಿಕ್ಕನಾಯ್ಕನಹಳ್ಳಿಮಠ, ಭದ್ರಾವತಿ ತಾಲ್ಲೂಕಿನ ಗೋಣಿಬೀಡು ಹುಲ್ಲುಮನೆ ಮಠ, ತಿಳಲುಮಠ, ಹೊಸಳ್ಳಿಮಠ, ಬಾಳುಮಠ, ಹಲ್ಕೂರುಮಠ, ಕಲ್ಕೆರೆಮಠ, ಹುಣಸೇಘಟ್ಟದ ಮಠ, ಚನ್ನಗಿರಿ ಗುರುಶಾಂತದೇವರಮಠ, ಕೆರೆಹಿಂದಿರುವ ಶಿವಮಠ, ಕುಂಸಿಹಾರನಹಳ್ಳಿಮಠ, ಉಪ್ಪರಿಗೆಮಠ, ಚಿಕ್ಕಮಗಳೂರಿನ ಹೊಸಮಠ, ಉಪ್ಪಳ್ಳಿಮಠ, ಗುರುಸಿದ್ದೇಶ್ವರ ಮಠ, ಗಿಡ್ಡೇನಹಳ್ಳಿಮಠ, ಬಾಣಾವರದ ಕೆರೆಕೋಡಿಯಲ್ಲಿರುವ ಮಠ, ಆರದವಳ್ಳಿಮಠ, ಕಾರಂಜಿಮಠ, ಕೊಡಗುನಾಡಿನಮಠ, ಮೂಡಿಗೆರೆಮಠ, ಮಾಡಾಳುಮಠ, ಚಲುವನಹಳ್ಳಿ ಗವಿಮಠ ಇನ್ನು ಮುಂತಾದ ಅನೇಕ ಮಠಗಳು ಕೋಡಿಮಠಕ್ಕೆ ಶಾಖಾಮಠಗಳಾಗಿವೆ. ಸಾವಿರದ ಎಂಟುನೂರ ಅರವತ್ತೆಂಟನೆಯ ಇಸವಿ ಜನವರಿ ಒಂದರಲ್ಲಿ ಕಸಬಾ ಹಾರನಹಳ್ಳಿ ತಾಲ್ಲೂಕು ಕಸಬಾ ಹಾರನಹಳ್ಳಿ ಕೋಡಿಮಠದ ಶ್ರೀ ಶಿವಲಿಂಗ ಸ್ವಾಮಿಗಳ ಹುಕ್ಕುಂ ಮೇರೆಗೆ ಬರೆಸಿಕೊಟ್ಟ ದಾಖಲೆಯ ಆಧಾರದಿಂದ ಮೇಲಿನ ಮಠಗಳು ನಮ್ಮ ಶಾಖಾಮಠಗಳಾಗಿವೆ ಎಂದು ಈಗಿನ ಗುರುಗಳಾದ ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮಿಗಳು ತಿಳಿಸಿರುತ್ತಾರೆ. ಈ ಶಾಖಾಮಠಗಳಲ್ಲಿ ಕೆಲವು ಮಠಗಳು ನ್ಯಾಯ ತೀರ್ಮಾನಕ್ಕೆಂದು ನ್ಯಾಯಾಲಯದಲ್ಲಿವೆ. ನಿರಂಜನವಂಶ ರತ್ನಾಕರ ಕೃತಿಯಲ್ಲಿ ಮೇಲಿನ ಕೆಲವು ಮಠಗಳ ಹೆಸರುಗಳು ಉಲ್ಲೇಖವಾಗಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ.

ಶೈಕ್ಷಣಿಕ ಹಾಗೂ ಸಾಮಾಜಿಕ ಸೇವೆ: ಸಾವಿರದ ಒಂಭೈನೂರ ಎಂಬತ್ತರಲ್ಲಿ ಸದ್ಗುರು ಶ್ರೀ ಕೋಡಿಮಠ ಮಹಾವಿದ್ಯಾಪೀಠವನ್ನು ಸ್ಥಾಪಿಸಲಾಗಿತ್ತು. ನಂತರ ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಈ ಶಿಕ್ಷಣ ಸಂಸ್ಥೆಯು ವಿಸ್ತಾರವಾಗಿ ಬೆಳೆದು ,ಗ್ರಾಮಾಂತರ ಮಕ್ಕಳ ಕಲಿಕೆಗೆ ನೆರವಾಯಿತು. ಈ ಶಿಕ್ಷಣ ಸಂಸ್ಥೆಯ ಆಶ್ರಯದಲ್ಲಿ ಪ್ರಸ್ತುತ ಕೆಳಗಿನ ವಿದ್ಯಾ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.

೧. ಶ್ರೀ ಜಗದ್ಗುರು ಶಿವಲಿಂಗೇಶ್ವರ ಕಲಾ-ವಾಣಿಜ್ಯ-ವಿಜ್ಞಾನ ಕಿರಿಯ ಮಹಾವಿದ್ಯಾಲಯ, ಹಾರನಹಳ್ಳಿ.

೨. ಶ್ರೀ ಜಗದ್ಗುರು ಕೋಡಿಮಠ ಕಲಾ-ವಾಣಿಜ್ಯ-ವಿಜ್ಞಾನ ಕಿರಿಯ ಮಹಾವಿದ್ಯಾಲಯ, ಅರಸೀಕೆರೆ.

೩. ಶ್ರೀ ಪ್ರಸನ್ನ ರಾಮೇಶ್ವರ ಕಲಾ-ವಾಣಿಜ್ಯ-ವಿಜ್ಞಾನ ಕಿರಿಯ ಮಹಾವಿದ್ಯಾಲಯ, ಬೆಲಗೂರು, ಹೊಸದುರ್ಗ ತಾಲ್ಲೂಕು.

೪. ಶ್ರೀ ಜಗದ್ಗುರು ಕೋಡಿಮಠ ಕಲಾ-ವಾಣಿಜ್ಯ-ವಿಜ್ಞಾನ ಕಿರಿಯ ಮಹಾವಿದ್ಯಾಲಯ, ಬಿಕ್ಕೋಡು, ಬೇಲೂರು ತಾಲ್ಲೂಕು.

೫. ಶ್ರೀ ಜಗದ್ಗುರು ಕೋಡಿಮಠ ಕಲಾ-ವಾಣಿಜ್ಯ-ವಿಜ್ಞಾನ ಮಹಾವಿದ್ಯಾಲಯ, ಪಾಳ್ಯ, ಆಲೂರು ತಾಲ್ಲೂಕು.

೬. ಅಮರಗಿರಿ ಕಿರಿಯ ತಾಂತ್ರಿಕ ಮಹಾವಿದ್ಯಾಲಯ, ಅರಸೀಕೆರೆ.

೭. ಗೋಪಿ ಕಾನೂನು ಕಾಲೇಜು, ಅರಸೀಕೆರೆ.

೮. ಶ್ರೀ ಮಲೆನಾಡು ಗ್ರಾಮಾಂತರ ಪ್ರೌಢಶಾಲೆ, ಬಿಕ್ಕೋಡು.
೯. ಶ್ರೀ ನೀಲಮ್ಮಜ್ಜಯ್ಯ ಸುಸಿವಾಸಿ ಪ್ರೌಢಶಾಲೆ, ಕೋಡಿಮಠ.
೧೦. ಶ್ರೀ ಕೋಡಿಮಠದ ಶಿವಲಿಂಗಸ್ವಾಮಿ ಗ್ರಾಮಾಂತರ ಪ್ರೌಢಶಾಲೆ, ಕಿತ್ತನಕೆರೆ, ಅರಸೀಕೆರೆ ತಾಲ್ಲೂಕು.
೧೧. ಶ್ರೀ ನೀಲಲೋಚನ ಗ್ರಾಮಾಂತರ ಪ್ರೌಢಶಾಲೆ, ಪಾಳ್ಯ, ಆಲೂರು ತಾಲ್ಲೂಕು.
೧೨. ಶ್ರೀ ವೀರಬಲ್ಲಾಳ ಗ್ರಾಮಾಂತರ ಪ್ರೌಢಶಾಲೆ, ಬಲ್ಲಾಳಸಮುದ್ರ, ಹೊಸದುರ್ಗ ತಾಲ್ಲೂಕು.
೧೩. ಶ್ರೀ ಲಕ್ಷ್ಮೀರಂಗನಾಥಸ್ವಾಮಿ ಗ್ರಾಮಾಂತರ ಪ್ರೌಢಶಾಲೆ, ಅಣೆಗೆರೆ, ಕಡೂರು ತಾಲ್ಲೂಕು.
೧೪. ಶ್ರೀ ಕೋಡಿಮಠ ಪ್ರೌಢಶಾಲೆ, ಬಾಣಾವರ, ಅರಸೀಕೆರೆ ತಾಲ್ಲೂಕು.
೧೫. ಶ್ರೀ ಬಸವೇಶ್ವರ ಪ್ರೌಢಶಾಲೆ, ಉಗನಿ.
೧೬. ಶ್ರೀ ನಿರ್ವಾಣ ಸಿದ್ಧೇಶ್ವರ ಪ್ರೌಢಶಾಲೆ, ನಿಡುವಳ್ಳಿ, ಕಡೂರು ತಾಲ್ಲೂಕು.
೧೭. ಶ್ರೀ ಬಸವೇಶ್ವರ ಪ್ರೌಢಶಾಲೆ, ಗರುಡನಗಿರಿ, ಅರಸೀಕೆರೆ ತಾಲ್ಲೂಕು.
೧೮. ಶ್ರೀ ಕೋಡಿಮಠ ಪ್ರೌಢಶಾಲೆ, ನಾಗವೇದಿ.
೧೯. ಶ್ರೀ ಕೋಡಿಮಠ ಪ್ರೌಢಶಾಲೆ, ಕೆಲ್ಲಂಗೆರೆ.
೨೦. ಶ್ರೀ ಹಾರನಹಳ್ಳಿ ಕೋಡಿಮಠದ ಶ್ರೀ ಶಿವಲಿಂಗೇಶ್ವರ ಸಂಯುಕ್ತ ಕಿರಿಯ ಕಾಲೇಜು, ಕಿತ್ತನಕೆರೆ.
೨೧. ಶ್ರೀ ಕೋಡಿಮಠದ ಕೈಗಾರಿಕಾ ತರಬೇತಿ ಕೇಂದ್ರ, ಅರಸೀಕೆರೆ.

ಇಷ್ಟಲ್ಲದೆ ಬಿಕ್ಕೋಡು, ಆಲೂರು ತಾಲ್ಲೂಕಿನ ಪಾಳ್ಯ, ಕೋಡಿಮಠ, ಬಾಣಾವರದಲ್ಲಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿ ಗ್ರಾಮಾಂತರ ಮಕ್ಕಳ ಕಲಿಕೆಗೆ ನೆರವಾಗಿದೆ. ಹಾರನಹಳ್ಳಿಯಲ್ಲಿ ಸ್ಥಾಪಿತವಾಗಿರುವ ಸರ್ಕಾರಿ ಪ್ರೌಢಶಾಲೆಗೆ ಧನಸಹಾಯವನ್ನು ನೀಡಿ ಮಠದ ಹೆಸರಿನಲ್ಲಿ ಶಾಲೆ ಪ್ರಾರಂಭವಾಗುವಂತೆ ಮಾಡಿದ್ದಾರೆ. ಶ್ರೀ ನೀಲಲೋಚನ ಮಹಾಸ್ವಾಮಿ ಪ್ರಾಚ್ಯ ವಿದ್ಯಾ ಸಂಶೋಧನಾ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ಮಾಡಾಳು ಶ್ರೀ ಸ್ವರ್ಣಗೌರಮ್ಮ ಗ್ರಂಥಭಂಡಾರ, ಶ್ರೀ ಉರುಲಿಂಗ ದೇಶಿಕೇಂದ್ರ ವೈದಿಕ ಜ್ಯೋತಿಷ್ಯ ಪಾಠಶಾಲೆಯನ್ನು ಪ್ರಾರಂಭಿಸಲಾಗಿದೆ.

ವಿಳಾಸ: ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮಿಗಳು, ಶ್ರೀ ಕೋಡಿಮಠ, ಹಾರನಹಳ್ಳಿ, ಅರಸೀಕೆರೆ ತಾ, ಹಾಸನ ಜಿಲ್ಲೆ.
ಆಧಾರ: ನಿರಂಜನವಂಶ ರತ್ನಾಕರ, ಸಂಪಾದಕರು: ಚನ್ನಮಲ್ಲಿಕಾರ್ಜುನ.

ಹುಣಸೇಘಟ್ಟ

ಅರಸೀಕೆರೆ ತಾಲ್ಲೂಕಿನ ಹುಣಸೇಘಟ್ಟ ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹದಿನೈದು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಕೋಡಿಮಠದ ಶಾಖಾಮಠವು ಅಸ್ತಿತ್ವದಲ್ಲಿದೆ.

ಕೋಡಿಮಠದ ಶಾಖಾಮಠ: ಹುಣಸೇಘಟ್ಟ ಗ್ರಾಮದಲ್ಲಿ ಪುರಾತನ ಕಾಲದಲ್ಲಿ ವಿರಕ್ತಮಠವು ಸ್ಥಾಪನೆಗೊಂಡು ಧಾರ್ಮಿಕ ಕೆಲಸಗಳನ್ನು ನಡೆಸಿಕೊಂಡು ಬಂದಿದೆ. ಪ್ರಸ್ತುತ ಹಾರನಹಳ್ಳಿಯ ಕೋಡಿಮಠದ ಶಾಖಾ ಮಠವಾಗಿ ಬೆಳೆದಿರುವ ಈ ಮಠವು ಪುರಾತನ ಕಾಲದಿಂದಲೂ ಕೋಡಿಮಠದ ಸಂಬಂಧದಲ್ಲಿ ಬೆಳೆದುಬಂದಿತ್ತೆಂದು ಹೇಳಲಾಗುತ್ತಿದೆ. ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮಿಗಳು ಕೋಡಿಮಠದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಈ ಮಠವನ್ನು ಜೀರ್ಣೋದ್ಧಾರ ಗೊಳಿಸಿದ್ದಾರೆ. ಇಲ್ಲಿರುವ ಮರಿಸ್ವಾಮಿಗಳ ಗದ್ದುಗೆಯನ್ನು ನವೀಕರಿಸಿ ಪೂಜೆಗೆ ವ್ಯವಸ್ಥೆಗೊಳಿಸಿದ್ದಾರೆ. ತಿಂಗಳಲ್ಲಿ ಎರಡು ಮೂರು ಬಾರಿ ಮಠದಲ್ಲಿ ವಾಸ್ತವ್ಯ ಮಾಡಿ ಭಕ್ತರಿಗೆ ಧಾರ್ಮಿಕ ಮಾರ್ಗದರ್ಶನವನ್ನು ನೀಡುತ್ತಿದ್ದಾರೆ.

ವಿಳಾಸ: ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮಿಗಳು, ಶ್ರೀ ಕೋಡಿಮಠ, ಹಾರನಹಳ್ಳಿ, ಅರಸೀಕೆರೆ ತಾ, ಹಾಸನ ಜಿಲ್ಲೆ.

❑

ಅರಕಲಗೂಡು ತಾಲ್ಲೂಕು

ಹಾಸನಜಿಲ್ಲೆಯ ಅರಕಲಗೂಡು ತಾಲ್ಲೂಕು, ಮಲೆನಾಡಿನ ಅಂಚಿನಲ್ಲಿ ರೂಪುಗೊಂಡಿದೆ. ಈ ತಾಲ್ಲೂಕಿನಲ್ಲಿ ಪ್ರಾಚೀನ ಕಾಲದಿಂದಲೂ ವೀರಶೈವಧರ್ಮ ಪ್ರಬಲವಾಗಿ ಅಲ್ಲದಿದ್ದರೂ ಸಾಧಾರಣ ಮಟ್ಟದಲ್ಲಿ ಬೆಳೆದಿತ್ತು. ನಂತರದ ದಿನಗಳಲ್ಲಿ ಕ್ಷೀಣಿಸಿದ ಲಕ್ಷಣಗಳು ಕಂಡುಬರುತ್ತದೆ. ಪ್ರಸ್ತುತ ಈ ತಾಲ್ಲೂಕಿನಲ್ಲಿ ಆರು ಮಠಗಳನ್ನು ಗುರುತಿಸಬಹುದಾಗಿದೆ.

ಅರಕಲಗೂಡು

ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಕೇಂದ್ರ. ಅರಕಲಗೂಡು ಪಟ್ಟಣದ ದಕ್ಷಿಣಕ್ಕೆ ಒಂದು ಕಿ.ಮೀ. ದೂರದಲ್ಲಿ ಶ್ರೀ ಚಿಲುಮೆಮಠವು ಅಸ್ತಿತ್ವದಲ್ಲಿದೆ.

ಚಿಲುಮೆಮಠ: ಅರಕಲಗೂಡು ಸಮೀಪ ಶ್ರೀ ಚಿಲುಮೆಮಠವು ಸ್ಥಾಪನೆಯಾಗಿದೆ. ವಿರಕ್ತ ಸಂಪ್ರದಾಯದ ಮುರುಘಾ ಸಮಯದ ಈ ಮಠವು ಹದಿನೈದನೆಯ ಶತಮಾನದಲ್ಲಿ ಪ್ರಾರಂಭಗೊಂಡಿರಬಹುದೆಂದು ಹೇಳಲಾಗುತ್ತಿದೆ.

ಮಠ ಸ್ಥಾಪನೆ: ಹದಿನೈದನೆಯ ಶತಮಾನದ ಶ್ರೀ ತೋಂಟದ ಸಿದ್ಧಲಿಂಗೇಶ್ವರರು ಪರದನಹಳ್ಳಿಯಿಂದ ಹೊರಟು, ಲೋಕ ಸಂಚಾರ ಮಾಡಿ ಎಡೆಯೂರಿಗೆ ಬರುವ ಮುನ್ನ ಈ ಪ್ರಶಾಂತ ಸ್ಥಳದಲ್ಲಿ ಅನುಷ್ಠಾನಗೊಂಡು, ಕೆಲವು ದಿನ ಈ ಜಾಗದಲ್ಲಿ ನೆಲೆಸಿ ಜಾಗೃತ ಸ್ಥಳವನ್ನಾಗಿ ಪರಿವರ್ತಿಸಿದ್ದರು. ಶ್ರೀ ಸಿದ್ಧಲಿಂಗೇಶ್ವರರು ಈ ಜಾಗದಿಂದ ನಿರ್ಗಮಿಸಿದ ಮೇಲೆ ಈ ಸ್ಥಳದಲ್ಲಿ ಶ್ರೀ ಸಿದ್ಧಲಿಂಗೇಶ್ವರರ ಭಕ್ತರು ಮಠವನ್ನು ನಿರ್ಮಿಸಿದ್ದಾರೆ. ಅಂದು ಮಠವನ್ನು ಸ್ಥಾಪಿಸಿದ ಕರ್ತೃಗುರುಗಳ ಬಗ್ಗೆ ನಿಖರವಾದ ಮಾಹಿತಿ ದೊರೆತಿಲ್ಲ.

ಇಲ್ಲಿನ ಜನಪದಕಥೆಯ ಆಧಾರದ ಮೇಲೆ ಮಠದ ಪರಂಪರೆಯನ್ನು ದಾಖಲಿಸಬಹುದಾಗಿದೆ. ಶ್ರೀ ನಂಜುಂಡ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಈ ಜಾಗೃತಸ್ಥಳಕ್ಕೆ ಆಗಮಿಸಿ ಈ ಹಿಂದೆಯೇ ಸ್ಥಾಪಿತಗೊಂಡಿದ್ದ ಮಠ ದಲ್ಲಿ ಅನುಷ್ಠಾನಕ್ಕೆ ಕುಳಿತರು. ಶಿವಪೂಜಾನಿಷ್ಠರೂ, ಧರ್ಮಧುರಂಧರರೂ ಆಗಿದ್ದ ಗುರುಗಳು ಅನ್ನ ನೀರು ಇಲ್ಲದೆ ದಿನ ಪೂರ್ತಿ ತಪೋಮಗ್ನರಾಗಿ ಕುಳಿತುಕೊಂಡಿ ರುತ್ತಿದ್ದರು. ಇದನ್ನು ನೋಡಿದ ಭಕ್ತರು ಈ ತಪಸ್ವಿಗಳ ಪೂಜೆಗೆ ನೆರವಾಗತೊಡಗಿ ದರು. ಪ್ರಸಾದ ವ್ಯವಸ್ಥೆಗಾಗಿ ಹಾಲು, ಹಣ್ಣನ್ನು ನೀಡಿ ಗುರುಗಳ ಆಶೀರ್ವಾದಕ್ಕೆ ಪಾತ್ರರಾದರು. ಇವರು ತಪೋನುಷ್ಠಾನಕ್ಕೆ ಕುಳಿತಿದ್ದ ಸಂದರ್ಭದಲ್ಲಿ ಹಸಿದ ಹುಲಿಯೊಂದು ಗುರುಗಳನ್ನು ನೋಡಿ ಗುರುಗಳ ಮೇಲೆರಗಲು ಆರ್ಭಟಿಸುತ್ತಾ ಬರತೊಡ ಗಿತು. ಏಕಚಿತ್ತ ದಿಂದ ಗುರುಗಳು ಹುಲಿಯನ್ನು ದೃಷ್ಟಿಸಿ ನೋಡತೊಡಗಿದರು. ಸಮೀಪಕ್ಕೆ ಬಂದ ಹುಲಿಯು ಮೇಲೆ ಎರಗುವು ದನ್ನು ಬಿಟ್ಟು, ಮಂಡಿಯೂರಿ ಎದುರು ಕುಳಿತುಕೊಂಡಿತು. ಅಂದಿನಿಂದ ವ್ಯಾಘ್ರವು ಸಾಧು ಪ್ರಾಣಿಯಾಗಿ ವರ್ತಿಸತೊಡಗಿತೆಂದು ಹೇಳಲಾಗುತ್ತಿದೆ.

ಶ್ರೀ ನಂಜುಂಡ ಸ್ವಾಮಿಗಳು ಈ ರೀತಿ ಅನೇಕ ಪವಾಡಗಳನ್ನು ಸೃಷ್ಟಿಸಿ ಜನಮನ್ನಣೆಗೆ ಪಾತ್ರರಾಗಿದ್ದರು. ಮಠ ಸ್ಥಾಪನೆಗೊಂಡ ಮೇಲೆ ಮಠದಲ್ಲಿ ನೀರಿಗೆ ತೊಂದರೆ ಕಂಡು ಬಂದಾಗ, ಮಠದ ಮುಂಭಾಗದಲ್ಲಿ ಗುರುಗಳು ಚಿಕ್ಕದಾಗಿ ಒಂದು ಗುಂಡಿಯನ್ನು ತೋಡಿ ತಮ್ಮ ತಪೋಶಕ್ತಿಯ ಫಲದಿಂದ ಜಲಧಾರೆಯನ್ನು ಚಿಮ್ಮಿಸಿದ್ದರು. ಅಂದಿನಿಂದ ಈಗಿನವರೆಗೂ ನೀರಿನ ಚಿಲುಮೆ ಬತ್ತದೆ ಉಳಿದಿದೆ. ಈ ಕಾರಣದಿಂದ ಈಮಠಕ್ಕೆ 'ಚಿಲುಮೆಮಠ 'ಎಂದು ಹೆಸರು ಬಂದಿತು.

ಪರಂಪರೆ:

೧. ಶ್ರೀ ಮ.ನಿ.ಪ್ರ.ನಂಜುಂಡಸ್ವಾಮಿಗಳು
೨. ಶ್ರೀ ಮ.ನಿ.ಪ್ರ.ಶಿವದೇವಸ್ವಾಮಿಗಳು
೩. ಶ್ರೀ ಮ.ನಿ.ಪ್ರ.ಜಯದೇವಸ್ವಾಮಿಗಳು (ಈಗಿನವರು)

ಇದು ಮಠದ ಪರಂಪರೆ. ಶ್ರೀ ನಂಜುಂಡ ಸ್ವಾಮಿಗಳ ನಂತರ ಶ್ರೀ ಶಿವದೇವ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಹೆಚ್ಚು ಅಭಿವೃದ್ಧಿಪಡಿಸಿದ್ದಾರೆ. ಇವರು ಈ ನಾಡಿನಾದ್ಯಂತ ಸಂಚಾರ ಕೈಗೊಂಡು ಧಾರ್ಮಿಕ ವಿಚಾರಗಳನ್ನು ಜನಮನಕ್ಕೆ

ಮುಟ್ಟಿಸಿ ಭಕ್ತರು ಸನ್ಮಾರ್ಗದಲ್ಲಿ ನಡೆಯುವಂತೆ ಮಾಡಿದ್ದರು. ಇವರ ನಂತರ ಸುಮಾರು ವರ್ಷಗಳ ಕಾಲ ಮಠ ಖಾಲಿ ಉಳಿದಿತ್ತು. ಆಗ ಚಿತ್ರದುರ್ಗದ ಮುರುಘಾ ಮಠದ ಗುರುಗಳು ಶ್ರೀ ಜಯದೇವ ಸ್ವಾಮಿಗಳನ್ನು ನೇಮಕ ಮಾಡಿರುತ್ತಾರೆ.

ಹಾವೇರಿ ತಾಲ್ಲೂಕಿನ ದೇವಗಿರಿ ಗ್ರಾಮದ ಶ್ರೀ ಜಯದೇವ ಸ್ವಾಮಿಗಳು ಬಾಲ್ಯದಲ್ಲೇ ಆಧ್ಯಾತ್ಮದ ಬಗ್ಗೆ ಒಲವು ತೋರಿಸಿ ಸಂಸ್ಕೃತ, ವೇದ, ಆಗಮಗಳನ್ನು ಕಲಿತು ಮಠದ ಆಡಳಿತವನ್ನು ವಹಿಸಿಕೊಂಡಿದ್ದಾರೆ. ಧಾರ್ಮಿಕ ವಿಚಾರಗಳ ಬಗ್ಗೆ ಅಭ್ಯಾಸ ಮಾಡಿರುವ ಗುರುಗಳು ಮಠವನ್ನು ಹಿರಿಯ ಗುರುಗಳ ಪರಂಪರೆಯ ರೀತಿಯಲ್ಲಿ ಬೆಳೆಸುತ್ತಿದ್ದಾರೆ. ಬಸವಾದಿ ಪ್ರಮಥರ ತತ್ತ್ವಗಳನ್ನು ನಾಡಿಗೆ ಪ್ರಚಾರಗೊಳಿಸುವ ಕಾರ್ಯದಲ್ಲಿ ಮುಂದಾಗಿದ್ದಾರೆ. ಮಠದ ಆಡಳಿತವನ್ನು ಮುರುಘಾ ಮಠದ ಶ್ರೀ ಶಿವಮೂರ್ತಿ ಮುರುಘ ರಾಜೇಂದ್ರ ಸ್ವಾಮಿಗಳ ಮಾರ್ಗದರ್ಶನದಂತೆ ಮುನ್ನಡೆಸಿಕೊಂಡು ಬರತೊಡಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಸ್ಥಾಪನೆಯಾಗಿರುವ ಕರ್ತೃ ಗದ್ದುಗೆಗೆ ನಿತ್ಯ ಪೂಜೆಯನ್ನು ಮಾಡಲಾಗುತ್ತಿದೆ. ಶ್ರಾವಣ ಮಾಸದಲ್ಲಿ ಶ್ರೀ ಶಿವದೇವ ಸ್ವಾಮಿಗಳ ಆರಾಧನೆಯನ್ನು ನಡೆಸಲಾಗುತ್ತಿದೆ. ಮಠದ ಭಕ್ತರ ಅಹ್ವಾನಕ್ಕೆ ಮನ್ನಿಸಿ, ಭಕ್ತರ ಮನೆಗಳಿಗೆ ಹೋಗಿ ಪೂಜಾ ಕಾರ್ಯಗಳಲ್ಲಿ ಪಾಲ್ಗೊಂಡು ಆಶೀರ್ವದಿಸುವುದು ಮಠದ ಮತ್ತು ಗುರುಗಳ ಧಾರ್ಮಿಕ ಕೆಲಸಗಳಾಗಿವೆ. ವಿಶೇಷ ಸಂದರ್ಭಗಳನ್ನು ಬಳಸಿಕೊಂಡು ಧಾರ್ಮಿಕ ವಿಚಾರಗಳನ್ನು ಪ್ರಚಾರಪಡಿಸತೊಡಗಿದ್ದಾರೆ. ಮಠದ ಆಸ್ತಿಯಾಗಿರುವ ಎಂಟುಎಕರೆ ಜಮೀನನ್ನು ಅಭಿವೃದ್ಧಿ ಪಡಿಸಿ, ಎರಡುವರೆ ಎಕರೆ ಪ್ರದೇಶದಲ್ಲಿ ತೆಂಗು, ನಾಲ್ಕುಎಕರೆಯನ್ನು ನೀರಾವರಿಗೆ ಯೋಗ್ಯಗೊಳಿಸಿ ಅಧಿಕಆದಾಯ ಬರುವಂತೆ ಮಾಡಿದ್ದಾರೆ. ಜಮೀನಿನ ಮೂಲದಿಂದ ಬರುವ ಆದಾಯವನ್ನು ಧಾರ್ಮಿಕ ಹಾಗೂ ದಾಸೋಹ ಕಾರ್ಯಗಳಿಗೆ ಬಳಸಿಕೊಂಡು ಮಠವನ್ನು ಮುನ್ನಡೆಸತೊಡಗಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಜಯದೇವ ಸ್ವಾಮಿಗಳು, ಶ್ರೀ ಚಿಲುಮೆ ಮಠ, ಅರಕಲಗೂಡು, ಹಾಸನ ಜಿಲ್ಲೆ.

ದೊಡ್ಡ ಮಠ: ಅರಕಲಗೂಡು ಪಟ್ಟಣದ ಪಶ್ಚಿಮ ಭಾಗದ ಕೆರೆಯ ದಡದಲ್ಲಿ ಸ್ಥಾಪನೆಗೊಂಡಿರುವ ದೊಡ್ಡ ಮಠವು ಈಗ ಉತ್ತರಾಧಿಕಾರಿಗಳಿಲ್ಲದೆ ಜೀರ್ಣಗೊಂಡಿದೆ. ಪುರಾತನ ಕಾಲದಲ್ಲಿಯೇ ಪ್ರಾರಂಭಗೊಂಡಿರಬಹುದಾದ ಈ ಮಠದಲ್ಲಿ ನಾಲ್ಕು ಗದ್ದುಗೆಗಳು ಸ್ಥಾಪನೆಗೊಂಡಿವೆ. ಶ್ರೀ ಚನ್ನಬಸವೇಶ್ವರ ಸ್ವಾಮಿಗಳು ಈ ಹಿಂದೆ ಮಠದ ಆಡಳಿತ ನಡೆಸಿ ಮಠವನ್ನು ಅಭಿವೃದ್ಧಿ ಪಡಿಸಿದ್ದರು. ಗುರುಗಳು ಲಿಂಗೈಕ್ಯರಾಗುವ ಮುನ್ನ ಉತ್ತರಾಧಿಕಾರಿಗಳನ್ನು ಆಯ್ಕೆಮಾಡಿಕೊಳ್ಳದೆ, ೧೯೯೭ ರಿಂದ ಮಠವು ಖಾಲಿ ಉಳಿದಿದೆ.ಮಠದ ಭಕ್ತರು ಪುರಾತನ ಮಠದ ಅಸ್ತಿತ್ವವನ್ನು ಉಳಿಸಿಕೊಳ್ಳಲು ಉತ್ತರಾಧಿಕಾರಿಗಳನ್ನು ನೇಮಕ ಮಾಡುವ ತಯಾರಿಯಲ್ಲಿದ್ದಾರೆ. ಮಠದ ಆಸ್ತಿಯಾಗಿರುವ ತೆಂಗು ಮತ್ತು ಅಡಿಕೆ ತೋಟವು ಮಠಕ್ಕೆ ಆದಾಯದ ಮೂಲವಾಗಿದೆ. ಪುರಾತನ ಕಾಲದಲ್ಲಿ ಪ್ರಾರಂಭಗೊಂಡ ಕಟ್ಟಡದ ಕಲ್ಲಿನ ಅವಶೇಷಗಳು ಈ ಮಠದ ಪುರಾತನ ಇತಿಹಾಸವನ್ನು ಹೇಳುತ್ತವೆ.

ಮುರುಘರಾಜೇಂದ್ರ ಆನಂದ ಆಶ್ರಮ (ಮಠ): ಅರಕಲಗೂಡು ಪಟ್ಟಣದ ಕೋಟೆ ಬಡಾವಣೆಯಲ್ಲಿ ಹನ್ನೆರಡು ವರ್ಷಗಳ ಹಿಂದೆ ಪ್ರಾರಂಭಗೊಂಡ ಶ್ರೀ ಮುರುಘ ರಾಜೇಂದ್ರ ಆನಂದ ಆಶ್ರಮವು ಇಲ್ಲಿನ ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ. ಶ್ರೀ ಜಯಾನಂದ ಸ್ವಾಮಿಗಳು ಬಸವತತ್ತ್ವದ ಪ್ರಚಾರ ಹಾಗೂ ಗ್ರಾಮಾಂತರ ಬಡ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕಲ್ಪಿಸಲು ಈ ಮಠವನ್ನು ಸ್ಥಾಪಿಸಿದ್ದಾರೆ. ಈ ಆಶ್ರಮವು ಸ್ವಂತ ಕಟ್ಟಡವನ್ನು ಹೊಂದಿದ್ದು ಕಲಿಯುವ ಹತ್ತು ವಿದ್ಯಾರ್ಥಿಗಳಿಗೆ ಆಶ್ರಯ ಕಲ್ಪಿಸಿಕೊಡಲಾಗಿದೆ. ಈ ನೂತನ ಮಠಕ್ಕೆ ಎರಡು ಎಕರೆ ಅಡಿಕೆ ತೋಟವಿದ್ದು, ಈ ತೋಟದಿಂದ ಬರುವ ಆದಾಯವನ್ನು ಮಠದ ಧಾರ್ಮಿಕ ಹಾಗೂ ದಾಸೋಹ ಕಾರ್ಯಗಳಿಗೆ ಬಳಕೆ ಮಾಡಿಕೊಳ್ಳಲಾಗುತ್ತಿದೆ.

ವಿಳಾಸ:ಶ್ರೀ ಜಯಾನಂದ ಸ್ವಾಮಿಗಳು, ಶ್ರೀ ಮುರುಘರಾಜೇಂದ್ರ ಆನಂದಆಶ್ರಮ,ಕೋಟೆ, ಅರಕಲಗೂಡು, ಹಾಸನ ಜಿಲ್ಲೆ.

ಬಸವಪಟ್ಟಣ

ಅರಕಲಗೂಡು ತಾಲ್ಲೂಕಿನ ಬಸವಪಟ್ಟಣವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತೈದು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ಕಾಶಿಮಠವು ಅಸ್ತಿತ್ವದಲ್ಲಿದೆ.

ಕಾಶಿಮಠ: ಬಸವಪಟ್ಟಣ ಗ್ರಾಮದಲ್ಲಿ ಪಂಚಪೀಠಗಳಲ್ಲಿ ಒಂದಾದ ಕಾಶಿಪೀಠದ ಶಾಖಾಮಠ ಪುರಾತನ ಕಾಲದಿಂದಲೇ ಸ್ಥಾಪಿತಗೊಂಡಿದೆ. ಕಾಶಿಯಲ್ಲಿ ಸಂಸ್ಕೃತ, ವೇದಾಧ್ಯಯನಗಳನ್ನು ಮಾಡಿ ಲೋಕಸಂಚಾರಕ್ಕೆಂದು ಬಂದ ತಪಸ್ವಿಗಳು, ಈ ಮಲೆನಾಡಿನ ಪ್ರಕೃತಿಯ ಸೌಂದರ್ಯಕ್ಕೆ ಮನಸೋತು ಈ ಸ್ಥಳದಲ್ಲಿಯೇ ನೆಲೆಗೊಳ್ಳುತ್ತಾರೆ. ಇಲ್ಲಿ ನೆಲೆಗೊಂಡ ಗುರುಗಳು ಚಿಕ್ಕದಾಗಿ ಒಂದು ಕುಠೀರವನ್ನು ಸ್ಥಾಪಿಸಿಕೊಂ ಡರು. ನಿತ್ಯ ಪೂಜಾನುಷ್ಠಾನಗಳಲ್ಲಿ ಕಾಲಕಳೆದು ತ್ರಿಕಾಲ ಪೂಜೆ ಮಾಡಿ, ಅನೇಕ ಪವಾಡಗಳನ್ನು ನಡೆಸುತ್ತಾರೆ. ಗುರುಗಳ ಈ ಪವಾಡಕ್ಕೆ ಮನಸೋತ ಭಕ್ತರು ಗುರುಗಳಿಗಾಗಿ ಅವಶ್ಯಕತೆಗೆ ತಕ್ಕಂತೆ ಮಠದ ಕಟ್ಟಡವನ್ನು ಕಟ್ಟಿಸಿಕೊಡುತ್ತಾರೆ. ಮಠದ ಧಾರ್ಮಿಕ ಚಟುವಟಿಕೆಗಳಿಗೆ ಅನುಕೂಲವಾಗಲೆಂದು ಆಸ್ತಿಯನ್ನು ಸಂಪಾದಿಸಿಕೊಟ್ಟು ಭಕ್ತರೇ ಮಠಕ್ಕೆ ಆಶ್ರಯ ಕಲ್ಪಿಸಿ ಮಠವನ್ನು ಬೆಳೆಸಿದ್ದಾರೆ.

ಮಠದ ಪರಂಪರೆಯ ಬಗ್ಗೆ ನಿಖರವಾದ ಮಾಹಿತಿಗಳು ಲಭ್ಯವಿಲ್ಲದ ಕಾರಣ ಮಠದ ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಗುರುಗಳ ಬಗ್ಗೆ ವಿವರಗಳು ಸಿಗುತ್ತಿಲ್ಲ. ಆದರೆ ಮಠದ ಆವರಣದಲ್ಲಿ ಒಟ್ಟು ಐದು ಗದ್ದುಗೆಗಳು ನೋಡಸಿಗುತ್ತವೆ. ಈ ಆಧಾರದಿಂದ ಮಠವು ಕರ್ತೃಗುರುಗಳ ನಂತರ ಅಸ್ತಿತ್ವದಲ್ಲಿದ್ದು ಬೆಳೆದು ಬಂದಿದೆ ಎಂಬುದನ್ನು ಸಾಬೀತು ಪಡಿಸುತ್ತದೆ. ಪ್ರಸ್ತುತ ಮಠದಲ್ಲಿ ಗುರುಗಳು ಯಾರೂ ಇಲ್ಲದ ಕಾರಣ ಹೆಗ್ಗಡಹಳ್ಳಿಯ ಮಠಾಧೀಶ್ವರರೇ ಈ ಮಠದ ಧಾರ್ಮಿಕ ಕಾರ್ಯಗಳನ್ನು ನೋಡಿಕೊಂಡು ಮುನ್ನಡೆಸುತ್ತಿದ್ದಾರೆ.

ವಿಳಾಸ: ಶ್ರೀ ಶಿವಶಂಕರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಕಾಶಿಮಠ, ಬಸವಪಟ್ಟಣ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.

ಸಂತೆಮರೂರು

ಅರಕಲಗೂಡು ತಾಲ್ಲೂಕಿನ ಸಂತೆಮರೂರು ಗ್ರಾಮವು ತಾಲ್ಲೂಕು ಕೇಂದ್ರದ ಪಶ್ಚಿಮಕ್ಕೆ ಹತ್ತು ಕಿ. ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಸಿದ್ಧೇಶ್ವರ ಮಠವು ಅಸ್ತಿತ್ವದಲ್ಲಿದೆ.

ಸಿದ್ಧೇಶ್ವರಸ್ವಾಮಿಮಠ: ಸಂತೆಮರೂರು ಗ್ರಾಮದಲ್ಲಿ ಹನ್ನೆರಡನೆಯ ಶತಮಾನದಲ್ಲಿ ಸ್ಥಾಪನೆಗೊಂಡಿರಬಹುದಾದ ಸಿದ್ಧೇಶ್ವರ ಮಠವು ಅಸ್ತಿತ್ವದಲ್ಲಿದೆ. ವಿಜಯನಗರದಿಂದ ಬಂದಂತಹ ಶಿವಶರಣರು ಈ ಗ್ರಾಮದಲ್ಲಿ ನೆಲೆನಿಂತು ಪೂಜಾನುಷ್ಠಾನಗಳನ್ನು ಕೈಗೊಂಡು, ಈ ಗ್ರಾಮವನ್ನು ಜಾಗೃತ ಸ್ಥಳವನ್ನಾಗಿ ರೂಪಿಸಿದರು ಎಂದು ಹೇಳಲಾಗುತ್ತಿದೆ. ವಿಜಯ ನಗರದಿಂದ ಆಗಮಿಸಿದ ಶಿವಶರಣರಲ್ಲಿ ಒಬ್ಬರಾದ ಶ್ರೀ ಸಿದ್ಧೇಶ್ವರಸ್ವಾಮಿಗಳು ಈ ವಾತಾವರಣಕ್ಕೆ ಮನಸೋತು ಇಲ್ಲಿಯೇ ನೆಲೆಸಬೇಕೆಂದು ನಿರ್ಧರಿಸಿ, ತಮ್ಮ ಶಿವಪೂಜಾನುಷ್ಠಾನಗಳಿಂದ ಹೆಸರು ಪಡೆದರು. ಗುರುಗಳ ಮತ್ತು ಭಕ್ತರ ಒಡನಾಟ ಹೆಚ್ಚಾದಂತೆಲ್ಲಾ ಗ್ರಾಮದ ಭಕ್ತರು ಗುರುಗಳಿಗಾಗಿ ಮಠವನ್ನು ಸ್ಥಾಪಿಸಿಕೊಡಬೇಕೆಂದು ನಿರ್ಧರಿಸಿ ನೂತನ ಮಠಕ್ಕಾಗಿ ಕಟ್ಟಡವನ್ನು ನಿರ್ಮಿಸುತ್ತಾರೆ.

ಜೀರ್ಣಗೊಂಡ ಮಠ: ನೂತನ ಮಠದ ಪ್ರಥಮ ಗುರುಗಳಾಗಿ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಹೆಚ್ಚು ಪ್ರಬುದ್ಧಮಾನಕ್ಕೆ ಬರುವಂತೆ ಮಾಡಿದ್ದಾರೆ. ಶ್ರೀ ಸಿದ್ಧೇಶ್ವರ ಸ್ವಾಮಿಗಳ ನಂತರ ಮಠದ ಅಧಿಕಾರವನ್ನು ವಹಿಸಿಕೊಂಡು ಮುನ್ನಡೆಸಿದ ಗುರುಗಳ ವಿವರ ದೊರೆಯದಾಗಿದೆ. ಈಗ ಮಠ ಪೂರ್ಣವಾಗಿ ಶಿಥಿಲಗೊಂಡಿದ್ದು ಕರ್ತೃ ಗುರುಗಳಾದ ಶ್ರೀಸಿದ್ಧೇಶ್ವರ ಸ್ವಾಮಿಗಳ ಗದ್ದುಗೆಯ ಜತೆಗೆ ಇನ್ನೂ ಒಂದು ಗದ್ದುಗೆ ನೋಡ ಸಿಗುತ್ತದೆ. ಆದರೆ ಹೆಸರು ತಿಳಿದು ಬರುತ್ತಿಲ್ಲ.

ಮಠದ ಆಸ್ತಿ: ಶ್ರೀ ಸಿದ್ಧೇಶ್ವರಸ್ವಾಮಿ ಮಠಕ್ಕೆ ಹತ್ತುಎಕರೆ ಜಮೀನು ಇದ್ದು ಇದನ್ನು ಅಭಿವೃದ್ಧಿಪಡಿಸಲಾಗಿದೆ. ಈಗಲೂ ಈ ಮಠಕ್ಕೆ ಸಂಬಂಧಪಟ್ಟವರು ಈ ಮಠದ ಜಮೀನನ್ನು ಉಳುಮೆ ಮಾಡಿಕೊಂಡು ಬರುತ್ತಿದ್ದು, ಮಠದಲ್ಲಿನ ಗದ್ದುಗೆಗಳ ಪೂಜೆ ಹಾಗೂ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಈ ಮಠದ ಧಾರ್ಮಿಕ ಉಸ್ತುವಾರಿಯನ್ನು ಚಿಲುಮೆ ಮಠದ ಗುರುಗಳೇ ನೋಡಿಕೊಂಡು ಬರುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಜಯದೇವ ಸ್ವಾಮಿಗಳು, ಶ್ರೀ ಸಿದ್ಧೇಶ್ವರಸ್ವಾಮಿಮಠ, ಸಂತೆಮರೂರು, ಅರಕಲಗೂಡು ತಾ, ಹಾಸನಜಿಲ್ಲೆ.

ಸಿರಗನಹಳ್ಳಿ

ಅರಕಲಗೂಡು ತಾಲ್ಲೂಕಿನ ಸಿರಗನಹಳ್ಳಿಯು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಪದಿನೆಂಟು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಉಜ್ಜಯಿನಿ ಶಾಖಾಮಠವು ಅಸ್ತಿತ್ವದಲ್ಲಿದೆ.

ಉಜ್ಜಯಿನಿ ಶಾಖಾಮಠ: ಸಿರಗನಹಳ್ಳಿಯ ಉತ್ತರಭಾಗದಲ್ಲಿ ಸ್ಥಾಪನೆಯಾಗಿರುವ ಉಜ್ಜಯಿನಿಪೀಠದ ಶಾಖಾಮಠವಾಗಿರುವ ಈ ಮಠವು ಶಿಷ್ಯವರ್ಗದ ಪರಂಪರೆಯಲ್ಲಿ ಬೆಳೆದಿದೆ. ಏಳು ವರ್ಷಗಳ ಹಿಂದೆ ಸ್ಥಾಪನೆಗೊಂಡ ಮಠವು ಧಾರ್ಮಿಕ ಚಟುವಟಿಕೆ ನಡೆಸಿಕೊಂಡು ಬರುತ್ತಿದೆ.

ಸಿರಗನಹಳ್ಳಿಯಲ್ಲಿ ಧಾರ್ಮಿಕ ಆಚರಣೆಗೆ ತೊಡಕಾದಾಗ ಗ್ರಾಮಸ್ಥರು ಇಲ್ಲಿ ಮಠವನ್ನು ಸ್ಥಾಪಿಸಲು ತೀರ್ಮಾನ ಕೈಗೊಂಡು ಮಠದ ಕಟ್ಟಡವನ್ನು ನಿರ್ಮಿಸಿದರು. ಅಂದು ಗ್ರಾಮಸ್ಥರ ನೆರವಿನಿಂದ ಪ್ರಾರಂಭಗೊಂಡ ನೂತನ ಮಠಕ್ಕೆ ಅಧಿಕಾರಿಗಳಾಗಿ ನೇಮಕಗೊಂಡ ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ವೀರಶೈವ ಸಿದ್ಧಾಂತವನ್ನು ಬೋಧಿಸಿ, ಧಾರ್ಮಿಕ ಕ್ರಿಯಾದಿಗಳನ್ನು ನೆರವೇರಿಸಿ ಭಕ್ತರಿಗೆ ಸಂಸ್ಕಾರವನ್ನು ನೀಡುತ್ತಿದ್ದಾರೆ. ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ಇಳಕಲ್ ಗವಿಮಠದಲ್ಲಿ ಅನುಷ್ಠಾನಗೊಂಡು ನಂತರ ಮೈಸೂರು ಜಿಲ್ಲೆಯ ಹರವೆ, ದಿಂಡಗಾಡು, ಕೊಡಗು ಜಿಲ್ಲೆಯ ಕುಶಾಲನಗರ ಮುಂತಾದ ಕಡೆಗಳಲ್ಲಿ ಸಂಚರಿಸಿ, ಸಿರಗನಹಳ್ಳಿಯ ಮಠದಲ್ಲಿ ನೆಲೆಸಿ ಅಧಿಕಾರವನ್ನು ವಹಿಸಿಕೊಳ್ಳುತ್ತಾರೆ. ನೂತನ ಮಠದಲ್ಲಿ ವೀರಭದ್ರದೇವರನ್ನು ಸ್ಥಾಪನೆ ಮಾಡಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು, ಶ್ರೀ ಉಜ್ಜಯಿನಿ ಶಾಖಾಮಠ, ಸಿರಗನಹಳ್ಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.

❑

ಆಲೂರು ತಾಲ್ಲೂಕು

ಹಾಸನ ಜಿಲ್ಲೆಯ ಆಲೂರು ತಾಲ್ಲೂಕು, ಚಿಕ್ಕ ತಾಲ್ಲೂಕಾಗಿ ರೂಪುಗೊಂಡಿದೆ. ಮಲೆನಾಡಿನ ಸೆರಗಿನಲ್ಲಿರುವ ಈ ತಾಲ್ಲೂಕು ಇತ್ತ ಮಲೆನಾಡೂ ಅಲ್ಲದೆ ಅತ್ತ ಬಯಲು ಸೀಮೆಯೂ ಅಲ್ಲದ ಸ್ಥಿತಿಯಲ್ಲಿದೆ. ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಪ್ರಮುಖವಾಗಿ ಬೆಳೆದ ಲಕ್ಷಣಗಳು ಕಂಡುಬರುತ್ತದೆ. ಪ್ರಸ್ತುತ ಎರಡು ಮಠಗಳನ್ನು ಗುರುತಿಸಬಹುದಾಗಿದೆ.

ಅಬ್ಬನ

ಆಲೂರು ತಾಲ್ಲೂಕಿನ ಕೆಂಚಮ್ಮನ ಅಬ್ಬನ ಗ್ರಾಮವು ತಾಲ್ಲೂಕು ಕೇಂದ್ರದ ಪಶ್ಚಿಮಕ್ಕೆ ಹತ್ತು ಕಿ.ಮೀ. ದೂರದಲ್ಲಿದೆ. ಸಕಲೇಶಪುರ ಮತ್ತು ಆಲೂರು ರಸ್ತೆಯ ಬಲಭಾಗಕ್ಕೆ ಮೂರು ಕಿ.ಮೀ. ಒಳದಾರಿಯಲ್ಲಿ ಸಾಗಿದರೆ ಸಿಗುವ ಮಠವೇ ಶ್ರೀಸಂಗಮೇಶ್ವರ ಮಠ ಅಥವಾ ಸಂಗಯ್ಯನಮಠ.

ಸಂಗಮೇಶ್ವರಮಠ: ಚಿಕ್ಕಮಗಳೂರು ಜಿಲ್ಲೆಯ ನಿರ್ವಾಣಸ್ವಾಮಿ, ಮುಳ್ಳಯ್ಯನಗಿರಿ ಮತ್ತು ಸೀತಾಳಯ್ಯನಗಿರಿಯ ಸಂಬಂಧ ವನ್ನು ಹೊಂದಿರುವ ಸಂಗಮೇಶ್ವರ ಮಠವು, ರಾಜ್ಯದ ವಿವಿಧ ಕಡೆ ಸ್ಥಾಪನೆಗೊಂಡಿರುವ ಎಪ್ಪತ್ತೇಳು ಗದ್ದುಗೆಗಳಲ್ಲಿ ಹಿರಿಯ ಗದ್ದುಗೆ ಇದಾಗಿದೆ ಎಂದು ಹೇಳಲಾಗುತ್ತಿದೆ. ಉತ್ತರದ ಕಡೆಯಿಂದ ಬಂದಂತಹ ಶರಣರ ಗುಂಪು ಕಡೂರು ಭಾಗದಿಂದ ಚಿಕ್ಕಮಗಳೂರು ಕಡೆಗೆ ಒಂದುಗುಂಪು ಹೋದರೆ, ಈ ಭಾಗಕ್ಕೆ ಶ್ರೀ ಸಂಗಮೇಶ್ವರ ಸ್ವಾಮಿಗಳು ಆಗಮಿಸಿದರು. ಆಲೂರು ತಾಲ್ಲೂಕಿನ ನಿಡನೂರು ದಿಬ್ಬದಲ್ಲಿ ತಮ್ಮ ಬೆತ್ತವನ್ನು ಊರಿದ ಶ್ರೀಸಂಗಮೇಶ್ವರರು ಇದು ತಪೋನುಷ್ಠಾನಕ್ಕೆ ಯೋಗ್ಯವಾದ ಸ್ಥಳವಲ್ಲ ಎಂದು ಅರಿತು ಅಬ್ಬನ ಗ್ರಾಮಕ್ಕೆ ಬಂದು ಗ್ರಾಮದ ಹೊರಭಾಗದ ಪ್ರಶಾಂತ ಸ್ಥಳದಲ್ಲಿ ನೆಲೆಗೊಳ್ಳುತ್ತಾರೆ.

ಮಠಸ್ಥಾಪನೆ: ಶ್ರೀ ಸಂಗಮೇಶ್ವರ ಸ್ವಾಮಿಗಳು ಅಬ್ಬನ ಗ್ರಾಮದಲ್ಲಿ ನೆಲೆನಿಂತು ಅನೇಕ ವರ್ಷಗಳ ಕಾಲ ದೀರ್ಘ ತಪಸ್ಸನ್ನು ಆಚರಿಸಿ ಈ ಸ್ಥಳವನ್ನು ಜಾಗೃತಸ್ಥಳವನ್ನಾಗಿ ಮಾಡಿದರು.ಗುರುಗಳು ಇಲ್ಲಿ ತಪೋನುಷ್ಠಾನಕ್ಕೆ ಕುಳಿತ ಸಂದರ್ಭದಲ್ಲಿ ಊರಿನ ಭಕ್ತರು ಗುರುಗಳ ಅನುಗ್ರಹಕ್ಕಾಗಿ ಬಂದು ಆಶೀರ್ವಾದವನ್ನು ಪಡೆದು ಹೋಗುತ್ತಿದ್ದರು. ಈ ರೀತಿ ಗುರು ಶಿಷ್ಯರ ನಡುವಿನ ಸಂಬಂಧ ನಿರಂತರವಾಗಿ ಬೆಳೆದ ಮೇಲೆ ಶ್ರೀಸಂಗಮೇಶ್ವರ ಸ್ವಾಮಿಗಳು ಲೋಕೋದ್ಧಾರಕ್ಕಾಗಿ ತಪೋನುಷ್ಠಾನ ಕೈಗೊಂಡಿದ್ದ ಈ ಸ್ಥಳದಲ್ಲಿ ಮಠವನ್ನು ಸ್ಥಾಪನೆ ಮಾಡಿ ಧರ್ಮಪ್ರಚಾರವನ್ನು ಕೈಗೊಳ್ಳುತ್ತಾರೆ.

ಧಾರ್ಮಿಕ ಕಾರ್ಯಗಳು: ಈ ಮಠವು ಶ್ರೀ ಸಂಗಮೇಶ್ವರ ಸ್ವಾಮಿಗಳ ನಂತರ ಉತ್ತರಾಧಿಕಾರಿಗಳು ಯಾರೂಇಲ್ಲದೆ ಮಠವು ಖಾಲಿ ಉಳಿಯಿತು. ಶ್ರೀ ಸಂಗಮೇಶ್ವರ ಸ್ವಾಮಿಗಳ ಗದ್ದುಗೆಯನ್ನು ಮಠದ ಗರ್ಭಾಂಕಣದಲ್ಲಿ ಸ್ಥಾಪಿಸಲಾಗಿದೆ. ಕರ್ತೃಗುರುಗಳ ಗದ್ದುಗೆಯ ಎದುರು ಭೂತನಗುಡಿಯನ್ನು ಸ್ಥಾಪಿಸಲಾಗಿದೆ. ಕರ್ತೃಗುರುಗಳ ಗದ್ದುಗೆಗೆ ದಿನದ ಎರಡೂ ವೇಳೆ ಶ್ರೀ ಕೆ.ಎಸ್. ಚಂದ್ರಶೇಖರಯ್ಯ ಮತ್ತು ಅವರ ಮಕ್ಕಳು ಪೂಜಾ ಕಾರ್ಯಗಳನ್ನು ಮಾಡಿಕೊಂಡು ಬರುತ್ತಿದ್ದಾರೆ.

ಶ್ರೀ ಸಂಗಮೇಶ್ವರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಈ ತನಕವೂ ಮಠಕ್ಕೆ ಉತ್ತರಾಧಿಕಾರಿಗಳನ್ನು ನೇಮಿಸದಿದ್ದರೂ ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ ಬಂದಿದ್ದು, ಪ್ರತಿ ಶ್ರಾವಣ ಮತ್ತು ಕಾರ್ತೀಕಮಾಸಗಳಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ನಿತ್ಯ ರುದ್ರಾಭಿಷೇಕ ಪೂಜೆಯನ್ನು ನೆರವೇರಿಸಲಾಗುತ್ತಿದೆ.ಈ ದಿನಗಳಲ್ಲಿ ಮಠಕ್ಕೆ ಬಂದಂತಹ ಭಕ್ತರಿಗೆ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.ಮಠದ ಸುತ್ತಲೂ ಇರುವ ಜಮೀನನ್ನು ಅಭಿವೃದ್ಧಿ ಪಡಿಸಿ ರುವ ಮಠದ ಆಡಳಿತಾಧಿಕಾರಿಗಳು ಕಾಫಿತೋಟವನ್ನು ಮಾಡಿದ್ದು, ಅದರಿಂದ ಹೆಚ್ಚು ಆದಾಯ ಬರುವಂತೆ ಮಾಡಿಕೊಂಡಿದ್ದಾರೆ.

ವಿಳಾಸ: ಶ್ರೀ ಚಂದ್ರಶೇಖರಯ್ಯ ಮಠದ ಆಡಳಿತಾಧಿಕಾರಿಗಳು, ಶ್ರೀ ಸಂಗಮೇಶ್ವರ ಮಠ, ಅಬ್ಬನ, ಆಲೂರು ತಾ, ಹಾಸನ ಜಿಲ್ಲೆ.

ಸಂಕಲಾಪುರ

ಆಲೂರು ತಾಲ್ಲೂಕಿನ ಪಾಳ್ಯ ಹೋಬಳಿಯ ಸಂಕಲಾಪುರವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿನಾರು ಕಿ.

ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಸಂಕಲಾಪುರಮಠವು ಅಸ್ತಿತ್ವದಲ್ಲಿದೆ.

ಸಂಕಲಾಪುರಮಠ: ಸಂಕಲಾಪುರದ ಪೂರ್ವಭಾಗದಲ್ಲಿ ಸ್ಥಾಪಿಸಲ್ಪಟ್ಟಿರುವ ವಿರಕ್ತಮಠವು ಮುರುಘಾ ಸಮಯದ ಶಾಖಾ ಮಠವಾಗಿ ಬೆಳೆದಿದೆ. ಕೊಡಗಿನ ಪುಷ್ಪಗಿರಿಯಲ್ಲಿ ಮೂಲ ಮಠವಿದ್ದು ಕಾರಣಾಂತರದಿಂದ ಇಲ್ಲಿಗೆ ಸ್ಥಳಾಂತರಗೊಂಡು ತನ್ನ ಧಾರ್ಮಿಕ ಕಾರ್ಯಗಳನ್ನು ಮುನ್ನಡೆಸಿಕೊಂಡು ಬಂದಿದೆ.

ಮಠ ಸ್ಥಾಪನೆ: ಶ್ರೀ ಶಾಂತಲಿಂಗೇಶ್ವರ ತಪಸ್ವಿಗಳು ಲೋಕಸಂಚಾರಕ್ಕೆಂದು ಬಂದವರು ನೆಲೆಗೊಳ್ಳಲು ತಪೋಸ್ಥಳಕ್ಕಾಗಿ ಅನ್ವೇಷಿಸತೊಡಗಿದರು. ತಮ್ಮ ತಪೋ ಶಕ್ತಿಯಿಂದ ಈ ಸ್ಥಳವನ್ನು ಗುರುತಿಸಲು ತಮ್ಮ ಬಳಿಯಲ್ಲಿದ್ದ ನಿಂಬೆಹಣ್ಣನ್ನು ಮಂತ್ರಿಸಿ ನೆಲಕ್ಕೆ ಉರುಳಿಬಿಟ್ಟು ನಿಂಬೆ ಹಣ್ಣು ಎಲ್ಲಿ ನಿಲ್ಲುತ್ತದೆಯೋ ಆ ಸ್ಥಳದಲ್ಲಿ ಅನುಷ್ಠಾನಗೊಳ್ಳಲು ನಿರ್ಧಾರ ಕೈಗೊಂಡರಂತೆ. ಉರುಳಿಬಿಟ್ಟ ನಿಂಬೆಹಣ್ಣು ಸಂಕಲಾಪುರದ ಪೂರ್ವಭಾಗದ ಪ್ರದೇಶದಲ್ಲಿ ಬಂದು ನಿಂತುಕೊಂಡಿತು. ಚಲಿಸುತ್ತಿದ್ದ ನಿಂಬೆಹಣ್ಣನ್ನೇ ಹಿಂಬಾಲಿಸಿಕೊಂಡು ಬಂದ ಶ್ರೀ ಶಾಂತಲಿಂಗೇಶ್ವರ ತಪಸ್ವಿಗಳು ಈ ಪ್ರಶಾಂತವಾದ ವಾತಾವರಣ ದಲ್ಲಿ ನೆಲೆಗೊಂಡು ಮಠಸ್ಥಾಪನೆ ಮಾಡಿದರೆಂದು ಹೇಳಲಾಗುತ್ತಿದೆ.

ಹಿರೇಕೋಟೆ ಮತ್ತು ಚಿಕ್ಕೋಟೆ ಪಾಳೆಗಾರಿಕೆಯ ಕಾಲದಲ್ಲಿ ಗ್ರಾಮಗಳಲ್ಲಿ ವ್ಯಾಜ್ಯ ನಡೆದರೆ ನ್ಯಾಯ ತೀರ್ಮಾನಕ್ಕೆಂದು ದೂರುಗಳು ಪಾಳೆಗಾರರಲ್ಲಿಗೆ ಬರುತ್ತಿದ್ದವು. ಪಾಳೆಗಾರರು ನ್ಯಾಯ ತೀರ್ಮಾನ ಮಾಡುವ ಜವಾಬ್ದಾರಿಯನ್ನು ಶ್ರೀ ಶಾಂತಲಿಂಗೇ ಶ್ವರ ತಪಸ್ವಿಗಳಿಗೆ ವಹಿಸಿಕೊಟ್ಟಿದ್ದರು. ಗುರುಗಳು ತಪ್ಪಿತಸ್ಥರಿಗೆ ನಿರ್ದಾಕ್ಷಿಣ್ಯವಾಗಿ ಸಂಕೋಲೆ ಹಾಕಿಸುತ್ತಿದ್ದರು. ಈ ಕಾರಣಕ್ಕೆ ಗುರುಗಳು ನೆಲೆನಿಂತ ಈ ಸ್ಥಳ 'ಸಂಕೋಲೆಪುರ' ಎಂದು ಹೆಸರು ಪಡೆಯಿತು. ಕಾಲಾನಂತರ ಈ ಹೆಸರು ಸಂಕಲಾಪುರ ಎಂದು ಅನ್ವರ್ಥಗೊಂಡಿದೆ.ಈ ಗ್ರಾಮದಲ್ಲಿ ಮಠವನ್ನು ಸ್ಥಾಪಿಸಿದ ಶ್ರೀ ಶಾಂತಲಿಂಗೇಶ್ವರ ತಪಸ್ವಿಗಳು ಧಾರ್ಮಿಕ ಆಚರಣೆಯ ಜತೆಗೆ ಸಾಮಾಜಿಕ ನ್ಯಾಯ ಕಾರ್ಯಗಳನ್ನು ಮಾಡಿ ಜನರನ್ನು ಧರ್ಮ ಮತ್ತು ನೀತಿಪರರಾಗಿ ಮಾಡುತ್ತಿದ್ದರು.

ಪರಂಪರೆ: ಕೊಡಗಿನ ಪುಷ್ಪಗಿರಿಯಿಂದ ಬಂದ ಶ್ರೀ ಶಾಂತಲಿಂಗೇಶ್ವರ ತಪಸ್ವಿಗಳು ಲಿಂಗೈಕ್ಯರಾದ ನಂತರ ಕೆಲವು ಮಠಾಧೀಶ್ವ ರರು ಆಡಳಿತವನ್ನು ನಡೆಸಿದ ಬಗ್ಗೆ ಹೇಳಲಾಗುತ್ತಿದೆಯಾದರೂ, ಇದನ್ನು ಸ್ಪಷ್ಟಪಡಿಸುವ ಯಾವುದೇ ಆಧಾರಗಳು ಲಭ್ಯವಿಲ್ಲ. ಸುಮಾರು ಎಪ್ಪತ್ತು-ಎಂಬತ್ತು ವರ್ಷಗಳಿಂದ ಮಠಾಧೀಶ್ವರರು ಯಾರೂ ಇಲ್ಲದೆ ಖಾಲಿ ಉಳಿದಿದ್ದ ಮಠಕ್ಕೆ ಉತ್ತರಾಧಿಕಾರಿ ಗಳನ್ನು ನೇಮಕ ಮಾಡಬೇಕೆಂದು ಗ್ರಾಮಸ್ಥರು ತೀರ್ಮಾನವನ್ನು ಕೈಗೊಂಡರು. ವಂಶಪಾರಂಪರ್ಯ ಮಠವಾದ ಈ ಮಠಕ್ಕೆ ಹಿಂದಿನ ಗುರುಗಳ ವಂಶಸ್ಥರಲ್ಲಿ ಒಬ್ಬರನ್ನು ಉತ್ತರಾಧಿಕಾರಿಗಳನ್ನಾಗಿ ಆಯ್ಕೆಮಾಡಿಕೊಳ್ಳಲು ಮುಂದಾದರು.

ಹನಬಾಳು ಗ್ರಾಮದ ಶ್ರೀ ಸಂಗಯ್ಯ ಮತ್ತು ಶ್ರೀಮತಿ ಬಸಮ್ಮನವರ ಪುತ್ರರಾಗಿ ೧೯೫೯ರ ಏಪ್ರಿಲ್ ಇಪ್ಪತ್ತಾರರಂದು ಜನಿಸಿದ ಶ್ರೀ ಧರ್ಮರಾಜೇಂದ್ರ ಸ್ವಾಮಿಗಳು ಸಂಕಲಾಪುರ, ಬೆಳಕೋಡು ಗ್ರಾಮಗಳಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ, ಪ್ರೌಢ ಶಿಕ್ಷಣಕ್ಕೆ ಸಿದ್ಧಗಂಗೆಗೆ ಆಗಮಿಸುತ್ತಾರೆ. ಸಿದ್ಧಗಂಗಾ ಮಠದಲ್ಲಿ ಆಶ್ರಯವನ್ನು ಪಡೆದು ಸಂಸ್ಕೃತ, ವೇದಾಧ್ಯಯನದ ಜತೆಗೆ ಕಾಲೇಜು ವಿದ್ಯಾಭ್ಯಾಸವನ್ನು ಮುಗಿಸಿದ ಶ್ರೀ ಧರ್ಮರಾಜೇಂದ್ರ ಸ್ವಾಮಿಗಳು ೧೯೬೦ರಲ್ಲಿ ಸಂಕಲಾಪುರದ ಮಠದ ಪಟ್ಟಾಧಿಕಾ ರವನ್ನು ವಹಿಸಿಕೊಂಡರು. ಬಂಡೆಮಠದ ಚರಮೂರ್ತಿ ಶ್ರೀ ಶಿವರುದ್ರಸ್ವಾಮಿಗಳು ಪಟ್ಟಾಧಿಕಾರದ ಅನುಗ್ರಹವನ್ನು ನೀಡಿದರು. ಈ ಸಂದರ್ಭದಲ್ಲಿ ಸಿದ್ಧಗಂಗಾ ಮಠದ ಡಾ. ಶ್ರೀ ಶಿವಕುಮಾರ ಸ್ವಾಮಿಗಳು ಸಾನ್ನಿಧ್ಯವನ್ನು ವಹಿಸಿದ್ದರು. ಶ್ರೀಧರ್ಮರಾಜೇಂದ್ರ ಸ್ವಾಮಿಗಳು ಮಠದ ಆಡಳಿತವನ್ನು ವಹಿಸಿಕೊಂಡ ಮೇಲೆ ಶಿಥಿಲಗೊಂಡಿದ್ದ ಮಠದ ಕಟ್ಟಡವನ್ನು ಪೂರ್ಣ ತೆಗೆಸಿ, ಆವಶ್ಯಕತೆಗೆ ತಕ್ಕಂತೆ ಕಟ್ಟಡವನ್ನು ನಿರ್ಮಿಸಿಕೊಂಡು ಧಾರ್ಮಿಕ ಕಾರ್ಯಕ್ರಮಗಳನ್ನು ಪ್ರಾರಂಭಿಸಿದರು. ವೀರಶೈವ ಧರ್ಮದ ಆಚರಣೆಗಳ ಬಗ್ಗೆ ಭಕ್ತರಿಗೆ ಮಾರ್ಗದರ್ಶನವನ್ನು ನೀಡಿ, ಮಠ ಮತ್ತು ಜನ ಸಾಮಾನ್ಯರ ಮಧ್ಯೆ ಕೊಂಡಿಯಾಗಿ ಬೆಳೆದರು.

ಅಭಿವೃದ್ಧಿ ಕಾರ್ಯಗಳು: ಶ್ರೀ ಧರ್ಮರಾಜೇಂದ್ರ ಸ್ವಾಮಿಗಳು ಮಠದ ಆಸ್ತಿಯಾಗಿದ್ದ ಹದಿನಾಲ್ಕು ಎಕರೆ ಜಮೀನನ್ನು ಅಭಿವೃದ್ಧಿ ಪಡಿಸಿ, ಕಾಯಕಯೋಗಿಗಳಾಗಿ ದುಡಿದು ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ಜಮೀನಿನಿಂದ ಬಂದ ಆದಾಯ ಮತ್ತು ಭಕ್ತರ ನೆರವು ಪಡೆದು ಗುರುಗಳ ವಾಸ್ತವ್ಯ ಕೊಠಡಿ, ಕಲ್ಯಾಣಮಂಟಪ ಹಾಗೂ ಕರ್ತೃಗುರುಗಳ ಗದ್ದುಗೆಗೆ ಮಂಟಪ,

ದಾಸೋಹನಿಲಯ ಈ ರೀತಿ ಅನೇಕ ಕಟ್ಟಡಗಳನ್ನು ನಿರ್ಮಿಸಿ ಮಠವನ್ನು ಅಭಿವೃದ್ಧಿಪಡಿಸಿದರು.

ಧಾರ್ಮಿಕ ಕೆಲಸ: ಗುರುಗಳು ಅಧಿಕಾರಕ್ಕೆ ಬಂದ ಮೇಲೆ ಮಠದ ಪರಂಪರೆಯ ಗುರುಗಳ ಗದ್ದುಗೆಗಳನ್ನು ಗುರುತಿಸುವ ಕಾರ್ಯಕ್ಕೆ ಮುಂದಾದರು. ಆದರೆ ಕರ್ತೃಗುರುಗಳ ಗದ್ದುಗೆಯೊಂದನ್ನು ಹೊರತುಪಡಿಸಿ ಉಳಿದ ಎಲ್ಲಾ ಗದ್ದುಗೆಗಳು ಗುರುತಿಸಲಾಗದಂತೆ ನಶಿಸಿ ಹೋಗಿದ್ದವು. ಈ ಕಾರಣಕ್ಕೆ ಕರ್ತೃಗುರುಗಳ ಗದ್ದುಗೆಯೊಂದನ್ನೇ ನವೀಕರಣಗೊಳಿಸಿ ಪೂಜೆಗೆ ಅಣಿಗೊಳಿಸಿದರು. ಕಾರ್ತೀಕ, ಶ್ರಾವಣಮಾಸಗಳಲ್ಲಿ ನಿತ್ಯ ರುದ್ರಾಭಿಷೇಕ ಪೂಜೆಯನ್ನು ನೆರವೇರಿಸಿ ಭಕ್ತರನ್ನು ಒಲಿಸಿಕೊಳ್ಳ ತೊಡಗಿದ್ದಾರೆ. ಕರ್ತೃಗುರುಗಳಾದ ಶ್ರೀ ಶಾಂತಲಿಂಗೇಶ್ವರರ ಜಾತ್ರೆಯನ್ನು ಪ್ರತಿ ವರ್ಷ ಕಾರ್ತೀಕ ಮಾಸದಲ್ಲಿ ನೆರವೇರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಸೇರುವ ಸಾವಿರಾರು ಭಕ್ತರಿಗೆ ಅನ್ನದಾಸೋಹದ ವ್ಯವಸ್ಥೆಯನ್ನು ಕಲ್ಪಿಸಿಕೊಡಲಾಗುತ್ತದೆ. ಹುಣ್ಣಿಮೆ ಮತ್ತು ಪ್ರತಿ ಸೋಮವಾರದಂದು ರುದ್ರಾಭಿಷೇಕವನ್ನು ಮಾಡಲಾಗುತ್ತಿದೆ. ಶ್ರೀ ಶಾಂತಲಿಂಗೇಶ್ವರ ಗುರುಗಳ ಗದ್ದುಗೆಯ ಎದುರಿನಲ್ಲಿ ಶ್ರೀ ಶಂಕರಲಿಂಗೇಶ್ವರ ದೇವಸ್ಥಾನ ಮತ್ತು ಮಠದಮ್ಮನವರ ಕಟ್ಟೆ ಸ್ಥಾಪಿತಗೊಂಡಿವೆ.
ವಿಳಾಸ: ಶ್ರೀ ಮ.ನಿ.ಪ್ರ.ಧರ್ಮರಾಜೇಂದ್ರ ಸ್ವಾಮಿಗಳು, ಶ್ರೀ ಸಂಕಲಾಪುರ ಮಠ, ಸಂಕಲಾಪುರ, ಮಡಬಲು ಅಂಚೆ, ಆಲೂರು ತಾಲ್ಲೂಕು, ಹಾಸನ ಜಿಲ್ಲೆ.

❑

ಚನ್ನರಾಯಪಟ್ಟಣ ತಾಲ್ಲೂಕು

ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕು, ಪುರಾಣ ಹಾಗೂ ಐತಿಹಾಸಿಕ ಪ್ರಸಿದ್ಧ ಸ್ಥಳ. ಇಲ್ಲಿ ಜೈನ ಸಂಸ್ಕೃತಿಯ ಪ್ರಭಾವ ಹೆಚ್ಚಾಗಿದ್ದು, ಇಲ್ಲಿನ ಗೊಮ್ಮಟೇಶ್ವರ ವಿಗ್ರಹ ಲೋಕ ವಿಖ್ಯಾತಗೊಂಡಿದೆ. ಇಲ್ಲಿ ವೀರಶೈವ ಧರ್ಮ ಅಷ್ಟೇನೂ ಪ್ರಮುಖವಾಗಿ ಬೆಳೆದಂತೆ ಕಂಡುಬರುವುದಿಲ್ಲ. ಇಲ್ಲಿ ಅನೇಕ ಮಠಗಳು ಸ್ಥಾಪನೆಯಾಗಿದ್ದರೂ ಕಾಲಾನಂತರ ಮರೆಯಾಗಿದ್ದು, ಎರಡು ಮಠಗಳನ್ನು ಮಾತ್ರ ಗುರುತಿಸಬಹುದಾಗಿದೆ.

ಚನ್ನರಾಯಪಟ್ಟಣ

ತಾಲ್ಲೂಕಿನ ಕೇಂದ್ರ ಸ್ಥಳವಾಗಿ ಬೆಳೆದಿರುವ ಚನ್ನರಾಯಪಟ್ಟಣವು ತೆಂಗಿನ ಬೆಳೆಯಿಂದ ಆರ್ಥಿಕವಾಗಿ ಮುಂದುವರೆದಿದೆ. ಇಲ್ಲಿ ಶ್ರೀ ಕಾಡುಸಿದ್ಧೇಶ್ವರಮಠವು ಅಸ್ತಿತ್ವದಲ್ಲಿತ್ತು.

ಕಾಡುಸಿದ್ಧೇಶ್ವರಮಠ: ಚನ್ನರಾಯಪಟ್ಟಣದ ಅರಳಿಪೇಟೆಯಲ್ಲಿ ಕಾಡು ಬಸವೇಶ್ವರಮಠ ಪುರಾತನ ಕಾಲದಲ್ಲಿ ಸ್ಥಾಪನೆಯಾಗಿತ್ತು. ಈ ಮಠವು ಸ್ವಾತಂತ್ರ್ಯ ಪೂರ್ವದಲ್ಲೇ ಅಸ್ತಿತ್ವದಲ್ಲಿದ್ದು, ಇಲ್ಲಿ ಗುರುಗಳು ನೆಲೆಸಿ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿದ್ದರು. ಗುರುಗಳು ಲಿಂಗೈಕ್ಯರಾದ ಮೇಲೆ ಮಠಕ್ಕೆ ಉತ್ತರಾಧಿಕಾರಿಗಳನ್ನು ನೇಮಿಸದೆ ಹೋದ ಕಾರಣ ಸ್ವಾತಂತ್ರ್ಯಾ ನಂತರವೂ ಮಠ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತ್ತು. ಈಗ ಚನ್ನರಾಯಪಟ್ಟಣದ ವೀರಶೈವರು ಮಠದ ಅಸ್ತಿತ್ವವನ್ನು ಉಳಿಸಿಕೊಳ್ಳುವ ಪ್ರಯತ್ನದಿಂದ ಕಾಡುಬಸವೇಶ್ವರರ ಗದ್ದುಗೆಗೆ ನಿತ್ಯ ಪೂಜೆಗೆ ವ್ಯವಸ್ಥೆ ಮಾಡಿಸಿದ್ದಾರೆ.

ಗುರುಗಳು ಲಿಂಗೈಕ್ಯರಾದ ಮೇಲೆ ಮಠದಲ್ಲಿ ಹೇಳುವವರು ಕೇಳುವವರು ಯಾರೂ ಇಲ್ಲದ ಕಾರಣ ಮಠದ ಸುತ್ತಲೂ ಇದ್ದ ನಿವೇಶನ ಅನ್ಯರ ಪಾಲಾಗಿ ಹೋಗಿದೆ. ಇತ್ತೀಚೆಗೆ ಎಚ್ಚೆತ್ತು ಕೊಂಡ ವೀರಶೈವರು ವೀರಶೈವ ಯುವವೇದಿಕೆಯನ್ನು ರಚಿಸಿಕೊಂಡು ಮಠದ ಆವರಣದಲ್ಲಿ ತಮ್ಮ ಕಾರ್ಯ ಚಟುವಟಿಕೆಗಳನ್ನು ಪ್ರಾರಂಭಿಸಿದ್ದಾರೆ. ಮಠದಲ್ಲಿ ಧಾರ್ಮಿಕ ಚಟುವಟಿಕೆಗಳು ನಡೆಯುವಂತೆ ವ್ಯವಸ್ಥೆ ಮಾಡಿದ್ದಾರೆ. ಚನ್ನರಾಯಪಟ್ಟಣದಲ್ಲಿ ಬಸವನ ಕಟ್ಟೆ ಎಂದು ಹೆಸರಾಗಿದ್ದ ವೀರಶೈವ ಮಠದ ಜಾಗ, ಇಂದು ಸಂತೆನಡೆಯುವ ಜಾಗವಾಗಿ ರೂಪಾಂತರಗೊಂಡಿದೆ.

ವಿಳಾಸ: ವೀರಶೈವ ಯುವ ವೇದಿಕೆ, ಶ್ರೀ ಕಾಡುಬಸವೇಶ್ವರ ಮಠ, ಅರಳಿ ಪೇಟೆ, ಚನ್ನರಾಯಪಟ್ಟಣ, ಹಾಸನ ಜಿಲ್ಲೆ.

ನುಗ್ಗೇಹಳ್ಳಿ

ಚನ್ನರಾಯಪಟ್ಟಣ ತಾಲ್ಲೂಕಿನ ನುಗ್ಗೇಹಳ್ಳಿಯು, ತಾಲ್ಲೂಕು ಕೇಂದ್ರಸ್ಥಾನದಿಂದ ಈಶಾನ್ಯಕ್ಕೆ ಹದಿನೈದು ಕಿ.ಮೀ.ದೂರದಲ್ಲಿರುವ ಒಂದು ಅಭಿವೃದ್ಧಿಶೀಲ ಗ್ರಾಮ. ಇಲ್ಲಿ ಶ್ರೀ ಪುರವರ್ಗದ ಮಠವು ಅಸ್ತಿತ್ವದಲ್ಲಿದೆ.

ಪುರವರ್ಗದಮಠ: ನುಗ್ಗೇಹಳ್ಳಿಯಲ್ಲಿ ರಂಭಾಪುರಿ ಪೀಠದ ಶಾಖಾಮಠವಾದ ನುಗ್ಗೇಹಳ್ಳಿ - ಐನಹಳ್ಳಿ ಪುರವರ್ಗದ ಮಠವು ಸ್ಥಾಪನೆಯಾಗಿದೆ. ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದು ಬಂದಿದೆ. ಈ ಮಠದಲ್ಲಿ ಪ್ರಸ್ತುತ ಮಠಾಧೀಶ್ವರರಾದ ಶ್ರೀಮೃತ್ಯುಂಜಯ ಸ್ವಾಮಿಗಳು ಮೈಸೂರು ಮಹಾರಾಜ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ವಿಶೇಷ ಸಂದರ್ಭದಲ್ಲಿ ಮಠಕ್ಕೆ ಬಂದು ಮಠದ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಡುತ್ತಾರೆ. ಉಳಿದಂತೆ ಈ ಮಠದ ವಂಶಸ್ಥರೇ ನಿತ್ಯದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಮಠದ ಆವರಣದ ಹೊರ ಭಾಗದಲ್ಲಿ ಶ್ರೀ ದೊಡ್ಡ ಸ್ವಾಮಿಗಳು ಮತ್ತು ಶ್ರೀ ಪ್ರಭು ಸ್ವಾಮಿಗಳ ಗದ್ದುಗೆಗಳು ನಿರ್ಮಾಣಗೊಂಡಿವೆ. ಮಠದ ಆಸ್ತಿಯಾಗಿ ಜಮೀನು ಇಲ್ಲದಿದ್ದರೂ, ಗದ್ದುಗೆ ಪೂಜೆಯನ್ನು ಮಾತ್ರ ಮಾಡಿಕೊಂಡು ಬರುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಮೃತ್ಯುಂಜಯ ಶಿವಾಚಾರ್ಯ ಸ್ವಾಮಿಗಳು, ಶ್ರೀ ಪುರವರ್ಗದ ಮಠ, ನುಗ್ಗೇಹಳ್ಳಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ.

❑

ಬೇಲೂರು ತಾಲ್ಲೂಕು

ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕು ಐತಿಹಾಸಿಕ ಹಾಗೂ ಸಾಂಸ್ಕೃತಿಕವಾಗಿ ದೇಶ ವಿದೇಶಗಳ ಗಮನವನ್ನು ಸೆಳೆದಿದೆ. ಬೇಲೂರು ಮತ್ತು ಹಳೇಬೀಡಿನ ಶಿಲ್ಪಕಲೆಗಳು ನಾಡಿಗೆ ಹೆಸರು ತಂದುಕೊಟ್ಟಿದೆ. ಇಂತಹ ತಾಲ್ಲೂಕಿನಲ್ಲಿ ವೀರಶೈವ ಧರ್ಮ ಪ್ರಬಲವಾಗಿ ಅಲ್ಲದಿದ್ದರೂ ಸಾಧಾರಣ ಮಟ್ಟದಲ್ಲಿ ಬೆಳೆದಿದೆ. ಇಲ್ಲಿ ಮೂರು ಮಠಗಳು ಅಸ್ತಿತ್ವದಲ್ಲಿವೆ.

ಚಿಲ್ಕೂರು

ಬೇಲೂರು ತಾಲ್ಲೂಕಿನ ಚಿಲ್ಕೂರು, ತಾಲ್ಲೂಕು ಕೇಂದ್ರದ ಪಶ್ಚಿಮಕ್ಕೆ ಹತ್ತು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀಪುಷ್ಪಗಿರಿ-ಚಿಲ್ಕೂರುಮಠವು ಅಸ್ತಿತ್ವದಲ್ಲಿದೆ.

ಪುಷ್ಪಗಿರಿ-ಚಿಲ್ಕೂರುಮಠ: ಚಿಲ್ಕೂರು ಗ್ರಾಮದಲ್ಲಿ ಇನ್ನೂರು ವರ್ಷಗಳ ಹಿಂದೆ ಮಠ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ. ಚಿಲ್ಕೂರಿನಲ್ಲಿ ಸ್ಥಾಪನೆಯಾಗುವ ಮೊದಲು ಬೇಲೂರು ತಾಲ್ಲೂಕಿನ ಪುಷ್ಪಗಿರಿಯ ಮಲ್ಲಿಕಾರ್ಜುನ ದೇವಾಲಯದ ಆವರಣದಲ್ಲಿ ಮಠ ಸ್ಥಾಪನೆಗೊಂಡಿತ್ತೆಂದು ಹೇಳಲಾಗುತ್ತಿದೆ. ನಂತರ ಚಿಲ್ಕೂರಿಗೆ ಸ್ಥಳಾಂತರಗೊಂಡಿದೆ. ಹೊಯ್ಸಳರ ರಾಜಧಾನಿಯಾಗಿದ್ದ ದೋರ ಸಮುದ್ರದ ಹತ್ತಿರವಿದ್ದ ಪುಷ್ಪಗಿರಿಯ ಮಲ್ಲಿಕಾರ್ಜುನಸ್ವಾಮಿ ಹೊಯ್ಸಳರ ಆರಾಧ್ಯದೈವವಾಗಿತ್ತು. ಹೊಯ್ಸಳರ ಎರಡನೆಯ ವೀರಬಲ್ಲಾಳನ ರಾಣಿಯಾದ ಉಮಾದೇವಿ ಹಾಗೂ ಆತನ ಮಗ ಎರಡನೆಯ ನರಸಿಂಹನ ಕಾಲದಲ್ಲಿ ದೇವಾಲಯದ ಧಾರ್ಮಿಕ ಚಟುವಟಿಕೆಗಳಿಗೆ ಭೂದಾನವನ್ನು ನೀಡಿ ಮಠ ಮತ್ತು ದೇವಾಲಯಗಳು ಬೆಳೆಯಲು ಸಹಾಯಕರಾಗಿದ್ದರು.

ಮಠದ ಪರಂಪರೆ: ಹರಿಹರ ತಾಲ್ಲೂಕಿನ ನಂದಿಗುಡಿಯ ಮಠದ ಸಂಬಂಧವನ್ನು ಹೊಂದಿರುವ ಈ ಮಠವು ಪಂಡಿತಾರಾಧ್ಯ ಪರಂಪರೆಗೆ ಸೇರಿದೆ. ಮಠದ ಪರಂಪರೆಯ ಎಲ್ಲಾ ಗುರುಗಳ ಹೆಸರು ಲಭ್ಯವಿಲ್ಲದ ಕಾರಣ, ಈ ಮಠವನ್ನು ಸ್ಥಾಪಿಸಿದ ಕರ್ತೃ ಗುರುಗಳು ಯಾರು ಎಂಬ ಬಗ್ಗೆ ಮಾಹಿತಿ ಇಲ್ಲದಾಗಿದೆ. ಮಠದ ಪರಂಪರೆಯ ಗುರುಗಳ ಗದ್ದುಗೆಗಳು ಪುಷ್ಪಗಿರಿ ಮತ್ತು ಚಿಲ್ಕೂರುಗಳಲ್ಲಿ ಸ್ಥಾಪನೆಗೊಂಡಿವೆ. ಈಗ ಲಭ್ಯವಿರುವ ಮಾಹಿತಿಯ ಆಧಾರದ ಮೇಲೆ ಈ ಕೆಳಗಿನಂತೆ ಮಠದ ಗುರು ಪರಂಪರೆಯನ್ನು ಗುರುತಿಸಬಹುದಾಗಿದೆ.

೧. ಶ್ರೀ ಚನ್ನಮಲ್ಲದೇಶಿಕೇಂದ್ರಸ್ವಾಮಿಗಳು
೨. ಶ್ರೀ ಬಸವರಾಜ ದೇಶಿಕೇಂದ್ರಸ್ವಾಮಿಗಳು
೩. ಶ್ರೀ ಎರಡನೆಯ ಬಸವರಾಜ ದೇಶೀಕೇಂದ್ರಸ್ವಾಮಿಗಳು (ಈಗಿನವರು)

ಶ್ರೀ ಚನ್ನಮಲ್ಲದೇಶಿಕೇಂದ್ರ ಸ್ವಾಮಿಗಳು ಮಠದ ಆಡಳಿತವನ್ನು ನಡೆಸಿಕೊಂಡು ಮಠವನ್ನು ಉದ್ಧರಿಸಿದ್ದರು. ಇವರ ನಂತರ ಮಠದ ಉತ್ತರಾಧಿಕಾರಿಗಳಾಗಿ ಶ್ರೀ ಬಸವರಾಜ ದೇಶಿಕೇಂದ್ರ ಸ್ವಾಮಿಗಳು ೧೯೦೨ ರಲ್ಲಿ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಸುಮಾರು ಐವತ್ತೆಂಟು ವರ್ಷಗಳ ಕಾಲ ಮುನ್ನಡೆಸಿ ಅಭಿವೃದ್ಧಿಪಡಿಸಿದ್ದಾರೆ. ಮಠವನ್ನು ಧಾರ್ಮಿಕ ಹಾಗೂ ಸಾಮಾಜಿಕವಾಗಿ ಬೆಳೆಸಿ ಹೆಚ್ಚು ಜನಪ್ರಿಯಗೊಳಿಸಿದ ಶ್ರೀ ಬಸವರಾಜ ದೇಶಿಕೇಂದ್ರ ಸ್ವಾಮಿಗಳು ೧೯೫೮ರಲ್ಲಿ ಲಿಂಗೈಕ್ಯರಾಗಿದ್ದಾರೆ. ನಂತರ ೧೯೬೧ರ ನವೆಂಬರ್‌ನಲ್ಲಿ ಮಠದ ಉತ್ತರಾಧಿಕಾರಿಗಳಾಗಿ ಎರಡನೆಯ ಶ್ರೀ ಬಸವರಾಜ ದೇಶಿಕೇಂದ್ರ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡಿದ್ದಾರೆ.

ಎರಡನೆಯ ಶ್ರೀ ಬಸವರಾಜ ದೇಶಿಕೇಂದ್ರ ಸ್ವಾಮಿಗಳು ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಅತ್ತಿಕಟ್ಟೆ ಗ್ರಾಮದಲ್ಲಿ ಶ್ರೀಮತಿ ಈರಮ್ಮ ಮತ್ತು ಶ್ರೀ ವೀರಯ್ಯನವರ ಪುತ್ರರಾಗಿ ೧೯೩೧ರಲ್ಲಿ ಜನಿಸಿ, ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ಹಂಸಬಾವಿಯಲ್ಲಿ ಮುಗಿಸಿ ಉನ್ನತ ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಆಗಮಿಸಿದರು. ಮೈಸೂರಿನಲ್ಲಿ ವಿದ್ಯಾಭ್ಯಾಸವನ್ನು ಮಾಡುತ್ತಿದ್ದ ಸಂದರ್ಭದಲ್ಲಿ ಭಕ್ತರ ಒತ್ತಾಸೆಯ ಮೇರೆಗೆ ಚಿಲ್ಕೂರು ಮಠಕ್ಕೆ ಉತ್ತರಾಧಿಕಾರಿಗಳಾಗಿ ನೇಮಕಗೊಂಡು,

ಮಠದ ಪೂರ್ಣ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಸಂಸ್ಕೃತದಲ್ಲಿ ಪಾಂಡಿತ್ಯವನ್ನು ಪಡೆದುಕೊಂಡ ಗುರುಗಳು ಶಿವಾದ್ವೈತ ತತ್ತ್ವವನ್ನು ಆಳವಾಗಿ ಅಭ್ಯಾಸ ಮಾಡಿಕೊಂಡಿದ್ದು, ವೀರಶೈವ ಧರ್ಮವು ಬೆಳೆಯುವಲ್ಲಿ ಶ್ರಮಿಸಿದರು. ಶಿವಪೂಜಾನಿಷ್ಠರಾಗಿ ನಿರಾಡಂಬರ ಮೂರ್ತಿಯಾಗಿದ್ದ ಗುರುಗಳು ಜನಮನದಲ್ಲಿ ಮನ್ನಣೆಪಡೆದರು. ಕಾಯಕಯೋಗಿಗಳಾದ ಎರಡನೆಯ ಶ್ರೀ ಬಸವರಾಜ ದೇಶಿಕೇಂದ್ರ ಸ್ವಾಮಿಗಳು ಮಠವನ್ನು ಹೆಚ್ಚು ಅಭಿವೃದ್ಧಿ ಪಡಿಸಿದರು.

ಅಭಿವೃದ್ಧಿ ಕಾರ್ಯಗಳು: ಎರಡನೆಯ ಶ್ರೀ ಬಸವರಾಜ ದೇಶಿಕೇಂದ್ರ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಅತ್ತಿಕಟ್ಟೆ, ಚಿಲ್ಕೂರು ಮತ್ತು ಪುಷ್ಪಗಿರಿಯಲ್ಲಿದ್ದ ಮಠದ ಜಮೀನನ್ನು ಅಭಿವೃದ್ಧಿಪಡಿಸಿ, ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ಪುಷ್ಪಗಿರಿಯಲ್ಲಿ ಕಲ್ಯಾಣ ಮಂಟಪವನ್ನು ನಿರ್ಮಿಸಲಾಗಿದ್ದು ಸಾರ್ವಜನಿಕರ ಉಪಯೋಗಕ್ಕೆ ನೀಡಲಾಗಿದೆ. ಚಿಲ್ಕೂರಿನಲ್ಲಿ ಶಿಥಿಲವಾಗಿದ್ದ ಮಠದ ಕಟ್ಟಡವನ್ನು ನವೀಕರಿಸಿದ್ದಾರೆ.

ಶೈಕ್ಷಣಿಕಸಾಧನೆ: ಎರಡನೆಯ ಶ್ರೀ ಬಸವರಾಜ ದೇಶಿಕೇಂದ್ರ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಗ್ರಾಮಾಂತರ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲೆಂದು ೧೯೬೨ ರಲ್ಲಿ ಹಳೇಬೀಡಿನಲ್ಲಿ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿದ್ದರು. ಪ್ರಾರಂಭ ಗೊಂಡ ಮೂರುವರ್ಷದ ತನಕ ನಡೆದ ವಿದ್ಯಾರ್ಥಿನಿಲಯವು ಕಾರಣಾಂತರದಿಂದ ನಿಂತುಹೋಯಿತು. ಈ ಕಟ್ಟಡದಲ್ಲಿ ನರ್ಸರಿಯಿಂದ ಪ್ರೌಢಶಾಲೆಯವರೆಗೆ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಲಾಯಿತು. ಧಾರವಾಡ ಜಿಲ್ಲೆಯ ಅತ್ತಿಕಟ್ಟೆಯಲ್ಲಿ ೧೯೬೪ರಲ್ಲಿ ಪ್ರೌಢಶಾಲೆಯನ್ನು ಪ್ರಾರಂಭಿಸಲಾಗಿದೆ. ಈ ರೀತಿ ಗ್ರಾಮಾಂತರ ಪ್ರದೇಶದಲ್ಲಿ ಶೈಕ್ಷಣಿಕಸೇವೆ ಸಲ್ಲಿಸಲಾಗುತ್ತಿದೆ.

ಧಾರ್ಮಿಕ ಕೆಲಸ: ಮಠದ ಪರಂಪರೆಯ ಗುರುಗಳ ಗದ್ದುಗೆಗಳಿಗೆ ನಿತ್ಯ ಪೂಜೆ, ಶ್ರಾವಣ,ಕಾರ್ತೀಕಮಾಸಗಳಲ್ಲಿ ವಿಶೇಷಪೂಜೆ ಯನ್ನು ನಡೆಸಲಾಗುತ್ತಿದೆ. ಗುರುಗಳು ಭಕ್ತರ ಮನೆಗಳಲ್ಲಿ ನಡೆಯುವ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಂಡು ಭಕ್ತರಿಗೆ ನೆರವಾಗುವರಲ್ಲದೆ, ಈ ಸಂದರ್ಭದಲ್ಲಿ ಧಾರ್ಮಿಕ ವಿಚಾರಗಳನ್ನು ತಿಳಿಯ ಹೇಳಿ ವೀರಶೈವ ಧರ್ಮಪ್ರಚಾರವನ್ನು ಮಾಡುತ್ತಿದ್ದಾರೆ.

ವಿಳಾಸ: ಶ್ರೀ ಬಸವರಾಜ ದೇಶಿಕೇಂದ್ರ ಸ್ವಾಮಿಗಳು, ಪುಷ್ಪಗಿರಿ-ಚಿಲ್ಕೂರುಮಠ, ಚಿಲ್ಕೂರು, ಬೇಲೂರು ತಾ, ಹಾಸನ ಜಿಲ್ಲೆ.

ಬಿಕ್ಕೋಡು

ಬೇಲೂರು ತಾಲ್ಲೂಕಿನ ಬಿಕ್ಕೋಡು ಗ್ರಾಮವು ತಾಲ್ಲೂಕು ಕೇಂದ್ರ ಸ್ಥಳದ ಪಶ್ಚಿಮಕ್ಕೆ ಹತ್ತು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಬಿಕ್ಕೋಡು ಗ್ರಾಮದ ಹೊರವಲಯದ ಪೂರ್ವದಿಕ್ಕಿನಲ್ಲಿ ಸ್ಥಾಪನೆಗೊಂಡಿರುವ ಪುರಾತನ ಕಾಲದ ವಿರಕ್ತಮಠವು ಇಲ್ಲಿನ ಧಾರ್ಮಿಕ ಹಾಗೂ ಶೈಕ್ಷಣಿಕ ಕ್ಷೇತ್ರದ ಕೇಂದ್ರವಾಗಿ ಬೆಳೆದಿದೆ.

ಮಠ ಸ್ಥಾಪನೆ: ಅರಸೀಕೆರೆ ತಾಲ್ಲೂಕಿನ ಹಾರನಹಳ್ಳಿಯ ಕೋಡಿ ಮಠದ ಶಾಖಾಮಠವಾಗಿರುವ ಬಿಕ್ಕೋಡು ವಿರಕ್ತಮಠವು ಪುರಾತನ ಕಾಲದಲ್ಲಿ ಸ್ಥಾಪನೆಗೊಂಡು ಅಭಿವೃದ್ಧಿಗೊಂಡಿದೆ. ಉತ್ತರದ ಕಡೆಯಿದ ಲೋಕಸಂಚಾರಕ್ಕೆಂದು ಬಂದ ಮಹಾ ತಪಸ್ವಿಗಳಾದ ಶ್ರೀ ಸಿದ್ಧವೃಷಭೇಂದ್ರ ಸ್ವಾಮಿಗಳು ಈ ತಪೋಭೂಮಿಯಲ್ಲಿ ನೆಲೆನಿಂತು ಕಲ್ಲುಬಂಡೆಗಳಿಂದ ಆವೃತ್ತವಾದ ಈ ಪ್ರಶಾಂತ ಸ್ಥಳವು ಅನುಷ್ಠಾನಕ್ಕೆ ಯೋಗ್ಯವಾಗಿದೆ ಎಂದುಅರಿತು ನೈಸರ್ಗಿಕವಾಗಿ ರೂಪುಗೊಂಡಿದ್ದ ಗವಿಯಲ್ಲಿ ಅನುಷ್ಠಾನಗೊಂಡು ಮಠವನ್ನು ಸ್ಥಾಪನೆ ಮಾಡಿರುತ್ತಾರೆ. ಮಹಾತಪಸ್ವಿಗಳಾದ ಶಿವಯೋಗಿ ಶ್ರೀ ಸಿದ್ಧವೃಷಭೇಂದ್ರ ಸ್ವಾಮಿಗಳು ಮಂಗಳವಾರ ತಪಸ್ಸಿಗೆ ಕುಳಿತರೆ ಪುನಃ ಮಂಗಳವಾರದ ಪ್ರಾತಃ ಕಾಲದಲ್ಲಿ ಎಚ್ಚರಗೊಂಡು ಸ್ನಾನ ಪೂಜಾಕಾರ್ಯಗಳನ್ನು ಮುಗಿಸಿ ಪುನಃ ತಪಸ್ಸಿಗೆ ಕುಳಿತುಕೊಳ್ಳುತ್ತಿದ್ದರೆಂದು ಇಲ್ಲಿನ ಜನಪದ ಹೇಳಿಕೆಯಿಂದ ತಿಳಿದು ಬರುತ್ತದೆ. ಮಠದ ಮೂಲ ಕರ್ತೃಗಳಾದ ಶಿವಯೋಗಿ ಶ್ರೀ ಸಿದ್ಧವೃಷಭೇಂದ್ರ ಸ್ವಾಮಿಗಳು ಇಲ್ಲೇ ಲಿಂಗೈಕ್ಯರಾಗಿದ್ದು ಇವರ ಗದ್ದುಗೆಯು ಗವಿಯಿಂದ ಪೂರ್ವ ಭಾಗದಲ್ಲಿ ಸ್ಥಾಪನೆಗೊಂಡಿದೆ.

ಕಟ್ಟಡ ಸ್ಥಾಪನೆ: ಮೂಲ ಕರ್ತೃಗುರುಗಳಾದ ಶಿವಯೋಗಿ ಶ್ರೀ ಸಿದ್ಧವೃಷಭೇಂದ್ರ ಸ್ವಾಮಿಗಳ ಗದ್ದುಗೆಯನ್ನು ಕೇಂದ್ರವನ್ನಾಗಿ ಮಾಡಿಕೊಂಡು ಏಳು ಅಂಕಣದ ತೊಟ್ಟಿಯಾಕಾರದ ಕಟ್ಟಡವನ್ನು ನಿರ್ಮಿಸಲಾಗಿದೆ.ಮರದ ಬೃಹದಾಕಾರದ ಕಂಬಗಳನ್ನು ಬಳಸಿ ಕಲ್ಲು ಬಂಡೆಗಳ ಮಧ್ಯೆ ಎತ್ತರದ ಪ್ರದೇಶದಲ್ಲಿ ನಿರ್ಮಿಸಲಾದ ಈ ಕಟ್ಟಡವು ನೋಡಲು ಭವ್ಯವಾಗಿದೆ.

ಪರಂಪರೆ: ಮಹಾತಪಸ್ವಿ ಶಿವಯೋಗಿ ಶ್ರೀ ಸಿದ್ಧವೃಷಭೇಂದ್ರ ಸ್ವಾಮಿಗಳು ತಪೋನುಷ್ಠಾನಗೊಂಡು ಲಿಂಗೈಕ್ಯರಾದ ಮೇಲೆ ಅನೇಕ ಗುರುಗಳು ಈ ಮಠದ ಆಡಳಿತವನ್ನು ನಡೆಸಿಕೊಂಡು ಬಂದು ಈ ಮಠವನ್ನು ಹೆಚ್ಚು ಜನಪ್ರಿಯಗೊಳಿಸಿದ್ದಾರೆ.

೧. ಶ್ರೀ ಮ.ನಿ.ಪ್ರ. ಸಿದ್ಧವೃಷಭೇಂದ್ರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ವೃಷಭೇಂದ್ರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ದೊಡ್ಡಶಾಂತವೀರಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಶಿವಾನಂದ ಶಿವಯೋಗಿ ರಾಜೇಂದ್ರಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಎಷ್ಟು ಜನ ಗುರುಗಳು ಅಧಿಕಾರಕ್ಕೆ ಬಂದರು ಎಂದು ಹೇಳಲು ಯಾವುದೇ ಆಧಾರಗಳೂ ಲಭ್ಯವಿಲ್ಲ. ಆದರೆ ಶ್ರೀ ವೃಷಭೇಂದ್ರ ಸ್ವಾಮಿಗಳು ನಂತರ ಶ್ರೀ ದೊಡ್ಡಶಾಂತವೀರ ಸ್ವಾಮಿಗಳು ಈ ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಹೆಚ್ಚು ಅಭಿವೃದ್ಧಿಪಡಿಸಿದ್ದಾರೆ. ಶ್ರೀ ದೊಡ್ಡಶಾಂತವೀರ ಸ್ವಾಮಿಗಳು ಮಹಾ ತಪಸ್ವಿಗಳಾಗಿ ಈ ಪ್ರಾಂತ್ಯದಲ್ಲಿ ಹೆಚ್ಚು ಹೆಸರುವಾಸಿಯಾಗಿದ್ದರು. ಇವರ ಕಾಲದಲ್ಲಿ ಹಾಸನ ನಗರದ ಶ್ರೀ ಜವನಹಳ್ಳಿ ವಿರಕ್ತಮಠಕದಲ್ಲಿ ಉತ್ತರಾಧಿಕಾರಿಗಳಿಲ್ಲದೆ ಮಠದ ಆಡಳಿತವು ಸ್ಥಗಿತಗೊಂಡಿದ್ದ ಕಾರಣ, ಶ್ರೀ ದೊಡ್ಡಶಾಂತವೀರ ಸ್ವಾಮಿಗಳು ಈ ಮಠವನ್ನು ತಮ್ಮ ವಶಕ್ಕೆತೆಗೆದುಕೊಂಡು ಅಭಿವೃದ್ಧಿಪಡಿಸಿರುವುದಾಗಿ ಜವನಹಳ್ಳಿಮಠದ ಇತಿಹಾಸ ಹೇಳುತ್ತದೆ. ಶ್ರೀ ದೊಡ್ಡಶಾಂತವೀರ ಸ್ವಾಮಿಗಳ ನಂತರ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಕಂಚುಕಲ್ಲು ಬಿದರೆಯ ಶ್ರೀ ಶಿವಾನಂದ ಶಿವಯೋಗಿಗಳು ಮಠದ ಆಡಳಿತವನ್ನು ನೋಡಿಕೊಂಡು ಮಠವನ್ನು ಹೆಚ್ಚು ಅಭಿವೃದ್ಧಿಪಡಿಸಿದರು. ಈ ಮಠದಲ್ಲಿ ಅಧಿಕಾರವನ್ನು ನಡೆಸುತ್ತಿದ್ದ ಸಂದರ್ಭದಲ್ಲಿಯೇ ಅರಸೀಕೆರೆ ತಾಲ್ಲೂಕಿನ ಕೋಡಿಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡು, ಎರಡೂ ಮಠದ ಆಡಳಿತವನ್ನು ನೋಡಿಕೊಂಡು ಹೋಗುತ್ತಿದ್ದಾರೆ.

ಬತ್ತದಚಿಲುಮೆ: ಮಠದ ಕಟ್ಟಡದ ಎಡಬದಿಯಲ್ಲಿ ಎತ್ತರದ ಬಂಡೆಯ ಮೇಲೆ ಶ್ರೀ ಚನ್ನಬಸವೇಶ್ವರ ಸ್ವಾಮಿಯ ಹೆಸರಿನಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಅಲ್ಲದೆ ಈ ಬಂಡೆಯ ಪಕ್ಕದಲ್ಲಿ ಮೂಲ ಗವಿಯಿದ್ದು ಈ ಗವಿಯಲ್ಲಿ ದೊರೆತ ಪಾದುಕೆ ಗಳನ್ನು ಇಟ್ಟುಪೂಜೆ ಮಾಡಲಾಗುತ್ತಿದೆ. ಗವಿಯ ಎದುರು ಭಾಗದಲ್ಲಿ ಚಿಲುಮೆ ಇದ್ದು ಇದರ ನೀರನ್ನು ಮಠದ ಪೂಜಾ ಕಾರ್ಯಗಳಿಗೆ ಬಳಸಿಕೊಳ್ಳಲಾಗುತ್ತದೆ. ಈ ಪ್ರಾಂತ್ಯದ ಎಲ್ಲಾ ಬಾವಿಗಳಲ್ಲಿ ನೀರು ಬತ್ತಿದರೂ, ಈ ಬೆಟ್ಟದ ಮೇಲೆ ಇರುವ ಚಿಲುಮೆಯಲ್ಲಿ ನೀರು ಬತ್ತುವುದಿಲ್ಲ ಎಂದು ಹೇಳಲಾಗುತ್ತದೆ.

ಅಭಿವೃದ್ಧಿ ಕಾರ್ಯಗಳು: ಪುರಾತನ ಕಾಲದಿಂದಲೂ ಈ ಮಠವು ಆಸ್ತಿವಂತ ಮಠವಾಗಿ ರೂಪುಗೊಂಡಿತ್ತು. ಸ್ವಾತಂತ್ರ್ಯಾನಂತರ ಬದಲಾದ ಭೂಕಾಯ್ದೆಯಡಿ ಮಠದ ಜಮೀನು ಅನ್ಯರಪಾಲಾಯಿತು. ಶ್ರೀ ಶಿವಾನಂದ ಶಿವಯೋಗಿಗಳು ಅಧಿಕಾರಕ್ಕೆ ಬಂದ ಮೇಲೆ ಕೈಬಿಟ್ಟು ಹೋಗಿದ್ದ ಮಠದ ಆಸ್ತಿಯು ಪುನಃ ಮಠದ ವಶಕ್ಕೆ ಬಂದಿತು. ಮಠದ ಆಸ್ತಿಯನ್ನು ಉಪಯೋಗಿಸಿಕೊಳ್ಳುತ್ತಿದ್ದ ಕೆಲವರು ಪ್ರತಿರೋಧವನ್ನು ವ್ಯಕ್ತಪಡಿಸಿದರೂ ಶ್ರೀ ಶಿವಾನಂದ ಶಿವಯೋಗಿಗಳು ತಮ್ಮ ಸ್ವಸಾಮರ್ಥ್ಯದಿಂದ ಹಾಗೂ ತಪೋಶಕ್ತಿಯಿಂದ ಎಲ್ಲಾ ಪ್ರತಿರೋಧಗಳನ್ನು ಎದುರಿಸಿ, ಮಠದ ಆಸ್ತಿಯನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಮಠದ ಆಸ್ತಿಯನ್ನು ತಮ್ಮ ವಶಕ್ಕೆ ತೆಗೆದುಕೊಂಡ ಗುರುಗಳು ಅದನ್ನು ಅಭಿವೃದ್ಧಿಪಡಿಸಿ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ. ಮಠದ ಹಿಂಭಾಗದ ಜಮೀನಿನಲ್ಲಿ ಕಾಫಿಯನ್ನು ಬೆಳೆಸಿದ್ದಾರೆ.

ಶ್ರೀ ಶಿವಾನಂದ ಶಿವಯೋಗಿಗಳು ಶಿಥಿಲಗೊಂಡಿದ್ದ ಮಠದ ಕಟ್ಟಡವನ್ನು ನವೀಕರಿಸಿ, ಮಠದಲ್ಲಿ ಧಾರ್ಮಿಕ ಚಟುವಟಿಕೆ ಗಳು ನಿರಂತರವಾಗಿ ನಡೆಯುವಂತೆ ವ್ಯವಸ್ಥೆಗೊಳಿಸಿದರು. ಕೋಡಿಮಠದ ಶಿಕ್ಷಣಸಂಸ್ಥೆಯಿಂದ ನಡೆಸಲಾಗುತ್ತಿರುವ

ಪ್ರೌಢಶಾಲೆಯನ್ನು ಬಿಕ್ಕೋಡು ಮಠದ ಆವರಣದಲ್ಲಿ ಸ್ಥಾಪಿಸಿ, ಆವಶ್ಯಕತೆಗೆ ಅನುಗುಣವಾಗಿ ಕಟ್ಟಡವನ್ನು ನಿರ್ಮಿಸಿದ್ದಾರೆ.

ಪುರಾತನ ಸ್ಮಾರಕಗಳು: ಪುರಾತನ ಮಠದ ಕಟ್ಟಡ ಹಾಗೂ ಮಠದ ಮೂಲಗವಿ ಪುರಾತನ ಸ್ಮಾರಕಗಳಾಗಿವೆ. ಮಠದ ಆವರಣದಲ್ಲಿ ಪುರಾತನಕಾಲದ ವಸ್ತುಗಳಾದ ಮರದ ಮಂಚ, ತ್ರಿಶೂಲ,ಭರ್ಜಿ, ಕತ್ತಿ, ಹಾಗೂ ಚಾಮರಗಳು, ಗುರುಗಳು ಬಳಸುತ್ತಿದ್ದ ಬೆತ್ತಗಳು ಹಾಗೂ ಶಂಖ ಮಠದಲ್ಲಿ ಈಗಲೂ ನೋಡಸಿಗುತ್ತಿವೆ. ಮಠದ ಕಟ್ಟಡದ ಮೂಲ ಆಕೃತಿಗೆ ಧಕ್ಕೆ ಬರದಂತೆ ಕಟ್ಟಡವನ್ನು ಈಗ ನವೀಕರಣ ಮಾಡಲಾಗಿದೆ.

ವಿಳಾಸ: ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮಿಗಳು, ಶ್ರೀ ಬಿಕ್ಕೋಡುಮಠ, ಬಿಕ್ಕೋಡು, ಬೇಲೂರು ತಾ, ಹಾಸನ ಜಿಲ್ಲೆ.

ಯಲಹಂಕ

ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಯಲಹಂಕವು ಸುಧಾರಣೆಗೊಂಡ ಒಂದು ಪುಟ್ಟ ಗ್ರಾಮ. ಬೇಲೂರಿನಿಂದ ಹನಿಕೆಗೆ ಹೋಗುವ ರಸ್ತೆಯಿಂದ ಎಡಭಾಗಕ್ಕೆ ಐದು ಕಿ.ಮೀ. ದೂರದ ದಾರಿ ಸವೆಸಿದರೆ ಸಿಗುವ ಯಲಹಂಕವು ಶ್ರೀ ಶಿವಕುಮಾರ ಸ್ವಾಮಿಗಳು ಪಟ್ಟಾಧಿಕಾರ ಪಡೆದಿದ್ದರಿಂದ, ರಾಜ್ಯ ಭೂಪಟದಲ್ಲಿ ತನ್ನದೇ ಆದ ಅಸ್ತಿತ್ತ್ವವನ್ನು ಪಡೆದುಕೊಂಡಿದೆ. ಇಲ್ಲಿ ಶ್ರೀ ತರಳಬಾಳು ಶಾಖಾಮಠವು ಅಸ್ತಿತ್ವದಲ್ಲಿದೆ.

ತರಳಬಾಳು ಶಾಖಾಮಠ: ಯಲಹಂಕದಲ್ಲಿ ಸ್ಥಾಪಿತವಾದ ತರಳಬಾಳು ಶಾಖಾಮಠವು ಸಪ್ಪೆ ಸಿದ್ದಲಿಂಗದೇವರ ವಂಶಸ್ಥರಿಂದ ಸ್ಥಾಪಿತವಾಗಿ, ತನ್ನ ಅಸ್ತಿತ್ತ್ವವನ್ನು ಉಳಿಸಿ ಬೆಳೆಸಿಕೊಂಡು ಬಂದಿದೆ. ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳಂತಹ ಮಹಾನ್ ಸಾಧಕರನ್ನು ಸಿರಿಗೆರೆಯ ತರಳಬಾಳು ಬೃಹನ್ಮಠಕ್ಕೆ ನೀಡಿ ಸಾರ್ಥಕತೆಯನ್ನು ಕಂಡುಕೊಂಡಿದೆ.

ಪರಂಪರೆ: ಪಾಲ್ಕುರಿಕೆಯಲ್ಲಿದ್ದ ಸಪ್ಪೆಸಿದ್ದಲಿಂಗದೇವರ ವಂಶಸ್ಥರಾದ ಮಾಗಡಿಪಟ್ಟದದೇವರು ಯಲಹಂಕಕ್ಕೆ ಬಂದು ನೆಲೆಸಿ ಮಠವನ್ನು ಸ್ಥಾಪಿಸಿದ್ದಾರೆಂದು ಸಿರಿಗೆರೆ ಬೃಹನ್ಮಠದ ಹಿರಿಯ ಲಿಂಗೈಕ್ಯ ಗುರುಗಳಾದ ಶ್ರೀ ಶಿವಕುಮಾರ ಸ್ವಾಮಿಗಳ ಅಭಿಪ್ರಾಯ ವಾಗಿದ್ದು, ಇಲ್ಲಿನ ಪರಂಪರೆಯನ್ನು ನಿಖರವಾಗಿ ದಾಖಲಿಸಲಾಗದಿದ್ದರೂ ನಾಲ್ಕು ಜನ ಗುರುಗಳನ್ನು ಹೆಸರಿಸಬಹುದು.

೧. ಶ್ರೀ ಮಾಗಡಿ ಪಟ್ಟದ ದೇವರು
೨. ಶ್ರೀ ಹನಿಕೆ ಶಿವನಂಜುಂಡಸ್ವಾಮಿಗಳು
೩. ಶ್ರೀ ಶಿವನಂಜುಂಡೇಶ್ವರಸ್ವಾಮಿಗಳು (ಭೈರನಾಯಕನಹಳ್ಳಿ)
೪. ಶ್ರೀ ಶಿವಕುಮಾರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಯಲಹಂಕ ಮಠದ ಪರಂಪರೆ ಬೆಳೆದು ಬಂದಿದ್ದು ಎರಡನೆಯ ಪಟ್ಟಾಧ್ಯಕ್ಷರಾದ ಹನಿಕೆಯ ಶ್ರೀ ಶಿವನಂಜುಂಡ ಸ್ವಾಮಿಗಳ ಕಾಲದಲ್ಲಿ ಯಲಹಂಕಮಠ ಹೆಚ್ಚು ಪ್ರಬುದ್ಧಮಾನಕ್ಕೆ ಬಂದಿತು. ಇವರು ದೇಶಸಂಚಾರ ಮಾಡಿ ಹೆಚ್ಚು ಲೋಕಾನುಭವ ಪಡೆದವರಾಗಿದ್ದರಲ್ಲದೆ ಮಹಾನ್ ಚತುರರಾಗಿದ್ದು ಎಂತಹ ಸಮಸ್ಯೆಗಳೇ ಬಂದರೂ ಅವುಗಳನ್ನು ಎದುರಿಸುವ ಎದೆಗಾರಿಕೆಯನ್ನು ಇಟ್ಟುಕೊಂಡಿದ್ದರು. ಯಲಹಂಕ ಮಠಕ್ಕೆ ನೂತನವಾದ ಭವ್ಯಕಟ್ಟಡವನ್ನು ಕಟ್ಟಿಸಿದರು. ಹನಿಕೆ ಶ್ರೀಶಿವನಂಜುಂಡ ಸ್ವಾಮಿಗಳು ೧೮೭೮ ರಲ್ಲಿ ಲಿಂಗೈಕ್ಯರಾದ ನಂತರ ಭೈರನಾಯಕನಹಳ್ಳಿಯ ಶ್ರೀ ಶಿವನಂಜುಂಡೇಶ್ವರ ಸ್ವಾಮಿಗಳು ಅಧಿಕಾರಕ್ಕೆ ಬಂದು ೧೯೨೪ರಲ್ಲಿ ಲಿಂಗೈಕ್ಯರಾಗುತ್ತಾರೆ. ಇದಾದನಂತರ ಯಲಹಂಕ ಮಠದಲ್ಲಿ ಚರಪಟ್ಟಾಧ್ಯಕ್ಷರಾಗಿದ್ದ ಶ್ರೀ ಚನ್ನವೃಷಭ ದೇಶಿಕೇಂದ್ರ ಸ್ವಾಮಿಗಳು ಮಠದ ಅಧಿಕಾರದಲ್ಲಿದ್ದು ಮಠವನ್ನು ಅಭಿವೃದ್ಧಿಪಡಿಸಿ ೧೯೨೯ರಲ್ಲಿ ಲಿಂಗೈಕ್ಯ ರಾಗುತ್ತಾರೆ. ಈ ತರುವಾಯ ಮಠವು ಮಠಾಧಿಕಾರಿಗಳಿಲ್ಲದೆ ಖಾಲಿ ಉಳಿಯಿತು.

ಹೊಳಲ್ಕೆರೆ ತಾಲ್ಲೂಕು ಮುತ್ತುಗದೂರಿನ ಶ್ರೀ ಮಹದೇವಯ್ಯ ಮತ್ತು ಶ್ರೀಮತಿ ಬಸಮ್ಮನವರ ಪುತ್ರರಾಗಿ ೧೯೧೪ ರ ಬಸವಜಯಂತಿಯಂದು ಜನಿಸಿದ ಶ್ರೀ ಶಿವಕುಮಾರ ಸ್ವಾಮಿಗಳ ಮೂಲ ಹೆಸರು ರೇವಣಸಿದ್ದಯ್ಯ. ಯಲಹಂಕ ಮಠಕ್ಕೆ ಉತ್ತರಾಧಿಕಾರಿಯನ್ನಾಗಿ ನೇಮಿಸಿದ ಮೇಲೆ ಶ್ರೀ ಶಿವಕುಮಾರ ಸ್ವಾಮಿಗಳೆಂದು ಅಭಿಧಾನವನ್ನಿತ್ತು ಅಧಿಕಾರಕ್ಕೆ ತರಲು

ನಿರ್ಧರಿಸಲಾಯಿತು. ಅಧಿಕಾರವನ್ನು ವಹಿಸಿಕೊಳ್ಳುವ ಮೊದಲು ಶ್ರೀ ಶಿವಕುಮಾರ ಸ್ವಾಮಿಗಳನ್ನು ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು ಕಾಶಿಗೆ ಕಳುಹಿಸಿಕೊಡಲಾಯಿತು. ಆದರೆ ಕಾರಣಾಂತರದಿಂದ ವಿದ್ಯಾಭ್ಯಾಸವನ್ನು ಸ್ಥಗಿತಗೊಳಿಸಿ ಬಂದ ಶ್ರೀ ಶಿವಕುಮಾರ ಸ್ವಾಮಿಗಳಿಗೆ ೧೯೩೩ ರಲ್ಲಿ ಯಲಹಂಕ ಮಠಕ್ಕೆ ಪಟ್ಟಾಧಿಕಾರ ಮಾಡಲಾಯಿತು. ಇವರು ಅಧಿಕಾರಕ್ಕೆ ಬಂದ ಮೇಲೆ ಉಭಯ ಮಠಗಳು (ಸಿರಿಗೆರೆ ಮತ್ತು ಯಲಹಂಕ) ಒಂದಾಗಿ ಬೆಳೆಯಲು ಸಹಾಯಕವಾಯಿತು. ಸಿರಿಗೆರೆ ಬೃಹನ್ಮಠದ ಶ್ರೀ ಗುರುಶಾಂತ ದೇಶಿಕೇಂದ್ರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಯಲಹಂಕ ಮಠದ ಮಠಾಧೀಶರಾಗಿದ್ದ ಶ್ರೀ ಶಿವಕುಮಾರ ಸ್ವಾಮಿಗಳನ್ನು ಸಿರಿಗೆರೆ ತರಳಬಾಳು ಬೃಹನ್ಮಠಕ್ಕೆ ಜಗದ್ಗುರುಗಳಾಗಿ ನೇಮಕಗೊಳಿಸಿ ಪಟ್ಟಾಧಿಕಾರ ಮಾಡಲಾಯಿತು. ಅಂದಿನಿಂದ ಈ ಮಠವು ಖಾಲಿ ಉಳಿಯ ಬೇಕಾಯಿತು. ಇಲ್ಲಿ ಅಧಿಕಾರಿಗಳು ಇಲ್ಲದಿರುವುದರಿಂದ ಸಿರಿಗೆರೆ ಬೃಹನ್ಮಠದ ಮಠಾಧೀಶ್ವರರೇ ಆಡಳಿತವನ್ನು ನೋಡಿಕೊಳ್ಳುತ್ತಿದ್ದಾರೆ. ಮಠದ ವತಿಯಿಂದ ಯಲಹಂಕದಲ್ಲಿ ಶ್ರೀ ಶಿವನಂಜುಂಡೇಶ್ವರ ಪ್ರೌಢಶಾಲೆಯನ್ನು ಪ್ರಾರಂಭಿಸಿದ್ದು, ಒಂದು ವಿದ್ಯಾರ್ಥಿ ನಿಲಯವನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ತರಳಬಾಳು ಜಗದ್ಗುರು ಸಂಸ್ಥಾನ ಮಠ, ಯಲಹಂಕ, ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ.

ಆಧಾರ: 'ದಿಟ್ಟ ಹೆಜ್ಜೆ ಧೀರ ಕ್ರಮ' ಲೇಖಕರು : ಶ್ರೀ ಶಿವಕುಮಾರ ಸ್ವಾಮಿಗಳು

❑

ಸಕಲೇಶಪುರ ತಾಲ್ಲೂಕು

ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕು, ಮಲೆನಾಡಿನ ತಾಲ್ಲೂಕಾಗಿದ್ದು ಕಾಫಿಯ ಬೆಳೆಯಿಂದ ಶ್ರೀಮಂತಿಕೆಯನ್ನು ಕಂಡಿದೆ. ಇಲ್ಲಿ ವೀರಶೈವಧರ್ಮ ಪ್ರಾಚೀನದಿಂದಲೂ ಬೆಳೆದು ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಇಲ್ಲಿ ಪ್ರಸ್ತುತ ಮೂರು ಮಠಗಳು ಅಸ್ತಿತ್ವದಲ್ಲಿವೆ.

ಚಂಗಡಹಳ್ಳಿ

ಸಕಲೇಶಪುರ ತಾಲ್ಲೂಕಿನ ಚಂಗಡಹಳ್ಳಿಯು ತಾಲ್ಲೂಕು ಕೇಂದ್ರ ಸ್ಥಳದಿಂದ ದಕ್ಷಿಣಕ್ಕೆ ಇಪ್ಪತ್ತೈದು ಕಿ.ಮೀ.ದೂರಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಚಂಗಡಹಳ್ಳಿ ಗ್ರಾಮದಲ್ಲಿ ಮುರುಘಾಸಮಯದ ವಿರಕ್ತಮಠವು ಸ್ಥಾಪನೆಯಾಗಿ ಇಲ್ಲಿ ಧಾರ್ಮಿಕ ಹಾಗೂ ಸಾಂಸ್ಕೃತಿಕವಾಗಿ ಹೆಸರು ಪಡೆದಿದೆ. ಶ್ರೀ ಸಿದ್ಧಲಿಂಗ ಮುರುಘರಾಜೇಂದ್ರ ಸ್ವಾಮಿಗಳು ತಮ್ಮ ನೂರಹದಿನೈದು ಜನ ಶಿಷ್ಯರೊಡನೆ ಲೋಕಸಂಚಾರ ಕೈಗೊಂಡು ಈ ಪ್ರದೇಶಕ್ಕೆ ಆಗಮಿಸುತ್ತಾರೆ. ಜಂಗಡಹಳ್ಳಿಯ ಈ ಪ್ರಶಾಂತ ವಾತಾವರಣದಲ್ಲಿ ಅನುಷ್ಠಾನಗೊಂಡು ಶಿವಾನುಭವ ಗೋಷ್ಠಿಗಳನ್ನು ನಡೆಸಿ ಧರ್ಮಬೋಧನೆ ಮಾಡುತ್ತಿದ್ದರು.

ಮಠಸ್ಥಾಪನೆ: ಶ್ರೀ ಸಿದ್ಧಲಿಂಗ ಮುರುಘರಾಜೇಂದ್ರ ಸ್ವಾಮಿಗಳ ನೇತೃತ್ವದಲ್ಲಿ ನಡೆಯುತ್ತಿದ್ದ ಶಿವಾನುಭವ ಗೋಷ್ಠಿಗೆ ಸುತ್ತಲಿನ ಪ್ರಾಂತ್ಯದ ಜನ ಜಾತಿಭೇದವಿಲ್ಲದೆ ಬರುತ್ತಿದ್ದರು. ಧರ್ಮಬೋಧನೆಯ ನಂತರ ಬಂದ ಸಮಸ್ತ ಜನರಿಗೆ ದಾಸೋಹ ನಡೆಯುತ್ತಿತ್ತು. ಈ ಸಂದರ್ಭದಲ್ಲಿಯೇ ಶ್ರೀ ಸಿದ್ಧಲಿಂಗ ಮುರುಘರಾಜೇಂದ್ರ ಸ್ವಾಮಿಗಳು ಜೀವಂತ ಸಮಾಧಿಯಾದರು. ಗುರುಗಳು ನಿರ್ವಿಕಲ್ಪ ಸಮಾಧಿಯಾದ ಈ ಪವಿತ್ರ ಸ್ಥಳವೇ ಮಠವಾಗಿ ರೂಪುಗೊಂಡಿತು.

ಪರಂಪರೆ:

೧. ಶ್ರೀ ಮ.ನಿ.ಪ್ರ. ಚರಮೂರ್ತಿ ಸಿದ್ಧಲಿಂಗ ಮುರುಘರಾಜೇಂದ್ರ ಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಚರಮೂರ್ತಿ ದೊಡ್ಡ ಚನ್ನವೀರ ಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಚರಮೂರ್ತಿ ಬಸಪ್ಪ ಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಚರಮೂರ್ತಿ ಚಂದ್ರಶೇಖರ ಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಶ್ರೀ ಸಿದ್ಧಲಿಂಗ ಮುರುಘರಾಜೇಂದ್ರ ಸ್ವಾಮಿಗಳ ಕಾಲದಲ್ಲಿ ಕೊಡಗಿನ ಅರಸರು, ಮೈಸೂರಿನ ಒಡೆಯರು ಮನ್ನಣೆ ನೀಡಿ ಈ ಮಠದ ಭಕ್ತರಾಗಿದ್ದರು. ೧೭೩೦ರಲ್ಲಿ ಲಿಂಗರಾಜರ ಕಾಲದಲ್ಲಿ ಮಠಕ್ಕೆ ಅಧಿಕನೆರವು ನೀಡಿದ್ದರು. ಈ ಕಾಲದಲ್ಲಿ ಕಾಸರಗೋಡು, ಮರೂರು ಚೌಕಿಮಠ ಶಾಖಾಮಠಗಳಾಗಿದ್ದವು. ಈ ಮಠಗಳ ಧಾರ್ಮಿಕ ಕಾರ್ಯ ನಿರ್ವಹಣೆಗಾಗಿ ಕೊಡಗಿನ ಅರಸರು ಮೂವತ್ತ್ಮೂರು ಎಕರೆ ತರಿಭೂಮಿ, ತೊಂಬತ್ತೊಂದು ಎಕರೆ ಖುಷ್ಕಿ ಭೂಮಿ ಮತ್ತು ಹದಿನೈದು ಎಕರೆ ಕಾಫಿ ತೋಟವನ್ನು ಇನಾಂ ನೀಡಿದ್ದರು. ನಂತರ ಶ್ರೀ ದೊಡ್ಡ ಚನ್ನವೀರ ಸ್ವಾಮಿಗಳು ೧೯೧೭ರ ನವೆಂಬರ್ ಇಪ್ಪತ್ತಾರರಂದು ಪಟ್ಟಾಧಿಕಾರ ಪಡೆದು ಮಠವನ್ನು ಮುನ್ನಡೆಸಿದ್ದಾರೆ. ಶ್ರೀ ದೊಡ್ಡ ಚನ್ನವೀರ ಸ್ವಾಮಿಗಳು ಅಧಿಕಾರಕ್ಕೆ ಬರುವ ಮೊದಲು ಕೆಲವು ದಿನ ಮಠವು ಮಠಾಧೀಶ್ವರರು ಇಲ್ಲದೆ ಖಾಲಿ ಉಳಿದಿತ್ತು ಎಂದು ಹೇಳಲಾಗುತ್ತಿದೆ. ಶ್ರೀ ದೊಡ್ಡಚನ್ನವೀರ ಸ್ವಾಮಿಗಳು ಶಿಥಿಲಗೊಂಡಿದ್ದ ಮಠದ ಕಟ್ಟಡವನ್ನು ನವೀಕರಿಸಿ ಸುಸ್ಥಿತಿಗೆ ತಂದು, ಮಠದಲ್ಲಿ ನಿತ್ಯ ಧರ್ಮೋಪದೇಶ ನಡೆಯುವಂತೆ ಮಾಡಿರುತ್ತಾರೆ.

ಶ್ರೀ ದೊಡ್ಡಚನ್ನವೀರ ಸ್ವಾಮಿಗಳು ಕೊಡಗು ಜಿಲ್ಲೆಯ ಕೊಳ್ಳೂರು ಶಾಖಾಮಠಕ್ಕೆ ಸೇರಿದ ಒಟ್ಟು ಎಪ್ಪತ್ತಾರುಎಕರೆ ಜಮೀನನ್ನು ಅಭಿವೃದ್ಧಿಪಡಿಸಿ, ಅದರ ನಿರ್ವಹಣೆಗೆಂದು ಜಂಗಮ ಮಹಾಂತಪ್ಪನವರಿಗೆ ಐವತ್ತು ವರ್ಷಗಳ ಭೋಗ್ಯಕ್ಕೆ ಕೊಟ್ಟಿರುತ್ತಾರೆ. ಇದರಿಂದ ಬಂದ ಆದಾಯವನ್ನು ಮಠದ ಅಭಿವೃದ್ಧಿಗೆ ಬಳಸಿಕೊಂಡಿದ್ದರು. ಮಠವನ್ನು ಸುಸ್ಥಿತಿಗೆ ತರುವಲ್ಲಿ ಶ್ರೀ ದೊಡ್ಡಚನ್ನವೀರ ಸ್ವಾಮಿಗಳು ಪಟ್ಟ ಪ್ರಯತ್ನವನ್ನು ಮಠದ ಇತಿಹಾಸ ಮರೆಯುವಂತಿಲ್ಲ.

ಉತ್ತರಾಧಿಕಾರಿ: ಹಿರಿಯ ಸ್ವಾಮಿಗಳಾದ ಶ್ರೀ ಚನ್ನವೀರ ಸ್ವಾಮಿಗಳ ಅಪೇಕ್ಷೆಯ ಮೇರೆಗೆ ದಾವಣಗೆರೆ ತಾಲ್ಲೂಕಿನ ಗುರುಶಾಂತಪ್ಪನವರ ಪುತ್ರರಾದ ಶ್ರೀ ಚಂದ್ರಶೇಖರ ದೇವರಿಗೆ ಶ್ರೀ ಚರಮೂರ್ತಿ ಚಂದ್ರಶೇಖರ ಸ್ವಾಮಿಗಳೆಂದು ಅಭಿಧಾನವಿತ್ತು, ಮಹಾರಾಷ್ಟ್ರದ ಕೊಲ್ಲಾಪುರದ ಮುರುಘಾ ಮಠದ (ಚಿತ್ರದುರ್ಗ ಮುರುಘಾಮಠದ ಖಾಸಾ ಶಾಖಾಮಠ) ಮಠಾಧೀಶ್ವರರಾದ ಶ್ರೀ ಗುರುಶಾಂತ ಸ್ವಾಮಿಗಳಿಂದ ೧೯೭೧ರಲ್ಲಿ ಪಟ್ಟಾಧಿಕಾರದ ಅನುಗ್ರಹವನ್ನು ಕೊಡಿಸಲಾಯಿತು. ಈ ಸಮಾರಂಭದಲ್ಲಿ ಚಿತ್ರದುರ್ಗದ ಮುರುಘಾ ಮಠದ ಜಗದ್ಗುರು ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮಿಗಳು ಸಾನಿಧ್ಯವನ್ನು ವಹಿಸಿದ್ದರು. ಶ್ರೀ ಚಂದ್ರಶೇಖರ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡ ಮೇಲೆ ಸಂಸ್ಕೃತ, ವೇದಾಧ್ಯಯನ ಮುಗಿಸಿ ಮಠಕ್ಕೆ ಬಂದವರು ಮಠದ ಪೂರ್ಣಆಡಳಿತವನ್ನು ವಹಿಸಿಕೊಂಡು, ಅನ್ಯರ ಪಾಲಾಗಿದ್ದ ಮಠದ ಆಸ್ತಿಯನ್ನು ಕಾನೂನುಬದ್ಧ ಹೋರಾಟದಿಂದ ಉಳಿಸಿಕೊಂಡಿದ್ದಾರೆ. ಚಿತ್ರದುರ್ಗದ ಮುರುಘಾಮಠದ ಮಾರ್ಗದರ್ಶನದಲ್ಲಿ ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮಠವನ್ನು ಮುನ್ನಡಿಸಿ ಲಿಂಗೈಕ್ಯರಾಗಿದ್ದಾರೆ. ಈಗ ಚಿತ್ರದುರ್ಗ ಮುರುಘರಾಜೇಂದ್ರ ಬೃಹನ್ಮಠವೇ ನೇರ ಆಡಳಿತವನ್ನು ನಡೆಸತೊಡಗಿದೆ.

ಶೈಕ್ಷಣಿಕ ಸಾಧನೆ: ಗ್ರಾಮಾಂತರ ಮಕ್ಕಳ ಅನುಕೂಲಕ್ಕಾಗಿ ೧೯೩೮ರ ಮೇ ಇಪ್ಪತ್ತಾರರಂದು ಪ್ರಾಥಮಿಕ ಶಾಲೆಯನ್ನು ಸ್ಥಾಪಿಸಿ ೧೯೭೨ರಲ್ಲಿ ಶಾಲೆಗೆ ಕಟ್ಟಡವನ್ನು ನಿರ್ಮಿಸಲಾಗಿದೆ. ಶ್ರೀ ಚಂದ್ರಶೇಖರ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಹಿರಿಯ ಗುರುಗಳು ಸ್ಥಾಪನೆ ಮಾಡಿದ ಶಿಕ್ಷಣ ಸಂಸ್ಥೆಗಳನ್ನು ಅಭಿವೃದ್ಧಿಗೊಳಿಸಿ, ಸುವ್ಯವಸ್ಥಿತವಾಗಿ ನಡೆಯುವಂತೆ ಮಾಡಿದರು. ಪ್ರೌಢಶಾಲೆಯ ಸುತ್ತ ಇದ್ದ ಎರಡು ಎಕರೆ ಜಮೀನನ್ನು ತೆರವು ಮಾಡಿಸಿ ಶಾಲಾವನವನ್ನು ನಿರ್ಮಿಸಿದ್ದರು.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ನಾಲ್ಕು ಗದ್ದುಗೆಗಳಿಗೆ ನಿತ್ಯ ಪೂಜೆ, ಶ್ರಾವಣ ಮತ್ತು ಕಾರ್ತೀಕ ಮಾಸಗಳಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ವರ್ಷಕ್ಕೊಮ್ಮೆ ಶ್ರೀ ಚನ್ನವೀರ ಸ್ವಾಮಿಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಶಿವಾನುಭವ ಗೋಷ್ಠಿಗಳು ಧಾರ್ಮಿಕ ಸಭೆ, ಅನ್ನದಾಸೋಹವನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ವಿರಕ್ತಮಠ,ಚಂಗಡಹಳ್ಳಿ, ಸಕಲೇಶಪುರ ತಾ, ಹಾಸನಜಿಲ್ಲೆ.

ಬಿಳಕೋಡು

ಸಕಲೇಶಪುರ ತಾಲ್ಲೂಕಿನ ಬಿಳಕೋಡು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹನ್ನೊಂದು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಕಲ್ಮಠವು ಅಸ್ತಿತ್ವದಲ್ಲಿತ್ತು.

ಕಲ್ಮಠ: ಬಿಳಕೋಡು ಗ್ರಾಮದಲ್ಲಿ ಬಿಳಕೋಡು ಕಲ್ಮಠವು ಪುರಾತನ ಕಾಲದಲ್ಲಿ ಸ್ಥಾಪನೆಯಾಗಿದೆ.ಪಂಚಪೀಠಗಳಲ್ಲಿ ಒಂದಾದ ಉಜ್ಜಯಿನಿ ಶಾಖಾಮಠವಾದ ಈ ಮಠವು ಈಗ ಉತ್ತರಾಧಿಕಾರಿಗಳಿಲ್ಲದೆ ಖಾಲಿ ಉಳಿದಿದೆ. ೧೯೬೫ ರಲ್ಲಿ ಶ್ರೀ ಸದಾಶಿವ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಈ ಮಠವು ಖಾಲಿ ಉಳಿಯಿತು. ನಂಜುಂಡಪ್ಪ ಎಂಬುವವರು ಅನೇಕ ವರ್ಷಗಳ ಕಾಲ ಮಠದ ಆಡಳಿತವನ್ನು ನೋಡಿಕೊಂಡು ಗುರುಗಳಿಗೆ ಸಹಾಯಕರಾಗಿದ್ದರು. ಈ ಮಠದಲ್ಲಿ ಗದ್ದುಗೆಗಳಿದ್ದು ಇವುಗಳಿಗೆ ಪೂಜೆ ನಡೆಯುತ್ತಿದೆ.

ಯಸಳೂರು

ಸಕಲೇಶಪುರ ತಾಲ್ಲೂಕಿನ ಯಸಳೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತೈದು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ತೆಂಕಲಗೋಡು ಬೃಹನ್ಮಠವು ಅಸ್ತಿತ್ವದಲ್ಲಿದೆ.

ತೆಂಕಲಗೋಡು ಬೃಹನ್ಮಠ: ಯಸಳೂರು ಗ್ರಾಮದಲ್ಲಿ ಉಜ್ಜಯಿನಿ ಪೀಠದ ಪುತ್ರವರ್ಗದ ಸಂಪ್ರದಾಯದ ತೆಂಕಲಗೋಡು ಬೃಹನ್ಮಠವಿದೆ. ಯಸಳೂರಿನ ತೆಂಕಣ (ಉತ್ತರ) ಭಾಗದಲ್ಲಿ ಸ್ಥಾಪನೆಗೊಂಡಿರುವುದರಿಂದ ಈ ಮಠಕ್ಕೆ 'ತೆಂಕಲಗೋಡು ಬೃಹನ್ಮಠ'ಎಂದು ಹೆಸರು ಬಂದಿದೆ.

ಮಠಸ್ಥಾಪನೆ: ಕಳೆದ ಶತಮಾನದಲ್ಲಿ ಪ್ರಾರಂಭಗೊಂಡಿರಬಹುದಾದ ಈ ಮಠವು ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟಿದೆ. ಹಾಸನ,ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಮಲೆನಾಡು ಪ್ರದೇಶದಲ್ಲಿ ಈ ಮಠಕ್ಕೆ ಭಕ್ತರು ಇದ್ದಾರೆ. ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ಶ್ರೀ ಮಲೆನಾಡಿನ ಪ್ರಾಂತ್ಯದಲ್ಲಿ ಸಂಚರಿಸಿ ಧರ್ಮೋಪದೇಶ ನೀಡಿ, ಈ ಪ್ರಾಂತ್ಯಗಳಲ್ಲಿ ವೀರಶೈವ ಧರ್ಮ ಬೆಳೆಯಲು ಸಹಾಯಕರಾಗಿದ್ದಾರೆ.

ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ವೀರಶೈವ ಧರ್ಮ ಆಚರಣೆ ಮತ್ತು ಸಿದ್ಧಾಂತವನ್ನು ಆಳವಾಗಿ ಅಭ್ಯಾಸ ಮಾಡಿದವರಾಗಿದ್ದು, ಧರ್ಮವನ್ನು ಸಮಾಜದಲ್ಲಿ ನೆಲೆಗೊಳಿಸಲು ಬಹಳವಾಗಿ ಶ್ರಮಿಸಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಮಠದ ಕರ್ತೃಗುರುಗಳಾದ ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ಭವಿಷ್ಯದಲ್ಲಿ ಮಠವು ಪ್ರಜ್ವಲವಾಗಿ ಬೆಳಗಬೇಕು ಎಂಬ ದೂರಾಲೋಚನೆಯಿಂದ ಮಠವನ್ನು ಸದೃಢವಾಗಿ ಬೆಳೆಸಿದರು.

ಪರಂಪರೆ:
೧. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ನೀಲಕಂಠ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಚನ್ನಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು ಸದೃಢವಾಗಿ ಬೆಳೆಸಿದ ಮಠಕ್ಕೆ ಎರಡನೆಯ ಗುರುಗಳಾಗಿ ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳು ಪಟ್ಟಾಧಿಕಾರ ವಹಿಸಿಕೊಳ್ಳುತ್ತಾರೆ. ಗುರುಗಳು ಸಂಸ್ಕೃತ, ವೇದ, ಆಗಮಗಳನ್ನು ಬಲ್ಲವರಾಗಿ ವೀರಶೈವ ವಿಶಿಷ್ಟಾದ್ವೈತವನ್ನು ಅಧ್ಯಯನ ಮಾಡಿದ್ದರು. ಶಿವಪೂಜಾನಿಷ್ಠರಾಗಿ ಸಮಾಜದಲ್ಲಿ ಧಾರ್ಮಿಕ ವಾತಾವರಣವನ್ನು ಮೂಡಿಸುವಲ್ಲಿ ಹಿರಿಯ ಗುರುಗಳಂತೆ ಶ್ರಮಿಸಿದರು. ಲೌಕಿಕ ಜಗತ್ತಿಗಿಂತ ಅಲೌಕಿಕತೆಯ ಲೋಕದಲ್ಲಿದ್ದು, ಸದಾ ಶಿವತತ್ತ್ವದ ಬಗ್ಗೆ ಚಿಂತನೆ ನಡೆಸಿ ಧ್ಯಾನಾಸಕ್ತರಾಗಿರುತ್ತಿದ್ದರು.

ವಿದ್ಯಾಸಂಪನ್ನರು: ತೆಂಕಲಗೋಡು ಬೃಹನ್ಮಠದ ಮೂರನೆಯ ಮಠಾಧೀಶ್ವರರಾಗಿ ಬಾಳೆಹೊನ್ನೂರು ರಂಭಾಪುರಿಪೀಠದ ಆಗಿನ ಜಗದ್ಗುರು ಶ್ರೀ ವೀರರುದ್ರಮುನಿ ಶಿವಾಚಾರ್ಯರಿಂದ ಪಟ್ಟಾಧಿಕಾರದ ಅನುಗ್ರಹ ಪಡೆದು ೧೯೭೭ರಲ್ಲಿ ಪಟ್ಟಾಧಿಕಾರ ವಹಿಸಿಕೊಂಡಿರುವ ಶ್ರೀ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ವಿದ್ಯಾಸಂಪನ್ನರು. ವಿಜ್ಞಾನದ ವಿಷಯದಲ್ಲಿ ಪದವಿ ಪಡೆದ ಗುರುಗಳು ನಂತರ ಇತಿಹಾಸ ಮತ್ತು ತತ್ತ್ವ ಶಾಸ್ತ್ರಗಳಲ್ಲಿ ಸ್ನಾತಕೋತ್ತರ ಪದವಿ ಪಡೆದರಲ್ಲದೆ ರಾಷ್ಟ್ರಭಾಷೆ ಹಿಂದಿಯಲ್ಲಿ ಪದವಿ ಪಡೆದಿದ್ದಾರೆ. ಮೂರು ಭಾಷೆಗಳಲ್ಲಿ ಪಾಂಡಿತ್ಯ ಪಡೆದು ಮಹಾಮೇಧಾವಿಗಳೆನಿಸಿಕೊಂಡು ಯಸಳೂರು ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ.

ಧಾರ್ಮಿಕ ಸಂಪನ್ನರು: ಶ್ರೀ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಧಾರ್ಮಿಕ ಸಂಪನ್ನರಾಗಿ ಹೆಸರುಮಾಡಿದ್ದಾರೆ. ವೈಜ್ಞಾನಿಕ ದೃಷ್ಟಿಕೋನದಿಂದ ಧರ್ಮವನ್ನು ಅವಲೋಕಿಸಿ ಆಧುನಿಕ ಜಗತ್ತಿಗೆ ಧರ್ಮವನ್ನು ತಿಳಿಹೇಳುತ್ತಿದ್ದಾರೆ. ವೀರಶೈವ ಧರ್ಮದ ಸಿದ್ಧಾಂತವನ್ನು ಅಭ್ಯಾಸ ಮಾಡಿಕೊಂಡಿರುವ ಇವರು ವಿಶಿಷ್ಟಾದ್ವೈತ, ಸಿದ್ಧಾಂತ ಶಿಖಾಮಣಿ, ಅಷ್ಟಾವರಣ, ಪಂಚಾಚಾರ ಮತ್ತು ಷಟಸ್ಥಲಗಳ ಬಗ್ಗೆ ಅಧಿಕೃತವಾಗಿ ಮಾತನಾಡಬಲ್ಲಂತಹ ವಿದ್ವತ್ತನ್ನು ಸಂಪಾದಿಸಿಕೊಂಡಿದ್ದಾರೆ.

ಧರ್ಮ ಪ್ರಚಾರಕ್ಕಾಗಿ ನಾಡಿನ ನಾನಾಭಾಗಗಳಲ್ಲಿ ಸುತ್ತಿ ಧಾರ್ಮಿಕ ವಿಚಾರಗಳ ಬಗ್ಗೆ ಉಪನ್ಯಾಸ ನೀಡಿ ಧರ್ಮ ಜಾಗೃತಿಗೊಳಿಸಿದ್ದಾರೆ. ಲೋಕಕಲ್ಯಾಣಾರ್ಥ ಶ್ರಾವಣಮಾಸದಲ್ಲಿ ಒಂದು ತಿಂಗಳು ಶಿವಪೂಜಾನುಷ್ಠಾನಗೊಂಡು ವೀರಶೈವ ಧರ್ಮದ ಆಚಾರ ವಿಚಾರಗಳ ಬಗ್ಗೆ ಭಕ್ತರಿಗೆ ಉಪದೇಶನೀಡುವುದು ಗುರುಗಳ ವಾಡಿಕೆಯ ಕೆಲಸವಾಗಿದೆ.

ಶೈಕ್ಷಣಿಕ ಸೇವೆ: ವಿದ್ಯಾಸಂಪನ್ನರಾದ ಶ್ರೀ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಗ್ರಾಮಾಂತರ ಮಕ್ಕಳ ಭವಿಷ್ಯವನ್ನು ರೂಪಿಸಲು ಮಠದ ವತಿಯಿಂದ ಎಂಟು ಎಕರೆ ಜಮೀನು ಹಾಗೂ ಐವತ್ತು ಸಾವಿರ ರೂಪಾಯಿ ದೇಣಿಗೆಯನ್ನು ನೀಡಿ ಯಸಳೂರಿನಲ್ಲಿ ಪ್ರೌಢಶಾಲೆಯನ್ನು ಪ್ರಾರಂಭಿಸಲು ಕಾರಣಕರ್ತರಾಗಿದ್ದಾರೆ. ಈ ಪ್ರೌಢಶಾಲೆಯನ್ನು ಮೇಲ್ದರ್ಜೆಗೇರಿಸಿ

ಪದವಿ ಪೂರ್ವ ಕಾಲೇಜನ್ನು ಸ್ಥಾಪಿಸಲು ನೆರವಾಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗದ್ದುಗೆಗಳು, ಕ್ಷೇತ್ರ ದೇವತೆಗಳಾದ ಚೌಡೇಶ್ವರಿ, ನಂದೀಶ್ವರ ಮೂರ್ತಿಗಳಿಗೆ ನಿತ್ಯ ಪೂಜೆ ನಡೆಸಲಾಗುತ್ತಿದೆ. ಮಠದ ವತಿಯಿಂದ ಉಚಿತ ಸಾಮೂಹಿಕ ವಿವಾಹಗಳು, ಶಿವದೀಕ್ಷೆಕಾರ್ಯ ಹಾಗೂ ಹಿರಿಯ ಗುರುಗಳ ಆರಾಧನೆ ಕಾರ್ಯಕ್ರಮಗಳು ಮಠದ ವತಿಯಿಂದ ನಡೆಯುವ ಧಾರ್ಮಿಕ ಕಾರ್ಯಗಳಾಗಿವೆ.

ಮಠದ ಆಸ್ತಿಯಾಗಿ ಒಟ್ಟು ಮೂವತ್ತು ಎಕರೆ ಜಮೀನು ಇದ್ದು ಇದರಲ್ಲಿ ಕಾಫಿ ತೋಟ, ಗದ್ದೆಯನ್ನು ಒಳಗೊಂಡಿದೆ. ಇದರಿಂದ ಅಧಿಕ ಆದಾಯ ಬರುವಂತೆ ಮಾಡಿದ್ದಾರೆ. ಮಠದ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳಿಗೆ ಜಮೀನಿನಿಂದ ಬರುವ ಆದಾಯವನ್ನು ಬಳಸಿಕೊಂಡು ಮಠವನ್ನು ಸಮರ್ಥವಾಗಿ ಮುನ್ನಡೆಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು, ಶ್ರೀ ತೆಂಕಲಗೋಡು ಬೃಹನ್ಮಠ, ಯಸಳೂರು, ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ.

ಹೆಗ್ಗಡಹಳ್ಳಿ

ಸಕಲೇಶಪುರ ತಾಲ್ಲೂಕಿನ ಹೆಗ್ಗಡಹಳ್ಳಿಯು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಸುಮಾರು ಮೂವತ್ತು ಕಿ. ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಹೆಗ್ಗಡಹಳ್ಳಿಮಠವು ಅಸ್ತಿತ್ವದಲ್ಲಿದೆ.

ಹೆಗ್ಗಡಹಳ್ಳಿಮಠ: ಹೆಗ್ಗಡಹಳ್ಳಿ ಗ್ರಾಮದಲ್ಲಿ ಪಂಚಪೀಠಗಳಲ್ಲಿ ಒಂದಾದ ಗಿರಿರಾಜಸೂರ್ಯ ಸಿಂಹಾಸನ ಶ್ರೀಶೈಲಪೀಠದ ಶಾಖಾಮಠವು ಶಿಷ್ಯವರ್ಗದ ಪರಂಪರೆಯನ್ನು ಪಡೆದು ಪುರಾತನ ಕಾಲದಿಂದಲೂ ಅಸ್ತಿತ್ವಗೊಂಡು ಈ ಪ್ರಾಂತ್ಯದಲ್ಲಿ ಜನಮನ್ನಣೆ ಗಳಿಸಿದೆ. ಕೊಡಗಿನ ಅರಸರಾದ ವೀರರಾಜರ ಕಾಲದಲ್ಲಿ ಈ ಮಠ ಸ್ಥಾಪನೆಗೊಂಡಿರಬಹುದೆಂದು ಹೇಳಲಾಗುತ್ತದೆ. ಶ್ರೀ ಶಾಂತ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಮಠದ ಮೂಲ ಗುರುಗಳಾಗಿದ್ದಾರೆ. ಉತ್ತರದ ಕಡೆಯಿಂದ ಆಗಮಿಸಿದ ಇವರು ಈ ಪ್ರಶಾಂತ ಸ್ಥಳದಲ್ಲಿ ನೆಲೆನಿಂತು ಮಠವನ್ನು ಸ್ಥಾಪನೆ ಮಾಡಿದ್ದಾರೆ. ಇವರು ಅನೇಕ ಪವಾಡಗಳನ್ನು ಮಾಡಿ ಜನಮನ್ನಣೆಗೆ ಪಾತ್ರರಾಗಿದ್ದರು. ಗುರುಗಳು ಮಠವನ್ನು ಅಭಿವೃದ್ಧಿಪಡಿಸಿ, ಈ ಪ್ರಾಂತ್ಯದಲ್ಲಿ ವೀರಶೈವ ಧರ್ಮಾಚರಣೆ ಗೊಳ್ಳಲು ಹೆಚ್ಚು ಪ್ರಚಾರ ಕಾರ್ಯವನ್ನು ಕೈಗೊಂಡರು.

ಪರಂಪರೆ:

೧. ಷ.ಬ್ರ.ಶ್ರೀ ಶಾಂತಮಲ್ಲಿಕಾರ್ಜುನಸ್ವಾಮಿಗಳು
೨. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಶಿವಶಂಕರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯನ್ನು ಗುರುತಿಸಬಹುದಾಗಿದೆ. ಮಠದ ಆವರಣದಲ್ಲಿ ಆರು ಗದ್ದುಗೆಗಳು ಸ್ಥಾಪನೆಗೊಂಡಿವೆ. ಆದರೆ ಗುರುಗಳ ಹೆಸರು ಮಾತ್ರ ಲಭ್ಯವಾಗಿಲ್ಲ. ಹಿಂದಿನ ಗುರುಗಳು ದಾಖಲಿಸದೆ ಇರುವ ಕಾರಣ ಮಠದ ಪರಂಪರೆಯನ್ನು ಅಧಿಕೃತವಾಗಿ ಹೇಳಲು ಸಾಧ್ಯವಾಗುತ್ತಿಲ್ಲ. ಕರ್ತೃಗುರುಗಳಾದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳ ನಂತರ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಮಠದ ಆಡಳಿತವನ್ನು ವಹಿಸಿಕೊಂಡು ಮಠವನ್ನು ಹೆಚ್ಚು ಪ್ರಬುದ್ಧತೆಗೆ ತಂದಿದ್ದಾರೆ. ಇವರ ಕಾಲದಲ್ಲಿ ಮಠವು ಧಾರ್ಮಿಕವಾಗಿ ಹೆಚ್ಚು ಹೆಸರು ಪಡೆಯಿತು. ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ವೀರಶೈವ ಸಿದ್ಧಾಂತವನ್ನು ಭಕ್ತರಿಗೆ ಮುಟ್ಟಿಸುವಲ್ಲಿ ಸಫಲರಾಗಿದ್ದಾರೆ. ವೀರಶೈವ ಧರ್ಮದ ಆಚರಣೆಗಳಿಗೆ ಒತ್ತುಕೊಟ್ಟು ಈ ಪ್ರಾಂತ್ಯದಲ್ಲಿ ಸಂಚಾರವನ್ನು ಕೈಗೊಂಡು ಧಾರ್ಮಿಕ ವಿಚಾರಗಳನ್ನು ಜನಮನದಲ್ಲಿ ಬೆಳೆಸಲು ಪ್ರಯತ್ನ ನಡೆಸಿದರು. ಇವರ ನಂತರ ಶ್ರೀ ಶಿವಶಂಕರ ಶಿವಾಚಾರ್ಯ ಸ್ವಾಮಿಗಳು ೧೯೩೯ರ ಜನವರಿ ಇಪ್ಪತ್ತೇಳರಂದು ಪಟ್ಟಾಧಿಕಾರವನ್ನು ವಹಿಸಿಕೊಂಡರು. ಗುರುಗಳು ವೀರಶೈವ ತತ್ತ್ವಗಳನ್ನು ಪ್ರಚಾರಪಡಿಸಿ ನುಡಿದಂತೆ ನಡೆದು ಮಠ ಮತ್ತು ಸಮಾಜವನ್ನು ಅಭಿವೃದ್ಧಿಪಡಿಸಿದರು.

ಹರಿಜನರಿಗೆ ದೀಕ್ಷೆ: ಶ್ರೀ ಶಿವಶಂಕರ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದ ನಂತರ ಸಮಷ್ಟಿ ಸಮಾಜದ ಒಳಿತಿಗಾಗಿ

ಚಿಂತನೆಯನ್ನು ನಡೆಸಿದರು. ಶೋಷಿತರ ಬಗ್ಗೆ, ರೇಣುಕಾಚಾರ್ಯ ಮತ್ತು ಬಸವಾದಿ ಶರಣರು ಇಟ್ಟುಕೊಂಡ ಕಾಳಜಿಯನ್ನೇ ಶ್ರೀ ಶಿವಶಂಕರ ಶಿವಾಚಾರ್ಯ ಸ್ವಾಮಿಗಳು ತೋರಿಸತೊಡಗಿ ಹರಿಜನೋದ್ಧಾರವನ್ನು ಮಾಡುವ ಸಂಕಲ್ಪ ಹೊಂದಿದ್ದರು. ಈ ಪ್ರಾಂತ್ಯದ ಅನೇಕ ಹರಿಜನರಿಗೆ ಲಿಂಗದೀಕ್ಷೆಯನ್ನು ನೀಡಿದ್ದಾರೆ.ಗುರುಗಳು ಸಮಾಜದ ಎಲ್ಲಾ ವರ್ಗದ ಜನರ ಜತೆ ಬೆರೆತು ಧರ್ಮೋಪದೇಶವನ್ನು ಮಾಡುತ್ತಾ ಸಮಾಜವನ್ನು ಇಡಿಯಾಗಿ ನೋಡಿ ಬೆಳೆಸಿದರು. ಈ ಪ್ರಾಂತ್ಯವನ್ನೆಲ್ಲಾ ಸುತ್ತಿ ವೀರಶೈವ ಧರ್ಮದ ಪ್ರಚಾರವನ್ನು ಮಾಡಿ ಬೆಳೆಸಿದರು. ಈ ಮಠಕ್ಕೆ ಇಂದಿಗೂ ಎಲ್ಲಾ ವರ್ಗದ ಜನರೂ ಭಕ್ತರಾಗಿದ್ದಾರೆ. ವಯೋವೃದ್ಧರಾದ ಗುರುಗಳು ೧೯೯೯ರಲ್ಲಿ ಲಿಂಗೈಕ್ಯರಾದರು. ಈಗ ಮಠದ ವಂಶಸ್ಥರಾದ ಶ್ರೀ ಮಲ್ಲಿಕಾರ್ಜುನ ಎಂಬುವರು ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಆಚರಣೆ: ಮಠದ ಆವರಣದಲ್ಲಿರುವ ಆರು ಗದ್ದುಗೆಗಳ ಪೂಜೆ, ಸಂಕ್ರಾಂತಿಯ ದಿನ ಕರ್ತೃಗುರುಗಳ ಜಾತ್ರೆಯನ್ನು ಆಚರಿಸುವುದು ಮಠದ ವಾರ್ಷಿಕ ಆಚರಣೆಯಾಗಿದೆ. ಹುಣ್ಣಿಮೆ ಮತ್ತು ಅಮಾವಾಸ್ಯೆ, ಶ್ರಾವಣ ಮತ್ತು ಕಾರ್ತೀಕ ಮಾಸಗಳಲ್ಲಿ ವಿಶೇಷ ಪೂಜೆ ಮತ್ತು ದಾಸೋಹ ವ್ಯವಸ್ಥೆ ನಡೆಯುತ್ತಿದೆ.

ವಿಳಾಸ: ಶ್ರೀ ಮಲ್ಲಿಕಾರ್ಜುನ ಶ್ರೀ ಹೆಗ್ಗಡಹಳ್ಳಿ ಮಠ, ಹೆಗ್ಗಡಹಳ್ಳಿ, ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ.

❑

ಹಾಸನ ತಾಲ್ಲೂಕು

ಹಾಸನ ಜಿಲ್ಲೆಯ ಎಂಟು ತಾಲ್ಲೂಕುಗಳಲ್ಲಿ ಒಂದಾದ ಹಾಸನ ತಾಲ್ಲೂಕು ಐತಿಹಾಸಿಕ, ಧಾರ್ಮಿಕ ಹಾಗೂ ಶೈಕ್ಷಣಿಕ ವಾಗಿ ಹೆಸರು ಮಾಡಿದೆ. ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಬೆಳೆದು ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ. ಇಲ್ಲಿ ನಾಲ್ಕು ಮಠಗಳು ಅಸ್ತಿತ್ವದಲ್ಲಿವೆ.

ಮಲ್ಲೇದೇವರಪುರ

ಹಾಸನ ತಾಲ್ಲೂಕಿನ ಮುಲ್ಲೇದೇವರಪುರವು ಹಾಸನದ ಸಮೀಪ ಸಿಗುವ ಒಂದು ಚಿಕ್ಕಹಳ್ಳಿ. ಇಲ್ಲಿ ಶ್ರೀ ಮುಕುಂ ದೂರು ಚಿದಾನಂದ ಮಠವು ಅಸ್ತಿತ್ವದಲ್ಲಿದೆ.

ಮುಕುಂದೂರುಮಠ: ಮುಲ್ಲೇದೇವರಪುರ ಗ್ರಾಮದ ಹೊರವಲಯದಲ್ಲಿ ಬೆಟ್ಟದಲ್ಲಿ ಶ್ರೀ ಬಸವಲಿಂಗ ಶಿವಯೋಗಿಗಳು ಮಠವನ್ನು ಸ್ಥಾಪನೆ ಮಾಡಿ, ಈ ಗ್ರಾಮವನ್ನು ಧಾರ್ಮಿಕ ಕ್ಷೇತ್ರದಲ್ಲಿ ಹೆಸರು ಪಡೆಯುವಂತೆ ಮಾಡಿದ್ದಾರೆ. ಸಿದ್ಧರಾಮದೇವರ ಪಾಳ್ಯದಲ್ಲಿ ಜನಿಸಿ ಚಿಕ್ಕವಯಸ್ಸಿನಲ್ಲಿಯೇ ತಮ್ಮ ತಂದೆ ತಾಯಿಗಳನ್ನು ಕಳೆದುಕೊಂಡ ಶ್ರೀ ಬಸವಲಿಂಗ ದೇವರು ತಬ್ಬಲಿಯಾಗಿದ್ದರು. ಚಿಕ್ಕ ವಯಸ್ಸಿನಲ್ಲಿಯೇ ಬದುಕಿಗಾಗಿ ಜೀತ ಮಾಡುತ್ತಾ ಅನುಭವವನ್ನು ಸಂಪಾದಿಸಿಕೊಂಡು ಬೆಳೆದು, ಗೃಹಸ್ಥಾಶ್ರಮವನ್ನು ಸ್ವೀಕರಿಸಿದರು. ನಂತರ ಶ್ರೀ ಬಸವಲಿಂಗ ದೇವರು ಆಧ್ಯಾತ್ಮ ಚಿಂತನೆಯಿಂದ ವೈರಾಗ್ಯತಾಳಿ ಸಂಸಾರವನ್ನು ತ್ಯಜಿಸಿ, ಮುಕುಂದೂರು ಬೆಟ್ಟದಲ್ಲಿ ದೀರ್ಘತಪೋನುಷ್ಠಾನ ಕೈಗೊಂಡು ಶಿವಯೋಗಿಗಳಾಗಿ ಆಧ್ಯಾತ್ಮ ಚಿಂತನೆಗಳಿಂದ ಸುತ್ತಲ ಗ್ರಾಮಸ್ಥರನ್ನು ಆಕರ್ಷಿಸಿಕೊಂಡರು. ಕೇವಲ ಕೆಲವೇ ದಿನಗಳಲ್ಲಿ ಶ್ರೀ ಬಸವಲಿಂಗ ಶಿವಯೋಗಿಗಳು ಈ ಬೆಟ್ಟವನ್ನು ಒಂದು ತಪೋಭೂಮಿಯನ್ನಾಗಿ ಮಾಡಿದರು.

ಶ್ರೀ ಬಸವಲಿಂಗ ಶಿವಯೋಗಿಗಳ ಪ್ರಭಾವ ಹೆಚ್ಚಾದಂತೆ ಅರಸೀಕೆರೆ ತಾಲ್ಲೂಕಿನ ಮಾರಗೊಂಡನಹಳ್ಳಿಯಲ್ಲಿ ಭಕ್ತರು ತಾವೇ ಸ್ಥಾಪಿಸಿದ ವಿರಕ್ತಮಠಕ್ಕೆ ಕರೆದುಕೊಂಡು ಬರುತ್ತಾರೆ. ಶ್ರೀ ಬಸವಲಿಂಗ ಶಿವಯೋಗಿಗಳು ಮಾರಗೊಂಡನಹಳ್ಳಿ ಯಲ್ಲಿ ನೆಲೆನಿಂತ ಮೇಲೆ ಮುಕುಂದೂರು ಚಿದಾನಂದಮಠವು ಖಾಲಿ ಉಳಿಯಬಾರದೆಂದು ಸಿದ್ಧರಾಮದೇವರ ಪಾಳ್ಯದ ಮರಿದೇವರನ್ನು ನೆಲೆಗೊಳಿಸಿದರು. ಶ್ರೀ ಬಸವಲಿಂಗ ಸ್ವಾಮಿಗಳೆಂಬ ಅಭಿಧಾನ ಪಡೆದು ಶ್ರೀ ಮುಕುಂದೂರು ಚಿದಾನಂದ ಮಠದ ಆಡಳಿತವನ್ನು ವಹಿಸಿಕೊಂಡು, ಹಿರಿಯ ಗುರುಗಳ ಮಾರ್ಗದರ್ಶನದಿಂದ ಧಾರ್ಮಿಕ ಕಾರ್ಯಗಳನ್ನು ನಡೆಸಿ, ಮಠವನ್ನು ಹೆಚ್ಚು ಅಭಿವೃದ್ಧಿ ಪಡಿಸಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಮೂರನೆಯ ಗುರುಗಳಾಗಿ ಅಧಿಕಾರಕ್ಕೆ ಬಂದ ಶ್ರೀ ಚನ್ನ ಬಸವಲಿಂಗ ಸ್ವಾಮಿಗಳೆಂದು ಅಭಿದಾನ ಪಡೆದು ಅಧಿಕಾರವನ್ನು ನಡೆಸುತ್ತಿದ್ದಾರೆ.

ವಿಳಾಸ: ಶ್ರೀ ಚನ್ನಬಸವಲಿಂಗ ಸ್ವಾಮಿಗಳು, ಶ್ರೀಮುಕುಂದೂರು ಚಿದಾನಂದಮಠ, ಮುಲ್ಲೇದೇವರಪುರ, ಹಾಸನ ತಾಲ್ಲೂಕು.

ಯಲಗುಂದ

ಹಾಸನ ತಾಲ್ಲೂಕಿನ ಯಲಗುಂದ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಎಂಟು ಕಿ.ಮೀ.ದೂರದಲ್ಲಿದೆ. ಅಭಿವೃದ್ಧಿ ಕಾಣಬೇಕಾಗಿರುವ ಈ ಗ್ರಾಮದಲ್ಲಿ ಸಿದ್ಧರಾಮೇಶ್ವರ ಮಠವು ಪ್ರಾರಂಭವಾಗಿ ಈ ಗ್ರಾಮದ ಹಾಗೂ ಸುತ್ತಲಿನ ನಾಲ್ಕು ಗ್ರಾಮದ ಭಕ್ತರ ಧಾರ್ಮಿಕ ಕೇಂದ್ರವಾಗಿ ಬೆಳೆದಿದೆ.

ಸಿದ್ಧರಾಮೇಶ್ವರಮಠ: ಯಲಗುಂದ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ಸಿದ್ಧರಾಮೇಶ್ವರಮಠವು ಪುರಾತನ ಕಾಲದಲ್ಲಿಯೇ ಪ್ರಾರಂಭವಾಗಿದೆ ಎಂದು ಹೇಳಲಾದರೂ ಇದನ್ನು ದೃಢಪಡಿಸಲು ಯಾವುದೇ ಆಧಾರಗಳು ಮಠದಲ್ಲಿ ಇಲ್ಲ. ಮಠದ ಆವರಣದಲ್ಲಿ ಹೊಯ್ಸಳರ ಕಾಲದಲ್ಲಿ ಸ್ಥಾಪಿಸಲ್ಪಟ್ಟ ರಾಮಲಿಂಗೇಶ್ವರ ದೇವಾಲಯವಿದೆ. ಈ ದೇವಾಲಯದ ಪಕ್ಕದಲ್ಲಿ ನಿರ್ಮಾಣಗೊಂಡು ಜೀರ್ಣಾವಸ್ಥೆಯಾದ ಮಠದ ಕಟ್ಟಡದ ಅವಶೇಷಗಳು ನೋಡಸಿಗುತ್ತವೆ. ಈ ಒಂದು ಆಧಾರದಿಂದ

ಈ ಮಠವು ಪುರಾತನ ಕಾಲದಲ್ಲಿ ಸ್ಥಾಪನೆಗೊಂಡಿದೆ ಎಂದು ಹೇಳಬಹುದು.

ಮೊದಲ ಗುರುಗಳು: ಪುರಾತನ ಮಠ ಎಂದು ಹೇಳಲಾಗುವ ಈ ಮಠದ ಸ್ಥಾಪಕರ ಬಗ್ಗೆ ನಿಖರವಾದ ವಿವರಗಳು ತಿಳಿದು ಬಂದಿಲ್ಲ. ೧೯೨೫ರಲ್ಲಿ ಶ್ರೀ ಚನ್ನಬಸವ ದೇಶಿಕೇಂದ್ರ ಸ್ವಾಮಿಗಳು ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡು ಮಠದ ಧಾರ್ಮಿಕ ಚಟುವಟಿಕೆಗಳನ್ನು ಪ್ರಾರಂಭ ಮಾಡಿದ್ದಾರೆಂದು ಹೇಳಬಹುದು. ಶ್ರೀ ಚನ್ನಬಸವರಾಜ ದೇಶಿಕೇಂದ್ರಸ್ವಾಮಿಗಳು ಮಠದ ಅಭಿವೃದ್ಧಿಗಾಗಿ ಶ್ರಮಿಸಿ ಮಠದ ಅಸ್ತಿಯಾಗಿದ್ದ ಐದುಎಕರೆ ಜಮೀನನ್ನು ಅಭಿವೃದ್ಧಿಪಡಿಸಿ ಮಠಕ್ಕೆ ಆದಾಯ ಬರುವಂತೆ ನೋಡಿಕೊಂಡಿದ್ದರು.ಗುರುಗಳು ಪುರಾತನ ಮಠದ ಇತಿಹಾಸವನ್ನು ಅರಿಯಲು ಶ್ರಮಪಟ್ಟಿದ್ದಾರೆ. ಇವರ ಪ್ರಯತ್ನ ದಿಂದ ಈಗಿನ ತೋಟದ ಜಾಗದಲ್ಲಿ ಮಠವು ಮೊದಲು ಪ್ರಾರಂಭಗೊಂಡಿದ್ದು, ನಂತರ ಯಲಗುಂದ ಗ್ರಾಮದ ಸಮೀಪದಲ್ಲಿ ಸ್ಥಾಪನೆ ಗೊಂಡಿದೆ ಎಂದು ತಿಳಿದು ಬಂದಿದೆ. ಅಲ್ಲದೆ ತೋಟದಲ್ಲಿ ನಾಲ್ಕು ಗದ್ದುಗೆಗಳು ದೊರೆತಿವೆ ಎಂದು ಹೇಳಲಾಗುತ್ತಿದೆ. ಈ ಗದ್ದುಗೆಗಳ ಸಂರಕ್ಷಣೆ ಇಲ್ಲದೆ ಈಗ ಗುರುತಿಸಲಾಗುತ್ತಿಲ್ಲ. ಆದರೆ ಗದ್ದುಗೆ ಜಾಗ ಎಂದು ಈಗಲೂ ಕರೆಯಲಾಗುತ್ತಿದೆ.

ಈ ಮಠದ ಮೊದಲ ಗುರುಗಳಾಗಿ (ದಾಖಲೆ ಪ್ರಕಾರ) ಅಧಿಕಾರ ವಹಿಸಿಕೊಂಡ ಐವತ್ತನಾಲ್ಕು ವರ್ಷಗಳ ದೀರ್ಘ ಆಡಳಿತವನ್ನು ನಡೆಸಿದ ಶ್ರೀ ಚನ್ನಬಸವರಾಜ ದೇಶಿಕೇಂದ್ರ ಸ್ವಾಮಿಗಳು ವೀರಶೈವ ಸಿದ್ಧಾಂತವನ್ನು ಜನಮನಕ್ಕೆ ಮುಟ್ಟಿಸಿ, ವೀರಶೈವ ಧರ್ಮದ ಆಚರಣೆಗಳನ್ನು ಆಚರಿಸಲು ಭಕ್ತರಿಗೆ ಪ್ರೇರಣೆ ನೀಡಿ ಲಿಂಗ,ವಿಭೂತಿ ಹಾಗೂ ರುದ್ರಾಕ್ಷಿಗಳ ಮಹತ್ವವನ್ನು ಭಕ್ತರಿಗೆ ತಿಳಿಸಿ, ಧಾರ್ಮಿಕ ಭಾವನೆಯನ್ನು ಬೆಳೆಸಿ ಮಠವನ್ನು ಜನಮನದಲ್ಲಿ ಬರುವಂತೆ ಮಾಡಿದರು. ಶ್ರೀ ಚನ್ನಬಸವರಾಜ ದೇಶಿಕೇಂದ್ರ ಸ್ವಾಮಿಗಳು ೧೯೮೨ರಲ್ಲಿ ಶ್ರೀ ಸಿದ್ಧರಾಮ ದೇಶಿಕೇಂದ್ರ ಸ್ವಾಮಿಗಳಿಗೆ ಪಟ್ಟಾಧಿಕಾರ ನೀಡಿದ್ದಾರೆ.

ಸಮರ್ಥ ಅಧಿಕಾರಿ: ಹಾಸನ ತಾಲ್ಲೂಕಿನ ಇಬ್ಬದಾಣಿ ಗ್ರಾಮದ ಶ್ರೀ ನಂಜುಂಡಯ್ಯ ಮತ್ತು ಶ್ರೀಮತಿ ಅಪರ್ಣಮ್ಮನವರ ಪುತ್ರರಾಗಿ ೧೯೬೭ರ ಡಿಸೆಂಬರ್ ಇಪ್ಪತ್ತಾರರಂದು ಜನಿಸಿದರು. ಇಬ್ಬದಾಣಿಯಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿ ಮೈಸೂರಿನಲ್ಲಿ ಪದವಿ ಶಿಕ್ಷಣಪಡೆದು ೧೯೮೨ರಲ್ಲಿ ಯಲಗುಂದ ಮಠದ ಪಟ್ಟಾಧಿಕಾರವನ್ನು ಪಡೆದು ಪುನಃ ತಮ್ಮ ಸ್ನಾತಕೋತ್ತರ ವ್ಯಾಸಂಗಕ್ಕಾಗಿ ಮೈಸೂರಿಗೆ ಹೋಗಿ ಎರಡು ವರ್ಷದ ವಿದ್ಯಾಭ್ಯಾಸ ಮುಗಿಸಿ ಯಲಗುಂದ ಮಠಕ್ಕೆ ಬಂದು ನೆಲೆಸಿ ಮಠದ ಅಭಿವೃದ್ಧಿಯ ಕಡೆ ಗಮನ ಹರಿಸತೊಡಗಿದರು. ಶ್ರೀ ಸಿದ್ಧರಾಮ ದೇಶಿಕೇಂದ್ರ ಸ್ವಾಮಿಗಳು ವಿದ್ವತ್ ಪಾಂಡಿತ್ಯವನ್ನು ವ್ಯರ್ಥಗೊಳಿಸದೆ ಧಾರ್ಮಿಕ ಚಿಂತನೆ ಮಾಡತೊಡಗಿ ಮಠವನ್ನು ಹೆಚ್ಚು ಪ್ರಚಾರಗೊಳಿಸಿದರು. ಇವರ ಆಡಳಿತ ಚತುರತೆ ಮತ್ತು ವಿದ್ವತ್ತನ್ನು ಗುರುತಿಸಿದ ಹರಿಹರ ತಾಲ್ಲೂಕಿನ ನಂದಿಗುಡಿಯ ಶ್ರೀ ಬಸವರಾಜ ದೇಶಿಕೇಂದ್ರ ಸ್ವಾಮಿಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ಆಯ್ಕೆಮಾಡಿಕೊಂಡರು. ನಂದಿಗುಡಿಯ ವೃಷಭಪುರಿ ಸಂಸ್ಥಾನಾಧೀಶ್ವರರಾಗಿ ೧೯೯೩ರ ನವೆಂಬರ್ ಇಪ್ಪತ್ತೆಂಟರಂದು ಪಟ್ಟಾಧಿಕಾರ ವಹಿಸಿಕೊಂಡರೂ ಸಹ ಶ್ರೀ ಸಿದ್ಧರಾಮ ದೇಶಿಕೇಂದ್ರ ಸ್ವಾಮಿಗಳು ಯಲಗುಂದ ಮಠದ ಜವಾಬ್ದಾರಿಯನ್ನೂ ನೋಡಿಕೊಳ್ಳತೊಡಗಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಮಠದ ಧಾರ್ಮಿಕ, ಶೈಕ್ಷಣಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಬಗ್ಗೆ ಚಿಂತನೆ ನಡೆಸಿ ಮಠದಲ್ಲಿ ಉಪನ್ಯಾಸ, ಭಕ್ತರ ಸಂಘಟನೆ, ಮಠದ ಜೀರ್ಣಾಭಿವೃದ್ಧಿ, ಹಿರಿಯ ಗುರುಗಳ ಗದ್ದುಗೆ ಮಂಟಪ, ರಾಮಲಿಂಗೇಶ್ವರ ದೇವಸ್ಥಾನದ ಅಭಿವೃದ್ಧಿ ಸೇರಿದಂತೆ ಅನೇಕ ಯೋಜನೆಗಳನ್ನು ರೂಪಿಸಿಕೊಂಡ ಗುರುಗಳು ಒಂದೊಂದೇ ಕಾರ್ಯಗಳನ್ನು ಮುಗಿಸುತ್ತಾ ಬಂದರು. ಪರಂಪರಾಗತವಾಗಿ ನಡೆದುಕೊಂಡು ಬರುತ್ತಿದ್ದ ಭಕ್ತರನ್ನು ಬಳಸಿಕೊಂಡು ಮಠವನ್ನು ಹೆಚ್ಚು ಅಭಿವೃದ್ಧಿಪಡಿಸಿದರು.

ಶೈಕ್ಷಣಿಕ ಸೇವೆ: ಲಿಂಗೈಕ್ಯ ಗುರುಗಳಾದ ಶ್ರೀ ಚನ್ನಬಸವರಾಜ ದೇಶಿಕೇಂದ್ರ ಸ್ವಾಮಿಗಳು ಇಪ್ಪತ್ತು ವರ್ಷಗಳ ಹಿಂದೆ ಮಠದಲ್ಲಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದ್ದರು. ಸಂಸ್ಕೃತ, ವೇದ ಹಾಗೂ ಆಗಮಗಳ ಬಗ್ಗೆ ಕಲಿಸಿಕೊಡಲು ಪಾಠಶಾಲೆಯನ್ನು ಪ್ರಾರಂಭಿಸ ಲಾಗಿತ್ತು. ನಂತರ ಬಂದ ಶ್ರೀ ಸಿದ್ಧರಾಮ ದೇಶಿಕೇಂದ್ರ ಸ್ವಾಮಿಗಳು ಪ್ರೌಢಶಾಲೆಯನ್ನು ಪ್ರಾರಂಭಿಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಮುಂಭಾಗದಲ್ಲಿರುವ ರಾಮಲಿಂಗೇಶ್ವರ ದೇವಸ್ಥಾನ, ಮಠದ ಗದ್ದುಗೆ ಪೂಜೆ ನಿತ್ಯದ

ಧಾರ್ಮಿಕ ಕಾರ್ಯಗಳಾಗಿವೆ. ಶ್ರಾವಣ, ಕಾರ್ತೀಕಮಾಸಗಳಲ್ಲಿ ವಿಶೇಷ ಪೂಜೆ, ಪ್ರತಿ ವರ್ಷ ಸಂಕ್ರಾಂತಿಯಲ್ಲಿ ಹಿರಿಯ ಗುರುಗಳ ಆರಾಧನೆ, ಗ್ರಾಮದಲ್ಲಿ ಕರಿಬಸವ ಸ್ವಾಮಿಗಳ ಜಾತ್ರೆ ಹಾಗೂ ಸಿದ್ಧರಾಮೇಶ್ವರ ಜಯಂತಿಯನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ನಂದೀಶ್ವರ ಶಿವಾಚಾರ್ಯಸ್ವಾಮಿಗಳು, ಶ್ರೀಸಿದ್ಧರಾಮೇಶ್ವರ ಮಠ, ಯಲಗುಂದ, ಹಾಸನ ತಾ, ಹಾಸನ ಜಿಲ್ಲೆ.

ಹಾಸನ

ಜಿಲ್ಲೆಯ ಕೇಂದ್ರ ಸ್ಥಳವಾಗಿರುವ ಹಾಸನ ನಗರವು ವ್ಯಾಪಾರಿಕೇಂದ್ರ ಸ್ಥಳವಾಗಿ ಪುರಾತನ ಕಾಲದಿಂದಲೂ ಹೆಸರು ಪಡೆದಿದೆ. ಈ ನಗರದಲ್ಲಿ ವೀರಶೈವರ ಧಾರ್ಮಿಕ ಚಟುವಟಿಕೆಗಳ ಕೇಂದ್ರ ಬಿಂದುವಾಗಿ ತಣ್ಣೀರುಹಳ್ಳದ ಮಠ ಮತ್ತು ಜವನಹಳ್ಳಿ ಮಠಗಳು ಹೆಸರು ಪಡೆದಿವೆ. ಪುರಾತನ ಕಾಲದಲ್ಲಿ ಪ್ರಾರಂಭಗೊಂಡ ಈ ಮಠಗಳು ಈತನಕವೂ ತಮ್ಮ ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿವೆ.

ತಣ್ಣೀರುಹಳ್ಳದಮಠ: ಹಾಸನ ನಗರದ ಪಶ್ಚಿಮ ಭಾಗದ ಹೊರವಲಯದಲ್ಲಿ ಸ್ಥಾಪಿತಗೊಂಡಿರುವ ತಣ್ಣೀರು ಹಳ್ಳದ ಮಠವು, ನಗರ ಬೆಳೆದಂತೆ ನಗರದ ಒಳ ಭಾಗಕ್ಕೆ ಸೇರಿಕೊಂಡಿದೆ. ವಿರಕ್ತಸಂಪ್ರದಾಯದ ಮುರುಘಾ ಸಮಯದ ಈ ಮಠವು ಸ್ವತಂತ್ರ ಮಠವಾಗಿ ನಗರದ ತಣ್ಣೀರು ಹಳ್ಳದದಡದಲ್ಲಿ ಸ್ಥಾಪನೆಯಾದ ಕಾರಣ'ತಣ್ಣೀರುಹಳ್ಳದಮಠ'ಎಂದು ಹೆಸರುಬಂದಿದೆ.

ಮಠಸ್ಥಾಪನೆ: ಈ ಮಠವು ಮಲೆನಾಡು ಪ್ರದೇಶದ ಸಕಲೇಶಪುರ ಮತ್ತು ಬೇಲೂರು ಕೂಡು ರಸ್ತೆಯಲ್ಲಿಸ್ಥಾಪನೆಗೊಂಡಿದೆ. ಐತಿಹಾಸಿಕವಾಗಿ ಹೆಸರು ಪಡೆದಿರುವ ಈ ಮಠವು ದಳಪತಿ ನಂಜರಾಜಯ್ಯನ ಕಾಲದಲ್ಲಿ ಸ್ಥಾಪಿಸಲ್ಪಟ್ಟಿತ್ತೆಂದು ಹೇಳಲಾಗುತ್ತಿದೆ. ಅಂದು ಪ್ರಾರಂಭಗೊಂಡ ಮಠದಲ್ಲಿ ವಿದ್ವಾಂಸರೂ ತಪೋಮೂರ್ತಿಗಳೂ ಆದ ಗುರುಗಳು ಈ ಕ್ಷೇತ್ರದಲ್ಲಿ ನೆಲೆನಿಂತು ಈ ಸ್ಥಳವನ್ನು ಜಾಗೃತ ಸ್ಥಳವನ್ನಾಗಿ ರೂಪಿಸಿರುತ್ತಾರೆ. ಲೋಕಸಂಚಾರಕ್ಕೆಂದು ಬಂದ ಶಿವಯೋಗಿಗಳು ಈ ಪ್ರಶಾಂತ ಸ್ಥಳದಲ್ಲಿ ನೆಲೆಗೊಂಡು ಧರ್ಮಜಾಗೃತಿ ಮಾಡಿ ಅನೇಕ ಪವಾಡಗಳಿಂದ ಜನ ಮನದಲ್ಲಿ ಬೆಳೆದಿದ್ದರು. ದಳಪತಿ ನಂಜರಾಜಯ್ಯನು ಶಿವಯೋಗಿಗಳ ಈ ಪವಾಡಗಳನ್ನು ಕೇಳಿ ತಿಳಿದು ದರ್ಶನಕ್ಕೆಂದು ಆಗಮಿಸುತ್ತಾನೆ. ತಣ್ಣೀರು ಹಳ್ಳದ ದಡದ ಈ ಪ್ರಶಾಂತ ವಾತಾವರಣ ಧಾರ್ಮಿಕ ಪ್ರಭೆಯಿಂದ ಕಂಗೊಳಿಸುತ್ತಿರುವುದನ್ನು ನೋಡಿ ನಂಜರಾಜಯ್ಯನು ಸಂತೋಷಗೊಂಡನು. ತನ್ನ ಪ್ರಾಂತ್ಯದಲ್ಲಿ ಇಂತಹ ಚರಮೂರ್ತಿಗಳಿಂದ ಶಾಂತಿ, ಸುವ್ಯವಸ್ಥೆ ಹಾಗೂ ಸಹಬಾಳ್ವೆ ಸಾಕಾರಗೊಂಡರೆ ಈ ನಾಡು ಸುಭಿಕ್ಷವಾಗಿ ಬೆಳೆಯಲು ಕಾರಣವಾಗುತ್ತದೆ ಎಂದು ಅರಿತು ಗುರುಗಳಿಗಾಗಿ ಈ ಸ್ಥಳದಲ್ಲಿ ಮಠವನ್ನು ನಿರ್ಮಿಸಿಕೊಡಲು ಮುಂದಾದನು.

ಗುರುಗಳ ದರ್ಶನ: ರಾಜಪರಿವಾರ ಸಮೇತ ಗುರುಗಳ ದರ್ಶನಕ್ಕೆಂದು ಬಂದಿದ್ದ ನಂಜರಾಜಯ್ಯನು ಗುರುಗಳ ದರ್ಶನಕ್ಕೂ ಮೊದಲೇ ಈ ವಾತಾವರಣವನ್ನು ನೋಡಿ ಭಾವುಕಗೊಂಡು ಗುರುಗಳ ಬಳಿಗೆ ಆಗಮಿಸಿ ಕಾಣಿಕೆಯನ್ನು ನೀಡಿ ನಮಸ್ಕರಿಸುತ್ತಾನೆ. 'ಈ ಪ್ರಾಂತ್ಯವನ್ನು ಧಾರ್ಮಿಕವಾಗಿ ಬೆಳೆಯುವಂತೆ ಆಶೀರ್ವದಿಸಿರುವ ತಾವುಗಳು ಇಲ್ಲೇ ನೆಲೆಸಿ ಈ ನಾಡಿನಲ್ಲಿ ಧರ್ಮ ಸಂಸ್ಕಾರಗೊಳ್ಳುವಂತೆ ಮಾಡಬೇಕು' ಎಂದು ಶಿವಯೋಗಿಗಳಲ್ಲಿ ಬಿನ್ನವಿಸಿಕೊಳ್ಳುತ್ತಾನೆ. ಅಲ್ಲದೆ ಈ ನೆಲದಲ್ಲಿ ಮಠವನ್ನು ಸ್ಥಾಪನೆ ಮಾಡಲು ನಿರ್ಧರಿಸಿರುವ ವಿಚಾರವನ್ನು ಗುರುಗಳಿಗೆ ತಿಳಿಸಿ ಅವರ ಅನುಮತಿಯನ್ನು ಪಡೆದುಕೊಳ್ಳುತ್ತಾನೆ.

ಗುರುಗಳಿಗಾಗಿ ಮಠವನ್ನು ಸ್ಥಾಪನೆ ಮಾಡಿದ ದಳಪತಿ ನಂಜರಾಜಯ್ಯನು ಮಠದ ಧಾರ್ಮಿಕ ಚಟುವಟಿಕೆಗಳು ಶಾಶ್ವತವಾಗಿ ನಡೆಯಬೇಕೆಂಬ ಕಾರಣಕ್ಕಾಗಿ ದೇವರಾಯಪಟ್ಟಣ, ಗೂಳೇನಹಳ್ಳಿ ಮತ್ತು ದ್ಯಾವನಹಳ್ಳಿಗಳನ್ನು ಮಠಕ್ಕೆ ಒಪ್ಪಿಸುತ್ತಾನೆ. ಈ ರೀತಿ ರಾಜಾಶ್ರಯದಿಂದಲೇ ಪ್ರಾರಂಭಗೊಂಡ ವಿರಕ್ತಮಠದ ಬೆಳವಣಿಗೆಗೆ ನಂತರ ಹಾಸನದ ವರ್ತಕ ಶ್ರೀ ನರಸಿಂಹದಾಸ, ಶ್ರೀ ರಂಗಯ್ಯ, ವೆಂಕಟರಾಮಯ್ಯ ಮತ್ತು ಕೊಳ್ಳೆಗಾಲದ ಶ್ರೀ ವೀರಶೆಟ್ಟರೆಂಬ ಶಿಷ್ಯರುಗಳು ಸಹಕಾರವನ್ನು ನೀಡಿದವರಾಗಿದ್ದಾರೆ. ನಂತರ ಸುಲ್ತಾನರ ಆಳ್ವಿಕೆಯ ಕಾಲದಲ್ಲಿ ಕಿರುಕುಳ ಪ್ರಾರಂಭಗೊಳ್ಳುತ್ತದೆ. ಈ ಸಂದರ್ಭದಲ್ಲಿ ಚರಮೂರ್ತಿ ಶಿವಯೋಗಿಗಳು ಮಠವನ್ನು ಬಿಟ್ಟು ಲೋಕಸಂಚಾರ ಹೊರಟು ಮಂಜ್ರಾಬಾದ್ ತಾಲ್ಲೂಕಿಗೆ ಹೋಗಿ ಶ್ರೀವೆಂಕಟಾದ್ರಿ ನಾಯಕನೆಂಬ ಪಾಳೆಗಾರನಿಂದ ಸನ್ಮಾನಿತರಾಗಿ ಸರ್ವಮಾನ್ಯ ಬಿರುದನ್ನು ಪಡೆದುಕೊಂಡು ಸಂಕಲಾಪುರದಲ್ಲಿ ಮಠವನ್ನು ಸ್ಥಾಪಿಸಿ ನೆಲೆಸಿದರು.

ಹಿಂದಿರುಗಿದ ಗುರುಗಳು: ಸಂಕಲಾಪುರದಲ್ಲಿ ಮಠವನ್ನು ಸ್ಥಾಪಿಸಿದ ಗುರುಗಳು ಅಲ್ಲೇ ನೆಲೆಗೊಂಡಿದ್ದಾಗ ಹಾಸನ, ದೇವರಾಯ ಪಟ್ಟಣ, ಗೂಳೇನಹಳ್ಳಿ ಮತ್ತು ದ್ಯಾವನಹಳ್ಳಿ ಭಕ್ತರು ಸಂಕಲಾಪುರಕ್ಕೆ ಹೋಗಿ ಗುರುಗಳನ್ನು ಮತ್ತೆ ಬರುವಂತೆ ಬಿನ್ನವಿಸಿಕೊಳ್ಳುತ್ತಾರೆ. ಶಿಷ್ಯವರ್ಗದ ಪ್ರಾರ್ಥನೆಗೆ ಸಮ್ಮತಿಸಿದ ಗುರುಗಳು ಪುನಃ ಹಾಸನದ ಮಠಕ್ಕೆ ಬರಲು ಒಪ್ಪಿಕೊಂಡು ಶಿಷ್ಯರ ಜತೆಯಲ್ಲಿಯೇ ಹಿಂದಿರುಗುತ್ತಾರೆ. ಗುರುಗಳು ಮಠಕ್ಕೆ ಹಿಂದಿರುಗುವ ವೇಳೆಗೆ ದಳಪತಿ ನಂಜರಾಜಯ್ಯನು ನೀಡಿದ್ದ ಮೂರು ಹಳ್ಳಿಗಳು ಕೈತಪ್ಪಿ ಹೋಗಿದ್ದವು. ಮಠದ ಧಾರ್ಮಿಕ ಕಾರ್ಯಗಳ ನಿರ್ವಹಣೆಗೆ ಆದಾಯದ ಮೂಲವೇ ಇಲ್ಲವಾಗಿ ರುವುದನ್ನು ಮನಗಂಡ ಗುರುಗಳು ಚಿಂತೆಗೀಡಾದರು. ಆಗ ಕೃಷ್ಣರಾಜ ಎಂಬ ದಾನಿಗಳು ಮಠದ ಸುತ್ತ ಇದ್ದಂತಹ ಜಮೀನನ್ನು ಕ್ರಯಕ್ಕೆ ಪಡೆದುಕೊಂಡು ಗುರುಗಳಿಗೆ ಒಪ್ಪಿಸಿದನು. ಇದರಿಂದ ಮಠದ ಅಸ್ತಿತ್ವ ಉಳಿಯುವಂತಾಯಿತು.

ಪರಂಪರೆ:	೧. ಶ್ರೀ ಮ.ನಿ.ಪ್ರ. ಚರಮೂರ್ತಿಶಿವಯೋಗಿಗಳು	
	೨. ಶ್ರೀ ಮ.ನಿ.ಪ್ರ. ಶಾಂತವೀರಸ್ವಾಮಿಗಳು	(೧೮೯೦)
	೩. ಶ್ರೀ ಮ.ನಿ.ಪ್ರ. ಗುರುಶಾಂತಸ್ವಾಮಿಗಳು	(೧೯೧೯)
	೪. ಶ್ರೀ ಮ.ನಿ.ಪ್ರ. ಶಿವಲಿಂಗಸ್ವಾಮಿಗಳು	(೧೯೫೨) (ಈಗಿನವರು)

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃಗುರುಗಳ ಹೆಸರು ತಿಳಿಯದಾಗಿದ್ದರೂ ಶ್ರೀ ಚರಮೂರ್ತಿ ಶಿವಯೋಗಿಗಳೆಂದೇ ಜನರು ರೂಢಿಗತ ಮಾತಿನಿಂದ ಕರೆಯತೊಡಗಿದ್ದರು. ಈ ಮಾತೇ ಕರ್ತೃಗುರುಗಳಿಗೆ ಶಾಶ್ವತವಾಗಿ ಉಳಿದುಕೊಂಡಿದೆ. ಕರ್ತೃಗುರುಗಳ ನಂತರ ಮಠದ ಪರಂಪರೆಯ ಬೆಳವಣಿಗೆಯ ಬಗ್ಗೆ ನಿಖರವಾದ ಮಾಹಿತಿಗಳು ದೊರೆಯ ದಾಗಿವೆ. ಈ ಕ್ಷೇತ್ರದಲ್ಲಿ ಪಟ್ಟಾಧಿಕಾರವನ್ನು ಪಡೆದು ಲಿಂಗೈಕ್ಯರಾದ ನಾಲ್ಕು ಜನ ಗುರುಗಳ ಗದ್ದುಗೆಗಳು ನೋಡಸಿಗುತ್ತಿವೆ.

೧೮೯೦ ರಲ್ಲಿ ಮಠದಲ್ಲಿ ಆಡಳಿತವನ್ನು ನಡೆಸುತ್ತಿದ್ದ ಶ್ರೀ ಶಾಂತವೀರ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ, ಧಾರ್ಮಿಕ ಕಾರ್ಯಗಳಿಂದ ಹೆಸರು ಪಡೆದವರಾಗಿದ್ದರು. ಇವರು ಲಿಂಗೈಕ್ಯರಾದ ನಂತರ ಸುಮಾರು ಇಪ್ಪತ್ತೈದು ವರ್ಷಗಳ ಕಾಲ ಮಠವು ಮಠಾಧೀಶರು ಇಲ್ಲದೆ ಖಾಲಿ ಉಳಿಯಿತು. ನಂತರ ೧೯೧೯ರ ಸೆಪ್ಟೆಂಬರ್ ಹದಿಮೂರರಂದು ಶ್ರೀ ಗುರುಶಾಂತಪ್ಪ ಎಂಬುವವರು ವಿರಕ್ತಾಶ್ರಮವನ್ನು ಸ್ವೀಕರಿಸಿ ಶ್ರೀ ಶಾಂತವೀರ ಸ್ವಾಮಿಗಳೆಂದು ಅಭಿದಾನ ಪಡೆದುಕೊಂಡು ಮಠದ ಅಧಿಕಾರವನ್ನು ವಹಿಸಿಕೊಳ್ಳುತ್ತಾರೆ. ನಂತರ ಶ್ರೀ ಶಾಂತವೀರ ಸ್ವಾಮಿಗಳು ಸಂಸ್ಕೃತ, ವೇದಾಧ್ಯಯನಗಳನ್ನು ಮಾಡಿ ಶರಣಸಾಹಿತ್ಯದ ಬಗ್ಗೆ ಅಭ್ಯಾಸ ನಡೆಸಿ ಧಾರ್ಮಿಕ ವಿಚಾರಗಳನ್ನು ಮನನಮಾಡಿಕೊಂಡು ಸಮಾಜವನ್ನು ಮುನ್ನಡೆಸತೊಡಗಿ ದರು. ಶ್ರೀ ಗುರು ಶಾಂತವೀರ ಸ್ವಾಮಿಗಳು ಮಠದ ಶ್ರೇಯೋಭಿವೃದ್ಧಿಗಾಗಿ ಬಹಳವಾಗಿ ಶ್ರಮಿಸಿದರು. ಸಕಲೇಶಪುರ, ಆಲೂರು ಮತ್ತು ಅರಕಲಗೋಡು ತಾಲ್ಲೂಕುಗಳಲ್ಲಿ ಸಂಚರಿಸಿ ಭಕ್ತರಿಗೆ ಧಾರ್ಮಿಕ ತಿಳಿವಳಿಕೆ ಹೇಳಿ ಭಕ್ತರನ್ನು ಸಂಘಟಿಸಿದರು. ಈ ರೀತಿ ಸಂಘಟನೆಗೊಂಡ ಸಮಾಜಕ್ಕೆ ಧರ್ಮ ಜಾಗೃತಿಯನ್ನು ಉಂಟು ಮಾಡಿ ಸಮಾಜದ ಅಭಿವೃದ್ಧಿಗೆ ಧರ್ಮದ ಉಪದೇಶ ವೊಂದೇ ಪರಿಹಾರವಾಗುವುದಿಲ್ಲ ಎಂಬುದನ್ನು ಅರಿತು ಮಠದಲ್ಲಿ ಕಲಿಯುವ ಬಡ ಮಕ್ಕಳಿಗೆ ಆಶ್ರಯ ಕಲ್ಪಿಸಿದರು. ಇದರಿಂದ ಪ್ರೇರಿತಗೊಂಡ ಭಕ್ತರು ಮಠದ ಕಟ್ಟಡವನ್ನು ವಿಸ್ತರಿಸಲು ಮರಮುಟ್ಟು, ದವಸ-ಧಾನ್ಯ ಹಾಗೂ ಆರ್ಥಿಕ ಸಹಾಯವನ್ನು ನೀಡಿ ಭವ್ಯ ಕಟ್ಟಡವನ್ನು ನಿರ್ಮಿಸಿ ಮಠವನ್ನು ಅಭಿವೃದ್ಧಿಪಡಿಸಿದರು. ಗುರುಗಳು ೧೯೨೫ ರಲ್ಲಿ ಲಿಂಗೈಕ್ಯರಾದರು. ನಂತರ ಪುನಃ ಇಪ್ಪತ್ತೈದು ವರ್ಷಗಳ ಕಾಲ ಮಠಾಧೀಶರು ಯಾರೂ ಇಲ್ಲದೆ ಮಠವು ಖಾಲಿ ಉಳಿಯಬೇಕಾಯಿತು.

ಕ್ರಿಯಾಶೀಲರ ಆಗಮನ: ಈ ಕಾಲದಲ್ಲಿ ಮಠದ ಧಾರ್ಮಿಕ ಕಾರ್ಯಗಳು ಸ್ಥಗಿತಗೊಂಡವು. ಮಠವು ಜನಮನದಿಂದ ಮರೆಯಾಗತೊಡಗಿತು. ಇದನ್ನು ಗಮನಿಸಿದ ಭಕ್ತರು ಮಠಕ್ಕೆ ಉತ್ತರಾಧಿಕಾರಿಯನ್ನು ನೇಮಕ ಮಾಡುವ ಜವಾಬ್ದಾರಿಯನ್ನು ಸಿದ್ಧಗಂಗೆ ಕ್ಷೇತ್ರದ ಶ್ರೀ ಶಿವಕುಮಾರ ಸ್ವಾಮಿಗಳಿಗೆ ವಹಿಸಿದರು. ಶ್ರೀ ಸಿದ್ಧಗಂಗಾ ಮಠದಲ್ಲಿ ವಿದ್ಯಾಭ್ಯಾಸವನ್ನು ಮಾಡುತ್ತಿದ್ದ ಶ್ರೀ ಶಿವಲಿಂಗ ಸ್ವಾಮಿಗಳು ಹಿರಿಯ ಚೇತನ ಶ್ರೀ ಶಿವಕುಮಾರ ಸ್ವಾಮಿಗಳ ದೃಷ್ಟಿಗೆ ಬೀಳುತ್ತಾರೆ. ಹಾಸನದ ತಣ್ಣೀರು ಹಳ್ಳದ ಮಠಕ್ಕೆ ಉತ್ತರಾಧಿಕಾರಿಗಳಾಗಲು ಸೂಕ್ತ ಗುರುಗಳೆಂದು ಅರಿತು ೧೯೫೨ ರಲ್ಲಿ ಶ್ರೀ ಶಿವಲಿಂಗ ಸ್ವಾಮಿಗಳೆಂದು ಅಭಿದಾನವಿತ್ತು ವಿರಕ್ತ ಸಂಪ್ರದಾಯದಂತೆ ಪಟ್ಟಾಧಿಕಾರವನ್ನು ನೀಡಿ ಅಧಿಕಾರಕ್ಕೆ ತರುತ್ತಾರೆ. ಶ್ರೀ ಶಿವಲಿಂಗ ಸ್ವಾಮಿಗಳು

ಹಾಸನ ನಗರದ ಶ್ರೀ ಶಾಂತಯ್ಯ ಮತ್ತು ಶ್ರೀಮತಿ ಪಾರ್ವತಮ್ಮನವರ ಪುತ್ರರಾಗಿ ೧೯೩೬ರಲ್ಲಿ ಜನಿಸಿ ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದ ಈ ವಿರಕ್ತ ಮಠದ ಅಧಿಕಾರವನ್ನು ವಹಿಸಿಕೊಳುತ್ತಾರೆ.

ಬೆಳೆದ ಮಠ: ಆಧುನಿಕ ಪ್ರಪಂಚದಲ್ಲಿ ಧರ್ಮದ ಬಗ್ಗೆ ಅಸಡ್ಡೆ, ಅಸಂತೋಷ ಮತ್ತು ತಾತ್ಸಾರವನ್ನು ತೋರಿಸುವ ಇಂದಿನ ಪೀಳಿಗೆಗೆ ಧಾರ್ಮಿಕ ವಿಚಾರಗಳನ್ನು ಮುಟ್ಟಿಸುವುದು ಕಷ್ಟದ ಕೆಲಸ.ಈ ಕಂದಕವನ್ನು ಮುಚ್ಚದೆ ಹೋದರೆ ಧಾರ್ಮಿಕ ಸಂಸ್ಕಾರಗಳಿಂದ ಸಮಾಜ ದೂರವಾಗುತ್ತದೆ. ಆಧುನಿಕತೆಯ ಹೆಸರಿನಲ್ಲಿ ಅನೀತಿ, ಅಧರ್ಮಗಳು ತಲೆ ಎತ್ತಬಹುದು ಎಂದು ಅರಿತ ಗುರುಗಳು ಧಾರ್ಮಿಕ ಕೇಂದ್ರಗಳಾದ ಮಠ ಮಾನ್ಯಗಳು ತಮ್ಮ ಸಂಪ್ರದಾಯದ ಆಚಾರ ವಿಚಾರಗಳನ್ನು ಸಮಾಜಕ್ಕೆ ಮುಟ್ಟಿಸುವುದು ಆದ್ಯಕರ್ತವ್ಯ. ಸಮಾಜದಿಂದ ಅಸಡ್ಡೆ ಮತ್ತು ತಾತ್ಸಾರಗಳು ಏನೇ ಬಂದರೂ ಇದನ್ನು ಎದುರಿಸಿ ಧರ್ಮ ಕಾರ್ಯವನ್ನು ಮುಂದುವರೆಸುವುದು ಅವಶ್ಯ ಎಂದು ತಿಳಿದ ಗುರುಗಳು ಸಾರ್ವಕಾಲಿಕ ಸತ್ಯಗಳಾಗಿದ್ದ ಬಸವಾದಿ ಪ್ರಮಥರು ಸಾರಿದ ತತ್ತ್ವ ಸಮಷ್ಟಿ ಸಮಾಜದ ಹಿತಚಿಂತನೆಗಾಗಿ ಪ್ರಚಾರಪಡಿಸತೊಡಗಿದರು. ಈ ಪ್ರಯತ್ನದ ಫಲವಾಗಿ ಈ ಪ್ರಾಂತ್ಯದಲ್ಲಿ ವೀರಶೈವ ಧರ್ಮದ ಧಾರ್ಮಿಕ ಕೇಂದ್ರವಾಗಿ ಬೆಳೆದ ತಣ್ಣೀರುಹಳ್ಳದ ಮಠ ಮತ್ತೊಮ್ಮೆ ಭಕ್ತರ ಹೃದಯಾಂತರಾಳದಲ್ಲಿ ಧಾರ್ಮಿಕ ಸೆಲೆ ಮೂಡಿಸುವಲ್ಲಿ ಯಶಸ್ವಿಯಾಯಿತು.

ಶೈಕ್ಷಣಿಕ ಸಾಧನೆ: ಧಾರ್ಮಿಕವಾಗಿ ಸಮಾಜವನ್ನು ಯಶಸ್ವಿಯಾಗಿ ಮುನ್ನಡೆಸಬೇಕಾದರೆ ಶಿಕ್ಷಣ ಅನಿವಾರ್ಯ ಎಂದು ಮನಗಂಡ ಶ್ರೀಶಿವಲಿಂಗ ಸ್ವಾಮಿಗಳು ಮಠದ ವತಿಯಿಂದ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ, ಪ್ರಾಥಮಿಕ ಹಾಗೂ ಪ್ರೌಢಶಾಲೆ ಗಳನ್ನು ಪ್ರಾರಂಭಿಸಿದರು. ಅಲ್ಲದೆ ಕೈಗಾರಿಕಾ ತರಬೇತಿ ಕೇಂದ್ರವನ್ನು ಸ್ಥಾಪನೆ ಮಾಡಿದರು. ಗ್ರಾಮಾಂತರ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮಲೆನಾಡು ವೀರಶೈವ ವಿದ್ಯಾರ್ಥಿ ನಿಲಯವನ್ನು ಸ್ಥಾಪನೆ ಮಾಡಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಶಿವಲಿಂಗ ಸ್ವಾಮಿಗಳು ಮಠದಲ್ಲಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ವ್ಯವಸ್ಥೆಗೊಳಿಸಿ ಮಠದ ಸರ್ವಾಂಗೀಣ ಅಭಿವೃದ್ಧಿಗೆ ಕಂಕಣತೊಟ್ಟಿದ್ದಾರೆ. ಕಳೆದ ಒಂದು ದಶಕದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ವ್ಯಯಮಾಡಿ ವಾಣಿಜ್ಯ ಮಳಿಗೆಗಳು, ಕಲ್ಯಾಣ ಮಂಟಪ,ವಿದ್ಯಾರ್ಥಿನಿಲಯ, ಗದ್ದುಗೆ ಮಂಟಪ, ಶಿವಲಿಂಗೇಶ್ವರ, ಶ್ರೀ ಗಣಪತಿ ಮತ್ತು ಪಾರ್ವತಿ ದೇವಾಲಯಗಳ ನಿರ್ಮಾಣ ಕಾರ್ಯವನ್ನು ಮಾಡಿದ್ದಾರೆ.

ಧಾರ್ಮಿಕ ಕಾರ್ಯಗಳು: ತಣ್ಣೀರುಹಳ್ಳದ ಮಠದ ಪರಂಪರೆಯಲ್ಲಿ ಬಂದಂತಹ ಗುರುಗಳ ಗದ್ದುಗೆಗಳು, ಮಠದ ಆವರಣ ದಲ್ಲಿ ಸ್ಥಾಪನೆಗೊಂಡಿರುವ ದೇವಾಲಯಗಳಲ್ಲಿ ನಿತ್ಯಪೂಜೆ, ಶ್ರಾವಣ ಮತ್ತು ಬಸವಜಯಂತಿ ಸಂದರ್ಭಗಳಲ್ಲಿ ವಿಶೇಷಪೂಜೆ ಹಾಗೂ ಶರಣರ ದಿನಾಚರಣೆಗಳನ್ನು ಪ್ರತಿ ತಿಂಗಳು ಆಚರಣೆ ಮಾಡಲಾಗುತ್ತಿದೆ. ಬಸವ ತತ್ತ್ವಪ್ರಚಾರದ ಯೋಜನೆಯನ್ನು ಹಮ್ಮಿಕೊಂಡು ಬಸವ ದಳದ ವೇದಿಕೆಯ ಮೂಲಕ ಕಾರ್ಯಗತಗೊಳಿಸಲಾಗುತ್ತಿದೆ. ತಣ್ಣೀರುಹಳ್ಳದ ಮಠವು ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ತನ್ನನ್ನು ತೊಡಗಿಸಿಕೊಂಡು ಸಮಷ್ಟಿ ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಶಿವಲಿಂಗ ಸ್ವಾಮಿಗಳು, ಶ್ರೀ ತಣ್ಣೀರುಹಳ್ಳದ ಮಠ, ಬಿ.ಎಂ.ರಸ್ತೆ, ಹಾಸನ.
ಆಧಾರ: 'ಕಲ್ಯಾಣ' ಸಂಚಿಕೆಯ ಶ್ರೀ ಶಿವಲಿಂಗ ಸ್ವಾಮಿಗಳ ಲೇಖನ

ಜವನಹಳ್ಳಿಮಠ: ಹಾಸನ ನಗರದ ಸಂಗಮೇಶ್ವರ ಬಡಾವಣೆಯಲ್ಲಿ ಸ್ಥಾಪನೆಗೊಂಡಿರುವ ಜವನಹಳ್ಳಿ ಮಠವು ವಿರಕ್ತ ಸಂಪ್ರದಾಯದಲ್ಲಿ ಬೆಳೆದು ಬಂದಿದೆ. ಸುಮಾರು ಎಂಟು ನೂರು ವರ್ಷಗಳ ಹಿಂದೆ ಪ್ರಾರಂಭಗೊಂಡಿರುವ ಈ ಮಠವನ್ನು ವ್ಯಾಪಾರಿಯಾದ ಹೋಳಿ ಹಂಪಣ್ಣನೆಂಬುವನು ಕಟ್ಟಿಸಿರುವನೆಂದು ಹೇಳಲಾಗುತ್ತಿದೆ. ಹೋಳಿ ಹಂಪಣ್ಣನು ವ್ಯಾಪಾರಕ್ಕಾಗಿ ಬಂದವನು ನಷ್ಟಹೊಂದಿ ಹಾಸನದಲ್ಲಿ ಬಿಡಾರ ಮಾಡಿದ್ದನು. ಈ ಸಂದರ್ಭದಲ್ಲಿ ಸಂಗಮೇಶ್ವರ ಸ್ವಾಮಿಯವರು ಸ್ವಪ್ನದಲ್ಲಿ ಬಂದು 'ಚಿಂತಾಕ್ರಾಂತನಾಗುವ ಆವಶ್ಯಕತೆಯಿಲ್ಲ, ಇಂದು ಆದ ನಷ್ಟವೇ ಮುಂದಿನ ಲಾಭಕ್ಕೆ ನಾಂದಿ'ಎಂದು ಸಮಾಧಾನ ಮಾಡಿ ಆಶೀರ್ವದಿಸಿದರು. ಗುರುಗಳ ಕನಸಿನ ವಾಣಿಯಿಂದ ಧೈರ್ಯ ಪಡೆದು ತನ್ನ ವ್ಯಾಪಾರವನ್ನು ಮುಂದುವರೆಸಿ ಅಧಿಕ ಲಾಭ ಪಡೆದು ಶ್ರೀಮಂತನಾದನು.

ಮಠ ಸ್ಥಾಪನೆ: ಲೋಕಸಂಚಾರಕ್ಕೆಂದು ಹೋಗಿದ್ದ ಶ್ರೀ ಸಂಗಮೇಶ್ವರ ಸ್ವಾಮಿಗಳು ಹಿಂದಿರುಗಿ ಬಂದ ಮೇಲೆ ಹೋಳಿ ಹಂಪಣ್ಣನು ಗುರುಗಳ ದರ್ಶನವನ್ನು ಪಡೆದು ಕನಸಿನಲ್ಲಿ ತಾವು ಬಂದು ಆಶೀರ್ವದಿಸಿದ ವಿಚಾರವನ್ನು ತಿಳಿಸಿದನು. ಆಗ ಗುರುಗಳು,'ನೀನು ಕನಸು ಕಂಡ ಜಾಗವನ್ನು ತೋರಿಸು' ಎಂದು ವ್ಯಾಪಾರಿಗೆ ಹೇಳುತ್ತಾರೆ. ಗುರುಗಳನ್ನು ಹಾಸನಕ್ಕೆ ಕರೆತಂದು ತಾನು ಬಿಡಾರ ಮಾಡುತ್ತಿದ್ದ ಸ್ಥಳವನ್ನು ತೋರಿಸಿದನು. ಗುರುಗಳು ಈ ಪ್ರಶಾಂತ ವಾತಾವರಣವನ್ನು ನೋಡಿ ತಮ್ಮ ತಪಸ್ಸಿಗೆ ಇದೇ ಸೂಕ್ತ ಸ್ಥಳವೆಂದು ಅರಿತು ಅಲ್ಲಿಯೇ ಉಳಿಯಲು ನಿರ್ಧರಿಸಿದರು. ಗುರುಗಳು ಈ ಸ್ಥಳದಲ್ಲಿ ನೆಲೆಗೊಳ್ಳುವ ವಿಚಾರ ತಿಳಿದು ಮಠದ ಸುತ್ತಲೂ ಇದ್ದ ಜಮೀನನ್ನು ಖರೀದಿಸಿ ಗುರುಗಳಿಗಾಗಿ ಒಂದು ಮಠವನ್ನು ಸ್ಥಾಪಿಸಿಕೊಡುತ್ತಾನೆ. ಜವನಹಳ್ಳಿ ಗ್ರಾಮದ ಜಮೀನಿನಲ್ಲಿ ಪ್ರಾರಂಭಗೊಂಡ ಈ ಮಠಕ್ಕೆ ಜವನಹಳ್ಳಿ ಮಠ ಎಂದು ಹೆಸರು ಬರಲು ಕಾರಣವಾಯಿತು.

ಈ ರೀತಿ ಪ್ರಾರಂಭಗೊಂಡ ಮಠಕ್ಕೆ ನಿತ್ಯದ ಪೂಜೆ ಮತ್ತು ದಾಸೋಹ ವ್ಯವಸ್ಥೆಗೆಂದು ಐವತ್ತಾರು ನಾಡುಗಳ ಗ್ರಾಮಸ್ಥರು ಈ ಮಠದ ಭಕ್ತರಾಗಿ ಪ್ರತಿವರ್ಷ ಮಠಕ್ಕೆ ದವಸ-ಧಾನ್ಯಗಳನ್ನು ಭಕ್ತಿಯಿಂದ ನೀಡುತ್ತಿದ್ದರು ಎಂಬುದು ದಾನಶಾಸನದಲ್ಲಿ ಉಲ್ಲೇಖಗೊಂಡಿದೆ. ಶ್ರೀ ಸಂಗಮೇಶ್ವರ ಸ್ವಾಮಿಗಳು ಭಕ್ತರು ಕಟ್ಟಿಸಿಕೊಟ್ಟ ಮಠದಲ್ಲಿ ತಪೋನುಷ್ಠಾನ ಗೊಂಡು ಮಠವನ್ನು ಜಾಗೃತ ಸ್ಥಳವನ್ನಾಗಿ ಮಾಡಿರುತ್ತಾರೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಸಂಗಮೇಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಪ್ರಭುಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಹಾಲುಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ರೇವಣಸಿದ್ಧೇಶ್ವರಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಕಟಿಗೆ ಸಂಗಮೇಶ್ವರಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಕುಮಾರಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಶಿರಹಳ್ಳಿ ರುದ್ರಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ದೊಡ್ಡಶಾಂತವೀರಸ್ವಾಮಿಗಳು
೯. ಶ್ರೀ ಮ.ನಿ.ಪ್ರ. ಚಿಕ್ಕಶಾಂತವೀರಸ್ವಾಮಿಗಳು
೧೦. ಶ್ರೀ ಮ.ನಿ.ಪ್ರ. ಸಂಗಮೇಶ್ವರದೇವರು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ಸಂಗಮೇಶ್ವರ ಸ್ವಾಮಿಗಳು ತಮ್ಮ ಅಧಿಕಾರದ ಅವಧಿಯಲ್ಲಿ ಈ ಪ್ರಾಂತ್ಯವನ್ನೆಲ್ಲಾ ಸುತ್ತಿ ಧರ್ಮಪ್ರಚಾರಕ್ಕೆಂದು ಅರವತ್ತಮೂರು ಮಠಗಳನ್ನು ಸ್ಥಾಪಿಸಿದರೆಂದು ಹೇಳಲಾಗುತ್ತಿದೆ. ಅವುಗಳಲ್ಲಿ ಮುಖ್ಯವಾದ ಆಲೂರು ತಾಲ್ಲೂಕಿನ ನಲ್ಲೂರು ಮಠ, ಬೇಲೂರು ತಾಲ್ಲೂಕಿನ ಹಲಸುಲಿಗೆ ಮಠ, ಮರಸಿನಮಠ, ಮಳಲಿಮಠ, ಕಿರಕಳ್ಳಿಮಠ ಹಾಗೂ ಹೆತ್ತೂರು ಮಠ-ಇವುಗಳು ಅಸ್ತಿತ್ವದಲ್ಲಿದ್ದು ಈಗಲೂ ಈ ಮಠಗಳಲ್ಲಿ ಧಾರ್ಮಿಕ ಚಟುವಟಿಕೆಗಳು ನಡೆಯುವಂತೆ ವ್ಯವಸ್ಥೆ ಮಾಡಲಾಗಿದೆ. ನಂತರ ಮಠದ ಅಧಿಕಾರವನ್ನು ಶ್ರಿ ನಿರಂಜನ ಪ್ರಭು ಸ್ವಾಮಿಗಳು ವಹಿಸಿಕೊಂಡರು. ಇವರ ನಂತರ ಶ್ರೀ ಹಾಲುಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಅಭಿವೃದ್ಧಿ ಪಡಿಸಿದ್ದಾರೆ. ಇವರು ಧರ್ಮಪ್ರಚಾರಕ್ಕೆಂದು ಈ ಪ್ರಾಂತ್ಯದಲ್ಲೆಲ್ಲಾ ಸಂಚರಿಸುತ್ತಿದ್ದರು. ಇವರು ಬೇಲೂರು ಪ್ರಾಂತ್ಯದಲ್ಲಿ ಸಂಚಾರ ಮಾಡುತ್ತಿದ್ದಾಗ ಇವರ ತಪೋಶಕ್ತಿಯ ಪ್ರಭಾವಕ್ಕೆ ಒಳಗಾದ ಬೇಲೂರಿನ ಪಾಳೆಗಾರ ಕೃಷ್ಣಪ್ಪ ನಾಯಕನು ಗುರುಗಳಿಗೆ ಭೂಮಿಯನ್ನು ದಾನ ಮಾಡಿ ತಾಮ್ರಶಾಸನ ಬರೆಸಿಕೊಟ್ಟಿದ್ದಾನೆ. ಶ್ರೀ ಹಾಲು ಸ್ವಾಮಿಗಳು ತಮ್ಮ ಕಾಲಾವಧಿಯಲ್ಲಿ ಸಿಕ್ಕಂತಹ ಎಲ್ಲಾ ಅವಕಾಶಗಳನ್ನೂ ಸಮರ್ಥವಾಗಿ ಬಳಸಿಕೊಂಡು ಮಠವನ್ನು ವೈಭವಯುತವಾಗಿ ನಡೆಸಿರುತ್ತಾರೆಂದು ಹೇಳಲಾಗುತ್ತಿದೆ.

ಬಿಕ್ಕೋಡಿನ ಗುರುಗಳ ಆಗಮನ: ಮಠದ ಪರಂಪರೆಯ ಎಂಟನೆಯ ಗುರುಗಳಾದ ಶ್ರೀ ದೊಡ್ಡಶಾಂತವೀರ ಸ್ವಾಮಿಗಳು ಮಹಾಮಹಿಮರಾಗಿ ಧಾರ್ಮಿಕ ವಿಚಾರಗಳ ಬಗ್ಗೆ ಅದ್ವಿತೀಯ ಪ್ರವಚನಕಾರರಾಗಿದ್ದರು. ಗುರುಗಳು ಉತ್ತರದ ಕಡೆಯಿಂದ ಲೋಕಸಂಚಾರಕ್ಕೆಂದು ಬಂದವರು ಬೇಲೂರು ತಾಲ್ಲೂಕಿನ ಬಿಕ್ಕೋಡು ಗ್ರಾಮದ ಮಠದಲ್ಲಿ ನೆಲೆಸಿ ಬಿಕ್ಕೋಡು ಮಠದ

ಅಧಿಕಾರವನ್ನು ವಹಿಸಿಕೊಂಡಿದ್ದರು. ಇವರು ಈ ಪ್ರಾಂತ್ಯದಲ್ಲಿ ಧರ್ಮವು ನೆಲೆಗೊಳ್ಳುವಂತೆ ಮಾಡಿದ್ದಾರೆ. ಇವರು ಅನೇಕ ವರ್ಷಗಳ ಕಾಲ ಬಿಕ್ಕೋಡಿನಲ್ಲಿ ನೆಲೆಸಿದ್ದಾಗ ಹಾಸನದ ಜವನಹಳ್ಳಿಮಠದಲ್ಲಿ ಮಠಾಧೀಶರು ಯಾರೂ ಇಲ್ಲದಿದ್ದಾಗ ಜವನಹಳ್ಳಿ ಮಠವನ್ನು ತಮ್ಮ ವಶಕ್ಕೆ ತೆಗೆದುಕೊಂಡು ಹತ್ತನೆಯ ಗುರುಗಳಾಗಿ ಅಧಿಕಾರವನ್ನು ವಹಿಸಿಕೊಂಡು, ಎರಡೂ ಮಠದ ಆಡಳಿತವನ್ನು ನೋಡಿಕೊಂಡು ಧರ್ಮಜಾಗೃತಿಯನ್ನು ಉಂಟುಮಾಡಿದ್ದಾರೆ. ಪ್ರತಿ ತಿಂಗಳು ತ್ರಯೋದಶಿಯಂದು ಗುರುಗಳು ರುದ್ರಾಕ್ಷಿ ಮಂಟಪದಲ್ಲಿ ಕುಳಿತು ನಡೆಸುತ್ತಿದ್ದ ರುದ್ರಾಭಿಷೇಕದ ಪೂಜೆ ಆಕರ್ಷಣೀಯವಾಗಿತ್ತು.

ಶ್ರೀ ದೊಡ್ಡಶಾಂತವೀರ ಸ್ವಾಮಿಗಳು ಪವಾಡ ಪುರುಷರಾಗಿ ಅನೇಕ ಪವಾಡಗಳನ್ನು ಮಾಡಿ ಜನಮನವನ್ನು ಗೆದ್ದಿದ್ದರು. ಅಥಣಿಯ ಶಿವಯೋಗಿಗಳ ಸಮಕಾಲೀನರಾಗಿದ್ದ ಇವರು ಅಥಣಿಯ ಶಿವಯೋಗಿಗಳ ಜತೆಯಲ್ಲಿ ಸಂಪರ್ಕವನ್ನು ಬೆಳೆಸಿಕೊಂಡು ಧಾರ್ಮಿಕ ಚಿಂತನೆಗಳನ್ನು ನಡೆಸುತ್ತಿದ್ದರು. ಶಿವಪೂಜಾ ನಿಷ್ಠೆ, ಶಿವಯೋಗದಲ್ಲಿ ತಲೀನರಾಗುತ್ತಿದ್ದ ಶ್ರೀ ದೊಡ್ಡಶಾಂತವೀರ ಸ್ವಾಮಿಗಳು ನೂರಾ ಎಂಟು ವರ್ಷಗಳ ಕಾಲ ಬದುಕಿ ಬಿಕ್ಕೋಡು ಮತ್ತು ಜವನಹಳ್ಳಿ ಮಠಗಳನ್ನು ಅಭಿವೃದ್ಧಿಪಡಿಸಿ ಲಿಂಗೈಕ್ಯ ರಾಗಿರುತ್ತಾರೆ. ನಂತರ ಹನಿಕೆ ಗ್ರಾಮದ ದೊಡ್ಡಯ್ಯ ಶಾಸ್ತ್ರಿಗಳ ಪುತ್ರರಾದ ಪುಟ್ಟಸ್ವಾಮಿ ಶಾಸ್ತ್ರಿಗಳು ಮಠದ ಉತ್ತರಾಧಿಕಾರಿ ಗಳಾಗಿ ಆಯ್ಕೆಗೊಂಡು ಶ್ರೀ ಚಿಕ್ಕಶಾಂತವೀರ ಸ್ವಾಮಿಗಳೆಂದು ಅಭಿಧಾನ ಪಡೆದು ಜವನಹಳ್ಳಿ ಮಠದ ಅಧಿಕಾರವನ್ನು ವಹಿಸಿಕೊಳ್ಳುತ್ತಾರೆ. ಇವರ ಕಾಲದಲ್ಲಿ ಮಠ ಹೆಚ್ಚು ಅಭಿವೃದ್ಧಿಗೊಂಡು ಧಾರ್ಮಿಕ ಚಟುವಟಿಕೆಗಳು ಕ್ರಿಯಾತ್ಮಕವಾಗಿ ನಡೆಯತೊಡಗಿದವು. ಶ್ರೀ ಚಿಕ್ಕಶಾಂತವೀರ ಸ್ವಾಮಿಗಳ ಕಾಲದಲ್ಲಿ ವೀರಶೈವಾಮೃತ ಪುರಾಣವನ್ನು ಪರಿಷ್ಕರಿಸಿ, ಪ್ರಕಟಣೆ ಗೊಳಿಸಿರುತ್ತಾರೆ. ಧಾರ್ಮಿಕ ಹಾಗೂ ಸಾಹಿತ್ಯಿಕವಾಗಿ ಆಸಕ್ತಿವುಳ್ಳವರಾಗಿದ್ದ ಇವರ ನಂತರ ಹಾನಗಲ್‌ನಲ್ಲಿ ವಿದ್ಯಾಭ್ಯಾಸವನ್ನು ಮಾಡುತ್ತಿದ್ದ ಶ್ರೀ ಸಂಗಮೇಶ್ವರ ದೇವರು ೧೯೬೮ರಲ್ಲಿಉತ್ತರಾಧಿಕಾರಿಗಳಾಗಿ ಆಯ್ಕೆಗೊಂಡರು. ಶ್ರೀ ಸಂಗಮೇಶ್ವರ ಸ್ವಾಮಿಗಳು ಹಿರಿಯ ಗುರುಗಳು ನಡೆಸುತ್ತಿದ್ದ ಸಂಸ್ಕೃತ ಮತ್ತು ನರ್ಸರಿ ಪಾಠಶಾಲೆಗಳನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಶ್ರೀ ಸಂಗಮೇಶ್ವರ ದೇವರಿಗೆ ಪಟ್ಟಾಧಿಕಾರವನ್ನು ಪಡೆದುಕೊಳ್ಳುವ ಕಾಲ ಇನ್ನೂ ಕೂಡಿಬಂದಿಲ್ಲ.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಕರ್ತೃಗುರುಗಳಾದ ಶ್ರೀ ಸಂಗಮೇಶ್ವರ ಸ್ವಾಮಿಗಳ ಗದ್ದುಗೆಗೆ ನಿತ್ಯಪೂಜೆ, ಹುಣ್ಣಿಮೆ ಮತ್ತು ಅಮಾವಾಸ್ಯೆ,ಶ್ರಾವಣ, ಕಾರ್ತೀಕ ಮಾಸಗಳಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ವರ್ಷಕ್ಕೊಮ್ಮೆ ಹಿರಿಯ ಗುರುಗಳ ಆರಾಧನಾ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ.ಸಂಗಮೇಶ್ವರ ದೇವರು, ಶ್ರೀ ಜವನಹಳ್ಳಿ ಮಠ, ಸಂಗಮೇಶ್ವರ ಬಡಾವಣೆ, ಹಾಸನ.
ಆಧಾರ: 'ಕಲ್ಯಾಣ' ಸ್ಮರಣ ಸಂಚಿಕೆ ಲೇಖಕ: ಎ.ಎಸ್.ಮಲ್ಲಪ್ಪ

ಹೊಳೆನರಸೀಪುರ ತಾಲ್ಲೂಕು

ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕು ರಾಜಕೀಯವಾಗಿ ಹೆಸರು ಮಾಡಿದೆ. ಇಲ್ಲಿ ವೀರಶೈವಧರ್ಮ ಪ್ರಮುಖವಾಗಿ ಬೆಳೆದಿಲ್ಲ. ಮೈಸೂರು ಜಿಲ್ಲೆಗೆ ಹೊಂದಿಕೊಂಡಂತೆ ಇರುವ ಹಳ್ಳಿಮೈಸೂರು ಹೋಬಳಿಯಲ್ಲಿ ಮಾತ್ರ ವೀರಶೈವ ಧರ್ಮ ಬೆಳೆದಿದೆ. ಇಲ್ಲಿ ಎರಡು ಮಠಗಳು ಅಸ್ತಿತ್ವದಲ್ಲಿವೆ.

ತೇಜೂರು

ಹೊಳೆನರಸೀಪುರ ತಾಲ್ಲೂಕಿನ ಹಳ್ಳಿಮೈಸೂರು ಹೋಬಳಿಯ ತೇಜೂರು, ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹದಿನಾರು ಕಿ. ಮೀ.ದೂರದಲ್ಲಿದೆ. ಶ್ರೀ ಸಿದ್ಧರಾಮೇಶ್ವರಮಠವು ಅಸ್ತಿತ್ವದಲ್ಲಿದೆ.

ಸಿದ್ಧರಾಮೇಶ್ವರಮಠ: ತೇಜೂರು ಗ್ರಾಮದಲ್ಲಿ ಇತ್ತೀಚೆಗೆ ಪ್ರಾರಂಭಗೊಂಡ ಶ್ರೀ ಸಿದ್ಧರಾಮೇಶ್ವರಮಠವು ಇಲ್ಲಿನ ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ಬೆಳೆದಿದೆ. ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಕುಲುಗಾಣ ಗ್ರಾಮದವರಾದ ಶ್ರೀ ಶಿವಪ್ಪ ಎಂಬ ಶರಣರು ತೇಜೂರಿನಲ್ಲಿ ಬಸವೇಶ್ವರ ದೇವಸ್ಥಾನವನ್ನು ಕಟ್ಟಿಸಲು ಪ್ರಾರಂಭಿಸಿ ದೇವಸ್ಥಾನದ ನಿರ್ಮಾಣದ ಎಲ್ಲಾ ಕೆಲಸಗಳೂ ಮುಗಿದ ಮೇಲೆ ಬಸವೇಶ್ವರ ವಿಗ್ರಹವನ್ನು ಪ್ರತಿಷ್ಠಾಪಿಸಿ, 'ನಾನು ಇಲ್ಲಿ ಬಂದು ನೆಲೆಸಿ ಮಾಡಬೇಕಾದ ಕಾರ್ಯವನ್ನು ಮುಗಿಸಿರುವೆ, ಇನ್ನು ಮೇಲೆ ಬದುಕಿರುವುದು ಅನಾವಶ್ಯಕ' ಎಂದು ತಿಳಿದು ಐಕ್ಯವಾಗುತ್ತಾರೆ. ಇವರ ನಂತರ ಶ್ರೀ ಶಿವಪ್ಪ ಶರಣರ ತಂದೆ ವರ್ಷಕ್ಕೊಮ್ಮೆ ಬಂದು ಇಲ್ಲಿ ಪೂಜೆಯನ್ನು ನಡೆಸಿಕೊಂಡು ಹೋಗುತ್ತಿದ್ದರು.

ಮಠ ಸ್ಥಾಪನೆ: ಶ್ರೀ ಶಿವಪ್ಪಶರಣರು ತೇಜೂರು ಗ್ರಾಮದಲ್ಲಿ ಶ್ರೀ ಬಸವೇಶ್ವರ ದೇವಸ್ಥಾನವನ್ನು ನಿರ್ಮಿಸಿ ಲಿಂಗೈಕ್ಯರಾದ ಮೇಲೆ ಅವರ ಸಮಾಧಿಯನ್ನು ತೇಜೂರು ಗ್ರಾಮದಲ್ಲಿಯೇ ಸ್ಥಾಪಿಸಿ ಗದ್ದುಗೆಯನ್ನು ನಿರ್ಮಿಸಲಾಗಿತ್ತು. ಇಂತಹ ಧಾರ್ಮಿಕ ಸ್ಥಳದಲ್ಲಿ ಮಠವನ್ನು ಸ್ಥಾಪಿಸಬೇಕೆಂಬ ಹಂಬಲತೊಟ್ಟು ಶ್ರೀ ಕಲ್ಯಾಣಸ್ವಾಮಿಗಳು ತೇಜೂರು ಗ್ರಾಮಕ್ಕೆ ಆಗಮಿಸಿದರು. ಸಂಸ್ಕೃತ ಭಾಷೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದ ಶ್ರೀ ಕಲ್ಯಾಣ ಸ್ವಾಮಿಗಳು ತೇಜೂರಿನಲ್ಲಿ ನೆಲೆಸಿ ಭಕ್ತರ ಸಹಕಾರ ಹಾಗೂ ಸುತ್ತೂರು ಶಿವರಾತ್ರೀಶ್ವರ ಮಠದ ಜಗದ್ಗುರುಗಳ ಮಾರ್ಗದರ್ಶನದಲ್ಲಿ ಸುಮಾರು ಐದುಲಕ್ಷ ರೂಪಾಯಿಗಳ ವೆಚ್ಚದಲ್ಲಿ ಮಠದ ಕಟ್ಟಡವನ್ನು ನಿರ್ಮಿಸಿದ್ದಾರೆ. ೧೯೯೨ರಲ್ಲಿ ನೂತನ ಮಠದ ಕಟ್ಟಡದ ಉದ್ಘಾಟನಾ ಸಮಾರಂಭವನ್ನು ನೆರವೇರಿಸಿರುತ್ತಾರೆ.

ಧಾರ್ಮಿಕ ಕಾರ್ಯಗಳು: ಶ್ರೀ ಕಲ್ಯಾಣ ಸ್ವಾಮಿಗಳು ತೇಜೂರಿಗೆ ಬಂದು ನೆಲೆಸಿ ಸುತ್ತೂರು ಶಾಖಾನುವರ್ತಿ ಮಠವಾಗಿ ತೇಜೂರಿನ ಸಿದ್ಧರಾಮೇಶ್ವರ ಮಠವನ್ನು ಸ್ಥಾಪಿಸಿದ್ದಾರೆ. ಮಠವು ಸ್ಥಾಪನೆಗೊಂಡ ಮೇಲೆ ತೇಜೂರು ಮತ್ತು ಸುತ್ತ ಮುತ್ತಲಿನ ಗ್ರಾಮಗಳಲ್ಲಿ ನಡೆಯುವ ಧಾರ್ಮಿಕ ಚಟುವಟಿಕೆಗಳಲ್ಲಿ ಭಾಗವಹಿಸಿ ಭಕ್ತರಿಗೆ ನೆರವಾಗುವುದು ಮತ್ತು ಧಾರ್ಮಿಕ ಉಪದೇಶಗಳಿಂದ ಭಕ್ತರನ್ನು ಸನ್ಮಾರ್ಗದಲ್ಲಿ ನಡೆಸುವಲ್ಲಿ ನೆರವಾಗಿದ್ದಾರೆ. ಬಸವೇಶ್ವರ ದೇವಸ್ಥಾನ ಹಾಗೂ ಶ್ರೀ ಶಿವಪ್ಪಶರಣರ ಗದ್ದುಗೆಗೆ ಪೂಜಾ ಕಾರ್ಯಗಳು ನಡೆಯುತ್ತಿವೆ. ಈ ಗ್ರಾಮದಲ್ಲಿ ಚೋಳರ ಕಾಲದಲ್ಲಿ ಸ್ಥಾಪಿಸಲ್ಪಟ್ಟ ಈಶ್ವರ ದೇವಸ್ಥಾನವಿದ್ದು ಇಲ್ಲಿ ನಡೆಯುವ ಧಾರ್ಮಿಕ ಕಾರ್ಯಗಳಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ.

ಶೈಕ್ಷಣಿಕಸೇವೆ: ತೇಜೂರು ಗ್ರಾಮದಲ್ಲಿ ಮಠ ಸ್ಥಾಪನೆಗೊಂಡು ಧಾರ್ಮಿಕ ಕಾರ್ಯಗಳು ನಡೆಯುವಂತಾದ ಮೇಲೆ ಇಲ್ಲಿನ ಶೈಕ್ಷಣಿಕ ಅಭಿವೃದ್ಧಿಗೆ ಒತ್ತುಕೊಟ್ಟ ಗುರುಗಳು ಹಳ್ಳಿಮೈಸೂರಿನಲ್ಲಿ ಶ್ರೀ ಸಿದ್ಧರಾಮೇಶ್ವರ ಶಿಶುವಿಹಾರವನ್ನು ಪ್ರಾರಂಭಿಸಿದ್ದಾರೆ. ಮಠದ ಆಸ್ತಿಯಾಗಿ ಮೂರು ಎಕರೆ ಜಮೀನು ಇದ್ದು ಇದನ್ನು ಅಭಿವೃದ್ಧಿಪಡಿಸಿ ಮಠದ ಧಾರ್ಮಿಕ ಹಾಗೂ ಶೈಕ್ಷಣಿಕ ಪ್ರಗತಿಗೆ ಬಳಕೆ ಮಾಡಿಕೊಳ್ಳುತ್ತಿದ್ದಾರೆ.

ವಿಳಾಸ: ಶ್ರೀ ಕಲ್ಯಾಣ ಸ್ವಾಮಿಗಳು, ಶ್ರೀ ಸಿದ್ಧರಾಮೇಶ್ವರ ಮಠ, ತೇಜೂರು, ಹಳ್ಳಿಮೈಸೂರು ಅಂಚೆ, ಹೊಳೆನರಸೀಪುರ ತಾಲ್ಲೂಕು. ಹಾಸನ ಜಿಲ್ಲೆ.

ಟಿ.ಮಾಯಗೊಂಡನಹಳ್ಳಿ

ಹೊಳೆನರಸೀಪುರ ತಾಲ್ಲೂಕಿನ ಟಿ.ಮಾಯಗೊಂಡನಹಳ್ಳಿಯು ತಾಲ್ಲೂಕು ಕೇಂದ್ರದಿಂದ ದಕ್ಷಿಣಭಾಗಕ್ಕೆ ಎಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ರಾಜಾಪುರಮಠವು ಅಸ್ತಿತ್ವದಲ್ಲಿದೆ.

ರಾಜಾಪುರಮಠ: ಟಿ.ಮಾಯಗೊಂಡನಹಳ್ಳಿ ಗ್ರಾಮದಲ್ಲಿ ಮೂರು ತಲೆಮಾರುಗಳ ಹಿಂದೆ ರಾಜಾಪುರಮಠವು ಸ್ಥಾಪನೆಗೊಂಡಿದೆ. ರಂಭಾಪುರಿ ಪೀಠದ ಶಾಖಾಮಠವಾಗಿರುವ ಈ ಮಠವು ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದಿದೆ.

ಸ್ಥಳಾಂತರಗೊಂಡ ಮಠ: ಅರಕಲಗೂಡು ತಾಲ್ಲೂಕಿನ ರಾಜಾಪುರದಲ್ಲಿ ಸ್ಥಾಪನೆಗೊಂಡಿದ್ದ ಸಂಪ್ರದಾಯಸ್ಥ ಮಠವನ್ನು ಅಲ್ಲಿ ನಡೆದ ಕೆಲವು ಘಟನೆಗಳಿಂದ ಬೇಸತ್ತು ಇಲ್ಲಿಗೆ ಸ್ಥಳಾಂತರಿಸಿರುತ್ತಾರೆ. ರಾಜಾಪುರದಿಂದ ಹೊರಟ ಮಠದ ಪರಿವಾರವು ಉದ್ದೂರು ಹೊಸಳ್ಳಿಯಲ್ಲಿ ನೆಲೆಗೊಂಡಿತು. ಈ ಸಂದರ್ಭದಲ್ಲಿ ಟಿ.ಮಾಯಗೊಂಡನಹಳ್ಳಿಯ ಭಕ್ತರು ತಮ್ಮ ಧಾರ್ಮಿಕ ಆಚರಣೆಗಳಿಗಾಗಿ ಉದ್ದೂರಿನಲ್ಲಿ ನೆಲೆಸಿದ್ದ ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮಿಗಳನ್ನು ಕರೆದುಕೊಂಡು ಬರುತ್ತಾರೆ. ಇದಾದ ನಂತರ ಮಾಯಗೊಂಡನಹಳ್ಳಿಯ ಭಕ್ತರು ಉದ್ದೂರಿನಲ್ಲಿ ನೆಲೆಸಿದ್ದ ಗುರುಗಳ ಭಕ್ತರಾಗಿ ತಮ್ಮ ಎಲ್ಲಾ ಧಾರ್ಮಿಕ ಚಟುವಟಿಕೆಗಳಿಗೂ ಈ ಗುರುಗಳನ್ನೇ ಅವಲಂಬಿಸಿದರು. ಕಾಲಕ್ರಮೇಣ ಮಾರಗೊಂಡನಹಳ್ಳಿಯ ಭಕ್ತರು ಮತ್ತು ಗುರುಗಳ ಮಧ್ಯೆ ಅವಿನಾಭಾವ ಸಂಬಂಧ ಬೆಳೆಯಿತು. ಈ ಒಂದು ಭಾವನಾತ್ಮಕ ಸಂಬಂಧದಿಂದ ಮಠದ ಪರಿವಾರವು ಟಿ. ಮಾಯ ಗೊಂಡನಹಳ್ಳಿಗೆ ಸ್ಥಳಾಂತರಗೊಂಡಿತು.

ಬೆಳೆದಮಠ: ಟಿ.ಮಾಯಗೊಂಡನಹಳ್ಳಿಗೆ ೧೮೮೮ರಲ್ಲಿ ಸ್ಥಳಾಂತರಗೊಂಡ ಮೇಲೆ ಗ್ರಾಮದ ಭಕ್ತರು ಗುರುಗಳಿಗಾಗಿ ಸುಸಜ್ಜಿತ ಕಟ್ಟಡವನ್ನು ೧೮೯೮ರಲ್ಲಿ ನಿರ್ಮಿಸಿಕೊಟ್ಟಿದ್ದಾರೆ. ನೂತನ ಮಠದ ಸ್ಥಾಪನೆಯಾದ ನಂತರ ಟಿ.ಮಾಯಗೊಂಡನ ಹಳ್ಳಿಯಲ್ಲಿ ೧೯೦೨ ರಿಂದ ಧಾರ್ಮಿಕ ಚಟುವಟಿಕೆಗಳು ಕ್ರಿಯಾತ್ಮಕವಾಗಿ ನಡೆಯತೊಡಗಿದವು. ಪ್ರತಿನಿತ್ಯ ಶಿವಾನುಭವಗೋಷ್ಠಿ ನಡೆಯ ತೊಡಗಿತು. ಇದರಿಂದ ಗ್ರಾಮದಲ್ಲಿ ಧಾರ್ಮಿಕ ವಾತಾವರಣ ಸೃಷ್ಟಿಯಾಗಿ ಗ್ರಾಮದ ಜನತೆ ತಮ್ಮ ಎಲ್ಲಾ ಕೆಲಸಗಳನ್ನು ಮುಗಿಸಿ ಸಂಜೆಯ ಬಿಡುವಿನ ವೇಳೆಯನ್ನು ಮಠದಲ್ಲಿ ಕಳೆಯತೊಡಗಿದರು. ಗ್ರಾಮದ ಹಿರಿಕಿರಿಯರೆಲ್ಲಾ ಬೆರೆತು ಶ್ರೀಸೋಮಶೇಖರ ಶಿವಾಚಾರ್ಯ ಸ್ವಾಮಿಗಳು ನೀಡುತ್ತಿದ್ದ ಉಪದೇಶವನ್ನು ಕೇಳಿ ಸನ್ಮಾರ್ಗದಲ್ಲಿ ನಡೆಯತೊಡಗಿದರು. ಗ್ರಾಮದ ಧಾರ್ಮಿಕ ಕೇಂದ್ರಬಿಂದುವಾಗಿ ರೂಪುಗೊಂಡ ರಾಜಾಪುರ ಮಠವು ಅಭಿವೃದ್ಧಿಗೊಂಡು ಬೆಳೆಯಿತು.

ಪರಂಪರೆ: ರಾಜಾಪುರದಿಂದ ಇಲ್ಲಿಗೆ ಬಂದು ಮಠವನ್ನು ಸ್ಥಾಪಿಸಿದ ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮಿಗಳ ನಂತರ ಶ್ರೀ ಚಂದ್ರಶೇಖರ ಸ್ವಾಮಿಗಳು ೧೯೫೫ ರಲ್ಲಿ ಪಟ್ಟಾಧಿಕಾರವನ್ನು ಪಡೆದುಕೊಂಡರು. ಶ್ರೀ ಚಂದ್ರಶೇಖರ ಸ್ವಾಮಿಗಳು ಪುಟ್ಟಸ್ವಾಮಯ್ಯನವರ ಮೂರನೆಯ ಮಗನಾಗಿ ಜನಿಸಿ, ಮೈಸೂರಿನಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ಮಠದ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡ ಮೇಲೆ ಮಠವು ಅಭಿವೃದ್ಧಿಗೊಳ್ಳ ತೊಡಗಿತು. ಮಠದ ಪರಂಪರೆಯ ಧಾರ್ಮಿಕ ಕಾರ್ಯಗಳ ಜತೆಗೆ ಉಪನ್ಯಾಸವನ್ನು ನೀಡಿ ಧರ್ಮ ಜಾಗೃತಿಯನ್ನು ಉಂಟುಮಾಡುತ್ತಿ ದ್ದರು. ತಮ್ಮ ಅವಧಿಯಲ್ಲಿ ನಲವತ್ತು ಎಕರೆ ಜಮೀನನ್ನು ಖರೀದಿಸಿ ಮಠದ ಆದಾಯದ ಮೂಲವನ್ನಾಗಿ ಮಾಡಿಕೊಂಡಿದ್ದಾರೆ.

ಗುರು-ವಿರಕ್ತರ ಸಂಬಂಧ: ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಗುರು-ವಿರಕ್ತರಲ್ಲಿ ಸಮಾನಭಾವನೆಯನ್ನು ಕಾಣತೊಡಗಿ ವೀರಶೈವ ಧರ್ಮದ ಅಭಿವೃದ್ಧಿಗೆ ಕಂಟಕಪ್ರಾಯವಾಗಿ ನಿಂತಿರುವ ಗುರು-ವಿರಕ್ತ ಎಂಬ ವಿಷಯವನ್ನು ತೊಡೆದು ಹಾಕಲು ಪ್ರಯತ್ನಿಸಿದ್ದಾರೆ. ಇದರ ಫಲವೇ ಬಾಳೆಹೊನ್ನೂರು ರಂಭಾಪುರಿ ಪೀಠದ ಗುರುಗಳು ಮತ್ತು ಸಿದ್ಧಗಂಗೆಯ ಶ್ರೀ ಶಿವ ಕುಮಾರ ಸ್ವಾಮಿಗಳು, ಮೈಸೂರಿನ ಸುತ್ತೂರು ಮಠದ ಶ್ರೀ ಶಿವರಾತ್ರೀಶ್ವರ ದೇಶಿಕೇಂದ್ರ ಸ್ವಾಮಿಗಳ ಸಂಪರ್ಕವನ್ನಿಟ್ಟುಕೊಂಡು ನಾಡಿನ ಎಲ್ಲಾ ಗುರು-ವಿರಕ್ತ ಮಠಗಳ ಜತೆ ಸಂಪರ್ಕ ಬೆಳೆಸಿ ವೀರಶೈವ ಧರ್ಮವನ್ನು ಸಂಘಟನಾತ್ಮಕ ವಾಗಿ ಬೆಳೆಸಲು ಮುಂದಾಗಿದ್ದಾರೆ.


ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಸ್ಥಾಪನೆಯಾಗಿರುವ ಒಂದು ಗದ್ದುಗೆಗೆ ನಿತ್ಯ ಪೂಜೆ, ಭಕ್ತರ ಮನೆಗಳ ಧಾರ್ಮಿಕ ಚಟುವಟಿಕೆಗಳಲ್ಲಿ ಪಾಲ್ಗೊಂಡು ಆಶೀರ್ವಾದ ನೀಡುವುದು ಇವು ಸಾಂಪ್ರದಾಯಿಕ ಕೆಲಸಗಳಾಗಿ ನಡೆಯುತ್ತಿವೆ. ಬಸವಜಯಂತಿ, ಕಡೆಯ ಕಾರ್ತೀಕ, ಶ್ರಾವಣಮಾಸಗಳಲ್ಲಿ ವಿಶೇಷ ಪೂಜೆ ಹಾಗೂ ಉಪದೇಶ ನೀಡುವ ಕಾರ್ಯಕ್ರಮಗಳು ವಾಡಿಕೆಯಂತೆ ನಡೆಯುತ್ತಿವೆ.

ವಿಳಾಸ: ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು, ಶ್ರೀ ರಾಜಾಪುರಮಠ, ಟಿ.ಮಾಯಗೊಂಡನಹಳ್ಳಿ, ಹಳ್ಳಿಮೈಸೂರು ಅಂಚೆ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ.

❑

ಹಾವೇರಿ ಜಿಲ್ಲೆ

ಹಾವೇರಿ ಜಿಲ್ಲೆ



ಹಾವೇರಿ ತಾಲ್ಲೂಕು : ೧. ಕರ್ಜಗಿ, ೨. ಆಗಡಿ, ೩. ಕನವಳ್ಳಿ, ೪. ಹಂದಿಗನೂರು, ೫. ಹೊಸರಿತ್ತಿ, ೬. ಗುತ್ತಲ, ೭. ಹಾವನೂರು

ರಾಣಿಬೆನ್ನೂರು ತಾಲ್ಲೂಕು : ೧. ಹೊಸವನ್ನತ್ತಿ, ೨. ಗುಡ್ಡದ ಹಾನವೇರಿ, ೩. ಅಸುಂಡಿ, ೪. ಮುದೇನೂರು, ೫. ಲಿಂಗದಹಳ್ಳಿ

ಹಿರೇಕೆರೂರು ತಾಲ್ಲೂಕು : ೧. ಮಡ್ಲೂರು, ೨. ಚಿಕ್ಕೆರೂರು, ೩. ಹಂಸಬಾವಿ, ೪. ರಟ್ಟೀಹಳ್ಳಿ, ೫. ತಿಪ್ಪಾಯಕೊಪ್ಪ

ಹಾನಗಲ್ ತಾಲ್ಲೂಕು : ೧. ಬಮ್ಮನ ಹಳ್ಳಿ, ೨. ಹುಲ್ಲತ್ತಿ, ೩. ನರೆಗಲ್ಲು, ೪. ಕೂಡ್ಲು, ೫. ಅಕ್ಕಿಹಾಲೂರು, ೬. ತಿಳವಳ್ಳಿ, ೭. ಹೊಂಕಣ

ಶಿಗ್ಗಾಂವ್ ತಾಲ್ಲೂಕು : ೧. ಬಂಕಾಪುರ, ೨. ಗಂಜಿಕಟ್ಟೆ, ೩. ಧುಂಡಸಿ, ೪. ಕಡಹಳ್ಳಿ

ಸವಣೂರು ತಾಲ್ಲೂಕು : ೧. ಮಂತ್ರವಾಡಿ, ೨. ಹೂವಿನ ಶಿಗ್ಲಿ, ೩. ಹತ್ತಿ ಮತ್ತೂರು

ಮಧ್ಯ ಕರ್ನಾಟಕದ ಹಾವೇರಿ ಜಿಲ್ಲೆಯು ಕ್ರಿ.ಶ. ೧೯೯೭ರಲ್ಲಿ ಹೊಸ ಜಿಲ್ಲೆಯಾಗಿ ರಚನೆಗೊಂಡು ಹಾವೇರಿ, ಹಾನಗಲ್ಲು, ಸವಣೂರು, ಬ್ಯಾಡಗಿ,ರಾಣೆಬೆನ್ನೂರು, ಹಿರೇಕೆರೂರು ಹಾಗೂ ಶಿಗ್ಗಾಂವಿ ತಾಲ್ಲೂಕುಗಳನ್ನು ಒಳಗೊಂಡಿದೆ. ಉತ್ತರಕನ್ನಡ, ಶಿವಮೊಗ್ಗ, ದಾವಣಗೆರೆ, ಬಳ್ಳಾರಿ, ಗದಗ ಹಾಗೂ ಧಾರವಾಡ ಜಿಲ್ಲೆಗಳ ಗಡಿ ಪ್ರದೇಶಗಳಿಂದ ಹಾವೇರಿ ಜಿಲ್ಲೆಗೆ ಹೊಂದಿಕೊಂಡಿದೆ. ತುಂಗಭದ್ರಾ, ವರದಾ ಮತ್ತು ಧರ್ಮ ನದಿಗಳು ಹರಿದು ಈ ಜಿಲ್ಲೆಯನ್ನು ಪ್ರಾಕೃತಿಕವಾಗಿ ಶ್ರೀಮಂತಗೊಳಿಸಿವೆ. ಅರೆಮಲೆನಾಡು ಮತ್ತು ಬಯಲುಸೀಮೆಯನ್ನು ಒಳಗೊಂಡ ಈ ಜಿಲ್ಲೆಯು ಹತ್ತಿ ಮತ್ತು ಮೆಣಸಿನಕಾಯಿ ಬೆಳೆಯುವ ಮೂಲಕ ಸಂಪದ್ಭರಿತ ಜಿಲ್ಲೆಯಾಗಿ ಬೆಳೆದಿದೆ. ಕದಂಬರು (ಕ್ರಿ.ಶ.೪೨೦) ಸವಣೂರಿನ ನವಾಬರು, ವಿಜಯನಗರದ ಅರಸರು, ಹಾನಗಲ್ಲಿನ ಪಾಳೆಗಾರರು ಆಳ್ವಿಕೆಯನ್ನು ನಡೆಸಿ, ಈ ಜಿಲ್ಲೆಯನ್ನು ಐತಿಹಾಸಿಕವಾಗಿ ಪ್ರಸಿದ್ಧಿಗೊಳಿಸಿದ್ದಾರೆ.

೧೯೦೪ ರಲ್ಲಿ ವೀರಶೈವರನ್ನು ಸಂಘಟನಾತ್ಮಕವಾಗಿ ಬೆಳೆಸುವ ಉದ್ದೇಶದಿಂದ ಇಡೀ ನಾಡಲೆಲ್ಲಾ ಸಂಚರಿಸಿ ವೀರಶೈವ ಮಹಾಸಭೆಯನ್ನು ಸ್ಥಾಪಿಸಿದ ಹಾನಗಲ್ಲು ಶ್ರೀ ಕುಮಾರ ಶಿವಯೋಗಿಗಳು ಮತ್ತು ಹಾವೇರಿಯ ಶ್ರೀ ಶಿವಬಸವ ಸ್ವಾಮಿಗಳು ವೀರಶೈವರು ಎಂದೂ ಮರೆಯದ ಮಹಾಚೇತನರಾಗಿದ್ದರು. ವೀರಶೈವ ಧರ್ಮಕ್ಕೆ ಇಂತಹ ಮಹನೀಯರನ್ನು ನೀಡಿದ್ದು ಈ ಜಿಲ್ಲೆಯ ಹೆಗ್ಗಳಿಕೆ. ದಾಸ ಸಾಹಿತ್ಯಕ್ಕೆ ಅಪಾರ ಕೊಡುಗೆಯನ್ನು ಸಲ್ಲಿಸಿದ ಕನಕದಾಸರ ಜನ್ಮಸ್ಥಳ ಕಾಗಿನೆಲೆ ಈ ಜಿಲ್ಲೆಯಲ್ಲಿರುವುದು ಮತ್ತೊಂದು ಹೆಗ್ಗಳಿಕೆಯಾಗಿದೆ.

ಸವಣೂರು ದೊಡ್ಡಹುಣಸೆ ಮರಗಳ ಸೃಷ್ಟಿಯಿಂದ ವಿಶ್ವದ ಗಮನವನ್ನು ಸೆಳೆದಿದೆ. ದಕ್ಷಿಣ ಆಫ್ರಿಕಾದ ದಟ್ಟ ಅರಣ್ಯದಲ್ಲಿ ಕಾಣಿಸಿಕೊಳ್ಳುವ ಅಪರೂಪವಾದ ಹುಣಸೆ ಮರಗಳು, ಕರ್ನಾಟಕದ ಸವಣೂರು ನೆಲದಲ್ಲಿ ಕಳೆದ ನೂರಾರು ವರ್ಷಗಳ ಹಿಂದಿನಿಂದಲೂ ಬೆಳೆದು ಇನ್ನೂ ಬೃಹದಾಕಾರವಾಗಿ ಬೆಳೆಯುತ್ತಿರುವುದು ಪ್ರವಾಸಿಗರ, ಪರಿಸರ ತಜ್ಞರ, ಪರಿಸರ ಪ್ರೇಮಿಗಳ ಗಮನವನ್ನು ಸೆಳೆದಿರುವುದು ಒಂದು ಅದ್ಭುತವೇ ಸರಿ.

ವಿಶಿಷ್ಟ ಹಿನ್ನೆಲೆಗಳನ್ನು ಒಳಗೊಂಡಿರುವ ಹಾವೇರಿ ಜಿಲ್ಲೆಯಲ್ಲಿ ವೀರಶೈವ ಧರ್ಮವು ಪ್ರಾಚೀನ ಕಾಲದಿಂದಲೂ ಬೆಳೆದು ಶ್ರೀಮಂತಗೊಂಡಿದೆ. ಏಳು ತಾಲ್ಲೂಕುಗಳನ್ನು ಒಳಗೊಂಡಿರುವ ಈ ಜಿಲ್ಲೆಯಲ್ಲಿ ಒಟ್ಟು ಮುನ್ನೂರ ಅರವತ್ತು ಮಠಗಳು ಸ್ಥಾಪನೆಗೊಂಡಿರುವುದರ ಬಗ್ಗೆ ಮಾಹಿತಿ ದೊರೆತಿದ್ದು, ಈ ಮಠಗಳ ಶೋಧನೆಗೆ ಹೋದಾಗ ನೂರಎಂಭತ್ತೆಂಟು ಮಠಗಳು ಪತ್ತೆಯಾಗಿವೆ. ಉಳಿದ ನೂರಎಪ್ಪತ್ತೆರಡು ಮಠಗಳು ಹೇಳಲು ಹೆಸರಿಲ್ಲದಂತೆ ಇತಿಹಾಸದ ಪುಟಗಳಿಂದ ದೂರವಾಗಿವೆ. ಶೋಧನೆಯಿಂದ ದೊರೆತಿರುವ ಮಠಗಳಲ್ಲಿ ಐವತ್ತೇಳು ಮಠಗಳು ತಮ್ಮ ಅಸ್ತಿತ್ವ ವನ್ನು ಉಳಿಸಿಕೊಂಡು ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುಗಳಾಗಿ ಬೆಳೆದಿವೆ. ಒಟ್ಟು ನೂರಮೂವತ್ತೊಂದು ಮಠಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿದ್ದರೂ ಮಠಾಧೀಶರು ಇಲ್ಲದೆ ಕೇವಲ ಗದ್ದುಗೆ ಪೂಜೆಗೆ ಮಾತ್ರ ಸೀಮಿತವಾಗಿ ಉಳಿದಿವೆ.

ಹಾವೇರಿ ಜಿಲ್ಲೆಯಲ್ಲಿ ಸ್ಥಾಪನೆಗೊಂಡ ವೀರಶೈವ ಮಠಗಳು ಜಿಲ್ಲೆಯ ಧಾರ್ಮಿಕ ಕ್ಷೇತ್ರವನ್ನು ಶ್ರೀಮಂತಗೊಳಿಸಿ ರುವುದಲ್ಲದೆ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆಯನ್ನು ನೀಡಿ ಜಿಲ್ಲೆಯು ಸಂಸ್ಕಾರವಂತ ನಾಡಾಗಿ ಬೆಳೆಯಲು ಸಹಾಯಕವಾಗಿವೆ.

ಬ್ಯಾಡಗಿ ತಾಲ್ಲೂಕು

ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕು, ಶರಣರು ಹಾಗೂ ದಾಸರು ನೆಲೆಸಿದ ಪುಣ್ಯಸ್ಥಳ. ಇಲ್ಲಿ ವೀರಶೈವಧರ್ಮ ಪ್ರಮುಖವಾಗಿ ಬೆಳೆದಿದ್ದು, ನಂತರದ ದಿನಗಳಲ್ಲಿ ಕ್ಷೀಣಿಸಿದ ಲಕ್ಷಣಗಳು ಕಂಡುಬರುತ್ತದೆ. ಪ್ರಸ್ತುತ ಆರು ಮಠಗಳನ್ನು ಗುರುತಿಸಬಹುದಾಗಿದೆ.

ಕದರಮುಂಡಲಗಿ

ಬ್ಯಾಡಗಿ ತಾಲ್ಲೂಕಿನ ಕದರಮುಂಡಲಗಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಐದು ಕಿ.ಮೀ.ದೂರದಲ್ಲಿದೆ. ಈ ಗ್ರಾಮದಲ್ಲಿ ಪ್ರಾಚೀನ ಕಾಲದಲ್ಲಿ ಪಂಚಪೀಠಗಳ ಐದು ಶಾಖಾಮಠಗಳು ಸ್ಥಾಪನೆಯಾಗಿದೆ ಎಂದು ಮಾಹಿತಿ ದೊರೆಯುತ್ತದೆ. ಈ ಮಾಹಿತಿಯ ಅಧಾರದ ಮೇಲೆ ಶೋಧನೆಯನ್ನು ನಡೆಸಿದಾಗ ರಂಭಾಪುರಿಪೀಠ, ಉಜ್ಜಯಿನಿಪೀಠ ಮತ್ತು ಶ್ರೀಶೈಲ ಪೀಠಗಳ ಶಾಖಾಮಠಗಳು ಮಾತ್ರ ದೊರೆತಿದ್ದು ಉಳಿದ ಎರಡು ಪೀಠಗಳ ಶಾಖಾಮಠಗಳ ಹೆಸರು ದೊರೆಯುತ್ತಿಲ್ಲ. ಅಂದು ಪ್ರಾರಂಭಗೊಂಡ ಶಾಖಾಮಠಗಳು ಈ ಗ್ರಾಮದಲ್ಲಿ ಧಾರ್ಮಿಕ ಶ್ರೀಮಂತಿಕೆಯನ್ನು ಬೆಳೆಸಿವೆ.

ಕಂತೆಸ್ವಾಮಿಮಠ: ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಕಂತೆಸ್ವಾಮಿ ಮಠವು ಬಾಳೆಹೊನ್ನೂರು ರಂಭಾಪುರಿ ಪೀಠದ ಶಾಖಾಮಠವಾಗಿರುವ ಕಂತೆಸ್ವಾಮಿ ಮಠವು ಈ ಗ್ರಾಮದ ಪ್ರಥಮ ಮಠವಾಗಿ ಸ್ಥಾಪನೆಯಾಗಿದ್ದು ಈ ಮಠದಲ್ಲಿ ಒಂದು ಗದ್ದುಗೆ ಇದೆ. ಈ ಗದ್ದುಗೆಗೆ ನಿತ್ಯ ಪೂಜೆ ಮಾಡಲಾಗುತ್ತಿದೆ.

ಕಲ್ಲುಮಠ: ಗ್ರಾಮದ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ಕಲ್ಲುಮಠವು ಉಜ್ಜಯಿನಿ ಪೀಠದ ಶಾಖಾಮಠವಾಗಿದ್ದು ಮಠದ ಅಸ್ತಿತ್ವವನ್ನು ಉಳಿಸಿಕೊಳ್ಳುವಲ್ಲಿ ಇತರೆ ಎರಡು ಮಠಗಳಿಗಿಂತ ಉತ್ತಮವಾಗಿದೆ. ನೆಗಳೂರು ಮಠದ ಶ್ರೀ ಚನ್ನವೀರ ಸ್ವಾಮಿಗಳು ಇಲ್ಲಿ ಮಠವನ್ನು ಸ್ಥಾಪಿಸಿ ಮಠದ ಎಡಭಾಗದಲ್ಲಿ ಕಟ್ಟೆಯಾಕಾರವಾಗಿ ನಿರ್ಮಿಸಿಕೊಂಡ ಎತ್ತರದ ಸ್ಥಾನದಲ್ಲಿ ಕುಳಿತು ಬಿಕ್ಷೆಯನ್ನು ಸ್ವೀಕರಿಸುತ್ತಿದ್ದರು ಎಂದು ಹೇಳಲಾಗುತ್ತದೆ. ಶ್ರೀ ಚನ್ನವೀರ ಸ್ವಾಮಿಗಳು ಇಪ್ಪತ್ತು ವರ್ಷಗಳ ಹಿಂದೆ ಲಿಂಗೈಕ್ಯರಾದ ಮೇಲೆ ಉತ್ತರಾಧಿಕಾರಿಗಳನ್ನು ನೇಮಿಸಿಲ್ಲದ ಕಾರಣ ಮಠ ಖಾಲಿ ಉಳಿದಿದೆ. ಮಠದ ಆವರಣದಲ್ಲಿರುವ ಗದ್ದುಗೆಗೆ ಮಠದ ಮನೆಯವರು ಪೂಜೆಯನ್ನು ನಡೆಸುತ್ತಿದ್ದಾರೆ. ಮಠದ ಆವರದಲ್ಲಿ ಒಂದು ಕಲ್ಲಿನ ಬಾವಿ, ಒಂದು ಬಿಲ್ವಪತ್ರೆ ಮರ ಇದೆ. ಮಠದ ಸುತ್ತ ವಿಶಾಲ ಜಾಗವನ್ನು ಹೊಂದಿದೆ.

ಹಾಲುಸ್ವಾಮಿಮಠ: ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಹಾಲುಸ್ವಾಮಿ ಮಠವು ಶ್ರೀಶೈಲ ಪೀಠದ ಶಾಖಾಮಠವಾಗಿ ಬೆಳೆದಿತ್ತು. ಈ ಮಠದಲ್ಲಿ ಕರ್ತೃಗದ್ದುಗೆ ಎಂದು ಹೇಳಲಾಗುವ (ಹೆಸರು ಗೊತ್ತಿಲ್ಲ) ಒಂದು ಗದ್ದುಗೆ ಸ್ಥಾಪನೆಯಾಗಿದೆ. ಈ ಗದ್ದುಗೆಗೆ ನಿತ್ಯಪೂಜೆಯನ್ನು ಸಲ್ಲಿಸಲಾಗುತ್ತಿದೆ.

ಕದಮ್ಮನಹಳ್ಳಿ

ಬ್ಯಾಡಗಿ ತಾಲ್ಲೂಕಿನ ಕದಮ್ಮನಹಳ್ಳಿಯು ತಾಲ್ಲೂಕು ಕೇಂದ್ರದಿಂದ ವಾಯುವ್ಯ ದಿಕ್ಕಿಗೆ ಹತ್ತು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ಪಂಡಿತಾರಾಧ್ಯ ಮಠವು ಅಸ್ತಿತ್ವದಲ್ಲಿದೆ.

ಪಂಡಿತಾರಾಧ್ಯಮಠ: ಕದಮ್ಮನಹಳ್ಳಿಯ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಪಂಡಿತಾರಾಧ್ಯ ಮಠವು ರಂಭಾಪುರಿ ಪೀಠದ ಜಗದ್ಗುರುಗಳಾಗಿದ್ದ ಶ್ರೀ ಪ್ರಸನ್ನವೀರಗಂಗಾಧರ ಶಿವಾಚಾರ್ಯ ಸ್ವಾಮಿಗಳಿಂದ ಗುರುತಿಸಲ್ಪಟ್ಟಿತು. ಸ್ವಯಂ ನೂರಾಒಂದು ಬಿಲ್ವಪತ್ರೆ ಮರಗಳು ಬೆಳೆದಿದ್ದು ಶ್ರೀ ವೀರಗಂಗಾಧರ ಶಿವಾಚಾರ್ಯ ಸ್ವಾಮಿಗಳ ಮನಸ್ಸನು ಸೆಳೆಯಲು ಕಾರಣವಾಗಿತ್ತು. ಬಿಲ್ವಪತ್ರೆ ವನದ ಪವಿತ್ರ ಸ್ಥಾನದಲ್ಲಿ ಹಾವೇರಿಯ ಹಿರೇಮಠದ ಪಟ್ಟದದೇವರು ಅನುಷ್ಠಾನ ಕುಳಿತುಕೊಳ್ಳುವ ಅಪೇಕ್ಷೆಯಿಂದ ಈ ಗ್ರಾಮಕ್ಕೆ ಬಂದ ಸಂದರ್ಭದಲ್ಲಿ ಗುರುಗಳ ಅನುಷ್ಠಾನಕ್ಕಾಗಿ ಒಂದು ಕುಟೀರ ಮತ್ತು ಪೂಜಾ

ಕೊಠಡಿಯನ್ನು ಸ್ಥಾಪಿಸಿಕೊಡಲಾಗಿತ್ತು. ಹಿರೇಮಠದ ಪಟ್ಟದದೇವರು ಅನುಷ್ಠಾನಕ್ಕೆ ಕುಳಿತ ಸ್ಮರಣಾರ್ಥ ರೇಣುಕಮಂದಿರವನ್ನು ನಿರ್ಮಿಸಿಕೊಟ್ಟರು. ಇದಾದ ನಂತರ ಬಿಲ್ವಪತ್ರೆ ವನದಲ್ಲಿ ಮಠದ ವಾತವರಣ ಸೃಷ್ಟಿಯಾಯಿತು. ನಂತರ ಬಿಳಸನೂರು ಶ್ರೀ ಹಾಲು ಸ್ವಾಮಿಗಳು ಬಂದು ಈ ಜಾಗೃತ ಸ್ಥಳದಲ್ಲಿ ಮಹೇಶ್ವರ ಜಾತ್ರೆಯನ್ನು ನಡೆಸಲು ತಿರ್ಮಾನಿಸಿದರು. ಶ್ರೀ ಹಾಲು ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಶ್ರೀ ಹಾಲುಸ್ವಾಮಿಗಳ ಜಾತ್ರೆಯನ್ನು ನಡೆಸಲಾಗುತ್ತಿದೆ.

ಗುರುಗಳು ಈ ಜಾಗೃತ ಸ್ಥಳದಲ್ಲಿ ನಿರಂತರವಾಗಿ ನೆಲೆಸಬೇಕೆಂದು ಗ್ರಾಮಸ್ಥರು ಅಪೇಕ್ಷೆಪಟ್ಟರು. ಈ ಅಪೇಕ್ಷೆಗೆ ರಾಣಿಬೆನ್ನೂರು ತಾಲ್ಲೂಕಿನ ಮಣಕೂರು ಗ್ರಾಮದ ಹಾಲುಸ್ವಾಮಿ ಮಠದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಸಮ್ಮತಿ ಸೂಚಿಸಿದರು. ಕ್ರಿ.ಶ. ೨೦೦೦ ದ ಅಗಸ್ಟ್ ನಾಲ್ಕರಂದು ಭಕ್ತರ ಜತೆ ಮೊದಲ ಸುತ್ತಿನ ಸಮಾಲೋಚನೆ ನಡೆದಿದ್ದು ಭಕ್ತರೂ ಒಮ್ಮತದಿಂದ ಮಠವನ್ನು ಮಣಕೂರು ಮಠದ ಗುರುಗಳಿಗೆ ಒಪ್ಪಿಸಲು ನಿರ್ಧರಿಸಿದ್ದರು.

ವಿಳಾಸ: ಶ್ರೀ ಪಂಡಿತಾರಾಧ್ಯ ಮಠ, ಕದಮ್ಮನಹಳ್ಳಿ, ಬ್ಯಾಡಗಿ ತಾಲ್ಲೂಕು, ಹಾವೇರಿ ಜಿಲ್ಲೆ.

ಗುಡ್ಡದ ಮಲ್ಲಾಪುರ

ಬ್ಯಾಡಗಿ ತಾಲ್ಲೂಕಿನ ಗುಡ್ಡದಮಲ್ಲಾಪುರವು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ ಮೂವತ್ತೈದು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಮೂಕಪ್ಪಸ್ವಾಮಿಗಳ ದಾಸೋಹಮಠವು ಅಸ್ತಿತ್ವದಲ್ಲಿದೆ.

ಮೂಕಪ್ಪಸ್ವಾಮಿಗಳ ದಾಸೋಹಮಠ: ಗುಡ್ಡದಮಲ್ಲಾಪುರ ಗ್ರಾಮದಲ್ಲಿ ಮೂಕಪ್ಪಸ್ವಾಮಿಗಳ ದಾಸೋಹಮಠವು ವಿಶಿಷ್ಟ ಸಂಪ್ರದಾಯದಲ್ಲಿ ಬೆಳೆದು ಬಂದಿದೆ. ವೃಷಭನು ಈ ಮಠದ ಆಚಾರ್ಯ ಪದವಿಯನ್ನು ಪಡೆದು ಬೇರೆ ಮಠಗಳ ಸಂಪ್ರದಾಯದಂತೆ ಪಟ್ಟಾಧಿಕಾರವನ್ನು ಪಡೆದು, ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರಲಾಗುತ್ತಿದೆ.

ಮಠ ಸ್ಥಾಪನೆ: ಸುಮಾರು ಮುನೂರು ವರ್ಷಗಳ ಹಿಂದೆ ಅಂಧ್ರಪ್ರದೇಶದ ರಾಯಚೋಟಿ ಎಂಬ ಗ್ರಾಮದ ಶ್ರೀ ಮಲ್ಲಯ್ಯ ಮತ್ತು ಶ್ರೀಮತಿ ಪಾರ್ವತಮ್ಮನವರ ಪುತ್ರರಾಗಿ ಶ್ರೀ ಅಜ್ಜಯ್ಯನವರು ಜನಿಸಿದರು. ಎಂಟು ವರ್ಷದಲ್ಲಿ ಧೀಕ್ಷಾಸಂಸ್ಕಾರವನ್ನು ಪಡೆದು ಶ್ರೀಶೈಲದ ಜಗುದ್ಗುರುಗಳ ಸನ್ನಿಧಾನದಲ್ಲಿ ಸೇವೆಮಾಡುತ್ತ ಯೌವ್ವನಾವಸ್ಥೆಗೆ ಕಾಲಿಟ್ಟ ಶ್ರೀ ಅಜ್ಜಯ್ಯನವರು ತಮ್ಮ ಪೋಷಕರ ಒತ್ತಾಯ್ಯದ ಮೇರೆಗೆ ಶಿವಲೀಲಾ ಎಂಬ ವಧುವನ್ನು ಮದುವೆಯಾಗಿ ಸಂಸರಾದ ಬಂದನಕ್ಕೆ ಒಳಗಾದರು. ಸಂಸಾರದಲ್ಲಿದ್ದರು ಸಂಸಾರವನ್ನು ಅಟ್ಟಿಸಿಕೊಳ್ಳದ ಅಜ್ಜಯ್ಯನವರು ಶ್ರೀಶೈಲ ಪೀಠದಲ್ಲಿ ಗುರುಗಳ ಸೇವೆ ಮಾಡುತ್ತ ಕಾಲಕಳೆಯ ತೊಡಗಿದರು.

ಈ ಸಂದರ್ಭದಲ್ಲಿ ಬಿಜಾಪುರದ ಸುಲ್ತಾನರಿಂದ ಶ್ರೀಶೈಲ ಕ್ಷೇತ್ರ ಆಕ್ರಮಣವಾಗಿತ್ತು. ಈ ಸಂದರ್ಭದಲ್ಲಿ ಗುರುಪೀಠಕ್ಕೆ ಮತ್ತು ಪೀಠದ ಅನುಯಾಯಿಗಳಿಗೆ ಕಿರುಕುಳ ಪ್ರಾರಂಭವಾಗಿ ಮತಾಂತರಕ್ಕೆ ಹೆಚ್ಚು ಒತ್ತಾಯ ನಡೆಯತೊಡಗಿತ್ತು. ಈ ಪರಿಸ್ಥಿಯ ಗಂಭಿರತೆಯನ್ನು ಅರ್ಥಮಾಡಿಕೊಂಡ ಜಗದ್ಗುರುಗಳು ತಮ್ಮ ಶಿಷ್ಯರನ್ನು ಲೋಕಸಂಚಾರಕ್ಕೆ ಕಳಿಸಿಕೊಡುತ್ತಾರೆ. ಈ ಸಂದರ್ಭದಲ್ಲಿ ಶ್ರೀ ಅಜ್ಜಯ್ಯನವರು ತಮ್ಮ ಸತಿ ಮತ್ತು ಸಹೋದರರನ್ನು ಜತೆಯಲ್ಲಿ ಕರೆದುಕೊಂಡು ಧರ್ಮರಕ್ಷಣೆಗಾಗಿ ದಕ್ಷಿಣದ ಕಡೆಗೆ ಹೊರಡುತ್ತಾರೆ.

ಶ್ರೀಶೈಲದಿಂದ ಆಗಮನ: ಶ್ರೀಶೈಲದಿಂದ ನೇರವಾಗಿ ಹೊರಟ ಶ್ರೀ ಅಜ್ಜಯ್ಯನವರ ಪರಿವಾರವು ಕರ್ನಾಟಕಕ್ಕೆ ಆಗಮಿಸಿ ಕಾರವಾರ ಜಿಲ್ಲೆಯ ಹುಡೇಲಕೊಪ್ಪಲು, ಶಿವಮೊಗ್ಗ ಜಿಲ್ಲೆಯ ನೆಗವಾಡಿ, ಧಾರವಾಡ ಜಿಲ್ಲೆಯ ಹಿರೇಬಾಸುರು ಮುತಾಂದ ಕಡೆಗಳಲ್ಲಿ ನೆಲೆನಂತು ಮಠಗಳನ್ನು ಸ್ಥಾಪಿಸಿ ಧಾರ್ಮಿಕ ಆಚರಣೆಗೆ ನೆರವಾಗಲೆಂದು ಜಮೀನನ್ನು ಕರಿದಿಸಿ ತಮ್ಮ ಸಹೋದರರನ್ನು ಈ ಮಠಗಳಿಗೆ ನೆಲೆಗೊಳಿಸುತ್ತಾ ಬಂದರು. ಈ ರೀತಿ ಧರ್ಮಪ್ರಚಾರವನ್ನು ಕೈಗೊಂಡು ಗುಡ್ಡದಮಲ್ಲಾಪುರದ ಸಮೀಪದ ಸೂಡಂಬಿ ಗ್ರಾಮಕ್ಕೆ ಬಂದು ನೆಲೆಸುತ್ತಾರೆ. ಆದರೆ ಮಲ್ಲಾಪುರದ ಗುಡ್ಡವು ಶ್ರೀ ಅಜ್ಜಯ್ಯ ಗುರುಗಳ ಮನಸ್ಸನ್ನು ಅಕರ್ಷಿಸುತ್ತದೆ. ನಂತರ ಮಲ್ಲಾಪುರದ ಗುಡ್ಡದ ಮೇಲೆ ಗವಿಯನ್ನು ತೋಡಿಸಿಕೊಂಡು ಅನುಷ್ಠಾನಕ್ಕೆ ಕುಳಿತರು. ಅನೇಕ

ದಿನಗಳ ಅನುಷ್ಠಾನದ ನಂತರ ಅನೇಕ ಪವಾಡಗಳನ್ನು ನಡೆಸಿ ಭಕ್ತರ ಕಷ್ಟ ಕಾರ್ಪಣ್ಯಗಳನ್ನು ನಿವಾರಿಸಿ ಅಧ್ಯಾತ್ಮ ಪುಚ್ಚಿನಿಂದ ಮೆರೆಯತೊಡಗಿದರು. ಇದ್ದನ್ನು ನೋಡಿದ ಭಕ್ತರು ಶ್ರೀ ಅಜ್ಜಯ್ಯ ಸ್ವಾಮಿಗಳನ್ನು ಶ್ರೀ ಪುಚ್ಚಪ್ಪ ಸ್ವಾಮಿಗಳೆಂದು ರೂಢಿಗತವಾಗಿ ಕರೆಯತೊಡಗಿದರು.

ಶ್ರೀ ಪುಚ್ಚಪ್ಪ ಸ್ವಾಮಿಗಳು ವೈರಾಗ್ಯ ತಾಳಿ ಧರ್ಮಪ್ರಚಾರವನ್ನೆ ತಮ್ಮ ಮೂಲ ಉದ್ದೇಶವನ್ನಾಗಿ ಇಟ್ಟುಕೊಂಡರು. ಶಿವರಾತ್ರಿಯಂದು ಗಿರಿ (ಶ್ರೀಶೈಲ) ಹೊಗುತ್ತಿದ್ದರು. ಈ ಸಂದರ್ಭದಲ್ಲಿ ತಮ್ಮ ಪೂಜಾ ಸಾಮಗ್ರಿಗಳನ್ನು ಹೊತ್ತುಕೊಂಡು ಹೊಗಲು ಸಾಕಷ್ಟು ಪಳಗಿಂದ ಹಾಗೂ ಸಂಸ್ಕಾರವನ್ನು ಪಡೆದಿದ್ದ ಒಂದು ಕಂಟಲೆ ಬಸವ ಅವರ ಜತೆಯಲ್ಲಿ ಯವಾಗಲೂ ಇರುತ್ತಿತು. ಶ್ರೀ ಪುಚ್ಚಯ್ಯ ಸ್ವಾಮಿಗಳು ವೃದ್ಧಾಪ್ಯದಲ್ಲಿ ಅವರ ಪತ್ನಿ ಶಿವಲೀಲೆಯವರು ಶಿವೈಕ್ಯರಾದರು. ಈ ಅಗಲುವಿಕೆಯ ನೋವನ್ನು ಅನುಭವಿಸಿದ ಶ್ರೀ ಅಜ್ಜಯ್ಯ ಸ್ವಾಮಿಗಳು ತಮ್ಮ ಅಂತಿಮ ಕಾಲ ಸಮೀಪಿಸುತ್ತಿದೆ ಎಂಬುದನ್ನು ಹರಿತು ತಮ್ಮ ಉತ್ತರಾಧಿಕಾರಿಗಳ ಶೋಧನೆಗೆ ತೊಡಗಿದರು. ಅದರೆ ಸಮರ್ಥರು ಯಾರು ಸಿಗದೆ ಇದ್ದಾಗ ತಮ್ಮ ಸೇವೆಯಲ್ಲಿ ತೊಡಗಿದ್ದ ಕಂಟಲೆ ಬಸವನ ಸಂಸ್ಕಾರ ಮತ್ತು ಕಾಯಕಕ್ಕೆ ನೋಡಿದ್ದ ಗುರುಗಳು ಕಂಟಲೆ ಬಸವನಿಗಿತ ಬೇರೆ ಇನ್ಯಾರೂ ಸಿಗಲಾ ರರು ಎಂಬುದನ್ನು ಹರಿತು ತಮ್ಮಲ್ಲಿದ್ದ ಜೋಳಿಗೆಯನ್ನು ಬಸವನ ಕೋರಳಿಗೆ ಹಾಕಿ ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿಕೊಂಡು ಬಸವನ ಕಿವಿಯಲ್ಲಿ ಉಪದೇಶಾಮೃತವನ್ನು ಮಾಡಿದರು.

ಗುರುವಾದ ಬಸವ: ಗುರುಗಳು ಕಂಟಲೆ ಬಸವನನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಕಗೊಳಿಸಿಕೊಂಡ ನಂತರ ಮಠದ ಸದಭಕ್ತರನ್ನು ಸೇರಿಸಿಕೊಂಡು ತಮ್ಮ ನಿರ್ಧಾರವನ್ನು ಸಭೆಯ ಮುಂದಿಟ್ಟರು. ಈಗಾಗಲೇ ಶ್ರೀ ಪುಚ್ಚಪ್ಪ ಸ್ವಾಮಿ ಗಳೆಂದು ಕರೆಸಿಕೊಂಡಿದ್ದ ಗುರುಗಳ ಈ ಮಾತನ್ನು ಕೇಳಿ ಇದು ಗುರುಗಳ ಹುಚ್ಚಾಚಾರಕ್ಕೆ ಸಾಕ್ಷಿಎಂದು ಕೊಂಡರು. ಊರಿನ ಮುಖಂಡರೊಬ್ಬರು ಮೂಕ ಪ್ರಾಣಿ ಧರ್ಮಗುರುವಾಗಲು ಸಾದ್ಯವೆ ಎಂದು ಪ್ರಶ್ನಿಸಿದರು. ಆಗ ಗುರುಗಳು 'ಧರ್ಮರೂಪವಾದ ವೃಷಭನೇ ಈ ಸ್ಥಾನಕ್ಕೆ ಯೋಗ್ಯನೆಂದು ನಿರ್ಧಾರ ಕೈಗೊಂಡಾಗಿದೆ. ನಮ್ಮ ಉತ್ತರಾಧಿಕಾರಿಗಳಾದ ವೃಷಭನಿಗೆ ಸದಾಕಾಲ ಬೆಂಬಲವಾಗಿ ನಿಂತು ವೀರಶೈವ ಧರ್ಮದ ಜ್ಯೋತಿ ನಂದದಂತೆ ನೋಡಿಕೊಳುತ್ತೇನೆ'ಎಂದು ಹೇಳಿದಾಗ ಭಕ್ತರು ಸಮ್ಮತಿಸಿದರು. ವೀರಶೈವ ಧರ್ಮಾಚರಣೆಯ ವಿದಿವಿಧಾನಗಳನ್ನು ಪೂರೈಸಿ ಗುರುಪೀಠಗಳ ಸಂಪ್ರದಾಯದ ಅನ್ವಯದಂತೆ ಪಟ್ಟಾಧಿಕಾರದ ಕ್ರಮವನ್ನು ಅನುಸರಿಸಿ ಕಂಟಲೆ ಬಸವನಿಗೆ ಶ್ರೀ ವೃಷಭಮೂರ್ತಿ ಶಿವಾಚಾರ್ಯರೆಂದು ಅಭಿದಾನವಿತ್ತು ಪಟ್ಟಾಧಿಕಾರ ಮಾಡಿದರು. ಮಠದ ಕಾರುಬಾರಿಗೆ ತಮ್ಮ ಸಹೋದರನ ಜೇಷ್ಠಪುತ್ರನನ್ನು ನೇಮಿಸಿ ಕಾಲನು ಕ್ರಮದಲ್ಲಿ ಜೇಷ್ಠ ಪುತ್ರನೇ ಈ ಕಾರ್ಯವನ್ನು ನೋಡಿಕೊಂಡು ಹೊಗತಕ್ಕದೆಂದು ಅಪ್ಪಣೆಕೊಡಿಸಿದರು.

ಇದಾದ ಕೆಲವೇ ದಿನಗಳಲ್ಲಿ ಶ್ರೀ ಪುಚ್ಚಪ್ಪ ಸ್ವಾಮಿಗಳು ಲಿಂಗೈಕ್ಯರಾಗಲೂ ಅವರ ದಿವ್ಯ ತೇಜಸ್ಸು ವೃಷಭಮೂರ್ತಿ ಯಲ್ಲಿ ಅಂತರ್ಗತವಾಯಿತು. ನಂತರ ವೃಷಭಮೂರ್ತಿಯ ಅಚಾರ ವಿಚಾರಗಳು, ಅದು ವರ್ತಿಸುತ್ತಿದ ರೀತಿಯನ್ನು ನೋಡಿ ಭಕ್ತರು ವೃಷಭನಲ್ಲೇ ಹುಚ್ಚೇಶ್ವರ ಸ್ವಾಮಿಗಳನ್ನು ಕಾಣತೊಡಗಿದರು.

ಬೆಳೆದ ಪರಂಪರೆ: ಮಠದ ಪರಂಪರೆಯಲ್ಲಿ ಬರುವ ಶ್ರೀ ವೃಷಭ ಸ್ವಾಮಿಗಳು (ಮೂಕಪ್ಪಸ್ವಾಮಿಗಳು) ಲಿಂಗೈಕ್ಯರಾಗುವ ಮೊದಲು ಈ ಪ್ರಾಂತ್ಯದ ಯಾವುದಾದರೂ ಒಂದು ಮನೆಯಲ್ಲಿ ಮೂಕಪ್ಪಸ್ವಾಮಿ ಜನಿಸುತ್ತದೆ. ಅಂದು ಜನಿಸಿದ ಕರು ತನ್ನ ತಾಯಿಯ ಕೆಚ್ಚಲು ಹಾಲನ್ನು ಸೇವಿಸದೆ ಗಂಭಿರವಾಗಿ ಮಲಗಿರುತ್ತದೆ. ಕರುವಿನ ಸೂಕ್ಷ್ಮ ಚಲನವಲನಗಳನ್ನು ಗಮನಿಸಿದ ಭಕ್ತರು ಗುಡ್ಡದ ಮಲ್ಲಾಪುರದ ಮೂಕಪ್ಪಸ್ವಾಮಿ ದಾಸೋಹ ಮಠಕ್ಕೆ ವಿಚಾರವನ್ನು ಮುಟ್ಟಿಸುತ್ತಾರೆ. ಮಠದ ಧರ್ಮದಿಕಾರಿ ಯಾಗಿ ಮಠದ ಪರಿವಾರವು ಕರು ಇರುವ ಮನೆಗೆ ಆಗಮಿಸಿ ಮಠದ ಉತ್ತರಾಧಿಕಾರಿಗಳಾಗಿ ಜನಿಸಿದ ಕರುವಿಗೆ ದೀಕ್ಷಾ ಕಾರ್ಯಗಳನ್ನು ನೇರವೆರಿಸಿದಾಗ ಕರು ತನ್ನ ತಾಯಿಯ ಹಾಲನ್ನು ಕುಡಿಯಲು ಮುಂದಾಗುತ್ತದೆ. ದೀಕ್ಷೆಮಾಡಿದ ಕರುವನ್ನು ಒಂಬತ್ತರಿಂದ ಹನ್ನೊಂದು ತಿಂಗಳ ನಂತರ ಮಠಕ್ಕೆ ತಂದು ಹಿರಿಯ ಪಠಾಧ್ಯಕ್ಷವೃಷಭ ಸ್ವಾಮಿಯು ಲಿಂಗೈಕ್ಯವಾದ ನಂತರ ಶಾಖಾನುವರ್ತಿ ಹಿರೇಮಠದ ಸ್ವಾಮಿಗಳಿಂದ ಪಟ್ಟಾಧಿಕಾರದ ಅನುಗ್ರಹವನ್ನು ನೀಡಲಾಗುತ್ತದೆ. ಪಟ್ಟಾಧಿಕಾರವನ್ನು ನೀಡುವ ಸಂದರ್ಭದಲ್ಲಿ ಪುಚ್ಚಪ್ಪ ಸ್ವಾಮಿಗಳ ಗದ್ದುಗೆಯ ಮೇಲೆ ಕುಳಿತ ಶಾಖಾನುವರ್ತಿ ಹಿರೇಮಠದ ಸ್ವಾಮಿಗಳು ಪಟ್ಟಾಧಿಕಾರವಾಗು

ವೃಷಭನ ಕೊರಳಿಗೆ ಜಂಗು, ಜೋಳಿಗೆ ಮತ್ತು ಭೆತ್ತವನ್ನು ಕಟ್ಟಿ ಬಲಕಿವಿಯಲ್ಲಿ ಮಂತ್ರೋಪದೇಶವನ್ನು ನೀಡಲಾಗುತ್ತದೆ. ಅಂದು ನಡೆಯುವ ಧಾರ್ಮಿಕ ಸಭೆಯಲ್ಲಿ ಪಟ್ಟಾಧಿಕಾರ ಪಡೆದ ವೃಷಭ ಸ್ವಾಮಿಯು ವೇದಿಕೆಯಲ್ಲಿ ಉಪಸ್ಥಿತ್ತವಿರುತ್ತದೆ. ಪಟ್ಟಾಧಿಕಾರವಾದ ವೃಷಭನಿಗೆ ತ್ರಿಕಾಲದಲ್ಲಿ ಸ್ನಾನ ಪೂಜಾ ಕಾರ್ಯಗಳು ನಡೆಯುತ್ತವೆ. ಈ ರೀತಿ ಮಠದ ಸಂಪ್ರದಾಯದಂತೆ ಒಂದು ಜೊತೆ (ಚರ ಮತ್ತು ಸ್ಥಿರ) ವೃಷಭ ಸ್ವಾಮಿಗಳು ಅಧಿಕಾರದಲ್ಲಿರುತ್ತವೆ.

ಧಾರ್ಮಿಕ ಕಾರ್ಯಗಳು: ಲಿಂಗೈಕ್ಯರಾಗಿರು ವೃಷಭಸ್ವಾಮಿಗಳ ಗದ್ದುಗೆ ಹಾಗೂ ಶ್ರೀ ಹುಚ್ಚಪ್ಪ ಸ್ವಾಮಿಗಳ ಗದ್ದುಗೆಗೆ ನಿತ್ಯ ಪೂಜೆ, ಅನ್ನದಾಸೋಹ ನಡೆಸಲಾಗುತ್ತದೆ. ಬೇರೆ ಮಠದ ಗುರುಗಳು ಭಕ್ತರ ಮನೆಗೆ ಹೋಗಿ ಪೂಜಾಕಾರ್ಯ ಮುಗಿಸಿಕೊಂಡು ಬರುವಂತೆ ಈ ಮಠದ ವೃಷಭಸ್ವಾಮಿಗಳು ಸಹ ಭಕ್ತರ ಮನೆಗಳಿಗೆ ಹೊಗಿ ಪೂಜಾಕಾರ್ಯವನ್ನು ಮಾಡಿ ಕೊಂಡು ಬರುತ್ತವೆ. ವರ್ಷಕ್ಕೊಮ್ಮೆ ಹಿರಿಯ ಗುರುಗಳ ಪುಣ್ಯಾರಾಧನೆ ಕಾರ್ಯಕ್ರಮವನ್ನು ನಡೆಸಲಾಗುತ್ತದೆ. ಈ ಸಮಾರಂಭದ ಸಾನ್ನಿಧ್ಯವನ್ನು ಶ್ರೀ ವೃಷಭಸ್ವಾಮಿಗಳೆ ವಹಿಸಿಕೊಳ್ಳುವುದು ಒಂದು ವಿಶೇಷ.

ಶೈಕ್ಷಣಿಕ ಸೇವೆ: ಮಠದ ವತಿಯಿಂದ ೧೯೮೮-೧೯೮೯ನೆಯ ಸಾಲಿನಲ್ಲಿ ಪ್ರೌಢಶಾಲೆಯನ್ನು ಪ್ರಾರಂಭಿಸಲಾಗಿದೆ. ಅಲ್ಲದೆ ನಿರ್ಗತಿಕ ಅನಾಥ ಮಕ್ಕಳ ವಸತಿ ಶಾಲೆಯನ್ನು ಪ್ರಾರಂಭಿಸಿ ಅನಾಥ ಮಕ್ಕಳಿಗೆ ನೇರವನ್ನು ಕಲ್ಪಿಸಲಾಗಿದೆ. ಶ್ರೀ ಮೂಕಪ್ಪ ಸ್ವಾಮಿಗಳ ಮಠದ ಧರ್ಮಾಧಿಕಾರಿಗಳಾಗಿರುವ ಶ್ರೀ ಮೃಂತ್ಯುಜಯ ಸ್ವಾಮಿಗಳು ಮಠವನ್ನು ಧಾರ್ಮಿಕ ಮತ್ತು ಶೈಕ್ಷಣಿಕವಾಗಿ ಅಭಿವೃದ್ಧಿಪಡಿಸುತ್ತಾ ಪರಂಪರೆಗೆ ಧಕ್ಕೆ ಬಾರದಂತೆ ನೋಡಿಕೊಳ್ಳುತ್ತಿದ್ದಾರೆ.

ಶಾಖಾಮಠಗಳು: ಶ್ರೀ ಹುಚ್ಚಪ್ಪಸ್ವಾಮಿಗಳು ಶ್ರೀಶೈಲದಿಂದ ಆಗಮಿಸಿ ಸ್ಥಾಪನೆ ಮಾಡಿದ ಮಠಗಳಲ್ಲಿ ಹಾನಗಲ್ಲು ತಾಲ್ಲೂಕಿನ ಹಿರೇಬಾಸುರು, ಮಳಗಿಪಾಳ್ಯ, ಸೊರಬ ತಾಲ್ಲೂಕಿನ ನೆಗವಾಡಿ ಮಠಗಳು ಇಂದಿಗು ಈ ಮಠದ ಶಾಖಾಮಠಗಳಾಗಿವೆ.

ವಿಳಾಸ: ಶ್ರೀ ಮೃತ್ಯುಂಜಯ ಸ್ವಾಮಿಗಳು, ಧರ್ಮಾಧಿಕಾರಿಗಳು, ಶ್ರೀ ಮೂಕಪ್ಪಸ್ವಾಮಿ ದಾಸೋಹಮಠ, ಗುಡ್ಡದ ಮಲ್ಲಾಪುರ, ಅತ್ತಿಕಟ್ಟೆ ಅಂಚೆ, ಬ್ಯಾಡಗಿ ತಾಲ್ಲೂಕು, ಹಾವೇರಿ ಜಿಲ್ಲೆ.

ಬ್ಯಾಡಗಿ

ಹಾವೇರಿ ಜಿಲ್ಲೆಯ ಬ್ಯಾಡಗಿ ಪಟ್ಟಣವು ತಾಲ್ಲೂಕು ಕೇಂದ್ರವಾಗಿರುವುದಲ್ಲದೆ, ಮೆಣಸಿನ ಕಾಯಿಯ ವ್ಯಾಪಾರ ಕೇಂದ್ರವಾಗಿ ಪ್ರಪಂಚದ ಗಮನವನ್ನು ಸೆಳೆದಿದೆ. ಜಿಲ್ಲಾ ಕೇಂದ್ರದಿಂದ ಆಗ್ನೇಯ ದಿಕ್ಕಿಗೆ ಹದಿನೈದು ಕಿ.ಮೀ.ದೂರದಲ್ಲಿದೆ. ಬ್ಯಾಡಗಿ ಪಟ್ಟಣದಲ್ಲಿ ಪ್ರಾಚೀನ ಕಾಲದಿಂದಲೂ ಮೂರು ಮಠಗಳು ಸ್ಥಾಪನೆಗೊಂಡ ಬಗ್ಗೆ ಮಾಹಿತಿ ದೊರೆಯುತ್ತದೆ. ಇವುಗಳಲ್ಲಿ ವಿರಕ್ತ ಸಂಪ್ರದಾಯದ ಮುಪ್ಪಿನಸ್ವಾಮಿ ಮಠ, ಹಾವೇರಿಯ ಸಿಂದಗಿ ಪಟ್ಟದದೇವರ ಮಠ (ಕುಮಾರೇಶ್ವರ ಧಾರ್ಮಿಕ ಪಾಠಶಾಲೆ) ಮತ್ತು ಹಿರೇಮಠ ಸ್ಥಾಪನೆಗೊಂಡಿವೆ. ಆದರೆ ಈ ಮಠಗಳಲ್ಲಿ ಮುಪ್ಪಿನಸ್ವಾಮಿ ಮಠದಲ್ಲಿ ಮಾತ್ರ ಗುರುಗಳಿದ್ದು ಧಾರ್ಮಿಕ ಕಾರ್ಯಗಳು ನಡೆಯುತ್ತಿವೆ.

ಮುಪ್ಪಿನಸ್ವಾಮಿಮಠ: ಬ್ಯಾಡಗಿ ಪಟ್ಟಣದ ಮಧ್ಯಭಾಗದಲ್ಲಿ ಮುಪ್ಪಿನಸ್ವಾಮಿ ಮಠ ಅಥವಾ ಜಂಗಮ ಮಠವು ಸ್ಥಾಪನೆಯಾಗಿದೆ. ಕರ್ತೃ ಗುರುಗಳಾದ ಶ್ರೀ ಮುಪ್ಪಿನ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿದ್ದಾರೆ. ಶ್ರೀ ಮುಪ್ಪಿನ ಸ್ವಾಮಿಗಳು ಮಹಾತಪಸ್ವಿಗಳಾಗಿದ್ದು ತಮ್ಮ ವಿದ್ವತ್ ಶಕ್ತಿಯಿಂದ ಪಂಡಿತ ಪಾಮರರಿಗೂ ಚಿರಪರಿಚಿತರಾಗಿದ್ದರು. ಶೂನ್ಯ ಸಿಂಹಾಸನ ಪೀಠದ ಇಪ್ಪತ್ತಮೂರನೆಯ ಪಟ್ಟಾಧ್ಯಕ್ಷರಾಗಿ(೧೮೮೧-೧೯೦೩) ಮೈಸೂರು ಅರಸು ಮನೆತನದಲ್ಲಿ ಉದ್ಭವಿಸಿದ ಸಮಸ್ಯೆಯನ್ನು ಬಗೆಹರಿಸಿ, ಚಾಮರಾಜ ಒಡೆಯರಿಗೆ ಪುನಃ ಪಟ್ಟಾಧಿಕಾರವನ್ನು ಕೊಡಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ ಎಂದು ಚಿತ್ರದುರ್ಗ ಬೃಹನ್ಮಠದ ಶೂನ್ಯ ಪೀಠದ ಪರಂಪರೆ ಎಂಬ ಪ್ರಕಟಿತ ಲೇಖನದಲ್ಲಿ ಬಿ.ಸಂ.ಚಂದ್ರಯ್ಯನವರು ಶ್ರೀ ಮುಪ್ಪಿನ ಸ್ವಾಮಿಗಳ ಬಗ್ಗೆ ವಿವರಣೆ ನೀಡಿದ್ದಾರೆ.

ಮಠಸ್ಥಾಪನೆ: ಆಧ್ಯಾತ್ಮ ಮತ್ತು ಸಾಮಾಜಿಕ ಕಳಕಳಿಯನ್ನು ಇಟ್ಟುಕೊಂಡು ನಾಡಿನ ಉದ್ದಗಲಕ್ಕೂ ಸಂಚಾರ ಕೈಗೊಂಡಿದ್ದ

ಶ್ರೀ ಮುಪ್ಪಿನಸ್ವಾಮಿಗಳು ಬ್ಯಾಡಗಿಯಲ್ಲಿ ಮಠವನ್ನು ಸ್ಥಾಪನೆಮಾಡಿ ಭವ್ಯವಾದ ಕಟ್ಟಡವನ್ನು ನಿರ್ಮಿಸಿರುತ್ತಾರೆ. ತಮ್ಮ ಜೀವಿತದ ಕೊನೆಯ ಅವಧಿಯನ್ನು ಅಲ್ಲೇ ಕಳೆದು ೧೯೦೩ ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರಿಂದ ಸ್ಥಾಪನೆಗೊಂಡ ಮಠವು ಈ ತನಕ ಬೆಳೆದು ವೀರಶೈವ ತತ್ತ್ವವನ್ನು ಪ್ರಚಾರಪಡಿಸುತ್ತ ತಮ್ಮದೇ ಆದ ಕಾಣಿಕೆಯನ್ನು ನೀಡುತ್ತಾ ಬಂದಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಮುಪ್ಪಿನಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಚನ್ನವೀರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಚನ್ನಬಸವಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಶಿವಪುತ್ರಸ್ವಾಮಿಗಳು (ಈಗಿನವರು)

ಈರೀತಿ ಮಠದ ಪರಂಪರೆ ಬೆಳೆದಿದ್ದು, ಶ್ರೀ ಮುಪ್ಪಿನ ಸ್ವಾಮಿಗಳ ನಂತರ ಶ್ರೀ ಚನ್ನವೀರ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಮುನ್ನಡೆಸಿದ್ದಾರೆ. ನಂತರ ಬಂದ ಶ್ರೀ ಚನ್ನಬಸವ ಸ್ವಾಮಿಗಳು ಈ ಮಠದ ಅಭಿವೃದ್ಧಿಗೆ ಶ್ರಮಿಸಿ ಮಠದಲ್ಲಿ ವಸತಿ ಶಾಲೆಯನ್ನು ಪ್ರಾರಂಭಿಸಿ ಕಲಿಯುವ ಬಡಮಕ್ಕಳಿಗೆ ನೆರವಾಗಿದ್ದರು ಎಂದು ಹೇಳಲಾಗುತ್ತಿದೆ. ನಾಡಿನಾದ್ಯಂತ ಸಂಚಾರ ಕೈಗೊಳ್ಳುತ್ತಿದ್ದ ಶ್ರೀ ಚನ್ನಬಸವ ಸ್ವಾಮಿಗಳು ೧೯೭೧ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ೧೯೭೧ರಲ್ಲಿ ಶ್ರೀ ಶಿವಪುತ್ರ ಸ್ವಾಮಿಗಳು ಪಟ್ಟಾಧಿಕಾರಕ್ಕೆ ಬಂದು ಮಠವನ್ನು ಮುನ್ನಡೆಸಿದ್ದಾರೆ.

ಅಭಿವೃದ್ಧಿಕಾರ್ಯಗಳು: ಗದಗ ತಾಲ್ಲೂಕಿನ ಕಲ್ಲುಮುಳುಗುಂದ ಗ್ರಾಮದ ವೀರಯ್ಯ ಮತ್ತು ಶಿವಮ್ಮನವರ ಮಗನಾಗಿ ೧೯೩೭ರಲ್ಲಿ ಶ್ರೀ ಶಿವಪುತ್ರ ಸ್ವಾಮಿಗಳು ಜನಿಸಿದರು. ಚಿತ್ರದುರ್ಗ ಬೃಹನ್ಮಠದ ಜಗದ್ಗುರುಗಳಾಗಿದ್ದ ಶ್ರೀ ಜಯವಿಭವ ಸ್ವಾಮಿಗಳ (೧೯೪೯-೧೯೬೪) ಸಹೋದರ ಸಂಬಂಧಿಗಳಾಗಿದ್ದ ಶ್ರೀ ಶಿವಪುತ್ರ ಸ್ವಾಮಿಗಳು, ಬೃಹನ್ಮಠದಲ್ಲಿ ಆಶ್ರಯ ಪಡೆದು ವಿದ್ಯಾಭ್ಯಾಸವನ್ನು ಮುಗಿಸಿದರು. ಕಾಶಿಯ ಬನಾರಸ್ ವಿಶ್ವವಿದ್ಯಾನಿಲಯದಲ್ಲಿ ಉನ್ನತ ಶಿಕ್ಷಣವನ್ನು ಮುಗಿಸಿಕೊಂಡು ಬಂದು ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಶ್ರೀ ಶಿವಪುತ್ರ ಸ್ವಾಮಿಗಳು ಕಾಯಕಯೋಗಿಗಳಾಗಿ ಮಠವನ್ನು ಅಭಿವೃದ್ಧಿ ಪಡಿಸಿದರು. ಅಲ್ಲದೆ ಅನ್ಯರ ಪಾಲಾಗಿದ್ದ ಮಠದ ಆಸ್ತಿಯ ಕೆಲವು ಭಾಗವನ್ನು ಬಿಡಿಸಿಕೊಂಡು ಮಠಕ್ಕೆ ಆದಾಯವನ್ನು ಹೆಚ್ಚಿಸಿಕೊಂಡಿದ್ದಾರೆ.

ಸಾಮಾಜಿಕ ಕಾರ್ಯಗಳು: ಮಠವನ್ನು ಧಾರ್ಮಿಕ ಮತ್ತು ಆರ್ಥಿಕವಾಗಿ ಸದೃಢಪಡಿಸಿದ್ದ ಗುರುಗಳು ಮಠದ ವತಿಯಿಂದ ಶಿಕ್ಷಣಸಂಸ್ಥೆಯನ್ನು ಸ್ಥಾಪಿಸಲು ಮುಂದಾಗದೆ, ಸರ್ಕಾರಿ ಶಾಲೆಗೆ ಕಟ್ಟಡವನ್ನು ನಿರ್ಮಿಸಲು ಮಠದ ನಿವೇಶನವನ್ನು ಉಚಿತವಾಗಿ ನೀಡಿದ್ದಾರೆ. ಕರ್ತೃಗುರುಗಳಿಂದ ಈಗಿನ ಗುರುಗಳ ತನಕ ಎಲ್ಲಾ ಗುರುಗಳು ಸಾಮಾಜಿಕ ಅಭಿವೃದ್ಧಿಯ ಬಗ್ಗೆಕಳಕಳಿಯನ್ನು ಇಟ್ಟುಕೊಂಡು ಧರ್ಮಪ್ರಚಾರವನ್ನು ಕೈಗೊಂಡಿರುತ್ತಾರೆ.

ಧಾರ್ಮಿಕ ಕಾರ್ಯಗಳು: ಮಠದ ಅಧೀನದಲ್ಲಿರುವ ಬ್ಯಾಡಗಿಯ ಹೊರಮಠದಲ್ಲಿ ಕರ್ತೃಗುರುಗಳಾದ ಶ್ರೀ ಮುಪ್ಪಿನ ಸ್ವಾಮಿಗಳ ಗದ್ದುಗೆಯಿದ್ದು ಈ ಗದ್ದುಗೆಗೆ ನಿತ್ಯಪೂಜೆಯ ವ್ಯವಸ್ಥೆಯನ್ನು ಮಾಡಲಾಗಿದೆ. ಅಲ್ಲದೆ ಪರಂಪರೆಯಲ್ಲಿ ಬರುವ ಇಬ್ಬರು ಗುರುಗಳ ಗದ್ದುಗೆಗಳು ಈ ಮಠದ ಆವರಣದಲ್ಲಿ ಸ್ಥಾಪನೆಗೊಂಡಿದ್ದು ಎರಡು ವೇಳೆ ಪೂಜೆ ಮಾಡಲಾಗುತ್ತಿದೆ. ಶ್ರಾವಣ, ಕಾರ್ತಿಕಮಾಸಗಳಲ್ಲಿ ವಿಶೇಷ ಪೂಜೆಯ ವ್ಯವಸ್ಥೆ ನಡೆಸಲಾಗುತ್ತಿತ್ತು. ಆದರೆ ಈಗ ಸ್ಥಗಿತಗೊಳಿಸಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಶಿವಪುತ್ರ ಸ್ವಾಮಿಗಳು, ಶ್ರೀ ಮುಪ್ಪಿನಸ್ವಾಮಿ ಮಠ, ಬ್ಯಾಡಗಿ ತಾಲ್ಲೂಕು, ಹಾವೇರಿ ಜಿಲ್ಲೆ.

❑

ರಾಣಿಬೆನ್ನೂರು ತಾಲ್ಲೂಕು

ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕು, ಐತಿಹಾಸಿಕ ಹಾಗೂ ಸಾಂಸ್ಕೃತಿಕವಾಗಿ ಹೆಸರು ಪಡೆದಿದೆ. ಇಲ್ಲಿ ವೀರಶೈವಧರ್ಮ ಗಟ್ಟಿಯಾಗಿ ಬೆಳೆದು ತನ್ನ ನೆಲೆಯನ್ನು ಗುರುತಿಸಿಕೊಂಡಿದೆ. ಇಲ್ಲಿ ಸುಮಾರು ೨೨೦ ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತದೆ. ಆದರೆ ಪ್ರಸ್ತುತ ಸುಮಾರು ನಲವತ್ತು ಮಠಗಳನ್ನು ಗುರುತಿಸಬಹುದಾಗಿದ್ದು ಇವುಗಳಲ್ಲಿ ಎಂಟು ಮಠಗಳಲ್ಲಿ ಗುರುಗಳಿದ್ದು ಧಾರ್ಮಿಕ ಕಾರ್ಯಗಳು ನಡೆಯುತ್ತಿವೆ.

ಅಸುಂಡಿ

ರಾಣೆಬೆನ್ನೂರು ತಾಲ್ಲೂಕಿನ ಅಸುಂಡಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಎಂಟು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಅಸುಂಡಿ ಗ್ರಾಮದ ಹೊರಭಾಗದಲ್ಲಿ ಶ್ರೀಶೈಲ ಪೀಠದ ಶಾಖಾಮಠ ಪ್ರಾರಂಭಗೊಂಡಿದೆ. ಹಿರೇಮಠದ ಪರಂಪರೆಯಲ್ಲಿ ಬೆಳೆದ ಈ ಮಠದಲ್ಲಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡಲು ಸಮರ್ಥ ಗುರುವು ಇಲ್ಲದೆ ಇರುವುದನ್ನು ಗಮನಿಸಿ, ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಸಾಲೂರು ಹಿರೇಮಠದ ಶ್ರೀ ಪಂಚಾಕ್ಷರಿ ಶಿವಾಚಾರ್ಯ ಸ್ವಾಮಿಗಳು ಈ ಗ್ರಾಮದಲ್ಲಿ ಮಠವನ್ನು ಸ್ಥಾಪನೆ ಮಾಡಲು ಕನಸನ್ನು ಕಂಡಿದ್ದರು.

ಮಠ ಸ್ಥಾಪನೆ: ಅಸುಂಡಿಯಲ್ಲಿ ಭಕ್ತರ ಅಪೇಕ್ಷೆಯ ಮೇರೆಗೆ ಮಠವನ್ನು ಸ್ಥಾಪಿಸಿ ಮಠದಲ್ಲಿ ರೇಣುಕಾಚಾರ್ಯರ ಹಾಗೂ ಪಾರ್ವತಿ ದೇವಿಯ ಮೂರ್ತಿಗಳನ್ನು ಪ್ರತಿಷ್ಠಾಪಿಸಿದ್ದಾರೆ. ಅಸುಂಡಿ ಹಿರೇಮಠದ ವಂಶಸ್ಥರಾದ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಸಾಲೂರಿನ ಹಿರೇಮಠದ ಗುರುಗಳಾಗಿದ್ದ ಶ್ರೀ ಪಂಚಾಕ್ಷರಿ ಸ್ವಾಮಿಗಳಿಂದ ಶಿಕ್ಷಣವನ್ನು ಪಡೆದು ಸಮರ್ಥ ಗುರುವಾಗಿ ರೂಪುಗೊಂಡರು. ಶ್ರೀ ಚನ್ನವೀರ ಸ್ವಾಮಿಗಳ ವಿದ್ವತ್ತನ್ನು ಗಮನಿಸಿ ಶ್ರೀಶೈಲ ಪೀಠಕ್ಕೆ ಉತ್ತರಾಧಿಕಾರಿಗಳನ್ನಾಗಿ ಆಯ್ಕೆಮಾಡಿ ಕೊಳ್ಳಲು ತಯಾರಿ ನಡೆದಾಗ, ಶ್ರೀ ಪಂಚಾಕ್ಷರಿ ಶಿವಾಚಾರ್ಯಸ್ವಾಮಿಗಳು ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳಿಗೆ ಸಾಲೂರು ಮಠದ ಅಧಿಕಾರವನ್ನು ನೀಡಿದರು. ನಂತರ ಶ್ರೀಶೈಲ ಪೀಠಕ್ಕೆ ವಿದ್ವತ್‌ಸಂಪನ್ನರಾದ ಮುದೇನೂರಿನ ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಆಯ್ಕೆಯಾದರು. ಶ್ರೀ ಪಂಚಾಕ್ಷರಿ ಶಿವಾಚಾರ್ಯ ಸ್ವಾಮಿಗಳು ಸಾಲೂರು ಮಠದ ಅಧಿಕಾರವನ್ನು ತಮ್ಮ ಉತ್ತರಾಧಿಕಾರಿಗೆ ವಹಿಸಿಕೊಟ್ಟು ಲಿಂಗೈಕ್ಯರಾಗಿದ್ದಾರೆ.

ಸಾಲೂರು ಹಿರೇಮಠದ ಅಧಿಕಾರ ವಹಿಸಿಕೊಂಡಿದ್ದ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಪರಂಪರಾಗತ ಇತಿಹಾಸ ವುಳ್ಳ ಸಾಲೂರು ಹಿರೇಮಠದ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಸಂದರ್ಭದಲ್ಲಿಯೇ, ಅಸುಂಡಿ ಗ್ರಾಮದಲ್ಲಿ ಹಿಂದಿನ ಹಿರಿಯ ಗುರುಗಳಾದ ಶ್ರೀ ಪಂಚಾಕ್ಷರಿ ಶಿವಾಚಾರ್ಯ ಸ್ವಾಮಿಗಳು ಸ್ಥಾಪಿಸಿದ್ದ ಮಠವನ್ನು ಅಭಿವೃದ್ಧಿಪಡಿಸಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿದರು. ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಎರಡನೆಯ ಶ್ರೀ ಪಂಚಾಕ್ಷರಿ ಶಿವಾಚಾರ್ಯ ಸ್ವಾಮಿಗಳು ಹಾಗೂ ೧೯೯೨ರಲ್ಲಿ ಸಾಲೂರು ಮಠಕ್ಕೆ ಅಧಿಕಾರಕ್ಕೆ ಬಂದ ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು ಅಸುಂಡಿಯ ವಂಶಸ್ಥರೇ ಆಗಿದ್ದು, ಇವರುಗಳು ಈ ಎರಡೂ ಮಠಗಳ ಆಡಳಿತವನ್ನು ನಡೆಸಿಕೊಂಡು ಬರುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಅಸುಂಡಿ, ರಾಣೆಬೆನ್ನೂರು ತಾ, ಹಾವೇರಿ ಜಿಲ್ಲೆ.

ಗುಡ್ಡದಹಾನವೇರಿ

ರಾಣೆಬೆನ್ನೂರು ತಾಲ್ಲೂಕಿನ ಗುಡ್ಡದಹಾನವೇರಿಯು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಎಂಟು ಕಿ.ಮೀ.ದೂರದಲ್ಲಿದೆ. ಶ್ರೀ ಜಂಗಮಠವು ಅಸ್ತಿತ್ವದಲ್ಲಿದೆ.

ಜಂಗಮಮಠ: ಗುಡ್ಡದಹಾನವೇರಿ ಗ್ರಾಮದಲ್ಲಿ ನೂರೈವತ್ತು ವರ್ಷಗಳ ಹಿಂದೆ ಶ್ರೀ ಶಿವಯೋಗೀಶ್ವರ ಸ್ವಾಮಿಗಳು ಸ್ಥಾಪನೆ ಮಾಡಿದ ಜಂಗಮ ಮಠವು, ಗ್ರಾಮದ ಧಾರ್ಮಿಕ ಕೇಂದ್ರ ಬಿಂದುವಾಗಿ ಬೆಳೆದಿದೆ.

ಮಠ ಸ್ಥಾಪನೆ: ಪೂರ್ವಭಾಗದ ಪುರ ಪ್ರವೇಶದ್ವಾರದಲ್ಲಿ ಸ್ಥಾಪನೆಯಾಗಿರುವ ವಿರಕ್ತ ಸಂಪ್ರದಾಯದ ಈ ಮಠವು ಈ ನಾಡಿನಲ್ಲಿ ಧಾರ್ಮಿಕ ಪ್ರಜ್ಞೆಯನ್ನು ಮೂಡಿಸುವಲ್ಲಿ ಯಶಸ್ವಿಯಾಗಿದೆ. ಮಠದ ಕರ್ತೃಗುರುಗಳಾದ ಶ್ರೀ ಶಿವಯೋಗೀಶ್ವರ ಸ್ವಾಮಿಗಳು ವಿದ್ವತ್ ಪುರುಷರಾಗಿ ವೀರಶೈವ ಧರ್ಮದ ಬೆಳವಣಿಗೆಗೆ ಪ್ರಮುಖ ಪಾತ್ರವಹಿಸಿದ್ದರು. ಸಂಚಾರಮೂರ್ತಿಗಳಾದ ಇವರು ಅನೇಕ ಧಾರ್ಮಿಕ ಕ್ಷೇತ್ರಗಳಲ್ಲಿ ಸಂಚರಿಸಿ ಪುಣ್ಯ ಪುರುಷರ ದರ್ಶನ ಪಡೆದು ಹೆಚ್ಚು ಅನುಭವ ಪಡೆದಿದ್ದರು. ಇವರೇ ಗುಡ್ಡದ ಹಾನವೇರಿಯಲ್ಲಿ ನೆಲೆಸಿ ಮಠವನ್ನು ಸ್ಥಾಪನೆ ಮಾಡಿದ್ದಾರೆ.

ದೂರವಾದ ದಾರಿದ್ರ್ಯ: ಶ್ರೀ ಶಿವಯೋಗೀಶ್ವರರು ಮಠವನ್ನು ಸ್ಥಾಪನೆಮಾಡಿ ನಿತ್ಯ ಶಿವಾನುಭವಗೋಷ್ಠಿಯನ್ನು ಏರ್ಪಡಿಸಿ ಜನರಲ್ಲಿ ಧರ್ಮಜಾಗೃತಿಯನ್ನು ಉಂಟುಮಾಡುವಲ್ಲಿ ಯಶಸ್ವಿಯಾಗಿದ್ದರು. ಧಾರ್ಮಿಕ ಚಟುವಟಿಕೆಗಳನ್ನು ನಡೆಸಲು ಅಗತ್ಯಕ್ಕನುಗುಣವಾಗಿ ಕಲ್ಲಿನ ಕಟ್ಟಡವನ್ನು ನಿರ್ಮಿಸಿಕೊಂಡಿದ್ದರು. ಶ್ರೀ ಶಿವಯೋಗೀಶ್ವರ ಸ್ವಾಮಿಗಳು ಈ ಗ್ರಾಮದಲ್ಲಿ ನೆಲೆಸಿದ ಕೆಲವೇ ದಿನಗಳಲ್ಲಿ ಹೆಚ್ಚು ಹೆಸರು ಪಡೆದು ಜನಾನುರಾಗಿಗಳಾಗಿ ಬೆಳೆದಿದ್ದರು. ಗುರುಗಳು ಇಲ್ಲಿಗೆ ಬರುವ ಮುನ್ನ ಅನೀತಿ ಮತ್ತು ದಾರಿದ್ರ್ಯತೆ ತುಂಬಿತ್ತು. ಗುರುಗಳು ಬಂದ ಮೇಲೆ ಗ್ರಾಮದಲ್ಲಿ ನೀತಿ ರೂಪುಗೊಂಡು, ಧರ್ಮ ಪ್ರತಿಷ್ಠಾಪನೆಯಾಗಿ ದಾರಿದ್ರ್ಯತೆ ದೂರವಾಯಿತು ಎಂದು ಇಲ್ಲಿನ ಜನರು ಅಭಿಪ್ರಾಯಿಸುತ್ತಾರೆ.

ಖಾಲಿಉಳಿದಮಠ: ಜಂಗಮ ಮಠದ ಶ್ರೀ ಶಿವಯೋಗೀಶ್ವರ ಸ್ವಾಮಿಗಳು ಭಕ್ತರಲ್ಲಿ ಧಾರ್ಮಿಕಪ್ರಜ್ಞೆಯನ್ನು ಬೆಳೆಸಿ,ಲಿಂಗೈಕ್ಯರಾದ ಮೇಲೆ ಮಠವು ಖಾಲಿ ಉಳಿಯುತ್ತದೆ. ಖಾಲಿ ಉಳಿದ ಮಠದಲ್ಲಿ ಗ್ರಾಮಸ್ಥರು ಲಿಂಗನಾಯ್ಕನಹಳ್ಳಿ ಮಠದ ಗುರುಗಳ ಮಾರ್ಗದರ್ಶನದಲ್ಲಿ ಧಾರ್ಮಿಕಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದರು. ಆದರೆ ಧರ್ಮಗುರುವಿನ ಅನುಪಸ್ಥಿತಿ ಭಕ್ತರ ಮನಸ್ಸಿನಲ್ಲಿ ನೋವನ್ನು ತಂದಿತ್ತು. ಇಲ್ಲಿನ ಭಕ್ತರ ಧಾರ್ಮಿಕ ಪ್ರಜ್ಞೆಯನ್ನು ಗಮನಿಸಿದ ಲಿಂಗನಾಯ್ಕನಹಳ್ಳಿಯ ಶ್ರೀಚನ್ನವೀರ ಗುರುಗಳು, ಭಕ್ತರ ಅಪೇಕ್ಷೆಯ ಮೇರೆಗೆ ೧೯೮೮ರಲ್ಲಿ ಖಾಲಿ ಉಳಿದ ಮಠಕ್ಕೆ ಉತ್ತರಾಧಿಕಾರಿಗಳನ್ನು ನೇಮಕಮಾಡಿದರು.

ಪಟ್ಟಾಧಿಕಾರ: ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನ ಮನ್ನೆರಾಳು ಗ್ರಾಮದ ಶ್ರೀ ಸಂಗಯ್ಯ ಮತ್ತು ಶ್ರೀಮತಿ ವೀರಮ್ಮನವರ ಪುತ್ರರಾಗಿ ೧೯೬೪ರ ಜೂನ್ ಒಂದರಂದು ಜನಿಸಿ, ಕಾಲೇಜು ವಿದ್ಯಾಭ್ಯಾಸವನ್ನು ಮುಗಿಸಿ ಗುಡ್ಡದಹಾನವೇರಿಗೆ ಆಗಮಿಸಿದರು. ಹಿರಿಯ ಗುರುಗಳಾದ ಶ್ರೀ ಶಿವಯೋಗೀಶ್ವರ ಸ್ವಾಮಿಗಳ ಹೆಸರನ್ನೆ ಅಭಿದಾನ ಪಡೆದ ಎರಡನೆಯ ಶ್ರೀ ಶಿವಯೋಗೀಶ್ವರ ಸ್ವಾಮಿಗಳು ಲಿಂಗನಾಯ್ಕನ ಹಳ್ಳಿಯ ಹಿರಿಯ ಗುರುಗಳಾಗಿದ್ದ ಶ್ರೀ ಚನ್ನವೀರ ಸ್ವಾಮಿಗಳಿಂದ ಅನುಗ್ರಹ ಪಡೆದು ಖಾಲಿ ಉಳಿದಿದ್ದ ಮಠದ ಅಧಿಕಾರವನ್ನು ವಹಿಸಿಕೊಂಡರು. ಪ್ರವಚನಕಾರರಾದ ಗುರುಗಳು ನಾಡಿನ ನಾನಾಭಾಗಗಳಲ್ಲಿ ಸಂಚರಿಸಿ ಪುರಾಣ ಪ್ರವಚನಗಳನ್ನು ಮಾಡಿದ್ದಾರೆ. ವಚನ ಸಾಹಿತ್ಯ, ಸಂಗೀತ, ಸಂಸ್ಕೃತವನ್ನು ಅಭ್ಯಾಸಮಾಡಿಕೊಂಡಿರುವ ಗುರುಗಳು ಧಾರ್ಮಿಕ ವಿಚಾರಗಳಲ್ಲಿ ಆಳವಾದ ಅಧ್ಯಯನವನ್ನು ಮಾಡಿದವರಾಗಿದ್ದಾರೆ. ಮಠದ ಶ್ರೇಯಸ್ಸಿಗಾಗಿ ಹಗಲಿರುಳು ಶ್ರಮಿಸಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಹಿರಿಯ ಗುರುಗಳ ಕಾಲದಲ್ಲಿ ಸ್ಥಾಪನೆಯಾಗಿದ್ದ ಕಲ್ಲಿನ ಕಟ್ಟಡವನ್ನು ಅಗತ್ಯತೆಗೆ ತಕ್ಕಂತೆ ನವೀಕರಣಗೊಳಿಸಿಕೊಂಡಿದ್ದು, ೧೯೯೩ ರಲ್ಲಿ ನಾಲ್ಕುಲಕ್ಷರೂಪಾಯಿಗಳ ವೆಚ್ಚದಲ್ಲಿ ಕಲಾಭವನ, ಮೂರು ಲಕ್ಷರೂಪಾಯಿ ಯೋಜನೆಯಲ್ಲಿ ದಾಸೋಹ ಮಂದಿರ ಮತ್ತು ಆವರಣವನ್ನು ನಿರ್ಮಿಸಿದ್ದಾರೆ. ಈ ರೀತಿ ಪಟ್ಟಾಧಿಕಾರ ಆದಂದಿನಿಂದ ಯೋಜನೆಗಳನ್ನು ಹಮ್ಮಿಕೊಂಡು ಹಂತಹಂತವಾಗಿ ಪೂರೈಸಿಕೊಂಡು ಬರುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಕರ್ತೃಗದ್ದುಗೆಗೆ ನಿತ್ಯಪೂಜೆ, ಕಾರ್ತೀಕದಲ್ಲಿ ದೀಪೋತ್ಸವ ಕಾರ್ಯಕ್ರಮದ ಜತೆಗೆ ಸಂಗೀತ ಕಾರ್ಯಕ್ರಮ, ಮಕ್ಕಳ ಮನರಂಜನೆಗಾಗಿ ಗ್ರಾಮಾಂತರ ಕಲಾವಿದರಿಂದ ಕೋಲಾಟ, ಗೀಗೀಪದ ಹಾಗೂ ಸೋಬಾನೆ ಪದಗಳನ್ನು ಹೇಳಿಸಲಾಗುತ್ತಿದೆ. ಅಲ್ಲದೆ ಲಿಂಗೈಕ್ಯ ಹಿರಿಯ ಗುರುಗಳ ಸ್ಮರಣೋತ್ಸವ ಕಾರ್ಯಕ್ರಮವನ್ನು ಶಿವರಾತ್ರಿ,

ಬಸವ ಜಯಂತಿಯಲ್ಲಿ ಹದಿನೈದು ದಿನ ಪುರಾಣ ಪ್ರವಚನವನ್ನು ಏರ್ಪಡಿಸಲಾಗತ್ತಿದೆ. ಶಿವದೀಕ್ಷಾ ಕಾರ್ಯಕ್ರಮ, ಜಾತಿ ಭೇದವಿಲ್ಲದೆ ಸಾಮೂಹಿಕ ವಿವಾಹವನ್ನು ಈ ಸಂದರ್ಭದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ. ಪಂಕ್ತಿಭೇದವಿಲ್ಲದೆ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಬಸವಜಯಂತಿ ಅಂಗವಾಗಿ ನಿರಂತರವಾಗಿ ನಡೆಯುವ ಕಾರ್ಯಕ್ರಮದ ಕೊನೆಯ ದಿನ ಧಾರ್ಮಿಕಸಭೆಯನ್ನು ಏರ್ಪಡಿಸಿ ಸಮಾಜದ ವಿವಿಧ ಗಣ್ಯರಿಗೆ ಸನ್ಮಾನ, ವಿವಿಧ ವಿದ್ವಾಂಸರು ಹಾಗೂ ಧರ್ಮಗುರುಗಳಿಂದ ಉಪನ್ಯಾಸ ಕಾರ್ಯ ಕ್ರಮಗಳನ್ನು ಏರ್ಪಡಿಸಲಾಗುತ್ತದೆ.

ವಿಳಾಸ: ಶ್ರೀ ಮ.ನಿ.ಪ್ರ.ಶಿವಯೋಗೀಶ್ವರ ಸ್ವಾಮಿಗಳು, ಶ್ರೀ ಜಂಗಮಮಠ, ಗುಡ್ಡದಹಾನವೇರಿ, ರಾಣೆಬೆನ್ನೂರು ತಾ, ಹಾವೇರಿಜಿಲ್ಲೆ.

ಚೌಡಯ್ಯ ದಾನಪುರ

ರಾಣೆಬೆನ್ನೂರು ತಾಲ್ಲೂಕಿನ ಚೌಡಯ್ಯದಾನಪುರವು ತಾಲ್ಲೂಕು ಕೇಂದ್ರದ ಉತ್ತರ ಭಾಗಕ್ಕೆ ಇಪ್ಪತ್ತಮೂರು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ಒಡೆಯರ್ ಸಂಸ್ಥಾನಮಠವು ಅಸ್ತಿತ್ವದಲ್ಲಿದೆ.

ಒಡೆಯರ್ ಸಂಸ್ಥಾನಮಠ: ಚೌಡಯ್ಯದಾನಪುರ ಗ್ರಾಮದ ದಕ್ಷಿಣಭಾಗದಲ್ಲಿ ಸ್ಥಾಪನೆಯಾಗಿರುವ, ಕಾಶಿ ಪೀಠದ ಶಾಖಾ ಮಠವಾದ ಒಡೆಯರ್ ಸಂಸ್ಥಾನಮಠವು ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದು ಬಂದಿದೆ. ಪ್ರಾರಂಭದಲ್ಲಿ ಸಂಸ್ಥಾನಾಧೀಶ್ವರರ ಆಶ್ರಯದಲ್ಲಿ ಬೆಳೆದ ಕಾರಣಕ್ಕೆ 'ಶ್ರೀ ಒಡೆಯರ್ ಸಂಸ್ಥಾನಮಠ ' ಎಂದು ಹೆಸರು ಬಂದಿದೆ.

ಮಠಸ್ಥಾಪನೆ: ಕ್ರಿ.ಶ.೧೨೧೫ರಲ್ಲಿ ಶ್ರೀ ಶಿವದೇವ ಮುನಿಗಳು ಲೋಕಸಂಚಾರ ಮಾಡುತ್ತಾ ಭರತಖಂಡವನ್ನೆಲ್ಲ ಸುತ್ತಿ ಓರಾಂಗಲ್ ಪ್ರದೇಶದಿಂದ ಚೌಡಯ್ಯದಾನಪುರಕ್ಕೆ ಬಂದು, ಗ್ರಾಮದ ದಕ್ಷಿಣಭಾಗದ ನಿರ್ಜನಪ್ರದೇಶದಲ್ಲಿ ದೀರ್ಘ ಅನುಷ್ಠಾನಕ್ಕೆ ಕುಳಿತುಕೊಳ್ಳುತ್ತಾರೆ. ಕಾಲಾನಂತರ ಈ ಗ್ರಾಮದ ಭಕ್ತರು ಗುರುಗಳನ್ನು ಗುರುತಿಸಿ ಮಠವನ್ನು ನಿರ್ಮಿಸಿಕೊಡುತ್ತಾರೆ. ತಪೋನಿಷ್ಠರೂ, ಶಿವಯೋಗಿಗಳೂ ಆದ ಶ್ರೀ ಶಿವದೇವ ಮುನಿಗಳು ಅನೇಕ ಪವಾಡಗಳನ್ನು ಮಾಡಿ ಈ ಪ್ರಾಂತ್ಯದಲ್ಲಿ ಹೆಚ್ಚು ಹೆಸರುವಾಸಿಯಾಗಿದ್ದರು. ಗುಪ್ತರ ಸಾಮಂತ ರಾಜರಾದ ಗುತ್ತಲದ ಅರಸರು ಗುರುಗಳ ಪ್ರಭಾವಕ್ಕೆ ಮಣಿದು, ಮಠಕ್ಕೆ ಅನೇಕ ದತ್ತಿ ಕಾಣಿಕೆಗಳನ್ನು ನೀಡಿ ಸಂಸ್ಥಾನ ಮಠವೆಂದು ಮನ್ನಣೆಯನ್ನು ಕೊಟ್ಟಿದ್ದರು.

ಪರಂಪರೆ:

೧. ಷ.ಬ್ರ.ಶ್ರೀ ಶಿವದೇವಮುನಿ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಗೋಮುನಿ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಅನ್ನದಾನಿ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ವೀರರಾಜ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ವಿರೂಪಾಕ್ಷ ಶಿವಾಚಾರ್ಯಒಡೆಯರ್
೭. ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯಒಡೆಯರ್ (ಈಗಿನವರು)

ಈರೀತಿ ಮಠದ ಪರಂಪರೆಯು ಬೆಳೆದು ಬಂದಿದ್ದು, ಕರ್ತೃಗುರುಗಳಾದ ಶ್ರೀ ಶಿವದೇವ ಮುನಿಗಳ ಪ್ರಭಾವವನ್ನು ಉಳಿಸಿ ಬೆಳೆಸಿಕೊಂಡು ಬರುವಂತಹ ಉತ್ತರಾಧಿಕಾರಿಗಳು ಈ ಮಠದಲ್ಲಿ ಅಧಿಕಾರವನ್ನು ನಡೆಸಿದ್ದಾರೆ. ಪರಂಪರೆಯ ಎರಡನೆಯ ಗುರುಗಳಾದ ಶ್ರೀ ಗೋಮುನಿ ಶಿವಾಚಾರ್ಯ ಸ್ವಾಮಿಗಳು ಹೊನ್ನತ್ತಿಯ ಹೊನ್ನಮ್ಮನಿಗೆ ಲಿಂಗಧಾರಣೆ ಮಾಡಿ ಸಂಸ್ಕಾರ ನೀಡಿ ಹೊನ್ನಮ್ಮದೇವಿಯಾಗಿ ರೂಪಗೊಳ್ಳಲು ಕಾರಣಕರ್ತರಾಗಿದ್ದರೆಂದು ಹೇಳುವ ಜನಪದ ಕಥೆ ಕೇಳಿಬರುತ್ತಿದೆ.ನಂತರ ಬಂದ ಗುರುಗಳ ವಿವರಗಳ ಬಗ್ಗೆ ಮಠದಲ್ಲಿ ಯಾವುದೇಮಾಹಿತಿ ಲಭ್ಯವಿಲ್ಲ. ಹಿಂದಿನ ಹಿರಿಯ ಗುರುಗಳಾದ ಶ್ರೀ ವಿರೂಪಾಕ್ಷ ಶಿವಾಚಾರ್ಯ ಒಡೆಯರ್ ಅವರು ಮಧ್ಯ ಪ್ರದೇಶದ ಇಂದೂರಿನಲ್ಲಿ ಸ್ಥಾಪನೆಯಾಗಿದ್ದ ಮಠವನ್ನು ೧೯೫೪ರಲ್ಲಿ ಅಭಿವೃದ್ಧಿ ಪಡಿಸಿ,ಅಲ್ಲಿಯೇ ನೆಲೆಸಿ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದರು. ಜೊತೆಗೆ ಇಲ್ಲಿನ ಈ ಮಠದ ಆಡಳಿತವನ್ನೂ ಸಹ ನೋಡಿಕೊಂಡು ಬರುತ್ತಿದ್ದರು. ಇವರು ಲಿಂಗೈಕ್ಯರಾದ ನಂತರ ಶ್ರೀ ಚಂದ್ರಶೇಖರ ಶಿವಾಚಾರ್ಯ ಒಡೆಯರು ೧೯೮೪ರಲ್ಲಿ

ಪಟ್ಟಾಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸತೊಡಗಿದ್ದಾರೆ. ಗೋಮುನಿ ಒಡೆಯರ್ ಮತ್ತು ಸುವರ್ಣಮ್ಮನವರ ಮಗನಾಗಿ ೧೯೬೪ರ ಜೂನ್ ಏಳರಂದು ಜನಿಸಿದ ಶ್ರೀ ಚಂದ್ರಶೇಖರ ಒಡೆಯರು ಹರಿಹರ,ಶಿವಯೋಗ ಮಂದಿರದಲ್ಲಿ ಆಶ್ರಯ ಪಡೆದು ಆರು ವರ್ಷಗಳ ಕಾಲ ಸಂಸ್ಕೃತ, ವೇದಾಧ್ಯಯನ ಮಾಡಿಕೊಂಡು ಮಠಕ್ಕೆ ಆಗಮಿಸಿದರು. ೧೯೮೪ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡ ಗುರುಗಳು ಪುನಃ ಕಾಲೇಜು ಶಿಕ್ಷಣಕ್ಕಾಗಿ ಗದಗಕ್ಕೆ ಆಗಮಿಸಿ ೧೯೯೦ರಲ್ಲಿ ಪದವಿ ಶಿಕ್ಷಣವನ್ನು ಮುಗಿಸಿ ಮಠಕ್ಕೆ ಆಗಮಿಸಿ ಪೂರ್ಣ ಅಧಿಕಾರವನ್ನು ವಹಿಸಿಕೊಂಡರು.

ಧಾರ್ಮಿಕ ಕಾರ್ಯಗಳು: ನಿತ್ಯ ಗದ್ದುಗೆಗಳಿಗೆ ಪೂಜೆ, ಶ್ರಾವಣ ಮತ್ತು ಕಾರ್ತೀಕ ಮಾಸಗಳಲ್ಲಿ ವಿಶೇಷ ಪೂಜೆ, ಸಂಕ್ರಮಣದಲ್ಲಿ ಹಿರಿಯ ಗುರುಗಳ ಆರಾಧನೆಯ ಅಂಗವಾಗಿ ತಿಂಗಳು ಪೂರ್ತಿ ಪುರಾಣಪ್ರವಚನವನ್ನು ಮಾಡಲಾಗುತ್ತಿದೆ. ಈ ವಿಶೇಷ ಕಾರ್ಯಸಂದರ್ಭಗಳಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಚಂದ್ರಶೇಖರ ಶಿವಾಚಾರ್ಯಒಡೆಯರು, ಶ್ರೀ ಒಡೆಯರ್ ಸಂಸ್ಥಾನ ಮಠ, ಚೌಡಯ್ಯದಾನಪುರ, ರಾಣೆಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆ.

ಮಣಕೂರು

ರಾಣೆಬೆನ್ನೂರು ತಾಲ್ಲೂಕಿನ ಮಣಕೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಹದಿನಾರು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಹಾಲುಸ್ವಾಮಿ ಮಠವು ಅಸ್ತಿತ್ವದಲ್ಲಿದೆ.

ಹಾಲುಸ್ವಾಮಿಮಠ: ಮಣಕೂರು ಗ್ರಾಮದಲ್ಲಿ ಶ್ರೀಶೈಲ ಪೀಠದ ಶಾಖಾಮಠವಾದ ಹಾಲುಸ್ವಾಮಿ ಮಠವು ಪುರಾತನ ಕಾಲದಲ್ಲಿ ಅಸ್ತಿತ್ವ ಗೊಂಡು ಈ ತನಕ ಬೆಳೆದು ಬಂದಿದೆ. ಗೋವಿನಕೊವಿಯ ಹಾಲುಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟ ಈಮಠವು ಕರ್ತೃಗುರುಗಳ ನಂತರ ಖಾಲಿ ಉಳಿದಿದ್ದು, ಶ್ರೀ ಬಸವರಾಜಶಿವಾಚಾರ್ಯ ಸ್ವಾಮಿಗಳಿಂದ ಪುನಃ ಸ್ಥಾಪನೆಗೊಂಡು ಬೆಳೆದಿದೆ. ಗುರುಗಳಾದ ಶ್ರೀ ಬಸವರಾಜ ಶಿವಾಚಾರ್ಯಸ್ವಾಮಿಗಳು ಅಧ್ಯಾತ್ಮ ಚಿಂತನೆಯಿಂದ ಲೋಕಸಂಚಾರ ಮಾಡಿ ಅನೇಕ ಗುರುಗಳ ಜತೆಗೆ ವೀರಶೈವಧರ್ಮದ ಬಗ್ಗೆ ಚರ್ಚಿಸಿ, ಅಪಾರ ಅನುಭವವನ್ನು ಸಂಪಾದಿಸಿಕೊಂಡು ಬಂದು ಮಣಕೂರು ಗ್ರಾಮದಲ್ಲಿ ನೆಲೆನಿಂತರು. ಗುರುಗಳು ಲೋಕಸಂಚಾರದಲ್ಲಿದ್ದಾಗ ಅನೇಕ ಕಡೆ ಮಠಗಳನ್ನು ಸ್ಥಾಪಿಸಿ ವೀರಶೈವ ಧರ್ಮವು ಬೆಳೆಯುವಂತೆ ಮಾಡಿದ್ದರು. ಇದೇ ರೀತಿ ಮಣಕೂರಿನಲ್ಲಿಯೂ ತಮ್ಮ ಮೂಲಮಠದ ಅಸ್ತಿತ್ವವನ್ನು ಪುನರ್‌ಸ್ಥಾಪಿಸಿ, ಧಾರ್ಮಿಕ ಕಾರ್ಯಗಳು ನಡೆಯುವಂತೆ ಮಾಡಿ ಇಲ್ಲಿಗೆ ಸಮೀಪದ ಇಟಗಿ ಗ್ರಾಮಕ್ಕೆ ಹೋಗಿ ತಾವೇ ಸ್ಥಾಪಿಸಿದ ಮಠದಲ್ಲಿ ಲಿಂಗೈಕ್ಯರಾಗುತ್ತಾರೆ. ಅಪಾರ ಭಕ್ತ ಸಂಪತ್ತನ್ನು ಹೊಂದಿದ್ದ ಕಾರಣ ಇಟಗಿಯಲ್ಲಿ ಸಮಾಧಿಯನ್ನು ನಿರ್ಮಿಸಲಾಯಿತು. ಇಂದಿಗೂ ಇಟಗಿಯಲ್ಲಿ ಶ್ರೀ ಬಸವರಾಜ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಯು ಜಾಗೃತ ಸ್ಥಳವಾಗಿ ಅಪಾರ ಭಕ್ತರಿಂದ ಪೂಜ್ಯತೆಗೆ ಒಳಗಾಗಿದೆ.

ಖಾಲಿಉಳಿದ ಮಠ: ಶ್ರೀ ಬಸವರಾಜ ಶಿವಾಚಾರ್ಯಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಮಣಕೂರಿನ ಮಠವು ಉತ್ತರಾಧಿಕಾರಿಗಳಿಲ್ಲದೆ ಖಾಲಿ ಉಳಿಯುತ್ತದೆ. ಪುತ್ರವರ್ಗದ ಪರಂಪರೆಯ ಈ ಮಠ ಸಮರ್ಥ ಉತ್ತರಾಧಿಕಾರಿಗಳಿಲ್ಲದೆ ಸುಮಾರು ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಖಾಲಿ ಉಳಿದಿದ್ದ ಈ ಮಠಕ್ಕೆ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ೧೯೯೨ರಲ್ಲಿ ಅಧಿಕಾರವನ್ನು ವಹಿಸಿಕೊಂಡಿದ್ದಾರೆ.

ಉತ್ತರಾಧಿಕಾರಿ: ಮಣಕೂರಿನ ಶ್ರೀ ಹಾಲಯ್ಯ ಮತ್ತು ಶ್ರೀಮತಿ ಕೊಟ್ಟೂರಮ್ಮನವರ ಪುತ್ರರಾಗಿ ೧೯೬೫ರ ಡಿಸೆಂಬರ್ ಹದಿನೆಂಟರಂದು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಜನಿಸಿದರು. ಜನಿಸಿದ ಎಂಟು ವರ್ಷಗಳಲ್ಲಿ ಮಠದ ಉತ್ತರಾಧಿಕಾರಿಗಳೆಂದು ನೇಮಕಗೊಂಡರು. ತಮ್ಮ ಪ್ರಾಥಮಿಕ ಶಿಕ್ಷಣವನ್ನು ಮಣಕೂರಿನಲ್ಲಿ ಮುಗಿಸಿ, ಹೊನ್ನಾಳಿಯ ಹಿರೇಕಲ್ಮಠದಲ್ಲಿ ಪ್ರೌಢಶಿಕ್ಷಣವನ್ನು ಮುಗಿಸಿದ್ದಲ್ಲದೆ ಸಂಸ್ಕೃತ, ಜ್ಯೋತಿಷ್ಯ ಮತ್ತು ವೇದಾಧ್ಯಯನವನ್ನು ಮುಗಿಸಿದರು. ಹೊನ್ನಾಳಿಯ ಶ್ರೀ ಚಂದ್ರಶೇಖರ ಶಿವಾಚಾರ್ಯ ಒಡೆಯರ ಕೃಪಾಶೀರ್ವಾದದಿಂದ ಬೆಳೆದು ೧೯೯೨ರ ಫೆಬ್ರವರಿ ಹದಿನೈದರಂದು ಪಟ್ಟಾಧಿಕಾರವನ್ನು ವಹಿಸಿಕೊಂಡರು.

ಅಭಿವೃದ್ಧಿ ಕಾರ್ಯಗಳು: ಪುರಾತನ ಮಠದ ಕಟ್ಟಡವು ಮಣಕೂರು ಗ್ರಾಮದ ಮಧ್ಯಭಾಗದಲ್ಲಿದ್ದು ಮೂಲ ಕಟ್ಟಡ ಶಿಥಿಲಗೊಂಡ ಕಾರಣ ಮಠದ ಕಟ್ಟಡವನ್ನು ೧೯೯೯ರಲ್ಲಿ ಗ್ರಾಮದ ಹೊರಭಾಗದಲ್ಲಿ ನಿರ್ಮಿಸಲಾಗಿದೆ. ನೂತನವಾಗಿ ನಿರ್ಮಿಸಲಾದ ಮಠದಲ್ಲಿ ಗೋವಿನಕೋವಿ ಹಾಲುಸ್ವಾಮಿಗಳ ತೋರುಗದ್ದುಗೆಯನ್ನು ನಿರ್ಮಿಸಲಾಗಿದೆ. ಕ್ರಿಯಾಶೀಲ ಗುಣಗಳನ್ನು ಮೈಗೂಡಿಸಿಕೊಂಡಿರುವ ಗುರುಗಳು ಸಂಚಾರಮೂರ್ತಿಯಾಗಿ ಭಕ್ತರನ್ನು ಸಂಘಟಿಸುತ್ತ, ಧರ್ಮಪ್ರಚಾರವನ್ನು ಮಾಡುವುದರ ಜತೆಗೆ ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ನಾಡಿನ ಅನೇಕ ಭಾಗಗಳಲ್ಲಿರುವ ಶಾಖಾಮಠಗಳನ್ನು ಗುರುತಿಸಿ ಅನ್ಯರ ಪಾಲಾಗಿರುವ ಮಠ ಮತ್ತು ಮಠದ ಆಸ್ತಿಯನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವ ಪ್ರಯತ್ನವನ್ನು ನಡೆಸಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಣಕೂರು ಗ್ರಾಮದ ಮಧ್ಯಭಾಗದ ಮೂಲಮಠದಲ್ಲಿರುವ ಗದ್ದುಗೆಗೆ ಮತ್ತು ನೂತನ ಕಟ್ಟಡದಲ್ಲಿ ಸ್ಥಾಪನೆಗೊಂಡ ತೋರುಗದ್ದುಗೆಗೆ ನಿತ್ಯಪೂಜೆಗೆ ವ್ಯವಸ್ಥೆಗೊಳಿಸಲಾಗಿದೆ. ಶ್ರಾವಣ,ಅಮಾವಾಸ್ಯೆ ಮತ್ತು ಹುಣ್ಣಿಮೆಯಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತದೆ. ಬೆಸಕನ ಅಮಾವಾಸ್ಯೆಯಂದು ಕುಂಬಾಭಿಷೇಕ, ಶಿವದೀಕ್ಷೆಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಅಲ್ಲದೆ ಧಾರ್ಮಿಕ ಸಭೆಯನ್ನು ಏರ್ಪಡಿಸಿ ವಿವಿಧ ಮಠಾಧೀಶರನ್ನು ಕರೆಸಿ ಉಪದೇಶವನ್ನು ಕೊಡಿಸಲಾಗುತ್ತಿದೆ. ಅಂದು ಸೇರುವ ಸಾವಿರಾರು ಜನ ಭಕ್ತರಿಗೆ ಅನ್ನದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.

ವಿಳಾಸ:ಷ.ಬ್ರ.ಶ್ರೀಮಲ್ಲಿಕಾರ್ಜುನಶಿವಾಚಾರ್ಯಸ್ವಾಮಿಗಳು,ಶ್ರೀಹಾಲುಸ್ವಾಮಿಮಠ,ಮಣಕೂರು,ರಾಣೆಬೆನ್ನೂರು ತಾ,ಹಾವೇರಿಜಿಲ್ಲೆ.

ಮುದೇನೂರು

ರಾಣೆಬೆನ್ನೂರು ತಾಲ್ಲೂಕಿನ ಮುದೇನೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಹದಿನಾಲ್ಕು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಮುದೇನೂರು ಗ್ರಾಮದ ಹೊರಭಾಗದ ತುಂಗಭದ್ರಾ ನದಿಯ ದಡದಲ್ಲಿ ಸ್ಥಾಪನೆಗೊಂಡಿರುವ ಹಿರೇಮಠವು ಶ್ರೀಶೈಲ ಪೀಠದ ಶಾಖಾಮಠವಾಗಿ ಪುತ್ರವರ್ಗದ ಪರಂಪರೆಯಲ್ಲಿ ಬೆಳೆದಿದೆ. ಪ್ರಾಚೀನ ಪರಂಪರೆಯನ್ನು ಹೊಂದಿರುವ ಈ ಮಠವು ಸ್ಥಾಪನೆಗೊಂಡ ಕಾಲಮಾನದ ಬಗ್ಗೆ ನಿಖರವಾದ ಆಧಾರಗಳು ಲಭ್ಯವಿಲ್ಲ. ಆದರೆ ಈ ಮಠದ ಪರಂಪರೆ,ಆಧ್ಯಾತ್ಮ ಶ್ರೀಮಂತಿಕೆಯನ್ನು ಗುರುತಿಸಿ ಈ ಮಠದ ಪಟ್ಟಾಧಿಕಾರಿಗಳಾದ್ದ ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳನ್ನು ಶ್ರೀಶೈಲ ಪೀಠದ ಜಗದ್ಗುರುಗಳಾಗಿ ಆಯ್ಕೆಮಾಡಿ ಪಟ್ಟಾಧಿಕಾರ ಮಾಡಿರುವುದನ್ನು ಇಲ್ಲಿ ಸ್ಮರಿಸಬೇಕಾಗಿದೆ. ೧೯೪೦ರ ಜುಲೈ ಏಳರಂದು ಶ್ರೀಶೈಲ ಪೀಠದ ಜಗದ್ಗುರುಗಳಾಗಿ ಪಟ್ಟಾಧಿಕಾರವನ್ನು ವಹಿಸಿಕೊಂಡು ಪೀಠದ ಸಕಲ ವಿಧದ ಗೌರವಗಳೊಂದಿಗೆ ಆಡಳಿತವನ್ನು ವಹಿಸಿಕೊಂಡು ಜಗತ್ಪ್ರಸಿದ್ಧಿಯಾಗಿ, ಧರ್ಮದ ಗುರು-ವಿರಕ್ತ ಎಂಬ ಭೇದವನ್ನು ಅಳಿಸಲು ಬಹಳವಾಗಿ ಶ್ರಮಿಸಿ ಲೋಕೊದ್ಧಾರಕ ಬಸವಣ್ಣ, ಮರುಳಸಿದ್ಧಾಂಕ ಹಾಗೂ ಇತರೆ ಅನೇಕ ಕೃತಿಗಳನ್ನು ರಚಿಸಿ ವೀರಶೈವ ಧರ್ಮದ ಬೆಳವಣಿಗೆಯ ಸಾಕಾರ ಮೂರ್ತಿಯಾಗಿದ್ದಾರೆ. ಇಂತಹ ಮಹಾನ್ ಗುರುಗಳನ್ನು ನಾಡಿಗೆ ನೀಡಿದ ಕೀರ್ತಿ ಮುದೇನೂರು ಹಿರೇಮಠಕ್ಕೆ ಸಲ್ಲುತ್ತದೆ.

ಕೈಗೂಡಿದ ಕಾರ್ಯ: ಶ್ರೀ ವಾಗೀಶ ಪಂಡಿತಾರಾಧ್ಯ ಸ್ವಾಮಿಗಳ ತರುವಾಯ ಮಠದ ಉಸ್ತುವಾರಿಯನ್ನು ಶ್ರೀ ಗುರುಸಿದ್ಧ ಸ್ವಾಮಿಗಳು, ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು, ಹಾಗೂ ಶ್ರೀ ಪಂಡಿತಾರಾಧ್ಯ ಸ್ವಾಮಿಗಳು ಮಠದ ಪೂಜಾಕಾರ್ಯಗಳನ್ನು ನೋಡಿಕೊಂಡು ಬರುತ್ತಿದ್ದರು. ಆದರೆ ಪಟ್ಟಾಧಿಕಾರಿಗಳನ್ನು ನೇಮಿಸಬೇಕೆಂದು ಹಲವು ಪ್ರಯತ್ನಗಳು ನಡೆದರೂ ಫಲಕಾರಿಯಾಗಿರಲಿಲ್ಲ. ಜಗದ್ಗುರು ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ತಮ್ಮ ನಂತರ ಮುದೇನೂರು ಹಿರೇಮಠವು ಖಾಲಿ ಉಳಿದಿದ್ದನ್ನು ನೋಡಿ ವ್ಯಥೆಪಟ್ಟಿದ್ದರು. ತಮ್ಮ ಸಹೋದರ ಸಂಬಂಧಿಯಾದ ಮಲ್ಲಿಕಾರ್ಜುನ ಸ್ವಾಮಿಯವರನ್ನು ಮದುವೆಯಾದ ರತ್ನಮ್ಮನವರು ತಮ್ಮ ತವರುಮನೆಯಲ್ಲಿ ಇದ್ದಾಗ, ಶ್ರೀಶೈಲದಿಂದ ಆಗಮಿಸಿದ ಶ್ರೀ ವಾಗೀಶ ಪಂಡಿತಾರಾಧ್ಯ ಸ್ವಾಮಿಗಳು ನಿಮಗೆ ಜನಿಸುವ ಹಿರಿಯ ಮಗನನ್ನು ಮಠದ ಉತ್ತರಾಧಿಕಾರಿಗಳನ್ನಾಗಿ ನೇಮಿಸಿ, ಪರಂಪರೆಯ ಮಠ ಬೆಳೆಯುವಂತೆ ಮಾಡ ಬೇಕೆಂದು ರತ್ನಮ್ಮನವರಿಂದ ವಾಗ್ದಾನ ಪಡೆದುಕೊಂಡಿದ್ದರು. ಅಂದು ಗುರುಗಳಿಗೆ ಕೊಟ್ಟ

ಮಾತು ೧೯೯೨ ರಂದು ಕೈಗೂಡಿದ್ದು ಎಲ್ಲರಿಗೂ ನೆಮ್ಮದಿಯನ್ನು ತಂದಿದೆ.

ಉತ್ತರಾಧಿಕಾರಿಯ ನೇಮಕ: ಮುದೇನೂರಿನ ಶ್ರೀ ಮಲ್ಲಿಕಾರ್ಜುನಸ್ವಾಮಿ ಮತ್ತು ಶ್ರೀಮತಿ ರತ್ನಮ್ಮನವರ ಮೊದಲ ಪುತ್ರರಾಗಿ ೧೯೭೭ರಲ್ಲಿ ಶ್ರೀ ಮಹಾಂತ ದೇವರು ಜನಿಸಿದರು. ಮುದೇನೂರು ಮತ್ತು ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡಿದ ಶ್ರೀ ಮಹಾಂತದೇವರು ಶ್ರೀ ಮಹಾಂತರಾಜೇಂದ್ರ ಶಿವಾಚಾರ್ಯ ಸ್ವಾಮಿಗಳೆಂದು ಅಭಿದಾನ ಪಡೆದು ೧೯೯೨ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡು, ಮಹಾತಪೋನಿಧಿ ಮತ್ತು ಜ್ಞಾನನಿಧಿಯಾಗಿದ್ದ ಜಗದ್ಗುರು ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳ ಅಭಿಲಾಷೆಯನ್ನು ಪೂರೈಸಿದರು.

ಮುಂದುವರೆದ ಕಲಿಕೆ: ಶ್ರೀ ಮಹಾಂತ ರಾಜೇಂದ್ರ ಶಿವಾಚಾರ್ಯ ಸ್ವಾಮಿಗಳು ಮುದೇನೂರು ಹಿರೇಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ಮೈಸೂರಿನಲ್ಲಿ ಕಾಲೇಜು ಶಿಕ್ಷಣವನ್ನು ಮುಂದುವರೆಸಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ಈಗ ಪಿಎಚ್.ಡಿ ಮಾಡುತ್ತಿದ್ದಾರೆ. ಉನ್ನತ ಶಿಕ್ಷಣದೊಂದಿಗೆ ಮನೆತನದ ಸುಸಂಸ್ಕೃತ ನಡೆವಳಿಕೆಗಳು ಸಮ್ಮಿಳನಗೊಂಡು ಆಚಾರವಂತ ಗುರುವಾಗಿ ರೂಪುಗೊಂಡಿದ್ದಾರೆ.

ಧಾರ್ಮಿಕ ಕೆಲಸಗಳು: ನಿತ್ಯ ಗದ್ದುಗೆಗಳ ಪೂಜೆ, ಭಕ್ತರ ಮನೆಯಲ್ಲಿ ನಡೆಯುವ ಧಾರ್ಮಿಕ ಕ್ರಿಯಾದಿಗಳಲ್ಲಿ ಪಾಲ್ಗೊಳ್ಳುವುದು ವಾಡಿಕೆಯ ಕೆಲಸಗಳಾಗಿವೆ. ಶ್ರಾವಣ ಮತ್ತು ಧನುರ್ಮಾಸಗಳಲ್ಲಿ ನಿತ್ಯ ರುದ್ರಾಭಿಷೇಕವನ್ನು ಮಾಡಲಾಗುತ್ತಿದೆ. ಸಂಕ್ರಾಂತಿಯಂದು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ನಾಡಿನ ವಿವಿಧ ಮಠಾಧೀಶರು ಹಾಗೂ ವಿದ್ವಾಂಸರಿಂದ ಧರ್ಮಬೋಧನೆಯನ್ನು ಮಾಡಿಸಲಾಗುತ್ತಿದೆ.

ವಿಳಾಸ:ಷ.ಬ್ರ.ಶ್ರೀ ಮಹಾಂತರಾಜೇಂದ್ರ ಶಿವಾಚಾರ್ಯಸ್ವಾಮಿಗಳು,ಶ್ರೀಹಿರೇಮಠ,ಮುದೇನೂರು,ರಾಣೆಬೆನ್ನೂರು ತಾ, ಹಾವೇರಿಜಿಲ್ಲೆ.

ರಾಣೆಬೆನ್ನೂರು

ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ಕೇಂದ್ರ ಸ್ಥಳ. ಜಿಲ್ಲಾ ಕೇಂದ್ರದಿಂದ ಆಗ್ನೇಯ ದಿಕ್ಕಿಗೆ ಐವತ್ತು ಕಿ.ಮೀ. ದೂರದಲ್ಲಿದೆ. ವ್ಯಾಪಾರದ ಕೇಂದ್ರ ಸ್ಥಳವಾದ ರಾಣೆಬೆನ್ನೂರು ಧಾರ್ಮಿಕವಾಗಿ ಹೆಚ್ಚು ಹೆಸರು ಮಾಡಿದೆ.ಈ ಪಟ್ಟಣದಲ್ಲಿ ಪುರಾತನ ಕಾಲದಲ್ಲಿ ನೂರೊಂದು ಮಠಗಳು ಸ್ಥಾಪನೆಯಾಗಿವೆ ಎಂಬ ಮಾಹಿತಿ ದೊರೆಯುತ್ತಿದೆ. ಈ ಮಾಹಿತಿಯ ಆಧಾರದ ಮೇಲೆ ಮಠಗಳ ಶೋಧನೆಗೆ ಹೋದಾಗ ಮೂವತ್ತು ಮಠಗಳ ಅಸ್ತಿತ್ವ ದೊರೆಯುತ್ತದೆ. ಉಳಿದ ಮಠಗಳು ಗುರುತಿಸಲಾಗದ ಸ್ಥಿತಿಯನ್ನು ತಲುಪಿರುವುದಲ್ಲದೆ, ಈ ಮಠಗಳ ಹೆಸರು ಜನರ ಮನದಾಳದಿಂದ ದೂರವಾಗಿವೆ.

ರಾಣೆಬೆನ್ನೂರು ಪಟ್ಟಣದಲ್ಲಿರುವ ಮಠಗಳ ಹೆಸರುಗಳು

೧. ಪುಟ್ಟಯ್ಯನ ಮಠ	೨. ಮೂಡಲ ಮಠ	೩. ಕುರುಬಗೇರಿ ಮಠ
೪. ನೂರೊಂದುದೇವರ ಮಠ	೫. ರೇಣುಕಮಂದಿರ	೬. ಕೊಟ್ರಯ್ಯನ ಮಠ (ಸಂಗಪ್ಪಜ್ಜನಮಠ)
೭. ಹೊಸಮಠ	೮. ಮಳೆಮಠ	೯. ಹಿಟ್ಟಿನಯ್ಯನವರ ಮಠ
೧೦. ಶಾಂತಬಸಪ್ಪನವರ ಮಠ	೧೧. ಶೆಟ್ಟರಗುರುವಿನ ಮಠ	೧೨. ಹುಲಿಕಂತೆ ಮಠ
೧೩. ಹಿರೇಮಠ	೧೪. ಅಕ್ಕಿಮಠ	೧೫. ಹಾಲುಸ್ವಾಮಿ ಮಠ
೧೬. ಗುರುಪಾದದೇವರ ಮಠ	೧೭. ಅಂದೇಲಿ ಮಠ	೧೮. ಫಕೀರಸ್ವಾಮಿ ಮಠ
೧೯. ಮೃತ್ಯುಂಜಯ ಮಠ	೨೦. ಅಜ್ಜೋಡಿ ಮಠ	೨೧. ಒಡೆಯರ್ ಮಠ
೨೨. ಚಪ್ಪದರಹಳ್ಳಿ ಮಠ	೨೩. ಹನುಕೋಡಿ ಮಠ	೨೪. ಬೆಳಲಿಗಿ ಮಠ
೨೫. ಷಡಕ್ಷರಿ ಮಠ	೨೬. ಬಂಗಾಳಿ ಮಠ	೨೭. ಗುಡುಗೂರು ಮಠ
೨೮. ಕಿತ್ತೂರು ಮಠ	೨೯. ತಡಾಗಿ ಮಠ	೩೦. ಆನೆಮಠ
೩೧. ಕಾರಡಗಿ ಮಠ		

ಈ ರೀತಿ ಒಟ್ಟು ಮೂವತ್ತೊಂದು ಮಠಗಳು ಶೋಧನೆಯಿಂದ ದೊರೆಯುತ್ತವೆ. ಈ ಮಠಗಳಲ್ಲಿ ಶ್ರೀ ಪುಟ್ಟಯ್ಯನ ಮಠ, ರೇಣುಕಮಂದಿರ ಮತ್ತು ಕೊಟ್ರಯ್ಯನ ಮಠದಲ್ಲಿ ಧಾರ್ಮಿಕ ಕಾರ್ಯಗಳು ನಡೆಯುತ್ತಾ ಬಂದಿವೆ. ಉಳಿದ ಮಠಗಳು ಕೇವಲ ಗದ್ದುಗೆಗಳ ಪೂಜೆಗೆ ಸೀಮಿತಗೊಂಡಿವೆ.

ಪುಟ್ಟಯ್ಯನಮಠ: ರಾಣೆಬೆನ್ನೂರು ತಾಲ್ಲೂಕಿನ ದೊಡ್ಡಪೇಟೆಯಲ್ಲಿ ಸ್ಥಾಪನೆಯಾಗಿರುವ ಪುಟ್ಟಯ್ಯನ ಮಠವು ಮುನ್ನೂರು ವರ್ಷಗಳ ಹಿಂದೆ ಪ್ರಾರಂಭವಾಗಿದೆ ಎಂದು ಹೇಳಬಹುದು. ಮುರುಘಾ ಸಮಯದ ವಿರಕ್ತ ಮಠವಾದ ಈ ಮಠವನ್ನು ಶ್ರೀ ಅನ್ನದಾನ ಸ್ವಾಮಿಗಳು ಪ್ರಾರಂಭಮಾಡಿರಬಹುದೆಂದು ಹೇಳಲಾಗುತ್ತಿದೆ. ಈ ಹೇಳಿಕೆಗೆ ಪೂರಕವಾಗಿ ಕೇಂದ್ರಬಿಂದುವಾಗಿ ಕರ್ತೃಗುರುಗಳಾದ ಶ್ರೀ ಅನ್ನದಾನ ಸ್ವಾಮಿಗಳ ಗದ್ದುಗೆಯನ್ನು ನಿರ್ಮಿಸಲಾಗಿದೆ. ಕರ್ತೃಗುರುಗಳಾದ ಶ್ರೀ ಅನ್ನದಾನ ಸ್ವಾಮಿಗಳು ಎಲ್ಲಿಂದ ಬಂದರೆಂದು ಹೇಳಲಾಗುವ ಯಾವುದೇ ಆಧಾರಗಳು ಮಠದಲ್ಲಿ ಲಭ್ಯವಿಲ್ಲ. ಆದರೆ ಶ್ರೀ ಅನ್ನದಾನ ಸ್ವಾಮಿಗಳು ಶಿವಪೂಜಾನಿಷ್ಠರಾಗಿ ವಾಕ್‌ಸಿದ್ಧಿಯನ್ನು ಪಡೆದಿದ್ದ ಮಹಾಮಹಿಮರೆಂದು ಹೇಳಲಾಗುತ್ತಿದೆ. ಗುರುಗಳು ಪುರಾಣ ಪ್ರವಚನಗಳ ಮೂಲಕ ಶರಣ ತತ್ತ್ವವನ್ನು ಪ್ರಚಾರಪಡಿಸಿ ವೀರಶೈವ ಧರ್ಮ ಬೆಳೆಯಲು ಪ್ರೇರಕರಾಗಿದ್ದಾರೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಅನ್ನದಾನಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ರಾಚೋಟಿಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಬಸವಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಗುರುಪಾದಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ಅನ್ನದಾನ ಸ್ವಾಮಿಗಳ ಹೆಸರನ್ನೇ ಮಠದ ಅಧಿಕಾರಕ್ಕೆ ಬಂದ ಎಲ್ಲಾ ಗುರುಗಳಿಗೂ ಅಭಿದಾನ ಮಾಡುತ್ತಿದ್ದ ಕಾರಣ ಮಠದ ಪರಂಪರೆಯಲ್ಲಿ ಬರುವ ಗುರುಗಳ ಹೆಸರನ್ನು ನಿರ್ದಿಷ್ಟವಾಗಿ ಗುರುತಿಸಲಾಗುತ್ತಿಲ್ಲ. ಇದನ್ನು ಅರಿತು ನಂತರ ಬೇರೆ ಬೇರೆ ಹೆಸರಿನಿಂದ ಅಧಿಕಾರವನ್ನು ಪಡೆಯುವ ಸಂಪ್ರದಾಯ ಬೆಳೆಯಿತು. ನಂತರ ಶ್ರೀ ರಾಚೋಟಿ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಹಿರಿಯ ಗುರುಗಳು ಹಾಕಿಕೊಟ್ಟ ದಾರಿಯಲ್ಲಿ ಬೆಳೆಸಿ, ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಸಂಚಾರ ಮೂರ್ತಿಗಳಾದ ಇವರು ಲೋಕಸಂಚಾರ ಮಾಡುತ್ತ ಧರ್ಮವನ್ನು ಬೆಳೆಸಿ ಭಕ್ತರನ್ನು ಸಂಘಟಿಸಿ ಮಠದ ಹೆಸರನ್ನು ಹೆಚ್ಚು ಪ್ರಚಾರಕ್ಕೆ ತಂದು ೧೯೩೨ರಲ್ಲಿ ಲಿಂಗೈಕ್ಯರಾಗಿದ್ದಾರೆ.ಇವರ ನಂತರ ಶ್ರೀ ಬಸವ ಸ್ವಾಮಿಗಳು ಅಧಿಕಾರಕ್ಕೆ ಬಂದಿದ್ದಾರೆ.

ಹಲಗೇರಿಯ ಆರಾಧ್ಯ ಮಠದ ಶ್ರೀ ಗುರುಪಾದಪ್ಪ ಮತ್ತು ಶ್ರೀಮತಿ ಹಾಲಮ್ಮನವರ ಪುತ್ರರಾಗಿ ೧೯೧೪ರಲ್ಲಿ ಶ್ರೀಬಸವ ಸ್ವಾಮಿಗಳು ಜನಿಸಿದರು. ಧಾರವಾಡದಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ತಮ್ಮ ಹದಿನೆಂಟನೆಯ ವರ್ಷಕ್ಕೆ ಪಟ್ಟಾಧಿಕಾರವನ್ನು ವಹಿಸಿಕೊಂಡ ಗುರುಗಳು ಮಠವನ್ನು ಧಾರ್ಮಿಕವಾಗಿ ಬೆಳೆಸತೊಡಗಿದರು. ಈ ಮಠದ ಶಾಖಾಮಠವಾದ ಹಲಗೇರಿ ಮಠದಲ್ಲಿ ನಾಲ್ಕು ಗದ್ದುಗೆಗಳು ಸ್ಥಾಪನೆಗೊಂಡಿವೆ. ರಾಣೆಬೆನ್ನೂರು ಪಟ್ಟಣದಲ್ಲಿರುವ ಮೂಡಲ ಮಠ ಮತ್ತು ಕುರುಬಗೇರಿ ಮಠವು ಈ ಮಠದ ಶಾಖಾಮಠಗಳಾಗಿದ್ದು ಈ ಮಠಗಳಲ್ಲಿರುವ ಗದ್ದುಗೆಗಳನ್ನು ಶ್ರೀ ಬಸವ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಅಭಿವೃದ್ಧಿಪಡಿಸಿರುವರು. ಹಿರಿಯ ಗುರುಗಳಾದ ಶ್ರೀ ಬಸವ ಸ್ವಾಮಿಗಳು ತಮ್ಮ ಎಂಬತ್ತಾರನೆಯ ವಯಸ್ಸಿನಲ್ಲಿ ತಮ್ಮ ಸಹೋದರ ಸಂಬಂಧಿಯಾದ ಶ್ರೀ ಗುರುಪಾದ ಸ್ವಾಮಿಗಳನ್ನು ಉತ್ತರಾಧಿಕಾರಿಗಳಾಗಿ ನೇಮಕಮಾಡಿ ಕೊಂಡು, ೨೦೦೦ದ ಮೇ ಇಪ್ಪತ್ತೆರಡು ಪಟ್ಟಾಧಿಕಾರವನ್ನು ಮಾಡಿದ್ದಾರೆ.

ಧಾರ್ಮಿಕ ಕೆಲಸ: ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ಎರಡು ವೇಳೆ ನಿತ್ಯ ಪೂಜೆ ಮಾಡಲಾಗುತ್ತಿದೆ. ಶ್ರಾವಣಮಾಸದಲ್ಲಿ ನಿತ್ಯ ರುದ್ರಾಭಿಷೇಕ ನಡೆಸಲಾಗುವುದು. ಹಿರಿಯ ಗುರುಗಳ ಪುಣ್ಯತಿಥಿಯನ್ನು ದಸರಾ ಸಂದರ್ಭದಲ್ಲಿ ಆಚರಿಸಲಾಗುತ್ತಿದೆ. ಈ ಎಲ್ಲಾ ಧಾರ್ಮಿಕ ಕಾರ್ಯಗಳಿಗೆ ಮಠದ ಆಸ್ತಿಯಾಗಿರುವ ಇಪ್ಪತ್ತೊಂದು ಎಕರೆ ಜಮೀನಿಂದ ಬರುವ ಆದಾಯವನ್ನು ಬಳಸಿಕೊಳ್ಳಲಾಗುವುದಲ್ಲದೆ ಭಕ್ತರ ನೆರವನ್ನು ಪಡೆದುಕೊಳ್ಳಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ.ಗುರುಪಾದ ಸ್ವಾಮಿಗಳು, ಶ್ರೀ ಪುಟ್ಟಯ್ಯನ ಮಠ, ದೊಡ್ಡಪೇಟೆ, ರಾಣೆಬೆನ್ನೂರು, ಹಾವೇರಿ ಜಿಲ್ಲೆ.

ಲಿಂಗದಹಳ್ಳಿ

ರಾಣೆಬೆನ್ನೂರು ತಾಲ್ಲೂಕಿನ ಲಿಂಗದಹಳ್ಳಿಯು ತಾಲ್ಲೂಕು ಕೇಂದ್ರದ ದಕ್ಷಿಣಕ್ಕೆ ಹದಿನೆಂಟು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ಲಿಂಗದಹಳ್ಳಿ ಗ್ರಾಮದ ಹೊರಭಾಗದಲ್ಲಿ ೧೯೯೮ರಲ್ಲಿ ಹಿರೇಮಠವು ಪ್ರಾರಂಭಗೊಂಡಿದೆ. ಹೊಸಪೇಟೆ ತಾಲ್ಲೂಕಿನ ತಂಬರಹಳ್ಳಿಯಲ್ಲಿ ವಾಸಿಸುತ್ತಿದ್ದ ಈ ಮಠದ ವಂಶಸ್ಥರು ತುಂಗಭದ್ರ ಅಣೆಕಟ್ಟೆಯ ನಿರ್ಮಾಣದಿಂದ ತಂಬರಹಳ್ಳಿಯು ಮುಳುಗಡೆಗೊಂಡ ಕಾರಣ ಲಿಂಗದಹಳ್ಳಿಗೆ ಬಂದು ನೆಲೆಸಿರುತ್ತಾರೆ. ತುಂಗಭದ್ರ ಅಣೆಕಟ್ಟೆಯ ಹಿನ್ನೀರಿನಲ್ಲಿ ಮೂಲಮಠವು ಮುಳುಗಡೆಯಾದ ಕಾರಣ ಮಠದ ಪರಂಪರೆಯು ಸ್ಥಗಿತಗೊಂಡಿತು. ಪುನಃ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳ ಸ್ವಪ್ರಯತ್ನದಿಂದ ಮಠವು ಪುನರಾರಂಭಗೊಳ್ಳಲು ಕಾರಣವಾಯಿತು.

ಬೆಳೆದ ಮಠ: ರಂಭಾಪುರಿ ಪೀಠದ ಶಾಖಾಮಠವಾದ ಹಿರೇಮಠವು ಪುರಾತನ ಕಾಲದ ತಮ್ಮ ಮಠದ ಅಸ್ತಿತ್ವವನ್ನು ಉಳಿಸಿ ಬೆಳೆಸಿಕೊಂಡು ವೀರಶೈವ ಧರ್ಮದ ಬೆಳವಣಿಗೆಗೆ ತಮ್ಮ ಬದುಕನ್ನು ಮುಡುಪಾಗಿಡಲು ತೀರ್ಮಾನಿಸಿದ ಶ್ರೀವೀರಭದ್ರ ಶಿವಾಚಾರ್ಯ ಸ್ವಾಮಿಗಳು, ೧೯೯೪ರಲ್ಲಿ ತೀರ್ಮಾನ ಕೈಗೊಂಡು ಮಠದ ಕಟ್ಟಡವನ್ನು ನಿರ್ಮಿಸತೊಡಗಿದರು. ಆವಶ್ಯಕತೆಗೆ ಅನುಗುಣವಾಗಿ ಮಠದ ಕಟ್ಟಡದ ಕಾರ್ಯ ಮುಗಿದ ಮೇಲೆ ಶ್ರೀ ರಂಭಾಪುರಿ ಜಗದ್ಗುರು ಪ್ರಸನ್ನ ವೀರ ಸೋಮೇಶ್ವರ ಶಿವಾಚಾರ್ಯ ಭಗವತ್ಪಾದರ ಸಮ್ಮುಖದಲ್ಲಿ ೧೯೯೮ರ ಡಿಸೆಂಬರ್ ಒಂದರಂದು ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ.

ಲಿಂಗದಹಳ್ಳಿಯ ಶ್ರೀ ಚನ್ನಮಲ್ಲಪ್ಪಯ್ಯ ಮತ್ತು ಶ್ರೀಮತಿ ಚನ್ನಮ್ಮನವರ ಪುತ್ರರಾಗಿ ೧೯೬೭ರ ಫೆಬ್ರವರಿ ಐದರಂದು ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳು ಜನಿಸಿದರು. ಬಾಲ್ಯದಿಂದಲೇ ಅಧ್ಯಾತ್ಮ ಚಿಂತನೆಯನ್ನು ಮೈಗೂಡಿಸಿಕೊಂಡಿದ್ದ ಗುರುಗಳು ತಮ್ಮ ಪ್ರೌಢಶಿಕ್ಷಣ ಮುಗಿದ ಮೇಲೆ ವೃತ್ತಿ ಆಧಾರಿತ ತರಬೇತಿಯನ್ನು ಮುಗಿಸಿದ್ದಲ್ಲದೆ, ಧಾರ್ಮಿಕ ಶಿಕ್ಷಣವಾದ ಸಂಸ್ಕೃತ,ವೇದ ಮತ್ತು ಜ್ಯೋತಿಷ್ಯವನ್ನು ಕಲಿತರು.ನಂತರ ಜೀವನೋಪಾಯಕ್ಕಾಗಿ ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮದಲ್ಲಿ ಮೇಲ್ವಿಚಾರಕ ಹುದ್ದೆಗೆ ನೇಮಕಗೊಂಡರು.

ಕಾಯಕದ ಜತೆ ಧರ್ಮಬೋಧನೆ: ಲಿಂಗದಹಳ್ಳಿಗೆ ಸಮೀಪದ ಹಲಗೇರಿಯಲ್ಲಿ ವೃತ್ತಿಯಲ್ಲಿರುವ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳು ಪಟ್ಟಾಧಿಕಾರದ ನಂತರವೂ ಕಾಯಕವನ್ನು ಮುಂದುವರಿಸಿದ್ದಾರೆ. ಕಾಯಕದ ಜತೆಗೆ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿರುವ ಗುರುಗಳು ಧರ್ಮಬೋಧನೆಯಿಂದ ಸಮಾಜವನ್ನು ಸಂಸ್ಕಾರಯುತವಾಗಿ ಬೆಳೆಸುತ್ತಿದ್ದಾರೆ. ಮಠದ ಆವರಣದಲ್ಲಿ ರೇಣುಕಾಚಾರ್ಯರು, ವೀರಭದ್ರೇಶ್ವರ,ವಿಘ್ನೇಶ್ವರ ಮತ್ತು ಚೌಡೇಶ್ವರಿ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ನಿತ್ಯ ಪೂಜೆಗೆ ವ್ಯವಸ್ಥೆಗೊಳಿಸಿದ್ದಾರೆ. ಪ್ರತಿ ಅಮಾವಾಸ್ಯೆಯಂದು ವಿಶೇಷ ಪೂಜೆಯ ಜತೆಗೆ ಪುರಾಣ ಪ್ರವಚನವನ್ನು ಏರ್ಪಡಿಸಲಾಗುತ್ತಿದೆ. ಅಂದು ಸಂಜೆ ವಿದ್ವಾಂಸರನ್ನು ಕರೆಸಿ ಉಪನ್ಯಾಸ ಏರ್ಪಡಿಸಲಾಗುತ್ತದೆ. ಮಠದಲ್ಲಿ ವಾರ್ಷಿಕ ಕಾರ್ಯಕ್ರಮವಾಗಿ ರೇಣುಕ ಜಯಂತಿಯನ್ನು ಆಚರಿಸಲಾಗುತ್ತಿದೆ.

ಸಾಮಾಜಿಕ ಸೇವೆ: ನೂತನ ಮಠವು ಧಾರ್ಮಿಕ ಕಾರ್ಯಗಳನ್ನು ಸಮರ್ಥವಾಗಿ ಮಾಡುತ್ತಿರುವುದರ ಜತೆಗೆ ಸಾಮಾಜಿಕ ಕಾರ್ಯಗಳಲ್ಲಿಯೂ ತನ್ನನ್ನು ತೊಡಗಿಸಿಕೊಂಡಿದೆ. ಹೊಳಲಕೆರೆ ತಾಲ್ಲೂಕು ಮಲ್ಲಾಡಿಹಳ್ಳಿಯಲ್ಲಿ ಆಯುರ್ವೇದ ಚಿಕಿತ್ಸೆಯಲ್ಲಿ ತರಬೇತಿ ಪಡೆದಿರುವ ಗುರುಗಳು ಗ್ರಾಮಾಂತರ ಪ್ರದೇಶದಲ್ಲಿ ವಿವಿಧ ಕಾಯಿಲೆಗಳಿಗೆ ಉಚಿತವಾಗಿ ಚಿಕಿತ್ಸೆಯನ್ನು ನೀಡುತ್ತಿದ್ದಾರೆ. ಮಠದಲ್ಲಿ ಆಯುರ್ವೇದ ಆಸ್ಪತ್ರೆ ಮತ್ತು ಯೋಗ ತರಬೇತಿ ಕೇಂದ್ರವನ್ನು ಮುಂದಿನ ವರ್ಷದಲ್ಲಿ ನಿರ್ಮಿಸುವ ಯೋಜನೆಯನ್ನು ಹಮ್ಮಿಕೊಂಡಿದ್ದಾರೆ. ಎರಡನೆಯ ಹಂತವಾಗಿ ಅನಾಥಾಶ್ರಮ, ವೃದ್ಧಾಶ್ರಮ ಮತ್ತು ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಲಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ಲಿಂಗದಹಳ್ಳಿ, ರಾಣೆಬೆನ್ನೂರು ತಾ, ಹಾವೇರಿ ಜಿಲ್ಲೆ.

ಹೊಸಹೊನ್ನತ್ತಿ

ರಾಣೆಬೆನ್ನೂರು ತಾಲ್ಲೂಕಿನ ಹೊಸಹೊನ್ನತ್ತಿಯು ತಾಲ್ಲೂಕು ಕೇಂದ್ರ ಸ್ಥಾನದ ಉತ್ತರಕ್ಕೆ ಹನ್ನೆರಡು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಶಿವಯೋಗಿಶ್ವರ ಮಠವು ಅಸ್ತಿತ್ವದಲ್ಲಿದೆ.

ಶಿವಯೋಗೀಶ್ವರಮಠ (ಹಿರೇಮಠ): ಹೊಸಹೊನ್ನತ್ತಿ ಗ್ರಾಮದಲ್ಲಿ ಶ್ರೀ ಶಿವಯೋಗೀಶ್ವರ ಸ್ವಾಮಿಗಳು ಸ್ಥಾಪಿಸಿರುವ ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿರುವ ಶ್ರೀ ಶಿವಯೋಗಿಶ್ವರ ಮಠವು ಹಾವೇರಿ ತಾಲ್ಲೂಕಿನ ನೆಗಳೂರು ಹಿರೇಮಠದ ಶಾಖಾಮಠವಾಗಿದೆ.

ಮಠ ಸ್ಥಾಪನೆ: ಗ್ರಾಮದ ಹೊರಭಾಗದ ದಕ್ಷಿಣ ದಿಕ್ಕಿನಲ್ಲಿರುವ ಶ್ರೀ ಶಿವಯೋಗಿಶ್ವರ ಮಠವು ಪುರಾತನ ಕಾಲದಲ್ಲಿ ನಿರ್ಮಿಸಿಲ್ಪಟ್ಟ ಇಪ್ಪತ್ತೈದು ಅಂಕಣದ ಕಲ್ಲಿನಮಠ. ಇಲ್ಲಿ ಗುರುಗಳು ಅನುಷ್ಠಾನಗೊಂಡ ಪುರಾತನ ಕಾಲದ ಗವಿಇದೆ. ಕರ್ತೃ ಗುರುಗಳಾದ ಶ್ರೀ ಶಿವಯೋಗೀಶ್ವರ ಶಿವಾಚಾರ್ಯ ಸ್ವಾಮಿಗಳು ತಪೋನಿಷ್ಠರು. ಶಿವಯೋಗದಲ್ಲಿ ಸಿದ್ಧಿಯನ್ನು ಪಡೆದ ಇವರ ಕಾಲದಲ್ಲಿ ವೀರಶೈವ ಧರ್ಮ ಈ ಭಾಗದಲ್ಲಿ ಪ್ರಬಲವಾಗಿ ಬೆಳೆಯಿತು. ಸಿದ್ಧಾಂತ ಶಿಖಾಮಣಿಯ ಕರ್ತೃಗಳೇ ಈ ಶಿವಯೋಗಿ ಶಿವಾಚಾರ್ಯರೆಂದು ಹೇಳಲಾಗುತ್ತಿದ್ದು, ಈ ಬಗ್ಗೆ ಸಂಶೋಧನೆ ನಡೆಯಬೇಕಾಗಿದೆಯೆಂದು ಈಗಿನ ಗುರುಗಳಾದ ಶ್ರೀ ಶಿವಾನಂದ ಶಿವಾಚಾರ್ಯಸ್ವಾಮಿಗಳು ಅಭಿಪ್ರಾಯಿಸುತ್ತಾರೆ.

ಪ್ರಭಾವಿ ಮಠ: ಶಾಲಿವಾಹನ ಶಕೆ ಐದನೆಯ ಶತಮಾನದಲ್ಲಿ ಸ್ಥಾಪನೆಯಾಗಿರಬಹುದೆಂದು ಹೇಳಲಾಗುವ ಈ ಮಠದಲ್ಲಿ ಇದಕ್ಕೆ ಸಂಬಂಧಿಸಿದ ಯಾವುದೇ ಆಧಾರಗಳು ಲಭ್ಯವಿಲ್ಲ. ಶ್ರೀ ಶಿವಯೋಗೀಶ್ವರ ಶಿವಾಚಾರ್ಯರು ಬಹಳ ಪ್ರಭಾವಿಗಳಾಗಿದ್ದ ಕಾರಣ ಈ ಮಠಕ್ಕೆ ಜನಸಾಮಾನ್ಯರಿಂದ ಹಿಡಿದು ಸಂಸ್ಥಾನಧೀಶರೂ ಸಹ ಈ ಮಠದ ಭಕ್ತರಾಗಿದ್ದರು. ಶಿವಯೋಗಿಗಳ ಕಾಲದಲ್ಲಿ ಈ ಮಠಕ್ಕೆ ರಾಜಾಶ್ರಯ ಸಿಕ್ಕಿ ಧಾರ್ಮಿಕ ಚಟುವಟಿಕೆಗಳಿಗೆ ಉಂಬಳಿಯಾಗಿ ಜಮೀನು ದೊರೆತಿದೆ ಎಂದು ಹೇಳಲಾಗುತ್ತಿದೆ.

ಅಭಿವೃದ್ಧಿಕಾರ್ಯಗಳು: ಕರ್ತೃಗುರುಗಳ ನಂತರ ಈ ಮಠವು ಮಠಾಧೀಶ್ವರರು ಇಲ್ಲದೆ ಖಾಲಿ ಉಳಿಯುತ್ತದೆ. ಈಮಠದ ಮೂಲಮಠವಾದ ನೆಗಳೂರು ಮಠವು ಇಲ್ಲಿನ ಧಾರ್ಮಿಕ ಕಾರ್ಯವನ್ನು ಔಪಚಾರಿಕವಾಗಿ ಮಾಡಿಕೊಂಡು ಬರುತ್ತಿತ್ತು. ಆದರೆ ಈಗಿನ ಮಠಾಧೀಶರಾದ ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮೂಲ ಮಠವನ್ನು ಅಭಿವೃದ್ಧಿ ಪಡಿಸುವುದರ ಜತೆಗೆ ಈ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ೧೯೬೨ರಲ್ಲಿ ಮಠದ ಕಲ್ಲಿನ ಕಟ್ಟಡ, ಗವಿ ಹಾಗೂ ಕರ್ತೃ ಗದ್ದುಗೆಯನ್ನು ದುರಸ್ಥಿಗೊಳಿಸಿ, ಧಾರ್ಮಿಕ ಚಟುವಟಿಕೆಗಳು ನಡೆಯಲು ಅವಕಾಶವನ್ನು ಮಾಡಿಕೊಟ್ಟರು.

ಧಾರ್ಮಿಕ ಕೆಲಸ: ಅಭಿವೃದ್ಧಿಗೊಂಡ ಮಠದಲ್ಲಿ ನಿತ್ಯ ಕರ್ತೃಗದ್ದುಗೆಗೆ ಪೂಜೆ ವ್ಯವಸ್ಥೆ, ಶ್ರಾವಣ ಮತ್ತು ಕಾರ್ತೀಕಮಾಸಗಳಲ್ಲಿ ವಿಶೇಷ ಪೂಜೆ ನಡೆಯತೊಡಗಿದೆ. ಫೆಬ್ರುವರಿ ಅಥವಾ ಮಾರ್ಚ್ ತಿಂಗಳಲ್ಲಿ ಕರ್ತೃಗುರುಗಳ ಆರಾಧನೆಯ ಅಂಗವಾಗಿ ಪುರಾಣ ಪ್ರವಚನ, ಧಾರ್ಮಿಕ ಸಭೆಯನ್ನು ನಡೆಸಿ, ಧರ್ಮ ಮತ್ತು ಸಾಹಿತ್ಯ ವಿಚಾರಗಳಲ್ಲಿ ಉಪನ್ಯಾಸ ಮತ್ತು ಉಪದೇಶವನ್ನು ಮಾಡಿಸಲಾಗುತ್ತಿದೆ. ಅಲ್ಲದೆ ಸಾವಿರಾರು ಜನಕ್ಕೆ ಅನ್ನದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು, ಶ್ರೀ ಶಿವಯೋಗೀಶ್ವರ ಮಠ, ಹೊಸಹೊನ್ನತ್ತಿ, ಗುಡಿಹೊನ್ನತ್ತಿ ಅಂಚೆ, ರಾಣೆಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆ.

❑

ಶಿಗ್ಗಾಂವಿ ತಾಲ್ಲೂಕು

ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲ್ಲೂಕು, ಧಾರ್ಮಿಕವಾಗಿ ಶ್ರೀಮಂತಿಕೆ ಪಡೆದ ಜಿಲ್ಲೆ. ಇಲ್ಲಿ ವೀರಶೈವಧರ್ಮ ಪ್ರಾಚೀನದಿಂದಲೂ ಬೆಳೆದು ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಪ್ರಸ್ತುತ ಹದಿಮೂರು ಮಠಗಳು ಅಸ್ತಿತ್ವದಲ್ಲಿವೆ.

ಕಡಹಳ್ಳಿ-ಶ್ಯಾಡಂಬಿ

ಶಿಗ್ಗಾಂವಿ ತಾಲ್ಲೂಕಿನ ಕಡಹಳ್ಳಿ-ಶ್ಯಾಡಂಬಿ ಎಂಬ ಜೋಡಿ ಗ್ರಾಮಗಳು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹನ್ನೊಂದು ಕಿ. ಮೀ.ದೂರದಲ್ಲಿವೆ. ಈ ಗ್ರಾಮಗಳ ಸರಹದ್ದಿಗೆ ಸೇರಿದ ಶ್ರೀ ಭೂಕೈಲಾಸ ಮಂದಿರವು ಬೆಂಗಳೂರು ಮತ್ತು ಪೂನಾ ರಸ್ತೆಯ ಎಡಬದಿಯಲ್ಲಿ ಸ್ಥಾಪನೆಗೊಂಡಿದೆ.

ಭೂಕೈಲಾಸ ಮಂದಿರ: ಕಡಹಳ್ಳಿ-ಶ್ಯಾಡಂಬಿ ಗ್ರಾಮದಲ್ಲಿರುವ ಶ್ರೀ ಭೂಕೈಲಾಸ ಮಂದಿರವು ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳಿಂದ ೧೯೯೦ರಲ್ಲಿ ವಿರಕ್ತಮಠವು ಪ್ರಾರಂಭಗೊಂಡಿತು. ನಿಡಗುಂದಿ ಗ್ರಾಮದಲ್ಲಿ ಜನಿಸಿದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಹುಟ್ಟಿದ ಗ್ರಾಮವನ್ನು ತ್ಯಜಿಸಿ, ಅಧ್ಯಾತ್ಮ ಚಿಂತನೆಯನ್ನು ಮೈಗೂಡಿಸಿಕೊಂಡು ಹರಗುರುಚರ ಮೂರ್ತಿಗಳ ಸಂಪರ್ಕದಲ್ಲಿ ಬೆಳೆದು ಧಾರವಾಡದ ಮುರುಘಾಮಠದ ಶ್ರೀ ಮಹಾಂತ ಸ್ವಾಮಿಗಳ ಕೃಪಾಶೀರ್ವಾದಕ್ಕೆ ಒಳಗಾಗಿ ಅವರ ಪರಮಶಿಷ್ಯರಾಗಿ ಬೆಳೆದರು. ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಪುರಾಣ ಪ್ರವಚನಕಾರರಾಗಿ ನಾಡಿನ ನಾನಾ ಭಾಗಗಳಲ್ಲಿ ಪ್ರವಚನ ನೀಡುತ್ತಾ ವೀರಶೈವ ಧರ್ಮದ ತತ್ತ್ವಗಳನ್ನು ಪ್ರಚಾರಪಡಿಸಿ ಈ ಕಡಹಳ್ಳಿಗೆ ಬಂದು ನೆಲೆಸಿದರು.

ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳ ಶಿವಪೂಜಾನಿಷ್ಠೆ ಮತ್ತು ಧಾರ್ಮಿಕ ಪ್ರೌಢಿಮೆಯನ್ನು ಗುರುತಿಸಿದ ಇಲ್ಲಿನ ಭಕ್ತರು ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳ ಅಪೇಕ್ಷೆಯ ಮೇರೆಗೆ ಮಠವನ್ನು ಸ್ಥಾಪಿಸಿಕೊಡಲು ಮುಂದಾಗುತ್ತಾರೆ. ಮಠವನ್ನು ಸ್ಥಾಪಿಸಲು ಜಾಗದ ಆವಶ್ಯಕತೆ ಕಂಡು ಬಂದಾಗ ಕಡಹಳ್ಳಿ ಗ್ರಾಮದ ಹೇಮಯ್ಯ ಅಡವಯ್ಯ ಹಿರೇಮಠ ಎಂಬುವವರು ಐದು ಗುಂಟೆ ಜಾಗವನ್ನು ದಾನಮಾಡಿದರು.

ಮಠಸ್ಥಾಪನೆ: ನೂತನ ಮಠವನ್ನು ಸ್ಥಾಪಿಸಲು ದಾನವಾಗಿ ನಿವೇಶನ ದೊರೆತ ಮೇಲೆ ಕಡವಳ್ಳಿ ಮತ್ತು ಶ್ಯಾಡಂಬಿ ಗ್ರಾಮದ ಭಕ್ತರು ಸೇರಿ ಮಠದ ಕಟ್ಟಡವನ್ನು ನಿರ್ಮಿಸಿರುತ್ತಾರೆ. ಮಠದ ಮುಂದೆ ಬಾವಿಯನ್ನು ನಿರ್ಮಿಸಿ 'ಶಿವತೀರ್ಥ'ಎಂದು ನಾಮಕರಣ ಮಾಡಿ ಮಠವನ್ನು ಶ್ರೀಶೈಲ ಪೀಠದ ಜಗದ್ಗುರುಗಳಾದ ಶ್ರೀ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳಿಂದ ಉದ್ಘಾಟನೆಯನ್ನು ಮಾಡಿಸಲಾಗಿದೆ.

ಧಾರ್ಮಿಕ ಮತ್ತು ಅಭಿವೃದ್ಧಿ ಕಾರ್ಯಗಳು: ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ತಮ್ಮ ಚಿಕ್ಕ ವಯಸ್ಸಿನಲ್ಲೇ ಆಧ್ಯಾತ್ಮ ಚಿಂತನೆಯನ್ನು ಮೈಗೂಡಿಸಿಕೊಂಡು ಸ್ವತಂತ್ರ ಮಠ ಸ್ಥಾಪನೆಯತನಕ ಅನೇಕ ಅನುಭವಗಳನ್ನು ಗಳಿಸಿಕೊಂಡಿದ್ದರು. ಗುರುಗಳು ತಮ್ಮ ಎಪ್ಪತ್ತೈದನೆಯ ವರ್ಷದಲ್ಲಿ ಸ್ವತಂತ್ರಮಠವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾದರು. ನೂತನವಾಗಿ ಸ್ಥಾಪಿತವಾದ ಮಠದಲ್ಲಿ ಪ್ರತಿ ಅಮಾವಾಸ್ಯೆಯಂದು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಶಿವಾನುಭವಗೋಷ್ಠಿ ಹಾಗೂ ದಾಸೋಹವನ್ನು ನಡೆಸಲಾಗುತ್ತಿದೆ. ಪ್ರತಿ ವರ್ಷದ ಭರತಹುಣ್ಣಿಮೆಯ ಸಂದರ್ಭದಲ್ಲಿ ಶ್ರೀ ಮಹಂತಪ್ಪ ಸ್ವಾಮಿಗಳ ಸಂಸ್ಮರಣೆಯನ್ನು ಮಾಡಿಕೊಳ್ಳಲು ಎರಡು ದಿನ ಉತ್ಸವವನ್ನು ಆಚರಿಸಲಾಗುತ್ತಿದೆ. ನೂತನವಾಗಿ ಸ್ಥಾಪಿತಗೊಂಡ ಮಠದ ಧಾರ್ಮಿಕ ಚಟುವಟಿಕೆಗಳು ನೆಡೆಯಲು ಅನುಕೂಲವಾಗುವಂತೆ ಮಠದ ಸುತ್ತಲ ಜಮೀನನ್ನು ಖರೀದಿಸಿದ ಗುರುಗಳು, ಅದನ್ನು ಅಭಿವೃದ್ಧಿಪಡಿಸಿ ಮಠಕ್ಕೆ ಆದಾಯ ಬರುವಂತೆ ಮಾಡಿಕೊಂಡಿದ್ದಾರೆ. ಸದಾ ಸಂಚಾರಮೂರ್ತಿಗಳಾದ ಶ್ರೀ ಮಲ್ಲಿಕಾರ್ಜುನಸ್ವಾಮಿಗಳು ಭಕ್ತರನ್ನು ಸಂಘಟಿಸಿ ವೀರಶೈವ ಧರ್ಮ ಬೆಳೆಯುವಂತೆ ಮಾಡಿದ್ದಾರೆ.

ವಿಳಾಸ:ಶ್ರೀ ಮ.ನಿ.ಪ್ರ.ಮಲ್ಲಿಕಾರ್ಜುನ ಸ್ವಾಮಿಗಳು, ಶ್ರೀ ಭೂಕೈಲಾಸ ಮಂದಿರ, ಕಡವಳ್ಳಿ-ಶ್ಯಾಡಂಬಿ, ಬಿ.ಪಿ.ರಸ್ತೆ, ಶಿಗ್ಗಾಂವ ತಾಲ್ಲೂಕು, ಹಾವೇರಿ ಜಿಲ್ಲೆ.

ಗಂಜಿಕಟ್ಟೆ

ಶಿಗ್ಗಾಂವಿ ತಾಲ್ಲೂಕಿನ ಗಂಜಿಕಟ್ಟೆಯು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಮೂರು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ಚರಮೂರ್ತೀಶ್ವರ ಮಠವು ಅಸ್ತಿತ್ವದಲ್ಲಿದೆ.

ಚರಮೂರ್ತೀಶ್ವರಮಠ: ಗಂಜಿಕಟ್ಟೆಯ ಹೊರಭಾಗದಲ್ಲಿ ರಂಭಾಪುರಿ ಪೀಠದ ಶಾಖಾಮಠವಾದ ಶ್ರೀ ಚರಮೂರ್ತೀಶ್ವರ ಮಠವು ಸ್ಥಾಪನೆಯಾಗಿದ್ದು ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಹಿತ್ಯಿಕವಾಗಿ ಈ ಗ್ರಾಮವು ರಾಜ್ಯದ ಭೂಪಟದಲ್ಲಿ ಹೆಚ್ಚು ಹೆಸರು ಪಡೆಯಲು ಕಾರಣವಾಗಿದೆ.

ಮಠಸ್ಥಾಪನೆ: ಮೈಸೂರು ಪ್ರಾಂತ್ಯದಿಂದ ಲೋಕಸಂಚಾರವನ್ನು ಕೈಗೊಂಡು ಇಲ್ಲಿಗೆ ಆಗಮಿಸಿದ ಶ್ರೀ ಶಂಭುಲಿಂಗ ಚರಮೂರ್ತೀಶ್ವರರು ಈ ಸ್ಥಳದಲ್ಲಿ ನೆಲೆಗೊಳ್ಳುತ್ತಾರೆ. ಶ್ರೀ ಶಿಶುನಾಳ ಶರೀಫರು, ಶ್ರೀ ಸಿದ್ಧಾರೂಢರು, ಶ್ರೀ ನಾಗಲಿಂಗ ಸ್ವಾಮಿಗಳು ಹಾಗೂ ಶ್ರೀ ಗರಗದ ಮಡಿವಾಳೇಶ್ವರರ ಸಮಕಾಲೀನರಾಗಿದ್ದ ಶ್ರೀ ಶಂಭುಲಿಂಗ ಚರಮೂರ್ತಿಗಳು ಮೈಸೂರು, ಉರವಕೊಂಡ, ಸವಣೂರು, ಮಾದಾಪುರ ಮುಂತಾದ ಕಡೆಗಳಲ್ಲಿ ಸಂಚರಿಸಿ ತಾವು ನೆಲೆನಿಂತ ಕಡೆ ಜಾಗೃತಸ್ಥಳಗಳನ್ನಾಗಿ ಮಾಡಿರುತ್ತಾರೆ. ಇಂತಹ ಮಹಾತಪಸ್ವಿಗಳು ಗಂಜಿಕಟ್ಟೆಗೆ ಬಂದು ನೆಲೆಗೊಂಡು ದೀರ್ಘತಪಸ್ಸನ್ನು ಆಚರಿಸಿ ಧರ್ಮಜಾಗೃತಿಯನ್ನು ಉಂಟು ಮಾಡಿ ಭಕ್ತರ ಸಂಖ್ಯೆಯನ್ನು ಹೆಚ್ಚಿಸಿಕೊಂಡಿದ್ದಾರೆ. ಗುರುಗಳ ಪವಾಡಕ್ಕೆ ಮನಸೋತ ಭಕ್ತರು ಗುರುಗಳು ಇಲ್ಲಿಯೇ ನೆಲೆಸಬೇಕೆಂಬ ಮಹಾದಾಸೆಯಿಂದ ಮಠವನ್ನು ನಿರ್ಮಿಸಿಕೊಟ್ಟಿದ್ದಾರೆ.

ಮಠಸ್ಥಾಪನೆಯಾದ ಮೇಲೆ ಶ್ರೀ ಶಂಭುಲಿಂಗ ಚರಮೂರ್ತಿಗಳು ನಿತ್ಯಶಿವಾನುಭವ ಗೋಷ್ಠಿಗಳನ್ನು ಮಾಡುವ ಮೂಲಕ ವೀರಶೈವ ಧಮದ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳ ಬಗ್ಗೆ ಉಪದೇಶವನ್ನು ನೀಡಿ ಧರ್ಮದ ಆಚರಣೆಗೆ ನೆರವಾದರು. ತಮ್ಮ ಜೀವಿತಾವಧಿಯಲ್ಲಿ ಧಾರ್ಮಿಕ ತಳಹದಿಯ ಮೇಲೆ ಸಮಾಜವನ್ನು ನಿರ್ಮಿಸಿದ ಶ್ರೀ ಶಂಭುಲಿಂಗ ಚರಮೂರ್ತಿಗಳು ೧೯೨೦ರ ಸುಮಾರಿನಲ್ಲಿ ಲಿಂಗೈಕ್ಯರಾಗಿರುತ್ತಾರೆ.

ಪರಂಪರೆ:

೧. ಷ.ಬ್ರ.ಶ್ರೀ ಶಂಭುಲಿಂಗಚರಮೂರ್ತಿಗಳು
೨. ಷ.ಬ್ರ.ಶ್ರೀ ಸದಾಶಿವಸ್ವಾಮಿಗಳು
೩. ಷ.ಬ್ರ.ಶ್ರೀ ಚರಮೂರ್ತೀಶ್ವರಸ್ವಾಮಿಗಳು
೪. ಷ.ಬ್ರ.ಶ್ರೀ ಶಿವಲಿಂಗೇಶ್ವರ ಶಿವಾಚಾರ್ಯಚರಮೂರ್ತೀಶ್ವರರು (ಈಗಿನವರು)

ಮಠದ ಪರಂಪರೆಯು ಬೆಳೆದುಬಂದಿದೆ. ಲೀಲಾಮೂರ್ತಿಗಳಾದ ಶ್ರೀ ಶಂಭುಲಿಂಗ ಚರಮೂರ್ತಿಗಳ ನಂತರ ಬಂದಂತಹ ಎಲ್ಲಾ ಗುರುಗಳು ಆಧ್ಯಾತ್ಮ ಜೀವಿಗಳಾಗಿ ಸಮಾಜವನ್ನು ಧಾರ್ಮಿಕ ತಳಹದಿಯ ಮೇಲೆ ಬೆಳೆಸಿದವರಾಗಿದ್ದಾರೆ. ಎರಡನೆಯ ಗುರುಗಳಾದ ಶ್ರೀ ಸದಾಶಿವ ಸ್ವಾಮಿಗಳು ಮಹಾಪಂಡಿತರಾಗಿ ಹೆಸರು ಮಾಡಿದ್ದರು. ಇವರ ಪಾಂಡಿತ್ಯಕ್ಕೆ ಮನ್ನಣೆ ಕೊಟ್ಟ ಮೈಸೂರಿನ ನಾಲ್ಮಡಿ ಕೃಷ್ಣರಾಜ ಒಡೆಯರು ಗುರುಗಳನ್ನು ಅರಮನೆಗೆ ಆಹ್ವಾನಿಸಿ ಗೌರವಿಸಿ ಕಳುಹಿಸಿದ್ದಾರೆ. ಪರಂಪರೆಯ ಮೂರನೆಯ ಗುರುಗಳಾದ ಶ್ರೀ ಚರಮೂರ್ತೀಶ್ವರರೂ ಸಹ ಮಹಾನ್‌ಪಂಡಿತರಾಗಿ, ಧರ್ಮದುರಂಧರರಾಗಿ ಬೆಳೆದಿದ್ದರು.

ನಾಲ್ಕನೆಯಗುರುಗಳು: ಮಠದ ಪರಂಪರೆಯ ನಾಲ್ಕನೆಯ ಗುರುಗಳಾಗಿ ಅಧಿಕಾರಕ್ಕೆ ಬಂದ ಶ್ರೀ ಶಿವಲಿಂಗೇಶ್ವರ ಶಿವಾಚಾರ್ಯ ಚರಮೂರ್ತೀಶ್ವರರು ಮಠವನ್ನು ಸದೃಢವಾಗಿ ಬೆಳೆಸುವಲ್ಲಿ ಯಶಸ್ವಿಯಾಗಿದ್ದಾರೆ. ಶ್ರೀಶಿವಲಿಂಗೇಶ್ವರ ಶಿವಾಚಾರ್ಯ ಚರಮೂರ್ತೀಶ್ವರರು ಬೀದರ್ ಜಿಲ್ಲೆ ಮುದೋಳಿನ ಮಹದೇವಯ್ಯ ಮತ್ತು ರತ್ನಮ್ಮನವರ ಮಗನಾಗಿ ೧೯೫೮ರ ಅಕ್ಟೋಬರ್ ಇಪ್ಪತ್ತಮೂರರಂದು ಜನಿಸಿದರು. ಮುದೋಳದಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ಶಿವಯೋಗ ಮಂದಿರದಲ್ಲಿ ಧಾರ್ಮಿಕ ವಿದ್ಯಾಭ್ಯಾಸವನ್ನು ಮುಗಿಸಿ, ಹುಬ್ಬಳ್ಳಿ ಮತ್ತು ಮೈಸೂರಿನಲ್ಲಿ ಸಂಸ್ಕೃತವನ್ನು ಕಲಿತು ಅಪಾರ ವಿದ್ವತ್ತನ್ನು ಸಂಪಾದಿಸಿಕೊಂಡು ಮಠದ ಆಡಳಿತವನ್ನು ವಹಿಸಿಕೊಂಡರು.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿ ಕರ್ತೃಗುರುಗಳೂ ಸೇರಿದಂತೆ ಸದಾಶಿವ ಸ್ವಾಮಿಗಳು ಮತ್ತು ಚರಮೂರ್ತೀಶ್ವರರ ಗದ್ದುಗೆಗೆಗಳನ್ನು ನಿರ್ಮಿಸಿ, ಪ್ರತ್ಯೇಕವಾಗಿ ಮೂರು ಗದ್ದುಗೆಗಳಿಗೆ ಕಲ್ಲುಮಂಟಪವನ್ನು ನಿರ್ಮಿಸಲಾಗಿದೆ. ಈ ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ, ಶ್ರಾವಣದಲ್ಲಿ ರುದ್ರಾಭಿಷೇಕ, ಶಿವರಾತ್ರಿಯಲ್ಲಿ ರಥೋತ್ಸವ ಹಾಗೂ ಕಡುಬಿನಕಾಳಗ ಮಾಡಲಾಗುತ್ತಿದೆ. ಪ್ರತಿ ಅಮಾವಾಸ್ಯೆಯಲ್ಲಿ ವಿಶೇಷ ಪೂಜಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ. ಅಂದು ಸೇರುವ ಸಾವಿರಾರು ಜನಕ್ಕೆ ಅನ್ನದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಕಾರ್ತೀಕ ಅಮಾವಾಸ್ಯೆಯಲ್ಲಿ ನಡೆಯುವ ಉತ್ಸವದಲ್ಲಿ ಸುಮಾರು ಹತ್ತು ಸಾವಿರ ಜನರಿಗೆ ಹೋಳಿಗೆ ಊಟವನ್ನು ಮಾಡಿಸಲಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಧಾರ್ಮಿಕ ಸಭೆಗಳನ್ನು ಹಮ್ಮಿಕೊಂಡು ಧರ್ಮ ಪ್ರಚಾರದ ಕಾರ್ಯವನ್ನು ವ್ಯವಸ್ಥಿತವಾಗಿ ಮಾಡಲಾಗುತ್ತಿದೆ.

ಸಾಮಾಜಿಕ ಕಾರ್ಯಗಳು: ಸಾಮಾಜಿಕ ಕಳಕಳಿಯುಳ್ಳ ಶ್ರೀ ಶಿವಲಿಂಗೇಶ್ವರ ಶಿವಾಚಾರ್ಯಚರಮೂರ್ತೀಶ್ವರರು ಸಮಾಜದಲ್ಲಿ ಧಾರ್ಮಿಕ ಸಾಮರಸ್ಯವನ್ನು ಮೂಡಿಸಲು ಸದ್ಭಾವನಾಗೋಷ್ಠಿಯನ್ನು ನಡೆಸುತ್ತಿದ್ದಾರೆ. ಪಾದಯಾತ್ರೆಯ ಮೂಲಕ ಹಳ್ಳಿಗಳಲ್ಲಿ ಸಂಚರಿಸಿ ಧರ್ಮಜಾಗೃತಿಯನ್ನು ಉಂಟುಮಾಡಲಾಗುತ್ತಿದೆ. ಈ ಸಂದರ್ಭಗಳಲ್ಲಿ ಶ್ರಮದಾನ ಶಿಬಿರಗಳನ್ನು ಹಮ್ಮಿಕೊಂಡು ಸ್ವಚ್ಛತಾಕಾರ್ಯಕ್ರಮಗಳು, ಆರೋಗ್ಯ ಶಿಬಿರಗಳನ್ನು ಏರ್ಪಡಿಸುವುದಲ್ಲದೆ, ದುಶ್ಚಟಗಳಿಗೆ ಬಲಿಯಾದವರ ಮನಃಪರಿವರ್ತನೆಗೆ ಪ್ರಯತ್ನಿಸಲಾಗುತ್ತದೆ. ಸಾಮೂಹಿಕ ವಿವಾಹಗಳನ್ನು ನಡೆಸಲಾಗುತ್ತಿದೆ. ರೈತರಿಗೆ ತಿಳುವಳಿಕೆಯನ್ನು ಮೂಡಿಸಲು ಸಾವಯವ ಗೊಬ್ಬರದ ಬಗ್ಗೆ ವಿಚಾರ ಸಂಕಿರಣಗಳನ್ನು ಏರ್ಪಡಿಸಲಾಗುತ್ತಿದೆ. ಈ ರೀತಿ ಅನೇಕ ಸಾಮಾಜಿಕ ಕಾರ್ಯಕ್ರಮಗಳನ್ನು ಕೈಗೊಂಡು ಜನ ಮನದಲ್ಲಿ ಹೆಸರುಗಳಿಸಿದ್ದಾರೆ.

ಸಾಹಿತ್ಯ ಸೇವೆ: ಸಾಹಿತ್ಯಾಸಕ್ತರಾದ ಶ್ರೀ ಶಿವಲಿಂಗೇಶ್ವರ ಶಿವಾಚಾರ್ಯ ಚರಮೂರ್ತೀಶ್ವರರು ಮಠದ ಪತಿಯಿಂದ ಸಾಧನಕಿರಣವೆಂಬ ಪ್ರಕಾಶನ ಸಂಸ್ಥೆಯನ್ನು ಪ್ರಾರಂಭಿಸಿ'ಸಾಧನ ಕಿರಣ'ಎಂಬ ಮಾಸಪತ್ರಿಕೆಯನ್ನು ಹೊರತರುತ್ತಿದ್ದಾರೆ. ತಮ್ಮ ಪ್ರಕಾಶನ ಸಂಸ್ಥೆಯಿಂದ ನಮ್ಮೂರು, ನಾನು ನಡೆದು ಬಂದ ದಾರಿ, ಗೀತಗುಚ್ಛವಚನ, ಭಾವೋದಯ, ರುದ್ರವೀಣೆ ಹಾಗೂ ಇಷ್ಟಲಿಂಗ ಪೂಜಾವಿಧಾನ ಮುಂತಾದ ಹನ್ನೆರಡು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ಶೈಕ್ಷಣಿಕ ಸೇವೆ: ಧಾರ್ಮಿಕ, ಸಾಮಾಜಿಕ ಮತ್ತು ಸಾಹಿತ್ಯಿಕವಾಗಿ ಸಾಧನೆ ಸಾಧಿಸಿದ ಶ್ರೀ ಚರಮೂರ್ತೀಶ್ವರಮಠವು ಶೈಕ್ಷಣಿಕ ಕ್ಷೇತ್ರದಲ್ಲಿಯೂ ಪ್ರಗತಿಯ ದಾಪುಗಾಲು ಹಾಕಿದೆ. ೧೯೮೯ರಲ್ಲಿ ಗ್ರಾಮೀಣ ವಿದ್ಯಾಪೀಠವನ್ನು ಪ್ರಾರಂಭಿಸಿ ಗಂಜಿಕಟ್ಟೆ, ಬನ್ನಿಕೊಪ್ಪ, ಶಿಗ್ಗಾಂವ ಮತ್ತು ಮಂತ್ರೋಡಿಯಲ್ಲಿ ಶ್ರೀ ಶಂಭುಲಿಂಗೇಶ್ವರ ಪ್ರೌಢಶಾಲೆಗಳನ್ನು ಪ್ರಾರಂಭಿಸಲಾಗಿದೆ. ಮಠದಲ್ಲಿ ವಿದ್ಯಾರ್ಥಿನಿಲಯ ಇಲ್ಲದಿದ್ದರೂ ಎಂಟರಿಂದ ಹತ್ತು ಜನ ವಿದ್ಯಾರ್ಥಿಗಳು ಇಲ್ಲಿ ವಿದ್ಯೆಯನ್ನು ಕಲಿಯುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶಿವಲಿಂಗೇಶ್ವರ ಶಿವಾಚಾರ್ಯ ಚರಮೂರ್ತೀಶ್ವರ ಸ್ವಾಮಿಗಳು, ಶ್ರೀ ಚರಮೂರ್ತೀಶ್ವರ ಮಠ, ಗಂಜಿಕಟ್ಟೆ, ಶಿಗ್ಗಾಂವಿ ತಾಲ್ಲೂಕು, ಹಾವೇರಿ ಜಿಲ್ಲೆ.

ಗಂಗಿಬಾವಿ

ಶಿಗ್ಗಾಂವ ತಾಲ್ಲೂಕಿನ ಗಂಗಿಬಾವಿಯು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಐದು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಗಂಗಿಬಾವಿ ಮಠವು ಅಸ್ತಿತ್ವದಲ್ಲಿದೆ.

ಗಂಗಿಬಾವಿಮಠ: ಗಂಗಿಬಾವಿ ಗ್ರಾಮದ ಪೂರ್ವಭಾಗದಲ್ಲಿ ಶ್ರೀ ಗಂಗಿಬಾವಿ ಮಠವು ೧೯೬೦ರಲ್ಲಿ ಸ್ಥಾಪನೆಯಾಗಿದೆ. ಈ ಮಠವು ಶ್ರೀ ರಂಭಾಪುರಿ ಪೀಠದ ಶಾಖಾ ಮಠವಾಗಿ ರೂಪುಗೊಂಡಿದೆ. ಶ್ರೀ ರಂಭಾಪುರಿ ಪೀಠದ ಹಿಂದಿನ ಜಗದ್ಗುರುಗಳಾದ ಶ್ರೀ ಪ್ರಸನ್ನರೇಣುಕ ವೀರ ಗಂಗಾಧರ ಶಿವಾಚಾರ್ಯ ಭಗವತ್ಪಾದರು ಇಲ್ಲಿ ಅನುಷ್ಠಾನಗೊಂಡು ಈ ಸ್ಥಳವನ್ನು ಜಾಗೃತ ಸ್ಥಳವನ್ನಾಗಿ ರೂಪಿಸಿದರು.

ಮಠ ಸ್ಥಾಪನೆ: ಶ್ರೀ ವೀರ ಗಂಗಾಧರ ಶಿವಾಚಾರ್ಯ ಭಗವತ್ಪಾದರು ಅನುಷ್ಠಾನದಿಂದ ಸುಕ್ಷೇತ್ರವಾಗಿ ರೂಪುಗೊಂಡಿದ್ದ

ಈ ಕ್ಷೇತ್ರದಲ್ಲಿ ಧಾರ್ಮಿಕ ಕಾರ್ಯಗಳು ನಿರಂತರವಾಗಿ ನಡೆಯಬೇಕೆಂಬ ಉದ್ದೇಶದಿಂದ ಗಂಗಿಬಾವಿಯ ಶ್ರೀ ವೃಷಭೇಂದ್ರಯ್ಯ ಮತ್ತು ಶ್ರೀಮತಿ ವೀರಮ್ಮನವರ ಪುತ್ರರಾಗಿ ೧೯೩೫ ರಲ್ಲಿ ಜನಿಸಿದ ಶ್ರೀ ಯೋಗಿರಾಜೇಂದ್ರ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಸ್ಥಾಪಿಸಿದ್ದಾರೆ. ಶಿವಪೂಜಾನಿಷ್ಠರಾದ ಗುರುಗಳು ಮಠದ ಆವರಣದಲ್ಲಿರುವ ಶ್ರೀ ರಾಮಲಿಂಗೇಶ್ವರ ದೇವಸ್ಥಾನ ಮತ್ತು ಜಗದ್ಗುರು ಶ್ರೀ ಗಂಗಾಧರ ಶಿವಾಚಾರ್ಯ ಭಗವತ್ಪಾದರು ಅನುಷ್ಠಾನಗೊಂಡಿದ್ದ ಗವಿಯನ್ನು ಧಾರ್ಮಿಕ ಕೇಂದ್ರಗಳನ್ನಾಗಿ ರೂಪಿಸಿದ್ದಾರೆ. ಅಲ್ಲದೆ ಪಂಚಾಚಾರ್ಯರ ಮೂರ್ತಿಗಳನ್ನು ಸ್ಥಾಪಿಸಿ ನಿತ್ಯಪೂಜೆಗೆ ವ್ಯವಸ್ಥೆಮಾಡಿ ಧರ್ಮೋಪದೇಶವನ್ನು ಕೈಗೊಂಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಯೋಗಿರಾಜೇಂದ್ರ ಶಿವಾಚಾರ್ಯಸ್ವಾಮಿಗಳು, ಶ್ರೀಗಂಗಿಬಾವಿಮಠ,ಗಂಗಿಬಾವಿ, ಶಿಗ್ಗಾಂವ ತಾ, ಹಾವೇರಿಜಿಲ್ಲೆ.

ಜೊಂಡಲಗಟ್ಟಿ

ಶಿಗ್ಗಾಂವ ತಾಲ್ಲೂಕಿನ ಜೊಂಡಲಗಟ್ಟಿಯು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಹದಿನೆಂಟು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಜೊಂಡಲಗಟ್ಟಿ ಗ್ರಾಮದ ಹೊರಭಾಗದ ಅಡವಿಯಲ್ಲಿ ಸ್ಥಾಪನೆಗೊಂಡಿರುವ ವಿರಕ್ತಸಂಪ್ರದಾಯದ ಮಠವು ಪ್ರಾಚೀನ ಕಾಲದಿಂದಲೂ ಎಲೆಮರೆಯ ಕಾಯಿಯಂತೆ ಬೆಳೆದಿದೆ. ಜನಸಂಪರ್ಕದಿಂದ ದೂರ ಉಳಿದಿರುವ ಈ ಮಠವು ಆಧ್ಯಾತ್ಮಚಿಂತಕರಿಗೆ ಹಾಗೂ ತಪೋನಿಷ್ಠರಿಗೆ ಪ್ರಶಾಂತ ಸ್ಥಳವಾಗಿದೆ.

ಇಂತಹ ಪ್ರಶಾಂತ ಸ್ಥಳದಲ್ಲಿ ಪ್ರಾಚೀನ ಕಾಲದಲ್ಲಿ ವಿರಕ್ತಗುರುಗಳೊಬ್ಬರು (ಹೆಸರು ಲಭ್ಯವಿಲ್ಲ) ತಪೋನುಷ್ಠಾನಗೊಂಡು ಮಠ ಸ್ಥಾಪನೆಯನ್ನು ಮಾಡಿದ್ದಾರೆ. ಈ ಮಠದಲ್ಲಿ ಕರ್ತೃಗುರುಗಳ ನಂತರ ಅಧಿಕಾರವನ್ನು ನಡೆಸಿದ ಗುರುಗಳ ಬಗ್ಗೆ ಮಾಹಿತಿ ಲಭ್ಯವಿಲ್ಲ. ಮಠದ ಒಳಭಾಗದಲ್ಲಿ ಒಂದು ಗದ್ದುಗೆ ನಿರ್ಮಾಣಗೊಂಡಿದ್ದು ಈ ಗದ್ದುಗೆಯನ್ನು ಶ್ರೀಕುಂಟಯ್ಯ ಸ್ವಾಮಿಗಳ ಗದ್ದುಗೆಯೆಂದು ಹೇಳಲಾಗುವುದಲ್ಲದೆ, ಈ ವಿರಕ್ತಮಠಕ್ಕೆ'ಶ್ರೀ ಕುಂಟಯ್ಯಸ್ವಾಮಿ ಮಠ'ಎಂದು ಕರೆಯುತ್ತಾರೆ. ಪ್ರಸ್ತುತ ಅರವತ್ತು ವರ್ಷ ವಯಸ್ಸಿನ ವಯೋವೃದ್ಧರಾದ ಗುರುಗಳು ಅಧಿಕಾರವನ್ನು ನಡೆಸುತ್ತಿದ್ದಾರೆ. ಆಧ್ಯಾತ್ಮ ಚಿಂತಕರಾಗಿರುವ ಗುರುಗಳು ಲೌಖಿಕ ಪ್ರಪಂಚಕ್ಕೆ ಅಂಟಿಕೊಳ್ಳದೆ, ನಿರ್ಜನ ಪ್ರದೇಶದಲ್ಲಿ ಹುಲ್ಲುಗುಡಿಸಲಿನಲ್ಲಿ ತಪೋನುಷ್ಠಾನಕೈಗೊಂಡು ಈ ಪ್ರದೇಶದಲ್ಲಿ ಧರ್ಮಜಾಗೃತಗೊಳ್ಳುವಂತೆ ಮಾಡಿದ್ದಾರೆ.

ವಿಳಾಸ: ಶ್ರೀ ವಿರಕ್ತಮಠ (ಶ್ರೀ ಕುಂಟಯ್ಯಸ್ವಾಮಿ ಮಠ), ಜೊಂಡಲಗಟ್ಟಿ, ಶಿಗ್ಗಾಂವಿ ತಾಲ್ಲೂಕು, ಹಾವೇರಿ ಜಿಲ್ಲೆ.

ಧುಂಡಸಿ

ಶಿಗ್ಗಾಂವಿ ತಾಲ್ಲೂಕಿನ ಧುಂಡಸಿಯು ತಾಲ್ಲೂಕು ಕೇಂದ್ರದಿಂದ ವಾಯುವ್ಯದಿಕ್ಕಿಗೆ ಹತ್ತು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಧುಂಡಸಿ ಗ್ರಾಮದಲ್ಲಿ ಶ್ರೀ ವಿರಕ್ತಮಠವು ಇನ್ನೂರು ವರ್ಷಗಳ ಹಿಂದೆ ಶ್ರೀ ಪರದೇಶಿ ಸ್ವಾಮಿಗಳಿಂದ ಪ್ರಾರಂಭವಾಗಿರಬಹುದೆಂದು ಹೇಳಲಾಗುತ್ತಿದೆ. ಉತ್ತರದ ಕಡೆಯಿಂದ ಲೋಕಸಂಚಾರಮಾಡುತ್ತಾ ಆಗಮಿಸಿದ ಶ್ರೀ ಪರದೇಶಿ ಸ್ವಾಮಿಗಳು ಈ ಸ್ಥಳದಲ್ಲಿ ನೆಲೆಸಿ, ತಪೋನುಷ್ಠಾನಗೊಂಡು ಮಠವನ್ನು ಸ್ಥಾಪನೆ ಮಾಡಿದ್ದಾರೆ ಎಂದು ಹೇಳಲಾಗುತ್ತಿದೆ.

ಬೆಳೆದ ಮಠ: ಶ್ರೀ ಪರದೇಶಿ ಸ್ವಾಮಿಗಳಿಂದ ಪ್ರಾರಂಭಗೊಂಡ ಮಠದಲ್ಲಿ ನಿತ್ಯ ಶಿವಾನುಭವಗೋಷ್ಠಿಗಳು ಮತ್ತು ಅನ್ನದಾಸೋಹ ಕಾರ್ಯಗಳು ನಡೆಯತೊಡಗಿದವು. ಧುಂಡಸಿ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರು ಶ್ರೀ ವಿರಕ್ತ ಮಠದಲ್ಲಿ ನಡೆಯುತ್ತಿದ್ದ ಶಿವಾನುಭವ ಗೋಷ್ಠಿಗಳಲ್ಲಿ ಪಾಲ್ಗೊಂಡು, ಧರ್ಮಾಭಿಮಾನವನ್ನು ಬೆಳಸಿಕೊಳ್ಳತೊಡಗಿದರು. ಮಠ ಸ್ಥಾಪನೆಯಿಂದ ಧರ್ಮ ಜಾಗೃತಿಯನ್ನು ಉಂಟುಮಾಡಿದ ಶ್ರೀ ಪರದೇಶಿ ಸ್ವಾಮಿಗಳು ಜೀವಂತ ಸಮಾಧಿಯಾದರು. ಅವರ ನಂತರ

ಗದಗ ಜಿಲ್ಲೆ ಮುಂಡರಗಿಯಿಂದ ಆಗಮಿಸಿದ ಶ್ರೀ ಸಿದ್ಧರಾಮ ಸ್ವಾಮಿಗಳು ಧುಂಡಸಿಯ ಶ್ರೀ ವಿರಕ್ತಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡು ಮಠವನ್ನು ಹಿರಿಯ ಗುರುಗಳು ಬೆಳೆಸಿದ ರೀತಿಯಲ್ಲಿಯೇ ಬೆಳೆಸಿ, ಧಾರ್ಮಿಕ ಕಾರ್ಯಗಳನ್ನು ಕೈಗೊಂಡು ಮಠವನ್ನು ಅಭಿವೃದ್ಧಿಪಡಿಸಿ ಲಿಂಗೈಕ್ಯರಾಗಿದ್ದಾರೆ. ಶ್ರೀ ಸಿದ್ಧರಾಮ ಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದವರು ಶ್ರೀ ಕುಮಾರ ಸ್ವಾಮಿಗಳು. ಹಿರೇಕೆರೂರು ತಾಲ್ಲೂಕಿನ ಸೀತಿಕೊಂಡದಲ್ಲಿ ಜನಿಸಿ, ಶಿಕಾರಿಪುರ ತಾಲ್ಲೂಕಿನ ಕಪ್ಪನಹಳ್ಳಿ ಆಶ್ರಮದಲ್ಲಿ ಆಶ್ರಯವನ್ನು ಪಡೆದವರು. ನಂತರ ಶಿವಯೋಗ ಮಂದಿರದಲ್ಲಿ ಧಾರ್ಮಿಕ ವಿದ್ಯಾಭ್ಯಾಸವನ್ನು ಕಲಿತು, ಇಪ್ಪತ್ತೈದು ವರ್ಷಗಳ ಹಿಂದೆ ಧುಂಡಸಿ ಗ್ರಾಮಕ್ಕೆ ಬಂದು ಭಕ್ತರ ಅಪೇಕ್ಷೆಯಂತೆ ಪಟ್ಟಾಧಿಕಾರವನ್ನು ವಹಿಸಿಕೊಂಡಿರುತ್ತಾರೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಪರದೇಶಿ ಸ್ವಾಮಿಗಳ ಕಾಲದಲ್ಲಿ ನಿರ್ಮಾಣಗೊಂಡ ಮಣ್ಣಿನ ಕಟ್ಟಡ ಇಂದಿಗೂ ಸುಸ್ಥಿತಿಯಲ್ಲಿದ್ದು ಎರಡು ಅಂತಸ್ತಿನಲ್ಲಿ ನಿರ್ಮಿಸಲಾಗಿದೆ. ಶ್ರೀ ಕುಮಾರ ಸ್ವಾಮಿಗಳು ಮಠದ ಆಸ್ತಿಯಾಗಿದ್ದ ಜಮೀನನ್ನು ತಮ್ಮ ಸ್ವಾಧೀನಕ್ಕೆ ಪಡೆದುಕೊಂಡು ಗುತ್ತಿಗೆಗೆ ನೀಡಿದ್ದಾರೆ. ಮಠದ ಮುಂದಿನ ವಿಶಾಲ ಜಾಗದ ಶುಚಿತ್ವವನ್ನು ಕಾಪಾಡಿಕೊಂಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಕರ್ತೃಗದ್ದುಗೆ ಹಾಗೂ ಮಠದ ಹೊರಭಾಗದಲ್ಲಿರುವ ಶ್ರೀ ಸಿದ್ಧರಾಮ ಸ್ವಾಮಿಗಳ ಗದ್ದುಗೆಗೆ ನಿತ್ಯಪೂಜೆಯನ್ನು ನಡೆಸಲಾಗುತ್ತಿದೆ. ಅಮಾವಾಸ್ಯೆ ಮತ್ತು ಹುಣ್ಣಿಮೆಗಳಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಶಿವರಾತ್ರಿಯಂದು ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ಮಾಡಲಾಗುತ್ತಿದೆ. ಈ ವಿಶೇಷ ಸಂದರ್ಭಗಳಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಸದಾ ಸಂಚಾರಮೂರ್ತಿಗಳಾದ ಶ್ರೀ ಕುಮಾರ ಸ್ವಾಮಿಗಳು ಶಿವಪೂಜೆಯ ಬಗ್ಗೆ ಭಕ್ತರಲ್ಲಿ ತಿಳುವಳಿಕೆಯನ್ನು ಮೂಡಿಸಿ ಪೂಜಾ ವಿಧಾನಗಳನ್ನು ಪ್ರಚಾರಪಡಿಸಿದ್ದಾರೆ. ಗುರುಗಳ ಧರ್ಮನಿಷ್ಠೆಯನ್ನು ಗುರುತಿಸಿದ ಆಡೂರು ಭಕ್ತರು ವಿರಕ್ತಮಠವನ್ನು ಗುರುಗಳ ವಶಕ್ಕೆ ಒಪ್ಪಿಸಲು ನಿರ್ಧಾರವನ್ನು ಕೈಗೊಂಡಿದ್ದಾರೆ. ವೀರಶೈವ ಧರ್ಮದ ಪ್ರಚಾರಕ್ಕೆ ನಾಡಿನಾದ್ಯಂತ ಸಂಚರಿಸಿ ಧರ್ಮ ಬೆಳೆಯಲು ನೆರವಾಗಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಕುಮಾರ ಸ್ವಾಮಿಗಳು, ಶ್ರೀ ವಿರಕ್ತಮಠ, ಧುಂಡಸಿ, ಶಿಗ್ಗಾಂವಿ ತಾಲ್ಲೂಕು, ಹಾವೇರಿ ಜಿಲ್ಲೆ.

ಬಂಕಾಪುರ

ಶಿಗ್ಗಾಂವ ತಾಲ್ಲೂಕಿನ ಬಂಕಾಪುರವು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಏಳು ಕಿ.ಮೀ.ದೂರದಲ್ಲಿದೆ. ಈ ಗ್ರಾಮವು ೧೯೩೨ ಕ್ಕೂ ಹಿಂದೆ ತಾಲ್ಲೂಕು ಕೇಂದ್ರ ಸ್ಥಳವಾಗಿ ಬೆಳೆದು ಹೆಸರು ಮಾಡಿತ್ತು. ದ್ವಾಪರಯುಗದಲ್ಲಿ ಈ ಊರು 'ಏಕಚಕ್ರನಗರ'ವೆಂದು ಪ್ರಸಿದ್ಧಿಯನ್ನು ಪಡೆದಿತ್ತು. ಇತಿಹಾಸದ ರಾಷ್ಟ್ರಕೂಟರ ಸಾಮಂತನಾದ ಚನ್ನಕೇತನು ಬಂಕಾಪುರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು. ಕ್ರಿ.ಶ.೧೧೪೧ರಲ್ಲಿ ಹೊಯ್ಸಳರ ದೊರೆ ವಿಷ್ಣುವರ್ಧನನು ಬಂಕಾಪುರದಲ್ಲಿಯೇ ಮೃತಪಟ್ಟನೆಂದು ಹೇಳಲಾಗಿದೆ. ೧೩೩೬ರಲ್ಲಿ ವಿಜಯನಗರದ ಆಡಳಿತಕ್ಕೆ ಸೇರಿ, ೧೪೪೩ರಲ್ಲಿ ಬಹುಮನಿ ಸುಲ್ತಾನರ ಆಳ್ವಿಕೆಗೆ ಒಳಪಟ್ಟಿತು. ನಂತರ ಕೆಳದಿ ಅರಸರ ಆಡಳಿತಕ್ಕೆ ಒಳಪಟ್ಟು ಐತಿಹಾಸಿಕವಾಗಿ ಮಹತ್ವವನ್ನು ಪಡೆದ ಬಂಕಾಪುರವು, ಧಾರ್ಮಿಕ ಕ್ಷೇತ್ರದಲ್ಲಿಯೂ ಉನ್ನತ ಸ್ಥಾನವನ್ನು ಪಡೆದಿದೆ. ರಾಷ್ಟ್ರಕೂಟರ ಕಾಲದಲ್ಲಿ ವೀರಶೈವ ಧರ್ಮದ ಪ್ರಚಾರಕ್ಕೆ ಹೆಚ್ಚು ಒತ್ತು ಸಿಕ್ಕಿತು. ನಂತರ ಕಲ್ಯಾಣಿ ಚಾಲುಕ್ಯರು ವೀರಶೈವ ಧರ್ಮದ ಉನ್ನತಿಗೆ ಶ್ರಮಿಸಿ ಅನೇಕ ದೇವಸ್ಥಾನಗಳು ಮತ್ತು ಮಠ ಮಂದಿರಗಳು ಸ್ಥಾಪನೆ ಯಾಗುವಲ್ಲಿ ನೆರವಾಗಿದ್ದಾರೆ. ಈ ರೀತಿ ಐತಿಹಾಸಿಕವಾಗಿ ಮತ್ತು ಧಾರ್ಮಿಕವಾಗಿ ಹೆಸರು ಪಡೆದ ಬಂಕಾಪುರದಲ್ಲಿ ನಾಲ್ಕು ಮಠಗಳು ಸ್ಥಾಪನೆಯಾಗಿದ್ದವೆಂದು ಹೇಳಲಾಗುತ್ತಿದೆ. ಆದರೆ ಶೋಧನೆ ಮಾಡಿದಾಗ ಪ್ರಾಚೀನ ಕಾಲದ ಪರಂಪರೆಯುಳ್ಳ ಶ್ರೀ ಅರಳೆಲೆ ಹಿರೇಮಠ ಮತ್ತು ಶ್ರೀ ಗುರುಭೂತ ಭುಜಲಿಂಗೇಶ್ವರ ಗಚ್ಚಿನಮಠಗಳು ಮಾತ್ರ ಅಸ್ತಿತ್ವದಲ್ಲಿರುವುದು ಗೋಚರವಾಗುತ್ತಿದೆ.

ಅರಳೆಲೆ ಹಿರೇಮಠ: ಬಂಕಾಪುರದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಅರಳೆಲೆ ಹಿರೇಮಠವು ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿ ಬೆಳೆದಿದೆ.ಕೊಲ್ಲಿಪಾಕಿಯಿಂದ ಬಾಳೆಹೊನ್ನೂರಿಗೆ ಆಗಮಿಸಿದ ಶ್ರೀ ರೇಣುಕಾಚಾರ್ಯರು ಅಗಸ್ತ್ಯಮುನಿಗೆ ಉಪದೇಶವನ್ನು ನೀಡಿ ಉತ್ತರದ ಕಡೆಗೆ ಲೋಕಸಂಚಾರಕ್ಕೆಂದು ಹೊರಟ ಸಂದರ್ಭದಲ್ಲಿ ಬಂಕಾಪುರದ

ಸಮೀಪ ಗುಡ್ಡದಚನ್ನಾಪುರದಲ್ಲಿ ಅನುಷ್ಠಾನಗೊಂಡು, ಈ ಕ್ಷೇತ್ರದಲ್ಲಿ ವೀರಶೈವ ಧರ್ಮವು ಬೆಳೆಯಲು ಭಕ್ತರಿಗೆ ನೆರವಾಗ ಬೇಕೆಂಬ ಕಾರಣದಿಂದ ಬಂಕಾಪುರ ಗ್ರಾಮದಲ್ಲಿ ಮಠವನ್ನು ಸ್ಥಾಪಿಸಿ ಉತ್ತರಾಧಿಕಾರಿಗಳನ್ನು ನೇಮಿಸಿ ಮುಂದೆ ಹೊರಡುತ್ತಾರೆ ಎಂಬ ಹೇಳಿಕೆ ಪ್ರಚುರದಲ್ಲಿದೆ.

ಅರಳೆಲೆಮರದ ದಂಡ: ಅರಳೆಲೆಮರದ (ಅಶ್ವತ್ಥಮರದ) ಕಟ್ಟಿಗೆಯಿಂದ ಮಾಡಿದ ದಂಡಕ್ಕೆ ಹಸಿರು ವಸ್ತ್ರದಿಂದ ಧ್ವಜವನ್ನು ಮಾಡಿ ಮಠದ ಅಧಿಕಾರಿಯ ಕೈಗೆ ನೀಡಿ, ಧರ್ಮಪ್ರಚಾರವನ್ನು ಮಾಡಲು ಆಶೀರ್ವದಿಸಿದ.ಕಾರಣ ಈ ಮಠಕ್ಕೆ 'ಶ್ರೀಅರಳೆಲೆ ಹಿರೇಮಠ' ಎಂಬ ಹೆಸರು ಬರಲು ಕಾರಣವಾಯಿತು. ಈ ಮಠವು ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದು ಬಂದಿದೆ. ಶ್ರೀರಂಭಾಪುರಿ ಜಗದ್ಗುರುಗಳು ಗುಡ್ಡದ ಚನ್ನಾಪುರ ಗ್ರಾಮದಲ್ಲಿ ಪ್ರತಿವರ್ಷ ತಪೋನುಷ್ಠಾನ ಕೈಗೊಳ್ಳುವ ಸಂದರ್ಭದಲ್ಲಿ ಸಂಪೂರ್ಣ ಉಸ್ತುವಾರಿಯನ್ನು ಬಂಕಾಪುರದ ಶ್ರೀ ಅರಳೆಲೆಮಠವೇ ನೋಡಿಕೊಳ್ಳುತ್ತದೆ. ಈ ರೀತಿ ಮೂಲ ಪೀಠದ ಸಂಬಂಧವನ್ನು ಉಳಿಸಿಕೊಂಡು, ಪರಂಪರಾಗತ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿರುವ ಬಂಕಾಪುರಮಠವು ಪ್ರಸಿದ್ಧಿಗೆ ಬಂದಿದೆ.

ಮಠದಪರಂಪರೆ: ಶ್ರೀ ರೇಣುಕಾಚಾರ್ಯರಿಂದ ಸ್ಥಾಪಿತಗೊಂಡ ಶ್ರೀ ಅರಳೆಲೆಮಠದ ಪರಂಪರೆಯಲ್ಲಿ ನೂರುಜನ ಗುರುಗಳು, ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆಂದು ಹೇಳಲಾಗಿದ್ದರೂ ಇದಕ್ಕೆ ಸಂಬಂಧಪಟ್ಟ ಆಧಾರಗಳು ದೊರೆತಿಲ್ಲ. ಲಭ್ಯವಿರುವ ಆಧಾರದ ಹಿನ್ನೆಲೆಯಲ್ಲಿ ಈ ಕೆಳಗಿನ ಕೆಲವು ಹೆಸರುಗಳನ್ನು ದಾಖಲಿಸಬಹುದಾಗಿದೆ.

೧. ಷ.ಬ್ರ.ಶ್ರೀ ಚನ್ನಬಸವ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಕಿಡಿಗಣ್ಣ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಗುರುಪಾದ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ರೇವಣಸಿದ್ದೇಶ್ವರ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಈ ರೀತಿ ಶ್ರೀ ಅರಳೆಲೆಮಠದ ಪರಂಪರೆಯು ಬೆಳೆದು ಬಂದಿದೆ. ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳು ಕ್ರಿ.ಶ.೧೯೦೦ರಲ್ಲಿ ತಮ್ಮ ಅರವತ್ತನೆಯ ವಯಸ್ಸಿನಲ್ಲಿ ಮಠದ ಉಸ್ತುವಾರಿಯನ್ನು ನೋಡಿಕೊಳ್ಳಲು ತಮ್ಮ ಉತ್ತರಾಧಿಕಾರಿಗಳ ಆಯ್ಕೆಯಲ್ಲಿ ತೊಡಗಿದ್ದರು. ಈ ಸಂದರ್ಭದಲ್ಲಿ ಹಾನಗಲ್ಲು ತಾಲ್ಲೂಕಿನ ಕೂಸನೂರ ಗ್ರಾಮದಲ್ಲಿ ಶ್ರೀ ಚನ್ನವೀರಯ್ಯ ಮತ್ತು ಶ್ರೀಮತಿ ಸಾವಿತ್ರಮ್ಮನವರ ಮಗನಾಗಿ ಜನಿಸಿದ್ದ ಶ್ರೀ ಗದ್ದಿಗಯ್ಯನವರನ್ನು ನೇಮಕ ಮಾಡಿಕೊಳ್ಳಬೇಕೆಂಬ ಹಂಬಲದಿಂದ ಕೂಸನೂರ ಗ್ರಾಮಕ್ಕೆ ಆಗಮಿಸಿದರು. ಶ್ರೀ ಗದ್ದಿಗಯ್ಯನವರು ಹರಪನಹಳ್ಳಿಯ ತಗ್ಗಿನ ಮಠದಲ್ಲಿ ಆಶ್ರಯವನ್ನು ಪಡೆದು ವಿದ್ಯಾಭ್ಯಾಸವನ್ನು ಮಾಡುತ್ತಿದ್ದರು. ಬಾಲ್ಯದಲ್ಲಿಯೇ ಶಿವಪೂಜಾನಿಷ್ಠರಾಗಿದ್ದ ಶ್ರೀ ಗದ್ದಿಗಯ್ಯನವರು ಗುರುಹಿರಿಯರ ಜತೆ ವಿನಮ್ರ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದರು.ಈ ವರ್ತನೆಯು ಅರಳೆಲೆ ಮಠದ ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳಿಗೆ ತಮ್ಮ ಶಿಷ್ಯನನ್ನಾಗಿ ಮಾಡಿಕೊಳ್ಳಬೇಕೆಂಬ ನಿರ್ಧಾರವನ್ನು ಕೈಗೊಳ್ಳಲು ಕಾರಣವಾಯಿತು.

ಉತ್ತರಾಧಿಕಾರಿಯ ಆಯ್ಕೆ: ಶ್ರೀ ಗುರುಪಾದ ಶಿವಾಚಾರ್ಯ ಸ್ವಾಮಿಗಳು ತಮ್ಮ ಉತ್ತರಾಧಿಕಾರಿಗಳನ್ನು ಆಯ್ಕೆಮಾಡಿ ಕೊಂಡು ಮಠದ ಭಕ್ತರಿಗೆ ತಿಳಿಸಿ ಉತ್ತರಾಧಿಕಾರಿಗಳನ್ನು ವಿಜೃಂಭಣೆಯಿಂದ ಬಂಕಾಪುರಕ್ಕೆ ಸ್ವಾಗತಿಸಿಕೊಳ್ಳಲು ತಿಳಿಸಿದರು. ಗುರುಗಳ ಅಪ್ಪಣೆಯಂತೆ ಬಂಕಾಪುರದ ಭಕ್ತರು ಕೂಸನೂರು ಗ್ರಾಮಕ್ಕೆ ಬಂದು ಶ್ರೀ ಗದ್ದಿಗಯ್ಯ ದೇವರಿಗೆ ಆಹ್ವಾನವಿತ್ತು ಬರಮಾಡಿ ಕೊಂಡರು. ೧೯೧೩ (ಶಾಲಿವಾಹನಶಕೆ ೧೮೩೪) ರಲ್ಲಿರಂಭಾಪುರಿ ಪೀಠದ ಜಗದ್ಗುರುಗಳಾದ ಶ್ರೀ ಶಿವಾನಂದ ರಾಜ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳ ದಿವ್ಯಸಾನ್ನಿಧ್ಯದಲ್ಲಿ ಶ್ರೀ ಗದ್ದಿಗಯ್ಯನವರಿಗೆ ಶ್ರೀ ರುದ್ರಮುನಿ ಶಿವಾಚಾರ್ಯ ರೆಂದು ಅಭಿದಾನವಿತ್ತು, ಶಿಗ್ಗಾಂವ ನಗರದ ಹಿರೇಮಠದ ಶ್ರೀ ಮಹಾಂತೇಶ ಶಿವಾಚಾರ್ಯರಿಂದ ಪಟ್ಟಾಧಿಕಾರದ ಅನುಗ್ರಹ ವನ್ನು ಕೊಡಿಸಲಾಯಿತು. ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಪರಂಪರಾಗತ ಮಠದ ಪರಂಪರೆಯ ತೊಂಬತ್ತೊಂಬತ್ತ

ನೆಯ ಗುರುಗಳಾಗಿ ಪಟ್ಟಾಧಿಕಾರವನ್ನು ವಹಿಸಿಕೊಂಡು, ತಮ್ಮ ತಪೋಸಿದ್ಧಿಯ ಫಲದಿಂದ ಅನೇಕ ಪವಾಡಗಳನ್ನು ಮಾಡಿ ಈ ಪ್ರಾಂತ್ಯದ ಭಕ್ತರನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಪ್ರೇರಣೆಯನ್ನು ನೀಡಿದರು.

ಶ್ರೀ ರುದ್ರಮುನಿ ಶಿವಾಚಾರ್ಯರು ತಮ್ಮ ಸುದೀರ್ಘವಾದ ಆಡಳಿತದಲ್ಲಿ ಮಠವನ್ನು ಧಾರ್ಮಿಕವಾಗಿ ಅಭಿವೃದ್ಧಿ ಪಡಿಸಿ ದಂತೆಯೇ, ಆರ್ಥಿಕವಾಗಿಯೂ ಸದೃಢಗೊಳಿಸಲು ಮುಂದಾಗಿ ಮಠಕ್ಕೆ ಆಸ್ತಿಯನ್ನು ರೂಢಿಸಿದರು. ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳ ಶಿವಪೂಜಾನುಷ್ಠಾನ ಮತ್ತು ಮಠದ ಧಾರ್ಮಿಕ ಸತ್ಕಾರ್ಯಗಳಿಗೆ ಬಳಕೆಯಾಗಲು ಗುರುಗಳ ಪ್ರಭಾವಕ್ಕೆ ಒಳಗಾದ ಅನೇಕ ಭಕ್ತರು ಮಠಕ್ಕೆ ಆಸ್ತಿಯನ್ನು ಉಂಬಳಿಯಾಗಿ ನೀಡಿರುತ್ತಾರೆ. ಗುರುಗಳು ತಮ್ಮ ಕಾಲದಲ್ಲಿ ದೊರೆತ ಎಲ್ಲಾ ಅವಕಾಶಗಳನ್ನು ಸದ್ವಿನಿಯೋಗಪಡಿಸಿಕೊಂಡು ಮಠವನ್ನು ಉನ್ನತೋನ್ನತಿಗೆ ಕೊಂಡೊಯ್ದರು. ತಮ್ಮ ಎಪ್ಪತ್ತೆಂಟನೆಯ ವರ್ಷದಲ್ಲಿ ತಮ್ಮ ಸಹೋದರ ಸಂಬಂಧಿಯಾದ ಶ್ರೀ ಸಿದ್ಧಲಿಂಗಯ್ಯಸ್ವಾಮಿ ಮತ್ತು ಶ್ರೀಮತಿ ಕಾಶಮ್ಮನವರ ಪುತ್ರರಾಗಿ ಜನಿಸಿದ್ದ ಶ್ರೀ ಗುರುಪಾದದೇವರನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ೧೯೬೩ರ ಜುಲೈ ಇಪ್ಪತ್ತೇಳರಂದು ವಿಧ್ಯುಕ್ತವಾಗಿ ನೇಮಕಮಾಡಿಕೊಂಡರು.

ಪಟ್ಟಾಧಿಕಾರ: ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ತಮ್ಮ ಮರಣವನ್ನು ಮೊದಲೇ ಅರಿತು ತಮ್ಮ ಉತ್ತರಾಧಿಕಾರಿ ಗಳನ್ನು ನೇಮಕಮಾಡಿ, ೧೯೭೪ರ ಜನವರಿ ಹದಿನೆಂಟರಂದು ಲಿಂಗೈಕ್ಯರಾದರು. ಉತ್ತರಾಧಿಕಾರಿಗಳಾಗಿ ಈ ಮೊದಲೇ ನೇಮಕಗೊಂಡಿದ್ದ ಶ್ರೀ ಗುರುಪಾದ ದೇವರಿಗೆ ಶ್ರೀ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳೆಂದು ಅಭಿದಾನ ಮಾಡಿ ೧೯೮೭ ರ ಮೇ ಹನ್ನೊಂದರಂದು ರಂಭಾಪುರಿ ಪೀಠದ ಜಗದ್ಗುರು ಶ್ರೀ ಪ್ರಸನ್ನ ರೇಣುಕ ವೀರ ರುದ್ರಮುನಿದೇವ ಶಿವಾಚಾರ್ಯ ಸ್ವಾಮಿಗಳ ಸಾನ್ನಿಧ್ಯದಲ್ಲಿ ಪಟ್ಟಾಧಿಕಾರವನ್ನು ಮಾಡಲಾಯಿತು.

ಅಭಿವೃದ್ಧಿ ಕಾರ್ಯಗಳು: ಲಿಂಗೈಕ್ಯ ಹಿರಿಯ ಗುರುಗಳಾದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಮಠವು ಅನೇಕ ಅಭಿವೃದ್ಧಿ ಕಾರ್ಯಗಳನ್ನು ಸಾಧಿಸಿತು. ನಂತರ ಬಂದ ಶ್ರೀ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳೂ ಸಹ ತಮ್ಮ ಕ್ರಿಯಾತ್ಮಕ ಚಟುವಟಿಕೆಗಳಿಂದ ಮಠವನ್ನು ಸರ್ವಾಂಗೀಣ ಅಭಿವೃದ್ಧಿಯತ್ತ ಕೊಂಡೊಯ್ಯುತ್ತಿದ್ದಾರೆ. ಮಠದ ಆವರಣದಲ್ಲಿ ರೇಣುಕ ಮಂದಿರವನ್ನು ನಿರ್ಮಾಣಮಾಡಿ, ಮಠದ ಕಟ್ಟಡವನ್ನು ನವೀಕರಣಗೊಳಿಸಿದ್ದಲ್ಲದೇ ಮಠದ ಸಮುಚ್ಚಯದಲ್ಲಿ ಕಲ್ಯಾಣ ಮಂಟಪವನ್ನು ನಿರ್ಮಾಣ ಮಾಡಿದ್ದಾರೆ. ಮಠದ ಆಸ್ತಿಯನ್ನು ಅಭಿವೃದ್ಧಿಪಡಿಸಿ ಹೆಚ್ಚು ಉತ್ಪನ್ನ ಬರುವಂತೆ ಮಾಡಿದ್ದಾರೆ.

ಧಾರ್ಮಿಕ ಕಾರ್ಯಗಳು: ನಿತ್ಯ ಕರ್ತೃಗದ್ದುಗೆಗೆ, ಇತರೆ ಗದ್ದುಗೆಗಳಿಗೆ ಹಾಗೂ ಶ್ರೀ ರೇಣುಕಮೂರ್ತಿಗೆ ಪೂಜೆಯನ್ನು ಮಾಡಲಾಗುತ್ತಿದೆ. ಅಮಾವಾಸ್ಯೆ ಮತ್ತು ಹುಣ್ಣಿಮೆ, ಶ್ರಾವಣ ಮತ್ತು ಕಾರ್ತೀಕ ಮಾಸಗಳಲ್ಲಿ ರುದ್ರಾಭಿಷೇಕ, ಶಿವರಾತ್ರಿಯಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ವರ್ಷಕ್ಕೊಮ್ಮೆ ಹಿರಿಯ ಗುರುಗಳ ಸಂಸ್ಮರಣಾ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಈ ಸಂದರ್ಭಗಳಲ್ಲಿ ಸಾವಿರಾರು ಜನರಿಗೆ ಅನ್ನದಾಸೋಹವನ್ನು ನಡೆಸಲಾಗುತ್ತಿದೆ. ಗುರುಗಳು ಭಕ್ತರ ಮನೆಯಲ್ಲಿ ನಡೆಯುವ ಧಾರ್ಮಿಕ ಆಚರಣೆಗಳಲ್ಲಿ ಪಾಲ್ಗೊಂಡು ಆಶೀರ್ವದಿಸುವುದು ವಾಡಿಕೆಯಾಗಿದೆ.

ವಿಳಾಸ: ಷ.ಬ್ರ.ಶ್ರೀ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಅರಳೆಲೆಮಠ, ಬಂಕಾಪುರ, ಶಿಗ್ಗಾಂವಿ ತಾ, ಹಾವೇರಿಜಿಲ್ಲೆ.

ಗುರು ಭೂತಭುಜಲಿಂಗೇಶ್ವರ ಗಚ್ಚಿನಮಠ: ಬಂಕಾಪುರದ ಮಧ್ಯಭಾಗದಲ್ಲಿರುವ ಶ್ರೀ ಗುರು ಭೂತಭುಜಲಿಂಗೇಶ್ವರಗಚ್ಚಿನ ಮಠವು ರಂಭಾಪುರಿ ಪೀಠದ ಶಾಖಾಮಠವಾಗಿದೆ. ಶ್ರೀ ಗುರುಭೂತಭುಜಲಿಂಗೇಶ್ವರ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟು, ಧಾರ್ಮಿಕ ಹಾಗೂ ಆಧ್ಯಾತ್ಮಿಕ ಕಾರ್ಯಗಳಿಂದ ಭಾರಿ ಪ್ರಭಾವಿ ಮಠವಾಗಿ ಬೆಳೆದಿತ್ತು. ಪ್ರಸ್ತುತ ಮಠಾಧೀಶ್ವರರು ಯಾರೂ ಇಲ್ಲದ ಕಾರಣ ಮಠವು ಖಾಲಿ ಉಳಿದಿದೆ. ಮಠದ ಆವರಣದಲ್ಲಿ ನಿರ್ಮಾಣಗೊಂಡಿರುವ ಕರ್ತೃಗದ್ದುಗೆಗೆ ಮಠದ ವಂಶಸ್ಥರು ನಿತ್ಯ ಪೂಜೆಯನ್ನು ಸಲ್ಲಿಸುತ್ತಾ ಅಸ್ತಿತ್ವವನ್ನು ಉಳಿಸಿಕೊಂಡಿದ್ದಾರೆ. ಶ್ರೀ ಗುರು ಭೂತಭುಜಲಿಂಗೇಶ್ವರ ಸ್ವಾಮಿಗಳು ಮಠವನ್ನು ಸ್ಥಾಪಿಸಿ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ, ವೀರಶೈವ ಧರ್ಮ ಬೆಳೆಯುವಂತೆ ಮಾಡಿ ಜೀವಂತ ಸಮಾಧಿಯಾದರು.

ಶಿಗ್ಗಾಂವಿ

ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲ್ಲೂಕು ಕೇಂದ್ರ ಸ್ಥಳ. ಜಿಲ್ಲಾ ಕೇಂದ್ರದಿಂದ ವಾಯುವ್ಯ ದಿಕ್ಕಿಗೆ ಮೂವತ್ತು ಕಿ.ಮೀ. ದೂರದಲ್ಲಿದೆ. ಸಿದ್ಧರು ವಾಸಿಸುತ್ತಿದ್ದ ಕಾರಣದಿಂದ ಸಿದ್ಧಗಾಂವ ಎಂದು ಹೆಸರಾಗಿತ್ತು. ಕಾಲಾನಂತರ ಸಂಸ್ಕೃತೀಕರಣ ಗೊಂಡು ಈ ಹೆಸರು ಶಿಗ್ಗಾಂವ ಎಂದು ರೂಪಾಂತರಗೊಂಡಿದೆ. ಈ ಪಟ್ಟಣದಲ್ಲಿ ಹನ್ನೆರಡನೆಯ ಶತಮಾನಕ್ಕೂ ಮೊದಲು ಸ್ಥಾಪನೆ ಯಾಗಿರಬಹುದೆಂದು ಹೇಳಲಾಗುವ ವಿರಕ್ತ ಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಶಿಗ್ಗಾಂವಿ ಪಟ್ಟಣದ ಮಧ್ಯಭಾಗದಲ್ಲಿರುವ ಕುಮಾರ ಸಮಯದ, ವಿರಕ್ತ ಸಂಪ್ರದಾಯದ ಈ ಮಠವನ್ನು ಶ್ರೀ ಮುರುಘೇಂದ್ರರು ಸ್ಥಾಪಿಸಿರುವರೆಂದು ಹೇಳಲಾಗುತ್ತಿದೆ.

ಮಠ ಸ್ಥಾಪನೆ: ಸಂಸಾರದ ಬಂಧನದಲ್ಲಿ ಸಿಲುಕಿಕೊಂಡಿದ್ದ ಶ್ರೀ ಮುರುಘೇಂದ್ರರು ತಮ್ಮ ಆಧ್ಯಾತ್ಮದ ಆಲೋಚನೆಗಳಿಂದ ವೈರಾಗ್ಯವನ್ನು ತಾಳಿ,ಸಂಸಾರದ ಬಂಧನದಿಂದ ಹೊರಬಂದು ಮಠವನ್ನು ಸ್ಥಾಪನೆಮಾಡುತ್ತಾರೆ. ಶಿವಪೂಜಾನಿಷ್ಠರಾಗಿ, ಲೌಕಿಕ ಜಗತ್ತಿನಲ್ಲಿ ಆಧ್ಯಾತ್ಮದ ಬೀಜವನ್ನು ಬಿತ್ತಿ ಸಂಸ್ಕಾರವಂತ ನಾಡನ್ನು ಬೆಳೆಸಲು ಶ್ರೀ ಮುರುಘೇಂದ್ರರು ಶ್ರಮಿಸಿದರು. ಲೋಕೋದ್ಧಾರದ ಕನಸುಗಳನ್ನು ಕಾಣುತ್ತಾ ಭಕ್ತರಕಷ್ಟಕಾರ್ಪಣ್ಯಗಳಿಗೆ ನೆರವಾಗಿ ಭಕ್ತರಿಗೆ ಆತ್ಮಸ್ಥೈರ್ಯವನ್ನು ನೀಡುತ್ತಿದ್ದರು. ದಿನ ಕಳೆದಂತೆ ಶ್ರೀ ಮುರುಘೇಂದ್ರ ಸ್ವಾಮಿಗಳ ಪ್ರಭಾವ ಹೆಚ್ಚಾಗಿ ಮಠದ ಹೆಸರು ಪೆಚ್ಚು ಪ್ರಚಾರಕ್ಕೆ ಒಳಗಾಯಿತು.

ಬೆಳೆದ ಪರಂಪರೆ: ಶ್ರೀ ಮುರುಘೇಂದ್ರರಿಂದ ಪ್ರಾರಂಭಗೊಂಡ ಈ ಮಠದ ಪರಂಪರೆಯಲ್ಲಿ ಪಟ್ಟಾಧಿಕಾರಕ್ಕೆ ಬಂದಿರುವ ಗುರುಗಳು ಮೂಲ ಗುರುಗಳ ಹೆಸರನ್ನು ಅಭಿಧಾನವಾಗಿ ಪಡೆದು ಪಟ್ಟಾಧಿಕಾರಕ್ಕೆ ಬಂದಿರುತ್ತಾರೆ. ಆದರೆ ಒಂಬತ್ತನೆಯ ಗುರುಗಳ ಕಾಲದಿಂದ ಪಟ್ಟಾಧಿಕಾರ ಪಡೆದ ಗುರುಗಳ ಹೆಸರು ಬದಲಾವಣೆಗೊಂಡಿರುವುದು ಕಂಡುಬರುತ್ತದೆ.

೧. ಶ್ರೀ ಮುರುಘೇಂದ್ರ ಸ್ವಾಮಿಗಳು
೨. ಶ್ರೀ ಮನಿ.ಪ್ರ. ಎರಡನೆಯ ಮುರುಘೇಂದ್ರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಮೂರನೆಯ ಮುರುಘೇಂದ್ರಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ನಾಲ್ಕನೆಯ ಮುರುಘೇಂದ್ರಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಐದನೆಯ ಮುರುಘೇಂದ್ರಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಆರನೆಯ ಮುರುಘೇಂದ್ರಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಏಳನೆಯ ಮುರುಘೇಂದ್ರ ಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಎಂಟನೆಯ ಮುರುಘೇಂದ್ರಸ್ವಾಮಿಗಳು
೯. ಶ್ರೀ ಮ.ನಿ.ಪ್ರ. ಸಂಗನಬಸವಸ್ವಾಮಿಗಳು
೧೦. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು
೧೧. ಶ್ರೀ ಮ.ನಿ.ಪ್ರ. ಗುರುಸಿದ್ಧದೇವರು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ಮುರುಘೇಂದ್ರ ಸ್ವಾಮಿಗಳ ನಂತರ ಬಂದಂತಹ ಏಳು ಜನ ಗುರುಗಳ ಬಗ್ಗೆ ವಿವರಗಳು ಲಭ್ಯವಿಲ್ಲ. ಎಂಟನೆಯ ಗುರುಗಳಾದ ಶ್ರೀ ಮುರುಘೇಂದ್ರ ಸ್ವಾಮಿಗಳು ಮಹಾತಪಸ್ವಿ ಗಳು ಹಾಗೂ ಆಯುರ್ವೇದ ಪಂಡಿತರಾಗಿದ್ದು, ಧರ್ಮ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಹೆಚ್ಚು ಹೆಸರು ಪಡೆದು ಮಠವನ್ನು ಅಭಿವೃದ್ಧಿಪಡಿಸಿದರು. ನಂತರ ಬಂದ ಶ್ರೀ ಸಂಗನಬಸವ ಸ್ವಾಮಿಗಳ ಕಾಲದಿಂದ ಪರಂಪರೆಯಿಂದ ಬಂದಂತಹ ಕರ್ತೃಗುರುಗಳ ಹೆಸರಿನ ಬದಲಿಗೆ ಬೇರೆಯದಾದ ಹೆಸರಿನಿಂದ ಅಭಿದಾನಪಡೆದು, ಅಧಿಕಾರಕ್ಕೆ ಬರುವ ಸಂಪ್ರದಾಯ ಬೆಳೆಯಿತು. ಶ್ರೀಸಂಗನ ಬಸವ ಸ್ವಾಮಿಗಳ ನಂತರ ಶ್ರೀ ಬಸವಲಿಂಗ ಸ್ವಾಮಿಗಳು ಅಧಿಕಾರಕ್ಕೆ ಬಂದು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಇವರು ಕರ್ನಾಟಕದ ವಿವೇಕಾನಂದರೆಂದೇ ಖ್ಯಾತಿ ಪಡೆದಿದ್ದರು. ಶ್ರೀ ಬಸವಲಿಂಗ ಸ್ವಾಮಿಗಳು ಉತ್ತಮ ವಾಗ್ಮಿಗಳಾಗಿ ತಮ್ಮ

ವಾಕ್ಚಾತುರ್ಯದಿಂದ ಜನಸಮುದಾಯವನ್ನು ಆಕರ್ಷಿಸಿಕೊಳ್ಳಬಲ್ಲಂತಹ ಶಕ್ತಿಯನ್ನು ಪಡೆದಿದ್ದರು. ಎಂಟನೆಯ ಗುರುಗಳಂತೆ ಶ್ರೀ ಬಸವಲಿಂಗ ಸ್ವಾಮಿಗಳೂ ಸಹ ಆಯುರ್ವೇದ ಪಂಡಿತರಾಗಿ, ವಾಕ್‌ಸಿದ್ದಿಗಳಾಗಿ ಹಾಗೂ ಶಿವಪೂಜಾನಿಷ್ಠರಾಗಿ ಹೆಚ್ಚು ಹೆಸರು ಪಡೆದಿದ್ದರು. ಕರ್ನಾಟಕದ ಅನೇಕ ಮಠಾಧೀಶ್ವರರು ಇವರ ಮಾರ್ಗದರ್ಶನದಲ್ಲಿ ಬೆಳಕು ಕಂಡಿದ್ದಾರೆ ಎಂದು ಹೇಳಲಾಗುತ್ತದೆ. ಇಂತಹ ಮಹಾನ್ ಸಾಧಕರು ೧೯೮೫ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಮಠವು ಮಠಾಧೀಶ್ವರರು ಇಲ್ಲದೆ ಕೆಲವು ದಿನ ಖಾಲಿ ಉಳಿಯಿತು.

ಉತ್ತರಾಧಿಕಾರಿ ಆಗಮನ: ವಿರಕ್ತಮಠವಾದರೂ ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದು ಬಂದಿರುವ ಶ್ರೀ ವಿರಕ್ತಮಠಕ್ಕೆ ಶ್ರೀ ಬಸವಲಿಂಗ ಸ್ವಾಮಿಗಳ ನಂತರ ಶ್ರೀ ಶಿವಲಿಂಗಯ್ಯ ಮತ್ತು ಶ್ರೀಮತಿ ಅನ್ನಪೂರ್ಣಮ್ಮನವರ ಪುತ್ರರಾಗಿ ೧೯೬೩ ರ ಮಾರ್ಚ್ ಒಂದರಂದು ಜನಿಸಿದ ಶ್ರೀ ಗುರುಸಿದ್ಧ ದೇವರು ನೇಮಕಗೊಂಡರು. ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡ ನಂತರ ಕಾಲೇಜು ಶಿಕ್ಷಣವನ್ನು ಪಡೆದು ೧೯೮೪ರಲ್ಲಿ ಮಠಕ್ಕೆ ಆಗಮಿಸಿ ಜೀರ್ಣಗೊಂಡಿದ್ದ ಮಠದ ಆಡಳಿತವನ್ನು ವಹಿಸಿಕೊಂಡರು.

ಅಭಿವೃದ್ಧಿ ಕಾರ್ಯಗಳು: ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡು ಹಲವು ವರ್ಷಗಳೇ ಸಂದರೂ ಇನ್ನೂ ಪಟ್ಟಾಧಿಕಾರವನ್ನು ವಹಿಸಿಕೊಳ್ಳದೆ ಮಠದ ಸರ್ವಾಂಗೀಣ ಅಭಿವೃದ್ಧಿಗೆ ದುಡಿಯುತ್ತಿದ್ದಾರೆ. ಶಿಥಿಲಗೊಂಡಿದ್ದ ಮಠದ ಕಟ್ಟಡವನ್ನು ಜೀರ್ಣಾಭಿವೃದ್ಧಿಗೊಳಿಸಿದ್ದಾರೆ. ಮಠದ ಪರಂಪರೆಯಲ್ಲಿ ಬಂದಂತಹ ಗುರುಗಳ ಗದ್ದುಗೆಗಳನ್ನು ಪತ್ತೆಮಾಡಿ, ಗದ್ದುಗೆಗಳನ್ನು ನವೀಕರಣಗೊಳಿಸಿ ಸ್ಮಾರಕಗಳನ್ನಾಗಿ ನಿರ್ಮಿಸಿದ್ದಾರೆ. ಮಠದ ಪರಂಪರೆಯಲ್ಲಿ ದಾಖಲಿಸಲು ಹತ್ತು ಜನ ಲಿಂಗೈಕ್ಯ ಗುರುಗಳ ಹೆಸರುಗಳು ಲಭ್ಯ ಇವೆ. ಆದರೆ ಮಠದ ಆವರಣದಲ್ಲಿ ಒಟ್ಟು ಹನ್ನೊಂದು ಗದ್ದುಗೆಗಳು ದೊರೆತಿರುವುದರಿಂದ, ಮಠದ ಪರಂಪರೆಯಲ್ಲಿ ಇನ್ನೂ ಕೆಲವು ಗುರುಗಳು ಅಧಿಕಾರವನ್ನು ನಡೆಸಿರಬಹುದೆಂಬ ಶಂಕೆಯನ್ನು ಮೂಡಿಸುತ್ತದೆ. ಈ ಬಗ್ಗೆ ಸಂಶೋಧನೆಯನ್ನು ನಡೆಸಿ ಮಠದ ಪರಂಪರೆಯನ್ನು ದಾಖಲಿಸುವ ಕೆಲಸವನ್ನು ಪ್ರಸ್ತುತ ಉತ್ತರಾಧಿಕಾರಿಗಳಾಗಿ ನೇಮಕಗೊಂಡಿರುವ ಶ್ರೀ ಗುರುಸಿದ್ಧ ದೇವರು ಮಾಡುತ್ತಿದ್ದಾರೆ. ಮಠದ ಆಸ್ತಿಯಾಗಿದ್ದ ಜಮೀನನ್ನು ಗುರುತಿಸಿ ತಮ್ಮ ವಶಕ್ಕೆ ಪಡೆದುಕೊಂಡು ಮಠವು ಸ್ವಾವಲಂಬನೆಯನ್ನು ಸಾಧಿಸಿಕೊಂಡು, ಆರ್ಥಿಕವಾಗಿ ಸದೃಢಗೊಳ್ಳುವಂತೆ ಮಾಡಿದ್ದಾರೆ. ಮಠದ ಸರ್ವಾಂಗೀಣ ಅಭಿವೃದ್ಧಿಯ ನಂತರ ಮಠದ ಹನ್ನೆರಡನೆಯ ಗುರುಗಳಾಗಿ ಪಟ್ಟಾಧಿಕಾರವನ್ನು ವಹಿಸಿಕೊಳ್ಳಲು ನಿರ್ಧರಿಸಿದ್ದಾರೆ.

ಧಾರ್ಮಿಕ ಕೆಲಸಗಳು: ಶ್ರೀ ಗುರುಸಿದ್ಧದೇವರು ಮಠಕ್ಕೆ ಬರುವ ಮೊದಲು ಉಸ್ತುವಾರಿಯಿಲ್ಲದೆ ಮಠದಲ್ಲಿ ಧಾರ್ಮಿಕ ಕಾರ್ಯಗಳೂ ಸಹ ಸ್ಥಗಿತಗೊಂಡಿದ್ದವು. ಶ್ರೀ ಗುರುಸಿದ್ಧದೇವರು ಮಠದಲ್ಲಿ ನೆಲೆಸಿದ ನಂತರ ಮಠದ ಪರಂಪರೆಯ ಗುರುಗಳ ಗದ್ದುಗೆಗಳಿಗೆ ಪೂಜಾಕಾರ್ಯ ನಡೆಯುವಂತಾಯಿತು. ಪ್ರತಿ ಅಮಾವಾಸ್ಯೆಯಂದು ಶಿವಾನುಭವಗೋಷ್ಠಿ, ವಾರ್ಷಿಕ ಕಾರ್ಯಕ್ರಮವಾಗಿ ಹಿರಿಯ ಗುರುಗಳ ಪುಣ್ಯಾರಾಧನೆ ನಡೆಯುತ್ತಿದೆ. ಈ ಸಂದರ್ಭದಲ್ಲಿ ಸಾಮೂಹಿಕ ವಿವಾಹಗಳು, ನುರಿತ ವೈದ್ಯರಿಂದ ವೈದ್ಯಕೀಯ ತಪಾಸಣಾಶಿಬಿರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.ಅನ್ನದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.

ಸಾಹಿತ್ಯ ಸೇವೆ: ಶ್ರೀ ಗುರುಸಿದ್ಧ ದೇವರು ಸ್ವತಃ ವಚನಕಾರರಾಗಿದ್ದು ಈಗಾಗಲೇ ಅನೇಕ ವಚನಗಳನ್ನು ರಚಿಸಿ, ಪುಸ್ತಕ ರೂಪದಲ್ಲಿ ತರಲು ಪ್ರಯತ್ನಿಸಿದ್ದಾರೆ. ಮಠದ ಪರಂಪರೆಯ ಬಗ್ಗೆ ಸಂಶೋಧನಾತ್ಮಕ ಚರಿತ್ರೆಯನ್ನು ರಚಿಸಿದ್ದು, ಪಟ್ಟಾಧಿಕಾರದ ಸಂದರ್ಭದಲ್ಲಿ ಈ ಎರಡೂ ಪುಸ್ತಕಗಳನ್ನು ಪ್ರಕಾಶಿಸುವ ಪ್ರಯತ್ನವು ನಡೆದಿದೆ.

ವಿಳಾಸ: ಶ್ರೀ ಮ.ನಿ.ಪ್ರ.ಗುರುಸಿದ್ಧ ದೇವರು, ಶ್ರೀ ವಿರಕ್ತಮಠ, ಶಿಗ್ಗಾಂವಿ, ಹಾವೇರಿ ಜಿಲ್ಲೆ.

ಹಿರೇಮಠ: ಶಿಗ್ಗಾಂವಿ ನಗರದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿದ್ದ ರಂಭಾಪುರಿ ಪೀಠದ ಶಾಖಾಮಠವಾದ ಹಿರೇಮಠವು ಪುರಾತನ ಕಾಲದಲ್ಲಿ ಸ್ಥಾಪನೆಗೊಂಡಿದೆ. ಈ ಪಟ್ಟಣದ ಧಾರ್ಮಿಕ ವಿಧಿವಿಧಾನಗಳನ್ನು ಪೂರೈಸುತ್ತಾ, ವೀರಶೈವ ಧರ್ಮದ ಆಚಾರ ವಿಚಾರಗಳು ಬೆಳೆಯುವಂತೆ ಮಾಡಿದ ಶ್ರೀ ಹಿರೇಮಠವು ಶ್ರೀ ಮಹಾಂತೇಶ ಶಿವಾಚಾರ್ಯ ಸ್ವಾಮಿಗಳ ನಂತರ ಮಠಾಧೀಶರು ಯಾರೂ ಇಲ್ಲದೆ ಖಾಲಿ ಉಳಿದಿದೆ. ಈಗ ಗದ್ದುಗೆಗಳಿಗೆ ಪೂಜಾಕಾರ್ಯ ನಡೆಯುತ್ತಿದೆ.

ಸದಾಶಿವಪೇಟೆ

ಶಿಗ್ಗಾಂವಿ ತಾಲ್ಲೂಕಿನ ಸದಾಶಿವ ಪೇಟೆಯು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಐದು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ಶರಣಬಸವೇಶ್ವರ ಮಠ ಮತ್ತು ಶ್ರೀ ವಿರಕ್ತಮಠಗಳು ಸ್ಥಾಪನೆಯಾಗಿ ಧಾರ್ಮಿಕ ಸಂಸ್ಕಾರವನ್ನು ನೀಡತೊಡಗಿವೆ.

ಶರಣಬಸವೇಶ್ವರಮಠ: ಸದಾಶಿವ ಪೇಟೆಯ ಮಧ್ಯಭಾಗದಲ್ಲಿ ೧೯೭೭ರಲ್ಲಿ ಸ್ಥಾಪನೆಗೊಂಡಿರುವ ಶ್ರೀ ಶರಣಬಸವೇಶ್ವರ ಮಠವು ಈ ಗ್ರಾಮದ ಧಾರ್ಮಿಕ ಕೇಂದ್ರಬಿಂದುವಾಗಿ ಬೆಳೆದಿದೆ.

ಮಠಸ್ಥಾಪನೆ: ಅಬ್ಬಿಗೆರೆಯ ಅರಳೆಲೆ ಮಠದಿಂದ ಆಗಮಿಸಿದ ಶ್ರೀ ರೇವಣಸಿದ್ಧ ಸ್ವಾಮಿಗಳು ಈ ಗ್ರಾಮದಲ್ಲಿ ನೆಲೆನಿಲ್ಲುತ್ತಾರೆ. ಸಂಸಾರಿಗಳಾದ ಶ್ರೀ ರೇವಣಸಿದ್ಧ ಸ್ವಾಮಿಗಳು ಆಧ್ಯಾತ್ಮವನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಗುಲ್ಬರ್ಗದ ಶರಣಬಸವೇಶ್ವರ ಮಠದ ಸಂಪ್ರದಾಯದಂತೆ ಸದಾಶಿವ ಪೇಟೆಯಲ್ಲಿ ಮಠವನ್ನು ಸ್ಥಾಪನೆಮಾಡಿದ್ದಾರೆ. ಶ್ರೀ ರೇವಣಸಿದ್ಧ ಸ್ವಾಮಿಗಳು ಇಲ್ಲಿ ನೆಲೆನಿಂತ ಮೇಲೆ ನಿತ್ಯ ಶಿವಾನುಭವಗೋಷ್ಠಿಯನ್ನು ನಡೆಸುವುದರ ಮೂಲಕ ಜನರಲ್ಲಿ ಧಾರ್ಮಿಕ ಪ್ರಜ್ಞೆಯನ್ನು ಬೆಳೆಸಿದರು. ಸದಾಶಿವಪೇಟೆ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರು ಶ್ರೀ ರೇವಣಸಿದ್ಧ ಸ್ವಾಮಿಗಳು ನಡೆಸುತ್ತಿದ್ದ ಧಾರ್ಮಿಕ ಕಾರ್ಯಗಳಿಗೆ ಮನಸೋತು ಮಠ ಸ್ಥಾಪಿಸಿ ಕೊಟ್ಟಿದ್ದಾರೆ.

ಚುರುಕುಗೊಂಡ ಕಾರ್ಯಗಳು: ಭಕ್ತರ ನೆರವಿನಿಂದ ಸ್ಥಾಪನೆಗೊಂಡ ಮಠದಲ್ಲಿ ಶರಣ ಬಸವೇಶ್ವರರಮೂರ್ತಿ ಹಾಗೂ ಈಶ್ವರ ಮೂರ್ತಿ ಪ್ರತಿಷ್ಠಾಪನೆಗೊಂಡಿವೆ. ನಿತ್ಯ ಪೂಜೆಯ ಜೊತೆಗೆ ಸಂಜೆಯ ವೇಳೆ ಭಜನೆ ಕಾರ್ಯಕ್ರಮಗಳು ನಡೆಯುತ್ತಿವೆ. ಶ್ರೀಶರಣಬಸವೇಶ್ವರರ ಜಾತ್ರೆಯ ಅಂಗವಾಗಿ ಹೋಳಿಹುಣ್ಣಿಮೆಯಿಂದ ಭರತಹುಣ್ಣಿಮೆಯವರೆಗೆ ನಿರಂತರವಾಗಿ ಧಾರ್ಮಿಕ ಕಾರ್ಯಗಳು ನಡೆಯುತ್ತಿರುತ್ತವೆ. ಈ ಸಂದರ್ಭದಲ್ಲಿ ಸಾಮೂಹಿಕ ವಿವಾಹಗಳು, ಜಾತ್ರಾಮಹೋತ್ಸವ ಹಾಗೂ ಅನ್ನದಾಸೋಹ ಕಾರ್ಯಗಳು ನಡೆಯುತ್ತಿವೆ.

ವಿಳಾಸ: ಶ್ರೀಮ.ನಿ.ಪ್ರ.ರೇವಣಸಿದ್ಧಸ್ವಾಮಿಗಳು, ಶ್ರೀಶರಣಬಸವೇಶ್ವರ ಮಠ, ಸದಾಶಿವಪೇಟೆ, ಶಿಗ್ಗಾಂವಿ ತಾ, ಹಾವೇರಿ ಜಿಲ್ಲೆ.

ಗದಿಗೇಶ್ವರ ವಿರಕ್ತಮಠ: ಸದಾಶಿವ ಪೇಟೆಯ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಗದಿಗೇಶ್ವರ ವಿರಕ್ತಮಠವು ಹನ್ನೆರಡನೆಯ ಶತಮಾನದ ನಂತರ ಸ್ಥಾಪನೆಗೊಂಡಿದೆ. ಮುರುಘಾ ಸಮಯದ ಪರಂಪರೆಯಲ್ಲಿ ಬೆಳೆದು, ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುವ ಮೂಲಕ ವೀರಶೈವ ಧರ್ಮವನ್ನು ಬೆಳೆಸಿದೆ.

ಮಠ ಸ್ಥಾಪನೆ: ಗುಲ್ಬರ್ಗ ಜಿಲ್ಲೆಯ ಯಾದಗಿರಿಯ ಶ್ರೀ ಹಿರೇಮಠದ ಶ್ರೀ ಶಿವದೇವಯ್ಯ ಮತ್ತು ಶ್ರೀಮತಿ ಕಮಲಾದೇವಿಯವರು ಪುತ್ರರಾಗಿ ಜನಿಸಿದ ಶ್ರೀ ಗದಿಗೇಶ್ವರರು ಬಾಲ್ಯದಲ್ಲಿಯೇ ವೈರಾಗ್ಯವನ್ನು ತಾಳಿ ಗುಲ್ಬರ್ಗ ನಗರದ ಗದ್ದುಗೆಮಠದ ಶ್ರೀ ರೇವಣಸಿದ್ದೇಶ್ವರ ಸ್ವಾಮಿಗಳಿಂದ ದೀಕ್ಷೆಯನ್ನು ಪಡೆದು, ಲೋಕಸಂಚಾರ ಕೈಗೊಂಡು ಈ ಕ್ಷೇತ್ರಕ್ಕೆ ಬಂದು ನೆಲೆಸಿದರು. ಇಲ್ಲಿ ಧಾರ್ಮಿಕ ಕಾರ್ಯಗಳನ್ನು ಮಾಡುವ ಮೂಲಕ ಹೆಚ್ಚು ಪ್ರಸಿದ್ಧಿ ಪಡೆದರು. ಗುರುಗಳು ನೆಲೆ ನಿಂತ ಸ್ಥಳವು ಮಠವಾಗಿ ರೂಪುಗೊಂಡು ಬೆಳೆದು ಶ್ರೀ ಗದಿಗೇಶ್ವರಮಠ ಎಂಬ ಹೆಸರು ಪಡೆಯಿತು.

ಪರಂಪರೆ:	೧. ಶ್ರೀ ಮನಿ.ಪ್ರ. ಗದಿಗೇಶ್ವರಸ್ವಾಮಿಗಳು	(ಕ್ರಿ.ಶ.೧೪೫೦-೧೫೩೦)
	೨. ಶ್ರೀ ಮನಿ.ಪ್ರ. ಗದಿಗೇಶ್ವರಸ್ವಾಮಿಗಳು	(ಕ್ರಿ.ಶ.೧೫೩೦-೧೬೦೫)
	೩. ಶ್ರೀ ಮ.ನಿ.ಪ್ರ. ಬಸವರಾಜೇಂದ್ರಸ್ವಾಮಿಗಳು	(ಕ್ರಿ.ಶ.೧೬೦೫-೧೮೭೫)
	೪. ಶ್ರೀ ಮ.ನಿ.ಪ್ರ. ಬಸವರಾಜೇಂದ್ರಸ್ವಾಮಿಗಳು	
	೫. ಶ್ರೀ ಮ.ನಿ.ಪ್ರ. ಬಸವರಾಜೇಂದ್ರಸ್ವಾಮಿಗಳು	
	೬. ಶ್ರೀ ಮ.ನಿ.ಪ್ರ. ಬಸವರಾಜೇಂದ್ರಸ್ವಾಮಿಗಳು	(ಕ್ರಿ.ಶ.೧೮೭೫-೧೯೭೨)

೭. ಶ್ರೀ ಮ.ನಿ.ಪ್ರ. ಸಚ್ಚಿದಾನಂದಸ್ವಾಮಿಗಳು (ಕ್ರಿ.ಶ.೧೮೭೨-೧೯೯೮)
೮. ಶ್ರೀ ಮ.ನಿ.ಪ್ರ. ಗದಿಗೇಶ್ವರಸ್ವಾಮಿಗಳು (ಕ್ರಿ.ಶ.೧೯೯೯-)

ಪರಂಪರೆಯಲ್ಲಿ ಅನೇಕ ಗುರುಗಳು ಮಠದ ಅಧಿಕಾರವನ್ನು ವಹಿಸಿಕೊಂಡು ಮಠ ಮತ್ತು ಸಮಾಜವನ್ನು ಬೆಳಸಿದ್ದಾರೆ. ಈಗ ಶ್ರೀ ಗದಿಗೇಶ್ವರ ಸ್ವಾಮಿಗಳು ಮಠದ ಆಡಳಿತವನ್ನು ನಡೆಸುತ್ತಾ ಮಠವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ಚನ್ನಗಿರಿ ತಾಲ್ಲೂಕಿನ ನಲ್ಲೂರು ಗ್ರಾಮದಲ್ಲಿ ಜನಿಸಿದ ಗುರುಗಳು ಪ್ರಾಥಮಿಕ ಮತ್ತ ಪ್ರೌಢಶಿಕ್ಷಣವನ್ನು ನಲ್ಲೂರು ಮತ್ತು ಚನ್ನಗಿರಿಯಲ್ಲಿ ಮುಗಿಸಿ, ಶಿವಯೋಗ ಮಂದಿರಲ್ಲಿ ಸಂಸ್ಕೃತ, ವೇದ ಹಾಗೂ ಯೋಗಶಿಕ್ಷಣವನ್ನು ಪಡೆದು ಮಠದ ೧೯೯೯ರಲ್ಲಿ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಗುರುಗಳು ಈ ಮಠದ ಜವಾಬ್ದಾರಿಯ ಜತೆಗೆ ಗುಬ್ಬಿ ತಾಲ್ಲೂಕಿನ ಗುಬ್ಬಿ ಹೊಸಳ್ಳಿ ಗ್ರಾಮದ ಶ್ರೀಪಡುವಲು ಮಠದ ಅಧಿಕಾರವನ್ನು ವಹಿಸಿಕೊಂಡು ಕೆಲವು ದಿನ ಆಡಳಿತ ನಡೆಸಿದ್ದಾರೆ. ಶರಣತತ್ತ್ವವನ್ನು ಪ್ರಚಾರಪಡಿಸುವಲ್ಲಿ ನಿರತರಾಗಿದ್ದಾರೆ. ಗುರುಗಳು ಉತ್ತಮ ವಾಗ್ಮೀಗಳು ಹಾಗೂ ಪ್ರವಚನಕಾರರಾಗಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಗದಿಗೇಶ್ವರ ಸ್ವಾಮಿಗಳು, ಶ್ರೀ ಗದಿಗೇಶ್ವರ ವಿರಕ್ತಮಠ, ಸದಾಶಿವಪೇಟೆ, ಶಿಗ್ಗಾಂವಿ ತಾ, ಹಾವೇರಿ ಜಿಲ್ಲೆ.

ಹಿರೇಮಣಕಟ್ಟಿ

ಶಿಗ್ಗಾಂವಿ ತಾಲ್ಲೂಕಿನ ಹಿರೇಮಣಕಟ್ಟಿಯು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಆರು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಮುರುಘೇಂದ್ರ ಮಠವು ಅಸ್ತಿತ್ವದಲ್ಲಿದೆ.

ಮುರುಘೇಂದ್ರಮಠ: ಹಿರೇಮಣಕಟ್ಟಿ ಗ್ರಾಮದ ಉತ್ತರಭಾಗದಲ್ಲಿ ಕಾಶಿ ಪೀಠದ ಶಾಖಾಮಠವಾದ ಶ್ರೀ ಮುರುಘೇಂದ್ರ ಮಠವು ಸ್ಥಾಪನೆಯಾಗಿ ಇಲ್ಲಿನ ಧಾರ್ಮಿಕ ಕೇಂದ್ರವಾಗಿ ಬೆಳೆದಿದೆ. ಹನ್ನೊಂದನೆಯ ಶತಮಾನದಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಲಾಗುವ ಈ ಮಠದಲ್ಲಿ ಇದಕ್ಕೆ ಪೂರಕವಾದ ಯಾವುದೇ ಆಧಾರಗಳೂ ಲಭ್ಯವಿಲ್ಲ. ಮಠದ ಆವರಣದಲ್ಲಿ ಶ್ರೀ ಕಲ್ಲೇಶ್ವರ ದೇವಸ್ಥಾನವಿದೆ. ಈ ದೇವಾಲಯದ ಹತ್ತಿರವೇ ಇರುವ ಮಠದ ಕಟ್ಟಡದ ಅವಶೇಷಗಳ ಹಿನ್ನಲೆಯಲ್ಲಿ ಈ ಮಠವು ಪುರಾತನ ಕಾಲದ್ದೆಂದು ಹೇಳಬಹುದಾಗಿದೆ.

ಪರಂಪರೆ: ೧. ಷ.ಬ್ರ.ಶ್ರೀ ಮುರುಘೇಂದ್ರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ವೀರಭದ್ರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ವಿಶ್ವಾರಾಧ್ಯ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದು ಬಂದಿರುವ ಈ ಮಠದಲ್ಲಿ ಕರ್ತೃ ಗುರುಗಳ ಗದ್ದುಗೆ ಹಾಗೂ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳ ಗದ್ದುಗೆಯನ್ನು ಹೊರತುಪಡಿಸಿ ಬೇರೆ ಗದ್ದುಗೆಗಳು ದೊರಕದೆ ಇರುವುದರಿಂದ ಈ ಮಠದ ಕಾಲಮಾನದ ಹಾಗೂ ಪರಂಪರೆಯ ಗುರುಗಳ ಬಗ್ಗೆ ಹೆಚ್ಚು ಮಾಹಿತಿ ದೊರೆಯದಾಗಿದೆ. ಶ್ರೀ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ಶ್ರೀ ವಿರೂಪಾಕ್ಷಯ್ಯ ಮತ್ತು ಶ್ರೀಮತಿ ವೀರಮ್ಮನವರ ಪುತ್ರರಾಗಿ ೧೯೭೦ ರಲ್ಲಿ ಜನಿಸಿ ವಿದ್ಯಾಭ್ಯಾಸವನ್ನು ಮುಗಿಸಿ ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಬೆಳೆಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಗದ್ದುಗೆಗಳಿಗೆ ನಿತ್ಯಪೂಜೆ, ಶ್ರಾವಣ ಹಾಗೂ ಕಾರ್ತಿಕ ಮಾಸಗಳಲ್ಲಿ ವಿಶೇಷ ಪೂಜೆ ನಡೆಯುತ್ತಿದೆ. ಶಿವರಾತ್ರಿಯಂದು ಜಾತ್ರಾ ಮಹೋತ್ಸವ ನಡೆಯುತ್ತದೆ. ಈ ಸಂದರ್ಭದಲ್ಲಿ ಸಹಸ್ರಾರು ಭಕ್ತರು ಪಾಲ್ಗೊಳ್ಳುತ್ತಾರೆ.

ವಿಳಾಸ: ಷ.ಬ್ರ.ಶ್ರೀ ವಿಶ್ವಾರಾಧ್ಯ ಶಿವಾಚಾರ್ಯಸ್ವಾಮಿಗಳು, ಶ್ರೀಮುರುಘೇಂದ್ರಮಠ, ಹಿರೇಮಣಕಟ್ಟಿ, ಶಿಗ್ಗಾಂವಿ ತಾ. ಹಾವೇರಿಜಿಲ್ಲೆ.

ಹೋತನಹಳ್ಳಿ

ಶಿಗ್ಗಾಂವಿ ತಾಲ್ಲೂಕಿನ ಹೋತನಹಳ್ಳಿಯು ತಾಲ್ಲೂಕು ಕೇಂದ್ರದಿಂದ ದಕ್ಷಿಣಕ್ಕೆ ಇಪ್ಪತ್ತು ಕಿ.ಮೀ. ದೂರದಲ್ಲಿದೆ.

ಇಲ್ಲಿ ಶ್ರೀ ಸಿಂದಗಿಮಠವು ಅಸ್ತಿತ್ವದಲ್ಲಿದೆ.

ಸಿಂದಗಿಮಠ: ಹೋತನಹಳ್ಳಿಯ ಹೊರಭಾಗದ ಪಶ್ಚಿಮ ದಿಕ್ಕಿನಲ್ಲಿ ಸ್ಥಾಪನೆಯಾಗಿರುವ ಸಿಂದಗಿ ಮಠವು, ರಂಭಾಪುರಿ ಪೀಠದ ಶಾಖಾಮಠವಾಗಿ ಬೆಳೆದಿದೆ. ಶ್ರೀ ಶಾಂತವೀರ ಪಟ್ಟಾಧ್ಯಕ್ಷರ ಕಾಲದಿಂದ ಹೆಚ್ಚು ಪ್ರಚಾರಗೊಂಡು ಬೆಳೆದಿದೆ. ಶಿವಯೋಗ ಮಂದಿರದಲ್ಲಿ ಶ್ರೀ ಹಾನಗಲ್ಲು ಕುಮಾರಸ್ವಾಮಿಗಳ ಪರಮಶಿಷ್ಯರಾಗಿ ಸಿಂದಗಿಯ ಶ್ರೀ ಶಾಂತವೀರ ಪಟ್ಟಾಧ್ಯಕ್ಷರು ಬೆಳೆದರು. ಹಾನಗಲ್ಲು ಶ್ರೀ ಕುಮಾರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಹಾವೇರಿಯ ಶ್ರೀಶಿವಬಸವ ಸ್ವಾಮಿಗಳಲ್ಲಿಗೆ ಆಗಮಿಸಿದರು. ಹಾವೇರಿಯ ಹುಕ್ಕೇರಿ ಮಠದಲ್ಲಿ ನೆಲೆಸಿ ಶ್ರೀ ಶಿವಬಸವ ಸ್ವಾಮಿಗಳ ಸೇವೆಯನ್ನು ಮಾಡಿಕೊಂಡಿದ್ದರು. ಶ್ರೀ ಶಿವಬಸವ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಶ್ರೀ ಸಿಂದಗಿ ಪಟ್ಟಾಧ್ಯಕ್ಷರು ಪ್ರತ್ಯೇಕ ಮಠವನ್ನು ಸ್ಥಾಪಿಸಿ ಜಿಲ್ಲೆಯ ನಾನಾ ಕಡೆ ಪಾಠಶಾಲೆಗಳನ್ನು ಪ್ರಾರಂಭ ಮಾಡಿದರು. ಈ ಸಂದರ್ಭದಲ್ಲಿ ೧೯೭೫ ರಲ್ಲಿ ಸ್ಥಾಪನೆಗೊಂಡ ಶ್ರೀ ಸಿಂದಗಿ ಮಠವು ಪಟ್ಟದ ಮಠವಾಗಿದ್ದರೂ ವಿರಕ್ತ ಮಠಗಳ ಸಂಬಂಧವನ್ನು ಬೆಳೆಸಿಕೊಂಡಿದ್ದು ಗುರು-ವಿರಕ್ತರ ಸಮನ್ವಯತೆಯ ಸಂಕೇತವಾಗಿ ಬೆಳೆದಿದೆ.

ಉತ್ತರಾಧಿಕಾರಿಯ ನೇಮಕ: ಶ್ರೀ ಶಾಂತವೀರ ಪಟ್ಟದದೇವರ ನಂತರ ಮಠದಲ್ಲಿ ತೋರುಗದ್ದುಗೆಯನ್ನು ನಿರ್ಮಿಸಿದ್ದು ಪೂಜಾ ಕಾರ್ಯವನ್ನು ಮಾಡಲಾಗುತ್ತಿದೆ. ೧೯೯೨ ರಂದು ಮಠದ ಉಸ್ತುವಾರಿಯನ್ನು ನೋಡಿಕೊಂಡು ಹೋಗಲು ಸಿಂದಗಿಯ ಶ್ರೀ ಶಿವಯ್ಯ ಮತ್ತು ಶ್ರೀಮತಿ ಶಾಂತಮ್ಮನವರ ಮಗನಾಗಿ ೧೯೬೦ರಲ್ಲಿ ಜನಿಸಿದ ಶ್ರೀ ಶಂಭುಲಿಂಗ ದೇವರನ್ನು ನೇಮಕ ಮಾಡಲಾಗಿದೆ. ಹಾವೇರಿಯ ಶ್ರೀ ಸಿಂದಗಿ ಮಠದ ಆಡಳಿತವನ್ನು ನೋಡಿಕೊಳ್ಳುತ್ತಿರುವ ಗದಗಿನ ತೋಂಟದಾರ್ಯ ಮಠದ ಶ್ರೀ ಡಾ. ತೋಂಟದಾರ್ಯ ಸ್ವಾಮಿಗಳು ಈ ನೇಮಕವನ್ನು ಮಾಡಿದ್ದಾರೆ. ಮಠದ ಆವರಣದಲ್ಲಿ ಸರ್ಕಾರಿ ವಿದ್ಯಾರ್ಥಿ ನಿಲಯವನ್ನು ನಡೆಸಲಾಗುತ್ತಿದೆ. ಮಠದ ಆಸ್ತಿಯಾಗಿರುವ ಸುಮಾರು ಹತ್ತುಎಕರೆ ಜಮೀನನ್ನು ಮಠದ ವತಿಯಿಂದ ಸಾಗುವಳಿ ಮಾಡಿಸುತ್ತಿದ್ದು, ಮಠಕ್ಕೆ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ.

ವಿಳಾಸ: ಶ್ರೀ ಶಂಭುಲಿಂಗ ದೇವರು, ಶ್ರೀ ಸಿಂದಗಿಮಠ, ಹೋತನಹಳ್ಳಿ, ಶಿಗ್ಗಾಂವಿ ತಾಲ್ಲೂಕು, ಹಾವೇರಿ ಜಿಲ್ಲೆ.

❑

ಸವಣೂರು ತಾಲ್ಲೂಕು

ಹಾವೇರಿ ಜಿಲ್ಲೆಯ ಸವಣೂರು ತಾಲ್ಲೂಕು, ಐತಿಹಾಸಿಕವಾಗಿ ಪ್ರಸಿದ್ಧಿಯಾಗಿದೆ. ಈ ತಾಲ್ಲೂಕಿನಲ್ಲಿ ವೀರಶೈವಧರ್ಮ ಪ್ರಮುಖವಾಗಿ ಬೆಳೆದಿದೆ. ಇಲ್ಲಿ ಸುಮಾರು ಇಪ್ಪತ್ತೆರಡು ಮಠಗಳನ್ನು ಗುರುತಿಸಬಹುದಾಗಿದೆ.

ಮಹಾದೇವಪುರ

ಸವಣೂರು ತಾಲ್ಲೂಕಿನ ಮಹಾದೇವಪುರವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಎಂಟು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಶಂಭುಲಿಂಗೇಶ್ವರ ಮಠವು ಅಸ್ತಿತ್ವದಲ್ಲಿದೆ.

ಶಂಭುಲಿಂಗೇಶ್ವರಮಠ: ಸುಮಾರು ನೂರು ವರ್ಷಗಳ ಹಿಂದೆ ಶ್ರೀ ಶಂಭುಲಿಂಗ ಶಿವಯೋಗಿಗಳು ಸಂಚಾರ ಕೈಗೊಂಡು ಮಹಾದೇವಪುರ ಗ್ರಾಮಕ್ಕೆ ಬಂದು ನೆಲೆಸಿ, ಪಂಚಪೀಠಗಳಲ್ಲಿ ಒಂದಾದ ಜಗದ್ಗುರು ಶ್ರೀ ರಂಭಾಪುರಿ ಪೀಠದ ಶಾಖಾಮಠವನ್ನು ಗ್ರಾಮದ ದಕ್ಷಿಣ ಭಾಗದಲ್ಲಿ ಸ್ಥಾಪಿಸಿದ್ದಾರೆ. ಗುರುಗಳ ಹೆಸರಿನಲ್ಲಿ ಬೆಳೆದ ಶ್ರೀ ಶಂಭುಲಿಂಗೇಶ್ವರ ಮಠವು ಈ ಗ್ರಾಮದ ಧಾರ್ಮಿಕ ಕೇಂದ್ರಬಿಂದುವಾಗಿದೆ.

ಪರಂಪರೆ: ಶ್ರೀ ಶಂಭುಲಿಂಗ ಶಿವಯೋಗಿಗಳ ನಂತರ ಶ್ರೀ ಶಿವಲಿಂಗೇಶ್ವರ ಚರಮೂರ್ತಿಗಳು ಅಧಿಕಾರಕ್ಕೆ ಬಂದು ಮಠದ ಪರಂಪರೆಯನ್ನು ಮುಂದುವರೆಸಿದ್ದಾರೆ. ಮುಧೋಳ ಗ್ರಾಮದ ಶ್ರೀ ಮಹಾದೇವಯ್ಯ ಮತ್ತು ಶ್ರೀಮತಿ ರತ್ನಮ್ಮನವರ ಪುತ್ರರಾಗಿ ಜನಿಸಿ, ಶ್ರೀ ಶಂಭುಲಿಂಗ ಶಿವಯೋಗಿಗಳ ಕರಕಮಲ ಸಂಜಾತರಾಗಿ ಮಠದ ಅಧಿಕಾರವನ್ನು ವಹಿಸಿಕೊಂಡು ಪರಂಪರೆಯ ಎರಡನೆಯ ಗುರುಗಳಾಗಿ ಮಠವನ್ನು ಮುನ್ನಡೆಸಿದ್ದಾರೆ. ಶ್ರೀ ಶಿವಲಿಂಗೇಶ್ವರ ಚರಮೂರ್ತಿಗಳು ಅಧಿಕಾರವನ್ನು ವಹಿಸಿಕೊಂಡ ಮೇಲೆ ಮಠವು ಅಭಿವೃದ್ಧಿಯನ್ನು ಕಂಡಿದೆ.

ಧಾರ್ಮಿಕ ಕಾರ್ಯಗಳು: ಮಠದ ಕರ್ತೃ ಗುರುಗಳಾದ ಶ್ರೀ ಶಂಭುಲಿಂಗೇಶ್ವರ ಶಿವಯೋಗಿಗಳ ಗದ್ದುಗೆಗೆ ನಿತ್ಯ ಪೂಜೆ, ಪ್ರತಿ ವರ್ಷ ಕರ್ತೃಗುರುಗಳ ಹೆಸರಿನಲ್ಲಿ ಜಾತ್ರಾ ಮಹೋತ್ಸವವನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಸೇರುವ ಸಹಸ್ರಾರು ಭಕ್ತರಿಗೆ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತದೆ.

ಸಾಮಾಜಿಕ ಕಾರ್ಯಗಳು: ಶ್ರೀ ಶಿವಲಿಂಗೇಶ್ವರ ಚರಮೂರ್ತಿಗಳು ಕ್ರಿಯಾಶೀಲ ವ್ಯಕ್ತಿತ್ವದಿಂದ ಜನಮನ್ನಣೆ ಪಡೆದಿದ್ದು, ಸಮಾಜದ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ. ಲೋಕಕಲ್ಯಾಣಾರ್ಥ ಪಾದಯಾತ್ರೆಯನ್ನು ನಡೆಸಿ, ಈ ಸಂದರ್ಭಗಳಲ್ಲಿ ಧಾರ್ಮಿಕಸಭೆ ಸಮಾರಂಭಗಳನ್ನು ನಡೆಸಿ ಜನಜಾಗೃತಿಯನ್ನುಂಟು ಮಾಡಿದ್ದಾರೆ. ಹಿರಿಯ ಗುರುಗಳ ವಾರ್ಷಿಕ ಆರಾಧನೆಯ ಸಂದರ್ಭದಲ್ಲಿ ಸಾಮೂಹಿಕ ವಿವಾಹಗಳನ್ನು ನಡೆಸುತ್ತಿದ್ದಾರೆ. ಸಾಹಿತ್ಯಾಭಿರುಚಿಯನ್ನು ಹೊಂದಿರುವ ಗುರುಗಳು ಸಾಧನಕಿರಣ ಪ್ರಕಾಶನವನ್ನು ಪ್ರಾರಂಭಿಸಿ ಕೆಲವು ಪುಸ್ತಕಗಳನ್ನು ಪ್ರಕಟಿಸಿ, ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶಿವಲಿಂಗೇಶ್ವರಚರಮೂರ್ತಿಗಳು, ಶ್ರೀಶಂಭುಲಿಂಗೇಶ್ವರಮಠ, ಮಹಾದೇವಪುರ, ಸವಣೂರು ತಾ, ಹಾವೇರಿಜಿಲ್ಲೆ.

ಮಂತ್ರವಾಡಿ

ಸವಣೂರು ತಾಲ್ಲೂಕಿನ ಮಂತ್ರವಾಡಿಯು ತಾಲ್ಲೂಕು ಕೇಂದ್ರದ ಪಶ್ಚಿಮಕ್ಕೆ ಎಂಟು ಕಿ.ಮೀ ದೂರದಲ್ಲಿದೆ.ಈ ಗ್ರಾಮದ ಹೊರಭಾಗದ ಬೆಟ್ಟದ ಮೇಲೆ ಶ್ರೀ ರೇವಣಸಿದ್ದೇಶ್ವರ ಮಠವು ಅಸ್ತಿತ್ವದಲ್ಲಿದೆ.

ರೇವಣಸಿದ್ಧೇಶ್ವರಮಠ: ಹನ್ನೊಂದನೆಯ ಶತಮಾನದ ಉತ್ತರಾರ್ಧದಲ್ಲಿ ಶ್ರೀ ರಂಭಾಪುರಿ ಪೀಠದ ಜಗದ್ಗುರುಗಳಾದ ಶ್ರೀ ರೇವಣಸಿದ್ಧೇಶ್ವರ ಶಿವಾಚಾರ್ಯ ಭಗವತ್ಪಾದರು ಲೋಕಸಂಚಾರ ಕೈಗೊಂಡು, ಮಂತ್ರವಾಡಿ ಗ್ರಾಮದ ಹೊರಭಾಗದ ಬೆಟ್ಟದಲ್ಲಿ ನೆಲೆಗೊಂಡು ತಪೋನುಷ್ಠಾನ ಕೈಗೊಂಡರು. ಈ ಸಂದರ್ಭದಲ್ಲಿ ಪೇಶ್ವೆಯ ಆಡಳಿತಕ್ಕೆ ಬೇಸತ್ತು ಅಪಾತ್ರರ ಈ

ನಾಡಿನಲ್ಲಿ ನೆಲೆಸಿದರೆ ಆಧ್ಯಾತ್ಮ ಬದುಕಿಗೆ ಧಕ್ಕೆಯಾಗುತ್ತದೆಂದು ಮಹಾರಾಷ್ಟ್ರದ ಸೋಲಾಪುರ ಜಿಲ್ಲೆಯ ಬಿದ್ರಿಕೋಟಿ ಹಿರೇಮಠದ ಗುರುಗಳಾದ ಶ್ರೀ ಶಾಂತಯ್ಯ ಸ್ವಾಮಿಗಳು, ಶ್ರೀ ಮಹಾಂತಯ್ಯ ಸ್ವಾಮಿಗಳು ಹಾಗೂ ಶ್ರೀ ಜಡೆತಲೆ ಬಸವಲಿಂಗ ಸ್ವಾಮಿಗಳು ದಕ್ಷಿಣದ ಕಡೆಗೆ ಲೋಕಸಂಚಾರ ಹೊರಟು ಮಂತ್ರವಾಡಿಗೆ ಬಂದು ನೆಲೆಸುತ್ತಾರೆ. ಇಲ್ಲಿನ ಬೆಟ್ಟದ ಮೇಲೆ ಶ್ರೀರೇವಣಸಿದ್ದೇಶ್ವರರು ಅನುಷ್ಠಾನಗೊಂಡಿರುವ ವಿಷಯ ತಿಳಿದು ಅಲ್ಲಿಗೆ ಆಗಮಿಸಿದ ಶ್ರೀ ಶಾಂತಯ್ಯ ಸ್ವಾಮಿಗಳ ಪರಿವಾರವು ಶ್ರೀ ರೇವಣಸಿದ್ದೇಶ್ವರರ ದರ್ಶನ ಪಡೆಯಿತು. ಆಗ ಜಗದ್ಗುರು ಶ್ರೀ ರೇವಣಸಿದ್ದೇಶ್ವರರು ಶ್ರೀ ಶಾಂತಯ್ಯ ಸ್ವಾಮಿಗಳ ಪುತ್ರರಾದ ಶ್ರೀ ಸಿದ್ಧರಾಮೇಶ್ವರರಲ್ಲಿದ್ದ ಆಧ್ಯಾತ್ಮಿಕ ಕಳೆಯನ್ನು ಗುರುತಿಸಿದರು. ಶ್ರೀ ರೇವಣಸಿದ್ದೇಶ್ವರರು ಅನುಷ್ಠಾನ ಮುಗಿದ ಮೇಲೆ ಇಲ್ಲಿ ಮಠವನ್ನು ಸ್ಥಾಪಿಸಿ, ಶ್ರೀ ಸಿದ್ಧರಾಮೇಶ್ವರರನ್ನು ಪ್ರಥಮ ಗುರುಗಳನ್ನಾಗಿ ನೇಮಕಮಾಡಿ ಮುಂದೆ ಹೊರಡುತ್ತಾರೆ. ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ಏಕದಂಡಿ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯರೆಂದು ಹೆಸರು ಪಡೆದರು. ಇವರು ಮಠದ ಆವರಣದಲ್ಲಿ ಮಜ್ಜನ ಬಾವಿಯನ್ನು ಸ್ಥಾಪಿಸಿದರು. ಅಲ್ಲದೆ ಅನೇಕ ಪವಾಡಗಳನ್ನು ಮಾಡಿ ಮಠವನ್ನು ಪ್ರಸಿದ್ಧಿಗೆ ತಂದು ಲಿಂಗೈಕ್ಯರಾದರು.

ಪರಂಪರೆ:
೧. ಷ.ಬ್ರ.ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಕೆಂಜೆಡೇಶ್ವರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಜಗದ್ಗುರು ಶ್ರೀ ರೇವಣಸಿದ್ದೇಶ್ವರರಿಂದ ಸ್ಥಾಪನೆಯಾದ ಈ ಮಠದ ಪರಂಪರೆಯು ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳಿಂದ ಆರಂಭವಾಗಿ ನಂತರ ಬಂದ ಅನೇಕ ಗುರುಗಳು ಪಟ್ಟಾಧಿಕಾರಿಗಳಾಗಿ ಮಂತ್ರವಾಡಿ ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಆದರೆ ಆ ಗುರುಗಳ ಬಗ್ಗೆ ನಿಖರವಾದ ಮಾಹಿತಿಗಳು ಲಭ್ಯವಿಲ್ಲ. ಮಠದ ಪರಂಪರೆಯ ಗುರುಗಳ ಪವಾಡವನ್ನು ಕೇಳಿ ತಿಳಿದುಕೊಂಡಿದ್ದ ಸವಣೂರಿನ ನವಾಬರು ಈ ಮಠದ ಭಕ್ತರಾಗಿ, ಧಾರ್ಮಿಕ ಕಾರ್ಯಗಳು ಸುಗಮವಾಗಿ ನಡೆಯಲೆಂದು ಅನೇಕ ದಾನ, ದತ್ತಿಗಳನ್ನು ನೀಡಿದ್ದರೆಂದು ಹೇಳಲಾಗುತ್ತಿದೆ.

೧೯೪೮ ರ ಏಪ್ರಿಲ್ ಇಪ್ಪತ್ತೈದರಂದು ಜನಿಸಿದ ಶ್ರೀ ಕೆಂಜೆಡೇಶ್ವರ ಶಿವಾಚಾರ್ಯ ಸ್ವಾಮಿಗಳು ಶ್ರೀ ರಂಭಾಪುರಿ ಪೀಠದ ಜಗದ್ಗುರುಗಳಾದ ಶ್ರೀ ಶಿವಾನಂದ ರಾಜೇಂದ್ರ ಶಿವಾಚಾರ್ಯ ಭಗವತ್ಪಾದರ ಅನುಗ್ರಹ ಪಡೆದು, ೧೯೬೭ರಲ್ಲಿ ಪರಂಪರಾಗತ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡರು. ಗುರುಗಳು ಸಂಚಾರ ಕೈಗೊಂಡು ಸಮಾಜವನ್ನು ಬೆಳೆಸಿದರು. ಇವರು ತಮ್ಮ ಜೀವಿತಾವಧಿಯಲ್ಲಿ ಸಮಾಜದ ಅಭಿವೃದ್ಧಿಗೆ ಪೂರಕವಾಗುವಂತಹ ಅನೇಕ ಪವಾಡಗಳನ್ನು ಮಾಡಿ, ೧೯೭೪ರ ನವೆಂಬರ್ ಇಪ್ಪತ್ತರಂದು ಶ್ರೀ ಸಿದ್ಧರಾಮ ದೇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿ ಲಿಂಗೈಕ್ಯರಾದರು.

ಶ್ರೀ ಸಿದ್ಧರಾಮ ದೇವರು ಶ್ರೀ ಸಿದ್ಧಯ್ಯಸ್ವಾಮಿ ಮತ್ತು ಶ್ರೀಮತಿ ಸಿದ್ಧಮಾಂಬೆಯವರ ಪುತ್ರರಾಗಿ ೧೯೬೪ರ ಜೂನ್ ಇಪ್ಪತ್ತಾಲ್ಕರಂದು ಜನಿಸಿದರು. ಇವರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿದ ನಂತರ ಸಂಸ್ಕೃತ ವಿದ್ಯಾಭ್ಯಾಸವನ್ನು ಮಾಡಿ ಪಾಂಡಿತ್ಯವನ್ನು ಗಳಿಸಿಕೊಂಡರು. ಗುರುಗಳು ಲೌಕಿಕ ಹಾಗೂ ಧಾರ್ಮಿಕ ವಿದ್ಯಾಭ್ಯಾಸವನ್ನು ಮಾಡಿ ಮಠಕ್ಕೆ ಆಗಮಿಸಿ, ಶ್ರೀಕೆಂಜೆಡೇಶ್ವರ ಸ್ವಾಮಿಗಳ ಶಿಲಾಗದ್ದುಗೆಯಲ್ಲಿ ಪ್ರಾಣ ಪ್ರತಿಷ್ಠಾಪಿಸಿದರು. ಮೂರ್ತಿ ಸ್ಥಾಪನೆ ಹಾಗೂ ಕಳಸಾರೋಹಣವನ್ನು ೧೯೮೬ರಲ್ಲಿ ಮುಗಿಸಿ, ಶ್ರೀ ಕೆಂಜೆಡೇಶ್ವರ ಶಿವಾಚಾರ್ಯ ಸ್ವಾಮಿಗಳ ಇಪ್ಪತ್ತೊಂದನೆಯ ಪುಣ್ಯಾರಾಧನೆಯಂದು, ಹೊಸ ಸಹಸ್ರಮಾನದ ೨೦೦೦ದ ಫೆಬ್ರವರಿ ಐದರಂದು ಪಂಚಪೀಠಾಧೀಶರ ಸಮ್ಮುಖದಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡರು.

ಧಾರ್ಮಿಕ ಕಾರ್ಯಗಳು: ಮಠದ ಪರಂಪರೆಯ ಗದ್ದುಗೆಗಳಿಗೆ ನಿತ್ಯ ಪೂಜೆ, ಕರ್ತೃಗುರುಗಳಾದ ಶ್ರೀ ಸಿದ್ಧರಾಮೇಶ್ವರರ ಹಾಗೂ ಶ್ರೀ ಕೆಂಜೆಡೇಶ್ವರ ಸ್ವಾಮಿಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ಮಠದಲ್ಲಿ ನಿತ್ಯ ಅನ್ನದಾಸೋಹವನ್ನು ನಡೆಸ ಲಾಗುತ್ತಿದೆ. ಈಗಿನ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮಿಗಳು ಇಲ್ಲಿ ನೆಲೆಸಿದ ಮೇಲೆ ಮಠಕ್ಕೆ ಭವ್ಯವಾದ ಕಟ್ಟಡವನ್ನು ನಿರ್ಮಿಸಿ, ಇಲ್ಲಿನ ನೈಸರ್ಗಿಕ ವಾತಾವರಣಕ್ಕೆ ಒಂದು ಕಳೆಯನ್ನು ನೀಡಿದ್ದಾರೆ. ಗುರುಗಳು ಅನುಷ್ಠಾನ ಮೂರ್ತಿ

ಗಳಾಗಿದ್ದು, ಪ್ರತಿ ಶ್ರಾವಣಮಾಸದಲ್ಲಿ ಮೌನ ಅನುಷ್ಠಾನವನ್ನು ಕೈಗೊಳ್ಳುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮಿಗಳು, ಶ್ರೀ ರೇವಣಸಿದ್ಧೇಶ್ವರ ಮಠ, ಮಂತ್ರವಾಡಿ, ಸವಣೂರು ತಾಲ್ಲೂಕು, ಹಾವೇರಿ ಜಿಲ್ಲೆ.

ಆಧಾರ: 'ಶ್ರೀ ಕೆಂಜೆಡೇಶ್ವರ ಲೀಲಾಮೃತ ', ಲೇಖಕರು : ಶ್ರೀ ಗಂಗಾಧರ ಶಾಸ್ತ್ರಿಗಳು.

ಸವಣೂರು

ಹಾವೇರಿ ಜಿಲ್ಲೆಯ ಸವಣೂರು ಪಟ್ಟಣವು ಜಿಲ್ಲಾ ಕೇಂದ್ರದಿಂದ ಉತ್ತರಕ್ಕೆ ಇಪ್ಪತ್ತೈದು ಕಿ.ಮೀ. ದೂರದಲ್ಲಿದೆ. ತಾಲ್ಲೂಕಿನ ಕೇಂದ್ರ ಸ್ಥಳವಾದ ಸವಣೂರು ಪಟ್ಟಣವು ನವಾಬರ ಆಳ್ವಿಕೆಯಿಂದ ಐತಿಹಾಸಿಕ ಸ್ಥಾನ ಪಡೆದಿದೆ. ಪ್ರಸಿದ್ಧಿ ಪಡೆದ ಸವಣೂರುಪಟ್ಟಣ ಜಗತ್ಪ್ರಸಿದ್ಧವಾದ ದೊಡ್ಡಹುಣಸೇ ಮರಗಳಿಂದಾಗಿ ವಿಶ್ವದ ಗಮನವನ್ನು ಸೆಳೆದಿದೆ. ಸವಣೂರಿನಲ್ಲಿ ಹದಿನೆಂಟು ಮಠಗಳು ಸ್ಥಾಪನೆಗೊಂಡಿವೆ ಎಂದು ಹೇಳಲಾಗುತ್ತಿದೆ. ಪ್ರಾಚೀನ ಕಾಲದಲ್ಲಿ ಸ್ಥಾಪನೆಗೊಂಡ ಹದಿನೆಂಟು ಮಠಗಳಲ್ಲಿ ಈಗ ಕೇವಲ ಶ್ರೀ ದೊಡ್ಡಹುಣಸೇಮಠ, ಶ್ರೀ ಕಲ್ಮಠ ಹಾಗೂ ಶ್ರೀ ಅಡವಿಸ್ವಾಮಿ ಮಠಗಳು ಮಾತ್ರ ಅಸ್ತಿತ್ವದಲ್ಲಿದ್ದು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿವೆ. ಉಳಿದ ಹದಿನೈದು ಮಠಗಳಲ್ಲಿ ೧.ಶ್ರೀ ಚರಮೂರ್ತಿಮಠ ೨. ಶ್ರೀ ಹಿರೇಮಠ ೩.ಶ್ರೀ ಮಹಾಂತಿನಮಠ ೪.ಶ್ರೀ ಗುರುಪಾದಮಠ ೫. ಶಾನುಭೋಗರ ಗುರುಸ್ವಾಮಿಮಠ ೬. ಶ್ರೀ ಗೌಡರ ಗುರುಸ್ವಾಮಿಮಠ ೭.ಶ್ರೀ ಮಹಾಂತಯ್ಯನಮಠ ೮. ಶ್ರೀ ಸಾಲಿಮಠ ೯. ಶ್ರೀ ಫಕೀರಸ್ವಾಮಿಮಠ ೧೦. ಶ್ರೀ ಭಕ್ತಮಠ ಎಂಬ ಹೆಸರಿನಲ್ಲಿ ಹತ್ತು ಮಠಗಳು ಕೇವಲ ಗದ್ದುಗೆಗಳ ಪೂಜೆ ಮಾತ್ರ ಸೀಮಿತ ವಾಗಿವೆ. ಉಳಿದ ನಾಲ್ಕು ಮಠಗಳು ಹೇಳಲು ಹೆಸರಿಲ್ಲದಂತಾಗಿವೆ.

ದೊಡ್ಡಹುಣಸೇಮಠ: ಸವಣೂರಿನ ಪಶ್ಚಿಮ ಭಾಗದಲ್ಲಿರುವ ಕೋಟೆಯ ಅಗಸಿ ಬಾಗಿಲಿನ ಬಳಿ ಶ್ರೀ ದೊಡ್ಡಹುಣಸೇ ಮಠವು ಸ್ಥಾಪನೆಯಾಗಿದೆ. ಈ ಮಠವು ಎಂಟುನೂರು ವರ್ಷಗಳ ಹಿಂದೆ ಪ್ರಾರಂಭಗೊಂಡಿರಬಹುದೆಂದು ಹೇಳಲಾಗುತ್ತಿದೆ. ಶ್ರೀ ರಾಚೋಟೇಶ್ವರ ಶಿವಯೋಗಿಗಳು ಈ ಮಠದ ಸ್ಥಾಪಕರೆಂದು ಹೇಳಲಾದರೂ, ಈ ಬಗ್ಗೆ ದಾಖಲಿಸಲು ಯಾವುದೇ ಆಧಾರಗಳು ಲಭ್ಯವಿಲ್ಲ. ವಿರಕ್ತ ಸಂಪ್ರದಾಯದ ಮುರುಘಾ ಸಮಯದ ಶ್ರೀ ದೊಡ್ಡಹುಣಸೇ ಮಠವು ತನ್ನ ಪರಂಪರೆಯ ಜತೆಗೆ ದೊಡ್ಡಹುಣಸೇ ಮರಗಳನ್ನು ಸೃಷ್ಟಿಸಿಕೊಂಡು, ವಿಶ್ವದ ಭೂಪಟದಲ್ಲಿ ಗುರುತಿಸುವಂತಹ ಮಹತ್ವದ ಪಾತ್ರವನ್ನು ಪಡೆದುಕೊಂಡಿದೆ.

ದೊಡ್ಡ ಹುಣಸೇಮರ: ಪುರಾತನ ಕಾಲದಲ್ಲಿ ಸ್ಥಾಪನೆಗೊಂಡ ಈ ಮಠದ ಆವರಣದಲ್ಲಿ ವಿಶ್ವವಿಖ್ಯಾತಿ ಪಡೆದ ದೊಡ್ಡಹುಣಸೇ ಮರಗಳು ಬೆಳೆದಿರುವ ಕಾರಣ ಈ ಮಠಕ್ಕೆ 'ಶ್ರೀ ದೊಡ್ಡಹುಣಸೇಮಠ 'ಎಂಬ ಹೆಸರು ಬಂದಿದೆ. ಪ್ರಕೃತಿಯ ಅದ್ಭುತಗಳನ್ನು ಅವಲೋಕಿಸುವುದರ ಜೊತೆಗೆ ಅವುಗಳ ನಿಗೂಢತೆ ಮತ್ತಷ್ಟು ಆಳಕ್ಕೆ ಹೋಗುತ್ತದೆ. ಇದನ್ನು ಬಯಲು ಮಾಡಲು ಮಾನವ ಏನೆಲ್ಲಾ ಪ್ರಯತ್ನಪಟ್ಟರೂ, ಪ್ರಕೃತಿ ನಿಗೂಢತೆಯ ಆಳಕ್ಕೆ ಹೋಗುತ್ತದೆ. ಇಂತಹ ನಿಗೂಢತೆ ಮತ್ತು ಅದ್ಭುತಗಳು ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ನೋಡಸಿಗುತ್ತಿವೆ. ಇಂತಹ ಅದ್ಭುತಗಳಲ್ಲಿ ಒಂದಾದ ದೊಡ್ಡ ಹುಣಸೇಮರಗಳು ಸವಣೂರಿನ ಈ ಮಠದಲ್ಲಿ ಮಠದ ಪರಂಪರೆಯ ಜೊತೆಗೇ ಬೆಳೆದಿವೆ.

ಹಠಯೋಗಿಗಳಾದ ಶ್ರೀ ಗೋರಕನಾಥರು ದೇಶಸಂಚಾರ ಮಾಡುತ್ತಾ ಸವಣೂರಿಗೆ ಬಂದು ಕಲ್ಮಠದಲ್ಲಿ ನೆಲೆಗೊಂಡು, ಅನೇಕ ವರ್ಷಗಳವರೆಗೆ ಯೋಗಸಿದ್ಧಿಗಾಗಿ ತಪೋನುಷ್ಠಾನ ಕೈಗೊಂಡಿದ್ದರು. ಇದರ ನೆನಪಿಗಾಗಿ ತಮ್ಮ ತಪೋಶಕ್ತಿಯಿಂದ ಹುಣಸೇ ಸಸಿಗಳನ್ನು ನೆಟ್ಟು, ದೀರ್ಘ ಕಾಲದವರೆಗೆ ಬದುಕಲಿ ಎಂದು ಆಶೀರ್ವದಿಸಿದ್ದರಿಂದ, ಈ ಮರಗಳು ಕಳೆದ ಎಂಟುನೂರು ವರ್ಷಗಳ ಇತಿಹಾಸವನ್ನು ಹೊತ್ತು ಬೆಳೆಯುತ್ತಾ ಬಂದಿವೆ ಎಂದು ಮಠದ ಗುರುಗಳು ಅಭಿಪ್ರಾಯಿಸುತ್ತಾರೆ.

ಈ ಮರಗಳು ನೋಡಲು ಉಬ್ಬಿದ ಬಾಟಲಿಯಂತೆ ಬೆಳೆದು ಘೇಂಡಾಮೃಗದ ಚರ್ಮದ ಹೋಲಿಕೆಯಿರುವ ತೊಗಟೆಯನ್ನು ಹೊಂದಿವೆ. ಸುತ್ತಳತೆ ೧೪.೭೦ ಮೀಟರ್ ಹಾಗೂ ಎತ್ತರ ೧೭.೫೦ ಮೀಟರ್ ಇರುವುದು ಆಶ್ಚರ್ಯ ತರುತ್ತದೆ. ಈ ರೀತಿ ಒಟ್ಟು ಮೂರು ಮರಗಳು ಈ ಮಠದ ಆವರಣದಲ್ಲಿ ಬೆಳೆದಿವೆ. ಇವುಗಳಲ್ಲಿ ಬಿಡುವ ಕಾಯಿಗಳ

ಗಾತ್ರವು ಸುಮಾರು ಹದಿನೆಂಟು ಇಂಚಿನಿಂದ ಇಪ್ಪತ್ತು ಇಂಚಿನವರೆಗೂ ಇದ್ದು, ಈ ಕಾಯಿಯ ಚಿಪ್ಪನ್ನು ಒಡೆದರೆ ಒಳಗೆ ಸಿಹಿಮಿಶ್ರಿತ ಹುಳಿಯಾದ ತೊಳೆಗಳು ಸಿಗುತ್ತವೆ. ಜಗತ್ತಿನ ಎರಡು ಪ್ರದೇಶಗಳಲ್ಲಿ ಮಾತ್ರ ಈ ರೀತಿಯ ಬೃಹದಾಕಾರದ ಮರಗಳು ಬೆಳೆದಿವೆ ಎಂದು ಹೇಳಲಾಗುತ್ತಿದೆ. ದಕ್ಷಿಣ ಆಫ್ರಿಕಾದ ಕಾಡುಗಳನ್ನು ಬಿಟ್ಟರೆ ಭಾರತದ ಸವಣೂರಿನಲ್ಲಿ ಮಾತ್ರ ಇಂತಹ ಅಪರೂಪದ ಮರಗಳು ಕಾಣಸಿಗುತ್ತಿವೆ ಎಂದು ಸಸ್ಯಶಾಸ್ತ್ರಜ್ಞರು ಅಭಿಪ್ರಾಯಿಸಿದ್ದಾರೆ.

ಮಠದ ಪರಂಪರೆ: ಕರ್ತೃಗುರುಗಳಾದ ಶ್ರೀ ರಾಚೋಟಿ ಶಿವಯೋಗಿಗಳ ನಂತರ ಶ್ರೀ ಗದ್ದುಗೇಶ್ವರ ಶಿವಯೋಗಿಗಳು ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ನಂತರ ಮಠದ ಪರಂಪರೆಯಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಳ್ಳುವ ಗುರುಗಳಿಗೆ ಕರ್ತೃಗುರುಗಳಾದ ಶ್ರೀ ರಾಚೋಟಿ ಶಿವಯೋಗಿಗಳ ಹೆಸರನ್ನೇ ಅಭಿದಾನ ಮಾಡಿ, ಒಂದೇ ಹೆಸರಿನಿಂದ ಗುರುತಿಸಲಾಗಿದೆ. ಈವರೆಗೆ ಹನ್ನೆರಡು ಜನ ಗುರುಗಳು ಪಟ್ಟಾಧಿಕಾರವನ್ನು ವಹಿಸಿಕೊಂಡು ಆಡಳಿತವನ್ನು ನಡೆಸಿ ಲಿಂಗೈಕ್ಯರಾಗಿದ್ದಾರೆ. ಪರಂಪರೆಯ ಮೂರನೆಯ ಗುರುಗಳಾದ ಶ್ರೀ ರಾಚೋಟೇಶ್ವರ ಶಿವಯೋಗಿಗಳು ಮಹಾತಪಸ್ವಿಗಳಾಗಿ ಆಯುರ್ವೇದ ಪಂಡಿತರಾಗಿ ಧರ್ಮ ಮತ್ತು ಸಮಾಜವನ್ನು ಸಮಾನವಾಗಿ ಬೆಳೆಸಿದವರಾಗಿದ್ದಾರೆ. ಕಾಯಕಯೋಗವನ್ನು ನಂಬಿ ಕೃಷಿಯಲ್ಲಿ ಅಪಾರ ಅನುಭವವನ್ನು ಪಡೆದು, ಈ ಕ್ಷೇತ್ರದಲ್ಲಿ ಸಾಧನೆಯನ್ನು ಸಾಧಿಸಿದ್ದರು.

ಉತ್ತರಾಧಿಕಾರಿಗಳ ನೇಮಕ: ಹನ್ನೆರಡನೆಯ ಗುರುಗಳು ೧೯೮೫ರಲ್ಲಿ ಲಿಂಗೈಕ್ಯರಾದ ಮೇಲೆ ಸವಣೂರಿನ ಶ್ರೀ ರೇವಣ ಸಿದ್ಧಯ್ಯ ಮತ್ತು ಶ್ರೀಮತಿ ರುದ್ರಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಚನ್ನಬಸವ ದೇವರನ್ನು, ೧೯೮೫ರಲ್ಲಿ ಉತ್ತರಾಧಿಕಾರಿ ಗಳನ್ನಾಗಿ ನೇಮಕ ಮಾಡಲಾಗಿದೆ. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಸವಣೂರು ಮತ್ತು ಹುಬ್ಬಳ್ಳಿಯಲ್ಲಿ ಮುಗಿಸಿ, ಶಿವಯೋಗ ಮಂದಿರದಲ್ಲಿ ಧಾರ್ಮಿಕ ವಿದ್ಯಾಭ್ಯಾಸವನ್ನು ಮುಗಿಸಿರುವ ಶ್ರೀ ಚನ್ನಬಸವ ದೇವರು ಧಾರವಾಡ ವಿಶ್ವವಿದ್ಯಾನಿಲ ಯದಲ್ಲಿ ೧೯೯೩-೯೪ ನೆಯ ಸಾಲಿನಲ್ಲಿ ಸಂಸ್ಕೃತ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪೂರೈಸಿ ಮಠಕ್ಕೆ ಆಗಮಿಸಿದರು. ವಿದ್ಯಾ ಸಂಪನ್ನರೂ, ಪ್ರಗತಿಪರ ಚಿಂತಕರೂ ಹಾಗೂ ವೈಚಾರಿಕ ಮನೋಧರ್ಮವನ್ನು ಬೆಳೆಸಿಕೊಂಡಿರುವ ಶ್ರೀ ಚನ್ನಬಸವ ದೇವರು ವೀರಶೈವ ಧರ್ಮದ ಮೂಲ ಉದ್ದೇಶಗಳಿಗೆ ಒತ್ತುಕೊಟ್ಟು, ಧರ್ಮಪ್ರಚಾರವನ್ನು ಕೈಗೊಂಡಿದ್ದಾರೆ. ಇತಿಹಾಸದ ಬಗ್ಗೆ ಕಾಳಜಿಯುಳ್ಳ ಗುರುಗಳು ಮಠದ ಆವರಣದಲ್ಲಿರುವ ಬೃಹದಾಕಾರದ ವೃಕ್ಷಗಳ ಸಂರಕ್ಷಣೆ ಹಾಗೂ ಮಠದ ಪರಂಪರೆಯ ಹನ್ನೆರಡು ಜನ ಗುರುಗಳ ಗದ್ದುಗೆಗಳನ್ನು ನವೀಕರಣಗೊಳಿಸಿ ಸ್ಮಾರಕಗಳನ್ನಾಗಿ ಉಳಿಸಿದ್ದಾರೆ.

ಅಭಿವೃದ್ಧಿಗೆ ಸಂಕಲ್ಪ: ಉತ್ತರಾಧಿಕಾರಿಗಳಾಗಿ ಕಳೆದ ಹದಿನೈದು ವರ್ಷಗಳ ಹಿಂದೆಯೇ ನೇಮಕಗೊಂಡಿದ್ದರೂ, ಮಠವು ಸರ್ವಾಂಗೀಣ ಅಭಿವೃದ್ಧಿಯನ್ನು ಕಂಡ ನಂತರವೇ ಪಟ್ಟಾಧಿಕಾರವನ್ನು ಮಾಡಿಕೊಳ್ಳಬೇಕೆಂಬ ನಿರ್ಧಾರವನ್ನು ಕೈಗೊಂಡಿದ್ದಾರೆ. ಈಗ ಹದಿನೈದು ಲಕ್ಷ ರೂಪಾಯಿ ವೆಚ್ಚದಲ್ಲಿ ಮಠದ ಕಟ್ಟಡವನ್ನು ನವೀಕರಣಗೊಳಿಸಲು ಯೋಜನೆಯನ್ನು ತಯಾರಿಸಿಕೊಂಡಿದ್ದಾರೆ. ಮಠದ ಆವರಣದಲ್ಲಿ ಕಲ್ಯಾಣಮಂಟಪ, ಗರ್ಭಗುಡಿ ನವೀಕರಣ, ಶಿವಪೂಜಾ ಮಂದಿರ ನಿರ್ಮಾಣ, ಮಠದ ಮಹಾದ್ವಾರದ ನಿರ್ಮಾಣ, ಮಠದ ಆವರಣದಲ್ಲಿ ಬೆಳೆದಿರುವ ಬೃಹದಾಕಾರದ ವೃಕ್ಷಗಳ ವೀಕ್ಷಣೆಗೆ ಬರುವ ಪ್ರವಾಸಿಗರಿಗೆ ಮತ್ತು ಭಕ್ತಾಧಿಗಳಿಗೆ ಅನುಕೂಲವಾಗುವಂತೆ ವಸತಿ ವ್ಯವಸ್ಥೆ, ದಾಸೋಹ ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲು ಮುಂದಾಗಿದ್ದಾರೆ.

ಸಾಮಾಜಿಕ ಕಾರ್ಯಗಳು: ಪ್ರಗತಿಪರ ಚಿಂತನೆಯನ್ನು ಮೈಗೂಡಿಸಿಕೊಂಡಿರುವ ಶ್ರೀ ಚನ್ನಬಸವ ದೇವರು ಸಮಷ್ಟಿ ಸಮಾಜವನ್ನು ದೃಷ್ಟಿಯಲ್ಲಿಟ್ಟುಕೊಂಡು, ಸಾಮಾಜಿಕ ಕಾರ್ಯಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ. ಹರಿಜನರ ಮತ್ತು ಹಿಂದುಳಿದ ವರ್ಗಗಳ ಓಣಿ ಗಳಲ್ಲಿ ಪಾದಯಾತ್ರೆಯ ಮೂಲಕ ಜಾಗೃತಿಯನ್ನುಂಟು ಮಾಡಿ, ದುಶ್ಚಟಗಳನ್ನು ಬಿಡುವಂತೆ ಮನಃಪರಿವರ್ತಿ ಸುವ ಕಾರ್ಯವನ್ನು ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ರುದ್ರಾಕ್ಷಿ ಧಾರಣೆಯನ್ನು ಮಾಡಿ ಧಾರ್ಮಿಕ ಮನೋಭಾವವನ್ನು ಬೆಳೆಸಿ ಕೊಳ್ಳಲು ಉಪದೇಶವನ್ನು ನೀಡಲಾಗುತ್ತಿದೆ. ಡಾ. ಅಂಬೇಡ್ಕರ್ ಜಯಂತಿಯಂದು ಹರಿಜನೋದ್ಧಾರದ ದ್ಯೇಯೋದ್ದೇಶ ಗಳನ್ನು ಇಟ್ಟುಕೊಂಡು ಹರಿಜನರ ಕೇರಿಗಳಲ್ಲಿ ಸಂಚರಿಸಿ ಜನರಿಗೆ ಕಾಯಕ ಮಾರ್ಗವನ್ನು ಹೇಳಿಕೊಟ್ಟು, ಮಾನಸಿಕ ಸ್ಥೈರ್ಯ ವನ್ನು ತುಂಬುವ ಕೆಲಸವನ್ನು ಮಾಡುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ, ಪ್ರತಿ ತಿಂಗಳು ಹುಣ್ಣಿಮೆಯಂದು ವಿಶೇಷ ಪೂಜೆಯ ಜೊತೆಗೆ ಶಿವಾನುಭವ ಗೋಷ್ಠಿಯನ್ನು ನಡೆಸಲಾಗುತ್ತಿದೆ. ಶ್ರೀ ರಾಚೋಟೇಶ್ವರ ಸ್ವಾಮಿಗಳ ಸಂಸ್ಮರಣೋತ್ಸವ ಕಾರ್ಯಕ್ರಮ ವನ್ನು ವರ್ಷಕ್ಕೊಮ್ಮೆ ಎರಡು ದಿನಗಳ ಕಾಲ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ.

ವಿಳಾಸ: ಶ್ರೀ ಚನ್ನಬಸವ ದೇವರು, ಶ್ರೀ ದೊಡ್ಡಹುಣಸೇ ಮಠ (ಕಲ್ಮಠ), ಸವಣೂರು, ಹಾವೇರಿ ಜಿಲ್ಲೆ.

ಕಲ್ಮಠ: ಸವಣೂರಿನ ಪಶ್ಚಿಮ ಭಾಗದಲ್ಲಿ ಸ್ಥಾಪನೆಯಾಗಿರುವ ಶ್ರೀ ಕಲ್ಮಠವು ವಿರಕ್ತ ಸಂಪ್ರದಾಯದ ಮುರುಘಾ ಸಮಯದ ಮಠವಾಗಿದೆ. ಮುನ್ನೂರು ವರ್ಷಗಳ ಹಿಂದೆ ಶ್ರೀ ಲಲಾಟೇಶ್ವರರು ಪ್ರಾರಂಭಮಾಡಿದ ಮಠ ಇದಾಗಿದೆ. ಈ ಪಟ್ಟಣದ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕೇಂದ್ರಬಿಂದುವಾಗಿ ಬೆಳೆದಿದೆ.

ಮಠ ಸ್ಥಾಪನೆ: ಮಹಾತಪಸ್ವಿಗಳಾಗಿ ಸಂಚಾರಮೂರ್ತಿಗಳಾಗಿದ್ದ ಶ್ರೀ ಲಲಾಟೇಶ್ವರರು ಲೋಕಸಂಚಾರ ಕೈಗೊಂಡು ಅಗಡಿ, ಬಂಕಾಪುರ, ಬಿದರಳ್ಳಿ ಮುಂತಾದ ಕಡೆಗಳಲ್ಲಿ ಅನುಷ್ಠಾನಗೊಂಡು, ಧರ್ಮಜಾಗೃತಿಯನ್ನುಂಟು ಮಾಡಿ ಸವಣೂರಿಗೆ ಆಗಮಿಸಿದ ಗುರುಗಳು ಇಲ್ಲಿ ನೆಲೆಸಿ, ದೀರ್ಘ ಅನುಷ್ಠಾನವನ್ನು ಕೈಗೊಂಡು ಮಠವನ್ನು ಸ್ಥಾಪನೆಮಾಡಿದ್ದಾರೆ. ಮಠಕ್ಕೆ ಕಲ್ಲಿನ ಕಟ್ಟಡವನ್ನು ನಿರ್ಮಿಸಿದ ಕಾರಣ'ಶ್ರೀ ಕಲ್ಮಠ 'ಎಂಬ ಹೆಸರು ಬಂದಿದೆ. ಶ್ರೀ ಲಲಾಟೇಶ್ವರರು ವೀರಶೈವ ಧರ್ಮದ ಪ್ರಚಾರಕ್ಕಾಗಿ ನಿತ್ಯ ಶಿವಾನುಭವಗೋಷ್ಠಿಯನ್ನು ನಡೆಸಿ ಅನ್ನದಾಸೋಹದ ವ್ಯವಸ್ಥೆ ಮಾಡಿ, ಸಂಸ್ಕಾರವಂತ ಸಮಾಜವನ್ನು ರೂಪಿಸಿದ್ದರು.

ಪರಂಪರೆ:

೧. ಶ್ರೀ ಮ.ನಿ.ಪ್ರ. ಲಲಾಟೇಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಗುರುಬಸವಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಸಂಗನಬಸವಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಮಹಾಂತಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಸಿದ್ಧಲಿಂಗ ಸ್ವಾಮಿಗಳು ತಪೋನಿಷ್ಠರಾಗಿ ಹೆಸರು ಗಳಿಸಿದ್ದರು. ನಂತರ ಬಂದಂತಹ ಶ್ರೀ ಗುರುಬಸವ ಸ್ವಾಮಿಗಳ ಬಗ್ಗೆ ಹೆಚ್ಚು ವಿವರಗಳು ದೊರೆಯ ದಾಗಿದೆ. ನಂತರ ಬಂದ ಶ್ರೀ ಸಂಗನಬಸವ ಸ್ವಾಮಿಗಳು ಧಾರವಾಡದ ಮುರುಘಾಮಠದ ಶ್ರೀ ಮೃತ್ಯುಂಜಯ ಸ್ವಾಮಿಗಳು ಕ್ರಿಯಾಮೂರ್ತಿಗಳಾಗಿ ಹೆಸರು ಮಾಡಿದ್ದರು. ಶಿವಪೂಜಾ ನಿಷ್ಠರಾಗಿ ಮಠವನ್ನು ಹೆಚ್ಚು ಅಭಿವೃದ್ಧಿಪಡಿಸಿ, ಮೂವತ್ತು ವರ್ಷಗಳ ಹಿಂದೆ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಮಠವು ಉತ್ತರಾಧಿಕಾರಿಗಳಿಲ್ಲದೆ ಖಾಲಿ ಉಳಿಯಿತು.

ಶ್ರೀ ಮಹಾಂತ ಸ್ವಾಮಿಗಳು ಶಿಗ್ಗಾಂವಿ ತಾಲ್ಲೂಕಿನ ಬಂಕಾಪುರದ ಶ್ರೀ ಸಿದ್ಧಲಿಂಗಯ್ಯ ಮತ್ತು ಶ್ರೀಮತಿ ಗಂಗಮ್ಮ ನವರ ಪುತ್ರರಾಗಿ ಜನಿಸಿದರು. ತಮ್ಮ ಹನ್ನೆರಡನೆಯ ವರ್ಷದಲ್ಲಿ ಖಾಲಿ ಉಳಿದಿದ್ದ ಕಲ್ಮಠಕ್ಕೆ, ಧಾರವಾಡ ಮುರುಘಾ ಮಠದ ಶ್ರೀ ಮಹಾಂತಪ್ಪ ಸ್ವಾಮಿಗಳ ಅನುಗ್ರಹವನ್ನು ಪಡೆದು ಪಟ್ಟಾಧಿಕಾರವನ್ನು ವಹಿಸಿಕೊಂಡರು. ನಂತರ ಶಿವಯೋಗ ಮಂದಿರದಲ್ಲಿ ಸಂಸ್ಕೃತ, ವೇದ ಹಾಗೂ ವಚನ ಸಾಹಿತ್ಯವನ್ನು ಅಭ್ಯಾಸಮಾಡಿದ ಶ್ರೀ ಮಹಾಂತ ಸ್ವಾಮಿಗಳು ಮಠಕ್ಕೆ ಬಂದು ಪೂರ್ಣ ಅಧಿಕಾರವನ್ನು ವಹಿಸಿಕೊಂಡರು.

ಅಭಿವೃದ್ಧಿ ಕಾರ್ಯಗಳು: ಚಿಕ್ಕ ವಯಸ್ಸಿನಲ್ಲೇ ದೊಡ್ಡ ಜವಾಬ್ದಾರಿಯನ್ನು ವಹಿಸಿಕೊಂಡ ಶ್ರೀ ಮಹಾಂತ ಸ್ವಾಮಿಗಳು ಜೀರ್ಣಗೊಂಡಿದ್ದ ಮಠದ ಕಟ್ಟಡವನ್ನು ಅಭಿವೃದ್ಧಿಪಡಿಸಿದರು. ನಂತರ ಹತ್ತುಲಕ್ಷ ರೂಪಾಯಿಗಳ ಯೋಜನೆಯಲ್ಲಿ ಕಲ್ಯಾಣ ಮಂಟಪವನ್ನು ಸ್ಥಾಪಿಸಿದ್ದಾರೆ. ಕರ್ತೃಗುರುಗಳ ಗದ್ದುಗೆಯ ನವೀಕರಣ ಸೇರಿದಂತೆ, ಮಠದ ಸರ್ವಾಂಗೀಣ ಅಭಿವೃದ್ಧಿ ಯನ್ನು ಹಂತಹಂತವಾಗಿ ಕಾರ್ಯಗತ ಮಾಡುತ್ತಾ ಬಂದಿದ್ದಾರೆ.

ಧಾರ್ಮಿಕ ಕಾರ್ಯಗಳು: ಗದ್ದುಗೆಗಳಿಗೆ ನಿತ್ಯಪೂಜೆ, ಅಮಾವಾಸ್ಯೆ, ಹುಣ್ಣಿಮೆಯಲ್ಲಿ ವಿಶೇಷಪೂಜೆಯನ್ನು ನಡೆಸಲಾಗುತ್ತಿದೆ.

ಮಠದ ಆಶ್ರಯದಲ್ಲಿ ಅಕ್ಕನ ಬಳಗವನ್ನು ಸ್ಥಾಪನೆ ಮಾಡಲಾಗಿದೆ. ಹಿರಿಯ ಗುರುಗಳ ಪುಣ್ಯಾರಾಧನೆಯು ಪ್ರತಿವರ್ಷ ಪುಷ್ಯ ಮಾಸದಲ್ಲಿ ನಡೆಯುತ್ತಿದೆ. ಈ ಸಂದರ್ಭದಲ್ಲಿ ಶಿವಾನುಭವ ಗೋಷ್ಠಿಗಳನ್ನು ಏರ್ಪಡಿಸಿ, ಪುರಾಣ ಪ್ರವಚನಗಳು, ವಿಚಾರಗೋಷ್ಠಿ ಗಳು ಹಾಗೂ ವಿವಿಧ ವಿಷಯಗಳ ಮೇಲೆ ಉಪನ್ಯಾಸವನ್ನು ನಡೆಸಲಾಗುತ್ತಿದೆ. ಗುರುಗಳು ಭಕ್ತರ ಮನೆಗಳಲ್ಲಿ ನಡೆಯುವ ಧಾರ್ಮಿಕ ಆಚರಣೆಗಳಲ್ಲಿ ಪಾಲ್ಗೊಂಡು ಆಶೀರ್ವದಿಸಿ, ಮಾರ್ಗದರ್ಶನವನ್ನು ನೀಡುತ್ತಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಮಹಾಂತ ಸ್ವಾಮಿಗಳು ಧಾರ್ಮಿಕ ಸಂಸ್ಕಾರವನ್ನು ನೀಡುವ ಜೊತೆಗೆ ಶಿಕ್ಷಣದ ಸಂಸ್ಕಾರವು ದೊರೆಯಬೇಕು ಎಂಬ ಮಹಾ ದಾಸೆಯಿಂದ ಶ್ರೀ ಲಲಾಟೇಶ್ವರ ವಿದ್ಯಾಪೀಠವನ್ನು ೧೯೯೦ರಲ್ಲಿ ಪ್ರಾರಂಭಿಸಿದರು. ಮಠದ ವಿಶಾಲವಾದ ಆವರಣದಲ್ಲಿ ಶಿಶುವಿಹಾರ, ಪ್ರಾಥಮಿಕಶಾಲೆ ಮತ್ತು ಬಾಲಕಿಯರಿಗಾಗಿ ಪ್ರೌಢಶಾಲೆಯನ್ನು ಪ್ರಾರಂಭಿಸಲಾಗಿದೆ. ಬಡಮಕ್ಕಳ ಅನುಕೂಲಕ್ಕಾಗಿ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿದ್ದು, ಇಪ್ಪತ್ತೈದು ಜನ ವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿಯನ್ನು ಕಲ್ಪಿಸಲಾಗಿದೆ.

ಶಾಖಾಮಠಗಳು: ಶ್ರೀ ಲಲಾಟೇಶ್ವರರು ಸವಣೂರಿನಲ್ಲಿ ಮಠವನ್ನು ಸ್ಥಾಪನೆ ಮಾಡುವ ಮೊದಲು,ಅನುಷ್ಠಾನವನ್ನು ಕೈಗೊಂಡಿದ್ದ ಬಿದರಳ್ಳಿ, ಅಗಡಿ, ಬಂಕಾಪುರದ ದೇಸಾಯಿಮಠ ಶಾಖಾಮಠಗಳಾಗಿವೆ. ಬಂಕಾಪುರದ ದೇಸಾಯಿ ಮಠದಲ್ಲಿ ಮೂರು ಗದ್ದುಗೆಗಳು ಇವೆ. ಮಠದ ಪರಂಪರೆಯ ಮೂರನೆಯ ಗುರುಗಳಾದ ಶ್ರೀ ಗುರುಬಸವ ಸ್ವಾಮಿಗಳ ಗದ್ದುಗೆಯು ಈ ಶಾಖಾಮಠದಲ್ಲಿ ಸ್ಥಾಪನೆಯಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಮಹಾಂತ ಸ್ವಾಮಿಗಳು, ಶ್ರೀ ಕಲ್ಮಠ, ಸವಣೂರು, ಹಾವೇರಿ ಜಿಲ್ಲೆ.

ಅಡವಿಸ್ವಾಮಿಮಠ: ಸವಣೂರಿನ ಮಧ್ಯಭಾಗದಲ್ಲಿರುವ ಶ್ರೀ ಅಡವಿಸ್ವಾಮಿ ಮಠವು ಪ್ರಾಚೀನ ಕಾಲದಲ್ಲಿ ಪ್ರಾರಂಭವಾಗಿರ ಬಹುದೆಂದು ಹೇಳಲಾಗುತ್ತಿದೆ. ಆದರೆ ಮಠದ ಸ್ಥಾಪನೆಯ ಬಗ್ಗೆ ಮತ್ತು ಕಾಲಮಾನದ ಬಗ್ಗೆ ನಿಖರವಾದ ಮಾಹಿತಿ ಲಭ್ಯವಿಲ್ಲದಾಗಿದೆ. ಶ್ರೀ ಅಡವಿ ಸ್ವಾಮಿಗಳು ಲೋಕಸಂಚಾರವನ್ನು ಕೈಗೊಂಡು ಮಠವನ್ನು ಸ್ಥಾಪನೆಮಾಡಿದ್ದಾರೆ. ಮಠಕ್ಕೆ ಕರ್ತೃಗುರುಗಳ ಹೆಸರನ್ನೇ ಇಡಲಾಗಿದೆ. ವಿರಕ್ತ ಸಂಪ್ರದಾಯದ, ಕುಮಾರ ಸಮಯದ ಪರಂಪರೆಯಲ್ಲಿ ಈ ಮಠವು ಬೆಳೆದಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಅಡವಿಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಶಿವಲಿಂಗಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಹುಚ್ಚಪ್ಪಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಎರಡನೆಯ ಅಡವಿಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಎರಡನೆಯ ಹುಚ್ಚಪ್ಪಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಮೂರನೆಯ ಅಡವಿಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಮೂರನೆಯ ಹುಚ್ಚಪ್ಪಸ್ವಾಮಿಗಳು
೮. ಶ್ರೀ ಮ.ನಿ.ಪ್ರ. ಗಂಗಾಧರಸ್ವಾಮಿಗಳು
೯. ಶ್ರೀ ಮ.ನಿ.ಪ್ರ. ನಾಲ್ಕನೆಯ ಅಡವಿಸ್ವಾಮಿಗಳು
೧೦. ಶ್ರೀ ಮ.ನಿ.ಪ್ರ. ಕುಮಾರಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದ ಎಲ್ಲಾ ಗುರುಗಳು ಶಿವಪೂಜಾ ನಿಷ್ಠರಾಗಿ, ಮಠವನ್ನು ಸರ್ವಾಂಗೀಣವಾಗಿ ಅಭಿವೃದಿ ಪಡಿಸಿದ್ದಾರೆ. ಈ ಮಠವು ಪುತ್ರವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದ್ದು, ಶ್ರೀ ಕುಮಾರಸ್ವಾಮಿಗಳು ಹತ್ತನೆಯ ಪಟ್ಟಾಧಿಕಾರಿಗಳಾಗಿ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ತಮ್ಮ ಉತ್ತರಾಧಿಕಾರಿಗಳನ್ನಾಗಿ ಶ್ರೀ ಗದ್ದಿಗಯ್ಯ ಮತ್ತು ಶ್ರೀಮತಿ ಅನ್ನಪೂರ್ಣಮ್ಮನವರ ಪುತ್ರರಾಗಿ ೧೯೮೦ರಲ್ಲಿ ಜನಿಸಿದ, ತಮ್ಮ ಸಹೋದರ ಸಂಬಂಧಿಯಾದ ಶ್ರೀ ಶಿವಕುಮಾರ ದೇವರನ್ನು ನೇಮಿಸಿಕೊಂಡಿದ್ದಾರೆ. ಮಠದ ಪರಂಪರೆಯಲ್ಲಿ ಒಟ್ಟು

ಹತ್ತು ಜನ ಗುರುಗಳು ಅಧಿಕಾರವನ್ನು ನಡೆಸಿದ್ದಾರೆ ಎಂದು ಹೇಳಲಾದರೂ, ಮಠದ ಆವರಣದಲ್ಲಿ ಕೇವಲ ಆರು ಗದ್ದುಗೆಗಳು ನೋಡಸಿಗುತ್ತಿವೆ. ಉಳಿದವುಗಳು ಎಲ್ಲಿ ನಿರ್ಮಾಣಗೊಂಡಿವೆ ಎಂಬ ಬಗ್ಗೆ ಮಾಹಿತಿ ಲಭ್ಯವಿಲ್ಲ.

ಅಭಿವೃದ್ಧಿ ಕಾರ್ಯಗಳು: ನಾಲ್ಕನೆಯ ಶ್ರೀ ಅಡವಿ ಸ್ವಾಮಿಗಳ ಕಾಲದಲ್ಲಿ ಮಠದ ಕಟ್ಟಡವು ನವೀಕರಣಗೊಂಡು ನೂತನವಾಗಿ ನಿರ್ಮಾಣವಾಗಿದೆ ಎಂದು ಹೇಳಲಾಗುತ್ತಿದೆ. ಶಿಥಿಲಗೊಂಡಿದ್ದ ಕಟ್ಟಡವನ್ನು ತೆಗೆಸಿ ಮಠದ ಕಲ್ಪನೆಗೆ ಅನುಗುಣವಾಗಿ ಅಂದು ನಿರ್ಮಿಸಿದ ಕಟ್ಟಡ ತನ್ನ ಭವ್ಯತೆಯನ್ನು ಸಾರುತ್ತಾ ಇಂದಿಗೂ ಅಚ್ಚಳಿಯದೆ ನಿಂತಿದೆ. ಇಪ್ಪತ್ತಾರು ವರ್ಷಗಳ ಹಿಂದೆ ಅಧಿಕಾರ ವನ್ನು ವಹಿಸಿಕೊಂಡ ಗುರುಗಳು, ಮಠವನ್ನು ಉನ್ನತೋನ್ನತಿಗೆ ಕೊಂಡೊಯ್ದಿದ್ದಾರೆ.

ಧಾರ್ಮಿಕ ಕಾರ್ಯಗಳು: ಗದ್ದುಗೆಗಳಿಗೆ ನಿತ್ಯ ಎರಡೂ ವೇಳೆ ಪೂಜೆ, ಶ್ರಾವಣ, ಕಾರ್ತೀಕ ಮಾಸಗಳಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಫೆಬ್ರವರಿಯಲ್ಲಿ ಹಿರಿಯ ಗುರುಗಳ ಪುಣ್ಯಸ್ಮರಣೆ ಕಾರ್ಯವನ್ನು ಹಮ್ಮಿಕೊಳ್ಳಲಾಗುತ್ತಿದೆ. ಅಲ್ಲದೆ ವಿಶೇಷ ಸಂದರ್ಭಗಳಲ್ಲಿ ಅನ್ನದಾಸೋಹವನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಕುಮಾರ ಸ್ವಾಮಿಗಳು, ಶ್ರೀ ಅಡವಿಸ್ವಾಮಿ ಮಠ, ಸವಣೂರು, ಹಾವೇರಿ ಜಿಲ್ಲೆ.

ಹತ್ತಿಮತ್ತೂರು

ಸವಣೂರು ತಾಲ್ಲೂಕಿನ ಹತ್ತಿಮತ್ತೂರು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಹತ್ತಿಮತ್ತೂರು ಗ್ರಾಮದಲ್ಲಿ ವಿರಕ್ತಮಠವು ಮೊದಲು, ಹಾವೇರಿ ಸಮೀಪದ ಕರ್ಜಗೆಯಲ್ಲಿ ಮುನ್ನೂರು ವರ್ಷಗಳ ಹಿಂದೆ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಗಳಿಂದ ಸ್ಥಾಪನೆಯಾಗಿತ್ತೆಂದೂ, ಈ ಮಠವನ್ನು ಸ್ಥಾಪನೆ ಮಾಡಿದ್ದಾರೆಂದೂ ಹೇಳಲಾಗುತ್ತಿದೆ. ಶ್ರೀ ಮುರುಘೇಂದ್ರ ಸ್ವಾಮಿಗಳ ನಂತರ ಬಂದ ಶ್ರೀ ರುದ್ರಮುನಿ ಸ್ವಾಮಿಗಳು ಈ ಗ್ರಾಮಕ್ಕೆ ಸ್ಥಳಾಂತರಿಸಿದ್ದಾರೆ. ಶ್ರೀ ವಿರಕ್ತಮಠವು ಕರ್ಜಗೆಯ ಮೂಲಮಠದ ಜೊತೆಗೆ ಸಂಕಲಿಪುರ, ಕಳಸಬಸವನಕೊಪ್ಪ, ಚಿಕ್ಕಮಗಳೂರು, ಹರಳೇಹಳ್ಳಿಯಲ್ಲಿ ಶಾಖಾಮಠಗಳನ್ನು ಹೊಂದಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಸಿದ್ಧಲಿಂಗೇಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ರುದ್ರಮುನಿಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಗುಳ್ಳಯ್ಯಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಮುರುಘೇಂದ್ರಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಎರಡನೆಯ ರುದ್ರಮುನಿಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ನಿಜಗುಣಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದ್ದು, ಧಾರ್ಮಿಕ, ಸಾಮಾಜಿಕ ಹಾಗೂ ಆರ್ಥಿಕವಾಗಿ ಮುನ್ನಡೆದು ಹೆಚ್ಚು ಪ್ರಸಿದ್ಧಿಯಾಗಲು, ಪರಂಪರೆಯ ಆರು ಜನ ಗುರುಗಳು ಕಾರಣೀಭೂತರಾಗಿದ್ದಾರೆ. ಎರಡನೆಯ ಶ್ರೀ ರುದ್ರಮುನಿ ಸ್ವಾಮಿಗಳು ೧೯೨೭ರಲ್ಲಿ ಕರ್ಜಗೆಯ ಮಠದಲ್ಲಿ ಪಟ್ಟಾಧಿಕಾರ ಪಡೆದು ಹತ್ತಿಮತ್ತೂರಿಗೆ ಆಗಮಿಸಿ ಮಠಕ್ಕೆ ಬೃಹದಾಕಾರದ ಕಟ್ಟಡವನ್ನು ನಿರ್ಮಿಸಿದ್ದಲ್ಲದೆ, ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಿ ೧೯೮೪ರಲ್ಲಿ ಲಿಂಗೈಕ್ಯರಾದರು. ನಂತರ ಪರಂಪರೆಯ ಆರನೆಯ ಗುರುಗಳಾಗಿ ಅಧಿಕಾರವನ್ನು ಸ್ವೀಕರಿಸಿದ ಶ್ರೀ ನಿಜಗುಣ ಸ್ವಾಮಿಗಳು ಶ್ರೀ ರುದ್ರಮುನಿ ಸ್ವಾಮಿಗಳ ಕರಕಮಲ ಸಂಜಾತರಾಗಿ ಬೆಳೆದವರಾಗಿದ್ದಾರೆ. ಕರ್ಜಗೆಯ ಶ್ರೀ ಶಾಂತವೀರಯ್ಯ ಮತ್ತು ಶ್ರೀಮತಿ ಪಾರ್ವತಿದೇವಿಯವರ ಪುತ್ರರಾಗಿ ೧೯೬೫ರ ಸೆಪ್ಟೆಂಬರ್ ಒಂಬತ್ತರಂದು ಜನಿಸಿದ ಶ್ರೀ ನಿಜಗುಣ ಸ್ವಾಮಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಹತ್ತಿಮತ್ತೂರಿನಲ್ಲಿ ಮುಗಿಸಿ, ಧಾರವಾಡದಲ್ಲಿ ಕಾಲೇಜು ಶಿಕ್ಷಣವನ್ನು ಮುಗಿಸಿರುತ್ತಾರೆ. ಶ್ರೀ ರುದ್ರಮುನಿ ಸ್ವಾಮಿಗಳ ಸಾನ್ನಿಧ್ಯದಲ್ಲಿ ಧಾರವಾಡದ

ಶ್ರೀ ಮುರುಘಾ ಮಠದ ಶ್ರೀ ಮಹಂತಪ್ಪ ಸ್ವಾಮಿಗಳಿಂದ ಅನುಗ್ರಹ ಪಡೆದು, ೧೯೮೮ರಲ್ಲಿ ಪಟ್ಟಾಧಿಕಾರವನ್ನು ಪಡೆದು ಮಠದ ಅಧಿಕಾರವನ್ನು ವಹಿಸಿಕೊಂಡರು.

ಗದ್ದುಗೆಗಳು: ಕರ್ಜಗೆಯಲ್ಲಿ ಕರ್ತೃಗುರುಗಳಾದ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಗಳಿಂದ ಶ್ರೀ ಮುರುಘೇಂದ್ರ ಸ್ವಾಮಿಗಳವರೆಗೆ ಆಡಳಿತವನ್ನು ನಡೆಸಿದ ಗುರುಗಳ ಗದ್ದುಗೆಗಳಿವೆ. ಶ್ರೀ ರುದ್ರಮುನಿ ಸ್ವಾಮಿಗಳ ಗದ್ದುಗೆಯು ಹತ್ತಿಮತ್ತೂರಿನಲ್ಲಿ ನಿರ್ಮಿತವಾಗಿದೆ.

ಶೈಕ್ಷಣಿಕ ಸಾಧನೆ: ಶ್ರೀ ಸಿದ್ಧಲಿಂಗೇಶ್ವರ ವಿದ್ಯಾಪೀಠವನ್ನು ಸ್ಥಾಪಿಸಿ, ಈ ಮೂಲಕ ಸಂಸ್ಕೃತ ಪಾಠಶಾಲೆಯನ್ನು ೧೯೭೩ ರಲ್ಲಿ ಪ್ರಾರಂಭಿಸಲಾಗಿದೆ. ೧೯೯೩ರಲ್ಲಿ ಕನ್ನಡ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿ, ಗ್ರಾಮಾಂತರ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಮಠವು ನೆರವಾಗಿದೆ. ಕಳಸ ಮತ್ತು ಚಿಕ್ಕಮುಗದೂರು ಗ್ರಾಮಗಳಲ್ಲಿ ಶಾಲಾ ಕಟ್ಟಡಗಳನ್ನು ನಿರ್ಮಿಸಲು, ಮಠವು ನಿವೇಶನಗಳನ್ನು ದಾನವಾಗಿ ನೀಡಿ ಶಿಕ್ಷಣ ಕ್ಷೇತ್ರಕ್ಕೂ ತನ್ನ ಕೊಡುಗೆಯನ್ನು ನೀಡಿದೆ.

ಧಾರ್ಮಿಕ ಕಾರ್ಯಗಳು: ಗದ್ದುಗೆಗಳಿಗೆ ನಿತ್ಯಪೂಜೆ, ಶ್ರಾವಣ, ಕಾರ್ತೀಕಮಾಸಗಳಲ್ಲಿ ವಿಶೇಷ ಪೂಜೆ ಹಾಗೂ ಪ್ರತಿ ಹುಣ್ಣಿಮೆಯಂದು ಶಿವಾನುಭವ ಗೋಷ್ಠಿಯನ್ನು ಏರ್ಪಡಿಸಿ, ಶರಣರ ತತ್ತ್ವಗಳನ್ನು ಪರಿಚಯಿಸುವ ಕಾರ್ಯವನ್ನು ಹಮ್ಮಿ ಕೊಳ್ಳಲಾಗುತ್ತಿದೆ. ಈ ಸಂದರ್ಭಗಳಲ್ಲಿ ವಿಶೇಷ ದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ಸಾಹಿತ್ಯ ಕಾರ್ಯ: ಶ್ರೀ ಕೊಟ್ಟೂರು ಬಸವೇಶ್ವರ ಪುರಾಣ ಹಾಗೂ ಮಹಂತ ದರ್ಶನ ಎಂಬ ಎರಡು ಸಾಹಿತ್ಯ ಕೃತಿಗಳನ್ನು ಪ್ರಕಟಿಸಿದ್ದಾರೆ. ಅಲ್ಲದೆ ಮಠದ ಪರಂಪರೆಯಲ್ಲಿ ಬಂದಂತಹ ಪೂಜಾ ಪರಿಕರಗಳನ್ನು ಸಂರಕ್ಷಿಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ನಿಜಗುಣ ಸ್ವಾಮಿಗಳು, ಶ್ರೀ ವಿರಕ್ತಮಠ, ಹತ್ತಿಮತ್ತೂರು, ಸವಣೂರು ತಾಲ್ಲೂಕು, ಹಾವೇರಿ ಜಿಲ್ಲೆ.

ಹೂವಿನಶಿಗ್ಲಿ

ಸವಣೂರು ತಾಲ್ಲೂಕಿನ ಹೂವಿನಶಿಗ್ಲಿ, ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಹೂವಿನಶಿಗ್ಲಿ ಗ್ರಾಮದ ಹೊರಭಾಗದಲ್ಲಿ ಶ್ರೀ ವಿರಕ್ತ ಮಠವು ಸ್ಥಾಪನೆಯಾಗಿದೆ. ಶ್ರೀ ನಿರಂಜನ ಸ್ವಾಮಿಗಳು ಈ ಗ್ರಾಮದಲ್ಲಿ ಬಂದು ನೆಲೆಸುವ ಮುನ್ನ ಈ ಮಠವು ರೂಪುಗೊಂಡಿದ್ದು, ಧಾರ್ಮಿಕ ಜಾಗೃತ ಸ್ಥಳವಾಗಿದೆ. ಇಲ್ಲಿ ಈಶ್ವರಲಿಂಗ, ಎರಡು ನಂದಿ ವಿಗ್ರಹಗಳು ಹಾಗೂ ಶ್ರೀ ಗವಿಸಿದ್ಧೇಶ್ವರ ಕಂಚಿನಮೂರ್ತಿ ದೊರೆತಿವೆ. ಈ ಜಾಗದಲ್ಲಿ ಪುರಾತನ ಕಾಲದಲ್ಲಿ ನಿರ್ಮಾಣಗೊಂಡಿರುವ ಮಣ್ಣಿನ ಹಳೆಯ ಕಟ್ಟಡ, ಇದರ ಎಡಬದಿಯಲ್ಲಿ ನಿರ್ಮಾಣಗೊಂಡಿರುವ ಕಲ್ಯಾಣಿ ಮತ್ತು ಕಲ್ಲಿನಿಂದ ನಿರ್ಮಿಸಿದ ತೊಟ್ಟಿ ಸ್ಮಾರಕಗಳಾಗಿ ಉಳಿದಿವೆ. ಬೀದರ್ ಜಿಲ್ಲೆಯಿಂದ ಆಗಮಿಸಿದ ಶ್ರೀ ನಿರಂಜನ ಸ್ವಾಮಿಗಳು ಈ ಹಳೆಯ ಕಟ್ಟಡವನ್ನೇ ನವೀಕರಿಸಿಕೊಂಡು, ತಮ್ಮ ವಾಸ್ತವ್ಯಕ್ಕೆ ಅಣಿಮಾಡಿಕೊಂಡಿದ್ದಾರೆ.

ಹೊಸ ಆಯಾಮ: ಪುರಾತನ ಪರಂಪರೆ ಇರುವ ಈ ಸ್ಥಳವು ಮಠ ಸ್ಥಾಪನೆಯಿಂದ ಒಂದು ಹೊಸ ಆಯಾಮವನ್ನು ಕಂಡು ಕೊಂಡಿದೆ. ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಸೋನಾಳು ಗ್ರಾಮದ ಹಿರೇಮಠದ ಶ್ರೀ ಶರಣಯ್ಯ ಮತ್ತು ಶ್ರೀಮತಿ ನೀಲಮ್ಮನವರ ಪುತ್ರರಾಗಿ ೧೯೫೦ ರ ಫೆಬ್ರುವರಿ ಹದಿನೈದರಂದು ಜನಿಸಿದ ಶ್ರೀ ನಿರಂಜನ ಸ್ವಾಮಿಗಳು ಭಾಲ್ಕಿ, ಸೋಲಾಪುರ, ಕಮಲಾನಗರ ಹಾಗೂ ಸಿದ್ಧಗಂಗೆಯಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿದರು. ನಂತರ ಆಧ್ಯಾತ್ಮವನ್ನು ಮೈಗೂಡಿಸಿಕೊಂಡು ಲೋಕ ಸಂಚಾರಕ್ಕೆ ಹೊರಟ ಗುರುಗಳು ಗುಡೆಗೇರಿಯಲ್ಲಿ ನೆಲೆಸಿ ಕೆಲವು ದಿನ ಅನುಷ್ಠಾನಗೊಂಡು, ನಂತರ ರಾಮಗಿರಿ ಮತ್ತು ಎಲವಿಯಲ್ಲಿ ಅನುಷ್ಠಾನಗೊಂಡು ಹೂವಿನಶಿಗ್ಲಿಗೆ ಬಂದರು. ಇಲ್ಲಿಗೆ ಬಂದವರು ಹಾಳು ಬಿದ್ದಿದ್ದ ದೇವಸ್ಥಾನದಲ್ಲಿ ನೆಲೆಸಿ, ಈ ಪರಿಸರಕ್ಕೆ ಮನಸೋತು ಧಾರ್ಮಿಕ ಹಿನ್ನೆಲೆ ಇರುವ ಈ ಸ್ಥಳವನ್ನು ಅಭಿವೃದ್ಧಿಪಡಿಸಿ ಮಠ ಸ್ಥಾಪನೆಗೆ ನಾಂದಿಯಾಡಿದ್ದಾರೆ.

ಹೂವಿನಶಿಗ್ಲಿಗೆ ಬಂದ ಗುರುಗಳು ನಲವತ್ತೊಂದು ದಿನಗಳ ಕಾಲ ಅನುಷ್ಠಾನಕ್ಕೆ ಕುಳಿತು ಪ್ರತಿದಿನ ಬಸವತತ್ತ್ವದ ಪ್ರಚಾರವನ್ನು ಕೈಗೊಂಡು, ಈ ಗ್ರಾಮದಲ್ಲಿ ಧಾರ್ಮಿಕ ವಾತಾವರಣವನ್ನು ಸೃಷ್ಟಿಸಿದರು. ಗ್ರಾಮಸ್ಥರ ಸಹಕಾರದಿಂದ ಶಿವಾನುಭವ ಮಂಟಪ ಹಾಗೂ ಕಲ್ಯಾಣ ಮಂಟಪವನ್ನು ನಿರ್ಮಿಸಿದ ಗುರುಗಳು ಹಾಳುಬಿದ್ದಿದ್ದ ಪರಿಸರವನ್ನು ಸ್ವಚ್ಛಗೊಳಿಸಿ ಒಪ್ಪಓರಣ ಮಾಡಿದರು. ಮಠದ ದ್ವಾರಕ್ಕೆ ದ್ವಾರಮಂಟಪವನ್ನು ನಿರ್ಮಿಸಿದ್ದಾರೆ. ಮಠಕ್ಕೆ ಪ್ರಾಥಮಿಕ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟು, ೧೯೭೫ ರಲ್ಲಿ ಮಠಾಧ್ಯಕ್ಷರಾಗಿ ನೂತನ ಮಠದ ಅಧಿಕಾರವನ್ನು ವಹಿಸಿಕೊಂಡರು. ಭಾಲ್ಕಿ ಪಟ್ಟದ ಮಠದ ಶ್ರೀ ಚನ್ನಬಸವ ದೇವರು ಪಟ್ಟಾಧಿಕಾರದ ಅನುಗ್ರಹವನ್ನು ನೀಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ಶ್ರೀ ನಿರಂಜನ ಸ್ವಾಮಿಗಳು ತ್ರಿಕಾಲ ಪೂಜೆಯೊಂದಿಗೆ ಬಸವತತ್ತ್ವ ಪ್ರವಚನದ ಮೂಲಕ ಮಠದ ಅಸ್ತಿತ್ವವನ್ನು ಗಟ್ಟಿಗೊಳಿಸಿ, ಧಾರ್ಮಿಕ ಕಾರ್ಯಗಳು ನಡೆಯುವಂತೆ ಅನುವುಮಾಡಿ ಕೊಟ್ಟರು. ಅಮಾವಾಸ್ಯೆಯಂದು ಶಿವಾನುಭವಗೋಷ್ಠಿಯನ್ನು ನಡೆಸುವುದಲ್ಲದೆ, ಅಂದು ಸೇರುವ ಭಕ್ತಾದಿಗಳಿಗೆ ಅನ್ನ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಿದ್ದಾರೆ.

ಶೈಕ್ಷಣಿಕ ಪ್ರಗತಿ: ಶ್ರೀ ನಿರಂಜನ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ಧಾರ್ಮಿಕ ಮತ್ತು ಸಾಮಾಜಿಕ ಅಭಿವೃದ್ಧಿಯ ಜೊತೆಗೆ ಶೈಕ್ಷಣಿಕ ಪ್ರಗತಿಗೂ ಹೆಚ್ಚು ಒತ್ತುಕೊಟ್ಟು, ಗುರುಕುಲದ ಮಾದರಿಯಲ್ಲಿ ಪ್ರಾಥಮಿಕ ಶಾಲೆ, ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಕೊಂಚಗೇರಿಯಲ್ಲಿ ಕಿರಿಯ ಪ್ರಾಥಮಿಕ ಶಾಲೆ ಹಾಗೂ ಸೋನಾಳಿಯಲ್ಲಿ ನರ್ಸರಿ ಶಾಲೆಗಳನ್ನು ಪ್ರಾರಂಭಿಸಿದ್ದಾರೆ. ಹೂವಿನಶಿಗ್ಲಿಯಲ್ಲಿ ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಿ, ಕಲಿಯುವ ಬಡ ಮಕ್ಕಳಿಗೆ ಮಠದಲ್ಲಿ ಆಶ್ರಯ ವನ್ನು ಕಲ್ಪಿಸಿ ಕೊಟ್ಟಿದ್ದಾರೆ.

ವಿಳಾಸ:ಶ್ರೀ ಮ.ನಿ.ಪ್ರ.ನಿರಂಜನ ಸ್ವಾಮಿಗಳು, ಶ್ರೀ ವಿರಕ್ತಮಠ, ಹೂವಿನಶಿಗ್ಲಿ, ಸವಣೂರು ತಾಲ್ಲೂಕು, ಹಾವೇರಿ ಜಿಲ್ಲೆ.

❑

ಹಾವೇರಿ ತಾಲ್ಲೂಕು

ಹಾವೇರಿ ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿ ಒಂದಾದ ಹಾವೇರಿ ತಾಲ್ಲೂಕು, ಧಾರ್ಮಿಕ ಹಾಗೂ ಸಾಂಸ್ಕೃತಿಕವಾಗಿ ಹೆಸರು ಪಡೆದಿದೆ. ಇಲ್ಲಿ ಪುರಾತನ ಕಾಲದಿಂದಲೂ ವೀರಶೈವಧರ್ಮ ಸದೃಢವಾಗಿ ಬೆಳೆದ ಲಕ್ಷಣಗಳು ಕಂಡುಬರುತ್ತದೆ. ಪ್ರಸ್ತುತ ಎಪ್ಪತ್ಮೂರು ಮಠಗಳನ್ನು ಗುರುತಿಸಬಹುದಾಗಿದ್ದು ಇವುಗಳಲ್ಲಿ ಹದಿನಾಲ್ಕು ಮಠಗಳಲ್ಲಿ ಗುರುಗಳಿದ್ದು ಧಾರ್ಮಿಕ ಕಾರ್ಯಗಳು ನಡೆಯುತ್ತಿವೆ.

ಅಗಡಿ

ಹಾವೇರಿ ತಾಲ್ಲೂಕಿನ ಅಗಡಿ ಗ್ರಾಮವು ತಾಲ್ಲೂಕು ಕೇಂದ್ರದ ಪೂರ್ವಕ್ಕೆ ಎಂಟು ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ವಿರಕ್ತ ಸಂಪ್ರದಾಯದ ಮುರುಘಾ ಸಮಯಕ್ಕೆ ಸೇರಿದ ಪ್ರಭುಸ್ವಾಮಿ ಮಠ ಮತ್ತು ಅಕ್ಕಿಮಠ ಸ್ಥಾಪನೆಗೊಂಡಿದ್ದು ಈ ಗ್ರಾಮದ ಧಾರ್ಮಿಕ ಕೇಂದ್ರಬಿಂದುಗಳಾಗಿ ಬೆಳೆದಿವೆ.

ಪ್ರಭುಸ್ವಾಮಿಮಠ: ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಗೊಂಡಿರುವ ಶ್ರೀ ಪ್ರಭುಸ್ವಾಮಿಮಠವು ಹನ್ನೆರಡನೆಯ ಶತಮಾನದಲ್ಲಿ ಅಲ್ಲಮ ಪ್ರಭುಗಳು ಕಲ್ಯಾಣಕ್ಕೆ ಹೋಗುವ ಮುನ್ನ ಇಲ್ಲಿಗೆ ಸಮೀಪದ ಜಾನಕೊಪ್ಪದಲ್ಲಿ ಅನುಷ್ಠಾನಗೊಂಡಿದ್ದರು. ಈ ವಿಚಾರವನ್ನು ತಿಳಿದ ಅಗಡಿ ಗ್ರಾಮದ ಭಕ್ತರು ಅಲ್ಲಮಪ್ರಭುಗಳನ್ನು ಕರೆತಂದು ಅಗಡಿಯಲ್ಲಿ ಅನುಷ್ಠಾನಗೊಳ್ಳುವಂತೆ ಮಾಡುತ್ತಾರೆ. ಆ ಸ್ಥಳದಲ್ಲಿ ತೋರುಗದ್ದುಗೆಯನ್ನು ನಿರ್ಮಿಸಿ ಪೂಜೆಮಾಡಲು ಪ್ರಾರಂಭಿಸಿ ಪ್ರಭುಸ್ವಾಮಿ ಮಠ ಎಂದು ಕರೆಯತೊಡಗಿದರು. ಈ ರೀತಿ ಪ್ರಾರಂಭಗೊಂಡ ಮಠದಲ್ಲಿ ಧಾರ್ಮಿಕ ಕಾರ್ಯಗಳು ಇಂದಿನ ತನಕ ನಡೆಯುತ್ತಾ ಬಂದಿವೆ.

ಪರಂಪರೆ:
೧. ಶ್ರೀ ಮನಿ.ಪ್ರ. ಗುರುಶಾಂತಸ್ವಾಮಿಗಳು.
೨. ಶ್ರೀ ಮ.ನಿ.ಪ್ರ. ರುದ್ರಮುನಿಶಿವಯೋಗಿಗಳು.
೩. ಶ್ರೀ ಮ.ನಿ.ಪ್ರ. ಸಂಗನಬಸವಸ್ವಾಮಿಗಳು (ಈಗಿನವರು)

ಈರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಹನ್ನೆರಡನೆಯ ಶತಮಾನದಲ್ಲಿ ಪ್ರಾರಂಭಗೊಂಡ ಈ ಮಠವು ಮಠಾಧೀಶ್ವರರು ಇಲ್ಲದೆ ಕೇವಲ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿತ್ತು. ಶ್ರೀ ಗುರುಶಾಂತ ಸ್ವಾಮಿಗಳು ಮಠದ ಆಡಳಿತವನ್ನು ವಹಿಸಿಕೊಂಡು ಧಾರ್ಮಿಕ ಚಟುವಟಿಕೆಗಳು ನಡೆಯುವಂತೆ ಮಾಡಿ ಮಠವನ್ನು ಹೆಚ್ಚು ಪ್ರಬುದ್ಧಮಾನಕ್ಕೆ ಬರುವಂತೆ ಮಾಡಿದರು. ತಮ್ಮ ಜೀವಿತಾವಧಿಯಲ್ಲಿಯೇ ಶ್ರೀ ರುದ್ರಮುನಿ ಶಿವಯೋಗಿಗಳನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಂಡರು. ಶ್ರೀ ರುದ್ರಮುನಿ ಶಿವಯೋಗಿಗಳು ಮಹಾತಪಸ್ವಿಗಳು. ಅನುಷ್ಠಾನಮೂರ್ತಿಗಳಾಗಿ ಆಧ್ಯಾತ್ಮವನ್ನೇ ತಮ್ಮ ಉಸಿರನ್ನಾಗಿ ಮಾಡಿಕೊಂಡಿದ್ದರು. ಗುರುಗಳು ವೀರಶೈವ ಧರ್ಮದ ಅಷ್ಟಾವರಣ,ಪಂಚಾಚಾರಗಳ ಬಗ್ಗೆ ಆಳವಾದ ಅಧ್ಯಯನ ಮಾಡಿ ವೀರಶೈವ ಧರ್ಮವನ್ನು ಬೆಳೆಸುವಲ್ಲಿ ಯಶಸ್ವಿಯಾಗಿದ್ದರು. ಗುರುಗಳು ತಮ್ಮ ತಪೋಶಕ್ತಿಯಿಂದ ವಾಕ್‌ಸಿದ್ಧಿಯನ್ನು ಪಡೆದು ಭಕ್ತರ ಕಷ್ಟಕಾರ್ಪಣ್ಯಗಳನ್ನು ನಿವಾರಿಸುವಲ್ಲಿ ಹೆಚ್ಚು ಹೆಸರನ್ನು ಪಡೆದಿದ್ದರು. ಶ್ರೀ ರುದ್ರಮುನಿ ಶಿವಯೋಗಿಗಳು ಶಿರಾಳಕೊಪ್ಪ ಮತ್ತು ಗುತ್ತಲ ಗ್ರಾಮಗಳಲ್ಲಿ ಸ್ಥಾಪನೆಯಾಗಿದ್ದ ಮಠಗಳ ಆಡಳಿತವನ್ನು ನೋಡಿಕೊಂಡು ಮೂಲ ಮಠದ ಜತೆಗೆ ಈ ಶಾಖಾಮಠಗಳನ್ನು ಸಹ ಅಭಿವೃದ್ಧಿಪಡಿಸಿದ್ದಾರೆ.

ಶ್ರೀ ರುದ್ರಮುನಿ ಶಿವಯೋಗಿಗಳು ಧಾರ್ಮಿಕ ನೆಲೆಗಟ್ಟಿನ ಮೇಲೆ ಸಮಾಜವನ್ನು ಬೆಳೆಸಿ ಮಠವನ್ನು ಹೆಚ್ಚು ಪ್ರಚಾರಕ್ಕೆ ತಂದಿದ್ದರು. ಮಠವನ್ನು ಧಾರ್ಮಿಕವಾಗಿ ಬೆಳೆಸಿದ ರೀತಿಯಲ್ಲಿಯೆ ಆರ್ಥಿಕವಾಗಿಯೂ ಸದೃಢಗೊಳ್ಳುವಂತೆ ಮಾಡಿ ೧೯೭೦ರಲ್ಲಿ ಪುಷ್ಯಬಹುಳ ಸಂಕ್ರಮಣದಂದು ಲಿಂಗೈಕ್ಯರಾದರು. ಶ್ರೀ ರುದ್ರಮುನಿ ಶಿವಯೋಗಿಗಳ ನಂತರ ಶ್ರೀ ಸಂಗನಬಸವ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದಾರೆ.

ಕಾಯಕಯೋಗಿಗಳು: ಹಾವೇರಿ ತಾಲ್ಲೂಕಿನ ಹೊಸರಿತ್ತಿ ಗ್ರಾಮದ ಶ್ರೀ ಮಲ್ಲಯ್ಯ ಮತ್ತು ಶ್ರೀಮತಿ ಗುರುಸಿದ್ಧಮ್ಮನವರ

ಪುತ್ರರಾಗಿ ೧೯೩೨ರ ಜನವರಿಯಲ್ಲಿ ಜನಿಸಿದ ಕೊಟ್ರೇಶದೇವರು ಹೊಸರಿತ್ತಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿದರು. ನಂತರ ಶಿವಯೋಗಮಂದಿರದಲ್ಲಿ ಧಾರ್ಮಿಕ ಜ್ಞಾನವನ್ನು ಸಂಪಾದಿಸಿಕೊಂಡರು. ಶ್ರೀ ಕೊಟ್ರೇಶ ದೇವರು ಶ್ರೀ ಸಂಗನಬಸವ ಸ್ವಾಮಿಗಳೆಂದು ಅಭಿದಾನ ಪಡೆದು ೧೯೬೧ರಲ್ಲಿ ಪ್ರಭುಸ್ವಾಮಿಮಠದ ಅಧಿಕಾರ ವಹಿಸಿಕೊಂಡಿರುತ್ತಾರೆ.

ಕಾಯಕ ಯೋಗಿಗಳಾದ ಶ್ರೀ ಸಂಗನಬಸವ ಸ್ವಾಮಿಗಳು ಹಿಂದಿನ ಗುರುಗಳು ಸಂಪಾದಿಸಿಕೊಟ್ಟಿದ್ದ ಆಸ್ತಿಯಲ್ಲಿ ದುಡಿದು ಹೆಚ್ಚು ಸಂಪಾದನೆಯನ್ನು ಮಾಡಿ ಆಸ್ತಿಯನ್ನು ವಿಸ್ತರಿಸಿದರು. ಅಗಡಿಯ ಶ್ರೀ ಪ್ರಭುಸ್ವಾಮಿ ಮಠದ ಆಡಳಿತದ ಜತೆಗೆ ಗುತ್ತಲದ ಮಠದ ಆಡಳಿತವನ್ನು ಸಹ ನೋಡಿಕೊಂಡು ಎರಡು ಮಠಗಳನ್ನು ಪ್ರಗತಿಯತ್ತ ಕೊಂಡೊಯ್ಯುತ್ತಿದ್ದಾರೆ. ಶ್ರೀ ಸಂಗನಬಸವ ಸ್ವಾಮಿಗಳು ೧೯೯೯ರ ಜನವರಿ ಇಪ್ಪತ್ತೆರಡರಂದು ತಮ್ಮ ಷಷ್ಟ್ಯಬ್ಧಿ ಕಾರ್ಯಕ್ರಮವನ್ನು ಆಚರಿಸಿಕೊಂಡರು. ಅಂದು ಮಠದ ಇತಿಹಾಸದಲ್ಲಿ ಉಳಿಯುವಂತಹ ಅದ್ದೂರಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಧಾರ್ಮಿಕ ಕಾರ್ಯಗಳು: ಮಠದಲ್ಲಿ ನಿರ್ಮಿಸಲ್ಪಟ್ಟಿರುವ ಎರಡು ಗದ್ದುಗೆಗಳಿಗೆ ನಿತ್ಯ ರುದ್ರಾಭಿಷೇಕ, ಅಮಾವಾಸ್ಯೆ, ಹುಣ್ಣಿಮೆಯಲ್ಲಿ ಹಾಗೂ ಶ್ರಾವಣಮಾಸದಲ್ಲಿ ವಿಶೇಷ ಪೂಜೆ, ಕಾರ್ತಿಕ ಮಾಸದಲ್ಲಿ ಲಕ್ಷದೀಪೋತ್ಸವನ್ನು ಆಚರಿಸಲಾಗುತ್ತಿದೆ. ಶ್ರೀ ರುದ್ರಮುನಿ ಶಿವಯೋಗಿಗಳ ಪುಣ್ಯತಿಥಿಯನ್ನು ಒಂದು ತಿಂಗಳ ಕಾಲ ಆಚರಿಸುವ ವಾಡಿಕೆ ಬೆಳೆದು ಬಂದಿದೆ. ಈ ಸಂದರ್ಭದಲ್ಲಿ ಪುರಾಣ ಪ್ರವಚನವನ್ನು ಏರ್ಪಡಿಸಲಾಗುತ್ತಿದೆ.

ಸಾಹಿತ್ಯಸೇವೆ: ಧಾರ್ಮಿಕ ಮತ್ತು ಆರ್ಥಿಕವಾಗಿ ಅಭಿವೃದ್ಧಿಗೊಂಡಿರುವ ಈ ಮಠದಲ್ಲಿ ಸಾಹಿತ್ಯಿಕವಾಗಿಯು ಗುರುತಿಸುವಕೆಲಸ ನೆಡೆದಿದ್ದು ಮಠದ ಚರಿತ್ರೆಯನ್ನು ಒಳಗೊಂಡ ಪುಸ್ತಕವನ್ನು ಪ್ರಕಟಿಸಲಾಗಿದೆ. ವಾರ್ಷಿಕ ಕಾರ್ಯಕ್ರಮಗಳಲ್ಲಿ ಧರ್ಮದ ಜತೆಗೆ ಶರಣ ಸಾಹಿತ್ಯವನ್ನು ಪ್ರಚಾರಪಡಿಸುವ ಸಲುವಾಗಿ ವಿವಿಧ ವಿದ್ವಾಂಸರಿಂದ ಉಪನ್ಯಾಸವನ್ನು ಏರ್ಪಡಿಸಲಾಗುತ್ತದೆ.

ಶೈಕ್ಷಣಿಕಸೇವೆ: ಶ್ರೀ ರುದ್ರಮುನಿ ಪ್ರಾಥಮಿಕ ಪಾಠಶಾಲೆಯನ್ನು ೧೯೮೯ರಲ್ಲಿ ಪ್ರಾರಂಭಿಸಿರುವ ಗುರುಗಳು ಗ್ರಾಮಾಂತರ ಮಕ್ಕಳ ಕಲಿಕೆಗೆ ನೆರವಾಗಿದ್ದಾರೆ. ಗುತ್ತಲ ಮಠದಲ್ಲಿ ಪ್ರಸ್ತುತ ವರ್ಷದಲ್ಲಿ ಕಾನ್ವೆಂಟ್ ಶಾಲೆಯನ್ನು ಪ್ರಾರಂಭಿಸಲಾಗಿದೆ.

ಉತ್ತರಾಧಿಕಾರಿಗಳ ಆಯ್ಕೆ: ಶ್ರೀ ಸಂಗನಬಸವ ಸ್ವಾಮಿಗಳು ಶ್ರೀ ಗುರುಸಿದ್ಧ ದೇವರನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿಕೊಂಡಿದ್ದಾರೆ. ಶ್ರೀ ಗುರುಸಿದ್ಧ ದೇವರು ಹೊಸರತ್ತಿಯ ಶ್ರೀ ಪತ್ರಯ್ಯ ಮತ್ತು ಶ್ರೀಮತಿ ಶಾಂತಾದೇವಿಯರ ಪುತ್ರರಾಗಿ ಜನಿಸಿ, ಪ್ರಾಥಮಿಕ, ಪ್ರೌಢಶಿಕ್ಷಣ ಮತ್ತು ಕಾಲೇಜು ಶಿಕ್ಷಣವನ್ನು ಮುಗಿಸಿರುವ ಶ್ರೀ ಗುರುಸಿದ್ಧ ದೇವರು ವೈದಿಕ ಮತ್ತು ಸಂಸ್ಕೃತವನ್ನು ಅಭ್ಯಾಸ ಮಾಡಿ ೧೯೯೩ರಿಂದ ಮಠದಲ್ಲಿ ನೆಲೆಸಿ, ಹಿರಿಯ ಗುರುಗಳ ಮಾರ್ಗದರ್ಶನದಲ್ಲಿ ಮಠದ ಧಾರ್ಮಿಕ ಮತ್ತು ಆಡಳಿತವನ್ನು ನೋಡಿಕೊಳ್ಳುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಸಂಗನಬಸವ ಸ್ವಾಮಿಗಳು, ಶ್ರೀ ಪ್ರಭುಸ್ವಾಮಿ ಮಠ, ಅಗಡಿ, ಹಾವೇರಿ ತಾಲ್ಲೂಕು.

ಅಕ್ಕಿಮಠ: ಅಗಡಿ ಗ್ರಾಮದ ಮಧ್ಯಭಾಗದಲ್ಲಿರುವ ಅಕ್ಕಿಮಠವು ವಿರಕ್ತ ಸಂಪ್ರದಾಯದ ಮುರುಘಾ ಮಠದ ಶಾಖಾಮಠವಾಗಿ ಬೆಳೆದಿದೆ. ಇನ್ನೂರು ವರ್ಷಗಳ ಹಿಂದೆ ಈ ಮಠವನ್ನು ಶ್ರೀ ಗುರುಬಸವ ಸ್ವಾಮಿಗಳು ಪ್ರಾರಂಭಮಾಡಿರಬಹುದೆಂದು ಹೇಳಲಾಗುತ್ತದೆ. ಶ್ರೀ ಗುರುಬಸವ ಸ್ವಾಮಿಗಳು ಈ ಗ್ರಾಮದಲ್ಲಿ ಮಠವನ್ನು ಸ್ಥಾಪಿಸಿ ಧರ್ಮಪ್ರಚಾರವನ್ನು ಕೈಗೊಂಡು ಈ ಪ್ರಾಂತ್ಯದಲ್ಲಿ ಧರ್ಮಜಾಗೃತಿಯನ್ನು ಉಂಟುಮಾಡಿದ್ದರು.

ಶ್ರೀ ಗುರುಬಸವ ಸ್ವಾಮಿಗಳ ನಂತರ ಶ್ರೀ ಮುಪ್ಪಯ್ಯ ಶಿವಯೋಗಿಗಳು ಮಠವನ್ನು ಅಭಿವೃದ್ಧಿಪಡಿಸಿದ್ದಾರೆ. ಶಿವಪೂಜಾ ನಿಷ್ಠರಾದ ಇವರು ಚಿತ್ರದುರ್ಗದ ಮುರುಘಾಮಠದಲ್ಲಿ ಲಿಂಗೈಕ್ಯರಾಗಿದ್ದು ಗದ್ದುಗೆಯನ್ನು ಚಿತ್ರದುರ್ಗದಲ್ಲಿಯೇ ನಿರ್ಮಿಸಲಾಗಿದೆ. ಇವರ ನಂತರ ಕೆಲವಾರು ವರ್ಷಗಳ ಕಾಲ ಮಠವು ಖಾಲಿ ಉಳಿದಿದ್ದು ಈಗ ಶ್ರೀ ಚನ್ನಬಸವ ಸ್ವಾಮಿಗಳು ಅಧಿಕಾರಕ್ಕೆ ಬಂದಿದ್ದಾರೆ. ಅಗಡಿಯ ಈ ಮಠದ ಅಧಿಕಾರವನ್ನು ವಹಿಸಿಕೊಂಡ ಶ್ರೀ ಚನ್ನಬಸವ ಸ್ವಾಮಿಗಳು, ಚಿತ್ರದುರ್ಗ ಬೃಹನ್ಮಠದ ಜಗದ್ಗುರುಗಳ ಆದೇಶದ ಅನ್ವಯ ಬೆಳಗಾಂ ಜಿಲ್ಲೆ ಅಥಣಿಯ ಗಚ್ಚಿನ ಮಠದ ಅಧಿಕಾರವನ್ನೂ ಸಹ ವಹಿಸಿ

ಕೊಂಡು ಎರಡೂ ಮಠಗಳ ಆಡಳಿತವನ್ನು ನೋಡಿಕೊಳ್ಳುತ್ತಿದ್ದಾರೆ. ನೂರೈವತ್ತು ವರ್ಷಗಳ ಹಿಂದೆ ನಿರ್ಮಿಸಲ್ಪಟ್ಟ ಭವ್ಯ ಕಟ್ಟಡವು ಇಂದು ಶಿಥಿಲಾವಸ್ಥೆಗೆ ಬಂದಿದೆ. ಇಂತಹ ಪುರಾತನ ಕಟ್ಟಡದಲ್ಲಿ ಮಠದ ಧಾರ್ಮಿಕ ಆಚರಣೆಗಳು ನಡೆಯುತ್ತಿವೆ. ಮಠದ ಆವರಣದಲ್ಲಿರುವ ಎರಡು ಗದ್ದುಗೆಗಳು ಮತ್ತು ಚೌಡೇಶ್ವರಿ ದೇವಿಗೆ ನಿತ್ಯ ಪೂಜೆಯನ್ನು ಮಾಡಲಾಗುತ್ತಿದೆ. ಮಠದ ಆಸ್ತಿಯಾಗಿ ಮೂವತ್ತಾರು ಎಕರೆ ಜಮೀನಿದ್ದು ಈ ಜಮೀನನ್ನು ಅಭಿವೃದ್ಧಿಪಡಿಸಿ ಆದಾಯ ಬರುವಂತೆ ಮಾಡಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಚನ್ನಬಸವ ಸ್ವಾಮಿಗಳು, ಶ್ರೀ ಅಕ್ಕಿಮಠ, ಅಗಡಿ, ಹಾವೇರಿ ತಾಲ್ಲೂಕು.

ಕರ್ಜಿಗೆ

ಹಾವೇರಿ ತಾಲ್ಲೂಕಿನ ಕರ್ಜಿಗೆ ಗ್ರಾಮವು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಹನ್ನೊಂದು ಕಿ. ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ಪುರಾತನ ಕಾಲದಲ್ಲಿ ಒಟ್ಟು ಹತ್ತು ಮಠಗಳು ಸ್ಥಾಪನೆಗೊಂಡಿವೆ ಎಂದು ಹೇಳಲಾಗುತ್ತಿದೆ. ಈ ಮಠಗಳಲ್ಲಿ ಶ್ರೀ ಹೊಸಮಠ, ಶ್ರೀ ಗೌರಿಮಠ, ಶ್ರೀ ಗುಬ್ಬಿನಂಜುಂಡೇಶ್ವರಮಠ, ಶ್ರೀ ವಿರಕ್ತಮಠ,(ಹತ್ತಿಮತ್ತೂರುಶಾಖೆ) ಶ್ರೀಕೂಡಲ ಮಠ, ಶ್ರೀ ಕಳ್ಳಿಮಠ, ಶ್ರೀ ಚರಂತಿಮಠ ಮತ್ತು ಶ್ರೀ ಅಗಡಿಮಠಗಳನ್ನು ಇಂದು ದಾಖಲಿಸಲು ಆಧಾರಗಳು ಲಭ್ಯವಿದ್ದು ಉಳಿದ ಎರಡು ಮಠಗಳ ಹೆಸರು ಲಭ್ಯವಿಲ್ಲ. ಲಭ್ಯವಿರುವ ಎಂಟು ಮಠಗಳಲ್ಲಿ ಶ್ರೀ ಗೌರಿಮಠ ಇಂದಿಗೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು, ಈ ಗ್ರಾಮದ ಧಾರ್ಮಿಕ ಚಟುವಟಿಕೆಯ ಕೇಂದ್ರಬಿಂದುವಾಗಿ ಬೆಳೆದಿದೆ. ಅಲ್ಲದೆ ವಿರಕ್ತ ಸಂಪ್ರದಾಯದ ಶ್ರೀ ಹೊಸಮಠವು ಇತ್ತೀಚಿಗೆ ತನ್ನ ಅಸ್ತಿತ್ವವನ್ನು ಕಳೆದುಕೊಂಡಿದೆ.

ಗೌರಿಮಠ: ಕರ್ಜಿಗೆ ಗ್ರಾಮದ ಮಧ್ಯಭಾಗದಲ್ಲಿರುವ ರಂಭಾಪುರಿ ಪೀಠದ ಶಾಖಾಮಠವಾದ ಗೌರಿಮಠವು, ಪುತ್ರವರ್ಗದ ಸಂಪ್ರದಾಯದಲ್ಲಿ ಬೆಳೆದುಬಂದಿದೆ. ಮುನ್ನೂರು ವರ್ಷಗಳ ಹಿಂದೆ ಪ್ರಾರಂಭವಾಗಿರಬಹುದಾದ ಈ ಮಠದಲ್ಲಿ, ಕರ್ತೃಗದ್ದುಗೆ ಎಂದು ಗುರುತಿಸಲಾದ ಗದ್ದಿಗಪ್ಪ ಸ್ವಾಮಿಗಳ ಗದ್ದುಗೆ ಈ ಮಠದ ಕೇಂದ್ರಬಿಂದು. ಈ ಮಠದ ಒಳ ಆವರಣದಲ್ಲಿರುವ ಹುತ್ತದಲ್ಲಿ ಗೌರಿಯು ಉದ್ಭವಗೊಂಡಿರುವುದರಿಂದ ಈ ಮಠಕ್ಕೆ 'ಶ್ರೀ ಗೌರಿಮಠ'ಎಂದು ಹೆಸರು ಬಂದಿದೆ.

ಮಠ ಸ್ಥಾಪನೆ: ಮಠ ಸ್ಥಾಪನೆಗೊಂಡ ಜಾಗದಲ್ಲಿ ಹುತ್ತವು ಬೆಳೆಯುತ್ತಿತ್ತು. ಇದನ್ನು ಗುರುಗಳು ಕತ್ತರಿಸುತ್ತಿದ್ದರು. ಕತ್ತರಿಸ ದಂತೆಲ್ಲಾ ಹುತ್ತವು ಪುನಃ ಬೆಳೆಯುತ್ತಿತ್ತು. ಒಮ್ಮೆ ಗೌರಮ್ಮನು ಗುರುಗಳ ಕನಸಿನಲ್ಲಿ ಬಂದು 'ನಾನು ಇಲ್ಲೇ ನೆಲೆಸಬೇಕು ಎಂದು ತೀರ್ಮಾನಿಸಿರುವೆ. ಹುತ್ತದಲ್ಲಿ ನಾನು ಪ್ರತಿಷ್ಠಾಪನೆಗೊಳ್ಳುತ್ತೇನೆ' ಎಂದು ಹೇಳಿದಂತಾಗುತ್ತದೆ. ಅಂದಿನಿಂದ ಗುರುಗಳು ಹುತ್ತವನ್ನು ಕತ್ತರಿಸದೆ ಪೂಜೆ ಮಾಡತೊಡಗುತ್ತಾರೆ. ಅಂದು ಬೆಳೆದ ಹುತ್ತದಲ್ಲಿ ಗೌರಿಯು ಪ್ರತಿಷ್ಠಾಪನೆಗೊಂಡ ಮೇಲೆ ತನ್ನ ಬೆಳವಣಿಗೆಯನ್ನು ನಿಲ್ಲಿಸಿದೆ ಎಂದು ಹೇಳುವ ಜನಪದ ಕಥೆ ಕೇಳಿಬರುತ್ತಿದೆ. ಇಂತಹ ವಿಶಿಷ್ಟ ಸಂಪ್ರದಾಯವಿರುವ ಈ ಮಠವು ಸ್ಥಾಪನೆಗೊಂಡಾಗಿನಿಂದ ಇಲ್ಲಿಯ ತನಕ ಮಠದ ಧಾರ್ಮಿಕ ಕಾರ್ಯಗಳು ನಿರಂತರವಾಗಿ ನಡೆಯುತ್ತಾ ಬಂದಿವೆ.

ಪರಂಪರೆ:
೧. ಷ.ಬ್ರ.ಶ್ರೀ ಗದ್ದಿಗಪ್ಪ ಶಿವಾಚಾರ್ಯಸ್ವಾಮಿಗಳು
೨. ಷ.ಬ್ರ.ಶ್ರೀ ಶಾಂತವೀರ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ಶಿವಯೋಗಿ ಶಿವಾಚಾರ್ಯಸ್ವಾಮಿಗಳು

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದ್ದು, ಪರಂಪರೆಯ ಮೂರನೆಯ ಗುರುಗಳಾದ ಶ್ರೀಸಿದ್ಧರಾಮ ಶಿವಾಚಾರ್ಯ ಸ್ವಾಮಿಗಳು ಶಿವಪೂಜಾನಿಷ್ಠರಾಗಿ ಭಕ್ತರನ್ನು ಹೆಚ್ಚಿಸಿಕೊಂಡಿದ್ದು ೧೯೧೨ ರಲ್ಲಿ ಲಿಂಗೈಕ್ಯರಾಗಿದ್ದಾರೆ. ನಂತರ ಬಂದ ಶ್ರೀಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಶ್ರೀ ಶಿವಬಸವಯ್ಯ ಮತ್ತು ಶ್ರೀಮತಿ ಶಿವಬಸಮ್ಮನವರ ಪುತ್ರರಾಗಿ ಜನಿಸಿದರು. ಸಂಸ್ಕೃತ, ವೇದ, ಜ್ಯೋತಿಷ್ಯದಲ್ಲಿ ಪಾಂಡಿತ್ಯವನ್ನು ಪಡೆದು ಹಿರಿಯ ಗುರುಗಳ ಜೀವಿತಾವಧಿಯಲ್ಲಿಯೇ ಮಠದ ಉತ್ತರಾಧಿ ಕಾರಿಯಾಗಿ ನೇಮಕಗೊಂಡರು. ನಂತರ ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿ ಬಂದು ೧೯೨೪ ರಲ್ಲಿ

ಪಟ್ಟಾಧಿಕಾರವನ್ನು ವಹಿಸಿ ಕೊಳ್ಳುತ್ತಾರೆ. ನಂತರ ಸಂಪ್ರದಾಯದ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡುವ ಮೂಲಕ ಮಠವನ್ನು ಹೆಚ್ಚು ಪ್ರಬುದ್ಧ ಮಾನಕ್ಕೆ ತಂದರು. ಗುರುಗಳು ಕಾಯಕಯೋಗಿಗಳಾಗಿ ವೀರಶೈವ ಧರ್ಮವನ್ನು ಬೆಳೆಸುವಲ್ಲಿ ಯಶಸ್ವಿಯಾಗಿ ೧೯೭೭ರಲ್ಲಿ ಲಿಂಗೈಕ್ಯರಾಗಿರುತ್ತಾರೆ.

ವಿದ್ಯಾಸಂಪನ್ನರು: ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಶ್ರೀ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬರುತ್ತಾರೆ. ಶ್ರೀ ರೇವಣಸಿದ್ಧಯ್ಯ ಮತ್ತು ಶ್ರೀಮತಿ ಲಲಿತಾದೇವಿಯವರ ಪುತ್ರರಾಗಿ ೧೯೬೨ರ ಡಿಸೆಂಬರ್ ಹದಿನೈದರಂದು ಜನಿಸಿದ ಶ್ರೀ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು ಪ್ರಾಥಮಿಕ ಶಿಕ್ಷಣವನ್ನು ಕರ್ಜಗೆಯಲ್ಲಿ ಮುಗಿಸಿ, ಹೊನ್ನಾಳಿಯ ಕಲ್ಮಠದಲ್ಲಿ ಆಶ್ರಯವನ್ನು ಪಡೆದು ಕಾಲೇಜು ಶಿಕ್ಷಣವನ್ನು ಮುಗಿಸಿ, ಧಾರವಾಡ ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತ ಭಾಷೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪೂರೈಸಿದರು. ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿದ ಗುರುಗಳು ೧೯೮೩ರಲ್ಲಿ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದರು. ಗುರುಗಳು ಮಠದ ಪಟ್ಟಾಧಿಕಾರವನ್ನು ವಹಿಸಿ ಕೊಂಡಿದ್ದರೂ ಹಾವೇರಿಯ ಆಯುರ್ವೇದಿಕ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಧಾರ್ಮಿಕ ಕಾರ್ಯಗಳು: ಕರ್ತೃಗದ್ದುಗೆಗೆ ನಿತ್ಯ ಎರಡೂ ವೇಳೆ ಪೂಜೆ, ಶ್ರಾವಣ ಮತ್ತು ಕಾರ್ತೀಕಮಾಸಗಳಲ್ಲಿ ವಿಶೇಷ ಪೂಜೆ ನಡೆಯುತ್ತದೆ. ಗೌರಿಹುಣ್ಣಿಮೆಯಲ್ಲಿ ಗೌರಿಹಬ್ಬವನ್ನು ವಿಶೇಷವಾಗಿ ಹಾಗೂ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಗೌರಿಯು ಮಠದಲ್ಲಿ ಪ್ರತಿಷ್ಠಾಪನೆಗೊಂಡಿರುವ ಕಾರಣ ಗ್ರಾಮದ ಎಲ್ಲಾ ಹೆಣ್ಣು ಮಕ್ಕಳು ಗೌರಿಹಬ್ಬದಂದು ಮಠಕ್ಕೆ ಭೇಟಿಕೊಟ್ಟು ಪೂಜೆಯಲ್ಲಿ ಪಾಲ್ಗೊಳ್ಳುತ್ತಾರೆ. ಸೀಗೆ ಹುಣ್ಣಿಮೆಯಂದು ಸೀಗಮ್ಮನ ಹಬ್ಬ, ಬಸವಜಯಂತಿಯಂದು ಲಿಂಗೈಕ್ಯ ಗುರುಗಳ ಸಂಸ್ಮರಣಾ ಕಾರ್ಯಕ್ರಮವನ್ನು ಆಚರಿಸಲಾಗುತ್ತಿದೆ. ಅಂದು ಶಿವದೀಕ್ಷೆ ಕಾರ್ಯಕ್ರಮ, ಧಾರ್ಮಿಕ ಸಮಾರಂಭಗಳು ಸಾಮೂಹಿಕ ವಿವಾಹಗಳು ನಡೆಯುತ್ತವೆ.

ಅಭಿವೃದ್ಧಿ ಕಾರ್ಯಗಳು: ಹಿರಿಯ ಗುರುಗಳಾದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಮಠದ ಕಟ್ಟಡವು ನವೀಕರಣಗೊಂಡಿತು. ಪ್ರಸ್ತುತ ಗುರುಗಳಾಗಿ ಅಧಿಕಾರದಲ್ಲಿರುವ ಶ್ರೀ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು ಮಠದ ಕಟ್ಟಡವನ್ನು ಅಗತ್ಯಕ್ಕೆ ಅನುಗುಣವಾಗಿ ನವೀಕರಣಗೊಳಿಸಿಕೊಂಡು, ಮಠದ ಪರಂಪರೆಯ ಗುರುಗಳ ಗದ್ದುಗೆಗಳನ್ನು ನವೀಕರಣಗೊಳಿಸಿ ಸ್ಮಾರಕಗಳನ್ನಾಗಿ ನಿರ್ಮಿಸಿದ್ದಾರೆ. ವಿದ್ಯಾಸಂಪನ್ನರಾದ ಶ್ರೀ ಶಿವಯೋಗಿ ಸ್ವಾಮಿಗಳು ಮಠಕ್ಕೆ ಭಕ್ತರನ್ನು ಹೆಚ್ಚಿಸಿಕೊಂಡಿದ್ದು ಕರ್ಜಗೆ ಸುತ್ತಮುತ್ತಲ ಗ್ರಾಮಗಳಲ್ಲೂ ಭಕ್ತರನ್ನು ಸಂಪಾದಿಸಿಕೊಂಡಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ಗೌರಿಮಠ, ಕರ್ಜಗೆ, ಹಾವೇರಿ ತಾಲ್ಲೂಕು, ಹಾವೇರಿ ಜಿಲ್ಲೆ.

ಹೊಸಮಠ: ಕರ್ಜಗೆ ಗ್ರಾಮದ ಮಧ್ಯಭಾಗದಲ್ಲಿರುವ ಹೊಸಮಠವು ವಿರಕ್ತಸಂಪ್ರದಾಯದಲ್ಲಿ ಬೆಳೆದು ಬಂದಿದೆ. ಶಿರಹಟ್ಟಿಯ ಶ್ರೀ ಫಕೀರಸ್ವಾಮಿ ಮಠದ ಶಾಖಾಮಠವಾಗಿ ಬೆಳೆದಿರುವ ಈ ಮಠದ ಕರ್ತೃಗುರುಗಳು ಶ್ರೀ ಚನ್ನವೀರ ಸ್ವಾಮಿಗಳೆಂದು ಹೇಳಲಾಗುತ್ತಿದೆ. ಶ್ರೀ ಚನ್ನವೀರಸ್ವಾಮಿಗಳ ನಂತರ ಶ್ರೀ ರುದ್ರಮುನಿಸ್ವಾಮಿಗಳು ಅಧಿಕಾರಕ್ಕೆ ಬಂದು ೧೯೫೧ರಲ್ಲಿ ಲಿಂಗೈಕ್ಯರಾಗಿದ್ದಾರೆ. ಇವರ ನಂತರ ಈ ಮಠಕ್ಕೆ ಮಠಾಧೀಶ್ವರರು ಯಾರೂ ಇಲ್ಲದ ಕಾರಣ ಮಠ ಖಾಲಿ ಉಳಿದಿದೆ. ಈ ಮಠದಲ್ಲಿ ಮೂರು ಗದ್ದುಗೆಗಳಿವೆ. ಈ ಗದ್ದುಗೆಗಳಿಗೆ ಮಠದ ವಂಶಸ್ಥರೆಂದು ಹೇಳಲಾಗುವ ನಾಲ್ಕು ಮನೆಯವರು ಸರದಿಯಂತೆ ಪೂಜಾಕಾರ್ಯವನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಕನವಳ್ಳಿ

ಹಾವೇರಿ ತಾಲ್ಲೂಕಿನ ಕನವಳ್ಳಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಇಪ್ಪತ್ತು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ಚರಂತಿ ಮಠವು ಅಸ್ತಿತ್ವದಲ್ಲಿದೆ.

ಚರಂತಿಮಠ: ಕನವಳ್ಳಿ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ಚರಂತಿಮಠವು ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿರುವ

ಈ ಮಠವು ಚರಂತೇಶ್ವರ ಶಿವಾಚಾರ್ಯ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟಿತೆಂದು ಹೇಳಲಾಗುತ್ತಿದೆ.

ಮಠ ಸ್ಥಾಪನೆಯ ಹಿನ್ನೆಲೆ: ನೇಪಾಳದ ಪಶುಪತಿ ದೇವಾಲಯದ ಪಕ್ಕದಲ್ಲಿ ಚರಂತಿ ಮಠವಿದ್ದು ಈ ಮಠದ ಮರಿ ದೇವರೊಬ್ಬರು ಉಜ್ಜಯಿನಿಯಲ್ಲಿ ಮಠವನ್ನು ಸ್ಥಾಪಿಸಿ, ಶಿಷ್ಯರ ಬಯಕೆ ಹಾಗೂ ಇಂದೂರಿನ ಮಹಾರಾಜರ ಇಚ್ಛೆಯಂತೆ ಇಂದೂರಿನಲ್ಲೂ ಸಹ ಒಂದು ಮಠವನ್ನು ಸ್ಥಾಪನೆ ಮಾಡಿರುತ್ತಾರೆ. ನಂತರ ಮರಿದೇವರು ಮುಂಬಯಿಗೆ ಆಗಮಿಸಿ ಅಂಬಾಭವಾನಿ ದೇವಸ್ಥಾನದ ಹತ್ತಿರ ಮಠವನ್ನು ಸ್ಥಾಪಿಸಿರುತ್ತಾರೆಂದು ಹೇಳಲಾಗುತ್ತಿದೆ. ಅಲ್ಲಿಂದ ಮುಂದೆ ಬಂದು ಬಾಗಲಕೋಟೆ, ಸವಣೂರುಮತ್ತು ಧಾರವಾಡ ಸೇರಿದಂತೆ ಅನೇಕ ಕಡೆಗಳಲ್ಲಿ ಚರಂತಿ ಮಠಗಳನ್ನು ಸ್ಥಾಪಿಸಲಾಗಿದ್ದು, ಈ ಸಂದರ್ಭದಲ್ಲಿ ಕನವಳ್ಳಿಯಲ್ಲಿಯೂ ಮಠವನ್ನು ಸ್ಥಾಪನೆ ಮಾಡಲಾಗಿದೆ ಎಂದು ಮಠದ ಪ್ರಕಟಣೆ ತಿಳಿಸುತ್ತದೆ.

ಕೆರೆ-ದೇವಸ್ಥಾನ ಸ್ಥಾಪನೆ: ಈ ಮಠದ ಹಿಂದಿನ ಗುರುಗಳು ಮಹಾ ತಪಸ್ವಿಗಳಾಗಿದ್ದು ಇವರ ಧರ್ಮನಿಷ್ಠೆಗೆ ಶರಣಾದ ಗುತ್ತದ ಅರಸರು ಗುರುಗಳ ಅಪ್ಪಣೆಯ ಪ್ರಕಾರ ಕನವಳ್ಳಿಯಲ್ಲಿ ಪರಮೇಶ್ವರ ಮೂರ್ತಿಯನ್ನು ಪ್ರತಿಷ್ಠಾಪಿಸಿ ದೇವಸ್ಥಾನವನ್ನು ಕಟ್ಟಿಸಿಕೊಟ್ಟಿದ್ದಲ್ಲದೆ, ಕೆರೆಯನ್ನು ನಿರ್ಮಿಸಿಕೊಟ್ಟಿದ್ದಾರೆ ಎಂದು ಹೇಳಲಾಗುತ್ತಿದೆ. ಇವರ ನಂತರ ಅನೇಕ ವರ್ಷಗಳ ಕಾಲ ಮಠಾಧೀಶ್ವರರು ಇಲ್ಲದೆ ಮಠವು ಖಾಲಿ ಉಳಿದಿದ್ದು ನಂತರ ಜಾಲಿಮಲ್ಲಪ್ಪನವರು ಸವಣೂರಿನ ಚರಂತಿ ಮಠದ ಚರಂತಪ್ಪನವರಿಗೆ ಹೇಳಿ ಖಾಲಿ ಉಳಿದಿದ್ದ ಮಠದಲ್ಲಿ ದೀಪ ಬೆಳಗುವಂತೆ ಮಾಡಿದರು. ಈ ಸಂದರ್ಭದಲ್ಲಿ ಮಠಕ್ಕೆ ಆಗಮಿಸಿದ ಗುರುಗಳು ಮಠವನ್ನು ಬೆಳೆಯುವಂತೆ ಮಾಡಿದರು.ನಂತರದ ಮೂರು ನಾಲ್ಕು ತಲೆಮಾರುಗಳ ಕಾಲ ಮಠವು ನಿರಂತರವಾಗಿ ನಡೆದುಕೊಂಡು ಬಂದು ಸುಸ್ಥಿತಿಯಲ್ಲಿರಲು ಕಾರಣವಾಗಿದೆ.

ಬೆಳೆದ ಪರಂಪರೆ: ಮಠದ ಪರಂಪರೆಯಲ್ಲಿ ಇದುವರಗೆ ಹನ್ನೆರಡು ಜನ ಚರ ಪಟ್ಟಾಧ್ಯಕ್ಷರುಗಳು ಆಡಳಿತವನ್ನು ನಡೆಸಿಕೊಂಡು ಬಂದಿದ್ದಾರೆ ಎಂದು ಹೇಳಲಾದರೂ, ಅವರುಗಳ ಹೆಸರುಗಳನ್ನು ಗುರುತಿಸುವ ಯಾವುದೇ ಆಧಾರಗಳು ಲಭ್ಯವಿಲ್ಲ. ಪ್ರಸ್ತುತ ಚರಪಟ್ಟಾಧ್ಯಕ್ಷರಾಗಿರುವ ಶ್ರೀ ಚರಂತಪ್ಪ ಶಿವಾಚಾರ್ಯ ಸ್ವಾಮಿಗಳು ಸಂಚಾರಮೂರ್ತಿಯಾಗಿ ಸದಾ ಧರ್ಮಕಾರ್ಯವನ್ನು ನಡೆಸುತ್ತಿದ್ದಾರೆ. ಕೈಯಲ್ಲಿ ಒಂದು ದಪ್ಪದಾದ ದಂಡ, ತಲೆಗೆ ದೊಡ್ಡ ಪೇಟವನ್ನುಸುತ್ತಿಕೊಂಡು ಅನಾಥ ಮಕ್ಕಳ ಕಲ್ಯಾಣಕ್ಕಾಗಿ ಒಂದಲ್ಲ ಒಂದು ಕೆಲಸವನ್ನು ಕೈಯಲ್ಲಿ ಇಟ್ಟುಕೊಂಡು, ಸರ್ಕಾರ ಮತ್ತು ಭಕ್ತರ ನೆರವು ಪಡೆಯಲು ಸದಾ ಸಂಚಾರದಲ್ಲಿಯೇ ಇರುವುದರಿಂದ ಈ ಗುರುಗಳಿಗೆ ಸಂಚಾರಮೂರ್ತಿಗಳೆಂಬ ಅನ್ವರ್ಥನಾಮ ಬಂದಿದೆ. ಶ್ರೀ ಚರಂತಪ್ಪ ಶಿವಾಚಾರ್ಯ ಸ್ವಾಮಿಗಳು ಸೈಕಲ್ಲಿನ ಮೇಲೆ ಎರಡು ಬಾರಿ ಭಾರತವನ್ನು ಸಂಚರಿಸಿದ್ದಾರೆ. ಅಲ್ಲದೆ ಇಪ್ಪತ್ತಮೂರು ಬಾರಿ ಮೌನವ್ರತದ ಅನುಷ್ಠಾನ ಮಾಡಿದ್ದು ಇವರ ಸಾಧನೆಯ ಮೈಲುಗಲ್ಲುಗಳಾಗಿವೆ.

ಮಠದ ಕಟ್ಟಡದ ನೆಲಮಾಳಿಗೆಯಲ್ಲಿ ಕರ್ತೃಗುರುಗಳ ಗದ್ದುಗೆ ಇದೆ. ಈ ಗದ್ದುಗೆಗೆ ನಿತ್ಯಪೂಜೆ ನಡೆಸಲಾಗುತ್ತಿದೆ. ಇತ್ತೀಚೆಗೆ ಮಠದ ಕಟ್ಟಡವನ್ನು ವಿಸ್ತಾರಗೊಳಿಸಿದ್ದು ಮಠದ ಧಾರ್ಮಿಕ ಚಟುವಟಿಕೆಗಳು ನಡೆಯಲು ಅನುಕೂಲವನ್ನು ಕಲ್ಪಿಸಿ ಕೊಳ್ಳಲಾಗಿದೆ. ಗುರುಗಳ ನೆರವಿನಿಂದ ಸುಮಾರು ಐದುನೂರು ಜನ ಅನಾಥ ಮಕ್ಕಳು ಆಶ್ರಯ ಪಡೆದು, ರಾಜ್ಯ ರಸ್ತೆಸಾರಿಗೆ ಸಂಸ್ಥೆ ಮತ್ತು ಪೋಲೀಸು ಇಲಾಖೆಯಲ್ಲಿ ಕೆಲಸವನ್ನು ಸಂಪಾದಿಸಿಕೊಂಡಿದ್ದಾರೆಂದು ಮಠದ ಪ್ರಕಟಣೆ ತಿಳಿಸುತ್ತದೆ. ಧಾರ್ಮಿಕ ಮತ್ತು ಸಾಮಾಜಿಕವಾಗಿ ಸ್ಪಂದಿಸುವ ಈ ಮಠದ ಗುರುಗಳು ಸಾಮಾಜಿಕ ಸೇವೆಯನ್ನೇ ತಮ್ಮ ಆದ್ಯಕರ್ತವ್ಯವೆಂದು ಭಾವಿಸಿ ಹಗಲಿರುಳು ಅನಾಥ ಮಕ್ಕಳ ಸೇವೆಗೆ ದುಡಿಯುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಚರಂತಪ್ಪ ಶಿವಾಚಾರ್ಯ ಸ್ವಾಮಿಗಳು, ಶ್ರೀ ಚರಂತಿ ಮಠ, ಕನವಳ್ಳಿ, ಹಾವೇರಿ ತಾಲ್ಲೂಕು.

ಗುತ್ತಲ

ಹಾವೇರಿ ತಾಲ್ಲೂಕಿನ ಗುತ್ತಲ ಗ್ರಾಮವು ತಾಲ್ಲೂಕು ಕೇಂದ್ರದಿಂದ ಇಪ್ಪತ್ತೇಳು ಕಿ.ಮೀ.ದೂರದಲ್ಲಿದೆ.ಇಲ್ಲಿ ಹನ್ನೆರಡು ಮಠಗಳು ಸ್ಥಾಪನೆಗೊಂಡಿವೆ ಎಂದು ಹೇಳಲಾಗುತ್ತಿದೆ. ಈ ಮಠಗಳಲ್ಲಿ ಶ್ರೀ ವಿರಕ್ತಮಠ ಒಂದು ಅಸ್ತಿತ್ವದಲ್ಲಿದ್ದು ಧಾರ್ಮಿಕ

ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. ಶ್ರೀ ಚರಂತಿಮಠ, ಶ್ರೀ ಅಜ್ಜಯ್ಯನಮಠ, ಶ್ರೀ ಹಿರೇಮಠ, ಶ್ರೀ ಚನ್ನವೀರ ಸ್ವಾಮಿಮಠ, ಶ್ರೀ ಸುತ್ತೂರುಮಠ, ಶ್ರೀ ಹಿರಿಸೊಮಠ, ಶ್ರೀ ಗಡ್ಡದ ದೇವರಮಠ ಹಾಗೂ ಶ್ರೀ ನಂದಿಕೋರು ಮಠ ಈ ರೀತಿ ಒಂಬತ್ತು ಮಠಗಳ ಹೆಸರನ್ನು ದಾಖಲಿಸಬಹುದಾಗಿದ್ದು ಉಳಿದ ಮೂರು ಮಠಗಳ ಹೆಸರು ಲಭ್ಯವಿಲ್ಲವಾಗಿದೆ.

ವಿರಕ್ತಮಠ: ಗುತ್ತಲ ಗ್ರಾಮದ ರಾಣೆಬೆನ್ನೂರು ರಸ್ತೆಯಲ್ಲಿ ಸ್ಥಾಪನೆಗೊಂಡಿರುವ ಮಠವು ಮುರುಘಾ ಸಮಯದ ಮಠವಾಗಿದ್ದು, ಅಗಡಿ ವಿರಕ್ತಮಠದ ಶಾಖಾಮಠವಾಗಿ ಬೆಳೆದಿದೆ. ಎಪ್ಪತ್ತೈದು ವರ್ಷಗಳ ಹಿಂದೆ ಶ್ರೀ ರುದ್ರಮುನಿ ಸ್ವಾಮಿಗಳ ಕಾಲದಲ್ಲಿ ಸ್ಥಾಪನೆಗೊಂಡ ಈ ಮಠವು ಈ ಗ್ರಾಮದ ಧಾರ್ಮಿಕ ಕೇಂದ್ರಬಿಂದುವಾಗಿ ಬೆಳೆದಿದೆ. ಶ್ರೀ ರುದ್ರಮುನಿ ಸ್ವಾಮಿಗಳ ಕಾಲದಲ್ಲಿ ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಗೊಂಡಿದ್ದ ಮಠವು ಈಗಿನ ಶ್ರೀ ಸಂಗನಬಸವ ಸ್ವಾಮಿಗಳ ಕಾಲದಲ್ಲಿ ಗ್ರಾಮದ ಹೊರಭಾಗದ ವಿಶಾಲ ಮೈದಾನದಲ್ಲಿ ಸ್ಥಾಪನೆಗೊಂಡಿದೆ.

ಮಠದ ಆವರಣದಲ್ಲಿ ಶ್ರೀ ರುದ್ರಮುನಿಸ್ವಾಮಿಗಳ ತೋರುಗದ್ದುಗೆಯನ್ನು ನಿರ್ಮಿಸಲಾಗಿದ್ದು ನಿತ್ಯಪೂಜೆ ಮಾಡಲಾಗುತ್ತಿದೆ. ಶ್ರಾವಣಮಾಸದಲ್ಲಿ ಪುರಾಣ ಪ್ರವಚನವನ್ನು ಏರ್ಪಡಿಸಲಾಗುತ್ತದೆ. ಶ್ರೀ ರುದ್ರಮುನಿ ಸ್ವಾಮಿಗಳ ಜಯಂತಿ ಉತ್ಸವವನ್ನು ಮಾರ್ಚ್ ತಿಂಗಳಲ್ಲಿ ಏರ್ಪಡಿಸಿ ವಿದ್ವಾಂಸರಿಂದ ಉಪನ್ಯಾಸವನ್ನು ಏರ್ಪಡಿಸಲಾಗುತ್ತದೆ. ಮಠದಲ್ಲಿ ನಿರ್ಮಿಸಲಾಗಿರುವ ಗದ್ದುಗೆಯ ಎಡಭಾಗದಲ್ಲಿ ದಾಸೋಹ ಮಂದಿರವನ್ನು ನಿರ್ಮಿಸಿ ನಿತ್ಯದಾಸೋಹ ನಡೆಸಲಾಗುತ್ತಿದೆ. ಅಗಡಿ ಮತ್ತು ಗುತ್ತಲಮಠಗಳು ಶ್ರೀ ಸಂಗನಬಸವ ಸ್ವಾಮಿಗಳ ನೇತೃತ್ವದಲ್ಲಿ ಧಾರ್ಮಿಕ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿಗೊಂಡಿವೆ. ಇತ್ತೀಚೆಗೆ ಮಠದ ಆವರಣದಲ್ಲಿ ಕಾನ್ವೆಂಟ್‌ಶಾಲೆಯನ್ನು ಪ್ರಾರಂಭಿಸಿ ಶೈಕ್ಷಣಿಕ ಪ್ರಗತಿಗೆ ನಾಂದಿ ಹಾಡಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಸಂಗನಬಸವ ಸ್ವಾಮಿಗಳು, ಶ್ರೀ ವಿರಕ್ತಮಠ, ಗುತ್ತಲ, ಹಾವೇರಿ ತಾಲ್ಲೂಕು.

ನೆಗಳೂರು

ಹಾವೇರಿ ತಾಲ್ಲೂಕಿನ ನೆಗಳೂರು ಗ್ರಾಮವು ತಾಲ್ಲೂಕು ಕೇಂದ್ರದ ಪೂರ್ವಕ್ಕೆ ಮೂವತ್ತು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಹಿರೇಮಠವು ಅಸ್ತಿತ್ವದಲ್ಲಿದೆ.

ಹಿರೇಮಠ: ನೆಗಳೂರು ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಯಾಗಿರುವ ಹಿರೇಮಠವು ಬಾಳೇಹೊನ್ನೂರಿನ ಶ್ರೀ ರಂಭಾಪುರಿ ಪೀಠದ ಶಾಖಾಮಠವಾಗಿ ಅದೇ ಸಂಪ್ರದಾಯದಲ್ಲಿ ಬೆಳೆದು ಬಂದಿದೆ.

ಮಠಸ್ಥಾಪನೆ : ೧೧೭೮ರಲ್ಲಿ ಬಿಜಾಪುರದಿಂದ ಶ್ರೀ ಗುರುಶಾಂತ ಶಿವಾಚಾರ್ಯ ಸ್ವಾಮಿಗಳೆಂಬುವರು ಲೋಕಸಂಚಾರಕ್ಕೆಂದು ಬಂದವರು ಹಾವನೂರಿನ ಒಂದನೆಯ ಹನುಮಂತ ದೇಸಾಯಿಗೆ ಪ್ರಾಣದಾನ ಮಾಡಿ ಪೇಶ್ವೆಯವರಿಂದ ರಕ್ಷಿಸಿದ್ದರು. ಪ್ರಾಣದಾನ ಪಡೆದುಕೊಂಡಿದ್ದ ಹನುಮಂತ ದೇಸಾಯಿಯು ಕಾಡಿನಲ್ಲಿ ತಪೋನುಷ್ಠಾನ ಕೈಗೊಂಡಿದ್ದ ಶ್ರೀ ಗುರುಶಾಂತ ಶಿವಾಚಾರ್ಯ ಸ್ವಾಮಿಗಳಿಗೆ ಮಠವನ್ನು ಕಟ್ಟಿಸಿಕೊಟ್ಟು, ಮಠದ ಧಾರ್ಮಿಕ ಚಟುವಟಿಕೆಗಳು ನಿರಂತರವಾಗಿ ನಡೆಯಲೆಂದು ಅರವತ್ತೈದು ಎಕರೆ ಜಮೀನನ್ನು ಇನಾಂ ನೀಡಿದ್ದರು. ಅಂದು ಊರಹೊರಗಿನ ದೊಡ್ಡಕೆರೆಯ ಕೋಟೆಯ ಸಮೀಪ ಸ್ಥಾಪನೆಯಾಗಿದ್ದ ಮಠವು ಕಾಲಕ್ರಮೇಣ ಬದಲಾದ ಪರಿಸ್ಥಿತಿಯಲ್ಲಿ ಈಗ ಇರುವ ಸ್ಥಳಕ್ಕೆ ಸ್ಥಳಾಂತರಗೊಂಡಿದೆ. ಮಠದ ಕರ್ತೃ ಗುರುಗಳಾದ ಶ್ರೀ ಗುರುಶಾಂತ ಶಿವಾಚಾರ್ಯ ಸ್ವಾಮಿಗಳ ಕರ್ತೃಗದ್ದುಗೆಯು ಈಗಿನ ಮಠದ ಆವರಣದಲ್ಲಿದೆ.

ಪರಂಪರೆ:

೧. ಷ.ಬ್ರ. ಶ್ರೀ ಗುರುಶಾಂತ ಶಿವಾಚಾರ್ಯಸ್ವಾಮಿಗಳು

೨. ಷ.ಬ್ರ. ಶ್ರೀ ಸಿದ್ಧರಾಮ ಶಿವಾಚಾರ್ಯಸ್ವಾಮಿಗಳು

೩. ಷ.ಬ್ರ. ಶ್ರೀ ಜೋಗೇಶ್ವರ ಶಿವಾಚಾರ್ಯಸ್ವಾಮಿಗಳು

೪. ಷ.ಬ್ರ. ಶ್ರೀ ಶಿವಯೋಗಿ ಶಿವಾಚಾರ್ಯಸ್ವಾಮಿಗಳು

೫. ಷ.ಬ್ರ. ಶ್ರೀ ಶಿವಾನಂದ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಈ ರೀತಿ ಗುರು ಪರಂಪರೆಯನ್ನು ಹೊಂದಿರುವ ಹಿರೇಮಠವು ಈ ತನಕ ಮೂವತ್ತಾರು ಜನ ಗುರುಗಳನ್ನು ಕಂಡಿದೆ ಎಂದು ಹೇಳಲಾಗುತ್ತದೆ. ಆದರೆ ಮೇಲೆ ದಾಖಲಿಸಿದ ಗುರುಗಳ ಹೆಸರನ್ನು ಹೊರತುಪಡಿಸಿದರೆ ಉಳಿದ ಗುರುಗಳ ಹೆಸರುಗಳು ಲಭ್ಯವಿಲ್ಲ. ನೆಗಳೂರಿನಲ್ಲಿ ಐದು ಗದ್ದುಗೆಗಳು, ಹೊಳಲು ಗ್ರಾಮದಲ್ಲಿ ಒಂದು ಗದ್ದುಗೆ ಸೇರಿದಂತೆ ಸವಣೂರು ತಾಲ್ಲೂಕಿನ ಬಸವನ ಕೊಪ್ಪದಲ್ಲಿ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳ ಗದ್ದುಗೆಯನ್ನು ನಿರ್ಮಿಸಲಾಗಿದೆ. ಈ ರೀತಿ ಒಟ್ಟು ಎಂಟು ಗದ್ದುಗೆಗಳು ನೋಡ ಸಿಗುತ್ತವೆ. ಉಳಿದ ಗದ್ದುಗೆಗಳು ಶಾಖಾಮಠಗಳಲ್ಲಿ ನಿರ್ಮಾಣಗೊಂಡಿವೆ ಎಂದು ಹೇಳಲಾಗುತ್ತಿದೆ. ಪೂರ್ವದಲ್ಲಿ ಕರ್ತೃಗುರುಗಳ ಹೆಸರನ್ನೇ ಪಟ್ಟಾಧಿಕಾರವನ್ನು ವಹಿಸಿಕೊಳ್ಳುವ ಗುರುಗಳಿಗೆ ಅಭಿದಾನ ಮಾಡಲಾಗುತ್ತಿದ್ದ ಕಾರಣ ಪರಂಪರೆಯ ಗುರುಗಳ ಹೆಸರನ್ನು ದಾಖಲಿಸಲಾಗಿಲ್ಲ ಎಂದು ಹೇಳುತ್ತಾರೆ. ಮೂವತ್ತೈದನೆಯ ಗುರುಗಳಾಗಿ ಅಧಿಕಾರವನ್ನು ವಹಿಸಿಕೊಂಡಿದ್ದ ಶ್ರೀ ಶಿವ ಯೋಗಿ ಶಿವಾಚಾರ್ಯ ಸ್ವಾಮಿಗಳು ಆಸ್ತಿಯ ವಿಚಾರವಾಗಿ ೧೯೫೫ ರಲ್ಲಿ ದುಷ್ಕರ್ಮಿಗಳ ದುಷ್ಕೃತ್ಯಕ್ಕೆ ಬಲಿಯಾದರು ಎಂದು ಹೇಳಲಾಗುತ್ತಿದೆ. ಇವರ ನಂತರ ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ಅಧಿಕಾರಕ್ಕೆ ಬಂದಿರುತ್ತಾರೆ.

ಶ್ರೀ ಫಕೀರಯ್ಯ ಮತ್ತು ಶ್ರೀಮತಿ ಶಾಂತಮ್ಮನವರ ಪುತ್ರರಾಗಿ ೧೯೪೨ರಲ್ಲಿ ಜನಿಸಿದ ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ನೆಗಳೂರಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿ ೧೯೬೨ರಲ್ಲಿ ಪಟ್ಟಾಧಿಕಾರ ಪಡೆದು ನಂತರ ಶಿವಯೋಗ ಮಂದಿರ, ಗದಗದಲ್ಲಿ ಉನ್ನತ ಶಿಕ್ಷಣವನ್ನು ಮುಗಿಸಿ ಮಠಕ್ಕೆ ಮರಳುತ್ತಾರೆ. ಮಠಕ್ಕೆ ಮರಳಿದ ಗುರುಗಳು ಮಠದ ಆಸ್ತಿಯನ್ನು ಶಿಸ್ತುಬದ್ಧವಾಗಿ ದಾಖಲೆಗೊಳಿಸಿ ಮಠವನ್ನು ಆರ್ಥಿಕವಾಗಿ ಸದೃಢಗೊಳಿಸಲು ಮುಂದಾದರು.

ಅಭಿವೃದ್ಧಿ ಕಾರ್ಯಗಳು: ಪರಂಪರೆಯಲ್ಲಿ ಬಂದಂತಹ ಶ್ರೀ ಜೋಗಿಸ್ವಾಮಿಗಳು ಮತ್ತು ಶ್ರೀ ಶಿವಯೋಗಿ ಸ್ವಾಮಿಗಳ ಕಾಲದಲ್ಲಿ ಮಠದ ಕಟ್ಟಡವು ಸವಿಸ್ತಾರವಾಗಿ ರೂಪುಗೊಂಡಿದೆ. ನೆಗಳೂರಿನಲ್ಲಿರುವ ಪರಂಪರೆಯ ಐದು ಗದ್ದುಗೆಗಳನ್ನು ಅಭಿವೃದ್ಧಿಪಡಿಸಿ ಸ್ಮಾರಕಗಳನ್ನಾಗಿ ನಿರ್ಮಿಸಲಾಗಿದೆ. ಹಿಂದೆ ದೇಸಾಯಿಯವರಿಂದ ಲಭ್ಯವಾಗಿದ್ದ ಅರವತ್ತು ಎಕರೆ ಜಮೀನಿನಲ್ಲಿ ಈಗ ಕೇವಲ ಹದಿನೈದು ಎಕರೆ ಜಮೀನು ಮಾತ್ರ ಉಳಿದಿದ್ದು, ಈ ಜಮೀನನ್ನೇ ಅಭಿವೃದ್ಧಿಪಡಿಸಿ ಹೆಚ್ಚು ಆದಾಯ ಬರುವಂತೆ ಮಾಡಲಾಗಿದೆ. ಇತ್ತೀಚೆಗೆ ಶಾಖಾಮಠಗಳ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಅಲ್ಲದೆ ಶಿಕ್ಷಣ ಸಂಸ್ಥೆಗಳ ಕಟ್ಟಡಗಳನ್ನು ನಿರ್ಮಿಸ ಲಾಗಿದ್ದು ಮಠ ಸದೃಢವಾಗಿ ಬೆಳೆಯುವಂತೆ ಮಾಡಲಾಗಿದೆ.

ಶೈಕ್ಷಣಿಕ ಸೇವೆ: ಧಾರ್ಮಿಕ ಮತ್ತು ಆರ್ಥಿಕವಾಗಿ ಬೆಳೆದ ಹಿರೇಮಠವು ಶೈಕ್ಷಣಿಕವಾಗಿಯೂ ಹೆಚ್ಚು ಸಾಧನೆಯನ್ನು ಸಾಧಿಸಿದೆ. ಹಿರೇಮಗದೂರು, ಪೇಟೆಆಲೂರು, ಮುಂಡರಗಿ, ಎರೆ ಬೇಲೇರಿ ಗ್ರಾಮಗಳಲ್ಲಿ ಪ್ರೌಢಶಾಲೆಗಳನ್ನು ಪ್ರಾರಂಭಿಸ ಲಾಗಿದೆ. ಪೇಟೆ ಆಲೂರಿನಲ್ಲಿ ಪದವಿಪೂರ್ವ ಕಾಲೇಜನ್ನು ಸ್ಥಾಪನೆ ಮಾಡಿ ಗ್ರಾಮಾಂತರ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗಿದೆ.

ಧಾರ್ಮಿಕ ಕಾರ್ಯಗಳು: ಕರ್ತೃಗದ್ದುಗೆ ಸೇರಿದಂತೆ ಉಳಿದ ನಾಲ್ಕು ಗದ್ದುಗೆಗಳಿಗೆ ನಿತ್ಯಪೂಜೆಯನ್ನು ಮಾಡಲಾಗುತ್ತಿದೆ. ಹುಣ್ಣಿಮೆಯಲ್ಲಿ ಶಿವಾನುಭವಗೋಷ್ಠಿಯನ್ನು ಏರ್ಪಡಿಸುವುದಲ್ಲದೆ ಅನ್ನದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಪ್ರತಿ ವರ್ಷ ಫೆಬ್ರವರಿಯಲ್ಲಿ ಹಿರಿಯ ಗುರುಗಳ ಪುಣ್ಯಾರಾಧನೆಯನ್ನು ಪಂಚಪೀಠಾಧೀಶ್ವರರ ಸಮ್ಮುಖದಲ್ಲಿ ನೆಡೆಸಲಾಗುತ್ತಿದೆ. ಹೊರಗಿನಿಂದ ಬರುವ ಭಕ್ತರಿಗೆ ನಿತ್ಯ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ವಿಳಾಸ: ಷ.ಬ್ರ.ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು, ಶ್ರೀ ಹಿರೇಮಠ, ನೆಗಳೂರು, ಹಾವೇರಿ ತಾಲ್ಲೂಕು.

ಹಂದಿಗನೂರು

ಹಾವೇರಿ ತಾಲ್ಲೂಕಿನ ಹಂದಿಗನೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಈಶಾನ್ಯ ಭಾಗಕ್ಕೆ ಮೂವತ್ತು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಹಂದಿಗನೂರು ಗ್ರಾಮದಲ್ಲಿ ಉತ್ತರಕನ್ನಡ ಜಿಲ್ಲೆಯ ಶಿರಸಿಯ ಬಣ್ಣದ ಮಠದ ಶಾಖಾಮಠವಾದ ವಿರಕ್ತಮಠವು ಗ್ರಾಮದ ಹೊರಭಾಗದಲ್ಲಿ ಸ್ಥಾಪನೆಗೊಂಡಿದೆ. ಈ ಮಠವನ್ನು ಶ್ರೀ ಚಿಕ್ಕವೀರೇಶ್ವರ ಸ್ವಾಮಿಗಳು ಸ್ಥಾಪನೆ ಮಾಡಿದ್ದು,

ಇವರ ನಂತರ ಶಿರಸಿಯ ಬಣ್ಣದ ಮಠದ ಗುರುಗಳೇ ಅಧಿಕಾರವನ್ನು ನೋಡಿಕೊಂಡು ಬರುತ್ತಿದ್ದಾರೆ.

ಕರ್ತೃಗುರುಗಳಾದ ಶ್ರೀ ಚಿಕ್ಕವೀರೇಶ್ವರ ಸ್ವಾಮಿಗಳ ಗದ್ದುಗೆಗೆ ಇತ್ತೀಚಿಗೆ ಭವ್ಯವಾದ ಮಂಟಪವನ್ನು ನಿರ್ಮಿಸಲಾಗಿದೆ. ಶ್ರೀ ಗುರುಸಿದ್ಧ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ೧೯೮೫ರಲ್ಲಿ ಶ್ರೀ ಶಿವಲಿಂಗಸ್ವಾಮಿಗಳು ಬಣ್ಣದಮಠ ಮತ್ತು ಈ ಮಠದ ಅಧಿಕಾರವನ್ನು ನೋಡಿಕೊಂಡು ಅಭಿವೃದ್ಧಿ ಪಡಿಸತೊಡಗಿದ್ದಾರೆ. ಹಂದಿಗನೂರು ವಿರಕ್ತ ಮಠವು ಶ್ರೀಗುರುಸಿದ್ಧ ಸ್ವಾಮಿಗಳ ಕಾಲದಲ್ಲಿ ಹೆಚ್ಚು ಅಭಿವೃದ್ಧಿಗೊಂಡಿದೆ. ಇವರ ಕಾಲದಲ್ಲಿ ಮಠದ ಕಟ್ಟಡವು ವಿಶಾಲವಾಗಿ ರೂಪುಗೊಂಡಿದೆ. ಅಲ್ಲದೆ ನಲವತ್ತು ಎಕರೆ ಆಸ್ತಿಯನ್ನು ಸಂಪಾದಿಸಿ ಮಠಕ್ಕೆ ಭದ್ರಬುನಾದಿಯನ್ನು ಹಾಕಿಕೊಟ್ಟರು. ಈಗಿನ ಗುರುಗಳಾದ ಶ್ರೀ ಶಿವಲಿಂಗ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠದ ಆಸ್ತಿಯನ್ನು ಅಭಿವೃದ್ಧಿ ಪಡಿಸಿದ್ದಾರೆ. ಮಠದ ಸುತ್ತಲೂ ಆವರಣವನ್ನು ನಿರ್ಮಿಸಲಾಗಿದೆ. ಕರ್ತೃಗದ್ದುಗೆಗೆ ನಿತ್ಯ ಪೂಜೆ ಹಾಗೂ ಅನ್ನ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಶಿವಲಿಂಗ ಸ್ವಾಮಿಗಳು, ಶ್ರೀ ವಿರಕ್ತಮಠ, ಹಂದಿಗನೂರು, ಹಾವೇರಿ ತಾಲ್ಲೂಕು.

ಹಾವೇರಿ

ರಾಜ್ಯದಲ್ಲಿ ಜಿಲ್ಲೆಗಳ ವಿಂಗಡಣೆ ನಡೆದ ಕಾಲದಲ್ಲಿ (೧೯೯೭) ಹೊಸ ಜಿಲ್ಲೆಯಾಗಿ ರೂಪುಗೊಂಡ ಹಾವೇರಿಯು ಜಿಲ್ಲಾ ಕೇಂದ್ರಸ್ಥಳವಾಗಿದೆ. ಹಾವೇರಿಯನ್ನು ಕೃತಯುಗದಲ್ಲಿ ನಳ ಚಕ್ರವರ್ತಿಯು ನಿರ್ಮಿಸಿದನೆಂದು ಹೇಳಲಾಗುತ್ತದೆ. ಶಾಸನಗಳ ಉಲ್ಲೇಖಗಳಿಂದ ಹತ್ತನೆಯ ಶತಮಾನಕ್ಕೂ ಪೂರ್ವದಿಂದಲೇ'ಹಾವೇರಿ'ಎಂಬ ಹೆಸರು ಇರುವುದು ತಿಳಿದು ಬರುತ್ತದೆ. ಹರಿಯುವ ನೀರಿಗೆ ಹಾವೊಂದು ಅಡ್ಡವಾಗಿ ಬರಲು ಪಾವರಿ >ಹಾವರಿ> ಹಾವೇರಿ ಎಂದು ಹೆಸರಾಯಿತ್ತೆಂದು ಸಂಶೋಧಕ ಡಾ. ಭೋಜರಾಜ ಪಾಟೀಲರು ತಮ್ಮ ಶಿವಲಿಂಗಸಂಪದದ ಪುಟ ೯೩ ರಲ್ಲಿ ಉಲ್ಲೇಖಿಸಿದ್ದಾರೆ.

ಹಾವೇರಿಯು ಪುರಾತನ ಕಾಲದಲ್ಲಿ ಮಹಾವಿದ್ಯಾಕೇಂದ್ರವಾಗಿ, ವ್ಯಾಪಾರ ಕೇಂದ್ರಸ್ಥಳವಾಗಿ ಬೆಳೆದಿತ್ತು. ಅಲ್ಲದೆ ಈ ಪಟ್ಟಣದಲ್ಲಿ ಪ್ರಾಚೀನ ಕಾಲದಲ್ಲಿ ಒಟ್ಟು ಅರವತ್ತಮೂರು ಮಠಗಳು ಸ್ಥಾಪನೆಗೊಂಡು ಮರಿಕಲ್ಯಾಣವಾಗಿ ರೂಪುಗೊಂಡಿತ್ತೆಂದು ಸಂಶೋಧಕರು ಅಭಿಪ್ರಾಯಿಸಿದ್ದಾರೆ. ಪ್ರಾಚೀನ ಮತ್ತು ಇತ್ತೀಚಿನ ವರ್ಷಗಳಲ್ಲಿ ಸ್ಥಾಪನೆಗೊಂಡ ಅರವತ್ತಮೂರು ಮಠಗಳಲ್ಲಿ, ಇಂದು ಬೆರಳೆಣಿಕೆಯಷ್ಟು ಮಠಗಳು ಮಾತ್ರ ಅಸ್ತಿತ್ವದಲ್ಲಿವೆ. ಉಳಿದವುಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿವೆ. ಇಂದು ಹಾವೇರಿಯಲ್ಲಿ ಅರವತ್ತಮೂರು ಮಠಗಳ ಶೋಧನೆಗೆ ಹೊರಟರೆ ಈ ಬಗ್ಗೆ ಪೂರ್ಣ ಮಾಹಿತಿಯನ್ನು ನೀಡುವವರು ಯಾರೂ ಇಲ್ಲ ಆದರೆ ಸುದೈವ ಎಂಬಂತೆ ಕಳೆದ ಎರಡು ದಶಕಗಳ ಹಿಂದೆ ಹಂಪೆಯ ಹೇಮಕೂಟಿಮಠದ ಹಿರಿಯ ಮಠಾಧ್ಯಕ್ಷರ ವಂಶಸ್ಥರಾದ ಪಟದಯ್ಯನವರು ಶ್ರಮವಹಿಸಿ ಹಾವೇರಿಯ ಅರವತ್ತಮೂರು ಮಠಗಳ ಬಗ್ಗೆ ಪೂರ್ಣ ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ಇದು ಈ ಮಠಗಳ ದಾಖಲೆಗೆ ನೆರವಾಗಿದೆ.

ಹಾವೇರಿಯ ೬೩ ವೀರಶೈವ ಮಠಗಳ ವಿವರ

ಹಳೆಯ ಊರಿನಲ್ಲಿರುವ ಗುರುವರ್ಗದ ಮಠಗಳು

೧. ಹಿರೇಮಠ	೨. ಚರಂತಿಮಠ	೩. ಬಾಳೆಹಳ್ಳಿಮಠ
೪. ವರದಿಮಠ	೫. ಶೀಲವಂತಮಠ	೬. ಟಿಂಗಿನಮಠ
೭. ಕೆಂಪಯ್ಯಮಠ	೮. ಕೊಟ್ಟೂರು ಮಠ	೯. ಕಬ್ಬಿಣಕಂತೆ ಮಠ

ವಿರಕ್ತ ಮಠಗಳು

೧೦. ಉಪ್ಪರಗಿಮಠ	೧೧. ಕಾವಲಿಮಠ	೧೨. ಮುರುಘಸ್ವಾಮಿಮಠ

ಪೇಟೆಯಲ್ಲಿರುವ ಗುರುವರ್ಗದ ಮಠಗಳು

೧೩. ನಡುವಿನ ಮಠ	೧೪. ಮಾಳಪ್ಪನಮಠ	೧೫. ಹಂಜಗಿಮಠ

೧೬. ಪಂಚಮನಮಠ	೧೭. ರಿತ್ತಿಮಠ	೧೮. ಆಲದಿಮಠ
೧೯. ಹರಿಹರಮಠ	೨೦. ಗಟ್ಟಿಮಠ	೨೧. ಹರಸೂರಕರಿಸಿದ್ಧೇಶ್ವರಮಠ
೨೨. ಹರಸೂರು ಚರಂತಿಮಠ	೨೩. ಅಜ್ಜಯ್ಯಮಠ	೨೪. ಗದ್ದಯ್ಯನಮಠ
೨೫. ಹಾಲಯ್ಯನವರಮಠ	೨೬. ಚನ್ನಮಲ್ಲಪ್ಪನವರಮಠ	೨೭. ನಂಜಪ್ಪದೇವರಮಠ
೨೮. ಮುರುಡೇಶ್ವರಮಠ	೨೯. ಸಾಲೀಮಠ	೩೦. ಭಸ್ಮಾಂಗಿಮಠ
೩೧. ಕಂಥೆಮಠ	೩೨. ಇಂಜಾಳಿಮಠ	೩೩. ಸಾವಳಗಿ ಶಿವಲಿಂಗಪ್ಪನವರಮಠ
೩೪. ಗುರುಲಿಂಗದೇವರಮಠ	೩೫. ಪರ್ವತದೇವರಮಠ	೩೬. ಉತ್ತರಾಜೀಮಠ
೩೭. ಘಂಟಿಮಠ	೩೮. ಭಾವಿಮಠ	೩೯. ದೇವಗಿರಿಮಠ

ಪೇಟೆಯಲ್ಲಿರುವ ವಿರಕ್ತ ಮಠಗಳು

೪೦. ಸಾವಳಗಿಮಠ	೪೧. ಸಾವಳಗಿಮಠ (ಗದ್ದಿಗೆ)	೪೨. ಪುಟ್ಟಸಿದ್ಧಲಿಂಗಪ್ಪನಮಠ
೪೩. ಹೊಸಮಠ	೪೪. ಹೊಂಡದ ಮಠ	೪೫. ಅಣರಂಗೀಮಠ
೪೬. ಕೋರಿಟೊಪ್ಪಿಮಠ	೪೭. ಚೌಕಿಮಠ	

ಸಿದ್ಧೇದೇವಪುರದ ಗುರುವರ್ಗದ ಮಠಗಳು

೪೮. ಚನ್ನವೀರಸ್ವಾಮಿಮಠ (ಜಡೆಚನ್ನವೀರಸ್ವಾಮಿಮಠ)	೪೯. ಗುರುಪಾದದೇವರಮಠ	೫೦. ಚೌಕಿಮಠ
	೫೧. ಬೆಡಗಿನಮಠ	೫೨. ಯೋಗಿಮಠ
೫೩. ಕಲ್ಯಾಣಿಮಠ	೫೪. ಅಂದಾನಿಮಠ	೫೫. ದೇವಗುಂಡಿಮಠ
೫೬. ಸುತ್ತೂರುಮಠ	೫೭. ಬಂಕಾಪುರಮಠ	೫೮. ನೀಲಕಂಠಸ್ವಾಮಿಮಠ (ಚೌಕಿಮಠ)

ಸಿದ್ಧೇದೇವಪುರದ ವಿರಕ್ತ ಮಠಗಳು

೫೯. ಹುಕ್ಕೇರಿಮಠ	೬೦. ಘಂಟೆಚನ್ನವೀರಸ್ವಾಮಿಮಠ (ಶಿವಲಿಂಗೇಶ್ವರಮಠ, ವಾಲಿಯವರಮಠ)	
೬೧. ದೇವಗಿರಿಮಠ	೬೨. ದೇವಗಿರಿಮಠದ ಚೌಕಿಮಠ	೬೩. ಹೊಸಕೇರಿಮಠ

ಈ ರೀತಿ ಹಾವೇರಿಯ ಅರವತ್ತಮೂರು ಮಠಗಳನ್ನು ಲಿಂಗೈಕ್ಯ ಪಟದಯ್ಯನವರ ಪುತ್ರರಾದ ಪ್ರೊ.ಸಿ.ಪಿ.ಹೇಮಗಿರಿಮಠ ಇವರಲ್ಲಿ ಇರುವ ಮಾಹಿತಿಯ ಆಧಾರದ ಮೇಲೆ ಗುರುತಿಸಲಾಗಿದೆ. ಅರವತ್ತಮೂರು ಮಠಗಳ ಪೈಕಿ ಪ್ರಸ್ತುತ ಹುಕ್ಕೇರಿ ಮಠದಲ್ಲಿ ಶ್ರೀ ಶಿವಲಿಂಗ ಸ್ವಾಮಿಗಳು ಅಧಿಕಾರದಲ್ಲಿದ್ದಾರೆ. ಹೊಸಮಠದಲ್ಲಿದ್ದ ಶ್ರೀ ಶಿವಮೂರ್ತಿ ಸ್ವಾಮಿಗಳು ಚಿತ್ರದುರ್ಗ ಬೃಹನ್ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ಮಠವು ಗುರುಗಳಿಲ್ಲದೆ ಖಾಲಿ ಉಳಿದಿದೆ. ಆದರೂ ಧಾರ್ಮಿಕ ಚಟುವಟಿಕೆಗಳು ಯಥಾಸ್ಥಿತಿಯಲ್ಲಿ ನಡೆದುಕೊಂಡು ಬರುತ್ತಿವೆ. ಸಿಂದಗಿ ಮಠದಲ್ಲಿ ಶ್ರೀ ಶಾಂತವೀರ ಪಟ್ಟದ ದೇವರ ನಂತರ ಗದಗಿನ ತೋಂಟದಾರ್ಯ ಮಠದ ಗುರುಗಳು ಈ ಮಠದ ಆಡಳಿತವನ್ನು ನೋಡಿಕೊಂಡು ಬರುತ್ತಿದ್ದಾರೆ. ಶ್ರೀ ಗುರುಪಾದ ದೇವರ ಮಠದಲ್ಲಿ ಗುರುಗಳು ಇದ್ದು ಧಾರ್ಮಿಕ ಕಾರ್ಯಗಳು ನಡೆಯುತ್ತಿವೆ. ನಡುವಿನ ಮಠದಲ್ಲಿ ಜಗದ್ಗುರು ಶ್ರೀರೇಣುಕ ಮಂದಿರವನ್ನು ನಿರ್ಮಾಣ ಮಾಡಿ ಧಾರ್ಮಿಕ ಕಾರ್ಯಗಳನ್ನು ನೆಡೆಸಲಾಗುತ್ತಿದೆ. ಉಳಿದಂತೆ ಬಹುತೇಕ ಎಲ್ಲಾ ಮಠಗಳು ಕೇವಲ ಗದ್ದುಗೆ ಪೂಜೆಗೆ ಮಾತ್ರ ಸೀಮಿತವಾಗಿವೆ. ಇನ್ನೂ ಕೆಲವು ಮಠಗಳು ಪೂರ್ಣ ಅಸ್ತಿತ್ವವನ್ನು ಕಳೆದುಕೊಂಡಿವೆ.

ಹುಕ್ಕೇರಿಮಠ: ಹಾವೇರಿ ನಗರದ ಹೃದಯಭಾಗದಲ್ಲಿರುವ ಹುಕ್ಕೇರಿ ಮಠವು ಕಳೆದ ಮುನ್ನೂರು ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟಿದೆ. ಶ್ರೀ ರಾಚೋಟಿ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟ ಹುಕ್ಕೇರಿ ವಿರಕ್ತಮಠವು ಕುಮಾರಸಮಯದ ಸಂಪ್ರದಾಯದಲ್ಲಿ ಬೆಳೆದು ಬಂದಿದೆ. ಶಿವಪೂಜಾನಿಷ್ಠರಾದ ಶ್ರೀ ರಾಚೋಟಿ ಸ್ವಾಮಿಗಳು ಲೋಕ ಸಂಚಾರವನ್ನು ಮಾಡುತ್ತಾ ಈ ಪಟ್ಟಣಕ್ಕೆ ಬಂದು ನೆಲೆಸಿ ಭಕ್ತರ ಅಪೇಕ್ಷೆಯಂತೆ ಮಠವನ್ನು ಸ್ಥಾಪಿಸಿ ವೀರಶೈವ ಧರ್ಮವನ್ನು ಜನ ಮನಕ್ಕೆ ಬಿತ್ತುವಲ್ಲಿ ಮುಂದಾದರು.

ಶ್ರೀ ರಾಚೋಟಿ ಸ್ವಾಮಿಗಳು ಬರುವ ವೇಳೆಗಾಗಲೇ ಹಾವೇರಿ ನಗರವು ಶೈಕ್ಷಣಿಕ, ಧಾರ್ಮಿಕ ಹಾಗೂ ಆರ್ಥಿಕವಾಗಿ ಶ್ರೀಮಂತವಾಗಿತ್ತು. ಇಲ್ಲಿನ ಭಕ್ತರಿಗೆ ವೀರಶೈವ ಧರ್ಮದ ಮೂಲ ಸಿದ್ಧಾಂತವನ್ನು ಬೋಧಿಸಿದ್ದಲ್ಲದೆ, ಶಿವಾನುಭವಗೋಷ್ಠಿಗಳನ್ನು ನಡೆಸಿ ವೀರಶೈವ ಧರ್ಮವು ಈ ನೆಲದಲ್ಲಿ ಗಟ್ಟಿಗೊಳ್ಳಲು ಕಾರಣಕರ್ತರಾದರು.

ಪರಂಪರೆ:

೧. ಶ್ರೀ ಮ.ನಿ.ಪ್ರ. ರಾಚೋಟಿಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಬಸವಲಿಂಗಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಸಿದ್ಧಲಿಂಗಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಶಿವಬಸವಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಶಿವಲಿಂಗಸ್ವಾಮಿಗಳು (ಈಗಿನವರು)

ಈ ರೀತಿ ಹುಕ್ಕೇರಿ ಮಠದ ಪರಂಪರೆಯು ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ರಾಚೋಟಿ ಸ್ವಾಮಿಗಳು ಮಠವನ್ನು ಸ್ಥಾಪಿಸಿ, ಅಭಿವೃದ್ಧಿಪಡಿಸಿ ಲಿಂಗೈಕ್ಯರಾದ ಮೇಲೆ ಹುಕ್ಕೇರಿ ಮಠದಲ್ಲಿ ಸಮಾಧಿಮಾಡಿ ಗದ್ದುಗೆಯನ್ನು ನಿರ್ಮಿಸಲಾಗಿದೆ. ಶ್ರೀ ರಾಚೋಟಿ ಸ್ವಾಮಿಗಳ ನಂತರ ಅನೇಕ ಮಠಾಧೀಶ್ವರರು ಅಧಿಕಾರವನ್ನು ನಡೆಸಿದ್ದರೆಂದು ಹೇಳಲಾದರೂ ಈ ಬಗ್ಗೆ ಯಾವುದೇ ಆಧಾರಗಳು ಲಭ್ಯವಾಗಿಲ್ಲ. ಶ್ರೀ ಬಸವಲಿಂಗ ಸ್ವಾಮಿಗಳು ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡು ಧಾರ್ಮಿಕ ಕಾರ್ಯಗಳನ್ನು ನಡೆಸಿದ್ದಾರೆ. ಇವರ ನಂತರ ಅಧಿಕಾರವನ್ನು ವಹಿಸಿಕೊಂಡ ಶ್ರೀ ಸಿದ್ಧಲಿಂಗ ಸ್ವಾಮಿಗಳೂ ಸಹ ಧಾರ್ಮಿಕ ಕಾರ್ಯಗಳನ್ನು ನಡೆಸಿ ಮಠವನ್ನು ಹೆಚ್ಚು ಪ್ರಬುದ್ಧಮಾನಕ್ಕೆ ತಂದಿದ್ದಾರೆ. ಇವರಿಬ್ಬರ ಗದ್ದುಗೆಗಳು ಹುಕ್ಕೇರಿ ಮಠದ ಶಾಖಾಮಠವಾಗಿರುವ ಹಾವೇರಿ ನಗರದ ನಾಗೇಂದ್ರನ ಮಟ್ಟಿಯಲ್ಲಿರುವ ಹೊಸಕೇರಿ ಮಠದಲ್ಲಿವೆ.

ಶ್ರೀ ಶಿವಯೋಗಿಗಳು: ಹುಕ್ಕೇರಿಮಠದ ಅಭಿವೃದ್ಧಿಯ ರೂವಾರಿಯಾಗಿ ಶ್ರೀ ಶಿವಬಸವ ಶಿವಯೋಗಿಗಳು ಮಠದ ಅಧಿಕಾರವನ್ನು ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ವಹಿಸಿಕೊಂಡಿರುತ್ತಾರೆ. ಇವರು ಪೂಜಾನಿಷ್ಠರಾಗಿದ್ದು ಹಾನಗಲ್ಲು ಶ್ರೀಕುಮಾರ ಸ್ವಾಮಿಗಳಿಗೆ ಬಲಗೈಯಂತಿದ್ದರು. ಶಿವಯೋಗಮಂದಿರದ ಪ್ರಥಮ ಅಧ್ಯಕ್ಷರಾಗಿ ನಿಡಗುಂದಿ ಕೊಪ್ಪದಲ್ಲಿ ಶಿವಯೋಗ ಮಂದಿರದ ಶಾಖೆಯನ್ನು ಪ್ರಾರಂಭಿಸಿ ಅಭಿವೃದ್ಧಿಪಡಿಸಿದರು. ಹಾನಗಲ್ಲು ಶ್ರೀ ಕುಮಾರ ಸ್ವಾಮಿಗಳ ಜತೆಯಲ್ಲಿದ್ದು ಸಮಷ್ಟಿ ಸಮಾಜದ ಅಭಿವೃದ್ಧಿಗೆ ಕಂಕಣತೊಟ್ಟು ದುಡಿದ ಶ್ರೀ ಶಿವಬಸವ ಶಿವಯೋಗಿಗಳು, ಹುಕ್ಕೇರಿ ಮಠವು ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಹೆಚ್ಚು ಪ್ರಬುದ್ಧಮಾನಕ್ಕೆ ಬರಲು ಕಾರಣಕರ್ತರಾಗಿ ೧೯೪೭ರಲ್ಲಿ ಲಿಂಗೈಕ್ಯರಾಗಿದ್ದಾರೆ.

ಖಾಲಿ ಉಳಿದ ಮಠ: ಶ್ರೀ ಶಿವಬಸವ ಶಿವಯೋಗಿಗಳು, ವ್ಯಾಕರಣ ಶಾಸ್ತ್ರದಲ್ಲಿ ವಿದ್ವಾಂಸರಾದ ಶ್ರೀ ಬಸವದೇವರನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಳ್ಳಲು ಪ್ರಯತ್ನಿಸಿದರು. ಆದರೆ ಈ ಪ್ರಯತ್ನ ಫಲಿಸದೆ ಹೋಯಿತು. ಗುರುಗಳು ಲಿಂಗೈಕ್ಯರಾಗುವ ಸಮಯದಲ್ಲಿ ತಮ್ಮ ಜತೆಯಲ್ಲಿದ್ದ ಸಿಂದಗಿಯ ಶ್ರೀ ಶಾಂತವೀರ ಪಟ್ಟಾಧ್ಯಕ್ಷರಿಗೆ ಉತ್ತರಾಧಿಕಾರಿಗಳನ್ನು ನೇಮಿಸುವ ಹೊಣೆಯನ್ನು ಒಪ್ಪಿಸಿ ಲಿಂಗೈಕ್ಯರಾದರು.

ಉತ್ತರಾಧಿಕಾರಿಗಳ ಆಯ್ಕೆಯ ಪ್ರಯತ್ನ: ಸಿಂದಗಿ ಶ್ರೀ ಶಾಂತವೀರ ಪಟ್ಟದದೇವರು ಕೆಲವು ದಿನ ಈ ಮಠದಲ್ಲಿ ನೆಲೆಸಿ ನಂತರ ಬೇರೆಡೆಗೆ ಹೋದಮೇಲೆ ಮಠವು ಖಾಲಿ ಉಳಿಯುವಂತಾಯಿತು. ಈ ಸಂದರ್ಭದಲ್ಲಿ ಹಾವೇರಿಯ ಭಕ್ತರೆ ಮಠವನ್ನು ಮುನ್ನಡೆಸಿಕೊಂಡು ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದರು. ಆದರೆ ಗುರುಗಳಿಲ್ಲದೆ ಖಾಲಿ ಉಳಿದಿದ್ದ ಮಠಕ್ಕೆ ಗುರುಗಳನ್ನು ನೇಮಿಸಬೇಕೆಂಬ ಹಂಬಲದಿಂದ ಶಿವಯೋಗ ಮಂದಿರದ ಮುಖ್ಯಸ್ಥರು ಹಾನಗಲ್ಲು ವಿರಕ್ತಮಠದ ಶ್ರೀಸದಾಶಿವ ಸ್ವಾಮಿಗಳಲ್ಲಿಗೆ ಬಂದು ಉತ್ತರಾಧಿಕಾರಿಗಳನ್ನು ನೇಮಿಸಬೇಕೆಂದು ಬಿನ್ನವಿಸಿಕೊಂಡರು. ಆಗ ಹಿರಿಯ ಗುರುಗಳಾದ ಶ್ರೀ ಶಿವಬಸವ ಶಿವಯೋಗಿಗಳು ಅನುಗ್ರಹ ನೀಡಿದ್ದ ಶ್ರೀ ಶಿವಯೋಗಿ ದೇಶಿಕರ ಹೆಸರನ್ನು ಸೂಚಿಸಿದರು. ಇದೇ ಅಭಿಪ್ರಾಯವನ್ನು ಸಿಂದಗಿ ಶ್ರೀ ಶಾಂತವೀರ ಪಟ್ಟಾಧ್ಯಕ್ಷರು ನೀಡಿದರು. ಆದರೆ ಹಾವೇರಿಯ ಕೆಲವು ಭಕ್ತರು ಸಮ್ಮತಿಸದೆ ಹೋದ ಕಾರಣ ಈ ಆಯ್ಕೆಯ ವಿಚಾರ ಸ್ಥಗಿತಗೊಂಡಿತು. ಕೆಲವಾರು ದಿನಗಳ ನಂತರ ಸಮರ್ಥ ಉತ್ತರಾಧಿಕಾರಿಗಳ

ಆಯ್ಕೆಯ ಕಾರ್ಯ ಮತ್ತೆ ನಡೆಯಿತು. ಆದರೆ ಸಮರ್ಥರು ಸಿಗದೆ ಹೋದ ಕಾರಣ ಶ್ರೀ ಸದಾಶಿವ ಶಿವಯೋಗಿಗಳು ಮತ್ತು ಶ್ರೀ ಶಾಂತವೀರ ಪಟ್ಟಾಧ್ಯಕ್ಷರು ಸೂಚಿಸಿದ ಶ್ರೀ ಶಿವಯೋಗಿ ದೇಶಿಕರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಳ್ಳಲು ಮುಂದಾದರು.

ಶ್ರೀ ಶಿವಯೋಗಿ ದೇಶಿಕರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಳ್ಳಬೇಕೆಂದು ಅಪೇಕ್ಷೆ ಪಟ್ಟು ಹಾವೇರಿಯ ಭಕ್ತರು ಶಿವಯೋಗ ಮಂದಿರಕ್ಕೆ ಬಂದಾಗ ಶ್ರೀ ಶಿವಯೋಗಿ ದೇಶಿಕರು ಬಿಜಾಪುರ ಜಿಲ್ಲೆ ಮಾದನ ಹಿಪ್ಪರಗಿಯ ಶಿವಲಿಂಗೇಶ್ವರ ವಿರಕ್ತ ಮಠಕ್ಕೆ ಪಟ್ಟಾಧಿಕಾರಿಗಳಾಗಿ ನೇಮಕಗೊಂಡಿದ್ದರು. ಆದರೆ ಹಾವೇರಿಯ ಭಕ್ತರು ಪಟ್ಟು ಬಿಡದೆ ಶ್ರೀ ಶಿವಯೋಗಿ ದೇಶಿಕರೆ ಹುಕ್ಕೇರಿ ಮಠಕ್ಕೆ ಉತ್ತರಾಧಿಕಾರಿಗಳಾಗಬೇಕೆಂದು ಒತ್ತಾಯಿಸಿದಾಗ, ಶ್ರೀ ಸದಾಶಿವ ಸ್ವಾಮಿಗಳು ಹಾವೇರಿಯ ಭಕ್ತರು ಮತ್ತು ಸಿಂದಗಿ ಶ್ರೀ ಶಾಂತವೀರ ಪಟ್ಟದ ದೇವರನ್ನು ಮಾದನಹಿಪ್ಪರಗಿಗೆ ಕಳುಹಿಸಿಕೊಟ್ಟರು. ಈ ವಿಚಾರ ತಿಳಿದ ಮಾದನಹಿಪ್ಪರಗಿಯ ಭಕ್ತರು ಮಠದಲ್ಲಿ ಜಮಾಯಿಸಿದರು. ಹಾವೇರಿಯ ಭಕ್ತರಿಗೆ ಇಲ್ಲಿನ ವಾತಾವರಣವನ್ನು ನೋಡಿ ಭಯವಾಯಿತಾದರೂ ಶ್ರೀಶಿವಲಿಂಗ ಸ್ವಾಮಿಗಳನ್ನು ಹಾವೇರಿಯ ಹುಕ್ಕೇರಿ ಮಠಕ್ಕೆ ಕಳುಹಿಸಿಕೊಡಲು ಬಿನ್ನವಿಸಿಕೊಂಡರು. ಈ ವಿಚಾರವಾಗಿ ಎರಡೂ ಮಠಗಳ ಭಕ್ತರಲ್ಲಿ ವಾಗ್ವಾದ ನಡೆಯಿತು. ಮಠದಲ್ಲಿ ನಡೆಯುತ್ತಿದ್ದ ಈ ಸನ್ನಿವೇಶವನ್ನು ನೋಡಿದ ಶ್ರೀ ಶಿವಲಿಂಗ ಸ್ವಾಮಿಗಳಿಗೆ ಆಶ್ಚರ್ಯ ಉಂಟಾಯಿತು. ಸಿಂದಗಿ ಪಟ್ಟಾಧ್ಯಕ್ಷರು ಈ ಸಂದರ್ಭವನ್ನು ಜಾಣ್ಮೆಯಿಂದ ಬಳಸಿಕೊಂಡು, ಹಾವೇರಿಯ ಹುಕ್ಕೇರಿ ಮಠದ ಕರ್ತೃಗುರುಗಳಾದ ಶ್ರೀ ರಾಚೋಟಿ ಸ್ವಾಮಿಗಳು ಮಾದನಹಿಪ್ಪರಗಿಯವರು. ಇಲ್ಲಿನ ಮಠಕ್ಕೆ ಅಧಿಕಾರವಾದ ಗುರುಗಳು ನಂತರ ಹುಕ್ಕೇರಿ ಮಠಕ್ಕೂ ಅಧಿಕಾರವನ್ನು ಹೊಂದಿದ್ದರು. ಇಂತಹ ಸಂಪ್ರದಾಯ ವಿರುವ ಕಾರಣಕ್ಕೆ ಇಲ್ಲಿ ಪಟ್ಟಾಧ್ಯಕ್ಷರಾಗಿರುವ ಶ್ರೀ ಶಿವಲಿಂಗ ಸ್ವಾಮಿಗಳು ಹಾವೇರಿಯ ಹುಕ್ಕೇರಿ ಮಠಕ್ಕೂ ಪಟ್ಟಾಧ್ಯಕ್ಷರಾದರೆ ಒಳ್ಳೆಯದು ಎಂದು ಹೇಳಿದರು. ಪಟ್ಟಾಧ್ಯಕ್ಷರ ಮಾತಿಗೆ ಎರಡೂ ಕಡೆಯ ಭಕ್ತರು ಮರುಮಾತನಾಡದೆ ಮೌನವಾದರು.

ಗುರುಗಳ ಒಪ್ಪಿಗೆ: ಈ ಪರಿಸ್ಥಿತಿಯನ್ನು ಅವಲೋಕಿಸಿದ ಶ್ರೀ ಶಿವಲಿಂಗ ಸ್ವಾಮಿಗಳು 'ಶ್ರೀ ಶಿವಬಸವ ಸ್ವಾಮಿಗಳ ಅಪೇಕ್ಷೆಯನ್ನು ಪೂರೈಸಲು ನಾವು ಹಾವೇರಿಯ ಹುಕ್ಕೇರಿ ಮಠದ ಅಧಿಕಾರವನ್ನು ವಹಿಸಿಕೊಳ್ಳಬೇಕಾಗಿದೆ. ಹುಕ್ಕೇರಿ ಮಠದ ಆಡಳಿತವನ್ನು ವಹಿಸಿಕೊಂಡಾಕ್ಷಣ ಮಾದನ ಹಿಪ್ಪರಗಿಯ ಸಂಬಂಧವನ್ನು ಕಳಚಿಕೊಳ್ಳುವುದು ಎಂದರ್ಥವಲ್ಲ, ಎರಡೂ ಕಡೆ ಸಮಾನ ದೃಷ್ಟಿಯನ್ನಿಟ್ಟುಕೊಂಡು ಆಡಳಿತವನ್ನು ನಡೆಸಿಕೊಂಡು ಹೋಗುತ್ತೇವೆ' ಎಂದು ಭಕ್ತರಿಗೆ ಭರವಸೆಯನ್ನು ನೀಡಿ ಹುಕ್ಕೇರಿ ಮಠದ ಅಧಿಕಾರವನ್ನು ವಹಿಸಿಕೊಳ್ಳಲು ಒಪ್ಪಿಗೆ ಕೊಟ್ಟರು. ಗುರುಗಳು ಪಟ್ಟಾಧಿಕಾರಿಗಳಾಗಿ ಬರಲು ಒಪ್ಪಿಗೆ ಕೊಟ್ಟ ಮೇಲೆ ಹಾವೇರಿಯ ಭಕ್ತರು ಹಾವೇರಿಗೆ ಬಂದು ೧೯೭೮ ರ ಜುಲೈ ಒಂದರಂದು ಶ್ರೀ ಶಿವಲಿಂಗ ಸ್ವಾಮಿಗಳಿಗೆ ಪಟ್ಟಾಧಿಕಾರ ನಡೆಸಲು ನಿಶ್ಚಯಿಸಿದರು.

ನೆರವೇರಿದ ಸಂಕಲ್ಪ: ಶಿರಾಳಕೊಪ್ಪದ ಮಂಚಿಕೊಪ್ಪ ಹಿರೇಮಠದ ಶ್ರೀ ಬಸವಣ್ಣಯ್ಯ ಮತ್ತು ಶ್ರೀಮತಿ ಫಕೀರಮ್ಮನವರ ಪುತ್ರರಾಗಿ ೧೯೭೮ ರ ಮಾರ್ಚ್ ತಿಂಗಳಲ್ಲಿ ಜನಿಸಿದ ಶ್ರೀ ಸೋಮಶೇಖರ ದೇವರು, ಹಾವೇರಿಯ ಹುಕ್ಕೇರಿ ಮಠದ ಶ್ರೀಶಿವ ಬಸವ ಸ್ವಾಮಿಗಳು ಮತ್ತು ಹಾನಗಲ್ಲು ಶ್ರೀ ಕುಮಾರ ಸ್ವಾಮಿಗಳ ಕೃಪಾಶೀರ್ವಾದದಿಂದ ಬೆಳೆದು ಶ್ರೀ ಶಿವಯೋಗಿ ದೇಶಿಕರಾಗಿ ಅಭಿದಾನ ಪಡೆದು, ಶಿವಯೋಗ ಮಂದಿರದಲ್ಲಿ ಅಭ್ಯಾಸಮಾಡಿ ನಂತರ ಮಾದನ ಹಿಪ್ಪರಗಿ ಮಠದ ಪಟ್ಟಾಧಿಕಾರ ವನ್ನು ವಹಿಸಿಕೊಳ್ಳುವಾಗ ಶ್ರೀ ಶಿವಲಿಂಗ ಸ್ವಾಮಿಗಳೆಂದು ಅಭಿದಾನ ಪಡೆದುಕೊಂಡಿದ್ದರು. ತಮ್ಮ ಬದುಕಿನಲ್ಲಿ ಅನೇಕ ಸಾಧನೆಗಳನ್ನು ಕಂಡು ಧಾರ್ಮಿಕ ಕ್ಷೇತ್ರದಲ್ಲಿ ಸಮರ್ಥವಾಗಿ ಬೆಳೆದಿದ್ದ ಶ್ರೀ ಶಿವಲಿಂಗ ಸ್ವಾಮಿಗಳು ಹಿರಿಯ ಗುರುಗಳ ಹಾರೈಕೆಯಂತೆ ಹಾವೇರಿಯ ಹುಕ್ಕೇರಿ ಮಠಕ್ಕೆ ಗುರುಗಳಾಗಿದ್ದು ಒಂದು ಯೋಗಾಯೋಗವೇ ಸರಿ. ಹಿರಿಯ ಗುರುಗಳಾದ ಶ್ರೀ ಶಿವಬಸವ ಸ್ವಾಮಿಗಳು ೧೯೭೩ರಲ್ಲಿ ಮಾಡಿದ ಸಂಕಲ್ಪ ಇಂದು ನೆರವೇರಿತು.

ಅಭಿವೃದ್ಧಿ ಕಾರ್ಯಗಳು: ಶ್ರೀ ಶಿವಲಿಂಗ ಸ್ವಾಮಿಗಳು ಹಾವೇರಿಯ ಹುಕ್ಕೇರಿ ಮಠದ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಮಠದಲ್ಲಿ ಹೇಳಿಕೊಳ್ಳುವಂತಹ ಯಾವುದೇ ಆಸ್ತಿ ಇರಲಿಲ್ಲ. ಅಲ್ಲದೆ ಸರಿಯಾದ ಕಟ್ಟಡವು ಇಲ್ಲದಾಗಿತ್ತು. ಯಾವುದೇ

ಆದಾಯದ ಮೂಲ ಇಲ್ಲದ ಈ ಮಠವನ್ನು ಅಭಿವೃದ್ಧಿಪಡಿಸುವುದಾದರೂ ಹೇಗೆ ಎಂಬ ಚಿಂತೆಯಲ್ಲಿ ಇರುವಾಗಲೇ ಭಕ್ತರು ಕೊಟ್ಟುದನ್ನು ಸ್ವೀಕರಿಸಿ ಮಠವನ್ನು ಬೆಳೆಸತೊಡಗಿದರು. ತಾವುಕೊಟ್ಟ ಹಣ ವ್ಯರ್ಥವಾಗುವುದಿಲ್ಲ ಎಂದು ಅರಿತ ಮೇಲೆ ಭಕ್ತರಿಂದ ಯಥೇಚ್ಛವಾದ ಹಣ ಮಠದ ಕಡೆ ಹರಿದು ಬರತೊಡಗಿತು. ಮಠದ ಕಟ್ಟಡಗಳ ಆಮೂಲಾಗ್ರ ಅಭಿವೃದ್ಧಿಗೆ ಯೋಜನೆಯನ್ನು ತಯಾರಿಸಿಕೊಂಡ ಭಕ್ತರು ಪ್ರಥಮವಾಗಿ ಶ್ರೀ ಶಿವಬಸವ ಸ್ವಾಮಿಗಳ ಗದ್ದುಗೆ ಹಾಗೂ ಕರ್ತೃಗದ್ದುಗೆಯು ಸೇರಿದಂತೆ ಮಠದ ಆವರಣದಲ್ಲಿರುವ ಎಲ್ಲಾ ಗದ್ದುಗೆಗಳ ನವೀಕರಣ ಮತ್ತು ಮಂಟಪಗಳ ಪುನರ್‌ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಂಡು ಮುಗಿಸಿದರು. ಮಠದ ಕಟ್ಟಡದ ಮಹಾದ್ವಾರ ಮಂಟಪ ಇನ್ನೂ ಅನೇಕ ಕಟ್ಟಡಗಳನ್ನು ನಿರ್ಮಿಸಿ ಮಠದ ಸಮುಚ್ಚಯವನ್ನು ಅಭಿವೃದ್ಧಿಪಡಿಸಿದರು. ಅಲ್ಲದೆ ೧೯೭೯ರಲ್ಲಿ ಭವ್ಯವಾದ ಕಲ್ಯಾಣ ಮಂಟಪವನ್ನು ನಿರ್ಮಿಸಲಾಯಿತು.

ಶೈಕ್ಷಣಿಕ ಸೇವೆ: ಧಾರ್ಮಿಕ ಕಾರ್ಯದಿಂದ ಹೆಚ್ಚು ಹೆಸರು ಪಡೆದ ಹುಕ್ಕೇರಿ ಮಠದ ಹಿರಿಯ ಗುರುಗಳಾದ ಶ್ರೀ ಶಿವಬಸವ ಸ್ವಾಮಿಗಳ ಕನಸನ್ನು ನನಸಾಗಿಸಲು ಶ್ರೀ ಶಿವಲಿಂಗ ಸ್ವಾಮಿಗಳು ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಲು ನಿರ್ಧರಿಸಿದರು. ಈ ನಿರ್ಧಾರದ ಫಲವಾಗಿ ೧೯೭೩ರ ಜೂನ್ ಮೂವತ್ತರಂದು'ಹಾವೇರಿ ತಾಲ್ಲೂಕು ಎಜುಕೇಶನ್ ಸೊಸೈಟಿ'ಯನ್ನು ಹುಟ್ಟು ಹಾಕಿದರು. ಇದರ ಪ್ರಥಮ ಪ್ರಯತ್ನವಾಗಿ ಶ್ರೀ ಶಿವಬಸವೇಶ್ವರ ಪ್ರೌಢಶಾಲೆಯನ್ನು ೧೯೭೩ರ ಜುಲೈ ಇಪ್ಪತ್ತರಂದು ವಿಧ್ಯುಕ್ತವಾಗಿ ಪ್ರಾರಂಭಿಸಿದರು. ಪ್ರಾಢಶಾಲೆಗೆ ಹೊಂದಿಕೊಂಡಂತೆ ೧೯೭೪-೧೯೭೫ ನೆಯ ಸಾಲಿನಲ್ಲಿ ಪ್ರಾಥಮಿಕ ಶಾಲೆ, ೧೯೮೪ರಲ್ಲಿ ಶಿಶುವಿಹಾರ, ೧೯೮೬ರಲ್ಲಿ ಶಾರದ ಸಂಗಿತ ವಿದ್ಯಾಲಯವನ್ನು ಸ್ಥಾಪಿಸಲಾಗಿದೆ. ೧೯೯೨ರಲ್ಲಿ ಶ್ರೀಶಿವಲಿಂಗೇಶ್ವರ ಮಹಿಳಾ ಮಹಾವಿದ್ಯಾಲ, ೧೯೫೬ರಲ್ಲಿ ಶ್ರೀ ಕುಮಾರೇಶ್ವರವೇದ ಹಾಗೂ ಜ್ಯೋತಿಷ್ಯ ಪಾಠಶಾಲೆಯನ್ನು ಪ್ರಾರಂಭಿಸಲಾಯಿತು. ೧೯೪೬ರಲ್ಲಿ ಪ್ರಾರಂಭಗೊಂಡ ಪ್ರಸಾದ ನಿಲಯವು ಇಂದಿಗೂ ವ್ಯವಸ್ಥಿತವಾಗಿ ನಡೆದು ಕೊಂಡು ಬರುತ್ತಿದೆ. ಪ್ರಸಾದನಿಲಯದ ಅನುಕೂಲವನ್ನು ಪಡೆದುಕೊಂಡಿದ್ದ ಹಳೆಯ ವಿದ್ಯಾರ್ಥಿಗಳೆಲ್ಲ ಸೇರಿ ೧೯೯೭ ರ ಮಾರ್ಚ್ ಒಂದು, ಎರಡು ಮತ್ತು ಮೂರರಂದು ಗುರುಗಳ ಪಟ್ಟಾಧಿಕಾರ ಮತ್ತು ಪ್ರಸಾದನಿಲಯದ ಸುವರ್ಣ ಮಹೋತ್ಸವವನ್ನು ಅದ್ದೂರಿಯಾಗಿ ಆಚರಿಸಿದರು.

ಸಾಹಿತ್ಯಸೇವೆ: ಶ್ರೀ ಶಿವಲಿಂಗ ಸ್ವಾಮಿಗಳು ಗದ್ಯ ಮತ್ತು ಪದ್ಯ ಸೇರಿದಂತೆ ಒಟ್ಟು ಹದಿನೆಂಟು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇವುಗಳಲ್ಲಿ ಪ್ರಮುಖವಾದುವುಗಳೆಂದರೆ ಶಿವಲಿಂಗ ಕಂಡ ಪ್ರಭುಲಿಂಗ, ಸೂಕ್ತಿ ಸುಧಾ, ಸುಭಾಷಿತ ಶ್ಲೋಕಗಳು. ಗುರುಗಳು ಸ್ವತಃ ಬರಹಗಾರರಾಗಿದ್ದು ಸಾಹಿತ್ಯ ಸಂವರ್ಧನೆಗೆ ಹೆಚ್ಚು ಒತ್ತು ಕೊಟ್ಟು ಮಠದ ವತಿಯಿಂದ ಜಿ.ಎಂ.ಉಮಾಪತಿ ಶಾಸ್ತ್ರಿಗಳ ಸಂಪಾದಕತ್ವದಲ್ಲಿ 'ಸುಕುಮಾರ' ಎಂಬ ಮಾಸ ಪತ್ರಿಕೆಯನ್ನು ೧೯೫೦ ರಲ್ಲಿ ಪ್ರಾರಂಭಿಸಿದರು. ಅಲ್ಲದೆ ಬೇರೆ ಪ್ರಕಟಣೆಗಳಿಗೆ ನೆರವು ನೀಡಿ ಸಾಹಿತ್ಯದ ಅಭಿವೃದ್ಧಿಗೆ ನೆರವಾಗಿದ್ದಾರೆ.

ಹಿರಿತನ ಕಂಡ ಗುರುಗಳು: ತುಂಬು ಜೀವನ ನಡೆಸಿದ ಶ್ರೀ ಶಿವಲಿಂಗ ಸ್ವಾಮಿಗಳು ಪಟ್ಟಾಧಿಕಾರದ ಐವತ್ತು ವರ್ಷದ ಸುವರ್ಣ ಮಹೋತ್ಸವ, ಎಂಬತ್ತನೆಯ ವರ್ಷಗಳ ವರ್ಧಂತಿ ಮಹೋತ್ಸವವನ್ನು ೧೯೯೭ ರ ಮಾರ್ಚ್‌ನಲ್ಲಿ ಭಕ್ತರೆಲ್ಲ ಸೇರಿ ಅದ್ದೂರಿಯಾಗಿ ಆಚರಿಸಿದರು. ಶ್ರೀ ಶಿವಲಿಂಗ ಸ್ವಾಮಿಗಳು ೨೦೦೦ದ ಮಾರ್ಚ್ ಮೂರರಂದು ಎಂಬತ್ತೆರಡು ವರ್ಷಗಳನ್ನು ಪೂರೈಸಿದ ಸವಿ ನೆನಪಿಗಾಗಿ ಸಹಸ್ರ ಚಂದ್ರ ದರ್ಶನ ಸಮಾರಂಭವನ್ನು ಏರ್ಪಡಿಸಿ ಗುರುಗಳಿಗೆ ಗೌರವವನ್ನು ಅರ್ಪಿಸಿದ್ದಾರೆ. ಗುರುಗಳು ತಮ್ಮ ಪೂರ್ಣ ಬದುಕನ್ನು ಸಾರ್ಥಕ ಪಡಿಸಿಕೊಂಡು ಸಮಾಜದ ಅಭಿವೃದ್ಧಿಗೆ ಮುಡುಪಾಗಿಟ್ಟು ಕರ್ಪೂರ ಮತ್ತು ಗಂಧದಂತೆ ತಮ್ಮನ್ನು ತಾವೇ ಸವೆಸಿಕೊಂಡಿದ್ದಾರೆ. ಗುರುಗಳ ಆಶೀರ್ವಾದ ಮತ್ತು ಋಣದಿಂದ ಬದುಕಿದ ಸಮಾಜವು ಈ ಹಿರಿಯ ಚೇತನಕ್ಕೆ ಭಕ್ತಿಪೂರ್ವಕ ಅಭಿನಂದನೆಯನ್ನು ಸಲ್ಲಿಸಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಶಿವಲಿಂಗ ಸ್ವಾಮಿಗಳು, ಶ್ರೀ ಹುಕ್ಕೇರಿ ಮಠ, ಹಾವೇರಿ, ಹಾವೇರಿ ಜಿಲ್ಲೆ.
ಆಧಾರ: 'ಶಿವಲಿಂಗ ಸಂಪದ' - ಡಾ. ಭೋಜರಾಜ ಪಾಟೀಲ್

ಸಿಂದಗಿಮಠ: ಹಾವೇರಿಯ ಶಿವಬಸವ ನಗರದಲ್ಲಿರುವ ಸಿಂದಗಿ ಮಠವನ್ನು ೧೯೫೬ರಲ್ಲಿ ಸಿಂದಗಿ ಶ್ರೀ ಶಾಂತವೀರ ಪಟ್ಟಾಧ್ಯಕ್ಷರು ಸ್ಥಾಪನೆ ಮಾಡಿದ್ದಾರೆ. ಸಿಂದಗಿಯ ಪಟ್ಟದ ಮಠದ ಮಠಾಧೀಶರಾದ ಶ್ರೀ ಶಾಂತವೀರ ಪಟ್ಟದೇವರು

ಶಿವಯೋಗ ಮಂದಿರದಲ್ಲಿ ಅಧ್ಯಯನ ಮಾಡುತ್ತಾ, ತಮ್ಮ ಪೂರ್ವದ ಸಿಂದಗಿ ಮಠದಿಂದ ದೂರವಾಗಿಯೇ ಉಳಿದು ಗುರು-ವಿರಕ್ತ ಎಂಬ ಭೇದವಿಲ್ಲದೆ ಸಮಷ್ಟಿ ಸಮಾಜದ ಅಭ್ಯುದಯದ ಕನಸು ಕಂಡವರಾಗಿದ್ದರು. ಶಿವಯೋಗ ಮಂದಿರದಲ್ಲಿದ್ದಾಗ ಹಾನಗಲ್ಲು ಶ್ರೀ ಕುಮಾರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಶಿವಯೋಗ ಮಂದಿರವನ್ನು ತೊರೆದು ಹಾವೇರಿಗೆ ಬಂದು, ಶ್ರೀ ಶಿವಬಸವ ಸ್ವಾಮಿಗಳ ಸೇವೆಯನ್ನು ಮಾಡತೊಡಗುತ್ತಾರೆ. ಶ್ರೀ ಶಿವಬಸವ ಸ್ವಾಮಿಗಳ ಪರಮಾಪ್ತ ಶಿಷ್ಯರಾಗಿ ಬೆಳೆದ ಶ್ರೀ ಶಾಂತವೀರ ಪಟ್ಟದದೇವರು ಹಾವೇರಿಯಲ್ಲಿ ನೆಲೆಸ ತೊಡಗಿದ ಮೇಲೆ, ಶ್ರೀ ಶಿವಬಸವ ಸ್ವಾಮಿಗಳು ತಮ್ಮ ಶಾಖಾಮಠವಾಗಿದ್ದ ಹಾನಗಲ್ಲು ತಾಲ್ಲೂಕಿನ ನರೇಗಲ್ಲು ಗ್ರಾಮದಲ್ಲಿ ಸ್ಥಾಪನೆಯಾಗಿದ್ದ ಮಠವನ್ನು ಶ್ರೀ ಶಾಂತವೀರ ಪಟ್ಟದ ದೇವರಿಗೆ ಬಿಟ್ಟುಕೊಡುತ್ತಾರೆ. ಆದರೆ ಶ್ರೀ ಶಾಂತವೀರ ಪಟ್ಟದದೇವರು ಹೆಚ್ಚಾಗಿ ಇಲ್ಲಿ ನೆಲೆಸದೆ ಹಾವೇರಿಯ ಹುಕ್ಕೇರಿ ಮಠದಲ್ಲಿ ಶ್ರೀ ಶಿವಬಸವ ಸ್ವಾಮಿಗಳ ಸೇವೆಯಲ್ಲಿ ನಿರತರಾಗಿತ್ತಾರೆ.

ಮಠ ಸ್ಥಾಪನೆ: ಹುಕ್ಕೇರಿಮಠದ ಶ್ರೀ ಶಿವಬಸವ ಸ್ವಾಮಿಗಳು ಲಿಂಗೈಕ್ಯರಾದ ನಂತರ ಶ್ರೀ ಶಾಂತವೀರ ಪಟ್ಟದದೇವರು ಕೆಲವು ದಿನಗಳ ಕಾಲ ಹುಕ್ಕೇರಿ ಮಠದಲ್ಲಿಯೆ ಇದ್ದು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿದ್ದರು. ಆದರೆ ಈ ಮಠದಲ್ಲಿ ನೆಲೆಸಲು ಇಚ್ಛೆ ಬರದೆ ೧೯೪೦ರ ಸುಮಾರಿನಲ್ಲಿ ಈಗ ಸಿಂದಗಿ ಮಠವು ಸ್ಥಾಪನೆಯಾಗಿರುವ ಈ ಜಾಗದಲ್ಲಿ ಒಂದು ಗುಡಿಸಲನ್ನು ನಿರ್ಮಿಸಿಕೊಂಡು ವಾಸಮಾಡತೊಡಗಿದರು. ಈ ವಿಚಾರವನ್ನು ತಿಳಿದ ಹಾವೇರಿಯ ಭಕ್ತರು ಇದೇ ಸ್ಥಳದಲ್ಲಿ ಗುರುಗಳಿಗಾಗಿ ಮಠವನ್ನು ಸ್ಥಾಪಿಸಿಕೊಡುತ್ತಾರೆ. ಗುರುಗಳು ಕ್ರಿಯಾಶೀಲ ಗುಣಗಳಿಂದ ಹಾಗೂ ಭಕ್ತರ ನೆರವಿನಿಂದ ಮಠವನ್ನು ಹೆಚ್ಚು ಅಭಿವೃದ್ಧಿಪಡಿಸಿ ಸಿಂದಗಿ ಮಠದ ವತಿಯಿಂದ ೧೯೫೭ರಲ್ಲಿ ಶ್ರೀ ಕುಮಾರೇಶ್ವರ ಧಾರ್ಮಿಕ ಪಾಠಶಾಲೆಯನ್ನು ಪ್ರಾರಂಭಿಸುತ್ತಾರೆ. ಅಂದು ಧಾರ್ಮಿಕ ವಿಚಾರಗಳಿಗಾಗಿ ಸ್ಥಾಪನೆಗೊಂಡ ಶಾಲೆ ಇಂದು ಸಿಂದಗಿ, ಗದಗ,ಬ್ಯಾಡಗಿ, ಶಿವಮೊಗ್ಗ, ನರೇಗಲ್ಲು, ಸಂಗೂರು, ಹೋತನಹಳ್ಳಿ ಹಾಗೂ ಇನ್ನೂ ಅನೇಕ ಕಡೆ ಒಟ್ಟು ಹನ್ನೆರಡು ಶಾಲೆಗಳನ್ನು ಪ್ರಾರಂಭಿಸಿ, ವರ್ಷಕ್ಕೆ ಮುನ್ನೂರಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಧಾರ್ಮಿಕ ಶಿಕ್ಷಣವನ್ನು ನೀಡುತ್ತಿದೆ.

ಬೆಳೆದ ಮಠಾಧೀಶ್ವರರು: ಸಿಂದಗಿ ಶ್ರೀ ಶಾಂತವೀರ ಪಟ್ಟದದೇವರ ಗರಡಿಯಲ್ಲಿ ಬೆಳೆದ ಸುಮಾರು ಐವತ್ತು ಜನ ಮಠಾಧೀಶ್ವರರು ವಿವಿಧ ಮಠಗಳಲ್ಲಿ ಅಧಿಕಾರವನ್ನು ನಡೆಸುತ್ತಿದ್ದಾರೆ. ಇವರಲ್ಲಿ ಪ್ರಮುಖರೆಂದರೆ ಗದಗಿನ ಶ್ರೀತೋಂಟದಾರ್ಯ ಸ್ವಾಮಿಗಳು ಒಬ್ಬರು. ಶ್ರೀ ತೋಂಟದಾರ್ಯ ಸ್ವಾಮಿಗಳು ನಾಲ್ಕನೆಯ ತರಗತಿಯಿಂದ ಸ್ನಾತಕೋತ್ತರ ಪದವಿಯನ್ನು ಮುಗಿಸುವ ತನಕ ಶ್ರೀ ಪಟ್ಟದ ದೇವರ ಆಶ್ರಯದಲ್ಲಿಯೇ ಬೆಳೆದರು. ಅಲ್ಲದೆ ಸಿಂದಗಿ ಮಠದ ಅಧಿಕಾರಿಗಳಾಗಿ ನೇಮಕಗೊಳ್ಳುವುದರಲ್ಲಿದ್ದರು. ಆದರೆ ಪರಿಸ್ಥಿತಿಯ ಒತ್ತಡಕ್ಕೆ ಮಣಿದು ಗದಗಿನ ತೋಂಟದಾರ್ಯಮಠಕ್ಕೆ ನೇಮಕಗೊಂಡರು. ತಾವೇ ಬೆಳೆಸಿದ ಮರಿದೇವರು ತಮ್ಮ ಮಠಕ್ಕೆ ದಕ್ಕಲಿಲ್ಲ ಎಂಬ ನೋವು ಇದ್ದರು ಅದನ್ನು ಮರೆತು ಗದುಗಿನ ಮಠಕ್ಕೆ ಶ್ರೀ ತೋಂಟದಾರ್ಯಸ್ವಾಮಿಗಳು ಅಧಿಕಾರವಹಿಸಿಕೊಳ್ಳುವ ದಿನ ಆಶೀರ್ವದಿಸಿ ಬಂದರು. ಇದಾದ ಕೆಲವೇ ದಿನಗಳ ನಂತರ ಶ್ರೀ ಶಾಂತವೀರ ಪಟ್ಟದದೇವರು ೧೯೮೦ರ ಫೆಬ್ರವರಿ ಹದಿನಾರರಂದು ಲಿಂಗೈಕ್ಯರಾದರು.

ಗದಗಿನ ಗುರುಗಳಉಸ್ತುವಾರಿ: ಶ್ರೀ ಶಾಂತವೀರ ಪಟ್ಟದ ದೇವರ ಸಹೋದರ ಸಂಬಂಧಿಯಾದ ಗದಗಿನ ಶ್ರೀ ತೋಂಟದಾರ್ಯ ಸ್ವಾಮಿಗಳು ಸಿಂದಗಿ ಮಠದ ಅಧಿಕಾರವನ್ನು ವಹಿಸಿಕೊಳ್ಳಲಾಗದಿದ್ದರೂ ಶ್ರೀ ಪಟ್ಟದ ದೇವರ ನಂತರ ಉಸ್ತುವಾರಿಯನ್ನು ವಹಿಸಿಕೊಂಡು ಮಠವನ್ನು ಅಭಿವೃದ್ಧಿಪಡಿಸುವಲ್ಲಿ ತೃಪ್ತಿಕಂಡಿದ್ದಾರೆ.

ಬೆಳೆದ ಮಠ: ಗದಗಿನ ಶ್ರೀ ತೋಂಟದಾರ್ಯರ ಉಸ್ತುವಾರಿಯಲ್ಲಿ ವಿವಿಧ ಕಡೆ ಸ್ಥಾಪಿಸಲ್ಪಟ್ಟಿರುವ ಪಾಠಶಾಲೆಗಳ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಿ ರುವುದಲ್ಲದೆ, ಹಾವೇರಿಯ ಸಿಂದಗಿ ಮಠದ ಸರ್ವಾಂಗೀಣ ಅಭಿವೃದ್ಧಿಗೆ ಯೋಜನಾಬದ್ಧತೆಯಿಂದ ಮಠದ ಸಮುಚ್ಛಯವನ್ನು ಅಭಿವೃದ್ಧಿಪಡಿಸಿದ್ದಾರೆ. ಮೊದಲ ಹಂತವಾಗಿ ಶ್ರೀ ಶಾಂತವೀರ ಪಟ್ಟದದೇವರ ಗದ್ದುಗೆಗೆ ಭವ್ಯ ಮಂಟಪವನ್ನು ನಿರ್ಮಿಸಲಾಗಿದೆ. ನಿತ್ಯ ದಾಸೋಹಕ್ಕಾಗಿ ನೂರಾರು ಜನರಿಗೆ ಅನುಕೂಲವಾಗುವಂತೆ ದಾಸೋಹ ಮಂದಿರವನ್ನು ನಿರ್ಮಿಸಲಾಗಿದೆ. ಗದಗಿನ ತೋಂಟದಾರ್ಯ ವಿದ್ಯಾಪೀಠದ ವತಿಯಿಂದ ಸಂಸ್ಕೃತ ಶಾಲೆ ಮತ್ತು ಚಿತ್ರಕಲಾ ಮಹಾವಿದ್ಯಾಲಯಕ್ಕೆ ಕಟ್ಟಡ, ಆಯುರ್ವೇದ ಕಾಲೇಜನ್ನು ಸ್ಥಾಪನೆಮಾಡಲಾಗಿದೆ.

ಧಾರ್ಮಿಕ ಕಾರ್ಯಗಳು: ನಿತ್ಯ ರುದ್ರಾಭಿಷೇಕ,ಅಷ್ಟೋತ್ತರ, ಮಹಾ ಮಂಗಳಾರತಿಯನ್ನು ನಡೆಸಲಾಗುತ್ತಿದೆ. ನಿತ್ಯ ಸಂಜೆ ಪುರಾಣವನ್ನು ಏರ್ಪಡಿಸಲಾಗುತ್ತಿದೆ. ಹೊರಗಿನಿಂದ ಬರುವ ಭಕ್ತರಿಗೆ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗಿದ್ದು ಪ್ರತಿದಿನ ಐವತ್ತರಿಂದ ನೂರು ಜನರು ಅನ್ನದಾಸೋಹದಲ್ಲಿ ಪಾಲ್ಗೊಳ್ಳುತ್ತಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಡಾ. ತೋಂಟದಾರ್ಯ ಸ್ವಾಮಿಗಳು, ಶ್ರೀ ಸಿಂದಗಿಮಠ, ಶಿವಬಸವ ನಗರ, ಹಾವೇರಿ.

ಹೊಸಮಠ: ಹಾವೇರಿ ನಗರದ ಹೃದಯ ಭಾಗದಲ್ಲಿರುವ ಹೊಸಮಠವು ಮುರುಘಾ ಮಠದ ಶಾಖಾಮಠವಾಗಿದ್ದು ತನ್ನ ಪರಂಪರೆಯ ಶ್ರೀಮಂತಿಕೆಯಿಂದ ಹೆಚ್ಚು ಪ್ರಚಾರವನ್ನು ಪಡೆದುಕೊಂಡಿದೆ. ಚಿತ್ರದುರ್ಗ ಮುರುಘಾ ಮಠದ ಜಗದ್ಗುರುಗಳಾಗಿ ಲಿಂಗೈಕ್ಯರಾದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಈ ಮಠದ ಅಧಿಕಾರವನ್ನು ವಹಿಸಿಕೊಂಡಿದ್ದ ಸಂದರ್ಭದಲ್ಲಿ ಮಠವು ಹೆಚ್ಚು ಅಭಿವೃದ್ಧಿಯಾಗಿತ್ತು. ನಂತರ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ೧೯೬೫ರಲ್ಲಿ ಚಿತ್ರದುರ್ಗದ ಬೃಹನ್ಮಠಕ್ಕೆ ಅಧಿಕಾರ ಹೊಂದಿದ ಮೇಲೆ ಮಠವು ಮಠಾಧೀಶರಿಲ್ಲದೆ ಖಾಲಿ ಉಳಿಯಿತು.

ಕ್ರಿಯಾಶೀಲರ ಆಗಮನ: ನಂತರ ೧೯೮೪ರಲ್ಲಿ ಶ್ರೀ ಶಿವಮೂರ್ತಿ ಸ್ವಾಮಿಗಳು ನೇಮಕಗೊಂಡರು. ಇವರ ಕಾಲದಲ್ಲಿ ಮಠವು ಕ್ರಿಯಾತ್ಮಕ ಚಟುವಟಿಕೆಗಳ ಮೂಲಕ ಹೆಚ್ಚು ಪ್ರಚಾರಗೊಂಡು ಧಾರ್ಮಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ನಿರಂತರವಾಗಿ ನೆಡೆಯತೊಡಗಿದವು. ಪ್ರತಿ ತಿಂಗಳು ಎರಡನೆಯ ತಾರೀಖಿನಂದು ಶಿವಾನುಭವಗೋಷ್ಠಿಯನ್ನು ನೆಡೆಸಲಾಗುತ್ತಿದೆ. ಅಂದು ಸೇರುವ ನೂರಾರು ಭಕ್ತರಿಗೆ ಅನ್ನದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಶ್ರೀ ಶಿವಮೂರ್ತಿ ಸ್ವಾಮಿಗಳ ಕಾಲದಲ್ಲಿ ಮಠವು ಹೊಸಹೊಸ ಯೋಜನೆಗಳಿಂದ ಅಭಿವೃದ್ಧಿಗೊಳ್ಳುತ್ತಿರುವ ವೇಳೆಗೆ, ಚಿತ್ರದುರ್ಗದ ಬೃಹನ್ಮಠದ ಜಗದ್ಗುರುಗಳಾಗಿ ಅಧಿಕಾರ ಸ್ವೀಕರಿಸಿದ ನಂತರ ಮಠವು ಮತ್ತೊಮ್ಮೆ ಖಾಲಿ ಉಳಿದಿದೆ.

ಧಾರ್ಮಿಕ ಕೆಲಸ: ಹೊಸ ಮಠದಲ್ಲಿ ಗುರುಗಳು ಇಲ್ಲ ಎಂಬ ಕೊರತೆಯನ್ನು ಬಿಟ್ಟರೆ ಉಳಿದಂತೆ ನಡೆಯುವ ಎಲ್ಲಾಧಾರ್ಮಿಕ ಚಟುವಟಿಕೆಗಳೂ ಸಾಂಗವಾಗಿ ನಡೆಯುತ್ತಿವೆ. ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯ ಪೂಜೆ, ಶ್ರಾವಣಮಾಸದಲ್ಲಿ ವಿಶೇಷ ಪೂಜೆಯ ಜತೆಗೆ ಸಂಜೆ ನಿತ್ಯ ಪ್ರವಚನ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಹೊರಗಿನಿಂದ ಬರುವ ಭಕ್ತರಿಗೆ ನಿತ್ಯ ಅನ್ನದಾಸೋಹ ಮತ್ತು ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಮಠದ ಆವರಣದಲ್ಲಿ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದ್ದು ಬಡ ಮಕ್ಕಳಿಗೆ ಕಲಿಯಲು ಆಶ್ರಯವನ್ನು ಕಲ್ಪಿಸಲಾಗಿದೆ. ಈ ಎಲ್ಲಾ ಉಸ್ತುವಾರಿಯನ್ನು ನೋಡಿಕೊಳ್ಳಲು ಸ್ಥಳೀಯವಾಗಿ ಒಂದು ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಚಿತ್ರದುರ್ಗ ಬೃಹನ್ಮಠದ ವತಿಯಿಂದ ಆಡಳಿತ ಸಿಬ್ಬಂದಿಯನ್ನು ನೇಮಿಸಿ ಆಡಳಿತದ ಉಸ್ತುವಾರಿಯನ್ನು ನೋಡಿಕೊಳ್ಳಲು ವ್ಯವಸ್ಥೆ ಮಾಡಲಾಗಿದೆ. ಚಿತ್ರದುರ್ಗ ಬೃಹನ್ಮಠದ ಶ್ರೀಶಿವಮೂರ್ತಿ ಸ್ವಾಮಿಗಳು ತಿಂಗಳಿಗೊಮ್ಮೆ ಬಂದು ಮಠದ ಧಾರ್ಮಿಕ ಮತ್ತು ಅಭಿವೃದ್ಧಿ ಕಾರ್ಯವನ್ನು ಅವಲೋಕಿಸುತ್ತಾರೆ.

ವಿಳಾಸ: ಶ್ರೀ ಶಿವಮೂರ್ತಿ ಮುರುಘ ರಾಜೇಂದ್ರ ಶರಣರು ಶ್ರೀ ಹೊಸಮಠ, ಹಾವೇರಿ, ಹಾವೇರಿ ಜಿಲ್ಲೆ.

ಗುರುಪಾದದೇವರಮಠ: ಹಾವೇರಿ ನಗರದ ಮಧ್ಯಭಾಗದ ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ಶ್ರೀ ಗುರುಪಾದ ದೇವರಮಠವು ಶ್ರೀ ಶಾಂತವೀರ ಸ್ವಾಮಿಗಳ ಕಾಲದಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತದೆ. ಹಾವೇರಿ ತಾಲ್ಲೂಕಿನ ಕರ್ಜಿಗೆ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಗೌರಿಮಠದ ಶಾಖಾ ಮಠವಾಗಿರುವ ಶ್ರೀ ಗುರುಪಾದ ದೇವರ ಮಠವು ಪಂಚ ಪೀಠಗಳಲ್ಲಿ ಒಂದಾದ ಶ್ರೀರಂಭಾಪುರಿ ಪೀಠದ ಶಾಖಾಮಠವಾಗಿ ಬೆಳೆದಿದೆ. ಕರ್ಜಿಗೆ ಗ್ರಾಮದ ಗೌರಿಮಠದ ಶ್ರೀ ಶಾಂತವೀರ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿ ಇಲ್ಲಿಯೇ ಲಿಂಗೈಕ್ಯರಾಗಿದ್ದಾರೆ. ಇವರ ಗದ್ದುಗೆ ನಿರ್ಮಾಣವಾಗಿದೆ. ಈ ಗುರುಗಳ ನಂತರ ಗೌರಿಮಠದ ಮಠಾಧೀಶ್ವರರೇ ಈ ಮಠದ ಆಡಳಿತವನ್ನು ನೋಡಿಕೊಂಡು ಬರುತ್ತಿದ್ದಾರೆ.

ಪ್ರಸ್ತುತ ಶ್ರೀ ಶಿವಯೋಗಿ ಶಿವಾಚಾರ್ಯರು ಈ ಮಠದಲ್ಲಿ ನೆಲೆಸಿ ಮಠದ ಅಧಿಕಾರವನ್ನು ನೋಡಿಕೊಳ್ಳುತ್ತಿದ್ದಾರೆ.

ಶ್ರೀ ಶಿವಯೋಗಿ ಶಿವಾಚಾರ್ಯರು ಅಧಿಕಾರಕ್ಕೆ ಬರುವ ಮುನ್ನ ಮಠದ ಮಣ್ಣಿನ ಕಟ್ಟಡವು ಶಿಥಿಲಗೊಂಡಿತ್ತು. ಗುರುಗಳು ಅಧಿಕಾರ ವಹಿಸಿಕೊಂಡ ಮೇಲೆ ಮಠದ ಕಟ್ಟಡವನ್ನು ದುರಸ್ತಿಗೊಳಿಸಿದ್ದಲ್ಲದೆ ಮಠದ ಸುತ್ತಮುತ್ತಇದ್ದ ಆಸ್ತಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡು ಮಠದ ಅಭಿವೃದ್ದಿಗೆ ಶ್ರಮಿಸುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು, ಶ್ರೀ ಗುರುಪಾದದೇವರಮಠ, ಎಂ.ಜಿ.ರಸ್ತೆ, ಹಾವೇರಿ.

ಹಾವನೂರು

ಹಾವೇರಿ ತಾಲ್ಲೂಕಿನ ಹಾವನೂರು ಗ್ರಾಮವು ತಾಲ್ಲೂಕು ಕೇಂದ್ರದ ಪೂರ್ವಕ್ಕೆ ಮೂವತ್ತು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ದಳವಾಯಿಮಠವು ಅಸ್ತಿತ್ವದಲ್ಲಿದೆ.

ದಳವಾಯಿಮಠ: ಹಾವನೂರು ಗ್ರಾಮದ ಹೊರಭಾಗದಲ್ಲಿ ವಿರಕ್ತ ಸಂಪ್ರದಾಯದ ಮುರುಘಾ ಸಮಯದ ಶ್ರೀ ಗುರುಸಿದ್ಧೇಶ್ವರ ದಳವಾಯಿ ಮಠವು ಸ್ಥಾಪನೆಗೊಂಡಿದೆ. ಈ ಮಠದ ಸ್ಥಾಪನೆಯ ಕಾಲಮಾನದ ಬಗ್ಗೆ ನಿಖರವಾದ ಆಧಾರಗಳು ಲಭ್ಯವಿಲ್ಲವಾಗಿವೆ. ಕರ್ತೃಗುರುಗಳಾದ ಶ್ರೀ ಗುರುಸಿದ್ಧೇಶ್ವರ ಸ್ವಾಮಿಗಳು ಈ ಮಠವನ್ನು ಸ್ಥಾಪಿಸಿರಬಹುದೆಂದು ಹೇಳಲಾಗುತ್ತಿದೆ.

ಬೆಳೆದ ಮಠ: ಶ್ರೀ ಗುರುಸಿದ್ಧೇಶ್ವರಸ್ವಾಮಿಗಳ ನಂತರ ಮಠದ ಅಧಿಕಾರವನ್ನು ನಡೆಸಿದ ಗುರುಗಳ ಹೆಸರು ಲಭ್ಯವಿಲ್ಲ. ಆದರೆ ಈ ಮಠಕ್ಕೆ ಮೂರು ಜನ ಉತ್ತರಾಧಿಕಾರಿಗಳು ಅಧಿಕಾರವನ್ನು ನಡೆಸುವ ಆಸೆ ಹೊತ್ತು ಬಂದರಾದರೂ ಇಲ್ಲಿನ ವ್ಯವಸ್ಥೆಗೆ ಹೊಂದಿಕೊಳ್ಳದೆ ಹಿಂದಿರುಗಿದರು. ಮೂವತ್ತೈದು ವರ್ಷಗಳ ಹಿಂದೆ ಈಗಿನ ಶ್ರೀ ಸಿದ್ಧಲಿಂಗ ಸ್ವಾಮಿಗಳು ೧೯೬೭ ರ ಜೂನ್ ಇಪ್ಪತ್ತೆರಡರಂದು ಪಟ್ಟಾಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದ್ದಾರೆ. ಶ್ರೀ ಸಿದ್ಧಲಿಂಗ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಳ್ಳುವ ಮುನ್ನ ಮಠವು ಅನೇಕ ವರ್ಷಗಳ ಕಾಲ ಉತ್ತರಾಧಿಕಾರಿಗಳಿಲ್ಲದೆ ಹಾಳು ಬಿದ್ದಿತ್ತು. ಗುರುಗಳು ಅಧಿಕಾರವನ್ನು ವಹಿಸಿಕೊಂಡು ವಾಸ್ತವ್ಯಕ್ಕೆ ಕೊಠಡಿಯನ್ನು ನಿರ್ಮಿಸಿಕೊಂಡು ಮಠದ ಆಸ್ತಿಯನ್ನು ಅಭಿವೃದ್ಧಿಪಡಿಸಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಸಿದ್ಧಲಿಂಗ ಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ಭಕ್ತರನ್ನು ಸಂಘಟಿಸಿದ್ದಲ್ಲದೆ ಧಾರ್ಮಿಕ ಕಾರ್ಯಗಳು ನಿರಂತರವಾಗಿ ನಡೆಯುವಂತೆ ವ್ಯವಸ್ಥೆಗೊಳಿಸಿದರು. ಕರ್ತೃಗುರುಗಳ ಗದ್ದುಗೆಗೆ ಕಲ್ಲಿನ ಕಟ್ಟಡವನ್ನು ನಿರ್ಮಿಸಿ ಮಠದ ಸಮುಚ್ಚಯಕ್ಕೆ ಹೊಸ ಕಳೆಯನ್ನು ತಂದುಕೊಟ್ಟರು. ಹಾಳುಬಿದ್ದಿದ್ದ ಮಠ ಇವರ ಕಾಲದಲ್ಲಿ ಅಭಿವೃದ್ಧಿಗೊಂಡಿದೆ. ಮಠದ ಸುತ್ತಮುತ್ತ ತೆಂಗು ಮತ್ತು ವಿವಿಧ ಜಾತಿಯ ಹೂವಿನ ಗಿಡಗಳನ್ನು ಬೆಳೆಸಿದ್ದಾರೆ.

ಧಾರ್ಮಿಕ ಕೆಲಸ: ಮಠದ ಕರ್ತೃಗದ್ದುಗೆಗೆ ನಿತ್ಯ ಪೂಜೆ, ಶ್ರಾವಣ, ಕಾರ್ತೀಕಮಾಸದಲ್ಲಿ ರುದ್ರಾಭಿಷೇಕ, ಅಮಾವಾಸ್ಯೆಯಲ್ಲಿ ವಿಶೇಷ ಪೂಜೆ ಮತ್ತು ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಹಿರಿಯ ಗುರುಗಳ ಆರಾಧನೆಯನ್ನು ವರ್ಷಕ್ಕೊಮ್ಮೆ ಆಚರಿಸಲಾಗುತ್ತಿದೆ. ಶ್ರೀ ಸಿದ್ಧಲಿಂಗೇಶ್ವರ ಭಜನಾ ಮಂಡಳಿಯನ್ನು ಸ್ಥಾಪಿಸಿಕೊಂಡು ನಿತ್ಯ ಭಜನೆಯ ಮೂಲಕ ಶರಣ ತತ್ವಗಳನ್ನು ಪ್ರಚಾರ ಪಡಿಸುವ ಕಾರ್ಯವನ್ನು ವ್ಯವಸ್ಥಿತವಾಗಿ ಮಾಡಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಸಿದ್ಧಲಿಂಗ ಸ್ವಾಮಿಗಳು, ಶ್ರೀ ಗುರುಸಿದ್ಧೇಶ್ವರ ದಳವಾಯಿ ಮಠ, ಹಾವನೂರು, ಹಾವೇರಿ ತಾಲ್ಲೂಕು.

ಹೊಸರಿತ್ತಿ

ಹಾವೇರಿ ತಾಲ್ಲೂಕಿನ ಹೊಸರಿತ್ತಿಯು ತಾಲ್ಲೂಕು ಕೇಂದ್ರದ ಪೂರ್ವಭಾಗಕ್ಕೆ ಇಪ್ಪತ್ತನಾಲ್ಕು ಕಿ. ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಗುದ್ದಲೀಶ್ವರಸ್ವಾಮಿ ಮಠವು ಅಸ್ತಿತ್ವದಲ್ಲಿದೆ.

ಗುದ್ದಲೀಶ್ವರಸ್ವಾಮಿಮಠ: ಹೊಸರಿತ್ತಿಯಲ್ಲಿ ವಿರಕ್ತ ಸಂಪ್ರದಾಯದ ಚೀಲಾಳ ಸಮಯದ ಪುತ್ರವರ್ಗದ ಪರಂಪರೆಯ ಶ್ರೀ ಗುದ್ದಲೀಶ್ವರಸ್ವಾಮಿ ಮಠವಿದೆ. ಹತ್ತೊಂಬತ್ತನೆಯ ಶತಮಾನದ ಆರಂಭದಲ್ಲಿ (೧೮೦೪) ಪ್ರಾರಂಭಗೊಂಡಿದ್ದು ಈ ಜಿಲ್ಲೆಯ ಪ್ರಭಾವಿ ಮಠಗಳಲ್ಲಿ ಒಂದಾಗಿ ಬೆಳೆದಿದೆ.

ಮಠ ಸ್ಥಾಪನೆ: ಹಾವೇರಿ ಜಿಲ್ಲೆಯ ಇಚ್ಚಂಗಿ ಗ್ರಾಮದ ಚರಂತಿ ಮಠದ ಶ್ರೀ ಲಿಂಗಯ್ಯ ಮತ್ತು ಶ್ರೀಮತಿ ಬಸಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಶಿವಲಿಂಗಯ್ಯನವರು, ಬಡತನದಿಂದ ದನಕಾಯುವ ಕಾಯಕವನ್ನು ಮಾಡಿ ಬಾಲ್ಯಾವಸ್ಥೆಯಲ್ಲಿಯೇ ಆಧ್ಯಾತ್ಮ ವಿಚಾರಗಳನ್ನು ಬೆಳೆಸಿಕೊಂಡಿದ್ದರು. ತಮ್ಮ ತಾಯಿಗೆ ಹೇಳದೆ ಕಾಡಿನಿಂದ ಕಾಣೆಯಾಗುತ್ತಾರೆ. ಶ್ರೀ ಶಿವಲಿಂಗಯ್ಯನವರು ಸಂಚಾರ ಮಾಡುತ್ತಾ ತಮ್ಮ ತಾಯಿಯ ತವರೂರಾದ ಹಾನಗಲ್ಲು ತಾಲ್ಲೂಕಿನ ಕೊಪ್ಪಗ್ರಾಮಕ್ಕೆ ಬಂದು ತಮ್ಮ ಸೋದರಮಾವ ಏರ್ಪಡಿಸಿದ್ದ ಶಿವದೀಕ್ಷಾ ಕಾರ್ಯಕ್ರಮದಲ್ಲಿ ಶಿವದೀಕ್ಷೆಯನ್ನು ಪಡೆದುಕೊಳ್ಳುತ್ತಾರೆ.

ವಿರಕ್ತಬಾಲಕ: ಬಾಲಕ ಶಿವಲಿಂಗಯ್ಯ ಕಾಣೆಯಾದ ವಿಚಾರವನ್ನು ತಿಳಿದು ತಾಯಿ ಬಸಮ್ಮನವರು ಮಗನನ್ನು ಹುಡುಕಿಕೊಂಡು ತಮ್ಮ ತವರಿಗೆ ಬರುತ್ತಾರೆ. ಶಿವದೀಕ್ಷೆಯನ್ನು ಪಡೆದುಕೊಳ್ಳುವ ವಟುಗಳ ಸಾಲಿನಲ್ಲಿ ಮಡಿಯುಟ್ಟು ಕುಳಿತ ಮಗನನ್ನು ನೋಡಿ ಸಂತೋಷಗೊಳ್ಳುತ್ತಾರೆ. ದೀಕ್ಷಾ ಕಾರ್ಯಕ್ರಮ ಮುಗಿದ ನಂತರ ತಮ್ಮ ಮಗನಿಗೆ ವಿವಾಹವನ್ನು ಮಾಡಲು ನಿರ್ಧರಿಸಿ ಮಗನನ್ನು ಒತ್ತಾಯಿಸುತ್ತಾರೆ. ಇದಕ್ಕೆ ಕಿವಿಗೊಡದ ಬಾಲಕ ಶಿವಲಿಂಗಯ್ಯ ಈ ರಾತ್ರಿ ಇಲ್ಲಿಯೇ ಉಳಿದರೆ ಒತ್ತಾಯಪೂರಕವಾಗಿ ತಮ್ಮನ್ನು ಸಂಸಾರ ಬಂಧನಕ್ಕೆ ಸಿಲುಕಿಸುತ್ತಾರೆ ಎಂದರಿತು, ಎಲ್ಲರೂ ಮಲಗಿದ ಮೇಲೆ ಉಟ್ಟ ಬಟ್ಟೆಯಲ್ಲಿಯೇ ಸಂಚಾರಕ್ಕೆ ಹೊರಡುತ್ತಾರೆ. ಹನ್ನೆರಡು ವರ್ಷದ ಬಾಲಕ ಶಿವಲಿಂಗಯ್ಯನವರು ವಿರಕ್ತಿಯನ್ನು ತಾಳಿ ಉರುವಕೊಂಡದ ಶ್ರೀ ಕರಿಬಸವ ಸ್ವಾಮಿಗಳ ಆಶ್ರಯಕ್ಕೆ ಬರುತ್ತಾರೆ. ಬಾಲಕನಲ್ಲಿದ್ದ ಆಧ್ಯಾತ್ಮದ ಹಸಿವನ್ನು ಅರಿತ ಶ್ರೀಕರಿಬಸವ ಸ್ವಾಮಿಗಳು ಶಿವಲಿಂಗಯ್ಯನವರ ಹುಟ್ಟು ಹೆಸರನ್ನು ತೆಗೆದು 'ಶ್ರೀ ರಾಘವಾಂಕ'ನೆಂದು ಅಭಿದಾನ ಮಾಡಿ ತಮ್ಮ ಆಪ್ತ ಶಿಷ್ಯನನ್ನಾಗಿ ಮಾಡಿಕೊಳ್ಳುತ್ತಾರೆ.

ಮಠ ತೊರೆದ ವಿರಕ್ತ: ಶ್ರೀ ರಾಘವಾಂಕರು ಬಾಲ್ಯಾವಸ್ಥೆಯಿಂದ ಪ್ರೌಢಾವಸ್ಥೆಗೆ ಬಂದಂತೆಯೇ ತಮ್ಮ ಆಧ್ಯಾತ್ಮ ವಿಚಾರಗಳಲ್ಲಿಯೂ ಸಹ ಪ್ರೌಢತೆಯನ್ನು ಸಾಧಿಸಿ ಶ್ರೀ ಕರಿಬಸವ ಸ್ವಾಮಿಗಳ ಉತ್ತರಾಧಿಕಾರಿಗಳಾಗಿ ನೇಮಕಗೊಳ್ಳುತ್ತಾರೆ. ಉರುವಕೊಂಡ ಮಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡು ಒಂದೆಡೆ ನೆಲೆಸಲು ಇಚ್ಚಿಸದ ಶ್ರೀ ರಾಘವಾಂಕರು ಉರುವಕೊಂಡ ಮಠವನ್ನು ತೊರೆದು ಗಂಗಸಮುದ್ರಕ್ಕೆ ಬರುತ್ತಾರೆ. ಇಲ್ಲಿನ ಗುರುಗಳಲ್ಲಿ ಆಶ್ರಯವನ್ನು ಪಡೆದು ವೀರಶೈವಧರ್ಮದ ಆಳ ಅರಿವಿನ ಬಗ್ಗೆ ಚರ್ಚಿಸಿ ಈ ಕ್ಷೇತ್ರದಲ್ಲಿ ಕೆಲವು ದಿನ ನೆಲೆಗೊಳ್ಳುತ್ತಾರೆ. ಅಲ್ಲಿ ಆಧ್ಯಾತ್ಮದ ಹಸಿವನ್ನು ತೀರಿಸಿಕೊಂಡ ಶ್ರೀ ರಾಘವಾಂಕರು ಸರ್ವಸಂಗ ಪರಿತ್ಯಾಗಿಯಾಗಿ ಲೋಕಸಂಚಾರಕ್ಕೆಂದು ಹೊರಡುತ್ತಾರೆ. ಹಳ್ಳಿಯಲ್ಲಿ ಒಂದು ರಾತ್ರಿ ಪಟ್ಟಣದಲ್ಲಿ ಪಂಚರಾತ್ರಿ ನೆಲೆಸಿ, ವೀರಶೈವ ಧರ್ಮದ ಬಗ್ಗೆ ಉಪದೇಶವನ್ನು ನೀಡಿ ಜನರಲ್ಲಿ ಜಾಗೃತಿಯನ್ನುಂಟು ಮಾಡಿ ಬಕ್ಕಪ್ಪ (ಹೆಸರಿಲ್ಲದ) ಸ್ವಾಮಿ ಎಂದು ಕರೆಸಿಕೊಳ್ಳುತ್ತಾ, ಲೋಕಸಂಚಾರವನ್ನು ಮಾಡುತ್ತಾ ನೂರಾಒಂದು ಗುದ್ದಲಿಗಳನ್ನು ಹಿಡಿದು ನೆಲ ಕಡಿಯುವ ಒಕ್ಕಲು ಕ್ಷೇತ್ರದ ಅನ್ವೇಷಣೆ ಮಾಡುತ್ತಾ ಬರುತ್ತಾರೆ.

ಗುದ್ದಲಿಯನ್ನು ಕೇಳಿದ ಗುರುಗಳು: ಚಿಂಚೋಳಿ ಗ್ರಾಮದ ಶಾಂತವೀರೇಗೌಡರ ಹೊಲದಲ್ಲಿ ನೂರು ಜನ ಕೂಲಿಗಳೊಂದಿಗೆ ಶಾಂತವೀರೇಗೌಡರ ಹಿರಿಯ ಮಗ ಗುದ್ದಲಿಯನ್ನು ಹಿಡಿದು ಹೊಲದಲ್ಲಿ ಅಗೆತವನ್ನು ಮಾಡುತ್ತಿರುತ್ತಾರೆ. ಇದನ್ನು ನೋಡಿದ ಶ್ರೀ ಬಕ್ಕಪ್ಪ ಸ್ವಾಮಿಗಳು ರೈತರಲ್ಲಿಗೆ ಬರುತ್ತಾರೆ. ವಿರಕ್ತರು ಬಂದಿದ್ದನ್ನು ಗಮನಿಸಿದ ಶಾಂತವೀರೇಗೌಡನ ಹಿರಿಯ ಮಗ ತನ್ನ ಕೆಲಸವನ್ನು ನಿಲ್ಲಿಸಿ ವಿರಕ್ತರಲ್ಲಿ ಬಂದು ಕುಶಲವನ್ನು ವಿಚಾರಿಸುತ್ತಾನೆ. ಅಷ್ಟರಲ್ಲಿ ರೊಟ್ಟಿ ಬುತ್ತಿಯು ಊರಿನಿಂದ ಬರುತ್ತದೆ. ಆಗ ಗುರುಗಳನ್ನು ಉದ್ದೇಶಿಸಿ ಶಾಂತವೀರೇಗೌಡರ ಮಗನು 'ನಾವೆಲ್ಲಾ ವೀರಶೈವರೆ, ತಾವು ಪ್ರಯಾಣದಿಂದ ಬಳಲಿದ್ದೀರಿ, ಪಕ್ಕದಲ್ಲಿ ಹರಿಯುತ್ತಿರುವ ಹಳ್ಳದಲ್ಲಿ ಸ್ನಾನವನ್ನು ಮುಗಿಸಿ ಪೂಜಾ ಕಾರ್ಯಗಳನ್ನು ಮುಗಿಸಿಕೊಂಡು ಬಂದರೆ ತಮಗೆ ಮೊದಲು ಪ್ರಸಾದವನ್ನು ಬಡಿಸಿ ನಂತರ ನಾವು ಉಣಬಯಸುತ್ತೇವೆ'ಎಂದು ವಿನಂತಿಸಿಕೊಳ್ಳುತ್ತಾನೆ. ಇದಕ್ಕೊಪ್ಪಿದ ಗುರುಗಳು ಪೂಜಾ ಪ್ರಸಾದಾದಿ ಕಾರ್ಯಗಳನ್ನು ಮುಗಿಸಿ ಗುದ್ದಲಿಯನ್ನು ಕಾಣಿಕೆಯಾಗಿ ಕೇಳುತ್ತಾರೆ. ಆಗ ಗುದ್ದಲಿಯನ್ನು ಕೊಡಲು ಒಪ್ಪದ ಶಾಂತವೀರೇಗೌಡನ ಮಗನು ತನ್ನ ಹಿರಿಯರನ್ನು ಕೇಳಿ ಪಡೆದುಕೊಳ್ಳಬಹುದೆಂದು ಹೇಳುತ್ತಾನೆ. ಆಗ ಗುರುಗಳು ನೇರವಾಗಿ ಶಾಂತವೀರೇಗೌಡನ ಮನೆಗೆ ಬಂದು ಹೊಲದಲ್ಲಿ ನಡೆದ ಘಟನೆಗಳನ್ನು ವಿವರಿಸಿ ಗುದ್ದಲಿಯನ್ನು ಕೊಡಬೇಕೆಂದು ಕೇಳುತ್ತಾರೆ. ಆಗ ಶಾಂತವೀರೇಗೌಡನು ಕೆಲಸ ಮಾಡುವ ಗುದ್ದಲಿಯನ್ನು ನಾವು ಕೊಡಲಾರೆವು. ತಮಗೆ

ಗುದ್ದಲಿಯೇ ಬೇಕು ಎಂದಾದರೆ ಅದಕ್ಕೆ ತಗಲುವ ವೆಚ್ಚವನ್ನು ಕೊಡುತ್ತೇವೆ ತಾವು ಬೇರೆ ಎಲ್ಲಿಯಾದರೂ ಖರೀದಿಸಿಕೊಳ್ಳಬಹುದೆಂದು ಹೇಳುತ್ತಾರೆ. ಆಗ ಗುರುಗಳು ತಮ್ಮ ಹಿರಿಯ ಮಗನು ಕೆಲಸಕ್ಕೆ ಉಪಯೋಗಿಸುವ ಗುದ್ದಲಿಯೇ ಬೇಕು ಎಂದು ಹಠ ಹಿಡಿಯುತ್ತಾರೆ. ಆಗ ನೆರೆದಿದ್ದ ಭಕ್ತರಾದಿಯಾಗಿ ಗುರುಗಳಾದವರು ಈ ರೀತಿ ಹಠ ಮಾಡಬಾರದು. ಭಕ್ತರು ಕೊಟ್ಟಿದ್ದನ್ನು ಸ್ವೀಕರಿಸಿ ಮುಂದೆ ಹೋಗಬೇಕೆಂದು ಹೇಳುತ್ತಾರೆ. ಇದಕ್ಕೆ ಮರು ಮಾತನಾಡದೆ ಹೊರಟ ಶ್ರೀ ಬಕ್ಕಪ್ಪ ಸ್ವಾಮಿಗಳು ಗ್ರಾಮದ ದೇವಾಲಯದಲ್ಲಿ ಅನುಷ್ಠಾನಕ್ಕೆ ಕುಳಿತುಕೊಳ್ಳುತ್ತಾರೆ.

ಮರುದಿನ ಎಂದಿನಂತೆಯೇ ಶಾಂತವೀರೇಗೌಡರ ಹಿರಿಯ ಮಗನು ನೂರು ಜನ ಆಳುಗಳೊಂದಿಗೆ ಹೊಲಕ್ಕೆ ಬಂದು ಅಗೆಯಲು ಪ್ರಾರಂಭ ಮಾಡುತ್ತಾನೆ. ಶಾಂತವೀರೇಗೌಡರ ಹಿರಿಯ ಮಗ ಗುದ್ದಲಿಯನ್ನು ಹಿಡಿದು ಕೈ ಎತ್ತಿದರೆ ಎತ್ತಿದಕ್ಕೆ ಕೆಳಗೆ ಇಳಿಯಲಾರದೆ ಹೋಯಿತು. ಗೊಂಬೆಯಂತೆ ಹಾಗೆಯೇ ನಿಂತುಕೊಂಡನು. ಇದನ್ನು ನೋಡಿದ ಇತರರು ಈ ಆಶ್ಚರ್ಯ ಘಟನೆಯನ್ನು ಶಾಂತವೀರೇ ಗೌಡರಿಗೆ ತಿಳಿಸಿದರು. ಈ ಕೌತುಕವನ್ನು ನೋಡಲು ಜನ ತಂಡೋಪತಂಡವಾಗಿ ಧಾವಿಸಿದರು. ಗುರುಗಳು ಗುದ್ದಲಿಯನ್ನು ಕೇಳಿದರೂ ಕೊಡಲು ಒಪ್ಪದಿದ್ದ ಕಾರಣ ಈ ಘಟನೆ ಸಂಭವಿಸಿದೆ ಎಂದು ಅರಿತು, ಗುರುಗಳು ಅನುಷ್ಠಾನಕ್ಕೆ ಕುಳಿತ ಜಾಗಕ್ಕೆ ಬಂದು ತಮ್ಮಿಂದಾದ ಅಪರಾಧವನ್ನು ಮನ್ನಿಸಬೇಕೆಂದು ಕೇಳಿಕೊಂಡು ಗುದ್ದಲಿಯನ್ನು ಕೊಡಲು ಒಪ್ಪಿದರು. ಇದಾದ ನಂತರ ಎತ್ತಿದ ಕೈ ಕೆಳಗಿಳಿಯುತ್ತದೆ.

ಗುದ್ದಲಿ ನೀಡಿದ ಭಕ್ತರು: ಶ್ರೀ ಬಕ್ಕಪ್ಪ ಸ್ವಾಮಿಗಳು ಶಾಂತವೀರೇಗೌಡರ ಮನೆಯಲ್ಲಿ ಪೂಜಾಕಾರ್ಯಗಳನ್ನು ಮುಗಿಸಿ ಹಿರಿಯ ಮಗ ಬಳಸುತ್ತಿದ್ದ ಗುದ್ದಲಿಯನ್ನು ಸ್ವೀಕರಿಸಿ ಹೆಗಲ ಮೇಲೆ ಹಾಕಿಕೊಂಡು ಹೊರಡುತ್ತಾರೆ. ಅಂದಿನಿಂದ ಗುದ್ದಲೇಶ್ವರ ಸ್ವಾಮಿಗಳೆಂದು ಹೆಸರು ಪಡೆದುಕೊಳ್ಳುತ್ತಾರೆ.

ಗುದ್ದಲಿಯನ್ನು ಸ್ವೀಕರಿಸಿ ಶ್ರೀ ಗುದ್ದಲೇಶ್ವರ ಸ್ವಾಮಿಗಳು ಲೋಕ ಸಂಚಾರವನ್ನು ಕೈಗೊಂಡು ತಮ್ಮ ಹುಟ್ಟೂರಾದ ಇಚ್ಚಂಗಿಗೆ ಬಂದು ತಮ್ಮ ತಾಯಿ ಬಸಮ್ಮನ ದರ್ಶನವನ್ನು ಪಡೆಯುತ್ತಾರೆ. ತನ್ನ ವಂಶದ ಕುಡಿ ಚಿಗುರದಾಯಿತೆಂಬ ಕೊರತೆಯಿಂದ ನೋವನ್ನು ಅನುಭವಿಸಿದ ತಾಯಿಗೆ 'ನಾನು ಎರಡು ಮಕ್ಕಳನ್ನು ನಿನ್ನ ಮಡಿಲಿಗೆ ಹಾಕುತ್ತೇನೆ. ಅವುಗಳನ್ನು ಬೆಳೆಸಿ ಇಚ್ಚಂಗಿ ಚರಂತಿಮಠದ ವಂಶೋದ್ಧಾರವನ್ನು ಮಾಡು' ಎಂದು ಹೇಳಿ ಚನ್ನೂರು ಗ್ರಾಮಕ್ಕೆ ಬರುತ್ತಾರೆ. ಗುರುಸ್ಥಲದ ಕಲ್ಲಯ್ಯನವರ ಮನೆಯಲ್ಲಿ ಪೂಜೆಯನ್ನು ಮುಗಿಸಿದ ಗುರುಗಳು ವಿಶ್ರಾಂತಿಯನ್ನು ಪಡೆಯುತ್ತಿರುವ ಸಂದರ್ಭದಲ್ಲಿ ಹೊಸರಿತ್ತಿಯ ಶಿವಪ್ಪಯ್ಯ ಎಂಬ ಸೇವಕನನ್ನು ಗುರುಗಳಿಗೆ ಒಪ್ಪಿಸುತ್ತಾರೆ. ಶಿವಪ್ಪಯ್ಯನು ಗುರುಗಳ ಸೇವೆಯನ್ನು ಮಾಡಿಕೊಂಡು ಗುರುಗಳ ಪ್ರೀತಿಗೆ ಒಳಗಾಗಿದ್ದನು. ಈ ಸಂದರ್ಭದಲ್ಲಿಯೇ ಗೌರಿಮನೆ ಶಿವಬಸಪ್ಪ ಎಂಬುವವರು ಚನ್ನೂರು ಗ್ರಾಮದಲ್ಲಿ ಎರಡುಎಕರೆ ಭೂಮಿಯನ್ನು ದಾನವಾಗಿ ನೀಡುತ್ತಾನೆ. ಗುರುಗಳು ಈ ಜಾಗದಲ್ಲಿ ಭಕ್ತರ ನೆರವು ಪಡೆದು ಮಠವನ್ನು ಸ್ಥಾಪಿಸುತ್ತಾರೆ. ತಮ್ಮ ಸೇವೆಯಲ್ಲಿದ್ದ ಹೊಸರಿತ್ತಿಯ ಶಿವಪ್ಪಯ್ಯನಿಗೆ ಗುಡಗೇರಿ ಹಿರೇಮಠದ ಕನ್ಯೆಯೊಂದಿಗೆ ವಿವಾಹ ಮಾಡಿಸಿ ಹೊಸರಿತ್ತಿಗೆ ಕಳುಹಿಸಿಕೊಡುತ್ತಾರೆ. ನಂತರ ಶ್ರೀ ಕೊಟ್ಟೂರು ಸ್ವಾಮಿಗಳಿಗೆ ಅಧಿಕಾರವನ್ನು ನೀಡಿ ಹೊಸರಿತ್ತಿಗೆ ಬಂದು ತಮಗಾಗಿ ಸಮಾಧಿಯನ್ನು ತೆಗೆಸಿ ಮಠವನ್ನು ಕಟ್ಟಿಸಿಕೊಳ್ಳುತ್ತಾರೆ. ಇದಾದ ಕೆಲವೇ ದಿನಗಳ ನಂತರ ಶ್ರೀ ಗುದ್ದಲೀಶ್ವರ ಸ್ವಾಮಿಗಳು ಚನ್ನೂರಿನಲ್ಲಿ ಲಿಂಗೈಕ್ಯರಾಗುತ್ತಾರೆ. ಈ ಸಂದರ್ಭದಲ್ಲಿ ಗುರುಗಳ ಸಮಾಧಿಯನ್ನು ಚನ್ನೂರಿನಲ್ಲಿ ಮಾಡಬೇಕೆಂದು ಕೆಲವು ಭಕ್ತರು ಪಟ್ಟು ಹಿಡಿದರಾದರೂ ಗುರುಗಳ ಅಪೇಕ್ಷೆಯಂತೆ ಹೊಸರಿತ್ತಿಯಲ್ಲಿ ಅವರೇ ನಿರ್ಮಿಸಿಕೊಂಡಿದ್ದ ಸ್ಥಳದಲ್ಲಿ ಸಮಾಧಿಯನ್ನು ಮಾಡಿ ಗದ್ದುಗೆಯನ್ನು ನಿರ್ಮಿಸಲಾಯಿತು.

ಪರಂಪರೆ:

೧. ಶ್ರೀ ಗುದ್ದಲೀಶ್ವರಸ್ವಾಮಿಗಳು
೨. ಶ್ರೀ ಕೊಟ್ಟೂರೇಶ್ವರಸ್ವಾಮಿಗಳು
೩. ಶ್ರೀ ಗುದ್ದಲಿಸ್ವಾಮಿಗಳು
೪. ಶ್ರೀ ಗದ್ದಿಗಪ್ಪಯ್ಯಸ್ವಾಮಿಗಳು
೫. ಶ್ರೀ ಗುದ್ದಲೀಶ್ವರಸ್ವಾಮಿಗಳು

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಕರ್ತೃಗುರುಗಳಾದ ಶ್ರೀ ಗುದ್ದಲೇಶ್ವರ ಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಕೊಟ್ಟೂರೇಶ್ವರ ಸ್ವಾಮಿಗಳು ಅನೇಕ ಪವಾಡಗಳನ್ನು ಮಾಡಿದರು. ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ ಧರ್ಮ ಪ್ರಚಾರವನ್ನು ಕೈಗೊಂಡರು. ಮಠವನ್ನು ಹೆಚ್ಚು ಬೆಳಕಿಗೆ ತಂದರು. ಇವರ ನಂತರ ಶ್ರೀ ಗುದ್ದಲಿ ಸ್ವಾಮಿಗಳು ಅಧಿಕಾರಕ್ಕೆ ಬರುತ್ತಾರೆ.

ಶ್ರೀ ಗುದ್ದಲಿ ಸ್ವಾಮಿಗಳು ಹೊಸರಿತ್ತಿಯ ಶ್ರೀ ಶಿವಪ್ಪಯ್ಯನವರ ಎರಡನೆಯ ಪುತ್ರರಾಗಿ ಜನಿಸಿ ಶ್ರೀಕೊಟ್ಟೂರು ಸ್ವಾಮಿಗಳ ಸೇವೆಯನ್ನು ಮಾಡಿ ಮೂರನೆಯ ಪಟ್ಟಾಧ್ಯಕ್ಷರಾಗಿ ಅಧಿಕಾರವನನ್ನು ವಹಿಸಿಕೊಳ್ಳುತ್ತಾರೆ. ಈ ವೇಳೆಗಾಗಲೇ ಚನ್ನೂರಿನ ಮಠದ ಆಡಳಿತ ಹೊಸರಿತ್ತಿಗೆ ವರ್ಗಾವಣೆಗೊಂಡಿತ್ತು. ಶ್ರೀ ಗುದ್ದಲಿ ಸ್ವಾಮಿಗಳು ಮಠದಲ್ಲಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ವ್ಯವಸ್ಥೆಯನ್ನು ಮಾಡಿ, ಭಕ್ತರ ಉದ್ಧಾರಕ್ಕಾಗಿ ಹಗಲಿರುಳು ಶ್ರಮಿಸಿ ಲೋಕಸಂಚಾರದಲ್ಲಿದ್ದಾಗ ತುಮಕೂರು ಜಿಲ್ಲೆ ತಿಪಟೂರಿನಲ್ಲಿ ಲಿಂಗೈಕ್ಯರಾಗಿದ್ದಾರೆ.

ಇವರ ನಂತರ ಶ್ರೀ ಗದ್ದಿಗಪ್ಪಯ್ಯ ಸ್ವಾಮಿಗಳು ಅಧಿಕಾರಕ್ಕೆ ಬರುತ್ತಾರೆ. ಶ್ರೀ ಗದ್ದಿಗಪ್ಪಯ್ಯ ಸ್ವಾಮಿಗಳು ಶ್ರೀ ರಾಚೋಟಪ್ಪ ಮತ್ತು ಶ್ರೀಮತಿ ಪಾರ್ವತಮ್ಮನವರ ಎರಡನೆಯ ಪುತ್ರರಾಗಿ ಜನಿಸಿ, ಬಾಲ್ಯದಲ್ಲಿಯೇ ಆಧ್ಯಾತ್ಮಿಕ ಗುಣಗಳನ್ನು ಬೆಳೆಸಿಕೊಂಡು ಸಂಸ್ಕಾರವಂತ ಶಿಶುವಾಗಿ ಬೆಳೆದರು. ಇವರ ಆಧ್ಯಾತ್ಮ ಸಂಸ್ಕಾರವನ್ನು ಗಮನಿಸಿ ಮಠದ ಉತ್ತರಾಧಿಕಾರಿಯನ್ನಾಗಿ ನೇಮಕಮಾಡಿಕೊಂಡು ಅಧಿಕಾರವನ್ನು ವಹಿಸಿಕೊಡಲಾಯಿತು. ಕ್ರಿಯಾಶೀಲ ಮೂರ್ತಿಯಾದ ಗುರುಗಳು ತಿಪಟೂರಿನಲ್ಲಿ ಲಿಂಗೈಕ್ಯರಾದ ಗುರುಗಳ ಗದ್ದುಗೆಗೆ ಮಂಟಪವನ್ನು ನಿರ್ಮಿಸಿದರು. ಇನ್ನೂ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡ ಗುರುಗಳು ಉತ್ತರಾಧಿಕಾರಿಗಳನ್ನಾಗಿ ತಮ್ಮ ಸಹೋದರ ಸಂಬಂಧಿಯಾದ ಶ್ರೀ ಗುದ್ದಲೀಶ್ವರರನ್ನು ನೇಮಕಮಾಡಿಕೊಳ್ಳುತ್ತಾರೆ.

ಶ್ರೀ ಶಿವಯ್ಯ ಮತ್ತು ಶ್ರೀಮತಿ ಕೊಟ್ಟೂರಮ್ಮನವರ ಪುತ್ರರಾಗಿ ೧೯೫೧ ರ ಅಕ್ಟೋಬರ್ ಇಪ್ಪತ್ತಾರರಂದು ಜನಿಸಿದ ಶ್ರೀ ಗುದ್ದಲೀಶ್ವರ ಸ್ವಾಮಿಗಳು, ಹೊಸರಿತ್ತಿಯಲ್ಲಿಯೇ ತಮ್ಮ ಶಿಕ್ಷಣವನ್ನು ಮುಗಿಸಿ ಸಂಸ್ಕೃತ ಮತ್ತು ವೇದವನ್ನು ಹಿರಿಯ ಗುರುಗಳಿಂದ ಕಲಿತು, ೧೯೬೭ರಲ್ಲಿ ಪರಂಪರಾಗತ ಮಠದ ಅಧಿಕಾರವನ್ನು ವಹಿಸಿಕೊಳ್ಳುತ್ತಾರೆ.

ಅಭಿವೃದ್ಧಿ ಕಾರ್ಯಗಳು: ಹಿರಿಯ ಗುರುಗಳ ಕಾಲದಲ್ಲಿ ಅಭಿವೃದ್ಧಿಯನ್ನು ಕಂಡಿದ್ದ ಮಠಕ್ಕೆ ಈಗಿನ ಶ್ರೀ ಗುದ್ದಲೀಶ್ವರ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠಕ್ಕೆ ವೈಭವಯುತವಾದ ಮಹಾದ್ವಾರದ ಮಂಟಪವನ್ನು ನಿರ್ಮಿಸಿ ಕಳಶಾರೋಹಣವನ್ನು ಮಾಡಿದ್ದಾರೆ. ಮಠದ ಆಸ್ತಿಯನ್ನು ಅಭಿವೃದ್ಧಿಪಡಿಸಿ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದ ಆವರಣದಲ್ಲಿರುವ ಮೂರು ಗದ್ದುಗೆಗಳಿಗೆ ನಿತ್ಯ ಪೂಜೆಯನ್ನು ಮಾಡಲಾಗುತ್ತಿದೆ. ಶ್ರಾವಣ ಮತ್ತು ಕಾರ್ತಿಕ ಮಾಸಗಳಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತದೆ. ವರ್ಷಕ್ಕೊಮ್ಮೆ ಹಿರಿಯ ಗುರುಗಳ ಸಂಸ್ಮರಣಾ ಕಾರ್ಯವನ್ನು ಹಮ್ಮಿಕೊಂಡು ಧಾರ್ಮಿಕ ಮತ್ತು ಸಾಹಿತ್ಯಿಕ ವಿಚಾರಗಳಲ್ಲಿ ಉಪನ್ಯಾಸ ಮತ್ತು ಉಪದೇಶವನ್ನು ಏರ್ಪಡಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಸೇರುವ ಸಾವಿರಾರು ಜನ ಭಕ್ತರಿಗೆ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗುವುದಲ್ಲದೆ, ಹೊರಗಿನಿಂದ ಬರುವ ಭಕ್ತರಿಗೆ ಮಠದಲ್ಲಿ ನಿತ್ಯ ಅನ್ನದಾಸೋಹದ ವ್ಯವಸ್ಥೆಯೂ ಇದೆ.

ಶೈಕ್ಷಣಿಕ ಸೇವೆ: ಮಠದ ಪರಂಪರೆಯ ಮೂರನೆಯ ಗುರುಗಳಾದ ಶ್ರೀ ಗುದ್ದಲಿ ಸ್ವಾಮಿಗಳು ತಮ್ಮ ಕಾಲದಲ್ಲಿ ಸಂಸ್ಕೃತ ಮತ್ತು ವೇದಾಧ್ಯಯನ ಶಾಲೆಯನ್ನು ಪ್ರಾರಂಭಿಸಿದ್ದರು. ಕಾಲಕ್ರಮೇಣ ಈ ಪಾಠಶಾಲೆ ನಿಂತುಹೋಯಿತು. ಇತ್ತೀಚೆಗೆ ಸಂಗೀತ ಪಾಠಶಾಲೆ ಮತ್ತು ಕಂಪ್ಯೂಟರ್ ತರಬೇತಿ ಕೇಂದ್ರವನ್ನು ಪ್ರಾರಂಭಿಸಲಾಗಿದ್ದು, ಗ್ರಾಮಾಂತರ ಮಕ್ಕಳ ಬೌದ್ಧಿಕ ಮಟ್ಟವನ್ನು ಹೆಚ್ಚಿಸುವಲ್ಲಿ ಮಠವು ಶ್ರಮಿಸುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಗುದ್ದಲೀಶ್ವರ ಸ್ವಾಮಿಗಳು, ಶ್ರೀ ಗುದ್ದಲೀಶ್ವರಸ್ವಾಮಿ ಮಠ, ಹೊಸರಿತ್ತಿ, ಹಾವೇರಿ ತಾಲ್ಲೂಕು.

ಆಧಾರ: ಶ್ರೀ ಕರವೀರ ಶಾಸ್ತ್ರಿಯವರ 'ಶ್ರೀಗುದ್ದಲೇಶ ಚರಿತ್ರೆ'

❑

ಹಾನಗಲ್ಲು ತಾಲ್ಲೂಕು

ಹಾವೇರಿ ಜಿಲ್ಲೆಯ ಹಾನಗಲ್ಲು ತಾಲ್ಲೂಕು ಪುರಾಣ ಪ್ರಸಿದ್ಧ ಸ್ಥಳ. ಇಲ್ಲಿ ವೀರಶೈವಧರ್ಮ ಪ್ರಮುಖವಾಗಿ ಬೆಳೆದಿದ್ದು ಈಗಲೂ ತನ್ನ ಪ್ರಾಬಲ್ಯವನ್ನು ಉಳಿಸಿಕೊಂಡಿದೆ. ಇಲ್ಲಿ ಪ್ರಸ್ತುತ ಹತ್ತು ಮಠಗಳು ಅಸ್ತಿತ್ವದಲ್ಲಿವೆ.

ಅಕ್ಕಿಆಲೂರು

ಹಾನಗಲ್ಲು ತಾಲ್ಲೂಕಿನ ಅಕ್ಕಿಆಲೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಏಳು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಚನ್ನವೀರಸ್ವಾಮಿ ಮಠವು ಅಸ್ತಿತ್ವದಲ್ಲಿದೆ.

ಚನ್ನವೀರಸ್ವಾಮಿಮಠ: ಅಕ್ಕಿಆಲೂರು ಗ್ರಾಮದಲ್ಲಿ ಸ್ಥಾಪನೆಯಾಗಿರುವ ಶ್ರೀ ಚನ್ನವೀರಸ್ವಾಮಿಮಠವು, ವಿರಕ್ತಸಂಪ್ರದಾಯದ ಕುಮಾರ ಸಮಯಕ್ಕೆ ಸೇರಿದ ಶ್ರೀ ಚನ್ನವೀರ ಸ್ವಾಮಿಮಠವು ಹಾನಗಲ್ಲು ವಿರಕ್ತ ಮಠದ ಶಾಖಾ ಮಠವಾಗಿ ಬೆಳೆದಿದೆ.ಪುರಾತನ ಕಾಲದಲ್ಲಿಯೇ ಈ ಮಠವು ಸ್ಥಾಪನೆಗೊಂಡಿದೆ. ಶ್ರೀ ಚನ್ನವೀರ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟ ಈ ಮಠಕ್ಕೆ ಕರ್ತೃಗುರುಗಳ ಹೆಸರಿನಿಂದ ಕರೆಯಲಾಗುತ್ತದೆ.

ಮಠ ಸ್ಥಾಪನೆ: ಶ್ರೀ ಚನ್ನವೀರ ಸ್ವಾಮಿಗಳು ಸ್ಥಾಪಿಸಿದ್ದಾರೆ ಎಂದು ಹೇಳಲಾದರೂ, ನಿಖರವಾದ ಕಾಲಮಾನದ ಬಗ್ಗೆ ಹೇಳಲು ಯಾವುದೇ ಆಧಾರಗಳು ಲಭ್ಯವಿಲ್ಲ. ಕಿತ್ತೂರು ಸಂಸ್ಥಾನದ ಮಲ್ಲಸರ್ಜ ದೊರೆಯ ಕಾಲದಲ್ಲಿ (೧೭೮೨-೧೮೧೬) ಮಠದ ಹೆಬ್ಬಾಗಿಲನ್ನು ನಿರ್ಮಿಸಲಾಗಿದೆ, ಅಂದರೆ ಇದಕ್ಕೂ ಮೊದಲು ಈ ಮಠವು ಅಸ್ತಿತ್ವದಲ್ಲಿತ್ತು ಎಂದು ಹೇಳಲಾಗುತ್ತಿದೆ.

ಪರಂಪರೆ:

೧. ಶ್ರೀ ಮ.ನಿ.ಪ್ರ. ಚನ್ನವೀರಸ್ವಾಮಿಗಳ
೨. ಶ್ರೀ ಮ.ನಿ.ಪ್ರ. ಅಡವಿಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಕುಮಾರಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಜಡೆಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಮಹೇಶ್ವರಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಸದಾಶಿವಸ್ವಾಮಿಗಳು
೭. ಶ್ರೀ ಮ.ನಿ.ಪ್ರ. ಚನ್ನವೀರಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಹಾನಗಲ್ಲು ವಿರಕ್ತ ಮಠದ ಶಾಖಾಮಠವಾದ ಈ ಮಠದಲ್ಲಿ ವಿರಕ್ತ ಮಠದಿಂದ ನೇಮಿಸಲ್ಪಟ್ಟ ಗುರುಗಳು ಮಠದ ಅಧಿಕಾರವನ್ನು ನಡೆಸಿಕೊಂಡು ಹೋಗುತ್ತಾರೆ. ಪ್ರಸ್ತುತ ಮಠಾಧೀಶ್ವರರಾಗಿರುವ ಶ್ರೀ ಚನ್ನವೀರ ಸ್ವಾಮಿಗಳು ೧೯೧೮ರಲ್ಲಿ ಶ್ರೀ ಚನ್ನವೀರಪ್ಪಯ್ಯ ಮತ್ತು ಶ್ರೀಮತಿ ಗೌರಮ್ಮನವರ ಪುತ್ರರಾಗಿ ಜನಿಸಿದರು. ಶ್ರೀ ಚನ್ನವೀರ ಸ್ವಾಮಿಗಳು ಹರಪನಹಳ್ಳಿ ತಾಲ್ಲೂಕಿನ ನೀಲಗುಂದ ಮಠದ ಅಧಿಕಾರ ವಹಿಸಿಕೊಂಡು ಶಿವಯೋಗ ಮಂದಿರದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಸಂದರ್ಭದಲ್ಲಿ ಶ್ರೀ ಸದಾಶಿವ ಸ್ವಾಮಿಗಳ ದೃಷ್ಟಿಗೆ ಬಿದ್ದು, ಅಕ್ಕಿಆಲೂರು ಮಠದ ಪಟ್ಟಾಧಿಕಾರವನ್ನು ೧೯೬೪ ರಲ್ಲಿ ವಹಿಸಿಕೊಂಡರು. ಮಠದ ಆವರಣದಲ್ಲಿ ಕರ್ತೃಗುರುಗಳಾದ ಶ್ರೀ ಚನ್ನವೀರ ಸ್ವಾಮಿಗಳ ಗದ್ದುಗೆ ಒಂದನ್ನು ಗುರುತಿಸಬಹುದಾಗಿದ್ದು, ಉಳಿದ ಐದು ಗದ್ದುಗೆಗಳು ಯಾರ ಹೆಸರಲ್ಲಿ ನಿರ್ಮಾಣಗೊಂಡಿವೆ ಎಂದು ತಿಳಿಯದಾಗಿದೆ.

ಧಾರ್ಮಿಕ ಕಾರ್ಯಗಳು: ನಿತ್ಯ ಕರ್ತೃಗದ್ದುಗೆಗೆ ರುದ್ರಾಭಿಷೇಕ ನಡೆಸಲಾಗುತ್ತಿದೆ. ಶ್ರಾವಣಮಾಸದಲ್ಲಿ ಪುರಾಣ ಪ್ರವಚನವನ್ನು ನಡೆಸಲಾಗುತ್ತಿದೆ. ಶ್ರೀ ಕುಮಾರ ಸ್ವಾಮಿಗಳ ಪುಣ್ಯಾರಾಧನೆಯನ್ನು ಫೆಬ್ರವರಿ ತಿಂಗಳಲ್ಲಿ ಮೂರು ದಿನಗಳ ಕಾಲ ಕಾರ್ಯಕ್ರಮವನ್ನು ಏರ್ಪಡಿಸಿ ಸಾಹಿತ್ಯ ಮತ್ತು ಧರ್ಮದ ವಿಚಾರಗಳ ಬಗ್ಗೆ ಗೋಷ್ಠಿಗಳನ್ನು ಏರ್ಪಡಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.

ಅಭಿವೃದ್ಧಿ ಕಾರ್ಯಗಳು: ಮಠದ ಜಾಗದಲ್ಲಿ ಕಲ್ಯಾಣಮಂಟಪ, ಕಾಲೇಜು ಸಮುಚ್ಚಯಗಳನ್ನು ನಿರ್ಮಿಸಲಾಗಿದೆ. ಉಚಿತ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಲಾಗಿದೆ. ಮಠದ ಈಕಟ್ಟಡವು ವಿಶಾಲ ತಳಪದಿಯ ಮೇಲೆ ಎರಡು ಅಂತಸ್ತುಗಳಲ್ಲಿ ರಚನೆ ಗೊಂಡಿದೆ. ನೂರಾರು ವರ್ಷಗಳ ಹಿಂದೆ ನಿರ್ಮಿಸಲ್ಪಟ್ಟಿರುವ ಈ ಕಟ್ಟಡವು ಈಗಲೂ ಸುವ್ಯವಸ್ಥಿತವಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಚನ್ನವೀರ ಸ್ವಾಮಿಗಳು, ಶ್ರೀ ಚನ್ನವೀರ ಸ್ವಾಮಿಮಠ, ಅಕ್ಕಿಆಲೂರು, ಹಾನಗಲ್ಲು ತಾ, ಹಾವೇರಿ ಜಿಲ್ಲೆ.

ಆಡೂರು

ಹಾನಗಲ್ಲು ತಾಲ್ಲೂಕಿನ ಆಡೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಹದಿನೇಳು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಆಡೂರು ಗ್ರಾಮದಿಂದ ಪಶ್ಚಿಮದಿಕ್ಕಿನ ಹೊರಭಾಗದ ಗುಡ್ಡದ ಮೇಲೆ ಸ್ಥಾಪನೆಯಾಗಿರುವ ವಿರಕ್ತಮಠವು ಕುಮಾರ ಸಮಯದ ಸಂಪ್ರದಾಯದಲ್ಲಿ ಬೆಳೆದು ಬಂದಿದೆ. ಮಠದ ಆವರಣದಲ್ಲಿ ಒಟ್ಟು ಮೂರು ಗದ್ದುಗೆಗಳು ಇದ್ದು, ಈ ಗದ್ದುಗೆಗಳಿಗೆ ನಿತ್ಯ ಪೂಜೆಗೆ ವ್ಯವಸ್ಥೆ ಮಾಡಲಾಗಿದೆ. ಪ್ರಸ್ತುತ ಮಠದಲ್ಲಿ ಮಠಾಧೀಶರು ಯಾರೂ ಇಲ್ಲದ ಕಾರಣ ಮಠವು ಈಗ ಖಾಲಿ ಉಳಿದಿದೆ. ಮಠದ ಆಸ್ತಿಯಾಗಿ ಮೂರು ಎಕರೆ ಜಮೀನು ಇದ್ದು, ಈ ಮಠದ ಅಧಿಕಾರವನ್ನು ನೋಡಿಕೊಳ್ಳಲು ಶಿಗ್ಗಾಂವಿ, ತಾಲ್ಲೂಕಿನ ದುಂಡಸಿ ಗ್ರಾಮದ ವಿರಕ್ತ ಮಠದ ಸ್ವಾಮಿಗಳು ಮುಂದೆ ಬಂದಿದ್ದು, ಭಕ್ತರ ಸಮ್ಮುಖದಲ್ಲಿ ಒಪ್ಪಂದ ಏರ್ಪಟ್ಟಲ್ಲಿ ದುಂಡಸಿ ಗುರುಗಳು ಈ ಮಠದ ಉತ್ತಾರಾಧಿಕಾರಿಗಳಾಗಿ ನೇಮಕಗೊಳ್ಳಲಿದ್ದಾರೆ.

ಮಠವು ಸುಸಜ್ಜಿತವಾದ ಕಲ್ಲಿನ ಕಟ್ಟಡವನ್ನು ಹೊಂದಿದೆ.ಮಠದ ಆವರಣದಲ್ಲಿ ಜೀರ್ಣಾವಸ್ಥೆಯಲ್ಲಿರುವ ಒಂದು ಪುರಾತನ ಬಾವಿ, ಪುರಾತನ ಕಾಲದ ಕೆತ್ತನೆಯ ಕಲ್ಲುಗಳು ಹಾಗೂ ನಾಗರ ಕಲ್ಲುಗಳು ನೋಡಸಿಗುತ್ತಿವೆ. ಈ ಕಾರಣದಿಂದ ಮಠವು ಪುರಾತನ ಕಾಲದಲ್ಲಿ ಸ್ಥಾಪನೆಗೊಂಡಿರಬಹುದೆಂದು ಹೇಳಲಾಗುತ್ತಿದೆ. ಈ ವಿರಕ್ತಮಠವು ಅಪಾರ ಭಕ್ತರನ್ನು ಪಡೆದಿದೆ.

ವಿಳಾಸ: ಶ್ರೀ ವಿರಕ್ತ ಮಠ, ಆಡೂರು, ಹಾನಗಲ್ಲು ತಾಲ್ಲೂಕು, ಹಾವೇರಿ ಜಿಲ್ಲೆ.

ಉಪ್ಪುಹುಣಸೆ

ಹಾನಗಲ್ಲು ತಾಲ್ಲೂಕಿನ ಉಪ್ಪುಹುಣಸೆ ಗ್ರಾಮವು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಇಪ್ಪತ್ತು ಕಿ.ಮೀ.ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಉಪ್ಪುಹುಣಸೆ ಗ್ರಾಮದ ಮಧ್ಯ ಭಾಗದಲ್ಲಿ ಸ್ಥಾಪನೆಯಾಗಿರುವ ವಿರಕ್ತಮಠವು ಇಲ್ಲಿನ ಧಾರ್ಮಿಕ ಕೇಂದ್ರಬಿಂದು ವಾಗಿ ಬೆಳೆದಿದೆ. ವಿರಕ್ತಸಂಪ್ರದಾಯದಲ್ಲಿ ಬೆಳೆದಿರುವ ಈ ಮಠವು ಶ್ರೀ ಜಯಬಸವೇಶ್ವರ ಸ್ವಾಮಿಗಳಿಂದ ೧೯೬೬ರ ಏಪ್ರಿಲ್ ಏಳರಂದು ಸ್ಥಾಪನೆಯಾಗಿದೆ. ಮಠದಲ್ಲಿ ಶ್ರೀ ಮುರುಘೇಂದ್ರ ಸ್ವಾಮಿಗಳ ಗದ್ದುಗೆಯನ್ನು ನಿರ್ಮಿಸಲಾಗಿದೆ. ಶ್ರೀ ಸಂಗಯ್ಯ ಮತ್ತು ಶ್ರೀಮತಿ ಈರಮ್ಮನವರ ಪುತ್ರರಾಗಿ ೧೯೬೨ರಲ್ಲಿ ಜನಿಸಿದ ಶ್ರೀ ಜಯಬಸವೇಶ್ವರ ಸ್ವಾಮಿಗಳು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿದ ನಂತರ ತಾವೇ ಸ್ಥಾಪಿಸಿದ ಮಠದ ಅಧಿಕಾರವನ್ನು ವಹಿಸಿಕೊಳ್ಳುತ್ತಾರೆ.

ಶ್ರೀ ಜಯಬಸವೇಶ್ವರ ಸ್ವಾಮಿಗಳು ಉಪ್ಪುಹುಣಸೆ ಗ್ರಾಮದ ಧಾರ್ಮಿಕ ಚಟುವಟಿಕೆಗಳಿಗೆ ಹಾಗೂ ಬಸವಾದಿ ಪ್ರಮಥರ ತತ್ವಗಳನ್ನು ನಾಡಿಗೆ ಸಾರುವ ಉದ್ದೇಶವನ್ನು ಇಟ್ಟುಕೊಂಡು ಮಠವನ್ನು ಸ್ಥಾಪನೆಮಾಡಿ, ಕಳೆದ ನಾಲ್ಕುವರ್ಷಗಳಿಂದ ಸಾಮಾಜಿಕ, ಸಾಹಿತ್ಯಿಕ ಹಾಗೂ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಮಠದಲ್ಲಿ ಹೊರಗಿನ ಭಕ್ತರಿಗೆ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗಿದೆ. ಮಠದಲ್ಲಿ ಸಂದರ್ಭಕ್ಕೆ ಅನುಗುಣವಾಗಿ ನಡೆಯುವ ಧಾರ್ಮಿಕ ಕಾರ್ಯ ಕ್ರಮಗಳಲ್ಲಿ ಉಪನ್ಯಾಸ, ಉಪದೇಶ ಮತ್ತು ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಜಯಬಸವೇಶ್ವರ ಸ್ವಾಮಿಗಳು,ಶ್ರೀ ವಿರಕ್ತಮಠ, ಉಪ್ಪುಹುಣಸೆಗ್ರಾಮ, ಹಾನಗಲ್ಲು ತಾ, ಹಾವೇರಿಜಿಲ್ಲೆ.

ಕೂಡಲ

ಹಾನಗಲ್ಲು ತಾಲ್ಲೂಕಿನ ಕೂಡಲ ಕ್ಷೇತ್ರವು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ಗುರುನಂಜೇಶ್ವರ ಮಠವು ಅಸ್ತಿತ್ವದಲ್ಲಿದೆ.

ಗುರುನಂಜೇಶ್ವರಮಠ: ಕೂಡಲ ಕ್ಷೇತ್ರವು ಪುಣ್ಯಕ್ಷೇತ್ರಗಳಲ್ಲಿ ಒಂದಾಗಿ ಬೆಳೆದಿದೆ. ಇಲ್ಲಿ ವರದಾ ನದಿಯು ಉತ್ತರಾಭಿಮುಖವಾಗಿ ಹರಿದಿದ್ದು ಧರ್ಮ ನದಿಯು ಪೂರ್ವಾಭಿಮುಖವಾಗಿ ಹರಿದು ಬಂದು, ಎರಡು ನದಿಗಳ ಈಶಾನ್ಯ ದಿಕ್ಕಿಗೆ ತಿರುವು ಪಡೆದುಕೊಳ್ಳುವಲ್ಲಿ ಸಂಗಮವಾಗುವ ಸ್ಥಳ ಕೂಡಲ ಈ ಸಂಗಮ ಕ್ಷೇತ್ರದಲ್ಲಿ ಶ್ರೀ ಗುರುನಂಜೇಶ್ವರ ಮಠವು ಸ್ಥಾಪನೆಯಾಗಿದೆ.

ಮಠ ಸ್ಥಾಪನೆ: ಮುನ್ನೂರು ವರ್ಷಗಳಿಗಿಂತಲೂ ಮೊದಲು ಶ್ರೀ ಗುರುನಂಜೇಶ್ವರ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟ ಈ ಮಠವನ್ನು ಕರ್ತೃಗುರುಗಳ ಹೆಸರಿನಿಂದಲೇ ಕರೆಯಲಾಗುತ್ತಿದೆ. ಶ್ರೀ ಗುರುನಂಜೇಶ್ವರ ಸ್ವಾಮಿಗಳ ನಂತರ ಅನೇಕ ಗುರುಗಳು ಅಧಿಕಾರವನ್ನು ನಡೆಸಿ ಈ ಮಠದ ಅಸ್ತಿತ್ವವನ್ನು ಉಳಿಸಿಹೋಗಿದ್ದರು. ಇಂತಹ ಮಠದ ಪರಂಪರೆಯನ್ನು ಬೆಳೆಸಲು ಹಿರೇ ಒಡ್ಡಟ್ಟಿ ಗ್ರಾಮದ ಹಿರೇಮಠದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಪಟ್ಟಾಧಿಕಾರವನ್ನು ವಹಿಸಿಕೊಂಡ ಬಗ್ಗೆ ಉಲ್ಲೇಖ ದೊರೆಯುತ್ತದೆ. ಶ್ರೀ ರುದ್ರಮುನಿ ಸ್ವಾಮಿಗಳು ತಮ್ಮ ಮಠದ ದಾಸೋಹಕ್ಕೆ ಭಿಕ್ಷೆಗೆಂದು ಆನೆ, ಒಂಟೆಗಳೊಂದಿಗೆ ಈ ಪ್ರಾಂತ್ಯಕ್ಕೆ ಬಂದವರು ಇಲ್ಲಿನ ಪರಿಸರ ಮತ್ತು ಸಂಗಮ ಕ್ಷೇತ್ರದಲ್ಲಿ ಈ ಹಿಂದೆಯೇ ಸ್ಥಾಪಿಸಲ್ಪಟ್ಟ ಶ್ರೀ ಗುರುನಂಜೇಶ್ವರ ಮಠವನ್ನು ನೋಡಿ ಈ ಮಠದಲ್ಲಿಯೆ ಅನುಷ್ಠಾನಗೊಳ್ಳುತ್ತಾರೆ. ಇಲ್ಲಿಯ ಅಗಾಧ ಪ್ರಶಾಂತತೆಗೆ ಮನಸೋತರು. ಇಲ್ಲೇ ನೆಲೆನಿಂತು ವೀರಶೈವ ಧರ್ಮವನ್ನು ಸಾಕಾರಗೊಳಿಸಲು ದೃಢನಿಶ್ಚಯವನ್ನು ಕೈಗೊಂಡರು. ಇದಕ್ಕಾಗಿ ಹಿರೇವಡ್ಡಟ್ಟಿ ಪುತ್ರವರ್ಗದ ಮಠವನ್ನು ತೊರೆದು ಇಲ್ಲಿನ ಅಧಿಕಾರವನ್ನು ವಹಿಸಿಕೊಂಡರು.

ಪರಂಪರೆ:

೧. ಷ.ಬ್ರ.ಶ್ರೀ ಗುರುನಂಜೇಶ್ವರಸ್ವಾಮಿಗಳು
೨. ಷ.ಬ್ರ.ಶ್ರೀ ಗುಬ್ಬಿಸ್ವಾಮಿಗಳು
೩. ಷ.ಬ್ರ.ಶ್ರೀ ಹುಚ್ಚಯ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಮಲ್ಲಯ್ಯಸ್ವಾಮಿಗಳು
೫. ಷ.ಬ್ರ.ಶ್ರೀ ರುದ್ರಮುನಿ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಗುರುನಂಜೇಶ್ವರ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಶ್ರೀ ಗುರುನಂಜೇಶ್ವರ ಸ್ವಾಮಿಗಳು ಮಠದ ಕರ್ತೃಗುರುಗಳಾಗಿ ಮಠವನ್ನು ಹೆಚ್ಚು ಪ್ರಚಾರಗೊಳಿಸುವಲ್ಲಿ ಸಹಾಯಕರಾಗಿದ್ದಾರೆ. ಇವರು ಲಿಂಗೈಕ್ಯರಾದ ನಂತರ ಶ್ರೀ ಗುಬ್ಬಿ ಸ್ವಾಮಿಗಳು ಮಠವನ್ನು ನಡೆಸಿಕೊಂಡು ಬಂದಿರುತ್ತಾರೆ. ಇವರ ನಂತರ ಶ್ರೀ ಹುಚ್ಚಯ್ಯ ಸ್ವಾಮಿಗಳು ಮತ್ತು ಶ್ರೀ ಮಲ್ಲಯ್ಯ ಸ್ವಾಮಿಗಳು ಮಠದ ಉಸ್ತುವಾರಿಯನ್ನು ನೋಡಿಕೊಂಡು, ಮಠದ ಅಸ್ತಿತ್ವ ಉಳಿದು ಬೆಳೆಯುವಂತೆ ಭದ್ರಬುನಾದಿಯನ್ನು ಹಾಕಿದರು. ಇವರ ನಂತರ ಮಠವು ಧರ್ಮಾಧಿಕಾರಿಗಳಿಲ್ಲದೆ ಖಾಲಿ ಉಳಿದಿತ್ತು. ಇಂತಹ ಸಮಯದಲ್ಲಿಯೇ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಇಲ್ಲಿಗೆ ಆಗಮಿಸಿ ಈ ಮಠದ ಅಧಿಕಾರವನ್ನು ವಹಿಸಿಕೊಂಡರು. ಅನೇಕ ವರ್ಷಗಳಕಾಲ ಅಧಿಕಾರ ನಡೆಸಿ ಹಿರೇಒಡ್ಡಟ್ಟಿಯಲ್ಲಿ ೧೯೬೧ ರಲ್ಲಿ ಲಿಂಗೈಕ್ಯರಾದರು. ಇವರ ನಂತರ ಶ್ರೀ ಗುರುನಂಜೇಶ್ವರ ಶಿವಾಚಾರ್ಯ ಸ್ವಾಮಿಗಳು ಪಟ್ಟಾಧಿಕಾರವನ್ನು ವಹಿಸಿಕೊಳ್ಳುತ್ತಾರೆ.

ಬಾಲ್ಯದಲ್ಲಿಯೇ ಪಟ್ಟಾಧಿಕಾರ: ಆಲದಕಟ್ಟೆಯ ಶ್ರೀ ಶಿವರುದ್ರಯ್ಯ ಮತ್ತು ಶ್ರೀಮತಿ ನೀಲಮ್ಮನವರ ಪುತ್ರರಾಗಿ ೧೯೫೪ ರಲ್ಲಿ ಜನಿಸಿದ ಶ್ರೀ ಗುರುನಂಜೇಶ್ವರ ಶಿವಾಚಾರ್ಯ ಸ್ವಾಮಿಗಳು ನಾಗನೂರಿನಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ, ಹಾವೇರಿಯ ಸಿಂದಗಿ ಮಠದಲ್ಲಿ ಜ್ಯೋತಿಷ್ಯ ಮತ್ತು ಹುಬ್ಬಳ್ಳಿಯಲ್ಲಿ ಕಾಲೇಜು ಶಿಕ್ಷಣವನ್ನು ಮುಗಿಸಿದರು. ಶ್ರೀಗುರುನಂಜೇಶ್ವರ ಶಿವಾಚಾರ್ಯ ಸ್ವಾಮಿಗಳು ತಮ್ಮ ಹಿರಿಯ ಗುರುಗಳಾದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳ ಅಪೇಕ್ಷೆಯ

ಮೇರೆಗೆ ತಮ್ಮ ಎಂಟು ವರ್ಷದ ಬಾಲ್ಯಾವಸ್ಥೆಯಲ್ಲೇ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡರು. ನಂತರ ವಿದ್ಯಾಭ್ಯಾಸ ಮುಗಿಸಿ ಕೂಡಲಕ್ಕೆ ಬಂದು ಮಠದ ಪೂರ್ಣ ಅಧಿಕಾರದ ಹೊಣೆಹೊತ್ತರು.

ಸಂಗಮಕ್ಷೇತ್ರ: ವರದ ಮತ್ತು ಧರ್ಮ ನದಿಗಳ ಸಂಗಮ, ಶೈವ ಮತ್ತು ವೀರಶೈವರ ಸಂಗಮ ಹಾಗೂ ಗುರು-ವಿರಕ್ತರ ಸಂಗಮ ಕ್ಷೇತ್ರವಾಗಿ ಕೂಡಲ ಕ್ಷೇತ್ರವು ಬೆಳೆದಿದೆ.ನದಿಯ ದಂಡೆಯ ಮೇಲೆ ಸ್ಥಾಪನೆಗೊಂಡಿರುವ ಶ್ರೀ ಗುರುನಂಜೇಶ್ವರ ಮಠವು ಮೂಲದಲ್ಲಿ ವಿರಕ್ತ ಮಠವಾಗಿ ಬೆಳೆದಿತ್ತು. ನಂತರ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳ ನಂತರ ಕಾಶಿಪೀಠದ ಶಾಖಾ ಮಠವಾಗಿ ಶರಣಸ್ಥಲ ಮತ್ತು ಗುರುಸ್ಥಲದ ಸಂಪ್ರದಾಯದಲ್ಲಿ ಸ್ವತಂತ್ರ ಮಠವಾಗಿ ಬೆಳೆದು ಬಂದಿದೆ.

ಅಭಿವೃದ್ಧಿಕಾರ್ಯಗಳು: ಪುರಾತನ ಕಾಲದ ಇತಿಹಾಸಉಳ್ಳ ಈ ಮಠವು ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳ ಕಾಲದಲ್ಲಿ ಹೆಚ್ಚು ಅಭಿವೃದ್ಧಿಗೊಂಡಿತ್ತು. ಅವರ ಕಾಯಕಯೋಗದಿಂದ ಮಠವು ಸುಮಾರು ಅರವತ್ತೆರಡು ಎಕರೆ ಜಮೀನನ್ನು ರೂಢಿಸಿಕೊಂಡಿತು. ಈ ಎಲ್ಲಾ ಆಸ್ತಿಯನ್ನು ತಮ್ಮ ಪರಿಶ್ರಮದಿಂದ ಸಂಪಾದಿಸಿಕೊಂಡ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಮಠವನ್ನು ಹೆಚ್ಚು ಶ್ರೀಮಂತಗೊಳಿಸಿದರು.ನಂತರ ಬಂದ ಶ್ರೀ ಗುರುನಂಜೇಶ್ವರ ಶಿವಾಚಾರ್ಯ ಸ್ವಾಮಿಗಳು ಹಿಂದಿನ ಗುರುಗಳು ಸಂಪಾದಿಸಿಕೊಟ್ಟ ಜಮೀನನ್ನು ನೀರಾವರಿಗೆ ಯೋಗ್ಯಗೊಳಿಸಿ ಹೆಚ್ಚು ಆದಾಯ ಬರುವಂತೆ ಮಾಡಿದ್ದಾರೆ.

ಮಠದ ಹಳೆಯ ಕಟ್ಟಡವನ್ನು ಪೂರ್ಣವಾಗಿ ತೆಗೆಸಿ ಕರ್ತೃಗುರುಗಳ ಗದ್ದುಗೆ, ಅದರ ಮುಂಭಾಗದಲ್ಲಿ ಪ್ರಾಂಗಣವನ್ನು ನಿರ್ಮಿಸಲಾಗಿದೆ. ಮಠದ ಒಂದು ಅಂಗವೇ ಆಗಿರುವ ನೀಲಾಂಬಿಕೆಯ ದೇವಸ್ಥಾನವನ್ನು ನವೀಕರಣಗೊಳಿಸಲಾಗಿದೆ. ಮಠದ ಆವರಣದಲ್ಲಿರುವ ಉಳಿದ ಮೂರು ಗದ್ದುಗೆಗಳನ್ನು ನವೀಕರಣಗೊಳಿಸಿ ಮೇಲ್ಛಾವಣಿಯನ್ನು ಹಾಕಿಸಲಾಗಿದೆ. ಮಠದ ಸುತ್ತ ಪೌಳಿಯನ್ನು (ಕಾಂಪೌಂಡ್) ನಿರ್ಮಿಸಲಾಗಿದೆ. ಈ ರೀತಿ ಏಕಕಾಲದಲ್ಲಿ ಈ ಕಾರ್ಯಗಳನ್ನು ಮಾಡಿಮುಗಿಸಿರುವ ಶ್ರೀ ಗುರು ನಂಜೇಶ್ವರ ಸ್ವಾಮಿಗಳು ಮಠವನ್ನು ಸುವ್ಯವಸ್ಥಿತವಾಗಿ ಬೆಳೆಸುವಲ್ಲಿ ಯಶಸ್ವಿಯಾಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಕರ್ತೃಗುರುಗಳ ಗದ್ದುಗೆಗೆ ನಿತ್ಯ ರುದ್ರಾಭಿಷೇಕ, ದಿನದ ಎರಡು ವೇಳೆ ಪೂಜೆಯನ್ನು ನಡೆಸಲಾಗುತ್ತಿದೆ. ಶ್ರಾವಣ ಮಾಸದಲ್ಲಿ ವಿಶೇಷ ಪೂಜೆ, ಈ ಪುಣ್ಯಕ್ಷೇತ್ರಕ್ಕೆ ನಿತ್ಯ ಭೇಟಿ ನೀಡುವ ಯಾತ್ರಿಕರಿಗೆ ನಿತ್ಯ ಅನ್ನದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಪ್ರತಿ ಅಮಾವಾಸ್ಯೆಯಲ್ಲಿ ನೀಲಮ್ಮನವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಮತ್ತು ದಾಸೋಹ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಮಠದಲ್ಲಿ ಯುಗಾದಿ ಪಾಡ್ಯದಲ್ಲಿ ಹಿರಿಯ ಗುರುಗಳ ಸ್ಮರಣೋತ್ಸವ ಕಾರ್ಯಕ್ರಮದ ಅಂಗವಾಗಿ ಸಾಮೂಹಿಕ ಲಗ್ನಗಳು, ಸಾಮೂಹಿಕ ಶಿವದೀಕ್ಷಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ.

ಶೈಕ್ಷಣಿಕ ಸೇವೆ: ಮಠದಲ್ಲಿ ಹತ್ತರಿಂದ ಹದಿನೈದು ವಿದ್ಯಾರ್ಥಿಗಳು ಮಠದಲ್ಲಿ ಆಶ್ರಯ ಪಡೆದು ಕಲಿಯುತ್ತಿದ್ದಾರೆ. ಹಿಂದೆ ಸಂಸ್ಕೃತ ಮತ್ತು ವೇದಾಧ್ಯಯನದ ಕೇಂದ್ರವನ್ನು ಸ್ಥಾಪಿಸಲಾಗಿತ್ತು ಆದರೆ ಕಾರಣಾಂತರದಿಂದ ಇಂದು ಸ್ಥಗಿತಗೊಳಿಸಲಾಗಿದೆ. ಮಠದ ಕಟ್ಟಡಗಳ ಕಾಮಗಾರಿಗಳು ಪೂರ್ಣಗೊಂಡ ಮೇಲೆ ಮಠದಲ್ಲಿ ವೈದಿಕ ಮತ್ತು ಜ್ಯೋತಿಷ್ಯ ಪಾಠಶಾಲೆಯನ್ನು ತೆರೆಯಲು ಯೋಜಿಸಲಾಗಿದೆ ಎಂದು ಈಗಿನ ಗುರುಗಳು ಅಭಿಪ್ರಾಯಿಸುತ್ತಾರೆ.

ಶಾಖಾಮಠಗಳು: ಶಾಖಾಮಠಗಳಾಗಿ ಮೊಟೆಬೆನ್ನೂರಿನ ರುದ್ರದೇವರ ಮಠ, ಮುಂಡರಗಿ ತಾಲ್ಲೂಕಿನ ಕಲ್ಕೆರೆ ಗ್ರಾಮದ ಹಿರೇಮಠ, ಹಾನಗಲ್ಲು ತಾಲ್ಲೂಕಿನ ಮುಳತಳ್ಳಿಯಲ್ಲಿ ಶ್ರೀ ಗುರುನಂಜೇಶ್ವರ ಮಠಗಳು ಸ್ಥಾಪನೆಯಾಗಿದೆ. ಇಲ್ಲಿ ಮಠಕ್ಕೆ ಸಂಬಂಧಿಸಿದ ಕಟ್ಟಡಗಳು ಸ್ಥಾಪನೆಗೊಂಡಿವೆ ಎಂದು ಹೇಳಲಾಗುತ್ತಿದೆ.

ವಿಳಾಸ: ಷ.ಬ್ರ.ಶ್ರೀ.ಗುರುನಂಜೇಶ್ವರ ಶಿವಾಚಾರ್ಯಸ್ವಾಮಿಗಳು, ಶ್ರೀಗುರುನಂಜೇಶ್ವರಮಠ,ಕೂಡಲ,ಹಾನಗಲ್ಲು ತಾ, ಹಾವೇರಿಜಿಲ್ಲೆ.

ತಿಳುವಳ್ಳಿ

ಹಾನಗಲ್ಲು ತಾಲ್ಲೂಕಿನ ತಿಳುವಳ್ಳಿಯು ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಇಪ್ಪತ್ತೆರಡು ಕಿ. ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಕಲ್ಮಠ ಅಥವಾ ಶ್ರೀ ಕಟಗೆಹಳ್ಳಿ ರಾಚೋಟಿ ಚರಮೂರ್ತಿಮಠವು ಅಸ್ತಿತ್ವದಲ್ಲಿದೆ.

ಕಲ್ಮಠ (ಕಟಗೆಹಳ್ಳಿ ರಾಚೋಟಿಚರಮೂರ್ತಿಮಠ): ತಿಳುವಳ್ಳಿ ಗ್ರಾಮದಲ್ಲಿ ಶೂನ್ಯ ಸಿಂಹಾಸನಪೀಠದ ಏಳನೆಯ ಪಟ್ಟಾಧ್ಯಕ್ಷರಾದ ಶ್ರೀ ಕಟಗೆಹಳ್ಳಿ ರಾಚೋಟಿ ಚರಮೂರ್ತಿ ಸ್ವಾಮಿಗಳು ಮತ್ತು ಮುರುಘಾಮಠದ ಪರಂಪರೆಯ ಎಂಟನೆಯ ಜಗದ್ಗುರುಗಳಾದ ಶೂನ್ಯಪೀಠದ (ಹದಿನೈದನೆಯ ಪಟ್ಟಾಧ್ಯಕ್ಷರಾದ) ಶ್ರೀ ಒಪ್ಪತ್ತಿನ ಚನ್ನವೀರ ಸ್ವಾಮಿಗಳು ಲಿಂಗೈಕ್ಯರಾದ ಕಾರಣ ಈ ಗ್ರಾಮವು ವೀರಶೈವ ಧರ್ಮದ ಇತಿಹಾಸದ ಪುಟಗಳಲ್ಲಿ ತನ್ನದೇ ಆದ ಸ್ಥಾನವನನ್ನು ಪಡೆದುಕೊಂಡಿದೆ.

ಮಠ ಸ್ಥಾಪನೆ: ಶೂನ್ಯಪೀಠದ ಏಳನೆಯ ಜಗದ್ಗುರುಗಳಾಗಿ ಅಧಿಕಾರವನ್ನು ವಹಿಸಿಕೊಂಡ (೧೬೨೦-೧೬೪೦) ಶ್ರೀ ಕಟಗೆಹಳ್ಳಿ ರಾಚೋಟಿ ಚರಮೂರ್ತಿಗಳು ದೇಶಸಂಚಾರವನ್ನು ಕೈಗೊಂಡು ವೀರಶೈವ ಧರ್ಮವನ್ನು ಬೆಳೆಸಿದರು. ತಮ್ಮ ಸಂಚಾರದಲ್ಲಿ ಮೈಸೂರು ಪ್ರಾಂತ್ಯಕ್ಕೆ ಆಗಮಿಸಿದಾಗ ಮೈಸೂರು ಅರಸರು ಬಹಳ ಗೌರವದಿಂದ ಆಹ್ವಾನಿಸಿದ್ದಲ್ಲದೆ, ಅರಮನೆಯಲ್ಲಿ ಏರ್ಪಡಿಸಿದ್ದ ಧರ್ಮದ ವಾದವಿವಾದದಲ್ಲಿ ಅಗಣಿತ ಪಂಡಿತರು ಎನಿಸಿಕೊಂಡ ಪಂಡಿತರನ್ನೆಲ್ಲಾ ಪರಾಭವಗೊಳಿಸಿ ಅರಮನೆಯಿಂದ ಸತ್ಕರಿಸಲ್ಪ ಟ್ಟಿದ್ದರು. ಶ್ರೀ ಕಟಗೆಹಳ್ಳಿ ರಾಚೋಟಿ ಚರಮೂರ್ತಿಗಳು ಸಂಚಾರ ಮಾಡುತ್ತಾ ತಿಳುವಳ್ಳಿ ಗ್ರಾಮಕ್ಕೆ ಬಂದು ಇಲ್ಲೇ ನೆಲೆನಿಂತು ದೀರ್ಘಅನುಷ್ಠಾನವನ್ನು ಕೈಗೊಂಡು ಲಿಂಗೈಕ್ಯರಾದರು. ಕಟಗೆಹಳ್ಳಿಯಲ್ಲಿ ಶ್ರೀ ರಾಚೋಟಿ ಸ್ವಾಮಿಗಳಿಂದಾಗಿ ಕಲ್ಮಠ ತಿಳುವಳ್ಳಿ ಶೂನ್ಯಸಿಂಹಾಸನ ಪೀಠದ ಪರಂಪರೆಯಲ್ಲಿ ಸ್ಥಾನವನ್ನು ಪಡೆದುಕೊಂಡಿತು. ಗುರುಗಳ ಗದ್ದುಗೆಯ ಮೇಲೆ ಮಠವನ್ನು ಸ್ಥಾಪಿಸಿದ ಭಕ್ತರು ಭದ್ರವಾಗಿ ಕಲ್ಲು ಕಟ್ಟಡವನ್ನು ನಿರ್ಮಿಸಿ ಧಾರ್ಮಿಕ ಕಾರ್ಯಗಳು ನಡೆಯುವಂತೆ ಸಜ್ಜುಗೊಳಿಸಿದರು.

ಮುಂದುವರೆದ ಕಾರ್ಯಗಳು: ತಿಳುವಳ್ಳಿ ಗ್ರಾಮದ ಭಕ್ತರು ಕಟಗೆಹಳ್ಳಿ ಶ್ರೀ ರಾಚೋಟಿಚರಮೂರ್ತಿಗಳ ಗದ್ದುಗೆ ಮೇಲೆ ಸ್ಥಾಪನೆಗೊಂಡ ಮಠದಲ್ಲಿ ಧಾರ್ಮಿಕ ಚಟುವಟಿಕೆಗಳು ನಡೆಯಲು ಸ್ಥಳೀಯ ವಿಶ್ವಸ್ತ ಮಂಡಳಿಯನ್ನು (ಟ್ರಸ್ಟ್‌ಗಳನ್ನು) ರಚಿಸಿ ಕೊಂಡು, ಮಠದ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಮಠದ ಸುತ್ತಮುತ್ತಲ ಪ್ರದೇಶದಲ್ಲಿ ಸ್ಥಾಪನೆ ಗೊಂಡಿರುವ ಗದ್ದುಗೆಗಳನ್ನು ಸಂರಕ್ಷಿಸಿದ್ದು, ಈ ಎಲ್ಲಾ ಗದ್ದುಗೆಗಳಿಗೆ ಪೂಜಾಕಾರ್ಯ ನಡೆಯುವಂತೆ ಮಾಡಿದ್ದಾರೆ.

ವಿಳಾಸ: ಶ್ರೀ ಕಟಗೆಹಳ್ಳಿ ರಾಚೋಟಿ ಚರಮೂರ್ತಿಮಠ (ಕಲ್ಮಠ), ತಿಳುವಳ್ಳಿ, ಹಾನಗಲ್ಲು ತಾಲ್ಲೂಕು, ಹಾವೇರಿ ಜಿಲ್ಲೆ.

ನರೇಗಲ್ಲು

ಹಾನಗಲ್ಲು ತಾಲ್ಲೂಕಿನ ನರೇಗಲ್ಲು ಗ್ರಾಮವು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ಮೂವತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ನರೇಗಲ್ಲು ಗ್ರಾಮದಲ್ಲಿ ವಿರಕ್ತಮಠವು ಸ್ಥಾಪನೆಯಾಗಿದ್ದು, ಹಾವೇರಿ ನಗರದ ಸಿಂದಗಿ ಮಠದ ಶಾಂತವೀರೇಶ್ವರ ಪಾಠಶಾಲೆಯು ನಡೆಯುತ್ತಿದೆ. ಗದುಗಿನ ಶ್ರೀ ತೋಂಟದಾರ್ಯ ಸ್ವಾಮಿಗಳೇ ಪ್ರಸ್ತುತ ಮಠದ ಆಡಳಿತ ನೋಡಿಕೊಳುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಡಾ. ತೋಂಟದ ಸಿದ್ಧಲಿಂಗ ಸ್ವಾಮಿಗಳು, ಶ್ರೀ ತೋಂಟದಾರ್ಯಮಠ, ಗದಗ.

ಬೊಮ್ಮನಹಳ್ಳಿ

ಹಾನಗಲ್ಲು ತಾಲ್ಲೂಕಿನ ಬೊಮ್ಮನಹಳ್ಳಿಯು ತಾಲ್ಲೂಕು ಕೇಂದ್ರದ ಉತ್ತರ ಭಾಗಕ್ಕೆ ಹದಿನೈದು ಕಿ. ಮೀ. ದೂರದಲ್ಲಿದೆ. ಇಲ್ಲಿ ಶ್ರೀ ವಿರಕ್ತಮಠವು ಅಸ್ತಿತ್ವದಲ್ಲಿದೆ.

ವಿರಕ್ತಮಠ: ಬೊಮ್ಮನಹಳ್ಳಿ ಗ್ರಾಮದ ದಕ್ಷಿಣಭಾಗದಲ್ಲಿ ಸ್ಥಾಪನೆಯಾಗಿರುವ ವಿರಕ್ತಮಠವು ಶಿಷ್ಯವರ್ಗದ ಪರಂಪರೆಯಲ್ಲಿ ಬೆಳೆದು ಬಂದಿದೆ. ಧಾರವಾಡ ಜಿಲ್ಲೆ ಕುಂದಗೋಳು ತಾಲ್ಲೂಕಿನ ಮುಳ್ಳಳ್ಳಿ ಗ್ರಾಮದಲ್ಲಿ ಸ್ಥಾಪನೆಗೊಂಡಿದ್ದ ಈ ಮಠವು ಕಾರಣಾಂತರದಿಂದ ಶ್ರೀ ಗುರುಪಾದೇಶ್ವರ ಸ್ವಾಮಿಗಳ ಕಾಲದಲ್ಲಿ ಈ ಗ್ರಾಮಕ್ಕೆ ಸ್ಥಳಾಂತರಗೊಂಡಿದೆ.

ಮಠ ಸ್ಥಾಪನೆ: ಸುಮಾರು ಮುನ್ನೂರು ವರ್ಷಗಳ ಇತಿಹಾಸವಿರುವ ಈ ಮಠವು ಶ್ರೀ ಗುರುಪಾದೇಶ್ವರ ಸ್ವಾಮಿಗಳಿಂದ

ಸ್ಥಾಪಿಸಲ್ಪಟ್ಟಿತ್ತೆಂದು ಹೇಳಲಾಗುತ್ತದೆ. ಶ್ರೀ ಗುರುಪಾದೇಶ್ವರ ಸ್ವಾಮಿಗಳು ತಪೋನಿಷ್ಠರು, ಪೂಜಾನಿಷ್ಠರೂ ಆಗಿದ್ದು ವೀರಶೈವ ಧರ್ಮ ಇವರ ಕಾಲದಲ್ಲಿ ಹೆಚ್ಚು ಬೆಳೆದಿದೆ. ಉತ್ತಮ ಪ್ರವಚನಕಾರರಾದ ಶ್ರೀ ಗುರುಪಾದೇಶ್ವರ ಸ್ವಾಮಿಗಳು ಮಠದಲ್ಲಿ ಶಿವಾನುಭವ ಗೋಷ್ಠಿಗಳನ್ನು ಏರ್ಪಡಿಸಿ ಭಕ್ತರನ್ನು ಧರ್ಮ ಮಾರ್ಗದಲ್ಲಿ ನಡೆಯುವಂತೆ ಮಾಡುತ್ತಿದ್ದರು. ಇವರ ಕಾಲದಲ್ಲಿ ಮಠ ಹೆಚ್ಚು ಪ್ರಚಾರಗೊಂಡು ಜನಮನದಲ್ಲಿ ಬೆಳೆಯಿತು

ಪರಂಪರೆ:

೧. ಶ್ರೀ ಮ.ನಿ.ಪ್ರ. ಗುರುಪಾದೇಶ್ವರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಚನ್ನವೀರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಕೊಟ್ಟೂರುಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಪ್ರಭುಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಎರಡನೆಯ ಚನ್ನವೀರಸ್ವಾಮಿಗಳು
೬. ಶ್ರೀ ಮ.ನಿ.ಪ್ರ. ಶಿವಯೋಗಿಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಶ್ರೀ ಗುರುಪಾದೇಶ್ವರ ಸ್ವಾಮಿಗಳ ನಂತರ ಬಂದ ಎಲ್ಲಾ ಗುರುಗಳು, ಶಿವಪೂಜಾ ನಿಷ್ಠರಾಗಿ ಶರಣತತ್ತ್ವವನ್ನು ಸಮರ್ಥವಾಗಿ ಪ್ರತಿಪಾದಿಸುವವರಾಗಿ ವೀರಶೈವ ಧರ್ಮವನ್ನು ಬೆಳೆಸುವಲ್ಲಿ ಯಶಸ್ವಿಯಾಗಿದ್ದಾರೆ. ಪರಂಪರೆಯ ನಾಲ್ಕನೆಯ ಗುರುಗಳಾದ ಶ್ರೀ ಪ್ರಭು ಸ್ವಾಮಿಗಳು ಸಂಗೀತಗಾರರಾಗಿ, ಉತ್ತಮ ಪ್ರವಚನಕಾರರಾಗಿ ಹೆಸರು ಪಡೆದಿದ್ದರು. ಅಲ್ಲದೆ ಅಪೇಕ್ಷಿತರಿಗೆ ಜ್ಯೋತಿಷ್ಯ ಹೇಳುವ ಸಂಪ್ರದಾಯವನ್ನು ಬೆಳಸಿಕೊಂಡವರಾಗಿದ್ದರೆಂದು ಹೇಳಲಾಗುತ್ತದೆ. ಪರಂಪರೆಯ ಐದನೆಯ ಗುರುಗಳಾದ ಎರಡನೆಯ ಶ್ರೀ ಚನ್ನವೀರ ಸ್ವಾಮಿಗಳು ನವಿಲುಗುಂದ ತಾಲ್ಲೂಕಿನ ದುಂದೂರು ಗ್ರಾಮದಲ್ಲಿ ಜನಿಸಿ ೧೯೪೨ರಲ್ಲಿ ಈ ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡಿರುತ್ತಾರೆ. ಗುರುಗಳು ಕ್ರಿಯಾಶೀಲರಾಗಿ ಮಠದ ಸರ್ವಾಂಗೀಣ ಅಭಿವೃದ್ಧಿಗೆ ದುಡಿದವರಾಗಿದ್ದು ಮಠದಲ್ಲಿ ಧಾರ್ಮಿಕ ಕಾರ್ಯಗಳು, ದಾಸೋಹ ಕಾರ್ಯಗಳು ಹಾಗೂ ಅಭಿವೃದ್ಧಿ ಕಾರ್ಯಗಳು ಎಡೆಬಿಡದೆ ನಡೆದು ಮಠವು ಸುಸ್ಥಿತಿಗೆ ಬರಲು ಕಾರಣವಾಗಿದ್ದಾರೆ.

ಶಿವಯೋಗಿಗಳು: ಸೊರಬ ತಾಲ್ಲೂಕಿನ ಅರಳಿಕೊಪ್ಪ ಗ್ರಾಮದ ಶ್ರೀ ಬಸವಣ್ಣೆಯ್ಯ ಮತ್ತು ಶ್ರೀಮತಿ ಪುಟ್ಟಮ್ಮನವರ ಪುತ್ರ ರಾಗಿ ೧೯೬೦ ರ ಡಿಸೆಂಬರ್ ಹನ್ನೆರಡರಂದು ಶ್ರೀ ಶಿವಯೋಗಿ ಸ್ವಾಮಿಗಳು ಜನಿಸಿದರು. ತಮ್ಮ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ವನ್ನು ಅರಳಿಕೊಪ್ಪ ಮತ್ತು ಮುಳ್ಳಳ್ಳಿಯಲ್ಲಿ ಪಡೆದು, ಹುಬ್ಬಳ್ಳಿ ಮೂರುಸಾವಿರ ಮಠದಲ್ಲಿ ಆಶ್ರಯವನ್ನು ಪಡೆದು ಕಾಲೇಜು ಶಿಕ್ಷಣವನ್ನು ಮುಗಿಸಿದ ಗುರುಗಳು ಪದವಿಶಿಕ್ಷಣವನ್ನು ಬಾಗಲಕೋಟೆಯಲ್ಲಿ ಮುಗಿಸಿದರು. ನಂತರ ಧಾರವಾಡ ವಿಶ್ವವಿದ್ಯಾ ನಿಲಯದಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ೧೯೯೪ ರ ಫೆಬ್ರವರಿ ಆರರಂದು ಪಟ್ಟಾಧಿಕಾರವನ್ನು ವಹಿಸಿಕೊಳ್ಳುತ್ತಾರೆ. ಹಿರಿಯ ಗುರುಗಳ ಅನುಗ್ರಹ ಪಡೆದು ಅಧಿಕಾರಕ್ಕೆ ಬಂದ ಶ್ರೀ ಶಿವಯೋಗಿ ಸ್ವಾಮಿಗಳು ಮಾರ್ಗದರ್ಶನದ ಮೇಲೆ ಮಠದ ಆಡಳಿತವನ್ನು ನಡೆಸಿಕೊಂಡು ಬರತೊಡಗಿ ಅವರ ಹಿರಿಯ ಗುರುಗಳು ಲಿಂಗೈಕ್ಯರಾದ ಮೇಲೆ ಎಲ್ಲಾ ಜವಾಬ್ದಾರಿಗಳನ್ನು ವಹಿಸಿಕೊಂಡು ಮಠದ ಆಡಳಿತವನ್ನು ಸಮರ್ಥವಾಗಿ ನಿರ್ವಹಿಸತೊಡಗಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಶಿವಯೋಗಿ ಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಮಠದ ಕರ್ತೃಗದ್ದುಗೆ ಸೇರಿದಂತೆ ಮಠದ ಆವರಣದಲ್ಲಿರುವ ನಾಲ್ಕು ಗದ್ದುಗೆಗಳು ನವೀಕರಣಗೊಂಡವು. ಮಠದ ಹೊಲದಲ್ಲಿರುವ ಶ್ರೀ ಕೊಟ್ಟೂರು ಸ್ವಾಮಿಗಳ ಗದ್ದುಗೆಯು ಸೇರಿದಂತೆ ಉಳಿದ ಎರಡು ಗದ್ದುಗೆಗಳನ್ನು(ಹೆಸರು ಗೊತ್ತಿಲ್ಲ) ನವೀಕರಣಗೊಳಿಸಿ ಮಠದ ಪರಂಪರೆಯ ಸ್ಮಾರಕ ಗಳಾಗಿ ರೂಪಿಸಲಾಯಿತು. ಹದಿನೈದು ಲಕ್ಷ ರೂಪಾಯಿಗಳ ಯೋಜನೆಯಲ್ಲಿ ಮಠಕ್ಕೆ ಹೊಸ ಕಟ್ಟಡವನ್ನು ರಚಿಸಲಾಗಿದೆ. ಲಕ್ಷರೂಪಾಯಿಗಳ ಯೋಜನೆಯಲ್ಲಿ ಕಲ್ಯಾಣಮಂಟಪವನ್ನು ರೂಪಿಸಲಾಗಿದೆ. ಮಠಕ್ಕೆ ಸ್ವಾವಲಂಬನೆಯನ್ನು ತಂದುಕೊಡಲು ಮಠದ ಹದಿನಾಲ್ಕು ಎಕರೆ ಜಮೀನಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಿ ಹಣ್ಣಿನ ಗಿಡಗಳು, ತೆಂಗು, ಕಬ್ಬು, ಹಾಗೂ ಭತ್ತವನ್ನು ಬೆಳೆಯಲಾಗುತ್ತಿದ್ದು ಹೆಚ್ಚು ಆದಾಯ ಬರುವಂತೆ ಮಾಡಲಾಗಿದೆ.

ಶೈಕ್ಷಣಿಕ ಕಾರ್ಯಗಳು: ಶ್ರೀ ಗುರುಪಾದೇಶ್ವರ ವಿದ್ಯಾಸಂಸ್ಥೆಯನ್ನು ೧೯೫೪ರಲ್ಲಿ ಪ್ರಾರಂಭಿಸಿ ಬಾಲಕಿಯರ ಪ್ರೌಢಶಾಲೆ, ಅಲ್ಲದೆ ವಿದ್ಯಾರ್ಥಿನಿಲಯ ಸ್ಥಾಪಿಸಿ ಗ್ರಾಮಾಂತರದ ಇಪ್ಪತ್ತೈದು ವಿದ್ಯಾರ್ಥಿಗಳಿಗೆ ಆಶ್ರಯವನ್ನು ಕಲ್ಪಿಸಲಾಗಿದೆ.

ಧಾರ್ಮಿಕ ಕಾರ್ಯಗಳು: ಗದ್ದುಗೆಗಳಿಗೆ ನಿತ್ಯ ರುದ್ರಾಭಿಷೇಕ ಪೂಜೆ, ಪ್ರತಿಅಮಾವಾಸ್ಯೆಯಲ್ಲಿ ಶಿವಾನುಭವಗೋಷ್ಠಿಯನ್ನು ಏರ್ಪಡಿಸಿ ಸಾಹಿತ್ಯ ಮತ್ತು ಧರ್ಮದ ವಿಚಾರದಲ್ಲಿ ಉಪನ್ಯಾಸ ಮತ್ತು ಉಪದೇಶಗಳನ್ನು ನಡೆಸಲಾಗುತ್ತಿದೆ. ಪ್ರತಿವರ್ಷ ಫೆಬ್ರವರಿ ತಿಂಗಳಲ್ಲಿ ಹಾನಗಲ್ಲು ಶ್ರೀ ಶಿವಕುಮಾರ ಸ್ವಾಮಿಗಳ ಸ್ಮರಣೋತ್ಸವವನ್ನು ಎರಡು ದಿನ ಏರ್ಪಡಿಸಲಾಗುತ್ತಿದೆ. ಈ ಸಂದರ್ಭದಲ್ಲಿ ನಾಡಿನ ವಿವಿಧ ವಿದ್ವಾಂಸರಿಂದ ಉಪನ್ಯಾಸ, ವಿವಿಧ ಮಠಾಧೀಶ್ವರರಿಂದ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗುತ್ತಿದೆ. ಈ ಎಲ್ಲಾ ಸಂದರ್ಭಗಳಲ್ಲಿಯೂ ಅನ್ನ ದಾಸೋಹವನ್ನು ಕಲ್ಪಿಸಲಾಗುತ್ತಿದೆ.

ಸಾಮಾಜಿಕ ಕಾರ್ಯಗಳು: ಮಠದಲ್ಲಿ ನಡೆಯುವ ವಾರ್ಷಿಕ ಕಾರ್ಯದ ಅಂಗವಾಗಿ ಉಚಿತ ಸಾಮೂಹಿಕ ವಿವಾಹಗಳು, ಉಚಿತ ನೇತ್ರಚಿಕಿತ್ಸೆ ಶಿಬಿರಗಳನ್ನು ಏರ್ಪಡಿಸಲಾಗುತ್ತಿದೆ. ಲಾತೂರು ಭೂಕಂಪದಿಂದ ಹಾನಿಗೊಳಗಾದ ಸಂತ್ರಸ್ತರಿಗೆ ನೆರವು ನೀಡಲು ಪಾದಯಾತ್ರೆಯ ಮೂಲಕ ಹಣ ಸಂಗ್ರಹಿಸಿದ್ದು ಶ್ರೀ ಶಿವಯೋಗಿ ಸ್ವಾಮಿಗಳು ಕೈಗೊಂಡ ಅನೇಕ ಸಾಮಾಜಿಕ ಕಾರ್ಯಗಳಲ್ಲಿ ಒಂದಾಗಿದೆ. ಎಲ್ಲಾ ಮತೀಯರಿಗೂ ಸ್ಪಂದಿಸುವ ಗುರುಗಳು ಮುಸ್ಲಿಮರ ಉರುಸ್ ಸಂದರ್ಭದಲ್ಲಿ ಈ ಮೂಲಕ ಹಿಂದು ಮತ್ತು ಮುಸ್ಲಿಂ ಭಾವೈಕ್ಯತೆಯನ್ನು ಬೆಳೆಸಲು ಮುಂದಾಳತ್ವವನ್ನು ವಹಿಸಿ ಉರುಸ್ಸನ್ನು ನಡೆಸಿಕೊಡುತ್ತಾರೆ.

ಪುರಾತನ ಸಾಮಗ್ರಿಗಳು: ಪುರಾತನ ಮಠವಾದ ಈ ವಿರಕ್ತ ಮಠದಲ್ಲಿ ಪರಂಪರಾಗತವಾಗಿ ಬಂದಂತಹ ಪೂಜಾ ಸಾಮಾಗ್ರಿಗಳು, ಬೆಳ್ಳಿ ಪಾದುಕೆಗಳು ಬೆತ್ತ, ಕಮಂಡಲ, ರುದ್ರಾಕ್ಷಿಮಾಲೆಗಳಿವೆ. ೧೯೩೨ ಕ್ಕಿಂತಲೂ ಹಿಂದೆ ಅಧಿಕಾರ ನಡೆಸಿದ ಶ್ರೀ ಪ್ರಭುಸ್ವಾಮಿ ಗಳಿಂದ ರಚಿತಗೊಂಡಿರುವ ಹೊತ್ತಿಗೆಯು ಲಭ್ಯವಿದೆ. ಇಂದಿಗೂ ಸಹ ಈ ಹೊತ್ತಿಗೆಯಿಂದ ಭವಿಷ್ಯವನ್ನು ಹೇಳಲಾಗುತ್ತಿದೆ.

ವಿಂಗಡಣೆ ಬೇಡ: ವೀರಶೈವ ಧರ್ಮದಲ್ಲಿ ಗುರು-ವಿರಕ್ತರೆಂದು ವಿಂಗಡಣೆಯಾಗಿದೆ. ವಿರಕ್ತರಲ್ಲಿ ಐದು ಸಮಯಗಳಾಗಿ ವಿಂಗಡಣೆಗೊಂಡು ವೀರಶೈವ ಸಮಾಜದ ಸಂಘಟನೆಯಲ್ಲಿ ತೊಡಕನ್ನು ಸೃಷ್ಟಿಸಿದೆ. ಈ ಕಾರಣಕ್ಕಾಗಿ ಸಮಯದ ವಿಂಗಡಣೆ ಬೇಡ ಎಂದು ಗುರುಗಳು ಪ್ರತಿಕ್ರಿಯಿಸುತ್ತಾರೆ. ಆಳವಾದ ಅಧ್ಯಯನ ವೈಚಾರಿಕ ಚಿಂತನೆ, ಕ್ರಿಯಾಶೀಲ ವ್ಯಕ್ತಿತ್ವವನ್ನು ಮೈಗೂಡಿಸಿ ಕೊಂಡಿರುವ ಗುರುಗಳು ವೀರಶೈವ ಧರ್ಮದ ಬೆಳವಣಿಗೆಗೆ ಸಹಾಯಕವಾಗಿ ಮಠವನ್ನು ಸಧೃಡವಾಗಿ ಬೆಳೆಸಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ.ಶಿವಯೋಗಿ ಸ್ವಾಮಿಗಳು, ಶ್ರೀ ವಿರಕ್ತಮಠ, ಬೊಮ್ಮನಹಳ್ಳಿ, ಹಾನಗಲ್ಲು ತಾ, ಹಾವೇರಿ ಜಿಲ್ಲೆ.

ಹಾನಗಲ್ಲು

ಧಾರವಾಡ ಜಿಲ್ಲೆಯಿಂದ ಬೇರ್ಪಟ್ಟ (೧೯೯೭)ಹಾವೇರಿ ಜಿಲ್ಲೆಯ ತಾಲ್ಲೂಕಿನ ಕೇಂದ್ರಸ್ಥಳವಾದ ಹಾನಗಲ್ಲು, ಜಿಲ್ಲಾ ಕೇಂದ್ರದ ಪಶ್ಚಿಮಕ್ಕೆ ನಲವತ್ತು ಕಿ.ಮೀ. ದೂರದಲ್ಲಿದೆ. ಹಾನಗಲ್ಲು ಪಟ್ಟಣವು ಹನ್ನೊಂದನೆಯ ಶತಮಾನದಿಂದ ಹದಿಮೂರನೆಯ ಶತಮಾನದವರೆಗೆ ಕದಂಬರ ರಾಜಧಾನಿಯಾಗಿ ಐತಿಹಾಸಿಕ ಸ್ಥಾನವನ್ನು ಪಡೆದುಕೊಂಡಿದೆ. ಧಾರ್ಮಿಕವಾಗಿಯೂ ತನ್ನದೇ ಆದ ವಿಶಿಷ್ಟ ಸ್ಥಾನ ಪಡೆದುಕೊಂಡಿದೆ. ಹಾನಗಲ್ಲು ಎಂಬ ಹೆಸರನ್ನು ಕೇಳಿದಾಕ್ಷಣ ತಟ್ಟನೆ ನಮ್ಮ ನೆನಪಿಗೆ ಬರುವುದು ಶ್ರೀ ಕುಮಾರ ಶಿವಯೋಗಿಗಳು. ಇಂತಹ ಮಹಾನ್ ಶಿವಯೋಗಿಯ ಕಾರ್ಯಕ್ಷೇತ್ರವಾದ ಹಾನಗಲ್ಲು ಪಟ್ಟಣವನ್ನು ಪಾಂತಿಪುರ, ವೈರಾಟಪುರ, ವಿರಾಟಕೋಟೆ, ವಿರಾಟನಗರ, ಪಾನುಂಗಲ್ ಮತ್ತು ಹಾನುಂಗಲ್ ಎಂಬ ಹೆಸರುಗಳಿಂದ ಸಂಬೋಧಿಸಲಾಗುತ್ತಿತ್ತು.

ವಿರಕ್ತಮಠ: ಐತಿಹಾಸಿಕ ಮತ್ತು ಧಾರ್ಮಿಕವಾಗಿ ಹೆಸರು ಪಡೆದ ಈ ಪಟ್ಟಣದಲ್ಲಿ, ಪುರಾತನ ಕಾಲದಲ್ಲಿ ಸ್ಥಾಪನೆಗೊಂಡ ಶ್ರೀವಿರಕ್ತ ಮಠವು ವೀರಶೈವ ಮಠಮಾನ್ಯಗಳ ಹಾಗೂ ವೀರಶೈವ ಸಮಾಜದ ಬೆಳವಣಿಗೆಯ ಕೇಂದ್ರಬಿಂದುವಾಗಿ ರೂಪುಗೊಂಡಿದೆ. ವೀರಶೈವ ಮಠಗಳು ಮತ್ತು ಸಮಾಜವು ಸಂಘಟನಾತ್ಮಕವಾಗಿ ಹಾಗೂ ಶಿಸ್ತುಬದ್ಧವಾದ ಚೌಕಟ್ಟಿನಲ್ಲಿ ಬೆಳೆಯಲು ಹಾನಗಲ್ಲಿನ ಶ್ರೀ ವಿರಕ್ತಮಠವು ಕಾರಣೀಭೂತವಾಗಿದೆ ಎಂಬುದನ್ನು ಸ್ಮರಿಸಬಹುದಾಗಿದೆ.

ಪರಂಪರೆ:
೧. ಶ್ರೀ ಮ.ನಿ.ಪ್ರ. ಫಕೀರಸ್ವಾಮಿಗಳು
೨. ಶ್ರೀ ಮ.ನಿ.ಪ್ರ. ಕುಮಾರಸ್ವಾಮಿಗಳು
೩. ಶ್ರೀ ಮ.ನಿ.ಪ್ರ. ಮಹದೇಶ್ವರಸ್ವಾಮಿಗಳು
೪. ಶ್ರೀ ಮ.ನಿ.ಪ್ರ. ಸದಾಶಿವಸ್ವಾಮಿಗಳು
೫. ಶ್ರೀ ಮ.ನಿ.ಪ್ರ. ಕುಮಾರಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆ ಬೆಳೆದು ಬಂದಿದೆ. ಶ್ರೀ ಫಕೀರ ಸ್ವಾಮಿಗಳು ತಪೋನಿಷ್ಠರಾಗಿ ಜ್ಞಾನದಾಸೋಹ ಮತ್ತು ಅನ್ನ ದಾಸೋಹವನ್ನು ನಡೆಸಿ ಹೆಚ್ಚು ಹೆಸರುವಾಸಿಯಾಗಿದ್ದರು. ಶ್ರೀ ಫಕೀರಸ್ವಾಮಿಗಳು ತಪೋಸಿದ್ಧಿಯ ಫಲದಿಂದ ವಾಕ್‌ಸಿದ್ಧಿಯನ್ನು ಪಡೆದಿದ್ದರು. ಇವರ ಆಶೀರ್ವಾದಕ್ಕೆಂದು ನಾಡಿನ ಅನೇಕ ಭಾಗಗಳಿಂದ ಭಕ್ತರು ಹಾನಗಲ್ಲಿನ ವಿರಕ್ತ ಮಠಕ್ಕೆ ಬರುತ್ತಿದ್ದರು. ವಯೋವೃದ್ಧರಾದ ಶ್ರೀ ಫಕೀರ ಸ್ವಾಮಿಗಳು ಪರಂಪರಾಗತವಾದ ಈ ಮಠಕ್ಕೆ ಉತ್ತರಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವ ಸಲುವಾಗಿ ಸಮರ್ಥ ಶಿಷ್ಯನಿಗಾಗಿ ತಪಾಸಣೆ ನಡೆಸಿದ್ದರು. ಇಂತಹ ಸಂದರ್ಭದಲ್ಲಿ ಉಳವಿಯ ಗುರುಬಸವಯ್ಯ ಹಾಗೂ ಕೆಂಡಪ್ಪಗೌಡರು ಶ್ರೀ ಫಕೀರಸ್ವಾಮಿಗಳ ದರ್ಶನಕ್ಕೆಂದು ಬಂದಾಗ ಸಮರ್ಥ ಉತ್ತರಾಧಿಕಾರಿಗಳ ವಿಚಾರವಾಗಿ ಮಾತನಾಡಿದರು. ಹಾಲಯ್ಯನವರ (ಶ್ರೀ ಕುಮಾರ ಸ್ವಾಮಿಗಳು) ಶಿವಪೂಜಾನಿಷ್ಠೆ ಮತ್ತು ವೈರಾಗ್ಯಶೀಲತೆಯ ಗುಣಗಳನ್ನು ಶ್ರೀ ಫಕೀರ ಸ್ವಾಮಿಗಳಿಗೆ ತಿಳಿಸಿದರು. ಆಗ ಗುರುಗಳು ಹಾಲಯ್ಯನವರನ್ನು ತಕ್ಷಣ ಕರೆದುಕೊಂಡು ಬರುವಂತೆ ಸೂಚನೆಯಿತ್ತರು.

ಹಾನಗಲ್ಲಿಗೆ ಆಗಮನ: ಗುರುಬಸವಯ್ಯ ಹಾಗೂ ಕೆಂಡಪ್ಪಗೌಡರು ಉಳವಿಗೆ ಬಂದು ಹಾನಗಲ್ಲಿಗೆ ಹೋಗುವ ವಿಚಾರವನ್ನು ಶ್ರೀ ಹಾಲಯ್ಯನವರಿಗೆ ತಿಳಿಸಿ ಮರುದಿನವೇ ಹಾನಗಲ್ಲಿಗೆ ಕರೆತಂದರು. ಶ್ರೀ ಫಕೀರ ಸ್ವಾಮಿಗಳು ಶ್ರೀ ಹಾಲಯ್ಯನವರನ್ನು ನೋಡಿದ ಮೊದಲ ನೋಟದಲ್ಲಿಯೇ ಗುರುತ್ವದ ಶಕ್ತಿ ಹಾಲಯ್ಯನಲ್ಲಿ ಇರುವುದನ್ನು ಗಮನಿಸಿ ಸೂಕ್ತ ಉತ್ತರಾಧಿಕಾರಿಯಾಗ ಬಹುದೆಂದು ನಿರ್ಧರಿಸಿದರು. ನಂತರ ತಮ್ಮ ಹತ್ತಿರ ಕೂರಿಸಿಕೊಂಡು ಮಠದ ಉತ್ತರಾಧಿಕಾರಿಗಳಾಗಬೇಕೆಂದು ಕೇಳಿ, ಹಾಲಯ್ಯ ನವರಲ್ಲಿದ್ದ ಮಾನಸಿಕ ತೊಡಕುಗಳನ್ನು ನಿವಾರಣೆಮಾಡಿ ಒಪ್ಪಿಗೆ ಪಡೆದುಕೊಂಡರು. ವಯೋವೃದ್ಧರಾದ ಶ್ರೀ ಫಕೀರಸ್ವಾಮಿಗಳ ಮಾತಿಗೆ ಎದುರುತ್ತರವನ್ನು ನೀಡಲಾಗದ ಶ್ರೀ ಹಾಲಯ್ಯನವರು ಹಾನಗಲ್ಲಿನಲ್ಲಿಯೇ ಉಳಿದು ಗುರುಗಳ ಸೇವೆಯನ್ನು ಮಾಡತೊಡಗಿದರು. ಈ ಸಂದರ್ಭದಲ್ಲಿಯೇ ಮಠದ ಎಲ್ಲಾ ಜವಾಬ್ದಾರಿಗಳನ್ನು ಶ್ರೀ ಕುಮಾರ ಸ್ವಾಮಿಗಳಿಗೆ ಒಪ್ಪಿಸಿದರು.

ಜೋಯಿಸರ ಹರಳಹಳ್ಳಿಯ ಜ್ಯೋತಿ: ರಾಣೆಬೆನ್ನೂರು ತಾಲ್ಲೂಕಿನ ಜೋಯಿಸರ ಹರಳಹಳ್ಳಿಯಲ್ಲಿ ೧೮೬೭ರಲ್ಲಿ ಶ್ರೀ ಬಸವಯ್ಯ ಮತ್ತು ಶ್ರೀಮತಿ ನೀಲಮ್ಮನವರ ಪುತ್ರರಾಗಿ ಜನಿಸಿದ ಕುಮಾರ ಶಿವಯೋಗಿಗಳು ಬಡತನದ ಬೇಗೆಯಲ್ಲಿ ಬೆಳಗಿದ ಮಹಾನು ಭಾವರು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಜ್ಜರಿ ಗ್ರಾಮದಲ್ಲಿ ಮುಗಿಸಿ, ಆಧ್ಯಾತ್ಮ ಚಿಂತನೆಯಲ್ಲಿ ತೊಡಗಿ ಸಮಾಜ ಸೇವೆಯ ಬಗ್ಗೆ ತಮ್ಮ ಮನಸ್ಸನ್ನು ಒಪ್ಪಿಸಿ ಬದುಕನ್ನು ರೂಪಿಸಿಕೊಂಡರು. ಹುಬ್ಬಳ್ಳಿಯ ಸಿದ್ಧಾರೂಢರ ಮಠದಲ್ಲಿ ನೆಲೆಸಿ ಆಧ್ಯಾತ್ಮದ ಬಗ್ಗೆ ಚಿಂತಿಸತೊಡಗಿ ಎಲ್ಲರ ದೃಷ್ಟಿಗೆ ಒಳಗಾದರು. ಸಿದ್ಧಾರೂಢರ ಮಠದಲ್ಲಿ ಪರಮಾನುಭವಬೋಧೆ, ವಿಚಾರಸಾಗರ ಮುಂತಾದ ಆಧ್ಯಾತ್ಮಿಕ ಗ್ರಂಥಗಳನ್ನು ಅಭ್ಯಾಸಮಾಡಿದರು. ಅಲ್ಲಿ ನಡೆಯುತ್ತಿದ್ದ ಇಷ್ಟಲಿಂಗ ತ್ಯಾಗ ಇವರಿಗೆ ಸರಿ ಬರಲಿಲ್ಲ. ಈ ಕಾರಣದಿಂದ ರುದ್ರಾಕ್ಷಿ ಮಠದಲ್ಲಿ ಆಶ್ರಯವನ್ನು ಪಡೆದು ಪೂಜೆ ಪ್ರಸಾದಗಳನ್ನು ಸ್ವೀಕರಿಸಿ ಕಲಿಕೆಗಾಗಿ ಸಿದ್ಧಾರೂಢರ ಮಠಕ್ಕೆ ಬರುತ್ತಿದ್ದರು. ಇಂತಹ ಸಂದರ್ಭದಲ್ಲಿ ಚಾಮರಾಜನಗರ ಜಿಲ್ಲೆಯ ಯಳಂದೂರು ಶ್ರೀ ಬಸವಲಿಂಗ ಸ್ವಾಮಿಗಳ ದರ್ಶನವಾಗಿ ಗುರುಗಳ ಜತೆ ಸೇವೆಗೆಂದು ಲೋಕಸಂಚಾರಕ್ಕೆ ಹೊರಟರು. ಈ ಸಂದರ್ಭದಲ್ಲಿ ವೀರಶೈವ ಧರ್ಮದ ಆಚಾರವಿಚಾರಗಳು ಮತ್ತು ಆಳ ಅರಿವನ್ನು ಅರ್ಥೈಸಿಕೊಂಡರು. ಯಳಂದೂರು ಶ್ರೀ ಬಸವಲಿಂಗ ಸ್ವಾಮಿಗಳ ಮಾರ್ಗದರ್ಶನದಲ್ಲಿ ಸಮರ್ಥ ಧರ್ಮಗುರುವಾಗಿ ಬೆಳೆದ ಶ್ರೀ ಕುಮಾರ ಶಿವಯೋಗಿಗಳು ಹಾನಗಲ್ಲು ವಿರಕ್ತ ಮಠಕ್ಕ ದೊರೆತಿದ್ದು ಒಂದು ಯೋಗಾಯೋಗದ ಫಲವೆಂದು ಹೇಳಬಹುದು.

ವೀರಶೈವ ಮಹಾಸಭೆ ಸ್ಥಾಪನೆ: ವೀರಶೈವ ಸಮಾಜದ ಬಗ್ಗೆ ಅಪಾರ ಕಾಳಜಿ ಮತ್ತು ಕಳಕಳಿಯನ್ನು ಇಟ್ಟುಕೊಂಡಿದ್ದ ಶ್ರೀಕುಮಾರ ಶಿವಯೋಗಿಗಳು ಸಮಾಜದ ಒಗ್ಗಟ್ಟಿಗೆ ಹಾಗೂ ಪ್ರಗತಿಗೆ ಗಮನಕೊಟ್ಟು ಸಂಘಟನಾತ್ಮಕ ಶಕ್ತಿಯನ್ನು ರೂಪಿಸಲು

ಕ್ರಿ.ಶ.೧೯೦೪ ರಲ್ಲಿ ಅಖಿಲಭಾರತ ವೀರಶೈವ ಮಹಾಸಭೆಯನ್ನು ಸ್ಥಾಪಿಸಿದರು. ವೀರಶೈವ ಧರ್ಮ ವಿಶ್ವಧರ್ಮವಾಗಬೇಕು ಎಂಬ ಮಹಾದಾಸೆಯನ್ನು ಇಟ್ಟುಕೊಂಡಿದ್ದರು. ಸಮಾಜದ ಸಂಘಟನೆಗಾಗಿ ನಾಡನ್ನೆಲ್ಲಾ ಸುತ್ತಿ ವೀರಶೈವ ಮಹಾಸಭಾದ ವತಿಯಿಂದ ಶಿಕ್ಷಣ ಸಂಸ್ಥೆಗಳನ್ನು ತೆರೆಯಲು ಪ್ರೋತ್ಸಾಹವನ್ನು ನೀಡಿದ್ದಲ್ಲದೆ, ಕಲಿಯುವ ವೀರಶೈವ ಮಕ್ಕಳಿಗೆ ನೆರವು ಕೊಡಿಸುವುದು ಇನ್ನೂ ಮುಂತಾದ ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಮಾಜದ ಅಭಿವೃದ್ಧಿಗೆ ಹಗಲಿರುಳು ದುಡಿದ ಈ ಮಹಾ ಚೇತನವನ್ನು ಯಾರೂ ಮರೆಯಲಾರರು.

ಶಿವಯೋಗ ಮಂದಿರ ಸ್ಥಾಪನೆ: ವೀರಶೈವ ಸಮಾಜದ ಧಾರ್ಮಿಕ ಕೇಂದ್ರಗಳಾಗಿದ್ದ ಮಠ ಮಾನ್ಯಗಳಲ್ಲಿ ಸಮರ್ಥ ವಟು ಗಳಿಲ್ಲದೆ ಧರ್ಮಪ್ರಚಾರ ಹಾಗೂ ಧಾರ್ಮಿಕ ಉಪದೇಶಗಳು ಸಮರ್ಥವಾಗಿ ನಡೆಯದೇ ಹೋದ ವಿಚಾರವನ್ನು ಗಮನಿಸಿದ ಶ್ರೀ ಕುಮಾರ ಶಿವಯೋಗಿಗಳು, ೧೯೦೯ರಲ್ಲಿ ಬಾದಾಮಿ ತಾಲ್ಲೂಕಿನಲ್ಲಿ ಶಿವಯೋಗ ಮಂದಿರವನ್ನು ಸ್ಥಾಪಿಸುತ್ತಾರೆ. ಶಿವಯೋಗ ಮಂದಿರವನ್ನು ವೀರಶೈವ ಮಠಗಳಿಗೆ ಉತ್ತರಾಧಿಕಾರಿಯಾಗಿ ಆಯ್ಕೆಯಾಗಬಲ್ಲಂತಹ ವಟುಗಳ ತರಬೇತಿ ಕೇಂದ್ರವನ್ನಾಗಿ ರೂಪಿಸಿ, ಸಮರ್ಥ ವಟುಗಳಿಗೆ ಧಾರ್ಮಿಕವಾಗಿ ತರಬೇತಿಯನ್ನು ನೀಡುವುದು, ವೀರಶೈವ ಧರ್ಮದ ಆಚಾರವಿಚಾರಗಳನ್ನು ಶಾಸ್ತ್ರೀಯ ಅಧ್ಯಯನದಿಂದ ತಿಳಿಹೇಳುವ ಕಾರ್ಯವನ್ನು ರೂಪಿಸಲಾಯಿತು.

ಗಾನಯೋಗಿಗಳಿಗೆ ಆಶ್ರಯ: ಶ್ರೀ ಕುಮಾರ ಶಿವಯೋಗಿಗಳು ಹಾನಗಲ್ಲು ವಿರಕ್ತ ಮಠದ ಮತ್ತು ಸಮಸ್ತ ಸಮಾಜದ ಹೊಣೆಯನ್ನು ಹೊತ್ತುಕೊಂಡು ಲೋಕಸಂಚಾರಮಾಡುತ್ತಿದ್ದ ಸಂದರ್ಭದಲ್ಲಿ ಹಾನಗಲ್ಲು ತಾಲ್ಲೂಕಿನ ಕಾಡಶೆಟ್ಟಿ ಹಳ್ಳಿಯ ಗುರುಪಾದಯ್ಯನವರ ಅಂಧ ಮಕ್ಕಳಾದ ಗುರುಬಸವಯ್ಯ ಮತ್ತು ಗದ್ದಿಗಯ್ಯರು ತಮ್ಮ ಕಂಠ ಸಿರಿಯಿಂದ ಗುರುಗಳ ಮನಸ್ಸನ್ನು ಸೆಳೆದರು. ನಂತರ ಇವರಿಗೆ ಸಂಸ್ಕಾರವನ್ನು ನೀಡಿ ಸಂಗೀತಾಭ್ಯಾಸ ಮಾಡಿಸಲು ತಮ್ಮ ಮಠಕ್ಕೆ ಕರೆದೊಯ್ದರು. ಮಠದಲ್ಲಿ ಅಂಧಮಕ್ಕಳಿಗಿಬ್ಬರಿಗೂ ಸಂಗೀತ ವಿದ್ವಾಂಸರಿಂದ ಪಾಠ ಹೇಳಿಸಿ ಪ್ರತಿಭಾವಂತರಾಗಿ ಬೆಳೆಯಲು ಅವಕಾಶವನ್ನು ಕಲ್ಪಿಸಿಕೊಟ್ಟರು. ಈ ಸಂದರ್ಭದಲ್ಲಿ ಗುರುಬಸವಯ್ಯ ಕಾಲರಾ ರೋಗದಿಂದ ಅಸುನೀಗಿದರು. ತಮ್ಮ ಸಹೋದರನ ಅಗಲಿಕೆಯಿಂದ ಗದ್ದಿಗಯ್ಯನವರು ಮಾನಸಿಕನೋವು ಅನುಭವಿಸುತ್ತಿದ್ದುದನ್ನು ಗಮನಿಸಿದ ಶ್ರೀ ಕುಮಾರ ಶಿವಯೋಗಿಗಳು ಅವರಿಗೆ ಸ್ಥೈರ್ಯ ನೀಡಿ ಬೆಳೆಸಿದರು. ಮುಂದೆ ಗದ್ದಿಗಯ್ಯನವರಿಗೆ ನಾಲ್ಕನೆಯ ವೀರಶೈವ ಮಹಾಸಭೆಯ ಅಧಿವೇಶನದಲ್ಲಿ 'ಪಂಚಾಕ್ಷರಿ' ಎಂದು ನಾಮಕರಣ ಮಾಡಿ ಗವಾಯಿ ಎಂಬ ಬಿರುದನ್ನು ನೀಡಿ ಆಶೀರ್ವದಿಸಿದರು. ಇಂತಹ ಅನೇಕ ಮಹತ್ ಸಾಧನೆಗಳನ್ನು ಸಾಧಿಸಿ ತಮ್ಮ ಅರವತ್ತಮೂರನೆಯ ವಯಸ್ಸಿನಲ್ಲಿ (೧೯೩೦) ಲಿಂಗೈಕ್ಯರಾದರು.

ಶ್ರೀ ಕುಮಾರ ಶಿವಯೋಗಿಗಳ ದೂರದೃಷ್ಟಿಯಿಂದ ರೂಪಿತಗೊಂಡ ಅಖಿಲಭಾರತ ವೀರಶೈವ ಮಹಾಸಭಾ ಮತ್ತು ಶಿವಯೋಗ ಮಂದಿರಗಳು ವೀರಶೈವಧರ್ಮದ ಅಭ್ಯುದಯದ ಸಂಕೇತಗಳಾಗಿ ಇಂದು ನಮ್ಮ ಮುಂದಿವೆ. ಇಂತಹ ಸಾಧಕರನ್ನು ನೀಡಿದ ವಿರಕ್ತ ಮಠವು ಇಂದಿಗೂ ಸಹ ಸಮಾಜದ ಪ್ರಗತಿಯ ಬಗ್ಗೆ ಚಿಂತಿಸುತ್ತಾ ಬೃಹದಾಕಾರವಾಗಿ ಬೆಳೆದು ನಿಂತಿದೆ. ಶ್ರೀ ಕುಮಾರ ಶಿವಯೋಗಿಗಳು ಲಿಂಗೈಕ್ಯರಾದ ನಂತರ ಶ್ರೀ ಮಹೇಶ್ವರ ಸ್ವಾಮಿಗಳು ಹಾನಗಲ್ಲು ವಿರಕ್ತಮಠದ ಉತ್ತರಾಧಿಕಾರಿಗಳಾಗಿ ಅಧಿಕಾರವನ್ನು ವಹಿಸಿಕೊಂಡು ಕೇವಲ ಕೆಲವೇ ದಿನಗಳಲ್ಲಿ ಲಿಂಗೈಕ್ಯರಾಗುತ್ತಾರೆ. ಇವರ ನಂತರ ಶ್ರೀಸದಾಶಿವ ಸ್ವಾಮಿಗಳು ಈ ಮಠದ ಅಧಿಕಾರವನ್ನು ವಹಿಸಿಕೊಂಡು ಮಠವನ್ನು ಮುನ್ನಡೆಸಿದರು. ಶ್ರೀ ಸದಾಶಿವ ಸ್ವಾಮಿಗಳು ಹುಬ್ಬಳ್ಳಿ ತಾಲ್ಲೂಕಿನ ಅರಳಿಕಟ್ಟೆ ಗ್ರಾಮದ ಶ್ರೀ ಗಂಗಯ್ಯ ಮತ್ತು ಶ್ರೀ ರಾಚಯ್ಯನವರ ಪುತ್ರರಾಗಿ ಜನಿಸಿ, ಶಿವಯೋಗ ಮಂದಿರದಲ್ಲಿ ಶ್ರೀಕುಮಾರ ಶಿವಯೋಗಿಗಳ ಕರುಣೆಯಿಂದ ಬೆಳೆದಿದ್ದರು. ಶ್ರೀ ಸದಾಶಿವ ಸ್ವಾಮಿಗಳು ಸಂಸ್ಕೃತ ಸಾಹಿತ್ಯದಲ್ಲಿ ಅಪಾರ ಪಾಂಡಿತ್ಯವನ್ನು ಗಳಿಸಿ ಆಗಮ, ಉಪನಿಷತ್ತು ಮತ್ತು ವೇದಗಳನ್ನು ಚೆನ್ನಾಗಿ ಅಧ್ಯಯನ ಮಾಡಿ ಪಾಂಡಿತ್ಯವನ್ನು ಸಂಪಾದಿಸಿಕೊಂಡಿದ್ದರು. ಮಹಾತಪಸ್ವಿಗಳೂ, ಪೂಜಾನಿಷ್ಠರೂ ಆಗಿದ್ದ ಶ್ರೀ ಸದಾಶಿವ ಸ್ವಾಮಿಗಳು ೧೯೮೩ರಲ್ಲಿ ಬಸವನ ಬಾಗೇವಾಡಿಯಲ್ಲಿ ಅರವತ್ತ ಮೂರು ಮಂಟಪ ಪೂಜೆಯನ್ನು ಮಾಡಿಸಿ ಅದೇ ವರ್ಷ ಲಿಂಗೈಕ್ಯರಾದರು.

ಅಭಿನವ ಕುಮಾರಸ್ವಾಮಿಗಳು: ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ಕಲ್ಕೆರೆ ಗ್ರಾಮದ ಶಿವಮೂರ್ತಯ್ಯ ಮತ್ತು

ಗಂಗಮ್ಮನವರ ಮಗನಾಗಿ ಜನಿಸಿದ ವೇದಮೂರ್ತಿ ಪ್ರಾಥಮಿಕ ಶಿಕ್ಷಣವನ್ನು ಕಲ್ಕೆರೆಯಲ್ಲಿ, ಪ್ರೌಢಶಿಕ್ಷಣವನ್ನು ಗಿರಿಯಾಪುರದಲ್ಲಿ ಮುಗಿಸಿ ಶ್ರೀ ಸದಾಶಿವ ಸ್ವಾಮಿಗಳ ಕೃಪಾಶೀರ್ವಾದಕ್ಕೆ ಒಳಗಾಗಿ, ಧಾರ್ಮಿಕ ವಿದ್ಯಾಕೇಂದ್ರವಾದ ಶಿವಯೋಗ ಮಂದಿರಕ್ಕೆ ತೆರಳಿ, ಸಂಸ್ಕೃತ ಮತ್ತು ವೇದಗಳನ್ನು ಅಧ್ಯಯನ ಮಾಡಿದರು. ಚಿಕ್ಕ ವಯಸ್ಸಿನಲ್ಲಿಯೇ ತಮ್ಮ ವಿದ್ವತ್‌ಪೂರ್ಣ ಪ್ರತಿಭೆಯಿಂದ ಉನ್ನತ ಪರಂಪರೆಯ ಹಾನಗಲ್ಲು ವಿರಕ್ತ ಮಠದ ಅಧಿಕಾರವನ್ನು ಶ್ರೀ ಕುಮಾರ ಸ್ವಾಮಿಗಳು ಎಂಬ ಅಭಿದಾನದೊಂದಿಗೆ ೧೯೮೭ ರಲ್ಲಿ ವಹಿಸಿಕೊಂಡರು. ನಗುಮುಖದ, ಮೃದು ಭಾಷೆಯ ಶ್ರೀ ಕುಮಾರ ಸ್ವಾಮಿಗಳು ಮಗುವಿನ ಮುಗ್ಧತೆಯ ಭಾವದವರು ಪರಂಪರೆಯ ಎಲ್ಲಾ ಗುರುಗಳ ಗುಣಗಳನ್ನು ಮೈಗೂಡಿಸಿಕೊಂಡು ಬೆಳೆದಿರುವ ಶ್ರೀ ಕುಮಾರ ಸ್ವಾಮಿಗಳು 'ಅಭಿನವ ಕುಮಾರ ಶಿವಯೋಗಿಗಳು' ಎಂದು ಖ್ಯಾತಿ ಪಡೆದಿದ್ದಾರೆ.

ಶೀಲವಂತರು: ಶ್ರೀ ಸದಾಶಿವ ಸ್ವಾಮಿಗಳ ಕರಕಮಲ ಸಂಜಾತರಾಗಿ ಬೆಳೆದ ಶ್ರೀ ಕುಮಾರ ಸ್ವಾಮಿಗಳು ಶಿವಪೂಜಾನಿಷ್ಠರೂ ಹಾಗೂ ಶೀಲವಂತರು. ಸಾಹಿತ್ಯಾಸಕ್ತರಾಗಿ ಧರ್ಮವನ್ನು ವಾಸ್ತವ ನೆಲೆಗಟ್ಟಿನಲ್ಲಿ ಹಾಗೂ ವೈಚಾರಿಕ ಹಿನ್ನೆಲೆಯಲ್ಲಿ ಪರಾಮರ್ಶಿಸುವ ಇವರು, ವೀರಶೈವ ಧರ್ಮವನ್ನು ಶರಣ ಸಂಸ್ಕೃತಿಯಂತೆ ಬೆಳೆಸುತ್ತಾ ಬಂದಿದ್ದಾರೆ. ಕ್ರಿಯಾಶೀಲ ಗುಣಗಳಿಂದ ತಮ್ಮ ವ್ಯಕ್ತಿತ್ವವನ್ನು ಹೆಚ್ಚಿಸಿಕೊಂಡಿದ್ದಾರೆ. ವೀರಶೈವ ಧರ್ಮದ ಘನತೆಯನ್ನು ಉಳಿಸಿ ಬೆಳೆಸುವಲ್ಲಿ ಯಶಸ್ವಿಯಾಗಿದ್ದಾರೆ. ಹುಬ್ಬಳ್ಳಿಯ ಮೂರು ಸಾವಿರ ಮಠದ ಜಗದ್ಗುರುಗಳಾಗಿ ೧೯೯೫ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದು ಇವರ ಘನತೆಗೆ ಸಿಕ್ಕ ಗೌರವವಾಗಿದೆ.

ಶೈಕ್ಷಣಿಕ ಸೇವೆ: ಶಿಕ್ಷಣದ ಮೂಲಕ ಸಮಾಜವನ್ನು ಸರಿದಾರಿಗೆ ತರಬಹುದೆಂಬ ಮಹಾದಾಸೆಯಿಂದ ಮಠದ ಆವರಣದಲ್ಲಿ ಪ್ರೌಢಶಾಲೆ ಮತ್ತು ಬಿ.ಎಡ್ ಕಾಲೇಜನ್ನು ಪ್ರಾರಂಭಿಸಲಾಗಿದೆ. ಜತೆಗೆ ಸಂಗೀತ ಪಾಠಶಾಲೆಯನ್ನು ತೆರೆದಿದ್ದು ಅನೇಕ ಕಲಾವಿದರನ್ನು ಸೃಷ್ಟಿ ಮಾಡುವಲ್ಲಿ ಹಾನಗಲ್ಲು ವಿರಕ್ತ ಮಠವು ಯಶಸ್ವಿಯಾಗಿದೆ. ಪ್ರತಿ ವರ್ಷ ನಿವೃತ್ತರಾಗುವ ತಾಲ್ಲೂಕಿನ ಎಲ್ಲಾ ಶಿಕ್ಷಕರನ್ನು ಮಠಕ್ಕೆ ಬರಮಾಡಿಕೊಂಡು ಸನ್ಮಾನಿಸುವ ಕಾರ್ಯಕ್ರಮ ಬಹಳ ವಿನೂತನವಾಗಿದೆ.

ಧಾರ್ಮಿಕ ಕೆಲಸಗಳು: ನಿತ್ಯ ಗದ್ದುಗೆಪೂಜೆ, ಪ್ರತಿ ತಿಂಗಳು ಅಮಾವಾಸ್ಯೆಯ ದಿನ ವಿಶೇಷ ಪೂಜೆ, ಶಿವಾನುಭವ ಗೋಷ್ಠಿಯನ್ನು ಏರ್ಪಡಿಸಲಾಗುತ್ತಿದೆ. ಪ್ರತಿ ವರ್ಷ ಹಿರಿಯ ಗುರುಗಳಾದ ಶ್ರೀ ಕುಮಾರ ಶಿವಯೋಗಿಗಳ ಪುಣ್ಯ ತಿಥಿಯನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಮಠದಲ್ಲಿ ಸಂದರ್ಭಕ್ಕನುಗುಣವಾಗಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಕೀರ್ತನೆ, ಭಜನೆ ಮೂಲಕ ಧರ್ಮಪ್ರಸಾರದ ಕಾರ್ಯವನ್ನು ನಡೆಸಲಾಗುತ್ತಿದೆ. ಗುರುಗಳು ಭಕ್ತರ ಮನೆಮನೆಯ ಧಾರ್ಮಿಕ ಕಾರ್ಯ ಕ್ರಮಗಳಲ್ಲಿ ಪಾಲ್ಗೊಂಡು ಧರ್ಮೋಪದೇಶವನ್ನು ಮಾಡುತ್ತಾ ಭಕ್ತರಲ್ಲಿ ಧಾರ್ಮಿಕ ಸಂಸ್ಕಾರವನ್ನು ಬೆಳೆಸುತ್ತಿದ್ದಾರೆ.

ವಿಳಾಸ: ಶ್ರೀ ಮ.ನಿ.ಪ್ರ. ಕುಮಾರ ಸ್ವಾಮಿಗಳು, ಶ್ರೀ ವಿರಕ್ತಮಠ, ಹಾನಗಲ್ಲು, ಹಾನಗಲ್ಲು ತಾಲ್ಲೂಕು.

ಹುಲ್ಲತ್ತಿ

ಹಾನಗಲ್ಲು ತಾಲ್ಲೂಕಿನ ಹುಲ್ಲತ್ತಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹದಿಮೂರು ಕಿ. ಮೀ. ದೂರದಲ್ಲಿದೆ. ಇಲ್ಲಿ ಶ್ರೀ ದಿಂಗಾಲಸ್ವಾಮಿ ಮಠವು ಅಸ್ತಿತ್ವದಲ್ಲಿದೆ.

ದಿಂಗಾಲಸ್ವಾಮಿಮಠ: ಹುಲ್ಲತ್ತಿ ಗ್ರಾಮದ ವಾಯುವ್ಯದ ಹೊರಭಾಗದಲ್ಲಿ ಸ್ಥಾಪನೆಯಾಗಿರುವ ದಿಂಗಾಲಸ್ವಾಮಿ ಮಠವು ವಿರಕ್ತ ಸಂಪ್ರದಾಯದ ಮಠವಾಗಿದ್ದು, ಶಿರಹಟ್ಟಿ ತಾಲ್ಲೂಕಿನ ಬಾಲಿಹೊಸೂರು ಮಠದ ಶಾಖಾಮಠವಾಗಿ ಬೆಳೆದಿದೆ.

ಮಠಸ್ಥಾಪನೆ: ಪುರಾತನ ಕಾಲದಲ್ಲಿ ಸ್ಥಾಪನೆಯಾಗಿರುವ ಈ ಮಠವು ಕರ್ತೃಗುರುಗಳಾದ ಶ್ರೀ ದಿಂಗಾಲೇಶ್ವರ ಸ್ವಾಮಿಗಳಿಂದ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದ್ದು, ಈ ಮಠಕ್ಕೆ ಕರ್ತೃಗುರುಗಳ ಹೆಸರನ್ನೇ ಸಂಬೋಧಿಸಲಾಗಿದೆ. ಉತ್ತರದ ಕಡೆಯಿಂದ ಲೋಕಸಂಚಾರವನ್ನು ಕೈಗೊಂಡು ನಂತರ ಈ ಗ್ರಾಮದಲ್ಲಿ ಬಂದು ನೆಲೆನಿಂತ ದಿಂಗಾಲೇಶ್ವರರು ಇಲ್ಲಿನ ಪ್ರಶಾಂತ ವಾತಾವರಣದಲ್ಲಿ ದೀರ್ಘ ಅನುಷ್ಠಾನ ಕೈಗೊಂಡು ಮಠವನ್ನು ಸ್ಥಾಪಿಸಿದ್ದಾರೆ. ಮಹಾ ಪವಾಡಪುರುಷರಾದ ದಿಂಗಾಲೇಶ್ವರರು

ಬಾಲಿಹೊಸೂರು ಮತ್ತು ಹುಲ್ಲತ್ತಿ ಗ್ರಾಮಗಳಲ್ಲಿ ಮಠವನ್ನು ಸ್ಥಾಪಿಸಿ, ಎರಡೂ ಕಡೆ ಧಾರ್ಮಿಕ ಕಾರ್ಯಗಳು ನಡೆಯುವಂತೆ ವ್ಯವಸ್ಥೆಗೊಳಿಸಿದ್ದರು. ಪವಾಡ ಪುರುಷರಾದ ಗುರುಗಳು ಬೆಳಿಗ್ಗೆ ಹುಲ್ಲತ್ತಿಯ ಮಠದಲ್ಲಿ ಪೂಜಾಕಾರ್ಯವನ್ನು ಮುಗಿಸಿ ಅದೃಶ್ಯರಾಗಿ ಬಾಲಿಹೊಸೂರಿಗೆ ಬಂದು ಇಲ್ಲಿಯೂ ಪೂಜಾ ಕಾರ್ಯವನ್ನು ನೆರವೇರಿಸುತ್ತಿದ್ದರೆಂದು ಜನಪದ ಕಥೆಗಳು ಹೇಳುತ್ತವೆ. ಇವರು ಬಾಲಿಹೊಸೂರಿನಲ್ಲಿ ಲಿಂಗೈಕ್ಯರಾದ ಮೇಲೆ ತೋರುಗದ್ದುಗೆಯನ್ನು ಇಲ್ಲಿ ಸ್ಥಾಪನೆ ಮಾಡಲಾಗಿದೆ.

ಧಾರ್ಮಿಕ ಕಾರ್ಯಗಳು: ಬಾಲಿಹೊಸೂರು ಮಠದ ಮಠಾಧ್ಯಕ್ಷರೇ ಈ ಮಠದ ಆಡಳಿತವನ್ನು ನೋಡಿಕೊಂಡು ಹೋಗುತ್ತಿದ್ದು ನಿತ್ಯ ಪೂಜೆ, ಶ್ರಾವಣಮಾಸದಲ್ಲಿ ಪ್ರತಿದಿನ ರುದ್ರಾಭಿಷೇಕ, ಫೆಬ್ರವರಿ ತಿಂಗಳಲ್ಲಿ ದಿಂಗಾಲೇಶ್ವರರ ಪುಣ್ಯಾರಾಧನೆ, ಪ್ರತಿ ಅಮಾವಾಸ್ಯೆಯಂದು ಬಾಲಿಹೊಸೂರಿ ನಿಂದ ಗುರುಗಳು ಆಗಮಿಸಿ ವಿಶೇಷ ಪೂಜೆಯನ್ನು ಏರ್ಪಡಿಸುತ್ತಾರೆ. ಅಂದು ನೂರಾರು ಜನ ಭಕ್ತರು ಸೇರುತ್ತಾರೆ. ಈ ಸಂದರ್ಭದಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ.ಸ್ವಾಮಿಗಳು, ಶ್ರೀ ದಿಂಗಾಲೇಶ್ವರ ಮಠ, ಹುಲ್ಲತ್ತಿ, ಹಾನಗಲ್ಲು ತಾಲ್ಲೂಕು, ಹಾವೇರಿ ಜಿಲ್ಲೆ.

ಹೊಂಕಣ

ಹಾನಗಲ್ಲು ತಾಲ್ಲೂಕಿನ ಹೊಂಕಣವು ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಹದಿನೆಂಟು ಕಿ. ಮೀ.ದೂರದಲ್ಲಿದೆ. ಇಲ್ಲಿ ಶ್ರೀ ಗುಬ್ಬಿಮಠವು ಅಸ್ತಿತ್ವದಲ್ಲಿದೆ.

ಗುಬ್ಬಿಮಠ: ಹೊಂಕಣ ಗ್ರಾಮದಲ್ಲಿ ಶ್ರೀ ನಿರಂಜನ ಶಿವಯೋಗಿ ಗುಬ್ಬಿ (ಅಜ್ಜ) ನಂಜುಂಡೇಶ್ವರರು ಸ್ಥಾಪಿಸಲ್ಪಟ್ಟ ಮಠವು ಅಸ್ತಿತ್ವದಲ್ಲಿದೆ. ವರದಾ ನದಿಯ ದಡದಲ್ಲಿ ಸ್ಥಾಪನೆಗೊಂಡಿರುವ ಶ್ರೀ ಗುಬ್ಬಿಮಠವು ಇತ್ತೀಚಿನ ಕಾಲಮಾನದಲ್ಲಿ ಸ್ಥಾಪನೆಗೊಂಡಿದ್ದಾಗಿದೆ. ತುಮಕೂರು ಜಿಲ್ಲೆಯ ಗುಬ್ಬಿಯಲ್ಲಿ ಜನಿಸಿದ ಶ್ರೀ ನಂಜುಂಡೇಶ್ವರ ಶಿವಯೋಗಿಗಳು ಲೋಕ ಸಂಚಾರವನ್ನು ಕೈಗೊಂಡು ಈ ಪ್ರಾಂತ್ಯಕ್ಕೆ ಬಂದು ಇಲ್ಲಿ ನೆಲೆಸುತ್ತಾರೆ. ಇಲ್ಲಿ ನೆಲೆಗೊಂಡ ಶ್ರೀ ಶಿವಯೋಗಿಗಳು ೧೯೨೭ರಲ್ಲಿ ನಾಗನದಿ ಮತ್ತು ವರದಾ ನದಿಗಳ ಸಂಗಮ ಕ್ಷೇತ್ರದಲ್ಲಿ ಇರುವ ಹೊಳೆಲಿಂಗೇಶ್ವರ ದೇವಸ್ಥಾನದ ಜಾತ್ರೆಯನ್ನು ಪ್ರಾರಂಭಿಸುತ್ತಾರೆ. ಪ್ರತಿವರ್ಷ ಈ ಜಾತ್ರೆಯನ್ನು ಆಚರಿಸಲು ಸಕಲ ವ್ಯವಸ್ಥೆಯನ್ನು ಮಾಡತೊಡಗಿದರು. ಜಾತ್ರೆಯ ಕಾರ್ಯಗಳೆಲ್ಲಾ ಮುಗಿದ ಮೇಲೆ ದೇಶಸಂಚಾರಕ್ಕೆ ಹೊರಡುತ್ತಿದ್ದ ಗುರುಗಳು ಜಾತ್ರೆಯ ಸಂದರ್ಭಕ್ಕೆ ಸರಿಯಾಗಿ ಹೊಂಗಳ ಗ್ರಾಮಕ್ಕೆ ಆಗಮಿಸುತ್ತಿದ್ದರು. ಇದೇ ರೀತಿ ಪ್ರತಿ ವರ್ಷ ವಿಜೃಂಭಣೆಯಿಂದ ಜಾತ್ರೆಯನ್ನು ಆಚರಿಸಿ ಲೋಕಸಂಚಾರಕ್ಕೆ ಹೊರಡುತ್ತಿದ್ದ ಶ್ರೀಶಿವಯೋಗಿಗಳು ಬ್ಯಾಡಗಿ ತಾಲ್ಲೂಕಿನ ಹಿರೇಹಳ್ಳಿಯಲ್ಲಿ ಲಿಂಗೈಕ್ಯರಾಗುತ್ತಾರೆ. ಗುರುಗಳ ಅಪೇಕ್ಷೆಯ ಮೇರೆಗೆ ಲಿಂಗೈಕ್ಯ ಗುರುಗಳ ಪಾರ್ಥಿವ ಶರೀರವನ್ನು ಹೊಂಕಣಕ್ಕೆ ತಂದು ರಾಮಲಿಂಗೇಶ್ವರ ದೇವಸ್ಥಾನದ ಬಳಿ ಸಮಾಧಿಯನ್ನು ಮಾಡಿ ಗದ್ದುಗೆಯನ್ನು ನಿರ್ಮಿಸಲಾಗಿದೆ.

ಶ್ರೀ ನಂಜುಂಡೇಶ್ವರ ಶಿವಯೋಗಿಗಳನ್ನು(ಗುಬ್ಬಿಅಜ್ಜ) ಸಮಾಧಿ ಮಾಡಿದ ಸ್ಥಳದಲ್ಲಿ ಮಠವನ್ನು ನಿರ್ಮಿಸಲಾಗಿದೆ. ಮಠವು ಸ್ಥಾಪನೆಗೊಂಡ ಮೇಲೆ ಬೇರೆ ಗುರುಗಳನ್ನು ಪಟ್ಟಾಧಿಕಾರಕ್ಕೆ ತರಲು ಬಯಸದ ಗ್ರಾಮಸ್ಥರು ಗದ್ದುಗೆಗೆ ನಿತ್ಯ ಪೂಜೆಗೆ ವ್ಯವಸ್ಥೆ ಗೊಳಿಸಿದ್ದಾರೆ. ಶ್ರಾವಣ, ಕಾರ್ತೀಕ ಮತ್ತು ಶಿವರಾತ್ರಿಯ ವಿಶೇಷ ಸಂದರ್ಭಗಳಲ್ಲಿ ವಿಶೇಷ ಪೂಜೆ ಮತ್ತು ಭಜನೆಯನ್ನು ಮಾಡಲಾಗುತ್ತಿದೆ. ಪ್ರತಿ ಅಮಾವಾಸ್ಯೆಯಂದು ವಿಶೇಷಪೂಜೆಯನ್ನು ನಡೆಸಲಾಗುತ್ತಿದೆ. ವರ್ಷಕ್ಕೊಮ್ಮೆ ಶ್ರೀನಂಜುಂಡೇಶ್ವರ ಶಿವಯೋಗಿಗಳ ಪುಣ್ಯತಿಥಿಯನ್ನು ಅದ್ದೂರಿಯಾಗಿ ಆಚರಿಸಲಾಗುತ್ತಿದೆ.

ವಿಳಾಸ: ಶ್ರೀ ಗುಬ್ಬಿಮಠ, ಹೊಂಕಣ, ಹಾನಗಲ್ಲು ತಾಲ್ಲೂಕು, ಹಾವೇರಿ ಜಿಲ್ಲೆ.

❑

ಹಿರೇಕೆರೂರು ತಾಲ್ಲೂಕು

ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕು, ಸರ್ವಜ್ಞ ಕವಿಯು ಜನಿಸಿದ ತಾಲ್ಲೂಕೆಂದು ಪ್ರಸಿದ್ಧಿ ಪಡೆದಿದೆ. ಸಾಹಿತ್ಯ, ಧಾರ್ಮಿಕ ಹಾಗೂ ಸಾಂಸ್ಕೃತಿಕವಾಗಿ ಹೆಸರು ಪಡೆದಿರುವ ಈ ತಾಲ್ಲೂಕಿನಲ್ಲಿ ಐದು ಮಠಗಳು ಅಸ್ತಿತ್ವದಲ್ಲಿವೆ.

ಚಿಕ್ಕೆರೂರು

ಹಿರೇಕೆರೂರು ತಾಲ್ಲೂಕಿನ ಚಿಕ್ಕೆರೂರು ಗ್ರಾಮವು ಒಂದು ವ್ಯಾಪಾರಿ ಸ್ಥಳವಾಗಿದ್ದು, ತಾಲ್ಲೂಕು ಕೇಂದ್ರದಿಂದ ವಾಯುವ್ಯಕ್ಕೆ ಇಪ್ಪತ್ತು ಕಿ.ಮೀ ದೂರದಲ್ಲಿದೆ. ಇಲ್ಲಿ ಮುರುಘಾಮಠದ ಶಾಖಾಮಠವಾದ ವಿರಕ್ತಮಠವು ಪುರಾತನ ಕಾಲದಲ್ಲಿಯೇ ಸ್ಥಾಪನೆಗೊಂಡು ಈ ಗ್ರಾಮದ ಧಾರ್ಮಿಕ ಕೇಂದ್ರವಾಗಿ ಬೆಳೆದಿದೆ.

ವಿರಕ್ತಮಠ: ಚಿಕ್ಕೆರೂರು ಗ್ರಾಮದ ಮಧ್ಯಭಾಗದಲ್ಲಿ ಸ್ಥಾಪನೆಗೊಂಡಿರುವ ಈ ಪುರಾತನ ವಿರಕ್ತಮಠದಲ್ಲಿ ಶ್ರೀ ಕರ್ಪೂರ ಸ್ವಾಮಿಗಳ ಗದ್ದುಗೆಯಿದ್ದು, ಅದನ್ನೇ ಕರ್ತೃಗುರುಗಳ ಗದ್ದುಗೆಯೆಂದು ಗುರುತಿಸಲಾಗುತ್ತಿದೆ. ಈ ಗದ್ದುಗೆಗೆ ನಿತ್ಯ ಪೂಜೆಗೆ ವ್ಯವಸ್ಥೆಗೊಳಿಸಲಾಗಿದೆ. ಶ್ರೀಚಂದ್ರಶೇಖರ ಸ್ವಾಮಿಗಳು ಅಧಿಕಾರಕ್ಕೆ ಬರುವ ಮೊದಲು ಒಂದು ಶತಮಾನಕ್ಕೂ ಹೆಚ್ಚು ಕಾಲ ಮಠಾಧೀಶ್ವರರು ಇಲ್ಲದೆ ಮಠದ ಕಟ್ಟಡವು ಪೂರ್ಣ ಜೀರ್ಣಗೊಂಡಿತ್ತು. ಶ್ರೀ ಚಂದ್ರಶೇಖರ ಸ್ವಾಮಿಗಳು ಅಧಿಕಾರವನ್ನು ವಹಿಸಿಕೊಂಡ ಮೇಲೆ ಮಠವನ್ನು ಹೆಚ್ಚು ಪ್ರಚಾರಗೊಳಿಸಿ ಅಭಿವೃದ್ಧಿಪಡಿಸಿದ್ದಾರೆ.

ಶಿಗ್ಗಾಂವಿ ತಾಲ್ಲೂಕಿನ ಚಿಕ್ಕಮಲ್ಲೂರು ಗ್ರಾಮದ ಶ್ರೀ ಬಸವಣ್ಣೆಯ್ಯ ಮತ್ತು ಶ್ರೀಮತಿ ಗಿರಿಜಮ್ಮನವರ ಮಗನಾಗಿ ಜನಿಸಿದ ಶ್ರೀ ಚಂದ್ರಶೇಖರ ಸ್ವಾಮಿಗಳು ಶ್ರೀ ಶಾಂತವೀರ ಮಹಾ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟ ಕುಮಾರೇಶ್ವರ ವೈದಿಕ, ಜೋತಿಷ್ಯ, ಸಂಸ್ಕೃತ ಪಾಠಶಾಲೆಯಲ್ಲಿ ವಿದ್ಯೆಯನ್ನು ಕಲಿತು ಸಿಂದಗಿ ಪಟ್ಟಾಧ್ಯಕ್ಷರ ಸೇವೆಯನ್ನು ಮಾಡಿದರು. ನಂತರ ಜಡೆ ಮಠದ ಶ್ರೀ ಪ್ರಭುಕುಮಾರ ಸ್ವಾಮಿಗಳ ಶಿಷ್ಯರಾಗಿ ಬೆಳೆದು ಶಕುನಹಳ್ಳಿ ಸುರಳೇಶ್ವರದಲ್ಲಿ ಆಹಾರ ಸೇವನೆಯಿಲ್ಲದೆ ದೀರ್ಘ ತಪಸ್ಸನ್ನು ಆಚರಿಸಿದರು. ಇದನ್ನು ನೋಡಿದ ಚಿಕ್ಕೆರೂರು ಭಕ್ತರು ತಮ್ಮ ಊರಿನ ವಿರಕ್ತಮಠಕ್ಕೆ ಉತ್ತರಾಧಿಕಾರಿಗಳನ್ನಾಗಿ ನೇಮಿಸಿಕೊಳ್ಳುವ ಆಲೋಚನೆಯನ್ನು ಮಾಡಿ, ಗುರುಗಳು ಚಿಕ್ಕೆರೂರಿಗೆ ಆಗಮಿಸಲು ಒಪ್ಪಿಗೆ ಪಡೆದರು.

ಪಟ್ಟಾಧಿಕಾರ: ಶ್ರೀ ಚಂದ್ರಶೇಖರ ಸ್ವಾಮಿಗಳು ಚಿಕ್ಕೆರೂರು ವಿರಕ್ತಮಠಕ್ಕೆ ಪಟ್ಟಾಧಿಕಾರಿಗಳಾಗಲು ಒಪ್ಪಿದ ಮೇಲೆ, ಗ್ರಾಮದ ಭಕ್ತರು ಶಿಕಾರಿಪುರ ತಾಲ್ಲೂಕಿನ ಕಪ್ಪನಹಳ್ಳಿಯ ಶ್ರೀ ರುದ್ರಮುನಿ ಸ್ವಾಮಿಗಳ ಮುಂದಾಳತ್ವದಲ್ಲಿ ೧೯೭೦ ರ ಜನವರಿ ಮೂವತ್ತೊಂದರಂದು ಶ್ರೀ ಚಂದ್ರಶೇಖರ ಸ್ವಾಮಿಗಳಿಗೆ ಪಟ್ಟಾಧಿಕಾರದ ಅನುಗ್ರಹವನ್ನು ಕೊಡಿಸಿದರು.

ಅಭಿವೃದ್ಧಿ ಕಾರ್ಯಗಳು: ಅಸ್ತಿತ್ವವೇ ನಶಿಸಿ ಹೋಗಿದ್ದ ಸಂದರ್ಭದಲ್ಲಿ ಮಠದ ಅಧಿಕಾರವನ್ನು ವಹಿಸಿಕೊಂಡ ಶ್ರೀಚಂದ್ರಶೇಖರ ಸ್ವಾಮಿಗಳು ಮಠಕ್ಕೆ ಮಣ್ಣಿನ ಕಟ್ಟಡವನ್ನು ನಿರ್ಮಿಸಿರುತ್ತಾರೆ. ಶ್ರೀ ಕರ್ಪೂರ ಸ್ವಾಮಿಗಳ ಗದ್ದುಗೆಯನ್ನು ನವೀಕರಿಸಿ ಪೂಜೆಗೆ ವ್ಯವಸ್ಥೆಯನ್ನು ಮಾಡಿರುತ್ತಾರೆ. ಅಧಿಕಾರವನ್ನು ವಹಿಸಿಕೊಂಡ ಮೇಲೆ ಮಠದಲ್ಲಿ ಪುರಾಣ ಪ್ರವಚನಗಳನ್ನು ಏರ್ಪಡಿಸಿ, ಶತಮಾನಗಳ ಕಾಲ ಜನರ ಸಂಪರ್ಕದಿಂದ ದೂರವಿದ್ದ ಶ್ರೀ ವಿರಕ್ತಮಠಕ್ಕೆ ಜೀವಕಳೆಯನ್ನು ತಂದುಕೊಟ್ಟರು. ಸದಾ ಸಂಚಾರ ಮಾಡುತ್ತಾ ಭಕ್ತರನ್ನು ಸಂಘಟಿಸಿ ಮಠವನ್ನು ಧಾರ್ಮಿಕ ತಳಹದಿಯ ಮೇಲೆ ಸದೃಢಗೊಳಿಸಿದರು.

ಧಾರ್ಮಿಕ ಕಾರ್ಯಗಳು: ಮಠದಲ್ಲಿ ನಿತ್ಯ ಗದ್ದುಗೆಪೂಜೆಯನ್ನು ನಡೆಸಲಾಗುತ್ತಿದೆ. ಶ್ರಾವಣ ಮತ್ತು ಕಾರ್ತೀಕಮಾಸಗಳಲ್ಲಿ ವಿಶೇಷ ಪೂಜೆಯನ್ನು ಏರ್ಪಡಿಸಲಾಗುತ್ತಿದೆ. ಸದಾ ಸಂಚಾರದಲ್ಲಿರುವ ಶ್ರೀ ಚಂದ್ರಶೇಖರ ಸ್ವಾಮಿಗಳು ಧರ್ಮಪ್ರಚಾರವನ್ನು ಕೈಗೊಂಡು ವೀರಶೈವ ಧರ್ಮವು ಬೆಳೆಯಲು ನೆರವಾಗಿದ್ದಾರೆ. ಶಿವರಾತ್ರಿ ಮತ್ತು ಬಸವಜಯಂತಿಯಲ್ಲಿ ಮಠದಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ.

ವಿಳಾಸ: ಶ್ರೀ ಮ.ನಿ.ಪ್ರ. ಚಂದ್ರಶೇಖರ ಸ್ವಾಮಿಗಳು, ಶ್ರೀ ವಿರಕ್ತಮಠ, ಚಿಕ್ಕೆರೂರು, ಹಿರೇಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ.

ತಿಪ್ಪಾಯಕೊಪ್ಪ

ಹಿರೇಕೆರೂರು ತಾಲ್ಲೂಕಿನ ತಿಪ್ಪಾಯಕೊಪ್ಪವು ತಾಲ್ಲೂಕು ಕೇಂದ್ರದ ದಕ್ಷಿಣಕ್ಕೆ ಹನ್ನೊಂದು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಗುರುಮೂಕಪ್ಪ ಶಿವಯೋಗಿಗಳ ಮಠವು ಅಸ್ತಿತ್ವದಲ್ಲಿದೆ.

ಗುರುಮೂಕಪ್ಪ ಶಿವಯೋಗಿಗಳಮಠ: ತಿಪ್ಪಾಯಕೊಪ್ಪ ಗ್ರಾಮದ ಪಶ್ಚಿಮ ಭಾಗದಲ್ಲಿ ಹರಿಯುವ ಕುಮದ್ವತಿ ನದಿಯ ದಂಡೆಯ ಮೇಲೆ ಸ್ಥಾಪನೆಗೊಂಡಿದೆ. ಹತ್ತೊಂಬತ್ತನೆಯ ಶತಮಾನದಲ್ಲಿ ಶ್ರೀ ಮೂಕಪ್ಪ ಶಿವಯೋಗಿಗಳು ಇಲ್ಲಿನ ಮಲ್ಲೇಶ್ವರ ದೇವಾಲಯದಲ್ಲಿ ಅನುಷ್ಠಾನಗೊಂಡು ಮಠವು ಸ್ಥಾಪನೆಯಾಗಲು ಕಾರಣರಾಗಿದ್ದಾರೆ.

ಮಠ ಸ್ಥಾಪನೆ: ರಾಣಿಬೆನ್ನೂರು ತಾಲ್ಲೂಕಿನ ಹೊನ್ನತ್ತಿ ಹಿರೇಮಠದ ಶ್ರೀ ಚನ್ನವೀರಯ್ಯ ಮತ್ತು ಶ್ರೀಮತಿ ನೀಲಮ್ಮನವರ ಪುತ್ರರಾಗಿ ೧೮೫೦ರಲ್ಲಿ ಜನಿಸಿದ ಶ್ರೀ ಮೂಕಪ್ಪ ಸ್ವಾಮಿಗಳು ಬಳ್ಳಾರಿಯ ಸಕ್ರಿ ಕರಿಯಪ್ಪನವರ ಗರಡಿಯಲ್ಲಿ ಅಭ್ಯಾಸ ಮಾಡಿದರು. ಇಳಕಲ್ಲಿನ ಶ್ರೀ ವಿಜಯಮಹಂತ ಸ್ವಾಮಿಗಳು, ಹಾವೇರಿಯ ಶ್ರೀ ಶಿವಬಸವ ಸ್ವಾಮಿಗಳು, ಹಾಗೂ ಗರಗದ ಶ್ರೀ ಮಡಿವಾಳ ಸ್ವಾಮಿಗಳ ಸಮಕಾಲೀನರಾಗಿದ್ದ ಶ್ರೀ ಮೂಕಪ್ಪ ಶಿವಯೋಗಿಗಳು ಲೋಕ ಸಂಚಾರಕ್ಕೆಂದು ಹೊರಟವರು ಬೆಳಗಾಂ ಜಿಲ್ಲೆಯ ಗೋಕಾಕ್ ತಾಲ್ಲೂಕಿನ ಅಂಕಲಗಿಯ ಶ್ರೀ ಅಡವಿ ಶಿವಯೋಗಿಗಳ ಹತ್ತಿರ ಕೆಲವು ದಿನ ಸೇವೆ ಮಾಡಿ, ಅವರಿಂದ ಅನುಗ್ರಹವನ್ನು ಪಡೆದು ಸೊಗಲ, ಕೊಪ್ಪಳ ಮುಂತಾದ ಕ್ಷೇತ್ರಗಳಲ್ಲಿ ಸಂಚಾರ ಕೈಗೊಂಡು ಮಾಸೂರಿನ ಸಿದ್ಧಪ್ಪನ ಗುಡ್ಡದಲ್ಲಿ ಅನುಷ್ಠಾನಗೊಂಡು ಈ ಸ್ಥಳಗಳನ್ನು ಜಾಗೃತ ಸ್ಥಳಗಳನ್ನಾಗಿ ಮಾಡಿ ತಿಪ್ಪಾಯಕೊಪ್ಪಕ್ಕೆ ಬಂದು ನೆಲಸುತ್ತಾರೆ. ಶ್ರೀ ಮೂಕಪ್ಪ ಸ್ವಾಮಿಗಳು ಲೋಕ ಸಂಚಾರವನ್ನು ಕೈಗೊಂಡು ಇಲ್ಲಿ ನೆಲೆಗೊಂಡ ಮೇಲೆ ಮೌನವಾಗಿ ಇರುತ್ತಿದ್ದ ಕಾರಣ ಗುರುಗಳಿಗೆ ಭಕ್ತರು ರೂಢಿಗತವಾಗಿ ಶ್ರೀ ಮೂಕಪ್ಪ ಸ್ವಾಮಿಗಳೆಂದು ಕರೆಯತೊಡಗಿದರು. ಅಂದು ಭಕ್ತರು ಇಟ್ಟ ಹೆಸರೇ ಇಂದಿಗೂ ಶಾಶ್ವತವಾಗಿ ಉಳಿದು ಅದೇ ಹೆಸರಿನಲ್ಲಿ ಮಠ ಸ್ಥಾಪನೆಯಾಗಿದೆ.

ಶ್ರೀ ಮೂಕಪ್ಪ ಸ್ವಾಮಿಗಳು ತಿಪ್ಪಾಯಕೊಪ್ಪದ ಶ್ರೀ ಮಲ್ಲೇಶ್ವರ ದೇವಸ್ಥಾನದಲ್ಲಿ ನೆಲೆಗೊಂಡು ಭಕ್ತರ ಕಷ್ಟ ಕಾರ್ಪಣ್ಯಗಳನ್ನು ಪರಿಹರಿಸುತ್ತಾ, ಧರ್ಮಸಂಸ್ಕಾರವನ್ನು ನೀಡಿ ಭಕ್ತರ ಬದುಕನ್ನು ರೂಪಿಸಿದರು. ಭಕ್ತರ ಸಂಖ್ಯೆ ಬೆಳೆದಂತೆ ಗುರುಗಳಿಗಾಗಿ ಪ್ರತ್ಯೇಕವಾದ ಮಠವನ್ನು ಸ್ಥಾಪಿಸಲು ಭಕ್ತರು ಮುಂದಾದರು. ಆದರೆ ಗುರುಗಳು ಇದಕ್ಕೆ ಒಪ್ಪದೆ 'ವಿರಕ್ತರಾದ ನಮಗೆ ಪ್ರತ್ಯೇಕ ಕೊಠಡಿಯ ಆವಶ್ಯಕತೆ ಇಲ್ಲ'ಎಂದು ಭಕ್ತರ ಅಪೇಕ್ಷೆಯನ್ನು ತಿರಸ್ಕರಿಸಿ ಮಲ್ಲೇಶ್ವರ ಗುಡಿಯಲ್ಲಿಯೇ ನೆಲೆಸಿ, ಧರ್ಮಪ್ರಸಾರದ ಕಾರ್ಯವನ್ನು ಮಾಡತೊಡಗಿದರು. ಶ್ರೀ ಮೂಕಪ್ಪ ಸ್ವಾಮಿಗಳು ಮಲ್ಲೇಶ್ವರ ದೇವಸ್ಥಾನದ ಪಕ್ಕ ದಲ್ಲಿಯೇ ಹರಿಯುತ್ತಿದ್ದ ಕುಮದ್ವತಿ ನದಿಯಲ್ಲಿ ಮಿಂದು ಮಲ್ಲೇಶ್ವರ ಮೂರ್ತಿಗೆ ಪೂಜೆ ಸಲ್ಲಿಸಿ ತಮ್ಮ ಪೂಜಾದಿ ಕಾರ್ಯಗಳನ್ನು ಅಲ್ಲಿಯೇ ಮುಗಿಸಿ ಕಲ್ಲನ್ನೇ ತಲೆದಿಂಬನ್ನಾಗಿ ಮಾಡಿಕೊಂಡು ದೇವಸ್ಥಾನದಲ್ಲಿಯೇ ವಿಶ್ರಾಂತಿಯನ್ನು ಪಡೆಯುತ್ತಿದ್ದರು. ಅಂದು ಶ್ರೀಮೂಕಪ್ಪ ಸ್ವಾಮಿಗಳು ದಿಂಬನ್ನಾಗಿ ಬಳಸುತ್ತಿದ್ದ ಕಲ್ಲು ಇಂದೂ ಮಲ್ಲೇಶ್ವರ ದೇವಸ್ಥಾನದಲ್ಲಿ ಪೂಜ್ಯತೆಗೆ ಒಳಗೊಂಡಿದೆ. ಶ್ರೀ ಮೂಕಪ್ಪ ಸ್ವಾಮಿಗಳು ತಿಪ್ಪಾಯ ಕೊಪ್ಪದಲ್ಲಿ ಧರ್ಮವನ್ನು ಜಾಗೃತಗೊಳಿಸಿ ೧೯೩೭ರಲ್ಲಿ ಲಿಂಗೈಕ್ಯರಾದರು. ಇವರ ಸಮಾಧಿಯನ್ನು ಮಲ್ಲೇಶ್ವರ ದೇವಸ್ಥಾನದ ಪಕ್ಕದಲ್ಲಿಯೇ ಮಾಡಿ ಗದ್ದುಗೆ ಮಂಟಪವನ್ನು ನಿರ್ಮಿಸಿರುತ್ತಾರೆ. ಅಂದು ಪ್ರಾರಂಭಗೊಂಡ ಧಾರ್ಮಿಕ ಕಾರ್ಯಗಳು ನಿಲ್ಲದಂತೆ ಸಾಗುತ್ತಾ ಬಂದಿವೆ.

ಕ್ರಿಯಾಶೀಲರ ಆಗಮನ: ೧೯೮೦ರಲ್ಲಿ ತಿಪ್ಪಾಯಕೊಪ್ಪದ ಈ ಮಠಕ್ಕೆ ಆಗಮಿಸಿದ ಶ್ರೀ ವಿರೂಪಾಕ್ಷ ಸ್ವಾಮಿಗಳು ತಮ್ಮ ಕ್ರಿಯಾಶೀಲ ಗುಣಗಳಿಂದ ಈ ಕ್ಷೇತ್ರವನ್ನು ಅಭಿವೃದ್ಧಿಪಡಿಸಿ ಶತಶತಮಾನಗಳ ಇತಿಹಾಸ ಇರುವ ಮಠಗಳು ಸಾಧಿಸ ಲಾಗದಿದ್ದ ಅಭಿವೃದ್ಧಿಯನ್ನು ಕೇವಲ ಒಂದು ದಶಕದಲ್ಲಿ ಮಾಡಿರುವುದು ಇವರ ಕ್ರಿಯಾಶೀಲ ಗುಣಕ್ಕೆ ಹಿಡಿದ ಕೈಗನ್ನಡಿ ಯಾಗಿದೆ. ಶ್ರೀ ವಿರೂಪಾಕ್ಷಸ್ವಾಮಿಗಳು ಸವಣೂರು ತಾಲ್ಲೂಕಿನ ಚಿಕ್ಕಮರಳೇಹಳ್ಳಿ ಗ್ರಾಮದ ಶ್ರೀ ಸಣ್ಣಬಸಯ್ಯ ಮತ್ತು ಶ್ರೀಮತಿ ಶಾಂತಮ್ಮನವವರ ಪುತ್ರರಾಗಿ ೧೯೫೧ ರ ಮಾರ್ಚ್ ಆರರಂದು ಜನಿಸಿದರು. ಶಿವಯೋಗ ಮಂದಿರದಲ್ಲಿ ಸಂಸ್ಕೃತ, ವೇದ, ವಚನಸಾಹಿತ್ಯವನ್ನು ಅಭ್ಯಾಸಮಾಡುತ್ತಿರುವಾಗಲೇ ಶ್ರೀ ಗುರುಮೂಕಪ್ಪ ಶಿವಯೋಗಿಗಳ ಮಠಕ್ಕೆ ನೇಮಕಗೊಂಡರು.

ಇಲ್ಲಿಗೆ ನೇಮಕಗೊಂಡ ಶ್ರೀ ವಿರೂಪಾಕ್ಷ ಸ್ವಾಮಿಗಳು ಅಗಿನ ವಾತಾವರಣವನ್ನು ನೋಡಿ ಬೇಸರಪಟ್ಟುಕೊಂಡರೂ ಹಿಂಜರಿಯದೆ ಈ ಮಠವನ್ನು ಅಭಿವೃದ್ಧಿಪಡಿಸಿ ಸುಸ್ಥಿತಿಗೆ ತರುವ ಛಲತೊಟ್ಟು ಮಠದಲ್ಲಿ ನೆಲೆನಿಲ್ಲುತ್ತಾರೆ.

ಶ್ರೀ ಮೂಕಪ್ಪ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ ಅನೇಕ ಜನ ವಿರಕ್ತರು ಅಧಿಕಾರವಿಲ್ಲದೆ ಈ ಕ್ಷೇತ್ರದಲ್ಲಿ ನೆಲೆಸಿ, ಧಾರ್ಮಿಕ ಕಾರ್ಯಗಳನ್ನು ಕೈಗೊಂಡಿದ್ದರೂ ಅವರಲ್ಲಿ ಯಾರೊಬ್ಬರೂ ಇಲ್ಲಿ ಹೆಚ್ಚು ದಿನ ನೆಲೆಸದೆ ಹೋಗಿದ್ದಾರೆ. ಆದರೆ ಶ್ರೀ ವಿರೂಪಾಕ್ಷ ಸ್ವಾಮಿಗಳು ಅಧಿಕೃತವಾಗಿ ನೇಮಕಗೊಂಡ ಮೇಲೆ ಇಲ್ಲಿನ ಧಾರ್ಮಿಕ ಚಟುವಟಿಕೆಗಳನ್ನು ಚುರುಕುಗೊಳಿಸಿ ಮಠದ ಸುತ್ತಮುತ್ತ ಸ್ವಚ್ಛತೆಯ ವಾತಾವರಣವನ್ನು ನಿರ್ಮಿಸಿ ಭಕ್ತರನ್ನು ಮಠದ ಕಡೆ ಆಕರ್ಷಿಸಿಕೊಂಡರು. ಶ್ರೀ ವಿರೂಪಾಕ್ಷ ಸ್ವಾಮಿಗಳು ಇಲ್ಲಿಗೆ ಆಗಮಿಸಿದ ಮೇಲೆ ಶಿವಾನುಭವ ಕಾರ್ಯಕ್ರಮಗಳನ್ನು ಪುರಾಣ ಪ್ರವಚನಗಳನ್ನು ಮಾಡುವ ಮೂಲಕ ಧರ್ಮಜಾಗೃತಿಯನ್ನು ಉಂಟುಮಾಡಿ ಮಠದಲ್ಲಿ ಧಾರ್ಮಿಕ ಕಾರ್ಯಗಳ ಜತೆಗೆ ಅನ್ನ ದಾಸೋಹದ ಕಾರ್ಯಗಳು ನಡೆಯುವಂತೆ ವ್ಯವಸ್ಥೆಗೊಳಿಸಿದರು. ಪ್ರಥಮವಾಗಿ ಶ್ರೀ ಮೂಕಪ್ಪ ಸ್ವಾಮಿಗಳ ಗದ್ದುಗೆಯ ಮಂಟಪವನ್ನು ನವೀಕರಿಸಿದ್ದಲ್ಲದೆ ಗದ್ದುಗೆಯ ಮುಂಭಾಗದ ಮೈದಾನದಲ್ಲಿ ಕಟ್ಟಡವನ್ನು ನಿರ್ಮಿಸಿ ಮಠಕ್ಕೆ ಒಂದು ರೂಪುಕೊಟ್ಟರು.

ಪಟ್ಟಾಧಿಕಾರ: ೧೯೯೨ರಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡ ಗುರುಗಳು ಮಠದ ಸರ್ವಾಂಗೀಣ ಅಭಿವೃದ್ಧಿಗೆ ಕಂಕಣ ತೊಟ್ಟರು. ಶ್ರೀ ವಿರೂಪಾಕ್ಷ ಸ್ವಾಮಿಗಳು ಇಲ್ಲಿ ಬಂದು ನೆಲೆನಿಂತ ಮೇಲೆ ಕರ್ತೃಗದ್ದುಗೆಯ ಹಿಂಭಾಗದಲ್ಲಿದ್ದ ತಗಡಿನಿಂದ ನಿರ್ಮಿಸಲ್ಪಟ್ಟ ಶೆಡ್ಡಿನಲ್ಲಿ ವಾಸಮಾಡುತ್ತಾ, ಹಂತಹಂತವಾಗಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಮಠವನ್ನು ಬೆಳೆಸಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಶ್ರೀ ಮೂಕಪ್ಪ ಸ್ವಾಮಿಗಳ ಗದ್ದುಗೆ ಮತ್ತು ಮಲ್ಲೇಶ್ವರಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿದ್ದ ವಿಶಾಲ ಮೈದಾನದಲ್ಲಿ ಹತ್ತುಲಕ್ಷ ರೂಪಾಯಿ ವೆಚ್ಚದಲ್ಲಿ ಪ್ರಾರ್ಥನಾ ಮಂದಿರವನ್ನು ನಿರ್ಮಿಸಿದ್ದಾರೆ. ಈ ಕಾರ್ಯ ಮುಗಿದ ಮೇಲೆ ಕುಮುದ್ವತಿ ನದಿಯ ದಂಡೆಗೆ ರಕ್ಷಣಾಗೋಡೆಯನ್ನು ಇಪ್ಪತ್ತು ಲಕ್ಷರೂಪಾಯಿ ವೆಚ್ಚದಲ್ಲಿ ನಿರ್ಮಿಸಿರುವುದು ಇವರು ಕೈಗೊಂಡ ಬೃಹತ್ ಯೋಜನೆಗಳಲ್ಲಿ ಒಂದಾಗಿದೆ. ನೈಸರ್ಗಿಕ ವಾತಾವರಣಕ್ಕೆ ಮೆರಗು ಬರುವಂತೆ ನಿರ್ಮಿಸಿರುವ ಈ ರಕ್ಷಣಾಗೋಡೆ ಮಠದ ಅಭಿವೃದ್ಧಿಯ ದ್ಯೋತಕವಾಗಿರುವು ದಲ್ಲದೆ ಧಾರ್ಮಿಕ ವಾತಾವರಣವನ್ನು ರೂಪಿಸುವ ಒಂದು ಸಂಕೇತವಾಗಿಯೂ ಇದೆ. ಕರ್ತೃಗದ್ದುಗೆಯ ಹಿಂಭಾಗದಲ್ಲಿರುವ ವಿಶಾಲವಾದ ಜಾಗದಲ್ಲಿ ಅರವತ್ತುಲಕ್ಷ ರೂಪಾಯಿಗಳ ಯೋಜನೆಯಲ್ಲಿ ಪ್ರಸಾದ ನಿಲಯ, ಅತಿಥಿಗಳ ವಾಸ್ತವ್ಯಕೊಠಡಿಗಳೂ ಸೇರಿದಂತೆ ಮಠದ ಆಡಳಿತ ಕಛೇರಿ, ಗುರುಗಳ ವಾಸ್ತವ್ಯ ಕೊಠಡಿಗಳನ್ನು ನಿರ್ಮಿಸಲಾಗಿದೆ.

ಧಾರ್ಮಿಕ ಕಾರ್ಯಗಳು: ಕರ್ತೃಗುರುಗಳ ಗದ್ದುಗೆಗೆ ಮತ್ತು ಮಲ್ಲೇಶ್ವರ ಮೂರ್ತಿಗೆ ನಿತ್ಯ ರುದ್ರಾಭಿಷೇಕದ ಪೂಜೆ ಅಲ್ಲದೆ ಪ್ರತಿ ತಿಂಗಳೂ ಶಿವಾನುಭವ ಗೋಷ್ಠಿಯನ್ನು ಏರ್ಪಡಿಸಿ ಧರ್ಮಜಾಗೃತಿಯನ್ನು ಉಂಟುಮಾಡಲಾಗುತ್ತಿದೆ. ಶ್ರೀಮೂಕಪ್ಪ ಸ್ವಾಮಿಗಳ ಪುಣ್ಯಸ್ಮರಣೆಯ ಅಂಗವಾಗಿ ಪ್ರತಿವರ್ಷ ಮೇ ತಿಂಗಳಲ್ಲಿ ಮೂರು ದಿನ ವಿಶೇಷ ಕಾರ್ಯಕ್ರಮವನ್ನು ನಡೆಸಲಾಗಿದೆ. ಇದರ ಅಂಗವಾಗಿ ಮೇ ತಿಂಗಳಲ್ಲಿ ನಡೆಯುವ ಪುರಾಣ ಪ್ರವಚನಗಳ ಸಂದರ್ಭಗಳಲ್ಲಿ ಸುಮಾರು ಹತ್ತು ಸಾವಿರ ಜನರಿಗೆ ದಾಸೋಹ ವ್ಯವಸ್ಥೆಯನ್ನು ಏರ್ಪಡಿಸಲಾಗುತ್ತಿದೆ. ಪ್ರತಿತಿಂಗಳು ನಡೆಯುವ ಶಿವಾನುಭವಗೋಷ್ಠಿ ನಡೆಸಲಾಗುತ್ತಿದೆ. ಈ ವಿಶೇಷ ದಿನಗಳಲ್ಲಲ್ಲದೆ ನಿತ್ಯವೂ ಅನ್ನದಾಸೋಹದ ವ್ಯವಸ್ಥೆ ಇದೆ. ಕುಮುದ್ವತಿ ನದಿಯ ದಡದ ಮೇಲೆ ಶಂಭು ಲಿಂಗಗಳು ಮತ್ತು ನವಗ್ರಹಗಳನ್ನು ಸ್ಥಾಪಿಸಿ ಭಕ್ತರ ಪೂಜೆಗೆ ವ್ಯವಸ್ಥೆ ಕಲ್ಪಿಸುವ ಯೋಜನೆಯು ತಯಾರಾಗಿದೆ.

ಶೈಕ್ಷಣಿಕ ಕಾರ್ಯಗಳು: ಪ್ರಸ್ತುತ ಮಠದಲ್ಲಿ ಯಾವುದೇ ಶೈಕ್ಷಣಿಕ ಕಾರ್ಯಗಳು ನಡೆಯುತ್ತಿಲ್ಲವಾದರೂ ಮಠದಲ್ಲಿ ಕೈಗೊಂಡಿರುವ ಕಟ್ಟಡಗಳ ಕಾಮಗಾರಿ ಕಾರ್ಯಗಳು ಮುಗಿದ ಮೇಲೆ ಸಂಗೀತ ಪಾಠಶಾಲೆ ಮತ್ತು ಸಂಸ್ಕೃತ ವೇದಾಧ್ಯಯನಕ್ಕೆ ಕಲ್ಪಿಸಲಾಗುತ್ತದೆ. ಜತೆಗೆ ವಿದ್ಯಾರ್ಥಿನಿಲಯವನ್ನು ಸ್ಥಾಪಿಸುವ ಯೋಜನೆಯ ಅವಕಾಶ ಈ ಮಠವು ಹೊಂದಿದೆ.

ಸಾಹಿತ್ಯ ಸೇವೆ: ಮಠದಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳಲ್ಲಿಯೂ ಧಾರ್ಮಿಕ ಕ್ಷೇತ್ರಕ್ಕೆ ಕೊಟ್ಟಷ್ಟೇ ಪ್ರಾಮುಖ್ಯತೆಯನ್ನು ಸಾಹಿತ್ಯ ಕ್ಷೇತ್ರಕ್ಕೂ ಕೊಟ್ಟು, ಶರಣಸಾಹಿತ್ಯವನ್ನು ಪ್ರಚಾರಕ್ಕೆ ತರಲಾಗುತ್ತಿದೆ. ಶ್ರೀ ಮೂಕಪ್ಪ ಶಿವಯೋಗಿಗಳ ಜೀವನಚರಿತ್ರೆ

ಹಾಗೂ ಪುರಾಣಗಳನ್ನು ಮಠದ ವತಿಯಿಂದ ಪ್ರಕಟಿಸಲಾಗಿದೆ. ಶ್ರೀ ಮೂಕಪ್ಪ ಶಿವಯೋಗಿಗಳ ಮಠದ ಅಧಿಕಾರವನ್ನು ವಹಿಸಿಕೊಂಡ ಶ್ರೀ ವಿರೂಪಾಕ್ಷ ಸ್ವಾಮಿಗಳು ತಗಡಿನ ಮನೆಯಲ್ಲಿ ವಾಸವಾಗಿದ್ದುಕೊಂಡು ಮಠಕ್ಕೆ ಯಾವುದೇ ಆಸ್ತಿಯಿಲ್ಲದಿದ್ದರೂ ತಮ್ಮ ಕ್ರಿಯಾಶೀಲ ವ್ಯಕ್ತಿತ್ವದಿಂದ ಕೆಲವೇ ದಿನಗಳಲ್ಲಿ ಅಗಾಧವಾದದ್ದನ್ನು ಸಾಧಿಸಿರುವುದು ಅನುಕರಣೀಯವಾಗಿದೆ.

ವಿಳಾಸ: ಶ್ರೀ ಮ.ನಿ.ಪ್ರ. ವಿರೂಪಾಕ್ಷ ಸ್ವಾಮಿಗಳು, ಶ್ರೀಗುರುಮೂಕಪ್ಪಶಿವಯೋಗಿಗಳ ಮಠ, ತಿಪ್ಪಾಯಕೊಪ್ಪ, ಹಿರೇಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ.

ಮಡ್ಲೂರು

ಹಿರೇಕೆರೂರು ತಾಲ್ಲೂಕಿನ ಮಡ್ಲೂರು ಗ್ರಾಮವು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಹದಿನೆಂಟು ಕಿ.ಮೀ. ದೂರದಲ್ಲಿದೆ. ಇಲ್ಲಿ ಶ್ರೀ ಮುರುಘಾಮಠವು ಅಸ್ತಿತ್ವದಲ್ಲಿದೆ.

ಮುರುಘಾಮಠ: ಮಡ್ಲೂರು ಗ್ರಾಮದಲ್ಲಿರುವ ಶ್ರೀ ಮುರುಘಾಮಠವು ಶ್ರೀ ಮುರುಘೇಂದ್ರ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟಿತ್ತೆಂದು ಹೇಳಲಾಗುತ್ತದೆ. ವಿರಕ್ತ ಸಂಪ್ರದಾಯದ ಮುರುಘಾ ಸಮಯದ ಈ ಮಠವು ಮಡ್ಲೂರು ಗ್ರಾಮದ ಹೊರಭಾಗದ ಉತ್ತರ ದಿಕ್ಕಿನಲ್ಲಿ ಸ್ಥಾಪನೆಗೊಂಡಿದೆ.

ಮಠ ಸ್ಥಾಪನೆ: ಶ್ರೀ ಮುರುಘೇಂದ್ರ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟಿದೆ ಎಂದು ಹೇಳಲಾದರೂ, ಕರ್ತೃಗುರುಗಳ ಬಗ್ಗೆ ಯಾವುದೇ ವಿವರ ಲಭ್ಯವಿಲ್ಲವಾಗಿದೆ. ಅಲ್ಲದೆ ಕರ್ತೃಗುರುಗಳ ನಂತರ ಅಧಿಕಾರಕ್ಕೆ ಬಂದಿರಬಹುದಾದ ಗುರುಗಳ ವಿವರವೂ ಸಹ ಲಭ್ಯವಿಲ್ಲವಾಗಿದೆ. ಆದರೆ ಶ್ರೀ ಸದಾಶಿವ ಸ್ವಾಮಿಗಳು ಅಧಿಕಾರದಲ್ಲಿದ್ದ ಬಗ್ಗೆ ಮಾಹಿತಿ ಲಭ್ಯವಿದೆ. ಇತ್ತೀಚಿನ ದಿನಗಳ ತನಕ ಅಧಿಕಾರವನ್ನು ನಡೆಸುತ್ತಿದ್ದ ಶ್ರೀ ಸದಾಶಿವ ಸ್ವಾಮಿಗಳು ಮಠದ ಅಭಿವೃದ್ಧಿಗೆ ಶ್ರಮಿಸಿ ಈ ಗ್ರಾಮದಲ್ಲಿ ಧಾರ್ಮಿಕ ವಾತಾವರಣ ಸೃಷ್ಟಿಯಾಗಲು ಕಾರಣಕರ್ತೃವಾಗಿದ್ದಾರೆ. ಶ್ರೀ ಸದಾಶಿವ ಸ್ವಾಮಿಗಳು ೧೯೮೫ ರಲ್ಲಿ ಸುಲೇಪೇಟೆಯಲ್ಲಿ ಲಿಂಗೈಕ್ಯರಾದ ನಂತರ ಈ ಮಠಕ್ಕೆ ಉತ್ತರಾಧಿಕಾರಗಳಿಲ್ಲದೆ ಮಠ ಖಾಲಿ ಉಳಿಯುವಂತಾಯಿತು.

ಉತ್ತರಾಧಿಕಾರಿ ನೇಮಕ: ಗುಲ್ಬರ್ಗ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಸುಲೇಪೇಟೆಯ ಶ್ರೀ ಸಿದ್ಧರಾಮಯ್ಯ ಮತ್ತು ಶ್ರೀಮತಿ ಕಮಲಮ್ಮನವರ ಪುತ್ರರಾಗಿ ೧೯೬೯ರ ಅಕ್ಟೋಬರ್ ಹನ್ನೊಂದರಂದು ಜನಿಸಿದ ಶ್ರೀ ಮುರುಘರಾಜೇಂದ್ರ ಸ್ವಾಮಿಗಳು, ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಸುಲೇಪೇಟೆಯಲ್ಲಿಯೇ ಮುಗಿಸಿ, ಪ್ರೌಢಶಿಕ್ಷಣವನ್ನು ಮಡ್ಲೂರು ಗ್ರಾಮದಲ್ಲಿ ಪಡೆದು, ಹಾವೇರಿಯ ಸಿಂದಗಿ ಮಠದಲ್ಲಿ ಆಶ್ರಯ ಪಡೆದು ಜೋತಿಷ್ಯ, ಸಂಸ್ಕೃತವನ್ನು ಕಲಿತು ೧೯೮೯ ರ ನವೆಂಬರ್ ಹದಿನಾರರಂದು ಮಡ್ಲೂರು ಗ್ರಾಮದ ಶ್ರೀ ಮುರುಘಾಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಧಾರವಾಡ ಮುರುಘಾ ಮಠದ ಶ್ರೀಮಹಂತಪ್ಪ ಸ್ವಾಮಿಗಳು ಪಟ್ಟಾಧಿಕಾರದ ಅನುಗ್ರಹವನ್ನು ನೀಡಿದ್ದಾರೆ.

ಶ್ರೀ ಮುರುಘರಾಜೇಂದ್ರ ಸ್ವಾಮಿಗಳು ಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡಾಗ ಮಠದ ಕಟ್ಟಡವು ವಾಸಿಸಲು ಯೋಗ್ಯವಿಲ್ಲದಂತಾಗಿತ್ತು. ಹಿರಿಯರಾದ ಶ್ರೀ ಸದಾಶಿವ ಸ್ವಾಮಿಗಳು ಲಿಂಗೈಕ್ಯರಾದ ನಂತರ ಮಠದಲ್ಲಿ ಮಠಾಧೀಶ್ವರರು ಅಲ್ಲದೆ ಮಠದ ಉಸ್ತುವಾರಿಯನ್ನು ನೋಡಿಕೊಳ್ಳಲು ಯಾರೂ ಇಲ್ಲದ ಕಾರಣ ಮಠದ ಕಟ್ಟಡವು ದುಸ್ಥಿತಿಯನ್ನು ತಲುಪಿತ್ತು. ಇಂತಹ ಸಂದರ್ಭದಲ್ಲಿ ಅಧಿಕಾರವನ್ನು ವಹಿಸಿಕೊಂಡ ಶ್ರೀ ಮುರುಘರಾಜೇಂದ್ರ ಸ್ವಾಮಿಗಳು ಮಠದ ಕಟ್ಟಡವನ್ನು ಸುಸ್ಥಿತಿಗೆ ತರುವಲ್ಲಿ ಯಶಸ್ವಿಯಾಗಿ, ಮಠದ ಕರ್ತೃಗುರುಗಳ ಗದ್ದುಗೆಗೆ ಮಂಟಪ ಹಾಗೂ ಶ್ರೀ ಸದಾಶಿವ ಸ್ವಾಮಿಗಳ ತೋರುಗದ್ದುಗೆಯನ್ನು ನಿರ್ಮಾಣಮಾಡಿ ಮಂಟಪವನ್ನು ಕಟ್ಟಿಸಿದ್ದಾರೆ. ಮಠದ ಕಟ್ಟಡವನ್ನು ಅಗತ್ಯಕ್ಕೆ ತಕ್ಕಂತೆ ನವೀಕರಣಗೊಳಿಸಿಕೊಂಡಿದ್ದಾರೆ. ಶ್ರೀ ಮುರುಘರಾಜೇಂದ್ರ ಸ್ವಾಮಿಗಳು ಮಠ ಮತ್ತು ಮಠದ ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಂಡು ಸದಾ ಅಸನ್ಮುಖಿಗಳಾಗಿರುತ್ತಾರೆ. ಧಾರ್ಮಿಕ ವಿಚಾರಗಳನ್ನು ಸಾಮಾನ್ಯರಿಗೆ ಮುಟ್ಟುವಂತೆ ಹೇಳುವ ರೀತಿ ಭಕ್ತರಿಗೆ ಆಕರ್ಷಣೀಯವಾಗಿದೆ. ಈ ಕಾರಣದಿಂದಲೇ ಮಠವು ಹೆಚ್ಚು ಪ್ರಚಾರಗೊಂಡು ಬೆಳೆಯುತ್ತಿದೆ.

ಧಾರ್ಮಿಕ ಕಾರ್ಯಗಳು: ನವೀಕರಣಗೊಂಡ ಮಠದಲ್ಲಿ ಗದ್ದುಗೆಗಳಿಗೆ ಮತ್ತು ಮಠದ ಹಿಂಭಾಗದಲ್ಲಿರುವ ಚೌಡಮ್ಮ ಹಾಗೂ ಕರ್ತೃಗುರುಗಳ ಗದ್ದುಗೆಯ ಪಕ್ಕದಲ್ಲಿ ಸ್ಥಾಪನೆಗೊಂಡಿರುವ ಈಶ್ವರ ದೇವಸ್ಥಾನದಲ್ಲಿ ನಿತ್ಯಪೂಜೆಗೆ ವ್ಯವಸ್ಥೆ ಮಾಡಲಾಗಿದೆ. ಶ್ರಾವಣ ಮತ್ತು ಕಾರ್ತೀಕ ಮಾಸಗಳಲ್ಲಿ ವಿಶೇಷ ಪೂಜೆ ನಡೆಯುತ್ತದೆ. ಹಾಗೂ ಶ್ರೀ ಸದಾಶಿವ ಸ್ವಾಮಿಗಳ ಪುಣ್ಯತಿಥಿಯ ಅಂಗವಾಗಿ ನವರಾತ್ರಿಯಿಂದ ಶಿವರಾತ್ರಿಯವರೆಗೆ ಪುರಾಣ ಪ್ರವಚನಗಳನ್ನು ನಡೆಸಲಾಗುತ್ತದೆ. ಈ ಸಂದರ್ಭದಲ್ಲಿ ಅನ್ನದಾಸೋಹದ ವ್ಯವಸ್ಥೆಯನ್ನು ವಿಶೇಷವಾಗಿ ಏರ್ಪಡಿಸಲಾಗುತ್ತದೆ. ಪುಣ್ಯಸ್ಮರಣೆಯ ಅಂಗವಾಗಿ ಮಾಸಾಂತ್ಯದಲ್ಲಿ ನಡೆಯುವ ಕುಂಭೋತ್ಸವವನ್ನು ನಡೆಸಲಾಗುತ್ತಿದೆ. ಪ್ರತಿ ಅಮಾವಾಸ್ಯೆಯ ದಿನ ಅಪೇಕ್ಷಿತರಿಗೆ ಗುರುಗಳು ಜ್ಯೋತಿಷ್ಯಶಾಸ್ತ್ರವನ್ನು ಹೇಳುತ್ತಾರೆ. ಅಂದು ಸುಮಾರು ನೂರಾರು ಭಕ್ತರು ಮಡ್ಲೂರು ಮತ್ತು ಸುತ್ತಮುತ್ತಲ ಗ್ರಾಮಗಳಿಂದ ಬಂದು ಸೇರುತ್ತಾರೆ. ಅಂದು ಬೆಳಿಗ್ಗೆಯಿಂದಲೇ ಬಂದು ಸೇರುವ ಭಕ್ತರಿಗೆ ಅನ್ನ ದಾಸೋಹದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.

ಅಭಿವೃದ್ಧಿ ಕಾರ್ಯಗಳು: ಮಠದ ಕಟ್ಟಡವನ್ನು ನವೀಕರಣಗೊಳಿಸಿದ ಗುರುಗಳು ಮಠದ ಮುಂಭಾಗದ ಆವರಣಕ್ಕೆ ಕಡಪದ ಕಲ್ಲುಗಳನ್ನು ಹಾಕಿಸಿ ಸಭೆ ಸಮಾರಂಭಗಳು ನಡೆಯಲು ವ್ಯವಸ್ಥೆಗೊಳಿಸಿದ್ದಾರೆ. ದಾಸೋಹ ಮಂದಿರವನ್ನು ಸ್ಥಾಪಿಸಲಾಗಿದೆ. ಮಠದ ಆಸ್ತಿಯಾಗಿರುವ ಹನ್ನೆರಡು ಎಕರೆ ಜಮೀನನ್ನು ಬೇಸಾಯಕ್ಕೆ ಯೋಗ್ಯಗೊಳಿಸಿ ಭತ್ತ, ಗೋವಿನಜೋಳ ಮತ್ತು ಹತ್ತಿಯನ್ನು ಬೆಳೆಯಲಾಗುತ್ತಿದೆ. ಮಳೆಯ ಆಶ್ರಯದಲ್ಲಿ ಬೆಳೆಯಲಾದ ಬೆಳೆಗಳಿಂದ ಬರುವ ಆದಾಯವನ್ನು ಮಠದ ಅಭಿವೃದ್ಧಿಗೆ ಬಳಸಿಕೊಳ್ಳಲಾಗುತ್ತಿದೆ. ಮಠದ ಸಂಪ್ರದಾಯದಂತೆ ಪ್ರತಿ ವರ್ಷದ ದೀಪಾವಳಿಯ ನಂತರ ನಿಗದಿತ ಭಕ್ತರ ಮನೆಗಳಿಗೆ ಜೋಳಿಗೆಯನ್ನು ಹಿಡಿದು ಭಿಕ್ಷೆಗೆ ಹೋಗಲಾಗುತ್ತದೆ. ಈ ಸಂದರ್ಭಗಳಲ್ಲಿ ದವಸ ಧಾನ್ಯವನ್ನು ಸಂಗ್ರಹಿಸಿ ಮಠದಲ್ಲಿ ನಡೆಯುವ ದಾಸೋಹ ಸೇವೆಗೆ ಬಳಸಿಕೊಳ್ಳಲಾಗುತ್ತಿದೆ.

ಕ್ರಿಯಾಶೀಲರು: ಚಿಕ್ಕವಯಸ್ಸಿನ ಶ್ರೀ ಮುರುಘರಾಜೇಂದ್ರ ಸ್ವಾಮಿಗಳು ಸದಾಚಟುವಟಿಕೆಯ ಮೂರ್ತಿಯಾಗಿ ಮಠದಲ್ಲಿ ಧಾರ್ಮಿಕ ವಾತಾವರಣವನ್ನು ಸೃಷ್ಟಿಸಲು ಸಫಲರಾಗಿದ್ದು ತಮ್ಮ ಕ್ರಿಯಾಶೀಲ ಚಟುವಟಿಕೆಯಿಂದ ಭಕ್ತರನ್ನು ಅದರಲ್ಲಿಯೂ ಯುವಪೀಳಿಗೆಯನ್ನು ಆಕರ್ಷಿಸಿಕೊಂಡು ಮಠವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯುತ್ತಿದ್ದಾರೆ.

ವಿಳಾಸ: ಶ್ರೀ.ಮ.ನಿ.ಪ್ರ. ಮುರುಘರಾಜೇಂದ್ರ ಸ್ವಾಮಿಗಳು, ಶ್ರೀಮುರುಘಾಮಠ, ಮಡ್ಲೂರು, ಹಿರೇಕೆರೂರು ತಾ, ಹಾವೇರಿ ಜಿಲ್ಲೆ.

ರಟ್ಟೀಹಳ್ಳಿ

ಹಿರೇಕೆರೂರು ತಾಲ್ಲೂಕಿನ ರಟ್ಟೀಹಳ್ಳಿಯು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಇಪ್ಪತ್ತು ಕಿ.ಮೀ.ದೂರದಲ್ಲಿದೆ. ಈ ಗ್ರಾಮವು ಹತ್ತನೆಯ ಶತಮಾನದಿಂದಲೂ ಧಾರ್ಮಿಕವಾಗಿ ಹೆಸರು ಪಡೆದು ಬೆಳೆದಿದೆ. ಕದಂಬರ ಆಳ್ವಿಕೆಯ ಕಾಲದಲ್ಲಿ ನಿರ್ಮಿಸಲಾದ ಕದಂಬೇಶ್ವರ ದೇವಸ್ಥಾನವು ಈ ನೆಲದ ಧಾರ್ಮಿಕ ಇತಿಹಾಸವನ್ನು ಬಿಂಬಿಸುತ್ತಿದೆ. ಹನ್ನೆರಡನೆಯ ಶತಮಾನದಲ್ಲಿ ಪ್ರಾರಂಭವಾಗಿರಬಹುದಾದ ಮಠವು ಇಲ್ಲಿನ ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿ ಈತನಕ ಬೆಳೆದು ಬಂದಿದೆ.

ಕಬ್ಬಿಣಕಂತೆಮಠ: ಹನ್ನೆರಡನೆಯ ಶತಮಾನದಲ್ಲಿ ಉಜ್ಜಯಿನಿಪೀಠದಲ್ಲಿ ನೆಲೆಸಿದ್ದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ರಟ್ಟೀಹಳ್ಳಿ ಗ್ರಾಮದ ಆಗ್ನೇಯ ಭಾಗದಲ್ಲಿ ಹರಿಯುತ್ತಿರುವ ಕುಮುದ್ವತಿ ನದಿಯ ದಂಡೆಯ ಮೇಲೆ ನೆಲೆನಿಂತು, ಅನೇಕ ದಿನಗಳ ಕಾಲ ತಪೋನುಷ್ಠಾನಗೊಂಡು ಈ ನೆಲವನ್ನು ಪುಣ್ಯಕ್ಷೇತ್ರವನ್ನಾಗಿ ಮಾಡಿದ್ದಾರೆ. ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ತಪೋನುಷ್ಠಾನವನ್ನು ಕೈಗೊಳ್ಳುತ್ತಿದ್ದ ಸಂದರ್ಭದಲ್ಲಿ ಈ ಪ್ರಾಂತ್ಯದಲ್ಲಿ ಮಳೆ ಇಲ್ಲದೆ ಕ್ಷಾಮ ಬಂದು ಜನ ಮತ್ತು ಜಾನುವಾರುಗಳಿಗೆ ತುಂಬಾ ತೊಂದರೆಯಾಗಿತ್ತು. ತಪೋನುಷ್ಠಾನವನ್ನು ಕೈಗೊಂಡಿದ್ದ ಗುರುಗಳ ಬಳಿಗೆ ಭಕ್ತರು ಆಗಮಿಸಿ ಈ ಭೀಕರ ಕ್ಷಾಮವನ್ನು ನಿವಾರಣೆ ಮಾಡಬೇಕೆಂದು ಬಿನ್ನವಿಸಿಕೊಂಡರು. ಆಗ ಮಹಾತಪಸ್ವಿಗಳಾದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಕಾಯಿಸಿದ ಕಬ್ಬಿಣದ ಕವಚವನ್ನು ಧಾರಣಮಾಡಿಕೊಂಡು ಸಮೃದ್ಧ ಮಳೆಗಾಗಿ ಪ್ರಾರ್ಥನೆ ಸಲ್ಲಿಸಿ, ತಮ್ಮ ತಪೋಶಕ್ತಿಯ ಬಲದಿಂದ ಧಾರಾಕಾರವಾಗಿ ಮಳೆಯು ಸುರಿಯುವಂತೆ ಮಾಡಿದರು. ಅಂದು ಧಾರಣಮಾಡಿಕೊಂಡಿದ್ದ

ಕಾಯಿಸಿದ ಕಬ್ಬಿಣದ ಕಂತೆಯು ಇಂದಿಗೂ ಮಠದಲ್ಲಿ ಪೂಜೆಗೊಳ್ಳುತ್ತಿದೆ. ಈ ಕಾರಣದಿಂದ ರಟ್ಟೀಹಳ್ಳಿಮಠಕ್ಕೆ 'ಕಬ್ಬಿಣಕಂತೆ' ಮಠ ಎಂದು ಹೆಸರು ಬಂದಿದೆ.

ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಮಠ ಸ್ಥಾಪನೆ ಮಾಡಿ ಇಲ್ಲಿ ನೆಲೆನಿಂತು ಅನೇಕ ಪವಾಡಗಳನ್ನು ಸೃಷ್ಟಿಸಿ, ವೀರಶೈವಧರ್ಮ ಬೆಳೆಯುವಂತೆ ಮಾಡಿದರು. ಇವರ ಕಾಲದಲ್ಲಿ ಈ ಪ್ರಾಂತ್ಯವು ಧಾರ್ಮಿಕ ನೆಲೆಗಟ್ಟಿನಲ್ಲಿ ರೂಪುಗೊಂಡು ಸದಾಚಾರ, ಸಂಪನ್ನತೆಯ ಶ್ರೀಮಂತಿಕೆಯಿಂದ ಬೆಳೆಯಿತು. ತಾವು ಸ್ಥಾಪಿಸಿದ ಮಠಕ್ಕೆ ಉತ್ತರಾಧಿಕಾರಿಗಳನ್ನು ನೇಮಿಸಿ ಲೋಕಸಂಚಾರಕ್ಕೆಂದು ಮುಂದೆ ಹೊರಟರು. ತಾವು ನೆಲೆನಿಂತ ಸ್ಥಳಗಳನ್ನು ಪುಣ್ಯಕ್ಷೇತ್ರಗಳನ್ನಾಗಿ ಮಾಡಿ, ಕಣಿವೆಸಿದ್ಧೇಶ್ವರ ಕ್ಷೇತ್ರದಲ್ಲಿ ನೆಲೆಗೊಂಡು ಅಲ್ಲಿಯೇ ಲಿಂಗೈಕ್ಯರಾಗಿದ್ದಾರೆ.

ಪರಂಪರೆ:

೧. ಷ.ಬ್ರ.ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು (ಕರ್ತೃಗುರುಗಳು)
೨. ಷ.ಬ್ರ.ಶ್ರೀ ಎರಡನೆಯ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೩. ಷ.ಬ್ರ.ಶ್ರೀ ಮೂರನೆಯ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೪. ಷ.ಬ್ರ.ಶ್ರೀ ಹಾಲುಸ್ವಾಮಿ ಶಿವಾಚಾರ್ಯಸ್ವಾಮಿಗಳು
೫. ಷ.ಬ್ರ.ಶ್ರೀ ನಾಲ್ಕನೆಯ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೬. ಷ.ಬ್ರ.ಶ್ರೀ ಜಯಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು
೭. ಷ.ಬ್ರ.ಶ್ರೀ ಶಿವಲಿಂಗ ಶಿವಾಚಾರ್ಯಸ್ವಾಮಿಗಳು (ಈಗಿನವರು)

ಈ ರೀತಿ ಮಠದ ಪರಂಪರೆಯು ಬೆಳೆದು ಬಂದಿದೆ. ಮಠದ ಪರಂಪರೆಯಲ್ಲಿ ಬಂದಂತಹ ಅನೇಕ ಗುರುಗಳ ಹೆಸರುಗಳು ಲಭ್ಯವಿಲ್ಲದ ಕಾರಣ, ಪರಂಪರೆಯ ಏಳು ಜನ ಗುರುಗಳ ಹೆಸರುಗಳನ್ನು ಮಾತ್ರ ಇಲ್ಲಿ ದಾಖಲಿಸಲಾಗಿದೆ. ಕರ್ತೃಗುರುಗಳ ನಂತರ ಬಂದಂತಹ ಬಹುತೇಕ ಎಲ್ಲಾ ಗುರುಗಳು ಶಿವಪೂಜಾನಿಷ್ಠರಾಗಿ ಮಠವನ್ನು ಬೆಳೆಸಿ ಇಲ್ಲಿ ಧರ್ಮ ನೆಲೆಗೊಳ್ಳುವಲ್ಲಿ ಕಾರಣೀಭೂತರಾಗಿದ್ದಾರೆ. ಮಠದ ಪರಂಪರೆಯಲ್ಲಿ ಬರುವ ಗುರುಗಳ ಗದ್ದುಗೆಗಳು ಹಾವೇರಿ, ಸೊರಬ ತಾಲ್ಲೂಕಿನ ಜಡೆಕೋಟೆಯಲ್ಲಿ ಹಾಗೂ ಚನ್ನಗಿರಿ ತಾಲ್ಲೂಕಿನ ಬೆಳಲಗೆರೆಯಲ್ಲಿ ಸ್ಥಾಪಿತವಾಗಿವೆ. ಒಂಬತ್ತು ವರ್ಷಗಳ ಹಿಂದೆ ಲಿಂಗೈಕ್ಯರಾದ ಶ್ರೀಜಯಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಮಹಾ ತಪಸ್ವಿಗಳಾಗಿ, ಸಾತ್ವಿಕರಾಗಿ ಮಠ ಮತ್ತು ಸಮಾಜದ ಅಭಿವೃದ್ಧಿಗೆ ಶ್ರಮಿಸಿದವರಾಗಿದ್ದಾರೆ. ಈ ಕಾರಣಕ್ಕಾಗಿಯೇ ಇವರು ಈಗಲೂ ಜನಮನದಲ್ಲಿ ಸ್ಮರಣೀಯರಾಗಿ ಉಳಿದಿದ್ದಾರೆ.

ತತ್ತ್ವಜ್ಞಾನಿಗಳ ಆಗಮನ: ಶ್ರೀ ಜಯಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳ ನಂತರ ಅಧಿಕಾರಕ್ಕೆ ಬಂದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಚಂದ್ರಶೇಖರಯ್ಯ ಮತ್ತು ಶ್ರೀಮತಿ ಪುಟ್ಟಮ್ಮನವರ ಪುತ್ರರಾಗಿ ೧೯೬೩ ರ ಜನವರಿ ಹತ್ತರಂದು ಜನಿಸಿದರು. ಪ್ರಾಥಮಿಕ ವಿದ್ಯಾಭ್ಯಾಸವನ್ನು ರಟ್ಟಿಹಳ್ಳಿಯಲ್ಲಿಯೇ ಮುಗಿಸಿ, ಪದವಿ ಶಿಕ್ಷಣವನ್ನು ಮೈಸೂರಿನಲ್ಲಿ ಮುಗಿಸಿದರು. ನಂತರ ತತ್ತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ಮಠದ ಆಡಳಿತವನ್ನು ವಹಿಸಿಕೊಳ್ಳುತ್ತಾರೆ. ವಿದ್ಯಾಸಂಪನ್ನತೆ ಹಾಗೂ ಸರಳತೆಯನ್ನು ಮೈಗೂಡಿಸಿಕೊಂಡಿರುವ ಗುರುಗಳು ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸಿ, ಅವುಗಳ ಪರಿಹಾರಕ್ಕೆ ಪ್ರಯತ್ನಿಸಿ ಜನಾನುರಾಗಿಯಾಗಿದ್ದಾರೆ.

ಧಾರ್ಮಿಕ ಕಾರ್ಯಗಳು: ಮಠದಲ್ಲಿರುವ ಗದ್ದುಗೆಗಳಿಗೆ ಹಾಗೂ ಹನ್ನೆರಡು ಮಣ ತೂಕವಿರುವ ಕಬ್ಬಿಣಕಂತೆಗೆ ನಿತ್ಯವೂ ಪೂಜೆಯನ್ನು ಸಲ್ಲಿಸಲಾಗುತ್ತಿದೆ. ಅಮಾವಾಸ್ಯೆ,ಹುಣ್ಣಿಮೆಗಳಲ್ಲಿ ಹಾಗೂ ಶ್ರಾವಣ ಮತ್ತು ಕಾರ್ತೀಕಮಾಸಗಳಲ್ಲಿ ರುದ್ರಾಭಿಷೇಕ, ವಾರ್ಷಿಕ ಆಚರಣೆಯಾಗಿ ಹಿರಿಯ ಗುರುಗಳ ಪುಣ್ಯಾರಾಧನೆ, ದೀಕ್ಷಾಸಂಸ್ಕಾರ, ಉಚಿತ ಸಾಮೂಹಿಕ ವಿವಾಹಗಳು ಮತ್ತು ಪ್ರತಿ ಭಾನುವಾರ ಧರ್ಮಚಿಂತನ ಗೋಷ್ಠಿಗಳನ್ನು ನಡೆಸಲಾಗುತ್ತಿದೆ.'ಮಠ ಮಾನ್ಯಗಳು ಧರ್ಮಪ್ರಚಾರಕ್ಕಾಗಿ ಹುಟ್ಟಿದ ಧರ್ಮ ಕೇಂದ್ರಗಳಾಗಿದ್ದರೂ ಸಾಮಾಜಿಕ ಸಮಸ್ಯೆಗಳಿಗೂ ಸ್ಪಂದಿಸುತ್ತಾ ಸಮಾಜದಲ್ಲಿ ನೈತಿಕತೆಯನ್ನು ಬೆಳೆಸುವ ಕೇಂದ್ರಗಳಾಗಿ ಬೆಳೆಯ ಬೇಕು. ಮಠ ಮಾನ್ಯಗಳಲ್ಲಿ ಜಾತಿ ಮತದ ಪ್ರಸ್ತಾಪ ಸಲ್ಲದು. ಮಠಾಧೀಶರು ತಮ್ಮ ಸಾನ್ನಿಧ್ಯಕ್ಕೆ ಬರುವ ಭಕ್ತರ

ಒಳಿತಿಗಾಗಿ ಶ್ರಮಿಸಬೇಕು'ಎಂಬ ಆಶಯವನ್ನು ಇಟ್ಟುಕೊಂಡಿರುವ ಈಗಿನ ಪಟ್ಟಾಧಿಕಾರಿಗಳಾದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮಿಗಳು ಸಮಾಜವನ್ನು ಸಮಷ್ಟಿದೃಷ್ಟಿಯಿಂದ ನೋಡುತ್ತಿದ್ದಾರೆ.

ವಿಳಾಸ: ಷ.ಬ್ರ.ಶ್ರೀ ಶಿವಲಿಂಗ ಶಿವಾಚಾರ್ಯಸ್ವಾಮಿಗಳು, ಶ್ರೀ ಕಬ್ಬಿಣಕಂತೆಮಠ, ರಟ್ಟೀಹಳ್ಳಿ, ಹಿರೇಕೆರೂರು ತಾ, ಹಾವೇರಿ ಜಿಲ್ಲೆ.

ಹಂಸಬಾವಿ

ಹಿರೇಕೆರೂರು ತಾಲ್ಲೂಕಿನ ಹಂಸಬಾವಿಯು ತಾಲ್ಲೂಕು ಕೇಂದ್ರದಿಂದ ಉತ್ತರಕ್ಕೆ ಇಪ್ಪತ್ತೈದು ಕಿ.ಮೀ. ದೂರದಲ್ಲಿದೆ. ಧಾರ್ಮಿಕ ಕ್ಷೇತ್ರಗಳಲ್ಲಿ ಒಂದಾದ ಹಂಸಬಾವಿಯು ವೀರಶೈವ ಧರ್ಮದ ಬೆಳವಣಿಗೆಗೆ ತನ್ನದೇ ಆದ ಕೊಡುಗೆಯನ್ನು ನೀಡಿರುವುದು ಒಂದು ವಿಶೇಷವಾಗಿದೆ. ಹನ್ನೆರಡನೆಯ ಶತಮಾನದಲ್ಲಿ ದೊರೆತ ಶಾಸನದ ಪ್ರಕಾರ ಈ ಗ್ರಾಮದ ಹೆಸರನ್ನು ತುಯ್ಯಾಲ ಬೇಗೂರು ಎಂದು ನಮೂದಿಸಲ್ಪಟ್ಟಿದೆ. ತುಯ್ಯಾಲ ಅಥವಾ ಗುಯ್ಯಲ ಎಂದರೆ ನೀರು ಎಂದು ಅರ್ಥ ಬರುತ್ತದೆ. ಇದಕ್ಕನು ಗುಣವಾಗಿ ಈ ಗ್ರಾಮದಲ್ಲಿ ಎಂತಹ ಬೇಸಿಗೆಯಲ್ಲಿಯೂ ನೀರು ಬತ್ತದೆ ಕುಡಿಯುವ ನೀರಿಗೆ ಯಾವತ್ತೂ ತೊಂದರೆಯಾಗಿಲ್ಲ ಎಂದು ಸಂಶೋಧಕರಾದ ಡಾ. ಬೋಜರಾಜ ಪಾಟೀಲರು ಅಭಿಪ್ರಾಯಿಸುತ್ತಾರೆ. ಹದಿನೈದನೆಯ ಶತಮಾನದ ಶಾಸನದ ಪ್ರಕಾರ 'ಹಾವಸ್ಯೆಬಾವಿ'ಎಂಬ ಹೆಸರಿನಿಂದ ಗುರುತಿಸಲ್ಪಪಟ್ಟ ಬಾವಿಯ ಹೆಸರು ನಮೂದಾಗಿದೆ. ನಾಗರಖಂಡ ಎಪ್ಪತ್ತರ ಹೆಬ್ಬಾಗಿಲಾಗಿದ್ದ ಈ ಪ್ರದೇಶದಲ್ಲಿ ಹಾವಸ್ಯೆಬಾವಿ ಎಂಬುದು ಕಾಲಕ್ರಮೇಣ ಸಂಸ್ಕೃತೀಕರಣಗೊಂಡು 'ಹಂಸಬಾವಿ' ಎಂಬುದಾಗಿ ಪರಿವರ್ತನೆ ಯಾಗಿರಬಹುದು. ಈ ಗ್ರಾಮದಲ್ಲಿ ಪುರಾತನ ಕಾಲದಲ್ಲಿ ಒಟ್ಟು ಅರವತ್ತ್ಮೂರು ಮಠಗಳು ಸ್ಥಾಪನೆಗೊಂಡಿದ್ದವೆಂದು ಹೇಳಲಾಗುತ್ತದೆ. ಈ ಅರವತ್ತಮೂರು ಮಠಗಳ ಜತೆಗೆ ಮಠಕ್ಕೊಂದರಂತೆ ಒಟ್ಟು ಅರವತ್ತ್ಮೂರು ಬಾವಿಗಳು ನಿರ್ಮಾಣಗೊಂಡಿವೆ. ಈಗಲೂ ಹಂಸಬಾವಿಯೆಂದು ಕರೆಯುವ ಬಾವಿಯು ಅಸ್ತಿತ್ವದಲ್ಲಿದೆ.

ಪುರಾತನ ಕಾಲದಲ್ಲಿ ಸ್ಥಾಪನೆಗೊಂಡ ಅರವತ್ತಮೂರು ಮಠಗಳಲ್ಲಿ ಸದ್ಯದ ಸ್ಥಿತಿಯಲ್ಲಿ ಹದಿನೆಂಟು ಮಠಗಳನ್ನು ಗುರುತಿಸಿ ದಾಖಲಿಸಬಹುದಾಗಿದೆ. ಶ್ರೀ ಕೋರಿಟೋಪಿಮಠ, ಶ್ರೀ ತೋಟಮಠ, ಶ್ರೀ ತೊಗರ್ಸಿಮಠ, ಶ್ರೀ ನಿಂಬಿಯಣ್ಣನಮಠ, ಶ್ರೀ ಉಜ್ಜಯಿನಿಮಠ, ಶ್ರೀ ಮಹಂತಿನ ಮಠ, ಶ್ರೀ ತಗಣಿಮಠ, ಶ್ರೀ ಹೊಳೆಬಸವೇಶ್ವರ ಮಠ, ಶ್ರೀ ಹಳ್ಳೂರುಮಠ, ಶ್ರೀಹೊಂಡದಮಠ, ಶ್ರೀ ಸುಡಗಾಡುಮಠ, ಶ್ರೀ ಓದಿಸೋಮಠ, ಶ್ರೀ ಮಳೀಮಠ, ಶ್ರೀ ಕೋರನ್ನಮಠ, ಶ್ರೀ ಹಿರೇಮಠ, ಶ್ರೀ ಭಿಕ್ಷದಮಠ, ಶ್ರೀ ಜೀರಿಗೆಮಠ ಹಾಗೂ ಶ್ರೀ ಅಜ್ಜಯ್ಯಸ್ವಾಮಿಮಠ ಎಂಬ ಈ ಹದಿನೆಂಟು ಮಠಗಳಲ್ಲಿ ಬಹುತೇಕ ಎಲ್ಲಾ ಮಠಗಳಲ್ಲಿಯೂ ಮಠಾಧೀಶ್ವರರು ಇಲ್ಲ. ಈ ಮಠಗಳು ಗದ್ದುಗೆಪೂಜೆಯನ್ನು ನೆರವೇರಿಸುತ್ತಾ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ. ಶ್ರೀ ಕೋರಿಟೋಪಿಮಠ ಮತ್ತು ಶ್ರೀ ಅಜ್ಜಯ್ಯಸ್ವಾಮಿ ಮಠವನ್ನು ಹೊರತುಪಡಿಸಿದರೆ ಉಳಿದ ಎಲ್ಲಾ ಮಠಗಳೂ ಸಂಸಾರಿ ಮನೆಗಳಾಗಿ ಪರಿವರ್ತನೆಗೊಂಡಿವೆ.

ಹನ್ನೆರಡನೆಯ ಶತಮಾನಕ್ಕಿಂತಲೂ ಮೊದಲು ಈ ಪ್ರದೇಶವು ಜೈನರ ಪ್ರಾಬಲ್ಯಕ್ಕೆ ಒಳಗಾಗಿತ್ತು. ಗುಲ್ಬರ್ಗಾ ಜಿಲ್ಲೆಯಿಂದ ಏಕಾಂತರಾಮಯ್ಯ ಎಂಬ ಶರಣರು ಹಬಲೂರಿಗೆ ಬರುತ್ತಾರೆ. ಇಲ್ಲಿದ್ದ ಬ್ರಹ್ಮೇಶ್ವರ ದೇವಾಲಯ ಪ್ರವೇಶಿಸಲು ಪ್ರಯತ್ನಿ ಸುತ್ತಾರೆ. ಆಗ ಅಲ್ಲಿನ'ಸಂಖ್ಯಗಾವುಂಡ'ಎಂಬುವನು ವಿರೋಧಿಸುತ್ತಾನೆ. ಈ ಸಂದರ್ಭದಲ್ಲಿ ಏಕಾಂತರಾಮಯ್ಯ ಮತ್ತು ಸಂಖ್ಯಗಾವುಂಡನಿಗೆ ವಾದವಿವಾದ ನಡೆಯುತ್ತದೆ. ಏಕಾಂತರಾಮಯ್ಯನವರು ಶಿವನೇ ಹೆಚ್ಚು ಎಂದು ವಾದಿಸಿದನು. ದಿವ್ಯಗಳಲ್ಲಿಯೇ ಶಿರಸ್ಕದಿವ್ಯ ಬಹಳ ಅಪಾಯಕಾರಿ ದಿವ್ಯವಾಗಿದ್ದು ಶಿರಸ್ಕ ದಿವ್ಯವನ್ನು ಪಣವಾಗಿಟ್ಟು ಏಳು ದಿನಗಳ ಕಾಲ ಪುಣ್ಯಕ್ಷೇತ್ರಗಳಲ್ಲಿ ಸಂಚರಿಸಿ, ಏಳನೆಯ ದಿನದಂದು ಶಿರಸ್ಸನ್ನು ಛೇದಿಸಿದ ಮುಂಡಕ್ಕೆ ಪುನಃ ಸೇರಿಸಲಾಗುತ್ತದೆ. ಇಂತಹ ಅಪಾಯಕಾರಿ ಪಣವನ್ನು ತೊಟ್ಟು ಶಿವನೇ ಹೆಚ್ಚು ಎಂದು ಸಾಬೀತು ಪಡಿಸಲು ಏಕಾಂತರಾಮಯ್ಯ ಮುಂದಾಗುತ್ತಾರೆ. ಈ ಪಣದಲ್ಲಿ ಏಕಾಂತರಾಮಯ್ಯ ಗೆದ್ದರೆ ಇಡೀ ಜೈನರೆಲ್ಲಾ ವೀರಶೈವರಾಗಿ ಪರಿವರ್ತನೆಯಾಗಬೇಕೆಂಬ ಒಡಂಬಡಿಕೆಯ ಕಾಗದ ಪತ್ರವನ್ನು ಮಾಡಿಸುತ್ತಾರೆ.

ತನ್ನ ಶಿರಸ್ಸನ್ನೇ ಪಣವಾಗಿಟ್ಟು ಏಕಾಂತರಾಮಯ್ಯ ಅಗ್ನಿಹೊನ್ನಯ್ಯನನ್ನು ಬರಮಾಡಿಕೊಂಡು ಗಂಡುಕತ್ತಿಯಿಂದ

ಶಿರಚ್ಛೇದನವನ್ನು ಮಾಡಿಕೊಳ್ಳುತ್ತಾರೆ. ಶ್ರೀ ಅಗ್ನಿಹೊನ್ನಯ್ಯನು ಕತ್ತರಿಸಿದ ಶಿರಸ್ಸನ್ನು ಪರಿವಾಣದಲ್ಲಿ ಇಟ್ಟುಕೊಂಡು ಏಳು ದಿನಗಳ ಕಾಲ ಪುಣ್ಯಕ್ಷೇತ್ರಗಳ ದರ್ಶನಕ್ಕೆ ಹೊರಡುತ್ತಾರೆ. ಏಳು ದಿನಗಳ ಕಾಲ ಸಂಚರಿಸಿ ಅಂತರವಳ್ಳಿಗೆ ಬರುವ ವೇಳೆಗೆ ಕತ್ತಲು ಆವರಿಸುತ್ತದೆ. ಈ ಗ್ರಾಮದಲ್ಲಿ ಮೂರುಜಾವದಯ್ಯ ಎಂಬ ಮಹಾಯೋಗಿಯು ನೆಲೆಸಿದ್ದು ತಮ್ಮ ಅಂತಃರ್ಜ್ಞಾನದಿಂದ ಏಕಾಂತರಾಮಯ್ಯ ನವರ ಪಣವನ್ನು ಅರಿತವರಾಗಿ ತಮ್ಮ ತಪೋಶಕ್ತಿಯಿಂದ ಚಲಿಸುವ ಸೂರ್ಯನನ್ನು ಮೂರು ಜಾವದವರೆಗೆ ತಡೆದು ನಿಲ್ಲಿಸುತ್ತಾರೆ. ಅಗ್ನಿಹೊನ್ನಯ್ಯನವರು ಏಕಾಂತರಾಮಯ್ಯನವರ ಛೇದನಗೊಂಡ ಶಿರಸ್ಸನ್ನು ಹಬಲೂರಿಗೆ ತಂದು ಛೇದನಗೊಂಡ ಶಿರಸ್ಸು ಮತ್ತು ದೇಹವನ್ನು ಪುನಃ ಜೋಡಿಸುತ್ತಾರೆ. ಏಕಾಂತರಾಮಯ್ಯನವರು ಈ ಅಪಾಯಕಾರಿ ಪಣದಿಂದ ಜಯಶೀಲರಾಗುತ್ತಾರೆ. ಸೋತ ಜೈನರು ಈ ಕರಾರಿಗೆ ಒಪ್ಪಿಕೊಳ್ಳದೆ ಹೋಗುತ್ತಾರೆ. ಏಕಾಂತರಾಮಯ್ಯನವರ ಭಕ್ತರಿಗೂ ಮತ್ತು ಜೈನರಿಗೂ ಕದನ ನಡೆಯುತ್ತದೆ. ಈ ಕದನದಲ್ಲಿಯೂ ಸೋತ ಜೈನರು ವೀರಶೈವ ಧರ್ಮವನ್ನು ಸ್ವೀಕರಿಸುತ್ತಾರೆ.

ಇಂತಹ ಮಹಾಶರಣರಿಂದ ವೀರಶೈವ ಧರ್ಮವು ಈ ಪ್ರಾಂತ್ಯದಲ್ಲಿ ಪ್ರಬಲವಾಗಿ ಬೆಳೆಯಲು ಕಾರಣವಾಯಿತು. ಹಂಸಬಾವಿಯಲ್ಲಿ ಪಂಚಪೀಠಗಳ ಶಾಖಾಮಠಗಳಾದ ಅನೇಕ ಮಠಗಳು ಅಸ್ತಿತ್ವದಲ್ಲಿದ್ದ ಕಾರಣ ಜೈನ ಧರ್ಮೀಯರಿಗೆ ಹಂಸಬಾವಿಯ ಒಳಗೆ ಪ್ರವೇಶಿಸಲು ಅವಕಾಶ ಕೊಡದೆ ಪ್ರಬಲವಾಗಿ ತಡೆಯೊಡ್ಡಿದ್ದರೆಂದು ತಿಳಿದು ಬರುತ್ತದೆ.

ಕೋರಿಟೋಪಿಮಠ: ಕೋರಿಟೋಪಿಮಠವು ಹಂಸಬಾವಿಯ ಹೊರಭಾಗದ ಪೂರ್ವಭಾಗದಲ್ಲಿ ಸ್ಥಾಪನೆಯಾಗಿದೆ. ವಿರಕ್ತಸಂಪ್ರದಾಯದ ಈ ಮಠದಲ್ಲಿ ಪ್ರಸ್ತುತ ಮಠಾಧೀಶ್ವರರು ಇಲ್ಲದಿದ್ದರೂ ಮಠದ ಆವರಣದಲ್ಲಿರುವ ಗದ್ದುಗೆಗಳಿಗೆ ನಿತ್ಯ ಪೂಜೆಗೆ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಕ್ರಿ.ಶ. ೧೮೦೦ರಲ್ಲಿ ಜೀವಿಸಿದ್ದರೆಂದು ಹೇಳಲಾದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಮಠದ ಕೊನೆಯ ಗುರುಗಳಾಗಿದ್ದಾರೆ. ಶ್ರೀ ಸಿದ್ಧಲಿಂಗ ಸ್ವಾಮಿಗಳ ನಂತರ ಮಠಾಧೀಶರು ಯಾರೂ ಇಲ್ಲದ ಕಾರಣ ಮಠವು ಶಿಥಿಲಾವಸ್ಥೆಗೆ ಬರತೊಡಗಿತು. ಇದನ್ನು ಗಮನಿಸಿದ ಗ್ರಾಮದ ಭಕ್ತರು ಆಸ್ತಿವಂತ ಮಠವು ಅನ್ಯರ ಪಾಲಾಗುವುದು ಬೇಡ ಎಂಬುದನ್ನು ಅರಿತು, ಮಠದ ಪರಂಪರೆಯಲ್ಲಿ ಬರುವ ಗುರುಗಳಾದ ಶ್ರೀ ಮೃತ್ಯುಂಜಯ ಸ್ವಾಮಿಗಳ ಹೆಸರಿನಲ್ಲಿ ವಿದ್ಯಾಪೀಠವನ್ನು ಪ್ರಾರಂಭಿಸಿ ಮಠವನ್ನು ಧಾರ್ಮಿಕವಾಗಿ ಮತ್ತು ಶೈಕ್ಷಣಿಕವಾಗಿ ಅಭಿವೃದ್ಧಿಪಡಿಸಿದ್ದಾರೆ.

ವಿಳಾಸ: ಅಧ್ಯಕ್ಷರು, ಅಭಿವೃದ್ಧಿ ಸಮಿತಿ, ಶ್ರೀ ಕೋರಿಟೋಪಿ ಮಠ, ಹಂಸಬಾವಿ, ಹಿರೇಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ.

❑

ಅನುಬಂಧ

ಅನುಬಂಧ-೧

ವೀರಶೈವ ಮಠಗಳಲ್ಲಿಯೇ ಪ್ರಾಚೀನ ಪರಂಪರೆಯನ್ನು ಹೊಂದಿರುವ ಪಂಚಪೀಠಗಳು ದೇಶದ ನಾಲ್ಕು ರಾಜ್ಯಗಳಲ್ಲಿ ಸ್ಥಾಪನೆಯಾಗಿವೆ. ಶಿವನ ಅಪ್ಪಣೆಯ ಮೇರೆಗೆ ಪಂಚಗಣಾಧೀಶರೆ ಪಂಚಾಚಾರ್ಯರಾಗಿ ಭೂಲೋಕದಲ್ಲಿ ಅವತರಿಸಿದರೆಂದು ಶಿವಾಗಮಗಳಿಂದ ತಿಳಿದು ಬರುತ್ತದೆ. ಕರ್ನಾಟಕದಲ್ಲಿ ಶ್ರೀ ರಂಭಾಪುರಿಪೀಠ ನೆಲೆಗೊಂಡಿತು. ಶ್ರೀ ಉಜ್ಜಯಿನಿ ಪೀಠ ಮಧ್ಯಪ್ರದೇಶದಲ್ಲಿ ನೆಲೆಗೊಂಡು ನಂತರ ಕರ್ನಾಟಕಕ್ಕೆ ಸ್ಥಳಾಂತರಗೊಂಡಿತು. ಹೊರರಾಜ್ಯಗಳಾದ ಉತ್ತರಾಂಚಲ ರಾಜ್ಯ (ಉತ್ತರಪ್ರದೇಶದಿಂದ ವಿಭಜನೆಗೊಂಡು ಈಗ ಹೊಸದಾಗಿ ರಚನೆಗೊಂಡ) ದಲ್ಲಿ ಶ್ರೀ ಕೇದಾರಪೀಠ, ಆಂಧ್ರಪ್ರದೇಶದಲ್ಲಿ ಶ್ರೀಶೈಲ ಪೀಠ, ಉತ್ತರಪ್ರದೇಶದಲ್ಲಿ ಕಾಶೀಪೀಠ ಸ್ಥಾಪನೆಗೊಂಡು ಧರ್ಮಪ್ರಚಾರವನ್ನು ಕೈಗೊಂಡವು. ಈ ಪೀಠಗಳು ಧರ್ಮ ಪ್ರಚಾರಕ್ಕಾಗಿ ಶಿವಾಚಾರ್ಯರನ್ನು ಮಂಡಲಕೊಬ್ಬರಂತೆ ನೇಮಿಸಿ ಮಠಗಳನ್ನು ಸ್ಥಾಪಿಸಿದವು. ನಂತರ ಭಕ್ತರ ಧಾರ್ಮಿಕ ಕ್ರಿಯಾದಿಗಳನ್ನು ಪೂರೈಸುವ ಉದ್ದೇಶಕ್ಕೆಂದು ಗ್ರಾಮಕ್ಕೊಂದು ಮಠದ ಮನೆಯನ್ನು ಸ್ಥಾಪಿಸಲಾಯಿತು. ಅಂದು ಶಾಸನಬದ್ಧವಾಗಿ ರೂಪುಗೊಂಡ ಪಂಚಪೀಠಗಳ ಮಠೀಯ ವ್ಯವಸ್ಥೆ ಇಂದಿಗೂ ಬೆಳೆದುಬಂದಿರುವುದನ್ನು ನೋಡಬಹುದಾಗಿದೆ.

"ಕರ್ನಾಟಕದ ವೀರಶೈವ ಮಠಗಳು" ಎಂಬ ಈ ಗ್ರಂಥದಲ್ಲಿ ಶ್ರೀ ರಂಭಾಪುರಿ ಪೀಠ ಮತ್ತು ಶ್ರೀ ಉಜ್ಜಯಿನಿ ಪೀಠಗಳ ಪರಿಚಯವನ್ನು ನೀಡಲಾಗಿದ್ದು, ಹೊರರಾಜ್ಯಗಳಲ್ಲಿ ಸ್ಥಾಪನೆಗೊಂಡಿರುವ ಕೇದಾರ, ಶ್ರೀಶೈಲ ಮತ್ತು ಕಾಶಿಪೀಠಗಳ ಮಾಹಿತಿಯನ್ನು ಈ ಸಂಪುಟದಲ್ಲಿ ನೀಡಲಾಗಿರಲಿಲ್ಲ. ಕರ್ನಾಟಕದಲ್ಲಿ ಈ ಮೂರೂ ಪೀಠಗಳ ಶಾಖಾಮಠಗಳು ಅಧಿಕ ಸಂಖ್ಯೆಯಲ್ಲಿ ಇರುವುದರಿಂದ, ಮೂಲ ಪೀಠಗಳ ಪರಿಚಯವಿಲ್ಲದೆ ಶಾಖಾಮಠಗಳ ಪರಿಚಯ ನೀಡುವುದು ಅಪೂರ್ಣವೆಂಬ ಅಭಿಪ್ರಾಯ ಬಂದ ಹಿನ್ನೆಲೆಯಲ್ಲಿ, ಈ ಮೂರು ಪೀಠಗಳ ಸಂಕ್ಷಿಪ್ತ ಪರಿಚಯುವನ್ನು ಅನುಬಂಧದಲ್ಲಿ ನೀಡಲಾಗುತ್ತಿದೆ. ಮುಂದೆ ಪ್ರಕಟಗೊಳ್ಳಲಿರುವ ಮಠಗಳ ಪರಂಪರೆ-ಮಾಹಿತಿಕೋಶ ಗ್ರಂಥಮಾಲಿಕೆಯ "ಹೊರರಾಜ್ಯದ ಮಠಗಳು" ಸಂಪುಟ-೩ರಲ್ಲಿ ಸವಿವರವಾದ ಪರಿಚಯುವನ್ನು ನೀಡಲಾಗುತ್ತದೆ.

ಶ್ರೀಮದ್ ಕೇದಾರಪೀಠ

ಉತ್ತರಪ್ರದೇಶದಿಂದ ವಿಭಜನೆಗೊಂಡು ಉತ್ತರಾಂಚಲವೆಂಬ ಹೊಸ ಹೆಸರಿನಿಂದ ರಚನೆಗೊಂಡಿರುವ ರಾಜ್ಯದ ರುದ್ರಪ್ರಯಾಗ ಜಿಲ್ಲೆಯ ಓಖೀಮಠ ಎಂಬಲ್ಲಿ ಕೇದಾರಪೀಠವು ಸ್ಥಾಪನೆಯಾಗಿದೆ.

ಪೀಠ ಸ್ಥಾಪನೆ: ಶಿವನ ಅಪ್ಪಣೆಯ ಮೇರೆಗೆ ಭೂಲೋಕದಲ್ಲಿ ವೀರಶೈವ ಧರ್ಮವನ್ನು ಸ್ಥಾಪಿಸುವ ಉದ್ದೇಶದಿಂದ ಅವತರಿಸಿದ ಪಂಚಶಿವಗಣರಲ್ಲಿ ಒಬ್ಬರಾದವರೇ ಶ್ರೀ ಏಕೋರಾಮೋರಾಧ್ಯರು. ಇವರು ಆಂಧ್ರಪ್ರದೇಶದ ದ್ರಾಕ್ಷಾರಾಮ ಕ್ಷೇತ್ರದ ಭೀಮನಾಥ (ರಾಮನಾಥ) ಲಿಂಗದಿಂದ ಅವಿರ್ಭವಿಸಿ, ಉತ್ತರಭಾರತದ ಹಿಮಾಲಯದ ಹಿಮಚ್ಛಾದಿತ ಪರ್ವತ ಶ್ರೇಣಿಯ ಕೇದಾರದಲ್ಲಿ ನೆಲೆಗೊಂಡು ವೈರಾಗ್ಯ ಪೀಠವನ್ನು ಸ್ಥಾಪಿಸಿದರೆಂದು ಶಿವಾಗಮಗಳಲ್ಲಿ ಉಲ್ಲೇಖಿತವಾಗಿದೆ.

ಶ್ರೀ ಏಕೋರಾಮೋರಾಧ್ಯರೆ ಕೃತಯುಗದಲ್ಲಿ ಜಗದ್ಗುರು ಶ್ರೀ ತ್ರ್ಯಕ್ಷರ ಶಿವಾಚಾರ್ಯರೆಂದು, ತ್ರೇತಾಯುಗದಲ್ಲಿ ಜಗದ್ಗುರು ಶ್ರೀ ತ್ರಿವಕ್ತ್ರ ಶಿವಾಚಾರ್ಯರೆಂದು, ದ್ವಾಪರ ಯುಗದಲ್ಲಿ ಜಗದ್ಗುರು ಶ್ರೀ ಘಂಟಾಕರ್ಣ ಶಿವಾಚಾರ್ಯರೆಂಬ ನಾಮದಿಂದ ಅವತರಿಸಿ ವೀರಶೈವ ಧರ್ಮವನ್ನು ಬೆಳೆಸಿದ್ದಾರೆ. ದ್ವಾಪರ ಯುಗದ ಜಗದ್ಗುರು ಶ್ರೀ ಘಂಟಾಕರ್ಣ ಶಿವಾಚಾರ್ಯರು ವ್ಯಾಸಮಹರ್ಷಿಗಳಿಗೆ ಶಿವಾದ್ವೈತ ಸಿದ್ಧಾಂತವನ್ನು ಬೋಧಿಸುವುದರ ಮೂಲಕ ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ. ಜಗದ್ಗುರು ಶ್ರೀ ಘಂಟಾಕರ್ಣ ಶಿವಾಚಾರ್ಯರಿಂದ ವೀರಶೈವ ಸಿದ್ಧಾಂತವನ್ನು ತಿಳಿದುಕೊಂಡ ವ್ಯಾಸ ಮಹರ್ಷಿಗಳು ತಾವು ವಿರಚಿಸಿದ ಸ್ಕಂದ ಪುರಾಣ, ಶಿವಪುರಾಣ ಮತ್ತು ಲಿಂಗಪುರಾಣಗಳಲ್ಲಿ

ಪ್ರಸಂಗಾನುಸಾರವಾಗಿ ವೀರಶೈವ ಸಿದ್ಧಾಂತವನ್ನು ಉಲ್ಲೇಖಿಸಿರುವುದು ಗಮನಾರ್ಹವಾಗಿದೆ. ಶ್ರೀ ಘಂಟಾಕರ್ಣ ಶಿವಾಚಾರ್ಯರು ಭರತಖಂಡವಲ್ಲಿ ಸಂಚರಿಸಿ ವೀರಶೈವ ಧರ್ಮದ ತತ್ತ್ವಗಳನ್ನು ಪ್ರಚಾರಗೊಳಿಸಿದ್ದಾರೆ. ಕಲಿಯುಗದ ಆಚಾರ್ಯರಾದ ಶ್ರೀ ಏಕೋರಾಮೋರಾಧ್ಯರು ಭಕ್ತಾದಿಗಳಿಗೆ ವೀರಶೈವ ಸಿದ್ಧಾಂತವನ್ನು ಬೋಧಿಸಿ ವೀರಶೈವ ಧರ್ಮ ಬೆಳೆಯುವಂತೆ ಮಾಡಿದರು.

ಕೇದಾರೇಶ್ವರ: ಓಖೀಮಠ ಅಥವಾ ಉಷಾಮಠ ಎಂದು ಕರೆಯಲ್ಪಡುವ ವೈರಾಗ್ಯ ಪೀಠದ ಮೂಲ ಆಡಳಿತವು ಇಲ್ಲಿಂದಲೇ ನಡೆಯುತ್ತದೆ. ಓಖೀಮಠದಿಂದ ಐವತ್ತು ಕಿ.ಮೀ. ದೂರದಲ್ಲಿರುವ ಕೇದಾರನಾಥ ಕ್ಷೇತ್ರವು ಭಾರತದ ಪುಣ್ಯಕ್ಷೇತ್ರಗಳಲ್ಲಿ ಒಂದಾಗಿ ಹೆಸರು ಪಡೆದಿದೆ. ಕೇದಾರನಾಥನ ಪೂಜಾ ಉಸ್ತುವಾರಿಯು ಓಖೀಮಠದ ಆಡಳಿತಕ್ಕೆ ಒಳಪಟ್ಟಿದ್ದಾಗಿದೆ. ಬೇಸಿಗೆ ಕಾಲದಲ್ಲಿ ಕೇದಾರನಾಥ ದೇವಾಲಯದ ಬಾಗಿಲು ತೆರೆಯುವಾಗ ಹಾಗೂ ಚಳಿಗಾಲದಲ್ಲಿ ದೇವಾಲಯದ ಬಾಗಿಲು ಮುಚ್ಚುವ ಪ್ರಕ್ರಿಯೆ ಜಗದ್ಗುರುಗಳ ಸಮ್ಮುಖದಲ್ಲಿಯೇ ನಡೆಯಲ್ಪಡುವುದು ವಿಶೇಷತೆಯಾಗಿದೆ. ಕೇದಾರನಾಥ ಮಂದಿರದ ಕಳಸದಲ್ಲಿ ಶ್ರೀ ಏಕೋರಾಮೋರಾಧ್ಯರ ಮೂರ್ತಿಯು ಕೆತ್ತಲ್ಪಟ್ಟಿದೆ. ಇದು ಕೇದಾರನಾಥ ದೇವಾಲಯ ಮತ್ತು ಪೀಠದ ಸಂಬಂಧವನ್ನು ಪುಷ್ಟೀಕರಿಸುತ್ತದೆ. ಕೇದಾರಪೀಠದ ಪರಂಪರೆ ಹಾಗೂ ನಿಯಮಗಳು ಇನ್ನುಳಿದ ಪೀಠಗಳಿಗಿಂತ ಭಿನ್ನವಾಗಿರುವುದನ್ನು ಇಲ್ಲಿ ಕಾಣಬಹುದಾಗಿದೆ. ಪ್ರಾಚೀನ ಐತಿಹಾಸಿಕ ದಾಖಲೆಗಳಿಂದ ಕೂಡಿರುವ ಕೇದಾರಪೀಠದ ಪರಂಪರೆಯು ವಿಶಿಷ್ಟ ರೀತಿಯಲ್ಲಿ ಬೆಳೆದುಬಂದಿದೆ. ಕೇದಾರನಾಥ ದೇವಾಲಯದ ಪೂಜಾರಿಗಳು ವೈರಾಗ್ಯಪೀಠದ ಜಗದ್ಗುರುಗಳ ಪಟ್ಟ ಶಿಷ್ಯಂದಿರಾಗಿ ನಿಯುಕ್ತಿಗೊಂಡ ನಂತರ ನಾಲ್ಕು ಜನರು ಪೂಜಾರಿಗಳಾಗಿ ಕೇದಾರನಾಥನನ್ನು ಪೂಜೆ ಮಾಡುವ ಅರ್ಹತೆಯನ್ನು ಪಡೆಯುತ್ತಾರೆ. ಇವರಲ್ಲಿ ನೈಷ್ಠಿಕ ಬ್ರಹ್ಮಚಾರಿಗಳಾಗಿದ್ದು ಜಗದ್ಗುರುಗಳ ಕೃಪೆಗೆ ಪ್ರಾರಾದವರು ಮಾತ್ರ ಮುಂದೆ ಜಗದ್ಗುರುಗಳಾಗುವ ಅರ್ಹತೆಯನ್ನು ಪಡೆಯುತ್ತಾರೆ.

ಕೇದಾರನಾಥ ಮಂದಿರದ ಸಮಿತಿಯವರು ರಾವಲ್ ಪದವಿಗೆ ಜಗದ್ಗುರುಗಳು ನೇಮಿಸಿದ ವಟುವನ್ನು ಟೆಹರಿ ಗಡವಾಲ ಮಹಾರಾಜರಿಗೆ ಶಿಫಾರಸ್ಸು ಮಾಡುತ್ತಾರೆ. ನಂತರ ಇಲ್ಲಿನ ಮಹಾರಾಜರು ರಾಜೋಚಿತ ಪೋಷಾಕು ಮತ್ತು ಬಂಗಾರದ ಕಡಗವನ್ನು ನೀಡಿ ಹಣೆಗೆ ತಿಲಕವನ್ನು ಇಟ್ಟು ರಾವಲ್ ಎಂದು ಸನ್ಮಾನಿಸುತ್ತಾರೆ.

ಉಷಾಮಠ: ಶಿವನ ಅಘೋರಮುಖ ಸಂಜಾತ ಏಕೋರಾಮೋರಾಧ್ಯರಿಂದ ಬೆಳೆದ ಓಖೀಮಠಕ್ಕೆ ಉಷಾಮಠ ಎಂಬ ಹೆಸರು ಸಹ ಥಳಕು ಹಾಕಿಕೊಳ್ಳುತ್ತದೆ. ಬಾಣಾಸುರನ ಮಗಳಾದ ಕು॥ ಉಷಾದೇವಿಯು ಈ ವೈರಾಗ್ಯ ಪೀಠದಲ್ಲಿಯೇ ನೆಲೆಸಿ ವೇದಾಧ್ಯಯನ ಮಾಡಿದಳು. ವಿದ್ಯಾಭ್ಯಾಸ ಮುಗಿಸಿದ ಇವಳ ವಿವಾಹವು ಶ್ರೀ ಅನಿರುದ್ಧನೊಡನೆ ನೆರವೇರಿತು. ಶ್ರೀಮತಿ ಉಷಾದೇವಿಯು ತನ್ನ ಪತಿಯೊಡನೆ ಅಂದು ಪೀಠದ ಜಗದ್ಗುರುಗಳಾಗಿದ್ದ ಶ್ರೀ ಆನಂದಲಿಂಗ ಶಿವಾಚಾರ್ಯ ಸ್ವಾಮಿಗಳ ಸೇವೆಯನ್ನು ಮಾಡುತ್ತ ಬಹುಕಾಲದವರೆಗೆ ಪೀಠದಲ್ಲಿ ಗುರುಸಾನಿಧ್ಯದಲ್ಲಿ ನೆಲೆಸಿದ್ದಳು. ಕೊನೆಗೆ ಗುರುಋಣದಿಂದ ಮುಕ್ತಳಾಗಲು ಮಠಕ್ಕೆ ಭವ್ಯವಾದ ಕಟ್ಟಡ ನಿರ್ಮಿಸಿ ಗುರುಕಾಣಿಕೆಯನ್ನು ನೀಡಿದಳು. ಇದಕ್ಕೆ ಸಾಕ್ಷಿಯೆಂಬಂತೆ ಈಗಲೂ ಉಷೆ, ಅನಿರುದ್ಧ ಕೈಮುಗಿದು ನಿಂತಿರುವ ಮೂರಡಿ ಎತ್ತರದ ವಿಗ್ರಹಗಳು ಓಂಕಾರನಾಥ ಗರ್ಭಗುಡಿಯಲ್ಲಿ ಇವೆ. ಅಂದು ಉಷೆ ನಿರ್ಮಿಸಿಕೊಟ್ಟ ಕಟ್ಟಡವೇ ಇಂದಿಗೂ ಇದೆ. ಇದರಲ್ಲಿಯೇ ಜಗದ್ಗುರುಗಳ ವಾಸ್ತವ್ಯ. ಉಷೆ ಸ್ನಾನ ಮಾಡುತ್ತಿದ್ದ ಕೊಳವನ್ನು ನೋಡಬಹುದಾಗಿದೆ.

ಪ್ರಾಚೀನ ಕಾಲದಿಂದ ಈ ಪುರಾತನ ಪೀಠಕ್ಕೆ ಭೂ ದಾನ, ಅನೇಕ ಬಿರುದಾವಳಿಗಳು ರಾಜ-ಮಹಾರಾಜರುಗಳಿಂದ ದೊರೆಯಲ್ಪಟ್ಟಿವೆ. ಉದಾಹರಣೆಗೆ ದ್ವಾಪರಯುಗದ ಪಾಂಡವರ ವಂಶಸ್ಥನಾದ ಜನಮೇಜಯನು ಜಗದ್ಗುರು ಶ್ರೀ ಆನಂದಲಿಂಗ ಶಿವಾಚಾರ್ಯಸ್ವಾಮಿಗಳಿಗೆ ಕೇದಾರಖಂಡವನ್ನೇ ದಾನ ಮಾಡಿ ತಾಮ್ರ ಶಾಸನವನ್ನು ಬರೆಸಿ ಕೊಟ್ಟಿದ್ದು ಪೀಠದಲ್ಲಿ ದಾಖಲೆಯಾಗಿದೆ. ಇದಕ್ಕೆ ಪೂರಕವೆಂಬಂತೆ ದಕ್ಷಿಣ ಕರ್ನಾಟಕದ ಹಾನಗಲ್ಲು ಪ್ರಾಂತ್ಯದಲ್ಲಿ ಕೇಳಿಬರುವ ಜಾನಪದ ಕಥೆಯನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. ಈ ಕಥೆಯ ಆಧಾರದಂತೆ, ದ್ವಾಪರ ಯುಗದಲ್ಲಿ ಹಾನಗಲ್ಲು ಪ್ರಾಂತ್ಯವು ವಿರಾಟನಗರವಾಗಿತ್ತು. ಪಾಂಡವರು ಈ ಪ್ರಾಂತ್ಯದಲ್ಲಿಯೇ ತಮ್ಮ ಅಜ್ಞಾತವಾಸವನ್ನು ಕಳೆದರು.

ಈ ಸಂದರ್ಭದಲ್ಲಿ ಇಲ್ಲಿನ ವೀರಶೈವ ಮಠಗಳು ಪಾಂಡವರಿಗೆ ನೆರವಾಗಿದ್ದವು. ತಮ್ಮ ವಂಶಸ್ಥರಿಗೆ ನೀಡಿದ ಸಹಕಾರದ ಕೃತಜ್ಞತೆಗಾಗಿ ಜನಮೇಜಯನು ವೀರಶೈವ ಪೀಠವಾಗಿರುವ ಕೇದಾರಪೀಠಕ್ಕೆ ಅನೇಕ ದಾನ, ದತ್ತಿಯನ್ನು ನೀಡಿ ಮಠದ ಭಕ್ತನಾಗಿದ್ದನೆಂದು ಹೇಳಲಾಗುತ್ತದೆ. ಬ್ರಿಟಿಷ್ ಸರ್ಕಾರ ಆಡಳಿತಕ್ಕೆ ಬರುವವರೆಗೆ ಜನಮೇಜಯ ಉಂಬಳಿಯಾಗಿ ನೀಡಿದ್ದ ಸಾವಿರ ಗ್ರಾಮಗಳು ಪೀಠದ ಅಧೀನದಲ್ಲಿಯೇ ಇದ್ದವು. ೧೮೫೪ರಲ್ಲಿ ಬ್ರಿಟಿಷ್ ಸರ್ಕಾರ ಆಸ್ತಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡು ಆಗಿನ ಜಗದ್ಗುರುಗಳಾದ ಶ್ರೀ ಗಣೇಶಲಿಂಗ ಶಿವಾಚಾರ್ಯ ಸ್ವಾಮಿಗಳಿಗೆ ಗಢ್‌ವಾಲ ಜಿಲ್ಲೆಯ ೭೦, ಆಲ್ಮೋರ ಜಿಲ್ಲೆಯ ೪೩, ಟೆಹರಿ ಜಿಲ್ಲೆಯ ೨೭, ಡೆಹರಾಡೂನ್ ಜಿಲ್ಲೆಯ ೨ ಮತ್ತು ನೈನಿತಾಲ್ ಜಿಲ್ಲೆಯ ೧ ಹೀಗೆ ಒಟ್ಟು ೧೪೩ ಗ್ರಾಮಗಳನ್ನು ಮಾತ್ರ ಕೇದಾರಪೀಠಕ್ಕೆ ಬಿಟ್ಟುಕೊಟ್ಟು, ಈ ಗ್ರಾಮಗಳ ಸಂಪೂರ್ಣ ಆದಾಯವನ್ನು ಪೀಠವು ಅನುಭವಿಸುವಂತೆ ಮಾಡಿತ್ತು. ಈ ಆದಾಯದಿಂದ ಮೂಲಪೀಠದ ಧಾರ್ಮಿಕಕಾರ್ಯಗಳು, ಮಠದ ಸ್ವಾಧೀನದಲ್ಲಿದ್ದ ಕಾಳೀಮಠ, ಉದಕಕುಂಡ, ಗೌರೀಕಂಡ, ಗೌರೀಮಾಯಿ, ತುಂಗನಾಥ, ತ್ರಿಯುಗಿನಾರಾಯಣ, ನಾರಾಯಣತೀರ್ಥ, ನಾಲೀಭಗವತಿ, ಮೈಖಂಡ ಮತ್ತು ಸೋಮದ್ವಾರ ಮುಂತಾದ ೨೨ ಕ್ಷೇತ್ರಗಳ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಂಡು ಬರಬೇಕೆಂದು ತಿಳಿಸಿತು. ಇದರಿಂದ ಈ ಕ್ಷೇತ್ರಗಳು ಮಠದ ಅಧೀನದಲ್ಲಿ ದ್ದವೆಂಬುದು ಉಲ್ಲೇಖಾರ್ಹವಾಗಿದೆ. ಸ್ವತಂತ್ರ ಭಾರತದಲ್ಲಿ ಬದಲಾದ ಕಾನೂನುಗಳಿಂದ ಪೀಠದ ಅಧೀನದಲ್ಲಿದ್ದ ಗ್ರಾಮಗಳು ಮತ್ತು ಧಾರ್ಮಿಕ ಕ್ಷೇತ್ರಗಳು ಕೈ ತಪ್ಪಿಹೋಗಿ ಸ್ವತಂತ್ರಗೊಂಡವು. ಪ್ರಸ್ತುತ ಕೇದಾರನಾಥ, ಗುಪ್ತಕಾಶಿ, ಮಧ್ಯಮಹೇಶ್ವರ, ಓಖೀಮಠ ಈ ನಾಲ್ಕು ಕ್ಷೇತ್ರಗಳ ಒಡೆತನ ಮಾತ್ರ ಶ್ರೀ ಕೇದಾರಪೀಠದ ಜಗದ್ಗುರುಗಳ ಅಧೀನದ ಲ್ಲಿವೆ. ಈ ಕ್ಷೇತ್ರಗಳಲ್ಲಿ ಪೀಠದ ಶಿಷ್ಯರಾದ ದಕ್ಷಿಣಭಾರತದ ಜಂಗಮ ವಂಶಸ್ಥರು ಜಗದ್ಗುರುಗಳಿಂದ ನಿಯುಕ್ತಿ ಗೊಂಡು ಪ್ರಧಾನ ಅರ್ಚಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಪರಂಪರೆ: ಪೀಠವು ಬಹಳ ಪ್ರಾಚೀನ ಪರಂಪರೆಯನ್ನು ಒಳಗೊಂಡಿರುವುದು ಕಪ್ಪಗಲ್ ಮಠದ ವೇದಮೂರ್ತಿ ಶ್ರೀ ಕರಿಬಸವಶಾಸ್ತ್ರಿಗಳ "ಜಗದ್ಗುರು ಶ್ರೀ ಪಂಚಾಚಾರ್ಯರ ಪ್ರಾಚೀನತ್ವ" ಮತ್ತು ಹಿಂದಿ ಪಂಡಿತರಾದ ಶ್ರೀ ಹರಿಕೃಷ್ಣರಾಥೋಡಿಯವರ " ಗಢ್‌ವಾಲ ಕಾ ಇತಿಹಾಸ್" ಎಂಬ ಗ್ರಂಥಗಳಿಂದ ತಿಳಿದುಬರುತ್ತಿದೆ. ಈ ಆಧಾರದ ಮೇಲೆ ೩೨೪ ಜಗದ್ಗುರುಗಳು ಈ ಪೀಠದ ಪರಂಪರೆಯಲ್ಲಿ ಅಧಿಕಾರವನ್ನು ನಡೆಸಿ ಪೀಠವನ್ನು ಬೆಳೆಸಿರುವುದು ಕಂಡುಬರುತ್ತದೆ.

ಜಗದ್ಗುರು ಶ್ರೀ ತ್ರ್ಯಕ್ಷರ ಶಿವಾಚಾರ್ಯ ಭಗವತ್ಪಾದರು (ಕೃತಯುಗ)
ಜಗದ್ಗುರು ಶ್ರೀ ತ್ರಿವಕ್ತ್ರ ಶಿವಾಚಾರ್ಯ ಭಗವತ್ಪಾದರು (ತ್ರೇತಾಯುಗ)
ಜಗದ್ಗುರು ಶ್ರೀ ಘಂಟಾಕರ್ಣ ಶಿವಾಚಾರ್ಯ ಭಗವತ್ಪಾದರು (ದ್ವಾಪರಯುಗ)
ಜಗದ್ಗುರು ಶ್ರೀ ಏಕೋರಾಮೋರಾಧ್ಯ ಭಗವತ್ಪಾದರು (ಕಲಿಯುಗ)

೧. ಜಗದ್ಗುರು ಶ್ರೀ ಭುಕುಂಡಲಿಂಗ ಶಿವಾಚಾರ್ಯರು
೨. ಜಗದ್ಗುರು ಶ್ರೀ ಗಣೇಶಲಿಂಗ ಶಿವಾಚಾರ್ಯರು
೩. ಜಗದ್ಗುರು ಶ್ರೀ ಸೋಮಲಿಂಗ ಶಿವಾಚಾರ್ಯರು
೪. ಜಗದ್ಗುರು ಶ್ರೀ ಹರಲಿಂಗ ಶಿವಾಚಾರ್ಯರು
೫. ಜಗದ್ಗುರು ಶ್ರೀ ವೀರಲಿಂಗ ಶಿವಾಚಾರ್ಯರು
೬. ಜಗದ್ಗುರು ಶ್ರೀ ಗರ್ಗಲಿಂಗ ಶಿವಾಚಾರ್ಯರು
೭. ಜಗದ್ಗುರು ಶ್ರೀ ಭವ್ಯಲಿಂಗ ಶಿವಾಚಾರ್ಯರು
೮. ಜಗದ್ಗುರು ಶ್ರೀ ವಿಶ್ವಲಿಂಗ ಶಿವಾಚಾರ್ಯರು
೯. ಜಗದ್ಗುರು ಶ್ರೀ ಕಾರಣಲಿಂಗ ಶಿವಾಚಾರ್ಯರು
೧೦. ಜಗದ್ಗುರು ಶ್ರೀ ಮನೋಹರಲಿಂಗ ಶಿವಾಚಾರ್ಯರು
೧೧. ಜಗದ್ಗುರು ಶ್ರೀ ಜ್ಯೋತಿರ್ಲಿಂಗ ಶಿವಾಚಾರ್ಯರು

೧೨. ಜಗದ್ಗುರು ಶ್ರೀ ಜಗನ್ಮಂಗಲಲಿಂಗ ಶಿವಾಚಾರ್ಯರು
೧೩. ಜಗದ್ಗುರು ಶ್ರೀ ಜಯಲಿಂಗ ಶಿವಾಚಾರ್ಯರು
೧೪. ಜಗದ್ಗುರು ಶ್ರೀ ಮಹಾಲಿಂಗ ಶಿವಾಚಾರ್ಯರು
೧೫. ಜಗದ್ಗುರು ಶ್ರೀ ಶಂಕರಲಿಂಗ ಶಿವಾಚಾರ್ಯರು
೧೬. ಜಗದ್ಗುರು ಶ್ರೀ ಪರಲಿಂಗ ಶಿವಾಚಾರ್ಯರು
೧೭. ಜಗದ್ಗುರು ಶ್ರೀ ಕುಬೇರಲಿಂಗ ಶಿವಾಚಾರ್ಯರು
೧೮. ಜಗದ್ಗುರು ಶ್ರೀ ಗಜಲಿಂಗ ಶಿವಾಚಾರ್ಯರು
೧೯. ಜಗದ್ಗುರು ಶ್ರೀ ವಿರೂಪಾಕ್ಷಲಿಂಗ ಶಿವಾಚಾರ್ಯರು
೨೦. ಜಗದ್ಗುರು ಶ್ರೀ ವರಲಿಂಗ ಶಿವಾಚಾರ್ಯರು
೨೧. ಜಗದ್ಗುರು ಶ್ರೀ ಗಂಗಾಧರಲಿಂಗ ಶಿವಾಚಾರ್ಯರು
೨೨. ಜಗದ್ಗುರು ಶ್ರೀ ದೇವಲಿಂಗ ಶಿವಾಚಾರ್ಯರು
೨೩. ಜಗದ್ಗುರು ಶ್ರೀ ತ್ರ್ಯಂಬಕಲಿಂಗ ಶಿವಾಚಾರ್ಯರು
೨೪. ಜಗದ್ಗುರು ಶ್ರೀ ಮದನಲಿಂಗ ಶಿವಾಚಾರ್ಯರು
೨೫. ಜಗದ್ಗುರು ಶ್ರೀ ತ್ರಿಲೋಚನಲಿಂಗ ಶಿವಾಚಾರ್ಯರು
೨೬. ಜಗದ್ಗುರು ಶ್ರೀ ಸ್ಮರಾರಿಲಿಂಗ ಶಿವಾಚಾರ್ಯರು
೨೭. ಜಗದ್ಗುರು ಶ್ರೀ ಪುರಾರಿಲಿಂಗ ಶಿವಾಚಾರ್ಯರು
೨೮. ಜಗದ್ಗುರು ಶ್ರೀ ಸಂಪಾತಿಲಿಂಗ ಶಿವಾಚಾರ್ಯರು
೨೯. ಜಗದ್ಗುರು ಶ್ರೀ ಕರ್ಮಠಲಿಂಗ ಶಿವಾಚಾರ್ಯರು
೩೦. ಜಗದ್ಗುರು ಶ್ರೀ ಸುರಲಿಂಗ ಶಿವಾಚಾರ್ಯರು
೩೧. ಜಗದ್ಗುರು ಶ್ರೀ ಆನಂದತಾಂಡವಲಿಂಗ ಶಿವಾಚಾರ್ಯರು
೩೨. ಜಗದ್ಗುರು ಶ್ರೀ ಶುಕ್ರಲಿಂಗ ಶಿವಾಚಾರ್ಯರು
೩೩. ಜಗದ್ಗುರು ಶ್ರೀ ರೂಪಲಿಂಗ ಶಿವಾಚಾರ್ಯರು
೩೪. ಜಗದ್ಗುರು ಶ್ರೀ ಮೀನಾಕ್ಷಿಸುಂದರಲಿಂಗ ಶಿವಾಚಾರ್ಯರು
೩೫. ಜಗದ್ಗುರು ಶ್ರೀ ಸುಬ್ರಹ್ಮಣ್ಯಲಿಂಗ ಶಿವಾಚಾರ್ಯರು
೩೬. ಜಗದ್ಗುರು ಶ್ರೀ ಮೂರ್ತಿಲಿಂಗ ಶಿವಾಚಾರ್ಯರು
೩೭. ಜಗದ್ಗುರು ಶ್ರೀ ವಾರಿಲಿಂಗ ಶಿವಾಚಾರ್ಯರು
೩೮. ಜಗದ್ಗುರು ಶ್ರೀ ಕುಂದಲಿಂಗ ಶಿವಾಚಾರ್ಯರು
೩೯. ಜಗದ್ಗುರು ಶ್ರೀ ಚರಮಲಿಂಗ ಶಿವಾಚಾರ್ಯರು
೪೦. ಜಗದ್ಗುರು ಶ್ರೀ ಧರ್ಮಲಿಂಗ ಶಿವಾಚಾರ್ಯರು
೪೧. ಜಗದ್ಗುರು ಶ್ರೀ ತೀರ್ಥಲಿಂಗ ಶಿವಾಚಾರ್ಯರು
೪೨. ಜಗದ್ಗುರು ಶ್ರೀ ಚಂಡಿಕೇಶ್ವರಲಿಂಗ ಶಿವಾಚಾರ್ಯರು
೪೩. ಜಗದ್ಗುರು ಶ್ರೀ ಭಜನಲಿಂಗ ಶಿವಾಚಾರ್ಯರು
೪೪. ಜಗದ್ಗುರು ಶ್ರೀ ದೇವಲಿಂಗ ಶಿವಾಚಾರ್ಯರು
೪೫. ಜಗದ್ಗುರು ಶ್ರೀ ರಾಮಲಿಂಗ ಶಿವಾಚಾರ್ಯರು
೪೬. ಜಗದ್ಗುರು ಶ್ರೀ ನಂದಿಲಿಂಗ ಶಿವಾಚಾರ್ಯರು
೪೭. ಜಗದ್ಗುರು ಶ್ರೀ ಭವಾರಿಲಿಂಗ ಶಿವಾಚಾರ್ಯರು
೪೮. ಜಗದ್ಗುರು ಶ್ರೀ ಸಭಾಪತಿಲಿಂಗ ಶಿವಾಚಾರ್ಯರು

೪೯. ಜಗದ್ಗುರು ಶ್ರೀ ಸುನಾಮಲಿಂಗ ಶಿವಾಚಾರ್ಯರು
೫೦. ಜಗದ್ಗುರು ಶ್ರೀ ಧ್ವಜಲಿಂಗ ಶಿವಾಚಾರ್ಯರು
೫೧. ಜಗದ್ಗುರು ಶ್ರೀ ಭೈರವಲಿಂಗ ಶಿವಾಚಾರ್ಯರು
೫೨. ಜಗದ್ಗುರು ಶ್ರೀ ಸುಮೇರುಲಿಂಗ ಶಿವಾಚಾರ್ಯರು
೫೩. ಜಗದ್ಗುರು ಶ್ರೀ ಗಿರಿಲಿಂಗ ಶಿವಾಚಾರ್ಯರು
೫೪. ಜಗದ್ಗುರು ಶ್ರೀ ಓಂಕಾರಲಿಂಗ ಶಿವಾಚಾರ್ಯರು
೫೫. ಜಗದ್ಗುರು ಶ್ರೀ ಪೂರ್ಣಲಿಂಗ ಶಿವಾಚಾರ್ಯರು
೫೬. ಜಗದ್ಗುರು ಶ್ರೀ ಅಘೋರಲಿಂಗ ಶಿವಾಚಾರ್ಯರು
೫೭. ಜಗದ್ಗುರು ಶ್ರೀ ಭಾವಲಿಂಗ ಶಿವಾಚಾರ್ಯರು
೫೮. ಜಗದ್ಗುರು ಶ್ರೀ ಮಣಿಭದ್ರಲಿಂಗ ಶಿವಾಚಾರ್ಯರು
೫೯. ಜಗದ್ಗುರು ಶ್ರೀ ಭವಾರಿಲಿಂಗ ಶಿವಾಚಾರ್ಯರು
೬೦. ಜಗದ್ಗುರು ಶ್ರೀ ನಾಗಹಾರಲಿಂಗ ಶಿವಾಚಾರ್ಯರು
೬೧. ಜಗದ್ಗುರು ಶ್ರೀ ಮುರಾರಿಲಿಂಗ ಶಿವಾಚಾರ್ಯರು
೬೨. ಜಗದ್ಗುರು ಶ್ರೀ ರತ್ನಲಿಂಗ ಶಿವಾಚಾರ್ಯರು
೬೩. ಜಗದ್ಗುರು ಶ್ರೀ ಗಿರಿಲಿಂಗ ಶಿವಾಚಾರ್ಯರು
೬೪. ಜಗದ್ಗುರು ಶ್ರೀ ಬ್ರಹ್ಮಾನಂದಲಿಂಗ ಶಿವಾಚಾರ್ಯರು
೬೫. ಜಗದ್ಗುರು ಶ್ರೀ ಕಠೋರಲಿಂಗ ಶಿವಾಚಾರ್ಯರು
೬೬. ಜಗದ್ಗುರು ಶ್ರೀ ಪುರೇಂದ್ರಲಿಂಗ ಶಿವಾಚಾರ್ಯರು
೬೭. ಜಗದ್ಗುರು ಶ್ರೀ ಶಂಭುಲಿಂಗ ಶಿವಾಚಾರ್ಯರು
೬೮. ಜಗದ್ಗುರು ಶ್ರೀ ವರುಣಲಿಂಗ ಶಿವಾಚಾರ್ಯರು
೬೯. ಜಗದ್ಗುರು ಶ್ರೀ ತಾರಕಲಿಂಗ ಶಿವಾಚಾರ್ಯರು
೭೦. ಜಗದ್ಗುರು ಶ್ರೀ ವರ್ಣಲಿಂಗ ಶಿವಾಚಾರ್ಯರು
೭೧. ಜಗದ್ಗುರು ಶ್ರೀ ಕಾಮಲಿಂಗ ಶಿವಾಚಾರ್ಯರು
೭೨. ಜಗದ್ಗುರು ಶ್ರೀ ಮಂಡಲೇಶ್ವರಲಿಂಗ ಶಿವಾಚಾರ್ಯರು
೭೩. ಜಗದ್ಗುರು ಶ್ರೀ ಅರುಣಾಚಲಲಿಂಗ ಶಿವಾಚಾರ್ಯರು
೭೪. ಜಗದ್ಗುರು ಶ್ರೀ ಮಹೇಶಲಿಂಗ ಶಿವಾಚಾರ್ಯರು
೭೫. ಜಗದ್ಗುರು ಶ್ರೀ ಹರಿಕೇಶಲಿಂಗ ಶಿವಾಚಾರ್ಯರು
೭೬. ಜಗದ್ಗುರು ಶ್ರೀ ಸುರೇಶಲಿಂಗ ಶಿವಾಚಾರ್ಯರು
೭೭. ಜಗದ್ಗುರು ಶ್ರೀ ಮಹಾರುದ್ರಲಿಂಗ ಶಿವಾಚಾರ್ಯರು
೭೮. ಜಗದ್ಗುರು ಶ್ರೀ ಬಲಾಹಕಲಿಂಗ ಶಿವಾಚಾರ್ಯರು
೭೯. ಜಗದ್ಗುರು ಶ್ರೀ ರೋಹಿತಲಿಂಗ ಶಿವಾಚಾರ್ಯರು
೮೦. ಜಗದ್ಗುರು ಶ್ರೀ ಭೀಮಕರ್ಣಲಿಂಗ ಶಿವಾಚಾರ್ಯರು
೮೧. ಜಗದ್ಗುರು ಶ್ರೀ ಶಂಕರಲಿಂಗ ಶಿವಾಚಾರ್ಯರು
೮೨. ಜಗದ್ಗುರು ಶ್ರೀ ಕೀರ್ತಿಸಾಗರಲಿಂಗ ಶಿವಾಚಾರ್ಯರು
೮೩. ಜಗದ್ಗುರು ಶ್ರೀ ಮುಖ್ಯಲಿಂಗ ಶಿವಾಚಾರ್ಯರು
೮೪. ಜಗದ್ಗುರು ಶ್ರೀ ಶುದ್ಧಲಿಂಗ ಶಿವಾಚಾರ್ಯರು
೮೫. ಜಗದ್ಗುರು ಶ್ರೀ ವದಾನ್ಯಲಿಂಗ ಶಿವಾಚಾರ್ಯರು
೮೬. ಜಗದ್ಗುರು ಶ್ರೀ ವೇದಸಮ್ಮತಲಿಂಗ ಶಿವಾಚಾರ್ಯರು

೮೭. ಜಗದ್ಗುರು ಶ್ರೀ ಮನುಲಿಂಗ ಶಿವಾಚಾರ್ಯರು
೮೮. ಜಗದ್ಗುರು ಶ್ರೀ ಕುಮಾರಲಿಂಗ ಶಿವಾಚಾರ್ಯರು
೮೯. ಜಗದ್ಗುರು ಶ್ರೀ ಯಜ್ಞಲಿಂಗ ಶಿವಾಚಾರ್ಯರು
೯೦. ಜಗದ್ಗುರು ಶ್ರೀ ಮುಕ್ತಿಮುನಿಲಿಂಗ ಶಿವಾಚಾರ್ಯರು
೯೧. ಜಗದ್ಗುರು ಶ್ರೀ ಯಜ್ಞಮೂರ್ತಿಲಿಂಗ ಶಿವಾಚಾರ್ಯರು
೯೨. ಜಗದ್ಗುರು ಶ್ರೀ ಸಾತ್ವಿಕಲಿಂಗ ಶಿವಾಚಾರ್ಯರು
೯೩. ಜಗದ್ಗುರು ಶ್ರೀ ಪರ್ಣಲಿಂಗ ಶಿವಾಚಾರ್ಯರು
೯೪. ಜಗದ್ಗುರು ಶ್ರೀ ಭೂತಲಿಂಗ ಶಿವಾಚಾರ್ಯರು
೯೫. ಜಗದ್ಗುರು ಶ್ರೀ ಬಾಲಲಿಂಗ ಶಿವಾಚಾರ್ಯರು
೯೬. ಜಗದ್ಗುರು ಶ್ರೀ ಕಲಾಧರಲಿಂಗ ಶಿವಾಚಾರ್ಯರು
೯೭. ಜಗದ್ಗುರು ಶ್ರೀ ನಿರಂಜನಲಿಂಗ ಶಿವಾಚಾರ್ಯರು
೯೮. ಜಗದ್ಗುರು ಶ್ರೀ ಗುರುಲಿಂಗ ಶಿವಾಚಾರ್ಯರು
೯೯. ಜಗದ್ಗುರು ಶ್ರೀ ಗುರುಮೂರ್ತಿಲಿಂಗ ಶಿವಾಚಾರ್ಯರು
೧೦೦. ಜಗದ್ಗುರು ಶ್ರೀ ಕಲಾಧರಲಿಂಗ ಶಿವಾಚಾರ್ಯರು
೧೦೧. ಜಗದ್ಗುರು ಶ್ರೀ ಸತ್ಯಲಿಂಗ ಶಿವಾಚಾರ್ಯರು
೧೦೨. ಜಗದ್ಗುರು ಶ್ರೀ ವೀರಭದ್ರಲಿಂಗ ಶಿವಾಚಾರ್ಯರು
೧೦೩. ಜಗದ್ಗುರು ಶ್ರೀ ಅವ್ಯಕ್ತಲಿಂಗ ಶಿವಾಚಾರ್ಯರು
೧೦೪. ಜಗದ್ಗುರು ಶ್ರೀ ಕಲ್ಪಲಿಂಗ ಶಿವಾಚಾರ್ಯರು
೧೦೫. ಜಗದ್ಗುರು ಶ್ರೀ ರುದ್ರಪಾದಲಿಂಗ ಶಿವಾಚಾರ್ಯರು
೧೦೬. ಜಗದ್ಗುರು ಶ್ರೀ ಸಾಮಲಿಂಗ ಶಿವಾಚಾರ್ಯರು
೧೦೭. ಜಗದ್ಗುರು ಶ್ರೀ ಮೃತ್ಯುಂಜಯಲಿಂಗ ಶಿವಾಚಾರ್ಯರು
೧೦೮. ಜಗದ್ಗುರು ಶ್ರೀ ಧಾನ್ಯಲಿಂಗ ಶಿವಾಚಾರ್ಯರು
೧೦೯. ಜಗದ್ಗುರು ಶ್ರೀ ಪ್ರಧಾನಲಿಂಗ ಶಿವಾಚಾರ್ಯರು
೧೧೦. ಜಗದ್ಗುರು ಶ್ರೀ ಪುರಾಣಲಿಂಗ ಶಿವಾಚಾರ್ಯರು
೧೧೧. ಜಗದ್ಗುರು ಶ್ರೀ ಕಲ್ಯಾಣಲಿಂಗ ಶಿವಾಚಾರ್ಯರು
೧೧೨. ಜಗದ್ಗುರು ಶ್ರೀ ಅಘೋರಲಿಂಗ ಶಿವಾಚಾರ್ಯರು
೧೧೩. ಜಗದ್ಗುರು ಶ್ರೀ ವಿಷ್ಣುಲಿಂಗ ಶಿವಾಚಾರ್ಯರು
೧೧೪. ಜಗದ್ಗುರು ಶ್ರೀ ಹರಲಿಂಗ ಶಿವಾಚಾರ್ಯರು
೧೧೫. ಜಗದ್ಗುರು ಶ್ರೀ ಕವಿಲಿಂಗ ಶಿವಾಚಾರ್ಯರು
೧೧೬. ಜಗದ್ಗುರು ಶ್ರೀ ನೀಲಲಿಂಗ ಶಿವಾಚಾರ್ಯರು
೧೧೭. ಜಗದ್ಗುರು ಶ್ರೀ ಕರ್ಮಲಿಂಗ ಶಿವಾಚಾರ್ಯರು
೧೧೮. ಜಗದ್ಗುರು ಶ್ರೀ ಜನಾರ್ಧನಲಿಂಗ ಶಿವಾಚಾರ್ಯರು
೧೧೯. ಜಗದ್ಗುರು ಶ್ರೀ ವ್ರತಲಿಂಗ ಶಿವಾಚಾರ್ಯರು
೧೨೦. ಜಗದ್ಗುರು ಶ್ರೀ ರಾಜಲಿಂಗ ಶಿವಾಚಾರ್ಯರು
೧೨೧. ಜಗದ್ಗುರು ಶ್ರೀ ನೀತಿಲಿಂಗ ಶಿವಾಚಾರ್ಯರು
೧೨೧. ಜಗದ್ಗುರು ಶ್ರೀ ಮನೋರಥಲಿಂಗ ಶಿವಾಚಾರ್ಯರು
೧೨೩. ಜಗದ್ಗುರು ಶ್ರೀ ಗುಣಾಧರಲಿಂಗ ಶಿವಾಚಾರ್ಯರು
೧೨೪. ಜಗದ್ಗುರು ಶ್ರೀ ಮನೋರೂಪಲಿಂಗ ಶಿವಾಚಾರ್ಯರು

೧೨೫. ಜಗದ್ಗುರು ಶ್ರೀ ವಿದ್ಯಾಲಿಂಗ ಶಿವಾಚಾರ್ಯರು
೧೨೬. ಜಗದ್ಗುರು ಶ್ರೀ ಬಲಲಿಂಗ ಶಿವಾಚಾರ್ಯರು
೧೨೭. ಜಗದ್ಗುರು ಶ್ರೀ ವಸಂತಲಿಂಗ ಶಿವಾಚಾರ್ಯರು
೧೨೮. ಜಗದ್ಗುರು ಶ್ರೀ ಜೀವಲಿಂಗ ಶಿವಾಚಾರ್ಯರು
೧೨೯. ಜಗದ್ಗುರು ಶ್ರೀ ಜ್ಯೋತಿರೂಪಲಿಂಗ ಶಿವಾಚಾರ್ಯರು
೧೩೦. ಜಗದ್ಗುರು ಶ್ರೀ ನಿರಂಜನಲಿಂಗ ಶಿವಾಚಾರ್ಯರು
೧೩೧. ಜಗದ್ಗುರು ಶ್ರೀ ಪುರಾಣಲಿಂಗ ಶಿವಾಚಾರ್ಯರು
೧೩೨. ಜಗದ್ಗುರು ಶ್ರೀ ಸರ್ವೇಶಲಿಂಗ ಶಿವಾಚಾರ್ಯರು
೧೩೩. ಜಗದ್ಗುರು ಶ್ರೀ ಪಿನಾಕಲಿಂಗ ಶಿವಾಚಾರ್ಯರು
೧೩೪. ಜಗದ್ಗುರು ಶ್ರೀ ವಜ್ರಲಿಂಗ ಶಿವಾಚಾರ್ಯರು
೧೩೫. ಜಗದ್ಗುರು ಶ್ರೀ ಪುರೇಂದ್ರಲಿಂಗ ಶಿವಾಚಾರ್ಯರು
೧೩೬. ಜಗದ್ಗುರು ಶ್ರೀ ರೋಮಲಿಂಗ ಶಿವಾಚಾರ್ಯರು
೧೩೭. ಜಗದ್ಗುರು ಶ್ರೀ ತ್ರ್ಯಂಬಕಲಿಂಗ ಶಿವಾಚಾರ್ಯರು
೧೩೮. ಜಗದ್ಗುರು ಶ್ರೀ ಕುಂದಲಿಂಗ ಶಿವಾಚಾರ್ಯರು
೧೩೯. ಜಗದ್ಗುರು ಶ್ರೀ ಶಂಖಲಿಂಗ ಶಿವಾಚಾರ್ಯರು
೧೪೦. ಜಗದ್ಗುರು ಶ್ರೀ ಭೂತಲಿಂಗ ಶಿವಾಚಾರ್ಯರು
೧೪೧. ಜಗದ್ಗುರು ಶ್ರೀ ಭವಲಿಂಗ ಶಿವಾಚಾರ್ಯರು
೧೪೨. ಜಗದ್ಗುರು ಶ್ರೀ ಸ್ಥಾಣುಲಿಂಗ ಶಿವಾಚಾರ್ಯರು
೧೪೩. ಜಗದ್ಗುರು ಶ್ರೀ ಧೀರಲಿಂಗ ಶಿವಾಚಾರ್ಯರು
೧೪೪. ಜಗದ್ಗುರು ಶ್ರೀ ಸ್ವರಲಿಂಗ ಶಿವಾಚಾರ್ಯರು
೧೪೫. ಜಗದ್ಗುರು ಶ್ರೀ ಸಾರಲಿಂಗ ಶಿವಾಚಾರ್ಯರು
೧೪೬. ಜಗದ್ಗುರು ಶ್ರೀ ಹರಲಿಂಗ ಶಿವಾಚಾರ್ಯರು
೧೪೭. ಜಗದ್ಗುರು ಶ್ರೀ ಪಂಚಯಜ್ಞಲಿಂಗ ಶಿವಾಚಾರ್ಯರು
೧೪೮. ಜಗದ್ಗುರು ಶ್ರೀ ಜಗತಲಿಂಗ ಶಿವಾಚಾರ್ಯರು
೧೪೯. ಜಗದ್ಗುರು ಶ್ರೀ ಕೈಲಾಸಲಿಂಗ ಶಿವಾಚಾರ್ಯರು
೧೫೦. ಜಗದ್ಗುರು ಶ್ರೀ ಸೂಕ್ಷ್ಮಲಿಂಗ ಶಿವಾಚಾರ್ಯರು
೧೫೧. ಜಗದ್ಗುರು ಶ್ರೀ ನಾದಲಿಂಗ ಶಿವಾಚಾರ್ಯರು
೧೫೨. ಜಗದ್ಗುರು ಶ್ರೀ ಹಾರಲಿಂಗ ಶಿವಾಚಾರ್ಯರು
೧೫೩. ಜಗದ್ಗುರು ಶ್ರೀ ವಾಯುಲಿಂಗ ಶಿವಾಚಾರ್ಯರು
೧೫೪. ಜಗದ್ಗುರು ಶ್ರೀ ಅಮರಲಿಂಗ ಶಿವಾಚಾರ್ಯರು
೧೫೫. ಜಗದ್ಗುರು ಶ್ರೀ ಮಂದಾರಲಿಂಗ ಶಿವಾಚಾರ್ಯರು
೧೫೬. ಜಗದ್ಗುರು ಶ್ರೀ ಸುಲಭಲಿಂಗ ಶಿವಾಚಾರ್ಯರು
೧೫೭. ಜಗದ್ಗುರು ಶ್ರೀ ಯೋಗಿಲಿಂಗ ಶಿವಾಚಾರ್ಯರು
೧೫೮. ಜಗದ್ಗುರು ಶ್ರೀ ಸುಂದರಲಿಂಗ ಶಿವಾಚಾರ್ಯರು
೧೫೯. ಜಗದ್ಗುರು ಶ್ರೀ ಶಾಂತಲಿಂಗ ಶಿವಾಚಾರ್ಯರು
೧೬೦. ಜಗದ್ಗುರು ಶ್ರೀ ಭೂಪಲಿಂಗ ಶಿವಾಚಾರ್ಯರು
೧೬೧. ಜಗದ್ಗುರು ಶ್ರೀ ಸ್ವರೂಪಲಿಂಗ ಶಿವಾಚಾರ್ಯರು
೧೬೨. ಜಗದ್ಗುರು ಶ್ರೀ ಮಾಯಾಲಿಂಗ ಶಿವಾಚಾರ್ಯರು

೧೬೩. ಜಗದ್ಗುರು ಶ್ರೀ ಅಮೃತಲಿಂಗ ಶಿವಾಚಾರ್ಯರು
೧೬೪. ಜಗದ್ಗುರು ಶ್ರೀ ಶಾಂತಲಿಂಗ ಶಿವಾಚಾರ್ಯರು
೧೬೫. ಜಗದ್ಗುರು ಶ್ರೀ ಅನ್ನಲಿಂಗ ಶಿವಾಚಾರ್ಯರು
೧೬೬. ಜಗದ್ಗುರು ಶ್ರೀ ಕಲಾಧರಲಿಂಗ ಶಿವಾಚಾರ್ಯರು
೧೬೭. ಜಗದ್ಗುರು ಶ್ರೀ ಗೌರೀಶಲಿಂಗ ಶಿವಾಚಾರ್ಯರು
೧೬೮. ಜಗದ್ಗುರು ಶ್ರೀ ಅಮೇಯಲಿಂಗ ಶಿವಾಚಾರ್ಯರು
೧೬೯. ಜಗದ್ಗುರು ಶ್ರೀ ಜಯದ್ರಥಲಿಂಗ ಶಿವಾಚಾರ್ಯರು
೧೭೦. ಜಗದ್ಗುರು ಶ್ರೀ ವೀರಲಿಂಗ ಶಿವಾಚಾರ್ಯರು
೧೭೧. ಜಗದ್ಗುರು ಶ್ರೀ ಗಂಭೀರಲಿಂಗ ಶಿವಾಚಾರ್ಯರು
೧೭೨. ಜಗದ್ಗುರು ಶ್ರೀ ಕ್ಷೇತ್ರಲಿಂಗ ಶಿವಾಚಾರ್ಯರು
೧೭೩. ಜಗದ್ಗುರು ಶ್ರೀ ಶಿವಾಗಮಲಿಂಗ ಶಿವಾಚಾರ್ಯರು
೧೭೪. ಜಗದ್ಗುರು ಶ್ರೀ ಗಿರಿರಾಜಲಿಂಗ ಶಿವಾಚಾರ್ಯರು
೧೭೫. ಜಗದ್ಗುರು ಶ್ರೀ ಕಾಲಲಿಂಗ ಶಿವಾಚಾರ್ಯರು
೧೭೬. ಜಗದ್ಗುರು ಶ್ರೀ ಚಂದ್ರಶೇಖರಲಿಂಗ ಶಿವಾಚಾರ್ಯರು
೧೭೭. ಜಗದ್ಗುರು ಶ್ರೀ ಕ್ರೌಂಚಧರಲಿಂಗ ಶಿವಾಚಾರ್ಯರು
೧೭೮. ಜಗದ್ಗುರು ಶ್ರೀ ಪುರಂಧರಲಿಂಗ ಶಿವಾಚಾರ್ಯರು
೧೭೯. ಜಗದ್ಗುರು ಶ್ರೀ ಕಲಕಾರಿಲಿಂಗ ಶಿವಾಚಾರ್ಯರು
೧೮೦. ಜಗದ್ಗುರು ಶ್ರೀ ವಿಷ್ಣುಲಿಂಗ ಶಿವಾಚಾರ್ಯರು
೧೮೧. ಜಗದ್ಗುರು ಶ್ರೀ ವರ್ಮಲಿಂಗ ಶಿವಾಚಾರ್ಯರು
೧೮೨. ಜಗದ್ಗುರು ಶ್ರೀ ತ್ರಿಪುರಾರಿಲಿಂಗ ಶಿವಾಚಾರ್ಯರು
೧೮೩. ಜಗದ್ಗುರು ಶ್ರೀ ದಾಮೋದರಲಿಂಗ ಶಿವಾಚಾರ್ಯರು
೧೮೪. ಜಗದ್ಗುರು ಶ್ರೀ ಹೇರವಲಿಂಗ ಶಿವಾಚಾರ್ಯರು
೧೮೫. ಜಗದ್ಗುರು ಶ್ರೀ ಹರಿದ್ರಲಿಂಗ ಶಿವಾಚಾರ್ಯರು
೧೮೬. ಜಗದ್ಗುರು ಶ್ರೀ ಜಾಲಪಾದಲಿಂಗ ಶಿವಾಚಾರ್ಯರು
೧೮೭. ಜಗದ್ಗುರು ಶ್ರೀ ಮಾಧವಲಿಂಗ ಶಿವಾಚಾರ್ಯರು
೧೮೮. ಜಗದ್ಗುರು ಶ್ರೀ ವಾಸವಲಿಂಗ ಶಿವಾಚಾರ್ಯರು
೧೮೯. ಜಗದ್ಗುರು ಶ್ರೀ ಸರ್ವಲಿಂಗ ಶಿವಾಚಾರ್ಯರು
೧೯೦. ಜಗದ್ಗುರು ಶ್ರೀ ಭೂತಿಲಿಂಗ ಶಿವಾಚಾರ್ಯರು
೧೯೧. ಜಗದ್ಗುರು ಶ್ರೀ ಮೃಡಲಿಂಗ ಶಿವಾಚಾರ್ಯರು
೧೯೨. ಜಗದ್ಗುರು ಶ್ರೀ ಪ್ರಥಮಾಧಿಪಲಿಂಗ ಶಿವಾಚಾರ್ಯರು
೧೯೩. ಜಗದ್ಗುರು ಶ್ರೀ ಬಾಣಲಿಂಗ ಶಿವಾಚಾರ್ಯರು
೧೯೪. ಜಗದ್ಗುರು ಶ್ರೀ ಧನಲಿಂಗ ಶಿವಾಚಾರ್ಯರು
೧೯೫. ಜಗದ್ಗುರು ಶ್ರೀ ದೇವೇಶಲಿಂಗ ಶಿವಾಚಾರ್ಯರು
೧೯೬. ಜಗದ್ಗುರು ಶ್ರೀ ಗುಣಾತೀತಲಿಂಗ ಶಿವಾಚಾರ್ಯರು
೧೯೭. ಜಗದ್ಗುರು ಶ್ರೀ ಪೀತಾಂಬರಲಿಂಗ ಶಿವಾಚಾರ್ಯರು
೧೯೮. ಜಗದ್ಗುರು ಶ್ರೀ ವಿಶಾಲಲಿಂಗ ಶಿವಾಚಾರ್ಯರು
೧೯೯. ಜಗದ್ಗುರು ಶ್ರೀ ಕೇವಲಲಿಂಗ ಶಿವಾಚಾರ್ಯರು
೨೦೦. ಜಗದ್ಗುರು ಶ್ರೀ ಶೂಲಧಾರಿಲಿಂಗ ಶಿವಾಚಾರ್ಯರು

೨೦೧. ಜಗದ್ಗುರು ಶ್ರೀ ಬುಧಲಿಂಗ ಶಿವಾಚಾರ್ಯರು
೨೦೨. ಜಗದ್ಗುರು ಶ್ರೀ ಅರಜಲಿಂಗ ಶಿವಾಚಾರ್ಯರು
೨೦೩. ಜಗದ್ಗುರು ಶ್ರೀ ಜನಕಲಿಂಗ ಶಿವಾಚಾರ್ಯರು
೨೦೪. ಜಗದ್ಗುರು ಶ್ರೀ ಕಾಲಲಿಂಗ ಶಿವಾಚಾರ್ಯರು
೨೦೫. ಜಗದ್ಗುರು ಶ್ರೀ ಕೈವಲ್ಯಲಿಂಗ ಶಿವಾಚಾರ್ಯರು
೨೦೬. ಜಗದ್ಗುರು ಶ್ರೀ ಸಿಂಹಲಿಂಗ ಶಿವಾಚಾರ್ಯರು
೨೦೭. ಜಗದ್ಗುರು ಶ್ರೀ ಪಶುಪತಿಲಿಂಗ ಶಿವಾಚಾರ್ಯರು
೨೦೮. ಜಗದ್ಗುರು ಶ್ರೀ ಭದ್ರಲಿಂಗ ಶಿವಾಚಾರ್ಯರು
೨೦೯. ಜಗದ್ಗುರು ಶ್ರೀ ಬಹುರೂಪಲಿಂಗ ಶಿವಾಚಾರ್ಯರು
೨೧೦. ಜಗದ್ಗುರು ಶ್ರೀ ಪೂಜ್ಯಲಿಂಗ ಶಿವಾಚಾರ್ಯರು
೨೧೧. ಜಗದ್ಗುರು ಶ್ರೀ ಕಾಂತಲಿಂಗ ಶಿವಾಚಾರ್ಯರು
೨೧೨. ಜಗದ್ಗುರು ಶ್ರೀ ನಿರಾಮಲಿಂಗ ಶಿವಾಚಾರ್ಯರು
೨೧೩. ಜಗದ್ಗುರು ಶ್ರೀ ಹಂಸಲಿಂಗ ಶಿವಾಚಾರ್ಯರು
೨೧೪. ಜಗದ್ಗುರು ಶ್ರೀ ಮನಸ್ಸಲಿಂಗ ಶಿವಾಚಾರ್ಯರು
೨೧೫. ಜಗದ್ಗುರು ಶ್ರೀ ವಿಶ್ವಹಾರಲಿಂಗ ಶಿವಾಚಾರ್ಯರು
೨೧೬. ಜಗದ್ಗುರು ಶ್ರೀ ವಿರಾಗಲಿಂಗ ಶಿವಾಚಾರ್ಯರು
೨೧೭. ಜಗದ್ಗುರು ಶ್ರೀ ರವಿನೇತ್ರಲಿಂಗ ಶಿವಾಚಾರ್ಯರು
೨೧೮. ಜಗದ್ಗುರು ಶ್ರೀ ಪವಿತ್ರಲಿಂಗ ಶಿವಾಚಾರ್ಯರು
೨೧೯. ಜಗದ್ಗುರು ಶ್ರೀ ನಾದಲಿಂಗ ಶಿವಾಚಾರ್ಯರು
೨೨೦. ಜಗದ್ಗುರು ಶ್ರೀ ವರದಲಿಂಗ ಶಿವಾಚಾರ್ಯರು
೨೨೧. 'ಜಗದ್ಗುರು ಶ್ರೀ ಮಂತ್ರಲಿಂಗ ಶಿವಾಚಾರ್ಯರು
೨೨೨. ಜಗದ್ಗುರು ಶ್ರೀ ಪ್ರಥಮಲಿಂಗ ಶಿವಾಚಾರ್ಯರು
೨೨೩. ಜಗದ್ಗುರು ಶ್ರೀ ಶಿತಿಕಂಠಲಿಂಗ ಶಿವಾಚಾರ್ಯರು
೨೨೪. ಜಗದ್ಗುರು ಶ್ರೀ ವಿಧಿಲಿಂಗ ಶಿವಾಚಾರ್ಯರು
೨೨೫. ಜಗದ್ಗುರು ಶ್ರೀ ವಿಶ್ವೇಶ್ವರಾಶ್ರಮಲಿಂಗ ಶಿವಾಚಾರ್ಯರು
೨೨೬. ಜಗದ್ಗುರು ಶ್ರೀ ಸೋಮನಾಥಲಿಂಗ ಶಿವಾಚಾರ್ಯರು
೨೨೭. ಜಗದ್ಗುರು ಶ್ರೀ ಕೇದಾರಲಿಂಗ ಶಿವಾಚಾರ್ಯರು
೨೨೮. ಜಗದ್ಗುರು ಶ್ರೀ ನಾಥಲಿಂಗ ಶಿವಾಚಾರ್ಯರು
೨೨೯. ಜಗದ್ಗುರು ಶ್ರೀ ಕವಿನಾಥಲಿಂಗ ಶಿವಾಚಾರ್ಯರು
೨೩೦. ಜಗದ್ಗುರು ಶ್ರೀ ಪರ್ಣಾನಂದಲಿಂಗ ಶಿವಾಚಾರ್ಯರು
೨೩೧. ಜಗದ್ಗುರು ಶ್ರೀ ಶೈಲಪತಿಲಿಂಗ ಶಿವಾಚಾರ್ಯರು
೨೩೨. ಜಗದ್ಗುರು ಶ್ರೀ ಚೈತನ್ಯಲಿಂಗ ಶಿವಾಚಾರ್ಯರು
೨೩೩. ಜಗದ್ಗುರು ಶ್ರೀ ಕೆಂಜೇಶ್ವರಲಿಂಗ ಶಿವಾಚಾರ್ಯರು
೨೩೪. ಜಗದ್ಗುರು ಶ್ರೀ ದ್ವಂದ್ವಾತೀತಲಿಂಗ ಶಿವಾಚಾರ್ಯರು
೨೩೫. ಜಗದ್ಗುರು ಶ್ರೀ ಆಮೋದಲಿಂಗ ಶಿವಾಚಾರ್ಯರು
೨೩೬. ಜಗದ್ಗುರು ಶ್ರೀ ಪಂಚವಕ್ತ್ರಲಿಂಗ ಶಿವಾಚಾರ್ಯರು
೨೩೭. ಜಗದ್ಗುರು ಶ್ರೀ ಸಿದ್ಧೇಶ್ವರಲಿಂಗ ಶಿವಾಚಾರ್ಯರು
೨೩೮. ಜಗದ್ಗುರು ಶ್ರೀ ಕಾಶೀನಾಥಲಿಂಗ ಶಿವಾಚಾರ್ಯರು

೨೩೯. ಜಗದ್ಗುರು ಶ್ರೀ ಸಂಹಾರಲಿಂಗ ಶಿವಾಚಾರ್ಯರು
೨೪೦. ಜಗದ್ಗುರು ಶ್ರೀ ಶರಭಲಿಂಗ ಶಿವಾಚಾರ್ಯರು
೨೪೧. ಜಗದ್ಗುರು ಶ್ರೀ ಗದಾಧರಲಿಂಗ ಶಿವಾಚಾರ್ಯರು
೨೪೨. ಜಗದ್ಗುರು ಶ್ರೀ ಗಗನಲಿಂಗ ಶಿವಾಚಾರ್ಯರು
೨೪೩. ಜಗದ್ಗುರು ಶ್ರೀ ಉತ್ತಮಲಿಂಗ ಶಿವಾಚಾರ್ಯರು
೨೪೪. ಜಗದ್ಗುರು ಶ್ರೀ ವಿಭವಲಿಂಗ ಶಿವಾಚಾರ್ಯರು
೨೪೫. ಜಗದ್ಗುರು ಶ್ರೀ ಪಾರಿಜಾತಕಲಿಂಗ ಶಿವಾಚಾರ್ಯರು
೨೪೬. ಜಗದ್ಗುರು ಶ್ರೀ ಬಾಲರೂಪಲಿಂಗ ಶಿವಾಚಾರ್ಯರು
೨೪೭. ಜಗದ್ಗುರು ಶ್ರೀ ಅಮರಲಿಂಗ ಶಿವಾಚಾರ್ಯರು
೨೪೮. ಜಗದ್ಗುರು ಶ್ರೀ ಪ್ರಮಾಣಲಿಂಗ ಶಿವಾಚಾರ್ಯರು
೨೪೯. ಜಗದ್ಗುರು ಶ್ರೀ ಪರಶುರಾಮಲಿಂಗ ಶಿವಾಚಾರ್ಯರು
೨೫೦. ಜಗದ್ಗುರು ಶ್ರೀ ನಾಗೇಶಲಿಂಗ ಶಿವಾಚಾರ್ಯರು
೨೫೧. ಜಗದ್ಗುರು ಶ್ರೀ ಉದಯಲಿಂಗ ಶಿವಾಚಾರ್ಯರು
೨೫೨. ಜಗದ್ಗುರು ಶ್ರೀ ಉದಾರಲಿಂಗ ಶಿವಾಚಾರ್ಯರು
೨೫೩. ಜಗದ್ಗುರು ಶ್ರೀ ಕಾರಣಲಿಂಗ ಶಿವಾಚಾರ್ಯರು
೨೫೪. ಜಗದ್ಗುರು ಶ್ರೀ ಪದ್ಮನಾಭಲಿಂಗ ಶಿವಾಚಾರ್ಯರು
೨೫೫. ಜಗದ್ಗುರು ಶ್ರೀ ಅಘೋರಲಿಂಗ ಶಿವಾಚಾರ್ಯರು
೨೫೬. ಜಗದ್ಗುರು ಶ್ರೀ ಜಯನಾಥಲಿಂಗ ಶಿವಾಚಾರ್ಯರು
೨೫೭. ಜಗದ್ಗುರು ಶ್ರೀ ವೀತರಾಗಲಿಂಗ ಶಿವಾಚಾರ್ಯರು
೨೫೮. ಜಗದ್ಗುರು ಶ್ರೀ ಚಂದ್ರಲಿಂಗ ಶಿವಾಚಾರ್ಯರು
೨೫೯. ಜಗದ್ಗುರು ಶ್ರೀ ವಿಚಿತ್ರಲಿಂಗ ಶಿವಾಚಾರ್ಯರು
೨೬೦. ಜಗದ್ಗುರು ಶ್ರೀ ಸುಂದರಲಿಂಗ ಶಿವಾಚಾರ್ಯರು
೨೬೧. ಜಗದ್ಗುರು ಶ್ರೀ ಅಷ್ಟಮೂರ್ತಿಲಿಂಗ ಶಿವಾಚಾರ್ಯರು
೨೬೨. ಜಗದ್ಗುರು ಶ್ರೀ ಯಜ್ಞಲಿಂಗ ಶಿವಾಚಾರ್ಯರು
೨೬೩. ಜಗದ್ಗುರು ಶ್ರೀ ಸತ್ಯರೂಪಲಿಂಗ ಶಿವಾಚಾರ್ಯರು
೨೬೪. ಜಗದ್ಗುರು ಶ್ರೀ ಸ್ವರೂಪಲಿಂಗ ಶಿವಾಚಾರ್ಯರು
೨೬೫. ಜಗದ್ಗುರು ಶ್ರೀ ಕಲ್ಯಾಣಲಿಂಗ ಶಿವಾಚಾರ್ಯರು
೨೬೬. ಜಗದ್ಗುರು ಶ್ರೀ ಪುರಾಣಲಿಂಗ ಶಿವಾಚಾರ್ಯರು
೨೬೭. ಜಗದ್ಗುರು ಶ್ರೀ ಸ್ವಭಾವಲಿಂಗ ಶಿವಾಚಾರ್ಯರು
೨೬೮. ಜಗದ್ಗುರು ಶ್ರೀ ವಿಶೇಷಲಿಂಗ ಶಿವಾಚಾರ್ಯರು
೨೬೯. ಜಗದ್ಗುರು ಶ್ರೀ ವೈದ್ಯಲಿಂಗ ಶಿವಾಚಾರ್ಯರು
೨೭೦. ಜಗದ್ಗುರು ಶ್ರೀ ಪ್ರಾಣೇಶಲಿಂಗ ಶಿವಾಚಾರ್ಯರು
೨೭೧. ಜಗದ್ಗುರು ಶ್ರೀ ಧನದಲಿಂಗ ಶಿವಾಚಾರ್ಯರು
೨೭೨. ಜಗದ್ಗುರು ಶ್ರೀ ಪ್ರಕಾಶಲಿಂಗ ಶಿವಾಚಾರ್ಯರು
೨೭೩. ಜಗದ್ಗುರು ಶ್ರೀ ಬ್ರಾಹ್ಮಣ್ಯಲಿಂಗ ಶಿವಾಚಾರ್ಯರು
೨೭೪. ಜಗದ್ಗುರು ಶ್ರೀ ನಿರ್ಮಲಲಿಂಗ ಶಿವಾಚಾರ್ಯರು
೨೭೫. ಜಗದ್ಗುರು ಶ್ರೀ ಸ್ಟೈತಲಿಂಗ ಶಿವಾಚಾರ್ಯರು

೨೭೬. ಜಗದ್ಗುರು ಶ್ರೀ ನಾರಾಯಣಲಿಂಗ ಶಿವಾಚಾರ್ಯರು
೨೭೭. ಜಗದ್ಗುರು ಶ್ರೀ ಗೌರಲಿಂಗ ಶಿವಾಚಾರ್ಯರು
೨೭೮. ಜಗದ್ಗುರು ಶ್ರೀ ಪ್ರಕಾಶಲಿಂಗ ಶಿವಾಚಾರ್ಯರು
೨೭೯. ಜಗದ್ಗುರು ಶ್ರೀ ವಿದೇಹಲಿಂಗ ಶಿವಾಚಾರ್ಯರು
೨೮೦. ಜಗದ್ಗುರು ಶ್ರೀ ಪ್ರಮಾಣಲಿಂಗ ಶಿವಾಚಾರ್ಯರು
೨೮೧. ಜಗದ್ಗುರು ಶ್ರೀ ಸ್ವಸ್ತಿಕಲಿಂಗ ಶಿವಾಚಾರ್ಯರು
೨೮೨. ಜಗದ್ಗುರು ಶ್ರೀ ಸದಾನಂದಲಿಂಗ ಶಿವಾಚಾರ್ಯರು
೨೮೩. ಜಗದ್ಗುರು ಶ್ರೀ ದುರ್ಗಮಲಿಂಗ ಶಿವಾಚಾರ್ಯರು
೨೮೪. ಜಗದ್ಗುರು ಶ್ರೀ ಚಿರಂತನಲಿಂಗ ಶಿವಾಚಾರ್ಯರು
೨೮೫. ಜಗದ್ಗುರು ಶ್ರೀ ವಸಂತಸರಲಿಂಗ ಶಿವಾಚಾರ್ಯರು
೨೮೬. ಜಗದ್ಗುರು ಶ್ರೀ ರಹಸ್ಯಲಿಂಗ ಶಿವಾಚಾರ್ಯರು
೨೮೭. ಜಗದ್ಗುರು ಶ್ರೀ ಜ್ಞಾನದೀಪಲಿಂಗ ಶಿವಾಚಾರ್ಯರು
೨೮೮. ಜಗದ್ಗುರು ಶ್ರೀ ವಿಶೋಕಲಿಂಗ ಶಿವಾಚಾರ್ಯರು
೨೮೯. ಜಗದ್ಗುರು ಶ್ರೀ ಜನಾರ್ಧನಲಿಂಗ ಶಿವಾಚಾರ್ಯರು
೨೯೦. ಜಗದ್ಗುರು ಶ್ರೀ ಕೃತಜ್ಞಲಿಂಗ ಶಿವಾಚಾರ್ಯರು
೨೯೧. ಜಗದ್ಗುರು ಶ್ರೀ ಧರ್ಮರಾಜಲಿಂಗ ಶಿವಾಚಾರ್ಯರು
೨೯೨. ಜಗದ್ಗುರು ಶ್ರೀ ಜಟಾಧರಲಿಂಗ ಶಿವಾಚಾರ್ಯರು
೨೯೩. ಜಗದ್ಗುರು ಶ್ರೀ ಖ್ಯಾತಲಿಂಗ ಶಿವಾಚಾರ್ಯರು
೨೯೪. ಜಗದ್ಗುರು ಶ್ರೀ ದುರ್ಲಭಲಿಂಗ ಶಿವಾಚಾರ್ಯರು
೨೯೫. ಜಗದ್ಗುರು ಶ್ರೀ ವಿಶೂಲಲಿಂಗ ಶಿವಾಚಾರ್ಯರು
೨೯೬. ಜಗದ್ಗುರು ಶ್ರೀ ಕಲ್ಪರಾಜಲಿಂಗ ಶಿವಾಚಾರ್ಯರು
೨೯೭. ಜಗದ್ಗುರು ಶ್ರೀ ಅಭಿರಾಮಲಿಂಗ ಶಿವಾಚಾರ್ಯರು
೨೯೮. ಜಗದ್ಗುರು ಶ್ರೀ ವರುಣಲಿಂಗ ಶಿವಾಚಾರ್ಯರು
೨೯೯. ಜಗದ್ಗುರು ಶ್ರೀ ಅಜರಲಿಂಗ ಶಿವಾಚಾರ್ಯರು
೩೦೦. ಜಗದ್ಗುರು ಶ್ರೀ ದೇವದೇವಲಿಂಗ ಶಿವಾಚಾರ್ಯರು
೩೦೧. ಜಗದ್ಗುರು ಶ್ರೀ ಕಪಿಲಲಿಂಗ ಶಿವಾಚಾರ್ಯರು
೩೦೨. ಜಗದ್ಗುರು ಶ್ರೀ ಬಾಲಚಂದ್ರಲಿಂಗ ಶಿವಾಚಾರ್ಯರು
೩೦೩. ಜಗದ್ಗುರು ಶ್ರೀ ಮುರಾರಿಲಿಂಗ ಶಿವಾಚಾರ್ಯರು
೩೦೪. ಜಗದ್ಗುರು ಶ್ರೀ ಅಮಲಲಿಂಗ ಶಿವಾಚಾರ್ಯರು
೩೦೫. ಜಗದ್ಗುರು ಶ್ರೀ ಕಾಮಲಿಂಗ ಶಿವಾಚಾರ್ಯರು
೩೦೬. ಜಗದ್ಗುರು ಶ್ರೀ ತ್ರಿಕಾಮಲಿಂಗ ಶಿವಾಚಾರ್ಯರು
೩೦೭. ಜಗದ್ಗುರು ಶ್ರೀ ಚಾಂದಲಿಂಗ ಶಿವಾಚಾರ್ಯರು
೩೦೮. ಜಗದ್ಗುರು ಶ್ರೀ ವೀರಭದ್ರಲಿಂಗ ಶಿವಾಚಾರ್ಯರು
೩೦೯. ಜಗದ್ಗುರು ಶ್ರೀ ಶಿವಲಿಂಗ ಶಿವಾಚಾರ್ಯರು
೩೧೦. ಜಗದ್ಗುರು ಶ್ರೀ ಶಿವಲಿಂಗ ಶಿವಾಚಾರ್ಯರು
೩೧೧. ಜಗದ್ಗುರು ಶ್ರೀ ಸಿತಂಬರಲಿಂಗ ಶಿವಾಚಾರ್ಯರು
೩೧೨. ಜಗದ್ಗುರು ಶ್ರೀ ಮಹಾಲಿಂಗ ಶಿವಾಚಾರ್ಯರು

೩೧೩. ಜಗದ್ಗುರು ಶ್ರೀ ನೀಲಕಂಠಲಿಂಗ ಶಿವಾಚಾರ್ಯರು
೩೧೪. ಜಗದ್ಗುರು ಶ್ರೀ ವಸುಲಿಂಗ ಶಿವಾಚಾರ್ಯರು
೩೧೫. ಜಗದ್ಗುರು ಶ್ರೀ ಸಿತಂಬರಲಿಂಗ ಶಿವಾಚಾರ್ಯರು
೩೧೬. ಜಗದ್ಗುರು ಶ್ರೀ ವೈದ್ಯಲಿಂಗ ಶಿವಾಚಾರ್ಯರು
೩೧೭. ಜಗದ್ಗುರು ಶ್ರೀ ಕೇದಾರಲಿಂಗ ಶಿವಾಚಾರ್ಯರು
೩೧೮. ಜಗದ್ಗುರು ಶ್ರೀ ಗಣೇಶಲಿಂಗ ಶಿವಾಚಾರ್ಯರು
೩೧೯. ಜಗದ್ಗುರು ಶ್ರೀ ವಿಶ್ವಲಿಂಗ ಶಿವಾಚಾರ್ಯರು
೩೨೦. ಜಗದ್ಗುರು ಶ್ರೀ ನೀಲಕಂಠಲಿಂಗ ಶಿವಾಚಾರ್ಯರು
೩೨೧. ಜಗದ್ಗುರು ಶ್ರೀ ವಿಶ್ವನಾಥಲಿಂಗ ಶಿವಾಚಾರ್ಯರು
೩೨೨. ಜಗದ್ಗುರು ಶ್ರೀ ಶಾಂತಲಿಂಗ ಶಿವಾಚಾರ್ಯರು
೩೨೩. ಜಗದ್ಗುರು ಶ್ರೀ ಸಿದ್ಧೇಶ್ವರಲಿಂಗ ಶಿವಾಚಾರ್ಯರು
೩೨೪. ಜಗದ್ಗುರು ಶ್ರೀ ಭೀಮಶಂಕರಲಿಂಗ ಶಿವಾಚಾರ್ಯರು

ಈ ರೀತಿ ಪೀಠದ ಪರಂಪರೆ ಬೆಳೆದು ಬಂದಿದೆ. ಏಕೋರಾಮೋರಾಧ್ಯರ ನಂತರ ಅನೇಕ ಜನ ಗುರುಗಳು ಅಧಿಕಾರ ನಡೆಸಿರುವುದು ದಾಖಲೆಯಾಗಿದ್ದರೂ ಅವರುಗಳ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಲಭ್ಯವಿಲ್ಲ. ಪೀಠದಲ್ಲಿ ಲಭ್ಯವಿರುವ ಆಧಾರದ ಹಿನ್ನೆಲೆಯಲ್ಲಿ ಜಗದ್ಗುರು ಶ್ರೀ ಆನಂದಲಿಂಗ ಶಿವಾಚಾರ್ಯಸ್ವಾಮಿಗಳು ಮಹಾಯೋಗಿಗಳಾಗಿ ವೀರಶೈವ ಧರ್ಮವನ್ನು ಪ್ರಚಾರಪಡಿಸಿದ್ದಾರೆ. ನಂತರ ಹೆಸರಿಸಬಹುದಾದ ಜಗದ್ಗುರುಗಳೆಂದರೆ ಶ್ರೀ ಭುಕುಂಡಲಿಂಗ ಶಿವಾಚಾರ್ಯ ಸ್ವಾಮಿಗಳು. ಇವರು ಉತ್ತರಭಾರತದಿಂದ ದಕ್ಷಿಣಭಾರತದವರೆಗೆ ಹೆಸರು ಗಳಿಸಿದ್ದು ವೇದ, ಆಗಮಗಳಲ್ಲಿ ಪರಿಣಿತ ರಾಗಿದ್ದರು. ಇವರನ್ನು ವೀರಭದ್ರನ ಅವತಾರವೆಂದು ಸಹ ಭಕ್ತರು ಗುರುತಿಸಿದ್ದರು. ಇವರ ಶಿಷ್ಯರಲ್ಲಿ ಶ್ರೀ ಗಣೇಶ ಲಿಂಗ ಶಿವಾಚಾರ್ಯರು ವಿದ್ಯಾಸಂಪನ್ನರು. ಯೋಗಿಗಳಾಗಿ ಕೇದಾರಪೀಠವನ್ನು ಬೆಳೆಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಪರಂಪರೆಯ ಎಲ್ಲಾ ಗುರುಗಳು ಪೀಠದ ಮತ್ತು ಕೇದಾರೇಶ್ವರ ಕ್ಷೇತ್ರದ ಧಾರ್ಮಿಕ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತ ಸರ್ಕಾರ ಮತ್ತು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ ಎಂಬುದು ಗಮನಾರ್ಹ ವಿಷಯವಾಗಿದೆ. ಪರಂಪರೆಯ ೩೧೯ನೆಯ ಜಗದ್ಗುರುಗಳಾಗಿದ್ದ ಶ್ರೀ ವಿಶ್ವಲಿಂಗ ಶಿವಾಚಾರ್ಯರ ಕಾಲದಲ್ಲಿ ಪೀಠದ ಖರ್ಚು ವೆಚ್ಚಕ್ಕೆ ೮೦,೦೦೦ ರೂ.ಗಳ ಸಾಲವಾಗಿತ್ತು. ಈ ಸಾಲವನ್ನು ತೀರಿಸಲು ಉಜ್ಜಯಿನಿ ಪೀಠದ ಆಗಿನ ಜಗದ್ಗುರುಗಳಾಗಿದ್ದ ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳು ಹಾಗೂ ಪಂಡಿತ ಕಾಶಿನಾಥಶಾಸ್ತ್ರಿಗಳ ಸಲಹೆಯಂತೆ ಶ್ರೀ ವಿಶ್ವಲಿಂಗ ಶಿವಾಚಾರ್ಯಸ್ವಾಮಿಗಳು ಕರ್ನಾಟಕಕ್ಕೆ ಆಗಮಿಸಿ ಅನೇಕ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಲ್ಲದೆ, ೧೯೧೯ನೆಯ ಡಿಸೆಂಬರ್‌ನಲ್ಲಿ ಚಿಕ್ಕಮಗಳೂರು ಜಿಲ್ಲೆಯ ಬೀರೂರಿನಲ್ಲಿ ೯ನೆಯ ಅಖಿಲಭಾರತ ವೀರಶೈವ ಮಹಾಸಭೆಯನ್ನು ನಡೆಸಿ ಸಾಲ ತೀರಿಸುವಲ್ಲಿ ಯಶಸ್ವಿಯಾದರು. ಗುರುಗಳು ಕರ್ನಾಟಕದಲ್ಲಿ ಸಂಚಾರದಲ್ಲಿದ್ದಾಗ ೧೯೨೦ರ ಜುಲೈ ೧೫ ರಂದು ಲಿಂಗೈಕ್ಯರಾದರು. ಇವರ ಗದ್ದುಗೆಯನ್ನು ಉಜ್ಜಯಿನಿ ಪೀಠದಲ್ಲಿ ನಿರ್ಮಿಸಲಾಯಿತು. ಜಗದ್ಗುರುಗಳ ಅಪ್ಪಣೆಯ ಮೇರೆಗೆ ಅವರ ಶಿಷ್ಯರಾಗಿದ್ದ ಶ್ರೀ ನೀಲಕಂಠಲಿಂಗ ಶಿವಾಚಾರ್ಯಸ್ವಾಮಿಗಳು ೩೨೦ನೆಯ ಜಗದ್ಗುರುಗಳಾಗಿ ಅಧಿಕಾರವಹಿಸಿಕೊಂಡರು. ಇವರು ಧಾರವಾಡ ಜಿಲ್ಲೆಯ ಕಲ್ಲೇದೇವೂರು ಗ್ರಾಮದಲ್ಲಿ ೧೮೮೯ರಲ್ಲಿ ಜನಿಸಿದರು. ಇವರು ಕಾಶೀ ಜಂಗಮವಾಡಿ ಮಠದಲ್ಲಿ ಕೆಲವು ಕಾಲ ನೆಲೆಸಿ ಸಂಸ್ಕೃತ ಮತ್ತು ಹಿಂದಿ ಭಾಷೆಯನ್ನು ಅಭ್ಯಾಸ ಮಾಡಿದ್ದರು. ಪೂಜ್ಯ ಜಗದ್ಗುರುಗಳು ವೈರಾಗ್ಯ ಪೀಠದ ಅಧಿಕಾರವನ್ನು ವಹಿಸಿಕೊಂಡಮೇಲೆ ದೇಶದಾದ್ಯಂತ ಸಂಚರಿಸಿ ವೀರಶೈವ ಧರ್ಮವನ್ನು ಪ್ರಚಾರ ಪಡಿಸಿದರು. ಅಲ್ಲದೆ ಓಖೀಮಠ ಮತ್ತು ಗುಪ್ತಕಾಶಿಗಳ ಮಧ್ಯದಲ್ಲಿ "ಉತ್ತರಾಖಂಡ ವಿದ್ಯಾಪೀಠ"ವನ್ನು ಸ್ಥಾಪಿಸಿ ಹಿಮಾಚ್ಛಾದಿತ ಪರ್ವತಶ್ರೇಣಿಯ ಮಕ್ಕಳಿಗೆ ಶಿಕ್ಷಣ ದೊರೆಯುವ ವ್ಯವಸ್ಥೆಯನ್ನು ಮಾಡಿದರು. ಈ ವಿದ್ಯಾಪೀಠವು ಸಂಸ್ಕೃತ, ಹಿಂದಿ ಮತ್ತು ಆಯುರ್ವೇದ ಮುಂತಾದ ವಿಷಯಗಳ

ಅಧ್ಯಯನ ವಿಭಾಗಗಳನ್ನು ಸ್ಥಾಪಿಸಿ ಬೆಳೆಸಿದರು. ಇಂದು ಈ ವಿದ್ಯಾಸಂಸ್ಥೆ ಸ್ವತಂತ್ರವಾದ ವಿಶ್ವವಿದ್ಯಾಲಯವಾಗುವ ಹಂತದಲ್ಲಿದೆ. ಇದಕ್ಕಾಗಿ ಕೇದಾರನಾಥ ಮತ್ತು ಬದರೀನಾಥ ವಿಶ್ವಸ್ಥಸಮಿತಿ ಹಾಗೂ ಓಖೀಮಠದ ನಿವಾಸಿಗಳು ಪ್ರಯತ್ನ ನಡೆಸಿದ್ದಾರೆ. ಶ್ರೀ ನೀಲಕಂಠ ಶಿವಾಚಾರ್ಯರು ಸ್ವಾಮಿಗಳು ಕೇದಾರಪೀಠವನ್ನು ಅಭಿವೃದ್ಧಿಪಡಿಸಿ ೧೯೪೫ರ ಏಪ್ರಿಲ್ ೨೩ರಂದು ಓಖೀಮಠದಲ್ಲಿಯೇ ಲಿಂಗೈಕ್ಯರಾದರು. ಇವರ ಗದ್ದುಗೆಯನ್ನು ವಿದ್ಯಾಪೀಠದಲ್ಲಿ ಮಾಡಲಾಗಿದೆ. ಶಿಕ್ಷಣ ಸಂಸ್ಥೆಯ ಕೇಂದ್ರಸ್ಥಾನದಲ್ಲಿ ಜಗದ್ಗುರು ಶ್ರೀ ನೀಲಕಂಠ ಶಿವಾಚಾರ್ಯರು ಸ್ವಾಮಿಗಳ ಅಮೃತಶಿಲಾ ವಿಗ್ರಹವನ್ನು ಸ್ಥಾಪಿಸಿ ಗುರುಗಳಿಗೆ ಗೌರವ ಸಲ್ಲಿಸಲಾಗಿದೆ. ಇವರ ನಂತರ ಹಾವೇರಿಯ ನಡುವಿನ ಮಠದ ಶ್ರೀ ವಿಶ್ವನಾಥಲಿಂಗ ಶಿವಾಚಾರ್ಯರು ೩೨೧ನೆಯ ಜಗದ್ಗುರುಗಳಾಗಿ ರಾವಲ್ ಪದವಿಯನ್ನು ಪಡೆದರು. ಜಗದ್ಗುರು ಶ್ರೀ ವಿಶ್ವನಾಥಲಿಂಗಶಿವಾಚಾರ್ಯಸ್ವಾಮಿಗಳು ೨೧ ವರ್ಷಗಳ ಕಾಲ ಅಧಿಕಾರವನ್ನು ನಡೆಸಿ ಹಾವೇರಿಯಲ್ಲಿ ಲಿಂಗೈಕ್ಯರಾದರು. ಇವರ ನಂತರ ಬೆಳಗಾವಿ ಜಿಲ್ಲೆಯ ಮುತ್ನಾಳು ಹಿರೇಮಠದ ಶ್ರೀ ಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳು ರಂಭಾಪುರಿ ಹಾಗೂ ಕಾಶಿ ಪೀಠದ ಜಗದ್ಗುರುಗಳಿಂದ ಅಧಿಕಾರದ ಅನುಗ್ರಹವನ್ನು ಪಡೆದು ೧೯೬೬ರ ಜೂನ್ ೧೦ ರಂದು ಜಗದ್ಗುರು ಪಟ್ಟಾಧಿಕಾರವನ್ನು ಪಡೆದು ೩೨೨ನೆಯ ಜಗದ್ಗುರುಗಳಾಗಿ ಅಧಿಕಾರವನ್ನು ವಹಿಸಿಕೊಂಡರು. ಗುರುಗಳು ೧೪ ವರ್ಷಗಳ ಕಾಲ ಪೀಠದ ಆಡಳಿತವನ್ನು ನಡೆಸಿ, ೧೯೮೦ರ ಫೆಬ್ರವರಿ ೬ ರಂದು ಮುತ್ನಾಳು ಹಿರೇಮಠದಲ್ಲಿ ಲಿಂಗೈಕ್ಯರಾದರು. ಇವರ ನಂತರ ಐದು ವರ್ಷಗಳ ಕಾಲ ಪೀಠಾಧಿಕಾರಿಗಳಿಲ್ಲದೆ ಪೀಠವು ಖಾಲಿ ಉಳಿಯಿತು. ಕಾಶಿ ಪೀಠದ ಜಗದ್ಗುರು ಶ್ರೀ ವಿಶ್ವೇಶ್ವರ ಶಿವಾಚಾರ್ಯಸ್ವಾಮಿಗಳ ಕೃಪಾಶೀರ್ವಾದದಿಂದ ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ಗುಲಬಾಳ ಗ್ರಾಮದಲ್ಲಿ ಜನಿಸಿದ ಶ್ರೀ ಸಿದ್ಧೇಶ್ವರಲಿಂಗ ಶಿವಾಚಾರ್ಯಸ್ವಾಮಿಗಳು ೧೯೮೫ರ ಜೂನ್ ೭ರಂದು ೩೨೩ನೆಯ ಜಗದ್ಗುರುಗಳಾಗಿ ಅಧಿಕಾರ ವಹಿಸಿಕೊಂಡರು. ಗುರುಗಳು ತಮ್ಮ ವಿದ್ವತ್‌ಶಕ್ತಿಯಿಂದ ಪುರಾತನ ಪೀಠವನ್ನು ೧೫ ವರ್ಷಗಳ ಕಾಲ ಸಮರ್ಥವಾಗಿ ಮುನ್ನಡೆಸಿ, ಶ್ರೀ ಭೀಮಶಂಕರಲಿಂಗ ಶಿವಾಚಾರ್ಯಸ್ವಾಮಿಗಳಿಗೆ ೨೦೦೦ದಂದು ಅಧಿಕಾರವನ್ನು ನೀಡಿದ್ದಾರೆ.

ಬಿಜಾಪುರ ಜಿಲ್ಲೆ ಸಿಂದಗಿ ತಾಲ್ಲೂಕಿನ ಹೂವಿನಹಳ್ಳಿಯಲ್ಲಿ ಜನಿಸಿದ ಜಗದ್ಗುರು ಶ್ರೀ ಭೀಮಶಂಕರಲಿಂಗ ಶಿವಾಚಾರ್ಯಸ್ವಾಮಿಗಳು ಜಗದ್ಗುರು ಪಟ್ಟಾಧಿಕಾರವನ್ನು ಪಡೆಯುವ ಮೊದಲು ಶಿರಡೋಣದ ಪಟ್ಟದಮಠದ ಗುರುಗಳಾಗಿ ಅಧಿಕಾರ ನಡೆಸುತ್ತಿದ್ದರು. ನಂತರ ೨೦೦೦ರಅಕ್ಟೋಬರ್ ೧೩ರಂದು ಪಂಚಪೀಠಾದೀಶರ ಸಮ್ಮುಖದಲ್ಲಿ ಜಗದ್ಗುರು ಶ್ರೀ ಸಿದ್ಧೇಶ್ವರಲಿಂಗ ಶಿವಾಚಾರ್ಯಸ್ವಾಮಿಗಳ ಅನುಗ್ರಹ ಪಡೆದು, ಪುರಾತನ ಪೀಠದ ಜಗದ್ಗುರುಗಳಾಗಿ ವೀರಶೈವಧರ್ಮವನ್ನು ಪ್ರಚಾರಪಡಿಸುವಲ್ಲಿ ಮುಂದಾಗಿದ್ದಾರೆ. ಜಗದ್ಗುರುಗಳು ಹೂವಿನಹಳ್ಳಿಯಲ್ಲಿ ಪ್ರಾಥಮಿಕ, ಸೋಲಾಪುರದ ಹೊಟಗಿಮಠದಲ್ಲಿ ಪ್ರೌಢಶಿಕ್ಷಣದ ಜತೆಗೆ ಸಂಸ್ಕೃತ, ವೇದ, ಜ್ಯೋತಿಷ್ಯ ಶಾಸ್ತ್ರದವರೆಗೆ ವಿದ್ಯಾಭ್ಯಾಸ ಮಾಡಿದರು. ಶಿರಡೋಣದ ಪಟ್ಟದಮಠದ ಗುರುಗಳಾದ ಮೇಲೆ ಕಾಶಿಪೀಠ ಗುರುಕುಲದಲ್ಲಿ ನೆಲೆಸಿ ಸಂಪೂರ್ಣಾ ನಂದ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಅಧ್ಯನ ಮಾಡಿದ್ದಾರೆ. ಜಗದ್ಗುರುಗ ಶ್ರೀ ಭೀಮಶಂಕರಲಿಂಗ ಶಿವಾಚಾರ್ಯಸ್ವಾಮಿಗಳು ಆಧ್ಯಾತ್ಮಿಕ, ಶೈಕ್ಷಣಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಅಪಾರವಾದ ಪ್ರಗತಿಯನ್ನು ಸಾಧಿಸಿದ್ದು ವೀರಶೈವ ಸಿದ್ಧಾಂತದ ಹಿನ್ನೆಲೆಯಲ್ಲಿ ಧರ್ಮಜಾಗೃತಿಯನ್ನು ಮೂಡಿಸಲು ಮುಂದಾಗಿದ್ದಾರೆ.

ವಿಳಾಸ: ಶ್ರೀಮದ್ ವೈರಾಗ್ಯಪೀಠ ಜಗದ್ಗುರು ಶ್ರೀ ಭೀಮಶಂಕರ ಶಿವಾಚಾರ್ಯ ಭಗವತ್ಪಾದರು
ಶ್ರೀಮತ್ ಹಿಮವತ್‌ಕೇದಾರ ಪೀಠ, ರುದ್ರಪ್ರಯಾಗ ಜಿಲ್ಲೆ, ಉತ್ತರಾಂಚಲ ರಾಜ್ಯ.

ಆಧಾರ: ವೀರಶೈವ ಪಂಚಪೀಠ ಪರಂಪರೆ, ಲೇಖಕರು : ಷ.ಬ್ರ. ಶ್ರೀ ಡಾ॥ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು
ಗುರುಕಾರುಣ್ಯ, ಸಂಪಾದಕರು: ಡಾ॥ ಪಂಚಾಕ್ಷರಿ ಹಿರೇಮಠ

❑

ಶ್ರೀಮದ್ ಗಿರಿರಾಜ ಸೂರ್ಯಸಿಂಹಾಸನ ಶ್ರೀಶೈಲ ಪೀಠ

ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯ ಕೃಷ್ಣಾ ನದಿಯ ದಡದಲ್ಲಿ ಶ್ರೀಶೈಲ ಪೀಠವು ಸ್ಥಾಪನೆಯಾಗಿದೆ. ಎತ್ತರವಾದ ಬೆಟ್ಟಗಳ ಸಾಲಿನ ಶ್ರೀಶೈಲಗಿರಿಯಲ್ಲಿ ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದಾದ ಶ್ರೀ ಮಲ್ಲಿಕಾರ್ಜುನ ಶಿವಲಿಂಗ ಹಾಗೂ ಭ್ರಮರಾಂಬೆ ಸನ್ನಿಧಿಯಲ್ಲಿ ವೀರಶೈವ ಧರ್ಮದ ಪ್ರಾಚೀನ ಪೀಠವು ಸ್ಥಾಪನೆಯಾಗಿರುವುದು ವೀರ ಶೈವರಿಗೆ ಒಂದು ಹೆಗ್ಗಳಿಕೆಯಾಗಿದೆ.

ಪುರಾಣಪ್ರಸಿದ್ಧ ಸ್ಥಳ : ಪುರಾತನ ಕಾಲದಲ್ಲಿ ಶಿಲಾದ ಮಹರ್ಷಿಯ ಮಗನಾದ ಪರ್ವತನು ತಂದೆಯಂತೆಯೇ ಶ್ರೀಶೈಲ ಕ್ಷೇತ್ರದ ಜ್ಯೋತಿರ್ಲಿಂಗದ ಸನ್ನಿಧಾನದಲ್ಲಿ ಘೋರ ತಪಸ್ಸನ್ನು ಆಚರಿಸಿದನು. ಆಗ ಶಿವನು ಪ್ರತ್ಯಕ್ಷನಾಗಿ ನಿನಗೆ ಏನು ಬೇಕು ಎಂದು ಕೇಳಿದನು. ಆಗ ಪರ್ವತನು ದಿನದಲ್ಲಿ ಮೂರು ಬಾರಿ ಜ್ಯೋತಿರ್ಲಿಂಗದಲ್ಲಿ ದರ್ಶನ ನೀಡಬೇಕೆಂದು ಶಿವನನ್ನು ಬೇಡಿಕೊಂಡನು. ಅದರಂತೆ ಶಿವನು ಪ್ರತಿದಿವಸ ಪರ್ವತನಿಗೆ ದರ್ಶನವನ್ನು ನೀಡತೊಡಗಿದನು. ಅಂದಿನಿಂದ ಈ ಕ್ಷೇತ್ರದ ಶಿವಲಿಂಗಕ್ಕೆ ಪರ್ವತಮಲ್ಲಯ್ಯ ಎಂಬ ರೂಢನಾಮವು ಪ್ರಚಲಿತಕ್ಕೆ ಬಂದಿತು.

ಆದಿಕಾಲದಿಂದಲೂ ಶ್ರೀಶೈಲ ಕ್ಷೇತ್ರದ ದರ್ಶನಕ್ಕೆ ಅನೇಕ ಪುಣ್ಯಪುರುಷರು ಆಗಮಿಸಿರುವುದು ತಿಳಿದುಬರುತ್ತದೆ. ಕೃತಯುಗದಲ್ಲಿ ಹಿರಣ್ಯಕಶ್ಯಪ, ತ್ರೇತಾಯುಗದಲ್ಲಿ ಶ್ರೀರಾಮ ಭೇಟಿ ನೀಡಿ ಜ್ಯೋತಿರ್ಲಿಂಗದ ಕೃಪೆಗೆ ಪಾತ್ರರಾಗಿದ್ದರು. ದ್ವಾಪರ ಯುಗದಲ್ಲಿ ಅರ್ಜುನನು ಮಲ್ಲಿಗೆ ಹೂಗಳಿಂದ ಜ್ಯೋತಿರ್ಲಿಂಗವನ್ನು ಪೂಜಿಸಿ ಸಾಕ್ಷಾತ್ಕರಿಸಿಕೊಂಡಿದ್ದನು. ಇದರ ಜ್ಞಾಪಕಾರ್ಥ ಮಲ್ಲಿಕಾ+ಅರ್ಜುನ ಮಲ್ಲಿಕಾರ್ಜುನ ಎಂಬ ಅಭಿದಾನವನ್ನು ಜ್ಯೋತಿರ್ಲಿಂಗಕ್ಕೆ ಮಾಡಲಾಯಿತು. ದ್ವಾಪರ ಯುಗದಿಂದ ಪರ್ವತಮಲ್ಲಯ್ಯನು ಮಲ್ಲಿಕಾರ್ಜುನ ಲಿಂಗವಾಗಿ ಹೆಸರು ಪಡೆಯಿತು.

ಚಂದ್ರಗುಪ್ತಮೌರ್ಯನು ತನ್ನ ಸಹೋದರರಾದ ನವನಂದರನ್ನು ಕೊಲ್ಲಿಸಿದ ಪಾಪದ ಪರಿಣಾಮವಾಗಿ ಕಾಲಾನಂತರದಲ್ಲಿ ರಾಜ್ಯಭ್ರಷ್ಟನಾಗಿ ದೇಶ ಸಂಚಾರಮಾಡುತ್ತ ಶ್ರೀಶೈಲಕ್ಕೆ ಬಂದನು. ಇವನ ಮಗಳಾದ ಚಂದ್ರಾವತಿಯು ವಿವಾಹವಾಗದೆ ಬ್ರಹ್ಮಚಾರಿಣಿಯಾಗಿದ್ದು ತಂದೆಯು ಮಾಡಿದ ಪಾಪ ನಿವೃತ್ತಿಗೆ ಶ್ರೀಶೈಲದಲ್ಲಿ ಅನೇಕ ವ್ರತಗಳನ್ನು ಮಾಡುತ್ತ, ಜ್ಯೋತಿರ್ಲಿಂಗದ ಮಹಿಮೆಯನ್ನು ಅರಿತು ಮಲ್ಲಿಗೆ ಹೂಗಳಿಂದ ಪೂಜಿಸಿ ಅನುಗ್ರಹ ಪಡೆದಳು. ಈ ಕಾರಣದಿಂದಲೂ ಶ್ರೀಶೈಲದ ಜ್ಯೋತಿರ್ಲಿಂಗಕ್ಕೆ ಮಲ್ಲಿಕಾರ್ಜುನ ಎಂಬ ಹೆಸರು ಬಂದಿರಬಹುದು ಎಂದು ಕ್ಷೇತ್ರದ ಪುರಾಣಗಳಿಂದ ತಿಳಿದುಬರುತ್ತದೆ. ೧೨ನೆಯ ಶತಮಾನದಲ್ಲಿ ಅಕ್ಕಮಹಾದೇವಿ ಮತ್ತು ಅಲ್ಲಮರಂತಹ ಅನುಭಾವಿಗಳು ಈ ಕ್ಷೇತ್ರದಲ್ಲಿ ನೆಲೆನಿಂತು ತಪೋಗೈದು ಐಕ್ಯರಾಗಿದ್ದಾರೆ. ಚೋಳ, ಕದಂಬ, ಪಲ್ಲವ, ಚಾಲುಕ್ಯ ಮುಂತಾದ ರಾಜ ಮನೆತನಗಳು ಶ್ರೀಶೈಲ ಕ್ಷೇತ್ರದ ಮಲ್ಲಿಕಾರ್ಜುನನ ಭಕ್ತರಾಗಿದ್ದರು.

ಶ್ರೀಶೈಲ ಪಂಡಿತಾರಾಧ್ಯಪೀಠದ ಸ್ಥಾಪನೆ : ಪರಶಿವನ ಅಪ್ಪಣೆಯ ಮೇರೆಗೆ ಭೂಲೋಕದಲ್ಲಿ ವೀರಶೈವ ಧರ್ಮವನ್ನು ಸಂಸ್ಥಾಪಿಸುವುದಕ್ಕಾಗಿ ಅವತರಿಸಿದ ಪಂಚಶಿವಗಣರಲ್ಲಿ ಒಬ್ಬರಾದವರೇ ಶ್ರೀ ಪಂಡಿತಾರಾಧ್ಯರು. ಶಿವಾಗಮಗಳ ಆಧಾರದಿಂದ ಇವರೇ ಕೃತಯುಗದಲ್ಲಿ ಶ್ರೀ ಚತುರಕ್ಷರ ಶಿವಾಚಾರ್ಯರೆಂದು, ತ್ರೇತಾಯುಗದಲ್ಲಿ ಶ್ರೀ ಚತುರ್‌ವಕ್ತ್ರ ಶಿವಾಚಾರ್ಯರೆಂದು, ದ್ವಾಪರಯುಗದಲ್ಲಿ ಶ್ರೀ ದೇನುಕರ್ಣಶಿವಾಚಾರ್ಯರೆಂದು ಅವತರಿಸಿದ್ದರೆಂದು ತಿಳಿದು ಬರುತ್ತದೆ. ದ್ವಾಪರಯುಗದಲ್ಲಿ ಶ್ರೀಶೈಲ ಕ್ಷೇತ್ರದ ಸುಪ್ರಸಿದ್ಧ ಮಲ್ಲಿಕಾರ್ಜುನ ಜ್ಯೋತಿರ್ಲಿಂಗದಿಂದ ಶಿವರಾತ್ರಿಯಂದು ಆವಿರ್ಭವಿಸಿದ ಜಗದ್ಗುರು ಶ್ರೀ ದೇನುಕರ್ಣಶಿವಾಚಾರ್ಯ ಭಗವತ್ಪಾದರು ಸಾನಂದ ಮಹರ್ಷಿಗೆ ವೀರಶೈವ ಸಿದ್ಧಾಂತವನ್ನು ಬೋಧಿಸಿ, ಆಂಧ್ರಪ್ರದೇಶದಲ್ಲಿ ವೀರಶೈವ ಧರ್ಮ ಬೆಳೆಯುವಂತೆ ಮಾಡಿದರು. ಮುಂದೆ ಕಲಿಯುಗದಲ್ಲಿ ಜಗದ್ಗುರು ಶ್ರೀ ಪಂಡಿತಾರಾಧ್ಯಶಿವಾಚಾರ್ಯ ಭಗವತ್ಪಾದರೆಂಬ ಅಭಿಧಾನದಿಂದ ಅವತರಿಸಿ ವಿಖ್ಯಾತರಾಗಿ ಲೋಕಕಲ್ಯಾಣ ಕಾರ್ಯಗಳನ್ನು ಮಾಡಿದರು. ಇವರ ತರುವಾಯ ಪೀಠದ ಪರಂಪರೆ ಅವಿಚ್ಛಿನ್ನವಾಗಿ ಬೆಳೆದು ಬಂದಿರುವುದನ್ನು ಕಾಣಬಹುದಾಗಿದೆ.

ಪರಂಪರೆ : ಜಗದ್ಗುರು ಶ್ರೀ ಚತುರಕ್ಷರ ಶಿವಾಚಾರ್ಯ ಭಗವತ್ಪಾದರು (ಕೃತಯುಗ)
ಜಗದ್ಗುರು ಶ್ರೀ ಚತುರ್ಮುಖ ಶಿವಾಚಾರ್ಯ ಭಗವತ್ಪಾದರು (ತ್ರೇತಾಯುಗ)
ಜಗದ್ಗುರು ಶ್ರೀ ಧೇನುಕರ್ಣ ಶಿವಾಚಾರ್ಯ ಭಗವತ್ಪಾದರು (ದ್ವಾಪರಯುಗ)
ಜಗದ್ಗುರು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು (ಕಲಿಯುಗ)

೧. ಜಗದ್ಗುರು ಶ್ರೀ ಸದಾನಂದ ಶಿವಾಚಾರ್ಯರು
೨. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೯೪೦)
೩. ಜಗದ್ಗುರು ಶ್ರೀ ಶಂಕರ ಶಿವಾಚಾರ್ಯರು
೪. ಜಗದ್ಗುರು ಶ್ರೀ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯರು (ಕ್ರಿ.ಶ.೧೦೬೦)
೫. ಜಗದ್ಗುರು ಶ್ರೀ ಗಜಕರ್ಣ ಶಿವಾಚಾರ್ಯರು
೬. ಜಗದ್ಗುರು ಶ್ರೀ ಸಂಗಮ ಶಿವಾಚಾರ್ಯರು
೭. ಜಗದ್ಗುರು ಶ್ರೀ ತ್ರಿರಂಗುಷ್ಠ ಶಿವಾಚಾರ್ಯರು
೮. ಜಗದ್ಗುರು ಶ್ರೀ ಅವ್ಯಯ ಶಿವಾಚಾರ್ಯರು
೯. ಜಗದ್ಗುರು ಶ್ರೀ ಕಲ್ಯಾಣಪಂಡಿತ ಶಿವಾಚಾರ್ಯರು
೧೦. ಜಗದ್ಗುರು ಶ್ರೀ ಉಮಾಧವ ಶಿವಾಚಾರ್ಯರು
೧೧. ಜಗದ್ಗುರು ಶ್ರೀ ಪ್ರಭು ಶಿವಾಚಾರ್ಯರು
೧೨. ಜಗದ್ಗುರು ಶ್ರೀ ಗೋಕರ್ಣ ಶಿವಾಚಾರ್ಯರು
೧೩. ಜಗದ್ಗುರು ಶ್ರೀ ಮಂಚಣ ಪಂಡಿತಾರಾಧ್ಯ ಶಿವಾಚಾರ್ಯರು
೧೪. ಜಗದ್ಗುರು ಶ್ರೀ ಸುಕೇಶಿ ಶಿವಾಚಾರ್ಯರು
೧೫. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು
೧೬. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯ ಶಿವಾಚಾರ್ಯರು (ಕ್ರಿ.ಶ.೧೧೯೫)
೧೭. ಜಗದ್ಗುರು ಶ್ರೀ ಈಶ್ವರ ಶಿವಾಚಾರ್ಯರು (ಕ್ರಿ.ಶ.೧೩೦೦)
೧೮. ಜಗದ್ಗುರು ಶ್ರೀ ಪಟ್ಟದ ಪ್ರಮಥೇಶ್ವರ ಶಿವಾಚಾರ್ಯರು (ಕ್ರಿ.ಶ.೧೭೦೦)
೧೯. ಜಗದ್ಗುರು ಶ್ರೀ ಸಿದ್ಧಮಲ್ಲಿಕಾರ್ಜುನ ಶಿವಾಚಾರ್ಯರು
೨೦. ಜಗದ್ಗುರು ಶ್ರೀ ಶ್ರೀಲಿಂಗ ಚಕ್ರೇಶ್ವರ ಶಿವಾಚಾರ್ಯರು
೨೧. ಜಗದ್ಗುರು ಶ್ರೀ ಪಟ್ಟದ ಪರ್ವತರಾಜ ಶಿವಾಚಾರ್ಯರು
೨೨. ಜಗದ್ಗುರು ಶ್ರೀ ಜಡೆ ಶಂಕರ ಶಿವಾಚಾರ್ಯರು
೨೩. ಜಗದ್ಗುರು ಶ್ರೀ ಮುಕ್ತಿಮುನಿ ಶಿವಾಚಾರ್ಯರು
೨೪. ಜಗದ್ಗುರು ಶ್ರೀ ಸಿದ್ಧಭಿಕ್ಷಾವರ್ತಿ ಶಿವಾಚಾರ್ಯರು
೨೫. ಜಗದ್ಗುರು ಶ್ರೀ ನಾಗಲೂಟಿಭಿಕ್ಷಾವರ್ತಿ ಶಿವಾಚಾರ್ಯರು (ಕ್ರಿ.ಶ.೧೯೦೮-೧೯೪೦)
೨೬. ಜಗದ್ಗುರು ಶ್ರೀ ವಾಗೀಶಪಂಡಿತಾರಾಧ್ಯ ಶಿವಾಚಾರ್ಯರು (ಕ್ರಿ.ಶ.೧೯೪೦-೧೯೮೬)
೨೭. ಜಗದ್ಗುರು ಶ್ರೀ ಉಮಾಪತಿಪಂಡಿತಾರಾಧ್ಯ ಶಿವಾಚಾರ್ಯರು (ಕ್ರಿ.ಶ.೧೯೮೧-)

ಈ ರೀತಿ ಪೀಠದ ಪರಂಪರೆಯ ಜಗದ್ಗುರುಗಳ ಹೆಸರನ್ನು ದಾಖಲಿಸಬಹುದಾಗಿದೆ.ಪೀಠದ ಪರಂಪರೆಯಲ್ಲಿ ದಾಖಲೆಗಳನ್ನು ಸಂರಕ್ಷಿಸಿದವ ಕಾರಣ ಪರಂಪರೆಯ ಜಗದ್ಗುರುಗಳ ಹೆಸರುಗಳು ಚರಿತ್ರೆಯ ಕಾಲಗರ್ಭದಲ್ಲಿ ಮರೆಯಾಗಿವೆ.

ಸ್ಕಂದ ಪುರಾಣದಲ್ಲಿ ಶ್ರೀಶೈಲ ಪೀಠವು ಬಹಳ ಪ್ರಾಚೀನವಾದುದೆಂದು ಉಲ್ಲೇಖಿತವಾಗಿದೆ. ಇಂತಹ ಪುರಾತನ ಪೀಠದ ಪರಂಪರೆಯ ಜಗದ್ಗುರುಗಳಾದ ಶ್ರೀ ಸದಾನಂದ ಶಿವಾಚಾರ್ಯಸ್ವಾಮಿಗಳು ಮಹಾತಪಸ್ವಿಗಳಾಗಿದ್ದು, ಶ್ರೀಶೈಲ ಪೀಠವನ್ನು ಅಭಿವೃದ್ಧಿಗೊಳಿಸಿದರು. ಇವರ ಕಾಲದಲ್ಲಿ ಇತರೆ ನಾಲ್ಕು ಪೀಠದ ಜಗದ್ಗುರುಗಳನ್ನು ಶ್ರೀಶೈಲಕ್ಕೆ ಬರ

ಮಾಡಿಕೊಂಡು ಗೌರವಿಸಿರುವುದು ಪೀಠದ ಶಿಲಾಶಾಸನದಲ್ಲಿ ಸ್ಮಾರಕವಾಗಿ ಉಳಿದಿದೆ. ಪಂಚಪೀಠಾಧೀಶ್ವರರು ಶ್ರೀಶೈಲದಲ್ಲಿ ಸಮ್ಮಿಲನಗೊಂಡ ಜ್ಞಾಪಕಾರ್ಥ ಪಂಚಮಠಗಳು ಸ್ಥಾಪನೆಯಾಗಿವೆ. ಕೇದಾರ ಪೀಠಕ್ಕೆ ಸೇರಿದ ಘಂಟಾಮಠ, ಉಜ್ಜಯಿನಿ ಪೀಠಕ್ಕೆ ಸೇರಿದ ನಂದೀಮಠ, ಕಾಶಿಪೀಠಕ್ಕೆ ಸೇರಿದ ರುದ್ರಾಕ್ಷಿಮಠ, ರಂಭಾಪುರಿ ಪೀಠಕ್ಕೆ ಸೇರಿದ ಸಾರಂಗಮಠವು ಅಸ್ತಿತ್ವದಲ್ಲಿವೆ. ಜಗದ್ಗುರು ಶ್ರೀ ಸದಾನಂದ ಶಿವಾಚಾರ್ಯಸ್ವಾಮಿಗಳ ಕಾಲದಲ್ಲಿ ಪೀಠವು ಜನಮಾನ್ಯತೆ ಪಡೆದು ಬೆಳೆದ ಲಕ್ಷಣಗಳು ಕಂಡುಬರುತ್ತವೆ. ನಂತರ ಬಂದ ಅನೇಕ ಗುರುಗಳು ಪೀಠವನ್ನು ಮತ್ತು ಮಲ್ಲಿಕಾರ್ಜುನ ಭ್ರಮರಾಂಬೆ ದೇವಾಲಯವನ್ನು ಅಭಿವೃದ್ಧಿಪಡಿಸಿ ವೀರಶೈವ ಧರ್ಮ ಬೆಳೆಯುವಂತೆ ಮಾಡಿದ್ದಾರೆ.

ಪಂಡಿತತ್ರಯರು : ಪರಂಪರೆಯ ಆಚಾರ್ಯರಲ್ಲಿ ಜಗದ್ಗುರು ಶ್ರೀ ಶ್ರೀಪತಿಪಂಡಿತಾರಾಧ್ಯ ಶಿವಾಚಾರ್ಯಸ್ವಾಮಿಗಳು ಜಗದ್ಗುರು ಶ್ರೀ ಮಂಚಣಪಂಡಿತಾರಾಧ್ಯ ಶಿವಾಚಾರ್ಯಸ್ವಾಮಿಗಳು ಮತ್ತು ಜಗದ್ಗುರು ಶ್ರೀ ಮಲ್ಲಿಕಾರ್ಜುನಪಂಡಿತಾರಾಧ್ಯ ಶಿವಾ ಚಾರ್ಯಸ್ವಾಮಿಗಳು ಮಹಾ ಪಂಡಿತರಾಗಿ ಅನೇಕ ಗ್ರಂಥಗಳನ್ನು ರಚಿಸುವ ಮೂಲಕ" ಪಂಡಿತತ್ರಯ" ರೆಂಬ ಖ್ಯಾತಿಗೆ ಒಳಗಾಗಿದ್ದಾರೆ. ಶ್ರೀ ಶ್ರೀಪತಿಪಂಡಿತಾರಾಧ್ಯರು ಬ್ರಹ್ಮಸೂತ್ರಗಳಿಗೆ ವೀರಶೈವ ಸಿದ್ಧಾಂತ ಪರವಾದ ಶಕ್ತಿವಿಶಿಷ್ಟಾ ದ್ವೈತ ಭಾಷ್ಯವನ್ನು ಬರೆದಿದ್ದಾರೆ. ಅದು ಶ್ರೀಕರಭಾಷ್ಯ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಜಗದ್ಗುರು ಶ್ರೀ ಮಲ್ಲಿಕಾ ರ್ಜುನಪಂಡಿತಾರಾಧ್ಯ ಶಿವಾಚಾರ್ಯಸ್ವಾಮಿಗಳು ಶಿವತತ್ತ್ವಸಾರಮು, ಗಣಸಹಸ್ರನಾಮಾವಳಿ, ಲಿಂಗೋದ್ಭವದೇವ ಗದ್ಯಮು, ರುದ್ರಮಹಿಮೆ, ಅಮರೇಶ್ವರಾಷ್ಟಕ ಮತ್ತು ಪರ್ವತವರ್ಣನಮು ಮುಂತಾದ ಕನ್ನಡ, ತೆಲುಗು ಗ್ರಂಥಗಳನ್ನು ಬರೆದಿರುವುದಾಗಿ ತಿಳಿದುಬರುತ್ತದೆ.

ಪೀಠದ ಪರಂಪರೆಯ ಗುರುಗಳಲ್ಲಿ ಒಬ್ಬರಾದ ಜಗದ್ಗುರು ಶ್ರೀ ಸಿದ್ಧಭಿಕ್ಷಾವರ್ತಿ ಶಿವಾಚಾರ್ಯಸ್ವಾಮಿಗಳು ಶಿವಪೂಜಾ ನಿಷ್ಠರಾಗಿ ಮಹಾತಪಸ್ವಿಗಳಾಗಿದ್ದರು. ಇವರ ತರುವಾಯ ಜಗದ್ಗುರು ಶ್ರೀ ನಾಗಲೂಟಿಭಿಕ್ಷಾವರ್ತಿ ಶಿವಾಚಾರ್ಯಸ್ವಾಮಿಗಳು ಅಧಿಕಾರಕ್ಕೆ ಬಂದರು. ಇವರು ಕರ್ನೂಲು ಜಿಲ್ಲೆಯ ನಂದಿಕೊಟಕೂರು ತಾಲ್ಲೂಕು ಇಸಗಾಳು ಎಂಬ ಗ್ರಾಮದ ಜಂಗಮ ಮನೆತನದ ಶ್ರೀ ಸಣ್ಣವೀರಭದ್ರಯ್ಯ ಮತ್ತು ಸಣ್ಣರಾಚಮ್ಮನವರ ಪುತ್ರರಾಗಿ ಜನಿಸಿ, ಶಿವಯೋಗಸಂಪನ್ನತೆಯನ್ನು ಮೈಗೂಡಿಸಿಕೊಂಡು ಬೆಳೆದರು. ಇವರು ಶ್ರೀಶೈಲ ಪೀಠದ ಜಗದ್ಗುರುಗಳಾಗಿ ನೇಮಕಗೊಂಡು ಮೂವತ್ತೆರಡು ವರ್ಷಗಳ ಕಾಲ ದೀರ್ಘ ಆಡಳಿತವನ್ನು ನಡೆಸಿ ಆಂಧ್ರ, ಕರ್ನಾಟಕ, ಮಹಾರಾಷ್ಟ್ರ ಹಾಗೂ ದೇಶದ ನಾನಾ ಭಾಗಗಳಲ್ಲಿ ಸಂಚರಿಸಿ ಪೀಠದ ಘನತೆ, ಗೌರವಗಳನ್ನು ಹೆಚ್ಚಿಸಿದರು. ೧೯೧೮ರಲ್ಲಿ ಕಾಶಿಯಲ್ಲಿ ನಡೆದ ಪಂಚಾಚಾರ್ಯರ ಸಮ್ಮೇಳನದಲ್ಲಿ ಭಾಗವಹಿಸಿ ವೀರಶೈವ ಧರ್ಮದ ಬೆಳವಣಿಗೆಗೆ ಸೂಕ್ತ ಮಾರ್ಗ ದರ್ಶನವನ್ನು ನೀಡಿದ್ದರು. ಉಜ್ಜಯಿನಿ ಜಗದ್ಗುರು ಶ್ರೀ ಸಿದ್ದೇಶ್ವರ ಶಿವಾಚಾರ್ಯಸ್ವಾಮಿಗಳ ಮಾರ್ಗದರ್ಶನದಂತೆ ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯಸ್ವಾಮಿಗಳನ್ನು ನೇಮಕ ಮಾಡಿಕೊಂಡು ೧೯೪೦ರ ಜುಲೈ ೭ರಂದು ಶ್ರೀಶೈಲ ಪೀಠದ ಅಧಿಕಾರವನ್ನು ವಹಿಸಿಕೊಟ್ಟರು. ಅದೇ ತಿಂಗಳ ೩೧ರಂದು ಪೀಠದಲ್ಲಿ ಲಿಂಗೈಕ್ಯರಾದರು.

ಜನಾನುರಾಗಿಗಳ ಆಗಮನ : ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲ್ಲೂಕಿನ ಮುದೇನೂರು ಗ್ರಾಮದ ಹಿರೇಮಠದ ಶ್ರೀ ಬಸವಯ್ಯ ಮತ್ತು ಶ್ರೀಮತಿ ರುದ್ರಮ್ಮನವರ ಪುತ್ರರಾಗಿ ೧೯೧೮ರ ಜೂನ್ ೨೬ರಂದು ಜನಿಸಿದ ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯಸ್ವಾಮಿಗಳು, ಎಡೆಯೂರಿನಲ್ಲಿ ರಂಭಾಪುರಿ ಪೀಠದ ಜಗದ್ಗುರು ಶ್ರೀ ಪಂಚಾಕ್ಷರ ಶಿವಾಚಾರ್ಯಸ್ವಾಮಿಗಳ ನೇತೃತ್ವದಲ್ಲಿ ಶಿವದೀಕ್ಷೆಯನ್ನು ಪಡೆದರು. ಗುರುಗಳು ಬಾಣಾವರ, ಬ್ಯಾಡಗಿ, ಬಾಗಲಕೋಟೆ, ಅಥಣಿ ಮುಂತಾದ ಸ್ಥಳಗಳಲ್ಲಿ ಕನ್ನಡ ಮತ್ತು ಸಂಸ್ಕೃತ ಅಧ್ಯಯನವನ್ನು ಮಾಡಿ ಹೆಚ್ಚಿನ ವ್ಯಾಸಂಗಕ್ಕೆ ಕಾಶಿಪೀಠದ ಶ್ರೀ ವಿಶ್ವಾರಾಧ್ಯ ಗುರುಕುಲದಲ್ಲಿ ಪ್ರವೇಶ ಪಡೆದ ಗುರುಗಳು ೧೯೩೭ರಲ್ಲಿ ವಿದ್ಯಾರ್ಥಿ ವೇತನವನ್ನು ಪಡೆದು ಸಂಸ್ಕೃತ ವಿದ್ಯಾಭ್ಯಾಸವನ್ನು ಮುಗಿಸಿದರು. ಗುರುಗಳು ಕಾವ್ಯತೀರ್ಥ ಪರೀಕ್ಷೆಯ ನಂತರ ಸಾಹಿತ್ಯಾಚಾರ್ಯ ಮತ್ತು ವೇದಾಂತ ಚಾರ್ಯ ಪರೀಕ್ಷೆಗಳಲ್ಲಿಯೂ ಉತ್ತೀರ್ಣರಾದರು. ಇವರು ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿಗಳ ಸಹಯೋಗದಿಂದ ಜಂಗಮವಾಡಿ ಮಠದಲ್ಲಿ "ಕಾಶಿ ವೀರಶೈವ ವಿದ್ವತ್ ಸಂಘ" ಎಂಬ ಸಂಸ್ಥೆಯನ್ನು ಪ್ರಾರಂಭಿಸಿ

ಅವರಿಂದ ಮಹಾನಾರಾಯಣೋಪನಿಷತ್ತು, ಸಿದ್ಧಾಂತ ಶಿಖಾಮಣಿ (ಮೂಲ), ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತ ಮುಂತಾದ ಗ್ರಂಥಗಳನ್ನು ಪ್ರಕಾಶಪಡಿಸಿದರು. ಅಲ್ಲದೆ ಸಾಹಿತ್ಯದರ್ಪಣ, ಮೃಚುಕಟಿಕ, ಮುದ್ರಾರಾಕ್ಷಸ ಮುಂತಾದ ಸಂಸ್ಕೃತ ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿದರು.

ಗಾಂಧೀಜಿ ಸಂಬಂಧ : ಶ್ರೀ ವಾಗೀಶಪಂಡಿತಾರಾಧ್ಯ ಶಿವಾಚಾರ್ಯಸ್ವಾಮಿಗಳು ವಿದ್ಯಾರ್ಥಿಗಳಾಗಿದ್ದಾಗಲೇ ಸಂಸ್ಕೃತದ ಮಹಾಗ್ರಂಥಗಳ ರಚನೆ ಮತ್ತು ಅನುವಾದದ ಕಾರ್ಯದ ಜೊತೆಗೆ ೧೯೩೬ರಲ್ಲಿ ಗಾಂಧೀಜಿಯವರ ಪ್ರೀತಿಗೂ ಪಾತ್ರರಾದರು. ಗಾಂಧೀಜಿಯವರ ಸಂಗಡ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ ಗುರುಗಳು ಕಾಂಗ್ರೆಸ್ ಸೇವಾದಳ ದಲ್ಲಿ ಆರು ವರ್ಷ ಸೇವೆ ಸಲ್ಲಿಸಿ ಸ್ವತಂತ್ರ ಹೋರಾಟದಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿದರು. ಗುರುಗಳ ವಿದ್ವತ್ತನ್ನು ಗಮನಿಸಿದ ಶ್ರೀಶೈಲ ಪೀಠದ ಜಗದ್ಗುರುಗಳು ಪೀಠಕ್ಕೆ ಕರೆತಂದು ಮಹಾಶಿವರಾತ್ರಿಯಂದು ಅಧಿಕಾರವನ್ನು ನೀಡಿದರು.

ಜಗದ್ಗುರು ಶ್ರೀ ವಾಗೀಶಪಂಡಿತಾರಾಧ್ಯ ಶಿವಾಚಾರ್ಯಸ್ವಾಮಿಗಳು ಪೀಠಾರೋಹಣ ಮಾಡಿದ ನಂತರ ಆಂಧ್ರ, ಕರ್ನಾಟಕ, ಮಹಾರಾಷ್ಟ್ರ ಹಾಗೂ ದೇಶದಾದ್ಯಂತ ಸಂಚರಿಸಿ ಭಕ್ತರ ಉದ್ಧಾರ ಹಾಗೂ ವೀರಶೈವ ಧರ್ಮದ ಪ್ರಚಾರ ವನ್ನು ಏಕಕಾಲದಲ್ಲಿ ಕೈಗೊಂಡರು. ತಮ್ಮ ಪ್ರಭಾವವನ್ನು ಬಳಸಿ ೧೯೫೬ರಲ್ಲಿ ಶ್ರೀಶೈಲಕ್ಕೆ ನೂತನ ರಸ್ತೆಯನ್ನು ಮಾಡಿಸುವ ಮೂಲಕ ಯಾತ್ರಿಕರಿಗೆ ಅನುಕೂಲ ಕಲ್ಪಿಸಿದರು. ಯಾತ್ರಾನಿವಾಸ ಹಾಗೂ ಅನ್ನದಾಸೋಹದ ವ್ಯವಸ್ಥೆಯನ್ನು ಕಲ್ಪಿಸಿದರು. ಗುರುಗಳ ಕಾಲದಲ್ಲಿ ಪೀಠವು ಶಿಕ್ಷಣ ಕ್ಷೇತ್ರಕ್ಕೂ ಪಾದಾರ್ಪಣೆ ಮಾಡಿತು. ಗುರುಗಳ ಪಟ್ಟಾಧಿಕಾರದ ಸುವರ್ಣಮಹೋತ್ಸವವು ಜಗದ್ಗುರುಗಳ ವ್ಯಕ್ತಿತ್ವಕ್ಕೆ ಅನುಗುಣವಾಗಿ ಅದ್ದೂರಿಯಾಗಿ ನಡೆಯಿತು.

ಜಗದ್ಗುರು ಶ್ರೀ ವಾಗೀಶಪಂಡಿತಾರಾಧ್ಯ ಶಿವಾಚಾರ್ಯಸ್ವಾಮಿಗಳು ತಮ್ಮ ಉತ್ತರಾಧಿಕಾರಿಗಳನ್ನಾಗಿ ಬಸವನ ಬಾಗೇವಾಡಿಯ ಶ್ರೀ ಉಮಾಪತಿದೇವರನ್ನು ನೇಮಿಸಿಕೊಂಡರು. ಅಲ್ಲದೆ ೧೯೮೧ರ ಫೆಬ್ರವರಿ ೧೬ರಂದು ರಂಭಾಪುರಿ, ಕಾಶಿ ಮತ್ತು ಉಜ್ಜಯಿನಿ ಜಗದ್ಗುರುಗಳ ದಿವ್ಯ ಸಮ್ಮುಖದಲ್ಲಿ ಪಟ್ಟಾಧಿಕಾರದ ಅನುಗ್ರಹವನ್ನು ನೀಡಿದರು. ಗುರುಗಳು ಸಾಹಿತ್ಯ, ಸಾಮಾಜಿಕ ಹಾಗೂ ಶಿಕ್ಷಣ ಕ್ಷೇತ್ರದಲ್ಲಿಯೂ ಅಪಾರ ಸಾಧನೆಗೈದು ೪೬ವರ್ಷಗಳ ಅಖಂಡ ಕಾಲ ಪೀಠವನ್ನು ಅಭಿವೃದ್ಧಿಪಡಿಸಿ ವಿವಾದಕ್ಕೆ ಒಳಗಾಗಿದ್ದ ಪೀಠವನ್ನು ಕಾನೂನುಬದ್ಧಗೊಳಿಸಿ ೧೯೮೬ರ ಸೆಪ್ಟೆಂಬರ್ ೧೫ರಂದು ಲಿಂಗೈಕ್ಯರಾದರು. ಇವರ ಗದ್ದುಗೆಯನ್ನು ದಾವಣಗೆರೆಯ ಪಂಚಾಚಾರ್ಯ ಮಂದಿರದಲ್ಲಿ ನಿರ್ಮಿಸಲಾಗಿದೆ.

ಹಿರಿತನದ ಸಾಧನೆ : ಜಗದ್ಗುರು ಶ್ರೀ ಉಮಾಪತಿಪಂಡಿತಾರಾಧ್ಯ ಶಿವಾಚಾರ್ಯಸ್ವಾಮಿಗಳು ಬಿಜಾಪುರ ಜಿಲ್ಲೆಯ ಬಸವನಬಾಗೇವಾಡಿಯ ಶ್ರೀ ಪಟ್ಟದ ಪದಮ್ಮರಾಜ ಒಡೆಯರ ಹೀರೆಮಠದ ಶ್ರೀ ಸಂಗಯ್ಯಸ್ವಾಮಿಗಳು ಮತ್ತು ಶ್ರೀಮತಿ ಶಿವಲಿಂಗಮ್ಮನವರ ಪುತ್ರರಾಗಿ ೧೯೪೯ರ ಅಕ್ಟೋಬರ್ ತಿಂಗಳಲ್ಲಿ ಜನಿಸಿದರು. ಗುರುಗಳು ಬಸವನ ಬಾಗೇವಾಡಿ, ಶಿವಯೋಗಮಂದಿರ, ಹುಬ್ಬಳ್ಳಿ ಶ್ರೀ ಮೂರುಸಾವಿರಮಠದಲ್ಲಿ ಶಿಕ್ಷಣವನ್ನು ಪಡೆದರು. ನಂತರ ಸ್ನಾತ ಕೋತ್ತರ ಅಧ್ಯಯನಕ್ಕಾಗಿ ಕಾಶಿಯಲ್ಲಿ ನೆಲೆಸಿ ಸಾಹಿತ್ಯಾಚಾರ್ಯ ಪದವಿ ಪಡೆದು ನಂತರ ಪ್ರಯಾಗ ವಿಶ್ವವಿದ್ಯಾಲಯ ದಲ್ಲಿ ಸಾಹಿತ್ಯರತ್ನ ಮುಗಿಸಿ ಕಾಶಿ ಹಿಂದೂ ವಿಶ್ವವಿದ್ಯಾಲಯದಲ್ಲಿ ಎಂ.ಎ. ಪದವಿಯನ್ನು ಪಡೆದು ವಿದ್ಯಾಭೂಷಣರಾ ದರು. ಗುರುಗಳು ಶ್ರೀಶೈಲ ಪೀಠದ ಅಧಿಕಾರ ದೊರೆತ ಮೇಲೆ ಹಿರಿಯ ಗುರುಗಳ ಕೃಪಾಶೀರ್ವಾದದೊಂದಿಗೆ ಇನ್ನೂ ಬಗೆಹರಿಯಬೇಕಾಗಿದ್ದ ಅನೇಕ ಗೊಂದಲಗಳನ್ನು ಬಗೆಹರಿಸಿ, ಪೀಠಕ್ಕೆ ಅಂಟಿಕೊಂಡಿದ್ದ ಗ್ರಹಣವನ್ನು ನಿವಾರಣೆ ಮಾಡಿ ದರು. ನಂತರ ಪೀಠವನ್ನು ಪೂರ್ಣಪ್ರಮಾಣದಲ್ಲಿ ಕಾನೂನುಬದ್ಧಗೊಳಿಸಿ ಪೀಠವನ್ನು ಅಭಿವೃದ್ಧಿ ಪಡಿಸತೊಡಗಿದರು.

ಅಭಿವೃದ್ಧಿ ಕಾರ್ಯಗಳು : ಜಗದ್ಗುರು ಶ್ರೀ ಉಮಾಪತಿಪಂಡಿತಾರಾಧ್ಯ ಶಿವಾಚಾರ್ಯಸ್ವಾಮಿಗಳು ಅಧಿಕಾರಕ್ಕೆ ಬಂದ ಮೇಲೆ ಜಗದ್ಗುರು ಶ್ರೀ ಪಂಡಿತಾರಾಧ್ಯ ಯಾತ್ರಿನಿವಾಸವನ್ನು ವಿಸ್ತರಿಸಿ ನವೀಕರಿಸಿದ್ದಾರೆ. ಶ್ರೀ ಶಿವಶಂಕರ ಯಾತ್ರಿನಿವಾಸ ಹಾಗೂ ನಿತ್ಯ ಅನ್ನದಾಸೋಹ ಮಂದಿರ, ಸುವರ್ಣಕಲಶ ಸ್ಥಾಪನೆ ಮತ್ತು ಧ್ವಜಸ್ತಂಭದ ಪ್ರತಿಷ್ಠಾಪನೆ, ಶ್ರೀ ಮಲ್ಲಿಕಾರ್ಜುನ ಹಾಗೂ ಭ್ರಮರಾಂಬ ದೇವಸ್ಥಾನದ ಬಾಹ್ಯ ಸೌಂದರ್ಯವನ್ನು ಹೆಚ್ಚಿಸುವುದಕ್ಕಾಗಿ ಮುಖ ಮಂಟಪ,

ಗೋಪುರದ ಮೇಲೆ ಪಂಚಸುವರ್ಣ ಕಲಶಗಳ ಸ್ಥಾಪನೆ ಮಾಡಲಾಗಿದೆ. ಪೀಠದ ವತಿಯಿಂದ ಶಿಖರೇಶ್ವರ ಬೆಟ್ಟದ ಮೇಲೆ ಬೆಳಕಿನ ಲಿಂಗ ಸ್ಥಾಪನೆ, ಶೈವ ಹಾಗೂ ವೀರಶೈವ ಸಿದ್ಧಾಂತಗಳ ಕುರಿತು ಅಧ್ಯಯನ ನಡೆಸುವುದಕ್ಕಾಗಿ ಶ್ರೀಶೈಲದ ತೆಲುಗು ವಿಶ್ವವಿದ್ಯಾ ನಿಲಯದಲ್ಲಿ ವೀರಶೈವ ವಿಚಾರ ಸಂಕಿರಣವನ್ನು ಏರ್ಪಡಿಸುವುದು ಇವೇ ಮುಂತಾದ ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿ ಕೊಂಡು ಪೀಠ ಮತ್ತು ವೀರಶೈವಧರ್ಮವನ್ನು ಅಭಿವೃದ್ಧಿಪಡಿಸಿದ್ದಾರೆ.

ಜಗದ್ಗುರು ಶ್ರೀ ವಾಗೀಶಪಂಡಿತಾರಾಧ್ಯಶಿವಾಚಾರ್ಯಸ್ವಾಮಿಗಳ ಗದ್ದುಗೆಗೆ (ದಾವಣಗೆರೆ) ೨೫ಲಕ್ಷ ರೂ.ಗಳಿಗೂ ಅಧಿಕ ವೆಚ್ಚದಿಂದ ಅಮೃತಶಿಲಾಮಯ ಮಂದಿರವನ್ನು ನಿರ್ಮಿಸಲಾಗಿದೆ. ಗದ್ದುಗೆ ಆವರಣದಲ್ಲಿ ಪ್ರಾರ್ಥನಾ ಮಂದಿರ ವನ್ನು ನಿರ್ಮಿಸಲಾಗಿದೆ. ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯ ಆದವಾನಿ ನಗರದಲ್ಲಿ ವೀರಶೈವ ಮಂಗಲ ಭವನ, ಕರ್ನೂಲು ಜಿಲ್ಲೆಯ ಆತ್ಮಕೂರಿನಲ್ಲಿ ಶ್ರೀಶೈಲ ಜಗದ್ಗುರು ಯಾತ್ರಾನಿವಾಸ, ಚಿತ್ರದುರ್ಗ ಜಿಲ್ಲೆಯ ಜಗಳೂರಿನಲ್ಲಿ ಪಂಚಾಚಾರ್ಯಮಂದಿರ, ಹಾಸನದಲ್ಲಿ ಪಂಚಾಚಾರ್ಯಮಂದಿರ, ತುಮಕೂರಿನಲ್ಲಿ ಮಂಗಲಭವನ, ಬಳ್ಳಾರಿ ಜಿಲ್ಲೆಯ ಶ್ರೀಧರಗಡ್ಡೆಯಲ್ಲಿ ಪಂಚಾಚಾರ್ಯ ಮಂಗಲಭವನ, ಹುಬ್ಬಳ್ಳಿಯಲ್ಲಿ ಪಂಚಾಚಾರ್ಯಪುಣ್ಯಾಶ್ರಮ, ಹಾವೇರಿ ಜಿಲ್ಲೆಯ ಗುತ್ತಲದಲ್ಲಿ ಜಗದ್ಗುರು ಪಂಚಾಚಾರ್ಯ ಮಂಗಲಕಾರ್ಯಾಲಯ, ಬಿಜಾಪುರ ಜಿಲ್ಲೆಯ ಬಸವನಬಾಗೇ ವಾಡಿಯಲ್ಲಿ ಗುರುಮಠ, ಆತ್ಮಕೂರಿನಲ್ಲಿ ಶ್ರೀಶೈಲ ಸೂರ್ಯಮಠ, ಗುಂತಕಲ್ ಸೂರ್ಯಮಠ ಈ ರೀತಿ ಪೀಠದ ವತಿಯಿಂದ ಅನೇಕ ಅಭಿವೃದ್ಧಿಕಾರ್ಯಗಳನ್ನು ಮಾಡಲಾಗಿದೆ.

ಧಾರ್ಮಿಕ ಕಾರ್ಯಗಳು : ವೀರಶೈವ ಧರ್ಮದ ಪುರಾತನ ಪೀಠಗಳಲ್ಲಿ ಒಂದಾದ ಶ್ರೀಶೈಲ ಪೀಠವು ಧರ್ಮ ಪ್ರಚಾರವನ್ನು ಮೂಲ ಉದ್ದೇಶವನ್ನಾಗಿಟ್ಟುಕೊಂಡು ವೀರಶೈವ ಧರ್ಮವನ್ನು ಪ್ರಚಾರಪಡಿಸುತ್ತಿದೆ. ದೇಶದಾದ್ಯಂತ ನೂರಾರು ಶಾಖಾಮಠಗಳನ್ನು ಹೊಂದಿದ್ದು, ಈ ಶಾಖಾಮಠಗಳಿಗೆ ಮಾರ್ಗದರ್ಶನ ಮಾಡುವ ಮೂಲಕ ವರ್ಷ ಕ್ಕೊಮ್ಮೆ ದೇಶದ ವಿವಿಧ ಭಾಗಗಳಲ್ಲಿ ದಸರಾ ದರ್ಬಾರನ್ನು ಮಾಡುವ ಮೂಲಕ ಜಗದ್ಗುರುಗಳು ಭಕ್ತರಿಗೆ ದರ್ಶನ ನೀಡಿ ಧರ್ಮೋಪದೇಶ ಮಾಡುತ್ತಾರೆ. ಶಿವರಾತ್ರಿಯಂದು ಪೀಠದಲ್ಲಿ ವಿಶೇಷಪೂಜೆ ನಡೆಸಲಾಗುತ್ತಿದೆ. ಅದೇ ರೀತಿ ಶ್ರಾವಣಮಾಸದಲ್ಲಿಯೂ ಸಹ ವಿಶೇಷ ಪೂಜೆಯನ್ನು ನಡೆಸಲಾಗುತ್ತಿದೆ. ಜಗದ್ಗುರುಗಳು ತಮ್ಮ ಪೀಠಾರೋಹಣದ ದಶಮಾನೋತ್ಸವದ ಅಂಗವಾಗಿ ಅನೇಕ ಪಟ್ಟಣ ಮತ್ತು ನಗರಪ್ರದೇಶಗಳಲ್ಲಿ ಕಾರ್ಯಕ್ರಮಗಳ ಮೂಲಕ ಧರ್ಮೋಪ ದೇಶ ನೀಡಿದ್ದಾರೆ. ಸನ್ನಿಧಿಯವರು ಅನುಷ್ಠಾನ, ಧರ್ಮಜಾಗೃತಿ ಸಭೆ, ಸರ್ವಧರ್ಮ ಸಮ್ಮೇಳನ ಮುಂತಾದ ಕಾರ್ಯಕ್ರಮಗಳ ಮೂಲಕ ಧರ್ಮಜಾಗೃತಿಯನ್ನು ಉಂಟುಮಾಡಿದ್ದಾರೆ.

ಶೈಕ್ಷಣಿಕ ಸೇವೆ : ಧಾರ್ಮಿಕ ಕ್ಷೇತ್ರಕ್ಕಷ್ಟೇ ಸೀಮಿತಗೊಂಡಿದ್ದ ಪೀಠದ ಕಾರ್ಯಚಟುವಟಿಕೆಗಳು ಜಗದ್ಗುರು ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯಸ್ವಾಮಿಗಳ ಕಾಲದಲ್ಲಿ ಶಿಕ್ಷಣಕ್ಷೇತ್ರಕ್ಕೂ ಪಾದಾರ್ಪಣೆ ಮಾಡಿತು. ಆಂಧ್ರ, ಕರ್ನಾಟಕ, ಮಹಾರಾಷ್ಟ್ರಗಳಲ್ಲಿ ಶಾಲಾ ಕಾಲೇಜು, ತಾಂತ್ರಿಕ ತರಬೇತಿ ಕೇಂದ್ರಗಳು, ವಿದ್ಯಾರ್ಥಿವಸತಿಗೃಹಗಳು ಸ್ಥಾಪನೆ ಗೊಂಡಿವೆ. ಅವುಗಳಲ್ಲಿ ಮುಖ್ಯವಾದವುಗಳನ್ನು ಈ ಕೆಳಗೆ ಹೆಸರಿಸಲಾಗಿದೆ.

೧. ಅನಂತಪುರಂ ಜಿಲ್ಲೆಯ ಗುಂತಕಲ್‌ನಲ್ಲಿ ಜಗದ್ಗುರು ಶ್ರೀ ಪಂಡಿತಾರಾಧ್ಯ ಪದವಿಪೂರ್ವ ಕಾಲೇಜು.
೨. ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪದಲ್ಲಿ ಜಗದ್ಗುರು ಶ್ರೀ ಪಂಚಾಚಾರ್ಯ ತಾಂತ್ರಿಕ ಮಹಾವಿದ್ಯಾಲಯ.
೩. ಶಿವಮೊಗ್ಗ ಜಿಲ್ಲೆಯ ಸಂತೆಬೆನ್ನೂರಿನಲ್ಲಿ ಜಗದ್ಗುರು ಶ್ರೀ ವಾಗೀಶ ಪಂಡಿತಾರಾಧ್ಯ ಪದವಿಪೂರ್ವ ಕಾಲೇಜು.
೪. ದಾವಣಗೆರೆಯಲ್ಲಿ ಆಂಗ್ಲ ಮಾಧ್ಯಮ ಶಾಲೆ.
೫. ದಾವಣಗೆರೆಯಲ್ಲಿ ಕಲೆ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು.
೬. ಹರಿಹರದಲ್ಲಿ ಆಂಗ್ಲ ಭಾಷಾ ಮಾಧ್ಯಮ ಶಾಲೆ.
೭. ಹರಿಹರದಲ್ಲಿ ಕಲೆ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು.
೮. ಹರಿಹರದಲ್ಲಿ ಶಿಕ್ಷಣ ತರಬೇತಿ ಕಾಲೇಜು.

೯. ಹರಿಹರದಲ್ಲಿ ಪ್ರೌಢಶಾಲೆ.

೧೦. ಹರಿಹರದಲ್ಲಿ ಈಶ್ವರಿ ಪ್ರಾಥಮಿಕ ಶಾಲೆ.

ಈ ರೀತಿ ಅನೇಕ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಶೈಕ್ಷಣಿಕ ಸೇವೆಯನ್ನು ಸಲ್ಲಿಸಲಾಗುತ್ತಿದೆ. ಈಗಿನ ಜಗದ್ಗುರುಗಳಾದ ಶ್ರೀ ಉಮಾಪತಿಪಂಡಿತಾರಾಧ್ಯ ಶಿವಾಚಾರ್ಯಸ್ವಾಮಿಗಳು ಶಿಕ್ಷಣಪ್ರೇಮಿಗಳಾಗಿ, ಪೀಠವು ಶಿಕ್ಷಣ ಕ್ಷೇತ್ರದಲ್ಲಿ ವಿಸ್ತಾರಗೊಳ್ಳುವ ಹಲವು ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ.

ಸಾಹಿತ್ಯ ಕ್ಷೇತ್ರ: ಶ್ರೀಶೈಲ ಪೀಠದ ಪರಂಪರೆಯ ಜಗದ್ಗುರು ಶ್ರೀ ಶ್ರೀಪತಿಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ಜಗದ್ಗುರು ಶ್ರೀ ಮಂಚಣಪಂಡಿತಾರಾಧ್ಯ ಶಿವಾಚಾರ್ಯಸ್ವಾಮಿಗಳು, ಜಗದ್ಗುರು ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯಶಿವಾಚಾರ್ಯಸ್ವಾಮಿಗಳು ಸಾಹಿತ್ಯ ಕ್ಷೇತ್ರದಲ್ಲಿ ಹೆಸರುಗಳಿಸಿದ್ದನ್ನು ಈಗಾಗಲೇ ಉಲ್ಲೇಖಿಸಲಾಗಿದೆ. ಜಗದ್ಗುರು ಶ್ರೀ ವಾಗೀಶಪಂಡಿತಾರಾಧ್ಯಶಿವಾಚಾರ್ಯಸ್ವಾಮಿಗಳು ಸಹ ಅನೇಕ ಕನ್ನಡ ಮತ್ತು ಸಂಸ್ಕೃತ ಕೃತಿಗಳನ್ನು ಪ್ರಕಟಿಸಿದ್ದರು. "ಲೋಕೋದ್ಧಾರಕ ಬಸವಣ್ಣ" ಎಂಬ ಕೃತಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಈಗಿನ ಜಗದ್ಗುರು ಶ್ರೀ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯಸ್ವಾಮಿಗಳು ಸ್ವತಃ ಸಾಹಿತಿಗಳಾಗಿದ್ದು ಸುವಿಚಾರಗುಚ್ಛ, ಯೋಗಕನ್ನಡಿ, ವಚನ ಲಹರಿ, ಅಷ್ಟಾವರಣ ಮಹಿಮೆ ಇನ್ನು ಮುಂತಾದ ಅನೇಕ ಕೃತಿಗಳನ್ನು ರಚಿಸಿ ಪ್ರಕಟಿಸಿದ್ದಾರೆ. ಪೀಠದ ವತಿಯಿಂದ ಅನೇಕ ಮೌಲಿಕ ಕೃತಿಗಳು ಪ್ರಕಟವಾಗಲು ನೆರವು ನೀಡಲಾಗಿದೆ. ಈ ರೀತಿ ಸಾಹಿತ್ಯ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರದಲ್ಲಿ ಪೀಠವು ಸಾಧನೆಗೈದಿರುವುದು ಉಲ್ಲೇಖಾರ್ಹವಾಗಿದೆ.

ವಿಳಾಸ: ಶ್ರೀಮದ್ಗಿರಿರಾಜ ಸೂರ್ಯ ಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಶ್ರೀಶೈಲ ಜಗದ್ಗುರು ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು, ಶ್ರೀ ಜಗದ್ಗುರು ಶ್ರೀಶೈಲ ಸೂರ್ಯ ಸಿಂಹಾಸನ ಮಹಾಪೀಠ ಶ್ರೀಶೈಲಂ, ಕರ್ನೂಲು ಜಿಲ್ಲೆ, ಆಂಧ್ರಪ್ರದೇಶ.

ಆಧಾರ: ವೀರಶೈವ ಪಂಚಪೀಠ ಪರಂಪರೆ, ಲೇಖಕರು : ಶ್ರೀ ಷ.ಬ್ರ.ಡಾ॥ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು. ಗುರುಕಾರುಣ್ಯ, ಸಂಪಾದಕರು : ಡಾ॥ ಪಂಚಾಕ್ಷರಿ ಹಿರೇಮಠ,

❑

ಶ್ರೀಮದ್ ಜ್ಞಾನಸಿಂಹಾಸನ ಕಾಶಿಪೀಠ (ಜಂಗಮವಾಡಿ ಮಠ)

ಭಾರತದ ಪುಣ್ಯಕ್ಷೇತ್ರಗಳಲ್ಲಿ ಒಂದಾದ ಕಾಶಿಯು ಪ್ರಸಿದ್ಧ ಧರ್ಮಕ್ಷೇತ್ರವಾಗಿದೆ. ಪುರಾಣ ಹಾಗೂ ಇತಿಹಾಸ ಪ್ರಸಿದ್ಧ ಕಾಶಿ ಕ್ಷೇತ್ರವು ಉತ್ತರ ಪ್ರದೇಶದ ಈಶಾನ್ಯ ಭಾಗದಲ್ಲಿ ಸ್ಥಾಪನೆಯಾಗಿದೆ. ಕಾಶಿಯಲ್ಲಿ ಭಾರತದ ಎಲ್ಲಾ ಧರ್ಮದ, ಎಲ್ಲಾ ಭಾಷೆಯ, ಎಲ್ಲಾ ಪ್ರದೇಶದ ಜನರು ಬಹುಕಾಲದಿಂದ ವಾಸಮಾಡುತ್ತ ಬಂದಿರುವುದೊಂದು ವಿಶೇಷ ವಾಗಿದ್ದು, ಸಮಸ್ತ ಭಾರತವನ್ನು ಕಾಶಿಯಲ್ಲಿ ಕಾಣಬಹುದಾಗಿದೆ. ಕಾಶಿಯಲ್ಲಿ ವಿಭಿನ್ನ ಸಂಪ್ರದಾಯದ ೩೦೦ ಮಠ ಗಳು, ೧೫೫೦ ದೇವಸ್ಥಾನಗಳು ಇವೆ. ೧೯೬೧ರ ಜನಗಣತಿಯ ಪ್ರಕಾರ ೨೪೦ಜನರಿಗೆ ಒಬ್ಬ ಸಂನ್ಯಾಸಿಯು ನೆಲೆಸಿ ದ್ದಾರೆ ಎಂಬುದು ವ್ಯಕ್ತವಾಗಿದೆ. ಈ ೩೦೦ ಮಠಗಳಲ್ಲಿ ಶ್ರೀ ಜಂಗಮವಾಡಿ ಮಠವೇ ಅತ್ಯಂತ ಪ್ರಾಚೀನವಾದುದ್ದೆಂದು ದಾಖಲೆಗಳಿಂದ ಲಭ್ಯವಾಗಿದೆ.

ಪುರಾಣ ಹಾಗೂ ಶಿವಾಗಮಗಳ ಆಧಾರ : ಶಿವನ ಅಪ್ಪಣೆಯ ಮೇರೆಗೆ ಭೂಲೋಕದಲ್ಲಿ ವೀರಶೈವ ಧರ್ಮವನ್ನು ಸಂಸ್ಥಾಪಿಸುವ ಉದ್ದೇಶದಿಂದ, ಶಿವನ ಪಂಚಗಣರಲ್ಲಿ ಒಬ್ಬರಾದ ಶ್ರೀ ವಿಶ್ವಾರಾಧ್ಯರು ಕಾಶಿ ಮಹಾಕ್ಷೇತ್ರದ ವಿಶ್ವನಾಥ ಜ್ಯೋತಿರ್ಲಿಂಗ ದಲ್ಲಿ ಮಹಾಶಿವರಾತ್ರಿಯ ಪರ್ವ ಕಾಲದಲ್ಲಿ ಅವತರಿಸಿದರು. ಈ ವಿಶ್ವಾರಾಧ್ಯರೇ ಪ್ರತಿಯೊಂದು ಯುಗದಲ್ಲಿ ಭಿನ್ನ ಭಿನ್ನವಾದ ಹೆಸರಿನಲ್ಲಿ ಅವತರಿಸಿದ ವಿಷಯವು ಶಿವಾಗಮಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ. ಇವರು ಕೃತಯುಗದಲ್ಲಿ ಜಗದ್ಗುರು ಶ್ರೀ ಪಂಚಾಕ್ಷರಶಿವಾಚಾರ್ಯರೆಂದು, ತ್ರೇತಾಯುಗದಲ್ಲಿ ಜಗದ್ಗುರು ಶ್ರೀ ಪಂಚವಕ್ತ್ರ ಶಿವಾಚಾರ್ಯರೆಂದು, ದ್ವಾಪರಯುಗದಲ್ಲಿ ಜಗದ್ಗುರು ಶ್ರೀ ವಿಶ್ವಕರ್ಣ ಶಿವಾಚಾರ್ಯರೆಂದು ಅವತರಿಸಿದರು. ದ್ವಾಪರಯುಗದ ಆಚಾರ್ಯ ರಾದ ಜಗದ್ಗುರು ಶ್ರೀ ವಿಶ್ವಕರ್ಣ ಶಿವಾಚಾರ್ಯ ಭಗವತ್ಪಾದರು ಕ್ರೋಧದ ಅವತಾರಿಯಾದ ದೂರ್ವಾಸ ಮಹರ್ಷಿಗೆ ಶಿವಾದ್ವೈತ ಸಿದ್ಧಾಂತವನ್ನು ಬೋಧಿಸಿ ಅವರ ಕ್ರೋಧವನ್ನು ಕಳೆದು ಅವರನ್ನು ಶಿವಾದ್ವೈತ ಜ್ಞಾನಿಗಳನ್ನಾಗಿ ಪರಿವರ್ತಿ ಸಿದರು. ಅಂದು ದೂರ್ವಾಸ ಮಹರ್ಷಿಗಳಿಗೆ ಉಪದೇಶಿಸಿದ ಉಪದೇಶವೆ "ಪಂಚವರ್ಣ ಮಹಾಸೂತ್ರ" ಈ ಪಂಚ ವರ್ಣ ಮಹಾಸೂತ್ರಕ್ಕೆ ಬರೆದ ಭಾಷ್ಯಾಗ್ರಂಥವು ತಾಡೋಲೆ ಪ್ರತಿಯಲ್ಲಿ ಈಗ ದೊರೆತಿದ್ದು ಅದು ಕಾಶಿ ಪೀಠದಿಂದ ಪ್ರಕಟಣೆಗೊಳ್ಳಲಿದೆ.

ಜ್ಞಾನಪೀಠದಲ್ಲಿ ಶಿವನೇ ಜಂಗಮನಾಗಿ ಬಂದು ನೆಲೆಸಿದ ಕಾರಣ ಒಂದಾದರೆ, ಪೀಠದ ಸುತ್ತಮುತ್ತ ಜಂಗಮರು ವಾಸಿಸುತ್ತಿದ್ದ ಕಾರಣ ಈ ಪ್ರಾಂತ್ಯಕ್ಕೆ ಜಂಗಮವಾಡಿ ಎಂದೂ ಪೀಠಕ್ಕೆ ಜಂಗಮವಾಡಿಮಠ ಎಂಬ ಹೆಸರು ರೂಢಿಗತವಾಗಿ ಬಂದಿದೆ.

ರಾಜ ಮನೆತನಗಳು ನೀಡಿದ ಗೌರವ : ಕಾಶಿಯಲ್ಲಿರುವ ಜ್ಞಾನಸಿಂಹಾಸನ ಪೀಠವಾದ ಜಂಗಮವಾಡಿ ಮಠವು ಕ್ರಿ.ಶ. ೬ನೆಯ ಶತಮಾನಕ್ಕಿಂತಲೂ ಪೂರ್ವದಲ್ಲಿ ಅಸ್ತಿತ್ವದಲ್ಲಿತ್ತು ಎಂದು, "ಸ್ವತಂತ್ರ ಭಾರತ" ಎಂಬ ವಾರಣಾಸಿಯ ಹಿಂದಿ ದಿನಪತ್ರಿಕೆಯಲ್ಲಿ ಪ್ರಕಟವಾದ ಸಂಶೋಧನಾ ಲೇಖನವು ಅಭಿಪ್ರಾಯಿಸಿದೆ. ಅಲ್ಲದೆ ಅನೇಕ ಪುರಾಣ ಗ್ರಂಥಗಳಿಂದಲೂ ಸಹ ಕಾಶಿಪೀಠದ ಪರಂಪರೆಯ ಬಗ್ಗೆ ತಿಳಿಯಬಹುದಾಗಿದೆ.

ಕಾಶಿ ಜಂಗಮವಾಡಿಮಠಕ್ಕೆ ಬಹು ಪ್ರಾಚೀನ ಶಾಸನಗಳು ದೊರೆತಿವೆ. ಕ್ರಿ.ಶ.೬೩೧ರಲ್ಲಿ ಕಾಶಿ ಪ್ರಾಂತ್ಯವನ್ನು ಆಳುತ್ತಿದ್ದ ನರೇಶಜಯನಂದನು ಶಾಸನಗಳನ್ನು ಬರೆಸಿ ಭೂದಾನ ಹಾಗೂ ದತ್ತಿಯನ್ನು ನೀಡಿರುವುದು ತಿಳಿದು ಬರುತ್ತದೆ. ನೇಪಾಳದ ಮಲ್ಲದೊರೆಗಳೀರ್ವರಾದ ವಿಶ್ವಮಲ್ಲ ಹಾಗೂ ಜಯರುದ್ರಮಲ್ಲರಸರು ಈ ಮಠಕ್ಕೆ ಭೂದಾನ ಮಾಡಿದ ಬಗ್ಗೆ ಎರಡು ಸಂಸ್ಕೃತ ಶಿಲಾಶಾಸನಗಳು ಪೀಠದಲ್ಲಿ ಲಭ್ಯವಿವೆ. ಈ ಶಾಸನಗಳನ್ನು ಕ್ರಿ.ಶ.೭೭೦ರ ಸುಮಾರಿನಲ್ಲಿ ಬರೆಸಿರಬಹುದೆಂದು ಅಂದಾಜಿಸಲಾಗಿದೆ. ರಾಜಾಶ್ರಯದಿಂದ ಬೆಳೆದ ಈ ಮಠವು ಸುಮಾರು ೧೪೦೦ ಎಕರೆಗಳಷ್ಟು ವಿಸ್ತಾರವುಳ್ಳ ಭೂಮಿಯನ್ನು ಹೊಂದಿತ್ತು. ಕಾಲಕ್ರಮೇಣ ಭರತಖಂಡವು ಮುಸ್ಲಿಂ ದೊರೆಗಳ ಆಳ್ವಿಕೆಗೆ ಒಳಗಾದಾಗ, ಈ ಮಠದ ಪ್ರಭಾವವನ್ನು ಅರಿತು ಮುಸ್ಲಿಂ ದೊರೆಗಳಾದ ಶಹಜಾನ್, ಜಹಾಂಗೀರ್, ಔರಂಗಜೇಬ್,

ಅಕ್ಬರ್ ಮೊದಲಾದವರು ಕಾಶಿ ಪೀಠಕ್ಕೆ ದಾನ, ದತ್ತಿಯನ್ನು ನೀಡಿ ಶಾಸನಗಳನ್ನು ಬರೆಸಿ ಕೊಟ್ಟಿರುವುದು ಮಠದಲ್ಲಿ ಲಭ್ಯವಿದೆ. ಕರ್ನಾಟಕದ ಕೆಳದಿ, ಕೊಡಗು ಹಾಗೂ ಮೈಸೂರಿನ ಅರಸರೂ ಸಹ ಜಂಗಮವಾಡಿ ಮಠದ ಪ್ರಭಾವಕ್ಕೆ ಒಳಗಾಗಿ ಅನೇಕ ದಾನ, ದತ್ತಿಯನ್ನು ನೀಡಿದ ಉಲ್ಲೇಖಗಳು ದೊರೆಯುತ್ತಿವೆ.

ಪರಂಪರೆ : ಜಗದ್ಗುರು ಶ್ರೀ ಪಂಚಾಕ್ಷರ ಶಿವಾಚಾರ್ಯ ಭಗವತ್ಪಾದರು (ಕೃತಯುಗ)
ಜಗದ್ಗುರು ಶ್ರೀ ಪಂಚವಕ್ತ್ರ ಶಿವಾಚಾರ್ಯ ಭಗವತ್ಪಾದರು (ತ್ರೇತಾಯುಗ)
ಜಗದ್ಗುರು ಶ್ರೀ ವಿಶ್ವಕರ್ಣ ಶಿವಾಚಾರ್ಯ ಭಗವತ್ಪಾದರು (ದ್ವಾಪರಯುಗ)
ಜಗದ್ಗುರು ಶ್ರೀ ವಿಶ್ವಾರಾಧ್ಯ ಶಿವಾಚಾರ್ಯ ಭಗವತ್ಪಾದರು (ಕಲಿಯುಗ)

೧. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೨೦೦೧-೧೬೯೦)
೨. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೧೬೯೦-೧೫೭೬)
೩. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೧೫೭೬-೧೫೦೧)
೪. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೧೫೦೧-೧೪೦೦)
೫. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೧೪೦೦-೧೨೭೫)
೬. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೧೨೭೫-೧೧೯೫)
೭. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೧೧೯೫-೧೧೩೧)
೮. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೧೧೩೧-೧೦೭೬)
೯. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೧೦೭೬-೧೦೧೯)
೧೦. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೧೦೧೯-೯೫೬)
೧೧. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೯೫೬-೮೮೧)
೧೨. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೮೮೧-೮೪೭)
೧೩. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೮೪೭-೮೦೨)
೧೪. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೮೦೨-೭೬೫)
೧೫. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೭೬೫-೬೯೯)
೧೬. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೬೯೯-೬೬೮)
೧೭. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೬೬೮-೬೪೩)
೧೮. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೬೪೩-೬೨೬)
೧೯. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೬೨೬-೬೧೧)
೨೦. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೬೧೧-೫೯೦)
೨೧. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೫೯೦-೫೧೩)
೨೨. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೫೧೩-೪೭೮)
೨೩. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೪೭೮-೪೩೮)
೨೪. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೪೩೮-೩೯೩)
೨೫. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೩೯೩-೩೪೨)
೨೬. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೩೪೨-೩೧೪)
೨೭. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೩೧೪-೩೦೦)
೨೮. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೩೦೦-೨೩೩)

೨೯. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೨೩೩-೨೧೪)
೩೦. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೨೧೪-೧೯೦)
೩೧. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೧೯೦-೧೬೮)
೩೨. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೧೬೮-೧೧೬)
೩೩. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೧೧೬-೭೮)
೩೪. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೭೮-೩೬)
೩೫. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೩೬-೨೭)
೩೬. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೨-ಕ್ರಿ.ಶ.೫)
೩೭. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೫-೪೯)
೩೮. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೪೯-೮೧)
೩೯. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೮೧-೧೦೫)
೪೦. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೧೦೫-೧೩೧)
೪೧. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೧೩೧-೧೫೫)
೪೨. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೧೫೫-೨೧೪)
೪೩. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೨೧೪-೨೨೮)
೪೪. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೨೨೮-೨೮೫)
೪೫. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೨೮೫-೩೫೪)
೪೬. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೩೫೪-೪೧೭)
೪೭. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೪೧೭-೪೩೮)
೪೮. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೪೩೮-೪೪೯)
೪೯. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೪೪೯-೫೨೧)
೫೦. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೫೨೧-೫೫೩)
೫೧. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೫೫೩-೬೭೪)
೫೨. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೬೭೪-೭೫೯)
೫೩. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೭೫೯-೭೯೩)
೫೪. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೭೯೩-೮೨೯)
೫೫. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೮೨೯-೮೮೨)
೫೬. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೮೮೨-೯೪೦)
೫೭. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೯೪೦-೯೯೬)
೫೮. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೯೯೬-೧೦೦೯)
೫೯. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೧೦೦೯-೧೦೫೭)
೬೦. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೧೦೫೭-೧೧೦೩)
೬೧. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೧೧೦೩-೧೧೨೨)
೬೨. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೧೧೨೨-೧೧೮೭)
೬೩. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೧೧೮೭-೧೨೦೧)

೬೪. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೧೨೦೧-೧೨೭೫)
೬೫. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೧೨೭೫-೧೩೪೭)
೬೬. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೧೩೪೭-೧೩೫೬)
೬೭. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೧೩೫೬-೧೪೨೯)
೬೮. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೧೪೨೯-೧೪೪೨)
೬೯. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೧೪೪೨-೧೪೬೦)
೭೦. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೧೪೬೦-೧೫೨೭)
೭೧. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೧೫೨೭-೧೫೪೭)
೭೨. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೧೫೪೨-೧೫೮೩)
೭೩. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೧೫೮೩-೧೬೩೧)
೭೪. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೧೬೩೧-೧೬೩೯)
೭೫. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೧೬೩೯-೧೬೬೩)
೭೬. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಶ.೧೬೬೩-೧೭೧೦)
೭೭. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು (ಕ್ರಿ.ಪೂ.೧೭೧೦-೧೭೫೦)
೭೮. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು
ಉರ್ಫ್ ಜಗದ್ಗುರು ಶ್ರೀ ಶಿವಲಿಂಗ ಶಿವಾಚಾರ್ಯರು (ಕ್ರಿ.ಶ.೧೭೫೦-೧೮೨೫)
೭೯. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು
ಉರ್ಫ್ ಜಗದ್ಗುರು ಶ್ರೀ ಹರೇಶ್ವರ ಶಿವಾಚಾರ್ಯರು (ಕ್ರಿ.ಶ.೧೮೨೫-೧೮೭೯)
೮೦. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು
ಉರ್ಫ್ ಜಗದ್ಗುರು ಶ್ರೀ ವೀರಭದ್ರ ಶಿವಾಚಾರ್ಯರು (ಕ್ರಿ.ಶ.೧೮೭೯-೧೮೯೧)
೮೧. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು
ಉರ್ಫ್ ಜಗದ್ಗುರು ಶ್ರೀ ರಾಜೇಶ್ವರ ಶಿವಾಚಾರ್ಯರು (ಕ್ರಿ.ಶ.೧೮೯೧-೧೯೦೭)
೮೨. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು
ಉರ್ಫ್ ಜಗದ್ಗುರು ಶ್ರೀ ಶಿವಲಿಂಗ ಶಿವಾಚಾರ್ಯರು (ಕ್ರಿ.ಶ.೧೯೦೭-೧೯೩೨)
೮೩. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು
ಉರ್ಫ್ ಜಗದ್ಗುರು ಶ್ರೀ ಪಂಚಾಕ್ಷರ ಶಿವಾಚಾರ್ಯರು (ಕ್ರಿ.ಶ.೧೯೩೨-೧೯೪೪)
೮೪. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು
ಉರ್ಫ್ ಜಗದ್ಗುರು ಶ್ರೀ ವೀರಭದ್ರ ಶಿವಾಚಾರ್ಯರು (ಕ್ರಿ.ಶ.೧೯೪೪-೧೯೪೮)
೮೫. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು
ಉರ್ಫ್ ಜಗದ್ಗುರು ಶ್ರೀ ವಿಶ್ವೇಶ್ವರ ಶಿವಾಚಾರ್ಯರು (ಕ್ರಿ.ಶ.೧೯೪೮-೧೯೮೯)
೮೬. ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು
ಉರ್ಫ್ ಜಗದ್ಗುರು ಶ್ರೀ ಡಾ॥ ಚಂದ್ರಶೇಖರ ಶಿವಾಚಾರ್ಯರು (ಕ್ರಿ.ಶ.೧೯೮೯-)

ಈ ರೀತಿ ಪೀಠದ ಪರಂಪರೆಯ ಜಗದ್ಗುರುಗಳ ಹೆಸರುಗಳನ್ನು ದಾಖಲಿಸಬಹುದಾಗಿದೆ. ಕಲಿಯುಗದಲ್ಲಿ ಅವತರಿಸಿದ ಜಗದ್ಗುರು ಶ್ರೀ ವಿಶ್ವಾರಾಧ್ಯರು ಅನೇಕ ಪವಾಡಗಳನ್ನು ಮಾಡಿ ಭಾರತದಾದ್ಯಂತ ಸಂಚರಿಸಿ ವೀರಶೈವ ಧರ್ಮದ ತತ್ತ್ವಗಳನ್ನು ಉಪದೇಶಿಸಿದರು. ಇವರ ನಂತರ ಜಗದ್ಗುರು ಶ್ರೀ ಮಲ್ಲಿಕಾರ್ಜುನಶಿವಾಚಾರ್ಯರೆಂಬ ಗುರುಗಳು

ಜ್ಞಾನಪೀಠದ ಅಧಿಕಾರವನ್ನು ವಹಿಸಿಕೊಂಡು ಪೀಠವನ್ನು ಅಭಿವೃದ್ಧಿಪಡಿಸಿದರು. ಇವರ ನಂತರ ಪೀಠದ ಪರಂಪರೆಯ ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳೆಂಬ ಅಭಿಧಾನವನ್ನು ಪಡೆದು ಅಧಿಕಾರ ನಡೆಸಿರುವುದು ಪೀಠದ ದಾಖಲೆಗಳಿಂದ ತಿಳಿದುಬರುತ್ತದೆ.

ಕ್ರಿ.ಪೂ.೨೦೪೦ರ ಸುಮಾರಿನಲ್ಲಿ ಪೀಠಾಧಿಕಾರಿಗಳಾಗಿದ್ದ ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮಿಗಳು ಮಹಾ ತಪಸ್ವಿಗಳಾಗಿ, ಶಿವಯೋಗದ ಬಲದಿಂದ ೩೧೧ ವರ್ಷಗಳ ಕಾಲ ಬದುಕಿ ಜೀವಂತ ಸಮಾಧಿಯಾದರು. ಇವರ ಗದ್ದುಗೆಯು ಜಂಗಮವಾಡಿ ಮಠದಲ್ಲಿ ಮುಖ್ಯ ಗದ್ದುಗೆಯಾಗಿ ಪೂಜನೀಯವಾಗಿದೆ. ಇವರ ತರುವಾಯ ೭೭ ಜನ ಗುರುಗಳು ಜಗದ್ಗುರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರೆಂದೇ ಅಭಿಧಾನ ಪಡೆದು ಅಧಿಕಾರಕ್ಕೆ ಬಂದಿದ್ದಾರೆ. ೧೭೫೦ರಲ್ಲಿ ಅಧಿಕಾರಕ್ಕೆ ಬಂದ ಶ್ರೀ ಶಿವಲಿಂಗ ಶಿವಾಚಾರ್ಯರು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರ ಹೆಸರನ್ನೇ ಅಭಿಧಾನ ಪಡೆದು ಜ್ಞಾನಪೀಠಾರೋಹಣ ಮಾಡಿದರಾದರೂ, ಪೀಠದ ಇತಿಹಾಸದಲ್ಲಿ ಗುರುಗಳ ಹೆಸರುಗಳನ್ನು ದಾಖಲೆಗೆ ತರುವಲ್ಲಿ ಹಾಗೂ ಆಯಾ ಗುರುಗಳು ಮಾಡಿದ ಸಾಧನೆಯನ್ನು ದಾಖಲಿಸುವಲ್ಲಿ ಗೊಂದಲವಾಗಬಾರದೆಂಬ ಕಾರಣದಿಂದ ಜಗದ್ಗುರು ಶ್ರೀ ಶಿವಲಿಂಗ ಶಿವಾಚಾರ್ಯರೆಂಬ ಹೆಸರಿನಿಂದ ಗುರುತಿಸಲ್ಪಟ್ಟರು. ಇವರ ನಂತರ ಜಗದ್ಗುರು ಶ್ರೀ ಹರೀಶ್ವರ ಶಿವಾಚಾರ್ಯಸ್ವಾಮಿಗಳು ಅಧಿಕಾರವನ್ನು ನಡೆಸಿ ಪೀಠವನ್ನು ಅಭಿವೃದ್ಧಿಪಡಿಸಿದರು.

ಕ್ರಿ.ಶ.೧೮೭೭ರಂದು ಪೀಠದ ಅಧಿಕಾರವನ್ನು ವಹಿಸಿಕೊಂಡ ಜಗದ್ಗುರು ಶ್ರೀ ವೀರಭದ್ರ ಶಿವಾಚಾರ್ಯಸ್ವಾಮಿಗಳು ತಮ್ಮ ಕಾಯಕಯೋಗದಿಂದ ಪೀಠವನ್ನು ಉನ್ನತಸ್ಥಿತಿಗೆ ಕೊಂಡೊಯ್ದರು. ಇವರು ಪೀಠದಲ್ಲಿ ಪ್ರಸಾದದ ವ್ಯವಸ್ಥೆ ಮತ್ತು ವೇದಾಧ್ಯಯನಕ್ಕಾಗಿ ಬಂದ ವಿದ್ಯಾರ್ಥಿಗಳಿಗೆ ವಸತಿ ವ್ಯವಸ್ಥೆಯನ್ನು ಕಲ್ಪಿಸಿದರು. ಇವರು ೧೮೯೧ರಲ್ಲಿ ಲಿಂಗೈಕ್ಯರಾದರು. ಇವರ ನಂತರ ಆಂಧ್ರಪ್ರದೇಶದ ರಾಜಮಹೇಂದ್ರ ಭಾಗದಲ್ಲಿ ಮಠಾಧೀಶರಾಗಿದ್ದ ಶ್ರೀ ರಾಜೇಶ್ವರ ಸ್ವಾಮಿಗಳು ವೇದಾಧ್ಯಯನಕ್ಕಾಗಿ ಕಾಶಿಗೆ ಆಗಮಿಸಿ ಹಿರಿಯ ಗುರುಗಳ ಕೃಪಾಶೀರ್ವಾದಕ್ಕೆ ಒಳಗಾಗಿದ್ದರು. ಇವರು ಜಗದ್ಗುರು ಶ್ರೀ ವೀರಭದ್ರ ಶಿವಾಚಾರ್ಯಸ್ವಾಮಿಗಳ ನಂತರ ೧೮೯೧ರಲ್ಲಿ ಕಾಶಿ ಪೀಠದ ಅಧಿಕಾರವನ್ನು ವಹಿಸಿಕೊಂಡರು. ಜಗದ್ಗುರು ಶ್ರೀ ರಾಜೇಶ್ವರ ಶಿವಾಚಾರ್ಯಸ್ವಾಮಿಗಳು ಮಹಾತಪಸ್ವಿಗಳಾಗಿದ್ದು ಔದಾರ್ಯಮೂರ್ತಿಗಳಾಗಿ ರೂಪುಗೊಂಡರು. ಇವರ ಜ್ಞಾನಸಂಪತ್ತಿಗೆ ಮನಸೋತ ಭಕ್ತರು "ಜಂಗಮರಾಜ" ಎಂಬ ಬಿರುದನ್ನು ನೀಡಿ ಗೌರವಿಸಿದರು. ಗುರುಗಳು ಮೈಸೂರು ಪ್ರಾಂತ್ಯಕ್ಕೆ ಪ್ರವಾಸಕ್ಕೆಂದು ಬಂದು ಕಾಶಿಗೆ ಹಿಂದಿರುಗುವಾಗ ಕರ್ನಾಟಕ, ಆಂಧ್ರ ಮತ್ತು ಮಹಾರಾಷ್ಟ್ರ ಪ್ರಾಂತ್ಯದ ಸುಮಾರು ೨೦೦ ಜನ ಮಾಹೇಶ್ವರ ವಟುಗಳನ್ನು ಸಂಸ್ಕೃತ ಅಧ್ಯಯನಕ್ಕಾಗಿ ತಮ್ಮ ಜೊತೆಯಲ್ಲಿ ಕಾಶಿಗೆ ಕರೆತಂದಿದ್ದರು. ಇವರ ಊಟ ಮತ್ತು ವಸತಿಗೆ ವ್ಯವಸ್ಥೆ ಮಾಡಿಸಿ ಉತ್ತಮ ವಟುಗಳನ್ನಾಗಿ ರೂಪಿಸುವಲ್ಲಿ ಯಶಸ್ವಿಯಾದರು. ಇವರು ೧೯೦೭ರ ಜುಲೈ ೩೧ರಂದು ಲಿಂಗೈಕ್ಯರಾದರು. ಇವರ ಆದೇಶದನ್ವಯದಂತೆ ನ್ಯಾಯಶಾಸ್ತ್ರ ಪಂಡಿತರೂ, ಜಗದ್ಗುರು ಶ್ರೀ ರಾಜೇಶ್ವರಶಿವಾಚಾರ್ಯಸ್ವಾಮಿಗಳ ಆಪ್ತ ಶಿಷ್ಯರೂ ಆಗಿದ್ದ ಶ್ರೀಶಿವಲಿಂಗ ಸ್ವಾಮಿಗಳು ಪೀಠದ ಉತ್ತರಾಧಿಕಾರಿಗಳಾಗಿ ನೇಮಕಗೊಂಡರು. ಉಳಿದ ನಾಲ್ಕು ಪೀಠಾಚಾರ್ಯರುಗಳ ಸಮ್ಮುಖದಲ್ಲಿ ೧೯೧೮ರ ಮಾರ್ಚ ೨೩ರಂದು ಜಗದ್ಗುರುಗಳಾಗಿ ಶ್ರೀ ಶಿವಲಿಂಗ ಸ್ವಾಮಿಗಳು ಪೀಠಾಧಿಕಾರವನ್ನು ವಹಿಸಿಕೊಂಡರು. ಈ ಸಂದರ್ಭದಲ್ಲಿ ಪಂಚಾಚಾರ್ಯ ಸಮ್ಮೇಳನವನ್ನು ಏರ್ಪಡಿಸಿ, ಇದರ ಜ್ಞಾಪಕಾರ್ಥವಾಗಿ ಜಂಗಮವಾಡಿಮಠದಲ್ಲಿ "ವಿಶ್ವಾರಾಧ್ಯ ಗುರುಕುಲ"ವನ್ನು ಸ್ಥಾಪಿಸಿದರು.

ಜ್ಞಾನ ಸಂಪತ್ತು : ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ತಾಸಗಾಂವ್ ಹಿರೇಮಠದ ಶ್ರೀ ಪಂಚಾಕ್ಷರ ಶಿವಾಚಾರ್ಯ ಸ್ವಾಮಿಗಳು ಜಗದ್ಗುರು ಶ್ರೀ ಶಿವಲಿಂಗ ಶಿವಾಚಾರ್ಯಸ್ವಾಮಿಗಳ ಕರಕಮಲ ಸಂಜಾತರಾಗಿ ಬೆಳೆದು, ಗುರುಗಳ ಅನುಗ್ರಹದಿಂದ ೧೯೩೨ರ ಫೆಬ್ರವರಿ ೧೯ರಂದು ಜ್ಞಾನಪೀಠದ ೮೩ನೆಯ ಜಗದ್ಗುರುಗಳಾಗಿ ಅಧಿಕಾರ ವಹಿಸಿಕೊಂಡರು. ತಮ್ಮ ಶಿಷ್ಯನಿಗೆ ಅಧಿಕಾರವನ್ನು ಹಸ್ತಾಂತರಿಸಿದ ಜಗದ್ಗುರು ಶ್ರೀ ಶಿವಲಿಂಗ ಶಿವಾಚಾರ್ಯರು ೧೯೩೨ರ ಏಪ್ರಿಲ್ ೫ರಂದು ಲಿಂಗೈಕ್ಯರಾದರು. ಗುರುಗಳು ಲಿಂಗೈಕ್ಯರಾದ ಮೇಲೆ ಪೀಠದ ಪೂರ್ಣ ಅಧಿಕಾರವನ್ನು ವಹಿಸಿಕೊಂಡ

ಶ್ರೀ ಪಂಚಾಕ್ಷರ ಶಿವಾಚಾರ್ಯಸ್ವಾಮಿಗಳು ಪೀಠವನ್ನು ಅಭಿವೃದ್ಧಿಪಡಿಸಲು ಮುಂದಾದರಾದರೂ, ಅನೇಕ ಅಡ್ಡಿ ಆತಂಕಗಳು ಉಂಟಾದವು. ಹಿಂದೆ ಪೀಠದ ವತಿಯಿಂದ ಸ್ಥಾಪಿತವಾಗಿದ್ದ ವಿಶ್ವಾರಾಧ್ಯ ಬ್ಯಾಂಕ್‌ನ ವ್ಯವಹಾರಗಳು ಹದಗೆಟ್ಟು, ಈ ಸಮಸ್ಯೆಗಳ ಸುಳಿಯಿಂದ ಬಿಡಿಸಿಕೊಳ್ಳುವುದರಲ್ಲಿಯೇ ತಮ್ಮ ಕಾಲಾವಧಿಯನ್ನು ಪೂರ್ಣಗೊಳಿಸಬೇಕಾಯಿತು. ಈ ಅವಧಿಯಲ್ಲಿ ಪೀಠವನ್ನು ಕಾನೂನುಬದ್ಧಗೊಳಿಸಿದ್ದಲ್ಲದೆ ಪುರಾತನ ಇತಿಹಾಸಕ್ಕೆ ಸಂಬಂಧಿಸಿದಂತೆ ದಾಖಲೆ ಪತ್ರಗಳನ್ನು ಶಿಸ್ತುಬದ್ಧಗೊಳಿಸಿದರು. ಇವರ ನಂತರ ಆಂಧ್ರಪ್ರದೇಶದ ನಲಗೊಂಡದ ಚಿವರಿಮಠದ ಶ್ರೀನಾಗಭೂಷಣ ಶಾಸ್ತ್ರಿ ಹಾಗೂ ಶ್ರೀಮತಿ ಶ್ಯಾಮಲಾಂಭ ಇವರ ಪುತ್ರರಾಗಿ ಜನಿಸಿದ ಶ್ರೀ ವೀರಭದ್ರಶಿವಾಚಾರ್ಯಸ್ವಾಮಿಗಳು, ಪೀಠದ ಆಳನೆಯ ಗುರುಗಳಾಗಿ ೧೯೪೪ರ ಸೆಪ್ಟೆಂಬರ್ ೨೭ರಂದು ಉಳಿದ ಪೀಠಾಚಾರ್ಯರ ಸಮ್ಮುಖದಲ್ಲಿ ಶ್ರೀ ರಂಭಾಪುರಿ ಪೀಠದ ಶ್ರೀ ಶಿವಾನಂದರಾಜೇಂದ್ರ ಶಿವಾಚಾರ್ಯ ಭಗವತ್ಪಾದರ ಅಮೃತ ಹಸ್ತದಿಂದ ಪೀಠಾಧಿಕಾರದ ಅನುಗ್ರಹವನ್ನು ಪಡೆದರು. ಶ್ರೀ ವೀರಭದ್ರ ಶಿವಾಚಾರ್ಯಸ್ವಾಮಿಗಳು ವಿದ್ಯಾರ್ಥಿದೆಸೆಯಲ್ಲಿದ್ದಾಗಲೇ ವೀರಶೈವ ಧರ್ಮದ ಪ್ರಚಾರವನ್ನು ಒಂದು ಆಂದೋಲನದ ರೀತಿಯಲ್ಲಿ ರೂಪಿಸಿಕೊಂಡು ಪ್ರಚಾರಪಡಿಸುತ್ತಿದ್ದರು. ಗುರುಗಳು ಅನೇಕ ಸಂಘ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಹೆಸರು ಪಡೆದವರಾಗಿದ್ದರು. ಇಂತಹ ವಿದ್ವತ್‌ಚೇತನವು ಕಾಶಿ ಪೀಠದಂತಹ ಜ್ಞಾನಪೀಠದ ಅಧಿಕಾರ ದೊರೆತ ಮೇಲೆ, ತಮ್ಮ ಜ್ಞಾನ ಸಂಪತ್ತನ್ನು ಸವಿಸ್ತಾರವಾಗಿ ಬೆಳೆಸಿಕೊಂಡು ಸಮಾಜಕ್ಕೆ ಈ ಜ್ಞಾನಸಂಪತ್ತನ್ನು ಹಂಚುವಲ್ಲಿ ಯಶಸ್ವಿಯಾದರು. ಗುರುಗಳು ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ "ಜ್ಞಾನಮಂದಿರ" ಎಂಬ ಭವ್ಯವಾದ ಗ್ರಂಥಾಲಯವನ್ನು ನಿರ್ಮಿಸಿದರು. ಇಂದು ಈ ಗ್ರಂಥಾಲಯದಲ್ಲಿ ೧೦,೦೦೦ಕ್ಕೂ ಹೆಚ್ಚು ಮುದ್ರಿತ ಗ್ರಂಥಗಳು, ಸಾವಿರಾರು ತಾಡೋಲೆಗ್ರಂಥಗಳನ್ನು ಸಂಗ್ರಹಿಸಿಡಲಾಗಿದೆ. ಇದು ಕಾಶಿಯಲ್ಲಿಯೇ ಒಂದು ಅಮೂಲ್ಯ ಗ್ರಂಥಾಲಯವಾಗಿ ಹೆಸರು ಪಡೆದಿದೆ. ಅನೇಕ ವಿಶ್ವವಿದ್ಯಾನಿಲಯಗಳಿಂದ ಅಧ್ಯಯನಕ್ಕೆಂದು ಇಲ್ಲಿಗೆ ಆಗಮಿಸುವುದು ಒಂದು ಹೆಗ್ಗಳಿಕೆ. ಜ್ಞಾನನಿಧಿಯಾಗಿದ್ದ ಜಗದ್ಗುರು ಶ್ರೀ ವಿರಭದ್ರ ಶಿವಾಚಾರ್ಯಸ್ವಾಮಿಗಳು ಪೀಠವನ್ನು ಅಭಿವೃದ್ಧಿಪಡಿಸಿ, ೧೯೪೮ರ ಜನವರಿ ೨೫ ರಂದು ಲಿಂಗೈಕ್ಯರಾದರು.

ಅಭಿವೃದ್ಧಿಗೆ ನಾಂದಿ: ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಮಾಸೂರು ಹಿರೇಮಠದ ಶ್ರೀ ಪರಮೇಶ್ವರಯ್ಯ ಮತ್ತು ಶ್ರೀಮತಿ ರುದ್ರಮ್ಮನವರ ಪುತ್ರರಾಗಿ ೧೯೧೭ರ ಮಾರ್ಚಿ ೨೦ರಂದು ಜನಿಸಿದ ಶ್ರೀ ಜಯಗುರುಸ್ವಾಮಿಗಳು ರಟ್ಟಿಹಳ್ಳಿ, ಕಡೇನಂದಿಹಳ್ಳಿ ಹಾಗೂ ಸೋಲಾಪುರಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಮುಗಿಸಿ, ಸಂಸ್ಕೃತ ಅಧ್ಯಯನಕ್ಕಾಗಿ ಕಾಶಿಗೆ ತೆರಳಿದರು. ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡಿ ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಕ್ಯಾಸನೂರು ಮಠದ ಪಟ್ಟಾಧಿಕಾರಿಗಳಾಗಿ ನೇಮಕಗೊಂಡರು. ಇವರ ವಿದ್ವತ್ತನ್ನು ಗುರುತಿಸಿದ ಕಾಶಿ ಪೀಠದ ಜಗದ್ಗುರು ಶ್ರೀ ವೀರಭದ್ರ ಶಿವಾಚಾರ್ಯಸ್ವಾಮಿಗಳು ಶ್ರೀ ಜಯಗುರುಸ್ವಾಮಿಗಳನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ನೇಮಕಮಾಡಿಕೊಂಡಿದ್ದರು. ಹಿರಿಯ ಗುರುಗಳು ಲಿಂಗೈಕ್ಯರಾದ ಮೇಲೆ ಶ್ರೀ ಜಯಗುರುಸ್ವಾಮಿಗಳು ಜಗದ್ಗುರು ಶ್ರೀ ವಿಶ್ವೇಶ್ವರ ಶಿವಾಚಾರ್ಯಸ್ವಾಮಿಗಳೆಂದು ಅಭಿಧಾನ ಪಡೆದು ೧೯೪೮ರ ನವಂಬರ್ ೧೪ರಂದು ಕಾಶಿ ಪೀಠದ ಆಱನೆಯ ಜಗದ್ಗುರುಗಳಾಗಿ ಅಧಿಕಾರ ವಹಿಸಿಕೊಂಡರು. ಗುರುಗಳು ಅಧಿಕಾರಕ್ಕೆ ಬಂದ ಮೇಲೆ ಪೀಠದ ಸ್ವಾಧೀನದಲ್ಲಿದ್ದ ಸಾವಿರಾರು ಮನೆಗಳು ಸರ್ಕಾರದ ಬದಲಾದ ಕಾನೂನಿನಿಂದ ಕೈತಪ್ಪಿದವು. ಪೀಠಕ್ಕೆ ಆದಾಯದ ಮೂಲವಾಗಿದ್ದ ೧೨ ಗ್ರಾಮಗಳ ಉಂಬಳಿ ಭೂಮಿಯು ೧೯೫೭ರಲ್ಲಿ ಕೈತಪ್ಪಿದ ಕಠಿಣ ಪರಿಸ್ಥಿತಿಯಲ್ಲಿಯೂ ಜಗದ್ಗುರುಗಳು ಧೈರ್ಯಗೆಡದೆ ಬಂದ ಕಷ್ಟಗಳನ್ನು ತಮ್ಮ ತಪೋಶಕ್ತಿಯ ಬಲದಿಂದ ಎದುರಿಸಿದರು. ಸದ್ಭಕ್ತರ ಸಹಕಾರದಿಂದ ಪೀಠವನ್ನು ಅಭಿವೃದ್ಧಿಪಡಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಜಗದ್ಗುರು ಶ್ರೀ ವಿಶ್ವೇಶ್ವರ ಶಿವಾಚಾರ್ಯಸ್ವಾಮಿಗಳು ಪೀಠದ ಆವರಣದಲ್ಲಿ ವಾಣಿಜ್ಯ ಮಳಿಗೆಗಳ ನಿರ್ಮಾಣ ಮಾಡುವ ಮೂಲಕ ಪೀಠಕ್ಕೆ ಆದಾಯದ ಮೂಲವನ್ನಾಗಿ ಮಾಡಿಕೊಂಡರು. ಅಧ್ಯಯನಕ್ಕಾಗಿ ಆಗಮಿಸುವ ವಿದ್ಯಾರ್ಥಿಗಳಿಗೆ ಉಚಿತ ವಸತಿ ಮತ್ತು ಪ್ರಸಾದದ ವ್ಯವಸ್ಥೆಯನ್ನು ಮುಂದುವರಿಸಿದರು. ಯಾತ್ರಿಕರಿಗೆ ಸೌಕರ್ಯವನ್ನು ಕಲ್ಪಿಸಿದರು. ಮಹಾರಾಷ್ಟ್ರದ ೨೬ ಜಿಲ್ಲೆಗಳಲ್ಲಿ ಸಂಚಾರ ಕೈಗೊಂಡು ಧರ್ಮಜಾಗೃತಿಯನ್ನು ಮಾಡಿದರಲ್ಲದೆ,

ಪುಣೆಯಲ್ಲಿ ವಿಶ್ವಾರಾಧ್ಯ ವಿದ್ಯಾರ್ಥಿನಿಲಯ ಹಾಗೂ ಮಂಗಳವೇಡೆಯಲ್ಲಿ ಶ್ರೀ ವಿಶ್ವಾರಾಧ್ಯ ಬೋರ್ಡಿಂಗನ್ನು ಸ್ಥಾಪಿಸಿದರು. ಇಷ್ಟಲ್ಲದೆ ಔರಂಗಾಬಾದ್ ಮತ್ತು ನಾಗಪುರದಲ್ಲಿಯೂ ವೀರಶೈವ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದರು. ಇವರ ಕೃಪಾಶೀರ್ವಾದದ ಫಲವಾಗಿ ಕಾಶಿಯ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದ ವೇದಾಂತ ವಿಭಾಗದಲ್ಲಿ ಶಕ್ತಿವಿಶಿಷ್ಟಾದ್ವೈತ ವೇದಾಂತಶಾಖೆ ಸ್ಥಾಪನೆಯಾಯಿತು. ಈ ಕಾರ್ಯಕ್ಕೆ ಈಗಿನ ಜಗದ್ಗುರುಗಳಾದ ಶ್ರೀ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು ಬೆಂಬಲ ನೀಡಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ. ಗುರುಗಳು ೪೧ ವರ್ಷಗಳ ದೀರ್ಘ ಆಡಳಿತದಲ್ಲಿ ಕಾಶಿ ಪೀಠವನ್ನು ಅಭಿವೃದ್ಧಿಯ ಕಕ್ಷೆಗೆ ಕೊಂಡೊಯ್ದರು. ಇವರು ಪುಣೆಯಲ್ಲಿ ವಾಸ್ತವ್ಯದಲ್ಲಿದ್ದಾಗ ಲಿಂಗೈಕ್ಯರಾದರು. ತಕ್ಷಣವೇ ಹೆಲಿಕ್ಯಾಪ್ಟರ್‌ನಲ್ಲಿ ಇವರ ಪಾರ್ಥಿವಶರೀರವನ್ನು ಕಾಶಿಗೆ ತೆಗೆದುಕೊಂಡು ಹೋಗಿ ಉಳಿದ ಪೀಠಾಚಾರ್ಯರ ಸಮ್ಮುಖದಲ್ಲಿ ಗದ್ದುಗೆಯನ್ನು ಮಾಡಲಾಯಿತು.

ಜ್ಞಾನದ ಗಣಿ : ಡಾ॥ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು ಬಾಗಲಕೋಟೆ ಜಿಲ್ಲೆ ಬದಾಮಿ ತಾಲ್ಲೂಕಿನ ತೋಗುಣಸಿ ಗ್ರಾಮದ ಶ್ರೀ ಸಿದ್ಧಯ್ಯ ಪುರಾಣಮಠ ಹಾಗೂ ಶ್ರೀಮತಿ ಸಾವಂತ್ರಮ್ಮನವರ ಪುತ್ರರಾಗಿ ೧೯೪೭ರ ಆಗಸ್ಟ್ ೨೮ರಂದು ಜನಿಸಿದರು. ಇವರಿಗೆ ಶೇಖರಯ್ಯ ಎಂದು ನಾಮಕರಣ ಮಾಡಲಾಯಿತು. ಇವರು ತೋಗುಣಸಿಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದು ಬ್ಯಾಡಗಿಯಲ್ಲಿ ೮ನೆಯ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದರು. ಗುಳೇದಗುಡ್ಡದ ಮುನ್ಸಿಫಲ್ ಹೈಸ್ಕೂಲ್‌ನಲ್ಲಿ ಪ್ರವೇಶ ಪಡೆದ ಶೇಖರಯ್ಯನವರು ಅಮರೇಶ್ವರ ಮಠದಲ್ಲಿ ವಸತಿಗೆಂದು ಆಶ್ರಯಪಡೆದರು. ೮೦ವರ್ಷಗಳ ವಯೋವೃದ್ಧರಾಗಿದ್ದ ಶ್ರೀ ಅಮರೇಶ್ವರಸ್ವಾಮಿಗಳು ಶೇಖರಯ್ಯನವರನ್ನು ತಮ್ಮ ಉತ್ತರಾಧಿಕಾರಿಗಳೆಂದು ತೀರ್ಮಾನಿಸಿ ತಮ್ಮ ಮೃತ್ಯುಪತ್ರದಲ್ಲಿ ದಾಖಲಿಸಿಟ್ಟರು. ಅಲ್ಲದೆ ಇವರ ತಂದೆ-ತಾಯಿಗಳ ಒಪ್ಪಿಗೆಯನ್ನು ಪಡೆದು ಬಾಲಕ ಶೇಖರಯ್ಯನಿಗೆ ಚಂದ್ರಶೇಖರಯ್ಯ ಎಂಬುದಾಗಿ ನಾಮಕರಣ ಮಾಡಿ ವೇದಾಂತ, ಆಯುರ್ವೇದ ಹಾಗೂ ಜ್ಯೋತಿಷ್ಯಶಾಸ್ತ್ರದಲ್ಲಿ ಅಪಾರಜ್ಞಾನವನ್ನು ನೀಡಬೇಕೆಂದು ತೀರ್ಮಾನಿಸಿದರು. ಇದಕ್ಕಾಗಿ ಸೋಲಾಪುರದ ಶ್ರೀಮದ್ ವೀರಶೈವ ಗುರುಕುಲ (ಹೊಟಗಿಮಠ)ದಲ್ಲಿ ಸಂಸ್ಕೃತ ಅಧ್ಯಯನಕ್ಕಾಗಿ ೧೯೬೩ರಲ್ಲಿ ಪ್ರವೇಶ ಪಡೆದರು. ಶ್ರೀ ಚಂದ್ರ ಶೇಖರಯ್ಯನವರು ಗುರುಕುಲದಲ್ಲಿ ಚಂದ್ರಶೇಖರಶರ್ಮರಾಗಿ ಪುನರ್‌ನಾಮಕರಣಗೊಂಡು, ೧೯೬೮ರವರೆಗೆ ವಿದ್ಯಾಭ್ಯಾಸ ಮಾಡಿ ಕಾವ್ಯಆದ್ಯ, ಕಾವ್ಯಮಾಧ್ಯಮ ಮತ್ತು ಕಾವ್ಯತೀರ್ಥ ಪರೀಕ್ಷೆಗಳನ್ನು ಉತ್ತಮ ಶ್ರೇಣಿಯಲ್ಲಿ ಮುಗಿಸಿದರು. ಈ ಸಂದರ್ಭದಲ್ಲಿ ಕಾಶಿ ಜಗದ್ಗುರುಗಳಾದ ಶ್ರೀ ವಿಶ್ವೇಶ್ವರ ಶಿವಾಚಾರ್ಯಸ್ವಾಮಿಗಳ ಗುರುಕಾರುಣ್ಯಕ್ಕೆ ಒಳಗಾದರು. ಈ ವೇಳೆಗಾಗಲೇ ಅಮರೇಶ್ವರ ಮಠದ ಶ್ರೀ ಅಮರೇಶ್ವರ ಸ್ವಾಮಿಗಳು ಲಿಂಗೈಕ್ಯರಾದರು. ಲಿಂಗೈಕ್ಯ ಗುರುಗಳ ಅಪೇಕ್ಷೆಯ ಮೇರೆಗೆ ಚಂದ್ರಶೇಖರಶರ್ಮರು ಅಮರೇಶ್ವರ ಮಠದ ಪಟ್ಟಾಧಿಕಾರವನ್ನು ಶ್ರೀ ಚಂದ್ರಶೇಖರ ಶಿವಾಚಾರ್ಯಸ್ವಾಮಿ ಗಳೆಂಬ ಅಭಿಧಾನದಿಂದ ೧೯೭೦ರಲ್ಲಿ ವಹಿಸಿಕೊಂಡರು.

ಕಾಶಿಗೆ ಪಯಣ : ಅಮರೇಶ್ವರ ಮಠದ ಅಧಿಕಾರವನ್ನು ವಹಿಸಿಕೊಂಡ ವರ್ಷವೇ ಹೆಚ್ಚಿನ ಅಧ್ಯಯನಕ್ಕಾಗಿ ಕಾಶಿಗೆ ತೆರಳಿ ಶ್ರೀ ಜಂಗಮವಾಡಿಮಠದ ವಿಶ್ವಾರಾಧ್ಯ ಗುರುಕುಲದಲ್ಲಿ ಆಶ್ರಯವನ್ನು ಪಡೆದರು. ಗುರುಗಳು ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲ ಯದ ವೇದಾಂತ ವಿಭಾಗದ ಆಚಾರ್ಯವರ್ಗದಲ್ಲಿ ಪ್ರವೇಶ ಪಡೆದು, ಮೂರು ವರ್ಷಗಳ ಕಾಲ ವೇದಾಂತಚಾರ್ಯದ ಬಗ್ಗೆ ಅಧ್ಯಯನ ಮಾಡಿ ಪ್ರಥಮ ರ್‍ಯಾಂಕ್‌ನಲ್ಲಿ ಉತ್ತೀರ್ಣರಾಗಿ ಸಂಪೂರ್ಣಾನಂದ ಸ್ವರ್ಣ ಪದಕ, ಸ್ವಾಮಿ ವಿವೇಕಾನಂದ ಸ್ವರ್ಣಪದಕ ಮತ್ತು ಅನ್ನದಾಪ್ರಸಾದ ಮುಖರ್ಜಿ ಸ್ವರ್ಣಪದಕಗಳನ್ನು ಪಡೆದು ವೇದಾಂತ ವಿಭಾಗಕ್ಕೆ ಕೀರ್ತಿಯನ್ನು ತಂದುಕೊಟ್ಟರು. ಜೊತೆಗೆ ಮೂರು ಚಿನ್ನದ ಪದಕಗಳನ್ನು ಪಡೆದು ಜಗದ್ಗುರು ಶ್ರೀ ವಿಶ್ವಾರಾಧ್ಯ ಗುರುಕುಲದ ಹೆಗ್ಗಳಿಕೆಗೆ ಪಾತ್ರರಾದರು. ಗುರುಗಳು ಕಲ್ಕತ್ತದ ವಂಗೀಯ ಸಂಸ್ಕೃತ ಶಿಕ್ಷಾ ಪರಿಷತ್‌ನ "ಸರ್ವದರ್ಶನ ತೀರ್ಥ" ಪರೀಕ್ಷೆಯನ್ನು ಸಹ ಪ್ರಥಮ ರ್‍ಯಾಂಕ್‌ನಲ್ಲಿ ಪಾಸಾಗಿ ಪಶ್ಚಿಮಬಂಗಾಳ ಸರ್ಕಾರದ ಅಂದಿನ ರಾಜ್ಯಪಾಲರಾಗಿದ್ದ ನೂರುಲ್‌ಹಸನ್‌ರವರಿಂದ ಶರದಿಂದುಕುಮಾರ ಎಂಬ ಸ್ವರ್ಣಪದಕವನ್ನು ಪಡೆದು ಕರ್ನಾಟಕದ ಕೀರ್ತಿ ಪತಾಕೆಯನ್ನು ಹಾರಿಸಿದರು. ೧೯೭೩ರಲ್ಲಿ ಕೇರಳದ ಗುರುವಾಯೂರಿನಲ್ಲಿ ನಡೆದ ಅಖಿಲ ಭಾರತ ಸಂಸ್ಕೃತ ಆಶುಭಾಷಣ ಸ್ಪರ್ಧೆಯಲ್ಲಿ ಉತ್ತರಪ್ರದೇಶದ ಪ್ರತಿನಿಧಿಗಳಾಗಿ ಪಾಲ್ಗೊಂಡು ವೇದಾಂತ ವಿಷಯದಲ್ಲಿ ಪ್ರಥಮ

ಪುರಸ್ಕಾರವನ್ನು ಪಡೆದ ಹೆಗ್ಗಳಿಕೆ ಇವರದು. ಹೀಗೆ ವಿದ್ಯಾರ್ಥಿ ಜೀವನದಲ್ಲಿಯೇ ಅನೇಕ ಪುರಸ್ಕಾರಗಳಿಗೆ ಪಾತ್ರರಾದರು.

"ಸಿದ್ಧಾಂತ ಶಿಖಾಮಣಿ ಹಾಗೂ ಷಡ್‌ದರ್ಶನಗಳ ತೌಲನಿಕ ಅಧ್ಯಯನ" ಎಂಬ ವಿಷಯದಲ್ಲಿ ಸಂಶೋಧನೆ ನಡೆಸಿ, ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ೧೯೮೧ರಂದು ಈ ಪ್ರಬಂಧವನ್ನು ಮಂಡಿಸಿ ಪಿಹೆಚ್.ಡಿ.ಪದವಿಯನ್ನು ಪಡೆದುಕೊಂಡರು. ಕಾಶಿ ಜಗದ್ಗುರುಗಳಾದ ಶ್ರೀ ವಿಶ್ವೇಶ್ವರ ಶಿವಾಚಾರ್ಯಸ್ವಾಮಿಗಳ ಮಾರ್ಗದರ್ಶನದ ಮೇರೆಗೆ ೧೯೮೨ರಲ್ಲಿ ವಿದ್ಯಾವಾಚಸ್ಪತಿ ಉಪಾಧಿಗಾಗಿ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದ ವೇದಾಂತ ವಿಭಾಗಾಧ್ಯಕ್ಷರಾದ ಡಾ॥ ದೇವಸ್ವರೂಪ ಮಿಶ್ರರವರ ಮಾರ್ಗದರ್ಶನದಲ್ಲಿ, "ಶಕ್ತಿ ವಿಶಿಷ್ಟಾದ್ವೈತ ತತ್ತ್ವತ್ರಯ ವಿಮರ್ಶೆ" ಎಂಬ ವಿಷಯದ ಮೇಲೆ ೬ ವರ್ಷಗಳ ಕಾಲ ಸಂಶೋಧನೆ ನಡೆಸಿ ೧೯೮೮ರಲ್ಲಿ ಮಹಾ ಪ್ರಬಂಧವನ್ನು ಮಂಡಿಸಿದರು.

ಜಗದ್ಗುರು ಶ್ರೀ ವಿಶ್ವೇಶ್ವರ ಶಿವಾಚಾರ್ಯಸ್ವಾಮಿಗಳು ತಮ್ಮ ಉತ್ತರಾಧಿಕಾರಿಗಳ ಆಯ್ಕೆಯ ಪ್ರಕ್ರಿಯೆಯನ್ನು ಪೂರ್ಣಗೊಳಿಸದೆ ಲಿಂಗೈಕ್ಯರಾಗಿದ್ದ ಕಾರಣ ರಂಭಾಪುರಿ ಪೀಠದ ಜಗದ್ಗುರು ಶ್ರೀ ವೀರರುದ್ರಮುನಿ ದೇವಶಿವಾಚಾರ್ಯ ಭಗವತ್ಪಾದರು, ಉಜ್ಜಯಿನಿ ಪೀಠದ ಜಗದ್ಗುರು ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಭಗವತ್ಪಾದರು, ಕೇದಾರ ಪೀಠದ ಜಗದ್ಗುರು ರಾವಲ್ ಶ್ರೀ ಸಿದ್ಧೇಶ್ವರಲಿಂಗ ಶಿವಾಚಾರ್ಯ ಭಗವತ್ಪಾದರು, ಶ್ರೀಶೈಲ ಪೀಠದ ಜಗದ್ಗುರು ಶ್ರೀ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು ಸಮಾವೇಶಗೊಂಡು ಕಾಶಿಪೀಠದ ಉತ್ತರಾಧಿಕಾರಿಗಳ ಆಯ್ಕೆಯ ಬಗ್ಗೆ ಸುದೀರ್ಘವಾಗಿ ಸಮಾಲೋಚಿಸಿ ಬದಾಮಿ ತಾಲ್ಲೂಕಿನ ಗುಳೇದಗುಡ್ಡದ ಅಮರೇಶ್ವರ ಮಠದ ಪಟ್ಟಾಧ್ಯಕ್ಷರಾದ ಷ.ಬ್ರ.ಶ್ರೀ ಡಾ॥ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳನ್ನು ಆಯ್ಕೆಮಾಡಿದರು.

ವಿದ್ಯಾಸಂಪನ್ನತೆಯಿಂದ ಜ್ಞಾನದ ಗಣಿಯಾಗಿ ರೂಪುಗೊಂಡಿದ್ದ ಡಾ॥ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು ಪೀಠಾಚಾರ್ಯರ ತೀರ್ಮಾನದಂತೆ, ಭಕ್ತರ ಸಮ್ಮುಖದಲ್ಲಿ ಕಾಶಿ ಪೀಠದ ೮೬ನೆಯ ಪೀಠಾಧ್ಯಕ್ಷರಾಗಿ ೧೯೮೯ರ ನವೆಂಬರ್ ಹದಿನೇಳರಂದು ಪೀಠಾರೋಹಣವನ್ನು ಮಾಡಿದರು. ಗುರುಗಳು ಅಧಿಕಾರವನ್ನು ವಹಿಸಿಕೊಂಡ ಮೇಲೆ ಪೀಠದ ಅಭಿವೃದ್ಧಿಯ ಜೊತೆ ಜೊತೆಗೆ ಧಾರ್ಮಿಕ ಸಾಹಿತ್ಯವನ್ನು ಪ್ರಚುರಗೊಳಿಸುವಲ್ಲಿ ಮುಂದಾದರು. ಇದರ ಫಲವೇ ಕಾಶಿ ಪೀಠ ಸರ್ವತೋಮುಖ ವಾಗಿ ಅಭಿವೃದ್ಧಿಗೊಂಡು ಜನಮನ್ನಣೆಗೆ ಪಾತ್ರವಾಗಿ ಬೆಳೆಯುವಂತಾಯಿತು.

ಜನಕಲ್ಯಾಣ ಯೋಜನೆಗಳು : ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಕಾಶಿ ಪೀಠದ ಅಧಿಕಾರಕ್ಕೆ ಬಂದಮೇಲೆ, ಜನಕಲ್ಯಾಣದ ದೃಷ್ಟಿಯಿಂದ ವರ್ಷಕ್ಕೊಮ್ಮೆ ಹೊಸ ಹೊಸ ಯೋಜನೆಗಳನ್ನು ರೂಪಿಸಿಕೊಂಡು ಈ ಮೂಲಕ ಪೀಠ ಮತ್ತು ಸಮಾಜವನ್ನು ಅಭಿವೃದ್ಧಿಪಡಿಸತೊಡಗಿದ್ದಾರೆ. ೧೯೯೩ರಂದು ಅಧಿಕ ಮಾಸದ ಅನುಷ್ಠಾನದ ನಿಮಿತ್ತವಾಗಿ ಪೀಠದಲ್ಲಿ ಜನಕಲ್ಯಾಣಾರ್ಥವಾಗಿ "ಜಗದ್ಗುರು ಶ್ರೀ ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ" ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಇದರ ಅಂಗಸಂಸ್ಥೆಗಳು ದೇಶದ ನಾನಾ ಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಸಂಶೋಧನ ವಿದ್ಯಾರ್ಥಿಗಳಿಗೆ ಇಲ್ಲಿ ಶಿವಾಗಮಗಳನ್ನು ಕುರಿತು ಸಂಶೋಧನೆಯನ್ನು ಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ. ಸಂಸ್ಥೆಯ ವತಿಯಿಂದ ಸಂಶೋಧಕ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ೫೦೦ ರೂ.ಗಳ ಶಿಷ್ಯವೇತನವನ್ನು ನೀಡಲಾಗುತ್ತಿದೆ. ಈ ಸಂಸ್ಥೆಯಡಿ ೨೦ಕ್ಕೂ ಅಧಿಕ ಗ್ರಂಥಗಳನ್ನು ಪ್ರಕಟಿಸಲಾಗಿದೆ.

ಬೆಂಗಳೂರಿನಲ್ಲಿ ಜಗದ್ಗುರು ಶ್ರೀ ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ ಸಂಸ್ಥೆಯ ಅಂಗಸಂಸ್ಥೆಯಾಗಿ ವೀರಶೈವ ಅನುಸಂಧಾನ ಸಂಸ್ಥಾನವು ಕಾರ್ಯನಿರತವಾಗಿದೆ. ಮಕುಟಾಗಮ, ಕಾರಣಾಗಮ, ಸೂಕ್ಷ್ಮಾಗಮ ಮತ್ತು ಪರಮೇಶ್ವರಾಗಮಗಳು ಕನ್ನಡದಲ್ಲಿ ಅನುವಾದಿಸಲ್ಪಟ್ಟು ಮುದ್ರಣಗೊಂಡಿವೆ. ಅಲ್ಲದೆ ಶ್ರೀ ಸಿದ್ಧಾಂತ ಶಿಖಾಮಣಿ ವಿಚಾರದೀಪ್ತಿ, ಶೈವಾಗಮಗಳಲ್ಲಿ ವೀರಶೈವ, ಚಂದ್ರಜ್ಞಾನಾಗಮ ವಿಚಾರ ರಶ್ಮಿ ಮುಂತಾದ ವಿಚಾರಸಂಕಿರಣಗಳನ್ನು ನಡೆಸುವ ಮೂಲಕ ವರದಿ ರೂಪದ ಗ್ರಂಥಗಳನ್ನು ಪ್ರಕಟಿಸಲಾಗಿದೆ.

ಗದಗ ನಗರದಲ್ಲಿ ಜನಕಲ್ಯಾಣ ಪ್ರತಿಷ್ಠಾನದ ಅಂಗಸಂಸ್ಥೆಯಾಗಿ ಒಂದು ಪಾಠಶಾಲೆಯನ್ನು ಪ್ರಾರಂಭಿಸಿ ವೇದ, ಆಗಮ, ಸಂಸ್ಕೃತ ಹಾಗೂ ಯೊಗಾಭ್ಯಾಸವನ್ನು ಮಾಡಿಸಲಾಗುತ್ತಿದೆ. ಅಲ್ಲದೆ ಧಾರವಾಡ, ಗುಲ್ಬರ್ಗ, ಸೋಲಾಪುರ, ನರಖೇಡ, ನಾಗಾಪುರದಲ್ಲಿ ಪ್ರತಿಷ್ಠಾನದ ಅಂಗಸಂಸ್ಥೆಗಳು ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಗಳನ್ನು ನಿರ್ವಹಿಸುತ್ತಾ ಬಂದಿವೆ. ಕಾಶಿ ಕ್ಷೇತ್ರದ ಗಂಗಾನದಿಯ ದಡದಲ್ಲಿ ಅತಿ ಪ್ರಾಚೀನವಾದ ವಾಲ್ಮೀಕಿ ಕುಂಡದ ಬಳಿ "ಬಾಲವಿದ್ಯಾಲಯ"ವನ್ನು ಪ್ರತಿಷ್ಠಾಪಿಸಲಾಗಿದೆ. ಇಲ್ಲಿ ಅನೇಕ ವಿದ್ಯಾರ್ಥಿಗಳು ಪ್ರಾಥಮಿಕ ಶಿಕ್ಷಣದ ಪ್ರಯೋಜನವನ್ನು ಪಡೆದುಕೊಳ್ಳುತ್ತಿದ್ದಾರೆ. ಮೆಡಿಕಲ್ ಮತ್ತು ಇಂಜಿನಿಯರಿಂಗ್ ಓದುವ ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳಿಗೆ ಮಾಹೆಯಾನ ೧,೦೦೦ ರೂ.ಗಳ ಶಿಷ್ಯವೇತನವನ್ನು ನೀಡಲಾಗುತ್ತಿದೆ.

ಸಾಹಿತ್ಯ ಚಟುವಟಿಕೆ : ಜ್ಞಾನ ಭಂಡರವಾಗಿರುವ ಈ ಪೀಠ ಪ್ರಥಮ ಆಚಾರ್ಯರಿಂದ ಈತನಕ ಜ್ಞಾನದ ವೃದ್ಧಿಗೆ ಶ್ರಮಿಸಿದೆ. ಜಗದ್ಗುರು ಶ್ರೀ ವೀರಭದ್ರ ಶಿವಾಚಾರ್ಯಸ್ವಾಮಿಗಳ ಕಾಲದಲ್ಲಿ ಪೀಠವು ಜ್ಞಾನಸಂಪತ್ತಿನಿಂದ ಸಮೃದ್ಧಿಗೊಂಡಿತು. ಇವರ ಕಾಲದಲ್ಲಿ ಸ್ಥಾಪನೆಗೊಂಡ ಗ್ರಂಥಭಂಡಾರದ ಬಗ್ಗೆ ಹಿಂದೆ ಪ್ರಸ್ತಾಪಿಸಲಾಗಿದೆ. ನಂತರ ಜಗದ್ಗುರು ಶ್ರೀ ವಿಶ್ವೇಶ್ವರ ಶಿವಾಚಾರ್ಯಸ್ವಾಮಿಗಳ ಕಾಲದಲ್ಲಿಯೂ ಶಿಕ್ಷಣ ಮತ್ತು ಸಾಹಿತ್ಯ ಕ್ಷೇತ್ರ ಉಜ್ವಲವಾಗಿ ಬೆಳೆಯಿತು. ಈಗಿನ ಜಗದ್ಗುರುಗಳಾದ ಡಾ॥ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು ಜ್ಞಾನದ ಗಣಿಗಳಾಗಿ ಸಾಹಿತ್ಯ ಕ್ಷೇತ್ರವನ್ನು ಉಜ್ವಲಗೊಳಿಸಿದ್ದಾರೆ. ಗ್ರಂಥಭಂಡಾರದಲ್ಲಿ ೧೦,೦೦೦ ಕೃತಿಗಳನ್ನು ಸಂಗ್ರಹಿಸಿರುವುದಲ್ಲದೆ, ಸಿದ್ಧಾಂತ ಶಿಖಾಮಣಿ ಪ್ರವಚನಪ್ರಭೆ (ಕನ್ನಡ), ವೀರಶೈವ ಅಷ್ಟಾವರಣ ವಿಜ್ಞಾನ (ಹಿಂದಿ), ಶ್ರೀ ಸಿದ್ಧಾಂತ ಶಿಖಾಮಣಿ ಸಮೀಕ್ಷಾ (ಸಂಸ್ಕೃತ), ಶಕ್ತಿವಿಶಿಷ್ಟಾದ್ವೈತ, ತತ್ತ್ವತ್ರಯ ವಿಮರ್ಶಾ (ಸಂಸ್ಕೃತ), ವೀರಶೈವ ದರ್ಶನ ಕೋಶ (ಹಿಂದಿ), ವೀರಶೈವ ಪಂಚಪೀಠ ಪರಂಪರೆ (ಕನ್ನಡ), ಶಿವಾದ್ವೈತ ಪರಿಭಾಷಾ (ಸಂಸ್ಕೃತ ಸಂಪಾದನೆ), ಶಿವಾದ್ವೈತ ಮಂಜರಿ (ಸಂಸ್ಕೃತ ಸಂಪಾದನೆ), ಶ್ರೀ ಸಿದ್ಧಾಂತ ಶಿಖಾಮಣಿ (ಮರಾಠಿ ಅನುವಾದ ಸಹಿತ ಸಂಪಾದನೆ) ಮುಂತಾದ ಮೌಲಿಕ ಕೃತಿಗಳ ರಚನೆ ಹಾಗೂ ಸಂಪಾದನೆಯನ್ನು ಮಾಡಿ ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸಾಧನೆಯನ್ನು ಮಾಡಿದ್ದಾರೆ.

ಜಗದ್ಗುರುಗಳಾದ ಶ್ರೀ ವೀರಭದ್ರ ಶಿವಾಚಾರ್ಯಸ್ವಾಮಿಗಳು ಹಾಗೂ ಶ್ರೀ ವಿಶ್ವೇಶ್ವರ ಶಿವಾಚಾರ್ಯಸ್ವಾಮಿಗಳ ಕಾಲದಲ್ಲಿ ಲಿಂಗಧಾರಣ ಚಂದ್ರಿಕೆ (ಸಂಸ್ಕೃತ), ಶಿವಧರ್ಮ (ಸಂಸ್ಕೃತ), ಶ್ರೀಕರಭಾಷ್ಯ (ಸಂಸ್ಕೃತ), ಪುರುಷಸೂಕ್ತ (ಸಂಸ್ಕೃತ), ಸಿದ್ಧಾಂತ ಶಿಖಾಮಣಿ (ಸಂಸ್ಕೃತ), ಸಿದ್ಧಾಂತ ಶಿಖಾಮಣಿ (ಕನ್ನಡ), ವೀರಶೈವರತ್ನ ಮತ್ತು ಕಾಶಿಪ್ರಾಚೀನತ್ವ, ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತ (ಮರಾಠಿ), ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತ (ಹಿಂದಿ), ರೇಣುಕಾಚಾರ್ಯ ಚರಿತ್ರಮು (ತೆಲಗು), ವೀರಶೈವ ಮಹಾತ್ಮ (ತೆಲಗು), ಪಾಲ್ಕುರಿಕೆ ಸೋಮನಾಥಚರಿತ್ರೆ (ತೆಲಗು), ವೀರಶೈವ ವಿವಾಹ ವಿಧಿ (ತೆಲಗು), ಲಿಂಗಧಾರಣ ಚಂದ್ರಿಕೆ (ಹಿಂದಿ), ಜಂಗಮವಾಡಿ ಮಠದ ಪ್ರಾಚೀನತೆ (ಹಿಂದಿ), ಕಾಶಿ ಪೀಠದ ಜಡ್ಜ್‌ಮೆಂಟ್ (ಕನ್ನಡ, ಹಿಂದಿ, ಇಂಗ್ಲೀಷ್) ಈ ರೀತಿ ವಿವಿಧ ಭಾಷೆಯ ಅನೇಕ ಕೃತಿಗಳು ರಚಿತಗೊಂಡು ಪ್ರಕಟವಾಗಿವೆ.

ಭಾರತೀಯ ಪ್ರಾಚೀನ ಸಂಸ್ಕೃತ ಭಾಷೆಯಲ್ಲಿರುವ ಧರ್ಮದರ್ಶನಗಳ ಅದರಲ್ಲೂ ವಿಶೇಷವಾಗಿ ವೀರಶೈವ ಧರ್ಮದರ್ಶನದ ಅಭ್ಯಾಸವನ್ನು ಮಾಡುತ್ತಿರುವ ಹಾಗೂ ಅದರಲ್ಲಿ ಪ್ರಾವೀಣ್ಯತೆಯನ್ನು ಪಡೆದ ಶ್ರೇಷ್ಠ ಸಂಶೋಧಕ ಸಾಹಿತಿಗಳಿಗೆ ಗೌರವವನ್ನು ಕೊಡುವ ಉದ್ದೇಶದಿಂದ, ಜಗದ್ಗುರು ಶ್ರೀ ವಿಶ್ವಾರಾಧ್ಯ ವಿಶ್ವಭಾರತಿ ಪುರಸ್ಕಾರವನ್ನು ೧೯೯೭ರಿಂದ ಕೊಡಲು ಮುಂದಾಗಿದೆ. ಪ್ರಶಸ್ತಿಪತ್ರ, ೨೫,೦೦೦ ರೂ.ಗಳ ನಗದು, ಶಾಲು ಹಾಗೂ ಶ್ರೀಫಲಗಳನ್ನು ನೀಡಿ ಗೌರವಿಸಲಾಗುತ್ತದೆ.

ಧಾರ್ಮಿಕ ಕಾರ್ಯಗಳು : ಶಿವರಾತ್ರಿಯಂದೇ ಶ್ರೀ ವಿಶ್ವಾರಾಧ್ಯರು ವಿಶ್ವನಾಥಲಿಂಗದಿಂದ ಅವಿರ್ಭವಿಸಿದರೆಂಬ ಕಾರಣ ಕಾಶಿ ಪೀಠಕ್ಕೆ ಶಿವರಾತ್ರಿ ಪವಿತ್ರದಿನವಾಗಿದೆ. ಈ ದಿನದಂದು ಶ್ರೀ ವಿಶ್ವಾರಾಧ್ಯರ ಜಯಂತಿ, ಬೆಳ್ಳಿರಥೋತ್ಸವ ನಡೆಯಲ್ಪಡುತ್ತಿದೆ. ಅಂದು ವಿಶೇಷವಾಗಿ ರುದ್ರಪಾರಾಯಣ, ಸಾಮೂಹಿಕ ಶಿವಪೂಜೆ, ಮಹಾಮಂಗಳಾರತಿ ಹಾಗೂ ಮಹಾ ದಾಸೋಹ, ನಡೆಯುತ್ತದೆ. ೧೯೯೭ರಲ್ಲಿ ವಿಶ್ವಶಾಂತಿಗಾಗಿ ಕೋಟಿ ಬಿಲ್ವಾರ್ಚನ ಕಾರ್ಯಕ್ರಮವು ಆಷಾಢ

ಮಾಸದ ಗೌರಿ ಪೌರ್ಣಮಿಯಿಂದ ಕಾರ್ತಿಕಮಾಸದ ಪೌರ್ಣಮಿಯವರೆಗೆ ನಡೆದದ್ದು ಒಂದು ದಾಖಲೆಯಾಗಿದೆ. ಪ್ರತಿದಿನವು ಮಹಾರುದ್ರಾಭಿಷೇಕ, ಬಿಲ್ವಾರ್ಚನೆ, ಸಂಜೆ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳಿಂದ ಶ್ರೀ ಸಿದ್ಧಾಂತ ಶಿಖಾಮಣಿಯ ಬಗ್ಗೆ ಉಪದೇಶವನ್ನು ನಡೆಸಲಾಗುತ್ತಿತ್ತು. ಈ ಕಾಲಾವಧಿಯಲ್ಲಿ ೮೦,೦೦೦ಕ್ಕೂ ಹೆಚ್ಚು ಭಕ್ತಾಧಿಗಳು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಜಗದ್ಗುರುಗಳ ಜನ್ಮ ಸುವರ್ಣ ಮಹೋತ್ಸವವನ್ನೂ ಆಚರಿಸಲಾಯಿತು. ಈ ಅವಧಿಯಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿಯ ಬಗ್ಗೆ ರಾಷ್ಟ್ರಮಟ್ಟದ ವಿಚಾರಗೋಷ್ಠಿಯನ್ನು ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಭಕ್ತರಿಂದ ಬಂದ ೩೦ಲಕ್ಷ ರೂ. ದೇಣಿಗೆಯಿಂದ ಜಗದ್ಗುರು ಶ್ರೀ ವಿಶ್ವಾರಾಧ್ಯ ಭಕ್ತ ನಿವಾಸವನ್ನು ನಿರ್ಮಿಸಿ, ಭಕ್ತಾಧಿಗಳ ವಸತಿ ಸೌಕರ್ಯಕ್ಕೆ ಅರ್ಪಿಸಲಾಗಿದೆ.

ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರ ಪೀಠಾರೋಹಣದ ದ್ವಾದಶ ವಾರ್ಷಿಕ ಮಹೋತ್ಸವದ ಅಂಗವಾಗಿ ೨೦೦೧ರ ಅಕ್ಟೋಬರ್ ೧೭ರಿಂದ ೨೦೦೧ರ ಡಿಸೆಂಬರ್ ೫ರವರೆಗೆ ವಿಶ್ವನಾಥ ಲಿಂಗಕ್ಕೆ ಅತಿರುದ್ರಮಹಾಭಿಷೇಕ, ಬಿಲ್ವಾರ್ಚನೆ ಹಾಗೂ ಕೋಟಿ ದಿಪೋತ್ಸವ ಕಾರ್ಯಕ್ರಮವು ೫೦ ದಿನಗಳವರೆಗೆ ಅದ್ದೂರಿ ಯಾಗಿ ಆಚರಿಸಲ್ಪಟ್ಟಿತು. ಈ ಅವಧಿಯಲ್ಲಿ ದೇಶದಾದ್ಯಂತ ಲಕ್ಷಕ್ಕೂ ಅಧಿಕ ಸಂಖ್ಯೆಯ ಭಕ್ತಾಧಿಗಳು ಈ ಕಾರ್ಯ ಕ್ರಮದಲ್ಲಿ ಪಾಲ್ಗೊಂಡಿದ್ದರು.

ಕಾಶಿ ಪೀಠವು ದೇಶದ ನಾನಾ ಭಾಗಗಳಲ್ಲಿ ವೀರಶೈವ ಧರ್ಮ ಬೆಳೆಯುವಂತೆ ಮಾಡಿದೆ. ಈಗಿನ ಗುರುಗಳಾದ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ತಮ್ಮ ಕ್ರಿಯಾಶೀಲ ಚಟುವಟಿಕೆಯಿಂದ ಸಾಹಿತ್ಯ ಮತ್ತು ಧರ್ಮವನ್ನು ಬೆಳೆಸಿ, ಪ್ರಚಾರಪಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ವಿಳಾಸ: ಶ್ರೀ ಜ್ಞಾನಸಿಂಹಾಸನಾದೀಶ್ವರ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಡಾ॥ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು
ಶ್ರೀ ಜ್ಞಾನಸಿಂಹಾಸನಪೀಠ, ಜಂಗಮವಾಡಿಮಠ, ಕಾಶಿ.

ಆಧಾರ: ವೀರಶೈವ ಪಂಚಪೀಠ ಪರಂಪರೆ, ಲೇಖಕರು : ಷ.ಬ್ರ.ಶ್ರೀ ಡಾ॥ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು
ಗುರುಕಾರುಣ್ಯ, ಸಂಪಾದಕರು : ಡಾ॥ ಪಂಚಾಕ್ಷರಿ ಹಿರೇಮಠ

❑

ಅನುಬಂಧ-೨

ಜಿಲ್ಲಾವಾರು ಮಠಗಳ ವಿವರ

ಜಿಲ್ಲೆ	ಇದ್ದವೆಂದುಹೇಳಲಾಗುವ ಮಠಗಳು	ಮರೆಯಾದ ಮಠಗಳು	ಗುರುತಿಸಲಾದ ಮಠಗಳು	ಮರೆಯಾಗುತ್ತಿರುವ ಮಠಗಳು	ಅಸ್ತಿತ್ವದಲ್ಲಿರುವ ಮಠಗಳು
ಉತ್ತರಕನ್ನಡ	೩೪	೧೦	೨೪	೧೮	೬
ಉಡುಪಿ	೫೬	೨೭	೨೯	೨೯	......
ಕೊಡಗು	೧೦೮	೯೮	೧೧	೧	೧೦
ಕೊಪ್ಪಳ	೬೮	೩೬	೩೨	೩	೨೯
ಕೋಲಾರ	೨೨	೧೧	೧೧	೭	೪
ಗದಗ	೨೪೬	೧೨೩	೧೨೩	೫೩	೭೦
ಗುಲ್ಬರ್ಗ	೩೫೮	೧೬೮	೧೯೦	೫೦	೧೪೦
ಚಾಮರಾಜನಗರ	೯೫	೩೭	೫೮	೪	೫೪
ಚಿಕ್ಕಮಗಳೂರು	೭೭	೪೩	೩೪	೧೮	೧೬
ಚಿತ್ರದುರ್ಗ	೪೮	೩೬	೧೬	೧೧	೫
ತುಮಕೂರು	೧೦೮	೫೪	೫೪	೧೭	೩೭
ದಕ್ಷಿಣಕನ್ನಡ	೪೦	೧೨	೨೫	೨೩	೨
ದಾವಣಗೆರೆ	೫೬	೧೭	೩೯	೧೯	೨೦
ಧಾರವಾಡ	೯೫	೪೩	೫೨	೧೦	೪೨
ಬಳ್ಳಾರಿ	೧೧೮	೪೬	೭೨	೩೩	೩೯
ಬಾಗಲಕೋಟೆ	೩೧೨	೨೨೪	೮೮	೧೮	೭೦
ಬಿಜಾಪುರ	೪೬೬	೩೨೭	೧೩೯	೩೫	೧೦೪
ಬೀದರ್	೧೩೪೧	೧೨೪೭	೯೪	೫೫	೩೯
ಬೆಳಗಾವಿ	೭೦೮	೫೫೨	೧೫೬	೫೮	೯೮
ಬೆಂಗಳೂರುನಗರ	೧೦೮	೩೪	೭೬	೬೧	೧೫
ಬೆಂಗಳೂರು ಗ್ರಾ.	೨೬೬	೨೦೮	೫೮	೧೩	೪೫
ಮಂಡ್ಯ	೧೦೬	೭೦	೩೬	೪	೩೨
ಮೈಸೂರು	೧೧೮	೪೨	೭೬	೪	೭೨
ರಾಯಚೂರು	೧೫೮	೧೦೫	೫೩	೩೨	೨೧
ಶಿವಮೊಗ್ಗ	೧೩೮	೪೪	೯೪	೬೬	೨೮
ಹಾಸನ	೯೬	೪೬	೫೦	೧೬	೩೪
ಹಾವೇರಿ	೩೬೦	೧೭೨	೧೮೮	೧೩೧	೫೭
ಒಟ್ಟು	೫೭೦೬	೩೮೩೨	೧೮೭೮	೭೭೫	೧೦೮೯

ಅನುಬಂಧ - ೩

ಜಿಲ್ಲಾವಾರು ಮಠಗಳ ಸ್ಥಳ, ವರ್ಗಗಳ ವಿವರಣೆ

ಜಿಲ್ಲೆ	ತಾಲ್ಲೂಕು	ಸ್ಥಳ	ಮಠ	ವರ್ಗ	ಪುಟ
೧. ಉತ್ತರಕನ್ನಡ	೧. ಅಂಕೋಲ	ಗೋಕರ್ಣ	ಹನ್ನೆರಡುಮಠ	ಗುರುವರ್ಗ	೪
	೨. ಶಿರಸಿ	ಬನವಾಸಿ	ಹೊಳೆಮಠ	ವಿರಕ್ತಮಠ	೫
		ಶಿರಸಿ	ಬಣ್ಣದಮಠ	ವಿರಕ್ತಮಠ	೬
			ರುದ್ರದೇವರಮಠ	ವಿರಕ್ತಮಠ	೮
	೩. ಸಿದ್ಧಾಪುರ	ಮಾವಿನಗುಂಡಿ	ಜೋಗಫಾಲ್ಸ್‌ಮಠ	ವಿರಕ್ತಮಠ	೯
	೪. ಸೂಪ	ಉಳವಿ	ಮಹಾಮನೆಮಠ	ವಿರಕ್ತಮಠ	
೨. ಉಡುಪಿ	೫. ಉಡುಪಿ	ಉಡುಪಿ	ಶಿರಾಡಿಮಠ	———	೧೪
		ಪಾಂಗಾಳ	ಜಂಗಮಮಠ	ಗುರುವರ್ಗ	೧೫
		ಕೊಂಡಾಡಿ	ಜಂಗಮಮಠ	———	೧೫
		ಕಲ್ಯಾಣಪುರ	ಕಲ್ಯಾಣಪುರಮಠ	———	೧೫
		ಪಿಲಾರು	ಸ್ವರಕಾಳ ಜಂಗಮಮಠ	———	೧೫
	೬. ಕಾರ್ಕಳ	ಮೂಡಬಿದ್ರೆ	ಪನ್ನಾಚಾರಿಮಠ	ವಿರಕ್ತಮಠ	೧೬
೩. ಕೊಡಗು	೭. ವೀರರಾಜಪೇಟೆ	ಅರಮೇರಿ	ಕಳಂಚೇರಿಮಠ	ವಿರಕ್ತಮಠ	೨೧
		ವೀರರಾಜಪೇಟೆ	ದೊಡ್ಡಮಠ	ವಿರಕ್ತಮಠ	೨೨
	೮. ಸೋಮವಾರಪೇಟೆ	ಕೊಡ್ಲಿಪೇಟೆ	ಕಲ್ಮಠ	ವಿರಕ್ತಮಠ	೨೩
			ದೊಡ್ಡಕೊಡ್ಲಿಪೇಟೆ	ಗುರುವರ್ಗ	೨೪
			ಕಲ್ಲಳ್ಳಿಮಠ	ವಿರಕ್ತಮಠ	೨೫
		ತೊರೆನೂರು	ಮರುಳಸಿದ್ದೇಶ್ವರಸ್ವಾಮಿವಿರಕ್ತಮಠ	ವಿರಕ್ತಮಠ	೨೬
		ದುಂಡಳ್ಳಿ	ಮುದ್ದಿನಕಟ್ಟೆಮಠ	ಗುರುವರ್ಗ	೨೭
		ನೀರಗುಂದ	ಕಿರಿಕೊಡ್ಲಿಮಠ	ವಿರಕ್ತಮಠ	೨೮
		ಮಾದಾಪುರ	ಮುರುಘಾಮಠ	ವಿರಕ್ತಮಠ	೨೯
		ಸೋಮವಾರಪೇಟೆ	ವಿರಕ್ತಮಠ	ವಿರಕ್ತಮಠ	೩೧
೪. ಕೊಪ್ಪಳ	೯. ಕುಷ್ಟಗಿ	ಕುಷ್ಟಗಿ	ಮದ್ದಾನೆಹಿರೇಮಠ	ಗುರುವರ್ಗ	೩೫
			ಪಟ್ಟಕಂತೆ ಹಿರೇಮಠ	ಗುರುವರ್ಗ	೩೬
		ಕೇಸೂರು	ಮಹಾಂತೇಶ್ವರ ಕಲ್ಮಠ	ವಿರಕ್ತಮಠ	೩೭
		ಗುಡದೂರು	ದೊಡ್ಡಬಸವೇಶ್ವರಮಠ	ಶರಣಸ್ಥಲ	೩೭
		ಚಳಗೇರಿ	ಹಿರೇಮಠ	ಗುರುವರ್ಗ	೩೮
		ನಿಡಸೇಸಿ	ಪಟ್ಟಕಂತೆ ಹಿರೇಮಠ	ಗುರುವರ್ಗ	೪೦
		ಪುರ್ತಗೇರಿ	ಪುರ್ತಗೇರಿಮಠ	ಗುರುವರ್ಗ	೪೧
		ಮುದೇನೂರು	ಚಂದ್ರಶೇಖರಸ್ವಾಮಿಮಠ	ಗುರುವರ್ಗ	೪೨
	೧೦. ಕೊಪ್ಪಳ	ಅಳವಂಡಿ	ಸಿದ್ಧೇಶ್ವರಮಠ	ಗುರುವರ್ಗ	೪೩
		ಎತ್ತಿನಹಟ್ಟಿ	ಬಸವರಾಜೇಂದ್ರಸ್ವಾಮಿಮಠ	ವಿರಕ್ತಮಠ	೪೪
		ಕೊಪ್ಪಳ	ಗವಿಸಿದ್ಧೇಶ್ವರಮಠ	ವಿರಕ್ತಮಠ	೪೫
		ಹಿರೇಸಿಂದೂಗಿ	ಚನ್ನಬಸವೇಶ್ವರ ಕಪ್ಪತ್ತಮಠ	ವಿರಕ್ತಮಠ	೪೭
	೧೧. ಗಂಗಾವತಿ	ಅರಳಹಳ್ಳಿ	ಬೃಹನ್ಮಠ	ಗುರುವರ್ಗ	೪೯
		ಆರಾಳು	ದಾಸೋಹಮಠ	ವಿರಕ್ತವರ್ಗ	೪೯
		ಕನಕಗಿರಿ	ರುದ್ರಸ್ವಾಮಿಮಠ	ವಿರಕ್ತಮಠ	೫೦

ಜಿಲ್ಲೆ	ತಾಲ್ಲೂಕು	ಸ್ಥಳ	ಮಠ	ವರ್ಗ	ಪುಟ
			ಹಿರೇಮಠ	ಗುರುವರ್ಗ	೫೦
		ಗಂಗಾವತಿ	ಕೊಟ್ಟೂರೇಶ್ವರ ಕಲ್ಮಠ	ವಿರಕ್ತಮಠ	೫೧
			ಮಲ್ಲಿಕಾರ್ಜುನಮಠ	ವಿರಕ್ತಮಠ	೫೩
			ರೇಣುಕಮಠ	ಗುರುವರ್ಗ	೫೪
		ಬೂದಗುಂಪಾ	ವಿರಕ್ತಮಠ	ವಿರಕ್ತಮಠ	೫೪
		ಸೂಳೇಕಲ್ಲು	ಬೃಹನ್ಮಠ	ಗುರುವರ್ಗ	೫೬
		ಹೆಬ್ಬಾಳ	ಸಂಸ್ಥಾನ ಹಿರೇಮಠ	ಗುರುವರ್ಗ	೫೭
	೧೨. ಯಲಬುರ್ಗ	ಕುದುರೆಮೋತಿ	ಮೈಸೂರು ಸಂಸ್ಥಾನಮಠ	ವಿರಕ್ತಮಠ	೫೯
		ಕುಕನೂರು	ಅರಳೆಲೆ ಕಟ್ಟಿಮನಿಮಠ	ಗುರುವರ್ಗ	೬೧
		ತಳಕಲ್ಲು	ಹಿರೇಮಠ	ಗುರುವರ್ಗ	೬೧
		ಬೆದವಟಿ	ಹಿರೇಮಠ	ಗುರುವರ್ಗ	೬೨
		ಮಂಗಳೂರು	ಅರಳೆಲೆಕಟ್ಟಿಮನಿ ಹಿರೇಮಠ	ಗುರುವರ್ಗ	೬೩
		ಯಲಬುರ್ಗ	ಸಿದ್ಧರಾಮೇಶ್ವರ ಸಂಸ್ಥಾನ ಹಿರೇಮಠ	ಗುರುವರ್ಗ	೬೪
			ಶ್ರೀಧರಮುಡಿಮಠ	ಗುರುವರ್ಗ	೬೭
೫. ಕೋಲಾರ	೧೩. ಕೋಲಾರ	ಕೋಲಾರ	ಕಂಬಳಿಸ್ವಾಮಿಮಠ	ಗುರುವರ್ಗ	೭೨
			ಹಳೆಯಮಠ	ವಿರಕ್ತಮಠ	೭೩
			ಹೊಸಮಠ	ವಿರಕ್ತಮಠ	೭೪
			ಗವಿಮಠ	———	೭೪
			ಕೈವಾರಮಠ	ಗುರುವರ್ಗ	೭೪
			ಹೊರಗಪ್ಪನಮಠ	ಗುರುವರ್ಗ	೭೪
		ನಾಗಲಾಪುರ	ನಾಗಲಾಪುರಮಠ	ಗುರುವರ್ಗ	೭೫
	೧೪. ಬಂಗಾರಪೇಟೆ	ಐತಾಂಡಹಳ್ಳಿ	ಗೂಳೂರು ಜಂಗಮಮಠ	ಗುರುವರ್ಗ	೭೬
	೧೫. ಬಾಗೇಪಲ್ಲಿ	ಗೂಳೂರು	ನಿಡುಮಾಮಿಡಿ ಸಂಸ್ಥಾನಮಠ	ಗುರುವರ್ಗ	೭೮
	೧೬. ಮಾಲೂರು	ಬೆಳ್ಳಾವಿ	ಬೆಳ್ಳನಪುರಿ ಸಂಸ್ಥಾನಮಠ	ಗುರುವರ್ಗ	೮೪
೬. ಗದಗ	೧೭. ಗದಗ	ಗದಗ	ತೋಂಟದಾರ್ಯ ಸಂಸ್ಥಾನಮಠ	ವಿರಕ್ತಮಠ	೮೯
			ಶಿವಾನಂದ ಬೃಹನ್ಮಠ	———	೯೫
			ವೀರೇಶಾಶ್ರಮ	———	೯೭
			ನೀಲಕಂಠೇಶ್ವರಮಠ	ಗುರುವರ್ಗ	೯೮
			ಶರಣೆ ನೀಲಮ್ಮಮಠ	ಶರಣಸ್ಥಲ	೯೯
			ತಗ್ಗಿನಮಠ	———	೧೦೦
			ಮೂಲೆಮಠ	ವಿರಕ್ತಮಠ	೧೦೦
		ನರಸಾಪುರ	ವೀರೇಶ್ವರಮಠ	———	೧೦೦
		ಬಳಗಾನೂರು	ಬಳಗಾನೂರುಮಠ	ಶರಣಸ್ಥಲ	೧೦೦
		ನೀಲಗುಂದ	ಗುದ್ನೇಶ್ವರಮಠ	ಶರಣಸ್ಥಲ	೧೦೧
		ಮುಳುಗುಂದ	ಗವಿಮಠ	ವಿರಕ್ತಮಠ	೧೦೨
		ಎಚ್.ಎಸ್.ವೆಂಕಟಾಪುರ	ಕೊಂಬಳಿ ಹಿರೇಮಠ	ಗುರುವರ್ಗ	೧೦೩
		ಹೊಸಹಳ್ಳಿ	ಭೂದೀಶ್ವರ ಸಂಸ್ಥಾನಮಠ	ವಿರಕ್ತಮಠ	೧೦೩
	೧೭. ನರಗುಂದ	ಕೊಣ್ಣೂರು	ಹಿರೇಮಠ	ಗುರುವರ್ಗ	೧೦೫
			ವಿರಕ್ತಮಠ	ವಿರಕ್ತಮಠ	೧೦೬
		ನರಗುಂದ	ಪಂಚಗ್ರಹಗುಡ್ಡದ ಹಿರೇಮಠ	ಗುರುವರ್ಗ	೧೦೭

ಜಿಲ್ಲೆ	ತಾಲ್ಲೂಕು	ಸ್ಥಳ	ಮಠ	ವರ್ಗ	ಪುಟ
			ಚನ್ನಬಸವೇಶ್ವರ ವಿರಕ್ತಮಠ	ವಿರಕ್ತಮಠ	೧೦೮
			ಪುಣ್ಯಾರಣ್ಯ ಪತ್ರೆವನ ಸಂಸ್ಥಾನಮಠ	ಗುರುವರ್ಗ	೧೦೯
		ಬಸಪಟ್ಟಿ	ಹಿರೇಮಠ	ಗುರುವರ್ಗ	೧೧೦
		ಭೈರನಹಟ್ಟಿ	ದೊರೆಸ್ವಾಮಿಮಠ	———	೧೧೧
		ಮಧುಗಣಕಿ	ಶಂಭುಲಿಂಗೇಶ್ವರಮಠ	———	೧೧೨
		ರೆಡ್ಡೆರನಾಗನೂರು	ಸಿದ್ಧೇಶ್ವರಮಠ	ಗುರುವರ್ಗ	೧೧೨
		ಶಿರೋಳ	ಹಿರೇಮಠ	ಗುರುವರ್ಗ	೧೧೩
			ಕಲ್ಮಠ	ವಿರಕ್ತಮಠ	೧೧೪
		ಸುರುಕೋಡು	ಶಿವರುದ್ರಶಿವಯೋಗಿ ಹಿರೇಮಠ	ಗುರುವರ್ಗ	೧೧೪
		ಹದಲಿ	ಹಿರೇಮಠ	ಗುರುವರ್ಗ	೧೧೬
	೧೮. ಮುಂಡರಗಿ	ಕಲಕೇರಿ-ವಿರೂಪಾಪುರ	ಹಿರೇಮಠ	ಗುರುವರ್ಗ	೧೧೭
		ಜಾಲವಾಡಿಗಿ	ಮಾನಿಹಳ್ಳಿ ಪುರವರ್ಗದಮಠ	ಗುರುವರ್ಗ	೧೧೮
		ಡಂಬಳ	ಅರ್ಧನಾರೀಶ್ವರಮಠ	ವಿರಕ್ತವರ್ಗ	೧೧೮
			ಹಾಲುಸ್ವಾಮಿಮಠ	ಗುರುವರ್ಗ	೧೧೮
		ಪೇಠಾಆಲೂರು	ಹಾಲೇಶ್ವರ ಶಿವಯೋಗಾಶ್ರಮ	ಗುರುವರ್ಗ	೧೧೯
		ಮುಂಡರಗಿ	ಅನ್ನದಾನೇಶ್ವರ ಸಂಸ್ಥಾನಮಠ	ವಿರಕ್ತಮಠ	೧೨೦
			ತೋಂಟದಾರ್ಯಮಠ	ವಿರಕ್ತಮಠ	೧೨೩
		ಹಿರೇವಡ್ಡಟ್ಟಿ	ಹಿರೇಮಠ	ಗುರುವರ್ಗ	೧೨೪
	೧೯. ರೋಣ	ಅಸೂಟಿ	ಫಲಹಾರೇಶ್ವರಮಠ	ವಿರಕ್ತಮಠ	೧೨೬
			ಹಿರೇಮಠ	ಗುರುವರ್ಗ	೧೨೭
			ತೋಂಟದಾರ್ಯಮಠ	ವಿರಕ್ತಮಠ	೧೨೭
		ಅಬ್ಬಿಗೇರಿ	ಹಿರೇಮಠ	ಗುರುವರ್ಗ	೧೨೮
			ಅರಳೆಲೆಮಠ	ಗುರುವರ್ಗ	೧೨೯
		ಇಟಗಿ	ಗೊಗ್ಗೆಹಳ್ಳಿ ಹಿರೇಮಠ	ಗುರುವರ್ಗ	೧೨೯
		ಕರಮುಡಿ	ಒಪ್ಪತ್ತೇಶ್ವರಮಠ	ವಿರಕ್ತಮಠ	೧೩೦
		ಕೊತಬಾಳ	ಅಡವಿಸಿದ್ಧೇಶ್ವರ ಸಂಸ್ಥಾನಮಠ	ವಿರಕ್ತಮಠ	೧೩೧
		ಕೋಡಿಕೊಪ್ಪ	ವೀರಪ್ಪಜ್ಜನಮಠ	———	೧೩೨
		ಚಿಕ್ಕಮಣ್ಣೂರು	ಬೃಹನ್ಮಠ	ಗುರುವರ್ಗ	೧೩೩
		ಜಕ್ಲಿ	ಹಿರೇಮಠ	ಗುರುವರ್ಗ	೧೩೩
		ನರೇಗಲ್ಲು	ಅನ್ನದಾನೇಶ್ವರಮಠ	ವಿರಕ್ತಮಠ	೧೩೩
			ಹಿರೇಮಠ	ಗುರುವರ್ಗ	೧೩೪
		ನಿಡಗುಂದಿಕೊಪ್ಪ	ಶಾಖಾಶಿವಯೋಗ ಮಂದಿರ	ವಿರಕ್ತಮಠ	೧೩೫
		ಬೆನಹಾಳು	ಹಿರೇಮಠ	ಗುರುವರ್ಗ	೧೩೭
		ಬೆಳವಣಿಕೆ	ಶಿವಾನಂದಮಠ	ವಿರಕ್ತಮಠ	೧೩೭
		ರೋಣ	ಗುಲಗಂಜಿಮಠ	ವಿರಕ್ತಮಠ	೧೩೮
		ಸೂಡಿ	ಜುಕ್ತಿ ಹಿರೇಮಠ	ಗುರುವರ್ಗ	೧೩೯
		ಹಾಲಕೆರೆ	ಅನ್ನದಾನೇಶ್ವರ ಸಂಸ್ಥಾನಮಠ	ವಿರಕ್ತಮಠ	೧೪೦
		ಹೊಳೆಹಡಗಲಿ	ಹಿರೇಮಠ	ಗುರುವರ್ಗ	೧೪೨
	೨೦. ಶಿರಹಟ್ಟಿ	ಕಡಗೋಳ	ಹಿರೇಮಠ	ಗುರುವರ್ಗ	೧೪೩
		ಕಳಸ	ಮೇಗಲಮಠ	ವಿರಕ್ತಮಠ	೧೪೩

ಜಿಲ್ಲೆ	ತಾಲ್ಲೂಕು	ಸ್ಥಳ	ಮಠ	ವರ್ಗ	ಪುಟ
		ತಂಗೋಡ	ಹಿರೇಮಠ	ಗುರುವರ್ಗ	೧೪೪
		ಬನ್ನಿಕೊಪ್ಪ	ದಾರಕೇಶ್ವರಮಠ	ಗುರುವರ್ಗ	೧೪೪
		ಬಾಲೇಹೊಸೂರು	ದಿಂಗಾಲೇಶ್ವರ ವಿರಕ್ತಮಠ	ವಿರಕ್ತಮಠ	೧೪೫
		ಬೆಳ್ಳಟ್ಟಿ	ರಾಮಲಿಂಗೇಶ್ವರಮಠ	———	೧೪೬
		ಮುಕ್ತಿಮಂದಿರ	ಮುಕ್ತಿಮಂದಿರಮಠ	ಗುರುವರ್ಗ	೧೪೮
		ಲಕ್ಷ್ಮೇಶ್ವರ	ಕರೆವಾಡಿಮಠ	ಗುರುವರ್ಗ	೧೫೦
			ಸುರುಗಿಮಠ	ಗುರುವರ್ಗ	೧೫೦
			ಕಲ್ಮಠ	ಗುರುವರ್ಗ	೧೫೦
			ಗಡ್ಡದ ದೇವರಮಠ	ಗುರುವರ್ಗ	೧೫೧
			ಹಾಲೇವಾಡಿಮಠ	ಗುರುವರ್ಗ	೧೫೧
		ಶಿರಹಟ್ಟಿ	ಜಗದ್ಗುರು ಫಕೀರೇಶ್ವರಮಠ	———	೧೫೧
		ಸಂತೆಶಿಗ್ಗಿ	ಶಿವಯೋಗಮಂದಿರ	ಶರಣಸ್ಥಲ	೧೫೫
		ಸಾಸಲವಾಡ	ಹಿರೇಮಠ	ಗುರುವರ್ಗ	೧೫೬
		ಹೊಳೆಇಟಗಿ	ವಿರಕ್ತಮಠ	ವಿರಕ್ತಮಠ	೧೫೬
೭. ಗುಲ್ಬರ್ಗ	೨೧. ಅಫಜಲಪುರ	ಅಫಜಲಪುರ	ಹಿರೇಮಠ	ಗುರುವರ್ಗ	೧೫೯
		ಚಿಂಚೋಳಿ	ಹಿರೇಮಠ	ಗುರುವರ್ಗ	೧೬೦
		ಜೋಗೂರು	ಹಿರೇಮಠ	ಗುರುವರ್ಗ	೧೬೦
		ನೀಲೂರು	ರಾಚೋಟೇಶ್ವರಮಠ	ಗುರುವರ್ಗ	೧೬೧
		ಬಡದಾಳು	ಚನ್ನಮಲ್ಲೇಶ್ವರಮಠ	ಗುರುವರ್ಗ	೧೬೨
		ಬಳುರ್ಗಿ	ವಿರಕ್ತಮಠ	ವಿರಕ್ತಮಠ	೧೬೪
		ಬಂದರವಾಡ	ಸುರುಗಿಮಠ	ಗುರುವರ್ಗ	೧೬೫
		ಭೈರಾಮಡಗಿ	ಮಹಾಂತೇಶ್ವರ ವಿರಕ್ತಮಠ	ವಿರಕ್ತಮಠ	೧೬೬
		ಮಲ್ಲಾಬಾರ	ರೇವಣಸಿದ್ಧೇಶ್ವರ ಹಿರೇಮಠ	ಗುರುವರ್ಗ	೧೬೭
		ಮಹಾಂತಪುರ	ಮಹಾಂತೇಶ್ವರಮಠ	ಗುರುವರ್ಗ	೧೬೮
		ರೇವೂರು (ಬಿ)	ಬೊಮ್ಮಲಿಂಗೇಶ್ವರಮಠ	ಗುರುವರ್ಗ	೧೭೦
			ಹಿರೇಮಠ	ಗುರುವರ್ಗ	೧೭೦
		ಹಿರೇಹಳ್ಳಗಿ	ಶಾಂತಲಿಂಗೇಶ್ವರಮಠ	ಗುರುವರ್ಗ	೧೭೧
		ಹಿಂಜಗೇರಿ	ಶಿವಯೋಗೀಶ್ವರ ವಿರಕ್ತಮಠ	ವಿರಕ್ತಮಠ	೧೭೨
		ಹಿರೇಜೇವರ್ಗಿ	ಶಾಂತಲಿಂಗೇಶ್ವರಮಠ	ಗುರುವರ್ಗ	೧೨೩
	೨೨. ಆಳಂದ	ಆಳಂದ	ಸಿದ್ಧಲಿಂಗೇಶ್ವರ ಸಂಸ್ಥಾನಮಠ	ಗುರುವರ್ಗ	೧೭೪
		ಕಡೆಗಂಚಿ	ಶಾಂತಲಿಂಗೇಶ್ವರ ಕಟ್ಟಿಮಠ	ಗುರುವರ್ಗ	೧೭೬
			ಮಹಾಂತೇಶ್ವರಮಠ	ಗುರುವರ್ಗ	೧೭೬
		ಕವಲಗಿ	ಶಾಂತಲಿಂಗೇಶ್ವರ ವಿರಕ್ತಮಠ	ವಿರಕ್ತಮಠ	೧೭೭
		ಖಜೂರಿ	ಕೋರಣ್ಣೇಶ್ವರವಿರಕ್ತಮಠ	ವಿರಕ್ತಮಠ	೧೭೮
		ಚಿಂಚನಸೂರು	ಕಲ್ಮಠ	ಗುರುವರ್ಗ	೧೮೦
		ಜಿಡಗ	ಬಸವಲಿಂಗೇಶ್ವರ ವಿರಕ್ತಮಠ	ವಿರಕ್ತಮಠ	೧೮೧
		ದೇವಂತಿಗಿ	ರೇವಣಸಿದ್ಧೇಶ್ವರಮಠ	ಗುರುವರ್ಗ	೧೮೩
		ನರೋಣ	ಮಹಾಂತೇಶ್ವರ ವಿರಕ್ತಮಠ	ವಿರಕ್ತಮಠ	೧೮೪
			ಹಿರೇಮಠ	ಗುರುವರ್ಗ	೧೮೫
		ನಿಂಬಾಳ	ಶಾಂತಲಿಂಗೇಶ್ವರ ವಿರಕ್ತಮಠ	ವಿರಕ್ತಮಠ	೧೮೫
		ನಿಂಬರ್ಗಾ	ವಿರಕ್ತಮಠ	ವಿರಕ್ತಮಠ	೧೮೬

ಜಿಲ್ಲೆ	ತಾಲ್ಲೂಕು	ಸ್ಥಳ	ಮಠ	ವರ್ಗ	ಪುಟ
			ಗದ್ದುಗೆಮಠ	ಗುರುವರ್ಗ	೧೮೬
			ಹಿರೇಮಠ	ಗುರುವರ್ಗ	೧೮೬
		ಪಡುಸಾವಳಗಿ	ಶಿವಲಿಂಗೇಶ್ವರ ಹಿರೇಮಠ	ಗುರುವರ್ಗ	೧೮೭
			ಜಗಜ್ಯೋತಿ ಬಸವೇಶ್ವರಮಠ	ವಿರಕ್ತಮಠ	೧೮೮
		ಭೂಸನೂರು	ಒಪ್ಪತ್ತೇಶ್ವರ ವಿರಕ್ತಮಠ	ವಿರಕ್ತಮಠ	೧೮೯
			ಹಿರೇಮಠ	ಗುರುವರ್ಗ	೧೮೯
		ಮಾದನಹಿಪ್ಪರಗಿ	ಶಿವಲಿಂಗೇಶ್ವರಮಠ	ವಿರಕ್ತಮಠ	೧೯೦
		ಮಾಡ್ಯಾಳ	ಒಪ್ಪತ್ತೇಶ್ವರ ವಿರಕ್ತಮಠ	ವಿರಕ್ತಮಠ	೧೯೧
		ಮುಗುಳಿ	ವಿರಕ್ತಮಠ	ವಿರಕ್ತಮಠ	೧೯೨
		ಮುದ್ದಡಗ	ಸಂಗಮೇಶ್ವರಮಠ	ಗುರುವರ್ಗ	೧೯೨
		ಯಳಸಂಗಿ	ಸಿದ್ಧಲಿಂಗೇಶ್ವರ ವಿರಕ್ತಮಠ	ವಿರಕ್ತಮಠ	೧೯೩
		ವಿ.ಕೆ. ಸಲಗರ	ಸಾಂಬಶಿವಯೋಗೀಶ್ವರ ಸಂಸ್ಥಾನಮಠ	ಗುರುವರ್ಗ	೧೯೪
		ಹಡಲಗಿ	ಶಾಂತೇಶ್ವರಮಠ	ಗುರುವರ್ಗ	೧೯೬
		ಹೊದಲೂರು	ಶಿವಲಿಂಗೇಶ್ವರ ವಿರಕ್ತಮಠ	ವಿರಕ್ತಮಠ	೧೯೬
	೨೩. ಗುಲ್ಬರ್ಗ	ಅಪ್ಚಗಿ	ಹಿರೇಮಠ	ಗುರುವರ್ಗ	೧೯೮
		ಕಮಲಾಪುರ	ಶಾಂತಲಿಂಗೇಶ್ವರ ಹಿರೇಮಠ	ಗುರುವರ್ಗ	೧೯೮
		ಕುರುಕೋಟಿ	ಶಿವಲಿಂಗೇಶ್ವರ ವಿರಕ್ತಮಠ	ವಿರಕ್ತಮಠ	೧೯೯
		ಗುಲ್ಬರ್ಗ	ಗದ್ದುಗೆಮಠ	ವಿರಕ್ತಮಠ	೨೦೦
			ಗುರುಬಸವ ಬೃಹನ್ಮಠ	ವಿರಕ್ತಮಠ	೨೦೧
			ಚೌದಾಪುರಿಮಠ	ಗುರುವರ್ಗ	೨೦೩
			ಪರುಷಮಠ	ಗುರುವರ್ಗ	೨೦೫
			ಮಹಾಜನಮಠ	ಗುರುವರ್ಗ	೨೦೬
			ರೋಜಾಹಿರೇಮಠ	ಗುರುವರ್ಗ	೨೦೬
			ಶರಣ ಬಸವೇಶ್ವರ ಸಂಸ್ಥಾನಮಠ	ಶರಣಸ್ಥಲ	೨೦೭
			ಸಲಪಲ್‌ಮಠ	ಗುರುವರ್ಗ	೨೧೦
		ನಾಗೂರು	ವಿರಕ್ತಮಠ	ವಿರಕ್ತಮಠ	೨೧೧
		ಪಾಳಾ	ಕಟ್ಟಿಮನಿ ಹಿರೇಮಠ	ಗುರುವರ್ಗ	೨೧೨
		ಬಬಲಾದಿ	ವಿರಕ್ತಮಠ	ವಿರಕ್ತಮಠ	೨೧೩
		ಮಹಾಗಾಂವ್	ಕಳ್ಳಿಮಠ	ಗುರುವರ್ಗ	೨೧೪
		ಸರಡಗಿ	ಚಿಕ್ಕವೀರೇಶ್ವರ ಸುಲ್ತಾನಪುರಹಿರೇಮಠ	ಗುರುವರ್ಗ	೨೧೫
		ಸ್ವಂತ	ಹಿರೇಮಠ	ಗುರುವರ್ಗ	೨೧೬
		ಹಿರೇನಂದೂರು	ತೋಪಿನಕಟ್ಟಿಮನಿ ಹಿರೇಮಠ	ಗುರುವರ್ಗ	೨೧೭
		ಹಿರೇಸಾವಳಗಿ	ಶಿವಲಿಂಗೇಶ್ವರ ಸಂಸ್ಥಾನಮಠ	ವಿರಕ್ತಮಠ	೨೧೮
			ಶಾಂತೇಶ್ವರ ಸಂಸ್ಥಾನಮಠ	ಗುರುವರ್ಗ	೨೨೦
		ಹೊನ್ನಕಿರಣ	ಹೊನ್ನಕಿರಣಮಠ	ಗುರುವರ್ಗ	೨೨೧
		ಫಿರೋಜಾಬಾದ್	ವಿರಕ್ತಮಠ	ವಿರಕ್ತಮಠ	೨೨೧
	೨೪. ಚಿತ್ತಾಪುರ	ಅಳ್ಳಳ್ಳಿ	ಸಾವಿರಸಂಸ್ಥಾನಮಠ	ಗುರುವರ್ಗ	೨೨೨
		ಕಾಳಗಿ	ಶಿವಬಸವೇಶ್ವರ ಹಿರೇಮಠ	ಗುರುವರ್ಗ	೨೨೨
		ಚಿತ್ತಾಪುರ	ಕಂಬಳೇಶ್ವರಮಠ	ಗುರುವರ್ಗ	೨೨೪
		ತೆಂಗಳಿ	ಶಾಂತನಮಠ	ಗುರುವರ್ಗ	೨೨೬

ಜಿಲ್ಲೆ	ತಾಲ್ಲೂಕು	ಸ್ಥಳ	ಮಠ	ವರ್ಗ	ಪುಟ
		ದಂಡೋತಿ	ದೀವಟಿಗೆ	ಗುರುವರ್ಗ	೨೨೬
		ದಂಪಗುಂಡ	ಹಿರೇಮಠ	ಗುರುವರ್ಗ	೨೨೭
		ನಾಲವಾರ	ಕೋರಿಸಿದ್ಧೇಶ್ವರ ಸಂಸ್ಥಾನಮಠ	ಗುರುವರ್ಗ	೨೨೮
		ಭರತನೂರು	ಗುರುನಂಜೇಶ್ವರ ವಿರಕ್ತಮಠ	ವಿರಕ್ತಮಠ	೨೩೦
		ಮುಗಳನಾಗಾವಿ	ಕಟ್ಟಿಮನಿ ಹಿರೇಮಠ	ಗುರುವರ್ಗ	೨೩೧
		ರಾವೂರು	ವಿರಕ್ತಮಠ	ವಿರಕ್ತಮಠ	೨೩೩
		ಹಾಳಕಟ್ಟಾ	ಕಟ್ಟಿಮನಿ ಹಿರೇಮಠ	ಗುರುವರ್ಗ	೨೩೪
		ಹೊನಗುಂಟ	ವಿರಕ್ತಮಠ	ವಿರಕ್ತಮಠ	೨೩೫
	೨೫. ಚಿಂಚೋಳಿ	ಕುಡಳ್ಳಿ	ಹಿರೇಮಠ	ಗುರುವರ್ಗ	೨೩೬
		ಕೋಡ್ಲಿ	ರೇವಣಸಿದ್ಧೇಶ್ವರ ಹಿರೇಮಠ	ಗುರುವರ್ಗ	೨೩೬
		ಗವನಹಳ್ಳಿ	ಹಿರೇಮಠ	ಗುರುವರ್ಗ	೨೩೭
		ಚಂದನಕೆರೆ	ಮಹಾಂತಿಮಠ	ಗುರುವರ್ಗ	೨೩೭
		ಚಿಂಚೋಳಿ	ಮಹಾಂತೇಶ್ವರಮಠ	ಗುರುವರ್ಗ	೨೩೭
		ಚಿಮ್ಮಇದಲಾಯಿ	ಸಿದ್ಧರಾಮೇಶ್ವರ ಹಿರೇಮಠ	ಗುರುವರ್ಗ	೨೩೮
		ನಿಡುಗುಂದಿ	ಹಿರೇಮಠ	ಗುರುವರ್ಗ	೨೩೯
		ಪಂಗಡಗ	ಹಿರೇಮಠ	ಗುರುವರ್ಗ	೨೩೯
		ರಟಗಲ್ಲು	ರೇವಣಸಿದ್ಧೇಶ್ವರ ಹಿರೇಮಠ	ಗುರುವರ್ಗ	೨೪೦
			ಮರುಳಘೇಂದ್ರಸ್ವಾಮಿಮಠ	ವಿರಕ್ತಮಠ	೨೪೧
		ರಾಯಕೋಡು	ಕಟ್ಟಿಮನಿ ಹಿರೇಮಠ	ಗುರುವರ್ಗ	೨೪೩
		ಸುಲೇಪೇಟೆ	ಖಟ್ವಾಂಗೇಶ್ವರಮಠ	ವಿರಕ್ತಮಠ	೨೪೪
			ತೆಂಗಿನಮಠ	ಗುರುವರ್ಗ	೨೪೫
			ಹಿರೇಮಠ	ಗುರುವರ್ಗ	೨೪೫
		ಹೊಸಳ್ಳಿ	ಹಿರೇಮಠ	ಗುರುವರ್ಗ	೨೪೫
	೨೬. ಜೇವರಗಿ	ಆಲೂರು	ಸಂಸ್ಥಾನ ಹಿರೇಮಠ	ಗುರುವರ್ಗ	೨೪೭
		ಕಡಕೋಳ	ಮಡಿವಾಳೇಶ್ವರ ಮಹಾಮಠ	ಗುರುವರ್ಗ	೨೪೭
		ಜೇವರಗಿ	ಷಣ್ಮುಖ ಶಿವಯೋಗಿಮಠ	ವಿರಕ್ತಮಠ	೨೪೯
		ಜೇರಟಗಿ	ವಿರಕ್ತಮಠ	ವಿರಕ್ತಮಠ	೨೫೧
		ನೆಲೋಗಿ	ಶಿವಾನಂದೇಶ್ವರ ವಿರಕ್ತಮಠ	ವಿರಕ್ತಮಠ	೨೫೨
		ಮಳ್ಳಿ	ಹಿರೇಮಠ	ಗುರುವರ್ಗ	೨೫೩
		ಮಾಗಣಗೇರಿ	ಬೃಹನ್ಮಠ	ಗುರುವರ್ಗ	೨೫೩
		ಯಡ್ರಾಮಿ	ಮರುಳಘೇಂದ್ರಸ್ವಾಮಿ ವಿರಕ್ತಮಠ	ವಿರಕ್ತಮಠ	೨೫೫
		ಯಲಗೋಡು	ಶಿವಯೋಗಿಪ್ರಭುಮಠ	ಗುರುವರ್ಗ	೨೫೬
		ಸೊನ್ನ	ವಿರಕ್ತಮಠ	ವಿರಕ್ತಮಠ	೨೫೭
	೨೭. ಯಾದಗಿರಿ	ಅಬ್ಬೆತುಮಕೂರು	ವಿಶ್ವಾರಾಧ್ಯ ಸಿದ್ಧಸಂಸ್ಥಾನಮಠ	———	೨೫೯
		ಅಶನಾಳ	ಸತ್ಯವಾಹಿಮಠ	ಶರಣಸ್ಥಲ	೨೬೧
		ಕಡೆಚೂರು	ಉಜ್ಜಯಿನಿ ಶಾಖಾಮಠ	ಗುರುವರ್ಗ	೨೬೧
		ಕೌಳೂರು	ಸಿದ್ಧರಾಮೇಶ್ವರಸ್ವಾಮಿಮಠ	ಗುರುವರ್ಗ	೨೬೨
		ಗುರುಮಠಕಲ್ಲು	ಶಾಂತವೀರಮಠ	ವಿರಕ್ತಮಠ	೨೬೩
			ಹಿರೇಮಠ	ಗುರುವರ್ಗ	೨೬೪
		ಚಿಂತನಹಳ್ಳಿ	ಗವಿಸಿದ್ಧೇಶ್ವರಮಠ	———	೨೬೫

ಜಿಲ್ಲೆ	ತಾಲ್ಲೂಕು	ಸ್ಥಳ	ಮಠ	ವರ್ಗ	ಪುಟ
		ಯಾದಗಿರಿ	ರಾಮಗಿರಿ ಹಿರೇಮಠ	ಗುರುವರ್ಗ	೨೫೫
	೨೮. ಶಹಾಪುರ	ಕನ್ಯೆಕೋಳೂರು	ಸಿದ್ಧಲಿಂಗೇಶ್ವರ ಹಿರೇಮಠ	ಗುರುವರ್ಗ	೨೬೬
		ದೋರನಹಳ್ಳಿ	ಮಹಾಂತೇಶ್ವರ ಹಿರೇಮಠ	ಗುರುವರ್ಗ	೨೬೭
			ಚಿಕ್ಕಮಠ	ಗುರುವರ್ಗ	೨೬೯
		ಮದ್ದರಕಿ	ಶೀಲವಂತೇಶ್ವರ ಸಂಸ್ಥಾನಮಠ	ಗುರುವರ್ಗ	೨೬೯
			ಗಚ್ಚಿನಮಠ	ಗುರುವರ್ಗ	೨೭೦
		ರಸ್ತಾಪುರ	ಗಿರಿಲಿಂಗೇಶ್ವರಮಠ	ಗುರುವರ್ಗ	೨೭೧
			ವಿರಕ್ತಮಠ	ವಿರಕ್ತಮಠ	೨೭೨
		ಶಹಾಪುರ	ಫಕೀರೇಶ್ವರಮಠ	ವಿರಕ್ತಮಠ	೨೭೨
			ಗುಮ್ಮಾಳಾಪುರ ಹಿರೇಮಠ	ಗುರುವರ್ಗ	೨೭೪
			ಹಿರೇಮಠ	ಗುರುವರ್ಗ	೨೭೫
			ಚರಬಸವೇಶ್ವರಮಠ	ಗುರುವರ್ಗ	೨೭೬
		ಸಗರ	ನಾಗಠಾಣಾ ಹಿರೇಮಠ	ಗುರುವರ್ಗ	೨೭೭
			ಒಕ್ಕಲಗೇರಿಮಠ	ಗುರುವರ್ಗ	೨೭೮
			ಹಿರೇಮಠ	ಗುರುವರ್ಗ	೨೭೮
			ಶರಣೆಅಕ್ಕಮಹಾದೇವಿ ಆನಂದಾಶ್ರಮ	ವಿರಕ್ತಮಠ	೨೭೮
		ಸುಗೂರು	ಹಿರೇಮಠ	ಗುರುವರ್ಗ	೨೭೯
	೨೯. ಸುರಪುರ	ಕರಡಗಲ್ಲು	ಕೋರಿಸಿದ್ಧೇಶ್ವರಮಠ	ಗುರುವರ್ಗ	೨೮೦
		ಕುಂಬಾರಪೇಟೆ	ದಾಸೋಹಮಠ	ದಾಸೋಹಮಠ	೨೮೦
		ಕೆಂಬಾವಿ	ಹಿರೇಮಠ	ಗುರುವರ್ಗ	೨೮೧
		ದೇವಾಪುರ	ಹಿರೇಮಠ	ಗುರುವರ್ಗ	೨೮೨
		ನಗನೂರು	ಶರಣ ಬಸವೇಶ್ವರಮಠ	ಶರಣಸ್ಥಲ	೨೮೨
			ಸುಗೂರೇಶ್ವರಮಠ	ಗುರುವರ್ಗ	೨೮೩
		ರಂಗಂಪೇಟೆ	ಅಣ್ಣಯ್ಯಸ್ವಾಮಿಮಠ	ವಿರಕ್ತಮಠ	೨೮೩
		ರುಕ್ಮಾಪುರ	ಹಿರೇಮಠ	ಗುರುವರ್ಗ	೨೮೪
		ಸುರಪುರ	ಕಡ್ಲಪ್ಪನವರಮಠ	ವಿರಕ್ತಮಠ	೨೮೫
	೩೦. ಸೇಡಂ	ಕೋಲಕುಂಡ	ಕೋಲಕುಂಡ ಹಿರೇಮಠ	ಗುರುವರ್ಗ	೨೮೬
		ಜಾಕನಹಳ್ಳಿ	ಗವಿಸಿದ್ಧಲಿಂಗೇಶ್ವರಮಠ	ಗುರುವರ್ಗ	೨೮೬
		ಮಳಖೇಡ	ಭಂಗಿಮಠ	ಗುರುವರ್ಗ	೨೮೭
			ಮೂಲಾಧಾರಮಠ	ಗುರುವರ್ಗ	೨೮೮
		ಮಲಖೋಡ	ಕಟ್ಟಿಮನಿ ಹಿರೇಮಠ	ಗುರುವರ್ಗ	೨೮೮
		ಸೇಡಂ	ಶಿವಶಂಕರೇಶ್ವರ ಸಂಸ್ಥಾನಮಠ	ಗುರುವರ್ಗ	೨೮೯
			ವಿರಕ್ತಮಠ	ವಿರಕ್ತಮಠ	೨೯೦
೮.ಚಾಮರಾಜನಗರ	೩೧. ಕೊಳ್ಳೆಗಾಲ	ಅಜ್ಜೀಪುರ	ಕೊಡದಾಳುಮಠ	ಗುರುವರ್ಗ	೨೯೫
		ಆಲಹಳ್ಳಿ	ಪಟ್ಟದಮಠ	ಗುರುವರ್ಗ	೨೯೬
		ಕಾಮಗೆರೆ	ಪಟ್ಟದಮಠ	ಗುರುವರ್ಗ	೨೯೭
			ದಾಸೋಹಮಠ	ದಾಸೋಹಮಠ	೨೯೭
		ಕೊಳ್ಳೆಗಾಲ	ದಾಸೋಹಮಠ	ದಾಸೋಹಮಠ	೨೯೮
		ಗುಂಡೇಗಾಲ	ಶಿವಯೋಗೀಶ್ವರ ತೋಟದಮಠ	ವಿರಕ್ತಮಠ	೨೯೮
		ಗೋಪಿಶೆಟ್ಟಿಯೂರು	ಪಟ್ಟದಮಠ	ಗುರುವರ್ಗ	೨೯೯

ಜಿಲ್ಲೆ	ತಾಲ್ಲೂಕು	ಸ್ಥಳ	ಮಠ	ವರ್ಗ	ಪುಟ
			ದಾಸೋಹಮಠ	ದಾಸೋಹಮಠ	೩೦೦
		ಚನ್ನಲಿಂಗನಹಳ್ಳಿ	ಪಟ್ಟದಮಠ	ಗುರುವರ್ಗ	೩೦೦
		ಚಿಲಕವಾಡಿ	ಗುರುರಾಮಯೋಗೀಶ್ವರಮಠ	———	೩೦೧
			ನಿಜಗುಣಾನುಭವ ಮಂಟಪ	———	೩೦೨
		ಚಿಕ್ಕಂದವಾಡಿ	ಪಟ್ಟದಮಠ	ಗುರುವರ್ಗ	೩೦೩
		ಪಾಳ್ಯ	ಪಟ್ಟದಮಠ	ಗುರುವರ್ಗ	೩೦೪
		ಬಂಡಹಳ್ಳಿ	ದೊಡ್ಡಮಠ	ಗುರುವರ್ಗ	೩೦೪
			ಕಂತೆಭಿಕ್ಷದಮಠ	ದಾಸೋಹಮಠ	೩೦೫
		ಮಲೆಮಾದೇಶ್ವರಬೆಟ್ಟ	ಸಾಲೂರುಮಠ	ಗುರುವರ್ಗ	೩೦೫
		ಮಧುವನಹಳ್ಳಿ	ಚಿಕ್ಕಮಠ	ಗುರುವರ್ಗ	೩೧೧
			ಜಾಲಿಕಂತೆಮಠ	ಗುರುವರ್ಗ	೩೧೧
		ಮುಡಿಗುಂಡಂ	ವಿರಕ್ತಮಠ	ವಿರಕ್ತಮಠ	೩೧೨
		ಹೊಂದರಬಾಳು	ಶಂಖಿನಮಠ	ಗುರುವರ್ಗ	೩೧೩
	೩೨. ಗುಂಡ್ಲುಪೇಟೆ	ಕಬ್ಬಹಳ್ಳಿ	ಜಂಗಮಮಠ	ಗುರುವರ್ಗ	೩೧೫
			ದಾಸೋಹಮಠ	ದಾಸೋಹಮಠ	೩೧೬
		ಕುರುಬರಹುಂಡಿ	ಕುರುಬರಹುಂಡಿಮಠ	ಗುರುವರ್ಗ	೩೧೬
		ಗೋಪಾಲಪುರ	ಕಬ್ಬಿಣ ಕೋಲೇಶ್ವರಮಠ	ಗುರುವರ್ಗ	೩೧೭
			ಭಿಕ್ಷದಮಠ	ದಾಸೋಹಮಠ	೩೧೮
		ಚಿಕ್ಕತುಪ್ಪೂರು	ಶಿವಪೂಜೆಮಠ	ಗುರುವರ್ಗ	೩೧೮
		ತೆರಕಣಾಂಬಿ	ಪಟ್ಟದಮಠ	ಗುರುವರ್ಗ	೩೧೯
		ಪಡಗೂರು	ಅಡವಿಮಠ	ವಿರಕ್ತಮಠ	೩೨೦
		ಬೊಮ್ಮನಹಳ್ಳಿ	ಗುರುಮಲ್ಲೇಶ್ವರ ದಾಸೋಹಮಠ	ದಾಸೋಹಮಠ	೩೨೩
			ಪಟ್ಟದಮಠ	ಗುರುವರ್ಗ	೩೨೩
		ಮಾದಾಪಟ್ಟಣ	ವಿರಕ್ತಮಠ	ವಿರಕ್ತಮಠ	೩೨೪
		ಮುಡಗೂರು	ವಿರಕ್ತಮಠ	ವಿರಕ್ತಮಠ	೩೨೫
		ಸೋಮಹಳ್ಳಿ	ವೀರಸಿಂಹಾಸನಶಿಲಾಮಠ	ಗುರುವರ್ಗ	೩೨೬
		ಹಂಗಳ	ಹಳ್ಳದ ವಿರಕ್ತಮಠ	ಗುರುವರ್ಗ	೩೨೭
			ಪಟ್ಟದಮಠ	ಗುರುವರ್ಗ	೩೨೯
		ಹಂಗಳಪುರ	ಪಟ್ಟದಮಠ	ಗುರುವರ್ಗ	೩೩೦
	೩೩. ಚಾಮರಾಜನಗರ	ಅಂಡರಕಳ್ಳಿ	ಶ್ರೀಶೈಲಶಾಖಾಮಠ	ಗುರುವರ್ಗ	೩೩೧
		ಅರಕಲವಾಡಿ	ಪಟ್ಟದಮಠ	ದಾಸೋಹಮಠ	೩೩೨
		ಉಗನೇದ ಹುಂಡಿ	ಗುರುಮಲ್ಲೇಶ್ವರ ದಾಸೋಹಮಠ	ದಾಸೋಹಮಠ	೩೩೩
		ಕಟ್ನವಾಡಿ	ದಾಸೋಹಮಠ	ದಾಸೋಹಮಠ	೩೩೩
		ಕುದೇರು	ಶಂಕರದೇವರಮಠ	ಗುರುವರ್ಗ	೩೩೪
			ಹೊಸಮಠ	ಗುರುವರ್ಗ	೩೩೪
			ದಾಸೋಹಮಠ	ದಾಸೋಹಮಠ	೩೩೫
		ಕೊತ್ತಲವಾಡಿ	ದಾಸೋಹಮಠ	ದಾಸೋಹಮಠ	೩೩೫
		ಚಾಮರಾಜನಗರ	ಸಿದ್ಧಮಲ್ಲೇಶ್ವರ ವಿರಕ್ತಮಠ	ವಿರಕ್ತಮಠ	೩೩೫
		ಮರೆಯಾಲ	ಮುರುಘರಾಜೇಂದ್ರಮಠ	———	೩೩೭
		ಹರವೆ	ವಿರಕ್ತಮಠ	ವಿರಕ್ತಮಠ	೩೩೮

ಜಿಲ್ಲೆ	ತಾಲ್ಲೂಕು	ಸ್ಥಳ	ಮಠ	ವರ್ಗ	ಪುಟ
			ದಾಸೋಹಮಠ	ದಾಸೋಹಮಠ	೩೩೯
		ಹುರುಳಿನಂಜನಪುರ	ಪಟ್ಟದಮಠ	ಗುರುವರ್ಗ	೩೩೯
	೩೪. ಯಳಂದೂರು	ಅಗರ	ವಿರಕ್ತಮಠ	ವಿರಕ್ತಮಠ	೩೪೧
		ಕಾರಾಪುರ	ವಿರಕ್ತಮಠ	ವಿರಕ್ತಮಠ	೩೪೨
		ಕೆಸ್ತೂರು	ಪಟ್ಟದಮಠ	———	೩೪೩
		ಗೌಡಹಳ್ಳಿ	ಗೌಡಹಳ್ಳಿಮಠ	ವಿರಕ್ತಮಠ	೩೪೪
		ಹೊನ್ನೂರು	ಪಟ್ಟದಮಠ	———	೩೪೫
೯.ಚಿಕ್ಕಮಗಳೂರು	೩೫. ಕಡೂರು	ಕಡೂರು	ಯಳನಾಡುಮಠ	ಗುರುವರ್ಗ	೩೫೦
		ಕಂಚಗಲ್‌ಬಿದರೆ	ದೊಡ್ಡಮಠ	ಗುರುವರ್ಗ	೩೫೦
		ಗಿರಿಯಾಪುರ	ಗುರುಕುಮಾರಶ್ರಮ	———	೩೫೨
		ಬೀರೂರು	ಶಿವಾನಂದಾಶ್ರಮ	ಗುರುವರ್ಗ	೩೫೩
		ಮಾದಾಪುರ	ಮರಳಸಿದ್ಧೇಶ್ವರಮಠ	———	೩೫೩
		ಸಖರಾಯಪಟ್ಟಣ	ಹಾಲುಸ್ವಾಮಿಠ	ಗುರುವರ್ಗ	೩೫೪
			ಕಲ್ಮುರುಡೇಶ್ವರಮಠ	———	೩೫೪
		ಹುಲಿಕೆರೆ	ದೊಡ್ಡಮಠ	ಗುರುವರ್ಗ	೩೫೫
	೩೬. ಚಿಕ್ಕಮಗಳೂರು	ಆರದವಳ್ಳಿ	ಶಂಕರದೇವರಮಠ	ಗುರುವರ್ಗ	೩೫೭
		ಕಂಚಗಲ್‌ದುರ್ಗ	ಮುಳ್ಳಯ್ಯಸ್ವಾಮಿಮಠ	ಗುರುವರ್ಗ	೩೫೯
		ಚಿಕ್ಕಮಗಳೂರು	ಜಾಬಾಲಪುರಿಮಠ	ಗುರುವರ್ಗ	೩೫೯
			ಬಸವಮಂದಿರ	ವಿರಕ್ತಮಠ	೩೬೧
		ಮಾಚಗೊಂಡನಹಳ್ಳಿ	ಬೇರುಗಂಡಿಮಠ	ಗುರುವರ್ಗ	೩೬೨
		ಮುತ್ತಿನಪುರ	ಫಲಹಾರಸ್ವಾಮಿಮಠ	ಗುರುವರ್ಗ	೩೬೩
		ಸಿಂದಿಗೆರೆ	ಕರಡಿಗವಿಮಠ	ವಿರಕ್ತಮಠ	೩೬೪
		ಹಿರೇಕೊಳಲೆ	ನಾರುಕಂತೆಮಠ	ಗುರುವರ್ಗ	೩೬೬
		ಹಿರೇಕಾನು	ಬಿಸಲಗ್ಗಣಿಮಠ	ಗುರುವರ್ಗ	೩೬೬
		ಹೊಸಳ್ಳಿ	ನಿರ್ವಾಣಸ್ವಾಮಿಮಠ	———	೩೬೭
	೩೭. ತರೀಕೆರೆ	ತರೀಕೆರೆ	ಎಣ್ಣೆಹೊಳೆಮಠ	ವಿರಕ್ತಮಠ	೩೬೮
		ನಂದಿ	ನುಲಿಯಚಂದಯ್ಯಮಠ	ವಿರಕ್ತಮಠ	೩೬೮
		ನಂದೀಪುರ	ಉಜ್ಜಯಿನಿ ಶಾಖಾಮಠ	ಗುರುವರ್ಗ	೩೭೦
		ಹಣ್ಣೆ	ಶ್ರೀಶೈಲ ಶಾಖಾಮಠ	ಗುರುವರ್ಗ	೩೭೧
		ಹುಣಸಘಟ್ಟ	ಹಾಲುಸ್ವಾಮಿಮಠ	ಗುರುವರ್ಗ	೩೭೩
	೩೮. ನರಸಿಂಹರಾಜಪುರ	ಬಾಳೆಹೊನ್ನೂರು	ಜಗದ್ಗುರು ಶ್ರೀ ರಂಭಾಪುರಿಪೀಠ	ಗುರುವರ್ಗ	೩೭೬
೧೦. ಚಿತ್ರದುರ್ಗ	೩೯. ಚಳ್ಳಕೆರೆ	ಪರುಶರಾಮಪುರ	ಕಾಲ್ವಿಹಳ್ಳಿ ಹಿರೇಮಠ	ಗುರುವರ್ಗ	೩೮೯
	೪೦. ಚಿತ್ರದುರ್ಗ	ಚಿತ್ರದುರ್ಗ	ಮುರುಘರಾಜೇಂದ್ರ ಬೃಹನ್ಮಠ	ವಿರಕ್ತಮಠ	೩೯೦
			ಉಜ್ಜಯಿನಿಮಠ	ಗುರುವರ್ಗ	೩೯೯
		ಸಿರಿಗೆರೆ	ಜಗದ್ಗುರು ತರಳಬಾಳು ಬೃಹನ್ಮಠ	ಗುರುವರ್ಗ	೪೦೦
	೪೧. ಮೊಳಕಾಲ್ಮೂರು	ಆನೆಸಿದ್ದಾಪುರ	ಹಿರೇಮಠ	ಗುರುವರ್ಗ	೪೧೦
		ಮೊಳಕಾಲ್ಮೂರು	ಹಿರೇಮಠ	ಗುರುವರ್ಗ	೪೧೦
		ಸಿದ್ಧಯ್ಯನಕೋಟೆ	ಗುರುಮಹಾಂತಮಠ	ವಿರಕ್ತಮಠ	೪೧೧
	೪೨. ಹೊಸದುರ್ಗ	ಸಾಣೇಹಳ್ಳಿ	ತರಳಬಾಳು ಸಂಸ್ಥಾನ ಶಾಖಾಮಠ	ಗುರುವರ್ಗ	೪೧೨
೧೧. ತುಮಕೂರು	೪೩. ಕುಣಿಗಲ್ಲು	ಅಂಕನಹಳ್ಳಿ	ಗವಿಮಠ	ಗುರುವರ್ಗ	೪೨೧

ಜಿಲ್ಲೆ	ತಾಲ್ಲೂಕು	ಸ್ಥಳ	ಮಠ	ವರ್ಗ	ಪುಟ
		ಆಲಕೆರೆ	ವಿರಕ್ತಮಠ	ವಿರಕ್ತಮಠ	೪೨೪
		ಎಡೆಯೂರು	ಬಾಳೆಹೊನ್ನೂರು ಖಾಸಾಶಾಖಾಮಠ	ಗುರುವರ್ಗ	೪೨೪
		ಕುಣಿಗಲ್ಲು	ಹಿರೇಮಠ	ಗುರುವರ್ಗ	೪೨೬
		ಬೆಟ್ಟಹಳ್ಳಿ	ಬೆಟ್ಟಹಳ್ಳಿಮಠ	ಗುರುವರ್ಗ	೪೨೭
		ಹುಲಿಯೂರುದುರ್ಗ	ವಿರಕ್ತಮಠ	ವಿರಕ್ತಮಠ	೪೨೯
		ಹೊಸಕೆರೆ	ತ್ರಿಪುರಾಂತಕೇಶ್ವರಮಠ	ಗುರುವರ್ಗ	೪೩೦
		ಹೊಸಹಳ್ಳಿ	ಭದ್ರಗಿರಿಮಠ	ಗುರುವರ್ಗ	೪೩೧
	೪೪. ಗುಬ್ಬಿ	ಗುಬ್ಬಿ	ತೋರೆಮಠ	ವಿರಕ್ತಮಠ	೪೩೨
		ಗುಬ್ಬಿ ಹೊಸಳ್ಳಿ	ಪಡುವಲಮಠ	ವಿರಕ್ತಮಠ	೪೩೬
			ಚೌಕಿಮಠ	ಗುರುವರ್ಗ	೪೩೭
		ಗೊಲ್ಲಳ್ಳಿ	ಜಂಗಮಮಠ	ವಿರಕ್ತಮಠ	೪೩೮
		ದೊಡ್ಡಗುಣಿ	ಹಿರೇಮಠ	ಗುರುವರ್ಗ	೪೩೮
		ಬಿದರೆ	ರುದ್ರನಮಠ	ಗುರುವರ್ಗ	೪೪೦
		ಬೆಟ್ಟದಹಳ್ಳಿ	ಗವಿಮಠ	ವಿರಕ್ತಮಠ	೪೪೦
	೪೫. ಚಿಕ್ಕನಾಯಕನಹಳ್ಳಿ	ಕುಪ್ಪೂರು	ಮರುಳಸಿದ್ಧೇಶ್ವರ ಗದ್ದುಗೆಮಠ	ಗುರುವರ್ಗ	೪೪೩
		ಗೋಡಕೆರೆ	ಸ್ಥಿರಪಟ್ಟಾಧ್ಯಕ್ಷರಮಠ	ಗುರುವರ್ಗ	೪೪೫
			ಚರಪಟ್ಟಾಧ್ಯಕ್ಷರಮಠ	ಗುರುವರ್ಗ	೪೪೮
		ತಮ್ಮಡಿಹಳ್ಳಿ	ವಿರಕ್ತಮಠ	ವಿರಕ್ತಮಠ	೪೪೯
		ಮಾದಿಹಳ್ಳಿ	ಹಿರೇಮಠ	ಗುರುವರ್ಗ	೪೫೧
		ಮುದ್ದೇನಹಳ್ಳಿ	ಬಯಲುಬಸವೇಶ್ವರಮಠ	ವಿರಕ್ತಮಠ	೪೫೧
	೪೬. ತಿಪಟೂರು	ತಿಪಟೂರು	ಶಿಡ್ಲೆಹಳ್ಳಿ-ಬಳ್ಳೆಕಟ್ಟೆ ಸಂಸ್ಥಾನಮಠ	ಗುರುವರ್ಗ	೪೫೪
			ಷಡಕ್ಷರಿಮಠ	ವಿರಕ್ತಮಠ	೪೫೭
		ನೊಣವಿನಕೆರೆ	ಕಾಡುಸಿದ್ಧೇಶ್ವರಮಠ	ವಿರಕ್ತಮಠ	೪೫೮
		ಫಾಲ್ಕುರಿಕೆ	ತರಳಬಾಳು ಶಾಖಾಮಠ	ಗುರುವರ್ಗ	೪೬೦
		ರಂಗಾಪುರ	ಕೆರೆಕೋಡಿ-ರಂಗಾಪುರಮಠ	———	೪೬೧
		ಹೊನ್ನವಳ್ಳಿ	ಕರಿಸಿದ್ಧೇಶ್ವರಸ್ವಾಮಿಮಠ	ಗುರುವರ್ಗ	೪೬೬
	೪೭. ತುಮಕೂರು	ಚಿಕ್ಕತೊಟ್ಲುಕೆರೆ	ಅಡವಿಸ್ವಾಮಿಮಠ	ವಿರಕ್ತಮಠ	೪೬೮
		ತುಮಕೂರು	ಸಿದ್ಧಗಂಗಾಮಠ	ವಿರಕ್ತಮಠ	೪೬೯
			ಹಿರೇಮಠ	ಗುರುವರ್ಗ	೪೭೭
			ಕರಿಬಸವಸ್ವಾಮಿಮಠ	ವಿರಕ್ತಮಠ	೪೭೯
			ಪುರದಮಠ	ಗುರುವರ್ಗ	೪೮೦
		ಬೆಳ್ಳಾವಿ	ರುದ್ರನಮಠ	ಗುರುವರ್ಗ	೪೮೧
		ರಾಮೇನಹಳ್ಳಿ	ರಾಮೇನಹಳ್ಳಿಮಠ	ವಿರಕ್ತಮಠ	೪೮೨
		ಹೆಬ್ಬೂರು	ಅತಿಥಿಮಠ	ಗುರುವರ್ಗ	೪೮೩
	೪೮. ತುರುವೇಕೆರೆ	ಅಂಬಲದೇವರಹಳ್ಳಿ	ಉಜ್ಜಿನೇಶ್ವರಮಠ	ಗುರುವರ್ಗ	೪೮೪
		ತುರುವೇಕೆರೆ	ಶಿವಯೋಗಮಂದಿರ ವಿರಕ್ತಮಠ	ವಿರಕ್ತಮಠ	೪೭೫
೧೨.ದಕ್ಷಿಣಕನ್ನಡ	೪೯. ಮಂಗಳೂರು	ಗುರುಪುರ	ಜಂಗಮಮಠ	ವಿರಕ್ತಮಠ	೪೯೩
		ಮಂಗಳೂರು	ಬಸವನಗುಡಿಮಠ	ಗುರುವರ್ಗ	೪೯೫
೧೩. ದಾವಣಗೆರೆ	೫೦. ಚನ್ನಗಿರಿ	ಅರಿಶಿನಘಟ್ಟ	ಓಂಕಾರೇಶ್ವರಮಠ	———	೫೦೦
		ಚನ್ನಗಿರಿ	ಹಾಲುಸ್ವಾಮಿ ವಿರಕ್ತಮಠ	ವಿರಕ್ತಮಠ	೫೦೦

ಜಿಲ್ಲೆ	ತಾಲ್ಲೂಕು	ಗ್ರಾಮ	ಮಠ	ವರ್ಗ	ಪುಟ
			ಹಿರೇಮಠ	ಗುರುವರ್ಗ	೫೦೧
		ತಾವರೆಕೆರೆ	ಶಿಲಾಮಠ	ಗುರುವರ್ಗ	೫೦೨
		ಪಾಂಡುಮಟ್ಟಿ	ವಿರಕ್ತಮಠ	ವಿರಕ್ತಮಠ	೫೦೪
		ಬಸವಪಟ್ಟಣ	ಹಾಲುಸ್ವಾಮಿಮಠ	ಗುರುವರ್ಗ	೫೦೫
	೫೧. ಜಗಳೂರು	ಕಣ್ವಕುಪ್ಪೆ	ಗವಿಮಠ	ಗುರುವರ್ಗ	೫೦೬
		ಮುಸ್ಟೂರು	ಓಂಕಾರೇಶ್ವರಮಠ	ಗುರುವರ್ಗ	೫೦೭
	೫೨. ದಾವಣಗೆರೆ	ಆವರಗೊಳ್ಳ	ಚೌಸಷ್ಟಿ ಗ್ರಾಮದ ಪುರವರ್ಗದ ಹಿರೇಮಠ	ಗುರುವರ್ಗ	೫೦೯
		ದಾವಣಗೆರೆ	ಹಿರೇಮಠ	ಗುರುವರ್ಗ	೫೧೦
		ಹೆಬ್ಬಾಳು	ರುದ್ರೇಶ್ವರ ವಿರಕ್ತಮಠ	ವಿರಕ್ತಮಠ	೫೧೨
	೫೪. ಹರಪನಹಳ್ಳಿ	ದುಗ್ಗಾವತಿ	ಹಿರೇಮಠ	ಗುರುವರ್ಗ	೫೧೪
		ನೀಲಗುಂದ	ಗುಡ್ಡದ ವಿರಕ್ತಮಠ	ವಿರಕ್ತಮಠ	೫೧೪
		ರಾಮಘಟ್ಟ	ಉಚ್ಚಂಗಿದುರ್ಗ ಕಟ್ಟಿಮನಿಮಠ	ಗುರುವರ್ಗ	೫೧೬
		ಹರಪನಹಳ್ಳಿ	ತೆಗ್ಗಿನಮಠ	ಗುರುವರ್ಗ	೫೧೮
	೫೫. ಹರಿಹರ	ನಂದಿಗುಡಿ	ಬೃಹನ್ಮಠ	ಗುರುವರ್ಗ	೫೨೧
	೫೬. ಹೊನ್ನಾಳಿ	ಕತ್ತಿಗೆ	ಕತ್ತಿಗೆಮಠ	ಗುರುವರ್ಗ	೫೨೩
		ರಾಂಪುರ	ಹಾಲುಸಿದ್ಧೇಶ್ವರ ಬೃಹನ್ಮಠ	ಗುರುವರ್ಗ	೫೨೩
		ಹೊನ್ನಾಳಿ	ಹಿರೇಕಲ್ಮಠ	ಗುರುವರ್ಗ	೫೨೫
		ಹೊಟ್ಯಾಪುರ	ಹಿರೇಮಠ	ಗುರುವರ್ಗ	೫೨೮
೧೪. ಧಾರವಾಡ	೪೭. ಕಲಘಟಗಿ	ಕಲಘಟಗಿ	ಹನ್ನೆರಡುಮಠ	ಗುರುವರ್ಗ	೫೩೩
		ಬಮ್ಮಿಗಟ್ಟಿ	ಅಡವಿಸ್ವಾಮಿಮಠ	ವಿರಕ್ತಮಠ	೫೩೪
		ಜೋಡಿಹಳ್ಳಿ	ಹುಲಿಶಾಂಬಯ್ಯನಮಠ	ಗುರುವರ್ಗ	೫೩೪
	೪೮. ಕುಂದಗೋಳ	ಕುಂದಗೋಳ	ಪಂಚಗ್ರಹ ಹಿರೇಮಠ	ಗುರುವರ್ಗ	೫೩೫
			ಶಿವಾನಂದಮಠ	———	೫೩೬
		ಪಶುಪತಿಹಾಳು	ಮುರುಘಾಮಠ	ವಿರಕ್ತಮಠ	೫೩೭
		ಸಂಸೆ	ಫಕಿರೇಶ್ವರಮಠ	———	೫೩೭
			ವಿರಕ್ತಮಠ	ವಿರಕ್ತಮಠ	೫೩೮
	೪೯. ಧಾರವಾಡ	ಅಮ್ಮಿನಬಾವಿ	ಪಂಚಗ್ರಹ ಹಿರೇಮಠ	ಗುರುವರ್ಗ	೫೩೯
		ಗರಗ	ಮಡಿವಾಳ ಶಿವಯೋಗಿಗಳಮಠ	ವಿರಕ್ತಮಠ	೫೪೦
		ಧಾರವಾಡ	ಮುರುಘಾಮಠ	ವಿರಕ್ತಮಠ	೫೪೧
			ಓಂಮಠ	———	೫೪೪
			ನವಕಲ್ಯಾಣಮಠ	———	೫೪೪
		ಹೆಬ್ಬಳ್ಳಿ	ಶಿವಾನಂದಮಠ	———	೫೪೬
	೫೦. ನವಿಲುಗುಂದ	ಅಣ್ಣಿಗೇರಿ	ತೋಂಟದಾರ್ಯಮಠ	ವಿರಕ್ತಮಠ	೫೪೭
			ಅನ್ನದಾನೇಶ್ವರಮಠ	ವಿರಕ್ತಮಠ	೫೪೭
			ಹಿರೇಮಠ	ಗುರುವರ್ಗ	೫೪೮
		ಅಡ್ನೂರು	ದಾಸೋಹಮಠ	ಗುರುವರ್ಗ	೫೪೮
		ತುಪ್ಪದಕುರಹಟ್ಟಿ	ಭೂಸನೂರು ಸಂಸ್ಥಾನಬೃಹನ್ಮಠ	ಗುರುವರ್ಗ	೫೪೯
		ದಟನಾಳ	ಶಿವಾನಂದಮಠ	———	೫೫೦
		ನವಿಲಗುಂದ	ಪಂಚಗ್ರಹ ಹಿರೇಮಠ	ಗುರುವರ್ಗ	೫೫೧

ಜಿಲ್ಲೆ	ತಾಲ್ಲೂಕು	ಸ್ಥಳ	ಮಠ	ವರ್ಗ	ಪುಟ
			ಗವಿಮಠ	ವಿರಕ್ತಮಠ	೫೫೩
		ನಾಯಕನೂರು	ಶಕ್ತಿಮಂದಿರ	ಶರಣಸ್ಥಲ	೫೫೫
		ಮೊರಬ	ಜಡೆಮಠ	ಗುರವರ್ಗ	೫೫೫
			ವಿರಕ್ತಮಠ	ವಿರಕ್ತಮಠ	೫೫೬
		ಶಲವಡಿ	ವಿರಕ್ತಮಠ	ವಿರಕ್ತಮಠ	೫೫೭
		ಶಿರಕೊಳ	ಹಿರೇಮಠ	ಗುರವರ್ಗ	೫೫೮
	೫೧. ಹುಬ್ಬಳ್ಳಿ	ಇಂಗಳಹಳ್ಳಿ	ಮೃತ್ಯುಂಜಯಸ್ವಾಮಿಮಠ	ವಿರಕ್ತಮಠ	೫೬೦
		ತಡಸಕ್ರಾಸ್	ಜಗದ್ಗುರು ರೇಣುಕ ಧರ್ಮನಿವಾಸ	ಗುರವರ್ಗ	೫೬೦
		ಬ್ಯಾಹಟ್ಟಿ	ಹಿರೇಮಠ	ಗುರವರ್ಗ	೫೬೧
			ಕರೆಚರಂತಿ ಹಿರೇಮಠ	ಗುರುವರ್ಗ	೫೬೧
		ಮಂಟೂರು	ಅಡವಿಸಿದ್ಧೇಶ್ವರಮಠ	ವಿರಕ್ತಮಠ	೫೬೨
		ರಾಯನಹಾಳು	ವಿರಕ್ತಮಠ	ವಿರಕ್ತಮಠ	೫೬೩
		ಸುಳ್ಳ	ಪಂಚಗ್ರಹ ಹಿರೇಮಠ	ಗುರುವರ್ಗ	೫೬೪
		ಹುಬ್ಬಳ್ಳಿ	ಮೂರುಸಾವಿರಮಠ	ವಿರಕ್ತಮಠ	೫೬೫
			ಹೊಸಮಠ	ವಿರಕ್ತಮಠ	೫೬೯
			ಎರಡೆಂತ್ತಿನಮಠ	ವಿರಕ್ತಮಠ	೫೭೦
			ಕಲ್ಯಾಣಮಠ	ವಿರಕ್ತಮಠ	೫೭೧
			ರುದ್ರಾಕ್ಷಿಮಠ	ವಿರಕ್ತಮಠ	೫೭೨
			ಶಿಗ್ಗಾಂವಿಮಠ	ವಿರಕ್ತಮಠ	೫೭೨
			ಗುಲ್ಬರ್ಗಮಠ	ವಿರಕ್ತಮಠ	೫೭೩
			ಹನ್ನೆರಡುಮಠ	ಗುರುವರ್ಗ	೫೭೩
೧೫. ಬಳ್ಳಾರಿ	೫೨. ಕೂಡ್ಲಿಗಿ	ಉಜ್ಜಯಿನಿ	ಜಗದ್ಗುರು ಉಜ್ಜಯಿನಿಪೀಠ	ಗುರುವರ್ಗ	೫೭೭
		ಕಾನಮಡುವು	ದಾಸೋಹಮಠ	———	೫೮೩
		ಕೂಡ್ಲಿಗಿ	ಸಾಸಲವಾಡ ಶಾಖಾಮಠ	ಗುರುವರ್ಗ	೫೮೪
		ಕೊಟ್ಟೂರು	ಕೊಟ್ಟೂರೇಶ್ವರಮಠ	———	೫೮೫
			ಮಹಲ್‌ಮಠ	ವಿರಕ್ತಮಠ	೫೮೬
			ಭೂತಭುಜಂಗನಮಠ	ಗುರುವರ್ಗ	೫೮೭
			ಡೋಣೂರು ಶ್ರೀ ಚಾನುಕೋಟಿಮಠ	ಗುರುವರ್ಗ	೫೮೭
	೫೩. ಬಳ್ಳಾರಿ	ಎಮ್ಮಿಗನೂರು	ಹಂಪಿಸಾವಿರದೇವರ ಮಹಂತರಮಠ	ಗುರುವರ್ಗ	೫೮೯
			ಜಡೆತಾತನಮಠ	ವಿರಕ್ತಮಠ	೫೯೧
		ಕುರುಗೋಡು	ರಾಘುವಾಂಕಸ್ವಾಮಿಮಠ	ಗುರುವರ್ಗ	೫೯೧
		ಕುಡುತನಿ	ಶರಣೆ ನೀಲಮ್ಮನಮಠ	ವಿರಕ್ತಮಠ	೫೯೩
		ಬಳ್ಳಾರಿ	ಮರಿಸ್ವಾಮಿಮಠ	ಗುರುವರ್ಗ	೫೯೩
			ಮುಣ್ಣೂರು ಕೊಟ್ಟೂರುಸ್ವಾಮಿಮಠ	———	೫೯೪
			ಶಿವಲಿಂಗಸ್ವಾಮಿಮಠ	ವಿರಕ್ತಮಠ	೫೯೫
		ಸಿರುಗುಪುರ	ರೇಣುಕಮಠ	ಗುರುವರ್ಗ	೫೯೬
	೫೪. ಶಿರಗುಪ್ಪ	ಶಾನವಾಸಪುರ	ದಾರುಕಮಠ	ಗುರುವರ್ಗ	೫೯೭
		ಶಿರಿಗೆರೆ	ಪಾಠಶಾಲೆಮಠ	ಗುರುವರ್ಗ	೫೯೭
		ಹಳೆಕೋಟೆ	ಮರಿಸ್ವಾಮಿತಾತನಮಠ	ವಿರಕ್ತಮಠ	೫೯೮
		ಹಾಚೋಹಳ್ಳಿ	ಮುತ್ತಿನಪೆಂಡಿಮಠ	ಗುರುವರ್ಗ	೫೯೮

ಜಿಲ್ಲೆ	ತಾಲ್ಲೂಕು	ಸ್ಥಳ	ಮಠ	ವರ್ಗ	ಪುಟ
	೫೫. ಸಂಡೂರು	ಗರಗ-ನಾಗಲಾಪುರ	ಒಪ್ಪತ್ತೇಶ್ವರ ವಿರಕ್ತಮಠ	ವಿರಕ್ತಮಠ	೬೦೦
		ಯಶವಂತನಗರ	ಸಿದ್ಧರಾಮೇಶ್ವರಮಠ	ವಿರಕ್ತಮಠ	೬೦೧
		ಸಂಡೂರು	ಪ್ರಭುದೇವರ ಸಂಸ್ಥಾನವಿರಕ್ತಮಠ	ವಿರಕ್ತಮಠ	೬೦೩
			ಮೌನಶರಣರಮಠ	———	೬೦೫
	೫೬.ಹಗರಿಬೊಮ್ಮನಹಳ್ಳಿ	ಅಲ್ಲೀಪುರ	ಶಿವಕಂಚಿಮಠ	———	೬೦೭
		ಕಡಲೆಬಾಳು	ಗವಿಸಿದ್ದೇಶ್ವರಮಠ	ಗುರುವರ್ಗ	೬೦೭
		ನಂದೀಪುರ	ದೊಡ್ಡಬಸವೇಶ್ವರಮಠ	———	೬೦೭
	೫೭. ಹೂವಿನಹಡಗಲಿ	ಕಂದಗಲ್ಲುಪುರ	ಸೋಗಿಪುರವರ್ಗಮಠ	ಗುರುವರ್ಗ	೬೦೮
		ಕುರುವತ್ತಿ	ತೋಂಟದಾರ್ಯ ವಿರಕ್ತಮಠ	ವಿರಕ್ತಮಠ	೬೦೯
		ಮಾನಿಹಳ್ಳಿ	ಪುರವರ್ಗಮಠ	ಗುರುವರ್ಗ	೬೧೦
		ಲಿಂಗನಾಯಕನಹಳ್ಳಿ	ಹಾಲವರ್ತಿಚನ್ನವೀರಸ್ವಾಮಿಗಳಮಠ	ವಿರಕ್ತಮಠ	೬೧೧
		ಹಿರೇಹಡಗಲಿ	ಹಾಲುಸ್ವಾಮಿಮಠ	ಗುರುವರ್ಗ	೬೧೩
		ಹೂವಿನಹಡಗಲಿ	ಗವಿಸಿದ್ದೇಶ್ವರ ಸಂಸ್ಥಾನಮಠ	ವಿರಕ್ತಮಠ	೬೧೩
			ಮಲ್ಲನಕೆರೆಮಠ	———	೬೧೪
			ಚರಂತಿಮಠ	ಗುರುವರ್ಗ	೬೧೪
		ಹೊಳಗುಂದಿ	ವಿರಕ್ತಮಠ	ವಿರಕ್ತಮಠ	೬೧೪
	೫೮. ಹೊಸಪೇಟೆ	ಕಂಪ್ಲಿ	ಕಲ್ಮಠ	ವಿರಕ್ತಮಠ	೬೧೬
			ತಗ್ಗಿನಮಠ	ಗುರುವರ್ಗ	೬೧೭
		ಬುಕ್ಕಸಾಗರ	ಗುರುಕರಿಸಿದ್ದೇಶ್ವರ ಸಂಸ್ಥಾನಮಠ	ಗುರುವರ್ಗ	೬೧೭
		ಮರಿಯಮ್ಮನಹಳ್ಳಿ	ಗುರುಪಾದದೇವರಮಠ	ಗುರುವರ್ಗ	೬೧೯
		ಹೊಸಪೇಟೆ	ಹೇಮಕೂಟ ಸಿಂಹಾಸನ ಕೊಟ್ಟೂರು ಸ್ವಾಮಿಮಠ	ವಿರಕ್ತಮಠ	೬೨೦
೧೬.ಬಾಗಲಕೋಟೆ	೫೯. ಜಮಖಂಡಿ	ಕೊಣ್ಣೂರು	ಹೊರಗಿನಮಠ	ಗುರುವರ್ಗ	೬೨೮
		ಚಿಮ್ಮಡ	ವಿರಕ್ತಮಠ	ವಿರಕ್ತಮಠ	೬೨೮
		ಜಮಖಂಡಿ	ಓಲೇಮಠ	ವಿರಕ್ತಮಠ	೬೩೦
			ಮುತ್ತಿನಕಂತೆ ಹಿರೇಮಠ	ಗುರುವರ್ಗ	೬೩೨
			ಕಲ್ಯಾಣಮಠ	ಗುರುವರ್ಗ	೬೩೩
		ತುಬಚಿ	ಶಿವಲಿಂಗೇಶ್ವರಮಠ	ವಿರಕ್ತಮಠ	೬೩೪
		ತೇರದಾಳು	ಹಿರೇಮಠ	ಗುರುವರ್ಗ	೬೩೪
			ವಿರಕ್ತಮಠ	ವಿರಕ್ತಮಠ	೬೩೪
		ಬಿದರಿ	ವಿರಕ್ತಮಠ	ವಿರಕ್ತಮಠ	೬೩೬
		ಮರೇಗುದ್ದಿ	ಅಡವಿಸಿದ್ದೇಶ್ವರಮಠ	ವಿರಕ್ತಮಠ	೬೩೭
			ಮಹಾಂತಮಠ	ವಿರಕ್ತಮಠ	೬೩೯
			ದಿಗಂಬರೇಶ್ವರ ಸಂಸ್ಥಾನಮಠ	ವಿರಕ್ತಮಠ	೬೩೯
		ರಬಕವಿ	ವಿರಕ್ತಮಠ	ವಿರಕ್ತಮಠ	೬೪೧
			ಬಾಗೋಜಿಮಠ	ವಿರಕ್ತಮಠ	೬೪೧
		ಹಿಪ್ಪರಗಿ	ಹಿರೇಮಠ	ಗುರುವರ್ಗ	೬೪೨
		ಹಿರೇಪಡಸಲಗಿ	ಹಿರೇಮಠ	ಗುರುವರ್ಗ	೬೪೩
		ಹುಲ್ಯಾಳ	ಹಿರೇಮಠ	ಗುರುವರ್ಗ	೬೪೪
	೬೦. ಬಾಗಲಕೋಟೆ	ಕಲಾದಗಿ	ಗುರುಲಿಂಗೇಶ್ವರಪಂಚಗ್ರಹ ಹಿರೇಮಠ	ಗುರುವರ್ಗ	೬೪೬

ಜಿಲ್ಲೆ	ತಾಲ್ಲೂಕು	ಸ್ಥಳ	ಮಠ	ವರ್ಗ	ಪುಟ
		ಕಾರಿಹಳ್ಳಿ	ದಾಸೋಹಮಠ	ವಿರಕ್ತಮಠ	೬೪೬
		ಕಿರಸೂರು	ಹಿರೇಮಠ	ಗುರುವರ್ಗ	೬೪೭
		ಚೌಡಾಪುರ	ರೇವಣಸಿದ್ಧಸ್ವಾಮಿಮಠ	ಗುರುವರ್ಗ	೬೪೮
		ಬಾಗಲಕೋಟೆ	ತೆಂಗಿನಮಠ-ಟೀಕಿನಮಠ	ವಿರಕ್ತಮಠ	೬೪೮
			ಚರಂತಿಮಠ	ವಿರಕ್ತಮಠ	೬೫೦
			ಕಸ್ತೂರಿಮಠ	ಗುರುವರ್ಗ	೬೫೧
		ಬಿಲ್ವಕೆರೂರು	ಬಿಲ್ವಾಶ್ರಮ ಹಿರೇಮಠ	ಗುರುವರ್ಗ	೬೫೨
		ಬೇವೂರು	ಗೌರಿಶಂಕರಮಠ	ಗುರುವರ್ಗ	೬೫೩
			ಹುಚ್ಚೇಶ್ವರಮಠ	ವಿರಕ್ತಮಠ	೬೫೩
		ಭಗವತಿ	ಶಿವಶಕ್ತಿಮಠ	———	೬೫೪
		ಮಲ್ಲಾಪುರ	ದುರುದುಂಡೇಶ್ವರಮಠ	ವಿರಕ್ತಮಠ	೬೫೪
		ಮುತ್ತತ್ತಿ	ಶಿವಯೋಗೀಶ್ವರಮಠ	ಗುರುವರ್ಗ	೬೫೫
		ಶಿರೂರು	ಸಿದ್ಧೇಶ್ವರಮಠ	ವಿರಕ್ತಮಠ	೬೫೫
			ಮಹಾಂತತೀರ್ಥ	ವಿರಕ್ತಮಠ	೬೫೬
		ಹಳ್ಳೂರು	ಹುಚ್ಚೇಶ್ವರಮಠ	ವಿರಕ್ತಮಠ	೬೫೭
	೬೧. ಬಾದಾಮಿ	ಕೆರೂರು	ವಿರಕ್ತಮಠ	ವಿರಕ್ತಮಠ	೬೫೮
			ಚರಂತಿಮಠ	ಗುರುವರ್ಗ	೬೫೯
		ಗುಳೇದಗುಡ್ಡ	ಮುರುಘಾಮಠ	ವಿರಕ್ತಮಠ	೬೫೯
			ಮರಡಿಮಠ	ಗುರುವರ್ಗ	೬೬೧
			ಅಮರೇಶ್ವರಮಠ	ಗುರುವರ್ಗ	೬೬೨
			ಗುರುಸಿದ್ಧೇಶ್ವರ ಬೃಹನ್ಮಠ	ಗುರುವರ್ಗ	೬೬೩
			ಒಪ್ಪತ್ತೇಶ್ವರಮಠ	ವಿರಕ್ತಮಠ	೬೬೪
			ಹೊಳೆಹುಚ್ಚೇಶ್ವರ ಸಂಸ್ಥಾನಮಠ	ವಿರಕ್ತಮಠ	೬೬೫
		ಬಾದಾಮಿ	ಶಿವಪ್ಪಯ್ಯನಮಠ	ಗುರುವರ್ಗ	೬೬೬
			ನವಗ್ರಹ ಹಿರೇಮಠ	ಗುರುವರ್ಗ	೬೬೬
	೬೨. ಬೀಳಗಿ	ಕುಂದರಗಿ	ಹಿರೇಮಠ	ಗುರುವರ್ಗ	೬೬೮
		ಗಲಗಲಿ	ಕಾಶಿಮಠ	ಗುರುವರ್ಗ	೬೬೮
		ಗಿರಿಸಾಗರ	ಕಲ್ಯಾಣಮಠ	ಗುರುವರ್ಗ	೬೬೯
		ಗುಳಬಾಳ	ಕೇದಾರಮಠ	ಗುರುವರ್ಗ	೬೭೦
		ನಾಗರಾಳು	ದಿಗಂಬರೇಶ್ವರಮಠ	ಗುರುವರ್ಗ	೬೭೦
		ಬಕ್ಕೇಶ್ವರ	ಬಕ್ಕೇಶ್ವರಮಠ	———	೬೭೧
		ಬಾಡಗಂಡಿ	ಕರವೀರಮಠ	ಗುರುವರ್ಗ	೬೭೧
		ಬೀಳಗಿ	ಸೋಮಪ್ಪಯ್ಯನಮಠ	ವಿರಕ್ತಮಠ	೬೭೨
			ಹಿರೇಮಠ	ಗುರುವರ್ಗ	೬೭೨
		ಬೂದಿಹಾಳು	ಫಕಿರೇಶ್ವರಮಠ	ವಿರಕ್ತಮಠ	೬೭೩
	೬೩. ಮುಧೋಳ	ಇಂಗಳಗಿ	ಹಿರೇಮಠ	ಗುರುವರ್ಗ	೬೭೫
		ಎಡಹಳ್ಳಿ	ಅಡವೀಶ್ವರಮಠ	ಗುರುವರ್ಗ	೬೭೫
		ಕಸಬಾ ಜಂಬಿಗೆ	ಹಿರೇಮಠ	ಗುರುವರ್ಗ	೬೭೬
		ನಾಗರಾಳು	ಅಂಬಿಗರ ಚೌಡಯ್ಯನಮಠ	ಶರಣಸ್ಥಲ	೬೭೭
		ಮಹಾಲಿಂಗಪುರ	ಮಹಾಲಿಂಗೇಶ್ವರಮಠ	———	೬೭೭

ಜಿಲ್ಲೆ	ತಾಲ್ಲೂಕು	ಸ್ಥಳ	ಮಠ	ವರ್ಗ	ಪುಟ
			ನೀಲಕಂಠೇಶ್ವರಮಠ	ಗುರುವರ್ಗ	೬೭೯
		ಮುಧೋಳ	ವಿರಕ್ತಮಠ - ಗವಿಮಠ	ವಿರಕ್ತಮಠ	೬೮೦
		ಲೋಕಾಪುರ	ಹಿರೇಮಠ	ಗುರುವರ್ಗ	೬೮೨
	೬೪. ಹುನಗುಂದ	ಅಮೀನಗಡ	ಗಚ್ಚಿನಮಠ	ವಿರಕ್ತಮಠ	೬೮೩
			ಲಾಳಸಂಗಿ ಹಿರೇಮಠ	ಗುರುವರ್ಗ	೬೮೪
			ಹಿರೇಮಠ	ಗುರುವರ್ಗ	೬೮೪
		ಇಲಕಲ್ಲು	ಚಿತ್ತರಗಿ ವಿಜಯಮಹಂತಮಠ	ವಿರಕ್ತಮಠ	೬೮೪
		ಕಮತಗಿ	ಹೊಳೆಹುಚ್ಚೇಶ್ವರ ಸಂಸ್ಥಾನಮಠ	ವಿರಕ್ತಮಠ	೬೮೯
			ಹಿರೇಮಠ	ಗುರುವರ್ಗ	೬೯೦
		ಕೂಡಲಸಂಗಮ	ಸಾರಂಗಮಠ	ಗುರುವರ್ಗ	೬೯೧
		ಗೂಡೂರು	ಹಿರೇಮಠ	ಗುರುವರ್ಗ	೬೯೨
		ನಂದವಾಡಗಿ	ಮಹಾಂತೇಶ್ವರ ಹಿರೇಮಠ	ಗುರುವರ್ಗ	೬೯೩
		ಹಡಗಲಿ	ರುದ್ರಸ್ವಾಮಿ ಪಟ್ಟದಮಠ	ಗುರುವರ್ಗ	೬೯೩
೧೭. ಬಿಜಾಪುರ	೬೫. ಇಂಡಿ	ಅಥರ್ಗ	ವಿರಕ್ತಮಠ	ವಿರಕ್ತಮಠ	೬೯೮
		ಇಂಡಿ	ಹಿರೇಮಠ	ಗುರುವರ್ಗ	೬೯೯
			ಅಲಸಂಗಿಮಠ	ಗುರುವರ್ಗ	೬೯೯
		ಇಂಚಗೇರಿ	ಕರಿಬಸವೇಶ್ವರಮಠ	ಗುರುವರ್ಗ	೬೯೯
		ಖೇಡಗಿ	ಗುಡ್ಡಸ್ವಾಮಿಮಠ	ವಿರಕ್ತಮಠ	೭೦೨
		ಚಡಚಣ	ಕರಿಬಸವೇಶ್ವರಮಠ	ಗುರುವರ್ಗ	೭೦೨
			ವಿರಕ್ತಮಠ	ವಿರಕ್ತಮಠ	೭೦೩
		ಜೇವೂರು	ರೇವಣಸಿದ್ಧೇಶ್ವರಮಠ	———	೭೦೩
		ಝಳಕಿ	ಹಿರೇಮಠ	ಗುರುವರ್ಗ	೭೦೪
			ಕಾಡಸಿದ್ಧೇಶ್ವರಮಠ	ಗುರುವರ್ಗ	೭೦೪
		ತಗ್ಗಿಹಳ್ಳಿ	ವಿರಕ್ತಮಠ	ವಿರಕ್ತಮಠ	೭೦೪
		ತಡವಲಗ	ಹಿರೇಮಠ	ಗುರುವರ್ಗ	೭೦೫
		ತದ್ದೇವಾಡಿ	ಹಿರೇಮಠ	ಗುರುವರ್ಗ	೭೦೫
		ನಾದ-ಲಾಳಸಂಗಿ	ಹಿರೇಮಠ	ಗುರುವರ್ಗ	೭೦೬
		ಬರಡೋಲ	ಮುಪ್ಪಿನಾರ್ಯ ಹಿರೇಮಠ	ಗುರುವರ್ಗ	೭೦೭
		ಬಂಥನಾಳು	ವೃಷಭಲಿಂಗೇಶ್ವರ ಸಂಸ್ಥಾನಮಠ	ವಿರಕ್ತಮಠ	೭೦೭
		ರೋಡಗಿ	ಸಾವಳಗಿ ಶಿವಲಿಂಗೇಶ್ವರ ವಿರಕ್ತಮಠ	ವಿರಕ್ತಮಠ	೭೦೯
		ಶಿರಶ್ಯಾಡ	ಹಿರೇಮಠ	ಗುರುವರ್ಗ	೭೧೦
		ಶಿವಪುರ	ಸಾವಳಗಿ ಶಿವಲಿಂಗೇಶ್ವರಮಠ	ವಿರಕ್ತಮಠ	೭೧೧
		ಹತ್ತಳ್ಳಿ	ಗುರುಪಾದೇಶ್ವರ ಹಿರೇಮಠ	ಗುರುವರ್ಗ	೭೧೧
		ಹಾವಿನಹಾಳ	ಚರಂತಿಮಠ	ಗುರುವರ್ಗ	೭೧೨
		ಹೊರ್ತಿ	ಅರಳೇಂದ್ರಮಠ	ಗುರುವರ್ಗ	೭೧೨
	೬೬.ಬಸವನಬಾಗೇವಾಡಿ	ಆಲಮಟ್ಟಿ	ಪುರವರ್ಗದ ಹಿರೇಮಠ	ಗುರುವರ್ಗ	೭೧೪
			ಕಟ್ಟಿಮನಿ ಹಿರೇಮಠ	ಗುರುವರ್ಗ	೭೧೪
		ಇಂಗಳೇಶ್ವರ	ವಿರಕ್ತಮಠ	ವಿರಕ್ತಮಠ	೭೧೫
			ಹಿರೇಮಠ	ಗುರುವರ್ಗ	೭೧೭
		ಚೈನಾಪುರ	ಪವಾಡ ಬಸವೇಶ್ವರ ಬೃಹನ್ಮಠ	ಗುರುವರ್ಗ	೭೧೭

ಜಿಲ್ಲೆ	ತಾಲ್ಲೂಕು	ಸ್ಥಳ	ಮಠ	ವರ್ಗ	ಪುಟ
		ಡೋಣೂರು	ಚಾನುಕೋಟಿಮಠ	ಗುರುವರ್ಗ	೭೧೯
		ದಿಂಡವಾರ	ಗಚ್ಚಿನಮಠ	ಗುರುವರ್ಗ	೭೨೦
		ನಿಡುಗುಂದಿ	ರುದ್ರಸ್ವಾಮಿ ಪಟ್ಟದಮಠ	ಗುರುವರ್ಗ	೭೨೦
		ಬಸವನಬಾಗೇವಾಡಿ	ಪಟ್ಟದಪದ್ಮರಾಜಒಡೆಯರಹಿರೇಮಠ	ಗುರುವರ್ಗ	೭೨೧
			ವಿರಕ್ತಮಠ	ವಿರಕ್ತಮಠ	೭೨೨
		ಮಸುಬಿನಾಳು	ದಾಸೋಹ ಸಂಸ್ಥಾನವಿರಕ್ತಮಠ	ವಿರಕ್ತಮಠ	೭೨೪
		ಮಸೂತಿ	ಜಗದೀಶ್ವರ ಹಿರೇಮಠ	ಗುರುವರ್ಗ	೭೨೫
		ಮನಗೋಳಿ	ಪಟ್ಟಕಂತೆಹಿರೇಮಠ	ಗುರುವರ್ಗ	೭೩೭
			ಹಿರೇಮಠ	ಗುರುವರ್ಗ	೭೨೭
		ಮುತ್ತಗಿ	ರುದ್ರಸ್ವಾಮಿ ಪಟ್ಟದಮಠ	ಗುರುವರ್ಗ	೭೨೯
		ಮುಳುವಾಡ	ಹಿರೇಮಠ	ಗುರುವರ್ಗ	೭೩೦
		ಯಂಬತ್ನಾಳ	ಬಸವಲಿಂಗೇಶ್ವರಮಠ	ಗುರುವರ್ಗ	೭೩೦
		ಯರನಾಳ-ಉಕ್ಕಲಿ	ವಿರಕ್ತಮಠ	ವಿರಕ್ತಮಠ	೭೩೦
		ವಡವಡಗಿ	ನಂದಿಮಠ	ವಿರಕ್ತಮಠ	೭೩೨
			ಶಿವಧಾಮ ಬೃಹನ್ಮಠ	ಗುರುವರ್ಗ	೭೩೩
		ಸಾಸನೂರು	ಮಡಿವಾಳೇಶ್ವರ ಹಿರೇಮಠ	ಗುರುವರ್ಗ	೭೩೩
		ಸಿಕಲವಾಡಿ	ಚಿಕ್ಕಮಠ	ಗುರುವರ್ಗ	೭೩೪
		ಹೂವಿನಹಡಗಲಿ	ಚಿಕ್ಕಮಠ	———	೭೩೪
	೬೭. ಬಿಜಾಪುರ	ಕನ್ನೂರು	ಗುರುಮಠ	ಗುರುವರ್ಗ	೭೩೫
		ಜಂಬಗಿ	ಹಿರೇಮಠ	ಗುರುವರ್ಗ	೭೩೭
			ವಿರಕ್ತಮಠ	ವಿರಕ್ತಮಠ	೭೩೭
		ತಿಕೋಟ	ಹಿರೇಮಠ	ಗುರುವರ್ಗ	೭೩೮
			ವಿರಕ್ತಮಠ	ವಿರಕ್ತಮಠ	೭೩೮
		ತೊರವಿ	ಹಿರೇಮಠ	ಗುರುವರ್ಗ	೭೩೯
		ನಾಗಠಾಣ	ಉದಯೇಶ್ವರಮಠ	ಗುರುವರ್ಗ	೭೪೦
		ಬಬಲೇಶ್ವರ	ಗುರುಪಾದೇಶ್ವರ ಬೃಹನ್ಮಠ	ಗುರುವರ್ಗ	೭೪೧
		ಬಾಬಾನಗರ	ಪುಣ್ಯದಮಠ	ಗುರುವರ್ಗ	೭೪೩
		ಬಿಜಾಪುರ	ಜ್ಞಾನಯೋಗಾಶ್ರಮ	———	೭೪೩
			ಅರಳೆಲೆಮಠ	ಗುರುವರ್ಗ	೭೪೪
			ಹಿರೇಮಠ	ಗುರುವರ್ಗ	೭೪೪
		ಬಿಜ್ಜರಗಿ	ವಿರಕ್ತಮಠ	ವಿರಕ್ತಮಠ	೭೪೫
		ಬೊಮ್ಮನಹಳ್ಳಿ	ಗವಿಮಠ	ಗುರುವರ್ಗ	೭೪೬
		ಮಮದಾಪುರ	ವಿರಕ್ತಮಠ	ವಿರಕ್ತಮಠ	೭೪೭
	೬೮. ಮುದ್ದೇಬಿಹಾಳು	ಕುಂಟೋಜಿ	ಹಿರೇಮಠ	ಗುರುವರ್ಗ	೭೪೮
			ಕರಿವಿರೇಶ್ವರಮಠ	ಗುರುವರ್ಗ	೭೪೮
		ಕೇಶಾಪುರ	ಸಂಗಮೇಶ್ವರ ಸಂಸ್ಥಾನ ಬೃಹನ್ಮಠ	ಗುರುವರ್ಗ	೭೫೦
		ತಮದಡ್ಡಿ	ಭದ್ರೇಶ್ವರಮಠ	ವಿರಕ್ತಮಠ	೭೫೧
		ತಾಳಿಕೋಟೆ	ಖಾಸಗತೇಶ್ವರ ವಿರಕ್ತಮಠ	ವಿರಕ್ತಮಠ	೭೫೧
		ನಾವದಗಿ	ಹಿರೇಮಠ	ಗುರುವರ್ಗ	೭೫೪
		ಬಳಗಾನೂರು	ವಿರಕ್ತಮಠ	ವಿರಕ್ತಮಠ	೭೫೬

ಜಿಲ್ಲೆ	ತಾಲ್ಲೂಕು	ಸ್ಥಳ	ಮಠ	ವರ್ಗ	ಪುಟ
		ಕೊಮ್ಮನಾಳು	ಶಾಂತಲಿಂಗೇಶ್ವರ ಕಡಗಂಚಿಮಠ	ಗುರುವರ್ಗ	೨೫೬
		ಮಡಕೆಶಿರೂರು - ಬಿದರಕುಂದಿ	ಶಿವಯೋಗಾಶ್ರಮ	ವಿರಕ್ತಮಠ	೨೫೬
		ಹಿರೂರು	ಅನ್ನದಾನೇಶ್ವ ಸಂಸ್ಥಾನ ಹಿರೇಮಠ	ಗುರುವರ್ಗ	೨೫೯
	೬೯. ಸಿಂದಗಿ	ಅಸ್ಕಿ	ಪಟ್ಟದದೇವರಮಠ	ಗುರುವರ್ಗ	೨೬೦
		ಆಲಮೇಲು	ತಾರಾಪುರ ಹಿರೇಮಠ	ಗುರುವರ್ಗ	೨೬೧
			ಸಂಸ್ಥಾನ ಹಿರೇಮಠ	ಗುರುವರ್ಗ	೨೬೨
			ಹೊಸಮಠ	ಗುರುವರ್ಗ	೨೬೨
			ವಿರಕ್ತಮಠ	ವಿರಕ್ತಮಠ	೨೬೨
		ಕನ್ನೊಳಿ	ಹಿರೇಮಠ	ಗುರುವರ್ಗ	೨೬೩
		ಕಲಕೇರಿ	ಹಿರೇಮಠ	ಗುರುವರ್ಗ	೨೬೪
			ಗದ್ದುಗೆಮಠ	ಗುರುವರ್ಗ	೨೬೬
			ವಿರಕ್ತಮಠ	ವಿರಕ್ತಮಠ	೨೬೬
		ಕೆರುಟಗಿ	ಸಿದ್ಧರಾಮೇಶ್ವರಮಠ	ಗುರುವರ್ಗ	೨೬೭
		ಕೊಕಟನೂರು	ಮಡಿವಾಳಪ್ಪನಮಠ	ವಿರಕ್ತಮಠ	೨೬೮
		ಕೋರವಾರ	ಮಹಾಂತೇಶ್ವರಮಠ	ಗುರುವರ್ಗ	೨೬೮
		ಕೋರಹಳ್ಳಿ	ಹಿರೇಮಠ	ಗುರುವರ್ಗ	೨೬೯
			ಶಬ್ದಸ್ವಾಮಿ ಚರಂತಿಮಠ	ಗುರುವರ್ಗ	೨೭೦
		ಗೋಲಗೇರಿ	ವಿರಕ್ತಮಠ	ವಿರಕ್ತಮಠ	೨೭೦
		ತಿಳಗುಳ	ಮಹಾಂತೇಶ್ವರಮಠ	ಗುರುವರ್ಗ	೨೭೧
		ದೇವರಹಿಪ್ಪರಗಿ	ಗದ್ದುಗೆಮಠ	ಗುರುವರ್ಗ	೨೭೨
			ಜಡೆಮಠ	ಗುರುವರ್ಗ	೨೭೩
			ಸದಾಶಿವಮಠ	ಗುರುವರ್ಗ	೨೭೩
			ಪರದೇಶಿಮಠ	ಗುರುವರ್ಗ	೨೭೪
			ಹಿರೇಮಠ	ಗುರುವರ್ಗ	೨೭೪
			ಶಾಂತನಮಠ	ಗುರುವರ್ಗ	೨೭೫
		ದೇವಣಗಾಂವ್	ಬಕ್ಕೇಶ್ವರಮಠ	ವಿರಕ್ತಮಠ	೨೭೫
		ದೇವೂರು	ಪಟ್ಟದದೇವರಮಠ	ಗುರುವರ್ಗ	೨೭೬
		ಬನ್ನಿಹಟ್ಟಿ	ಸಂಗಮೇಶ್ವರಮಠ	ಗುರುವರ್ಗ	೨೭೭
		ಬೋರಗಿ	ವಿಶ್ವಾರಾಧ್ಯರಮಠ	———	೨೭೭
		ಮಲಘಾಣ	ಜಡೆಶಾಂತೇಶ್ವರಮಠ	ಗುರುವರ್ಗ	೨೭೭
		ಮೋರಟಗಿ	ನೂರೊಂದೇಶ್ವರ ವಿರಕ್ತಮಠ	ವಿರಕ್ತಮಠ	೨೭೮
		ಯಂಕಂಚಿ	ಕುಂಟೋಜಿಮಠ	ಗುರುವರ್ಗ	೨೮೦
		ಸಿಂದಗಿ	ಸಾರಂಗಮಠ	ಗುರುವರ್ಗ	೨೮೦
			ಶಾಂತವೀರೇಶ್ವರ ಹಿರೇಮಠ	ಗುರುವರ್ಗ	೨೮೩
			ವಿರಕ್ತಮಠ	ವಿರಕ್ತಮಠ	೨೮೪
		ಸೋಮಜ್ಯಾಳ	ಮಲ್ಲಿಕಾರ್ಜುನ ಹಿರೇಮಠ	ಗುರುವರ್ಗ	೨೮೫
		ಹರ್ನಾಳು	ರೇವಣಸಿದ್ಧಮಠ	ಗುರುವರ್ಗ	೨೮೭
೧೮. ಬೀದರ್	೭೦. ಔರಾದ	ಕಮಲನಗರ	ಹಿರೇಮಠ	ಗುರುವರ್ಗ	೨೯೧
		ಕುಶನೂರುಠಾಣಾ	ವಿರಕ್ತಮಠ	ವಿರಕ್ತಮಠ	೨೯೧

ಜಿಲ್ಲೆ	ತಾಲ್ಲೂಕು	ಸ್ಥಳ	ಮಠ	ವರ್ಗ	ಪುಟ
		ಕೌಠಾ (ಬಿ)	ಬೆಲ್ಲದಾಳು ಶರಣರ ಆಶ್ರಮ	ಶರಣಸ್ಥಲ	೭೯೨
		ಮುಧೋಳ (ಬಿ)	ಶಿವಲಿಂಗೇಶ್ವರಮಠ	ಗುರುವರ್ಗ	೭೯೩
		ಹಾವಗಿ	ಹಿರೇಮಠ	ಗುರುವರ್ಗ	೭೯೪
		ಹೆಡಗಾಪುರ	ಹಿರೇಮಠ	ಗುರುವರ್ಗ	೭೯೪
	೭೧. ಬಸವಕಲ್ಯಾಣ	ಖೇಳಗಿ	ವಿರಕ್ತಮಠ	ವಿರಕ್ತಮಠ	೭೯೫
		ಖೇಡ (ಬಿ)	ಹಿರೇಮಠ	ಗುರುವರ್ಗ	೭೯೫
		ಗಡಿಗೌಡಗಾಂವ್	ಹಿರೇಮಠ	ಗುರುವರ್ಗ	೭೯೫
		ಬಸವಕಲ್ಯಾಣ	———	———	೭೯೬
		ಬಟಗೇರ	ಗೋಣಿರುದ್ರೇಶ್ವರಮಠ	———	೭೯೭
		ಬೇಲೂರು	ಹಿರೇಮಠ	ಗುರುವರ್ಗ	೭೯೭
		ಮಂಠಾಳ	ಗುಹೇಶ್ವರಮಠ	———	೭೯೮
		ರಾಜೇಶ್ವರ	ಹಿರೇಮಠ	ಗುರುವರ್ಗ	೭೯೮
		ಹಾರಕೊಡ	ಹಿರೇಮಠ	ಗುರುವರ್ಗ	೭೯೮
		ಹಿರೇನಾಗಾಂವ್	ವಿರಕ್ತಮಠ	ವಿರಕ್ತಮಠ	೮೦೦
		ಹುಲಸೂರು	ಗುರುಬಸವೇಶ್ವರ ಸಂಸ್ಥಾನಮಠ	ವಿರಕ್ತಮಠ	೮೦೧
	೭೨. ಭಾಲ್ಕಿ	ಮೆಹಕರ್	ಹಿರೇಮಠ	ಗುರುವರ್ಗ	೮೦೪
		ನಾವದಗಿ	ವಿರಕ್ತಮಠ	ವಿರಕ್ತಮಠ	೮೦೪
		ಭಾಲ್ಕಿ	ಹಿರೇಮಠ	ಗುರುವರ್ಗ	೮೦೪
		ಭಾತಂಬ್ರಾ	ವಿರಕ್ತಮಠ	ವಿರಕ್ತಮಠ	೮೦೮
	೭೩. ಬೀದರ್	ಅಲಿಯಂಬರ	ಹಿರೇಮಠ	ಗುರುವರ್ಗ	೮೧೦
		ಚಾಂಬೋಳ	ಹಿರೇಮಠ	ಗುರುವರ್ಗ	೮೧೧
		ನಿಡವಂಚಾ	ಚೌಕಿಮಠ	ವಿರಕ್ತಮಠ	೮೧೧
	೭೪. ಹುಮನಬಾದ್	ಇಟಗಾ	ಚನ್ನಮಲ್ಲೇಶ್ವರ ತ್ಯಾಗಿಯೋಗಾಶ್ರಮ	———	೮೧೩
		ಚಿಟಗುಪ್ಪ	ಹಿರೇಮಠ	ಗುರುವರ್ಗ	೮೧೩
		ವಿಮಲಖೇಡ	ಹಿರೇಮಠ	ಗುರುವರ್ಗ	೮೧೪
		ಹುಮನಬಾದ್	ಬಸವತೀರ್ಥ ವಿರಕ್ತಮಠ	ವಿರಕ್ತಮಠ	೮೧೫
			ಮುರುಘಾಮಠ	ವಿರಕ್ತಮಠ	೮೧೫
			ಹಿರೇಮಠ	ಗುರುವರ್ಗ	೮೧೫
		ಹುಡುಗಿ	ಹಿರೇಮಠ	ಗುರುವರ್ಗ	೮೧೬
			ವಿರಕ್ತಮಠ	ವಿರಕ್ತಮಠ	೮೧೭
		ಹುಲಕುಂಠಿ	ವಿರಕ್ತಮಠ	ವಿರಕ್ತಮಠ	೮೧೭
೧೯. ಬೆಳಗಾವಿ	೭೫. ಅಥಣಿ	ಅಥಣಿ	ಗಚ್ಚಿನಮಠ	ವಿರಕ್ತಮಠ	೮೨೧
			ಮೋರಟಗಿಮಠ	ವಿರಕ್ತಮಠ	೮೨೨
			ಕುಮಾರಮಠ	ವಿರಕ್ತಮಠ	೮೨೪
			ಗೊಟಕಿಂಡಿಮಠ	ವಿರಕ್ತಮಠ	೮೨೪
			ಹಿರೇಮಠ	ಗುರುವರ್ಗ	೮೨೫
		ತೆಲಸಂಗ	ವಿರಕ್ತಮಠ	ವಿರಕ್ತಮಠ	೮೨೫
			ಹಿರೇಮಠ	ಗುರುವರ್ಗ	೮೩೫
		ಶೇಗುಣಸಿ	ವಿರಕ್ತಮಠ	ವಿರಕ್ತಮಠ	೮೨೬
		ಸನದಿ	ಸಂಗನಬಸವೇಶ್ವರ ವಿರಕ್ತಮಠ	ವಿರಕ್ತಮಠ	೮೨೬

ಜಿಲ್ಲೆ	ತಾಲ್ಲೂಕು	ಸ್ಥಳ	ಮಠ	ವರ್ಗ	ಪುಟ
		ಹಳಿಯಾಳ	ಶಿವಯೋಗಿಗುರುಸಿದ್ಧೇಶ್ವರವಿರಕ್ತಮಠ	ವಿರಕ್ತಮಠ	೮೨೭
	೭೬. ಖಾನಾಪುರ	ಉಳಗಡ್ಡಿ ಖಾನಾಪುರ	ಹಿರೇಮಠ	ಗುರುವರ್ಗ	೮೨೮
		ನಂದಗಡ	ವಿರಕ್ತಮಠ	ವಿರಕ್ತಮಠ	೮೨೮
	೭೭. ಗೋಕಾಕ್	ಅರಭಾವಿ	ದುರುದುಂಡೇಶ್ವರಮಠ	ವಿರಕ್ತಮಠ	೮೩೦
		ಅಂಕಲಗಿ	ಅಡವಿಸಿದ್ಧೇಶ್ವರಮಠ	ವಿರಕ್ತಮಠ	೮೩೨
		ಕುಂದರಗಿ	ಅಡವಿಸಿದ್ಧೇಶ್ವರಮಠ	ವಿರಕ್ತಮಠ	೮೩೩
		ಕೊಣ್ಣೂರುಮರಡಿಮಠ	ಕಾಡಸಿದ್ಧೇಶ್ವರಮಠ	ವಿರಕ್ತಮಠ	೮೩೩
		ಗೋಕಾಕ್	ಸಂಪಾದನೆಮಠ	ವಿರಕ್ತಮಠ	೮೩೫
			ಹಿರೇಮಠ	ಗುರುವರ್ಗ	೮೩೬
			ಮುಪ್ಪಯ್ಯನವರಮಠ	ಗುರುವರ್ಗ	೮೩೭
			ಚರಂತೇಶ್ವರಮಠ	ವಿರಕ್ತಮಠ	೮೩೭
		ಘಟಪ್ರಭ	ಕೆಂಪಯ್ಯಸ್ವಾಮಿಮಠ	ವಿರಕ್ತಮಠ	೮೩೮
			ಹೊಸಮಠ	ವಿರಕ್ತಮಠ	೮೩೮
		ಮಮದಾಪುರ	ಚರಮೂರ್ತೇಶ್ವರ ಮಹಾಮಠ	ಗುರುವರ್ಗ	೮೩೮
		ಯಾದವಾಡ	ಚೌಕಿಮಠ	ವಿರಕ್ತಮಠ	೮೩೯
		ಯೋಗಿಕೊಳ್ಳ	ವಿರಕ್ತಮಠ	ವಿರಕ್ತಮಠ	೮೪೦
		ಸಾವಳಗಿ	ಶಿವಲಿಂಗೇಶ್ವರ ಸಿದ್ಧಸಂಸ್ಥಾನಮಠ	———	೮೪೦
		ಸುಣ್ಣದೋಳಿ	ಜಡೆಸಿದ್ಧೇಶ್ವರಮಠ	———	೮೪೩
	೭೮. ಚಿಕ್ಕೋಡಿ	ಅಡಿ	ಸಿದ್ಧೇಶ್ವರಮಠ	ವಿರಕ್ತಮಠ	೮೪೫
			ಗಿರಿಮಠ	ವಿರಕ್ತಮಠ	೮೪೫
		ಖಟ್ಕಲಾಟ	ವಿರಕ್ತಮಠ	ವಿರಕ್ತಮಠ	೮೪೬
		ಗಳತಗ	ಕಾಡಸಿದ್ಧೇಶ್ವರಮಠ	ವಿರಕ್ತಮಠ	೮೪೭
		ಚಿಕ್ಕೋಡಿ	ಸಂಪಾದನಸಂಸ್ಥಾನ ಚರಮೂರ್ತಿಮಠ	ವಿರಕ್ತಮಠ	೮೪೭
		ಚಿಂಚಣಿ	ಪ್ರಭುದೇವರಮಠ	ವಿರಕ್ತಮಠ	೮೪೮
		ನಿಪ್ಪಾಣಿ	ದಮ್ಮಯ್ಯನಮಠ	ವಿರಕ್ತಮಠ	೮೪೯
		ಯಡೂರು	ಕಾಡಸಿದ್ಧೇಶ್ವರಮಠ	ಗುರುವರ್ಗ	೮೫೦
	೭೯. ಬೆಳಗಾವಿ	ಅರಳಿಕಟ್ಟೆ	ವಿರಕ್ತಮಠ	ವಿರಕ್ತಮಠ	೮೫೧
		ಕಡೋಲಿ	ದುರುದುಂಡೇಶ್ವರಮಠ	ವಿರಕ್ತಮಠ	೮೫೨
		ಬೆಳಗಾವಿ	ನಾಗನೂರು ರುದ್ರಾಕ್ಷಿಮಠ	ವಿರಕ್ತಮಠ	೮೫೨
			ಕಾರಂಜಿಮಠ	ವಿರಕ್ತಮಠ	೮೫೭
			ಕಲ್ಮಠ	ಗುರುವರ್ಗ	೮೫೮
			ಬಸವಗುರುಕುಲಮಠ	ವಿರಕ್ತಮಠ	೮೫೮
		ಬೆಂಡಿಗೇರಿ	ಹಿರೇಮಠ	ಗುರುವರ್ಗ	೮೫೮
		ಭೂತರಾಮನಹಟ್ಟಿ	ಮುಕ್ತಿಮಠ	ಗುರುವರ್ಗ	೮೫೯
		ಮುತ್ನಾಳು	ಬೃಹನ್ಮಠ	ಗುರುವರ್ಗ	೮೫೯
	೮೦. ಬೈಲಹೊಂಗಲ	ಅಣ್ಣಿಕೇರಿ	ಹಿರೇಮಠ	ಗುರುವರ್ಗ	೮೬೧
		ಕಾದರವಳ್ಳಿ	ಸೀಮೆಮಠ	ಗುರುವರ್ಗ	೮೬೧
		ಕಿತ್ತೂರು	ಕಲ್ಮಠ	ವಿರಕ್ತಮಠ	೮೬೨
		ಚಿಕ್ಕನಾಯಕನಕೊಪ್ಪ	ದೇವರಕೊಂಡಮಠ	———	೮೬೩
		ದೇಶನೂರು	ವಿರಕ್ತಮಠ	ವಿರಕ್ತಮಠ	೮೬೩

ಜಿಲ್ಲೆ	ತಾಲ್ಲೂಕು	ಸ್ಥಳ	ಮಠ	ವರ್ಗ	ಪುಟ
		ದೇವರಶೀಗೆಹಳ್ಳಿ	ಮಡಿವಾಳೇಶ್ವರಮಠ	ವಿರಕ್ತಮಠ	೮೬೪
		ದೊಡವಾಡ	ಹಿರೇಮಠ	ಗುರುವರ್ಗ	೮೬೪
		ನಿಚ್ಚಣಕಿ	ಮಡಿವಾಳೇಶ್ವರಮಠ	ವಿರಕ್ತಮಠ	೮೬೫
		ಬೈಲಹೊಂಗಲ	ತಿಪ್ಪೇಮಠ	ವಿರಕ್ತಮಠ	೮೬೫
			ರುದ್ರಾಕ್ಷಿಮಠ	ವಿರಕ್ತಮಠ	೮೬೭
			ಕುಂಬಾರಗೇರಿ ಹಿರೇಮಠ	ಗುರುವರ್ಗ	೮೬೭
		ಬೈಲೂರು	ಬಸವತತ್ತ್ವ ಮಂದಿರ	ವಿರಕ್ತಮಠ	೮೬೮
		ಸಂಗೊಳ್ಳಿ	ಹಿರೇಮಠ	ಗುರುವರ್ಗ	೮೬೮
		ಸಂಪಗಾಂವ್	ಕಾಟಾಪುರಿಮಠ	ಗುರುವರ್ಗ	೮೬೮
		ಸುತಗಟ್ಟಿ	ಹಿರೇಮಠ	ಗುರುವರ್ಗ	೮೬೯
		ಹಣಬರಹಟ್ಟಿ	ಹಿರೇಮಠ	ಗುರುವರ್ಗ	೮೬೯
	೮೧. ರಾಯಭಾಗ	ನಂದಿಕುರಳಿ	ಪಂಚಲಿಂಗೇಶ್ವರಮಠ	ವಿರಕ್ತಮಠ	೮೭೦
		ಬೆಂಡವಾಡ	ರೇವಣಸಿದ್ಧೇಶ್ವರಮಠ	ವಿರಕ್ತಮಠ	೮೭೦
			ವಿರಕ್ತಮಠ	ವಿರಕ್ತಮಠ	೮೭೧
		ಹಂದಿಗುಂದ	ಸಿದ್ಧೇಶ್ವರಮಠ	ವಿರಕ್ತಮಠ	೮೭೧
	೮೨. ರಾಮದುರ್ಗ	ಅವರಾಧಿ	ಫಲಹಾರೇಶ್ವರಮಠ	ವಿರಕ್ತಮಠ	೮೭೨
		ಖಟಕೋಳ	ಕುಮಾರೇಶ್ವರಮಠ	ವಿರಕ್ತಮಠ	೮೭೩
			ಚೌಕಿಮಠ	ವಿರಕ್ತಮಠ	೮೭೪
			ಹಿರೇಮಠ	ಗುರುವರ್ಗ	೮೭೪
			ಗಡದೇಶ್ವರ ಹಿರೇಮಠ	ಗುರುವರ್ಗ	೮೭೪
		ಗೊಡಚಿ	ಗುರುಗಡದೇಶ್ವರಮಠ	ಗುರುವರ್ಗ	೮೭೫
		ಚಿಪ್ಪಲಕಟ್ಟಿ	ಗುರುಮಠ	ಗುರುವರ್ಗ	೮೭೫
		ಎಂ.ಚಂದರಗಿ	ಹಿರೇಮಠ	ಗುರುವರ್ಗ	೮೭೫
		ತೋರಗಲ್ಲು	ಗಚ್ಚಿನ ಹಿರೇಮಠ	ಗುರುವರ್ಗ	೮೭೬
		ಬನ್ನೂರು	ಹಿರೇಮಠ	ಗುರುವರ್ಗ	೮೭೬
			ಚಿಕ್ಕಮಠ	ಗುರುವರ್ಗ	೮೭೭
		ಬಟಕುರ್ಕಿ	ವಿರಕ್ತಮಠ	ವಿರಕ್ತಮಠ	೮೭೭
		ಬಿಜಗುಪ್ಪ	ಹಿರೇಮಠ	ಗುರುವರ್ಗ	೮೭೮
		ಬಾಗೋಜಿಕೊಪ್ಪ	ಹಿರೇಮಠ	ಗುರುವರ್ಗ	೮೭೯
		ಮುಳ್ಳೂರು	ಹಿರೇಮಠ	ಗುರುವರ್ಗ	೮೭೯
		ರಾಮದುರ್ಗ	ಶಿವಮೂರ್ತೇಶ್ವರ ವಿರಕ್ತಮಠ	ವಿರಕ್ತಮಠ	೮೭೯
	೮೩. ಸವದತ್ತಿ	ಇನಾಂಹೊಂಗಲ	ವಿರಕ್ತಮಠ	ವಿರಕ್ತಮಠ	೮೮೧
		ಉಗರಗೋಳ	ನಿರ್ವಾಣೇಶ್ವರಮಠ	ವಿರಕ್ತಮಠ	೮೮೨
		ಮುರಗೋಡು	ದುರುದುಂಡೇಶ್ವರಮಠ	ವಿರಕ್ತಮಠ	೮೮೨
			ಹಿರೇಮಠ	ಗುರುವರ್ಗ	೮೮೪
			ಚೌಕಿಮಠ	———	೮೮೫
		ಮುನವಳ್ಳಿ	ಆಲೂರುಮಠ	ವಿರಕ್ತಮಠ	೮೮೫
			ಅನ್ನದಾನೇಶ್ವರಮಠ	ವಿರಕ್ತಮಠ	೮೮೬
			ವಿರಕ್ತಮಠ	ವಿರಕ್ತಮಠ	೮೮೬
			ಸೋಮಶೇಖರಮಠ	ವಿರಕ್ತಮಠ	೮೮೬

ಜಿಲ್ಲೆ	ತಾಲ್ಲೂಕು	ಸ್ಥಳ	ಮಠ	ವರ್ಗ	ಪುಟ
		ಯಕ್ಕುಂಡಿ	ಕುಮಾರೇಶ್ವರ ವಿರಕ್ತಮಠ	ವಿರಕ್ತಮಠ	೮೮೭
		ಸವದತ್ತಿ	ಸ್ವಾದಿಮಠ	ವಿರಕ್ತಮಠ	೮೮೭
			ಕಲ್ಮಠ	ವಿರಕ್ತಮಠ	೮೮೮
			ಹೊಸಮಠ	ವಿರಕ್ತಮಠ	೮೮೯
			ಕಳ್ಳಿಮಠ	ಗುರುವರ್ಗ	೮೯೦
			ಬೆಟನೂರುಮಠ	ಗುರುವರ್ಗ	೮೯೦
		ಸತ್ತಿಗೇರಿ	ಹಿರೇಮಠ	ಗುರುವರ್ಗ	೮೯೧
		ಹಳಕಟ್ಟಿ	ಸಾಂಬಯ್ಯನಮಠ	ಗುರುವರ್ಗ	೮೯೧
		ಹೂಲಿ	ಪಂಚವಣ್ಣಿಗಿ ಚರಪಟ್ಟಾಧಿಕಾರದಮಠ	ಗುರುವರ್ಗ	೮೯೨
			ಪಂಚವಣ್ಣಿಗಿ ಸ್ಥಿರಪಟ್ಟಾಧಿಕಾರದಮಠ	ಗುರುವರ್ಗ	೮೯೪
			ಶಾಂಬಯ್ಯನವರಮಠ	ಗುರುವರ್ಗ	೮೯೫
		ಹೊಸೂರು	ಮಡಿವಾಳಸ್ವಾಮಿಮಠ	ವಿರಕ್ತಮಠ	೮೯೬
	೮೪. ಹುಕ್ಕೇರಿ	ಘೋಡಗೇರಿ	ವಿರಕ್ತಮಠ	ವಿರಕ್ತಮಠ	೮೯೭
		ನಿಡಸೋಸಿ	ಸಿದ್ಧಸಂಸ್ಥಾನಮಠ	ವಿರಕ್ತಮಠ	೮೯೭
		ಪಾಶ್ಚಾಪುರ	ಹುಚ್ಚೇಶ್ವರ ಸಂಸ್ಥಾನಹಿರೇಮಠ	ಗುರುವರ್ಗ	೯೦೦
		ಬೆಲ್ಲದಬಾಗೇವಾಡಿ	ಮಹಾಂತೇಶ್ವರ ವಿರಕ್ತಮಠ	ವಿರಕ್ತಮಠ	೯೦೧
		ಯಮಕನಮರಡಿ	ಹುಣಸೆಕೊಳ್ಳಮಠ	ವಿರಕ್ತಮಠ	೯೦೨
		ಶಿರಢಾಣ	ಮೂರುಸಾವಿರಮಠದ ಶಾಖಾಮಠ	ವಿರಕ್ತಮಠ	೯೦೩
		ಸಂಕೇಶ್ವರ	ವಿರಕ್ತಮಠ	ವಿರಕ್ತಮಠ	೯೦೩
		ಹತ್ತರಗಿ	ಸಿದ್ಧೇಶ್ವರಮಠ	ವಿರಕ್ತಮಠ	೯೦೩
		ಹುಕ್ಕೇರಿ	ಹಿರೇಮಠ	ಗುರುವರ್ಗ	೯೦೪
			ಶಿವಲಿಂಗೇಶ್ವರ ವಿರಕ್ತಮಠ	ವಿರಕ್ತಮಠ	೯೦೫
			ಅಡವಿಮಠ	ವಿರಕ್ತಮಠ	೯೦೬
೨೦.ಬೆಂಗಳೂರುನಗರ	೮೫. ಆನೇಕಲ್ಲು	ರಾಜಾಪುರ	ಸಂಸ್ಥಾನಮಠ	ಗುರುವರ್ಗ	೯೧೦
	೮೬.ಬೆಂಗಳೂರು ಉತ್ತರ ಮತ್ತು ದಕ್ಷಿಣ ವಲಯ	ಕೆಂಗೇರಿ	ಬಂಡೇಮಠ	ವಿರಕ್ತಮಠ	೯೧೩
		ಬೆಂಗಳೂರು ನಗರ	ಕರಿಸಿದ್ಧ ದೇವರಮಠ	ವಿರಕ್ತಮಠ	೯೧೪
			ಕೊಳದಮಠ	ವಿರಕ್ತಮಠ	೯೧೪
			ಗಂಜಾಂಮಠ	ವಿರಕ್ತಮಠ	೯೧೬
			ಗುರುವಣ್ಣ ದೇವರಮಠ	ವಿರಕ್ತಮಠ	೯೧೭
			ಗೋದುರಯ್ಯನಮಠ	ವಿರಕ್ತಮಠ	೯೧೮
			ಜಂಗಮಮಠ	ವಿರಕ್ತಮಠ	೯೧೯
			ತಿಪ್ಪಶೆಟ್ಟಿಮಠ	ವಿರಕ್ತಮಠ	೯೧೯
			ದೊಡ್ಡಮಠ	ವಿರಕ್ತಮಠ	೯೨೦
			ನರಗುಂದದೇವರಮಠ	ವಿರಕ್ತಮಠ	೯೨೦
			ನಿಜಗುಣಮಠ	ವಿರಕ್ತಮಠ	೯೨೧
			ಬೇಲಿಮಠ	ವಿರಕ್ತಮಠ	೯೨೨
			ಮಹಾಂತಿನಮಠ	ಗುರುವರ್ಗ	೯೨೬
			ಮುತ್ತಿನಕಂತೆಮಠ	ಗುರುವರ್ಗ	೯೨೬
		ವಿಭೂತಿಪುರ	ವಿಭೂತಿಪುರಮಠ	ಗುರುವರ್ಗ	೯೨೭

ಜಿಲ್ಲೆ	ತಾಲ್ಲೂಕು	ಸ್ಥಳ	ಮಠ	ವರ್ಗ	ಪುಟ
		ಬೆಂಗಳೂರು ನಗರ	ಶಂಕರದೇವರಮಠ	ವಿರಕ್ತಮಠ	೯೨೯
			ಸರ್ಪಭೂಷಣಮಠ	ವಿರಕ್ತಮಠ	೯೩೦
		ಹುಣಸಮಾರನಹಳ್ಳಿ	ಹುಣಸಮಾರನಹಳ್ಳಿ ಸಂಸ್ಥಾನಮಠ	ಗುರುವರ್ಗ	೯೩೧
೨೧. ಬೆಂಗಳೂರು ಗ್ರಾಮಾಂತರಜಿಲ್ಲೆ	೮೭. ಕನಕಪುರ	ಅಜ್ಜಬಸವನಹಳ್ಳಿ	ಗದ್ದುಗೆಮಠ	ಗುರುವರ್ಗ	೯೩೭
		ಕನಕಪುರ	ದೇಗುಲಮಠ	ವಿರಕ್ತಮಠ	೯೩೮
		ಕಬ್ಬಾಳು	ಬಿಲ್ವಪತ್ರೆ ಗವಿಮಠ	ವಿರಕ್ತಮಠ	೯೪೪
		ಕೋಡಿಹಳ್ಳಿ	ಪಟ್ಟದಮಠ	ಗುರುವರ್ಗ	೯೪೫
		ಗುರುವಿನಪುರ	ಪಟ್ಟದಮಠ	ಗುರುವರ್ಗ	೯೪೫
		ಚಿಕ್ಕಕಲ್ಲುಬಾಳು	ಪಟ್ಟದಮಠ	ಗುರುವರ್ಗ	೯೪೬
		ತೋಟಹಳ್ಳಿ	ವಿರಕ್ತಮಠ	ವಿರಕ್ತಮಠ	೯೪೬
		ದೊಡ್ಡಮರಳವಾಡಿ	ಶಿವಮಠ	ವಿರಕ್ತಮಠ	೯೪೭
		ಪಡುವಣಗೆರೆ	ಮಹಂತೇಶ್ವರಮಠ	ವಿರಕ್ತಮಠ	೯೪೮
		ಮರಳೆ	ಮರಳೆ ಗವಿಮಠ	ವಿರಕ್ತಮಠ	೯೪೮
		ಮಡಿವಾಳ	ಓಂಕಾರೇಶ್ವರ ಬೃಹನ್ಮಠ	ಗುರುವರ್ಗ	೯೫೨
		ಮುಳ್ಳಳ್ಳಿ	ಶಾಂತಲಿಂಗಸ್ವಾಮಿಮಠ	ಗುರುವರ್ಗ	೯೫೩
			ಕಂತೆಭಿಕ್ಷಮಠ	ದಾಸೋಹಮಠ	೯೫೫
		ಹುಣಸನಹಳ್ಳಿ	ಜಂಗಮಮಠ	ವಿರಕ್ತಮಠ	೯೫೫
		ಹೊರಳಕಲ್ಲು	ಮಹಂತೇಶ್ವರಮಠ	ವಿರಕ್ತಮಠ	೯೫೬
	೮೮. ಚನ್ನಪಟ್ಟಣ	ಚನ್ನಪಟ್ಟಣ	ಕುಡಿನೀರುಕಟ್ಟೆ ವಿರಕ್ತಮಠ	ವಿರಕ್ತಮಠ	೯೫೮
		ಬೇವೂರು	ಮಲ್ಲಿಕಾರ್ಜುನಸ್ವಾಮಿಮಠ	ಗುರುವರ್ಗ	೯೫೯
	೮೯. ದೊಡ್ಡಬಳ್ಳಾಪುರ	ಖಾನಿ	ಖಾನಿಮಠ	ವಿರಕ್ತಮಠ	೯೬೨
	೯೦. ದೇವನಹಳ್ಳಿ	ವಿಜಯಪುರ	ಬಸವಕಲ್ಯಾಣಮಠ	ವಿರಕ್ತಮಠ	೯೬೪
	೯೧. ನೆಲಮಂಗಲ	ತ್ಯಾಮಗೊಂಡಲು	ಕಾಲುವೆಮಠ	ವಿರಕ್ತಮಠ	೯೬೬
		ದೊಡ್ಡಬೆಲೆ	ದೊಡ್ಡಮಠ	ವಿರಕ್ತಮಠ	೯೬೭
		ನೆಲಮಂಗಲ	ಪವಾಡ ಬಸವಣ್ಣದೇವರಮಠ	ವಿರಕ್ತಮಠ	೯೬೮
			ಹೊಸಮಠ	ವಿರಕ್ತಮಠ	೯೭೦
			ಚೌಕಿಮಠ	ವಿರಕ್ತಮಠ	೯೭೧
			ಮಹಾಂತಿನಮಠ	ಗುರುವರ್ಗ	೯೭೧
		ಶಿವಗಂಗೆ	ಮೇಲಣಗವಿ ಸಂಸ್ಥಾನಮಠ	ಗುರುವರ್ಗ	೯೭೩
			ಕಂಬಾಳು ಸಂಸ್ಥಾನಮಠ	ಗುರುವರ್ಗ	೯೭೫
			ಹೊನ್ನಮ್ಮಗವಿ ಸಂಸ್ಥಾನಮಠ	ಗುರುವರ್ಗ	೯೭೭
	೯೨. ಮಾಗಡಿ	ಕಣ್ಣೂನೂರು	ಮಕ್ಕಳದೇವರಮಠ	ವಿರಕ್ತಮಠ	೯೭೮
		ಕಲ್ಯ	ಜಂಗಮಮಠ	ಗುರುವರ್ಗ	೯೮೧
		ಕಾಳೇರಿ	ಜಂಗಮಮಠ	ಗುರುವರ್ಗ	೯೮೧
		ಗುಮ್ಮಸಂದ್ರ	ರುದ್ರಮುನೀಶ್ವರಮಠ	ಗುರುವರ್ಗ	೯೮೨
		ಚಕ್ರಬಾವಿ	ಚಕ್ರಬಾವಿಮಠ	ಗುರುವರ್ಗ	೯೮೨
		ತಿಪ್ಪಸಂದ್ರ	ಮೂಡಲಮಠ	ವಿರಕ್ತಮಠ	೯೮೩
		ಮಾಗಡಿ	ಅರೆಶಂಕರಮಠ	ಗುರುವರ್ಗ	೯೮೪
			ಜಡೆದೇವರಮಠ	ವಿರಕ್ತಮಠ	೯೮೫

ಜಿಲ್ಲೆ	ತಾಲ್ಲೂಕು	ಸ್ಥಳ	ಮಠ	ವರ್ಗ	ಪುಟ
		ಸೋಲೂರು	ಚಿಲಮೆಮಠ	ವಿರಕ್ತಮಠ	೯೮೬
			ಕಪಲೆಮಠ	ವಿರಕ್ತಮಠ	೯೮೮
			ಗದ್ದುಗೆಮಠ	ವಿರಕ್ತಮಠ	೯೮೮
		ಹುಲಿಕಲ್ಲು	ತೋಪಿನಮಠ	ವಿರಕ್ತಮಠ	೯೮೯
			ಶುಂಠಿಮಠ	ಗುರುವರ್ಗ	೯೯೦
	೯೩. ರಾಮನಗರ	ಅಪ್ಪೇರಹಳ್ಳಿ	ರೇವಣಸಿದ್ಧೇಶ್ವರ ಬೆಟ್ಟದಮಠ	ಗುರುವರ್ಗ	೯೯೧
		ಗೊಲ್ಲರಪಾಳ್ಯ	ಬಸವಸಿದ್ಧಲಿಂಗ ಧರ್ಮಪೀಠ	ವಿರಕ್ತಮಠ	೯೯೨
		ಬಿಡದಿ	ಚೌಕಿಮಠ	ವಿರಕ್ತಮಠ	೯೯೩
		ಭೈರುಮಂಗಲ-ಸಂಗನ ಬಸವನದೊಡ್ಡಿ	ವಿರೂಪಾಕ್ಷ ದೇವರಮಠ	ವಿರಕ್ತಮಠ	೯೯೩
	೯೪. ಹೊಸಕೋಟೆ	ಹೋಸಕೋಟೆ	ಶರಣೆ ವೀರಮ್ಮನವರಮಠ	ಗುರುವರ್ಗ	೯೯೫
೨೨. ಮಂಡ್ಯ	೯೫. ಕೆ.ಆರ್. ಪೇಟೆ	ಕಾಪನಹಳ್ಳಿ	ಗವಿಮಠ	ವಿರಕ್ತಮಠ	೧೦೦೦
		ತೆಂಡೆಕೆರೆ	ರಂಭಾಪುರಿಖಾಸಾ ಶಾಖಾಮಠ	ಗುರುವರ್ಗ	೧೦೦೦
	೯೬. ಪಾಂಡವಪುರ	ತಾಳಶಾಸನ	ಭಿಕ್ಷದಮಠ	ದಾಸೋಹಮಠ	೧೦೦೨
		ಬೇಬಿಗ್ರಾಮ	ಮಹಾಂತ ಶಿವಯೋಗಿಗಳಮಠ	ವಿರಕ್ತಮಠ	೧೦೦೨
			ಮೇಲಿನಮಠ	ವಿರಕ್ತಮಠ	೧೦೦೪
	೯೭. ಮದ್ದೂರು	ಮಠದದೊಡ್ಡಿ	ಮಠದದೊಡ್ಡಿಮಠ	ಗುರುವರ್ಗ	೧೦೦೫
		ಮಡೇನಹಳ್ಳಿ	ತೋಂಟದಾರ್ಯಮಠ	ವಿರಕ್ತಮಠ	೧೦೦೭
		ವೈದ್ಯನಾಥಪುರ	ಕದಂಬ ಜಂಗಮಮಠ	ಗುರುವರ್ಗ	೧೦೦೮
		ಹೊನ್ನಲಗೆರೆ	ಶಿವಕ್ಷೇತ್ರಮಠ	ಗುರುವರ್ಗ	೧೦೦೯
	೯೮. ಮಳವಳ್ಳಿ	ಕಿರುಗಾವಲು	ಬಸವೇಶ್ವರಮಠ	ಗುರುವರ್ಗ	೧೦೧೦
		ಕುಂದೂರು	ಸರ್ಪಭೂಷಣ ಶಿವಯೋಗಿಗಳಮಠ	ಗುರುವರ್ಗ	೧೦೧೦
			ದೊಡ್ಡಮಠ	ಗುರುವರ್ಗ	೧೦೧೧
		ಕ್ಯಾತನಹಳ್ಳಿ	ಗುರುಮಲ್ಲೇಶ್ವರ ದಾಸೋಹಮಠ	ದಾಸೋಹಮಠ	೧೦೧೨
		ಚಿಕ್ಕಬಾಗಿಲು	ಭಿಕ್ಷದಮಠ	ದಾಸೋಹಮಠ	೧೦೧೩
		ತೆಂಕನಹಳ್ಳಿ	ಕುಂದೂರುಬೆಟ್ಟಮಠ	ಗುರುವರ್ಗ	೧೦೧೩
		ದೊಡ್ಡಬೂವಳ್ಳಿ	ಗುರುಮಲ್ಲೇಶ್ವರ ದಾಸೋಹಮಠ	ದಾಸೋಹಮಠ	೧೦೧೪
		ಧನಗೂರು	ವೀರಸಿಂಹಾಸನಮಠ	ಗುರುವರ್ಗ	೧೦೧೪
		ನಂಜೇಗೌಡನದೊಡ್ಡಿ	ದಾಸೋಹಮಠ	ದಾಸೋಹಮಠ	೧೦೧೮
		ನೆಲ್ಲಿಕೆರೆ	ಪಟ್ಟದ ಮಹಾಂತ ಸ್ವಾಮಿಗಳಮಠ	ದಾಸೋಹಮಠ	೧೦೧೯
		ಪೂರಿಗಾಲಿ	ಚನ್ನಬಸವ ಒಡೆಯರಮಠ	ಗುರುವರ್ಗ	೧೦೧೯
		ಬೆಳಕವಾಡಿ	ಹೊಳೆಕೆರೆಮಠ	ಗುರುವರ್ಗ	೧೦೨೦
			ಭಿಕ್ಷದಮಠ	ದಾಸೋಹಮಠ	೧೦೨೦
		ಬೆಳಕೋಡಿಹೊಸಳ್ಳಿ	ಸಿದ್ಧಮಲ್ಲೇಶ್ವರ ಪಟ್ಟದಮಠ	ದಾಸೋಹಮಠ	೧೦೨೨
		ಬೊಪ್ಪೇಗೌಡನಪುರ	ಹೊರಮಠ	ಗುರುವರ್ಗ	೧೦೨೨
		ಮಳವಳ್ಳಿ	ಶಂಕರಮಠ	ಗುರುವರ್ಗ	೧೦೨೪
		ರಾಗಿಬೊಮ್ಮನಹಳ್ಳಿ	ಪಟ್ಟದಮಠ	ಗುರುವರ್ಗ	೧೦೨೫
		ಸರಗೂರು	ಸರಗೂರುಮಠ	ಗುರುವರ್ಗ	೧೦೨೫
		ಹಣಕೊಳ	ಪಟ್ಟದಮಠ	ಗುರುವರ್ಗ	೧೦೨೭
		ಹಲಗೂರು	ಬೃಹನ್ಮಠ	ಗುರುವರ್ಗ	೧೦೨೭

ಜಿಲ್ಲೆ	ತಾಲ್ಲೂಕು	ಸ್ಥಳ	ಮಠ	ವರ್ಗ	ಪುಟ
		ಹಲಸಹಳ್ಳಿ	ಗವಿಮಠ	ಗುರುವರ್ಗ	೧೦೨೯
	೯೯. ಮಂಡ್ಯ	ಗುತ್ತಲ	ಗುತ್ತಲ ಜಂಗಮಮಠ	ಗುರುವರ್ಗ	೧೦೩೧
		ಪುರ	ಗುರುಮಲ್ಲೇಶ್ವರಮಠ	ದಾಸೋಹಮಠ	೧೦೩೨
		ಹಾಲುಕೆರೆ	ಗುರುಮಲ್ಲೇಶ್ವರ ದಾಸೋಹಮಠ	ದಾಸೋಹಮಠ	೧೦೩೨
		ಹೊನಗಳ್ಳಿ	ಹೊನಗಳ್ಳಿಮಠ	———	೧೦೩೨
೨೩. ಮೈಸೂರು	೧೦೦. ಕೆ.ಆರ್.ನಗರ	ಅರಕೆರೆ	ವಿರಕ್ತಮಠ	ವಿರಕ್ತಮಠ	೧೦೩೬
		ಎಲೆಮುದ್ದನಹಳ್ಳಿ	ವಿರಕ್ತಮಠ	ವಿರಕ್ತಮಠ	೧೦೩೭
		ಅಂಕನಹಳ್ಳಿ	ಬಸವಕಲ್ಯಾಣ ವಿರಕ್ತಮಠ	ವಿರಕ್ತಮಠ	೧೦೩೭
		ಕರ್ಪೂರವಳ್ಳಿ	ಜಂಗಮಮಠ	ಗುರುವರ್ಗ	೧೦೩೮
		ನರಚನಹಳ್ಳಿ	ಅಂಬಲಿಮಠ	ಗುರುವರ್ಗ	೧೦೩೯
		ಮಾರಗೊಂಡನಹಳ್ಳಿ	ಮಾರಗೊಂಡನಹಳ್ಳಿಮಠ	ಗುರುವರ್ಗ	೧೦೪೦
		ಲಾಲನಹಳ್ಳಿ	ಗುರುಮಲ್ಲೇಶ್ವರ ದಾಸೋಹಮಠ	ದಾಸೋಹಮಠ	೧೦೪೦
		ಸರಗೂರು	ಪಟ್ಟದಮಠ	ಗುರುವರ್ಗ	೧೦೪೧
		ಹಾಡ್ಯ	ಈಶಾನೇಶ್ವರಮಠ	ಗುರುವರ್ಗ	೧೦೪೧
	೧೦೧. ಟಿ.ನರಸೀಪುರ	ಕಳ್ಳೀಪುರ	ಪಟ್ಟದಮಠ	ಗುರುವರ್ಗ	೧೦೪೨
		ಕರೋಹಟ್ಟಿ	ವಿರಕ್ತಮಠ	ವಿರಕ್ತಮಠ	೧೦೪೩
		ಕಾವೇರಿಪುರ	ಗುರುಮಲ್ಲೇಶ್ವರ ದಾಸೋಹಮಠ	ದಾಸೋಹಮಠ	೧೦೪೩
		ಕುರುಬೂರು	ಕುರುಬೂರುಮಠ	ಗುರುವರ್ಗ	೧೦೪೪
		ಚಿದರಳ್ಳಿ	ಗವಿಮಠ	ವಿರಕ್ತಮಠ	೧೦೪೪
		ತಲಕಾಡು	ಹಸ್ತಿಕೇರಿಮಠ	ಗುರುವರ್ಗ	೧೦೪೭
		ಟಿ. ನರಸೀಪುರ	ತ್ರಿಯಂಬಕಮಠ	ಗುರುವರ್ಗ	೧೦೪೯
			ಸೇತುವೆಮಠ	ದಾಸೋಹಮಠ	೧೦೫೦
		ನರೆಗ್ಯಾತನಹಳ್ಳಿ	ವಿರಕ್ತಮಠ	ವಿರಕ್ತಮಠ	೧೦೫೧
		ಪರಿಣಾಮಿಪುರ	ಬಿದರಚೌಕಿಮಠ	ವಿರಕ್ತಮಠ	೧೦೫೨
		ಬಿಲಿಗೆರೆಹುಂಡಿ	ದಾಸೋಹಮಠ	ದಾಸೋಹಮಠ	೧೦೫೩
		ಬೆನಕನಹಳ್ಳಿ	ಪಟ್ಟದಮಠ	ಗುರುವರ್ಗ	೧೦೫೪
		ಮದ್ದಾಗರಲಿಂಗಯ್ಯನಹುಂಡಿ	ಉಕ್ಕಲಗೆರೆ ಬೆಟ್ಟದಮಠ	ವಿರಕ್ತಮಠ	೧೦೫೫
		ಮಾಡರಹಳ್ಳಿ	ಪಟ್ಟದಮಠ	ಗುರುವರ್ಗ	೧೦೫೬
		ಮುಡುಕುತೊರೆ	ತೋಪಿನಮಠ	ಗುರುವರ್ಗ	೧೦೫೭
			ಕಲ್ಮಠ	ವಿರಕ್ತಮಠ	೧೦೫೯
		ಮೇದಿನಿ	ಪಟ್ಟದಮಠ	ಗುರುವರ್ಗ	೧೦೫೯
		ರಾಮೇಗೌಡನಪುರ	ಪಟ್ಟದಮಠ	ಗುರುವರ್ಗ	೧೦೬೦
		ವಾಟಾಳು	ಸಂಸ್ಥಾನಮಠ	ಗುರುವರ್ಗ	೧೦೬೧
		ವೀರಪ್ಪಒಡೆಯರಹುಂಡಿ	ಪಟ್ಟದಮಠ	ಗುರುವರ್ಗ	೧೦೬೩
		ಸೋಸಲೆ	ತೋಪಿನಮಠ	ವಿರಕ್ತಮಠ	೧೦೬೩
		ಹಲವಾರು	ಸುತ್ತೂರುಖಾಸಾ ಶಾಖಾಮಠ	ಗುರುವರ್ಗ	೧೦೬೫
	೧೦೨. ನಂಜನಗೂಡು	ಕಸುವಿನಹಳ್ಳಿ	ಪಟ್ಟದಮಠ	ಗುರುವರ್ಗ	೧೦೬೭
			ಗುರುಮಲ್ಲೇಶ್ವರ ದಾಸೋಹಮಠ	ದಾಸೋಹಮಠ	೧೦೬೭
		ಕಾರ್ಯ	ಪ್ರಭುಸ್ವಾಮಿಮಠ	ಗುರುವರ್ಗ	೧೦೬೮
		ಚುಂಚನಹಳ್ಳಿ	ಕಡಕಲಕಟ್ಟೆಮಠ	ಗುರುವರ್ಗ	೧೦೬೯

ಜಿಲ್ಲೆ	ತಾಲ್ಲೂಕು	ಸ್ಥಳ	ಮಠ	ವರ್ಗ	ಪುಟ
		ದೇವನೂರು	ದಾಸೋಹ ಮಹಾಸಂಸ್ಥಾನಮಠ	ದಾಸೋಹಮಠ	೧೦೭೯
		ನಂಜನಗೂಡು	ಕನಕಗಿರಿ ಕೆಂಡಗಣ್ಣಸ್ವಾಮಿಮಠ	———	೧೦೭೩
			ಹೊಂದಲಗೆರೆಮಠ	ಗುರುವರ್ಗ	೧೦೭೪
		ನವಿಲೂರು	ಗುರುಮಲ್ಲೇಶ್ವರಮಠ	ದಾಸೋಹಮಠ	೧೦೭೪
		ಬಸವನಪುರ	ಮಲ್ಲನಮೂಲೆಮಠ	ದಾಸೋಹಮಠ	೧೦೭೫
		ಶಿರಮಳ್ಳಿ	ಮುರುಘಸ್ವಾಮಿ ವಿರಕ್ತಮಠ	ವಿರಕ್ತಮಠ	೧೦೭೯
		ಸಂಗಮಕ್ಷೇತ್ರ	ಕಾರ್ಯಸ್ವಾಮಿಮಠ	ಗುರುವರ್ಗ	೧೦೮೦
			ಮಹದೇವ ತಾತನವರ ಐಕ್ಯಸ್ಥಳ	———	೧೦೮೦
		ಸುತ್ತೂರು	ಶಿವರಾತ್ರೀಶ್ವರ ಸಂಸ್ಥಾನಮಠ	ಗುರುವರ್ಗ	೧೦೮೧
		ಸೂರಹಳ್ಳಿ	ವಿರಕ್ತಮಠ	ವಿರಕ್ತಮಠ	೧೦೯೨
			ಭಿಕ್ಷದಮಠ	ದಾಸೋಹಮಠ	೧೦೯೩
		ಹುಲ್ಲಹಳ್ಳಿ	ಹುಲ್ಲಹಳ್ಳಿ ವಿರಕ್ತಮಠ	ವಿರಕ್ತಮಠ	೧೦೯೩
	೧೦೩. ಪಿರಿಯಾಪಟ್ಟಣ	ದಿಂಡಗಾಡು	ಬಸವಜ್ಯೋತಿಮಠ	ವಿರಕ್ತಮಠ	೧೦೯೫
		ಬೆಟ್ಟದಪುರ	ವಿರಕ್ತಮಠ	ವಿರಕ್ತಮಠ	೧೦೯೫
		ರಾವಂದೂರು	ಮುರುಘಾಮಠ	ವಿರಕ್ತಮಠ	೧೦೯೭
	೧೦೪. ಮೈಸೂರು	ದಂಡಿಕೆರೆ	ದಂಡಿಕೆರೆಮಠ	ಗುರುವರ್ಗ	೧೦೯೮
		ಬರಡನಪುರ	ಪಟ್ಟದಮಠ	ಗುರುವರ್ಗ	೧೦೯೮
		ಮೈಸೂರು	ಅರಮನೆ ಪಂಚಗವಿಮಠ	ವಿರಕ್ತಮಠ	೧೦೯೯
			ಅನ್ನದಾನೇಶ್ವರಮಠ	ವಿರಕ್ತಮಠ	೧೧೦೦
			ಕುಂದೂರುಮಠ	ವಿರಕ್ತಮಠ	೧೧೦೪
			ಜಪದಕಟ್ಟೆಮಠ	ಗುರುವರ್ಗ	೧೧೦೪
			ನಮಃ ಶಿವಾಯಮಠ	———	೧೧೦೬
			ನೀಲಕಂಠ ಸ್ವಾಮಿಗಳಮಠ	ವಿರಕ್ತಮಠ	೧೧೦೬
			ಮಡಿವಾಳಸ್ವಾಮಿಮಠ	ದಾಸೋಹಮಠ	೧೧೦೮
			ಶಿವಾಯ ನಮಃಮಠ	ವಿರಕ್ತಮಠ	೧೧೦೮
			ಸುತ್ತೂರು ಶಾಖಾಮಠ	ಗುರುವರ್ಗ	೧೧೦೯
			ಹೊಸಮಠ	ವಿರಕ್ತಮಠ	೧೧೦೯
		ಶೆಟ್ಟಿನಾಯಕನಹಳ್ಳಿ	ಪಟ್ಟದಮಠ	ಗುರುವರ್ಗ	೧೧೧೨
	೧೦೫. ಹುಣಸೂರು	ಗಾವಡಗೆರೆ	ಓಂ ಶ್ರೀ ಗುರುಲಿಂಗ ಜಂಗಮ ದೇವರಮಠ	ಗುರುವರ್ಗ	೧೧೧೩
		ಮಾದಹಳ್ಳಿ	ಉಕ್ಕಿನಕಂತೆಮಠ	ಗುರುವರ್ಗ	೧೧೧೪
	೧೦೬.ಹೆಗ್ಗಡದೇವನಕೋಟೆ	ದಡದಹಳ್ಳಿ	ಗುರುಮಲ್ಲೇಶ್ವರ ಪಟ್ಟದಮಠ	ದಾಸೋಹಮಠ	೧೧೧೬
		ನಂಜೂಪುರ	ನಂಜೂಪುರಮಠ	ವಿರಕ್ತಮಠ	೧೧೧೭
		ಬಿಡಗಲು	ಪಡುವಲುಮಠ	ವಿರಕ್ತಮಠ	೧೧೧೭
			ಮೂಡಲಮಠ	ಗುರುವರ್ಗ	೧೧೧೮
		ಮಾದಾಪುರ	ಚಂದ್ರಮೌಳೇಶ್ವರಮಠ	ಗುರುವರ್ಗ	೧೧೧೯
		ಹಂಚೀಪುರ	ಪಟ್ಟದಮಠ	ದಾಸೋಹಮಠ	೧೧೨೦
೨೪.ರಾಯಚೂರು	೧೦೭. ದೇವದುರ್ಗ	ಗಬ್ಬೂರು	ಬೂದಿಬಸವೇಶ್ವರಮಠ	ಗುರುವರ್ಗ	೧೧೨೪
			ಸಾವಿರದೇವರಮಠ	ಗುರುವರ್ಗ	೧೧೨೫
		ಗೆಜ್ಜೆಬಾವಿ	ಚನ್ನಬಸವೇಶ್ವರಮಠ	ಗುರುವರ್ಗ	೧೧೨೬

ಜಿಲ್ಲೆ	ತಾಲ್ಲೂಕು	ಸ್ಥಳ	ಮಠ	ವರ್ಗ	ಪುಟ
		ಜಾಲಹಳ್ಳಿ	ಜಯಶಾಂತಲಿಂಗೇಶ್ವರ ಸಂಸ್ಥಾನಮಠ	ಗುರುವರ್ಗ	೧೧೨೮
		ದೇವದುರ್ಗ	ಸಿದ್ಧರಾಮೇಶ್ವರ ಶಿಖರಮಠ	ಗುರುವರ್ಗ	೧೧೩೨
		ನೀಲಗಲ್ಲು	ಬೃಹನ್ಮಠ	ಗುರುವರ್ಗ	೧೧೩೪
		ಮಸರಕಲ್ಲು	ಮರುಳೇಂದ್ರಸ್ವಾಮಿಮಠ	ವಿರಕ್ತಮಠ	೧೧೩೫
	೧೦೮. ಮಾನವಿ	ಅಡವಿಅಮರೇಶ್ವರ	ಅಡವಿಅಮರೇಶ್ವರಮಠ	ವಿರಕ್ತಮಠ	೧೧೩೬
		ಊಟಕನೂರು	ಅಡವಿಸಿದ್ಧೇಶ್ವರಮಠ	ಗುರುವರ್ಗ	೧೧೩೭
		ಕರೆಗುಡ್ಡ	ಹಿರೇಮಠ	ಗುರುವರ್ಗ	೧೧೩೮
		ಚಿಕ್ಕಲಪರ್ವಿ	ರುದ್ರದೇವರಮಠ	ವಿರಕ್ತಮಠ	೧೧೩೮
		ನವಿಲಕಲ್ಲು	ಹಿರೇಮಠ	ಗುರುವರ್ಗ	೧೧೩೯
		ಮಾನವಿ	ಕಲ್ಮಠ	ಗುರುವರ್ಗ	೧೧೪೦
	೧೦೯. ರಾಯಚೂರು	ಚಿಕ್ಕಸುಗೂರು	ಚೌಕಿಮಠ	ವಿರಕ್ತಮಠ	೧೧೪೨
		ಬಿಚ್ಚಾಲಿ	ಸಾವಿರದೇವರ ಸಂಸ್ಥಾನಮಠ	ಗುರುವರ್ಗ	೧೧೪೩
		ಮಟಮರಿ	ಮಹಾಂತೇಶ್ವರಮಠ	ಗುರುವರ್ಗ	೧೧೪೪
		ರಾಯಚೂರು	ಖಿಲ್ಲೆ ಬೃಹನ್ಮಠ	ಗುರುವರ್ಗ	೧೧೪೪
			ಶಿಖರಮಠ	ಗುರುವರ್ಗ	೧೧೪೫
			ಸೋಮವಾರಪೇಟೆ ಹಿರೇಮಠ	ಗುರುವರ್ಗ	೧೧೪೬
			ಮಂಗಳವಾರಪೇಟೆಮಠ	ಗುರುವರ್ಗ	೧೧೪೬
	೧೧೦. ಲಿಂಗಸುಗೂರು	ಗುರುಗುಂಟ	ತೋಪಿನಕಟ್ಟೆ ಸಂಸ್ಥಾನಮಠ	ಗುರುವರ್ಗ	೧೧೪೭
			ರಾಜಗುರುಮಠ	ವಿರಕ್ತಮಠ	೧೧೪೮
		ದೇವರಭೂಪುರ	ಬೃಹನ್ಮಠ	ಗುರುವರ್ಗ	೧೧೪೮
		ಮಸ್ಕಿ	ಗಚ್ಚಿನ ಹಿರೇಮಠ	ಗುರುವರ್ಗ	೧೧೫೧
		ಲಿಂಗಸುಗೂರು	ವಿಜಯಮಹಾಂತೇಶ್ವರಮಠ	ವಿರಕ್ತಮಠ	೧೧೫೨
			ತೋಂಟದಾರ್ಯಮಠ	ವಿರಕ್ತಮಠ	೧೧೫೨
		ಸಂತೆಕೆಲ್ಲೂರು	ಘನಮಠದಾರ್ಯರಮಠ	ವಿರಕ್ತಮಠ	೧೧೫೨
	೧೧೧. ಸಿಂಧನೂರು	ಒಳಬಳ್ಳಾರಿ	ಸುವರ್ಣಗಿರಿ ವಿರಕ್ತಮಠ	ವಿರಕ್ತಮಠ	೧೧೫೪
		ಗೋಪುರಕಲ್ಲು	ಕರಿವಿರೇಶ್ವರ ಹಿರೇಮಠ	ಗುರುವರ್ಗ	೧೧೫೫
		ತುರುವಿಹಾಳು	ಹಿರೇಮಠ	ಗುರುವರ್ಗ	೧೧೫೬
		ಮುಳ್ಳೂರು	ಶಂಭುಲಿಂಗೇಶ್ವರಮಠ	———	೧೧೫೬
		ಸಿಂಧನೂರು	ಕಲ್ಮಠ	ಗುರುವರ್ಗ	೧೧೫೭
೨೫. ಶಿವಮೊಗ್ಗ	೧೧೨. ತೀರ್ಥಹಳ್ಳಿ	ಕವಲೇದುರ್ಗ	ಕೆಳದಿ ರಾಜಗುರು ಮಹಂತ್ತಿನ ಭುವನಗಿರಿ ಸಂಸ್ಥಾನಮಠ	ಗುರುವರ್ಗ	೧೧೬೨
		ಕೋಣಂದೂರು	ಉದ್ಧಾದೇವರ ಮಠ	ಗುರುವರ್ಗ	೧೧೬೩
			ಉಡೇವು ಶಿವಲಿಂಗೇಶ್ವರ ಬೃಹನ್ಮಠ	ಗುರುವರ್ಗ	೧೧೬೪
		ಮಳಲಿ	ಸಂಸ್ಥಾನಮಳಲಿಮಠ	ಗುರುವರ್ಗ	೧೧೬೪
	೧೧೩. ಭದ್ರಾವತಿ	ಅರಕೆರೆ	ಅರಕೆರೆಮಠ	ವಿರಕ್ತಮಠ	೧೧೬೭
		ಗೋಣಿಬೀಡು	ಶೀಲಸಂಪಾದನಮಠ	ವಿರಕ್ತಮಠ	೧೧೬೯
		ಬಿಳಕಿ	ಹಿರೇಮಠ	ಗುರುವರ್ಗ	೧೧೭೦
	೧೧೪. ಶಿವಮೊಗ್ಗ	ಶಿವಮೊಗ್ಗ	ಬೆಕ್ಕಿನಕಲ್ಮಠ	ವಿರಕ್ತಮಠ	೧೧೭೧
	೧೧೫. ಶಿಕಾರಿಪುರ	ಕಪ್ಪನಹಳ್ಳಿ-ಕಾಳೇನಹಳ್ಳಿ	ಶಿವಯೋಗಾಶ್ರಮ	ವಿರಕ್ತಮಠ	೧೧೭೩
		ಕಣಸೋಗಿ	ಹೊಂಡದಮಠ	ಗುರುವರ್ಗ	೧೧೭೫

ಜಿಲ್ಲೆ	ತಾಲ್ಲೂಕು	ಸ್ಥಳ	ಮಠ	ವರ್ಗ	ಪುಟ
	೧೩೦. ಸವಣೂರು	ಮಹಾದೇವಪುರ	ಶಂಭುಲಿಂಗೇಶ್ವರಮಠ	ಗುರುವರ್ಗ	೧೨೭೨
		ಮಂತ್ರವಾಡಿ	ರೇವಣಸಿದ್ಧೇಶ್ವರಮಠ	ಗುರುವರ್ಗ	೧೨೭೨
		ಸವಣೂರು	ದೊಡ್ಡ ಹುಣಸೆಮಠ	ವಿರಕ್ತಮಠ	೧೨೭೪
			ಕಲ್ಮಠ	ವಿರಕ್ತಮಠ	೧೨೭೬
			ಅಡವಿಸ್ವಾಮಿಮಠ	ವಿರಕ್ತಮಠ	೧೨೭೭
		ಹತ್ತಿಮತ್ತೂರು	ವಿರಕ್ತಮಠ	ವಿರಕ್ತಮಠ	೧೨೭೮
		ಹೂವಿನಶಿಗ್ಲಿ	ವಿರಕ್ತಮಠ	ವಿರಕ್ತಮಠ	೧೨೭೯
	೧೩೧. ಹಾವೇರಿ	ಅಗಡಿ	ಪ್ರಭುಸ್ವಾಮಿಮಠ	ವಿರಕ್ತಮಠ	೧೨೮೧
			ಅಕ್ಕಿಮಠ	ವಿರಕ್ತಮಠ	೧೨೮೨
		ಕರ್ಜಿಗೆ	ಗೌರಿಮಠ	ಗುರುವರ್ಗ	೧೨೮೩
			ಹೊಸಮಠ	ವಿರಕ್ತಮಠ	೧೨೮೪
		ಕನವಳ್ಳಿ	ಚರಂತಿಮಠ	ಗುರುವರ್ಗ	೧೨೮೪
		ಗುತ್ತಲ	ವಿರಕ್ತಮಠ	ವಿರಕ್ತಮಠ	೧೨೮೬
		ನೆಗಳೂರು	ಹಿರೇಮಠ	ಗುರುವರ್ಗ	೧೨೮೬
		ಹಂದಿಗನೂರು	ವಿರಕ್ತಮಠ	ವಿರಕ್ತಮಠ	೧೨೮೭
		ಹಾವೇರಿ	ಹುಕ್ಕೇರಿಮಠ	ವಿರಕ್ತಮಠ	೧೨೮೯
			ಸಿಂದಗಿಮಠ	ಗುರುವರ್ಗ	೧೨೯೨
			ಹೊಸಮಠ	ವಿರಕ್ತಮಠ	೧೨೯೪
			ಗುರುಪಾದದೇವರಮಠ	ಗುರುವರ್ಗ	೧೨೯೪
		ಹಾವನೂರು	ದಳವಾಯಿಮಠ	ವಿರಕ್ತಮಠ	೧೨೯೫
		ಹೊಸರಿತ್ತಿ	ಗುದ್ದಲೀಶ್ವರಸ್ವಾಮಿಮಠ	ವಿರಕ್ತಮಠ	೧೨೯೫
	೧೩೨. ಹಾನಗಲ್ಲು	ಅಕ್ಕಿಆಲೂರು	ಚನ್ನವೀರಸ್ವಾಮಿಮಠ	ವಿರಕ್ತಮಠ	೧೨೯೯
		ಆಡೂರು	ವಿರಕ್ತಮಠ	ವಿರಕ್ತಮಠ	೧೩೦೦
		ಉಪ್ಪುಹುಣಸೆ	ವಿರಕ್ತಮಠ	ವಿರಕ್ತಮಠ	೧೩೦೦
		ಕೂಡಲ	ಗುರುನಂಜೇಶ್ವರಮಠ	ಗುರುವರ್ಗ	೧೩೦೧
		ತಿಳುವಳ್ಳಿ	ಕಲ್ಮಠ	ವಿರಕ್ತಮಠ	೧೩೦೩
		ನರೇಗಲ್ಲು	ವಿರಕ್ತಮಠ	ವಿರಕ್ತಮಠ	೧೩೦೩
		ಬೊಮ್ಮನಹಳ್ಳಿ	ವಿರಕ್ತಮಠ	ವಿರಕ್ತಮಠ	೧೩೦೩
		ಹಾನಗಲ್ಲು	ವಿರಕ್ತಮಠ	ವಿರಕ್ತಮಠ	೧೩೦೫
		ಹುಲ್ಲತ್ತಿ	ದಿಂಗಾಲಸ್ವಾಮಿಮಠ	ವಿರಕ್ತಮಠ	೧೩೦೮
		ಹೊಂಕಣ	ಗುಬ್ಬಿಮಠ	———	೧೩೦೯
	೧೩೩. ಹಿರೇಕೆರೂರು	ಚಿಕ್ಕೆರೂರು	ವಿರಕ್ತಮಠ	ವಿರಕ್ತಮಠ	೧೩೧೦
		ತಿಪ್ಪಾಯಕೊಪ್ಪ	ಗುರುಮೂಕಪ್ಪಶಿವಯೋಗಿಗಳಮಠ	ವಿರಕ್ತಮಠ	೧೩೧೧
		ಮಡ್ಲೂರು	ಮುರುಘಾಮಠ	ವಿರಕ್ತಮಠ	೧೩೧೩
		ರಟ್ಟೀಹಳ್ಳಿ	ಕಬ್ಬಿಣಕಂತೆಮಠ	ಗುರುವರ್ಗ	೧೩೧೪
		ಹಂಸಬಾವಿ	ಕೋರಿಟೋಪಿಮಠ	ವಿರಕ್ತಮಠ	೧೩೧೭
❋	❋	❋	❋	❋	❋

ಪೋಷಕರು

ಗ್ರಂಥ ಪ್ರಕಟಣೆಯ ಸಂದರ್ಭದಲ್ಲಿ ಮಾರ್ಗದರ್ಶನ ನೀಡಿ ಆಶೀರ್ವದಿಸಿದ ಪೂಜ್ಯರುಗಳು




ನಿಡಸೋಸಿ ಶ್ರೀಗಳು



ಕೋಡಿಮಠದ ಶ್ರೀಗಳು




ಮೂರುಸಾವಿರ ಮಠದ ಶ್ರೀಗಳು




ಸಾಣೇಹಳ್ಳಿ ಶ್ರೀಗಳು


ಗ್ರಂಥ ಪ್ರಕಟಣೆಯ ಸಂದರ್ಭದಲ್ಲಿ ಮಾರ್ಗದರ್ಶನ ನೀಡಿ ಆಶೀರ್ವದಿಸಿದ ಪೂಜ್ಯರುಗಳು




ಸಾವಳಗಿ ಶ್ರೀಗಳು



(ಕರಿಬಸವ ಸ್ವಾಮಿ ಮಠ) ತುಮಕೂರು ಶ್ರೀಗಳು



ಹೊಸಪೇಟೆ ಶ್ರೀಗಳು



ಹೊನ್ನಾಳಿ ಶ್ರೀಗಳು



ಹರಪನಹಳ್ಳಿ ಶ್ರೀಗಳು


ಗ್ರಂಥ ಪ್ರಕಟಣೆಯ ಸಂದರ್ಭದಲ್ಲಿ ಮಾರ್ಗದರ್ಶನ ನೀಡಿ ಆಶೀರ್ವದಿಸಿದ ಪೂಜ್ಯರುಗಳು



ನಿಡುಮಾಮಿಡಿ ಶ್ರೀಗಳು




ಹಣ್ಣೆ ಶ್ರೀಗಳು



ಕುಪ್ಪೂರು ಶ್ರೀಗಳು




ಎಡೆಯೂರು ಶ್ರೀಗಳು




ಮಳಲಿ ಶ್ರೀಗಳು

ದಾನಿಗಳು


ಗ್ರಂಥ ಪ್ರಕಟಣೆಗೆ ನೆರವು ನೀಡಿದ ಮಹನೀಯರುಗಳು



ಲಿ॥ ಶ್ರೀ ಬಿ.ಎಸ್. ಚನ್ನಬಸಪ್ಪ,
ದಾವಣಗೆರೆ.



ಲಿ॥ ಶ್ರೀ ಡಿ.ಜಿ. ಶಿವಣ್ಣಗೌಡರು,
ಶಿವಮೊಗ್ಗ.



ಲಿ॥ ಶ್ರೀ ಎ.ಎಂ. ಬಸವೇಗೌಡರು ಮತ್ತು
ಶ್ರೀಮತಿ ಗೌರಮ್ಮ ಬಸವೇಗೌಡರು, ಚಿಕ್ಕಮಗಳೂರು.


ಗ್ರಂಥ ಪ್ರಕಟಣೆಗೆ ನೆರವು ನೀಡಿದ ಮಹನೀಯರುಗಳು



ಶ್ರೀ ಎಸ್. ಬಿ. ಮುಳ್ಳೇಗೌಡರು ಮತ್ತು
ಶ್ರೀಮತಿ ಶಾರದಮ್ಮನವರು, ಶಿರವಾಸೆ.



ಶ್ರೀ ಬಿ.ಬಿ. ರೇಣುಕಾರ್ಯ ಮತ್ತು
ಶ್ರೀಮತಿ ಕಲ್ಯಾಣಮ್ಮನವರು, ಆಲ್ದೂರು.




ಶ್ರೀಮತಿ ಮತ್ತು ಶ್ರೀ ಕೆ.ಬಿ. ಮಲ್ಲಿಕಾರ್ಜುನ್,
ಶಾಸಕರು, ಬೀರೂರು.




ಶ್ರೀ ಸಿ. ಸೋಮಶೇಖರ್ ಮತ್ತು
ಶ್ರೀಮತಿ ಸರ್ವಮಂಗಳ ಸೋಮಶೇಖರ್, ಬೆಂಗಳೂರು.

ಗ್ರಂಥ ಪ್ರಕಟಣೆಗೆ ನೆರವು ನೀಡಿದ ಮಹನೀಯರುಗಳು




ಶ್ರೀ ಬಾಣೂರು ಸೋಮಶೇಖರಪ್ಪ ಮತ್ತು
ಶ್ರೀಮತಿ ಚಂದ್ರಮ್ಮನವರು, ಬಾಣೂರು.




ಶ್ರೀ ಎಸ್.ಎಂ. ನಾಗರಾಜ್ ಮಾಜಿಶಾಸಕರು ಮತ್ತು
ಶ್ರೀಮತಿ ಪುಷ್ಪನಾಗರಾಜ್



ಶ್ರೀ ಪಿ. ಯೋಗಪ್ಪ ಮತ್ತು ಶ್ರೀಮತಿ [illegible]
ಬೈರವಿ ಮೆಡಿಕಲ್ಸ್, ಚಿಕ್ಕಮಗಳೂರು.



ಶ್ರೀ ಜೆ.ಬಿ. ಶಿವಪ್ಪಗೌಡ,
ಜಕ್ಕನಹಳ್ಳಿ.



ಶ್ರೀ ಎಂ.ಡಿ. ಪುಟ್ಟಸ್ವಾಮಿ,
ಮಾವಿನಹಳ್ಳಿ.



ಶ್ರೀ ಸಿ. ನಟರಾಜ,
ಬೆಂಗಳೂರು.

ಗ್ರಂಥ ಪ್ರಕಟಣೆಗೆ ನೆರವು ನೀಡಿದ ಮಹನೀಯರುಗಳು

೧. ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ.
೨. ಶ್ರೀ ಬಸವಲಿಂಗ ಪಟ್ಟದದೇವರು, ಸಂಸ್ಥಾನ ಹಿರೇಮಠ, ಬಾಲ್ಕಿ.
೩. ಶ್ರೀ ಮ.ನಿ.ಪ್ರ.ಶಿವಾನಂದ ಸ್ವಾಮಿಗಳು, ಗುರುಬಸವೇಶ್ವರ ಸಂಸ್ಥಾನ ಮಠ, ಹುಲಸೂರು, ಬೀದರ್ ಜಿಲ್ಲೆ.
೪. ಜಗದ್ಗುರು ಶ್ರೀ ಅನ್ನದಾನೇಶ್ವರ ಸ್ವಾಮಿಗಳು, ಸಂಸ್ಥಾನಮಠ, ಮುಂಡರಗಿ.
೫. ಶ್ರೀ ಮಹಾಂತಸ್ವಾಮಿಗಳು, ಚಿತ್ತರಗಿ ಸಂಸ್ಥಾನಮಠ, ಇಳಕಲ್ಲು.
೬. ಶ್ರೀ ಮ.ನಿ.ಪ್ರ. ವಿದ್ವಾನ್ ಇಮ್ಮಡಿ ಶಿವಬಸವ ಸ್ವಾಮಿಗಳು, ಕುಂದೂರುಮಠ, ಮೈಸೂರು.
೭. ಶ್ರೀ ಮ.ನಿ.ಪ್ರ. ಚಿದಾನಂದಸ್ವಾಮಿಗಳು, ಹೊಸಮಠ, ನಟರಾಜ ಪ್ರತಿಷ್ಠಾನ, ಮೈಸೂರು.
೮. ಷ.ಬ್ರ.ಶ್ರೀ ಡಾ॥ ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು, ಅರಮನೆ ಜಪದಕಟ್ಟೇಮಠ, ಮೈಸೂರು.
೯. ಷ.ಬ್ರ.ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯಸ್ವಾ ಮಿಗಳು, ಸಿದ್ಧರಾಮೇಶ್ವರ ಮಠ, ಯಲಬುರ್ಗ.
೧೦. ಶ್ರೀ ಬಿ.ಎಂ.ಶಿವಾನಂದ, ಕಾಫಿ ಬೆಳೆಗಾರರು, ಆಲ್ದೂರು.
೧೧. ಶ್ರೀ ಹೆಚ್.ಡಿ.ಬೊಮ್ಮೆಗೌಡರು, ಕಾಫಿ ಬೆಳೆಗಾರರು, ಹಾಂದಿ.
೧೨. ಶ್ರೀ ಹೆಚ್.ಡಿ.ಚಂದ್ರಶೇಖರ್, ಕಾಫಿ ಬೆಳೆಗಾರರು, ಆಲ್ದೂರು.
೧೩. ಶ್ರೀ ಸೋಮಶೇಖರ್‌ರವರು, ಗೊಬ್ಬರ ವ್ಯಾಪಾರಿಗಳು, ಆಲ್ದೂರು.
೧೪. ಶ್ರೀ ಈ.ಸಿ.ಯಶೋಧರಯ್ಯ ಮತ್ತು ಸಹೋದರರು, ಕಾಫಿ ಬೆಳೆಗಾರರು, ಇಳೇಖಾನ್.
೧೫. ಶ್ರೀ ಬಿ.ಎಸ್.ಶಿವಕುಮಾರ್, ಕಾಫಿ ಬೆಳೆಗಾರರು, ಆಲ್ದೂರು.
೧೬. ಶ್ರೀ ವಿ.ಟಿ.ವೀರಭದ್ರೇಗೌಡರು, ಕಾಫಿ ಬೆಳೆಗಾರರು, ವಸ್ತಾರೆ.
೧೭. ಶ್ರೀ ಎನ್.ಎಂ.ಗಿರೀಶ್, ಸೀಮೆಎಣ್ಣೆ ವ್ಯಾಪಾರಿಗಳು, ಚಿಕ್ಕಮಗಳೂರು.
೧೮. ಶ್ರೀ ಎಂ.ಎನ್.ಷಡಕ್ಷರಿ, ಮಾಡೆಲ್ ಇಂಗ್ಲೀಷ್ ಸ್ಕೂಲ್, ಚಿಕ್ಕಮಗಳೂರು.
೧೯. ಶ್ರೀ ಜಿ.ಬಿ.ಶಿವೇಗೌಡರು ಮತ್ತು ಮಕ್ಕಳು, ಕಾಫಿ ಬೆಳೆಗಾರರು, ಗಡಬನಹಳ್ಳಿ.
೨೦. ಶ್ರೀ ಕೆ.ಎನ್.ಚಂದ್ರಪ್ಪಶೆಟ್ಟಿ ಕರ್ಕಿಪೇಟೆ,
೨೧. ಶ್ರೀ ಟಿ.ಎಂ.ಚಂದ್ರಶೇಖರ್, ಕಾಫಿ ಬೆಳೆಗಾರರು, ಚಿಕ್ಕಮಗಳೂರು.
೨೨. ಶ್ರೀ ಹೆಚ್.ಎಂ.ಉಮೇಶ್‌ಕುಮಾರ್ ಬಿನ್ ಪಟೇಲ್ ಮರುಳಸಿದ್ಧೇಗೌಡರು, ಹಿರೇಕೊಳಲೆ.
೨೩. ಶ್ರೀ ಸಿ.ಬಿ.ಶಿವರುದ್ರಯ್ಯ, ಚಿಕ್ಕಮಗಳೂರು.
ಶ್ರೀ ಹೆಚ್.ಎನ್.ನಂಜೇಗೌಡ ಮತ್ತು ಸಹೋದರರು, ಕಾಫಿ ಬೆಳೆಗಾರರು, ಹಲಸುಮನೆ.
ಶ್ರೀ ಎಂ.ಪಿ.ಷಡಕ್ಷರಯ್ಯ ಮತ್ತು ಮಕ್ಕಳು, ಬೀರೂರು.
ಶ್ರೀ ಪತ್ರೆಸದಾಶಿವನ್, ಕಾಫಿ ಬೆಳೆಗಾರರು, ಬೀರೂರು.
ಶ್ರೀ ಎಂ.ಪ್ರಕಾಶ್‌ಕುಮಾರ್, ಅಡಿಕೆ ಬೆಳೆಗಾರರು, ಬುಕ್ಕಸಾಗರ.
ಶ್ರೀ ಟಿ.ಎಸ್.ಶಂಕರೇಗೌಡ, ನಿವೃತ ಪಶುಪರಿವೀಕ್ಷಕರು, ಚಿಕ್ಕಮಗಳೂರು.
೯. ಶ್ರೀಮತಿ ಲಲಿತಾಂಬರವರ ಜ್ಞಾಪಕಾರ್ಥ ಶ್ರೀ ಜಿ.ಸಿ.ಭಾರ್ಗೇಶಪ್ಪ ಮತ್ತು ಮಕ್ಕಳು, ಭದ್ರಾವತಿ.
೩೦. ಶ್ರೀ ಡಾ॥ ಜೆ.ಪಿ.ಕೃಷ್ಣೇಗೌಡ, ಜೋಳದಾಳ್ ನರ್ಸಿಂಗ್ ಹೋಂ, ಚಿಕ್ಕಮಗಳೂರು.
೩೧. ಶ್ರೀ ಚನ್ನವೀರದೇವರು, ಪ್ರಧಾನ ಅರ್ಚಕರು, ಗಣಪತಿ ದೇವಸ್ಥಾನ, ಜಯನಗರ, ೪ನೇ ವಿಭಾಗ, ಬೆಂಗಳೂರು.
೩೨. ಶ್ರೀ ಜಿ.ಬಿ.ರಾಜಪ್ಪ ಮತ್ತು ಶ್ರೀಮತಿ ಪಾರ್ವತಮ್ಮ ಶಿಕ್ಷಣ ತರಬೇತಿ ಕೇಂದ್ರ, ಚಿಕ್ಕಮಗಳೂರು.
೩೩. ಶ್ರೀ ಡಿ.ಬಿ.ಅಶೋಕ್, ಕೈಗಾರಿಕೋದ್ಯಮಿಗಳು, ಶಿವಮೊಗ್ಗ.
೩೪. ಶ್ರೀ ಜಿ.ಸಿ.ವೀರೇಗೌಡ, ಗೋಣಕಲ್ಲು.

೩೫. ಶ್ರೀ ಪಿ.ಎಂ.ಮರುಳಸಿದ್ದಪ್ಪ, ತಹಶೀಲ್ದಾರ್, ಚಿಕ್ಕಮಗಳೂರು.
೩೬. ಶ್ರೀ ಕುಮಾರಸ್ವಾಮಿ, ವ್ಯವಸ್ಥಾಪಕರು, ಡಿ.ಎಸ್.ಎಂ.ಎಸ್. ಚಿಕ್ಕಮಗಳೂರು.
೩೭. ಶ್ರೀ ಶಿವಮೂರ್ತಿ, ಕಾರ್ಯಪಾಲಕ ಅಭಿಯಂತರರು, ಕೆ.ಪಿ.ಟಿ.ಸಿ.ಎಲ್. ಚಿಕ್ಕಮಗಳೂರು.
೩೮. ಶ್ರೀ ಎಂ.ಸಿ.ನರೇಂದ್ರ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಪಿ.ಟಿ.ಸಿ.ಎಲ್. ಚಿಕ್ಕಮಗಳೂರು.
೩೯. ಶ್ರೀ.ಜಿ.ಆರ್.ನಾಗೇಂದ್ರಪ್ಪ, ಕಿರಿಯ ಅಭಿಯಂತರರು, ಕೆ.ಪಿ.ಟಿ.ಸಿ.ಎಲ್. ಗೌರಾಪುರ.
೪೦. ಶ್ರೀ ಎನ್.ಆರ್.ನಾಗಭೂಷಣಾರಾಧ್ಯರು, ನಿವೃತ್ತ ಶಿಕ್ಷಕರು ಮತ್ತು ಮಕ್ಕಳು, ನಾರಣಾಪುರ.
೪೧. ಶ್ರೀ ಡಾ॥ ಎನ್.ಚಂದ್ರಶೇಖರ್, ಚೇತನ ನರ್ಸಿಂಗ್ ಹೋಂ. ಕಡೂರು.
೪೨. ಶ್ರೀ ಎಂ.ಆರ್.ಸತೀಶ್ ಬಿನ್ ಎಂ.ರಂಗಪ್ಪ, ಕೈಗಾರಿಕೋದ್ಯಮಿಗಳು, ಕಡೂರು.
೪೩. ಶ್ರೀ ಕೆಂಚಪ್ಪನವರು, ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು.
೪೪. ಶ್ರೀ ಜಿ.ಟಿ.ಸೋಮಶೇಖರ್ ಕಿರಿಯ ಅಭಿಯಂತರರು, ಜಿಲ್ಲಾ ಪಂಚಾಯಿತಿ, ಗೌರಾಪುರ.
೪೫. ಶ್ರೀಮತಿ ಪಾರ್ವತಮ್ಮ ಮತ್ತು ಮಕ್ಕಳಾದ ಬಿ.ಎಂ.ಮಲ್ಲಿಕಾರ್ಜುನ, ಕಿರಿಯ ಅಭಿಯಂತರರು, ಬೀಕನಹಳ್ಳಿ.
೪೬. ಶ್ರೀ ಮುದೇಗೌಡರ ವೀರಭದ್ರಪ್ಪನವರು, ದಾವಣಗೆರೆ.
೪೭. ಶ್ರೀ ಅಥಣಿ ವೀರಣ್ಣನವರು, ಲೆಕ್ಕಪರಿಶೋಧಕರು, ದಾವಣಗೆರೆ.
೪೮. ಶ್ರೀ ರಾಜಗುರು ಗುರುಸ್ವಾಮಿ ಕಲಕೇರಿ, ಗದಗ.
೪೯. ಶ್ರೀ ಚನ್ನಬಸಪ್ಪ ಶೆಟ್ಟಿ, ಚಿಕ್ಕಮಗಳೂರು.
೫೦. ಶ್ರೀಮತಿ ಕಾತ್ಯಾಯಿನಿ ಚಂದ್ರಶೇಖರ್, ಕಾಫಿ ಬೆಳೆಗಾರರು, ಚಿಕ್ಕಮಗಳೂರು.
೫೧. ಶ್ರೀ ಎ.ಸಿ. ಶಾಂತಮಲ್ಲೇಗೌಡರು, ಚಂದ್ರಿಕಾ ಎಸ್ಟೇಟ್, ಚಿಕ್ಕಮಗಳೂರು.
೫೨. ಶ್ರೀ ಜಿ. ಗಡ್ಡದದೇವರಮಠ, ಶಾಸಕರು, ಲಕ್ಷ್ಮೇಶ್ವರ, ಶಿರಹಟ್ಟಿ ತಾಲ್ಲೂಕು.
೫೩. ಅಧ್ಯಕ್ಷರು ಮತ್ತು ಸದಸ್ಯರು ಶ್ರೀ ಮಹಂತರಮಠ ಟ್ರಸ್ಟ್, ಬೆಂಗಳೂರು.
೫೪. ಅಧ್ಯಕ್ಷರು ಮತ್ತು ಸದಸ್ಯರು ಶ್ರೀ ಮಹಂತರಮಠದ ವಿದ್ಯಾರ್ಥಿನಿಲಯ ಟ್ರಸ್ಟ್, ಬೆಂಗಳೂರು.
೫೫. ಜ್ಞಾನಪ್ರಭು ಸಿದ್ಧರಾಮ ದೇಶಿಕೇಂದ್ರ ಸ್ವಾಮಿಗಳು, ಯಳನಾಡು ವಿದ್ಯಾಸಂಸ್ಥೆ, ಅರಸೀಕೆರೆ.
೫೬. ಶ್ರೀ ಬಿ.ಆರ್.ವಿ. ಗೌಡರು, ಲೆಕ್ಕಪರಿಶೋಧಕರು, ಬೆಂಗಳೂರು.
೫೭. ದಿಬ್ಬೂರು ವೀರಪ್ಪ ಮತ್ತು ನಂಜಮ್ಮ ಎಂಡೋಮೆಂಟ್ ಟ್ರಸ್ಟ್, ಬೆಂಗಳೂರು.
೫೮. ಶ್ರೀ ಎಸ್. ಈಶ್ವರದೇವರು, ಜ್ಞಾನಭಾರತಿ ವಿದ್ಯಾಸಂಸ್ಥೆ, ಬೆಂಗಳೂರು.
೫೯. ಶ್ರೀ ಎಲ್.ವಿ. ಬಸವರಾಜು, ಅಧ್ಯಕ್ಷರು, ನಗರಸಭೆ, ಚಿಕ್ಕಮಗಳೂರು.